REGISTERED
M. 20.

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೦ ಮೈಸೂರು—ಸನ್ ೧೯೦೭ ನೇ ಇಸವಿ ಜನವರಿ ತಾರೀಖು ೩ ನೇ ಗುರುವಾರ. ಸಂಚಿಕೆ ೩೧

ಕೊಡಗು ದೇಶದ ಶ್ರೇಷ್ಠವಾದ ಉತ್ಕೃಷ್ಟ ಕಾಫಿಯು

ಬೀಯನೆ ಇರುವದು ಅಥವಾ ಆಗತಾನೆ ಹುರಿದದ್ದು ಕಡವಾಡಿದ ಸ್ಥಳದಿಂದಲೆ ನೆಟ್ಟಗೆ ರವಾನಿಸಲ್ಪಡುವದು.

85-47

ವ್ಯಾಪಾರದ ಹೆಗ್ಗುರ್ತು

C C E C

ಕಾಡುಕೋಣದ ತಲೆಯು ಮುದ್ರೆ ಇದೆ.

ಸಂಪೂರ್ಣವಾಗಿ ಯಂತ್ರದಿಂದಲೆ ಸಿದ್ಧಪಡಿಸಿದ್ದು ಹೆಗ್ಗುರ್ತು ವಿಲಾಸದ ಚೇಟಿ ಸುತ್ತಿಲ್ಲದಿರುವವು ಸ್ವಚ್ಛವಾದವುಗಳಲ್ಲ ಅವು ನಮ್ಮದಲ್ಲ. ಏಜಂಟರುಗಳು ಬೇಕು, ಇಂಥವರಿಗೆ ಅಲಾಯದ ದರ. ದಯಮಾಡಿ ದಯವಿಟ್ಟು ಈ ಪತ್ರಿಕೆಯ ಹೆಸರನ್ನು ಸೂಚಿಸಿ

ವಿಳಾಸ.—ಮ್ಯಾನೇಜರ್, ಮ್ಯಾಥಿಸನ್ಸ್ ಕಾಫಿ ವರ್ಕ್ಸ್, ಹುಣಸೂರು.

ಜ್ವರಹರಿ.

142-10



ಈ ಸಾಧಾರಣ ಜ್ವರ, ಹಳೇಜ್ವರ, ಮೊರೇಜ್ವರ, ಪಿತ್ಥಜ್ವರ ಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನು ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮುಡಾಮತ್ ಸಬ್ ಡಿವಿಜನ್ ಆಫೀಸರ್ ಎಸ್. ಟಿ. ವೆಂಕಟಪತಿ ಅಯ್ಯ — ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ ಈ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು ಇನ್ನೂ ಜನಗಳು ಶಾಹಿಲೇ ಬೇಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨೦ ಔನ್ಸಿನ ಸೀಸೆಯನ್ನು ವಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದರು.

ಕ್ರಯ.—ಸೀಸೆ ೧ ಕ್ಕೆ ೮ ಆಣೆ, ೧ ರೂ., ೧—೮ ರೂ., ೩—೦—೦ ರೂ., ೧೧ ರೂ., ಹನ್ನೆರಡು ಸೀಸೆ ತರಿಸಿಕೊಂಡರೆ ಡಜನ್ ಮಾಫಿ ಬಿಡಲಾಗುವದು.

****

ಓಮುಂ ಕರ್ಪೂರ.

Omum Carpoor

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಕಳೆ ಹದ, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು ಇದು. ಕೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗೂವಾಗ್ಯೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ನಮ್ಮ ದರವು ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ಸಿಕ್ಕುವದು

ಕಡಪ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆಸ್ರಿಯ ಕರ್ಪೂರವನ್ನು ನಾನೂ ನನ್ನ ಹಾಬೇದಾರರೂ ಮ್ಯುನಿಸಿಪಲ್ ಡಿಸ್ಪೆನ್ಸರಿಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ, ಅಜೀರ್ಣ ರೋಗಿಷ್ಠರಿಗೆ ಕೊಡುತ್ತೇವೆ ಕೊಟ್ಟ ಕೂಡಲೆ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧವಾಗಿರುತ್ತದೆ.

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲಿ, ಔಷಧ ಶಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ದೊರೆಯುತ್ತವೆ ಇಲ್ಲದಿದ್ದರೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ — ಸದರನ್ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ, ಕೋಲ್ ಬ್ರೇಕ್ ರೈನ್, ಮದ್ರಾಸ್

ಬೇಕಾಗಿದೆ.

153-3

ಇಂಗ್ಲಿಷ್ ಮತ್ತು ಕನ್ನಡ ಅಕ್ಷರ ಜೋಡಿಸುವವರು (ಕಂಪಾಜಿಟರುಗಳು) ಬೇಕಾಗಿದೆ. ಚೆನ್ನಾಗಿ ಕಲಿತಿರುವವರು ಮಾತ್ರ ಖುದ್ದಾಗಿ ಬಂದು ಮಾತನಾಡಬಹುದು

ಮ್ಯಾನೇಜರ್, ಮಿರ್ಷ ಪ್ರೆಸ್, ಮೈಸೂರು.

ಮುಂಬಯಿ ವ್ಯಾಪಾರಮಾಡಲಿಚ್ಛಿಸುವವರು.

85-31

ಮುಂಬಯಿಯಲ್ಲಿ ಪ್ರತಿಯೊಂದು ಮಾಲಿನ ತೂಕ ಅಳತೆ ಮತ್ತು ಮಾಲಿನ ವರ್ಣನೆ ಹಾಗೂ ಅನೇಕ ಉಪಯುಕ್ತ ಮಾಹಿತಿಯುಳ್ಳ ಕನ್ನಡ ಪುಸ್ತಕ —ಕ್ರಯ ೧೦ ಆಣೆ ವಿ. ಪಿ. ಯಿಂದ ಕಳುಹಿಸುವೆವು ಟಪಾಲು ಖರ್ಚು ಬೇರೆ ಬೇಕಾದ್ದು ಸೇಲರರಿಗೆ ಯೋಗ್ಯ ಕಮಿಷನ್ ದೊರೆಯುವದು ಮತ್ತು ಲಿಂಗಾಯತ ಧರ್ಮಸಂಬಂಧ ವಿರಕ್ತೋತ್ಪತ್ತಿ ಕ್ರಿಯಾಲಕ್ಷಣವೆಂಬುವ ಕನ್ನಡ ಪುಸ್ತಕ—ನಾಲ್ಕು ಆಣೆ ಕಲೊ ಅಕ್ಷರದಿಂದ ಬರಿಯಿರಿ ಪತ್ತಾ ಚನ್ನಬಸಪ್ಪ ಮಲ್ಲಪ್ಪ ವಾರದ, ಪೋಸ್ಟು ಮಾಂಡ್ವಿ, ಮುಂಬಯಿ.

ಬೆಲೆಗೆ ಬೆಳ್ಳಿ—ಗುಣಕ್ಕೆ ಬಂಗಾರ.

86-32

ಕ್ಲೆಮೆಂಟ್ಸ್‌ರವರ ಗಾರಿಡಿಬಾಧಾ ನಿವಾರಿಣಿ

ಪಾರ್ಶ್ವನೋವು, ಕೀಲುಗಳ ನೋವುಗಳು, ಕಿಬ್ಬೊಟ್ಟೆನೋವು, ಬೆನ್ನು ಳಿಯುವದು, ತಲೆನೋವು, ಕೆಮ್ಮು ಕಿಲುಬುಗಳು, ಕೀಲುಗಳು, ಕತ್ತರಿಸುವದು, ಬಗ್ಗಿರುವ ಬೆನ್ನುಗಳು, ಕೊರಳು ಊತ, ಇವುಗಳಿಂದುಂಟಾಗುವ ಬಾಧೆಗಳು, ಕೈಕಾಲು ಮಡೆತ, ಇವುಗಳಿಗೆ ಕ್ಲೆಮೆಂಟ್‌ರವರ ಗಾರಿಡಿ ಬಾಧೆ ನಿವಾರಣ ತೈಲವನ್ನು ಚೆನ್ನಾಗಿ ತಿಕ್ಕಿದರೆ ಈ ಬಾಧೆಗಳಲ್ಲಾ ಪರಿಹಾರವಾಗುವದು ಬಾಧೆಯನ್ನು ನಿಲ್ಲಿಸುವದಕ್ಕಾಗಿ ಕ್ಲೆಮೆಂಟ್ಸ್‌ರವರ ಮ್ಯಾಜಿಕ್ ಬಾಂ ಪಟ್ಟಿ ಇದೆ ಆ ಫಲವನ್ನು ಆದು ಮಾಡುವದು ಕೀಟಾಣುಗಳಲ್ಲಿ ಹಾಕಿ ನೂರುವ ಔಷಧಗಳಲಿ ಬಾಧೆಯನ್ನು ಶಮನಮಾಡುವದರಲ್ಲಿ ಕ್ಲೆಮೆಂಟ್ಸ್‌ರವರ ಮ್ಯಾಜಿಕ್ ಬಾಂನಂತಹದು ಬೇರೊಂದಿಲ್ಲವು ಕ್ರಯ —೧ ಬಾಟ್ಲಿಗೆ ೧೨ ಆಣೆ. ೩ ಕ್ಕೆ ೨ ರೂಪಾಯಿ ೬ ಕ್ಕೆ ೩॥ ರೂಪಾಯಿ ೧೨ ಕ್ಕೆ ೬ ರೂಪಾಯಿ ಅಂಚೆ ವೆಚ್ಚ ಒಂದರಿಂದ ಮೂರು ಬಾಟ್ಲಿ ವರೆಗೆ ೩ ಆಣೆ

ನಮ್ಮ ವಿಳಾಸ.—ಎಫ್. ಡಬ್ಲ್ಯು. ಆರ್ನ,
ಸಿಮೆಟ್ರಿ ರೋಡ್, ವೆಪೆರಿ, ಮದರಾಸ್

ಬೆಂಗಳೂರು ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪೆನಿ ಲಿಮಿಟೆಡ್.

122—16

ಮೈಸೂರು ಸರ್ಕಾರದವರು ಇಂಡಿಯಾ ಗವರ್ನಮೆಂಟಿನವರು ಈ ರೈಲನ್ನು ಸ್ಯಾಂಕ್ಷನ್ ಮಾಡುವ ಕಂಡಿಷನ್‌ಮೇಲೆ ಖರ್ಚಾಗುವ ಮೂಲಧನಕ್ಕೆ ಶೇಕಡ ನಾಲ್ಕರಂತೆ ಬಡ್ಡಿ ಕೊಡಲು ಜಾಮೀನಾಗಿರುತ್ತೇವೆಂದು ಈಚೆಗೆ ಪ್ರೈಸಲ್ ಮಾಡಿರುತ್ತಾರೆ.

ನಿಯಮಿಕ ಮೂಲಧನ ಶೇರು ಒಂದಕ್ಕೆ ೨೫ ರೂಪಾಯಿಗಳ ಬೆಲೆಯುಳ್ಳ ೪೮ ಸಾವಿರ ಷೇರುಗಳಿಂದಾಗುವ ೧೨ ಲಕ್ಷ ರೂಪಾಯಿಗಳು—ಈ ಷೇರು ಮೊಬಲಗು ಷೇರು ಒಂದಕ್ಕೆ ಒಂದು ರೂಪಾಯಿ ನಂತೆ ಅಪ್ಲಿಕೇಷನ್ ಜೊತೆಯಲ್ಲಿ ಅಡ್ವಾಂಸಾಗಿ ಕೊಟ್ಟು ಬಾಕಿ ೨೪ ರೂಪಾಯಿಗಳನ್ನು ನೋಟೀಸ್ ಕೊಟ್ಟನಂತರ ೧೨ ಬಿಸ್ತುಗಳಲ್ಲಿ ಪಾವತಿ ಮಾಡತಕ್ಕದ್ದು ಈ ರೈಲಿನ ಸರ್ವೆ ಪೂರೈಸಲ್ಪಟ್ಟಿದೆ

ಈ ಕಂಪೆನಿಯ ಷೇರುಗಳನ್ನು ಅಪೇಕ್ಷಿಸತಕ್ಕಂಥಾವರು ಈ ಕೆಳಗೆ ರುಜುವು ಮಾಡಿರುವವರಿಗೆ ಅಥವಾ ಸಬ್ ಏಜಂಟ್ರಿಗೆ ದರಖಾಸ್ತು ಮಾಡಿಕೊಳ್ಳಬೇಕು

ಷೇರು ಹಣವನ್ನು ಈ ಕೆಳಗೆ ರುಜು ಮಾಡಿರುವವರಿಗೆ, ಇವರಿಂದ ಲಿಖಿತ ಮೂಲಕ ಹಣ ವಸೂಲು ಮಾಡಲು ಅಧಿಕಾರ ಹೊಂದಿರುವ ಸಬ್ ಏಜಂಟರಿಗೆ, ಬೆಂಗಳೂರು ಬ್ರಾಂಚು ಮದ್ರಾಸು ಬ್ಯಾಂಕಿಗೆ (ಈ ಕಂಪೆನಿಯ ಕ್ರೆಡಿಟ್ಟಿಗೆ), ಅಥವಾ ಮೈಸೂರು ಸೀಮೆಯ ತಾಲ್ಲೂಕು ಡಿಸ್ಟ್ರಿಕ್ಟು ಖಜಾನೆಗಳಿಗಾಗಲಿ ಪಾವತಿ ಮಾಡಬೇಕು

(ಸ್ವರ್ಗ) ಬಿ. ವಿ. ರಾಮಸ್ವಾಮಿ ಶೆಟ್ಟಿ, ಬಿ. ಎ.,
ಅಡ್ವೋಕೇಟ್, ಮತ್ತು ಬೆಂಗಳೂರು ಚಿಕ್ಕಬಳ್ಳಾಪುರ
ಲೈಟ್ ರೈಲ್ವೆ ಕಂಪೆನಿಯ ಚೀಫ್ ಏಜಂಟ್.
ನಗರ್ತಪೇಟೆ, ಬೆಂಗಳೂರು ಸಿಟಿ

The Place for Hassan Caps is Hassan.

ನಿಮ್ಮ ತಲೆಯ ಮೇಲಿರುವದೇನು ?
ಹಾಸನದ ಟೋಪಿ ಅಲ್ಲವೋ? ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

154-3

ಒಳ್ಳೇ ಟೋಪಿಗಳು ಯಾವವು ? ಯಾಕೆ ? ಸಂದೇಹವೇನು ?
ಹಾಸನದ ಟೋಪಿಗಳ ಸಮಾನ ಉಂಟೇ ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು ? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು ? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ವಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇಳಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ —(೧)ನಮ್ಮಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು. (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣದ, ಬಹಳ ಬಾಳಿಕೆಬರುವ ಟೋಪಿಗಳು ಬೇಕಾದರೆ ನಮಗೇ ಸೀದಾ ಬರೆದು ತರಿಸಿಕೊಳ್ಳಿ ಅಗ್ಗವಾದದ್ದು ಚನ್ನಾಗಿಲ್ಲದ್ದು ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ.

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ

"ಅರೇಬಿಯನ್ ನೈಟ್ಸ್

150-5

ಅಥವಾ

ಯವನಯಾಮಿನೀ ವಿನೋದ ಕಥೆಗಳು"

ಅರೇಬಿಯನ್ ನೈಟ್ಸ್ ಅಥವಾ ಯವನಯಾಮಿನೀ ವಿನೋದ ಕಥೆಗಳು "ಈ ಪುಸ್ತಕವು ಲೋಕಪ್ರಸಿದ್ಧವಾದುದೆಂದು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ನಾನೂರು ಎಪ್ಪತ್ತು ಪುಟಗಳುಳ್ಳದ್ದು. ಭಾರಿ ಪುಸ್ತಕ ಭಾಷೆಯು ಬಹು ಸರಳವಾಗಿದೆ ಪುಸ್ತಕವನ್ನು ಒಂದಾವರ್ತಿ ಓದಿದ ಮೇಲೆ ಅದನ್ನು ಪುನಃ ಪುನಃ ಓದುವಂತೆ ಅದು ಮನಸ್ಸನ್ನು ಆಕರ್ಷಿಸುವದು ಇದರ ಕ್ರಯ ಎರಡೇ ರೂಪಾಯಿ ವಿ. ಪಿ. ಮೂಲಕ ೨—೩—೦ ಹತ್ತು ಅಥವಾ ಹದಿನೈದು ವರ್ಷಗಳ ಹಿಂದೆ ಇದರ ಕ್ರಯ ಎಂಟು ರೂಪಾಯಿ ಎಂದು ಅನೇಕರಿಗೆ ಗೊತ್ತು ಇದನ್ನು ಬಡವರೂ, ಐಶ್ವರ್ಯವಂತರೂ ಓದುವಂತೆ ಪುನಃ ಛಾಪಿಸಿ ಇಷ್ಟು ದೊಡ್ಡ ಪುಸ್ತಕವನ್ನು ಇಷ್ಟು ಸುಲಭ ಕ್ರಯಕ್ಕೆ ಮಾರುತ್ತೇವೆ ಹನ್ನೆರಡು ಪುಸ್ತಕಗಳನ್ನು ಒಟ್ಟಿಗೆ ತರಿಸಿಕೊಂಡರೆ ಪುಸ್ತಕಕ್ಕೆ ಎರಡು ಆಣೆಯಂತೆ ಕಮಿಷನ್ ಕೊಡುತ್ತೇವೆ ಜಾಗ್ರತೆ ನೋಡಿ ನಮ್ಮ ವಿಳಾಸ.—

ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

ಹಿಂದೂದೇಶಪ್ರದಕ್ಷಿಣ.

ಈ ನೂತನ ಪುಸ್ತಕದ ೧ನೇ ಮುದ್ರಣದ ಪ್ರತಿಗಳೆಲ್ಲಾ ಸಂಪೂರ್ಣವಾಗಿ ಮುಗಿದುಹೋದ್ದರಿಂದ ಎರಡನೇ ಮುದ್ರಣವನ್ನು ಹಾಕಿಸಿರುತ್ತೇವೆ ಮೂರು ಅಥವಾ ನಾಲ್ಕು ತಿಂಗಳೊಳಗಾಗಿ ನೂರಾರು ಪ್ರತಿಗಳು ವಿಕರಿ ಮಾಡಲ್ಪಟ್ಟದ್ದರಿಂದ ಅನಂತರ ಈ ಪುಸ್ತಕವನ್ನು ಅಪೇಕ್ಷಿಸಿದ ಅನೇಕರಿಗೆ ಇದು ದೊರಿಯದೆ ವ್ಯಸನಕ್ಕೊಳಗಾದರು ಈಗಲಾದರೂ ಜಾಗ್ರತೆಯಿಂದ ಬರೆದು ವಿ. ಪಿ. ಮೂಲಕ ತರಿಸಿಕೊಳ್ಳಿ ಇದರಲ್ಲಿ ಅಡಗಿರುವ ಸಂಗತಿಗಳನ್ನು ವಿವರಿಸಲು ಸ್ಥಳ ಸಂಕೋಚವಾಗಿದೆ. ಹಿಂದೂ ದೇಶದಲ್ಲಿರುವ ಅನೇಕ ಪಟ್ಟಣಗಳ ಚಿತ್ರಗಳೂ ಮತ್ತು ಅವುಗಳ ವರ್ಣನೆಗಳೂ ಪುರಾತನ ಆಶ್ಚರ್ಯಕರವಾದ ಕಟ್ಟಡಗಳೂ ಅವುಗಳ ಚಿತ್ರಗಳೂ ಇದರಲ್ಲಿ ಅಡಗಿವೆ. ಇದರಲ್ಲಿ ಸುಮಾರು ತೊಂಭತ್ತು ಪ್ರಸಿದ್ಧವಾದ ಚಿತ್ರಗಳಿರುತ್ತವೆ ನೂರಾರು ರೂಪಾಯಿಗಳನ್ನು ಖರ್ಚುಮಾಡಿ ದೇಶಸಂಚಾರ ಮಾಡುವುದಕ್ಕೆ ಬದಲಾಗಿ ಈ ದೊಡ್ಡ ಪುಸ್ತಕವನ್ನು ತರಿಸಿ ಓದಿದರೆ ಬಹು ಪ್ರಯೋಜನವಾದೀತೆನ್ನುವುದರಲ್ಲಿ ಯಾವ ಸಂಶಯವೂ ಇರಲಾರದು. ಪುಸ್ತಕದ ಕ್ರಯ ಎಂಟೇ ಆಣೆ. ವಿ. ಪಿ. ಮೂಲಕ ತರಿಸಿಕೊಂಡರೆ ಹನ್ನೊಂದಾಣೆಯಾಗುವುದು

ಮ್ಯಾನೇಜರ್ ಸಿ. ಎಲ್. ಎಸ್. ಬುಕ್ ಡಿಪೋ ಮೈಸೂರು.

೧೯೦೩ ನೇ ಲೋವರ್ ಸೆಕಂಡರಿ ಕನ್ನಡ ನೋಟ್ಸ್.

8-1

ಹಿಂದಿನ ವರುಷದಂತೆ ನಮ್ಮ 'ಎಗ್ಸಾಮಿನರ್' ಮಾಸಪತ್ರಿಕೆಗೆ ಚಂದಾದಾರರಾಗತಕ್ಕವರಿಗೆ ಈ ನೋಟ್ಸು ಬೆಲೆಯಿಲ್ಲದೆ ಬಹುಮಾನವಾಗಿ ದೊರೆಯುತ್ತದೆ. ಹೆಚ್ಚಿನ ಸಂಗತಿಗಳಿಗಾಗಿ ನಮ್ಮ ಪ್ರಕಟನ ಪತ್ರಿಕೆಯನ್ನು ಅವಶ್ಯ ತರಿಸಿ ನೋಡಿ.

ವಿಳಾಸ ಮ್ಯಾನೇಜರ್, ದಿ ಎಗ್ಸಾಮಿನರ್ ಆಫೀಸ್; ಚಿಕ್ಕಬಳ್ಳಾಪುರ

ಹೊಸ ನಮೂನೆ ಬಹು ಬಾಳಿಕೆ ಕ್ರಯ ಕಡಮೆ.

2-1

ರಬ್ಬರ್ ಸೀಲ್‌ಗಿಂತ ಬಾಳಿಕೆ ಬರುವ ಹಿತ್ತಾಳೆ ತಾಂಬ್ರ ಮತ್ತು ಬೆಳ್ಳಿಯಿಂದ ಸೀಲ್‌ಗಳು ಹಿಡಿಸಮೇತ ತಯಾರಿಸಲ್ಪಡುತ್ತೆ. ಕ್ರಯ ಹಿತ್ತಾಳೆ ತಾಂಬ್ರ ರೂ ೧-೮-೦ ಬೆಳ್ಳಿ ರೂ. ೩-೮-೦ ಪೋಸ್ಟೇಜು ಸಮೇತ ೧೫ ಮಾರ್ಗದ ಕಳುಹಿಸಿ. ಇಂಗ್ಲಿಷ್ ಕನ್ನಡ ಬಾಳಬಂದು ಹೆಸರು ನಮೂನೆ ಯಾವ ತರಹಾ ಬೇಕು ತಿಳಿಸಿ. ನಮ್ಮ ವಿಳಾಸ

ಕೆ. ವಿ. ಸಿ. ಅಂಡ್ ಕೋ, ಎ ಫಸಿಯಾಚಾರ್ ಸೀಲ್ ಮೇಕರ್,

ಬೆಲಗೂರು ಕಡೂರ್ ಡಿಸ್ಟ್ರಿಕ್ಟ್.

ನೋಟೀಸ್.

1-5

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ತಿಪ್ಟೂರಲ್ಲಿರುವ ಬಾಗಪಲ್ಲಿ ನಂಜುಂಡಯ್ಯ ಎಂಬ ನನ್ನ ತಂದೆಗೆ ೭೫ ವರ್ಷದ ವೃದ್ಧಾಪ್ಯದ ದೆಸೆಯಿಂದ ಐದಾರು ತಿಂಗಳಿಂದಲೂ ಕಾಯಿಲೆಯಾಗಿ ಕಡೆಗೆ ಹೆಗ್ಗತ್ತಿನ ಮೇಲ್ಗಡೆ ಬಾವು ಎದ್ದು ನಮ್ಮೆಲ್ಲರಿಗೂ ಭಯವನ್ನುಂಟುಮಾಡಿತು. ನನ್ನ ತಂದೆಗೆ ಬುದ್ಧಿವಿಕಲ್ಪವಾಗಿರುವ ಈ ಕಾಲದಲ್ಲಿ ನನ್ನ ಅಣ್ಣನಾದ ೧ ನೇ ಮಗ ರಾಮಯ್ಯ ಈತನಿಗೆ ಹೆಣ್ಣು ಕೊಟ್ಟಿರುವ ಕೃಷ್ಣಯ್ಯ ವಗೈರೆ ಕೆಲವರು ಕೂಡಿ ನನ್ನ ತಂದೆಗೆ ದುರ್ಬೋಧನೆ ಹೇಳಿ, ತಂದೆಯ ಸುಪರ್ದಿನಲ್ಲಿರುವ ಕೆಲವು ಸೊತ್ತುಗಳು ೨ನೇ ಮಗ ವೆಂಕಟಸುಬ್ಬಯ್ಯನೆಂಬ ನನಗೆ ಸಮಭಾಗಾಂಶ ಬರಬೇಕಾಗಿರುವಲ್ಲಿ ಕ್ಷುದ್ರಾಲೋಚನೆಯ ಪರ ಭಾರೆ ದಸ್ತಾವೈಜು ಮಾಡಿಸುವಂತೆ ತಿಳಿಯಬಂತು.

೨ ನೇ ಮಗ ವೆಂಕಟಸುಬ್ಬಯ್ಯನೆಂಬ ನನ್ನ ಹುಟ್ಟು ಅರ್ಧ ಹಕ್ಕುಳ್ಳ ಈ ಕೆಳಗೆ ಕಂಡ ಸ್ಥಿರ ಚರ ಸ್ವತ್ತುಗಳ ಕ್ರಯ ಭೋಗ್ಯ ಅಡಮಾನ ವಗೈರೆಗಳಿಗೆ ನನ್ನ ಅನುಮತಿ ಇಲ್ಲದೆ ಯಾರಾದರೂ ಪ್ರವೇಶಿಸಿದರೆ ನನ್ನ ನಷ್ಟ ಕೋರ್ಟು ಖರ್ಚು ಮುಂತಾದವುಗಳಿಗೆ ಗುರಿಯಾಗುವರು.

ಸ್ಥಿರಸೊತ್ತುಗಳ ವಿವರ

೧	ನೆಲವಂಗ್ಲದ	೪೧ ನೆ	ನಂಬರು ..	ಗದ್ದೆ
೨	ಮಳೀಪುರದ ..	೩೫ನೆ	,, .	ಹೊಲ
೩	ಚಿಕ್ಕಸಂದ್ರದ .	೪೨ ನೆ	,, ..	ಹೊಲ.
೪	ನಗದೂರು ..	७९ ನೆ	,,	೧-೨ನೆ ಪೋಡು ಹೊಲ
೫	ದಾಸನಪುರದ ..	७४ ನೆ	,,	.. ೨-೩ ೪ ನೆ ಪೋಡಿನ ದಾನಪತ್ರದ ಗದ್ದೆ.
೬	,, ..	೩೦ ನೆ ನಂಬರು	.	ಹೊಲ
೭	,, .	७९ನೆ	,, .	ಗದ್ದೆ
೮	,, .	೨೬ ನೆ	,,	ಊರೊಳಗಿನ ಮನೆ
೯	ನೆಲವಂಗ್ಲದ ಟವನ್ನಲ್ಲಿ ೪೯೭ನೆ		,, .	ಮನೆ
೧೦	ತಿಪ್ಟೂರು ದವಳೆ ಪೇಟೆಯಲ್ಲಿರುವ		..	ಅಂಗಡಿ

ಚರಸೊತ್ತುಗಳ ವಿವರ

೧	ತಂದೆಯು ನನ್ನ ಅಣ್ಣ ರಾಮಯ್ಯನಿಂದ ಪಡೆದಿರುವ ನಗದು	ರ ೪೫
೨	,, ನನ್ನಿಂದ ಪಡೆದಿರುವ ನಗದು	ರ ೬೦೫
	ಮತ್ತು ತಂದೆಯ ಬಳಿಯಲ್ಲಿರುವ ಚಿನ್ನ ಬೆಳ್ಳಿ ನಗಗಳು ನಗದು ಸಹಾ	
೩	ರಾಮಟೆಂಕೀ ಪದಕಾ ..	೧
೪	ಬೆಳ್ಳಿ ಗಣೇಶ ..	೧

ಒಟ್ಟು ಸುಮಾರು ७,१०० ರೂಪಾಯಿ ಆಸ್ತಿ ಇರುತ್ತದೆ

ರುಜು ಬಾಗೇಪಲ್ಲಿ ವೆಂಕಟಸುಬ್ಬಯ್ಯ. ತಿಪಟೂರು

ವೃತ್ತಾಂತ ಪತ್ರಿಕೆಯ ಪಂಚಾಂಗವು.

. ದ್ಧವಾಗಿದೆ ಕ್ರಯ ಒಂದಾಣೆ.

೧೯೦೭ನೆ ವರ್ಷದ ಕ್ಯಾಲೆಂಡರು ದೊಡ್ಡ ಸೈಜು. ಇದರಲ್ಲಿ ನಮ್ಮ ಮಹಾರಾಜರವರ ಉತ್ಕೃಷ್ಟವಾದ ಫೋಟೊ, ದಿವಾನರವರ ಮತ್ತು ಛೀಫ್ ಜಡ್ಜರ ಫೋಟೊಗಳು ಬಹಳ ಸೊಗಸಾಗಿವೆ. ಇದುವರೆಗೆ ಇಂಥಾ ಚಿತ್ರಗಳು ಕ್ಯಾಲೆಂಡರಲ್ಲಿ ಯಾರೂ ನೋಡಿರಲಾರರು.

ಚಂದಾದಾರರಿಗೆ ಸೂಚನೆ—ಇದೇ ಜನವರಿ ಆಖೈರಿನೊಳಗಾಗಿ "ವೃತ್ತಾಂತ ಪತ್ರಿಕೆ"ಗೆ ಒಂದು ವರುಷದ ಚಂದಾ ಅಡ್ವಾನ್ಸು ಕಟ್ಟತಕ್ಕವರಿಗೆಲ್ಲಾ ಒಂದೊಂದು ಕ್ಯಾಲೆಂಡರನ್ನು ಭಗಸಟ್ಟೆ ಕೊಡುವೆವು. ಆನಂತರ ಬಿಟ್ಟಿಯಾಗಿ ಸಿಕ್ಕುವದಿಲ್ಲ.

ಎಚ್ಚರಿಕೆ—ಬಹಳ ಕೊಂಚ ಪ್ರತಿಗಳನ್ನು ಮಾತ್ರ ಪ್ರಿಂಟು ಮಾಡಿದೇವೆ ಕೂಡ್ಲೆ ಬರೆಯಿರಿ. ವಿಳಾಸ:

ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು

CHAMBERLAIN'S COLIC, CHOLERA AND DIARRHOEA REMEDY.

ಚೇಂಬರ್ಲೇನ್ ಯವರು ಹೊಟ್ಟೆಶೂಲೆ, ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು

4-1



ಕೆಳ ಹೊಟ್ಟೆಯ ನೋವು, ಬರೀ ಭೇದಿಯಾಗುವುದು, ಆಮಶಂಕೆ, ವಾಂತಿಭೇದಿ ಉಪದ್ರ, ಶೂಲೆ ನೋವು, ಹೊಟ್ಟೆಯ ನಾನಾ ತರದ ಶೂಲೆಗಳು—ಈ ರೋಗಗಳನ್ನೆಲ್ಲಾ ವಾಸಿಮಾಡುತ್ತದೆ. ಈ ಪರ್ಯಾಯುಕ್ತವಾದ ಔಷಧವು ಜನರನ್ನು ಬದುಕಿಸಿರುವಷ್ಟು ಮತ್ತು ನೋವನ್ನೂ ಬಾಧೆಯನ್ನೂ ನಿವಾರಿಸಿರುವಷ್ಟು ಪ್ರಪಂಚದಲ್ಲೇ ಇನ್ಯಾವ ಔಷಧವೂ ಮಾಡಿರುವುದಿಲ್ಲ.

ಜ್ಞಾಪಕದಲ್ಲಿಟ್ಟುಕೊಳ್ಳಿ—ಒಂದು ಸೊಟ್ಟು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯಲ್ಲಿರುವ ಎಲ್ಲಾ ತರದ ನೋವನ್ನೂ ನಿಲ್ಲಿಸಿಬಿಡುತ್ತದೆ. ಬಹಳ ಕಠಿಣವಾದ ಭೇದಿಯೂ ಕೂಡ ಸ್ವಲ್ಪ ಹೊತ್ತಿನಲ್ಲಿ ಈ ಔಷಧದಿಂದ ನಿರ್ಮೂಲವಾಗಿ ನಿಲ್ಲಿಸುತ್ತದೆ. ಖಂಡಿತವಾಗಿ ವಾಸಿಮಾಡುವುದೇ ಇದರ ಗುಣ.

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ.

ಕೈಯಿಂದ ಸ್ವಲ್ಪವೂ ಮುಟ್ಟಿದ್ದಲ್ಲ

ಇದು ಎಲ್ಲೆಲ್ಲೂ ಬಿಕರಿಯಾಗುವದು — ಸಣ್ಣ ಶೀಸೆಗೆ ೧ ರೂಪಾಯಿ — ದೊಡ್ಡ ಶೀಸೆಗೆ ೨ ರೂಪಾಯಿ.

ವೃತ್ತಾಂತ ಪತ್ರಿಕೆ.

ಸರ್ ೧೯೦೭ ನೇ ಇಸವಿ ಜನವರಿ ತಾ ೩ ನೇ ಗುರುವಾರ

ಹೊಸ ವರುಷವು.

ಇದು ೧೯೦೭ನೆ ಹೊಸ ವರುಷದ ಮೊದಲನೆಯ ಪತ್ರಿಕೆಯು. ಇಂಥಾ ಸಮಯಗಳಲ್ಲಿ ಕಾಲವೆಂಬುದು ದೊಡ್ಡ ಪ್ರವಾಹವೋಪಾದಿಯಲ್ಲಿ ಮಾನುಷವರ್ಗವನ್ನು ಹೊತ್ತುಕೊಂಡು ಉರುಳಿಹೋಗುತ್ತಿದೆ ಎಂದು ಜ್ಞಾಪಕಪಡಿಸುತ್ತದೆ. ಮತ್ತು ಈ ಪ್ರವಾಹದಲ್ಲಿ ನಾವು ಯಾವ ಕಡೆಗೆ ಹೋಗುತ್ತಿರುವೆವೆಂದು ಸ್ವಲ್ಪ ಯೋಚಿಸಬಹುದಾಗಿದೆ. ಈಚೆಗೆ ಜರ್ಮನಿ ಚಕ್ರವರ್ತಿಯವರು ಒಬ್ಬ ಪಂಡಿತನ ಕೂಡೆ ಮಾತನಾಡುತ್ತಿರುವಲ್ಲಿ ಆತನನ್ನು ಕುರಿತು—"ಸಿಡಿಮಿಡಿಪಡುವವರನ್ನು ಕಂಡರೆ ನನಗೆ ಸಹನವಿಲ್ಲ; ನಾನಾದರೋ ಸರ್ವದಾ ಮುಂದು ಮುಂದಕ್ಕೆ ನುಗ್ಗಿ ಹೋಗುತ್ತಲೇ ಇರಬೇಕು" ಎಂದು ಅಪ್ಪಣೆ ಕೊಡಿಸಿದರೆಂದು ಪ್ರಕಟವಾಗಿದೆ.

ಹಿಂದುಸ್ಥಾನವು ಎಲ್ಲಿಯೋ ಮುಂದೆ ನುಗ್ಗಿ ಹೋಗುತ್ತಿರುವುದು ನಿಜ; ತನ್ನ ಹಳೆಯ ವಸ್ತುಗಳನ್ನು ಬಿಟ್ಟು ಹೊಸ ರೂಪವನ್ನು ಧರಿಸಿಕೊಳ್ಳುತ್ತಲಿದೆ. ನಾವು ಬದಲಾವಣೆ ಹೊಂದಿ, ಯಾವ ಸ್ಥಿತಿಗೆ ಬರುವೆವು? ಬಂಗಾಳದಲ್ಲಿ ಕಳೆದ ವಾರ ನಡೆದ ಕೆಲವು ದೊಡ್ಡ ಸಮಾಜಗಳ ಕಾರ್ಯಗಳನ್ನು ಸ್ವಲ್ಪಮಟ್ಟಿಗೆ ಇನ್ನೊಂದು ಕಡೆ ವಿವರಿಸಿರುತ್ತೇವೆ. ಎಲ್ಲವನ್ನೂ ವಿವರಿಸುವುದಕ್ಕೆ ನಮಗೆ ಸ್ಥಳಸಂಕೋಚವಾಗಿರುತ್ತದೆ; ಕಾನೂನುಗಳನ್ನು ಬದಲಾವಣೆಮಾಡಿ, ಸ್ವರಾಜ್ಯಾಧಿಕಾರಗಳನ್ನು ಹಿಂದುಸ್ಥಾನದ ಪ್ರಜೆಗಳಿಗೆ ವಹಿಸಬೇಕೆಂದು ಕೇಳುವ ನ್ಯಾಷನಲ್ ಕಾಂಗ್ರೆಸ್ ಎಂಬ ಸಮಾಜವು ಕೂಡಿದನಂತರ ಸಂಘಪರಿಷ್ಕರಣ ಸಮಾಜವು ಪ್ರಾರಂಭವಾಯಿತು. ಪ್ರೆಸಿಡೆಂಟ್ ಸರ್ ಎಂ ಘೋಷ್ ಯವರು ಹೇಳುವಂತೆ "ಈ ರಾಷ್ಟ್ರದ ಪ್ರಾಚೀನಾಚಾರ ಪದ್ಧತಿಗಳೇ ಮುಂತಾದವು ಈಗಿನಕಾಲಕ್ಕೆ ಅನುಕೂಲಿಸುವಂತೆ ದಲಾವಣೆಯಾಗಬೇಕು." ಇಷ್ಟೇ ಅಲ್ಲ, ದೇಶೀಯ ಕಸಬು ಕೈಗಾರಿಕೆಗಳ ಪ್ರದರ್ಶನವೂ ಸಮಾಜವೂ ನಡೆದವು. ಈ ಸಮಾಜದಲ್ಲಿ ಬರೋಡಾ ಮಹಾರಾಜರವರು ಈ ರಾಷ್ಟ್ರದ ಗುಪ್ತಧನಗಳನ್ನೆಲ್ಲಾ ಕೈಗಾರಿಕೆ ಕಸಬುಗಳ ಮೂಲಕ ಅಭಿವೃದ್ಧಿಪಡಿಸಿಕೊಳ್ಳಬೇಕೆಂದು ಬಹು ಉತ್ಕೃಷ್ಟವಾದ ಭಾಷಣವನ್ನು ಮಾಡಿದರು. ಅತ್ತಲಾಗಿ ಢಕ್ಕಾ ನಗರದಲ್ಲಿ ಮಹಮದೀಯರು ದೊಡ್ಡ ಸಮಾಜವನ್ನು ನಡಿಸಿ, ತಮ್ಮ ಬಾಲಕರ ವಿದ್ಯಾಭಿವೃದ್ಧಿಗೆ ಬೇಕಾದ ಸೌಕರ್ಯಗಳನ್ನು ಒದಗಿಸಿಕೊಳ್ಳುವ ಭಾಗದಲ್ಲಿ ಕೆಲವು ತೀರ್ಮಾನಗಳನ್ನು ಮಾಡಿಕೊಂಡರು. ಇದಲ್ಲದೆ ಮಹಮದೀಯರು ರಾಜಕೀಯ ವಿಷಯಗಳಲ್ಲಿ ತಮ್ಮ ಅಭಿಪ್ರಾಯಗಳನ್ನು ಗವರ್ನಮೆಂಟಿಗೆ ಅರಿಕೆಮಾಡಿಕೊಳ್ಳುವುದಕ್ಕಾಗಿ ಢಕ್ಕಾ ನವಾಬರ ಕೃಪಾಪೋಷಣೆಯನ್ನು ಪಡೆದ ಒಂದು ರಾಜಕೀಯ ಸಂಘವನ್ನೂ ಏರ್ಪಡಿಸಿಕೊಂಡರು.

ಈ ಪ್ರಕಾರ ಎಲ್ಲರೂ ಒಂದೊಂದು ಭಾಗದಲ್ಲಿ ಅಭಿವೃದ್ಧಿ ಹೊಂದಬೇಕೆಂದು ಸಾಹಸಪಡುತ್ತಿದ್ದಾರೆ. ಬ್ರಿಟಿಷ್ ರಾಜ್ಯಭಾರವು ನಿಷ್ಪ್ರಯೋಜನಕರವಾದದ್ದೆಂದು ಕೆಲವರು ಹೇಳುವುದುಂಟು. ನಾವು ಈ ಅಭಿಪ್ರಾಯವನ್ನು ಒಪ್ಪಲಾರೆವು; ಇಂಗ್ಲಿಷ್ ರಾಜ್ಯಭಾರದ ದೆಸೆಯಿಂದಲೇ ಇಷ್ಟೊಂದು ಸಭೆಗಳೂ ಸಮಾಜಗಳೂ ನಡೆಯುವುದಕ್ಕೆ ಅವಕಾಶವುಂಟಾಗಿದೆ. ಹಿಂದೂ ಅಥವಾ ಮೊಗಲಾಯಿ ರಾಜ್ಯಭಾರಕಾಲಗಳಲ್ಲಿ ಯಾವ ಜನಗಳಾದರೂ ಸಭೆಸೇರಿ ಪ್ರಜಾಸಾಮಾನ್ಯಕ್ಕೆ ಅನುಕೂಲವೂ ಆವಶ್ಯಕವೂ ಆದಂಥಾ ರಾಜಕೀಯ, ಸಾಂಸರ್ಗಿಕ, ಅಥವಾ ಕಸಬು ಕೈಗಾರಿಕೆಗಳ ಬದಲಾವಣೆಗೂ ಅಭಿವೃದ್ಧಿಗೂ ಏರ್ಪಾಡುಮಾಡಿಕೊಂಡದ್ದುಂಟೇ? ಇಂಥಾದ್ದಕ್ಕೆ ಆಗ ಜನರಿಗೆ ಅವಕಾಶವಿತ್ತೇ? ಇಂಗ್ಲಿಷ್ ಗವರ್ನಮೆಂಟಿನವರಿಂದ ಈ ರಾಷ್ಟ್ರದ ವಿವೇಕವೂ ಬುದ್ಧಿಕುಶಲತೆಯೂ ಕಾರ್ಯಸಾಧನೆಯೂ ಕುತೂಹಲವೂ ಹುಟ್ಟಿ ಬೆಳೆಯುತ್ತಾ ಬಂದಿರುವವು. ಆದ್ದರಿಂದ ಅವರ ರಾಜ್ಯಭಾರವು ಖಂಡಿತವಾಗಿಯೂ ನಿಷ್ಪ್ರಯೋಜನಕರವಾದುದಲ್ಲವು. ಹಾಗಾದರೆ ಬ್ರಿಟಿಷ್ ಆಳ್ವಿಕೆಯ ಉದ್ದೇಶಗಳೇನು? ಅಂಥಾ ಕೆಲವನ್ನು ಇಲ್ಲಿ ಸೂಚಿಸುತ್ತೇವೆ. ಸೃಷ್ಟಿಕರ್ತನ ನಿರ್ಮಾಣದಲ್ಲಿ ಮಾನವರು ಬುದ್ಧಿ ನೀತಿ ಸಾಮರ್ಥ್ಯ ಸಚ್ಚರಿತ್ರಗಳಲ್ಲಿ ಅಪಾರವಾಗಿ ಅಭಿವೃದ್ಧಿ ಹೊಂದುವುದಕ್ಕೆ ಶಕ್ತಿಯುಳ್ಳವರಾಗಿದ್ದಾರೆ. ಮಾನವರು ಯಾವ ತರವಾದ ರೀತಿಯಲ್ಲಿ ಏಳಿಗೆ ಹೊಂದಬೇಕೆಂದು ಆ ಪರಮಾತ್ಮನೇ ಅವರಲ್ಲಿ ಸರ್ವಕಾಲಗಳಲ್ಲೂ ನೆಲಸಿ ಕೆಲಸಮಾಡುತ್ತಿರುವನು. ಆತನು ದುಷ್ಟರನ್ನು ಶಿಕ್ಷೆಗೆ ಗುರಿಮಾಡಿ ಸತ್ಯವಂತರನ್ನು ಸರ್ವ ವಿಷಯಗಳಲ್ಲೂ ಮುಂದಕ್ಕೆ ತರುವನು. ಮಾನುಷವರ್ಗವೆಲ್ಲಾ ದೇವರ ಈ ಉದ್ದೇಶವನ್ನು ನೆನಸಿಕೊಳ್ಳುತ್ತಾ ಅದಕ್ಕನುಸಾರವಾಗಿಯೂ ಅದು ಕೈಗೂಡುವಂತೆಯೂ ನಡೆದುಕೊಳ್ಳಬೇಕಾಗಿದೆ. ವಿಲಾಯಿತಿ ರಾಜ್ಯದ ಶಾಸ್ತ್ರಾಭ್ಯಾಸಿಗಳಲ್ಲಿ ವಿಶೇಷ ಘನತೆಯನ್ನು ಸಂಪಾದಿಸಿಕೊಂಡ ಸರ್ ಆಲಿವರ್ ಲಾಡ್ಜ್ ಎಂಬ ಮಹಾಪುರುಷನು ತನ್ನ ಅಭಿಮತವನ್ನು ಕುರಿತು ಬರೆದಿರುವುದನ್ನು ಓದಿ ನೋಡಿ—

"ಸಮಸ್ತವನ್ನು ನಡಿಸುವಂಥಾ ಪ್ರೀತಿವತ್ಸಲನಾದಂಥಾ ಮಧ್ಯಾಂತರಹಿತನಾದಂಥಾ ಏಕೋಭಗವಂತನಲ್ಲಿ ನಾನು ಭಕ್ತಿ ವಿಶ್ವಾಸಗಳನ್ನಿಟ್ಟುಕೊಂಡಿರುತ್ತೇನೆ. ಆ ತಂದೆಯಲ್ಲೇ ಸಮಸ್ತ ಅಡಕವಾಗಿರುವದು. ಆತನ ಭಗವತ್ ಸ್ವಭಾವವು ನಮ್ಮ ಕರ್ತನಾದ ಯೇಸುಕ್ರಿಸ್ತನ ಮೂಲಕ ಮಾನವರಿಗೆ ಪ್ರತ್ಯಕ್ಷಪಡಿಸಲ್ಪಟ್ಟದೆ ಎಂದು ನಾನು ನಂಬುತ್ತೇನೆ. ಆ ದೈವಿಕ ಸ್ವಭಾವವನ್ನು ಅರಿತು, ಅದು ಸಾರ್ಥಕವಾಗುವುದಕ್ಕೆ ಭೂಲೋಕದಲ್ಲಿ ಮಾನವರಿಗೆ ಅವಕಾಶ ಕಲ್ಪಿಸಿರುವುದು. ಮನುಷ್ಯನು ದೇವರಲ್ಲಿ ಅನನ್ಯಭಕ್ತಿಯನ್ನು ಇಡಲು ಪ್ರಾರ್ಥನೆಯೇ ಮುಖ್ಯ ಮಾರ್ಗ. ನಾವು ಒಳ್ಳೆಯವರಾಗಿರಲು ಪ್ರಯತ್ನಿಸುವ ಎಲ್ಲಾ ಭಾಗದಲ್ಲೂ ಸರ್ವದಾ ಪವಿತ್ರಾತ್ಮನು ನಮಗೆ ಸಹಾಯ ಮಾಡಲು ಸಿದ್ಧನಾಗಿರುತ್ತಾನೆ. ನಾವು ಪವಿತ್ರವಾದ ಕಾರ್ಯಗಳನ್ನೇ ನಡಿಸುತ್ತಾ ಬಂದು ಕಡೆಯಲ್ಲಿ ಶಾಶ್ವತ ಪರಲೋಕವನ್ನು ಹೊಂದಿ ನಿತ್ಯಾನಂದವನ್ನನುಭವಿಸುವವರಾಗೋಣ."

ಈ ವಿಧವಾದ ಭಕ್ತಿಮಾರ್ಗವನ್ನೆಲ್ಲಾ ನಮ್ಮ ವಾಚಕರಲ್ಲಿ ಕೆಲವರು ಒಪ್ಪಿಕೊಳ್ಳದೆ ಇರಬಹುದು. ಆದರೆ ಇದರಲ್ಲಿ ಬಹು ಭಾಗವನ್ನು ಎಲ್ಲರೂ ಒಪ್ಪಿಕೊಂಡಾರೆನ್ನುವುದಕ್ಕೆ ಸಂಶಯವಿಲ್ಲ. ಇಂಥಾ ಭಕ್ತಿಯನ್ನಿಟ್ಟುಕೊಂಡ ಮೇಲೆ ನಿರಾಶೆಯನ್ನೂ ಸೋಮಾರಿತನವನ್ನೂ ಅಸಡ್ಡೆಯ ಸ್ವಭಾವವನ್ನೂ ತ್ಯಜಿಸಿಬಿಡೋಣ. ಅದೃಷ್ಟವೆಂದಾಗಲಿ ಕಲಿಯುಗವೆಂದಾಗಲಿ ಎಂದಿಗೂ ಹೇಳದೆ ಇರೋಣ. ಈ ಹೊಸ ವರುಷವು ನಮ್ಮ ವಾಚಕರಿಗೆ ಸಮಾಧಾನ ಸುಖ ಸಂತೋಷದಾಯಕವಾಗಲೆಂದು ಪ್ರಾರ್ಥಿಸುತ್ತೇವೆ.

ಒಳದೇಶದ ವೃತ್ತಾಂತಗಳು

ನಮ್ಮ ಚಂದಾದಾರರೆಲ್ಲಾ ವೃತ್ತಾಂತ ಪತ್ರಿಕೆಯ ೧೯೦೭ ವರುಷದ ಕ್ಯಾಲೆಂಡರನ್ನು ಈ ಪತ್ರಿಕೆಯ ಮೂಲಕ ಕಳುಹಿಸಿದೆ.

****

ರಾಮಸ್ವಾಮಿಯಲ್ಲಿ ದೊಡ್ಡಕೆರೆಯ ನೀರನ್ನು ಉಪಯೋಗಿಸತಕ್ಕಂದು ನಿಶ್ಚಯಿಸಿದ್ದ ಆಬ್ಕಾರಿ ಸಿದ್ಧರಾಮಶೆಟ್ಟಿ ಈ ನಿರ್ಬಂಧ ನಾಳೆಯಿಂದ ಜಾರಿಮಾಡುವದಾಗಿ ಪ್ರಕಟಿಸಿದಾರೆ.

****

ಶ್ರೀ ಮಹಾರಾಜರವರು ಕಲ್ಕತ್ತೆಯಿಂದ ದಯಮಾಡಿದರೆ ಕ್ರಿಸ್ಮಸ್ ವಿಕ್ಟೋರಿಯಾ ಸ್ವಾಮಿಗಳ ದರ್ಶನಕ್ಕೆ ಹೋಗುವ ಅವರನ್ನು ರಾಮಸ್ವಾಮಿಗೆ ಬರಮಾಡುವಂತೆ ಕೇಳಿಕೊಳ್ಳುವರು.

****

ಕೋಲಾರ್ ಚಿನ್ನದ ಗಣಿಗಳ ಮ್ಯಾನೇಜರುಗಳ ಪೈಕಿ ಆರ್ಥರ್ ಟೇಯ್ಲರ್ ಎಂಬುವರು ಮಾಂಗನೀಸ್ ಎಂಬ ಲೋಹದ ಕಂಡುಹಿಡಿಯುವುದಕ್ಕಾಗಿ ತುಂಕೂರು ಡಿಸ್ಟ್ರಿಕ್ಟಿಗೆ ಬಂದಿದ್ದಾರೆ.

ಬೆಂಗಳೂರಿನಲ್ಲಿ ಟ್ರಾಂವೇ ಗಾಡಿಗಳನ್ನು ಇಟ್ಟು ವಿದ್ಯುಚ್ಛಕ್ತಿಯ ಸಹಾಯದಿಂದ ಓಡಿಸಬೇಕೆಂಬ ವಿಚಾರವಾಗಿ ಅದಕ್ಕೆ ಬೇಕಾಗುವ ಯಂತ್ರಗಳನ್ನು ಕಂಬಿ ಮೊದಲಾದ ಸಾಮಾನು [illegible] ತರಿಸುವವರಲ್ಲಿದಾರೆ

****

[illegible] ಮಹಾರಾಜರವರು, ಯುವರಾಜರವರು [illegible] ಕಳೆದ [illegible] ವೋಲೋ [illegible] ಆದರೆ ಇವರ ಗುಂಪು ಸ್ವಲ್ಪದರಲ್ಲೇ ಸೋ[illegible] [illegible]ತೆಂದು ತಂತೀ ವರ್ತಮಾನ ಬಂದಿದೆ

****

[illegible]ಕ್ಕೆ ಸೇರಿದ ಛಾಂಪಿಯನ್ ರೀಫ್ ಗಣಿ ಪ್ರಾಂತ್ಯದಲ್ಲಿ [illegible]ರವರು ಒಂದು ಭಾರೀ ಕೆರೆಯನ್ನು ಕಟ್ಟಿಸುತ್ತಿದಾರೆ. [illegible] ಬೇತಮಂಗಲದ ಕೆರೆಯ ನೀರನ್ನು ಹರಿದುಬಿಟ್ಟು ಪ್ರಜೆಗಳಿಗೆ [illegible] ಸರಬರಾಯಿ ಆಗುವಂತೆ ಮಾಡುತ್ತಿರುವರು

****

[illegible] ಡಾಯಿ ಎಫ್ ಜೆ ಟಾಸು ಬಹದೂರ್ ಯವರು [illegible] [illegible] ಕಂಟ್ರೋಲರ್ ಕೆಲಸವನ್ನು ಬಿಟ್ಟು [illegible] [illegible] [illegible] ಸತ್ಯರಾಜ [illegible] [illegible] ಭಾರವನ್ನು ವಹಿಸಿಕೊಂಡು ನೋಡುತ್ತಿದಾರೆ

****

[illegible] ಸೆಂಟ್ರಲ್ ಕಾಲೇಜ್ ಪ್ರೈವೇಟ್ ಸಾಮಾನು [illegible] ಸರ್ಕಾರ [illegible] ದುರುಪಯೋಗಪಡಿಸಿದನೆಂದು [illegible] ಮೊಕದ್ದಮೆಯನ್ನು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ [illegible] ಸೆಷನ್ ವಿಚಾರಣೆಗೆ ಒಪ್ಪಿಸಿದ್ದಾರೆ

****

[illegible]ಕಳ್ಳಿ ತಾಲ್ಲೂಕು [illegible] ಗ್ರಾಮದಲ್ಲಿ [illegible] [illegible] ಕಳೆದ ಬುಧವಾರ ರಾತ್ರಿ ಬೆಂಕಿ ಬಿದ್ದು ಸುಟ್ಟು ಹೋಯಿತೆಂ[illegible] ಸೇರಿ ಬೆಂಕಿಯನ್ನು ನಂದಿಸಿದರೆಂದೂ ತಿಳಿಯಬಂದಿದೆ

****

[illegible] ಕಳೆದ [illegible] ನೆ ಬುಧವಾರ ರಾತ್ರಿ [illegible] ಎಂಬವನ ಮನೆಗೆ ಬೆಂಕಿ ಬಿದ್ದು ಉರಿದುಹೋಗಿ [illegible] ಸುಮಾರು [illegible] ನಷ್ಟವಾದದ್ದಲ್ಲದೆ [illegible] ಪೋಲೀಸ್ [illegible] ಮಾಡಿದ್ದಾರೆ [illegible] ತಿಳಿದು ಬಂದಿದೆ

****

[illegible] ವೆಂಕಟಸುಬ್ಬಯ್ಯನೆಂಬ ಬ್ರಾಹ್ಮಣನನ್ನು [illegible] ಮೊಕದ್ದಮೆಯು ಕಳೆದ ವಾರ [illegible] ಕಲ್ಯಾಣಮ್ಮನೆಂಬ ಅಪರಾಧಿಗೆ [illegible] ವಿಧಿಸಿ ಉಳಿದ ಅಪರಾಧಿಗಳನ್ನು [illegible] ಬಿಟ್ಟು [illegible] ಬಿಟ್ಟು ಬಿಟ್ಟರೆಂದು ತಿಳಿಸುತ್ತಾರೆ

****

[illegible]ರವರು [illegible] ಮುನಿಸಿಪಲ್ [illegible] ದಿನವನ್ನು [illegible] ಬೆಂಗಳೂರು [illegible] ಸರ್ಕಾರದವರು ಪ್ರಕಟಿಸಿದಾರೆ [illegible] ಮುನಿಸಿಪಾಲಿಟಿಗಳಲ್ಲಿ ಜಾರಿಗೆ ತರುವ ವಿಷಯದಲ್ಲಿ [illegible]ಗಳ ಅಭಿಪ್ರಾಯವನ್ನು ಕೇಳಿದ್ದಾರೆ.

****

[illegible] ಶುಕ್ರವಾರ ಪಟ್ಟಣದಲ್ಲಿ ನಮ್ಮ [illegible] ಲಾರ್ಡ್ ಮಿಂಟೋ [illegible] ಭೇಟಿ [illegible] ಮೈಸೂರು [illegible] ದಿನ ಸಾಯಂಕಾಲ [illegible] ಎಂಬ ರಾಜಭವನಕ್ಕೆ [illegible] ನಮ್ಮ [illegible] ಗೆ [illegible] ತಂತೀ ವರ್ತಮಾನ ಬಂದಿದೆ

****

[illegible] ಇನ್ಸ್ಪೆಕ್ಟರ್ [illegible] ಕಾರ್ಯ [illegible] ಕಟ್ಟಡವನ್ನು [illegible] ಅಥವಾ [illegible] [illegible] ಆಸ್ಪತ್ರೆಯನ್ನು ನಡೆಸುತ್ತಾರೆಂದು [illegible] [illegible] ಡಾಕ್ಟರ್, ಸಹಾಯಕ [illegible] ಕಟ್ಟಡಗಳನ್ನು [illegible] ಸುವವರಾಗಿದ್ದಾರೆ

****

[illegible] ಮಹಾರಾಜ್ ರೈಲ್ವೇ ಕಂಪನಿಯವರು ಈಗಿರುವ [illegible] ಗಾಡಿಗಳನ್ನು ತೆಗೆದುಹಾಕಿ ಹೊಸ ತರಹ ಎಂಜಿನ್‌ಗಳನ್ನು [illegible] [illegible] ಎಂಜಿನ್‌ಗಳನ್ನು [illegible] ಗಾಡಿಗಳಿಗೆ [illegible] ರೂಪಾಯಿ ಆಗುವುದು [illegible] ರೂಪಾ[illegible] ಎರಡು ಎಂಜಿನ್‌ಗಳನ್ನು ಮೈಸೂರ್ ಸ್ಟೇಟ್ ರೈಲ್ವೇ [illegible]

****

[illegible] ಮಹಾರಾಜ್ ರೈಲ್ವೇ ಕಂಪನಿಯವರು ಮೈಸೂರು [illegible] ಕೋಲಾರ್ ಚಿನ್ನದ ಗಣಿಯಿಂದ [illegible] ಮಾರ್ಗವಾಗಿ [illegible] ಸ್ಟೇಷನಿಗೆ ರೈಲುರಸ್ತೆ [illegible] ನಮ್ಮ ಸರ್ಕಾರದವರ [illegible] ಚಿನ್ನದ ಗಣಿಯಿಂದ [illegible] [illegible] ಅನುಕೂಲವಾ[illegible] ಸರ್ಕಾರದವರ ಆಲೋಚನೆಯಾಗಿದೆ

****

[illegible] ಪಟ್ಟಣದ ಸೆಂಟ್ರಲ್ ಕಾಲೇಜ್ ಎಂಬ [illegible] ಕಳೆದ [illegible] ಹಿಂದುಸ್ಥಾನದ [illegible] ಸಭೆ ನಡೆಯಿತು [illegible] ಎಲ್ಲಾ [illegible] ಪ್ರಜೆಗಳು [illegible] ನಮ್ಮ [illegible] ಸಭೆಗೆ [illegible] ಹಿಂದುಸ್ಥಾನದ [illegible] ಅಭಿವೃದ್ಧಿಗೆ [illegible] ಉಪನ್ಯಾಸಗಳನ್ನು ಮಾಡಿದರು

ಶಿವಸಮುದ್ರದ ವಿದ್ಯುಚ್ಛಕ್ತಿಯ ಕಾರ್ಖಾನೆಯಲ್ಲಿ ನೌಕರರಾಗಿರುವ [illegible] ವೆಲ್ಲರ್ [illegible] ಹಿಂದುವಿಗೆ ವಿಧಿಸಿ [illegible] ರೆಂದು [illegible] ಬೆಂಗಳೂರು [illegible] [illegible] ಕೋರ್ಟಿನಲ್ಲಿ [illegible] ಸರ್ಕಾರದ ಕಡೆ [illegible] ವೆಲ್ಲರ್ [illegible] [illegible] ಈ ಮೊಕದ್ದಮೆಯು [illegible] ತಿಂಗಳ ೮ ಕ್ಕೆ ವಿಚಾರಣೆಯಾಗುವುದು

****

ಒಬ್ಬ ಬಾತ್ಮೀದಾರರು ಬರೆಯುವುದು — [illegible] ಹಳ್ಳಿಗೆ ೧ ಮೈಲಿ ದೂರದಲ್ಲಿರುವ [illegible] ಗ್ರಾಮದಲ್ಲಿ ತಾ ೨ ನೆ ರಾತ್ರಿ [illegible] ಅದನ್ನು ಕೇಳುವದಕ್ಕೆ ತುಂಬಾ ಜನರು ಸೇರಿದ್ದರು. ಬೆಳಗಿನ ಝಾವದಲ್ಲಿ ಸದರಿ ಗ್ರಾಮದ [illegible] ಗಳು ಬಹು [illegible] ಅದನ್ನು ಕೇಳಿ ಕೆಲವರು ಅಲ್ಲಿಗೆ ಹೋಗಿ ನೋಡಲು ಒಂದು [illegible] ಚಿರತೆಯನ್ನು [illegible] ಗಳು [illegible] ಕೆಲವರು [illegible] ನಾಯಿಗಳನ್ನು ಕರೆದುಕೊಂಡು ಒಂದು ಚಿರತೆಯನ್ನು [illegible] ಹೋಗಿ [illegible] ಕೊಂದುಹಾಕಿ ಇನಾಮು ಪಡೆಯಲು ತಾಲ್ಲೂಕಿಗೆ ತೆಗೆದುಕೊಂಡು [illegible] ಈ ಊರಿನ ಸುತ್ತಲೂ ತುಂಬಾ ಅಡವಿ ಇರುವುದರಿಂದ ಇಂಥಾ ಕ್ರೂರ ಮೃಗಗಳು [illegible] ಬಹಳವಾಗಿ ಬಾಧಿಸುತ್ತಿವೆ

ಬಹುಮಾನ ಪಡೆದ ವರ್ತಮಾನವು

[ಈ ಬಾತ್ಮಿ ಬರೆದ ಮಿ॥ ಕೃಷ್ಣಸಿಂಗರಾವ್, ಮಧುವನಹಳ್ಳಿ, ಕೊಳ್ಳೆಗಾಲಂ ತಾಲ್ಲೂಕು ಇವರಿಗೆ ಈ ವಾರದ ಬಹುಮಾನವನ್ನು ಕಳುಹಿಸಿದೇವೆ]

ಮನುಷ್ಯನನ್ನು ಹುಲಿ ತಿಂದದ್ದು

ಕೊಳ್ಳೆಗಾಲಂ ತಾಲ್ಲೂಕು ಮಧುವನಹಳ್ಳಿ [illegible] [illegible] ಜಾತಿ [illegible] ಎಂಬುವ ೪೦ ವರ್ಷ ವಯಸ್ಸಿನವನು ಇದೇ ತಿಂಗಳು ೨೦ ನೇ ತೇದಿ ಶನಿವಾರ [illegible] ಎಂಬುವ ೨೦ ವರ್ಷದ [illegible] ಕರೆದುಕೊಂಡು [illegible] [illegible] ಊರಿಗೆ ೩ ಮೈಲಿ ದೂರದಲ್ಲಿರುವ [illegible] ಸುಮಾರು ೫೦ ಗಜದ ದೂರದವರೆಗೆ [illegible] [illegible] ಹುಲಿಯು [illegible] [illegible] ಬೆಟ್ಟದ ಮೇಲೆ [illegible] [illegible] [illegible] ಸುಮಾರು ೩೦೦ ಜನರು [illegible] ಸಾಯಂಕಾಲ ತಲುಪಿ [illegible] ನೆಲವೆಲ್ಲಾ ರಕ್ತಮಯವಾಗಿತ್ತು. ಸುಮಾರು ೧೦೦ ಜನರು [illegible] [illegible] ಸುಮಾರು [illegible] ಮೈಲಿ [illegible] [illegible] ಹುಲಿಯ [illegible] [illegible] ಹೋರಟುಹೋಯಿತು. [illegible] ಆಸ್ಪತ್ರೆಗೆ [illegible] [illegible] [illegible] ಮೂರು ಘಂಟೆಗೆ ಬಂದು [illegible] ಅಪ್ಪಣೆ ಕೊಟ್ಟ ಮೇಲೆ ನಿಕ್ಷೇಪಿಸಿದರು. ಅವನ [illegible] ಮಕ್ಕಳ ಗೋಳನ್ನು ಕೇಳಲಾರದು

ಬಾತ್ಮೀದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರುವ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು. ಆದಕಾರಣ ಬಾತ್ಮೀದಾರರು ನಮ್ಮ [illegible] ಸ್ಪಷ್ಟವಾಗಿ ಹೆಸರು ವಿಳಾಸಗಳನ್ನು ಬರೆದು [illegible] ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ನಿಗಾ ಕೊಡಲಾರೆವು

ಬಾತ್ಮೀದಾರರು ಬರೆಯುವ ಅಭಿಪ್ರಾಯಗಳಿಗೆ ನಾವು ಜವಾಬ್ದಾರರು ಆಗುವುದಿಲ್ಲವೆಂಬುದನ್ನು ಸಕಲರೂ ತಿಳಿಯತಕ್ಕದ್ದು.—ಎಡಿ

ಕರೆಸ್‌ಪಾಂಡೆನ್ಸ್.

ಪಟೇಲಿ ಕೆಲಸಕ್ಕೆ ಗ್ರಾಮಸ್ಥರ ಅಭಿಪ್ರಾಯ.

ಅಯ್ಯಾ,

ಬೆಂಗಳೂರು ತಾ ಉತ್ತರಹಳ್ಳಿ ಹೋಬಳಿ ದೊಡ್ಡಕಲ್‌ಸಂದ್ರದ ಗ್ರಾಮದ ಪಟೇಲ್ ನಂಜೇಗೌಡನಿಗೆ ೮೦ ವರುಷ ವಯಸ್ಸಾಗಿತ್ತು. ಈತನು ತನ್ನ ಕೆಲಸವನ್ನು ತನ್ನ ಮಗನಾದ ವೆಂಕಟೇಗೌಡನ ಹೆಸರಿಗೆ ಮಾಡಿಸಿದನು. ಅಷ್ಟರಲ್ಲೇ ಈತನಿಗೆ ಕಾಯಿಲೆಯಾಗಿ ೬-೭ ದಿವಸದಲ್ಲಿ ಕಾಲವಾದನು. ಆತನ ಮಗ ವೆಂಕಟೇಗೌಡನು ಅನ್ನ ತಂದೆ ಸತ್ತನೆಂಬ ವ್ಯಸನದಿಂದ ೬-೭ ದಿವಸದಲ್ಲಿ ಸತ್ತುಹೋದನು. ಅವನ ಮನೆಯಲ್ಲಿ ಗಂಡಸರು ಯಾರೂ ಇಲ್ಲ. ಆದಕ್ಕೆ ಗ್ರಾಮಸ್ಥರಿಗೆ ಬಹಳ ವ್ಯಸನವುಂಟಾಗಿದೆ. ತಂದೆ ಮಕ್ಕಳು ಬಹಳ ಧರ್ಮಿಷ್ಠರಾಗಿ ಜನಗಳಿಗೆ ಬಹಳ ಉಪಕಾರಮಾಡುತ್ತಾ ಸರ್ಕಾರದ ಕೆಲಸವನ್ನು ಸರಿಯಾಗಿ ನೋಡುತ್ತಾ ಇದ್ದರು. ಇಂಥಾವರು ನಮಗೆ ದೊರೆಯುವುದಿಲ್ಲವೆಂದು ಬಹಳ ವ್ಯಸನಪಡುತ್ತಾ ಇದಾರೆ. ಈ ಊರಿನಲ್ಲಿರುವ ಪಿಲ್ಯಾಯ್ಯನ ಮಗನು [illegible] ಕೆಲಸವನ್ನು ಮಾಡಿರುತ್ತಾನೆ. ಇಂಥಾನಿಗೆ ಇಲ್ಲಿನ ಪಟೇಲಿ ಕೆಲಸ ಕೊಟ್ಟರೆ ಸರ್ಕಾರದ ಕ್ಕೂ ಪ್ರಜೆಗಳಿಗೂ ಬಹಳ ಉಪಕಾರಮಾಡುತ್ತಾನೆ. ಈತನು ಧರ್ಮದ ಕೆಲಸವನ್ನು ಈ ಊರಿನಲ್ಲಿ ಅನೇಕ ಮಾಡಿರುತ್ತಾನೆ. ಇನ್ನೂ ಮಾಡುತ್ತಾ ಇದಾನೆ. ಸರ್ಕಾರದವರು ದಯವಿಟ್ಟು ಪ್ರಜೆಗಳ ಉಪಯೋಗಕ್ಕಾಗಿ ಸದರಿ ಪಿಲ್ಯಾಯ್ಯನಿಗೆ ಪಟೇಲಿ ಕೆಲಸ ಕೊಟ್ಟರೆ ಗ್ರಾಮಸ್ಥರಿಗೆ ಮತ್ತು ಪರಸ್ಥರವರಿಗೆ ಸಂತೋಷವಾಗಿರುತ್ತದೆ.

ಅಬ್ದುಲ್ ಕರೀಂ ಸಾಬ್

ಭತ್ತ ಕುಟ್ಟುವ ಯಂತ್ರ ಬೇಕು

ಅಯ್ಯಾ,

ನಮಗೆ ಭತ್ತ ಕುಟ್ಟುವ ಯಂತ್ರ ಬೇಕಾಗಿದೆ. ದಿನಕ್ಕೆ ೬—೮ ಖಂಡಗ ಭತ್ತ ಕುಟ್ಟಬೇಕು. ಒಬ್ಬ ಅಥವಾ ಇಬ್ಬರು ಆಳುಗಳ ಸಹಾಯದಿಂದ ಕೆಲಸ ನಡೆಯಬೇಕು. ರಿಪೇರಿ ಮಾಡಿಸಲು ಸುಲಭವಾಗಿರಬೇಕು. ಸುಲಭ ಕ್ರಯವುಳ್ಳದ್ದಾಗಿಯೂ ಮಜಬೂತಾಗಿಯೂ ಇರಬೇಕು. ಈ ವಿಷಯವನ್ನು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಿ ತಾವಾಗಲಿ ತಮ್ಮ ವಾಚಕರಲ್ಲಿ ಯಾರಾದರೂ ಸದರೀ ಯಂತ್ರ ಸಿಕ್ಕುವ ಕಂಪನಿಯ ಹೆಸರು ವಿಳಾಸಗಳನ್ನು ತಿಳಿಸಿದಲ್ಲಿ ತುಂಬಾ ಸಹಾಯ ಮಾಡಿದಂತಾಗುವುದು.

ಬಿ. ಸೂರ್ಯನಾರಾಯಣರಾವ್,

ಚಿಕ್ಕಗಟ್ಟ ತಾಲ್ಲೂಕು. ಬಿಸೆಟ್ಟಳ್ಳಿ

ವೈಶ್ಯರ ಆಕ್ಷೇಪಣೆ

ಅಯ್ಯಾ,

ನಮ್ಮ ಗವರ್ನಮೆಂಟಿನವರು ಪ್ರಕಟಿಸುತ್ತಿರುವ ಜಾತಿವರ್ಣನೆಯ ಪುಸ್ತಕದ ೬ ನೇ ಪ್ರಕರಣದಲ್ಲಿ ಕೋಮಟಿಗರ ವರ್ಣನೆಯನ್ನು ಬರೆದು ಪ್ರಕಟಿಸಿರುತ್ತಾರೆ. ಈ ಪುಸ್ತಕದಲ್ಲಿ ನಮ್ಮ ಜನರು ಮದುವೆಯ ಎಲ್ಲಾ ದಿನ [illegible] ಪೂಜೆಯ [illegible] [illegible] ಕನ್ಯೆಗೂ [illegible] ಕೊಳ್ಳುವರೆಂತಲೂ, ಇನ್ನೂ ನಮ್ಮಲ್ಲಿ ಇಲ್ಲದ ಅನೇಕ ವಿಷಯಗಳನ್ನು ಬರೆದು ಪ್ರಕಟಿಸಿರುತ್ತಾರೆ. ಈ ಆಚಾರಗಳ ನಿಜಕ್ಕೆ [illegible] ನಮ್ಮಲ್ಲಿ [illegible] [illegible] ಜನಗಳು [illegible] [illegible] ನಮ್ಮ ಕುಲಗುರುಗಳನ್ನು [illegible] ಕೇಳಿ ತಿಳಿದುಕೊಂಡಿದ್ದಲ್ಲಿ ಈ ರೀತಿ ಪ್ರಕಟಿಸಲು ಕಾರಣವಿರಲಿಲ್ಲ. ನಿಷ್ಪಕ್ಷಪಾತವಾಗಿ ನಮ್ಮ ವೈಶ್ಯರುಗಳಿಂದ ಎಂದಿಗೂ ತಿಳಿಯಲಿಲ್ಲ. ಮಿ॥ ಹೆಚ್. ವಿ. ನಂಜುಂಡಯ್ಯನವರಲ್ಲಿ [illegible] [illegible] ಈ ವಿಷಯವಾಗಿ ಮಾತಾಡಲು [illegible] ಇದರ ಫಲಿತಾಂಶವು ಇನ್ನೂ ತಿಳಿದಿಲ್ಲ. ಆದುದರಿಂದ ಈ ದೇಶದ [illegible] ದೊಡ್ಡ ಸಭೆಗಳಲ್ಲಿರುವ ವೈಶ್ಯ [illegible] ಜಾತಿವರ್ಣನೆಯ ಪುಸ್ತಕದ [illegible] ಕೋಮಟಿಗರ ವರ್ಣನೆಯನ್ನು ಚೆನ್ನಾಗಿ ಗಮನಿಸಿ ನಮ್ಮಲ್ಲಿ ಇಲ್ಲದಿರುವ ಅಂಶಗಳನ್ನೆಲ್ಲಾ ತೆಗೆದುಹಾಕಲು ಗವರ್ನಮೆಂಟಿನವರಿಗೆ ಅರಿಕೆ ಮಾಡಿಕೊಳ್ಳಬೇಕೆಂದು ಕೋರುತ್ತೇನೆ

ಒಬ್ಬ ವೈಶ್ಯ

ಪ್ಲೇಗ್ ಮಾರಿಯ ಮಹಿಮೆಯು.

ಅಯ್ಯಾ,

ಈ ಗ್ರಾಮದಲ್ಲಿ ಸುಮಾರು ೨ ವರುಷಗಳ ಹಿಂದೆ ಊರಿಗೆ ಪ್ಲೇಗ್ ಪ್ರವೇಶಿಸಿದ್ದ ಕಾಲದಲ್ಲಿ ಕೆಲವು ಜನಗಳು ಸೇರಿ ಪ್ಲೇಗ್ ಮಹಾಮಾರಿ ಎಂದು ಹೆಸರಿಟ್ಟು ಒಂದು ಪ್ರತಿಮೆಯನ್ನು ಮಾಡಿಸಿ ಪ್ರತಿಷ್ಠೆ ಮಾಡಿಸಿದರು. ಅಗಿನಿಂದಲೂ ಅನೇಕರು ತಮಗೆ ಏನಾದರೂ ಆಪತ್ತು ಬಂದ ಕಾಲದಲ್ಲಿ ಕೆಲವರು [illegible] ಕೆಲವರು ಕಾಣಿಕೆ ಕೊಡುತ್ತೇವೆಂದೂ ಇನ್ನೂ ಅನೇಕ ವಿಧವಾಗಿ ಹರಸಿಕೊಂಡು, ಕೆಲವು ದಿನಗಳ ಮೇಲೆ ಆಪತ್ತು ನಿವಾರಣೆ ಆದ ಪಕ್ಷದಲ್ಲಿ ಹರಕೆಯ ಪ್ರಕಾರ ಕಾಣಿಕೆಯನ್ನಾಗಲೀ ಕೋಣವನ್ನಾಗಲಿ ತಂದು ದೇವತೆಗೆ ಅರ್ಪಿಸುತ್ತಾರೆ. ಆ ರೀತಿಯಾಗಿ ಅನೇಕರು ತಮ್ಮ ಆಪತ್ತು ನಿವಾರಣೆ ಆದಕಾರಣ ದೇವತೆಗೆ ಬಲಿಕೊಟ್ಟಿರುವ ಕೋಣಗಳ ಚರ್ಮಗಳಿಂದಲೇ ಸುಮಾರು ೨೦೦—೩೦೦ ರೂಪಾಯಿ ಉತ್ಪತ್ತಿ ಆಗಿರಬಹುದು. ಈ ಮೊಬಲಗನ್ನೆಲ್ಲಾ ಅರ್ಚಕರುಗಳು ಉಪಯೋಗಿಸಿ ಇಟ್ಟಿರುತ್ತಾರೆ. ಇದೂ ಅಲ್ಲದೆ ದೂರಪ್ರಾಂತ್ಯಗಳಲ್ಲಿರುವ ಗ್ರಾಮಗಳವರು ಈ ರೀತಿ ದೇವತೆಗೆ ಹರಸಿರುವ ಆಭರಣಗಳೂ ಇವೆ. ಸುಮಾರು ೨ ತಿಂಗಳ ಕೆಳಗೆ ಈ ದೇವಾಲಯದಲ್ಲಿ ಕಳುವಾಯಿತು. ಆ ಕಳುವಾದ ಸಾಮಾನುಗಳು ಮೊನ್ನೆ ೨೮ ನೇ ತಾ ದಿನ ದೇವಸ್ಥಾನದ ಮುಂದೆ ಬಿದ್ದಿದ್ದುವು. ಇದಕ್ಕೆ ಏನು ಕಾರಣವೋ ಗೊತ್ತಾಗಲಿಲ್ಲವೆಂದು ಜನಗಳು ಬಹಳ ಆಶ್ಚರ್ಯಪಡುತ್ತಾರೆ.

ಈ ಗ್ರಾಮದಲ್ಲಿ ಮೊನ್ನೆ ೨೩ ನೇ ತಾ [illegible] ಒಂದು ಮಗುವಿಗೆ ಬೆಳಗು ಕಾಡಿಯಿತು. ಆ ಮಗು ೨೪ ನೇ ತಾ ಮಧ್ಯಾಹ್ನದವರೆಗೂ ಆ ರೋಗದಿಂದ ಬಾಧೆಪಡುತ್ತಿತ್ತು. ಮಧ್ಯಾಹ್ನದಿಂದ ಆಚೆಗೆ ನೋವು ಬಾಧೆ ಏನೂ ಇಲ್ಲದೆ ನೆಮ್ಮದಿಯಾಗಿ ಜೊತೆ ಮಕ್ಕಳ ಸಂಗಡ ಆಡಿಕೊಳ್ಳುತ್ತಿತ್ತು. ಆ ರಾತ್ರಿ ಊಟಮಾಡಿ ಮಲಗಿಕೊಂಡಿದ್ದು ಬೆಳಗ್ಗೆ ಮೇಲಕ್ಕೆ ಏಳಲೇ ಇಲ್ಲ. ಮನೆಯವರು ನೋಡಿದಾಗ ಪ್ರಾಣ ಹೋಗಿತ್ತು. ಬೇಳು ಕಡಿದು ಈ ರೀತಿ ಪ್ರಾಣ ಹೋದದ್ದು ಇದುವರೆಗೆ ಯಾವಾಗಲೂ ಇಲ್ಲ.

ಕ ವ ಡಾ.

ಹಿಂದುಸ್ಥಾನದ ಕೈಗಾರಿಕೆಗಳ ಪ್ರದರ್ಶನವು.

ಕಲ್ಕತ್ತೆಯಲ್ಲಿ ವೈಸ್‌ರಾಯಿಯವರು ಪ್ರಾರಂಭಿಸಿದರು

ಕಳೆದ ೨೯ ನೆ ಶನಿವಾರ ಹಿಂದುಸ್ಥಾನದ ಕೈಗಾರಿಕೆಗಳ ಮತ್ತು ವ್ಯವಸಾಯೋಪಕರಣಗಳ ಐದನೆಯ ಪ್ರದರ್ಶನಶಾಲೆಯು ಪ್ರಾರಂಭವಾಯಿತು. ಬಂಗಾಳಾ ಹೈಕೋರ್ಟಿನ ಜಡ್ಜಿಗಳು, ಲೆಫ್ಟಿನೆಂಟ್ ಗವರ್ನರವರು, ಇಂಡಿಯಾ ಗವರ್ನಮೆಂಟ್ ದೊಡ್ಡ ಉದ್ಯೋಗಗಳಲ್ಲಿರುವ ಸರ್ದಾರರು, ಸೆಕ್ರೆಟರಿಗಳು, ದರ್ಭಾಂಗದ ಮಹಾರಾಜರು, ಕೂಚ್ ಬೇಹಾರ್ ಮಹಾರಾಜರು, ನೈರ್ಪಸಿಂಗ್ ಮಹಾರಾಜರು, ರಾಜಾ ಪ್ಯಾರಿ ಮೋಹನ ಮುಖರ್ಜಿಯವರು, ಭಕ್ತಿಯಾರ್ ಷಹಾ ರಾಜಕುಮಾರರು, [illegible]ಪುರದ ಬಾಲ್ಯವಂಶಸ್ಥನ ರಾಜರು, ಸಭಾ ಸಂಸ್ಥಾನದ ಟಿಕ್ಕಾಸಾಹೇಬರು, ಈ ಮೊದಲಾದ ಯೂರೋಪ್ಯರ್ ಮತ್ತು ದೇಶೀಯ ಸರ್ದಾರರೂ ದೊಡ್ಡಮನುಷ್ಯರೂ ಪ್ರದರ್ಶನಶಾಲೆಯ ಮುಂದೆ ಹಾಕಿದ್ದ ದರ್ಬಾರ್ ಮಂಟಪದಲ್ಲಿ ಹಾಜರಾಗಿದ್ದರು. ಸಾಯಂಕಾಲ ೪ ಗಂಟೆಗೆ ವೈಸ್‌ರಾಯಿ ಲಾರ್ಡ್ ಮಿಂಟೋ ರವರು ಪತ್ನಿ ಪುತ್ರಿಯರೊಡಗೂಡಿ ಪರಿವಾರ ಸಹಿತ ಆ ಮಂಟಪಕ್ಕೆ ದಯಮಾಡಿ, ಅವರಿಗಾಗಿ ಬಿಟ್ಟಿದ್ದ ಶ್ರೇಷ್ಠಾಸನಗಳನ್ನು ಅಲಂಕರಿಸಿದರು. ಕೂಡಲೇ ವಾದ್ಯಘೋಷಗಳೂ ಮಂಗಳಗೀತಗಳೂ ಹಾಡಲ್ಪಟ್ಟವು. ಜಯಧ್ವನಿಗಳಾಗುತ್ತಿರುವಲ್ಲಿ ಮೇಲ್ಕಂಡ ಪ್ರದರ್ಶನಶಾಲೆಯ ಸೆಕ್ರೆಟರಿ ಮಿ। ಚೌಧರಿಯವರು ಎದ್ದು ವೈಸ್‌ರಾಯಿಯವರನ್ನೂ ಸಭಾಸದರನ್ನೂ ಕುರಿತು ಆ ಪ್ರದರ್ಶನಾಲಯದ ಸಂಕ್ಷೇಪಚರಿತ್ರೆಯನ್ನು ಅರಿಕೆಮಾಡಿದರು. ಅವರು ತಿಳಿಸಿದ ಮುಖ್ಯವಿಷಯಗಳೇನೆಂದರೆ—

ಪ್ರದರ್ಶನದ ಸಂಕ್ಷೇಪ ವಿವರಣೆಯು

ಹಿಂದುಸ್ಥಾನದ ನ್ಯಾಷನಲ್ ಕಾಂಗ್ರೆಸ್ ಎಂಬ ಸಾರ್ವಜನಿಕ ಸಮಾಜದ ಜೊತೆಗೆ ಕಳೆದ ಐದು ವರುಷಗಳಿಂದಲೂ ಹಿಂದುಸ್ಥಾನದ ಕೈಗಾರಿಕೆಗಳ ಮತ್ತು ವ್ಯವಸಾಯೋಪಕರಣಗಳ ಪ್ರದರ್ಶನವನ್ನೂ ನಡೆಸುತ್ತಾ ಬರಲಾಗಿದೆ. ಈ ಸಲ ಈ ಪ್ರದರ್ಶನವು ಕಲ್ಕತ್ತಾ ಪಟ್ಟಣದಲ್ಲಿ ನಡೆಯಬೇಕೆಂದು ಏರ್ಪಾಡಾಯಿತು. ಸಾರ್ವಜನಿಕ ಮತ್ತು ರಾಜಕೀಯ ವಿಷಯಗಳನ್ನು ಈ ರೀತಿ ಚರ್ಚಿಸುವ ಘಾಷ್ಠಿಗಳಿಂದ ಗವರ್ನಮೆಂಟಿನವರು ಆ ಸಭೆಯ ವಿಷಯದಲ್ಲಿ ಪರಾಙ್ಮುಖರಾಗಿರಬಹುದು. ಆದರೆ ದೇಶೋನ್ನತಿಗೆ ಸಹಾಯಭೂತವಾಗಿರುವ ಈ ಪ್ರದರ್ಶನಕಾರ್ಯಕ್ಕೆ ತುಂಬಾ ಪ್ರೋತ್ಸಾಹವಾಗಿರುತ್ತಾರೆ. ಈ ಪ್ರದರ್ಶನಶಾಲೆಯನ್ನು ಇನ್ನೂ ವಿಸ್ತಾರವಾಗಿ ಕಟ್ಟಿ ಹೆಚ್ಚು ಪದಾರ್ಥಗಳನ್ನು ತರಿಸಬಹುದಾಗಿತ್ತು. ಆದರೆ ಈ ಪ್ರಾಂತ್ಯ ಶಾಸವು ಪ್ರಜೆಗಳನ್ನು ಬಹಳವಾಗಿ ಕಷ್ಟಕ್ಕೆ ಗುರಿಮಾಡಿರುವುದು. ಬಂಗಾಳಾ ಗವರ್ನಮೆಂಟಿನವರು ಪ್ರೆಸಿಡೆನ್ಸಿ ಜನರಲ್ ಆಸ್ಪತ್ರೆಯ ಪಕ್ಕದಲ್ಲಿರುವ ಈ ಸ್ಥಳವನ್ನು ಪ್ರದರ್ಶನಶಾಲೆ ಕಟ್ಟುವುದಕ್ಕೆ ದಯಪಾಲಿಸಿ, ಇನ್ನೂ ನಾನಾವಿಧವಾಗಿ ಈ ಕಾರ್ಯವನ್ನು ಪ್ರೋತ್ಸಾಹಪಡಿಸಿರುವ ಭಾಗದಲ್ಲಿ ಪ್ರಜೆಗಳು ಅವರನ್ನು ವಂದಿಸುವರು. ಈ ಪ್ರಾಂತ್ಯದ ದೊಡ್ಡಮನುಷ್ಯರೂ ಇದಕ್ಕೆ ತುಂಬಾ ಸಹಾಯಮಾಡಿರುತ್ತಾರೆ. ಮುರ್ಷಿದಾಬಾದ್ ನವಾಬ್ ಬಹದೂರ್, ಕೂಚ್ ಬೇಹಾರ್ ಮಹಾರಾಜರು, ದರ್ಭಾಂಗದ ಮಹಾರಾಜರು, ಕಾಸಿಂಬಜಾರ್ ಮಹಾರಾಜರು, ರಾಜಾ ಪ್ಯಾರಿ ಮೋಹನ ಮುಖರ್ಜಿಯವರು, ಮಹಾರಾಜಾ ಸರ್ ಯತೀಂದ್ರ ಮೋಹನ ಠಾಕೂರ್‌ಯವರು, ಇನ್ನೂ ಬಹುಮಂದಿ ಪುಣ್ಯಾತ್ಮರು ಈ ಪ್ರದರ್ಶನಕ್ಕೆ ದ್ರವ್ಯಸಹಾಯಮಾಡಿದಾರೆ. ಕಲ್ಕತ್ತಾ ಪಟ್ಟಣದ ಮ್ಯುನಿಸಿಪಾಲಿಟಿಯವರು ೧೦,೦೦೦ ರೂಪಾಯಿ ಕೊಟ್ಟರು. ಈ ರೀತಿ ಅನೇಕರ ಧನ ಕೊಟ್ಟದ್ದಲ್ಲದೆ ಮುಂದಾಳಾಗಿ ನಿಂತು ಈ ಪ್ರದರ್ಶನವನ್ನು ಸರ್ವೋತ್ಕೃಷ್ಟವಾಗಿಯೂ ಸರ್ವಶ್ಲಾಘ್ಯವಾಗಿಯೂ ನಡಿಸಬೇಕೆಂದು ಪ್ರಾರ್ಥಿಸಿದ್ದರು. ಈ ಪ್ರದರ್ಶನಾಲಯವು ೧೦ ಎಕರೆ ಜಮೀನನ್ನು ಆವರಿಸಿಕೊಂಡಿರುವುದು. ಕಲ್ಕತ್ತೆಯಲ್ಲಿ ಇದುವರೆಗೆ ಇಷ್ಟು ಭಾರಿ ಪ್ರದರ್ಶನ ನಡೆದಿರುವದಿಲ್ಲ. ಪ್ರದರ್ಶನದ ದ್ವಾರವನ್ನು ಕಾರೀಗಾರರು ದೇಶೀಯ ಪ್ರಸಿದ್ಧ ಕಟ್ಟಡಗಳ ಆಕೃತಿಯಲ್ಲಿ ಕಟ್ಟಿ ಅಲಂಕಾರ ಮಾಡಿರುತ್ತಾರೆ. ನೋಡಿದವರೆಲ್ಲಾ ಇಂಥಾ ಸುಂದರವಾದ ಕಟ್ಟಡವನ್ನು ಕಡೆಯಲ್ಲಿ ಕಂಡು ಹೊಗಳಬೇಕಾಗಿದೆಯಲ್ಲಾ ಎಂದು ಹೇಳುವರು. ಈ ಪ್ರದರ್ಶನದಲ್ಲಿ ಸ್ವದೇಶೀ ಕಸಬುಗಳು, ವ್ಯವಸಾಯೋಪಕರಣಗಳು, ವಿದ್ಯುಚ್ಛಾಸ್ತ್ರೋಪಕರಣಗಳು, ಯಂತ್ರ ಸಾಧನಗಳು, ನಾನಾ ತರದ ಅವಶ್ಯಪದಾರ್ಥಗಳನ್ನು ಸುಲಭರೀತಿಯಲ್ಲಿ ತಯಾರುಮಾಡಿ ಒದಗಿಸುವಂಥಾ ಸಾಧನಗಳು ಈ ಮೊದಲಾದವುಗಳನ್ನೆಲ್ಲಾ ತರಿಸಿ ಇಟ್ಟಿದೆ. ಇದರ ಒಂದು ಪ್ರತ್ಯೇಕವಾದ ಭಾಗದಲ್ಲಿ ಹಿಂದುಸ್ಥಾನದ ಸ್ತ್ರೀಯರಿಂದಲೇ ತಯಾರುಮಾಡಲ್ಪಟ್ಟಿರುವ ನಾನಾ ಚಿತ್ರವಸ್ತುಗಳನ್ನಿಟ್ಟು ಪ್ರದರ್ಶನಮಾಡಲಾಗಿದೆ. ಇತರ ಜವಾಬ್ದಾರಿಯನ್ನು ಬೋಸ್, ಆರ್ಲ, ರಾಯ್, ಬ್ಯಾನರ್ಜಿ, ಮುಖರ್ಜಿ ಎಂಬೀ ದೊಡ್ಡಮನುಷ್ಯರ ಪತ್ನಿಯರುಗಳೇ ವಹಿಸಿಕೊಂಡು ಬಹಳ ಸಾಹಸಪಟ್ಟು ಪದಾರ್ಥಗಳನ್ನು ಹಿಂದುಸ್ಥಾನದ ಎಲ್ಲಾ ಪ್ರಾಂತ್ಯಗಳಿಂದಲೂ ತರಿಸಿರುತ್ತಾರೆ. ಚಿನ್ನ ಬೆಳ್ಳಿಯೇ ಮೊದಲಾದ ಲೋಹಗಳಲ್ಲೂ ದಂತ ತುಪಟ ರೇಷ್ಮೆ ಮುಂತಾದವುಗಳಿಂದಲೂ ಈ ದೇಶದ ಕಸಬುದಾರರು ತಯಾರುಮಾಡುವ ನಾನಾ ಚಿತ್ರವಸ್ತುಗಳೂ ಅವಶ್ಯಪದಾರ್ಥಗಳೂ ಪ್ರದರ್ಶನಮಾಡಲ್ಪಟ್ಟಿವೆ. ಇದಲ್ಲದೆ ಈ ಸಕಲ ಪದಾರ್ಥಗಳನ್ನೂ ಯಾವ ಸಾಧನಗಳಿಂದ ತಯಾರುಮಾಡಬೇಕೋ ಅಂಥಾ ಸಾಧನಗಳನ್ನೆಲ್ಲಾ ಅಲ್ಲಲ್ಲಿ ಕ್ರಮವಾಗಿ ಇಟ್ಟು ತೋರಿಸಲಾಗಿದೆ. ಹಿಂದುಸ್ಥಾನದಲ್ಲಿ ತಯಾರಾಗುವಂಥಾ ಸಮಸ್ತ ಅಪೂರ್ವ ಚಿತ್ರಕೆಲಸಗಳೂ ದಂತದ ಕೆಲಸಗಳೂ ಮರಕೆಲಸಗಳೂ ಪ್ರದರ್ಶನಮಾಡಲ್ಪಟ್ಟಿವೆ. ಇದರಿಂದ ಹಿಂದುಸ್ಥಾನದ ಕಸಬುದಾರರು ಬಹು ಲಾಭಕರವಾದ ನಾನಾ ಸುಲಭೋಪಾಯಗಳನ್ನು ನೋಡಿ ಕಲಿತುಕೊಂಡು ಹೋಗುವುದಕ್ಕೂ ದೇಶಾಭ್ಯುದಯಕ್ಕೆ ತುಂಬಾ ಸಹಾಯವಾದೀತೆನ್ನುವುದಕ್ಕೆ ಸಂಶಯವಿಲ್ಲ.

ದರ್ಭಾಂಗ ಮಹಾರಾಜರವರ ಭಾಷಣವು

ಅನಂತರ ದರ್ಭಾಂಗ ಮಹಾರಾಜರು ಎದ್ದು ವೈಸ್‌ರಾಯಿ ಲಾರ್ಡ್ ಮಿಂಟೋ ಪ್ರಭುಗಳನ್ನು ಕುರಿತು ಅರಿಕೆಮಾಡಿದ್ದೇನೆಂದರೆ—

ಇದು ಈ ರಾಷ್ಟ್ರದ ಕಸಬುದಾರರಿಂದ ತಯಾರುಮಾಡಲ್ಪಟ್ಟ ವಸ್ತುಗಳ ಪ್ರದರ್ಶನಶಾಲೆಯಾಗಿರುತ್ತದೆ. ಕಸಬುಗಳ ಈ ಕಟ್ಟಡವು ಸಮಾಧಾನದ ಮಂದಿರವಾಗಿರುವುದು. ಇದರಲ್ಲಿ ಭಿನ್ನಾಭಿಪ್ರಾಯಗಳನ್ನು ಹುಟ್ಟಿಸತಕ್ಕ ವಿಷಯ ಯಾವದೂ ಇರುವುದಿಲ್ಲ. ಯುದ್ಧದಲ್ಲಿ ಜಯಪ್ರದ ಹೊಂದಿ ಬರುವುದರಲ್ಲಿ ಉಂಟಾಗುವ ಕೀರ್ತಿ ಸಂತೋಷಾದಿಗಳಿಗಿಂತಲೂ ನೆಮ್ಮದಿ ಸಮಾಧಾನಗಳಲ್ಲಿ ಬರುವ ಸಂತೋಷವೂ ಅಭಿವೃದ್ಧಿಯೂ ಅತಿಶಯವಾದವುಗಳೆಂದು ಈ ಪ್ರದರ್ಶನಮಂದಿರದಿಂದ ಪ್ರಕಾಶವಾಗುವುದು. ಹೀಗೆಯೇ ಈ ರಾಷ್ಟ್ರದ ಬೇರೆ ಬೇರೆ ಜನಾಂಗಗಳೆಲ್ಲಾ ಏಕೀಭವಿಸಿ ಸಹಕರಿಸಿ ಸಂತೋಷಸಮಾಧಾನ ಐಶ್ವರ್ಯಾದಿಗಳಲ್ಲಿ ದಿನೇ ದಿನೇ ಅಭಿವೃದ್ಧಿ ಹೊಂದುವವರಾಗಲೆಂದು ಪ್ರಾರ್ಥಿಸುತ್ತೇನೆ. ನಮ್ಮ ದೇಶದ ಕೈಗಾರಿಕೆಗಳೂ ಕಸಬುಗಳೂ ವ್ಯಾಪಾರಗಳೂ ಹೆಚ್ಚದಲ್ಲದೆ ಸಂಪದ್ಯುಕ್ತವಾಗಲಾರದು. ನಮ್ಮ ದೇಶದಲ್ಲಿ ಕಸಬುಗಳು ನಾನಾ ತರದವುಗಳಾಗಿಯೂ ತುಂಬು ಉತ್ಕೃಷ್ಟವಾದವುಗಳಾಗಿಯೂ ಲೋಕಪ್ರಖ್ಯಾತವಾದವುಗಳಾಗಿಯೂ ಇದ್ದವು. ಆದರೆ ಪಾಶ್ಚಾತ್ಯ ಯಂತ್ರಸಾಧನಗಳು ಬಂದು ನಮ್ಮ ಅನೇಕ ಪ್ರಸಿದ್ಧ ಕಸಬುಗಳನ್ನು ಕ್ಷೀಣಗತಿಗೆ ತಂದುಬಿಟ್ಟವೆ. ವಿದ್ಯಾಭ್ಯಾಸಮಾಡಿದ ಕಸಬುದಾರರು ತಮ್ಮ ಕಸಬಿನಲ್ಲಿ ಜೀವನ ನಡೆಯುವುದಿಲ್ಲವೆಂದು ಹೇಳಿ ಕಸಬುಗಳನ್ನು ಅನುವರ್ತಿಸುವುದಿಲ್ಲ. ಕಸಬು ಅವಮಾನಕರವಾದದ್ದೆಂದು ಹೇಳಿ ಇತರರು ಕಸಬು ಕಲಿಯುವುದಿಲ್ಲ. ಜಾತಿ ಕಟ್ಟುಗಳು ದೇಶಾಭ್ಯುದಯಕ್ಕೆ ತುಂಬಾ ಹಾನಿಕರವಾಗಿರುತ್ತವೆ. ಈಗಲಾದರೋ ಗವರ್ನಮೆಂಟಿನವರು ಇವನ್ನೆಲ್ಲಾ ನೋಡಿ ಕಸಬುಗಳನ್ನು ಕಲಿಸತಕ್ಕ ಏರ್ಪಾಡುಮಾಡಿರುವರು. ಅನೇಕ ಪರದೇಶೀಯ ವರ್ತಕರು ಬಂದು ಕಸಬುಗಳನ್ನು ಮಾಡಿಸುತ್ತಾ ಜನರಿಗೆ ಹೇಳಿಕೊಡುತ್ತಾ ಬಂದಿದಾರೆ. ನಮ್ಮ ಪ್ರಜೆಗಳು ಬೇರೊಂದು ಹೊಸ ಪದಾರ್ಥವನ್ನು ಮಾಡುವುದಕ್ಕೆ ವಿದ್ಯೆ ಬುದ್ಧಿ ಶಕ್ತಿಗಳು ಇಲ್ಲದವರಾಗಿದ್ದರೂ ನೋಡಿದ ವಸ್ತುವಿಶೇಷವನ್ನು ಕೂಡಲೇ ಮಾಡಿಡುವಷ್ಟು ಸಮರ್ಥರಾಗಿರುತ್ತಾರೆ. ಈಗ ನಮ್ಮನ್ನು ಆಳುವುದಕ್ಕೆ ದಯಮಾಡಿರುವಂಥಾ ಮಹನೀಯರಾದ ತಮಗಿಂತಲೂ ನಮ್ಮ ಶ್ರೇಯಸನ್ನು ಬಯಸತಕ್ಕವರೂ ನಮ್ಮನ್ನು ಪ್ರೀತಿಸತಕ್ಕವರೂ ಯಾರೂ ಇರುವುದಿಲ್ಲ. ತಾವು ಈ ಕಸಬಿನ ಪ್ರದರ್ಶನಾಲಯವನ್ನು ಪ್ರಾರಂಭಿಸುವುದಾಗಿ ಕೃಪೆಯಿಟ್ಟು ಒಪ್ಪಿ ದಯಮಾಡಿದ ಭಾಗದಲ್ಲಿ ನಾವೆಲ್ಲಾ ತುಂಬಾ ಕೃತಜ್ಞರಾಗಿರುತ್ತೇವೆ. ತಾವೀಗ ಈ ಆಲಯವನ್ನು ತೆರೆಯಬೇಕೆಂದು ಪ್ರಾರ್ಥಿಸುವೆವು.

ವೈಸ್‌ರಾಯಿಯವರು ಅಪ್ಪಣೆಕೊಡಿಸಿದ್ದು

ಕಲ್ಕತ್ತಾ ಪಟ್ಟಣದಲ್ಲಿ ಇದು ಎರಡನೆಯ ಸಲ ನಡೆಯುವ ಪ್ರದರ್ಶನವೆಂದೂ ೧೯೦೧ ನೆ ಇಸವಿಯಲ್ಲಿ ಮೊದಲನೇ ಪ್ರದರ್ಶನವು ನಡೆಯಿತೆಂದೂ ಆ ವರುಷವೇ ಇಂಥಾ ಪ್ರದರ್ಶನ ನಡೆಯಲು ಈ ರಾಷ್ಟ್ರದಲ್ಲಿ ಪ್ರಾರಂಭವಾದುದೆಂದೂ ತಿಳಿದು ಬರುವುದು. ಈ ರಾಷ್ಟ್ರದ ಕಸಬುಗಳ, ಕೈಗಾರಿಕೆಗಳ ಮತ್ತು ವ್ಯವಸಾಯೋಪಕರಣಗಳ ಆಲಯವನ್ನು ಈ ಸಲ ತೆರೆದು ಪ್ರಾರಂಭಿಸುವದರಲ್ಲಿ ನನಗೆ ವಿಶೇಷ ಸಂತೋಷವುಂಟಾಗಿದೆ. ಇಂಥಾ ವಿಶೇಷವಾದ ಕಾರ್ಯಗೌರವವನ್ನು ನನಗೆ ವಹಿಸಿದ್ದಕ್ಕಾಗಿ ಮಹನೀಯರಾದ ನಿಮ್ಮನ್ನೆಲ್ಲಾ ಮನಃಪೂರ್ವಕವಾಗಿಯೂ ಕೃತಜ್ಞತಾಭಾವದಿಂದಲೂ ವಂದಿಸುವೆನು. ಇದುವರೆಗೆ ನೀವುಗಳು ಈ ಪ್ರದರ್ಶನಾಲಯದ ವಿಷಯವಾಗಿಯೂ ಈ ರಾಷ್ಟ್ರದ ಕಸಬುಗಳ ವಿಷಯವಾಗಿಯೂ ಹೇಳಿದ ವಿವೇಕಗಾಂಭೀರ್ಯಪೂರಿತಗಳಾದ ಮಾತುಗಳನ್ನು ಕೇಳಿ ನನಗೆ ಬಹಳ ಸಂತೋಷವಾಗಿದೆ. ಈ ದೇಶದ ಕಸಬು ಕೈಗಾರಿಕೆಗಳನ್ನು ಪ್ರೋತ್ಸಾಹಿಸಿ ವೃದ್ಧಿಪಡಿಸುವವರಲ್ಲಿ ನಾನು ತುಂಬಾ ಕುತೂಹಲವುಳ್ಳವನಾಗಿರುತ್ತೇನೆಂದು ಕಳೆದ ಮಾರ್ಚಿ ತಿಂಗಳಲ್ಲಿ ನಡೆದ ಕೌನ್ಸಿಲ್ ಸಭೆಯಲ್ಲಿ ನಾನು ಹೇಳಿದುದಕ್ಕೆ ಈ ದಿನ ಈ ಆಲಯವನ್ನು ಪ್ರಾರಂಭಿಸಲು ಬಂದಿರುವುದೇ ದೃಷ್ಟಾಂತವಾಗಿರುತ್ತದೆಂದು ನೀವು ಎಣಿಸಬೇಕು. ಪರದೇಶಗಳಿಂದ ತಯಾರಾಗಿ ಬರತಕ್ಕ ವಸ್ತುಗಳನ್ನು ನೋಡಿ ಈ ದೇಶದಲ್ಲೂ ಅಂಥಾ ಪದಾರ್ಥಗಳನ್ನು ಅದೇ ರೀತಿ ಯಂತ್ರಸಾಧನಗಳ ಮೂಲಕ ಸುಲಭವಾಗಿ ತಯಾರುಮಾಡಿಕೊಳ್ಳುವದಕ್ಕೆ ಈಗೀಗ ಅನೇಕಾನೇಕರು ಪ್ರಯತ್ನಪಡುತ್ತಲಿದಾರೆ. ಇದು ತುಂಬಾ ಶ್ರೇಯಸ್ಕರವೂ ಸ್ತೋತ್ರಾರ್ಹವೂ ಸಂತೋಷಪ್ರದವೂ ಆಗಿರುತ್ತದೆ. ಇತ್ತಲಾಗಿ ಸಹಜವಾದ ಸ್ವದೇಶೀ ಏರ್ಪಾಟಿಗೂ ರಾಜಕೀಯ ವಿಷಯಗಳಿಗೂ ಸ್ವಲ್ಪವೂ ಸಂಬಂಧವಿರುವದಿಲ್ಲ. ಪ್ರತಿ ಒಬ್ಬ ಪ್ರಜೆಯೂ ರಾಜಕೀಯ ವಿಷಯದಲ್ಲಿ ಭಿನ್ನಾಭಿಪ್ರಾಯವನ್ನು ಪಡೆದಿರಬಹುದು. ನಾವು ಇಲ್ಲಿ ಕೂಡಿರುವ ಸ್ಥಳವು ರಾಜಕೀಯ ವಿಷಯಗಳನ್ನು ಕುರಿತು ಚರ್ಚಿಸುವುದಕ್ಕೆ ಅರ್ಹವಾದ ಸ್ಥಳವಲ್ಲ. ಇಲ್ಲಿ ಸಮಸ್ತರೂ ಅಂದರೆ ಆಳುವವರೂ ಪ್ರಜೆಗಳೂ ಏಕೀಭವಿಸಿ ದೇಶೋನ್ನತಿಗಾಗಿ ಸಾಹಸಪಟ್ಟು ಕೆಲಸಮಾಡಬೇಕಾಗಿರುವುದು. ಈ ಭಾಗದಲ್ಲಿ ಮಾತ್ರ ಎಲ್ಲರೂ ಏಕಾಭಿಪ್ರಾಯವುಳ್ಳವರಾಗಿರಬೇಕು. ರಾಜ್ಯಭಾರದ ವಿಷಯಗಳನ್ನೂ ಸ್ವದೇಶಾಭ್ಯುದಯದ ಕಾರ್ಯಗಳನ್ನೂ ಏಕಮಾಡಿಕೊಂಡು ಚರ್ಚಿಸುವದರಿಂದ ಅವೆರಡೂ ಸಾರ್ಥಕವಾಗಿ ಪರಿಣಾಮವನ್ನು ಹೊಂದಲಾರವು. ಮತ್ತು ದೇಶಾಭ್ಯುದಯಕ್ಕೆ ಕಾರಣಭೂತಗಳಾದ ಕೈಗಾರಿಕೆ ಕಸಬುಗಳನ್ನು ಪ್ರಥಮತಃ ವೃದ್ಧಿಪಡಿಸಿಕೊಳ್ಳುತ್ತಾ ಬರುವ ಪಕ್ಷ ಅವೇ ರಾಜ್ಯಭಾರನಿರ್ವಾಹಕ್ಕೂ ಸಹಕಾರಿಗಳಾಗಿ ಪರಿಣಮಿಸುತ್ತವೆ. ಹಾಗಿಲ್ಲದೆ, ರಾಜ್ಯಭಾರನಡಸುವ ಸ್ವತಂತ್ರ್ಯಗಳನ್ನು ಸಂಪಾದಿಸಿಕೊಳ್ಳಬೇಕೆಂಬ ಉದ್ದೇಶವನ್ನಿಟ್ಟುಕೊಂಡು, ಕಸಬುಗಳನ್ನೂ ದೇಶೀಯ ಕೈಗಾರಿಕೆಗಳನ್ನೂ ಪ್ರಾರಂಭಿಸಿ ನಡಸುತ್ತಾ ಬರುತ್ತೇವೆಂದರೆ ಯಾವ ಪ್ರಯೋಜನವೂ ಆಗುವುದಿಲ್ಲ. ದೇಶೀಯ ಕಸಬುಗಳನ್ನು ಅಭಿವೃದ್ಧಿಪಡಿಸುವ ಭಾಗದಲ್ಲಿ ನನಗೆ ತುಂಬಾ ಸಂತೋಷವುಂಟು. ಇದರಿಂದ ಈ ರಾಷ್ಟ್ರಕ್ಕೆ ಬಂದಿರುವ ಕೊರತೆಯನ್ನು ಕಾಪಾಡಿ ವೃದ್ಧಿಗೆ ತಂದಂತಾಗುವುದು. ಇಲ್ಲಿನ ಕಸಬುದಾರರ ಪ್ರಜಾಕೋಟಿಗಳಿಗೆ ಪ್ರತಿದಿನವೂ ಬೇಕಾಗುವ ಸಮಸ್ತ ಸರಕುಗಳನ್ನೂ ಯಂತ್ರಸಾಧನಗಳನ್ನಿಟ್ಟು ಅಪಾರವಾಗಿ ತಯಾರುಮಾಡಿ ಒದಗಿಸುತ್ತಾ ಬರಬೇಕೆಂದು ಪ್ರಾರ್ಥಿಸುತ್ತೇನೆ. ಬಹಳ ಕಾಲದಲ್ಲಿ ತಯಾರಾಗುತ್ತಿದ್ದಂಥಾ ಒರಟು ಪದಾರ್ಥಗಳನ್ನು ಈ ನವನಾಗರೀಕ[illegible]ದಲ್ಲಿ ಮಾಡಿ ಮಾರಾಟಮಾಗಬೇಕೆಂದು ಅಪೇಕ್ಷಿಸುವುದು ಶುದ್ಧ ಅಸ[illegible]ವಾಗಿರುತ್ತದೆ. ಅಗ್ಗವಾಗಿಯೂ ನಾಜೋಕಾಗಿಯೂ ಇರುವ ಪದಾ[illegible]ಗಳನ್ನು ತ್ಯಜಿಸಿ ಜನರು ಒರಟಾದ ವಸ್ತುಗಳನ್ನು ಹೆಚ್ಚು ದು[illegible] ಕೊಟ್ಟು ಕೊಂಡುಕೊಳ್ಳುತ್ತಾರೆಂದು ನಿರೀಕ್ಷಿಸುವುದಕ್ಕಾಗ[illegible] ಅಥವಾ ಅಂಥಾವುಗಳನ್ನು ಕೊಂಡುಕೊಳ್ಳಬಾರದೆಂದೂ ದೇಶ[illegible] ಪದಾರ್ಥಗಳನ್ನೇ ಕೊಂಡು ಉಪಯೋಗಿಸಬೇಕೆಂದೂ ನಿರ್ಬಂ[illegible]ಸುವುದು ಎಷ್ಟುಮಾತ್ರಕ್ಕೂ ತರವಲ್ಲ. ಮೊದಲಿನ ಸಾಧನೆಗಳೂ ಈಗ ಉಪಯೋಗಕ್ಕೆ ಬರುವುದಿಲ್ಲವೆಂದು ವ್ಯಸನಪಡಬೇಕಾದರೂ [illegible]ಗಿನ ಕಾಲಾನುಗುಣ್ಯವಾಗಿ ಹೊಸ ವಿಧಾನಗಳನ್ನು ಕಲಿತು ಅ[illegible]ಯಲ್ಲಿ ಕಂಡು ಅಭಿವೃದ್ಧಿ ಹೊಂದುವುದೇ ಧರ್ಮವಾಗಿದೆ. ಈ [illegible]ರ್ಶನಶಾಲೆಯು ಅಂಥಾ ಅಭಿವೃದ್ಧಿಗೆ ಸಾಕ್ಷಾತ್ತಾದ ಮಾರ್ಗಗ[illegible] ತೋರಿಸಿಕೊಡುವುದು. ಇಂಥಾ ಉತ್ಕೃಷ್ಟವಾದ ಆಲಯ[illegible] ನಿಮ್ಮೆಲ್ಲರ ಅನುಜ್ಞೆ ಸಮ್ಮತಿಗಳನ್ನು ಪಡೆದು ಈಗ ತೆರೆದು [illegible] ಮಾಡಿದೆನು ಎಂಬೀ ರೀತಿಯಾಗಿ ಅಪ್ಪಣೆಕೊಡಿಸಿ, ಪ್ರದರ್ಶನಾಲ[illegible] ತೆರೆಯನ್ನು ಎಳೆದು, ಪತ್ನಿ ಪುತ್ರಿಯರೊಡನೆ ಪರಿವಾರ ಸಮೇತ[illegible] ದಯಮಾಡಿ, ಎಲ್ಲಾ ಭಾಗಗಳನ್ನೂ ಪರಾಂಬರಿಸಿ ಸಂತೋಷ[illegible]ಕೊಂಡು ಹೊರಟು ಬಂದರು.

ಇತರ ವಿಷಯಗಳು

ವೈಸ್‌ರಾಯಿ ಯವರೇ ಮುಂತಾದವರು ಪ್ರದರ್ಶನಶಾಲೆಯ[illegible] ನೋಡಿಕೊಂಡು ಹೋದನಂತರ ಆ ಮಂದಿರದ್ವಾರಗಳು ಮುಚ್ಚ[illegible]ವು. ತಾ ೩೧ ನೆ ಸೋಮವಾರದ ಲಾಗಾಯತು ನೋಟಕರಿಗಾ[illegible] ದಿಟ್ಟಿದಾರೆ. ಈ ತಿಂಗಳ ಕಡೆಯ ವಾರದ ತನಕ ಅಂದರೆ ಆರು[illegible]ಗಳ ವರಗೆ ಪ್ರದರ್ಶನಾಲಯವು ತೆರೆಯಲ್ಪಟ್ಟಿರುವುದು. ನೋಟ[illegible]ತಲಾ ಇಷ್ಟೆಂದು ಫೀಜು ಕೊಟ್ಟು ಟಿಕೆಟ್ ಪಡೆದು ಒಳಗೆ ಹ[illegible] ನೋಡಿ ಬರಬೇಕಾಗಿರುತ್ತದೆ. ಈ ಟಿಕೆಟ್ ಕೊಡುವ ಭಾರ[illegible] ಕಮಿಟಿಯವರು ವಹಿಸಿಕೊಳ್ಳದೆ ಒಬ್ಬ ಕಂಟ್ರಾಕ್ಟರಿಗೆ ಒಂದು ಲಕ್ಷ ರೂಪಾಯಿಗೆ ಕೊಟ್ಟುಬಿಟ್ಟದಾರೆಂದೂ, ಪ್ರತಿದಿನವೂ [illegible] ಸಾವಿರ ಜನರೇ ಹೋಗಿ ನೋಡಿ ಬರುತ್ತಿದಾರೆಂದೂ ತಿಳಿದುಬ[illegible]

ಯಾವ ಯಾವ ಕೈಗಾರಿಕೆ ಕಸಬನ್ನು ಯಾವ ಯಾವ ರೀ[illegible]ಲ್ಲಿ ಅಭಿವೃದ್ಧಿಪಡಿಸಬೇಕೋ, ಅವುಗಳ ಸಾಧನಸಂಪತ್ತುಗಳೇನೇ [illegible] ಇದನ್ನೆಲ್ಲಾ ಕುರಿತು ಬರೋಡಾ ಸಂಸ್ಥಾನದ ಮಹಾರಾಜರ [illegible] ಮಿ॥ ದಾಮೋದರ ಥ್ಯಾಕರ್ಸೆಯವರೂ ಇತರ ಕೆಲವು ಮಹನೀಯ[illegible] ಕಳೆದ ವಾರ ಉಪನ್ಯಾಸಗಳನ್ನು ಮಾಡಿದರು.

ಇಂಡಿಯಾ ದೇಶದ ವೃತ್ತಾಂತಗಳು

ಕಾಶ್ಮೀರದ ಮಹಾರಾಜರು ಸ್ವಲ್ಪ ದಿನದಲ್ಲೆ ಲಾಹೋರ್ ಪ[illegible]ಕ್ಕೆ ಹೊರಡುವರೆಂದು ವರ್ತಮಾನವಿದೆ. ಅವರ ಜೊತೆಯಲ್ಲಿ ಕ್ರಿ[illegible] ಎಂಬ ಚೆಂಡಿನ ಆಟವನ್ನು ಆಡುವ ಕೆಲವರೂ ಹೊರಡುವರು.

****

ಅಫ್ಘಾನಿಸ್ಥಾನದ ಅಮೀರರು ಬೊಂಬಾಯಿಗೆ ಬಂದಾಗ್ಗೆ [illegible] ಭಾರೀ ಔತಣಮಾಡಿಸಬೇಕೆಂದೂ ಒಂದು ವಿಜ್ಞಾಪನಾಪತ್ರಿಕೆಯ[illegible] ಒಪ್ಪಿಸಬೇಕೆಂದೂ ಬೊಂಬಾಯಿನ ಮಹಮ್ಮದೀಯ ಜನರು [illegible] ಗುರುವಾರ ಸಭೆಸೇರಿ ತೀರ್ಮಾನಿಸಿರುತ್ತಾರೆ.

****

ಬೊಂಬಾಯಿ ನಲ್ಲಿ ಕಳೆದ ವಾರ ಟೇಪಿಯರ್ಸ್ ಎಂಬ [illegible] ಕಾರ್ಖಾನೆಗೆ ಬೆಂಕಿ ಬಿದ್ದು ಕಟ್ಟಡವೂ ಸಾಮಾನುಗಳೂ ಸ[illegible] ಹೋದವು. ಇದರಿಂದ ಕಾರ್ಖಾನೆಯ ಯಜಮಾನನಿಗೆ ಸು[illegible] ಒಂದು ಲಕ್ಷ ರೂಪಾಯಿ ನಷ್ಟವಾಯಿತೆಂದು ತಿಳಿದು ಬಂದಿದೆ.

****

ಮದರಾಸಿನಲ್ಲಿ ದೊರೆಸಾಮಿ ಐಯ್ಯಂಗಾರ್ ಎಂಬೊಬ್ಬ ಬ[illegible]ಣನು ಪ್ರಸಿದ್ಧ ಸ್ಯಾಂಡೊ ಮತ್ತು ರಾಮಮೂರ್ತಿ ಎಂಬ ಜಟ್ಟಿ[illegible]ಗಿಂತ ಬಹಳ ಬಲಿಷ್ಠನಾಗಿರುವದಾಗಿ ತಿಳಿದುಬಂದಿದೆ. ಇವನು ಬೆ[illegible] ಮೆಳದಿರುವಂಥಾ ಆರು ಆನೆಗಳಷ್ಟು ಶಕ್ತಿಯನ್ನು ಪಡೆದಿರುವ[illegible]

****

ರಂಗೂನ್‌ಪಟ್ಟಣದ ಉತ್ತರ ಒಂದು ಹಳ್ಳಿಯಲ್ಲಿ ಕಳೆದ ಅಕ್ಟೋಬರ್ ತಿಂಗಳು ೨೩ ನೇ ತಾ ರಾತ್ರಿ ಐದು ಜನರು ಭತ್ತ ಮಾರ[illegible] ಶ್ರೀಮಂತನಾದ ಒಬ್ಬ ದಳ್ಳಾಳಿಯ ಮನೆಗೆ ನುಗ್ಗಿ ಸುಮಾರ[illegible] ದಶಕಾಲು ಲಕ್ಷ ರೂಪಾಯಿನ ಒಡವೆಗಳನ್ನೂ ಸಾಮಾನನ್ನೂ [illegible] ಕೊಂಡು ಹೋದರೆಂದು ತಿಳಿದುಬಂದಿದೆ.

****

ಕಲ್ಕತ್ತೆಯಲ್ಲಿ ೧೯ ವರ ಷದ ಒಬ್ಬಾನೊಬ್ಬ ಬಂಗಾಳಿ ಜ[illegible]ನು ತನ್ನ ತಾಯಿಯು ತುಪ್ಪಹಾಕಿ ಅಡಿಗೆ ಮಾಡದಿದ್ದರೆ ತಾನು [illegible] ಮಾಡುವದಿಲ್ಲವೆಂದು ಹಟಹಿಡಿದನು. ಅವಳು ತುಪ್ಪವನ್ನು ಕೊ[illegible]ರುವದಕ್ಕೆ ದುಡ್ಡು ಇಲ್ಲವೆಂದು ನಿಷ್ಟು ವಿಧವಾಗಿ ಹೇಳಿದರೂ ಕ[illegible] ಕೇಳದೆ, ಕಳೆದ ಸೋಮವಾರ ವಿಷವನ್ನು ತಿಂದು ಪ್ರಾಣಬಿಟ್ಟನ[illegible]

****

ಮದರಾಸಿನ ಸರ್ಕಸ್ಸು ಪ್ರದರ್ಶನಶಾಲೆಯಲ್ಲಿ ಮೇಲ್ವಿಚಾ[illegible]ನ್ನು ರಿಪೇರಿ ಮಾಡುವದಕ್ಕೆ ಕಾಲಾವಧಿ ಕಟ್ಟಿಕೊಂಡಿದ್ದರು. [illegible] ರೋ ಈ ಕಾಲಾವಧಿಯ ಮೇಲೆ ಹತ್ತಿ ಕಟ್ಟಡದ ಒಳಕ್ಕೆ [illegible] ಒಳಗೆ ಪೂರ್ವಕಾಲದ ಮತ್ತು ಅಮೂಲ್ಯವಾದ ಕೆಲವು ಚಿನ್ನದ ನಾ[illegible] ಗಳನ್ನು ಕಳವು ಮಾಡಿದರೆಂತಲೂ ಕಳ್ಳರು ಇನ್ನೂ ಸಿಕ್ಕಲಿಲ್ಲವೆಂ[illegible] ತಿಳಿದುಬಂದಿದೆ.

****

ಬೊಂಬಾಯಿ ಪಟ್ಟಣದಲ್ಲಿ ಕಳೆದ ಮಾರ್ಚ್ ಕಡೆಯು[illegible] ಪ್ಲೇಗ್ ಕಿಡ ದಿನ ಹಾಲು ಸುಮಾರು ೩೧೬೩೬ ಸೀಸೆಗಳು [illegible] ರಾದವು. ಅವುಗಳ ಪೈಕಿ ಹಿಂದುಸ್ಥಾನದವರು ೨೪೯೬೫ [illegible]

ಲಾಹೋರ್ ಪಟ್ಟಣದಲ್ಲಿ ಹಿಂದುಸ್ಥಾನದ ದೊಡ್ಡ ಮನೆತನದ | ಇಂಡಿಯಾ ಗವರ್ನಮೆಂಟಿನವರು ಹಿಂದುಸ್ಥಾನದಲ್ಲಿರುವ ಸೆಯ್ಗ

ರಿಪೋ
ೆ, ಅ
ದ ಅವ
ತ್ರನ್ನು
ಸೇರು
ರಿಸ
ೀರುವ
ಕೆಲಸ
ಬಾಕ್ಸ
ಟಿಯು

ರಾಕ್
ಸುನ್ನು
ಸಾವಿರ
ಕೊಟ್ಟ
, ಪಥ
ಮತ್ತು
ಪಡುವ
ರಾಕ್
ಸಿದರು.
ಚೆಂಸಾ
ಹಾಯ
ಒಂದು
ಗಳಲ್ಲಿ
ಪಡೆ

ತಿಯು
ಬ್ಬರಿಂದ
ವದಾಗಿ
ಂತಿರುಗಿ
ಗೆ ಒಪ್ಪಿ
ಯನ್ನು
, ಹೇಳು
ವನ್ನು
ಾಂಬ್ರದ
ವಾನರು
ನಾಣ್ಯ
ಕ್ಷ ಯರ್
ೆ ಎಂಟು
ಅವಳು
ಾಡಿಯು

ದಿಯು.

ದ ಸಕಲ
ದು ಪಟ್ಟ
ಚರ್ಚೆ
ಪಸೆದಿರು
ರಗಳನ್ನು
ು ಎಳಿಗೆಗೆ
ಇಂಗ್ಲಿಷ್
ರ ಸಭೆಗೆ
ಟಿಸರು.
ದವು.
ಕಳೆದ
ಳ ತನಕ
ು ಚರ್ಚೆ

ಡ ಸಭಾ
ಾಗಿಂದೂ
ಕೆ ಎಂದು
ಟ್ಫಾರಂ
ದ ಮೇ
ಪಿ ಶಾಕಿ
ಹಿಂದುಗಡೆ
ಕೊಟ್ಟಿಗ್ಗ
ದುರುಗಡೆ
ರುಗಳೂ
ತೆ ಸಾಲು
ಗೆಗಳನ್ನು

ಮಧ್ಯ
ೆಯಿಂದಲೂ

ವೃತ್ತಾಂತ ಪತ್ರಿಕೆ.

ಪ್ರತಿಗುರುವಾರವೂ ಮೈಸೂರು ಪಟ್ಟಣದಲ್ಲಿ ಪ್ರಕಟವಾಗುವುದು ಈ ಸಂಸ್ಥಾನದಲ್ಲೆಲ್ಲಾ ಅತ್ಯಂತ ವಿಶೇಷವಾಗಿ ಪ್ರಚಾರವಾಗುತ್ತದೆ

1907.

ಚಂದಾ ವಿವರ — ೧೨ ತಿಂಗಳಿಗೆ (ಮುಂಗಡ) ರೂ ೧-೦-೦
, ಪೋಸ್ಟೇಜ್ ಸೇರಿ ೧-೧೪-೦
ಬಿಡಿ ಪತ್ರಿಕೆ ೧ ಕ್ಕೆ ೪ ಕಾಸು

ದಿವಾನ್ ವಿ ಪಿ ಮ [illegible]

ಸರ್ಕಾರಿ ರಜಾ ದಿನಗಳು.

ಜನವರಿ.

ಕ್ರಿಸ್ ಮ ೧—[illegible] [illegible]
ಗಲ್ ೧೯—೧೫ ಶ್ರೀಮನ್ಮಹಾರಾಜರವರ ವರ್ಧಂತಿ [illegible]

ಫೆಬ್ರವರಿ.

ಮಹಾ ಶಿವರಾತ್ರಿ ೧೧ [illegible]

ಮಾರ್ಚಿ

ಚಾಂದ್ರಮಾನ ಯುಗಾದಿ ೧೫ [illegible]

ಏಪ್ರಿಲ್

ಶ್ರೀರಾಮನವ [illegible]

ಮೇ

[illegible]

ಜೂನ್

[illegible] ಶ್ರೀಮನ್ಮಹಾರಾಜರವರ ವರ್ಧಂತಿ [illegible]

ಆಗಸ್ಟ್

[illegible]

ಸೆಪ್ಟೆಂಬರ್

[illegible] ಚತುರ್ದಶಿ ೩೦

ಅಕ್ಟೋಬರ್

[illegible] ದಸರಾ [illegible] ದಸರಾ [illegible]
೧೯—೪

ನವಂಬರ್

ದೀಪಾವಳಿ [illegible]

ಡಿಸೆಂಬರ್

ಕ್ರಿಸ್ಮಸ್ [illegible]

ಸಿವಿಲ್ ಕೋರ್ಟುಗಳ ರಜಾ ದಿನಗಳು

[illegible] ಕೋರ್ಟ್ [illegible]
[illegible] ರಿಂದ ಜೂನ್ ೧೫ [illegible]
ಇತರ ಕೋರ್ಟುಗಳು
[illegible] ೧೫ ರಿಂದ [illegible]

[illegible]

ಜನವರಿ						ಫೆಬ್ರವರಿ				
[illegible]										

ಜುಲೈ						ಆಗಸ್ಟ್				
[illegible]										

ಮೇ						ಜೂನ್				
[illegible]										

ನವಂಬರ್						ಡಿಸೆಂಬರ್				
[illegible]										



ಶ್ರೀಮನ್ ಮಹಾರಾಜಾ ಕೃಷ್ಣರಾಜ ಒಡೆಯರ್ ಬಹದ್ದೂರ್ ರವರು

Kanarese and English Type

made from good metal under the supervision of our European Manager and can be had from the W. M. Press, Mysore.

Half-Tone and Line Blocks

are now being made at the Wesleyan Mission Press, Mysore City. Illustrated circular sent free on application.

ಟಪ್ಪಾಲ್ ಹಾಸಲು

[illegible]

ಮನೀಆರ್ಡರ್ ಮತ್ತು ವ್ಯಾಲ್ಯು ಪೇಬಲ್

[illegible]

ಶಿವನಸಮುದ್ರದ ಕಾವೇರಿ ಜಲಪಾತ

ವೆಸ್ಲೆಯನ್ ಮಿಷನ್ ಪ್ರೆಸ್.

ಅತ್ಯುತ್ತಮವಾದ ಮುದ್ರಣವು! ಶ್ರೇಷ್ಠವಾದ ಮುದ್ರಣವು!

[illegible] ಈ ಮುದ್ರಾಲಯದಲ್ಲಿ [illegible] ಉಚಿತವಾಗಿ [illegible]

[illegible] ಕನ್ನಡ ಅಕ್ಷರಗಳನ್ನು [illegible] ಅಕ್ಷರಗಳ ಸಮೂಹ [illegible] ಪುಸ್ತಕಗಳಿಗೆ [illegible] ಚಿತ್ರಗಳನ್ನೂ ಮಾಡಿಕೊಡುತ್ತೇವೆ [illegible]

ವಿಳಾಸ — ಮ್ಯಾನೇಜರ್,
ವೆ ಮಿಷನ್ ಪ್ರೆಸ್, ಮೈಸೂರು

ಮಿಷನ್ ಆಸ್ಪತ್ರೆ ಮೈಸೂರು

Engraved and Printed at the Wesleyan Mission Press, Mysore City 1906

ವಿಂಬಲೋ ಪ್ರಭುಗಳನ್ನು ಕುರಿತು ಅರಿಕೆಮಾಡಿದ್ದೇನೆಂದರೆ— ಬರಬೇಕೆಂದು ಹಾರೈಸುತ್ತೇನೆ. ಒಬೀರಾಯನ ಕಾಲದಲ್ಲಿ ತಯಾ [illegible]

...ಪರಿಶೋಧಿಸಿದರು. ಇಂಡಿಯಾದಲ್ಲಿರುವ ಪೋರ್ಚುಗೀಸ್ ಜನ ...೫೫,೦೦೦ ಸೀಸೆಗಳನ್ನೂ ಅನ್ಯದೇಶಗಳವರು ೬೩,೯೪೯ ಸೀಸೆಗ...ಕೊಂಡು ಉಪಯೋಗಿಸಿರುತ್ತಾರೆ.

◆◆◆◆

ಬಂಗಾಳಾ ಆಧಿಪತ್ಯಕ್ಕೆ ಸೇರಿದ ಜೆಸ್ಸೋರ್ ಡಿಸ್ಟ್ರಿಕ್ಟಿನ ಕೋಟಚಾಂದ್ಪುರವೆಂಬ ಪಟ್ಟಣದಲ್ಲಿ ಸಕ್ಕರೆ ತಯಾರಾಗುವ ಇಪ್ಪತ್ತು ...ಕಾರ್ಖಾನೆಗಳಿರುತ್ತವೆ ಇಲ್ಲಿ ತಯಾರಾಗುವ ಸಕ್ಕರೆಯು ಕೆಲವು ...ಹಿಂಚೆ ಜಾಗ್ರತೆಯಾಗಿ ಖರ್ಚಾಗುತ್ತಿದ್ದು ಈಗ ಸುಮಾರು ...ಸಾವಿರ ಮಣದಷ್ಟು ಬಿಕರಿಯಾಗದೆ ಉಳಿದಿರುವುದು ಇದರಿಂದ ...ಲ್ಲಿ ಸಕ್ಕರೆಯ ವ್ಯಾಪಾರ ಕಮ್ಮಿಯಾದಂತೆ ತೋರುತ್ತದೆ.

◆◆◆◆

ರಂಗೂನ್ ಪಟ್ಟಣದ ಹತ್ತರ ಸಮುದ್ರದಲ್ಲಿ ಭೂಕಂಪವುಂಟಾಗಿ ...ದು ದೊಡ್ಡ ದ್ವೀಪವು ಸಮುದ್ರಮಧ್ಯೆ ನಿರ್ಮಾಣವಾಗಿರುತ್ತದೆ ...ದ್ವೀಪವು ಒಂದು ಅಗ್ನಿಪರ್ವತವಾಗಿ ಪರಿಣಮಿಸಿ ಆ ಪ್ರಾಂತ್ಯದ ...ಬಹಳ ಗಲಭೆಯನ್ನುಂಟುಮಾಡಿರುವದೆಂತಲೂ ಆ ಮಾರ್ಗ ...ಸಂಚಾರಮಾಡುವ ಹಡಗುಗಳು ಬಹಳ ಜಾಗರೂಕತೆಯಿಂದ ...ಬೇಕೆಂತಲೂ ರಂಗೂನ್ ಪಟ್ಟಣದ ಹಡಗಿನ ಯಜಮಾನರು ತಿಳಿ...ದೆ

◆◆◆◆

ಉತ್ತರ ಹಿಂದುಸ್ಥಾನದಲ್ಲಿ ರೈಲು ಕಂಬಿಗಳ ಕೆಳಗೆ ಹಾಸುವದ...೫,೪೦,೦೦೦ ಮರದ ದಿಮ್ಮಿಗಳು ಬೇಕಾಗಿವೆಯೆಂದು ರೈಲ್ವೆ ಬೋ...ರವರು ಪ್ರಕಟಿಸಿರುತ್ತಾರೆ ಅವುಗಳ ಪೈಕಿ ೯೦ ಸಾವಿರ ದಿಮ್ಮಿಗಳ...ನೇಪಾಳದ ಕಾಡುಗಳಿಂದ ಸರಬರಾಯಿ ಮಾಡುವದಾಗಿ ಇಬ್ಬರು ...ಕಾರರು ಕಂಟ್ರಾಕ್ಟು ಒಪ್ಪಿಕೊಂಡಿರುವರು ಉಳಿದವುಗಳನ್ನು ...ರಿಯದ ಕಾಡುಗಳಿಂದ ಕಂಟ್ರಾಕ್ಟರುಗಳ ಮೂಲಕ ತರಿಸಿ...ಲ್ಪವರು.

◆◆◆◆

ಪೇಶಾವರ್ ಪಟ್ಟಣದ ಮ್ಯುನಿಸಿಪಾಲಿಟಿಯು ಕಾರುಬಾರಿಗ...ತೃಪ್ತಿಕರವಾಗಿದ್ದದ್ದರಿಂದ ಲೆಫ್ಟಿನೆಂಟ್ ಗವರ್ನರವರು ಜಬಿನ್ನೆ...ಜನಗಳುಳ್ಳ ಒಂದು ಕಮಿಟಿಯನ್ನು ಏರ್ಪಡಿಸಿ ಮುಂದಿನ ಜನ...ಯಿಂದ ಎರಡು ವರ್ಷಗಳವರೆಗೂ ಮ್ಯುನಿಸಿಪಾಲಿಟಿಯ ಮೇಲ್ವಿ...ಚಾರಣೆಯನ್ನು ನೋಡಿಕೊಳ್ಳುವಂತೆ ತೀರ್ಮಾನಿಸಿರುತ್ತಾರೆ ಪ್ರಜೆ...ಗಳು ಮೆಂಬರುಗಳನ್ನು ಚುನಾಯಿಸುತ್ತಿದ್ದದ್ದನ್ನು ಸರ್ಕಾರದವರು ...ಪ್ಪಿಸಿಬಿಟ್ಟರು.

◆◆◆◆

ಸಿಲೋನ್ (ಲಂಕಾ)ನಲ್ಲಿಯೂ ಮದರಾಸಿನಂತೆ ಗವರ್ನಮೆಂಟು ...ಉದ್ಯೋಗಸ್ಥರಿಗೆ ಎರಡು ವಿಧವಾದ ಸಂಬಳಗಳನ್ನು ಏರ್ಪಡಿಸಬೇ...ಎಂದು ದೇಶೀಯ ಜನರು ಇಷ್ಟಪಟ್ಟಂತೆ ಸಿಲೋನಿನ ಗವರ್ನರಾದ ...ಅಲೆಕ್ಸಾಂಡರ್ ಆಷ್‌ಮೋರ್‌ರವರು ಸಮ್ಮತಿಸಲಿಲ್ಲ. ಮದರಾಸಿ...ನಲ್ಲಿ ಒಂದು ಕೆಲಸ ಮಾಡುವವನು ಯೂರೋಪಿಯನ್ ಆದರೆ ಜಾಸ್ತಿ ...ಸಂಬಳವೂ ಅದೇ ಕೆಲಸಮಾಡುವ ಒಬ್ಬ ಹಿಂದುವಿಗೆ ಅದಕ್ಕಿಂತ ಕಡಮೆ ...ಸಂಬಳವೂ ಸಲ್ಲಬೇಕೆಂದು ನಿಷ್ಕರ್ಷೆ ಮಾಡಲ್ಪಟ್ಟಿದೆ

◆◆◆◆

ಮಕ್ಕಾಕ್ಕೆ ಹೋಗಿಬರಬೇಕೆಂದು ಅನೇಕ ಮಹಮ್ಮದೀಯರು ...ಬೊಂಬಾಯಿಗೆ ಬಂದು ವಾಸಮಾಡುವದಕ್ಕೂ ಸ್ಥಳವಿಲ್ಲದೆ ತೊಂದರೆ ...ಪಡುತ್ತಿರುವರಷ್ಟೆ ಬೊಂಬಾಯಿನ ಒಬ್ಬನೊಬ್ಬ ಧರ್ಮ...ವಾದ ಮಹಮ್ಮದೀಯನು ಎರಡು ಸಾವಿರ ಜನಕ್ಕಾಗುವಷ್ಟು ಮನೆ...ಗಳನ್ನು ಕಟ್ಟುವದಕ್ಕೆ ಎರಡು ಲಕ್ಷ ರೂಪಾಯಿ ಕೊಡುತ್ತೇನೆಂದು ...ಹೇಳಿಕೊಂಡಿರುತ್ತಾನೆ ಗವರ್ನಮೆಂಟಿನವರು ಸರಿಯಾದ ಸ್ಥಳವನ್ನು ...ಕೊಡಿಸಿ ಯಾತ್ರಿಕರ ಕಷ್ಟ ನಿವಾರಣೆ ಮಾಡಬೇಕಾಗಿದೆ

◆◆◆◆

ಕೃಷ್ಣಘಡದಲ್ಲಿ ಒಬ್ಬನು ತನ್ನ ಚಿಕ್ಕವಯಸ್ಸಿನ ಹೆಂಡತಿಯನ್ನು ...ಸಮಾಡಿದ್ದಕ್ಕಾಗಿ ಅವನಿಗೆ ಏಳು ವರುಷ ಕಠಿಣ ಸಜಾ ವಿಧಿಸಿದರು ...ನು ಹಿಂತಿರುಗಿ ಬರುವವರೆಗೆ ಅವನ ಹೆಂಡತಿಯು ಜೀವನಕ್ಕಿಲ್ಲದೆ ...ಯಬೇಕು, ಇಲ್ಲವೇ ದುರ್ನಡತೆಯಿಂದ ಜೀವಿಸಬೇಕು. ಹೀಗೆ ...ಪ್ರದೇಶಸ್ಥರು ಮಾಡಿದ ಕಾಯಿದೆಗಳು ಕೆಲವು ವೇಳೆ ಬಹು ತೊಂದ...ರೆಯನ್ನು ಉಂಟುಮಾಡುತ್ತವೆ ಎಂದು ಕಲ್ಕತೆಯ ಅಮೃತ ಬಜಾರ್ ...ಪತ್ರಿಕಾ ಎಂಬ ವರ್ತಮಾನ ಪತ್ರಿಕೆಯು ಆಕ್ಷೇಪಣೆ ಮಾಡುವುದು

◆◆◆◆

ಬೊಂಬಾಯಿನಲ್ಲಿ ರಾಮಸರೂಪ ರಾಮಫಲನೆಂಬ ಕೋಚಮಾ...ನು ತನ್ನ ಯಜಮಾನನಾದ ಜೆನ್ನ ಎಂಬ ಲಾಯರನ್ನು ಮನೆಯ ಪ...ರ ಇಪ್ಪತ್ತು ನಿಮಿಷಗಳ ವರೆಗೆ ಗಾಡಿ ನಿಲ್ಲಿಸಿದನೆಂದು ಆ ಲಾಯರು ...ನ ಮೇಲೆ ಫಿರ್ಯಾದುಮಾಡಲು ಮ್ಯಾಜಿಸ್ಟ್ರೇಟರು ಅಪರಾಧಿಗೆ ...ಆರು ವಾರಗಳ ಕಠಿಣಸಜಾ ವಿಧಿಸಿದರು. ಅವನು ಛೀಫ್ ಕೋರ್ಟಿ...ನಲ್ಲಿ ಅಪೀಲ್ ಮಾಡಲು ಜಡ್ಜಿಯವರು ಅವನು ಇದುವರೆಗೆ ಅನುಭ...ವಿಸಿದ್ದ ಆರು ದಿನಗಳ ಸಜವೇ ಸಾಕಾಗಿರುವುದೆಂದು ತೀರ್ಮಾನಮಾಡಿ...ದ

◆◆◆◆

ಹಿಂದುಸ್ಥಾನದಲ್ಲಿ ಕಾಗದಗಳನ್ನು ತಯಾರ್ಮಾಡುವ ಕಾರ್ಖಾ...ನೆಗಳು ಇದ್ದಾಗ್ಯೂ ಬರ್ಮಾದವರೂ ಹಿಂದುಸ್ಥಾನದವರೂ ಅನ್ಯದೇಶ...ದಿಂದ ಬಹಳ ಕಾಗದವನ್ನು ಕೊಂಡು ತರಿಸಿಕೊಳ್ಳುತ್ತಿದ್ದಾರೆ ಈ ...ದ ವಿಸ್ತಾರವಾದ ಕಾಡುಗಳಲ್ಲಿ ಕಾಗದದ ತಯಾರಿಗೆ ಅನುಕೂಲ...ದ ಸಲಕರಣೆಗಳು ಸಿಕ್ಕುವದರಿಂದ ಅನ್ಯದೇಶದಿಂದ ಬರುವಷ್ಟು ಉ...ತ್ಕೃಷ್ಟವಾದ ಕಾಗದವನ್ನು ಇಲ್ಲೇ ತಯಾರ್ಮಾಡಬಹುದೇ ಎಂದು ...ಕಂಡು ಹಿಡಿಯುವದಕ್ಕೆ ಇಂಡಿಯಾ ಗವರ್ನಮೆಂಟಿನವರು ಸಿಂಡಾಲ್ ...ರವರನ್ನು ಬರ್ಮಾಕ್ಕೆ ಕಳುಹಿಸಿದ್ದರು ಬಿದುರಿನಿಂದಲೂ ಇತರ...ಕೆಲವು ಮರಗಳ ತಿರುಳಿನಿಂದಲೂ ಬರ್ಮಾದಲ್ಲಿ ಕಾಗದವನ್ನು ಮಾಡಬ...ಹುದೆಂದು ಅವರು ಈಚೆಗೆ ಗವರ್ನಮೆಂಟಿಗೆ ರಿಪೋರ್ಟುಮಾಡಿ...ದ್ದಾರೆ.

ಲಾಹೋರ್ ಪಟ್ಟಣದಲ್ಲಿ ಹಿಂದುಸ್ಥಾನದ ದೊಡ್ಡಮನೆತನದ ಹೆಣ್ಣು ಮಕ್ಕಳಿಗೆ ವಿದ್ಯೆಯನ್ನು ಕಲಿಸುವದಕ್ಕೆ ಒಂದು ದೊಡ್ಡ ವಿದ್ಯಾಶಾಲೆಯನ್ನು ಸ್ಥಾಪಿಸಿ ಅದಕ್ಕೆ ಪ್ರಿನ್ಸ್ ಆಫ್ ವೇಲ್ಸ್‌ರವರ ಪತ್ನಿಯವರ ಹೆಸರನ್ನು ಇಡಬೇಕೆಂದಿರುತ್ತಾರೆ ಈ ಸ್ಕೂಲನ್ನು ಕಟ್ಟುವದಕ್ಕೆ ಪಾಟಿಯಾಲಾ, ನಭಾ ಮತ್ತು ಝಿಂದ್ ಸಂಸ್ಥಾನಗಳವರು ೪೦,೦೦೦ ರೂಪಾಯಿ ಚಂದಾ ಕೊಟ್ಟಿರುವರು ವಿದ್ಯಾರ್ಥಿನಿಯರಿಗೆ ಸ್ವಲ್ಪ ಹೆಚ್ಚಾಗಿ ಇಂಗ್ಲೀಷನ್ನೂ ಮಾತೃಭಾಷೆಯನ್ನೂ ಕಲಿಸಬೇಕೆಂಬುವದೇ ಈ ಪಾಠಶಾಲೆಯ ಮುಖ್ಯೋದ್ದೇಶ.

◆◆◆◆

ಚಿತ್ಪುರದ ತಹಶೀಲ್‌ದಾರರಾದ ಫತ್ತೆ ಚಂದ್‌ರವರು ತಮ್ಮ ಊರಿನ ಹತ್ತರ ಇರುವ ಒಂದಾನೊಂದು ಹಳ್ಳಿಗೆ ಜಮಾಬಂದಿಗಾಗಿ ಹೋಗಿರಲು ಅಲ್ಲಿನ ಕೆಲವು ರೈತರಿಗೂ ತಹಶೀಲ್‌ದಾರರ ಜೊತೆಯಲ್ಲಿ ಹೋಗಿದ್ದವರಿಗೂ ವ್ಯಾಜ್ಯನಡೆದು ತಹಶೀಲ್‌ದಾರರಿಗೆ ಪೂರಾ ಏಟುಬಿದ್ದಿತು. ಅವರನ್ನು ಆಸ್ಪತ್ರೆಗೆ ಸಾಗಿಸುವದಕ್ಕೆ ಕೂಡಾ ಆಗದೆ ಹೋಯಿತು. ಅವರಿಗೂ ಇವರಿಗೂ ಬಹಳ ದಿವಸದಿಂದ ಇದ್ದ ದ್ವೇಷವೇ ಈ ಜಗಳಕ್ಕೆ ಕಾರಣವೆಂದು ತಿಳಿದುಬಂದಿದೆ. ಪೋಲೀಸಿನವರು ಈ ವಿಷಯವನ್ನು ತನಿಖೆ ಮಾಡುತ್ತಿರುವರು

◆◆◆◆

ಮದರಾಸ್ ಪಟ್ಟಣದಲ್ಲಿ ಮುದಿದು ಮುಪ್ಪಾಗುವಂಥಾ ಮೂಗು ಪ್ರಾಣಿಗಳನ್ನು ಒಂದು ಕಡೆ ಇಟ್ಟು, ಸಾಯುವವರೆಗೂ ಸಾಕುವದಕ್ಕೆ ಒಂದು ಕಟ್ಟಡವನ್ನು ಕಟ್ಟಬೇಕೆಂದು ಎಂಟು ವರುಷಗಳಿಂದಲೂ ಪ್ರಯತ್ನಪಡುತ್ತಿದ್ದು, ಈಗ ಕಟ್ಟುವದಕ್ಕೆ ಉಪಕ್ರಮಿಸಿರುವರು ಇದರ ಅಸ್ತಿಭಾರವನ್ನು ಮದರಾಸ್ ಗವರ್ನರವರು ಕಳೆದ ವಾರ ಹಾಕಿದರು ಈ ಬಂಗಲೆಯನ್ನು ಕಟ್ಟುವದಕ್ಕೆ ಚಂದಾ ಮೂಲಕ ೩೩,೦೦೦ ರೂಪಾಯಿ ಸೇರಿಸಲ್ಪಟ್ಟಿರುತ್ತದೆ. ಈಚೆಗೆ ವಿಜಯನಗರದ ರೀವಾ ಮಹಾರಾಣಿಯವರು ಈ ಫಂಡಿಗೆ ಒಂದು ಲಕ್ಷ ರೂಪಾಯಿ ಕೊಟ್ಟಿದ್ದಾರೆ.

◆◆◆◆

ಗ್ವಾಲಿಯರ್ ಸಂಸ್ಥಾನದ ಮಹಾರಾಣಿಯವರು ತಮ್ಮ ರಾಜಧಾನಿಯ ಹೆಂಗಸರಿಗೆ ವಿದ್ಯೆ ಕಲಿಸಿ, ದೇಹದಾರ್ಢ್ಯವನ್ನುಂಟುಮಾಡುವ ಅಂಗಸಾಧನೆಗಳೇ ಮೊದಲಾದವುಗಳಿಂದ ಅವರನ್ನು ಅಭಿವೃದ್ಧಿಸ್ಥಿತಿಗೆ ತರಬೇಕೆಂದು ಇಷ್ಟಪಟ್ಟು, ತಮ್ಮ ಅರಮನೆಯ ಒಂದು ಭಾಗದಲ್ಲಿ ಒಂದು ಸಂಘವನ್ನು ಏರ್ಪಡಿಸಿರುವರು ಅನೇಕ ಅಧಿಕಾರಿಗಳ ಮತ್ತು ಸರದಾರರ ಮನೆಗಳ ಸ್ತ್ರೀಯರು ಈ ಸಂಘಕ್ಕೆ ಸೇರಿರುತ್ತಾರೆ. ಮಹಾರಾಣಿಯವರು ತಮ್ಮ ಸ್ವಂತಖರ್ಚಿನಿಂದ ಈ ಸಂಘವನ್ನು ನಡೆಸುವರೇ ಹೊರತು ಮೆಂಬರುಗಳು ಏನೂ ರುಸುಂ ಕೊಡುವದಿಲ್ಲ.

◆◆◆◆

ಬೊಂಬಾಯಿ ಪಟ್ಟಣದ ಕೋಟೆಯಲ್ಲಿರುವ ಧನಮಾಲ್ ಚಲರಾಂ ಎಂಬ ಮುಲ್ತಾನಿಯವರ ಅಂಗಡಿಯಲ್ಲಿ ಕಳೆದ ಶನಿವಾರ ರಾತ್ರಿ ಭಾರೀ ಕಳವು ನಡೆಯಿತು ಪದ್ಧತಿಯಂತೆ ರಾತ್ರಿ ಅಂಗಡಿಯ ಬಾಗಿಲನ್ನು ಹಾಕಿಕೊಂಡು ಹೋಗಿ ಬೆಳಗ್ಗೆ ಬಂದು ನೋಡುವಲ್ಲಿ ಎರಡು ಪೆಟ್ಟಿಗೆಗಳಲ್ಲಿದ್ದ ಒಡವೆಗಳೂ ಮತ್ತೊಂದು ಪೆಟ್ಟಿಗೆಯಲ್ಲಿದ್ದ ಕೆಲವು ಚಿನ್ನದ ಸಾಮಾನುಗಳೂ ಗೈರ್ಹಾಜರಿಯಾಗಿದ್ದವು. ಅಲ್ಲೆಲ್ಲಾ ಹುಡುಕಿ ನೋಡುವಲ್ಲಿ ಅಂಗಡಿ ಮೇಲ್ಭಾಗದಲ್ಲಿ ಒಂದು ಕನ್ನವು ಕಂಡಿತು. ಅಂಗಡಿಯವರು ಒಟ್ಟು ೧೦,೧೯೯ ರೂಪಾಯಿ ಕಳೆಕೊಂಡರೆಂದು ತಿಳಿದು ಬಂದಿದೆ.

◆◆◆◆

ಕಲ್ಕತ್ತೆಯ ಸಮೀಪದಲ್ಲಿರುವ ಒಂದು ಹಳ್ಳಿಯಲ್ಲಿ ಪ್ರತಾಪಚಂದ್ರನೆಂಬವನು ತನ್ನ ಜೀತಗಾರರೊಡನೆ ಭತ್ತವನ್ನು ಬಿತ್ತುತ್ತಿರುವಲ್ಲಿ ಕತೋಬ್ದಿನಂದಲನೆಂಬವನು ಒಂಬತ್ತು ಜನರನ್ನು ಕರೆದುಕೊಂಡು ಹೋಗಿ ಬಿತ್ತಕೂಡದೆಂದು ಪ್ರತಾಪಚಂದ್ರನನ್ನು ಅಟಕಾಯಿಸಿದನು ಕೂಡಲೇ ಅವರಿಗೂ ಇವರಿಗೂ ಜಗಳವಾಗಿ ಪ್ರತಾಪನೂ ಅವನ ತಮ್ಮನೂ ಮೂವರು ಜೀತಗಾರರೂ ಪೂರಾ ಏಟುತಿಂದು ಮೃತಪಟ್ಟರು ಜಡ್ಜಿಯವರು ಎಲ್ಲರನ್ನೂ ತಪ್ಪಿತಸ್ಥರೆಂದು ತೀರ್ಮಾನಿಸಿ ಕತೋಬ್ದಿಗೂ ಇನ್ನೊಬ್ಬನಿಗೂ ೧೪ ವರುಷದಂತೆ ಗಡೀಪಾರು ಸಜವನ್ನೂ ಉಳಿದವರಿಗೆ ಒಂದರಿಂದ ಆರು ವರುಷಗಳ ವರೆಗೂ ಕಠಿಣ ಸಜವನ್ನೂ ವಿಧಿಸಿದರು.

◆◆◆◆

ಕೊಚ್ಚಿ ಸಂಸ್ಥಾನದ ಎರ್ನಾಕುಲಂ ಪಟ್ಟಣದಿಂದ ೬ ಮೈಲಿ ದೂರದಲ್ಲಿ ಒಬ್ಬ ಅಕ್ಕಸಾಲಿಗನು ಬಹಳ ಕಾಲದಿಂದಲೂ ಖೋಟಾ ರೂಪಾಯಿಗಳನ್ನು ತಯಾರ್ಮಾಡುತ್ತಿದ್ದು, ಕಳೆದ ವಾರ ಪೋಲೀಸಿನವರಿಗೆ ಸಿಕ್ಕಿಬಿದ್ದನು ಅವನ ಹೆಂಡತಿಗೆ ಅವನಲ್ಲಿ ನಂಬಿಕೆ ಸಾಲದೇ ಹೋದ್ದರಿಂದ ಅವಳೇ ಹೋಗಿ ಪೋಲೀಸಿನವರಿಗೆ ವರ್ತಮಾನ ಕೊಟ್ಟಳು ನಾಣ್ಯಗಳನ್ನು ಮಾಡುತ್ತಿದ್ದ ಆಯುಧಗಳನ್ನು ಅವನು ಭೂಮಿಯಲ್ಲಿ ಹೂಣಿಟ್ಟಿದ್ದನು. ಅವನು ತಯಾರ್ಮಾಡಿದ್ದ ಆರು ರೂಪಾಯಿಗಳು ಅವನ ಮನೆಯಲ್ಲಿ ಸಿಕ್ಕಿದವು ಅವುಗಳನ್ನೂ ಗವರ್ನಮೆಂಟಿನವರು ಅಚ್ಚು ಹಾಕಿರುವ ಸಾಚಾ ರೂಪಾಯಿಗಳನ್ನೂ ಹೋಲಿಸಿ ನೋಡಿದಾಗ ಸಾಧಾರಣವಾಗಿ ವ್ಯತ್ಯಾಸವೇನೂ ಕಾಣಬರಲಿಲ್ಲ.

◆◆◆◆

ಕಳೆದ ವರ್ಷ ಧರ್ಮಕಾರ್ಯಗಳಿಗೋಸ್ಕರ ಕಲ್ಕತ್ತೆಯ ಜಮುಗೋವಿಂದ ಲಾಹರವರು ಒಂದು ಲಕ್ಷ ರೂಪಾಯನ್ನು ಕೊಟ್ಟರು. ಇನ್ನೂ ಅನೇಕರು ಸಾವಿರ ರೂಪಾಯಿನಿಂದ ಮೂವತ್ತೈದು ಸಾವಿರ ರೂಪಾಯಿಗಳವರೆಗೆ ಧರ್ಮ ಮಾಡಿರುತ್ತಾರೆ ಪೂರ್ಣಿಯಾ ಪಟ್ಟಣದ ಶ್ರೀಮತಿ ಕದಂಬಿನೀ ದೇವಿ ಎಂಬಾಕೆಯು ಗವರ್ನಮೆಂಟು ಬ್ಯಾಂಕಿನಲ್ಲಿ ಹತ್ತು ಸಾವಿರ ರೂಪಾಯನ್ನು ಇರಿಸಿ, ಅದರ ಬಡ್ಡಿ ಹಣದಲ್ಲಿ ಅರ್ಧ ಬಿರ್ಭೂಂ ಡಿಸ್ಟ್ರಿಕ್ಟಿನಲ್ಲಿರುವ ಕುರುಡರಿಗೂ, ಕುಂಟರಿಗೂ, ಕಿವುಡುಮೂಕರಿಗೂ ಬಟ್ಟೆಬರೆಗಳನ್ನು ಧರ್ಮಾರ್ಥವಾಗಿ ಕೊಡುವುದಕ್ಕೆ ವಿನಿಯೋಗಿಸುತ್ತೇನೆಂತಲೂ ಉಳಿದ ಬಡ್ಡಿಯನ್ನು ಜೀವಂತಳಾಗಿರುವವರೆಗೂ ತಾನೇ ದಾನ ಧರ್ಮಾದಿಗಳನ್ನು ಮಾಡುವದಕ್ಕೆ ಉಪಯೋಗಿಸುತ್ತೇನೆಂತಲೂ ತಿಳಿಸಿರುತ್ತಾಳೆ.

ಇಂಡಿಯಾ ಗವರ್ನಮೆಂಟಿನವರು ಹಿಂದುಸ್ಥಾನದಲ್ಲಿರುವ ನೆಯ್ಗೆ ಕಾರ್ಖಾನೆಗಳಲ್ಲಿ ಕೆಲಸಮಾಡುವವರ ಸ್ಥಿತಿಯನ್ನು ವಿಚಾರಿಸಿ ರಿಪೋರ್ಟ್ ಮಾಡುವಂತೆ ಒಂದು ಕಮಿಟಿಯನ್ನು ಏರ್ಪಡಿಸಿದ್ದಾರೆ. ಆ ಕಮಿಟಿಯವರು ಗಂಡಸರು ಬಹಳ ಕಾಲ ಕೆಲಸ ಮಾಡುವದರಿಂದ ಅವರ ಆರೋಗ್ಯವು ಕೆಡುವದೇ, ಅಥವಾ ಕೆಲಸಮಾಡುವ ಹೊತ್ತನ್ನು ನಿಯಾಮಕಮಾಡಬೇಕೇ ಎಂಬುವದನ್ನೂ ಹುಡುಗರು ಕೆಲಸಕ್ಕೆ ಸೇರುವದಕ್ಕೆ ಮುಂಚೆ ವಯಸ್ಸಿನ ಯೋಗ್ಯತಾ ಪತ್ರಿಕೆಯನ್ನು ತೋರಿಸಬೇಕೇ ಎಂಬ ವಿಷಯವನ್ನೂ ಚರ್ಚಿಸುವರು. ಕೆಲಸಕ್ಕೆ ಸೇರುವ ಹುಡುಗರ ವಯಸ್ಸನ್ನು ಹೆಚ್ಚಿಸುವದನ್ನೂ ಕಾರ್ಖಾನೆಗಳಲ್ಲಿ ಕೆಲಸ ಮಾಡುವವರ ಆರೋಗ್ಯವನ್ನು ವಿಚಾರಣೆ ಮಾಡುವದಕ್ಕೆ ಬೇರೆ ಡಾಕ್ಟರುಗಳನ್ನು ನಿಯಾಮಕ ಮಾಡಬೇಕೆಂಬುವದನ್ನೂ ಈ ಕಮಿಟಿಯವರು ವಿಚಾರಿಸುತ್ತಾರೆ.

◆◆◆◆

ಕಳೆದ ವಾರ ಬೊಂಬಾಯಿನಲ್ಲಿ ಒಂದು ಸಭೆ ಸೇರಿಸಿ ಗುಜರಾಥ್ ಮತ್ತು ಕಚ್ಛವಾಡ ಸಂಸ್ಥಾನಗಳಲ್ಲಿ ಗೋಹತ್ಯೆಗಳ ಕೊಲೆಯನ್ನು ನಿಲ್ಲಿಸಿದ ಧರ್ಮಗುರು ಭಗತ್ ಲೋಕಭಗವಾನರವರಿಗೆ ಒಂದು ಸಾವಿರ ರೂಪಾಯಿ ಬಹುಮಾನವನ್ನೂ ಒಂದು ಚಿನ್ನದ ಬಿರುದನ್ನೂ ಕೊಟ್ಟರು ಇವರು ಗೋಹತ್ಯೆಗಳ ಕೊಲೆಯನ್ನು ನಿಲ್ಲಿಸಬೇಕೆಂದು ಶಪಥ ಮಾಡಿ ಸುಮಾರು ಹನ್ನೆರಡು ವರುಷಗಳಿಂದ ಹಣ್ಣು ಹಂಪಲು ಮತ್ತು ಹಾಲಿನಲ್ಲೇ ಜೀವನಮಾಡಿದರು. ಧರ್ಮಕೆಲಸಕ್ಕಾಗಿ ಇವರು ಪಡುವ ಶ್ರಮಕ್ಕೆ ಏನಾದರೂ ಪ್ರತ್ಯುಪಕಾರ ಮಾಡಬೇಕೆಂದು ಗುಜರಾಥ್ ಮತ್ತು ಕಾಥಿವಾರ್ ಜನಗಳು ಒಂದು ಫಂಡನ್ನು ಏರ್ಪಡಿಸಿದರು. ಭಾವನಗರದ ಠಾಕೂರ್ ಸಾಹೇಬರು ಇನ್ನೂ ಅನೇಕರೂ ಚಂದಾ ಕೊಟ್ಟರು. ಭಗತ್‌ಲೋಕರವರ ಕೆಲಸಕ್ಕೆ ಬಹಳವಾಗಿ ಸಹಾಯ ಮಾಡಿದ ಗೋವಿಂದರಘು ಎಂಬವರಿಗೆ ೨೫೦ ರೂಪಾಯನ್ನೂ ಒಂದು ಬಿರುದನ್ನೂ ಬಹುಮಾನ ಕೊಟ್ಟರು. ಇವರಿಂದ ಆ ದೇಶಗಳಲ್ಲಿ ಜಾನುವಾರುಗಳನ್ನು ಕೊಲ್ಲುವದಕ್ಕಾಗಿ ಪೂರ್ವ ಪದ್ಧತಿಯು ಬಹಳವಾಗಿ ಕಡಿಮೆಯಾಗಿರುವುದು

◆◆◆◆

ಕಲ್ಕತ್ತೆಯ ಹತ್ತರ ಲಕಿಯ ಮಲ್ಲಿಹಾರ್ ಎಂಬ ಮೂಟಗಾತಿಯು ಗಾಡಿಯಲ್ಲಿ ಪ್ರಯಾಣಮಾಡುತ್ತಾ ತನ್ನ ಜೊತೆಯಲ್ಲಿದ್ದ ಇಬ್ಬರಿಂದ ಸ್ವಲ್ಪ ದುಡ್ಡು ತೆಗೆದುಕೊಂಡು ಎರಡರಷ್ಟು ಮಾಡಿ ಕೊಡುವದಾಗಿ ಹೇಳಿದಳು. ಸ್ವಲ್ಪ ಹೊತ್ತಿನ ಮೇಲೆ ಕೊಟ್ಟ ಹಣವನ್ನೂ ಹಿಂತಿರುಗಿ ಕೊಡದೇ ಇರಲು ಪ್ರಯಾಣಸ್ತರು ಅವಳನ್ನು ಪೋಲೀಸಿನವರಿಗೆ ಒಪ್ಪಿಸಿದರು. ವಿಚಾರಣೆಮಾಡಿದಾಗ ಅವಳು ಏನೊಂದು ಉತ್ತರವನ್ನೂ ಕೊಡಲಿಲ್ಲ. ಕೋರ್ಟಿನ ಗುಮಾಸ್ತೆಯು—ನೀನು ಏನಾದರೂ ಹೇಳುವದುಂಟೇ ಎಂದು ಅವಳನ್ನು ಕೇಳಲು, ಅವಳು ಏನೋ ಮಂತ್ರವನ್ನು ಜಪಿಸಿ ಆ ಗುಮಾಸ್ತೆಯ ತಲೆಯ ಮೇಲೆ ಬೆಳ್ಳಿಯ ಮತ್ತು ಕಾಂಚಿನ ನಾಣ್ಯಗಳನ್ನು ತನ್ನ ಬಾಯಿಯಿಂದ ಸುರಿಸಿದಳು ಅಲ್ಲಿದ್ದ ಜವಾನರು ಜಾಗ್ರತೆಯಾಗಿ ದುಡ್ಡನ್ನು ಬಾಚಿಕೊಳ್ಳುವದಕ್ಕೆ ನುಗ್ಗಲು, ಆ ನಾಣ್ಯಗಳೆಲ್ಲಾ ಅದೃಶ್ಯವಾದವು. ಜಡ್ಜಿಯವರು ಇದನ್ನು ನೋಡಿ ಆಶ್ಚರ್ಯಪಟ್ಟರೂ ಅವಳನ್ನು ತಪ್ಪಿತಸ್ಥಳೆಂದು ತೀರ್ಮಾನಿಸಿ ಅವಳಿಗೆ ಎಂಟು ತಿಂಗಳ ಕಠಿಣಸಜಾ ವಿಧಿಸಿದರು ಈ ತೀರ್ಮಾನವನ್ನು ಕೇಳಿ ಅವಳು ತನ್ನನ್ನು ಯಾರೂ ಎರಡು ಗಂಟೆಯ ಹೊತ್ತೂ ಒಂದು ಕೊಠಡಿಯಲ್ಲಿ ಇರಿಸಲಾರರೆಂದು ಹೇಳಿಕೊಳ್ಳುತ್ತಾ ಜೈಲಿಗೆ ಹೋದಳು.

ಹಿಂದುಸ್ಥಾನದ ೨೨ನೇ ರಾಜಕೀಯ ಮಹಾ ಸಭೆಯು.

ಕಲ್ಕತ್ತಾ ಪಟ್ಟಣದಲ್ಲಿ ನಡೆಯಿತು

ಹಿಂದುಸ್ಥಾನದ ದೇಶೀಯ ವಿದ್ವಾಂಸರು ಈ ರಾಷ್ಟ್ರದ ಸಕಲ ಭಾಗಗಳಿಂದಲೂ ಪ್ರತಿ ವರುಷವೂ ಹೋಗಿ ಯಾವದಾದರೊಂದು ಪಟ್ಟಣದಲ್ಲಿ ಸಭೆ ಸೇರಿ, ರಾಜ್ಯಭಾರ ವಿಚಾರಗಳನ್ನು ಕುರಿತು ಚರ್ಚೆ ಮಾಡಿ, ಈ ದೇಶದ ಪ್ರಜೆಗಳಲ್ಲಿ ಯೋಗ್ಯತಾಸಿದ್ಧಿಯನ್ನು ಪಡೆದಿರುವಂಥಾವರಿಗೆ ಗವರ್ನಮೆಂಟಿನವರು ಹೆಚ್ಚು ಹೆಚ್ಚಾಗಿ ಅಧಿಕಾರಗಳನ್ನು ಕೊಡಬೇಕೆಂತಲೂ, ರಾಜ್ಯಭಾರ ವಿಚಾರಣೆಗಳನ್ನು ಪ್ರಜಾ ಏಳಿಗೆಗೆ ಸಹಕಾರವಾಗಿ ಬದಲಾವಣೆ ಮಾಡಬೇಕಾಗಿದೆ ಎಂತಲೂ ಇಂಗ್ಲಿಷ್ ಪ್ರಭುಗಳಿಗೆ ಅರಿಕೆ ಮಾಡುತ್ತಾ ಬಂದಿದ್ದಾರೆ ಈ ಸ್ವದೇಶೀಯರ ಸಭೆಗೆ ನ್ಯಾಷನಲ್ ಕಾಂಗ್ರೆಸ್ ಅಥವಾ ಸಾರ್ವಜನಿಕ ಸಮಾಜವೆಂಬ ಹೆಸರು. ಈ ಸಭೆಯು ಸ್ಥಾಪನೆಯಾಗಿ ಇಲ್ಲಿಗೆ ಇಪ್ಪತ್ತೆರಡು ವರುಷಗಳಾದವು. ಈ ವರುಷ ಮೇಲ್ಕಂಡ ಸಭೆಯು ಕಲ್ಕತ್ತೆಯಲ್ಲಿ ನಡೆಯಿತು. ಕಳೆದ ಡಿಸೆಂಬರ್ ೨೬ ನೆ ತಾ. ಪ್ರಾರಂಭವಾಗಿ ನಾಲ್ಕು ದಿನಗಳ ತನಕ ದೇಶವತ್ಸಲರು ಸಭೆಸೇರಿ ರಾಜಕೀಯ ವಿಚಾರಗಳನ್ನು ಕುರಿತು ಚರ್ಚಿಸಿದರು.

ಸಮಾಜದ ವರ್ಣನೆ ಮುಂತಾದದ್ದು.

ಕಲ್ಕತ್ತಾ ಪಟ್ಟಣದ ದೊಡ್ಡ ಮೈದಾನಿನಲ್ಲಿ ಮೇಲ್ಕಂಡ ಸಭಾಮಂದಿರವು ದೇಶೀಯ ವಸ್ತು ವಿಶೇಷಗಳಿಂದ ಅಪಾರ ವಿಸ್ತಾರವಾಗಿಯೂ ಬಹು ರಮಣೀಯವಾಗಿಯೂ ಕಟ್ಟಲ್ಪಟ್ಟಿರುವುದು ಒಳಗಡೆ ಎದುರು ಪಾರ್ಶ್ವದಲ್ಲಿ ಬಹಳ ದೊಡ್ಡದಾದ ಸ್ವಲ್ಪ ಎತ್ತರವುಳ್ಳ ಪ್ಲಾಟ್‌ಫಾರಂ ಎಂಬ ಜಗಲಿಯನ್ನು ಕಟ್ಟಿ ಅದರ ಮೇಲೆ ಮುಖ್ಯ ಮುಖ್ಯರಾದ ಮೆಂಬರುಗಳು ಕೂತುಕೊಳ್ಳುವುದಕ್ಕೆ ನೂರಾರು ಪೀಠಗಳನ್ನು ಹಾಕಿ ಅಲಂಕರಿಸಿದ್ದರು ಅದರ ಹಿಂದೆ ತೆರೆಯನ್ನು ಇಳೀಬಿಟ್ಟು ಹಿಂದುಗಡೆ ಸ್ತ್ರೀಯರು ಕೂತುಕೊಳ್ಳುವುದಕ್ಕೆ ಅನುಕೂಲ ಮಾಡಿಕೊಟ್ಟಿದ್ದರು ಆ ಪ್ಲಾಟ್‌ಫಾರಮಿನ ಉಭಯ ಪಾರ್ಶ್ವಗಳಲ್ಲೂ ಎದುರುಗಡೆಯೂ ವಿಸ್ತಾರವಾದ ದೊಡ್ಡ ರಂಗಸ್ಥಳದ ತುಂಬಾ ಮೆಂಬರುಗಳೂ ಪ್ರೋತ್ಸಾಹಕರೂ ಇತರ ವಿದ್ವಾಂಸರೂ ಕೂತುಕೊಳ್ಳುವಂತೆ ಸಾಲು ಸಾಲಾಗಿಯೂ ಒಂದರ ಹಿಂದೆ ಒಂದು ಎತ್ತರವಾಗಿಯೂ ಬೆಂಚುಗಳನ್ನು ಕಟ್ಟಿ ಸಿದ್ಧಪಡಿಸಿದ್ದರು

ಸಭಾ ಪ್ರಾರಂಭವು

ಸಭೆಯು ಪ್ರಾರಂಭವಾದ ತಾ. ೨೬ ನೆ ಬುಧವಾರ ಮಧ್ಯಾಹ್ನಕ್ಕೆ ಬಹಳ ಮುಂಚೆನಿಂದಲೂ ಸಭಾಮಂದಿರವು ಮೆಂಬರುಗಳಿಂದಲೂ

ಪ್ರೋತ್ಸಾಹಕರಿಂದಲೂ ಇತರ ದೊಡ್ಡ ಮನುಷ್ಯರಿಂದಲೂ ತುಂಬಿ ತುಳುಕುತಲಿತ್ತು. ಆ ದಿನದ ಕೋಲಾಹಲವೂ ಸಭಿಕರ ಜಯ ಘೋಷಗಳೂ ಸಂತೋಷ ಉತ್ಸಾಹಾದಿಗಳೂ ಅಪೂರ್ವವೆನಿಸಿದವು. ಒಂದು ಕಡೆ “ ವಂದೇ ಮಾತರಂ ” ಎಂಬ ಶಬ್ದವೂ, ಇನ್ನೊಂದು ಕಡೆ ಸ್ತ್ರೀಯರ ಮಂಗಳ ಪದಗಳೂ, ಮತ್ತೊಂದು ಕಡೆ ಬ್ಯಾಂಡ್ ವಾದ್ಯಗಳೂ ತುಂಬಿ ಆನಂದಮಯವಾಗಿದ್ದವು. ಸಭಾಮಂದಿರದಲ್ಲಿ ಸುಮಾರು ೧೫,೦೦೦ ಜನಗಳಿಂತಲೂ ಹೆಚ್ಚಾಗಿಯೇ ಸೇರಿದ್ದರೆಂತಲೂ ಈ ಪೈಕಿ ಮೆಂಬರುಗಳೇ ೨೫,೦೦೦ ಮಂದಿಗೆ ಮೀರಿದ್ದರೆಂತಲೂ ಧಾರಾಳವಾಗಿ ಹೇಳಬಹುದು. ಈ ಮೆಂಬರುಗಳ ಪೈಕಿ ಪಂಜಾಬ್ ಆಧಿಪತ್ಯದವರು ೧೫೦, ಮದರಾಸ್ ಆಧಿಪತ್ಯದವರು ೨೦೦, ಬೊಂಬಾಯಿ ಆಧಿಪತ್ಯದವರು ೨೦೦, ಸಂಯುಕ್ತ ಆಧಿಪತ್ಯಗಳವರು ೨೦೦, ಉಳಿದವರು ಬಂಗಾಳಾ ಆಧಿಪತ್ಯಕ್ಕೆ ಸೇರಿದ ಡಿಸ್ಟ್ರಿಕ್ಟುಗಳಿಂದ ಬಂದವರು. ಮಧ್ಯಾಹ್ನ ಹನ್ನೆರಡು ಗಂಟೆಗೆ ಸರಿಯಾಗಿ ಸಭಾ ಪ್ರೆಸಿಡೆಂಟರಾದ ಮೆ॥ ದಾದಾಭಾಯಿ ನೌರೋಜಿಯವರು ದಿವ್ಯವಾದ ಸಾರೋಟಿನಲ್ಲಿ ಬಂದ, ಮಂದಿರದ ಬಾಗಿಲಲ್ಲಿ ಇಳಿದರು. ಕೂಡಲೇ ವಾದ್ಯಗಳು ಭೋರ್ಗರೆದವು. ಸ್ತ್ರೀಯರು ಮಂಗಳ ಪದಗಳನ್ನು ಹಾಡಿದರು. ಸ್ಕೂಲ್ ಹುಡುಗರೂ ಸಭಿಕರೂ “ ವಂದೇ ಮಾತರಂ ” ಎಂಬುದಾಗಿ ಜಯ ಧ್ವನಿ ಮಾಡಿದರು. ಸಭೆಯ ಮುಖಂಡರು ಬಾಗಿಲಲ್ಲಿ ಕಾದಿದ್ದು ಪ್ರೆಸಿಡೆಂಟರನ್ನು ಮಹಾ ಗೌರವಪೂರ್ವಕವಾಗಿ ಒಳಕ್ಕೆ ಕರೆದುಕೊಂಡು ಹೋಗಿ, ಅವರಿಗಾಗಿ ಬಿಟ್ಟಿದ್ದ ಶ್ರೇಷ್ಠಾಸನದಲ್ಲಿ ಕೂಡಿಸಿದರು. ಆದ ವರೆಗೆ ಸಭಾಸದರೆಲ್ಲರೂ ಎದ್ದು ನಿಂತಿದ್ದು ವೃದ್ಧ ಪ್ರೆಸಿಡೆಂಟರಿಗೆ ಸನ್ಮಾನ ಮಾಡಿದರು. ಅವರ ಆಕ್ಕ ಪಕ್ಕಗಳಲ್ಲಿ ಪ್ಲ್ಯಾಟ್‌ಫಾರಮಿನ ಮೇಲೆ ಕುಳಿತಿದ್ದ ಮಹನೀಯರಲ್ಲಿ ಮುಂದೆ ಹೇಳುವ ದೇಶವತ್ಸಲರು ಕಾಣುತಲಿದ್ದರು. ಸರ್ ಫಿರೋಜ್‌ಷಾ ಮೆಹತಾ, ಮೆ॥ ಗಳಾದ ಗೋಖಲೆ, ವಾಚಾ, ಮುಧೋಳ್ಕರ್, ಖಾರೇ, ಪಾರೇಖ್, ರಾಜಾ ಪ್ಯಾರಿ ಮೋಹನ ಮುಖರ್ಜಿ, ಡಾ॥ ರಾಷ್ ಬಿಹಾರಿ ಘೋಸ್, ಘನ ಮೆ॥ ಸೆಟಲ್ವಾಡ್, ಮೆ॥ ಎರ್ಡ್ಲೆ ನಾರ್ಟನ್, ಮೆ॥ ಎಸ್ ಪಿ ಸಿನ್ಹ, ಘನ ದೀಕ್ಷಿತ್ ಮೆ॥ ಗಳಾದ ನರೇಂದ್ರನಾಥಸೇನ್, ಸುರೇಂದ್ರನಾಥ ಬಾನರ್ಜಿ, ತಿಲಕ್, ಲಾಜಪತ್ ರಾಯಿ, ಬಿಪಿನಚಂದ್ರ ಪಾಲ್, ಕರ್ನ, ಕೃಷ್ಣಸ್ವಾಮಿ ಐಯರ್, ಆನಂದ ಚಾರ್ಲು, ಶಂಕರ ನಾಯರ್, ವೀರ ರಾಘವಾಚಾರ್ಯರ್, ನವಾಬ್ ಸೈಯದ್ ಮಹಮದ್, ಕೃಷ್ಣನ್ ನಾಯರ್, ಸರ್ ಬಾಲಚಂದ್ರ ಕೃಷ್ಣ, ಮದನ ಮೋಹನ ಮಾಳವ್ಯ, ಗಂಗಾಪ್ರಸಾದವರ್ಮ, ಏ ಎಂ ಸಮರಥ, ಭೂಪೇಂದ್ರನಾಥ ಬೋಸ್, ಎ ಚೌಧರಿ, ಎಚ್ ಎ ವಾಡಿಯಾ, ವೈಕುಂಠನಾಥಸೇನ್, ಈ ಮೊದಲಾದವರು ಕುಳಿತಿದ್ದರು.

ಸಮಾಜದ ಕಾರ್ಯಾರಂಭವು

ಹಿಂದುಸ್ಥಾನ ದರ್ಪಣವೆಂಬ ಪತ್ರಿಕಾ ಎಡಿಟರ್ ಮೆ॥ ನರೇಂದ್ರನಾಥ ಸೇನರವರು ಎದ್ದು ಭಗವತ್ಪ್ರಾರ್ಥನೆಮಾಡಿ, ಸ್ವದೇಶಿಗಳಾದ ನಾವುಗಳು ಸ್ವರಾಜಕಾರ್ಯಗಳನ್ನು ಪಡೆದುಕೊಳ್ಳಬೇಕೆಂದು ಪ್ರಯತ್ನ ಪಡುತ್ತಿದೆ ಎದ್ದರಿಂದ ನಮಗೆ ಅದಕ್ಕಾಗಿ ಶಕ್ತಿ ಸಾಮರ್ಥ್ಯಾದಿಗಳನ್ನು ದಯ ಪಾಲಿಸಿ, ಈ ಸಭೆಯ ಕಾರ್ಯಗಳನ್ನು ನಿರ್ವಿಘ್ನವಾಗಿಯೂ ಸಾರ್ಥಕವಾಗಿಯೂ ನೆರವೇರಿಸಿ, ನಮ್ಮ ಇಷ್ಟಾರ್ಥಗಳು ಸಿದ್ಧಿಯಾಗುವಂತೆ ಮಾಡೆಂದು ಪ್ರಾರ್ಥಿಸಿ, ಸಮಾಜಕಾರ್ಯವನ್ನು ಆರಂಭಮಾಡಿದರು. ತರುವಾಯ ಕಲ್ಕತ್ತಾ ಪಟ್ಟಣದ ಪ್ರಸಿದ್ಧ ವಕೀಲರೂ ರಿಸೆಪ್ಷನ್ ಕಮಿಟಿಯ ಅಧ್ಯಕ್ಷರೂ ಆದ ಡಾಕ್ಟರ್ ರಾಷ್ ಬಿಹಾರಿ ಘೋಸ್‌ಯವರು ಸಮಸ್ತ ಪ್ರತಿನಿಧಿಗಳಿಗೂ ಸುಸ್ವಾಗತವನ್ನು ಬಯಸಿ, ಉಪನ್ಯಾಸಮಾಡಿದರು. ಅವರ ಹೇಳಿದ ಮುಖ್ಯಾಭಿಪ್ರಾಯಗಳೇನೆಂದರೆ —ಗತವರುಷ ಡಬ್ಲ್ಯು. ಸಿ. ಬಾನರ್ಜಿ, ಬದ್ರುದ್ದೀನ್ ತಯಬ್ಜಿ, ಏ. ಎಂ. ಬೋಸ್ ಎಂಬೀ ಪ್ರಸಿದ್ಧ ದೇಶವತ್ಸಲರು ಕಾಲವಾದುದರಿಂದ ನಮ್ಮ ರಾಷ್ಟ್ರಕ್ಕೂ ನಮ್ಮ ಈ ಸಮಾಜಕ್ಕೂ ಅಪಾರವಾದ ನಷ್ಟವಾಗಿರುತ್ತದೆ. ಆ ಪ್ರಜಾಭಿಪ್ರಾಯದ ಲಾರ್ಡ್ ಕರ್ಜನರು ನ್ಯಾಯ ಪಥವಿಂದ ಸ್ಖಲಿಸಿ ಬಂಗಾಳಾ ಆಧಿಪತ್ಯವನ್ನು ವಿಭಾಗಮಾಡಿ, ಈ ರಾಷ್ಟ್ರದಲ್ಲಿ ತುಂಬಾ ಮನೋವ್ಯಥೆಯನ್ನು ಹುಟ್ಟಿಸಿ ಹೋದರು. ಅದನ್ನು ರದ್ದುಮಾಡಬೇಕೆಂದು ಬಂಗಾಳಿಗಳು ನೂರಾರು ಸಭೆಗಳನ್ನು ನಡಿಸಿ ಗವರ್ನ್‌ಮೆಂಟಿನವರಿಗೆ ವಿಜ್ಞಾಪನೆ ಮಾಡಿಕೊಂಡಾಗ್ಯೂ ಸ್ಟೇಟ್ ಸೆಕ್ರೆಟರಿಯವರು ಇನ್ನಾದರೂ ಅದನ್ನು ರದ್ದುಮಾಡಿ ನಮ್ಮ ವಿನಯವನ್ನು ಅಂಗೀಕಾರ ಮಾಡುವರೆಂದು ನಿರೀಕ್ಷಿಸುತ್ತೇವೆ. ಆಗಿನಿಂದ ವಿಲಾಯತಿಯ ಕೈಗಾರಿಕೆ ಮತ್ತು ಕಸಬು ದಾರ ಪದಾರ್ಥಗಳನ್ನು ಕೊಂಡು ಉಪಯೋಗಿಸಕೂಡದೆಂದು ನಾವು ನಿರ್ಧರಮಾಡಿಕೊಳ್ಳುವುದಕ್ಕೆ ಈ ವಿಭಜನೆಯೇ ಕಾರಣವಾಯಿತು. ದೇಶೀಯ ಕಸಬು ಕೈಗಾರಿಕೆಗಳನ್ನು ಜೀರ್ಣೋದ್ಧಾರ ಮಾಡಿ ಅಭಿವೃದ್ಧಿಪಡಿಸಿಕೊಳ್ಳುವುದಕ್ಕಾಗಿ ಬಂಗಾಳಿಗಳು ಇದುವರೆಗೆ ಹತ್ತು ಲಕ್ಷ ರೂಪಾಯಿಗಿಂತಲೂ ಹೆಚ್ಚಾಗಿ ವಿನಿಯೋಗಿಸಿರುತ್ತಾರೆ. ಈಗಿನ ಸ್ಟೇಟ್ ಸೆಕ್ರೆಟರಿಯವರಾದ ಮೈಸ್‌ಮಾರ್ಲೆಯವರು ಬಹಳ ಧಾರಾಳಿಗಳೂ ಸಹೃದಯರೂ ನಮ್ಮ ರಾಷ್ಟ್ರವನ್ನು ಅಭಿವೃದ್ಧಿಗೆ ತರಬೇಕೆಂಬ ಕುತೂಹಲ ಪೂರಿತರೂ ಆಗಿರೋಣದರಿಂದ ನಮ್ಮ ದೇಶದ ಸ್ಥಿತಿಗತಿಯು ಎಲ್ಲಾ ಭಾಗಗಳಲ್ಲೂ ಇನ್ನು ಮುಂದೆ ದಿನೇ ದಿನೇ ತುಂಬಾ ವೃದ್ಧಿಹೊಂದುವ ಭಾಗವಲ್ಲಿ ಸಂಶಯವೇನೂ ಕಾಣುವುದಿಲ್ಲ. ನಾವು ಇಂಥಾ ಸುಸಮಯದಲ್ಲಿ ಆತುರಪಟ್ಟು ಗಲಭೆ ಮಾಡದೆ ಬಹಳ ಸಮಾಧಾನಿಗಳಾಗಿಯೂ ಶಾಂತಚಿತ್ತ ಮನೋಭಾವವುಳ್ಳವರಾಗಿಯೂ ಇರೋಣ. ನಮ್ಮ ಈ ೨೨ನೆಯ ರಾಜಕೀಯ ಸಮಾಜಕ್ಕೆ ಮೆ॥ ದಾದಾಭಾಯಿ ನೌರೋಜಿಯವರು ಪ್ರೆಸಿಡೆಂಟರಾಗಿ ದಯಮಾಡಿದ್ದು ನಮ್ಮ ದುರ್ದೆಶೆಯ ನಿವಾರಣೆಗೆ ವಿಶೇಷ ಪ್ರೋತ್ಸಾಹಕರವಾಗಿರುವುದು. ಅವರಿಗೆ ಈಗ ೮೨ ವರುಷ. ಅಂಬಿ ದೇಹವು ತುಂಬಾ ಗಳಿಸಿ ಹೋಗಿದ್ದಾಗ್ಯೂ ಅವರಲ್ಲಿ ನೆಲಸಿರತಕ್ಕ ದೇಶಾಭ್ಯುದಯ ಕಾಂಕ್ಷೆಯೂ ಸಾಹಸಪೂರ್ವಕವಾದ ಕಾರ್ಯಸಾಧನಾಚಿತ್ತವೃತ್ತಿಯೂ ಸ್ವಲ್ಪ ಮಟ್ಟಿಗೂ ಕುಂದಿರುವುದಿಲ್ಲ. ಈ ಶ್ರೇಷ್ಠಗುಣಗಳನ್ನು ನಾವು ಈ ಮಹನೀಯರಿಂದ ಕಲಿತುಕೊಳ್ಳಬೇಕು. ದೇಶೋನ್ನತಿಗಾಗಿ ಇವರಷ್ಟು ಸಾಹಸಪಟ್ಟು ಹೋರಾಡುತ್ತಾ ಬಂದಿರುವವರು ಯಾರೂ ಇರುವುದಿಲ್ಲ. ಅವರು ನಮಗೆಲ್ಲಾ—“ ನಿರಾಶೆಪಟ್ಟು ಕಾರ್ಯಸಾಧನೆಯನ್ನು ಬಿಡಬೇಡಿ, ಇಂಗ್ಲಿಷ್ ಗವರ್ನ್‌ಮೆಂಟಿನವರು ಸತ್ಯವಂತರೆಂದು ನಂಬಿ, ಅವರಿಂದ ನಿಮಗೆ ಇನ್ನೂ ಬಹಳ ಮೇಲ್ಮೆಯುಂಟಾಗುವುದು. ಮಹಾರಾಜ್ಞೀಯವರು ದಯೆಪಾಲಿಸಿರುವ ಪ್ರಖ್ಯಾತವಾದ ಇಸ್ತಿಹಾರ್ನಾಮೆಗೆ ಯಾರುತಾನೇ ಅಪಾರ್ಥಮಾಡಿಯಾರು ! ಸತ್ಯವಂತರೂ ಸಚ್ಚರಿತ್ರರೂ ಆದ ಇಂಗ್ಲಿಷರು ನಮಗೆ ಸ್ವತಂತ್ರಾಧಿಕಾರಗಳನ್ನು ಕೊಟ್ಟೇ ಕೊಡಬೇಕಾಗುವುದು. ಸ್ವಾತಂತ್ರ್ಯವೆಂಬುದಕ್ಕೆ ವಿಲಾಯತಿಯೇ ಜನ್ಮಭೂಮಿ. ಅಲ್ಲಿನವರು ಸ್ವಾತಂತ್ರ್ಯವನ್ನು ಸಂಪಾದಿಸಿಕೊಳ್ಳುವುದಕ್ಕೂ ತಮ್ಮ ಅಧೀನಕ್ಕೆ ಒಳಪಟ್ಟ ಪ್ರಜೆಗಳಿಗೂ ಸ್ವತಂತ್ರಾಧಿಕಾರವನ್ನು ವಹಿಸಿಕೊಡುವುದಕ್ಕೂ ಬಹಳ ಕಷ್ಟ ನಷ್ಟಗಳನ್ನು ಅನುಭವಿಸಿ ಕೀರ್ತಿವಂತರಾಗಿರುತ್ತಾರೆ. ನಾವು ಅಂಥಾ ಪ್ರಖ್ಯಾತರ ರಾಜ್ಯಾಧಿಪತ್ಯದಲ್ಲಿ ಸೇರಿಕೊಂಡಿರುವುದು ನಮ್ಮ ಭಾಗ್ಯೋದಯವಾಗಿದೆ. ಆದ್ದರಿಂದ ನಾವು ನಮಗೆ ಸ್ವರಾಜ್ಯಾಧಿಕಾರಗಳು ಬರುವುದಿಲ್ಲವೆಂದು ನಿರಾಶೆಪಡಬೇಕಾದದ್ದಿಲ್ಲ. ದುರ್ಮಾರ್ಗ ಪ್ರವರ್ತನೆಯಿಂದಲೂ ದುರ್ಭಾಷಾ ಪ್ರಯೋಗದಿಂದಲೂ ನಮ್ಮ ಉದ್ದೇಶಗಳು ಕೈಗೂಡಲಾರವೆಂದು ತಿಳಿಯಿರಿ ” ಎಂದು ಹೇಳುವರು.

ಪ್ರೆಸಿಡೆಂಟರ ಭಾಷಣವು

ತರುವಾಯ ರಾಜಾ ಪ್ಯಾರಿ ಮೋಹನ ಮುಖರ್ಜಿಯವರೂ, ಘನ ನವಾಬ್ ಸೈಯ್ಯದ್ ಅಹಮದ್‌ರವರೂ, ಮೆ॥ ಶಂಕರ ನಾಯರ್‌ರವರೂ ಉಪನ್ಯಾಸಗಳನ್ನು ಮಾಡಿ, ಮೆ॥ ದಾದಾಭಾಯಿ ನೌರೋಜಿಯವರು ಈ ಸಮಾಜದ ಅಗ್ರಸ್ಥಾನವನ್ನು ಅಲಂಕರಿಸಬೇಕೆಂದು ಕೇಳಿಕೊಂಡರು. ಸಮಾಜಮಂದಿರದಲ್ಲಿದ್ದವರೆಲ್ಲಾ ಅದರಂತೆ ಒಪ್ಪಿ ಆ ಕ್ಷಣದಲ್ಲೇ ಜಯಘೋಷಗಳನ್ನು ಮಾಡಿದರು. ಮೆ॥ ದಾದಾಭಾಯಿ ನೌರೋಜಿಯವರು ಸಭಾಸದರನ್ನೆಲ್ಲಾ ವಂದನೆಮಾಡಿ, ಅಗ್ರಪೀಠವನ್ನು ಹತ್ತಿ ನಿಂತು, ತಮ್ಮ ಉಪನ್ಯಾಸದಲ್ಲಿ ಕೆಲವು ವಾಕ್ಯಗಳನ್ನು ಓದಿ, ಉಳಿದ ಭಾಗವನ್ನು ಮೆ॥ ಗೋಖಲೆಯವರಿಂದ ಓದಿಸಿದರು. ಅದರಲ್ಲಿ ಕಂಡುಬರುವ ಮುಖ್ಯಾಭಿಪ್ರಾಯಗಳೇನೆಂದರೆ —ಈ ನಮ್ಮ ರಾಜಕೀಯ ಸಮಾಜದವರು ಎರಡು ವಿಷಯಗಳನ್ನು ಮಾತ್ರ ಗಮನಕ್ಕೆ ತಂದುಕೊಳ್ಳಬೇಕಾಗಿದೆ. ಇಲ್ಲಿಂದ ಮುಂದಕ್ಕೆ ಹಿಂದುಸ್ಥಾನದ ರಾಜ್ಯಭಾರಕಾರ್ಯಗಳು ಯಾವರೀತಿ ನಡೆಯಬೇಕು, ಅವುಗಳ ಮುಖ್ಯೋದ್ದೇಶಗಳು ಎಂಥವುಗಳಾಗಿರಬೇಕು? ಇದು ಮೊದಲನೆಯ ಭಾಗ. ಈಗಿನ ರಾಜ್ಯಭಾರಕರ್ತರುಗಳನ್ನು ಬಹು ಎಚ್ಚರಿಕೆಯಿಂದ ನೋಡಿ ತಿಳಿದುಕೊಳ್ಳುತ್ತಾ ಯಾವ ಯಾವ ವಿಷಯದಲ್ಲಿ ಏನೇನು ಒದಗಬೇಕಾಗಬೇಕೋ, ದೇಶಾಭ್ಯುದಯಕ್ಕೆ ಸಹಕಾರಿಗಳಾದ ರಾಜ್ಯಭಾರಕ್ರಮಗಳ್ಯಾವುವೋ ಅವುಗಳನ್ನೆಲ್ಲಾ ಪರ್ಯಾಲೋಚನೆಯಿಂದ ಆಗಾಗ್ಗೆ ಗವರ್ನ್‌ಮೆಂಟಿಗೆ ಅರಿಕೆ ಮಾಡುತ್ತಾ ಬರಬೇಕಾದದ್ದು ಎರಡನೆಯ ಭಾಗವಾಗಿರುತ್ತದೆ. ನಾವು ಬ್ರಿಟಿಷ್ ಚಕ್ರಾಧಿಪತ್ಯಕ್ಕೊಳಪಟ್ಟ ಪ್ರಜೆಗಳಾಗಿರುತ್ತೇವೆನ್ನುವುದನ್ನು ಅನೇಕ ಕಾರಣಗಳಿಂದ ಸಿದ್ಧಾಂತಪಡಿಸಬಹುದಾಗಿದೆ. ಆದ್ದರಿಂದ ಬ್ರಿಟಿಷ್ ಪ್ರಜೆಗಳಿಗೆ ಇರುವಂಥಾ ಸ್ವಾತಂತ್ರ್ಯಗಳೆಲ್ಲಾ ನಮಗೆ ದಕ್ಕಬೇಕು. ೧೫೦ ವರುಷಗಳಿಂದಲೂ ನಾವು ಆ ಚಕ್ರಾಧಿಪತ್ಯದ ಪ್ರಜೆಗಳೆನಿಸಿಕೊಂಡಿದ್ದಾಗ್ಯೂ ಬ್ರಿಟಿಷ್ ಗವರ್ನ್‌ಮೆಂಟಿನವರು ಅಂಥಾ ಸ್ವಾತಂತ್ರ್ಯಗಳನ್ನು ನಮಗೆ ಕೊಟ್ಟಿರುವುದಿಲ್ಲ. ಆದರೆ ಆಸ್ಟ್ರೇಲಿಯಾ, ನ್ಯೂಜೀಲೆಂಡ್, ಕಾನಡಾ, ಈ ಮೊದಲಾದ ವಸಾಹತುಗಳ ಪ್ರಜೆಗಳಿಗೆಲ್ಲಾ ಅಂಥಾ ಅಧಿಕಾರಗಳನ್ನು ವಹಿಸಿರುತ್ತಾರೆ. ಅಷ್ಟು ಮಾತ್ರವಲ್ಲದೆ ಸ್ವತಂತ್ರಾಧಿಕಾರವನ್ನು ನಾವು ಪಾಲಿಸುವ ತನಕ ನಾವು ಸುಮ್ಮನಿರದೆ ಕೇಳಿಕೊಳ್ಳುತ್ತಲೇ ಬರತಕ್ಕದ್ದು. ನಮ್ಮ ರಾಷ್ಟ್ರದ ಉತ್ಪತ್ತಿಯನ್ನು ಅನ್ಯಾಯದ ಮಾರ್ಗಗಳಲ್ಲಿ ಖರ್ಚು ಮಾಡುವುದನ್ನು ನಮಗೂ ಅಧಿಕಾರ ಕೊಡಬೇಕು. ತೆರಿಗೆ ಸುಂಕ ಕಂದಾಯಗಳನ್ನು ವಿಧಿಸುವುದಕ್ಕೂ ಬಜೆಟ್ಟು ವಿವರಗಳನ್ನು ಪಡಿಮಾಡುವುದಕ್ಕೂ, ದೇಶದ ಸಮಸ್ತ ಗುಪ್ತ ಧನಮಾರ್ಗಗಳನ್ನೂ ಅಭಿವೃದ್ಧಿಗೆ ತಂದುಕೊಂಡು ರೂಢಿಸುವುದಕ್ಕೂ ನಮಗೆ ಸ್ವಾತಂತ್ರ್ಯವಿರಬೇಕು. ಇದಕ್ಕೆ ಇದೇ ಸುಸಮಯವಾಗಿದೆ. ನಾವು ಅದಕ್ಕೆ ಅರ್ಹರಾಗಿರುತ್ತೇವೆ. ಪರದೇಶಗಳವರು ಬಂದು ನಮ್ಮ ದೇಶವನ್ನು ಆಳುವುದರಿಂದ ನಮ್ಮ ದೇಶವಾಗಲಿ ನಾವಾಗಲಿ ಅಭಿವೃದ್ಧಿ ಹೊಂದಲಾರೆವು. ನಮ್ಮ ದೇಶದ ಅಧಿಕಾರಸ್ಥಾನಗಳಿಗೆ ಸೀಮೆಯಿಂದ ಇಂಗ್ಲಿಷ್ ಜನರನ್ನು ಕರೆತಂದು ನೇಮಿಸುವುದನ್ನು ತಪ್ಪಿಸಿ ಇಲ್ಲೇ ಪರೀಕ್ಷೆಗಳನ್ನಿಟ್ಟು ತೇರ್ಗಡೆ ಹೊಂದುವಂಥಾ ಸ್ವದೇಶಿಗಳಿಗೆ ಅಧಿಕಾರಗಳನ್ನು ಕೊಡುವಂತಾಗಬೇಕು. ವಿದ್ಯಾಭ್ಯಾಸಕ್ಕಾಗಿ ಆಧಾರದ್ರವ್ಯವನ್ನು ಖರ್ಚುಮಾಡಿ ಪ್ರಜಾಕೋಟಿಗಳಿಗೆಲ್ಲಾ ಖರ್ಚಿಲ್ಲದೆ ಸಾಮಾನ್ಯವಿದ್ಯಾಭ್ಯಾಸವನ್ನು ಮಾಡಿಸಬೇಕು. ಇದಕ್ಕೆ ಎಷ್ಟು ಹಣ ಖರ್ಚಾದಾಗ್ಯೂ ಪ್ರಜೆಗಳು ಸರ್ಕಾರದವರನ್ನು ಅಷ್ಟು ವಿಶೇಷವಾಗಿ ಕೊಂಡಾಡುತ್ತಾರೆ. ಪ್ರಪಂಚದ ಯಾವ ಯಾವ ಭಾಗದಲ್ಲಿ ಎಂಥೆಂಥಾ ಪ್ರಭುತ್ವವಿರುವುದೋ, ಆಯಾ ಭಾಗದ ರಾಜ್ಯಭಾರಕ್ರಮಗಳೇನೋ ಇವೆಲ್ಲಾ ನಮ್ಮ ದೇಶದ ವಿದ್ಯಾವಂತರಿಗೆ ಮಾತ್ರವೇ ಅಲ್ಲ, ಅಕ್ಷರಸ್ಥರಲ್ಲದ ಪ್ರಜಾಕೋಟಿಗಳಿಗೂ ಇಲ್ಲಿನ ದೇಶಭಾಷಾ ವರ್ತಮಾನಪತ್ರಿಕೆಗಳ ಮೂಲಕ ಚೆನ್ನಾಗಿ ಗೊತ್ತಿರುತ್ತವೆ. ರಷ್ಯಾ ರಾಜ್ಯದ ರೈತಪ್ರಜೆಗಳಿಗೆ ಡೂಮಾ ಎಂಬ ಪ್ರತಿನಿಧಿ ಸಭೆಯನ್ನು ಮಾಡಿಕೊಟ್ಟಿದ್ದಾರೆ. ಪೂರ್ವದಿಗ್ರಾಜ್ಯಗಳ ಪೈಕಿ ಪರ್ಷಿಯಾ ರಾಜ್ಯದಲ್ಲೂ ಪಾರ್ಲಿಮೆಂಟನ್ನು ಸ್ಥಾಪಿಸಿರುವರು. ಜಪಾನ್ ರಾಜ್ಯದಲ್ಲಿ ಅಂಥಾ ಸಭೆಗಳು ಇದ್ದೇ ಇರುವುವು. ಚೀನಿಯರು ಈಗ ಪ್ರತಿನಿಧಿ ಸಮಾಜವನ್ನು ಸ್ಥಾಪಿಸಿಕೊಳ್ಳುವ ಪ್ರಯತ್ನಮಾಡುತ್ತಿದ್ದಾರೆ. ಇದಾಗ್ಯೂ ಪ್ರಪಂಚದ ಸಮಸ್ತದೇಶಗಳವರೂ ಇನ್ನೂ ಅಜ್ಞಾನಾಂಧಕಾರದಲ್ಲಿರುವಾಗ್ಗೆ ಮಹಾ ಅಭಿವೃದ್ಧಿಗೆ ಬಂದಿದ್ದು ಸಕಲರಿಗೂ ಬೆಳಕನ್ನು ತೋರಿಸಿಕೊಟ್ಟಂಥಾ ಈ ಹಿಂದುಸ್ಥಾನವು ಇನ್ನೂ ಸ್ವತಂತ್ರಾಧಿಕಾರವನ್ನು ಹೊಂದಲು ಯೋಗ್ಯತೆಯುಳ್ಳದ್ದಾಗಿಲ್ಲವೇ? ನಮ್ಮ ನಾಗರಿಕವನ್ನು ಎಲ್ಲಾ ಜನಾಂಗಗಳಿಗೂ ಕಲಿಸಿಕೊಟ್ಟಿದ್ದೇವೆ. ಇನ್ನಾದರೂ ಬ್ರಿಟಿಷ್ ಪ್ರಭುಗಳು ನಮಗೆ ಸ್ವರಾಜ್ಯಾಧಿಕಾರವನ್ನು ವಹಿಸಿಕೊಡಲೇಬೇಕು.

ಹಿಂದುಸ್ಥಾನದ ಸೈನ್ಯವನ್ನು ಬಹಳಮಟ್ಟಿಗೆ ಹೆಚ್ಚಿಸಿ, ಉತ್ಪತ್ತಿಯಲ್ಲಿ ವಿಶೇಷ ಭಾಗವನ್ನು ಅದಕ್ಕೆ ವಿನಿಯೋಗಿಸುತ್ತಾರೆ. ರಷ್ಯಾದವರಾಗಲಿ ಅಫ್ಘಾನಿಸ್ಥಾನದವರಾಗಲಿ ಬಂದು ನಮ್ಮ ರಾಷ್ಟ್ರದ ಮೇಲೆ ಬೀಳುವವರಾಗಿಲ್ಲ. ಇವರು ಸ್ನೇಹಿತರಾದರು. ಅವರ ಬಲವು ಇಲ್ಲಿನ ಪ್ರಜೆಗಳು ಸ್ವಾಮಿಭಕ್ತಿಪರಾಯಣರು. ಕಲಹ ಮಾಡರಲ್ಲವೆಂಬುದು ಸರ್ವವಿದಿತವಾಗಿದೆ. ಇಂಥಾದ್ದರಲ್ಲಿ ಇಷ್ಟು ಸೈನ್ಯವನ್ನು ಯಾಕೆ ಇಟ್ಟು ಸಾಕಬೇಕು? ಇದನ್ನು ಬಹಳ ಕಡಿಮೆ ಮಾಡಬಹುದೆಂತಲೂ, ಬ್ರಿಟಿಷ್ ಗವರ್ನ್‌ಮೆಂಟಿನವರೂ ಖರ್ಚಿಗೆ ಪ್ರತಿ ವರುಷವೂ ದ್ರವ್ಯ ಸಹಾಯ ಮಾಡಬೇಕೆಂತಲೂ ಕೆಲವು ಅಧಿಕಾರಿಗಳೂ ಪ್ರಸಿದ್ಧರಾದ ಇಂಗ್ಲಿಷ್ ದೊಡ್ಡಮನುಷ್ಯರೂ ಹೇಳುತ್ತಾರಲ್ಲಾ? ನಮಗೆ ಸ್ವತಂತ್ರಾಧಿಕಾರವನ್ನು ಕೊಡುವ ನಮ್ಮ ಪ್ರತಿನಿಧಿಗಳನ್ನು ಇಂಗ್ಲಿಷ್ ಪಾರ್ಲಿಮೆಂಟಿನಲ್ಲಿ ಮೆಂಬರ್‌ಗಳಾಗಿ ಸೇರಿಸಿಕೊಳ್ಳುತ್ತಾ ಬಂದರೆ ನಾವಾದರೋ ನಮ್ಮ ಆಚಾರವ್ಯವಹಾರಾದಿಗಳನ್ನು ಈಗಿನ ಕಾಲಕ್ಕೆ ತಕ್ಕಂತೆ ತಿದ್ದಿ ಬದಲಾಯಿಸಿಕೊಂಡು ಕಸಬು ಕೈಗಾರಿಕೆಗಳನ್ನು ಬಿಡದೆ ಅಭಿವೃದ್ಧಿಗೆ ತಂದುಕೊಳ್ಳುವೆವು. ಇದಲ್ಲದೆ ನಮ್ಮಲ್ಲಿ ಐಶ್ವರ್ಯವಂತರಾದ ದೇಶವತ್ಸಲರು ಒಂದು ಟ್ರಸ್ಟ್ ಫಂಡು ಕೂಡಿಸಿ, ಕೆಲವು ವಿದ್ಯಾವಂತರನ್ನು ತರಪೇತುಮಾಡಿ ಈ ರಾಷ್ಟ್ರದ ಸಕಲ ಹಳ್ಳಿ ಗ್ರಾಮ ಊರುಗಳ ಮೇಲೂ ಕಳುಹಿಸಿ, ಪ್ರಜೆಗಳಿಗೆಲ್ಲಾ ಅವರ ಕರ್ತವ್ಯಗಳನ್ನೂ ಅವರ ಸ್ವಾತಂತ್ರ್ಯಗಳನ್ನೂ ಕಲಿಸಬೇಕು. ಮತ್ತು ಅದೇ ಫಂಡಿನಿಂದ ಸಮರ್ಥರಾದ ವಿದ್ಯಾರ್ಥಿಗಳನ್ನು ವಿಲಾಯತಿಗೆ ಕಳುಹಿಸಿ, ಅಲ್ಲಿನ ಸಮಸ್ತ ಪ್ರಜೆಗಳಿಗೂ ಹಿಂದುಸ್ಥಾನದ ಸ್ಥಿತಿಗತಿ ಮುಂತಾದ್ದನ್ನೆಲ್ಲಾ ತಿಳಿಯಪಡಿಸಲು ಹೇಳಿಸಬೇಕು. ಬಂದರೆ ಖಂಡಿತವಾಗಿಯೂ ನಮ್ಮ ಇಷ್ಟಾರ್ಥವು ನೆರವೇರುವುದು. ಗವರ್ನ್‌ಮೆಂಟಿನವರು ಬಂಗಾಳಾ ಆಧಿಪತ್ಯ ವಿಭಾಗಮಾಡಿದ್ದು ತಪ್ಪು. ನಾವು ಬಿಡದೆ ಆಗಿಂದಾಗ್ಗೆ ಅದನ್ನು ಅವರಿಗೆ ತಿಳಿಸುತ್ತಾ ಬಂದಲ್ಲಿ ಅದನ್ನು ಅವರೇ ಮಾರ್ಪಡಿಸುವರೆನ್ನುವುದಕ್ಕೆ ಸಂಶಯವಿಲ್ಲ. ಸ್ವದೇಶೀ ವಿಚಾರವು ಈಗಿನದಲ್ಲ, ಸರ್ವದಿಂದಲೂ ಬೊಂಬಾಯಿನಲ್ಲಿ ಇದ್ದೇ ಇದೆ. ಇದು ನಮ್ಮ ದೇಶಾಭಿವೃದ್ಧಿಗೆ ತುಂಬಾ ಆವಶ್ಯಕವಾದದ್ದು. ಇದನ್ನು ಹಿಂದ ಸ್ಥಾನದ ಒಟ್ಟು ಪ್ರಜೆಯೂ ಪ್ರೋತ್ಸಾಹಿಸಬೇಕಾಗಿದೆ. ಇತ್ತಲಾಗಿ ಹಿಂದುಸ್ಥಾನದಲ್ಲಿರುವ ಸನ್ಯಾಸಿ ಮತ ಕುಲಗೋತ್ರದವರೂ ಏಕಮನಸ್ಸಿನಿಂದ ರಾಜ್ಯಭಾರ ಸ್ವಾತಂತ್ರ್ಯಗಳನ್ನು ಸಂಪಾದಿಸಿಕೊಳ್ಳುವುದಕ್ಕೆ ಸಹಾಯ ಮಾಡಬೇಕು. ಮಹಮದೀಯ ಪ್ರಜೆಗಳನ್ನು ಒಂದು ಮಾತು ಕೇಳಿಕೊಳ್ಳುತ್ತೇನೆ. ಹಿಂದುಸ್ಥಾನದಲ್ಲಿ ಮಹಮದೀಯರು ಈ ಸಮಾಜದ ಕಾರ್ಯಗಳಲ್ಲಿ ಸೇರಿಯದೆ ಇರುವುದು ಅವರಿಗೆ ಕುಂದಕವಾಗಿರುತ್ತದೆ. ಅವರೂ ಇತರ ಕುಲಗಳವರ ಸಂಗಡ ಒಗ್ಗಟ್ಟಾಗಿ ಕಾರ್ಯಸಾಧನೆ ಮಾಡುತ್ತಾ ಬರಬೇಕು. ಕಡೆಯ ಮಾತೇನೆಂದರೆ—ನಾನು ಈ ನನ್ನ ಸ್ವದೇಶವನ್ನು ಇಡೀ ಜನ್ಮವನ್ನು ಬಳಕೆಗಾಗಿ ಪ್ರೀತಿಸುತ್ತೇನೆ. ನೀವೆಲ್ಲಾ ಏಕವಾಗಿ ಏಕಮನಸ್ಸಿನಿಂದ ಕಾರ್ಯವನ್ನು ಸಾಧಿಸಿ ಸ್ವತಂತ್ರ ರಾಜ್ಯಾಧಿಕಾರವನ್ನು ಸಂಪಾದಿಸಿಕೊಳ್ಳಿ. ಈ ರಾಷ್ಟ್ರದ ಕೋಟ್ಯಾಂತರ ಪ್ರಜೆಗಳು ಮಹಾ ಬಡತನ ಕ್ಷಾಮ ವಿಷರೋಗಾದಿಗಳಿಂದ ಬಿಡುಗಡೆ ಹೊಂದುವರು; ಆದಲ್ಲದೆ ಉಂಟಾಗುವ ಲಕ್ಷಾಂತರ ಪ್ರಜೆಗಳು ನಿರ್ಭಯಾಗಿ ಬದುಕಿ ಅಭಿವೃದ್ಧಿಗೊಂಡ ನಂತರ ಪ್ರಾಚೀನ ನಾಗರಿಕತೆಯೂ ಐಶ್ವರ್ಯವೂ ಗಣ್ಯತೆಯೂ ಪ್ರಸಕ್ತ ಈ ಭರತಖಂಡಕ್ಕೆ ಉಂಟಾಗುವ ತನಕ ನಾವು ಸಾಹಸಪಡುವವರಾಗಿ ಇರುತ್ತೇವೆಂದು ಹೇಳಿಕೊಳ್ಳುವೆನು.

ತಾಲ್ಲೂಕು ವರ್ತಮಾನಗಳು

ಕೊಳ್ಳೇಗಾಲ — ಈ ತಾಲ್ಲೂಕಿನಲ್ಲಿ ಈ ತಿಂಗಳು ೨೬, ೨೭ ರಲ್ಲಿ ೩—೪ ಇಂಚು ಮಳೆ ಆಯಿತು. ಈಗಲೂ ಮೋಡವಾಗುತ್ತಲೇ ಇದೆ. ೩—೪ ದಿವಸದಿಂದ ಗ್ರಹಣ ಹಿಡಿದಂತೆ ಸೂರ್ಯ ಪ್ರಕಾಶ ಕಾಣುವದಿಲ್ಲ. ಇಲ್ಲಿ ಕಾಲರಾ ಎಂಬ ಅಂಟುರೋಗ ಅಲ್ಲಲ್ಲಿ ಹರಡಿಕೊಂಡಿದ್ದು ಈಗ ಶಮನವಾಗಿದೆ. ಬಡಜನರು ಧಾನ್ಯದ ಬೆಲೆಯಿಂದ ನರಳುತ್ತಿದ್ದಾರೆ. ಒಂದೊಂದು ಮನೆಯಲ್ಲಿ ತಿಂಡಿ ಬೇಯಿಸುವವರೇ ಇಲ್ಲದೆ ತೊಂದರೆಪಡುವರು. ಕಾವೇರಿ ಸಮೀಪದ ರುವ ಬೆಟ್ಟಗಳಲ್ಲಿ ಆನೆ ಹಿಂಡುಗಳು ಸೇರಿಕೊಂಡು ಜನರಿಗೆ ಬಹಳ ತೊಂದರೆಯನ್ನುಂಟುಮಾಡುತ್ತಲಿವೆ. ಸುಮಾರು ೩೦—೪೦ ಆನೆಗಳಲ್ಲಿ ಒಂದು ಗುಂಪು ಈ ಊರು ಸಮೀಪಕ್ಕೆ ಬಂದು, ಜನರು ಬೆಳೆದಿದ್ದ ರಾಗಿ ಹುಲ್ಲನ್ನೆಲ್ಲಾ ಕೆಳಕ್ಕೆ ಉರುಳಿಸಿ, ತೆನೆಯನ್ನೆಲ್ಲಾ ತಿಂದು, ಹುಲ್ಲನ್ನು ಮಾತ್ರ ಬಿಟ್ಟುಹೋಗಿರುವವು. ಇದರಿಂದ ಸುಮಾರು ೧೦೦ ಖಂಡುಗ ರಾಗಿಯಷ್ಟು ಖಾಲಿಯಾಗಿದೆ ಎನ್ನುವುದಕ್ಕೆ ಸಂಶಯವಿಲ್ಲ. ಬಡಜನರ ಗೋಳಾಟವನ್ನು ಹೇಳತೀರದು.

ಕೂಡಗು ಸೋಮವಾರಪೇಟೆ — ಇಲ್ಲಿ ಪಾರುಪತ್ಯಗಾರ್ ಚೆನ್ನಬಸಪ್ಪಶೆಟ್ಟಿ ಮೃತಪಟ್ಟು ಸುಮಾರು ೪ ವರುಷಗಳಾದವು. ಅವರ ೩ ಜನ ಪತ್ನಿಯರು ೧ನೆ ಗಂಗಮ್ಮ ಎಂಬುವರು ೧೯೦೧ನೆ ಇಸವಿಯಲ್ಲಿ ಮೈಸೂರು ಸೀಮೆ ಶಿಕ್ಕೋರಿ ಗ್ರಾಮದಲ್ಲಿ ಮೃತಪಟ್ಟರು. ಅವರ ಹಿಸ್ಸೆಯ ಸುಮಾರು ೪೦ ಸಾವಿರ ರೂಪಾಯಿಗೆ ಮೇಲ್ಪಟ್ಟ ಚರ ಆಸ್ತಿಯನ್ನೆಲ್ಲ ತನ್ನ ಬಂಧುಮಿತ್ರರಿಗೆ ಕೊಡಬೇಕಾಗಿ ಮಾಡಿದ ವಿಲ್ ಪ್ರಕಾರ ಕೊಡುವಂತೆ ಆಕೆಯ ವಿಷಯಕಾಗಿದ್ದ ಶಿಕ್ಕೋರಿ ಜನ ಮಾಂತಶೆಟ್ಟಿಯ ಸಲ್ಲತಕ್ಕವನಿಗೆ ಕೊಡಬೇಕೆಂಬ ಇರಾದೆಯಿಂದ ಒಬ್ಬ ಚೆಲುವಿನ ನಗನಾಣ್ಯ ವಸ್ತ್ರಗಳನ್ನು ಮುಟ್ಟಿಕೇರಿ ಸಾಹುಕಾರರುಗಳಾದ ರೋಷನ್ ಮಹಮದ್ ಖಾನ್, ರಸೂಲ್ ಖಾನ್, ಈ ಲಿಂಗಪ್ಪ ಎಂಬುವರ ವಶಕ್ಕೆ ಕೊಟ್ಟು ತನ್ನಲ್ಲಿ ಆಕೆಯ ಸೊತ್ತು ಏನೂ ಇಲ್ಲವೆಂದು ನಿರಾಕರಿಸಿ ಬಹು ಮೋಸ ಕಾರಾಗೃಹವಾಸ ಮಾಡಿದ್ದಾಯಿತ್ತು. ಈಗ್ಗೆ ಇಲ್ಲಿ ಅಧಿಕಾರಿಗಳ ಪ್ರಯತ್ನದಿಂದ ಸದರಿ ಸಾಹುಕಾರ್ ಚೆನ್ನಬಸಪ್ಪಶೆಟ್ಟ ಗಲ್ಲಿಯಾದ ಮಾಲುಗಳು ಮೇಲ್ಕಂಡ ೩ ಜನ ಸಾಹುಕಾರರ ಮನೆಯಲ್ಲಿ ಪತ್ತೆಯಾಗಿ ಆ ಮೂರು ಜನರನ್ನು ಜಾಮೀನು ಮೇಲೆ ಬಿಡದೆ ಲಾಕಪ್ಪಿನಲ್ಲಿ ಇಟ್ಟಿದ್ದಾರೆ. ಈ ಮೊಕದ್ದಮೆ ಪ್ರಸ್ತುತ ಜನವರಿ ೩ಕ್ಕೆ ವೀರರಾಜೇಂದ್ರಪೇಟೆ ಮೊಕ್ಕಾಂ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಇಟ್ಟಿದ್ದಾರೆ.

ಚಿತ್ರದುರ್ಗ—ತಾ ೨೭, ೨೮ ರಲ್ಲಿ ಇಲ್ಲಿ ಬಹಳ ಮೋಡವಾಗಿ ಒಂದೆರಡು ಹದ ಮಳೆಯಾಯಿತು. ಇಲ್ಲಿ ಒಬ್ಬರ ಮನೆಯಲ್ಲಿ ಇಲಿ ಬಿದ್ದವೆಂಬ ಪುಕಾರು ಹುಟ್ಟಿ ಆ ಮನೆಯನ್ನೂ ಅದರ ಅಜೂಬಾಜೂ ಮನೆಗಳನ್ನೂ ದರ್ಶಿ ಪರೀಕ್ಷೆ ಮಾಡಿಸಿದರು. ಈಚೆಗೆ ಇಲಿ ಬಿದ್ದ ಗಲಾಟೆ ಏನೂ ಹೊಸದಾಗಿ ಹುಟ್ಟಲಿಲ್ಲ. ಮ್ಯುನಿಸಿಪಾಲಿಟಿಯು ಊರಿನ ಶುಚಿತ್ವಕ್ಕೆ ಹೆಚ್ಚಾದ ಗಮನವನ್ನು ಕೊಡಬೇಕಾಗಿದೆ. ಕ್ರಿಸ್ಮಸ್ ಹಬ್ಬದ ದಿನ ಇಲ್ಲಿರುವ ಕೆಲವು ಪ್ರಾಟೆಸ್ಟೆಂಟ್ ಕ್ರೈಸ್ತರು ಮಿಷನ್ ಮನೆಯಲ್ಲಿ ಸೇರಿ ದೇವತಾರಾಧನೆಯನ್ನು ನಡಿಸುವಾಗ ಸಮೀಪದಲ್ಲಿ ವಾಸಮಾಡುತ್ತಿರುವ ಪೋಲೀಸ್ ಸೆಕೆಂಡ್ ಕ್ಲ್ಯಾಸ್ ಇನ್ಸ್ಪೆಕ್ಟರ್ ಮೆ|| ಸಿ ಕೃಷ್ಣರಾಯರು ತಮ್ಮ ಇಬ್ಬರು ಮಿತ್ರರನ್ನು ಜೊತೆಮಾಡಿಕೊಂಡು ಬಂದು ದೇವತಾರಾಧನೆಯಲ್ಲಿ ಹಾಜರಿದ್ದುದಲ್ಲದೆ ಆರಾಧನೆ ತೀರಿದನಂತರ ಸಭಿಕರಿಗೆ ಬುದ್ಧಿವಾದಗಳನ್ನು ಹೇಳಿ ನಮ್ಮ ಎಡ್ವರ್ಡ್ ಸಾರ್ವಭೌಮರ ಆಳ್ವಿಕೆಯೊಳಗಿನ ಸಮಸ್ತ ಕ್ರೈಸ್ತರಿಗೂ ಇದು ಶುಭದಿನ ವಾದ್ದರಿಂದ ಎಲ್ಲರೂ ಸಂತೋಷಪಟ್ಟು ಅವರ ಶ್ರೇಯಃಪ್ರಾರ್ಥನೆ ಮಾಡಬೇಕೆಂದು ಉಪನ್ಯಾಸಮಾಡಿ ಬಂದಿದ್ದ ಮಕ್ಕಳಿಗೆ ಹಣ್ಣು ದೊಡ್ಡವರಿಗೆ ಪುಷ್ಪ ತಾಂಬೂಲಗಳನ್ನು ಹಂಚಿ ಪ್ರೋತ್ಸಾಹಿಸಿದರು. ಟವನಿನ ಬಾಗಿಲಹಟ್ಟಿ ಎಂಬ ಭಾಗದಲ್ಲಿ ಮೆ|| ... ಎಂಬ ಪಂಡಿತರು ಸರಕಾರದಿಂದ ಬಹಳ ಅಲ್ಪ ವೇತನ ಪಡೆಯುತ್ತಲಿದ್ದಾರೆ. ಆ ಭಾಗದ ಜನಗಳಿಗೆ ಬಹು ಶ್ರದ್ಧೆಯಿಂದ ಉಪಕಾರ ಮಾಡುವರು. ಇವರಲ್ಲಿ ದಿನಕ್ಕೆ ೫೦ ಜನ ಔಷಧಿ ಪಡೆಯುವರು. ಬಾಗಿಲಹಟ್ಟಿ ಕೆಲವು ಪ್ರದೇಶಗಳೂ ಬೀದಿಗಳೂ ಕಶ್ಮಲಭರಿತವಾಗಿವೆ.

ತಿಪಟೂರು.—೩—೪ ದಿವಸಗಳಿಂದೀಚೆಗೆ ಪ್ರಾಪ್ತವಾಗಿರುವ ಸೋನೆ ಮಳೆ ಮೋಡಗಳ ದೆಸೆಯಿಂದ ಅವರೆ ತೊಗರಿ ಫಸಲಿಗೆ ತುಂಬಾ ಕೇಡು ಪ್ರಾಪ್ತವಾಗಿರುತ್ತೆ. ಧವಸ ಬಹಳ ಮಟ್ಟಿಗೆ ತಗ್ಗಿರುತ್ತೆ. ಹಾಲು ಕಮ್ಮಿ. ಈಗೀಗ ಈ ಊರಿಗೆ ಪ್ರಾಪ್ತವಾಗಿದ್ದ ವಾಯು ಬಹಳ ಮಟ್ಟಿಗೆ ಕಮ್ಮಿಯಾಗಿ ಜನಗಳು ಕಷ್ಟಪಟ್ಟಿಗೆ ಆರೋಗ್ಯ ಹೊಂದುತ್ತಾರೆ.—ಆಂಜನೇಯ ಸ್ವಾಮಿಯ ದೇವಸ್ಥಾನದ ನೂತನ ಕೆಲಸ ಇನ್ನೂ ಪೂರೈಸಲಿಕ್ಕೆ ಬಹಳ ದಿನ ಹಿಡಿಯಬಹುದಾಗಿ ತೋರುತ್ತೆ.—ಜನವರಿ ತಾ ೭ ಕ್ಕೆ ಈ ಊರಿಗೆ ಡೆಪ್ಯುಟಿ ಕಮೀಷನರೂ ... ಕೌನ್ಸಿಲರ್ ಮೆ|| ಟಿ. ಆನಂದರಾಯರವರೂ ಪೋಲೀಸ್ ... ದಯಮಾಡಿಸುವದಾಗಿ ಪ್ರವಂತಿ ಇರುತ್ತೆ.—ಊರಿನ ಎಲ್ಲಿ ನೋಡಿದರೂ ಜೂಜುಗಾರರ ಆಮಾಂತ್ರ ಬಹಳಮಟ್ಟಿಗೆ ಆಗಿದೆ. ಇಲ್ಲಿಗೆ ೬—೭ ಗಾವುದಗಳಿಂದ ವಿಶೇಷ ಹಣಗಳನ್ನು ದ್ರವ್ಯಾರ್ಜನೆಗಾಗಿ ಬರುವ ಜೂಜುಗಾರರು ಕೊನೆಗೆ ಇದ್ದದ್ದನ್ನೆಲ್ಲಾ ಸೋತು ದಾರಿ ಖರ್ಚಿಗೂ ಗತಿ ಇಲ್ಲದೆ ತಿರುಪೆತ್ತಿ ತಮ್ಮ ಊರಿಗೆ ಹೋಗಿ ಸಂಕಟಪಡುತ್ತಾರೆ. ಈ ವಿಷಯದಲ್ಲಿ ಪೋಲೀಸ್ ಜವಾದಾರ್ ವೆಂಕಟನಾರಾಣಪ್ಪನವರು ನಿಗಾತೆಗೆದು ಕೊಂಡಿದ್ದು ಜೂಜಾಟಕ್ಕೆ ನಾಶವೂ ಸದರಿ ಜವಾಬ್ದಾರರಿಗೆ ಸರಿಯಾದ ಸ್ಥಾನವರ್ಗವೂ ಉಂಟಾಗುವದರಲ್ಲಿ ಅಭ್ಯಂತರ ಇರುವದಿಲ್ಲ.—ಇಲ್ಲಿನ ಎ ವಿ ಸ್ಕೂಲಿನಲ್ಲಿ ಈಗ ೨—೩ ತಿಂಗಳಿಂದೀಚೆಗೆ ರೀಡಿಂಗ್ ರೂಂ ಸ್ಥಾಪನೆಯಾಗಿ ಇಲ್ಲಿನ ಆ ಮಾಸ್ಟರ್ ವೆಂಕಟನರಸಪ್ಪನವರ ಪ್ರೋತ್ಸಾಹದಿಂದ ಅಭಿವೃದ್ಧಿ ಸ್ಥಿತಿಯಲ್ಲಿದೆ. ಮತ್ತೊಂದು ರೀಡಿಂಗ್ ರೂಂ ಇಲ್ಲಿನ ಸರ್ಕಾರಿ ನೌಕರರಿಂದಲೂ ವರ್ತಕ ಮಹಾಜನರಿಂದಲೂ ಸ್ಥಾಪನೆಯಾಗಿ ಸಬ್ ರಿಜಿಸ್ಟ್ರಾರ್ ಮೆ|| ಲಕ್ಷ್ಮೀಕಾಂತಯ್ಯನವರ ಅಧ್ಯಕ್ಷತೆಯಲ್ಲಿ ಅಭಿವೃದ್ಧಿ ಹೊಂದುತ್ತಿದೆ.

ಹೊಸದುರ್ಗ.—ಈ ಪ್ರಾಂತ್ಯ ಮಳೆ ಇಲ್ಲ. ಧಾರಣೆಯು ಯಥಾಪ್ರಕಾರವಿದೆ. ಮೊನ್ನೆ ವೇದಾವತಿ ನದಿಯು ಒಂದು ದಿನವೆಲ್ಲಾ ಜನರು ದಾಟದಂತೆ ಹರಿಯಿತು. ಅಮಲ್‍ದಾರರು ಜಮಾಬಂದಿ ಮುಗಿಸಿ ಕಸಬಾ ಸೇರಿದರು. ಇಲ್ಲಿಗೆ ಹೊಸದಾಗಿ ಬಂದಿರುವ ಪೋಲೀಸ್ ಇನ್ಸ್ಪೆಕ್ಟರ್ ಕೃಷ್ಣರಾಯರು ಹಿಂದೆ ಒಬ್ಬ ಖೈದಿಯನ್ನು ಕಳೆದು ... ಆಗಿದ್ದುದು ಸ್ಪೆಷಲ್ ಪೋಲೀಸಿನಿಂದ ಹೈದರಾಬಾದ್ ಸೀಮೆಗೆ ಹೋಗಿ ಅದೇ ಖೈದಿಯನ್ನೇ ಬಹು ಪ್ರಯಾಸದಿಂದ ಹಿಡಿತಂದು ಕೆಲಸದ ಮೇಲೆ ಬಂದರು. ಇವರು ಬಹಳ ದಿನಗಳಿಗಿಯೂ ನಿಷ್ಪಕ್ಷಪಾತಿಗಳಾಗಿಯೂ ಇರುವಂತೆ ತೋರುತ್ತೆ.—ಬೆಲಗೂರು ಅಕಸಾಲೆ ಫಣಿಯಪ್ಪನವರ ಮಗ ೫ ವರ್ಷದ ಕೋಮಲವಾದ ಹುಡುಗನು ಸಿಡುಬಿನಿಂದ ಮೃತಪಟ್ಟದ್ದಕ್ಕೆ ಈ ಬಾಲಕನ ಬಾಲಲೀಲೆಗಳನ್ನು ನೆನಸಿಕೊಂಡು ಬಹುಜನರು ವ್ಯಸನಪಡುತ್ತಾರೆ. ಈ ವರ್ಷ ಸಿಡುಬಿನ ಹಾವಳಿಯು ಬಹಳತರದಲ್ಲಿ ಉಂಟುಮಾಡಿತು. ಕಳೆದ ತಿಂಗಳಲ್ಲಿ ಕೆಲವು ಮಕ್ಕಳು ಮೃತರಾದರು.—ಈ ಗ್ರಾಮದಲ್ಲಿ ಈಗೀಗ ಪತ್ರಿಕೆಗಳಿಂದಾಗುವ ಪ್ರಯೋಜನವನ್ನು ತಿಳಿದು ೧೦—೧೨ ಪತ್ರಿಕೆಗಳು ಬರುತ್ತವೆ. ಇಲ್ಲಿನ ಕೆಲವು ದೊಡ್ಡಮನುಷ್ಯರು—"ಇತರರನ್ನು ಈ ರೀತಿಯಲ್ಲಿ ಕೊಂಡುಕೊಳ್ಳ" ಎಂಬ ಕುತರ್ಕಕ್ಕೆ ಒಡಲು ... ರೀಡಿಂಗ್ ರೂಂ ಸ್ಥಾಪಿಸಿದರೆ ... ಪ್ರಯೋಜನವಾದೀತು ... ಬೆಂಗಳೂರಿಗೆ ೩ ಮೈಲಿ ದೂರದಲ್ಲಿರುವ ಹೊಸಕೆರೆ, ಮುತ್ತೂರು ಈ ಗ್ರಾಮದ ಕೆಲವರು ಶಿವನಿಗೆ ಸಂಬಂಧಪಟ್ಟ ಕೇಸುಗಳನ್ನೆಲ್ಲಾ ... ಕ್ರಿಮಿನಲ್‍ಗೆ ತರಿಗಿಸಿ ನೂರಾರು ರೂಪಾಯಿಗಳನ್ನು ವೆಚ್ಚಮಾಡುವದಕ್ಕೆ ಬದಲು ಧರ್ಮಕಾರ್ಯಗಳಿಗೆ ಆ ಹಣವನ್ನು ವಿನಿಯೋಗ ಮಾಡುವದರಿಂದಾಗುವ ಫಲವನ್ನು ಯೋಚಿಸಿ ಬುದ್ಧಿ ಹೇಳುವರೇ ಇಲ್ಲ. ... ಮಾಡಿದವರೂ ಇವರು ... ಲಾಭವನ್ನು ಯಾವದೊಂದು ಧರ್ಮಕಾರ್ಯಕ್ಕೆ ವಿನಿಯೋಗಿಸಬಾರದೇ!

ವಿದೇಶ ವರ್ತಮಾನಗಳು

ವಿಲಾಯತಿಗೆ ಸೇರಿದ ನಾರಿಚ್ ಪಟ್ಟಣದಲ್ಲಿ ೯೭ ವರುಷದ ಮೆ|| ... ಬೋಲ್ಟ್ ಎಂಬಾತನಿಗೆ ಐದು ವರುಷಗಳ ಕೆಳಗೆ ಕಣ್ಣು ಹೋಗಿ ಕುರುಡನಾಗಿದ್ದನು. ಕಳೆದ ತಿಂಗಳಲ್ಲಿ ಒಬ್ಬ ಪ್ರಸಿದ್ಧ ವೈದ್ಯನು ಆ ವೃದ್ಧನ ಕಣ್ಣಿಗೆ ಶಸ್ತ್ರಚಿಕಿತ್ಸೆಮಾಡಿ, ಯಥಾ ಪ್ರಕಾರ ಕಾಣುವಂತೆ ಮಾಡಿರುತ್ತಾನೆ.

ವಿಲಾಯಿತಿಗೆ ಸೇರಿದ ಕಿಂಗ್ಸ್ ಕೌಂಟಿ ಎಂಬ ಡಿಸ್ಟ್ರಿಕ್ಟಿನಲ್ಲಿ ನಾರಾ ಈಗನ್ ಎಂಬೊಬ್ಬ ವೃದ್ಧ ಸ್ತ್ರೀಯು ಕಳೆದ ನವಂಬರ್ ೨೯ ರಲ್ಲಿ ಕಾಲವಾದಳು. ಈಕೆಗೆ ೧೦೭ ವರುಷ ವಯಸ್ಸಾಗಿತ್ತೆಂತಲೂ, ಅದುವರೆಗೆ ಆಕೆಗೆ ಯಾವ ವಿಧವಾದ ಕಾಯಿಲೆಯೂ ಪ್ರಾಪ್ತವಾಗದೆ ದೃಢಕಾಯಳಾಗಿದ್ದಳೆಂತಲೂ ತಿಳಿದು ಬಂದಿದೆ.

●●●●

ಅಮೇರಿಕಕ್ಕೆ ಸೇರಿದ ನ್ಯೂ ಜರ್ಸಿ ಪಟ್ಟಣದಲ್ಲಿ ವಿದ್ಯಾಶಾಲೆಯೊಳಗೆ ಓದುವಂಥಾ ಬಾಲಕರೂ ಯೌವನಸ್ಥರೂ ದೋಣಿ ನಡಸುವ ಕಸರತ್ತನ್ನು ಅಭ್ಯಾಸಮಾಡಿ ಅದರಲ್ಲಿ ಪ್ರವೀಣರಾಗುವಂತೆ ಪ್ರಸಿದ್ಧ ಕೋಟ್ಯಾಧೀಶ್ವರನಾದ ಮೆ|| ಆಂಡ್ರೂ ಕಾರ್ನೆಗಿಯು ಮೂರು ಲಕ್ಷ ರೂಪಾಯಿ ವೆಚ್ಚಿಸಿ ಒಂದು ಭಾರಿ ಕೆರೆಯನ್ನು ಕಟ್ಟಿಸಿಕೊಟ್ಟಿರುತ್ತಾನೆ.

●●●●

ವಿಲಾಯತಿಯಲ್ಲಿದ್ದು ಕಾಲವಾದ ಮಿಸ್ ಡೊರೋಥಿಯಾ ಬೀಲ್ ಎಂಬಾಕೆಯು ತನ್ನ ಆಸ್ತಿಯಲ್ಲಿ ೧೨,೦೦,೦೦೦ ರೂಪಾಯಿಯನ್ನೂ, ಹೆನ್ರಿ ನಾರಿಸ್ ಎಂಬೊಬ್ಬ ವಕೀಲನು ೨,೨೫,೦೦೦ ರೂಪಾಯಿಯನ್ನೂ, ಎಲಿಸಾ ಹಾಡ್ವೆಲ್ ಎಂಬಾಕೆಯು ತನ್ನ ಆಸ್ತಿಯಲ್ಲಿ ೩,೫೦,೦೦೦ ರೂಪಾಯಿಯನ್ನೂ ಧರ್ಮಕಾರ್ಯಗಳಿಗೆ ವಿನಿಯೋಗಿಸಬೇಕೆಂದು ಮರಣಶಾಸನವನ್ನು ಬರೆದಿರುತ್ತಾರೆ.

●●●●

ಈಚೆಗೆ ದಕ್ಷಿಣ ಆಫ್ರಿಕಕ್ಕೆ ಸೇರಿದ ಜೂಲೂ ಎಂಬ ಸ್ವದೇಶಿಗಳು ದಂಗೆಯೆದ್ದು ದಾಂಧಳೆ ನಡಿಸಿದರಷ್ಟೆ. ಅವರ ಹಾವಳಿಯ ದೆಸೆಯಿಂದ ಟುಗೆಲಾ ಟಾಂಗಾಟ್ ನದಿಗಳ ನಡುವೆ ೩೦,೦೦೦ ಪ್ರಜೆಗಳ ಹೊಲಗದ್ದೆ ಮನೆಮಾರುಗಳು ಹಾಳಾಗಿದ್ದವು ಮತ್ತು ಆ ಪ್ರಜೆಗಳು ಜೀವನಕ್ಕೆ ಮಾರ್ಗವಿಲ್ಲದೆ ಬಹಳ ಕಷ್ಟಪಡುತ್ತಿದ್ದಾರೆ. ಇದನ್ನು ನೋಡಿ ಅಲ್ಲಿನ ಕೆಲವು ಧರ್ಮಿಷ್ಠರು ಚಂದಾ ಕೂಡಿಸಲಾರಂಭಿಸಿರುವರು.

●●●●

ಪರ್ಷಿಯಾ ರಾಜ್ಯದ ಹೊರ ಪಾರ್ಶ್ವದಲ್ಲಿರುವ ತುರ್ಕಿ ಸೈನಿಕರು ಸುಮಾರು ೫೦೦ ಮಂದಿ ತಮ್ಮ ಸಂಬಳ ಬಟವಾಡೆ ಆಗಲಿಲ್ಲವೆಂದು ನಾನಾ ಕಷ್ಟಗಳನ್ನನುಭವಿಸಿ ಕಡೆಗೆ ದಂಗೆಯೆದ್ದು ದಾಂಧಳೆ ನಡಿಸಿ ಪ್ರಜಾ ನೆಮ್ಮದಿಗೆ ಭಂಗವನ್ನುಂಟುಮಾಡಿದಾರೆ. ಅವರ ಹುದ್ದೇದಾರರು ಅವರಿಂದ ಗಾಯಪಟ್ಟು ಬಿದ್ದುಕೊಂಡಿರುವರು. ತುರ್ಕಿ ಸುಲ್ತಾನರು ಈ ಭಾಗದಲ್ಲಿ ಇನ್ನೂ ಯಾವ ಹುಕುಮನ್ನೂ ಕೊಟ್ಟಿರುವದಿಲ್ಲ.

●●●●

ಮೆ|| ಎಲ್. ಬಾಂಕ್ನಾಲ್ ಎಂಬಾತನು ತನ್ನ ಆಕಾಶಬುಟ್ಟಿಯಲ್ಲಿ ಕುಳಿತು ಲಂಡನ್ ಪಟ್ಟಣದಿಂದ ಅಂತರಿಕ್ಷಮಾರ್ಗದಲ್ಲಿ ಹೊರಟು ಇಂಗ್ಲಿಷ್ ಛಾನಲ್ ಎಂಬ ಕಡಲು ಕಾಲುವೆಗಳನ್ನು ದಾಟಿ, ಹಾಗೇ ಎಮಿಯೆನ್ಸ್, ರ್ಹೀಂಸ್, ಚೌಮಾಂಟ್ ಎಂಬೀ ಪಟ್ಟಣಗಳನ್ನು ಹಾಯ್ದು ರಾತ್ರಿಯೆಲ್ಲಾ ಸಂಚಾರ ಮಾಡಿಕೊಂಡು ಬೆಳಕು ಹರಿಯುವಾಗ್ಗೆ ಜರ್ಮನಿ ಕೆರೆಯ ಬಳಿ ಇರುವ ಮೇಯೆನ್ಸ್ ಎಂಬ ಪಟ್ಟಣದಲ್ಲಿ ಸುರಕ್ಷಿತವಾಗಿ ಇಳಿದನು. ಅಂದರೆ, ಅವನು ೧೭ ಗಂಟೆ ಹೊತ್ತಿನೊಳಗಾಗಿ ಅಂತರಿಕ್ಷ ಮಾರ್ಗದಲ್ಲಿ ಸಂಚಾರಮಾಡಿ ೬೦೦ ಮೈಲಿ ದೂರ ಹೋದಂತಾಯಿತು.

●●●●

ಕಳೆದ ನವಂಬರ್ ಎರಡನೇ ವಾರ ತುರ್ಕಿ ರಾಜ್ಯಕ್ಕೆ ಸೇರಿದ ಒಲ್ಗೇರಿಯಾ ರೈತ ಪ್ರಜೆಗಳನ್ನು ೬೦ ಜನ ಗ್ರೀಸ್ ಶಿಪಾಯಿಗಳು ತುರ್ಕಿ ಶಿಪಾಯಿಗಳಂತೆ ವೇಷ ಹಾಕಿಕೊಂಡು ಹೋಗಿ ಕೊಂದುಹಾಕಿ ನಾನಾ ಹಿಂಸೆಗಳನ್ನು ಮಾಡಿ ಮನೆಗಳಿಗೆ ಬೆಂಕಿಹಾಕಿ ಸುಟ್ಟುಬಿಟ್ಟರು. ಮೊದಲು ಊರ ಹೊರಗೆ ಸಿಕ್ಕಿದ ಕೆಲವು ದನಪಾಲಕರನ್ನು ಹಿಡಿದು ಕಡಿದುಹಾಕಿ, ಊರೊಳಕ್ಕೆ ನುಗ್ಗಿ ಮನೆಗಳಲ್ಲಿದ್ದ ಗಂಡಸರು ಹೆಂಗಸರು ಮಕ್ಕಳು ಮುಂತಾದವರನ್ನು ಕಡಿದು ಹಾಕಿದರು. ಈ ಭಾಗದಲ್ಲಿ ತುರ್ಕಿಯವರು ಗ್ರೀಸ್ ರಾಜ್ಯದವರ ಮೇಲೆ ಆಕ್ಷೇಪಣೆಮಾಡಿದಾರೆ.

●●●●

ಲಂಡನ್ ಪಟ್ಟಣದಲ್ಲಿ ಅಂಗಹೀನರಾದ ಮಕ್ಕಳೂ ದೊಡ್ಡವರೂ ಅನೇಕರಿರುತ್ತಾರೆ. ಇವರಿಗೆ ಜೀವನ ನಡಿಯುವುದು ಬಹಳ ಕಷ್ಟ. ಅಲ್ಲಿನ ನಗರಾಧ್ಯಕ್ಷನು (ಲಾರ್ಡ್ ಮೇಯರ್) ಅಂಥಾ ಅನಾಥರಿಗೋಸ್ಕರ ಒಂದು ಆಲಯವನ್ನು ಕಟ್ಟಿ ಅವರನ್ನು ಸಂರಕ್ಷಣೆ ಮಾಡಬೇಕಾಗಿದೆ ಎಂತಲೂ ಮಕ್ಕಳಿಗೆ ಜೀವನೋಪಾಯವನ್ನು ಕಲ್ಪಿಸಿಕೊಳ್ಳುವಂಥಾ ಯಾವುದಾದರೊಂದು ಕಸಬು ಕಲಿಸಬೇಕೆಂತಲೂ ಗೊತ್ತುಮಾಡಿ, ಈ ಪುಣ್ಯಕಾರ್ಯಕ್ಕೆ ೯ ಲಕ್ಷ ರೂಪಾಯಿ ಚಂದಾ ಕೂಡಿಸಲಾರಂಭಿಸಿದಾನೆ. ಆಗಲೇ ಅನೇಕ ಧರ್ಮಾತ್ಮರೂ ದೊರೆಯವರ ಮಹಾರಾಜ್ಞಿಯವರೂ ಈ ಫಂಡಿಗೆ ಹಣ ಕಳುಹಿಸಿರುವರು.

●●●●

ಅಪತ್ನೀಕನಾದ ಲಾರ್ಡ್ ಕರ್ಜನರವರಿಗೆ ಮೂರು ಮಂದಿ ಮಕ್ಕಳಿದಾರೆ. ಅವರ ಮಾವನು ಕಾಲವಾಗುವಾಗ್ಗೆ ಆ ಮಕ್ಕಳ ಶ್ರೇಯೋವೃದ್ಧಿಗಾಗಿ ತನ್ನ ಆಸ್ತಿಯಿಂದ ವರುಷಕ್ಕೆ ೨,೩೦,೦೦೦ ರೂಪಾಯಿ ಉತ್ಪತ್ತಿಯಾಗುವಷ್ಟು ಐಶ್ವರ್ಯವನ್ನು ಅವರ ಹೆಸರಿಗೆ ಮಾಡಿದನು ಮತ್ತು ತನ್ನ ಅಳಿಯನಿಗೆ ವರುಷಕ್ಕೆ ೫೪,೦೦೦ ರೂಪಾಯಿ ಉತ್ಪತ್ತಿಯಾಗುವಷ್ಟು ಆಸ್ತಿಯನ್ನು ವರದಕ್ಷಿಣೆಯಾಗಿ ಕೊಟ್ಟಿದ್ದನು. ಲಾರ್ಡ್ ಕರ್ಜನರವರು ಈ ಹಣವೆಲ್ಲಾ ಸರಿಯಾಗಿ ಪ್ರತಿ ವರುಷವೂ ತಮಗೆ ಅಮೇರಿಕದಿಂದ ವಿಲಾಯತಿಗೆ ಬರುವಂತೆ ಏರ್ಪಾಡು ಮಾಡುವದಕ್ಕೋಸ್ಕರ ಮೊನ್ನೆ ಅಮೇರಿಕಕ್ಕೆ ಹೋಗಿದ್ದರು.

●●●●

ಯೂರೋಪ್ ಖಂಡಕ್ಕೆ ಸೇರಿದ ಹಾಲೆಂಡ್ ರಾಜ್ಯದ ರಾಜಧಾನಿಯಾದ ಆಂಸ್ಟರ್ಡಾಂ ಪಟ್ಟಣದಲ್ಲಿ ಕೆಂಪು ವಜ್ರ ಮೊದಲಾದ ರತ್ನಗಳನ್ನು ಸಾಣೆಹಿಡಿಯುತ್ತಾರೆ. ಈ ಕಸಬು ಆ ಪಟ್ಟಣದಲ್ಲಿ ನಡೆಯುವಷ್ಟು ನಾಜೂಕಾಗಿ ಪ್ರಪಂಚದ ಇನ್ನ್ಯಾವ ಊರಿನಲ್ಲೂ ನಡೆಯುವುದಿಲ್ಲ. ಇತ್ತಲಾಗಿ ದಕ್ಷಿಣ ಆಫ್ರಿಕದ ಕೆಲವು ಗಣಿಗಳಲ್ಲಿ ಕೆಂಪು ವಜ್ರಗಳನ್ನು ತೆಗೆಯುವರಷ್ಟೆ. ಇದುವರೆಗೆ ಈ ರತ್ನಗಳನ್ನು ಸಾಣೆ ಹಿಡಿದು ವಿಕರಿ ಮಾಡುವದಕ್ಕೆ ದಕ್ಷಿಣ ಆಫ್ರಿಕದಿಂದ ಆ ಪಟ್ಟಣಕ್ಕೆ ಕಳುಹಿಸುತ್ತಿದ್ದರು. ಇದರಿಂದ ತುಂಬಾ ನಷ್ಟವೂ ನಾವಕಾಶವೂ ಆಗುವುದೆಂದೂ ಜೋಹಾನ್ಸ್‍ಬರ್ಗಿನಲ್ಲೇ ಸಾಣೆ ಹಿಡಿಯುವ ಕಾರ್ಖಾನೆಯೊನ್ನು ಏರ್ಪಡಿಸಿಕೊಳ್ಳಬೇಕೆಂದೂ ಪ್ರಯತ್ನನಡೆದಿದೆ. ಇನ್ನು ಕೆಲವು ದಿವಸಗಳೊಳಗಾಗಿ ಈ ಕಾರ್ಖಾನೆಯು ಸಿದ್ಧವಾಗುವುದು.

●●●●

ಲಂಡನ್ ಪಟ್ಟಣದಲ್ಲಿ ಬಿಷಾಫ್ಷೀಂ ಎಂಬೊಬ್ಬ ಯಹೂದ್ಯ ಪುಣ್ಯವಂತನು ಮದುವೆ ಮಾಡಿಕೊಂಡು ಕಳೆದ ನವಂಬರ್ ತಿಂಗಳಿಗೆ ೫೦ ವರುಷಗಳಾದವು. ಆ ದಂಪತಿಗಳು ೫೦ ನೇ ವರುಷದ ಅಂತ್ಯದಲ್ಲಿ ವಿಶೇಷವಾದ ಉತ್ಸವವನ್ನು ಆಚರಿಸಿ ನೂರಾರು ಮಂದಿ ದೊಡ್ಡ ಮನುಷ್ಯರಿಗೂ ಲಕ್ಷಾಂತರ ಬಡಬಗ್ಗರಿಗೂ ಅನ್ನ ದಾನ ಮಾಡಿ ಸಂತೋಷಪಡಿಸಿದರು. ಇದಲ್ಲದೆ ತಮ್ಮ ಆ ದಿವಸದ ಉತ್ಸವದ ಜ್ಞಾಪಕಾರ್ಥವಾಗಿ ತಮ್ಮ ಆಸ್ತಿಯಲ್ಲಿ ೧೫ ಲಕ್ಷ ದ್ರವ್ಯವನ್ನು ತೆಗೆದು ಪರೋಪಕಾರಾರ್ಥವಾದ ನಾನಾ ಧರ್ಮಗಳಿಗೆ ಹಂಚಿ ಕೊಟ್ಟರು. ಆತನ ಹೆಂಡತಿಯಾದರೋ ತನ್ನ ಸ್ವಂತ ಹಣದಿಂದ ಸೇಕಡಾ ೪ ರೂಪಾಯಿ ಬಡ್ಡಿ ಬರುವಂಥಾ ಒಂದೂವರೆ ಲಕ್ಷ ರೂಪಾಯಿನ ಪತ್ರಗಳನ್ನು ತೆಗೆದು, ಕ್ಷಯರೋಗ ಪರಿಹಾರಾರ್ಥವಾದ ಆಸ್ಪತ್ರೆಯ ಫಂಡಿಗೆ ಕೊಟ್ಟಿರುತ್ತಾಳೆ.

●●●●

ರಷ್ಯಾ ರಾಜ್ಯಕ್ಕೆ ಸೇರಿದ ಕ್ರಾಸ್ನೋಯಾರ್ಸ್ಕ್ ಪಟ್ಟಣದಲ್ಲಿ ನಡಗಿನ ಸೈನಿಕರು ಕೆಲವು ಕಾಲಕ್ಕೆ ಮುಂಚೆ ದಂಗೆಯೆದ್ದು ದಾಂಧಳೆ ನಡಿಸುತ್ತಿದ್ದರಷ್ಟೆ. ಸರ್ಕಾರದ ಹುಕುಂ ಪ್ರಕಾರ ಮಿಲಿಟರಿ ಇಲಾಖೆಯವರು ಆ ಸೈನಿಕರನ್ನು ಹಿಡಿದು ಬರ್ಖಾಸ್ತಿಮಾಡಿ ಆ ಪೈಕಿ ೭೮೩ ಜನರಿಗೆ ಸಜಾ ಶಿಕ್ಷೆಯನ್ನು ವಿಧಿಸಿದರು. ೧,೩೦೭ ಮಂದಿಯನ್ನು ಖುಲಾಸ್ ಮಾಡಿರುತ್ತಾರೆ. ಇನ್ನೊಂದು ಕಡೆ ಕಾಸಾನ್ ಎಂಬ ಊರಿನಲ್ಲಿ ರೈತಪ್ರಜೆಗಳೆಲ್ಲಾ ಏಕವಾಗಿ ಪಟ್ಟಣದ ಕಾವಲಿನ ಸಿಪಾಯಿಗಳನ್ನೇ ಹಿಡಿದು ಹೊಡೆದು ಓಡಿಸಿ, ಅವರ ಬಿರುಸು ಆಯುಧ ಮುಂತಾದ್ದನ್ನೆಲ್ಲಾ ಕಿತ್ತುಕೊಂಡು, ಸರ್ಕಾರಿ ಉಗ್ರಾಣಕ್ಕೆ ನುಗ್ಗಿ ಅವರಲ್ಲಿದ್ದ ಲಕ್ಷಾಂತರ ರೂಪಾಯಿನ ದವಸ ಧಾನ್ಯಾದಿಗಳನ್ನು ಲೂಟಿಮಾಡಿ ಹೊತ್ತುಕೊಂಡು ಹೋಗಿದ್ದರು. ಅದು ನಡೆದ ಒಂದು ವಾರದೊಳಗಾಗಿ ಹೊಸ ಸೈನಿಕರು ಆ ಊರಿಗೆ ಹೋಗಿ ರೈತಪ್ರಜೆಗಳ ಮೇಲೆ ಕಾಲ್ಪಾಡಿ ಯುದ್ಧ ನಡಿಸಿ ಅವರಲ್ಲಿ ಕೆಲವರನ್ನು ಕೊಂದು, ಅನೇಕರಿಗೆ ನಾನಾ ಗಾಯಗಳನ್ನು ಕಾಣಿಸಿ, ಆಯುಧ ಧಾನ್ಯಗಳನ್ನು ವಸೂಲ್ಮಾಡಿಕೊಂಡು ಬಂದರು.

●●●●

ರಷ್ಯಾ ರಾಜ್ಯಕ್ಕೆ ಸೇರಿದ ವ್ಲಾಡಿಮಿಯರ್ ಎಂಬ ಪಟ್ಟಣದ ಬಂದೀಖಾನೆಯಲ್ಲಿ ದೊಡ್ಡ ಗಲಭೆ ನಡೆಯಿತು. ೩೫ ಮಂದಿ ಖೈದಿಗಳು ಏಕವಾಗಿ ಜೈಲ್‍ಖಾನೆಯ ಗವರ್ನರನ್ನೂ ಇಬ್ಬರು ಸಣ್ಣ ಅಧಿಕಾರಿಗಳನ್ನೂ ಎಲ್ಲಾ ಇನ್ಸ್ಪೆಕ್ಟರನ್ನೂ ಹಿಡಿದು ಕಟ್ಟಿ ಒಂದು ಕೋಣೆಯಲ್ಲಿ ಹಾಕಿ, ೨೨ ಪಿಸ್ತೂಲುಗಳನ್ನೂ ೩ ಕತ್ತಿಗಳನ್ನೂ ಸಂಪಾದಿಸಿಕೊಂಡು, ಟೆಲಿಫೋನ್ ಮತ್ತು ಟೆಲಿಗ್ರಾಫ್ ತಂತಿಗಳನ್ನು ಕಡಿದುಬಿಟ್ಟು, ಬಂದೀಖಾನೆಯ ಉಗ್ರಾಣದೊಳಕ್ಕೆ ನುಗ್ಗಿ ಜೈಲ್ ಬಟ್ಟೆಗಳನ್ನು ಕಳಚಿಟ್ಟು, ತಮ್ಮ ಸ್ವಂತ ಸಾಧಾರಣ ಉಡುಪುಗಳನ್ನು ಹಾಕಿಕೊಂಡು, ಅಲ್ಲಿಂದ ಮೇಲ್ಗಡೆ ಗವರ್ನರ ಮನೆಗೆ ನುಗ್ಗಿ ಮನೆಯಲ್ಲಿದ್ದವರನ್ನೆಲ್ಲಾ ಕಟ್ಟಿ ಕೂರಿಸಿ ಮನೆಯನ್ನು ಲೂಟಿಮಾಡಿ ಸಿಕ್ಕಿದಷ್ಟು ಬೆಲೆಯಾಗುವ ಪದಾರ್ಥಗಳನ್ನು ಹೊತ್ತುಕೊಂಡು ಪರಾರಿಯಾದರು. ಕೂಡಲೇ ಈ ಸುದ್ದಿಯು ಊರಲ್ಲೆಲ್ಲಾ ಹಬ್ಬಿಕೊಂಡಿತು, ಪ್ರಜೆಗಳೂ ಸರ್ಕಾರದವರೂ ಸೇರಿ ಅವರ ಬೆನ್ನು ಹತ್ತಿ ಹೋಗಿ ೩೫ ಮಂದಿಯ ಪೈಕಿ ೨೩ ಜನರನ್ನು ಹಿಡಿದು ತಂದರು. ಒಬ್ಬನನ್ನು ಹಿಡಿಯುವುದಕ್ಕಾಗದೆ ಕೊಂದುಬಿಟ್ಟರು.

●●●●

ಅಮೇರಿಕ ಸಂಸ್ಥಾನಗಳ ಮುಖ್ಯ ಪಟ್ಟಣವಾದ ನ್ಯೂಯಾರ್ಕ್ ನಗರದಲ್ಲಿ ಹ್ಯಾಂಡ್‍ಫೀಲ್ಡ್ ಎಂಬೊಬ್ಬ ಹೆಂಗಸು ಮೆ|| ರಾಕ್ಫೆಲರ್ ಎಂಬ ಕೋಟ್ಯಾಧೀಶ್ವರನ ಬಂಗಲೆಗೆ ಹೋಗಿ ಅವನೆದುರಿಗೆ ನಿಂತುಕೊಂಡು—ಈ ಕ್ಷಣ ೩೦ ಲಕ್ಷ ರೂಪಾಯಿ ನನಗೆ ಕೊಟ್ಟುಬಿಡಬೇಕು; ಇಲ್ಲವಾದರೆ ನಿನ್ನನ್ನು ಕೊಂದುಬಿಡುತ್ತೇನೆ ಎಂದು ಹೇಳಿ ಜುಮಾನದಿದ್ದ ಪಿಸ್ತೂಲನ್ನು ಅವನ ಎದೆಗೆ ಹಿಡಿದಳು. ಕೂಡಲೇ ಆ ಕೋಟ್ಯಾಧೀಶ್ವರನು ತನ್ನ ಗುಮಾಸ್ತೆಯನ್ನು ಕರೆದು ಕಣ್ಣುಸನ್ನೆಮಾಡಿ—ಇವಳಿಗೆ ೩೦ ಲಕ್ಷ ರೂಪಾಯಿ ನಮ್ಮ ಬ್ಯಾಂಕಿನಿಂದ ಪಾವತಿಯಾಗುವಂತೆ ಒಂದು ಛೆಕ್ಕು ಬರೆದುಕೊಡು ಎಂದು ಹೇಳಿಕಳುಹಿಸಿದನು. ಅದೇ ರೀತಿ ಆ ಗುಮಾಸ್ತೆಯು ಛೆಕ್ಕು ಬರೆದುಕೊಟ್ಟು ಆ ಹೆಂಗಸನ್ನು ಕಳುಹಿಸಿ, ಬ್ಯಾಂಕಿನವರಿಗೆ ಈ ಸಂಗತಿಯನ್ನು ತಿಳಿಸಿದನು. ಅವಳು ಬ್ಯಾಂಕಿಗೆ ಹೋಗಿ ಖಜಾಂಚಿಗೆ ಛೆಕ್ಕು ತೋರಿಸಿ ಹಣಕೊಡು ಎಂದು ಕೇಳಿದಳು. ಅವನು—ಇನ್ನು ಸ್ವಲ್ಪಹೊತ್ತು ಬಿಟ್ಟುಬಂದರೆ ಕೊಡುತ್ತೇನೆಂದು ಹೇಳಿದನು. ಅವಳು ಅದೇ ಪ್ರಕಾರ ಎರಡನೇ ಸಲ ಹೋಗುವಾಗ್ಗೆ ಪೋಲೀಸಿನವರು ಕಾದಿದ್ದು ಅವಳನ್ನು ದಸ್ತಗಿರಿ ಮಾಡಿ ಠಾಣ್ಯಕ್ಕೆ ಸೇರಿಸಿದರು.

●●●●

ಫ್ರಾನ್ಸ್ ಆಧಿಪತ್ಯಕ್ಕೆ ಸೇರಿದ ಟೌಲೂಸ್ ಪಟ್ಟಣದಲ್ಲಿ ಅಂಚೆ ವಸ್ತುಗಳನ್ನು ಆಫೀಸುಗಳಿಂದ ಕೂಡಿಸಿ ಕುದುರೆ ಗಾಡಿಯಲ್ಲಿ ಸಾಗಿಸಿಕೊಂಡು ಹೋಗುವ ಪದ್ಧತಿಯಿದೆ. ಅಂಥಾ ಒಂದು ಗಾಡಿಯವನು ಹತ್ತಾರು ಪೋಸ್ಟ್ ಆಫೀಸುಗಳಿಂದ ಟಪಾಲ್ ವಸ್ತುಗಳನ್ನು ಕೂಡಿಸಿ ತನ್ನ ಗಾಡಿಯಲ್ಲಿ ಹಾಕಿಕೊಂಡು, ಇನ್ನೊಂದು ಆಫೀಸಿನ ಎದುರಿಗೆ ಗಾಡಿಯನ್ನು ನಿಲ್ಲಿಸಿ, ಇಳಿದು ಆ ಆಫೀಸಿನೊಳಗೆ ಹೋಗಿ ಅಂಚೆ ವಸ್ತುಗಳನ್ನು ತೆಗೆದುಕೊಂಡು ಬರುವಷ್ಟರೊಳಗಾಗಿ ಯಾವನೋ ಒಬ್ಬ ಕಳ್ಳನು ಆ ಗಾಡಿಯ ಮೇಲೆ ಹತ್ತಿ ಲಗಾಮು ಹಿಡಿದು ಕುದುರೆಗಳನ್ನು ಹೊಡೆದು ಓಡಿಸಿಕೊಂಡು ಪರಾರಿಯಾಗಿ ಹೋಗಿದ್ದನು. ಅನಂತರ ಹತ್ತಾರು ಗಂಟೆಗಳ ತನಕ ಹುಡುಕಿದ ಮೇಲೆ ಆ ಗಾಡಿಯು ಮನೆಗಳ ಗುಂಪಿನ ಮಧ್ಯೆ ಬಿಟ್ಟಿದ್ದದ್ದು ಸಿಕ್ಕಿತು. ಆದರೆ ಅದರಲ್ಲಿದ್ದ ಅಂಚೆ ವಸ್ತುಗಳನ್ನು ಆ ಕಳ್ಳನು ಅಪಹರಿಸಿಕೊಂಡು ಹೋಗಿದ್ದನು. ಆ ವಸ್ತುಗಳಲ್ಲಿದ್ದ ಕಾಗದಗಳೊಳಗೆ ೭೭ ಲಕ್ಷ ರೂಪಾಯಿನ ನೋಟುಗಳೂ ಛೆಕ್ಕುಗಳೂ ಇದ್ದವೆಂದು ತಿಳಿಯುವುದು. ಈ ರೀತಿ ಆದ ನಷ್ಟಕ್ಕೆ ಪೋಸ್ಟ್ ಇಲಾಖೆಯವರು ಜವಾಬ್ದಾರಿಯನ್ನು ವಹಿಸಿಕೊಂಡು, ನಷ್ಟಪಟ್ಟ ಪ್ರಜೆಗಳಿಗೆ ಪರಿಹಾರವನ್ನು ಕೊಡುವರೇ ಎಂದು ಅನುಮಾನವಾಗಿದೆ.

ಉತ್ತಮವಾದ ಸಿದ್ಧೌಷಧಗಳು.

1-1

ಆರ್ನೇಯದಿಂದಲೂ ಬಂದ ನನ್ನ ಔಷಧಿಗಳು ಲಕ್ಷಾಂತರ ರೋಗಿಗಳಿಗೆ ಉಪಯೋಗಿಸಿ ಗುಣ ಕಂಡುಬಂದವುಗಳಾಗಿವೆ. ಅವುಗಳೆಲ್ಲಾ ಮೂಲಿಕೆಗಳಿಂದ ತಯಾರಾಗಿರುತ್ತೆ. ತಿಂಗಳೊಂದಕ್ಕೆ ಅನೇಕರು ಔಷಧಿ ಸೇವಿಸುತ್ತಲೂ ಇರುವ ಸಂಗತಿ ಎಲ್ಲರಿಗೂ ಗೊತ್ತಿದೆ.

(೧) ಸಂಜೀವಿನಿ ತೈಲ ಸಮಸ್ತ ಮಹಾ ರೋಗಗಳಿಗೂ ಶಾಲು ಸೀಸೆಗೆ ೧-೮-೦ (೨) ಭೃಂಗರಾಜ ತೈಲ ಎಲ್ಲಾ ವಿಧದ ಶಿರೋರೋಗಗಳಿಗೆ ಶಾಲು ಸೀಸೆಗೆ ೦-೧೦-೦ (೩) ಧೇದಿ ಎಷ್ಟೋ ಸುಖಪ್ರವರ್ತಿಯಾಗುವುದು ಶಾಲು ಸೀಸೆಗೆ ೦-೧೦-೦ (೪) ಮಹಾಲೇಹ ಧಾತುಶಕ್ತಿಯನ್ನುಂಟುಮಾಡಿ ಪುಷ್ಟಿಮಾಡುತ್ತೆ. ಸೇರಿಗೆ ೨-೦-೦. (೫) ಸೌಭಾಗ್ಯ ಶುಂಠಾಮೃತ ಲೇಹ ಇದರ ಸೇವನೆಯಿಂದ ಬಾಣಂತಿಸನ್ನಿ ಕ್ಷಯ ಮೊದಲಾದ ರೋಗಗಳನ್ನು ಪರಿಹರಿಸುತ್ತೆ. ಸೇರಿಗೆ ೨-೦-೦ ಹುಚ್ಚು ನಾಯಿ, ಕೊಳತ ಮಂಡಲ ಇವುಗಳಿಂದುಂಟಾದ ಪ್ರಬಲ ರೋಗಿಗಳಿಗೂ ಚಿಕಿತ್ಸೆಯು ದೊರೆಯುವದು

ನಮ್ಮ ಕ್ಯಾಟಲಾಗು ತರಿಸಿ ನೋಡಿ—ಪಂಡಿತ ಕೃಷ್ಣಾಚಿಟ್ಟಪ್ಪ,
ನಿಖಿಲ ರೋಗಾಪಹರಿ ವೈದ್ಯಶಾಲಾ, ದೊಡ್ಡಪೇಟೆ, ಮೈಸೂರು

ಅಪಾಯದ ಕುರುಹುಗಳು.

ಸ್ವಾಭಾವಿಕವಾಗಿ ಅಪಾಯ ಬರಬಹುದಾದ ಕುರುಹುಗಳನ್ನು ಕಂಡುಹಿಡಿಯಬಹುದು.

ಕೆಮ್ಮು ಅಪಾಯದ ಕುರುಹು!

ಶ್ವಾಸಕೋಶಗಳು ಬಲಹೀನವುಳ್ಳವುಗಳೆಂದು ಇದರಿಂದ ತೋರಿಬರುತ್ತದೆ. ಅವನ್ನು ಬೇಗನೇ ಬಲಪಡಿಸತಕ್ಕದ್ದು ಬಹು ಆವಶ್ಯಕ

SCOTT,S EMULSION. 57-42

(ಸ್ಕಾಟ್ಸ್ ಇಮಲ್ಷನ್)

ಎಂಬೀ ಔಷಧವು ಈ ಕುರುಹುಗಳನ್ನು ಹೋಗಲಾಡಿಸುವದು.

ಬಲಹೀನವಾದ ಶ್ವಾಸಕೋಶಗಳನ್ನು ಬಲಪಡಿಸಿ, ಕೆಮ್ಮನ್ನು ನಿಲ್ಲಿಸುತ್ತದೆ.

ಕೈಯಿಂದ ಮುಟ್ಟಿ ತಯಾರಿಸಿದ್ದಲ್ಲ.

ಎಲ್ಲಾ ಔಷಧ ಮಾರಾಟಗಾರರಲ್ಲೂ ದೊರಕುತ್ತವೆ.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್
ಔಷಧಗಳ ಕಾರ್ಖಾನೆ,
ಲಂಡನ್, ಇಂಗ್ಲೆಂಡ್.

ಈ ಮೀನು ಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ.

ಸನ್ ೧೯೦೭ ನೇ ಇಸವಿಯ

151-4

ಎಂ. ನಂ॥ ಎಫ್. ನಂ॥ ಬಿ ನಂ॥ ಸಿ. ನಂ॥ ಹೆಚ್. ನಂ॥ ಡಿ. ನಂ॥

ಪಂಚಾಂಗ ಸಮೇತವಾದ ಇಂಗ್ಲೀಷು—ಕನ್ನಡ

ಪಾಕೆಟ್ ಡೈರಿಗಳು.

ಈ ಡೈರಿಗಳು ವರ್ತಕರು, ಲಾಯರುಗಳು, ಕಂಟ್ರಾಕ್ಟರು, ದೊಡ್ಡ ಮನುಷ್ಯರು, ಖುಷ್‌ಬಾಷ್‌ಸಮಸ್ತರಿಗೂ ಉಪಯೋಗವಾಗಿರುತ್ತವೆ ಇವುಗಳಲ್ಲಿ ಅಡಕವಾಗಿರುವ ವಿಷಯಗಳು:—ಪ್ಲವಂಗ ಸಂ॥ ಪಂಚಾಂಗ, ಗ್ರಹ ಕುಂಡಲಿ ಸಹಿತ, ಕ್ಯಾಲೆಂಡರು, ಹಬ್ಬಗಳು, ರಜಾ ದಿನಗಳು, ರೈಲ್ ಛಾರ್ಜ, ಕೋರ್ಟ್ ಫೀಜು, ಪ್ರೋಸೆಸ್ ರುಸುಂ, ಸ್ಟಾಂಪು, ರಿಜಿಸ್ಟರ್ ಫೀಜುಗಳು, ಪೋಸ್ಟಾಫೀಸಿನ ಎಲ್ಲಾ ವಿಷಯಗಳು, ದವಿರ್ಣಗಳ ಅಳತೆ, ತೂಕಗಳು, ಗೌರಿ ಪಂಚಾಂಗ, ಪ್ರಶ್ನಶಾಸ್ತ್ರ, ಹಲ್ಲಿ ಬಿದ್ದ ಫಲ, ರಾಹುಕಾಲ, ಗುಳಿಕಕಾಲ, ವಾರಶೂಲೆ, ದಿನ ಸಂಬಳದ ಪಟ್ಟಿ, ದೋಬಿ ಲೆಕ್ಕ, ಜಮಾಖರ್ಚಿನಪಟ್ಟಿ, ಇನ್ನೂ ಅನೇಕ ವಿಷಯಗಳಿವೆ. ಉತ್ಕೃಷ್ಟವಾದ ಕಾಗದ, ರೂಲು ಹಾಕಿದೆ, ಸೀಮೆ ಸೂಪರ್ ಬೈಂಡು, ಚಿನ್ನ ಬೆಳ್ಳಿ ನಮೂನೆ ಗಿಲೀಟುಮಾಡಿದೆ.

ಎ ನಂಬರ್ ಚಿಕ್ಕಸೈಜು ೩ ಆಣೆ	ಸಿ ನಂಬರು ದೊಡ್ಡಸೈಜು ೬ ಆ.
ಎಫ್. ,, ,, ೪ ,,	ಎಚ್. ,, ,, ೭ ,,
ಬಿ. ,, ಮುಚ್ಚಳವುಳ್ಳದ್ದು ೫ ,,	ಡಿ. ,, ಮುಚ್ಚಳವುಳ್ಳದ್ದು ೮ ,,

ಪೋಸ್ಟ್ ಚಾರ್ಜು ಬೇರೆ. ಒಂದೇ ನಮೂನೆಯ ೧೨ ಡೈರಿ ತರಿಸಿಕೊಂಡರೆ ೧ ಡೈರಿ ಇನಾಂ. ವಿ. ಪಿ ಮೂಲಕವೂ ತರಿಸಿಕೊಳ್ಳಬಹುದು.

ನಮ್ಮ ವಿಳಾಸ:—ಎಂ. ಆರ್. ಕೃಷ್ಣಸ್ವಾಮಿ ಶೆಟ್ಟಿ ಕಂಪೆನಿ.

ಜನಾರ್ದನ್ ಪ್ರೆಸ್, ಬೆಂಗಳೂರು ಸಿಟಿ } ಅಥವಾ { ಶ್ರೀಕೃಷ್ಣ ವಿಲಾಸ ಪ್ರೆಸ್, ಮೈಸೂರು.

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟ್ರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ

(ಅಡ್ವಾನ್ಸು)	ರೂ.	೧—೦—೦
ಪರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಹಾಸಲ್ ಸೇರಿ	ರೂ.	೧—೧೪—೦
,, ,, ೬ ,, ,,		೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು. ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು

ನಮ್ಮ ವಿಳಾಸ:—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು

ಪುರಿಂ ಳಾಸ ವಿ.

ಮಾಸಪತ್ರಿಕೆ—ಸ್ತ್ರೀಯರಿಗೂ ಹೆಣ್ಣುಮಕ್ಕಳಿಗೂ ಬಹು ಸ್ವಾರಸ್ಯವಾದದ್ದು.

149-5

ನವಂಬರ್ ತಿಂಗಳ ಸಂಚಿಕೆಯಲ್ಲಿ ಸುಂದರವಾದ ಫೋಟೋ ಚಿತ್ರಗಳೊಡನೆ

ಮದ್ದಗಿರಿಯ ಕೋಟೆ ಕೊತ್ತಲುಗಳು

ನೀರಿನಲ್ಲಿ ಬಿದ್ದವರನ್ನು ಬದುಕಿಸುವ ವಿಧಾನಗಳು

ಇನ್ನೂ ವಿಚಿತ್ರವೂ ಸ್ವಾರಸ್ಯವೂ ಆದ ಸಣ್ಣ ಕಥೆಗಳು.

ಒಗಟೆಗಳು ಮುಂತಾದ ವಿಷಯಗಳು ವಿವರಿಸಲ್ಪಟ್ಟಿವೆ.

ಕ್ರಯ:—೧ ಸಂಚಿಕೆಗೆ ೬ ಕಾಸು.

ಹಾಸಲು ಸೇರಿ ವರ್ಷದ ಚಂದಾ ೯ ಆಣೆ.

ಮಾದರಿ ಸಂಚಿಕೆ ಬೇಕಾದವರು ಕೆಳಗಿನ ವಿಳಾಸದಾರರಿಗೆ ಬರೆದು ತರಿಸಿಕೊಳ್ಳಬಹುದು.—

ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

ಇಗೋ! ಕನ್ನಡ "ಮಾಡೆಲ್" ಪಾಕೆಟ್ ಡೈರಿ!

133-12

ಸೊಗಸಾದ ಡೈರಿಗಳು!! ಉತ್ತಮವಾದ ಡೈರಿಗಳು!!

ಉತ್ಕೃಷ್ಟವಾದ ಡೈರಿಗಳು!!!

೧೯೦೭ನೇ ವರುಷದ ಕನ್ನಡ ಡೈರಿಗಳು ಸೊಗಸಾಗಿ ರೂಲ್ ಹಾಕಿದ ಕಾಗದದ ಮೇಲೆ ಮುತ್ತಿನಂಥಾ ಅಕ್ಷರಗಳಿಂದ ಪ್ರಿಂಟಾಗಿ ಮನಸ್ಸಿಗೆ ಆಹ್ಲಾದವನ್ನುಂಟುಮಾಡತಕ್ಕವುಗಳಾಗಿರುತ್ತವೆ. ಇವುಗಳನ್ನು ದಕ್ಷಿಣ ಹಿಂದೂಸ್ಥಾನದಲ್ಲಿ ಪ್ರಸಿದ್ಧವಾಗಿರುವ ವೆಸ್ಲೆಯನ್ ಮಿಷನ್ ಪ್ರೆಸ್ಸಲ್ಲಿ ಅಚ್ಚು ಹಾಕಿಸಿರುತ್ತೇವೆ ಇವುಗಳಲ್ಲಿ ಅಡಕವಾಗಿರುವ ವಿಷಯಗಳು:—ಜಮಾಖರ್ಚಿನ ಪಟ್ಟಿ, ದೋಬಿ ಲೆಕ್ಕ, ದಿನ ಸಂಬಳದ ಪಟ್ಟಿ, ವಾರಶೂಲೆ, ಗುಳಿಕ ಕಾಲ, ರಾಹು ಕಾಲ, ಹಲ್ಲಿ ಬಿದ್ದ ಫಲ, ಪ್ರಶ್ನಶಾಸ್ತ್ರ, ಗೌರಿ ಪಂಚಾಂಗ, ತೂಕಗಳು, ದವಿರ್ಣಗಳ ಅಳತೆ, ಪೋಸ್ಟಾಫೀಸಿನ ಎಲ್ಲಾ ವಿಷಯಗಳು, ರಿಜಿಸ್ಟರ್ ಫೀಜುಗಳು, ಸ್ಟಾಂಪು, ಪ್ರೋಸೆಸ್ ರುಸುಂ, ಕೋರ್ಟ್ ಫೀಜು, ರೈಲ್ ಛಾರ್ಜು, ರಜಾ ದಿನಗಳು, ಹಬ್ಬಗಳು, ಕ್ಯಾಲೆಂಡರು, (ಗ್ರಹಕುಂಡಲಿಸಹಿತ) ಪ್ಲವಂಗಸಂ॥ ಪಂಚಾಂಗ, ಇವೇ ಮುಂತಾದ ಅನೇಕ ವಿಷಯಗಳು ಅಡಗಿರುತ್ತವೆ

ಕ್ರಯ:—

ನಂ॥ ೧ ಸಣ್ಣ ಸೈಜು ಪೆನ್ಸಿಲ್ ಇಡತಕ್ಕ ಡೈರಿ ೦—೬—೦; ಹನ್ನೆರಡು ಡೈರಿಗಳಿಗೆ ೧ ಇನಾಮು.

ನಂ॥ ೨ ಸಣ್ಣ ಸೈಜು ಪೆನ್ಸಿಲ್ ಇಟ್ಟು ಮುಚ್ಚಳ ಹಾಕಿರುವ ಫ್ಲಾಪ್ ಡೈರಿ ೦—೬—೦; ಹನ್ನೆರಡು ಡೈರಿಗಳಿಗೆ ೧ ಇನಾಮು.

ನಂ॥ ೩ ದೊಡ್ಡ ಸೈಜು ಪೆನ್ಸಿಲ್ ಇಡತಕ್ಕ ಡೈರಿ ೦—೬—೦; ಹನ್ನೆರಡು ಡೈರಿಗಳಿಗೆ ೧ ಇನಾಮು.

ನಂ॥ ೪ ದೊಡ್ಡ ಸೈಜು ಪೆನ್ಸಿಲ್ ಇಟ್ಟು ಮುಚ್ಚಳ ಹಾಕಿರುವ ಡೈರಿ ೦—೮—೦, ಹನ್ನೆರಡು ಡೈರಿಗಳಿಗೆ ೧ ಇನಾಮು.

ಡೈರಿಗಳ ಗಲಾಟೆಯಲ್ಲಿ ಭ್ರಾಂತಿಹೊಂದದೇದಿ. ಉತ್ತಮವಾದವುಗಳಿಗೆ ಹಣವನ್ನು ವ್ಯಯಮಾಡಿರಿ. ನಮ್ಮ ಡೈರಿಗಳು ಬಹು ಸುಲಭ ಕ್ರಯವುಳ್ಳವುಗಳು. ಇವುಗಳು ಗೌರ್ನಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿವೆ.

ಮ್ಯಾನೇಜರ್, ಸಿ. ಎಲ್. ಎಸ್. ಬುಕ್‌ಡಿಪೋ, ಮೈಸೂರು.

ಅಥವಾ,

ಎಸ್. ಡಿ. ನಠ್‌ಮಲ್ ಕಂಪೆನಿ, ದೊಡ್ಡಪೇಟೆ, ಮೈಸೂರು.

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

7—12—1906 ರಿಂದ 14—12—1906 ರ ವ

ಸ್ಥಳ	ಪ್ಲೇಗ್		ಹೋ
	ತಗಲಿದ್ದು.	ಸತ್ತದ್ದು.	
ಬೆಂಗಳೂರು ಪಟ್ಟಣ	10	10	6
ಮೈಸೂರು ,,	24	15	0
ಬೆಂಗಳೂರು ಡಿಸ್ಟ್ರಿಕ್ಟು	18	14	11
ಮೈಸೂರು ,,	0	1	20
ಕೋಲಾರ್ ,,	0	0	5
ಕೋಲಾರ್ ಚಿನ್ನದ ಗಣಿಗಳು	1	0	1
ತುಮಕೂರು ಡಿಸ್ಟ್ರಿಕ್ಟು	5	6	0
ಹಾಸನ ,,	21	11	5
ಚಿತ್ರದುರ್ಗ ,,	0	0	0
ಕಡೂರ್ ,,	4	3	2
ಶಿವಮೊಗ್ಗ ,,	0	0	2
ಜುಮ್ಲಾ	83	59	56

ಶಾಲಿವಾಹನ ಶಕ ವರುಷಂಗಳು ೧೮೨೯ ನೇ ಪರಾಭವ ಸಂವತ್ಸರದ ಪುಷ್ಯ ಶುದ್ಧ ಚೌತಿ ಗುರುವಾರದಿಂದ ಪುಷ್ಯ ಶುದ್ಧ ದ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ.

೧೯೦೭ ನೇ ಇಸವಿ ಜನವರಿ.

ತಾ	ವಾರ	ತಿಥಿ.	ಘಳಿಗೆ.	ನಕ್ಷತ್ರ.	ಘಳಿಗೆ.
3	ಗುರು §	ಚೌತಿ	55 14	ಶ್ರ	17 46
4	ಶುಕ್ರ	ಪಂಚಮಿ	55-40	ಪು	20-22
5	ಶನಿವಾ	ಷಷ್ಟಿ	54-44	ಪು	21-50
6	ರವಿವಾ ‡	ಸಪ್ತಮಿ	52-12	ಉ	22-24
7	ಚಂದ್ರ	ಅಷ್ಟಮಿ	49-38	ಹ	21-4
8	ಕುಜ	ನವಮಿ	45-48	ಚಿ	18 8
9	ಬುಧ ::	ದಶಮಿ	41-2	ಸ್ವಾ	16-22

§ ಮೂಗೂರು ತಿಗರುಕಳಿಯೋದು, ಸಂಕಷ್ಟ ಚತುರ್ಥಿ ಕೋದಂಡರಾಮೋತ್ಸವಾರಂಭ

‡ ತಿಸ್ರೋಷ್ಟಕಾ

:: ಶಿವಪುರದಲ್ಲಿ ತಿರುಮಲೆಕೂಶ್ರಾಂ.

ಪೇಟೇ ಧಾರಣೆ.

ದಿನಸಿ		ಮೈಸೂರು	ಬೆಂಗಳೂರು
ಕಪ್ಪು ಅಕ್ಕಿ ಪಲ್ಲ ೧ಕ್ಕೆ	ರೂ.	೧೩-೪-೦	[illegible]
ಕೆಂಬೂತಿ ಅಕ್ಕಿ ಅವಲ್	..	೧೩-೩-೦	[illegible]
,, ದಾಯಂ	..	೧೩-೦-೦	[illegible]
ಪಾಪ್ರಾಯ ಅಕ್ಕಿ	..	೧೩-೦-೦	[illegible]
ಸಣ್ಣಕ್ಕಿ ಅವಲ್	..	೧೫-೦-೦	[illegible]
,, ದಾಯಂ	..	೧೪-೦-೦	[illegible]
ತೊಗರೀ ಬೇಳೆ ಪಲ್ಲ ೧ಕ್ಕೆ	.	೧೨-೮-೦	[illegible]
,, ದಾಯಂ	.	೧೨-೬-೦	[illegible]
ಹೈಗ ರಾಗಿ ಪಲ್ಲ ೧ಕ್ಕೆ	..	೬-೮-೦	[illegible]
ಕಾರ್ರಾಗಿ	..	೬-೦-೦	[illegible]
ಜೋಳ	..	೫-೮-೦	[illegible]
ಹಲಸಂದೆ ಪಲ್ಲ ೧ಕ್ಕೆ	.	೧೦-೧೨-೦	[illegible]
ಬಿಳೀ ಅವರೆ	.	೯-೪-೦	[illegible]
ಹೆಸರು	..	೧೧-೮-೦	[illegible]
ಉದ್ದು	..	೧೨-೦-೦	[illegible]
ಕಡಲೆ	..	೧೧-೮-೦	[illegible]
ಎಳ್ಳು ಸೆ. ೧-೨೭ ಕ್ಕೆ	..	೧೭-೦-೦	[illegible]
ಹುರುಳಿ	..	೭-೬-೦	[illegible]
ಹರಳು ೧-೨೭ ಸೇರಿಗೆ	..	೧೯-೦-೦	[illegible]
ಸೀಗೇಕಾಯಿ ಮಣ ೧ಕ್ಕೆ	..	೨-೨-೦	[illegible]
ಮೆಣಸಿನಕಾಯಿ	..	೩-೪-೦	[illegible]
,, ದುಯಂ	..	೩-೦-೦	[illegible]
ಬೆಲ್ಲ ದೊಡ್ಡ ಅಚ್ಚು	..	೪-೪-೦	ಮ ೧-[illegible]
ಬೆಳ್ಳುಳ್ಳಿ ಮಣ ೧ಕ್ಕೆ	..	೪-೮-೦	[illegible]
ಅರಳಿಶ್ಯ ,,	..	೬-೧೨-೦	[illegible]
ಕೊತ್ತಂಬರಿ ಪಲ್ಲ ೧ಕ್ಕೆ	..	೯-೦-೦	[illegible]
ಉಪ್ಪು ,,	..	೫-೧೦-೦	[illegible]
ಹುಣಸೇ ಹಣ್ಣು	..	೦-೧೨-೦	[illegible]
,, ಹಳೇದು	..	೦-೮-೦	[illegible]
ತುಪ್ಪ ಮಣ ೧ಕ್ಕೆ	..	೧೬-೦-೦	[illegible]
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ	..	೫-೪-೦	[illegible]
ತೆಂಗಿನಕಾಯಿ ೧೦೦ಕ್ಕೆ	..	೬-೮-೦	[illegible]
ಅಡಕೇಕಾಯಿ ಮಣ ೧ಕ್ಕೆ	..	೧-೦-೦	[illegible]
ಅಂಟುವಾಳಕಾಯಿ ಮಣ ೧ಕ್ಕೆ	.	೦-೧೨-೦	[illegible]
ಚಿನ್ನ (ಬೌನ್) ಕೆಂಪು	..	೧೫-೪-೦	[illegible]
,, ,, ಪಸಿಮೆ	..	೧೫-೧೦-೦	[illegible]
,, ,, ಗಟ್ಟಿ ತೊಲ ೧ಕ್ಕೆ	..	೨೩-೧೨-೦	[illegible]
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	..	೮೫-೧-೦	[illegible]

Printed and published by the Rev. E. Thompson, M.A., the Proprietor and M[anager] Wesleyan Mission Press, Mysore. 3/1/1907

REGISTERED M. 20.

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೦ ಮೈಸೂರು—ಸರ್ ೧೯೦೨ ನೇ ಇಸವಿ ಜನವರಿ ತಾರೀಖು ೧೧ ನೇ ಗುರುವಾರ. ಸಂಚಿಕೆ ೩೨

ಕೊಡಗು ದೇಶದ ಶ್ರೇಷ್ಠವಾದ ಉತ್ಕೃಷ್ಟ ಕಾಫಿಯು

ಸಾಯದ ಇರುವದು ಅಥವಾ ಆಗತಾನೆ ಹುರಿದದ್ದು ತಯಾರಾದ ಸ್ಥಳದಿಂದಲೆ ನೆಟ್ಟಗೆ ರವಾನಿಸಲ್ಪಡುವದು.

85 48

ವ್ಯಾಪಾರದ C C E C ಹೆಗ್ಗುರ್ತು

ಕಾಫಿಕೋವಾದ ತಲೆಯು ಮುದ್ರೆ ಇದೆ.

ಸಂಪೂರ್ಣವಾಗಿ ಯಂತ್ರದಿಂದಲೆ ಸಿದ್ಧಪಡಿಸಿದ್ದು, ಹೆಗ್ಗುರ್ತು ವಿಳಾಸದ ಚೀಟ ಸುತ್ತಿಲ್ಲದಿರುವವು ಸ್ವಚ್ಛವಾದವುಗಳಲ್ಲ. ಅವು ಗಳು. ಏಜಂಟರುಗಳು ಬೇಕು. ಅಂಥವರಿಗೆ ಅಲಾಂ ದ ದರ. ಸಮಾಚಾರ ದಯವಿಟ್ಟು ಈ ಪತ್ರಿಕೆಯ ಹೆಸರನ್ನು ಸೂಚಿಸಿ.

ವಿಳಾಸ.—ಮ್ಯಾನೇಜರ್, ಮ್ಯಾಫಿರ್ಸ್
ಕಾಫಿ ವರ್ಕ್ಸ್, ಹುಣಸೂರು.

ಜ್ವರಹರಿ.

142 11

ಈ ಸಾಧಾರಣ ಜ್ವರ, ಹಳೇಜ್ವರ, ಮೋರೇಜ್ವರ, ಪಿತ್ಥಜ್ವರ, ಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನು ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಸಬ್ ಓವರ್ಸಿಯರ್ ಆಫೀಸರ್ ಎಸ್ ಟಿ ವೆಂಕಟಪತಿ ಅಯ್ಯ ರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಸೀಸೆಯು ತೀರಿಹೋಯಿತು. ಇದು ಸ್ವಲ್ಪ ಕಾಲದಲ್ಲೇ ಔಷಧದಿಂದ ಅನೇಕ ಮಂದಿ ಜ್ವರದ ಬಾಧಿತರು ಚೆನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವ ರಿಂದ ದಯವಿಟ್ಟು ಇನ್ನೊಂದು ೨೦ ಡಜನಿನ ಸೀಸೆಯನ್ನು ವಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ—ಸೀಸೆ ೧ ಕ್ಕೆ ೮ ಆಣೆ, ೧ ರೂ, ೧—೮ ರೂ., ೩ ೨—೧೦ ಆ, ೧೧ ರೂ.; ಹನ್ನೆರಡು ಸೀಸೆ ತರಿಸಿಕೊಂಡರೆ ಗೆ ಅಂಚೆ ಮಾಫಿ ಬಿಡಲಾಗುವದು.

ಓಮ್ನಿಯಂ ಗೆದರಮ್.

Omnium Gatherum

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಯ ಶೂಲೆ, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾ ದವುಗಳನ್ನು ಮಹತ್ತರವಾಗಿ ಪರಿಣಮಿಸಿ, ಕೂಡಲೇ ಗುಣಕೊಡು ವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಈ ಔಷಧವು ಜ್ವರಹರಿ ಎಂಬ ಔಷಧದಂತೆಯೇ. ಸೀಸೆಗಳಲ್ಲಿ ಮಾರುವದು.

ಪೋಲೀಸು ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹಿವ್ವಿಯ ಈ ಔಷಧವನ್ನು ನಾನೂ ನನ್ನ ತಾಬೇದಾರರೂ ಮ್ಯುನಿಸಿಪಲ್ ಡಿಸ್ಪೆನ್ಸರಿಯಲ್ಲಿ ಅನೇಕ ಮರುವುಗಳಿಂದಲೂ ಕಾಲರಾ, ಅಜೀರ್ಣ ಕೇ, ಅಜೀರ್ಣ ರೋಗಿಷ್ಠರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಆ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧ ವಾಗಿರುವದು.

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗ ಳಲ್ಲೂ, ಕೆಲವು ಪಾತ್ರಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯ ಕ್ಕೆ ದೊರೆಯುವವು. ಇಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ - ವಾಗಿ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ, ಕೋಂ ಜೋನ್ಸ್ ಸ್ಟ್ರೀಟ್, ಮದ್ರಾಸ್

ಬೇಕಾಗಿದೆ.

153-4

ಇಂಗ್ಲಿಷ್ ಮತ್ತು ಕನ್ನಡ ಅಕ್ಷರ ಜೋಡಿಸುವವ ರು (ಕಂಪಾಜಿಟರುಗಳು) ಬೇಕಾಗಿದೆ. ಚನ್ನಾಗಿ ಕಲಿತಿ ರುವವರು ಮಾತ್ರ ಖುದ್ದಾಗಿ ಬಂದು ಮಾತನಾಡಬಹುದು.

ಮ್ಯಾನೇಜರ್, ಮಿರ್ರರ್ ಪ್ರೆಸ್, ಮೈಸೂರು.

ಮುಂಬಯಿ ವ್ಯಾಪಾರವನ್ನಾಪೇಕ್ಷಿಸುವವರು.

85-32

ಮುಂಬಯಿಯಲ್ಲಿ ಪ್ರತಿಯೊಂದು ಮಾಲಿನ ತೂಕ ಅಳತೆ ಮತ್ತು ಮಾಲಿನ ವರ್ಣನೆ ಹಾಗೂ ಅನೇಕ ವಿಷಯಗಳು ಮಾಹಿತಿಯಿರುವ ಕನ್ನಡ ಪುಸ್ತಕ—ಕ್ರಯ ೧೦ ಆಣೆ. ವಿ. ಪಿ. ಯಿಂದ ಕಳುಹಿಸು ವೆವು. ಟಪಾಲು ಖರ್ಚು ಬೇರೆ ಬುಕ್ಕು ಸೇಲರರಿಗೆ ಯೋಗ್ಯ ಕಮಿಷನ್ ದೊರೆಯುವದು ಮತ್ತು ಲಿಂಗಾಯತ ಧರ್ಮಸಂಬಂಧ ವಿರ ಶೈವೋತ್ಪತ್ತಿ ಕ್ರಿಯಾಲಕ್ಷಣವೆಂಬುವ ಕನ್ನಡ ಪುಸ್ತಕ—ನಾಲ್ಕು ಆಣೆ ಕಾಲು ಅಕ್ಷರದಿಂದ ಬರಿಯರಿ ಪತ್ತಾ ಚನ್ನಬಸಪ್ಪ ಮಲ್ಲಪ್ಪ ವಾರದ, ಫೋಪ್ಪು ಮಾಂಡ್ವಿ, ಮುಂಬಯಿ.

ಬೆಳಗೆ ಬೆಳ್ಳಿ—ಗುಣಕ್ಕೆ ಭಂಗಾರ.

86 38

ಕ್ಲಿಮೆಂಟ್ಸ್‌ರವರ ಗಾಲಿಡಿಬಾಧಾ ನಿವಾರಿಣಿ.

ಪಾರ್ಶ್ವನೋವು, ಕೀಲುಗಳ ನೋವುಗಳು, ಕಿಬ್ಬೊಟ್ಟೆನೋವು, ಬೆನ್ನು ಳೆಯುವದು, ತಲೆನೋವು, ಕೆಮ್ಮು ಕಿಲುಬುಗಳು, ಕೀಲುಗಳು, ಕತ್ತರಿಸುವದು, ಬಿಗ್ಗಿರುವ ಬೆನ್ನುಗಳು, ಕೊರಳು ಊತ, ಇವುಗಳಿಂ ದುಂಟಾಗುವ ಬಾಧೆಗಳು, ಕೈಕಾಲು ಪಡೆತ, ಇವುಗಳಿಗೆ ಕ್ಲಿಮೆಂಟ್ಸ ವರ ಗಾಲಿಡಿ ಬಾಧೆ ನಿವಾರಿಣಿ ತೈಲವನ್ನು ಚನ್ನಾಗಿ ತಿಕ್ಕಿದರೆ ಈ ಬಾ ಧೆಗಳೆಲ್ಲಾ ಪರಿಹಾರವಾಗುವದು. ಬಾಧೆಯನ್ನು ನಿಲ್ಲಿಸುವದಕ್ಕಾಗಿ ಕ್ಲಿಮೆಂಟ್ಸ್‌ರವರ ಮ್ಯಾಜಿಕ್ ಬಾಂ ಹುಟ್ಟಿ ಇದೆ ಆ ಕೆಲಸವನ್ನು ಅದು ಪಡೆಯುವದು. ಲೋಕದಲ್ಲಿ ಕಾಹಿ ವಾತದ ಔಷಧಗಳಿಂ ಬಾಧೆಯನ್ನು ಶಮನಮಾಡುವದರಲ್ಲಿ ಕ್ಲಿಮೆಂಟ್ಸ್‌ರವರ ಮ್ಯಾಜಿಕ್ ಬಾಂನಂತಹದು ಬೇರೊಂದಿಲ್ಲವು. ಕ್ರಯ:—೧ ಬಾಟ್ಲಿಗೆ ೧೨ ಆಣೆ. ೩ ಕ್ಕೆ ೨ ರೂಪಾಯಿ. ೬ ಕ್ಕೆ ೩ರೂಪಾಯಿ ೧೨ಕ್ಕೆ ೬ ರೂಪಾಯಿ ಅಂಚೆ ವೆಚ್ಚ ಒಂದರಿಂದ ಮೂರು ಬಾಟ್ಲಿವರೆಗೆ ೩ ಆಣೆ

ನಮ್ಮ ವಿಳಾಸ:—ಎಫ್. ಡಬ್ಲ್ಯು. ಆರ್ಗ,
ಸಿಮೆಟ್ರಿ ರೋಡ್, ವೇಪೆರಿ, ಮದರಾಸ್.

ಬೆಂಗಳೂರು ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪೆನಿ ಲಿಮಿಟೆಡ್.

122—17

ಮೈಸೂರು ಸರ್ಕಾರದವರು ಇಂಡಿಯಾ ಗವರ್ಮೆಂಟಿನವರು ಈ ರೈಲನ್ನು ಸ್ವಾಂಕ್ಷನ್ ಮಾಡುವ ಅಂಡಿನ್ಮೇಲೆ ಖರ್ಚಾಗುವ ಮೂಲಧನಕ್ಕೆ ಶೇಕಡ ನಾಲ್ಕರಂತೆ ಬಡ್ಡಿ ಕೊಡಲು ಜಾಮೀನಾಗಿರು ತ್ತೇವೆಂದು ಈಚೆಗೆ ಫೈಸಲ್ ಮಾಡಿರುತ್ತಾರೆ.

ನಿಯಮಿತ ಮೂಲಧನ ಶೇರು ಒಂದಕ್ಕೆ ೧೦ ರೂಪಾಯಿಗಳ ಬೆಲೆಯುಳ್ಳ ೪೦ ಸಾವಿರ ಶೇರುಗಳಿಂದಾಗುವ ೪ ಲಕ್ಷ ರೂಪಾಯಿ ಗಳು—ಈ ಶೇರು ಮೊಬಲಗು ಶೇರು ಒಂದಕ್ಕೆ ಒಂದು ರೂಪಾಯಿ ನಂತೆ ಅಪ್ಲಿಕೇಷನ್ ಜೊತೆಯಲ್ಲಿ ಅಡ್ವಾನ್ಸಾಗಿ ಕೊಟ್ಟು ಬಾಕಿ ೯ ರೂಪಾಯಿಗಳನ್ನ ನೋಟೀಸ್ ಕೊಟ್ಟನಂತರ ೧೦ ಕಿಸ್ತುಗಳಲ್ಲಿ ಪಾವತಿ ಮಾಡತಕ್ಕದ್ದು. ಗ್ಯಾರಂಟಿ ಸರ್ವೆ ಪೂರೈಸಲ್ಪಟ್ಟಿದೆ.

ಈ ಕಂಪನಿಯ ಶೇರು ಅಪೇಕ್ಷಿಸತಕ್ಕಂಥವರು ಈ ಕೆಳ ಗೆ ರುಜುವು ಮಾಡಿರುವ ... ಅಥವಾ ಸಬ್ ಏಜಂಟ್ರಿಗೆ ದರಖಾಸ್ತು ಮಾಡಿಕೊಳ್ಳಬೇಕು.

ಶೇರು ಹಣವನ್ನು ಈ ಕೆಳಗೆ ರುಜು ಮಾಡಿರುವವರಿಗೆ, ಇವರಿಂದ ಲಿಖಿತ ಮೂಲಕ ಹಣ ವಸೂಲು ಮಾಡಲು ಅಧಿಕಾರ ಹೊಂದಿರುವ ಸಬ್ ಏಜಂಟರಿಗೆ, ಬೆಂಗಳೂರು ಬ್ರಾಂಚು ಮದ್ರಾಸು ಬ್ಯಾಂಕಿಗೆ (ಈ ಕಂಪನಿಯ ಕ್ರೆಡಿಟ್ಟಿಗೆ), ಅಥವಾ ಮೈಸೂರು ಸೀಮೆಯ ತಾಲ್ಲೂಕು ಡಿಸ್ಟ್ರಿಕ್ಟು ಖಜಾನೆಗಳಿಗಾಗಲಿ ಪಾವತಿ ಮಾಡಬೇಕು.

(ಸ್ವ) ಬಿ. ವಿ. ರಾಮಸ್ವಾಮಿ ಶೆಟ್ಟಿ, ಬಿ. ಎ.,
ಅಡ್ವೊಕೇಟ್, ಮತ್ತು ಬೆಂಗಳೂರು ಚಿಕ್ಕಬಳ್ಳಾಪುರ
ಲೈಟ್ ರೈಲ್ವೆ ಕಂಪೆನಿಯ ಚೀಫ್ ಏಜಂಟ್.
ಸಗರ್ಪೇಟೆ, ಬೆಂಗಳೂರು ಸಿಟಿ

The Place for Hassan Caps is Hassan.

ನಿಮ್ಮ ತಲೆಯ ಮೇಲಿರುವದೇನು?
ಹಾಸನದ ಟೋಪಿ ಅಲ್ಲವೋ? ಹಾಗಾದರೆ ಬೇಗ
ಬರೆದು ತರಿಸಿಕೊಳ್ಳಿ.

164-3

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?
ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂ ದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿ ಗಳ ದಾರವೆಲ್ಲಾ ಟೀಳಾದದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ—(೧)ನಮ್ಮಲ್ಲಿ ತಯಾರಾಗುವ ಟೋಪಿ ಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು. (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿ ಸುತ್ತೇವೆ.

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆಬರುವ ಟೋಪಿ ಗಳು ಬೇಕಾದರೆ ನಮಗೇ ಸೀದಾ ಬರೆದು ತರಿಸಿಕೊಳ್ಳಿ. ಅಗ್ಗವಾ ದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ.

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ.

"ಅರೇಬಿಯನ್ ನೈಟ್ಸ್"

150-6

ಅಥವಾ

ಯವನಯಾಮಿನೀ ವಿನೋದ ಕಥೆಗಳು"

"ಅರೇಬಿಯನ್ ನೈಟ್ಸ್ ಅಥವಾ ಯವನಯಾಮಿನೀ ವಿ ನೋದಕಥೆಗಳು" ಈ ಪುಸ್ತಕವು ಲೋಕಪ್ರಸಿದ್ಧವಾದುದೆಂದು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ನಾನೂರು ಎಪ್ಪತ್ತು ಪುಟಗಳುಳ್ಳದ್ದು. ಭಾರಿ ಪುಸ್ತಕ. ಭಾಷೆಯು ಬಹು ಸರಳವಾಗಿದೆ. ಪುಸ್ತಕವನ್ನು ಒಂ ದಾವರ್ತಿ ಓದಿದ ಮೇಲೆ ಅದನ್ನು ಪುನಃ ಪುನಃ ಓದುವಂತೆ ಅದು ಮನ ಸ್ಸನ್ನು ಆಕರ್ಷಿಸುವದು. ಇದರ ಕ್ರಯ ಎರಡೇ ರೂಪಾಯಿ ವಿ. ಪಿ. ಮೂಲಕ ೨—೩—೦ ಹತ್ತು ಅಥವಾ ಹದಿನೈದು ವರ್ಷಗಳ ಹಿಂದೆ ಇದರ ಕ್ರಯ ಎಂಟು ರೂಪಾಯಿ ಎಂದು ಅನೇಕರಿಗೆ ಗೊ ತ್ತು. ಇದನ್ನು ಬಡವರೂ, ಐಶ್ವರ್ಯವಂತರೂ ಓದುವಂತೆ ಪುನಃ ಛಾಪಿಸಿ ಇಷ್ಟು ದೊಡ್ಡ ಪುಸ್ತಕವನ್ನು ಇಷ್ಟು ಸುಲಭ ಕ್ರಯಕ್ಕೆ ಮಾರುತ್ತೇವೆ. ಎನ್ನೆರಡು ಪುಸ್ತಕಗಳನ್ನು ಒಟ್ಟಿಗೆ ತರಿಸಿಕೊಂಡರೆ ಪುಸ್ತಕಕ್ಕೆ ಎರಡು ಆಣೆಯಂತೆ ಕಮಿಷನ್ ಕೊಡುತ್ತೇವೆ. ಜಾಗ್ರತೆ ನೋಡಿ. ನಮ್ಮ ವಿಳಾಸ:—

ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

ಹಿಂದೂದೇಶಪ್ರದಕ್ಷಿಣ.

ಈ ನೂತನ ಪುಸ್ತಕದ ೧ನೇ ಮುದ್ರಣದ ಪ್ರತಿಗಳೆಲ್ಲಾ ಸಂಪೂ ರ್ಣವಾಗಿ ಮುಗಿದುಹೋದ್ದರಿಂದ ಎರಡನೇ ಮುದ್ರಣವನ್ನು ಹಾಕಿ ಸಿರುತ್ತೇವೆ. ಮೂರು ಅಥವಾ ನಾಲ್ಕು ತಿಂಗಳೊಳಗಾಗಿ ನೂರಾರು ಪ್ರತಿ ಗಳು ಬಿಕರಿ ಮಾಡಲ್ಪಟ್ಟದ್ದರಿಂದ ಅನಂತರ ಈ ಪುಸ್ತಕವನ್ನು ಅಪೇಕ್ಷಿ ಸಿದ ಅನೇಕರಿಗೆ ಇದು ದೊರಿಯದೆ ವ್ಯಸನಕ್ಕೊಳಗಾದರು. ಈಗಲಾದ ರೂ ಜಾಗ್ರತೆಯಿಂದ ಬರೆದು ವಿ. ಪಿ. ಮೂಲಕ ತರಿಸಿಕೊಳ್ಳಿ. ಇದರ ಲ್ಲಿ ಅಡಗಿರುವ ಸಂಗತಿಗಳನ್ನು ವಿವರಿಸಲು ಸ್ಥಳ ಸಂಕೋಚವಾಗಿದೆ. ಹಿಂದೂ ದೇಶದಲ್ಲಿರುವ ಅನೇಕ ಪಟ್ಟಣಗಳು ಚಿತ್ರಗಳೂ ಮತ್ತು ಅವು ಗಳ ವರ್ಣನೆಗಳೂ ಪುರಾತನ ಚರಿತ್ರಾರ್ಹವಾದ ಕಟ್ಟಡಗಳೂ ಅವು ಗಳ ಚಿತ್ರಗಳೂ ಇದರಲ್ಲಿ ಅಡಗಿವೆ. ಇದರಲ್ಲಿ ಸುಮಾರು ಕೋಭತ್ತು ಪ್ರಸಿದ್ಧವಾದ ಚಿತ್ರಗಳಿರುತ್ತವೆ. ನೂರಾರು ರೂಪಾಯಿಗಳನ್ನು ಖರ್ಚುಮಾಡಿ ದೇಶಸಂಚಾರ ಮಾಡುವುದಕ್ಕೆ ಬದಲಾಗಿ ಈ ದೊಡ್ಡ ಪುಸ್ತಕವನ್ನು ತರಿಸಿ ಓದಿದರೆ ಬಹು ಪ್ರಯೋಜನವಾದೀತೆನ್ನುವುದ ರಲ್ಲಿ ಯಾವ ಸಂಶಯವೂ ಇರಲಾರದು. ಪುಸ್ತಕದ ಕ್ರಯ ಎಂಟೇ ಆಣೆ. ವಿ. ಪಿ. ಮೂಲಕ ತರಿಸಿಕೊಂಡರೆ ಹನ್ನೊಂದಾಣೆಯಾಗುವುದು.

ಮ್ಯಾನೇಜರ್ ಸಿ. ಎಲ್. ಎಸ್. ಬುಕ್ ಡಿಪೋ ಮೈಸೂರು.

ಬಿಳಗಿ ರಾಜವೈದ್ಯರ ಒಳ್ಳೆ ಖಾತ್ರಿಯಾದ ಔಷಧಗಳು.

೬-೧

ಸುಖದಾಯಿನೀ ಗುಳಿಗೆ:—ಇದರಿಂದ ಕೆಮ್ಮಿನ ಬಾಧೆ ಬಹು ಬೇಗನೆ ಗುಣಹೊಂದುವದು. ೧೦ ವರುಷದ ವೊಳಗಿನ ಯಾವ ಪ್ರಾಯದವರಾದರೂ ಸೇವಿಸಬಹುದು. ಕ್ರಯ ೨೪ ಗುಳಿಗೆಗೆ ೧ ರೂಪಾಯಿ. ವಿ. ಪಿ. ಚಾರ್ಜು ಆಣೆ ೪.

ಚಿಕ್ಕಹುಡುಗರ ಬಾಲಗ್ರಹದ ಔಷಧ.—ಜ್ವರಯುಕ್ತ ಅಥವಾ ಜ್ವರವಿಲ್ಲದೆ ಘಳ್ಕನೆ ಹುಟ್ಟುವ ಈ ಉಪಟಳಿಗೆ ಇದರಿಂದ ಬೇಗನೆ ಗುಣಹುಟ್ಟುವದು. ಕ್ರಯ ೧ ಕುಪ್ಪಿಗೆ ೮ ಆಣೆ. ವಿ. ಪಿ. ೪ ಆಣೆ.

ಗಜಕರ್ಣದ ಮುಲಾಮು:—೨ ಯಾ ೩ ಆವರ್ತಿ ಇದನ್ನು ಹಚ್ಚುವದರಿಂದ ಎಂಥ ಕಠಿಣವಾದ ಗಜಕರ್ಣ (ಹುಳಕಡ್ಡಿ) ಇದ್ದರೂ ಗುಣಹೊಂದುವದು. ಕ್ರಯ ೧ ಡಬ್ಬಿಗೆ ೮ ಆಣೆ. ವಿ. ಪಿ. ಚಾರ್ಜು ಆಣೆ ೪.

ಶತಮೂಲಿಕಾ ತೈಲವು.—ಹಳೇಬೊಕ್ಕೆ ಹಳೇಕಜ್ಜಿ ತುರಿಗಜ್ಜಿ ಹುಣಗಜ್ಜಿ ಮುಂತಾದ ಆಬಾಲವೃದ್ಧರ ಚರ್ಮವ್ಯಾಧಿಯೂ ಗುಣಹೊಂದುವದು. ಕ್ರಯ ೧ ಔನ್ಸಿನ ಕುಪ್ಪಿಗೆ ೧೦ ಆಣೆ; ೨ ಔನ್ಸಿನ ಕುಪ್ಪಿಗೆ ೧ ರೂಪಾಯಿ. ವಿ ಪಿ. ೫ ಆಣೆ.

ವಾಯುಹಾರಕ ತೈಲವು:—ಇದನ್ನು ಲೇಪಿಸಿದ ೫ ನಿಮಿಷದೊಳಗೆ ಸಂಧಿ ವಾತ, ಕಟಿವಾತ, ವ ಇತರ ವಾಯುಗಳ ನೋವು, ತಲೆನೋವು, ಚಿಕ್ಕಹುಡುಗರ ಉಬ್ಬಸ, ಕೆಮ್ಮು ಕೂಡ ಗುಣಹೊಂದುವದು. ಕ್ರಯ ೧ ಕುಪ್ಪಿಗೆ ೧ ರೂಪಾಯಿ. ವಿ. ಪಿ. ಚಾರ್ಜು ಆಣೆ ೪.

ಜ್ವರಗಡ್ಡೆಗೆ ಸುಧಾಬಿಂದು:—ಹೊಟ್ಟೆಯೊಳಗೆ ಸೇವಿಸಲಿಕ್ಕೆ. ಕ್ರಯ ೧ ಕುಪ್ಪಿಗೆ ೧೨ ಆಣೆ. ವಿ. ಪಿ. ಚಾರ್ಜು ಆಣೆ ೪.

ಜ್ವರಗಡ್ಡೆಗೆ ಮುಲಾಮು:—ಬಾಹ್ಯಲೇಪನಕ್ಕೆ. ಕ್ರಯ ಡಬ್ಬಿ ೧ಕ್ಕೆ ೧ ರೂಪಾಯಿ. ವಿ. ಪಿ ಚಾರ್ಜು ಆಣೆ ೪.

೧ನೇ ನಂಬರ ಶೀತಜ್ವರ ರಿಪುಗಳಿಗೆ.—ಆಬಾಲವೃದ್ಧರಿಗೆ ಹುಟ್ಟುವ ಪ್ರತಿನಿತ್ಯದ ಮತ್ತು ೩ನೆ ವ ೪ನೆ ದಿವಸದ ಪಾಳಿಯಾಗಿ ಕೂಡ ಬರುವ ಶೀತಜ್ವರಕ್ಕೆ. ಕ್ರಯ ೧ ಡಬ್ಬಿಗೆ ೧ ರೂಪಾಯಿ ವಿ. ಪಿ. ಚಾರ್ಜು ಆಣೆ ೪.

೨ನೇ ನಂಬರದ ಶೀತಜ್ವರ ರಿಪುಗಳಿಗೆ:—ಮೇಲೆ ವಿವರಿಸಿದಂಥ ಶೀತಜ್ವರಗಳು ಕಾಲಾವಧಿಯಾಗಿ ಮೈಯಲ್ಲಿ ವ್ಯಾಪಿಸಿಕೊಂಡು ಹಳೆತನಕ್ಕೆ ಬಿದ್ದು ಬರುವದಾದರೆ. ಕ್ರಯ ೧ ಡಬ್ಬಿಗೆ ೧ ರೂಪಾಯಿ. ವಿ ಪಿ. ಚಾರ್ಜು ಆಣೆ ೪.

ದಂತ ಶುದ್ಧಿಗೆ ಸುವಾಸಿಕ ಮಂಜನ:—ಎಲ್ಲ ಪ್ರಕಾರದ ಹಲ್ಲಿನ ವೇದನೆಗಳ ಉಪಶಮನಕ್ಕೆ. ಕ್ರಯ ೧ ಡಬ್ಬಿಗೆ ೮ ಆಣೆ ವಿ. ಪಿ. ೪ ಆಣೆ

ಪೀನಾಸ್ಯಕ್ಕೆ ಸುಧಾಚೂರ್ಣ:—ಮೂಗಿನ ಒಳಭಾಗದಲ್ಲಿ ಕ್ರಿಮಿ ಅಥವಾ ವ್ರಣವಾಗಿ ಅದರಿಂದ ದುರ್ವಾಸನೆಯೂ ರಸಿಗೆ ಅಥವಾ ನೀರಿನಂಥ ದ್ರವವು ಸ್ರವಿಸುವದಕ್ಕೆ. ಕ್ರಯ ೧ ಡಬ್ಬಿಗೆ ೧ ರೂಪಾಯಿ. ವಿ. ಪಿ. ಚಾರ್ಜು ಆಣೆ ೪

ನಯನರೋಗಕ್ಕೆ ಸುಖಾಂಜನವು:—ಹೊಸತಾಗಿ ಹುಟ್ಟಿದ ಅಥವಾ ಬಹುಕಾಲದಿಂದ ಇರುತ್ತಿದ್ದ ಕಣ್ಣಿನ ಎಲ್ಲಾ ಬಾಧೆಗಳು ಕಣ್ಣಿನಲ್ಲಿ ಕೆಂಪೇರುವಿಕೆ, ಕಣ್ಣಿನಿಂದ ನೀರು ಪಿಸರು ಬರುತ್ತಿರುವದು, ಬೆಳಕಿಗೆ ನೋಡಲಿಕ್ಕೆ ಆಗದೆ ಇರುವದು, ದೃಷ್ಟಿಮಾಂದ್ಯ, ಇತ್ಯಾದಿ ಎಲ್ಲ ಬಾಧೆಗಳೂ ಇದರಿಂದ ಬೇಗನೆ ಗುಣವಾಗುವದು. ಕ್ರಯ ೧ ಡಬ್ಬಿಗೆ ೧ ರೂಪಾಯಿ. ವಿ. ಪಿ ಚಾರ್ಜು ಆಣೆ ೪.

ಕರ್ಣಸ್ರಾವಕ್ಕೆ ವನೌಷಧಿ ತೈಲವು.—ಚಿಕ್ಕ ಮತ್ತು ಭರ್ತಿ ಪ್ರಾಯದವರ ಕಿವಿಯಿಂದ ರಕ್ತ, ಕೀವು, ಅಥವಾ ನೀರಿನಂಥ ದ್ರವ ಹೊಸತಾಗಿ ಅಥವಾ ಬಹು ಕಾಲದಿಂದ ಸ್ರವಿಸುತ್ತಿದ್ದರೆ ಹಾಗೂ ನೋವು, ಕಳತವೂ, ತುರಿಸುವಿಕೆಯೂ ಇರುತಿದ್ದರೆ ಇದರಿಂದ ಪೂರ್ಣ ಗುಣ ಹೊಂದುವದು ಕ್ರಯ ೧ ಕುಪ್ಪಿಗೆ ೧ ರೂಪಾಯಿ ವಿ. ಪಿ ೪.

ಚಿಕ್ಕ ಮಕ್ಕಳ ಮೈ ಪುಷ್ಟಿಗೆ ಬಾಲಸುಧಾರಸ:—ಚಿಕ್ಕ ಹುಡುಗರ ಅಶಕ್ತಿ, ಕುಡಿದ ಹಾಲಿನ ಅಥವಾ ಆಹಾರದ ವಾಂತಿ, ಅತಿಸಾರ, ಅನೇಕಾವರ್ತಿ ಮಲ ವಿಸರ್ಜನೆ, ಅಸ್ಥಿಗತಜ್ವರ, ಕೆಮ್ಮು ಇತ್ಯಾದಿ ಅನೇಕ ಉಪಟಳಿಗಳು ಗುಣವಾಗಿ ಮೈಯಲ್ಲಿ ರಕ್ತ ಮಾಂಸ ಅಸ್ತಿ ಇವುಗಳು ಬಲವಾಗಿ ಬೆಳೆದು ಚನ್ನಾಗಿ ಪುಷ್ಟಿಯಾಗುತ್ತಾರೆ. ಕ್ರಯ ೧ ಕುಪ್ಪಿಗೆ ೧ ರೂಪಾಯಿ. ವಿ. ಪಿ ಚಾರ್ಜು ಆಣೆ ೬.

ಸಕ್ಕರೆ ಪಾಕಕಫಕ್ಷಯ ವ ಕೆಮ್ಮು ಮುಂತಾದವುಗಳಿಗೆ:—ಶ್ವಾಸ ಕೋಶದ ಎಲ್ಲಾ ಉಪಟಳಿಗಳು ಅಂದರೆ ಹೊಸ ಮತ್ತು ಹಳೆ ತರ ಕೆಮ್ಮುಗಳು ನೆಗಡಿ ಉಬ್ಬಸ ಕಫ ಕ್ಷಯ ಅಸ್ತಿಜ್ವರ ಅಶಕ್ತಿ ಕ್ಷಯವ್ಯಾಧಿಯಲ್ಲಿ ಹುಟ್ಟುವ ಬೆವರು ಇತ್ಯಾದಿ ಬೇಗನೆ ಗುಣಹೊಂದುವದು. ಕ್ರಯ ೧ ಕುಪ್ಪಿಗೆ ರೂ. ೧—೪ ಆ ವಿ ಪಿ ಚಾರ್ಜು ಆಣೆ ೯.

ನಯನ ಸುಖಕ್ಕೆ ಸೌವೀರಾಂಜನವು (ಕಪ್ಪು ಸುರ್ಮ)—ಬಿಸಲಲ್ಲಿ ತಿರುಗಾಟ ಮಾಡುವದರಿಂದ ಬೆಂಕಿಯ ಕಳೆಯಲ್ಲಿ ಕೂಡುವದರಿಂದ ರಾತ್ರಿಯಲ್ಲಿ ಜಾಗ್ರಣ ಮಾಡುವದರಿಂದ ಅಥವಾ ಹೆಚ್ಚು ಕಾಲ ಓದುವದರಿಂದ ಸಹಾ ಉಂಟಾಗುವ ಕಣ್ಣಿನ ಬಾಧೆಯು ಕೆಂಪೇರುವಿಕೆ ಉರಿ ನವೆ ಮುಂತಾದವು ಗುಣಹೊಂದಿ ಕಣ್ಣಿಗೆ ಸುಖವು ಪ್ರಾಪ್ತವಾಗುತ್ತದೆ ಕ್ರಯ ೧ ಡಬ್ಬಿಗೆ ೮ ಆಣೆ. ವಿ. ಪಿ. ಚಾರ್ಜು ಡಬ್ಬಿ ೧ ರಿಂದ ೧೨ ಡಬ್ಬಿಗೆ ೪ ಆಣೆ.

ವಾಂತಿಭೇದಿಗೆ ಮತ್ತು ಅತಿಸಾರಕ್ಕೆ ಕ್ಲೋರೋಡಾಯಿನ್:—ಈ ಉಪದ್ರಗಳಿಗೆ ಇದು ದಿವ್ಯ ಔಷಧವಾಗಿದೆ. ವಿಶ್ವಾಸವುಳ್ಳ ಒಂದು ಕಂಪನಿಯಿಂದ ಇದನ್ನು ನಾವು ಸಂಗ್ರಹಿಸುತ್ತೇವೆ. ಕ್ರಯ ೧ ಕುಪ್ಪಿಗೆ ೧೨ ಆಣೆ ವಿ. ಪಿ ಚಾರ್ಜು ಆಣೆ ೪.

ಸೂಚನೆ.—ನಮ್ಮ ಔಷಧಗಳೊಳಗೆ ಅಪಾಯಕರವಾದ ಯಾವ ಜಿನಸಿನ ಮಿಶ್ರಣವೂ ಮಾಡಿಲ್ಲ. ಪ್ರತಿ ಒಂದು ಔಷಧಿಗೆ ಜೊತೆಯಲ್ಲಿ ಛಾಪಿಸಿದ ಅನುಪಾನ ಪತ್ರವನ್ನು ಕಳುಹಿಸುತ್ತಿರುತ್ತೇವೆ. ಇನ್ನೂ ಅನೇಕ ಉತ್ತಮವಾದ ಔಷಧಗಳಿಗಾಗಿ ನಮ್ಮ ಕ್ಯಾಟ್ಲಾಗು ತರಿಸಿಕೊಂಡು ಓದಿನೋಡಿ.

ನಮ್ಮ ಅಡ್ರೆಸು:—ಕರ್ನಾಟಕ ರಾಜ ವೈದ್ಯ ಮತ್ತು ಕಂಪನಿ, ಪೋಸ್ಟ್ ಬಿಳಗಿ, ಉತ್ತರಕನ್ನಡಾ ಜಿಲ್ಲಾ.

Post Bilgi. North Kanara District.

CHAMBERLAIN'S COUGH REMEDY.

ಚೇಂಬರ್ಲೇನ್ ಯವರು ಕಂಡು ಹಿಡಿದ ಕೆಮ್ಮಿನ ಔಷಧವು.



೪-೨

ಶೀತದ ಕೆಮ್ಮು, ಗಂಟ್ಲು ಗಾರೆಸುವುದು, ಉರಿಗೆಮ್ಮು, ನಾಯಿಗೆಮ್ಮು, ಎಲ್ಲಾ ತರದ ಕೀಲ, ಗಂಟ್ಲು ಎದೆಯಲ್ಲೂ ಹುಟ್ಟುವ ಸಮಸ್ತ ವ್ಯಾಧಿಗಳು—ಇವಕ್ಕೆಲ್ಲಾ ಈ ಔಷಧವು ಬಾಣಪ್ರಾಯವಾಗಿದೆ.

ಆ ಕೆಮ್ಮನ್ನು ಅಲಕ್ಷ್ಯಮಾಡಬೇಡಿ. ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ. ಅದು ನ್ಯೂಮೋನಿಯಾ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವುದು. ತರುವಾಯ ಉಗುಳಿನಲ್ಲಿ ರಕ್ತಬೀಳು ಹಾಗೆಯೇ ಕ್ಷಯರೋಗಕ್ಕೆ ಆಸ್ಪದವಾಗುವುದು.

ಚೇಂಬರ್ಲೇನರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟ್ಲಿನಲ್ಲಿ ಶ್ಲೇಷ್ಮ ಕಟ್ಟುವುದನ್ನೂ ಶ್ಲೇಷ್ಮ ವುದನ್ನೂ ಖಂಡಿತವಾಗಿ ನಿವಾರಣೆಮಾಡುತ್ತದೆ. ಉಸುರು ಹೊಯ್ಯುವುದು ಕಷ್ಟವಾಗಿದ್ದರೆ ಅದನ್ನು ಹರಿಸುತ್ತದೆ. ಅಪಾಯಕರವಾದ ಕೆಮ್ಮಿನ ಕಟ್ಟನ್ನು ವಿಲ್ಲಿಸಿಬಿಡುತ್ತದೆ. ಎದೆ ಒಣಗುವಂಥಾ ಸಂಪೂರ್ಣವಾಗಿ ವಾಸಿಮಾಡಬಲ್ಲದು. ಕೆಮ್ಮನ್ನು ಶಮನಮಾಡಿ, ನೀವು ಸುಖವಾಗಿ ನಿದ್ರೆಮಾಡುವಂತೆ ಉಲ್ಲಾಸಕೊಡುತ್ತದೆ.

ಚೇಂಬರ್ಲೇನರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇ

ಈ ಔಷಧವು ವನಸ್ಪತಿಗಳ ತಯಾರಿ.

ಕೈಯಿಂದಮುಟ್ಟದೆ ತಯಾರಾಗಿದೆ.

ಎಲ್ಲೆಲ್ಲೂ ಬಿಕರಿಯಾಗುವುದು. ಸಣ್ಣ ಸೀಸೆಗೆ ೧ ರೂಪಾಯಿ. ದೊಡ್ಡ ಸೀಸೆಗೆ ೨ ರೂಪಾಯಿ.

೧೯೦೭ ನೇ ಲೋವರ್ ಸೆಕಂಡರಿ ಕನ್ನಡ ನೋಟ್ಸ್.

೩-೨

ಹಿಂದಿನ ವರುಷದಂತೆ ನಮ್ಮ 'ಎಗ್ಸಾಮಿನರ್' ಮಾಸಪುಸ್ತಕಕ್ಕೆ ಚಂದಾದಾರರಾಗತಕ್ಕವರಿಗೆ ಈ ನೋಟ್ಸು ಬೆಲೆಯಿಲ್ಲದೆ ಬಹುಮಾನವಾಗಿ ದೊರೆಯುತ್ತದೆ. ಹೆಚ್ಚಿನ ಸಂಗತಿಗಳಿಗಾಗಿ ನಮ್ಮ ಪ್ರಕಟನ ಪತ್ರಿಕೆಯನ್ನು ಅವಶ್ಯ ತರಿಸಿ ನೋಡಿ.

ವಿಳಾಸ:-ಮ್ಯಾನೇಜರ್, ದಿ ಎಗ್ಸಾಮಿನರ್ ಆಫೀಸ್; ಚಿಕ್ಕಬಳ್ಳಾಪುರ

ಹೊಸ ನಮೂನೆ ಬಹು ಬಾಳಿಕೆ ಕ್ರಯ ಕಡಮೆ.

೨-೨

ರಬ್ಬರ್ ಸೀಲ್‌ಗಿಂತ ಬಾಳಿಕೆ ಬರುವ ಹಿತ್ತಾಳೆ ತಾಂಬ್ರ ಮತ್ತು ಬೆಳ್ಳಿಯಿಂದ ಸ್ಟೀಲ್‌ಗಳು ಹಿಡಿಸಮೇತ ತಯಾರಿಸಲ್ಪಡುತ್ತೆ. ಕ್ರಯ ಹಿತ್ತಾಳೆ ತಾಂಬ್ರ ರೂ. ೧-೭-೦ ಬೆಳ್ಳಿ ರೂ. ೩-೬-೦ ಪೋಸ್ಟೇಜು ಸಮೇತ ಹಣ ಮುಂಗಡ ಕಳುಹಿಸಿ. ಇಂಗ್ಲಿಷ್ ಕನ್ನಡ ಬಾಳಬಂದು ಕೆನಗು ನಮೂನೆ ಯಾವ ತರಹಾ ಬೇಕು ತಿಳುಹಿಸಿ ನಮ್ಮ ವಿಳಾಸ

ಕೆ. ವಿ. ಸಿ. ಅಂಡ್ ಕೋ, ಎ ಫನಿಯಾಚಾರ್ ಸೀಲ್ ಮೇಕರ್,

ಬೆಲಗೂರು ಕಡೂರ್ ಡಿಸ್ಟ್ರಿಕ್ಟ್.

ವೃತ್ತಾಂತ ಪತ್ರಿಕೆಯ ಪಂಚಾಂಗವು.

ಸಿದ್ಧವಾಗಿದೆ. ಕ್ರಯ ಒಂದಾಣೆ.

೧೯೦೭ನೆ ವರ್ಷದ ಕ್ಯಾಲೆಂಡರು. ದೊಡ್ಡ ಸೈಜು. ಇದರಲ್ಲಿ ನಮ್ಮ ಮಹಾರಾಜರವರ ಉತ್ಕೃಷ್ಟವಾದ ಫೋಟೋ, ದಿವಾನರವರ ಮತ್ತು ಛೀಫ್ ಜಡ್ಜರ ಫೋಟೋಗಳು ಬಹಳ ಸೊಗಸಾಗಿವೆ. ಇದುವರೆಗೆ ಇಂಥಾ ಚಿತ್ರಗಳು ಕ್ಯಾಲೆಂಡರಲ್ಲಿ ಯಾರೂ ನೋಡಿರಲಾರರು.

ಚಂದಾದಾರರಿಗೆ ಸೂಚನೆ—ಇದೇ ಜನವರಿ ಆಖೈರಿನೊಳಗಾಗಿ "ವೃತ್ತಾಂತ ಪತ್ರಿಕೆ"ಗೆ ಒಂದು ವರುಷದ ಚಂದಾ ಅಡ್ವಾನ್ಸು ಕಟ್ಟತಕ್ಕವರಿಗೆಲ್ಲಾ ಒಂದೊಂದು ಕ್ಯಾಲೆಂಡರನ್ನು ಪುಗಸಟ್ಟೆ ಕೊಡುವೆವು. ಅನಂತರ ಖಂಡಿತವಾಗಿ ಸಿಕ್ಕುವುದಿಲ್ಲ.

ಎಚ್ಚರಿಕೆ—ಬಹಳ ಕೊಂಚ ಪ್ರತಿಗಳನ್ನು ಮಾತ್ರ ಪ್ರಿಂಟು ಮಾಡಿದೇವೆ. ಕೂಡ್ಲೆ ಚಂದಾಸಹಿತ ಬರಿಯಿರಿ. ವಿಳಾಸ:—

ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ವೃತ್ತಾಂತ ಪತ್ರಿಕೆ.

—:೦:—

ಸಃ ೧೯೦೭ ನೇ ಇಸವಿ ಜನವರಿ ತಾ॥ ೧೦ನೇ ಗುರುವಾರ.

ಅಫಘಾನಿಸ್ಥಾನದ ಅಮೀರರು ಬಂದದ್ದು.

ಅಫಘಾನಿಸ್ಥಾನದ ಅಮೀರ್ ಹಬೀಬುಲ್ಲಾಖಾನರವರು ಪರಿವಾರ ಸಹಿತ ಕಳೆದ ವಾರ ಹಿಂದುಸ್ಥಾನವನ್ನು ಪ್ರವೇಶ ಮಾಡಿದರು. ಇದನ್ನು ಕೇಳಿ ಚಕ್ರವರ್ತಿ ಸಾರ್ವಭೌಮರವರೂ ವೈಸ್‌ರಾಯಿ ಪ್ರಭುಗಳೂ ಅವರಿಗೆ ಸುಸ್ವಾಗಮನವನ್ನು ಬಯಸಿರುತ್ತಾರೆ. ಅಮೀರರು ಅತಿಥಿಗಳಾಗಿ ಹಿಂದುಸ್ಥಾನದಲ್ಲಿ ಸಂಚಾರಮಾಡುತ್ತಾರಾದಕಾರಣ ಗವರ್ನಮೆಂಟಿನವರು ಅವರಿಗೆ ಎಲ್ಲಾ ಕಡೆಗಳಲ್ಲೂ ಸತ್ಕಾರ ಮಾಡಿ, ಈ ಸಂಚಾರದಿಂದ ಅವರಿಗೆ ಸುಖ ಸಂತೋಷಗಳೂ ನಾನಾ ಪ್ರಯೋಜನಗಳೂ ಉಂಟಾಗುವಂತೆ ಏರ್ಪಾಡು ಮಾಡುವುದು ಧರ್ಮವಾಗಿರುತ್ತದೆ. ಅಫಘಾನಿಸ್ಥಾನದ ಅರಸುಗಳು ಹಿಂದುಸ್ಥಾನಕ್ಕೆ ಬಂದಿರುವುದು ಬಹಳ ಅಪರೂಪವೆಂದೂ, ಪೂರ್ವಕಾಲದಿಂದಲೂ ಅಫಘಾನಿಸ್ಥಾನಕ್ಕೂ ಇಂಗ್ಲಿಷ್ ಗವರ್ನಮೆಂಟಿಗೂ ಮೂರು ನಾಲ್ಕು ವೇಳೆ ಕರಾರುಗಳು ನಡೆದಿದ್ದಾಗ್ಯೂ ಅವರವರಿಗೆ ರಾಜಕೀಯ ವಿಷಯಗಳಲ್ಲಿ ಅನುಮಾನ ಅಪನಂಬಿಕೆಗಳು ಇದ್ದವೆಂದೂ ನಾವು ಹೇಳಬೇಕಾಗಿಲ್ಲ. ಲೇಟ್ ಅಮೀರರು ೧೮೮೦ ನೇ ಇಸವಿಯಲ್ಲಿ ಇಂಗ್ಲಿಷರ ಮೂಲಕವೇ ಅಫಘಾನಿಸ್ಥಾನದ ಸಿಂಹಾಸನವನ್ನು ಸಂಪಾದಿಸಿಕೊಂಡ ಮೇಲೆ ರಷ್ಯಾ ಗವರ್ನಮೆಂಟಿನವರು ಬಂದು ಆ ಸಂಸ್ಥಾನವನ್ನು ಆಕ್ರಮಿಸಿಕೊಳ್ಳುವರೆಂಬ ಭೀತಿಯೂ ಒಳದೇಶದ ಗಲಭೆ ಹೆಚ್ಚಾದದ್ದನ್ನು ನೋಡಿ, ಇಂಗ್ಲಿಷರ ಬೆಂಬಲ ಕ್ಕಿಸಿ, ೧೮೮೫ ರಲ್ಲಿ ಒಂದಾವರ್ತಿ ರಾವಲ್‌ಪಿಂಡಿಗೆ ಬ ವೈಸ್‌ರಾಯಿ ಲಾರ್ಡ್ ಡಫ್ರೀನ್‌ಯವರ ಸಂಗಡ ಆ ಚನೆಮಾಡಿ, ಇಂಗ್ಲಿಷರ ಸಹಾಯದ ಭರವಸೆಯನ್ನು ಪ ಕೊಂಡು ಹೋದರು. ಅಂದಿನಿಂದೀಚೆಗೆ ಅನೇಕ ಪರಸ್ಪರ ಅನುಮಾನ ಅಪನಂಬಿಕೆಗಳು ಉಂಟಾದವು. ಮಾರ್ಟಿಮರ್ ಡೂರಾಂಡ್‌ರವರು ಕಾಬೂಲಿಗೆ ಹೋ ಅಮೀರರ ಸಂಗಡ ಕರಾರು ಮಾಡಿಕೊಂಡು ಬಂದ ಮೇ ೧೮೯೩ ರಲ್ಲಿ ಹಿಂದುಸ್ಥಾನದ ಆ ಸರಹದ್ದಿನಲ್ಲಿ ಗ ಯುಂಟಾದದ್ದೂ ಇಂಡಿಯಾ ಗವರ್ನಮೆಂಟಿನವರಿಗೂ ಜನರಿಗೂ ಕಲಹ ಕದನಗಳು ಪ್ರಾಪ್ತವಾದದ್ದೂ ವಾಚಕರು ಮರೆತಿರಲಾರರು. ಅಂತು ಲೇಟ್ ಅಮೀ ಒಂದಾವರ್ತಿ ಹಿಂದುಸ್ಥಾನಕ್ಕೆ ಬಂದುಹೋಗಿದ್ದರೆ ಮನಃಕಷಾಯಗಳೂ ಅಪನಂಬಿಕೆಗಳೂ ನಿವಾರ ಗುವುದಕ್ಕೆ ಮಾರ್ಗವಾಗುತ್ತಿತ್ತು. ಆದರೆ ಅವರಿಗೆ ಎ ವರ್ತಿ ಹೇಳಿಕಳುಹಿಸಿದಾಗ್ಯೂ ಅವರು ಬರಲು ಹೋ ಮನಸ್ಸುಮಾಡಲಿಲ್ಲ.

ಅವರ ಕಾಲಾನಂತರ ಈಗಿನ ಅಮೀರರನ್ನು ಕೊಂಡು ಎಲ್ಲಾ ರಾಜಕೀಯ ವಿಷಯಗಳನ್ನೂ ಇತ್ಯ ಪಡಿಸಬೇಕೆಂದು ಲಾರ್ಡ್ ಕರ್ಜನರವರು ಪ್ರಯತ್ನಪಟ್ಟ ಇದೂ ಸಾಧ್ಯವಾಗಲಿಲ್ಲ. ಆದರೆ ಅಮೀರರು ತಮ್ಮ ಯು ರಾಜರನ್ನು ಮಾತ್ರ ಹಿಂದುಸ್ಥಾನಕ್ಕೆ ಕಳುಹಿಸಿಕೊಟ್ಟ ಇಂಡಿಯಾ ಗವರ್ನಮೆಂಟಿನವರ ಪರವಾಗಿ ಸರ್ ಲೂ ಡೇನ್‌ಯವರು ಅದೇ ಸಮಯದಲ್ಲಿ ಕಾಬೂಲಿಗೆ ಹೋ ದ್ದರು. ಅಮೀರರು ಈ ರಾಯಭಾರಿಯ ಸಂಗಡ ತಮಗೂ ಇಂಗ್ಲಿಷರಿಗೂ ಇರುವ ಸಕಲ ರಾಜ ವಿಷಯಗಳನ್ನೂ ಚರ್ಚೆಯಿಂದ ಇತ್ಯರ್ಥಪಡಿಸಿ ಕರಾ ರುಜು ಹಾಕಿಬಿಟ್ಟರು. ಆ ತರುವಾಯ ಅಮೀರರು ಹಿಂ ಸ್ಥಾನವನ್ನು ಒಂದಾವರ್ತಿ ನೋಡಬೇಕೆಂದು ತಾವಾಗಿ ಆ ರಾಯಭಾರಿಯ ಕೂಡೆ ಹೇಳಿದರು. ಅವರ ಈ ಕ್ಷೆಯನ್ನು ನೆರವೇರಿಸುವುದಕ್ಕಾಗಿಯೇ ಈಗ ಗವ ಮೆಂಟಿನವರು ಏರ್ಪಾಡು ಮಾಡಿದ್ದಾರೆ.

ಅಮೀರ್ ಹಬೀಬುಲ್ಲಾಖಾನರವರಿಗೆ ಈ ರಾಷ್ಟ್ರ ಸಕಲ ಪ್ರಜೆಗಳೂ ಬಹು ಆದರಪೂರ್ವಕವಾದ ಸ ಸನ್ಮಾನಾದಿಗಳನ್ನು ಮಾಡಿ ಸಂತೋಷಪಡಿಸುತ್ತಾರೆನ್ನು ದಕ್ಕೆ ಸಂಶಯವಿಲ್ಲ. ಇಲ್ಲಿನ ಪ್ರಜಾಕೋಟಿಗಳ ನೆ ಸುಖಸಂತೋಷಗಳನ್ನೂ, ರಾಜ್ಯಭಾರದ ಅಂಗಾಂಗ ಚಕ್ಷಣೆಯನ್ನೂ, ಸೈನಿಕರ ಶಿಕ್ಷೆಯತ ಸಾಹಸ ಚತುರ ಸಾಮರ್ಥ್ಯಾದಿಗಳನ್ನೂ, ಬೊಂಬಾಯಿ ಕಲ್ಕತ್ತಾ ಮೊದಲಾದ ದೊಡ್ಡ ನಗರಗಳಲ್ಲಿ ನಡೆಯುವ ಅಪಾರ ವ್ಯಾಪಾರಾದಿಗಳನ್ನೂ, ದಿನಸಾವರಿ ಕಸಬು ಕೈಗಾರಿ ಕಾರ್ಖಾನೆಗಳನ್ನೂ, ಮಹಾ ಆಶ್ಚರ್ಯಕರಗಳಾದ ರೈ ಟೆಲಿಗ್ರಾಫ್, ನೀರಾವರಿ ಕಾಮಗಾರಿಗಳನ್ನೂ ಅಮೀ ರು ಪರಾಂಬರಿಸೋಣದರಿಂದ ಅವರ ಮನಸ್ಸೂ ಬುದ್ಧಿ ಲತೆಯೂ ಬಹಳಮಟ್ಟಿಗೆ ವಿಕಸಿತವಾಗಿ, ಪರಿಣಾಮ ಅಫಘಾನಿಸ್ಥಾನಕ್ಕೂ ಇಂಡಿಯಾ ಗವರ್ನಮೆಂಟಿಗೂ ಕ್ಷ್ಯವಾದ ಸಂಬಂಧಗಳೂ ಪ್ರೀತಿವಾತ್ಸಲ್ಯಗಳೂ ತ್ತವೆಂದು ಧಾರಾಳವಾಗಿ ನಿರೀಕ್ಷಿಸಬಹುದಾಗಿದೆ.

ಮನಸ್ಸು ಆಜ್ಞಾಪಿಸುವುದನ್ನು ಆ ಮನಸ್ಸು ವಿಧೇಯಿಸಿ ನಡೆಯದೆ ಇರುವುದಕ್ಕೆ ಕಾರಣವೇನೆಂಬುದು

[ಪುರಾತನಕಾಲದ ಒಬ್ಬ ಭಕ್ತನ ಅನುಭವವು]

ಯಾವುದು ಅತ್ಯಂತಾವಶ್ಯಕವಾಗಿ ಮಾಡಬೇಕಾದುದೆಂದು ಮನಸ್ಸು ಬಯಸಿತೋ ಆ ಕಾರ್ಯವನ್ನು ಮಾತ್ರ ಮಾಡದೆ ಇದ್ದೆನು ... ಗೊಳ್ಳುವ ಶಕ್ತಿಯು ಯಾವದೋ ಅದುವೇ ಆ ಚಿತ್ತಕ್ಕೆ ವಿಧೇಯವಾಗಿ ನಡೆಯತಕ್ಕ ಶಕ್ತಿಯಾಗಿದ್ದಿತು ಆದರೂ ಅದನ್ನು ಮಾಡದವನಾಗಿದ್ದೆನು ನನ್ನ ಅಂತರಾತ್ಮವು ಯಾವದನ್ನು ಮಾಡಬೇಕೆಂದು ಇಚ್ಛೈಸಿತೋ ಅದೆಷ್ಟು ಸ್ವಲ್ಪ ಕಾರ್ಯವಾದರೂ ಅದನ್ನು ನೆರವೇರಿಸುವುದಕ್ಕೆ ಈ ದೇಹವು ಎಷ್ಟೋ ತವಕ ಪಡುತ್ತಿದ್ದಿತು, ಆದರೆ ಆತ್ಮವು ತನ್ನಲ್ಲಿ ಮಾಡಿಕೊಂಡಿದ್ದ ಉದ್ದೇಶವನ್ನು ನೆರವೇರಿಸಿಕೊಳ್ಳಲು ಯಾವ ದೃಢಚಿತ್ತವು ಬೇಕಾಗಿದ್ದಿತೋ ಅದುವೇ ಕೊರತೆಯಾಗಿದ್ದಿತು

ಈ ವಿಪರೀತವಾದ ಅವ್ಯವಸ್ಥೆಯು ಎಲ್ಲಿಂದ ಹೇಗೆ ಉಂಟಾಯಿತು ... ಕರುಣಾನಿಧಿಯೇ, ನೀನು ಮನುಷ್ಯರಿಗೆ ಅಳೆದುಕೊಡುವಂಥ ... ನೆಯೋ ನನ್ನ ಅಂಧಕಾರ ಸ್ಥಿತಿಯಾಗಿದೆ ನೀನು ನರಸಂತಾನಕ್ಕೆ ... ಪಶ್ಚಾತ್ತಾಪ ಸ್ಥಿತಿಯೋ ನನಗೆ ಸಮರಾತ್ರಿಯ ಗಾಢಾಂಧವು ಇಂತಿರುವ ನಾನು ಈ ಅವ್ಯವಸ್ಥೆಗೇನು ಕಾರಣವೆಂದು ವಿಚಾರಿಸುವಲ್ಲಿ ನನಗೆ ಸದುತ್ತರವು ದೊರಕುವಂತೆ ನಿನ್ನ ಕರುಣೆಯು ... ನ ಹಾಗೆ ಪ್ರಕಾಶಿಸಿ ಕಾಂತಿಯನ್ನು ಕೊಡಲಿ ! ಮನಸ್ಸು ದೇಹದ ಮೇಲೆ ಅಧಿಕಾರವನ್ನು ನಡಸುವಾಗ ಆ ದೇಹವು ಆ ಕ್ಷಣವೇ ವಿಧೇಯಿಸಿ ನಡೆಯುತ್ತದೆ ಮನಸ್ಸು ಮನಸ್ಸಿಗೇ ಅಪ್ಪಣೆಯನ್ನು ಕೊಡಲಾಗಿ ಆ ಅಪ್ಪಣೆಯ ಪ್ರಕಾರ ನಡೆಯುವುದನ್ನು ಬಿಟ್ಟು ತಿರುಗ ಬೀಳುತ್ತದೆ. ಕೈ ಚಲಿಸಬೇಕೆಂಬುದಾಗಿ ಮನಸ್ಸು ಅಪ್ಪಣೆಯನ್ನು ಕೊಡುವ ಕ್ಷಣಮಾತ್ರವೂ ತಡೆಯಿಲ್ಲದೆ ಕೈ ಅಲ್ಲಾಡುತ್ತದೆ ಅಪ್ಪಣೆ ಕೊಡುವ ಕಾಲಕ್ಕೂ ಅದರಂತೆ ನಡೆಯುವ ಕಾಲಕ್ಕೂ ಅಂತರವೇ ಇಲ್ಲದಷ್ಟು ಬೇಗನೆ ಮನಸ್ಸಿನ ಅಪ್ಪಣೆಯು ದೇಹದ ಅವಯವಗಳಿಂದ ನಡೆಸಲ್ಪಡುತ್ತದೆ ಈ ಸಂದರ್ಭದಲ್ಲಿ ಅಪ್ಪಣೆ ಕೊಡುವಂಥದು ಮನಸ್ಸು, ಆ ಅಪ್ಪಣೆಯ ಪ್ರಕಾರ ನಡೆದುಕೊಳ್ಳುವಂಥದು ದೇಹವು ... ಮಧ್ಯಾಂತರ ನಡೆಯತಕ್ಕ ಕಾರ್ಯಕ್ಕೆ ಮನಸ್ಸು ಅಪ್ಪಣೆಯನ್ನು ಕೊಡಲು ದೇಹವು ಅಪ್ಪಣೆಗನುಸಾರವಾಗಿ ನಡೆದುಕೊಳ್ಳುವ ಸ್ವಭಾವವೆನ್ನಬಹುದು ಮನಸ್ಸಿನಿಂದಲೆ ನಡೆಯತಕ್ಕಂಥ ಒಂದು ಕಾರ್ಯವನ್ನು ಮಾಡು ಎಂಬ ಚಿತ್ತವುಂಟಾಗಲಿ ಎಂದು ಆ ಮನಸ್ಸೇ ಅಪ್ಪಣೆಯನ್ನು ಕೊಟ್ಟಲ್ಲಿ ಅದು ಕಿವಿಗೊಡದೆ ಹೋಗುತ್ತದೆ ಚಿತ್ತವಾಗಲಿ ಎಂದು ಮನಸ್ಸು ಅಪ್ಪಣೆಯನ್ನು ಕೊಡುತ್ತದೆ ಎಂಬುದಾಗಿ ಹೇಳಿದೆನಲ್ಲ ಇದರಲ್ಲಿ ಆಶ್ಚರ್ಯವೇನೂ ಇಲ್ಲ ಚಿತ್ತಗೊಳ್ಳದೆ ಹೋದರೆ ಆ ಅಪ್ಪಣೆಯು ಹುಟ್ಟುತ್ತಲೆ ಇರಲಿಲ್ಲ ಆದುದರಿಂದ ಚಿತ್ತವಾಗಲಿ ಎಂದು ಮನಸ್ಸು ಕೊಡುವ ಅಪ್ಪಣೆಯೂ ಅದರ ಪ್ರಕಾರವಾಗಿ ನಡೆಯುವ ಆ ಚಿತ್ತವೂ ಒಂದೇ ಹೊರತು ಬೇರೆ ಬೇರೆಯಲ್ಲ ಹೀಗಿದ್ದರೂ ಆ ಮನಸ್ಸಿನ ಅಪ್ಪಣೆಯು ನಡೆಯುವುದೇ ಇಲ್ಲ !

ಇದು ಏತಕ್ಕೆಂದು ಕೇಳುತ್ತೀರಾ ? ಚಿತ್ತಗೊಳ್ಳುವಂಥ ಮನಸ್ಸು ಪೂರ್ಣವಾದ ಮನಸ್ಸಿನಿಂದ ಚಿತ್ತಗೊಳ್ಳುವುದಿಲ್ಲವಾದುದರಿಂದಲೇ ಹೀಗಾಗುತ್ತದೆ ಚಿತ್ತವೆಷ್ಟರಮಟ್ಟಿಗೆ ಉಂಟೋ ಅಷ್ಟರಮಟ್ಟಿಗೇನೇ ಅಪ್ಪಣೆಯೂ ಹುಟ್ಟುತ್ತದೆ ಚಿತ್ತವೆಷ್ಟರಮಟ್ಟಿಗೆ ಹುಟ್ಟುವುದಿಲ್ಲವೋ ಅಷ್ಟುಮಟ್ಟಿಗೆ ಅಂಥ ಚಿತ್ತದಿಂದ ಹುಟ್ಟುವ ಅಪ್ಪಣೆಯೂ ನಡೆಯುವುದಿಲ್ಲ ಸಂಪೂರ್ಣವಾದ ಮನಸ್ಸಿನಿಂದ ಕೊಟ್ಟರಲ್ಲವೇ ಯಾವ ಕಾರ್ಯವಾದರೂ ನಡೆಯುವುದು ? ಪೂರ್ಣಮನಸ್ಸಿನಿಂದ ಅಪ್ಪಣೆ ಕೊಡದೆ ಹೋದರೆ ಅದು ಅಪ್ಪಣೆ ಕೊಡುವಂಥದು ಬೇರೆಯಾಯಿತು ಈ ಪ್ರಕಾರ ಈ ಚಿತ್ತಗೊಳ್ಳುವಿಕೆಯೂ ಚಿತ್ತಗೊಳ್ಳದೆ ಇರುವಿಕೆಯೂ ... ವಾದ ಅವ್ಯವಸ್ಥೆಯೆಂದು ನಾನು ಹೇಳಿದುದು ಮನಸ್ಸಿನ ... ಉಚಿತವಾದ ಅವಸ್ಥೆಯೇ ಹೊರತು ಬೇರೆ ಯಾವದೂ ಅಲ್ಲ ಮನಸ್ಸು ದುಷ್ಟಪದ್ಧತಿಯಿಂದ ಪೀಡಿಸಲ್ಪಟ್ಟುದಾಗಿರುವ ಕಾರಣ ... ದ ಮೂಲಕ ಸ್ವಸ್ಥತೆಯನ್ನು ಹೊಂದಿ ಮೇಲಕ್ಕೇಳುವುದನ್ನು ... ನೆಲಹತ್ತಿ ಬಿದ್ದಿರುತ್ತನೆ ನನ್ನ ದೇವರಾದ ಸ್ವಾಮಿಯನ್ನು ... ಸಬೇಕೆಂದು ಬಹುಕಾಲದಿಂದ ಉದ್ದೇಶಿಸಿದ್ದ ಪ್ರಕಾರವಾಗಿ ನಾನು ... ಆ ಕ್ಷಣವೇ ತೀರ್ಮಾನಿಸಲಿಲ್ಲ ? ಹಾಗೆ ಮಾಡುವುದಕ್ಕೆ ಚಿತ್ತಗೊಂಡವನಾರು ? ಹಾಗೆ ಚಿತ್ತಗೊಳ್ಳಲಾರದಿದ್ದವನು ಯಾರು ? ನಾನೇ ಹೊರತು ಬೇರೆ ಯಾರು ? ನಾನೇ ಸಂಪೂರ್ಣ ಮನಸ್ಸಿನಿಂದ ಚಿತ್ತಗೊಂಡವನಾಗಲಿ ... ಗೊಳ್ಳದೆ ಇರಲಿಲ್ಲ ಈ ರೀತಿಯಲ್ಲಿ ನನ್ನೊಳಗೆ ನಾನೆ ಕದನವನ್ನು ಮಾಡಿಕೊಂಡಿದ್ದೆನು ನನ್ನನ್ನು ನಾನೇ ಇತ್ತಕಡೆಗೂ ಅತ್ತ ಕಡೆಗೂ ... ಎಳೆಯುತ್ತಿದ್ದೆನು ಈ ಯುದ್ಧವಾದರೋ ನನ್ನ ಚಿತ್ತಕ್ಕೆ ವಿರೋಧವಾಗಿಯೇ ನಡೆಯುವಂಥದ್ದಾಗಿದ್ದಿತು, ಆದರೂ ನನ್ನಲ್ಲಿ ಒಂದು ಮನಸ್ಸೇ ಹೊರತು ಎರಡು ಮನಸ್ಸುಗಳು ಇದ್ದುವೆಂದು ಹೇಳಲಾರೆನು ... ಆ ಉತ್ತಮವಾದುದನ್ನು ಮೆಚ್ಚಿ ನಡೆದುಕೋ ಎಂದು ಆತ್ಮನ್ನು ಪ್ರೋತ್ಸಾಹಿಸುತ್ತಿರುವಲ್ಲಿ ಪದ್ಧತಿಯೆಂಬುದು ಅದನ್ನು ವಿರ್ಬಂಧಿಸಿ ಅಹಿತವಾದುದನ್ನು ನಿರಾಕರಿಸದಂತೆ ಮಾಡುವುದಾಗಿದೆ

ಒಳದೇಶದ ವೃತ್ತಾಂತಗಳು.

ವೈಶ್ಯರ ಗುರುಗಳು ಕಳೆದ ವಾರ ಕೋಲಾರದಿಂದ ರಾಜಧಾನಿಗೆ ಬಂದು ಇಲ್ಲಿನ ವೈಶ್ಯ ಮಂಡಲಿಯವರ ಸತ್ಕಾರಾದಿಗಳನ್ನು ಸ್ವೀಕರಿಸಿ ಪ್ರಯಾಣಮಾಡಿದರು

❖❖❖❖

ತುಂಕೂರಿಂದ ಶಿವಮೊಗ್ಗಾ ರೈಲ್ ಸ್ಟೇಷನ್ ತನಕ ಸಣ್ಣ ರೈಲನ್ನು ಹಾಕಿಸಬಹುದೆಂದು ಸರ್ಕಾರದವರು ಮೆ॥ ಹಾಜಿ ಇಸ್ಮೈಲ್ ಸೇಟ ರವರಿಗೆ ಅಪ್ಪಣೆಕೊಟ್ಟಿರುತ್ತಾರೆ.

ಮೈಸೂರು ಸರ್ಕಾರದವರು ಕಂಟ್ರೋಲರ್ ಕೆಲಸಕ್ಕೆ ಸಮರ್ಥರಾದವರನ್ನು ಕಳುಹಿಸಿಕೊಡಬೇಕೆಂದು ಇಂಡಿಯಾ ಗವರ್ನಮೆಂಟಿನವರನ್ನು ಕೇಳಿರುತ್ತಾರೆಂದು ತಿಳಿಯುವುದು

❖❖❖❖

ಶಿವಸಮುದ್ರದ ವಿದ್ಯುಚ್ಛಕ್ತಿ ಕಾರ್ಖಾನೆಯ ನೌಕರನಾದ ಸಿ ಮಾರ್ಶನ್ ಎಂಬಾತನು ಒಂದು ನೀರಗವನ್ನು ಕೊಂದು, ಕೋಲಾರದಲ್ಲಿ ೫೦ ರೂಪಾಯಿ ಬಹುಮಾನ ತೆಗೆದುಕೊಂಡನು

❖❖❖❖

ಶಿವಸಮುದ್ರದ ಕಾರ್ಖಾನೆಯಲ್ಲಿ ಇನ್ನೂ ವಿದ್ಯುಚ್ಛಕ್ತಿಯನ್ನು ಹೆಚ್ಚಾಗಿ ಉತ್ಪತ್ತಿಮಾಡಬೇಕೆಂದು ಗವರ್ನಮೆಂಟಿನವರು ರೂಪಾಯಿ ೧೭,೫೦,೦೦೦ ನ್ನು ಸ್ಯಾಂಕ್ಷನ್‌ಮಾಡಿ, ಚಾಲ್ತಿ ವರುಷದಲ್ಲಿ ೩,೫೬,೦೦೦ ರೂಪಾಯಿನ ಕಾಮಗಾರಿ ನಡಿಯಬೇಕೆಂದು ಹುಕುಂ ಕೊಟ್ಟಿದಾರೆ

❖❖❖❖

ಮೈಸೂರು ಸಂಸ್ಥಾನದ ಬ್ರಿಟಿಷ್ ರೆಸಿಡೆಂಟರಾದ ಮೆ॥ ಎಸ್ ಎಂ. ಫ್ರೇಜರ್‌ಯವರು ವೈಸ್‌ರಾಯಿ ಪ್ರಭುಗಳ ಅಪೇಕ್ಷೆಯ ಪ್ರಕಾರ ಅಮೀರರ ದರ್ಬಾರಿಗೆ ಆಗ್ರಾ ಪಟ್ಟಣದ ಕ್ಯಾಂಪಿಗೆ ಕಲ್ಕತ್ತೆಯಿಂದ ಹೋಗುವಾದ್ದರಿಂದ ಅವರು ಈ ತಿಂಗಳ ಕಡೇ ವಾರದಲ್ಲಿ ಬೆಂಗಳೂರಿಗೆ ಬರಬಹುದೆಂದು ಕಾಣುವುದು

❖❖❖❖

ಕಾಶಿ ಪಟ್ಟಣದ ಮಂಡಲೇಶ್ವರರಾದ ಪರಮಾತ್ಮಾನಂದಜಿ ಎಂಬ ಪರಮಹಂಸರವರು ನೆನ್ನೆ ಮಧ್ಯಾಹ್ನ ರಾಜಧಾನಿಗೆ ಬಂದರು ಇಲ್ಲಿನ ಹಲವು ಪ್ರಜೆಗಳು ಅವರನ್ನು ಎದುರುಗೊಂಡು, ಸತ್ಕರಿಸುತ್ತಿದ್ದಾರೆ ಪರಮಹಂಸರವರು ನಾಳೆನಾಡಿದ್ದರಲ್ಲಿ ಇಲ್ಲಿಂದ ದಕ್ಷಿಣ ದೇಶದ ಕಡೆ ಪ್ರಯಾಣಮಾಡುವರೆಂದು ಕೇಳುತ್ತೇವೆ

❖❖❖❖

ಉಡುಪಿಯ ಪೇಜಾವರ ಮಠದ ಸ್ವಾಮಿಗಳು ಕಳೆದ ಎರಡು ತಿಂಗಳಿಂದ ಬೆಂಗಳೂರಿನಲ್ಲಿದ್ದು, ಚೀಫ್ ಕೋರ್ಟ್ ಜಡ್ಜ್ ಮೆ॥ ಕೃಷ್ಣರಾಯರೇ ಮೊದಲಾದ ಶಿಷ್ಯವರ್ಗದವರಿಂದ ಸತ್ಕಾರ ಕಾಣಿಕೆ ಕಪ್ಪಗಳನ್ನು ಹೊಂದಿ, ಮೊನ್ನೆ ಭಾನುವಾರ ಬೆಳಿಗ್ಗೆ ಅಲ್ಲಿಂದ ರಾಜಧಾನಿಯನ್ನು ಕುರಿತು ಪ್ರಯಾಣಮಾಡಿರುತ್ತಾರೆ

❖❖❖❖

ಮೆ॥ ವಿ ಪಿ ಮಾಧವರಾವ್, ಸಿ ಐ ಇ, ಯವರು ಅನಂತಶಯನ ಸಂಸ್ಥಾನದಲ್ಲಿ ದಿವಾನಗಿರಿ ಮಾಡಿ ಬಂದಿರುತ್ತಾರಷ್ಟೆ ಅಲ್ಲಿ ಇವರು ಮಾಡಿಟ್ಟ ಅನೇಕ ಪ್ರಜಾರಂಜಕಗಳಾದ ರಾಜಕೀಯ ಬದಲಾವಣೆಗಳನ್ನು ಅಲ್ಲಿನ ಪ್ರಜೆಗಳು ಪರಿಗಣನೆ ಮಾಡಿ, ಆ ಸಂಸ್ಥಾನದಲ್ಲಿ ಇವರ ಹೆಸರನ್ನು ಶಾಶ್ವತಪಡಿಸುವಂಥಾ ರೂಪದಾದದೊಂದು ಕಾರ್ಯವನ್ನು ಮಾಡಬೇಕೆಂದು ಈಗತಾನೇ ಗೊತ್ತುಮಾಡಿರುತ್ತಾರೆ

❖❖❖❖

ಕಳೆದ ಭಾನುವಾರ ಸಾಯಂಕಾಲ ಬೆಂಗಳೂರು ಮನೋರಮಾ ಬಂಗಲಿಯಲ್ಲಿ ಮೆ॥ ಬಿ ಕೆ ವೆಂಕಟವರದೈಯ್ಯಂಗಾರ್ಯರು ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ ಇವರು ಮೈಸೂರು ಗವರ್ನಮೆಂಟಿನಲ್ಲಿ ಸುಮಾರು ೩೦ ವರುಷ ಸರ್ವಿಸ್ ಮಾಡಿ, ಕಳೆದ ಸೆಪ್ಟಂಬರ್ ತಿಂಗಳಿಂದ ಪೆನ್ಷನ್ ಪಡೆದು ನಿವೃತ್ತಿ ಸುಖವನ್ನು ಅನುಭವಿಸುತ್ತಿದ್ದರು ಇವರ ಚಟುವಟಿಕೆಯೂ ನಿಸ್ಪೃಹತೆಯೂ ನಿಷ್ಪಕ್ಷಪಾತತೆಯೂ ಸ್ತೋತ್ರಾರ್ಹಗಳಾಗಿದ್ದುವು ಇವರಿಗೆ ಅಂತ್ಯ ಕಾಲದಲ್ಲಿ ೫೫ ವರುಷ ತುಂಬುವುದರಲ್ಲಿತ್ತು ಇವರ ಒಬ್ಬನೇ ಕುಮಾರನು ಈಗ ರಾಜಧಾನಿಯ ಡಿಸ್ಟ್ರಿಕ್ಟ್ ಖಜಾಂಚಿ ಕೆಲಸದಲ್ಲಿದ್ದಾರೆ

❖❖❖❖

೧೯೦೪ನೇ ಇಸವಿಯ ಕ್ಯಾಲೆಂಡರುಗಳೂ ಡೈರಿಗಳೂ ನಮ್ಮಲ್ಲಿಗೆ ಬಂದಿರುತ್ತವೆ ಈ ಪೈಕಿ ಮೈಸೂರ್ ಗವರ್ನಮೆಂಟ್ ಪ್ರೆಸ್, ಮೈಸೂರು ನಾಷ್ನಲ್ ಕಂಪನಿ, ಮೈಸೂರು ಗ್ರಾಜ್ಯುಯೇಟ್ಸ್ ಟ್ರೇಡಿಂಗ್ ಅಸೋಸಿಯೇಷನ್ ಪ್ರೆಸ್, ಬೆಂಗಳೂರು ಸಿಟಿ ಚಿಕ್ಕಪೇಟೆ ಬಿ ಕೆ ಗರುಡಾಚಾರ್ರ ಸಿಟಿ ಮಾರ್ಟ್, ಮದರಾಸ್ ಪೆರುಮಾಳ್ ಚೆಟ್ಟಿಯವರು, ಮದರಾಸ್ ಒಕ್ಸ್ ಕಂಪನಿ, ಈ ಸಂಘಗಳ ವರ್ತಕರು ಕಳುಹಿಸಿರುವ ಕ್ಯಾಲೆಂಡರುಗಳೂ, ಮೈಸೂರು ನಾಷ್ನಲ್ ಕಂಪನಿ, ಕೃಷ್ಣಸಾಮಿ ಶೆಟ್ರು, ಮದರಾಸ್ ಹೋ ಕಂಪನಿ, ಈ ಸಂಘಗಳ ವರ್ತಕರ ಡೈರಿಗಳೂ ಬಹಳ ಸೊಗಸಾಗಿಯೂ ಸರ್ವರ ಪ್ರೋತ್ಸಾಹಕ್ಕೂ ಅರ್ಹವಾದವುಗಳಾಗಿಯೂ ಇರುತ್ತವೆ

❖❖❖❖

ಉತ್ತರ ದೇಶದಲ್ಲಿರುವ ರಾಜಪುತ್ರ ಮಂಡಲಿಯವರು ಈ ತಿಂಗಳು ೧೩, ೧೪, ೧೫ನೇ ತಾ ಗಳಲ್ಲಿ ಆಗ್ರಾಪಟ್ಟಣದಲ್ಲಿ ಸೇರಿ ಒಂದು ದೊಡ್ಡ ಸಮಾಜವನ್ನು ನಡಸುವವರಾಗಿದಾರೆ. ಈ ಸಮಾಜಕ್ಕೆ ಬರಬೇಕೆಂದು ಆ ಸಮಾಜದ ಮುಖಂಡರು ದಕ್ಷಿಣ ದೇಶದಲ್ಲಿನ ವಿಜಯನಗರದ ರಾಜರಿಗೂ, ಮೈಸೂರು ಡೆಪ್ಯುಟಿ ಕಮಿಷನರ್ ಮೆ॥ ಎಂ. ಕಾಂತರಾಜೆ ಅರಸಿನವರಿಗೂ, ಚೀಫ್ ಕಮ್ಯಾಂಡೆಂಟ್ ಕರ್ನಲ್ ಜೆ ದೇಶರಾಜೇ ಅರಸಿನವರಿಗೂ, ಮದರಾಸಿನಲ್ಲಿರುವ ಮೆ॥ ಫತೇಸಿಂಗ್‌ರವರಿಗೂ ಆಹ್ವಾನ ಪತ್ರಿಕೆಗಳನ್ನು ಕಳುಹಿಸಿರುತ್ತಾರೆ ಇದಲ್ಲದೆ ಈ ಮಂಡಲಿಯ ಪ್ರತಿನಿಧಿಗಳು ತಮಗಿರುವ ಕೊರತೆಗಳನ್ನು ವೈಸ್‌ರಾಯಿಯವರಲ್ಲಿ ಆಗ್ರಾಪಟ್ಟಣದಲ್ಲಿ ಅರಿಕೆಮಾಡಿಕೊಳ್ಳುವವರಾಗಿದಾರೆ

❖❖❖❖

ಕಳೆದ ಭಾನುವಾರ ಚನ್ನಪಟ್ಟಣದ ಬಳಿ ಒಂದು ಅನಾಹುತ ನಡೆದು ೬ ವರುಷದ ಒಂದು ಮಗು ಸತ್ತುಹೋಯಿತು ಬೆಂಗಳೂರು ಸೈನ್ಯದ ಕ್ಯಾಪ್ಟನ್ ವಾಕರ್ ಯವರು ಮೋಟಾರ್ ಗಾಡಿಯಲ್ಲಿ ಆ ಮಾರ್ಗವಾಗಿ ಬೆಂಗಳೂರಿಗೆ ಹೋಗುತ್ತಿದ್ದಾಗ ಆ ಮಗುವಿನ ಕಾಲಿನ ಮೇಲೆ ಗಾಡಿ ಹರಿಯಿತು ಕೂಡಲೆ ವಾಕರ್ ಯವರೂ ಇತರರೂ ಸೇರಿ ಮಗುವನ್ನು ಚನ್ನಪಟ್ಟಣದ ಮಿಷನ್ ಆಸ್ಪತ್ರೆಗೆ ಎತ್ತಿಕೊಂಡು ಹೋಗಿ ತಕ್ಕ ಚಿಕಿತ್ಸೆಗಳನ್ನು ಮಾಡಿದರು ಕ್ಯಾಪ್ಟನ್‌ರವರು ಮೋಟಾರ್ ಗಾಡಿಯಲ್ಲಿ ಕೂಡಲೇ ಬೆಂಗಳೂರಿಗೆ ಹೋಗಿ ಅಲ್ಲಿಂದ ಕ್ಯಾಪ್ಟನ್ ಫಾಸೆಟ್ ಎಂಬ ಡಾಕ್ಟರನ್ನು ಔಷಧಿಗಳ ಸಮೇತ ಚನ್ನಪಟ್ಟಣಕ್ಕೆ ಕರೆದು ತಂದು ಮಗುವಿಗೆ ಚಿಕಿತ್ಸೆಮಾಡಿಸಿದರು ಮಿಷನ್ ಆಸ್ಪತ್ರೆಯಲ್ಲಿ ಬೇರೆ ಚಿಕಿತ್ಸೆ ಮಾಡುವುದಕ್ಕೆ ಸಲಕರಣೆಗಳು ಇಲ್ಲದ್ದನ್ನು ನೋಡಿ, ಮಗುವನ್ನು ರಾತ್ರಿ ರೈಲಿನಲ್ಲಿ ಬೆಂಗಳೂರು ಆಸ್ಪತ್ರೆಗೆ ಕ್ಯಾಪ್ಟನ್‌ರವರು ಕರೆದುಕೊಂಡು ಹೋಗಿ ಅಲ್ಲಿಯೂ ಒಂದು ದಿವಸವೆಲ್ಲಾ ಏನೇನೋ ಔಷಧಾದಿಗಳನ್ನು ಹಾಕಿದರು ಆದರೂ ಮಗುವಿಗೆ ವಾಸಿಯಾಗದೆ ಮೊನ್ನೆ ಮಂಗಳವಾರ ಬೆಳಿಗ್ಗೆ ಆಸ್ಪತ್ರೆಯಲ್ಲಿ ಕಾಲವಾಯಿತು ಕ್ಯಾಪ್ಟನ್‌ರವರು ಮಗುವನ್ನು ಬದುಕಿಸಬೇಕೆಂದು ನಡಸಿದ ಪ್ರಯತ್ನವೆಲ್ಲಾ ನಿರರ್ಥಕವಾದದ್ದನ್ನು ನೋಡಿ ತುಂಬಾ ವ್ಯಸನಪಟ್ಟು, ಆ ಮಗುವಿನ ತಂದೆತಾಯಿಗಳಿಗೆ ಪ್ರತಿಫಲಕೊಡುವುದಾಗಿಯೂ ಮಾತುಕೊಟ್ಟಿದಾರೆಂದು ಕೇಳುತ್ತೇವೆ

ಮೈಸೂರು ಗೆಜೆಟ್ ಸಂಗ್ರಹ.

ಶಿವಮೊಗ್ಗಾ ಡಿಸ್ಟ್ರಿಕ್ಟ್ ಪೊಲೀಸ್ ಅ॥ ಸೂಪರಿಂಟೆಂಡೆಂಟ್ ಮೆ॥ ಬಿ ಎಸ್. ರಾಣೋಜಿರಾಯರಿಗೆ ಕೊಟ್ಟಿದ್ದ ಪ್ರಿವಿಲೆಜ್ ರಜವನ್ನು ಅವರು ಉಪಯೋಗಿಸಿಕೊಳ್ಳಲಿಲ್ಲವಾದ ಸಬಬು ರದ್ದುಮಾಡಿದೆ.

ಅ॥ ಕಮಿಷನರ್ ಮೆ॥ ಕೆ. ಚಾಂಡಿಯವರಿಗೆ ಕೊಟ್ಟಿರುವ ಒಂದು ತಿಂಗಳು ಹದಿನೈದು ದಿನಗಳ ಪ್ರಿವಿಲೆಜ್ ರಜವನ್ನು ಇನ್ನೂ ಐದು ದಿನಗಳು ಜಾಸ್ತಿ ಮಾಡಿದೆ.

ಆಕ್ಟಿಂಗ್ ಎಕ್‌ಸ್ಟ್ರಾ ಅ॥ ಕಮಿಷನರ್ ಮೆ॥ ಎಂ ಲಕ್ಷ್ಮಣಶಾಸ್ತ್ರಿಯವರಿಗೆ ಎರಡು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಸಿವಿಲ್ ಸರ್ಜನ್ ಮಿಸ್ ಆರ್ ಗೋವಿಂದರಾಜಲು ರವರನ್ನು ಕಳೆದ ಅಕ್ಟೋಬರ್ ೧೦ ರಿಂದ ೩ನೇ ಕ್ಲಾಸಿಗೆ ಬಡ್ತಿಮಾಡಿರೋಣದರಿಂದ ಅ॥ ಸರ್ಜನ್ ಮೆ॥ ಡಬ್ಲ್ಯು. ಶ್ರೀನಿವಾಸೈಯ್ಯಂಗಾರ್ಯರನ್ನು ೩ ನೇ ಕ್ಲಾಸ್ ಸಿವಿಲ್ ಸರ್ಜನರ ದರ್ಜೆಯಲ್ಲಿ ಬದಲೀ ನಡೆಯುವಂತೆ ನೇಮಿಸಲಾಗಿದೆ

ಬೆಂಗಳೂರ್ ಸಿಟಿ ಅ॥ ಕಮಿಷನರ್ ಮತ್ತು ೧ ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಮೆ॥ ಸಿ ರಾಮರಾಯರು ಬೆಂಗಳೂರು ಡಿವಿಜನ್ ಚಾರ್ಜಿನಲ್ಲಿರತಕ್ಕದ್ದು

ಬೆಂಗಳೂರಾ ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟ್ ಮೆ॥ ಜಿ. ಹ್ಯಾಂಡ್ಲೈಟ್‌ಯವರು ರಜದಿಂದ ವಾಪಸು ಬಂದ ಮೇಲೆ ಬೆಂಗಳೂರು ಸಿಟಿ ಮ್ಯಾಜಿಸ್ಟ್ರೇಟ್ ಕೋರ್ಟಿನ ಛಾರ್ಜನ್ನು ವಹಿಸತಕ್ಕದ್ದು. ಅವರಿಗೆ ೧ ನೆ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ಕೊಡಲ್ಪಟ್ಟಿದೆ.

ಮೈಸೂರು ಸ್ಟೇಟ್ ಸೈನ್ಯದ ಛೀಫ್ ಕಮ್ಯಾಂಡೆಂಟ್ ಲೆಫ್ಟಿನೆಂಟ್ ಕರ್ನಲ್ ಜೆ ದೇಶರಾಜೇ ಅರಸಿನವರು ಶ್ರೀಮನ್ ಮಹಾರಾಜರವರ ಸಂಗಡ ಸ್ಪೆಷಲ್ ಡ್ಯೂಟಿ ಮೇಲೆ ಕಳುಹಿಸಲ್ಪಟ್ಟಿರುವುದರಿಂದ ಅವರ ಪರ್ಸನಲ್ ಅಸಿಸ್ಟೆಂಟ್ ಮೆ॥ ಆರ್ ಪುಟ್ಟಣ್ಣನವರಿಗೆ ಡಿಸೆಂಬರ್ ೧೦ ರಿಂದ ಛೀಫ್ ಕಮ್ಯಾಂಡೆಂಟರ ಆಫೀಸಿನ ಚಾಲ್ತಿ ಕೆಲಸಗಳ ಛಾರ್ಜು ವಹಿಸಲ್ಪಟ್ಟಿದೆ

ಮೈಸೂರ್ ಗವರ್ನಮೆಂಟ್ ಕಂಟ್ರೋಲರ್ ರಾಯ ಎನ್. ಜಿ ಬಾಸು ಬಹದೂರ್ ಯವರು ತಮ್ಮ ಕೆಲಸದ ಛಾರ್ಜನ್ನು ಡಿಸೆಂಬರ್ ೩೦ ರಲ್ಲಿ ಅ॥ ಕಂಟ್ರೋಲರ್ ಮೆ॥ ಟಿ ನಞ್ಜರಾಜ ಚೆಟ್ಟಿಯವರಿಗೆ ವಹಿಸಿ, ಇಂಡಿಯಾ ಗವರ್ನಮೆಂಟಿನಲ್ಲಿ ಅವರಿಗಿದ್ದ ಖಾಯಂ ಕೆಲಸಕ್ಕೆ ಹೊರಟುಹೋಗಿದಾರೆ

ಬಹುಮಾನ ಪಡೆದ ವರ್ತಮಾನವು

[ಈ ಖಾತ್ರಿ ಕಳಿಸಿದ ಮ॥ ಜೋಡಿದಾರ್ ಎನ್ ಎನ್ ನಾರಣಪ್ಪ, ಸ್ಟಾಂಪ್ ವೆಂಡರ್, ಗೊಟ್ಟಿಗೆರೆ, ನೀಲಸಂದ್ರ ಪೋಸ್ಟ್, ಬೆಂಗಳೂರು ತಾಲ್ಲೂಕು, ಇವರಿಗೆ ಈ ವಾರದ ಬಹುಮಾನವನ್ನು ಕಳುಹಿಸಿದೇವೆ]

ಭಾರೀ ಹುಲಿಯನ್ನು ಕೊಂದುಹಾಕಿದ್ದು

ಬೆಂಗಳೂರು ತಾ॥ ಉತ್ತರಹಳ್ಳಿ ಹೋಬಳಿ ಗೊಟ್ಟಿಗೆರೆಯಲ್ಲಿ ಇದೇ ಮಾಹೆ ತಾ ೩ ನೇ ಭಾನುವಾರ ಪ್ರಾತಃಕಾಲಸುಮಾರು ೭ ಗಂಟೆ ಸಮಯದಲ್ಲಿ ಈ ಊರಿಗೆ ೨ ಮೈಲಿ ಫಾಸಲೆಯಲ್ಲಿರುವ ಆನೆಕಲ್ ತಾಲ್ಲೂಕು ಲೇಟ್ ನಸೋಡಿನ್ ಸಾಹೇಬರ ಜಂಗಲ್ ಶ್ಯಾನಭೋಗನಹಳ್ಳಿ ಕಾಡಿನ ಒಂದು ದೊಡ್ಡ ಹಳ್ಳದಲ್ಲಿ ಇದೇ ಊರಿನಲ್ಲಿ ರತಕ್ಕ ಒಕ್ಕಲಿಗರ ೧೯—೨೦ ವರ್ಷದ ಮುನಿಸ್ವಾಮಪ್ಪ, ಇವನ ತಂದೆ ಬೆಂಗಳೂರಪ್ಪ ಸಹಾ ಅಂದರೆ ಈಗ ಕೆಲವು ವರ್ಷಗಳಿಂದ ಅನೇಕ ಗ್ರಾಮಗಳ ದನ ಕರು ಕುರಿ ಆಡುಗಳನ್ನು ಹಿಂಸೆಪಡಿಸಿ ತಿನ್ನುತ್ತಾ ಇದುವರಿಗೆ ಪ್ರಜೆಗಳಿಗೆ ಸಾವಿರಾರು ರೂಪಾಯಿನ ದನಗಳನ್ನು ನಷ್ಟಪಡಿಸುತ್ತಾ ಇದ್ದ ಭಾರಿ ಹೆಣ್ಣು ಹುಲಿಯನ್ನು ಇಬ್ಬರೂ ತುಂಬಾ ಪ್ರಯಾಸಪಟ್ಟು ಬಂದೂಕಿನಿಂದ ಹೊಡದರು ಈ ದಿವಸ ಮಧ್ಯಾಹ್ನದ ಆಗಾಯಿತು ಸಾಯಂಕಾಲದ ವರಿಗೆ ವಾದ್ಯಗಳಿಂದ ಈ ಗೊಟ್ಟಿಗೆರೆ ಗ್ರಾಮದಲ್ಲಿ ಹುಲಿಯ ಗಾಡಿಯ ಮೇಲೆ ಮೆರವಣಿಗೆ ಆಯಿತು ಇದನ್ನು ನೋಡುವದಕ್ಕೆ ಸುಮಾರು ೧೦—೧೫ ಗ್ರಾಮದ ಜನಗಳು ಸಾವಿರಾರು ಮಂದಿ ಬಂದಿದ್ದರು. ಸಾವಿರಾರು ರೂಪಾಯಿನ ಮಾಲು ಅಂದರೆ ದನಗಳು ಕುರಿ ಆಡು ವಗೈರೆ ಕಳೆದುಕೊಂಡವರು ಈ ದುಷ್ಟ ಮೃಗವನ್ನು ಕೊಂದವರಿಗೆ ಬಹಳ ಮರ್ಯಾದೆ ಮಾಡಿ ಕೊರಳಿಗೆ ಹುಷ್ಪದ ಹಾರ ವಗೈರೆ ಹಾಕಿ ಬಹಳ ಮಟ್ಟಿಗೆ ಪ್ರೋತ್ಸಾಹ ಮಾಡಿದರು. ಅನೇಕ ಗ್ರಾಮಗಳ ಪಟೇಲ್ ಶ್ಯಾನಭೋಗರು, ಜೋಡಿದಾರ್‌ಗಳು, ಉತ್ತರಹಳ್ಳಿ ಶೇಕದಾರ್, ದಫೇದಾರ್, ಫಾರೆಸ್ಟ್ ಗಾರ್ಡುಗಳು, ಬೆಂಗಳೂರು ಮಂದಿ ಸಾಹುಕಾರರು, ಅನೇಕ ದೊಡ್ಡ ಮನುಷ್ಯರು, ಸ್ಕೂಲ್ ಮಾಸ್ಟರುಗಳು, ಕಂಟ್ರಾಕ್ಟದಾರರುಗಳು, ಮುಂತಾದವರು ಸೇರಿ ಬಹುಮಾನ ಕೊಟ್ಟಿದ್ದಲ್ಲದೆ ೬೦ ವರ್ಷ ವಯಸ್ಸುಳ್ಳ ಬೆಂಗಳೂರಪ್ಪ, ಈತನ ಮಗ ಮುನಿಶಾಮಪ್ಪ ಸಹಾ ಇದನ್ನು ಕೊಂದು ಪ್ರಜೆಗಳಿಗೆ ಹಿಂಸೆ ತಪ್ಪಿಸಿದ್ದಕ್ಕಾಗಿ ಬೆಂಗಳೂರು ಡೆಪ್ಯುಟಿ ಕಮಿಷನರ್ ಸಾಹೇಬರ ಹಜೂರು ಬರಿಕೆ ಬಗ್ಗೆ ತೆಗೆದುಕೊಂಡು ಹೋಗಬೇಕೆಂದು ತಾ ೪ ನೇ ಸೋಮವಾರ ಬಂಡೀ ಮೇಲೆ ಹಾಕಿ ರವಾನಿಸಿರುತ್ತಾರೆ ಇವರ ಧೈರ್ಯ ಸಾಮರ್ಥ್ಯಾದಿಗಳಿಗೆ ಮೆಚ್ಚಿ ಡೆಪ್ಯುಟಿ ಕಮಿಷನರ್ ಸಾಹೇಬರು ಏನು ಬಹುಮಾನ ಮಾಡುವರೋ ಮುಂದೆ ಗೊತ್ತಾಗಬೇಕು.

ಹಿಂದುಸ್ಥಾನದ ಮದ್ಯವಿಸರ್ಜನೆಯ ಕೂಟವು.

ಕಾಂಗ್ರೆಸ್ ಸಭಾ ಮಂದಿರದಲ್ಲಿ ನಡೆಯಿತು

ಹಿಂದುಸ್ಥಾನದ ೨೨ ನೆಯ ರಾಷ್ಟ್ರೀಯ ಸಮಾಜವು ಪೂರೈಸಿದ ಕೂಡಲೆ ಅಂದರೆ ಕಳೆದ ತಾ. ೨೯ ನೆ ಶನಿವಾರ ಬೆಳಗ್ಗೆ ಅದೇ ಸಭಾ ಮಂದಿರದಲ್ಲಿ ಹಿಂದುಸ್ಥಾನದ ಮದ್ಯವಿಸರ್ಜನಾ ಕೂಟವು ನಡಸಲ್ಪಟ್ಟಿತು. ಈ ಸಭೆಗೆ ಕಾಂಗ್ರೆಸ್ ಸಭಾ ಮೆಂಬರುಗಳೇ ಹಾಜರಾಗಿದ್ದರು ಈ ರಾಷ್ಟ್ರದಲ್ಲಿ ೪೦ ವರುಷಗಳಿಂದಲೂ ಮದ್ಯವಿಸರ್ಜನೆಯನ್ನು ಮಾಡಬೇಕೆಂದು ಪ್ರಜೆಗಳಿಗೆ ನಾನಾ ಪ್ರಕಾರವಾಗಿ ಬೋಧೆಮಾಡುತ್ತಾ ಬಂದು, ಈ ವರುಷದ ಸಮಾಜದಲ್ಲಿ ಪ್ರೆಸಿಡೆಂಟಾಗಿ ನಿಂತು ಕಾರ್ಯ ನಡಸಲೋಸುಗ ವಿಲಾಯತಿಯಿಂದ ಒಂದೆರಡು ದಿನಗಳ ಹಿಂದೆ ಕಲ್ಕತ್ತೆಗೆ ದಯಮಾಡಿದ್ದ ಮೆ॥ ಸಾಮ್ಯುಯಲ್ ಸ್ಮಿತ್‌ರವರು ಕಾಯಿಲೆ ಬಿದ್ದು ಸಮಾಜದ ಹಿಂದಿನ ದಿನ ಕಾಲವಾದರು ಅವರ ಅಕಾಲಮರಣವನ್ನೂ ಅವರಿಗೆ ಹಿಂದುಸ್ಥಾನದ ಮೇಲಿದ್ದ ಪ್ರೀತಿ ವಿಶ್ವಾಸಗಳನ್ನೂ ಕುರಿತು ಆ ಸಮಾಜದಲ್ಲಿ ಮೆ॥ ಗಳಾದ ಗೋಖಲೆ, ಸರ್ ಬಾಲಚಂದ್ರ ಕೃಷ್ಣ, ದಾದಾಭಾಯಿ ನೌರೋಜಿ, ಈ ಮೊದಲಾದ ದೊಡ್ಡ ಮನುಷ್ಯರು ಉಪನ್ಯಾಸಮಾಡಿ, ಅವರು ಕಾಲವಾದದ್ದರಿಂದ ಹಿಂದುಸ್ಥಾನಕ್ಕೆ ತುಂಬಾ ನಷ್ಟವಾಗಿರುತ್ತದೆಂದು ತಿಳಿಯಪಡಿಸಿ, ವಿಲಾಯತಿಯಲ್ಲಿರುವ ಅವರ ಸಂಸಾರಮಕ್ಕಳಿಗೆ ತಮ್ಮ ಸಂತಾಪವನ್ನು ಅರಿಕೆಮಾಡುವುದಾಗಿ ಗೊತ್ತುಮಾಡಿದರು

ಹಿಂದುಸ್ಥಾನಕ್ಕೆ ಪರದೇಶಗಳಿಂದ ನಾನಾತರವಾದ ಅಮಲೇರುವ ದ್ರವ್ಯಗಳು ಬಹಳವಾಗಿ ರಫ್ತಾಗಿ ಬಂದು ಈ ದೇಶದ ಎಲ್ಲಾ ಕಡೆಗಳಲ್ಲೂ ಬಿಕರಿಯಾಗೋಣದರಿಂದ ಜನರು ಮದ್ಯಪಾಯಿಗಳಾಗಿ ಕೆಡುವುದಕ್ಕೆ ಮಾರ್ಗವಾಗುತ್ತಿದೆ. ಇದು ಪ್ಲೇಗ್ ರೋಗದಂತೆ ಜನದಿಂದ ಜನಕ್ಕೂ ಊರಿಂದ ಊರಿಗೂ ಹಬ್ಬುತ್ತಾ ತುಂಬಾ ಹಾನಿಯನ್ನುಂಟುಮಾಡುವುದು. ಗವರ್ನಮೆಂಟಿನವರು ಈ ಮದ್ಯಪಾನ ವಸ್ತುಗಳು ಹಿಂದುಸ್ಥಾನಕ್ಕೆ ಬಾರದಂತೆ ತಡೆಯಬೇಕಾದದ್ದು ಅವಶ್ಯಕ. ಒಳದೇಶದಲ್ಲಿ ಅಬ್ಕಾರಿ ಇಲಾಖೆಯನ್ನು ಸರ್ಕಾರದವರು ಇಟ್ಟುಕೊಳ್ಳಕೂಡದು. ಅದರಿಂದ ಬರುವ ರಾಜಾದಾಯವು ಧರ್ಮವಾದದ್ದಲ್ಲ, ಜನರಿಗೆ ಕುಡುಕುತನವನ್ನು ಕಲಿಸುವುದಕ್ಕೂ ಅವರನ್ನು ನಾನಾರೀತಿಗಳಲ್ಲಿ ಕೆಡಿಸಿ ಹಾಳುಮಾಡುವುದಕ್ಕೂ ಈ ಇಲಾಖೆಯು ಸಹಾಯಮಾಡುವುದು ಎಂಬೀ ರೀತಿಯಾಗಿ ಅನೇಕ ಮೆಂಬರುಗಳು ಉಪನ್ಯಾಸಮಾಡಿ, ತಮ್ಮ ತೀರ್ಮಾನಗಳನ್ನು ಗವರ್ನಮೆಂಟಿಗೆ ಅರಿಕೆ ಮಾಡತಕ್ಕದ್ದೆಂದು ಗೊತ್ತುಮಾಡಿದರು. ಕಡೆಯಲ್ಲಿ ಮಿ॥ ಸುರೇಂದ್ರನಾಥಬಾನರ್ಜಿಯವರೇ ಮೊದಲಾದ ದೊಡ್ಡ ಮನುಷ್ಯರು ಉಪನ್ಯಾಸ ಮಾಡಿ ಸಭಾನಾಯಕರನ್ನು ವಂದಿಸಿ ಸಮಾಜವನ್ನು ಮುಕ್ತಾಯಕ್ಕೆ ತಂದರು

ರಾಜಧಾನಿಯಲ್ಲಿ ಸಂತೋಷಸಭೆ.

ನಮ್ಮ ಶ್ರೀಮನ್ ಮಹಾರಾಜರವರಿಗೆ ಬಿರುದುಬಂದದ್ದು.

ಹಿಂದುಸ್ಥಾನದ ವೈಸ್‌ರಾಯ ಗವರ್ನರ್ ಜನರಲ್‌ರವರಾದ ಲಾರ್ಡ್ ಮಿಂಟೋ ಪ್ರಭುಗಳು ನಮ್ಮ ಶ್ರೀಮನ್ ಮಹಾರಾಜರವರಾದ ಶ್ರೀ ಕೃಷ್ಣರಾಜ ಒಡೆಯರವರಿಗೆ ಈ ನೂತನ ವರುಷದ ಆರಂಭದಲ್ಲಿ ಮಹಾ ಶ್ರೇಷ್ಠತರವಾದ ಜಿ. ಸಿ. ಎಸ್ ಐ. ಎಂಬ ಬಿರುದನ್ನು ದಯೆಪಾಲಿಸಿದರು. ಈ ಶುಭಸಮಾಚಾರವನ್ನು ಕೇಳಿ ರಾಜಧಾನಿಯ ಪ್ರಜೆಗಳು ತುಂಬಾ ಸಂತೋಷಪಟ್ಟು, ತಮ್ಮ ಆನಂದವನ್ನೂ ರಾಜಭಕ್ತಿಯನ್ನೂ ಪ್ರಕಾಶಪಡಿಸುವುದಕ್ಕಾಗಿ ಕಳೆದ ತಾ. ೪ ನೆ ಶುಕ್ರವಾರ ಸಾಯಂಕಾಲ ಇಲ್ಲಿನ ರಂಗಾಚಾರ್ಲು ಮೆಮೋರಿಯಲ್ ಹಾಲ್ ಎಂಬ ಬಂಗಲೆಯಲ್ಲಿ ಸೇರಿ ಒಂದು ಸಭೆಯನ್ನು ನಡಿಸಿದರು ಈ ಸಭೆಯಲ್ಲಿ ರಾಜಧಾನಿಯ ಎಲ್ಲಾ ಕೋಮುಗಳ ಉದ್ಯೋಗಸ್ಥರು, ವಿದ್ಯಾವಂತರು, ದೊಡ್ಡ ಮನುಷ್ಯರು, ವರ್ತಕಮಂಡಲಿಯವರು ಹಾಜರಾಗಿದ್ದರು ಸಭಾಧ್ಯಕ್ಷತೆಯನ್ನು ವಹಿಸಿದ ಮೆ॥ ಅಂಬಳೆ ಅಣ್ಣಯ್ಯ ಪಂಡಿತರು ಸಭಾಸದರನ್ನು ಕುರಿತು—ನಮ್ಮ ಮಹಾರಾಜರವರು ಈ ಸಂಸ್ಥಾನವನ್ನು ಪ್ರಜಾರಂಜಕವಾಗಿಯೂ ಬಹು ವಿಚಕ್ಷಣೆಯಿಂದಲೂ ಆಳುತ್ತಾ ಬಂದಿರುವುದನ್ನು ಪ್ರಜೆಗಳಾದ ನಾವು ಅನುಭವಿಸಿ ಅವರನ್ನು ಕೊಂಡಾಡುತ್ತಿದ್ದೇವಷ್ಟೆ ಅವರ ಕೀರ್ತಿಯು ಹಿಂದುಸ್ಥಾನದಲ್ಲೆಲ್ಲಾ ಹರಡಿಕೊಂಡು ಇಂಡಿಯಾ ಗವರ್ನಮೆಂಟೆಂಬ ಸಾಂರಾಜ್ಯ ಪ್ರಭುಗಳ ತಿಳಿವಳಿಕೆಗೂ ಬಂದದ್ದರಿಂದ ಅವರು ನಮ್ಮ ಮಹಾರಾಜರವರಿಗೆ ಮಹಾ ಶ್ಲಾಘ್ಯತಮವಾದ ಜಿ ಸಿ ಎಸ್ ಐ ಎಂಬ ಬಿರುದನ್ನು ಈಗತಾನೇ ದಯೆಪಾಲಿಸಿ, ನಮ್ಮ ಮಹಾರಾಜರವರಲ್ಲಿ ಅವರಿಗಿರುವ ಪ್ರೀತಿ ವಿಶ್ವಾಸಗಳನ್ನು ಪ್ರಕಾಶಪಡಿಸಿರುತ್ತಾರೆ ಈ ಭಾಗದಲ್ಲಿ ಪ್ರಜೆಗಳಾದ ನಾವು ಇಂಡಿಯಾ ಗವರ್ನಮೆಂಟಿನವರಿಗೆ ತುಂಬಾ ಕೃತಜ್ಞರಾಗಿ ಭಕ್ತಿಪೂರ್ವಕವಾದ ವಂದನೆಗಳನ್ನು ಸಮರ್ಪಿಸುವೆವು ಮತ್ತು ನಮ್ಮ ಮಹಾರಾಜರವರಿಗೆ ಇಂಥಾ ಶ್ರೇಷ್ಠವಾದ ಬಿರುದು ಲಭ್ಯವಾದುದಕ್ಕಾಗಿ ನಮ್ಮ ಪರಮಾನಂದವನ್ನು ಕೂಡಲೇ ಅವರಿಗೆ ರಾಜಭಕ್ತಿ ಪ್ರೀತಿಗಳೊಡನೆ ಅರಿಕೆಮಾಡಿ ಕೃತಜ್ಞರಾಗಬೇಕೆಂದು ಈ ದಿನ ನಾವು ಸಭೆ ಸೇರಿರುತ್ತೇವೆ. ಆ ಸಂತೋಷವು ಅಪಾರವಾದದ್ದೆಂತಲೂ ಜನಜನಿತವಾದದ್ದೆಂತಲೂ ತಿಳಿಯಪಡಿಸುವುದಕ್ಕೆ ಈ ಸಭಾಮಂದಿರವು ಈಗ ತುಂಬಿ ತುಳುಕುತ್ತಿರುವುದೇ ನಿದರ್ಶನವಾಗಿರುವುದು ಎಂಬೀ ರೀತಿಯಾಗಿ ಉಪನ್ಯಾಸಮಾಡಿ ಸಭೆಯನ್ನು ಪ್ರಾರಂಭಿಸಿದರು ತರುವಾಯ ಮೌಲ್ವಿ ಜಮೇಷ್ ಖೀರ್ಖಾರವರು, ಮೌಲ್ವಿ ಸಿಕಂದರುದ್ದೀನ್ ರವರು, ಮೆ॥ ಗಾಜನೂರು ಎಂ ವೆಂಕಟಕೃಷ್ಣಯ್ಯನವರು, ಕೆ ಸಂಜೀವ ಚೆಟ್ಟಿಯವರು, ಪ್ಲೀಡರ್ ಎಂ ಮಲ್ಹಾರರಾಯರವರು, ಮೆ॥ ಗೋಮಟಂ ಶ್ರೀನಿವಾಸ ಜೋಯಿಸರವರು, ಈ ಮೊದಲಾದವರು ನಮ್ಮ ಮಹಾರಾಜರವರಿಗೆ ಲಭ್ಯವಾದ ವಿಶೇಷತಮವಾದ ಬಿರುದಿನ ವಿಷಯವಾಗಿಯೂ, ಅವರ ಚಿತ್ತಮನಸ್ಸು, ಕಾರ್ಯಸಾಧನೆ, ಪ್ರಜಾವಾತ್ಸಲ್ಯವೇ ಮೊದಲಾದ ಗುಣಕಥನವನ್ನು ಮಾಡಿ, ಈ ದಿನವೇ ಶ್ರೀಮನ್ ಮಹಾರಾಜರವರಿಗೆ ನಮ್ಮ ಆನಂದವನ್ನು ತಂತಿಯ ಮೂಲಕ ಅರಿಕೆಮಾಡಬೇಕೆಂದು ಹೇಳಿದರು. ಸಭಿಕರೆಲ್ಲಾ ಅದರಂತೆ ಏಕವಾಕ್ಯತೆಯಿಂದಲೂ ಸಂತೋಷಪೂರ್ವಕವಾಗಿಯೂ ಒಪ್ಪಿಕೊಂಡರು ಕೂಡಲೇ ಸರ್ವಸಮ್ಮತವಾದ ಮತ್ತು ರಾಜಭಕ್ತಿಪೂರಿತವಾದ ಕೆಲವು ವಾಕ್ಯಗಳನ್ನು ಇಂಗ್ಲೀಷಿನಲ್ಲಿ ಬರೆದು ಓದಿದರು. ಅದನ್ನು ಎಲ್ಲರೂ ಒಪ್ಪಿದರು ಪ್ರೆಸಿಡೆಂಟರು ಆ ವಾಕ್ಯಗಳನ್ನು ಆ ರಾತ್ರಿಯೇ ಕಲ್ಕತ್ತಾ ಪಟ್ಟಣದ ಹೇಸ್ಟಿಂಗ್ಸ್ ಹೌಸ್ ಎಂಬ ರಾಜಭವನದಲ್ಲಿ ವೈಸರಾಯರವರ ಆತಿಥ್ಯವನ್ನು ಸ್ವೀಕರಿಸುತ್ತಿರುವ ನಮ್ಮ ಶ್ರೀಮನ್ ಮಹಾರಾಜರವರಿಗೆ ಕಳುಹಿಸಿದರು.

ಕಸಬು ಕೈಗಾರಿಕೆಗಳ ಪ್ರೋತ್ಸಾಹಕ ಸಮಾಜವು.

ಮೇಲ್ಕಂಡ ಸಮಾಜದ ಎರಡನೇ ಸಭೆಯು ಕಲ್ಕತ್ತಾ ಪಟ್ಟಣದ ರಾಷ್ಟ್ರೀಯ ಸಭಾಮಂದಿರದಲ್ಲಿ ಕಳೆದ ತಾ ೩೦ ನೆ ಭಾನುವಾರವೂ ಆ ವಾರನೇ ದಿನವೂ ನಡಸಲ್ಪಟ್ಟಿತು. ಸಭಾಮಂದಿರವು ಮೆಂಬರುಗಳಿಂದಲೂ ಪ್ರೇಕ್ಷಕರಿಂದಲೂ ತುಂಬಿ ತುಳುಕುತ್ತಿತ್ತು. ಬರೋಡಾ ಸಂಸ್ಥಾನದ ಗಾಯಕವಾಡಿ ಮಹಾರಾಜರವರು ಉಪನ್ಯಾಸಪೂರ್ವಕವಾಗಿ ಸಭೆಯನ್ನು ಪ್ರಾರಂಭಿಸಿದರು. ಈ ಸಭೆಯಲ್ಲಿ ಈ ಸಂಸ್ಥಾನದ ದಿವಾನ್ ಮೆ॥ ಮಾಧವರಾಯರೂ, ರೆವಿನ್ಯೂ ಕಮಿಷನರ್ ಮೆ॥ ರಂಗಸ್ವಾಮಯ್ಯಂಗಾರರೂ ಹಾಜರಾಗಿದ್ದರು ಬರೋಡೆಯ ಮಹಾರಾಜರವರು ತಿಳಿಸಿದ ಮುಖ್ಯಾಭಿಪ್ರಾಯಗಳೇನೆಂದರೆ—ನಾನು ಪಾಶ್ಚಾತ್ಯರಾಜ್ಯಗಳಲ್ಲಿ ಸಂಚಾರಮಾಡಿಕೊಂಡು ಈಗತಾನೇ ಬಂದಿರುತ್ತೇನೆ ವಿಲಾಯತಿಯಲ್ಲೂ ಅಮೇರಿಕದಲ್ಲೂ ಕೈಗಾರಿಕೆಗಳೂ ಕಸಬುಗಳೂ ಬಹಳ ಉಚ್ಛ್ರಾಯಸ್ಥಿತಿಯಲ್ಲಿರೋಣದರಿಂದ ಆ ಪ್ರಾಂತ್ಯಗಳ ಜನಗಳು ಅಷ್ಟು ಐಶ್ವರ್ಯವಂತರಾಗಿರುತ್ತಾರೆ. ಆ ಜನರ ಅಭಿವೃದ್ಧಿಗೆ ಕಸಬುಗಳೇ ಮುಖ್ಯಕಾರಣವು. ಕಸಬನ್ನು ಬಹಳ ಘನವಾದದ್ದೆಂದು ಭಾವಿಸಿ ಅನುವರ್ತಿಸುತ್ತಾರೆ. ಈ ರಾಷ್ಟ್ರದಲ್ಲಿ ಕಸಬಿಗೆ ಸನ್ಮಾನವಿಲ್ಲ. ಜನರು ಕಸಬುಗಳನ್ನು ಬಹಳ ಅವಮಾನಕರವಾದವುಗಳೆಂದು ಹೇಳುತ್ತಾ ಅವನ್ನು ಮಾಡದೆ ಹಿಂತೆಗೆಯುವರು. ಎಲ್ಲರೂ ಸರ್ಕಾರಿ ಉದ್ಯೋಗಗಳಿಗೆ ಹತ್ತಬೇಕೆಂದು ಅಪೇಕ್ಷೆಪಡುತ್ತಾರೆ ಈ ಅಭಿಪ್ರಾಯವು ನಮ್ಮ ದೇಶದ ಜನರಲ್ಲಿ ಪ್ರಬಲವಾಗಿರುವ ತನಕ ಈ ರಾಷ್ಟ್ರವು ಐಶ್ವರ್ಯಯುಕ್ತವಾದದ್ದಾಗಲಾರದು. ನಮ್ಮ ದೇಶದ ಜನರು ಕೂಡಲೇ ಅಂಥಾ ಅಭಿಪ್ರಾಯವನ್ನು ವರ್ಜಮಾಡಿ, ಕಸಬು ಕೈಗಾರಿಕೆಗಳನ್ನು ಅವಲಂಬಿಸಬೇಕು. ನಮ್ಮ ದೇಶಕ್ಕೆ ಬೇಕಾಗುವ ಸಮಸ್ತ ಪದಾರ್ಥಗಳನ್ನೂ ಈ ದೇಶದಲ್ಲೇ ನಮ್ಮ ಜನರು ಮಾಡಿಕೊಳ್ಳಬೇಕು ಇದಾದಹೊರತು ನಾವು ಏಳಿಗೆ ಹೊಂದುವುದಕ್ಕೇ ಮಾರ್ಗವಿಲ್ಲ. ಸರ್ವತ್ರ ಎಲ್ಲಾ ಪ್ರಜೆಗಳೂ ಗಂಡಸರು ಹೆಂಗಸರು ವಿದ್ಯೆ ಕಲಿತು ಕಸಬು ಕೈಗಾರಿಕೆಗಳಲ್ಲಿ ಅನುರಕ್ತರಾಗಬೇಕು. ನಾನು ಬರೋಡಾ ಸಂಸ್ಥಾನದ ಒಂದು ಭಾಗದಲ್ಲಿ ಕೆಲವು ವರುಷಗಳಿಂದ ಬಲಾತ್ಕಾರವಾಗಿ ಮಕ್ಕಳಿಗೆ ವಿದ್ಯೆ ಕಲಿಸಬೇಕೆಂಬುದನ್ನು ಪ್ರಾರಂಭಿಸಿ ನಡಸುತ್ತಾ ಬಂದಿದ್ದೇನೆ. ಇದುವರೆಗೆ ಇದರಿಂದ ತುಂಬಾ ಪ್ರಯೋಜನ ಕಂಡುಬಂದಿರುವ ಕಾರಣ "ಈ ಕ್ರಮವನ್ನು ನನ್ನ ಸಂಸ್ಥಾನಕ್ಕೆಲ್ಲಾ ಜಾರಿಗೆ ತರುವವನಾಗಿರುತ್ತೇನೆ ನಾವು ಬಾಲವಿದ್ಯಾಭ್ಯಾಸವನ್ನು ಸರ್ಕಾರಿ ಹಣದಿಂದಲೇ ಸಕಲ ಪ್ರಜೆಗಳಿಗೂ ಕಲಿಸುವಂತೆ ಏರ್ಪಾಡು ಮಾಡುತ್ತೇವೆ. ಪ್ರಜೆಗಳಿಂದ ಫೀಜಿಗಾಗಿ ಒಂದು ಕಾಸೂ ತೆಗೆದುಕೊಳ್ಳುವುದಿಲ್ಲ. ಅತ್ತಲಾಗಿ ವಿದ್ಯದ ಜೊತೆಗೆ ಕಸಬು ಕೈಗಾರಿಕೆ ವಿದ್ಯೆಗಳನ್ನು ಕಲಿಸುವುದೂ ಪರಮಾವಶ್ಯಕವೇ ಆಗಿದೆ. ಪಶ್ಚಿಮ ರಾಜ್ಯಗಳಲ್ಲಿ ಈಗ ಕಸಬುಗಳು ಬಹಳ ಬದಲಾವಣೆಯಾಗಿರುವವು ಅಮೇರಿಕದಲ್ಲಿಯೇ ಅವು ತುಂಬಾ ಉಚ್ಛ್ರಾಯ ಸ್ಥಿತಿಯಲ್ಲಿರುತ್ತವೆ. ನಾವು ನಮ್ಮ ದೇಶದಲ್ಲಿ ಬಾಲಕರಿಗೆ ಪಾಠಶಾಲೆಗಳನ್ನಿಟ್ಟು ಕಸಬು ಕಲಿಸುವುದೇ ಸಾಲದು: ಇದರ ಜೊತೆಗೆ ಹಾಡುಗರ ಅಂಗಾಂಗಗಳನ್ನೂ ಶಿಕ್ಷಣದಿಂದ ತರಪೇತು ಮಾಡಬೇಕು. ವಿದ್ಯೆ ಕಲಿತು ಕಸಬಿನ ಮೇಲೆ ಅಭಿಲಾಷೆಯುಳ್ಳಂಥಾ ಪ್ರಾಯಸ್ಥರನ್ನು ನಾವು ವಿಲಾಯತಿ, ಅಮೇರಿಕ, ಜಪಾನ್, ಜರ್ಮನಿ ಮುಂತಾದ ಕಡೆಗಳಿಗೆ ಕಳುಹಿಸಿಕೊಟ್ಟು ಈಗಿನ ಕಾಲದ ಕಸಬುಗಳ ಲಕ್ಷಣಾದಿಗಳನ್ನು ಕಲಿತುಬರುವಂತೆ ಮಾಡಬೇಕು ಇನ್ನು ಮುಂದೆ ಹಿಂದುಸ್ಥಾನವು ಅಭಿವೃದ್ಧಿಗೆ ಬಂದೀತೆಂತಲೇ ನಾನು ನಂಬಿರುತ್ತೇನೆ ಈ ಭಾಗದಲ್ಲಿ ನನಗೆ ಅಧೈರ್ಯ ಸ್ವಲ್ಪವೂ ಇರುವುದಿಲ್ಲ ಕಡೆಯ ಮಾತಾಗಿ ನಾನು ಹೇಳುವುದೇನೆಂದರೆ—ಹಿಂದುಸ್ಥಾನವು ಪಾರಮಾರ್ಥಿಕವಾದ ತತ್ವಜ್ಞಾನವನ್ನು ಪಶ್ಚಿಮ ರಾಜ್ಯಗಳಿಗೆ ಹೇಳಿಕೊಟ್ಟು, ಅವರಿಂದ ನಾನಾ ವಿಜ್ಞಾನ ಶಾಸ್ತ್ರಗಳನ್ನು ಕಲಿಯಬೇಕಾಗಿದೆ ಹಿಂದುಸ್ಥಾನವು ತನ್ನ ನಿಷ್ಕಳಂಕವೂ ನಿರ್ದುಷ್ಟವೂ ಆದ ಜೀವನ ಮಾರ್ಗಗಳನ್ನು ಅವರಿಗೆ ಕಲಿಸಿಕೊಟ್ಟು ರಾಜ್ಯಭಾರ ವಿಚಾರಗಳಲ್ಲಿ ಯೂರೋಪ್ ಖಂಡದವರು ಸಂಪಾದಿಸಿಕೊಂಡಿರುವ ಮಹಾ ಶ್ರೇಷ್ಠವಾದ ಶಕ್ತಿ ಸಾಮರ್ಥ್ಯಾದಿಗಳನ್ನು ಅವರಿಂದ ಸಂಗ್ರಹ ಮಾಡಿಕೊಂಡು ಬರಬೇಕಾಗಿದೆ. ಅಮೇರಿಕದವರಿಗೆ ಆಮುಷ್ಮಿಕ ವಿಚಾರಗಳನ್ನು ಹೇಳಿಕೊಟ್ಟು, ಅವರಿಂದ ವ್ಯಾಪಾರ ವಿಷಯ ಕೆಲಸಮಾಡತಕ್ಕ ವಿಧಾನ ಮೊದಲಾದವುಗಳನ್ನು ಕಲಿಯಬೇಕು ಎಂಬುದೇ

ತರುವಾಯ ಇನ್ನೂ ಕೆಲವು ದೇಶೀಯ ದೊಡ್ಡ ಮನುಷ್ಯರೂ ಯೂರೋಪಿಯನ್ ಅಧಿಕಾರಿಗಳೂ ಈ ರಾಷ್ಟ್ರದ ಕಸಬುಗಳನ್ನು ಅಭಿವೃದ್ಧಿಗೆ ತರಬೇಕೆಂಬ ವಿಚಾರಕ್ಕೆ ಉಪನ್ಯಾಸಗಳನ್ನು ಮಾಡಿದರು ಅನೇಕರು ಬರೆದು ತಂದಿದ್ದ ಉಪನ್ಯಾಸಗಳನ್ನು ಓದಲು ಸಭೆಯಲ್ಲಿ ಸಮಯವಿರಲಿಲ್ಲ ಅವುಗಳನ್ನೆಲ್ಲಾ ಪ್ರೆಸಿಡೆಂಟರಿಗೆ ಒಪ್ಪಿಸಿರುತ್ತಾರೆ ಈ ಪ್ರಕಾರ ಈ ಸಮಾಜವು ನಡೆದು ಮುಕ್ತಾಯಮಾಡಲ್ಪಟ್ಟಿತು.

ಒಕ್ಕಲಿಗರ ಸಂಘಪರಿಷ್ಕರಣವು.

[ಒಬ್ಬ ಬಾತ್ಮೀದಾರರು ಬರೆಯುವುದು.]

ಮಲ್ನಾಡಿನಲ್ಲಿ ನಮ್ಮ ಒಕ್ಕಲಿಗರು ಬಹಳ ಜನಗಳಿದ್ದರೂ ಎಲ್ಲರೂ ವಿದ್ಯಾವಿಹೀನರಾಗಿರುತ್ತಾರಲ್ಲದೆ ಕೆಲವರು ತಮ್ಮ ಹೆಣ್ಣು ಮಕ್ಕಳಿಗೆ ಲಗ್ನ ಮಾಡಿಕೊಡಬೇಕಾದರೆ ಗಂಡಿನವರ ಕಡೆಯಿಂದ ಖರ್ಚಗೆಂಬ ಸುಳ್ಳು ನೆಪ ಹೇಳಿ ೧೫೦—೨೦೦—೩೫೦ ರೂಪಾಯಿ ತೆಗೆದುಕೊಳ್ಳುವದಲ್ಲದೆ ಅದರ ಜೊತೆಗೆ ೨ ಹೇರು ೩ ಹೇರು ಕೊಡಬೇಕೆಂತ ತಸ್ತು ಕೊಟ್ಟು ಅಮೇರ್ಯತೆಕ್ಕೊಂಡು ದಾಂದು ಮಾಡಿ ಲಗ್ನ ಮಾಡಿಕೊಡುವ ಪದ್ಧತಿ ಇಟ್ಟುಕೊಂಡಿರುತ್ತಾರೆ. ರೀತಿ ತೆಗೆದುಕೊಳ್ಳುವವರ ದೆಸೆಯಿಂದ ಸಣ್ಣ ಹುಡುಗಿಯನ್ನು ಸ್ವಾದವನಿಗೆ ಲಗ್ನ ಮಾಡಿ ಕೊಡುವದಕ್ಕೂ, ದೊಡ್ಡ ಹುಡುಗಿ ಚಿಕ್ಕವನಿಗೆ ಲಗ್ನ ಮಾಡಿ ಕೊಡುವದಕ್ಕೂ ಮಾರ್ಗವಾಗಿರು ಅನೇಕರು ಈ ಖರ್ಚುಗಳಿಗೋಸ್ಕರ ಜಾಣವಂತರಲ್ಲಿ ಬಹಳ ಬಡ್ಡಿಗೆ ಸಾಲಾ ತೆಗೆದುಕೊಳ್ಳುವರು. ಸರ್ವಸ್ವತ್ತನ್ನು ಈಡುಮಾಡಿಕೊಟ್ಟು ತೀರಿಸಲಾರದೆ ಅಬ್ಬರಿಗೆ ಎಲ್ಲಾ ಕಳೆದುಕೊಂಡವರಾಗಿ ಹೇಳಬಾರದ ಕಷ್ಟಕ್ಕೆ ಗುರಿಯಾಗಿರುತ್ತಾರೆ.

ಈ ವಿಷಯ ಯೋಚಿಸಿ ನಮ್ಮ ಜನದ ಮಂಗತ್ಯ ಹೋಗಲು ನಮ್ಮ ಹೆತ್ತೂರು ನಾಡ ಪಟೇಲರ ಮಗ ನಿವಾರಣೆಗೆ ಕಳೆದ ನವಂಬರ್ ಮತ್ತು ಡಿಸೆಂಬರ್ ತಿಂಗಳುಗಳಲ್ಲಿ ಗೊದ್ದುಗಾಡಿನಲ್ಲಿ ಸಭೆ ಸೇರಿಸಿ ನಮ್ಮ ಮಂಡಲಿಯವರೆಲ್ಲರಿಗೂ ಉಪನ್ಯಾಸ ಹೇಳಿದರು ಸರ್ವರೂ ಆ ರೀತಿ ಒಪ್ಪಿಕೊಂಡಿರುತ್ತಾರೆ. ವೆ ಸಭೆಯಲ್ಲೇನೋ ಒಪ್ಪಿಕೊಂಡರೇ ಹೊರತು ಮನೆಯಲ್ಲಿ ಆ ದುಂದು ಖರ್ಚು ಬಿಡಲಿಲ್ಲ. ಈ ರೀತಿ ಇನ್ನು ಪಾಪ ಕೃತ್ಯದನ್ನು ತಿಳಿಯದೆ ಮೂಢತ್ವ ಬಿಡದಿರುವ ನಮ್ಮ ಈ ಮತದವರು ಗೆತಾನೇ ಅಭಿವೃದ್ಧಿಹೊಂದ್ಯಾರು?

ನಮ್ಮ ಜನಗಳು ಬೇರೆಯವರು ಹೇಳಿದ್ದನ್ನು ಕೇಳುವ ಸ್ವಭಾವ ಯವುಂಟೇಬದನ್ನು ನಾನು ಬಲ್ಲೆನು. ಈ ವಿಷಯದಲ್ಲಿ ಬಾಲ್ಯವಿವಾಹದ ಕಾನೂನಿನ ಜೊತೆಗೆ ಹೆಣ್ಣಿನ ಲಗ್ನ ಕಾಲದಲ್ಲಿ ವರನ ಕಡೆಯಿಂದ ತೆಗೆದುಕೊಳ್ಳುವದನ್ನು ತಪ್ಪಿಸಲು ಸ್ವಲ್ಪ ಗವರ್ನಮೆಂಟಿನವರು ನಿರ್ಬಂಧ ದಯಪಾಲಿಸದಿದ್ದರೆ ಅದು ಜಾಗ್ರತೆ ನಿಲ್ಲುವದಿಲ್ಲ. ಆದು ವಿಷಯ ಆದರೆ ಬಾಲ್ಯ ವಿವಾಹದ ಕಾನೂನ್ ಸ್ಪಷ್ಟವಾಗುವುದು. ನಮ್ಮ ಒಕ್ಕಲಿಗರ ಮೌಢ್ಯತನವೂ ನಿಂತುಹೋಗುವದಕ್ಕೂ, ಪುಷ್ಟಿ ಮತ್ತು ದ್ರವ್ಯ ದುರ್ವ್ಯಯವಾಗುವದು ನಿಲ್ಲುವದಕ್ಕೂ ಅನುಕೂಲವಾಗುತ್ತೆ ಇದರೊಂದಿಗೆ ಮೇಲ್ಕಂಡ ನಿವಾರಣೆಗೆ ಮಾಡಿದ ಉಪನ್ಯಾಸದ ತೀರ್ಮಾನಗಳನ್ನು ಕಳುಹಿಸಿದೇನೆ, ಅದನ್ನು ಪ್ರಕಟಿಸಿದರೆ ಅರಿಯದವರಿಗೂ ದೂರದಲ್ಲಿರುವವರಿಗೂ ಗೊತ್ತಾಗಲು ಮಾರ್ಗವಾಗುತ್ತಾಗಿ ತಮ್ಮನ್ನು ಕೇಳಿಕೊಂಡಿರುತ್ತೇನೆ.

ಸಭೆಯ ತೀರ್ಮಾನಗಳು,

ಬೆಂಗಳೂರಲ್ಲಿನ ದೊಡ್ಡ ಮನುಷ್ಯರಾದ ನಮ್ಮವರು ಮಾಡಿಕೊಂಡಿರುವ ವಿದ್ಯಾಸಂಘವೆಂಬ ದೊಡ್ಡ ಕಾರ್ಯಕ್ಕೆ ಮುಖ್ಯಸ್ಥರಾದ ತಮಗೆಲ್ಲರಿಗೂ ಕಾಗದಗಳು ಬಂದರೂ ನಿಮ್ಮ ಗೊದ್ದಿನ ಪಟೇಲರು ಮಂದಿ ಪಟೇಲರು ಸಹಾ ಗ್ರಾಮಕ್ಕೆ ಬಂದು ತಿಳಿಸಿದರೂ ಡ ಒಬ್ಬರೂ ಮನಸ್ಸು ಕೊಡದೆ ಕೆಲವರು ಅಲ್ಲಿ ಸ್ಕೂಲಾದರೆ ನು? ನಮ್ಮ ಮಕ್ಕಳು ಅಲ್ಲಿಗೆ ಹೋಗಲಿಲ್ಲ! ಆದಾಗಲಿಲ್ಲ! ನಮಗೆ ಈಗ ಇರುವ ಸುಖವೇ ನಮಗೆ ಸಾಕೆಂದು ಹೇಳಿದ್ದನ್ನು ನಾಡಿನೊಳ್ಳ ನಿಮ್ಮ ಈ ಗೊದ್ದುಬಿಲ್ಲಾ ಡಿವಲ್ಲೂ ಕೇಳುತ್ತೇವೆ. ಈ ರೀತಿ ಇರುವುದು ಸರಿಯಲ್ಲ. ಆದ್ದರಿಂದ ಮೇಲ್ಕಂಡ ವಿದ್ಯಾಸಂಘವೆಂಬ ದೊಡ್ಡ ಕಾರ್ಯಕ್ಕೆ ಮತಸ್ಥರಾದ ನಾವೆಲ್ಲರೂ ಒಟ್ಟು ಸೇರಿ ಹೆಚ್ಚು ಸಹಾಯ ಮಾಡಿ ವೃದ್ಧಿ ಪಡಿಸಿ ಇದರಿಂದ ನಾವೆಲ್ಲಾ ಉತ್ತರೋತ್ತರ ವಿದ್ಯಾಧನವೆಂಬುವದನ್ನು ಸಂಪಾದಿಸುತ್ತಾ ಈಗ ಇರುವ ಅಜ್ಞಾನವನ್ನು ಹೋಗಲಾಡಿಸಿ ಸುಜ್ಞಾನವನ್ನು ಹೊಂದುವದರಲ್ಲಿ ಏನೊಂದೂ ಸಂದೇಹ ಕಾಣಬರುವದಿಲ್ಲ. ಧರ್ಮಗೂ ಪಾಪಪುಣ್ಯವನ್ನು ತಿಳುಕೊಳ್ಳುವದಕ್ಕೂ, ಮತವೃದ್ಧಿಗೂ ಲಬೀಜ ವಿದ್ಯದ ವಿನಹಾ ಬೇರೆ ಯಾವ ಮಾರ್ಗವೂ ಇಲ್ಲವೆಂದು ನಮ್ಮೆಲ್ಲರಿಗೂ ಗೊತ್ತಾಗುತ್ತದಷ್ಟೆ ಆದಕಾರಣ ಇನ್ನು ಮುಂದೆ ವಿದ್ಯಾಸಂಘದಿಂದ ಬೋಧಕರು ಬಂದಾಗ್ಗೆ ನಮ್ಮಗಳ ಶಕ್ತಿ ವಿಶಿದು ರೂಪಾಯಿ ಆಗಾಯ್ತು ೨೫ ರೂಪಾಯಿ ವರಿಗೂ ಸರ್ವ ಸಹಾಯ ಮಾಡುತ್ತೇವೆಂತಲೂ, ಹೆಣ್ಣು ಲಗ್ನ ಮಾಡಿಕೊಡುವ ಕರ್ಚಗೆಂತ ಹೆಣ್ಣಿನ ತಾಯಿತಂದೆ ಯಾ ವಾರಸ್‌ದಾರರು ಯಾರಾಗಲಿ ಏನೂ ತೆಗೆದುಕೊಳ್ಳಕೂಡದೆಂತಲೂ, ಇದು ಮಹಾ ಪಾಪದ್ದೆಂತಲೂ, ಹಾಗೆ ಯಾರಾದರೂ ತೆಗೆದುಕೊಂಡರೆ ತೆಗೆದುಕೊಂಡನ್ನೇ ಮತಕ್ಕೆ ತಪ್ಪಿತ ಕೊಡಬೇಕೆಂತಲೂ, ಅಂಥಾ ತಪ್ಪು ದ್ರವ್ಯವು ಮತದ ಅಭಿವೃದ್ಧಿ ವಿಷಯಕವಾದ ವಿದ್ಯಾ ಸಂಘ ವಗೈರೆ ಧರ್ಮಕಾರ್ಯಕ್ಕೆ ವಿನಿಯೋಗ ಪಡಿಸಬೇಕೆಂತಲೂ, ಈ ವಿಷಯ ನೆಲೆಯಿರುವ ತಮ್ಮೆಲ್ಲರಿಗೂ ಮತ್ತು ಕಡೆಗು ಕ್ಷೇಮೋಲಿರುವವರಿಗೂ ಸರ್ವೇಕೆಂತ ಸಹಾ ತೀರ್ಮಾನಿಸಿರುತ್ತಾರೆ. ಆದರಂತೆ ತಾವುಗಳೆಲ್ಲರೂ ಅಂಗೀಕರಿಸಿ ಅದನ್ನು ಜಾರಿಗೆ ಬರುವಂತೆ ಆಗಮಾಡಿಸಿ ನಮ್ಮ ಜನಗಳನ್ನು ವೃದ್ಧಿಗೊಳಿಸಲು ಸಹಾಯ ಮಾಡಿ ಧರ್ಮ ಮಾರ್ಗದ ಬುದ್ಧಿ ಪ್ರಕಾಶಪಡಿಸಿ ಅಜ್ಞಾನವನ್ನು ನೀಗಿ ಪಾಪರಹಿತರಾಗಬೇಕು ಮತ್ತು ಈ ಮೇಲಿನ ವಿಷಯಗಳೆಲ್ಲಾ ಕೊಡಗು ದೇಶದಲ್ಲಿನ ನಿಮ್ಮ ನೆಂಟರು ಯಾ ನಮ್ಮ ಮಂಡಲಿಯವರಾದ ಸರ್ವರಿಗೂ ಕಾಗದದ ಮೂಲಕ ಬಿನ್ನೈಸಿಕೊಂಡು ಇರುತ್ತೇನೆ.

ಹಿಂದುಸ್ಥಾನದ ೨೨ನೇ ರಾಜಕೀಯ ಮಹಾಸಭೆಯು.

ಸಭೆಯಲ್ಲಿ ತೀರ್ಮಾನವಾದ ವಿಷಯಗಳು

ಈ ರಾಷ್ಟ್ರೀಯ ಸಭೆಯು ಕಲ್ಕತ್ತಾ ಪಟ್ಟಣದಲ್ಲಿ ಪ್ರಾರಂಭವಾದ ವಿವರವನ್ನು ತಕ್ಕಮಟ್ಟಿಗೆ ಕಳೆದ ವಾರ ತಿಳಿಸಿರುತ್ತೇವೆ. ವಾರ ಆ ಸಭಿಕರು ತೀರ್ಮಾನ ಮಾಡಿರುವ ಕೆಲವು ಮುಖ್ಯ ಸಂಗತಿಗಳನ್ನು ನಮ್ಮ ವಾಚಕರಿಗೆ ತಿಳಿಸಬೇಕೆಂದು ಕುತೂಹಲಪಡುತ್ತೇವೆ.

೧. ಹಿಂದುಸ್ಥಾನದ ಪ್ರಜೆಗಳು ಗುಲಾಮರೋ?

ನಮ್ಮ ದೇಶದ ಪ್ರಜೆಗಳು ಜೀವನಾರ್ಥವಾಗಿ ಇಂಗ್ಲಿಷ್ ರಾಜ್ಯಗಳಾದ ದಕ್ಷಿಣ ಆಫ್ರಿಕ, ನಟಾಲ್, ಆಸ್ಟ್ರೇಲಿಯಾ, ಕಾನಡಾ, ಮೊದಲಾದ ದೇಶಗಳಿಗೆ ಹೋಗಿ ನಿಂತಿರುತ್ತಾರೆ ಇಂಥವರನ್ನು ಆಯಾ ದೇಶಗಳವರು ಗುಲಾಮರಂತೆ ಭಾವಿಸಿ ನಾನಾ ಕಷ್ಟ

...ಸುತ್ತಾ ಬಂದಿದ್ದಾರೆ. ಅವರು ವ್ಯಾಪಾರಾದಿ ಸ್ವತಂತ್ರಜೀವನ ...ನಡೆಸಿಕೊಳ್ಳದಂತೆಯೂ, ಮನೆ ಮಠ ಆಸ್ತಿಪಾಸ್ತಿಗಳನ್ನು ...ಕೊಳ್ಳದಂತೆಯೂ, ಕೆಲವು ರೈಲ್‌ಗಾಡಿಗಳಲ್ಲಿ ಕೂಡಾ ಸಂಚಾರ ...ದಂತೆಯೂ, ಪಬ್ಲಿಕ್ ರಸ್ತೆಗಳಲ್ಲೂ ತಿರುಗಾಡದಂತೆಯೂ, ... ನಾನಾ ರೀತಿಯಲ್ಲಿ ಅಡ್ಡಿ ಆತಂಕಗಳನ್ನು ಆಯಾ ದೇಶದವರು ...ಡಿಕೊಂಡಿದ್ದಾರೆ. ಹಿಂದುಸ್ಥಾನದ ಪ್ರಜೆಗಳು ೫೦,೦೦೦ ಕ್ಕಿಂತ ಅಧಿ...ಲ್ಲದೆ ಆ ಸ್ವಾಸ್ಥ್ಯಗಳಲ್ಲಿದ್ದು ನಾನಾ ಕಷ್ಟಗಳನ್ನು ಅನುಭವಿಸು...ರೆ ಇವರೂ ಅಲ್ಲಿನ ಜನರಂತೆ ಇಂಗ್ಲಿಷ್ ಪ್ರಭುತ್ವದ ಪ್ರಜೆಗಳೇ ...ರೋಣದರಿಂದ ಇವರನ್ನು ಮಾತ್ರ ಇಷ್ಟು ಪಕ್ಷಪಾತಮಾಡಿ ಕ್ರೂರ...ವಾಗಿ ಕಾಣುವುದು ಯೋಗ್ಯವಾದದ್ದಲ್ಲ. ಇದಕ್ಕೆ ಮುಖ್ಯ ಕಾರಣ ...ವೆಂದರೆ, ನಮ್ಮ ಜನರು ಅಲ್ಲಿನವರಿಗಿಂತ ತುಂಬಾ ಸಮರ್ಥರು. ...ರಿಗೆ ಸ್ವಾತಂತ್ರ್ಯಗಳನ್ನು ಕೊಟ್ಟುಬಿಟ್ಟರೆ ಅಲ್ಲಿನವರು ಹಿಂದಕ್ಕೆ ...ಕೊಳ್ಳುತ್ತಾರೆಂಬುದೇ ಮುಖ್ಯಕಾರಣ. ಆದರೂ ಇಂಗ್ಲಿಷ್ ...ವರ್ನ್‌ಮೆಂಟಿನವರು ಆಯಾ ಸ್ವಾಸ್ಥ್ಯಗಳ ಸರ್ಕಾರದವರಿಗೆ—ಈ ...ದಲ್ಲಿ ಯೋಗ್ಯವಾದ ಬದಲಾವಣೆಮಾಡಿ, ನಮ್ಮ ಜನರನ್ನು ಇತರ ...ರಂತೆ ಸ್ವಾತಂತ್ರ್ಯಾದಿಗಳನ್ನು ಕೊಟ್ಟು ಕಾಪಾಡುತ್ತಾ ಬರು...ವಮಾಡಿಕೊಡಬೇಕೆಂದು ಕೇಳುತ್ತೇವೆ. ಈ ವಿಷಯವು ಕ್ರಮಾಪ... ಈ ಸಭೆಗೆ ತುಂಬಾ ದುಃಖವೂ ಆಗ್ರಹವೂ ಉಂಟು.

೨ ಸೈನ್ಯದ ಖರ್ಚು ಕೋತಾಮಾಡುವುದು

ಈಚೀಚೆಗೆ ಇಂಡಿಯಾ ಗವರ್ನ್‌ಮೆಂಟಿನವರು ಸೈನ್ಯದ ಇಲಾಖೆ... ಅಪಾರವಾದ ದ್ರವ್ಯವನ್ನು ವಿನಿಯೋಗಿಸುತ್ತಾ ಬಂದಿದ್ದಾರೆ. ಹಿಂದು...ನದ ರಕ್ಷಣೆಗಾಗಿಯೇ ಈ ಸೈನ್ಯವನ್ನು ಸಾಕುವುದಿಲ್ಲ. ಪರರಾಜ್ಯ...ವು ಸಂಭವಿಸುವಂಥಾ ಯುದ್ಧಾದಿ ಕಾರ್ಯಗಳಿಗೂ ನಮ್ಮ ದೇಶದ ...ವೃತ್ತಿಯಿಂದ ಸಾಕುವಂಥಾ ಸೈನ್ಯವನ್ನು ಬ್ರಿಟಿಷ್ ಗವರ್ನ್‌ಮೆಂಟಿ...ನವರು ಉಪಯೋಗಿಸಿಕೊಳ್ಳುವರು. ಆದಕಾರಣ ಈ ಸೈನ್ಯದ ಖರ್ಚಿ...ನ ತಕ್ಕಷ್ಟು ಭಾಗವನ್ನು ಬ್ರಿಟಿಷ್ ಗವರ್ನ್‌ಮೆಂಟಿನವರು ಕೊಡು...ವು ಧರ್ಮವಾಗಿದೆ ಮತ್ತು ನಮ್ಮ ಸರ್ಕಾರದವರು ಸೈನ್ಯದ ...ವನ್ನು ಕೋತಾಮಾಡಿ, ಇಂಗ್ಲಿಷ್ ಸೈನಿಕರನ್ನು ಕ್ರಮೇಣ ...ಮಾಡುತ್ತಾ ದೇಶೀಯ ಫೌಜನ್ನ ಹೆಚ್ಚಿಸುತ್ತಾ, ಇದರಲ್ಲಿ ಉಳಿ...ಯುವಷ್ಟು ದ್ರವ್ಯವನ್ನು ಈ ರಾಷ್ಟ್ರದ ಪ್ರಜಾಕೋಟಿಗಳಿಗೆ ಸಕಲ ...ವಿದ್ಯೆಗಳನ್ನೂ ಕಲಿಸುವುದಕ್ಕೆ ವಿನಿಯೋಗಿಸಬೇಕಾಗಿರುವುದು ...ಅವಶ್ಯಕವು; ಆರೋಗ್ಯವರ್ಧಕಗಳಾದ ಸ್ಯಾನಿಟೇಷನ್ ಏರ್ಪಾ...ಡುಗಳನ್ನು ಮಾಡಿಸಬೇಕು; ಮತ್ತು ಉಪ್ಪಿನ ತೆರಿಗೆ ಮೊದಲಾದು... ವಜಾ ಮಾಡಿಕೊಡಬೇಕು: ಜಮೀನು ಕಂದಾಯದ ದರ...ವನ್ನು ಕಮ್ಮಿ ಹಾಕಿಕೊಡುವುದಲ್ಲದೆ, ರೈತಪ್ರಜೆಗಳ ಸಾಲಸೋಲ...ವನ್ನು ತೀರಿಸಿಕೊಳ್ಳುವುದಕ್ಕೂ ಅನುಕೂಲ ಮಾಡಿಕೊಡಬೇಕು. ...ಧಾನ್ಯದ ಬೆಲೆಯನ್ನು ಹೆಚ್ಚಿಸಿರೋಣದರಿಂದ ರೈತನು ಈಗ ...ಹಿಂತಲೂ ಹೆಚ್ಚು ಧವಸವನ್ನು ಬಿಕರಿಮಾಡಿ ಕಂದಾಯ ...ಗ ಕಟ್ಟುವಂತಾಗಿದೆ. ಈಗ ದೇಶದಲ್ಲಿ ಸಮಾಧಾನವು ನೆಲೆಗೊಂ...ಡಿದ್ದು ಕದನ ಯುದ್ಧಾದಿಗಳ ಭೀತಿ ಏನೂ ಇರುವುದಿಲ್ಲವಾ...ದ್ದ ಗವರ್ನ್‌ಮೆಂಟಿನವರು ಸೈನ್ಯದ ಖರ್ಚನ್ನು ಮೊದಲಿಗಿಂತಲೂ ...ಷ್ಟು ಹೆಚ್ಚುಮಾಡಿ ಹೊಸ ತೆರಿಗೆಗಳನ್ನು ವಿಧಿಸಿ ಪ್ರಜೆಗಳನ್ನು ...ಕರನ್ನಾಗಿ ಮಾಡುತ್ತಾ ಬಂದಿದ್ದಾರೆ ಇನ್ನಾದರೂ ಈ ಖರ್ಚ...ನ್ನು ಕೋತಾಮಾಡಬೇಕಾಗಿದೆ

೩. ಮಹಮದೀಯರ ವಾಕ್ಫ್

ಮಹಮದೀಯರು ಉಯಿಲು ಬರೆದು ತಮ್ಮ ಆಸ್ತಿಯನ್ನು ...ಕಾರ್ಯಗಳಿಗೂ ತಮ್ಮ ರಕ್ತಸಂಬಂಧಿಗಳಿಗೂ ಹಂಚಿಕೊಡುವ ...ದಲ್ಲಿ ಪ್ರಿವಿ ಕೌನ್ಸಿಲ್ ಎಂಬ ವಿಲಾಯತಿಯ ಪ್ರಥಮ ನ್ಯಾಯ...ಸದ ಜಡ್ಜಿಗಳು ಮಹಮದೀಯ ಮತಕ್ಕೂ ಆಚಾರಕ್ಕೂ ಧರ್ಮ...ಕ್ಕೂ ವಿರೋಧವಾದಂಥಾ ತೀರ್ಮಾನವನ್ನು ಮಾಡಿರುತ್ತಾರೆ ...ರಿಂದ ಮಹಮದೀಯರಿಗೆ ತುಂಬಾ ಅನ್ಯಾಯವಾಗಿದೆ ಗವರ್ನ್...ಮೆಂಟಿನವರು ಒಂದು ಪಂಚಾಯತಿ ಕೋರ್ಟನ್ನು ಸ್ಥಾಪಿಸಿ ಅದರ ...ಲಕ ಹಿಂದುಸ್ಥಾನದ ಸಮಸ್ತ ಮಹಮದೀಯ ಪ್ರಜೆಗಳ ಅಭಿ...ಪ್ರಾಯವನ್ನೂ ತಿಳಿದು, ಮೇಲ್ಕಂಡ ತೀರ್ಮಾನವನ್ನು ರದ್ದುಮಾಡಿ...ಡಬೇಕು.

ಮೂರನೆಯ ದಿನ ನಡೆದ ಕಾರ್ಯಗಳು.

ಮೂರನೆಯ ದಿನ ನಡೆದ ಸಭೆಗೆ ಬರೋಡಾ ಸಂಸ್ಥಾನದ ...ಕವಾಡಿ ಮಹಾರಾಜರವರು ತಮ್ಮ ದಿವಾನ್ ಮಿ॥ ರಮೇಶ ಚಂದ್ರ ...ರವರ ಸಮೇತ ದಯಮಾಡಿ, ಅಗ್ರಸ್ಥಾನದಲ್ಲಿ ಎರಡು ಗಂಟೆಗಳ...ಷ್ಟು ಕುಳಿತಿದ್ದು, ಸಭೆಯಲ್ಲಿ ನಡೆದ ಚರ್ಚೆ ಮುಂತಾದದ್ದನ್ನು ...ಲಿಸಿದರು. ಸಭಾಸದರೆಲ್ಲಾ ಎದ್ದುನಿಂತು ಶ್ರೀಮನ್ ಮಹಾರಾಜ...ರನ್ನು ಬಹಳವಾಗಿ ಸನ್ಮಾನಮಾಡಿದರು

೪. ಬಂಗಾಳ ಆಧಿಪತ್ಯವನ್ನು ವಿಭಾಗಮಾಡಿದ್ದು.

ಇಂಡಿಯಾ ಗವರ್ನ್‌ಮೆಂಟಿನವರು ಪ್ರಜೆಗಳ ಅಭಿಪ್ರಾಯವನ್ನು ...ದೆ ಅಪೇಕ್ಷಿಸದೆ ಬಂಗಾಳಾ ಆಧಿಪತ್ಯವನ್ನು ಎರಡಾಗಿ ವಿಭಾಗ ...ಮಾಡಿದ್ದು ಆ ಆಧಿಪತ್ಯದ ಅಭಿವೃದ್ಧಿಗೆ ತುಂಬಾ ಹಾನಿಕರವಾಗಿರುತ್ತದೆ ...ತಪ್ಪಾದ ಕಾರ್ಯವೆಂದು ಇದುವರೆಗೆ ಸಾವಿರಾರು ದೊಡ್ಡ ...ಸಂಘಗಳನ್ನು ಮಾಡಿ ತೀರ್ಮಾನಿಸಿ ಅದನ್ನು ವಜಾ ಮಾಡಬೇ...ಕೆಂದಿನಿಂದ ಗವರ್ನ್‌ಮೆಂಟಿನವರನ್ನು ಕೇಳಿಕೊಳ್ಳುತ್ತಾ ಬಂದ...ರೂ ಗವರ್ನ್‌ಮೆಂಟಿನವರು ಆ ಹುಕುಮನ್ನು ರದ್ದುಮಾಡದೆ ...ಇರುವುದು ಶೋಚನೀಯವಾಗಿರುವುದು

೫. ಅಷ್ಟು ಮುಂತಾದ ಪ್ರತೀಕಾರ ಕಾರ್ಯಗಳು

ಈ ರಾಷ್ಟ್ರದ ಅಗಾಧವಾದ ಪ್ರಜೆಗಳಿಗೆ ಪ್ರತಿನಿಧಿಗಳನ್ನು ಚು...ನಾಯಿಸುವ ಹಕ್ಕನ್ನು ಗವರ್ನ್‌ಮೆಂಟಿನವರು ದಯಪಾಲಿಸಿರುವುದಿಲ್ಲ ...ದರಿಂದ ಪ್ರಜೆಗಳು ತಮ್ಮ ಅಭಿಮತವನ್ನಾಗಲಿ ತಮ್ಮ ಕಷ್ಟದುಃಖ...ಗಳನ್ನಾಗಲಿ ಗವರ್ನ್‌ಮೆಂಟಿನವರಿಗೆ ಅರಿಕೆಮಾಡಿಕೊಂಡು ಸರಿ...ಪಡಿಸಿಕೊಳ್ಳುವುದು ಸಾಧ್ಯವಿಲ್ಲದೆ ಇದೆ ಪ್ರಜೆಗಳ ವಿಜ್ಞಾಪನೆಗಳನ್ನು ...ಸರ್ಕಾರದವರು ಅಷ್ಟು ತೃಪ್ತಿಕರವಾಗಿ ಇತ್ಯರ್ಥಪಡಿಸುವದೂ ಇಲ್ಲ. ...ಕಾರಣ ಬಂಗಾಳ ವಿಭಜನೆ ಮಾಡಿದಂದಿನಿಂದ ಬಂಗಾಳಾ ಪ್ರಜೆಗಳು ...ಯಲ್ಲಿ ತಂದಿರುವಂಥಾ ಅಂದರೆ ವಿಲಾಯತಿಯಿಂದ ತಯಾರಾಗಿ ...ವ ಸಮಸ್ತ ಪದಾರ್ಥಗಳನ್ನೂ ಯಾರೂ ಕೊಂಡು ಉಪಯೋಗಿಸ...ಬಾರದು ಎಂಬ ಪ್ರತೀಕಾರವು ನ್ಯಾಯವಾಗಿರುತ್ತದೆ.

೬. ವಿದ್ಯಾಭ್ಯಾಸ ವಿಚಾರವು.

ಈಚೆಗೆ ಗವರ್ನ್‌ಮೆಂಟಿನವರು ಹೊಸ ಕಾನೂನು ಮಾಡಿ ಜಾರಿಗೆ ತಂದಿದ್ದೋಣದರಿಂದ ಈ ರಾಷ್ಟ್ರದಲ್ಲಿ ಪ್ರೌಢವಿದ್ಯಾಭಿವೃದ್ಧಿಗೂ ಸೆಕಂಡರಿ ವಿದ್ಯಾಭ್ಯಾಸಕ್ಕೂ ಬಹಳ ಕುಂದು ಕೊರತೆಗಳೂ ಅಡಚಣೆಗಳೂ ಉಂಟಾಗಿವೆ. ಮತ್ತು ವಿದ್ಯೆಯು ಸಕಲ ಪ್ರಜೆಗಳೂ ಸಂಪಾದಿಸಿಕೊಳ್ಳದಂತಾಗಿರುವುದು. ಆದಕಾರಣ ಈ ಕಾಂಗ್ರೆಸ್ ಮಹಾಸಭೆಯವರು ಕೇಳುವುದೇನೆಂದರೆ—(೧) ಸಕಲರೂ ಈ ರಾಷ್ಟ್ರದಲ್ಲಿ ಒಂದು ಕಾಸೂ ಖರ್ಚಿಲ್ಲದೆ ಬಾಲ್ಯ ವಿದ್ಯಾಭ್ಯಾಸವನ್ನು ಮಾಡುವುದಕ್ಕೆ ಏರ್ಪಾಡಾಗಬೇಕು, ಕೆಲವು ಕಾಲಾನಂತರ ಸರ್ಕಾರದವರು ನಿರ್ಬಂಧಪಡಿಸಿ ಸಕಲರಿಗೂ ವಿದ್ಯೆ ಕಲಿಸಬೇಕು. (೨) ವಿದ್ಯೆ ಕಲಿಯದೆ ಬಹಳ ಹಿಂದೆ ಬಿದ್ದಿರುವಂಥಾ ಸಮಸ್ತ ಜಾತಿಯವರಿಗೂ ಸೆಕೆಂಡರಿ ವಿದ್ಯಾಭ್ಯಾಸ ಮಾಡುವುದಕ್ಕೆ ಬಹಳ ಹೆಚ್ಚಾಗಿ ದ್ರವ್ಯ ಸಹಾಯ ಮಾಡಬೇಕು. (೩) ಯೂನಿವರ್ಸಿಟಿ ಎಂಬ ವಿದ್ಯಾ ಸಂಘಗಳ ಮೇಲೆ ಈಗ ಇರುವ ಸರ್ಕಾರಿ ಅಧಿಕಾರಗಳನ್ನು ತೆಗೆದುಹಾಕಿ, ಆ ಸಂಘಗಳಿಗೆ ಹೆಚ್ಚು ಸ್ವತಂತ್ರಾಧಿಕಾರಗಳನ್ನು ವಹಿಸಿ, ಅವುಗಳೇ ವಿದ್ಯಾಭಿವೃದ್ಧಿಗೆ ತಕ್ಕ ಏರ್ಪಾಡುಮಾಡಿಕೊಳ್ಳುವಂತೆ ಅವಕಾಶವನ್ನು ಕಲ್ಪಿಸಿಕೊಡಬೇಕು. (೪) ಆಯಾ ಸ್ಥಳಾನುಗುಣ್ಯವಾದಂಥಾ ಕಸಬು ಕೈಗಾರಿಕೆ ವಿದ್ಯೆಗಳನ್ನು ಪ್ರಜೆಗಳಿಗೆ ಸಾರ್ಥಕವಾಗುವ ರೀತಿಯಲ್ಲಿ ಕಲಿಸಿಕೊಡುವುದಕ್ಕೋಸ್ಕರ ಅನೇಕವಾದ ಕಸಬುದಾರಿ ವಿದ್ಯಾಶಾಲೆಗಳನ್ನು ಇಡಿಸಿ ನಡಸುತ್ತಾ ಬರಬೇಕು.

೭. ಜನಾಂಗ ವಿದ್ಯಾಭ್ಯಾಸವು.

ಈ ರಾಷ್ಟ್ರದಲ್ಲಿರುವಂಥಾ ವಿದ್ಯಾವಂತರೂ ದೊಡ್ಡ ಮನುಷ್ಯರೂ ಇನ್ನು ಮುಂದೆ ತಟಸ್ಥರಾಗಿರದೆ, ಸಕಲ ಪ್ರಜೆಗಳಿಗೂ ವಿದ್ಯೆ ಕಲಿಸಿ ಕಸಬು ಕೈಗಾರಿಕೆಗಳನ್ನು ಅಭಿವೃದ್ಧಿಗೆ ತಂದುಕೊಳ್ಳುವ ಭಾಗದಲ್ಲಿ ತುಂಬಾ ಸಾಹಸ ಪಡಬೇಕಾಗಿರುವದು. ದೇಶವತ್ಸಲರು ಹುಡುಗರನ್ನೂ ಹುಡುಗಿಯರನ್ನೂ ತಕ್ಕ ರೀತಿಯಲ್ಲಿ ವಿದ್ಯಾವಂತರನ್ನಾಗಿಯೂ ಬುದ್ಧಿ ಕುಶಲರನ್ನಾಗಿಯೂ ಮಾಡಿಕೊಳ್ಳುವುದಕ್ಕೆ ತಕ್ಕ ಏರ್ಪಾಡುಗಳನ್ನು ಮಾಡಬೇಕು.

೮. ಸ್ವದೇಶೀ ಏರ್ಪಾಡು.

ಯಂತ್ರಗಳ ಮೂಲಕ ತಯಾರಾಗಿ ಪರದೇಶಗಳಿಂದ ಬರುವ ಸಮಸ್ತ ಸರಕುಗಳೂ ಈ ದೇಶದಲ್ಲಿ ತಯಾರಾಗುವ ಅಂಥಾ ಸರಕುಗಳಿಗಿಂತ ನಾಜೂಕಾಗಿಯೂ ಅತಿ ಅಗ್ಗವಾಗಿಯೂ ಇರುತ್ತವೆ. ಆದ್ದರಿಂದ ಪ್ರಜೆಗಳೆಲ್ಲಾ ಆ ಪರದೇಶಗಳ ಸಾಮಾನುಗಳನ್ನೇ ಕೊಂಡು ಉಪಯೋಗಿಸುತ್ತಾ ಬಂದಿದ್ದಾರೆ. ಇದು ನಮ್ಮ ದೇಶದ ಸಮಸ್ತ ಕಸಬುಗಳನ್ನೂ ಕೈಗಾರಿಕೆಗಳನ್ನೂ ಕೊಂದುಬಿಟ್ಟಿರುವುದು ಹೀಗೆ ಕಸಬು ಕೈಗಾರಿಕೆಗಳು ಕ್ಷೀಣವಾಗಿರುವುದೇ ಲಕ್ಷಾಂತರ ಪ್ರಜೆಗಳು ಕಸಬು ಬಿಟ್ಟು ಜೀವನಕ್ಕೆ ಮಾರ್ಗವಿಲ್ಲದೆ ಕೆಟ್ಟುಹೋಗುವುದಕ್ಕೂ ಧಾರಣೆ ಸ್ವಲ್ಪ ಮಾತ್ರ ಹೆಚ್ಚಾದಾಗ್ಯೂ ದವಸ ಕೊಳ್ಳಲು ಗತಿಯಿಲ್ಲದೆ ಕ್ಷಾಮಪೀಡಿತರಾಗಿ ಸತ್ತುಹೋಗುವುದಕ್ಕೂ ಕಾರಣವಾಗಿದೆ. ಆದಕಾರಣ ದೇಶವತ್ಸಲರಾದ ಪುಣ್ಯವಂತರೆಲ್ಲಾ ಸ್ವಲ್ಪ ನೋಟಕ್ಕೆ ಚನ್ನಾಗಿಲ್ಲದಿದ್ದರೂ ಕ್ರಯ ಸ್ವಲ್ಪ ಹೆಚ್ಚಾಗಿದ್ದರೂ ಲಕ್ಷ್ಯಮಾಡದೆ ಸ್ವದೇಶೀ ಸರಕುಗಳನ್ನೇ ಕೊಂಡು ಉಪಯೋಗಿಸುತ್ತಲೂ ಕಸಬುದಾರರಿಗೂ ಕೈಗಾರಿಕೆಯವರಿಗೂ ದ್ರವ್ಯಸಹಾಯ ಮಾಡುತ್ತಲೂ ಬರಬೇಕಾಗಿದೆ. ಅವರು ಕೆಲವುಕಾಲ ಹೀಗೆ ಮಾಡುವಷ್ಟರಲ್ಲಿ ಈ ರಾಷ್ಟ್ರದ ಕಸಬುಗಳು ಉಜ್ಜೀವಿಸಿಕೊಂಡು ಅಭಿವೃದ್ಧಿಗೆ ಬರುವುದರಲ್ಲಿ ಯಾವ ಸಂದೇಹವೂ ಇಲ್ಲ. ಸ್ವದೇಶೀ ಪದಾರ್ಥಗಳನ್ನೇ ಕೊಂಡುಕೊಳ್ಳಿ ಎಂದು ಬಡಬಗ್ಗರನ್ನು ನಿರ್ಬಂಧ ಪಡಿಸುವುದು ಸಹಜವಲ್ಲ. ಅವರಿಗೆ ಇರುವ ವರಮಾನದಲ್ಲಿ ಜೀವನ ಮಾಡಿಕೊಳ್ಳುವುದೇ ಕಷ್ಟವಾಗಿದೆ. ಭಾಗ್ಯವಂತರೂ ದೇಶವತ್ಸಲರೂ ಈ ಕಾರ್ಯವನ್ನು ಪರಾರ್ಥಕವಾಗಿಯೂ ದೇಶೋನ್ನತಿಗಾಗಿಯೂ ಮಾಡಬೇಕಾಗಿರುವುದು ಇವರು ದೇಶಾಭಿವೃದ್ಧಿಗೋಸ್ಕರ ಸ್ವಸುಖ ಸ್ವಸಂತೋಷ ಸ್ವಾನುಕೂಲ್ಯಾದಿಗಳನ್ನು ವಿಸರ್ಜನೆ ಮಾಡಬೇಕು ಈ ಭಾಗದಲ್ಲಿ ಈ ರಾಷ್ಟ್ರದ ಸಕಲ ದಿಗ್ದೇಶಗಳವರೂ ಏಕಮನಸ್ಸಿನಿಂದ ಸಾಹಸಪಟ್ಟು ಕಾರ್ಯಸಾಧನೆ ಮಾಡಬೇಕೆಂಬುದೇ ಈ ಸಮಾಜದ ಪ್ರಾರ್ಥನೆಯಾಗಿದೆ

೯. ಸ್ವರಾಜ್ಯಾಧಿಕಾರಗಳು.

ಬ್ರಿಟಿಷ್ ರಾಜ್ಯಾಂಗಗಳಾದ ಸ್ವಾಸ್ಥ್ಯಗಳಲ್ಲಿ ಯಾವ ರೀತಿ ಅಲ್ಲಿನ ಪ್ರಜೆಗಳೇ ರಾಜ್ಯಭಾರಕಾರ್ಯಗಳನ್ನು ವಹಿಸಿಕೊಂಡು ನಡಸುತ್ತಾ ಅಭಿವೃದ್ಧಿಗೆ ಬಂದಿರುತ್ತಾರೋ ಅಂಥಾ ಸಮಸ್ತ ಅಧಿಕಾರಗಳನ್ನೂ ಇಂಗ್ಲಿಷ್ ಗವರ್ನ್‌ಮೆಂಟಿನವರು ಹಿಂದುಸ್ಥಾನಕ್ಕೂ ವಹಿಸಿಕೊಡಬೇಕಾಗಿದೆ ಅಂಥಾ ಅಧಿಕಾರಗಳನ್ನು ವಹಿಸಿಕೊಡುವುದನ್ನು ಉದ್ದೇಶವಾಗಿಟ್ಟುಕೊಂಡು, ಚಕ್ರವರ್ತಿ ಸಾರ್ವಭೌಮರವರು ಈ ರಾಷ್ಟ್ರದಲ್ಲಿ ಕೆಲವು ರಾಜಕೀಯ ಬದಲಾವಣೆಗಳನ್ನು ಕೂಡಲೇ ಮಾಡಿಸಬೇಕಾಗಿರುತ್ತೆ ಅವು ಯಾವವೆಂದರೆ—(೧) ವಿಲಾಯತಿಯಲ್ಲಿ ನಡಸುವ ಸಮಸ್ತ ಪರೀಕ್ಷೆಗಳನ್ನೂ ಏಕಕಾಲದಲ್ಲಿ ಅಟ್ಟೂ ಹಿಂದುಸ್ಥಾನದಲ್ಲೂ ಕೂಡ ನಡಸಬೇಕು; ಹಿಂದುಸ್ಥಾನದಲ್ಲಿ ಮೇಲು ದರ್ಜೆಯ ಅಧಿಕಾರಗಳಿಗೆ ವಿದ್ಯಾವಂತರನ್ನು ಪರೀಕ್ಷೆಗಳ ಮೂಲಕವೇ ಚುನಾಯಿಸುವದಕ್ಕೆ ಅವಕಾಶಮಾಡಬೇಕು; ಇದಲ್ಲದೆ ಅಂಥಾ ಸಂದರ್ಭದಲ್ಲಿ ಕೀಳುದರ್ಜೆಯ ಮತ್ತು ಹಿಂದೆಬಿದ್ದಿರುವ ಜಾತಿಗಳವರಿಗೆ ಕೆಲವು ರಿಯಾಯತಿಗಳನ್ನು ತೋರಿಸಬೇಕು (೨) ಬೊಂಬಾಯಿ ಮತ್ತು ಮದರಾಸು ಗವರ್ನರುಗಳ, ವೈಸ್‌ರಾಯಿಯವರ ಮತ್ತು ಇಂಡಿಯಾ ಸ್ಟೇಟ್ ಸೆಕ್ರೆಟರಿಯವರ ಎಕ್ಸಿಕ್ಯೂಟಿವ್ ಕೌನ್ಸಿಲ್ ಸಭೆಗೆ ಈ ರಾಷ್ಟ್ರದ ವಿದ್ಯಾವಂತರನ್ನೂ ಮೆಂಬರುಗಳಾಗಿ ಚುನಾಯಿಸಿ ನೇಮಕ ಮಾಡಬೇಕು (೩) ಹಿಂದುಸ್ಥಾನದ ಸಮಸ್ತ ಮಂತ್ರಾಲೋಚನಾ ಸಭೆಗಳಲ್ಲೂ ಆದಾಯ ವ್ಯಯಗಳನ್ನು ಸರಿಯಾಗಿ ಮೇಲ್ವಿಚಾರಣೆ ನೋಡಿಕೊಳ್ಳುವುದಕ್ಕೆ ದೇಶೀಯ ದೊಡ್ಡಮನುಷ್ಯರನ್ನು ಹೆಚ್ಚಾಗಿ ನೇಮಿಸಬೇಕು (೪) ಲೋಕಲ್ ಮತ್ತು ಮ್ಯುನಿಸಿಪಲ್ ಬೋರ್ಡುಗಳ ಮೆಂಬರುಗಳಿಗೆ ವಿಲಾಯತಿಯಲ್ಲಿರುವಂಥಾ ಸ್ವಾತಂತ್ರ್ಯಗಳನ್ನೆಲ್ಲಾ ವಹಿಸಬೇಕು.

ನಾಲ್ಕನೆಯ ದಿನ ನಡೆದ ಕಾರ್ಯಗಳು

ನಾಲ್ಕನೆಯ ದಿನ ರಾಷ್ಟ್ರೀಯ ಸಭೆಯು ಬೆಳಿಗ್ಗೆ ೯ ಗಂಟೆಗೆ ಪ್ರಾರಂಭವಾಗಿ ಮೊದಲನೆಯ ದಿನದಂತೆಯೇ ಉತ್ಸಾಹದೊಡನೆ ನಡಸಲಾಯಿತು.

೧೦ ಜಮೀನು ಕಂದಾಯವು.

ರೈತನು ಸರ್ಕಾರಕ್ಕೆ ಕೊಡಬೇಕಾಗಿರುವ ಜಮೀನು ಕಂದಾಯವು ಇಷ್ಟೇ ಸರಿಯೆಂದು ನಿಷ್ಕರ್ಷೆಯಾಗದೆ ಆಗಿಂದಾಗ್ಗೆ ಬದಲಾಯಿಸಿ ಹೆಚ್ಚಿಸುತ್ತಾ ಬಂದರೆ ಯಾವ ದೇಶವೂ ಅಭಿವೃದ್ಧಿ ಹೊಂದಲಾರದು. ಹಿಂದುಸ್ಥಾನದಲ್ಲಿ ಇದೇ ಸ್ಥಿತಿ ಪ್ರಾಪ್ತವಾಗಿರೋಣದರಿಂದ ರೈತನು ತಲೆಯೆತ್ತಿಕೊಳ್ಳುವುದು ಅಸಾಧ್ಯವಾಗಿರುತ್ತದೆ. ಜಮೀನು ಸರ್ಕಾರದ್ದಲ್ಲವೆಂತಲೂ ಅದರ ಕಂದಾಯ ಮಾತ್ರ ಅವರಿಗೆ ಸಲ್ಲತಕ್ಕದ್ದೆಂತಲೂ ಹಿಂದುಸ್ಥಾನದಲ್ಲಿ ಲಾಗಾಯತಿನಿಂದಲೂ ಅಭಿಪ್ರಾಯವೂ ಆಚರಣೆಯೂ ಉಂಟು ಇದರಂತೆ ಗವರ್ನ್‌ಮೆಂಟಿನವರು ಅಂಗೀಕಾರ ಮಾಡಿ ರೈತನಿಂದ ವಸೂಲಾಗತಕ್ಕ ಕಂದಾಯ ಇಷ್ಟೇ ಎಂದು ಬಂದೋಬಸ್ತು ನಿಷ್ಕರ್ಷೆಮಾಡಿ ರೂಢಿಸಬೇಕು

ಇತರ ವಿಷಯಗಳು.

ಮಿ॥ ಗೋಪಾಲ ಕೃಷ್ಣ ಗೋಖಲೆಯವರು ಹಿಂದುಸ್ಥಾನದ ರಾಜಕೀಯ ವಿಚಾರಗಳನ್ನು ವಿಲಾಯತಿಯ ಪ್ರಜೆಗಳಿಗೂ ಅಧಿಕಾರಿಗಳಿಗೂ ತಿಳಿಯಪಡಿಸುವುದಕ್ಕಾಗಿ ಅಲ್ಲಿಗೆ ಹೋಗಿಬಂದದ್ದರಿಂದ ಅಂಥಾ ದೇಶವತ್ಸಲರಿಗೆ ಈ ಸಭೆಯವರು ಈ ರಾಷ್ಟ್ರದ ಪರವಾಗಿ ವಂದನೆಗಳನ್ನು ಸಮರ್ಪಿಸಿದರು. ವೃದ್ಧರಾಗಿದ್ದರೂ ಶರೀರ ಸೌಖ್ಯವನ್ನು ತೊರೆದು ಈ ವರುಷದ ರಾಷ್ಟ್ರೀಯ ಸಭೆಯನ್ನು ವಿಲಾಯಿತಿಯಿಂದ ಬಂದು ಪ್ರೆಸಿಡೆಂಟರಾಗಿ ನಿಂತು ನಿರ್ವಾಹ ಮಾಡಿ, ಸಕಲರಿಗೂ ಉತ್ತಮೋತ್ತಮವಾದ ಮೇಲ್ಪಂಕ್ತಿಯನ್ನು ಹಾಕಿಕೊಟ್ಟಂಥಾ ಮಿ॥ ದಾದಾಭಾಯಿ ನೌರೋಜಿಯವರನ್ನು ಬಹಳವಾಗಿ ವಂದಿಸಿದರು. ಈ ಮಹನೀಯರು ಕಡೆಯಲ್ಲಿ ಸಭಾಸದರನ್ನೂ ಹಿಂದುಸ್ಥಾನದ ಸಕಲ ಪ್ರಜೆಗಳನ್ನೂ ಕುರಿತು ಹೇಳಿದ್ದೇನೆಂದರೆ—ಸ್ವರಾಜ್ಯಾಧಿಕಾರಗಳನ್ನು ಪಡೆಯುವುದೇ ನಿಮ್ಮ ಉದ್ದೇಶವಾಗಿರಲಿ. ಈ ರಾಷ್ಟ್ರೀಯ ಸಭೆಯ ಸಕಲ ಕಾರ್ಯಗಳಿಂದಲೂ ಅದೊಂದು ಅನ್ಯವಾದ ಪಕ್ಷದಲ್ಲಿ ನಿಮ್ಮ ಶ್ರಮವೂ ನಿಮ್ಮ ಕರ್ತವ್ಯವೂ ನೆರವೇರಿತೆಂದು ತಿಳಿಯಿರಿ. ಈ ಕಾರ್ಯಭಾರವು ನಿಮ್ಮ ಮೇಲೆಯೂ ನಿಮ್ಮ ಮುಂದೆ ಬರುವ ಜನಾಂಗಗಳ ಮೇಲೆಯೂ ನೆಲಸಿರುತ್ತದೆ. ಎಲ್ಲರೂ ಸಮರಸ ಭಾವದಿಂದಲೂ ಉತ್ಸಾಹ ಪೂರ್ವಕವಾಗಿಯೂ ದೇಶ ವಾತ್ಸಲ್ಯಶೀಲರಾಗಿಯೂ ಏಕೀಭವಿಸಿ ಕಾರ್ಯಸಾಧನೆ ಮಾಡುತ್ತಾ ಬರುವವರಾಗಿ. ಆ ತರುವಾಯ ಸಭೆಯು ಮುಕ್ತಾಯಮಾಡಲ್ಪಟ್ಟಿತು.

ಬರುವ ವರುಷದ ಸಭೆ.

ಮಿ॥ ಚಿಟ್ನವಿಸ್ ಯವರು ಎದ್ದು ಸಭಾಸದರನ್ನು ಕುರಿತು ಮುಂದಿನ ವರುಷ ಕಾಂಗ್ರೆಸ್‌ಗಳೆಲ್ಲರೂ ಮಧ್ಯ ಪ್ರಾಂತ್ಯಗಳಿಗೆ ಸೇರಿದ ನಾಗಪುರಕ್ಕೆ ದಯಮಾಡಿ, ಈ ಕಾಂಗ್ರೆಸ್ ಮಹಾ ಸಭೆಯನ್ನು ನೆರವೇರಿಸಬೇಕೆಂದು ಕೇಳಿಕೊಂಡರು.

ಬಾತ್ಮೀದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಜಾಗ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ಜಾಗ ಕೊಡಲಾರೆವು.

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು—ಎಡಿ.

ಕರೆಸ್‌ಪಾಂಡೆನ್ಸ್.

ಸುಬ್ಬರಾಯನ ಪರಿಷೆ ಗಲಭೆ

ಅಯ್ಯಾ,

ಕಳೆದ ೨೪ ನೇ ತಾ ಸೋಮವಾರ ಸುಬ್ಬರಾಯನ ಪರಿಷೆಯಲ್ಲಿ ಆ ಗುಡಿಯ ಮುಂದೆ ಇರುವ ಭಾವಿಯಲ್ಲಿ ಕೈಕಾಲುಗಳನ್ನು ತೊಳೆಯಕೂಡದೆಂದು ಏರ್ಪಾಡು ಮಾಡಿದ್ದರು. ಆಗ ಇಬ್ಬರು ಒಡ್ಡರು ತಿಳಿಯದೆ ಭಾವಿಯ ಮೆಟ್ಟಲುಗಳ ಮೇಲೆ ಬಾಯಿ ಮುಕ್ಕಳಿಸಿದರು. ಆಗ ದೊಡ್ಡಬಳ್ಳಾಪುರದ ದಫೇದಾರ್ ಸುಬ್ಬಾಚಾರ್ರು ಅವರನ್ನು ಹಿಡಿದು ಹೊಡೆದು ಕಳುಹಿಸಿದರು ಆ ದಿನ ರಾತ್ರಿ ಅವರಿಬ್ಬರೂ ದಫೇದಾರರು ಇದ್ದ ಸ್ಥಳಕ್ಕೆ ಬಂದು ಒಳಕ್ಕೆ ನುಗ್ಗಿ ಒಬ್ಬ ಪೋಲೀಸಿನವನ ಕೈಮುರಿದು ದಫೇದಾರರ ಕಿವಿ ಕೊಯ್ದು ಓಡಿಹೋದರು ಅವರನ್ನು ಹುಡುಕಲಿಕ್ಕೆ ನಾಲ್ಕು ಮಂದಿ ಪೋಲೀಸಿನವರನ್ನು ನೇಮಿಸಿದಾರೆ

ಕೆ ಹನುಮಂತರಾವ್

ಬೆಂಗಳೂರಿನಲ್ಲಿ ರಾತ್ರೀ ಪಾಠಶಾಲೆಗಳು

ಅಯ್ಯಾ,

ಬೆಂಗಳೂರು ಸಿಟಿಯಲ್ಲಿ ನೆಯ್ಗೆಯವರ ಸಂಖ್ಯೆಯು ಜಾಸ್ತಿಯಾಗಿರುವದು ಸರಿಯಷ್ಟೆ ಇದರೆ ಈ ವರ್ಣಸ್ಥರಲ್ಲಿ ವಿದ್ಯಾಭಿವೃದ್ಧಿಯು ಮಾತ್ರ ಕಮ್ಮಿಯಾಗಿರುವುದು ಬಹಳ ಶೋಚನೀಯವಾಗಿದೆ ಈ ಪಂಗಡದವರು ತಮ್ಮ ಜೀವನಕ್ಕೋಸ್ಕರ ಕುಲಕಸಬಿನಲ್ಲಿ ನಿರತರಾಗಿ ವಿದ್ಯೆಕ್ಕೆ ತಕ್ಕ ಗಮನಕೊಡಲು ಅವಕಾಶದೊರೆಯದೆ ಬಹಳ ಕಷ್ಟಪಡುತ್ತಿದ್ದರು ಈ ಜನರು ಬಹಳ ದಿನಗಳಿಂದಲೂ ಅನುಭವಿಸುತ್ತಿದ್ದ ಕಷ್ಟವನ್ನು ನಿವಾರಣಮಾಡುವ ಉದ್ದಿಶ್ಯ ಪೇಷನ್ ಅಮಲ್ದಾರ್ ಮಿ॥ ರಾಮಭದ್ರಯ್ಯನವರು ಕಬ್ಬನ್ ಮತ್ತು ನಾಗರಾಯನಪೇಟೆಗಳಲ್ಲಿ ಎರಡು ರಾತ್ರೀ ಪಾಠಶಾಲೆಗಳನ್ನು ಏರ್ಪಡಿಸಿ, ನಾಲ್ಕೈದು ತಿಂಗಳ ಲಾಗಾಯ್ತು ನಡೆಯಿಸುತ್ತಿದ್ದರು ದಯಾಶಾಲಿಗಳಾದ ಗವರ್ನ್‌ಮೆಂಟಿನವರು ಸದರಿ ಪಾಠಶಾಲೆಗಳನ್ನು ಅಭಿವೃದ್ಧಿಸ್ಥಿತಿಗೆ ತರಲು ಪ್ರತಿ ತಿಂಗಳಿಗೆಯೂ ಸ್ವಲ್ಪ ಸಹಾಯದ್ರವ್ಯ ಕೊಡುವರು. ಮೇಲ್ಕಂಡ ವಿದ್ಯಾಹಿತೈಷಿಗಳಾದ ಮಿ॥ ರಾಮಭದ್ರಯ್ಯನವರು ಮಾಡಿರುವ ಉಪಕಾರವು ಚಿರಸ್ಮರಣೀಯವಾಗಿದೆ.

ಕೆ. ವಿ ರಾ.ಬ.

ಯಡೆಹಳ್ಳಿಯಲ್ಲಿ ನಡೆದ ಮೋಸಕೃತ್ಯವು.

ಅಯ್ಯಾ,

ಈ ಊರಿಗೆ ೨-೩ ತಿಂಗಳಲ್ಲಿ ಒಬ್ಬ ಮಂತ್ರವಾದಿ ಬಂದು ಒಂದು ಹೋಟಲಿನಲ್ಲಿ ಇಳಿದುಕೊಂಡಿದ್ದನು. ಇವನು ಮಂತ್ರವಾದಿಯೆಂತಲೂ, ಪಂಡಿತನೆಂತಲೂ ಹೇಳಿಕೊಂಡು, ಭೂಮಿಯಲ್ಲಿ ಇರತಕ್ಕ ಹಣವನ್ನು ತೆಗೆಯಬಲ್ಲೆನೆಂದು ಪ್ರೋತ್ಸಾಹಿಸಿ ಕೆಲವರಲ್ಲಿ ಉಪಾಯದಿಂದ ೩೦-೪೦ ರೂಪಾಯಿವರಿಗೆ ಸಂಪಾದನೆ ಮಾಡಿಕೊಂಡನು. ಕೆಲವರಿಗೆ ಔಷಧಿ ಕೊಡುವದಕ್ಕೆ ಪ್ರಾರಂಭಿಸಿ ಅದರಲ್ಲಿಯೂ ೩೦-೪೦ ರೂಪಾಯಿ ಸಂಪಾದಿಸಿಕೊಂಡು ಇದ್ದನು. ಜನಗಳಿಗೆ ಮಾತ್ರ ಪ್ರಯೋಜನವೇನೂ ಆಗಲೇ ಇಲ್ಲ. ಆದ್ದರಿಂದ ಜನಗಳು ಇವನಲ್ಲಿಗೆ ಯಾರೂ ಬರಲಿಲ್ಲ. ಈ ಮಂತ್ರವಾದಿಗೆ ಇಸ್ಪೀಟಿನ ಆಟವು ಬಹಳವಾಗಿ ರಾತ್ರಿ ಹಗಲು ಅದೇ ಕೆಲಸವಾಗಿತ್ತು. ಹೀಗೆ ಕೆಲವು ದಿವಸಗಳು ಕಳೆದ ನಂತರ ತಾನು ಸಂಪಾದಿಸಿದ ರೂಪಾಯಿಗಳೆಲ್ಲಾ ಇಸ್ಪೀಟಿನ ಆಟಕ್ಕೂ ಹೋಟೇಲಿಗೂ ಮುಗಿದು ಹೋಯಿತು. ಆ ವೇಳೆ ತನ್ನ ಮಂತ್ರವಾದಿ ಕೆಲಸವೂ ಪಂಡಿತತನವೂ ನಡೆಯದೇ ಹೋದದ್ದರಿಂದ ಆ ಮಂತ್ರವಾದಿಯು ತನ್ನಲ್ಲಿರುವ ಭಂಗಾರದ ನಾಣ್ಯಗಳನ್ನು ಮಾರಾಟಮಾಡುವದಕ್ಕೆ ಪ್ರಾರಂಭಿಸಿದನು. ಹೀಗೆ ಕೆಲವು ನಾಣ್ಯಗಳನ್ನು ಮಾರಾಟ ಮಾಡಿಕೊಂಡು ಊರಿಗೆ ಹೋಗಬೇಕೆಂದು ಹೊರಡುವ ಸಂದರ್ಭದಲ್ಲಿ ಈ ಮಂತ್ರವಾದಿಯು ಕೊಟ್ಟ ನಾಣ್ಯಗಳ ಪೈಕಿ ಒಂದು ನಾಣ್ಯವನ್ನು ಒಬ್ಬ ಗೌಡನು ಪರಗಲ್ಲಿನಿಂದ ಚನ್ನಾಗಿ ಉಜ್ಜಿದನು. ಅದು ಒಳಗೆ ಬೆಳ್ಳಿಯೂ ಮೇಲೆ ಮಾತ್ರ ಸ್ವಲ್ಪ ಭಂಗಾರವಾಗಿತ್ತು. ಅವನು ಕೂಡಲೇ ಗಾಬರಿಯಾಗಿ ಮಂತ್ರವಾದಿಯ ಹತ್ತಿರ ಬಂದು—ನಿನ್ನ ನಾಣ್ಯವನ್ನು ನೀನು ತೆಗೆದುಕೊಂಡು ನನ್ನ ರೂಪಾಯಿಗಳನ್ನು ಕೊಡು. ಇಲ್ಲದಿದ್ದರೆ ಸರ್ಕಾರಕ್ಕೆ ತಿಳಿಸುತ್ತೇನೆ ಎಂದು ಹೇಳಿದ ಕೂಡಲೆ ಅವನು ತನ್ನ ನಾಣ್ಯಗಳನ್ನು ಈಸುಕೊಂಡು ಅವನಿಗೆ ನಾಣ್ಯ ರೂಪಾಯಿಗಳನ್ನು ಕೊಟ್ಟುಬಿಟ್ಟನು. ಈ ವಿಷಯವನ್ನು ಗುಮಾನಿಯಿಂದ ನಮ್ಮ ದಫೇದಾರರು ಕಂಡುಹಿಡಿದು, ಆ ಮಂತ್ರವಾದಿಯನ್ನು ಸ್ಟೇಷನ್ನಿಗೆ ಕರೆಸಿ ವಿಚಾರಿಸಿ ಅವನ ಪೆಟ್ಟಿಗೆಯನ್ನು ತರಿಸಿ ಪಂಚಾಯಿತರ ಮೊಖ್ತಾ ಜಪತಿಮಾಡುವಲ್ಲಿ ಇನ್ನೂ ಕೆಲವು ನಾಣ್ಯಗಳು ಸಿಕ್ಕಿದವು. ಆ ನಾಣ್ಯಗಳ ಪೈಕಿ ಒಂದು ನಾಣ್ಯವನ್ನು ಕಚೇರಿಯಲ್ಲೇ ಕತ್ತರಿಸಿ ನೋಡುವಲ್ಲಿ ಒಳಗೆ ಬೆಳ್ಳಿಯೂ ಮೇಲೆ ಮಾತ್ರ ಸ್ವಲ್ಪ ಭಂಗಾರವಿತ್ತು. ಇದನ್ನು ಪಂಚಾಯಿತರ ಮೊಖ್ತಾ ಮಹಜರು ಮಾಡಿಕೊಂಡು ಅವನನ್ನು ಜಾಮೀನ್ ಮೇಲೆ ಬಿಟ್ಟಿದ್ದಾರೆ. ಈ ಮಂತ್ರವಾದಿಯು ಬೆಂಗಳೂರು ಮೈಸೂರಿನಲ್ಲಿಯೂ ಮಾರಾಟ ಮಾಡಿದ್ದಾನೆ. ಯಾರಿಗೂ ತಿಳಿದಿಲ್ಲ. ಇವನ ಜೊತೆಯಲ್ಲಿ ಒಬ್ಬ ಹೆಂಗಸು ಇದ್ದಾಳೆ.

ತಮ್ಮ ಪತ್ರಿಕಾ ವಾಚಕ.

ಅಜಾಗರೂಕತೆಯಿಂದ ಅನಾಹುತ

ಅಯ್ಯಾ,

ಈ ತಿಂಗಳು ೧ ನೇ ತಾ ೧೫-೧೬ ವಯಸ್ಸಿನ ಒಬ್ಬ ಹುಡುಗನು ಚನ್ನಪಟ್ಟಣದ ತಾಲ್ಲೂಕು ಶೆಟ್ಟಿಹಳ್ಳಿ ಗ್ರಾಮದ ರೈಲು ರಸ್ತೆ ಪಕ್ಕದಲ್ಲಿ ಕೆಲವು ದನಗಳನ್ನು ಮೇಯಿಸುತ್ತಾ ನಿಂತಿದ್ದನು. ಆ ದನಗಳಲ್ಲಿ ಕೆಲವು ಗಾಬರಿಪಡುವ ಅಭ್ಯಾಸವಿದ್ದದ್ದರಿಂದಲೋ ಏನೋ ಆ ಹುಡುಗನು ನಾಲ್ಕು ಹಸುಗಳಿಗೆ ಸುಮಾರು ಮೂರು ನಾಲ್ಕು ಮಾರು ಉದ್ದ ನೂಲು ಹಗ್ಗಗಳನ್ನು ಕಟ್ಟಿ ಆ ಹಗ್ಗಗಳ ಕೊನೆಯನ್ನು ಬಲವಾಗಿ ತನ್ನ ಎಡಗೈ ಸುತ್ತ ಸುತ್ತಿ ಹಿಡಿದು ಬಲಗೈಯಲ್ಲಿ ಒಂದು ಸಣ್ಣ ಕಡ್ಡಿ ಹಿಡಿದಿದ್ದನು. ಮಧ್ಯಾಹ್ನ ೨॥ ಘಂಟೆ ಸಮಯದಲ್ಲಿ ಬೆಂಗಳೂರಿನಿಂದ ರೈಲುಗಾಡಿಯು ಶೆಟ್ಟಿಹಳ್ಳಿಗೆ ಬರುತ್ತಾ ಸ್ಟೇಷನ್ ಸಮೀಪ ಘಟ್ಟಿಯಾಗಿಯೂ ದೀರ್ಘವಾಗಿಯೂ ಶಿಳ್ಳು ಧ್ವನಿಮಾಡಿತು. ದನಗಳನ್ನು ಹಿಡಿದ ಹುಡುಗನು ಬಹಳ ಉತ್ಸಾಹದಿಂದ ರೈಲು ನೋಡುತ್ತಾ ಆ ಕಡೆ ತಿರುಗಿಕೊಂಡಿದ್ದನು. ಹುಲ್ಲು ಮೇಯುತ್ತಿದ್ದ ದನಗಳು ರೈಲಿನ ಘೋರ ಶಬ್ದವನ್ನು ಕೇಳಿ ಗಾಬರಿಬಿದ್ದು ಹುಡುಗನ ಕಡೆಗೆ ಹಾರಿ ಓಡಿದವು. ಹುಡುಗನ ಎರಡು ಕಡೆಯಲ್ಲೂ ಹಗ್ಗಗಳು ಸುತ್ತಿಕೊಂಡಿದ್ದರಿಂದ ಅವು ಓಡುವ ರಭಸಕ್ಕೆ ಅವನು ಮೇಲ್ಮುಖ ಬಿದ್ದು ಕೈಹಗ್ಗಗಳನ್ನು ಬೇಗ ಬಿಡಿಸಲಾರದೆ ೩-೪ ಗಜ ದೂರ ಎಳೆಯಲ್ಪಟ್ಟನು. ಅದರಲ್ಲಿ ಅವನ ಬೆನ್ನೆಲ್ಲಾ ತರೆದುಹೋಯಿತು. ಸಹಾಯಕ್ಕೆ ಪಕ್ಕದಲ್ಲಿ ಯಾರೂ ಇರಲಿಲ್ಲ. ದನಗಳು ಕೊಂಚದೂರ ಓಡಿ ರೈಲಿನ ಶಬ್ದ ಕಮ್ಮಿಯಾಗಲು ನಿಂತುಕೊಂಡವು. ಆಗ ಹುಡುಗನು ಕೈ ಹಗ್ಗಗಳನ್ನು ಬಿಚ್ಚಿ ಬೆನ್ನಿನ ಗಾಯಕ್ಕೆ ಗಮನಕೊಡದೆ, ದನಗಳನ್ನು ಮನಸ್ಸಿಗೆ ಬೈಯುತ್ತಾ ಅಳುತ್ತಾ ಹೊಡೆಯುತ್ತಾ ಅಟ್ಟಿಕೊಂಡು ಓಡುತ್ತಿದ್ದನು. ಹುಡುಗನಿಗೆ ಬೆನ್ನೆಲ್ಲಾ ಗಾಯವಾಗಿ ರಕ್ತ ಸೋರುತ್ತಾ ಇತ್ತು. ದನಗಳ ಹಿಂದೆ ಓಡಿ ಬಳಲಿ ಬೆನ್ನಿನ ಗಾಯಗಳ ಬಾಧೆಯನ್ನು ತಡೆಯದೆ ಅಳುತ್ತಾ ನಿಂತಿರಲು, ಕೊಂಚದೂರದಲ್ಲಿ ಹೋಗುತ್ತಿದ್ದ ಅವನ ಬಂಧುವು ಅಲ್ಲಿಗೆ ಬಂದು ಸಮಾಚಾರಗಳನ್ನೆಲ್ಲಾ ಅವನಿಂದ ತಿಳಿಯುತ್ತಿದ್ದನು. ಕೈ ಮುಷ್ಟಿಗೂ ಬಹಳವಾಗಿ ಪೆಟ್ಟಾಗಿತ್ತು. ಆ ಗಾಯಗಳಿಗೆ ಸರಿಯಾದ ಔಷಧಿಯನ್ನು ಹಾಕಿಸಲು ಚನ್ನಪಟ್ಟಣದ ಆಸ್ಪತ್ರೆಗೆ ಹೋಗುವದು ಅನುಕೂಲವೆಂದು ತಿಳಿಸಿದ್ದಕ್ಕೆ ಅವಿವೇಕಿಯಾದ ಬಂಧುವು ಅಷ್ಟು ದೂರ ಆ ಸಣ್ಣ ಕೆಲಸಕ್ಕೋಸ್ಕರ ಹೋಗುವದು ಸರಿಯಲ್ಲವೆಂತಲೂ, ತಾನೇ ತುಂಬೇ ಸೊಪ್ಪನ್ನು ಅರೆದು ಹಾಕಿ ಮೂರು ದಿವಸದಲ್ಲಿ ವಾಸಿಮಾಡುವೆನೆಂತಲೂ ಹೇಳಿ, ಹುಡುಗನನ್ನು ಕರೆದುಕೊಂಡು ಹೋದನು. ತರುವಾಯ ಅವನ ವಿಷಯವೇನಾಯಿತೋ ತಿಳಿಯದು. ಸಕಲ ಪಟ್ಟಣಗಳಲ್ಲೂ ಜನಗಳ ಅನುಕೂಲಕ್ಕೆ ಆಸ್ಪತ್ರೆಗಳಿದ್ದಾಗ್ಯೂ ಅವುಗಳನ್ನು ಉಪಯೋಗಿಸಲು ಜನಗಳಿಗೆ ಇನ್ನೂ ಬುದ್ಧಿ ಹುಟ್ಟಲಿಲ್ಲವಲ್ಲಾ! ಎಂದು ವ್ಯಸನಪಡಬೇಕಾಗಿದೆ.

ಎಸ್. ರಾ. ಗೋ

ಇಸ್ಪೀಟಿನಿಂದಾದ ಖೂನಿ ಪ್ರಯತ್ನವು

ಅಯ್ಯಾ,

ಇದೇ ಜನವರಿ ತಾ ೪ ರಲ್ಲಿ ಬೆಂಗಳೂರು ಕಬ್ಬನ್ ಪೇಟೆಯ ಮ್ಯುನಿಸಿಪಲ್ ಗೋಡೆ ಆಚೆ ಇರುವ ಮೈದಾನದಲ್ಲಿ ಸಾಯಂಕಾಲ ಇಬ್ಬರು ಚಿಕ್ಕ ಹುಡುಗರು ಗೋಲಿ ಆಡುತ್ತಾ ಇರಲು ಇದನ್ನು ಒಬ್ಬ ಕುರುಬರವನು ಕುಳಿತು ನೋಡುತ್ತಾ ಇದ್ದನು. ಇವನಿಗೆ ಸುಮಾರು ೨೫ ವಯಸ್ಸು. ಅಕಾಸ್ಮಾತ್ತಾಗಿ ಬೇರೊಬ್ಬನು ಮೊಚ್ಚು ಹಿಡಿದು ಬಂದು, ಕೂತಿದ್ದ ಕುರುಬರವನನ್ನು ಹೊಡೆದನು. ಕುತ್ತಿಗೆಗೆ ಹಾಕಬೇಕೆಂದಿದ್ದ ಏಟು ಹ್ಯಾಗೋ ತಪ್ಪಿ ಕುರುಬನ ಬೆನ್ನಿನ ಮೇಲೆ ಬಿತ್ತು. ಆ ಮೊಚ್ಚು ಹಳೇಕಾಲದ್ದಾದ್ದರಿಂದ ದಪ್ಪವಾಗಿಯೂ ಭಾರವಾಗಿಯೂ ದಪ್ಪವಾದ ಬೆನ್ನಿನ ಕೊಕ್ಕೆಯಂತಿರುವ ತುದಿಯುಳ್ಳದ್ದಾಗಿಯೂ ಇತ್ತು. ಅದರ ಮೊನೆಯು ಅವನ ಬೆನ್ನಿನ ಮೇಲೆ ಬಿದ್ದು ಕಠಿಣವಾದ ರಂಧ್ರ ಮಾಡಿತು. ಕುರುಬನು ಗಾಬರಿಯಿಂದ ಎದ್ದು ಹಿಂತಿರುಗಿ ನೋಡುವಾಗ ಹೊಡೆದವನು ತನ್ನ ಶತ್ರು ಆಯುಧಪಾಣಿಯಾಗಿ ಬಂದಿದ್ದಾನೆಂದೂ ಲಕ್ಷಿಸದೆ ಅಲ್ಲೇ ನಿಂತು ಅವನ ಕಪಾಳಕ್ಕೆ ಬಲವಾಗಿ ಒಂದು ಪೆಟ್ಟು ಸಳೆದನು. ಆಗ ಆ ನೇಯ್ಗೆಯವನು ಮತ್ತಷ್ಟು ರೇಗಿದವನಾಗಿ ಕುರುಬನ ಕತ್ತಿನ ಮೇಲೆ ಮೊಚ್ಚಿನಿಂದ ಮತ್ತೊಂದು ಏಟು ಹಾಕಿದನು. ಅದಕ್ಕೆ ಕುರುಬರವನು ತನ್ನ ಎಡಗೈ ಒಡ್ಡಿದನು. ಆ ಏಟು ಅವನ ಎಡಗೈ ಮೇಲೆ ಬಿದ್ದು ಕೈಯನ್ನು ಎರಡು ತುಂಡುಮಾಡಿತು. ಒಳಗಿನ ಮೂಳೆ ಮುರಿದು ಬಹಳ ಘಾಯವಾಯಿತೇ ಹೊರತು ಕೈ ವಿಭಾಗವಾಗಲಿಲ್ಲ. ರಕ್ತವು ವಿಪರೀತವಾಗಿ ಬೆನ್ನಿನಿಂದಲೂ ಕೈಯಿಂದಲೂ ಹರಿಯುತ್ತಾ ಇತ್ತು. ಅಷ್ಟರಲ್ಲಿ ಪೋಲೀಸಿನವರು ಬಂದು ಇಬ್ಬರನ್ನೂ ಹಿಡಿದು, ನೇಯ್ಗೆಯವನನ್ನು ಲಾಕಪ್ಪಿನಲ್ಲಿ ಸೇರಿಸಿ ಇಬ್ಬರಿಂದಲೂ ಕೈಫಿಯತ್ತು ತೆಗೆದುಕೊಂಡರು. ಅಲ್ಲಿ ಹೊರಪಟ್ಟ ಸಂಗತಿಗಳೇನೆಂದರೆ—ಇವರಿಬ್ಬರೂ ಬಹಳ ಕಾಲದಿಂದ ಜೂಜಾಡಿ ಆಡಿ, ಕೊನೆಗೆ ನೇಯ್ಗೆಯವನು ಕುರುಬನಿಗೆ ಒಂದಾವರ್ತಿ ೨ ರೂ ತನಕ ಪೂರ್ಣವಾಗಿ ಸೋತ ಹಾಗಿದೆ. ಇಲ್ಲಿಂದ ನೇಯ್ಗೆಯವನು ಕುರುಬರವನ ಮೇಲೆ ವೈಷಮ್ಯವಿಡಲು ಶುರುಮಾಡಿದನೆಂದು ಗೊತ್ತಾಗುತ್ತದೆ. ಅನಂತರ ಆ ಕುರುಬರವನು ಗೆದ್ದ ೨ ರೂಪಾಯನ್ನು ಸೋಲುವ ತನಕ ನೇಯ್ಗೆಯವನು ಅವನನ್ನು ಬಿಡಲಿಲ್ಲ. ಹೀಗೆ ಇವರಿಬ್ಬರಿಗೂ ಬಾಕಿ ಇಲ್ಲದಂತಾಯಿತು. ಇಲ್ಲಿಗೇನೇ ನಿಲ್ಲಿಸದೆ ಪುನಃ ಆಟ ಪ್ರಾರಂಭ ಮಾಡಿದರು. ಆಗ ಕುರುಬರವನು ನೇಯ್ಗೆಯವನಿಗೆ ಆರಾಣೆ ಸೋತು—ಇನ್ನು ಸಾಕು! ಮುಂದೆ ನಾನಾಡುವುದಿಲ್ಲವೆಂದು ಹೇಳಿದನಂತೆ. ಅದಕ್ಕೆ ನೇಯ್ಗೆಯವನು—ನಾನು ನಿನಗೆ ೨ ರೂ. ಸೋಲುವ ತನಕ ಇದ್ದ ಹಾಗೆ ನೀನೂ ಇರು, ಇಲ್ಲವಾದರೆ ನಿನ್ನನ್ನು ಸುಮ್ಮನೆ ಬಿಡುವದಿಲ್ಲವೆಂದು ಎಚ್ಚರಿಸಿದನು. ಇವನು ಪ್ರಯಾಸದಿಂದ ಹ್ಯಾಗೋ ಅವನ ಸಹವಾಸ ತಪ್ಪಿಸಿಕೊಂಡು ಅವನ ಕಣ್ಣಿಗೆ ಬೀಳದೆ ತಿರುಗುತ್ತಾ ಮೇಲೆ ಹೇಳಿದ ಸ್ಥಳದಲ್ಲಿ ಕುಳಿತು ಗೋಲಿ ಆಟವನ್ನು ನೋಡುತ್ತಾ ಇರುವಲ್ಲಿ ಇವನನ್ನು ಹೊಂಚುಹಾಕುತ್ತಾ ಹಟ ಸಾಧಿಸುತ್ತಾ ಇದ್ದ ಇವನ ಶತ್ರು ಕೊನೆಗೆ ಬಂದು ಮೇಲೆ ತಿಳಿಸಿದ ರೀತಿ ಹಿಂಸೆ ಪಡಿಸಿದ್ದಾನೆ. ಪೆಟ್ಟು ತಿಂದವನು ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಲೂ, ಹೊಡೆದವನು ಹೊಂದತಕ್ಕ ಬಹುಮಾನಕ್ಕೆ ಸಿದ್ಧನಾಗುತ್ತಲೂ ಇದ್ದಾನೆ.

ಪುರುಷೋತ್ತಮ

"ಏನೋ ಮಿಶ್ರಮಾಡಿ ಊಟಕ್ಕಿಕ್ಕಿದ್ದು"

ಅಯ್ಯಾ,

ಮಂಡ್ಯ ತಾಲ್ಲೂಕು ಕೊಪ್ಪದ ಹೋಬಳಿ ಬಿದರಕೋಟೆ ಗ್ರಾಮಕ್ಕೆ ಕೀರ್ತ್ಯದ ಕಡೆಯಿಂದ ೪ ಜನ ಲಿಂಗಾಯತರೂ ಒಬ್ಬ ಒಕ್ಕಲಿಗರವನೂ ಈ ೫ ಜನಗಳೂ ೧೫ ದನಗಳನ್ನು ಅಟ್ಟಿಕೊಂಡು ಚುಂಚನಕಟ್ಟೆ ಜಾತ್ರೆಗೆ ಹೋಗಿ ಮಾರುವ ಉದ್ದಿಶ್ಯ ಈ ತಿಂಗಳು ೩ನೇ ಗುರುವಾರ ಸಾಯಂಕಾಲಕ್ಕೆ ಛಾವಡಿಗೆ ಬಂದು ತಂಗಿದರು. ಅದಕ್ಕೆ ೩ ದಿನ ಮುಂಚಿತವಾಗಿಯೇ ಒಬ್ಬ ಜಟೆ ಗಡ್ಡ ಸಹ ಬಿಟ್ಟ ಲಿಂಗಾಯತರ ಸನ್ಯಾಸಿಯೊಬ್ಬ ಅವನ ಪರಿಚಾರಕರಿಬ್ಬರು ಇವರುಗಳು ಡಿಸೆಂಬರು ೩೧ ರಲ್ಲಿಯೇ ಬಂದು ತಾವು ಸಾಕ್ಷಾತ್ ಪರಮೇಶ್ವರನ ಸಾನ್ನಿಧ್ಯದಿಂದ ಬಂದಿರುವಂತೆಯೂ ಮಕ್ಕಳಿಲ್ಲದವರಿಗೆ ಮಕ್ಕಳಾಗುವಂತೆ ವರ ಕೊಡುವಂತೆಯೂ ಭೂತ ಪ್ರೇತವನ್ನು ಬಿಡಿಸುತ್ತೇವೆಂತಲೂ ಇನ್ನೂ ಅನೇಕ ಮಾಯಕವಾದ ಮೋಸದ ಮಾತುಗಳನ್ನು ಹೇಳಿ ಜನಗಳನ್ನು ಮರುಳುಮಾಡಿ ಸುವರ್ಣಪುಷ್ಪ ಸಂಗ್ರಹಿಸುತ್ತಿದ್ದರು. ದನಗಳ ವ್ಯಾಪಾರದವರು ಬಂದು ಅಲ್ಲಿಯೇ ಸೇರಿದರು. ರಾತ್ರಿ ೯ ಸಂಜೆಯಲ್ಲಿ ತಾನು ರುದ್ರಾಭಿಷೇಕ ಮಾಡಿದ ತೀರ್ಥವನ್ನು ಆ ಐದು ಮಂದಿಗೂ ಕೊಟ್ಟು, ಹಣೆಗೆ ವಿಭೂತಿ ಹಚ್ಚಿ ಬಲವಂತ ಮಾಡಿ ೪ ಜನ ಲಿಂಗಾಯತರಿಗೆ ತನ್ನ ಅಡಿಗೆಯಲ್ಲಿ ಏನೋ ಮಿಶ್ರಮಾಡಿ ಊಟಕ್ಕಿಕ್ಕಿ ಎಲ್ಲರೂ ಒಂದೇ ಬಳಿ ಮಲಗಿದ್ದರು. ರಾತ್ರಿ ಸುಮಾರು ೧೧ ಘಂಟೆಯಲ್ಲಿ ಒಬ್ಬ ಲಿಂಗಾಯತರವನು ಎಲ್ಲಿಯೋ ಎದ್ದು ಹೊರಟುಹೋದನು. ಇವರೆಲ್ಲರಿಗೂ ನಿದ್ದೆ ಹತ್ತಿತ್ತು. ನಂತರ ಬಾಕಿ ೩ ಜನವು ಎದ್ದು ಓಡುವುದಕ್ಕೆ ಶುರು ಮಾಡಿ, ೪-೫ ಫರ್ಲಾಂಗ್ ಹೋಗುವುದರೊಳಗೆ ಹೊಟ್ಟೆಯು ಭೇರಿಯ ಹಾಗೆ ಆಗಿ ನೆಲಕ್ಕೆ ಬಿದ್ದರು. ಇವರನ್ನು ನೋಡುವುದಕ್ಕೆ ಶೂದ್ರನು ಹೊರಟ ತಕ್ಷಣದಲ್ಲಿ ಕಪಟ ಸನ್ಯಾಸಿಯು ಅವರ ಗಂಟಿನಲ್ಲಿದ್ದ ನಗದು ೧೦ ರೂಪಾಯಿ, ಅದರಲ್ಲಿದ್ದ ಪಾತ್ರೆ ಸಮೇತ ತೆಗೆದುಕೊಂಡು ಕಾಲಿಗೆ ಬುದ್ಧಿ ಹೇಳಿದನು—ಹೊಟ್ಟೆ ಉಬ್ಬಿ ಬಿದ್ದಿದ್ದ ೩ ಜನಕ್ಕೂ ಬಹಳ ವ್ಯಥೆ ಆಗಿ ಮಾತು ಆಡುವುದು ನಿಂತು, ಪ್ರಜ್ಞೆತಪ್ಪಿ ಮಾರನೇ ಶುಕ್ರವಾರ ಸಂಜೆ ವರಿಗೂ ಹಾಗೇ ನರಳುತ್ತಿದ್ದರು. ನಾಡಿಯು ನಿಂತುಹೋಗಿತ್ತು. ಬದುಕುವ ಆಸೆಯು ಬಿಟ್ಟಿತ್ತು. ಅಷ್ಟರಲ್ಲಿಯೇ ಒಬ್ಬ ವೈದ್ಯರು ಈ ಅವಸ್ಥೆಯನ್ನು ಕಂಡು ಪ್ರಜ್ಞೆ ತಪ್ಪಿದ್ದ ೩ ಮಂದಿಗೂ ಹೊಕ್ಕುಳಿಗೆ ಏನೋ ಧೃತಿ ಸವರಿದ ೪ ನಿಮಿಷಕ್ಕೆ ಹೊಟ್ಟೆಯು ಸುರಿದು ಸ್ವಲ್ಪ ಜ್ಞಾನವಾಗುತ್ತಾ ಬಂತು. ಮೊದಲು ತಪ್ಪಿಸಿಕೊಂಡವನನ್ನು ಶುಕ್ರವಾರ ಸಂಜೆಯಲ್ಲೂ ಶನಿವಾರ ಬೆಳಗಿನಿಂದ ಸಂಜೆವರಿಗೂ ಶ್ರಮಪಟ್ಟು ಎಷ್ಟು ಹುಡುಕಿದರೂ ಸಿಕ್ಕಲಿಲ್ಲ. ಹತ್ತಿದ್ದ ಪಾತ್ರೆಯು ಮತ್ತು ರೂಪಾಯಿಗಳಿದ್ದ ಗಂಟು ನೋಡುವಲ್ಲಿ ಮಾಯವಾಗಿತ್ತು. ಮುಂದಕ್ಕೆ ಪ್ರಯಾಣಮಾಡುವುದನ್ನು ಬಿಟ್ಟು ಓಡಿಗೆ ಗಾಡಿ ಮಾಡಿಕೊಂಡು ದನಗಳು ಹಿಂದಕ್ಕೆ ಹೊಡಿಸಿಕೊಂಡು ಒಬ್ಬನ ವಿಯೋಗದ ದೆಸೆಯಿಂದ ಅತಿ ದುಃಖದೊಡನೆ ತಮ್ಮ ಗ್ರಾಮಕ್ಕೆ ತಿರುಗಿದರು. ಊರಿನಲ್ಲಿ ದಾಸದಂಡವಾಗಿ ೮-೧೦ ರೂಪಾಯಿ ಮತ್ತು ಬಟ್ಟೆಬರೆ ಕೊಟ್ಟಿದ್ದವರು ಬಾಯಿಮುಚ್ಚಿಕೊಂಡು ಒಬ್ಬರ ಮುಖ ಒಬ್ಬರು ನೋಡುತ್ತಾ ಮೋಸಹೋಗಿ ಸುಮ್ಮನಾದರು.

ಎಚ್. ಕೆ.

ಜೈನ ವೈದೀಕ ವಿದ್ಯಾರ್ಥಿಗಳಿಗೆ ವೇತನ.

ಅಯ್ಯಾ,

ಶ್ರವಣಬೆಳಗುಳದ ಶ್ರೀ ವಾಣೀವಿಲಾಸ ಪಾಠಶಾಲೆಯಲ್ಲಿ ೨೪ ನೇ ತಾ. ಸೋಮವಾರ ರಾತ್ರಿ ಒಂದು ಜೈನ ಸಭೆಯು ತ್ತು. ಸಂಸ್ಕೃತ ಪಾಠಶಾಲಾಧ್ಯಕ್ಷರಾದ ವೇ॥ ಶ್ರೀ ದೋಬಲಿ ಜಿ ಶಾಸ್ತ್ರಿಗಳೂ ಅನೇಕ ವಿದ್ಯಾರ್ಥಿಗಳೂ ಸ್ಥಳಿಕ ಸಾಹುಕಾ ಇತರರೂ ಸಭೆಯನ್ನಲಂಕರಿಸಿದ್ದರು. ಈ ಪಾಠಶಾಲಾ ಕಟ್ಟಡ ಕರಾದ ಸಾಹುಕಾರ್ ಗೌ. ಪ ಧರಣಯ್ಯನವರು ಸಭಾಧ್ಯ ದ್ದರು. ಮೈಸೂರಿಂದ ಕಾರ್ಯಾರ್ಥವಾಗಿ ಇಲ್ಲಿಗೆ ಬಂದಿದ್ದ ಶ್ರೀಮಂತ ಲಕ್ಷ್ಮೀಪತಯ್ಯನವರ ಕುಮಾರರಾದ ಮ.ರಾ. ವಿ ಮಾನಯ್ಯನವರು ಇನ್ನೂ ಬಾಲ್ಯ ವಯಸ್ಸಿನವರಾದರೂ ಇ ಸಭೆಯಲ್ಲಿ ವಿದ್ಯಾಭಿವೃದ್ಧಿ ವಿಷಯವಾಗಿ ಧೈರ್ಯದಿಂದಲೂ ದಿಂದಲೂ ಮಾಡಿದ ಉಪನ್ಯಾಸವೂ ಎಫ್. ಎ ಕ್ಲಾಸ್ ವಿದ್ಯಾ ನೂರಪ್ಪನವರು ತಮ್ಮ ಸಹೋದರರಾದ ಜೈನ ವಿದ್ಯಾರ್ಥಿ ಜೈನರ ವೃದ್ಧಿಗೆ ಕಾರಣರಾಗಬೇಕೆಂದು ಎಲ್ಲರಿಗೂ ಮನ ಕರು ಮಾಡಿದ ಉಪನ್ಯಾಸವೂ ಸಭಿಕರಿಗೆಲ್ಲಾ ಸಂತೋಷವನ್ನುಂಟುಮ ಪ್ರ. ಜೈನ ವೈದೀಕ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡಲು ಹಾಯರಾಗಿರುವದನ್ನು ಶ್ರೀಮಂತ ವರ್ಧಮಾನರು ಅರಿತು ಇವ ಸಂಸ್ಕೃತಾಭ್ಯಾಸಿಗಳನ್ನಾಗಿ ಮಾಡಿ ಜೈನಮತ ಪ್ರಚಾರಕ್ಕೆ ರನ್ನಾಗಿ ಮಾಡಬೇಕೆಂದುದ್ದೇಶಿಸಿ ಸಂಸ್ಕೃತಾಭ್ಯಾಸಿಗಳಾದ ವೈದೀಕ ವಿದ್ಯಾರ್ಥಿಗಳಿಗೆ ಸಾಲಿಯಾನ ವೇತನ ಕೊಡುವದಕ್ಕಾಗಿ ವರುಷವೂ ವರುಷ ಒಂದಕ್ಕೆ ನೂರು ರೂಪಾಯಿನಂತೆ ಚಂದಾ ರೂ ಗಿ ದರ್ಮ ಸಹಾಯ ಮಾಡುವದಾಗಿ ಆ ಶ್ರೀಮಂತ ಕುಮಾ ಹೇಳಿದರು. ಇದೇ ಮೇರೆ ವರುಷ ೧ ಕ್ಕೆ ಚಂದಾ ರೂಪವಾಗಿ ಸಾ ಕಾರರುಗಳಾದ ಮ॥ ಗೌ ಪ ಧರಣಯ್ಯನವರು (ಸಭಾಧ್ಯಕ್ಷ ೫೦ ರೂಪಾಯಿ, ಮ॥ ಗೌ ಕ ಪದ್ಮರಾಜಯ್ಯನವರು ೫೦ ರೂಪಾಯಿ, ಮ॥ ಭು ಪ ಸಂಪಯ್ಯನವರು ೧೨ ರೂಪಾಯಿ, ಚ ಚಂದ್ರಯ್ಯನವರು ೧೦ ರೂಪಾಯಿ, ಮ॥ ಶೆಟ್ಟಿ ಧರ ನವರು ೧೦ ರೂಪಾಯಿ, ಈ ರೀತಿ ಪ್ರತಿ ವರುಷವೂ ಧರ್ಮ ಯ ಮಾಡುವದಾಗಿ ತಿಳಿಸಿದರು. ಅನಂತರ ಚ ಚಂ ಧರಮ್ಯ ನವರು ಧರ್ಮ ಸಹಾಯ ಕರ್ತರನ್ನೂ ಇತರರನ್ನೂ ವಂದಿಸಿದರು. ಯು ಮುಕ್ತಾಯವಾಯಿತು. ಈ ಶ್ರೀಮಂತ ಕುಮಾರರು ಬಾಲ್ಯ ವಯಸ್ಸಿನಲ್ಲಿಯೇ ಜೈನರಲ್ಲಿ ವಿದ್ಯಾ ಪ್ರೋತ್ಸಾಹಕರಾಗಿ ದನ್ನೂ ಇನ್ನು ಸ್ವಲ್ಪ ಕಾಲದಲ್ಲೇ ಜೈನ ಬೋರ್ಡಿಂಗ್ ಸ್ಕೂ (ವಿದ್ಯಾರ್ಥಿನಿಲಯ) ಮುಂತಾದ ಜೈನ ವಿದ್ಯಾಭಿವೃದ್ಧಿಗೆ ಸಾಧಕ ಕಾರ್ಯಗಳನ್ನು ಮಾಡುವದಕ್ಕೆ ಪ್ರಯತ್ನಿಸುತ್ತಿರುವದನ್ನೂ ನೋ ದರೆ ಇವರು ಮುಂದೆ ಜೈನಾಭಿವೃದ್ಧಿಗೆ ತುಂಬಾ ಸಹಾಯಕರಾಗು ರಲ್ಲಿ ಸಂಶಯ ತೋರುವದಿಲ್ಲ. ಆದರೆ ಇವರಂತೆಯೇ ಜೈನಾ ಭಿಮಾನಿಗಳೂ ಜೈನ ಧನಿಕರೂ ಇಂಥಾ ಜೈನ ವಿದ್ಯಾ ಪ್ರೋತ್ಸಾ ರವಾದ ಸತ್ಕಾರ್ಯಗಳಿಗೆ ತಮ್ಮ ತಮ್ಮ ನಿಜ ಉದಾರಾಶ್ರಯ ತೋರಿಸುತ್ತಾ ಬಂದರೆ ನಾವು ಅಭ್ಯುದಯ ಹೊಂದುವದರಲ್ಲಿ ಯವಿಲ್ಲ.

ಗುಪ್ತ

ನಂಜನಗೂಡು ನಾಲೆ ನೀರಿನ ಕಷ್ಟ

ಅಯ್ಯಾ,

ನಂಜನಗೂಡು ಕಪಿನಿ ಹೊಳೆಗೆ ದಿವಾನ್ ಲೇಟ್ ಶೇಷಾದ್ರಿಯ್ಯರ ಬಡವರ ಸಹಾಯಕ್ಕಾಗಿ ತೆಗೆಸಿದ ೨ ನಾಲೆಗಳ ಪೈಕಿ ಉತ್ತರದ ಯಲ್ಲಿ ನೀರಿನ ಪ್ರಕಾರು ಸ್ವಲ್ಪವೂ ಇಲ್ಲದೆ ಬಡವರಿಗೆ ಜೀವನ ತ್ತಾ ಇದೆ. ಇದಕ್ಕೆ ಸಮಾನವಾದ ದಕ್ಷಿಣ ನಾಲೆಯು ಆಗಾಗ್ಗೆ ಹೋಗುತ್ತಾ ಇತರರಿಗೆ ತನ್ನ ನೀರನ್ನು ಸರಿಯಾಗಿ ವಿಲೇ ಬಹಳ ತೊಂದರೆಮಾಡುತ್ತಾ ಇದೆ. ಇದಕ್ಕೆ ಮೊದಲನೇ ಪಥ ಗಾರಿಯು ಬಲವಾಗಿ ಆಗಲಿಲ್ಲವೆಂತ ಊಹಿಸಬಹುದು. ಆಗಾಗ್ಗೆ ವೇಳೆ ಗವರ್ನಮೆಂಟಿನವರು ಕರುಣವಿಟ್ಟು ಕಾಂಗಾರಿ ಮಾಡಿಸಿದ ಬಹಳ ದ್ರವ್ಯ ಲುಕ್ಸಾನಾಗುತ್ತದೆಯೇ ಹೊರತು ತೃಪ್ತಿಕರವಾಗಿ ಗಾರಿ ನಡಿಯುವದಿಲ್ಲ. ಇದಲ್ಲದೆ ಅನೇಕ ದೊಡ್ಡ ಮನುಷ್ಯರು ಉದ್ಯೋಗಸ್ಥರೂ ಅನೇಕ ಜಮೀನ್ ಮಾಡಿದವರಿಂದ ನೀರನ್ನು ಮಾಡುವ ಅಧಿಕಾರಿಗಳು ಆ ದೊಡ್ಡ ಮನುಷ್ಯರುಗಳ ದಾಕ್ಷಿಣ್ಯಕ್ಕೆ ಗಾಗಿ ಬಡವರ ಜಮೀನುಗಳು ಗ್ರೇಡು ಲೆವಲ್ಲಿಗಿಂತ ಹಳ್ಳವಾಗಿದ್ದ ಅವಕ್ಕೆ ನೀರು ಸಪ್ಲೈ ಸಲೀಸು ಆಗದೆ ಒಣಗುತ್ತಾ ಇದೆ. ನಾಲೆ ಕೆಳಗಿನ ಜಮೀನ್‌ದಾರ್ರು ಪಾಡೇ ಹೀಗಾಗಿರುವಲ್ಲಿ ಬ್ರಾಂಚು ಗಳ ಜಮೀನ್‌ದಾರ್ರು ಪಾಡೇನು? ಇದು ವಿವರಿಸಲಸಾಧ್ಯವಾಗಿದೆ. ದಕ್ಷಿಣ ನಾಲೆಗೇನೆ ಪ್ರಖ್ಯಾತರಾದ ಇಂಜನಿಯರು ಮ॥ ಅಯ್ಯ ಮಯ್ಯರನವರು ಬಡವರಾದ ನಮ್ಮಲ್ಲಿ ಕೃಪೆಯಿಟ್ಟು ಕಲ್ಲಹಳ್ಳಿ ಕತ್ತವಾಡಿಪುರದ ವರಿವಿಗೆ ೪ ಮೈಲಿ ಬ್ರಾಂಚು ನಾಲೆಯನ್ನು ತೆಗೆ ಸಿದರು. ಇದರ ಕೆಳಗೆ ಸುಮಾರು ೩೦೦ ಎಕರೆ ವರಿಗೂ ತರಿ ತ್ತಾ ಇರಬಹುದು. ಇವುಗಳಿಗೆ ನೀರು ಸಪ್ಲೈ ಕಮ್ಮಿಯಾದ್ದ ಚೀಫ್ ಇಂಜನಿಯರ ವರಿಗೆ ಪ್ರಕಾಶಮಾಡಿದ್ದರ ಮೇಲೆ ಬಿಚ್ಚಲು ಅಲ್ಲದೆ ಪುನಃ ಎರಡು ಸಲ್ಲಿಯನ್ನು ಇಡಿಸಿದರು. ದುರದೃಷ್ಟದಿಂದಲೂ ಡಣಾಯಕನಪುರದ ರೈತರ ಆರ್ಭಟದಿಂದ ಅದೇ ವರುಷ ಒಂದು ವಾರಕ್ಕೆ ಎರಡು ನಿಮಿಷ ಸಹಾ ನಮ್ಮ ಜಮೀ ಗಳು ನೀರು ಕಾಣದೆ ಒಣಗಿ ಹೋಯಿತು. ಈ ವರುಷವಾದ ನಾಲಾ ಬಂದು ಕಾಂಗಾರಿ ಸುತರಾಂ ಇಲ್ಲದೆ ಇದ್ದಾಗ್ಯೂ ಮಣೇಗಾರ್ರು ಕರುಣದಿಂದ ಅರ್ಧ ಮಟ್ಟಿಗಾದರೂ ಬೆಳಸಾಗಿದೆ. ಗಾರಿ ಮಾಡಿಸಿಕೊಡಬೇಕೆಂದು ಕೇಳಿದರೆ ಬ್ರಾಂಚುಗಳ ರೈತರೇ ಮಾಡಿಕೊಳ್ಳಬೇಕೆಂದು ಇಂಡಾರ್ಸದಂತೆ ನಮ್ಮ ಗ್ರಾ ಶ್ಯಾನಭಾಗರಿಂದ ತಿಳಿದು ಬಂತು. ನಮ್ಮ ಗ್ರಾಮದ ರೈತರು ಬಡವರಾಗಿ ೩-೮ ವರ್ಷದಿಂದಲೂ ದಂಡದ ಕಂದಾಯ ಕಟ್ಟ ರ್ಷ ಸಹಾ ತೆತ್ತು ಸಾಲಗಾರರಾಗಿ ಹೊಟ್ಟೆ ತುಂಬಾ ಕೂಳಿ ಈ ಬ್ರಾಂಚಿಗೆ ಕಡೆ ಗುದ್ದವೂ ಕಡೆ ಜಮೀನ್ ಇರುವದರಿಂದ

…ಸುರಿದ ಒಡನೆಯೇ ಗುಡ್ಡದಿಂದ ಮಣ್ಣು ಕಲ್ಲು ವಗೈರೆ ಭರ್ತಿಯಾಗಿ ನಮ್ಮ ಊರಿಗೆ ನೀರೇ ಬರುವದಿಲ್ಲ ಹೀಗಿರುವಲ್ಲಿ ಬಡವರಾದ …ನಾವು ಹ್ಯಾಗೆ ಕಾಂಗಾರಿ ಮಾಡಿಕೊಳ್ಳೋಣ! ಮೇಲ್ಭಾಗದ ಕಲ್ಲಹಳ್ಳಿ …ಯಗಳು ಅನೇಕ ದೊಡ್ಡ ಮನುಷ್ಯರೇ ಆಗಿದಾಗೆ. ಅವರುಗಳ …ವಿಗೆ ೫—೬ ಕಡೆ ಮನಸ್ಸು ತೋರಿದಂತೆ ನಲ್ಲಿಯನ್ನು ಇಟ್ಟು …ರುವದರಿಂದ ಬರುವ ಅಲ್ಪಸ್ವಲ್ಪ ನೀರು ಸಹಾ ಅವರುಗಳ …ಗಿ ನಾವು ನೀರಿಗಾಗಿ ಆಕಾಶವನ್ನೂ ಹೊಳೆಯನ್ನೂ ನೋಡಿ …ವ ಹೊತ್ತು ಬಂದಿದೆ. ಅವರುಗಳಿಗೆ ನೀರು ಸಲೀಸು ಹೋಗು…ದ ಅವರುಗಳ ಪುಕಾರು ನಿಂತುಹೋಯಿತು. ಊರಾದರೂ … ಹೋಗಿ ಕೂಲೀನಾಲಿಯಿಂದ ಜೀವನವನ್ನು ಮಾಡೋಣವೆಂದ …ಗಾರರ ಕಾಟ ಬಹಳವಾಗಿರುವದರಿಂದ ನಮ್ಮನ್ನಾಳುವ … ಮತ್ತು ದಿವಾನ್ ಪದವಿಯನ್ನು ಅಲಂಕರಿಸಿರುವ ಮೆ॥ ವಿ. ಪಿ. …ರವರಾಯರು ಬಡವರಾದ ನಮ್ಮ ಮೇಲೆ ದೃಷ್ಟಿಯಿಟ್ಟು ಪ್ರತಿವ… ಈ ಟ್ಯಾಂಕಿಗೆ ಸರಿಯಾದ ಸಾಲಾಟಾದು ಕಾಂಗಾರಿ ನಡಿಸಿ …ರೈತರಿಗೂ ಮತ್ತು ದೊಡ್ಡವರಿಗೂ ಸರಿಯಾದ ಹಂಚಿಕೆಯಿಂದ …ಕೊಡಿಸಿ ನಮ್ಮಗಳಿಗೆ ಅನ್ನಾಹಾರ ಕಾಪಾಡಬೇಕೆಂದು ಪ್ರಾರ್ಥಿ…ನೆ

ಕತ್ಯಾಡಿಪುರ ಒಬ್ಬ ರೈತ

ಸ್ಥಳೀಕ ವರ್ತಮಾನಗಳು.

ಮಂಗಳೂರು.—ಒಂದು ತಿಂಗಳಿಂದಲೂ ರೈತರು ಮಳೆಯನ್ನು …ನೋಡುತ್ತಾ ಇದ್ದರು ದೇವರ ಕೃಪೆಯಿಂದ ಕಳೆದ ತಿಂಗಳ ತಾ ೨೭ …೨೯ರ ವರಿಗೆ ಭಾರಿ ಮಳೆ ಬಂದಿರುವದನ್ನು ನೋಡಿ ರೈತರು …ಸಂತೋಷದಲ್ಲಿ ಮುಳುಗಿದಾರೆ.—ಇಲ್ಲಿಗೆ ೧೪ ಮೈಲು ದೂರ …ಕುಂಬಳೆಗೆ ಹೊಗೆ ಬಂಡಿಯು ಬಂದಿರುತ್ತದೆ ಇದೇ ಜನವರಿ …ಲ್ಲಿ ಮಂಗಳೂರಿಗೆ ಹೊಗೆ ಬಂಡಿ ಬರುವ ಸುದ್ದಿ ಇತ್ತು. ಆದ…ಗ ಬರುವ ಮಾರ್ಚ ತಿಂಗಳ ವರಿಗೆ ಇಲ್ಲಿಗೆ ಬರುವದಿಲ್ಲವೆಂದು …ತ್ತಾರೆ.—ಪೇಟೆಯಲ್ಲಿ ದಾರಣೆವಾಸಿಗಳು ಚಡಾವಾಗಿದೆ ಪ್ಲೇಗು …ಗಳು ಸ್ವಲ್ಪ ಕಮ್ಮಿಯೆಂತ ಕೇಳುತ್ತೇನೆ ಇಲ್ಲಿ ಇಲಿಗಳನ್ನು …ದ ಮುನಸಿಪಾಲಟಿಯವರು ದುಡ್ಡು ಕೊಡುತಾರೆಂತ ಕೇಳಿ …ಲ್ಲಿ ಎಲ್ಲರೂ ಇಲಿಗಳನ್ನು ಕೊಲ್ಲುತ್ತಾರೆ—ಇಲ್ಲಿ ಒಂದು …ರುವ ಹುಲಿಯನ್ನು ಪಂಜರದಲ್ಲಿ ಹಾಕಿ ಕೆಲವರು ತಂದಿದಾರೆ …ಇಲ್ಲಿ ರೈಲುವೆ ಹೋಟೆಲ್ ಎಂಬ ಹೆಸರಿನಲ್ಲಿ ಒಂದು ಹೋಟೆ…ಆಗಿದೆ. ದಿವಸ ಹೋದಹಾಗೆಲ್ಲಾ ಇಲ್ಲಿ ಜವಳಿ ಅಂಗಡಿಗಳು ಹೆಚ್ಚು…ತ್ತವೆ. ಇಲ್ಲಿಂದ ಉಡುಪಿಗೆ ಹೋಗುವ ಪ್ರಯಾಣಸ್ಥರ …ಕೆಲವು ಮೋಟಾರ್ ಗಾಡಿಗಳನ್ನು ಇಡುತ್ತಾರೆಂತ ಸುದ್ದಿ ಇದೆ. …ರೆ ಪ್ರಯಾಣಸ್ಥರಿಗೆ ತುಂಬಾ ಅನುಕೂಲವೇ ಸರಿ

…ಮಂಗಳೂರು.—ಇಲ್ಲಿನ ಮುನಿಸಿಪಾಲಿಟಿಯವರು ಊರ …ಪೆಕ್ಷನ್ ಮಾಡಿಸುತ್ತಲಿದಾರೆ. ಈ ಕೆಲಸವು ಮುಗಿಯುವದ… ಒಂದೆರಡು ತಿಂಗಳಾಗಬಹುದಾಗಿ ಕಾಣುತ್ತದೆ. ಜನರು … ಬಂದು ತಮ್ಮ ಮನೆಗಳನ್ನು ಸೇರಿಕೊಳ್ಳುತ್ತಿರುವರು. …ಸಿಪಾಲಿಟಿಯವರು ಮನೆಗಳನ್ನು ತೊಳದು ಶುದ್ಧಿಮಾಡಿಸುವದರ… ಎಷ್ಟು ಆಸಕ್ತಿಯುಳ್ಳವರಾಗಿದಾರೋ ಅಷ್ಟುಮಟ್ಟಿಗೂ ಊರಿನ …ಗಳನ್ನು ಶುಚಿಯಾಗಿಡುವದು ಒಳ್ಳೇದು. ಕೆಲವು ಕಡೆ ಚರಂ…ನ್ನು ಕಟ್ಟಿರುವದು ಸರಿಯಾಗಿಲ್ಲವಾದ್ದರಿಂದ ಯಾವಾಗಲೂ ನೀ…ನಿಂತೇ ಇರುತ್ತದೆ ಆ ನೀರಿನಲ್ಲಿ ದುರ್ವಾಸನೆ ಹುಟ್ಟುವದು …ವಲ್ಲದೆ ಸೊಳ್ಳೆಗಳು ಮೊಟ್ಟೆಯಿಟ್ಟು ವೃದ್ಧಿಹೊಂದಿ ಅಲ್ಲಿಂದ …ಬಂದು ಆ ಚರಂಡಿಪಕ್ಕದ ಅಂಗಡಿಗಳಲ್ಲಿ ವ್ಯಾಪಾರಮಾಡುವವರ… ವ್ಯಾಪಾರಕ್ಕೆ ಹೋಗಿ ನಿಲ್ಲುವವರನ್ನೂ ಕಚ್ಚಿ ಮಲೇರಿಯಾ …ಕೆಟ್ಟ ಜ್ವರವನ್ನುಂಟುಮಾಡುವದಕ್ಕೂ ಅವಕಾಶವಾಗೋಣದ …ಗಳನ್ನು ಪಾಕ್‌ಮಾಡುವ ಕಾಲದಲ್ಲಿಯೇ ಚರಂಡಿಗಳನ್ನೂ ಇ…ಳಿತ ಗಲೀಜಾಗಿರುವ ಭಾಗಗಳನ್ನೂ ಪಾಕ್‌ಮಾಡಿಸುವದು ಅವಶ್ಯ —ಇಲ್ಲಿನ ಇಂಗ್ಲಿಷ್ ಸ್ಕೂಲಿನಲ್ಲಿ ೧೯ಕ್ಕೆ ೫ ಹುಡುಗರು ಲೋ…ವರ್ ಸೆಕೆಂಡರಿಯಲ್ಲಿ ಪ್ಯಾಸಾಗಿರುವದಾಗಿ ವರ್ತಮಾನ ಸುಮಾರು …ತಿಂಗಳಿಂದಲೂ ಮುಚ್ಚಿಬಿಟ್ಟದ್ದ ಸ್ಕೂಲುಗಳು ಈ ತಿಂಗಳಿನ ೨೦ನೆ ತಾ ಗಳಲ್ಲಿ ತೆರೆಯಲ್ಪಡುವವು —ರೋಮನ್ ಕೆಥೋಲಿಕ್ ಸಭೆಯ ಅಧ್ಯಕ್ಷರಾದ ಲಾರ್ಡ್ ಬಿಷಪ್ ಬೇಲಿ ಯವರು ೨೮ ನೆ … ಇಲ್ಲಿಗೆ ಬಂದು ತಮ್ಮ ಮತಸಂಬಂಧವಾದ ಕಾರ್ಯಗಳನ್ನು …ಪೂರೈಸಿಕೊಂಡು ಈ ತಿಂಗಳ ಮೊದಲನೆ ವಾರ ಬೆಂಗಳೂರು ಕಡೆ ಪ್ರಯಾಣವಾದರೆಂದು ವರ್ತಮಾನ —ನಮ್ಮ ಡೆಪ್ಯುಟಿ ಕಮಿಷನರ… ಈ ಹೊತ್ತೋ ನಾಳೆಯೋ ಕಡೂರು ಕಡೆ ಸರ್ಕೀಟು ಹೊರ…ಡುವರಾಗಿದಾರೆ.

ಇಂಡಿಯಾ ದೇಶದ ವೃತ್ತಾಂತಗಳು.

…ಗೋನ್ ಪಟ್ಟಣದ ಚೈನಾ ಜನರು ವಾಸಿಸುವ ಭಾಗದಲ್ಲಿ ಕಳೆ…ತಿಂಗಳು ೨೫ನೇ ತಾ ರಾತ್ರಿ ಸುಮಾರು ೬೦ ಮನೆಗಳು ಬೆಂಕಿ …ಸುಟ್ಟುಹೋದವು. ಇದರಿಂದ ಮಾಲೀಕರಿಗೆ ಒಂದೂವರೆ ಲಕ್ಷ…ಕ್ಕಿಂತಲೂ ಹೆಚ್ಚಾಗಿ ನಷ್ಟವಾಗಿದೆ

❖❖❖❖

ಕಲ್ಕತ್ತೆಯಲ್ಲಿ ಕಳೆದ ಬುಧವಾರ ವೈಸ್‌ರಾಯಿ ಲಾರ್ಡ್ ಮಿಂ…ಟೋ ಅವರು ಮೈಸೂರು, ಆಲ್ವಾರ್ ಮತ್ತು ಕೂಚ್ ಬೇಹಾರ್ …ಮಹಾರಾಜರುಗಳಿಗೂ ಬರೋಡಾ ಸಂಸ್ಥಾನದ ಗಾಯಕವಾಡ ಮಹಾ…ರಾಜರಿಗೂ ಭಾರೀ ಔತಣವನ್ನು ಮಾಡಿಸಿದರು.

❖❖❖❖

ಕಲ್ಕತ್ತೆಯಲ್ಲಿ ಕೈಗಾರಿಕೆ ಮತ್ತು ಕಸಬುಗಳ ಸಮ್ಮೇಳನವನ್ನು …ಪೂರ್ವಕವಾಗಿ ಪ್ರಾರಂಭಿಸುವುದಕ್ಕೆ ಹೋಗಿದ್ದ ಬರೋಡಾ …ನದ ಗಾಯಕವಾಡ ಮಹಾರಾಜರವರು ಕಳೆದ ಶನಿವಾರ ಕಲ್ಕ…ಬಿಟ್ಟು ತಮ್ಮ ರಾಜಧಾನಿಗೆ ಪ್ರಯಾಣವಾದರು.

ಹಿಂದುಸ್ಥಾನದಲ್ಲಿ ಕಳೆದ ವಾರ ಪ್ಲೇಗು ತಗಲಿದವರು ೧೧,೪೩೯ ಮಂದಿ; ಮೃತಪಟ್ಟವರು ೯,೧೧೧ ಜನರು ಬೊಂಬಾಯಿ ಆಧಿಪತ್ಯದಲ್ಲಿ ೨,೫೫೫ ಜನರೂ, ಆಗ್ರ ಮತ್ತು ಅಯೋಧ್ಯೆಗಳಲ್ಲಿ ೨,೧೫೪ ಮಂದಿಯೂ, ಪಂಜಾಬಿನಲ್ಲಿ ೨,೪೮೭ ಜನರೂ ಮಧ್ಯ ಪ್ರಾಂತ್ಯಗಳಲ್ಲಿ ೯೪೧ ಜನರೂ ಕಳೆದ ವಾರ ಪ್ಲೇಗಿನಿಂದ ಸತ್ತು ಹೋದರು.

❖❖❖❖

ಕಲ್ಕತ್ತೆಯಲ್ಲಿ ವಿಕ್ಟೋರಿಯಾ ಚಕ್ರವರ್ತಿನಿಯವರ ಪ್ರತಿಮೆಯನ್ನು ನಿಲ್ಲಿಸಿರುವರಷ್ಟೆ. ಅದರ ತಲೆಯ ಮೇಲಿದ್ದ ಕಿರೀಟವನ್ನು ಯಾರೋ ಮುರಿದುಹಾಕಿರುವರೆಂದು ತಂತೀ ವರ್ತಮಾನ ಬಂದಿದೆ. ಪದ್ಧತಿಯಂತೆ ಆ ದಿನ ರಾತ್ರಿ ಪಹರೆಯವರಲ್ಲಿ ಒಬ್ಬನು ಕಾವಲಿಗೆ ಬರದೇ ಹೋದದ್ದರಿಂದ ಈ ಕೆಟ್ಟ ಕೃತ್ಯವು ನಡೆದಿರುವದು.

❖❖❖❖

ಕಲ್ನಾ ಡಿಸ್ಟ್ರಿಕ್ಟಿನ ನರಹರಿ ಪುರದಲ್ಲಿ ಈಚೆಗೆ ಒಂದು ಸಹಗಮನವು ನಡೆಯಿತು ಒಬ್ಬಾನೊಬ್ಬ ಹಿಂದೂ ದೊಡ್ಡ ಮನುಷ್ಯನು ವಾಂತಿ ಭೇದಿ ರೋಗದಲ್ಲಿ ಕಾಲವಾದನು. ಗವರ್ನಮೆಂಟಿನವರು ಸಹಗಮನಕ್ಕೆ ಅಡ್ಡಿ ಮಾಡುವರೆಂದು ತಿಳಿದು, ಅವನ ಹೆಂಡತಿಯು ತನ್ನ ಗಂಡ ಸತ್ತ ಮಾರನೇ ದಿನ ಆತ್ಮಹತ್ಯವನ್ನು ಮಾಡಿಕೊಂಡು ತಾನೂ ಕಾಲವಾದಳು.

❖❖❖❖

ಕಲ್ಕತ್ತೆಯಲ್ಲಿ ಸಕಲ ವಸ್ತು ಪ್ರದರ್ಶನ ಶಾಲೆಯು ಇನ್ನೂ ತೆರೆದಿರುವುದಷ್ಟೆ ಅಲ್ಲಿ ಕಳೆದ ಶನಿವಾರ ಒಂದು ಭಾರೀ ಕುಸ್ತಿಯು ನಡೆಯಿತು ಅದರಲ್ಲಿ ಗೆದ್ದವನಿಗೆ ೭,೫೦೦ ರೂಪಾಯಿ ಬಹುಮಾನವನ್ನೂ ಒಂದು ಬೆಳ್ಳಿಯ ಬಿರುದನ್ನೂ ಕೊಟ್ಟರು. ಇದೂ ಅಲ್ಲದೆ ಸಾವಿರ ರೂಪಾಯಿನ ವರೆಗೂ ಬಹುಮಾನವುಳ್ಳ ಅನೇಕ ಸಣ್ಣ ಕುಸ್ತಿಗಳೂ ನಡದವು.

❖❖❖❖

ಅಫ್ಘಾನಿಸ್ಥಾನದ ಅಮೀರರು ಆಗ್ರಾ ಪಟ್ಟಣಕ್ಕೆ ಬಂದಾಗ್ಗೆ ಸೈನಿಕರ ಕವಾತು ಕಸರತ್ತುಗಳನ್ನು ಮಾಡಿಸಿ ತೋರಿಸಬೇಕೆಂದು ನಿಶ್ಚಯಿಸಿ ಕೆಲವು ಸೈನಿಕರಿಗೆ ಲಟ್‌ಪುರಿ ಎಂಬ ಪಟ್ಟಣದಲ್ಲಿ ಮನೆಗಳನ್ನು ಕಟ್ಟಿಸಿ ಕೊಟ್ಟಿದ್ದರು. ಆ ಮನೆಗಳ ಹತ್ತಿರ ಇದ್ದ ಕಬ್ಬಿನ ಸಿಪ್ಪೆಗೆ ಕಳೆದ ವಾರ ಬೆಂಕಿ ಬಿದ್ದು ಒಂದು ಮನೆಯೂ ಅದರಲ್ಲಿದ್ದ ಸಿಪಾಯಿಗಳ ಸಾವಿರಾರು ದಿರಸುಗಳೂ ಎಲ್ಲಾ ಸುಟ್ಟುಹೋದವು.

❖❖❖❖

ಮುರ್ಷಿದಾಬಾದಿನ ನವಾಬರು ಕಳೆದ ತಿಂಗಳು ೨೭ ನೇ ತಾ. ಕಾಲವಾದರು. ಉತ್ತರ ಕ್ರಿಯೆಗಳು ಯಥಾವಿಧಿಯಾಗಿ ನಡೆದವಲ್ಲದೆ ಅವರು ಸತ್ತುಹೋದ ಮೂರು ಗಂಟೆಗಳೊಳಗಾಗಿ ಅವರ ಶವವನ್ನು ಬಹಳ ವಿಜೃಂಭಣೆಯಿಂದ ಮೆರವಣಿಗೆ ಮಾಡಿದರು. ಈಗ ಆ ಶರೀರಕ್ಕೆ ಸುಗಂಧ ವಸ್ತುಗಳನ್ನು ತುಂಬಿ ಅರೇಬಿಯಾದಲ್ಲಿನ ಕರ್ಬೆಲ ಎಂಬ ಊರಿಗೆ ತೆಗೆದುಕೊಂಡು ಹೋಗಿ ದಫನ್ ಮಾಡುವವರಾಗಿದಾರೆ.

❖❖❖❖

ಬೆಂಕಿಪುರದ ಮುಸಾನರ್ ಎಂಬ ಜಾತಿಯ ಜನರು ಇನ್ನು ಮೇಲೆ ಇಲಿಗಳನ್ನು ಕೊಲ್ಲಲೂ ತಿನ್ನಲೂ ಕೂಡದೆಂದು ಪಂಚಾಯತಿ ಮಾಡಿ ಕಟ್ಟುಮಾಡಿಕೊಂಡಿರುತ್ತಾರೆ. ಈ ಕಾಯಿದೆಗೆ ವಿರೋಧವಾಗಿ ನಡೆಯುವವರನ್ನು ಜಾತಿಯಿಂದ ಹೊರಗೆ ಹಾಕುವುದಾಗಿಯೂ ತಿಳಿಸಿರುವರು. ಪ್ಲೇಗು ಸೋಂಕುಳ್ಳ ಇಲಿಗಳನ್ನು ಕೊಂದು ತಿನ್ನುವದರಿಂದ ರೋಗವು ತಮಗೆ ವ್ಯಾಪನೆಯಾಗುವದೆಂದು ತಿಳಿದು ತಮ್ಮ ಆ ದುಷ್ಟ ಪದ್ಧತಿಯನ್ನು ಬಿಟ್ಟುಬಿಟ್ಟದಾರೆ

❖❖❖❖

ಬೊಂಬಾಯಿ ಪಟ್ಟಣದಲ್ಲಿ ಒಬ್ಬ ಸಾಹುಕಾರನು ಮೂರು ಅಂತಸ್ತುಳ್ಳ ಒಂದು ಮನೆಯಲ್ಲಿ ಹತ್ತಿಯನ್ನು ತುಂಬಿದ್ದನು. ಕಳೆದ ಗುರುವಾರ ಆ ಮನೆಗೆ ಬೆಂಕಿ ಬಿದ್ದು ಹತ್ತಿಯೆಲ್ಲಾ ಸುಟ್ಟುಹೋಯಿತು ಮನೆಯಲ್ಲಿ ಕೆಲಸ ಮಾಡುತ್ತಿದ್ದ ಆರು ಜನರ ಪೈಕಿ ನಾಲ್ವರಿಗೆ ಪೂರಾ ಗಾಯವಾದುದರಿಂದ ಅವರನ್ನು ಆಸ್ಪತ್ರೆಗೆ ತೆಗೆದುಕೊಂಡು ಹೋದರು ಬೆಂಕಿಯನ್ನು ಆರಿಸಬೇಕೆಂದು ಪ್ರಯತ್ನಪಟ್ಟ ಒಬ್ಬ ಯೂರೋಪಿಯನ್ನನ ತಲೆಯ ಮೇಲೆ ಆ ಮನೆಯ ಭಾವಣಿಯು ಬಿದ್ದು ಅವನು ಮೃತನಾದನು

❖❖❖❖

ದಕ್ಷಿಣ ಹಿಂದುಸ್ಥಾನದ ರೈಲ್ವೆ ಕಂಪನಿಯ ಮ್ಯಾನೇಜರಾದ ಸರ್ ಹೇರಿ ಕೆಂಬರ್‌ರವರು ಈ ತಿಂಗಳು ೨೬ ನೇ ತಾರೀಖಿಗೆ ಇಂಗ್ಲಾಂಡಿನಿಂದ ಸಿಲೋನ್ (ಲಂಕಾ) ದ್ವೀಪಕ್ಕೆ ಬರುವರು. ಅವರು ಇಲ್ಲಿನ ರೈಲ್ವೆಯನ್ನು ಪರೀಕ್ಷಿಸಿ ಪ್ರಯಾಣಸ್ಥರ ಅನುಕೂಲಕ್ಕಾಗಿ ಕೆಲವು ಸಣ್ಣ ರೈಲು ರಸ್ತೆಗಳನ್ನು ಹಾಕುವದಕ್ಕೆ ಮದರಾಸ್ ಗವರ್ನಮೆಂಟಿನವರ ಸಂಗಡ ಆಲೋಚನೆ ಮಾಡುತ್ತಾರೆ. ಮುಖ್ಯವಾಗಿ ದಕ್ಷಿಣ ಹಿಂದುಸ್ಥಾನದಿಂದ ಸಿಲೋನ್ ದ್ವೀಪದ ವರಿಗೂ ರೈಲನ್ನು ಹಾಕುವದೇ ಕೆಂಬರ್‌ರವರ ಅಭಿಮತವಾಗಿದೆಯೆಂದು ತಿಳಿದು ಬಂದಿದೆ.

❖❖❖❖

ಕಳೆದ ಇಪ್ಪತ್ತೈದು ವರುಷಗಳಿಂದ ಬರೋಡಾ ಸಂಸ್ಥಾನದ ಗಾಯಕವಾಡ ಮಹಾರಾಜರವರು ತಮ್ಮ ದೇಶದ ಪ್ರಜೆಗಳ ಅಭಿವೃದ್ಧಿಗೆ ಸಹಕಾರಿಗಳಾದ ಕಾನೂನುಗಳನ್ನೂ ಏರ್ಪಾಡುಗಳನ್ನೂ ಜಾರೀಗೆ ತಂದಿರುವುದರಿಂದ ಅವರ ಹೆಸರನ್ನು ಶಾಶ್ವತಪಡಿಸಬೇಕೆಂದು ಬರೋಡೆಯ ಪ್ರಜೆಗಳು ಕಳೆದ ತಿಂಗಳು ೨೪ನೇ ತಾ ಒಂದು ಸಭೆ ಮಾಡಿದ್ದರು ದಿವಾನರವರು ಅಗ್ರಾಸನವನ್ನು ವಹಿಸಿ ಮಹಾರಾಜರ ಹೆಸರಿನಲ್ಲಿ ಯಾವದಾದರೂ ಧರ್ಮ ಕೆಲಸವನ್ನು ನಡೆಯಿಸಬೇಕೆಂತಲೂ ಅವರ ಪ್ರತಿಮೆಯನ್ನು ಮಾಡಿ ಇಡಿಸಬೇಕೆಂತಲೂ ತೀರ್ಮಾನಿಸಿ ಒಂದು ಫಂಡನ್ನು ಏರ್ಪಡಿಸಿದರು ಅದಕ್ಕೆ ಆಗಲೇ ೧೯,೦೦೦ ರೂಪಾಯಿ ಚಂದಾ ಕೂಡಿರುತ್ತದೆ

❖❖❖❖

ಹಿಂದುಸ್ಥಾನದಲ್ಲೆಲ್ಲಾ ಬಹಳ ಬಲಿಷ್ಟನೆಂದು ಹೆಸರು ಹೊಂದಿರುವ ರಾಮಮೂರ್ತಿ ಎಂಬ ೩೦ ವಯಸ್ಸಿನ ಬ್ರಾಹ್ಮಣ ಭಟ್ಟಯು ಹೈದರಾಬಾದಿಗೆ ಹೋಗಿ ತನ್ನ ಶಕ್ತಿ ಸಾಮರ್ಥ್ಯಾದಿಗಳನ್ನು ಜನರಿಗೆ ಪ್ರದರ್ಶನಮಾಡುತ್ತಿರುವನು ಅವನು ವಿಜಯನಗರದ ನಿವಾಸಿಯು, ಕಣ್ಣಿನಿಂದ ನೋಡಿದ ಹೊರತು ಅವನ ಅದ್ಭುತ ಕಾರ್ಯಗಳು ನಿಜವೆಂದು ನಂಬುವುದಕ್ಕೆ ಆಗುವುದಿಲ್ಲ. ಅವನನ್ನು ಮಲಗಿಸಿ ೫೦ ಮಣಗಳಷ್ಟು ಭಾರವುಳ್ಳ ಕಲ್ಲನ್ನು ಎದೆಯ ಮೇಲೆ ಹೊರಿಸಿ ಆ ಕಲ್ಲು ಚೂರುಚೂರಾಗುವ ವರೆಗೂ ಸುತ್ತಿಗೆಗಳಿಂದ ಹೊಡೆಯುವರು. ಆ ನಂತರ ಅವನು ಅರ್ಧ ಅಂಗುಲಕ್ಕಿಂತಲೂ ದಪ್ಪವಾದ ಸರಪಣಿಯಿಂದ ಕೆಲವು ಸುತ್ತು ಹಾಕಿ ಕಟ್ಟಿಸಿಕೊಂಡು ಒಂದೇ ಸಲಕ್ಕೆ ಸರಪಣಿಯನ್ನು ಚೂರು ಮಾಡುವನು. ಅವನು ಇನ್ನೂ ಆಶ್ಚರ್ಯಕರವಾದ ಒಂದು ಕಾರ್ಯವನ್ನು ಮಾಡುತ್ತಾನೆ. ಸುಮಾರು ೧೪೦ ಮಣಗಳಷ್ಟು ಭಾರವುಳ್ಳ ಒಂದು ಕಲ್ಲನ್ನು ಆರು ಜನರು ಎಳೆದು ತಂದು ಬಹಳ ಪ್ರಯಾಸದಿಂದ ಎತ್ತಿ ರಾಮಮೂರ್ತಿಯ ಬರೀ ಎದೆಯ ಮೇಲೆ ಇರಿಸುವರು. ಆ ಮೇಲೆ ನಾಲ್ಕು ಜನರು ಸ್ವಲ್ಪ ಕಾಲದ ವರೆಗೆ ಕಲ್ಲಿನ ಮಧ್ಯದಲ್ಲಿ ಚಮ್ಮಟಿಗೆಗಳಿಂದ ಕುಟ್ಟುವರು. ಅನಂತರ ರಾಮಮೂರ್ತಿಯು ಆ ಕಲ್ಲನ್ನು ಬಹಳ ಹಗುರವಾದ ಪದಾರ್ಥದಂತೆ ಕೆಳಕ್ಕೆ ಕೆಡವಿ ಮೇಲಕ್ಕೆ ಏಳುತ್ತಾನೆ

ವಿದೇಶ ವರ್ತಮಾನಗಳು.

ದಕ್ಷಿಣ ಅಮೇರಿಕದ ಚಿಲಿ ರಾಜ್ಯದಲ್ಲಿರುವ ಅರೀಕ ಎಂಬ ಪಟ್ಟಣದ ಬಹು ಭಾಗವು ಈಚೆಗೆ ಪ್ರಾಪ್ತವಾದ ಭೂಕಂಪದಿಂದ ಹಾಳಾಯಿತೆಂದು ತಿಳಿದುಬಂದಿದೆ.

❖❖❖❖

ಅಫ್ಘಾನಿಸ್ಥಾನದ ಅಮೀರರ ಆರನೇ ಮಗನಾದ ಮಹಮುದ್ ಉಸ್ಮಾನ್ ಎಂಬ ನಾಲ್ಕು ವರ್ಷದ ಹುಡುಗನು ಕಳೆದ ವಾರ ಜಲಾಲಾಬಾದಿನ ಹತ್ತಿರ ಜ್ವರದಿಂದ ಮೃತಪಟ್ಟನು.

❖❖❖❖

ಅನ್ಯೋನ್ಯಸಂಸ್ಥಾನಗಳಲ್ಲಿ ಒಂದಾದ ಕಾನ್ಸಾಸ್ ಭಾಗದಲ್ಲಿ ಎರಡು ರೈಲುಗಾಡಿಗಳು ಎದುರುಬದುರಾಗಿ ಬಂದು ಬಡಿದಾಡಿದ್ದರಿಂದ ಅನಾಹುತವಾಗಿ ಪ್ರಯಾಣಸ್ಥರ ಪೈಕಿ ೩೦ ಜನರು ಸತ್ತುಹೋದರು. ಇಪ್ಪತ್ತು ಜನರಿಗೆ ಗಾಯಗಳಾಗಿವೆ.

❖❖❖❖

ಹಿಂದುಸ್ಥಾನದಿಂದ ಹೊರಟ ಐವತ್ತು ಸಾವಿರ ಮುಸಲ್ಮಾನ ಯಾತ್ರಿಕರು ಮಕ್ಕಾ ಪಟ್ಟಣವನ್ನು ತಲುಪಿದರೆಂತಲೂ ಅವರಿಗೆ ನೀರು ಸರಬರಾಜು ಮಾಡುವದಕ್ಕೆ ಸರಿಯಾದ ಏರ್ಪಾಡು ಮಾಡಿಕೊಟ್ಟಿಲ್ಲವೆಂತಲೂ ಅರೇಬಿಯಾದಿಂದ ವರ್ತಮಾನ ಬಂದಿದೆ.

❖❖❖❖

ಲಂಡನ್ ಪಟ್ಟಣದಲ್ಲಿ ಬಹಳ ಸೊಗಸಾದ ಒಂದಾನೊಂದು ನಾಟಕಶಾಲೆಯು ಡಿಸೆಂಬರ್ ತಿಂಗಳ ಆದಿಭಾಗದಲ್ಲಿ ಬಹಿರಂಗವಾಗಿ ಹರಾಜು ಹಾಕಲ್ಪಟ್ಟಿತು. ಒಬ್ಬ ದೊಡ್ಡಮನುಷ್ಯನು ಫೋಟೋಫೋಟಯಿಂದ ೧೭,೯೨,೫೦೦ ರೂಪಾಯಿಗೆ ಆ ನಾಟಕಶಾಲೆಯನ್ನು ಕೊಂಡುಕೊಂಡಿರುತ್ತಾನೆ.

❖❖❖❖

ಇಂಗ್ಲಂಡಿನಲ್ಲೂ ಯೂರೋಪಿನಲ್ಲೂ ಆನೆಕಲ್ಲಿನ ಮಳೆಯು ಬೀಳುತ್ತಿರುವದು. ಸ್ಕಾಟ್ಲೆಂಡಿನಲ್ಲಾದರೋ ಮಂಜು ಗಡ್ಡೆಗಳಿಂದ ಕೂಡಿದ ಬಿರುಗಾಳಿಯು ಬೀಸಿ, ಪರ್ಥ್ ಮತ್ತು ಆಬರ್ಡೀನ್ ಪಟ್ಟಣಗಳ ಮಧ್ಯೆ ರೈಲು ರಸ್ತೆಯು ಕಟ್ಟಿಹೋಗಿದೆ. ರೈಲು ರಸ್ತೆಯನ್ನು ಸರಿಮಾಡುವುದಕ್ಕೆ ತೆಗೆದುಕೊಂಡುಹೋದ ಮೂರು ಯಂತ್ರಗಳೂ ಗಾಳಿಯ ಏಟನ್ನು ತಡೆಯಲಾರದೆ ಬಿದ್ದುಹೋದವು.

❖❖❖❖

ಅನ್ಯೋನ್ಯ ಸಂಸ್ಥಾನಗಳ ಮುಖ್ಯ ಪಟ್ಟಣವಾದ ವಾಷಿಂಗ್‌ಟನ್ ನಗರದ ಹತ್ತಿರ ಸಾಮಾನುಗಳನ್ನು ಸಾಗಿಸಿಕೊಂಡು ಹೋಗುತ್ತಿದ್ದ ಒಂದು ರೈಲು ಗಾಡಿಯೂ ಪ್ರಯಾಣಿಕರು ಇದ್ದ ಇನ್ನೊಂದು ಗಾಡಿಯೂ ಎದುರುಬದುರಾಗಿ ಬಂದು ಢಿಕ್ಕಾ ಹೊಡೆದದ್ದರಿಂದ ಸುಮಾರು ಇಪ್ಪತ್ತು ಜನಕ್ಕಿಂತ ಹೆಚ್ಚಾಗಿ ಸತ್ತು ಹೋದರೆಂತಲೂ ನೂರಾರು ಜನರು ಗಾಯಪಟ್ಟರೆಂತಲೂ ತಿಳಿದು ಬಂದಿದೆ.

❖❖❖❖

ಕಾಬೂಲಿನ ಮಾರ್ಗವಾಗಿ ಬೊಖಾರಕ್ಕೆ ರಫ್ತಾಗುವ ಸುಮಾರು ೬೦೦ ರೂಪಾಯಿನಷ್ಟು ಟೀ ಎಲೆಯನ್ನು ಹೊರುವ ಪ್ರತಿಯೊಂದು ಒಂಟೆಯ ಹೊರೆಗೂ ಅಫ್ಘಾನಿಸ್ಥಾನದ ಗವರ್ನಮೆಂಟಿನವರು ಇದುವರೆಗೂ ಮೂವತ್ತು ರೂಪಾಯಿ ಸುಂಕವನ್ನು ವಸೂಲು ಮಾಡುತ್ತಿದ್ದರು. ಈ ಸುಂಕವನ್ನು ಹೆಚ್ಚಿಸಬೇಕೆಂದು ಈಚೆಗೆ ಒಬ್ಬ ಅಧಿಕಾರಿಯು ಅಭಿಪ್ರಾಯ ಪಟ್ಟದ್ದಕ್ಕೆ ಅಮೀರರು ಇಷ್ಟಪಡಲಿಲ್ಲ.

❖❖❖❖

ಈಗ್ಗೆ ಎರಡು ವರುಷಗಳ ಮುಂಚೆ ನೆಜ್ದ್ ಪಟ್ಟಣದಲ್ಲಿ ಜನಗಳು ಗಲಭೆಯನ್ನುಂಟುಮಾಡಿದ್ದಾಗ ತುರ್ಕಿಯವರು ದಂಗೆಯನ್ನು ಅಡಗಿಸುವದಕ್ಕೆ ನಾಲ್ಕು ಸಾವಿರ ಸೈನ್ಯವನ್ನು ಅಲ್ಲಿಗೆ ಕಳುಹಿಸಿದ್ದರು. ಅವರ ಪೈಕಿ ಒಂದು ಸಾವಿರ ಸೈನಿಕರು ಮಾತ್ರ ಹಿಂತಿರುಗಿ ಬಂದಿರುವರು. ಉಳಿದವರಲ್ಲಿ ಎರಡು ಸಾವಿರ ಜನರು ರೋಗದಲ್ಲಿ ಬಿದ್ದು ಸತ್ತುಹೋದರು. ಮಿಕ್ಕವರು ಸೈನ್ಯವನ್ನೇ ಬಿಟ್ಟು ತಪ್ಪಿಸಿಕೊಂಡು ಹೋದರು.

❖❖❖❖

ಚೀನಾ ರಾಜ್ಯದಲ್ಲಿರುವ ಮಹಮ್ಮದೀಯರು ಈಜಿಪ್ಟ ರಾಜ್ಯದಲ್ಲಿ ಹುಡುಗರಿಗೆ ವಿದ್ಯೆ ಕಲಿಸುವ ಏರ್ಪಾಡುಗಳನ್ನು ತಿಳಿದುಕೊಂಡು ಬರುವದಕ್ಕಾಗಿ ತಮ್ಮಲ್ಲಿ ಕೆಲವರನ್ನು ಚುನಾಯಿಸಿ ಅಲ್ಲಿಗೆ ಕಳುಹಿಸಿರುತ್ತಾರೆ ಈಜಿಪ್ಟಿನಲ್ಲಿ ತಮಗೆ ಅವಶ್ಯಕವಿರುವ ಸಂಗತಿಗಳನ್ನು ತಿಳಿದುಕೊಂಡನಂತರ ಅವರು ತುರ್ಕಿ ರಾಜ್ಯಕ್ಕೂ ಹೋಗಿಬರುವರು. ಅವರು ಚೀನಾಕ್ಕೆ ಹಿಂತಿರುಗಿ ಬಂದ ಮೇಲೆ ಅಲ್ಲಿನ ಮಹಮ್ಮದೀಯರಿಗೆ ಮತಸಂಬಂಧವಾದ ವಿಷಯಗಳನ್ನು ಕಲಿಸಬೇಕೆಂದಿರುತ್ತಾರೆ.

❖❖❖❖

ಜರ್ಮನೀ ರಾಜ್ಯದಲ್ಲಿ ಬಹಳ ಪ್ರಸಿದ್ಧನಾದ ಹೆನ್ನಿಂಗ್ ಎಂಬ ಕೊಲೆಗಾರನನ್ನು ಈಚೆಗೆ ತಲೆ ಕಡಿದುಹಾಕಿದರು ಕಪ್ಪು ಬಟ್ಟೆ ಹಾಸಿರುವ ಬೆಂಚಿನ ಮೇಲೆ ಜಡ್ಜಿಯವರೂ ಅವರ ಬಳಿ ಕೋರ್ಟಿನ ಮುನಷಿಯೂ ಕೂತುಕೊಂಡು ಅಪರಾಧಿಯು ಕೋರ್ಟಿನ ಒಳಕ್ಕೆ ಬಂದ ಕೂಡಲೇ ಅವನಿಗೆ ಮರಣದಂಡನೆ ವಿಧಿಸಿರುವದನ್ನು ಓದಿ ಕೇಳಿದರು. ಅನಂತರ ಒಂದು ಕಲ್ಲಿನ ಮೇಲೆ ಅಪರಾಧಿಯನ್ನು ಮಲಗಿಸಿ ಕೊಡಲಿಯಿಂದ ಕತ್ತನ್ನು ಕತ್ತರಿಸಿದರು ಈ ವಿಧವಾಗಿ ಮರಣದಂಡನೆಯನ್ನು ವಿಧಿಸುವದು ಇನ್ಯಾವ ರಾಜ್ಯದಲ್ಲೂ ಪ್ರಚಾರದಲ್ಲಿಲ್ಲ.

ಉತ್ತಮವಾದ ಸಿದ್ಧೌಷಧಗಳು

12

ಆರ್ಸೋಯದಿಂದಲೂ ಬಂದ ನಮ್ಮ ಔಷಧಿಗಳು ಲಕ್ಷಾಂತರ ರೋಗಿಗಳಿಗೆ ಉಪಯೋಗಿಸಿ ಗುಣ ಕಂಡುಬಂದವುಗಳಾಗಿವೆ ಅನೇಕಲ್ಲಾ ಮೊಹ್ಲೆಗಳಿಂದ ತಂಗಾರ್ಡ್ಮಿದಿರುತ್ತೆ ತಿಂಗಳೊಂದಕ್ಕೆ ಅನೇಕರು ಔಷಧಿ ಸೇವಿಸುತ್ತಲೂ ಇರುವ ಸಂಗತಿ ಎಲ್ಲರಿಗೂ ಗೊತ್ತಿದೆ

(೧) ಸಂಜೀವಿನಿ ತೈಲ ಸರ್ವಸ್ತ ಮಹಾ ರೋಗಗಳಿಗೂ ಕಾಲು ಸೀಸೆಗೆ ೦-೮-೦ (೨) ಭೃಂಗರಾಜ ತೈಲ ಎಲ್ಲಾ ವಿಧದ ಶಿರೋರೋಗಗಳಿಗೆ ಕಾಲು ಸೀಸೆಗೆ ೦-೧೦-೦ (೩) ಭೇದಿ ಎಕ್ಸ್ಕಿ ಸುಖಪ್ರವರ್ತಿಯಾಗುವುದು ಕಾಲು ಸೀಸೆಗೆ ೦ ೧೦ ೦ (೪) ಮಹಾಲೇಹ ದಾತ ಶಕ್ತಿಯನ್ನುಂಟುಮಾಡಿ ಪುಷ್ಟಿಮಾಡುತ್ತೆ ಸೇರಿಗೆ ೨-೦-೦ (೫) ಸೌಭಾಗ್ಯ ಶಂಕರಾಮೃತ ಲೇಹ ಇದರ ಸೇವನೆಯಿಂದ ಬಾಣಂತಿಸನ್ನಿ ಕ್ಷಯ ಮೊದಲಾದ ರೋಗಗಳನ್ನು ಪರಿಹರಿಸುತ್ತೆ ಸೇರಿಗೆ ೨ ೦ ೦ ಹುಚ್ಚುನಾಯಿ, ಕೊಳತ ಮಂಡಲ ಇವುಗಳಿಂದುಂಟಾದ ಪ್ರಬಲ ರೋಗಗಳಿಗೂ ಚಿಕಿತ್ಸೆಯು ದೊರೆಯುವುದು

ನಮ್ಮ ಕ್ಯಾಟಲಾಗು ತರಿಸಿ ನೋಡಿ—ಪಂಡಿತ ಕೃಷ್ಣಶೆಟ್ಟಿಸ್ವ, ನಿವಿಲ ರೆ ಕೀಗಾಹರಿ ವೈದ್ಯಶಾಲಾ, ದೊಡ್ಡಪೇಟೆ, ಮೈಸೂರು

ಹಿಂದುಸ್ಥಾನದಲಿ ಮಕ್ಕಳು

ಬಹಳ ಉಷ್ಣರಾಜ್ಯವಾದದ್ದರಿಂದ ನಾನಾ ಬೇಜಬಾಧೆಗಳನ್ನು ಸಹಿಸಿಕೊಂಡು ಬೆಳೆಯಬೇಕಾಗಿದೆ

ಅವರ ಸಣ್ಣ ಸಣ್ಣ ಮೂಳೆಗಳೂ ಮಾಂಸಖಂಡಗಳೂ ಸರಿಯಾಗಿ ಬಲಹೊಂದಿ ಬೆಳೆಯುವುವಕ್ಕೆ ಅವರಿಗೆ ಚಿಕ್ಕಂದಿನಿಂದಲೇ ಉಪಕಾರಿಯಾದ ಸೇವನಾ ಔಷಧವನ್ನು ಕೊಡುವುದು ಆವಶ್ಯಕ

SCOTT'S EMULSION 57-13

(ಸ್ಕಾಟ್ಸ್ ಇಮಲ್‌ಷನ್)

ಎಂಬೀ ಸೇವನಾ ಔಷಧದಲ್ಲಿ ಮಕ್ಕಳ ಸಮಸ್ತ ಅಂಗಗಳನ್ನೂ ಬಲಪಡಿಸಿ ಬೆಳೆಸತಕ್ಕಂಥಾ ಬಹು ಉತ್ಕೃಷ್ಟವಾದ ಗುಣಗಳಿರುತ್ತವೆ

ಇದಕ್ಕೆ ಸಮಾನವಾದದ್ದು ಮತ್ತಾವುದೂ ಇಲ್ಲ

ಈ ಔಷಧವನ್ನು ಸೇವನೆ ಮಾಡುತ್ತಾ ಬಂದ ಒಡನೆಯೇ ಅದರ ಗುಣಗಳು ಕಂಡು ಬರುವುವು

ಕೈಯಿಂದ ಮುಟ್ಟದೇನೇ ತಯಾರಾದದ್ದು

ಎಲ್ಲಾ ಔಷಧ ವ್ಯಾಪಾರಸ್ಥರಲ್ಲೂ ವಿಕ್ರಯಿಸುತ್ತಿದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್, ಔಷಧಗಳ ಕಾರ್ಖಾನೆ, ಲಂಡನ್, ಇಂಗ್ಲೆಂಡ್,

ಮೀನ ಮನುಷ್ಯ ಇರುವ ಈ ಔಷಧದ ಗುರುತು

ಸನ್ ೧೯೦೭ ನೇ ಇಸವಿಯ

151 5

ಎಂ ನಂ॥ ಎಫ್ ನಂ॥ ಬಿ ನಂ॥ ಸಿ ನಂ॥ ಹೆಚ್ ನಂ॥ ಡಿ ನಂ॥

ಪಂಚಾಂಗ ಸಮೇತವಾದ ಇಂಗ್ಲೀಷು—ಕನ್ನಡ

ಪಾಕೆಟ್ ಡೈರಿಗಳು

ಈ ಡೈರಿಗಳು ವರ್ತಕರು, ಲಾಯರುಗಳು, ಕಂಟ್ರಾಕ್ಟರು ದೊಡ್ಡವರುಗಳು, ಖಿಲ್ಲೆಯವರು ಸಮಸ್ತರಿಗೂ ಉಪಯೋಗವಾಗಿರುತ್ತವೆ ಇವುಗಳಲ್ಲಿ ಅಡಕವಾಗಿರುವ ವಿಷಯಗಳು —ಪ್ರವಂಗ ಸಂ॥ ಪಂಚಾಂಗ, ಗ್ರಹ ಕಂಡಲಿ ಸಹಿತ, ಕ್ಯಾಲೆಂಡರು, ಹಬ್ಬಗಳು, ರಜಾ ದಿನಗಳು ರೈಲ್ ಛಾರ್ಜು, ಕೋರ್ಟ್ ಫೀಜು, ಪೋಸ್ಟೆಜ್ ರುಸುಂ, ಸ್ಟಾಂಪು, ರಿಜಿಸ್ಟರ್ ಫೀಜುಗಳು, ಪೋಸ್ಟಾಫೀಸಿನ ಎಲ್ಲಾ ವಿಷಯಗಳು ಜಮೀನುಗಳ ಅಳತೆ, ತೂಕಗಳು, ಗೌರಿ ಪಂಚಾಂಗ, ಪುಷ್ಪ ಶಾಸ್ತ್ರ, ಹಲ್ಲಿ ಬಿದ್ದ ಫಲ, ರಾಹುಕಾಲ, ಗುಳಿಕಕಾಲ, ವಾರಶೂಲ, ದಿನ ಸಂಬಳದ ಪಟ್ಟಿ ದೋಟಿ ಲೆಕ್ಕ, ಜಮಾಖರ್ಚಿನಪಟ್ಟಿ, ಇನ್ನೂ ಅನೇಕ ವಿಷಯಗಳಿವೆ ಉತ್ಕೃಷ್ಟವಾದ ಕಾಗದ, ರೂಲು ಹಾಕಿದೆ, ಸೀಮೆ ಸಾಮಾನ್ ಬೈಂಡು, ಚಿನ್ನ ಬೆಳ್ಳಿ ನಮೂನೆ ಗಿಲೀಟು ಮಾಡಿದೆ

ಎ ನಂಬರ್ ಚಿಕ್ಕಸೈಜು ೩ ಆಣೆ ಸಿ ನಂಬರು ದೊಡ್ಡಸೈಜು ೬ ಆ
ಎಫ್ ,, ೩ ,, ಎಚ್ ,, ,, ೭ ,,
ಬಿ , ಮುಚ್ಚಳದ್ದು ೫ ,, ಡಿ ,, ಮುಚ್ಚಳದ್ದು ೮ ,,

ಪೋಸ್ಟ ಛಾರ್ಜು ಬೇರೆ ಒಂದು ನಮೂನೆಯ ೧೨ ಡೈರಿ ತರಿಸಿಕೊಂಡರೆ ೧ ಡೈರಿ ಇನಾಂ ವಿ ಪಿ ಮೂಲಕವೂ ತರಿಸಿಕೊಳ್ಳಬಹುದು

ನಮ್ಮ ವಿಳಾಸ—ಎಂ ಆರ್. ಕೃಷ್ಣಸ್ವಾಮಿ ಶೆಟ್ಟಿ ಕಂಪೆನಿ,

ಬಾರ್ಡನ್ ಪ್ರೆಸ್, ಬೆಂಗಳೂರು ಸಿಟಿ | ಅಥವಾ | ಶ್ರೀಕೃಷ್ಣ ವಿಲಾಸ ಪ್ರೆಸ್, ಮೈಸೂರು.

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟ್ರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ

(ಅಡ್ವಾನ್ಸು) ರೂ ೧—೦—೦

ಪರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿ ಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಪಾಸಲ್ ಸೇರಿ ರೂ ೧—೫—೦

೬ ,, ,, ೦—೧೪—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು ನಮ್ಮ ವಿಳಾಸ —ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು

ಮಹಿಳಾ ಸಖೀ,

ಮಾಸಪತ್ರಿಕೆ—ಸ್ತ್ರೀಯರಿಗೂ ಹೆಣ್ಣುಮಕ್ಕಳಿಗೂ ಬಹು ಸ್ವಾರಸ್ಯವಾದದ್ದು.

149 6

ನವಂಬರ್ ತಿಂಗಳ ಸಂಚಿಕೆಯಲ್ಲಿ ಸುಂದರವಾದ ಫೋಟೋ ಚಿತ್ರಗಳೊಡನೆ

ಮುದ್ದುಗಿರಿಯ ರೋಟಿ ಕೊತ್ತಲುಗಳು

ನೀರಿನಲ್ಲಿ ಬಿದ್ದವರನ್ನು ಬದುಕಿಸುವ ವಿಧಾನಗಳು

ಇನ್ನೂ ವಿಚಿತ್ರವೂ ಸ್ವಾರಸ್ಯವೂ ಆದ ಸಣ್ಣ ಕಥೆಗಳು

ಒಗಟಗಳು ಮುಂತಾದ ವಿಷಯಗಳು ವಿವರಿಸಲ್ಪಟ್ಟಿವೆ

ಕ್ರಯ—೧ ಸಂಚಿಕೆಗೆ ೩ ಕಾಸು

ಪಾಸಲು ಸೇರಿ ವರ್ಷದ ಚಂದಾ ೯ ಆಣೆ

ಮಾದ್ರಿ ಸಂಚಿಕೆ ಬೇಕಾದವರು ಕೆಳಗಿನ ವಿಳಾಸದಾರರಿಗೆ ಬರೆದು ತರಿಸಿಕೊಳ್ಳಬಹುದು —

ಮ್ಯಾನೇಜರ್, ಸಿ. ಎಲ್ ಎಸ್ ಬುಕ್ ಡಿಪೋ, ಮೈಸೂರು

ಇಗೋ! ಕನ್ನಡ "ಮಾಡೆಲ್" ಪಾಕೆಟ್ ಡೈರಿ!

133 13

ಸೊಗಸಾದ ಡೈರಿಗಳು !! ಉತ್ತಮವಾದ ಡೈರಿಗಳು !!

ಉತ್ಕೃಷ್ಟವಾದ ಡೈರಿಗಳು !!!



೧೯೦೭ನೇ ವರ್ಷದ ಕನ್ನಡ ಡೈರಿಗಳು ಸೊಗಸಾಗಿ ರೂಲ್ ಹಾಕಿದ ಕಾಗದದ ಮೇಲೆ ಸುತ್ತಿನಂಥಾ ಅಕ್ಷರಗಳಿಂದ ಪ್ರಿಂಟಾಗಿ ಮಾನಸ್ಸಿಗೆ ಆಕ್ಹಾನಂದವನ್ನುಂಟುಮಾಡತಕ್ಕವುಗಳಾಗಿರುತ್ತವೆ ಇವುಗಳನ್ನು ದಕ್ಷಿಣ ಹಿಂದೂಸ್ಥಾನದಲ್ಲಿ ಪ್ರಸಿದ್ಧವಾಗಿರುವ ವೆಸ್ಲಿಯನ್ ಮಿಷನ್ ಪ್ರೆಸ್‌ನಲ್ಲಿ ಅಚ್ಚು ಹಾಕಿಸಿರುತ್ತೇವೆ ಇವುಗಳಲ್ಲಿ ಅಡಕವಾಗಿರುವ ವಿಷಯಗಳೆ —ಜಮಾಖರ್ಚಿನ ಪಟ್ಟಿ, ದೋಬಿ ಲೆಕ್ಕ, ದಿನ ಸಂಬಳದ ಪಟ್ಟಿ, ವಾರಶೂಲೆ, ಗುಳಿಕ ಕಾಲ, ರಾಹು ಕಾಲ, ಹಲ್ಲಿ ಬಿದ್ದ ಫಲ, ಪುಷ್ಪಶಾಸ್ತ್ರ, ಗೌರಿ ಪಂಚಾಂಗ, ತೂಕಗಳು, ಜಮೀನುಗಳ ಅಳತೆ, ಪೋಸ್ಟಾಫೀಸಿನ ಎಲ್ಲಾ ವಿಷಯಗಳು ರಿಜಿಸ್ಟರ್ ಫೀಜುಗಳು, ಸ್ಟಾಂಪು, ಪೋಸ್ಟೇಜ್ ರುಸುಂ, ಕೋರ್ಟ್ ಫೀಜು, ರೈಲ್ ಛಾರ್ಜು, ರಜಾ ದಿನಗಳು, ಹಬ್ಬಗಳು ಕ್ಯಾಲೆಂಡರು, (ಗ್ರಹಕುಂಡಲಿಸಹಿತ) ಪ್ರವಂಗಸಂ॥ ಪಂಚಾಂಗ, ಇವೇ ಮುಂತಾದ ಅನೇಕ ವಿಷಯಗಳು ಅಡಗಿರುತ್ತವೆ

ಕ್ರಯ —

ನಂ॥ ೧ ಸಣ್ಣ ಸೈಜು ಪೆನ್ಸಿಲ್ ಇಡತಕ್ಕ ಡೈರಿ ೦—೨—೦ ಹನ್ನೆರಡು ಡೈರಿಗಳಿಗೆ ೧ ಇನಾಮು

ನಂ॥ ೨ ಸಣ್ಣ ಸೈಜು ಪೆನ್ಸಿಲ್ ಇಟ್ಟು ಮುಚ್ಚಳ ಹಾಕಿರುವ ಟ್ಲಾಕ್ ಡೈರಿ ೦—೩—೦, ಹನ್ನೆರಡು ಡೈರಿಗಳಿಗೆ ೧ ಇನಾಮು

ನಂ॥ ೩ ದೊಡ್ಡ ಸೈಜು ಪೆನ್ಸಿಲ್ ಇಡತಕ್ಕ ಡೈರಿ ೦—೩—೦, ಹನ್ನೆರಡು ಡೈರಿಗಳಿಗೆ ೧ ಇನಾಮು

ನಂ॥ ೪ ದೊಡ್ಡ ಸೈಜು ಪೆನ್ಸಿಲ್ ಇಟ್ಟು ಮುಚ್ಚಳ ಹಾಕಿರುವ ಡೈರಿ ೦—೪—೦ ಹನ್ನೆರಡು ಡೈರಿಗಳಿಗೆ ೧ ಇನಾಮು

ಡೈರಿಗಳ ಗಲಾಟೆಯಲ್ಲಿ ಭ್ರಾಂತಿಹೊಂದಬೇಡಿ ಉತ್ತಮವಾದವುಗಳಿಗೆ ಹಣವನ್ನು ವ್ಯಯಮಾಡಿರಿ ನಮ್ಮ ಡೈರಿಗಳು ಬಹು ಸುಲಭ ಕ್ರಯವುಳ್ಳವುಗಳು ಇವುಗಳು ಗೌರ್ನಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿವೆ

ಮ್ಯಾನೇಜರ್, ಸಿ ಎಲ್ ಎಸ್. ಬುಕ್‌ಡಿಪೋ, ಮೈಸೂರು

ಅಥವಾ,

ಎಸ್ ಡಿ. ನಥ್‌ಮಲ್ ಕಂಪೆನಿ, ದೊಡ್ಡಪೇಟೆ, ಮೈಸೂರು

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ

7—12—1906 ರಿಂದ 14—12—1906 ರ ವ[illegible]

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕೋ[illegible]
ಬೆಂಗಳೂರು ಪಟ್ಟಣ	10	10	8
ಮೈಸೂರು ,,	24	16	0
ಬೆಂಗಳೂರು ಡಿಸ್ಟ್ರಿಕ್ಟು	18	14	11
ಮೈಸೂರು ,,	0	1	80
ಕೋಲಾರ್ ,,	0	0	5
ಕೋಲಾರ್ ಚಿನ್ನದ ಗಣಿಗಳು	1	0	1
ತುಮಕೂರು ಡಿಸ್ಟ್ರಿಕ್ಟು	5	3	0
ಹಾಸನ ,	21	11	5
ಚಿತ್ರದುರ್ಗ ,,	0	0	0
ಕಡೂರ್ ,,	4	5	8
ಶಿವಮೊಗ್ಗ ,,	0	0	2
ಜುಮ್ಲಾ	63	59	84

ಶಾಲಿವಾಹನ ಶಕ ವರುಷಂಗಳು ೧೮೨೯ ನೇ ಪರಾಭವ ಸ್ವರದ ಪುಷ್ಯ ಶುದ್ಧ ಏಕಾದಶಿ ಗುರುವಾರದಿಂದ ಮಾಘ ಶುದ್ಧ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೭ ನೇ ಇಸವಿ ಜನವರಿ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ
10	ಗುರು §	ಏಕಾದಶಿ	35 48	ವಿ	13 3
11	ಶುಕ್ರ *	ದ್ವಾದಶಿ	30 5	ಸ್ವಾ	9 10
12	ಶನಿವಾ	ತ್ರಯೋ	24 22	ಜೆ	5 3
13	ರವಿವಾ ,,	ಚತುರ್ದಶಿ	18 38	ಮೂ	1 5
14	ಚಂದ್ರ ¶	ಅಮಾ	12 58	ಉ ಷಾ	53 28
15	ಕುಜ †	ಪಾಡ್ಯ	7 36	ಶ್ರ	50 22
16	ಬುಧ	ಬಿದಿಗೆ	3 5	ಉಷರಿ	36 40

§ ಸರ್ವತ್ರಏಕಾದಶಿ * ಪ್ರದೋಷ , ಮಕರೋಪಿ, ತಿಥಿದ್ವಯಂ, [illegible] ಅಮಾವಾಸ್ಯೆ, ಭೋಗ್ಯೋತ್ಸವ ¶ ಪ್ರತಿಪತ್ತಿಥಿ, ಸೂರ್ಯಗ್ರಹಣ, [illegible] ಗಂಗೋತ್ಪತ್ತಿ, ಗರುಡಜಯಂತಿ, ಅಮಾಸೋಮವ್ರತ, ಉತ್ತರಾಯಣ ಪು[illegible] † ಚಂದ್ರೋದಯ ಚುಂಚನಕಟ್ಟೆಲಿ ರಾಮ ಸ್ವಾಮಿ ರಥ, ಶ್ರೀರಂಗಪಟ್ಟ[illegible] ರಂಗನಾಥನ ರಥ, ಮಾಘಸ್ನಾನಾರಂಭ ಜಲಯೋಗ್ ಚಂದು ೧

ಪೇಟೇ ಧಾರಣೆ.

ದಿನಸು	ಮೈಸೂರು	ಬೆಂಗಳೂ
ಕಡ್ಡೀ ಅಕ್ಕಿ ಪಲ್ಲಾ ೧ಕ್ಕೆ	೧೭ ೦	೧೭
ಕೆಂಬೂತಿ ಅಕ್ಕಿ ,,	೧೭ ೪ ೦	೧೬
,,	೧೭-೯ ೦	೧೬
ಜೀರಾಬ್ರಾನ ಅಕ್ಕಿ	೧೭-೦ ೦	೧೭
ಸಣ್ಣಕ್ಕಿ ಅವಲ್	೯೫-೦-೦	೯೫
,, ದುಯಂ	೧೪ ೦ ೦	[illegible]
ತೊಗರೀ ಬೇಳೆ ಪಲ್ಲಾ ೧ಕ್ಕೆ	೧೨ ೮ ೦	೧೧
,, ದುಯಂ	೧೨ ೬-೦	೯೦
ಹೈರ್ ರಾಗಿ ಪಲ್ಲಾ ೧ಕ್ಕೆ	೬ ೮ ೦	೬
ಕಾರಾಗಿ	೬ ೦ ೦	೬
ಜೋಳ	೫-೮-೦	೮
ಹಲಸಂಡೆ ಪಲ್ಲಾ ೧ಕ್ಕೆ	೧೦ ೧೨ ೦	೧೦
ಬಿಳೀ ಅವರೆ	೯ ೭ ೦	೯
ಹೆಸರು	೧೦-೮ ೦	೯
ಉದ್ದು	೧೨ ೦-೦	೧೦
ಕಡಲೆ	೯೧-೮ ೦	೯೦
ಎಳ್ಳು ಸೆ ೧೨೭ ಕ್ಕೆ	೧೭ ೦-೦	೧೬
ಹುರಳಿ	೭ ೬-೦	೯
ಹರಳು ೧೨೦ ಸೇರಿಗೆ	೧೯ ೦-೦	೧೭
ಸೀಗೇಕಾಯಿ ಮಣ ೧ಕ್ಕೆ	೨ ೨ ೦	೦
ಮೆಣಸಿನಕಾಯಿ	೩-೪ ೦	೩
,, ದುಯಂ	೩ ೦ ೦	೩
ಬೆಲ್ಲ ದೊಡ್ಡ ಅಚ್ಚು	೭-೭-೧ ಮ ೧	[illegible]
ಒಳ್ಳೆಣ್ಣೆ ಮಣ ೧ಕ್ಕೆ	೬ ೮ ೦	೫ ೭
ಹರಳೆಣ್ಣೆ ,,	೬ ೧೨-೦	೫ ೮
ಕೊತ್ತುಂಬರಿ ಪಲ್ಲಾ ೧ಕ್ಕೆ	೯ ೦ ೦	೯
ಉಪ್ಪು ,,	೫-೧೧-೦	೬
ಹುಣಸೇ ಹಣ್ಣು	೦ ೧೨ ೦	೦
,, ಹಳೇದು	೦-೮-೦	೦
ತುಪ್ಪ ಮಣ ೧ಕ್ಕೆ	೧೬-೦ ೦	೧೪
ಸೀಮೆಎಣ್ಣೆ ಪೆಟ್ಟಿ ೧ಕ್ಕೆ	೫-೪-೦	೪
ತೆಂಗಿನಕಾಯಿ ೧೦೦ ಕ್ಕೆ	೬ ೮-೦	೬
ಅಳಲೇಕಾಯಿ ಮಣ ೧ಕ್ಕೆ	೧-೦-೦	೦
ಅಂಟ್ವಾಳದ ಕಾಯಿ ಮಣ ೧ಕ್ಕೆ	೦ ೧೨ ೦	೦
ಚಿನ್ನ (ಬಾರ್) ತೊಲ	೧೯-೪-೦	೧೯
,, ,, ಪವನು	೧೫ ೧೦ ೦	೧೫
,, ,, ಗಟ್ಟಿ ತೊಲ ೧ಕ್ಕೆ	೨೭-೧೨-೯	[illegible]
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	೮೫ ೦-೦	೮೫

Printed and published by the Rev E THOMPSON, M A, the Proprietor and Mana[ger] Wesleyan Mission Press, Mysore 10/1/1907.

REGISTERE
M. 2C

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೦ ಮೈಸೂರು—ಸನ್ ೧೯೦೭ ನೇ ಇಸವಿ ಜನವರಿ ತಾರೀಖು ೧೭ ನೇ ಗುರುವಾರ. ಸಂಚಿಕೆ ೩೩.

೧೯೦೭ ನೇ ಲೋವರ್ ಸೆಕಂಡರಿ ಕನ್ನಡ ನೋಟ್ಸ್.

3 3

ಹಿಂದಿನ ವರುಷದಂತೆ ನಮ್ಮ 'ಎಗ್ಸಾಮಿನರ್' ಮಾಸಪತ್ರಿಕೆಯ ಚಂದಾದಾರರಾಗತಕ್ಕವರಿಗೆ ಈ ನೋಟ್ಸು ಬೆಲೆಯಿಲ್ಲದೆ ಬಹುಮಾನವಾಗಿ ದೊರೆಯುತ್ತದೆ. ಹೆಚ್ಚಿನ ಸಂಗತಿಗಳಿಗಾಗಿ ನಮ್ಮ ಪ್ರಕಟನಪತ್ರಿಕೆಯನ್ನು ಅವಶ್ಯ ತರಿಸಿ ನೋಡಿ.

ವಿಳಾಸ-ಮ್ಯಾನೇಜರ್, ದಿ ಎಗ್ಸಾಮಿನರ್ ಆಫೀಸ್, ಚಿಕ್ಕಬಳ್ಳಾಪುರ

ಹೊಸ ನಮೂನೆ ಬಹು ಬಾಳಿಕೆ ಕ್ರಯ ಕಡಿಮೆ.

2-3

ರಬ್ಬರ್ ಸೀಲ್‌ಗಿಂತ ಬಾಳಿಕೆ ಬರುವ ಹಿತ್ತಾಳೆ ತಾಂವ್ರ ಮತ್ತು ಬೆಳ್ಳಿಯಿಂದ ಸೀಲ್‌ಗಳು ಹಿಡಿಸಮೇತ ತಯಾರಿಸಲ್ಪಡುತ್ತೆ. ಕ್ರಯ ಹಿತ್ತಾಳೆ ತಾಂವ್ರ ರೂ ೧-೬-೦ ಬೆಳ್ಳಿ ರೂ ೩-೬-೦ ಪೋಸ್ಟೇಜು ಸಮೇತ ಹಣ ಮುಂಗಡ ಕಳುಹಿಸಿ. ಇಂಗ್ಲಿಷ್ ಕನ್ನಡ ಬಾಳಬಂದು ನಮೂನೆ ಯಾವ ತರಹಾ ಬೇಕು ತಿಳುಹಿಸಿ. ನಮ್ಮ ವಿಳಾಸ ಪಿ ಸಿ ಅಂಡ್ ಕೋ, ಎ ಫಸಿಯೂಟಾರ್ ಸೀಲ್ ಮೇಕರ್, ಬೆಲಗೂರು ಕಡೂರ್ ಡಿಸ್ಟ್ರಿಕ್ಟ್

ವೃತ್ತಾಂತ ಪತ್ರಿಕೆಯ ಪಂಚಾಂಗವು.

ಸಿದ್ಧವಾಗಿದೆ. ಕ್ರಯ ಒಂದಾಣೆ.

೧೯೦೭ನೆ ವರ್ಷದ ಕ್ಯಾಲೆಂಡರು ದೊಡ್ಡ ಸೈಜು ಇದರಲ್ಲಿ ನನ್ನ ಚಂದಾದಾರರ ಉತ್ಕೃಷ್ಟವಾದ ಫೋಟೋ, ದಿವಾನರವರ ಮತ್ತು ಈಶ್ವರ ಫೋಟೋಗಳು ಬಹಳ ಸೊಗಸಾಗಿವೆ. ಇದುವರೆಗೆ ಈ ಚಿತ್ರಗಳು ಕ್ಯಾಲೆಂಡರಲ್ಲಿ ಯಾರೂ ನೋಡಿರಲಾರರು.

ಚಂದಾದಾರರಿಗೆ ಸೂಚನೆ—ಇದೇ ಜನವರಿ ಆಖೈರಿನೊಳಗಾಗಿ "ವೃತ್ತಾಂತ ಪತ್ರಿಕೆ"ಗೆ ಒಂದು ವರುಷದ ಚಂದಾ ಅಡ್ವಾನ್ಸು ಕಟ್ಟುವವರಿಗೆಲ್ಲಾ ಒಂದೊಂದು ಕ್ಯಾಲೆಂಡರನ್ನು ಪುಗಸಟ್ಟೆ ಕೊಡುವೆವು ತಡವಾದರೆ ಖಂಡಿತವಾಗಿ ಸಿಕ್ಕುವುದಿಲ್ಲ.

ಎಚ್ಚರಿಕೆ—ಬಹಳ ಕೊಂಚ ಪ್ರತಿಗಳನ್ನು ಮಾತ್ರ ಪ್ರಿಂಟು ಮಾಡಿದೇವೆ. ಕೂಡ್ಲೆ ಚಂದಾಸಹಿತ ಬರಿಯಿರಿ. ವಿಳಾಸ:—

ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ಸನ್ ೧೯೦೭ ನೇ ಇಸವಿಯ

151 6

ಎ ನಂ। ಎಫ್ ನಂ। ಬಿ ನಂ। ಸಿ. ನಂ। ಹೆಚ್ ನಂ। ಡಿ ನಂ।

ಪಂಚಾಂಗ ಸಮೇತವಾದ ಇಂಗ್ಲೀಷು—ಕನ್ನಡ

ಪಾಕೆಟ್ ಡೈರಿಗಳು.

ಈ ಡೈರಿಗಳು ವರ್ತಕರು, ಲಾಯರುಗಳು, ಕಂಟ್ರಾಕ್ಟರು, ಉದ್ಯೋಗಸ್ಥ ಮನುಷ್ಯರು, ಮಿಷ್‌ಟಾಪ್‌ಸವಾಸ್ತರಿಗೂ ಉಪಯೋಗವಾಗಿ, ಇರುವ ಇವುಗಳಲ್ಲಿ ಅಡಕವಾಗಿರುವ ವಿಷಯಗಳು—ಪ್ಲವಂಗ ನಾಮ ಪಂಚಾಂಗ, ಗ್ರಹ ಕುಂಡಲಿ ಸಹಿತ, ಕ್ಯಾಲೆಂಡರು, ಹಬ್ಬಗಳು, ರಜಾ ದಿನಗಳು, ರೈಲ್ ಛಾರ್ಜು, ಕೋರ್ಟ್ ಫೀಜು, ಪ್ರೋಸೆಸ್ ರುಸುಂ, ಸ್ಟಾಂಪು, ರಿಜಿಸ್ಟರ್ ಫೀಜುಗಳು, ಪೋಸ್ಟಾಫಿಸಿನ ಎಲ್ಲಾ ವಿಷಯಗಳು, ಜಮೀನುಗಳ ಅಳತೆ, ತೂಕಗಳು, ಗೌರಿ ಪಂಚಾಂಗ, ಪ್ರಶ್ನಶಾಸ್ತ್ರ, ಹಲ್ಲಿ ಬಿದ್ದ ಫಲ, ರಾಹುಕಾಲ, ಗುಳಿಕಕಾಲ, ವಾರಶೂಲೆ, ದಿನಸಂಬಳದ ಪಟ್ಟಿ, ದೋಟಿ ಲೆಕ್ಕ, ಜಮಾಖರ್ಚಿನಪಟ್ಟಿ, ಇನ್ನೂ ಅನೇಕ ವಿಷಯಗಳಿವೆ. ಉತ್ಕೃಷ್ಟವಾದ ಕಾಗದ, ರೂಲು ಹಾಕಿದೆ, ಕವರು ಸಾಮಾನು ಬೈಂಡು, ಚಿನ್ನ ಬೆಳ್ಳಿ ನಮೂನೆ ಗಿಲೀಟುಮಾಡಿದೆ

ಎ ನಂಬರ್ ಚಿಕ್ಕಸೈಜು		೩ ಆಣೆ	ಸಿ ನಂಬರು ದೊಡ್ಡ ಸೈಜು		೬ ಆ
ಬಿ "	"	೪ "	ಎಚ್ "	"	೩ "
ಎಫ್ " ಮುಚ್ಚಳದ್ದು		೫ "	ಡಿ. " ಮುಚ್ಚಳದ್ದು		೮ "

ಪೋಸ್ಟು ಚಾರ್ಜು ಬೇರೆ. ಒಂದೇ ನಮೂನೆಯ ೧೨ ಡೈರಿ ತರಿಸಿಕೊಂಡರೆ ೧ ಡೈರಿ ಇನಾಂ. ವಿ. ಪಿ. ಮೂಲಕವೂ ತರಿಸಿಕೊಳ್ಳಬಹುದು

ನಮ್ಮ ವಿಳಾಸ—ಎಂ. ಆರ್. ಕೃಷ್ಣಸ್ವಾಮಿ ಶೆಟ್ಟಿ ಕಂಪೆನಿ,

ಸ್ಟಾರ್ ಪ್ರೆಸ್, ಬೆಂಗಳೂರು ಸಿಟಿ } ಅಥವಾ { ಶ್ರೀಕೃಷ್ಣ ವಿಲಾಸ ಪ್ರೆಸ್, ಮೈಸೂರು.

ಕೊಡಗು ದೇಶದ ಸ್ವಚ್ಛವಾದ ಉತ್ಕೃಷ್ಟ ಕಾಫಿಯು.

ಪುಡಿಯದೆ ಇರುವದು ಅಥವಾ ಆಗತಾನೆ ಹುರಿದದ್ದು ಕಡಮಾಡಿದ ಸ್ಥಳದಿಂದಲೆ ನೆಟ್ಟಗೆ ರವಾನಿಸಲ್ಪಡುವದು.

25 49

ವ್ಯಾಪಾರದ ಹೆಗ್ಗುರ್ತು

ಕಾಡುಕೋಣದ ತಲೆಯ ಮುದ್ರೆ ಇದೆ.

ಸಂಪೂರ್ಣವಾಗಿ ಯಂತ್ರದಿಂದಲೆ ಸಿದ್ಧಪಡಿಸಿದ್ದು. ಹೆಗ್ಗುರ್ತು ಉಳ್ಳ ವಿಲಾಸದ ಚೀಟಿ ಸುತ್ತಿಲ್ಲದಿರುವವು ಸ್ವಚ್ಛವಾದವುಗಳಲ್ಲ. ಅವು ನಮ್ಮದಲ್ಲ. ಏಜಂಟರುಗಳು ಬೇಕು. ಇಂಥವರಿಗೆ ಅಲಾಯದ ದರ. ಬರೆಯುವವರು ದಯವಿಟ್ಟು ಈ ಪತ್ರಿಕೆಯ ಹೆಸರನ್ನು ಸೂಚಿಸಿ.

ವಿಳಾಸ.—ಮ್ಯಾನೇಜರ್, ಮ್ಯಾಥಿಸರ್ಸ್ ಕಾಫಿ ವರ್ಕ್ಸ್, ಹುಣಸೂರು.

ಜ್ವ ರ ಹ ರಿ. 142 12



ಇದು ಸಾಧಾರಣ ಜ್ವರ, ಚಳೀಜ್ವರ, ಮೊರೇಜ್ವರ, ಪಿತ್ಥಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮುರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್ ಟಿ ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಡೋಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಅನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೆ ಬೀಳುತ್ತಿರುವದರಿಂದ ದಯವಿಟ್ಟು ಇನ್ನೊಂದು ೨೦ ಡೋಸಿನ ಸೀಸೆಯನ್ನು ವಿ ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ:—ಸೀಸೆ ೧ ಕ್ಕೆ ೮ ಆಣೆ, ೧ ರೂ, ೧—೮ ರೂ.; ರೂ. ೨—೧೨ ಆ, ೧೧ ರೂ.; ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

****

ಬಿ ಮ ಂ ಕ ರ್ಪೂ ರ.

[illegible] Camphor

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ ವ್ಯಾಧಿಗಳಲ್ಲಿ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿ ಟದಾಪತ್ತಿ ಸೂರಗೆ ಆಗುವಾಗ್ಯೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ. ಸೀಸೆಗಳಲ್ಲಿ ದೊರಕುವದು

ಕಡಪದ ಅಸಿಸ್ಟೆಂಟ್ ಸರ್ಜನ ಗಣಪತಿಯವರು—ಹೆಪ್ಸಿಯು ಓಟುಂ ಕರ್ಪೂರವನ್ನು ನಾನೂ ನನ್ನ ಕಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂತ ಬರೆದಿದಾರೆ.

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ:—

ಹೆಪ್ಸಿಯುವರ ಗ್ರೇಟ್ ಇಂಡಿಯಾ ಔಷಧಗಳ ಕಂಪೆನಿ.

ಸೆಕೆಂಡ್ ಬೀಚ್ ರೈನ್, ಮದ್ರಾಸ್

ಮ ಹಿ ಳಾ ಸ ಖಿ.

ಮಾಸಪತ್ರಿಕೆ—ಸ್ತ್ರೀಯರಿಗೂ ಹೆಣ್ಣುಮಕ್ಕಳಿಗೂ ಬಹು ಸ್ವಾರಸ್ಯವಾದದ್ದು.

149-7

ನವೆಂಬರ್ ತಿಂಗಳ ಸಂಚಿಕೆಯಲ್ಲಿ ಸುಂದರವಾದ ಫೋಟೋ ಚಿತ್ರಗಳೊಡನೆ

ಮದ್ದಗಿರಿಯ ಕೋಟೆ ಕೊತ್ತಲುಗಳು

ನೀರಿನಲ್ಲಿ ಬಿದ್ದವರನ್ನು ಬದುಕಿಸುವ ವಿಧಾನಗಳು

ಇನ್ನೂ ವಿಚಿತ್ರವೂ ಸ್ವಾರಸ್ಯವೂ ಆದ ಸಣ್ಣ ಕಥೆಗಳು ಒಗಟೆಗಳು ಮುಂತಾದ ವಿಷಯಗಳು ವಿವರಿಸಲ್ಪಟ್ಟಿವೆ.

ಕ್ರಯ:—೧ ಸಂಚಿಕೆಗೆ ೩ ಕಾಸು.

ಹಾಸಲು ಸೇರಿ ವರ್ಷದ ಚಂದಾ ೯ ಆಣೆ.

ಮಾದ್ರಿ ಸಂಚಿಕೆ ಬೇಕಾದವರು ಕೆಳಗಿನ ವಿಳಾಸದಾರರಿಗೆ ಬರೆದು ತರಿಸಿಕೊಳ್ಳಬಹುದು —

ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು

ಇಗೋ! ಕನ್ನಡ "ಮಾಡಲ್" ಪಾಕೆಟ್ ಡೈರಿ

133-14

ಸೊಗಸಾದ ಡೈರಿಗಳು !! ಉತ್ತಮವಾದ ಡೈರಿಗಳು !!

ಉತ್ಕೃಷ್ಟವಾದ ಡೈರಿಗಳು !!!

೧೯೦೭ನೇ ವರುಷದ ಕನ್ನಡ ಡೈರಿಗಳು ಸೊಗಸಾಗಿ ರೂಲ್ ಹಾಕಿದ ಕಾಗದದ ಮೇಲೆ ಮುತ್ತಿನಂಥಾ ಅಕ್ಷರಗಳಿಂದ ಪ್ರಿಂಟಾಗಿ ಮನಸ್ಸಿಗೆ ಅತ್ಯಾನಂದವನ್ನುಂಟುಮಾಡತಕ್ಕವುಗಳಾಗಿರುತ್ತವೆ. ಇವುಗಳನ್ನು ದಕ್ಷಿಣ ಹಿಂದೂಸ್ಥಾನದಲ್ಲಿ ಪ್ರಸಿದ್ಧವಾಗಿರುವ ವೆಸ್ಲೆಯನ್ ಮಿಷನ್ ಪ್ರೆಸ್‌ನಲ್ಲಿ ಅಚ್ಚು ಹಾಕಿಸಿರುತ್ತೇವೆ. ಇವುಗಳಲ್ಲಿ ಅಡಕವಾಗಿರುವ ವಿಷಯಗಳು:—ಜಮಾಖರ್ಚಿನ ಪಟ್ಟಿ, ದೋಬಿ ಲೆಕ್ಕ, ದಿನ ಸಂಬಳದ ಪಟ್ಟಿ, ವಾರಶೂಲೆ, ಗುಳಿಕ ಕಾಲ, ರಾಹು ಕಾಲ, ಹಲ್ಲಿ ಬಿದ್ದ ಫಲ, ಪ್ರಶ್ನಶಾಸ್ತ್ರ, ಗೌರಿ ಪಂಚಾಂಗ, ತೂಕಗಳು, ಜಮೀನುಗಳ ಅಳತೆ, ಪೋಸ್ಟಾಫಿಸಿನ ಎಲ್ಲಾ ವಿಷಯಗಳು, ರಿಜಿಸ್ಟರ್ ಫೀಜುಗಳು, ಸ್ಟಾಂಪು, ಪ್ರೋಸೆಸ್ ರುಸುಂ, ಕೋರ್ಟ್ ಫೀಜು, ರೈಲ್ ಛಾರ್ಜು, ರಜಾ ದಿವಗಳು, ಹಬ್ಬಗಳು, ಕ್ಯಾಲೆಂಡರು, (ಗ್ರಹಕುಂಡಲಿಸಹಿತ) ಪ್ಲವಂಗನಾಮ ಪಂಚಾಂಗ, ಇನ್ನೇ ಮುಂತಾದ ಅನೇಕ ವಿಷಯಗಳು ಅಡಗಿರುತ್ತವೆ.

ಕ್ರಯ.—

ನಂ। ೧ ಸಣ್ಣ ಸೈಜು ಪೆನ್ಸಿಲ್ ಇಡತಕ್ಕ ಡೈರಿ ೦—೪—೦, ಹನ್ನೆರಡು ಡೈರಿಗಳಿಗೆ ೧ ಇನಾಮು.

ನಂ। ೨ ಸಣ್ಣ ಸೈಜು ಪೆನ್ಸಿಲ್ ಇಟ್ಟು ಮುಚ್ಚಳ ಹಾಕಿರುವ ಪ್ಯಾಕ್ ಡೈರಿ ೦—೬—೦, ಹನ್ನೆರಡು ಡೈರಿಗಳಿಗೆ ೧ ಇನಾಮು.

ನಂ। ೩ ದೊಡ್ಡ ಸೈಜು ಪೆನ್ಸಿಲ್ ಇಡತಕ್ಕ ಡೈರಿ ೦—೬—೦; ಹನ್ನೆರಡು ಡೈರಿಗಳಿಗೆ ೧ ಇನಾಮು.

ನಂ। ೪ ದೊಡ್ಡ ಸೈಜು ಪೆನ್ಸಿಲ್ ಇಟ್ಟು ಮುಚ್ಚಳ ಹಾಕಿರುವ ಡೈರಿ ೦—೮—೦, ಹನ್ನೆರಡು ಡೈರಿಗಳಿಗೆ ೧ ಇನಾಮು.

ಡೈರಿಗಳ ಗಲಾಟೆಯಲ್ಲಿ ಭ್ರಾಂತಿಹೊಂದಬೇಡಿ. ಉತ್ತಮವಾದವುಗಳಿಗೆ ಹಣವನ್ನು ವ್ಯಯಮಾಡಿರಿ. ನಮ್ಮ ಡೈರಿಗಳು ಬಹು ಸುಲಭ ಕ್ರಯವುಳ್ಳವುಗಳು. ಇವುಗಳು ಗೌರ್ನಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿವೆ.

ಮ್ಯಾನೇಜರ್, ಸಿ. ಎಲ್. ಎಸ್. ಬುಕ್‌ಡಿಪೋ, ಮೈಸೂರು.

ಅಥವಾ,

ಎಸ್. ಎ. ಸತ್‌ಮಲ್ ಕಂಪೆನಿ, ದೊಡ್ಡಪೇಟೆ, ಮೈಸೂರು.

ಬೇಕಾಗಿದೆ.

153-5

ಇಂಗ್ಲಿಷ್ ಮತ್ತು ಕನ್ನಡ ಅಕ್ಷರ ಜೋಡಿಸುವವರು (ಕಂಪಾಜಿಟರುಗಳು) ಬೇಕಾಗಿದೆ. ಚನ್ನಾಗಿ ಕಲಿತಿರುವವರು ಮಾತ್ರ ಖುದ್ದಾಗಿ ಬಂದು ಮಾತನಾಡಬಹುದು.

ಮ್ಯಾನೇಜರ್, ಮಿರ್ಷ ಪ್ರೆಸ್, ಮೈಸೂರು.

ಮುಂಬಯಿ ವ್ಯಾಪಾರವಮಾಡಲಿಚ್ಛಿಸುವವರು.

35-33

ಮುಂಬಯಿಯಲ್ಲಿ ಪ್ರತಿಯೊಂದು ಮಾಲಿನ ತೂಕ ಅಳತೆ ಮತ್ತು ಮಾಲಿನ ವರ್ಣನೆ ಹಾಗೂ ಅನೇಕ ಉಪಯುಕ್ತ ಮಾಹಿತಿಯುಳ್ಳ ಕನ್ನಡ ಪುಸ್ತಕ:—ಕ್ರಯ ೧೦ ಆಣೆ ವಿ. ಪಿ. ಯಿಂದ ಕಳುಹಿಸುವೆವು. ಟಪಾಲು ಖರ್ಚು ಬೇರೆ. ಬುಕ್ಕು ಸೇಲರರಿಗೆ ಯೋಗ್ಯ ಕಮಿಷನ್ ದೊರೆಯುವದು. ಮತ್ತು ಲಿಂಗಾಯತ ಧರ್ಮಸಂಬಂಧ ವೀರಶೈವೋತ್ಪತ್ತಿ ಕ್ರಿಯಾಲಕ್ಷಣವೆಂಬುವ ಕನ್ನಡ ಪುಸ್ತಕ—ನಾಲ್ಕು ಆಣೆ ಶಿಲೆ ಅಕ್ಷರದಿಂದ ಬರೆಯಲ್ಪಟ್ಟು ಚನ್ನ ಏನಿಸ್ಸ ಮಲ್ಲಪ್ಪ ವಾದದ್, ಕೋಷ್ಟಿ ಮಾಂಬ್ರಿ, ಮುಂಬಯಿ.

The Place for Hassan Caps is Hassan.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ? ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

154-4

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು? ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಸರಬರಾಯಾದವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೀಳಾದದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ:—(೧)ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯಿತಿಯಿಂದಲೇ ಬರುವದು. (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ, ಚನ್ನಾಗಿ ಹೆಣೆದ; ಬಹಳ ಬಾಳಿಕೆಬರುವ ಟೋಪಿಗಳು ಬೇಕಾದರೆ ನಮಗೇ ಸೀದಾ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ.

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ.

"ಅರೇಬಿಯನ್ ನೈಟ್ಸ್

150-7

ಅಥವಾ

ಯವನಯಾಮಿನೀ ವಿನೋದ ಕಥೆಗಳು"

ಅರೇಬಿಯನ್ ನೈಟ್ಸ್ ಅಥವಾ ಯವನಯಾಮಿನೀ ವಿನೋದ ಕಥೆಗಳು " ಈ ಪುಸ್ತಕವು ಲೋಕಪ್ರಸಿದ್ಧವಾದುದೆಂದು ಎಲ್ಲರೂ ಒಪ್ಪಿಕೊಳ್ಳುತ್ತಾರೆ ನಾನೂರು ಎಪ್ಪತ್ತು ಪುಟಗಳುಳ್ಳದ್ದು ಭಾರಿ ಪುಸ್ತಕ. ಭಾಷೆಯು ಬಹು ಸರಳವಾಗಿದೆ. ಪುಸ್ತಕವನ್ನು ಒಂದಾವರ್ತಿ ಓದಿದ ಮೇಲೆ ಅದನ್ನು ಪುನಃ ಪುನಃ ಓದುವಂತೆ ಅದು ಮನಸ್ಸನ್ನು ಆಕರ್ಷಿಸುವದು. ಇದರ ಕ್ರಯ ಎರಡೇ ರೂಪಾಯಿ. ವಿ. ಪಿ. ಮೂಲಕ ೨—೩—೦ ಹತ್ತು ಅಥವಾ ಹದಿನೈದು ವರ್ಷಗಳ ಹಿಂದೆ ಇದರ ಕ್ರಯ ಎಂಟು ರೂಪಾಯಿ ಎಂದು ಅನೇಕರಿಗೆ ಗೊತ್ತು. ಇದನ್ನು ಬಡವರೂ, ಐಶ್ವರ್ಯವಂತರೂ ಓದುವಂತೆ ಪುನಃ ಛಾಪಿಸಿ ಇಷ್ಟು ದೊಡ್ಡ ಪುಸ್ತಕವನ್ನು ಇಷ್ಟು ಸುಲಭ ಕ್ರಯಕ್ಕೆ ಮಾರುತ್ತೇವೆ. ಹನ್ನೆರಡು ಪುಸ್ತಕಗಳನ್ನು ಒಟ್ಟಿಗೆ ತರಿಸಿಕೊಂಡರೆ ಪುಸ್ತಕಕ್ಕೆ ಎರಡು ಆಣೆಯಂತೆ ಕಮಿಷನ್ ಕೊಡುತ್ತೇವೆ ಜಾಗ್ರತೆ ನೋಡಿ. ನಮ್ಮ ವಿಳಾಸ.—

ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

ಹಿಂದೂದೇಶಪ್ರದಕ್ಷಿಣ.

ಈ ನೂತನ ಪುಸ್ತಕದ ೧ನೇ ಮುದ್ರಣದ ಪ್ರತಿಗಳೆಲ್ಲಾ ಸಂಪೂರ್ಣವಾಗಿ ಮುಗಿದುಹೋದ್ದರಿಂದ ಎರಡನೇ ಮುದ್ರಣವನ್ನು ಹಾಕಿಸಿರುತ್ತೇವೆ ಮೂರು ಅಥವಾ ನಾಲ್ಕು ತಿಂಗಳೊಳಗಾಗಿ ನೂರಾರು ಪ್ರತಿಗಳು ಬಿಕರಿ ಮಾಡಲ್ಪಟ್ಟದ್ದರಿಂದ ಅನಂತರ ಈ ಪುಸ್ತಕವನ್ನು ಅಪೇಕ್ಷಿಸಿದ ಅನೇಕರಿಗೆ ಇದು ದೊರಿಯದೆ ವ್ಯಸನಕ್ಕೊಳಗಾದರು ಈಗಲಾದರೂ ಜಾಗ್ರತೆಯಿಂದ ಬರೆದು ವಿ. ಪಿ ಮೂಲಕ ತರಿಸಿಕೊಳ್ಳಿ ಇದರಲ್ಲಿ ಅಡಗಿರುವ ಸಂಗತಿಗಳನ್ನು ವಿವರಿಸಲು ಸ್ಥಳ ಸಂಕೋಚವಾಗಿದೆ ಹಿಂದೂ ದೇಶದಲ್ಲಿರುವ ಅನೇಕ ಪಟ್ಟಣಗಳ ಚಿತ್ರಗಳೂ ಮತ್ತು ಅವುಗಳ ವರ್ಣನೆಗಳೂ ಪುರಾತನ ಚರಿತ್ರಾರ್ಹವಾದ ಕಟ್ಟಡಗಳೂ ಅವುಗಳ ಚಿತ್ರಗಳೂ ಇದರಲ್ಲಿ ಅಡಗಿವೆ ಇದರಲ್ಲಿ ಸುಮಾರು ತೊಂಭತ್ತು ಪ್ರಸಿದ್ಧವಾದ ಚಿತ್ರಗಳಿರುತ್ತವೆ ನೂರಾರು ರೂಪಾಯಿಗಳನ್ನು ಖರ್ಚುಮಾಡಿ ದೇಶಸಂಚಾರ ಮಾಡುವುದಕ್ಕೆ ಬದಲಾಗಿ ಈ ದೊಡ್ಡ ಪುಸ್ತಕವನ್ನು ತರಿಸಿ ಓದಿದರೆ ಬಹು ಪ್ರಯೋಜನವಾದೀತೆನ್ನುವುದರಲ್ಲಿ ಯಾವ ಸಂಶಯವೂ ಇರಲಾರದು ಪುಸ್ತಕದ ಕ್ರಯ ಎಂಟೇ ಆಣೆ ವಿ. ಪಿ ಮೂಲಕ ತರಿಸಿಕೊಂಡರೆ ಹನ್ನೊಂದಾಣೆಯಾಗುವುದು

ಮ್ಯಾನೇಜರ್ ಸಿ. ಎಲ್. ಎಸ್. ಬುಕ್ ಡಿಪೋ ಮೈಸೂರು.

CHAMBERLAIN'S PAIN BALM

ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವು



43

ಬೆನ್ನೆಲುಬಿನಲ್ಲಿನ ನೋವು, ಪಕ್ಕಗಳಲ್ಲಿ ಆಗುವ ನೋವು, ಖಂಡಗಳಲ್ಲಿ ಹುಟ್ಟುವ ನೋವು, ಕಲೆತ ಬಜ್ಜಾದ ಕಡೆಗಳ ನೋವು, ವಾಯುನೋವು—ಇವುಗಳನ್ನೆಲ್ಲಾ ಸಂಪೂರ್ಣವಾಗಿ ವಾಸಿಮಾಡುವಂಥಾ ಔಷಧ.

ವಾಯುನೋವೆಂದರೇನು?

ಕೀಲುಗಳಲ್ಲೂ ಮಣಿಕಟ್ಟುಗಳಲ್ಲೂ ಗಾಯವಾಗುವುದು, ಊದಿಕೊಳ್ಳುವುದು, ಕಠಿಣವಾಗಿ ಕಳೆಯುವ ಖಂಡಗಳಲ್ಲಿ ಇರಿಯುವುದು, ವಿಶ್ರಾಂತಿಕೊಡದೆ ಇರುವುದು, ನಿದ್ದೆಹತ್ತದೆ ಇರುವುದು—ಇದೇ. ಇದೆಲ್ಲಾ ಯಾವಾಗ ಉಂಟಾಗುವುದೋ ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು.

ಆಗ ಚೇಂಬರ್ಲೇನ್‌ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ.

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹಾ ಕಾವು ಮೈಯೊಳಗೆ ವ್ಯಾಪಿಸುತ್ತದೆ ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ. ಮನಸ್ಸಿಗೆ ಉಲ್ಲಾಸವಾಗುತ್ತದೆ ಆದನ್ನೇ ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯುವಿನ ಹುಟ್ಟನ್ನೇ ಕಿತ್ತುಹಾಕಿಬಿಡುವುದು.

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಮುಟ್ಟಿದ್ದೇನೂ ಅಲ್ಲ

ಇದು ಎಲ್ಲೆಲ್ಲೂ ಬಿಕರಿಯಾಗುವುದು. ಸಣ್ಣ ಸೀಸೆಗೆ ೧ ರೂಪಾಯಿ. ದೊಡ್ಡ ಸೀಸೆಗೆ ೨ ರೂಪಾಯಿ.

ಬಾಲಶಿಕ್ಷೆ ೧ನೇ ಭಾಗ!

ಬಾಲಶಿಕ್ಷೆ ೧ನೇ ಭಾಗ!!

ಬಾಲಶಿಕ್ಷೆ ೧ನೇ ಭಾಗ!!!

7-1

ಬೇಗ ತರಿಸಿಕೊಳ್ಳಿ.

ಕ್ರಯ ೧ ಆಣೆ ವಿ. ಪಿ. ಮೂಲಕ ಮೂರು ಆಣೆಗಳು.

ನೂರು ಪ್ರತಿಗಳಿಗೆ ಹನ್ನೆರಡು ಪ್ರತಿಗಳು ಕಮಿಷನ್.

ವಿಳಾಸ:—ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

೧೮೭೬ ರಿಂದ ೧೯೦೬ ವರೆಗೆ.

ಕಾಲದ ಪರೀಕ್ಷೆ!

ಮೂವತ್ತೇಳು ವರ್ಷಗಳಿಗಿಂತಲೂ ಹೆಚ್ಚಾಗಿ

SCOTT'S EMULSION 57-44

(ಸ್ಕಾಟ್ಸ್ ಇಮಲ್‌ಷನ್)

ಎಂಬೀ ಸೇವನಾ ಔಷಧಿಯನ್ನು ಘನ ಪಂಡಿತರೆಲ್ಲಾ ಅನೇಕ ವೇಳೆ ಪರಿಶೋಧನೆಮಾಡಿ, ಸರ್ವೋತ್ತಮವಾದದ್ದೆಂದು ಹೇಳಿರುತ್ತಾರೆ

ಆದದರಿಂದ ಮುಂದಿನ ರೋಗಗಳಿಗೆ ಪ್ರಪಂಚದಲ್ಲೆಲ್ಲಾ ಈಗ ಈ ಔಷಧವು ಸರ್ವ ಶ್ರೇಷ್ಠವಾದದ್ದಾಗಿ ಪರಿಣಮಿಸಿದೆ —

ಶ್ವಾಸಕೋಶದ ಆಕ್ರಮಗಳು, ನಾನಾ ತರದ ಕೆಮ್ಮಲು;

ಸಕಲವಿಧ ಕೃಶತ್ವಗಳು, ಮಾಂಸಖಂಡಗಳ ಕ್ಷೀಣತೆ,

ಆಹಾರದಲ್ಲಿ ಅರುಚಿ

ಇದಲ್ಲದೆ ತಂದೆಗೂ ಮಗನಿಗೂ ಬಲಕಾರಿಯಾದ ಮತ್ತು ಅಂಗ ಬೆಳಸುವ ಸೇವನಾ ಔಷಧವೂ ಇದೇ

ಕೈಸೋಕದೆ ತಯಾರಾದದ್ದು.

ಔಷಧಗಳ ಅಂಗಡಿಗಳಲ್ಲೆಲ್ಲಾ ಬಿಕರಿಯಾಗುವದು

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್

ಈ ಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ.

ವೃತ್ತಾಂತ ಪತ್ರಿಕೆ.

—:o:—

ಸನ್ ೧೯೦೭ ನೇ ಇಸವಿ ಜನವರಿ ತಾ॥ ೧೭ನೇ ಗುರುವಾರ.

ಮೈಸೂರು ಪೋಲೀಸ್ ಇಲಾಖೆಯು.

ಮೈಸೂರು ಗವರ್ನಮೆಂಟಿನವರು ಈ ಸಂಸ್ಥಾನದ ೧೯೦೫—೦೬ ನೆ ಸಾಲಿನ ರಿಪೋರ್ಟನ್ನು ಈಗತಾನೇ ಪ್ರಕಟಿಸಿರುತ್ತಾರೆ ಈ ಇಲಾಖೆಯು ಪ್ರಜೆಗಳ ಮಾನ ಪ್ರಾಣ ಧನಗಳನ್ನೂ ಪ್ರಜಾ ನೆಮ್ಮದಿಯನ್ನೂ ಕಾಪಾಡುವಂಥಾದ್ದಾಗಿದೆ. ಹೀಗಿರುವಲ್ಲಿ ಪೋಲೀಸಿನವರು ಕಳೆದ ವರುಷ ೬೬೯ ಮೊಕದ್ದಮೆಗಳಲ್ಲಿ ಕೃತ್ಯ ನಡೆದಿದ್ದಾಗ್ಯೂ ಪತ್ತೆ ಮಾಡಲು ಸಾಧ್ಯವಿಲ್ಲವೆಂದು ಬಿಟ್ಟುಬಿಟ್ಟಿದಾರೆ. ಇದರಿಂದ ಅವರ ಚಟುವಟಿಕೆಯೂ ಬುದ್ಧಿ ಕುಶಲತೆಯೂ ಅಷ್ಟು ತೃಪ್ತಿಕರವಾಗಿಲ್ಲವೆಂದು ಕಾಣುವುದು ಮತ್ತು ೧,೬೦೯ ಮೊಕದ್ದಮೆಗಳಲ್ಲಿ ಮ್ಯಾಜಿಸ್ಟ್ರೇಟರು ಕೂಡ ಪೋಲೀಸ್ ರಿಪೋರ್ಟುಗಳನ್ನು ನಂಬಿ, ಸುಳ್ಳು ಮೊಕದ್ದಮೆಗಳೆಂದು ಹೇಳಿ ವಜಾ ಮಾಡಿಬಿಟ್ಟಿರುತ್ತಾರೆ. ಅಲ್ಪ ಸಂಬಳಗಾರರೂ ವಿದ್ಯಾಶೂನ್ಯರೂ ಆದ ದಫೇದಾರರೇ ಮುಂತಾದ ನೌಕರರು ಪತ್ತೆ ತರದೂದು ನಡಸುವುದು ಯೋಗ್ಯವಲ್ಲವೆಂಬುದು ಸರ್ಕಾರದವರಿಗೆ ಮನದಟ್ಟಾಗಿದೆ ಇದನ್ನು ಎಲ್ಲಾ ಕಡೆಗಳಲ್ಲೂ ತಪ್ಪಿಸಿ, ಇನ್ನು ಮೇಲೆ ಹೆಡ್ ಕಾನ್ಸ್ಟೆಬಲ್ ಅಥವಾ ಜಮಾದಾರರೂ ಅವರ ಮೇಲ್ಪಟ್ಟ ನೌಕರರೂ ಈ ಕೆಲಸ ನೋಡುವಂತೆ ಏರ್ಪಾಡು ನಡೆಯುವುದು. ಬೆಂಗಳೂರು ಪೋಲೀಸ್ ಸ್ಕೂಲಿನಲ್ಲಿ ಓದಿ ತೇರ್ಗಡೆ ಹೊಂದಿದವರೇ ಆ ದರ್ಜೆಗಳಿಗೆ ನೇಮಕವಾಗುತ್ತಿರುವುದರಿಂದ ಅವರು ಕಾರ್ಯಗಳನ್ನು ತೃಪ್ತಿಕರವಾಗಿ ನಡಸುತ್ತಾರೆಂದು ನಿರೀಕ್ಷಿಸಬಹುದು. ಆ ವರುಷ ಗ್ರಾಮಾಂತ್ರ ಪೋಲೀಸಿನವರು ಪತ್ತೆ ತರದೂದು ನಡಿಸಿ ೧೧೨ ಜನರನ್ನು ದಸ್ತಗಿರಿ ಮಾಡಿರುತ್ತಾರೆ. ಕಾನೂನಿಗೆ ವಿರೋಧವಾದ ಬಾಲ್ಯ ವಿವಾಹಗಳು ನಡೆಯುವುದು ವರುಷೇ ವರುಷ ಕಡಮೆಯಾಗುತ್ತಿದೆ ಎಂದು ತಿಳಿಸಲು ಸಂತೋಷಪಡುವೆವು. ಕಳೆದ ವರ್ಷ ೧೭ ಮೊಕದ್ದಮೆಗಳಾಗಿ ೬೮ ಜನರನ್ನು ಹಿಡಿದು ದಂಡಶಿಕ್ಷೆಗೆ ಗುರಿಮಾಡಿದರು. ಗ್ರಾಮಾಧಿಕಾರಿಗಳು ಚಾಕಚಕ್ಯವಿಟ್ಟು ಬಾಲ್ಯ ವಿವಾಹಗಳು ನಡೆಯುವುದಕ್ಕೆ ಮೊದಲೇ ಎಚ್ಚರಿಕೆ ಕೊಡುತ್ತಾ ಬಂದ ಪಕ್ಷದಲ್ಲಿ ಈ ವಿವಾಹಗಳು ಸಂಪೂರ್ಣವಾಗಿ ನಿಂತುಹೋಗುವುದರಲ್ಲಿ ಸಂಶಯವಿಲ್ಲ. ಮೈಸೂರು ಸಂಸ್ಥಾನದಲ್ಲಿರುವ ೫,೧೧೬ ಮಂದಿ ಪೋಲೀಸಿನವರಲ್ಲಿ ಅರೆವಾಸಿ ನೌಕರರು ಅಕ್ಷರಸ್ಥರೇ ಅಲ್ಲವೆಂದು ತಿಳಿಸಲು ವಿಷಾದಿಸುವೆವು ಅಂಥವರು ವಿದ್ಯೆ ಕಲಿಯುವುದಕ್ಕೆ ಸರ್ಕಾರದವರು ಅವಕಾಶವನ್ನೂ ತಕ್ಕ ಪ್ರೋತ್ಸಾಹವನ್ನೂ ಕಲ್ಪಿಸುವುದು ಅವಶ್ಯಕ. ಕಳೆದ ವರುಷ ಗವರ್ನಮೆಂಟಿನವರು ಈ ಇಲಾಖೆಗೆ ೯,೯೨,೮೭೩ ರೂಪಾಯಿ ವೆಚ್ಚ ಮಾಡಿರುತ್ತಾರೆ; ಅಂದರೆ ಪ್ರತಿ ೧೦೦ ಪ್ರಜೆಗಳಿಗೆ ಸುಮಾರು ೧೮ ರೂಪಾಯಿ ಬೀಳುವುದು. ಮೈಸೂರು ಮತ್ತು ಬೆಂಗಳೂರು ಪಟ್ಟಣಗಳ ಪೋಲೀಸಿನವರಿಗೆ ಪ್ರತ್ಯೇಕವಾದ ಕಟ್ಟಡಗಳನ್ನು ಕಟ್ಟಿಸುವುದೂ, ಗ್ರಾಮಗಳಲ್ಲಿ ಪಂಚಾಯಿತರನ್ನು ಏರ್ಪಡಿಸುವುದೂ ಗವರ್ನಮೆಂಟಿನವರ ಆಲೋಚನೆಯಲ್ಲಿದೆ ಈ ಸಂದರ್ಭದಲ್ಲಿ ಸರ್ಕಾರದವರು ರಾಜಧಾನಿಯಲ್ಲಿ ರಿಸರ್ವ್ ಪೋಲೀಸ್ ಲೈನ್ಸ್ ಬಹಳ ಹಣ ಮುಟ್ಟಿಸಿ ಕಟ್ಟಿಸಿದ್ದು ಸಾರ್ಥಕವಾಗದೆಹೋಯಿತೆಂತಲೂ, ಅನಾರೋಗ್ಯಕರವಾದ ಪ್ರದೇಶದಲ್ಲಿ ಅದನ್ನು ಕಟ್ಟಿಸಿರುತ್ತಾರೆಂತಲೂ ಸೂಚಿಸುವೆವು.

ದಾನ ಧರ್ಮವೆಂದರೇನು?

ದಾನಧರ್ಮವೆಂಬುದು ಲೋಕದಲ್ಲಿ ಬಹು ಸಾಧಾರಣವಾಗಿದೆ ಪೂರ್ವದಲ್ಲಿ ಪಾಪಷಾಗಳೆಂಬ ದೊರೆಗಳು ಈ ದೇಶವನ್ನಾಳುತ್ತಿದ್ದರಷ್ಟೆ ಅವರಲ್ಲಿ ಒಬ್ಬಾತನು ಬಡಬಗ್ಗರಿಗೆ ಅನೇಕ ಉಪಕಾರಗಳನ್ನು ಮಾಡುತ್ತ ಬಹು ಧರ್ಮಿಷ್ಠನೆಂದು ಹೆಸರುಗೊಂಡಿದ್ದನು. ಮತ್ತು ತನ್ನ ರಾಜಧಾನಿಗೆ ಯಾವ ಬಡವನಾಗಲೀ ಪರದೇಶಿಯಾಗಲೀ ಸಾಹುಕಾರನಾಗಲೀ ಬಂದರೆ ಅವನು ಆ ಊರಿನಲ್ಲಿ ಇರುವ ದಿನವೂ ಪಾದುಷಾಗಳ ಅರಮನೆಗೆ ಹೋಗಿ ಅವರ ಆತಿಥ್ಯವನ್ನು ಸ್ವೀಕರಿಸ ಬೇಕೆಂಬ ಅಪ್ಪಣೆಯಿತ್ತು ಹೀಗೆ ಬಹು ಕಾಲದಿಂದ ನಡೆದು ಬರುತ್ತಿರಲಾಗಿ ಒಂದಾನೊಂದು ದಿನ ಒಬ್ಬ ಪರಸ್ಥಳಿಕನು ರಾಜಧಾನಿಗೆ ಬಂದು ಒಂದು ಸತ್ರದಲ್ಲಿ ಇಳಿದುಕೊಂಡಿದ್ದನು ಆಗ ಅರಮನೆಯ ಉಗ್ರಾಣದವರು ಬಂದು ಆತನಿಗೆ ರಾಜಾಜ್ಞೆಯನ್ನು ತಿಳಿಸಿದರು. ಆ ಪ್ರವಾಸಿಕನು ಅತ್ಯಾನಂದಭರಿತನಾಗಿ ಯೋಗ್ಯವಾದ ವಸ್ತ್ರಾಭರಣ ಧರಿಸಿದವನಾಗಿ ನಿಯಮಿತವಾದ ವೇಳೆಗೆ ಸರಿಯಾಗಿ ಅರಮನೆಗೆ ಹೋಗಿ ಪಾದುಷಾರವರ ರೂಬರೂಬು ಊಟಕ್ಕೆ ಕುಳಿತನು ಊಟವಾದ ಬಳಿಕ ಅಲ್ಲಿದ್ದ ಅತಿಥಿಗಳೆಲ್ಲಾ ಪಾದಷಾರವರಿಗೆ ಅತಿ ದೈನ್ಯದಿಂದ ವಂದಿಸಿ

...ಮಾಡಿ ಅಪ್ಪಣೆಯನ್ನು ಪಡೆದು ತಮ್ಮ ತಮ್ಮ ದಾರೀ ಹಿಡಿದು ...ಗುತ್ತಿರಲು ಈ ಪ್ರಯಾಣಿಕನು ಮಾತ್ರ ಪಾದಚಾರಿಗೆ ಯಾವ ...ಮರ್ಯಾದೆಯನ್ನು ಮಾಡದೆ ಸುಮ್ಮನೆ ಹೊರಟು ...ದನು.

ಇವನ ನಡತೆಯನ್ನು ಆಸ್ಥಾನದ ದೊಡ್ಡ ಮನುಷ್ಯರು ಕಂಡು ...ನು ಬಹಳ ದುರಹಂಕಾರಿಯು. ಇವನು ರಾಜ ಸಮುಖದಲ್ಲಿ ಅತಿ ...ಗಿರುವದಕ್ಕೆ ಯೋಗ್ಯನಲ್ಲವಾದುದರಿಂದ ಇವನ ಹೆಸರನ್ನು ...ನೆಯ ಅತಿಥಿಗಳ ಪಟ್ಟಿಯಿಂದ ಅಳಿಸಿಬಿಡಬೇಕು ಎಂದು ಅರ... ಅಪ್ಪಣೆಯನ್ನು ಕೇಳಿಕೊಂಡರು. ಆತನು ಅದೇ ಪ್ರಕಾರ ಅನು...ಯನ್ನು ದಯಪಾಲಿಸಿದನು ಇದನ್ನೆಲ್ಲಾ ನೋಡಿ ಆ ಅತಿಥಿಯು ...ದ ಮೇಲೆ ಬಿದ್ದು ಹೊರಳಾಡುತ್ತಾ ಹುಚ್ಚು ನಗು ನಕ್ಕನು ...ಊ ಇದನ್ನು ಕಂಡು ಆಶ್ಚರ್ಯಭರಿತನಾಗಿ—ಅವನು ಹೀಗೆ ...ಮೀರಿ ನಗುವದಕ್ಕೆ ಕಾರಣವೇನು? ಎಂದು ವಿಚಾರಿಸಿದನು ...ಪ್ರಯಾಣಿಕನು—ಮಹಾಸ್ವಾಮಿ, ತಾವು ಮಾಡುವ ಧರ್ಮಕಾ...ರ್ಯ ಕೇವಲ ಮುಖಸ್ತುತಿಗೋಸ್ಕರವೇ ಎಂಬದು ಈಗ ಪ್ರಕಟ ...ಯಿತಲ್ಲವೇ? ನಿಮ್ಮ ಧರ್ಮಕಾರ್ಯದಲ್ಲಿ ಈ ಸ್ವಾರ್ಥತೆಯು ...ರುವದರಿಂದ ನೀವು ಮಾಡ ಪನೆಲ್ಲಾ ನಿರರ್ಥಕವಾಯಿತು ನನ್ನ ...ನ್ನು ನೀವು ನಿಮ್ಮ ಅತಿಥಿಗಳ ಪಟ್ಟಿಯಿಂದ ಅಳಿಸಿಬಿಟ್ಟಂತೆಯೇ ...ತನು ತನ್ನ ಸತ್ಪುರುಷರ ಪಟ್ಟಿಯಿಂದ ನಿಮ್ಮ ಹೆಸರನ್ನು ತೆಗೆದು ...ವನು ಎಂದುತ್ತರವನ್ನಿತ್ತನು

"ಜನರು ನೋಡಲಿ ಎಂದು ನಿಮ್ಮ ಧರ್ಮಕಾರ್ಯಗಳನ್ನು ಅವರ ...ದೆ ಮಾಡಬೇಡಿರಿ. ಹಾಗೆ ಮಾಡಿದರೆ ಪರಲೋಕದಲ್ಲಿರುವ ನಿಮ್ಮ ...ಯ ಹತ್ತಿರ ನಿಮಗೆ ಫಲ ದೊರೆಯದು ಜನರಿಂದ ಹೊಗಳಿಸಿ ...ಬೇಕೆಂದು ಕಪಟಿಗಳು ಸಭಾಮಂದಿರಗಳಲ್ಲಿಯೂ ಬೀದಿಗಳಲ್ಲಿ ...ಕೊಂಬೂದಿಸುತ್ತಾರೆ ಧರ್ಮ ಕೊಡುವಾಗ ಬಲಗೈ ಮಾಡಿದ್ದು ...ಗೈ ತಿಳಿಯದಿರಲಿ ಹೀಗೆ ಅಂತರಂಗದಲ್ಲಿ ನಡೆಯುವದನ್ನು ನೋಡು... ನಿಮ್ಮ ತಂದೆಯು ನಿಮಗೆ ಫಲವನ್ನು ಕೊಡುವನು"

ಬಳದೇಶದ ವೃತ್ತಾಂತಗಳು

"ಬಹುಮಾನದ ಮೇಲಾಟ"—ಇದಕ್ಕಾಗಿ ಈ ವಾರ ನಮ್ಮಲ್ಲಿಗೆ ...ಬಾತ್ಮಿಗಳಲ್ಲಿ ಯಾವುದೂ ಅರ್ಹವಾದದ್ದಾಗಿರಲಿಲ್ಲವಾದ್ದರಿಂದ ...ಬಾತ್ಮಿಗಾರರಿಗೂ ಬಹುಮಾನ ಕಳುಹಿಸಲಿಲ್ಲವು

****

ಮಿ॥ ಜೆ. ಹ್ಯೂಂ ರೈಟ್‌ರವರು ವಿಲಾಯತಿಯಿಂದ ಒಂದು ಬೆಂಗ...ಳೂರು ಸಿಟಿ ಮ್ಯಾಜಿಸ್ಟ್ರೇಟ್ ಕೋರ್ಟಿನ ಛಾರ್ಜ್ ವಹಿಸಿದರು

****

...ರ್ಭಂಗ ಮಹಾರಾಜರವರು ಕಳೆದ ವಾರ ಕಲ್ಕತ್ತಾ ಪಟ್ಟಣದಲ್ಲಿ ...ವಿಶ್ವಾಸಕ ಸಂಘ ಒಂದಕ್ಕೆ ೩,೦೦೦ ರೂಪಾಯಿ ಉಚಿತವಾಗಿ ...ಪಾಲಿಸಿದರು

****

...ಮ್ಮ ಮಹಾರಾಜರವರ ಪ್ರೈವೆಟ್ ಸೆಕ್ರಟರಿ ಮಿ॥ ಮೆಕಾನಕಿಯು...ನ ವಿಲಾಯತಿಯಲ್ಲಿ ಕಳೆದ ಡಿಸೆಂಬರ್ ೧೨ ರಲ್ಲಿ ಎರಡು ಅವಳಿ ...ಮಕ್ಕಳು ಹುಟ್ಟಿದರೆಂದು ಪ್ರಕಟವಾಗಿದೆ.

****

ಮಿ॥ ಟಿ. ಆರ್ ಎ ತಂಬೂಚೆಟ್ಟಿಯವರು ಕಳೆದ ವಾರ ...ಸರ್ ದಿವಾನ್ ಸ್ವಾಮಿ ಐಯ್ಯಂಗಾರ್‌ರಿಂದ ತಮ್ಮ ಕನ್ನಿನ ದುಮಾರ್ಗ...ಕ್ಕೆ ಕೊಯಿಸಿದ್ದಲ್ಲದೆ ಪರೆಯನ್ನು ತೆಗೆಸಿಕೊಂಡರೆಂದು ತಿಳಿ...ದು

****

ನಮ್ಮ ದಿವಾನರಾದ ಮಿ॥ ವಿ ಪಿ ಮಾಧವರಾಯರು ಪರಿವಾರ ...ಕಳೆದ ವಾರ ಕಲ್ಕತ್ತೆಯಿಂದ ಪ್ರಯಾಣಮಾಡಿ, ಬೊಂಬಾಯಿ ...ದಲ್ಲಿ ಸಂಚಾರಮಾಡಿಕೊಂಡು, ಮೊನ್ನೆ ಬೆಳಿಗ್ಗೆ ಬೆಂಗಳೂರನ್ನು ...ದರು.

****

ನಮ್ಮ ಮಹಾರಾಜರವರಿಗೆ ಬಹು ವಿಶೇಷವಾದ ಜಿ ಸಿ ಎಸ್ ಐ ...ಬಿರುದು ಬಂದದ್ದನ್ನು ಕೇಳಿ ಈ ಸಂಸ್ಥಾನದ ಪ್ರಜೆಗಳು ...ತಿ ಸಂತೋಷಪಟ್ಟು ಅಲ್ಲಲ್ಲಿ ಸಭೆಗಳನ್ನು ಮಾಡಿ, ತಮ್ಮ ...ಹರ್ಷವನ್ನು ಪ್ರಕಾಶಪಡಿಸುತ್ತಿದ್ದಾರೆ

****

ಮೈಸೂರು ತಾಲ್ಲೂಕಿಗೆ ಸೇರಿದ ಕಡಕೊಳ ಗ್ರಾಮದಲ್ಲಿ ಮೊನ್ನೆ ...ನವರ ಒಂದು ಉತ್ಸವದ ವಿಚಾರದಲ್ಲಿ ಎರಡು ಗುಂಪುಗಳಾಗಿ ...ಕದನಗಳು ನಡೆಯುವಂತೆ ಸಮಾಚಾರ ಬಂದದ್ದರಿಂದ ಪೊಲೀಸ್ ...ಸೂಪರಿಂಟೆಂಡೆಂಟರು ಅಲ್ಲಿಗೆ ಹೋಗಿರುತ್ತಾರೆಂದು ಕೇಳುವೆವು.

****

...ಡವೇರಿದ್ದ ಮಿ॥ ಡಿ ಎಂ ನರಸಿಂಗರಾಯರು ಚಿಕ್ಕಮಗಳೂ...ರು ಡಿಪ್ಯುಟಿ ಕೆಲಸವನ್ನು ವಹಿಸಿಕೊಂಡದ್ದರಿಂದ ಮಿ॥ ಟಿ ಇ ...ನಿವಾಸಯ್ಯರವರು ಬೆಂಗಳೂರು ಪ್ರಿನ್ಸಿಪಲ್ ಮುನ್ಸೀಫ್ ...ರು ಮಿ॥ ಡಿ ಕೆ. ರಾಮಾಚಾರ್ಯರು ಅಲ್ಲಿನ ಅಡಿಷನಲ್ ಮುನ್...ಸೀಫ್ ಕೆಲಸಕ್ಕೆ ವಾಪಸು ಬಂದಿರುತ್ತಾರೆ.

****

ಶ್ರೀ ಶೃಂಗೇರಿ ಜಗದ್ಗುರುಗಳು ನಾಳೆ ತಾ ೧೮ ಕ್ಕೆ ಅಲ್ಲಿಂದ ...ರು ಹೊರಟು, ಸುಮಾರು ೧೦ ಮೈಲಿ ದೂರದಲ್ಲಿರುವ ಬೆಟ್ಟದ ...ಕೆಲವು ದಿನಗಳ ತನಕ ಇದ್ದು, ಶ್ರೀಮನ್ಮಹಾರಾಜರವರನ್ನು ...ತರುವಾಯ ಬೆಂಗಳೂರಿಗೆ ಚಿತ್ತೈಸಿ, ಅಲ್ಲಿ ನಡೆಯಬೇಕಾ...ದ ಕಾರ್ಯವನ್ನು ಪೂರೈಸಿಕೊಂಡು, ರಾಜಧಾನಿಗೆ ದಯ...ಮಾಡಿಯೂ, ಇಲ್ಲಿಂದ ದಕ್ಷಿಣ ದೇಶದ ಮೇಲೆ ಸಂಚಾರ ...ಹೊರಡುವ ಕೇಳುತ್ತೇವೆ.

ಕಳೆದ ವಾರ ನಮ್ಮ ಪತ್ರಿಕೆಯಲ್ಲಿ ಸುಬ್ಬರಾಯನ ಘಾಟಜಾತ್ರೇ ವಿಷಯವನ್ನು ಕುರಿತು ಒಬ್ಬ ಬಾತ್ಮಿದಾರರು ಬರೆದಿದ್ದ ವಿಚಾರ ಅಂದರೆ ಕಸಬಾ ಪೊಲೀಸ್ ದಫೇದಾರ್ ಸುಬ್ಬಾಚಾರ್‍ರ ಕಿವಿ ಕೊಯ್ದಿದ್ದಾಗಲಿ ಮತ್ತೊಬ್ಬ ಪೊಲೀಸಿನವನ ಕೈಮುರಿದದ್ದಾಗಲಿ ನಿಜವಲ್ಲವೆಂಬದಾಗಿ ಒಬ್ಬ ಬಾತ್ಮಿದಾರರು ತಿಳಿಸುತ್ತಾರೆ.

****

ರಾಜಧಾನಿಯ ವಿಕ್ಟೋರಿಯಾ ಮಿಡ್ಲ್ ಗರ್ಲ್‌ಸ್ಕೂಲಿನ ಸೂಪರಿಂಟೆಂಡೆಂಟರಾದ ಮಿಸ್ ಪಾರ್ಸನ್ಸ್ ರವರು ಸೀಮೆಯಿಂದ ವಾಪಸು ಬಂದದ್ದಕ್ಕಾಗಿ ಸ್ಕೂಲಿನ ಉಪಾಧ್ಯಾಯರೂ ಬಾಲಿಕೆಯರೂ ಸೇರಿ ಕಳೆದ ಶನಿವಾರ ಒಂದು ಸಂತೋಷಸಭೆಯನ್ನು ನಡಿಸಿ ಅವರಿಗೆ ಅಡ್ರೆಸ್ಸನ್ನು ಓದಿ ಒಪ್ಪಿಸಿ ತಮ್ಮ ಕೃತಜ್ಞತೆಯನ್ನು ಪ್ರಕಾಶಪಡಿಸಿದರು.

****

ಬೆಂಗಳೂರು ಪಟ್ಟಣದಲ್ಲಿ ಮ್ಯುನಿಸಿಪಾಲಿಟಿಯವರು ಪ್ರಜೆಗಳಿಂದ ನೀರಿನ ತೆರಿಗೆ ವಸೂಲ್ಮಾಡುವುದರಲ್ಲಿ ಮನೆಗಳ ಯಜಮಾನರನ್ನು ವಿಚಾರಿಗಿಟ್ಟುಕೊಂಡು ಕಂದಾಯವನ್ನು ಗೊತ್ತು ಮಾಡದೆ ತಾವೇ ಸ್ವತಂತ್ರಿಸಿ ಲೆಕ್ಕ ಹಾಕಿ ಇಷ್ಟಿಷ್ಟು ವಸೂಲಾಗಬೇಕೆಂದು ಲೆಕ್ಕ ಹಾಕಿ ಆ ರೀತಿ ವಸೂಲ್ಮಾಡಲಾರಂಭಿಸಿರುವಂತೆಯೂ ಇದರಿಂದ ಪ್ರಜೆಗಳಲ್ಲಿ ಅಸಮಾಧಾನ ಉಂಟಾಗಿರುವಂತೆಯೂ ತಿಳಿದುಬಂದಿದೆ.

****

ಒಬ್ಬ ಬಾತ್ಮಿದಾರರು ಬರೆಯುವುದೇನಂದರೆ—ಶಿಡ್ಲಘಟ್ಟದ ತಾಲ್ಲೂಕು ಬಸೆಟ್ಟಹಳ್ಳಿ ಮಿ॥ ಬಿ ಸೂರ್ಯನಾರಾಯಣ ರಾಯರು ಕೇಳುವ ಭತ್ತಕುಟ್ಟುವ ಯಂತ್ರದ ವಿಷಯವಾಗಿ ಅವರು ಇದರಡಿ ಬರೆಯುವ ವಿಳಾಸಕ್ಕೆ ಬರೆದುಕೊಂಡಲ್ಲಿ ಅವರ ಅನುಕೂಲಕ್ಕೆ ತಕ್ಕ ಯಂತ್ರ ದೊರೆಯುತ್ತದೆ ಕಂಪನಿ ವಿಳಾಸ —ಮಾರ್ಷಲ್ ಸನ್ಸ್ ಅಂಡ್ ಕೊ, ಲಿಮಿಟೆಡ್, ಇಂಜನೀರ್ಸ್, ೮ ನೇ ಹ್ಯಾಮ್‌ಸ್ಟ್ರೀಟ್, ಬೊಂಬಾಯಿ

****

ಮೈಸೂರು ಮ್ಯಾಂಗನೀಸ್ ಕಂಪನಿಯ ೬ ಲಕ್ಷ ರೂಪಾಯಿ ಷೇರುಗಳಲ್ಲಿ ಎರಡು ಲಕ್ಷ ರೂಪಾಯಿನ ಷೇರುಗಳು ಬೆಂಗಳೂರು ಇಂಗ್ಲೀಷ್ ವೇರ್ ಹೌಸಿನ ವರ್ತಕರಾದ ಮಿ॥ ಹಾಜಿ ಇಸ್ಮೈಲ್ ಸೇಟರಿಗೂ ಇವರ ಮಗ ಮಿ॥ ಯೋಮಿನ್ ಸೇಟರಿಗೂ ಸೇರಿದ್ದವು ಈಚೆಗೆ ಈ ಕಂಪನಿಯನ್ನು ವಿಲಾಯತಿಯವರು ೨೦॥ ಲಕ್ಷ ರೂಪಾಯಿಗೆ ಕೊಂಡುಕೊಂಡದ್ದರಿಂದ ಅವರಿಬ್ಬರ ಪಾಲಿಗೂ ೨ ಕ್ಕೆ ೭ ಲಕ್ಷ ರೂಪಾಯಿ ಬರುವಂತಾಯಿತು

****

ರಾಜಧಾನಿಯಲ್ಲಿರುವ ವಿಕ್ಟೋರಿಯಾ ಗರ್ಲ್ಸ್‌ಸ್ಕೂಲಿನಲ್ಲಿ ಈ ಸಲ ಲೋವರ್ ಸೆಕಂಡರಿ ಪರೀಕ್ಷೆಯಲ್ಲಿ ನಾಲ್ಕು ಹುಡುಗಿಯರೂ, ಟ್ರೈನಿಂಗ್ ಪರೀಕ್ಷೆಯಲ್ಲಿ ಇಬ್ಬರು ಉಪಾಧ್ಯಾಯಿನಿಯರೂ ತೇರ್ಗಡೆ ಹೊಂದಿರುತ್ತಾರೆ ನಾರ್ಮಲ್ ಟ್ರೈನಿಂಗ್ ಕ್ಲಾಸಿಗೂ, ಇಂಗ್ಲಿಷ್ ಲೋವರ್ ಸೆಕಂಡರಿ ಕ್ಲಾಸಿಗೂ ಸೇರಲಪೇಕ್ಷಿಸುವವರು ಈ ತಿಂಗಳು ೨೫ ನೆ ತಾ. ಒಳಗಾಗಿ ಆ ಸ್ಕೂಲಿನ ಲೇಡಿ ಸೂಪರಿಂಟೆಂಡೆಂಟರಿಗೆ ಅರ್ಜಿ ಬರೆದುಕೊಳ್ಳತಕ್ಕದ್ದು ಎಂದು ಹೆಡ್ ಮಾಸ್ಟರು ತಿಳಿಸುತ್ತಾರೆ

****

ಕಳೆದ ವಾರ ಶ್ರೀಮನ್ ಮಹಾರಾಜರವರು ಮಾತ್ರ ಕಲ್ಕತ್ತೆಯಿಂದ ಆಗ್ರಾ ಪಟ್ಟಣಕ್ಕೆ ಒಂದು ದಿನದ ಮಟ್ಟಿಗೆ ದಯಮಾಡಿ ಅಲ್ಲಿ ಆ ರಾತ್ರಿ ನಡೆದ ದರ್ಬಾರಿನಲ್ಲಿ ವೈಸ್‌ರಾಯ್ ಲಾರ್ಡ್ ಮಿಂಟೋರವರ ಸ್ವಹಸ್ತದಿಂದ ಜಿ ಸಿ ಎಸ್. ಐ ಎಂಬ ಬಿರುದನ್ನು ಪಡೆದು, ಅದೇ ರಾತ್ರಿ ವಾಪಸು ಹೊರಟು ಮರುದಿನ ಕಲ್ಕತ್ತೆಯನ್ನು ತಲಪಿದರು. ತರುವಾಯ ಎಲ್ಲರೂ ಅಲ್ಲಿಂದ ಅಲಹಬಾದ್ (ಪ್ರಯಾಗ) ಕಾಶೀ ಪಟ್ಟಣಗಳ ಕಡೆ ಪ್ರಯಾಣ ಮಾಡಿರುತ್ತಾರೆ ಅವರೆಲ್ಲಾ ಮುಂದಿನ ಬುಧವಾರ ಬೆಂಗಳೂರಿಗೆ ಬಂದು ಸೇರುವಂತೆ ನಿಷ್ಕರ್ಷೆಯಾಗಿರುವುದು.

****

ರಾಜಧಾನಿಯಲ್ಲಿರುವ ಸಿಂಗರ್ ಕಂಪನಿಯ ಅಂಗಡಿಯನ್ನು ಮದರಾಸ್ ಡಿಸ್ಟ್ರಿಕ್ಟ್ ಮ್ಯಾನೇಜರವರು ಕಳೆದ ವಾರ ಬಂದು ಅಜಮಾಯಿಷಿ ಮಾಡಿದರು ಈ ಕಂಪನಿಯವರು ದರ್ಜಿಯವರಿಂದಲೂ ಇತರರಿಂದಲೂ ಹೊಲಿಯುವ ಯಂತ್ರಗಳ ಮುರುಕಲು ಭಾಗಗಳನ್ನು ಕ್ರಯ ಕಟ್ಟಿ ತೆಗೆದುಕೊಳ್ಳುವ ಪದ್ಧತಿಯುಂಟು ಈ ಮುರುಕಲು ಭಾಗಗಳನ್ನು ಹೊಸ ಯಂತ್ರಗಳಿಗೆ ಸರಿಮಾಡಿಸಿ ಜೋಡಿಸ್ಯಾರೆಂಬ ಅನುಮಾನ ಪ್ರಜೆಗಳಿಗೆ ಉಂಟಾಗಬಾರದೆಂದು ಮೇಲ್ಕಂಡ ಮ್ಯಾನೇಜರು ಅವುಗಳನ್ನೆಲ್ಲಾ ಖುದ್ದಾಗಿ ಚೂರು ಚೂರು ಮಾಡಿಸಿ ಕಳೆದ ತಾ ೯ ನೆ ಬುಧವಾರ ಬಿಸಾಡಿಸಿ ಪ್ರಯಾಣ ಮಾಡಿದರು.

****

ತುಂಕೂರು ಬಾತ್ಮಿದಾರರು ಬರೆಯುವುದು —ನಮ್ಮ ಸಂಸ್ಥಾನದ ಸೀನಿಯರ್ ಕೌನ್ಸೆಲರ್ ಮಿ॥ ಟಿ ಆನಂದರಾಯರು ಇಲ್ಲಿಗೆ ದಯಮಾಡಿಸಿ ಗಿಪ್ಪಿ ಕವಿ ಮಾರ್ಕರೇ ಮೊದಲಾದ ಉದ್ಯೋಗಸ್ಥರೊಡನೆ ಟರ್ಮ್ ಇನ್ಸ್‌ಪೆಕ್ಷನ್ ಮಾಡಿದರು ಈ ಸಂದರ್ಭದಲ್ಲಿ ಮಿಡ್ಲ್ ಇಂಡಸ್ಟ್ರಿಯಲ್ ಶಾಲೆಯನ್ನು ಪರಾಂಬರಿಸಿ ಪಟ್ಟಣ ಪ್ರವೇಶಮಾಡುತ್ತಿರುವಾಗ ರೈಲಿನಿಂದ ಒಬ್ಬ ಮುಸಲ್ಮಾನನು ಒಂಟೆತ್ತಿನ ಗಾಡಿಯಲ್ಲಿ ಸವಾರಿ ಮಾಡಿಕೊಂಡು ಬರುತ್ತಿರುವಾಗ ಈ ಜನರ ಗುಂಪನ್ನು ಆ ಎತ್ತು ನೋಡಿ ಬೆದರಿ ಗಾಡಿಯನ್ನು ಸ್ವೇಚ್ಛೆಯಾಗಿ ಎಳೆದುಕೊಂಡು ಕೌನ್ಸಿಲರ ಹತ್ತಕ್ಕೆ ನುಗ್ಗುವಷ್ಟರಲ್ಲಿ ಜಾಗ್ರತೆಯಾಗಿ ವೈಸ್ ಪ್ರೆಸಿಡೆಂಟರು ಅಡ್ಡಲಾಗಿ ಬಂದು ಗಾಡಿಯನ್ನು ತಡದದ್ದರಿಂದ ಏನೂ ಅಪಾಯವಾಗಲಿಲ್ಲ. ಈ ಗಾಡಿಯವನಿಗೆ ವಿಚಾರಣೆಯಿಂದ ಮೂರು ವಾರ ಖೈದು ವಿಧಿಸಿದರು.

****

ರಾಜಧಾನಿಯಲ್ಲಿ ಪೊಲೀಸ್ ಇನ್ಸ್‌ಪೆಕ್ಟರ್ ದೇವರಾಜೇ ಅರಸ್, ಹೆಡ್ ಕಾನ್ಸ್‌ಟೆಬಲ್ ಮಹಮದ್ ಇಬ್ರಾಹಿಂ, ಕಾನ್ಸ್‌ಟೆಬಲ್‌ಗಳಾದ ನಂಜುಂಡೈಯ್ಯ, ಜವರೈಯ್ಯ, ಮಹಮದಲ್ಲಿ, ಮನೀಶ್ವರೈಯ್ಯ, ವೀರರಾಘವಾಚಾರ್, ಸಿದ್ಧಯ್ಯ, ಈ ಎಂಟು ಜನರೂ ಸೇರಿ ಕಳೆದ ನವರಾತ್ರಿ ಉತ್ಸವ ಕಾಲದಲ್ಲಿ ನಂಜುಂಡೈಯ್ಯ, ಸಾಂಟಿಮೂರ್ತಿ, ರಾಮಚಂದ್ರ, ಸೋಮಶೇಖರ ಎಂಬ ನಾಲ್ವರು ಹುಡುಗರನ್ನು ಕಳುವು ಮಾಡಿದರೆಂದು ಹಿಡಿದು ಪೊಲೀಸ್ ಠಾಣದಲ್ಲಿಟ್ಟು ಹಿಂಸೆ ಮಾಡಿದರೆಂದು ಮೊಕದ್ದಮೆ ಆಗಿ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಮೇಲ್ಕಂಡ ಪೊಲೀಸಿನವರನ್ನೆಲ್ಲಾ ಸೆಷನ್ ವಿಚಾರಣೆಗೆ ಗುರಿಮಾಡಿರುತ್ತಾರೆ ಈಚೆಗೆ ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್‌ರವರಿಂದ ಹುಕುಂ ಬಂದ ಪ್ರಕಾರ ಮೇಲ್ಕಂಡ ಪೊಲೀಸ್ ನೌಕರರನ್ನೆಲ್ಲಾ ಮೊನ್ನೆ ಸೋಮವಾರದ ಬಾಗಾಯತು ಕೆಲಸ ಬಿಡಿರುತ್ತಾರೆ

****

ಬೆಂಗಳೂರು ಬಸವನಗುಡಿ ಬಡಾವಣೆಯಲ್ಲಿ ನೆನ್ನೆ ದಿನ ಮೈಸೂರು ಸರ್ಕಾರದವರು ಪಶುರೋಗಚಿಕಿತ್ಸೆಗಾಗಿ ಒಂದು ವೈದ್ಯಶಾಲೆಯನ್ನು ಸ್ಥಾಪನೆ ಮಾಡಿರುತ್ತಾರೆ ನಮ್ಮ ಸಂಸ್ಥಾನದಲ್ಲಿ ಇದುವರೆಗೆ ಇಂಥಾ ಆಸ್ಪತ್ರೆಯು ಇರಲೇ ಇಲ್ಲವೆಂದು ವಾಚಕರಿಗೆ ತಿಳಿದಿದೆ ಈ ಆಸ್ಪತ್ರೆಯಲ್ಲಿ ಕುದುರೆ, ಗೋಕಾಯಿಗಳು, ಕುರಿಗಳು, ನಾಯಿಗಳೇ ಮೊದಲಾದ ಪಶುಗಳಿಗೆ ಚಿಕಿತ್ಸೆ ನಡೆಯುವಂತೆ ಏರ್ಪಾಡು ಮಾಡಿದಾರೆ. ಅಪೇಕ್ಷೆ ಇದ್ದವರು ಕಾಯಿಲೆಯಾದ ಪಶುಗಳನ್ನು ಆಸ್ಪತ್ರೆಯಲ್ಲೇ ಇಟ್ಟು ಚಿಕಿತ್ಸೆ ಮಾಡಿಸಬಹುದು ರೈತರ ಮತ್ತು ಕೂಲಿಕಂಬಳಗಾರರ ಗೋಕಾಯಿಗಳಿಗೆ ಛಾರ್ಜನ್ನು ತೆಗೆದುಕೊಳ್ಳದೆ ಮುಫತ್ತಾಗಿ ಚಿಕಿತ್ಸೆಮಾಡುವರು ಅನುಕೂಲಸ್ಥರಾದ ಇತರ ಜನರ ಬಾಬತು ಗೋಕಾಯಿಗಳಿಗೂ ಔಷಧ ಹಾಕಿ ಚಿಕಿತ್ಸೆಮಾಡುವುದಕ್ಕೆ ಸ್ವಲ್ಪ ಮಟ್ಟಿಗೆ ಫೀಜು ವಸೂಲ್ಮಾಡುತ್ತಾರೆ ಜಟ್ಕಾಗಾಡಿಗಳ ಎತ್ತು ಕುದುರೆಗಳಿಗೆ ಔಷಧ ಕೊಡಲು ಅರ್ಧ ಛಾರ್ಜ್ ತೆಗೆದುಕೊಳ್ಳುವರು. ಇದಲ್ಲದೆ ಅಂಟುರೋಗಗಳು ತಗಲಿದ ದಾಸುಗಳನ್ನು ಇಟ್ಟು ಚಿಕಿತ್ಸೆ ಮಾಡುವುದಕ್ಕೂ ಪ್ರತ್ಯೇಕವಾದ ಆಲಯವನ್ನು ಕಟ್ಟಿಸುತ್ತಾರೆ. ಈ ಆಸ್ಪತ್ರೆಯು ಡಾಕ್ಟರೂ ನೌಕರರೂ ಪಶುಗಳನ್ನು ಸಾಕಿ ಬೆಳಸುವ ವಿಧಾನವೇ ಮುಂತಾದದ್ದನ್ನೆಲ್ಲಾ ರೈತಪ್ರಜೆಗಳಿಗೆ ಕಲಿಸಿಕೊಡಬೇಕೆಂದು ಉದ್ದೇಶಪಟ್ಟಿದ್ದಾರೆ ಈ ಆಸ್ಪತ್ರೆಯು ಪ್ರತಿದಿನವೂ ಬೆಳಿಗ್ಗೆ ೭ ರಿಂದ ೧೧ ಗಂಟೆ ವರಿಗೂ ಸಾಯಂಕಾಲ ೪ ರಿಂದ ೬ ಗಂಟೆ ವರಿಗೂ ತೆರೆದಿರುವುದು. ಮತ್ತು ಅವಸರವಾದ ಚಿಕಿತ್ಸೆ ಮುಂತಾದ್ದು ಮಾಡುವುದಕ್ಕೆ ಡಾಕ್ಟರು ಯಾವಾಗಲೂ ಸಿದ್ಧರಾಗಿರುವರು ಇಂಥಾ ಆಸ್ಪತ್ರೆಯ ಡಾಕ್ಟರಾಗಿರುವ ಮಿ॥ ಎನ್ ನರಸಿಂಹೈಯ್ಯಂಗಾರ್‍ರನ್ನೂ ಅವರ ಒಳ್ಳೇ ಗುಣಗಳನ್ನೂ ನಮ್ಮ ವಾಚಕರಲ್ಲಿ ಅನೇಕರು ಬಲ್ಲವರಾಗಿರುತ್ತಾರೆ. ಈ ಸಂಸ್ಥಾನದ ಗೋಕಾಯಿಗಳ ಜಾಡ್ಯಾದಿಗಳನ್ನು ಇವರೇ ಅನೇಕ ವೇಳೆ ಸರ್ಕೀಟು ಮಾಡಿ ಪರೀಕ್ಷಿಸಿ ಪರಿಹಾರವನ್ನು ಸೂಚಿಸಿರುವರು

ಹುಲಿಯ ಕಾಟವು.

ಹೊನ್ನಾಳಿ ಛತ್ರದಲ್ಲಿ ಕೊಂದದ್ದು.

ಈ ಹೊನ್ನಾಳಿ ಕೋಟೆಯಲ್ಲಿ ಮುನ್ಸೀಫ್ ಕೋರ್ಟು ಇದ್ದದ್ದನ್ನು ಸರ್ಕಾರದವರು ತೆಗೆದುಹಾಕಿ ೨ ವರುಷವಾಯಿತು. ಆ ಪೈಕಿ ತಾಲ್ಲೂಕು ಕಛೇರಿ ಒಂದು ಮಾತ್ರ ಕೋಟೆ ಒಳಗೆ ಇದೆ. ಮುನ್ಸೀಫ್ ಕೋರ್ಟು ಇದ್ದ ಕಾಲದಲ್ಲಿ ಎಲ್ಲಾ ಮನೆಗಳೂ ಜನಗಳಿಂದ ಭರ್ತಿಯಾಗಿ ಮನೆ ಸಾಲದೆ ಇದ್ದದ್ದಕ್ಕೆ ಒಂದೊಂದು ಮನೆಯಲ್ಲಿ ಬಾಡಿಗ್ಗೆ ೨—೩ ಸಂಸಾರಗಳು ವಾಸಮಾಡಿಕೊಂಡಿದ್ದರು. ಬಾಡಿಗೆಗೋಸ್ಕರವೆ ಕೆಲವರು ಮನೆ ಕಟ್ಟಿಕೊಂಡು ಜೀವನ ಮಾಡುತ್ತಾ ಇದ್ದರು. ಸದರಿ ಕೋರ್ಟು ವಜಾ ಆದ ಮೇಲೆ ಅನೇಕ ಮನೆಗಳು ಹಾಳು ಬಿದ್ದು ಅದರಿಂದಲ್ಲಿರತಕ್ಕ ದುಷ್ಟಮೃಗಗಳೆಲ್ಲಾ ಹಗಲು ಹೊತ್ತಿನಲ್ಲಿಯೇ ಜನಗಳ ಭೀತಿಯಿಲ್ಲದೆ ಊರಲ್ಲೆಲ್ಲಾ ಸಂಚಾರಮಾಡಿಕೊಂಡು ಹಾಳು ಮನೆಗಳಲ್ಲಿ ವಾಸಮಾಡಿಕೊಂಡು ಹಸುಗಳನ್ನೂ ಮೇಕೆಗಳನ್ನೂ ಹಿಡಿದು ತಿನ್ನುತ್ತಾ ಇದೆ ಇದೇ ಜನವರಿ ತಾ ೧೧ ರ ಪ್ರಾತಃಕಾಲ ೯ ಗಂಟೆ ಸಮಯದಲ್ಲಿ ಕೋಟೆ ಒಳಗೆ ಇರತಕ್ಕ ಕಾಶೀಪತಿ ದೀಕ್ಷಿತರ ಪಾಳೆ ಮನೆ ಒಳಗೆ ಒಂದು ಹುಲಿಯು ಸೇರಿತ್ತು. ಬೇರೆ ಮನೆಯಲ್ಲಿದ್ದ ಕಾಶೀಪತಿ ದೀಕ್ಷಿತರೆಂಬುವರು ಆ ಮನೆ ಬೀಗ ತೆಗದು ಒಳಗೆ ಏನೋ ಕೆಲಸಕ್ಕೋಸ್ಕರ ಹೋಗಿ ನೋಡುವಲ್ಲಿ ಒಂದು ಚಿಕ್ಕ ಮನೆಯಲ್ಲಿ ಹುಲಿಯು ಕೂತಿದ್ದುದನ್ನು ಕಂಡು ಹೆದರಿಕೊಂಡು ಪುನಃ ವಾಪಸು ಓಡಿಬಂದು ಬಾಗಲು ಬೀಗ ಹಾಕಿಕೊಂಡು ಊರಲ್ಲೆಲ್ಲಾ ಗಲಾಟೆ ಮಾಡಿದರು ಕೂಡಲೆ ೨೦೦—೩೦೦ ಜನಗಳ ವರಿಗೂ ಸೇರಿ ಬಂದು ಕೆಲವರು ಬಂದೂಕು ದೊಣ್ಣೆ ಭರ್ಜಿ ವಗೈರೆ ತೆಗೆದುಕೊಂಡು ಮನೆ ಒಳಗೆ ನುಗ್ಗಿ ೨—೩ ಗುಂಡು ಹಾರಿಸಿದರು ಆ ಹುಲಿಯು ಬಹಳ ಸಿಟ್ಟಿನಿಂದ ಮನೆ ಒಳಗೆಲ್ಲಾ ತಿರುಗಿ ಅರ್ಭಟಿಸಿ ಯಾರಿಗೂ ಸಿಕ್ಕದೆ ಒಂದು ಕಂಡಿಯಲ್ಲಿ ಹಾರಿ ಹಿತ್ತಲ ಕಡೆ ಆಳಗತದಲ್ಲಿ ಓಡಿಹೋಗಿ ಪುನಃ ಸರ್ಕಾರಿ ಛತ್ರದ ಒಳಗೆ ಬಚ್ಚಲ ಮನೆ ಕೋಣೆ ಒಳಗೆ ಕೂತುಕೊಂಡಿತು ಜನಗಳು ಕಾಣದೆ ಹುಲಿ ಸಿಕ್ಕಲಿಲ್ಲವೆಂದು ತಮ್ಮ ಮನೆಗಳಿಗೆ ಹೋದರು ಅನಂತರ ೨ ಗಂಟೆ ಮೇಲೆ ಛತ್ರದಲ್ಲಿರತಕ್ಕ ಕೂಲಿಮಾಡುವ ಒಬ್ಬ ಹೆಂಗಸು ಜೋಳ ಬೀಸುತ್ತಾ ಕೂತಿದ್ದವಳು ಯಾತಕ್ಕೋ ಕೆಲಸಕ್ಕೋಸ್ಕರ ಅದೇ ಬಚ್ಚಲಮನೆ ಕೋಣೆ ಒಳಕ್ಕೆ ಹೋಗಿ ನೋಡಿದ ಕೂಡಲೆ ಹುಲಿಯು ಅವಳನ್ನು ಕಂಡು ಗದಕುಹಾಕಿ ಮೇಲಕ್ಕೆ ಹಾರಿತು. ಅವಳು ಹೆದರಿ ಕಿರಿಚಿಕೊಂಡು ಬಾಗಲು ಚಿಲಕ ಹಾಕಿಕೊಂಡು ಓಡಿಬಂದು ಕೂಗಿಕೊಂಡಳು ಆ ಕೂಡಲೆ ಮೊದಲಿನಂತೆ ಜನಗಳು ಬಂದು ಛತ್ರದ ಒಳಕ್ಕೆ ನುಗ್ಗಿ ಮನೆ ಮೇಲೆ ಹತ್ತಿ ಹಂಚು ತೆಗದು ಒಳಗೆ ಇರತಕ್ಕ ಹುಲಿಯನ್ನು ಗುಂಡಿನಿಂದ ಮಧ್ಯಾನ್ಹ ೧೨ ಗಂಟೆ ಸಮಯದಲ್ಲಿ ಹೊಡೆದು ಕೊಂದರು ಜನಗಳಿಗೆ ಅರ್ಧ ಭಯ ಕಮ್ಮಿಯಾಯಿತು ಆ ಹುಲಿಯನ್ನು ಊರೆಲ್ಲಾ ಮೆರವಣಿಗೆ ಮಾಡಿದರು ಊರಲ್ಲೆಲ್ಲಾ ಮನೆಗಳು ಹಾಳುಬಿದ್ದುದರಿಂದಲೂ ಮುನ್ಸೀಫ್ ಕೋರ್ಟು ತೆಗದುಹಾಕಿದ್ದರಿಂದಲೂ ಹಗಲುಹೊತ್ತಿನಲ್ಲಿಯೇ ದುಷ್ಟಮೃಗಗಳು ಊರೊಳಗೆಲ್ಲಾ ಸಂಚಾರಮಾಡುವದಕ್ಕೆ ಪ್ರಾರಂಭವಾಗಿದೆ. ಸ. ಡಿ.

ಮತ್ತೀಪುರ, ಕೊಳ್ಳೇಗಾಲಂ ತಾಲ್ಲೂಕು

ಕೊಳ್ಳೇಗಾಲಂ ತಾಲ್ಲೋಕು ಇಕ್ಕಡಹಳ್ಳಿ ಮಜರೆ ಮತ್ತೀಪುರದ ಗ್ರಾಮದಲ್ಲಿ ಕುರುಬರ ಜಾತಿ ಸುಮಾರು ೪೦ ವಯಸ್ಸುಳ್ಳ ತಳವಾರ ಮಾದ ಎಂಬುವನು ಇದೇ ತಿಂಗಳು ೧೦ ನೆ ತೇದಿ ಬೃಹಸ್ಪತಿವಾರದ ದಿವಸ ಇನ್ನು ಕೆಲವು ಜನಗಳ ಕೂಡ ಸದರಿ ಗ್ರಾಮದಲ್ಲಿ ನಡೆಯುವ ಹಾಲುಹರಿವೆ ಎಂಬ ಹಬ್ಬದ ನಿಮಿತ್ತ ಸೌದೆ ತರುವದಕ್ಕೋಸ್ಕರ ಊರಿಗೆ ಸುಮಾರು ಅರ್ಧ ಮೈಲಿ ದೂರದಲ್ಲಿರುವ ಕಾಡಿಗೆ ಹೋಗಿ ಸೌದೆಯನ್ನು ಒಂದು ಹೊಲದ ಸಮೀಪದಲ್ಲಿ ಕಡಿಯುತ್ತಾ ಇರುವಲ್ಲಿ ಇವನ ಕೂಡ ಕೆಲವು ಜನಗಳು ಸೌದೆ ತರುವದಕ್ಕಾಗಿ ಹೋಗಿದ್ದವರು ತಮ್ಮ ಕೆಲಸಗಳನ್ನು ಜಾಗ್ರತೆ ಮಾಡಿಕೊಂಡು ಇವನನ್ನು ಕೂಗಲಾಗಿ ಸದರಿಯುವನು — ಇದೋ ಬರುತ್ತೇನೆ ಎಂದು ಹೇಳುವದರೊಳಗಾಗಿ ಒಂದು ಹುಲಿ ಬಂದು ಅವನನ್ನು ಕಚ್ಚಿ ಸದ್ದು ಕೊಡದಂತೆಯೇ ಹತ್ತಿರದಲ್ಲಿದ್ದ ಹಳ್ಳಕ್ಕೆ ತೆಗೆದುಕೊಂಡು ಹೋಗಿಬಿಟ್ಟಿತು ಇವನ ಜೊತೆಯಲ್ಲಿ ಹೋಗಿದ್ದವರಿಗೆ ಈ ಸಂಗತಿಯೇ ತಿಳಿಯದು ಸಹವಾಟಿಗಳು ಕೆಲವುದೂರ ಬಂದು ಇವನ ಸುಳಿವು ಕಾಣದಿರಲು ಊರಿಗೆ ಹೊರಟು ಬಂದರು ರಾತ್ರಿ ಸದರಿಯವನು ಮನೆಗೆ ಬರಲಿಲ್ಲ ಬೆಳಿಗ್ಗೆ ಇದನ್ನು ನೋಡಿ ಹುಲಿಯೇ ತಿಂದಿರಬಹುದೆಂಬ ಆಲೋಚನೆಯಿಂದ ಕೊಂಬು ತಮಟೆ ವಗೈರಾ ತೆಗೆದುಕೊಂಡು ಸುಮಾರು ೧೦೦—೧೫೦ ಜನರ ವರಿಗೆ ಹೋಗಿ ನೋಡುವಲ್ಲಿ ಹುಲಿ ಆಗಲೂ ಸದರಿ ಶವವನ್ನು ತಿನ್ನುತ್ತಿದ್ದು ಸದರಿ ಜನಗಳು ಸದ್ದುಮಾಡಲು ಇವರನ್ನು ಘರ್ಜಿಸಿ ಸದರಿ ಶವವನ್ನು ಬಾಯಿಯಲ್ಲಿ ಕಚ್ಚಿಕೊಂಡು ಕೆಲವುದೂರ ಹೋಗಿ ಅಲ್ಲಿಂದ ಒಂದು ಮರಕ್ಕೆ ಸದರಿ ಶವ ಸಿಕ್ಕಿಕೊಂಡು ಬಿಡಿಸಿಕೊಳ್ಳುವದಕ್ಕೆ ಗಾಬರಿಯಾದ್ದರಿಂದ ಅಲ್ಲೇ ಬಿಟ್ಟು ಹೊರಟುಹೋಯಿತ್ತು ಸದರಿ ಶವವನ್ನು ಅರ್ಧಭಾಗವೆಲ್ಲಾ ತಿಂದುಬಿಟ್ಟದೆ ಕೆಲವು ಹೊತ್ತಿನ ಮೇಲೆ ಈ ಜನಗಳು ಅದನ್ನು ತೆಗೆದುಕೊಂಡು ಬಂದರು ಗ್ರಾಮದ ಮುನ್ಸೀಫರು ಸದರಿ ವಿಷಯದಲ್ಲಿ ಪೋಲೀಸಿಗೆ ರಿಪೋರ್ಟು ಮಾಡಿ ಪೋಲೀಸು ಇಲಾಖೆಯವರು ಬಂದು ಮುಂದಿನ ಕ್ರಮವನ್ನು ಜರಿಗಿಸಿದರು ಈ ಹುಲಿಯ ಕಾಟದಿಂದ ಈ ಪ್ರಾಂತ್ಯ ಗ್ರಾಮಾಂತರಗಳಲ್ಲಿ ಹೊಲ ಗದ್ದೆ ತೋಟ ವಗೈರೆಗಳಿಗೆ ಹೋಗತಕ್ಕ ಜನರಿಗೆ ತುಂಬಾ ಭಯೋತ್ಪಾತ ಉಂಟಾಗಿರುತ್ತೆ ಎಂಬುದನ್ನು ವಿವರಿಸಲು ಶಕ್ತಿ ಸಾಲದು

ಆ ಸಾ

ಮಹಾದೇವನಹಳ್ಳಿ, ಹಾಸನ ತಾಲ್ಲೂಕು

ಹಾಸನದ ತಾಲ್ಲೋಕು ದುದ್ದದ ಹೋಬಳಿ ಮಹಾದೇವನಹಳ್ಳಿಯಲ್ಲಿ ವಾಸಮಾಡುವ ಮಾದಿಗರ ಕೆಂಗನೆಂಬುವನ ಮಗ ಮರಿಯನೆಂಬುವನು ಇದೇ ತಿಂಗಳು ೩ ತಾ. ಗುರುವಾರ ಮಧ್ಯಾಹ್ನ ಸುಮಾರು ೩ ಗಂಟೆ ಸಮಯದಲ್ಲಿ ಸುಮಾರು ೨—೩ ಫರ್ಲಾಂಗ್ ದೂರದಲ್ಲಿದ್ದ ತನ್ನ ಗದ್ದೆಗೆ ಹೋಗಿ ಹುಲ್ಲು ಕೊಯ್ಯುತ್ತಾ ಇದ್ದನು. ಅಲ್ಲಿ ಇವನಿಗೆ ಹೂಂಕಾರ ಧ್ವನಿಯು ಕೇಳಿಸಿತು. ಇವನು ಕೂಡಲೇ ಎದ್ದು ನೋಡಲು ಏನೂ ಕಾಣಬರಲಿಲ್ಲವಾದ್ದರಿಂದ ತನ್ನ ಕೆಲಸದಲ್ಲಿ ನಿರತನಾಗಿದ್ದನು. ಯಥಾಪ್ರಕಾರ ಮೊದಲಿನಂತೆಯೇ ಎರಡನೆ ಸಾರಿಯೂ ಹೂಂಕಾರ ಧ್ವನಿ ಕೇಳಿಸಿತು ಆ ಕೂಡಲೇ ಮತ್ತೊಂದಾವರ್ತಿ ಎದ್ದು ಸುತ್ತಲೂ ನಿಧಾನವಾಗಿ ನೋಡುತ್ತಿರುವಾಗ ಸುಮಾರು ೨೦—೨೫ ಗಜ ಸಮೀಪದಲ್ಲಿದ್ದ ಬೇಲಿ ಪಕ್ಕದಲ್ಲಿ ಒಂದು ನಾಯಿಯು ಮಲಗಿರುವಹಾಗೆ ಕಾಣಿಸಿತು ನಾಯಿಯೇ ಈ ರೀತಿ ಹೂಂಕಾರ ಧ್ವನಿ ಮಾಡಿತೆಂಬದಾಗಿ ತಿಳಿದು ಅವನು ಕಲ್ಲು ತೆಗೆದುಕೊಂಡು ಅದರ ಮೇಲೆ ಎಸೆಯಲು, ಆ ಕಲ್ಲಿನ ಪೆಟ್ಟಿಗೆ ಹುಲಿಯು ಸಿಟ್ಟುಗೊಂಡು ಇವನ ಮೇಲೆ ಹಾರಿ ಕುತ್ತಿಗೆಗೆ ಪಂಜಾದಿಂದ ಹೊಡೆದು ಅವನ ಬಲ ಭಾಗದ ಕಂಕಳನ್ನು ಬಾಯಿಂದ ಕಚ್ಚಿತು ಅಷ್ಟರಲ್ಲಿ ಅವನು ತನ್ನ ಕೈಯಲ್ಲಿದ್ದ ಕುಡುಗೋಲಿನಿಂದ ಹುಲಿಯ ರೊಂಡಿಗೆ ಹೊಡೆದು ಗಾಬರಿಯಿಂದ ಕುಡುಗೋಲನ್ನು ಬಿಟ್ಟು ಕೂಗಿಕೊಳ್ಳಲು, ಸುತ್ತಲೂ ಇದ್ದ ಜನಗಳು ಓಡಿಬಂದು ಗಲಾಟೆ ಮಾಡಿ ಹುಲಿಯನ್ನು ಓಡಿಸಿ ಕೆಲವರು ಮನೆಗಳಿಗೆ ಓಡಿ ಹೋಗಿ ಬಂದೂಕು ಈಟಿ ಮೊದಲಾದ ಆಯುಧಗಳನ್ನು ತೆಗೆದುಕೊಂಡು ಹುಲಿಯ ಬೆನ್ನಟ್ಟಿದರು ಹುಲಿಯು ಗಾಬರಿಯಿಂದ ಸೋಮನಹಳ್ಳಿ ಕಾವಲಿನ ಮಾರ್ಗವಾಗಿ ರಕ್ತವನ್ನು ಸುರಿಸುತ್ತಾ ಪಲಾಯನ ಮಾಡಿತು ಕೆಲವರು ಸದರಿ ಮರಿಯನನ್ನು ಉಪಚರಿಸಿ ನೋಡಿದಲ್ಲಿ ಅವನ ಕುತ್ತಿಗೆಗೆ ಹುಲಿಯ ೩ ಉಗುರಿನ ಗುರುತೂ ಬಲದ ಕಂಕುಳಲ್ಲಿ ಹಲ್ಲಿನ ಗಾಯವೂ ಕಂಡಿತು ಅನಂತರ ಅವನನ್ನು ಡೋಲಿಯ ಮೇಲೆ ತೆಗೆದುಕೊಂಡು ಹೋಗಿ ಉಪಚರಿಸುತ್ತಾ ಇದಾರೆ ಮೇಲ್ಕಂಡ ಹುಲಿಯು ಮಾರನೇ ದಿನ ಸೋಮನಹಳ್ಳಿ ಸಮೀಪದಲ್ಲಿರುವ ಕಾವಲಿಗೆ ನುಗ್ಗಿ ಅಲ್ಲಿ ಮೇಯುತ್ತಿದ್ದ ಕುರಿಗಳಲ್ಲಿ ಒಂದನ್ನು ಕಚ್ಚಿಕೊಂಡು ಐದಳ್ಳಿದ ಬಂಗಲಿನ ಮಾರ್ಗವಾಗಿ ಪಲಾಯನ ಮಾಡಿತು ಈ ಹುಲಿಯು ಸುಮಾರು ೧೦—೧೨ ಹೆಜ್ಜೆಯುದ್ದ ಇತ್ತು ಈ ಐದಳ್ಳಿದ ಬಂಗಲು ಹತ್ತಿರ ಇರುವದರಿಂದ ಹುಲಿಗಳು ಆಗಾಗ್ಗೆ ಬಂದು ದನ ಕುರಿ ಮೊದಲಾದ ಜಾನುವಾರುಗಳನ್ನು ನಷ್ಟಪಡಿಸುವದುಂಟು ಇಂಥಾ ಸಮಯದಲ್ಲಿ ಶಿಕಾರಿದಾರರು ಹುಲಿಗಳನ್ನು ಬೇಟೆಮಾಡಿ ಸರ್ಕಾರದಲ್ಲಿ ಬಹುಮಾನವನ್ನೂ ಜನರಲ್ಲಿ ಕೀರ್ತಿಯನ್ನೂ ಸಂಪಾದಿಸಬಾರದೇ? ಸದರಿ ಮರಿಯನು ಬದುಕುವದೇ ಕಷ್ಟವಾಗಿದೆ ಇವನ ತಾಯಿ ತಂದೆಗಳ ದುಃಖವನ್ನು ವಿವರಿಸಲು ಅಸಾಧ್ಯ

ಆರ್ ಸಿ ಎ

ಸ್ತ್ರೀ ವಿದ್ಯಾಭ್ಯಾಸದ ಆವಶ್ಯಕತೆಯು.

ದೇವರು ಸೃಷ್ಟಿ ಮಾಡಿದ ಪ್ರಾಣಿಗಳ ಪೈಕಿ ಜ್ಞಾನವುಳ್ಳ ಮನುಷ್ಯ ಜಾತಿಯು ನಾಗರೀಕ ಸ್ಥಿತಿಯನ್ನು ಹೊಂದಬೇಕಾದರೆ ವಿದ್ಯೆಯೇ ಮುಖ್ಯ ಇದರಲ್ಲಿ ಪುರುಷ, ಸ್ತ್ರೀ ಎಂಬದಾಗಿ ಎರಡು ಭೇದಗಳುಂಟು. ಪುರುಷರ ವಿದ್ಯಾಭ್ಯಾಸಕ್ಕೆ ಆಕ್ಷೇಪವಿಲ್ಲವಷ್ಟೆ ಸ್ತ್ರೀ ವಿದ್ಯಾಭ್ಯಾಸದ ವಿಷಯವಾಗಿ ಯೋಚಿಸೋಣ ಸ್ತ್ರೀಯರು ಸಾಧಾರಣವಾಗಿ ೧೨—೧೩ ವರ್ಷಗಳಲ್ಲಿ ವಿವಾಹಿತರಾಗುವರು ಕೆಲವು ದಿನಗಳ ಮೇಲೆ ತಮ್ಮ ಗಂಡಂದಿರ ಮನೆಗೆ ಬಂದು ಸಂಸಾರಕ್ಕೆ ಪ್ರಾರಂಭಿಸಿದರೆ ಮನೆ ಕೆಲಸಗಳೂ ಅಡಿಗೆ ಮಾಡುವದೂ, ಪತಿಯಲ್ಲಿ ವಿಧೇಯತೆಯಿಂದ ನಡೆದುಕೊಳ್ಳುವದೂ, ಪಾತಿವ್ರತ್ಯ ಧರ್ಮವನ್ನು ರಕ್ಷಿಸಿಕೊಳ್ಳುವದೂ, ತಮ್ಮ ಮಕ್ಕಳನ್ನು ಪೋಷಿಸುವದೂ, ಗುರು ಹಿರಿಯರ ಶುಶ್ರೂಷೆ ಮಾಡುವದೂ, ಕೆಲವು ಗೃಹಕೃತ್ಯ ಸಂಬಂಧವಾದ ಆದಾಯ ವೆಚ್ಚಗಳನ್ನು ನೋಡಿಕೊಳ್ಳುವದೂ, ಇವೇ ಮೊದಲಾದವುಗಳನ್ನು ಮಾಡಬೇಕಾಗಿದೆ ಇವುಗಳೆಲ್ಲವನ್ನೂ ಮಾಡಬೇಕಾದರೆ (೧) ಸ್ತ್ರೀಯರು ಚನ್ನಾಗಿ ಓದುವದನ್ನೂ ಬರೆಯುವದನ್ನೂ ಅಭ್ಯಾಸಿಸಬೇಕು ಓದು ಬರಹವನ್ನು ಕಲಿಯುವದರಿಂದ ಪತಿವ್ರತಾ ಸ್ತ್ರೀಯರ ಇತಿಹಾಸಗಳನ್ನೂ ಅವರ ನಡವಳಿಕೆ ಅವರ ಸ್ಥಿತಿ ಅವರು ಹೊಂದಿದ ಸತ್ಪರಿಣಾಮ ಇವುಗಳನ್ನು ಓದಿ ಅವರೂ ಅದರಂತೆ ನಡೆಯುತ್ತಾರೆ ಯಾವ ಯಾವ ದೇಶದಲ್ಲಿ ಯಾವ ಯಾವ ನಡವಳಿಕೆಗಳಿಂದ ಸ್ತ್ರೀಯರು ಪ್ರಸಿದ್ಧಿಗೆ ಬರುತ್ತಿದ್ದಾರೆಂದು ಪ್ರಪಂಚೋಪಕಾರಿಗಳಾದ ವರ್ತಮಾನ ಪತ್ರಿಕೆಗಳಿಂದ ಓದಿ ತಿಳಿದು, ಅದರಂತೆ ಆಚರಿಸಬಹುದಾಗಿದೆ ತಮ್ಮ ಮತ್ತು ತಮ್ಮ ಸಹೋದರಿಯರ ಕಷ್ಟ ಸುಖಗಳನ್ನು ವೃತ್ತಾಂತ ಪತ್ರಿಕೆಗಳ ಮೂಲಕ ಪ್ರಪಂಚಕ್ಕೆ ತಿಳಿಸಿ ಅವುಗಳನ್ನು ಸರಿಪಡಿಸಿಕೊಳ್ಳಬಹುದು ಮೈಸೂರ ಫ್ರೇಜರ ಪೇಟೆ ನಿವಾಸಿ ಸೌ॥ ಪದ್ಮಾವತಿಬಾಯಿಯವರು ವಿದ್ಯಾವತಿಯರಾದ್ದರಿಂದಲೇ ಸ್ತ್ರೀಯರ ನ್ಯೂನಾತಿರಿಕ್ತತೆಗಳನ್ನು ಪತ್ರಿಕೆಗಳಲ್ಲಿ ಚರ್ಚಿಸುತ್ತಿಲ್ಲವೇ? ವಿದ್ಯಾವತಿಯರಲ್ಲದ ಸ್ತ್ರೀಯರು ಮೇಲಿನ ಪ್ರಯೋಜನಗಳನ್ನು ಹ್ಯಾಗೆ ಹೊಂದ್ಯಾರು? ಆದ್ದರಿಂದ ಸ್ತ್ರೀಯರು ಮೊದಲು ಓದು ಬರಹವನ್ನು ಕಲಿತು, ಅನಂತರ (೨) ಆರೋಗ್ಯಶಾಸ್ತ್ರ, ಪಾಕಶಾಸ್ತ್ರ, ಸ್ವಲ್ಪ ಮಟ್ಟಿಗೆ ಗಣಿತಭಾಗ, ಕಲಾಕೌಶಲ್ಯ, ಇವುಗಳನ್ನು ಕಲಿಯಬೇಕು ಸ್ತ್ರೀಯರಿಗೆ ಆರೋಗ್ಯಶಾಸ್ತ್ರ ಕಲಿಯುವದರಿಂದ ಬಹು ಪ್ರಯೋಜನವುಂಟು ವಾಯು, ಆಹಾರ, ನಿದ್ರೆ, ವ್ಯಾಯಾಮ, ಉಡುಪು, ನೀರು, ನೈರ್ಮಲ್ಯ, ಇವುಗಳು ಎಷ್ಟೆಷ್ಟು ಹ್ಯಾಗೆ ಹ್ಯಾಗೆ ಇರಬೇಕೆಂಬದನ್ನು ಗೊತ್ತು ಮಾಡಿಕೊಂಡು ತಮ್ಮ ಮಕ್ಕಳನ್ನು ಪೋಷಿಸುತ್ತಾ ಬಂದಲ್ಲಿ ಅವರು ದೃಢಕಾಯರಾಗಿಯೂ, ಯಾವ ರೋಗವನ್ನೂ ಹೊಂದದೆ ಸುಖವಾಗಿಯೂ ಇದ್ದುಕೊಂಡು ಯಾವ ಕೆಲಸವನ್ನಾದರೂ ಮಾಡಲು ಅರ್ಹರೂ ಶಕ್ತರೂ ಆಗುವರು ಸ್ತ್ರೀಯರು ವಿದ್ಯಾವತಿಯರಾದಲ್ಲಿ ಮಕ್ಕಳಿಗೆ ಚಿಕ್ಕ ವಯಸ್ಸಿನಲ್ಲಿ ಮನೆಯೊಳಗೆ ಸ್ವಲ್ಪ ಮಟ್ಟಿಗೆ ವಿದ್ಯೆಯನ್ನು ಹೇಳಬಹುದು ಹೀಗೆ ಸ್ತ್ರೀಯರು ವಿದ್ಯಾವತಿಯರಾಗಿ ಆರೋಗ್ಯಶಾಸ್ತ್ರ ರೀತ್ಯಾ ಪೋಷಿಸಿ ದೃಢಕಾಯರಾದ ಮಕ್ಕಳಿಗೆ ಸ್ವಲ್ಪ ಮಟ್ಟಿಗೆ ವಿದ್ಯೆ ಹೇಳುತ್ತ ಬಂದಲ್ಲಿ ಯಾವ ಜನಾಂಗವು ತಾನೇ ಉತ್ತಮ ಸ್ಥಿತಿಗೆ ಬಾರದೆ ಹೋದೀತು? ಜರ್ಮನ ದೇಶದಲ್ಲಿ ಯುವತಿಯರು ವಿದ್ಯಾವತಿಯರಾಗಿರುವದರಿಂದಲೇ ಆ ದೇಶದ ಜನಗಳು ಧೈರ್ಯ, ಪರಾಕ್ರಮ, ವಿದ್ಯೆ, ನಾಗರೀಕತೆ, ಕಲಾಕೌಶಲ್ಯ, ಇವುಗಳಲ್ಲಿ ಅತ್ಯುನ್ನತಸ್ಥಿತಿಗೆ ಬಂದಿರುವರಲ್ಲವೇ? ಸ್ತ್ರೀಯರು ಗರ್ಭಿಣಿ ಶಿಶುಸಂರಕ್ಷಣ ಇತ್ಯಾದಿ ಗ್ರಂಥಗಳನ್ನು ಕಲಿಯುವದರಿಂದ ತಮ್ಮ ಮತ್ತು ತಮ್ಮ ಮಕ್ಕಳ ತಮ್ಮ ಆಪ್ತ ಇಷ್ಟರ ಹೆರಿಗೆ ಮತ್ತು ಗರ್ಭಿಣೀ ಕಾಲದಲ್ಲಿ ತಕ್ಕ ಆರೈಕೆ ಮಾಡಲು ಶಕ್ತರಾಗುತ್ತಾರೆ ಪಾಕಶಾಸ್ತ್ರವನ್ನು ಕಲಿಯುವದರಿಂದ ಅಡಿಗೆಯನ್ನು ರುಚಿಕರವಾಗಿ ಮಾಡುವದಕ್ಕೂ ಗಣಿತಭಾಗವನ್ನು ಕಲಿಯುವದರಿಂದ ಮನೆಯ ಆದಾಯ ವೆಚ್ಚಗಳನ್ನು ನೋಡಿಕೊಳ್ಳುವದಕ್ಕೂ ಕಲಾಕೌಶಲ್ಯಗಳನ್ನು ಕಲಿಯುವದರಿಂದ ಮನೆಯ ಕೆಲವು ಸಾಮಾನುಗಳನ್ನು ತಯಾರಿಸುವದಕ್ಕೂ ಹುಡುಗರ ಆಟದ ಸಾಮಾನು ಮಾಡಿಕೊಟ್ಟು ಅವರ ಮನರಂಜಿಸುವದಕ್ಕೂ ತಕ್ಕವರಾಗುತ್ತಾರೆ. ಈ ಪ್ರಕಾರ ವಿದ್ಯಾಭ್ಯಾಸವನ್ನು ಹೆಣ್ಣುಮಕ್ಕಳು ತಮ್ಮ ೬ ನೆಯ ವಯಸ್ಸಿನಲ್ಲಿ ಪ್ರಾರಂಭಿಸಿ, ವಿವಾಹಿತರಾಗುವ ೧೨—೧೪ ನೆ ವಯಸ್ಸಿಗೆ ಮುಗಿಸಬಹುದಾಗಿರುತ್ತೆ ಪ್ರತಿಯೊಂದು ಸಂಸಾರಿಯೂ ಸುಖವನ್ನು ಹೊಂದಲಿಕ್ಕೂ ಪ್ರತಿಯೊಂದು ದೇಶವೂ ಬಲಶಾಲಿಗಳಾದ ಪರಾಕ್ರಮವಂತರಾದ ವಿದ್ಯಾವಂತರಾದ ಪ್ರಜೆಗಳನ್ನೊಳಗೊಂಡು ಎಲ್ಲಾ ಕಲಾಕೌಶಲ್ಯಗಳಲ್ಲಿಯೂ ನಾಗರೀಕತೆಯಲ್ಲಿಯೂ ಅತ್ಯುತ್ತಮಸ್ಥಿತಿಗೆ ಬರಬೇಕಾದರೆ ಸ್ತ್ರೀ ವಿದ್ಯಾಭ್ಯಾಸವು ಮುಖ್ಯಕಾರಣವಾದ್ದರಿಂದ ತಂದೆ ತಾಯಿಗಳು ತಮ್ಮ ಹೆಣ್ಣು ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸಬೇಕು

ಎ ಜಿ ಆರ್

ಇಂಗ್ಲಿಷ್ ಪ್ರಭುತ್ವವೂ ಹಿಂದುಸ್ಥಾನವೂ

"ವಂದೇಮಾತರಂ," "ಸ್ವತಂತ್ರಗವರ್ನಮೆಂಟ್"

ಬಂಗಾಳಾ ದೇಶದಲ್ಲಿ ಈ ವರುಷ ನಡೆದ ದೇಶೀ ಸಭಾ ವಗೈರೆ ಸಭಾಗಳಲ್ಲಿ ಕೆಲವು ಜನ ದೊಡ್ಡ ಮನುಷ್ಯರು ಇಂಡಿಯಾ ದೇಶದ ಆಳ್ವಿಕೆಯು ಸ್ವತಂತ್ರ ತಮಗೇನೇ ವಹಿಸಿ ಕೊಡಬೇಕೆಂತಲೂ, ಇಂಗ್ಲೀಷ್ ರಾಜ್ಯಭಾರದಿಂದ ಹಿಂದೂ ದೇಶಕ್ಕೆ ಅನೇಕ ಬಾಧಕಗಳಿವೆ ಎಂತಲೂ ವಗೈರೆ ಉಪನ್ಯಾಸಗಳು ಮಾಡಿದ್ದನ್ನು ವರ್ತಮಾನ ಪತ್ರಿಕೆಗಳಲ್ಲಿ ಓದಿದೆ ಅದು ನನ್ನ ಅನುಭವದಿಂದ ನನ್ನ ಮನಸ್ಸಿಗೆ ಬೇಡವಟ್ಟಿದ್ದರಿಂದ ನನಗೆ ತಿಳಿದಿರುಕ್ಕ, ಹಾಂಗೂ ನನಗೆ ಅನುಭವ ವಿರತಕ್ಕ ನಿಜವಾದ ಸಂಗತಿಯನ್ನು ಈ ಕೆಳಗೆ ಅರಿಕೆಮಾಡುತ್ತೇನೆ.

ಇಂಗ್ಲೀಷ್ ಆಧಿಪತ್ಯವು ಈ ಇಂಡಿಯಾ ದೇಶಕ್ಕೆ ಉಂಟಾಗುವದಕ್ಕೆ ಮೊದಲಿನ ಚರಿತ್ರೆಗಳನ್ನು ನಾವು ಚನ್ನಾಗಿ ಯೋಚಿಸಿದರೆ ಈಗ ಸಮಸ್ತ ವಿಷಯದಲ್ಲೂ ನಾವು ಹಡದ ತಾಯಿ ಬಳಿ ಮಕ್ಕಳು ಸಂರಕ್ಷಣೆಯಾಗುವಂತೆ ಸೌಖ್ಯವಾಗಿ ಇದ್ದೇವೆಂಬ ಸಂತೋಷವು ಜನಜನಿತವಾಗಿದೆ ಹಿಂದಲ ಕಾಲದಲ್ಲಿ 'ಬಲ್ಲಾಬಹುಷ್ಕೃತಿ' ಎಂಬ ನ್ಯಾಯವು ತಾನೇತಾನಾಗಿ ಪ್ರಕಾಶಿಸುತ್ತಲಿತ್ತು, ಅಂದರೆ, ಊರೂರಿಗೂ ಒಬ್ಬೊಬ್ಬ ದೊರೆ, ಅವನ ಗವರ್ನಮೆಂಟ್ ನಡೆಯಲಿಕ್ಕೆ ತನ್ನ ಪ್ರಜೆಗಳ ಸ್ವತ್ತನ್ನು ದೋಚಿಕಾಕಿಕೊಳ್ಳತಕ್ಕದ್ದೇ ಅದಕ್ಕೆ ಆಸ್ತಿಭಾರ. ಪ್ರಜೆಗಳು ದಾಸತ್ವ ಮಾಡತಕ್ಕವರ ಹುಕ್ಕುಂ ಜಾರಿಮಾಡತಕ್ಕದ್ದೇ ಅವರ ಕರ್ತವ್ಯ. ಅದು ಎಷ್ಟು ಅನ್ಯಾಯವಾಗಿದ್ದರೂ ಅದನ್ನು ಚರ್ಚಿಸಿದರೆ ಅಂಥಾವನು ತನ್ನ ಸ್ವತ್ತು ಮನೆ ಮಾರ ಸಹ ಸರ್ಕಾರಕ್ಕೆ ಸು ಕೊಟ್ಟು ತಾನು ಗಲ್ಲಿಗೆ ಬೀಳತಕ್ಕ ಸ್ಥಿತಿಯಲ್ಲಿತ್ತು ಅಂಥಾ ಕಷ್ಟದಿಂದ ಸಹಿಸಿದಾಗ್ಯೂ ಒಬೆಟ್ಟಿದ್ದನು ಪುಂಡುಜನರನ್ನು ಸೇ ಕೊಂಡು ಹಳ್ಳಿ ಹಳ್ಳೀನೇ ಲೂಟಿಮಾಡತಕ್ಕದ್ದು ವಗೈರ ವ್ಯಥೆಗಳ ಹೇಳತಕ್ಕ ಹಾಗೇ ಇಲ್ಲ ಅಂತು ಆ ಕಾಲದಲ್ಲಿ ಪ್ರತಿ ಮನುಷ್ಯ ಮನೆ ಕಟ್ಟತಕ್ಕ ಕಾಲದಲ್ಲಿ ಆ ಮನೆಗೆ ಕಳ್ಳಬಾಗಿಲು ಮಾಡಿ ಬೇಕಾಗಿತ್ತು ಆ ಕಾಲದಲ್ಲಿ ಪ್ರಜೆಗಳಿಗೆ ಪ್ರಾಣ ಮಾನ ಧನ ಒಂದರಲ್ಲಿಯೂ ನಂಬಿಕೆಯೇ ಇರಲಿಲ್ಲ ಆಗ ರಾಜರಿಗೂ ಅ ಪ್ರಜೆಗಳಿಗೂ ಇದ್ದ ತಾರತಮ್ಯವು ಕುರಿಗಳಿಗೆ ಹುಲಿ ಧೊರೆಯ ರಾಜ್ಯಭಾರ ನಡೆಸುತ್ತಿದ್ದ ಹಾಗಿತ್ತೆಂದು ಹೇಳಿದರೂ ಒಪ್ಪತಕ್ಕ ಗಿಯೇ ಇದೆ

ಇಂಗ್ಲೀಷಿನವರ ರಾಜ್ಯಭಾರ ಬಂದನಂತರ (೧) ಮನುಷ್ಯನ ಆವೇ ಗವರ್ನಮೆಂಟಿನ ಬೆಂದಗಿ (೨) ಪ್ರಜೆಗಳ ಮಾನ ಪ್ರಾಣ ಸ್ವತ್ತು ಸಂರಕ್ಷಿಸಲಿಕ್ಕೇನೇ ಗವರ್ನಮೆಂಟ್ ಇರತಕ್ಕದ್ದು (೩) ಗವರ್ನಮೆಂಟ್ ಅಧಿಕಾರಿಗಳಿಗೆಲ್ಲಾ ಪ್ರಜೆಗಳ ಸೇವಕರೆಂತ ಹೆಸರು ಇರಬೇಕು (೪) ಪ್ರಜೆಗಳ ಸ್ವತ್ತನ್ನು ಅವರ ಅನುಮತಿ ಇಲ್ಲದೆ ಗವರ್ನಮೆಂಟ್ ಸಹ ತೆಗದುಕೊಳ್ಳಲಿಕ್ಕೆ ಅಧಿಕಾರವಿಲ್ಲ (೫) ಪ್ರಜೆಗಳಿಗೆ ಬಾಧಕವಾದ ತಪ್ಪಿತಗಳನ್ನು ಮಾಡದೆ ಸತ್ಯವಾಗಿ ನಡಿಯತಕ್ಕವನು ತನ್ನ ಸ್ವ ತ ಅನುಕೂಲಕ್ಕಾಗಿ ಬೇಕಾದ ಸೌಖ್ಯಪಡಬಹುದು, ಇಂಥವನಿಗೆ ಗೌರವ ಜಾಸ್ತಿ (೬) ಗವರ್ನಮೆಂಟಿಗೆ ಜಾತಿಭೇದವಿಲ್ಲ, ಮನುಷ್ಯ ತ್ರದವರೆಲ್ಲಾ ಒಂದೇನೇ ಈ ಮುಂತಾದ ಸೌಕರ್ಯಗಳೆಲ್ಲಾ ಸ್ವಾ ಅದರಂತೆ ನಡಿಸಿದರು ಜನಗಳಿಗೆ ಬಾಧಕವಾಗಿಯೂ ಅಪಮಾನಕರವಾಗಿಯೂ ಇದ್ದ ಕೆಟ್ಟ ತೆರಿಗೆಗಳನ್ನು ತೆಗೆದುಹಾಕಿ, ಗವರ್ನಮೆಂಟ್ ಸ್ವಾಧೀನದಲ್ಲೇ ಸಾಗುವಳಿಗೆ ಕೊಟ್ಟರೆ ಉಂಟು, ಇಲ್ಲದಿದ್ದರೆ ಎಂಬ ಸ್ಥಿತಿಯಲ್ಲಿದ್ದ ಭೂಮಿಯನ್ನು ಪ್ರಜೆಗಳಿಗೆ ಶಾಶ್ವತವಾಗಿ ಸ್ವತ್ತಾಗಿಯೇ ಕೊಟ್ಟು ಅದರಿಂದ ಅವರಿಗೆ ಹುಟ್ಟತಕ್ಕ ಫಾಯಿದೆಯಲ್ಲಿ ೧೬ರಲ್ಲಿ ೨ನು ಭಾಗ ಗವರ್ನಮೆಂಟಿಗೆ ತೆಗದುಕೊಳ್ಳುತ್ತಾ ಬಂದರು. ಇಂಥಾ ಅನುಕೂಲಗಳು ಅನೇಕವಿದೆ ಇದು ಸಮಸ್ತರಿಗೂ ತಿಳಿದಿರತಕ್ಕದ್ದೇ ಆದ್ದರಿಂದ ಅದನ್ನೆಲ್ಲಾ ವಿವರಿಸಲಿಲ್ಲ ಅಂಥಾ ಪ್ರಜೆಗಳಿಗಿದ್ದ ಬಾಧಕಗಳನ್ನೆಲ್ಲಾ ಪರಿಹರಿಸಿ, ತಗ್ಗುದಿನ್ನೆ ಸರಿಪಡಿಸಿ ರಾಜ್ಯಭಾರಸ್ಥಿತಿಯನ್ನು ಒಂದೇ ಕ್ರಮಕ್ಕೆ ತಂದು ಪ್ರಜೆಗಳೆಲ್ಲಾ ವಿದ್ಯಾವಂತರಾಗಿ ನಿಜತ್ವವನ್ನು ತಿಳಿದು ಚನ್ನಾಗಿ ಬದುಕಲಿ ಎಂಬ ತಾತ್ಪರ್ಯದಿಂದ ಸರ್ಕಾರಿ ಖರ್ಚಿನಿಂದಲೂ ಮಿಷನರಿಗಳ ಮೂಲಕವೂ ಪ್ರಜೆಗಳಿಗೆ ವಿದ್ಯಾದಾನ ಮಾಡಿದರು ಅವರು ಪ್ರತಿ ಒಂದು ವಿಷಯದಲ್ಲೂ ಖಂಡಿತವಾದ ದರ್ಪವನ್ನು ಇಟ್ಟುಕೊಂಡು ನಡದರು ಇದು ಎಲ್ಲರಿಗೆಲ್ಲಾ ಹಿತವಾಯಿತು. ಅದೇ ದೌಲತ್ತೇ ಈಗಲೂ ನಡಿಯುತ್ತಾ ಇದೆ

"ಒಳ್ಳೇದು ಕೆಟ್ಟದ್ದು," "ಕೆಟ್ಟದ್ದು ಒಳ್ಳೇದು"

ಲೋಕೋಪಕಾರವಾಗಲಿ ಎಂಬ ಒಳ್ಳೇ ಇರಾದೆಯಿಂದ ಇಂಗ್ಲೀಷ್ ಪ್ರಭುಗಳು ವಿದ್ಯಾವಂತರನ್ನಾಗಿ ಮಾಡಿದವರಲ್ಲಿ ವಿಶೇಷವಾಗಿ ಬ್ರಾಹ್ಮಣರೇ ಗವರ್ನಮೆಂಟಿನಲ್ಲಿ ಮೆಂಬರುಗಳೂ ಅಧಿಕಾರಿಗಳೂ ಆದರೂ ಆದರು ಇತರ ಹಿಂದುಗಳಂತೆ ಆಚಾರಕ್ಕೆ ಕಟ್ಟುಬಿದ್ದು ಸ್ವ ಫಾಯಿದೆ ಕಳೆದುಕೊಳ್ಳತಕ್ಕವರಲ್ಲದ ಬ್ರಾಹ್ಮಣೇತರರು ವಿಶೇಷ ಗಳಾದದ್ದು ಯೂರೋಪಿಯನ್ ಜನರಲ್ಲಿ ಸೇರಿ, ಮನುಷ್ಯನ ವ್ಯಾಪಾರ ಮುಂತಾದ್ದನ್ನು ಕಲಿತು, ತಮ್ಮ ನಡವಳಿಕೆ ವಿಷಯ ಒಂದು ಕಟ್ಟು ಮಾಡಿಕೊಂಡು, ಕೋಟ್ಯಾಧಿಕಾರಿಗಳಾದರು ವಿದ್ಯಾವಂತರಾದವರಲ್ಲಿ ಯಾರೊಬ್ಬರೂ ಹಿಂದೆಬಿದ್ದಿರತಕ್ಕ ಸಹೋದರರನ್ನು ಅಂದರೆ ತಮ್ಮ ಮಗ್ಗುಲು ಮನೆಯವರಾದ ಬ್ರಾಹ್ಮಣೇತರರನ್ನು ತಮ್ಮಂತೆ ಮಾಡಿಕೊಳ್ಳಲು ಪ್ರಯತ್ನ ಪಡಲಿಲ್ಲ ವಿದ್ಯಾವಂತರಾದವರಲ್ಲಿ, ಅಂದರೆ ಗವರ್ನಮೆಂಟ್ ಅಧಿಕಾರ ವಿಷಯವೇ ಕ್ಷೇತ್ರೇನಾದ್ದರಿಂದ ಬ್ರಾಹ್ಮಣಾಧಿಕಾರಿಗಳಲ್ಲಿ, ಅನೇಕರಿಗೆ ಇಂಗ್ಲೀಷ್ ಆಳಿಕೆಯೇ ಹಿತವಾಗಿದೆ ಅದರಂತೆ ನಡದರೆ ಚ್ಯುತಿಯಿಲ್ಲವೆಂಬ ನಂಬಿಕೆ ಬಂತು ಕೆಲವರಿಗೆ ತಮ್ಮ ತಮ್ಮ ಅಧಿಕಾರಸ್ಥಾನವನ್ನು ಭದ್ರಪಡಿಸಿಕೊಳ್ಳಬೇಕೆಂಬ, ಇತರರನ್ನು ಬಿಡಬಾರದೆಂಬ, ಚಾತುರ್ವರ್ಣ್ಯದಂತೆ ರಾಜ್ಯಭಾರ ನಡಿಯಬೇಕೆಂಬ ಆಶೆಹುಟ್ಟಿತು ಈ ಕಾರಣದಿಂದ ಇದರ ನಿಜತ್ವವು ಎಲ್ಲರಿಗೂ ತಿಳಿದೇ ಹೋಯಿತು ಹಿಂದೆಬಿದ್ದವರು ಹಿಂದೇನೇ ಬಿದ್ದರು ಮುಂದೆ ಬಂದವರು ಮುಂದೇನೇ ಬಂದರು ಬಲವಿಲ್ಲದವನ ಅವಸ್ಥೆ ಕೇಳತಕ್ಕವರೇ ಇಲ್ಲವಾಯಿತು ಪ್ರಜೆಗಳ ದೂರು, ಜುಡಿಷಲ್ ಕೋರ್ಟುಗಳು, ಎಕ್ಸೈಜ್ ಪ್ರಾಬಲ್ಯ, ದಾಯಿ ಇಲಾಖೆಯ ಪ್ರಾಬಲ್ಯ, ಪ್ರಜೆಗಳಲ್ಲಿ ಪರಸ್ಪರ ದ್ವೇಷ, ಸ ಗಳ ಅಭಿವೃದ್ಧಿ, ಇವೇ ಹೆಚ್ಚಾಯಿತು ಇಂಗ್ಲೀಷ್ ಪ್ರಭುಗಳು ಮೌಢ್ಯದಲ್ಲಿ ನಾವು ದೇವರೆಂತಾ ತಿಳಿದಿದ್ದ ಪದಾರ್ಥಗಳ ನಿಜತ್ವವನ್ನು ವಿದ್ಯಾಬಲದಿಂದ ನಮಗೆ ತೋರಿಸಿದರು ನಮ್ಮ ಭೂಮಿಯಲ್ಲಿ ಇರತಕ್ಕ ಬೆಲೆಯುಳ್ಳ ಪದಾರ್ಥಗಳನ್ನು ಅವರು ತೆಗದುಕೊಂಡು ಹೋಗುತ್ತಲಿದಾರೆ. ನಮ್ಮ ವಿದ್ಯಾವಂತರು ಅವರಲ್ಲಿ ಸೇರಿ ಅ ಯನ್ನು ಕಲತುಕೊಂಡು ತಾವೂ ಚನ್ನಾಗಿ ಬದುಕಿ, ಹಿಂದೆಬಿದ್ದಿರತಕ್ಕ ತಮ್ಮ ಸಹೋದರರನ್ನೂ ಬದುಕಿಸಲಿಕ್ಕೆ ಪ್ರಯತ್ನ ಪಡಲಿಲ್ಲ ಅವರಿಗೆಲ್ಲ ಅಧಿಕಾರದ ಮೇಲೆಯೇ ದೃಷ್ಟಿಹೋಯಿತು ಆದ್ದರಿಂದ ಬ್ರಾಹ್ಮಣೇತರರಿಗೆ ಅವರಲ್ಲಿ ಅಸೂಯೆ ಹುಟ್ಟಿ, ಅವರಲ್ಲೇ ವಿದ್ಯಾವಂತರಾದವರು ತಮ್ಮ ಸ್ವಜನಗಳನ್ನೇ ಕೂಡಿಸಿ ಸಂಪ ಮಾಡಿಕೊಂಡು ತಮ್ಮ ಹೀನಸ್ಥಿತಿ ತಾವು ಅಭಿವೃದ್ಧಿಗೆ ಬರತಕ್ಕ ಮಾರ್ಗ ಮುಂತಾದ್ದನ್ನು ಯೋಚಿಸಿಕೊಳ್ಳುತ್ತಲಿದಾರೆ ಜಾತಿ ಸಂಬಂಧವಾದ ಸ ಗಳೆಂತೂ ಪರಸ್ಪರ ಬೆಳೆಯುತ್ತಲೇ ಇದೆ ಆದರೂ ಪ್ರಜೆಗಳು ವಿದ್ಯಾವಂತರಾಗಿ ಅವರವರ ಸ್ಥಿತಿಗತಿಗಳನ್ನು ಅವರವರು ಸರಿಮಾಡಿಕೊಳ್ಳಬೇಕೆಂಬ ಜ್ಞಾನವು ಹಿಂದೆಬಿದ್ದಿರುವ ಹಲವು ಜಾತಿಯವರಿಗೆ ಬಂದದ್ದು ದೇಶಕ್ಕೆ ಕ್ಷೇಮಕರವಾದದ್ದೇ ಹೌದು ಆದಾಗ್ಯೂ ನಮ್ಮ ತಕ್ಕ ಇಂಗ್ಲೀಷ್ ಪ್ರಭುಗಳ ನಿಷ್ಪಕ್ಷಪಾತವಾದ ರಾಜ್ಯ ಅವರ ಅನುಭವ ನಡವಳಿಕೆಗಳಲ್ಲಿ ಕಂಡುಬರಬೇಕಾಗಿತ್ತು ವಿದ್ಯಾವಂತರಾದವರಿಗೆಲ್ಲಾ ಜಾತಿ ಪಕ್ಷಪಾತತೆ ಇಲ್ಲದೆ ಕೆಲಸಗಳು ಸಿಕ್ಕ

...ದ್ದರೆ ಎಲ್ಲಾ ಸಭೆಗಳವರ ಕೋರಿಕೆಗಳನ್ನೂ ಚಕ್ರವರ್ತಿ ಸಾರ್ವಭೌಮರೂ ನಮ್ಮ ಮಹಾರಾಜರವರೂ ನೆರವೇರಿಸಲಿಕ್ಕೆ ಬದ್ಧರೆಂಬ ರಾಜ ಬಿರುದು ಅವರಿಗೆ ತಿಳಿದು ಸಭಾ ಸೇರಲಿಕ್ಕೆ ಮಾಡ... ಪ್ರಯತ್ನ ಖರ್ಚು ಸಹಾ ಅವನವನ ಸ್ವಂತಕ್ಕಾಗಿ ಮಾಡಿಕೊಳ್ಳು...ದ್ದರು

ಈ ಮಧ್ಯೆ ರಾಜಕಾರ್ಯಾನುಕೂಲಕ್ಕಾಗಿ ಲಾರ್ಡ್ ಕರ್ಸನ್...ಗಳು ಬಂಗಾಳಾ ಆಧಿಪತ್ಯವನ್ನು ವಿಭಾಗ ಮಾಡಿದ ಲಾಗಾಯ್ತು ...ದೇಶೀ ಪದಾರ್ಥಗಳ ಅಭಿವೃದ್ಧಿಯ ಕೋಲಾಹಲ, ಅನ್ಯದೇಶದ ...ರ್ಥಗಳಿಗೆ ಬಹಿಷ್ಕಾರ, ವಂದೇಮಾತರಂ, ಇವೆಲ್ಲಾ ಹುಟ್ಟಿ ಕಾಣ... ...ಇರುವವು ಈಗ ಈ ಬಂಗಾಳಾ ವಿಭಾಗವು ವಜಾ ಆಗುವ ...ಗೂ ಅನ್ಯದೇಶದ ಪದಾರ್ಥಗಳ ಬಹಿಷ್ಕಾರವನ್ನು ತೆಗಿಯುವದಿಲ್ಲ ...ಲೂ ನಮಗೆ ಸ್ವತಂತ್ರಾಧಿಕಾರಗಳನ್ನು ಕೊಡಬೇಕೆಂತಲೂ ...ರಂಗವಾಗಿ ಕೇಳುತ್ತಿದ್ದಾರೆ

ವಾಚಕರೇ, ಮೇಲಿನ ನನ್ನ ಒರವಣಿಗೆಯನ್ನು ಕುರಿತು ಚೆನ್ನಾಗಿ ...ಚಿಸಿರಿ ಇಂಗ್ಲೀಷಿನವರ ರಾಜ್ಯಭಾರವು ನಮಗೆ ಬೇಡವೆಂದು ...ಕ್ಕೆ ಯಾವ ಪಾಪಿಯಾದರೂ ಇಂಡಿಯಾದಲ್ಲಿ ಇದ್ದಾನೆಯೇ? ...ನಟಿಕೆ ಅವರ ಅಧಿಕಾರ ಸಹ ಇಲ್ಲದೆ ಹಿಂದುಸ್ಥಾನವು ಚೆನ್ನಾಗಿ ...ತಕ್ಕ ಸ್ಥಿತಿಯಲ್ಲಿದೆಯೇ? ನಿಜವಾಗಿ ವಿಚಾರಮಾಡಿ ನೋಡಿ ...ಹೆಚ್ಚು ಭಾಗ ಜನಗಳ ತಾತ್ಪರ್ಯ ತಿಳಿಗೀತು [ಇದರಿಂದ ಈ ...ದಾರರು ಹಿಂದುಸ್ಥಾನದ ರಾಜಕೀಯ ನಾನಾ ಸಭೆಯವರ ...ಅಭಿಮತವನ್ನು ಸರಿಯಾಗಿ ಗ್ರಹಿಸಿಕೊಂಡಿರುವಂತೆ ಕಾಣುವು... ಇಂಗ್ಲೀಷರ ರಾಜ್ಯಭಾರವೇ ಬೇಡವೆಂದು ಆ ಸಭೆಯವರು ...ವುದಿಲ್ಲ ಆ ರಾಜ್ಯಭಾರದಲ್ಲಿ ಹಿಂದುಸ್ಥಾನವನ್ನೂ ಒಂದು ...ದಂತೆ ಮಾಡಿ ಇಡಬೇಕೆಂತಲೂ ಕೆನಡಾ ಆಸ್ಟ್ರೇಲಿಯಾ ...ಗಳಿಗೆ ವಹಿಸಿರುವಂಥಾ ಅಧಿಕಾರಗಳನ್ನು ಇಲ್ಲಿನ ಪ್ರಜೆ... ವಹಿಸಿಕೊಡಬೇಕೆಂತಲೂ ಕೇಳುತ್ತಾರೆ —ಎಡಿ]

ನಮಗೂ ಇಂಗ್ಲೀಷರಿಗೂ ಇರತಕ್ಕ ತಾರತಮ್ಯಗಳು

(೧) ಇಂಗ್ಲೀಷ್ ಜನಗಳು ಒಂದೇ ದೇವರನ್ನು ಮನಸ್ಸಿನಿಂದ ...ತಕ್ಕವರು, ನಾವು ೩೩ ಕೋಟಿ ದೇವತೆಗಳ ರೂಪ ಮಾಡಿ ...ಪ್ರತಿ ನಿತ್ಯವೂ ಅವುಗಳ ಪೂಜಾದಲ್ಲಿರತಕ್ಕವರು (೨) ...ತಮ್ಮ ಕೆಲಸಗಳ ವಿಷಯದಲ್ಲಿ ಕಾಲ ನಿಥ ಅದಕ್ಕೆ ಕ್ಲುಪ್ತ ...ಗೊತ್ತುಮಾಡಿಕೊಂಡು ನಡಿಯತಕ್ಕವರು ನಮಗೆ ಪುರಸತ್ತು ...ಕಾಲವೆನ್ನುತ್ತೇವೆ (೩) ಅವರು ಒಂದು ವಾರದಲ್ಲಿ ಒಂದೆ ...ಮಾತ್ರ ನಿಯಮವಾಗಿ ದೇವರ ಧ್ಯಾನಮಾಡಿ, ಬಾಕಿ ದಿವಸಗಳನ್ನು ...ರಿ ಕಾರ್ಯಕ್ಕಾಗಿಯೂ ಪ್ರಪಂಚಿಕವಾದ ಇತರೇ ಉಪಯುಕ್ತ ...ಕಾರ್ಯಗಳಿಗೂ ವಿನಿಯೋಗಿಸುತ್ತಾರೆ, ನಮಗೆ ದಿನವಹಿ ದೇವರ ...ಪೂಜೆ ತರತಕ್ಕದ್ದು, ವ್ರತ, ನೇಮಾದಿಗಳು ಇದ್ದೇ ಇದೆ ...ಅವರು ಒಂದೇ ಜನ್ಮವನ್ನು ನಂಬಿರತಕ್ಕವರು, ನಮಗೆ ಅನೇಕ... (೪) ಅವರು ಯಾವ ಕೆಲಸಕ್ಕಾದರೂ ಕಾಲ ಕ್ಲುಪ್ತವಾಗಿ ...ತಕ್ಕವರು, ನನಗೆ ಯಾವ ಕೆಲಸಕ್ಕೂ ಶಕುನ ಮನೋಬಯ... ...ಗಳು ಇವು ಬೇಕು (೫) ಅವರಲ್ಲಿ ಧನವಂತರಾದವರು ಪ್ರಜಾ ...ಗೆ ಉಪಯೋಗವಾಗತಕ್ಕ ಕೆಲಸ ಕಾರ್ಯಗಳಿಗೆ ಕೋಟ್ಯಾಂ...ರೂಪಾಯಿ ಕೊಡುತ್ತಾರೆ, ನಮ್ಮಲ್ಲಿ ದೇವಸ್ಥಾನಗಳನ್ನು ಕಟ್ಟ...ದ್ದು, ಬ್ರಾಹ್ಮಣಸಂತರ್ಪಣೆ, ಹರಿಕಥಾ, ನಾಟಕ, ಇವುಗಳಿಗೆ ...ಕೊಡುತ್ತಿದ್ದಾರೆ (೬) ಅವರಲ್ಲಿ ಪ್ರತಿ ಮನುಷ್ಯನೂ ಪ್ರಾಯ... ...ನಂತರ ಕೆಲಸಮಾಡದಿದ್ದರೆ ತನ್ನ ಜೀವನ ವ್ಯರ್ಥವೆಂಬ ಸಂಗತಿ ...ನ್ನು ತಿಳಿದು ಅದಕ್ಕಾಗಿ ಕೃಷಿ ಮಾಡುತ್ತಾನೆ, ನಮ್ಮಲ್ಲಿ ಒಬ್ಬನು ...ದರೆ ಸಾಕು, ಅವನಿಗೆ ಸೇರಿದವರೆಲ್ಲಾ ಅವನನ್ನೇ ಕಿತ್ತು ...ತಿನ್ನತಕ್ಕದ್ದೇ ತಮ್ಮ ಕರ್ತವ್ಯವೆಂದು ತಿಳಿದು ಕೊಂಬೇರಿ ...ನುತ್ತಿದ್ದಾರೆ (೭) ಅವರಲ್ಲಿ ಯಾವ ಕಸಬಾದರೂ ಮಾಡಿ ...ಸತಕ್ಕವರೇ ಜಾಸ್ತಿ, ನಮ್ಮಲ್ಲಿ ಭಿಕ್ಷಬೇಡುವವರೇ ಜಾಸ್ತಿ

ಈ ಪ್ರಕಾರ ನಮಗೂ ನಮ್ಮನ್ನಾಳತಕ್ಕ ಇಂಗ್ಲೀಷ್ ಪ್ರಭು...ಗೂ ಇಷ್ಟು ತಾರತಮ್ಯವಿದೆ ನಮಗೆ ಎಲ್ಲಾ ಪ್ರಜೆಗಳಲ್ಲಿಯೂ ...ತ್ಯವೂ ಏಕೋಭಾವವೂ ಬಂದಹೊರ್ತು ಅನೇಕ ಸಹಸ್ರ ಜಾತಿ ...ಸಿರತಕ್ಕ ಈ ಇಂಡಿಯಾ ದೇಶವನ್ನು ನಾವು ಆಳಲಿಕ್ಕೆ ಅರ್ಹ... ...ತೆದಿಲ್ಲ ನಾವು ಅಂಥಾ ನಿಷ್ಪಕ್ಷಪಾತಿಗಳಾಗಬೇಕೆಂಬುವುದೇ ...ಗೆ ವಿದ್ಯಾದಾನಮಾಡುತ್ತಿರುವ ಇಂಗ್ಲೀಷ್ ಪ್ರಭುಗಳಿಗೆ ಇರತಕ್ಕ ...ಧ್ಯೇಯವು ಆದರೆ ಅದು ನಮ್ಮ ನಡವಳಿಕೆಯಲ್ಲಿ ಬೇರೆ ವಿಧ...ಗಿ ಪರಿಣಮಿಸಿತು ಈಗಿನ ಸ್ಥಿತಿಯಲ್ಲಿ ಯೂರೋಪಿಯನ್ ...ಟರು ಇಲ್ಲದೆ ಯಾವ ದೇಶೀಯ ರಾಜರಾಗಲಿ ಈಗಿನಂತೆ ಪ್ರಜೆ...ನ್ನು ಪರಿಪಾಲಿಸಲಾರರು ಮಗನಾದವನು ಸಮಸ್ತ ವಿಷಯ...ದಲ್ಲಿ ಯೋಗ್ಯನಾಗಿದ್ದಾನೆಂದು ತಿಳಿದ ಹೊರ್ತು ಕುಟುಂಬದ ...ಸಾಮಾನ್ಯವನ್ನು ತಂದೆಯಾದವನು ಅವನಿಗೆ ವಹಿಸುವದಿಲ್ಲ

ಇದರಿಂದ "ವಂದೇಮಾತರ" ಎಂಬುದು ಅರ್ಥಹೀನವಾದ ...ಸರ್ವಜನ ಸಮ್ಮತವಾದದ್ದಲ್ಲವೆಂದೂ, ಅನ್ಯದೇಶದ ಪದಾರ್ಥ ...ಬಹಿಷ್ಕಾರವು ಒಪ್ಪತಕ್ಕ ಪರಿಹಾರ ಇಲ್ಲವೆಂದೂ, ಹಾಗೆ ಒಂದು ...ಒಪ್ಪಿದರೆ ಅಂಥವರು ಎಂದಿಗೂ ವಿವೇಕಶಾಲಿಗಳಾಗುವದಿಲ್ಲ ...ದೆ, ಅಂಥಾ ಕಾಲ ಬರುವದೂ ಇಲ್ಲವೆಂದೂ -- ನಗೆ ತೋರುತ್ತಿದೆ ...ದಾರಿದ್ರ್ಯಸ್ಥಾನೀಯವಾದ ನಮ್ಮ ಇಂಡಿಯಾಕ್ಕೆ ಇಂಗ್ಲೀಷ್ ...ಗಳ ಛತ್ರಛಾಯೆಯು ಶಾಶ್ವತವಾಗಿ ಇರಲಿ! ಇದೇ ನನ್ನ ...ನೆ ಜಗತ್ಕರ್ತನಾದ ಶ್ರೀ ಭಗವಂತನು ನಮ್ಮ ಎಡ್ವರ್ಡ್ ...ಭೌಮರಿಗೂ ಘನವನ್ನು ಹೊಂದಿದ ನಮ್ಮ ಶ್ರೀಮನ್ ಮಹಾ...ಜರವರಿಗೂ ಸಮಸ್ತ ಅನುಕೂಲವೂ ಸುಖವೂ ಕೊಟ್ಟು ...ಪಾಡಲಿ!

ಒಬ್ಬ ಪೆನ್ಷನ್ ಆಫೀಸರ್

ಖಾತ್ರಿದಾರರಿಗೆ ನೋಟೀಸು

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಖಾತ್ರಿಗಳಿಗೆ ನಾವು ಜಾಗಾ ಕೊಡಲಾರೆವು ಆದಕಾರಣ ಖಾತ್ರಿದಾರರು ನಮ್ಮ ತಿಳುವಳಿಕೆಗೋ... ...ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಖಾತ್ರಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರಯಕೂಡದು, ಇಂಥವುಗಳಿಗೆ ನಾವು ಜಾಗಾ ಕೊಡಲಾರೆವು.

ಖಾತ್ರಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು—ಎಡಿ

ಕರೆಸ್‌ಪಾಂಡೆನ್ಸ್.

ರಾಜಧಾನಿಯಲ್ಲಿ ನಾಪಿತರ ಪಂಚಾಯಿತಿ

ಅಯ್ಯಾ,

ಇದೇ ತಿಂಗಳು ತಾ ೯ ನೇ ಬುಧವಾರ ಕ್ಷೌರ ಮಾಡತಕ್ಕ ಜನಗಳಲ್ಲಿ ಮುಖ್ಯಸ್ಥರು ಇನ್ನು ಕೆಲವರು ಸೇರಿ ಪಂಚಾಯಿತಿ ಮಾಡಿದ್ದೇನಂದರೆ —ತಾ ೨೪ ನೆ ಅಕ್ಟೋಬರು ಗುರುವಾರದ ಪತ್ರಿಕೆಯಲ್ಲಿ ನಮ್ಮ ಜಾತಿಯನ್ನು ಕೀಳುಜಾತಿ ಎಂದು ಬರೆದಿರುತ್ತಾರೆ ನಾವು ಕೀಳು ಜಾತಿಯಾದ ಮೇಲೆ ನಾವು ಮುಟ್ಟಿದ ನೀರನ್ನು ತಲೆಯ ಮೇಲೆ ಹೇಗೆ ಹಾಕಿಸಿಕೊಳ್ಳುತ್ತಾರೆ ಉಪನಯನವಾಗಿ ಬ್ರಾಹ್ಮಣಾಧಿಕಾರಕ್ಕೆ ಸೇರಬೇಕಾದರೆ ನಾವುಗಳು ಬೇಕು ತಂದೆ ತಾಯಿಗಳಿಗೆ ತಿಲತರ್ಪಣಾದಿಗಳನ್ನು ಬಿಟ್ಟು ಸುಪುತ್ರನೆನ್ನಿಸಿಕೊಳ್ಳುವದಕ್ಕೆ ನಾವುಗಳು ಬೇಕು ಮತ್ತು ಆಯುಷ್ಕರ್ಮ ನಡೆಯದಿದ್ದರೆ ಆಯುಸ್ಸು ಕ್ಷೀಣವಾಗುತ್ತೆಂಬ ವಿಷಯ ಎಲ್ಲರಿಗೂ ಗೊತ್ತಿರಬಹುದು ನಾವುಗಳಿಲ್ಲದೆ ಶುಭಕರ್ಮ ಸಿದ್ಧಿಸಲಾರದೆಂಬ ವಿಷಯ ಎಲ್ಲರಿಗೂ ಗೊತ್ತೇ ಇರುತ್ತೆ ನಾವು ಈ ಕಸಬನ್ನು ಬಿಟ್ಟು ಬೇರೆ ಕಸಬನ್ನು ಕಲಿಯೋಣವೆಂದು ಕೆಲವರು ನಮ್ಮನ್ನು ಯಾರು ದೂಷಿಸುತಾರೆಯೋ ಅವರೇ ಕಲಿಯಲಿ ಎಂದು ಕೆಲವರು ಎಲ್ಲಾ ದೇಶಗಳಿಗೂ ಕಾಗದಗಳನ್ನು ಬರಿಯಬೇಕೆಂದೂ ಕೆಲವರು ಎಲ್ಲಾ ಜನಗಳನ್ನೂ ಸೇರಿಸಿ ಮತ್ತೊಂದು ದಿವಸ ಪಂಚಾಯಿತಿ ಮಾಡೋಣವೆಂದೂ ನಿಲ್ಲಿಸಿದಾರೆ

ಬಿ ಪುಟ್ಟಯ್ಯ,

ದೊಡ್ಡ ಒಕ್ಕಲಗೇರಿ, ಮೈಸೂರು

ದಾವಣಗೆರೆಯಲ್ಲಿ ವ್ಯಾಪಾರದ ಮೋಸ

ಅಯ್ಯಾ,

ಕಳೆದ ನವಂಬರು ೨೮ ನೇ ತಾ ಬುಧವಾರ ಪುರುಷೋತ್ತಮ ನಾರಾಯಣ ಕುಲಕರ್ಣಿ ಎಂದು ಹೇಳಿಕೊಂಡ ಒಬ್ಬ ಬಿಜಾಪುರ ವರ್ತಕನೂ ಈತನ ಗುಮಾಸ್ತನೆಂದು ಹೇಳಿಕೊಂಡು ಇನ್ನೊಬ್ಬಾತನೂ ದಾವಣಗೆರೆಗೆ ಬಂದು ಸಾಹುಕಾರ್ ಬ್ರಹ್ಮಪ್ಪಾ ತವನಪ್ಪನವರ ಮಂಡಿಗೆ ಹೋಗಿ ಜಮ್ನಾಲ್ ಸ್ಟೇಷನ್ನಿಂದ ತಾವು ೪೧ ಟಿನ್ ಒಳ್ಳೆಣ್ಣೆಯನ್ನು ರವಾನೆ ಮಾಡಿರುವದಾಗಿಯೂ ಇನ್ನು ಮುಂದೆಯೂ ತಾವು ಎಣ್ಣೆಯನ್ನು ಕಳುಹಿಸುವುದಾಗಿಯೂ ಸದರಿ ಸಾಹುಕಾರರು ಅದನ್ನು ಕಮಿಷನ್ ಮೇಲೆ ವಿಕ್ರಯಿಸಬೇಕೆಂಬದಾಗಿಯೂ ವಗೈರೆ ಹೇಳಿ, ತಾವು ತಂದಿದ್ದ ೪೧ನೇ ನಂಬರ್ ರೈಲ್ವೆ ರಶೀತಿಯನ್ನು ಕೊಟ್ಟು, ಅದರ ಮೇಲೆ ೪೫೦ ರೂಪಾಯಿ ಮುಂಗಡವಾಗಿ ಕೊಡಬೇಕೆಂದು ಕೇಳಿ, ೩೦೦ ರೂಪಾಯಿಗೆ ಕೊಲ್ಹಾಪುರದಲ್ಲಿರುವ ದಕ್ಷಿಣ ಮಹಾರಾಷ್ಟ್ರ ಬ್ಯಾಂಕಿನ ಮೇಲೆ ಒಂದು ಹುಂಡಿಯನ್ನೂ ನಗದಾಗಿ ೧೫೦ ರೂಪಾಯನ್ನೂ ೨೯ನೇ ತಾ ಗುರುವಾರ ತೆಗೆದುಕೊಂಡು ಬೆಳಗ್ಗೆ ೮ ಘಂಟೆಗೆ ದಾವಣಗೆರೆಯನ್ನು ಬಿಟ್ಟು ಹೊರಡುವ ಮೆಯಿಲ್ ಗಾಡಿಯಲ್ಲಿ ಹುಬ್ಬಳ್ಳಿಗೆ ಪ್ರಯಾಣಮಾಡಿದರು ಈ ವರ್ತಕರನ್ನು ಸಾಗುಕಳುಹಿಸಲು ಹೋಗಿದ್ದ ಸದರಿ ಬ್ರಹ್ಮಪ್ಪನವರ ಕಡೆಯವರು ಸರಕು ಬಂದಿರುವದೇ ಎಂದು ವಿಚಾರಿಸಲು ಗೂಡ್ಸ್ ಷೆಡ್ಡಿಗೆ ಹೋಗುತ್ತಿರುವಾಗ ಗದಗಿನ ಸ್ಟೇಷನ್ ಮಾಸ್ಟರಿಂದ ೪೧ ಟಿನ್ನುಗಳ ಪೈಕಿ ೩೩ ರಲ್ಲಿ ನೀರು ಭರ್ತಿ ಮಾಡಿರುವದಾಗಿಯೂ, ಉಳಿದ ೮ ಟಿನ್ನುಗಳಲ್ಲಿ ಮಾತ್ರ ಎಣ್ಣೆ ಇರುವಂತೆಯೂ ತಂತೀ ವರ್ತಮಾನ ಬಂತು ಕೂಡಲೇ ಈ ಸಂಗತಿಯು ಹರಿಹರದ ಪೋಲೀಸಿಗೆ ತಿಳಿಸಲ್ಪಟ್ಟಿತು ಗಾಡಿಯು ಹರಿಹರವನ್ನು ತಲಪಿದ ಕೂಡಲೇ ವರ್ತಕರಿಬ್ಬರೂ ಹಿಡಿಯಲ್ಪಟ್ಟು ದಾವಣಗೆರೆಗೆ ತರಲ್ಪಟ್ಟರು ಮೊಕದ್ದಮೆಯು ದಾವಣಗೆರೆ ೧ನೇ ತರಗತಿಯ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ದಾಖಲಾಗಿದೆ ಇದೇ ಮಾಹೆ ೫ ನೇ ತಾ ವಿಚಾರಣೆ ನಡೆದು ಮೋಸಮಾಡಿದ ತಪ್ಪು ಅಬಾಧಿತವಾಗಿದೆ ಡಿಫೆನ್ಸ್ ಬಗ್ಗೆ ಈ ಮೊಕದ್ದಮೆಯು ೧೫ನೇ ತಾರೀಖಿಗೆ ಇಡಲ್ಪಟ್ಟಿರುವದು

ಈ ಮಧ್ಯೆ ಬಿಜಾಪುರದ ಪೋಲೀಸಿನವರು ಈ ವಿಷಯದಲ್ಲಿ ವಿಚಾರ ಮಾಡಿ ದಾವಣಗೆರೆ ಪೋಲೀಸ್ ಆಫೀಸಿಗೆ ಒಂದು ಕಟ್ಟನ್ನು ಕಳುಹಿಸಿರುತ್ತಾರೆ ಇದರಿಂದ ಗುಮಾಸ್ತನೆಂದು ಹೇಳಿಕೊಂಡು ಬಂದಿದ್ದ ರಾಮಕೃಷ್ಣ ಗಂಗಾಧರನೆಂಬಾತನು ಬಿಜಾಪುರದಲ್ಲಿ ೪೧ ಟಿನ್ನುಗಳನ್ನು ಖರೀದಿಗೆ ತೆಗೆದುಕೊಂಡು ಅಲ್ಲಿಯೇ ಒಂದು ರೂಪಾಯಿ ಬಾಡಿಗೆ ಕೊಟ್ಟು ಒಂದು ಮುಸಲ್ಮಾನ್ ರಾತ್ರಿ ಪಾಠಶಾಲೆಯಲ್ಲಿ ಅವುಗಳನ್ನಿಟ್ಟು ನೀರು ತುಂಬಿ, ಬಿಜಾಪುರವು ದೊಡ್ಡ ಸ್ಟೇಷನ್ ಆದ ಪ್ರಯುಕ್ತ ಸಿಕ್ಕಿಬೀಳಬಹುದೆಂಬ ಶಂಕೆಯಿಂದ ೩ ಮೈಲಿ ಫಾಸಲೆಯಲ್ಲಿದ್ದ ಜಮ್ನಾಲ್ ಸ್ಟೇಷನ್ನಿಂದ ಸರಕನ್ನು ರವಾನೆ ಮಾಡಿರುವಂತೆಯೂ ಆ ಟಿನ್ನುಗಳನ್ನು ರವಾನೆಮಾಡಿದ ವರ್ತಕನ ನಿಜವಾದ ಹೆಸರು ಕೃಷ್ಣರಾವ್ ಆಬಾಜಿ ಎಂತಲೂ ತಿಳಿದು ಬಂದಿರುತ್ತದೆ

ಬಿ. ಕೆ. ಎಂ.

ಜಗಲೂರಿನಲ್ಲಿ ವಿದ್ಯಾಭಿವೃದ್ಧಿ ಕಡಿಮೆಯಾಗಿದೆ

ಅಯ್ಯಾ,

ಈ ಜಗಲೂರಲ್ಲಿ ತಾ ೩ ನೆ ಸಾಯಂಕಾಲ ೪ ಘಂಟೆ ಲಾಗಾಯ್ತು ೭ ಘಂಟೆ ವರಿಗೂ ನಮ್ಮ ಅಮಲ್ದಾರ್ ಮೆ॥ ಸದಾಶಿವಂ ಪಿಳ್ಳೆಯವರೂ, ಹಾಸ್ಪಿಟಲ್ ಅಸಿಸ್ಟೆಂಟ್ ಮೆ॥ ಮರಿಯ ಪಿಳ್ಳೆಯವರ ೩, ೯ರಸ್ತೆದಾರರೂ ಹೆಡ್ ಮಾಸ್ಟರೂ ಬಾಲಕರಿಂದ ಫುಟ್‌ಬಾಲ್ ವಗೈರೆ ಆಟಗಳನ್ನು ಆಡಿಸಿದ್ದಲ್ಲದೆ ಸ್ಕೂಲಿನಲ್ಲಿ ಅಮಲ್ದಾರ್‌ರವರು ಸಭಾ ಅಗ್ರಾಸನವನ್ನು ವಹಿಸಿ ಬಹುಮಾನವಾಗಿ ಬಂದಿದ್ದ ಪುಸ್ತಕಗಳನ್ನೂ ಸರ್ಟಿಫಿಕೇಟುಗಳನ್ನೂ ವಿದ್ಯಾರ್ಥಿಗಳಿಗೆ ಸ್ವಹಸ್ತದಿಂದ ಕೊಟ್ಟು ಬಾಲಕರ ಮನೋಲ್ಲಾಸವನ್ನು ಹೆಚ್ಚಿಸಿದರು ಹೆಡ್ ಮಾಸ್ಟರು ಗತಸಾಲಿನಲ್ಲಿ ೪೧ ವಿದ್ಯಾರ್ಥಿಗಳಿದ್ದರೆಂತಲೂ, ಈ ಸಾಲಿನಲ್ಲಿ ಒಂದು ನೂರು ಹುಡುಗರಿಗಿಂತ ಹೆಚ್ಚಾಗಿದ್ದಾರೆಂತಲೂ, ಈ ಸಾಲಿನಲ್ಲಿ ೩೯ಕ್ಕೆ ೨ ಜನ ಇಂಗ್ಲೀಷಿನಲ್ಲಿಯೂ ೫೯ಕ್ಕೆ ೩ ಜನ ಕನ್ನಡದಲ್ಲಿಯೂ ಪ್ಯಾಸಾಗಿದ್ದಾರೆಂತಲೂ ವಗೈರೆ ರಿಪೋರ್ಟು ಓದಿದರು ಅಮಲ್ದಾರವರು ವಿದ್ಯಾ ಪ್ರೋತ್ಸಹವಾದ ಉಪನ್ಯಾಸಮಾಡಿದರು ಈ ಉತ್ಸಾಹಕರವಾದ ಸಭೆಗೆ ರೈತರಾಗಲಿ ವರ್ತಕರಾಗಲಿ ಯಾರೂ ಬಂದಿರಲಿಲ್ಲ

ಈ ಸಭಾ ಕರ್ತವ್ಯದಿಂದ ಕೆಲವು ವಿಷಯಗಳು ತಿಳಿಯಬರುತ್ತವೆ. (೧) ನೂರು ಜನ ಹುಡುಗರೊಂದಿಗೆ ೭ ಜನ ಉಪಾಧ್ಯಾಯರಿರುವ ಈ ಎ ವಿ ಸ್ಕೂಲಿನಲ್ಲಿ ಬ್ರಾಹ್ಮಣ ವಿದ್ಯಾರ್ಥಿಗಳು ೫ ಜನ ತೇರ್ಗಡೆ ಹೊಂದತಕ್ಕದ್ದು ಅಷ್ಟೇನೂ ಆಶ್ಚರ್ಯವಲ್ಲ ಯಾಕೆಂದರೆ ಮೂರು ಕೆಂಡದಲ್ಲಿ ೨-೩ ಉಪಾಧ್ಯಾಯರಿರುವ ಆ ಚಿಕ್ಕ ಗ್ರಾಮದ ಸ್ಕೂಲಿನಿಂದ ಬರಾಯಿತು ಕಸಬಿನ ೨೦—೨೫ ವಿದ್ಯಾರ್ಥಿಗಳು ಚಿತ್ರದುರ್ಗಕ್ಕೆ ಲೋವರ್ ಸೆಕೆಂಡರೀ ಪರೀಕ್ಷೆಗೆ ಬಂದದ್ದನ್ನು ನಾನು ನೋಡಿದೆನು. ನಮ್ಮ ಸ್ಕೂಲ್ ಎ ವಿ ಸ್ಕೂಲ್ ಆಗಿಯೂ ತಾಲ್ಲೂಕು ಇರುವ ಸ್ಥಳವಾಗಿಯೂ ವಿಶೇಷ ರೈತರೂ ವರ್ತಕರೂ ಇದ್ದು ೭—೮ ಜನ ಉಪಾಧ್ಯಾಯರಿರುವಲ್ಲಿ ೫ ಜನ ಬಾಲಕರು ಪ್ಯಾಸಾದರೆಂದು ಹೇಳಿಕೊಳ್ಳುವದು ನಮಗೆ ತೃಪ್ತಿಕರವಾದರೂ ಎರಡನೆಯವರಿಗೆ ಎಂದಿಗೂ ತೃಪ್ತಿಕರವಾಗಲಾರದು (೨) ನೂರು ವಿದ್ಯಾರ್ಥಿಗಳಿರುವ ಸ್ಕೂಲಿನಲ್ಲಿ ಮೇಲಾದರ್ಜೆ ಕ್ಲಾಸಿನಲ್ಲಿ ಕೊಂಚ ಜನರೇ ಓದುತ್ತಿದ್ದಾರೆ ಇದರಿಂದ ಕೆಳ ಕ್ಲಾಸಿನಲ್ಲಿ ತರಬಿಯತ್ತು ಕಡಿಮೆ ಇದೆ ಎಂದು ತಿಳಿಯಬರುತ್ತದೆ (೩) ವಿದ್ಯಾರ್ಥಿಗಳ ತಂದೆತಾಯಿಗಳು ಮಕ್ಕಳು ಸವಿಯಾದ ಮಾತಿನಿಂದ ಓದತಕ್ಕದ್ದನ್ನೂ ಬರಿಯುವವನ್ನೂ ವಿಟ್ಟೆಯಲ್ಲಿರುವ ಅವರ ಮನೋಲ್ಲಾಸವನ್ನೂ ನೋಡಿ ಎಷ್ಟು ಸಂತೋಷ ಪಡಬಹುದಾಗಿದ್ದಿತೋ ಅಷ್ಟು ಖಿನ್ನ ಮನಸ್ಕರಾಗಿರುತ್ತಾರೆಂದು ತಿಳಿಯಬರುತ್ತದೆ ಮೇಲ್ಕಂಡಂತೆ ಇದಕ್ಕೆ ತತ್ಪೂರ್ವ ನಡೆದ ಸಭೆಗಳಲ್ಲಿ ರೈತರು ತಮ್ಮ ತಮ್ಮ ಮಕ್ಕಳೊಂದಿಗೆ ಉಲ್ಲಾಸದೊಡನೆ ಒಂದು ಆಟ ಪಾಠಗಳನ್ನು ನೋಡಿ ಸಂತೋಷಪಟ್ಟುಕೊಂಡು ಮನೆಗಳಿಗೆ ತೆರಳುತಾ ಇದ್ದರು ಈ ದಿವಸದ ಸಭೆಗೂ, ಇದಕ್ಕೆ ಮುಂಚೆ ನಡೆದ ೧—೨ ಸಭೆಗಳಿಗೂ ಯಾರೊಬ್ಬರೂ ಬರಲಿಲ್ಲ ಆದ್ದರಿಂದ ರೈತರ ಮನಸ್ಸಿಗೆ ವ್ಯಾಕುಲ ಹತ್ತಿದೆ ಎಂದು ತಿಳಿಯಬರುತ್ತದೆ

ಈ ಮೂರು ವಿಷಯಗಳಿಂದ ಈ ಸ್ಕೂಲಿನಲ್ಲಿ ವಿದ್ಯಾಭಿವೃದ್ಧಿಯು ಕ್ಷೀಣಗತಿಯಲ್ಲಿದೆ ಎಂದು ಹೇಳುವದು ಅಷ್ಟೇನೂ ಆಶ್ಚರ್ಯವಲ್ಲ. ಆದ್ದರಿಂದ ಹೆಡ್ ಮಾಸ್ಟರೂ ಅಸಿಸ್ಟೆಂಟ್ ಮಾಸ್ಟರುಗಳೂ ಏಕೀಭವಿಸಿ ರಾಜಭಕ್ತಿಯುಳ್ಳವರಾಗಿಯೂ ಪ್ರಜಾಭಿಮಾನವುಳ್ಳವರಾಗಿಯೂ ದೇಶವತ್ಸಲರಾಗಿಯೂ ವಿದ್ಯಾಭಿವೃದ್ಧಿಯನ್ನು ಪಡಿಸುತ್ತಾ ಬಂದಲ್ಲಿ ಇಹಲೋಕದಲ್ಲಿ ಯಶಸ್ಸೂ ಪರಲೋಕದಲ್ಲಿ ಪುಣ್ಯವೂ ಪಡೆಯುವರಲ್ಲದೆ ಈ ತಾಲ್ಲೂಕಿಗೂ ಈ ಸ್ಕೂಲಿಗೂ ಇಲ್ಲಿನ ಪ್ರಜೆಗಳಿಗೂ ವಿಶೇಷ ಗೌರವ ಕೊಟ್ಟಂತೆ ಆಗುತ್ತದೆ

ಬಡೇ ಸಾಬಿ

ವೈಶ್ಯರ ಆಕ್ಷೇಪಣೆ

ಅಯ್ಯಾ

ಕಳೆದ ಡಿಸೆಂಬರ್ ೨೪ ನೆ ತಾ "ಮೈಸೂರು ಸ್ಟಾರ್" ಪತ್ರಿಕೆಯಲ್ಲಿ ಜನಾಂಗವರ್ಣನೆ ಎಂದು ನಮೂದು ಮಾಡಿ ನಮ್ಮ ವೈಶ್ಯರ ಹಿತವಿಷಯದಲ್ಲಿ ಕೆಲವು ಸಂಗತಿಗಳನ್ನು ಪ್ರಕಟಿಸಿರುತ್ತಾರೆ ಆ ವಿಚಾರವು ನಮ್ಮ ಜನಗಳಿಗೆಲ್ಲಾ ತಿಳಿಯುವದಕ್ಕೆ ಆ ಪೇಪರನ್ನು ಲಿಂಗಾಯಿತರು ವಿನಹ ಬಾಕಿ ಮತಸ್ಥರು ವಿಶೇಷವಾಗಿ ತರಿಸುವದಿಲ್ಲ ಆದ್ದರಿಂದ ಜನಜನಿತವಾಗಿ ತಿಳಿಯಲು ಅವಕಾಶವಿಲ್ಲವಾಗಿದೆ ಅದರಲ್ಲಿ ನಮ್ಮ ಮತವನ್ನು ದೂಷಣೆ ಮಾಡಿರತಕ್ಕ ಕೆಲವು ವಿಷಯಗಳನ್ನು ನಮ್ಮ ಜನಗಳು ಮೈಸೂರು ಗವರ್ನಮೆಂಟಿನವರ ಸಂಗಡ ಹೊಡೆದಾಡಿ ಆ ದೂಷಣೀಯವಾದ ಕಲಮುಗಳನ್ನು ನಮೂದಿಸಿದರೆ ಸಮಸ್ತ ಜನಗಳಿಗೂ ತಿಳಿದು ಮುಂದಿನ ಕಾರ್ಯಗಳನ್ನು ನಡಿಸ್ಯಾರೆಂದು ನಂಬಿ ಆಶೆ ಮಾಡಿಕೊಂಡಿರುತ್ತೇನೆ ಅದೇನಂದರೆ—

೩ ನೇ ಕೋಮಟಿಗರು ಎಂದರೆ ವೈಶ್ಯರೆಂದು ತಾವಾಗಿ ಕರೆದು ಕೊಳ್ಳುವ ಕೋಮಟಿಗರು ವೈಶ್ಯವರ್ಗಕ್ಕೆ ಸೇರದವರೆಂದು ಸಾಮಾನ್ಯವಾಗಿ ಬಹು ಜನರು ಒಪ್ಪಿಕೊಂಡಾಗ್ಯೂ ಇವರ ವಿರೋಧಿಗಳಾದ ನಗರ್ತರು ಎಣ್ಣೆಯನ್ನು ತೆಗೆದು ಜೀವಿಸುವ ಜ್ಯೋತಿನಗರವೆಂದು ಕರೆಯಲ್ಪಡುವವರು ಸಹ ಇವರು ಎಂದರೆ ನಾವೇ ವೈಶ್ಯವರ್ಗಕ್ಕೆ ಸೇರಿದವರಲ್ಲವೆಂದು ತಿರಸ್ಕರಿಸುವದಲ್ಲದೆ ಇವರ ಜಾತಿ ಉತ್ಪತ್ತಿ ಬಹು ಕಠಿಣವಾದವೆಂಬ ವೃದಕ್ಕೆ ಕೆಲವು ಕಥೆಗಳನ್ನು ಹೇಳುವರು ಇಂಥಾ ಕಥೆಗಳು ಹೊಟ್ಟೆಕಿಚ್ಚಿನಿಂದಲೂ ದ್ವೇಷದಿಂದಲೂ ಹುಟ್ಟಿದವುಗಳಾಗಿರುವವಲ್ಲದೆ ಇಲ್ಲಿ ಒರೆಯಲು ಅರ್ಹವಾದವುಗಳಾಗಿಲ್ಲ ಆದರೆ ಕಲಿಯುಗದಲ್ಲಿ ಕ್ಷತ್ರಿಯರಿಲ್ಲವೇ ಇಲ್ಲವೆಂಬುವದಕ್ಕೆ ಶಾಸ್ತ್ರಾಧಾರವಿರುವಂತೆ ವೈಶ್ಯರೂ ಇಲ್ಲವೆಂಬುವದಕ್ಕೆ ಶಾಸ್ತ್ರಾಧಾರ ತೋರಿಸಲ್ಪಟ್ಟಿರುವದು ಎಂದು ನಮೂದಿದೆ ಇವರು ಪೂರ್ವದ ವೈಶ್ಯಜಾತಿಯವರ ಸಂತತಿಯವರೇ ಅಲ್ಲದಿದ್ದಾಗ್ಯೂ ಜಾತಿ ಸಂಬಂಧವಾದ ವೃತ್ತಿಯಲ್ಲಿ ಪೂರ್ವದ ವೈಶ್ಯರಂತೆಯೇ ಇರುತ್ತಾರೆಂದು ಬರೆದಿರುತ್ತೆ ಶೇಡಿಗಳು ಚಮತ್ಕಾರಿಗಳು ಮೋಸಗಾರರು ಎಂಬಿವು ಇವರ ಪಾಲಿಗೆ ಬಂದಿರುತ್ತವೆ ಎಂದು ಒರೆದಿರುತ್ತೆ. ಇವರು ಕೈ ಚಮತ್ಕಾರ ಮತ್ತು ಮೋಸದಲ್ಲಿ ಪ್ರಖ್ಯಾತರಾಗಿರುವರಲ್ಲದೆ ವ್ಯಾಪಾರದಲ್ಲಿ ಅನ್ಯಾಯ ಮೋಸ ಚಮತ್ಕಾರ ಮಾಡಲು ಕೊಂಚವೂ ಹೇಜರಿಯುವವರಲ್ಲವೆಂಬ ಮಹಾತುಟಕಳ ಕರೀಣವು ಎಂದು ನಮೂದಿದೆ ಈ ಜನರು ಕೋಮಟ ಶಬ್ದಕ್ಕೆ ಬದಲಾಗಿ ವೈಶ್ಯಶಬ್ದವನ್ನೇ ಉಪಯೋಗಿಸುವದು ಏನೂ ಆಶ್ಚರ್ಯವಿಲ್ಲವೆಂದೂ ನಮೂದಿದೆ ಮತ್ತು ಕೋಮಟಿಗಳು ತಾವು ಪೂರ್ವದ ವೈಶ್ಯರ ಪುನರಾವತಾರಿಗಳೆಂದು ಭಾವಿಸಿಕೊಂಡಿರುತ್ತಾರೆ ಈ ಜಾತಿಯ ಉತ್ಪತ್ತಿಯ ಕಾರಣಕ್ಕೊಂದು ಕಥೆಯುಂಟು ಹ್ಯಾಗಂದರೆ —ಪೂರ್ವದ ವೈಶ್ಯರು ತಮ್ಮ ನೀಚಕೃತ್ಯದಿಂದ ನಿರ್ಮೂಲರಾದರು ಆದರೆ ಇದರಿಂದ ಪ್ರಪಂಚದಲ್ಲಿ ವ್ಯಾಪಾರ ಮತ್ತು ವ್ಯವಹಾರಿಕ ಕೆಲಸಗಳಿಗೆ ಬಹು ತೊಂದರೆಯುಂಟಾದ್ದರ ಮೇಲೆ ಧನಾಧಿಪತಿಯಾದ ಕುಬೇರನು ಸೃಷ್ಟಿಕರ್ತನಲ್ಲಿ ಹೇಳಿಕೊಳ್ಳಬೇಕಾಯ್ತು.

ಆಗ ಒಬ್ಬ ಋಷಿಯು ಈ ವೈಶ್ಯಕುಲವನ್ನು ಭುವನ ಸೃಷ್ಟಿಗಲು ಅಪ್ಪಣೆಪ್ರಸಾಗಿ ಯಾಗಮಾಡುವಾಗ್ಗೆ ಧರಿಸಿದ್ದ ದರ್ಭೆಯ ಸಾವಿರ ಉಂಗುರಗಳೆಲ್ಲವೂ ಮನುಷ್ಯಜನ್ಮವನ್ನು ತಾಳಿ ಭೂಲೋಕದಲ್ಲಿ ಈ ವೈಶ್ಯರ ಉತ್ಪತ್ತಿಯನ್ನೂ ಧನಾಭಿವೃದ್ಧಿಯನ್ನೂ ಮಾಡಲು ಹೊರಟ ಮೊದಲು ಅಯೋಧ್ಯಾ ಪ್ರಾಂತ್ಯದಲ್ಲಿ ನೆಲೆಸಿದರು ಇವರಲ್ಲಿ ಏಳು ನೂರು ಹದಿನಾಲ್ಕು ಕುಟುಂಬದ ವರಿವಿಗೂ ದಕ್ಷಿಣಕ್ಕೆ ಹೊರಟುಬಂದು, ಪೆನುಗೊಂಡೆಯಲ್ಲಿ ನಿಂತರು ಎಂದೂ ನಮೂದಿದೆ ಈ ಜನರು ಲಗ್ನ ಮಾಡುವ ಕಾಲದಲ್ಲಿ ೪ ನೇ ದಿವಸ ಮಧ್ಯರಾತ್ರಿಯಲ್ಲಿ ಮನೆಯ ಯಜಮಾನನು ಬೆತ್ತಲೆಯಾಗಿ ಒಂದು ಕೋಣೆಯಲ್ಲಿ ಒಂದು ಕಳಶವನ್ನು ಪೂಜಿಸಿದ ನಂತರ ಬಟ್ಟೆ ಹಾಕಿಕೊಂಡು ಬಾಗಿಲನ್ನು ತೆರೆದು ಇತರರಿಗೆ ಪ್ರಸಾದವನ್ನು ಕೊಡುವನು ಪೂಜಾ ಕಾಲದಲ್ಲಿ ಹೆಂಗಸರು ಒಳಗೆ ಪ್ರವೇಶಿಸುವದಿಲ್ಲ ಪೂಜೆಯನ್ನು ಕೆಲವರು ಮಾತ್ರ್ಯಗೆ ಪೂಜೆಯೆಂತಲೂ, ವಸಂತಮಾಧವ ಪೂಜೆಯೆಂತಲೂ, ಮತ್ತೆ ಕೆಲರರು ವೈಭವ ಕರ್ಮವೆಂತಲೂ ಕರೆಯುವರು ಅದರೆ ನಗರ್ತರು ಈ ರಹಸ್ಯಪೂಜೆಯಲ್ಲಿ ಒಂದು ಹಸುವನ್ನು ಮಾಡಿ ಅದರ ಹೊಟ್ಟೆಯೊಳಗೆ ರಂಗಿನ ನೀರನ್ನು ತುಂಬಿ ಪೂಜೆಯಾದ ನಂತರ ಅದನ್ನು ಕತ್ತರಿಸಿ ತಮ್ಮ ಬಂಧುವರ್ಗದವರಲ್ಲಿ ಹಂಚಿಕೊಳ್ಳುವರು ಎಂಬೀ ರೀತಿಯಾಗಿ ನಮೂದಿದೆ ಭೂಲೋಕದಲ್ಲಿ ಚಂದ್ರವಂಶ ಸೂರ್ಯವಂಶದ ಅನೇಕ ಮಹಾರಾಜರುಗಳು ಇದ್ದರೂ ಕಲಿಯುಗದಲ್ಲಿ ಭೂಲೋಕದಲ್ಲಿ ಕ್ಷತ್ರಿಯರೇ ಇಲ್ಲವೆಂಬ ಮಾತಿಗೆ ಸರಿಯಾಗಿ ಭೂಲೋಕದಲ್ಲಿ ಕಲಿಯುಗದಲ್ಲಿ ಆ ಸೇತು ಹಿಮಾಚಲದ ವರಿವಿಗೂ ಅನೇಕ ಲಕ್ಷ ಜನರು ವೈಶ್ಯರು ಇದ್ದರೂ ಭೂಲೋಕದಲ್ಲಿ ವೈಶ್ಯರೇ ಇಲ್ಲವೆಂಬ ಮಾತು ಅದಕ್ಕೆ ಸಾಟಿಯಾಗಿದೆ ನಾವು ವೈಶ್ಯರಾಗಿದ್ದು ಯಾವ ಗಲಾಟೆಗೂ ಹೋಗದೆ ಸುಮ್ಮನೆ ಇರುವಂಥವರನ್ನು ನಿಷ್ಕಾರಣವಾಗಿ ನಮಗೆ ದ್ವೇಷಿಗಳಾದ ಜನಗಳ ಮಾತನ್ನು ಕೇಳಿ ಮನಸ್ವಿ ಅನ್ಯಾಯವಾಗಿ ಅಪವಾದಕರವಾದ ಬರವಣಿಗೆಯನ್ನು ಬರೆದಿರತಕ್ಕದ್ದನ್ನು ನಮ್ಮ ವೈಶ್ಯಮಂಡಲಿಯವರೆಲ್ಲಾ ಗಣನೆಗೆ ತಂದುಕೊಂಡು ಈ ಅಪಮಾನವನ್ನು ಹೋಗಲಾಡಿಸಿ ನಮ್ಮ ವೈಶ್ಯಮಂಡಲಿಗೆ ಕೀರ್ತಿಯನ್ನು ತಂದಾರೆಂದು ನಂಬಿ ಬರೆದಿರುತ್ತೇನೆ

ಅರಸೀಕೆರೆ ಕೋಲ್ಲಾ ಚನ್ನೈಯ್ಯಶೆಟ್ಟಿ

ಮೈಸೂರು ಗೆಜೆಟ್ ಸಂಗ್ರಹ

ಸಬ್ ಅಸಿಸ್ಟೆಂಟ್ ಸರ್ಜನ್ ಮ॥ ಜೆ ವಿ ಮಾಸ್ಕರೆನ್‌ಹಾಸ್ ರವರಿಗೆ ಎಂಟು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು

ಮೈಸೂರ್ ಮಹಾರಾಜಾ ಕಾಲೆಜ್ಜಿನ ಉಪಾಧ್ಯಾಯರಾದ ಮ॥ ಜೆ ಕಸ್ತೂರಿರಂಗೈಯ್ಯಂಗಾರ್ರಿಗೆ ಅರ್ಧ ಸಂಬಳದ ಮೇಲೆ ಹನ್ನೊಂದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು

ನಗರ್ ತಾಲ್ಲೂಕು ಅಮಲ್ದಾರ್ ಬಿ ನರಸಿಂಗರಾಯರಿಗೆ ೩೯ ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು ಅವರ ಗೈರ್‌ಹಾಜರಿಯಲ್ಲಿ ಶಿರಸ್ತೇದಾರ್ರವರು ತಾಲ್ಲೂಕ್ ಛಾರ್ಜನ್ನು ವಹಿಸಿದ್ದರು

ಶೃಂಗೇರಿ ಜಹಗೀರಿಯ ಡಿಪಿ ಅಮಲ್ದಾರ್ ಆರ್ ಶಾಮರಾಯರಿಗೆ ಕೊಟ್ಟಿದ್ದ ಒಂದು ತಿಂಗಳ ಪ್ರಿವಿಲೆಜ್ ರಜವನ್ನು ಇನ್ನೂ ಹದಿನೈದು ದಿನಗಳಿಗೆ ಜಾಸ್ತಿ ಮಾಡಿದೆ

ಶ್ರೀ ಶೃಂಗೇರಿ ಜಗದ್ಗುರುಗಳು ಸಂಚಾರಮಾಡುವ ಕಾಲದಲ್ಲಿ ಶೃಂಗೇರಿಯ ಮತ್ತು ಅದಕ್ಕೆ ಸೇರಿರುವ ಇನಾಂ ಗ್ರಾಮಗಳ ಆಡಳಿತವನ್ನು ನೋಡಿಕೊಳ್ಳುವುದಕ್ಕಾಗಿ ಗೋರೀಬಿದನೂರು ತಾಲ್ಲೂಕು ಅಮಲ್ದಾರ್ ಮೆ॥ ಬಿ ಸಿ ಕೃಷ್ಣಶಾಸ್ತ್ರಿಯವರನ್ನು ಅಲ್ಲಿಗೆ ವರ್ಗ ಮಾಡಿದೆ ಆ ಕಾಲದಲ್ಲಿ ಇವರು ಅಸಿಸ್ಟೆಂಟ್ ಕಮಿಷನರ ದರ್ಜೆಯನ್ನೂ ೧ ನೆ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರಗಳನ್ನೂ ಪಡೆದಿರತಕ್ಕದ್ದು ಇವರು ಕೂಡಲೆ ಶಿರಸ್ತೇದಾರರಿಗೆ ತಾಲ್ಲೂಕ್ ಛಾರ್ಜನ್ನು ವಹಿಸಿ, ಶೃಂಗೇರಿಗೆ ಹೋಗಿ ದಾಖಲಾಗತಕ್ಕದ್ದು

ಡೆಪ್ಯುಟಿ ಅಮಲ್ದಾರ್ ಮೆ॥ ಆರ್ ಶಾಮರಾಯರನ್ನು ೪ ನೆ ಕ್ಲಾಸ್ ಅಮಲ್ದಾರರನ್ನಾಗಿ ನೇಮಕಮಾಡಿ ಗೋರೀಬಿದನೂರ್ ತಾಲ್ಲೂಕಿಗೆ ವರ್ಗಮಾಡಿದೆ

ಗವರ್ನಮೆಂಟ್ ಅಸಿ ಸೆಕ್ರೆಟರಿ ಮೆ॥ ಎಂ ಎನ್ ಕೃಷ್ಣರಾಯರು ಮತ್ತೊಂದು ಹುಕುಂ ಕೊಡಲ್ಪಡುವ ತನಕ ಕಂಟ್ರೋಲರವರ ಆಫಿಸ್ ಛಾರ್ಜನ್ನು ವಹಿಸಿರತಕ್ಕದ್ದು ಇವರು ಜನವರಿ ೩ ರಲ್ಲಿ ಮೆ॥ ಟಿ ಸತ್ಯನಾರಾಯಣಶೆಟ್ಟಿಯವರಿಂದ ಕಂಟ್ರೋಲರ್ ಆಫೀಸ್ ಛಾರ್ಜನ್ನು ವಹಿಸಿಕೊಂಡಿರುತ್ತಾರೆ

ಬೆಂಗಳೂರು ಸೆಂಟ್ರಲ್ ಕಾಲೇಜ್ ಕ್ಯೂರೇಟರ್ ಮೆ॥ ವಿ ಎಸ್ ಸಾಂಬಶಿವ ಅಯ್ಯರವರಿಗೆ ಕೊಟ್ಟಿದ್ದ ಒಂದೂವರೆ ತಿಂಗಳ ಪ್ರಿವಿಲೆಜ್ ರಜವನ್ನು ಇನ್ನೂ ೨೯ ದಿನಗಳಿಗೆ ಜಾಸ್ತಿಮಾಡಿದೆ

ತಾಲ್ಲೋಕು ವರ್ತಮಾನಗಳು

ಕೊಳ್ಳೆಗಾಲ—ಈ ತಾಲ್ಲೂಕಿಗೆ ಸೇರಿದ ಮಧುವನಹಳ್ಳಿ ಪ್ರಾಂತ್ಯದಲ್ಲಿ ಹುಲಿಯು ಜನಗಳನ್ನು ತಿನ್ನುತ್ತ ಇದೆ ಮತ್ತು ಇಲ್ಲಿ ಸುಮಾರು ೧೫ ದಿನದಲ್ಲಿ ಮಳೆ ಹೊಯಿದು ೧-೨ ಭಾರಿ ಕೆರೆಗೆ ನೀರು ತುಂಬಿ ಇದೆ ನಮ್ಮ ಊರು ಫಾರೆಸ್ಟ್ ಡಿಪೋದಲ್ಲಿ ಸೌದೆ ಸಿಕ್ಕುತ್ತಾ ಇತ್ತು ಈಗ ಸುಮಾರು ೧೦—೧೫ ದಿವಸದಿಂದ ಸೌದೆ ದೊರೆಯುವದಿಲ್ಲ ಗರೀಬರು ಸೌದೆಗೆ ಬಹಳ ಕಷ್ಟಪಡುತ್ತಾರೆ ಆದ್ದರಿಂದ ಫಾರೆಸ್ಟು ಡಿಪೋದವರು ಸೌದೆಯನ್ನು ಜಾಗ್ರತೆಯಾಗಿ ತರಿಸಿ ವಿಕರಿ ಮಾಡುತ್ತಾರೆಂದು ನಂಬುತ್ತೇನೆ—ಬೆಂಗಳೂರಿನಿಂದ ಇಲ್ಲಿಗೆ ಬರುವ ಜವಳಿ ವ್ಯಾಪಾರಿಗಳಿಗೆ ಮೂಟೆಯು ಕಷ್ಟದಲ್ಲಿ ಸರಿಯಾಗಿರುವದಿಲ್ಲ ರೈಲಿನಲ್ಲಿ ಹೋಗುತ್ತವೋ ಮೂಟೆ ಕಟ್ಟುವಾಗ್ಗೆ ಹೋಗುತ್ತೋ ಮದ್ರಾಸಿನಿಂದಲೂ ಕುಂಭಕೋಣ ಕಡೆಯಿಂದಲೂ ಇಲ್ಲಿಂದಲೂ ಬರುವ ಮೂಟೆಗಳಲ್ಲಿ ಕಮ್ಮಿ ಬರವದಿಲ್ಲ ಬೆಂಗಳೂರಿನಿಂದ ನಮ್ಮ ಊರಿಗೆ ಬರುವ ಜವಳಿ ಮೂಟೆಗಳಲ್ಲಿ ಕಮ್ಮಿ ಬರುತ್ತಾ ಇದೆ ಎಲ್ಲಿ ಕಳುವಾಗುತ್ತೋ ಗೊತ್ತಾಗುವದಿಲ್ಲ

ಚನ್ನಪಟ್ಟಣ—ಇದೇ ಜನವರಿ ತಾ ೬ ರಲ್ಲು ಇಲ್ಲಿನ ಶ್ರೀ ಕನ್ನಿಕಾಪರಮೇಶ್ವರೀ ದೇವಸ್ಥಾನದಲ್ಲಿ ಎಂಡೋಮೆಂಟ್ ಇನ್‌ಸ್ಟಿಟ್ಯೂಷನಿನ ಒಂದು ಸಭೆಯು ಸೇರಿತ್ತು ಸಭೆಯಲ್ಲಿ ಇಲ್ಲಿನ ಗ ಶ್ಕೂ ಹೆಮಾ ಮೆ॥ ಕೆ ನಾರಾಯಣೈಯ್ಯಂಗಾರ್, ಬಿ ಎ ಯವರೂ, ಸಬ್ ರಿಜಿಸ್ಟ್ರಾರ್ ಮೆ॥ ನರಸಿಂಹೈಯ್ಯಂಗಾರ್ರವರೂ, ಮೆ॥ ರಾಮಣ್ಣನವರೂ, ಸಾ॥ ರಾಮಸಂಜೀವಯ್ಯ, ಪಟ್ಟಣದಶೆಟ್ಟಿ ಪುಟ್ಟಣ್ಣನವರೂ, ಪುಟ್ಟಸುಬ್ಬೈಯ್ಯನವರೂ, ಕ್ಲೋಸ್‌ಪೇಟೆ ಮೆ॥ ಲಕ್ಷ್ಮಣಸಿಂಗರೂ, ಬಿ ಸೂರಪ್ಪನವರೂ, ಮೊದಲಾದ ಸಂಘದ ಅನೇಕ ಮೆಂಬರುಗಳು ಹಾಜರಿದ್ದರು ಮೆ॥ ನರಸಿಂಹೈಯ್ಯಂಗಾರ್ರವರು ಸಂಘದ ಪ್ರೆಸಿಡೆಂಟರಾದ ಮೆ॥ ಸಾಹುಕಾರ ರಾಮಸಂಜೀವಶೆಟ್ಟಿಯವರು ಮೇಲ್ಕಂಡ ಸಂಘದ ವರುಷಾಂತ್ಯರಿಪೋರ್ಟನ್ನೂ, ಸದರಿ ಸಂಘವು ಏರ್ಪಾಡಾದ ಒಂದೇ ವರುಷದಲ್ಲಿ ಸಂಘಕ್ಕೆ ಉಂಟಾಗಿರುವ ಪ್ರೋತ್ಸಾಹಾಭಿವೃದ್ಧಿಯನ್ನೂ, ಸಂಘದ ರೂಲ್ಸುಗಳನ್ನೂ ಸಭಿಕರಿಗೆ ವಿವರಿಸಿದ್ದಲ್ಲದೆ, ಮುಂದೆ ಈ ಸಂಘವು ಮೆಂಬರುಗಳ ಕೋರಿಕೆ ಮೇರೆಗೆ ಗವರ್ನಮೆಂಟಿನಲ್ಲಿ ರಿಜಿಸ್ಟರು ಮಾಡಲ್ಪಡಬೇಕಾಗಿರುವದರಿಂದ ಇದಕ್ಕೆ ಯೋಗ್ಯರಾದ ೮ ಜನ ಡೈರೆಕ್ಟರುಗಳನ್ನು ಮೆಂಬರುಗಳೇ ಚುನಾಯಿಸಿಕೊಡಬೇಕೆಂತ ಸೂಚಿಸಿದರು ಸಭಿಕರು ಈಗ ಏರ್ಪಡಿಸಿರುವ ರೂಲ್ಸುಗಳೆಲ್ಲಾ ಸರಿಯಾಗಿವೆ ಎಂತಲೂ, ಮುಂದಿನ ಫೆಬ್ರವರಿ ೫ ಕ್ಕೆ ಒಂದು ಸಬ್ ಕಮಿಟಿ ಮಾಡಿ, ಸಂಘದ ಡೈರೆಕ್ಟರುಗಳನ್ನು ಚುನಾಯಿಸಬಹುದೆಂತಲೂ ಅನುಮೋದಿಸಿದರು ಅನಂತರ ಸಭಿಕರಿಗೆ ಗಂಧ ಪುಷ್ಪ ತಾಂಬೂಲಗಳನ್ನು ಹಂಚಿ ಸಭೆಯನ್ನು ಮುಕ್ತಾಯಮಾಡಲಾಯಿತು ಎಲ್ಲರೂ ಸಭಾ ಪ್ರೆಸಿಡೆಂಟರವರ ಔದಾರ್ಯ, ಸಾಹಸಾದಿಗಳನ್ನು ಸ್ತುತಿಸುತ್ತಾ ತೆರಳಿದರು

ಹೊಸದುರ್ಗ—ಈ ಪ್ರಾಂತ್ಯ ಮೋಡ ಕವಿಕೊಂಡು ಇದೆ ಚಳಿ ಕೊತ್ತಿನಲ್ಲಿ ಸೋನೆ ಬರುವದರಿಂದ ಕಣಗಳಲ್ಲಿ ಹೆಚ್ಚುತ್ತಿ ಕೆಲಸ ಮಾಡುವವರಿಗೆ ಬಹು ತೊಂದರೆ ತೊಗರಿ, ಅವರೆ, ಕೊಯ್ಲು ಆಗುತ್ತಿದೆ—ಕಳೆದ ತಾ ೩ ನೇ ಗುರುವಾರ ನಮ್ಮ ಡೆಪ್ಯುಟಿ ಕಮಿಷನರ್ ಮೆ॥ ಚಂಗೈಯ್ಯ ಚೆಟ್ಟಿಯವರೂ ನಮ್ಮ ಅಮಲ್‌ದಾರರಾದ ಎ॥ ಲಕ್ಷ್ಮಣೈಯ್ಯರವರೂ ಕೌನ್ಸಿಲರ್ ಮೆ॥ ಟಿ ಆನಂದರಾಯರವರನ್ನು ಭೇಟಿ ಮಾಡಿ ಕರತರುವ ಉದ್ದೇಶ್ಯ ಬೂದಿಹಾಳ್‌ಗೆ ಪ್ರಯಾಣ ಮಾಡಿ ಅಲ್ಲಿ ವರ್ತಕರೇ ಮೊದಲಾದ ಪರಿವಾರದಿಂದ ತೋರಣಾದಿ ಗ್ರಾಮ ಶೃಂಗಾರದಿಂದ ಕಾದಿದ್ದರು ಮರುದಿನ ಬೆಳಗ್ಗೆ ೯ ಘಂಟೆ ಸಮಯದಲ್ಲಿ ಹುಳಿಯೂರು ಕಡೆಯಿಂದ ಕೌನ್ಸಿಲರ್ ಮೆ॥ ಆನಂದರಾಯರು ಚಿತ್ತೈಸಲು ಪರಿವಾರ ಸಹಿತ ಕಾದಿದ್ದ ಮೆ॥ ಶೆಟ್ಟರೇ ಮೊದಲಾದವರೆಲ್ಲಾ ಅವರನ್ನು ಬಹು ಸನ್ಮಾನದಿಂದ ಎದುರುಗೊಂಡರು ಗೊಂಚಹೊತ್ತು ಕೆಲವು ಮಾತುಗಳು ನಡದನಂತರ ಕೌನ್ಸಿಲರವರೂ ಡೆ॥ ಕಮಿಷನರ್ ಸಾಹೇಬರೂ ಒಂದೇ ಗಾಡಿಯಲ್ಲಿ ಕುಳಿತು ಹೊಸದುರ್ಗಕ್ಕೆ ಪ್ರಯಾಣಮಾಡಿದರು ಊಟ ಉಪಚಾರಾದಿಗಳು ಮುಗಿದ ಮೇಲೆ ಮೆ॥ ಆನಂದರಾಯರೂ ಮೆ॥ ಶೆಟ್ಟರೂ ಪರಿವಾರ ಸಹಿತ ಗ್ರಾಮದ ಬೀದಿಗಳಲ್ಲಿ ಸಂಚರಿಸಿ ತಾಲ್ಲೂಕು ಕಛೇರಿಗೆ ಹೋಗಿ ಅಲ್ಲಿನ ಕೆಲವು ನೌಕರರ ಲೆಕ್ಕಪತ್ರಗಳನ್ನು ತೆಗಸಿ ನೋಡಿದರು ಬಹು ಕಳಬಡಾಗಿದ್ದ ನೌಕರರನ್ನು ಜಾಗ್ರತೆಯಾಗಿ ವರ್ಗಾಯಿಸುವಂತೆ ಡೆ॥ ಕಮಿಷನರ್ ಸಾಹೇಬರವರಿಗೆ ತಿಳಿಸಿದರು ಮರದಿನ ಕೌನ್ಸಿಲರವರು ಮೆ॥ ಶೆಟ್ಟರೊಂದಿಗೆ ಮಾರೀಕಣಿವೆಗೆ ಹೊರಟರು ಇಲ್ಲಿಗೆ ೮ ಮೈಲು ದೂರದಲ್ಲಿ ನೀರಿನ ತುದಿಯಲ್ಲಿ ಸ್ಟೀಮರು ಅವರನ್ನು ಎದುರು ನೋಡುತ್ತಿತ್ತು ಸದರಿಯ ನರಗಾಡಿಯ ಅಲ್ಲಿಗೆ ಹೋಗ ವಷರಲ್ಲಿ ಗಾಲಿಗಳ ಗುಂಬದ ವರಿಗೂ ನೀರು ಬಂದು ರಿಕಾಡ ಗಳ ಕ್ಕೆ ಪಟ್ಟಿಗೆಯು ನೆನೆದು ಹೋದ್ದರಿಂದ ಹಿಂತಿರಿಗಿ ವಾಪಸು ರಸ್ತೇ ಮಾರ್ಗವಾಗಿಯೇ ಮಾರೀಕಣಿವೆ ಸೇರಿದರು—ಇಲ್ಲಿಗೆ ೪ ಮೈಲು ದೂರದಲ್ಲಿರುವ ದೇವಪುರದ ಮಹದೇವನ ಜಾತ್ರೆಯು ಕಳೆದ ತಾ ೬ ಕ್ಕೆ ಮುಕ್ತಾಯವಾಯಿತು ಕ್ರಿಸ್‌ಮಸ್ ರಜಾದಿನಗಳಲ್ಲಿ ಒಂದೆರಡು ದಿನ ತಾಲ್ಲೂಕು ಅಮಲ್ದಾರರೂ ನೌಕರರೂ ಈ ಜಾತ್ರೆಯಲ್ಲಿ ಕಾಲವನ್ನು ಕಳೆದದ್ದರಿಂದ ಬಹು ದೂರಸ್ಥಳದಿಂದ ಬಂದಿದ್ದ ಅನೇಕ ಈಸ್ಪೇಟ್ ಕಂಪನಿದಾರರಿಗೆ ಬಹು ತೊಂದರೆಯಾಗಿತ್ತು ಕೌನ್ಸಿಲರವರು ಬರುವ ಗಲಾಟೆಯಿಂದಲೂ ರಜಾ ಮುಗಿದದ್ದರಿಂದಲೂ ತಾ ೧ ಕ್ಕೆ ಇವರೆಲ್ಲರೂ ಕಛೇರಿ ಸೇರಲು, ಮುಚ್ಚುಮರೆಯಲ್ಲಿಯೇ ಇದ್ದ ಈಸ್ಪೇಟ್ ಕಂಪನಿಗಳ ತಲೆಯೆತ್ತಿಕೊಂಡು ಎಲ್ಲೆಲ್ಲಿಯೂ ತನ್ಮಯವಾಯಿತು ಇದನ್ನು ಕಂಡ ಕೆಲವು ಪೋಲೀಸಿನವರು ಸುಮ್ಮನೇ ಇದ್ದ ಕಾರಣವನ್ನು ವಿಚಾರಿಸೆ ಯೋಚಿಸಬಹುದು ದಿನಕ್ಕೆ ಸಾವಿರಾರು ರೂಪಾಯಿಗಳು ಲೇವಾದೇವಿ ನಡೆಯುತ್ತಿದ್ದ ಈ ಕಂಪನಿಗಳ ಮೇಲುಸ್ತುವಾರಿ ಇದ್ದ ಪೋಲೀಸಿನವರಿಗೆ ಕಟಿಮೆಯೇನು? ಈ ದುರ್ವ್ಯಾಪಾರಾದಿಗಳು ಇನ್ನು ಎಂದಿಗೆ ತಪ್ಪುವವೋ ಕಾಣೆನು—ಈ ಬೆಲಗೂರಿಗೆ ೩ ಮೈಲು ಇರುವ ಮತ್ತೂರು ತಿಮ್ಮನೆಂಬುವನು ಶಿವಳ್ಳಿಗೆ ಸಂಬಂಧಿಸಿದ ಕೇಸನ್ನು ಹೊಡದಾಟದಿಂದ ಕ್ರಿಮಿನಲ್‌ಗೆ ವಿಚಾರಣೆಯಾಗಿ ನಡೆಯುವನಿಗೆ ೩ ದಿನ ಸಜಾ ೧೦ ರೂ ಜುಲ್ಮಾನೆ ವಿಧಿಸಿರುತ್ತಾರೆ

ಪೆರಿಯಾಪಟ್ಟಣ—ಈ ಪ್ರಾಂತ್ಯ ಕಳ್ಳರ ಉಪದ್ರ ಹೆಚ್ಚಾಗಿದೆ ಸುಮಾರು ೨ ತಿಂಗಳಲ್ಲಿ ಈ ಊರಲ್ಲಿರುವ ಬೋರ್ಡಿನಲ್ಲಿ ಸಾಹುಕಾರನನ್ನು ಹೊಡೆದು ಕೆಲ ತ್ರಿಣಕಾಸು ತೆಗದುಕೊಂಡು ಹೋದನಂತರ ಗುಮಾನಿ ಮೇಲೆ ೬—೫ ಜನಗಳನ್ನು ಹಿಡಿದು ಲಾಕಪ್ಪಿನಲ್ಲಿ ಕೂಡಿ ಫಿರ್ಯಾದು ಆದ ಮೇಲೆ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ವಿಚಾರಣೆ ನಡೆದು ಪಿರಿಯಾಪಟ್ಟಣದ ೪—೫ ಜನಗಳನ್ನು ಜಾಮೀನಿನ ಮೇಲೆ ಬಿಡಿಸಿ ನಾಡಿ ಈ ತಿಂಗಳ ೮ ನೇ ತಾರೀಖಿಗೆ ಹೀರಿಂಗು ಇಟ್ಟಿರುತ್ತಾರೆ ಕಳೆದ ತಿಂಗಳು ತಾ ೩೦ ನೇ ಆದಿತ್ಯವಾರ ಸಾಯಂಕಾಲದಲ್ಲಿ ಪಿರಿಯಾಪಟ್ಟಣದಿಂದ ಬೆಟ್ಟದಪುರಕ್ಕೆ ಹೋಗುವ ರಸ್ತೆ ಕಲ್ಲಹಳ್ಳಿ ರೆಯಲ್ಲಿ ಬೆಟ್ಟದಪುರದಲ್ಲಿರುವ ವ್ಯಾಪಾರಿಗಳು ಮೈಸೂರಿಗೆ ಹೋಗಿ ಲೆಕ್ಕ ಮೊಕಾಬಿಲೆ ಮಾಡಿಕೊಂಡು ಗಾಡಿಯಲ್ಲಿ ಕುಳಿತು ಹೋಗುತ್ತಿರುವಾಗ್ಗೆ ಸುಮಾರು ೧೦—೧೨ ಜನ ಕಳ್ಳರು ಬಂದು ಗಾಡಿಮುಂದೆ ನಿಂತು ಗಾಡಿ ತಡೆದು ಗಾಡಿಯ ಒಂದು ಏಟು ಹೊಡೆದು ಗಾಡಿ ಮುಂದಕ್ಕೆ ಬರುವಾಗ್ಗೆ ಗಾಡಿಯ ಕೂತಿದ್ದ ಶ್ಯಾನುಭೋಗರು ಬಾಯಿ ಬಿಡುಕೊಳ್ಳುವ ಹೊತ್ತಿಗೆ ನ್ನು ಹೊಡೆದು ಕೈಹಿಡಿದು ಎಳೆಯುವಾಗ್ಗೆ ಕೈಗೆ ಬಂಗಾರದ ಸಿಕ್ಕಿತು ಅದನ್ನು ಕಿತ್ತುಕೊಳ್ಳಬೇಕೆಂದು ಕೈನುಲಿಚಿ ಕಿತ್ತುಕೊಳ್ಳದೆ ಪೆಟ್ಟಿಗೆಯಲ್ಲಿದ್ದ ಸ್ವಲ್ಪ ದುಡ್ಡು ಬಟ್ಟೆಬರೆ ವಗೈರೆ ಸಾಮಾನುಗಳನ್ನು ತೆಗೆದುಕೊಂಡು ಪರಾರಿಯಾದರು ಮಾರಣೆ ದಿವಸ ಬೆ ೫ ಗಂಟೆಯಲ್ಲಿ ೧೦—೧೨ ಜನಗಳು ಪಿರಿಯಾಪಟ್ಟಣದ ಅರಸಿನಕೋಡಿ ಬಳಿ ಕೂತು ಇದ್ದರು ಪಿರಿಯಾಪಟ್ಟಣದ ನರಸಿಂಹೈಯ್ಯರ ಪುಟ್ಟಣ್ಣನವರ ಮಗ ರಾಮಸ್ವಾಮಿ ಮತ್ತು ಕೊಡಗುದೇಶದ ಸಾಹುಕಾರ ಇವರಿಬ್ಬರು ಮೈಸೂರಿಂದ ಹೊರಟು ಪಿರಿಯಾಪಟ್ಟಣದ ಗಾಡಿಗಳ ಜೊತೆಯಲ್ಲಿ ಬರುವಾಗ್ಗೆ ಕಂಪ್ಲಾಪುರದಲ್ಲಿ ೪ ಗಂಟೆಯಿಂದ—ಇನ್ನೇನು ಬೆಳಗಾಯ್ತು ನಮ್ಮ ಒಂದು ಗಾಡಿಯನ್ನೇ ಹೊಡೆ ಎಂದು ಗಾಡಿಯವನಿಗೆ ಹೇಳಿದ್ದರ ಮೇರೆ ಗಾಡಿಯನ್ನು ಹೊಡೆದುಕೊಂಡು ಪಿರಿಯಾಪಟ್ಟಕ್ಕೆ ಬರುವಾಗ್ಗೆ ಪಿರಿಯಾಪಟ್ಟದ ಅರಸಿನಕೋಡಿ ಬಳಿ ಕೂತಿದ್ದ ಕಳ್ಳರು ಬಂದು ಗಾಡಿ ನಿಲ್ಲಿಸಿ ಗಾಡಿಯವನಿಗೆ ಒಂದು ಏಟು ಹೊಡೆಯುತ್ತಲೇ ಗಾಡಿಯಲ್ಲಿ ಕೂತಿದ್ದ ಪುಟ್ಟಣ್ಣನವರ ಮಗ ಗಾಬರಿಯಿಂದ—ಕಳ್ಳರು ಬಂದರು! ಗಾಡಿಯಲ್ಲಿ ಇರುವವರು ಇಳಿದು ಓಡಿಬನ್ನಿರಿ! ಎಂದು ಬೇಕೆಂತ ಜೋರು ಮಾಡಿದ್ದರಿಂದ ಕಳ್ಳರು ದೊಣ್ಣೆಯಿಂದ ನೆತ್ತಿ ಬುರುಡೆಗೆ ಒಂದು ಏಟು ಹೊಡೆದುದು ಚರಂಡಿಗೆ ಕೆಡವಿಕೊಂಡು—ಕಡಗೋಲ್ ತರ್ತಾ ಕಾಲು ಮುರಿಸಿ ಕಾಲಿನಲ್ಲಿರುವ ಕಾಲುಮುರಿಯನ್ನು ತೆಗೆದುಕೊಳ್ಳುವ ಸಮಯಕ್ಕೆ ತೆಲಗು ಮಾತು ಅರಿವನ್ನು ಆ ಹುಡುಗ ಕೇಳಿ—ದಮ್ಮಯ್ಯ ಒಡೆಯ ಹಗ್ಗ ಬಿಂಟ ಹಿಗ್ಗಲಿಸಿ ತೆಗದುಕೊಳ್ಳಿ ಎಂದು ಹೇಳಿದ್ದರಿಂದ ಎತ್ತಿನ ಹಗ್ಗಬಿಚ್ಚಿ ಕಾಲುಮುರಿಗೆ ಹಾಕಿ ಎಳದು ತೆಗದುಕೊಂಡು ಮತ್ತು ಕಿವಿಯಲ್ಲಿ ಹಾಕಿದ್ದ ಕಡಕನ್ನು ನೋಡಿ ಕಿವಿ ಹರಿದು ತೆಗದುಕೊಳ್ಳೋಣವೆಂದು ಕಳ್ಳರು ಮಾತನಾಡಿಕೊಂಡದ್ದರಮೇಲೆ ಹಾಕೊಡ ತ್ತೇನೆ! ಕಿವಿ ಹರಿಯಬೇಡಿ ಎಂದು ತೆಗದು ಕೊಟ್ಟದ್ದಾಯಿತು ಇಷ್ಟು ಆಗುತ್ತಿದ್ದಾಗ್ಗೆ ಅಳುತ್ತಾ ಇದ್ದ ಗಾಡಿಯವನನ್ನು—ಕಳ್ಳ ಗಾಡಿ ಓಡಿಸಿಕೊಂಡು ಹೋಗು ಇಲ್ಲದಿದ್ದರೆ ನಿನ್ನನ್ನು ಹೊಡೆಯುವೆವೆಂದು ಬೆದರಿಸಿ ಮೇಲೆ ಹೇಳಿದ ಕೊಡಗಿನ ಸಾಹುಕಾರನಲ್ಲಿದ್ದ ಗಂಟನ್ನು ಹೊಡೆದು ಕಿತ್ತುಕೊಂಡು ಪರಾರಿಯಾದರು ಈ ವಿಷಯ ಸರ್ಕಾರಕ್ಕೆ ತಿಳಿದು ಪೋಲೀಸ್ ಇನ್ಸ್‌ಪೆಕ್ಟರೇ ಅದಿಯಾಗಿ ಬಂದು ಪಿರಿಯಾಪಟ್ಟಣದಲ್ಲಿ ಪುಟ್ಟಣ್ಣನವರ ಮಗನನ್ನು ವಿಚಾರಿಸಿ, ಆವನ ಗಾಯದ ಪತ್ತೆಯನ್ನು ಪರಾಂಬರಿಸಿ ಹೋಗಿ ಕಳ್ಳರ ಪತ್ತೆ ತರದೊಡಗಿಸುತ್ತ ಇರುವಾಗ್ಗೆ ಪಿರಿಯಾಪಟ್ಟದ ಸೋಬಳಿ ಕೆಂಡುಗಾಲದ ಬಳಿ ಕಾಡಿನಲ್ಲಿ ಒಡ್ಡು ಮನೆಗಳನ್ನು ಗುಮಾನಿ ಮೇಲೆ ಶೋಧನೆ ಮಾಡಿರು ಕೆಲವು ಮಾಲುಗಳು ಅಂದರೆ ಬೆಟ್ಟದಪುರದ ರಸ್ತೆಯಲ್ಲಿ ಸಾಯಂಕಾಲ ನಡೆದ ದರೋಡೆಯಲ್ಲಿ ಹೋದ ಮಾಲುಗಳು ಸಿಕ್ಕಿರುವದಾಯಿತು ವರ್ತಮಾನವಿದೆ ಪಿರಿಯಾಪಟ್ಟದ ಕಡೆ ಈ ರೀತಿ ಜನಗಳು ಕಳ್ಳರ ಭಯವು ಜನಗಳಿಗೆ ಒಳಕೋಟೆಯಲ್ಲಿ ಹುಲಿಯ ಭಯ ಇರುವದ್ದರಿಂದ ಇಲ್ಲಿ ವಾಸನೆ ಕಷ್ಟವಾಗಿದೆ ಲಾಕಪ್ಪಿನಲ್ಲಿ ಕೂಡಿದ ೬—೮ ಜನಗಳ ಪೈಕಿ ಇಬ್ಬರನ್ನು ಏಟು ತಿಂದ ರಾಮಸ್ವಾಮಿಯು ಗುರ್ತು ಸನಿಗೆ ಚನ್ನಾಗಿ ಇದೆ ಇವರು ನನ್ನ ಕಾಲುಬಳೆಯನ್ನು ಕಳಚಿಕೊಂಡರು ಬಾಕಿ ಜನಗಳ ಗುರ್ತು ನನಗೆ ಜ್ಞಾಪಕವಿಲ್ಲವೆಂದು ಹೇಳಿರುತ್ತಾನೆ ಬೆಟ್ಟದಪುರದಲ್ಲಿರುವ ಶ್ಯಾನುಭೋಗ ಮಲ್ಲಣ್ಣನವರು ಬಟ್ಟೆಒವೆ ಸಿಕ್ಕಿರುವದು ತಮ್ಮದೆಂದು ಆವರ ಕೈಫಿಯತ್ತಿನಲ್ಲಿ ಹೇಳುತ್ತಾರೆ

ಇಂಡಿಯಾ ದೇಶದ ವೃತ್ತಾಂತಗಳು

ಸುಮಾರು ೨,೫೦೦ ಮೈಲಿ ದೂರದಲ್ಲಿ ಭೂಕಂಪ ಸಂಭವಿಸಿದಂತೆ ಕಳೆದ ೭ ನೇ ತಾರೀಖು ಸಿಂಲಾ ಪಟ್ಟಣದಲ್ಲಿರುವ ಖಗೋಳಶಾಸ್ತ್ರಾಲಯದಲ್ಲಿ ಸೂಚನೆಯಾಗಿರುತ್ತದೆ

*****

ಕಲ್ಕತ್ತಾ ಪಟ್ಟಣದಲ್ಲಿ ಕಳೆದ ಭಾನುವಾರ ಸಾಯಂಕಾಲ ಒಂದು ಭಾರೀ ನಾರಿನ ಕಾರ್ಖಾನೆಗೆ ಬೆಂಕಿ ಬಿದ್ದು ಸುಮಾರು ೫೦ ಸಾವಿರ ರೂಪಾಯಿನ ನಾರಿನ ಗಟ್ಟಾಗಳು ಸುಟ್ಟುಹೋದವು

*****

ಪಂಜಾಬ್ ಗವರ್ನಮೆಂಟಿನವರು ತಮ್ಮ ದೇಶಕ್ಕೆ ಸಾಕಾಗುವಷ್ಟು ಶಿಪ ಬಿನ ಹಾಳನ್ನು ತಯಾರುಮಾಡುವ ಒಂದು ಕಾರ್ಖಾನೆಯನ್ನು ಪಂಜಾಬಿನಲ್ಲಿಯೇ ಸ್ಥಾಪಿಸಿಕೊಳ್ಳಬೇಕೆಂಬ ವಿಷಯವನ್ನು ಆಲೋಚಿಸುತ್ತಿದ್ದಾರೆ

*****

ಪೂರ್ವ ಬಂಗಾಳದಲ್ಲಿ ೩,೬೪ ಜನರು ಕ್ಷಾಮ ಬಾಧೆಯಿಂದ ಸರ್ಕಾರದವರ ಪೋಷಣೆಯಲ್ಲಿದ್ದಾರೆ ಅಕ್ಕಿಯ ಧಾರಣೆಯು ಇಳಿಯುತ್ತಾ ಇದೆ ಬಂಗಾಳಾದಲ್ಲಿ ಒಟ್ಟು ೫೨,೦೫೦ ಜನರು ಇನ್ನೂ ಕ್ಷಾಮ ಪೀಡಿತರಾಗಿರುವರು

*****

ರೆವಿನ್ಯೂ ಮತ್ತು ಪೋಸ್ಟಾಫೀಸಿನ ಕೆಲಸಗಳಿಗೆ ಉಪಯೋಗಿಸಲ್ಪಡತಕ್ಕ ಅಂಗಡಿಯ ಮತ್ತು ಬಂಡಾರದ ಹೊಸ ತರಹಾ ಸ್ಟಾಂಪುಗಳು ಸೀಮೆಯಿಂದ ಹಿಂದೂಸ್ಥಾನಕ್ಕೆ ಬಹಳವಾಗಿ ಬಂದು ಅನೇಕ ಕಡೆಗಳಲ್ಲಿ ಉಪಯೋಗಿಸಲ್ಪಡುತ್ತವೆ

*****

ಅಫ್ಘಾನಿಸ್ಥಾನದ ಅಮೀರರಾದ ಹಬೀಬುಲ್ಲಾಖಾನರವರು ಕಳೆದ ಬುಧವಾರ ಲಂಡಿಕೋಟಾಲ್ ಪಟ್ಟಣವನ್ನು ಸೌಖ್ಯವಾಗಿ ತಲುಪಿದರು ಅವರ ಜೊತೆಯಲ್ಲಿ ಏಳು ಜನ ಸರದಾರರೂ ಒಬ್ಬ ವೈದ್ಯನೂ ಇರುತ್ತಾರೆ ಅವರ್ಯಾರೆಂದರೆ ಮಹಮದ್ ಆಸೀಫ್‌ಖಾನ್, ಯೂಸೂಫ್‌ಖಾನ್, ಇಸ್ಮೈಲ್‌ಖಾನ್, ಸುಲೇಮಾನ್‌ಖಾನ್, ಅಲ್ಲಿ ಅಹಮದ್‌ಖಾನ್, ಫತ್ತೆ ಮಹಮದ್‌ಖಾನ್ ಮಹಮದ್ ರಫೀಕ್‌ಖಾನ್, ಗುಲಾಮ್ ನಬಿಖಾನ್

ನವಾನಗರದ ಮಹಾರಾಜರು ಈಚೆಗೆ ತೀರಿಹೋದರಷ್ಟೆ. ರಣಜಿ ಸಿಂಗ್‌ಜಿಯವರಿಗೆ ಪಟ್ಟವಾಗಬೇಕೆಂದು ಕತ್ಯವಾಡದ ಜನಗಳು ಅಧಿಕವಾಗಿ ಕಾತರಪಡುತ್ತಿದ್ದಾರೆ. ಈಗ ಹೊಡೆದಾಡುತ್ತಿರುವವರಲ್ಲಿ ರಣಜಿತ್‌ಸಿಂಗ್‌ರವರೇ ಈ ಪದವಿಗೆ ಅರ್ಹರಾಗಿರುವಂತೆ ತೋರುತ್ತದೆ.

****

ಥರ್ಸ್ಟನ್ ಎಂಬೊಬ್ಬ ಮಹಾ ಯುಕ್ತಿಶಾಲೀ ಆಟಗಾರನು ಕಳೆದ ವಾರ ಕಲ್ಕತ್ತೆಯಲ್ಲಿ ಮೂರು ದಿನ ತನ್ನ ಕುಶಲ ವಿದ್ಯೆಯನ್ನು ಆಡಿ ತೋರಿಸಿದನು. ಸಾವಿರಾರು ಜನರು ನೋಡಿ ಸಂತೋಷಪಟ್ಟರು. ಈ ಆಟಗಾರನು ಮೂರು ದಿನಗಳಲ್ಲೂ ತನಗೆ ಉತ್ಪತ್ತಿಯಾದ ಮೂರು ಎರಡು ಸಾವಿರ ರೂಪಾಯನ್ನು ಸ್ವದೇಶೀ ವಿದ್ಯಾಭ್ಯಾಸಕ್ಕಾಗಿ ಬಂಗಾಳಿ ದೊಡ್ಡ ಮನುಷ್ಯರ ವಶಕ್ಕೆ ಕೊಟ್ಟರು ...ನೆ

****

ಹಿಂದುಸ್ಥಾನದಿಂದ ಬಂಕರ್ (ಟಾಪು) ಸಜಾ ಅನುಭವಿಸುವುದಕ್ಕಾಗಿ ಖೈದಿಗಳನ್ನು ಅಂಡಮಾನ್ ದ್ವೀಪಕ್ಕೆ ಕಳುಹಿಸುವರು. ಇದು ...ಗೆ ಇಂಡಿಯಾ ಗವರ್ನಮೆಂಟಿನವರು ಈ ದ್ವೀಪದ ಮೇಲ್ವಿಚಾರಣೆಯನ್ನು ವಹಿಸಿಕೊಂಡಿದ್ದರು. ಇನ್ನು ಮುಂದೆ ಇದು ಬರ್ಮಾ ಅಧಿಕಾರಕ್ಕೆ ಸೇರಿಸಲ್ಪಡುವದೆಂದೂ, ಅಲ್ಲಿನ ಲೆಫ್ಟಿನೆಂಟ್ ಗವರ್ನರವರು ... ಪರ್ಯಟನೆಗಾಗಿ ಈ ವಾರ ಅಲ್ಲಿಗೆ ಹೋಗುತ್ತಾರೆಂದೂ ತಿಳಿದು ಬಂದಿದೆ

****

ದೆಹಲಿಯ ಮಹಮ್ಮದೀಯ ಚಕ್ರವರ್ತಿಗಳ ಪೈಕಿ ಬಹದೂರ್‌ಷಹ ...ನೇ ಕೊನೆಯವನು. ಈತನ ಮೊಮ್ಮಗನು ಈಗ ಆಲಿಘರ್ ...ದ ಮಹಮ್ಮದೀಯ ವಿದ್ಯಾಶಾಲೆಯಲ್ಲಿ ವಿದ್ಯಾರ್ಥಿ ನಿಲಯದ ...ಟೆಂಟ್ಸ್ ಹೋಂ) ಲ್ಲಿ ಪಾಕಶಾಲಾಧ್ಯಕ್ಷನಾಗಿದ್ದಾನೆ. ಈತನ ...ರು ಚಕ್ರವರ್ತಿ ಪದವಿಯನ್ನನುಭವಿಸಿದ್ದಕ್ಕೋಸ್ಕರ ಈತನಿಗೆ ...ಯಾ ಗವರ್ನಮೆಂಟಿನವರು ತಿಂಗಳಿಗೆ ಐದು ರೂಪಾಯಿ ಪೆನ್ಷನ್ ...ಕೊಡುತ್ತಿದ್ದಾರೆ

****

ಹೈದರಾಬಾದ್ ಸಂಸ್ಥಾನದಲ್ಲಿ ಕಳೆದ ಅಕ್ಟೋಬರು ೬ ರಿಂದ ... ವರುಷದ ಅಕ್ಟೋಬರ್ ೫ರ ವರೆಗಿನ ಒಂದು ಸಾಲಿನ ಜಮಾ...ನ್ನು ಖಜಾಂಚಿಯವರು ಪ್ರಕಟಿಸಿರುತ್ತಾರೆ. ಈಗ ಖಜಾನೆಯಲ್ಲಿ ...ರು ಕೋಟಿ ಹದಿನೇಳು ಲಕ್ಷದ ಐವತ್ತು ಸಾವಿರ ರೂಪಾಯಿ ...ತ ಇರುತ್ತದೆ. ಚಾಲ್ತಿ ಸಾಲಿನ ರಾಜಾದಾಯ ನಾಲ್ಕು ಕೋಟಿ ...ತ್ತು ನಾಲ್ಕು ಲಕ್ಷ ರೂಪಾಯಿ, ಖರ್ಚು ನಾಲ್ಕು ಕೋಟಿ ನಲವ...ತ್ತು ಲಕ್ಷ ರೂಪಾಯಿ

****

ಅನಂತಪುರ ಡಿಸ್ಟ್ರಿಕ್ಟು ಕಲ್ಯಾಣದುರ್ಗವೆಂಬ ಪಟ್ಟಣದಲ್ಲಿ ... ಸ್ಕೂಲಿನ ಉಪಾಧ್ಯಾಯನು ತನ್ನ ನೆರೆಹೊರೆಯವರ ನಡತೆ...ಯ ದೋಷಾರೋಪಣೆ ಮಾಡುವ ಹಾಡುಗಳನ್ನು ಕವನಮಾಡಿ ...ಅವನ್ನು ತನ್ನ ಸ್ಕೂಲಿನ ಕೆಲವು ಹುಡುಗರಿಗೆ ಪಾಠ ಮಾಡಿಸಿ ...ಬೀದಿಗಳಲ್ಲಿ ಹಾಡುವಂತೆ ಅವರನ್ನು ಕಳುಹಿಸಿದನು. ಇದು ಸರ್ಕಾರದವರಿಗೆ ತಿಳಿದುಬಂದು ಆ ಉಪಾಧ್ಯಾಯನನ್ನು ಕ್ರಿಮಿನಲ್ ವಿಚಾರಣೆಗೆ ಗುರಿಮಾಡಿರುತ್ತಾರೆ

****

...ಅಲಹಾಬಾದಿನಲ್ಲಿ ಇಬ್ಬರು ಬಹಳ ಉತ್ತಮವಾದ ದೂರದರ್ಶಕ ಯಂತ್ರದ ಸಹಾಯದಿಂದ ಸೂರ್ಯನನ್ನು ನೋಡಿದರು. ಆಗ ...ನು ಅಸ್ತಮಯಿಸುವ ಕಾಲವಾಗಿದ್ದುದರಿಂದ ಸೂರ್ಯನ ಮುಂದ...ಮೇಲಿರುವ ಬಹಳ ದೊಡ್ಡದಾದ ಒಂದು ಮಚ್ಚೆಯು ಕಂಡು ... ಯೂರೋಪ್ ಖಂಡದಲ್ಲೂ ಪ್ರಪಂಚದ ಇತರ ಕಡೆಗಳಲ್ಲೂ ...ವಾಗಿರುವ ಕೆಟ್ಟ ಹವಾಕ್ಕೆ ಈ ಮಚ್ಚೆಯೇ ಕಾರಣವೆಂದು ...ಲ್ಲ ಹೇಳುತ್ತಿದ್ದಾರೆ

****

ಸಿಲೋನ್ (ಲಂಕಾ) ದ್ವೀಪದ ಸರ್ಕಾರದ ಆಸ್ಪತ್ರೆಗಳಲ್ಲಿ ರೋಗಿಗಳ ಬಟ್ಟೆಗಳನ್ನು ಒಗೆಯುವ ಖರ್ಚು ಕಡಿಮೆ ಮಾಡಬೇಕೆಂದು ...ಸಿ ಅಲ್ಲಿನ ಬಂದೀಖಾನೆಯವರಿಂದ ಬಟ್ಟೆ ಒಗಿಸಬೇಕೆಂದು ಏರ್ಪಾಡು ಮಾಡಿರುವದನ್ನು ಗವರ್ನಮೆಂಟಿನವರು ಒಪ್ಪಿಕೊಂಡಿರುತ್ತಾರೆ ...ದ್ಯಾವಲಾಕ್‌ರವರ ಆಸ್ಪತ್ರೆಯಲ್ಲಿ ಈ ಏರ್ಪಾಡು ಜಾರಿಗೆ ಬಂದು ತೃಪ್ತಿಕರವಾಗಿ ನಡೆದರೆ ಇತರ ಆಸ್ಪತ್ರೆಗಳಲ್ಲೂ ಇದೇ ಪದ್ಧತಿಯನ್ನು ಅನುಸರಿಸುವರು

****

ಯೋಧ್ಯಾ ಡಿಸ್ಟ್ರಿಕ್ಟಿನ ಸೆಂಕಿಪುರದ ತಹಸೀಲ್‌ದಾರ್ ಮಗ...ಮಹಮದ್ ಕರೀಂ ಎಂಬವನು ಇಂಗ್ಲಂಡಿನ ಬ್ಯಾರಿಸ್ಟರ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದನು. ಇವನ ತಾಯಿತಂದೆಗಳು ಇವನಿಗೆ ...ಕ್ಕೆ ವರುಷವಾಗಿರುವಾಗಲೇ ಇಂಗ್ಲಾಂಡಿಗೆ ಕಳುಹಿಸಿದರು. ...ಮಗನಾದರೂ, ಚಿಕ್ಕ ವಯಸ್ಕನಾದರೂ ತಮ್ಮ ಮಮತೆಯನ್ನು ...ಬಿಟ್ಟು ದೂರ ದೇಶಕ್ಕೆ ಕಳುಹಿಸಿದ ಅವನ ತಂದೆತಾಯಿಗಳನ್ನು ಹೊಗಳದಿರಲು ತೀರದು.

****

... ಸಲ ಕಲ್ಕತ್ತೆಯಲ್ಲಿ ನಡೆದ ನ್ಯಾಷನಲ್ ಕಾಂಗ್ರೆಸ್ ಎಂಬ ...ಯ ಮಹಾ ಸಭೆಗೆ ಅಧ್ಯಕ್ಷರಾಗಿದ್ದು ಸಭಾಕಾರ್ಯಗಳನ್ನು ...ಕವಾಗಿ ನಿರ್ವಹಿಸಿದ ದಾದಾಭಾಯಿ ನೌರೋಜೆಯವರು ಕಳೆದ ...ಬೊಂಬಾಯಿಗೆ ಬಂದು ತಮ್ಮ ರಕ್ತಸಂಬಂಧಿಗಳ ಮತ್ತು ದೊಡ್ಡ ಮನುಷ್ಯರ ಸತ್ಕಾರಾದಿಗಳನ್ನು ಸ್ವೀಕರಿಸುತ್ತಿದ್ದಾರೆ ...ನಾಳೆಯ ದಿನ ಬೊಂಬಾಯಿನಲ್ಲಿ ಜಹಜು ಹತ್ತಿ ವಿಲಾಯತಿಗೆ ...ಣ ಮಾಡುವರೆಂದು ವರ್ತಮಾನವಿದೆ

****

...ರ್ಮಾದಲ್ಲಿ ಪೊಂಜಿಒಕಾಮವೆಂಬವನೂ ಇನ್ನೂ ಹದಿಮೂರು ... ಸೇರಿ ಬರ್ಮಾ ಗವರ್ನಮೆಂಟಿನ ಮೇಲೆ ಯುದ್ಧ ಮಾಡಬೇಕೆಂದಿದ್ದು ಸರ್ಕಾರದವರಿಗೆ ತಿಳಿದು ಬಂದು ವಿಚಾರಣೆ ಮಾಡಿದಾಗ ...ನಿಜವೆಂದು ಗೊತ್ತಾಯಿತು. ನೆಷನ್ಸ್ ಜಡ್ಜರು ವಲಾ ಮೂರು ವರುಷ ಕಠಿಣ ಸಜೆಯಿಂದ ಅಪಾರಣಾಂತರದ ಒಂದಿಗೂ ಸಜಾ ಶಿಕ್ಷೆಯನ್ನು ವಿಧಿಸಿದರು. ಅಪರಾಧಿಗಳು ಅಪೀಲ್ ಮಾಡಿದಾದ ಕಳಗಣ ಕೋರ್ಟಿನವರು ವಿಧಿಸಿದ್ದ ಶಿಕ್ಷೆಯನ್ನೇ ಮುಂಜೂರು ಮಾಡಿ ಮೊಕದ್ದಮೆಯನ್ನು ವಜಾ ಮಾಡಿರುತ್ತಾರೆ

****

ಅಲ್ಲಹಾಬಾದಿನಲ್ಲಿರುವ ಮೆ॥ ಸರ್ವಾಧಿಕಾರಿ ಎಂಬ ಬ್ಯಾರಿಸ್ಟರು ತಾನು ಪ್ರಕಟಿಸುವ ಮಾಸ ಪತ್ರಿಕೆಯಲ್ಲಿ ಅಲ್ಲಿನ ಹೈಕೋರ್ಟು ಜಡ್ಜಿಗಳ ಮೇಲೆ ಸಲ್ಲದ ಮತ್ತು ಅಪಮಾನಕರವಾದ ಆರೋಪಣೆಗಳನ್ನು ಬರೆದದ್ದಕ್ಕಾಗಿ ಹೈಕೋರ್ಟು ಜಡ್ಜಿಗಳು ಆತನಿಗೆ ವಿಚಾರಣೆಯಿಂದ ನಾಲ್ಕು ವರುಷ ವಕಾಲತ್ತು ನಡಸಕೂಡದೆಂಬ ಶಿಕ್ಷೆಯನ್ನು ವಿಧಿಸಿದರಷ್ಟೆ. ಅದರ ಮೇಲೆ ಆತನು ವಿಲಾಯತಿಯ ಪ್ರಿವಿ ಕೌನ್ಸಿಲ್ ಎಂಬ ಪ್ರಥಮ ನ್ಯಾಯಸ್ಥಾನದಲ್ಲಿ ಅಪೀಲ್ ಮಾಡಿಕೊಂಡಿದ್ದನು. ಆದರೆ ಅವರೂ ಕೂಡ ಕೆಳ ಕೋರ್ಟಿನ ತೀರ್ಪನ್ನೇ ಖಾಯಂ ಮಾಡಿರುತ್ತಾರೆ

****

ಸೂರತ್ ಪಟ್ಟಣದಲ್ಲಿ ಮ್ಯುನಿಸಿಪಾಲಿಟಿಯವರು ಶೀಮೆಯಿಂದ ಅಲ್ಲಿನ ವರ್ತಕರು ತರಿಸುವ ಹೊಸ ಬಟ್ಟೆಗಳ ಮೇಲಣ ಆಕ್ಟ್ರಾಯಿ ಸುಂಕದ ದರವನ್ನು ಹೆಚ್ಚು ಮಾಡಿದರು. ಇದನ್ನು ನೋಡಿ ಅಲ್ಲಿನ ೫೦೦ ಮಂದಿ ಭಾರೀ ಬೇಹಾ ವರ್ತಕರು ತಮ್ಮ ಅಂಗಡೀ ಬಾಗಿಲುಗಳನ್ನು ಮುಚ್ಚಿಬಿಟ್ಟು, ಇನ್ನು ಮುಂದೆ ತಮ್ಮ ಪೈಕಿ ಯಾರೊಬ್ಬರೂ ಶೀಮೆಯಿಂದ ಹೊಸ ಬಟ್ಟೆಗಳನ್ನು ತರಿಸಲೇ ಕೂಡದೆಂದಲೂ ಈ ಕಟ್ಟಳೆಯನ್ನು ಮೀರುವ ಪ್ರತಿಯೊಬ್ಬ ವರ್ತಕನೂ ತಮ್ಮ ವರ್ತಕ ಸಂಘಕ್ಕೆ ೫೦೦ ರೂಪಾಯಿನಂತೆ ದಂಡ ತೆರಬೇಕೆಂದಲೂ ಕಟ್ಟು ಮಾಡಿಕೊಂಡಿದ್ದಾರೆ

****

ಝಾಂಸಿ ಪಟ್ಟಣದಲ್ಲಿ ವಿಧವೆಯರ ಪುನರ್ವಿವಾಹ ಮಾಡುವದಕ್ಕೆ ಒಂದು ಸಂಘವು ಏರ್ಪಡಾಗಿರುವದಷ್ಟೆ. ಕಳೆದ ವಾರ ಈ ಸಂಘದವರು ಶ್ರೀಮತಿ ಮಾಯಾ ದೇವಿ ಎಂಬ ವಿಧವೆಗೂ ಲಾಲಾ ಟೀಕಾರಾಮನೆಂಬವನಿಗೂ ಮದುವೆಯನ್ನು ನೆರವೇರಿಸಿದರು. ಪಂಡಿತ ಬಾಲದೇವದತ್ತ ಶರ್ಮನೆಂಬ ಪುರೋಹಿತನು ವಿವಾಹ ಕರ್ಮಗಳನ್ನು ಮಾಡಿಸಿದನು. ಅನಂತರ ಆ ಸಂಘದ ಅಧ್ಯಕ್ಷರಾದ ಬಾಬು ನಾನಕ್ ಚಂದ್‌ರವರು ಹಿಂದೂ ವಿಧವೆಯರ ಘೋರವಾದ ದುಃಖ ಸ್ಥಿತಿಯನ್ನು ಕುರಿತು ಒಂದು ಉಪನ್ಯಾಸವನ್ನು ಮಾಡಿದರು. ಈ ಮದುವೆಗೆ ಸುಮಾರು ನಾನೂರು ಜನರ ವರೆಗೂ ಸೇರಿದ್ದರು

****

ಮುರ್ಷದಾಬಾದಿನ ನವಾಬರು ಕಾಲವಾದರಷ್ಟೆ. ಅಲ್ಲಿನ ಹಿಂದೂ ಮತ್ತು ಮಹಮ್ಮದೀಯ ಪ್ರಜೆಗಳು ಸಭೆ ಸೇರಿ ತಮ್ಮ ದುಃಖವನ್ನು ಪ್ರಕಾಶ ಪಡಿಸಿದರು. ಸಭಾ ಮಂದಿರವು ಜನರಿಂದ ತುಂಬಿ ತುಳುಕುತ್ತಿತ್ತು. ಅನೇಕರು ನವಾಬರ ವಿಷಯವಾಗಿ ಭಾಷಣ ಮಾಡಿದರು. ಸಭಿಕರೆಲ್ಲರೂ ತಮ್ಮ ವ್ಯಸನವನ್ನು ಈಗಿನ ನವಾಬರಾದ ವಾಸಫ್ ಆಲಿ ಮಿರ್ಜಾರವರಿಗೆ ಲಿಖಿತಮೂಲಕ ತಿಳಿಸಬೇಕೆಂದು ಅಭಿಪ್ರಾಯಪಟ್ಟದ್ದರಿಂದ ಸಭೆಯ ಅಧ್ಯಕ್ಷರು ಅಲ್ಲಿ ನಡೆದ ಸಂಗತಿಗಳನ್ನು ಕಾಣಿಸಿ ನವಾಬರವರಿಗೆ ಕಾಗದವನ್ನು ಬರೆದಿರುತ್ತಾರೆ. ದುಃಖರಮನಾರ್ಥವಾದ ಕಾಗದಗಳು ಎಲ್ಲಾ ಕಡೆಗಳಿಂದಲೂ ನವಾಬರವರಿಗೆ ಬಂದು ತುಲುಪುತ್ತಲಿವೆ

****

ಕಲ್ಕತ್ತೆಯಲ್ಲಿ ಫೋರ್ಜರಿ ಮಾಡಿದ್ದ ಪತ್ರವನ್ನು ನಿಜವಾದದ್ದೆಂದು ವಾದಿಸಿದ್ದಕ್ಕಾಗಿ ಝಹೀರುದ್ದೀನ್ ಎಂಬ ಲಾಯರನ್ನು ಕ್ರಿಮಿನಲ್ ವಿಚಾರಣೆಗೆ ಗುರಿಮಾಡಿದ್ದರು. ಅವನು ಬಂದೀಖಾನೆಯಲ್ಲಿದ್ದಾಗ ಸೇನಗುಪ್ತನೆಂಬ ಮತ್ತೊಬ್ಬ ಲಾಯರಿನ ಹೆಸರನ್ನು ಬರೆದು ಪೋಸ್ಟಾಫೀಸಿನಿಂದ ರಶೀತಿ ಬುಕ್ಕನ್ನು ತರಿಸಿಕೊಂಡನು. ಅವನ ಮನೆಯನ್ನು ಹುಡುಕಿದಾಗ ಪೋಸ್ಟಾಫೀಸಿಗೆ ಬರೆದಿದ್ದಂತೆ ಇನ್ನೆರಡು ಕಾಗದಗಳು ಸಿಕ್ಕಿದವು. ಇದಲ್ಲದೆ ಅಪರಾಧಿಯು ಗುಪ್ತನ ಹೆಸರಿನಲ್ಲಿ ಎಷ್ಟು ಹಣ ವಿದೆಯೆಂದು ಕಳೆದ ಜೂನ್ ತಿಂಗಳಲ್ಲಿ ವಿಚಾರಿಸಿದನು. ಈಚೆಗೆ ಈ ಮೊಕದ್ದಮೆಯು ವಿಚಾರಣೆಯಾಗಿ ಆ ಲಾಯರನ್ನು ತಪ್ಪಿತಸ್ಥನಲ್ಲವೆಂದು ತೀರ್ಮಾನಿಸಿ ಖುಲಾಸ್ ಮಾಡಿರುತ್ತಾರೆಂಬದಾಗಿ ತಂತೀ ವರ್ತಮಾನ ಬಂದಿದೆ

****

ಮದರಾಸಿನಲ್ಲಿ ಅರ್ಬತ್‌ನಾಟ್ ಎಂಬ ಭಾರೀ ಬ್ಯಾಂಕು ದಿವಾಳಿಯಾಯಿತಷ್ಟೆ. ಅದರ ದಿವಾಳಿ ಪಟ್ಟಿಯು ಮದರಾಸ್ ಹೈಕೋರ್ಟಿನಲ್ಲಿ ಹಾಜರ್ಮಾಡಲ್ಪಟ್ಟಿದೆ. ಈ ಬ್ಯಾಂಕಿನಲ್ಲಿ ಡಿಪಾಜಟ್ಟು ಹಣ ಹಾಕಿದವರು ಸುಮಾರು ೭,೦೦೦ ಜನರು. ಒಟ್ಟು ಬ್ಯಾಂಕಿನದೇಣೆ ಮೊಬಲಗು ೩,೦೧,೬೭,೫೯೮ ರೂಪಾಯಿ. ಬ್ಯಾಂಕಿನಲ್ಲಿ ಸಿಕ್ಕಿರುವ ಒಟ್ಟು ಆಸ್ತಿ ೫,೩೪,೫೪,೬೯೦ ರೂಪಾಯಿ. ಈ ಪೈಕಿ ಖಂಡಿತವಾಗಿ ವಸೂಲಾಗತಕ್ಕ ಮೊಬಲಗು ೧,೫೪,೭೬,೧೯೮ ರೂಪಾಯಿ, ಅನುಮಾನಾಸ್ಪದವಾದ ಸಾಲ ೬ ಲಕ್ಷವೂ ೫೧ ಸಾವಿರ ರೂಪಾಯಿ. ವಸೂಲಾಗದಿರುವ ಸಾಲದ ಮೊಬಲಗು ೯೩ ಲಕ್ಷವೂ ೪೪ ಸಾವಿರ ರೂಪಾಯಿ. ಅಂದರೆ, ಮೇಲ್ಕಂಡ ಡಿಪಾಜಟ್ಟುದಾರರಿಗಲ್ಲಾ ಹಂಚುವದಕ್ಕೆ ಸಿಕ್ಕತಕ್ಕ ಹಣ ೧,೩೭,೫೩,೧೯೮ ರೂಪಾಯಿ

****

ಆಗ್ರಾ ಮತ್ತು ಅಯೋಧ್ಯೆಗಳಲ್ಲಿ ರಿಜಿಸ್ಟರ್ ಮಾಡಿದ್ದ ಲಕೋಟೆಗಳಿಂದ ನೋಟುಗಳೂ ಭಾಂಗಿಗಳಿಂದ ಬೆಲೆಯುಳ್ಳ ಪದಾರ್ಥಗಳೂ ಕಳವಾದವೆಂದು ಅನೇಕರು ಟಪ್ಪಾಲಾಫೀಸಿನವರಿಗೆ ತಿಳಿಸಿದ ನಂತರ ಅವರು ಕಳ್ಳರನ್ನು ಪತ್ತೆ ಮಾಡುವದಕ್ಕೆ ಪೋಲೀಸಿನವರನ್ನು ನೇಮಿಸಿದರು. ಹೀಗೆ ಕಳ್ಳತನವು ಬಹು ಕಾಲದಿಂದಲೂ ನಡೆಯುತ್ತಾ ಬಂದಿರುವದರಿಂದ ಹತ್ತು ಸಾವಿರ ರೂಪಾಯಿನ ವರೆಗೂ ಹಣವೂ ಒಡವೆಗಳೂ ಜನರಿಗೆ ನಷ್ಟವಾಗಿರುತ್ತೆ. ಆಗ್ರಾ ಮತ್ತು ಲಖ್ನೋ ನಗರಗಳ ನಡುವೆ ಈ ದುಷ್ಕಾರ್ಯವು ನಡೆಯುತ್ತದೆಂದು ತಿಳಿದುಬಂದದ್ದರಿಂದ ಆ ಭಾಗದ ಟಪ್ಪಾಲು ಬಸ್ತಿನ ಗಾಡಿಗಳಲ್ಲಿ ಸಂಚಾರಮಾಡುವ ಮುನಿಲಾಲ್ ಎಂಬ ನೌಕರನನ್ನು ಹಿಡಿದು ಅವನ ಮನೆಯಲ್ಲಿ ಹುಡುಕಿದಾಗ ಕೆಲವು ನೋಟುಗಳೂ ಒಡವೆಗಳೂ ಸಿಕ್ಕಿದವು. ಅವನನ್ನು ಈಗ ಅಲ್ಲಹಾಬಾದಿನಲ್ಲಿ ವಿಚಾರಣೆ ಮಾಡುತ್ತಿದ್ದಾರೆ.

ತಿರುವಾಂಕೂರು (ಅನಂತಶಯನ) ಸಂಸ್ಥಾನದ ಶ್ರೀಮೂಲಂ ಪ್ರಜಾ ಪ್ರತಿನಿಧಿ ಸಭೆಯು ಕಳೆದ ನಾಲ್ಕನೇ ತಾರೀಖಿನಿಂದ ಪ್ರಾರಂಭವಾಗಿ ಆರು ದಿನಗಳ ವರೆಗೆ ನಡೆಯಿತು. ದಿವಾನ್ ಮೆ॥ ರಾಜಗೋಪಾಲಾಚಾರಿಯವರು ಕಳೆದ ಸಾಲಿನ ಜಮಾ ಖರ್ಚನ್ನೂ ಸಂಸ್ಥಾನದ ಸ್ಥಿತಿಗತಿಯನ್ನೂ ಪ್ರತಿನಿಧಿಗಳಿಗೆ ಓದಿ ತಿಳಿಸಿದರು. ಈ ವರುಷ ಪ್ರತಿನಿಧಿಗಳು ವಿಶೇಷ ಉತ್ಸಾಹದಿಂದ ಚರ್ಚೆಗಳನ್ನು ನಡಿಸಿದರು. ಕೆಲವು ಸಂದರ್ಭಗಳಲ್ಲಿ ದಿವಾನರವರು ಮೆಂಬರುಗಳ ವಾಗ್ಬಂಧನ ಮಾಡಿ ಚರ್ಚೆ ನಿಲ್ಲಿಸಿದರು. ಪ್ರತಿನಿಧಿಗಳೆಲ್ಲಾ ಈ ಸಮಾಜವನ್ನು ತಮ್ಮ ಮಹಾರಾಜರವರು ಈ ವರುಷ ನಡೆಯುವದಕ್ಕೆ ಅವಕಾಶ ಕೊಟ್ಟದ್ದಕ್ಕೋಸ್ಕರ ಕೃತಜ್ಞತೆ, ರಾಜ ಭಕ್ತಿ ಪ್ರೀತಿ ಸಂತೋಷಗಳನ್ನು ಶ್ರೀಮನ್ ಮಹಾರಾಜರವರಿಗೆ ಅರಿಕೆ ಮಾಡಬೇಕೆಂದು ದಿವಾನರವರನ್ನು ಸಭೆಯಲ್ಲಿ ಕೇಳಿಕೊಂಡದಕ್ಕೆ ದಿವಾನರವರು ಅದಾಗಲಾರದೆಂದು ಹೇಳಿಬಿಟ್ಟರು. ಹೀಗೆ ಅಪ್ಪಣೆ ಕೊಡಲು ಕಾರಣವೇನಿತ್ತೋ ಗೊತ್ತಾಗುವುದಿಲ್ಲ. ದಿವಾನರವರ ರಿಪೋರ್ಟಿನಿಂದ ಅನಂತಶಯನ ಸಂಸ್ಥಾನದ ಖಜಾನೆಯ ಸ್ಥಿತಿಯು ತೃಪ್ತಿಕರವಾಗಿಲ್ಲವೆಂದು ಕಂಡು ಬರುತ್ತದೆ. ಕಳೆದ ವರ್ಷ ರಾಜಾದಾಯಕ್ಕಿಂತಲೂ ಖರ್ಚು ಬಾಬು ಏಳು ಲಕ್ಷ ರೂಪಾಯಿ ವರೆಗೆ ಜಾಸ್ತಿಯಾಯಿತೆಂದೂ, ಚಾಲ್ತಿ ವರುಷದ ಜಮಾ ಖರ್ಚಿನ ಅಂದಾಜು ಪಟ್ಟಿಯ ಪ್ರಕಾರ ಆದಾಯವು ವ್ಯಯಕ್ಕಿಂತಲೂ ೩—೪ ಲಕ್ಷ ರೂಪಾಯಿ ತನಕ ಕಡಿಮೆಯಾಗುವದೆಂದೂ ತಿಳಿದು ಬರುವುದು.

ವಿದೇಶ ವರ್ತಮಾನಗಳು.

ರಷ್ಯಾ ರಾಜಧಾನಿಯಾದ ಸೇಂಟ್ ಪೀಟರ್ಸ್‌ಬರ್ಗಿನಲ್ಲಿರುವ ಭಾರೀ ಬ್ಯಾಂಕಿಗೆ ಹನ್ನೆರಡು ಮಂದಿ ನುಗ್ಗಿ ಒಳಗೆ ಖಜಾನೆ ಕೋಣೆಯಲ್ಲಿದ್ದ ಎಂಟು ಜನ ಗುಮಾಸ್ತರನ್ನೂ ಹೆದರಿಸಿ ಸೊಲ್ಲೆತ್ತಿದರೆ ಕೊಂದುಬಿಡುತ್ತೇವೆಂದು ಪಿಸ್ತೂಲು ಬಾಮ್ಬಾಂಬು ತೋರಿಸಿ, ಖಜಾನೆಯಲ್ಲಿದ್ದ ಎರಡು ಲಕ್ಷರೂಪಾಯಿನ ನಗ ನಾಣ್ಯಗಳನ್ನು ಸರ್ಕಾರಿ ಪತ್ರಗಳನ್ನೂ ಹೊತ್ತುಕೊಂಡು ಓಡಿಹೋದರು. ಆ ಕೂಡಲೇ ಅವರನ್ನು ಹಿಡಿಯಬೇಕೆಂದು ಪೋಲೀಸಿನವರು ಅವರ ಬೆನ್ನುಹತ್ತಿ ಹೋದರು. ಆದರೂ ಹನ್ನೊಂದು ಜನ ಕಳ್ಳರು ಸಿಕ್ಕಲಿಲ್ಲ. ಹನ್ನೆರಡನೇ ಕಳ್ಳನಾದರೋ ಸಿಕ್ಕಿಬೀಳುತ್ತೇನೆಂದು ಹೆದರಿ, ಕೂಡಲೇ ಹಿಂತಿರುಗಿ ನಿಂತು ಪಿಸ್ತೂಲು ಬಾರ್ಮಾಡಿ ಒಬ್ಬ ಪೋಲೀಸಿನವನನ್ನು ಹೊಡೆದು ಕೊಂದು, ತಾನೂ ಆತ್ಮಹತ್ಯ ಮಾಡಿಕೊಂಡನು

****

ದಕ್ಷಿಣ ಆಫ್ರಿಕದಲ್ಲಿ ಸರ್ಕಾರಿ ಅಧಿಕಾರಿಗಳು ಹಿಂದುಸ್ಥಾನದಿಂದ ಹೋದ ಜನರಿಗೆ ನಾನಾ ವಿಧವಾದ ಕಿರುಕುಳವನ್ನಿಟ್ಟು ಅವರನ್ನು ಗುಲಾಮರಿಗಿಂತ ಕಡೆಯಾಗಿ ಕಾಣುತ್ತಿದ್ದಾರಷ್ಟೆ. ಆದರೆ ಅದೇ ಬ್ರಿಟಿಷ್ ರಾಜ್ಯಭಾರಕ್ಕೆ ಸೇರಿದ ಪೂರ್ವ ಆಫ್ರಿಕಾದಲ್ಲಿ ಸರ್ಕಾರದವರು ಹಿಂದುಸ್ಥಾನದ ವ್ಯವಸಾಯಗಾರರನ್ನೂ ಕೈಗಾರಿಕೆಯವರನ್ನೂ ಕರೆಸಿ, ಸಂಸಾರಗಳನ್ನು ನೂಡಬೇಕೆಂದು ಸಾಹಸಪಡುತ್ತಿದ್ದಾರೆ. ವಿಕ್ಟೋರಿಯಾ ನಿಯಾಂಜಾ ಎಂಬ ಸ್ವಭಾವಜನ್ಯವಾದ ಕೆರೆಯ ಬಳಿ ಪೂರ್ವ ಆಫ್ರಿಕಾ ರೈಲ್ ರಸ್ತೆಯನ್ನು ಹಾಕಿರುವರು. ಈ ರೈಲ್ ರಸ್ತೆಯ ಉದ್ದಕ್ಕೂ ಬಹು ಫಲವತ್ತಾದ ಜಮೀನುಗಳು ಅಪಾರವಾಗಿರುತ್ತವೆ. ಈ ಜಮೀನುಗಳನ್ನು ಉತ್ತು ಬೆಳೆ ಮಾಡಬೇಕೆಂದು ಹಿಂದುಸ್ಥಾನದಿಂದ ಜನಗಳನ್ನು ಸಂಸಾರ ಸಹಿತ ಕರೆಸಿಕೊಳ್ಳುತ್ತಿದ್ದಾರೆ. ಇವರನ್ನು ಚುನಾಯಿಸಿ ಕರೆದುಕೊಂಡು ಹೋಗುವುದಕ್ಕಾಗಿ ಆ ಸರ್ಕಾರದವರು ಮೆ॥ ಎ ಡಿ ವಾಲ್ಲರ್ ಎಂಬಾತನನ್ನು ಹಿಂದುಸ್ಥಾನಕ್ಕೆ ಕಳುಹಿಸಿ ಕೊಟ್ಟಿರುವರು

****

ರಷ್ಯಾ ರಾಜ್ಯದ ಕೆಲವು ಅಧಿಪತ್ಯಗಳಲ್ಲಿ ಈಗ ದುರ್ಭಿಕ್ಷವು ಪ್ರಾಪ್ತವಾಗಿರುವುದೂ, ಪ್ರಜೆಗಳು ನಾನಾ ಕಷ್ಟ ನಷ್ಟಗಳನ್ನನುಭವಿಸುತ್ತಿರುವುದೂ, ಸರ್ಕಾರದವರು ಅಪಾರ ಹಣವನ್ನು ಸ್ಯಾಂಕ್ಷನ್ ಮಾಡಿ ಧಾನ್ಯವನ್ನು ಕೊಂಡು ತರಿಸಿ ಬಡಬಗ್ಗರಿಗೂ ಕ್ಷಾಮ ಪೀಡಿತರಿಗೂ ಕೊಡಬೇಕೆಂದು ಹುಕುಂ ಕೊಟ್ಟಿರುವುದೂ, ಒಬ್ಬನೊಬ್ಬ ಅಧಿಕಾರಿಯೂ ಒಬ್ಬ ಕಂಟ್ರಾಕ್ಟರೂ ಏಕವಾಗಿ ಈ ಕ್ಷಾಮ ನಿವಾರಣಾರ್ಥವಾದ ದ್ರವ್ಯವನ್ನು ಅಪಹರಿಸಿ ತನಿಖೆ ನಡಿಯುತ್ತಿರುವುದೂ ನಮ್ಮ ವಾಚಕರಿಗೆ ತಿಳಿದಿದೆಯಷ್ಟೆ. ಕ್ಷಾಮ ಪೀಡಿತವಾದ ಪ್ರದೇಶದಲ್ಲಿ ಈಗ ತಾನೇ ಸಂಚಾರ ಮಾಡಿಕೊಂಡು ಬಂದಿರುವ ಲ್ಯಾವ್ ಎಂಬೊಬ್ಬ ರಷ್ಯಾ ರಾಜ ವಂಶೀಯನು ಬರೆಯುವದೇನಂದರೆ— ನಾನು ಸಮಾರಾದಿಂದ ಕಾಜಾನ್ ತನಕ ಎಲ್ಲಾ ಪ್ರದೇಶಗಳಲ್ಲೂ ಸಂಚಾರ ಮಾಡಿ ಬಂದಿರುತ್ತೇನೆ. ಈ ೪೦೦ ಮೈಲಿ ಫಾಸಲೆಗೆ ಒಳಪಟ್ಟ ಯಾವ ಗ್ರಾಮದಲ್ಲಾಗಲಿ ಮನುಷ್ಯರಿಗೆ ಆಹಾರವಿಲ್ಲ, ದನಗಳಿಗೆ ಮೇವಿಲ್ಲ. ೧೧ ಗ್ರಾಮಗಳಲ್ಲಿ ಜನರು ಮುಗ್ಗಲು ಧಾನ್ಯವನ್ನು ತಿಂದು ಕಾಯಿಲೆ ಬಿದ್ದು ನರಳುತ್ತಿದ್ದಾರೆ. ಉಳಿದ ಕಡೆಗಳಲ್ಲೆಲ್ಲಾ ಕ್ಷಾಮ ಪೀಡಿತರಿಗೆ ಗಿಡಗಳ ತೊಗಟೆಗಳೂ ಮನೆಯ ಮೇಲೆ ಹೊದ್ದಿಸಿಕೊಂಡಿರುವ ಹುಲ್ಲೂ ಆಹಾರವಾಗಿ ಪರಿಣಮಿಸಿರುವುವು. ಗೋಶಾಲೆಗಳ ಸೆಲೆಯೇ ಎಲ್ಲೂ ಕಾಣುವುದಿಲ್ಲ. ಎಲ್ಲಾ ಸತ್ತುಹೋದವು. ಹೊಟ್ಟೆಬಾಡಿಗೋಸ್ಕರ ಕೆಲವರು ಗೋಶಾಲೆಗಳನ್ನು ಅಮಾನದ ಬೆಲೆಗೆ ಮಾರುತ್ತಿದ್ದಾರೆ. ಕೆಲವು ಧರ್ಮಿಷ್ಠರು ಹಣವನ್ನು ಈ ಪ್ರಾಂತ್ಯಕ್ಕೆ ಕಳುಹಿಸಿದರು. ಆದರೇನು? ಧಾನ್ಯವೇ ಎಲ್ಲೂ ಸಿಕ್ಕದು. ಆ ಕಾರಣ ಜನರು ಹೊಟ್ಟೆಗಿಲ್ಲದೆ ಕಾಯಿಲೆಬಿದ್ದು ಸತ್ತು ಹೋಗುತ್ತಿರುವರು. ಸರ್ಕಾರದವರಾದರೋ ರಾಜಧಾನಿಯಾದ ಸೇಂಟ್ ಪೀಟರ್ಸ್‌ಬರ್ಗಿನಲ್ಲಿ—ಅಂದರೆ, ಕ್ಷಾಮ ಪ್ರದೇಶಕ್ಕೆ ಸಾವಿರಾರು ಮೈಲಿಗಳ ದೂರದಲ್ಲಿ, ಕ್ಷಾಮನಿವಾರಣಾರ್ಥವಾದ ಕಮಿಟಿಯನ್ನು ಮಾಡಿಟ್ಟು ಅವರ ವಶಕ್ಕೆ ದ್ರವ್ಯವನ್ನು ಕೊಟ್ಟಿದ್ದಾರೆ. ಈ ಕಮಿಟಿಯವರಿಂದ ನಾಲ್ಕು ಕೋಟಿ ಕ್ಷಾಮ ಪೀಡಿತರನ್ನು ಸಾಕಿ ಸಲಹುವುದಕ್ಕಾದೀತೇ? ಎಂಬುದೇ

ಬಿಳಗಿ ರಾಜವೈದ್ಯರ ಬಹಳ ಖಾತ್ರಿಯಾದ ಔಷಧಗಳು

6-2

ಸುಖದಾಯಿನೀ ಗುಳಿಗೆ —ಇದರಿಂದ ಕೆಮ್ಮಿನ ಬಾಧೆ ಬಹು ಬೇಗನೆ ಗುಣಹೊಂದುವದು ೧೦ ವರುಷದ ಮೇಲಿನ ಯಾವ ಪ್ರಾಯದವರಾದರೂ ಸೇವಿಸಬಹುದು ಕ್ರಯ ೫೪ ಗುಳಿಗೆಗೆ ೧ ರೂಪಾಯಿ ವಿ ಪಿ ಚಾರ್ಜು ಆಣೆ ೪

ಚಿಕ್ಕ ಹುಡುಗರ ಬಾಲಗ್ರಹದ ಔಷಧ —ಜ್ವರಯುಕ್ತ ಅಥವಾ ಜ್ವರವಿಲ್ಲದೆ ಫಕ್ಕನೆ ಹುಟ್ಟುವ ಈ ಉಪಹತಿಗೆ ಇದರಿಂದ ಬೇಗನೆ ಗುಣಹುಟ್ಟುವದು ಕ್ರಯ ೧ ಕುಪ್ಪಿಗೆ ೮ ಆಣೆ ವಿ ಪಿ ೪ ಆಣೆ

ಗಜಕರ್ಣದ ಮುಲಾಮು —೨ ಯಾ ೩ ಆವರ್ತಿ ಇದನ್ನು ಹಚ್ಚುವದರಿಂದ ಎಂಥ ಕಠಿಣವಾದ ಗಜಕರ್ಣ (ಹುಳಕಡ್ಡಿ) ಇದ್ದರೂ ಗುಣಹೊಂದುವದು ಕ್ರಯ ೧ ಡಬ್ಬಿಗೆ ೮ ಆಣೆ ವಿ ಪಿ ಚಾರ್ಜು ಆಣೆ ೪

ಶತಮೂಲಿಕಾ ತೈಲವು —ಹಳೇಬೊಕ್ಕೆ ಹಳೇಕಜ್ಜಿ ತುರಿಗಜ್ಜಿ ವಣಗಜ್ಜಿ ಮುಂತಾದ ಆಬಾಲವೃದ್ಧರ ಚರ್ಮವ್ಯಾಧಿಯೂ ಗುಣಹೊಂದುವದು ಕ್ರಯ ೧ ದರ್ಜೆಸಿನ ಕುಪ್ಪಿಗೆ ೧೦ ಆಣೆ, ೨ ದರ್ಜೆಸಿನ ಕುಪ್ಪಿಗೆ ೧ ರೂಪಾಯಿ ವಿ ಪಿ ೫ ಆಣೆ

ವಾಯುಹಾರಕ ತೈಲವು —ಇದನ್ನು ಲೇಪಿಸಿದ ೫ ನಿಮಿಷದೊಳಗೆ ಸಂಧಿವಾತ, ಕಟಿವಾತ, ವ ಇತರ ವಾಯುಗಳ ನೋವು, ತಲೆನೋವು, ಚಿಕ್ಕಹುಡುಗರ ಉಬ್ಬಸ, ಕೆಮ್ಮು ಕೂಡ ಗುಣಹೊಂದುವದು ಕ್ರಯ ೧ ಕುಪ್ಪಿಗೆ ೧ ರೂಪಾಯಿ ವಿ ಪಿ ಚಾರ್ಜು ಆಣೆ ೪

ಜ್ವರಗಡ್ಡೆಗೆ ಸುಧಾಬಿಂದು —ಹೊಟ್ಟೆಯೊಳಗೆ ಸೇವಿಸಲಿಕ್ಕೆ ಕ್ರಯ ೧ ಕುಪ್ಪಿಗೆ ೧೨ ಆಣೆ ವಿ ಪಿ ಚಾರ್ಜು ಆಣೆ ೪

ಜ್ವರಗಡ್ಡೆಗೆ ಮುಲಾಮು —ಬಾಹ್ಯಲೇಪನಕ್ಕೆ ಕ್ರಯ ಡಬ್ಬಿ ೧ಕ್ಕೆ ೧ ರೂಪಾಯಿ ವಿ ಪಿ ಚಾರ್ಜು ಆಣೆ ೪

೧ನೇ ನಂಬರ ಶೀತಜ್ವರ ರಿಪುಗಳಿಗೆ —ಆಬಾಲವೃದ್ಧರಿಗೆ ಹುಟ್ಟುವ ಪ್ರತಿನಿತ್ಯದ ಮತ್ತು ೩ನೆ ವ ೪ನೆ ದಿವಸದ ಪಾಳಿಯಾಗಿ ಕೂಡ ಬರುವ ಶೀತಜ್ವರಕ್ಕೆ ಕ್ರಯ ೧ ಡಬ್ಬಿಗೆ ೧ ರೂಪಾಯಿ ವಿ ಪಿ ಚಾರ್ಜು ಆಣೆ ೪

೨ನೇ ನಂಬರದ ಶೀತಜ್ವರ ರಿಪುಗಳಿಗೆ —ಮೇಲೆ ವಿವರಿಸಿದಂಥ ಶೀತಜ್ವರಗಳು ಕಾಲಾವಧಿಯಾಗಿ ಮೈಯಲ್ಲಿ ವ್ಯಾಪಿಸಿಕೊಂಡು ಹಳೆ ತರಕ್ಕೆ ಬಿದ್ದು ಬರ ವದಾದರೆ ಕ್ರಯ ೧ ಡಬ್ಬಿಗೆ ೧ ರೂಪಾಯಿ ವಿ ಪಿ ಚಾರ್ಜು ಆಣೆ ೪

ದಂತ ಶುದ್ಧಿಗೆ ಸುವಾಸಿಕ ಮಂಜನ —ಎಲ್ಲ ಪ್ರಕಾರದ ಹಲ್ಲಿನ ವೇದನೆಗಳ ಉಪಶಮನಕ್ಕೆ ಕ್ರಯ ೧ ಡಬ್ಬಿಗೆ ೮ ಆಣೆ ವಿ ಪಿ ೪ ಆಣೆ

ಪೀನಾಶಿಗೆ ಸುಧಾಚೂರ್ಣ —ಮೂಗಿನ ಒಳಭಾಗದಲ್ಲಿ ಕ್ರಿಮಿ ಅಥವಾ ವ್ರಣವಾಗಿ ಅದರಿಂದ ದುರ್ವಾಸನೆಯೂ ರಸಿಗೆ ಅಥವಾ ನೀರಿನಂಥ ದ್ರವವು ಸ್ರವಿಸುವದಕ್ಕೆ ಕ್ರಯ ೧ ಡಬ್ಬಿಗೆ ೧ ರೂಪಾಯಿ ವಿ ಪಿ. ಚಾರ್ಜು ಆಣೆ ೪

ನಯನರೋಗಕ್ಕೆ ಸುಖಾಂಜನವು —ಹೊಸತಾಗಿ ಹುಟ್ಟಿದ ಅಥವಾ ಬಹುಕಾಲದಿಂದ ಇರುತ್ತಿದ್ದ ಕಣ್ಣಿನ ಎಲ್ಲಾ ಬಾಧೆಗಳು ಕಣ್ಣಿನಲ್ಲಿ ಕೆಂಪೇರುವಿಕೆ ಕಣ್ಣಿನಿಂದ ನೀರು ಪಿಸರು ಬರುತ್ತಿರುವದು, ಬೆಳಕಿಗೆ ನೋಡಲಿಕ್ಕೆ ಆಗದೆ ಇರ ವದು ದೃಷ್ಟಿಮಾಂದ್ಯ ಇತ್ಯಾದಿ ಎಲ್ಲ ಬಾಧೆಗಳೂ ಇದರಿಂದ ಬೇಗನೆ ಗುಣವಾಗ ವದು ಕ್ರಯ ೧ ಡಬ್ಬಿಗೆ ೧ ರೂಪಾಯಿ ವಿ ಪಿ ಚಾರ್ಜು ಆಣೆ ೪

ಕರ್ಣಸ್ರಾವಕ್ಕೆ ವನೌಷಧಿ ತೈಲವು —ಚಿಕ್ಕ ಮತ್ತು ವಯಸ್ಕ ಪ್ರಾಯದವರ ಕಿವಿಯಿಂದ ರಕ್ತ, ಕೀವು, ಅಥವಾ ನೀರಿನಂಥ ದ್ರವ ಹೊಸತಾಗಿ ಅಥವಾ ಬಹು ಕಾಲದಿಂದ ಸ್ರವಿಸುತ್ತಿದ್ದರೆ ಹಾಗೂ ನೋವು, ಕಳಿತವು ತುರಿಸ ವಿಕೆಯೂ ಇರ ತಿದ್ದರೆ ಇದರಿಂದ ಪೂರ್ಣಗುಣ ಹೊಂದುವವು ಕ್ರಯ ೧ ಕುಪ್ಪಿಗೆ ೧ ರೂಪಾಯಿ ವಿ ಪಿ ೪

ಚಿಕ್ಕ ಮಕ್ಕಳ ಮೈ ಪುಷ್ಟಿಗೆ ಬಾಲಸುಧಾರಸ —ಚಿಕ್ಕ ಹುಡುಗರ ಅಶಕ್ತಿ ಕುಡಿದ ಹಾಲಿನ ಅಥವಾ ಆಹಾರದ ವಾಂತಿ, ಅತಿಸಾರ, ಅನೇಕಾವರ್ತಿ ಮಲ ವಿಸರ್ಜನೆ ಅಸ್ಥಿಗತಜ್ವರ, ಕೆಮ್ಮು ಇತ್ಯಾದಿ ಅನೇಕ ಉಪಹತಿಗಳು ಗುಣವಾಗಿ ಮೈಯಲಿ ರಕ್ತ ಮಾಂಸ ಅಸ್ತಿ ಇವುಗಳು ಬಲವಾಗಿ ಬೆಳೆದು ಚನ್ನಾಗಿ ಪುಷ್ಟಿಯಾಗುತ್ತಾರೆ ಕ್ರಯ ೧ ಕುಪ್ಪಿಗೆ ೧ ರೂಪಾಯಿ ವಿ ಪಿ ಚಾರ್ಜು ಆಣೆ ೪

ಸಕ್ಕರೆ ಮೂತ್ರ ಕಫಕ್ಷಯ ವ ಕೆಮ್ಮು ಮುಂತಾದವುಗಳಿಗೆ —ಶ್ವಾಸಕೋಶದ ಎಲ್ಲಾ ಉಪಹತಿಗಳು ಅಂದರೆ ಹೊಸ ಮತ್ತು ಹಳೆ ತರ ಕೆಮ್ಮುಗಳು ನೆಗಡಿ ಉಬ್ಬಸ ಕಫ ಕ್ಷಯ ಅಸ್ತಿಜ್ವರ ಅಶಕ್ತಿ ಕ್ಷಯವ್ಯಾಧಿಯಲ್ಲಿ ಹುಟ್ಟುವ ಬೆವರು ಇತ್ಯಾದಿ ಬೇಗನೆ ಗುಣಹೊಂದುವದು ಕ್ರಯ ೧ ಕುಪ್ಪಿಗೆ ರೂ ೧—೪ ಆ ವಿ ಪಿ ಚಾರ್ಜು ಆಣೆ ೪

ನಯನ ಸುಖಪ್ರದ ಸೌವೀರಾಂಜನವು (ಕಪ್ಪು ಸುರ್ಮ) —ಬಿಸಿಲಲ್ಲಿ ತಿರುಗಾಟ ಮಾಡುವದರಿಂದ ಹೊಗೆಯ ಕಳೆಯಲ್ಲಿ ಕೂಡ್ರುವದರಿಂದ ರಾತ್ರಿಯಲ್ಲಿ ಜಾಗ್ರಣ ಮಾಡುವದರಿಂದ ಅಥವಾ ಹೆಚ್ಚು ಕಾಲ ಓದುವದರಿಂದ ಸಹಾ ಉಂಟಾಗ ವ ಕಣ್ಣಿನ ಬಾಧೆಯು ಕೆಂಪೇರುವಿಕೆ ಉರಿ ನವೆ ಮುಂತಾದವು ಗುಣಹೊಂದಿ ಕಣ್ಣಿಗೆ ಸುಖವು ಪ್ರಾಪ್ತವಾಗುತ್ತದೆ ಕ್ರಯ ೧ ಡಬ್ಬಿಗೆ ೮ ಆಣೆ ವಿ ಪಿ ಚಾರ್ಜು ಡಬ್ಬಿ ೧ ರಿಂದ ೧೨ ಡಬ್ಬಿಗೆ ೪ ಆಣೆ

ವಾಂತಿಭೇದಿಗೆ ಮತ್ತು ಅತಿಸಾರಕ್ಕೆ ಕ್ಲೋರೋಡೈಯಿನ್ —ಈ ಉಪದ್ರಗಳಿಗೆ ಇದು ದಿವ್ಯ ಔಷಧವಾಗಿದೆ ವಿಶ್ವಾಸವುಳ್ಳ ಒಂದು ಕಂಪನಿಯಿಂದ ಇದನ್ನು ನಾವು ಸಂಗ್ರಹಿಸುತ್ತೇವೆ ಕ್ರಯ ೧ ಕುಪ್ಪಿಗೆ ೧೨ ಆಣೆ ವಿ ಪಿ ಚಾರ್ಜು ಆಣೆ ೪

ಸೂಚನೆ —ನಮ್ಮ ಔಷಧಗಳೊಳಗೆ ಅಪಾಯಕರವಾದ ಯಾವ ಜಿನಸಿನ ಮಿಶ್ರಣವೂ ಮಾಡಿಲ್ಲ ಪ್ರತಿ ಒಂದು ಔಷಧಿಗೆ ಜೊತೆಯಲಿ ಭಾಷೆಯ ಅನುಪಾನ ಪತ್ರವನ್ನು ಕಳುಹಿಸುತ್ತಿರುತ್ತೇವೆ ಇನ್ನೂ ಅನೇಕ ಉತ್ತಮವಾದ ಔಷಧಗಳಿಗಾಗಿ ನಮ್ಮ ಕ್ಯಾಟ್ಲಾಗು ತರಿಸಿಕೊಂಡು ಓದಿನೋಡಿ

ನಮ್ಮ ಅಡ್ರೆಸು —ಕರ್ನಾಟಕ ರಾಜ ವೈದ್ಯ ಮತ್ತು ಕಂಪನಿ, ಪೋಸ್ಟು ಬಿಳಗಿ, ಉತ್ತರಕನ್ನಡಾ ಜಿಲ್ಲಾ

Post Bilgi North Kanara District

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟ್ರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು)	ರೂ ೧—೦—೦
ಪರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಸಾಸಲ್ ಸೇರಿ	ರೂ ೧—೧೪—೦
" " ೬ " "	೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು

ನಮ್ಮ ವಿಳಾಸ —ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು

ಬೆಲೆಗೆ ಬೆಳ್ಳಿ—ಗುಣಕ್ಕೆ ಭಂಗಾರ.

86 54

ಕ್ಲೆಮೆಂಟ್ಸ್‌ರವರ ಗಾರಿಡಿಬಾಧಾ ನಿವಾರಿಣಿ

ವಾರ್ಶ್ವನೋವು, ಕೀಲುಗಳ ನೋವುಗಳು, ಕಿಬ್ಬೊಟ್ಟೆನೋವು, ಬೆನ್ನುಳೆಯುವದು, ತಲೆನೋವು, ಕೆಮ್ಮು ಕಿಲುಬುಗಳು, ಕೀಲುಗಳು ಕತ್ತರಿಸುವದು, ಬಗ್ಗಿರುವ ಬೆನ್ನುಗಳ ಕೊರಳು ಉ., ಇವುಗಳಿಂದುಂಟಾಗುವ ಬಾಧೆಗಳು ಕೈಕಾಲು ಮಡೆತ, ಇವುಗಳಿಗೆ ಕ್ಲೆಮೆಂಟ್ಸ್‌ರವರ ಗಾರಿಡಿ ಬಾಧೆ ನಿವಾರಿಣಿ ತೈಲವನ್ನು ಚನ್ನಾಗಿ ತಿಕ್ಕಿದರೆ ಈ ಬಾಧೆಗಳೆಲ್ಲಾ ಪರಿಹಾರವಾಗುವದು ಬಾಧೆಯನ್ನು ನಿಲ್ಲಿಸುವದಕ್ಕಾಗಿ ಕ್ಲೆಮೆಂಟ್ಸ್‌ರವರ ಮ್ಯಾಜಿಕ್ ಬಾಂ ಹುಟ್ಟಿ ಇದೆ ಆ ಕೆಲಸವನ್ನು ಅದು ಮಾಡ ವದು ಕೀಲುಗಳಲ್ಲಿ ಹಾಕಿ ಮಾರ ವ ಔಷಧಗಳಲ್ಲಿ ಬಾಧೆಯನ್ನು ಶಮನಮಾಡುವದರಲ್ಲಿ ಕ್ಲೆಮೆಂಟ್ಸ್‌ರವರ ಮ್ಯಾಜಿಕ್ ಬಾಂನಂತಹದು ಬೇರೊಂದಿಲ್ಲವು ಕ್ರಯ —೧ ಬಾಟ್ಲಿಗೆ ೧೨ ಆಣೆ ೩ಕ್ಕೆ ೨ ರೂಪಾಯಿ ೬ಕ್ಕೆ ೩॥ ರೂಪಾಯಿ ೧೨ಕ್ಕೆ ೬ ರೂಪಾಯಿ ಅಂಚೆ ವೆಚ್ಚ ಒಂದರಿಂದ ಮೂರು ಬಾಟ್ಲ ವರಿಗೆ ೩ ಆಣೆ

ನಮ್ಮ ವಿಳಾಸ —ಎಚ್ ಡಬ್ಲ್ಯು ಆರ್ನ,
ಸಿಮೆಟ್ರಿ ರೋಡ್, ವೆಪೆರಿ, ಮದರಾಸ್

ಉತ್ತಮವಾದ ಸಿದ್ಧೌಷಧಗಳು

13

ಆರ್ಸೇಯದಿಂದಲೂ ಬಂದ ನಮ್ಮ ಔಷಧಿಗಳು ಲಕ್ಷಾಂತರ ರೋಗಿಗಳಿಗೆ ಉಪಯೋಗಿಸಿ ಗುಣ ಕಂಡುಬಂದವುಗಳಾಗಿವೆ ಅವುಗಳೆಲ್ಲಾ ಮೂಲಿಕೆಗಳಿಂದ ತಯಾರ್ಮಾಡಿರುತ್ತೆ ತಿಂಗಳೊಂದಕ್ಕೆ ಅನೇಕರು ಔಷಧಿ ಸೇವಿಸುತ್ತಲೂ ಇರುವ ಸಂಗತಿ ಎಲ್ಲರಿಗೂ ಗೊತ್ತಿದೆ



(೧) ಸಂಜೀವಿನಿ ತೈಲ ಸಮಸ್ತ ಮಹಾರೋಗಗಳಿಗೂ ಕಾಲು ಸೀಸೆಗೆ ೧-೮-೦ (೨) ಭೃಂಗರಾಜ ತೈಲ ಎಲ್ಲಾ ವಿಧದ ಶಿರೋರೋಗಗಳಿಗೆ ಕಾಲು ಸೀಸೆಗೆ ೦-೧೦ ೦ (೩) ಭೇದಿ ಸಲ್ಲಿ ಸುಖಪ್ರವರ್ತಿಯಾಗುವುದು ಕಾಲು ಸೀಸೆಗೆ ೦-೯ ೦ ೦ (೪) ವ ಹಾಲೇಹ ಧಾತುಶಕ್ತಿಯ ನ್ನುಂಟು ಮಾಡಿ ಪುಷ್ಟಿಮಾಡುತ್ತೆ ಸೇರಿಗೆ ೨ ೦ ೦ (೫) ಸೌಭಾಗ್ಯ ಶುಂಠ್ಯಾವಲೇಹ ಇದರ ಸೇವನೆಯಿಂದ ಬಾಣಂತಿಸನ್ನಿ ಕ್ಷಯ ಮೊದಲಾದ ರೋಗಗಳನ್ನು ಪರಿಹರಿಸುತ್ತೆ ಸೇರಿಗೆ ೨ ೦ ೦ ಹುಚ್ಚುನಾಯಿ, ಕೊಳಕುಮಂಡಲ ಇವುಗಳಿಂದುಂಟಾದ ಪ್ರಬಲ ರೋಗಿಗಳಿಗೂ ಚಿಕಿತ್ಸೆಯು ದೊರೆಯುವದು

ನಮ್ಮ ಕ್ಯಾಟಲಾಗು ತರಿಸಿ ನೋಡಿ—ಪಂಡಿತ ಕೃಷ್ಣಾಜೆಟ್ಟಪ್ಪ,
ನಿಖಿಲ ರೋಗಾಪಹರಿ ವೈದ್ಯಶಾಲಾ, ದೊಡ್ಡಪೇಟೆ, ಮೈಸೂರು

ಬೆಂಗಳೂರು ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪನಿ ಲಿಮಿಟೆಡ್

123—18

ಮೈಸೂರು ಸರ್ಕಾರದವರು ಇಂಡಿಯಾ ಗವರ್ನಮೆಂಟಿನವರು ಈ ರೈಲನ್ನು ಸ್ಯಾಂಕ್ಷನ್ ಮಾಡುವ ಕಂಡಿಷನ್ ಮೇಲೆ ಖರ್ಚಾಗುವ ಮೂಲಧನಕ್ಕೆ ಶೇಕಡ ನಾಲ್ಕರಂತೆ ಬಡ್ಡಿ ಕೊಡಲು ಜಾಮೀನಾಗಿರುತ್ತೇವೆಂದು ಈಚೆಗೆ ಫೈಸಲ್ ಮಾಡಿರುತ್ತಾರೆ

ನಿಯಮಿಕ ಮೂಲಧನ ಶೇರು ಒಂದಕ್ಕೆ ೨೫ ರೂಪಾಯಿಗಳ ಬೆಲೆಯುಳ್ಳ ೪೮ ಸಾವಿರ ಷೇರುಗಳಿಂದಾಗುವ ೧೨ ಲಕ್ಷ ರೂಪಾಯಿಗಳು—ಈ ಷೇರು ನೊಬಲಗು ಷೇರು ಒಂದಕ್ಕೆ ಒಂದು ರೂಪಾಯಿನಂತೆ ಅಪ್ಲಿಕೇಷನ್ ಜೊತೆಯಲ್ಲಿ ಅಡ್ವಾನ್ಸಾಗಿ ಕೊಟ್ಟು ಬಾಕಿ ೨೪ ರೂಪಾಯಿಗಳನ್ನ ನೋಟೀಸ್ ಕೊಟ್ಟನಂತರ ೧೨ ಕಿಸ್ತುಗಳಲ್ಲಿ ಪಾವತಿ ಮಾಡತಕ್ಕದ್ದು ಲೈಸೆನ್ಸ ಸರ್ವೆ ಪೂರೈಸಲ್ಪಟ್ಟಿದೆ

ಈ ಕಂಪೆನಿಯ ಷೇರುಗಳನ್ನು ಪಡೆಯತಕ್ಕಂಥವರು ಈ ಕೆಳಗೆ ರುಜುವು ಮಾಡಿರುವವರಿಗೆ ಅಥವಾ ಸಬ್ ಏಜಂಟ್ರಿಗೆ ದರಖಾಸ್ತು ಮಾಡಿಕೊಳ್ಳಬೇಕು

ಷೇರು ಹಣವನ್ನು ಈ ಕೆಳಗೆ ರುಜು ಮಾಡಿರುವವರಿಗೆ, ಇವರಿಂದ ಲಿಖಿತ ಮೂಲಕ ಹಣ ವಸೂಲು ಮಾಡಲು ಅಧಿಕಾರ ಹೊಂದಿರುವ ಸಬ್ ಏಜಂಟರಿಗೆ, ಬೆಂಗಳೂರು ಬ್ರಾಂಚು ಮದ್ರಾಸು ಬ್ಯಾಂಕಿಗೆ (ಈ ಕಂಪನಿಯ ಕ್ರೆಡಿಟ್ಟಿಗೆ), ಅಥವಾ ಮೈಸೂರು ಸೀಮೆಯ ಆಯಾ ಡಿಸ್ಟ್ರಿಕ್ಟು ಖಜಾನೆಗಳಿಗಾಗಲಿ ಪಾವತಿ ಮಾಡಬೇಕು

(ಸ್ವ) ಬಿ ವಿ ರಾಮಸ್ವಾಮಿ ಶೆಟ್ಟಿ, ಬಿ ಎ,
ಅಡ್ವೋಕೇಟ್ ಮತ್ತು ಬೆಂಗಳೂರು ಚಿಕ್ಕಬಳ್ಳಾಪುರ
ಲೈಟ್ ರೈಲ್ವೆ ಕಂಪೆನಿಯ ಚೀಫ್ ಏಜಂಟ್
ನಗರ್ತಪೇಟೆ, ಬೆಂಗಳೂರು ಸಿಟಿ

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ

21—12—1906 ರಿಂದ 26—12—1906 ರ ವರೆ[illegible]

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಹೋದ ವಾರ ... ಸಂಖ್ಯೆ	[illegible]
ಬೆಂಗಳೂರು ಪಟ್ಟಣ	5	5	35	[illegible]
ಮೈಸೂರು "	31	19	0	[illegible]
ಬೆಂಗಳೂರು ಡಿಸ್ಟ್ರಿಕ್ಟು	29	22	15	[illegible]
ಮೈಸೂರು "	2	2	17	[illegible]
ಕೋಲಾರ್ "	0	0	5	[illegible]
ಕೋಲಾರ್ ಚಿನ್ನದ ಗಣಿಗಳು	1	2	3	[illegible]
ತುಂಕೂರು ಡಿಸ್ಟ್ರಿಕ್ಟು	1	1	0	[illegible]
ಹಾಸನ "	19	10	0	[illegible]
ಚಿತ್ರದುರ್ಗ "	0	0	3	[illegible]
ಕಡೂರ್ "	5	3	4	[illegible]
ಶಿವಮೊಗ್ಗಾ "	0	0	22	[illegible]
ಜುಮ್ಲಾ	92	84	10	[illegible]

ಶಾಲಿವಾಹನ ಶಕ ವರುಷಂಗಳು ೧೮೨೮ ನೇ ಪರಾಭವ ಸಂವತ್ಸರದ ಮಾಘ ಶುದ್ಧ ಚೌತಿ ಗುರುವಾರದಿಂದ ಮಾಘ ಶುದ್ಧ ನ[illegible] ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೭ ನೇ ಇಸವಿ ಜನವರಿ

ತಾ	ವಾರ		ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	[illegible]
17	ಗುರು	‡	ಚೌತಿ	56 38	ಶ	46 48	[illegible]
18	ಶುಕ್ರ	*	ಪಂಚಮಿ	55 2	ಪೂಭಾ	46 28	[illegible]
19	ಶನಿವಾ		ಷಷ್ಟಿ	54 34	ಉಭಾ	47 12	[illegible]
20	ರವಿವಾ		ಸಪ್ತಮಿ	55 25	ರೇ	49 20	[illegible]
21	ಚಂದ್ರ	¶	ಅಷ್ಟಮಿ	57 26	ಅಶ್ವಿ	52 40	[illegible]
22	ಕುಜ	T	ನವಮಿ	60 0	ಭ	57 2	[illegible]
23	ಬುಧ		ನವಮಿ	0 26	ಕೃ	60 0	[illegible]

‡ ತಿಲಚತುರ್ಥಿ * ಮದನಪಂಚಮಿ ಕುಮಾರ[illegible] , ರಥಸಪ್ತಮಿ, ಶ್ರೀರಂಗಪಟ್ಟಣದಲ್ಲಿ ರಂಗನಾಥ ರಥ, ಯ[illegible]ರೆಯಲ್ಲಿ ಅರ್ಕೇಶ್ವರ ರಥ ¶ ಭೀಷ್ಮಾಷ್ಟಮಿ T ಕು[illegible] ಗತೋರವಿ

ಪೇಟೇ ಧಾರಣೆ.

ಜಿನಸಿ	ಮೈಸೂರು	ಬೆಂಗಳೂರು
ಕಡ್ಡೀ ಅಕ್ಕಿ ಪಲ್ಲ ೧ಕ್ಕೆ	ರೂ ೧೩-೪ ೦	[illegible]
ಕೆಂಬೂತಿ ಅಕ್ಕಿ ಅವಲ್	೧೩-೪ ೦	[illegible]
" ಗ ಯಂ	೧೩ ೦ ೦	[illegible]
ಜಾಮ್ರಾಜ ಅಕ್ಕಿ	೧೩-೦ ೦	[illegible]
ಸಣ್ಣಕ್ಕಿ ಅವಲ್	೧೫-೦ ೦	[illegible]
" ದುಯಂ	೧೪-೦-೦	[illegible]
ತೊಗರೀ ಬೇಳೆ ಪಲ್ಲ ೧ಕ್ಕೆ	೧೨ ೮ ೦	[illegible]
" ದುಯಂ	೧೨ ೬ ೦	[illegible]
ಹೈ ರಾಗಿ ಪಲ್ಲ ೧ಕ್ಕೆ	೩ ೮ ೦	[illegible]
ಕಾರ್‍ರಾಗಿ	೩ ೦-೦	[illegible]
ಜೋಳ	೫-೮ ೦	[illegible]
ಹಲಸಂದೆ ಪಲ್ಲ ೧ಕ್ಕೆ	೧೦ ೧-೦ ೦	[illegible]
ಬಿಳೀ ಅವರೆ	೯ ೪ ೦	[illegible]
ಹೆಸರು	೧೧-೮ ೦	[illegible]
ಉದ್ದು	೧-೦-೦-೦	[illegible]
ಕಡಲೆ	೧೧-೮ ೦	[illegible]
ಎಳ್ಳು ಸೇ ೧೦೩ಕ್ಕೆ	೧೩ ೦ ೦	[illegible]
ಹುರುಳಿ	೩ ೩-೦	[illegible]
ಹರಳು ೧೦೩ ಸೇರಿಗೆ	೧೯-೦-೦	[illegible]
ಸೀಗೇಕಾಯಿ ಮಣ ೧ಕ್ಕೆ	೨-೨ ೦	[illegible]
ಮೆಣಸಿನಕಾಯಿ	೩ ೪ ೦	[illegible]
" ದುಯಂ	೩ ೦ ೦	[illegible]
ಬೆಲ್ಲ ದೊಡ್ಡ ಅಚ್ಚು	೪ ೪ ೦	[illegible]
ಒಳ್ಳೆಣ್ಣೆ ಮಣ ೧ಕ್ಕೆ	೪-೮-೦	[illegible]
ಹರಳೆಣ್ಣೆ "	೩ ೧-೦-೦	[illegible]
ಕೊತ್ತುಂಬರಿ ಪಲ್ಲ ೧ಕ್ಕೆ	೯-೦-೦	[illegible]
ಉಪ್ಪು "	೫-೧೧-೦	[illegible]
ಹುಣಸೇ ಹಣ್ಣು	೨-೧-೨-೦	[illegible]
" ಹಳೇದು	೦-೮-೦	[illegible]
ತುಪ್ಪ ಮಣ ೧ಕ್ಕೆ	೧೩-೦ ೦	[illegible]
ಸೀಮೆಯೆಂಣೆ ಪೆಟ್ಟಿ ೧ಕ್ಕೆ	೫-೪-೦	[illegible]
ತೆಂಗಿನಕಾಯಿ ೧೦೦ಕ್ಕೆ	೩-೮-೦	[illegible]
ಅಳಲೇಕಾಯಿ ಮಣ ೧ಕ್ಕೆ	೯-೦-೦	[illegible]
ಅಂಟ್ವಾಳದ ಕಾಯಿ ಮಣ ೧ಕ್ಕೆ	೦-೧-೨ ೦	[illegible]
ಚಿನ್ನ (ಪೌನ್) ಕೆಂಪು	೧೫-೪-೦	[illegible]
" " ಪಸಿಮೆ	೧೫-೧೦-೦	[illegible]
" " ಗಟ್ಟಿ ತೊಲ ೧ಕ್ಕೆ	೨೩-೧-೨-೦	[illegible]
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	೮೫-೦ ೦	[illegible]

Printed and published by the Rev E W THOMPSON, M A, the Proprietor and Manager, Wesleyan Mission Press, Mysore 17/1/1907

REGISTERED
M. 20.

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು

ಸಂಪುಟ ೨೦ ಮೈಸೂರು—ಸನ್ ೧೯೦೭ ನೇ ಇಸವಿ ಜನವರಿ ತಾರೀಖು ೨೪ ನೇ ಗುರುವಾರ. ಸಂಚಿಕೆ ೩೪

ಬೇಕಾಗಿದೆ.

153-6

ಇಂಗ್ಲಿಷ್ ಮತ್ತು ಕನ್ನಡ ಅಕ್ಷರ ಜೋಡಿಸುವವರು (ಕಂಪಾಜಿಟರುಗಳು) ಬೇಕಾಗಿದೆ. ಚನ್ನಾಗಿ ಕಲಿತಿರುವವರು ಮಾತ್ರ ಖುದ್ದಾಗಿಬಂದು ಮಾತನಾಡಬಹುದು

ಮ್ಯಾನೇಜರ್, ಮಿರ್ರ ಪ್ರೆಸ್, ಮೈಸೂರು.

ಹೊಸ ನಮೂನೆ ಬಹು ಬಾಳಿಕೆ ಕ್ರಯ ಕಡಮೆ.

3 4

ರಬ್ಬರ್ ಸೀಲ್‌ಗಿಂತ ಬಾಳಿಕೆ ಬರುವ ಹಿತ್ತಾಳೆ ಕಾಂಪ್ರು ಮತ್ತು ಕೈಯಿಂದ ಸೀಲ್‌ಗಳು ಹಿಡಿನಮೋತ ತಯಾರಿಸಲ್ಪಡುತ್ತೆ ಕ್ರಯ ಹಿತ್ತಾಳೆ ಕಾಂಪ್ರು ರೂ ೧-೭-೦ ಬೆಳ್ಳಿ ರೂ ೩ ೭-೦ ಪೋಸ್ಟೇಜು ಸಹಿತ ರಣ ಮುಂಗಡ ಕಳುಹಿಸಿ ಇಂಗ್ಲಿಷ್ ಕನ್ನಡ ಬಾಳಬಂದು ಯು ನಮೂನೆ ಯಾವ ತರಹಾ ಬೇಕು ತಿಳಿಸಿಸಿ ನಮ್ಮ ವಿಳಾಸ ಕೆ.ವಿ ಸಿ ಅಂಡ್ ಕೋ, ಎ ಪಸುಯಾಚಾರ್ ಸೀಲ್ ವ (ಕರ್, ಬೆಂಗಳೂರು ಕಂಟೋನ್ಮೆಂಟ್ ಡಿಸ್ಟ್ರಿಕ್ಟ್

ವೃತ್ತಾಂತ ಪತ್ರಿಕೆಯ ಪಂಚಾಂಗವು.

ಸಿದ್ಧವಾಗಿದೆ ಕ್ರಯ ಒಂದಾಣೆ.

೧೯೦೭ನೆ ವರ್ಷದ ಕ್ಯಾಲೆಂಡರು ದೊಡ್ಡ ಸೈಜು ಇದರಲ್ಲಿ ನಮ್ಮ ಮಹಾರಾಜರವರ ಉತ್ಕೃಷ್ಟವಾದ ಫೋಟೋ, ದಿವಾನರವರ ಮತ್ತು ಡಾಕ್ಟರ ಫೋಟೋಗಳು ಬಹಳ ಸೊಗಸಾಗಿವೆ ಇದುವರೆಗೆ ಈ ಚಿತ್ರಗಳು ಕ್ಯಾಲೆಂಡರಲ್ಲಿ ಯಾರೂ ನೋಡಿರಲಾರರು.

ಚಂದಾದಾರರಿಗೆ ಸೂಚನೆ—ಇದೇ ಜನವರಿ ಆಖೈರಿನೊಳಗಾಗಿ "ವೃತ್ತಾಂತ ಪತ್ರಿಕೆ"ಗೆ ಒಂದು ವರುಷದ ಚಂದಾ ಅಡ್ವಾನ್ಸು ಕಟ್ಟುವವರಿಗೆಲ್ಲಾ ಒಂದೊಂದು ಕ್ಯಾಲೆಂಡರನ್ನು ಧರ್ಮಕ್ಕೆ ಕೊಡುವೆವು ತಪ್ಪದೆ ಬಹು ಖಂಡಿತವಾಗಿ ಸಿಕ್ಕುವದಿಲ್ಲ.

ಎಚ್ಚರಿಕೆ—ಬಹಳ ಕೊಂಚ ಪ್ರತಿಗಳನ್ನು ಮಾತ್ರ ಪ್ರಿಂಟು ಮಾಡಿದೇವೆ ಕೂಡ್ಲೆ ಚಂದಾಸಹಿತ ಬರೆಯಿರಿ. ವಿಳಾಸ:—

ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ಸನ್ ೧೯೦೭ ನೇ ಇಸವಿಯ

151 7

ಎ ನಂ ಎಸ್. ನಂ ಬಿ ನಂ ಸಿ. ನಂ ಸೆಟ್ ನಂ ಡಿ ನಂ

ಪಂಚಾಂಗ ಸಮೇತವಾದ ಇಂಗ್ಲೀಷು—ಕನ್ನಡ

ಪಾಕೆಟ್ ಡೈರಿಗಳು.

ಈ ಡೈರಿಗಳು ವರ್ತಕರು, ಲಾಯರುಗಳು, ಕಂಟ್ರಾಕ್ಟರ್ರು, ಕೈ ಮನುಷ್ಯರು, ಬುಕ್‌ಬಾಕ್‌ನವುಸ್ತರಿಗೂ ಉಪಯೋಗವಾಗಿ, ನೆ ಇವುಗಳಲ್ಲಿ ಅಡಕವಾಗಿರುವ ವಿಷಯಗಳು—ಪ್ಲಾನಂಗ ಪಟಾಂಗ, ಗ್ರಹ ಕುಂಡಲಿ ಸಹಿತ, ಕ್ಯಾಲೆಂಡರು, ಹಬ್ಬಗಳು, ದಿನಗಳು, ರೈಲ್ ಛಾರ್ಜು, ಕೋರ್ಟ್ ಫೀಜು, ಪ್ರೋಸೆಸ್ ಸ್ಟಾಂಪು, ರಿಜಿಸ್ಟರ್ ಫೀಜುಗಳು, ಪೋಸ್ಟಾಫೀಸಿನ ಎಲ್ಲಾ ವಿಷಯಗಳು, ಪಾರಿಕಗಳ ಅಳತೆ, ತೂಕಗಳು, ಗೌರಿ ಪಂಚಾಂಗ, ಪ್ರಶ್ನೆ, ಹಲ್ಲಿ ಬಿದ್ದ ಫಲ, ರಾಹುಕಾಲ, ಗುಳಿಕಕಾಲ, ವಾರಶೂಲೆ ಸಂಬಳದ ಪಟ್ಟಿ, ದೋಬಿ ಲೆಕ್ಕ, ಜಮಾಖರ್ಚುಪಟ್ಟಿ, ಇನ್ನೂ ಕ ವಿಷಯಗಳಿವೆ ಉತ್ಕೃಷ್ಟವಾದ ಕಾಗದ, ರೂಲು ಹಾಕಿದೆ, ಸಾಮಾ ಬೈಂಡು, ಚಿನ್ನ ಬೆಳ್ಳಿ ನಮೂನೆ ಗಿಲೀಟುಮಾ ಡೆ

ಪಾಕೆಟ್ ಚಿಕ್ಕಸೈಜು ೩ ಆಣೆ ಸಿ ನಂಬರು ದೊಡ್ಡಸೈಜು ೬ ಆ

" " ೩ " | ಸೆಟ್ " " ೭ "

" ಮುಚ್ಚಳವುಳ್ಳದ್ದು ೫ " ಡಿ. " ಮುಚ್ಚಳವುಳ್ಳದ್ದು ೮ "

ಪೋಸ್ಟು ಚಾರ್ಜು ಬೇರೆ ಒಂದೇ ನಮೂನೆಯ ೧೨ ಡೈರಿ ತರಿಸಿದರೆ ೧ ಡೈರಿ ಇನಾಂ ವಿ. ಪಿ. ಮೂಲಕವೂ ತರಿಸಿಕೊಳ್ಳಬಹುದು

ವಿಳಾಸ:—ಎಂ. ಆರ್. ಕೃಷ್ಣಸ್ವಾಮಿ ಶೆಟ್ಟಿ ಕಂಪೆನಿ, ... ನ್ ಪ್ರೆಸ್, ... ರು ಸಿಟಿ. } ಅಥವಾ { ಶ್ರೀಕೃಷ್ಣ ವಿಲಾಸ ಪ್ರೆಸ್, ಮೈಸೂರು.

ಕೊಡಗು ದೇಶದ ಶ್ರೇಷ್ಠವಾದ ಉತ್ಕೃಷ್ಟ ಕಾಫಿಯು

ಗರಿಯದೆ ಇರುವದು ಅಥವಾ ಆಗತಾನೆ ಹುರಿದದ್ದು ತಯಾರು ಮಾಡಿದ ಸ್ಥಳದಿಂದಲೆ ನೆಟ್ಟಗೆ ರವಾನಿಸಲ್ಪಡುವದು.

85 ೧0

ವ್ಯಾಪಾರದ ಹೆಗ್ಗುರ್ತು

ಕಾಡುಕೋಣದ ತಲೆಯ ಮುದ್ರೆ ಇದೆ

ಸಂಪೂರ್ಣವಾಗಿ ಯಂತ್ರದಿಂದಲೆ ಸಿದ್ಧಪಡಿಸಿದ್ದು ಹೆಗ್ಗುರ್ತುಳ್ಳ ವಿಲಾಸದ ಚೀಲ ಸುತ್ತಿಲ್ಲದಿರುವವು ಸ್ವಚ್ಛವಾದವುಗಳಲ್ಲ ಆವ ಸಮುದಲ್ಲ ಏಜಂಟರುಗಳು ಬೇಕು. ಇಂಥವರಿಗೆ ಅಲಾಯಿದ ದರ ಬರೆಯುವವರು ದಯವಿಟ್ಟು ಈ ಪತ್ರಿಕೆಯ ಹೆಸರನ್ನು ಸೂಚಿಸಿ.

ವಿಳಾಸ.—ಮ್ಯಾನೇಜರ್, ಮ್ಯಾಥಿಸರ್ಸ್ ಕಾಫಿ ವರ್ಕ್ಸ್, ಹುಣಸೂರು

ಜ್ವರಹರಿ.

142-13



ಇದು ಸಾಧಾರಣ ಜ್ವರ, ಚಳೀಜ್ವರ, ಮೋರೇಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮದಾಮತ್ ಇಲಾಖಾ ಸಬ್ ಡಿವಿಜನ್ ಆಫಿಸರ್ ಎಸ್ ಟಿ ವೆಂಕಟಪತಿ ಅಯ್ಯನವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಡೋಸಿನ ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚನ್ನಾಗಿ ಗುಣ ಹೊಂದಿರುವರು ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವ ಕಾರಣ ದಯವಿಟ್ಟು ಇನ್ನೊಂದು ೨೦ ಡೋಸಿನ ಸೀಸೆಯನ್ನು ವಿ ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಾರೆ

ಕ್ರಯ:—ಸೀಸೆ ೧ ಕ್ಕೆ ೮ ಆಣೆ, ೧ ರೂ, ೧—೮ ರೂ, ರೂ. ೨—೧೨ ಆ, ೧೦ ರೂ.; ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

****

ಓಮಂಕರ್ಪೂರ.

Omum Carpoor

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಕಳೆತುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರೀಕ್ಷಿಸಿ, ಕೂಡಲೇ ಗುಣಕೊಡುವದು ಇದು ಹೊಗಸರು ತಿಂಗಳಿ ಒಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯಕ್ಕೆ ದಪವು ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆನ್ರಿಯವರ ಓಮಂ ಕರ್ಪೂರವನ್ನು ನಾನೂ ನನ್ನ ಕಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧವೆಂದು ಬರೆದಿದ್ದಾರೆ

ಈ ಸಹಲಷ್ಟು ಔಷಧಗಳು ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ ಇವಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ —

ಹೆನ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,

ಕೆಳೆಂಡ್ ಬೀಚ್ ಲೈನ್, ಮದ್ರಾಸ್

ಮುಂಬಯಿ ವ್ಯಾಪಾರಮಾಡಲಿಚ್ಛಿಸುವವರು.

85-34

ಮುಂಬಯಿಯಲ್ಲಿ ಪ್ರತಿಯೊಂದು ಮಾಲಿನ ತೂಕ ಅಳತೆ ಮತ್ತು ಮಾಲಿನ ವರ್ಣನೆ ಹಾಗೂ ಅನೇಕ ಉಪಯುಕ್ತ ಮಾಹಿತಿಯಿರುವ ಕನ್ನಡ ಪುಸ್ತಕ.—ಕ್ರಯ ೧೦ ಆಣೆ ವಿ. ಪಿ ಯಿಂದ ಕಳುಹಿಸುವೆವು ಟಪಾಲು ಖರ್ಚು ಬೇರೆ ಬುಕ್ಕು ಸೇಲರರಿಗೆ ಯೋಗ್ಯ ಕಮಿಷನ್ ದೊರೆಯುವದು ಮತ್ತು ಲಿಂಗಾಯತ ಧರ್ಮಸಂಬಂಧ ವಿರಕ್ತೋತ್ಪತ್ತಿ ಕ್ರಿಯಾಲಕ್ಷಣವೆಂಬುವ ಕನ್ನಡ ಪುಸ್ತಕ—ನಾಲ್ಕು ಆಣೆ. ಚಲೂ ಅಕ್ಷರದಿಂದ ಬರೆಯಿರಿ ಪತ್ತಾ ಚನ್ನಬಸಪ್ಪ ಮಲ್ಲಪ್ಪ ವಾರದ, ಪೋಸ್ಟು ಮಾಂಡ್ವಿ, ಮುಂಬಯಿ

ಬಾಲಶಿಕ್ಷೆ ೧ನೇ ಭಾಗ!
ಬಾಲಶಿಕ್ಷೆ ೧ನೇ ಭಾಗ!!
ಬಾಲಶಿಕ್ಷೆ ೧ನೇ ಭಾಗ!!!

7 2

ಬೇಗ ತರಿಸಿಕೊಳ್ಳಿ.

ಕ್ರಯ ೧ ಆಣೆ ವಿ. ಪಿ. ಮೂಲಕ ಮೂರು ಆಣೆಗಳು, ನೂರು ಪ್ರತಿಗಳಿಗೆ ಹನ್ನೆರಡು ಪ್ರತಿಗಳು ಕಮಿಷನ್.

ವಿಳಾಸ:—ಮ್ಯಾನೇಜರ್, ಸಿ ಎಲ್. ಎಸ್. ಬುಕ್ ಡಿಪೋ, ಮೈಸೂರು.

ಮಾಡಲ್ ಪಾಕೆಟ್ ಡೈರಿಗಳು! ಮಾಡಲ್ ಪಾಕೆಟ್ ಡೈರಿಗಳು!!

8-1

ನಾವು ಮಾರುತ್ತಿದ್ದ ಪ್ರಸಿದ್ಧವಾದ ಮಾಡಲ್ ಪಾಕೆಟ್ ಡೈರಿಗಳಲ್ಲಿ ಒಂದನೇ (ನಾಲ್ಕಾಣೆಯದು), ಎರಡನೇ (ಆರಾಣೆಯದು), ಮತ್ತು ನಾಲ್ಕನೇ (ಎಂಟು ಆಣೆಯದು) ನಂಬರುಗಳ ಡೈರಿಗಳು ಸಂಪೂರ್ಣವಾಗಿ ಮುಗಿದುಹೋಗಿರುವದರಿಂದ ನಮ್ಮನ್ನು ಬಹು ಉದಾರವಾದ ದಯೆಯಿಂದ ಪ್ರೋತ್ಸಾಹಪಡಿಸಿದ ನಮ್ಮ ಅನೇಕ ಸಹಸ್ರ ಮಿತ್ರರಿಗೆ ಮೇಲ್ಕಂಡ ನಂಬರುಗಳ ೧೯೦೭ ನೇ ವರುಷದ ಡೈರಿಗಳು ದೊರೆಯಲಾರವೆಂದು ಈಗ ವಿನಯವಾಗಿ ಕೃತಪಡಿಸುತ್ತೇವೆ ನಮ್ಮಲ್ಲಿ ಮೂರನೇ ನಂಬರಿನ ದೊಡ್ಡ ಸೈಜಿನ ಡೈರಿಯ ಕೆಲವು ಪ್ರತಿಗಳು ಮಾತ್ರ ಉಳಿದಿವೆ ಇದರ ಕ್ರಯ ಆರು ಆಣೆ ವಿ ಪಿ. ಮೂಲಕ ತರಿಸಿದರೆ ಒಂಭತ್ತು ಆಣೆ ಬೀಳುವದು. ಜಾಗ್ರತೆ ನೋಡಿ ತರಿಸಿ!

ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

ಅಥವಾ

ನತ್‌ಮಲ್ ಅಂಡ್ ಕಂಪನಿ, ದೊಡ್ಡಪೇಟೆ, ಮೈಸೂರು.

ಉತ್ತಮವಾದ ಸಿದ್ಧೌಷಧಗಳು.

1-4

ಆಷೇರಯದಿಂದಲೂ ಬಂದ ನಮ್ಮ ಔಷಧಿಗಳು ಲಕ್ಷಾಂತರ ರೋಗಿಗಳಿಗೆ ಉಪಯೋಗಿಸಿ ಗುಣ ಕಂಡುಬಂದವುಗಳಾಗಿವೆ ಅವುಗಳೆಲ್ಲಾ ಮೂಲಿಕೆಗಳಿಂದ ತಯಾರ್ಮಾಡಿರುತ್ತೆ ತಿಂಗಳೊಂದಕ್ಕೆ ಅನೇಕರು ಔಷಧಿ ಸೇವಿಸುತ್ತಲೂ ಇರುವ ಸಂಗತಿ ಎಲರಿಗೂ ಗೊತ್ತಿದೆ



(೧) ಸಂಜೀವಿನಿ ತೈಲ ಸಮಸ್ತ ಮಹಾ ರೋಗಗಳಿಗೂ ಕಾಲು ಸೀಸೆಗೆ ೦-೮-೦ (೨) ಭೃಂಗರಾಜ ತೈಲ ಎಲ್ಲಾ ವಿಧದ ಶಿರೋರೋಗಗಳಿಗೆ ಕಾಲು ಸೀಸೆಗೆ ೦-೧೦-೦ (೩) ಭೇದಿ ಎಣ್ಣೆ ಸುಖಪ್ರವರ್ತನೆಯಾಗುವುದು ಕಾಲು ಸೀಸೆಗೆ ೦-೧೦-೦ (೪) ಮಹಾಲೇಹ ಧಾತುಶಕ್ತಿಯನ್ನು ಅಭಿವೃದ್ಧಿ ಮಾಡುತ್ತೆ ಸೇರಿಗೆ ೨-೦-೦ (೫) ಸೌಭಾಗ್ಯ ಶಂಕರಾವಲೇಹ ಇದರ ಸೇವನೆಯಿಂದ ಬಾಣಂತಿಸನ್ನಿ ಕ್ಷಯ ಮೊದಲಾದ ರೋಗಗಳನ್ನು ಪರಿಹರಿಸುತ್ತೆ ಸೇರಿಗೆ ೨ ೦ ೦ ಜಬ್ಬುನಾಯಿ, ಕೊಳತ ಮಂಡಲ ಇವುಗಳಿಂದುಂಟಾದ ಪ್ರಬಲ ರೋಗಿಗಳಿಗೂ ಚಿಕಿತ್ಸೆಯು ದೊರೆಯುವದು

ನಮ್ಮ ಕ್ಯಾಟಲಾಗು ತರಿಸಿ ನೋಡಿ—ಪಂಡಿತ ಕೃಷ್ಣಾಚಿಟ್ಟಪ್ಪ, ನಿಖಿಲ ರೋಗಾಪಹರಿ ವೈದ್ಯಶಾಲಾ, ದೇವರಾಜಪೇಟೆ, ಮೈಸೂರು

ಯೆನ್ಸ್ಟ್ ಕೆಂಪು ಮತ್ತು ಕಾಜಾ ಕಪ್ಪು.

ಹಾರ್ಸ ಪೂಲ ದಾರ.

125 11

೩,೦೦೧ ಹಾಸನದ ಟೋಪಿ ಹೊಲಿಯುವ

ಸುಪೀರಿಯರ್ ಪೂಲನ್ ದಾರ ಮಾತ್ರ

	ರೂ	ಆ	ಪೈ
೧ ಟೋಪಿ ಆಗುವ ಪೂಲ ದಾರದ ಕ್ರಯ	೦	೪	೦
೧೦ ಟೋಪಿ ಆಗುವ ಒಂದು ಬಂಡಲ್ ದಾರದ ಕ್ರಯ ೩	೧೩	೦
ಹಾರ್ಸ ಟೋಪಿ ಹೊಲಿಯುವ ಕೊಕ್ಕೆ ಸೂಜಿ ೧ಕ್ಕೆ	೦	೧	೯
ಈ ದಾರದಲ್ಲಿ ಆದ ಟೋಪಿ ಡಜನ್ ೧ಕ್ಕೆ	೧೩	೩	೦

ವಿ ಪಿ ಯಿಂದಲೂ ರವಾನಿಸುತ್ತೇವೆ

ವಿಳಾಸ— ಸಿ ರಘುನಾಥ ಕಾಮತ್,

ಪೂಲ ಮರ್ಚಂಟ್,

ಬೋಳಾರ, ಮಂಗಳೂರು

CHAMBERLAIN'S COLIC, CHOLERA AND DIARRHOEA REMEDY.

ಚೇಂಬರ್ಲೀನ ಯವರು ಹೊಟ್ಟೆಶೂಲೆ, ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು



4-4

ಕೆಳ ಹೊಟ್ಟೆಯ ನೋವು, ಬರೀ ಭೇದಿಯಾಗುವುದು, ಆಮಶಂಕೆ, ವಾಂತಿಭೇದಿ ಉಪದ್ರ, ಶೀತ ನೋವು, ಹೊಟ್ಟೆಯ ನಾನಾ ತರದ ಶೂಲೆಗಳು—ಈ ರೋಗಗಳನ್ನೆಲ್ಲಾ ವಾಸಿಮಾಡುತ್ತದೆ ಈ ಪರ್ಯಾಯವುಳ್ಳ ಔಷಧವು ಜನರನ್ನು ಬದುಕಿಸಿರುವಷ್ಟು ಮತ್ತು ನೋವನ್ನೂ ಬಾಧೆಯನ್ನೂ ನಿವಾರಿಸಿರುವಷ್ಟು ಪ್ರಪಂಚದಲ್ಲೇ ಇನ್ಯಾವ ಔಷಧವೂ ಮಾಡಿರುವುದಿಲ್ಲ.

ಜ್ಞಾಪಕದಲ್ಲಿಟ್ಟುಕೊಳ್ಳಿ—ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯ ರುವ ಎಲ್ಲಾ ತರದ ನೋವನ್ನೂ ನಿಲ್ಲಿಸಿಬಿಡುತ್ತದೆ ಬಹಳ ಕಠಿಣವಾದ ಭೇದಿಯೂ ಕೂಡ ಮೂರೇ ಹೊ ಈ ಔಷಧದಿಂದ ನಿರ್ಮೂಲವಾಗಿ ನಿಲ್ಲಿಸುತ್ತದೆ ಖಂಡಿತವಾಗಿ ವಾಸಿಮಾಡುವುದೇ ಇದರ ಗುಣ.

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಸ್ವಲ್ಪವೂ ಮುಟ್ಟದ್ದಲ್ಲ.

ಇದು ಎಲ್ಲೆಲ್ಲೂ ವಿಕರಿಯಾಗುವುದು ಸಣ್ಣ ಶೀಸೆಗೆ ೧ ರೂಪಾಯಿ ದೊಡ್ಡ ಶೀಸೆಗೆ ೨ ರೂಪಾಯಿ

ನೋಟೀಸು

91

ಕಡೂರು ಡಿ॥ ತರೀಕೆರೆ ತಾಲ್ಲೂಕು ಕಸಬಾ ಅಮೃತಾಪುರ ಗೇರಿ ಮರ್ಡಿಯಲ್ಲಿರುವ ಶೆಟ್ಟಿ ಬಣಜಿಗರ ರಾಮಣ್ಣನು ಈ ಮೂಲಕ ಸರ್ವರಿಗೂ ತಿಳಿಯಪಡಿಸುವದೇನಂದರೆ —ನನ್ನ ಹಿರೇ ಹೆಂಡತಿ ಪಾರ್ವತಿಯವಳ ಮಕ್ಕಳು ೧ ನೆ ಫಕೀರಪ್ಪ, ೨ ನೆ ಈರ ಈ ರೀತಿ ಇರುತ್ತಾ ನಾನು ಈಚೆಗೆ ಎರಡು ಜನ ಹೆಂಡರು ಲಗ್ನವಾಗಿರುತ್ತೇನೆ ಈ ಹೆಂಡರಿಗೆ ಹಾಲೀ ಗಂಡು ಮಕ್ಕಳು ಇರುತ್ತಾರೆ ಫಕೀರಪ್ಪನು ಹಿರೇ ಮಗನಾದ್ದರಿಂದ ನಾನು ಸ್ವಯಾರ್ಜಿತವಾಗಿ ಸಂಪಾದನೆ ಮಾಡಿರುವ ಚಾಕೋನಹಳ್ಳಿ ಗ್ರಾಮದ ಸರ್ವೆ ನಂಬರು ೫೩ ನೆ ಖುಷ್ಕಿ ಎಕರೆ ೪ —೪ ಆಕಾರ ೪॥ ರೂಪಾಯಿನ ದಿವಾನು ತಾ ೧೯—೧—೦೭ ರಲ್ಲಿ ರಾಜೀ ಕಬೂಲಿ ಮೂಲಕ ವರ್ಗಮಾಡಿಸಿದ್ದೆ ಇವನು ಈಗ ಕೋರ್ಟ ಜನಗಳ ಸಹವಾಸಕ್ಕೆ ಸಿಕ್ಕಿದ್ದ ನಿವಾ ನನ್ನ ಮಾತು ಕೇಳದೆ ಕೆಟ್ಟ ಪ್ರಯತ್ನಪಟ್ಟಿರುತ್ತಾನೆ ಇವನಿಂದ ನನ್ನ ಮನೆ ಸ್ಥಿರ ಚರ ಆಸ್ತಿಗಳಾ ಪತ್ತು ಯಾರಾದರೂ ಕ್ರಯ ದಾನ ಭೋಗ್ಯಾದಿಗಳನ್ನು ಮಾಡಿಕೊಂಡಾಗ್ಯೂ ಅದು ಅವರಿಗೆ ಊರ್ಜಿತವಾಗಲಾರದು ಅಲ್ಲದೆ ಫಕೀರಪ್ಪನ ಮಕ್ಕಳು, ಇವನ ತಮ್ಮ ಈರಣ್ಣ ೨ ನೆ ೩ ನೆ ನನ್ನ ಹೆಂಡತಿಯವರುಗಳ ಮಕ್ಕಳು ಪಕ್ಷಕಾರರಾಗಿ ದಾವೆ ಎಚ್ಚರಿಕೆ

ರಾಮಣ್ಣನ ರುಜು

ವೃತ್ತಾಂತ ಪತ್ರಿಕೆ.

- ೧ —

ಸನ್ ೧೯೦೭ ನೇ ಇಸವಿ ಜನವರಿ ತಾ॥ ೨೪ನೇ ಗುರುವಾರ

ಜಮೇಕಾ ದ್ವೀಪದಲ್ಲಿ ಭೂಕಂಪವು.

ಇಂಗ್ಲಿಷ್ ರಾಜ್ಯಭಾರಕ್ಕೆ ಸೇರಿದ ವೆಸ್ಟ್ ಇಂಡೀಸ್ ಎಂಬ ದ್ವೀಪಸಮುದಾಯದ ಪೈಕಿ ಜಮೇಕಾ ಎಂಬ ದ್ವೀಪವೇ ಬಹಳ ದೊಡ್ಡದು. ಕಿಂಗ್ಸ್ಟೌನ್ ಎಂಬುದೇ ಆ ದ್ವೀಪದ ರಾಜಧಾನಿ. ೧೯೦೧ ನೆ ಇಸವಿಯ ಖಾನೇಷುಮಾರಿಯಿಂದ ಆ ಪಟ್ಟಣದ ಪ್ರಜಾಸಂಖ್ಯೆಯು ಸುಮಾರು ೪೮,೦೦೦ ವೆಂದು ತಿಳಿಯುವುದು ಕಳೆದ ೧೪ ನೆ ತಾ ಸೋಮವಾರ ಮಧ್ಯಾಹ್ನ ಈ ಪಟ್ಟಣದಲ್ಲಿ ಭೂಕಂಪವೂ ಅದರ ಮೇಲೆ ಬೆಂಕಿಯೂ ಪ್ರಾಪ್ತವಾಗಿ ಪಟ್ಟಣಕ್ಕೆ ಪಟ್ಟಣವೇ ಸಂಪೂರ್ಣವಾಗಿ ನಾಶವಾಯಿತೆಂದು ತಂತೀ ವರ್ತಮಾನ ಬಂದಿರುತ್ತದೆ. ಈ ಸುದ್ದಿಯು ವಿಲಾಯತಿ, ಅಮೇರಿಕ, ಹಿಂದುಸ್ಥಾನ ಮುಂತಾದ ಕಡೆಗಳಲ್ಲಿ ಬಹಳ ವ್ಯಸನವನ್ನುಂಟುಮಾಡಿರುವುದು. ಈಚೆಗೆ ಅಲ್ಲಿಂದ ಬಂದಿರುವ ತಂತೀ ವರ್ತಮಾನಗಳನ್ನು ನೋಡಲಾಗಿ ಆ ಪಟ್ಟಣದಲ್ಲಿದ್ದ ಪ್ರಜೆಗಳ ಪೈಕಿ ಸುಮಾರು ಮೂರು ಸಾವಿರ ಪ್ರಜೆಗಳ ತನಕ ಈ ಅನಾಹುತಕ್ಕೆ ಸಿಕ್ಕಿ ಮೃತಪಟ್ಟದಾರೆಂತಲೂ ೨೦—೨೫ ಸಹಸ್ರ ಪ್ರಜೆಗಳು ಸರ್ವಸ್ವವನ್ನೂ ಕಳೆದುಕೊಂಡು, ತಿನ್ನುವುದಕ್ಕೆ ಅನ್ನವಾಗಲಿ ನಿಲ್ಲುವುದಕ್ಕೆ ನೆರಳಾಗಲಿ ಇಲ್ಲದೆ ಬೆಟ್ಟಗುಟ್ಟಗಳ ಮೇಲೂ ಮೈದಾನುಗಳಲ್ಲೂ ಇದ್ದುಕೊಂಡು ನಾನಾ ಕಷ್ಟಗಳನ್ನು ಅನುಭವಿಸುತ್ತಿದ್ದಾರೆಂತಲೂ ಗೊತ್ತಾಗುವುದು. ಅಲ್ಲಿಗೆ ಕೂಲಿ ವ್ಯಾಪಾರ ಮುಂತಾದ ಉದ್ಯೋಗಗಳನ್ನು ಹುಡುಕಿಕೊಂಡು ಹೋಗಿರುವ ಹಿಂದುಸ್ಥಾನದ ಪ್ರಜೆಗಳ ಪೈಕಿ ಎಷ್ಟು ಮಂದಿ ಈ ಅನಾಹುತಕ್ಕೆ ಸಿಕ್ಕಿಬಿದ್ದರೋ ತಿಳಿದು ಬರಲಿಲ್ಲ. ಆ ಪಟ್ಟಣದ ಸುತ್ತುಮುತ್ತಿನಲ್ಲಿ ಹತ್ತು ಮೈಲಿ ಫಾಸಲೆಯೊಳಗೆ ಒಂದು ಮನೆಯಾದರೂ ಉಳಿಯದಂತೆ ಬಿದ್ದು ಹೋಗಿರುತ್ತದೆ. ಕಳೆದ ೧೯೦೨ ನೆ ಇಸವಿಯಲ್ಲಿ ಇದೇ ದ್ವೀಪದೊಳಗೆ ಅಗ್ನಿಪರ್ವತದಿಂದ ಅಪಾರವಾದ ನಷ್ಟಗಳುಂಟಾದದ್ದನ್ನು ನಮ್ಮ ವಾಚಕರು ಮರೆತಿರಲಾರರು. ಅದರ ನಷ್ಟಗಳನ್ನು ಸರಿಪಡಿಸಿಕೊಳ್ಳುವುದಕ್ಕೆ ಕಳೆದ ನಾಲ್ಕು ವರುಷಗಳಿಂದಲೂ ಅಲ್ಲಿನ ಪ್ರಜೆಗಳೂ ಸರ್ಕಾರದವರೂ ತುಂಬಾ ಸಾಹಸವನ್ನೂ ಪ್ರಯಾಸವನ್ನೂ ಮಾಡಿ, ಈಗೀಗ ಪೂರ್ವದ ಸ್ಥಿತಿಗೆ ತಂದಿಟ್ಟುಕೊಂಡಿದ್ದರು. ಈ ವರುಷವೇ ಅವರ ಕಷ್ಟಗಳೆಲ್ಲಾ ಮುಕ್ತಾಯವಾಗಿ ಸುಭಿಕ್ಷವನ್ನು ಎದುರು ನೋಡುತ್ತಿದ್ದರು. ಇಂಥಾದ್ದರಲ್ಲಿ ಪಟ್ಟಣಕ್ಕೆ ಪಟ್ಟಣವೇ ನಾಶವಾಗುವಂಥಾ ಈ ಭೂಕಂಪವು ಪ್ರಾಪ್ತವಾದುದು ತುಂಬಾ ದುಃಖವನ್ನುಂಟುಮಾಡಿರುತ್ತದೆ ಈ ಅನಾಹುತ ನಡೆದ ಸುದ್ದಿಯು ತಂತಿಗಳೆಲ್ಲಾ ಕಿತ್ತುಹೋದದರಿಂದ ನಾಲ್ಕಾರು ದಿನಗಳವರೆಗೆ ಚೆನ್ನಾಗಿ ತಿಳಿದು ಬಂದಿರಲಿಲ್ಲ

ಈ ಅನಾಹುತ ನಡೆದ ಕಾಲದಲ್ಲಿ ಆ ಪಟ್ಟಣದಲ್ಲಿ ಹಾಜರಿದ್ದ ಮಿ' ಪೆನ್ನಿಕರ್ ಹೀಟ್ ಎಂಬೊಬ್ಬ ಇಂಗ್ಲಿಷ್ ದೊಡ್ಡ ಮನುಷ್ಯನು ಅಲ್ಲಿಂದ ತಂತೀ ವರ್ತಮಾನ ಕೊಟ್ಟಿರುವುದೇನಂದರೆ—ಆ ದಿನ ಮಧ್ಯಾಹ್ನ ನಾನು ಆ ಪಟ್ಟಣದ ಒಂದು ರಸ್ತೆಯಲ್ಲಿ ಹೋಗುತ್ತಿದ್ದೆನು ಅಂತರಿಕ್ಷವು ನಿರ್ಮಲವಾಗಿಯೂ ಶಾಂತವಾಗಿಯೂ ಸೂರ್ಯಕಿರಣಗಳು ಅತಿ ತೀಕ್ಷ್ಣವಾಗಿಯೂ ಇದ್ದವು ಭೂಮಿಯು ಕಂಪಿಸುವುದಕ್ಕಾರಂಭವಾಯಿತು. ಸಾವಿರಾರು ಪ್ರಜೆಗಳು ಮನೆಗಳಿಂದ ಹೊರಕ್ಕೆ ಓಡಿ ಬಂದರು. ಅನೇಕ ಮಂದಿ ಮಾಳಿಗೆಗಳಿಂದ ಧುಮುಕಿದರು ಸುತ್ತಲೂ ಸಮಸ್ತವಾದ ಕಟ್ಟಡಗಳೂ ಮನೆಗಳೂ ಅಲ್ಲಾಡಿ ಓಲಾಡಿ ಮಗುಚಿಕೊಂಡವು. ಐದು ನಿಮಿಷಗಳ ತನಕ ಕಗ್ಗತ್ತಲು ಕವಿಯಿತು ಮನೆಗಳು ಬಿದ್ದ ಧೂಳೂ ಮಣ್ಣೂ ಆಕಾಶವನ್ನೂ ಸೂರ್ಯನನ್ನೂ ಮುಚ್ಚಿಕೊಂಡಿತು. ನಾನೂ ನನ್ನ ಸಂಗಡಿದ್ದವರೂ ನಮ್ಮ ಕಣ್ಣಿಗೆ ಕಾಣಿಸಿದವರೂ ಕಪ್ಪಾಗಿ ಹೋದೆವು. ಸರ್ ಜೇಂಸ ಫರ್ಗ್ಯುಸನ್‌ರವರು ತಮ್ಮ ಬಂಗಲೆಯೊಳಗೆ ಸಿಕ್ಕಿ ಮೃತರಾದರು [ಇವರು ಹಿಂದೆ ಕೆಲವು ಕಾಲ ಬೊಂಬಾಯಿ ಆಧಿಪತ್ಯದ ಗವರ್ನರಾಗಿದ್ದರು] ಈ ಅನಾಹುತವು ಪಟ್ಟಣವನ್ನೇ ನಾಶಮಾಡಿ ಅಪಾರ ದುಃಖವನ್ನುಂಟುಮಾಡಿದೆ ಎಂಬುದೇ. ಈ ಸುದ್ದಿಯನ್ನು ಕೇಳಿದ ಕೂಡಲೇ ಇಂಗ್ಲಿಷ್ ಪ್ರಭುಗಳೂ ಮಹಾರಾಜ್ಞೀಯವರೂ ಅಮೇರಿಕದ ಪ್ರೆಸಿಡೆಂಟರೇ ಮುಂತಾದವರೂ ಅಲ್ಲಿನ ಗವರ್ನರವರಿಗೆ ಸಂತಾಪಸೂಚಕವಾದ ತಂತೀ ವರ್ತಮಾನಗಳನ್ನು ಕಳುಹಿಸಿರುತ್ತಾರೆ ವಿಲಾಯತಿಯಲ್ಲೂ ಅಮೇರಿಕದಲ್ಲೂ ಧರ್ಮಫಂಡುಗಳು ಏರ್ಪಾಡಾಗಿ ಆಗಲೇ ಸಾವಿರಾರು ರೂಪಾಯಿ ಚಂದಾ ಕೂಡಿರುವುದು ಅಮೇರಿಕದವರು ಹಡಗುಗಳಲ್ಲಿ ಆಹಾರಪದಾರ್ಥಗಳನ್ನೂ ಔಷಧಾದಿ ಸಾಮಗ್ರಿಗಳನ್ನೂ ಸಾಗಿಸಿಕೊಂಡು ಹೋಗಿ ಕಿಂಗ್ಸ್‌ಟೌನ್ ಪಟ್ಟಣದ ಪ್ರಜೆಗಳಿಗೆ ಸಹಾಯ ಮಾಡುತ್ತಿದ್ದಾರೆ ಆಸ್ಪತ್ರೆಗಳಲ್ಲಿ ಗಾಯಪಟ್ಟವರನ್ನು ತಂಡತಂಡವಾಗಿ ಇಟ್ಟು ಔಷಧಾದಿಗಳನ್ನು ಕೊಟ್ಟು ಉಪಚಾರ ಮಾಡುತ್ತಿದ್ದಾರೆ ದುಷ್ಟರು ಪಟ್ಟಣವನ್ನು ಲೂಟಿ ಮಾಡದಂತೆ ಬೀದಿಬೀದಿಗಳಲ್ಲೂ ಸಿಪಾಯಿಗಳನ್ನು ಪಹರೆ ನೇಮಿಸಿ, ಬಿದ್ದ ಮನೆಗಳ ಮಣ್ಣು ಮುಂತಾದ್ದನ್ನೆಲ್ಲಾ ಸಾಗಿಸುತ್ತಲೂ, ಹೆಣಗಳನ್ನು ಗಾಡಿಗಳಲ್ಲಿ ತೆಗೆದುಕೊಂಡು ಹೋಗಿ ದಫನ ಮಾಡುತ್ತಲೂ ಇರುವರು. ಪಟ್ಟಣವೆಲ್ಲಾ ಹೆಣಗಳ ನಾತದಿಂದ ತುಂಬಿದೆ ರಣಹದ್ದುಗಳು ತಂಡತಂಡವಾಗಿ ಇಳಿದು ಹೆಣಗಳನ್ನು ಕಿತ್ತು ತಿನ್ನುತ್ತಿರುವವು ಅಂತು ಈ ಅನಾಹುತವು ಬಹು ಭಯಂಕರವೂ ದುಃಖಕರವೂ ಆಗಿರುವುದು

ಮನವರಿಕೆ, ನಡತೆ, ಸ್ವಭಾವ

ಮನುಷ್ಯನು ತನ್ನ ಜೀವಮಾನದಲ್ಲಿ ಈ ಮೂರು ವಿಷಯಗಳನ್ನು ಸರಿಯಾಗಿ ತಿಳಿದುಕೊಂಡು ಅವುಗಳನ್ನು ತನ್ನ ಅನುಭವದಲ್ಲಿಟ್ಟುಕೊಂಡ ಪಕ್ಷದಲ್ಲಿ ಆತನು ಇಹಲೋಕದಲ್ಲಿ ಸುಖಲಿರುತ್ತ ಆಗೂ ಪರಲೋಕದಲ್ಲಿ ಸದ್ಗತಿಗೂ ಪಾತ್ರನಾಗುತ್ತಾನೆ ಹಾಗಾದರೆ ಈ ಮೂರು ವಿಷಯಗಳಲ್ಲೂ ಅಡಕವಾಗಿರುವ ಮುಖ್ಯಾಭಿಪ್ರಾಯಗಳೇನೆಂದು ವಾಚಕರು ತಿಳಿದುಕೊಳ್ಳಲು ಕುತೂಹಲ ಪಡಬಹುದು ಈ ಅಭಿಪ್ರಾಯಗಳೇನೆಂದರೆ—

೧ ಮನವರಿಕೆ ಅಂದರೇನು ? ನಾವು ಪ್ರಪಂಚದಲ್ಲಿ ಸಮಾಚಾರಗಳನ್ನು ಪುಸ್ತಕಗಳಲ್ಲೂ ವರ್ತಮಾನಪತ್ರಿಕೆಗಳಲ್ಲೂ ಓದಿ ತಿಳಿದುಕೊಂಡು ಅವುಗಳ ವಿಷಯದಲ್ಲಿ ನಮ್ಮ ಬುದ್ಧಿಯ ನ್ಯಾಯವಾದ ರೀತಿಯಲ್ಲಿ ಕೆಲವು ಊಹೆಗಳನ್ನು ಮಾಡಿಕೊಳ್ಳುತ್ತೇವೆ ಇದು ಮನವರಿಕೆ ಎನ್ನಿಸಿಕೊಳ್ಳಲಾರದು ಇದಲ್ಲದೆ ಪೂರ್ವದಲ್ಲಿ ಶಾಸ್ತ್ರಾಭ್ಯಾಸಿಗಳೆಲ್ಲಾ ತಿಳಿದುಕೊಂಡಿದ್ದಂತೆ ಭೂಮಿಯ ಆದರಲ್ಲಿರತಕ್ಕ ಸಮಸ್ತ ವಸ್ತುಗಳೂ ಅಣುರೇಣುಗಳಿಂದ ಕೂಡಿದವುಗಳೆಂದು ನಿಷ್ಕರ್ಷೆಯಾಗಿತ್ತು ಈಚೆಗೆ ಈ ನಿಷ್ಕರ್ಷೆಯಾದ ಸಿದ್ಧಾಂತವು ನಿಜವಲ್ಲವೆಂತಲೂ, ಸಮಸ್ತ ವಸ್ತುಗಳಲ್ಲೂ ಅಣುರೇಣುಗಳ ಒಂದು ವಿಧವಾದ ಶಕ್ತಿ ಸೇರಿಕೊಂಡಿದೆ ಎಂತಲೂ ಸಿದ್ಧಾಂತ ಮಾಡಿದ್ದಾರೆ ಆದಕಾರಣ ಇಂಥಾ ವಿಷಯಗಳೆಲ್ಲಾ ಒಂದೇ ಅಭಿಪ್ರಾಯ ಸ್ಥಿರತಾಗಿ ಎಂದೆಂದಿಗೂ ಚ್ಯುತಿಯಿಲ್ಲದ ಮನವರಿಕೆಯು ಎನ್ನಿಸಿಕೊಳ್ಳಲಾರವು ಇನ್ನೊಂದು ವಿಷಯವನ್ನು ನೋಡೋಣ ಮತ್ತ ಆಚಾರವ್ಯವಹಾರಗಳನ್ನು ನೋಡಿದರೆ, ಒಂದು ಕಾಲದಲ್ಲಿ ಅನುಕೂಲವೂ ತೃಪ್ತಿಕರವೂ ಎನಿಸಿಕೊಂಡಿದ್ದವು, ಇನ್ನೊಂದು ಕಾಲಕ್ಕೆ ಅನನುಕೂಲವೂ ಅತೃಪ್ತಿಕರವೂ ಆಗಿ ಹೋಗುವವು ಉದಾ, ಒಬ್ಬನು ತನ್ನ ಪದ್ಧತಿಯನ್ನೂ ಪೋಷಾಕಪದ್ಧತಿಯನ್ನೂ ಒಂದು ಕಾಲದಲ್ಲಿ ಈ ರಾಷ್ಟ್ರದವರು ತುಂಬಾ ಅವಶ್ಯವಾದವುಗಳೆಂದು ಆಚರಣೆಯಲ್ಲಿಟ್ಟುಕೊಂಡು ಬಂದರು ಈಗಲಾದರೋ ಅವನ್ನು ಅಲ್ಲಗಳೆಯದ ಮನುಷ್ಯನೇ ಇಲ್ಲ 'ಇವು ದೇಶಾಭಿವೃದ್ಧಿಗೆ ಕಾರಕಗಳಲ್ಲವೇ ಅಲ್ಲ'ವೆಂಬುದು ಅವನ್ನು ಬಿಟ್ಟು ಬಿಡಬೇಕೆಂತಲೂ ಒಬ್ಬರಿಗೂ ಗೊತ್ತಾಗುತ್ತಾ ಬಂದಿದೆ ಹೀಗೆ ಸಾಂಸಾರಿಕ ವಿಷಯಗಳಲ್ಲೂ ಪಾರಮಾರ್ಥಿಕ ವಿಚಾರದಲ್ಲೂ ಮನುಷ್ಯನು ಬಹಳ ಪರಿಜ್ಞಾನವನ್ನು ಸಂಪಾದಿಸಿಕೊಂಡು—"ಈ ಸಂಗತಿಯಲ್ಲಿ ನಾನು ಹೀಗೆ ಮಾಡುವುದೇ ಸರಿ, ನನ್ನ ಮನಸ್ಸಾಕ್ಷಿಯು ಈ ಕಾರ್ಯವನ್ನು ಒಪ್ಪಿಕೊಳ್ಳುತ್ತದೆ" ಎಂಬಂಥಾ ಮನಸ್ಸಂಕಲ್ಪವನ್ನು ಮಾಡಿಕೊಳ್ಳಬೇಕು ಮನುಷ್ಯನ ಮೊದಲನೆಯ ಕರ್ತವ್ಯವೇ ಇದು ಇದೇ ಮನವರಿಕೆ ಎಂದು ಹೇಳುವರು ಮನಸ್ಸಾಕ್ಷಿ ಒಪ್ಪದಿರುವಂಥಾ ಕಾರ್ಯವು ಎಂಥಾದ್ದಾಗಿದ್ದರೂ ಅದು ಮನವರಿಕೆಯಾದದ್ದಾಗುವುದಿಲ್ಲ ಐಶ್ವರ್ಯವಿದ್ದರೇನು? ಎಂಥಾ ಪದವಿಯಲ್ಲಿದ್ದರೇನು? ಎಂಥಾ ಸುಖ ಸಂತೋಷಗಳಿದ್ದರೇನು ? ಮನವರಿಕೆಯಾಗದಂಥಾ ಅಥವಾ ಮನಸ್ಸಾಕ್ಷಿಗೆ ಒಪ್ಪಿಗೆಯಾಗದೆ ಇರುವಂಥಾ ಕೃತ್ಯಗಳನ್ನು ಮಾಡಿದ ಮನುಷ್ಯನಿಗೆ ಆ ಅಧಿಕಾರವೂ ಐಶ್ವರ್ಯಾದಿ ಸುಖ ಸಂತೋಷಗಳು ಎಷ್ಟು ಮಾತ್ರಕ್ಕೂ ನೆಮ್ಮದಿಯನ್ನು ಕೊಡಲಾರವು ಅಂಥವನನ್ನು ಲೋಕದವರೆಲ್ಲಾ ಹೊಗಳಬಹುದು, ಸನ್ಮಾನ ಮಾಡಬಹುದು, ಆದರೆ ಅಂತರ್ಯದಲ್ಲಿ ಅವನಿಗೆ ನೆಮ್ಮದಿ ಇದ್ದೀತೇ ? ಅವನು ಎಂಥಾ ಪದವಿಯಲ್ಲಿದ್ದರೂ ಎಷ್ಟು ಸಂತೋಷ ಸಂಭ್ರಮಗಳಲ್ಲಿ ಬೆರೆದಿದ್ದರೂ ಅವನ ಮನಸ್ಸಾಕ್ಷಿಯು ಅವನನ್ನು "ನೀಚ ! ದುಷ್ಟ ! ಅಲ್ಪ !" ಎಂಬದಾಗಿ ಹೀನೈಸುತ್ತಾ ಇರುತ್ತದೆ ಅವನಿಗೆ ನೆಮ್ಮದಿ ಎಷ್ಟು ಮಾತ್ರಕ್ಕೂ ದೊರಕುವುದಿಲ್ಲ ಮನ ಒಪ್ಪುವ ಕಾರ್ಯವನ್ನೇ ಮಾಡಿದ ಪಕ್ಷದಲ್ಲಿ ಅವನ ಕಷ್ಟಗಳು ಎಷ್ಟಿದ್ದಾಗ್ಯೂ ಅವನು ಲಕ್ಷ್ಯ ಮಾಡುವುದಿಲ್ಲ ಕಷ್ಟಕ್ಕೆ ಹಿಂದೆಗೆಯುವುದಿಲ್ಲ "ನನ್ನ ಮನಸ್ಸಾಕ್ಷಿ ಒಪ್ಪಿದ್ದನ್ನು ನಾನು ಮಾಡಿರುತ್ತೇನೆ" ಎಂಬ ಸಮಾಧಾನವೂ ಇದರಿಂದಾಗುವ ಸಂತೋಷವೂ ಅವನಿಗೆ ದೊರಕುವವು. ಇಂದರನು ಇದರಿಂದ ತನಗೆ ಕೊಡುವ ಹಿಂಸೆಯನ್ನಾದರೂ ಕಷ್ಟಗಳನ್ನಾದರೂ ಸ್ವಲ್ಪ ಲಕ್ಷ್ಯಮಾಡನು ಆದಕಾರಣ ಈ ಲೋಕದಲ್ಲಿ ಮನುಷ್ಯನು ಮೊದಲು "ಇಂಥಿಂಥಾ ವಿಷಯದಲ್ಲಿ ನಾನು ಹೀಗೆ ಹೀಗೇ ನಡೆಯಬೇಕು" ಎಂಬಂಥಾ ಮನವರಿಕೆಯನ್ನು ಸಂಪಾದಿಸಿಕೊಳ್ಳಬೇಕಾದದ್ದು ಮುಖ್ಯವಾಗಿದೆ

೨ ಮನಸ್ಸಾಕ್ಷಿಯು ಯಾವುದನ್ನು ಒಪ್ಪುವದೋ ಅದನ್ನು ಮನುಷ್ಯನು ತನ್ನ ನಡವಳಿಕೆಯಲ್ಲಿ ನಡೆದು ತೋರಿಸಬೇಕಾದದ್ದು ಮನುಷ್ಯನ ಎರಡನೆ ಧರ್ಮವಾಗಿದೆ ನಡತೆಯು ಮನಸ್ಸಾಕ್ಷಿಗೆ ವಿರುದ್ಧವಾಗಿದ್ದರೆ ಅಂತರ್ಯದಲ್ಲಿರಬೇಕಾದ ಸುಖ ಸಂತೋಷ ಸಮಾಧಾನಗಳು ದೊರಕಲಾರವು ಮನುಷ್ಯನು ಬದುಕಿಯೂ ನಿಷ್ಪ್ರಯೋಜಕನೇ ಸರಿ ಅನೇಕರು ಈಗಿನ ಕಾಲದಲ್ಲಿ "ಇಂದಾ ನಡತೆಯೇ ನ್ಯಾಯವಾದದ್ದು" ಎಂದೂ, "ಹೀಗೇ ನಡೆಯುತ್ತೇನೆ" ಎಂದೂ ಬಹಳವಾಗಿ ಹೇಳಿಕೊಂಡು, ಕಷ್ಟಗಳೂ ಅಡ್ಡಿ ಆತಂಕಗಳೂ ಬಂದಾಗ ಆ ಮನೋನಿಶ್ಚಯದಂತೆ ನಡೆದು ತೋರಿಸದೆ ತಪ್ಪಿಸಿ

...ತುಂಬಾ ಹೇಯವಾದದ್ದೂ, ಅಪಹಾಸ್ಯಕರವಾದದ್ದೂ ಎಂದು ...ಕ್ಷೆಕಾಗಿಲ್ಲ. ಅಂಥವನು ಎಷ್ಟು ಉಚ್ಚಸ್ಥಾನದಲ್ಲಿದ್ದರೂ ...ಗೆ ಬೀಳುವನು ಅವನ ಮಾತಿನಲ್ಲಿ ಯಾರಿಗೂ ಭರವಸೆ ...ವುದಿಲ್ಲ ತಾನು ನಿಶ್ಚಯಮಾಡಿಕೊಂಡ ಪ್ರಕಾರವೇ ನಡೆದು ...ರಿಸದೆ ಹೋದಂಥಾ ಮನುಷ್ಯನಿಗೆ ಯಾರೂ ವಿಶ್ವಾಸಪಾತ್ರವಾ... ...ಕೊಡಲಾರರು. ಅವನಿಗೂ ಅವನ ಅಂತರ್ಯದಲ್ಲಿ ಸಂತೋ... ...ಸಮಾಧಾನಗಳಿಲ್ಲದೆ ಕೆಡುವನು. ಅನೇಕರು ಬಾಲ್ಯವಿವಾಹ ಕೆಟ್ಟ... ...ಮನಸ್ಸಾಕ್ಷಿಪೂರ್ವಕವಾಗಿ ತಿಳಿದಿದಾರೆ. ಆದರೆ ಅವರ ಮಕ್ಕ... ...ಮದುವೆ ಮಾಡುವಾಗ್ಗೆ ಆ ತಮ್ಮ ಮನೋನಿಶ್ಚಯವನ್ನು ಅನು... ...ಕಾರ್ಯ ನಡಸದೆ ಬಂಧುಬಳಗಗಳ ಜಾತಿಕಟ್ಟಳೆಯ ನಿಂದೆ ...ಗಳಿಗೆ ಹೆದರಿ ಅಧೈರ್ಯಪಟ್ಟು ಸೋತುಬಿಡುವರು ಇದು ...ಶ್ಯಬನ್ನ ವೆತ್ತಿದವರಿಗೆ ಸಲ್ಲತಕ್ಕ ಅಥವಾ ಶ್ರೇಯಸ್ಕರವಾದ ...ದುಲ್ಲ. ಯಾವ ದೇಶದಲ್ಲಾಗಲಿ ಯಾವ ಬದಲಾವಣೆಯಾಗಲಿ ...ವೃದ್ಧಿ ಕಾರ್ಯವಾಗಲಿ ನಡೆಯಬೇಕಾದರೆ ಮೊದಲು ಕೆಲವರು ...ಡಾಳುಗಳಾಗಿ ನಿಂತು ಕಷ್ಟ ನಿಂದೆ ನಷ್ಟಾದಿಗಳನ್ನು ಲಕ್ಷ್ಯ ...ಸದೆ ತಮ್ಮ ಮನಸ್ಸಾಕ್ಷಿ ಒಪ್ಪಿದಂಥಾ ಮಾನವರಿಕೆಗಳನ್ನು ತಮ್ಮ ...ರ್ಯದಲ್ಲಿ ನಡೆದು ಉದಹರಿಸಬೇಕಾಗಿದೆ ಇದಕ್ಕೆ ಸಮಸ್ತ ದೇಶ... ...ಲ್ಲಿ ಎಲ್ಲಾ ಕಾಲಗಳಲ್ಲೂ ದೃಷ್ಟಾಂತಗಳು ಸಿಕ್ಕುತ್ತವೆ ಈ ದೇಶ... ...ಹಿಂದೆ ನಡೆದ ದೃಷ್ಟಾಂತವು ರಾಮಾಯಣದಲ್ಲಿ ಬರೆದಿರುವುದು. ...ದಶರಥನು ತನ್ನ ಪತ್ನಿಗೆ ವಾಗ್ದಾನ ಮಾಡಿದ್ದ ವಾಗ್ದಾನ ವರ... ...ಆತನ ಜ್ಯೇಷ್ಠಪುತ್ರನಾದ ರಾಮನು ನೆರವೇರಿಸುವುದೇ ತನಗೆ ...ವೆಂದು ಮನಸ್ಸಾಕ್ಷಿಪೂರ್ವಕವಾಗಿ ತಿಳಿದುಕೊಂಡು, ಆದ... ...ಸ್ಸರ ಅನಗೆ ದೊರಕುತ್ತಿದ್ದ ರಾಜ್ಯಾಧಿಪತ್ಯವನ್ನೂ ತ್ಯಜಿಸಿ, ...ಕಷ್ಟಕರವಾದ ವನವಾಸಕ್ಕೆ ಹೋಗಲಿಲ್ಲವೇ? ಮನಸ್ಸಾಕ್ಷಿ... ...ದನ್ನೇ ಎಷ್ಟು ಕಷ್ಟಕರವಾಗಿದ್ದರೂ ಮಾಡಬೇಕೆಂಬುವುದಕ್ಕೆ ...ಕ್ಕಿಂತಲೂ ಬೇರೆ ದೃಷ್ಟಾಂತ ಬೇಕೇ?

ಈ ಲೋಕವೂ ಇದರಲ್ಲಿರುವ ಸಮಸ್ತವಾದ ಚೇತನಾ... ...ಗಳೂ ಅಶಾಶ್ವತವಾದವುಗಳೆಂದೂ ಕ್ಷಣಿಕವಾದವುಗಳೆಂದೂ ನಶ್ವ... ...ವುಗಳೆಂದೂ ಸಾಮಾನ್ಯವಾಗಿ ಎಲ್ಲಾ ಮತಗಳೂ ಹೇಳುತ್ತವೆ ...ರಣ ಈ ಪ್ರಪಂಚದಲ್ಲಿರತಕ್ಕ ನಾವು—ನಮ್ಮ ವಿದ್ಯೆ ಬುದ್ಧಿ ...ಸಾಮರ್ಥ್ಯ ಅಧಿಕಾರ ಐಶ್ವರ್ಯಾದಿಗಳು ಎಷ್ಟು ಅಪಾರವಾಗ... ...ತ್ಯು, ಮರಣವನ್ನು ಹೊಂದಬೇಕು. ಆ ವೃಕೆ ಯಾವುದೊಂ... ...ನ್ನ ನಾವು ನಮ್ಮ ಸಂಗಡ ತೆಗೆದುಕೊಂಡು ಹೋಗಲಾರೆವು ...ನಾವು ಈ ಲೋಕದಲ್ಲಿದ್ದಾಗ್ಗೆ ಮಾಡಿದ ಪುಣ್ಯ ಪಾಪಗಳಿರಲೇ... ...ಕೂಡ ಬರತಕ್ಕವು ನಾವು ನಮ್ಮ ಜೀವಮಾನದಲ್ಲಿ ಅಭ್ಯಾಸ ...ಕವಾಗಿ ನಡಸುವ ಕಾರ್ಯಗಳ ದೆಸೆಯಿಂದ ನಮ್ಮ ಸ್ವಭಾವ ...ಸ್ಥಿರಪಡಿಸಿಕೊಳ್ಳುತ್ತೇವೆ ಇದು ಮಾತ್ರ ನಮ್ಮ ಆತ್ಮವನ್ನು ...ಹೊಂದಿರುವುದು ಇದನ್ನು ಬಿಡಲಾಗುವುದೇ ಇಲ್ಲ ಇದರಿಂದಲೇ ...ಪರಲೋಕದಲ್ಲಿ ಸದ್ಗತಿಯೋ ದುರ್ಗತಿಯೋ ದೊರಕತಕ್ಕ... ...ಆದ್ದರಿಂದ ನಾವು ಈ ಪ್ರಪಂಚದಲ್ಲಿರುವಾಗ್ಗೆ ವಿಚಾರ... ...ಕವಾಗಿ ಅಚಂಚಲವಾದ ಮನಸ್ಸನ್ನು ಪಡೆದು, ಮನಸ್ಸಾಕ್ಷಿ... ...ಥಾ ಕಾರ್ಯಗಳನ್ನೇ ಸಾಧಿಸಿ, ಕಷ್ಟ ನಿಂದೆ ನಷ್ಟಗಳನ್ನು ...ಸಹಿಸುವ, ಇಹದಲ್ಲಿ ಉತ್ತಮೋತ್ತಮವಾದ ಕೀರ್ತಿಯನ್ನು ...ಲ್ಲಿ ಸತ್ಪದವಿ ನಿತ್ಯಸುಖಾದಿಗಳನ್ನು ಪಡೆಯುವುದಕ್ಕಾಗಿ ...ಸೋಣ

ಬಳದೇಶದ ವೃತ್ತಾಂತಗಳು

"ಬಹುಮಾನದ ಬಾತ್ಮಿ" ಈ ವಾರ ನಮ್ಮಲ್ಲಿಗೆ ಬಂದಿರುವ ...ಗಳು ಕೊಲೆ, ಷಿಕಾರಿ ಮೊದಲಾದ ವಿಷಯಗಳನ್ನು ಕುರಿತವುಗ... ...ವೆ ಇಂಥಾ ಬಾತ್ಮಿಗಳಿಗೆ ಇದುವರೆಗೆ ನಾವು ಬಹುಮಾನ ಕೊಟ್ಟಿ... ...ದ್ದೆ ಇನ್ನು ಕೆಲವು ಕಾಲದವರೆಗೆ ಈ ಭಾಗವನ್ನು ಎಲ್ಲಿಸಿ, ...ಸ್ಯವಾದ ಮತ್ತು ಕುತೂಹಲ ಹುಟ್ಟಿಸುವ ಬಾತ್ಮಿಗಳಿಗೆ ವಿಶೇಷ ...ಮಾನಗಳಿಗೂ ಬಹುಮಾನ ಕೊಡಬೇಕೆಂದು ತೀರ್ಮಾನಿಸಿರು... ...ವುದರಿಂದ ವಾಚಕರು ಈ ವಿಷಯಕ್ಕೆ ಗಮನ ಕೊಟ್ಟು, ಅಂಥಾ ...ಗಳನ್ನು ಬರೆಯುವರೆಂದು ನಿರೀಕ್ಷಿಸುವೆವು

*****

ಶ್ರೀಮನ್ಮಹಾರಾಜರವರು ಮುಂದಿನ ಸೋಮವಾರ ರಾಜಧಾನಿಗೆ ...ಮಾಡುವರೆಂದು ಕೇಳುತ್ತೇವೆ

*****

ಈ ಪತ್ರಿಕೆಯ ಸಂಗಡ "ವಿಕಟಪ್ರತಾಪ" ವೆಂಬ ಮಾಸಪತ್ರಿಕೆ ...ಸಪ್ಲಿಮೆಂಟನ್ನು ಕಳುಹಿಸಿರುತ್ತೇವೆ

*****

ಶ್ರೀಮನ್ಮಹಾರಾಜರವರು ನೆನ್ನೆ ಸಾಯಂಕಾಲ ಬೆಂಗಳೂರಿಗೆ ...ಮಾಡುವವರಾಗಿದ್ದರು ಅಲ್ಲಿನ ಒಂದು ಪತ್ರಿಕೆಯು ಈ ದಿನ ...ಕಾಲ ಅವರು ದಯಮಾಡುವರೆಂದು ತಿಳಿಸುತ್ತಿದೆ

*****

ಈ ಸಲ ನಡೆದ ಎಫ್ ಎ ಪರೀಕ್ಷೆಯಲ್ಲಿ ಮೈಸೂರು ಪಟ್ಟಣ... ...ಹತ್ತೊಂಬತ್ತು ಮಂದಿಯೂ, ಬೆಂಗಳೂರು ಸೆಂಟ್ರಲ್ ಕಾಲೇಜಿ... ...ಇಪ್ಪತ್ತೈದು ಮಂದಿಯೂ ತೇರ್ಗಡೆ ಹೊಂದಿರುತ್ತಾರೆ

*****

ಮೈಸೂರ್ ಚೀಫ್ ಕೋರ್ಟಿನ ಜಡ್ಜರಾದ ಮೆ॥ ಜಸ್ಟಿಸ್ ಮೂರ್ ...ವರು ರಾಜಧಾನಿಯಲ್ಲಿರುವ ಕೋರ್ಟುಗಳನ್ನು ತನಿಖೆಮಾಡು... ...ವುದಕ್ಕೆ ಮೊನ್ನೆ ಮಧ್ಯಾಹ್ನದ ರೈಲಿನಲ್ಲಿ ದಯಮಾಡಿದಾರೆ

*****

ಬ್ರಿಟಿಷ್ ರೆಸಿಡೆಂಟರಾದ ಮೆ॥ ಎಸ್ ಎಂ ಫ್ರೇಸರ್‌ಯವರು ...ಮಂಗಳವಾರ ನೀಲಗಿರಿಯಿಂದ ಸರ್ಕೀಟು ಹೊರಟು ...ಪ್ರಾಂತ್ಯದಲ್ಲಿ ಸಂಚಾರಮಾಡಿಕೊಂಡು, ಫೆಬ್ರವರಿ ಆಖೈರಿಗೆ ...ರನ್ನು ತಲುಪುವರೆಂದು ಕೇಳುತ್ತೇವೆ

ಕಳೆದ ಭಾನುವಾರ ಶ್ರೀಮನ್ಮಹಾರಾಜರವರ ಪಟ್ಟಾಭಿಷೇಕ ದಿನವಾಗಿದ್ದರಿಂದ ರಾಜಧಾನಿಯಲ್ಲಿ ೨೧ ತೋಪುಗಳು ಹಾರಿಸಲ್ಪಟ್ಟವು ಬೆಂಗಳೂರು ಸನ್ಮಾರ್ಗಪ್ರವರ್ತಕ ಸಂಘದವರು ವಿವೇಕಾನಂದಾಶ್ರಮದಲ್ಲಿ ಬಡಬಗ್ಗರಿಗೆ ಸಂಭೋಜನ ಮಾಡಿಸಿ ಸಂತೋಷಪಡಿಸಿದರು

*****

ಬೆಂಗಳೂರು ಪ್ರಜೆಗಳು, ಶ್ರೀಮನ್ಮಹಾರಾಜರವರಿಗೆ ಜಿ ಸಿ ಎಸ್. ಐ ಎಂಬ ಬಿರುದು ಬಂದದ್ದಕ್ಕಾಗಿ ಲಾಲ್ ಬಾಗ್ ಎಂಬ ಉದ್ಯಾನವನದಲ್ಲಿ ಅವರನ್ನು ಕರೆಸಿಕೊಂಡು ಬಂದು ಅಡ್ರೆಸ್ಸನ್ನು ಓದಿ ಒಪ್ಪಿಸಿ ತಮ್ಮ ಸಂತೋಷ ಕೃತಜ್ಞತೆ ರಾಜಭಕ್ತಿಗಳನ್ನು ಪ್ರಕಾಶಪಡಿಸಬೇಕೆಂಬು ತೀರ್ಮಾನಿಸಿರುತ್ತಾರೆ

*****

ಬಂಗಾಳಾ ಗವರ್ನಮೆಂಟ್ ಅಸಿಸ್ಟೆಂಟ್ ಅಕೌಂಟೆಂಟ್ ಜನರಲ್‌ರಾದ ಮೆ॥ ಉಪೇಂದ್ರಲಾಲ್ ಮೊಜುಂದಾರ್ ಎಂಬುವರನ್ನು ಮೈಸೂರು ಸರ್ಕಾರದವರು ಕಂಟ್ರೋಲರ್ ಕೆಲಸಕ್ಕೆ ನೇಮಿಸಿಕೊಂಡಿದಾರೆಂತಲೂ ಇವರು ಮುಂದಿನ ಮಾರ್ಚಿ ತಿಂಗಳಲ್ಲಿ ಬಂದು ಕೆಲಸದ ಭಾರ್ಜನ್ನು ವಹಿಸುಕೊಳ್ಳುತ್ತಾರೆಂತಲೂ ತಿಳಿದು ಬಂದಿದೆ.

*****

ಬೆಂಗಳೂರು ದಂಡಿಗೆ ಸಂಬಂಧಪಟ್ಟ ಹಲಸೂರಿನಲ್ಲಿ ಶ್ರೀ ರಾಮಕೃಷ್ಣ ಮಠದವರು ಸ್ವಾಮಿ ವಿವೇಕಾನಂದರವರ ವರ್ಷವರ್ಧಂತಿಯನ್ನು ನಡೆಸಿ ಬೆಂಗಳೂರು ಗವೀಪುರದಲ್ಲಿ ಸುಮಾರು ೧,೦೦೦ ಜನ ಬಡವರಿಗೆ ಅನ್ನ ಹಾಕಿಸಿದರು ಸಾಯಂಕಾಲ ಚಾಮರಾಜೇಂದ್ರ ಸಂಸ್ಕೃತ ಪಾಠಶಾಲೆಯಲ್ಲಿ ಸ್ವಾಮಿ ವಿವೇಕಾನಂದರವರ ಜೀವಚರಿತ್ರೆಯು ಓದಲ್ಪಟ್ಟಿತು ಆ ಸಮಯದಲ್ಲಿ ಶ್ರೀಮಂತ ಸರ್ ಕೃಷ್ಣಮೂರ್ತಿಯವರು ಅಗ್ರಾಸನವನ್ನು ವಹಿಸಿದ್ದರು

*****

ದಾವಣಗೆರೆ ಬಾತ್ಮಿದಾರರು ಬರೆಯುವುದು.—ಕಳೆದ ೧೭ ನೇ ತಾ ಸೋಮವಾರ ಬೆಳಿಗ್ಗೆ ದಿವಾನ್ ಮೆ॥ ವಿ ಪಿ ಮಾಧವರಾವ್, ಸಿ ಐ ಇ ಯವರ ಹರಿಹರಕ್ಕೆ ಹೊರಟು ಮಾರ್ಗವಾಗಿ ದಯಮಾಡಿ, ಅಲ್ಲಿ ಗ್ರಹಣದ ನಿಮಿತ್ತ ಆ ದಿನ ತುಂಗಭದ್ರಾ ನದಿಯಲ್ಲಿ ಸ್ನಾನಮಾಡಿಕೊಂಡು, ಅದೇ ಸಾಯಂಕಾಲ ಬೆಂಗಳೂರಿಗೆ ಪ್ರಯಾಣ ಮಾಡಿದರು ಆ ದಿನ ದಾವಣಗೆರೆ ನಿವಾಸಿಗಳೂ ಮುನಿಸಿಪಲ್ ಮೆಂಬರುಗಳು ಸ್ಟೇಷನ್ನಿನಲ್ಲಿ ಹಾಜರಿದ್ದು ಅವರನ್ನು ಎದುರುಗೊಂಡು ಕಾಣಿಕೆ ತಂದಿಟ್ಟು ಒಪ್ಪಿಸಿ, ಅನೇಕರ ಪರಿಚಯವನ್ನು ಮಾಡಿಸಿದರು ರೈಲ್ವೇ ಸ್ಟೇಷನ್ ಶೃಂಗಾರವೂ ದೀಪೋತ್ಸವವೂ ಸಂಭ್ರಮವಾಗಿದ್ದವು ಮುಖ್ಯವಾಗಿ ಅವರು ದೊಡ್ಡ ಪದವಿಯಲ್ಲಿದ್ದಾಗ್ಯೂ ತಾವು ಡೆಪ್ಯುಟಿ ಕಮಿಷನರಾಗಿದ್ದಾಗ್ಗೆ ತಮ್ಮ ಕೈಕೆಳಗೆ ಸಣ್ಣ ನೌಕರಿ ಮಾಡಿದವರನ್ನು ಮರೆಯದೆ ಅವರ ಯೋಗಕ್ಷೇಮವನ್ನು ವಿಚಾರಿಸಿದ್ದು ತುಂಬಾ ಸಂತೋಷಕರವಾಗಿದೆ. ಆ ದಿನ ಜನಗಳು ಅವರ ಗುಣಾತಿಶಯವನ್ನು ಹೊಗಳುತ್ತಾ ಇದ್ದರು

*****

ಒಬ್ಬ ಬಾತ್ಮಿದಾರರು ಬರೆಯುವುದು —ಬೆಂಗಳೂರು ಸಿಟಿ ಚಿಕ್ಕಪೇಟೆಯಲ್ಲಿರುವ ರಂಗದಾಸಿ ಎಂಬ ೧೯ ವರುಷದ ಹುಡುಗನಿಗೆ ೧ ವರುಷದ ಹೆಂಡತಿಯೂ ಮುಪ್ಪಿನ ತಾಯಿಯೂ ಇರುತ್ತಿದ್ದರು ಅವಳಿಗೆ ಈತನೊಬ್ಬನೇ ಮಗ ಆ ಹುಡುಗಿ ಇನ್ನೂ ದೊಡ್ಡವಳಾಗಿರಲಿಲ್ಲ. ಮೊನ್ನೆ ಸೋಮವಾರ ಬೆಳಿಗ್ಗೆ ೧೦ ಗಂಟೆಯಲ್ಲಿ ಅವನ ತಾಯಿ ಪೇಟೆಗೆ ಹೋಗಿದ್ದಳು ಆ ಹುಡುಗಿ ಅಡಿಗೇಮನೆಯಲ್ಲಿ ಒಲೆಯನ್ನು ಉರಿಸುತ್ತಾ ಕೂತಿದ್ದಾಗ ಗಂಡನಾದ ರಂಗದಾಸಿ ಬಂದು ಅಲ್ಲೇ ಕತ್ತಿಯಿಂದ ಕತ್ತನ್ನು ಕೊಯಿದು ಆಕೆ ಶವವನ್ನು ತೆಗೆದು ಕೊಂಡು ಬಂದು ಮನೆಯ ಹೊರಬಾಗಿಲ ಒಳಪಟ್ಟ ಸಮೀಪ ಮಲಗಿಸಿ ಕೂತಿದ್ದನು. ಅಷ್ಟರಲ್ಲಿ ಗಲಾಟೆ ಆಗಲು ಪೋಲೀಸಿನವರು ಬಂದು ಹಿಡಿದು ಕೊಂಡು ಹೋದರು ಆತನ ತಾಯಿ ಮನೆಗೆ ಬಂದು ಮನೆಯೆಲ್ಲಾ ರಕ್ತವಾಗಿ ಸೊಸೆ ಸತ್ತು ಬಿದ್ದಿರುವುದನ್ನು ನೋಡಿ ಗೋಳಾಡಿದಳು.

****

ಒಬ್ಬ ಬಾತ್ಮಿದಾರರು ಬರೆಯುವುದು.—ತಾ ೧೩ ನೇ ಭಾನುವಾರ ಬೆಳಿಗ್ಗೆ ೮ ಗಂಟೆಯಲ್ಲಿ ತ್ಯಾಗರಾಜಪ್ಪ ಚಕ್ರಪಾಣಿಯಾಚಾರ್ಯರ ಮಗ ೬ ವರ್ಷದ ವಿನಾಸನೆಂಬುವನೂ, ಗಿರಿಯಪ್ಪನವರ ಮಗ ೬ ವರುಷದ ಕೃಷ್ಣಮೂರ್ತಿ ಎಂಬುವನೂ ಸೇರಿ ತಮ್ಮ ಪೋಷಕರಿಂದ ಒಂದೊಂದು ಕಾಸು ಪಡೆದು ಅಂಗಡಿಯಲ್ಲಿ ತಿಂಡಿ ತೆಗೆದುಕೊಂಡು ತಿನ್ನುತ್ತಾ ಈ ಊರು ಕೋಟೆ ರಾಮಶೆಟ್ಟರ ಛತ್ರದ ಹಿಂದೆ ಇರುವ ಕಲ್ಯಾಣಿಗೆ ಜಲಪಾನಕ್ಕೋ ಹಸ್ತಪ್ರಕ್ಷಾಳನೆಗೋ ಹೋಗಿ ಒಬ್ಬನ ಕೈಯನ್ನೊಬ್ಬನು ಹಿಡಿದು ನೀರಿನ ಪಾಲಾದರು. ಈ ಬಾಲಕರು ಹಿಂದೆ ಯಾವಾಗಲೂ ಸಪ್ಪಗಾಗಿದ್ದಂತೆ ಕಾಣುವುದಿಲ್ಲ. ಯಾರೋ ದುರುಳರು ಅವರಿಬ್ಬರನ್ನೂ ದುಷ್ಕೃತ್ಯಕ್ಕಾಗಿ ಕರೆದೊಯ್ದರೆನ್ನುವುದಕ್ಕೆ ಹುಡುಗರ ಕೈಕಾಲುಗಳಲ್ಲಿದ್ದ ಬೆಳ್ಳಿ ನಗಗಳೆಲ್ಲಾ ಸರಿಯಾಗಿಯೇ ಇದ್ದುವು ಪೋಷಕರು ಬಾಲಕರನ್ನು ಈ ಊರಿನಲ್ಲೂ ಶಿವಗಂಗ ಜಾತ್ರೆಯಲ್ಲೂ ಹುಡುಕಿಸಿದರು ಕಡೆಗೆ ಮರುದಿನ ಬೆಳಿಗ್ಗೆ ಆ ಭಾವಿಯಲ್ಲಿದ್ದ ಮಕ್ಕಳನ್ನು ಮೇಲಕ್ಕೆ ತೆಗೆದು ಮಲಗಿಸಿರಲು ಒಬ್ಬನ ಕೈಯನ್ನೊಬ್ಬನು ಹಿಡಿದು ನಿದ್ರೆಮಾಡುತ್ತಿರುವ ಕಂದಮ್ಮಗಳಂತೆ ಕಾಣಬಂದಿತು. ತರುವಾಯ ಸಂಸ್ಕಾರವಾಗಿ ದಫನ್ ಆಗಲು ಸಾಯಂಕಾಲವಾಯಿತು ಊರಿನವರೆಲ್ಲಾ ತುಂಬಾ ವ್ಯಸನಪಡುತ್ತಾರೆ

ಮೈಸೂರು ಗೆಜೆಟ್ ಸಂಗ್ರಹ

ಚೌಂಗ್‌ಪೇಟೆ ತಾಲ್ಲೂಕಿನಲ್ಲಿ ಉಳಿದಿರುವ ಕ್ರಿಮಿನಲ್ ಮೊಕದ್ದಮೆಗಳನ್ನೆಲ್ಲಾ ಕೋಲಾರ್ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರೇ ಹಿಡಿದು ವ್ಯವಸ್ಥೆ ಮಾಡತಕ್ಕದ್ದು

ಮೈಸೂರ್ ಚೀಫ್ ಕೋರ್ಟ್ ರೆಜಿಸ್ಟ್ರಾರ್ ಮೆ॥ ಪಿ ಎ ರಾಜಪ್ಪ ನವರಿಗೆ ಮೊದಲಿನವರಿಗೆ ಕೊಟ್ಟಿದ್ದ ಇಪ್ಪತ್ತು ದಿನಗಳ ಪ್ರಿವಿಲೆಜ್ ರಜವನ್ನು ಇನ್ನೂ ಇಪ್ಪತ್ತೆರಡು ದಿನಗಳಿಗೆ ಜಾಸ್ತಿ ಮಾಡಿದೆ

ಮೊದಲಿನಂತೆ ಮೆ॥ ಬಿ. ಬಸವಾರಾಧ್ಯರವರೇ ತಮ್ಮ ಇತರ ಕೆಲಸಗಳೊಂದಿಗೆ ರೆಜಿಸ್ಟ್ರಾರ್ ಆಫೀಸಿನ ಚಾರ್ಜಿ ಕೆಲಸಗಳ ಭಾರ್ಜನ್ನು ವಹಿಸಿರತಕ್ಕದ್ದು

ಮೈಸೂರ ವಿದ್ಯಾಭ್ಯಾಸದ ಇಲಾಖಾ ಇನ್‌ಸ್ಪೆಕ್ಟರ್ ಜನರಲ್ ಮೆ॥ ಎಚ್ ಜೆ ಭಾಭಾ ಯವರಿಗೆ ಮೂರು ತಿಂಗಳ ಪ್ರಿವಿಲೆಜ್ ರಜಾ, ನಾಲ್ಕು ತಿಂಗಳ ಫರ್ಲೋ ರಜಾ ಕೊಟ್ಟಿದ್ದದನ್ನು ಫೆಬ್ರವರಿ ಆಖೈರ್ ವರೆಗೆ ಜಾಸ್ತಿ ಮಾಡಿದೆ. ಅದುವರೆಗೆ ಮೊದಲಿನಂತೆಯೇ ಬದಲಿ ಏರ್ಪಾಡು ನಡೆಯತಕ್ಕದ್ದು.

ಯಡತೊರೆ ತಾಲ್ಲೂಕ್ ಅಮಲ್ದಾರ್ ಮೆ॥ ಎಸ್ ರಾಮರಾಯರಿಗೆ ಕೊಟ್ಟಿದ್ದ ಎರಡು ತಿಂಗಳೂ ಹತ್ತು ದಿನಗಳ ಪ್ರಿವಿಲೆಜ್ ರಜವನ್ನು ಅವರು ಉಪಯೋಗಿಸಿಕೊಳ್ಳದಿದ್ದ ಕಾರಣ ರದ್ದುಮಾಡಿದೆ

ಮಳವಳ್ಳಿ ತಾಲ್ಲೂಕ್ ಅಮಲ್ದಾರ್ ಮೆ॥ ವಿ ಎಸ್ ಗುರುರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಎರಡು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮುಳಬಾಗಲ್ ತಾಲ್ಲೂಕ್ ಅಮಲ್ದಾರರಾಗಿ ಬದಲಿ ನೋಡುವ ಪೋಲೀಸ್ ಹೆಡ್ ಕ್ವಾರ್ಟರ್ ಇನ್‌ಸ್ಪೆಕ್ಟರ್ ಮೆ॥ ಪಿ ಸುಬ್ಬರಾಯರು ಮಳವಳ್ಳಿ ತಾಲ್ಲೂಕಿನ ಅಮಲ್ದಾರ್ ಮತ್ತು ೩ ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೋಡತಕ್ಕದ್ದು

ಮೈಸೂರು ಸರ್ವೆ ಮತ್ತು ಸೆಟ್ಲ್‌ಮೆಂಟ್ ಕಮಿಷನರ್ ಕರ್ನಲ್ ಜೆ ಪಿ ಗ್ರಾಂಟ್‌ಯವರು ರೆವಿನ್ಯೂ ಸರ್ವೆ ಡೆಪ್ಯುಟಿ ಸೂಪರಿಂಟೆಂಡೆಂಟ್ ಮೆ॥ ಡಿ ಶಾಮರಾಯರಿಗೆ ತಮ್ಮ ಆಫೀಸ್ ಭಾರ್ಜನ್ನು ಜನವರಿ ೯ರಲ್ಲಿ ವಹಿಸಿರುತ್ತಾರೆ

ಮೆ॥ ಡಿ ಶಾಮರಾಯರನ್ನು ಮೈಸೂರು ರೆವಿನ್ಯೂ ಸರ್ವೆ ಸೆಟ್ಲ್‌ಮೆಂಟ್ ಸೂಪರಿಂಟೆಂಡೆಂಟರನ್ನಾಗಿ ನೇಮಕವಾಗಿದೆ

ಮೈಸೂರು ಭೂಗರ್ಭ ಇಲಾಖೆಯ, ಅಸಿಸ್ಟೆಂಟ್ ಜಿಯಾಲಜಿಸ್ಟ್ ಮೆ॥ ಪಿ ಸಂಪತ್ಕುಮಾರ್‌ಯ್ಯಂಗಾರ್ಯ ತಮ್ಮ ಇತರ ಕೆಲಸಗಳೊಂದಿಗೆ ಬೆಂಗಳೂರು ಸೆಂಟ್ರಲ್ ಕಾಲೇಜಿನ ಉಪಾಧ್ಯಾಯರಾಗಿಯೂ ಕೆಲಸ ಮಾಡತಕ್ಕದ್ದು

ಮೈಸೂರು ನಾಪಿತರ ೨ನೇ ಪಂಚಾಯಿತಿ.

ಎಲ್ಲಾ ತಾಲ್ಲೂಕುಗಳಲ್ಲಿರತಕ್ಕ ನಮ್ಮ ಜಾತಿಯ ಜನಗಳನ್ನು ಬರಮಾಡಿಕೊಂಡು ಮುಂದಿನ ಕ್ರಮ ನಡಿಸಬೇಕೆಂತಲೂ ಶ್ರೀ ಶೃಂಗೇರಿ ಮಠಕ್ಕೆ ಹೋಗಿ ಮಾತನಾಡಬೇಕೆಂತಲೂ ಮಾತುಗಳು ನಡೆಯುವ ಸಮಯದಲ್ಲಿ ಅಲ್ಲಿದ್ದವರ ಪೈಕಿ ಒಬ್ಬನು ಎದ್ದು ನಿಂತುಕೊಂಡು—ಕಳೆದ ಪಂಚಾಯಿತಿ ಒಬ್ಬ ಮನುಷ್ಯನು ನನ್ನನ್ನು ನೆನೆಯಬಾರದ ಜಾತಿಯವನೆಂದು ಹೇಳಿದನು ಮತ್ತು ನನಗೆ ಬಹಳ ಅವಮಾನಕರವಾದ ಮಾತುಗಳನ್ನಾಡಿದನು ಇದಕ್ಕೆ ಸಾಕ್ಷಿಗಳು ಇದಾರೆ ಎಂದು ಹೇಳಿದನು ಅದಕ್ಕೆ ಪಂಚಾಯಿತರ ಪೈಕಿ ಒಬ್ಬಾತನು ಎದ್ದು—ಹೌದು ಅವರು ಹೇಳಿದ್ದು ನ್ಯಾಯ, ಹ್ಯಾಗೆಂದರೆ— ಕೆಟ್ಟ ದಿವಸಗಳಲ್ಲೂ, ಕೆಟ್ಟ ವಾರಗಳಲ್ಲೂ ಕೆಟ್ಟ ನಕ್ಷತ್ರಗಳಲ್ಲೂ ನೆನೆಯಬಾರದು ನೆನೆಯತಕ್ಕ ಕಾಲ ಒಳ್ಳೇ ಶುಭ ದಿವಸಗಳಲ್ಲಿಯೂ, ಒಳ್ಳೆ ಶುಭ ಲಗ್ನಗಳಲ್ಲಿಯೂ, ಶುಭ ನಕ್ಷತ್ರಗಳಲ್ಲಿಯೂ, ಒಳ್ಳೇ ಶುಭ ಕರ್ಮಗಳಲ್ಲಿಯೂ ನೆನೆಯಬೇಕು ಇದು ಬಲವಾದ ಮಾತು ನಮ್ಮ ಜಾತಿ ಜನಗಳ ಮನಸ್ಸು ಯಾವಾಗಲೂ ಶುಭವನ್ನೇ ಕೋರುವದು ಯಾರ ಮನೆಯಲ್ಲಿ ಲಗ್ನವಾಗಲಿ, ಯಾರ ಮನೆಯಲ್ಲಿ ಶ್ರೀಮಂತವಾಗಲಿ, ಪುತ್ರೋತ್ಸವವಾಗಲಿ ಇನ್ನೂ ಶುಭ ಕಾರ್ಯಗಳು ಬೇಗ ನಡಿಯಲೆಂದು ತ್ರಿಕಾಲದಲ್ಲೂ ಕೋರುತ್ತಾ ಇರುವವರಾಗಿರುತ್ತಾರೆ ಮತ್ತು ಎಲ್ಲರ ಕ್ಷೇಮವನ್ನೇ ಅಪೇಕ್ಷಿಸುತ್ತಾರೆ ಅರೂಪಗಳನ್ನು ರೂಪುಗಳಾಗಿ ಮಾಡಿ, ದರ್ಪಣವನ್ನು ಕೈಯಲ್ಲಿ ಕೊಟ್ಟು ಅವರವರ ರೂಪುಗಳನ್ನು ಅವರಿಗೆ ತೋರಿಸುತ್ತಾರೆ. ತಲೆತಲಾಂತ್ರದಿಂದಲೂ ಸೇವಿಸುವವರನ್ನು ದೂಷಿಸಬಹುದೇ? ನಮ್ಮ ವಂಶಾನುಕ್ರಮಣಿಕೆಯನ್ನು ತರಿಸಿಕೊಂಡು ನೋಡಿರಿ ನಮ್ಮಗಳಿಗೆ ಮುಖದಿಂದ ನಾದವನ್ನೂ ಬಾಹುಗಳಿಂದ ಆಯುಧಪಾಣಿಗಳಾಗಿ ಕ್ಷೌರವನ್ನೂ ಈ ಎರಡರಿಂದಲೂ ನಮ್ಮಗಳಿಗೆ ಜೀವನವು ಉಂಟಾಗಿರುತ್ತೆ ಮತ್ತು ಪಶ್ಚಿ ಜಗನ್ನಾಥದಲ್ಲಿ ನಮ್ಮಗಳಿಂದ ದೇವರಿಗೆ ನೈವೇದ್ಯಾದಿ ಉಪಚಾರಂಗಳು ನಡಿಯುವದನ್ನು ಸರ್ವರೂ ಅಂಗೀಕರಿಸಿರುತ್ತಾರೆ ಸಮಸ್ತ ಹಿಂದುಗಳ ಪೂಜೆಗಳಲ್ಲಿ ಗಣಪತಿ ಪೂಜೆಯಂತೆ ಮಂಗಳ ವಾದ್ಯವನ್ನು ದೇವಸ್ಥಾನ ಮೊದಲಾದ ಸ್ಥಳಗಳಲ್ಲಿ ಅವಶ್ಯಕವಾಗಿ ಸ್ವೀಕರಿಸೋಣವಾಗುತ್ತೆ ಈ ರೀತಿ ಇರುವದರಲ್ಲಿ ಈ ನಮ್ಮ ಮತವು ಯಾವ ವರ್ಗಕ್ಕೆ ಸೇರಬೇಕು? ತಾವೇ ಯೋಚನೆ ಮಾಡಿರಿ ಅನಾಥ ಮತವನ್ನು ಯಾವ ರೀತಿಯಿಂದ ತಿರಸ್ಕಾರ ಮಾಡುತ್ತಾರೋ ಗೊತ್ತಾಗುವದಿಲ್ಲ ಎಂದು ಹೇಳಿದರು ಮತ್ತು ಈ ಮತದ ಕೆಲವು ವಿದ್ಯಾರ್ಥಿಗಳು ಈ ದೇಶದಲ್ಲಿ ಇಂಥಾ ಅವಮಾನಕರವಾಗಿ ಹ್ಯಾಗೆ ವಿದ್ಯೆ ಕಲಿಯುವದು? ನಮಗೆ ದುಡ್ಡು ಸಹಾಯ ಮಾಡಿ ಕೊಡಿ ನಾವು ಪರದೇಶಕ್ಕೆ ಹೋಗಿ ವಿದ್ಯಾ ಕಲಿಯುತ್ತೇವೆಂದು ಕೇಳಿಕೊಂಡರು. ಪಂಚಾಯಿತರು ಆಗಬಹುದೆಂದು ಒಪ್ಪಿ ಕೆಲವು ವಿದ್ಯಾರ್ಥಿಗಳನ್ನು ಚುನಾಯಿಸಿದರು ಮತ್ತು ಕೆಲವು ತಾಲ್ಲೂಕುಗಳಲ್ಲಿ ಇರುವ ವಿದ್ಯಾರ್ಥಿಗಳನ್ನು ಚುನಾಯಿಸಿ, ಮನೆ ಒಂದಕ್ಕೆ ೪ ರೂಪಾಯಿನಂತೆ ಚಂದಾ ವಸೂಲ್ ಮಾಡಿ ಕಳುಹಿಸಬೇಕೆಂದು ಏರ್ಪಾಡು ಮಾಡಿರುತ್ತಾರೆ ರಾಜಧಾನಿಯಲ್ಲಿ ಚುನಾಯಿಸಿದ ಹುಡುಗರ ತಂಗೆತಾಯಿಗಳು—ಅಯ್ಯೋ, ದೇವರೇ! ನಮ್ಮ ಮಕ್ಕಳು ನಮ್ಮ ದೇಶದಲ್ಲಿದ್ದುಕೊಂಡು ವಿದ್ಯೆ ಕಲಿಯುವದಕ್ಕೆ ಮಾರ್ಗವಿಲ್ಲದೆ ಹೋಯಿತು! ಈ ದುಃಖವನ್ನು ಯಾರಲ್ಲಿ ಹೇಳಿಕೊಳ್ಳೋಣವೆಂದು ವ್ಯಸನಪಟ್ಟರು ನಾವು ಎಷ್ಟು ವಿಧವಾಗಿ ವಿಧೇಯತ್ವದಿಂದ ಕೆಲಸ ಮಾಡಿಕೊಂಡುಬಂದರೂ ನಮ್ಮ ಮತವನ್ನು ಅಭಿವೃದ್ಧಿಗೆ ತರಬೇಕೆಂದು ಯಾರಿಗೂ ಮನಸ್ಸು ಬರುವದಿಲ್ಲ ಎಂದು ಹೇಳಿಕೊಂಡು ಕೆಲವರು ಸಂಸಾರ ಸಹಿತ ಹೈದರಾಬಾದಿಗೆ ಹೋಗಿ ಮಕ್ಕಳಿಗೆ ವಿದ್ಯೆ ಕಲಿಸೋಣವೆಂದು ಯೋಚನೆ ಮಾಡುತ್ತಾರೆ ಇನ್ನು ಕೆಲವು ಜನಗಳು ಬರಬೇಕೆಂದು ಈ ಪಂಚಾಯಿತಿಯನ್ನು ಇಷ್ಟಕ್ಕೆ ನಿಲ್ಲಿಸಿರುತ್ತಾರೆ.

ಬಿ ಪುಟ್ಟಯ್ಯ, ದೊಡ್ಡ ಒಕ್ಕಲಗೇರಿ ಮೈಸೂರು.

ದುಷ್ಟ ಮೃಗಗಳ ಕಾಟವು.

ಹೋಳಧಾಳಿನಲ್ಲಿ ಹುಲಿ ಶಿಕಾರಿ ಮಾಡಿದ್ದು

ಹೋಳಧಾಳು ಗ್ರಾಮಕ್ಕೆ ಸಮೀಪವಾದ ಚಿಕಣಕೊಂಡವೆಂಬ ಕಾಡಿನಲ್ಲಿ ಕಳೆದ ತಾ. ೧೩ ನೆ ಭಾನುವಾರ ಆದರ ಸಮೀಪದಲ್ಲಿ ವಾಸವಾಗಿದ್ದ ಭೈರಗದ್ದೆ ಸಣ್ಣಯ್ಯನ ಬಾಬ್ತು ಒಂದು ಬೇಸಾಯದ ಎತ್ತನ್ನು ಹಗಲು ಹೊತ್ತಿನಲ್ಲಿ ಮೇಯುವದಕ್ಕೆ ಹೊರಗೆ ಹೋದ ಸಮಯದಲ್ಲಿ ಒಂದು ಹುಲಿ ಬಂದು ಅದರ ಮೇಲೆ ಬಿದ್ದು ತಲೆಯನ್ನು ತನ್ನ ಪಂಜಾಗಳಿಂದ ಹೊಡೆದು ಬಗೆಯುತು ಎತ್ತು ಒಳ್ಳೆ ಘಟ್ಟ ರಿಸಾದ್ದರಿಂದ ಆ ಏಟು ಸಹಿಸಿಕೊಂಡು ತನ್ನ ಒಡೆಯನ ಮನೆಗೆ ಓಡಿ ಬಂತು ಇದರ ಒಡೆಯನು ಅದನ್ನು ನೋಡಿ ಪಶ್ಚಾತ್ತಾಪ ಪಟ್ಟು ಇದು ಹುಲಿಯಿಂದಾಯಿತೆಂದು ನಿಶ್ಚೈಸಿದನು ಆ ಎತ್ತಿನ ತಲೆಯನ್ನು ಕಟ್ಟಿ ಏನೇನೋ ಕಂಡ ಔಷಧಿಯನ್ನು ಮಾಡಿದನು. ಆದರೆ ಪ್ರಯೋಜನಕ್ಕೆ ಬಾರದೆ ೩ ದಿವಸ ಬದುಕಿದ್ದು ಸತ್ತು ಹೋಯ್ತು. ಇದಕ್ಕೆ ಮುಂಚೆ ಹುಲಿ ೩, ೪ ಸಣ್ಣ ಕರುಗಳನ್ನು ತಿಂದು ಇತ್ತು. ಮಾರನೆ ಬೆಳಿಗ್ಗೆ ಸಣ್ಣಯ್ಯ ಈತನ ಅಳಿಯ ರಾಮಣ್ಣ ಇವನ ಬಾಜು ಮನೆಯ ಲಾಲಾ ಸಾಬಿ ಇನ್ನು ೩, ೪ ಜನಗಳು ಹುಲಿಯ ಶಿಕಾರಿಗಾಗಿ ಒಳ್ಳೊಳ್ಳೆ ನಾಯಿಗಳ ಕರದುಕೊಂಡು, ಬಂದೂಕುಗಳು ತೆಗದುಕೊಂಡು ಹೋದರು ಅವರು ಸದರಿ ಕಾಡಿನಲ್ಲಿ ಹುಡುಕುತ್ತಿರುವಾಗ್ಗೆ ಮೇಲ್ಕಂಡ ರಾಮಣ್ಣನ ಎದುರಿಗೆ ಆ ಹುಲಿಯು ಬಂತು ಕೂಡ್ಲೆ ಈತನು ಬಂದೂಕಿನಿಂದ ಹೊಡೆದನು ಗುಂಡು ಮುಂದಿನ ಕಾಲಿನ ಚಪ್ಪೆಗೆ ಬಿತ್ತು ಆಗ ಈತನ ಮಗನು ಬಂದು ಗುಂಡು ಹೊಡೆದನು ಒಂದು ತಪ್ಪಿತು ಇನ್ನೊಂದು ಅದರ ಕಣ್ಣಿಗೆ ತಗಲಿತು. ಆದರೂ ಅದು ಸಾಯಲಿಲ್ಲ. ಅಷ್ಟರಲ್ಲೇ ಮೇಲ್ಕಂಡ ಲಾಲಾಸಾಬಿಯು ಮುಂದೆ ನುಗ್ಗಲು ಹುಲಿಯು ಆರ್ಭಟಿಸಿತು ಅಷ್ಟಕ್ಕೆ ಅವನು ಹೆದರಿ ತನ್ನ ಕೈಲಿದ್ದ ಬಂದೂಕು ಅಲ್ಲಿ ಬಿಸಾಟು ಹಿಂತಿರುಗಿದನು ಕೂಡಲೇ ಹುಲಿ ಇವನ ಮೇಲೆರಗಿ ಇವನ ಬಲಕಾಲು ಹಿಮ್ಮಡಿಯನ್ನು ಕಚ್ಚಿತು ರಾಮಣ್ಣನು ಮತ್ತೊಂದು ಗುಂಡು ಹೊಡೆಯಲು ಹುಲಿ ಇವನ ಕಾಲು ಬಿಟ್ಟಿತು ಲಾಲುಸಾಬಿಗೆ ಕಾಲು ಬಹಳ ಬಾಧೆಯಾದ್ದರಿಂದಲೂ, ಇಷ್ಟು ಗುಂಡೇಟು ತಿಂದರೂ ಹುಲಿ ಸಾಯದ್ದರಿಂದಲೂ ಉತ್ಸಾಹವಿಲ್ಲದೆ ಈ ಶಿಕಾರಿದಾರರು ಭಗ್ನಮನೋರಥರಾಗಿ ಹಿಂದಕ್ಕೆ ಬಂದು ಬಿಟ್ಟರು ಆ ಸಾಯಂಕಾಲ ಊರೆಲ್ಲಾ ಸುದ್ದಿಯಾಯ್ತು ಪಟೇಲರು ಸೂಚಿಸಿದರು ಬೆಳಿಗ್ಗೆ ತಾ ೧೫ ನೆ ಮಂಗಳವಾರ ಎಲ್ಲರೂ ಸನ್ನಾಹ ಮಾಡಿಕೊಂಡು ಕಾಡಿಗೆ ಹೋದರು ಹುಲಿಯನ್ನು ಹುಡುಕುತ್ತಾ ಇರುವಲ್ಲಿ ಅದು ಒಂದು ಗುಂಡಿಯಲ್ಲಿ ಬಾಧೆಯಿಂದ ನಾಲ್ಕು ಕಾಲು ಮೇಲೆ ಮಾಡಿಕೊಂಡು ಮಲಗಿತ್ತು ಕೂಡಲೆ ಬಂದೂಕುಗಳ ಸುರುಟು ಆಯ್ತು ಅದು ಸತ್ತು ಹೋಯ್ತು ಅದನ್ನು ಹೊತ್ತುಕೊಂಡು ಬೈಲಿಗೆ ತರಲು ಎಲ್ಲರೂ ನೋಡಿ ಸಂತೋಷಪಟ್ಟರು ಇದು ಒಳ್ಳೆ ಕಳ್ಳ ಹುಲಿಯಾಗಿಯೂ, ಬಹಳ ಕಡೆ ಏಟು ತಿಂದು ತಪ್ಪಿಸಿಕೊಂಡು ಬಂದದ್ದಾಗಿಯೂ ಬಹಳ ಜನಗಳ ಗೋಕಾಯಿಗಳನ್ನು ನಾಶಮಾಡಿದ್ದಾಗಿಯೂ ಗೊತ್ತಾಗುತ್ತೆ ಈ ಹುಲಿ ೧೨ ಮೊಳ ಉದ್ದವೂ, ೩ ಅಡಿ ಎತ್ತರವೂ ಇತ್ತು ಇದನ್ನು ತೆಗೆದುಕೊಂಡು ಬಂದು ಒಳ್ಳೆ ಅಲಂಕಾರ ಮಾಡಿ ಗ್ರಾಮದಲ್ಲೆಲ್ಲಾ ಮೆರವಣಿಗೆ ಮಾಡಿಸಿ ಸಮಸ್ತ ಜನರೂ ನೋಡುವಂತೆ ಗ್ರಾಮದ ಮುಂದೆ ಕಟ್ಟಿಸಿತ್ತು. ಮಾರನೆ ದಿವಸ ಇದರ ಚರ್ಮವನ್ನು ಸುಲಿಸಿತು ಇದನ್ನು ತಾಲೂಕು ಕಚೇರಿಗೆ ಕಳುಹಿಸಬೇಕೆಂದು ಇರುತ್ತೆ ಈ ಮಲನಾಡು ಪ್ರಾಂತ್ಯ ಹಾಗೆ ಸರ್ಕಾರದವರು ಮಾಡಿರುವ ಕಾನೂನು ಮೇರೆ ಶಿಕಾರಿ ಮಾಡಲು ಅನುಕೂಲವಿಲ್ಲದ್ದರಿಂದ ಇಂಥಾ ದುಷ್ಟಮೃಗಗಳು ಬಹಳವಾಗಿ ಸೇರಿಕೊಂಡು ವೈರಿಗಳಾದ ನಮ್ಮಗಳ ಗೋಕಾಯಿಗಳನ್ನು ಬಹಳವಾಗಿ ನಾಶನಮಾಡುತ್ತಿವೆ ಆ ಪ್ರಾಂತ್ಯದ ಜನಗಳಿಗೆ ಈಗ ಶಿಕಾರಿ ಮಾಡುವ ಅಭ್ಯಾಸವೇ ಮರೆತು ಹೋಗಿರುತ್ತೆ ಸರ್ಕಾರದವರು ನಮ್ಮ ಮಲ್ನಾಡು ಪ್ರಾಂತ್ಯಕ್ಕಾದರೂ ಶಿಕಾರಿ ಮಾಡಬಹುದೆಂಬ ರೂಲಸು ತಿದ್ದುಪಡಿ ಮಾಡಿಕೊಟ್ಟಲ್ಲಿ ನಮ್ಮಗಳಿಗೆ ಆಗುವ ನಷ್ಟಕಷ್ಟಗಳು ಬಹಳವಾಗಿ ಉಳಿದೀತೆಂದು ಪ್ರಾರ್ಥಿಸುತ್ತೇವೆ ಕಾಡು ಕಂದಿಗಳ ಗುಂಪಂತೂ ಸಾಕಿದ ಹಂದಿಗಳ ಗುಂಪಿನಂತೆ ಹಗಲೇ ಹಾಡೆ ಮನೆ ಹಿಂದಿನ ಹಿತ್ತಲು ಕಾಫಿ ತೋಟಗಳಲ್ಲಿ ಓಡ್ಯಾಡುತ್ತವೆ ಕಾಫಿ ಧಾರಣೆ ಕಮ್ಮಿಯಾಗಿರುವದರಿಂದ ಅನೇಕ ತೋಟಗಳು ಸಾಗುವಳಿ ಇಲ್ಲದೆ ಪಾಳುಬಿದ್ದಿರುವದರಿಂದ ಇಂಥಾ ಮೃಗಗಳು ಸೇರಿಕೊಳ್ಳಲು ಇನ್ನೂ ಸಹಾಯವಾಗಿದೆ

ಗೌಡ

ಒಬ್ಬ ಮನುಷ್ಯ ಎರಡು ಕಿರುಬಗಳನ್ನು ಹೊಡೆದು ಗಾಯಪಟ್ಟದ್ದು

ಚಿಕ್ಕನಾಯಕನಹಳ್ಳಿ ತಾಲ್ಲೂಕು ಹುಳಿಯಾರ್ ಸಮ್ಮತು ಗಾಣಧಾಳೆಂಬ ಊರಿನಲ್ಲಿರುವ ಲಿಂಗಾಯತರ ಮರುಳಪ್ಪನೆಂಬವರ ಆಳುಗಳು ದನಗಳನ್ನು ಮೇಯಿಸಿಕೊಂಡು ತಾ ೧೦ನೆ ಸಾಯಂಕಾಲ ೬॥ ಗಂಟೆ ಸಮಯದಲ್ಲಿ ಹೊಡೆದುಕೊಂಡು ರೊಪ್ಪದಲ್ಲಿ ಕೂಡಿ ಮನೆಗೆ ಹೋಗುತ್ತಾ ಇರುವಷ್ಟರೊಳಗೆ ದನಗಳೆಲ್ಲಾ ಬೆದರಿದ ಹಾಗೆ ಆ ರೊಪ್ಪದಲ್ಲಿ ಶಬ್ದವಾಯಿತು ಆ ಶಬ್ದವನ್ನು ಅವರು ಕೇಳಿ—ಏನೋ ದನಗಳ ರೊಪ್ಪದಲ್ಲಿ ಶಬ್ದವಾಯಿತು ನೋಡಿಕೊಂಡು ಬರೋಣ ಎಂದು ಹೊರಟು ಬಂದು ದನಗಳನ್ನು ನೋಡಲಾಗಿ ದನಗಳೆಲ್ಲಾ ಹೆದರಿದ ಹಾಗೆ ಸ್ವಲ್ಪ ಕಾಣಿಸಿತು ಇವರು ಏನೂ ಇಲ್ಲವೆಂದು ಹೊರಟು ಹೋದರು ಮತ್ತು ಇವರು ಮಾರುದಿನ ಹೋಗಿ ದನಾ ಕಾಯುವಾಗ ಹಸುಗಳಲ್ಲಿ ಒಳ್ಳೆ ಪ್ರಾಯದ ೫೦ ರೂಪಾಯಿ ಬೆಲೆ ಬಾಳುವಂಥಾ ಹಸು ಕಾಣಿಸಲಿಲ್ಲ ಇದು ರಾತ್ರಿ ನಡದ ಗಲಾಟೆಯಲ್ಲಿ ಏನೋ ಆಗಿರಬಹುದೆಂದು ಇಲ್ಲಿ ಕಿರುಬಗಳ ಕಾಟ ಇದ್ದುದರಿಂದ ಅಲ್ಲಿ ಇಲ್ಲಿ ಹುಡುಕಲು ಸ್ವಲ್ಪ ದೂರದಲ್ಲಿ ಕಾವಲುಪ್ರದೇಶ, ಈ ಊರಿನ ಹೊಲ, ತೋಟಗಳ ಕಡೆ, ಗಿಡ ಕಾಡಿನ ಪ್ರದೇಶದಲ್ಲಿ ನೋಡಿದಾಗ ಒಂದು ಪೊದೆಯಲ್ಲಿ ಸತ್ತು ಬಿದ್ದಿದ್ದ ಆ ಹಸುವನ್ನು ನೋಡಿದರು ಇದರ ಹೊಟ್ಟೆ ಮತ್ತು ಕುತ್ತಿಗೆಯನ್ನು ಸೀಳಿ ಮಾಂಸವನ್ನು ಕಾಡುಮೃಗಗಳು ತಿಂದ ಹಾಗೆ ಕಾಣಿಸಿತು ಆಗ ಅದನ್ನು ಕಿರುಬಗಳೇ ತಿಂದಿರಬಹುದೆಂದು ತಿಳಿದು, ಇಲ್ಲಿಗೆ ಒಂದು ಮೈಲಿ ಫಾಸಲೆಯ ಮಾರೊಳೆಗ್ರಾಮದಲ್ಲಿ ಇರುವ ಮರಾಟಿಯ ಗೋವಿಂದನಿಗೆ ಹೇಳಲಾಗಿ ಇವನು ತನ್ನ ಜೋಡುನಳ್ಳಿ ತುಬಾಕಿಯಲ್ಲಿ ಆ ಕ್ಷಣವೇ ಗುಂಡನ್ನು ಬಾರ್ ಮಾಡಿಕೊಂಡು ಹೊರಟು, ಆ ಹಸು ಸತ್ತು ಬಿದ್ದಿದ್ದ ಸ್ಥಳಕ್ಕೆ ಹೋಗಿ ಅಲ್ಲಿಗೆ ಹತ್ತು ಹನ್ನೆರಡು ಗಜ ದೂರದಲ್ಲಿ ಮರೆಯಾಗಿದ್ದ ಒಂದು ಸ್ಥಳದಲ್ಲಿ ಆ ಕಿರುಬಗಳು ಬಂದರೆ ಹೊಡಿಯಬೇಕೆಂದು ರಾತ್ರಿಯೆಲ್ಲಾ ಕಾದನು ಅವು ಒಂದೂ ಬರಲಿಲ್ಲ ಮತ್ತು ಅವನು ತಾ. ೧೪ ನೆ ಬೆಳಿಗ್ಗೆ ೬ ಗಂಟೆ ಸಮಯದಲ್ಲಿ ಹೊರಡುವಷ್ಟರಲ್ಲಿ ಒಂದು ಕಿರುಬವು ಕಾಣಿಸಿತು. ಇದನ್ನು ತುಬಾಕಿಯಿಂದ ಹೊಡಿಯಲಾಗಿ ಗುಂಡು ಆ ಕಿರುಬನ ಅನ್ನಕೋಶದ ಮಾರ್ಗವಾಗಿ ನುಗ್ಗಿ ಇನ್ನೊಂದು ಕಡೆ ಹೋಯಿತು. ಆ ಕಿರುಬನ ಕರುಳುಗಳೂ ೨ ಗಜ ಹೊರಗೆ ಹೊರಟಿದ್ದು ಓಡಿಹೋಗಿ ಒಂದು ಕಾಡುಹೂರಿಗೆ ಪಕ್ಕದಲ್ಲಿ ಒಂದು ಪೊದೆಯನ್ನು ಸೇರಿತು ಇಷ್ಟರಲ್ಲಿ ಇನ್ನೊಂದು ಇದಕ್ಕಿಂತಲೂ ದೊಡ್ಡದಾದ ಕಿರುಬವು ಅಲ್ಲಿಗೆ ಬಂತು ಅವನು ಇನ್ನೊಂದು ಗುಂಡಿನಿಂದ ಅದನ್ನೂ ಹೊಡೆದನು ಅದಕ್ಕೆ ಗುಂಡು ಈರಿದ್ದೊಮೆಗಳ ಒಳಹೊಕ್ಕು ಹೊರಟದ್ದರಿಂದ ಸ್ವಲ್ಪ ಓಡಿ ಅಲ್ಲೇ ಸತ್ತುಬಿತ್ತು ಮೊದಲು ಹೊಡೆದ ಆ ಹೆಣ್ಣು ಕಿರುಬವನ್ನು ಸತ್ತಿದೆಯೋ ಏನೋ ಎಂದು ನೋಡುವುದಕ್ಕೆ ಇನ್ನೊಬ್ಬನ ಗುಂಡು ಬಾರ್ ಮಾಡಿದ ತುಬಾಕಿಯನ್ನು ತೆಗೆದುಕೊಂಡು ಹೋಗಲಾಗಿ ಆ ಕಿರುಬವು ಅಲ್ಲಿಂದ ಎದ್ದಿತು ಇವನು ತುಬಾಕಿಯಿಂದ ಹೊಡೆದನು ಗುಂಡು ತಪ್ಪಿತು ಆ ಕಿರುಬವು ಆ ಕ್ಷಣವೇ ಇವನ ಮೇಲೆ ಬೀಳಲಾಗಿ ಇವನು ಅದು ತನ್ನ ಕುತ್ತಿಗೆಯನ್ನು ಕಚ್ಚುತ್ತೆಂದು ತನ್ನ ಎಡದ ಕೈರಟ್ಟೆಯನ್ನು ಅದರ ಬಾಯಿಗೆ ಒಡ್ಡಿ, ಅದು ಕಡಿಯುತ್ತಿರುವಾಗ್ಗೆ ಬೊಗ್ಗಿ ಅದರ ಬಾಯಿ ಹಿಡಿಯುವಷ್ಟು ಒಂದು ಕಲ್ಲನ್ನು ತೆಗೆದುಕೊಂಡು ಅದರ ಬಾಯಿಯಲ್ಲಿ ಇಟ್ಟನು ಅದು ಹಲ್ಲಿನಿಂದ ಕಡಿಯುವುದನ್ನು ತಪ್ಪಿಸಿಕೊಂಡು ಅವನು ಅದರ ಕುತ್ತಿಗೆಯನ್ನು ಭದ್ರವಾಗಿ ಹಿಸುಕಿ ಕೊಂದನು ಊರಿನ ಜನಗಳು ತುಬಾಕಿ ಹಾರಿದ್ದನ್ನು ಕೇಳಿ ಕಿರುಬ ಹೊಡದಿರಬಹುದೆಂದು ನೋಡುವದಕ್ಕೆ ಬಂದು ಬೆಂಬಡಿ ಹೋಡಿಯುತ್ತಾ, ದೂರದಲ್ಲಿ ನಿಂತಿದ್ದರೇ ಹೊರತು ಹತ್ತಿರಕ್ಕೆ ಯಾರೂ ಬರಲಿಲ್ಲ ಆ ಗೋವಿಂದನಿಗೆ ಹತ್ತು ಹಲ್ಲುಗಳು ರಟ್ಟೆಯಲ್ಲಿ ನೆಟ್ಟು ಇನ್ನೂ ಅವನ ಮೈಯಲ್ಲಿ ೧೦ ಉಗುರಿನ ಸ್ವಲ್ಪ ಗಾಯಗಳಾಗಿದ್ದರೂ ಲಕ್ಷ್ಯ ಮಾಡದೆ ಆ ರಟ್ಟೆಗೆ ಒಂದು ವಸ್ತ್ರವನ್ನು ಸುತ್ತಿಕೊಂಡು ಆ ಕಿರುಬಗಳನ್ನು ಗಾಡಿಯ ಮೇಲಕ್ಕೆ ಹಾಕಿ ಹುಳಿಯಾರಿಗೆ ತೆಗೆದುಕೊಂಡುಬಂದು, ಇಲ್ಲಿಯ ಆಸ್ಪತ್ರೆ ಡಾಕ್ಟರಿಗೆ ತನ್ನ ಗಾಯಗಳನ್ನು ತೋರಿಸಲಾಗಿ ಇವನು ರಕ್ತಮಯನಾಗಿದ್ದದ್ದನ್ನು ಡಾಕ್ಟರು ನೋಡಿ ಅದನ್ನೆಲ್ಲಾ ತೊಳೆಯುವ ಉದ್ದಿಶ್ಯ ಕಾರ್ಬೋಲಿಕ್ ಲೋಷನಿಂದ ಸಿರಂಜ್ ಮಾಡಲು ಒಂದು ರಂಧ್ರದಿಂದ ಇನ್ನೊಂದು ರಂಧ್ರದಲ್ಲಿ ನೀರು ಹೋಗುತ್ತಾ ಇತ್ತು ಇದು ಎಲ್ಲಾ ಡಾಕ್ಟರು ಮಾಡುವ ಚಿಕಿತ್ಸೆಯಿಂದ ಜಾಗ್ರತೆ ವಾಸಿಯಾಗಬಹುದು ಮತ್ತು ಈ ಕಿರುಬಗಳಿಂದ ಅನೇಕ ದನಗಳು ಕುರಿ ಮೇಕೆಗಳೂ ಹತವಾಗುತ್ತಿದ್ದವು ದುಷ್ಟ ಪ್ರಾಣಿಗಳು ಸತ್ತದ್ದಕ್ಕೆ ಇಲ್ಲಿಯ ಸುತ್ತಮುತ್ತಿನ ಗ್ರಾಮಸ್ಥರೆಲ್ಲಾ ಬಹಳ ಸಂತೋಷಪಡುವರು ಆದರೂ ಇಲ್ಲಿಯ ಕಾಡುಗಳಲ್ಲಿ ಇನ್ನೂ ಅನೇಕ ಚಿರತೆಗಳಿವೆ ಹುಲಿಗಳು ಮಾತ್ರ ಇಲ್ಲ ಬೆಳೆಯನ್ನು ಹಾಳುಮಾಡುವ ಕಾಡುಹಂದಿಗಳು ಹಿಂಡುಹಿಂಡಾಗಿವೆ ಈಗ ಕೊಂದಿದ್ದ ಕಿರುಬಗಳಲ್ಲಿ ಗಂಡು ಕಿರುಬವು ೪ ಅಡಿ ಉದ್ದವಾಗಿಯೂ ಹೆಣ್ಣು ಕಿರುಬವು ೩ ಅಡಿ ಉದ್ದವಾಗಿಯೂ ಇವೆ

ಎಚ್ ಆರ್ ಕೆ

ಇಂಡಿಯಾ ದೇಶದ ವೃತ್ತಾಂತಗಳು.

ಅಫ್ಘಾನಿಸ್ಥಾನದ ಅಮೀರರು ಪೇಷಾವರ್ ಪಟ್ಟಣದಲ್ಲಿರುವ ಜುಮ್ಮಾ ಮಸೀತಿಯನ್ನು ಪರಾಂಬರಿಸಿ ಅದರ ರಿಪೇರಿಗಾಗಿ ೧೦ ಸಾವಿರ ರೂಪಾಯಿ ಕೊಟ್ಟರು

****

ರಂಗೂನ್ ಪಟ್ಟಣದಲ್ಲಿ ಎರಡಲ್ಲಿ ಕಟ್ಟಿದ ಮೂವತ್ತು ಮನೆಗಳಿಗೆ, ಎರಡು ಚೌಕಗಳು ಬೆಂಕಿ ಬಿದ್ದು ಸುಟ್ಟುಹೋದವು ಮನೆಯವರಿಗೆ ಸುಮಾರು ೪೦ ಸಾವಿರ ರೂಪಾಯಿ ನಷ್ಟವಾಯಿತು

****

ಕಪೂರ್ಥಲ ಸಂಸ್ಥಾನದ ಮಹಾರಾಜರವರ ಮೊಮ್ಮಗನಾದ ಷಂಷೇರ್‌ಸಿಂಗ್ ಎಂಬಾತನು ಲಂಡನ್ ಪಟ್ಟಣದಲ್ಲಿ ಅಲಿಸ್ ಮಾಡ್ ಆಂಡರ್‌ಸನ್ ಎಂಬ ಯುವತಿಯನ್ನು ವರಿಸಿ ವಿವಾಹ ಮಾಡಿಕೊಂಡನು

****

ಅಫ್ಘಾನಿಸ್ಥಾನದ ಅಮೀರರು ಕಲ್ಕತ್ತೆಗೆ ಹೋದಾಗ್ಗೆ ಅಲ್ಲಿನ ಮ್ಯುನಿಸಿಪಾಲಿಟಿಯವರು ಅವರಿಗೆ ಚಿನ್ನದ ತಗಡಿನ ಮೇಲೆ ಅಡ್ರೆಸ್ಸನ್ನು ಕೆತ್ತಿಸಿ ಚಿತ್ರಕೆಲಸ ಮಾಡಿದ ಕೈ ಪೆಟ್ಟಿಗೆಯಲ್ಲಿಟ್ಟು ಒಪ್ಪಿಸಬೇಕೆಂದು ಗೊತ್ತುಮಾಡಿದಾರೆ

****

ಕಳೆದ ವಾರ ಬೊಂಬಾಯಿ ಪಟ್ಟಣದ ಬಿಂಡಿಬಜಾರ್ ಎಂಬ ಬಸ್ತಿಯಲ್ಲಿ ಒಬ್ಬ ಐಶ್ವರ್ಯವಂತನ ಭಾರೀ ಮನೆಯು ಆಕಸ್ಮಾತ್ತಾಗಿ ಬಿದ್ದು ಹದಿನೈದು ಜನರು ಮೃತಪಟ್ಟರು ಹನ್ನೊಂದು ಮಂದಿಗೆ ಗಾಯಗಳಾದವು ಮೂವರು ಮಾತ್ರ ಅಪಾಯದಿಂದ ತಪ್ಪಿಸಿಕೊಂಡರು

****

ಬೊಂಬಾಯಿ ಪಟ್ಟಣದ ಮೆ॥ ಪೈರೋಜಿ ನಸರವಾಂಜಿ ಸಿವಾರ್ಯ ಎಂಬ ಪಾರ್ಸಿ ದೊಡ್ಡ ಮನುಷ್ಯನು ಒಡೋದಾ ರಾಜಧಾನಿಯಲ್ಲಿ ತನ್ನ ಆಸ್ತಿಯಿಂದ ಒಂದು ಧರ್ಮಶಾಲೆಯನ್ನೂ ಒಂದು ಅಗ್ನಿದೇವಸ್ಥಾನವನ್ನೂ ಕಟ್ಟಿಸಿ ಅವುಗಳಿಗೆ ೪೦ ಸಾವಿರ ರೂಪಾಯಿ ಫಂಡು ಹಾಕಿರುತ್ತಾನೆ.

ಸಿಲೋನ್ (ಲಂಕಾ) ದ್ವೀಪದ ಮುಖ್ಯ ರೇವು ಪಟ್ಟಣ ಕೊಲಂಬೋದಲ್ಲಿ ಒಂದು ಕಾರ್ಖಾನೆಗೆ ಬೆಂಕಿ ಬಿದ್ದು ಕ ಸಾಮಾನುಗಳೂ, ಯಂತ್ರಗಳೂ ಸುಟ್ಟುಹೋದವು ಕಾರ್ಖಾನೆಯ ಯಜಮಾನರಿಗೆ ಹಳೆವರೆ ಲಕ್ಷ ರೂಪಾಯಿ ಯಿತೆಂದು ಸಮಾಚಾರ ಬಂದಿದೆ

****

ಬಂಗಾಳಾ ಅಧಿಪತ್ಯಕ್ಕೆ ಸೇರಿದ ಬಿರ್ಭೂಂ ಡಿಸ್ಟ್ರಿಕ್ಟಿನ ಸಬ್ ರೆಜಿಸ್ಟ್ರಾರು ಈಗಿನ ಎಡ್ವರ್ಡ್ ಚಕ್ರವರ್ತಿಯವರ ಹೊಸ ರೂಪಾಯಿಗಳನ್ನು ಜನರು ತಂದುಕೊಟ್ಟರೆ ಅಂಗಿ ಹಳೇ ರೂಪಾಯಿಗಳನ್ನೇ ತಂದು ಕೊಡಬೇಕೆಂದೂ ಪತ್ರಗಳನ್ನು ರೆಜಿಸ್ಟರ್ ಮಾಡುವದಿಲ್ಲವೆಂದೂ ಹೇಳುತ್ತ ಅಲ್ಲಿನ ಒಂದು ಪತ್ರಿಕೆಯು ತಿಳಿಸುತ್ತದೆ.

****

ಕಲ್ಕತ್ತೆಯಲ್ಲಿ ಅಮೀರ್ ಷೇಕ್ ಎಂಬೊಬ್ಬ ಐಶ್ವರ್ಯವಂತ ೩ ಸಾವಿರ ರೂಪಾಯಿನ ಕರೆನ್ಸಿ ನೋಟುಗಳನ್ನು ಕಟ್ಟಿ ಪೆಟ್ಟಿಗೆಯಲ್ಲಿಟ್ಟಿದ್ದನು ಅವನ ಚಿಕ್ಕ ಪ್ರಾಯದ ಮಗನು ಒಡೆದು ನೋಟುಗಳನ್ನು ಅಪಹರಿಸಿದನು ಪೋಲೀಸಿನವರು ಗನ ಮೇಲೆ ಮೊಕದ್ದಮೆ ಮಾಡಿದರು ಮ್ಯಾಜಿಸ್ಟ್ರೇಟರು ಇಪ್ಪತ್ತು ಛಡೀ ಏಟು ಹೊಡಿಸಿ ಬಿಟ್ಟುಬಿಟ್ಟರು

****

೧೯೦೬ ನೇ ಇಸವಿ ಜನವರಿಯಿಂದ ನೋವೆಂಬರ್ ಅಖೈರು ಹಿಂದೂಸ್ಥಾನಕ್ಕೆ ಅನ್ಯದೇಶಗಳಿಂದ ೩೦,೩೦,೦೨,೬೪೩ ರೂ ಚಿನ್ನ ಬೆಳ್ಳಿಗಳು ಆಮದಾಗಿ ಬಂದವು ಹಿಂದೂಸ್ಥಾನದಿಂ ಕಾಲದಲ್ಲಿ ಪರದೇಶಗಳಿಗೆ ೩॥ ಕೋಟಿ ರೂಪಾಯಿನ ಚಿ ಗಳು ರಫ್ತಾಗಿ ಹೋಗಿರುತ್ತವೆ ಇದರಿಂದ ಈ ರಾಷ್ಟ್ರದಲ್ಲಿ ಕೋಟಿ ರೂಪಾಯಿನಷ್ಟು ಉಳಿಕೊಂಡಂತಾಯಿತು

****

ಪಂಜಾಬ್ ಅಧಿಪತ್ಯದ ಕಾಡುಗಳಿಂದ ೧೯೦೫—೦೬ ನೆ ಸಲ್ಲಿ ೯೭ ಲಕ್ಷ ತೊಲೆಗಳನ್ನು ಕಡಿದು ಬಿಕರಿ ಮಾಡಿದ ಹಿಂದಿನ ಸಾಲಿನಲ್ಲಿ ೩೪ ಲಕ್ಷ ತೊಲೆಗಳನ್ನು ಮಾತ್ರ ಕಡಿದು ತ ಕೋಲ ಮತ್ತು ಕಾಂಗ್ರ ಕಣಿವೆಗಳಲ್ಲಿ ಭೂಕಂಪದ ದೆಸೆಯಿಂ ನಷ್ಟವಾದ ಮನೆಗಳನ್ನು ಕಟ್ಟುವದಕ್ಕೆ ಸರ್ಕಾರದವರು ನ ಮ್ಮ ಕೆಟ್ಟಾಗಿ ಪ್ರಜೆಗಳಿಗೆ ಕೊಡಿಸಿದ್ದರಿಂದ ಕಾಡಿನ ಉತ್ಪತ್ತಿಯಾಗಲು ಕಾರಣವಾಯಿತು

****

ಅಫ್ಘಾನಿಸ್ಥಾನದ ಮಾಜಿ ಅಮೀರ್ ಷೇರ್ ಅಲಿ ಖಾನ ಮೊಮ್ಮಗ ಸರ್ದಾರ್ ಮಹಮದ್ ಅಯೂಬ್ ಖಾನರವ ಪಾಲಿಟಿಕಲ್ ಪೆನ್‌ಷನರ ಸಹಿತ ಲಾಹೋರ್ ಪಟ್ಟಣದಲ್ಲಿ ವಾಸ ಕ ದನಾರ ಇವರ ಒಬ್ಬ ಯುರೋಪಿಯನ್ ಹೆಂ ಸನ್ನು ಹತ್ತು ಮಾಸ ಹೇ ಕರನ್ನು ಕರೆದುಕೊಂಡು ಬಿ ಯಿಗೆ ಎಂದು ಜಾಗ ತ್ತು ಜರ್ಮನ್ ಮುಂತಾದ ಕಡೆಗಳಲ್ಲಿ ರ ಸಂಚಾರ ಹೊರಟು ಪ್ರಯಾಣಮಾಡಿರುತ್ತಾರೆ

****

ರಂಗೂನ್ ಪಟ್ಟಣದಲ್ಲಿ ಷೇಕ್ ಮಹಮದ್, ಸ್ವಾಮಿ ಎಂಬ ಯರ್ಮಂತಿರ ಇಬ್ಬರು ಕಂಟ್ರ್ಯಾಕ್ಟರುಗಳು ಒಂದು ಸರ್ಕಾ ಟ್ರಾಕ್ಟನ್ನು ತಮಗೇನೇ ಕೊಡಿಸಬೇಕೆಂದು ಸೆಕ್ರೆಟರಿ ಕೌಲಿಂಗ್ ಎಂಬ ಸರ್ದಾರನಿಗೆ ಎರಡು ಸಾವಿರ ರೂಪಾಯಿ ಕೊಟ್ಟರು ಆ ಸೆಕ್ರೆಟರಿಯವರು ಮೊಕದ್ದಮೆ ಮಾಡಿದರು ಕ್ಟ್ ಮ್ಯಾಜಿಸ್ಟ್ರೇಟರು ದಸ್ತಾವಿ ಮಾಡಿ ಪ್ರತಿ ಒಬ್ಬನಿಗೂ ಸಾವಿರ ರೂಪಾಯಿನಂತೆ ಜುಲ್ಮಾನೆಯನ್ನು ವಿಧಿಸಿ ಅವರು ಕೊಟ್ಟಿದ್ದ ಎರಡು ಸಾವಿರ ರೂಪಾಯಿಯನ್ನೂ ಸರ್ಕಾರಕ್ಕೆ ಕೊಂಡರು

****

ಸೀಲ್ದಾಡ್ ಪಟ್ಟಣದಲ್ಲಿ ಶಾವಿತ್ರೀಬಾ ಎಂಬುವಳ ಮನೆ ಅವಳ ಚಾಕರನಾದ ಜೋರ್ಜ್ ಹುಲೂವಿ ಎಂಬವನೂ ಅವನ ಹ ಯಾದ ಮಾರ್ಥ ಎಂಬುವಳೂ ವಾಸಿಸುತ್ತಿದ್ದರು ಕೆಲವು ದಿನದ ಶಾವಿತ್ರಿಯು ಮಾರ್ಥಗೆ ತಿನ್ನುವದಕ್ಕೆ ಒಂದು ಹಣ್ಣನ್ನು ಕೊ ಮಾರ್ಥೆಯು ಅದನ್ನು ತಿಂದು ಮತ್ತೊಂದನ್ನು ಕದ್ದು ತಿಂ ಟ್ಟಳು ಇದರಿಂದ ಮನೆಯ ಯಜಮಾನಿಗೆ ಬಹಳ ಕೋಪ ಶಾವಿತ್ರಿಯು ಕಡ್ಡಿಗಳನ್ನು ಕೆಂಪಗೆ ಕಾಯಿಸಿ ಆ ಹುಡುಗಿಯ ಮೈ ಲೆಲ್ಲಾ ಬರೆ ಹಾಕಿದಳು ಇದು ಪೋಲೀಸಿನವರಿಗೆ ತಿಳಿದು ಬಂದು ದ್ದನು ಆಗ ವಿಚಾರಣೆಯಾಗುತ್ತಿದೆ

****

ಚೀನಾ ರಾಜ್ಯದಲ್ಲಿ ಚಕ್ರವರ್ತಿಯವರು ಪ್ರಕಟಿಸಿರುವ ಹೊಸ ಇಸ್ತಿಹಾರ್‌ನಾಮೆಯ ಪ್ರಕಾರ ಅಲ್ಲಿನ ಪ್ರಜೆಗಳು ಅಫೀಮನ್ನು ಇನ್ನು ಹತ್ತು ವರ್ಷದೊಳಗಾಗಿ ಬಿಟ್ಟುಬಿಡಬೇಕಾ ಈ ಅಫೀಂ ವ್ಯಾಪಾರದಿಂದ ಆ ರಾಜ್ಯಕ್ಕೆ ಪ್ರತಿ ವರ್ಷವೂ ಸುಮಾರು ೧ ಕೋಟಿ ೮೫ ಲಕ್ಷ ರೂಪಾಯಿಯೂ ಹಿಂದುಸ್ಥಾನದ ಸರ್ಕಾರಿ ರೈತರಿಗೂ ೧೦ ಕೋಟಿ ೪೩ ಲಕ್ಷ ರೂಪಾಯಿಯೂ ಉತ್ಪತ್ತಿಯಾಗುವದು ನಿಂತುಹೋಗುತ್ತೆ ಹ್ಯಾಗೂ ಚೀನಾ ಗವರ್ನಮೆಂಟಿನವರು ಅಫೀಂ ಸೇವನೆಯನ್ನು ತಮ್ಮ ರಾಜ್ಯದಿಂದ ನಿರ್ನಾಮ ಮಾಡಬೇಕೆಂದು ನಿಶ್ಚಯಿಸಿಕೊಂಡಿದಾರೆ ಟೀಂಟ್ಸಿನ್ ಪಟ್ಟಣದಲ್ಲೂ ಭಾರೀ ಪಟ್ಟಣಗಳಲ್ಲೂ ಅಫೀಂ ಮಂಡಿಗಳನ್ನೂ ಆಲಯಗಳನ್ನೂ ಮುಚ್ಚಿಸಿಬಿಟ್ಟರು

****

ಹೈದರಾಬಾದ್ ಸಂಸ್ಥಾನದ ನಮ್ಬರ ಹತ್ತರ ಸಲಹೆಗಾರ ನವಾಬ್ ಮಹಮದ್ ರಾಜೇಯುದ್ದೀನ್ ಖಾನ್ ಬಹಾದರ್ ದಂಗರವರು ಕಳೆದ ಬುಧವಾರ ಸಿಕಂದರಾಬಾದ್ ಪಟ್ಟಣದಲ್ಲಿ ಕಾಲವಾದರು ಇವರು ನೈಜಾಮರ ಆಲೋಚನಾ ಸಭೆಯ ಮೆಂಬರಾಗಿದ್ದು ಇಂಗ್ಲೆಂಡಿನಲ್ಲೂ ಇತರ ಯೂರೋಪಿಯನ್ ರಾಜ್ಯಗಳಲ್ಲೂ ಎಲ್ಲಾ ಸಂಚರಿಸಿ ಬಂದಿದ್ದರು ಅವಲ್ಲದೆ ಅರಬ್ಬಿ ಮತ್ತು ಪಾರ್ಸಿ ಭಾಷೆ

...ಬಳ್ಳಿ ಪರಿಶ್ರಮವನ್ನು ಹೊಂದಿ, ಒಂದು ಖಗೋಳಶಾಸ್ತ್ರಾಲಯ... ಕಟ್ಟಿಸಿ, ಅದರಲ್ಲಿ ಬಹಳ ದೊಡ್ಡದಾದ ದೂರದರ್ಶಕ ಯಂತ್ರ... ಇರಿಸಿಟ್ಟಿರುತ್ತಾರೆ. ಅವರು ಸತ್ತ ದಿನ ಸರ್ಕಾರಿ ಆಫೀಸು... ಗಳನ್ನು ಗೌರವಾರ್ಥವಾಗಿ ಮುಚ್ಚಿದ್ದರು. ಅವರು ಮೃತರಾ... ...ಅವರಿಗೆ ೬೩ ವಯಸ್ಸಾಗಿತ್ತು.

****

ಅಜ್ಮೀರ್ ಪಟ್ಟಣದಲ್ಲಿ ಕಳೆದ ವಾರ ಬಹಳ ಐಶ್ವರ್ಯವಂತಳಾದ ...ಬಹದ್ದೂರ್ ಸೇತುಸೋಭಾಗ್ಮಲ್ ಎಂಬ ಜೈನ ಹೆಂಗಸು

ಕಲ್ಕತ್ತೆಯಲ್ಲಿ ಒಂದು ದಿನ ಸಾಯಂಕಾಲ ಒಬ್ಬ ಮಾರ್ವಾಡಿ ಹೆಂಗಸು ತನ್ನ ಮುಖವನ್ನು ಸೀರೆ ಸೆರಗಿನಿಂದ ಮುಚ್ಚಿಕೊಂಡು ಅಳುತ್ತಿದ್ದ ಮತ್ತೊಬ್ಬಳ ಕೈಯನ್ನು ಹಿಡಿದುಕೊಂಡು ಹೋಗುತ್ತಿದ್ದಳು. ಅವಳ ಸೆರಗಿನ ಮೇಲೆಯೂ ಕಾಲಿನ ಮೇಲೂ ರಕ್ತದ ಗುರುತುಗಳಿದ್ದವು. ಜೊತೆಯಲ್ಲಿ ಹೋಗುತ್ತಿದ್ದವಳು ತನ್ನ ಜೊತೆಗಾತಿಯು ಆಕಸ್ಮಾತ್ತಾಗಿ ದಾರಿಯಲ್ಲಿ ಮಗುವನ್ನು ಹೆತ್ತಳೆಂತಲೂ ಆದರಿಂದ ಅವಳು ತುಂಬಾ ಸಂಕಟಪಡುತ್ತಿರುವಳೆಂತಲೂ ದಾರಿಯಲ್ಲಿ ಹೋಗುವವರಿಗ ಹೇಳಿಕೊಂಡು ಅವರಿಂದ ಹಣವನ್ನು ಸಂಪಾದಿಸುತ್ತಾ ಹೋಗುತ್ತಿ...

...ಕೊಂಡು ಬಾಯಿನಿಂದ ಕಿತ್ತು ರಕ್ತ ಸುರಿದು ಮಾಂಸ ಎಲುಬುಗಳನ್ನು ಬಾಯಲ್ಲಿ ಕಚ್ಚಿಕೊಂಡು ಚತುರ್ದಿಕ್ಕಿನಲ್ಲಿರುವ ಜನರಿಗೆ ತೋರಿಸಿದ ಕೂಡಲೆ ಒಬ್ಬರ ಮೇಲೊಬ್ಬರು ಬೀಳುತ್ತಾ ನೂಕಾಟ ಏಳುತ್ತಾ ನೋಡಿದ್ದಾಯಿತು. ತಾ ೪ ನೆ ಶುಕ್ರವಾರ ಚಿತ್ರದುರ್ಗದವರಿಗೂ ಮೊದಲೇರಿದ್ದವರಿಗೂ ಕುಸ್ತಿ ಬಿಟ್ಟರು. ನೋಟ ನೋಡುವ ಜನರು ಒಬ್ಬರಿಗೊಬ್ಬರು ಗುದ್ದಾಟಮಾಡಿದರು. ಯಾವತ್ತು ಜನರು ಎಗ್ಗನೆದ್ದು ಅವರವರ ಮನೆಗೆ ಹೊರಟು ಹೋದರು. ತಾ ೫ ನೆ ಶನಿವಾರ ಕುಸ್ತಿ ಬಿಟ್ಟರು. ಪ್ರಾತಃಕಾಲದಲ್ಲಿ ಬಿಟ್ಟ ಜೋಡಿ ಪೈಕಿ ಹೊಸಕೆರೆ ಊರವನನ್ನು ಸೋಲಿಸಿ ಚಿತ್ರದುರ್ಗದವನು ಕಡಗ ಗೆದ್ದನು

ದುಷ್ಟ ಮೃಗಗಳ ಕಾಟವು.

ಹೋಳಧಾಳಿನಲ್ಲಿ ಹುಲಿ ಷಿಕಾರಿ ಮಾಡಿದ್ದು.

ಹೋಳಧಾಳು ಗ್ರಾಮಕ್ಕೆ ಸಮೀಪವಾದ ಚಿಕಹೊಳೊಂದವೆಂಬ ಕಾಡಿನಲ್ಲಿ ಕಳೆದ ತಾ. ೧೩ ನೆ ಭಾನುವಾರ ಅದರ ಸಮೀಪದಲ್ಲಿ ವಾಸವಾಗಿದ್ದ ಭೈರಗಸ್ಟ ಸಣ್ಣಯ್ಯನ ಬಾಪ್ತು ಒಂದು ಬೇಸಾಯದ ಎತ್ತನ್ನು ಹಗಲು ಹೊತ್ತಿನಲ್ಲಿ ಮೇಯುವದಕ್ಕೆ ಹೊರಗೆ ಹೋದ ಸಮಯದಲ್ಲಿ ಒಂದು ಹುಲಿ ಬಂದು ಅದರ ಮೇಲೆ ಬಿದ್ದು ಅಲೆಯನ್ನು ತನ್ನ ಪಂಜಾಗಳಿಂದ ಹೊಡೆದು ಬಗೆಯಿತು. ಎತ್ತು ಒಳ್ಳೆ ಘಟ್ಟ ರಾಸಾದ್ದರಿಂದ ಆ ಏಟು ಸಹಿಸಿಕೊಂಡು ತನ್ನ ಒಡೆಯನ ಮನೆಗೆ ಓಡಿ ಬಂತು ಇದರ ಒಡೆಯನು ಅದನ್ನು ನೋಡಿ ಪಶ್ಚಾತ್ತಾಪ ಪಟ್ಟು ಇದು ಹುಲಿಯಿಂದಾಯಿತೆಂದು ನಿಶ್ಚೈಸಿದನು. ಆ ಎತ್ತಿನ ತಲೆಯನ್ನು ಕಟ್ಟಿ ಏನೇನೋ ಕಂಡ ಔಷಧಿಯನ್ನು ಮಾಡಿದನು. ಅದರ ಪ್ರಯೋಜನಕ್ಕೆ ಬಾರದೆ ೭ ದಿವಸ ಬದುಕಿದ್ದು ಸತ್ತು ಹೋಯ್ತು. ಇದಕ್ಕೆ ಮುಂಚೆ ಹುಲಿ ೩, ೪ ಸಣ್ಣ ಕರುಗಳನ್ನು ತಿಂದು ಇತ್ತು. ಮಾರನೆ ಬೆಳಿಗ್ಗೆ ಸಣ್ಣಯ್ಯ ಈತನ ಅಳಿಯ ರಾಮಣ್ಣ ಇವನ ಬಾಬು ಮನೆಯ ಲಾಲು ಸಾಬಿ ಇನ್ನು ೩, ೪ ಜನಗಳು ಹುಲಿಯ ಷಿಕಾರಿಗಾಗಿ ಒಳ್ಳೊಳ್ಳೆ ನಾಯಿಗಳ ಕರದುಕೊಂಡು, ಬಂದೂಖುಗಳು ತಗದುಕೊಂಡು ಹೋದರು. ಅವರು ಸದರಿ ಕಾಡಿನಲ್ಲಿ ಹುಡುಕುತ್ತಿರುವಾಗ್ಗೆ ಮೇಲ್ಕಂಡ ರಾಮಣ್ಣನ ಎದುರಿಗೆ ಆ ಹುಲಿಯು ಬಂತು. ಕೂಡ್ಲೆ ಈತನು ಬಂದೂಕಿನಿಂದ ಹೊಡೆದನು. ಗುಂಡು ಮುಂದಿನ ಕಾಲಿನ ಚಿಪ್ಪೆಗೆ ಬಿತ್ತು ಆಗ ಈತನ ಮಗನು ಬಂದು ಗುಂಡು ಹೊಡೆದನು. ಒಂದು ತಪ್ಪಿತು ಇನ್ನೊಂದು ಅದರ ಕಪಾಳಕ್ಕೆ ತಗಲಿತು, ಅದರೂ ಅದು ಸಾಯಲಿಲ್ಲ. ಅಷ್ಟರಲ್ಲೇ ಮೇಲ್ಕಂಡ ಲಾಲುಸಾಬಿಯು ಮುಂದೆ ನುಗ್ಗಲು ಹುಲಿಯು ಅರ್ಭಟಿಸಿತು. ಅಷ್ಟಕ್ಕೆ ಅವನು ಹೆದರಿ ತನ್ನ ಕೈಲಿದ್ದ ಬಂದೂಕು ಅಲ್ಲಿ ಬಿಸಾಟು ಹಿಂತಿರಿಗಿದನು ಕೂಡಲೇ ಹುಲಿ ಇವನ ಮೇಲೆರಗಿ ಇವನ ಬಲಕಾಲು ಹಿಮ್ಮಡಿಯನ್ನು ಕಚ್ಚಿತು ರಾಮಣ್ಣನು ಮತ್ತೊಂದು ಗುಂಡು ಹೊಡೆಯಲು ಹುಲಿ ಇವನ ಕಾಲು ಬಿಟ್ಟಿತು ಲಾಲುಸಾಬಿಗೆ ಕಾಲು ಬಹಳ ಬಾಧೆಯಾದ್ದರಿಂಲೂ, ಇಷ್ಟು ಗಂಟೆ ಮೇಟು ತಿಂದರೂ ಹುಲಿ ಸಾಯದ್ದರಿಂದಲೂ ಯುಕ್ತವಿಲ್ಲದೆ ಈ ಷಿಕಾರಿದಾರರು ಭಗ್ನ ಮನೋರಥರಾಗಿ ಹಿಂದಕ್ಕೆ ಬಂದು ಬಿಟ್ಟರು ಆ ಸಾಯಂಕಾಲ ಊರೆಲ್ಲಾ ಸುದ್ದಿಯಾಯ್ತು. ಪಟೇಲರು ಸಾರಿಸಿದರು ಬೆಳಿಗ್ಗೆ ತಾ ೧೪ ನೆ ಮಂಗಳವಾರ ಎಲ್ಲರೂ ಸನ್ನಾಹ ಮಾಡಿಕೊಂಡು ಕಾಡಿಗೆ ಹೋದರು ಹುಲಿಯನ್ನು ಹುಡುಕುತ್ತಾ ಇರುವಲ್ಲಿ ಅದು ಒಂದು ಗುಂಡಿಯಲ್ಲಿ ಬಾಧೆಯಿಂದ ನಾಲ್ಕು ಕಾಲು ಮೇಲೆ ಮಾಡಿಕೊಂಡು ಮಲಗಿತ್ತು ಕೂಡಲೆ ಬಂದೂಕುಗಳ ಸುರುಟು ಆಯ್ತು ಅದು ಸತ್ತು ಹೋಯ್ತು ಅದನ್ನು ಹೊತ್ತುಕೊಂಡು ಬೈಲಿಗೆ ತರಲು ಎಲ್ಲರೂ ನೋಡಿ ಸಂತೋಷಪಟ್ಟರು ಇದು ಬಹಳ ಹಳೇ ಹುಲಿಯಾಗಿಯೂ, ಬಹಳ ಕಡೆ ಏಟು ತಿಂದು ತಪ್ಪಿಸಿಕೊಂಡು ಬಂದದ್ದಾಗಿಯೂ, ಬಹಳ ಜನಗಳ ಗೋಕಾಯಿಗಳನ್ನು ನಾಶಮಾಡಿದ್ದಾಗಿಯೂ ಗೊತ್ತಾಗುತ್ತೆ ಈ ಹುಲಿ ೧೦ ನೆಟ್ಟು ಉದ್ದವೂ, ೩ ಅಡಿ ಎತ್ತರವೂ ಇತ್ತು. ಇದನ್ನು ತೆಗೆದುಕೊಂಡು ಬಂದು ಒಳ್ಳೆ ಅಲಂಕಾರಮಾಡಿ ಗ್ರಾಮದಲ್ಲೆಲ್ಲಾ ಮೆರವಣಿಗೆ ಮಾಡಿಸಿ ಸಮಸ್ತ ಜನರೂ ನೋಡುವಂತೆ ಗ್ರಾಮದ ಮುಂದೆ ಕಟ್ಟಿಸಿತ್ತು, ಮಾರನೆ ದಿವಸ ಇದರ ಚರ್ಮವನ್ನು ಸುಲಿಸಿತು. ಇದನ್ನು ತಾಲ್ಲೂಕು ಕಚೇರಿಗೆ ಕಳುಹಿಸಬೇಕೆಂದು ಇರುತ್ತೆ ಈ ಮಲನಾಡು ಪ್ರಾಂತ್ಯ ಹಾಲಿ ಸರ್ಕಾರದವರು ಮಾಡಿರುವ ಕಾನೂನು ಮೇರೆ ಷಿಕಾರಿ ಮಾಡಲು ಅನುಕೂಲವಿಲ್ಲದ್ದರಿಂದ ಇಂಥಾ ದುಷ್ಟಮೃಗಗಳು ಬಹಳವಾಗಿ ಸೇರಿಕೊಂಡು ಧೈರ್ಯವಾದ ನಮ್ಮಗಳ ಗೋಕಾಯಿಗಳನ್ನು ಬಹಳವಾಗಿ ನಾಶನಮಾಡುತ್ತಿವೆ. ಆ ಪ್ರಾಂತ್ಯದ ಜನಗಳಿಗೆ ಈಗ ಷಿಕಾರಿ ಮಾಡುವ ಅಭ್ಯಾಸವೇ ಮರೆತು ಹೋಗಿರುತ್ತೆ. ಸರ್ಕಾರದವರು ನಮ್ಮ ಮಲನಾಡು ಪ್ರಾಂತ್ಯಕ್ಕಾದರೂ ಷಿಕಾರ ಮಾಡಬಹುದೆಂಬ ರೂಲಸು ತಿದ್ದುಪಡಿ ಮಾಡಿಕೊಟ್ಟಲ್ಲಿ ನಮ್ಮಗಳಿಗೆ ಆಗುವ ನಷ್ಟಕಷ್ಟಗಳು ಬಹಳವಾಗಿ ಉಳಿದೀತೆಂದು ಪ್ರಾರ್ಥಿಸುತ್ತೇವೆ. ಕಾಡುಕಂದಿಗಳ ಗುಂಪಂತೂ ಸಾಕಿದ ಕಂದಿಗಳ ಗುಂಪಿನಂತೆ ಹಗಲೇ ಹಾದೆ ಮನೆ ಹಿಂದಿನ ಹಿತ್ತಲು ಕಾಫಿ ತೋಟಗಳಲ್ಲಿ ಒಡ್ಯಾಡುತ್ತವೆ. ಕಾಫಿ ಧಾರಣೆ ಕಮ್ಮಿಯಾಗಿರುವದರಿಂದ ಅನೇಕ ತೋಟಗಳು ಕಾಮಗಾರಿ ಇಲ್ಲದೆ ಪಾಳುಬಿದ್ದಿರುವದರಿಂದ ಇಂಥಾ ಮೃಗಗಳು ಸೇರಿಕೊಳ್ಳಲು ಇನ್ನೂ ಸಹಾಯವಾಗಿದೆ.

ಗೌಡ.

ಒಬ್ಬ ಮನುಷ್ಯ ಎರಡು ಕಿರುಬಗಳನ್ನು ಹೊಡೆದು ಗಾಯಪಟ್ಟಿದ್ದು.

ಚಿಕ್ಕನಾಯಕನಹಳ್ಳಿ ತಾಲ್ಲೂಕು ತುರುವೇಕೆರೆ ಸಮ್ಮತು ಗೂಳಿಹಳ್ಳಿ ಊರಿನಲ್ಲಿರುವ ಲಿಂಗಾಯತರ ಮರಳಪ್ಪನೆಂಬವರ ಆಳುಗಳು ದನಗಳನ್ನು ಮೇಯಿಸಿಕೊಂಡು ತಾ ೧೦ನೇ ಸಾಯಂಕಾಲ ೬!! ಗಂಟೆ ಸಮಯದಲ್ಲಿ ಹೊಡೆದುಕೊಂಡು ರೊಪ್ಪದಲ್ಲಿ ಕೂಡಿ ಮನೆಗೆ ಹೋಗುತ್ತಾ ಇರುವಷ್ಟರೊಳಗೆ ದನಗಳೆಲ್ಲಾ ಬೆದರಿದ ಹಾಗೆ ಆ ರೊಪ್ಪದಲ್ಲಿ ಶಬ್ದವಾಯಿತು. ಆ ಶಬ್ದವನ್ನು ಅವರು ಕೇಳಿ—ಏನೋ ದನಗಳ ರೊಪ್ಪದಲ್ಲಿ ಶಬ್ದವಾಯಿತು ನೋಡಿಕೊಂಡು ಬರೋಣ ಎಂದು ಹೊರಟು ಬಂದು ದನಗಳನ್ನು ನೋಡಲಾಗಿ ದನಗಳೆಲ್ಲಾ ಹೆದರಿದ ಹಾಗೆ ಸ್ವಲ್ಪ ಕಾಣಿಸಿತು ಇವರು ಏನೂ ಇಲ್ಲವೆಂದು ಹೊರಟು ಹೋದರು ಮತ್ತು ಇವರು ಮರುದಿನ ಹೋಗಿ ದನಾ ಕಾಯುವಾಗ ಹಸುಗಳಲ್ಲಿ ಒಳ್ಳೆ ಪ್ರಾಯದ ೧೦ ರೂಪಾಯಿ ಬೆಲೆ ಬಾಳುವಂತಹ ಹಸು ಕಾಣಿಸಲಿಲ್ಲ. ಇದು ರಾತ್ರಿ ನಡೆದ ಗಲಾಟೆಯಲ್ಲಿ ಏನೋ ಆಗಿರಬಹುದೆಂದು ಇಲ್ಲಿ ಕಿರುಬಗಳ ಕಾಟ ಇದ್ದುದರಿಂದ ಅಲ್ಲಿ ಇಲ್ಲಿ ಹುಡುಕಲು ಸ್ವಲ್ಪ ದೂರದಲ್ಲಿ ಕಾಡುಪ್ರದೇಶ, ಈ ಊರಿನ ಹೊಲ, ತೋಟಗಳ ಕಡೆ, ಗಿಡ ಕಾಡಿನ ಪ್ರದೇಶದಲ್ಲಿ ಹೋದಾಗ ಒಂದು ಪೊದೆಯಲ್ಲಿ ಸತ್ತು ಬಿದ್ದಿದ್ದ ಆ ಹಸುವನ್ನು ನೋಡಿದರು. ಇದರ ಹೊಟ್ಟೆ ಮತ್ತು ಕುತ್ತಿಗೆಯನ್ನು ಕೀಳಿ ಮಾಂಸವನ್ನು ಕಾಡುಮೃಗಗಳು ತಿಂದ ಹಾಗೆ ಕಾಣಿಸಿತು ಆಗ ಅದನ್ನು ಕಿರುಬಗಳೇ ತಿಂದಿರಬಹುದೆಂದು ತಿಳಿದು, ಇಲ್ಲಿಗೆ ಒಂದು ಮೈಲಿ ಘಾಸಲೆಯ ಮಾರೊಳಗ್ರಾಮದಲ್ಲಿ ಇರುವ ಮರಾಟೆಯ ಗೋವಿಂದನಿಗೆ ಹೇಳಲಾಗಿ ಇವನು ತನ್ನ ಜೋಡಿನಲ್ಲಿ ತುಪಾಕಿಯಲ್ಲಿ ಆ ಕ್ಷಣವೇ ಗುಂಡನ್ನು ಬಾರ್ ಮಾಡಿಕೊಂಡು ಹೊರಟು, ಆ ಹಸು ಸತ್ತುಬಿದ್ದಿದ್ದ ಸ್ಥಳಕ್ಕೆ ಹೋಗಿ ಅಲ್ಲಿಗೆ ಹತ್ತು ಹನ್ನೆರಡು ಗಜ ದೂರದಲ್ಲಿ ಮರೆಯಾಗಿದ್ದ ಒಂದು ಸ್ಥಳದಲ್ಲಿ ಆ ಕಿರುಬಗಳು ಬಂದರೆ ಹೊಡಿಯಬೇಕೆಂದು ರಾತ್ರಿಯೆಲ್ಲಾ ಕಾದನು ಅವು ಒಂದೂ ಬರಲಿಲ್ಲ. ಮತ್ತು ಅವನು ತಾ. ೧೫ನೆ ಬೆಳಿಗ್ಗೆ ೬ ಗಂಟೆ ಸಮಯದಲ್ಲಿ ಹೊರಡುವಷ್ಟರಲ್ಲಿ ಒಂದು ಕಿರುಬವು ಕಾಣಿಸಿತು. ಅದನ್ನು ತುಪಾಕಿಯಿಂದ ಹೊಡಿಯಲಾಗಿ ಗುಂಡು ಆ ಕಿರುಬನ ಅಸ್ಥಿಕೋಶದ ಮಾರ್ಗವಾಗಿ ನುಗ್ಗಿ ಇನ್ನೊಂದು ಕಡೆ ಹೋಯಿತು. ಆ ಕಿರುಬನ ಕರುಳುಗಳೂ ೨ ಗಜ ಹೊರಗೆ ಹೊರಟದ್ದು ಓಡಿಹೋಗಿ ಒಂದು ಕಾಲುದಾರಿಯ ಪಕ್ಕದಲ್ಲಿ ಒಂದು ಪೊದೆಯನ್ನು ಸೇರಿತು. ಇಷ್ಟರಲ್ಲಿ ಇನ್ನೊಂದು ಇದಕ್ಕಿಂತಲೂ ದೊಡ್ಡದಾದ ಕಿರುಬವು ಅಲ್ಲಿಗೆ ಬಂತು. ಅವನು ಇನ್ನೊಂದು ಗುಂಡಿನಿಂದ ಅದನ್ನೂ ಹೊಡೆದನು ಅದಕ್ಕೆ ಗುಂಡು ಈಲದ್ದೊಮೆಗಳ ಒಳಹೊಕ್ಕು ಹೊರಟದ್ದರಿಂದ ಸ್ವಲ್ಪ ಓಡಿ ಅಲ್ಲೆ ಸತ್ತುಬಿತ್ತು ಮೊದಲು ಹೊಡೆದ ಆ ಹೆಣ್ಣು ಕಿರುಬವನ್ನು ಸತ್ತಿದೆಯೋ ಏನೋ ಎಂದು ನೋಡುವುದಕ್ಕೆ ಇನ್ನೊಬ್ಬನ ಗುಂಡು ಬಾರ್ ಮಾಡಿದ ತುಪಾಕಿಯನ್ನು ತೆಗೆದುಕೊಂಡು ಹೋಗಲಾಗಿ ಆ ಕಿರುಬವು ಅಲ್ಲಿಂದ ಎದ್ದಿತು ಇವನು ತುಪಾಕಿಯಿಂದ ಹೊಡೆದನು ಗುಂಡು ತಪ್ಪಿತು ಆ ಕಿರುಬವು ಆ ಕ್ಷಣವೇ ಇವನ ಮೇಲೆ ಬೀಳಲಾಗಿ ಇವನು ಅದು ತನ್ನ ಕುತ್ತಿಗೆಯನ್ನು ಕಡಿಯತ್ತೆಂದು ತನ್ನ ಎಡದ ಕೈರಟ್ಟೆಯನ್ನು ಅದರ ಬಾಯಿಗೆ ಒಟ್ಟಿ, ಅದು ಕಡಿಯುತ್ತಿರುವಾಗ್ಗೆ ಬೊಗ್ಗಿ ಅದರ ಬಾಯಿ ಹಿಡಿಯುವಷ್ಟು ಒಂದು ಕಲ್ಲನ್ನು ತೆಗೆದುಕೊಂಡು ಅದರ ಬಾಯಿಯಲ್ಲಿ ಇಟ್ಟನು ಅದು ಅಲ್ಲಿ ನಿಂದ ಕಡಿಯುವುದನ್ನು ತಪ್ಪಿಸಿಕೊಂಡು ಅವನು ಅದರ ಕುತ್ತಿಗೆಯನ್ನು ಭದ್ರವಾಗಿ ಹಿಸುಕಿ ಕೊಂದನು. ಊರಿನ ಜನಗಳು ತುಪಾಕಿ ಹಾರಿದ್ದನ್ನು ಕೇಳಿ ಕಿರುಬ ಹೊಡನಿರಬಹುದೆಂದು ನೋಡುವದಕ್ಕೆ ಬಂದು ಬೇಂಬಟ ಹೊಡಿಯುತ್ತಾ, ದೂರದಲ್ಲಿ ನಿಂತಿದ್ದರೇ ಹೊರತು ಹತ್ತರಕ್ಕೆ ಯಾರೂ ಬರಲಿಲ್ಲ. ಆ ಗೋವಿಂದನಿಗೆ ಶಕ್ತ ಹಲ್ಲುಗಳು ಕಟ್ಟಿಯಲ್ಲಿ ನೆಟ್ಟು ಇನ್ನೂ ಅವನ ಮೈಯಲ್ಲಿ ೧೦ ಉಗುರಿನ ಸ್ವಲ್ಪ ಗಾಯಗಳಾಗಿದ್ದರೂ ಲಕ್ಷ್ಯ ಮಾಡದೆ ಆ ರಕ್ತಿಗೆ ಒಂದು ವಸ್ತ್ರವನ್ನು ಸುತ್ತಿಕೊಂಡು ಆ ಕಿರುಬಗಳನ್ನು ಗಾಡಿಯ ಮೇಲಕ್ಕೆ ಹೇರಿ ಊರಿಯಾರಿಗೆ ತೆಗೆದುಕೊಂಡುಬಂದು, ಇಲ್ಲಿಯ ಆಸ್ಪತ್ರೆ ಡಾಕ್ಟರಿಗೆ ತನ್ನ ಗಾಯಗಳನ್ನು ತೋರಿಸಲಾಗಿ ಇವನು ರಕ್ತಮಯವಾಗಿದ್ದದ್ದನ್ನು ಡಾಕ್ಟರು ನೋಡಿ ಅದನ್ನೆಲ್ಲಾ ತೊಳೆಯುವ ಉದ್ದೇಶ್ಯ ಕಾರ್ಬೋಲಿಕ್ ಲೋಷನಿನಿಂದ ಸಿರಂಜ್ ಮಾಡಲು ಒಂದು ರಂಧ್ರದಿಂದ ಇನ್ನೊಂದು ರಂಧ್ರದಲ್ಲಿ ನೀರು ಹೊರಡುತ್ತಾ ಇತ್ತು. ಇದು ಒಬ್ಬ ಡಾಕ್ಟರು ಮಾಡುವ ಚಿಕಿತ್ಸೆಯಿಂದ ಜಾಗ್ರತೆ ವಾಸಿಯಾಗಬಹುದು ಮತ್ತು ಈ ಕಿರುಬಗಳಿಂದ ಅನೇಕ ದನಗಳೂ ಕುರಿ ಮೇಕೆಗಳೂ ಹತವಾಗುತ್ತಿದ್ದವು ದುಷ್ಟ ಪ್ರಾಣಿಗಳು ಸತ್ತದ್ದಕ್ಕೆ ಇಲ್ಲಿಯ ಸುತ್ತಮುತ್ತಿನ ಗ್ರಾಮಸ್ಥರೆಲ್ಲಾ ಬಹಳ ಸಂತೋಷದಿಂದಿರುವರು ಅದರೂ ಇಲ್ಲಿಯ ಕಾಡುಗಳಲ್ಲಿ ಇನ್ನೂ ಅನೇಕ ಚಿರತೆಗಳಿವೆ. ಹುಲಿಗಳು ಮಾತ್ರ ಇಲ್ಲ. ಬೆಳೆಯನ್ನು ಹಾಳುಮಾಡುವ ಕಾಡುಕಂದಿಗಳೂ ಹಿಂದುಹಿಂದಾಗಿವೆ ಈಗ ಹೊಡೆದ ಕಿರುಬಗಳಲ್ಲಿ ಗಂಡು ಕಿರುಬವು ೪ ಅಡಿ ಉದ್ದವಾಗಿಯೂ ಹೆಣ್ಣು ಕಿರುಬವು ೬ ಅಡಿ ಉದ್ದವಾಗಿಯೂ ಇವೆ.

ಎಚ್ ಆರ್ ಕೆ

ಇಂಡಿಯಾ ದೇಶದ ವೃತ್ತಾಂತಗಳು.

ಆಫ್ಘಾನಿಸ್ತಾನದ ಅಮೀರರು ಪೆಷಾವರ್ ಪಟ್ಟಣದಲ್ಲಿರುವ ಜುಮ್ಮಾ ಮಸೀತಿಯನ್ನು ಪರಾಂಬರಿಸಿ ಅದರ ರಿಪೇರಿಗಾಗಿ ೧೦ ಸಾವಿರ ರೂಪಾಯಿ ಕೊಟ್ಟರು.

*****

ರಂಗೂನ್ ಪಟ್ಟಣದಲ್ಲಿ ಮರದಲ್ಲಿ ಕಟ್ಟಿದ ಮೂವತ್ತು ಮನೆಗಳಲ್ಲ ಎರಡು ಚೌಕಗಳು ಬೆಂಕಿ ಬಿದ್ದು ಸುಟ್ಟುಹೋದವು. ಮನೆಯವರಿಗೆ ಸುಮಾರು ೪೦ ಸಾವಿರ ರೂಪಾಯಿ ನಷ್ಟವಾಯಿತು.

*****

ಕಪೂರ್ಥಲ ಸಂಸ್ಥಾನದ ಮಹಾರಾಜರವರ ಮೊಮ್ಮಗನಾದ ಮಂಷೇರ್‌ಸಿಂಗ್ ಎಂಬಾತನು ಲಂಡನ್ ಪಟ್ಟಣದಲ್ಲಿ ಅಲಿಸ್ ಮಾಡ್ ಅಂಡರ್‌ಸನ್ ಎಂಬ ಯುವತಿಯನ್ನು ವರಿಸಿ ವಿವಾಹ ಮಾಡಿಕೊಂಡನು

*****

ಆಫ್ಘಾನಿಸ್ತಾನದ ಅಮೀರರು ಕಲ್ಕತ್ತೆಗೆ ಹೋದಾಗ್ಗೆ ಅಲ್ಲಿನ ಮ್ಯುನಿಸಿಪಾಲಿಟಿಯವರು ಅವರಿಗೆ ಚಿನ್ನದ ತಗಡಿನ ಮೇಲೆ ಅಡ್ರೆಸ್ಸನ್ನು ಕೆತ್ತಿಸಿ ಚಿತ್ರಕೆಲಸ ಮಾಡಿದ ಕೈ ಪಟ್ಟಿಗೆಯಲ್ಲಿಟ್ಟು ಒಪ್ಪಿಸಬೇಕೆಂದು ಗೊತ್ತುಮಾಡಿದಾರೆ.

*****

ಕಳೆದ ವಾರ ಬೊಂಬಾಯಿ ಪಟ್ಟಣದ ಭಿಂಡಿಬಜಾರ್ ಎಂಬ ಬಸ್ತಿಯಲ್ಲಿ ಒಬ್ಬ ಐಶ್ವರ್ಯವಂತನ ಭಾರೀ ಮನೆಯು ಆಕಸ್ಮಾತ್ತಾಗಿ ಬಿದ್ದು ಹದಿನೈದು ಜನರು ಮೃತಪಟ್ಟರು. ಹನ್ನೊಂದು ಮಂದಿಗೆ ಗಾಯಗಳಾದವು. ಮೂವರು ಮಾತ್ರ ಅಪಾಯದಿಂದ ತಪ್ಪಿಸಿಕೊಂಡರು.

*****

ಬೊಂಬಾಯಿ ಪಟ್ಟಣದ ಮೊಬ್ಬೈರಾಂಜಿ ಸಸೂರ್ವಾಂಜಿ ಸಿರ್ವಾಯಿ ಎಂಬ ಪಾರ್ಸಿ ದೊಡ್ಡ ಮನುಷ್ಯನು ಒದೋದಾ ರಾಜಧಾನಿಯಲ್ಲಿ ತನ್ನ ಆಸ್ತಿಯಿಂದ ಒಂದು ಧರ್ಮಶಾಲೆಯನ್ನೂ ಒಂದು ಅಗ್ನಿ ದೇವಸ್ಥಾನವನ್ನೂ ಕಟ್ಟಿಸಿ ಅವುಗಳಿಗೆ ೪೦ ಸಾವಿರ ರೂಪಾಯಿ ಫಂಡು ಹಾಕಿರುತ್ತಾನೆ.

ಸಿಲೋನ್ (ಲಂಕಾ) ದ್ವೀಪದ ಮುಖ್ಯ ರೇವು ಪಟ್ಟಣ ಕೊಲಂಬೋದಲ್ಲಿ ಒಂದು ಕಾರ್ಖಾನೆಗೆ ಬೆಂಕಿ ಬಿದ್ದು ಕಟ್ಟಡ ಸಾಮಾನುಗಳೂ, ಯಂತ್ರಗಳೂ ಸುಟ್ಟುಹೋದವು. ಈ ಕಾರ್ಖಾನೆಯ ಯಜಮಾನರಿಗೆ ಏಳೂವರೆ ಲಕ್ಷ ರೂಪಾಯಿ ನಷ್ಟ ಉಂಟಾಯಿತೆಂದು ಸಮಾಚಾರ ಬಂದಿದೆ.

*****

ಬಂಗಾಳಾ ಆಧಿಪತ್ಯಕ್ಕೆ ಸೇರಿದ ಬಿರ್ಭೂಂ ಡಿಸ್ಟ್ರಿಕ್ಟಿನಲ್ಲಿ ಸಬ್ ರೆಜಿಸ್ಟ್ರಾರು ಈಗಿನ ಎಡ್ವರ್ಡ್ ಚಕ್ರವರ್ತಿಯವರ ತಲೆಯುಳ್ಳ ಹೊಸ ರೂಪಾಯಿಗಳನ್ನು ಜನರು ತಂದುಕೊಟ್ಟರೆ ಅಂಗೀಕರಿಸದೆ ಹಳೇ ರೂಪಾಯಿಗಳನ್ನೇ ತಂದು ಕೊಡಬೇಕೆಂತಲೂ ಇಲ್ಲವಾದರೆ ಪತ್ರಗಳನ್ನು ರೆಜಿಸ್ಟರ್ ಮಾಡುವದಿಲ್ಲವೆಂದೂ ಹೇಳುತ್ತಾರೆಂದು ಅಲ್ಲಿನ ಒಂದು ಪತ್ರಿಕೆಯು ತಿಳಿಸುತ್ತದೆ.

****

ಕಲ್ಕತ್ತೆಯಲ್ಲಿ ಅಮೀರ್ ಷೇಕ್ ಎಂಬೊಬ್ಬ ವ್ಯಾಪಾರಿಯು ೩ ಸಾವಿರ ರೂಪಾಯಿನ ಕರೆನ್ಸಿ ನೋಟುಗಳನ್ನು ಕಟ್ಟಿದ ಥೈಲಿಯನ್ನು ಜೇಬಿನಲ್ಲಿಟ್ಟಿದ್ದನು ಅವನ ಚಿಕ್ಕ ಪ್ರಾಯದ ಮಗನು ಅದನ್ನು ಒಡೆದನು ನೋಟುಗಳನ್ನು ಅಪಹರಿಸಿದನು ಪೋಲೀಸಿನವರು ಆ ಮಗನ ಮೇಲೆ ಮೊಕದ್ದಮೆ ಮಾಡಿದರು. ಮ್ಯಾಜಿಸ್ಟ್ರೇಟರು ಅವನಿಗೆ ಇಪ್ಪತ್ತು ಛಡೀ ಏಟು ಹೊಡಿಸಿ ಬಿಟ್ಟುಬಿಟ್ಟರು

*****

೧೯೦೬ ನೇ ಇಸವಿ ಜನವರಿಯಿಂದ ನೋವೆಂಬರ್ ಆಖೈರು ಹಿಂದೂಸ್ಥಾನಕ್ಕೆ ಅನ್ಯ ದೇಶಗಳಿಂದ ೩,೩೦,೦೦,೪೯೩ ರೂಪಾಯಿ ಬೆಲೆ ಬಾಳುವ ಚಿನ್ನ ಬೆಳ್ಳಿಗಳು ಆಮದಾಗಿ ಬಂದವು ಹಿಂದೂಸ್ಥಾನದಿಂದ ಆ ಕಾಲದಲ್ಲಿ ಪರದೇಶಗಳಿಗೆ ೭೩ ಕೋಟಿ ರೂಪಾಯಿನ ಚಿನ್ನ ಬೆಳ್ಳಿಗಳು ರಫ್ತಾಗಿ ಹೋಗಿರುತ್ತವೆ ಇದರಿಂದ ಈ ರಾಷ್ಟ್ರದಲ್ಲಿ ೨ ಕೋಟಿ ರೂಪಾಯಿನಷ್ಟು ಉಳಿಕೊಂಡಂತಾಯಿತು

****

ಪಂಜಾಬ್ ಆಧಿಪತ್ಯದ ಕಾಡುಗಳಿಂದ ೧೯೦೪—೦೫ ನೇ ಸಾಲಿನಲ್ಲಿ ೧೯ ಲಕ್ಷ ತೊಲೆಗಳನ್ನು ಕಡಿದು ವಿಕರಿ ಮಾಡಿರುತ್ತಾರೆ. ಹಿಂದಿನ ಸಾಲಿನಲ್ಲಿ ೩೯ ಲಕ್ಷ ತೊಲೆಗಳನ್ನು ಮಾತ್ರ ಕಡಿದು ತಂದಿದ್ದರು. ಮತ್ತು ಕಾಗ್ರು ಕಣಿವೆಗಳಲ್ಲಿ ಭೂಕಂಪದ ದೆಸೆಯಿಂದ ನಷ್ಟವಾದ ಮನೆಗಳನ್ನು ಕಟ್ಟುವದಕ್ಕೆ ಸರ್ಕಾರದವರು ಮರಮುಟ್ಟನ್ನು ಬಿಟ್ಟಿಯಾಗಿ ಪ್ರಜೆಗಳಿಗೆ ಕೊಡಿಸಿದ್ದರಿಂದ ಕಾಡಿನ ಉತ್ಪತ್ತಿ ಕಡಿಮೆಯಾಗಲು ಕಾರಣವಾಯಿತು

*****

ಆಫ್ಘಾನಿಸ್ತಾನದ ಮಾಜಿ ಅಮೀರ್ ಷೇರ್ ಅಲಿ ಖಾನರ ಕುಮಾರರಾದ ಸರ್ದಾರ್ ಮೊಹಮದ್ ಅಯೂಬ್ ಖಾನರವರು ಬಹುಕಾಲದಿಂದಲೂ ಪರಿವಾರ ಸಹಿತ ಲಾಹೋರ್ ಪಟ್ಟಣದಲ್ಲಿ ವಾಸಮಾಡಿ, ಇಂಡಿಯಾ ಸರ್ಕಾರದ ಇವರು ಒಬ್ಬ ಯೂರೋಪಿಯನ್ ಡಾಕ್ಟರನ್ನೂ ಇತ್ತು ಮಂದಿ ಸೇವಕರನ್ನೂ ಕರೆದುಕೊಂಡು ಬೊಂಬಾಯಿಗೆ ಬಂದು ಪೂನಾ ಇತ್ಯಾದಿ ಜರ್ಮನ್ ಮುಂತಾದ ಕಡೆಗಳಲ್ಲಿ ಸಂಚಾರ ಮಾಡಿಕೊಂಡು ಬರಲು ಪ್ರಯಾಣಮಾಡುತ್ತಾರೆ

*****

ರಂಗೂನ್ ಪಟ್ಟಣದಲ್ಲಿ ಷೇಕ್ ಮಹಮದ್, ಸ್ವಾಮಿ ಎಂಬ ಇಬ್ಬರು ಕಂಟ್ರಾಕ್ಟರುಗಳು ಒಂದು ಸರ್ಕಾರಿ ಕಂಟ್ರಾಕ್ಟನ್ನು ತಮಗೇನೇ ಕೊಡಿಸಿಕೊಡಬೇಕೆಂದು ಸೆಕ್ರೆಟರಿ ಮಿ ಕೌಲಿಂಗ್ ಎಂಬ ಅದ್ಧಿಕಾರಿಗೆ ಎರಡು ಸಾವಿರ ರೂಪಾಯಿ ಲಂಚ ಕೊಟ್ಟರು ಆ ಸೆಕ್ರಿಟರಿಯವರು ಮೊಕದ್ದಮೆ ಮಾಡಿದರು. ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟರು ದರ್ಯಾಫ್ತು ಮಾಡಿ ಪ್ರತಿ ಒಬ್ಬನಿಗೂ ೧೦ ಸಾವಿರ ರೂಪಾಯಿನ ಜುಲ್ಮಾನೆಯನ್ನು ವಿಧಿಸಿ ಅವರು ಆ ಕೊಟ್ಟಿದ್ದ ಎರಡು ಸಾವಿರ ರೂಪಾಯಿಯನ್ನೂ ಸರ್ಕಾರಕ್ಕೆ ಸೇರಿಕೊಂಡರು

*****

ಸೀಲ್ದಾಡ್ ಪಟ್ಟಣದಲ್ಲಿ ಹಾತ್ರೀಪಾ ಎಂಬವಳ ನಾಯಿಯು ಅವಳ ಚಾಕರನಾದ ಜೋಗಿ ಹುಲಾವಿ ಎಂಬವನೂ ಅವನ ಹೆಂಡತಿಯಾದ ಮೂರ್ತಿ ಎಂಬವಳೂ ವಾಸಿಸುತ್ತಿದ್ದರು ಕೆಲವು ದಿವಸದ ಹಿಂದೆ ರಾತ್ರಿಯು ಮೂರ್ತಿಗೆ ತಿನ್ನುವದಕ್ಕೆ ಒಂದು ಪಣ್ಣನ್ನು ಕೊಟ್ಟಳು ಮೂರ್ತಿಯು ಅದನ್ನು ತಿಂದು ಮತ್ತೊಂದನ್ನೂ ಕದ್ದು ತಿಂದುಬಿಟ್ಟಳು. ಇದರಿಂದ ಮನೆಯ ಯಜಮಾನಿಗೆ ಬಹಳ ಕೋಪ ಬಂದು ಚತ್ರಿಯ ಕಡ್ಡಿಗಳನ್ನು ಕೆಂಪಗೆ ಕಾಯಿಸಿ ಆ ಹುಡುಗಿಯ ಮೈ ಮೇಲೆಲ್ಲಾ ಬರೆ ಹಾಕಿದಳು ಇದು ಪೋಲೀಸಿನವರಿಗೆ ತಿಳಿದು ಬಂದು ಮೊಕದ್ದಮೆ ಆಗಿ ವಿಚಾರಣೆಯಾಗುತ್ತಿದೆ.

*****

ಚೀನಾ ರಾಜ್ಯದಲ್ಲಿ ಚಕ್ರವರ್ತಿಯವರು ಪ್ರಕಟಿಸಿರುವ ಬಹಿರಂಗವಾದ ಇಸ್ತಿಹಾರ್‌ನಾಮೆಯ ಪ್ರಕಾರ ಅಲ್ಲಿನ ಪ್ರಜೆಗಳು ಅಫೀಂ ಸೇವನೆಯನ್ನು ಇನ್ನು ಹತ್ತು ವರ್ಷದೊಳಗಾಗಿ ಬಿಟ್ಟುಬಿಡಬೇಕಾಗಿದೆ ಈ ಅಫೀಂ ವ್ಯಾಪಾರದಿಂದ ಆ ರಾಜ್ಯಕ್ಕೆ ಪ್ರತಿ ವರ್ಷವೂ ಸುಮಾರು ೧ ಕೋಟಿ ೬೦ ಲಕ್ಷ ರೂಪಾಯೂ ಹಿಂದೂಸ್ಥಾನದ ಸರ್ಕಾರಕ್ಕೂ ರೈತರಿಗೂ ೧೦ ಕೋಟಿ ೪೫ ಲಕ್ಷ ರೂಪಾಯೂ ಉತ್ಪತ್ತಿ ಇರುವುದು ನಿಂತುಹೋಗುತ್ತೆ. ಹ್ಯಾಗೂ ಚೀನಾ ಗವರ್ನಮೆಂಟಿನವರು ಅಫೀಂ ಸೇವನೆಯನ್ನು ತಮ್ಮ ರಾಜ್ಯದಿಂದ ನಿರ್ನಾಮ ಮಾಡಬೇಕೆಂದು ನಿಶ್ಚಯಿಸಿಕೊಂಡಿದಾರೆ ಟೀನ್‌ಟ್ಸಿನ್ ಪಟ್ಟಣದಲ್ಲೂ ಇತರ ಭಾರೀ ಪಟ್ಟಣಗಳಲ್ಲೂ ಅಫೀಂ ದಂಗಗಳನ್ನೂ ಆಲಯಗಳನ್ನೂ ಮುಚ್ಚಿಸಿಬಿಟ್ಟರು

*****

ಹೈದರಾಬಾದ್ ಸಂಸ್ಥಾನದ ನವಾಬರ ಹತ್ತಿರ ಸಂಬಂಧಿಗಳಾದ ನವಾಬ್ ಮಹಮದ್ ರಾಜೇಯುದ್ದೀನ್ ಖಾನ್ ಜಾಫರ್ ಜಂಗ್‌ರವರು ಕಳೆದ ಬುಧವಾರ ಸಿಕಂದರಾಬಾದ್ ಪಟ್ಟಣದಲ್ಲಿ ಕಾಲವಾದರು ಇವರು ನೈಜಾಮರ ಆಲೋಚನಾ ಸಭೆಯ ಮೆಂಬರಾಗಿದ್ದರು ಇಂಗ್ಲೆಂಡಿನಲ್ಲೂ ಇತರ ಯೂರೋಪಿಯನ್ ರಾಜ್ಯಗಳಲ್ಲೂ ಎರಡುಸಲ ಸಂಚರಿಸಿ ಬಂದಿದ್ದರು ಅದಲ್ಲದೆ ಅರಬ್ಬಿ ಮತ್ತು ಪಾರ್ಸಿ

...ಬಳ್ಳ ಪರಿಶ್ರಮವನ್ನು ಹೊಂದಿ, ಒಂದು ಖಗೋಳಶಾಸ್ತ್ರಾಲಯ ...ಕಟ್ಟಿಸಿ, ಅದರಲ್ಲಿ ಬಹಳ ದೊಡ್ಡದಾದ ದೂರದರ್ಶಕ ಯಂತ್ರ ...ಕೂಡಿಟ್ಟಿರುತ್ತಾರೆ. ಅವರು ಸತ್ತ ದಿನ ಸರ್ಕಾರಿ ಕೋರ್ಟು ...ಗಳನ್ನು ಗೌರವಾರ್ಥವಾಗಿ ಮುಚ್ಚಿದ್ದರು. ಅವರು ಮೃತರ ...ಅವರಿಗೆ ೬೩ ವಯಸ್ಸಾಗಿತ್ತು.

****

...ಜೈಪೂರ್ ಪಟ್ಟಣದಲ್ಲಿ ಕಳೆದ ವಾರ ಬಹಳ ಐಶ್ವರ್ಯವಂತಳಾದ ...ಬಹದ್ದೂರ್ ಸೇತುಸೋಭಗ್ಯಾಲ್ ಎಂಬ ಜೈನ ಹೆಂಗಸು ...ಟ್ಟಳು. ಅವಳಿಗೆ ತೊಂಭತ್ತು ವಯಸ್ಸಾಗಿತ್ತು. ಅವಳು ಬಹ...ರವಿಷ್ಠಳಾಗಿಯೂ, ಧರ್ಮಬುದ್ಧಿಯುಳ್ಳವಳಾಗಿಯೂ ಇದ್ದು, ...ವರೆಗೂ ೨೫ ಲಕ್ಷ ರೂಪಾಯಿ ಧರ್ಮ ಮಾಡಿರುತ್ತಾ... ಅವಳ ಉತ್ತರ ಕ್ರಿಯಾದಿಗಳು ಸಾವಿರಾರು ಜನರು ಸೇರಿ ಬಹಳ ...

ಕಲ್ಕತ್ತೆಯಲ್ಲಿ ಒಂದು ದಿನ ಸಾಯಂಕಾಲ ಒಬ್ಬ ಮಾರ್ವಾಡಿ ಹೆಂಗಸು ತನ್ನ ಮುಖವನ್ನು ಸೀರೆ ಸೆರಗಿನಿಂದ ಮುಚ್ಚಿಕೊಂಡು ಅಳುತ್ತಿದ್ದ ಮತ್ತೊಬ್ಬಳ ಕೈಯನ್ನು ಹಿಡಿದುಕೊಂಡು ಹೋಗುತ್ತಿದ್ದಳು. ಅವಳ ಸೆರಗಿನ ಮೇಲೆಯೂ ಕಾಲಿನ ಮೇಲೂ ರಕ್ತದ ಗುರುತುಗಳಿದ್ದವು. ಜೊತೆಯಲ್ಲಿ ಹೋಗುತ್ತಿದ್ದವಳು ತನ್ನ ಜೊತೆಗಾತಿಯು ಅಕಸ್ಮಾತ್ತಾಗಿ ದಾರಿಯಲ್ಲಿ ಮಗುವನ್ನು ಹೆತ್ತಳೆಂತಲೂ ಅದರಿಂದ ಅವಳು ತುಂಬಾ ಸಂಕಟಪಡುತ್ತಿರುವಳೆಂತಲೂ ದಾರಿಯಲ್ಲಿ ಹೋಗುವವರಿಗೆ ಹೇಳಿಕೊಂಡು ಅವರಿಂದ ಹಣವನ್ನು ಸಂಪಾದಿಸುತ್ತಾ ಹೋಗುತ್ತಿದ್ದಳು. ಆ ಮಾರ್ಗವಾಗಿ ಹೋಗುತ್ತಿದ್ದ ಪೊಲೀಸ್ ಸೂಪರಿಂಟೆಂಡೆಂಟರು ಒಂದು ಡೋಲಿಯನ್ನು ತರಿಸಿ ರೋಗಿಯನ್ನು ಹತ್ತಿರ ಇದ್ದ ಆಸ್ಪತ್ರೆಗೆ ತೆಗೆದುಕೊಂಡು ಹೋಗಿ ಪರೀಕ್ಷಿಸಲಾಗಿ ಅವಳ ಬಟ್ಟೆಯ ಮೇಲಿದ್ದ ಕೆಂಪು ಗುರುತುಗಳು ಬಣ್ಣದವುಗಳಾಗಿದ್ದವು. ಹೊಸದಾಗಿ ಹುಟ್ಟಿದ ಮಗುವಾದರೋ ಚಿಂದೀ ಬಟ್ಟೆಗಳಿಂದ ಮಾಡಲ್ಪಟ್ಟು ತಲೆಗೆ ...

...ಕೊಂಡು ಬಾಯಿಂದ ಕಿತ್ತು ರಕ್ತ ಕಾರುವ ಮಾಂಸ ಎಲುಬುಗಳನ್ನು ಬಾಯಲ್ಲಿ ಕಚ್ಚಿಕೊಂಡು ಚತುರ್ದಿಕ್ಕಿನಲ್ಲಿರುವ ಜನರಿಗೆ ತೋರಿಸಿದ ಕೂಡಲೆ ಒಬ್ಬರ ಮೇಲೊಬ್ಬರು ಬೀಳುತ್ತಾ ನೂಕುತ್ತಾ ಏಳುತ್ತಾ ನೋಡಿದ್ದಾಯಿತು. ತಾ ೪ ನೆ ಶುಕ್ರವಾರ ಚಿತ್ರದುರ್ಗದವರಿಗೂ ಮೊದಿಕೇರಿಪುರದವರಿಗೂ ಕುಸ್ತಿ ಬಿಟ್ಟರು. ನೋಟ ನೋಡುವ ಜನರು ಒಬ್ಬರಿಗೊಬ್ಬರು ಗುದ್ದಾಟ ಮಾಡಿದರು. ಯಾವತ್ತು ಜನರು ದಿಗ್ಗನೆದ್ದು ಅವರವರ ಮನೆಗೆ ಹೊರಟು ಹೋದರು. ತಾ. ೫ ನೆ ಶನಿವಾರ ಕುಸ್ತಿ ಬಿಟ್ಟರು. ಪ್ರಾತಃಕಾಲದಲ್ಲಿ ಬಿಟ್ಟ ಜೋಡಿ ಸ್ಥಳೀಕ ಮೊದಿಕೇರೆ ಊರವನನ್ನು ಸೋಲಿಸಿ ಚಿತ್ರದುರ್ಗದವನು ಪಗಡಿ ಗೆದ್ದನು. ಮತ್ತು ಸಾಯಂಕಾಲದಲ್ಲಿ ೧, ೨, ೩ ಜೋಡಿ ಬಿಟ್ಟರು. ಮೊದಿಕೇರೆ ಪುರದವನು ಒಂದು ವಸ್ತ್ರ ಗೆದ್ದನು. ಪುನಃ ಬೇರೆ ಜೋಡಿ ಬಿಟ್ಟರು. ಸಾಯಂಕಾಲ ೬ ಘಂಟೆ ವರಿಗೂ ಕುಸ್ತಿ ಮಾಡಿದರು. ಒಬ್ಬರೂ ಸೋಲಲಿಲ್ಲ. ಸಾಯಂಕಾಲವಾದ್ದರಿಂದ ಸಿಳ್ಳಿಸಿದ್ದಾಯಿತು. ದೇವರ ಉತ್ಸವ ಬಹಳ ವಿಜೃಂಭಣೆಯಿಂದ ಮಾಡಿದರು. ರಾತ್ರಿ ತುರುವನೂರಿನ ...

SUPPLEMENT TO THIS ISSUE.

☞ ದಯವಿಟ್ಟು ತಮ್ಮ ಮಿತ್ರಮಂಡಲಿಯಲ್ಲಿ ಪ್ರಚುರಪಡಿಸಿರಿ.

ಶ್ರೀ.

ಓಂ ಸರ್ವಂ ವಿಕಟಮಯಂ ಜಗತ್.

ಘಟಕಟನೆ

Annual Subscription Rs. 1-0-0
For patrons (yearly) Rs. 4-0-0
Single copy..........0-2-0

ವಾರ್ಷಿಕ ಚಂದಾ (ಅಂಚೆ ಕೂಲಿ ಸಹಾ)...೧-೦-೦
ಪೋಷಕರಿಗೆ (ವರ್ಷಕ್ಕೆ)...೪-೦-೦
ಬಿಡಿ ಸಂಚಿಕೆಗೆ...೦-೨-೦



VIKATAPRATAPA.

ವಿಕಟ ಪ್ರತಾಪ

ಎಂಬ

ಸಚಿತ್ರವೂ, ವಿಚಿತ್ರವೂ ಆದ

ಮಾಸಪತ್ರಿಕೆ.

VERY LARGELY CIRCULATED.

ದೇಶಾಭಿಮಾನಿಗಳಾದ ಸಹೋದರರುಗಳಿರಾ!

ಈ ನಮ್ಮ "ವಿಕಟಪ್ರತಾಪ" ವೆಂಬ ಮಾಸಪತ್ರಿಕೆಯು ಹೊರಟು ಆರು ತಿಂಗಳುಗಳಾದುವು. ಈಗ ೬ನೆಯ ಸಂಚಿಕೆಯು ಹೊರಟಿದೆ, ಮೊದಲಿನ ೬ ಸಂಚಿಕೆಗಳಲ್ಲಿರುವ ವಿಷಯಗಳ ರುಚಿಯನ್ನು ಕ್ರಮೇಣ ಹೇಗೆ ಹೆಚ್ಚಿಸುತ್ತ ಬರುತ್ತಿದ್ದೇವೆಂಬ ಅಂಶವು ವಾಚಕಮಹಾಶಯರಿಗೆ ಸುಲಭಗೋಚರವಾಗಬಹುದಾದುದರಿಂದ ಸದರಿ ಪತ್ರಿಕೆಯನ್ನು ಎಷ್ಟು ಶ್ರದ್ಧೆಯಿಂದ ನಡೆಯಿಸುತ್ತಿದ್ದೇವೆಂಬುದನ್ನು ನಾವು ಇಲ್ಲಿ ಹೇಳಬೇಕಾದುದಿಲ್ಲ.

...ಈಗಿನ ಕಾಲದ ಕನ್ನಡ ಪತ್ರಿಕೆಗಳ ಸ್ಥಿತಿ. ಕಾಲವು ಹೆಚ್ಚುತ್ತ ಬಂದಹಾಗೆಲ್ಲ ...ನಮ್ಮ ಜನರಿಗೆ ಕನ್ನಡ ಭಾಷೆಯಲ್ಲ ಅಭಿಲಾಷೆಯೇ ಹೋಯಿತು. ಯಾರನ್ನು ನೋಡಿದರೂ ಇಂಗ್ಲೀಷು ಪತ್ರಿಕೆಗಳನ್ನೇ ವಿಶೇಷವಾಗಿ ಓದುತ್ತಿದ್ದಾರೆಯೇ ಹೊ...

ದುಷ್ಟ ಮೃಗಗಳ ಕಾಟವು.

ಹೋಳಧಾಳಿನಲ್ಲಿ ಹುಲಿ ಷಿಕಾರಿ ಮಾಡಿದ್ದು.

ಹೋಳಧಾಳು ಗ್ರಾಮಕ್ಕೆ ಸಮೀಪವಾದ ಚಿಕಣಕೊಂಡವೆಂಬ ಕಾಡಿನಲ್ಲಿ ಕಳೆದ ತಾ. ೧೩ ನೆ ಭಾನುವಾರ ಅದರ ಸಮೀಪದಲ್ಲಿ ವಾಸವಾಗಿದ್ದ ಭೈರಗಡ್ಡೆ ಸಣ್ಣಯ್ಯನ ಬಾಬ್ತು ಒಂದು ಬೇಸಾಯದ ಎತ್ತನ್ನು ಹಗಲು ಹೊತ್ತಿನಲ್ಲಿ ಮೇಯುವದಕ್ಕೆ ಹೊರಗೆ ಹೋದ ಸಮಯದಲ್ಲಿ ಒಂದು ಹುಲಿ ಬಂದು ಅದರ ಮೇಲೆ ಬಿದ್ದು ತಲೆಯನ್ನು ತನ್ನ ಪಂಜಾಗಳಿಂದ ಹೊಡೆದು ಬಗೆಯಿತು. ಎತ್ತು ಒಳ್ಳೆ ಘಟ್ಟಿ ಯಾದ್ದರಿಂದ ಆ ಏಟು ಸಹಿಸಿಕೊಂಡು ತನ್ನ ಒಡೆಯನ ಮನೆಗೆ ಓಡಿ ಬಂತು. ಇದರ ಒಡೆಯನು ಅದನ್ನು ನೋಡಿ ಪಶ್ಚಾತ್ತಾಪ ಪಟ್ಟು ಇದು ಹುಲಿಯಿಂದಾಯಿತೆಂದು ನಿಶ್ಚೈಸಿದನು. ಆ ಎತ್ತಿನ ತಲೆಯನ್ನು ಕಟ್ಟಿ ಏನೇನೋ ಕಂಡ ಔಷಧಿಯನ್ನು ಮಾಡಿದನು. ಅದರ ಪ್ರಯೋಜನಕ್ಕೆ ಬಾರದೆ ೭ ದಿವಸ ಬದುಕಿದ್ದು ಸತ್ತು ಹೋಯಿತ್ತು. ಇದಕ್ಕೆ ಮುಂಚೆ ಹುಲಿ ೩, ೮ ಸಣ್ಣ ಕರುಗಳನ್ನು ತಿಂದು ಇತ್ತು. ಮಾರನೆ ಬೆಳಿಗ್ಗೆ ಸಣ್ಣಯ್ಯ ಈತನ ಅಳಿಯ ರಾಮಣ್ಣ ಇವನ ಜಾಜು ... ಸತ್ತು ಬಿದ್ದಿದ್ದ ಆ ಹಸುವನ್ನು ನೋಡಿದರು. ಇದರ ಹೊಟ್ಟೆ ಮತ್ತು ಕುತ್ತಿಗೆಯನ್ನು ಕೀಳಿ ಮಾಂಸವನ್ನು ಕಾಡುಮೃಗಗಳು ತಿಂದ ಹಾಗೆ ಕಾಣಿಸಿತು. ಆಗ ಅದನ್ನು ಕಿರುಬಗಳೇ ತಿಂದಿರಬೇಕೆಂದು ತಿಳಿದು, ಇಲ್ಲಿಗೆ ಒಂದು ಮೈಲಿ ಫಾಸಲೆಯ ಮಾರೋಳಗ್ರಾಮದಲ್ಲಿ ಇರುವ ಮರಾಟೆಯ ಗೋವಿಂದನಿಗೆ ಹೇಳಲಾಗಿ ಇವನು ತನ್ನ ಜೋಡುನಲ್ಲಿ ತುಬಾಕಿಯಲ್ಲಿ ಆ ಕ್ಷಣವೇ ಗುಂಡನ್ನು ಬಾರ್ ಮಾಡಿಕೊಂಡು ಹೊರಟು, ಆ ಹಸು ಸತ್ತುಬಿದ್ದಿದ್ದ ಸ್ಥಳಕ್ಕೆ ಹೋಗಿ ಅಲ್ಲಿಗೆ ಹತ್ತು ಹನ್ನೆರಡು ಗಜ ದೂರದಲ್ಲಿ ಮರೆಯಾಗಿದ್ದ ಒಂದು ಸ್ಥಳದಲ್ಲಿ ಆ ಕಿರುಬಗಳು ಬಂದರೆ ಹೊಡಿಯಬೇಕೆಂದು ರಾತ್ರಿಯೆಲ್ಲಾ ಕಾದನು. ಅವು ಒಂದೂ ಬರಲಿಲ್ಲ. ಮತ್ತು ಅವನು ತಾ. ೧೪ ನೆ ಬೆಳಗ್ಗೆ ೬ ಗಂಟೆ ಸಮಯದಲ್ಲಿ ಹೊರಡುವಷ್ಟರಲ್ಲಿ ಒಂದು ಕಿರುಬವು ಕಾಣಿಸಿತು. ಇದನ್ನು ತುಬಾಕಿಯಿಂದ ಹೊಡಿಯಲಾಗಿ ಗುಂಡು ಆ ಕಿರುಬನ ಅನ್ನಕೋಶದ ಮಾರ್ಗವಾಗಿ ನುಗ್ಗಿ ಇನ್ನೊಂದು ಕಡೆ ಹೋಯಿತು. ಆ ಕಿರುಬನ ಕರುಳುಗಳು ೨ ಗಜ ಹೊರಗೆ ಹೊರಟಿದ್ದು ಓಡಿಹೋಗಿ ಒಂದು ಕಾಲುದಾರಿಯ ಪಕ್ಕದಲ್ಲಿ ಒಂದು ಪೊದೆಯನ್ನು ಸೇರಿತು. ಇಷ್ಟರಲ್ಲಿ ಇನ್ನೊಂದು ಇದಕ್ಕಿಂತಲೂ ದೊಡ್ಡದಾದ ಕಿರುಬವು ಅಲ್ಲಿಗೆ ಬಂ...

ಸಿಲೋನ್ (ಲಂಕಾ) ದ್ವೀಪದ ಮುಖ್ಯ ರೇವು ... ಕೊಲಂಬೋದಲ್ಲಿ ಒಂದು ಕಾರ್ಖಾನೆಗೆ ಬೆಂಕಿ ಬಿದ್ದು ... ಸಾಮಾನುಗಳೂ, ಯಂತ್ರಗಳೂ ಸುಟ್ಟುಹೋದವು. ಕಾರ್ಖಾನೆಯ ಯಜಮಾನರಿಗೆ ಏಳೂವರೆ ಲಕ್ಷ ರೂಪಾಯಿ ... ಯಿತೆಂದು ಸಮಾಚಾರ ಬಂದಿದೆ.

****

ಬಂಗಾಳಾ ಆಧಿಪತ್ಯಕ್ಕೆ ಸೇರಿದ ಬಿರ್ಭೂಂ ಡಿಸ್ಟ್ರಿಕ್ಟಿನ ... ಸಬ್ ರಿಜಿಸ್ಟ್ರಾರು ಈಗಿನ ಎಡ್ವರ್ಡ್ ಚಕ್ರವರ್ತಿಯವರ ... ಹೊಸ ರೂಪಾಯಿಗಳನ್ನು ಜನರು ತಂದುಕೊಟ್ಟರೆ ... ಹಳೇ ರೂಪಾಯಿಗಳನ್ನೇ ತಂದು ಕೊಡಬೇಕೆಂದೂ ... ಪತ್ರಗಳನ್ನು ರಿಜಿಸ್ಟರ್ ಮಾಡುವದಿಲ್ಲವೆಂದೂ ಹೇಳುತ್ತಾ ... ಅಲ್ಲಿನ ಒಂದು ಪತ್ರಿಕೆಯು ತಿಳಿಸುತ್ತದೆ.

****

ಕಲ್ಕತ್ತೆಯಲ್ಲಿ ಅಮೀರ್ ಷೇಕ್ ಎಂಬೊಬ್ಬ ಅಕ್ಕಸಾಲಿಗ... ೩ ಸಾವಿರ ರೂಪಾಯಿನ ಕರೆನ್ಸಿ ನೋಟುಗಳನ್ನು ಕಟ್ಟಿ... ಗೆಯಲ್ಲಿಟ್ಟಿದ್ದನು. ಅವನ ಚಿಕ್ಕ ಪ್ರಾಯದ ಮಗನು ...

... ಪೋಲೀಸಿನವರು ಆ ...
ಮ್ಯಾಜಿಸ್ಟ್ರೇಟರು ...
ಟ್ಟರು

ನೊವೆಂಬರ್ ಆಖೈರ...

(2)

ರನು ಕನ್ನಡ ಪತ್ರಿಕೆಗಳನ್ನು ಮುಟ್ಟಿಯೂ ನೋಡುವದಿಲ್ಲ. ಕೇಳಿದರೆ-ಕನ್ನಡ ... ಕೆಗಳು ಅಷ್ಟು ಸ್ವಾರಸ್ಯವಿಲ್ಲವೆಂದು ಹೇಳುತ್ತಾರೆ. ಕನ್ನಡ ಪತ್ರಿಕೆಗಳ ಓದುವೆಯೋ ಅವುಗಳಲ್ಲಿರುವ ಸ್ವಾರಸ್ಯವು ತಿಳಿದೀತೆ ಇಂಗ್ಲೀಷು ಪತ್ರಿಕೆಗಳ ಓದಿ, ಎಷ್ಟು ಉಪಯುಕ್ತ ಸಂಗತಿಗಳನ್ನು ಇಂಗ್ಲೀಷು ತಿಳಿದ ನಮ್ಮ ಸೋದರರು ತಿಳಿದುಕೊಂಡಿದ್ದಾರೆ! ಯಾವ ಯಾವ ದೇಶದ ಕಾರುಬಾರುಗಳು ಹೇಗೆ ಇವೆಯೆಂದು ತಿಳಿದುಕೊಂಡಿದ್ದಾರೆ! ಉನ್ನತಪದವಿಯಲ್ಲಿರತಕ್ಕ ದೇಶಗಳು ಯಾವ ಯಾವ ಕಾರಣಗಳಿಂದ ಆ ಪದವಿಯನ್ನು ಪಡೆದುವು ಎಂಬುದನ್ನು ... ರವುಟ್ಟಿಗೆ ತಿಳಿದುಕೊಂಡಿದ್ದಾರೆ! ಇಂತಹ ವಿವಿಧ ವಿಷಯಗಳನ್ನು ಇಂಗ್ಲೀಷು ಪತ್ರಿಕೆಗಳಿಂದ ಗ್ರಹಿಸಿದ ನಮ್ಮ ಸಹೋದರರು ನಮ್ಮ ದೇಶದ ಏಳಿಗೆಯ ... ಯದಲ್ಲಿ ಎಷ್ಟು ಕಷ್ಟಪಟ್ಟಿದ್ದಾರೆ! ಏನೇನು ಏರ್ಪಾಡುಗಳನ್ನು ಮಾಡಿದ್ದಾರೆ! ಇಂಗ್ಲೀಷು ತಿಳಿಯದ ತಮ್ಮ ದೇಶದವರಾದ ಒಕ್ಕಲಿಗರು, ವ್ಯಾಪಾರಸ್ಥರು ಮೊದಲಾದ ಸಹೋದರವರ್ಗದವರಿಗೆ ತಾವು ತಿಳಿದ ಅಂಶಗಳನ್ನು ಎಷ್ಟು ... ಬೋಧಿಸಿ ಅವರುಗಳನ್ನು ಒಳ್ಳೆಯ ಸ್ಥಿತಿಗೆ ತಂದಿದ್ದಾರೆ. ಇಂತಹ ಪತ್ರಿಕೆಗಳನ್ನು ಓದುವುದರಿಂದ ಉಂಟಾಗುವ ಪ್ರಯೋಜನಗಳು ಈ ಪ್ರಕಾರವಿವೆಯೆಂದು ಎಷ್ಟು ಹೇಳಿಕೊಟ್ಟಿದ್ದಾರೆ! ಅಥವಾ ಈ ಅಂಶಗಳನ್ನೆಲ್ಲ ಅವರು ತಿಳಿದುಕೊಳ್ಳಲು ಎಷ್ಟು ಸೌಕರ್ಯಗಳನ್ನು ಕಲ್ಪಿಸಿಕೊಟ್ಟಿದ್ದಾರೆ! ಅಯ್ಯೋ, ಇವೆಲ್ಲ ಶೋಚನೀಯವಾಗಿ ... ಲ್ಲವೆ! ನಾವು ಇಂಗ್ಲೀಷು ತಿಳಿದವರು, ವಿದೇಶದಿಂದ ಬರತಕ್ಕ ಅನೇಕ ಪತ್ರಿಕೆಗಳನ್ನು ... ಮಾತ್ರ ... ಎಂಬುದಕ್ಕೆ ಗುರುತೇನು! ಅವುಗಳನ್ನು ... ಓದಿ ನಮ್ಮ ಮನಸ್ಸಿನಲ್ಲಿ ... ಹೀಗೆ ... ಮುಚ್ಚಿಕೊಂಡಿರುವುದಕ್ಕೆ? ಹೀಗಿದ್ದರೆ ಹೀನಸ್ಥಿತಿಯಲ್ಲಿರುವ ನಮ್ಮ ದೇಶವು ಒಳ್ಳೆಯ ಸ್ಥಿತಿಗೆ ಬರುವುದೆಂತು? ಮಾತೃಭಾಷೆಯಾದ ಕನ್ನಡವನ್ನು ... ಮಾಡಿದರೆ ತಾಯಿಗೆ ದ್ರೋಹಮಾಡಿದ ಹಾಗಾಗುವುದಿಲ್ಲವೆ? ಕನ್ನಡ ಪತ್ರಿಕೆಗಳು ... ನಿಯೋಗ ... ಹೀಗೆ ಮಾಡಿದರೆ ಏನು ತಾನೆ ಪ್ರಯೋಜನವಿದ್ದೀತು! ... ಮ್ಯಭಾಷೆಯಲ್ಲಿ ಹೇಳುವ ಗಾದೆಯಂತೆ "... ಕೆಟ್ಟ, ... ಕೆಟ್ಟ, ... ಕೆಟ್ಟ" ಎಂಬಂತಾಗುವುದಿಲ್ಲವೆ? ಇಂಗ್ಲೀಷು ತಿಳಿಯದ ಕೇವಲ ನಮ್ಮ ಕನ್ನಡ ... ನಾಟಿಗರಾದರೆ ... ಪತ್ರಿಕೆಗಳಿಂದರೆ ... ಮೊಂದಿಸುತ್ತಾರೆ. "ಭ್ರಮರಕೀಟನ್ಯಾಯ"ದಂತೆ. ಈ ದುರಭಿಪ್ರಾಯವು ... ನೋಡಿದರೂ ... ಇದನ್ನು ... ಅಲ್ಲ. ಬಯ... ವನ್ನೇ ಆಹಾರವಾಗಿ ಉಪಯೋಗಿಸುವ ಮನುಷ್ಯನಿಗೆ ... ಆಹಾರವು ... ಮೈಗೆ ಒಗ್ಗದೋ ಆ ... ಅಭಿಪ್ರಾಯವು ಮನಸ್ಸಿನಲ್ಲಿ ನಾಟಿದ ... ಅದನ್ನು ತಪ್ಪಿಸುವುದು ಬಹಳ ಕಷ್ಟ. ಆದರೂ ಕ್ರಮೇಣ ಸರಿಯಾದ ಸ್ಥಿತಿಗೆ ತರುವುದೇನೂ ದೊಡ್ಡ ಕೆಲಸವಲ್ಲ. ಇಂಗ್ಲೆಂಡು ಮೊದಲಾದ ದೇಶಗಳಲ್ಲಿ ಪ್ರತಿಯೊ...

... ಉತ್ಪತ್ತಿ ...
... ಗವರ್ನಮೆಂಟಿನ ...
... ನಿರ್ನಾಮ ಮಾ...
... ಪಟ್ಟಣದಲ್ಲಿ ...
... ನ್ನು ಆಲಯಗಳ...

ರ ಹತ್ತಿರ ಸಂಬಂಧಿಗ...
... ಜೋಸೆಫ್ ಬಂಗ...
... ದಲ್ಲಿ ಕಾ...
... ವೆಂಬವಾಗಿದ್ದ ...
... ಗಳೆಲ್ಲಾ ಎ...
... ಮತ್ತು ಶಾರ್...

...ಳ್ಳೆ ಪರಿಶ್ರಮವನ್ನು ಹೊಂದಿ, ಒಂದು ಖಗೋಳಶಾಸ್ತ್ರಾಲಯ ...ಪ್ಪಿಸಿ, ಅದರಲ್ಲಿ ಬಹಳ ದೊಡ್ಡದಾದ ದೂರದರ್ಶಕ ಯಂತ್ರ ...ಇಟ್ಟಿರುತ್ತಾರೆ ಅವರು ಸತ್ತ ದಿನ ಸರ್ಕಾರಿ ಕೋರ್ಟು ...ಗಳನ್ನು ಗೌರವಾರ್ಥವಾಗಿ ಮುಚ್ಚಿದ್ದರು ಅವರು ಮೃತರಾ...ಗ ಅವರಿಗೆ ೪೩ ವಯಸ್ಸಾಗಿತ್ತು.

****

...ಪ್ಪೂರ್ ಪಟ್ಟಣದಲ್ಲಿ ಕಳೆದ ವಾರ ಬಹಳ ಐಶ್ವರ್ಯವಂತಳಾದ ...ಬಹದ್ದೂರ್ ಸೇತುಸೌಭಾಗ್ಯಾಲ್ ಎಂಬ ಜೈನ ಹೆಂಗಸು ...ಸತ್ತಳು ಅವಳಿಗೆ ತೊಂಭತ್ತು ವಯಸ್ಸಾಗಿತ್ತು ಅವಳು ಬಹು ...ದನಿಷ್ಠಳಾಗಿಯೂ, ಧರ್ಮ ಬುದ್ಧಿಯುಳ್ಳವಳಾಗಿಯೂ ಇದ್ದು, ...ಕಾಲದ ವರೆಗೂ ೨೫ ಲಕ್ಷ ರೂಪಾಯಿ ಧರ್ಮ ಮಾಡಿರುತ್ತಾ... ಅವಳ ಉತ್ತರ ಕ್ರಿಯಾದಿಗಳು ಸಾವಿರಾರು ಜನರು ಸೇರಿ ಬಹಳ ...ಭಣೆಯಿಂದ ನಡಿ... ...ವಳ ಸಂಬಂಧಿಕರು ಒಂಟೆಗಳ ...ಸವಾರಿ ಮಾಡು... ...ವೇರಿ ಎರಚು... ...ಯಾರಿಗೂ ಅವರ ...ಂದು ತಿಳಿದು ಬ...

ಕಲ್ಕತ್ತೆಯಲ್ಲಿ ಒಂದು ದಿನ ಸಾಯಂಕಾಲ ಒಬ್ಬ ಮಾರ್ವಾಡಿ ಹೆಂಗಸು ತನ್ನ ಮುಖವನ್ನು ಸೀರೆ ಸೆರಗಿನಿಂದ ಮುಚ್ಚಿಕೊಂಡು ಅಳು ತ್ತಿದ್ದ ಮತ್ತೊಬ್ಬಳ ಸ್ತ್ರೀಯನ್ನು ಹಿಡಿದುಕೊಂಡು ಹೋಗುತ್ತಿದ್ದಳು ಅವಳ ಸೆರಗಿನ ಮೇಲೆಯೂ ಕಾಲಿನ ಮೇಲೂ ರಕ್ತದ ಗುರುತುಗಳಿ ದ್ದವು ಜೊತೆಯಲ್ಲಿ ಹೋಗುತ್ತಿದ್ದವಳು ತನ್ನ ಜೊತೆಗಾತಿಯು ಅಕ ಸ್ಮಾತ್ತಾಗಿ ದಾರಿಯಲ್ಲಿ ಮಗುವನ್ನು ಹೆತ್ತಳೆಂತಲೂ ಅದರಿಂದ ಅವಳು ತುಂಬಾ ಸಂಕಟಪಡುತ್ತಿರುವಳೆಂತಲೂ ದಾರಿಯಲ್ಲಿ ಹೋಗುವವರಿಗೆ ಹೇಳಿಕೊಂಡು ಅವರಿಂದ ಹಣವನ್ನು ಸಂಪಾದಿಸುತ್ತಾ ಹೋಗುತ್ತಿ ದ್ದಳು ಆ ಮಾರ್ಗವಾಗಿ ಹೋಗುತ್ತಿದ್ದ ಪೊಲೀಸ್ ಸೂಪರಿಂಟೆಂಡೆಂ ಟರು ಒಂದು ಡೋಲಿಯನ್ನು ತರಿಸಿ ರೋಗಿಯನ್ನು ಹತ್ತಿರ ಇದ್ದ ಆಸ್ಪತ್ರೆಗೆ ತೆಗೆದುಕೊಂಡು ಹೋಗಿ ಪರೀಕ್ಷಿಸಲಾಗಿ ಅವಳ ಬಟ್ಟೆಯ ಮೇಲಿದ್ದ ಕೆಂಪು ಗುರುತುಗಳು ಬಣ್ಣದವುಗಳಾಗಿದ್ದವು ಹೊಸದಾಗಿ ಹುಟ್ಟಿದ ಮಗುವಾದರೋ ಚಿಂದೀ ಬಟ್ಟೆಗಳಿಂದ ಮಾಡಲ್ಪಟ್ಟು ಅಳಿಗೆ ... ...ಆಸ ಹಿಂಯ...

...ಕೊಂಡು ಬಾಯಿನಿಂದ ಕಿತ್ತು ರಕ್ತ ಕಾರಿದ್ದು ಮಾಂಸ ಎಲುಬು ಗಳನ್ನು ಬಾಯಲ್ಲಿ ಕಚ್ಚಿಕೊಂಡು ಚತುರ್ದಿಕ್ಕಿನಲ್ಲಿರುವ ಜನರಿಗೆ ತೋರಿಸಿದ ಕೂಡಲೆ ಒಬ್ಬರ ಮೇಲೊಬ್ಬರು ಬೀಳುತ್ತಾ ನೂಕುತ್ತಾ ಏಳುತ್ತಾ ನೋಡಿದ್ದಾಯಿತು ತಾ ೭ ನೆ ಶುಕ್ರವಾರ ಚಿತ್ರದುರ್ಗದ ವರಿಗೂ ಮೊದಿಳೆರಿಯುರದವರಿಗೂ ಕುಸ್ತಿ ಬಿಟ್ಟರು ನೋಟ ನೋಡ... ವ ಜನರು ಒಬ್ಬರಿಗೊಬ್ಬರು ಗುದ್ದಾಟಮಾಡಿದರು ಯಾವತ್ತು ಜನರು ದಿಗ್ಗನೆದ್ದು ಅವರವರ ಮನೆಗೆ ಹೊರಟು ಹೋದರು ತಾ ೧೦ ನೆ ಶನಿವಾರ ಕುಸ್ತಿ ಬಿಟ್ಟರು ಪ್ರಾತಃಕಾಲದಲ್ಲಿ ಬಿಟ್ಟ ಜೋಡಿ ಪೈಕಿ ಮೊದಿಳೆರೆ ಊರವನನ್ನು ಸೋಲಿಸಿ ಚಿತ್ರದುರ್ಗದವನು ಕಡಗ ಗೆದ್ದನು ಮತ್ತು ಸಾಯಂಕಾಲದಲ್ಲಿ ೧, ೨, ೩ ಜೋಡಿ ಬಿಟ್ಟರು ಮೊದಿಳೆರೆ ಊರದವನು ಒಂದು ವಸ್ತ್ರ ಗೆದ್ದನು. ಪುನಃ ಬಿಳಿ ಜೋಡಿ ಬಿಟ್ಟರು. ಸಾಯಂಕಾಲ ೬ ಘಂಟೆ ವರಿಗೂ ಕುಸ್ತಿ ಮಾಡಿದರು ಒಬ್ಬರೂ ಸೋಲಲಿಲ್ಲ. ಸಾಯಂಕಾಲವಾದ್ದರಿಂದ ನಿಲ್ಲಿಸಿದ್ದಾಯಿತು. ದೇವರ ಉತ್ಸವ ಬಹಳ ವಿಜೃಂಭಣೆಯಿಂದ ಮಾಡಿದರು ರಾತ್ರಿ ತಾರುವನೂರಿನ ...

(3)

...ಳಿಯವನು ಕಂತ ತಾನು ಮನೆಗೆ ಹಿಂದಿರುಗುವಾಗ ಅಂದಿನ ತನ್ನ ಜೇಬಿನಲ್ಲಿ ...ರ್ಧ ಪೆನಿ (ಎಂದರೆ ! ಆಣೆ) ಯನ್ನು ಕಟ್ಟು ಒಂದು ವರ್ತಮಾನ ಪತ್ರಿಕೆಯನ್ನು ...ಕೊಂಡುಕೊಂಡು ಹೋಗುತ್ತಾನೆ ನಾಗರೀಕ ರಾಜ್ಯಗಳಿಗೆ ಅದು ತಕ್ಕ ಲಕ್ಷಣವೇ ...ರಿ ಇಂಗ್ಲೀಷು ಪತ್ರಿಕೆಗಳಿಗೆ ಇಂಗ್ಲೀಷಿನವರು ಕಂದಾ ಚಂದಾದಾರರಾಗುವುದ ...ರೆ ಇತರ ಭಾಷೆಯವರೂ ಚಂದಾದಾರರಾಗಿರಲು ಅಂತಹ ಪತ್ರಿಕೆಗಳು ಅಭಿವೃ ...ದ್ಧಿಗೆ ಬರಲು ಎಡೆಯೆಲ್ಲಿದೆ? ಆದರೆ ಕನ್ನಡ ಪತ್ರಿಕೆಗಳಿಗೆ ಕನ್ನಡವನ್ನು ತಿಳಿದವರಲ್ಲಿ ...ಒಂದು ಅಭಿಮಾನವು ಜನರ ಕಂತ ಆದಕ್ಕೆ ಯನ್ನು ತೋರಿಸುವುದಿಲ್ಲ.

...ದೆ ಹಾಗೆ ಆಗಲಿ, ಮುಂದಕ್ಕೆ ಬರಬೇಕಾದರೆ ಸಾಮಾನ್ಯ ಜನಗಳಾದ ...ಕ್ಕಳಿಗರು (ಪ್ರಜಾಮುಖರು) ಇತರ ಬೆಳೆದಂಬುಗಳವರು ಇವರೇ ಮುಂತಾ ...ದವರು ವಿದ್ಯಾವಂತರಾಗಿ ಮುಂದಕ್ಕೆ ಬರಬೇಕು ಏಕೆಂದರೆ, ಪ್ರತಿ ದೇಶದಲ್ಲಿಯೂ ...ವರ ಜನಸಂಖ್ಯೆಯೇ ಮುಖ್ಯಂತರಿಗಿಂತ ಹೆಚ್ಚಾಗಿದೆ ಆದುದರಿಂದ ಇವರೆ ...ಲ್ಲೂ ವಿದ್ಯಾವಂತರಾಗಿ ರಾಜಕೀಯ ಮೊದಲಾದ ವಿವಿಧ ವಿಷಯಗಳನ್ನು ತಿಳಿದುಕೊಳ್ಳಬೇಕಾ ...ದು ಅತ್ಯಂತಾವಶ್ಯಕವು ಸಹೋದರರುಗಳೇ, ಈ ನಮ್ಮ ದೈನ್ಯದಾರಿದ್ರ್ಯನ ...ಮ್ಮ ನಡುಗಾಡಿನಲ್ಲಿ ಮಾರುವ ರೋದನದಂತೆಯೂ, ಸುಡುಗಾಡಿನಲ್ಲಿ ಕಾಯುವ ...ಳುಗಳಂತೆಯೂ ನಿಷ್ಫಲವಾಗಿ ಹೋಗದೆ ಸಾರ್ಥಕಗೊಳಿಸುವಿರೆಂದು ನಂಬುತ್ತೇವೆ.

ಪತ್ರಿಕಾವಿಚಾರ ಈ ನಮ್ಮ "ವಿಕಟಪ್ರತಾಪ" ಪತ್ರಿಕೆಯಂತಹ ಪತ್ರಿಕೆಯು ...ದುವರೆಗೆ ನಮ್ಮ ಹಿಂದೂಸ್ಥಾನದಲ್ಲಿಯೇ ಇಲ್ಲವೆಂದು ಹೇಳಬೇಕು ಇಂಗ್ಲೆಂ ...ಡಿನಲ್ಲಿಯೂ ಪಂಚ್ (Punch), ಟಿಟ್‌ಬಿಟ್ಸ್ (Tit-Bits) ಎಂಬ ಪತ್ರಿಕೆಗಳು ...ಅತಿ ಹಾಸ್ಯವಾದ ಬರಿವಣಿಗೆಗಳಿಂದ ಆ ಜನರನ್ನು ಬಹು ಸಂತೋಷಪಡಿಸು ...ತ್ತಿರುವುವು ಆ ಪತ್ರಿಕೆಗಳನ್ನು ಅಪೇಕ್ಷಿಸದ ಮನುಷ್ಯನೇ ಇಲ್ಲ ನಮ್ಮ ...ಕನ್ನಡ ಭಾಷೆಯಲ್ಲಿಯೂ ಈ ಕೊರತೆಯು ಇಲ್ಲದಂತೆ ಮಾಡುವುದು ... ಪತ್ರಿಕೆಯೊಂದಿಲ್ಲವೆಂಬ ಕೊರತೆಯನ್ನು ನೀಗ ...ಸಲು ನಮ್ಮ ಮುಖ್ಯ ತಾತ್ಪರ್ಯವು ಇದಲ್ಲದೆ ಪ್ರತಿದಿನವೂ ನ್ಯಾಯ ...ವಾಗಿ ... ರಾಜಕೀಯ ವಿಷಯಗಳು, ನಾನಾ ... ವಿಷಯಗಳು ಇವುಗಳನ್ನು ವಿಮರ್ಶಿಸಬೇಕೆಂಬುದೇ ನಮ್ಮ ಉದ್ದೇಶವು ... ...ವನ್ನು ಮುಚ್ಚಿಕೊಂಡು ಅತ್ತೆಮಳೆ ಸುರಿದಂತೆ "ನೀವು ಹಾಗೆ ಮಾಡಬೇಕು, ...ದನ್ನು ಹೀಗೆ ಮಾಡಬೇಕು, ಅದು ಹಾಗಾಗಬೇಕು, ಇದು ಹೀಗಾಗಬೇಕು" ಎಂ... ...ಬೋಧನಾಸೂತ್ರಗಳನ್ನು ಹೇಳುವುದಕ್ಕೆ ತೊಡಗಿದರೆ ಓದಿದವಾಗಿಯೂ ವ್ಯರ್ಥ ...ವಾಗುವುದೇ ಸರಿ. ಹೇಳುವ ಯಾವ ಸಂಗತಿಗಳನ್ನಾದರೂ ವಾಚಕರ ಮನ ...ಸ್ಸಿಗೆ ಉಲ್ಲಾಸವನ್ನು ಹುಟ್ಟಿಸುವಂತೆ ರಸಭರಿತವಾಕ್ಯಗಳಿಂದ ಹೇಳಬೇಕು ಶೃಂಗ ...ರಾದಿ ... ರಸಗಳಲ್ಲ ಒಂದಾದ ಹಾಸ್ಯರಸವು ನಮಗೆ ಇಂತಹ ಪ್ರಯೋಗಗಳಲ್ಲಿ ...ಬರುವಾಗ ವಿಷ್ಟು ಮುಖ್ಯವೂ ಆಗಲಾರದು. ಏಕೆಂದರೆ,

ಶ್ಲೋ ॥ ಶೃಂಗಾರಾದಿ ರಸೋಷ್ವಪಿ ।
ಮಂಗಳ್ ಪ್ರಾಗ್ಜಾತಿಗೊಡವೆ ಹಾಸ್ಯರಸೋತ್ಯ ॥

ದುಷ್ಟ ಮೃಗಗಳ ಕಾಟವು.

ಹೋಳಿಧಾಳಿನಲ್ಲಿ ಹುಲಿ ಷಿಕಾರಿ ಮಾಡಿದ್ದು

ಹೋಳಿಧಾಳು ಗ್ರಾಮಕ್ಕೆ ಸಮೀಪವಾದ ಚಿಕಹೊಂಡವೆಂಬ ಕಾಡಿನಲ್ಲಿ ಕಳೆದ ತಾ ೧೩ ನೆ ಭಾನುವಾರ ಅದರ ಸಮೀಪದಲ್ಲಿ ವಾಸವಾಗಿದ್ದ ಭೈರಗದ್ದೆ ಸಣ್ಣಯ್ಯನ ಬಾಬ್ತು ಒಂದು ಬೇಸಾಯದ ಎತ್ತನ್ನು ಹಗಲು ಹೊತ್ತಿನಲ್ಲಿ ಮೇಯುವದಕ್ಕೆ ಹೊರಗೆ ಹೋದ ಸಮಯದಲ್ಲಿ ಒಂದು ಹುಲಿ ಬಂದು ಅದರ ಮೇಲೆ ಬಿದ್ದು ತಲೆಯನ್ನು ತನ್ನ ಪಂಜಾಗಳಿಂದ ಹೊಡೆದು ಬಗೆಯಿತು ಎತ್ತು ಒಳ್ಳೆ ಘಟ್ಟ ರಾಸಾದ್ದರಿಂದ ಆ ಏಟು ಸಹಿಸಿಕೊಂಡು ತನ್ನ ಒಡೆಯನ ಮನೆಗೆ ಓಡಿ ಬಂತು ಇದರ ಒಡೆಯನು ಅದನ್ನು ನೋಡಿ ಪಶ್ಚಾತ್ತಾಪ ಪಟ್ಟು ಇದು ಹುಲಿಯಿಂದಾಯಿತೆಂದು ತಿಳಿದು ಪರಿಹರಿಸಿದನು ಆ ಎತ್ತಿನ ತಲೆಯನ್ನು ಕಟ್ಟಿ ಏನೇನೋ ಕಂಡ ಔಷಧಿಯನ್ನು ಮಾಡಿದನು ಆದರೆ ಪ್ರಯೋಜನಕ್ಕೆ ಬಾರದೆ ೩ ದಿವಸ ಬಿದ್ದಿದ್ದು ಸತ್ತು ಹೋಯ್ತು ಇದಕ್ಕೆ ಮುಂಚೆ ಹುಲಿ ೩, ೪ ಸಣ್ಣ ಕರುಗಳನ್ನು ತಿಂದು ಇತ್ತು ಮಾರನೆ ಬೆಳಿಗ್ಗೆ ಸಣ್ಣಯ್ಯ ಈತನ ಅಳಿಯ ರಾಮಣ್ಣ ಇವನ ಬಾಬು ಸತ್ತು ಬಿದ್ದಿದ್ದ ಆ ಹಸುವನ್ನು ನೋಡಿದರು ಇದರ ಹೊಟ್ಟೆ ಮತ್ತು ಕುತ್ತಿಗೆಯನ್ನು ಸೀಳಿ ಮಾಂಸವನ್ನು ಕಾಡುನಾಯಿಗಳು ತಿಂದ ಹಾಗೆ ಕಾಣಿಸಿತು ಆಗ ಅದನ್ನು ಕಿರುಬಗಳೇ ತಿಂದಿರಬಹುದೆಂದು ತಿಳಿದು, ಇಲ್ಲಿಗೆ ಒಂದು ಮೈಲಿ ಫಾಸಲೆಯು ಮಾತೋಳಿಗ್ರಾಮದಲ್ಲಿ ಇರುವ ಮಾರಾಟೆಯು ಗೋವಿಂದನಿಗೆ ಹೇಳಲಾಗಿ ಇವನು ತನ್ನ ಜೋಡುನಲ್ಲಿ ತುಪಾಕಿಯಲ್ಲಿ ಆ ಕ್ಷಣವೇ ಗುಂಡನ್ನು ಬಾರ್ ಮಾಡಿಕೊಂಡು ಹೊರಟು, ಆ ಹಸು ಸತ್ತು ಬಿದ್ದಿದ್ದ ಸ್ಥಳಕ್ಕೆ ಹೋಗಿ ಅಲ್ಲಿಗೆ ಹತ್ತು ಹನ್ನೆರಡು ಗಜ ದೂರದಲ್ಲಿ ಮರೆಯಾಗಿದ್ದ ಒಂದು ಸ್ಥಳದಲ್ಲಿ ಆ ಕಿರುಬಗಳು ಬಂದರೆ ಹೊಡೆಯಬೇಕೆಂದು ರಾತ್ರಿಯೆಲ್ಲಾ ಕಾದನು ಅವು ಬಂದೂ ಬರಲಿಲ್ಲ ಮತ್ತು ಅವನು ತಾ ೧೪ ನೆ ಬೆಳಿಗ್ಗೆ ೬ ಗಂಟೆ ಸಮಯದಲ್ಲಿ ಹೊರಡುವಷ್ಟರಲ್ಲಿ ಒಂದು ಕಿರುಬವು ಕಾಣಿಸಿತು ಇದನ್ನು ತುಪಾಕಿಯಿಂದ ಹೊಡೆಯಲಾಗಿ ಗುಂಡು ಆ ಕಿರುಬನ ಅನ್ನಕೋಶದ ಮಾರ್ಗವಾಗಿ ನುಗ್ಗಿ ಇನ್ನೊಂದು ಕಡೆ ಹೋಯಿತು ಆ ಕಿರುಬನ ಕರುಳುಗಳೂ ೨ ಗಜ ಹೊರಗೆ ಹೊರಟದ್ದು ಓಡಿಹೋಗಿ ಒಂದು ಕಾಲುದಾರಿಯ ಪಕ್ಕದಲ್ಲಿ ಒಂದು ಪೊದೆಯನ್ನು ಸೇರಿತು ಇಷ್ಟರಲ್ಲಿ ಇನ್ನೊಂದು ಇದಕ್ಕಿಂತಲೂ ದೊಡ್ಡದಾದ ಕಿರುಬವು ಅಲ್ಲಿಗೆ ಬಂ

ಸಿಲೋನ (ಲಂಕಾ) ದ್ವೀಪದ ಮುಖ್ಯ ರೇವು ಕೊಲಂಬೋದಲ್ಲಿ ಒಂದು ಕಾರ್ಖಾನೆಗೆ ಬೆಂಕಿ ಬಿದ್ದು ಸಾಮಾನುಗಳೂ, ಯಂತ್ರಗಳೂ ಸುಟ್ಟುಹೋದವು ಕಾರ್ಖಾನೆಯ ಯಜಮಾನರಿಗೆ ಏಳುವರೆ ಲಕ್ಷ ರೂಪಾಯಿ ಹಾ... ಯಿತೆಂದು ಸಮಾಚಾರ ಬಂದಿದೆ

●●●●

ಬಂಗಾಳಾ ಅಧಿಕಾರಕ್ಕೆ ಸೇರಿದ ಬಿರ್ಭೂಂ ಡಿಸ್ಟ್ರಿಕ್ಟ್ ... ಸಬ್ ರೆಜಿಸ್ಟ್ರಾರು ಈಗಿನ ಎಡ್ವರ್ಡ್ ಚಕ್ರವರ್ತಿಯವರ ... ಹೊಸ ರೂಪಾಯಿಗಳನ್ನು ಜನರು ತಂದುಕೊಟ್ಟರೆ ... ಹಳೇ ರೂಪಾಯಿಗಳನ್ನೇ ತಂದು ಕೊಡಬೇಕೆಂದೂ ... ಪತ್ರಗಳನ್ನು ರೆಜಿಸ್ಟರ್ ಮಾಡುವದಿಲ್ಲವೆಂದೂ ಹೇಳುತ್ತಾ... ಅಲ್ಲಿನ ಒಂದು ಪತ್ರಿಕೆಯು ತಿಳಿಸುತ್ತದೆ

●●●●

ಕಲ್ಕತ್ತೆಯಲ್ಲಿ ಅಮೀರ್ ಷೇಕ್ ಎಂಬೊಬ್ಬ ಐಶ್ವರ್ಯ... ೩ ಸಾವಿರ ರೂಪಾಯಿನ ಕರೆನ್ಸಿ ನೋಟುಗಳನ್ನು ಕಟ್ಟಿ... ಗೆಯಲ್ಲಿಟ್ಟಿದ್ದನು ಅವನ ಚಿಕ್ಕ ಪ್ರಾಯದ ಮಗನು ...

... ಪೋಲೀಸಿನವರು ...

... ಮ್ಯಾಜಿಸ್ಟ್ರೇಟರು ...

...ಟ್ಟರು

ನೋವೆಂಬರ್ ಆಖೈ...

(4)

ಹಂಗೋಂಡು ನಗೆವ ಶಕ್ತಿಯು ।

ತಾಂ ಗಡ ನರರೊಳ್ ಮೇಣುವ ತಿರ್ಯಗ್ಜಾತಿ ಕ್ಕೆ ।

ಮನುಷ್ಯರಿಗೂ ಮೃಗಗಳಿಗೂ ಇಷ್ಟೇ ಭೇದವು. ಶೃಂಗಾರ, ವೀರ, ಕರುಣ, ಅದ್ಭುತ, ಹಾಸ್ಯ, ಭಯಾನಕ, ಬೀಭತ್ಸ, ರೌದ್ರ, (ಶಾಂತ ಎಂಬುವವುಗಳು) ಎಂಬೀ ೯ ರಸಗಳ ಅನುಭವವು ಮನುಷ್ಯಜಾತಿಗಿರುವಂತೆಯೇ ಮೃಗಗಳಿಗೂ ಇದೆ ಮನುಷ್ಯಜಾತಿಯು ಹಾಸ್ಯರಸದ ಸ್ವಾರಸ್ಯವನ್ನು ಗ್ರಹಿಸಿ ಅದಕ್ಕನುಸಾರವಾಗಿ ನಟಿಸಬಲ್ಲದು (ಎಂದರೆ ನಗಬಲ್ಲದು) ಮನುಷ್ಯಜಾತಿಯಿಂದು ತೋರಿಸುವುದಕ್ಕೆ ಇದೊಂದೆ ಕಿರಿಯ ವಾದ ಗುಣವು ಆದರೆ ಹಾಸ್ಯರಸವನ್ನು ಗ್ರಹಿಸಿ ಅದಕ್ಕೆ ತಕ್ಕಂತೆ ನಟಿಸುವ (ಎಂದರೆ ನಗುವ) ಶಕ್ತಿಯು ಮೃಗಜಾತಿಗಿಲ್ಲ ಹಾಸ್ಯರಸವನ್ನು ಕಲಿಸುವ ಮನುಷ್ಯನು ಮೃಗಜಾತಿಯಿಂದ ಬೇರೆಯಾಗಿ ವ್ಯಕ್ತವಾಗುತ್ತಿದೆಯಲ್ಲವೆ?

ಆದುದರಿಂದ ಹಾಸ್ಯರಸವನ್ನೇ ಪ್ರಧಾನವಾಗಿಟ್ಟುಕೊಂಡು, ಈ ಹಾಸ್ಯವೆಂಬ ಅನ್ನದ ಜೊತೆಯಲ್ಲಿ ಶೃಂಗಾರಾದಿ ಮಿಕ್ಕ ೮ ರಸಗಳೆಂಬ ತುಪ್ಪ, ಚಟ್ನಿ, ಹುಳಿ, ಸಾರು, ಪಾಯಸ, ಪಚ್ಚಡಿ ಇವುಗಳನ್ನು ಕಾಲಕ್ಕೆ ತಕ್ಕಂತೆ ಸೇರಿಸುತ್ತಾ, ನಮ್ಮ ಕನ್ನಡ ಸಾಹಿತ್ಯದ ಹಸಿವನ್ನು ಅಡಗಿಸಿ ನಾಗರಿಕವೆಂಬ ಶಕ್ತಿಯನ್ನುಂಟುಮಾಡಬೇಕೆಂಬುದೇ ನಮ್ಮ ಮುಖ್ಯ ಮನೋಗತವು ... ಪಾಠಕರ ಮನವು ಈ ಹಾಸ್ಯರಸವೆಂಬ ಹಾಲನ್ನೇ ಕುಡಿಯುವದಕ್ಕೆ ... ದುತ್ತೇವೆ ಆದರೆ ಈ ಕಾಲದಲ್ಲಿ "ಲೋಕೋಭಿನ್ನರುಚಿಃ" ಎಂಬಂತೆ ಒಬ್ಬರಿಗೆ ಬಂದೊಂದು ಬಗೆಯು ಬೇರಾಗಿ ಕಾಣುತ್ತದೆ ಒಬ್ಬರಿಗೆ ಹಾಸ್ಯವೇ ... ದರು, ಇನ್ನೊಬ್ಬರಿಗೆ ಹಾಸ್ಯವು ಹೆಚ್ಚಾಗಿ ಬೇಕು, ಮತ್ತೊಬ್ಬರಿಗೆ ... ಕಂತರು, ಮಗುದೊಬ್ಬರಿಗೆ ಪ್ರಾಸವಾದುದೇ ವಿಶೇಷವಾಗಿ ಒಪ್ಪುತ್ತದೆ ... ಅದು ಸಹಜ ಕ್ಕೆಂದರೆ— ಒಂದು ಸಂಸಾರದಲ್ಲಿಯೇ ಅಪ್ಪನಿಗೆ ಸಪ್ಪೆ... ಅಮ್ಮನಿಗೆ ಕಮ್ಮಿ ... ಬೇಕು, ಅಕ್ಕನಿಗೆ ಕಾರ ಕಡಿದು, ಮಗನಿಗೆ ... ಬೇಕು ... ಉಪ್ಪು ಕಡಿದು, ಈ ಪ್ರಕಾರವಾಗಿ ತೃಪ್ತಿ ಇಷ್ಟೇ ಅಲ್ಲ ಜನರ ... ಯಗಳು ಚಿತ್ರವಿಚಿತ್ರವಾಗಿವೆ ಬಲಕ್ಕೆ ಬಂದರೆ ಬಲುಗೂರ, ಎಡಕ್ಕೆ ... ಆತ ಕತ್ತರಿ, ನಡುವೆ ... ಆಡ್ಡಸಾತಿ, ಈ ಗಂಡಾಂತರವನ್ನು ... ಹೇಗೋ ಆದುದಾಗಲಿ ಹಲವು ತೆರನಾದ ನಮ್ಮ ವಾಚಕಮಹಾಶಯರನ್ನು ತೃಪ್ತಿಪಡಿಸುವುದಕ್ಕೆ ಹಾಸ್ಯರಸದ ಕುಶಲವಾಗಲೇ ನಮ್ಮ ಪತ್ರಿಕೆಯ ... ಹೊಸದೆ ಅನೇಕ ವಿವಿಧ ವಿಷಯಗಳ ಪಟ್ಟಿಗೆಯನ್ನು ಕೆಂಡ ಕೊಟ್ಟಿರುತ್ತೇವೆ ಈ ವಿಷಯದಲ್ಲಿ ಸಹಾಯಕರಾಗಿರುವ ಮತ್ತು ಇನ್ನು ಮುಂದೆಯೂ ಸಹಾಯ ... ರಗಿರುವರೆಂದು ನಂಬುಗೆಯನ್ನು ಕೊಟ್ಟಿರುವ ಮಹನೀಯರುಗಳಾದ ಶ್ರೀ ... ವಿನೋದ ಘನಗಣಶತಕಲಾನಿಧಿ ಚಂಡಪ್ರಚಂಡ ಜಂಘಾಪವನಸುತ ... ಕೆ. ಟಿ ಗೋಪಾಲಾಚಾರ್ಯವರ್ಯರಿಗೂ, ಶ್ರೀ ಮಜ್ಜೀವಶಿಖಾಮಣಿ ಅಳಸಿಂಗಾಚಾ...

... ಉತ್ಪತ್ತಿ ...
... ಗವರ್ನಮೆಂಟ...
... ನಿರ್ಮಾಣ ...
... ಪಟ್ಟಣದಲ್ಲಿ ...
... ಅಲಯ...

... ಹತ್ತರಸಂಬಂಧ...
... ಬಾಸ್ಕರ್ ಡಂಗ...
... ಲ್ಲಿ ಕಾ...
... ವೊಂಬರಾಗಿದ್ದು ...
... ಗಳಲ್ಲೂ ...
... ಬಾತು ...

...ಳ್ಳೆ ಪರಿಶ್ರಮವನ್ನು ಹೊಂದಿ, ಒಂದು ಖಗೋಳಶಾಸ್ತ್ರಾಲಯ ...ಟ್ಟಿಸಿ, ಅದರಲ್ಲಿ ಬಹಳ ದೊಡ್ಡದಾದ ದೂರದರ್ಶಕ ಯಂತ್ರ ...ಟ್ಟಿರುತ್ತಾರೆ. ಅವರು ಸತ್ತ ದಿನ ಸರ್ಕಾರಿ ಕೋರ್ಟು ...ಗಳನ್ನು ಗೌರವಾರ್ಥವಾಗಿ ಮುಚ್ಚಿದ್ದರು. ಅವರು ಮೃತರಾ...ಗ ಅವರಿಗೆ ೪೭ ವಯಸ್ಸಾಗಿತ್ತು.

****

...ಶ್ಮೀರ್ ಪಟ್ಟಣದಲ್ಲಿ ಕಳೆದ ವಾರ ಬಹಳ ಐಶ್ವರ್ಯವಂತಳಾದ ...ಬಹದ್ದೂರ್ ಸೇತುಸೋಭಗ್ಮಾಲ್ ಎಂಬ ಜೈನ ಹೆಂಗಸು ...

ಕಲ್ಕತ್ತೆಯಲ್ಲಿ ಒಂದು ದಿನ ಸಾಯಂಕಾಲ ಒಬ್ಬ ಮಾರ್ವಾಡಿ ಹೆಂಗಸು ತನ್ನ ಮುಖವನ್ನು ಸೀರೆ ಸೆರಗಿನಿಂದ ಮುಚ್ಚಿಕೊಂಡು ಅಳುತ್ತಿದ್ದ ಮತ್ತೊಬ್ಬಳ ಕೈಯನ್ನು ಹಿಡಿದುಕೊಂಡು ಹೋಗುತ್ತಿದ್ದಳು. ಅವಳ ಸೆರಗಿನ ಮೇಲೆಯೂ ಕಾಲಿನ ಮೇಲೂ ರಕ್ತದ ಗುರುತುಗಳಿದ್ದವು. ಜೊತೆಯಲ್ಲಿ ಹೋಗುತ್ತಿದ್ದವಳು ತನ್ನ ಜೊತೆಗಾತಿಯು ಅಕಸ್ಮಾತ್ತಾಗಿ ದಾರಿಯಲ್ಲಿ ಮಗುವನ್ನು ಹೆತ್ತಳೆಂತಲೂ ಅದರಿಂದ ಅವಳು ತುಂಬಾ ಸಂಕಟಪಡುತ್ತಿರುವಳೆಂತಲೂ ದಾರಿಯಲ್ಲಿ ಹೋಗುವವರಿಗೆ ಹೇಳಿಕೊಂಡು ಅವರಿಂದ ಹಣವನ್ನು ಸಂಪಾದಿಸುತ್ತಾ ಹೋಗುತ್ತಿ... ...ಮಾರ್ಗವಾಗಿ ಹೋಗುತಿದ್ದ ಪೋಲೀಸ್ ಸೂಪರಿಂಟೆಂಡೆಂ...

...ಕೊಂಡು ಬಾಯಿನಿಂದ ಕಿತ್ತು ರಕ್ತ ಕಾರಿದ್ದು ಮಾಂಸ ಎಲುಬುಗಳನ್ನು ಬಾಯಲ್ಲಿ ಕಚ್ಚಿಕೊಂಡು ಚತುರ್ದಿಕ್ಕಿನಲ್ಲಿರುವ ಜನರಿಗೆ ತೋರಿಸಿದ ಕೂಡಲೆ ಒಬ್ಬರ ಮೇಲೊಬ್ಬರು ಬೀಳುತ್ತಾ ನೂಕುತ್ತಾ ಏಳುತ್ತಾ ನೋಡಿದ್ದಾಯಿತು. ತಾ ೪ ನೆ ಶುಕ್ರವಾರ ಚಿತ್ರದುರ್ಗದವರಿಗೂ ಮೆದಿಕೇರಿಪುರದವರಿಗೂ ಕುಸ್ತಿ ಬಿಟ್ಟರು ನೋಟ ನೋಡುವ ಜನರು ಒಬ್ಬರಿಗೊಬ್ಬರು ಗುದ್ದಾಟಮಾಡಿದರು. ಹೂವತ್ತು ಜನರು ದಿಗ್ಗನೆದ್ದು ಅವರವರ ಮನೆಗೆ ಹೊರಟು ಹೋದರು. ತಾ. ೫ ನೆ ಶನಿವಾರ ಕುಸ್ತಿ ಬಿಟ್ಟರು ಪ್ರಾತಃಕಾಲದಲ್ಲಿ ಬಿಟ್ಟ ಜೋಡಿ ಪೈಕಿ ಮೆದಿಕೆರೆ ಊರವನನ್ನು ಸೋಲಿಸಿ ಚಿತ್ರದುರ್ಗದವನು ಕಡಗ ಗೆದ್ದನು.

(೮)

...ಸ್ತಿ, ಮ॥ ರಾ॥ ರಾ॥ ಶ್ರೀ. ಕವಿ ಲೋಕಪರ್ಯ್ಯವಮೆಗಳ, ಬ್ರ॥ ಶ್ರೀ॥ ಸಿದ್ಧಾಂತಿ ... ಗಳಿಗೆ, ಮ॥ ರಾ॥ ರಾ॥ ಶ್ರೀ ಶಾಸ್ತ್ರಿಗಳ್, ಕೆ ... ಮ॥ ರಾ॥ ರಾ॥ ಶ್ರೀ ಬಿ. ವೆಂಕಟಾಚಾರ್ಯರಿಗೆ, ಮ॥ ರಾ॥ ರಾ॥ ಶ್ರೀ ... ವಿದ್ಯಾಸಾಗರರಿಗೆ, ಮ॥ ರಾ॥ ರಾ॥ ಶ್ರೀ ಕರ್ಣಾಟಕ ಕವಿರಾಜ ಎಟಿ ವೆಂಕಟರಾಮಯ್ಯನವರಿಗೂ ... ಸ್ವತಿ, ಬಾಲಸರಸ್ವತಿ, ಕವಿಶಿಷ್ಯ-ಇವರೆ ಮುಂತಾದ ... ಅನೇಕ ವಿದ್ವಜ್ಜನರಿಗೂ ನಮ್ಮ ವಿನಯಭಕ್ತಿ ಪೂರ್ವಕ ವಂದನೆಗಳನ್ನು ನಿರಂತರವೂ ಸಮರ್ಪಿಸುತ್ತಿರುವೆವು ... ಯಾಗುವುದರ ಪ್ರೋತ್ಸಾಹಕ್ಕೆ ... ವಿನೋದದ ... ಸುರಂಗ ಕವಿಯು ಹೇಳುವಂತೆ,

"ಚಂ ॥ ಅಲರ್ಗಳ ಕಂಪಿನಂತೆ, ಮೊರೆದಾಡುವ ತುಂಬಿಯ ಬಂಬಲಂತೆ, ತೆಂ ।
ಬೆಲರಿನ ಪೆರ್ಮೆಯಂತೆ, ತನಿವಣ್ಗಳನೊಪ್ಪುವ ಮಾವಿನಂತೆ, ಪಂ ॥
ಬಿಸುತೆ ಕದುಪ್ಪನೋಡುವೆಳವೆಂಚಿರ ಕಣ್ಮರಂತೆ, ಬಲ್ಲರಂ ।
... . ॥

ಎಂದರೆ ... ವಿನೋದದ ... ವಾಸನೆಯಂತೆಯೂ (ಪರಿಮಳದಂತೆಯೂ), (ಮನಸ್ಸಿಗೆ ಉಲ್ಲಾಸವನ್ನುಂಟುಮಾಡುತ್ತ) ... ತುಂಬಿಗಳ ಸಮೂಹದಂತೆಯೂ, (ಮಲಯಾನಿಲದ) ತೆಂಕಣ ಗಾಳಿಯ ಹೆಚ್ಚಿಕೆಯಂತೆ (... ಯೂ), ಪಕ್ವವಾದ ಹಣ್ಣುಗಳಿಂದ ... ಮಾವಿನ ಮರದಂತೆಯೂ, ... (ಒಬ್ಬರೂ ತಿಳಿಯದಂತೆ) ಕಳ್ಳತನದಿಂದ (ನಮ್ಮ ... ನ್ನು) ನೋಡುವ ... ಹೆಂಡತಿಯರ ... ಕಣ್ಣುಗಳಂತೆ (... ದಂತೆ) ಯೂ ... ಚೆನ್ನಾಗಿ ಮೋಹಪಡಿಸುತ್ತಿದೆ.

ಮತ್ತು ... ಕವಿಯು ಒತ್ತಿ ಹೇಳುವಂತೆ,

"ಚಂ ॥ ಎಳಗಿಳಿವಿಂಡಿನಂತೆ, ಮೊರೆದಾಡುವ ತುಂಬಿಯ ಬಂಬಲಂತೆ, ಕೆಂ ।
ದಳಿರ್ಗಳ ತೊಂಗಲಂತೆ, ನಲಿನಾಡುವ ಪೆಂಟಿರನೋಟದಂತೆ, ಪೂ ॥
ಗನೆ ಪೂಸುಗಂಪಿನೊಳ್ ಪೊರೆದು ತೀಡುವ ತೆಂಬೆಲರಂತೆ, ತೋರ್ಪ ಕೆಂ ॥
ಗಳಸಿರಿಯಂತೆ, ಸೋಲಿಸಿ .... ಲೀನಾದೇಶಂ ॥"

ಎಂದರೆ, ಎಳೆಯ ಗಿಳಿಗಳ ಬಳಗವೂ, ಹಾರಾಡುತ್ತ ವಿಹರಿಸುತ್ತಲಿರುವ ತುಂಬಿಗಳ ಸಮೂಹವೂ, ಮತ್ತು ಕೆಂಪಗಿರುವ ಎಳೆಯ ಚಿಗುರುಗಳ ಗುಚ್ಛ-ನೋಟಕ್ಕೆ ಎಷ್ಟು ರಮ್ಯವೋ ಅಷ್ಟು ರಮ್ಯವಾಗಿಯೂ ದೃಷ್ಟಿಯು ನಾಟಿಕೊಳ್ಳುವಂತೆ ನೋಡುವ (ಎಂದರೆ ವಿಶೇಷ ಭಾವಗರ್ಭಿತದೃಷ್ಟಿಯಿಂದ ನೋಡುವ) ... ಯ ನೋಟವೂ, ಪುಷ್ಪಲತೆಗಳ ನಡುವೆ ನುಗ್ಗಿ ಹೂಗಳನ್ನು ಸವರುತ್ತ ಆ ಪುಷ್ಪಗಳ ವಾಸನೆಯನ್ನೊಳಕೊಂಡು ಅಂದವಾಗಿ ಬೀಸುವ ಮಂದಮಾರುತವೂ (ತೆಂಗಾಳಿಯೂ) ಮತ್ತು ತಿಂಗಳಬೆಳಕಿನ ಸೊಗಸೂ ಮನಸ್ಸಿಗೆ ಎಷ್ಟು ಉಲ್ಲಾಸವನ್ನು ಸೂಸುತ್ತವೋ ಅಷ್ಟು ಉಲ್ಲಾಸವನ್ನು ಸೂಸುವ ... ಕಾವ್ಯ

ದುಷ್ಟ ಮೃಗಗಳ ಕಾಟವು.

ಹೋಳೆಧಾಳಿನಲ್ಲಿ ಹುಲಿ ಷಿಕಾರಿ ಮಾಡಿದ್ದು.

ಹೋಳೆಧಾಳು ಗ್ರಾಮಕ್ಕೆ ಸಮೀಪವಾದ ಚಿಕಣಿಕೊಂಡವೆಂಬ ಕಾಡಿನಲ್ಲಿ ಕಳೆದ ತಾ. ೧೩. ನೆ ಭಾನುವಾರ ಅದರ ಸಮೀಪದಲ್ಲೆ ವಾಸವಾಗಿದ್ದ ಭೈರಗದ್ದೆ ಸಣ್ಣಯ್ಯನ ಬಾಬ್ತು ಒಂದು ಬೇಸಾಯದ ಎತ್ತನ್ನು ಹಗಲು ಹೊತ್ತಿನಲ್ಲಿ ಮೇಯುವದಕ್ಕೆ ಹೊರಗೆ ಹೋದ ಸಮಯದಲ್ಲಿ ಒಂದು ಹುಲಿ ಬಂದು ಅದರ ಮೇಲೆ ಬಿದ್ದು ತಲೆಯನ್ನು ತನ್ನ ಪಂಜಾಗಳಿಂದ ಹೊಡೆದು ಬಗೆಯಿತು ಎತ್ತು ಒಳ್ಳೆ ಘಟ್ಟ ರಾಸಾದ್ದರಿಂದ ಆ ಏಟು ಸಹಿಸಿಕೊಂಡು ತನ್ನ ಒಡೆಯನ ಮನೆಗೆ ಓಡಿ ಬಂತು ಇದರ ಒಡೆಯನು ಅದನ್ನು ನೋಡಿ ಪಶ್ಚಾತ್ತಾಪ ಪಟ್ಟು ಇದು ಹುಲಿಯಿಂದಾಯಿತೆಂದು ವಿಶ್ವಸಿದನು. ಆ ಎತ್ತಿನ ತಲೆಯನ್ನು ಕಟ್ಟಿ ಏನೇನೋ ಕಂಡ ಔಷಧಿಯನ್ನು ಮಾಡಿದನು. ಆದರೆ ಪ್ರಯೋಜನಕ್ಕೆ ಬಾರದೆ ೩ ದಿವಸ ಬದುಕಿದ್ದು ಸತ್ತು ಹೋಯ್ತು. ಇದಕ್ಕೆ ಮುಂಚೆ ಹುಲಿ ೩, ೪ ಸಣ್ಣ ಕರುಗಳನ್ನು ತಿಂದು ಇತ್ತು. ಮಾರನೆ ಬೆಳಿಗ್ಗೆ ಸಣ್ಣಯ್ಯ ಈತನ ಅಳಿಯ ರಾಮಣ್ಣ ಇವನ ಬಾಬು ಸತ್ತು ಬಿದ್ದಿದ್ದ ಆ ಹಸುವನ್ನು ನೋಡಿದರು ಇದರ ಹೊಟ್ಟೆ ಮತ್ತು ಕುತ್ತಿಗೆಯನ್ನು ಸೀಳಿ ಮಾಂಸವನ್ನು ಕಾಡುಮೃಗಗಳು ತಿಂದ ಹಾಗೆ ಕಾಣಿಸಿತು ಆಗ ಅದನ್ನು ಕಿರುಬಗಳೇ ಕೊಂದಿರಬಹುದೆಂದು ತಿಳಿದು, ಇಲ್ಲಿಗೆ ಒಂದು ಮೈಲಿ ಫಾಸಲೆಯ ಮಾರೊಳಿಗ್ರಾಮದಲ್ಲಿ ಇರುವ ಮರಾಟಿಯ ಗೋವಿಂದನಿಗೆ ಹೇಳಲಾಗಿ ಇವನು ತನ್ನ ಜೋಡುನಳ್ಳಿ ತುಪಾಕಿಯಲ್ಲಿ ಆ ಕ್ಷಣವೇ ಗುಂಡನ್ನು ಬಾರ್ ಮಾಡಿಕೊಂಡು ಹೊರಟು, ಆ ಹಸು ಸತ್ತುಬಿದ್ದಿದ್ದ ಸ್ಥಳಕ್ಕೆ ಹೋಗಿ ಅಲ್ಲಿಗೆ ಹತ್ತು ಹನ್ನೆರಡು ಗಜ ದೂರದಲ್ಲಿ ಮರೆಯಾಗಿದ್ದ ಒಂದು ಸ್ಥಳದಲ್ಲಿ ಆ ಕಿರುಬಗಳು ಬಂದರೆ ಹೊಡೆಯಬೇಕೆಂದು ರಾತ್ರಿಯೆಲ್ಲಾ ಕಾದನು ಅವು ಒಂದೂ ಬರಲಿಲ್ಲ. ಮತ್ತು ಅವನು ತಾ. ೧೪ ನೆ ಬೆಳಿಗ್ಗೆ ೬ ಗಂಟೆ ಸಮಯದಲ್ಲಿ ಹೊರಡುವಷ್ಟರಲ್ಲಿ ಒಂದು ಕಿರುಬವು ಕಾಣಿಸಿತು. ಇದನ್ನು ತುಪಾಕಿಯಿಂದ ಹೊಡಿಯಲಾಗಿ ಗುಂಡು ಆ ಕಿರುಬನ ಅನ್ನಕೋಶದ ಮಾರ್ಗವಾಗಿ ನುಗ್ಗಿ ಇನ್ನೊಂದು ಕಡೆ ಹೋಯಿತು. ಆ ಕಿರುಬನ ಕರುಳುಗಳೂ ೨ ಗಜ ಹೊರಗೆ ಹೊರಟಿದ್ದು ಓಡಿಹೋಗಿ ಒಂದು ಕಾಡುದಾರಿಯ ಪಕ್ಕದಲ್ಲಿ ಒಂದು ಪೊದೆಯನ್ನು ಸೇರಿತು ಇಷ್ಟರಲ್ಲಿ ಇನ್ನೊಂದು ಇದಕ್ಕಿಂತಲೂ ದೊಡ್ಡದಾದ ಕಿರುಬವು ಅಲ್ಲಿಗೆ ಬಂ

ಸಿಲೋನ್ (ಲಂಕಾ) ದ್ವೀಪದ ಮುಖ್ಯ ರೇವು ಪಟ್ಟಣ ಕೊಲಂಬೋದಲ್ಲಿ ಒಂದು ಕಾರ್ಖಾನೆಗೆ ಬೆಂಕಿ ಬಿದ್ದು ಕಟ್ಟಡ ಸಾಮಾನುಗಳೂ, ಯಂತ್ರಗಳೂ ಸುಟ್ಟುಹೋದವು. ಕಾರ್ಖಾನೆಯ ವ್ಯವಹಾರರಿಗೆ ಏಳೂವರೆ ಲಕ್ಷ ರೂಪಾಯಿ ನಷ್ಟವಾಯಿತೆಂದು ಸಮಾಚಾರ ಬಂದಿದೆ

****

ಬಂಗಾಳಾ ಅಧಿಕಾರಕ್ಕೆ ಸೇರಿದ ಬಿಧರ್ಗಾಂ ಡಿಸ್ಟ್ರಿಕ್ಟಿನಲ್ಲಿ ಸಬ್ ರೆಜಿಸ್ಟ್ರಾರು ಈಗಿನ ಎಡ್ವರ್ಡ್ ಚಕ್ರವರ್ತಿಯವರ ತಲೆ ಹೊಸ ರೂಪಾಯಿಗಳನ್ನು ಜನರು ತಂದುಕೊಟ್ಟರೆ ಅಂಗೀಕರಿಸದೆ ಹಳೇ ರೂಪಾಯಿಗಳನ್ನೇ ತಂದು ಕೊಡಬೇಕೆಂದೂ ಇಲ್ಲದಿದ್ದರೆ ಪತ್ರಗಳನ್ನು ರೆಜಿಸ್ಟರ್ ಮಾಡುವದಿಲ್ಲವೆಂದೂ ಹೇಳುತ್ತಾರೆಂದು ಅಲ್ಲಿನ ಒಂದು ಪತ್ರಿಕೆಯು ತಿಳಿಸುತ್ತದೆ.

****

ಕಲ್ಕತ್ತೆಯಲ್ಲಿ ಅಮೀರ್ ಷೇಕ್ ಎಂಬೊಬ್ಬ ವಿದ್ಯಾರ್ಥಿ ೩ ಸಾವಿರ ರೂಪಾಯಿನ ಕರೆನ್ಸಿ ನೋಟುಗಳನ್ನು ಕಬ್ಬಿಣದ ಪೆಟ್ಟಿಗೆಯಲ್ಲಿಟ್ಟಿದ್ದನು ಅವನ ಚಿಕ್ಕ ಪ್ರಾಯದ ಮಗನು

. ಪೋಲೀಸಿನವರು ಆ

ಮ್ಯಾಜಿಸ್ಟ್ರೇಟರು

ಟ್ಟರು

ಪೊವೆಂಬರ್ ಆಖೈ

(೮)

ಲ್ಲಾ ಗಳು ಭಾರತ್ವಾಸನೆ ವೆಚ್ಚಪಡಿಸಲಾರದು? ಪಕೋರನನ್ನು ಮೋಸಗೊಳಿಸ ಪುವುದುಸಿಲ್ಲವು.

ಅದಲ್ಲದೆ, ವಿಕಟನ ಮುದ್ದುಮಾತುಗಳುಗಳೆಲ್ಲ ದುಡಿದುತಿರು ಬೇಸತ್ತು ಬಳಲಿ ಮನೆಗೆ, ಬೇಸರಿಕೆಯುಂಟ ದವಗೆ, ಮನಸ್ಸಿಗೆ ಹರ್ಷವಿಲ್ಲದವರಿಗೂ, ವ್ಯಾಧಿಯಿಂದ ಪೀಡಿತರಾದವರಿಗೆ, ಸಂಸಾರವೆಂಬ ಮಹಾರ್ಣವದಲ್ಲಿ ದಣಿಯುವವರಿಗೂ ಆನಂದವನ್ನುಂಟುಮಾಡಿ ಮನಸ್ಸಿನ ಜಿಗುಪ್ಸೆಯನ್ನು ಹೋಗಲಾಡಿಸಿ ಉತ್ಸಾಹವನ್ನು ಕೊಡುವ ಗಿದೆ ಬಹುಕಾಲದಿಂದ ಮಕ್ಕಳೇ ಇಲ್ಲದೆ ದೈವವಶಾತ್ ಜನಿಸಿದ ಮಗುವು ತಾಯಿಯು ಬೆರಗನ್ನು ಮುಖಕ್ಕೆ ಮುಚ್ಚಿಕೊಂಡು—"ಅಮ್ಮಾ ನೋಡೋಣಮ್ಮ ನಾನು, ನಾಲ್ಕುದಿನ ತೋರೋ" ಎಂಬ ಮುದ್ದುಮುದ್ದುಮಾತಿನ ತೊದಲು ನುಡಿಗಳಿಂದ ತಾಯಿಯ ಸ್ತನ್ಯ ಕರೆಯುತ್ತ, ಆಗಾಗಗೆ ಓಡಿಬಂದು ಅಪ್ಪಿಕೊಂಡು ಮುತ್ತಿಡುತ್ತಾ, ತನ್ನ ಕಾಲ್ಗೆಜ್ಜೆಗಳಿಂದ ತಾಯಿಯ ಮನಕ್ಕೆ ಮುದಂಗೊಡುವ ಎಳೆಯ ಮಗುವಿನಂತೆಯೂ, ಬಹುಕಾಲದಿಂದ ಪಟ್ಟಣವಾಸಗಳಿಂದುಂಟಾದ ಬೇಸರಿಕೆಯಿಂದ ಹಳ್ಳಿಗಾಡಿನ ಹೊಲಗದ್ದೆಗಳಲ್ಲಿ ಸಂಚರಿಸುತ್ತಾ ಕೊಳಗ ವ ತಿಳಿನೀರಿನ ಕೊಳಗಳಲ್ಲಿಯೂ ತಂಗಾಳಿ ಬೀಸುವ ಉದ್ಯಾನವನಗಳಲ್ಲಿಯೂ ವಿಹಾರಮಾಡುವವರ ಆನಂದದಂತೆಯೂ, ಹಳ್ಳಿಗಾಡುಗಳ ವಾಸವು ಮನಸ್ಸಿಗೆ ಬೇಸರಿಕೆಯನ್ನುಂಟುಮಾಡಲು ಹಲವು ದಿವಸಗಳು ಪಟ್ಟಣವಾಸದ ನಾಟಕಶಾಲೆಗಳನ್ನೂ ಆಶ್ಚರ್ಯಗಳನ್ನೂ ನೋಡುತ್ತ, ಬೇಸಗೆಯ ಮರದ ಸರ್ಪದಂತೆಯೂ, ಬಳಲುತ್ತ, ನಸ್ಯವಿಲ್ಲದೆ ಆಕಳಿಸುವರೆಯಾದರೂ ಒಂದು ಚಿಟಿಕೆ ನಸ್ಯವನ್ನು ಕೊಟ್ಟರೆ ಅದನ್ನು ಸೇದಿ ಹಲವು ಸೀನುಗಳಿಂದ ಹಾಸ್ಯವುಂಟಾಗುವ ನಿತ್ಯಾನಂದದಂತೆಯೂ ವಿಕಟನ ಮುದ್ದುಮಾತುಗಳು ನಮ್ಮ ಕನ್ನಡ ವಾಚಕರಿಗೆ ಅತ್ಯಂತ ಆಹ್ಲಾದಕರವಾಗಿರುತ್ತವೆ.

<u>ವಿಕಟನ ಸಂಭಾಷಣೆಗಳು.</u> ವಿಕಟನ ಸಂಪಾದಕರ ಹಾಸ್ಯದಿಂದ ತುಂಬಿ ತುಳುಕುತ್ತಿರುವ ನೀತಿಬೋಧಕ ಪದ್ಯಗಳು, ರಾಜಕೀಯ ವಿಷಯಗಳು, ಸಾಮಾಜಿಕ ವಿಷಯಗಳು, ಚರಿತ್ರೆ, ಕಾದಂಬರಿ, ವ್ಯಾಕರಣ, ಕವಿತೆಗಳು, ಸಮಸ್ಯೆಗಳು, ಒಗಟುಗಳು, ಲೀಲಾವತಿ ಪ್ರಶ್ನೆಗಳು, ಶಾಸ್ತ್ರವಿಚಾರಗಳು, ಸ್ತ್ರೀಧರ್ಮನೀತಿಗಳನ್ನು ಬೋಧಿಸುವಂತಹ ಲೇಖನಗಳು, ಅನೇಕ ಸಮಾಚಾರಗಳು ಇವೇ ಮುಂತಾದ ವಿವಿಧ ವಿಷಯಗಳು ಹಾಸ್ಯರೂಪವಾದ ಚಿತ್ರಗಳೊಂದಿಗೆ ಆಕರ್ಷಣೆಯಿಂದ ಸೇರಿಕೊಂಡಿರುವುದು ಆದುದರಿಂದ ಈ ಸಂಭಾಷಣೆಗೆ ತಕ್ಕ ಬಂಧುಗಳು ಇರಬೇಕು.

ಸಾಮಾನ್ಯವಾಗಿ ಮೇಲ್ಕಂಡ ವಿಷಯಗಳು ವಿದ್ವಜ್ಜನಮನೋರಂಜಕವಾಗಿರುವದರಿಂದ ವಿದ್ಯಾಂಸರಿಂದಲೂ ಇದು ಆದರಣೀಯವಾಗಿದೆ.

ಒಕ್ಕಲಿಗರು, ವ್ಯಾಪಾರಸ್ಥರು, ಇತರ ಕಸಬುಗಾರರು ಇವರೇ ಮೊದಲಾದ ಸಾಮಾನ್ಯ ಜನಗಳಿಗೆ ತಕ್ಕ ನೀತಿಬೋಧಕವಚನಗಳೂ, ರಾಜಕೀಯ ವಿಷಯಗಳೂ, ಸಾಮಾಜಿಕ ವಿಷಯಗಳೂ, ಹಾಸ್ಯಗಳೂ ಇರುವದರಿಂದ ಸಾಮಾನ್ಯ ಜನಗಳಿಂದಲೂ ಇದು ಸ್ವೀಕರಿಸಲ್ಪಡತಕ್ಕದಾಗಿದೆ.

ಷ್ಟು ಉತ್ಪತ್ತಿಯಾಗು

ತಾ ಗವರ್ನಮೆಂಟಿನ

ವ ನಿರ್ಮಾಣ ಮಾಡ

ಪಟ್ಟಣದಲ್ಲಿ

ನ್ನು ಅಲಿಯುಗಳನ್ನು

ರ ಹತ್ತ ರಸಂಬಂಧಿಗ

ಮಿ ಜಾಪನ್ ದಂಗೆಯ

ಪ್ಪಿಣದಲ್ಲಿ ಕಾಲ

ವೆಂಬರಾಗಿದ್ದ

ವ್ಯಗಳೆಲ್ಲಾ

, ಮತ್ತು ಪೂರ್ವ

...ಬಳ್ಳಿ ಪರಿಕ್ರಮವನ್ನು ಹೊಂದಿ, ಒಂದು ಖಗೋಳಶಾಸ್ತ್ರಾಲಯ ...ಕಟ್ಟಿಸಿ, ಅದರಲ್ಲಿ ಬಹಳ ದೊಡ್ಡದಾದ ದೂರದರ್ಶಕ ಯಂತ್ರ ...ಇರಿಸಿಟ್ಟಿರುತ್ತಾರೆ ಅವರು ಸತ್ತ ದಿನ ಸರ್ಕಾರಿ ಕೋರ್ಟು ...ಗಳನ್ನು ಗೌರವಾರ್ಥವಾಗಿ ಮುಚ್ಚಿದ್ದರು. ಅವರು ಮೃತಪ ...ಗ ಅವರಿಗೆ ೬೩ ವಯಸ್ಸಾಗಿತ್ತು.

****

...ಅಜ್ಮೀರ್ ಪಟ್ಟಣದಲ್ಲಿ ಕಳೆದ ವಾರ ಬಹಳ ಐಶ್ವರ್ಯವಂತಳಾದ ...ಬಹದ್ದೂರ್ ಸೇತುಸೋಭಗ್ಮಲ್ ಎಂಬ ಜೈನ ಹೆಂಗಸು ...

ಕಲ್ಕತ್ತೆಯಲ್ಲಿ ಒಂದು ದಿನ ಸಾಯಂಕಾಲ ಒಬ್ಬ ಮಾರ್ವಾಡಿ ಹೆಂಗಸು ತನ್ನ ಮಗುವನ್ನು ಸೀರೆ ಸೆರಗಿನಿಂದ ಮುಚ್ಚಿಕೊಂಡು ಅಳುತ್ತಿದ್ದ ಮತ್ತೊಬ್ಬಳ ಕೈಯನ್ನು ಹಿಡಿದುಕೊಂಡು ಹೋಗುತ್ತಿದ್ದಳು. ಅವಳ ಸೆರಗಿನ ಮೇಲೆಯೂ ಕಾಲಿನ ಮೇಲೂ ರಕ್ತದ ಗುರುತುಗಳಿದ್ದವು. ಜೊತೆಯಲ್ಲಿ ಹೋಗುತ್ತಿದ್ದವಳು ತನ್ನ ಜೊತೆಗಾತಿಯು ಅಕಸ್ಮಾತ್ತಾಗಿ ದಾರಿಯಲ್ಲಿ ಮಗುವನ್ನು ಹೆತ್ತಳೆಂತಲೂ ಅದರಿಂದ ಅವಳು ತುಂಬಾ ಸಂಕಟಪಡುತ್ತಿರುವಳೆಂತಲೂ ದಾರಿಯಲ್ಲಿ ಹೋಗುವವರಿಗೆ ಹೇಳಿಕೊಂಡು ಅವರಿಂದ ಹಣವನ್ನು ಸಂಪಾದಿಸುತ್ತಾ ಹೋಗುತ್ತಿದ್ದಳು. ... ಮಾರ್ಗವಾಗಿ ಹೋಗುತ್ತಿದ್ದ ಪೋಲೀಸ್ ಸೂಪರಿಂಟೆಂ...

...ಕೊಂಡು ಬಾಯಿನಿಂದ ಕಿತ್ತು ರಕ್ತ ಸುರಿದು ಮಾಂಸ ಎಲುಬುಗಳನ್ನು ಬಾಯಲ್ಲಿ ಕಚ್ಚಿಕೊಂಡು ಚತುರ್ದಿಕ್ಕಿನಲ್ಲಿರುವ ಜನರಿಗೆ ತೋರಿಸಿದ ಕೂಡಲೆ ಒಬ್ಬರ ಮೇಲೊಬ್ಬರು ಬೀಳುತ್ತಾ ನೂಕುತ್ತಾ ಏಳುತ್ತಾ ನೋಡಿದ್ದಾಯಿತು ತಾ ೪ ನೆ ಶುಕ್ರವಾರ ಚಿತ್ರದುರ್ಗದವರಿಗೂ ಮೊದಿಕೇರಿಪುರದವರಿಗೂ ಕುಸ್ತಿ ಬಿಟ್ಟರು ನೋಟ ನೋಡುವ ಜನರು ಒಬ್ಬರಿಗೊಬ್ಬರು ಗುದ್ದಾಟಮಾಡಿದರು ಯಾವತ್ತು ಜನರು ದಿಗ್ಗನೆದ್ದು ಅವರವರ ಮನೆಗೆ ಹೊರಟು ಹೋದರು. ತಾ. ೫ ನೆ ಶನಿವಾರ ಕುಸ್ತಿ ಬಿಟ್ಟರು ಪ್ರಾತಃಕಾಲದಲ್ಲಿ ಬಿಟ್ಟ ಜೋಡಿ ಪೈಕಿ ಮೊದಿಕೆರೆ ಊರವನನ್ನು ಸೋಲಿಸಿ ಚಿತ್ರದುರ್ಗದವನು ಕಡಗ ಗೆದ್ದನು.

...ಮೊದಿಕೇರ ...ದಿ ಬಿಟ್ಟರು. ... ಒಬ್ಬರೂ ...ತ್ರ. ದೇವರ ...ರುವಮೂರಿನ ...ವಾಚಕ

...೧ ಚಂಚಪ ...ರ್ಣ ಕವಿತಾ ...ಯರ್ಗವನ್ನು ...ದ್ದರಿಂದಲೂ ...ಶಾಸ್ತ್ರಾದಿಗಳಿಗೆ ...ದರು ತಮ್ಮ ...ಜು ನೋಡಿ ...ತೋರಿಸಿದರೆ ...ಸುವೃಕ್ಷವಾಗಿ ...ಂಚದ ಕಷ್ಟ ...ಅಪರೂಪ. ...ನ ಅಧಿಕಾರಿ ...ಮುಜರಾಯಿ ...ಂಬ ಹೆಸರು ...ರುಗಿರುವದು ...ಕ್ಯವರ್ತ್ಯರು? ...ಭಕ್ತಾದಿ ...ದ್ದರಲ್ಲಿ ಜನ ...ಗಿತ್ತು ಈ ...ಈ ನ್ಯೂನತೆ ...ಸನದ ಭಾಗ ...ಕು! ತೆಂಗಿನ ...ವರಿಗೆ ಕಷ್ಟ ...ಬದಬಿಗ್ಗರಿಂ ...ಪ ಪಂದನ್ನು ...ರದವರ ಅಭಿ

...ತ್ತಿ ಈ ...ರವಾದ ದನ ...ನಡೆಯುತ್ತಿ ...ದಲ್ಲಿ ಕಟ್ಟಿ ...ಬಳ ಮುಂತಾ ...ಕಲ್ಲಾದ್ದನ್ನು ...ನಿಗಾ ಇದೆ ...ದೂತರು ...

...ಸಮಯದಲ್ಲಿ ...ದ್ದಿರುವ ಒಂದು ...ಹುಲ್ಲಿ ತಮಟೆ ...ಯಲ್ಲಿ ಗದ್ದಲ ...ವನು—ಸಾಮಿ ...ರ್ಯ ನಾನು ...ಕು ಅಲಿಕಾಟ! ...ಅಂಬಾರದ ...ಮತ್ತು ತೋರಿ ...ರಿಗೂ ತೋರಿ ...ಅದಕ್ಕೆ ನಾನು ...ಹೋಗಲು, ನಾ ...ವಿ ಹೋಗುವ ...ಂದಕ್ಕೆ ಹೋ ...ಕೊಂಡು ಕಂಬಿ ...ದೃಷ್ಟು ಕೆಳಗೂ ...ತ್ತೆಯನ್ನು ...ತ್ತು ಅವನ ...ಳಿ ಇತ್ತು. ...ದೇವಾಂಕ ...ದೂ ಅತ್ತ ...ಇದರ ನಿಜ ...ಕಂಬಿಮೊಳಗಿ

(7)

ಸಾಹಿತ್ಯವನ್ನು ತಿಳಿಯದ ಮಹಾಜನರಿಗೆ ಇದರ ಉಪಯೋಗವನ್ನು ತಿಳಿಸಬೇಕೆಂದು ಹೇಳುತ್ತಿರುವು.

ಅಂದಿನ ವಿದ್ಯಾರ್ಥಿಗಳಿಗೇ ಮುಂದಿನ ಗ್ರಂಥಾವಲೋಕನ ಯೋಗ್ಯವಾದುದರಿಂದ ಪ್ರತಿಸೆಪ್ಟ ವಿದ್ಯಾರ್ಥಿಯೂ ನಮ್ಮ ಹಿತವನ್ನು ಪುರಸ್ಕರಿಸಬೇಕಾಗಿದೆ. ಅದೂ ಇಲ್ಲದೆ ವಿದ್ಯಾರ್ಥಿಗಳಿಗೆ ಉಪಯೋಗವಾದ ವ್ಯಾಕರಣವೇ ಮೊದಲಾದ ಭಾಷಾವಿಷಯಗಳು ಕೂಡ ಈ ಪತ್ರಿಕೆಯಲ್ಲಿ ಆಗಾಗ್ಗೆ ಚರ್ಚಿಸಲ್ಪಡುತ್ತವೆ.

ಚಿಕ್ಕವರು ಸುಲಭವಾಗಿ ಓದತಕ್ಕ ಕಥೆಗಳೂ, ಪ್ರತಿಯೊಬ್ಬ ಹೆಂಗಸೂ ಈ ಪತ್ರಿಕೆಯು ಓದಲು ಅರ್ಹವಾದುದರಿಂದ ಸ್ತ್ರೀಯರಿಂದಲೂ ಈ ಪತ್ರಿಕೆಯು ಓದಿಸಲ್ಪಡತಕ್ಕದಾಗಿದೆ.

ಸಾಮಾಜಿಕ ಮತ್ತು ರಾಜಕೀಯ ವಿಷಯಗಳಲ್ಲಿ ಆಗಿಗಾಗ್ಗೆ ಕಾಣಿಸಿಕೊಳ್ಳುವ ಚಿತ್ರದಿಂದ ಕನ್ನಡ ತಿಳಿಯದವರು ಕೂಡ ಈ ಪತ್ರಿಕೆಯನ್ನು ನೋಡಲನುಕೂಲವಾಗಿದೆ. ಆಗಾಗ್ಗೆ ಕೌತುಕವನ್ನುಂಟುಮಾಡುತ್ತ ತಂದೆತಾಯಿಗಳನ್ನು ಪೀಡಿಸುವ ಚಿಕ್ಕ ಮಕ್ಕಳನ್ನು ಸಮಾಧಾನ ಮಾಡುವುದಕ್ಕೆ ತಕ್ಕ ಚಿತ್ರಗಳು ಇರುವುದರಿಂದ ಈ ಪತ್ರಿಕೆಯು ಚಿಕ್ಕ ಮಕ್ಕಳಿಗೂ ಉಪಯೋಗವಾಗಿದೆ.

ಆದುದರಿಂದ ಉತ್ತಮ ಮಾರ್ಗದರ್ಶಕವಾದ ವಿಷಯಗಳು, ಸಜ್ಜನರಲ್ಲಿ ವಿಶ್ವಾಸ, ಆರೋಗ್ಯ ರಕ್ಷಣ, ಸೇವಕರುಗಳ ಪ್ರಲಾಪ, ಕಾಮಿನಿಯರ ಸಲ್ಲಾಪ, ರಸಿಕರ ಆಲಾಪ, ನಾಗರಿಕರ ಆಲೋಚನ, ಮಾತಿನ ಕೌಶಲ ಈ ಕಲಾಪಗಳು ಚಿತ್ರಗಳಿಂದೊಪ್ಪಿರುವ ನಮ್ಮ ವಿಚಿತ್ರ ಪತ್ರಿಕೆಯು ಸ್ತ್ರೀಪುರುಷರಲ್ಲಿ ಆಬಾಲವೃದ್ಧರಿಗೂ ಉಪಯೋಗವಾಗುವುದರಿಂದ ಇಷ್ಟು ಅಮೌಲ್ಯವಾದ ಪತ್ರಿಕೆಯನ್ನು ಸಕಲರೂ ಅತ್ಯವಶ್ಯವಾಗಿ ತರಿಸಿಕೊಂಡು ನೋಡುವರೆಂದು ನಂಬುತ್ತೇವೆ.

ಕನ್ನಡನಾಡಿನ ಮಹಾಶಯರು ತಮ್ಮ ಉದಾರಾಶ್ರಯವನ್ನು ಕೊಡುತ್ತ ಬಂದಲ್ಲಿ ಕ್ರಮೇಣ ಈ ಪತ್ರಿಕೆಯನ್ನು ವಿಶೇಷ ಅಭಿವೃದ್ಧಿಪಡಿಸಬಹುದೆಂಬ ಭರವಸೆ ನಮಗೆ ತುಂಬಾ ಇದೆ.

<u>ಚಂದಾ ವಿವರ.</u> ಇದಕ್ಕೆ ಚಂದಾ ಹೆಚ್ಚುಕಡಮೆ ದಿನಕ್ಕೆ ಅರ್ಧಕಾಸು, ಎಂದರೆ ವರ್ಷಕ್ಕೆ ೧ ರೂಪಾಯಿಗಿಂತ ಹೆಚ್ಚಾಗುವದಿಲ್ಲ. ನಾನಾ ವಿಷಯಗಳಲ್ಲಿ ದುಂದಾಗಿ ಹಣ ಖರ್ಚಾಗುತ್ತಿರಲು ಈ ಅತ್ಯಲ್ಪವಾದ ಚಂದಾ ಹಣವನ್ನು ಒಪ್ಪಿಸಿ, ದೇಶಾಭಿವೃದ್ಧಿಯಲ್ಲಿಯೇ ಮನಸ್ಸಿಟ್ಟಿರುವ ಈ ಪತ್ರಿಕೆಯನ್ನು ಕೈಗೊಂಡು ನಮ್ಮ ನಾಡಿನವರೆಲ್ಲರೂ ನಿಜವಾದ ದೇಶವಾತ್ಸಲ್ಯವನ್ನು ತೋರಿಸುವರೆಂದು ನಂಬಿದ್ದೇವೆ. ಮುಂದಿನ ವರ್ಷದಿಂದ ಚಂದಾ ಹಣವನ್ನು ಹೆಚ್ಚುಮಾಡಬೇಕೆಂದಿರುವುದರಿಂದ ಆ ಕಾಲವು ಬರುವದರೊಳಗೆ ದೇಶಾಭಿಮಾನಿಗಳೆಲ್ಲರೂ ಈ ಪತ್ರಿಕೆಗೆ ಚಂದಾದಾರರಾಗಿ ತಮ್ಮ ಹಣವನ್ನು ಸಾರ್ಥಕಗೊಳಿಸುವರೆಂದು ನಂಬುತ್ತೇವೆ.

ಈ ನಮ್ಮ ಪತ್ರಿಕೆಗೆ ಪ್ರತಿದಿನದಲ್ಲಿಯೂ ಏಜಂಟರುಗಳು ಬೇಕಾಗಿರುವದರಿಂದ ಇಷ್ಟವಿದ್ದವರು ದಯವಿಟ್ಟು ನಮಗೆ ಕೂಡಲೆ ತಿಳಿಯಪಡಿಸಿದಲ್ಲಿ ಅಂತಹ

ದುಷ್ಟ ಮೃಗಗಳ ಕಾಟವು.

ಹೋಳಿಧಾಳಿನಲ್ಲಿ ಹುಲಿ ಷಿಕಾರಿ ಮಾಡಿದ್ದು.

ಹೋಳಿಧಾಳು ಗ್ರಾಮಕ್ಕೆ ಸಮೀಪವಾದ ಚಿಕ್ಕಕೊಂಡವೆಂಬ ಊರಿನಲ್ಲಿ ಕಳೆದ ತಾ ೦೩ ನೆ ಭಾನುವಾರ ಅದರ ಸಮೀಪದಲ್ಲಿ ವಾಸವಾಗಿದ್ದ ಭೈರಗದ್ದೆ ಸಣ್ಣಯ್ಯನ ಬಾಬ್ತು ಒಂದು ಬೇಸಾಯದ ಎತ್ತನ್ನು ಹಗಲು ಹೊತ್ತಿನಲ್ಲಿ ಮೇಯುವದಕ್ಕೆ ಹೊರಗೆ ಹೋದ ಸಮಯದಲ್ಲಿ ಒಂದು ಹುಲಿ ಬಂದು ಅದರ ಮೇಲೆ ಬಿದ್ದು ತಲೆಯನ್ನು ತನ್ನ ಪಂಜಾಗಳಿಂದ ಹೊಡೆದು ಬಗೆಯಿತು ಎತ್ತು ಒಳ್ಳೆ ಘಟ್ಟ ರಾಸಾದ್ದರಿಂದ ಆ ಏಟು ಸಹಿಸಿಕೊಂಡು ತನ್ನ ಒಡೆಯನ ಮನೆಗೆ ಓಡಿ ಬಂತು ಇದರ ಒಡೆಯನು ಅದನ್ನು ನೋಡಿ ಪಶ್ಚಾತ್ತಾಪ ಪಟ್ಟು ಇದು ಹುಲಿಯಿಂದಾಯಿತೆಂದು ನಿಶ್ಚೈಸಿದನು. ಆ ಎತ್ತಿನ ತಲೆಯನ್ನು ಕಟ್ಟಿ ಏನೇನೋ ಕಂಡ ಔಷಧಿಯನ್ನು ಮಾಡಿದನು. ಆದರೆ ಪ್ರಯೋಜನಕ್ಕೆ ಬಾರದೆ ೩ ದಿವಸ ಬದುಕಿದ್ದು ಸತ್ತು ಹೋಯಿತ್ತು. ಇದಕ್ಕೆ ಮುಂಚೆ ಹುಲಿ ೩, ೪ ಸಣ್ಣ ಕರುಗಳನ್ನು ತಿಂದು ಇತ್ತು. ಮಾರನೆ ಬೆಳಗ್ಗೆ ಸಣ್ಣಯ್ಯ ಈತನ ಅಳಿಯ ರಾಮಣ್ಣ ಇವನ ಬಾಬು ಸತ್ತು ಬಿದ್ದಿದ್ದ ಆ ಹಸುವನ್ನು ನೋಡಿದರು ಇದರ ಹೊಟ್ಟೆ ಸುತ್ತು ಕಾತ್ತಿಗೆಯನ್ನು ಕೀಳ ಮಾಂಸವನ್ನು ಕಾದುಮೃಗಗಳು ತಿಂದ ಹಾಗೆ ಕಾಣಿಸಿತು ಆಗ ಅದನ್ನು ಕಿರುಬಗಳೇ ತಿಂದಿರಬಹುದೆಂದು ತಿಳಿದು, ಇಲ್ಲಿಗೆ ಒಂದು ಮೈಲಿ ಘಾಸಲೆಯ ಮಾರೊಳಗ್ರಾಮದಲ್ಲಿ ಇರುವ ಮಾರಾಟೆಯ ಗೋವಿಂದನಿಗೆ ಹೇಳಲಾಗಿ ಇವನು ತನ್ನ ಜೋಡುನಳ್ಳಿ ತುಪಾಕಿಯಲ್ಲಿ ಆ ಕ್ಷಣವೇ ಗುಂಡನ್ನು ಬಾರ್ ಮಾಡಿಕೊಂಡು ಹೊರಟು, ಆ ಹಸು ಸತ್ತು ಬಿದ್ದಿದ್ದ ಸ್ಥಳಕ್ಕೆ ಹೋಗಿ ಅಲ್ಲಿಗೆ ಹತ್ತು ಹನ್ನೆರಡು ಗಜ ದೂರದಲ್ಲಿ ಮರೆಯಾಗಿದ್ದ ಒಂದು ಸ್ಥಳದಲ್ಲಿ ಆ ಕಿರುಬಗಳು ಬಂದರೆ ಹೊಡಿಯಬೇಕೆಂದು ರಾತ್ರಿಯೆಲ್ಲಾ ಕಾದನು ಅವು ಒಂದೂ ಬರಲಿಲ್ಲ. ಮತ್ತು ಅವನು ತಾ. ೧೪ ನೆ ಬೆಳಗ್ಗೆ ೭ ಗಂಟೆ ಸಮಯದಲ್ಲಿ ಹೊರಡುವಷ್ಟರಲ್ಲಿ ಒಂದು ಕಿರುಬವು ಕಾಣಿಸಿತು. ಇದನ್ನು ತುಪಾಕಿಯಿಂದ ಹೊಡಿಯಲಾಗಿ ಗುಂಡು ಆ ಕಿರುಬನ ಅನ್ನಕೋಶದ ಮಾರ್ಗವಾಗಿ ನುಗ್ಗಿ ಇನ್ನೊಂದು ಕಡೆ ಹೋಯಿತು. ಆ ಕಿರುಬನ ಕರುಳುಗಳೂ ೨ ಗಜ ಹೊರಗೆ ಹೊರಟದ್ದು ಓಡಿಹೋಗಿ ಒಂದು ಕಾಡುದಾರಿಯ ಪಕ್ಕದಲ್ಲಿ ಒಂದು ಪೊದೆಯನ್ನು ಸೇರಿತು ಇಷ್ಟರಲ್ಲಿ ಇನ್ನೊಂದು ಇದಕ್ಕಿಂತಲೂ ದೊಡ್ಡದಾದ ಕಿರುಬವು ಅಲ್ಲಿಗೆ ಬಂ

ಸಿಲೋನ್ (ಲಂಕಾ) ದ್ವೀಪದ ಮುಖ್ಯ ರೇವು ಪಟ್ಟಣ ಕೊಲಂಬೋದಲ್ಲಿ ಒಂದು ಕಾರ್ಖಾನೆಗೆ ಬೆಂಕಿ ಬಿದ್ದು ಕಟ್ಟಡ ಸಾಮಾನುಗಳೂ, ಯಂತ್ರಗಳೂ ಸುಟ್ಟುಹೋದವು ಕಾರ್ಖಾನೆಯ ಯಜಮಾನರಿಗೆ ಏಳುವರೆ ಲಕ್ಷ ರೂಪಾಯಿ ನಷ್ಟವಾಯಿತೆಂದು ಸಮಾಚಾರ ಬಂದಿದೆ.

****

ಬಂಗಾಳಾ ಅಧಿಪತ್ಯಕ್ಕೆ ಸೇರಿದ ಬಿರ್ಭಂ ಡಿಸ್ಟ್ರಿಕ್ಟಿನಲ್ಲಿ ಸಬ್ ರೆಜಿಸ್ಟ್ರಾರು ಈಗಿನ ಎಡ್ವರ್ಡ್ ಚಕ್ರವರ್ತಿಯವರ ಅಚ್ಚಿನ ಹೊಸ ರೂಪಾಯಿಗಳನ್ನು ಜನರು ತಂದುಕೊಟ್ಟರೆ ಅಂಗೀಕರಿಸದೆ ಹಳೇ ರೂಪಾಯಿಗಳನ್ನೇ ತಂದು ಕೊಡಬೇಕೆಂದೂ ಇಲ್ಲದಿದ್ದರೆ ಪತ್ರಗಳನ್ನು ರಿಜಿಸ್ಟರ್ ಮಾಡುವದಿಲ್ಲವೆಂದೂ ಹೇಳುತ್ತಾರೆಂದು ಅಲ್ಲಿನ ಒಂದು ಪತ್ರಿಕೆಯು ತಿಳಿಸುತ್ತದೆ.

****

ಕಲ್ಕತ್ತೆಯಲ್ಲಿ ಅಮೀರ್ ಷೇಕ್ ಎಂಬೊಬ್ಬ ಐಶ್ವರ್ಯವಂತನು ೩ ಸಾವಿರ ರೂಪಾಯಿನ ಕರೆನ್ಸಿ ನೋಟುಗಳನ್ನು ಕಬ್ಬಿಣದ ಪೆಟ್ಟಿಗೆಯಲ್ಲಿಟ್ಟಿದ್ದನು ಅವನ ಚಿಕ್ಕ ಪ್ರಾಯದ ಮಗನು [illegible]. ಪೋಲೀಸಿನವರು ಆ[illegible] ಮ್ಯಾಜಿಸ್ಟ್ರೇಟರು [illegible] ವಿಟ್ಟರು.

(೩)

[illegible] ಲಾಭವು ಬಹಳ [illegible] ತಿಳಿಸುತ್ತೇವೆ. ವರ್ತಮಾನ ಪತ್ರಿಕೆ ಬೇಕಾದರೆ ಎರಡಾಣೆಯ ಸ್ಟಾಂಪನ್ನು ಕಳುಹಿಸಬೇಕು. ಪ್ರಿಯ ಪತ್ರಿಕೆಯು ತಲುಪಿದಮೇಲೆ ಪತ್ರಿಕೆಯನ್ನು ಬಯಸಿದರೆ ಈ ೨ ಆಣೆಯು ವಾರ್ಷಿಕ ಚಂದಾದಲ್ಲಿ ಕಳೆಯಲ್ಪಡುತ್ತದೆ.

ವಿಕ್ಟೋರಿಯ ಪ್ರತಾಪ ಆಫೀಸ್,

೧೭೪, ಅರಳೇಪೇಟೆ, ಬೆಂಗಳೂರು ಸಿಟಿ.

ಹೊಸ ಪುಸ್ತಕಗಳು! ಹೊಸ ಪುಸ್ತಕಗಳು!! ಹೊಸ ಪುಸ್ತಕಗಳು!!!

(೧) ಮನಶ್ಚಂದ್ರಬೋಧೆ.

ನೈತಿಕವಿಷಯಕ ಯುದ್ಧ.

ಮನೋರಾಜನಿಗೆ ಪ್ರವೃತ್ತಿ, ನಿವೃತ್ತಿ ಎಂಬ ಹೆಂಡತಿಯರು; ವಿವೇಕ, ವಿಷಯ ಎಂಬ ಮಕ್ಕಳು; [illegible] ಯುದ್ಧ ನಡೆಯುತ್ತದೆ. ಕ್ರಯ ೪ ಆಣೆ

(೨) ಒಬ್ಬ ಸಿಪಾಯಿಯ ಸಾಹಸಗಳು.

ಇದೊಂದು ವಿನೋದವಾದ ಕಥೆ, ಇದರ [illegible] ಸುಮಂತ [illegible] ಸಂಧಿಗಳನ್ನು ಬಿಡಿಸಿ ಬರೆಯಲ್ಪಟ್ಟಿದೆ. "ಒಂದು ಎತ್ತು ಮತ್ತು ಆರು ಗುಲಗಂಜಿಗಳ ಬುದ್ಧಿ." ಇದಕ್ಕೆ ಮುಟ್ಟಿದ ಮೊದಲು ಮುಗಿಸುವವರೆಗೆ [illegible] ಇಲ್ಲ. ಚಿತ್ರವಿಚಿತ್ರವಾದ ಸಾಹಸಗಳು, ಸ್ತ್ರೀ ಸಂಕೋಚದಿಂದ [illegible] ವಿವರಿಸಲಿಲ್ಲ. ಕ್ರಯ ೪ ಆಣೆ.

(೩) ಇಪ್ಪತ್ತನೆಯ ಶತಮಾನದ ಇರುಳು.

ಇದನ್ನು ಪ್ರತಿಯೊಬ್ಬ ಆರ್ಯಬಾಲಬಾಲಕಿಯರು ಅವಶ್ಯವಾಗಿ ಓದಬೇಕು. ನಿಮ್ಮ ಗವಿಯೂರಿನ ಜೀವನ ಸ್ವೈಜ್. ನೀವು ಹೊಂದಿರುವುದು ಗತ ವೈಭವದ ಜತೆಯಲ್ಲಿ ನಾಶವೂ ಬರುವದೆನ್ನುವದು. "ಪ್ರಮಾದಕ್ಕೆ ಅನ್ಯಜನನ್ನು [illegible] ತಿಳಿವಳಿಕೆಗಿಂತಲೂ ಅಜ್ಞಾನವೇ ಶ್ರೇಯಸ್ಕರವಲ್ಲವೆ?" ಎಂಬುದೆ ಇದರ ಸಾರಾಂಶ. ಕ್ರಯ ೨ ಆಣೆ.

(೪) ಅನುಭವತರಂಗಿಣೀ.— "ದಗಲ್‌ಬಾಜಿ" ಜನಗಳ ಗುಣಗಳು ಇದರಲ್ಲಿ ಚೆನ್ನಾಗಿಯೇ ವರ್ಣಿಸಲ್ಪಟ್ಟಿವೆ ಕ್ರಯ ೨ ಆಣೆ.

(೫) ಶ್ರೀರಾಮಲಿಂಗಪದ್ಯಗಳು:— (ತೆಲುಗು) ಸರ್ವಜ್ಞಮೂರ್ತಿ ಮತ್ತು ವೇಮನ್ನನವರ ಪದ್ಯಗಳಹಾಗೆ-ಇರುವ ಪದ್ಯಗಳಿವೆ. ಕ್ರಯ ೪ ಆಣೆ

(೬) ಸ್ವಧರ್ಮನೀತಿ.— ನಿತ್ಯಕರ್ಮಾನುಷ್ಠಾನಬೋಧಕವಾದ ಪದ್ಯಪ್ರಬಂಧ. ಕ್ರಯ ೨ ಆಣೆ.

ವಿಳಾಸ.— ವಿಕ್ಟೋರಿಯ ಪ್ರತಾಪ ಆಫೀಸ್, ೧೭೪ ಅರಳೇಪೇಟೆ, ಬೆಂಗಳೂರು ಸಿಟಿ.

...ಟಳ್ಳ ಪರಿಶ್ರಮವನ್ನು ಹೋಡಿ, ಒಂದು ಖಗೋಳಶಾಸ್ತ್ರಾಲಯ ...ಕಟ್ಟಿಸಿ, ಅದರಲ್ಲಿ ಬಹಳ ದೊಡ್ಡದಾದ ದೂರದರ್ಶಕ ಯಂತ್ರ ...ಇರಿಸಿಟ್ಟಿರುತ್ತಾರೆ. ಅವರು ಸತ್ತ ದಿನ ಸರ್ಕಾರಿ ಕೋರ್ಟು ...ಗಳನ್ನು ಗೌರವಾರ್ಥವಾಗಿ ಮುಚ್ಚಿದ್ದರು. ಅವರು ಮೃತರಾ...ಗ ಅವರಿಗೆ ೬೩ ವಯಸ್ಸಾಗಿತ್ತು.

****

ಅಜ್ಮೀರ್ ಪಟ್ಟಣದಲ್ಲಿ ಕಳೆದ ವಾರ ಬಹಳ ಐಶ್ವರ್ಯವಂತಳಾದ ...ಬಹದ್ದೂರ್ ಸೇತುಸೋಭಾಗ್ಮಾಲ್ ಎಂಬ ಜೈನ ಹೆಂಗಸು ...ಸತ್ತಳು. ಅವಳಿಗೆ ತೊಂಭತ್ತು ವಯಸ್ಸಾಗಿತ್ತು. ಅವಳು ಬಹ...ದೈವನಿಷ್ಠಳಾಗಿಯೂ, ಧರ್ಮ ಬುದ್ಧಿಯುಳ್ಳವಳಾಗಿಯೂ ಇದ್ದು, ...ಇದುವರೆಗೂ ೨೪ ಲಕ್ಷ ರೂಪಾಯಿ ಧರ್ಮ ಮಾಡಿರುತ್ತಾಳೆ. ಅವಳ ಉತ್ತರ ಕ್ರಿಯಾದಿಗಳು ಸಾವಿರಾರು ಜನರು ಸೇರಿ ಬಹಳ ...ವೈಭವದಿಂದ ನಡಿಸಲ್ಪಟ್ಟವು. ಅವಳ ಸಂಬಂಧಿಕರು ಒಂಟೆಗಳ ...ಸವಾರಿ ಮಾಡುತ್ತಾ ಬೆಳ್ಳಿಯ ಮತ್ತು ತಾಂಬ್ರದ ನಾಣ್ಯಗಳನ್ನು ...ಮೇಲೆ ಎರಚುತ್ತಾ ಹೋದರು. ಇದುವರೆಗೆ ಅಜ್ಮೀರ್ ಪಟ್ಟಣ...ದಲ್ಲಿಗೂ ಅವರ ಕರ್ಮಗಳು ಇಷ್ಟು ಅಟ್ಟಹಾಸವಾಗಿ ನಡೆಯ...ಲಿಲ್ಲವೆಂದು ತಿಳಿದು ಬರುತ್ತದೆ.

****

ಬರ್ದವಾನ್ ಡಿಸ್ಟ್ರಿಕ್ಟಿನಲ್ಲಿ ಇನಾಂದಾರನಾದ ಸುಮಾರು ೪೬ ...ವರ್ಷದ ಉಮಾಪತಿ ಬಾನರ್ಜಿ ಎಂಬ ಕುಲೀನ ಬ್ರಾಹ್ಮಣನು ತನ್ನ ...ಮೊದಲನೇ ಪತ್ನಿಯು ಸತ್ತನಂತರ ಇನ್ನೊಬ್ಬಳನ್ನು ಮದುವೆ ಮಾಡಿ...ಕೊಳ್ಳಬೇಕೆಂದು ನೆರೆಯೂರಿನಲ್ಲಿದ್ದ ಒಬ್ಬ ಕನ್ಯೆಯನ್ನು ಗೊತ್ತು ...ಮಾಡಿಕೊಂಡಿದ್ದನು. ಕನ್ನೆಯ ಕಡೆ ಪುರೋಹಿತನು ಗಂಡಿನಿಂದ ಬಹಳ ...ಹಣವನ್ನು ತಿಂದದ್ದಲ್ಲದೆ ಮದುವೆಗೆ ಸ್ವಲ್ಪ ಹೊತ್ತಿನ ಮುಂಚೆ ನೂರು ...ರೂಪಾಯಿನ ಪ್ರಾಂಸರಿಯನ್ನು ಬರೆದು ಅದಕ್ಕೆ ಉಮಾಪತಿಯನ್ನು ...ಸಹಿ ಹಾಕುವಂತೆಯೂ ಇಲ್ಲದಿದ್ದರೆ ಮದುವೆಯನ್ನೇ ನಿಲ್ಲಿಸುವದಾ...ಗಿಯೂ ಹೆದರಿಸಲು ಅವನು ಅದಕ್ಕೆ ಒಪ್ಪಿ ರುಜು ಹಾಕಿ ಕೊಟ್ಟನು. ...ಮರು ದಿನದ ಮೇಲೆ ಪುರೋಹಿತನು ಆ ಹಣಕ್ಕೆ ದಾವಾ ಮಾಡಲು ...ನ್ಯಾಯವರು ಕೋರ್ಟು ಖರ್ಚನ್ನು ಮಾತ್ರ ಕೊಡಿಸಿ ಮೊಕದ್ದಮೆ...ಯನ್ನು ವಜಾ ಮಾಡಿದರು.

****

ಬಂಗಾಳಾ ಆಧಿಪತ್ಯಕ್ಕೆ ಸೇರಿದ ಕ್ಯಾಸಿಂಗ್ ಟರ್ಕಿ ಎಂಬ ಊರಿ...ನ ಪ್ರಜೆಗಳಿಗೆ ದ್ರವ್ಯಸಹಾಯವನ್ನು ಕ್ಷಾಮನಿವಾರಣೆ ಮಾಡಬೇ...ಕೆಂದು ಮಿ॥ ಮಂ ಖರ್ಜೀ ಎಂಬ ಸರ್ಕಾರಿ ಅಧಿಕಾರಿಯು ಅಲ್ಲಿಗೆ ...ಬಂದನು. ಮಹೇಂದ್ರನಾಥ ಹಲಧರನೆಂಬೊಬ್ಬ ಪಂಚಾಯತದಾರನು ...ಕ್ಷಾಮಪೀಡಿತರಾದ ಪ್ರಜೆಗಳನ್ನು ಆ ಅಧಿಕಾರಿಯ ಬಳಿಗೆ ಕರೆದು...ಕೊಂಡು ಹೋಗಿ ಅವರ ಸ್ಥಿತಿಗತಿಗಳನ್ನು ಅವರಿಗೆ ತಿಳಿಸಬೇಕಾಗಿ ...ನಿರ್ದೇಶಿಸುವಂತೆ ಅವನಿಗೆಲ್ಲಾ ಹಣ ಕೊಡಿಸಿದನು. ... ...ಕ್ಷಾಮಪೀಡಿತರಾದವರಿಗೆ ಕ್ಷಾಮನಿವಾರಣಾ ಕರ್ತವ್ಯವಾಗಿದ್ದಂತೆ ಅವರು ...ಸಿಕ್ಕಿದ ಹಣದಲ್ಲಿ ತಲಾ ಅರ್ಧ ರೂಪಾಯಿಯಂತೆ ಅವನಿಗೆ ...ಕೊಟ್ಟು ಆ ಪಂಚಾಯತದಾರನು ಅವರನ್ನು ಹಿಂಸಿಸಿ ತಲಾ ...ಒಂದು ರೂಪಾಯಿಯಂತೆ ಅವರಿಂದ ಕಿತ್ತುಕೊಂಡನು. ಈ ಹಿಂಸೆಯು ...ಮಿತಿಮೀರಲು ಗಲಭೆಯನ್ನುಂಟುಮಾಡಿ ಸರ್ಕಾರಕ್ಕೆ ತಿಳಿಸಲು ...ಆ ಅವನ ಮೇಲೆ ಫಿರ್ಯಾದನ್ನು ಒಪ್ಪಿ ಮ್ಯಾಜಿಸ್ಟ್ರೇಟು ...೪ ದಿನಗಳ ಕಠಿಣ ಸಜೆಯನ್ನು ಮಾಡಿ ದಂಡವನ್ನು ವಸೂಲ...ನ್ನು ಮಾಡಿದರು.

****

ಅಫ್ಘಾನಿಸ್ಥಾನದ ಅಮೀರರು ಕಳೆದ ವಾರ ನಡೆದ ಬಕ್ರೀದ್ ...ಹಬ್ಬವನ್ನು ಹಿಂದೂ ಯಾತ್ರಿಕರ ಜೊತೆಗೆ ದೆಹಲಿ ಪಟ್ಟಣಕ್ಕೆ ಹೋದ ...ಈ ಹಬ್ಬದಲ್ಲಿ ಹಿಂದೂಸ್ಥಾನದ ಮಹಮ್ಮದೀಯರು ಅನೇಕ ...ಹಸುಗಳನ್ನು ಕೊಲ್ಲುತ್ತಾರೆ. ಅಮೀರರು ಬರುವರೆಂದು ತಿಳಿದ ...ದೆಹಲಿಯ ಮಹಮ್ಮದೀಯರು ನೂರು ಹಸುಗಳನ್ನು ಕೊಲ್ಲ...ಬೇಕೆಂದು ಇದ್ದರು. ಇದು ಅಮೀರರಿಗೆ ತಿಳಿದು ಒಡನೆ ಕೂಡಲೇ ಈ ...ಹಬ್ಬದಲ್ಲಿ ಅವರು ತಮ್ಮ ಅಸಮಾಧಾನವನ್ನು ತಿಳಿಯಪಡಿಸುತ್ತಾ ತಾವು ...ಮತಗಳ ವ್ಯತ್ಯಾಸವಿಲ್ಲದೆ ಎಲ್ಲಾ ಜನರನ್ನೂ ಈ ದೇಶವನ್ನೂ ...ನೋಡಿಕೊಂಡು ಹೋಗುವದಕ್ಕಾಗಿ ತಾವು ಬಂದಿರುವದಲ್ಲದೆ ಜಗಳ ...ಕ್ಕೆ ಕಾರಣಗಳು ತಮಗೆ ಇಷ್ಟವಿಲ್ಲವೆಂಬುದೇ ತಮ್ಮ ಅಭಿಮತವೆಂ...ದು, ಹಸುಗಳಿಗೆ ಬದಲಾಗಿ ಕುರಿಗಳನ್ನು ಕೊಂದರೆ ಹಿಂದುಗಳಿಗೆ ...ವಿರೋಧವಾದ ಅಸಮಾಧಾನವು ಉಂಟಾಗಲಾರದೆಂದೂ, ಹಾಗಿಲ್ಲದ...ದ್ದರಿಂದ ತಾವು ಆ ಹಬ್ಬದಲ್ಲಿ ಬಹಿರಂಗವಾಗಿ ಸೇರುವದಿಲ್ಲವೆಂತಲೂ ...ತಿಳಿಸಿದರು. ಅಮೀರರ ಅಭಿಪ್ರಾಯವನ್ನು ದೆಹಲಿ ಮಹ...ಮ್ಮದೀಯರು ಅನುಮೋದಿಸಿದರು. ಇದರಿಂದ ಅಮೀರರಿಗೆ ಹಿಂದೂ...ಗಳ ಮೇಲಿರುವ ಪ್ರೀತಿ ವಾತ್ಸಲ್ಯಗಳು ವ್ಯಕ್ತಪಡುವವು.

****

ಕಲ್ಕತ್ತೆಯ ಹತ್ತಿರ ಅಗ್ರಹಾರ ಎಂಬೊಂದು ಗ್ರಾಮದಲ್ಲಿ ಒಬ್ಬ ...ನು ತನ್ನ ಹೊಲದಲ್ಲಿ ಆನೆಗಳ ಗುಂಪು ನೆರೆದುಕೊಂಡು ಬೆಳೆಯನ್ನು ...ತಿನ್ನುತ್ತಿದ್ದದ್ದನ್ನು ನೋಡಿ ಅಂಜಿಕೆಯಿಂದ ಆನೆಗಳನ್ನು ಓಡಿ...ಸಲು ಆ ವ್ಯಕ್ತಿ ಒಂದು ಅಂಬು ಆನೆಗಳ ಕಡೆಗೆ ಬಿಡಲು ಅದು ...ಒಂದು ಸಣ್ಣ ಮರಿಗೆ ತಗಲಿ ಅದನ್ನು ಕೆಳಗುರುಳಿಸಿತು ...ಆನೆಗಳೆಲ್ಲಾ ಆ ರೈತನನ್ನು ಓಡಿಸಿಕೊಂಡು ಹೊದವು. ಅವ...ನು ಹೋಗಿ ಮನೆಯೊಳಗೆ ಸೇರಿಕೊಂಡನು. ಆನೆಗಳು ಸುತ್ತಲೂ ಸುತ್ತಿ ...ಮನೆಯನ್ನು ಧ್ವಂಸಮಾಡಿದವು. ಆದರೆ ಒಳಗಿದ್ದ ರೈತ ...ಆನೆಗಳಿಗೆ ಸಿಕ್ಕದೆ ಹೇಗೋ ತಪ್ಪಿಸಿಕೊಂಡು ಓಡಿ ಹೋಗಿ ಒಂದು ...ಮರದ ಮೇಲೆ ಹತ್ತಿ ಅದರ ಕೊನೆಯಲ್ಲಿ ಕೂತುಕೊಂ...ಡನು. ರೇಗಿದ್ದ ಆನೆಗಳು ಅವನನ್ನು ಬಿಡದೆ ಅಟ್ಟಿಸಿ ಕೊಂಡು ...ಹೋಗಿ ಆ ಮರದ ಸುತ್ತಲೂ ನಿಂತುಕೊಂಡವು. ಆ ವ್ಯಕ್ತಿ ಕೆಲವು ...ದಿನ ಸಮೀಪದಲ್ಲಿದ್ದ ಒಂದು ಕೊಳದಿಂದ ತಮ್ಮ ಸೊಂಡಲುಗಳ ...ನೀರುತಂದು ಮರದ ಬುಡಕ್ಕೆ ಸುರಿದು ಎಲ್ಲಾ ಸೇರಿ ಮರವನ್ನು ...ಕೆಡಹಿ ಬುಡ ಸಹಿತ ಕಿತ್ತು, ಕೆಳಗೆ ನೆಲದಿಂದ ಬಿದ್ದ ಅರೈತ...ನನ್ನು ಹಿಡಿದು ತುಳಿದು ಕೊಂದು ತಮ್ಮ ಹಗೆಯನ್ನು ತೀರಿಸಿಕೊಂ...

ಕಲ್ಕತ್ತೆಯಲ್ಲಿ ಒಂದು ದಿನ ಸಾಯಂಕಾಲ ಒಬ್ಬ ಮಾರ್ವಾಡಿ ಹೆಂಗಸು ತನ್ನ ಮುಖವನ್ನು ಸೀರೆ ಸೆರಗಿನಿಂದ ಮುಚ್ಚಿಕೊಂಡು ಅಳು ತ್ತಿದ್ದ ಮತ್ತೊಬ್ಬಳ ಕೈಯನ್ನು ಹಿಡಿದುಕೊಂಡು ಹೋಗುತ್ತಿದ್ದಳು. ಅವಳ ಸೆರಗಿನ ಮೇಲೆಯೂ ಕಾಲಿನ ಮೇಲೂ ರಕ್ತದ ಗುರುತುಗಳಿ ದ್ದವು. ಜೊತೆಯಲ್ಲಿ ಹೋಗುತ್ತಿದ್ದವಳು ತನ್ನ ಜೊತೆಗಾತಿಯು ಅಕ ಸ್ಮಾತ್ತಾಗಿ ದಾರಿಯಲ್ಲಿ ಮಗುವನ್ನು ಹೆತ್ತಳೆಂತಲೂ ಅದರಿಂದ ಅವಳು ತುಂಬಾ ಸಂಕಟಪಡುತ್ತಿರುವಳೆಂತಲೂ ದಾರಿಯಲ್ಲಿ ಹೋಗುವವರಿಗೆ ಹೇಳಿಕೊಂಡು ಅವರಿಂದ ಹಣವನ್ನು ಸಂಪಾದಿಸುತ್ತ ಹೋಗುತ್ತಿ ದ್ದಳು. ಆ ಮಾರ್ಗವಾಗಿ ಹೋಗುತ್ತಿದ್ದ ಪೊಲೀಸ್ ಸೂಪರಿಂಟೆಂಡೆಂ ಟರು ಒಂದು ಡೋಲಿಯನ್ನು ತರಿಸಿ ರೋಗಿಯನ್ನು ಹತ್ತಿರ ಇದ್ದ ಆಸ್ಪತ್ರೆಗೆ ತೆಗೆದುಕೊಂಡು ಹೋಗಿ ಪರೀಕ್ಷಿಸಲಾಗಿ ಅವಳ ಬಟ್ಟೆಯ ಮೇಲಿದ್ದ ಕೆಂಪು ಗುರ್ತುಗಳು ಬಣ್ಣದವುಗಳಾಗಿದ್ದವು. ಹೊಸದಾಗಿ ಹುಟ್ಟಿದ ಮಗುವಾದರೋ ಚಿಂದಿ ಬಟ್ಟೆಗಳಿಂದ ಮಾಡಲ್ಪಟ್ಟು ತಲೆಗೆ ಬದಲಾಗಿ ಒಂದು ಮಣ್ಣಿನ ಪಾತ್ರೆಯನ್ನು ಹೊಂದಿತ್ತು. ಆಸ್ಪತ್ರೆಯ ವರು ತುಂಬಾ ಆಶ್ಚರ್ಯಪಟ್ಟು ಆ ಹೆಂಗಸರಿಬ್ಬರನ್ನೂ ಕಳುಹಿಸಿಬಿ ಟ್ಟರು. ಈಗ ಪೋಲೀಸಿನವರು ಅವರಿಬ್ಬರ ಮೇಲೂ ಮೊಕದ್ದ ಮೆ ತಂದಿದಾರೆ.

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸ್ಥಳ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋ ಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕ ದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆ ಯಕೂಡದು, ಇಂಥವುಗಳಿಗೆ ನಾವು ಸ್ಥಳ ಕೊಡಲಾರೆವು.

ಬಾತ್ಮಿದಾರರು ಬರೆವ ಅಭಿಪ್ರಾಯಗಳಿಗೆ ನಾವು ಜೊತೆಗಾರರಾ ಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿ.

ಕರೆಸ್ಪಾಂಡೆನ್ಸ್.

ವರ್ತೂರು ಆಸ್ಪತ್ರೆಯು.

ಅಯ್ಯಾ,

ಬೆಂಗಳೂರು ತಾಲ್ಲೂಕು ವರ್ತೂರು ಗ್ರಾಮದಲ್ಲಿ ಈಗ ಸುಮಾ ರು ಮೂರು ತಿಂಗಳಿಗೆ ಆಗುವಷ್ಟು ಪ್ಲೇಗ್ ದೆಸೆಯಿಂದ ಆಸ್ಪತ್ರೆಯು ಪ್ಲಾಟ್ ಫಾರಂಗೆ ವರ್ಗವಾಗಿರುವದರಿಂದ ತುಂಬಾ ಅನಾನು ಕೂಲವಾಗಿದೆ. ಕಳೆದ ೩ ತಿಂಗಳಿಂದಲೂ ಪ್ಲೇಗ್ ರೋಗವು ಈ ಊರನ್ನೇ ಬಿಡದಾಗಿ ಮಾಡಿದೆ. ಈಗ ಸುಮಾರು ೧ ತಿಂಗಳಿಂದ ... ಕಳೆದ ೨೦ ದಿನಗಳಿಂದ ಈ ಗ್ರಾಮವು ನಿರ್ಮಲ ವಾಗುತ್ತಲಿದೆ. ಪ್ಲೇಗ್ ಇನ್ಸ್‌ಪೆಕ್ಟರು ಈ ಗ್ರಾಮದ ಪೂರಾ ಸ್ಥಿತಿ ಪಟ್ಟಣ ಬಿಡಬಹುದೆಂದು ಹೇಳಿ, ಜನಗಳು ಊರು ಸೇರಲು ಅಪ್ಪಣೆ ಕೊಡಿಸಿದರು. ಮೊದಲು ಈ ಗ್ರಾಮದಲ್ಲಿ ತಾಲ್ಲೂಕ್ ಇತ್ತು. ಈಗ ಮ್ಯುನಿಸಿಪಾಲಿಟಿ ಸಹಾ ಇಲ್ಲದಿರೋಣದಿಂದ ಗಲೀಜು ಜಾಸ್ತಿ ಯಾಗುತ್ತಲಿದೆ. ಈ ವಿಷಯದಲ್ಲಿ ಅನೇಕಾವರ್ತಿ ಮೇಲಿನವರಲ್ಲಿ ಅರಿಕೆಮಾಡಿಕೊಂಡಾಗ್ಯೂ ಪ್ರಯೋಜನವಾಗಲಿಲ್ಲ. ಇನ್ನಾದರೂ ಈ ಕೊರತೆಯು ನಿವಾರಣೆಯಾಗುವದೆಂದು ನಿರೀಕ್ಷಿಸುತ್ತೇನೆ.

ಪ್ರಜಾ ಹಿತಚಿಂತಕ.

ಭತ್ತ ಕುಟ್ಟುವ ಯಂತ್ರ ದೊರೆಯುತ್ತದೆ.

ಅಯ್ಯಾ,

ಚಿಕ್ಕಬಳ್ಳಾಪುರ ತಾಲ್ಲೂಕು ಬಸೆಟ್ಟಹಳ್ಳಿ ಬಿ ಸೂರ್ಯನಾರಾಯಣ ರಾಯರು ಭತ್ತಕುಟ್ಟುವ ಯಂತ್ರ ಬೇಕೆಂದೂ, ಸದರಿ ಯಂತ್ರ ಸಿಕ್ಕುವ ಕಂಪನಿಯ ಹೆಸರು ವಿಳಾಸಗಳನ್ನು ತಿಳಿಸಬೇಕೆಂದೂ ತಮ್ಮನ್ನು ಕೇಳಿದ್ದಕ್ಕೆ ವಾಚಕರ ಅನುಕೂಲಕ್ಕೋಸ್ಕರ ಸದರಿ ಅಂಶ ವನ್ನು ತಾವು ಇದೇ ಜನವರಿ ೩ ನೇ ಗುರುವಾರದಲ್ಲೂ ತಮ್ಮ ಪತ್ರಿಕೆ ಯಲ್ಲಿ ಪ್ರಕಟಿಸಿರುವದು ಸರಿಯಷ್ಟೆ. ಮೇಲ್ಕಂಡ ಭತ್ತಕುಟ್ಟುವ ಯಂತ್ರವು ಕನಡಾ ದೇಶದಲ್ಲಿರುವ ಲಂಡನ್ ಪಟ್ಟಣದ ಸ್ಪ್ರೋಟ್ ಶಾ ಕಂಪೆನಿಯಲ್ಲಿ ಬಹಳ ಸುಲಭ ಕ್ರಯಕ್ಕೆ ದೊರೆಯುತ್ತ ಇದ್ದರು. ಆಳುಗಳಿಂದ ಕುಟ್ಟಿಸಿಕೊಂಡು ಈ ಯಂತ್ರದಿಂದ ದಿನಕ್ಕೆ ೬—೮ ಖಂಡುಗ ಭತ್ತ ಧಾರಾಳವಾಗಿ ಕುಟ್ಟಬಹುದು. ಮಿಗತಾಗಿರುತ್ತದೆ. ಆದರ ಕೆಲಸವು ಬಹು ತೃಪ್ತಿಕರವಾಗಿ ಕಂಡುಬರುವುದಲ್ಲದೆ ಅಕ್ಕಿ ಕನಾಗಿ ಆಗುತ್ತದೆ. ಸುಲಭವಾಗಿ ರಿಪೇರಿ ಪಟ್ಟನೆ ಮಾಡೇ ಮಾಡಿ ಕೊಳ್ಳಬಹುದು. ಬೆಚ್ಚು ಸಂಗತಿಗೆ ಮೇಲೆ ನಮೂದು ಮಾಡಿರುವ ಕಂಪನಿಗೆ ಬರೆದು ತಿಳಿದುಕೊಳ್ಳಬಹುದು. ಈ ವಿಷಯವನ್ನು ಮೇಲ್ಕಂಡ ಮಿತ್ರರ ಮತ್ತು ವಾಚಕರ ಅವಗಾಹನೆಗೋಸ್ಕರವಾಗಿ ತಮ್ಮ ಪತ್ರಿಕೆಯಲ್ಲಿ ಪ್ರಕಟಪಡಿಸಬೇಕಾಗಿ ಕೋರುತ್ತೇನೆ.

ಬಿ. ಸಿ. ಎಸ್ ರಾಜಗೋಪಾಲಶರ್ಮ, ಬಿಡದಿ.

ಘೋರಕೊಲೆಗಳು.

ಅಯ್ಯಾ,

ಚಿತ್ರದುರ್ಗ ತಾಲ್ಲೂಕು ಹಿರುವನೂರು ಸಮ್ಮತು ಬೆಳಗಟ್ಟ ಗ್ರಾಮದ ವಾಸಸ್ತರು ಗ್ರಾಮದ ದೇವತೆ ದುರ್ಗಮ್ಮ ಪೂಜೇರಮ್ಮ ಎಂದು ಎರಡು ದೇವರು ಮಾಡಿದರು. ಜನವರಿ ತಾ ೧ ನೆ ಮಂಗಳ ವಾರ ರಾತ್ರಿ ೫ ಘಂಟೆ ಕಾಲದಲ್ಲಿ ಪಟ್ಟದ ಕೋಣ ಕಡಿದರು. ತಾ ೨ ನೆ ಮಧ್ಯಾಹ್ನ ಹಗಲು ೩ ಘಂಟೆ ವೇಳೆಯಲ್ಲಿ ಮೂರನೂರ ಇಪ್ಪತ್ತು ಕುರಿ ಕಡಿದಿರುವರು. ೧೩ ಕೋಣ ಬೇಗಾರು ಹತ್ಯ ಮಾಡಿದರು. ಕುರಿ ಕೋಣ ಸೇರಿ ಸಾವಿರ ರೂಪಾಯಿ ಖರ್ಚು ಆಗಿ ರುತ್ತೆ. ತಾ ೩ ನೆ ಗುರುವಾರ ೨ ಸರಿ ಮೇಕೆ ಹೋತಗಳನ್ನು ಗಾವು ಎಂದು ಕಡಿದರು. ಈ ಗಾವು ಯೆಂಬುವ ದನು ಆತನೂ ರಿಂದ ಪ್ರೇತದಂತಾದವರು ಎಂದು ತಲೆ ಕೆದರಲು ಬಿಟ್ಟುಕೊಂಡು ಎರಡು ಕೈಗೆ ಎರಡು ಲೋಟ ತೆಗೆದುಕೊಂಡು ೭ ಜನರು ಕುಣಿಯುತ್ತಾ ಬಳಿಗೆ ಅವರಿಂದ ಬೇಸರ ಸಮೀಪಕ್ಕೆ ಹೋಗಿ ಅಲ್ಲಿ ಪೂಜೆ ಪುನಸ್ಕಾರ ಮಾಡಿ, ಕಾಯಿ ಒಡೆದು ಮೇಕೆ ಹೋತ ಮೇಲಕ್ಕೆ ಎತ್ತಿ ಕಿವಿಯಲ್ಲಿ ಉಪ ಮಲಗಿಸಿ ಜಾತ್ರೆ ನೋಡುವದಕ್ಕೆ ಹೋದ ಜನರಲ್ಲಿ ಬಟ್ಟೆ ರೊಕ್ಕ ವಸೂಲುಮಾಡಿ ಇಟ್ಟು ಕೈಗೆ ಮೇಕೆ ಹೋತು ತೆಗೆದು ಕೊಂಡು ಬಾಯಿಂದ ಕಿತ್ತು ರಕ್ತ ಕುಡಿದು ಮಾಂಸ ಎಲುಬು ಗಳನ್ನು ಬಾಯಲ್ಲಿ ಕಚ್ಚಿಕೊಂಡು ಆತುರಿಕ್ಕಿ ನಿಲ್ಲಿರುವ ಜನರಿಗೆ ತೋರಿಸಿದ ಕೂಡ್ಲೆ ಒಬ್ಬರ ಮೇಲೊಬ್ಬರು ಬೀಳುತ್ತಾ ನೂಕುತ್ತಾ ಏಳುತ್ತಾ ನೋಡಿದ್ದಾಯಿತು. ತಾ ೪ ನೆ ಶುಕ್ರವಾರ ಚಿತ್ರದುರ್ಗದ ವರಿಗೂ ಮದಿಕೇರಿಪುರದವರಿಗೂ ಕುಸ್ತಿ ಬಿಟ್ಟರು. ನೋಟ ನೋಡು ವ ಜನರು ಒಬ್ಬರಿಗೊಬ್ಬರು ಗುದ್ದಾಟಮಾಡಿದರು. ಯಾವತ್ತು ಜನರು ದಿಗ್ಭ್ರನೆದ್ದು ಅವರವರ ಮನೆಗೆ ಹೊರಟು ಹೋದರು. ತಾ. ೫ ನೆ ಶನಿವಾರ ಕುಸ್ತಿ ಬಿಟ್ಟರು. ಪ್ರಾತಃಕಾಲದಲ್ಲಿ ಬಿಟ್ಟ ಜೋಡಿ ಪೈಕಿ ಮದಿಕೆರೆ ಊರವನನ್ನು ಸೋಲಿಸಿ ಚಿತ್ರದುರ್ಗದವನು ಕಡಗ ಗೆದ್ದನು. ಮತ್ತು ಸಾಯಂಕಾಲದಲ್ಲಿ ೧, ೨, ೩ ಜೋಡಿ ಬಿಟ್ಟರು. ಮದಿಕೆರೆ ಪುರದವನು ಒಂದು ವಸ್ತ್ರ ಗೆದ್ದನು. ಪುನಃ ಬಿಳಿ ಜೋಡಿ ಬಿಟ್ಟರು. ಸಾಯಂಕಾಲ ೬ ಘಂಟೆ ವರಿಗೂ ಕುಸ್ತಿ ಮಾಡಿದರು. ಒಬ್ಬರೂ ಸೋಲಲಿಲ್ಲ. ಸಾಯಂಕಾಲವಾದ್ದರಿಂದ ನಿಲ್ಲಿಸಿದ್ದಾಯ್ತು. ದೇವರ ಉತ್ಸವ ಬಹಳ ವಿಜೃಂಭಣೆಯಿಂದ ಮಾಡಿದರು. ರಾತ್ರಿ ದಾವಣಗೆರೆಯ ವರು ಕೃಷ್ಣರಸಂಹಾರವೆಂದು ಬೈಲ್ ಆಟ ಆಡಿದರು.

ವಾಚಕ.

ಚುಂಚನಕಟ್ಟೆ ಜಾತ್ರೆಯು.

ಅಯ್ಯಾ,

ಇದೇ ಮಾಹೆ ೧೪ ನೇ ತಾ ಎಡತೊರೆ ತಾಲ್ಲೂಕು ಚುಂಚನ ಕಟ್ಟೆಯಲ್ಲಿ ಶ್ರೀ ರಾಮದೇವರ ರಥೋತ್ಸವ ಜರುಗಿತು. ಆಗ ಅಮಿ ಲ್ದಾರರೂ ತಾಲ್ಲೂಕು ಅಧಿಕಾರಿಗಳೂ ನಿಂತು ದೇವರ ಕಾರ್ಯವನ್ನು ನೆರವೇರಿಸಿದರು. ಆದರೆ ಚುಂಚನಕಟ್ಟೆಯಲ್ಲಿ ಊರಿಲ್ಲದ್ದರಿಂದಲೂ ಕಾವೇರಿ ಪ್ರದೇಶವಾದ್ದರಿಂದಲೂ ಅಲ್ಲಿ ಬಂದಿದ್ದ ಭಕ್ತಾದಿಗಳಿಗೆ ಸುತರಾಂ ಯಾವ ಅನುಕೂಲವಿರಲಿಲ್ಲ. ಸಣ್ಣ ನೌಕರರು ತಮ್ಮ ಮೇಲ್ಪಟ್ಟವರೆದುರಿಗೆ ಸಡಗರದಿಂದ ಓಡಾಡಿ ಸರ್ಪರಾಜು ನೋಡಿ ಕೊಂಡು ಸರ್ಕಾರದ ಹುಟ್ಟುವಳಿಯನ್ನು ಬಡಾಯಿಸಿ ತೋರಿಸಿದರೆ ತಮ್ಮ ಕೆಲಸವು ಸಮರ್ಪಕವಾಯಿತೆಂಬ ದುರಭಿಪ್ರಾಯವುಳ್ಳವರಾಗಿ ರುವರೆ ಕೇವಲ ಬಡಬಗ್ಗರಿಗೆ ಅನುಕೂಲಪಡಿಸಿ ಪ್ರಪಂಚದ ಕಷ್ಟ ವನ್ನು ಕಡಮೆಮಾಡಬೇಕೆಂಬ ಅಭಿಲಾಷೆಯುಳ್ಳವರು ಅಪರೂಪ ವಾದ್ದರಿಂದ ಚುಂಚನಕಟ್ಟೆಯಲ್ಲಿ ನೋಡಿದ್ದರಲ್ಲಿ ಅಲ್ಲಿನ ಅಧಿಕಾರಿ ಗಳು ಅಂಗಡಿಯವರಿಂದ ಕೇವಲ ಬಾಡಿಗೆ ವಸೂಲ್ಮಾಡಿ ಮುಜರಾಯಿ ಹುಟ್ಟುವಳಿಯು ತಮ್ಮಿಂದ ತುಂಬಾ ಉತ್ಕೃಷ್ಟವಾಯಿತೆಂಬ ಹೆಸರು ವಾಸಿಯನ್ನು ಹೊಂದಬೇಕೆಂಬ ಅಭಿಲಾಷೆಯುಳ್ಳವರಾಗಿರುವದು ಗೊತ್ತಾಯಿತು. ಆದರೆ ಈ ಬಾಡಿಗೆಯನ್ನು ಕೊಡತಕ್ಕವರ್ಯಾರು? ಸೀದಾ ಅಂಗಡಿಯವರು ಕೊಟ್ಟಾಗ್ಯೂ ಜಾತ್ರೆಗೆ ಬಂದಂಥಾ ಭಕ್ತಾದಿ ಗಳಿಂದ ವಸೂಲ್ಮಾಡದೇ ಬಿಡುವರೇ? ಇಂಥಾದ್ದರಲ್ಲಿ ಜನ ಗಳಿಗೆ ಇಳಿದುಕೊಳ್ಳಲು ಆಕಾಶವೇ ಮೇಲುಛಾವಣಿಯಾಗಿತ್ತು. ಈ ವಿಷಯವನ್ನು ಸರ್ಕಾರದವರು ಪರ್ಯಾಲೋಚಿಸಿ ಈ ನ್ಯೂನತೆ ಗಳನ್ನು ಹೋಗಲಾಡಿಸುವರೆಂದು ನಂಬುತ್ತೇವೆ. ದೇವಸ್ಥಾನದ ಬಾಗ ಲಲ್ಲೇ ಪ್ರತಿಯೊಬ್ಬನೂ ಅರ್ಧಾಣೆ ಕೊಟ್ಟುಬಿಡಬೇಕು! ಹೆಂಗಿನ ಕಾಯಿ ಒಡೆದರೆ ಬೇರೆ ಅರ್ಧಾಣೆ! ಭಕ್ತಾದಿಗಳು ದೇವರಿಗೆ ಅಷ್ಟು ಕಾಣಿಕೆ ಕೊಡುವುದರಲ್ಲೇನೂ ಸಂದೇಹವಿಲ್ಲ. ಆದರೆ ಬಡಬಗ್ಗರಿಂ ದಲೂ ಹೀಗೆ ಬಲಾತ್ಕಾರದಿಂದ ವಸೂಲ್ಮಾಡಿ ಮುಜರಾಯಿ ಹಣವನ್ನು ಹೆಚ್ಚು ತೋರಿಸುವದು ಯಾವ ಧರ್ಮ! ಇದು ಸರ್ಕಾರದವರ ಅಭಿ ಪ್ರಾಯವೆಂದು ನಾವು ಹೇಳಬಹುದೇ?

ಚುಂಚನಕಟ್ಟೆಯಲ್ಲಿ ದನಗಳ ಸಂತೆಯು ನಡೆಯುತ್ತೆ. ಈ ವರುಷವೂ ರಾಸುಗಳು ಸೇರಿದ್ದವು. ಕೇವಲ ಅಲಂಕಾರವಾದ ದನ ಗಳೂ ಬಂದಿದ್ದವು. ೧೬ ನೇ ತಾ ಅವುಗಳ ಪ್ರದರ್ಶನ ನಡೆಯುತ್ತ. ಆಗ್ಗೆ ದನಗಳನ್ನೆಲ್ಲಾ ಕಟಕಟೆ ಹಾಕಿರುವ ಬಳಪ್ರದೇಶದಲ್ಲಿ ಕಟ್ಟ ಬೇಕೆಂದು ಡಂಗೂರ ಹಾಕಿಸಿ, ಅದಕ್ಕಾಗಿ ನೌಕರರು ಬಹಳ ಮುತು ವರ್ಜಿ ವಹಿಸಿದ್ದರು. ದನಗಳಿಗಾಗಿ ಸುಂಕ ವಸೂಲ್ಮಾಡಿದ್ದನ್ನು ನೋಡಿ ಅವುಗಳ ಮೇಲಾದರೂ ಸರ್ಕಾರದವರಿಗೆ ಇಷ್ಟು ನಿಗಾ ಇದೆ ಯಲ್ಲಾ ಎಂದು ಸಂತೋಷವಾಯಿತು.

ಜಾತ್ರೆಗೆ ಹೋಗಿದ್ದ ರಾಮನ ದೂತರು.

"ನೂತನ ವಿದ್ಯಲೂ ಕೂಟಕೊಂಡಕು"

ಅಯ್ಯಾ,

ಕಳೆದ ೨೦ ನೆ ತಾ ಸಾಯಂಕಾಲ ೬ ಘಂಟೆ ಸಮಯದಲ್ಲಿ ಮಧ್ದುಗಿರಿ ತಾಲ್ಲೂಕು ಕೊಡಲಪುರಕ್ಕೆ ಸಮೀಪದಲ್ಲಿರುವ ಒಂದು ಹಳ್ಳಿಯ ಪಕ್ಕದಲ್ಲಿ ಹೋಗುತ್ತಿದ್ದೆನು. ಆ ಹಳ್ಳಿಯಲ್ಲಿ ತಮಟೆ ಶಬ್ದ ಕೇಳಬಂದಿತು. ಓಹೋ, ಇದೇನು? ಈ ಹಳ್ಳಿಯಲ್ಲಿ ಗದ್ದಲ ಎಂದು ಆ ಗ್ರಾಮದವನಾದ ಒಬ್ಬನನ್ನು ಕೇಳಲು, ಅವನು—ಸ್ವಾಮಿ ಏನಂತ ಹೇಳಲಿ! ಈ ಅದ್ಭುತವಾದ ಈ ಆಶ್ಚರ್ಯ ನಾನು ಕಾಣೆ. ನಮ್ಮ ಹೆತ್ತಪ್ಪ ಮುತ್ತಪ್ಪರೂ ಕಾಣರು! ಏನು ಕಲಿಕಾಲ! ಸ್ವಾಮಿ, ಒಬ್ಬ ಮನುಷ ನೆಲದ ಮೇಲೂ ಕುಂತಿಲ್ಲಾ! ಅಂಬಾರದ ಮೇಲೂ ಕುಂತಿಲ್ಲಾ! ಮಧ್ಯೆ ಕುಂತಿದ್ದ ಅವನೆ! ಮತ್ತು ಕೋಳಿ ಮುಂಡಗೆ ೨ ಕೊಂಬುಗಳು ಹುಟ್ಟಿವೆ! ಅದನ್ನು ಎಲ್ಲರಿಗೂ ತೋರಿ ಸುತ್ತಾನೆ. ಅದೇ ಸ್ವಾಮಿ ಗದ್ದಲ ಎಂದು ಹೇಳಿದನು. ಅದಕ್ಕೆ ನಾನು ಇದರ ಸಂಗತಿ ತಿಳಿಯಬೇಕೆಂದು ಗ್ರಾಮದೊಳಕ್ಕೆ ಹೋಗಲು, ನೂ ರಾರು ಮಂದಿ ಒಬ್ಬರ ಮೇಲೊಬ್ಬರು ನೂಕಿಕೊಂಡು ಹೋಗುತ್ತಿ ದ್ದರು. ನಾನು ಆ ಗುಂಪನ್ನು ಬಿಡಿಸಿಕೊಂಡು ಮುಂದಕ್ಕೆ ಹೋ ದೆನು. ಅಲ್ಲಿ ಒಂದು ಛಪರಿ ಕಟ್ಟಿತ್ತು. ಛಪರಿಯಲ್ಲಿ ಒಂದು ಕಂಬ ವು ಹೂಣಿತ್ತು. ಆ ಕಂಬದ ಪಕ್ಕದಲ್ಲಿ ಒಬ್ಬ ಮನುಷ್ಯನು ಕೆಳಗೂ ಮೇಲೂ ಆಧಾರವಿಲ್ಲದೆ ಆ ಕಂಬವನ್ನು ಎಡಗೈಯಲ್ಲೂ ಕತ್ತೆಯನ್ನು ಬಲಗೈಯಲ್ಲೂ ಹಿಡಿದುಕೊಂಡ ಹಾಗೆ ಕಂಡುಬರುತ್ತಿತ್ತು. ಅವನ ಎದುರಿಗೆ ಮೂಲೆಯಲ್ಲಿ ಕೊಂಬಿನಿಂದ ಕೂಡಿದ ಕೋಳಿ ಇತ್ತು. ಈ ಆಶ್ಚರ್ಯವನ್ನು ಅಲ್ಲಿನ ಜನಗಳು ನೋಡಿ— ಈತನು ದೇವಾಂಶ ಪುರುಷನೆಂದೂ, ಈತನಿಗೆ ಕಾಣಿಕೆಗಳನ್ನು ಒಪ್ಪಿಸಬೇಕೆಂದೂ ಅದ್ದ ಬಿದ್ದು ಕಾಣಿಕೆಗಳನ್ನು ಒಪ್ಪಿಸಿ ಹೋಗುತ್ತಿದ್ದರು. ನಾನು ಇದರ ನಿಜ ತ್ವ ತಿಳಿಯಬೇಕೆಂದು ಒಳಕ್ಕೆ ಹೋಗಿ ನೋಡಲು, ಆ ಕಂಬದೊಳಗೆ

ದುಷ್ಟ ಮೃಗಗಳ ಕಾಟವು.

ಜೋಳಧಾಳಿನಲ್ಲಿ ಹುಲಿ ಶಿಕಾರಿ ಮಾಡಿದ್ದು

ಜೋಳಧಾಳು ಗ್ರಾಮಕ್ಕೆ ಸಮೀಪವಾದ ಚಿಕಣಿಕೊಂಡವೆಂಬ ಕಾಡಿನಲ್ಲಿ ಕಳೆದ ತಾ ೧೩ ನೆ ಭಾನುವಾರ ಅದರ ಸಮೀಪದಲ್ಲಿ ವಾಸವಾಗಿದ್ದ ಭೈರಗದ್ದೆ ಸಣ್ಣಯ್ಯನ ಬಾಬ್ತು ಒಂದು ಬೇಸಾಯದ ಎತ್ತನ್ನು ಹಗಲು ಹೊತ್ತಿನಲ್ಲಿ ಮೇಯುವದಕ್ಕೆ ಹೊರಗೆ ಹೋದ ಸಮಯದಲ್ಲಿ ಒಂದು ಹುಲಿ ಬಂದು ಅದರ ಮೇಲೆ ಬಿದ್ದು ತಲೆಯನ್ನು ತನ್ನ ಪಂಜಾಗಳಿಂದ ಹೊಡೆದು ಬಗೆಯಿತು ಎತ್ತು ಒಳ್ಳೆ ಘಟ್ಟಿ ಇದ್ದದ್ದರಿಂದ ಆ ಏಟು ಸಹಿಸಿಕೊಂಡು ತನ್ನ ಒಡೆಯನ ಮನೆಗೆ ಓಡಿ ಬಂತು ಇದರ ಒಡೆಯನು ಅದನ್ನು ನೋಡಿ ಪಶ್ಚಾತ್ತಾಪ ಪಟ್ಟು ಇದು ಹುಲಿಯಿಂದಾಯಿತೆಂದು ನಿಶ್ಚೈಸಿದನು ಆ ಎತ್ತಿನ ತಲೆಯನ್ನು ಕಟ್ಟಿ ಏನೇನೋ ಕಂಡ ಔಷಧಿಯನ್ನು ಮಾಡಿದನು ಅದರ ಪ್ರಯೋಜನಕ್ಕೆ ಬಾರದೆ ೩ ದಿವಸ ಬದುಕಿದ್ದು ಸತ್ತು ಹೋಯಿತು. ಇದಕ್ಕೆ ಮುಂಚೆ ಹುಲಿ ೩, ೪ ಸಣ್ಣ ಕರುಗಳನ್ನು ತಿಂದು ಇತ್ತು ಮಾರನೆ ಬೆಳಿಗ್ಗೆ ಸಣ್ಣಯ್ಯ ಈತನ ಅಳಿಯ ರಾಮಣ್ಣ ಇವನ ಬಾಬು ಸತ್ತು ಬಿದ್ದಿದ್ದ ಆ ಹಸುವನ್ನು ನೋಡಿದರು ಇದರ ಹೊಟ್ಟೆ ಮತ್ತು ಕುತ್ತಿಗೆಯನ್ನು ಕೀಳಿ ಮಾಂಸವನ್ನು ಕಾಡುಮೃಗಗಳು ತಿಂದ ಹಾಗೆ ಕಾಣಿಸಿತು ಆಗ ಅದನ್ನು ಕಿರುಬಗಳೇ ಕೊಂದಿರಬಹುದೆಂದು ತಿಳಿದು, ಇಲ್ಲಿಗೆ ಒಂದು ಮೈಲಿ ಘಾಸಲೆಯ ಮಾರೋಳಿಗ್ರಾಮದಲ್ಲಿ ಇರುವ ಮರಾಟೆಯ ಗೋವಿಂದನಿಗೆ ಹೇಳಲಾಗಿ ಇವನು ತನ್ನ ಜೋಡಿನಲ್ಲಿ ತುಪಾಕಿಯಲ್ಲಿ ಆ ಕ್ಷಣವೇ ಗುಂಡನ್ನು ಬಾರ್ ಮಾಡಿಕೊಂಡು ಹೊರಟು, ಆ ಹಸು ಸತ್ತು ಬಿದ್ದಿದ್ದ ಸ್ಥಳಕ್ಕೆ ಹೋಗಿ ಅಲ್ಲಿಗೆ ಹತ್ತು ಹನ್ನೆರಡು ಗಜ ದೂರದಲ್ಲಿ ಮರೆಯಾಗಿದ್ದ ಒಂದು ಸ್ಥಳದಲ್ಲಿ ಆ ಕಿರುಬಗಳು ಬಂದರೆ ಹೊಡಿಯಬೇಕೆಂದು ರಾತ್ರಿಯೆಲ್ಲಾ ಕಾದನು ಅವು ಬಂದೂ ಬರಲಿಲ್ಲ ಮತ್ತು ಅವನು ತಾ ೧೪ ನೆ ಬೆಳಿಗ್ಗೆ ೬ ಗಂಟೆ ಸಮಯದಲ್ಲಿ ಹೊರಡುವಷ್ಟರಲ್ಲಿ ಒಂದು ಕಿರುಬವು ಕಾಣಿಸಿತು ಅದನ್ನು ತುಪಾಕಿಯಿಂದ ಹೊಡಿಯಲಾಗಿ ಗುಂಡು ಆ ಕಿರುಬನ ಅನ್ನಕೋಶದ ಮಾರ್ಗವಾಗಿ ನುಗ್ಗಿ ಇನ್ನೊಂದು ಕಡೆ ಹೋಯಿತು ಆ ಕಿರುಬನ ಕರುಳುಗಳೂ ೨ ಗಜ ಹೊರಗೆ ಹೊರಟಿದ್ದು ಓಡಿಹೋಗಿ ಒಂದು ಕಾಲುದಾರಿಯ ಪಕ್ಕದಲ್ಲಿ ಒಂದು ಪೊದೆಯನ್ನು ಸೇರಿತು ಇಷ್ಟರಲ್ಲಿ ಇನ್ನೊಂದು ಇದಕ್ಕಿಂತಲೂ ದೊಡ್ಡದಾದ ಕಿರುಬವು ಅಲ್ಲಿಗೆ ಬಂ

ಸಿಲೋನ್ (ಲಂಕಾ) ದ್ವೀಪದ ಮುಖ್ಯ ರೇವು ಪಟ್ಟಣ ಕೊಲಂಬೋದಲ್ಲಿ ಒಂದು ಕಾರ್ಖಾನೆಗೆ ಬೆಂಕಿ ಬಿದ್ದು ಸಾಮಾನುಗಳೂ, ಯಂತ್ರಗಳೂ ಸುಟ್ಟುಹೋದವು ಕಾರ್ಖಾನೆಯ ಯಜಮಾನರಿಗೆ ಏಳುವರೆ ಲಕ್ಷ ರೂಪಾಯಿ ... ಯಿತೆಂದು ಸಮಾಚಾರ ಬಂದಿದೆ

****

ಬಂಗಾಳಾ ಆಧಿಪತ್ಯಕ್ಕೆ ಸೇರಿದ ಬಿರ್ಭೂಂ ಡಿಸ್ಟ್ರಿಕ್ಟಿನಲ್ಲಿ ಸಬ್ ರಿಜಿಸ್ಟ್ರಾರು ಈಗಿನ ಎಡ್ವರ್ಡ್ ಚಕ್ರವರ್ತಿಯವರ ... ಹೊಸ ರೂಪಾಯಿಗಳನ್ನು ಜನರು ತಂದುಕೊಟ್ಟರೆ ಅಂಗೀ... ಹಳೇ ರೂಪಾಯಿಗಳನ್ನೇ ತಂದು ಕೊಡಬೇಕೆಂದೂ ... ಪತ್ರಗಳನ್ನು ರಿಜಿಸ್ಟರ್ ಮಾಡುವದಿಲ್ಲವೆಂದೂ ಹೇಳುತ್ತಾ... ಅಲ್ಲಿನ ಒಂದು ಪತ್ರಿಕೆಯು ತಿಳಿಸುತ್ತದೆ.

****

ಕಲ್ಕತ್ತೆಯಲ್ಲಿ ಅಮೀರ್ ಷೇಕ್ ಎಂಬೊಬ್ಬ ಐಶ್ವರ್ಯ... ೩ ಸಾವಿರ ರೂಪಾಯಿನ ಕರೆನ್ಸಿ ನೋಟುಗಳನ್ನು ಕಟ್ಟಿ... ಗೆಯಲ್ಲಿಟ್ಟಿದ್ದನು ಅವನ ಚಿಕ್ಕ ಪ್ರಾಯದ ಮಗನು ... ಪೋಲೀಸಿನವರು ಅ... ಮ್ಯಾಜಿಸ್ಟ್ರೇಟರು ... ವಿಟ್ಟರು.

(೩)

...ಪತ್ರಗಳ ... ಬಹುಮಾನ ... ತಿಳಿಸುತ್ತೇವೆ ... ಪತ್ರಿಕೆ ... ತಿಳಿಯ ... ಗ್ರಾಹಕ ಪತ್ರಿಕೆಯನ್ನು ... ಕಾರ್ಡು ... ಹೊಂದುತ್ತೇವೆ

ವಿಕ್ರಮಪ್ರತಾಪ ಆಫೀಸ್,

೧೭೪, ಅರಳೇಪೇಟೆ, ಬೆಂಗಳೂರು ಸಿಟಿ

ಹೊಸ ಪುಸ್ತಕಗಳು! ಹೊಸ ಪುಸ್ತಕಗಳು!! ಹೊಸ ಪುಸ್ತಕಗಳು!!!

(೧) ಮನಸ್ಕಂದಪ್ರಬೋಧೆ

ವೇದಾಂತ ... ಯುದ್ಧ.

ಮನೋರಾಜನಿಗೆ ಪ್ರವೃತ್ತಿ, ನಿವೃತ್ತಿ, ಎಂಬ ಹೆಂಡತಿಯರು, ಮೋಹ, ವಿವೇಕರೆಂಬ ಮಕ್ಕಳು; ... ಕಡೆಗೆ ... ಅಧಿಕ ... ನಡೆದ ... ಕ್ರಯ ೪ ಆಣೆ

(೨) ಒಬ್ಬ ಸಿಪಾಯಿಯ ಸಾಹಸಗಳು.

ಇದೊಂದು ... ಕಥೆ ಇದರ ... ರಸವನ್ನು ... ಗುಲಗಂಜಿಗಳ ... ಕರೆಯಲ್ಪಟ್ಟದೆ "ಒಂದು ಎತ್ತು ... ಗುಲಗಂಜಿಗಳ ಸುದ್ದಿ" ಇದನ್ನು ಮುಟ್ಟಿದರೆ ಮೊದಲು ಮುಗಿಸುವ ವರೆಗೂ ... ರಸಿಕರು ... ಚಿತ್ರವಿಚಿತ್ರವಾದ ಸಾಹಸಗಳು ... ಸಂಕ್ಷೇಪದಿಂದ ... ವಿವರಿಸಲಾಗಿವೆ ಕ್ರಯ ೪ ಆಣೆ,

(೩) ಇಪ್ಪತ್ತನೆಯ ಶತಮಾನದ ಇರುಳು.

ಇದನ್ನು ಪ್ರತಿಯೊಬ್ಬ ... ಬಾಲಬಾಲಕಿಯರು ಅವಶ್ಯವಾಗಿ ತಿಳಿಯತಕ್ಕದ್ದು. ನಿಮ್ಮ ಗತಿಯಾದರ ಜೀವನ ಸ್ಟೇಜ್. ನೀವು ... ಜಡೆಯಲ್ಲಿ ನಾವೂ ಬರುವೆನೆನ್ನುವದು "ಪ್ರಪಂಚಕ್ಕೆ ಅನ್ನವನ್ನು ... ತಿಳಿವಳಿಕೆಗಿಂತಲೂ ಅಜ್ಞಾನವೇ ಶ್ರೇಯಸ್ಕರವಲ್ಲವೆ?" ಎಂಬುದೆ ಇದರ ಸಾರಾಂಶ ಕ್ರಯ ೨ ಆಣೆ

(೪) ಅನುಭವತರಂಗಿಣೀ — "ಹಗಲು ..." ... ಇದ್ದುದು ... ಕ್ರಯ ೨ ಆಣೆ

(೫) ಶ್ರೀರಾಮಲಿಂಗರ ... (ತೆಲುಗು) ಸರ್ವಜ್ಞಮೂರ್ತಿ ಮತ್ತು ವೇಮನ್ನನವರ ಪದ್ಯಗಳು ... ಪದ್ಯಗಳಿವೆ ಕ್ರಯ ೪ ಆಣೆ

(೬) ಸ್ವಧರ್ಮನೀತಿ — ನಿತ್ಯಕರ್ಮಾನುಷ್ಠಾನಸಂಬಂಧಕವಾದ ಪದ್ಯ ಪ್ರಬಂಧ ಕ್ರಯ ೨ ಆಣೆ

ವಿಳಾಸ — ವಿಕ್ರಮಪ್ರತಾಪ ಆಫೀಸ್, ೧೭೪ ಅರಳೇಪೇಟೆ, ಬೆಂಗಳೂರು ಸಿಟಿ.

...ಒಳ್ಳೆ ಪರಿಶ್ರಮವನ್ನು ಹೊಂದಿ, ಒಂದು ಖಗೋಳಶಾಸ್ತ್ರಾಲಯ ...ಸ್ಥಾಪಿಸಿ, ಅದರಲ್ಲಿ ಬಹಳ ದೊಡ್ಡದಾದ ದೂರದರ್ಶಕ ಯಂತ್ರ ...ಇಟ್ಟಿರುತ್ತಾರೆ. ಅವರು ಸತ್ತ ದಿನ ಸರ್ಕಾರಿ ಕೋರ್ಟು ...ಗಳನ್ನು ಗೌರವಾರ್ಥವಾಗಿ ಮುಚ್ಚಿದ್ದರು. ಅವರು ಮೃತಪ...ಟ್ಟಾಗ ಅವರಿಗೆ ೪೩ ವಯಸ್ಸಾಗಿತ್ತು.

****

ಅಜ್ಮೀರ್ ಪಟ್ಟಣದಲ್ಲಿ ಕಳೆದ ವಾರ ಬಹಳ ಐಶ್ವರ್ಯವಂತಳಾದ ...ಮನಸ್ಟೂರ್ ಸೇಠಸೋಭಾಗ್ಮಲ್ ಎಂಬ ಜೈನ ಹೆಂಗಸು ...ಸತ್ತಳು. ಅವಳಿಗೆ ತೊಂಭತ್ತು ವಯಸ್ಸಾಗಿತ್ತು. ಅವಳು ಬಹ...ಧರ್ಮನಿಷ್ಠಳಾಗಿಯೂ, ಧರ್ಮ ಬುದ್ಧಿಯುಳ್ಳವಳಾಗಿಯೂ ಇದ್ದು, ...ಕಾಲದ ವರೆಗೂ ೨೫ ಲಕ್ಷ ರೂಪಾಯಿ ಧರ್ಮ ಮಾಡಿರುತ್ತಾ... ಅವಳ ಉತ್ತರ ಕ್ರಿಯಾದಿಗಳು ಸಾವಿರಾರು ಜನರು ಸೇರಿ ಬಹಳ ...ವೈಭವದಿಂದ ನಡಿಸಲ್ಪಟ್ಟವು. ಅವಳ ಸಂಬಂಧಿಕರು ಒಂಟೆಗಳ ... ಸವಾರಿ ಮಾಡುತ್ತಾ ಬೆಳ್ಳಿಯ ಮತ್ತು ತಾಂಬ್ರದ ನಾಣ್ಯಗಳನ್ನು ... ಮೇಲೆ ಎರಚುತ್ತಾ ಹೋದರು. ಇದುವರೆಗೆ ಅಜ್ಮೀರ್ ಪಟ್ಟಣ...ದಲ್ಲಿ ಯಾರಿಗೂ ಅವರ ಕರ್ಮಗಳು ಇಷ್ಟು ಅಟ್ಟಹಾಸವಾಗಿ ನಡೆಯ...ಲಿಲ್ಲವೆಂದು ತಿಳಿದು ಬರುತ್ತದೆ.

****

ಬರ್ದ್ವಾನ್ ಡಿಸ್ಟ್ರಿಕ್ಟಿನಲ್ಲಿ ಇನಾಮುದಾರನಾದ ಸುಮಾರು ೫೬ ...ವರ್ಷದ ರಾಮಪತಿ ಬಾನರ್ಜಿ ಎಂಬ ಕುಲೀನ ಬ್ರಾಹ್ಮಣನು ತನ್ನ ...ಮೊದಲನೇ ಪತ್ನಿಯು ಸತ್ತ ನಂತರ ಇನ್ನೊಬ್ಬಳನ್ನು ಮದುವೆ ಮಾಡಿ...ಕೊಳ್ಳಬೇಕೆಂದು ನೆರೆಯೂರಿನಲ್ಲಿದ್ದ ಒಬ್ಬ ಕನ್ಯೆಯನ್ನು ಗೊತ್ತು ...ಮಾಡಿಕೊಂಡಿದ್ದನು. ಕನ್ನೆಯ ಕಡೆ ಪುರೋಹಿತನು ಗಂಡಿನಿಂದ ಬಹಳ ...ಹಣವನ್ನು ತಿಂದದ್ದಲ್ಲದೆ ಮದುವೆಗೆ ಸ್ವಲ್ಪ ಹೊತ್ತಿನ ಮುಂಚೆ ನೂರು ...ರೂಪಾಯಿನ ಪ್ರಾಂಸರಿಯನ್ನು ಬರೆದು ಅದಕ್ಕೆ ರಾಮಪತಿಯನ್ನು ...ಹಾಕುವಂತೆಯೂ ಇಲ್ಲದಿದ್ದರೆ ಮದುವೆಯನ್ನೇ ನಿಲ್ಲಿಸುವದಾ...ಗಿ ಹೆದರಿಸಲು, ಅವನು ಅದಕ್ಕೆ ಒಪ್ಪಿ ರುಜು ಹಾಕಿ ಕೊಟ್ಟನು. ...ನೇ ದಿನದ ಮೇಲೆ ಪುರೋಹಿತನು ಆ ಹಣಕ್ಕೆ ದಾವಾ ಮಾಡಲು ...ಯಾಧೀಶರು ಕೋರ್ಟು ಖರ್ಚನ್ನು ಮಾತ್ರ ಕೊಡಿಸಿ ವಜಾ ಮಾಡಿದರು.

****

ಬಂಗಾಳಾ ಆಧಿಪತ್ಯಕ್ಕೆ ಸೇರಿದ ಕ್ಯಾಸಂಗ್ ಟೌನ್ ಎಂಬ ಊರಿ... ಪ್ರಜೆಗಳಿಗೆ ದ್ರವ್ಯಸಹಾಯ ಮಾಡಿ ಪ್ರೋತ್ಸಾಹಿಸಬೇಕೆಂದು ... ಮಿ॥ ಸಿ. ಬರ್ಲೀ ಎಂಬ ಸರ್ಕಾರಿ ಅಧಿಕಾರಿಯು ಅಲ್ಲಿಗೆ ...ದನು. ಮಹೇಂದ್ರನಾಥ ಲಹರಿ ಎಂಬೊಬ್ಬ ಪಂಚಾಯತಿದಾರನು ...ಯಿತರಾದ ಪ್ರಜೆಗಳನ್ನು ಆ ಅಧಿಕಾರಿಯು ಒಳಗೆ ಕರೆದು ...ಯು ಹೋಗಿ ಅವರ ಸ್ಥಿತಿಗತಿಗಳನ್ನು ಕುರಿತು ಶಿಫಾರಸು ಮಾಡಿ ...ಹೋದ ಅವರಿಗೆಲ್ಲಾ ಹಣ ಕೊಡಿಸಿದನು. ಅದರಿಂದ ... ಪಂಚಾಯತಿದಾರನಿಗೆ ಪ್ರಾಮುಖ್ಯತೆ ಕಡಿಮೆಯಾಗಿದ್ದಂತೆ ಅವರು ...ಸಿಕ್ಕಿದ ಹಣದಲ್ಲಿ ತಲಾ ಅರ್ಧ ರೂಪಾಯಿನಂತೆ ಅವನಿಗೆ ...ವು. ಆದರೆ ಪಂಚಾಯತಿದಾರನು ಅವರನ್ನು ಹಿಂಸಿಸಿ ತಲಾ ... ರೂಪಾಯಿನಂತೆ ಅವರಿಂದ ಕಿತ್ತುಕೊಂಡನು. ಈ ಹಿಂಸೆಯು ...ಮುಟ್ಟಿದರಲ್ಲಿ ಗಲಭೆಯನ್ನುಂಟುಮಾಡಿ ಸರ್ಕಾರಕ್ಕೆ ತಿಳಿದು ...ಮ ಅವರು ... ಲಹರಿಯನ್ನು ಹಿಡಿದ ದುಷ್ಕೃತ್ಯವಾದ ...ಗೆ ಐದು ದಿನಗಳ ಕಠಿಣ ಸಜಾವನ್ನೂ ಮತ್ತು ... ಜುಲ್ಮಾ...ನೆಯನ್ನೂ ಹಾಕಿದರು.

****

ಅಫ್ಘಾನಿಸ್ಥಾನದ ಅಮೀರರು ಕಳೆದ ವಾರ ನಡೆದ ಬಕ್ರೀದ್ ...ಹಬ್ಬಕ್ಕೆ ಮಸೀದಿಯ ಹತ್ತಿರ ಸೇರಿದ ಡೆಹಲಿ ಪಟ್ಟಣಕ್ಕೆ ಹೋದ... ಈ ಹಬ್ಬದಲ್ಲಿ ಹಿಂದುಸ್ಥಾನದ ಮಹಮ್ಮದೀಯರು ಅನೇಕ ...ಹಸುಗಳನ್ನು ಕೊಲ್ಲುತ್ತಾರೆ. ಅಮೀರರು ಬರುವರೆಂದು ತಿಳಿದ ...ಡೆಹಲಿಯ ಮಹಮ್ಮದೀಯರು ನೂರಾರು ಹಸುಗಳನ್ನು ಕೊಲ್ಲ...ಬೇಕೆಂದು ಇದ್ದರು. ಇದು ಅಮೀರರಿಗೆ ತಿಳಿದು ಒಂದು ಕೂಡಲೇ ಈ ...ವಿಷಯದಲ್ಲಿ ಅವರು ತಮ್ಮ ಅಸಮಾಧಾನವನ್ನು ತಿಳಿಯಪಡಿಸಿರುತ್ತಾರೆ. ...ಜಾತಿ ಮತಗಳ ವ್ಯತ್ಯಾಸವಿಲ್ಲದೆ ಎಲ್ಲಾ ಜನರನ್ನೂ ಈ ದೇಶವನ್ನೂ ...ನೋಡಿಕೊಂಡು ಹೋಗುವದಕ್ಕಾಗಿ ತಾವು ಬಂದಿರುವವರಲ್ಲದೆ ಜಗಳ ...ಕಲಹಗಳು ತಮಗೆ ಇಷ್ಟವಿಲ್ಲವೆಂಬುದೇ ತಮ್ಮ ಅಭಿಮತವೆಂ...ದೂ, ಹಸುಗಳಿಗೆ ಬದಲಾಗಿ ಕುರಿಗಳನ್ನು ಕೊಂದರೆ ಹಿಂದುಗಳಿಗೆ ...ವ ವಿಧವಾದ ಅಸಮಾಧಾನವೂ ಉಂಟಾಗಲಾರದೆಂದೂ, ಹಾಗಿಲ್ಲದ...ದ್ದಲ್ಲಿ ತಾವು ಆ ಹಬ್ಬದಲ್ಲಿ ಬಹಿರಂಗವಾಗಿ ಸೇರುವದಿಲ್ಲವೆಂತಲೂ ...ಅಮೀರರು ತಿಳಿಸಿದರು. ಅಮೀರರ ಅಭಿಪ್ರಾಯವನ್ನು ಡೆಹಲಿ ಮಹ...ಮ್ಮದೀಯರು ಅನುಮೋದಿಸಿದರು. ಇದರಿಂದ ಅಮೀರರಿಗೆ ಹಿಂದೂ...ಗಳ ಮೇಲಿರುವ ಪ್ರೀತಿ ವಾತ್ಸಲ್ಯಗಳು ವ್ಯಕ್ತಪಡುತವೆ.

****

ಕಲ್ಕತ್ತೆಯ ಹತ್ತಿರ ಅಗ್ರಹಾರ ಎಂಬೊಂದು ಗ್ರಾಮದಲ್ಲಿ ಒಬ್ಬ ...ರೈತನು ತನ್ನ ಹೊಲದಲ್ಲಿ ಆನೆಗಳ ಗುಂಪು ಸೇರಿಕೊಂಡು ಬೆಳೆಯನ್ನು ...ಹಾಳು ಮಾಡುತ್ತಿದ್ದದ್ದನ್ನು ನೋಡಿ ಅಂಬಿನಿಂದ ಆನೆಗಳನ್ನು ಹೊಡೆ...ದನು. ಆ ಪೈಕಿ ಒಂದು ಅಂಬು ಆನೆಗಳ ಸಲಗಕ್ಕೆ ಬಡಿಯಿತು. ...ಇನ್ನೊಂದು ಒಂದು ಸಣ್ಣ ಮರಿಗೆ ತಗಲಿ ಅದನ್ನು ಕೊಂದು ಹಾಕಿತು. ...ಕೂಡಲೆ ಆನೆಗಳೆಲ್ಲಾ ಆ ರೈತನನ್ನು ಓಡಿಸಿಕೊಂಡು ಹೋದವು. ಅವ...ನು ಒಂದು ಜೋಪಡಿಯೊಳಗೆ ಸೇರಿಕೊಂಡನು. ಆನೆಗಳು ಸುತ್ತಲೂ ಸುತ್ತಿ...ಕೊಂಡು ಜೋಪಡಿಯನ್ನು ಧ್ವಂಸಮಾಡಿದವು. ಅಷ್ಟರಲ್ಲಿ ರೈತ...ನು ಆನೆಗಳಿಗೆ ಸಿಕ್ಕದೆ ಹೇಗೋ ತಪ್ಪಿಸಿಕೊಂಡು ಓಡಿ ಹೋಗಿ ಒಂದು ...ಆಲದ ಮರವನ್ನು ಹತ್ತಿ ಅದರ ಕೊನೆಯಲ್ಲಿ ಕೂತುಕೊಂ...ಡನು. ರೇಗಿದ್ದ ಆನೆಗಳು ಅವನನ್ನು ಬಿಡದೆ ಅಟ್ಟಿಸಿ ಕೊಂಡು ...ಬಂದು ಆ ಮರದ ಸುತ್ತಲೂ ನಿಂತುಕೊಂಡವು. ಆ ಪೈಕಿ ಕೆಲವು ...ಆನೆಗಳು ಸಮೀಪದಲ್ಲಿದ್ದ ಒಂದು ಕೊಳದಿಂದ ತಮ್ಮ ಸೊಂಡಿಲುಗಳ...ಲ್ಲಿ ನೀರು ತಂದು ಮರದ ಬುಡಕ್ಕೆ ಸುರಿದು ಎಲ್ಲಾ ಸೇರಿ ಮರವನ್ನು ...ಅಲ್ಲಾಡಿಸಿ ಬುಡ ಸಹಿತ ಕಿತ್ತು ಕೆಡವಿ ಮೇಲಿನಿಂದ ಬಿದ್ದ ಅರೈತ...ನನ್ನು ಹಿಡಿದು ಉಜ್ಜಿ ಕೊಂದು ತಮ್ಮ ಹಗೆಯನ್ನು ತೀರಿಸಿಕೊಂ...ಡವು.

ಕಲ್ಕತ್ತೆಯಲ್ಲಿ ಒಂದು ದಿನ ಸಾಯಂಕಾಲ ಒಬ್ಬ ಮಾರ್ವಾಡಿ ಹೆಂಗಸು ತನ್ನ ಮುಖವನ್ನು ಸೀರೆ ಸೆರಗಿನಿಂದ ಮುಚ್ಚಿಕೊಂಡು ಅಳು ತ್ತಿದ್ದ ಮತ್ತೊಬ್ಬಳ ಕೈಯನ್ನು ಹಿಡಿದುಕೊಂಡು ಹೋಗುತ್ತಿದ್ದಳು. ಅವಳ ಸೆರಗಿನ ಮೇಲೆಯೂ ಕಾಲಿನ ಮೇಲೂ ರಕ್ತದ ಗುರುತುಗಳಿ ದ್ದವು. ಜೊತೆಯಲ್ಲಿ ಹೋಗುತ್ತಿದ್ದವಳು ತನ್ನ ಜೊತೆಗಾತಿಯು ಆಕ ಸ್ಮಾತ್ತಾಗಿ ದಾರಿಯಲ್ಲಿ ಮಗುವನ್ನು ಹೆತ್ತಳೆಂತಲೂ ಅದರಿಂದ ಅವಳು ತುಂಬಾ ಸಂಕಟಪಡುತ್ತಿರುವಳೆಂತಲೂ ದಾರಿಯಲ್ಲಿ ಹೋಗುವವರಿಗೆ ಹೇಳಿಕೊಂಡು ಅವರಿಂದ ಹಣವನ್ನು ಸಂಪಾದಿಸುತ್ತಾ ಹೋಗುತ್ತಿ ದ್ದಳು. ಆ ಮಾರ್ಗವಾಗಿ ಹೋಗುತ್ತಿದ್ದ ಪೊಲೀಸ್ ಸೂಪರಿಂಟೆಂಡೆಂ ಟರು ಒಂದು ಡೋಲಿಯನ್ನು ತರಿಸಿ ರೋಗಿಯನ್ನು ಹತ್ತಿರ ಇದ್ದ ಆಸ್ಪತ್ರೆಗೆ ತೆಗೆದುಕೊಂಡು ಹೋಗಿ ಪರೀಕ್ಷಿಸಲಾಗಿ ಅವಳ ಬಟ್ಟೆಯ ಮೇಲಿದ್ದ ಕೆಂಪು ಗುರುತುಗಳು ಬಣ್ಣದವುಗಳಾಗಿದ್ದವು. ಹೊಸದಾಗಿ ಹುಟ್ಟಿದ ಮಗುವಾದರೋ ಚಿಂದೀ ಬಟ್ಟೆಗಳಿಂದ ಮಾಡಲ್ಪಟ್ಟು ತಲೆಗೆ ಬದಲಾಗಿ ಒಂದು ಮಣ್ಣಿನ ಪಾತ್ರೆಯನ್ನು ಹೊಂದಿತ್ತು. ಆಸ್ಪತ್ರೆಯ ವರು ತುಂಬಾ ಆಶ್ಚರ್ಯಪಟ್ಟು ಆ ಹೆಂಗಸರಿಬ್ಬರನ್ನೂ ಕಳುಹಿಸಿಬಿ ಟ್ಟರು. ಈಗ ಪೋಲೀಸಿನವರು ಅವರಿಬ್ಬರ ಮೇಲೂ ಮೊಕದ್ದ ಮೆ ತಂದಿದಾರೆ.

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸಿಗಾ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋ ಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ ದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆ ಯಕೂಡದು; ಇಂಥವುಗಳಿಗೆ ನಾವು ಸಿಗಾ ಕೊಡಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಜೊಕೆಗಾರರಾ ಗುವದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿ.

ಕರೆಸ್‌ಪಾಂಡೆನ್ಸ್.

ವರ್ತೂರು ಆಸ್ಪತ್ರೆಯು.

ಅಯ್ಯಾ,

ಬೆಂಗಳೂರು ತಾಲ್ಲೂಕು ವರ್ತೂರು ಗ್ರಾಮದಲ್ಲಿ ಈಗ ಸುಮಾ ರು ಮೂರು ತಿಂಗಳ ಲಾಗಾಯತು ಪ್ಲೇಗ್ ದೆಸೆಯಿಂದ ಆಸ್ಪತ್ರೆಯ ನ್ನು ವೈಟ್ ಫೀಲ್ಡಿಗೆ ವರ್ಗಮಾಡಿರೋಣದರಿಂದ ತುಂಬಾ ಅನಾನು ಕೂಲವಾಗಿದೆ. ಕಳೆದ ೩ ೪ ತಿಂಗಳಿಂದಲೂ ಪ್ಲೇಗ್ ರೋಗವು ಈ ಊರನ್ನೇ ಬರಿದಾಗಿ ಮಾಡಿತು. ಈಗ ಸುಮಾರು ೧॥ ತಿಂಗಳಿಂದ ಶಮನವಾಗಿರುತ್ತೆ. ಕಳೆದ ೨೦ ದಿನಗಳಿಂದ ಈ ಗ್ರಾಮವು ಪರಿಶುದ್ಧ ವಾಗುತ್ತಲಿದೆ. ಹೊಸ ಪ್ಲೇಗ ಇನ್ಸ್‌ಪೆಕ್ಟರು ಈ ಗ್ರಾಮದ ಹವಾ ಸ್ಥಿತಿ ಸರಿಯಾದ ಜಡಮಾಯಿಷಿ ಮಾಡಿ, ಜನಗಳು ಊರು ಸೇರಲು ಅಪ್ಪಣೆ ಕೊಡಿಸಿದರು. ಮೊದಲು ಈ ಗ್ರಾಮದಲ್ಲಿ ತಾಲ್ಲೂಕ್ ಇತ್ತು. ಈಗ ಮ್ಯುನಿಸಿಪಾಲಿಟಿ ಸಹಾ ಇಲ್ಲದಿರೋಣದರಿಂದ ಗಲೀಜು ಜಾಸ್ತಿ ಯಾಗುತ್ತಲಿದೆ. ಈ ವಿಷಯದಲ್ಲಿ ಅನೇಕಾವರ್ತಿ ಮೇಲಿನವರಲ್ಲಿ ಅರಿಕೆಮಾಡಿಕೊಂಡಾಗ್ಯೂ ಪ್ರಯೋಜನವಾಗಲಿಲ್ಲ. ಇನ್ನಾದರೂ ಈ ಕೊರತೆಯು ನಿವಾರಣೆಯಾದೀತೆಂದು ನಿರೀಕ್ಷಿಸುತ್ತೇನೆ.

ಪ್ರಜಾ ಹಿತಚಿಂತಕ

ಭತ್ತಕುಟ್ಟುವ ಯಂತ್ರ ದೊರೆಯುತ್ತದೆ.

ಅಯ್ಯಾ,

ಚಿಕ್ಕಬಳ್ಳಾಪುರ ತಾಲ್ಲೂಕು ಬಸೆಟ್ಟಹಳ್ಳಿ ಬಿ. ಸೂರ್ಯನಾರಾಯಣ ರಾಯರು ಭತ್ತಕುಟ್ಟುವ ಯಂತ್ರ ಬೇಕೆಂದೂ, ಸದರಿ ಯಂತ್ರ ಸಿಕ್ಕುವ ಕಂಪನಿಯ ಹೆಸರು ವಿಳಾಸಗಳನ್ನು ತಿಳಿಸಬೇಕೆಂದೂ ತಮ್ಮನ್ನು ಕೇಳಿದ್ದಕ್ಕೆ ವಾಚಕರ ಅವಗಾಹನೆಗೋಸ್ಕರ ಸದರಿ ಅಂಶ ವನ್ನು ತಾವು ಇದೇ ಜನವರಿ ೩ ನೇ ಗುರುವಾರದಲ್ಲೂ ತಮ್ಮ ಪತ್ರಿಕೆ ಯಲ್ಲಿ ಪ್ರಕಟಿಸಿರುವದು ಸರಿಯಷ್ಟೆ. ಮೇಲ್ಕಂಡ ಭತ್ತಕುಟ್ಟುವ ಯಂತ್ರವು ಕನಡಾ ದೇಶದಲ್ಲಿರುವ ಲಂಡನ್ ಪಟ್ಟಣದ ಸ್ಪ್ರೇಮೋಟಾರ್ ಕಂಪನಿಯಲ್ಲಿ ಬಹಳ ಸುಲಭ ಕ್ರಯಕ್ಕೆ ದೊರೆಯುತ್ತೆ. ಇಬ್ಬರು ಆಳುಗಳನ್ನಿಟ್ಟುಕೊಂಡು ಈ ಯಂತ್ರದಿಂದ ದಿನಕ್ಕೆ ೬—೭ ಖಂಡುಗ ಭತ್ತ ಸಾಗಾಗಿ ಕುಟ್ಟಬಹುದು. ಮದರಾಸು ... ಅದರ ಕೆಲಸವು ಬಹು ತೃಪ್ತಿಕರವಾಗಿ ಕಂಡುಬರುತ್ತದಲ್ಲದೆ ಅಕ್ಕಿ ... ಆಗುತ್ತದೆ. ಸುಲಭವಾಗಿ ರಿಪೇರಿ ವಗೈರೆ ನಾವೇ ಮಾಡಿ ಕೊಳ್ಳಬಹುದು. ಹೆಚ್ಚಿನ ಸಂಗತಿಗೆ ಮೇಲೆ ನಮೂದು ಮಾಡಿರುವ ಕಂಪನಿಗೆ ಬರೆದು ತಿಳಿದುಕೊಳ್ಳಬಹುದು. ಈ ವಿಷಯವನ್ನು ಮೇಲ್ಕಂಡ ಮಿತ್ರರ ಮತ್ತು ವಾಚಕರ ಅವಗಾಹನೆಗೋಸ್ಕರವಾಗಿ ತಮ್ಮ ಪತ್ರಿಕೆಯಲ್ಲಿ ಪ್ರಕಟಪಡಿಸಬೇಕಾಗಿ ಕೋರುತ್ತೇನೆ.

ಬಿ. ಸಿ. ಎಸ್. ರಾಜಗೋಪಾಲಶರ್ಮ, ಬಿಡದಿ.

ಘೋರಕೊಲೆಗಳು.

ಅಯ್ಯಾ,

ಚಿತ್ರದುರ್ಗ ತಾಲ್ಲೂಕು ತುರುವನೂರು ಸಮ್ಮತು ಬೆಳಗಟ್ಟ ಗ್ರಾಮದ ವಾಸಸ್ತರು ಗ್ರಾಮದ ದೇವತೆ ದುರ್ಗಮ್ಮ ಪೋಲೇರಮ್ಮ ಎಂಬು ಎರಡು ದೇವರು ಮಾಡಿದರು. ಜನವರಿ ತಾ ೧ ನೆ ಸೋಂಗಳ ವಾರ ರಾತ್ರಿ ೫ ಘಂಟೆ ಕಾಲದಲ್ಲಿ ಪಟ್ಟದ ಕೋಣ ಕಡಿದರು. ತಾ ೨ ನೆ ಮಧ್ಯಾಹ್ನ ಹಗಲು ೩ ಘಂಟೆ ವೇಳೆಯಲ್ಲಿ ಮೂರುನೂರ ಇಪ್ಪತ್ತು ಕುರಿ ಕತರಾಯಿಸಿದರು. ೧೩ ಕೋಣ ಬೇಗಾರು ಹತ್ಯ ಮಾಡಿದರು. ಕುರಿ ಕೋಣ ಸೇರಿ ಸಾವಿರ ರೂಪಾಯಿ ಖರ್ಚು ಆಗಿ ರುತ್ತೆ. ತಾ ೩ ನೆ ಗುರುವಾರ ೨ ಕರಿ ಮೇಕೆ ಹೋತಗಳನ್ನು ಗಾವು ಎಂದು ಸಿಗಿಸಿದರು. ಈ ಗಾವು ಸಿಗಿಯುವ ಜನರು ಆತುನೂ ರಿಂದ ಪೋತುರಾಜರು ಎಂದು ತಲೆ ಕೂದಲು ಬಿಟ್ಟುಕೊಂಡು ಎರಡು ಕೈಗೆ ಎರಡು ಲೋಹ ತೆಗೆದುಕೊಂಡು ೬ ಜನರು ಕುಣಿಯುತ್ತಾ, ಓಲಗ ಬಜಂತ್ರಿಯಿಂದ ದೇವರ ಸಮೀಪಕ್ಕೆ ಹೋಗಿ ಅಲ್ಲಿ ಪೂಜೆ ಪುನಸ್ಕಾರ ಮಾಡಿ, ಕಾಲು ಒಡೆದು ಮೇಕೆ ಹೋತ ಮೇಲಕ್ಕೆ ಎತ್ತಿ ಕಿವಿಯಲ್ಲಿ ಊದಿ ಮಲಗಿಸಿ ಜಾತ್ರೆ ನೋಡುವದಕ್ಕೆ ಹೋದ ಜನರಲ್ಲಿ ಬಟ್ಟೆ ರೊಕ್ಕ ವಸೂಲುಮಾಡಿ ಇಟ್ಟು ಕೈಗೆ ಮೇಕೆ ಹೋತು ತೆಗೆದು ಕೊಂಡು ಬಾಯಿನಿಂದ ಕಿತ್ತು ರಕ್ತ ಕುಡಿದು ಮಾಂಸ ಎಲುಬು ಗಳನ್ನು ಬಾಯಲ್ಲಿ ಕಚ್ಚಿಕೊಂಡು ಚತುರ್ದಿಕ್ಕಿನಲ್ಲಿರುವ ಜನರಿಗೆ ತೋರಿಸಿದ ಕೂಡ್ಲೆ ಒಬ್ಬರ ಮೇಲೊಬ್ಬರು ಬೀಳುತ್ತಾ ನೂಕುತ್ತಾ ಏಳುತ್ತಾ ನೋಡಿದ್ದಾಯಿತು. ತಾ ೪ ನೆ ಶುಕ್ರವಾರ ಚಿತ್ರದುರ್ಗದ ವರಿಗೂ ಮೊದಿಕೇರಿಪುರದವರಿಗೂ ಕುಸ್ತಿ ಬಿಟ್ಟರು. ನೋಟ ನೋಡು ವ ಜನರು ಒಬ್ಬರಿಗೊಬ್ಬರು ಗುದ್ದಾಟಮಾಡಿದರು. ಯಾವತ್ತು ಜನರು ದಿಗ್ಗನೆದ್ದು ಅವರವರ ಮನೆಗೆ ಹೊರಟು ಹೋದರು. ತಾ. ೫ ನೆ ಶನಿವಾರ ಕುಸ್ತಿ ಬಿಟ್ಟರು. ಪ್ರಾತಃಕಾಲದಲ್ಲಿ ಬಿಟ್ಟ ಜೋಡಿ ಪೈಕಿ ಮೊದಿಕೆರೆ ಊರವನನ್ನು ಸೋಲಿಸಿ ಚಿತ್ರದುರ್ಗದವನು ಕಡಗ ಗೆದ್ದನು. ಮತ್ತು ಸಾಯಂಕಾಲದಲ್ಲಿ ೧, ೨, ೩ ಜೋಡಿ ಬಿಟ್ಟರು. ಮೊದಿಕೆರೆ ಪುರದವನು ಒಂದು ವಸ್ತ್ರ ಗೆದ್ದನು. ಪುನಃ ಬಿಳಿ ಜೋಡಿ ಬಿಟ್ಟರು. ಸಾಯಂಕಾಲ ೬ ಘಂಟೆ ವರಿಗೂ ಕುಸ್ತಿ ಮಾಡಿದರು. ಒಬ್ಬರೂ ಸೋಲಲಿಲ್ಲ. ಸಾಯಂಕಾಲವಾದ್ದರಿಂದ ನಿಲ್ಲಿಸಿದ್ದಾಯಿತು. ದೇವರ ಉತ್ಸವ ಬಹಳ ವಿಜೃಂಭಣೆಯಿಂದ ಮಾಡಿದರು. ರಾತ್ರಿ ತುರುವನೂರಿನ ವರು ತ್ರಿಪುರಸಂಹಾರವೆಂದು ಬೈಲ್ ಆಟ ಆಡಿದರು.

ವಾಚಕ.

ಚುಂಚನಕಟ್ಟೆ ಜಾತ್ರೆಯು.

ಅಯ್ಯಾ,

ಇದೇ ಮಾಹೆ ೧೫ ನೇ ತಾ ಎಡತೊರೆ ತಾಲ್ಲೂಕು ಚುಂಚನ ಕಟ್ಟೆಯಲ್ಲಿ ಶ್ರೀ ರಾಮದೇವರ ರಥೋತ್ಸವ ಜರುಗಿತು. ಅ॥ ಅಮಿ ಲ್ದಾರರೂ ತಾಲ್ಲೂಕು ಅಧಿಕಾರಿಗಳೂ ನಿಂತು ದೇವರ ಕಾರ್ಯವನ್ನು ನೆರವೇರಿಸಿದರು. ಆದರೆ ಚುಂಚನಕಟ್ಟೆಯಲ್ಲಿ ಊರಿಲ್ಲದ್ದರಿಂದಲೂ ಕಾವೇರಿ ಪ್ರದೇಶವಾದ್ದರಿಂದಲೂ ಅಲ್ಲಿ ಬಂದಿದ್ದ ಭಕ್ತಾದಿಗಳಿಗೆ ಸುತರಾಂ ಯಾವ ಅನುಕೂಲವಿರಲಿಲ್ಲ. ಸಣ್ಣ ನೌಕರರು ತಮ್ಮ ಮೇಲ್ಪಟ್ಟವರೆದುರಿಗೆ ಸಡಗರದಿಂದ ಓಡಾಡಿ ಸರಭರಾಜು ನೋಡಿ ಕೊಂಡು ಸರ್ಕಾರದ ಹುಟ್ಟುವಳಿಯನ್ನು ಜಡಾಯಿಸಿ ತೋರಿಸಿದರೆ ತಮ್ಮ ಕೆಲಸವು ಸಮರ್ಪಕವಾಯಿತೆಂಬ ದುರಭಿಪ್ರಾಯವುಳ್ಳವರಾಗಿ ರುತ್ತಾರೆ. ಕೇವಲ ಬಡಬಗ್ಗರಿಗೆ ಅನುಕೂಲಪಡಿಸಿ ಪ್ರಪಂಚದ ಕಷ್ಟ ವನ್ನು ಕಡಮೆಮಾಡಬೇಕೆಂಬ ಅಭಿಲಾಷೆಯುಳ್ಳವರು ಅಪರೂಪ. ನಾವುಗಳು ಚುಂಚನಕಟ್ಟೆಯಲ್ಲಿ ನೋಡಿದ್ದರಲ್ಲಿ ಅಲ್ಲಿನ ಅಧಿಕಾರಿ ಗಳು ಅಂಗಡಿಯವರಿಂದ ಕೇವಲ ಬಾಡಿಗೆ ವಸೂಲ್ಮಾಡಿ ಮುಜರಾಯಿ ಹುಟ್ಟುವಳಿಯು ತಮ್ಮಿಂದ ತುಂಬಾ ಉತ್ಪತ್ತಿಯಾಯಿತೆಂಬ ಹೆಸರು ವಾಸಿಯನ್ನು ಹೊಂದಬೇಕೆಂಬ ಅಭಿಲಾಷೆಯುಳ್ಳವರಾಗಿರುವದು ಗೊತ್ತಾಯಿತು. ಆದರೆ ಈ ಬಾಡಿಗೆಯನ್ನು ಕೊಡತಕ್ಕವರ್ಯಾರು? ಸೀದಾ ಅಂಗಡಿಯವರು ಕೊಟ್ಟಾಗ್ಯೂ ಜಾತ್ರೆಗೆ ಬಂದಂಥಾ ಭಕ್ತಾದಿ ಗಳಿಂದ ವಸೂಲ್ಮಾಡಿದಂತೆಯೇ ಭಾವಿಸಬೇಕು. ಇಂಥಾದ್ದರಲ್ಲಿ ಜನ ಗಳಿಗೆ ಇಳುಕೊಳ್ಳಲು ಆಶ್ರಯವೇ ಮೇಲುಭಾವಣಿಯಾಗಿತ್ತು. ಈ ವಿಷಯವನ್ನು ಸರ್ಕಾರದವರು ಪರ್ಯಾಲೋಚಿಸಿ ಈ ನ್ಯೂನತೆ ಗಳನ್ನು ನೀಗಲಾಡಿಸುವರೆಂದು ನಂಬುತ್ತೇವೆ. ದೇವಸ್ಥಾನದ ಬಾಗ ಲಲ್ಲೇ ಪ್ರತಿಯೊಬ್ಬನೂ ಅರ್ಧಾಣೆ ಕೊಟ್ಟುಬಿಡಬೇಕು! ತೆಂಗಿನ ಕಾಯಿ ಒಡೆದರೆ ಬೇರೆ ಅರ್ಧಾಣೆ! ಭಕ್ತಾದಿಗಳು ದೇವರಿಗೆ ಕಪ್ಪ ಕಾಣಿಕೆ ಕೊಡುವುದರಲ್ಲೇನೂ ಸಂದೇಹವಿಲ್ಲ. ಆದರೆ ಬಡಬಗ್ಗರಿಂ ದಲೂ ಹೀಗೆ ಬಲಾತ್ಕಾರಪಡಿಸಿ ವಸೂಲ್ಮಾಡಿ ಮುಜರಾಯಿ ಫಂಡನ್ನು ಹೆಚ್ಚುತೋರಿಸುವದು ಯಾವ ಧರ್ಮ? ಇದು ಸರ್ಕಾರದವರ ಅಭಿ ಪ್ರಾಯವೆಂದು ನಾವು ಹೇಳಬಲ್ಲೆವೇ?

ಚುಂಚನಕಟ್ಟೆಯಲ್ಲಿ ದನಗಳ ಸಂತೆಯು ನಡೆಯುತ್ತೆ. ಈ ವರುಷವೂ ರಾಸುಗಳು ಸೇರಿದ್ದವು. ಕೇವಲ ಅಲಂಕಾರವಾದ ದನ ಗಳೂ ಬಂದಿದ್ದವು. ೧೬ ನೇ ತಾ ಅವುಗಳ ಪ್ರದರ್ಶನ ನಡೆಯುತ್ತೆ. ಆಗ್ಗೆ ದನಗಳನ್ನೆಲ್ಲಾ ಕಟಕಟೆ ಹಾಕಿರುವ ಒಳಪ್ರದೇಶದಲ್ಲಿ ಕಟ್ಟ ಬೇಕೆಂದು ಡಂಗೂರಾ ಹಾಕಿಸಿ, ಅದಕ್ಕಾಗಿ ನೌಕರರು ಬಹಳ ಮುತವ ರ್ಜಿ ವಹಿಸಿದ್ದರು. ದನಗಳಿಗಾಗಿ ಸುಂಕ ವಸೂಲ್ಮಾಡಿದ್ದನ್ನು ನೋಡಿ ಅವುಗಳ ಮೇಲಾದರೂ ಸರ್ಕಾರದವರಿಗೆ ಇಷ್ಟು ನಿಗಾ ಇದೆ ಯಲ್ಲಾ ಎಂದು ಸಂತೋಷವಾಯಿತು.

ಜಾತ್ರೆಗೆ ಹೋಗಿದ್ದ ರಾಮನ ದೂತರು

"ನೋಟ ವಿದ್ಯಾಲೂ ಕೂಟಕೋರಕು"

ಅಯ್ಯಾ,

ಕಳೆದ ೧೨ ನೆ ತಾ. ಸಾಯಂಕಾಲ ೫ ಘಂಟೆ ಸಮಯದಲ್ಲಿ ಮದ್ದಗಿರಿ ತಾಲ್ಲೂಕು ಕೊಡಲಾಪುರಕ್ಕೆ ಸಮೀಪದಲ್ಲಿರುವ ಒಂದು ಹಳ್ಳಿಯ ಪಕ್ಕದಲ್ಲಿ ಹೋಗುತ್ತಿದ್ದೆನು. ಆ ಹಳ್ಳಿಯಲ್ಲಿ ತಮಟೆ ಶಬ್ದ ಕೇಳಬಂದಿತು. ಓಹೋ, ಇದೇನು? ಈ ಹಳ್ಳಿಯಲ್ಲಿ ಗದ್ದಲ ಎಂದು ಆ ಗ್ರಾಮದವನಾದ ಒಬ್ಬನನ್ನು ಕೇಳಲು; ಅವನು—ಸ್ವಾಮಿ ಏನೆಂತ ಹೇಳಲಿ! ಈ ಅದ್ಭುತವಾದ ಈ ಆಶ್ಚರ್ಯ ನಾನು ಕಾಣೆ. ನಮ್ಮ ಹೆತ್ತಪ್ಪ ಮುತ್ತಪ್ಪರೂ ಕಾಣರು! ಏನು ಕಲಿಕಾಲ! ಸ್ವಾಮಿ, ಒಬ್ಬ ಮನುಷ ನೆಲದ ಮೇಲೂ ಕುಂತಿಲ್ಲಾ! ಅಂಬಾರದ ಮೇಲೂ ಕುಂತಿಲ್ಲಾ! ಮಧ್ಯೆ ಕುಂತಿದ್ದಾನೆ! ಮತ್ತು ಕೋಳಿ ಹುಂಜಗೆ ೨ ಕೊಂಬುಗಳು ಹುಟ್ಟವೆ! ಅದನ್ನು ಎಲ್ಲರಿಗೂ ತೋರಿ ಸುತ್ತಾನೆ. ಅದೇ ಸ್ವಾಮಿ ಗದ್ದಲ ಎಂದು ಹೇಳಿದನು. ಅದಕ್ಕೆ ನಾನು ಇದರ ಸಂಗತಿ ತಿಳಿಯಬೇಕೆಂದು ಗ್ರಾಮದೊಳಕ್ಕೆ ಹೋಗಲು, ನೂ ರಾರು ಮಂದಿ ಒಬ್ಬರ ಮೇಲೊಬ್ಬರು ನೂಕಿಕೊಂಡು ಹೋಗುತ್ತಿ ದ್ದರು. ನಾನು ಆ ಗುಂಪನ್ನು ಬಿಡಿಸಿಕೊಂಡು ಮುಂದಕ್ಕೆ ಹೋ ದೆನು. ಅಲ್ಲಿ ಒಂದು ಚಪರ ಕಟ್ಟಿತ್ತು. ಚಪರದಲ್ಲಿ ಒಂದು ಕಂಬ ವು ಹೂಣಿತ್ತು. ಆ ಕಂಬದ ಪಕ್ಕದಲ್ಲಿ ಒಬ್ಬ ಮನುಷ್ಯನು ಕೆಳಗೂ ಮೇಲೂ ಆಧಾರವಿಲ್ಲದೆ ಆ ಕಂಬವನ್ನು ಎಡಗೈಯಲ್ಲೂ ಕತ್ತಿಯನ್ನು ಬಲಗೈಯಲ್ಲೂ ಹಿಡಿದುಕೊಂಡು ಹಾಗೆ ಕುಡುಬರುತ್ತಿತ್ತು. ಅವನ ಎದುರಿಗೆ ಮೂಲೆಯಲ್ಲಿ ಕೊಂಬಿನಿಂದ ಕೂಡಿದ ಕೋಳಿ ಇತ್ತು. ಈ ಆಶ್ಚರ್ಯವನ್ನು ಅಲ್ಲಿನ ಜನಗಳು ನೋಡಿ— ಈತನು ದೇವಾಂಶ ಪುರುಷನೆಂದೂ, ಈತನಿಗೆ ಕಾಣಿಕೆಗಳನ್ನು ಒಪ್ಪಿಸಬೇಕೆಂದೂ ಅಷ್ಟ ಬಿದ್ದು ಕಾಣಿಕೆಗಳನ್ನು ಒಪ್ಪಿಸಿ ಹೋಗುತ್ತಿದ್ದರು. ನಾನು ಇದರ ನಿಜ ತ್ವ ತಿಳಿಯಬೇಕೆಂದು ಒಳಕ್ಕೆ ಹೋಗಿ ನೋಡಲು, ಆ ಕಂಬದೊಳಗಿ

ಯಿಂದ ಕಬ್ಬಿಣದ ಸಲಾಕಿ ಎದೆಗೆ ತಿರುಗಿ ಕೊಡುವದಕ್ಕೆ ಅನುಕೂಲವಾಗಿ ಸುತ್ತಿಕೊಂಡಿತು. ಆ ಮನುಷ್ಯನು ನಿಲುವಾದ ಅಂಗಿಯನ್ನು ಹಾಕಿಕೊಂಡು, ಆ ಸುತ್ತಿರುವ ಕಂಬಿಯ ಮೇಲೆ ಕೂತುಕೊಂಡು ಯಾರಿಗೂ ಕಾಣದ ಹಾಗೆ ಬಟ್ಟೆಯನ್ನು ಮುಚ್ಚಿದ್ದನು ಕೋಳಿಗೆ ದಂತದಿಂದ ಮಾಡಿದ ಕೊಂಬುಗಳು ಕೂದಲೊಳಗೆ ಅದಿಕಿಸಿದ್ದನು ನೋಡಿದಿರಾ, ಎಂಥಾ ಆಶ್ಚರ್ಯ! ಇದರ ಮರ್ಮ ತಿಳಿಯಲಾರದೆ ವರವನ್ನು ಕೊಡುವ ದೇವರೆಂದು ಭ್ರಮಿಸಿದರಲ್ಲಾ! ಏನು ಹೇಳಲಿ! ಇಂಗ್ಲಿಷ್ ರಾಜ್ಯಭಾರವು ಕೂಡಿ ನೂರಾರು ವರ್ಷಗಳಾದಾಗ್ಯೂ ಈ ಭರತಖಂಡದ ಜನಗಳ ಮೌಢ್ಯವು ಹೋಗಲಿಲ್ಲವಲ್ಲಾ! "ನೂರು ವಿದ್ಯೆ ಒಂದು ಕೂಟಿಕೋಸ್ಕರ" ಎಂಬ ಗಾದೆಯಂತೆ ಅವರು ಜನಗಳನ್ನು ಭ್ರಾಂತಿಪಡಿಸಿ ತಕ್ಕಮಟ್ಟಿಗೆ ಸಂಪಾದಿಸಿಕೊಂಡು ಮುಂದಿನ ಗ್ರಾಮಕ್ಕೆ ತೆರಳಿದರು

ಕ. ಲ.

ಬೆಂಗಳೂರು ಸಿಟಿಯ ನೆಯ್ಗೆಯವರ ಸ್ಥಿತಿ.

ಅಯ್ಯಾ,

ಸನ್ ೧೯೦೧ ನೇ ಇಸ್ವಿಯಲ್ಲಿ ನಡೆದ ಖಾನೇಷುಮಾರಿ ಲೆಕ್ಕದ ಪ್ರಕಾರ ಈ ಊರಿನ ಒಟ್ಟು ಪ್ರಜಾಸಂಖ್ಯೆಯು ೬೯,೪೪೭. ಈ ಪೈಕಿ ೧೦,೪೯೭ ಪ್ರಜೆಗಳು ನೆಯ್ಗೆಯವರಾಗಿದ್ದಾರೆ ಈ ವರ್ಗಸ್ಥರಲ್ಲಿ ಆಬಾಲವೃದ್ಧರೂ ಮೊದಲ್ಗೊಂಡು ಆದಿಯಿಂದ ಬಂದಿರತಕ್ಕ ಒಂದು ತೆರನಾದ ಮಗ್ಗದಲ್ಲಿ ಕೆಲಸ ಮಾಡಿಕೊಂಡು ಜೀವಿಸುತ್ತಲಿದ್ದಾರೆ. ಈ ಮಗ್ಗಗಳಿಂದ ಆಗತಕ್ಕ ನೆಯ್ಗೆಯ ಕೆಲಸವು ಜಾಗ್ರತೆ ಆಗದೆಯೂ, ಇಂಗ್ಲೆಂಡು ಮೊದಲಾದ ಪರದೇಶಗಳಲ್ಲಿ ಯಂತ್ರಗಳಿಂದ ತಯಾರಾದ ಶ್ಲಾಘನೀಯವಾದ ಬಟ್ಟೆಗಳು ಈ ದೇಶಕ್ಕೆ ತರಿಸಿಕೊಳ್ಳುವುದರಿಂದಲೂ ಸದರಿ ಜನರು ಮಾಡಿದ ಸರಕುಗಳು ಬಹಳ ಕಡಮೆ ಬೆಲೆಗೆ ವಿಕ್ರಯವಾಗಿ ಅವರು ಪಟ್ಟ ಕಷ್ಟಗಳೆಲ್ಲಾ ವ್ಯರ್ಥವಾಗುತ್ತಲಿವೆ ಕೆಲವು ಬುದ್ಧಿವಂತರು ಉತ್ತರ ಹಿಂದುಸ್ಥಾನದ ಅಲಹಾಬಾದ್, ಬನಾರಸ್‌ಗಳಲ್ಲೂ ಬರೋಡಾ ದೇಶದಲ್ಲೂ ಒಂದು ವಿಧವಾದ ನೇಯ್ಗೆಯ ಯಂತ್ರವನ್ನು ಕಂಡು ಹಿಡಿದಿರುತ್ತಾರೆಂದೂ ಇದರಿಂದ ನೆಯ್ಗೆ ಕೆಲಸ ತೀವ್ರವಾಗಿಯೂ ನಾಜೂಕಾಗಿಯೂ ಆಗುತ್ತದೆಂದೂ ತಿಳಿಯಬರುತ್ತೆ. ಮೈಸೂರು ಸರ್ಕಾರದವರು ಮೇಲ್ಕಂಡ ಜನರು ಬಹಳ ಕಾಲದಿಂದಲೂ ಅನುಭವಿಸುತ್ತಿರುವ ಕಷ್ಟವನ್ನೂ ವ್ಯಥೆಯನ್ನೂ ವಿಚಾರಣೆಮಾಡಲು ಆ ಪಂಗಡದವರ ಪೈಕಿ ಕೆಲವರಿಗೆ ಮಾಸ ವೇತನವನ್ನು ಕೊಟ್ಟು, ಸದರಿ ಸ್ಥಳಗಳಿಗೆ ಕಲಿಯುವುದಕ್ಕೆ ಕಳುಹಿಸಿ, ಈ ಸಿಟಿಯಲ್ಲೂ ಈ ಜನರಿಗಾಗಿ ಒಂದು ನೆಯ್ಗೆ ಶಾಲೆಯನ್ನು ಏರ್ಪಡಿಸಿದಲ್ಲಿ ಈ ಪಂಗಡದವರ ಕಷ್ಟಗಳು ಬಹಳ ಮಟ್ಟಿಗೆ ಕಮ್ಮಿಯಾಗಲು ಸಂದೇಹವಿಲ್ಲ

ಹಿತಚಿಂತಕ

ಒಂದು ಜಮೀನಿನ ವಿಷಯ

ಅಯ್ಯಾ,

ಕಾನಕಾನಹಳ್ಳಿ ತಾಲ್ಲೂಕು ಸಾತನೂರು ಹೋಬಳಿ ಕಬ್ಬಾಳು ದಾಖಲೆ ಕುರುಬಹಳ್ಳಿ ಗ್ರಾಮದಲ್ಲಿರುವ ಕಬ್ಬಾಳು ಪಟೇಲ ಸಿದ್ದೇಗೌಡನ ಪ್ರಾರ್ಥನೆ:—ನಾನು ಸರ್ಕಾರಕ್ಕೆ ೧೪೦ ರೂಪಾಯಿ ಕಂದಾಯ ಕೊಡುತ್ತೇನೆ. ಮಳವಳ್ಳಿ ತಾಲ್ಲೂಕು ಅರಸಿನಕೆರೆ ಹೋಬಳಿ ಮುಣೇಗೆರೆ ದಾಖಲೆ ನಾರಸಪುರದ ದೊಡ್ಡಿ ಗ್ರಾಮದಲ್ಲಿ ೧೮೬ನೇ ಇನಾಮು ಬಾಗಾಯತು ತಿಮ್ಮೇಗೌಡನ ಮಗ ಮುದ್ದೇಗೌಡನ ಹೆಸರಿಗೆ ಪಟ್ಟಿ ಆಗಿ ಕೆಲವು ಗ್ರಾಮಸ್ಥರಿಗೂ ನಮಗೂ ಸಹಾ ಕುಲ್ಲಾ ಸಾಗುವಳಿಗೆ ಮಾಜಿ ೧೮೭ನೇ ನಂಬರು ಜಮೀನು ಇತ್ತು. ಈ ಸ್ಥಳ ಲೇಂದೀವನ ಈ ಜಮೀನನ್ನು ಮಳವಳ್ಳಿ ಕಸಬಾದಲ್ಲಿದ್ದ ವೆಂಕಣ್ಣಕೋಟೆ ಮುದಾರ್ ಸಾಹೇಬಿ ಎಂಬುವನು ತನಗೆ ಸೇರಿಸಿಕೊಳ್ಳಬೇಕೆಂಬ ಉದ್ದೇಶದಿಂದ ದರಖಾಸ್ತು ಮಾಡಿದರು ನಂತರ ರಿಕಾರ್ಡ್ ನಡದು ಆ ದರಖಾಸ್ತು ವಜಾ ಆಯಿತು ಅಲ್ಲದೆ ಈ ಜಮೀನಿಗಾಗಿ ಅನೇಕ ದರಖಾಸ್ತು ತಿರಸ್ಕಾರವಾಯಿತು ಇದು ೧೯—೮—೧೮೯೦ ರಲ್ಲಿ ನಡೆದ ವಿಷಯ ಈಚೆಗೆ ಮೋಜಣಿ ಕಾಲದಲ್ಲಿ ಆ ಜಮೀನು ಕೆಂದೀವನವೆಂದು ಒಟ್ಟು ನಂಬರು ಮಾಡಿದರು ಕ್ಲಾಸ್ ಕಾಲದಲ್ಲಿ ಆ ಊರು ಶ್ಯಾನುಭೋಗರು ನಂಬರು ಬದಲಾವಣೆ ಮಾಡಿ ತಮಗೆ ಇಷ್ಟಬಂದ ಹಾಗೆ ಪಟ್ಟಿ ಮಾಡಿಸಿಕೊಂಡು ನಮ್ಮ ಸ್ವಾಧೀನ ಜಮೀನನ್ನು ಕೈತಪ್ಪಿಸಿದರು ನಂತರ ತನ್ನ ತಂದೆ ತಿಮ್ಮೇಗೌಡನು ಸರ್ಕಾರದಲ್ಲಿ ಅನೇಕ ವ್ಯವಹಾರಗಳು ನಡಿಸಿದನು ಇದಕ್ಕೆ ನಿನ್ನ ಜಮೀನು ಮಾಮೂಲು ಕೆರೆಗೆ ಇರುತ್ತದೆಂದು ವಗೈರೆ ಸಬ್ ಡಿವಿಜನ್ ೧೩೬ನೇ ನಂಬರ ಹುಕುಂ ಆಜ್ಞೆ ಆಯಿತೇ ಹೊರತು ನನ್ನ ಬಾಬ್ತು ಜಮೀನು ಮಾತ್ರ ಬಿಡಿಸಿಕೊಡಲಿಲ್ಲ ಪುನಃ ಡೆಪ್ಯುಟಿ ಕಮೀಷನರ್ ಸಾಹೇಬರವರ ಆಫೀಸಿಗೂ, ಕೌನ್ಸಿಲರವರಿಗೂ, ಹಜರತ್ ದಿವಾನ್ ಸಾಹೇಬರವರ ಆಫೀಸಿಗೂ ಸರ್ಕಾರಕ್ಕೂ ನನಗುಂಟಾದ ಸಹಾ ತುಂಬಾ ನಷ್ಟ ಕಷ್ಟಗಳನ್ನು ವಿವರಿಸತಕ್ಕ ದಾಖಲೆಗಳನ್ನಿಟ್ಟು ಅರ್ಜಿ ಕೊಟ್ಟದ್ದಕ್ಕೆ ಕೆಳಕೋರ್ಟ್‌ನವರು ತೀರ್ಮಾನ ಮಾಡಿರುವದೇ ಸರಿಯಾಗಿದೆ ಎಂದು ಅಪ್ಪಣೆ ಕೊಡಲ್ಪಟ್ಟಿತೇ ಹೊರತು ಜಮೀನು ಬಿಡಿಸಿಕೊಡಲಿಲ್ಲ ನಮ್ಮ ತಂದೆ ತಿಮ್ಮೇಗೌಡನು ವೃದ್ಧನಾದಕಾರಣ ನಾನು ಮಳವಳ್ಳಿ ತಾಲ್ಲೂಕು ಅಮಲ್ದಾರರಲ್ಲಿ ಮೇಲ್ಕಂಡ ಜಮೀನು ವಿಷಯ ಚೆನ್ನಾಗಿ ಪರಿಶೀಲಿಸಿ ನನ್ನ ಜಮೀನು ಬಿಡಿಸಿ ಕೊಡಬೇಕೆಂದು ವಗೈರೆ ರೂಬರೂಬು ಅರ್ಜಿಯನ್ನು ತಾ ೨—೧—೧೯೦೬ರಲ್ಲು, ಮತ್ತು ಡಿಸ್ಟ್ರಿಕ್ಟಿಗೂ ಪುನಃ [illegible]ಗೂ ಟಪಾಲ್ ಮೂಲಕ ಎಷ್ಟು ಅರ್ಜಿಯನ್ನು ಕೊಟ್ಟು ಏನು ಮಾಡಿದಾಗ್ಯೂ ಯಾವ ವಿಧವಾದ ಸಹಾಯವೂ ಮತ್ತು ಯಾವ ಹುಕುಂ ಕೂಡ [illegible] ಮಾಫಿಯಾದ ನನಗೆ ದೊರೆಯಲಿಲ್ಲ ಸರ್ಕಾರಕ್ಕೆ ಉತ್ಪತ್ತಿಯಾಗತಕ್ಕ ಕೆಂಪು ವನವನ್ನು ಸರ್ಕಾರಿಯಾಗಿಯೂ ಮಾಡಿಲ್ಲ ಅಥವಾ ನಮ್ಮ ಹಿಡುವಳಿಗೆ ಸೇರಿದ್ದ ಮಾಮೂಲು ಜಮೀನು ನನಗೆ ಬಿಡಿಸಿಕೊಡಲೂ ಇಲ್ಲ. ಇದನ್ನು ನಂಬಿದ ನನಗೆ ಉಂಟಾಗಿರುವ ಕಷ್ಟ ನಷ್ಟಗಳನ್ನು ಯಾರಲ್ಲಿ ಹೇಳಿಕೊಳ್ಳುವರೂ ತೋರಲಿಲ್ಲವು

[ಸರ್ಕಾರದ ಕೆಲಸಗಳು ತುಂಬಾ ನಿಧಾನವಾಗಿ ನಡೆಯುತ್ತಿರುವುದಕ್ಕೆ ಈ ಬಾತ್ಮಿಯು ಒಂದು ದೃಷ್ಟಾಂತವಾಗಿದೆ ಅಧಿಕಾರಿಗಳ ಅಕ್ರಮಗಳನ್ನು ಈ ರೀತಿಯಲ್ಲಿ ಅಣಗಿಸಬಿಡುವ ರೈತಪ್ರಜೆಗಳ ಕಷ್ಟಗಳು ಅಪಾರವಾಗುವವು ಇವು ಅಧಿಕಾರಿಗಳಿಗೆ ಪ್ರಜೆಗಳ ಮೇಲಿರಬೇಕಾದ ಅಭಿಮಾನವನ್ನು ಪ್ರಕಾಶಪಡಿಸುವುದಿಲ್ಲ. —ಎಡಿ]

ಶಿವಗಂಗೆ ಸಂಕ್ರಾಂತಿ ಜಾತ್ರೆಯು.

ಅಯ್ಯಾ,

ನೆಲಮಂಗಲಕ್ಕೆ ಸೇರಿದ ಶಿವಗಂಗೆಯಲ್ಲಿ ಸಂಕ್ರಾಂತಿ ಜಾತ್ರೆಯು ಕಳೆದ ತಾ. ೧೨ ರಿಂದ ೧೬ ರ ವರೆಗೆ ನಡೆಯಿತು ಸುಮಾರು ೧೦—೧೨ ಸಹಸ್ರ ಜನರು ಹಾಜರಿದ್ದರು ಗಂಗಾಧರಸ್ವಾಮಿಗೆ ತಾ. ೧೩ ನೆ ಭಾನುವಾರ ರಾತ್ರಿ ಕಲ್ಯಾಣೋತ್ಸವ ನಡೆಯಿತು ಈ ಸ್ಥಳದಲ್ಲಿ ಮನೆಗಳು ಬಾಡಿಗೆ ದೊರೆಯದೆ ಕೆಲವು ಜನರು ಅಗಸ್ತ್ಯತೀರ್ಥದ ಸುತ್ತೂ ಕೈಸಾಲೆಯಲ್ಲಿ ತುಂಬಾ ರಾತ್ರಿವೇಳೆ ಮಲಗುತ್ತಾ ಇದ್ದರು ಕೆಲವರು ಸ್ಥಳ ಸಿಕ್ಕದೆ ತುಂಬ ಶ್ರಮಪಡುತ್ತಾ ಇದ್ದರು. ತುಂಕೂರು ನಾಟಕದವರು ಬಂದು ನಾಟಕವಾಡಿ ಜನಗಳ ಮನಸ್ಸನ್ನೂ ದ್ರವ್ಯವನ್ನೂ ಆಕರ್ಷಣೆಮಾಡಿದರು ಇನ್ನೂ ಅನೇಕರು ತಮಾಷೆಗಳು ತೋರಿಸಿ ದುಡ್ಡು ಆಕರ್ಷಣೆಮಾಡಿದರು. ಜೂಜುಗಾರರು ಬಂದು ಜನಗಳಿಂದ ದ್ರವ್ಯವನ್ನು ಸ್ವೀಕರಿಸುತ್ತಾ ಇದ್ದರು ೧೦—೧೨ ಸಾವಿರ ಎತ್ತುಗಳು ಬಿಕರಿಗಾಗಿ ಬಂದು ಇದ್ದವು ಮಿಠಾಯಿ ಅಂಗಡಿಗಳು, ಚಿಲ್ಲರೆ ಅಂಗಡಿಗಳು, ಮರದ ಸಾಮಾನಿನ ಅಂಗಡಿಗಳು, ಇನ್ನೂ ಅನೇಕ ಅಂಗಡಿಗಳು ಬಂದು ಇದ್ದವು ಜಾತ್ರೆಗೆ ಬಂದು ಇರುವ ಜನಗಳಿಂದ ವ್ಯಾಪಾರಗಾರರೆಲ್ಲಾ ಸುಲಿಗೆಮಾಡಿದರು ಪಾತಾಳಗಂಗೆ ಬಾಗಲಿನಲ್ಲಿ ಇಬ್ಬರು ಇದ್ದು ಇಸಂ ೧ ಕ್ಕೆ ಅರ್ಧ ಆಣೆಯಂತೆ ದಬ್ಬಿಗೆ ಕೊಡಬೇಕೆಂದು ವಸೂಲ್ ಮಾಡಿದರು ಸ್ನಾನ ಮಾಡುವ ಸ್ಥಳದಲ್ಲಿ ಬೇರೆ ಇಬ್ಬರು ಇಸಂ ೧ ಕ್ಕೆ ಕಾಲಾಣೆ ಮೇರಿಗೆ ತೆಗೆದುಕೊಂಡರು ಒಬ್ಬ ಪೋಲೀಸು ಕಾನ್ಸ್ಟೇಬಲ್ ಕಾವಲಿದ್ದು ಗಲಾಟೆ ಇಲ್ಲದಂತೆ ನೋಡುತ್ತಾ ಇದ್ದನು. ಈ ಜಾತ್ರೆಗೆ ಅಮಲ್ದಾರರೂ ಪೋಲೀಸು ಇನ್ಸ್ಪೆಕ್ಟರೂ ದಯಮಾಡಿದ್ದರು. ಮುದ್ಗಲ್ಯತೀರ್ಥದ ಬಾಗಲಿನಲ್ಲಿ ಸ್ನಾನಕ್ಕೆ ಬಂದವರಿಂದ ಇಸಂ ೧ ಕ್ಕೆ ಅರ್ಧ ಆಣೆಯಂತೆ ತೆಗೆದುಕೊಳ್ಳುತ್ತಾ ಇದ್ದರು ಈ ದುಡ್ಡೆಲ್ಲಾ ಭಂಡಾರಕ್ಕೋ ಯಾ ತಮ್ಮ ಭಕ್ಷಣೆಗೋ ಎಂಬುವದು ಗೊತ್ತಾಗುವದಿಲ್ಲವೆಂದು ಜನಗಳು ಆಡಿಕೊಳ್ಳುತ್ತಿದ್ದರು ಎಲ್ಲಿ ನೋಡಿದಾಗ್ಯೂ ಮಲಮೂತ್ರಾದಿಗಳಿಂದ ಕಾಲು ಇಡುವದಕ್ಕೆ ಸ್ಥಳವಿಲ್ಲದೆ ದುರ್ಗಂಧವಾಗಿತ್ತು. ಕಳ್ಳರ ಮತ್ತು ದಾಸ್ಯೆಯರ ಕಾಟವೂ ಇನ್ನು ಇತರ ತೊಂದರೆಯೂ ಬಹಳವಾಗಿತ್ತು ಪೋಲೀಸಿನವರ ವಿಚಾರಣೆಯೇ ಕಾಣಿಸಲಿಲ್ಲ. ಬ್ರಾಹ್ಮಣರಿಗೆಲ್ಲಾ ಮಠದಲ್ಲಿ ೩ ದಿನ ಸಂತರ್ಪಣೆ ಚೆನ್ನಾಗಿ ಜರುಗುತ್ತಾ ಇತ್ತು ವೈಶ್ಯರಿಗೆಲ್ಲಾ ೩೦ ವರುಷದ ಬಾಗಾಯತು ತ್ಯಾಮಗೊಂಡ್ಲದ ವೈಶ್ಯರು ಮನೆ ಮನೆಗೆ ಚಂದಾ ವಸೂಲು ಮಾಡಿ ವಿಜೃಂಭಣೆಯಿಂದ ಸಂತರ್ಪಣೆ ನಡಿಸುತ್ತಾ ಇದ್ದರು ತ್ಯಾಮಗೊಂಡ್ಲದ ವೈಶ್ಯರ ಪೈಕಿ ರಾಜಾ ಮುನಿಯಪ್ಪಶೆಟ್ಟರ ಕಿರಿಮಗ ಸೀತಾರಾಮಶೆಟ್ಟರು ೬—೭ ವರುಷ ಶ್ರಮಪಟ್ಟು ಕಲ್ಲಿನಿಂದಲೂ ಗಾರೆಯಿಂದಲೂ ೧೦—೧೫ ಸಾವಿರ ರೂಪಾಯಿ ಮುಟ್ಟಿಸಿ ಅಂದವಾಗಿಯೂ ರಮ್ಯವಾಗಿಯೂ ಛತ್ರವನ್ನು ಕಟ್ಟಿಸಿರುತ್ತಾರೆ ಈ ಛತ್ರದಲ್ಲಿ ಗತವರುಷ ಇವರ ಅಣ್ಣ ಸುಬ್ಬಶೆಟ್ಟರು ವೈಶ್ಯರಿಗೆಲ್ಲಾ ಸಮಾರಾಧನೆ ಹೇಳಿ ನಾನೊಬ್ಬನೇ ಜಾತ್ರೆಗೆ ಬಂದ ವೈಶ್ಯರಿಗೆಲ್ಲಾ ೩ ದಿನ ಸಂತರ್ಪಣೆ ಮಾಡಿಸುತ್ತೇನೆಂದು ಹೇಳಿ ಅವರ ಇಷ್ಟಾನುಸಾರ ೩ ದಿನವೂ ವಿಜೃಂಭಣೆಯಿಂದ ಸಂತರ್ಪಣೆ ನಡಿಸಿದರೆಂದು ಬಂದು ಇದ್ದ ವೈಶ್ಯರೆಲ್ಲಾ ಹೇಳಿಕೊಳ್ಳುತ್ತಾ ಇದ್ದರು. ಈ ವರುಷ ಸಂತರ್ಪಣೆಗೆ ತಾ ೧೩ ನೆ ಭಾನುವಾರ ಸಾಯಂಕಾಲ ಸದರಿ ಸುಬ್ಬಶೆಟ್ಟರು ಪದಾರ್ಥಗಳ ಸಮೇತ ಬಂದರು. ಇವರು ಬರುವದಕ್ಕೆ ಮುಂಚಿತವಾಗಿ ಪ್ರಾತಃಕಾಲಕ್ಕೆ ೩೦೦—೪೦೦ ಜನ ವೈಶ್ಯರು ಬಂದು ಅಡಿಗೆ ಮಾಡಿಕೊಳ್ಳುವದಕ್ಕೆ ಸ್ಥಳವೂ ಪದಾರ್ಥವೂ ಇಲ್ಲದೆ ತೊಂದರೆಪಡುತ್ತಾ ಇದ್ದದ್ದನ್ನು ಕೆಲವರು ನೋಡಿ ಕೋಲಾರದ ಚಿಟ್ಟಿ ಬುಚ್ಚಯ್ಯಶೆಟ್ಟರು ಬೆಂಗಳೂರು ಚಿಲ್ಲರೆ ಅಂಗಡಿ ರಾಮಯ್ಯಶೆಟ್ಟರು ಇನ್ನು ಕೆಲವರು ಸೇರಿ ಭಾನುವಾರದ ಮಧ್ಯಾಹ್ನ ಎಲ್ಲರಿಗೂ ತೃಪ್ತಿಯಾಗಿ ಸಂತರ್ಪಣೆ ನಡಿಸಿದರು ರಾತ್ರಿ ೯ ಘಂಟೆ ಬಾಗಾಯಿತು ೩ ದಿನವೂ ರಾಜಾ ಸುಬ್ಬಶೆಟ್ಟರೇ ಸ್ವಂತದ್ರವ್ಯದಿಂದ ಸಂತರ್ಪಣೆ ನಡಿಸಿದರು [ಸಮಾರಾಧನೆಯ ಕಾಲದಲ್ಲಿ ನಡೆದ ಸಂಗತಿಗಳನ್ನು ಕುರಿತು ಬರೆದಿರುವ ಭಾಗವನ್ನು ಪ್ರಕಟಿಸದೆ ಬಿಟ್ಟಿರುತ್ತೇವೆ —ಎಡಿ.]

ಕೆಲವರು ನಿಡುವಂದ ಸ್ಟೇಷನ್‌ಗೆ ಬಂದು ಬೆಂಗಳೂರಿಗೆ ಟಿಕೆಟ್ಟು ಕೊಡಿ ಎಂದು ಮೇಷ್ಟರನ್ನು ಕೇಳಿ ನಾಲ್ಕೂಮುಕ್ಕಾಲಾಣೆಗೆ ಬದಲು ಈ ತಿಂಗಳು ತಾ. ೧೭ ಗುರುವಾರ ಸುಮಾರು ೯೦೦ ಜನರಿಂದ ಇಸಂ ೧ ಕ್ಕೆ ಐದು ಆಣೆ ಪ್ರಕಾರ ವಸೂಲು ಮಾಡಿ ದಯಮಾಡಿಟ್ಟು ಸಮಯಕ್ಕೆ ಟಿಕೆಟ್ಟು ದಯಮಾಡಿದರು ರೈಲ್ವೆ ಟ್ರಾಫಿಕ್ ಮ್ಯಾನೇಜರಿಗೂ ಸೂಪರಿಂಟೆಂಡೆಂಟು ಸಾಹೇಬರಿಗೂ ವೃತ್ತಾಂತ ಪತ್ರಿಕೆ ಮೂಲಕವಾದರೂ ತಿಳಿಸಿ ಬಡಜನರಿಗೆ ನಷ್ಟಕಷ್ಟಗಳಿಲ್ಲದಂತೆ ಮಾಡಬಹುದೆಂದು ಅರಿಕೆಮಾಡಿಕೊಳ್ಳುತ್ತೇನೆ.

ಪಿ ಆರ್ ಟಿ. ಸಿ

ತಾಲ್ಲೋಕು ವರ್ತಮಾನಗಳು

ಫ್ರೇಜರ್‌ಟೌನ್.—ಈ ಕಡೆ ಚಳಿ ಜ್ವರಗಳಿಂದ ಜನರು ಬಹಳ ಕಷ್ಟಪಟ್ಟರು ಈಗ ತಕ್ಕಮಟ್ಟಿಗೆ ಕ್ಷೇಮದಲ್ಲಿರುತ್ತಾರೆ. ಈ ಕಾಲದಲ್ಲಿ ನಮ್ಮ ಆಸ್ಪತ್ರೆ ಅಸಿಸ್ಟೆಂಟರು ಕಾಯಿಲೆಯವರನ್ನು ಪರಾಂಬರಿಸಿ ತಕ್ಕ ಔಷಧಗಳನ್ನು ಕೊಟ್ಟರು—ಈ ಊರಿನಲ್ಲಿ ಕಳ್ಳರ ಕಾಟ ಹೆಚ್ಚಾಗಿದೆ ಪೋಲೀಸ್ ಏರ್ಪಾಡುಗಳು ಸರಿಯಾಗಿಲ್ಲ ತಾ ೩೦ ನೇ ಡಿಸೆಂಬರ್ ರಾತ್ರಿ ಖಜಾನೆಗೆ ಕಳ್ಳರು ಬಿದ್ದು ಸಾವಿರಾರು ರೂಪಾಯಿ ಒಳತಕ್ಕ ಒಡವೆಗಳಿದ್ದ ಪೆಟ್ಟಿಗೆಯನ್ನೇ ಹೊತ್ತುಕೊಂಡು ಹೋದರು. ಈ ವರೆಗೂ ಪತ್ತೆ ಇಲ್ಲ ಪೋಲೀಸ್ ಜಮಾದಾರರು ರಾತ್ರಿ ಹಗಲು ಪತ್ತೆ ಮಾಡುವದರಲ್ಲಿದ್ದಾರೆ ಖಜಾನೆಯಲ್ಲೇ ಕಳವು ಮಾಡಿದ ಕಳ್ಳರು ಯಾರನ್ನು ತಾನೇ ಬಿಟ್ಟಾರು! ನಮ್ಮ ಗತಿಯೇನು? ಎಂಬದಾಗಿಯೂ ಈ ಕಳವಿನಿಂದ ಮನೆಯಲ್ಲಿರುವ ಮಾನಸ್ಥರೆಲ್ಲಾ ಪೋಲೀಸಿನವರ ಕಾಟದಿಂದ ಬೀದಿಗೆ ಬರಬೇಕಾಯಿತು ಎಂತಲೂ ಜನರು ಊರಿನಲ್ಲಿ ಬಹು ಭಯಸ್ಥರಾಗಿರುತ್ತಾರೆ. ಇದಲ್ಲದೆ ಕಳೆದ ತಾ ೧೭ ನೆ ಸಾಯಂಕಾಲ ಗೌಸ್ ಸಾಬ್ ಎಂಬುವರ ಅಂಗಡಿಯಲ್ಲಿ ೩೫೦ ರೂಪಾಯಿ ನೋಟುಗಳು ಕಳುವಾಯಿತು ಪೋಲೀಸಿನವರು ಅವರ ಅಂಗಡಿಯಲ್ಲಿದ್ದ ಆಳುಗಳನ್ನು ದಸ್ತಗಿರಿ ಮಾಡಿದ್ದಾರೆ ಇನ್ನೂ ಪತ್ತೆಯಾಗಲಿಲ್ಲ. ಈ ಸ್ಥಳದಲ್ಲಿ ಪುಂಡು ಜನರು ಹೆಚ್ಚುತ್ತಾ ಬಂದರು ಇಂಥವರ ಮೇಲೆ ಸರ್ಕಾರದವರ ಗಮನ ಬಿದ್ದರೆ ಮಾನಸ್ಥರಿಗೆ ಕ್ಷೇಮವಾದೀತು

ಹೊಸದುರ್ಗ.—೧೫ ದಿವಸಗಳಿಂದ ಮಳೆಯಿಲ್ಲ, ರೈತರು ಹೊಲಗಳಲ್ಲಿ ರಾಗಿ ಸಾವೆ ಮೊದಲಾದ್ದನ್ನು ತುಳಿಸುತ್ತಿದ್ದಾರೆ. ರಜಕ್ಕೆ ಹೋಗಿದ್ದ ಪೋಲೀಸ್ ಇನ್ಸ್ಪೆಕ್ಟರ್ ಬಾಲ್ ಸಾಹೇಬರು ಕೆಲಸದ ಮೇಲೆ ಬಂದರು ಉಪ್ಪಾಯನಿ ಮಠದ ಏಜೆಂಟರಾದ ಹಾಲಪ್ಪ ಚನ್ನಬಸವಾರಾಧ್ಯರವರು ತಂಡಗಡನ್ಯಾತ್ರ್ಯ ಕಾಣಿಕೆ ಎತ್ತುತ್ತಿದ್ದಾರೆ. ಬೋರ್ಡ್ ಸ್ಕೂಲ್‌ನಲ್ಲಿ ೬—೮ ವರ್ಷಗಳಿಂದ ಹೆಡ್ ಮಾಸ್ತರಾಗಿರುವ ಕೃಷ್ಣಪ್ಪನವರು ಆ ಕೆಲಸಕ್ಕೆ ಬಂದನಂತರ ೨೧ ವಿದ್ಯಾರ್ಥಿಗಳನ್ನು ಲೋವರ್ ಸೆಕೆಂಡರಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿಸಿರುತ್ತಾರೆ. ಈ ವರ್ಷ ೮ ವಿದ್ಯಾರ್ಥಿಗಳ ಪೈಕಿ ೬ ಮಂದಿ ತೇರ್ಗಡೆಹೊಂದಿದರು ಬೆಳಗೂರು ಗ್ರಾಮದಲ್ಲಿ ಸುಮಾರು ೩೦೦ ಮನೆಗಳಿರಬಹುದು ಸ್ಕೂಲ್ ರಿಜಿಸ್ಟರಿನಲ್ಲಿ ೬೦ ಹುಡುಗರು ದಾಖಲಾಗಿದ್ದಾರೆ. ಪ್ರತಿದಿನವು ಬರುವ ಸಂಖ್ಯೆಯು ೩೫. ಬಾಕಿ ಹುಡುಗರು ತೆಂಗಿನತೋಟ ಬಲಿಮೆಯಿಂದ ತಮ್ಮ ಐಶ್ವರ್ಯದ ಅಟ್ಟಹಾಸದಿಂದ ಅಲಂಕಾರವಿಗ್ರಹಗಳಂತೆ ಬೀದಿಬೀದಿಗಳಲ್ಲಿ ತಿರುಗಾಡುತ್ತಿರುವರು. ಕೆಲವರು ತಮ್ಮ ಮಕ್ಕಳಿಗೆ ಕಾ, ಕಾ, ಕಿ, ಕೀ, ಬಂತು ಇನ್ನು ಬೆಂಗಳೂರಿಗಾದರು ಮದರಾಸಿಗಾದರೂ ವಿದ್ಯೆ ಕಲಿಯುವದಕ್ಕೆ ಬಿಡಬೇಕು ಅನ್ನುತ್ತಾರೆ ಈ ಬಾಲಕರ ತಂದೆ ತಾಯಿಗಳು ಈಗ ತಿಳುಕೊಂಡಿರುವ ದುರಭಿಪ್ರಾಯವನ್ನು ಬಿಟ್ಟು, ಮಗನೇ ಒಂದು ತೋಟವೆಂತಲೂ ವಿದ್ಯೆ ಕಲಿತು ಉಂಟಾಗುವ ಫಲವೇ ತೆಂಗಿನ ತೋಟದ ಫಲವೆಂತಲೂ ಊಹಿಸಿ, ತೆಂಗಿನ ಗಿಡಗಳಿಗೆ ಗೊಬ್ಬರ ಮಣ್ಣು ಹಾಕಿಸುವಂತೆ ಆ ಮಕ್ಕಳಿಗೆ ದಿನವಹಿ ಸ್ಕೂಲಿನಲ್ಲಿ ಏನು ಕಲಿಸುವರು ಎಂದು ನೋಡಿಕೊಂಡು, ತಕ್ಕ ಲಕ್ಷ್ಯದಲ್ಲಿ ಇಟ್ಟರೆ ಈ ಗ್ರಾಮದ ವಿದ್ಯಾಭಿವೃದ್ಧಿಯು ದಿನಕ್ರಮೇಣ ಹೆಚ್ಚೀತು

ಚಿಕ್ಕಮಗಳೂರು.—ಊರಿಗೆ ಜನರು ಬಂದು ಸೇರಿಕೊಳ್ಳುತ್ತಿದ್ದಾರೆ. ಎಕ್ಸ್ಟೆನ್ಷನ್ ಕೆಲಸವು ಜೋರಾಗಿ ನಡೆಯುತ್ತಲಿದೆ ಜನರು ತಮ್ಮ ಮನೆಗಳನ್ನು ಸಣ್ಣ ಕಟ್ಟಿಕೊಂಡು ಬರುವದರಲ್ಲಿ ತುಂಬ ಆತುರವುಳ್ಳವರಾಗಿದ್ದಾರೆ ಈ ಕಾಲದಲ್ಲಿ ಮುನಿಸಿಪಾಲಿಟಿಯವರು ಸಣ್ಣ ಗಲೀಜಾಗಿರುವ ಸ್ಥಳಗಳನ್ನು ಪಾಕ್ ಮಾಡಿಸುವದೂ ಊರೊಳಗೆ ಪೊದೆಗಳೋಪಾದಿಯಲ್ಲಿ ಬೆಳೆದಿರುವ ಕಳ್ಳಿ ಕಸ ಮುಳ್ಳು ಮೊದಲಾದವುಗಳನ್ನು ತೆಗಿಸುವದೂ ಊರಿನ ಸುತ್ತಲಿರುವ ಕೆರೆಗಳನ್ನು ಶುಚಿಮಾಡಿಸುವದೂ ಬಹಳ ಉಪಕಾರವಾದೀತು. ಇಲ್ಲವಾದರೆ ಪೊದೆಗಳೋಪಾದಿ ಬೆಳೆದಿರುವ ಭಾಗಗಳಲ್ಲಿ ಜನರು ಮಲಮೂತ್ರ ವಿಸರ್ಜನೆ ಮಾಡಿ ದುರ್ವಾಸನೆ ಹುಟ್ಟಿಸೋಣದರಿಂದ ಪ್ರಜಾ ಆರೋಗ್ಯಭಂಗವಾದೀತೆಂದು ತೋರುತ್ತೆ ಇಲ್ಲಿನ ಸಿಗನೀಪುರದ ಪಟ್ಟೆಯ ನೀರಿನ ನಲ್ಲಿ ಇವದೆ ಇರೋಣದರಿಂದ ಆ ಜನರು ಬೇರೆ ಕಡೆ ಇರುವ ನಲ್ಲಿಗಳಿಗೆ ಹೋಗಿ ನೀರು ತರುವರು ಆದಕಾರಣ ಈ ಬೀದಿಯಲ್ಲಿ ಒಂದು ನಲ್ಲಿ ಇಡಿಸುವದು ಅವಶ್ಯವಾಗಿದೆ —ಕಳೆದ ೧೭ ನೆ ತಾ ರಾತ್ರಿ ಸಕ್ರೆಪಟ್ಟಣದ ಕಡೆಯಿಂದ ಬರುತ್ತಿದ್ದ ಮೂರು ಗಾಡಿಗಳ ಮೇಲೆ ಗುಡ್ಡದಾಳ್ ಕಣಿವೆಯಲ್ಲಿ ಕಳ್ಳರು ಬಿದ್ದು ಮಾಲು ಕಳವು ಮಾಡಿಕೊಂಡು ಬಂಡಿಯಲ್ಲಿದ್ದವರನ್ನು ಸುಮಾರಾಗಿ ಹೊಡೆದು ಪರಾರಿಯಾದರೆಂದು ವರ್ತಮಾನ —ಕಳೆದ ಡಿಸೆಂಬರ್ ತಾ ೧೪ ರಲ್ಲಿ ಅಲ್ಲಂಪುರದ ನಾರಪ್ಪನೆಂಬುವನ ಒಂದು ಎತ್ತನ್ನು ಸೈಯದ್ ಬಾದರ್ ಎಂಬುವನು ಕಳವು ಮಾಡಿಕೊಂಡು ಹೋಗುತ್ತಿದ್ದಂತೆಯೂ, ಆತನನ್ನು ಲಿಂಗದಹಳ್ಳಿ ಪೋಲೀಸಿನವರು ಹಿಡಿದು ಸ್ಟೇಷನ್ನಲ್ಲಿ ನಾಲ್ಕು ದಿನ ಇಟ್ಟಿದ್ದು ಅಲ್ಲಿಗೆ ಸಮೀಪದಲ್ಲಿದ್ದ ಹಳಿಗಬಾಳು ಪಟೇಲ ದೇವೇಗೌಡನಿಗೆ ಹದಿನಾರು ರೂಪಾಯಿಗೆ ಪೋಲೀಸಿನವರೇ ಖರೀದಿ ಮಾಡಿ ಕೊಡಿಸಿ ಚೀಟಿಯನ್ನು ಸಹ ಬರೆಸಿ ಅದಕ್ಕೆ ಪೋಲೀಸಿನವರು ತಮಗೆ ತಿಳಿಯದ ಭಾಷೆಯಲ್ಲಿ ರುಜು ಹಾಕಿ ಪಟೇಲನಿಗೆ ಕೊಟ್ಟು ಧೈರ್ಯಪಡಿಸಿದ್ದರ ಮೇಲೆ ಆತನು ಎತ್ತನ್ನು ತೆಗೆದುಕೊಂಡು ಹೋದನೆಂತೆಯೂ, ಅನಂತರ ಈ ಸಂಗತಿ ಮಾಲೀಕನಿಗೆ ತಿಳಿದು ಅವನು ಆ ಸ್ಥಳಕ್ಕೆ ಹೋಗಿ ಮಾಲನ್ನು ಕಂಡುಹಿಡಿದು ಪೋಲೀಸಿನವರಿಗೆ ಹೇಳಿ ಕಳುಹಿಸಲು ಅವರು ಬಾರದೆ ಹೋದರೆಂತಲೂ, ಕಡೆಗೆ ಅಲ್ಲಂಪುರದ ಪಟೇಲರೇ ಮೊದಲಾದವರು ಪೋಲೀಸ್ ಸ್ಟೇಷನ್ನಲ್ಲಿದ್ದ ದಫೇದಾರರಿಗೆ ನೀವು ಬಂದು ಮಹಜರು ಮಾಡದಿದ್ದರೆ ಅಮಲ್ದಾರರಿಗೆ ತಿಳಿಸುತ್ತೇವೆಂದು ಹೇಳಿದ್ದರ ಮೇಲೆ ಅವರು ಹೋಗಿ ಮಹಜರು ಮಾಡಿದರೆಂತೆಯೂ, ಈ ಮೊಕದ್ದಮೆ ಇದೇ ೧೯ ನೆ ತಾ. ಅಮಲ್ದಾರ್ ಕೋರ್ಟಿನಲ್ಲಿ ನಡೆಯುತ್ತಿರುವದಾಗಿಯೂ ವರ್ತಮಾನವಿದೆ —ಇದೇ ತಾಲ್ಲೂಕು ಜಾಗರದ ಹೋಬಳಿ ತೊಗರಿಹಂಕಲ್ ಗ್ರಾಮದ ಮೇಟಿ ಬಿ. ಮಲ್ಲೇಗೌಡರ ಕಾಫಿ ನೌಕರಿ ಆಳುಗಳ ಲೈನಿಗೆ ಆಕಸ್ಮಾತ್ತಾಗಿ ಬೆಂಕಿಯು ಕಳೆದ ತಾ. ೧೫ ನೆ ಮಂಗಳವಾರ ಮಧ್ಯಾಹ್ನ ಆವರಿಸಿಕೊಂಡು ೨೦—೨೫ ಆಳುಗಳ ಹುಲ್ಲಿನ ಲೈನುಗಳು ಸುಟ್ಟು ಭಸ್ಮವಾದವು. ಅವರ ಎಡಬಲದಲ್ಲಿ ಇತರೆ ಮನೆಗಳು ಯಾವುದೂ ಇಲ್ಲ. ಆ ಆಳುಗಳು ಪ್ಲಾಂಟರ್ ಮಲ್ಲೇಗೌಡರ ಕೆಲಸಕ್ಕೆ ಹೋಗಿದ್ದವರು ಸಾಯಂಕಾಲ ಬಂದು ನೋಡಿ ತಮ್ಮ ಆಹಾರ ಪದಾರ್ಥಗಳೂ ಬಟ್ಟೆಬರೆಯೂ ಯಾವದೊಂದೂ ಇಲ್ಲವೆಂಬ ವ್ಯಸನದಿಂದ ಮೇಟಿ ಬಿ. ಮಲ್ಲೇಗೌಡರ ಮನೆಯ ಬಳಿಗೆ ಬಂದು ಮೇಲ್ಕಂಡ ಸಂಗತಿಯನ್ನು ತಿಳಿಸಿ ವ್ಯಸನಪಟ್ಟರು. ಆ ವ್ಯಸನವನ್ನು ಅವರು ಮನಸ್ಸಿಗೆ ತಂದುಕೊಂಡು ಆಹಾರ ವಗೈರೆ ಸಾಮಾನುಗಳಿಗಾಗಿ ಸಾಕಾದಷ್ಟು ಹಣವನ್ನು ಕೊಟ್ಟರು ಸದರಿ ಲೈನುಗಳು ಸುಟ್ಟು ಹೋದ್ದರಿಂದ ಪುನಃ ಪ್ಲಾಂ. ಮಲ್ಲೇಗೌಡರು ಬೇರೆ ಕಾಲಿ ಲೈನುಗಳನ್ನು ಕಟ್ಟಿಸಲು ಪ್ರಯತ್ನಿಸಿರುತ್ತಾರೆ.

...ಳು — ಆನೇಕಲ್ ತಾ ಸೇರಿ ಮೂರು ಮೈಲಿ ಫಾಸಲೆಯ ...ವ ತಿಂಗಸಂದ್ರ ಗ್ರಾಮದ ಪಟೇಲ್ ರಾಮಯ್ಯನ ಮಗ ೧೩ ... ಮುನಿಸ್ವಾಮಿ ಎಂಬುವನು ಅದೇ ವಯಸ್ಸಿನ ಇಬ್ಬರು ಹುಡು...ಗ ಗ್ರಾಮದ ಹೊರಗೆ ಆಟವಾಡುತ್ತಾ ಇರುವಲ್ಲಿ, ಒಂದು ... ಬಿದುವಿನೊಳಗೆ ಹಾವಿನ ಹುತ್ತದ ಒಳಗೆ ದೊಡ್ಡ ಜೇನುಸೋ...ಂದ ಆಚ್ಛಾದಿತವಾಗಿದ್ದದ್ದು ಈ ಬಾಲಕರುಗಳ ಕಣ್ಣಿಗೆ ಗೋಚ...ಲು, ಹ್ಯಾಗಾದರೂ ನೊಣಗಳನ್ನು ಓಡಿಸಿ, ಜೇನು ಕಿತ್ತು...ವನ್ನು ಸಂಗ್ರಹಿಸಬೇಕೆಂಬ ಕುತೂಹಲವು ಇವರುಗಳಿಗೆ ...ಗಿ, ಅದನ್ನು ಉಪಾಯಾಂತರಗಳಿಂದ ಸಂಗ್ರಹ ಮಾಡುವ ... ಹೊರಟ ಕುತೂಹಲದಿಂದ ಮುಂದಾಗುವ ದುಗುಡವಂ ಅರಿ...ಯದು ಅವಸರದಿಂ ಸ್ಪೈರ್ ಪಟಾಸಿನಿಂದ ಮೂರು ಗೋಲಿಗಳಂ ... ಮತ್ತು ಸ್ಪೈರಿ ಬಾಮರ್ ವಿಡ ಒಂದು ಪಿಸ್ತೂಲ್ ಹಿಡುಕೊಂಡು ಜಾಗ್ರತೆಯಿಂದ ಕಳೆದ ತಾ ೯ ನೆ ಬುಧವಾರ ಮಧ್ಯಾಹ್ನ ಸು ೨ ಘಂಟೆಯಲ್ಲಿ ಜೇನು ಇದ್ದ ಹುತ್ತದ ಬಳಿಗೆ ಮೂರು ಬಾಲಕರೂ ತೆರಳಿ ಕೈಲಿದ್ದ ಪಿಸ್ತೂಲು ನೆಲದ ಮೇಲೆ ಇಟ್ಟು ... ಪಟಾಸ ಉಂಡೆಗಳು ೩ ನ್ನೂ ಕಲ್ಲಿಂದ ಮುನಿಸ್ವಾಮಿ ತನ್ನ ಎಡದಕೈ...ಯದು, ಹುತ್ತದ ಸಂದಿನಲ್ಲಿ ಇಣಿಕಿ ನೋಡುತ್ತಲಿರುವ ಗಾಬರಿ... ಬಾಮರ್ ಡಿ ಕೆಳಗೆ ಇಟ್ಟಿದ್ದ ಪಿಸ್ತೂಲು ಇವರುಗಳ ಕೈ...ಗೆ ಸೋಕಿ ಹಾರಿ ಕೈಲಿ ಹಿಡಿದು ಇದ್ದ ಸ್ಪೈರ್ ಪಟಾಸಿನ ಉಂಡೆ ...ತ್ತಿ ಸಿಡಿ... ಎಡದ ಕೈ ಹಸ್ತವು ...ವಾಗಿಯೂ ಬಲದ ಕೈನಲ್ಲಿ ... ತರ್ಜನಿ ಬೆರಳುಗಳೆ ... ಹಾರಿಸಿಕೊಂಡು ... ಕೂಡಲೇ ಹುಡುಗನು ... ನೆಲದ ಮೇಲೆ ಬಿದ್ದನು ಸಂಗಡ ಇದ್ದ ಇಬ್ಬರು ಹುಡು... ಕಾಲಿಗೆ ಬುದ್ಧಿ ಹೇಳಿ ಗ್ರಾಮ ಸೇರಿ ... ಕಡೆ ...ಸುತ್ತಿದ್ದರು ಇದು ಮುನಿಸ್ವಾಮಿಯ ತಂದೆ ರಾಮಯ್ಯನಿಗೆ ... ತನ್ನ ಬಾಲಕನು ಬಿದ್ದು ಇದ್ದ ಸ್ಥಳಕ್ಕೆ ಬೀದಿಯಿಂದ ಓಡಿ ...ಗಿ, ಪ್ರಜ್ಞೆಯಿಲ್ಲದೆ ಮಲಗಿಕೊಂಡಿದ್ದ ... ನಿಗೆ ಶೈತ್ಯೋಪ...ಚಾರ ಮಾಡಿ ಎಬ್ಬಿಸಿ, ... ರಾಯಂ... ಗಂಟೆಗೆ ಆನೇಕಲ್ ಆಸ್ಪತ್ರೆಗೆ ಕರೆದುಕೊಂಡು ಹೋಗಿ ...ದಲ್ಲಿ ಡಾಕ್ಟರು ... ಸವಿಸ್ತರಿಸಲಿಲ್ಲವೆಂದು ಹೇಳಿ ... ಅದೇ ರಾತ್ರಿ ಟಪಾಲ್ ಗಾಡಿಯಲ್ಲಿ ಹುಡುಗನನ್ನು ಸಾಗಿಸಿ ...ತಾ ೧೦ ನೇ ಗುರುವಾರ ಬೆಳಗ್ಗೆ ೮ ಗಂಟೆಗೆ ಬೆಂಗಳೂರು ... ಆಸ್ಪತ್ರೆಗೆ ಕರೆದುಕೊಂಡು ... ತೋರಿಸಲಾಗಿ ...ಕೈಗಳಲ್ಲಿಯೂ ... ಪ್ರಾಣದ ಭಯವಿಲ್ಲ ಹುಡುಗನು ಆಸ್ಪತ್ರೆಯಲ್ಲಿ ಇರು... ಟಂಟದಲ್ಲಿ ತುಂಬಾ ಚಟುವಟಿಕೆಯಾಗಿ ಮುಂದೆ ಅಭಿ...ರುತಲಿದ್ದ ಹುಡುಗನಿಗೆ ಎಡದ ಕೈ ಹಸ್ತವೂ, ಬಲದ ಕೈ ಬೆರಳುಗಳೂ ನಾಶವಾದವು

ವಿದೇಶ ವರ್ತಮಾನಗಳು

ಅಮೇರಿಕದಲ್ಲಿ ಮಿ॥ ರಾಕ್‌ಫೆಲರ್ ಎಂಬೊಬ್ಬ ಕೋಟ್ಯಾಧೀಶ... ದೇಶದಲ್ಲಿ ... ಹೆಣ್ಣುಮಕ್ಕಳ ವಿದ್ಯಾಭ್ಯಾಸಕ್ಕಾಗಿ ... ಸಂಘದವರಿಗೆ ... ರೂಪಾಯಿ ದಾನ ಮಾಡಿದ್ದಾನೆ

❖❖❖❖

ವಿಲಾಯತಿಗೆ ಸೇರಿದ ... ಪಟ್ಟಣದಲ್ಲಿ ... ನಾಸ್ಟರ್ ಎಂಬಾತನು ತನ್ನ ಆಸ್ತಿಯಲ್ಲಿ ಸ ಮಾರು ... ಹಣವನ್ನು ಧರ್ಮಕಾರ್ಯಗಳಿಗೆ ವಿನಿಯೋಗಿಸಬೇಕೆಂದು ...ಶಾಸನ ಬರೆದಿಟ್ಟಿರುತ್ತಾನೆ

❖❖❖❖

ವಿಲಾಯತಿಯಲ್ಲಿ ಕಾಲವಾದ ಮಿ॥ ... ಎಂಬಾತನು ... ಲಕ್ಷ ರೂಪಾಯನ್ನೂ ಮಿ॥ ... ಎಂಬಾತನು ... ಲಕ್ಷ ರೂಪಾಯನ್ನೂ ತಮ್ಮ ಆಸ್ತಿಯಿಂದ ಧರ್ಮ...ಗಳಿಗೆ ಖರ್ಚು ಮಾಡಬೇಕೆಂದು ಮರಣ ಶಾಸನಗಳನ್ನು ಬರೆದಿ...ರೆ

❖❖❖❖

...ರಿ ಇರ್ವಿಂಗ್ ಎಂಬ ಪ್ರಖ್ಯಾತನಾದ ನಾಟಕಶಾಲಾ ಪುರುಷನ...ನ್ನು ಲಂಡನ್ ಪಟ್ಟಣದಲ್ಲಿ ಶಾಶ್ವತಪಡಿಸಬೇಕೆಂತಲೂ, ಇದಕ್ಕೆ ...ಗಳ ಜನಗಳೇ ಚಂದಾ ಕೊಡಬೇಕೆಂತಲೂ ಗೊತ್ತುಮಾಡಿ ಆತನ ಪ್ರತಿಮೆಯನ್ನು ಮಾಡಿಸಿ ಲಂಡನ್ ಪಟ್ಟಣದಲ್ಲಿ ನಿಲ್ಲಿಸು... ೪೫,೦೦೦ ರೂಪಾಯಿ ವಸೂಲಾಗಿರುವುದು

❖❖❖❖

ಆಸ್ಟ್ರೇಲಿಯಾ ದ್ವೀಪಕ್ಕೆ ಸೇರಿದ ತರಗ್ವೆಲಾ ಎಂಬ ಊರಿನ ... ಬಂಗಾರದ ಗಟ್ಟಿಗಳೇ ಭೂಮಿಯಲ್ಲಿ ಸಿಕ್ಕುತ್ತವೆ ಎಂದು ...ದ್ದಾರೆ. ಒಂದು ವಾರದ ಒಳಗೆ ನೂರಾರು ಗಟ್ಟಿಗಳನ್ನು ಅಗೆದು ... ಈ ಪೈಕಿ ಕೆಲವು ಬಂಗಾರದ ಗಟ್ಟಿಗಳು ೩೦೦ ರಿಂದ ೧,೦೦೦ ... (೫೦ ರೂ ತೂಕಕ್ಕೆ ಒಂದು ...) ತೂಕದಷ್ಟು ...ಗಿದ್ದವು

❖❖❖❖

ದಕ್ಷಿಣ ಆಫ್ರಿಕಾ ಯುದ್ಧದ ಖರ್ಚಿಗಾಗಿ ಟ್ರಾನ್ಸ್‌ವಾಲ್ ಅಧಿಪತ್ಯ... ಇಂಗ್ಲಿಷ್ ಗವರ್ನಮೆಂಟಿನವರು ಏಳೂವರೆ ಕೋಟಿ ರೂಪಾಯಿ...ದವನ್ನು ಪಡೆಯಬೇಕೆಂದು ಕರಾರುಮಾಡಿ ಗೊತ್ತುಮಾಡಿದ ... ಈ ಹಣವನ್ನೆಲ್ಲಾ ಮಾಫ ಬಿಟ್ಟಿರುವುದಾಗಿ ತಿಳಿದುಬಂದಿದೆ ... ಟ್ರಾನ್ಸ್‌ವಾಲಿನವರು ಕೇವಲ ಇಂಗ್ಲಿಷ್ ಪ್ರಭುಗಳನ್ನು ಬಹಳ ಕೊಂಡಾಡುತ್ತಿದ್ದಾರೆ

❖❖❖❖

ಉತ್ತರ ಅಮೇರಿಕದಲ್ಲಿರುವ ಕೆನಡಾ ಎಂಬ ಇಂಗ್ಲಿಷ್ ಸ್ವಾಸ್ಥ್ಯದ ... ಅರ್ಲಿನ್ ಎಂಬ ಮುದುಕಿಯು ತನ್ನ ೧೦೦ ನೆ ... ವರ್ಷಂತಿಯನ್ನು ಮಾಡಿಕೊಂಡಳು ಅಲ್ಲಿನ ವರ್ತಮಾನಪತ್ರಿಕೆ...ಕೆಯ ಜೀವಚರಿತ್ರೆಯನ್ನು ಬಹು ಸಂತೋಷದಿಂದ ಪ್ರಕಟಿಸಿರು...ತ್ತಾವೆ ಆಕೆಯ ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳು, ಮರಿಮರಿಮಕ್ಕಳು, ರಕ್ತಸಂಬಂಧಿಗಳೇ ಮೊದಲಾದವರು ಆ ದಿನ ಒಂದು ಕಡೆ ಸೇರಿ ಭಗವತ್ಪ್ರಾರ್ಥನೆ ಔತನಾದಿ ಉತ್ಸವಗಳನ್ನು ಆಚರಿಸಿದರು

❖❖❖❖

ಪಶ್ಚಿಮ ಇಂಡಿಯಾ ದ್ವೀಪಗಳಿಗೆ ಸೇರಿದ ಡಾಮಿನಿಕಾ ಎಂಬ ಇಂಗ್ಲಿಷ್ ಸ್ವಾಸ್ಥ್ಯದಲ್ಲಿ ಬೆಳೆಯುವ ಬಹು ಶ್ರೇಷ್ಠತರವೂ ಅಪೂರ್ವವೂ ಆದ ಹಲವು ಫಲಾದಿಗಳನ್ನು ೬೭ ಪೆಟ್ಟಿಗೆಗಳಲ್ಲಿ ಭರ್ತಿಮಾಡಿ, ಲಂಡನ್ ಪಟ್ಟಣಕ್ಕೆ ಕಳುಹಿಸಿ ಮಹಾರಾಜಾ ಚಕ್ರವರ್ತಿ ಸಾರ್ವಭೌಮರವರಿಗೆ ಒಪ್ಪಿಸಿದರು ಚಕ್ರವರ್ತಿಯವರು ಅವನ್ನು ಬಹು ಸಂತೋಷದಿಂದ ಸ್ವೀಕರಿಸಿ, ಆ ಹಣ್ಣು ಹಂಪಲುಗಳನ್ನೆಲ್ಲಾ ಅಲ್ಲಿನ ಆಸ್ಪತ್ರೆಗಳಲ್ಲಿರುವ ರೋಗಿಗಳಿಗೆ ಹಂಚಿಕೊಡಬೇಕೆಂದು ಆಜ್ಞೆಮಾಡಿ ಕಳುಹಿಸಿಕೊಟ್ಟಿರುತ್ತಾರೆ

❖❖❖❖

ವಿಲಾಯತಿಗೆ ಸೇರಿದ ನಾರ್ಫಕ್ ಎಂಬ ಊರಿನಲ್ಲಿ ಜಾರ್ಜ್ ಗಾರ್ಡನರ್ ಎಂಬಾತನೂ ಆತನ ಹೆಂಡತಿಯೂ ತಮ್ಮ ೮೬ ನೇ ಹುಟ್ಟಿದ ಹಬ್ಬವನ್ನು ಮಾಡಿಕೊಂಡರು ಗಂಡಹೆಂಡರ ವಯಸ್ಸು ಒಂದೇ. ಇವರಿಗೆ ೭ ಮಕ್ಕಳಿದ್ದಾರೆ ೫೩ ಮೊಮ್ಮಕ್ಕಳಿದ್ದಾರೆ, ೧೬ ಮಂದಿ ಮರಿಮಕ್ಕಳೂ ಇದ್ದಾರೆ ಈ ಭಾರೀ ಸಂಸಾರದ ಯಜಮಾನನೂ ಯಜಮಾನಗಿತ್ತಿಯೂ ಮಾಡಿಕೊಂಡ ವರ್ಧಂತಿ ಉತ್ಸವಕ್ಕೆ ಚಕ್ರವರ್ತಿಯವರು ೩೦ ರೂಪಾಯಿ ಬಹುಮಾನ ಕಳುಹಿಸಿದರು ಇವರು ದಂಪತಿಗಳಾಗಿ ಇಲ್ಲಿಗೆ ೬೦ ವರುಷ ತುಂಬಿತು

❖❖❖❖

ಆಸ್ಟ್ರಿಯಾ ಹಂಗೇರೀ ರಾಜ್ಯದಲ್ಲಿ ೨೪ ವರುಷಕ್ಕೆ ಮೇಲ್ಪಟ್ಟ ಪ್ರತಿ ಒಬ್ಬ ಪ್ರಜೆಯೂ ಅಲ್ಲಿನ ಪಾರ್ಲಿಮೆಂಟಿಗೆ ಮೆಂಬರನ್ನು ಚುನಾಯಿಸುವದಕ್ಕೆ ಸಮ್ಮತಿ (ಓಟ್) ಕೊಡಬಹುದೆಂದು ಚಕ್ರವರ್ತಿಯವರು ಅಧಿಕಾರ ವಹಿಸಿರುತ್ತಾರೆ ಈ ವರುಷದಿಂದ ಈ ಹೊಸ ಮರ್ಯಾದೆ ಬರುವುದು ಸರ್ಕಾರದ ದೃಷ್ಟಿಯಲ್ಲಿ ಬಡವ, ಭಾಗ್ಯವಂತ, ಅಧಿಕಾರಸ್ಥ, ಕಂದಾಯ ಕೊಡತಕ್ಕವನು ಎಂಬೀ ರೀತಿಯಾದ ವ್ಯತ್ಯಾಸವೇನೂ ಇಡದೆ ಸಕಲವಾಗ ಪ್ರಜೆಗಳನ್ನೂ ಏಕ ಪ್ರಕಾರವಾಗಿ ಕಾಣಬೇಕೆಂಬುವುದು ಚಕ್ರವರ್ತಿಯವರ ಅಭಿಮತವಾಗಿರುತ್ತದೆ

❖❖❖❖

ಫ್ರಾನ್ಸ್ ಎಂಬ ಪ್ರಭುತ್ವದಲ್ಲಿ ಗವರ್ನಮೆಂಟಿನವರು ಅನೇಕಾನೇಕ ದೊಡ್ಡ ಮನುಷ್ಯರಿಗೆ ನಾನಾ ತರವಾದ ಬಿರುದುಗಳನ್ನು ಕೊಡುತ್ತಾರೆ ಈ ಬಿರುದುಗಳಿಂದಲೂ ಸರ್ಕಾರಕ್ಕೆ ಉತ್ಪತ್ತಿ ಮಾಡಿಕೊಳ್ಳಬೇಕೆಂದು ಈಗ ಒಂದು ಹೊಸ ಕಾನೂನ್ ಮಾಡಿ, ಹಿಂದೆ ಸಿದ್ಧ ಬಿರುದು ಮಗನಿಗೆ ಕೊಡಬೇಕಾದರೂ, ಹೊಸದಾಗಿ ಬಿರುದು ಕೊಡಬೇಕಾದರೂ ಇಂಥಿಂಥಾ ಬಿರುದಿಗೆ ಇಷ್ಟಿಷ್ಟು ಕಂದಾಯ ಕೊಡಬೇಕೆಂದು ನಿರ್ಣಯ ಮಾಡಿರುವರು ಈ ಬಿರುದುಗಳ ಕಂದಾಯದಿಂದ ಸರ್ಕಾರಕ್ಕೆ ಪ್ರತಿ ವರುಷವೂ ಐದು ಲಕ್ಷ ರೂಪಾಯಿ ಉತ್ಪತ್ತಿಯಾಗುವುದೆಂದು ತಿಳಿದು ಬಂದಿದೆ

❖❖❖❖

ಜರ್ಮನಿಯವರಿಗೂ ಇಂಗ್ಲಿಷರಿಗೂ ಪೂರ್ವ ಆಫ್ರಿಕದಲ್ಲಿ ಸೇರಿರುವ ಪ್ರದೇಶಗಳೊಳಗೆ ನಿದ್ರಾರೋಗವೆಂಬ ಮಹಾ ರೋಗವು ಹುಟ್ಟಿಕೊಳ್ಳುತ್ತಿದೆಯಷ್ಟೆ ಇದನ್ನು ಪರೀಕ್ಷಿಸಿದ ಕಾಚ್ ಎಂಬೊಬ್ಬ ವೈದ್ಯಶಾಸ್ತ್ರ ಪಂಡಿತನು ಒಂದು ಔಷಧವನ್ನು ಕಂಡುಹಿಡಿದಿರುವುದಾಗಿಯೂ ಅದರಿಂದ ಕೆಲವು ರೋಗಿಗಳು ಗುಣಪಟ್ಟಿರುವುದಾಗಿಯೂ ತಿಳಿದು ಬಂದಿದೆ ಈ ರೋಗವು ಹಿಂದುಸ್ಥಾನಕ್ಕೂ ವ್ಯಾಪಿಸಿಕೊಳ್ಳಬಹುದೆಂದು ಕೆಲವು ವೈದ್ಯರು ಸೂಚಿಸಿ, ಆ ಪ್ರಾಂತ್ಯದಿಂದ ಬಂದು ಬೊಂಬಾಯಿನಲ್ಲಿ ಇಳಿಯುವ ಜನರ ಶರೀರಸ್ಥಿತಿಯನ್ನು ಚೆನ್ನಾಗಿ ಪರೀಕ್ಷೆಮಾಡುತ್ತಾ ಬರುವುದು ಅವಶ್ಯವೆಂದು ಗವರ್ನಮೆಂಟಿನವರಿಗೆ ತಿಳಿಸಿರುತ್ತಾರೆ.

❖❖❖❖

ಲಂಡನ್ ಪಟ್ಟಣದಲ್ಲಿ ವೈಯರ್ಸ್ ಎಂಬೊಬ್ಬ ಹೆಂಗಸು ಒಂದು ಮನೆ ಮಾಡಿಕೊಂಡು ಪರರ ಮಕ್ಕಳನ್ನು ಸಾಕುತ್ತೇನೆಂದು ಪ್ರಕಟಿಸಿದಳು ಹಲವರು ತಮ್ಮ ಮಕ್ಕಳನ್ನು ಈ ಹೆಂಗಸಿನ ವಶಕ್ಕೆ ಕೊಟ್ಟು, ಸಾಕುವದಕ್ಕೆ ತಿಂಗಳು ತಿಂಗಳಿಗೆ ಹಣ ಕೊಡುತ್ತಾ ಬಂದರು ಇವಳು ಆ ಮಕ್ಕಳನ್ನು ಆಗಿಂದಾಗ್ಗೆ ಕೊಂದು ಹಾಕುತ್ತಾ, ಹಣವನ್ನು ಕೂಡಿ ಹಾಕುತ್ತಾ, ಕಾಯಿಲೆಯಾಗಿ ಸತ್ತು ಹೋದರೆಂದು ಹೇಳುತ್ತಾ, ಕೆಲವು ಸಂದರ್ಭಗಳಲ್ಲಿ ಸತ್ತ ಸುದ್ದಿಯನ್ನು ಹೆತ್ತವರಿಗೆ ತಿಳಿಸದೆ ಸಂಬಳವನ್ನು ತೆಗೆದುಕೊಳ್ಳುತ್ತಾ ಇದ್ದಳು ಎರಡು ವಾರಗಳ ಕೆಳಗೆ ಇವಳ ಸ್ವಂತ ಮಕ್ಕಳಿಂದಲೇ ಆ ಕ್ರೂರ ಕೃತ್ಯಗಳೆಲ್ಲಾ ಬಯಲಿಗೆ ಬಂದು, ಸರ್ಕಾರದವರು ಅವಳನ್ನು ಹಿಡಿದಾಕೆಂಡಿರುತ್ತಾರೆ

❖❖❖❖

ರಷ್ಯಾ ರಾಜ್ಯದಲ್ಲಿ ಪ್ರಜಾ ನೆಮ್ಮದಿಯು ಇನ್ನೂ ತೃಪ್ತಿಕರವಾಗಿಲ್ಲ ಪ್ರಜೆಗಳ ಫಿತೂರಿಗಳೂ ಸರ್ಕಾರದವರ ಕ್ರೂರಕೃತ್ಯಗಳೂ ನಡೆಯುತ್ತಲೇ ಇರುವುವು 'ರಾಜಧಾನಿಯಲ್ಲಿ ಎರಡು ವರ್ತಮಾನ ಪತ್ರಿಗಳ ಎಡಿಟರುಗಳನ್ನೂ ದೊಡ್ಡ ವಿಶ್ವಶಾಲೆಯ ಉಪಾಧ್ಯಾಯರನ್ನೂ ಸರ್ಕಾರದವರು ಹಿಡಿದು ಅನಂತಾಂತವಾದ ಸಜಾ ವಿಧಿಸಿದರು ಒಂದು ಪಾಠಶಾಲೆಯಲ್ಲಿ ೬೦—೭೦ ಜನ ಗಂಡು ಹೆಣ್ಣು ಮಕ್ಕಳು ಸೇರಿ ಉಪನ್ಯಾಸ ಕೇಳುತ್ತಿದ್ದಾಗ ಪೋಲೀಸಿನವರು ಅವರನ್ನೆಲ್ಲಾ ರಾಜದ್ರೋಹಿಗಳೆಂದು ಹಿಡಿದು ಸೆರೆಮನೆಗೆ ಕೂಡಿದರು ಹಲವು ವರ್ತಮಾನ ಪತ್ರಿಕೆಗಳನ್ನು ಸರ್ಕಾರದವರು ನಿರ್ಬಂಧಪಡಿಸಿ ನಿಲ್ಲಿಸಿಬಿಟ್ಟಿರುವಕಾರಣ ಅಲ್ಲಲ್ಲಿ ನಡೆಯುವ ಸಮಾಚಾರಗಳೇನೂ ತಿಳಿಯದಂತಾಗಿದೆ

❖❖❖❖

ದಕ್ಷಿಣ ಅಮೇರಿಕಕ್ಕೆ ಸೇರಿದ ಉರುಗ್ವೆ ಎಂಬ ಪ್ರಜಾ ಪ್ರಭುತ್ವದಲ್ಲಿ ಸರ್ಕಾರದವರು ಕೂಲೀ ಜನರ ಪಕ್ಷವನ್ನು ವಹಿಸಿ ಒಂದು ಹೊಸ ಕಾನೂನ್ ಮಾಡಿ ಈಗ ತಾನೇ ಜಾರಿಗೆ ತಂದುಕೊಂಡಿದ್ದಾರೆ ಈ ಕಾನೂನಿನ ಮುಖ್ಯ ವಿಚಾರವೇನೆಂದರೆ—ಯಾವ ಕಾರ್ಖಾನೆಯವರೂ ಕೂಲಿಯವರಿಂದ ದಿನಕ್ಕೆ ಎಂಟು ಗಂಟೆ ಹೊತ್ತಿಗಿಂತ ಹೆಚ್ಚಾಗಿ ದುಡಿಸಿಕೊಳ್ಳಕೂಡದು ಭಾನುವಾರಗಳಲ್ಲಿ ವಿಶ್ರಾಂತಿ ಕೊಡಬೇಕು. ಆ ದಿವಸ ಯಾರೂ ಕೂಲಿ ಮಾಡಿಸಕೂಡದು. ಹೆರಿಗೆಯಾದ ಹೆಂಗಸಿಗೆ ಒಂದು ತಿಂಗಳ ರಜಾ ಕೊಡಬೇಕು ಹದಿಮೂರು ವರುಷ ತುಂಬದೆ ಇರುವಂಥಾ ಗಂಡು ಹೆಣ್ಣು ಮಕ್ಕಳನ್ನ ಯಾರೂ ಯಾವ ತರದ ಕೆಲಸಕ್ಕೂ ನೇಮಕಮಾಡಿಕೊಳ್ಳಕೂಡದು. ಈ ಕಟ್ಟಳೆಗಳನ್ನು ಯಾರೇ ಆಗಲಿ ಮೀರಿದ ಪಕ್ಷಕ್ಕೆ ಹೆಚ್ಚಾದ ಜುಲ್ಮಾನೆ ತೆರಬೇಕಾಗುವುದು

❖❖❖❖

ಆಫ್ರಿಕದಲ್ಲಿ ಜಾಂಬೆಸಿ ಎಂಬ ನದಿಯ ದಡದ ಮೇಲೆ ವಿಕ್ಟೋರಿಯಾ ಎಂಬ ಸ್ಥಳದಲ್ಲಿ ನೀರು ಬಹಳ ಎತ್ತರದಿಂದ ಕೆಳಗೆ ಬಿದ್ದು ಹರಿಯುತ್ತದೆ ಅಲ್ಲಿ ಯಂತ್ರಗಳನ್ನಿಟ್ಟು ವಿದ್ಯುಚ್ಛಕ್ತಿಯನ್ನು ಉತ್ಪತ್ತಿಮಾಡಿ ಅಲ್ಲಿಂದ ದಕ್ಷಿಣ ಆಫ್ರಿಕಕ್ಕೆ ತಂತಿಗಳ ಮೂಲಕ ಸಾಗಿಸಿ ಗಣಿಗಳಲ್ಲಿ ಯಂತ್ರಗಳಿಗೆ ಬಿಟ್ಟು ಕೆಲಸಮಾಡಿಸಿ ಲಾಭ ಸಂಪಾದಿಸಿಕೊಳ್ಳಬೇಕೆಂದು ಗೊತ್ತುಮಾಡಿ, ವಿಲಾಯತಿಯಲ್ಲಿ ಅದಕ್ಕಾಗಿ ನಾಲ್ಕುವರೆ ಕೋಟಿ ರೂಪಾಯಿ ಮೂಲಧನವುಳ್ಳ ಒಂದು ಕಂಪನಿಯನ್ನು ಏರ್ಪಾಡು ಮಾಡಿದ್ದಾರೆ. ಟ್ರಾನ್ಸ್‌ವಾಲಿನ ಚಿನ್ನದ ಗಣಿಗಳೂ ವಿಕ್ಟೋರಿಯಾ ಜಲಪಾತವೂ ಲೋಕಪ್ರಖ್ಯಾತವಾದವುಗಳಾಗಿವೆ ಈ ಜಲಪಾತದಿಂದ ಆ ಚಿನ್ನದ ಗಣಿಗಳ ಉತ್ಪತ್ತಿಯನ್ನು ಅಪಾರವಾಗಿ ಹೆಚ್ಚಿಸಿಕೊಳ್ಳುವುದಕ್ಕೆ ಈಗ ಮಾಡಿರುವ ಮೇಲ್ಕಂಡ ಏರ್ಪಾಡು ಪರಮಾಶ್ಚರ್ಯಕರವಾಗಿರುತ್ತದೆ

❖❖❖❖

ವಿಲಾಯತಿಯಿಂದ ಫ್ರಾನ್ಸಿಗೆ ಈಗ ಹಡಗಿನಲ್ಲಿ ಬರಬೇಕಾಗಿದೆ ಇಂಗ್ಲೀಷ್ ಛಾನಲ್ ಎಂಬ ಕಾಲುವೆ ಅಡ್ಡಲಾಗಿರುವದು ಈಗ ಅಲ್ಲಿಂದಲ್ಲಿಗೆ ಸಮುದ್ರದ ಕೆಳಗಡೆ ಉದ್ದಕ್ಕೂ ೩೦ ಮೈಲಿ ದೂರ ಎರಡು ಸುರಂಗಗಳನ್ನು ಕೊರೆದು ಈ ಸುರಂಗಗಳ ಮಾರ್ಗವಾಗಿ ರೈಲನ್ನು ಬಿಡಬೇಕೆಂದು ಗೊತ್ತುಮಾಡಿದ್ದಾರೆ ಇದಕ್ಕೆಲ್ಲಾ ಒಟ್ಟು ಇಪ್ಪತ್ತನಾಲ್ಕು ಕೋಟಿ ದ್ರವ್ಯ ಖರ್ಚಾಗುವುದೆಂದು ಅಂದಾಜಾಗಿದೆ ಈ ಪೈಕಿ ಅರ್ಧ ಮೊಬಲಗನ್ನು ವಿಲಾಯತಿಯವರೂ ಅರ್ಧವನ್ನು ಫ್ರಾನ್ಸಿನವರೂ ಕಂಪನಿಯ ಷೇರುಗಳ ಮೂಲಕ ಕೂಡಿಸಿ ಹಾಕಿ ಕಾಮಗಾರಿ ಮಾಡಿಸಬೇಕೆಂದು ಸನ್ನಾಹವಾಗುತ್ತಿರುವದು ವಿಲಾಯತಿಯ ಮತ್ತು ಫ್ರಾನ್ಸಿನ ಗವರ್ನಮೆಂಟುಗಳವರು ಈ ಸುರಂಗದ ರೈಲ್ವೆ ನಡವಳಿಕೆ ಮತ್ತು ಮೇಲ್ವಿಚಾರಣೆಗಳ ವಿಷಯದಲ್ಲಿ ಮೊದಲು ಒಂದು ಕರಾರುಮಾಡಿಕೊಂಡು, ತರುವಾಯ ಕಾಮಗಾರಿ ಪ್ರಾರಂಭಿಸುವಂತೆ ಅಪ್ಪಣೆಕೊಡಿಸಬೇಕೆಂದು ಕೆಲವು ಇಂಗ್ಲಿಷ್ ದೊಡ್ಡಮನುಷ್ಯರು ವಿಲಾಯತಿ ಪಾರ್ಲಿಮೆಂಟಿನಲ್ಲಿ ಸೂಚಿಸಿ ಚರ್ಚೆಮಾಡಿರುತ್ತಾರೆ

❖❖❖❖

ಹಿಂದಿನ ವಾರ ಅಮೇರಿಕದಿಂದ ಕೆಲವು ವಿಶೇಷ ವರ್ತಮಾನಗಳು ಬಂದಿರುತ್ತವೆ ಲಾರ್ಡ್ ಕರ್ಜನ್‌ರವರ ಅತ್ತೆಯೂ ಭಾವನೂ ಪಾಷಿಂಗ್ಟನ್ ಪಟ್ಟಣದಲ್ಲಿ ಮೋಟಾರ್ ಎಂಬ ಗಾಡಿಯೊಳಗೆ ಬಹು ರಭಸವಾಗಿ ಸಂಚಾರ ಮಾಡುತ್ತಿದ್ದರು ಈ ಗಾಡಿಗೆ ಒಬ್ಬ ಹುಡುಗನು ಸಿಕ್ಕಿ ಸತ್ತುಹೋದನು ಕೂಡಲೇ ಪೋಲೀಸಿನವರು ಅವರನ್ನೆಲ್ಲಾ ಹಿಡಿದು ಸೆರೆಮನೆಯಲ್ಲಿ ಹಾಕಿದರು ಈಚೆಗೆ ತಾಯಿ ಮಗ ಇಬ್ಬರನ್ನು ಮಾತ್ರ ಜಾಮೀನ್ ಮೇಲೆ ಖುಲಾಸ್ ಮಾಡಿದ್ದಾರೆ — ಮಿಸಿಸಿಪಿ ಡಿಸ್ಟ್ರಿಕ್ಟಿನಲ್ಲಿ ರೈಲಿನಲ್ಲಿ ಪ್ರಯಾಣ ಮಾಡುತ್ತಿದ್ದ ನೀಗ್ರೋ ಎಂಬ ಕಪ್ಪು ಜನರೊಳಗೆ ರೈಲ್ ಗಾಡಿಯಲ್ಲೇ ಕಲಹವೂ ಕಾದಾಟವೂ ಆಗಿ ೩೦ ಜನರು ಮೃತಪಟ್ಟರು ಉತ್ತರ ಡಕೋಟಾದಲ್ಲಿ ಎರಡು ರೈಲ್ ಗಾಡಿಗಳು ಎದುರುಬದುರಾಗಿ ಬಂದು ಢಿಕ್ಕಾ ಹೊಡೆದು ಅನಾಹುತವಾದದ್ದರಲ್ಲಿ ಲಾರ್ಡ್ ಬೆರೆಸ್‌ಫರ್ಡ್ ಎಂಬೊಬ್ಬ ದೊಡ್ಡ ಮನುಷ್ಯನೂ ೧೦ ಮಂದಿ ಪ್ರಯಾಣಿಕರೂ ಹತರಾದರು — ಅಮೇರಿಕದ ಪ್ರೆಸಿಡೆಂಟ್ ರೂಸ್‌ವೆಲ್ಟ್‌ರವರು ಚೀನಾ ರಾಜ್ಯದಲ್ಲಿ ಪ್ರಾಪ್ತವಾಗಿರುವ ಕ್ಷಾಮವನ್ನು ನಿವಾರಣೆ ಮಾಡುವುದಕ್ಕೆ ದವಸ ಧಾನ್ಯಾದಿಗಳನ್ನು ಕೂಡಿಸಿ ಅಮೇರಿಕದಿಂದ ಸರ್ಕಾರಿ ಹಡಗುಗಳ ಮೇಲೆ ರುಸುಂ ತೆಗೆದುಕೊಳ್ಳದೇನೇ ಕಳುಹಿಸಿಕೊಡಬೇಕೆಂದು ಹುಕುಂ ಕೊಟ್ಟಿದ್ದಾರೆ

❖❖❖❖

ಅಮೇರಿಕದ ಕೆಲವು ಪ್ರದೇಶಗಳಲ್ಲಿ ಕಾರ್ಖಾನೆಗಳನ್ನಿಟ್ಟು ನಡೆಸುವ ವರ್ತಕರು ಗವರ್ನಮೆಂಟ್ ಜೈಲ್‌ಖಾನೆಗಳ ಅಧಿಕಾರಿಗಳಿಗೆ ಅರ್ಜಿ ಬರೆದು ಅವರು ಕೇಳುವ ರಿವಾಜಿನಂತೆ ಹಣಕಟ್ಟಿ, ಬಂದೀವಾನರನ್ನು ಕರೆಸಿಕೊಳ್ಳುವುದೂ ಇವರಿಂದ ತಮ್ಮ ಕಾರ್ಖಾನೆಗಳಲ್ಲಿ ಕೆಲಸ ಮಾಡಿಸಿಕೊಳ್ಳುವುದೂ ರೂಢಿಯಲ್ಲಿದೆ ಆದರೆ ಸರ್ಕಾರದವರು ಬಂದೀವಾನರನ್ನು ಹೀಗೆ ಸಾಹುಕಾರರ ತೈನಾತಿಗೆ ಕೊಡುವುದು ಕ್ಷೇಮಕರವಲ್ಲವೆಂತಲೂ, ಅವರು ಬಂದೀವಾನರಿಂದ ಬಹು ಕಠಿಣವಾದ ಕೆಲಸಗಳನ್ನು ಮಾಡಿಸಿಕೊಳ್ಳುವುದಕ್ಕೂ ಬಂದೀವಾನರು ಹಿಡಿದು ಕೆಟ್ಟುಹೋಗುವುದಕ್ಕೂ ಅವಕಾಶವಾಗುವುದೆಂತಲೂ, ಈ ಪದ್ಧತಿಯನ್ನೇ ನಿಲ್ಲಿಸಿಬಿಡುವುದು ಉತ್ತಮವೆಂತಲೂ ಅನೇಕಾನೇಕರು ಆಕ್ಷೇಪಣೆ ಮಾಡುತ್ತಿರುವುದರಿಂದ ಅಮೇರಿಕದಲ್ಲಿ ಆ ಪದ್ಧತಿಯು ದಿನಕ್ರಮೇಣ ಕಡಿಮೆಯಾಗುತ್ತಾ ಬಂದಿದೆ ಈಚೆಗೆ ಈ ಪದ್ಧತಿಯನ್ನು ದಕ್ಷಿಣ ಆಫ್ರಿಕಾದಲ್ಲಿ ಪ್ರಾರಂಭಿಸಬೇಕೆಂದು ಅಲ್ಲಿನ ಕೆಲವು ಗಣಿಗಳ ಕಂಪನಿಯವರು ಕೇಳುತ್ತಿದ್ದಾರೆ ನಟಾಲ್ ಎಂಬ ಇಂಗ್ಲಿಷ್ ಸ್ವಾಸ್ಥ್ಯದಲ್ಲಿ ಅನೇಕ ಜೂಲೂ ದಂಗೇಕೋರರನ್ನು ಗವರ್ನಮೆಂಟಿನವರು ಹಿಡಿದು ಸೆರೆಮನೆಯಲ್ಲಿ ಹಾಕಿಕೊಂಡಿದ್ದಾರೆ ಪ್ರಿಮಿಯರ್ ಎಂಬ ಒಂದು ಭಾರೀ ವಜ್ರದ ಗಣಿ ಕಂಪನಿಯವರು ಈ ಜೂಲೂ ಖೈದಿಗಳನ್ನು ಕರೆಸಿಕೊಂಡು ವಜ್ರ ತೆಗೆಯುವ ಗಣಿ ಕೆಲಸಗಳನ್ನು ಮಾಡಿಸಿಕೊಳ್ಳಬೇಕೆಂತಲೂ ಅದಕ್ಕಾಗಿ ಗವರ್ನಮೆಂಟಿಗೆ ಕೂಲಿ ಹಣವನ್ನು ಅಡ್ವಾನ್ಸು ಕೊಡುವುದಾಗಿಯೂ ಕೇಳಿರುತ್ತಾರೆ ಗವರ್ನಮೆಂಟಿನವರು ತಮ್ಮ ಜೈಲ್‌ಖಾನೆಗಳಲ್ಲಿರುವ ಬಂದೀವಾನರನ್ನು ಕೂಲಿಯ ಆಸೆಗೆ ಗಣಿಯ ಜವಾನರ ವಶಕ್ಕೆ ಒಪ್ಪಿಸಿಬಿಡುವುದು ಎಷ್ಟುಮಾತ್ರಕ್ಕೂ ಯೋಗ್ಯವಾದದ್ದಲ್ಲ ಹಾಗೆ ಮಾಡಿದರೆ ಗಣಿಯವರು ಆ ಬಂದೀವಾನರಿಂದ ನಿರ್ದಾಕ್ಷಿಣ್ಯವಾಗಿ ದಂಡಿ ಕಷ್ಟಪಡಿಸುವುದಕ್ಕೆ ಆಸ್ಪದವಾಗುವುದು ಮತ್ತು ಇದರಿಂದ ಪ್ರಜೆಗಳಿಗೆ ಸರ್ಕಾರದವರ ಮೇಲಿರಬೇಕಾದ ಭಕ್ತಿ ಪ್ರೀತಿಗಳು ತಪ್ಪಿಹೋದಾವು ಎಂಬುದಾಗಿ ಅಲ್ಲಿನ ಜನರು ಗವರ್ನಮೆಂಟಿಗೆ ಅರಿಕೆ ಮಾಡಿಕೊಂಡಿರುತ್ತಾರೆ

ಬಿಳಗಿ ರಾಜವೈದ್ಯರ ಬಳ್ಳ ಖಾತ್ರಿಯಾದ ಔಷಧಗಳು

6-8

ಸುಖದಾಯಿನೀ ಗುಳಿಗೆ —ಇದರಿಂದ ಕೆವ್ಮಿನ ಬಾಧೆ ಬಹು ಬೇಗನೆ ಗುಣಹೊಂದುವದು ೧೦ ವರುಷದ ಮೇಲಿನ ಯಾವ ಪ್ರಾಯದವರಾದರೂ ಸೇವಿಸಬಹುದು ಕ್ರಯ ೨೪ ಗುಳಿಗೆಗೆ ೧ ರೂಪಾಯಿ ವಿ ಪಿ ಚಾರ್ಜು ಆಣೆ ೪

ಚಿಕ್ಕಹುಡುಗರ ಬಾಲಗ್ರಹದ ಔಷಧ —ಜ್ವರಯುಕ್ತ ಅಥವಾ ಜ್ವರವಿಲ್ಲದೆ ಫಕ್ಕನೆ ಹುಟ್ಟುವ ಈ ಉಪಹತಿಗೆ ಇದರಿಂದ ಬೇಗನೆ ಗುಣವಾಟ್ಟುವದು ಕ್ರಯ ೧ ಕುಪ್ಪಿಗೆ ೪ ಆಣೆ ವಿ ಪಿ ೪ ಆಣೆ

ಗಜಕರ್ಣದ ಮುಲಾಮು — ಯಾ ೩ ಆವರ್ತಿ ಇದನ್ನು ಹಚ್ಚುವದರಿಂದ ಎಂಥ ಕಠಿಣವಾದ ಗಜಕರ್ಣ (ಹುಳಕಡ್ಡಿ) ಇದ್ದರೂ ಗುಣಹೊಂದುವದು. ಕ್ರಯ ೧ ಡಬ್ಬಿಗೆ ೪ ಆಣೆ. ವಿ. ಪಿ. ಚಾರ್ಜು ಆಣೆ ೪

ಶತಮೂಲಿಕಾ ತೈಲವು —ಹಕೀಬೊಕ್ಕೆ ಹಕೀಕಜ್ಜಿ ತುರಿಗಜ್ಜಿ ಪಣಗಜ್ಜಿ ಮುಂತಾದ ಆಬಾಲವೃದ್ಧರ ಚರ್ಮವ್ಯಾಧಿಯೂ ಗುಣಹೊಂದುವದು ಕ್ರಯ ೧ ಔನ್ಸಿನ ಕುಪ್ಪಿಗೆ ೧೦ ಆಣೆ, ೨ ಔನ್ಸಿನ ಕುಪ್ಪಿಗೆ ೧ ರೂಪಾಯಿ ವಿ ಪಿ ೫ ಆಣೆ

ವಾಯ ಪ್ರಹಾರಕ ತೈಲವು —ಇದನ್ನು ಲೇಪಿಸಿದ ೫ ನಿಮಿಷದೊಳಗೆ ಸಂಧಿ ವಾತ, ಕಟಿವಾತ ವ ಇತರ ವಾಯುಗಳ ನೋವು, ತಲೆನೋವು, ಚಿಕ್ಕಹುಡುಗರ ಉಬ್ಬಸ, ಕೆಮ್ಮು ಕೂಡ ಗುಣಹೊಂದುವದು ಕ್ರಯ ೧ ಕುಪ್ಪಿಗೆ ೧ ರೂಪಾಯಿ ವಿ ಪಿ ಚಾರ್ಜು ಆಣೆ ೪

ಜ್ವರಗಡ್ಡೆಗೆ ಸುಧಾಬಿಂದು —ಹೊಟ್ಟೆಯೊಳಗೆ ಸೇವಿಸಲಿಕ್ಕೆ ಕ್ರಯ ೧ ಕುಪ್ಪಿಗೆ ೧೨ ಆಣೆ ವಿ ಪಿ ಚಾರ್ಜು ಆಣೆ ೪.

ಜ್ವರಗಡ್ಡೆಗೆ ಮುಲಾಮು —ಬಾಹ್ಯಲೇಪನಕ್ಕೆ ಕ್ರಯ ಡಬ್ಬಿ ೧ಕ್ಕೆ ೧ ರೂಪಾಯಿ ವಿ ಪಿ ಚಾರ್ಜು ಆಣೆ ೪

೧ನೇ ನಂಬರ ಶೀತಜ್ವರ ರಿಪುಗಳಿಗೆ —ಆಬಾಲವೃದ್ಧರಿಗೆ ಹುಟ್ಟುವ ಪ್ರತಿನಿತ್ಯದ ಮತ್ತು ಷಿನೆ ವ ೪ನೆ ದಿವಸದ ಪಾಳಿಯಾಗಿ ಕೂಡ ಬರುವ ಶೀತಜ್ವರಕ್ಕೆ ಕ್ರಯ ೧ ಡಬ್ಬಿಗೆ ೧ ರೂಪಾಯಿ ವಿ ಪಿ ಚಾರ್ಜು ಆಣೆ ೪

೨ನೇ ನಂಬರದ ಶೀತಜ್ವರ ರಿಪುಗಳಿಗೆ —ಮೇಲೆ ವಿವರಿಸಿದಂಥ ಶೀತಜ್ವರಗಳು ಕಾಲಾವಧಿಯಾಗಿ ಮೈಯಲ್ಲಿ ವ್ಯಾಪಿಸಿಕೊಂಡು ಹಳೆ ತರಕ್ಕೆ ಬಿದ್ದು ಬರುವದಾದರೆ ಕ್ರಯ ೧ ಡಬ್ಬಿಗೆ ೧ ರೂಪಾಯಿ ವಿ ಪಿ ಚಾರ್ಜು ಆಣೆ ೪

ದಂತ ಶುದ್ಧಿಗೆ ಸುವಾಸಿಕ ಮಂಜನ —ಎಲ್ಲ ಪ್ರಕಾರದ ಹಲ್ಲಿನ ವೇದನೆಗಳ ಉಪಶಮನಕ್ಕೆ ಕ್ರಯ ೧ ಡಬ್ಬಿಗೆ ೪ ಆಣೆ ವಿ ಪಿ ೪ ಆಣೆ

ಪೀನಾಶೆಗೆ ನಾಡಾಚರ್ಣ —ಮೂಗಿನ ಒಳಭಾಗದಲ್ಲಿ ಕ್ರಿಮಿ ಅಥವಾ ವ್ರಣವಾಗಿ ಅದರಿಂದ ದುರ್ವಾಸನೆಯೂ ಕೆಲಿಗೆ ಅದವಾ ನೀರಿನಂಥ ದ್ರಾವವು ಸ್ರವಿಸುವದಕ್ಕೆ ಕ್ರಯ ೧ ಡಬ್ಬಿಗೆ ೧ ರೂಪಾಯಿ ವಿ ಪಿ ಚಾರ್ಜು ಆಣೆ ೪

ನಯನರೋಗಕ್ಕೆ ಸುಖಾಂಜನವು —ಹೊಸತಾಗಿ ಹುಟ್ಟಿದ ಅಥವಾ ಬಹುಕಾಲದಿಂದ ಇರುತ್ತಿದ್ದ ಕಣ್ಣಿನ ಎಲ್ಲಾ ಬಾಧೆಗಳು ಕಣ್ಣಿನಲ್ಲಿ ಕೆಂಪೇರುವಿಕೆ, ಕಣ್ಣಿನಿಂದ ನೀರು ಪಿಸರು ಬರುತ್ತಿರುವದು, ಬೆಳಕಿಗೆ ನೋಡಲಿಕ್ಕೆ ಆಗದೆ ಇರ ಪದು ದೃಷ್ಟಿಮಾಂದ್ಯ, ಇತ್ಯಾದಿ ಎಲ್ಲ ಬಾಧೆಗಳೂ ಇದರಿಂದ ಬೇಗನೆ ಗುಣವಾಗವದು ಕ್ರಯ ೧ ಡಬ್ಬಿಗೆ ೧ ರೂಪಾಯಿ ವಿ ಪಿ ಚಾರ್ಜು ಆಣೆ ೪

ಕರ್ಣಸ್ರಾವಕ್ಕೆ ವನೌಷಧಿ ತೈಲವು —ಚಿಕ್ಕ ಮಕ್ಕಳು ಭರ್ತಿ ಪ್ರಾಯದವರ ಕಿವಿಯಿಂದ ರಕ್ತ ಕೀವು, ಅಥವಾ ನೀರಿನಂಥ ದ್ರವ ಹೊಸತಾಗಿ ಅಥವಾ ಬಹು ಕಾಲದಿಂದ ಸ್ರವಿಸುತ್ತಿದ್ದರೆ ಹಾಗೂ ನೋವು, ಕಳತವು, ತುರಸುವಿಕೆಯೂ ಇರ ತಿದ್ದರೆ ಇದರಿಂದ ಪೂರ್ಣ ಗುಣ ಹೊಂದುವದು ಕ್ರಯ ೧ ಕುಪ್ಪಿಗೆ ೧ ರೂಪಾಯಿ ವಿ ಪಿ ೪

ಚಿಕ್ಕ ಮಕ್ಕಳ ಮೈ ಪುಷ್ಟಿಗೆ ಬಾಲಾಹಾರಸ —ಚಿಕ್ಕ ಹುಡುಗರ ಅಶಕ್ತಿ, ಕೆಡಿದ ಹಾಲಿನ ಅಥವಾ ಅಜೀರ್ಣದ ವಾಂತಿ, ಅತಿಸಾರ, ಅನೇಕಾವರ್ತಿ ಮಲ ವಿಸರ್ಜನೆ ಅಸ್ತಗತಜ್ವರ, ಕೆಮ್ಮು ಇತ್ಯಾದಿ ಅನೇಕ ಉಪಹತಿಗಳು ಗುಣವಾಗಿ ಮೈಯಲಿ ರಕ್ತ ಮಾಂಸ ಆಸ್ತಿ ಇವುಗಳು ಬಲವಾಗಿ ಬೆಳೆದು ಚನ್ನಾಗಿ ಪುಷ್ಟಿಯಾಗುತ್ತಾರೆ ಕ್ರಯ ೧ ಕುಪ್ಪಿಗೆ ೧ ರೂಪಾಯಿ ವಿ ಪಿ ಚಾರ್ಜು ಆಣೆ ೬

ಸಕ್ಕರೆ ಪಾಕಕಫಕ್ಷಯ ವ ಕೆಮ್ಮು ಮುಂತಾದವುಗಳಿಗೆ —ಶ್ವಾಸ ಕೋಶದ ಎಲ್ಲಾ ಉಪಹತಿಗಳು ಅಂದರೆ ಹೊಸ ಮತ್ತು ಹಳೆ ತರ ಕೆಮ್ಮುಗಳು ನೆಗಡಿ ಉಬ್ಬಸ ಕಫ ಕ್ಷಯ ಅಸ್ತಿಜ್ವರ ಅಶಕ್ತಿ ಕ್ಷಯವ್ಯಾಧಿಯಲ್ಲಿ ಹುಟ್ಟುವ ಬೆವರು ಇತ್ಯಾದಿ ಬೇಗನೆ ಗುಣಹೊಂದುವದು ಕ್ರಯ ೧ ಕುಪ್ಪಿಗೆ ರೂ ೧—೪ ಆ ವಿ ಪಿ ಚಾರ್ಜು ಆಣೆ ೯

ನಯನ ಸುಖಕ್ಕೆ ಸೌವೀರಾಂಜನವು (ಕಪ್ಪು ಸುರ್ಮ) —ಬಿಸಿಲಲ್ಲಿ ತಿರುಗಾಟ ಮಾಡುವದರಿಂದ ಬೆಂಕಿಯ ಶಕೆಯಲ್ಲಿ ಕೂಡುವದರಿಂದ ರಾತ್ರಿಯಲ್ಲಿ ಜಾಗ್ರಣ ಮಾಡುವದರಿಂದ ಅಥವಾ ಹೆಚ್ಚು ಕಾಲ ಓದುವದರಿಂದ ಸಹಾ ಉಂಟಾಗುವ ಕಣ್ಣಿನ ಬಾದೆಯು ಕೆಂಪೇರುವಿಕೆ ಉರಿ ನವೆ ಮುಂತಾದವು ಗುಣಹೊಂದಿ ಕಣ್ಣಿಗೆ ಸುಖವು ಪ್ರಾಪ್ತವಾಗುತ್ತದೆ ಕ್ರಯ ೧ ಡಬ್ಬಿಗೆ ೪ ಆಣೆ ವಿ ಪಿ ಚಾರ್ಜು ಡಬ್ಬಿ ೧ ರಿಂದ ೧೨ ಡಬ್ಬಿಗೆ ೪ ಆಣೆ

ವಾಂತಿಬೇದಿಗೆ ಮತ್ತು ಅತಿಸಾರಕ್ಕೆ ಕ್ಲೋರೊಡಾಯಿನ್ —ಈ ಉಪದ್ರಗಳಿಗೆ ಇದು ದಿವ್ಯ ಔಷಧವಾಗಿದೆ ವಿಶ್ವಾಸವುಳ್ಳ ಒಂದು ಕಂಪನಿಯಿಂದ ಇದನ್ನು ನಾವು ಸಂಗ್ರಹಿಸುತ್ತೇವೆ ಕ್ರಯ ೧ ಕುಪ್ಪಿಗೆ ೧೨ ಆಣೆ ವಿ ಪಿ ಚಾರ್ಜು ಆಣೆ ೪

ಸೂಚನೆ—ನಮ್ಮ ಔಷಧಗಳೊಳಗೆ ಅಪಾಯಕರವಾದ ಯಾವ ಜಿನಸಿನ ಮಿಶ್ರಣವೂ ಮಾಡಿಲ್ಲ ಪ್ರತಿ ಒಂದು ಔಷಧಿಗೆ ಜೊತೆಯಲ್ಲಿ ಛಾಪೆಯ ಅನುಪಾನ ಪತ್ರವನ್ನು ಕಳುಹಿಸುತ್ತಿರುತ್ತೇವೆ ಇನ್ನೂ ಅನೇಕ ಉತ್ತಮವಾದ ಔಷಧಗಳಿಗಾಗಿ ನಮ್ಮ ಕ್ಯಾಟ್ಲಾಗು ತರಿಸಿಕೊಂಡು ಓದಿನೋಡಿ

ನಮ್ಮ ಅಡ್ರೆಸು —ಕರ್ನಾಟಕ ರಾಜ ವೈದ್ಯ ಮತ್ತು ಕಂಪನಿ, ಪೋಸ್ಟು ಬಿಳಗಿ, ಉತ್ತರ ಕನ್ನಡಾ ಜಿಲ್ಲಾ.

Post Bilgi, North Kanara District

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟ್ರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು) ರೂ ೧—೦—

ಪರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಹಾಸಲ್ ಸೇರಿ ರೂ ೧—೧೪—೦

" " " " ೧—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗ ರಿಜಿಸ್ಟರ್ ನಂಬರನ್ನು ಮರೆಯಬೇ ನಮೂದಿಸತಕ್ಕದ್ದು

ನಮ್ಮ ವಿಳಾಸ —ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು

ಬೆಲೆಗೆ ಬೆಳ್ಳಿ—ಗುಣಕ್ಕೆ ಭಂಗಾರ.

88 8೬

ಕ್ಲೆಮೆಂಟ್ಸರವರ ಗಾರಿಡಿಬಾಧಾ ನಿವಾರಿಣಿ.

ಪಾರ್ಶ್ವನೋವು, ಕೀಲುಗಳ ನೋವುಗಳು, ಕಿಬ್ಬೊಟ್ಟೆನೋವು, ಬೆನ್ನು ಳೆಯುವದು, ತಲೆನೋವು, ಕೆಮ್ಮು ಕಿಲುಬುಗಳು, ಕೀಲುಗಳು, ಕತ್ತರಿಸುವದು, ಬಗ್ಗಿರುವ ಬೆನ್ನುಗಳು, ಕೊರಳು ಊತ, ಇವುಗಳಿಂದುಂಟಾಗುವ ಬಾಧೆಗಳು, ಕೈಕಾಲು ನಡೆತ, ಇವುಗಳಿಗೆ ಕ್ಲೆಮೆಂಟ್‌ರವರ ಗಾರಿಡಿ ಬಾಧೆ ನಿವಾರಿಣಿ ತೈಲವನ್ನು ಚನ್ನಾಗಿ ತಿಕ್ಕಿದರೆ ಈ ಬಾಧೆಗಳೆಲ್ಲಾ ಪರಿಹಾರವಾಗುವದು ಬಾಧೆಯನ್ನು ನಿಲ್ಲಿಸ ವದಕ್ಕಾಗಿ ಕ್ಲೆಮೆಂಟ್ಸರವರ ಮ್ಯಾಜಿಕ್ ಬಾಂ ಹುಟ್ಟಿ ಇದೆ ಆ ಕೆಲಸವನ್ನು ಅದು ಮಾಡ ವದು ಕೀಲಾಯಗಳಲ್ಲಿ ಹಾಕಿ ನಾರ ವ ಔಷಧಗಳಲ್ಲಿ ಬಾಧೆಯನ್ನು ಶಮನಮಾಡುವದರಲ್ಲಿ ಕ್ಲೆಮೆಂಟ್ಸರವರ ಮ್ಯಾಜಿಕ್ ಬಾಂನಂತಹದು ಬೇರೊಂದಿಲ್ಲ ಕ್ರಯ —೧ ಬಾಟ್ಲಿಗೆ ೧೨ ಆಣೆ ೩ ಕ್ಕೆ ೨ ರೂಪಾಯಿ ೬ ಕ್ಕೆ ೩॥ ರೂಪಾಯಿ ೧೨ ಕ್ಕೆ ೬ ರೂಪಾಯಿ ಅಂಚೆ ವೆಚ್ಚ ಒಂದರಿಂದ ಮೂರು ಬಾಟ್ಲಿ ವರಿಗೆ ೩ ಆಣೆ

ನಮ್ಮ ವಿಳಾಸ —ಎಫ್ ಡಬ್ಲ್ಯು ಆರ್ನ,
ಸಿವೆಟ್ರಿ ರೋಡ್ ವೇಪರಿ, ಮದರಾಸ್

ಬೆಂಗಳೂರು ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪನಿ ಲಿಮಿಟೆಡ್.

122—19

ಮೈಸೂರು ಸರ್ಕಾರದವರು ಇಂಡಿಯಾ ಗವರ್ನಮೆಂಟಿನವರು ಈ ರೈಲಿನ್ನ ಕ್ಯಾಪಿಟಲ್ ಮೂಲದ ಕಂಡಿಶನ್ ಮೇಲೆ ಖರ್ಚಾಗುವ ಮೂಲಧನಕ್ಕೆ ಶೇಕಡ ನಾಲ್ಕರಂತೆ ಬಡ್ಡಿ ಕೊಡಲು ಜಾಮೀನಾಗಿರುತ್ತೇವೆಂದು ಈಚೆಗೆ ಫೈಸಲ್ ಮಾಡಿರುತ್ತಾರೆ

ನಿಯಮಿತ ಮೂಲಧನ ಶೇರು ಒಂದಕ್ಕೆ ೨೫ ರೂಪಾಯಿಗಳ ಬೆಲೆಯುಳ್ಳ ೬೪ ಸಾವಿರ ಷೇರುಗಳಿಂದಾಗುವ ೧೬ ಲಕ್ಷ ರೂಪಾಯಿಗಳು—ಈ ಷೇರು ಮೊಬಲಗು ಷೇರು ಒಂದಕ್ಕೆ ಒಂದು ರೂಪಾಯಿನಂತೆ ಅಪ್ಲಿಕೇಷನ್ ಜೊತೆಯಲ್ಲಿ ಅಡ್ವಾನ್ಸಾಗಿ ಕೊಟ್ಟು ಬಾಕಿ ೨೪ ರೂಪಾಯಿಗಳನ್ನ ನೋಟೀಸ್ ಕೊಟ್ಟನಂತರ ೧೨ ಕಿಸ್ತುಗಳಲ್ಲಿ ಪಾವತಿ ಮಾಡತಕ್ಕದ್ದು ಈ ರೈಲಿನ ಸರ್ವೆ ಪೂರೈಸಲ್ಪಟ್ಟಿದೆ

ಈ ಕಂಪನಿಯು ಷೇರುಗಳನ್ನು ಅಪೇಕ್ಷಿಸತಕ್ಕಂಥಾವರು ಈ ಕೆಳಗೆ ರುಜುವು ಮಾಡಿರುವವರಿಗೆ ಅಥವಾ ಸಬ್ ಏಜಂಟ್ರಿಗೆ ದರಖಾಸ್ತು ಮಾಡಿಕೊಳ್ಳಬೇಕು

ಷೇರು ಹಣವನ್ನು ಈ ಕೆಳಗೆ ರುಜು ಮಾಡಿರುವವರಿಗೆ, ಇವರಿಂದ ಲಿಖಿತ ಮೂಲಕ ಹಣ ವಸೂಲು ಮಾಡಲು ಅಧಿಕಾರ ಹೊಂದಿರುವ ಸಬ್ ಏಜಂಟರಿಗೆ, ಬೆಂಗಳೂರು ಬ್ರಾಂಚು ಮದ್ರಾಸು ಬ್ಯಾಂಕಿಗೆ (ಈ ಕಂಪನಿಯ ಕ್ರೆಡಿಟ್ಟಿಗೆ), ಅಥವಾ ಮೈಸೂರು ಸೀಮೆಯ ತಾಲ್ಲೂಕು ಡಿಸ್ಟ್ರಿಕ್ಟು ಖಜಾನೆಗಳಿಗಾಗಲಿ ಪಾವತಿ ಮಾಡಬೇಕು

(ಸೈನ್) ಬಿ ವಿ ರಾಮಸ್ವಾಮಿ ಶೆಟ್ಟಿ, ಬಿ ಎ,
ಅಡ್ವೊಕೇಟ್ ವ ತ್ತು ಬೆಂಗಳೂರು ಚಿಕ್ಕಬಳ್ಳಾಪುರ
ಲೈಟ್ ರೈಲ್ವೆ ಕಂಪನಿಯ ಚೀಫ್ ಏಜಂಟ್
ನಗರ್ತಪೇಟೆ, ಬೆಂಗಳೂರು ಸಿಟಿ

ಮಕ್ಕಳ ಹಿತಕಾರಿ

ಎಂದು

SCOTT'S EMULSION 57-45

(ಸ್ಕಾಟ್ಸ್ ಇಮಲ್ಷನ್)

ಎಂಬೀ ಸೇವನಾ ಔಷಧಕ್ಕೆ ಕೋಟ್ಯಾಂತರ ತಂದೆತಾಯಿಗಳು ಹೆಸರಿಟ್ಟಿದ್ದಾರೆ ಯಾಕೆಂದರೆ ಇದು ಮಕ್ಕಳ ಆರೋಗ್ಯವನ್ನು ವೃದ್ಧಿಪಡಿಸಿ ದೇಹವನ್ನು ಪುಷ್ಟಿಯಾಗಿ ಬೆಳೆಸಿರುತ್ತದೆ

ಇದು ತುಂಬಾ ರುಚಿಯಾಗಿದ್ದುವುದರಿಂದ ಮಕ್ಕಳು ಬಹು ಸಂತೋಷವಾಗಿ ಸೇವನೆಮಾಡುತ್ತಾರೆ

ಇದು ಕಾಯಿಲೆ ಮಕ್ಕಳನ್ನು ಆರೋಗ್ಯಮಾಡುವುದು, ಅಶಕ್ತರಾದ ಮಕ್ಕಳನ್ನು ಬಲಿಷ್ಠರನ್ನಾಗಿ ಮಾಡುವುದು

ಕೈಸೋಕದೆ ತಯಾರಾದದ್ದು.

ಎಲ್ಲಾ ಔಷಧ ವ್ಯಾಪಾರಸ್ಥರಲ್ಲೂ ಬಿಕರಿಯಾಗುತ್ತೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,
ಔಷಧಗಳ ಕಾರ್ಖಾನೆ,
ಲಂಡನ್, ಇಂಗ್ಲೆಂಡ್,

ಈ ಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ.

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

೬—1— 907 ರಿಂದ 1—1—1907 ರ ವರೆಗೆ

ಸ್ಥಳ	ಪ್ಲೇಗ್ ಆಗಲಿದ್ದು	ಸತ್ತದ್ದು	ಹೋದ ವಾರ ಈ ವಾರ ಸಂಖ್ಯೆ
ಬೆಂಗಳೂರು ಪಟ್ಟಣ	7	8	86
ಮೈಸೂರು ,,	39	30	0
ಬೆಂಗಳೂರು ಡಿಸ್ಟ್ರಿಕ್ಟು	57	35	16
ಮೈಸೂರು ,,	3	1	5
ಕೋಲಾರ್ ,,	0	0	0
ಕೋಲಾರ್ ಚಿನ್ನದ ಗಣಿಗಳು	0	0	4
ತುಂಕೂರು ಡಿಸ್ಟ್ರಿಕ್ಟು	1	0	0
ಹಾಸನ ,,	12	8	1
ಚಿತ್ರದುರ್ಗ ,,	0	0	5
ಕಡೂರ್ ,,	15	7	1
ಶಿವಮೊಗ್ಗ ,,	1	1	22
ಜುಮ್ಲಾ	135	85	90

ಶಾಲಿವಾಹನ ಶಕ ವರುಷಂಗಳು ೧೮೨೯ ನೇ ಪರಾಭವ ಸಂವತ್ಸರದ ಮಾಘ ಶುದ್ಧ ದಶಮಿ ಗುರುವಾರದಿಂದ ಮಾಘ ಬಹುಳ ಪಾಡ್ಯ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೭ ನೇ ಇಸವಿ ಜನವರಿ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ
24	ಗುರು	ದಶಮಿ	4 44	ಕೃ	2 24
25	ಶುಕ್ರ	* ಏಕಾದಶಿ	9 55	ರೋ	8 28
26	ಶನಿವಾ	ದ್ವಾದಶಿ	15 15	ಮೃ	14 56
27	ರವಿವಾ	, ತ್ರಯೋದಶಿ	20 40	ಆರ್ದ್ರ	21 28
28	ಚಂದ್ರ	¶ ಚತುರ್ದಶಿ	25 31	ಪುನ	27 27
29	ಕುಜ	† ಪೌರ್ಣಮಿ	29 29	ಪುಷ್ಯ	32 30
30	ಬುಧ	ಪಾಡ್ಯ	32 18	ಆಶ್ಲೇ	36 33

* ಸರ್ವತ್ರ ಏಕಾದಶಿ, ಮುಡುಕುತೊರೆಯಲ್ಲಿ ಮಲ್ಲಿಕಾರ್ಜುನಸ್ವಾಮಿ ರಥ , ಶನಿಪ್ರದೋಷ, ತ್ರಯೋದಶಿ ತಿಥಿ ,, ಶೂನ್ಯ ಶಿವಸಮುದ್ರದ ರಂಗನಾಥ ರಥ ¶ ಮಾರೀಸೋಮ, ಉತ್ತನಹಳ್ಳಿ ಜಾತ್ರೆ † ವ್ಯಾಸಪೂರ್ಣಿಮಾ, ತ್ರಿನೇತ್ರೇಶ್ವರಸ್ವಾಮಿ ರಥ, ಚಂದ್ರಗ್ರಹಣ

ಪೇಟೇ ಧಾರಣೆ.

ದಿನಸಿ	ಮೈಸೂರು	ಬೆಂಗಳೂರು
ಚಳ್ಳೆ ಅಕ್ಕಿ ಪಲ್ಲ ೧ಕ್ಕೆ ರೂ	೧೭ ೮ ೦	೧೭ ...
ಕೆಂಬೂತಿ ಅಕ್ಕಿ ಅವಲ್ ,	೧೭-೮-೦	೧೨ ೪
,, ಸಣ್ಣ	೧೭ ೦ ೦	೧೨-...
ಜಾಪಾನ್ಯ ಅಕ್ಕಿ	೧೭-೦-೦	೧೭ ೮
ಸಣ್ಣಕ್ಕಿ ಅವಲ್	೧೫-೦ ೦	೧೫ ೦
,, ದುಂಡು	೧೮-೦-೦	೧೮-...
ತೊಗರೀ ಬೇಳೆ ಪಲ್ಲ ೧ಕ್ಕೆ	೧೨ ೪ ೦	೧೦ ...
,, ದುಂಡು	೧೨ ೬-೦	೧೯ ...
ಹೈನ ರಾಗಿ ಪಲ್ಲ ೧ಕ್ಕೆ	೭ ೪-೦	೭ ೮
ಕಾರ್ರಾಗಿ	೬-೦-೦	೭ ೬
ಜೋಳ	೫-೪-೦	೪-೪
ಕಲಸಂದೆ ಪಲ್ಲ ೧ಕ್ಕೆ	೧೦-೧-೨-೦	೧೦-೪
ಬಿಳೀ ಅವರೆ	೯-೮ ೦	೯-೦-೨
ಹೆಸರು	೧೦-೪-೦	೯ ೮
ಉದ್ದು	೧-೨-೦-೦	೧೦ ...
ಕಡಲೆ	೧೦-೪-೦	೯ ೧೦
ಎಳ್ಳು ಸೆ ೧-೨೭ ಕ್ಕೆ	೧೭ ೦-೦	೧೬-೦-...
ಹುರುಳಿ	೭-೬-೦	೪-೮
ಹರಳು ೧-೨೭ ಸೇರಿಗೆ	೧೯-೦-೦	೧-೨-೪
ಸೀಗೆ ಕಾಯಿ ಮಣ ೧ಕ್ಕೆ	೨-೨ ೦	೧ ೧೨
ಮೆಣಸಿನಕಾಯಿ	೭-೮ ೦	೨ ೧೦
,, ದುಂಡು	೭-೦-೦	೨-೪
ಬೆಲ್ಲ ಮೊದ್ದು ಅಚ್ಚು	೮-೮-೦	ಮ ೧ ೧೮
ಒಳ್ಳೆಣ್ಣೆ ಮಣ ೧ಕ್ಕೆ	೮-೪-೦	೫ ೪
ಹರಳೆಣ್ಣೆ ,,	೬-೧-೨-೦	೫-೦
ಕೊತ್ತುಂಬರಿ ಪಲ್ಲ ೧ಕ್ಕೆ	೯-೦-೦	೭-...
ಉಪ್ಪು ,,	೫-೧೧-೦	೭-೦
ಹುಣಸೇ ಹಣ್ಣು	೦-೧-೨-೦	೦-೧೧
,, ಹಳೇದು	೦-೪-೦	೦-೧೮
ತುಪ್ಪ ಮಣ ೧ಕ್ಕೆ	೧೬-೦ ೦	೧೮ ೦
ಸೀಮೆಯೆಣ್ಣೆ ಪಟ್ಟ ೧ಕ್ಕೆ	೫-೮-೦	೮ ೦
ತೆಂಗಿನಕಾಯಿ ೧೦೦ ಕ್ಕೆ	೬-೪-೦	೬-೦
ಅರಳೇಕಾಯಿ ಮಣ ೧ಕ್ಕೆ	೧ ೦-೦	೧ ೦
ಅಂಟುವಾಳದ ಕಾಯಿ ಮಣ ೧ಕ್ಕೆ	೦-೧-೨ ೦	೦-೧೦
ಚಿನ್ನ (ಬಾರ್) ಕೆಂಪು	೧೫-೮-೦	೧೫ ೬
,, ,, ಪಸಿಮೆ	೧೫-೧೦ ೦	೧೫ ೬
,, ,, ಗಟ್ಟಿ ತೊಲ ೧ಕ್ಕೆ	೨೭-೧-೨-೦	೨೮ ೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	೪೫ ೦ ೦	೪೫-೦-

Printed and published by the Rev E W Thompson, M A, the Proprietor and Manager, Wesleyan Mission Press, Mysore 24/1/1907

REGISTERED
M. 20.

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು

ಸಂಪುಟ ೨೦ ಮೈಸೂರು—ಸನ್ ೧೯೦೭ ನೇ ಇಸವಿ ಜನವರಿ ತಾರೀಖು ೩೧ ನೇ ಗುರುವಾರ. ಸಂಚಿಕೆ ೫

ಬೇಕಾಗಿದೆ.

153-7

ಇಂಗ್ಲಿಷ್ ಮತ್ತು ಕನ್ನಡ ಅಕ್ಷರ ಜೋಡಿಸುವವ(ಕಂಪಾಜಿಟರುಗಳು) ಬೇಕಾಗಿವೆ. ಚನ್ನಾಗಿ ಕಲಿತಿರುವವರು ಮಾತ್ರ ನ ವ್ಯಾಗಿ ಬಂದು ಮಾತನಾಡಬಹುದು

ಮ್ಯಾನೇಜರ್, ಮಿಷನ್ ಪ್ರೆಸ್, ಮೈಸೂರು.

೧೯೦೭ ನೇ ಲೋವರ್ ಸೆಕೆಂಡರಿ ಕನ್ನಡ ನೋಟ್ಸ್.

12-1

ಬರುವ ಫೆಬ್ರುವರಿ ತಾ ೭ ಕ್ಕೆ ಬಿಕರಿಗೆ ಸಿದ್ಧವಾಗುತ್ತೆ. ಕ್ರಯ ೩ ಆಣೆ ಬಾಲವ್ಯಾಕರಣ ೧ ಆಣೆ ೯ ಪೈ ಮಾತ್ರ.

ವಿಳಾಸ — ಯಂ ಆರ್ ವೆಂಕಟಸುಬ್ಬಾಚಾರ್ಯ, ಸ...ಗ್ರಂಥಾಲಯ, ಮೈಸೂರು.

ವೃತ್ತಾಂತ ಪತ್ರಿಕೆಯ ಪಂಚಾಂಗವು.

ಸಿದ್ಧವಾಗಿದ. ಕ್ರಯ ಒಂದಾಣೆ.

೧೯೦೭ನೆ ವರ್ಷದ ಕ್ಯಾಲೆಂಡರು. ದೊಡ್ಡ ಸೈಜು ಇದರಲ್ಲಿ ನಮ್ಮ ಮಹಾರಾಜರವರ ಉತ್ಕೃಷ್ಟವಾದ ಫೋಟೋ, ದಿವಾನರವರ ಮತ್ತು ...ರ್ ಬಹದ್ದೂರ ಫೋಟೋಗಳು ಬಹಳ ಸೊಗಸಾಗಿವೆ ಇಷ್ಟುವರಗೆ ಈ ಚಿತ್ರಗಳು ಕ್ಯಾಲೆಂಡರಲ್ಲಿ ಯಾರೂ ನೋಡಿರಲಾರರು.

ಚಂದಾದಾರರಿಗೆ ಸೂಚನೆ—ಇದೇ ಜನವರಿ ಆಖೈರಿನೊಳಗಾಗಿ ವೃತ್ತಾಂತ ಪತ್ರಿಕೆಗೆ ಒಂದು ವರುಷದ ಚಂದಾ ಅಡ್ವಾನ್ಸು ಕಟ್ಟುವರಿಗೆಲ್ಲಾ ಒಂದೊಂದು ಕ್ಯಾಲೆಂಡರನ್ನು ಪುಗಸಟ್ಟೆ ಕೊಡುವೆವು. ಇತರ ಬಾಬತಾಗಿ ಸಿಕ್ಕುವುದಿಲ್ಲ.

ಎಚ್ಚರಿಕೆ—ಬಹಳ ಕೊಂಚ ಪ್ರತಿಗಳನ್ನು ಮಾತ್ರ ಪ್ರಿಂಟು ಮಾಡಿದೇವೆ ಕೂಡ್ಲೆ ಚಂದಾಸಹಿತ ಬರಿಯಿರಿ. ವಿಳಾಸ:— ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ಸನ್ ೧೯೦೭ ನೇ ಇಸವಿಯ

151-8



ಎ. ನಂ೧ ಎಫ್. ನಂ೧ ಬಿ ನಂ೧ ಸಿ. ನಂ೧ ಹೆಚ್ ನಂ೧ ಡಿ. ನಂ೧

ಪಂಚಾಂಗ ಸಮೇತವಾದ ಇಂಗ್ಲೀಷು—ಕನ್ನಡ

ಪಾಕೆಟ್ ಡೈರಿಗಳು.

ಈ ಡೈರಿಗಳು ವರ್ತಕರು, ಲಾಯರುಗಳು, ಕಂಟ್ರಾಕ್ಟರು, ...ಜ್ಞ ಪುರುಷರು, ಬುಕ್‌ಕೀಪರ್‌ಸಮಸ್ತರಿಗೂ ಉಪಯೋಗವಾಗಿ ...ತ್ತವೆ. ಇವುಗಳಲ್ಲಿ ಅಡಕವಾಗಿರುವ ವಿಷಯಗಳು.—ಪ್ಲವಂಗ ...ಪಂಚಾಂಗ, ಗ್ರಹ ಕುಂಡಲಿ ಸಹಿತ, ಕ್ಯಾಲೆಂಡರು, ಹಬ್ಬಗಳು, ...ದಿನಗಳು, ರೈಲ್ ಛಾರ್ಜು, ಕೋರ್ಟ್ ಫೀಜು, ಪ್ರೋಸೆಸ್ ...ಸು, ಸ್ಟಾಂಪು, ರಿಜಿಸ್ಟರ್ ಫೀಜುಗಳು, ಪೋಸ್ಟಾಫೀಸಿನ ಎಲ್ಲಾ ವಿಷಯಗಳು, ಜಮೀನುಗಳ ಅಳತೆ, ತೂಕಗಳು, ಗೌರಿ ಪಂಚಾಂಗ, ಪ್ರಶ್ನ..., ಹಲ್ಲಿ ಬಿದ್ದ ಫಲ, ರಾಹುಕಾಲ, ಗುಳಿಕಕಾಲ, ವಾರಶೂಲೆ, ...ಸಂಬಳದ ಪಟ್ಟಿ, ದೋಬಿ ಲೆಕ್ಕ, ಜಮಾಖರ್ಚಿನಪಟ್ಟಿ, ಇನ್ನೂ ...ಕ ವಿಷಯಗಳಿವೆ. ಉತ್ಕೃಷ್ಟವಾದ ಕಾಗದ, ರೂಲು ಹಾಕಿದೆ, ...ಸಾರಾ ಬೈಂಡು, ಚಿನ್ನ ಬೆಳ್ಳಿ ನಮೂನೆ ಗಿಲೀಟುಮಾಡಿದೆ.

...ನಂಬರ್ ಚಿಕ್ಕಸೈಜು ೩ ಆಣೆ	ಸಿ. ನಂಬರು ದೊಡ್ಡಸೈಜು ೭ ಆ
ಬಿ. ,, ,, ೪ ,,	ಎಚ್. ,, ,, ೭ ,,
,, ಮುಚ್ಚಳದ್ದು ೫ ,,	ಡಿ. ,, ಮುಚ್ಚಳದ್ದು ೮ ,,

ಪೋಸ್ಟ್ ಛಾರ್ಜು ಬೇರೆ. ಒಂದೇ ನಮೂನೆಯ ೧೨ ಡೈರಿ ತರಿಸಿದರೆ ೧ ಡೈರಿ ಇನಾಂ. ವಿ. ಪಿ. ಮೂಲಕವೂ ತರಿಸಿಕೊಳ್ಳಬಹುದು.

ವಿಳಾಸ:—ಎಂ. ಆರ್. ಕೃಷ್ಣಸ್ವಾಮಿ ಶೆಟ್ಟಿ ಕಂಪನಿ, ...ನ್ ಪ್ರೆಸ್, ...ಊರು ಪಿಟಿ} ಅಥವಾ { ಶ್ರೀಕೃಷ್ಣ ವಿಲಾಸ ಪ್ರೆಸ್, ಮೈಸೂರು.

ಕೊಡಗು ದೇಶದ ಸ್ವಚ್ಛವಾದ ಉತ್ಕೃಷ್ಟ ಕಾಫಿಯು

ಹುರಿಯದೆ ಇರುವದು ಅಥವಾ ಆಗತಾನೆ ಹುರಿದದ್ದು. ವಡವಮಾಡಿದ ಸ್ಥಳದಿಂದಲೆ ನೆಟ್ಟಗೆ ರವಾನಿಸಲ್ಪಡುವದು.

36-51

ವ್ಯಾಪಾರದ ಹೆಗ್ಗುರ್ತು

ಕಾಡುಕೋಳಿಯ ತಲೆಯ ಮುದ್ರೆ ಇದೆ

ಸಂಪೂರ್ಣವಾಗಿ ಯಂತ್ರದಿಂದಲೆ ಸಿದ್ಧಪಡಿಸಿದ್ದು. ಹೆಗ್ಗುರ್ತು ಉಳ್ಳ ವಿಳಾಸದ ಚೀಟಿ ಸುತ್ತಿಲ್ಲದಿರುವವು ಸ್ವಚ್ಛವಾದವುಗಳಲ್ಲ. ಅವು ನಮ್ಮದಲ್ಲ. ಏಜಂಟರುಗಳು ಬೇಕು. ಇಂಥವರಿಗೆ ಅನುಕೂಲ ಪರ ಬರೆಯುವವರು ದಯವಿಟ್ಟು ಈ ಪತ್ರಿಕೆಯ ಹೆಸರನ್ನು ಸೂಚಿಸಿ.

ವಿಳಾಸ.—ಮ್ಯಾನೇಜರ್, ಮ್ಯಾಥಿಸನ್ಸ್ ಕಾಫಿ ವರ್ಕ್ಸ್, ಹುಣಸೂರು.

ಜ್ವರಹರಿ.

142-14

ಇದು ಸಾಧಾರಣ ಜ್ವರ, ಹಳೇಜ್ವರ, ಮೋರೇಜ್ವರ, ಪಿತ್ಥಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್ ಟಿ. ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಡ್ರಾಮಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚನ್ನಾಗಿ ಗುಣ ಹೊಂದಿರುವರು ಇನ್ನೂ ಜನಗಳು ಖಾಹಿಲೇ ಬೀಳುತ್ತಿರುವ ಪ್ರಯುಕ್ತ ದಯವಿಟ್ಟು ಇನ್ನೊಂದು ೨೦ ಡ್ರಾಮಿನ ಸೀಸೆಯನ್ನು ವಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದಾರೆ

ಕ್ರಯ:—ಸೀಸೆ ೧ ಕ್ಕೆ ೮ ಆಣೆ, ೧ ರೂ., ೧—೮ ರೂ.; ರೂ. ೨—೧೨ ಆ., ೧೧ ರೂ.; ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

****

ಓಮಂಕರ್ಪೂರ.

Omum Carpoor

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಕಳ ...ರುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ ವ್ಯಾಧಿಗಳಿಗೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನೂ ಕೂಡ ಗುಣಪಡಿಸುತ್ತದೆ ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ. ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆನ್ರಿಯ ಓಮಂ ಕರ್ಪೂರವನ್ನು ನಾನೂ ನನ್ನ ತಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂತ ಬರೆದಿದಾರೆ.

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಪಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ:—

ಹೆನ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ, ಸೆಕೆಂಡ್ ಲೈನ್ ಬೀಚ್, ಮದ್ರಾಸ್

ಮುಂಬಯಿ ವ್ಯಾಪಾರಮಾಡಲಿಚ್ಛಿಸುವವರು.

85-35

ಮುಂಬಯಿಯಲ್ಲಿ ಪ್ರತಿಯೊಂದು ಮಾಲಿನ ಥೋಕ ಅಳತೆ ಮತ್ತು ಮಾಲಿನ ವರ್ಣನೆ ಹಾಗೂ ಅನೇಕ ಉಪಯುಕ್ತ ಮಾಹಿತಿಯಿರುವ ಕನ್ನಡ ಪುಸ್ತಕ:—ಕ್ರಯ ೧೦ ಆಣೆ. ವಿ. ಪಿ. ಯಿಂದ ಕಳುಹಿಸುವೆವು. ಟಪಾಲು ಖರ್ಚು ಬೇರೆ. ಬುಕ್ಸು ಸೇಲರರಿಗೆ ಯೋಗ್ಯ ಕಮಿಷನ್ ದೊರೆಯುವದು. ಮತ್ತು ಲಿಂಗಾಯತ ಧರ್ಮಸಂಬಂಧ ವೀರಶೈವೋತ್ಪತ್ತಿ ಕ್ರಿಯಾಲಕ್ಷಣವೆಂಬುವ ಕನ್ನಡ ಪುಸ್ತಕ.—ನಾಲ್ಕು ಆಣೆ. ಚಲೋ ಅಕ್ಷರದಿಂದ ಬರೆಯುವ ಪತ್ತಾ ಚನ್ನಬಸಪ್ಪ ಮಲ್ಲಪ್ಪ ಪಾರದ, ಪೋಸ್ಟು ಮಾಂಡ್ವಿ ಮುಂಬಯಿ

ಬಾಲಶಿಕ್ಷೆ ೧ನೇ ಭಾಗ!
ಬಾಲಶಿಕ್ಷೆ ೧ನೇ ಭಾಗ!!
ಬಾಲಶಿಕ್ಷೆ ೧ನೇ ಭಾಗ!!!

7-3

ಬೇಗ ತರಿಸಿಕೊಳ್ಳಿ.

ಕ್ರಯ ೧ ಆಣೆ. ವಿ. ಪಿ. ಮೂಲಕ ಮೂರು ಆಣೆಗಳು ನೂರು ಪ್ರತಿಗಳಿಗೆ ಹನ್ನೆರಡು ಪ್ರತಿಗಳು ಕಮಿಷನ್ ವಿಳಾಸ:—ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

ಮಾಡಲ್ ಪಾಕೆಟ್ ಡೈರಿಗಳು! ಮಾಡಲ್ ಪಾಕೆಟ್ ಡೈರಿಗಳು!!

8-2

ನಾವು ಮಾರುತ್ತಿದ್ದ ಪ್ರಸಿದ್ಧವಾದ ಮಾಡಲ್ ಪಾಕೆಟ್ ಡೈರಿಗಳಲ್ಲಿ ಒಂದನೇ (ನಾಲ್ಕಾಣೆಯದು), ಎರಡನೇ (ಆರಾಣೆಯದು), ಮತ್ತು ನಾಲ್ಕನೇ (ಎಂಟು ಆಣೆಯದು) ನಂಬರುಗಳ ಡೈರಿಗಳು, ಸಂಪೂರ್ಣವಾಗಿ ಮಾರಿಹೋಗಿರುವದರಿಂದ ನಮ್ಮನ್ನು ಬಹು ಉದಾರವಾದ ದಯೆಯಿಂದ ಪ್ರೋತ್ಸಾಹಪಡಿಸಿದ ನಮ್ಮ ಅನೇಕ ಸರಸ್ರ ಮಿತ್ರರಿಗೆ ಮೇಲ್ಕಂಡ ನಂಬರುಗಳ ೧೯೦೭ ನೇ ವರುಷದ ಡೈರಿಗಳು ದೊರೆಯಲಾರವೆಂದು ಈಗ ವಿನಯವಾಗಿ ಕ್ಷಮೆಪಡುತ್ತೇವೆ ನಮ್ಮಲ್ಲಿ ಮೂರನೇ ನಂಬರಿನ ದೊಡ್ಡ ಸೈಜಿನ ಡೈರಿಯ ಕೆಲವು ಪ್ರತಿಗಳು ಮಾತ್ರ ಉಳಿದಿವೆ. ಇದರ ಕ್ರಯ ಆರು ಆಣೆ. ವಿ. ಪಿ. ಮೂಲಕ ತರಿಸಿದರೆ ಒಂಭತ್ತು ಆಣೆ ಬೀಳುವದು. ಜಾಗ್ರತೆ ನೋಡಿ ತರಿಸಿ!

ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

ಅಥವಾ

ನತ್‌ಮಲ್ ಅಂಡ್ ಕಂಪನಿ, ದೊಡ್ಡಪೇಟೆ, ಮೈಸೂರು.

ಉತ್ತಮವಾದ ಸಿದ್ಧೌಷಧಗಳು.

1-5

ಆಶ್ಚರ್ಯದಿಂದಲೂ ಬಂದ ನಮ್ಮ ಔಷಧಗಳು ಲಕ್ಷಾಂತರ ರೋಗಿಗಳಿಗೆ ಉಪಯೋಗಿಸಿ ಗುಣ ಕಂಡುಬಂದವುಗಳಾಗಿವೆ. ಅವುಗಳೆಲ್ಲಾ ಮೂಲಿಕೆಗಳಿಂದ ತಯಾರಾಗಿರುತ್ತೆ ತಿಂಗಳೊಂದಕ್ಕೆ ಅನೇಕರು ಔಷಧಿ ಸೇವಿಸುತ್ತಲೂ ಇರುವ ಸಂಗತಿ ಎಲರಿಗೂ ಗೊತ್ತಿದೆ.



(೧) ಸಂಜೀವಿನಿ ತೈಲ ಸಮಸ್ತ ಮಹಾರೋಗಗಳಿಗೂ ಕಾಲು ಸೀಸೆಗೆ ೦-೮-೦ (೨) ಭೃಂಗರಾಜ ತೈಲ ಎಲ್ಲಾ ವಿಧದ ಶಿರೋರೋಗಗಳಿಗೆ ಕಾಲು ಸೀಸೆಗೆ ೦-೧೦-೦ (೩) ಭೇದಿ ಎಷ್ಟೇ ಸುಖಪ್ರವರ್ತಿಯಾಗುವುದು. ಕಾಲು ಸೀಸೆಗೆ ೦-೧೦-೦ (೪) ಮಹಾಲೇಹ ಧಾತುಶಕ್ತಿಯನ್ನುಂಟುಮಾಡಿ ಪುಷ್ಟಿಮಾಡುತ್ತೆ. ಸೇರಿಗೆ ೨-೦-೦. (೫) ಸೌಭಾಗ್ಯ ಶರ್ಕರಾಮೃತ ಲೇಹ ಇದರ ಸೇವನೆಯಿಂದ ಬಾಣಂತಿಸನ್ನಿ ಕ್ಷಯ ಮೊದಲಾದ ರೋಗಗಳನ್ನು ಪರಿಹರಿಸುತ್ತೆ ಸೇರಿಗೆ ೨-೦-೦ ಹುಚ್ಚುನಾಯಿ, ಕೊಳಕಮಂಡಲ ಇವುಗಳಿಂದುಂಟಾದ ಪ್ರಬಲ ರೋಗಗಳಿಗೂ ಚಿಕಿತ್ಸೆಯು ದೊರೆಯುವದು.

ನಮ್ಮ ಕ್ಯಾಟಲಾಗು ತರಿಸಿ ನೋಡಿ—ಪಂಡಿತ ಕೃಷ್ಣಾಚೆಟ್ಟಪ್ಪ, ನಿಖಿಲ ರೋಗಹರ ವೈದ್ಯಶಾಲಾ, ದೊಡ್ಡಪೇಟೆ, ಮೈಸೂರು.



CHAMBERLAIN'S COUGH REMEDY.
ಚೇಂಬರ್ಲೇನ್ ಯವರು ಕಂಡು ಹಿಡಿದ ಕೆಮ್ಮಿನ ಔಷಧವು

45

ಶೀತದ ಕೆಮ್ಮು, ಗಂಟಲು ಗೂರೆನ್ನುವುದು, ಹುಡಿಗೆಮ್ಮು, ನಾಯಿಗೆಮ್ಮು, ಎಲ್ಲಾ ತರದ ಶೀತ, ಗಂಟಲು ನಳಿಕೆ ಎದೆಯಲ್ಲೂ ಹುಟ್ಟುವ ಸಮಸ್ತ ವ್ಯಾಧಿಗಳು—ಇವಕ್ಕೆಲ್ಲಾ ಈ ಔಷಧವು ಬಾಣಪ್ರಾಯವಾಗಿದೆ

ಆ ಕೆಮ್ಮನ್ನು ಅಲಕ್ಷ್ಯಮಾಡಬೇಡಿ ಅದು ಮಹಾ ಅಪಾಯವನ್ನುಂಟು ಮಾಡತಕ್ಕದ್ದಾಗಿದೆ ಅದರ ಮೇಲೆ ನ್ಯೂಮೋನಿಯಾ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವುದು ತರುವಾಯ ಉಗುಳಿನಲ್ಲಿ ರಕ್ತ ಬೀಳುವುದು ಹಾಗೆಯೇ ಕ್ಷಯ ರೋಗಕ್ಕೆ ಆಸ್ಪದವಾಗುವುದು

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟಲಿನಲ್ಲಿ ಶ್ಲೇಷ್ಮ ಕಟ್ಟುವುದನ್ನೂ ಶ್ಲೇಷ್ಮ ಬೀಳುವುದನ್ನೂ ಖಂಡಿತವಾಗಿ ನಿವಾರಣೆಮಾಡುತ್ತದೆ ಉಸುರು ಹೊಯ್ಯುವುದು ಕಷ್ಟವಾಗಿದ್ದರೆ ಅದನ್ನು ಕೂಡಲೇ ಪರಿಹರಿಸುತ್ತದೆ ಅಪಾಯಕರವಾದ ಕೆಮ್ಮಿನ ಶಬ್ದವನ್ನು ನಿಲ್ಲಿಸಿಬಿಡುತ್ತದೆ ಎದೆ ಒಣಗುವಂಥಾ ಕೆಟ್ಟಸ್ಥಿತಿಯನ್ನು ಸಂಪೂರ್ಣವಾಗಿ ನಾಶಮಾಡಬಲ್ಲದು ಕೆಮ್ಮನ್ನು ಶಮನಮಾಡಿ, ನೀವು ಸುಖವಾಗಿ ನಿದ್ರೆಮಾಡುವಂತೆ ಮನಸ್ಸಿಗೆ ಉಲ್ಲಾಸಕೊಡುತ್ತದೆ

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇರಿಸಿದ್ದಿಲ್ಲ

ಈ ಔಷಧವು ವನಸ್ಪತಿಗಳ ತಯಾರಿ

ಕೈದಿಯಿಂದಪಟ್ಟದೆ ತಯಾರಾಗಿದೆ

ಎಲ್ಲೆಲ್ಲೂ ವಿಕರಿಯಾಗುವುದು ಸಣ್ಣ ಶೀಸೆಗೆ ೧ ರೂಪಾಯಿ ದೊಡ್ಡ ಶೀಸೆಗೆ ೨ ರೂಪಾಯಿ



ದಿ ಸಿಟಿ ಸಿಲ್ವರ್ ವಾಚ್

13 1

(ಚಿತ್ರದಲ್ಲಿ ಕಂಡದ್ದು.)

ಸ್ಟೆಂವ್ ಕೀಲಿ, ಮುಕ್ಕಾಲು ಪ್ಲೇಟ್ ಜೂಯಲ್ ಹಲನೆ ಹಾಲ್‌ಮಾರ್ಕ್ ಉಳ್ಳ ಬೆಳ್ಳಿ ಆಲ್ಬರ್ಟ್ ಸರಪಣಿ ಮತ್ತು ಸೀಲ್ ಸಹಿತ ಸಂಪೂರ್ಣ ದಮಾಸ್ ಪೆಟ್ಟಿಗೆಯಲ್ಲಿರುವಾಗ ಕ್ರಯ (ಹಿಂದುಸ್ಥಾನದ ಅಂಚೆ ವೆಚ್ಚ ಸೇರಿ) ರೂ ೧೩ ೧೪ ೧

ಮೇಲಾದ ಬೆಳ್ಳಿ ಗಡಿಯಾರಗಳು ಮುಕ್ಕಳವಿಲ್ಲದ್ದು ಕೀಲಿ ತಿರಿಗಿಸುವದೂ, ಕೀಲಿ ಇಲ್ಲದ್ದು ಕ್ರಯ ರೂ ೯ ೬, ರೂ ೧೧ ೧೦, ೧೬ ೮ ರೂ ೨೨ ೮

ಬಲವಾದ ಬೆಳ್ಳಿ ಆರ್ಧ ಹಂಟರ್ ಗಡಿಯಾರಗಳು —ಕ್ರಯ ೧೫, ರೂ ೧೯ ೧೪, ರೂ ೨೩ ೪, ರೂ ೨೮-೧೪

ಬಲವಾದ ಪೂರಾ ಹಂಟರ್ ಗಡಿಯಾರಗಳು —ರೂ ೧೩-೮, ರೂ ೧೫ ರೂ ೧೬ ೮ ೧೯-೨ ರೂ ೨೩ ೧೦

ಪಾಪ್ಯುಲರ್ ನಿಕ್ಕಲ್ ಗಡಿಯಾರಗಳು, ಸ್ವಲ್ಪ ಸುತ್ತುಳ್ಳವು, ಕೀಲಿ ಇಲ್ಲ ಲೀವರ್ ಚಲನೆ, ಸುಂದರವಾದ ಒಳ್ಳೆ ನಮೂನೆ ಮುಚ್ಚಳ ಸಂಖ್ಯೆಯಾದ ಗಂಟೆ ತೋರಿಸುವದು, ಕ್ರಯ ರೂ ೪ ೮, ರೂ ೬ ೪ ರೂ ೬

ಬಳಕೆ ಒಳ್ಳೆದಾದ ಚಪ್ಪಟೆಯಾಗಿರುವ ಗಡಿಯಾರಗಳು — (೧) ಕಪ್ಪು ಉಕ್ಕಿನ ಮುಚ್ಚಳ ಉಳ್ಳವು ಕ್ರಯ ರೂ ೧೦ ೮, ರೂ ೧೬ ೧೪ (೨) ಬೆಳ್ಳಿಯ ಮುಚ್ಚಳ ಉಳ್ಳವು ಕ್ರಯ ರೂ ೧೪ ೧೦, ರೂ ೨೧

ಬೆಳ್ಳಿ ಆಲ್ಬರ್ಟ್ ಸರಪಣಿಗಳು ಕ್ರಯ ರೂ ೩ ೧೫, ರೂ ೪ ೮ ರೂ ೫ ೧೨ ರೂ ೭ ೧, ರೂ ೮-೧೦

ಚಿನ್ನ ತುಂಬಿದ ಸರಪಣಿಗಳು ಕ್ರಯ ರೂ ೬ ೬, ರೂ ೮-೧, ರೂ ೯-೩

ಈ ಕ್ರಯದಲ್ಲಿ ಹಿಂದುಸ್ಥಾನದ ಅಂಚೆ ಹಾಸಲೂ ಸೇರಿದೆ

ಎಂಟು ದಿನಕ್ಕೊಮ್ಮೆ ಕೀಲಿ ತಿರುಗಿಸುವಂಥಾ ವಾಚುಗಳೂ, ಇನ್ನೂ ಎಲ್ಲಾ ತರದ ತಯಾರಿ ಮತ್ತು ಚಿತ್ರ ಕೆಲಸ ಮಾಡಿದ ವಾಚುಗಳೂ, ವಿಲಾಯತಿಯಲ್ಲಿ ತಯಾರಾದಲ್ಪಟ್ಟ ವಂಥಾ ನಕಲ ವಿಧವಾದ ಸಾಮಾನುಗಳೂ ಜವಾಹಿರಿ ನಗಗಳೂ ಕೇಳಿದವರಿಗೆಲ್ಲಾ ಕಳುಹಿಸಿಕೊಡುತ್ತೇವೆ

ನಗದು ಹಣ ಕಳುಹಿ ಇಂಗ್ಲಿಷಿನಲ್ಲೇ ನಮಗೆ ಬರಿಯಬೇಕು

ವಿಳಾಸ —Messrs Bride and Eastland, 29 to 35, City Road London E C

The Place for Hassan Caps is Hassan

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

11 1

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು? ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವೆ? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಲ್ಲೇ ಎಂದು ಹೇಳಬಹುದು

ಈಗ ಇತರ ಕಡೆಗಳಲ್ಲಿ ಮಾಡಿ ವಿಕರಿಯಾಗುತ್ತಿರುವ ಟೋಪಿಗಳು ಯಾವವೇ ಆಗಿದ್ದರೂ ಅವೇ ಹಾಸನದ ಟೋಪಿಗಳೆಂದು ಎಲ್ಲರೂ ತಿಳಿದುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೇರಾಗಿ ವಿಲಾಯತಿಯಿಂದಲೇ ಬರುವದು (೨) ಟೋಪಿಗಳನ್ನು ಬಹಳ ಜಾಗ್ರತೆಯಿಂದ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅವು ಕ್ಷಣ ಮಾತ್ರಕ್ಕೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ ನಮಗೆ ಈಗಲೇ ಬರೆದು ತರಿಸಿಕೊಳ್ಳಿ ಅಗ್ಗವಾದದ್ದು ಚನ್ನಾಗಿಲ್ಲದ್ದು ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ

ಸಾದಾ, ಕೆಂಪು ಕಪ್ಪು ಬಿಳಿ, ಕಾಫಿ ಟೋಪಿಗಳು ೧ ರೂ ೮ ಆ, ೧ ರೂ ೬ ಆ, ೧ ರೂ ೪ ಆ

ರೇಷ್ಮೆ ಚಿಕ್ಕಿಯುಳ್ಳ ಟೋಪಿಗಳು ೧ ರೂ ೮ ಆ, ೨ ರೂ

ದಾರದ ಟೋಪಿಗಳು ೧ ರೂ ೧೨ ಆ ೧ ರೂ ೮ ಆ ೧ ರೂ ೬ ಆ

ಉಣ್ಣೆಯ ಟೋಪಿಗಳು ೧ ರೂ ೮ ಆ, ೧ ರೂ ೬ ಆ

ಕಳಿಸುಗಳ ಟೋಪಿ ಸರ್ಫಿ ಮೋಜುದು, ಅರ್ಧ ಮೋಜುದು ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ

ಯೆಷ್ಟೋ ಕೆಂಪು ಮತ್ತು ತಾಜಾ ಕಪ್ಪು

ಹಾರ್ಸ್ ವೂಲ್ ದಾರ.

125 12

೩೦೦೦ ಹಾಸನದ ಟೋಪಿ ಹೊಲಿಯುವ

ಸುಪೀರಿಯರ್ ವೂಲನ್ ದಾರ ಮಾತ್ರ

	ರೂ	ಆ	ಪೈ
೧ ಟೋಪಿ ಆಗುವ ವೂಲ್ ದಾರದ ಕ್ರಯ	೦	೮	೦
೧೦ ಟೋಪಿ ಆಗುವ ಒಂದು ಬಂಡಲ್ ದಾರದ ಕ್ರಯ ೩	೧೩	೦	
ಹಾರ್ಸ್ ಟೋಪಿ ಹೊಲಿಯುವ ಕೊಕ್ಕೆ ಸೂಜಿ ೧ಕ್ಕೆ	೦	೧	೯
ಈ ದಾರದಲ್ಲಿ ಆದ ಟೋಪಿ ಡಜನ್ ೧ಕ್ಕೆ	೧೩	೩	೦

ವಿ ಪಿ ಯಿಂದಲೂ ರವಾನಿಸುತ್ತೇವೆ

ವಿಳಾಸ— ಸಿ ರಘುನಾಥ ಕಾಮತ್, ವೂಲ್ ಮರ್ಚಂಟ್ ಬೋಳಾರ, ಮಂಗಳೂರು.

ವೃತ್ತಾಂತ ಪತ್ರಿಕೆ

೧

ಸನ್ ೧೯೦೭ ನೇ ಇಸವಿ ಜನವರಿ ತಾ|| ೩೧ನೇ ಗುರುವಾರ

ಪರ್ಷಿಯಾ ರಾಜ್ಯದ ಷಾ ಸುಲ್ತಾನರ ಮರಣವು.

ಅಫ್ಘಾನಿಸ್ಥಾನದ ಪಶ್ಚಿಮ ಪಾರ್ಶ್ವದಲ್ಲಿರುವ ಪರ್ಷಿಯಾ (ಈರಾನ್) ರಾಜ್ಯದ ಷಾ ಸುಲ್ತಾನರವರ ಕಳೆದ ನೆ— ಕಾಲವಾದರೆಂದು ತಿಳಿಸಿರುತ್ತೇವಷ್ಟೆ ಇವರ ಆಳ್ವಿಕೆಯಲ್ಲಿ ನಡೆದ ಪರ್ಷಿಯಾ ರಾಜ್ಯಭಾರದ ಚರಿತ್ರೆಯನ್ನು ಕುರಿತು ಈಗ ಸ್ವಲ್ಪ ಮಟ್ಟಿಗೆ ಪ್ರಸ್ತಾಪ ಮಾಡುವುದು ಅವಶ್ಯವೆಂದು ಕಾಣುವುದು

ಷಾ ಸುಲ್ತಾನ್ ಮುಜಫರುದ್ದೀನ್‌ಯವರು ೧೮೫೩ ರಲ್ಲಿ ಹುಟ್ಟಿದರು ಅವರಿಗೆ ಐದು ವರುಷದಲ್ಲೇ ಅಲ್ಲಿನ ಪದ್ಧತಿಯ ಪ್ರಕಾರ ಯುವರಾಜರ ಪಟ್ಟವಾಯಿತು ಅವರ ತಂದೆ ನಜರುದ್ದೀನ್ ಷಾರವರ ಕೊಲೆಯಾಗುವ ತನಕ ಅಂದರೆ ೧೮೯೬ ರ ವರೆಗೆ ಆ ಯುವರಾಜರು ಒಂದು ಅಧಿಸತ್ತೆ ಗವರ್ನರಾಗಿ ಟೇಬ್ರಿಸ್ ನಗರದಲ್ಲಿದ್ದರು ಕೊಲೆಯ ಸುದ್ದಿ ತಿಳಿದ ಒಡನೆಯೇ ಮುಜಫರುದ್ದೀನ್ ಯುವರಾಜರು ಅಲ್ಲಿಂದ ಟೆಹರಾನ್ ರಾಜಧಾನಿಗೆ ಹೋದಾಗ್ಯೂ ಸಹೋದರರಿಗೆ ಹೆದರಿ ಸಿಂಹಾಸನವನ್ನು ಹತ್ತಲಿಲ್ಲ ಅವರಿಗೆ ಕಡೆಯಲ್ಲಿ ರಷ್ಯಾ ಮತ್ತು ಇಂಗ್ಲಿಷ್ ಗವರ್ನಮೆಂಟುಗಳ ಬೆಂಬಲ ಸಿಕ್ಕಿತು ರಷ್ಯಾ ಸೈನ್ಯಾಧಿಪತಿಯಾದ ಜನರಲ್ ಕೊಸ್ಸಕೋವ್‌ಸ್ಕಿಯವರೇ ಅರಮನೆಯ ದರ್ಬಾರ್ ಮಂದಿರದಲ್ಲಿ ಬಿಚ್ಚುಕತ್ತಿಯನ್ನು ಹಿಡಿದು ನಿಂತು ಮುಜಫರುದ್ದೀನ್‌ರವರಿಗೆ ಪಟ್ಟಕಟ್ಟಿ ಕಿರೀಟಧಾರಣೆಯನ್ನು ಮಾಡಿಸಿದರು

ಮುಜಫರುದ್ದೀನ್ ಷಾ ಸುಲ್ತಾನರು ಸಿಂಹಾಸನವನ್ನು ಹತ್ತಿದ ಮೇಲೆ ತಮ್ಮ ರಾಜ್ಯಭಾರದ ವಜೀರರನ್ನು ಕೆಲಸದಿಂದ ತೆಗೆದುಬಿಟ್ಟು ಇನ್ನು ಮುಂದೆ ಲಂಚ ತೆಗೆದುಕೊಂಡು ಯಾರಿಗೂ ಅಧಿಕಾರವು ದೊರಕಲಾರದೆಂತಲೂ ಯಥಾರ್ಥವಾದ ಯೋಗ್ಯತಾಸಿದ್ಧಿಯನ್ನು ಪಡೆದಿರತಕ್ಕವರನ್ನು ಮಾತ್ರ ಸರ್ಕಾರದ ಅಧಿಕಾರಗಳಿಗೆ ನೇಮಿಸಲಾಗುವುದೆಂತಲೂ ಪ್ರಕಟಮಾಡಿದರು ಆದರೆ ಸ್ವಲ್ಪಕಾಲದೊಳಗಾಗಿ ಸುಲ್ತಾನರ ಪ್ರಕಟನೆಯು ಸುಳ್ಳಾಯಿತು ರಾಜ್ಯಕಾರುಕರ್ದಿಗಳನ್ನು ಒಳ್ಳೇ ಸ್ಥಿತಿಗೆ ತರುವುದಕ್ಕೆ ಬದಲಾಗಿ ಸುಲ್ತಾನರು ಸ್ವಾರ್ಥವಾದ ಸುಖಸಂತೋಷಗಳಲ್ಲಿ ಮಗ್ನರಾದರು ಅವರ ಮತ್ತು ಅವರ ಆಸ್ಥಾನದವರ ದುಂದು ಖರ್ಚಿಗೂ ದುರ್ವ್ಯಯಗಳಿಗೂ ಹಣ ಬೇಕಾಯಿತು ಮೊದಲಿದ್ದ ವಜೀರನನ್ನೇ ಮತ್ತೆ ಕರೆಸಿ ಕೆಲಸಕ್ಕೆ ನೇಮಿಸಿಕೊಂಡರು ಈ ವಜೀರರು ವಿರ್ಬಾಡುಮನೆ ೧೮೯೮ ರಲ್ಲಿ ರಷ್ಯಾದಿಂದ ೧೫೦ ಲಕ್ಷ ರೂಪಾಯಿನ ಸಾಲ ಮಾಡಿ ಷಾಸುಲ್ತಾನರಿಗೆ ತಂದು ಕೊಟ್ಟರು ದ್ರವ್ಯವೆಲ್ಲಾ ಬೇಗನೆ ಖರ್ಚಾಗಿ ಹೋಯಿತು ಮತ್ತೆ ಹಣ ಬೇಕಾಯಿತು ವಜೀರರು ೧೯೦೦ ನೇ ಇಸವಿಯ ಒಪ್ಪಂದ ಪ್ರಕಾರ ರಷ್ಯಾ ರಾಜ್ಯದಿಂದ ೩೩೩|| ಲಕ್ಷ ರೂಪಾಯಿ ಸಾಲ ತಂದರು ಈ ಹಣವನ್ನೂ ಷಾಸುಲ್ತಾನರ ಅವರ ಆಸ್ಥಾನಿಕರೂ ನಾನಾರೀತಿಯಲ್ಲಿ ಖರ್ಚು ಮಾಡಿದ್ದಲ್ಲದೆ, ಸುಲ್ತಾನರು ದುಂದುಖರ್ಚು ಮಾಡಿಕೊಂಡು ಯೂರೋಪಿನ ರಾಜ್ಯಗಳಲ್ಲಿ ಸಂಚಾರನೆ ಮಾಡಿ ಮುಗಿಸಿಬಿಟ್ಟರು ತರುವಾಯ ೧೯೦೨ ರಲ್ಲಿ ರಷ್ಯಾದಿಂದ ಮೂರನೇ ಸಲ ೧| ಕೋಟಿ ರೂಪಾಯಿ ಸಾಲ ಮಾಡಿದರು ಹೀಗೆ ಪರ್ಷಿಯಾ ಸುಲ್ತಾನರು ಬಹಳವಾಗಿ ರಷ್ಯಾದಲ್ಲಿ ಸಾಲಗಳನ್ನು ಮಾಡಿಬಿಟ್ಟದ್ದರಿಂದ ಆ ಗವರ್ನಮೆಂಟಿನ ಅಧಿಕಾರಿಗಳು ಸುಲ್ತಾನರ ಆಸ್ಥಾನದಲ್ಲೂ ರಾಜ್ಯದಲ್ಲೂ ಹೆಚ್ಚಿಕೊಂಡವು ಆಮೇಲೆ ೧೯೦೩ ರಲ್ಲಿ ಇಂಗ್ಲಿಷ್ ಗವರ್ನಮೆಂಟಿನವರು ಲಾರ್ಡ್ ಕರ್ಜನ್‌ರವರನ್ನು ಪಡಗಿನ ಸೈನ್ಯ ಸಹಿತ ಪರ್ಷಿಯಾಕ್ಕೆ ಕಳುಹಿಸಿಕೊಟ್ಟು, ಅವರ ಮೂಲಕ ಮುಜಫರುದ್ದೀನ್‌ಯವರಿಗೆ—ನೀವು ಈ ರೀತಿ ರಷ್ಯಾ ಗವರ್ನಮೆಂಟಿನವರ ವಶವರ್ತಿಗಳಾಗುವುದು ಯೋಗ್ಯವಾದದ್ದಲ್ಲವೆಂತಲೂ ಇಂಗ್ಲಿಷ್ ಗವರ್ನಮೆಂಟಿನವರು ಅಷ್ಟು ಅವಕಾಶ ಕೊಡತಕ್ಕವರಲ್ಲವೆಂತಲೂ ತಿಳಿಯಪಡಿಸಿದರು

ಅತ್ತಲಾಗಿ ಪರ್ಷಿಯಾ ರಾಜ್ಯದೊಳಗೇನೇ ಪ್ರಜೆಗಳು ರಾಜ್ಯಭಾರದ ವಿಷಯದಲ್ಲಿ ತುಂಬಾ ಅಸಮಾಧಾನ ಪಟ್ಟು ಗೊಣಗುಟ್ಟಲಾರಂಭಿಸಿದರು ೧೯೦೩ ರಲ್ಲಿ ರಾಜ್ಯದ ಹಲವು ಸ್ಥಳಗಳಲ್ಲಿ ಪ್ರಜೆಗಳು ದಂಗೆಗಳನ್ನು ಎಬ್ಬಿಸಿ ತಮ್ಮ ಅಸಮಾಧಾನವನ್ನು ಪ್ರಕಟ ಮಾಡಿದರು ಮತ್ತು ಆ ವರುಷ ವಜೀರರು ತಮ್ಮ ಸ್ಥಾನಕ್ಕೆ ಇನ್ನೊಬ್ಬನನ್ನು ನೇಮಿಸಿ

...ಹಿದು ಅನುಮಾನ ಪಟ್ಟು ಒಬ್ಬ ದೊಡ್ಡ ಮನುಷ್ಯನನ್ನು ಕೊಲ್ಲಿಸಿಬಿಟ್ಟರು ಎಂಬುದಾಗಿ ಪ್ರತಿವಾದ ಹುಟ್ಟಿದ್ದರಿಂದ ಆ ವಜೀರರನ್ನು ಕೆಲಸದಿಂದ ತೆಗೆದುಬಿಟ್ಟರು. ಪ್ರಜೆಗಳು ಈ ವಜೀರನಿಂದಲೆ ರಾಜ್ಯಭಾರವು ಕೆಟ್ಟುಹೋಯಿತೆಂದು ಹೇಳುತ್ತಾ ಬಂದರು. ಆದರೆ ಆತನನ್ನು ಕೆಲಸದಿಂದ ತೆಗೆದುಹಾಕಿದಾಗ್ಯೂ ಗವರ್ನಮೆಂಟಿನ ಕಾರುಬಾರಿನಲ್ಲೇನೋ ಚನ್ನಾಗಲೇ ಇಲ್ಲ. ವೈದಿಕರೇ ಮುಂತಾದ ಪುರೋಹಿತರು ಮುಂದಾಳುಗಳಾಗಿ ನಿಂತು, ರಾಜ್ಯಭಾರ ಕ್ರಮಗಳನ್ನು ಬದಲಾವಣೆ ಮಾಡಬೇಕೆಂದು ಹಟಹಿಡಿದುಕೊಳ್ಳುತ್ತಾ ಗಲಭೆಮಾಡುತ್ತಾ ಬಂದು, ಕಳೆದ ವರುಷ ಷಾಸುಲ್ತಾನರನ್ನು ಹೋಗಿ ಕಾಣಿಸಿಕೊಂಡು, ಅವರಲ್ಲಿ ತಮ್ಮ ಅಭಿಮತವನ್ನು ಅರಿಕೆಮಾಡಿಕೊಂಡರು. ಸುಲ್ತಾನರು ಅವರನ್ನೂ ಅವರ ಮನವಿಯನ್ನೂ ತಿರಸ್ಕಾರಮಾಡಿದರು. ...ಕ ಮುಖಂಡರು ಅಸಮಾಧಾನಪಟ್ಟು ರಾಜಧಾನಿಯಿಂದ ಬಿಟ್ಟುಹೋದರು. ಒಡನೆಯೇ ರಾಜಧಾನಿಯಾದ ಟೆಹೆರಾನ್ ಪಟ್ಟಣದಲ್ಲಿ ವರ್ತಕರುಗಳೆಲ್ಲರೂ ಅಂಗಡಿಮುಂಗಟ್ಟುಗಳನ್ನು ಮುಚ್ಚಿಬಿಟ್ಟರು. ಕೆಲವು ಸಹಸ್ರಪ್ರಜೆಗಳು ...ರುವ ಇಂಗ್ಲಿಷ್ ರಾಯಭಾರಿಯ ಆಶ್ರಯಕ್ಕೆ ಹೋಗಿ ಸೇರಿಕೊಂಡು, ತಮ್ಮ ಮಾನ ಧನ ಪ್ರಾಣಗಳನ್ನು ಸಂರಕ್ಷಣೆ ಮಾಡಬೇಕೆಂದು ಬೇಡಿಕೊಂಡರು.

ಕಡೆಗೆ ಷಾರವರಿಗೆ ಜ್ಞಾನೋದಯವಾಯಿತು. ಪ್ರಜೆಗಳ ಅಭಿಮತವನ್ನು ನಡಿಸಿಕೊಡಬೇಕೆಂಬದರ ಮೇಲೆ ದೃಷ್ಟಿ ಬಿದ್ದಿತು. ಅದುವರೆಗೆ ತಮಗೆ ಸಲಹೆ ಕೊಡುತ್ತಿದ್ದ ಮಂತ್ರಿಗಳನ್ನು ಕೆಲಸದಿಂದ ತೆಗೆದುಹಾಕಿದರು. ಪ್ರಜಾಭಿಪ್ರಾಯದಂತೆ ಒಂದು ಪ್ರತಿನಿಧಿಸಮಾಜವನ್ನು (ಪಾರ್ಲಿಮೆಂಟನ್ನು) ಸ್ಥಾಪಿಸಿಕೊಡುವುದಾಗಿ ಸಾರಿಸಿದರು. ಪ್ರಜೆಗಳು ಹ...ಟ್ಟು ಪ್ರತಿನಿಧಿಗಳನ್ನು ಚುನಾಯಿಸಿದರು. ಕಳೆದ ...ನೆ ಅಕ್ಟೋಬರ್ ತಿಂಗಳಲ್ಲಿ ಮೊದಲನೇ ಪ್ರತಿನಿಧಿಸಭೆಯು ಕೂಡಿತು. ಪ್ರಜೆಗಳ ಸಂತೋಷ ಸಂಭ್ರಮ ಕೋಲಾಹಲಗಳ ಮಧ್ಯೆ ಮುಜಫರುದ್ದೀನ್ ಷಾಸುಲ್ತಾನರೇ ಈ ಪ್ರತಿನಿಧಿಸಭೆಯನ್ನು ಪ್ರಾರಂಭಮಾಡಿದರು.

ಈ ಪ್ರಕಾರ ಪರ್ಷಿಯಾದಲ್ಲಿ ಹೊಸ ಗವರ್ನಮೆಂಟು ...ರ್ಪಾಟಾಗಿರುತ್ತದೆ. ಈಗ ರಾಜ್ಯಭಾರ ಕಾರ್ಯಗಳನ್ನು ನಡಸುವುದಕ್ಕೆ ಅವರಿಗೆ ಹಣಬೇಕಾಯಿತು. ಮಂತ್ರಿಗಳು ಪರರಾಜ್ಯಗಳಿಂದ ಸಾಲಮಾಡಿ ತರೋಣವೆಂದು ಸೂಚಿಸಿದರು. ಇಂಗ್ಲಿಷ್ ಮತ್ತು ರಷ್ಯಾ ಗವರ್ನಮೆಂಟುಗಳವರು ತಲಾ ೩೦ ಲಕ್ಷ ರೂಪಾಯಿನಂತೆ ಸಾಲ ಕೊಡುವುದಕ್ಕೆ ಸಿದ್ಧರಾಗಿದ್ದರು. ಆದರೆ ಅವರು ಆ ಹಣವನ್ನು ...ಸೂ ಗವರ್ನಮೆಂಟಿನ ರಾಜಕೀಯ ವಿಚಾರಗಳಿಗೆ ಮತ್ತಾವ ರೀತಿಯಲ್ಲೂ ಖರ್ಚುಮಾಡಕೂಡದೆಂದು ...ಸಿದರು. ಪರ್ಷಿಯಾ ಹೊಸ ಪಾರ್ಲಿಮೆಂಟಿನವರು ಅವ...ಪ್ಪರೆ ತಮ್ಮ ದೇಶದಲ್ಲೇ ಸಾಹುಕಾರರಿಂದ ತಮಗೆ ಬೇಕಾಗುವಷ್ಟು ಹಣವನ್ನು ಸಾಲಮಾಡೋಣವೆಂದು ಪ್ರಯತ್ನಪಟ್ಟರು. ದುರ್ದೈವಕ್ಕೆ ಸರಿಯಾಗಿ ಹಣವಂತರ್ಯಾರೂ ...ಕೊಡದೆ ಹೋದರು.

ಈ ರೀತಿಯಾದ ಈಚಿನ ಪರ್ಷಿಯಾ ರಾಜ್ಯದ ಚರಿತ್ರೆ... ರಾಜ್ಯಭಾರ ಮಾಡುವವರ ದುಂದು ಖರ್ಚುಗಳೂ ...ದಾಗುವ ಕೇಡುಗಳೂ ಯಾವ ರೀತಿ ಪರಿಣಾಮ ...ವುವೋ, ಪರರಾಜ್ಯಗಳಿಂದ ಸಾಲ ತಂದು ದುರ್ವಿನಿಯೋಗಮಾಡುವುದರ ಫಲಿತಾಂಶಗಳೇನೋ ಚನ್ನಾಗಿ ...ದು ಬರುವುವು. ಇತ್ತಲಾಗಿ ಇಂಡಿಯಾ ಗವರ್ನಮೆಂಟಿನವರು ಕೂಡ ಪರದೇಶಗಳಲ್ಲಿ ಸಾಲ ಮಾಡಿ ಹಣ ತಂದಿದ್ದಾರೆ. ಈ ಸಾಲಕ್ಕೂ ಪರ್ಷಿಯಾ ರಾಜ್ಯದವರು ಮಾಡಿದ ಮೇಲ್ಕಂಡಂಥಾ ಸಾಲಗಳಿಗೂ ಯಾವ ಹೋಲಿಕೆಯೂ ಇರಲಾರದು. ಹಿಂದುಸ್ಥಾನದ ಸಾಲವು ಈ ರಾಷ್ಟ್ರದ ಬಡತನಕ್ಕೆ ಕಾರಣವೆ... ಉಚ್ಛ್ರಾಯಸ್ಥಿತಿಗೆ ತಂದು ವೃದ್ಧಿ ಮಾಡುತ್ತದೆ. ಆ ಸಾಲದ ಹಣದಿಂದ ಇಂಡಿಯಾ ಗವರ್ನಮೆಂಟಿನವರು ಅನೇಕವೂ ಅಗಾಧವೂ ಆದಂಥಾ ...ರೈಲ್ವೆ ಮೊದಲಾದ ಕಾಮಗಾರಿಗಳನ್ನು ಮಾಡಿಸಿ, ಅನೇಕ ಬಂಜರು ಭೂಮಿಗಳನ್ನೂ ಕಾಡು ಪ್ರದೇಶಗಳನ್ನೂ ಫಲಭರಿತವಾಗುವಂತೆಯೂ, ಧಾನ್ಯಾದಿಗಳು ಅತಿ...ನ ಒಂದು ಭಾಗದಿಂದ ಮತ್ತೊಂದು ಭಾಗಕ್ಕೆ ಸಾಗಿ...ಗುವಂತೆಯೂ ಏರ್ಪಾಡು ಮಾಡಿರುತ್ತಾರೆ.

ಪರ್ಷಿಯಾ ರಾಜ್ಯದ ಹೊಸ ಪಾರ್ಲಿಮೆಂಟು ಯಾವ ...ಲ್ಲಿ ರಾಜಕೀಯ ಕಾರ್ಯಭಾಗಗಳನ್ನು ನೆರವೇರಿಸಿಕೊಂಡು ಬರುವುದೋ ಎಂದು ಕುತೂಹಲಪೂರ್ವಕವಾಗಿ ನೋಡುತ್ತಾ ಬರಬೇಕಾಗಿದೆ. ಈ ಪಾರ್ಲಿಮೆಂಟಿನ ದೆಸೆಯಿಂದ ಆ ರಾಜ್ಯವು ಪೂರ್ವದಂತೆ ನೆಮ್ಮದಿಯನ್ನೂ ಐಶ್ವರ್ಯವನ್ನೂ ಕೀರ್ತಿಯನ್ನೂ ಪಡೆದುಕೊಂಡೀತೆಂದು ನಿರೀಕ್ಷಿಸುತ್ತೇವೆ.

ಒಳದೇಶದ ವೃತ್ತಾಂತಗಳು.

ಶ್ರೀಮನ್ಮಹಾರಾಜರವರ ಖಾಯಂ ಪ್ರೈವೆಟ್ ಸೆಕ್ರೆಟರಿ ಮ॥ ಮೆಕಾನಕಿಯವರು ಇನ್ನೂ ಮೂರು ತಿಂಗಳ ರಜಾ ಪಡೆದುಕೊಂಡಿರುವರೆಂದು ಕೇಳಿದೆವು

****

ದೇವನಹಳ್ಳಿ ಟರ್ನ್ ಮೆಡಿಕಲ್ ಪ್ರಾಕ್ಟಿಷನರ್ ಮ॥ ಎಂ. ಗೋವಿಂದಶೆಟ್ಟರವರಲ್ಲಿ ಬಿಕರಿಯಾಗುವ ಔಷಧಾದಿಗಳ ವಿವರಪಟ್ಟಿಯುಳ್ಳ ಸಪ್ಲಿಮೆಂಟನ್ನು ಈ ವಾರದ ಪತ್ರಿಕೆಯ ಕೂಡ ಪ್ರಕಟಿಸಿರುತ್ತೇವೆ

****

ಫೆಬ್ರವರಿ ತಾ. ೮ನೆ ಶುಕ್ರವಾರದ ದಿನ ಬೆಂಗಳೂರು ಸಿಟಿ ಮತ್ತು ದಂಡಿನ ಪ್ರಜೆಗಳು ಲಾಲ್ ಬಾಗ್ ಉದ್ಯಾನವನದಲ್ಲಿ ಶ್ರೀಮನ್ಮಹಾರಾಜರವರಿಗೆ ಒಂದು ಅಡ್ರೆಸ್ಸನ್ನು ಒಪ್ಪಿಸಬೇಕೆಂದು ಗೊತ್ತುಮಾಡಿದಾರೆ.

****

ಬೆಂಗಳೂರು ದಂಡಿನಲ್ಲಿರುವ ರಾಯಬಹದ್ದೂರ್ ಮ॥ ನಾರಾಯಣಸ್ವಾಮಿ ಮೊದಲಿಯಾರ್‌ರು ತಮ್ಮ ಕಸಬುದಾರಿ ವಿದ್ಯಾಶಾಲೆಗೆ ಶ್ರೀಮನ್ಮಹಾರಾಜರವರನ್ನು ಕರೆಸಿಕೊಂಡು, ಸತ್ಕಾರ ಮಾಡುವವರಾಗಿದ್ದಾರೆಂದು ಕೇಳುತ್ತೇವೆ

****

ಶ್ರೀಮನ್ಮಹಾರಾಜರವರು ನಾಳೆ ಭಾನುವಾರ ಬೆಂಗಳೂರಿಂದ ಹೊರಟು ತಾ. ೫ರಲ್ಲಿ ಶೃಂಗೇರಿಯಲ್ಲಿದ್ದು ಮರುದಿನ ಹಿಂತಿರುಗಿ ತಾ. ೭ಕ್ಕೆ ಬೆಂಗಳೂರಿಗೂ, ಅಲ್ಲಿಂದ ತಾ. ೧೦ಕ್ಕೆ ರಾಜಧಾನಿಗೂ ದಯಮಾಡುವರೆಂದು ವರ್ತಮಾನವಿದೆ

****

ಬೆಂಗಳೂರು ಸಿಟಿಯ ನೌಕ್ರಿ ಜನರಿಗಾಗಿ ಒಂದು ನೈಟ್ ಪಾಠಶಾಲೆಯನ್ನು ಸ್ಥಾಪಿಸಬೇಕೆಂತಲು, ಆ ಜನರಲ್ಲೇ ಒಂದು ಪರಸ್ಪರ ಸಹಾಯಕ ಸಂಘವನ್ನು ಪ್ರಾರಂಭಿಸಿ ಅವರ ಕಸಬನ್ನು ಅಭಿವೃದ್ಧಿಗೆ ತರಬೇಕೆಂತಲೂ ಸರ್ಕಾರದವರು ಹುಕುಂ ಕೊಟ್ಟಿದಾರೆ.

****

ಕಳೆದವಾರ ಬೆಂಗಳೂರು ಡಿಸ್ಟ್ರಿಕ್ಟ್ ಆಫೀಸ್ ಮೈದಾನದಲ್ಲಿ ಸಲ್ಲಿಯ ಹತ್ತಿರ ಒಬ್ಬ ಮನುಷ್ಯನು ಕೂತ ಹಾಗೇ ಸತ್ತಿದ್ದನು ಸರ್ಕಾರದವರು ಅವನ ಮೈಶೋಧನೆ ಮಾಡಿದಾಗ ಆಸ್ಪತ್ರೆಯ ಚೀಟಿ ಅವನ ಜೇಬಿನಲ್ಲಿ ಸಿಕ್ಕಿತು ಅವನು ಕ್ಷಯರೋಗದಿಂದ ಕಾಲವಾದನೆಂದು ಪ್ರಕಟವಾಗಿದೆ

****

ಶ್ರೀಮನ್ಮಹಾರಾಜರವರ ಸಂಗಡ ಕಲ್ಕತ್ತಾ, ಆಗ್ರಾ ಮುಂತಾದ ಕಡೆಗಳಿಗೆ ಹೋಗಿದ್ದ ಮಿಲಿಟರಿ ಬಕ್ಷಿ ಮ॥ ಸುಬ್ಬರಾಜೆ ಅರಸಿನವರು ಕಾಯಿಲೆಯಾಗಿ ಕಳೆದ ಶನಿವಾರ ಬೆಳಗ್ಗೆ ರಾಜಧಾನಿಗೆ ವಾಪಸು ಬಂದರು ಈಗ ಅವರಿಗೆ ಕಾಯಿಲೆ ಸ್ವಲ್ಪ ವಾಸಿಯಾಗುತ್ತಿದೆ ಎಂದು ತಿಳಿಸಲು ಸಂತೋಷವಾಗಿದೆ

****

ಪೂನಾ ಸರ್ಕಾರಿ ಭೂಗರ್ಭಶಾಲಾ ಪಂಡಿತರು ತಮ್ಮ ೩೦ ಮಂದಿ ವಿದ್ಯಾರ್ಥಿ ಸಮೇತ ಕಳೆದವಾರ ಬೆಂಗಳೂರು, ಕೋಲಾರ, ಶಿವಸಮುದ್ರ, ಶ್ರೀರಂಗಪಟ್ಟಣ, ಈ ಮೊದಲಾದ ಕಡೆಗಳಲ್ಲಿ ಸಂಚಾರಮಾಡಿ, ಭೂಶೋಧಕ ವಿಧಾನ ಗಣಿಗಳ ಲಕ್ಷಣಾದಿಗಳನ್ನು ವಿದ್ಯಾರ್ಥಿಗಳಿಗೆ ತೋರಿಸಿ ಕರೆದುಕೊಂಡು ಹೋದರೆಂದು ಪ್ರಕಟವಾಗಿದೆ

****

ಮೊನ್ನೆ ಸೋಮವಾರ ಬೆಂಗಳೂರು ಸಿಟಿಯಲ್ಲಿ ೩—೪ ವರುಷಗಳ ಮೂವರು ಬ್ರಾಹ್ಮಣ ಹುಡುಗರು ಎಲ್ಲೋ ತಪ್ಪಿಸಿಕೊಂಡು ಹೋದರು ಸಾಯಂಕಾಲಕ್ಕೆ ಗಂಗೈಯ್ಯನವರು ಆ ಹುಡುಗರನ್ನು ಅವರ ಮೈಮೇಲಿದ್ದ ಒಡವೆಗಳ ಸಮೇತ ಕರೆದುಕೊಂಡು ಹೋಗಿ ಅವರವರ ಪೋಷಕರ ವಶಕ್ಕೆ ಬಿಟ್ಟರೆಂದು ಒಬ್ಬ ಬಾತ್ಮೀದಾರರು ಬರೆಯುತ್ತಾರೆ

****

ಗಣಿ ಚಿನ್ನವೆಂಬುದನ್ನು ಪರೀಕ್ಷೆ ಮಾಡುವುದಕ್ಕೆ ಸರ್ಕಾರಿ ಅಧಿಕಾರಿಯ ಬಳಿಗೆ ಪೋಲೀಸಿನವರೂ ಮ್ಯಾಜಿಸ್ಟ್ರೇಟರೂ ಕೋಲಾರದ ಗಣಿ ಪ್ರಾಂತ್ಯದಿಂದ ಕಳುಹಿಸುತ್ತಿದ್ದರು. ಇದುವರೆಗೆ ಈ ಚಿನ್ನವನ್ನು ಆ ಅಧಿಕಾರಿಯು ವಾಪಸು ಕೊಡದೆ ಸರ್ಕಾರದ ಖಜಾನೆಗೆ ಸೇರಿಸುತ್ತಿದ್ದರು. ಇನ್ನುಮೇಲೆ ಹಾಗೆ ಪರೀಕ್ಷೆಮಾಡಿ ಉಳಿಯುವ ಚಿನ್ನವನ್ನೆಲ್ಲಾ ಪೋಲೀಸಿನವರಿಗಾಗಲಿ ಮ್ಯಾಜಿಸ್ಟ್ರೇಟರಿಗಾಗಲಿ ವಾಪಸು ಕೊಡಬೇಕೆಂದು ಸರ್ಕಾರದವರು ಆ ಅಧಿಕಾರಿಗೆ ತಿಳಿಸಿದಾರೆ.

****

ಅರಮನೆ ಆಫೀಸರ್ ಮ॥ ರಾಮಕೃಷ್ಣರಾಯರೂ ಮ॥ ನಾಯರ್ ಎಂಬುವರೂ ಕೆಲವು ವಿದ್ಯಾರ್ಥಿಗಳ ಸಂಗಡ ಕಳೆದ ಭಾನುವಾರದ ದಿನ ರಾಜಧಾನಿಯ ಚಾಮುಂಡಿ ಬೆಟ್ಟದ ಮೇಲೆ ಸಂತೋಷ ಸಂಭ್ರಮದಿಂದ ದಿನವನ್ನು ಕಳೆದು ಬರಬೇಕೆಂದು ಹೋಗಿದ್ದರು. ಆಗ್ಗೆ ಅವರ ಸಂಗಡ ಹೋದ ೧೮ ವರುಷದ ಶ್ರೀವೈಷ್ಣವ ವಿದ್ಯಾರ್ಥಿಯೊಬ್ಬನು ಮೆಟ್ಟಿಲು ಹತ್ತುತ್ತಾ ಇರುವಲ್ಲಿ ಎದೆಶೂಲೆ ಹುಟ್ಟಿ ಅಲ್ಲೇ ಕಾಲವಾದನೆಂದು ತಿಳಿದುಬಂದಿದೆ ಈ ಹುಡುಗನು ಘನಪಾಠಿ ಹಿಂಗ್ಲಚಾರ್ಯರ ಮೊಮ್ಮಗನೆಂತಲೂ ಇಲ್ಲಿನ ಸ್ಟೂಡೆಂಟ್ಸ್ ಹೋಂನಲ್ಲಿದ್ದು ವಿದ್ಯೆ ಕಲಿಯುತ್ತಿದ್ದನೆಂತಲೂ ಕೇಳಿದೆವು

****

ಜಾವಾದ್ವೀಪದ ಗವರ್ನಮೆಂಟಿನವರು ಉತ್ಕೃಷ್ಟವಾದ ಗೋಕಾಯಿಗಳನ್ನು ಕೊಂಡು ತರುವಂತೆ ಕ್ಯಾಪ್ಟನ್ ವಾಂಡರ್ಲೀನ್ ಎಂಬಾತನನ್ನು ಅಲ್ಲಿಂದ ಹಿಂದುಸ್ಥಾನಕ್ಕೆ ಕಳುಹಿಸಿದಾರೆ. ಈತನು ಕಳೆದವಾರ ನಮ್ಮ ಸಂಸ್ಥಾನದಲ್ಲೂ ರಾಜಧಾನಿಯಲ್ಲೂ ಸಂಚಾರಮಾಡಿ ಗ್ರಾಮಾಂತರಗಳ ಮೇಲೆ ಸುತ್ತಿ ೨೫೦ ಸೊಗಸಾದ ರಾಸುಗಳನ್ನು ಕೊಂಡು ಬೆಂಗಳೂರಿಗೆ ತೆಗೆದುಕೊಂಡುಹೋಗಿ ಅಲ್ಲಿಂದ ಮದರಾಸಿಗೆ ಸಾಗಕಳುಹಿಸಿದನು ಆ ಪೈಕಿ ಒಂದು ಜೊತೆ ಸುಂದರವಾದ ಎತ್ತಿಗೆ ೮೦೦ ರೂಪಾಯಿ ಕೊಟ್ಟು ಕೊಂಡುಕೊಂಡನೆಂತಲೂ, ಇನ್ನೂ ಕೆಲವು ರಾಸುಗಳನ್ನು ಆಗಮಾಡಿಕೊಂಡು ಹೋಗುವುದಕ್ಕೋಸ್ಕರ ಆತನು ಬೆಂಗಳೂರಿನಲ್ಲೇ ಇರುತ್ತಾನೆಂತಲೂ ತಿಳಿದುಬಂದಿದೆ.

****

ಮೈಸೂರು ಮಹಾರಾಜಾ ಕಾಲೇಜಿನ ಸಹಾಯೋಪಾಧ್ಯಾಯರಾದ ಮ॥ ಟಿ ಡೆನ್ಹಾಂ ಎಂಬುವರು ಕಳೆದ ತಾ ೧೧ರಲ್ಲಿ ತಮ್ಮ ನಾಯನ್ನು ಬೆಂಗಳೂರಿಗೆ ಕರೆದುಕೊಂಡು ಹೋಗಿ, ಅಲ್ಲಿ ಅವರ ಪತ್ನಿಯ ಬಳಿ ಬಿಟ್ಟು ವಾಪಸು ಬಂದರು ಆ ನಾಯಿ ಒಂದು ದಿನ ಮಾತ್ರ ಅಲ್ಲಿದ್ದು ರಾತ್ರಿಯೇ ಅಲ್ಲಿಂದ ಬರುವ ರೈಲ್ ಮಾರ್ಗವನ್ನು ಹಿಡಿದು ರೈಲು ತಲಪುವುದಕ್ಕೆ ಮುಂಚೆಯಾಗಿ ಬೆಳಗಿನ ಝಾವ ೫॥ ಗಂಟೆಗೆ ಮೈಸೂರಿಗೆ ಬಂದು ಅವರ ಬಂಗಲೆಯನ್ನು ಸೇರಿತು ಆ ದಿನವೆಲ್ಲಾ ಬರೀ ನೀರು ಮಾತ್ರ ಸ್ವಲ್ಪ ಕುಡಿದು ದಣಿವಾರಿಸಿಕೊಂಡಿತು ಈಗ ಸುಖವಾಗಿದೆ ಇದರಿಂದ ನಾಯಿಗೆ ಇರುವ ಸ್ವಾಮಿಭಕ್ತಿಯೂ ಜ್ಞಾಪಕಶಕ್ತಿಯೂ ಎಷ್ಟು ಮಟ್ಟಿನವೋ ವಾಚಕರೇ ತಿಳಿದುಕೊಳ್ಳಬಹುದು

ಬಹುಮಾನ ಪಡೆದ ವರ್ತಮಾನಗಳು.

[ಇವೆರಡು ಬಾತ್ಮಿಗಳನ್ನೂ ಕಳುಹಿಸಿದ ಇಬ್ಬರು ಬಾತ್ಮೀದಾರರಿಗೆ ಬಹುಮಾನವನ್ನು ಹಂಚಿ ಒಂದೊಂದು ರೂಪಾಯಿ ಕಳುಹಿಸಿರುತ್ತೇವೆ]

೧ ಬೆಂಕಿಯಿಂದ ಆದ ಕೆಡಕು

ನಾನು ನೆನ್ನೆ ಅನವಟ್ಟಿಗೆ ಹೋಗಿದ್ದೆ. ಉತ್ತರ ದಿಗ್ಭಾಗದಿಂದ ಒಮ್ಮಿಂದೊಮ್ಮೆ ಹೊಗೆ ಎದ್ದಿತು. ಘಾಬರಿಯಿಂದ ಅಲ್ಲಿ ಹೋಗುವದರೊಳಗೆ ಸದರಿ ಗ್ರಾಮಕ್ಕೆ ಸಮೀಪ ಇರುವ ದೇವಸ್ಥಾನದ ಪಕ್ಕದಲ್ಲಿ ಬೆಂಕಿ ಬಿದ್ದಿತ್ತು ಅಲ್ಲಿ ಸುಮಾರು ೧೨ ಮನೆಗಳು ಸುಡುತ್ತಿದ್ದವು. ಅಷ್ಟರಲ್ಲಿ ಆಸ ಟ್ಟಯಿಂದ ಇಲ್ಲಿನ ಪಟೇಲರಾದ ನಾಗ ಗೋಪಾಲರಾಯರು ಬಂದರು ಎಲ್ಲಾ ಜನರು ನೋಡುತ್ತ ನಿಂತಿದ್ದರು ಸದರಿ ನಾಯಗರು ಒಂದು ದೊಣ್ಣೆಯಿಂದ ೨—೩ ಜನಕ್ಕೆ ಹೊಡೆದರು ಕೂಡಲೆ ಎಲ್ಲರು ಅನವಟ್ಟಿ ಜನರು ಕೊಡಗಳು ತೆಗೆದುಕೊಂಡು ನೀರಿಗೆ ಹೋದರು. ಅಷ್ಟರೊಳಗೆ ಲಕ್ಷ್ಮಿಯು ಬಂದು ನನ್ನ ಕೂಸು ಸಾಯುತ್ತಿದೆ, ತೆಗೆಯಿರಿ ಎಂದಳು ಗೌಡರು ಬಹಳ ಘಾಬರಿ ಆಗಿ ಹುಡುಗನನ್ನು ತೆಗೆದವರಿಗೆ ಬಾರಿ ಇನಾಮು ಕೊಡುತ್ತೇನೆಂದು ಘಟ್ಟಿಯಾಗಿ ಕೂಗಿದರು ಬಹು ಧೈರ್ಯಶಾಲಿಯಾದ ರುದ್ರ ಮತ್ತು ರಾಮ ಸಹ ಹೊಕ್ಕು ಸದರಿ ಕೂಸನ್ನು ತೆಗೆದಲ್ಲದೆ ಸುಡುತ್ತಿದ್ದ ಮನೆ ದನ ಪಣ್ಯತನ್ನು ಉಳಿಸಿದರು ಮತ್ತು ಅನವಟ್ಟಿ ಕಡೆಯಿಂದಲೇ ಒಬ್ಬ ಹೆಣ್ಣುಮಗಳು ಅತ್ತುಕೊಳ್ಳುತ್ತಾ ಓಡಿಬಂದಳು ಅಂತು ೨ ಮನೆಗಳು ಉಳಿದವು ಆ ಹೆಣ್ಣುಮಗಳ ಮನೆ ಒಳಗೆ ಮಾದನೆಂಬವನನ್ನು ಇಳಿಸಿ ಅಲ್ಲಿದ್ದ ಕೆಲವು ಸಾಮಾನು ತೆಗಿಸಿ ಆ ಹೆಂಗಸಿಗೆ ಕೊಟ್ಟರು. ಬಾಕಿ ಭತ್ತ ರಾಗಿ ಸುಡುವದು ಕಂಡು ಬಹಳ ಗೋಳಿಡಲಾರಂಭಿಸಿದರು. ಆ ದಿವಸದ ಗೋಳು ವರ್ಣಿಸಲು ಅಸಾಧ್ಯ ಅಂತು ಈ ಬೆಂಕಿಯಿಂದ ೬೦೦—೭೦೦ ರೂಪಾಯಿನ ಮಾಲುಗಳು ಲುಕ್ಸಾನು ಆಯಿತೆಂದು ಕೇಳಬರುದಾಗಿದೆ ದನವಿದ ಕೊಟ್ಟಿಗೆಯಲ್ಲಿ ಅಡಿಗೆ ಮಾಡುತ್ತಿದ್ದ ರಾಮ ಪಂಡಿತನ ಹೆಂಡತಿಯು ಹೊರಗೆ ಹೋಗಿದ್ದಳು ಬದಿಯಲ್ಲಿ ನಿಲಿಸಿದ್ದ ಕಬ್ಬಿನ ಸಿಪ್ಪೆಗೆ ಬೆಂಕಿ ಹತ್ತಿ ಸೂರಿಗೆ ವ್ಯಾಪಿಸಿತೆಂದು ಹೇಳಿದರು

೨ ಬೆಂಕಿಯ ಕಾಟ.

ತಾ ೨೪ನೇ ಗುರುವಾರ ಹಗಲು ೨ ಘಂಟೆ ಸಮಯಕ್ಕೆ ಶಿಕಾರಿಪುರ ತಾಲ್ಲೂಕು ಚಿಕ್ಕಮಾಗಡಿಗ್ರಾಮದಲ್ಲಿ ರಾಗಿಬಸಪ್ಪನೆಂಬಾತನ ಮನೆಗೆ ಬೆಂಕಿಯು ಪ್ರಥಮದಲ್ಲಿ ಪ್ರವೇಶಮಾಡಿ ಸುಟ್ಟುಹಾಕಿತು. ಈ ಕಾಲದಲ್ಲಿ ಈ ಗ್ರಾಮದ ಪಟೇಲರಾದ ವೀರಪ್ಪಗೌಡರೂ ಇವರ ಅಣ್ಣಂದಿರಾದ ವೀರಭದ್ರಪ್ಪನವರೂ ಸೇರಿ ಜಮಾಯಿಸಿ ಕೆಲಸದ ಬಗ್ಗೆ ಹೋಗಿದ್ದ ಜನರನ್ನು ಬಹಳ ಸಾಹಸದಿಂದ ಬರಮಾಡಿಕೊಂಡು ಬೆಂಕಿಯನ್ನು ಶಮನ ಮಾಡಿಸುತ್ತಾ ಬಂದರು ಬೆಂಕಿಯಾದರೋ ಈ ಗ್ರಾಮದ ಕೆಲವು ಭಾಗವನ್ನು ಆಹುತಿಗೊಳ್ಳುತ್ತದೆಂದು ನೋಡಿದವರಿಗೆಲ್ಲಾ ಭೀತಿ ಉಂಟಾಗಿತ್ತೇ ಹೊರತು ಸಮೀಪದಲ್ಲಿದ್ದ ಮನೆಗಳು ಎಷ್ಟು ಮಾತ್ರಕ್ಕೂ ಉಳಿಯುತ್ತವೆಂದು ತಿಳಿದಿರಲಿಲ್ಲ ಮತ್ತು ಬೆಂಕಿಗೆ ಸಹಾಯವಾಗಿ ಗಾಳಿ ಬೀಸಿದ್ದರಿಂದ ಸಮೀಪದಲ್ಲಿದ್ದ ತೆಂಗಿನಮರಗಳಿಗೆ ವ್ಯಾಪಿಸಿಕೊಂಡಿತು. ಈ ತೆಂಗಿನಮರದ ಗರಿಗಳು ಉರಿಯುತ್ತಾ ವಾಯುಮುಖದಿಂದ ದಿಕ್ಕುದಿಕ್ಕಿಗೂ ಹೋಗುತ್ತಿದ್ದವು ಆಗ್ಗೆ ಪ್ರತಿ ಒಂದು ಮನೆಯ ಮೇಲ್ಗಡೆಗೂ ಜನಗಳು ಕೊಡಗಳನ್ನು ತುಂಬಿಕೊಂಡು ಕುಳಿತಿದ್ದುದನ್ನು ನೋಡಿದರೆ ಮಹಾಪ್ರಯಾಸದಿಂದ ದಣಿದು ಬರುತ್ತಿರುವ ಅತಿಥಿಪುರುಷನಿಗೆ ಅರವಟ್ಟಿಗೆಯನ್ನಿಟ್ಟಿದ್ದಂತೆ ಕಾಣುತ್ತಿದ್ದಿತು. ಈ ಗ್ರಾಮದಲ್ಲಿ ಸ್ಕೂಲ್ ಮನೆಯು ಸಂಪೂರ್ಣವಾಗಿ ತಯಾರಾಗದೆ ಇರುವುದರಿಂದ ಮಾಸ್ತರು ಸರ್ಕಾರಿ ಸಾಮಾನುಗಳನ್ನು ಒಬ್ಬನ ಹುಲ್ಲುಮನೆಯಲ್ಲಿಟ್ಟುಕೊಂಡಿದ್ದ ಕಾರಣ ತುಂಬಾ ಭಯಪಟ್ಟು ಒಬ್ಬ ವಿದ್ಯಾರ್ಥಿಯ ಸಹಾಯದಿಂದ ಬೀದಿಗೆ ತಂದು ಕಾಯುತ್ತಿದ್ದರು. ೩ ಘಂಟೆ ವೇಳೆಗೆ ಬೆಂಕಿಯು ಪಕ್ಕದಲ್ಲಿದ್ದ ಅರಿಕಟ್ಟೆ ಮಲ್ಲಿಕಾರ್ಜುನಪ್ಪನ ಮನೆಯನ್ನು ಆಹುತಿಗೊಂಡಿತು ಎದುರಿಗಿದ್ದ ಹೆಂಚಿನ ಮನೆ ಒಂದಕ್ಕೆ ಜ್ವಾಲೆ ಬಲಾತ್ಕಾರದಿಂದ ಪ್ರವೇಶಮಾಡಲು ಕೆಲವರು ಮಹಾ ಜಾಗ್ರತೆಯಿಂದ ತಡೆದರು ಇಷ್ಟರಲ್ಲಿ ಹುಲ್ಲುಮನೆಗಳವರೆಲ್ಲಾ ತಮ್ಮ ತಮ್ಮ ಮನೆಯ ಮೇಲಿನ ಹುಲ್ಲನ್ನು ಭೂಮಿಗೆ ತಳ್ಳಿದರು ಇದರಿಂದಲೇ ಬಡಜನಗಳೆಲ್ಲಾ ಕ್ಷೇಮವನ್ನು ಹೊಂದಿದರು. ಹಿಂದಿನ ವರ್ಷ ಮಳೆಯಾಗದೆ ಬೆಳೆಬಾರದೆ ಹೋದ ಕಷ್ಟಕ್ಕೂ ಕಳೆದ ಇಸವಿ ಡಿಸೆಂಬರ್ ತಿಂಗಳ ೧೮ ಮತ್ತು ೨೦ನೇ ರಾತ್ರಿಗಳಲ್ಲೂ ಆ ಮೇಲೆ ಕೆಲವು ದಿವಸವೂ ಸುರಿದ ಮಳೆಯಿಂದ ಬೆಳೆದ ದವಸವನ್ನು ಹಾಳುಮಾಡಿಕೊಂಡಿದ್ದಕ್ಕೂ ಜನರು ನೆನಸಿಕೊಂಡು ಜೀವಶವಗಳಾಗುತ್ತಿದ್ದರು. ಈ ಗ್ರಾಮದಲ್ಲಿ ಈಗ ನಾಲ್ಕು ವರ್ಷಗಳಿಂದಲೂ ಬೆಂಕಿಯಿಂದ ಕೇಡು ಉಂಟಾಗುತ್ತಲೇ ಇದೆ. ಕಾರಣವೇನೋ ತಿಳಿಯದು.

ರಾಜಧಾನಿಯ ಮ್ಯುನಿಸಿಪಲ್ ಮೀಟಿಂಗು.

ಮೈಸೂರು ಟೌನ್ ಮ್ಯುನಿಸಿಪಲ್ ಮೆಂಬರುಗಳು ಕಳೆದ ಶನಿವಾರ ಬೆಳಿಗ್ಗೆ ಟೌನ್ ಹಾಲ್ ಬಂಗಲೆಯಲ್ಲಿ ಸಭೆ ಸೇರಿ ತಿಂಗಳು ಕಟ್ಟಳೆಯ ಮ್ಯುನಿಸಿಪಲ್ ಮೀಟಿಂಗನ್ನು ನಡಿಸಿದರು. ಕಳೆದ ಡಿಸೆಂಬರ್ ತಿಂಗಳಲ್ಲಿ ಮ್ಯುನಿಸಿಪಾಲಿಟಿಗೆ ಎಲ್ಲಾ ಬಾಬುಗಳಿಂದಲೂ ರೂ. ೧೧,೯೫೨—೧೦—೬ ಪೈ ಜಮಾ ಆಯಿತು; ರೂ ೬,೮೦೭—೮—೦ ಖರ್ಚಾಯಿತು ಆ ತಿಂಗಳಲ್ಲಿ ಜನನ ೧೨೫, ಮರಣ ಪ್ಲೇಗ್ ೮೫, ವಾಂತಿಭೇದಿ ೪, ಜ್ವರ ೪೫, ಇತರ ಕಾರಣಗಳು ೧೮೬, ಒಟ್ಟು ೩೨೦. ಮತ್ತು ಜನವರಿ ೧ ರಿಂದ ೨೫ ರ ವರೆಗೆ ಜನನ ೬೭; ಮರಣ ಪ್ಲೇಗ್ ೧೨೦, ಜ್ವರ ೨೬, ಇತರ ಕಾರಣಗಳು ೧೫೦, ಜುಮಲಾ ೨೯೬ ಎಂದು ತಿಳಿದು ಬಂದಿದೆ.

ಅಡ್ವೊಕೇಟ್ ಮೆ॥ ಎಚ್ ಕೃಷ್ಣರಾಯರು ಕೃಷ್ಣವಿಲಾಸದ ಅಗ್ರಹಾರದಲ್ಲಿ ತಮ್ಮ ಮನೆಯ ಪಶ್ಚಿಮ ದಿಕ್ಕಿಗೆ ಇರುವ ಖಾಲೀ ನಿವೇಶನವನ್ನು ತಮಗೆ ಕೊಡಿಸಿ ಕೊಡಬೇಕೆಂದು ಅರ್ಜಿ ಬರೆದಿದ್ದರು ಅವರು ಆ ನಿವೇಶನಕ್ಕೆ ಅಲಂಕಾರವಾದ ಗೋಡೆಯನ್ನು ಹಾಕಿ, ಒಳಗೆ ದೊಡ್ಡ ಮರ ಹಾಕದೆ, ಶಾಶ್ವತವಾದ ಕಟ್ಟಡ ಕಟ್ಟದೆ ಇಟ್ಟುಕೊಂಡಿದ್ದು, ಕೇಳಿದಾಗ ಪ್ರತಿಫಲವೇನೂ ಅಪೇಕ್ಷಿಸದೆ ಮ್ಯುನಿಸಿಪಾಲಿಟಿಗೆ ಬಿಟ್ಟು ಕೊಡುವುದಾದರೆ ಆ ನಿವೇಶನವನ್ನು ಅವರಿಗೆ ಕೊಡಬಹುದೆಂದು ಮೆಂಬರುಗಳು ತೀರ್ಮಾನ ಮಾಡಿದಾರೆ.

ಮ್ಯುನಿಸಿಪಲ್ ಜಮಾ ಖರ್ಚನ್ನು ಸರ್ಕಾರದ ಕಂಟ್ರೋಲರ್ ಆಫೀಸಿನವರು ಬಂದು ತನಿಖೆ ಮಾಡಿ ಇಲ್ಲಿಗೆ ಹನ್ನೆರಡು ವರುಷಗಳಾದವು ಒಬ್ಬ ಅಧಿಕಾರಿಯನ್ನು ಕಳುಹಿಸಿ ತನಿಖೆ ಮಾಡಿಸಬೇಕೆಂದು ಮೆಂಬರುಗಳು ಗವರ್ನಮೆಂಟಿಗೆ ಬರೆದಿದ್ದರು ಅವರು ಅಜಮಾಯಿಷಿ ಮಾಡಬೇಕಾದ ಅಗತ್ಯವೇನೂ ಕಂಡು ಬರುವುದಿಲ್ಲವೆಂದೂ, ಹಾಗೆ ತನಿಖೆ ಮಾಡಬೇಕೆಂದರೆ ಅಂಥಾ ಅಧಿಕಾರಿಯ ಖರ್ಚನ್ನೆಲ್ಲಾ ಕೊಡುತ್ತೀರಾ ಎಂದೂ ಕೇಳಿದರು ಮೆಂಬರುಗಳು ಇದರ ಮೇಲೆ ಗವರ್ನಮೆಂಟಿಗೆ ಅರಿಕೆ ಮಾಡಿರುವುದೇನೆಂದರೆ—೧೨ ವರುಷದ ಕೆಳಗೆ ತನಿಖೆ ಮಾಡಿದಾಗ ಆದ ರುಸುಮನ್ನು ಸರ್ಕಾರದವರು ಮ್ಯುನಿಸಿಪಾಲಿಟಿಯಿಂದ ತೆಗೆದುಕೊಳ್ಳಲಿಲ್ಲವಾದ್ದರಿಂದ ಈಗಲೂ ಒಬ್ಬ ಅಧಿಕಾರಿಯನ್ನು ಸರ್ಕಾರಿ ಖರ್ಚಿನಿಂದಲೇ ಕಳುಹಿಸಿ, ತನಿಖೆ ಮಾಡಿಸಬೇಕು ಎಂಬುದೇ

ಮ್ಯುನಿಸಿಪಾಲಿಟಿಯ ಪರವಾಗಿ ಮೆ॥ ಮಾದಪ್ಪನವರು ತಾಲ್ಲೂಕ್ ಬೋರ್ಡಿನ ಮೆಂಬರಾಗಿರತಕ್ಕದ್ದೆಂದು ಮೆಂಬರುಗಳೆಲ್ಲಾ ಗೊತ್ತುಮಾಡಿದರು

ದೇವರಾಜಮೊಹಲ್ಲಾ ಯುನಾನಿ ಹಕೀಂ ಮಹಮದ್ ಖಾನರವರಿಗೆ ಮ್ಯುನಿಸಿಪಾಲಿಟಿಯಿಂದ ಕೊಡುವ ೧೦ ರೂಪಾಯಿ ಗ್ರಾಂಟನ್ನು ೧೫ ರೂಪಾಯಿಗೆ ಜಾಸ್ತಿ ಮಾಡಬೇಕೆಂದು ತೀರ್ಮಾನವಾಗಿದೆ.

ಚಾಮರಾಜಮೊಹಲ್ಲಾ ಬಜಾರ್ ಲೈನ್ ಎಂಬ ರಸ್ತೆಯನ್ನು ಚಿಕ್ಕದುಮಾಡಿ ಉಳಿದ ಸ್ಥಳವನ್ನು ಎರಡು ಕಡೆಗಳಲ್ಲೂ ಇರುವ ಲೈನ್ ಮನೆಗಳವರಿಗೆ ಹಂಚಿಕೊಡಬೇಕೆಂದು ಮೆ॥ ಬಾಲಕೃಷ್ಣರಾಯರೆ ಮುಂತಾದವರು ಅರ್ಜಿ ಹಾಕಿದ್ದರು ಹೀಗೆ ಕೊಡುವುದಕ್ಕಾಗುವುದಿಲ್ಲವೆಂದು ಬೋರ್ಡಿನಲ್ಲಿ ತೀರ್ಮಾನವಾಗಿದೆ.

ರಾಜಧಾನಿಯಲ್ಲಿ ನೀರಿನ ತೆರಿಗೆ ಹಾಕುವ ವಿಚಾರದಲ್ಲಿ ಗವರ್ನಮೆಂಟಿನವರು ಈಚೆಗೆ ಕೆಲವು ರೂಲಸನ್ನು ಮಾಡಿ ಪ್ರಕಟಿಸಿರುತ್ತಾರೆ ಈ ವಿಷಯದಲ್ಲಿ ಇದುವರೆಗೆ ನಡೆದಿರುವ ಕಾಗದಪತ್ರಗಳನ್ನೆಲ್ಲಾ ಮೆ॥ ಗಳಾದ ಅಂಬಳೆ ಪಂಡಿತರೂ, ರಂಗೈಯ್ಯಂಗಾರರೂ, ವೆಂಕಟಕೃಷ್ಣಯ್ಯನವರೂ, ಚಂದ್ರಶೇಖರಯ್ಯನವರೂ, ವೈಸ್ ಪ್ರೆಸಿಡೆಂಟರೂ ಕಮಿಟಿಯಾಗಿ ಸೇರಿ ನೋಡಿ, ಗವರ್ನಮೆಂಟಿಗೆ ಬೋರ್ಡಿನಿಂದ ಬರೆಯಬೇಕಾದ ಜವಾಬನ್ನು ತಯಾರುಮಾಡಿಕೊಡಬೇಕೆಂದು ತೀರ್ಮಾನಮಾಡಿದಾರೆ.

ಸಬರ್ಬನ್ ಆಸ್ಪತ್ರೆ ಕಟ್ಟಡಕ್ಕೆ ಈಗ ಮ್ಯುನಿಸಿಪಾಲಿಟಿಯಿಂದ ಕೊಡುವ ೮ ರೂಪಾಯಿ ಬಾಡಿಗೆಯನ್ನು ೧೦ ರೂಪಾಯಿಮಾಡಿ, ಜನವರಿಯಿಂದ ಕೊಡಬಹುದೆಂದು ಮೆಂಬರುಗಳು ಒಪ್ಪಿಕೊಂಡರು

ಪ್ಲೇಗ್ ರೂಲಸಿನ ಪ್ರಕಾರ ಬಡಬಗ್ಗರ ಸಾಮಾನ್ ಸುಡಬೇಕಾದ ಸಂದರ್ಭದಲ್ಲಿ ಅಂಥವರಿಗೆ ಮ್ಯುನಿಸಿಪಾಲಿಟಿಯಿಂದ ಪ್ರತಿಫಲವನ್ನು ಕೊಡುವ ವಿಚಾರವಾಗಿ ಮೆಂಬರುಗಳು ಚರ್ಚೆಮಾಡಿ, ಈಗ ಮ್ಯುನಿಸಿಪಾಲಿಟಿಯ ಸ್ಥಿತಿಯು ಅಷ್ಟು ಚೆನ್ನಾಗಿಲ್ಲವಾದಕಾರಣ ಪ್ಲೇಗ್ ಫಂಡಿನಿಂದಲೇ ಅಂಥವರಿಗೆ ಏನಾದರೂ ದ್ರವ್ಯ ಸಹಾಯಮಾಡುವುದು ಅವಶ್ಯವಾಗಿದೆ ಎಂದು ತಿಳಿಸುವಂತೆ ತೀರ್ಮಾನಮಾಡಿದರು.

ಮಂಡಿಮೊಹಲ್ಲಾ ಯುನಾನಿ ಹಕೀಂ ಆಲಿ ಹೀರ್ ಸಾಹೇಬರಿಗೆ ಮ್ಯುನಿಸಿಪಾಲಿಟಿಯಿಂದ ಕೊಡುತ್ತಿರುವ ಗ್ರಾಂಟನ್ನು ಅವರು ಕೇಳುವ ಪ್ರಕಾರ ಜಾಸ್ತಿ ಮಾಡಲಾಗುವುದಿಲ್ಲವೆಂದು ವ್ಯವಸ್ಥೆಮಾಡಲ್ಪಟ್ಟಿತು

ಚಾಮರಾಜ ಮೊಹಲ್ಲಾದಲ್ಲಿ ಮೆ॥ ಸ್ವಾಮಿನಾಥ ಅಯ್ಯರವರ ಅರ್ಜಿಯ ಪ್ರಕಾರ ಅವರು ಕೇಳುವ ಖಾಲಿ ನಿವೇಶನನ್ನು ಅವರಿಗೆ ಕೊಡಬಹುದೆಂದು ಮೆಂಬರುಗಳು ತೀರ್ಮಾನ ಮಾಡಿದಾರೆ.

ಇಂಡಿಯಾ ದೇಶದ ವೃತ್ತಾಂತಗಳು.

ಅಫ್ಘಾನಿಸ್ಥಾನದ ಅಮೀರರವರು ಕಳೆದವಾರ ಗ್ವಾಲಿಯರ್ ಸಂಸ್ಥಾನದಲ್ಲಿದ್ದಾಗ್ಗೆ ಷಿಕಾರಿಗೆ ಹೋಗಿ ಎರಡು ಹುಲಿಗಳನ್ನು ಕೊಂದು ತಂದರೆಂದು ತಿಳಿಯುವುದು.

◆◆◆◆

ಕಲ್ಕತ್ತಾ ಪಟ್ಟಣಕ್ಕೆ ಬವೇರಿಯಾ ರಾಜ್ಯದ ಇಬ್ಬರು ರಾಜಕುಮಾರರು ದೇಶ ಸಂಚಾರಾರ್ಥವಾಗಿ ಸಾಮಾನ್ಯ ಪ್ರಯಾಣಿಕರಂತೆ ಬಂದು ಇಳುಕೊಂಡಿದಾರೆ.

ಹಿಂದುಸ್ಥಾನದ ಗವರ್ನಮೆಂಟ್ ಟಂಕಸಾಲೆಗಳಲ್ಲಿ ಇನ್ನು ಮುಂದೆ ಅಂದರೆ ಮುಂದಿನ ಏಪ್ರೇಲ್ ತಿಂಗಳು ಲಾಗಾಯಿತು ಚಿನ್ನದ ನಾಣ್ಯಗಳನ್ನು ಛಾಪಾ ಹಾಕಕೂಡದೆಂದು ಹುಕುಂ ಕೊಟ್ಟದಾರೆ.

◆◆◆◆

ರಾಮಚಂದ್ರಪುರದಲ್ಲಿ ಮೆ॥ ಕೆ ಪೆರ್ರಾಜು ಎಂಬೊಬ್ಬ ದೊಡ್ಡ ಮನುಷ್ಯನು ತನ್ನ ಆಸ್ತಿಯಲ್ಲಿ ೪೦,೦೦೦ ರೂಪಾಯನ್ನು ಫಂಡು ಹಾಕಿ ಒಂದು ದೇಶೀಯ ವಿದ್ಯಾಶಾಲೆಯನ್ನು ಸ್ಥಾಪಿಸಿರುತ್ತಾನೆ

◆◆◆◆

ಭಾವನಗರದಲ್ಲಿ ದಿನ್ಷಾಬೋಂಮಾಜಿ ಎಂಬೊಬ್ಬ ಭಾರೀ ವರ್ತಕನ ಹತ್ತಿ ಬಟ್ಟೆಯ ಕಾರ್ಖಾನೆಗೆ ಕಳೆದ ವಾರ ಬೆಂಕಿ ಬಿದ್ದು ಆತನಿಗೆ ಸುಮಾರು ಎರಡು ಲಕ್ಷ ರೂಪಾಯಿ ನಷ್ಟವಾಯಿತು.

◆◆◆◆

ಬೊಂಬಾಯಿಪಟ್ಟಣದ ಮ್ಯುನಿಸಿಪಾಲಿಟಿಯವರು ಅಫ್ಘಾನಿಸ್ಥಾನದ ಅಮೀರರಿಗೆ ಒಂದು ಅಡ್ರೆಸ್ಸನ್ನು ಓದಿ ಒಪ್ಪಿಸುವುದಕ್ಕೆ ೨,೫೦೦ ರೂಪಾಯಿ ಖರ್ಚುಮಾಡಬಹುದೆಂದು ಸ್ಯಾಂಕ್ಷನ್ ಮಾಡಿದಾರೆ.

◆◆◆◆

ಸಿಲೋನ್ ದ್ವೀಪದ ಕೊಲಂಬೋ ಪಟ್ಟಣದಲ್ಲಿ ಹಡಗುಗಳು ಬಂದರೆ ಸುರಕ್ಷಿತವಾಗಿ ನಿಲ್ಲುವುದಕ್ಕಾಗಿ ಸಮುದ್ರದ ದಡದಲ್ಲಿ ೬೬ ಲಕ್ಷ ರೂಪಾಯಿ ವೆಚ್ಚಿಸಿ ಕಾಮಗಾರಿ ಮಾಡಿ ಒಂದು ಏಕಾಣೆಯನ್ನು ಕಟ್ಟುವುದಕ್ಕಾರಂಭಿಸಿದಾರೆ.

◆◆◆◆

ಮದರಾಸ್ ಗವರ್ನರ್ ಸರ್ ಆರ್ಥರ್ ಲಾಲಿಯವರೂ ಅವರ ಸಹೋದರರಾದ ಲಾರ್ಡ್ ವೆನ್ಲಾಕ್ ರವರೂ ಪತ್ನಿ ಪರಿವಾರ ಸಹಿತ ಅನಂತಶಯನ ಕೊಚ್ಚಿ ಸಂಸ್ಥಾನಗಳನ್ನು ನೋಡಿಕೊಂಡು ಬರುವುದಕ್ಕಾಗಿ ಮೊನ್ನೆ ತಾ ೨೫ ರಲ್ಲಿ ಮದರಾಸಿನಿಂದ ಪ್ರಯಾಣಮಾಡಿದಾರೆ

◆◆◆◆

ಬೊಂಬಾಯಿಪಟ್ಟಣದಲ್ಲಿ ಯೂನಿವರ್ಸಿಟಿ (ವಿದ್ಯಾನಿಲಯ) ಪರೀಕ್ಷೆಗಳು ನಡೆಯುವುದಕ್ಕೆ ಒಂದು ಭಾರೀ ಕಟ್ಟಡವನ್ನು ೨॥ ಲಕ್ಷ ರೂಪಾಯಿ ವೆಚ್ಚಿಸಿ ಕಟ್ಟಿಸಿಕೊಡುತ್ತೇನೆಂದು ಅಲ್ಲಿನ ಸರ್ ಕವಾಸ್ಜಿ ಜಹಾಂಗೀರ್ ರೆಡಿಮನಿ ಎಂಬ ಪಾರ್ಸಿ ಸಾಹುಕಾರನು ಗವರ್ನರವರಿಗೆ ತಿಳಿಸಿರುತ್ತಾನೆ

◆◆◆◆

ಕಳೆದ ವಾರ ಹಿಂದುಸ್ಥಾನದಲ್ಲೆಲ್ಲಾ ೧೧,೩೪೩ ಮಂದಿ ಪ್ಲೇಗ್ ಉಪದ್ರದಲ್ಲಿ ಮೃತಪಟ್ಟರು. ಈ ಪೈಕಿ ಪಂಜಾಬ್ ೩೦,೮೫, ಸಂಯುಕ್ತ ಅಧಿಪತ್ಯಗಳು ೨,೮೬೩, ಬೊಂಬಾಯಿ ಅಧಿಪತ್ಯ ೨,೧೧೩, ಬಂಗಾಳಾ ೩೦೦, ಮಧ್ಯ ಪ್ರಾಂತ್ಯಗಳು ೬೬೫; ಬರ್ಮಾ ೪೫೯; ಮಧ್ಯ ಇಂಡಿಯಾ ೨೩೪

◆◆◆

ಕೃಷ್ಣಾ ನದಿಯ ನೀರನ್ನು ನಾಲೆಗಳಲ್ಲಿ ತಂದು ಒಂದು ಭಾರೀ ಕೆರೆಯನ್ನು ಕಟ್ಟಿ ಅದಕ್ಕೆ ಬಿಟ್ಟುಕೊಂಡು, ಅದರಿಂದ ನಾಲೆಗಳನ್ನು ಕಟ್ಟಿ ಜಮೀನಿಗೆ ಹಾಯಿಸಿ ವ್ಯವಸಾಯವನ್ನು ಅಭಿವೃದ್ಧಿಗೆ ತರಬೇಕೆಂದು ಇಂಡಿಯಾ ಸ್ಟೇಟ್ ಸೆಕ್ರೆಟರಿಯವರು ತೀರ್ಮಾನಿಸಿ ಅದಕ್ಕಾಗಿ ೯॥ ಕೋಟಿ ರೂಪಾಯಿ ಸ್ಯಾಂಕ್ಷನ್ ಮಾಡಿದಾರೆ

◆◆◆◆

ಈಗ ಹಿಂದುಸ್ಥಾನದಿಂದ ವಿಲಾಯಿತಿಗೆ ಕಾಗದ ಬರೆಯುವುದಕ್ಕೆ ೨॥ ತೊಲ ತೂಕವುಳ್ಳ ಲಕ್ಕೋಟೆಗೆ ಒಂದಾಣೆ ಸ್ಟಾಂಪು ಅಂಟಿಸಬೇಕಾಗಿದೆ. ಈ ಒಂದಾಣೆಗೆ ಒಂದು ಔನ್ಸು ಅಂದರೆ ೫ ರೂಪಾಯಿ ತೂಕವುಳ್ಳ ಲಕ್ಕೋಟೆಯನ್ನು ರವಾನೆಮಾಡುವಂತೆ ಇಷ್ಟರಲ್ಲೇ ಏರ್ಪಾಡಾದೀತೆಂದು ಕಾಣುವುದು.

◆◆◆◆

ಉತ್ತರ ದೇಶದಲ್ಲಿ ಕ್ಷಾಮಬಾಧೆಯು ಇನ್ನೂ ಸಂಪೂರ್ಣವಾಗಿ ನಿವಾರಣೆಯಾಗಲಿಲ್ಲವೆಂದು ತಿಳಿಸಲು ವಿಷಾದಿಸುತ್ತೇವೆ ಬೀಹಾರ್ ಪ್ರಾಂತ್ಯಕ್ಕೆ ಸೇರಿದ ದರ್ಭಾಂಗ ಡಿಸ್ಟ್ರಿಕ್ಟಿನಲ್ಲಿ ಈಗ ೫೫,೦೦೦ ಪ್ರಜೆಗಳು ಸರ್ಕಾರದವರ ಪೋಷಣೆಯಲ್ಲಿರುತ್ತಾರೆ ೨೦,೦೦೦ ಜನರು ಧರ್ಮಸತ್ರಗಳಲ್ಲಿ ಹೊಟ್ಟೆ ಹೊರಕೊಳ್ಳುತ್ತಿರುವರು

◆◆◆◆

ಕಳೆದವಾರ ಅಫ್ಘಾನಿಸ್ಥಾನದ ಅಮೀರರು ಅಲಿಘರ್ ಪಟ್ಟಣದ ಮಹಮ್ಮದೀಯ ವಿದ್ಯಾಶಾಲೆಯ ಮೂಲಧನಕ್ಕೆ ೨೬ ೦೦೦ ರೂಪಾಯಿ ದಯಪಾಲಿಸಿದರು. ಭಿಕಾಂಪುರದ ಆಲಿ ಅಹಮದ್ ಮಹಮದ್ ಖಾನರವರಿಗೆ ಅವರು ಮುಸಲ್ಮಾನ್ ತತ್ವ ಶಾಸ್ತ್ರವನ್ನು ಹುಡುಗರಿಗೆ ಕಲಿಸಿಕೊಡುವುದಕ್ಕಾಗಿ ಅಮೀರರು ೧೦,೦೦೦ ರೂಪಾಯಿ ಕೊಡುತ್ತೇವೆಂದು ವಾಗ್ದಾನ ಮಾಡಿದರು.

◆◆◆◆

ಕಾಶ್ಮೀರ ಸಂಸ್ಥಾನದ ಪಾಡಾರ್ ಎಂಬ ಗ್ರಾಮದಲ್ಲಿ ಒಂದು ಭಾರೀ ವಜ್ರದ ಗಣಿ ಇದೆ ಪೂರ್ವಕಾಲದಲ್ಲಿ ಅಲ್ಲಿ ಗಣಿಗಳನು ತೋಡಿ ವಜ್ರಗಳನ್ನು ತೆಗೆಯುತ್ತಿದ್ದರು ಈಗ ಈ ಹಳೇ ಗಣಿಗಳನ್ನು ಕೆಲವರು ಸ್ವಾಧೀನ ಮಾಡಿಕೊಂಡು ವಜ್ರಗಳನ್ನು ತೆಗೆಯುತ್ತಾರೆ ಕಳೆದ ವಾರ ಈ ಗಣಿಗಳಲ್ಲಿ ಸಿಕ್ಕಿದ ೨೦,೦೦೦ ರೂಪಾಯಿನ ವಜ್ರಗಳು ಕಲ್ಕತ್ತೆಯಲ್ಲಿ ಬಿಕರಿಯಾದವು.

◆◆◆◆

ಬೊಂಬಾಯಿ ಪಟ್ಟಣದ ಪೋಸ್ಟ್ ಆಫೀಸುಗಳಿಂದ ಪ್ರಜೆಗಳಿಗೆ ಕಾಗದ ಮುಂತಾದ್ದನ್ನು ತೆಗೆದುಕೊಂಡು ಹೋಗಿ ಪಾವತಿ ಮಾಡುವ ಪೋಸ್ಟ್ ಪೀಯೋನ್‌ಗಳಿಗೆ ಮೊದಲು ಕೊಡುತ್ತಿದ್ದ ಸಂಬಳವು ಜೀವನಕ್ಕೆ ಸಾಲದೆಂದು ತಿಳಿದದ್ದರ ಮೇಲೆ ಈಗ ಪೋಸ್ಟ್ ಇಲಾಖೆಯವರು ಅವರ ಸಂಬಳವನ್ನು ತಿಂಗಳಿಗೆ ೧೫, ೧೭, ೨೦, ೨೫, ೩೦ ಈ ರೀತಿ ಐದು ದರ್ಜೆಗಳಾಗಿ ಬಡ್ತಿ ಮಾಡಿರುತ್ತಾರೆ. ಇದು ಆ ಜವಾನರಿಗೆಲ್ಲಾ ತುಂಬಾ ತೃಪ್ತಿಯನ್ನುಂಟುಮಾಡಿರುವುದು.

ಗಿಧೋರ್ ಸಂಸ್ಥಾನದ ಮಹಾರಾಜರವರು ಆಗ್ರಾ ದರ್ಬಾರನ್ನು ತೀರಿಸಿಕೊಂಡು ಕಳೆದ ವಾರ ಅಲಹಾಬಾದ್ (ಪ್ರಯಾಗ) ಪಟ್ಟಣಕ್ಕೆ ಹೋಗಿ ಗಂಗಾ ಸ್ನಾನ ಕ್ರಿಯಾದಿಗಳನ್ನೂ ಅನ್ನ ದಾನವನ್ನೂ ವಿಶೇಷ ಸಂಭ್ರಮದಿಂದ ನಡಿಸಿ, ಮಠದಲ್ಲಿ ತುಲಾಭಾರವನ್ನು ಮಾಡಿಕೊಂಡು ತಮ್ಮ ತೂಕದಷ್ಟು ಚಿನ್ನ ಬೆಳ್ಳಿಯನ್ನು ಬ್ರಾಹ್ಮಣರಿಗೂ ಬಡ ಬಗ್ಗರಿಗೂ ಹಂಚಿ ಕೊಟ್ಟರು ತರುವಾಯ ಪರಿವಾರ ಸಹಿತ ಕಲ್ಕತ್ತಾ ಪಟ್ಟಣವನ್ನು ಕುರಿತು ಪ್ರಯಾಣ ಮಾಡಿದಾರೆ.

◆◆◆◆

ದರ್ಭಾಂಗದ ಮಹಾರಾಜರವರು ಸೂರ್ಯ ಗ್ರಹಣದ ದಿನ ಸಂಸಾರ ಸಮೇತ ಕಲ್ಕತ್ತಾ ಪಟ್ಟಣಕ್ಕೆ ಹೋಗಿ ಅಲ್ಲಿ ಸ್ನಾನಾದಿಗಳನ್ನು ಮಾಡಿಕೊಂಡು ವಾಪಸು ಕಾಶೀ ಪಟ್ಟಣಕ್ಕೆ ಬಂದರು ಕೂಡಲೆ ಅವರ ಇಬ್ಬರು ಮಹಾರಾಣೀರಿಗೂ ವಾಂತಿ ಭೇದಿ ಉಪದ್ರ ತಗಲಿತು ಡಾಕ್ಟರುಗಳು ಬಹಳ ಮುತುವರ್ಜಿಯಿಂದ ಚಿಕಿತ್ಸೆ ಮಾಡುತ್ತಿದಾರೆ ಅವರಿಬ್ಬರಿಗೂ ಸ್ವಲ್ಪ ವಾಸಿಯಾಗಿದೆ ಎಂತಲೂ ಈಚೆಗೆ ವೈಸ್‌ರಾಯರವರೇ ಮುಂತಾದವರು ವ್ಯಸನಪಟ್ಟು ಮಹಾರಾಜರಿಗೆ ತಂತೀ ವರ್ತಮಾನ ಕಳುಹಿಸಿ ಸಂತಾಪವನ್ನು ಸೂಚಿಸಿದರೆಂತಲೂ ಪ್ರಕಟವಾಗಿದೆ.

◆◆◆◆

ಕಲ್ಕತ್ತೆಯಲ್ಲಿರುವ ಪಂಡಿತಾ ಸರಳದೇವಿ ಚೌಧರಾಣಿ ಎಂಬ ಬಂಗಾಳಾ ಸ್ತ್ರೀಯು ೧೭ ನೆ ವಯಸ್ಸಿನಲ್ಲಿ ಬಿ. ಎ. ಪರೀಕ್ಷೆಯಲ್ಲಿ ತೇರ್ಗಡೆಹೊಂದಿದಳು. ಕೆಲವು ಕಾಲ ಈಕೆ ಮೈಸೂರಿನಲ್ಲೂ ನೌಕರಿಮಾಡಿರುತ್ತಾಳೆ. ಈಗ ಈ ವಿಖ್ಯಾತೆಯು ಕಲ್ಕತ್ತೆಯಲ್ಲಿ "ಭಾರತಿ" ಎಂಬ ಪತ್ರಿಕೆಯನ್ನು ನಡಸುತ್ತಾ ಸ್ವದೇಶೀ ಪ್ರೋತ್ಸಾಹಕಳಾಗಿ ಈ ರಾಷ್ಟ್ರದಲ್ಲಿ ತಯಾರಾಗುವ ವಸ್ತುವಿಶೇಷಗಳನ್ನು ಒಂದು ಕಡೆಯಲ್ಲಿ ಪ್ರದರ್ಶನಮಾಡಿರುತ್ತಾಳೆ ಈಕೆ ಸುಮಾರು ೧೮ ತಿಂಗಳ ಕೆಳಗೆ ಲಾಹೋರ್ ಪಟ್ಟಣದ ಪಂಡಿತ ರಾಮಭಜದತ್ತ ಚೌಧರಿ ಎಂಬುವನನ್ನು ವರಿಸಿ ವಿವಾಹಮಾಡಿಕೊಂಡಳು. ಈ ದಂಪತಿಗಳಿಗೆ ಈಗ ಒಂದು ಗಂಡುಮಗುವಾಗಿದೆ ಎಂದು ತಿಳಿದುಬರುವುದು.

◆◆◆◆

ಅಫ್ಘಾನಿಸ್ಥಾನದ ಅಮೀರರವರು ದೆಹಲಿಪಟ್ಟಣದಲ್ಲಿ ಬಕ್ರೀದ್ ಹಬ್ಬವನ್ನು ಕಳೆದ ಶುಕ್ರವಾರ ಆಚರಿಸಿದರು. ಆ ದಿನ ಅಫ್ಘಾನಿಸ್ಥಾನದ ೧೦೦ ಕುರಿಗಳೂ ಹಿಂದುಸ್ಥಾನದ ೫೦ ಮೇಕೆಗಳೂ ಬಲಿಕೊಡಲ್ಪಟ್ಟವು ಅವುಗಳ ಮಾಂಸವನ್ನೆಲ್ಲಾ ಬಡಬಗ್ಗರಿಗೆ ಹಂಚಿಕೊಡುವಂತೆ ತಿಳಿಸಿದರು ಅಲ್ಲಿಂದ ಪರಿವಾರ ಸಹಿತ ರೈಲಿನಲ್ಲಿ ಪ್ರಯಾಣಮಾಡಿ ಮೊನ್ನೆ ಸೋಮವಾರ ಬೆಳಿಗ್ಗೆ ಕಲ್ಕತ್ತಾ ಪಟ್ಟಣದಲ್ಲಿ ಇಳಿದು, ಹೇಸ್ಟಿಂಗ್ಸ್ ಹೌಸ್ ಎಂಬ ರಾಜಭವನದಲ್ಲಿ ಇಳುಕೊಂಡಿದಾರೆ. ಮೊನ್ನೆ ಶುಕ್ರವಾರದ ದಿನ ಮದರಾಸ್ ಪಟ್ಟಣದ ಹಿಂದೂ ಮಹಮದೀಯ ದೊಡ್ಡಮನುಷ್ಯರು ಸಭೆಸೇರಿ, ಅಮೀರರನ್ನು ಮದರಾಸಿಗೆ ದಯಮಾಡುವಂತೆ ಕೇಳಿಕೊಳ್ಳಬೇಕೆಂದು ತೀರ್ಮಾನಿಸಿ, ಆ ಅರ್ಥಕ್ಕೆ ಅವರಿಗೆ ಒಂದು ಕಾಗದವನ್ನು ಬರೆದಿರುತ್ತಾರೆ

◆◆◆◆

ಕಲ್ಕತ್ತಾ ಪಟ್ಟಣದಲ್ಲಿ ಹಿಂದುಸ್ಥಾನವನ್ನು ಅಭಿವೃದ್ಧಿಗೆ ತರಬೇಕೆಂಬ ಉದ್ದೇಶವುಳ್ಳ ಒಂದು ಸಂಘವು ಏರ್ಪಾಡಾಗಿದೆ ಇದರಲ್ಲಿ ರಾಷ್ಟ್ರದ ದೊಡ್ಡ ಮನುಷ್ಯರೂ ಐಶ್ವರ್ಯವಂತರೂ ಮೆಂಬರುಗಳಾಗಿ ಸೇರಿಕೊಂಡಿದಾರೆ ವ್ಯಾಪಾರಿಕೆ, ಕಸಬುದಾರಿ ಮೊದಲಾದ ಕಲಾವಿದ್ಯೆಗಳನ್ನು ಕಲಿತುಕೊಂಡು ಬರುವದಕ್ಕಾಗಿ ಈ ಸಂಘದವರು ವಿದ್ಯಾವಂತರಾದ ದೇಶೀಯ ಯೌವನಸ್ಥರಿಗೆ ತಲಾ ತಿಂಗಳಿಗೆ ೫೦ ರಿಂದ ೧೨೦ ರೂಪಾಯಿ ವರೆಗೆ ವೇತನಗಳನ್ನು ಕೊಟ್ಟು ಅಮೇರಿಕ ಯೂರೋಪ್ ಜಪಾನ್ ಮುಂತಾದ ರಾಜ್ಯಗಳಿಗೆ ಕಳುಹಿಸುತ್ತಿದಾರೆ ಈ ಸಂಘದವರು ಕೆಲವು ಕಾಲಕ್ಕೆ ಮುಂಚೆ ಎರಡಾವರ್ತಿ ೬೦ ಮಂದಿ ಯೌವನಸ್ಥರನ್ನು ವಿದ್ಯಾ ಸಂಪಾದನೆಗಾಗಿ ಕಳುಹಿಸಿರುವರು ಈಗ ಪುನಃ ೪೦ ಮಂದಿ ವಿದ್ಯಾರ್ಥಿಗಳನ್ನು ವೇತನಕೊಟ್ಟು ಕಳುಹಿಸಬೇಕೆಂದು ತೀರ್ಮಾನ ಮಾಡಿದಾರೆಂದು ತಿಳಿಸಲು ಸಂತೋಷವಾಗಿದೆ.

◆◆◆◆

ಕಲ್ಕತ್ತಾ ಪಟ್ಟಣದ ವ್ಯಾಪಾರಿಕೆ ಮತ್ತು ಕಸಬುಗಳ ಪ್ರದರ್ಶನಶಾಲೆಯಲ್ಲಿ ಅನೇಕ ಜೋಡಿಗಳ ಕುಸ್ತಿಗಳು ನಡೆದು ಅವರಿಗೆಲ್ಲಾ ಬಹುಮಾನಗಳು ಕೊಡಲ್ಪಟ್ಟವೆಂದು ತಿಳಿಸಿರುತ್ತೇವಷ್ಟೆ ಆ ಸ್ಥ[illegible] ಕಲೂ ಮತ್ತು ಕರೀಂ ಎಂಬಿಬ್ಬರಿಗೆ ನಡೆದ ಕುಸ್ತಿಯು ಬಹು ಭಯಂಕರವಾಗಿತ್ತು ಮಧ್ಯಸ್ಥಗಾರರಾಗಿ ನಿಂತಿದ್ದ ಕೂಚ್ ಬೀಹಾರ್ ನತ್ತೂರ್, ಮೋರ್ಬಂಜ್ ಎಂಬೀ ಸಂಸ್ಥಾನಗಳ ಮಹಾರಾಜರುಗಳು ಸೋಲು ಗೆಲುವುಗಳನ್ನು ತೀರ್ಮಾನಿಸಿ ಕಲೂ ಜಟ್ಟಿಗೆ ೫,೦೦೦ ರೂಪಾಯನ್ನೂ ಕರೀಮನಿಗೆ ೨,೫೦೦ ರೂಪಾಯನ್ನೂ ಮೊದಲನೆ ಬಹುಮಾನಗಳನ್ನು ಕೊಡುವಂತೆ ಮಾಡಿದರು. ಆದರೆ ಇವರಿಬ್ಬರ ಪೈಕಿ ಯಾರಿಗೆ ಬಿರುದಿನ ಬೆಲ್ಟು ಕೊಡಬೇಕೆಂಬ ವಿಷಯದಲ್ಲಿ ಅನುಮಾನವುಂಟಾಗಿ ಅವರಿಬ್ಬರೂ ಕೂಚ್ ಬೀಹಾರಿನೊಳಗೆ ಮರು[illegible] ಕುಸ್ತಿ ಮಾಡಬೇಕೆಂತಲೂ ಗೆದ್ದವರಿಗೆ ಆ ಬೆಲ್ಟನ್ನು ಕೊಡಬೇಕೆಂತಲೂ ಗೊತ್ತು ಮಾಡಿರುವರು

◆◆◆◆

ಕುಂಭಕೋಣದಲ್ಲಿ ನಾಲ್ಕು ಅಡಿ ಎತ್ತರವಾಗಿ ಬೆಳೆದ ಒಂದು ಕಾಡು ಕೋತಿಯು ಹಿಂದಿನ ಕಾಲುಗಳ ಮೇಲೆ ನಿಂತು ನಡೆಯುತ್ತಾ ಮನೆ ಮನೆಗೂ ನುಗ್ಗಿ ಕೆಲವು ಕಾಲದಿಂದ ನಾನಾ ರೀತಿಯಲ್ಲಿ ಜನರನ್ನು ಹಿಂಸೆಪಡಿಸುತ್ತಿತ್ತು ಅದು ಎರಡು ಮಕ್ಕಳನ್ನು ಕಚ್ಚಿ ಕೊಂದುಹಾಕಿತು. ಅದಿಗೆ ಮನೆಗಳಿಗೆ ನುಗ್ಗಿ ಹೆಂಗಸರು ಮಕ್ಕಳನ್ನು ಗಾಬರಿಪಡಿಸಿ ಅಡಿಗೆ ತಿಂಡಿಪದಾರ್ಥಗಳನ್ನೆಲ್ಲಾ ತಿಂದುಹಾಕುತ್ತಿತ್ತು. ಒಂದು ದಿನ ಸಾಯಂಕಾಲ ಕೆಲವುಮಂದಿ ಹೆಂಗಸರು ಬಿಂದಿಗೆಗಳಲ್ಲಿ ನೀರು ಹೊತ್ತು ತರುತ್ತಿದ್ದಾಗ ಈ ಕೋತಿಯು ಒಬ್ಬ ಹೆಂಗಸನ್ನು ಹಿಡಿದು ಹಿಂಸೆಪಡಿಸಿ, ಅವರನ್ನು ಅದರ ಕೈಗಳಿಂದ ಬಿಡಿಸುವುದೇ ಪ್ರಯಾಸವಾಯಿತು. ಮ್ಯುನಿಸಿಪಾಲಿಟಿಯವರು ಅದರ ಹಿಂಸೆಯನ್ನು ತಪ್ಪಿಸಬೇಕೆಂದು ಅದನ್ನು ಕೊಂದವರಿಗೆ ಹತ್ತು ರೂಪಾಯಿ ಇನಾಮು ಕೊ[illegible]

...ಹಿಸಿದರು. ಆದರೂ ಕೆಲವು ದಿನಗಳ ತನಕ ಅದು ಯಾರಿ...ದ್ದರೆ ಪ್ರಜೆಗಳಿಗೆ ತುಂಬಾ ಕಳವಳವನ್ನುಂಟುಮಾಡುತ್ತಾ ಬಂ... ಪೋಲೀಸಿನವರು ಇನಾಂ ಪಡೆಯಬೇಕೆಂದು ತುಂಬಾ ಸಾಹಸ ...ಡು. ಆದರೆ ಅಲ್ಲಿನ ಕೋರ್ಟ್ ದಿವಾನನು ಕಡೆಗೆ ಅದನ್ನು ಸಂ...ಕೊಂಡು ಬಹುಮಾನವನ್ನು ಪಡೆದನು. ಪ್ರಜೆಗಳು ತುಂಬಾ ಸಂತುಷ್ಟರಾಗಿ ಅವನಿಗೆ ಬಹುಮಾನಗಳನ್ನು ಕೊಟ್ಟರು.

****

...ನ್ನವೆಲ್ಲಿ ಡಿಸ್ಟ್ರಿಕ್ಟಿಗೆ ಸೇರಿದ ವಡಕೂರಿನಲ್ಲಿ ಕ್ರೈಸ್ತ ಪಂಚ...ಕೂ ಪೋಲೀಸಿನವರಿಗೂ ಜಗಳವಾಯಿತು. ಕ್ರೈಸ್ತರು ಹಬ್ಬ...ದ್ದಾಗ ಮೂವರು ಪೋಲೀಸಿನವರೂ ಇನ್ಸಿಪೆಕ್ಟರೂ ಆ ಗ್ರಾ...ಹೋಗಿ ಕ್ರೈಸ್ತರ ಮೂರು ಕುರಿಗಳನ್ನು ಹಿಡಿದು ತೆಗೆದು...ಹೋಗುತ್ತಿದ್ದರು. ಕ್ರೈಸ್ತರೆಲ್ಲಾ ಸೇರಿ ಆ ಪೋಲೀಸಿನವರ...ಹಿಡಿದು ಕಟ್ಟಿಹಾಕಿ ಅವರ ಬಳಿ ಇದ್ದ ಎರಡು ಬಂದೂಕುಗಳ...ಕಿತ್ತುಕೊಂಡರು. ಈ ಗಲಭೆಯ ಸುದ್ದಿಯನ್ನು ಕೇಳಿ ಸಬ್ ...ಸ್ಟ್ರೇಟರು, ಪೋಲೀಸ್ ಇನ್ಸ್‌ಪೆಕ್ಟರು, ೩೦ ಮಂದಿ ಕಾನ್‌ಸ್ಟೇ...ಬಲು ಬಹುಮಂದಿ ನಲ್ಲಾಳರು, ಮರವರು, ಇವರೆಲ್ಲಾ ಆ ಗ್ರಾಮ...ದರು. ಅವರವರಿಗೆ ಜಗಳ ನಡೆಯಿತು. ಸರ್ಕಾರದ ನೌಕರ...ರನ್ನು ...ಟುಮಾಡಿದರು. ಗಂಡಸರನ್ನು ಹೊಡೆದು ಹೆಂ...ರನ್ನು ಅವಮಾನಪಡಿಸಿ, ಆಸ್ತಿಯನ್ನು ಅಪಹರಿಸಿದ್ದಲ್ಲದೆ ದೇವ...ಲಯಕ್ಕೆ ನುಗ್ಗಿ ಕ್ರೈಸ್ತರೆಲ್ಲಾ ಪ್ರಾರ್ಥನೆ ನಡೆಸುತ್ತಿದ್ದಾಗ ...ನ್ನು ಹೊಡೆದು ಓಡಿಸಿದರು. ಒಬ್ಬ ಮುದುಕನ ಕೈ ಮುರಿದು...ದು. ಕಡೆಗೆ ಕ್ರೈಸ್ತರು ಕಟ್ಟಿಹಾಕಿದ್ದ ಪೋಲೀಸಿನವರನ್ನು ...ಕೊಂಡು, ಪಿಸ್ತೂಲುಗಳನ್ನು ವಾಪಸು ಪಡೆದು, ೩೦ ಮಂದಿ ...ರನ್ನು ದಸ್ತಗಿರಿ ಮಾಡಿ, ಈಚೆಗೆ ಆ ಪೈಕಿ ೧೬ ಮಂದಿಯನ್ನು ...ಮೇಲೆ ಬಿಟ್ಟು ದಾವೆಂತಲೂ ಮೊಕದ್ದಮೆ ನಡೆಯುತ್ತಿದೆ ಎಂ...ತಿಳಿದುಬಂದಿದೆ.

****

...ಬಿ ಪಟ್ಟಣದ ನವಾಬರು ಅಫ್ಘಾನಿಸ್ಥಾನದ ಅಮೀರರ ...ತೋಷಪಡಿಸುವುದಕ್ಕಾಗಿ ಬಕ್ರೀದ್ ಹಬ್ಬದ ದಿನ ೧೦೦ ಹಸು...ಕೊಲ್ಲಬೇಕೆಂದು ಗೊತ್ತುಮಾಡಿ, ಅಮೀರರಿಗೆ ತಿಳಿಸಿದ ...ಅಮೀರರು ಅವರಿಗೆ ಹಾಗೆ ಮಾಡಕೂಡದೆಂದು ಜವಾಬು ...ಅದಕ್ಕೆ ಪ್ರತಿ ಕುರಿಗಳನ್ನು ಕೊಲ್ಲಬೇಕೆಂದು ತಿಳಿಸಿದ ...ಈ ವರ್ತಮಾನವು ಉತ್ತರ ದೇಶದಲ್ಲೂ ದಕ್ಷಿಣ ದೇಶದಲ್ಲೂ ...ಈ ಅಮೀರರಿಗೆ ಹಿಂದುಗಳ ಮೇಲಿರುವ ಪ್ರೀತಿಯನ್ನು ತಿಳಿ...ಕ್ಕಾಗಿಯೇ ಅವರು ಆ ರೀತಿ ಅಪ್ಪಣೆ ಕೊಟ್ಟದ್ದಾಗಿಯೂ, ಈ ...ಲ್ಲ ಹಿಂದುಗಳು ತುಂಬಾ ಸಂತೋಷಪಟ್ಟು ಅಮೀರರಿಗೆ ...ಕೃತಜ್ಞತೆ ಸಂತೋಷಗಳನ್ನು ತಂತೀ ವರ್ತಮಾನಗಳ ಮೂಲ...ಮು ಕಳುಹಿಸಿದ ಹಾಗೂ ಕಳೆದ ವಾರ ತಿಳಿಸಿದ್ದೆವಷ್ಟೆ. ಈಚೆಗೆ ...ಟ್ಟಣದ ಮುಸಲ್ಮಾನರು ಒಂದು ದೊಡ್ಡ ಸಭೆ ಮಾಡಿದರು. ...ಮಂದಿ ಮುಸಲ್ಮಾನರು ದೊಡ್ಡ ಮನುಷ್ಯರೂ ಮೌಲ್ವಿಗಳೂ ...ಇದ್ದರು. ಆ ಸಭೆ ಅವರು ತೀರ್ಮಾನಿಸಿದ್ದೇನೆಂದರೆ—ದೆಹಲಿ ...ಮೀಯರು ಅಫ್ಘಾನಿಸ್ಥಾನದ ಅಮೀರರನ್ನು ಆ ರೀತಿಯಾಗಿ ...ಳಲಿಲ್ಲ. ಈ ವರ್ತಮಾನವೆಲ್ಲಾ ನಿರಾಧಾರವಾದದ್ದು. ಹಿಂ...ಈ ಮುಸಲ್ಮಾನರಿಗೂ ದ್ವೇಷಾಸೂಯೆಗಳನ್ನು ಉಂಟು...ಮಾಡಬೇಕೆಂಬ ದುಷ್ಟರು ಯಾರೋ ಆ ರೀತಿ ಕು...ವು ೧೦೦ ಹಸುಗಳನ್ನು ಕೊಲ್ಲುವವರಾಗಿದ್ದೇವೆಂದೂ, ಅದ...ಮೀರರು ಒಪ್ಪಲಿಲ್ಲವೆಂದೂ ಪತ್ರಿಕೆಗಳಲ್ಲಿ ಪ್ರಕಟಿಸಿರುತ್ತಾ...ಕ್ಕೆ ದೆಹಲಿಯ ಮುಸಲ್ಮೀಯರಾದ ನಾವು ಯಾರೂ ಸಮ್ಮತಿ...ನಮ್ಮಲ್ಲಿಯೂ ಈ ವಿಷಯ ಹ್ಯಾಗೆ ಹುಟ್ಟಿತೋ ತಿಳಿಯ...ಬೇರಾಗಿ ತೀರ್ಮಾನ ಮಾಡಿ, ಈ ತೀರ್ಮಾನವನ್ನು ಎಲ್ಲಾ ಪ...ಕೆಗಳಲ್ಲಿ ಪ್ರಕಟಿಸಿರುತ್ತಾರೆ.

ವಿದೇಶ ವರ್ತಮಾನಗಳು.

...ಜಾನ್ ಡಿ ರಾಕ್‌ಫೆಲರ್ ಎಂಬ ಅಮೇರಿಕದ ಕೋಟ್ಯಾಧೀಶ...ಚಿಕಾಗೋ ಪಟ್ಟಣದ ವಿದ್ಯಾಶಾಲೆಯ ಮೂಲಧನಕ್ಕೆ ೯೦ ಲಕ್ಷ...ವನ್ನು ಹೊಸ ವರುಷದ ಬಹುಮಾನವಾಗಿ ಕೊಟ್ಟು ಕಳುಹಿಸಿ...ಆ ಫಂಡಿನಲ್ಲಿ ಈಗ ೫೪೮೫ ಲಕ್ಷ ರೂಪಾಯಿ ಶೇಖರವಾಗಿರು...

****

...ವೆಸ್ಟ್ ದ್ವೀಪಸಮುದಾಯಕ್ಕೆ ಸೇರಿದ ಹೈಟಿ, ಸೋಮಾರ್ ಎಂಬ ...ಲ್ಲಿ ಸುಂಟರಗಾಳಿಯೂ ಅಪಾರವಾದ ಮಳೆಯೂ ಪ್ರಾಪ್ತ...ರು ಜನರು ಹತರಾದರು. ಅನೇಕ ಭಾರೀ ಕಟ್ಟಡಗಳು ನೆಲ...ದವು. ಈ ಅನಾಹುತದ ಸರಿಯಾದ ವಿವರಣೆಯು ಇನ್ನೂ ...ತಿಗಲಿಲ್ಲ.

****

ಳೆದ ವಾರ ಯುರೋಪಿನ ರಾಜ್ಯಗಳಲ್ಲೆಲ್ಲಾ ಬಹು ಅಪೂರ್ವ...ಶೀತ ಹವಾ ಪ್ರಾಪ್ತವಾಗಿತ್ತು. ಮಂಜಿನ ಮಳೆ ಸುರಿಯಿತು. ...ಕಡೆಗಳಲ್ಲಿ ಜನರು ರಸ್ತೆಗಳಲ್ಲೇ ಬಿದ್ದು ಶೈತ್ಯವನ್ನು ತಡೆಯ...ಪ್ರಾಣಬಿಟ್ಟರು. ರೈಲ್ ಗಾಡಿಗಳ ಸಂಚಾರಕ್ಕೆ ಕುಂದಕವಾಯಿ...ನೇಕ ಕೆರೆ ಕೊಳ ನದಿಗಳ ಮೇಲೆಲ್ಲಾ ಮಂಜು ಬಿದ್ದು ನೀರು ...ಕಟ್ಟಿಕೊಂಡಿತು.

****

...ಸ್ಟ್ರೇಲಿಯಾ ಎಂಬ ಇಂಗ್ಲೀಷ್ ಸಾಮ್ರಾಜ್ಯಕ್ಕೆ ಸೇರಿದ ವಿಕ್ಟೋರಿ...ಗವರ್ನಮೆಂಟಿನವರು ಬಡಬಗ್ಗರಾದ ಮುದುಕರಿಗೆಲ್ಲಾ ರಲಾ...ಕ್ಕೆ ಆರು ರೂಪಾಯಿನಂತೆ ಜೀವನಾಂಶವನ್ನು ಖಜಾನೆಯಿಂದ ...ಕೊಡುತ್ತಿದ್ದರು. ಇದು ಅವರಿಗೆ ಜೀವನಕ್ಕೆ ಸಾಕಾಗುವುದಿಲ್ಲವೆಂದು ...ಬಂದದ್ದರಿಂದ ಇನ್ನೂ ೧॥ ರೂಪಾಯಿನಂತೆ ಜಾಸ್ತಿ ಕೊಡ...ಬು ಗೊತ್ತುಮಾಡಿದಾರೆ.

ರಷ್ಯಾ ರಾಜ್ಯದಲ್ಲಿ ಡ್ಯೂಮಾ ಎಂಬ ಪ್ರಜಾಪ್ರತಿನಿಧಿ ಸಮಾಜಕ್ಕೆ ಜನರು ಮೆಂಬರುಗಳನ್ನು ಚುನಾಯಿಸಲಾರಂಭವಾಗಿದೆ. ಮಾಸ್ಕೋ ಪಟ್ಟಣದ ಗವರ್ನರ್ ಜನರಲ್‌ರವರು ಪ್ರಜೆಗಳಿಗೆ ಇಸ್ತಿಹಾರು ಹಾಕಿಸಿ ಯಾರಾದರೂ ಚುನಾವಣೆಯ ಕಾಲದಲ್ಲಿ ಸರ್ಕಾರಕ್ಕೆ ವಿರೋಧವನ್ನುಂಟುಮಾಡುವಂಥಾ ಉಪನ್ಯಾಸಗಳನ್ನು ಮಾಡಿದ ಪಕ್ಷದಲ್ಲಿ ಅಂಥವರನ್ನು ಹಿಡಿದು ಮೂರು ತಿಂಗಳ ಸಜಾ ಹಾಕುತ್ತೇವೆಂದು ತಿಳಿಸಿರುತ್ತಾರೆ.

****

ಪರ್ಷಿಯಾ ರಾಜ್ಯದ ಷಾರವರು ಕಾಲವಾದರು. ಅವರ ಕುಮಾರರಿಗೆ ಕಳೆದ ವಾರ ರಾಜಧಾನಿಯಾದ ಟೆಹರಾನ್ ಪಟ್ಟಣದಲ್ಲಿ ಪಟ್ಟಾಭಿಷೇಕವಾಯಿತು. ಇವರು ತಮ್ಮ ಕುಮಾರನಿಗೆ ಯುವರಾಜನೆಂಬ ಬಿರುದನ್ನು ಕೊಟ್ಟರು. ಆ ರಾಜ್ಯದ ಹೊಸ ಪಾರ್ಲಿಮೆಂಟ್ ಮೆಂಬರುಗಳು ಸರ್ಕಾರದ ಕಾರುಬಾರುಗಳನ್ನು ಸಹಜವಾಗಿ ತಿಳಿಸುವುದಕ್ಕೋಸ್ಕರ ಮಜಲೀಷ್ ಎಂಬ ಹೆಸರಿನ ಒಂದು ವರ್ತಮಾನ ಪತ್ರಿಕೆಯನ್ನು ದಿನವಹಿ ಪ್ರಕಟಿಸುತ್ತಿದ್ದಾರೆ.

****

ಕಳೆದ ತಿಂಗಳು ಅಮೇರಿಕದಲ್ಲಿ ೨—೩ ಕಡೆ ಭಯಂಕರವಾದ ರೈಲ್ವೆ ಅನಾಹುತಗಳು ನಡೆದಿರುತ್ತವೆ. ಬಾಲ್ಟಿಮೋರ್ ಓಹಯೋ ರೈಲ್ವೆ ಅನಾಹುತದಲ್ಲಿ ೫೦ ಜನರು ಹತರಾದರು, ೪೦ ಜನರಿಗೆ ಗಾಯಗಳಾದವು. ಫ್ರೆಡ್ರಿಕ್ ಸಿಟಿ ರೈಲ್ವೆ ಅನಾಹುತದಲ್ಲಿ ೫೯ ಜನರು ಮೃತಪಟ್ಟರು. ಚಿಕಾಗೋ, ರಾಕ್ ಐಲೆಂಡ್, ಪೆಸಿಫಿಕ್ ರೈಲ್ವೆ ಅನಾಹುತದಲ್ಲಿ ೩೬ ಮಂದಿ ಸತ್ತುಹೋದರು, ೩೧ ಜನರಿಗೆ ಗಾಯಗಳಾದವು. ಅಂತು ಆ ತಿಂಗಳಲ್ಲಿ ಒಂದೇ ವಾರದೊಳಗಾಗಿ ೧೩೫ ಜನರು ಅಪಮೃತ್ಯುವಿಗೆ ಗುರಿಯಾದದ್ದು ತುಂಬಾ ದುಃಖಕರವಾಗಿರುತ್ತದೆ.

****

ಸರ್ವಿಯಾ ರಾಜ್ಯದಲ್ಲಿ ಎರಡು ವರುಷಗಳ ಕೆಳಗೆ ಕೆಲವು ಸೈನ್ಯಾಧಿಕಾರಿಗಳು ಪಿತೂರಿ ಮಾಡಿ, ದೊರೆಯನ್ನೂ ರಾಣಿಯನ್ನೂ ನಿಷ್ಕಾರಣವಾಗಿ ಕೊಂದುಹಾಕಿ, ದೂರ ದೇಶದಿಂದ ಒಬ್ಬಾತನನ್ನು ಕರೆಸಿಕೊಂಡು ಆತನಿಗೆ ಪಟ್ಟ ಕಟ್ಟಿರುತ್ತಾರಷ್ಟೆ. ಈಗೀಗ ಈಗಿನ ದೊರೆಯ ಮೇಲೂ ಗವರ್ನಮೆಂಟಿನ ಮೇಲೂ ಪ್ರಜೆಗಳಿಗೆ ಅಸಮಾಧಾನವೂ ಮನಸ್ತಾಪಗಳೂ ಹುಟ್ಟಿರುತ್ತವೆಂದೂ, ಬಹಿರಂಗವಾಗಿ ಬೀದಿಗಳಲ್ಲೇ ಸಭೆಗಳನ್ನು ನಡೆಸುತ್ತಿದ್ದಾರೆಂದೂ, ಒಂದು ಸಭೆಯಲ್ಲಿ ಮಂತ್ರಿಯ ಚಿತ್ರವನ್ನು ಬರೆಸಿ ಅದು ಬೆಂಕಿ ಹಾಕಿ ಸುಟ್ಟುಬಿಟ್ಟರೆಂದೂ ಪ್ರಕಟವಾಗಿದೆ.

****

ತುರ್ಕಿ ರಾಜ್ಯಾಧಿಪತ್ಯಕ್ಕೆ ಸೇರಿದ ಸ್ಮರ್ನಾ ದೇಶದಲ್ಲಿ ಕಳೆದ ತಿಂಗಳು ಪ್ರವಾಹಗಳ ದೆಸೆಯಿಂದ ಬಾಳ ಅವಾಂತರಗಳಾಗಿ ಅನೇಕ ಸಹಸ್ರ ಪ್ರಜೆಗಳು ಸರ್ವಸ್ವವನ್ನೂ ಕಳೆದುಕೊಂಡು ಬಹಳ ಕಷ್ಟವನ್ನನುಭವಿಸುತ್ತಿದ್ದಾರೆ. ಸುಲ್ತಾನರು ಅವರ ಸಹಾಯಾರ್ಥವಾಗಿ ಒಂದು ಧರ್ಮದ ಫಂಡನ್ನು ಪ್ರಾರಂಭಿಸಿ, ತಾವು ಮೊದಲು ೩೦,೦೦೦ ರೂಪಾಯಿ ಕೊಟ್ಟದ್ದಲ್ಲದೆ ವ್ಯವಸಾಯ ಬ್ಯಾಂಕಿನಿಂದ ೧॥ ಲಕ್ಷ ರೂಪಾಯನ್ನೂ ಖಜಾನೆಯಿಂದ ೩೬,೦೦೦ ರೂಪಾಯನ್ನೂ ಕೊಡಿಸಿದರು. ಇಟಲಿ ರಾಜ್ಯದ ದೊರೆಯವರು ೬,೦೦೦ ರೂಪಾಯಿ ಕಳುಹಿಸಿ ಕೊಟ್ಟರು.

****

ದಕ್ಷಿಣ ಆಫ್ರಿಕಕ್ಕೆ ಸೇರಿದ ಕೇಪ್ ಕಾಲನಿ ಎಂಬ ಇಂಗ್ಲೀಷ್ ಸಾಮ್ರಾಜ್ಯದಲ್ಲಿ ಕೌಪರ್ ಎಂಬುವನು ಅನಗೆ ಜಾರತ್ವದಲ್ಲಿ ಹುಟ್ಟಿದ ಮಗುವನ್ನು ಕೊಂದುಹಾಕಿದನು. ಜಡ್ಜರು ಅವನಿಗೆ ಮರಣ ದಂಡನೆಯನ್ನು ವಿಧಿಸಿದರು. ಆದರೆ ಅಲ್ಲಿನ ಪ್ರಜೆಗಳೆಲ್ಲಾ ಸೇರಿ ಮರಣ ದಂಡನೆಯನ್ನೇ ವಜಾಮಾಡಿಸಿಕೊಳ್ಳಬೇಕೆಂದು ಗವರ್ನರಿಗೆ ಅರ್ಜಿ ಬರೆದುಕೊಂಡರು. ಗವರ್ನರು ಆ ವಿಜ್ಞಾಪನೆಯನ್ನು ಲಕ್ಷ್ಯ ಮಾಡದೆ ಖಂಡಿತವಾದ ಹುಕುಂ ಕೊಟ್ಟು ಆ ಅಪರಾಧಿಯನ್ನು ಗಲ್ಲಿಗೆ ಹಾಕಿಸಿಬಿಟ್ಟರು. ಇದು ಇಲ್ಲಿನ ಪ್ರಜೆಗಳಲ್ಲಿ ಸ್ವಲ್ಪ ಅಸಮಾಧಾನವನ್ನು ಹುಟ್ಟಿಸಿದೆ.

****

ರಷ್ಯಾ ರಾಜ್ಯಕ್ಕೆ ಸೇರಿದ ಲಾಡ್ಜ್ ಎಂಬ ಪಟ್ಟಣದಲ್ಲಿ ಆರು ಹತ್ತಿ ಕಾರ್ಖಾನೆಗಳು ಮುಚ್ಚಲ್ಪಟ್ಟವು. ೩೦,೦೦೦ ಕೂಲೀ ಜನರು ಜೀವನಕ್ಕೆ ಮಾರ್ಗವಿಲ್ಲದೆ ಕಷ್ಟಪಡುತ್ತಿದ್ದಾರೆ. ದಂಗೆಕೋರರು ಪೋಲ್ಯಾಂಡ್ ಕಾರ್ಖಾನೆಗೆ ನುಗ್ಗಿ ಅಧಿಕಾರಿಗಳಿಬ್ಬರನ್ನು ಕೊಂದುಹಾಕಿದರು. ದಂಗೆಕೋರರಿಗೂ ಅಧಿಕಾರಿಗಳಿಗೂ ಕಾದಾಟಗಳು ಇನ್ನೂ ನಿಲ್ಲಲಿಲ್ಲ. ಅತ್ತಲಾಗಿ ಜನರಲ್ ಕುರೋಪಾಟ್ಕಿನ್‌ರವರು ರಷ್ಯಾ ಜಪಾನ್ ಯುದ್ಧದ ಚರಿತ್ರೆಯನ್ನು ಬರೆದು ಅಚ್ಚು ಹಾಕಿಸಿದರು. ಆ ಪುಸ್ತಕಗಳನ್ನೆಲ್ಲಾ ವಿಕ್ರಯ ಮಾಡಕೂಡದೆಂದು ಸರ್ಕಾರದವರು ತಡೆದಿಟ್ಟುಕೊಂಡಿದಾರೆ.

****

ಸುಮಾತ್ರಾ ದ್ವೀಪಕ್ಕೆ ಪಶ್ಚಿಮದಿಕ್ಕಿನಲ್ಲಿ ಡಚ್ಚರಿಗೆ ಸೇರಿರುವ ಸಿಮಾಲೂ (ಅಥವಾ ಹಾಗ್) ದ್ವೀಪದಲ್ಲಿ ಕಳೆದ ೧೧ನೆ ತಾರೀಖಿನ ದಿನ ಬಹು ಬಲವಾದ ಭೂಕಂಪವುಂಟಾಗಿ ಆ ದ್ವೀಪಕ್ಕೆ ಸ್ವಲ್ಪವೇ ಸಮುದ್ರದೊಳಕ್ಕೆ ಮುಳುಗಿಹೋಯಿತು. ಸುಮಾರು ೧,೫೦೦ ಜನರು ನಾಶಹೊಂದಿದರು. ಅಕ್ಕಪಕ್ಕದ ದ್ವೀಪಗಳಲ್ಲಿ ಆಗಾಗ್ಗೆ ಭೂಕಂಪಗಳು ಇನ್ನೂ ಆಗುತ್ತಲೇ ಇವೆ. ಈಚೆಗೆ ಆ ದ್ವೀಪದಲ್ಲಿ ಕೆಲವು ಭಾಗ ಉಳಿಕೊಂಡಿರುವುದಾಗಿಯೂ ಡಚ್ಚರ ಗವರ್ನರವರು ಔಷಧವೇ ಮೊದಲಾದ ಸಾಮಗ್ರಿಗಳನ್ನು ತೆಗೆದುಕೊಂಡು ಆ ದ್ವೀಪಕ್ಕೆ ಪ್ರಯಾಣ ಮಾಡಿರುವುದಾಗಿಯೂ ತಂತೀವರ್ತಮಾನ ಬಂದಿದೆ.

****

ಜಮೇಕಾ ದ್ವೀಪದ ರಾಜಧಾನಿಯಾದ ಕಿಂಗ್‌ಸ್ಟನ್ ನಗರದಲ್ಲಿ ಸಂಭವಿಸಿದ ಭೂಕಂಪದ ಅನಾಹುತವನ್ನು ಕಳೆದ ವಾರ ವಿವರಿಸಿರುತ್ತೇವಷ್ಟೆ. ಈಚೆಗೆ ತಾ ೨೨ ರಲ್ಲಿ ಎರಡುಸಾರಿ ಬಹಳ ಬಲವಾಗಿ ಭೂಮಿಯು ಕಂಪಿಸಿತು. ಮೊದಲನೆ ಅನಾಹುತವನ್ನು ಕಳೆದುಳಿದಿದ್ದಂಥಾ ಅನೇಕ ಭಾರೀ ಕಟ್ಟಡಗಳು ಉರುಳಿಕೊಂಡವು. ಪ್ರಾಣ ನಷ್ಟವೇನೂ ಆಗಲಿಲ್ಲ. ಆದರೆ ಜನರು ಬಹಳವಾಗಿ ಗಾಬರಿಬಿದ್ದರು ಎಂದು ತಂತೀವರ್ತಮಾನ ಬಂದಿದೆ. ಹಿಂದುಸ್ಥಾನದಲ್ಲಿ ವೈಸ್‌ರಾಯಿ ಲಾರ್ಡ್ ಮಿಂಟೋ ಪ್ರಭುಗಳು ಆ ಪಟ್ಟಣದ ಪ್ರಜೆಗಳಿಗೆ ಸಹಾಯ ಮಾಡಬೇಕೆಂದು ಒಂದು ಧರ್ಮದ ಫಂಡು ಏರ್ಪಾಡು ಮಾಡಿ, ತಾವು ಮೊದಲು ೧,೦೦೦ ರೂಪಾಯಿ ಕೊಟ್ಟದಾರೆ.

****

ಪ್ರಪಂಚದಲ್ಲೆಲ್ಲಾ ಎಲ್ಲಾ ವಿಷಯಗಳಲ್ಲೂ ಮೊದಲನೆಯ ಪಟ್ಟಣವಾಗಿರುವ ಲಂಡನ್ ನಗರದಲ್ಲಿ ಈಗ ೧,೨೩,೦೦೦ ಬಾಬರುಗಳು ಅಂದರೆ ತಿನ್ನುವುದಕ್ಕೆ ಗತಿ ಇಲ್ಲದೆ ಅಲೆಯುವವರು ಇರುತ್ತಾರೆ. ಇಂಥಾ ನಿರ್ಗತಿಕರನ್ನು ಸ್ವಲ್ಪಬಿಟ್ಟು ಸಾಕುವುದಕ್ಕೆ ಮ್ಯುನಿಸಿಪಾಲಿಟಿಯವರು ಅನೇಕ ಆಲಯಗಳನ್ನೂ ಧರ್ಮ ಸತ್ರಗಳನ್ನೂ ಕಟ್ಟಿಸಿರುವರು. ಈ ಆಲಯಗಳಲ್ಲಿ ೭೮,೬೦೩ ಮಂದಿ ಪ್ರಜೆಗಳು ಸೇರಿಕೊಂಡು ಅವುಗಳ ಯಜಮಾನರು ಹೇಳುವ ಕೆಲಸಗಳನ್ನು ಮಾಡುತ್ತಾ ಅವುಗಳಲ್ಲಿ ಹಾಕುವ ಅನ್ನವನ್ನು ತಿಂದು ಜೀವನ ಮಾಡುತ್ತಿದ್ದಾರೆ. ಕಳೆದ ವರುಷ ಆ ಪಟ್ಟಣದಲ್ಲಿ ಬಡಬಗ್ಗರನ್ನು ಸಾಕಿ ಅವರ ಕಾಯಿಲೆಗಳನ್ನು ವಾಸಿಮಾಡಿ ಕಾಪಾಡಿದ್ದಕ್ಕೆ ೫೬೦ ಲಕ್ಷ ರೂಪಾಯಿ ಖರ್ಚಾಗಿರುತ್ತದೆಂದು ಅಲ್ಲಿನ ಅಧಿಕಾರಿಗಳು ತಿಳಿಸಿದಾರೆ.

****

ಜರ್ಮನಿ ಗವರ್ನಮೆಂಟಿನವರು ಒಂದೂವರೆ ಲಕ್ಷ ರೂಪಾಯಿ ಖರ್ಚು ಮಾಡಿ ಡಾಕ್ಟರ್ ವಾನ್ ಲೆಕಾಕ್ ಎಂಬ ಪ್ರಾಚೀನಶಾಸ್ತ್ರಜ್ಞನನ್ನು ಮಧ್ಯ ಏಷ್ಯಾ ಪ್ರಾಂತ್ಯಕ್ಕೆ ಕಳುಹಿಸಿ, ಆತನಿಂದ ಅಲ್ಲಿರುವ ಪ್ರಾಚೀನಕಾಲದ ಚರಿತ್ರಾರ್ಹವಾದ ವಸ್ತುವಿಶೇಷಗಳನ್ನು ಪರೀಕ್ಷೆಮಾಡಿಸಿರುತ್ತಾರೆ. ಆತನಿಗೆ ಚೀನಾ ತುರ್ಕಿಸ್ಥಾನದ ರಾಜಧಾನಿಯ ಭೂಗರ್ಭದಲ್ಲಿ ಅನೇಕ ಕಾಗದ ಪತ್ರಗಳು ಸಿಕ್ಕಿದವು. ಒಂದು ಸಾವಿರ ವರುಷಗಳ ಹಿಂದೆ ಭೂಗತಮಾಡಲ್ಪಟ್ಟಿದ್ದ ನೂರಾರು ಬೌದ್ಧ ಸನ್ಯಾಸಿಗಳ ಶವಗಳು ಸಾಕಾರವಾಗಿ ಸಿಕ್ಕಿದವು. ಈ ಶವಗಳಿಗೆ ಸುಗಂಧಗಳನ್ನು ಹಾಕಿ ಬಟ್ಟೆಗಳನ್ನು ತೊಡಿಸಿಟ್ಟಿದ್ದರು. ಆದ್ದರಿಂದ ಅವು ಸ್ವಲ್ಪವೂ ಕೆಟ್ಟಿರಲಿಲ್ಲ. ಸಿಕ್ಕಿರುವ ಕಾಗದಪತ್ರಗಳು ೧೦—೧೨ ಲಿಪಿಗಳಲ್ಲಿ ಬರೆಯಲ್ಪಟ್ಟವೆ. ಇನ್ನೂ ಅನೇಕವಾದ ಸಾಮಾನುಗಳೂ ದೊರಕಿರುವವು. ಇವುಗಳನ್ನೆಲ್ಲಾ ಆ ಶಾಸ್ತ್ರಜ್ಞನು ೨೦೦ ಪೆಟ್ಟಿಗೆಗಳಲ್ಲಿ ತುಂಬಿ ಮೊಹರು ಮಾಡಿ, ಜರ್ಮನಿಗೆ ರವಾನೆ ಮಾಡಿರುತ್ತಾನೆ.

****

ಚೀನಾ ರಾಜ್ಯದಲ್ಲಿ ನಡೆದ ಕೆಲವು ಕಾರುಬಾರುಗಳ ವಿವರವೇನೆಂದರೆ—ಅಮೇರಿಕಕ್ಕೆ ಚೀನಾಯವರನ್ನು ಬಿಡಕೂಡದೆಂದು ಅಲ್ಲಿನ ಸರ್ಕಾರದವರು ತಡೆಯುತ್ತಿದ್ದಾರೆ. ಇದನ್ನು ಚೀನಾಯವರು ಕೇಳಿ ಆಗ್ರಹಪಟ್ಟು ಕ್ಯಾಂಟನ್ ಪಟ್ಟಣದಲ್ಲಿ ಒಂದು ಭಾರೀ ಸಭೆಯನ್ನು ನಡಿಸಿ ತೀರ್ಮಾನಿಸಿರುವುದೇನೆಂದರೆ—ಅಮೇರಿಕದ ಸರಕುಗಳನ್ನು ಚೀನಾದಲ್ಲಿ ಕೊಂಡುಕೊಳ್ಳಕೂಡದು. ಚೀನಾ ವರ್ತಮಾನ ಪತ್ರಿಕೆಗಳಲ್ಲಿ ಅಮೇರಿಕದ ವ್ಯಾಪಾರ ಪದಾರ್ಥಗಳನ್ನು ಕುರಿತು ಪ್ರಕಟನೆಗಳನ್ನು ಹಾಕಕೂಡದು. ಅಮೇರಿಕದವರು ಕಟ್ಟುವ ಪನಾಮಾ ಎಂಬ ಭಾರೀ ಸಮುದ್ರ ಕಾಲುವೆಯ ಕಾಮಗಾರಿಗೆ ಚೀನಾಯಿಂದ ಕೂಲಿಗಾರರು ಹೋಗಕೂಡದು. ಅಮೇರಿಕದವರು ಚೀನಾಯವರ ವಿಷಯದಲ್ಲಿ ಮಾಡಿಕೊಂಡಿರುವ ಕಾನೂನನ್ನು ವಜಾ ಮಾಡುವಂತೆ ಅವರಿಗೆ ತಿಳಿಸಬೇಕೆಂದು ಚೀನಾ ವೈಸ್‌ರಾಯರವರಿಗೆ ಅರಿಕೆ ಮಾಡಿಕೊಳ್ಳಬೇಕು. ಈ ತೀರ್ಮಾನಗಳನ್ನು ಚೀನಾಯವರು ದೊಡ್ಡಕ್ಷರಗಳಲ್ಲಿ ಅಚ್ಚು ಹಾಕಿಸಿ ಚೀನಾ ರಾಜ್ಯದಲೆಲ್ಲಾ ಎಲ್ಲರೂ ಓದಿಕೊಳ್ಳುವಂತೆ ಮುಖ್ಯ ಮುಖ್ಯ ಸ್ಥಳಗಳಲ್ಲಿ ಅಂಟಿಸಿರುತ್ತಾರೆ.—ಸರ್ಗಾವೀ ಎಂಬ ಚೀನಾ ಅಧಿಪತ್ಯದಲ್ಲಿ ಕ್ಷಾಮವು ಬಹು ಕಠಿಣವಾಗಿರುತ್ತದೆ. ೩೦ ವರುಷಗಳಿಂದ ಪ್ರಜೆಗಳು ಇಂಥಾ ಕ್ಷಾಮವನ್ನು ನೋಡಿರಲಿಲ್ಲ. ೩೦ ಲಕ್ಷ ಪ್ರಜೆಗಳು ಹೊಟ್ಟೆಗಿಲ್ಲದೆ ಹಾಹಾಕಾರ ಪಡುತ್ತಿದ್ದಾರೆ. ಅಲ್ಲಿಂದ ನಾನ್‌ಕಿಂಗ್ ಪಟ್ಟಣಕ್ಕೆ ಕ್ಷಾಮ ಪೀಡಿತರು ೫೦,೦೦೦ ಮಂದಿ ಜೀವನಗಳಿಗಾಗಿ ಬಂದಿರುತ್ತಾರೆ. ಕ್ಷಾಮ ನಿವಾರಣೆ ಮಾಡುವದಕ್ಕೆ ಸರ್ಕಾರಿ ಅಧಿಕಾರಿಗಳಿಗೆ ಚೈತನ್ಯ ಸಾಲದು. ಹಾಂಟಿಂಗ್ ಅಧಿಪತ್ಯದಲ್ಲಿ ಕ್ಷಾಮ ಪ್ರಾಪ್ತವಾಗಿರೋಣದರಿಂದ ಸರ್ಕಾರದವರು ಜಮೀನ್ ಕಂದಾಯವನ್ನೆಲ್ಲಾ ರಿಮಿಷನ್ ಮಾಡಿರುವಂತೆ ಇಸ್ತಿಹಾರು ಕೊಟ್ಟದಾರೆ.—ಚೀನಾ ರಾಜ್ಯದಲ್ಲಿ ಸರ್ಕಾರಿ ವಿದ್ಯಾಶಾಲೆಗಳಲ್ಲಿ ತಮ್ಮ ಮತದ ಮೂಲ ಪುರುಷನಾದ ಕನ್‌ಫ್ಯೂಸಿಯಸ್ ಎಂಬುವನ ವಿಗ್ರಹವನ್ನು ಇಟ್ಟು, ಇದಕ್ಕೆ ವಿದ್ಯಾರ್ಥಿಗಳೆಲ್ಲಾ ಪ್ರತಿ ದಿನವೂ ನಮಸ್ಕಾರ ಮಾಡಬೇಕೆಂದು ಹುಕುಂ ಕೊಟ್ಟದಾರೆ. ಇದು ಕ್ರೈಸ್ತ ವಿದ್ಯಾರ್ಥಿಗಳಿಗೂ ಇತರ ಮತಸ್ಥರಿಗೂ ಅಸಮಾಧಾನವನ್ನು ಹುಟ್ಟಿಸಿರುವದು.

ಸ್ಥಳೀಕ ವರ್ತಮಾನಗಳು

ನಂಜನಗೂಡು.—ನಮ್ಮ ಸಂಸ್ಥಾನಕ್ಕೆ ಕಿರೀಟ ಪ್ರಾಯವಾದ ಮೈಸೂರಿನಲ್ಲಿ ಪ್ಲೇಗ್ ರೋಗವು ಹೆಚ್ಚುತ್ತಾ ಬರುವದಕ್ಕೆ ತುಂಬಾ ವ್ಯಸನ ಪಡಬೇಕಾಗಿದೆ. ಆದರೆ ಅಲ್ಲಿನ ವಾಸಿಗಳು ಇಲ್ಲಿಗೂ ಇತರ ಕಡೆಗಳಿಗೂ ತಂಡ ತಂಡವಾಗಿ ಬಂದು ಸೇರಿ ಪ್ಲೇಗ್ ಬೀಜವನ್ನು ಪ್ರೇರಾವು ಮಾಡುವಂತೆ ಕಾಣುತ್ತೆ. ಮೈಸೂರು ಟವನಿಗೆ ರೈಲ್ ಮಾರ್ಗದಿಂದಲೂ ಇತರ ರಸ್ತೆಗಳಿಂದಲೂ ಹೋಗುವವರು ಅಬ್ಸರ್ವೇಷನ್ ಫಾರಂ ಪಡೆದ ಹೊರತು ಪುರ ಪ್ರವೇಶಕ್ಕೆ ಅವಕಾಶವಿರುವದೇ ಇಲ್ಲ. ಈಗ ಟವನಿನಲ್ಲಿ ಪ್ಲೇಗ್ ಹೆಚ್ಚಾಗಿರುವದರಿಂದ ಸರ್ಕಾರದವರು ಮೈಸೂರು ಟವನಿಗೆ ಬರುವವರ ಆರೋಗ್ಯಸ್ಥಿತಿಯನ್ನು ನೋಡಿ ಬಿಡುವದಕ್ಕೆ ಬದಲಾಗಿ ಆ ಟವನಿನಿಂದ ಇತರ ಸ್ಥಳಗಳಿಗೆ ಹೊರಡುವವರ ಆರೋಗ್ಯವನ್ನು ನೋಡಿ ಬಿಡುವಂತೆ ಹುಕುಂ ಮಾಡಿದರೆ ಇತರ ಸ್ಥಳಗಳಿಗೆ ಪ್ಲೇಗ್ ಹರಡುವದು ಕಮ್ಮಿಯಾಗುತ್ತೆಂದು ಹೇಳಬಹುದು.—ಈ ಟವನಿನಲ್ಲಿ ಮುನಿಸಿಪಲ್ ರೋಡುಗಳಲ್ಲಿ ೮—೯ ಘಂಟೆಯಾದರೂ

ಕಟಲು ಬಳಿಯುವದೆ ಇಲ್ಲ. ಕತ್ತಲೆ ಕಾಲದಲ್ಲಿ ಕೆಲವು ಕಡೆ ಇರುವ ಲಾಂದ್ರ ಕಂಬಗಳನ್ನು ಹುಡುಕಬೇಕಾದರೆ ನಾರಾಯಣಾಚಾರ್ಯರ ಅಗ್ರಹಾರಕ್ಕೆ ಹೋಗುವ ದಾರಿಯಲ್ಲಿ ಬೀಗಿ ಎತ್ತುಗಳನ್ನು ಕಟ್ಟಿರುವದನ್ನು ಮ್ಯುನಿಸಿಪಲ್ ನೌಕರರು ಅನೇಕ ವೇಳೆ ನೋಡಿದಾಗ್ಯೂ ಅಡ್ಯಾಟ ತಪ್ಪಿಸದೆ ಹೋಗಿರೋಣದರಿಂದ ಸರ್ಕಾರಕ್ಕೆ ನಷ್ಟವಾಗುವದರಲ್ಲಿ ಸಂಶಯವಿಲ್ಲ —ಕಪಿಗಳ ಕಾಟವನ್ನು ಇಲ್ಲಿ ಬರೆಯಲು ಅಸಾಧ್ಯ. ಇವುಗಳನ್ನು ಹಿಡಿಸಬೇಕೆಂದು ಹಿಂದೆ ಕೆಲವರು ಮೀಟಿಂಗ್ ಮಾಡಿ ಮನೆಗೆ ಇಷ್ಟೆಂಯು ರುಸುಂ ಗೊತ್ತು ಮಾಡಿದರು. ಅದರಂತೆ ಕೆಲವು ಮೊಬಲಗು ವಸೂಲ್ ಸಹಾ ಆಯಿತು ಈಚೆಗೆ ಆ ಏರ್ಪಾಡೇ ನಿಂತುಹೋಗಿ ಬಡವರಿಗೆ ತುಂಬಾ ನಷ್ಟವೂ ಕಷ್ಟವೂ ಪ್ರಾಪ್ತವಾಗಿದೆ ಈಗ ಬಂದಿರುವ ನಮ್ಮ ಅಮಲ್ದಾರರಾದರೂ ನಮ್ಮಗಳ ಕಷ್ಟವನ್ನು ಬಿಡಿಸ್ಯಾರೆಂದು ಕುತೂಹಲವುಳ್ಳವರಾಗಿರುತ್ತೇವೆ —ಇಲ್ಲಿಗೆ ವರ್ಗವಾಗಿ ಬಂದಿರುವ ಮುನ್ಸಿಫ್ ಮೆ॥ ಶ್ರೀಕಂಠೇಶ ಗೌಡರು ಇದೇ ಊರು ಕರೋಹಟ್ಟಿ ಸಿದ್ಧಪ್ಪನವರ ಅಳಿಯಂದಿರಾಗಿ ಅವರ ಮಗ ವೈನರಿಗೆ ಗಾರ್ಡಿಯನ್ ಆಗಿ ೩೦—೪೦ ಸಾವಿರ ರೂಪಾಯಿನ ಆಸ್ತಿಗಳನ್ನೆಲ್ಲಾ ವಿತರಣೆಯಿಂದ ರೂಢಿಸುತ್ತಾ ಇರುತ್ತಾರೆ ಸಿದ್ಧಪ್ಪನವರ ಪೇಟೆ ಮನೆ ರಿಪೇರಿ ಬಗ್ಗೆ ತುಂಬಾ ಶ್ರಮ ಪಟ್ಟರು. ಇವರು ಬಹು ಒಳ್ಳೆಯವರು, ಯಾರ ಸಂಗಡಲೂ ಘಟ್ಟಿಯಾಗಿ ಮಾತನಾಡುವದಿಲ್ಲ ನೌಕರರಲ್ಲಿ ಅತಿ ಪ್ರೇಮದಿಂದ ಇರುತ್ತಾರೆ ಇವರು ಬಂದ ಮೇಲೆ ಕೆಲವರಿಗೆ ಕೋರ್ಟಿನಿಂದ ಇತರ ಕೋರ್ಟುಗಳಿಗೆ ವರ್ಗವಾಯಿತು ಅವರಲ್ಲಿ ಕೆಲವು ಅಮೀನರಿಗೆ ವರ್ಗವಾದದ್ದಕ್ಕೆ ಕೋರ್ಟಿಗೆ ಒಳ್ಳೇ ಹೆಸರು ಬರಲು ಕಾರಣವಾಯಿತು ಆದರೆ ಮುನ್ಸಿಫರು ಕಾಲಕ್ಕೆ ಬಂದು ತೀರ್ಮಾನಗಳನ್ನು ಜಾಗ್ರತೆ ಹೇಳುವ ಪಕ್ಷದಲ್ಲಿ ಕಕ್ಷಿಗಾರರಿಗೆ ಇನ್ನೂ ವಿಶೇಷ ಅನುಕೂಲವಾಗುವದರಲ್ಲಿ ಸಂಶಯವಿಲ್ಲ

ಮಂಡ್ಯ.—ಈಚೆಗೆ ಇಲ್ಲಿ ಪ್ಲೇಗ್ ಉಪಶಮನವಾಗಿದೆ ಜನರೆಲ್ಲರು ಷೆಡ್ಡುಗಳಿಂದ ತಂತಮ್ಮ ಮನೆಗಳಿಗೆ ಕಳೆದ ಬುಧವಾರ ಬಂದಿರುತ್ತಾರೆ ಪೋಸ್ಟಾಫೀಸು ತಾಲೂಕ್ ಕಚೇರಿಯಿಂದಲೂ ಮಿಡ್ಲ್ ಸ್ಕೂಲುಗಳು ಷೆಡ್ಡಿನಿಂದಲೂ ಕಳೆದ ಶನಿವಾರ ಮುಂಚಿನ ಸ್ಥಾನಕ್ಕೆ ಬಂದಿರುತ್ತವೆ —ಈ ತಿಂಗಳು ೩ನೆ ತಾ ಮೈಸೂರಿಂದ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರವರು ಇಲ್ಲಿಗೆ ದಯಮಾಡಿಸಿ, ಬಸರಾಳಿನ ಕಡೆ ಜಮಾಬಂದಿಗಾಗಿ ಹೋಗಿದ್ದರು ಅಲ್ಲಿನ ಕಾರ್ಯಗಳನ್ನೆಲ್ಲಾ ಪೂರೈಸಿಕೊಂಡು ೭ನೆ ತಾ ಇಲ್ಲಿಗೆ ಬಂದು ಇಲ್ಲಿನ ಜಮಾಬಂದಿಕಾರ್ಯವನ್ನು ೧೦ನೇ ತಾ ವರಿಗೂ ನಡಸಿ ಮೈಸೂರಿಗೆ ರಸ್ತೆ ಮಾರ್ಗವಾಗಿ ಪ್ರಯಾಣ ಬೆಳಸಿದರು ಅವರು ಪುನಃ ಈ ತಿಂಗಳಲ್ಲಿ ೨೯ನೇ ತಾ ದಯಮಾಡಿಸುತ್ತಾರೆಂಬ ವರ್ತಮಾನವಿದೆ —ಈಚೆಗೆ ಒಂದು ತಿಂಗಳ ಕೆಳಗೆ ಇಲ್ಲಿನ ಅನ್ಯೋನ್ಯ ಸಹಾಯಕ ಸಂಘವು ಜಾರಿಗೆ ಬಂದು ಅವನ್ನು ರಿಜಿಸ್ಟರ್ ಮಾಡಿರುತ್ತಾರೆಂದು ತಿಳಿಸಿದ್ದೆವಷ್ಟೆ ಕಳೆದ ಶನಿವಾರ ಸಾಯಂಕಾಲ ಈ ಸಂಘವು ಸರಾಗವಾಗಿ ನಡಯುವ ಹಾಗೆ ಒಂದು ಮೀಟಿಂಗ್ ನಡಸಿದರು ಈ ಮೀಟಿಂಗ್‌ನಲ್ಲಿ ತಾ ಶಿರಸ್ತೇದಾರರು ಸಭೆಯ ಅನುಮತಿಯಿಂದ ಅಗ್ರಾಸನವನ್ನು ವಹಿಸಿ, ಸಂಘವನ್ನು ನಡಸತಕ್ಕ ಸ್ಥಳ ಮತ್ತು ಅದರ ಕ್ರಮವನ್ನು ತೀರ್ಮಾನಿಸಿದರು ತಾ ೨೦ನೇ ಭಾನುವಾರ ಸಾಯಂಕಾಲದಿಂದ ಕೆಲಸಗಳು ಪ್ರಾರಂಭಿಸಲ್ಪಟ್ಟವು

ಅರಸೀಕೆರೆ.—ಈ ಟವ್ನ ಹವಾ ಚೆನ್ನಾಗಿದೆ ಬಾಣಾವಾರದಲ್ಲಿ ಮಾತ್ರ ಪ್ಲೇಗು ೩—೪ ದಿನಕ್ಕೆ ಒಂದೆರಡರಂತೆ ಆಗುತ್ತಾ ಇದೆ ಕೆಲವರು ಊರು ಬಿಟ್ಟಿರುತ್ತಾರೆ ಬಾಕಿ ಜನಗಳನ್ನು ಬಿಡುವಂತೆ ನಮ್ಮ ಅಮಲ್ದಾರರವರು ತಿಳಿಯಪಡಿಸಿರುತ್ತಾರೆ ಇನ್ನರಲ್ಲೇ ಊರೆಲ್ಲಾ ಖಾಲಿ ಮಾಡಬಹುದು —ನಮ್ಮ ರೆಸಿಡೆಂಟರವರಾದ ಮೆ॥ ಫ್ರೇಸರ್ ಸಾಹೇಬರವರು ಇದೇ ಮಾಹೆ ತಾ ೨೯ ಸ್ಪೆಷಲ್ ಟ್ರೈನಿನಲ್ಲಿ ಇಲ್ಲಿಗೆ ದಯಮಾಡಿ, ಪ್ರಾತಃಕಾಲ ೬ ಗಂಟೆಗೆ ಇಲ್ಲಿಂದ ಮೋಟಾರ್ ಕಾರ್ ಗಾಡಿಯಲ್ಲಿ ಮಂಜರಾಬಾದಿಗೆ ಮಧ್ಯಾಹ್ನದ ಭೋಜನಕ್ಕೆ ದಯಮಾಡಿಸುತ್ತಾರೆ ಅವರ ಜೊತೆಯಲ್ಲಿ ಅಸಿಸ್ಟೆಂಟು ರೆಸಿಡೆಂಟರವರೂ ಸಹಾ ಬರುವದಾಗಿ ಗೊತ್ತಾಗಿರುತ್ತದೆ — ಅರಸೀಕೆರೆಯಲ್ಲಿ ಶ್ರೀ ಕೃಷ್ಣರಾಜ ಒಡೆಯರ್ ಲಿಟರರಿ ಇನ್ಸ್ಟಿಟ್ಯೂಟ್ ಎಂದು ಈಗ್ಗೆ ಸ್ವಲ್ಪ ದಿವಸದಲ್ಲಿ ಸ್ಥಾಪನೆಯಾಯಿತು ಎಲ್ಲಾ ಮೆಂಬರುಗಳೂ ಬಹು ಸಂತೋಷದಿಂದ ಸೇರಿ ವಿದ್ಯಾಕಾಲಕ್ಷೇಪ ಮಾಡುತ್ತಾ ಇದ್ದರು ಒಂದೆರಡು ಜನರು ಸೇರಿ ಬರತಕ್ಕ ದೊಡ್ಡ ಮನುಷ್ಯರ ಮನಸ್ಸಿಗೆ ಅಸಮಾಧಾನವನ್ನುಂಟುಮಾಡಿದಹಾಗೂ, ಅದರಿಂದ ಹಲವರು ರೀಡಿಂಗ್ ರೂಮನ್ನೇ ಬಿಡುವದರಲ್ಲಿರುವದಾಗಿಯೂ ವರ್ತಮಾನವಿದೆ ಈ ರೀಡಿಂಗ್ ರೂಂ ನಮ್ಮ ಮಹಾರಾಜರವರ ಹೆಸರಿನಲ್ಲಿ ಸ್ಥಾಪನೆಯಾಗಿರುವದರಿಂದ ಮೆಂಬರುಗಳು ಅದನ್ನು ಅಭಿವೃದ್ಧಿಗೆ ತರುತ್ತಾರೆಂತ ನಂಬಿದ್ದೇವೆ

ಚಿತ್ರದುರ್ಗ —ಚಳಿಯ ಪ್ರತಾಪವು ಕಡಿಮೆಯಾಗುತ್ತಾ ಬಿಸಿಲು ಝಳವು ಹೆಚ್ಚಾಗುತ್ತಲಿದೆ ಹವಾ ತಕ್ಕಮಟ್ಟಿಗೆ ಆರೋಗ್ಯವಾಗಿದೆ ಆದಾಗ್ಯೂ ಬಾರ್ಸ್ಟೈರ್ ಮುಂತಾದ ಕೆಲವು ಕಡೆಗಳಲ್ಲಿ ಸಿಡುಬಿನ ಉಪದ್ರ ಇನ್ನೂ ಇದ್ದೇ ಇದೆ —ಜೂಜುಗಾರರ ಸಂಖ್ಯೆಯು ಸಂದುಗೊಂದುಗಳಲ್ಲಿ ಹೆಚ್ಚುತ್ತಾ ಇದೆ. ಪೋಲೀಸಿನವರು ಈ ದುಷ್ಕಾರ್ಯವನ್ನು ನಿಲ್ಲಿಸುವದಕ್ಕೆ ಗಮನಕೊಡಬೇಕಾಗಿದೆ —ಇಲ್ಲಿಗೆ ಎರಡು ಮೂರು ತಿಂಗಳಿಗೆ ಮುಂಚೆ ವರ್ಗವಾಗಿ ಬಂದ ಡಾಕ್ಟರ್ ಅಪ್ಪಾದೊರೆ ಮೊದಲಿಯಾರ್ರಿಗೆ ಆಗಲೇ ವರ್ಗವಾದ್ದನ್ನು ಕೇಳಿ ಎಲ್ಲರೂ ಚಿಂತಾಕ್ರಾಂತರಾಗಿದ್ದಾರೆ ಇವರು ಸ್ವಲ್ಪಕಾಲದಲ್ಲೇ ರೋಗಿಗಳಲ್ಲಿ ದಯೆ, ಸಂಭಾಷಣೆಗಳಿಂದ ಎಲ್ಲರ ಪ್ರೀತಿಗೂ ಗೌರವಕ್ಕೂ ಪಾತ್ರರಾದರು. ಈಗ ಅವರು ಸ್ಥಳಬಿಟ್ಟು ಹೋಗುವರೆಂಬ ಮಾತುಕೇಳಿ ಬಹುಮಂದಿ ಮರುಗುತ್ತಲಿದ್ದಾರೆ —ಸೆಷನ್ಸ್ ಜಡ್ಜರಾದ ಮೆ॥ ಸ್ಲಮರ್ ದೊರೆಗಳು ಈ ಊರಿಗೆ ಬಂದು ಈಗ ಸುಮಾರು ೧೦—೧೨ ದಿನಗಳಿಂದ ಮೊಕದ್ದಮೆಗಳನ್ನು ವಿಚಾರಿಸುತ್ತಿರುವರು. ಇವರ ನಿಷ್ಪಕ್ಷಪಾತವಾದ ವಿಚಾರಣೆಗಳು ಸತ್ಯವಂತರಿಗೆ ಧೈರ್ಯವನ್ನೂ ಅಸತ್ಯವಂತರಿಗೆ ಭಯವನ್ನೂ ಹುಟ್ಟಿಸುವದಾಗಿದೆ —ಊರಿಗೆ ಕುಡಿಯುವ ನೀರು ಸರಬರಾಯಿ ಮಾಡುವ ನಲ್ಲಿಗಳ ಬಳಿ ಯಾರೂ ಕೈಕಾಲು ಮುಖ ತೊಳೆಯುವದು ಬಟ್ಟೆ ಹಿಂಡುವದು ಮುಂತಾದ ಮೈಲಿಗೆ ಕೆಲಸಗಳನ್ನು ಮಾಡಬಾರದು ಅಂಥವರನ್ನು ಶಿಕ್ಷೆಗೆ ಗುರಿಮಾಡುವೆವೆಂದು ಸಾರಿಸಿದ್ದಾರೆ ಅಂಥ ಒಬ್ಬರಿಬ್ಬರಿಗೆ ಸ್ವಲ್ಪ ಶಿಕ್ಷೆಯಾದರೆ ಉಳಿದವರಿಗೆ ಬುದ್ಧಿ ಬರುವದು

ಸಾಗರ—ಈಗ ಸುಮಾರು ೫—೬ ದಿವಸದಲ್ಲಿ ಸಾಗರದಲ್ಲಿ ಗಂಧದ ಕೋಠಿಯಲ್ಲಿ ದರೋಗರು ಇಟ್ಟಿದ್ದ ೭೦೦ ರೂಪಾಯಿಯೂ ಕೆಲವು ನೋಟುಗಳೂ ನಾಣ್ಯಗಳೂ ಕಳ್ಳರು ಕೋಠಿ ಒಡೆದು ತೆಗೆದುಕೊಂಡು ಹೋದರಷ್ಟೆ ಈ ವಿಷಯವಾಗಿ ಸಾಗರದ ತಾಲ್ಲೂಕು ಪೋಲೀಸು ಆಫೀಸರುಗಳು ಅಪರಾಧಿಗಳನ್ನು ಹಿಡಿದು ವಿಚಾರಣೆ ನಡಸುವ ಬಗ್ಗೆ ಶಿವಮೊಗ್ಗ ಸೂಪರಿಂಟೆಂಡೆಂಟ್ ಸಾಹೇಬರಿಗೆ ಎಕ್ಸ್‌ಪ್ರೆಸ್ ಬಿಟ್ಟರು ತಾ ೧೯ ರಲ್ಲಿ ನಮ್ಮ ಪೊ॥ ಸೂ॥ ಮೆ॥ ರಾಮೋಜಿರಾಯರು ಗಾಡಿ ಮುಂದಕ್ಕೆ ಕಳುಹಿಸಿ ಸಾಗರಕ್ಕೆ ಹೋಗುವ ಉದ್ದೇಶ ಬೈಸಿಕಲ್ ಗಾಡಿಯ ಮೇಲೆ ಹೊರಟು ಬರುವಾಗ್ಗೆ ಆನಂದಪುರಕ್ಕೆ ಮೂರು ಮೈಲಿ ಫಾಸಲೆಯಲ್ಲಿರುವ ಆಳಲಗುಂದಿ ಎಂಬ ಊರಿನ ಹತ್ತಿರ ಇರುವ ಘಟ್ಟದಲ್ಲಿ ಕುದುರೆಯು ಬೆದರಿ ಕೆಡವಿಬಿಟ್ಟಿತು ಸಾಹೇಬರು ಬಿದ್ದ ಎಡಗೈ ರಟ್ಟೆ ಮುರಿದುಹೋಯಿತು ಗಾಡಿ ಕೋಚುಮನನ ತಲೆ ಒಡೆದು ಹೋಯಿತು ನಂತರ ಸಾಹೇಬರು ಆನಂತಪುರದ ಪೋಸ್ಟ್ ಆಫೀಸಿಗೆ ಬಂದರು ಆಗ ಮೆ॥ ಕೃಷ್ಣಯ್ಯಂಗಾರರು ಸಾಹೇಬರ ಸ್ಥಿತಿಯನ್ನು ನೋಡಿ ಅವರನ್ನು ತಮ್ಮಲ್ಲೇ ಇಟ್ಟುಕೊಂಡು ಉಪಚಾರ ಮಾಡಿದರು ನಂತರ ಸಾಹೇಬರು ಸಾಗರದಿಂದ ಡಾಕ್ಟರನ್ನು ಕರಸಿದರು ಅವರು ಕೈಗೆ ತಕ್ಕ ಚಿಕಿತ್ಸೆ ಮಾಡಿದರು ಕೂಡಲೆ ಸಾಹೇಬರಿಗೆ ೧೦ ಭಾಗದಲ್ಲಿ ೯ ಭಾಗ ನೋವು ಹೋಯಿತು ಸಾಹೇಬರವರು ಬಹು ಸಂತೋಷಪಟ್ಟು ಮರುದಿನ ಗಾಡಿಯಲ್ಲಿ ಪ್ರಯಾಣಮಾಡಿದರು ಈ ಊರಿಗೆ ಆಸ್ಪತ್ರೆ ಬಂದು ಒಂದು ತಿಂಗಳಾಗುತ್ತಾ ಬಂತು ಕಾಂಪೌಂಡರು ಒಂದರು ಅನೇಕ ಔಷಧ ಮುಂತಾದ್ದು ಬಂದರೂ ಕೂಡ ಈ ವರೆಗೂ ಡಾಕ್ಟರು ಬರಲಿಲ್ಲ ಈಗ ನಮ್ಮ ಪೊ॥ ಸೂಪರಿಂಟೆಂಡೆಂಟರು ರಟ್ಟೆ ಮುರಿದುಕೊಂಡರಷ್ಟೆ ಅವರಾದರೂ ದೊಡ್ಡ ಉದ್ಯೋಗಸ್ಥರಿಗೆ ತಿಳಿಸಿ ಡಾಕ್ಟರನ್ನು ಕರಸಿಕೊಂಡರು ಇತರರು ಯಾರಾದರೂ ಕೈ ಕಾಲು ಮುರಿದುಕೊಂಡು ಬಂದರೆ ಇಲ್ಲಿ ಡಾಕ್ಟರು ಇಲ್ಲದ ಪಕ್ಷ ಅವರ ಸಂಕಟ ಯಾವ ರೀತಿ ಪರಿಹಾರಮಾಡಬೇಕು ? ನಮ್ಮ ಶಿವಮೊಗ್ಗ ಸಿವಿಲ್ ಸರ್ಜನ್ ಸಾಹೇಬರು ಇದೆಲ್ಲಾ ಯೋಚಿಸಿ ಡಾಕ್ಟರನ್ನು ಕಳುಹಿಸಿ, ಪ್ರಜೆಗಳ ಸಂಕಟವನ್ನು ಪರಿಹಾರ ಮಾಡಬೇಕಾಗಿ ಬೇಡುತ್ತೇವೆ

ಯಡೇಹಳ್ಳಿ —ಬುಧವಾರದಿಂದ ಬೆಳಗಿನ ೮ ಗಂಟೆ ವರಿಗೂ ಚಳಿ ಜೋರಾಗಿದೆ ಮಧ್ಯಾಹ್ನ ಬಿಸಿಲಿನ ತಾಪ ಹೆಚ್ಚು ಈ ಪ್ರಾಂತ್ಯ ಕಟಾವೆಲ್ಲಾ ಪೂರೈಸಿ ಕಣಗಳಲ್ಲಿ ರೈತರ ಕೆಲಸಗಳು ನಡೆಯುತ್ತಾ ಇವೆ. ಭಾವಿಕಾಲುವೆಗಳು ಇನ್ನೂ ಸ್ವಲ್ಪವಾದರೂ ಕಮ್ಮಿಯಾಗಿಲ್ಲ ಬಡಬಗ್ಗರ ಪೇಚಾಟ ಕೇಳತೀರದು ಈ ಮಧ್ಯೆ ಪೋಲೀಸಿನವರ ಕಾಟ ಇದೇ ತಿಂಗಳು ತಾ ೧೧ ರಲ್ಲಿ ಒಬ್ಬ ಗೌಡನ ಮನೆಗೆ ಯಾರೋ ನುಗ್ಗಿ ನಾನಾ ವಿಧವಾಗಿ ಬೆದರಿಸಿ ಅವನಿಂದ ನಗದು ೫೦ ರೂಪಾಯಿ ಕಿತ್ತುಕೊಂಡದ್ದಲ್ಲದೆ ಒಂದು ಭಾರವಾದ ಸ್ತ್ರೀಯ ... ಜೊತೆ ಭಂಗಾರದ ಓಲೆ ಒನಪ್ಪು ಕೆಲವು ಬೆಳ್ಳಿ ಬಂಗಾರದ ಸಾಮಾನುಗಳನ್ನು ಸಹಾ ದರೋಡೆ ಮಾಡಿಕೊಂಡು ಬಂದರೆಂತ ವರ್ತಮಾನ ಇನ್ನೂ ಎರಡು ಮೂರು ಕಡೆಗಳಲ್ಲಿ ಇದೇ ರೀತಿ ನಡೆಸಿದ್ದಾರಂತೆ. ಜುಲುಮೆ ಬಿಟ್ಟರೆ ಮತ್ತೂ ಕಷ್ಟ ಮೇಲ್ಪಟ್ಟ ಆಫೀಸರ ನೋಟೀಸಿಗೆ ಬರುವುದೇ ಇಲ್ಲ ಇನ್ನಾದರೂ ಸರಿಯಾದ ಏರ್ಪಾಡು ಮಾಡದೆ ಬಿಟ್ಟರೆ ಜನರ ಪರಿಣಾಮ ಕಷ್ಟ ಇಲ್ಲಿಯ ಎ ವಿ ಸ್ಕೂಲಿನಲ್ಲಿ ಈ ವರುಷ ಎಂಟು ಜನ ಬಾಲಕರು ಲೋವರ್ ಸೆಕೆಂಡರಿ ಪರೀಕ್ಷೆಗೆ ಹೋಗಿ ಎಲ್ಲರೂ ಫೇಲ್ ಆಗಿದ್ದಾರೆ ಇತರ ಯಾವ ಸ್ಕೂಲುಗಳಲ್ಲಿಯೂ ಇಷ್ಟು ಉತ್ತಮವಾದ ಫಲ ಇಲ್ಲವೆಂತ ಕೇಳಬಹುದು — ನಮ್ಮ ಡಿಸ್ಟ್ರಿಕ್ಟ ವಿದ್ಯಾಧಿಕಾರಿ ಸಾಹೇಬರಾದ ಮೆ॥ ದೇವರಾಜೇ ಅರಸಿನವರು ತಾ ೨೧ನೆ ಸೋಮವಾರ ಇಲ್ಲಿನ ಎ ವಿ ಸ್ಕೂಲ್ ಮತ್ತು ಗರ್ಲ್ಸ್ ಸ್ಕೂಲಿಗೆ ದಯಮಾಡಿ, ಇನ್ಸ್ಪೆಕ್ಷನಮಾಡಿ ಬಹಳ ಸಂತೋಷಪಟ್ಟದ್ದಲ್ಲದೆ ಬಾಲಕ ಬಾಲಕಿಯರಿಗೆ ಮಿಠಾಯಿ ಹಂಚುವುದಕ್ಕೋಸ್ಕರ ದ್ರವ್ಯ ಸಹಾಯಮಾಡಿದರು ಮಾರನೇ ದಿನ ಮುನ್ಸಿಫರು ಅಮಲ್ದಾರರೇ ಮುಂದಾಗಿ ಎಲ್ಲಾ ಬಾಲಕ ಬಾಲಕೀಯರುಗಳಿಗೂ ಮಿಠಾಯಿ, ತಿಂಡಿಗಳನ್ನು ಹಂಚಿ ಸಂತೋಷಪಡಿಸಿದರು —ಶ್ರೀಮನ್ ಮಹಾರಾಜರಾಜಾ ಸಾಹೇಬ್ ಒಡೆಯರವರು ಶೃಂಗೇರಿಗೆ ದಯಮಾಡಿಸುವ ಉದ್ದಿಶ್ಯ ಈ ಊರು ಮಾರ್ಗವಾಗಿ ದಯಮಾಡಿಸುತ್ತಾರೆಂತ ಅವರನ್ನು ಮರ್ಯಾದೆಯಿಂದ ಎದುರುಗೊಳ್ಳಲು ಅಪ್ರ ಮಸ್ಯೆತೆ ತಕ್ಕ ಏರ್ಪಾಡುಗಳು ನಡೆಯುತ್ತಾ ಇವೆ

ತಿಪ್ಪಟೂರು.—ಊರಲ್ಲಿ ಅನಾರೋಗ್ಯವು ಸುಮಾರಾಗಿ ಇದ್ದೇ ಇರುತ್ತೆ ಇಲಿಗಳೇನೋ ಪ್ರಬಲವಾಗಿಯೇ ಇವೆ ನಮ್ಮ ಅಮಲ್ದಾರರು ಹೊಸ ಸಮೂನೆಯ ಚರಂಡಿಗಳನ್ನು ಕಟ್ಟಿಸುತ್ತಿದ್ದಾರೆ ಒಂದೆರಡು ಕಕ್ಕಸ್ ಮನೆಗಳನ್ನು ಕಟ್ಟಿಸಿಕೊಟ್ಟರೆ ಮತ್ತಷ್ಟು ಉಪಕಾರವಾದೀತು ಎಂದು ಎಲ್ಲರೂ ಹಂಬಲಿಸುತ್ತಿದ್ದಾರೆ —ಗೋಪತಿ ಶ್ರೀಕಂಠಯ್ಯನವರ ತೋಟದ ಪಕ್ಕದಲ್ಲಿ ಕೆರೆಗೆ ಹೋಗುವ ಓಣಿಯು, ಜಲಮಲ ವಿಸರ್ಜನೆಗಳಿಂದ ಮೆರೆಯುತ್ತಿದೆ ಮುನ್ಸಿಪಾಲಿಟಿಯವರ ಆ ಕಡೆ ದೃಷ್ಟಿಯಿಟ್ಟರೆ ಒಳ್ಳೇದು ಡಾಕ್ಟರವರು ಪ್ರತಿದಿನ ಬೆಳಗ್ಗೆ ಟವ್ನ ಸ್ಯಾನಿಟೇಷನ್ ವಿಚಾರವನ್ನು ನೋಡಿಕೊಂಡು ಹೋಗುತ್ತಿದ್ದಾರೆ — ಜಾ॥ ಕಮಿಷನರ್ ಸಾಹೇಬರು ದಯಮಾಡಿಸಿ, ನೊಣವಿನಕೆರೆ ಮುಂತಾದ ಗ್ರಾಮಗಳನ್ನು ನೋಡಿಕೊಂಡು ಬಂದರೆಂದು ತಿಳಿಯಿತು —ಈಗ ಸುಗ್ಗಿಕಾಲವಾದ್ದರಿಂದ ರೂಪಾಯಿಗೆ ೧೫ ಸೇರು ಬಿಳೆ ರಾಗಿಯನ್ನು ದಾರಾಳವಾಗಿ ಮಾರುತ್ತಾರೆ —ಹುಳಿಯಾರಿನಲ್ಲಿ ಒಬ್ಬ ಮುಸಲ್ಮಾನನು ಗೊಲ್ಲರವಳನ್ನು ಕೆಡಿಸಿದ್ದಕ್ಕಾಗಿ ಛಿದ್ರಛಿದ್ರವಾಗಿ ಕತ್ತರಿಸಲ್ಪಟ್ಟನೆಂದು ಮೊಕದ್ದಮೆ ಸೆಷನ್ಸಿಗೆ ಕಮಿಟ್ಟಾಗಿದೆ ಎಂದು ತಿಳಿಯಿತು ಮತ್ತೊಬ್ಬ ಮುಸಲ್ಮಾನನು ಇಲ್ಲಿನ ಜವಳಿ ಅಂಗಡಿಯಲ್ಲಿ ಒಂದು ರೇಷ್ಮೆ ವಸ್ತ್ರವನ್ನು ಕದ್ದನೆಂದು ಮೊಕದ್ದಮೆ ನಡೆಯುತ್ತಿದೆ — ಒಬ್ಬ ದೊಡ್ಡ ಮನುಷ್ಯರಿಗೆ ಗಾಣಿಗರ ವರ್ತಕನೊಬ್ಬನು ಕಮ್ಮಿ ಸೇರಿನಿಂದ ಎಣ್ಣೆಯನ್ನು ಕೊಟ್ಟನೆಂದು ರಿಪೋರ್ಟಾಗಿ, ಪೋಲೀಸಿನವರು ಬಂದು ಆ ಎಣ್ಣೆ ಮನೆಯಲ್ಲಿ ಅಳತೆಮಾಡುತ್ತಿರುವಾಗಲೇ ಪಂಚೆ ಸಾಕ್ಷಿಗಾಗಿ ಬಂದಿದ್ದವರೆಲ್ಲಾ ತಣ್ಣಗೆ ಹೋದರೆಂದು ಜಾರುತ್ತಿದ್ದರು ಮುಂದೆ ನೋಡಬೇಕು —ಬೊಂಬೆ ಕಳುವನ್ನು ವಿಚಾರಿಸುವದಕ್ಕೆ ಹೋಗಿದ್ದ ಪೋಲೀಸ್ ಆಫೀಸರ ಮೇಲೆಯೇ ನೊಣವಿನಕೆರೆಯ ಕೆಲವರು ಫಿರ್ಯಾದು ಮಾಡಲು ಅದು ಮಜಾ ಆಯಿತೆಂದು ತಿಳಿಯಿತು —ಕಳೆದ ಲಿಂಗಾಯತರ ಕಾನ್ಫರೆನ್ಸಿನಲ್ಲಿ ಸಂಗೀತ ವಿದ್ವಾನ್ ಎಂದು ಹೆಸರು ಪಡೆದಿರುವ ಮೆ॥ ಆರ್ ಮಹದೇವಪ್ಪನವರು ಹಾರುಮಕೊಂತೆ ಸಾಹುಕಾರರ ಮನೆಯಲ್ಲಿ ಸಂಗೀತ ಪಾಡಿ, ಸಭಿಕರೆಲ್ಲಾ ತಲೆದೂಗುವಂತೆ ಮಾಡಿದರೆಂದು ತಿಳಿಯಿತು ಗ್ರಾಮಫೋನವಾದ್ಯದಿಂದ ಮತ್ತೊಬ್ಬರು ಸಬ್ ರೆಜಿಸ್ಟ್ರಾರ್ ಶಿರಸ್ತೇದಾರರು ಮನೆಗಳಲ್ಲಿ ಸಭಿಕರನ್ನು ಸಂತೋಷಗೊಳಿಸಿದರು

ಬಿಡದಿ.—ಇಲ್ಲಿ ರಾಗಿ, ಹುರಳಿ ಬೆಳೆಗಳು ಕೆಲವು ಕಡೆ ಚನ್ನಾಗಿ ಆಗಿದೆ ಕೆಲವು ಕಡೆ ಜವುಗಿನಿಂದ ಕೊಳೆತುಹೋಗಿ ಅನೇಕರಿಗೆ ನಷ್ಟವಾಯಿತು ಪೇಟೆ ಧಾರಣೆ ಬಹಳ ಚಪಾನಾಗಿದೆ ಇಳಿಯಲೇ ಇಲ್ಲ ಅಕ್ಕಿ ರೂಪಾಯಿಗೆ ೬॥ ಸೇರೂ, ರಾಗಿ ೧೫॥ ಸೇರೂ ದೊರೆಯುವದು ಆದಾಗ್ಯೂ ಅನೇಕ ವರ್ತಕರು ಸರಿಯಾದ ಸೇರಿನಲ್ಲಿ ಕೊಡುವದಿಲ್ಲ ಪಿಚ್ಚೇ ಸೇರಿನಲ್ಲಿಯೂ, ಸಾಬಾ ತೂಕಕ್ಕೆ ಬದಲಾಗಿ ತಕ್ಕಡಿಯಲ್ಲಿ ಪಚ್ಚಿ ಬಟ್ಟುಗಳನ್ನು ಹಾಕಿ ತೂಕಾ ಕೊಡುತ್ತಾರೆ ಈ ವಿಷಯವನ್ನು ಅಮಲ್ದಾರರು ನಿಗಾಕ್ಕೆ ತಂದುಕೊಂಡು ತಪ್ಪಿಸುವರೆಂದು ನಂಬುತ್ತೇನೆ —ಸರ್ಕಾರೀ ಅನ್ನ ಛತ್ರದಲ್ಲಿ ಈಗ ಸುಮಾರು ೧ ತಿಂಗಳಿಂದಲೂ ಅಡಿಗೆಯವನನ್ನಿಟ್ಟು ಅನ್ನ ಹಾಕಿಸುತ್ತಿದಾರೆ ಸ್ಕೂಲ್ ಹೆಡ್ ಮಾಸ್ಟರೇ ಬ್ರಾಂಚ್ ಪೋಸ್ಟ್ಮಾಸ್ಟರ್ ಕೆಲಸವನ್ನು ನೋಡುತ್ತಿರುವದರಿಂದಲೂ, ಸ್ಕೂಲ್ ಕೆಲಸಕ್ಕಿಂತ ಪೋಸ್ಟ್ ಕೆಲಸವು ಅಧಿಕ ಜವಾಬ್ದಾರಿಯಾದ್ದರಿಂದಲೂ ಅದಕ್ಕೆ ಪ್ರತ್ಯೇಕ ಗಮನ ಕೊಟ್ಟು ನಿರ್ವಹಿಸುತ್ತಿರುವದರಿಂದಲೂ, ಸ್ಕೂಲ್ ಅಭಿವೃದ್ಧಿ ದಿನೇ ದಿನೇ ಕ್ಷೀಣಾವಸ್ಥೆಯನ್ನುಹೊಂದುತ್ತದೆ ಈ ತೊಂದರೆಗಳನ್ನು ನಿವಾರಣೆ ಮಾಡಬೇಕೆಂದು ಪೋಸ್ಟ್ ಇಲಾಖೆಗೂ, ವಿದ್ಯಾ ಇಲಾಖೆಗೂ ೨—೩ ಸಲ ಗ್ರಾಮಸ್ಥರು ಅರ್ಜಿ ಕೊಟ್ಟಾಗ್ಯೂ ಇದುವರಿಗೂ ವ್ಯವಸ್ಥೆಯೇ ಇಲ್ಲ ಸ್ಕೂಲಿನಲ್ಲಿ ಪೂರ್ವದಲ್ಲಿ ವಿದ್ಯಾರ್ಥಿ ಸಂಖ್ಯೆಗಿಂತ ಈ ವರ್ಷ ಬಹಳ ಕಡಿಮೆಯಾಗಿದೆ ಈ ರೀತಿ ಇನ್ನು ಕೊಂಚ ಕಾಲವಿದ್ದರೆ ಸ್ಕೂಲ್ ಇದ್ದದ್ದೂ ಫಲವಿಲ್ಲವಾಗಿ ಬರುತ್ತದೆ ನಾಲ್ಕು ಜನ ಮೇಷ್ಟರುಗಳಿದ್ದೂ ಈ ರೀತಿಯಾದರೆ ಇರುವ ಸ್ಕೂಲಿನ ಗತಿಯೇನು ? ಈ ವಿಚಾರವನ್ನೆಲ್ಲಾ ತಿಳಿದು ಇನ್ಸ್ಪೆಕ್ಟರವರು ಪೂರ್ವದಂತೆ ಪ್ರತ್ಯೇಕಿಸಿ ಸ್ಕೂಲ್ ಅಭಿವೃದ್ಧಿ ತಂದು ನಮ್ಮಗಳ ಸಂತೋಷ ಪಡಿಸುವರೆಂದು ದೃಢವಾಗಿ ನಂಬುತ್ತೇನೆ —ಛಾವಣಿ ಸನ್ನಿಧಿ ಮಾನಗಳು ಅಳಿಯುವದು ಕಷ್ಟ ರುವದರಿಂದ ಗ್ರಾಮಸ್ಥರೆಲ್ಲರು ಒಟ್ಟಾಗಿ ಸೇರಿ, ದೇಶ ಪಕ್ಷ್ಯಗಳನ್ನು ತ್ಯಜಿಸಿ, ಒಂದು ವಾಚಕ ಮಂದಿರವನ್ನು ಏರ್ಪಡಿಸಿ ಇಲ್ಲಿಗೆ ನಾನಾ ದೇಶದ ವರ್ತಮಾನ ಪತ್ರಿಕೆಗಳನ್ನು ತರಿಸಿ ಅಭ್ಯಾಸ ಕೊಡುವರೆಂದು ನಂಬುತ್ತೇನೆ

ತುಮಕೂರು —ಹವ ಅನುಕೂಲವಾಗಿದೆ ಎಲ್ಲಾ ದಿನಸಿಗಳ ರೇಟೂ ಅನುಕೂಲಿಸುತ್ತಾ ಬಂದಾಗ್ಯೂ ರಾಗಿ ಮಾತ್ರ ಇನ್ನೂ ಸಂತೆಯಲ್ಲಿ ರೂಪಾಯಿಗೆ ೧೫ ಸೇರು ಕೂಡ ದೊರೆಯದೇ ಬಡವರಿಗೆ ತುಂಬಾ ತೊಂದರೆಯಾಗಿದೆ —ಯಡೆಯೂರು ಕಂಪನಿಯವರು ನಾಟಕವಾಡುತ್ತಿದಾರೆ ಇವರ ಮನೆಗೆ ಬೆಂಕಿ ಇಟ್ಟನೆಂಬ ಆಪಾದನೆಗೆ ಗುರಿ ಮಾಡಲ್ಪಟ್ಟ ಉಗ್ರೆಯನೆಂಬುವನನ್ನು ಮ್ಯಾಜಿಸ್ಟ್ರೇಟರು ವಿಚಾರಣೆ ಮಾಡಿ ಸೆಷನ್ಸಿಗೆ ಕಮಿಟ್ ಮಾಡಿದ್ದಾರೆ ಈ ವಾರ ಮಿಡ್ಲ್ ಗರಲ್ಸ್ ಸ್ಕೂಲುಗಳ ಲೇಡಿ ಸೂಪರಿಂಟೆಂಡೆಂಟರವರಾಗಿ ರಜೆಗೆ ಹೋದ ಮಿಸ್ ಹಾಜೇಟರವರ ಬದಲಿಗಾಗಿ ಮಿಸ್ ವಿಲರ್ ಎಂಬುವರು ದಯಮಾಡಿಸಿ ಛಾರ್ಜು ತೆಗೆದುಕೊಂಡಿರುತ್ತಾರೆ ಟವ್ನಿಗೆ ಮೂರು ಮೈಲಿ ದೂರದಲ್ಲಿರುವ ಗೂಳೂರಿನ ಮಿಡ್ಲ್ ಸ್ಕೂಲಿನಲ್ಲಿ ಇದೇ ಪ್ರಥಮತ ಲೋವರ್ ಸೆಕೆಂಡರಿ ಪರೀಕ್ಷೆಗೆ ಹೋಗಿದ್ದ ೪ ಮಂದಿ ವಿದ್ಯಾರ್ಥಿಗಳೂ ತೇರ್ಗಡೆಯಾಗಿರುವರಲ್ಲದೆ ಇಬ್ಬರು (ಒಬ್ಬನು ಮುಸಲ್ಮಾನರ ಹುಡುಗ) ಒಡನೇ ತರಗತಿಯಲ್ಲಿ ತೇರ್ಗಡೆಯಾಗಿರುವ ಸಂಗತಿ ಸಂತೋಷವಾಗಿದೆ —ಈ ಊರಿನ ಸಂತೇಪೇಟೆಯ ಸಾ॥ ಕೋದಂಡರಾಮಶೆಟ್ಟರು ಎಂಬುವರ ಸ್ವಾಧೀನದಲ್ಲಿರುವ ಸುಮಾರು ೪೦ ಸಾವಿರ ರೂಪಾಯಿ ವರಿಗೂ ಕ್ರಯ ಬಾಳುವ ಛತ್ರಗಳ ವಿಷಯ ರಿಪೇರಿ ಬಹಳ ಕಾಲದಿಂದಲೂ ನಿಲ್ಲಿಸಲ್ಪಟ್ಟಿದೆ ಇದರಲ್ಲಿ ಮೆ॥ ಶೆಟ್ರು ಹತ್ತಿಯ ಅಲೆಗಳನ್ನು ಎರಕ ಹೊಯ್ಯುವ ಯಂತ್ರವನ್ನು ಇಟ್ಟು ತಯಾರುಮಾಡಿಸುತ್ತಿದ್ದರು ಇದರಿಂದ ನೂರಾರು ಜನರ ಜೀವನವೂ ಕೈಗಾರಿಕೆಯ ಅಭಿವೃದ್ಧಿಗೆ ಕಾರಣವೂ ಆಗಿತ್ತು ಯಾವ ಕಾರಣದಿಂದಲೋ ಬಾಗಿಲು ಹಾಕಿರುವದು ತುಂಬಾ ವಿಷಾದ ಕಾರಣವಾಗಿದೆ ಮೆ॥ ಶೆಟ್ರು ಈ ವಿಷಯದಲ್ಲಿ ತಕ್ಕ ಏರ್ಪಾಡು ಮಾಡಿ ವಿಷಯ ನಡೆಯುವಂತೆ ಏರ್ಪಾಡು ಮಾಡಿಸಿದಲ್ಲಿ ನಮ್ಮ ಟವ್ನಿಗೇನೇ ಬಹಳ ಅನುಕೂಲವೆಂದು ಧಾರಾಳವಾಗಿ ಹೇಳಬಹುದು —ಇಲ್ಲಿರುವ ಪ್ಲೀಡರಾದ ಮೆ॥ ಸಿ ಡಿ. ರಾಮಸ್ವಾಮಯ್ಯನವರು ಈಗ ಹೊಸದಾಗಿ ಸರ್ಕಾರದವರಿಂದ ಏರ್ಪಾಡಾಗಿರುವ ಪರಸ್ಪರ ಸಹಾಯಕ ಸಂಘವನ್ನೂ ನಮ್ಮ ತುಮಕೂರಿನಲ್ಲೂ ತುಮಕೂರು ಸೆಂಟ್ರಲ್ ಕೋ ಆಪರೇಟಿವ್ ಸಂಘ ಎಂಬುದಾಗಿ ಸ್ಥಾಪಿಸಲು ಪ್ರಯತ್ನಿಸುತ್ತಿರುವ ವರ್ತಮಾನವು ಸಂತೋಷಪ್ರದವಾಗಿದೆ ಈ ಸಂದರ್ಭದಲ್ಲಿ ಸರ್ಕಾರ ಏರ್ಪಾಡುಗಳಿಗೆ ತಕ್ಕ ಸಹಾಯ ಒದಗುವದರಲ್ಲಿ ಸಂಶಯವಿಲ್ಲ —ಮ್ಯುನಿಸಿಪಾಲಿಟಿಯವರು ಬಾಳನಕಟ್ಟೆಯ ಮೇಲೆ ಸಾಗುವದಕ್ಕೆ ಲಾಂದ್ರಕಂಭಗಳನ್ನು ಹಾಕಿಸಿದ ಹೊರತು ನೀರಿಗಾಗಿ ಬರುವ ಜನರಿಗೂ ರೈಲಿಗೆ ಹೋಗುವ ಪ್ರಯಾಣಿಕರಿಗೂ ಪ್ರಯಾಸ ತಪ್ಪಲಾರದೆಂದು ಹೇಳುತ್ತೇವೆ

ಬಾತ್ಮಿದಾರರಿಗೆ ನೋಟೀಸು

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಜವಾಬು ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೆ

...ನ್ನು ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕ... ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆ... ಬಾರದು; ಇಂಥವುಗಳಿಗೆ ನಾವು ನಿಗಾ ಕೊಡಲಾರೆವು.

...ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು—ಎಡಿ

“...ಕ್ಟ್ರೆ...” ಎಂಬ ಬಾತ್ಮಿದಾರರು “ಚಿತ್ರದುರ್ಗದ ...ಕರವಾದ ವನಭೋಜನವು” ಎಂಬ ಬಾತ್ಮಿಯನ್ನು ಬರೆದು, ...ಲವು ಹುಡುಗರು ಬೆಟ್ಟದ ಮೇಲೆ ಸೇರಿ ತಿಂದಿ ತೀರ್ಥಗಳನ್ನು ...ಕೊಂಡು ವಾಪಸು ಬರುವಾಗ್ಗೆ ಸರ್ಕಾರಿ ಪ್ಲಾಂಟೇಷನಲ್ಲಿ ...ಕೊಡ್ಡ ಹುಲ್ಲಿಗೆ ಬೆಂಕಿ ತೋರಿಸಿ ಉರಿಸಿದ್ದರಿಂದ ಗೋಕಾ... ...ಮಾತ್ರ ಹೋಯಿತೆಂತಲೂ, ಫಾರೆಸ್ಟಿನವರು ಆ ಪೈಕಿ ಒಬ್ಬಿಬ್ಬ... ...ರಿದು ತನಿಖೆಮಾಡುತ್ತಿದ್ದಾರೆಂತಲೂ ಬರೆದಿದ್ದಾರೆ

ಕರೆಸ್‌ಪಾಂಡೆನ್ಸ್.

ನಾಪಿತರ ೩ ನೆ ಪಂಚಾಯಿತಿ

...ಈಗ ನಮ್ಮ ಜಾತಿಯಲ್ಲಿ ಬಹಳ ಜನಗಳು ಅನಾಥರಾಗಿಯೂ ...ವಂತರಾಗಿಯೂ ಇರುವದರಿಂದ ಈ ರಾಜಧಾನಿಯಲ್ಲಿ ಒಂದು ...ಲಯವನ್ನು ಸ್ಥಾಪಿಸಿ ನಮ್ಮ ಜಾತಿ ಅನಾಥ ಹುಡುಗರಿಗೆ ...ವಸ್ತ್ರಾದಿಗಳಿಂ ವಿದ್ಯೆ ಮತ್ತು ಒಳ್ಳೆ ಗುಣಗಳನ್ನು ಕಲಿಸಿ ...ಸಿದ ನಂತರ ಅವರವರ ಮನೆಗೆ ಕಳುಹಿಸಬೇಕೆಂತಲೂ ನವ...ರಾತ್ರಿ ಮಹೋತ್ಸವಗಳು ಈ ರಾಜಧಾನಿಯಲ್ಲಿ ನಡೆಯುವ ...ಕಾಲ್ಲಿಗೆ ಉತ್ಸವಕ್ಕೆ ಬರತಕ್ಕ ನಮ್ಮ ಜಾತಿ ಪರಸ್ಥಳದ ಜನಗ...ಳನ್ನು ಕಾಪಾಡುವದಕ್ಕೂ ಈ ಅನಾಥಾಲಯವನ್ನು ಸ್ಥಾಪಿಸಬೇ...ಕೆಂದು ನಮ್ಮವರೆಲ್ಲಾ ಯೋಚನೆ ಮಾಡಿದರು. ಜಾತಿ ವಿಷಯಗ...ಳ ಮಾತನಾಡುವದಕ್ಕೆ ಮಂದರಾಸು, ಕೋಲಾರ, ಬೆಂಗಳೂರು, ...ಈ ಡಿಸ್ಟ್ರಿಕ್ಟುಗಳಿಂದಲೂ ಕೆಲವು ತಾಲ್ಲೋಕುಗಳಿಂದಲೂ ...ದವಾಬು ಬರಲಿಲ್ಲವಾದ್ದರಿಂದ ಈ ಪಂಚಾಯಿತಿಯನ್ನು ...ನಿಲ್ಲಿಸಿದರು

ಬಿ ಪುಟ್ಟೈಯ್ಯ, ದೊಡ್ಡ ಒಕ್ಕಲಗೇರಿ, ಮೈಸೂರು.

ಸತ್ತ ಪ್ರಾಣಿಯನ್ನು ತಿನ್ನುವದರ ಫಲ

...ನಾಗಮಂಗಲದ ತಾಲ್ಲೋಕು ನಲ್ಲಿಗೆರೆ ಹೋಬಳಿ ಗೊಂದಿಹಳ್ಳಿ ...ಮೂಸ್ಲೇ ಗೌಡನ ಮಗ ತಿಮ್ಮೈಯ್ಯಗೌಡನು ಆಡು ಕು...ರಿದ ದಾಸುಗಳನ್ನು ಈ ಊರಿಗೆ ಸಮೀಪದಲ್ಲಿರುವ ಗುಡ್ಡಕ್ಕೆ ...ಮೇಸುವ ಉದ್ದಿಶ್ಯ ಹೋಗಿರುವಲ್ಲಿ ಒಂದು ಟಗರು ತಕ್ಷಣದಲ್ಲೇ ...ಮೇಲೆ ಬಿದ್ದು ಕೊಲ್ಯಾಡಿ ಸತ್ತಿತು. ಸಮೀಪದಲ್ಲಿದ್ದ ಈ ತಿ...ಮ್ಮೈಯ್ಯಗೌಡನು ಅದನ್ನು ಮನೆಗೆ ತೆಗೆದುಕೊಂಡು ಬಂದು ಆಹಾ...ರಕ್ಕುಪಯೋಗಿಸಿಕೊಂಡನು. ಅನಂತರ ೭—೮ ದಿನಗಳೊಳ...ಗೆ ...ತನ ಬಲಗೈ ಮೇಲೆ ಒಂದು ಹುಣ್ಣು ಹುಟ್ಟಿ ರೋಗಬಾಧೆ ...ಪಡಿಸಿಕೊಂಡಿತು. ಈ ರೀತಿಯಿಂದ ಕಂಡ ಗುಳ್ಳೆಗೆ ಕಾರಿ ...ಹಿಬಡಾಗಿ ಹೇಳುತ್ತಾರೆ ಇದಕ್ಕೆ ಪಂಡಿತರಿಂದ ಚಿಕಿತ್ಸೆಯೇ ...ದ ಯಾವ ಇಲಾಜು ಮಾಡಿದಾಗ್ಯೂ ಗುಣತೋರದೆ ಶರೀರದ ...ಗಳಲ್ಲಿನ ನರಗಳೆಲ್ಲಾ ಬಿಗಿಹಿಡಿಯಲ್ಪಟ್ಟು ಈ ಮಾಹೆ ೧೮ ...ಸತ್ತನು. ಸತ್ತ ಪ್ರಾಣಿಗಳ ಮಾಂಸವನ್ನು ಭಕ್ಷಿಸುವದು ಆ ...ದಿನಗಳಲ್ಲಿ ರೂಢಿಯುಂಟು ಇನ್ನು ಮೇಲಾದರೂ ಈ ಕೆಟ್ಟ ...ಮ್ನು ತ್ಯಜಿಸುವಂತೆ ಸೂಚಿಸುತ್ತೇನೆ.

ಎಂ ಬೋರೈಯ್ಯಗೌಡ.

ಸಂಕ್ರಾಂತಿ ಹಬ್ಬದಲ್ಲಿ ನಡೆದ ಪಶುಹಿಂಸೆ

...ಸಂಕ್ರಾಂತಿ ಹಬ್ಬವು ಕಳೆದ ತಾರೀಖು ೧೪ ನೇ ಮಂಗಳವಾರದ ...ದಲ್ಲಿ ನಡೆಯಿತಷ್ಟೆ ...ಬೆಂಗಳೂರು ತಾಲ್ಲೂಕು ...ಟ್ಟಿಗೆರೆ ...ಯಲ್ಲಿ ನಡೆದ ಹಬ್ಬದ ವಿನೋದವನ್ನೂ ಪಶುಗಳಿಗುಂಟಾದ ಹಿಂ...ಸೆಯನ್ನು ಸ್ವಲ್ಪ ವಿವರಿಸುತ್ತೇನೆ ಎಂದಿನಂತೆ ಈ ಗ್ರಾಮದ ಜನಗಳು ...ದನಗಳಿಗೆ ಶೃಂಗಾರಮಾಡಿ ಪೂಜೆಪುನಸ್ಕಾರಾದಿಗಳೆಲ್ಲವು ಪೂ...ರ್ತಿಯಾದ ಮೇಲೆ ಊರ ಹೊರಗೆ ಮೇಯುವುದಕ್ಕೆ ಬಿಟ್ಟರು. ಸಾ...ಯಂಕಾಲ ಕೆಲವರು ಸೇರಿ ಅವು ಊರೊಳಗೆ ಬರತಕ್ಕ ಮಾರು ಊ...ರ ಬಾಗಿಲುಗಳಲ್ಲಿಯೂ ಹುಲ್ಲು ಕಟ್ಟಿಗೆಗಳಿಂದ ಬೆಂಕಿಯನ್ನು ಹ...ಚ್ಚಿ ಜ್ವಾಲೆಯಲ್ಲಿ ದನಕರುಗಳೆಲ್ಲ ನುಗ್ಗಿಬರಬೇಕೆಂಬ ಅಪೇ...ಕ್ಷೆಯಿಂದ ಅವುಗಳನ್ನು ಮೊದಲೇ ಅಲ್ಲಲ್ಲಿ ತಡೆಯಿಸಿದ್ದರು ಅದೇ ಪ್ರ...ಕಾರ ಮೂಗುದಾಣಗಳನ್ನು ಪ್ರಸಾರಗಳ ಮೂಲಕ ಆ ಅಗ್ನಿಜ್ವಾ...ಲೆಯಲ್ಲಿ ಬಲಾತ್ಕಾರವಾಗಿ ನುಗ್ಗಿಸಿದ್ದಲ್ಲದೆ ಇಲ್ಲಿಗೆ ಸಮೀಪದಲ್ಲಿರುವ ...ಹಳ್ಳಿಯೂ ಅನೇಕ ದನಕರುಗಳನ್ನು ಸೇರಿಸಿ, ಅವುಗಳನ್ನು ...ಎತ್ತಿರುವ ಸಂಘಗಳಿಂದಲೂ ವಾದ್ಯಘೋಷಗಳಿಂದಲೂ ದಿಕ್ಕು...ಗೆಟ್ಟು ಚದರಿ ಹೋಗುವಂತೆ ಘಾಟರಿ ಹುಟ್ಟಿಸಿ ಅನೇಕ ವಿಧವಾ...ಗಿ ಹಿಂಸಿಸಿದರು. ಇದರಿಂದ ಕೆಲವು ಪ್ರಾಣಿಗಳಿಗೆ ಘಾಯಗಳೇ ಆದಿ ...ಅಪಾಯಗಳುಂಟಾದವು ಈ ರೀತಿ ಪಶುಗಳನ್ನು ಹಿಂಸಿಸುವ ...ಪದ್ಧತಿಯನ್ನು ಎಷ್ಟು ವರ್ಣಿಸಿದರೂ ತೀರದು

ಆರ್ ನಾಮೈಯ್ಯ.

ಹುಡುಗನನ್ನು ಹಿಂಸೆ ಮಾಡಿದ್ದು.

...ಕೆರೆ ತಾಲ್ಲೋಕು ಬಿಲಿಗಿನ...ಯಲ್ಲಿ ಮುರುಡಿಮಲ್ಲ ಎಂ...ಬುವನಿದ್ದಾನೆ ಅವನ ಮನೆಯಲ್ಲಿ ಈಗ್ಗೆ ಕೆಲವು ದಿವಸಗಳ ...ಮೃತಪಟ್ಟ ಅಕ್ಕನ ಮಕ್ಕಳು ಅನಾಥರಾಗಿ ೧ ಹುಡುಗಿ, ೧ ಹು...ಡುಗನ ಹೆಸರು ಉಜ್ಜಯಿನಿ. ಸ್ವಲ್ಪ ಬಂಡವಾಳಸ್ಥರು ...ಮೈಲಾರ ಮುರುಡಿಮಲ್ಲನು ಹಿಂಡವಾಳವನ್ನು ಅಪಹರಿಸ...ಬೇಕೆಂಬ ಉದ್ದೇಶದಿಂದಲೋ ಅಥವ ಇನ್ಯಾವ ಕಾರಣದಿಂದಲೋ ತಾ ೨೦ ನೇ ಮಂಗಳವಾರ ರಾತ್ರಿ ೧೧ ಘಂಟೆ ಸಮಯದಲ್ಲಿ ಸದರಿ ಉಜ್ಜಯಿನಿ ಎಂಬ ಹುಡುಗನಿಗೆ ಅವರೆ ಹೊಲದಲ್ಲಿ ಅನ್ನ ಬಾಬ್ತು ದನಗಳನ್ನು ಬಿಟ್ಟು ಮೇಯಿಸಿದನೆಂದು ನೆಪ ಮಾಡಿಕೊಂಡು ನೋಡಲಿಕ್ಕೆ ದ್ವೇಷಿಗಳಿಗೂ ಕೂಡ ಸಹಿಸಲಸಾಧ್ಯವಾಗಿ ಬೆನ್ನು ಅವಯುಸ್ಥಳಗಳಿಗೆಲ್ಲಾ ೧ ಗಜದ ಸಲಾಕಿಯನ್ನು ಕಾಯಿಸಿ ೧೮—೨೦ ಬರೆಗಳನ್ನು ಹಾಕಿ ಪ್ರಾಣಾಂತ್ಯವಾದ ಶಿಕ್ಷೆಯನ್ನು ಮಾಡಿ ಹೊರಕ್ಕೆ ದಬ್ಬಿದ ಸಂಗತಿ ಗ್ರಾಮ ಮುಖಂಡರೂ ಪೋಲೀಸರೂ ವಗೈರೇರು ತಿಳಿದು ಬಹಳ ಪಶ್ಚಾತ್ತಾಪ ಪಟ್ಟದ್ದಲ್ಲದೆ ರೂಲ್ಸು ಮೀರಿ ಹುಡುಗನನ್ನು ಆಸ್ಪತ್ರೆಗೂ, ಸದರಿ ಮಲ್ಲನನ್ನು ಲಾಕಪ್ಪಿನಲ್ಲಿಯೂ ಇಟ್ಟಿರುತ್ತಾರೆ. ಡಾಕ್ಟರವರ ಉಪಚಾರದಿಂದ ಹುಡುಗ ಮೃತಪಟ್ಟಿಲ್ಲ. ಇಷ್ಟುಮಟ್ಟಿಗೆ ಸ್ವಲ್ಪವಾದ ಲಾಭ್ಯವನ್ನೇ ಪ್ರಾಧಾನ್ಯ ಯೋಚಿಸಿ ಉತ್ತರೋತ್ತರ ದಂಡ ಅಧಿಕವಾಗಿ ತೆರುವ ಒನಗಳ ಮೌಢ್ಯವು ಇನ್ನೂ ಹೋಗಲಿಲ್ಲವಲ್ಲಾ ಎಂದು ವಿಷಾದಪಡಬೇಕಾಗಿದೆ.

ಲ. ನ.

ಬೆಂಗಳೂರಿನಲ್ಲಿ ಮೋಸಗಳು.

ಅಯ್ಯಾ,

ಈ ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯ ಪಕ್ಕದ ರಸ್ತೆಯಲ್ಲಿ ಒಬ್ಬನು ಪ್ರತಿ ದಿನವೂ ಕೆಲವು ಬಟ್ಟೆಗಳನ್ನು ಇಟ್ಟುಕೊಂಡು ಅವರಲ್ಲಿ ಒಂದನ್ನು ಕೈಯಲ್ಲಿ ಹಿಡಿದು ‘ಒಂದು ರೂಪಾಯಿ ನಾಲ್ಕಾಣೆ,’ ‘ಏಕ್ ರುಪೈ ಚಾರಾಣಾ’ ಎಂದು ಸುಮ್ಮನೇ ಕೂಗುತ್ತಿರುವನು ಯಾರಾದರೂ ಗಾವಿಲರು ಮಾರ್ಗದಲ್ಲಿ ಬಂದ ಒಡನೆಯೇ ೩—೪ ಜನಗಳು ಬಂದು ಸುಮ್ಮನೆ ಹೆಚ್ಚು ಪರಬಾಸ್ತು ಮಾಡುವರು ಹಳ್ಳಿಯವರು ಈ ತಂತ್ರಗಳನ್ನು ಕಾಣದವರಾದ್ದರಿಂದ ತಾವು ಬೆಲೆಯನ್ನು ಹೆಚ್ಚಿಸಲು ಹೋಗಿ ಮೋಸಹೋಗಿ—ಅಯ್ಯೋ, ಕೆಟ್ಟೆವು! ಎಂದು ನಡೆಯುತ್ತಲಿರುವರು ತಮಾಷೆಯನ್ನು ನೋಡುವುದಕ್ಕೂ ಬಾಟಗೆಗಳನ್ನು ಸಂಪಾದಿಸುವುದಕ್ಕೂ ಬರುವವರೆಲ್ಲ ಈ ವಿಚಾರವನ್ನು ತಿಳಿದು ಮೋಸಹೋಗದೆ ಇರುವರೆಂದು ನಂಬಿದ್ದೇನೆ.

ಈ ಬೆಂಗಳೂರು ರೈಲ್ ಸ್ಟೇಷನ್‌ನಿಂದ ಬರುವ ಮಾರ್ಗದಲ್ಲಿರುವ ಕೆರೆಯ ಕಟ್ಟೆಯ ಮೇಲೆ ೪—೫ ಜನ ಮೂರೆಲೆ ವಿಸ್ಪೀಟು ಆಟದವರು ಸೇರಿ ರೈಲಿನಿಂದ ಇಳಿದು ಬರುವ ಜನಗಳನ್ನು ವಂಚಿಸುವರು ಎಷ್ಟೋ ಜನರು ತಂದ ದುಡ್ಡನ್ನೆಲ್ಲಾ ಇವರ ಪಾಲುಮಾಡಿ ಗೋಳಿಡುತ್ತಾ ಹೋಗುವರು ಸಂಗ್ರಹವಿದನು—‘ಅದಿಗೋ ಬಿಮ್ಮ ಇದಿಗೋ ಬಿಮ್ಮ’ ಎಂದು ಹೇಳುವವರ ಮಾತನ್ನು ನಂಬಿ, ಪರದ್ರವ್ಯಕ್ಕೆ ಆಶೆಪಟ್ಟು ತಮ್ಮ ಸಿಪತ್ತುಗಳನ್ನು ಕಳೆದುಕೊಂಡು ಗೋಳಾಡುವುದಕ್ಕಿಂತಲೂ ಸುಮ್ಮನೆ ಇರುವುದು ಉತ್ತಮ ಈ ಮೂರೆಲೆ ಆಟದವರು ಒಂದೊಂದು ದಿನ ಒಂದೊಂದು ಕಡೆ ಹೋಗುವುದೂ ಅಲ್ಲದೆ ಒಂದು ಗಂಟೆಯಲ್ಲಿದ್ದ ಕಡೆ ಮತ್ತೊಂದು ಗಂಟೆಯಲ್ಲಿರುವುದಿಲ್ಲ ಈ ವಿಷಯದಲ್ಲಿ ಜನಗಳು ಹುಷಾರಾಗಿರುವರೆಂದು ಸೂಚಿಸುತ್ತೇನೆ.

ಸಿ ಸಂಗೈಯ್ಯ.

ಹೆಜ್ಜೇನು ಮುರಿದ ಯುಕ್ತಿ.

ಅಯ್ಯಾ,

ದಾವಣಗೆರೆ ತಾಲ್ಲೂಕು ಕಂದಗಲ್ಲು ಗ್ರಾಮದ ಸಾಹುಕಾರ್ ಹುಚ್ಚವೀರಪ್ಪನವರು ಈ ಗ್ರಾಮದ ಸಮೀಪದಲ್ಲಿರುವ ಆಲದಮರದ ಮೇಲೆ ಇಟ್ಟಿದ್ದ ಬಲವಾದ ಹೆಜ್ಜೇನನ್ನು ತಾ ೧೩ ನೇ ಮಧ್ಯಾಹ್ನ ಮುರಿಯಲಿಕ್ಕೆ ಅನೇಕರನ್ನು ಕರೆದುಕೊಂಡು ಹೋಗಿ ಮೊದಲೇ ಸಿದ್ಧಪಡಿಸಿಕೊಂಡು ಬಂದಿದ್ದ ಒಂದು ತರಹಾ ಸೊಪ್ಪಿನ ಪುಡಿಯಿಂದ ಹೊಗೆಯನ್ನು ಹಾಕಿಸಿ, ಮರದ ಶಿವರುದ್ರಯ್ಯ, ಅಂಗಡಿ ವೀರಬಸಪ್ಪ ಇವರನ್ನು ಮರದ ಮೇಲಕ್ಕೆ ಹತ್ತಿಸಿ, ಸದರಿ ಹೊಗೆಯನ್ನು ಹಾಕಿಸಲು ಹುಳಗಳೆಲ್ಲಾ ಜೋಯ್ಯೆಂದು ಏಳಲು, ಆ ಆರ್ಭಟಕ್ಕೆ ಅಲ್ಲಿದ್ದ ಜನಗಳೆಲ್ಲಾ ಹೆದರಿ ಓಡಿಹೋಗುವದಕ್ಕೆ ಮೊದಲುಮಾಡಿದರು. ಸದರೀ ಹುಚ್ಚವೀರಪ್ಪನವರು ಅನುಭವದ ದೃಷ್ಟಾಂತದಿಂದಲೂ ಶಪಥದಿಂದಲೂ ಎಲ್ಲರಿಗೂ ಧೈರ್ಯ ಹೇಳಿ ನಿಲ್ಲಿಸಿದರು. ಹುಳಗಳೆಲ್ಲಾ ಹಾರಾಡುತ್ತಲೂ ಜನಗಳ ಮೇಲೆ ಕೂಡುತ್ತಲೂ ಇದ್ದರೇ ಹೊರತು ಒಂದಾದರೂ ಒಬ್ಬರನ್ನೂ ಸ್ವಲ್ಪವೂ ಚುಚ್ಚಲಿಲ್ಲ ಮೂಲಿಕೆ ಸತ್ವದಿಂದ ಜೇನುಗಳ ಮುಳ್ಳುಗಳು ಒಳಗೆ ಸೇದಿಕೊಂಡಿದ್ದವು ಮೂಲಿಕೆ ಶಕ್ತಿ ಎಷ್ಟರ ಮಟ್ಟಿಗೆ ಇರಬಹುದೆಂದು ಅಲ್ಲಿಗೆ ಬಂದಿದ್ದ ಪಟೇಲ್ ಚನ್ನಬಸಪ್ಪನವರು, ಗೌಡ ಈಶ್ವರಪ್ಪನವರು, ಬಣಗಾರ್ ಚೂರಿ ಗಂಗಪ್ಪನವರೇ ಮೊದಲಾದವರು ಬಹಳ ಆಶ್ಚರ್ಯಪಟ್ಟರು ಕೆಲವು ಜನಗಳು ರಾತ್ರಿ ವೇಳೆಯಲ್ಲಿ ಪಂಜು ಹಾಕಿ ಎಲ್ಲಾ ಹುಳಗಳನ್ನೂ ಸುಟ್ಟು ಜೇನು ಮುರಿಯುತ್ತಾರೆ ಅದು ಕೇವಲ ಪಾಪಕರವಾದ ಕಾರ್ಯವಾಗಿದೆ. ಇವರು ಮುರಿದದ್ದರಲ್ಲಿ ಒಂದು ಹುಳವಾದರೂ ಸಾಯಲಿಲ್ಲ ಒಬ್ಬರಿಗಾದರೂ ಹಿಂಸೆಯಾಗಲಿಲ್ಲ ಅಲ್ಲಿಗೆ ಬಂದಿದ್ದ ಆಬಾಲವೃದ್ಧರೂ ಜೇನು ತುಪ್ಪ ಸವಿದು ತಮ್ಮ ಮನೆಗಳಿಗೆ ತೆರಳಿದರು

ಕೆ ಮಹಲಿಂಗಪ್ಪ

ದಾವಣಗೆರೆಯ ವಿಚಾರಗಳು

ಅಯ್ಯಾ,

ಕೆಲವು ದಿನಗಳಿಗೆ ಹಿಂದೆ ಇಲ್ಲಿನ ರೈಲ್ವೆ ಸ್ಟೇಷನ್ ಮಾಸ್ತರ ಹತ್ತಿರ ಒಬ್ಬನು ಮೈಸೂರಿಂದ ಬಂದು ಒಂದು ಜೊತೆ ಪತ್ತಕಡಕು ಕೊಟ್ಟು ೩೦೦ ರೂಪಾಯಿ ತೆಗೆದುಕೊಂಡು ಹೋದನೆಂದು ವರ್ತಮಾನ ಅದನ್ನು ಬೇರೆ ವರ್ತಕರಿಗೆ ತೋರಿಸುವಾಗ್ಗೆ ಅದು ಸುಮಾರು ೨೦—೩೦ ರೂಪಾಯಿ ಬಾಳುವುದು ಎಂದು ಹೇಳುವಲ್ಲಿ ಅವರು ಪೋಲೀಸಿನಲ್ಲಿ ರಿಪೋರ್ಟ್ ಮಾಡಿದರು ಆಗ ದಫೇದಾರರು ಮೈಸೂರಿಗೆ ಹೋಗಿ ಆಸಾಮಿಯನ್ನು ಹಿಡಿದು ಎಲ್ಲಾ ಪತ್ತೆ ಮಾಡಿ ಆತನ ಮೇಲೆ ಕೇಸ್‌ಮಾಡಿದಾರೆ ಮುಂದಕ್ಕೆ ವಿಚಾರಣೆ ಆಗಬಹುದು.

ಕಳೆದ ವಾರ ಇಲ್ಲಿ ಒಂದು ರಾಷ್ಟ್ರಸಭೆಯು ನಡೆಯಿತು ಈ ಸಭೆಗೆ ಶಿವಮೊಗ್ಗೆಯಿಂದ ಬಂದಿದ್ದ ಅಡ್ವೋಕೇಟ್ ಮೊ॥ ರಾಮರಾಯರು ಅಗ್ರಾಸನವನ್ನು ವಹಿಸಿದ್ದರು. ಆ ದಿನ ಸುಮಾರು ೩೦೦ ಜನಗಳಿಗಿಂತಲೂ ಹೆಚ್ಚಾಗಿಯೇ ಸೇರಿದ್ದರೆಂದು ಕೇಳಿದೆನು ಈ ಸಭೆಯಲ್ಲಿ ಮುಖ್ಯವಾಗಿ ನಡೆದ ಕಾರ್ಯಗಳೇನೆಂದರೆ—ಪರದೇಶದ ಮಾಲುಗಳನ್ನು ತರಿಸಬಾರದು. ಮತ್ತು ಮಿಷನ್ ಸ್ಕೂಲಿಗೆ ನಮ್ಮ ಮಕ್ಕಳನ್ನು ಕಳುಹಿಸಬಾರದು ಎಂಬುದು ಮೊ॥ ಸುಬ್ಬರಾಯರು ದಾವಣಗೆರೆಯಲ್ಲಿರುವ ದನಾರ್ಥಾರಿ ಪತ್ರಿಕೆಯ ಎಡಿಟರವರು ಉಪನ್ಯಾಸವನ್ನು ಮಾಡಿದರಂತೆ. ತದನಂತರ ಚಂದಾ ಹಾಕಬೇಕೆಂದು ಹೇಳಿದ ಮಾತ್ರಕ್ಕೆ ಅನೇಕರು ತಮ್ಮ ಕಾಲುಗಳಿಗೆ ಬುದ್ಧಿ ಹೇಳುವದಕ್ಕೆ ಪ್ರಯತ್ನಪಟ್ಟರೆಂದು ಕೇಳಿದೆನು ಈಗ ಮಿಷನ್ ಸ್ಕೂಲ್ ತಕ್ಕಮಟ್ಟಿಗೂ ವೃದ್ಧಿಹೊಂದುತ್ತಾ ಬರುತ್ತದೆ. ಈ ಮಧ್ಯೆ ಕೆಲವರು ಇದನ್ನು ನೋಡಿ ಸಹಿಸಲಾರದೆ ಈ ಪ್ರಕಾರ ಕೆಡಿಸಬೇಕೆಂದು ಪ್ರಯತ್ನಪಟ್ಟಿದ್ದಾರೆ ಈಗ ೩೦ ವರ್ಷಗಳಿಂದಲೂ ಈ ಊರಿನಲ್ಲಿ ಮಿಷನವರು ಸ್ಕೂಲಿಟ್ಟಿದ್ದಾರೆ ಯಾವ ವಿಷಯದಲ್ಲಾದರೂ ಅದನ್ನು ಕೆಡಿಸದೆ ಕ್ರಮವಾಗಿ ನಡೆಸಿಕೊಂಡು ಹೋಗುತ್ತಾರೆ. ಮತ್ತು ಮೇಲ್ಕಂಡ ಮೊ॥ ಸುಬ್ಬರಾಯರ ತಂಗಿಯರೂ ಅನೇಕ ದೊಡ್ಡ ವರ್ತಕರ ಮಕ್ಕಳೂ ತಕ್ಕಮಟ್ಟಿಗೂ ವಿದ್ಯಾವತಿಯರಾಗಿ, ತಮ್ಮ ಯಜಮಾನರನ್ನು ಮರ್ಯಾದೆಯಿಂದಲೂ ವಿಧೇಯತ್ವದಿಂದಲೂ ಕಾಣುತ್ತಾ ಬಂದಿದ್ದಾರೆಂಬುವದನ್ನು ಕೇಳಿ ಸಂತೋಷಪಡುತ್ತೇನೆ. ಈ ಮಧ್ಯೆ ಇದನ್ನು ಕೆಡಿಸಬೇಕೆಂದು ಕೆಲವರು ಯೋಚಿಸಿರುವದನ್ನು ನೋಡಿದರೆ ವ್ಯಸನಪಡಬೇಕಾಗಿದೆ. ವೀರಶೈವರು ಈ ವಿಷಯವನ್ನು ಚನ್ನಾಗಿ ಯೋಚನೆಮಾಡಿ, ಮೇಲಿನವರು ಅವರ ಮಕ್ಕಳಿಗೆ ಪ್ರಯೋಜನಮಾಡುತ್ತಾರೋ ಇಲ್ಲವೋ ಎಂಬುವದನ್ನು ಸ್ವಾನುಭವದಿಂದ ತಿಳಿದುಕೊಳ್ಳಬಹುದು. ಸದ್ಯ ಅನ್ಯೋನ್ಯವಾಗಿರೋಣವೆಂದು ಹೇಳುತ್ತಾ, ತದನಂತರ ಯಾವುದೂ ಇಲ್ಲದಂತೆ ಮಾಡಿಯಾರು.

ಪುರವಾಸಿ.

ವೈಶ್ಯಜನೋಪಕಾರಸಂಘ, ಬೆಂಗಳೂರು ದಂಡು

ಅಯ್ಯಾ,

ಈ ಸಂಘವು ಸ್ಥಾಪಿತವಾಗಿ ಇದುವರಿಗೆ ೧೬ ತಿಂಗಳುಗಳಾದವು ವೈಶ್ಯ ಅನಾಥಬಾಲಕರ ವಿದ್ಯಾಭಿವೃದ್ಧಿಗೆ ತಕ್ಕ ಅನುಕೂಲ ಪಡಿಸಿಕೊಡುವದೂ, ವರ್ತಮಾನ ಪತ್ರಿಕೆಗಳನ್ನೂ, ಮಾಸಪತ್ರಿಕೆಗಳನ್ನೂ ತರಿಸಿ, ಪ್ರಪಂಚದಲ್ಲಿ ನಡೆಯುವ ಸಕಲ ವಿಷಯಗಳನ್ನೂ ತಿಳಿದುಕೊಳ್ಳತಕ್ಕದ್ದು ಇವೇ ಮೊದಲಾದವುಗಳು ಈ ಸಂಘದ ಉದ್ದೇಶಗಳು

ಪ್ರತಿನಿತ್ಯವೂ ರಾತ್ರಿಕಾಲದಲ್ಲಿ ವ್ಯಾಪಾರೀಕರಿಗೂ ಇತರರಿಗೂ ಉಪಯುಕ್ತಗಳಾದ ವರ್ತಮಾನ ಪತ್ರಿಕೆಗಳೂ, ಮಾಸಪತ್ರಿಕೆಗಳೂ ಮೇಜುಗಳ ಮೇಲೆ ಸಿದ್ಧವಾಗಿ ಇರಿಸಲ್ಪಡುವವು ಎಲ್ಲರ ಉಪಯೋಗಕ್ಕೂ ಒಂದು ಚಿಕ್ಕ ಪುಸ್ತಕ ಭಂಡಾರ ಇರುವದು. ಪ್ರತಿನಿತ್ಯವೂ ಸರಿಯಾಗಿ ಈ ಸಂಘಕ್ಕೆ ಬಂದು, ಓದತಕ್ಕಂಥಾ ವರ್ತಕರಿಗೆ ಬಹಳ ಅನುಕೂಲಗಳಿರುವವು. ಕೆಲವು ದಿವಸಗಳಿಂದೀಚೆಗೆ ರಾತ್ರಿಕಾಲದಲ್ಲಿ ಬರತಕ್ಕವರ ಸಂಖ್ಯೆಯು ಸ್ವಲ್ಪ ಮಟ್ಟಿಗೆ ಕಡಮೆಯಾಗುತ್ತಿರುವುದು. ಕಾರಣವೇನೋ ತಿಳಿಯದು ಇನ್ನುಮೇಲೆ ಹೊಸ ಪತ್ರಿಕೆಗಳೂ ಹೊಸ ಪುಸ್ತಕಗಳೂ ಸಂಘಕ್ಕೆ ಬರುವಂತಿದೆ ವೈಶ್ಯ ಜನವೆಲ್ಲರೂ ಇವುಗಳ ಉಪಯೋಗವನ್ನು ಹೊಂದುವರೆಂದು ನಂಬಿರುವೆನು

ಈ ವರುಷದ ಪ್ರಾರಂಭದಿಂದ ಇದುವರಿಗೆ ವೈಶ್ಯ ಅನಾಥ ಬಾಲರ್ಯಾರೂ ಈ ಸಂಘದವರ ಸಹಾಯವನ್ನು ಅಪೇಕ್ಷಿಸಿಲ್ಲ ಕಂಟೋನ್ಮೆಂಟಿನಲ್ಲಿಯೇ ಇದ್ದುಕೊಂಡು ಓದತಕ್ಕ ವಿದ್ಯಾರ್ಥಿಗಳ್ಯಾರಾದರೂ ಇದ್ದಲ್ಲಿ ಸೆಕ್ರಿಟರಿಯವರಿಗೆ ಜಾಗ್ರತೆ ಬರೆದುಕೊಂಡಲ್ಲಿ ಅನುಕೂಲವಾಗುವದು ಪುಸ್ತಕ, ಸ್ಕೂಲುಫೀ ಮೊದಲಾದವುಗಳಿಗೆ ಅನುಕೂಲ ಪಡಿಸಿ ಕೊಡುವದಲ್ಲದೆ ಕೇವಲ ಬಡವರಾಗಿದ್ದರೆ ಭೋಜನಕ್ಕೂ ಸಹಾ ಅನುಕೂಲ ಪಡಿಸಿಕೊಡುವರು ಪರಸ್ಥಳದ ಬಾಲಕರಿಗೂ ಸಹ ಎಲ್ಲಾ ಅನುಕೂಲಗಳೂ ದೊರೆಯುವವು ವೈಶ್ಯರಲ್ಲಿ ಅನೇಕ ದೊಡ್ಡ ಮನುಷ್ಯರು ಈ ಸಂಘದ ಮೇಲ್ಮೆಗಾಗಿ ಬಹು ಶ್ರಮ ಪಡುತ್ತಿರುವರು. ಈ ಜನರಲ್ಲಿ ಇಂಥಾ ಸಂಘಗಳು ಬಹಳ ಅಪರೂಪ ಇಂಥಾ ಒಳ್ಳೇ ಕೆಲಸಗಳಿಗಾಗಿ ಪ್ರಯತ್ನಿಸುವ ಮಹನೀಯರಿಗೆ ಭಗವಂತನು ಸಹಾಯ ಮಾಡಲಿ ಎಂದು ಸದಾ ಪ್ರಾರ್ಥಿಸುತ್ತಿರುವೆವು. ಮತ್ತು ಈ ಸಂಘದ ಪ್ರೆಸಿಡೆಂಟರಾದ ಸಿ ಯಸ್ ನಾರಾಯಣಶೆಟ್ಟರು ಈ ಸಂಘದಲ್ಲಿ ಇದ್ದು ಕೆಲವು ಬದಲಾವಣೆಗಳನ್ನು ಮಾಡಿ, ಈಗ ಆಗಿರುವದಕ್ಕಿಂತಲೂ ಹೆಚ್ಚು ಅಭಿವೃದ್ಧಿಗೆ ಬರುವಂತೆ ಮಾಡಿ ಶಾಶ್ವತವಾದ ಕೀರ್ತಿಗೆ ಒಳಗಾಗುವರೆಂದು ನಂಬಿರುತ್ತೇನೆ ಈ ಸಂಘದ ಇಬ್ಬರು ಸೆಕ್ರಿಟರಿಗಳು ಪಡುವ ಪ್ರಯಾಸಕ್ಕೆ ಒಳ್ಳೆ ಪ್ರೋತ್ಸಾಹವು, ಸಂಘದ ಮೆಂಬರುಗಳಿಂದ ದೊರೆಯುತ್ತಾ ಬಂದಲ್ಲಿ ಇನ್ನು ಕೆಲವು ಕಾಲದಲ್ಲಿಯೇ ಈ ವೈಶ್ಯಜನೋಪಕಾರ ಸಂಘವು ನಮ್ಮ ಮೈಸೂರು ದೇಶದಲ್ಲಿನ ಮಹಾ ಸಂಘಗಳಲ್ಲಿ ಒಂದೆನಿಸಿಕೊಳ್ಳುವದರಲ್ಲಿ ಸಂದೇಹವಿಲ್ಲ ಈ ಊರಿನ ವೈಶ್ಯ ಶ್ರೇಷ್ಠರಲ್ಲಿ ಒಬ್ಬರಾದ ಮತ್ತು ಧನಾಢ್ಯರೆಂದು ಹೆಸರು ಪಡೆದಿರುವ ಕೊತ್ತ. ಕೃಷ್ಣಶೆಟ್ಟರ ಗಮನವು ಈ ಸಂಘದ ವಿಷಯದಲ್ಲಿ ಇನ್ನೂ ಚನ್ನಾಗಿ ಬಿದ್ದಹಾಗಿಲ್ಲ ಈ ಮಹನೀಯರ ಕೃಪಾದೃಷ್ಟಿಯು ಇತ್ತಕಡೆ ಬಿದ್ದ ಒಡನೆಯೇ ಈ ಸಂಘದಿಂದ ಅನೇಕ ಬಡ ವೈಶ್ಯ ಬಾಲರ ಕಷ್ಟ ನಿವಾರಣೆಯಾಗಿ ಅವರ ವಿದ್ಯಾಭ್ಯಾಸವೂ ಹೆಚ್ಚುತ್ತದೆ

ಕೆಲವು ದಿನಗಳಿಂದೀಚೆಗೆ ಪರಸ್ಥಳದ ಬಾಲಕರು ಕೆಲವರಿಗೆ ರಾತ್ರಿ ಹಗಲು ಓದಿಕೊಳ್ಳಲು ಅನುಕೂಲವಾಗಿರುವಂತೆ ಈ ಸಂಘದವರು ಸಂಘದ ಕಟ್ಟಡದಲ್ಲಿಯೇ ಸ್ಥಳಕೊಟ್ಟು ಎಲ್ಲಾ ಅನುಕೂಲಗಳನ್ನೂ ಒದಗಿಸಿ ಕೊಟ್ಟಿರುವರು ಇದು ಒಂದು ಶ್ಲಾಘನೀಯವಾದ ಕಾರ್ಯವೆಂದು ಇಲ್ಲಿನ ಜನರೆಲ್ಲರೂ ಇವರನ್ನು ಹೊಗಳುತ್ತಿರುವರು. ಕೈಲಾದಮಟ್ಟಿಗೂ ವಿಧವಿಧದಲ್ಲಿ ಪರೋಪಕಾರ ಮಾಡಬೇಕೆನ್ನುವದೇ ಈ ಸಂಘದವರ ಉದ್ದೇಶವೆಂದು ತಿಳಿಸಲು ತುಂಬಾ ಸಂತೋಷಿಸುವೆನು.

ಕಂಟೋನ್ಮೆಂಟು ವಾಸಿ.

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟ್ರ
ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ
(ಅಡ್ವಾನ್ಸು) . . . ರೂ. ೧—೦—೦
ಪರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿ
ಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಪಾಸಲ್
ಸೇರಿ . . . . . ರೂ. ೧—೧೪—೦
" " " " ೦—೧೫—೦
ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು. ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು.
ನಮ್ಮ ವಿಳಾಸ.—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ಬೆಲೆಗೆ ಬೆಳ್ಳಿ—ಗುಣಕ್ಕೆ ಬಂಗಾರ.

86 56

ಕ್ಲೆಮೆಂಟ್ಸ್‌ರವರ ಗಾಂಡಿಬಾಧಾ ನಿವಾರಿಣಿ.

ಪಾರ್ಶ್ವನೋವು, ಕೀಲುಗಳ ನೋವುಗಳು, ಹಿಮ್ಮೊಟ್ಟುನೋವು, ಬೆನ್ನು ಳಿಯುವದು, ತಲೆನೋವು, ಕೆಮ್ಮು ಕೀಲುಬೇನೆಗಳು, ಕೀಲುಗಳು ಕತ್ತರಿಸುವದು, ಬಗ್ಗಿರುವ ಬೆನ್ನುಗಳು, ಕೊರಳು ಊತ, ಇವುಗಳಿಂದುಂಟಾಗುವ ಬಾಧೆಗಳು, ಕೈಕಾಲು ಪಡೆತ, ಇವುಗಳಿಗೆ ಕ್ಲಿಮೆಂಟ್ಸ್‌ರವರ ಗಾಂಡಿ ಬಾಧೆ ನಿವಾರಿಣಿ ತೈಲವನ್ನು ಚನ್ನಾಗಿ ತಿಕ್ಕಿದರೆ ಈ ಬಾಧೆಗಳೆಲ್ಲಾ ಪರಿಹಾರವಾಗುವದು ಬಾಧೆಯನ್ನು ನಿಲ್ಲಿಸುವದಕ್ಕಾಗಿ ಕ್ಲಿಮೆಂಟ್ಸ್‌ರವರ ಮ್ಯಾಜಿಕ್ ಬಾಂ ಹಚ್ಚಿ ಇದೆ ಆ ಕೆಲಸವನ್ನು ಅದು ಮಾಡುವದು. ಶೀತಾಯಿಗಳಲ್ಲಿ ಹಾಕಿ ಮಾರುವ ಔಷಧಗಳಲ್ಲಿ ಬಾಧೆಯನ್ನು ಶಮನಮಾಡುವದರಲ್ಲಿ ಕ್ಲಿಮೆಂಟ್ಸ್‌ರವರ ಮ್ಯಾಜಿಕ್ ಬಾಂನಂತಹದು ಬೇರೊಂದಿಲ್ಲವು. ಕ್ರಯ—೧ ಬಾಟ್ಲಿಗೆ ೧೨ ಆಣೆ. ೩ ಕ್ಕೆ ೨ ರೂಪಾಯಿ. ೬ ಕ್ಕೆ ೩॥ ರೂಪಾಯಿ. ೧೨ ಕ್ಕೆ ೬ ರೂಪಾಯಿ ಅಂಚೆ ವೆಚ್ಚ ಒಂದರಿಂದ ಮೂರು ಬಾಟ್ಲಿ ವರಿಗೆ ೩ ಆಣೆ
ನಮ್ಮ ವಿಳಾಸ:—ಎಸ್. ಪಬ್ಲಿಯು. ಆರ್,
ಸಿವೆಟ್ರಿ ರೋಡ್, ವೆಪರಿ, ಮದರಾಸ್.

ಬೆಂಗಳೂರು ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪೆನಿ ಲಿಮಿಟೆಡ್.

123—20

ಮೈಸೂರು ಸರ್ಕಾರದವರು ಇಂಡಿಯಾ ಗವರ್ನಮೆಂಟಿನವರು ಈ ರೈಲನ್ನ ಸ್ಯಾಂಕ್ಷನ್ ಮಾಡುವ ಕಂಡಿಷನ್ ಮೇಲೆ ಏರ್ಪಡುವ ಮೂಲಧನಕ್ಕೆ ಶೇಕಡ ನಾಲ್ಕರಂತೆ ಬಡ್ಡಿ ಕೊಡಲು ಜಾಮೀನಾಗಿರುತ್ತೇವೆಂದು ಈಚೆಗೆ ಪ್ರಸಿಲ್ ಮಾಡಿರುತ್ತಾರೆ

ನಿಯಮಿತ ಮೂಲಧನ ಹೇರು ಒಂದಕ್ಕೆ ೨೦ ರೂಪಾಯಿಗಳ ಬೆಲೆಯುಳ್ಳ ೩೦ ಸಾವಿರ ಷೇರುಗಳಿಂದಾಗುವ ೬ ಲಕ್ಷ ರೂಪಾಯಿಗಳು—ಈ ಷೇರು ಪಡೆಯಲು ಷೇರು ಒಂದಕ್ಕೆ ಒಂದು ರೂಪಾಯಿ ನಂತೆ ಅಪ್ಲಿಕೇಷನ್ ಜೊತೆಯಲ್ಲಿ ಅಡ್ವಾನ್ಸಾಗಿ ಕೊಟ್ಟು ಬಾಕಿ ೧೯ ರೂಪಾಯಿಗಳನ್ನ ನೋಟೀಸ್ ಕೊಟ್ಟ ನಂತರ ೨ ಕಿಸ್ತುಗಳಲ್ಲಿ ಪಾವತಿ ಮಾಡತಕ್ಕದ್ದು. ಈ ಲೈನಿನ ಸರ್ವೆ ಪೂರೈಸಲ್ಪಟ್ಟಿದೆ

ಈ ಕಂಪೆನಿಯ ಸೆಕ್ರಟರಿ, ಮ್ಯಾನೇಜಿಂಗ್ ಏಜಂಟರು ಈ ಕಳಗೆ ಲಭಿಸುವ ವಾಡಿರುವ ರಿಗೆ ಅಥವಾ ಸಬ್ ಏಜಂಟ್ರಿಗೆ ದರಖಾಸ್ತು ಮಾಡಿಕೊಳ್ಳಬೇಕು

ಷೇರು ಫಾರವನ್ನು ಈ ಕೆಳಗೆ ರುಜು ಮಾಡಿರುವವರಿಗೆ, ಇವರಿಂದ ಲಿಖಿತ ಮೂಲಕ ಅಧಿಕಾರ ಪಡೆದಿರುವ ಸಬ್ ಏಜಂಟರಿಗೆ, ಬೆಂಗಳೂರು ಬ್ರಾಂಚ್ ಅರ್ಬತ್ ಬ್ಯಾಂಕಿಗೆ (ಈ ಕಂಪೆನಿಯ ಬ್ಯಾಂಕರ್ಸ್), ಅಥವಾ ಮೈಸೂರು ಪ್ರಾಂತ್ಯದ ತಾಲ್ಲೂಕು ಡಿಸ್ಟ್ರಿಕ್ಟ್ ಖಜಾನೆಗಳಿಗಾಗಲಿ ಪಾವತಿ ಮಾಡಬೇಕು.

(ಸ್ವ) ಬಿ ವಿ ರಾಮಸ್ವಾಮಿ ಚೆಟ್ಟಿ, ಬಿ. ಎ,
ಅಡ್ವೊಕೇಟ್, ಮತ್ತು ಬೆಂಗಳೂರು ಚಿಕ್ಕಬಳ್ಳಾಪುರ
ಲೈಟ್ ರೈಲ್ವೆ ಕಂಪೆನಿಯ ಚೀಫ್ ಏಜಂಟ್
ನಗರ್ತಪೇಟೆ, ಬೆಂಗಳೂರು ಸಿಟಿ

ಔಷಧಿ ತಕ್ಕೊಂಡು ಗುಣವಾಗುವದಕ್ಕಿಂತಲೂ
ತಕ್ಕ ಕ್ರಮದಲ್ಲಿರುವದು ಉತ್ತಮ.

SCOTT'S EMULSION.

57-46

(ಸ್ಕಾಟ್ಸ್ ಇಮಲ್‌ಷನ್)

ಶಕ್ತಿ ಶರೀರವುಳ್ಳವರಿಗೆ ಪ್ಲೇಗ್, ಮಹಾಮಾರಿರೋಗ, ವಾಂತಿ ಭೇದಿ ಅಥವಾ ಕ್ಷಯರೋಗದ ರೋಗಗಳ ಭಯಕ್ಕೆ ಒಳಪಡುವ ಅಗತ್ಯವಿಲ್ಲ

ರೋಗವು ಬಲಹೀನರನ್ನೂ ದುರ್ಬಲರನ್ನೂ ಬೇಗನೆ ತಗಲಿ ಹಿಡಿಯುತ್ತದೆ

ಅಸ್ವಸ್ಥವನ್ನು ದೂರ ಹೋಗಲಾಡಿಸಿ, ಶರೀರದಲ್ಲಿರುವ ಬಲಹೀನ ಭಾಗಗಳನ್ನು ಬಲಪಡಿಸಿ, ಸಂಪೂರ್ಣ ಸೌಖ್ಯವನ್ನು ಉಂಟುಮಾಡುತ್ತದೆ.

ಕೈಸೋಕದೆ ತಯಾರಾದದ್ದು.

ಎಲ್ಲಾ ಔಷಧ ವ್ಯಾಪಾರಗಾರರಲ್ಲೂ ಮಾರಾಟವಾಗುತ್ತದೆ.
ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,
ಔಷಧಗಳ ಕಾರ್ಖಾನೆ,
ಲಂಡನ್, ಇಂಗ್ಲೆಂಡ್.

ಈ ಮೀನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ.

ಬಿಳಗಿ ರಾಜವೈದ್ಯರ ಒಳ್ಳೆ ಖಾತ್ರಿಯಾದ ಔಷಧಗಳು.

64

ಸುಖದಾಯಿನೀ ಗುಳಿಗೆ—ಇದರಿಂದ ಕೆಮ್ಮಿನ ಬಾಧೆ ಬಹು ಬೇಗನೆ ಗುಣಹೊಂದುವದು. ೧೦ ವರುಷದ ಮೇಲಿನ ಯಾವ ಪ್ರಾಯದವರಾದರೂ ಸೇವಿಸಬಹುದು. ಕ್ರಯ ೨೪ ಗುಳಿಗೆಗೆ ೧ ರೂಪಾಯಿ ವಿ. ಪಿ ಚಾರ್ಜ್ ಆಣೆ ೪

ಚಿಕ್ಕಹುಡುಗರ ಬಾಲಗ್ರಹದ ಔಷಧ—ಜ್ವರಯುಕ್ತ ಅಥವಾ ಜ್ವರವಿಲ್ಲದೆ ಫಕ್ಕನೆ ಹುಟ್ಟುವ ಈ ಉಪಟಳಿಗೆ ಇದರಿಂದ ಬೇಗನೆ ಗುಣಹುಟ್ಟುವದು ಕ್ರಯ ೧ ಕುಪ್ಪಿಗೆ ೮ ಆಣೆ ವಿ ಪಿ ೪ ಆಣೆ

ಗಜಕರ್ಣದ ಮುಲಾಮು:—೨ ಯಾ ೩ ಆವರ್ತಿ ಇದನ್ನು ಹಚ್ಚುವದರಿಂದ ಎಂಥ ಕಠಿಣವಾದ ಗಜಕರ್ಣ (ಮಳಕಟ್ಟು) ಇದ್ದರೂ ಗುಣಹೊಂದುವದು. ಕ್ರಯ ೧ ಡಬ್ಬಿಗೆ ೮ ಆಣೆ. ವಿ. ಪಿ. ಚಾರ್ಜ್ ಆಣೆ ೪

ಶತಮೂಲಿಕಾ ತೈಲವು:—ಹಕೀಬೊಕ್ಕೆ ಹಕೀಕಜ್ಜಿ ತುರಿಗಜ್ಜಿ ವಣಗಜ್ಜಿ ಮುಂತಾದ ಆಬಾಲವೃದ್ಧರ ಚರ್ಮವ್ಯಾಧಿಯೂ ಗುಣಹೊಂದುವದು. ಕ್ರಯ ೧ ಔನ್ಸಿನ ಕುಪ್ಪಿಗೆ ೧೦ ಆಣೆ; ೨ ಔನ್ಸಿನ ಕುಪ್ಪಿಗೆ ೧ ರೂಪಾಯಿ. ವಿ ಪಿ. ೫ ಆಣೆ.

ವಾಯುಹಾರಕ ತೈಲವು:—ಇದನ್ನು ಲೇಪಿಸಿದ ೫ ನಿಮಿಷದೊಳಗೆ ಸಂಧಿವಾತ, ಕಟಿವಾತ, ವ ಇತರ ವಾಯುಗಳ ನೋವು, ತಲೆನೋವು, ಚಿಕ್ಕಹುಡುಗರ ಉಬ್ಬಸ, ಕೆಮ್ಮು ಕಡಿದ ಗುಣಹೊಂದುವದು ಕ್ರಯ ೧ ಕುಪ್ಪಿಗೆ ೧ ರೂಪಾಯಿ ವಿ. ಪಿ. ಚಾರ್ಜ್ ಆಣೆ ೪.

ಜ್ವರಗಸ್ತಿಗೆ ಸುಧಾಬಿಂದು.—ಹೊಟ್ಟೆಯೊಳಗೆ ಸೇವಿಸಲಿಕ್ಕೆ ಕ್ರಯ ೧ ಕುಪ್ಪಿಗೆ ೧೨ ಆಣೆ ವಿ. ಪಿ ಚಾರ್ಜ್ ಆಣೆ ೪.

ಜ್ವರಗಸ್ತೆಗೆ ಮುಲಾಮು:—ಬಾಹ್ಯಲೇಪನಕ್ಕೆ. ಕ್ರಯ ಡಬ್ಬಿ ೧ಕ್ಕೆ ೧ ರೂಪಾಯಿ ವಿ ಪಿ ಚಾರ್ಜ್ ಆಣೆ ೪

೧ನೇ ನಂಬರ ಶೀತಜ್ವರ ಬಿಲ್ಲೆಗಳಿಗೆ—ಆಬಾಲವೃದ್ಧರಿಗೆ ಹುಟ್ಟುವ ಪ್ರತಿನಿತ್ಯದ ಮತ್ತು ೩ನೆ ವ ೪ನೆ ದಿವಸದ ಪಾಳಿಯಾಗಿ ಹೊಡೆವ ಬರುವ ಶೀತಜ್ವರಕ್ಕೆ ಕ್ರಯ ೧ ಡಬ್ಬಿಗೆ ೧ ರೂಪಾಯಿ ವಿ ಪಿ ಚಾರ್ಜ್ ಆಣೆ ೪

೨ನೇ ನಂಬರದ ಶೀತಜ್ವರ ಬಿಲ್ಲೆಗಳಿಗೆ.—ಮೇಲೆ ವಿವರಿಸಿದಂಥ ಶೀತಜ್ವರಗಳು ಕಾಲಾವಧಿಯಾಗಿ ಮೈಯಲ್ಲಿ ವ್ಯಾಪಿಸಿಕೊಂಡು ಹಳೆ ತರಕ್ಕೆ ಬಿದ್ದು ಜಿರಾವಡಾದರೆ ಕ್ರಯ ೧ ಡಬ್ಬಿಗೆ ೧ ರೂಪಾಯಿ ವಿ ಪಿ ಚಾರ್ಜ್ ಆಣೆ ೪

ದಂತ ಶುದ್ಧಿಗೆ ಸುವಾಸಿಕ ಮಂಜನ—ಎಲ್ಲ ಪ್ರಕಾರದ ಹಲ್ಲಿನ ವೇದನೆಗಳ ಉಪಶಮನಕ್ಕೆ ಕ್ರಯ ೧ ಡಬ್ಬಿಗೆ ೮ ಆಣೆ ವಿ ಪಿ ೪ ಆಣೆ

ಪೀನಾಶಿಗೆ ಸುಧಾಚೂರ್ಣ:—ಮೂಗಿನ ಒಳಭಾಗದಲ್ಲಿ ಕ್ರಿಮಿ ಅಥವಾ ವ್ರಣವಾಗಿ ಅದರಿಂದ ದುರ್ವಾಸನೆಯೂ ರಕ್ತ ಅಥವಾ ನೀರಿನಂಥ ದ್ರವವು ಸ್ರವಿಸುವದಕ್ಕೆ. ಕ್ರಯ ೧ ಡಬ್ಬಿಗೆ ೧ ರೂಪಾಯಿ ವಿ ಪಿ ಚಾರ್ಜ್ ಆಣೆ ೪

ನಾನಾ ನವೋಗಳಿಗೆ ಸುಖಾಂಜನ:—ಹೊಸತಾಗಿ ಹುಟ್ಟಿದ ಅಥವಾ ಬಹುಕಾಲದಿಂದ ಇರ ಕ್ತಿದ್ದ ಕಣ್ಣಿನ ಎಲ್ಲಾ ಬಾಧೆಗಳು ಕಣ್ಣಿನಲ್ಲಿ ಕೆಂಪೇರುವಿಕೆ ಕಣ್ಣಿನಿಂದ ನೀರು ಪಿಸುರು ಬರುತ್ತಿರುವದು, ಬೆಳಕಿಗೆ ನೋಡಲಿಕ್ಕೆ ಆಗದೆ ಇರುವದು, ದೃಷ್ಟಿ ಮಾಂದ್ಯ, ಇತ್ಯಾದಿ ಎಲ್ಲ ಬಾಧೆಗಳೂ ಇದರಿಂದ ಬೇಗನೆ ಗುಣವಾಗುವದು ಕ್ರಯ ೧ ಕುಪ್ಪಿಗೆ ೧ ರೂಪಾಯಿ ವಿ ಪಿ. ಚಾರ್ಜ್ ಆಣೆ ೪.

ಕರ್ಣಸ್ರಾವಕ್ಕೆ ಔಷಧಿ ತೈಲವು—ಬಳ್ಳೆ ಮತ್ತು ಭರ್ತ ಪ್ರಾಯದವರ ಕಿವಿಯಿಂದ ರಕ್ತ ಕೀವು, ಅಥವಾ ನೀರಿನಂಥ ದ್ರವ ಹೊಸತಾಗಿ ಅಥವಾ ಬಹು ಕಾಲದಿಂದ ಸ್ರವಿಸುತ್ತಿದ್ದರೆ ಕಿವಿ ನೋವು, ಕಿವುಡು, ತುರಿಸುವಿಕೆಯೂ ಇರುತ್ತಿದ್ದರೆ ಇದರಿಂದ ಪೂರ್ಣ ಗುಣ ಹೊಂದುವದು ಕ್ರಯ ೧ ಕುಪ್ಪಿಗೆ ೧ ರೂಪಾಯಿ ವಿ ಪಿ ೪.

ಚಿಕ್ಕ ಮಕ್ಕಳ ವೈದ್ಯ ಪುಷ್ಟಿಗೆ ಬಾಲಸುಧಾರಸ.—ಚಿಕ್ಕ ಹುಡುಗರ ಅಕಸ್ಮಿಕ ಹಾಲಿನ ಅಥವಾ ಆಹಾರದ ವಾಂತಿ, ಅತಿಸಾರ, ಅನಿರ್ಮಲ ಮಲ ವಿಸರ್ಜನ ಅಸ್ತಿಗತಜ್ವರ, ಕೆಮ್ಮು ಇತ್ಯಾದಿ ಅನೇಕ ಉಪಟಳಿಗಳು ಗುಣವಾಗಿ ಮೈಯಲ್ಲಿ ರಕ್ತ ಮಾಂಸ ಅಸ್ತಿ ಇವುಗಳು ಬಲವಾಗಿ ಬೆಳೆದು ಚನ್ನಾಗಿ ಪುಷ್ಟಿಯಾಗುತ್ತಾರೆ. ಕ್ರಯ ೧ ಕುಪ್ಪಿಗೆ ೧ ರೂಪಾಯಿ. ವಿ ಪಿ ಚಾರ್ಜ್ ಆಣೆ ೬

ಸಕ್ಕರೆ ಪಾಕಳಕ್ಷಯ ವ ಕೆಮ್ಮು ಮುಂತಾದವುಗಳಿಗೆ:—ಶ್ವಾಸ ಕೋಶದ ಎಲ್ಲಾ ಉಪಟಳಿಗಳು ಅಂದರೆ ಹೊಸ ಮತ್ತು ಹಳೆ ತರ ಕೆಮ್ಮು ಹಳೆ ನೆಗಡಿ ಉಬ್ಬಸ ಕಫ ಕ್ಷಯ ಅಸ್ತಿಜ್ವರ ಅಶಕ್ತಿ ಕ್ಷಯವ್ಯಾಧಿಯಲ್ಲಿ ಹುಟ್ಟುವ ಬೆವರು ಇತ್ಯಾದಿ ಬೇಗನೆ ಗುಣಹೊಂದುವದು. ಕ್ರಯ ೧ ಕುಪ್ಪಿಗೆ ರೂ. ೧—೪ ಆ ವಿ ಪಿ ಚಾರ್ಜ್ ಆಣೆ ೯

ನಯನ ಸುಖಕ್ಕೆ ಸೌವೀರಾಂಜನವು (ಕಪ್ಪು ಸುರ್ಮ).—ದಿನ ಎಲ್ಲಿ ತಿರುಗಾಟ ಮಾಡುವದರಿಂದ ಬೆಂಕಿಯ ಶಕೆಯಲ್ಲಿ ಕೂಡ್ರುವ ರಿಂದ ರಾತ್ರಿಯಲ್ಲಿ ಜಾಗ್ರಣ ಮಾಡುವದರಿಂದ ಅಥವಾ ಹೆಚ್ಚು ಕಾಲ ಓದುವದರಿಂದ ಸಹಾ ಉಂಟಾಗುವ ಕಣ್ಣಿನ ಬಾಧೆಯು ಕೆಂಪೇರುವಿಕೆ ಉರಿ ನವೆ ಮುಂತಾದವು ಗುಣಹೊಂದಿ ಕಣ್ಣಿಗೆ ಸುಖವು ಪ್ರಾಪ್ತವಾಗುತ್ತದೆ ಕ್ರಯ ೧ ಡಬ್ಬಿಗೆ ೮ ಆಣೆ ವಿ ಪಿ ಚಾರ್ಜ್ ಡಬ್ಬಿ ೧ ರಿಂದ ೨ ಡಬ್ಬಿಗೆ ೪ ಆಣೆ

ವಾಂತಿಭೇದಿಗೆ ಮತ್ತು ಅತಿಸಾರಕ್ಕೆ ಕ್ಲೋರೋಡೈನ್—ಈ ಉಪದ್ರವಗಳಿಗೆ ಇದು ದಿವ್ಯ ಔಷಧವಾಗಿದೆ ವಿಶ್ವಾಸವುಳ್ಳ ಒಂದು ಕಂಪನಿಯಿಂದ ಇದನ್ನು ನಾವು ಸಂಗ್ರಹಿಸುತ್ತೇವೆ ಕ್ರಯ ೧ ಕುಪ್ಪಿಗೆ ೧೨ ಆಣೆ. ವಿ. ಪಿ ಚಾರ್ಜ್ ಆಣೆ ೪.

ಸೂಚನೆ.—ನಮ್ಮ ಔಷಧಗಳೊಳಗೆ ಅಪಾಯಕರವಾದ ಯಾವ ಜಿನಸಿನ ಮಿಶ್ರಣವೂ ಮಾಡಿಲ್ಲ. ಪ್ರತಿ ಒಂದು ಔಷಧಿಗೆ ಜೊತೆಯಲ್ಲಿ ಛಾಪೆಯ ಅನುಪಾನ ಪತ್ರವನ್ನು ಕಳುಹಿಸುತ್ತಿರುತ್ತೇವೆ. ಇನ್ನೂ ಅನೇಕ ಉತ್ತಮವಾದ ಔಷಧಗಳಿಗಾಗಿ ನಮ್ಮ ಕ್ಯಾಟಾಲಾಗು ತರಿಸಿಕೊಂಡು ಓದಿನೋಡಿ.

ನಮ್ಮ ಅಡ್ರೆಸು:—ಕರ್ನಾಟಕ ರಾಜ ವೈದ್ಯ ಮತ್ತು ಕಂಪನಿ, ಪೋಸ್ಟ ಬಿಳಗಿ, ಉತ್ತರ ಕನ್ನಡಾ ಜಿಲ್ಲಾ.
Post Bilgi, North Kanara District.

ಮೈಸೂರು ಸ್ಟೇಟಿನಲ್ಲಿ ಪ್ಲೇಗಿನ ಸ್ಥಿತಿ.

11—1—1907 ರಿಂದ 16—1—1907 ರ ವರೆಗೆ

ಸ್ಥಳ		ಪ್ಲೇಗ್ ತಗಲಿದ್ದು.	ಸತ್ತದ್ದು	ಹೋದ ಈ ವಾರ ಸಂ
ಬೆಂಗಳೂರು ಪಟ್ಟಣ		15	8	35
ಮೈಸೂರು	"	71	47	0
ಬೆಂಗಳೂರು ಡಿಸ್ಟ್ರಿಕ್ಟ್		49	26	11
ಮೈಸೂರು	"	11	7	8
ಕೋಲಾರ್	"	0	0	0
ಕೋಲಾರ್ ಚಿನ್ನದ ಗಣಿಗಳು		0	0	1
ತುಂಕೂರು ಡಿಸ್ಟ್ರಿಕ್ಟ್		3	3	0
ಹಾಸನ	"	17	14	0
ಚಿತ್ರದುರ್ಗ	"	0	0	4
ಕಡೂರ್	"	3	2	0
ಶಿವಮೊಗ್ಗ	"	2	1	25
	ಜುಮ್ಲಾ	188	98	78

ಶಾಲಿವಾಹನ ಶಕ ವರುಷಂಗಳು ೧೮೨೯ ನೇ ಪರಾಭವ ಸಂವತ್ಸರದ ಮಾಘ ಬಹುಳ ಬಿದಿಗೆ ಗುರುವಾರದಿಂದ ಮಾಘ ಬಹುಳ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ.

೧೯೦೭ ನೇ ಇಸವಿ ಫೆಬ್ರವರಿ.

ತಾ	ವಾರ		ತಿಥಿ.	ಘಳಿಗೆ.	ನಕ್ಷತ್ರ	ಘಳಿಗೆ.
31	ಗುರು		ಬಿದಿಗೆ	33 00	ಪು	39 29
1	ಶುಕ್ರ	*	ತದಿಗೆ	34 30	ಪು	41 24
2	ಶನಿ	:	ಚೌತಿ	33 38	ಉ	41 42
3	ರವಿ	,,	ಪಂಚಮಿ	31 30	ಹಸ್ತ	41 6
4	ಚಂದ್ರ	¶	ಷಷ್ಟಿ	28 26	ಚಿ	39-29
5	ಕುಜ	†	ಸಪ್ತಮಿ	24 20	ಸ್ವಾ	36-58
6	ಬುಧ	‡	ಅಷ್ಟಮಿ	19-36	ವಿ	33-43

* ಅಮೃತಯೋಗ, . ಉತ್ಪಾತಯೋಗ, ಸಂಕಷ್ಟ ಚತು
,, ಅಮೃತಸಿದ್ಧಿ ಯೋಗ ¶ ಗ್ರಾಹದಹನಯೋಗ, ಮಾರ್ತ
† ತಸಿ ಗ್ರಿಷ್ಟ ಕಾ ‡ ಮಹಾವ್ಯತಿಪಾತ, ತಿಥಿದ್ವಯಂ

ಪೇಟೇ ಧಾರಣೆ.

ದಿನಸಿ	ಮೈಸೂರು	ಬೆಂಗಳೂರು
ಸಣ್ಣ ಅಕ್ಕಿ ಪಲ್ಲ ೧ಕ್ಕೆ ರೂ.	೧೩-೮-೦	೧೩
ಕೆಂಬೂತಿ ಅಕ್ಕಿ ಅವಲ್	೧೨-೪-೦	೧೨
" ದುಯಂ	೧೨-೦-೦	೧೨
ಜಾವಾಗ್ರಹ ಅಕ್ಕಿ	೧೩-೬-೦	೧೩
ಸಣ್ಣಕ್ಕಿ ಅವಲ್	೧೫-೦-೦	೧೫
" ದುಯಂ	೧೪-೦-೦	೧೪
ತೊಗರೀ ಬೇಳೆ ಪಲ್ಲ ೧ಕ್ಕೆ	೧೧-೦-೦	೧೧
" ದುಯಂ	೧೦-೧೨-೦	೧೦
ಸ್ವರ್ಣವಾಗಿ ಪಲ್ಲ ೧ಕ್ಕೆ	೭-೪-೦	೭
ಕಾರ್ದಾಗಿ	೬-೦-೦	೬
ಜೋಳ	೫-೮-೦	೮
ಹಲಸಂದೆ ಪಲ್ಲ ೧ಕ್ಕೆ	೧೧-೧೨-೦	೯-೦
ಬಿಳೀ ಅವರೆ	೯-೪-೦	೯-೦
ಹೆಸರು	೧೧-೮-೦	೯
ಉದ್ದು	೧೨-೦-೦	೧೦
ಕಡಲೆ	೧೦-೮-೦	೯-೦
ಎಳ್ಳು ಸೇರು ೧೨ಕ್ಕೆ	೧೩-೦-೦	೧೬
ಹುರುಳಿ	೩-೬-೦	೮
ಹರಳು ೧೨ ಸೇರಿಗೆ	೧೯-೦-೦	೧೨
ಸೀಗೇಕಾಯಿ ಮಣ ೧ಕ್ಕೆ	೨೦-೨-೦	೧೦
ಮೆಣಸಿನಕಾಯಿ	೩-೪-೦	೨
" ದುಯಂ	೩-೧-೦	೨
ಬೆಲ್ಲ ದೊಡ್ಡ ಅಚ್ಚು	೪-೪-೦	ಮ ೦-೦
ಒಳ್ಳೆಣ್ಣೆ ಮಣ ೧ಕ್ಕೆ	೪-೮-೦	೫
ಹರಳೆಣ್ಣೆ "	೬-೧೨-೦	೫
ಕೊತ್ತುಂಬರಿ ಪಲ್ಲ ೧ಕ್ಕೆ	೯-೦-೦	೭-೦
ಉಪ್ಪು "	೫-೧೧-೦	೭
ಹುಣಸೇ ಹಣ್ಣು	೦-೧೨-೦	೦-೦
" ಹಳೇದು	೦-೮-೦	೦-೦
ತುಪ್ಪ ಮಣ ೧ಕ್ಕೆ	೧೬-೦-೦	೧೪
ಸೀಮೆಯೆಂಣೆ ಪೆಟ್ಟಿಗೆ ೧ಕ್ಕೆ	೫-೪-೦	೪
ತೆಂಗಿನಕಾಯಿ ೧೦೦ಕ್ಕೆ	೬-೮-೦	೭
ಅಡಿಕೆಕಾಯಿ ಮಣ ೧ಕ್ಕೆ	೧-೦-೦	೦
ಅಂಟ್ವಾಳದ ಕಾಯಿ ಮಣ ೧ಕ್ಕೆ	೦-೧೨-೦	೦-೦
ಚಿನ್ನ (ಪೌನ್) ಕೆಂಪು	೧೫-೪-೦	೧೫
" " ಪಸಿಮೆ	೧೫-೧೦-೦	೧೫
" " ಗಟ್ಟಿ ತೊಲ ೧ಕ್ಕೆ	೨೩-೧೨-೦	೨೩
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ	೮೫-೦-೦	೮೫

Printed and published by the Rev. E. THOMPSON, M.A., the Proprietor and Manager, Wesleyan Mission Press, Mysore. 31/1/1907.

REGISTERED
M. 20

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು

ಸಂಪುಟ ೨೦ | ಮೈಸೂರು—ಸರ್ ೧೯೦೭ ನೇ ಇಸವಿ ಫೆಬ್ರವರಿ ತಾರೀಖು ೭ ನೇ ಗುರುವಾರ. | ಸಂಚಿಕೆ ೩೬

ಬೇಕಾಗಿದೆ.

1038

ಇಂಗ್ಲಿಷ್ ಮತ್ತು ಕನ್ನಡ ಅಕ್ಷರ ಜೋಡಿಸುವವರು (ಕಂಪಾಜಿಟರುಗಳು) ಬೇಕಾಗಿದೆ ಚನ್ನಾಗಿ ಕಲಿತಿರುವವರು ಮಾತ್ರ ಖುದ್ದಾಗಿ ಬಂದು ಮಾತನಾಡಬಹುದು

ಮ್ಯಾನೇಜರ್, ಮಿರ್ಷ ಪ್ರೆಸ್, ಮೈಸೂರು

ಯಜ್ಞ ಕೆಂಪು ಮತ್ತು ತಾಜಾ ಅಚ್ಚು

ಹಾಸನ ಪೂಲ ದಾರ.

125 13

೩,೦೦೦ ಹಾಸನದ ಟೋಪಿ ಹೊಲಿಯುವ

ಸುಪೀರಿಯರ್ ಪೂಲನ್ ದಾರ ಮಾತ್ರ

	ರೂ	ಆ	ಪೈ
ಟೋಪಿ ಹೊಲಿವ ಪೂಲನ್ ದಾರದ ಕ್ರಯ	೦	೪	೦
ಟೋಪಿ ಹೊಲಿವ ಬಂದು ಬಂಡಲ್ ದಾರದ ಕ್ರಯ ೩	೧೩	೦
ಟೋಪಿ ಹೊಲಿಯುವ ಕೋಷ್ಟೆ ಸೂಜಿಗಳಿಗೆ	೦	೧	೯
ದವಡೆಗಳಲ್ಲಿ ಆದ ಟೋಪಿ ದರ್ಜ ಒಂದಕ್ಕೆ	೧೩	೩	೦

ವಿ ಪಿ ಯಿಂದಲೂ ರವಾನಿಸುತ್ತೇವೆ

ವಿಳಾಸ— ಸಿ ರಘುನಾಥ ಕಾಮತ್,
ಪೂಲನ್ ಮರ್ಚಂಟ್,
ಬೋಳಾರ, ಮಂಗಳೂರು

ವೃತ್ತಾಂತ ಪತ್ರಿಕೆಯ ಪಂಚಾಂಗವು.

ಸಿದ್ಧವಾಗಿದ. ಕ್ರಯ ಒಂದಾಣೆ

೧೯೦೭ನೆ ವರ್ಷದ ಕ್ಯಾಲೆಂಡರು. ದೊಡ್ಡ ಸೈಜು ಇದರಲ್ಲಿ ನಮ್ಮ ಮಹಾರಾಜರವರ ಉತ್ಕೃಷ್ಟವಾದ ಫೋಟೋ, ದಿವಾನರವರ ಮತ್ತು ಶ್ರೀ ಶಿಕ್ಷರ ಫೋಟೋಗಳ ಬಹಳ ಸೊಗಸಾಗಿವೆ ಇದುವರೆಗೆ ಈ ಚಿತ್ರಗಳು ಕ್ಯಾಲೆಂಡರಲ್ಲಿ ಯಾರೂ ನೋಡಿರಲಾರರು.

ಚಂದಾದಾರರಿಗೆ ಸೂಚನೆ—ಇದೇ ಫೆಬ್ರವರಿ ಆಖೈರಿನೊಳಗಾಗಿ ವೃತ್ತಾಂತ ಪತ್ರಿಕೆಗೆ ಒಂದು ವರುಷದ ಚಂದಾ ಅಡ್ವಾನ್ಸು ಕಟ್ಟುವವರಿಗೆಲ್ಲಾ ಒಂದೊಂದು ಕ್ಯಾಲೆಂಡರನ್ನು ಪುಗಸಟ್ಟೆ ಕೊಡುವೆವು ಆರ ಬಳಿಕ ಪುಗಸಟ್ಟೆ ಕೊಡುವದಿಲ್ಲ

ಎಚ್ಚರಿಕೆ—ಬಹಳ ಕೊಂಚ ಪ್ರತಿಗಳನ್ನು ಮಾತ್ರ ಪ್ರಿಂಟು ಮಾಡಿದೇವೆ ಕೂಡ್ಲೆ ಚಂದಾಸಹಿತ ಬರೆಯಿರಿ. ವಿಳಾಸ.—

ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

The Place for Hassan Caps is Hassan.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

112

ಈ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಈ ಕಸಬುಗಳು ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದ ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾರಾಟ ಬಿಕರಿಯಾಗುತ್ತಿರುವ ಟೋಪಿಗಳನ್ನು ಬೇಡವೆಂದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುತ್ತಾರೆ.

ಆದರೆ ಇಲ್ಲಿ ನೋಡಿ—(೧) ನಮ್ಮಲ್ಲಿ ತಯಾರಾಗುವ ಟೋಪಿಗಳೆಲ್ಲಾ ನೆಟ್ಟಗೆ ವಿಲಾಯಿತಿಯಿಂದಲೇ ಬರುವವು (೨) ಅವುಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಟೋಪಿಹಾಕುವವರಿಗೆ ಒಳ್ಳೆ ಚನ್ನಾಗಿರುವವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಕೆಲಸದ, ಬಹಳ ಬಾಳಿಕೆ ಬರುವ ಟೋಪಿ ಬೇಕಾದರೆ ನಮಗೆ ಸೀದಾ ಬರೆದು ತರಿಸಿಕೊಳ್ಳಿ ಅಗ್ಗಂ ಆದ ಚನ್ನಾಗಿಲ್ಲದ ಟೋಪಿ ಬೇಕಾದರೆ, ನಮ್ಮಲ್ಲಿ ತಯಾರಿಸುವದಿಲ್ಲ

ರೇಷ್ಮೆ ಕಪ್ಪು ಸಿಲ್ಕಿ ಕ್ಯಾಪ್ ಟೋಪಿಗಳು ೧ ರೂ ೪ ಆ, ೧ ರೂ ೩ ಆ

ಕಪ್ಪುಉಣ್ಣೆ ಟೋಪಿಗಳು ೧ ರೂ ೪ ಆ, ೨ ರೂ

ಪಟ್ಟೆ ಟೋಪಿಗಳು ೧ ರೂ ೧೨ ಆ ೧ ರೂ ೪ ಆ, ೧ ರೂ ೩ ಆ

ಚಿತ್ರ ಟೋಪಿಗಳು ೧ ರೂ ೪ ಆ ೧ ರೂ ೩ ಆ

ಹಾಸನದ ಟೋಪಿ, ಸೂಫಿರ್ ಮರ್ಚೆಂಟ್, ಆರ್ಡರ್ ಮೇಜರ್ ಮೊದಲು ಕಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳಿದವರಿಗೆ ಕೊಟ್ಟು ಕಳುಹಿಸುವೆವು

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ

ಕೊಡಗು ದೇಶದ ಶ್ರೇಷ್ಠವಾದ ಉತ್ಕೃಷ್ಟ ಕಾಫಿಯು

ಹುರಿಯದೆ ಇರುವದು ಅಥವಾ ಆಗತಾನೆ ಹುರಿದದ್ದು.

ಉದಯಮಾಡಿದ ಸ್ಥಳದಿಂದಲೆ ನೆಟ್ಟಗೆ ರವಾನಿಸಲ್ಪಡುವದು.

36 52

ವ್ಯಾಪಾರದ ಹೆಗ್ಗುರ್ತು

ಕಾಡುಕೋಣದ ತಲೆಯ ಮುದ್ರೆ ಇದೆ.

ಸಂಪೂರ್ಣವಾಗಿ ಯಂತ್ರನಿಂದಲೆ ಸಿದ್ಧಪಡಿಸಿದ್ದು ಹೆಗ್ಗುರ್ತು ಇಲ್ಲದ ವಿಲಾಸದ ಚೀಟಿ ಸುತ್ತಿಲ್ಲದಿರುವವು ಸ್ವಚ್ಛವಾದವುಗಳಲ್ಲ ಅವು ನಮ್ಮದಲ್ಲ. ಏಜಂಟರುಗಳು ಬೇಕು, ಇಂಥವರಿಗೆ ಅಲಾಯಿದ ದರ ಬರೆಯುವವರು ದಯವಿಟ್ಟು ಈ ಪತ್ರಿಕೆಯ ಹೆಸರನ್ನು ಸೂಚಿಸಿ.

ವಿಳಾಸ.—ಮ್ಯಾನೇಜರ್, ಮ್ಯಾಫಿಸರ್ಸ್

ಕಾಫಿ ವರ್ಕ್ಸ್, ಹುಣಸೂರು.

ಜ್ವರಹರಿ

151

ಇದು ಸಾಧಾರಣ ಜ್ವರ, ಚಳಿಜ್ವರ, ಘೋರಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮುರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್ ಟಿ ವೆಂಕಟಪತಿ ಅಯ್ಯಂಗಾರರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಡೋಸಿನ ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚನ್ನಾಗಿ ಗುಣ ಹೊಂದಿರುವರು ಇನ್ನೂ ಜನಗಳು ಕಾಯಿಲೆ ಬೀಳುತ್ತಿರುವ ದರಿಂದ ದಯವಿಟ್ಟು ಇನ್ನೊಂದು ೨೦ ಡೋಸಿನ ಸೀಸೆಯನ್ನು ವಿ ಪಿ ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ

ಕ್ರಯ—ಸೀಸೆ ೧ ಕ್ಕೆ ೮ ಆಣೆ, ೧ ರೂ, ೧—೪ ರೂ; ೩—೧೨ ಆ., ೧೦ ರೂ, ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

****

ಓಮುಂಕರ್ಪೂರ.

OmumCarpoor
TRADE MARK

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಕಳ್ಳ ನೋವು, ವಾಂತಿಭೇದಿ, ನಾನಾರದ ಹೊಟ್ಟೆನೋವುಗಳು—ಮುಂತಾದವುಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಕೆಂಗಸರು ತಿಂಗಳ ಬಂದಾಗಲೆ ಹೊಟ್ಟೆಗೆ ಆಗುವ ವ್ಯಾಕುಲತೆ ನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ಸಿಗುತ್ತವೆ.

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆನ್ರಿಯ ಓಮುಂ ಕರ್ಪೂರವನ್ನು ನಾನೂನನ್ನ ಕಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಷ್ಠರಿಗೆ ಕೊಡುತ್ತೇವೆ ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧ ಎಂತ ಬರೆದಿದಾರೆ

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ ದೊಡ್ಡ ಅಂಗಡಿಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ ಇದಲ್ಲದೆ ಕೆಳಗಿನ ವಿಳಾಸದಲ್ಲಿ ವಿಶೇಷ—

ಹೆನ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ

ಕೆಳೆಂಡ್ ಸ್ಟ್ರೀಟ್, ಮದ್ರಾಸ್

ಮುಂಬಯಿ ವ್ಯಾಪಾರಮಾಡಲಿಚ್ಛಿಸುವವರು.

85-36

ಮುಂಬಯಿಯಲ್ಲಿ ಪ್ರತಿಯೊಂದು ಮಾಲಿನ ತೂಕ ಅಳತೆ ಮತ್ತು ಮಾಲಿನ ವರ್ಣನೆ ಹಾಗೂ ಅನೇಕ ಉಪಯುಕ್ತ ಮಾಹಿತಿಯಿರುವ ಕನ್ನಡ ಪುಸ್ತಕ—ಕ್ರಯ ೧೦ ಆಣೆ ವಿ ಪಿ ಯಿಂದ ಕಳುಹಿಸುವೆವು ಟಪಾಲು ಖರ್ಚು ಬೇರೆ ಬುಕ್ಕು ಸೇಲರರಿಗೆ ಯೋಗ್ಯ ಕಮಿಷನ್ ದೊರೆಯುವದು ಮತ್ತು ಲಿಂಗಾಯಿತ ಧರ್ಮಸಂಬಂಧ ವೀರಶೈವೋತ್ಪತ್ತಿ ಕ್ರಿಯಾಲಕ್ಷಣವೆಂಬುವ ಕನ್ನಡ ಪುಸ್ತಕ—ನಾಲ್ಕು ಆಣೆ ಚಲೋ ಅಕ್ಷರದಿಂದ ಬರೆಯುರಿ ಪತ್ತಾ ಚನ್ನಬಸಪ್ಪ ಮಲ್ಲಪ್ಪ ವಾರದ, ಪೋಸ್ಟು ಮಾಂಡ್ವಿ, ಮುಂಬಯಿ

ಬಾಲಶಿಕ್ಷೆ ೧ನೇ ಭಾಗ!

ಬಾಲಶಿಕ್ಷೆ ೧ನೇ ಭಾಗ!!

ಬಾಲಶಿಕ್ಷೆ ೧ನೇ ಭಾಗ!!!

74

ಬೇಗ ತರಿಸಿಕೊಳ್ಳಿ.

ಕ್ರಯ ೧ ಆಣೆ ವಿ. ಪಿ. ಮೂಲಕ ಮೂರು ಆಣೆಗಳು

ನೂರು ಪ್ರತಿಗಳಿಗೆ ಹನ್ನೆರಡು ಪ್ರತಿಗಳು ಕಮಿಷನ್

ವಿಳಾಸ:—ಮ್ಯಾನೇಜರ್, ಸಿ. ಎಲ್. ಎಸ್.

ಬುಕ್ ಡಿಪೋ, ಮೈಸೂರು

ಮಾಡಲ್ ಪಾಕೆಟ್ ಡೈರಿಗಳು! ಮಾಡಲ್ ಪಾಕೆಟ್ ಡೈರಿಗಳು!!

93

ನಾವು ಮಾರುತ್ತಿದ್ದ ಪ್ರಸಿದ್ಧವಾದ ಮಾಡಲ್ ಪಾಕೆಟ್ ಡೈರಿಗಳಲ್ಲಿ ಒಂದನೇ (ನಾಲ್ಕಾಣೆಯದು), ಎರಡನೇ (ಆರಾಣೆಯದು), ಮತ್ತು ನಾಲ್ಕನೇ (ಎಂಟು ಆಣೆಯದು) ನಂಬರುಗಳ ಡೈರಿಗಳು ಸಂಪೂರ್ಣವಾಗಿ ಮುಗಿದುಹೋಗಿರುವದರಿಂದ ನಮ್ಮನ್ನು ಬಹು ಉದಾರವಾದ ದಯೆಯಿಂದ ಪ್ರೋತ್ಸಾಹಪಡಿಸಿದ ನಮ್ಮ ಅನೇಕ ಸಹಸ್ರ ಮಿತ್ರರಿಗೆ ಮೇಲ್ಕಂಡ ನಂಬರುಗಳ ೧೯೦೭ ನೇ ವರುಷದ ಡೈರಿಗಳು ದೊರೆಯಲಾರವೆಂದು ಈಗ ವಿನಯವಾಗಿ ಕೃತಜ್ಞರಾಗುತ್ತೇವೆ ನಮ್ಮಲ್ಲಿ ಮೂರನೇ ನಂಬರಿನ ದೊಡ್ಡ ಸೈಜಿನ ಡೈರಿಯು ಕೆಲವು ಪ್ರತಿಗಳು ಮಾತ್ರ ಉಳಿದಿವೆ ಇದರ ಕ್ರಯ ಆರು ಆಣೆ. ವಿ ಪಿ ಮೂಲಕ ತರಿಸಿದರೆ ಒಂಭತ್ತು ಆಣೆ ಬೀಳುವದು. ಜಾಗ್ರತೆ ನೋಡಿ ತರಿಸಿ!

ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

ಅಥವಾ

ನತ್‌ಮಲ್ ಅಂಡ್ ಕಂಪನಿ, ದೊಡ್ಡಪೇಟೆ, ಮೈಸೂರು.

ಉತ್ತಮವಾದ ಸಿದ್ಧೌಷಧಗಳು

16

ಆಪರ್ಣಯಿಂದಲೂ ಬಂದ ನಮ್ಮ ಔಷಧಿಗಳು ಅನೇಕಾಂತರ ರೋಗಿಗಳಿಗೆ ಉಪಯೋಗಿಸಿ ಗುಣ ಕಂಡುಬಂದವುಗಳಾಗಿವೆ. ಅವುಗಳೆಲ್ಲಾ ಮೂಲಿಕೆಗಳಿಂದ ತಯಾರಾಗಿರುತ್ತೆ ತಿಂಗಳಿಂದಕ್ಕೆ ಅನೇಕರು ಔಷಧಿ ಸೇವಿಸುತ್ತಲೂ ಇರುವ ಸಂಗತಿ ಎಲ್ಲರಿಗೂ ಗೊತ್ತಿದೆ



(೧) ಸಂಜೀವಿನಿ ತೈಲ ಸರ್ವಸ್ತ್ರ ಮಹಾರೋಗಗಳಿಗೂ ಕಾಲು ಸೀಸೆಗೆ ೦-೪-೦

(೨) ಬೃಂಗರಾಜ ತೈಲ ಎಲ್ಲಾ ವಿಧದ ಶಿರೋರೋಗಗಳಿಗೆ ಕಾಲು ಸೀಸೆಗೆ ೦-೧೦-೦ (೩) ಭೇದಿ ಎಷ್ಟು ಸುಖಪ್ರದವಾಗಿಯಾಗುವುದು ಕಾಲು ಸೀಸೆಗೆ ೦-೧೦-೦ (೪) ಮಹಾಲಕ್ಷ್ಮೀ ದಾತುಶಕ್ತಿಯನ್ನುಂಟುಮಾಡಿ ಪುಷ್ಟಿ ಮಾಡುತ್ತೆ ಸೇರಿಗೆ ೨-೦-೦ (೫) ಸೌಭಾಗ್ಯ ಶ ಕರಾಮೃತ ಲೇಹ ಇದರ ಸೇವನೆಯಿಂದ ಬಾಣಂತಿಸನ್ನಿ ಕ್ಷಯ ಮೊದಲಾದ ರೋಗಗಳನ್ನು ಪರಿಹರಿಸುತ್ತೆ ಸೇರಿಗೆ ೨-೦-೦ ಹುಚ್ಚು ನಾಯಿ ಕೊಳಕ ಮಂಡಲ ಹಾವುಗಳಿಂದುಂಟಾದ ಪ್ರಬಲ ರೋಗಿಗಳಿಗೆ ಚಿಕಿತ್ಸೆಯು ದೊರೆಯುವದು

ನಮ್ಮ ಕ್ಯಾಟಲಾಗು ತರಿಸಿ ನೋಡಿ—ಪಂಡಿತ ಕೃಷ್ಣಾಜೆಟ್ಟಪ್ಪ, ನಿಖಿಲ ರೋಗಾಪಹರಿ ವೈದ್ಯಶಾಲಾ, ದೊಡ್ಡಪೇಟೆ, ಮೈಸೂರು

CHAMBERLAIN'S PAIN BALM
ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವು



46

ಬೆನ್ನೆಲುಬಿನಲ್ಲಿನ ನೋವು, ಪಕ್ಕೆಗಳಲ್ಲಿ ಆಗುವ ನೋವು, ಖಂಡಗಳಲ್ಲಿ ಹುಟ್ಟುವ ನೋವು, ತಲೆನೋವು, ಜಜ್ಜಿದ ಕಡೆಗಳ ನೋವು, ವಾಯುನೋವು—ಇವುಗಳನ್ನೆಲ್ಲಾ ಸಂಪೂರ್ಣವಾಗಿ ವಾಸಿಮಾಡುವಂಥಾ ಔಷಧ

ವಾಯುನೋವೆಂದರೇನು?

ಕೀಲುಗಳಲ್ಲೂ ಮಾಂಸಖಂಡಗಳಲ್ಲೂ ಗಾಯವಾಗುವುದು, ಊದಿಕೊಳ್ಳುವುದು, ಕ್ಷಣವಾಗಿ ಕಳೆಯುವ ಬಾಧೆ ಖಂಡಗಳಲ್ಲಿ ಇರಿಯುವುದು, ವಿಶ್ರಾಂತಿಕೊಡದೆ ಇರುವುದು, ನಿದ್ರೆ ಹತ್ತದೆ ಇರುವುದು—ಇದೇ ಇದೆಲ್ಲಾ ನಿಮಗೆ ಯಾವಾಗ ಉಂಟಾಗುವುದೋ ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು

ಆಗ ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹಾ ಶಾಖವು ಮೂಳೆಯೊಳಕ್ಕೆ ವ್ಯಾಪಿಸುತ್ತದೆ ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ ಮನಸ್ಸಿಗೆ ಉಲ್ಲಾಸವಾಗುತ್ತದೆ ಅದನ್ನೇ ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯುವಿನ ಹುಟ್ಟನ್ನೇ ಕಿತ್ತುಹಾಕಿಬಿಡುವುದು

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಮುಟ್ಟಿದ್ದೇನೂ ಅಲ್ಲ

ಇದು ಎಲ್ಲೆಲ್ಲೂ ವಿಕರಿಯಾಗುವುದು | ಸಣ್ಣ ಸೀಸೆಗೆ ೧ ರೂಪಾಯಿ | ದೊಡ್ಡ ಸೀಸೆಗೆ ೨ ರೂಪಾಯಿ



ದಿ ಸಿಟಿ ಸಿಲ್ವರ್ ವಾಚ್.

132

(ಚಿತ್ರದಲ್ಲಿ ಕಂಡದ್ದು.)

ಸ್ಟೇಮ್ ಕೀಲಿ, ಮ ಕ್ಯಾಲು ಪ್ಲೇಟ್ ಜೂಯಲ್ ಚಲನೆ, ಹಾಲ್‌ಮಾರ್ಕ್ ಉಳ್ಳ ಬೆಳ್ಳಿ ಆಲ್ಬರ್ಟ್ ಸರಪಣಿ ಮತ್ತು ಸೀಲ್ ಸಹಿತ ಸಂಪೂರ್ಣ ದಮಾಸ್ ಪೆಟ್ಟಿಗೆಯಲ್ಲಿ ರುವುದು ಕ್ರಯ (ಹಿಂದ ಸ್ಥಾನದ ಅಂಚೆ ವೆಚ್ಚ ಸೇರಿ) ರೂ ೧೩ ೧೪-೦

ಮೇಲಾದ ಬೆಳ್ಳಿ ಗಡಿಯಾರಗಳು ಮುಚ್ಚಳವಿಲ್ಲದ್ದು ಕೀಲಿ ತಿರಿಗಿಸುವುದು ಕೀಲಿ ಇಲ್ಲದ್ದು ಕ್ರಯ ರೂ ೯-೬, ರೂ ೧೧ ೧೦, ೧೬-೮, ರೂ ೨೨ ೮

ಬಲವಾದ ಬೆಳ್ಳಿ ಅರ್ಧ ಹಂಟರ್ ಗಡಿಯಾರಗಳು —ಕ್ರಯ ೧೫, ರೂ ೧೯ ೧೪ ರೂ ೨೩ ೪, ರೂ ೨೯ ೧೪

ಬಲವಾದ ಪುರಾ ಹಂಟರ್ ಗಡಿಯಾರಗಳ —ರೂ ೧೩-೮ ರೂ ೧೫ ರೂ ೧೬ ೯ ೧೯ ೨ ರೂ ೨೩ ೧೧

ಪಾಪ್ಯುಲರ್ ನಿಕ್ಕಲ್ ಗಡಿಯಾರಗಳು ಸ್ವಲ್ಪ ಸ ತ್ತ್ವಳ್ಳವು, ಕೀಲಿ ಇಲ್ಲ ಲಿವರ್ ಚಲನೆ ಸುಂದರವಾದ ಬಿಳ್ಳಿ ನಮೂನೆ ಮುಚ್ಚಳ ನಂಬಿಕೆಯಾದ ಗಂಟೆ ತೋರಿಸುವದ, ಕ್ರಯ ರೂ ೪ ೮ ರೂ ೫ ೪, ರೂ ೬

ಬಳಕೆ ತೆಳ್ಳ ದ ಚಪ್ಪಟೆಯಾಗಿರ ವ ಗಡಿಯಾರಗಳು — (೧) ಕಪ್ಪು ಉಕ್ಕಿನವ ಚ್ಚಳ ಉಳ್ಳವು ಕ್ರಯ ರೂ ೧೦ ೮, ರೂ ೬ (೨) ಬೆಳ್ಳಿಯ ಮುಚ್ಚಳ ಉಳ್ಳವು ಕ್ರಯ ರೂ ೧೪ ೧೦ ರೂ ೨೧

ಬೆಳ್ಳಿ ಆಲ್ಬರ್ಟ್ ಸರಪಣಿಗಳು ಕ್ರಯ ರೂ ೩ ೧೫, ರೂ ೪ ೮, ರೂ ೫ ೧೩, ರೂ ೭ ೧ ರೂ ೮-೧೦

ಚಿನ್ನ ತಂಬಿದ ಸರಪಣಿಗಳು ಕ್ರಯ ರೂ ೬-೬, ರೂ ೮ ೧, ರೂ ೯ ೩

ಈ ಕ್ರಯದಲ್ಲ ಹಿಂದಸ್ಥಾನದ ಅಂಚೆ ಹಾಸಲ ಸೇರಿದೆ

ಎಂಟು ದಿನಕ್ಕೊಮ್ಮೆ ಕೀಲಿ ತಿರಿಗಿಸುವಂಥಾ ವಾಚುಗಳೂ, ಇನ್ನೂ ಎಲ್ಲಾತರದ ತಯಾರಿ ಮತ್ತು ಚಿತ್ರಕೆಲಸ ಮಾಡಿದ ವಾಚುಗಳೂ, ವಿಲಾಯತಿಯಲ್ಲಿ ತಯಾರಾಗಲ್ಪಡುವಂಥಾ ಸಕಲ ವಿಧವಾದ ಸಾಮಾನುಗಳೂ ಜವಾಹರಿ ನಗಗಳೂ ಕೇಳಿದವರಿಗೆಲ್ಲಾ ಕಳುಹಿಸಿಕೊಡುತ್ತೇವೆ

ನಗದು ಹಣ ಕಟ್ಟಿ ಇಂಗ್ಲೀಷಿನಲ್ಲೇ ನಮಗೆ ಬರೆಯಬೇಕು.

ವಿಳಾಸ —Messrs Bude and Fastland, 29 to 35 City Road, London E C

ಯನ್ನ ನೀಟವಾಗಿ ಎಳೆಯ ಬೇಕೇ ಹೊರತು ಅಡ್ಡವಾ ಎಳೆಯಕೂಡದು

೨ ಸನ್ ೧೯೦೭ ನೇ ಇಸವಿ ಜನವರಿ ೧ ರ ಲಾಗಾಯತ ಗಿಯಾಗಿ ತಯಾರ ಮಾಡಿದ ಕಾರ್ಡುಗಳ ಮೇಲೆ ವಿಲಾಸಿಯ ವಿ ಕಾ ಪೋಸ್ಟೇಜು ಸ್ಟಾಂಪು ಮತ್ತು ಸ್ಟಾಂಪುಗಳಿಗೂ, ಮತ್ತು ಟಪ್ಪಾಲಾಫೀಸಿನ ಆಫೀಸು ಮುದ್ರೆಗೂ ಸಹ ಅದರ ಬಲಗಡೆ ಕನಿಷ್ಠ ಅರ್ಧಾಂಶವನ್ನು ಪ್ರತ್ಯೇಕ ವಿಂಗಡಿಸದಿದ್ದರೆ ಅಂಥಾ ಕಾರ್ಡುಗಳು ಟಪ್ಪಾಲು ಕಾರ್ಡುಗಳಂತೆ ಎಣಿಸಲ್ಪಡಲಿಕ್ಕಿಲ್ಲಾ ಹಾಗೆ ಬಿಟ್ಟ ಅರ್ಧಾಂಶದಲ್ಲಿ ಏನೂ ಬರೆದಿರಕೂಡದು ಮತ್ತು ಅಚ್ಚು ಮುದ್ರೆ ಮೊದಲಾದವುಗಳನ್ನು ಸಹ ಹಾಕಿರಕೂಡದು. ಇಂಡಿಯನ್ ಪೋಸ್ಟಲ್ ಗೈಡಿನ ೫೫ ನೇ ಪ್ರಕರಣದಲ್ಲಿ ತೋರುವ ಶರತ್ತುಗಳಿಗೊಳಪಡದ ಕಾರ್ಡುಗಳು ಕಾಗದದಂತೆ ಎಣಿಸಲ್ಪಟ್ಟು ಅದೇ ಮೇರೆಗೆ ಚಾರ್ಜು ವಿಧಿಸಲ್ಪಡುವುದು

ಈ ಕಟ್ಟಳೆಗೆ ವಿರೋಧವಾಗಿ ಪ್ರಿಂಟು ಮಾಡಿರುವ ಕಾರ್ಡುಗಳನ್ನು ನಮ್ಮ ಚಂದಾದಾರರು ಮೊದಲಾದವರು ವಿಶೇಷವಾಗಿ ಕಾಗದಗಳನ್ನು ನಡಿಸುವದರಿಂದ ನಮಗೆ ನಷ್ಟವಾಗುತ್ತಿರುವುದರಿಂದ ಪ ಕರ ಮೇಲ್ಕಂಡ ಕಟ್ಟಳೆಗನುಸಾರವಾಗಿ ಬರೆಯುವ ಕಾರ್ಡು ಲ್ಲೇ ಬರೆಯಬೇಕೆಂದು ಕೇಳಿಕೊಳ್ಳುತ್ತೇವೆ — ಎಡಿಟರ್

ವೃತ್ತಾಂತ ಪತ್ರಿಕೆ

— o —

ಸನ್ ೧೯೦೭ ನೇ ಇಸವಿ ಫೆಬ್ರುವರಿ ತಾ॥ ೭ನೇ ಗುರುವಾರ

ಶ್ರೀಮನ್ಮಹಾರಾಜರವರಿಗೆ ನಡಸಿದ ಸತ್ಕಾರವು

ನಮ್ಮ ಮಹಾರಾಜರವರಿಗೆ ಬ್ರಿಟಿಷ್ ಸರ್ಕಾರದವರು ಜಿ ಸಿ ಎಸ್ ಐ ಎಂಬ ಘನವಾದ ಬಿರುದನ್ನು ದಯಪಾಲಿಸಿದ್ದರ ಸಂತೋಷವನ್ನು ಸೂಚಿಸುವದಕ್ಕಾಗಿ ಬೆಂಗಳೂರಿನಲ್ಲಿ ವಾಸವಾಗಿರುವ ಕೇವಲ ರಾಜಭಕ್ತಿಯುತರಾದ ರಾವ್ ಬಹದೂರ್ ಧರ್ಮರತ್ನಾಕರ ನಾರಾಯಣಸ್ವಾಮಿ ಮೊದಲಿಯಾರ್ರವರು ಮಹಾರಾಜರವರನ್ನು ತಮ್ಮ ಹೈಸ್ಕೂಲು ಕಟ್ಟಡಕ್ಕೆ ಕರೆಯಿಸಿಕೊಂಡು ಬಹು ವಿಜೃಂಭಣೆಯಿಂದ ಸತ್ಕಾರವನ್ನು ಮಾಡಿಸಿದರು ಲೇಟ್ ದಿವಾನ್ ಸರ್ ಕೃಷ್ಣಮೂರ್ತಿಗಳೂ ಹಾಲಿ ದಿವಾನರವರೂ ಮಿ ತಂಬೂಸೆಟ್ಟಿಯವರೇ ಮೊದಲಾದ ಮಹನೀಯರು ಸೇರಿದ್ದರು ಮಹಾರಾಜರವರು ಯುವರಾಜರೊಡನೆ ಸಕಲ ರಾಜಮರ್ಯಾದೆ ಸಮೇತ ದಯಮಾಡಿಸಿ ಉಗ್ರಸ್ಥಾನವನ್ನು ಮಹಿಸಿದ್ದರು ತಮಿಳು ಇಂಗ್ಲಿಷ್ ಭಾಷೆಗಳಲ್ಲಿ ಸಂಗೀತವೂ ಪಿಟೀಲು ಪಿಯಾನೊ ಮೊದಲಾದ ಇಂಗ್ಲಿಷ್ ವಾದ್ಯಗಳೂ ಇಂಪಾಗಿ ನಡೆದವು ಮುನಿಸ್ವಾಮಿಸಾಪನೆಂಬುವನು ಕತ್ತಿಯ ಸಾಮು ಮಾಡಿದನು ಬಳಿಕ ಮಿ ತಂಬೂಚೆಟ್ಟಿಯವರು ಎದ್ದು ಮಹಾರಾಜರವರಿಗೆ ಲಭಿಸಿದ ಘನವಾದ ಪದವಿಯ ನಿಮಿತ್ತ ಸಂಸ್ಥಾನದ ಪ್ರಜೆಗಳಿಗುಂಟಾಗಿರುವ ಮಹದಾನಂದವನ್ನೂ ರಾ॥ ನಾರಾಯಣಸ್ವಾಮಿ ಮೊದಲಿಯಾರವರ ರಾಜಭಕ್ತಿಯನ್ನೂ ಕುರಿತು ಭಾಷಣವನ್ನು ಮಾಡಿದರು ಇದಕ್ಕೆ ಶ್ರೀಮನ್ಮಹಾರಾಜರವರು ಉಚಿತಪ್ರಕಾರವಾಗಿ ಪ್ರತ್ಯುತ್ತರವನ್ನು ದಯಪಾಲಿಸಿ ಸಭೆಯನ್ನು ಉಪಸಂಹಾರಮಾಡಿ ತೆರಳಿದರು ಆ ರಾತ್ರಿ ಬಾಣ ಬಿರುಸುಗಳ ಪ್ರದರ್ಶನವು ನೇತ್ರಾನಂದಕರವಾಗಿದ್ದಿತು

ಇಂಡಿಯಾ ದೇಶವು ಹೀನಸ್ಥಿತಿಗೆ ಬಂದದ್ದು ಯಾಕೆ?

[ಒಬ್ಬ ಚಂದಾದಾರರ ಆಕ್ಷೇಪಣೆ]

ತೀರ್ಥಹಳ್ಳಿಗೆ ಸುಮಾರ ೬—೭ ದಿವಸದ ಹಿಂದೆ ಸನಾತನ ಧರ್ಮ ಪ್ರಚಾರಕರು ಎಂದು ಹೆಸರುಗೊಂಡ ಸ್ವಾಮಿ ಮಾಧವಾನಂದ ಸರಸ್ವತೀ ಎಂಬ ನಾಮಧೇಯವುಳ್ಳ ಮಹಾಶಯರು ದಯಮಾಡಿದರು ಇವರು ಆರ್ಯ ಧರ್ಮ ವಿಚಾರದಲ್ಲಿ ಕೆಲವು ಭಾಗಗಳನ್ನು ಉಪನ್ಯಾಸ ಮೂಲಕ ತಿಳಿಸುವದಾಗಿ ಇಲ್ಲಿನ ಕೆಲವು ದೊಡ್ಡ ಮನುಷ್ಯರ ಆಶ್ರಯವನ್ನು ಹೊಂದಿ ಗವರ್ನಮೆಂಟ್ ಎ ವಿ ಸ್ಕೂಲಿನಲ್ಲಿ ಇದುವರೆಗೆ ೪ ಉಪನ್ಯಾಸಗಳನ್ನು ಮಾಡಿದರು

ಇವರು ಮೊದಲನೆಯ ಉಪನ್ಯಾಸದಲ್ಲಿ—“ದೇವರು ಮನುಷ್ಯವರ್ಗಕ್ಕೆ ನಿಜವಾದ ಐಹಿಕಾಮುಷ್ಮಿಕ ಜ್ಞಾನ ಉಂಟಾಗುವದಕ್ಕೆ ವೇದವನ್ನು ಕೊಟ್ಟಿದಾನೆ ಈ ವೇದವು ಅನಾದಿಯಿಂದ ಇದ್ದದ್ದು ಇದು ಎಲ್ಲರಿಂದಲೂ ಪ್ರಮಾಣವೆಂದು ಅಂಗೀಕರಿಸಲ್ಪಡುವದಕ್ಕೆ ಯೋಗ್ಯವಾದದ್ದು ಮತ್ತು ನಿರ್ದೋಷವಾದದ್ದು ಇದು ದೈವಸೃಷ್ಟಿ ವಿಶಿಷ್ಟ ವಿಷಯಗಳನ್ನೂ ಒಳಗೊಂಡಿರುವದು ಇದು ದೇವಭಾಷೆಯಾದ ಸಂಸ್ಕೃತದಲ್ಲಿ ಮಾತ್ರ ಆರ್ಯರಾದ ನಮಗೆ ಕೊಡಲ್ಪಟ್ಟಿದೆ ಇದೇ ಯಗ್ಯಜುಸ್ಸಾಮಾಥರ್ವಣವೆಂದು ನಾಲ್ಕು ಭಾಗಗಳಾಗಿ ವಿಭಾಗಿಸಲ್ಪಟ್ಟಿದೆ ಈ ವೇದಗಳ ವಿನಹ ಬೇರೆ ಕ್ರೈಸ್ತ ಮಹಮದೀಯ ಮೊದಲಾದವರಿಂದ ಅಂಗೀಕರಿಸಲ್ಪಟ್ಟರುವ ಬೈಬಲ್, ಕುರಾನ್ ಮುಂತಾದವುಗಳು ವೇದಗಳಲ್ಲವೇ ಅಲ್ಲವು ಇವು ಸಾಮಾನ್ಯ ಮನುಷ್ಯ ಕಲ್ಪಿತಗಳು ಮತ್ತು ಇವುಗಳಲ್ಲಿ ಅಡಗಿರತಕ್ಕ ಸಾರಗಳು ಅಗ್ರಾಹ್ಯವಾದವುಗಳು” ಎಂದು ಮೊದಲಾಗಿ ಹೇಳಿದರು ಈ ವಿಷಯದಲ್ಲಿ ಕೆಲವು ಮುಖ್ಯಾಂಶಗಳನ್ನು ವಿಮರ್ಶೆ ಮಾಡಿ ನೋಡೋಣ

“ಮನುಷ್ಯ ವರ್ಗಕ್ಕೆಲ್ಲಾ ನಿಜವಾದ ಜ್ಞಾನ ಉಂಟಾಗುವದಕ್ಕಾಗಿ ಅನೇಕ ಕೋಟಿ ಮಾನವರಿಗೆ ತಿಳಿಯದೆ ಇರತಕ್ಕ

೧೯೦೭ ನೇ ಲೋವರ್ ಸೆಕಂಡರಿ ಕನ್ನಡ ನೋಟ್ಸು

122

ಬರುವ ಫೆಬ್ರುವರಿ ತಾ ೬ಕ್ಕೆ ವಿಕರಿಗೆ ಸಿದ್ಧವಾಗುತ್ತೆ ಕ್ರಯ ಆರು ಆಣೆ ವ್ಯಾಲ್ಯುಪೇಯಬಲ್ ೧ ಆಣೆ ಹೆಚ್ಚು ಮಾತ್ರ

ವಿಳಾಸ — ಯಸ್ ಆರ್ ವೆಂಕಟಸುಬ್ಬಾಚಾರ್ಯ
ಸದ್ಬೋಧಗ್ರಂಥಾಲಯ, ಮೈಸೂರು

ನೋಟೀಸ್

161

ಇದರಿಂದ ಸಮಸ್ತ ಜನಗಳಿಗೂ ತಿಳಿಸುವದೇನಂದರೆ —ವ ಡ್ರಾಸು ಅರ್ಬತ್ನಾಟ್ ಕಂಪನಿಗೆ ಸೇರಿದ ಹಿರಿಯೂರು ತಾಲ್ಲೂಕು ಬಗನಹಳ್ಳಿ ಆಮಾನಿಕೆರೆ ಕೆಳಗೆ ಮಿ॥ ಜೇಂಸ್ ಯಂಗ್ ಸಾಹೇಬರ ಖಾತೆಯಲ್ಲಿರುವ ೩೪೦ ಎಕರೆ ತರೀ ಜಮೀನನ್ನು ಈಗ ಅರ್ಬತ್ನಾಟ್ ಕಂಪನಿ ಆಡಳಿತವನ್ನು ನೋಡಿಕೊಳ್ಳುವದಕ್ಕೆ ಮದ್ರಾಸ್ ಸರ್ಕಾರದವರಿಂದ ನೇಮಿಸಿರುವ ಅಫಿಷಿಯಲ್ ಅಸೈನಿರವರು ಮೇಲ್ಕಂಡ ಜಮೀನುಗಳನ್ನು ಮಾರುವದಕ್ಕೆ ಮಿ। ಜೇಂಸ್ ಯಂಗ್ ಸಾಹೇಬರಿಗೆ ಅಧಿಕಾರ ಕೊಟ್ಟಿರುವದರಿಂದ ಚಿಲ್ಲರೆಯಾಗಿಯಾಗಲಿ ಅಥವಾ ಒಟ್ಟಿಗೆಯಾಗಲಿ ಕ್ರಯಕ್ಕೆ ಪಡೆಯಬಹುದು ಈ ಜಮೀನು ತಮಕೂರಿಗೆ ೪ ಮೈಲಿಯಲ್ಲಿ ಬೆಳ್ಳಾವಿ ರಸ್ತೆಯಲ್ಲಿದೆ ಕೆರೆ ತುಂಬಿ ಭರ್ತಿಯಾಗಿರುತ್ತೆ

ಜಮೀನು ತಪಶೀಲು ಬೇಕಾದವರು ಕನ್ನಡದಲ್ಲಿ ಬರೆಯಬೇಕಾದರೆ ತಿಪ್ಟೂರಲ್ಲಿರುವ ಬಿ ಯಸ್ ಮುದ್ದಪ್ಪನವರಿಗೂ ಅಥವಾ ಇಂಗ್ಲೀಷಿನಲ್ಲಿ ಮಿ॥ ಜೇಂಸ್ ಯಂಗ್ ಸಾಹೇಬರು ಹಿರಿಯೂರು, ಚಿತ್ರದುರ್ಗ ಡಿಸ್ಟ್ರಿಕ್ಟು ಎಂದು ಬರೆಯಬಹುದು

ಲಕ್ಷ್ಮೀಕರ ನಶ್ಯ

171

ಈ ನಶ್ಯ ಒಳ್ಳೆ ಪರಿಮಳವು, ಗುಣವೂ ಪಾಟು ಬಹುದಿನ ಇರುತ್ತದೆ ಬೆಲೆ ೧ ಡಬ್ಬಿಗೆ ೦—೩—೬ ೧ ಮೊದಲು ೪ ಡಬ್ಬಿವರೆಗೂ ವಿ ಪಿ ೪ ಆಣೆ ಚಂಪಕರಾಜಪುಷ್ಪ— ಪರಿಮಳವೂ ಕಣ್ಣು ತಲೆ ಕೂದಲು ಮೂಳೆ ಇವುಗಳಿಗೆ ಒಳ್ಳೆ ಗುಣವನ್ನು ಕೊಡುತ್ತೆ ಒಂದು ಸಾರಿ ಉಪಯೋಗಿಸಿ ನೋಡಿ। ಬೆಲೆ ಸೀಸೆ ಒಂದಕ್ಕೆ ೦—೧೦—೦ ವಿ ಪಿ ಚಾರ್ಜು ೦—೫—೦ ಜವಾಬಿಗೆ ರಿಪ್ಲೈ ತಿಳಿಯುವಂತೆ ಕಾರ್ಡು ಬರೆಯೋದು ಬರೆಯಬೇಕು

ವಿಳಾಸ —ರಾಮಚಂದ್ರ ಅಂಡ್ ಕೋ ತಿರುಪಳ್ಳಿಣಿ ಮದ್ರಾಸು

ನಮ್ಮ ಚಂದಾದಾರರು ಮೊದಲಾದವರು ಅವಶ್ಯವಾಗಿ ಗಮನಿಸ ಬೇಕಾದ ಟಪ್ಪಾಲು ಪ್ರಕಟನೆ

ಖಾಸಗಿಯಾಗಿ ತಯಾರ್ ಮಾಡಿದ ಕಾರ್ಡುಗಳ ಮೇಲೆ ವಿಲಾಸಿಯ ವಿಲಾಸಕ್ಕೂ ಪೋಸ್ಟೇಜ್ ಸ್ಟಾಂಪು ಮತ್ತು ಸ್ಟಾಂಪುಗಳಿಗೂ ಮತ್ತು ಟಪ್ಪಾಲಾಫೀಸಿನ ಆಫೀಸು ಮುದ್ರೆಗಳಿಗೂ ಸಹ ಕಾರ್ಡಿನ ಸಮಾರ್ಧಕ್ಕಿಂತ ಕಡಿಮೆಯಾದ ಒಂದು ಭಾಗವನ್ನು ಬಿಡಬೇಕಾಗಿಯೂ ಮತ್ತು ಅಂದ ಭಾಗವು ಸದರಿ ಕಾರ್ಡಿನ ಮಧ್ಯ ನೀಟವಾಗಿ ಅಥವಾ ಅಡ್ಡವಾಗಿ ಒಂದು ಗೆರೆ ಎಳೆದು ವಿಂಗಡಿಸಲ್ಪಡತಕ್ಕದಾಗಿಯೂ ಸಹ ಹೇಳುವ ಇಂಡಿಯನ್ ಪೋಸ್ಟಲ್ ಗೈಡಿನ ೫೫ ನೇ ಪ್ರಕರಣಕ್ಕೆ ಎಲ್ಲರೂ ಗಮನಿಸಬೇಕಾಗಿದೆ ಬರುವ ಸನ್ ೧೯೦೭ ನೇ ಇಸವಿ ಜನವರಿ ೧ ರ ಲಾಗಾಯತ ಅಂಥ ಕಾರ್ಡುಗಳ ಮೇಲೆ ವಿಲಾಸಭಾಗವನ್ನು ವಿಂಗಡಿಸಲು ಗೆರೆ

...ಸ್ಕೃತ ಭಾಷೆಯಲ್ಲಿ ಪ್ರಪಂಚದ ಒಂದು ಮೂಲೆಯಲ್ಲಿರುವ ಒಂದು ...ಜಾಗಕ್ಕೆ ಮಾತ್ರ ದೇವರು ವೇದವನ್ನು ಕೊಟ್ಟಿರಬಹುದೇ? ಹಾಗೂ ...ದೇವರು ಪಕ್ಷಪಾತಿಯೇ? ಇಂಥಾ ವೇದದಿಂದ ನಿಜವಾದ ಪ್ರಯೋಜನ ಉಂಟಾಗಿದೆಯೇ? ಹಾಗಿದ್ದರೆ, ಈ ವೇದಕ್ಕೆ ಭಿನ್ನಾಭಿಪ್ರಾಯಗಳುಳ್ಳ ಭಾಷ್ಯಗಳನ್ನು ರಚಿಸಿ ಬೇರೆ ಬೇರೆ ಮತಗಳನ್ನು ಸ್ಥಾಪಿಸಿ ...ಮತಗಳಲ್ಲಿ ಯಾವ ಮತದವರಿಗೆ ನಿಜವಾದ ಪ್ರಯೋಜನ ಉಂಟಾಯಿತು! ಈ ಒಂದೊಂದು ಮತದಲ್ಲಿಯೂ ಅನೇಕ ಶಾಖೋಪಶಾಖೆಗಳು ಯಾಕೆ ಉಂಟಾಯಿತು? ಅವರಿಗೆಲ್ಲಾ ಸದ್ಗತಿ? ಇವುಗಳಲ್ಲಿ ಯಾವ ಮತಸಿದ್ಧಾಂತವನ್ನು ಯೋಗ್ಯವೆಂದೆಣಿಸಬೇಕು? ಈ ವೇದವು ...ದಿಯಿಂದ ಹೇಗೆ ಬಂತು?" ಇವೇ ಮುಂತಾದ ಅನೇಕ ಅಸಂಬದ್ಧಗಳು ಹೊರಪಡುತ್ತವೆ. ಆದ್ದರಿಂದ ವೇದವು ಕೇವಲ ಸಾಮಾನ್ಯ ಮನುಷ್ಯಕೃತವೆಂದೇ ಹೇಳಬೇಕಾಗುತ್ತೆ. ಹಾಗಾದರೆ ನಿಜವಾಗಿಯೂ ...ರು ಪ್ರಸಾದಿಸಿರುವ ವೇದವು ಯಾವುದು ಎಂದು ಆಲೋಚಿಸಿದರೆ, ...ಕರ್ತನಾದ ಈಶ್ವರನು ಎಲ್ಲರ ಹೃದಯಗಳಿಗೂ ತನ್ನ ಆಜ್ಞೆಗಳನ್ನು ತಿಳಿಯಪಡಿಸಬೇಕೆಂದು ಆಯಾ ಆಜ್ಞೆಗಳನ್ನು ಎಲ್ಲರ ಹೃದಯ ...ಫಲಕಗಳ ಮೇಲೆ ಸ್ಥಿರವಾಗಿರುವ ಹಾಗೆ ಲಿಖಿಸಿರುವನಲ್ಲದೆ ಒಂದು ...ದಲ್ಲಿ ಕೆಲವರಿಗೆ ಮಾತ್ರ ಪ್ರತ್ಯಕ್ಷವಾಗಿ ಹೇಳಿ, ಗಣನಾತೀತವಾದ ...ಜನಗಳಿಗೆಲ್ಲಾ ತಿಳಿದಿರದಂತೆ ಮಾಡಿರಲಾರನು. ಎಂದು ಜ್ಞಾನ...ವುಳ್ಳವನಾದ ಯಾರಿಗಾದರೂ ತಿಳಿಯದೆ ಇರಲಾರದು.

ವೇದದ ಎಲ್ಲಾ ಭಾಗವೂ ಪ್ರಮಾಣಾರ್ಹವಲ್ಲವೆಂದು ಸೂಕ್ಷ್ಮವಾಗಿ ...ತಿಳಿಸಿದ್ದೇನೆ. ಆ ವಿಷಯದಲ್ಲಿ ಹೆಚ್ಚಾಗಿ ಹೇಳಬೇಕಾದ ಅಗತ್ಯವು ...ಬರಲಿಲ್ಲ. ಅಂತಹ ಅಗತ್ಯ ಕಂಡು ಬಂದಲ್ಲಿ ಆ ವಿಷಯವ...ನ್ನು ಚರ್ಚಿಸಲು ಸಿದ್ಧನಾಗಿದ್ದೇನೆ. ಪ್ರಸ್ತುತ ಸ್ವಾಮಿಗಳವರ ...ಸನೆಯ ದಿನದ ಉಪನ್ಯಾಸವನ್ನು ಕುರಿತು ಸ್ವಲ್ಪ ವಿಮರ್ಶೆ ...ಸುತ್ತೇನೆ.

ವೇದ ಪ್ರತಿಪಾದಿತವಾಗಿರುವಂತೆ ಚತುರ್ವರ್ಣದವರೂ ಅವರವರ ...ಗಳೇ ಶ್ರೇಷ್ಠವಾದುವುಗಳೆಂದು ನಂಬಿಕೊಂಡು ಅದರಂತೆಯೇ ...ಯುವುದರಲ್ಲಿ ಭಾರತೀಯರಿಗೆ ಸಕಲ ಶ್ರೇಯಸ್ಸುಂಟಾಗುವುದು, ...ನ್ನು ಬಿಟ್ಟು ಅನ್ಯ ಮತಾವಲಂಬನ ಮಾಡುವದರಿಂದ ಧರ್ಮಗಳೂ ...ಕೊಂಡು ಅವರೂ ದುರ್ಗತಿಯನ್ನು ಹೊಂದುವರು. ಪೂರ್ವದವ...ರು ಆರ್ಯರು ಸ್ವಧರ್ಮವನ್ನೇ ಆಚರಿಸುತಿದ್ದುದರಿಂದ ಈ ಭರತಖಂ...ಡವು ಇತರ ರಾಷ್ಟ್ರಗಳಿಗಿಂತಲೂ ಮಿಗಿಲಾದ ಸಂಪದ್ಯುಕ್ತವಾಗಿಯೂ ...ನ್ನತ ಸ್ಥಿತಿಯಲ್ಲಿಯೂ ಇತ್ತು, ಈಗ ಭಾರತೀಯರು ಅವರ ...ಧರ್ಮಗಳನ್ನು ಬಿಟ್ಟದ್ದರಿಂದ ಈ ದುರ್ದಶೆಯು ಈ ರಾಷ್ಟ್ರಕ್ಕೆ ...ಪ್ರಾಪ್ತವಾಗಿದೆ, ಮತ್ತು ಅನ್ಯ ಮತವು ಹರಡಿಕೊಳ್ಳುವದಕ್ಕೆ ಆಸ್ಪದ ...ವಿಲ್ಲದೆ ದಿನೇ ದಿನೇ ರಾಷ್ಟ್ರವು ಹೀನಸ್ಥಿತಿಗೆ ಬರುತ್ತಿರುವುದೂ ಅಲ್ಲದೆ ...ರ ಸೋದರಭಾವವೂ ಐಕಮತ್ಯವೂ ಲೋಪವಾಗುತ್ತಾ ಬಂತು ...ವಾಗಿ ಮುಸಲ್ಮಾನರು ಪ್ರವೇಶಮಾಡಿ ರಾಜ್ಯಾಧಿಕಾರವನ್ನು ...ದನಂತರ ಆರ್ಯ ಧರ್ಮವು ಲೋಪವಾಗುವದಕ್ಕೆ ಅವಕಾಶವಾ...ಯಿತು.

...ಪಂಚದಲ್ಲೆಲ್ಲಾ ಶ್ರೇಷ್ಠರೆನಿಸಿಕೊಂಡಿರುವ ಹಿಂದೂಗಳು ಈಗ ...ಹೀನದೆಶೆಯಲ್ಲಿರುವ ಕಾಲವು ಬಂತು. ಆದ್ದರಿಂದ ಈಗಲಾ...ದರೂ ಅವರು ಅವರ ಸ್ವಧರ್ಮದ ಮತ್ತು ಸ್ವದೇಶದ ಅಭಿಮಾನವನ್ನು ...ಐಕಮತ್ಯದಿಂದ ಕೆಲಸಗಳನ್ನು ಮಾಡಿ ಅವರ ಹಿಂದಿನವರಂತೆ ...ಸ್ಥಿತಿಯನ್ನು ಹೊಂದಬೇಕು. ಐಕಮತ್ಯವು ನೆಲಗೊಳ್ಳಲಿಕ್ಕೆ ...ಭೇದದಿಂದ ಯಾವ ಅನುಕೂಲವೂ ಇಲ್ಲ. ಕ್ರೈಸ್ತರೇ ಮೊದ...ಲಾದ ಸಂಘದವರಲ್ಲಿಯೂ ಕೂಡ ಅನೇಕ ಭೇದಗಳು ಇವೆ, ಆದ...ರೂ ಒಬ್ಬರಿಗೆ ಒಬ್ಬರು ಆಹಾರ ಸಂಬಂಧಾದಿಗಳನ್ನು ನಡೆಸುವ...ದಿಲ್ಲವೇ. ಹೀಗೆಲ್ಲಾ ಸ್ವಾಮಿಗಳವರು ಯುಕ್ತಿ ಯುಕ್ತವಾಗಿ ಉಪನ್ಯಾಸ ...ಮಾಡಿದರು.

...ಳ್ಳೇದು. ಈ ವಿಷಯಗಳನ್ನು ಸ್ವಲ್ಪ ವಿಚಾರಣೆ ಮಾಡೋಣ. ...ಲ್ಲಿ ವರ್ಣಭೇದವನ್ನು ಹೇಳಿರುವದು ನಿಜವೇ? ವೇದದಲ್ಲಿ ಎಲ್ಲಿ...ದರೂ ಹೀಗಿದ್ದಂತೆ ಕಂಡು ಬರುವುದಿಲ್ಲವೆಂಬ ಪ್ರಬಲ ಸಾಕ್ಷ್ಯಗ...ಳು ಸಿಗುತ್ತವೆ. ವೇದಗಳಲ್ಲಿ ಬಹಳ ಪುರಾತನವಾದುದು ಋಗ್ವೇ...ದ. ಕೇವಲ ಇದರಲ್ಲಿನ ಪುರುಷಸೂಕ್ತದೊಳಗಣ ಹನ್ನೆರಡನೇ ...ಸ್ಲಿ ಹೇಳಿರುವದನ್ನೇ ಆಧಾರಮಾಡಿಕೊಂಡು ಚತುರ್ವರ್ಣವೂ ...ಲ್ಲಿ ಹೇಳಲ್ಪಟ್ಟಿದೆ ಎಂಬು ಹೇಳುವದು ಮೂರ್ಖತೆಯೋ ಅಥವಾ ...ತಿಯೋ ಕಾಣೆನು. ಇದರಲ್ಲಿ ಮೊದಲಿನ ಮೂರು ಚರಣಗಳನ್ನು ...ಬಿಟ್ಟು ನಾಲ್ಕನೇ ಚರಣದಲ್ಲಿನ 'ಅಜಾಯತ' ಎಂಬ ಶಬ್ದ...ದ ಬಲದಿಂದ ಮಾತ್ರ ಆಯಾ ಅಂಗಗಳಿಂದ ಆಯಾ ವರ್ಣದವರು ...ಹುಟ್ಟಿದರೆಂದು ಕಲ್ಪಿಸುತ್ತಿರುವುದು ತಪ್ಪಾಗಿದೆ. ಲಾಕ್ಷಣಿಕಾರ್ಥವೇ ಇ...ದಕ್ಕೆ ಗತಿಯೆಂಬುದು ಹಿಂದಿನ ಒಂದು ಮತ್ತು ಆರನೇ ಋಕ್ಕ...ನ್ನು ನೋಡುವದರಿಂದ ತಿಳಿಯಬರುತ್ತದೆ. ಅದು ಹಾಗಿರಲಿ. ಕೇವ...ಲ ಶಬ್ದ ಪ್ರಮಾಣವೇ ನಂಬುವದಕ್ಕೆ ಯೋಗ್ಯವಲ್ಲವು. ಎಲ್ಲಿ ...ಪ್ರತ್ಯಕ್ಷಾನುಮಾನಗಳಿಗೆ ವಿರೋಧವಾಗಿರುವುದಿಲ್ಲವೋ ಅಲ್ಲಿ...ಗೆ ಮಾತ್ರ ಇದು ಗ್ರಾಹ್ಯವಾದದ್ದು. ಒಬ್ಬನು ಅನುಭವದಿಂದ ...ಣ್ಣು ಹುಳಿ ಎಂದು ತಿಳಿದುದನ್ನು ಬೇರೊಬ್ಬನು ಎಷ್ಟು ...ಯುಕ್ತವಾಗಿಯಾಗಲೀ ಗ್ರಂಥಗಳ ಆಧಾರದಿಂದಾಗಲೀ ಅದಲ್ಲ ...ಕೇಳಿಸಿದಾಗ್ಯೂ ಅದನ್ನು ನಂಬಲಾಗದು. ಚತುರ್ವರ್ಣವೂ ...ಕೃತವೆಂದು ಹೇಳುವದು ಹುಚ್ಚು ಮಾತಲ್ಲದೆ ಬೇರೆಯಲ್ಲ. ...ಯು, ಆನೆ, ಮೀನು, ಇವು ಬೇರೆ ಬೇರೆ ಜಾತಿ (ಜಾತಿ ಎಂದ...ರೆ ... ವರ್ಣ ಎಂದರೆ ಬಣ್ಣ, ಇವೆರಡು ಪದಗಳೂ ಈ ಗಪದ್ಯ...ವಾಗಿ ವರ್ತಿಸುತ್ತಿವೆ) ಎಂದ ಹಾಗೆ ಪ್ರತಿ ಮನುಷ್ಯನೂ ...ರೆ ಜಾತಿ ಎಂದರೆ ಎಂತಹ ಅಸಂಬದ್ಧವು!

...ಹಿಂದಿನವರ ಧರ್ಮಗಳನ್ನು ನಂಬಿ ಅವನ್ನು ಅನುಸರಿಸಿದಲ್ಲಿ ...ಉನ್ನತ ಸ್ಥಿತಿಗೆ ಈಗಿನ ಹಿಂದುಗಳೂ ಬರುತ್ತಾರಂತೆ! ಹಿಂದಿನ...ವರ ಧರ್ಮಗಳನ್ನಾಚರಿಸಿ ಉತ್ತಮ ಸ್ಥಿತಿಯಲ್ಲಿದ್ದಿದ್ದರೆ ಅಲ್ಲವೆ ...ಗೆ ಆ ಸ್ಥಿತಿಗೆ ಬರುವುದು! ಹಿಂದಿನವರ ಯಥಾರ್ಥ ಸ್ಥಿತಿಯನ್ನು ತಿಳಿಸುವ ಚರಿತ್ರೆಗಳು ಆ ಸಂಬಂಧವಾದ ಇತರ ಗ್ರಂಥಗಳಾದರೂ ಭಾರತೀಯರಲ್ಲಿವೆಯೇ? ಹತ್ತು ತಲೆಯ ಆರು ಭುಜದ ಮೂರು ಕಾಲಿನ ಜನಗಳು, ವಜ್ರದ ಕಂಭಗಳಿರುವ, ಪಚ್ಚೆಯ ಬೋದಿಗೆಗಳಿರುವ, ಹವಳದ ಜಂತೆಗಳಿರುವ ಅರಮನೆಗಳಲ್ಲಿ ವಾಸ ಮಾಡಿದ ಶ್ರೀಮಂತರು, ಸಮುದ್ರದಲ್ಲಿ ಪರ್ವತಗಳಿಂದ ಸೇತುವನ್ನು ಕಟ್ಟಿದ ಕೌಶಲಿಗಳು, ಒಂದು ಅಸ್ತ್ರದಿಂದ ಜಲಧಿಯನ್ನೇ ಶೋಷಿಸಿದ ವೀರರು, ಭೂಮಿಯನ್ನೇ ಚಾಪೆಯಂತೆ ಸುತ್ತಿ ಕಂಕುಳಲ್ಲಿಟ್ಟುಕೊಂಡು ಸಮುದ್ರ ಮಧ್ಯದಲ್ಲಿ ಅವಿತುಕೊಂಡ ದುಷ್ಟರು, ಒಂದು ಬಾಣದಿಂದ ಇಂದ್ರಲೋಕದಿಂದ ಆನೆಯನ್ನಿಳಿಸಿದ ಸಾಹಸಿಗಳು, ಕಂಭದಿಂದ ದೇವರನ್ನು ಬರಿಸಿದ ದೈವಭಕ್ತರು, ಇಂತಹವರನ್ನು ಕುರಿತ ಕಥೆಗಳೇ ಚರಿತ್ರೆಗಳು? ಇನ್ನು ಭೂಗೋಳವೋ? ಸರ್ಪ, ಕೂರ್ಮ, ಆನೆಗಳು ಹೊತ್ತುಕೊಂಡಿರುವ ಈ ಭೂಮಿಯು, ಇದನ್ನು ಆವರಿಸಿದ ಉಪ್ಪಿನ, ಮೊಸರಿನ, ಹೆಂಡದ, ಹಾಲಿನ ಸಮುದ್ರಗಳು, ಪರ್ವತಗಳು ಭಂಗಾರದವು ಬೆಳ್ಳಿಯವು, ನದಿಗಳು, ಮುಳುಗಿದ ಮಾತ್ರಕ್ಕೆ ಸಮಸ್ತ ಪಾಪವನ್ನೂ ಪರಿಹರಿಸತಕ್ಕವುಗಳು, ಇರುವದೆಲ್ಲವೂ, ಹಿಮಾಚಲಕ್ಕೂ ಲಂಕೆಗೂ, ಆಸ್ಸಾಮಿಗೂ (ಕಾಮರೂಪ) ಮ್ಲೇಂಛದೇಶಕ್ಕೂ (ಬಲೂಚಿಸ್ಥಾನ) ಮಧ್ಯೆ ಇರುವ ಐವತ್ತಾರು ದೇಶಗಳೇ, ಕಾಲ ಸರ್ಪನು ಚಂದ್ರ ಸೂರ್ಯರನ್ನು ನುಂಗುವುದೇ ಖಗೋಳ ಶಾಸ್ತ್ರವು ಇನ್ನು ಕೌಶಲವಿದ್ಯವೋ? ಈಗೀಗ ಪಾಶ್ಚಾತ್ಯರು ಬಂದು ನೆಲೆಸಿ ಪ್ರಚುರಪಡಿಸಿದ ಸಮಸ್ತವೂ ಮೊದಲೇ ತಮ್ಮಲ್ಲಿತ್ತೆಂದು ಹೇಳಿಕೊಳ್ಳುವದು ಮಾತ್ರವೇ. ಯಾಕಂದರೆ ಸಾಮಾನ್ಯವಾಗಿ ಸಂಸ್ಕೃತ ಭಾಷೆಯ ಪದಗಳು ಅನೇಕಾರ್ಥವನ್ನು ಕೊಡುವುವಾಗಿವೆ. ಮನೋವೇಗವು, ವಾಯುವೇಗವು, ವಿಮಾನವು, ಸೂರ್ಯನು ದೀಪ ಹತ್ತಿಸುವುದು, ವಾಯು ಗಾಳಿ ಬೀಸುವುದು, ಮುಂತಾದುವೆಲ್ಲವೂ ಇದ್ದಂತೆ ಕಂಡು ಬರುತ್ತದೆಯಲ್ಲದೆ ಅವು ಯಂತ್ರಗಳೆಂಬ ವಿಷಯದಲ್ಲಾಗಲೀ ಆ ಯಂತ್ರಗಳ ನಿರ್ಮಾಣದ ವಿಷಯದಲ್ಲಿ ಯಾಗಲೀ ಎಲ್ಲಾ ಗ್ರಂಥಗಳೂ ಮೌನಧಾರಣೆ ಮಾಡಿವೆ. ಆದ್ದರಿಂದ ಈಗ ಪ್ರಚಾರದಲ್ಲಿರುವ ವಿದ್ಯುಚ್ಛಕ್ತಿಯ ನೀರಿನ, ಗಾಳಿಯ, ಹಬೆಯ ಸಹಾಯದಿಂದ ನಡೆಯುವ ಯಂತ್ರಗಳೆಲ್ಲವೂ ಮೊದಲೇ ಇದ್ದುವೆಂದು ಹೇಳುವುದು ಕೇವಲ ಮೂರ್ಖತನದ ಆತ್ಮಸ್ತುತಿಯ ಮಾತೇ ಸರಿ. ಕೇವಲ ಆಯಾ ಅರ್ಥ ಬೋಧಕ ಶಬ್ದಗಳು ಮಾತ್ರ ಎಲ್ಲಿಯೋ ಒಂದೊಂದು ಕಡೆ ಅಪರೂಪವಾಗಿ ಕಂಡು ಬಂದ ಮಾತ್ರಕ್ಕೆ ಆಕಾರರೂಪದಿಂದ ಹೇಗೆ ಸಾಧಿಸುವುದು ಸಾಧ್ಯವು?

ಇನ್ನು ಪುರಾತನ ಗ್ರಂಥಗಳನ್ನು ನಂಬಿಕೊಂಡು ನಡೆಯಬೇಕಂತೆ. ಇಂತಹವರಿಗೆ ದೇಶಾಭಿಮಾನವು ಯಾಕೆ? ಪರಸ್ಪರ ಸೋದರಭಾವವೂ ಯಾಕೆ? ಹಾಗೆ ಈಗ ಭಾರತೀಯರು ನಂಬಿ ನಡೆಯುವದಕ್ಕೆ ಹಿಂದೆ ನಂಬಿ ನಡೆದ ಅವರಲ್ಲಿ ಸ್ವದೇಶಾಭಿಮಾನವಿತ್ತೆ? ಹಾಗಿದ್ದರೆ ಭರತಖಂಡದಲ್ಲಿ ಬೇರೆ ಬೇರೆ ರಾಜಸ್ಥಾನಗಳ, ಅವರವರಿಗೆ ನಡೆದ ಕಲಹಗಳ ವಿಷಯದಲ್ಲಿ ಗ್ರಂಥಗಳಲ್ಲಿ ನಾವು ಯಾಕೆ ನೋಡುತ್ತೇವೆ? ಮ್ಲೇಂಛರು ಈ ರಾಜ್ಯ ಪ್ರವೇಶ ಮಾಡಿದನಂತರ ಆರ್ಯ ಧರ್ಮವು ನಾಶವಾಗುವುದಕ್ಕೆ ಬಂತೆಂದು ಹೇಳುತ್ತಾರಷ್ಟೆ. ಹಾಗಾದರೆ ಅವರು ಪ್ರವೇಶ ಮಾಡಿದ ಕಾಲದಲ್ಲಿ ಎಲ್ಲರೂ ಸ್ವಧರ್ಮನಿರತರಾಗಿಯೇ ಇದ್ದರಷ್ಟೆ? ಆದ್ದರಿಂದ ಇವರಲ್ಲಿ ಒಂದು ಬಾಣದಿಂದ ಅಕ್ಷೋಹಿಣಿ ಸೈನ್ಯವನ್ನು ಸಂಹಾರ ಮಾಡುವ ಸಾಮರ್ಥ್ಯವೂ ಒಂದು ಬಾಣದಿಂದ ಪ್ರಳಯ ಕಾಲದ ಮಳೆಯನ್ನೇ ತಡೆಯುವ ಸಾಹಸವೂ ಇತ್ತಷ್ಟೆ? ಮ್ಲೇಂಛರು ದಂಡಯಾತ್ರೆ ಮಾಡಿ ಹಿಂದೂಸ್ಥಾನವನ್ನು ನುಗ್ಗಿದಾಗ ಭಾರತೀಯರ ಇಂತಹ ಸಾಹಸ ಪರಾಕ್ರಮಗಳು ಎಲ್ಲಿ ಅಡಗಿದವು? ಅದುಹೋಗಲಿ ಪರಸ್ಪರ ಸೋದರಭಾವವಾದರೂ ಇತ್ತೆ? ಈಗಲೂ ಸ್ವಲ್ಪ ಮಟ್ಟಿಗೆ ಅಧರ್ಮವನ್ನು ನಡೆಸುತ್ತಿರುವವರಲ್ಲಿ ಈಗೀಗ ಭಾರತೀಯರು ಸ್ವಲ್ಪ ಸ್ವಲ್ಪ ವಿದ್ಯಾವಂತರಾಗುತ್ತಾ ಉತ್ತಮ ಸ್ಥಿತಿಯನ್ನು ಹೊಂದುವ ಸೋಪಾನಗಳನ್ನು ಕಂಡುಕೊಳ್ಳುವವರಾಗಿದ್ದಾರೆ. ಸರ್ವ ವಿದ್ಯಾವಿಚಕ್ಷಣರಾದ ಆಂಗ್ಲೇಯರು ಗಾಢಾಂಧಕಾರದಿಂದ ಭಾರತೀಯರನ್ನು ಮುಂದಕ್ಕೆ ಸೂರ್ಯನ ಬೆಳಕಿಗೆ ತರುತ್ತಾ ಇದ್ದಾರೆ. ಇಂತಹ ಅಭಿವೃದ್ಧಿಯ ದಾರಿಯನ್ನು ಹಿಡಿಯಲು ಸೇರದ ದೇಶಹಿತೈಷಿಗಳೆಂದು ಹೇಳಿಕೊಳ್ಳುವ ಉಪನ್ಯಾಸಕರು 'ಹಿಂದಿನ ಸ್ಥಿತಿಯನ್ನೇ ನೀವೆಲ್ಲರೂ ಹೊಂದಬೇಕು. ಆ ಹಿಂದಿನ ಧರ್ಮಗಳನ್ನೇ ನಂಬಿ ಅವರಂತೆ ನೀವೆಲ್ಲರೂ ನಡೆಯಬೇಕು. ಅದರಿಂದಲೇ ನಮಗೆ ಕ್ಷೇಮವುಂಟಾಗುವದೆಂದು ನಂಬಿರಿ" ಎಂದು ಭಾರತೀಯರನ್ನು ಕುರಿತು ಹೇಳುವುದು "ಯಥಾರ್ಥ ಜ್ಞಾನವು ನಿಮಗೆ ಹಾನಿಕರವು, ಪುನಃ ಮಬ್ಬಿನಲ್ಲಿಯೇ ಇರುವದಕ್ಕೆ ಅಭ್ಯಾಸ ಮಾಡಿರಿ, ಬೋಧ್ಯಬೋಧನವನ್ನು ಮಾಡುತಿದ್ದರೂ ಅಜ್ಞಾನವನ್ನು ಭಜಿಸುತ್ತೇವೆಂದು ತಿಳಿದುಕೊಳ್ಳಿ" ಎಂದು ಹೇಳಿದಂತೆಯೇ ಆಗುವುದು. ಇಂತಹ ದುರ್ಬೋಧನೆಗಳನ್ನು ದೇಶಹಿತೈಷಿಗಳೆಂದು ಹೇಳಿಕೊಳ್ಳುವವರು ಜನಗಳಿಗೆ ಹೇಳಿ ಹಾನಿಯನ್ನುಂಟುಮಾಡುವದಕ್ಕಿಂತಲೂ ಇವರು ಒಂದು ತಂಟೆಗೂ ಬರದೇ ಸುಮ್ಮನಿದ್ದರೂ ಒಂದು ಕ್ಷೇಮವನ್ನೇ ದೇಶಕ್ಕೆ ಮಾಡಿದಂತಾಗುವುದು. ಇಂತಹವರ ಮಾತನ್ನು ಕೇಳಿ ನಡೆಯುವ ಕಾಲವು, ವಿದ್ಯಾಪ್ರಚುರ್ಯವೂ, ಗಾಡಿ ರಸ್ತೆಗಳೂ, ಓಡ್ಯಾಡುವ ದಾರಿಗಳೂ, ತಂತೀ ವರ್ತಮಾನವೂ, ಹೊಗೆಬಂಡಿಯೂ, ವರ್ತಮಾನ ಪತ್ರಿಕೆಗಳೂ, ಏನೊಂದು ಇಲ್ಲದ ಹಿಂದಿನ ಹಿಂದೂಸ್ಥಾನದ ಕ್ಲೇಶಾವಸ್ಥೆಯು. ಈ ಕಾಲವು ಎಂತಹ ಮಾತನ್ನು ಕೇಳಿದರೂ ಸ್ವತಂತ್ರ ವಿಚಾರವನ್ನು ಸ್ವಲ್ಪ ಮಟ್ಟಿಗಾದರೂ ಮಾಡುವ ಕಾಲವಾದುದರಿಂದ ಯಾರೂ ಇಂತಹ ಅಜ್ಞ ಕಥೆಗಳಿಗೆ ಕಿವಿಗೊಡಲಾರರೆಂದು ನಂಬುತ್ತೇನೆ.

ಸತ್ಯಶೋಧಕ

ಒಳದೇಶದ ವೃತ್ತಾಂತಗಳು

ಕಳೆದ ೧ನೇ ತಾ ಶುಕ್ರವಾರ ಬೆಂಗಳೂರು ಸಿಟಿ ಸಂಪಿಗೇ ಕೆರೆಯಲ್ಲಿ ಕುರುಬರ ಜಾತಿಯ ಒಬ್ಬ ಹೆಂಗಸಿನ ಶವವು ತೇಲುತ್ತಿತ್ತು. ಅದನ್ನು ಸಿಟಿ ಮ್ಯಾಜಿಸ್ಟ್ರೇಟು ತೆಗೆಯಿಸಿ ವಿಚಾರಿಸಲಾಗಿ ಅವಳಿಗೆ ಮೂರ್ಛೆ ರೋಗವು ಬರುತ್ತಿತ್ತೆಂದು ತಿಳಿದುಬಂತು.

ನಮ್ಮ ಶ್ರೀಮನ್ ಮಹಾರಾಜರವರು ಮಹಾಮಾತೋಶ್ರೀಯವರೇ ಮೊದಲಾದ ಸಕಲ ರಾಜಬಂಧುವರ್ಗದವರೊಡನೆ ನಾಳೆ ದಿನ ರಾಜಧಾನಿಗೆ ದಯಮಾಡುವರು.

*****

ಕಳೆದ ವಾರ ಬೆಂಗಳೂರು ಅಕ್ಕಿಪೇಟೆಯಲ್ಲಿ ಒಬ್ಬ ಹೆಂಗಸು ತನ್ನ ೬ ವರ್ಷದ ಮಗನನ್ನು, ಮತ್ತೊಬ್ಬಳು ತನ್ನ ಗಂಡನನ್ನು ಕೊಂದುಹಾಕಿರುತ್ತಾರೆ.

*****

ಬೆಂಗಳೂರಲ್ಲಿ ಕಳೆದವಾರ ಒಬ್ಬ ನೇಯಿಗೆಯವನು ತನ್ನ ಸ್ವಂತ ಹೆಂಡತಿಯನ್ನು ಖೂನಿಮಾಡಿದ ವಿಷಯದಲ್ಲಿ ಬೆಂಗಳೂರ್ ಸಿಟಿ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ವಿಚಾರಣೆ ನಡೆದು ಇವನು ಸೆಷನ್ ಕೋರ್ಟಿನ ವಿಚಾರಣೆಗೆ ಹೋಗಬೇಕೆಂದು ತೀರ್ಮಾನವಾಯಿತು.

*****

ಕಳೆದ ಡಿಸೆಂಬರಿನಲ್ಲಿ ಮೆಟ್ರಿಕ್ಯುಲೇಷನ್ ಪರೀಕ್ಷೆಗೆ ಮೈಸೂರು ಸೆಂಟರಿನಿಂದ ಸುಮಾರು ೩೦೦ ಜನ ಹೋಗಿದ್ದರು. ಅವರಲ್ಲಿ ೫೮ ಮಂದಿ ಮಾತ್ರ ಪ್ಯಾಸಾದರು. ಮರಿಮಲ್ಲಪ್ಪನವರ ಸ್ಕೂಲಿನಲ್ಲಿ ೧೧; ಮಿಷನ್ ಸ್ಕೂಲಿನಲ್ಲಿ ೯, ಮಹಾರಾಜಾ ಕಾಲೇಜು ಮತ್ತು ಪ್ರೈವೇಟು ವಿದ್ಯಾರ್ಥಿಗಳು ೩೮.

*****

ನಮ್ಮ ಶ್ರೀಮನ್ ಮಹಾರಾಜರವರಿಗೆ ಜಿ ಸಿ ಎಸ್ ಐ ಎಂಬ ಬಿರುದು ಬಂದ ಸಂತೋಷಕ್ಕೆ ಬೆಂಗಳೂರು ದಂಡಿನಲ್ಲಿರುವ ಮೆ॥ ಆರ್ಕಾಟ್ ನಾರಾಯಣಸ್ವಾಮಿ ಮೊದಲಿಯಾರ್ರವರು ಅವರ ಛತ್ರದಲ್ಲಿ ಮೊನ್ನೆ ದಿನ ೧೦೦೦ ಬಡಜನರಿಗೆ ಅನ್ನಹಾಕಿ ಬಟ್ಟೆಗಳನ್ನು ಕೊಡುವುದಾಗಿ ಏರ್ಪಾಡನ್ನು ಮಾಡಿದ್ದರು.

ಬಹುಮಾನ ಪಡೆದ ವರ್ತಮಾನಗಳು

[ಈ ಸಲದ ಬಹುಮಾನವನ್ನು ಮ॥ ರಾ॥ ವೈ ನಂಜುಂಡೈಯ್ಯ ೧೬೮ ಮುನಿಯಪ್ಪಶೆಟ್ಟಿ ಬೀದಿ, ಕೋಟೆ, ಮೈಸೂರು ಇವರಿಗೂ, ಮ॥ ರಾ॥ ಹೇಮಣ್ಣ ಪಟೇಲ್, ತುರುವನೂರು, ಚಿತ್ರದುರ್ಗ ಡಿ॥ ಇವರಿಗೂ ಹಂಚಿ ಕೊಟ್ಟಿದ್ದೇವೆ]

೧ ಆಕಸ್ಮಿಕ ಮರಣ

ಮೈಸೂರು ಕೋಟೆಯಲ್ಲಿ ಕೃಷ್ಣರಾಯರೆಂಬುವರ ಕುಟುಂಬವು ತಮ್ಮ ನಾಲ್ಕು ಮಕ್ಕಳೊಡನೆ ಸಂಸಾರ ಮಾಡಿಕೊಂಡಿದ್ದರು. ಇವರು ಕೇವಲ ಬಡವರಾಗಿದ್ದದ್ದರಿಂದ ಅರಮನೆಯಲ್ಲಿ ಕೊಡುವ ಮಜ್ಜಿಗೆ ಕಟ್ಟಳೆಗೆ ಸೇರಿದ್ದರು. ಈಕೆಯ ೩ನೇ ಮಗನಾದ ಸುಮಾರು ೧೦ ವರ್ಷದ ಅಪ್ಪಾಜಿ ಎಂಬುವನು, ತಾರೀಖು ೩-೨-೦೭ ನೇ ಭಾನುವಾರ ಬೆಳಿಗ್ಗೆ ಊಟಮಾಡಬೇಕೆಂದು ತಾಯಿಯನ್ನು ಕೇಳುವಲ್ಲಿ ಅರಮನೆಗೆ ಹೋಗಿ ಮಜ್ಜಿಗೆ ತೆಗೆದುಕೊಂಡು ಬಾರೆಂದು ಹೇಳಲಾಗಿ ನಿತ್ಯದಂತೆ ಮಜ್ಜಿಗೆ ತರಲು ಅರಮನೆಗೆ ಹೋದನು. ಹೊಸದಾಗಿ ಕಟ್ಟುತ್ತಿರುವ ಅರಮನೆ ಒಳಗೆ ಕಲ್ಯಾಣ ಮಂಟಪದಲ್ಲಿ ಅರ್ಧ ಕಾಯುದ್ದು ಹಾಕಿ ಕುಯ್ಯಬೇಕೆಂದು ಸುಮಾರು ೪ ಅಡಿ ಉದ್ದ ೩ ಅಡಿ ಅಗಲ ೩ ಇಂಚಿನ ಗಾತ್ರವಿರುವ ಒಂದು ಕಲ್ಲು ನಿಲ್ಲುವದಕ್ಕೋಸ್ಕರ ಚೇಪು ಕೊಟ್ಟು ಒಂದು ಕಂಭಕ್ಕೆ ಒರಗಿಸಿ ನಿಲ್ಲಿಸಲ್ಪಟ್ಟಿತ್ತು. ಈ ಹುಡುಗನು ಹೋಗಿ ಆ ಚೇಪಿನ ಮೇಲೆ ಕಾಲಿಟ್ಟು ಕಲ್ಲನ್ನು ಒರಗಿಕೊಂಡು ಮೇಲೆ ಮಾಡಿರುವ ಕೆಲಸವನ್ನು ನೋಡುತ್ತಿದ್ದನಾಗ ಆ ಚೇಪು ಸಡಿಲವಾಗಿ ಆ ಕಲ್ಲು ಹುಡುಗನನ್ನು ಅಂಗತ್ತನಾಗಿ ನೂಕಿ ಅವನ ಕಾಲಿನಿಂದ ಕತ್ತಿನವರಿಗೂ ಬಿತ್ತು. ತಕ್ಷಣವೇ ಕೆಲವು ಆಳುಗಳು ಬಂದು ಕಲ್ಲನ್ನು ಎತ್ತಿ ಹುಡುಗನನ್ನು ಆಚೆಗೆ ತೆಗೆದರು. ಆದರೆ ಕೆಲವು ನಿಮಿಷಗಳ ಒಳಗೆ ಅವನು ಪ್ರಾಣ ಬಿಟ್ಟನು! ಈ ವರ್ತಮಾನವು ಅವನ ತಾಯಿ ಅಣ್ಣನಿಗೆ ತಿಳಿಯಿತು! ಅವರ ದುಃಖವನ್ನು ಎಷ್ಟು ಹೇಳಿದರೂ ತೀರದು! ಈ ವರ್ತಮಾನವು ಅರಮನೆ ಆಫೀಸರಿಗೆ ತಿಳಿದ ಕೂಡ್ಲೆ ಅವರು ಬಂದು ಇದನ್ನು ನೋಡಿ ಅವರುಗಳಿಗೆ ಸಮಾಧಾನ ಹೇಳಿ ಮುಂದಲ ಕಾರ್ಯಕ್ಕಾಗಿ ಕೆಲವು ಹಣವನ್ನು ಕೊಟ್ಟರು.

೨ ವೇಷಹಾಕಿ ಮೋಸಹೋದ ಸಂಗತಿ

ಚಿತ್ರದುರ್ಗದ ತಾ॥ ತುರುವನೂರು ಮಜರೆ ಬಂಗಾರಕ್ಕನಹಳ್ಳಿಯೆಂಬ ಗ್ರಾಮದಲ್ಲಿ ಸುಣ್ಣಗಾರಜಾತಿಯವನಾದ ಸುಮಾರು ೩೮ ವರುಷ ವಯಸ್ಸುಳ್ಳ ಯಂಜನೆಂಬುವನು ನಿನ್ನೆ ಶನಿವಾರದ ರಾತ್ರಿ ಸದರಿ ಗ್ರಾಮದಲ್ಲಿ ಪ್ರಹ್ಲಾದನ ಚರಿತ್ರೆಯೆಂಬ ಆಟವನ್ನು ಆಡಿದರಂತೆ. ಅದರಲ್ಲಿ ಮೇಲ್ಕಂಡ ಯಂಜನೆಂಬುವನು ನರಸಿಂಹನ ವೇಷವನ್ನು ಹಾಕಿ ವೇಷಕ್ಕೆ ತಕ್ಕ ಬೈರೂಪವೆಂಬ ಗಾದೆಗೆ ಸರಿಯಾಗಿ ಚರಿತ್ರೆಗಳಲ್ಲಿ ವರ್ಣಿಸಿದಂತೆ ಅಂದರೆ ಉಗ್ರನರಸಿಂಹನು ತನ್ನ ಭಕ್ತನಾದ ಪ್ರಹ್ಲಾದನನ್ನು ಕಾಪಾಡುವ ಉದ್ದೇಶ್ಯ ಕಂಭದಲ್ಲಿ ಉದ್ಭವಿಸಿ ಕಣ್ಣುಗಳಲ್ಲಿ ಕಿಡಿಗಳನ್ನು ಶ್ವಾಸಗಳಲ್ಲಿ ಕಾರ್ಚೋಗೆಯನ್ನು ಸುರಿಸುತ್ತಾ ಹಿರಣ್ಯಕಶಿಪುವೆಂಬ ರಾಕ್ಷಸನನ್ನು ನೋಡಿದನೆಂಬ ಸಂದರ್ಭದಲ್ಲಿ ತಾವು ಅದರಂತೆ ನಟಿಸಿ ತೋರಿಸಿ ಜನರನ್ನು ಮೆಚ್ಚಿಸಬೇಕೆಂದು ಸದರಿ ಆಟಕ್ಕೆ ಸೇರಿದ ಜನಗಳು ಒಂದು ಗೇಣುದ್ದವಾದ ಬಿದರ ಕಟ್ಟಿಗೆಯ ತುದಿಯನ್ನು ಮೂರುಪಾಲಿಗೆ ಸೀಳಿ ಅದರಲ್ಲಿ ಒಂದು ಮದ್ದು ತುಂಬಿದ ಬಿರಿಸಿನ ಕುಡಿಕೆಯನ್ನು ಸಿಕ್ಕಿಸಿ ನರಸಿಂಹನ ವೇಷ ಹಾಕಿದ್ದ ಯಂಜನೆಂಬುವನ ಬಾಯಿಯಲ್ಲಿ ಬಿದರಕೋಲಿನ ಮತ್ತೊಂದು ತುದಿಯನ್ನು ಕಚ್ಚುವುದಕ್ಕೆ ಕೊಟ್ಟು ಕಂಭದಂತೆ ಕಟ್ಟಿದ ಪರದೆ ಒಳಗಿನಿಂದ ವೇಷವನ್ನು ಬೈಲಿಗೆ ತೆಗಿಯುತ್ತಲೇ ಬಿರಿಸಿನ ಕುಡಿಕೆಗೆ ಬೆಂಕಿ ಹಚ್ಚಿದರಂತೆ. ಬಿರಿಸಿಗೆ ಬೆಂಕಿ ಹತ್ತಿ ಅದರ ಪಾಪಾಸಿ ಅಂದರೆ ನಿಂತೀತೆ! ಮದ್ದು ಘೋರವಾಗಿ ಸುಡುಮಾಗ್ಯ ಸಿಡಿದು ಹೊಡೆದು ನರಸಿಂಹನ ವೇಷ ಹಾಕಿದ್ದ ಯಂಜನ ಮುಖವು ಸುಟ್ಟು ಸಿಂಹನ ಮುಖವೇ ಆಯಿತು. ಈ ವರ್ತಮಾನವನ್ನು ಕೇಳಿ, ಬೆಳಿಗ್ಗೆ ಸದರಿ ಗ್ರಾಮದ ಶಾನುಭೋಗ ಹನುಮಂತಪ್ಪನು ನಾನು ಸಹ ನಮ್ಮ ಊರಿಗೆ ಎರಡು ಮೈಲಿ ದೂರದಲ್ಲಿರುವ ಸದರಿ ಹಳ್ಳಿಗೆ ಹೋಗಿ ನೋಡುವಲ್ಲಿ ಮೇಲೆ ಬರೆದಿರುವ ಸಂಗತಿಯು ನಿಜವಾಗಿದ್ದಿತೆಂದು ಗೊತ್ತಾಯಿತು. ಸದರಿ ಯಂಜನಿಗೆ ಒಂದು ಕಣ್ಣಿಗೆ ಬಹಳ ಪೆಟ್ಟು ಬಿದ್ದು ಕೆಟ್ಟುಹೋಗಿರುತ್ತೆ. ಮುಖವೆಲ್ಲಾ ಬೊಬ್ಬೆಗಳಾಗಿರುತ್ತವೆ.

ಒಕ್ಕಲಿಗರ ಸಂಘ.

ಕಳೆದ ಜನವರಿ ೨೭ ನೆ ತಾರೀಖು ಭಾನುವಾರದ ದಿವಸ ಈ ಸಂಘದ ಕಾರ್ಯನಿರ್ವಾಹಕ ಸಭೆಯವರು ಮೀಟಿಂಗ್ ನಡೆಸಿ ಕೆಲವು ಮುಖ್ಯವಾದ ತೀರ್ಮಾನಗಳನ್ನು ಮಾಡಿಕೊಂಡರು. ಯಾವವೆಂದರೆ—

(೧) ಸಬ್ ಕಮಿಟಿಯವರು ಸಿದ್ಧ ಮಾಡಿದ ಸಂಘದ ನಿಬಂಧನೆಗಳನ್ನು ಅಂಗೀಕರಿಸಿ ಅವುಗಳಿಗನುಸಾರವಾಗಿ ಸಂಘವನ್ನು ಸನ್ ೧೯೦೪ ನೆ ಇಸವಿಯಲ್ಲಿ ಜಾರಿಗೆ ಬಂದ ಸೊಸೈಟಿ ರೆಗ್ಯುಲೇಷನ್ ಎಂಬ ಕಾನೂನಿಗೆ ಒಳಪಡಿಸಿ ರಿಜಿಸ್ಟರು ಮಾಡಿಸತಕ್ಕದ್ದು.

(೨) ಬೆಂಗಳೂರು ಕೋಟೆಯ ಬಳಿ ಸಿಟಿ ಇನ್‌ಸ್ಟಿಟ್ಯೂಟ್ ಪಕ್ಕದಲ್ಲಿರುವ ಜಮೀನು, ಅದರ ಪಕ್ಕದಲ್ಲಿರುವ ಕೆರೆ ಅಂಗಳ ಸಹ, ಸಂಘದವರು ಸ್ಥಾಪಿಸಬೇಕೆಂದು ಉದ್ದೇಶಿಸಿರುವ ಪಾಠಶಾಲೆ, ವಿದ್ಯಾರ್ಥಿನಿಲಯ ಮುಂತಾದ ಕಟ್ಟಡಗಳನ್ನು ಕಟ್ಟುವುದಕ್ಕೆ ಬಹಳ ಅನುಕೂಲವಾದ ಸ್ಥಳವೆಂತಲೂ, ಕೆರೆ ಅಂಗಳಗಳನ್ನು ಮುಚ್ಚಿ ಕೊಳಕ್ಕಾಗಿ ಮುಫತ್ತಾಗಿ ಕೊಡಲು ಸರ್ಕಾರದವರು ಉದ್ದೇಶಿಸಿರುವುದಕ್ಕೋಸ್ಕರ ಸಂಘದವರು ಸರ್ಕಾರದವರಿಗೆ ತಮ್ಮ ವಂದನೆಗಳನ್ನು ಸೂಚಿಸಬೇಕೆಂತಲೂ; ಮತ್ತು ಸರ್ಕಾರದವರು ಇನ್‌ಸ್ಟಿಟ್ಯೂಟ್ ಪಕ್ಕದಲ್ಲಿರುವ ಜಮೀನನ್ನು ಮಾಲೀಕರಿಂದ ಕಡಿಮೆ ಕ್ರಯಕ್ಕೆ ಕೊಡಿಸಿಕೊಡಬೇಕೆಂತಲೂ ತೀರ್ಮಾನಿಸಿದ ವಿಷಯಗಳನ್ನು ಕುರಿತು ಬೆಂಗಳೂರು ಡಿ॥ ಡೆಪ್ಯುಟಿಕಮಿಷನರ್ ಸಾಹೇಬರವರು ಸಂಘದವರಿಗೆ ಬರೆದಿದ್ದ ಲೇಖನಗಳಿಗೆ ಉತ್ತರವಾಗಿ ಅವರಿಗೆ ಜವಾಬು ಬರೆಯತಕ್ಕದ್ದು.

(೩) ಕ್ಷಿಪ್ರದಲ್ಲಿಯೇ ಸಂಘದ ಕನ್ನಡ ವಾರ ಪತ್ರಿಕೆಯನ್ನು ಛಾಪಿಸುವುದಕ್ಕೆ ಅತ್ಯವಶ್ಯಕವಾಗಿರುವ ಕಾಗದ ಮತ್ತು ಹೊಸ ಅಚ್ಚು ಮೊಳೆಗಳನ್ನು ಕೊಂಡುಕೊಳ್ಳುವುದಕ್ಕೆ ಆಗುವಷ್ಟು ಹಣವನ್ನು ಮುಂಜೂರ್ ಮಾಡತಕ್ಕದ್ದು.

ಸಮಸ್ತ ಜನರು ತೆಗೆದುಕೊಳ್ಳಲು ಅನುಕೂಲವಾಗಿರುವಹಾಗೆ "ಒಕ್ಕಲಿಗರ ಪತ್ರಿಕೆ" ಯ ವಾರ್ಷಿಕ ಚಂದಾ ಮೊಬಲಗನ್ನು ಸ್ಥಳದವರಿಗೆ ೧ ರೂಪಾಯಿಯಂತೆಯೂ, ಪರಸ್ಥಳದವರಿಗೆ ೧ ರೂಪಾಯಿ ೪ ಆಣೆ (ಅಂಚೆ ಹಾಸಲ್ ಸಹಿತ) ಯಂತೆಯೂ ಗೊತ್ತು ಮಾಡಬೇಕೆಂದಿದೆ. ಆದ್ದರಿಂದ ಈ ಪತ್ರಿಕೆಗೆ ಚಂದಾದಾರರಾಗಬೇಕೆಂದು ಅಪೇಕ್ಷೆಯುಳ್ಳವರೆಲ್ಲರೂ ಸಕ್ರೆಟರಿಯವರಿಗೆ ದಯವಿಟ್ಟು ತಮ್ಮ ಅಭಿಪ್ರಾಯವನ್ನು ತಿಳಿಸಬಹುದು.

ಇಂಡಿಯಾ ದೇಶದ ವೃತ್ತಾಂತಗಳು.

ಅಫಘಾನಿಸ್ಥಾನದ ಅಮೀರರು ಕಲ್ಕತ್ತಾ ಮ್ಯುನಿಸಿಪಾಲಿಟಿಯವರಿಂದಾಗಲಿ ಬೊಂಬಾಯಿ ಮ್ಯುನಿಸಿಪಾಲಿಟಿಯವರಿಂದಾಗಲಿ ಅಡ್ರೆಸ್ಸುಗಳನ್ನು ಅಂಗೀಕರಿಸುವುದಿಲ್ಲವೆಂದು ತಿಳಿಸಿಬಿಟ್ಟರು.

****

ಕಲ್ಕತ್ತಾ ಪಟ್ಟಣದ ಗಾರ್ಡನ್ ರೀಚ್ ಎಂಬ ಭಾಗದಲ್ಲಿ ಒಂದು ಹತ್ತಿಯ ಕಾರ್ಖಾನೆಗೆ ಕಳೆದವಾರ ಬೆಂಕಿಬಿದ್ದು ೪-೫ ಲಕ್ಷ ರೂಪಾಯಿನ ಸರಕುಗಳೂ ಮಗ್ಗಗಳೂ ಎಲ್ಲಾ ಸುಟ್ಟು ಬೂದಿಯಾಗಿರುತ್ತವೆ.

****

ಭಾವನಗರದ ಸಮುದ್ರ ತೀರದಲ್ಲಿ ದೊಡ್ಡ ಹಡಗುಗಳು ಸುರಕ್ಷಿತವಾಗಿ ನಿಲ್ಲುವಂತೆ ಕೆಲವು ಕಾಮಗಾರಿ ಮಾಡಿಸಬೇಕೆಂದು ಮಹಾರಾಜರವರು ೨,೩೦,೦೦೦ ರೂಪಾಯಿ ಸ್ಯಾಂಕ್ಷನ್ ಮಾಡಿ, ಅದಕ್ಕೆ ಇಬ್ಬರು ಇಂಜನಿಯರುಗಳನ್ನು ಹೊಸದಾಗಿ ನೇಮಿಸಿರುತ್ತಾರೆ.

****

ಕೊಯಮುತ್ತೂರಿನಲ್ಲಿ ವ್ಯವಸಾಯ ಶಾಸ್ತ್ರಶೋಧನೆಗೆ ಒಂದು ವಿದ್ಯಾಶಾಲೆಯನ್ನೂ ವ್ಯವಸಾಯ ಪರಿಶೋಧನಾಲಯವನ್ನೂ ಕಟ್ಟಿಸುವುದಕ್ಕೆ ಮದರಾಸ್ ಗವರ್ನ್‌ಮೆಂಟಿನವರು ೪,೪೩,೦೦೦ ರೂಪಾಯಿ ಸ್ಯಾಂಕ್ಷನ್ ಮಾಡಿದಾರೆ.

****

ನಾಯಿನರಿ ಮುಂತಾದ ಮೂಗು ಪ್ರಾಣಿಗಳಿಂದ ಕಡಿಸಿಕೊಂಡವರಿಗೆ ಚಿಕಿತ್ಸೆ ಮಾಡುವಂಥಾ ಒಂದು ಹೊಸ ಆಸ್ಪತ್ರೆಯನ್ನು ಥಾಂಡಾಂಗ್ ಎಂಬ ಊರಿನಲ್ಲಿ ಕಟ್ಟಬೇಕೆಂದು ರಂಗೂನ್ ಪಟ್ಟಣದ ಒಬ್ಬ ಐಶ್ವರ್ಯವಂತನು ಸರ್ಕಾರದವರ ವಶಕ್ಕೆ ೪೦,೦೦೦ ರೂಪಾಯಿ ಕೊಟ್ಟಿರುತ್ತಾನೆ.

****

ರಾಜಾ ಶ್ರೀನಾಥರಾಯ, ಬಾಬು ಜಾನಕೀನಾಥರಾಯ, ರಾಯ ಶ್ರೀನಾಥರಾಯ ಬಹದೂರ್ ಎಂಬೀ ಮೂರು ಮಂದಿ ದೊಡ್ಡ ಮನುಷ್ಯರು ಢಾಕಾ ನಗರದ ನವಾಬ್ ಖಾಜಾ ಸಾಲಿಮುಲ್ಲಾಯವರಿಂದ ತಮಗೆ ೧೬೩ ಸಾವಿರ ರೂಪಾಯಿ ಬರಬೇಕಾಗಿದೆ ಎಂದು ಅಲ್ಲಿನ ಸಬ್‌ಜಡ್ಜಿ ಕೋರ್ಟಿನಲ್ಲಿ ದಾವಾ ತಂದಿದಾರೆ.

****

ನಯಾಂ ರಾಜ್ಯದ ದೊರೆಯವರು ಪರಿವಾರ ಸಹಿತ ಮುಂದಿನ ಏಪ್ರೆಲ್ ತಿಂಗಳ ಮೊದಲನೆಯ ವಾರ ಪ್ರಯಾಣ ಮಾಡಿ, ತಾ. ೬ ಕ್ಕೆ ಸಿಲೋನ್ ದ್ವೀಪಕ್ಕೆ ಬಂದು ಒಂದೆರಡು ದಿನ ಅಲ್ಲಿ ತಂಗಿದ್ದು ಯೂರೋಪಿಗೆ ಹೋಗಿ ಒಂದು ವರುಷಕಾಲ ಅಲ್ಲಿನ ರಾಜ್ಯಗಳಲ್ಲೆಲ್ಲಾ ಸಂಚಾರ ಮಾಡಿಕೊಂಡು ಬರುತ್ತಾರೆಂದು ತಿಳಿಯುವುದು.

****

ಕಲ್ಕತ್ತಾ ಪಟ್ಟಣದ ಪ್ರಸಾದದಾಸ್ ಬೋರಲ್ ಕಂಪನಿಯವರು ೧೦ ರೂಪಾಯಿನ ಬಾಬತು ಒಂದು ಸಾವಿರ ನೋಟುಗಳನ್ನು ತಮ್ಮ ಜವಾನನಾಗಿದ್ದ ಜಯಬಂಧು ಉಪಾಧ್ಯಾಯ ಎಂಬುವವನ ವಶಕ್ಕೆ ಕೊಟ್ಟು ಆ ಹಣವನ್ನು ಬ್ಯಾಂಕಿಗೆ ಕಟ್ಟಿಬಾ ಎಂದು ಹೇಳಿ ಕಳುಹಿಸಿದರು. ಇನ್ನೂ ಹಣವೂ ಜವಾನನೂ ಪತ್ತೆಯೇ ಇಲ್ಲ.

****

ಬೊಂಬಾಯಿ ಪಟ್ಟಣದ ವೈಟ್ ಎಂಬ ಭಾರೀ ಕಂಪನಿಯಲ್ಲಿ ಅಸಿ॥ ಸೂಪರಿಂಟೆಂಡೆಂಟಾಗಿದ್ದ ಥಾಮಸ್ ವಿಲ್ಯಂ ಪೆರ್ರಿಟ್ ಎಂಬುವನು ಆ ಕಂಪನಿಯವರಿಗೆ ಮೋಸ ಪಡಿಸಿ ೧೬ ಸಾವಿರ ರೂಪಾಯಿ ತನಗೆ ತಿಂದು ಬಿಟ್ಟನು. ಇವನನ್ನು ದಸ್ತಗಿರಿ ಮಾಡಿ ಅಲ್ಲಿನ ಮ್ಯಾಜಿಸ್ಟ್ರೇಟರು ಅವನಿಗೆ ಮೂರು ವರುಷ ಕಠಿಣ ಸಜವನ್ನೂ ೧,೫೦೦ ರೂಪಾಯಿ ಜುಲ್ಮಾನೆಯನ್ನು ವಿಧಿಸಿರುತ್ತಾರೆ.

****

ಬಳ್ಳಾರಿ ಜಿಲ್ಲೆಯಲ್ಲಿ ಮೈಸೂರು ಸರಹದ್ದಿನಿಂದ ೬ ಮೈಲಿ ಆಚೆ ಮ್ಯಾಂಗನೀಸ್ ಎಂಬ ಲೋಹವು ಸಿಕ್ಕುವ ವಿಸ್ತಾರವಾದ ಭೂಪ್ರದೇಶವನ್ನು ಬೆಂಗಳೂರಿನ ಕಂಪನಿಯವರು ಕಂಡುಹಿಡಿದಿದಾರೆ. ಆ ಜಾಗದಲ್ಲಿ ಅರೆವಾಸಿಗಿಂತಲೂ ಹೆಚ್ಚಾಗಿಯೇ ಲೋಹವಿದೆ ಎಂತಲೂ, ಆ ಸ್ಥಳದಿಂದ ರೈಲ್ ರಸ್ತೆಗೂ ಬಹಳ ಸಮೀಪವಾಗಿದೆ ಎಂತಲೂ ತಿಳಿದು ಬಂದಿದೆ.

****

ಮದರಾಸ್ ಆಧಿಪತ್ಯದೊಳಗೆಲ್ಲಾ ಒಂಗೋಲಿನ ಗೋಕಾಯಿಗಳೇ ಬಹಳ ಉತ್ಕೃಷ್ಟವಾದವೆಂದು ಹೆಸರಾಗಿದೆ. ಅಲ್ಲಿನ ರೈತರೂ ಪ್ರಜೆಗಳೂ ದನಗಳನ್ನು ಬಹಳ ಆಸ್ಥೆಯಿಂದ ಸಾಕುತ್ತಾರೆ. ಗವರ್ನ್‌ಮೆಂಟಿನವರು ಆ ಜನರಿಗೂ ಚಿತ್ತೂರು, ಬೊಬ್ಬಿಲಿ ಊರುಗಳವರಿಗೂ ಪ್ರೋತ್ಸಾಹ ಪಡಿಸುವದಕ್ಕಾಗಿ ಗೋಕಾಯಿಗಳ ಪ್ರದರ್ಶನವನ್ನು ನಡಿಸಿ, ಬಹುಮಾನ ಕೊಡಬೇಕೆಂದು ೨,೦೦೦ ರೂಪಾಯಿ ಸ್ಯಾಂಕ್ಷನ್ ಮಾಡಿದಾರೆ.

****

ಬರ್ಮಾ ಆಧಿಪತ್ಯಕ್ಕೆ ಸೇರಿದ ರಂಗೂನ್ ಪಟ್ಟಣದಿಂದ ೯ ಮೈಲಿ ದೂರದಲ್ಲಿರುವ ಇನ್‌ಸೇನ್ ಎಂಬ ದೊಡ್ಡ ಊರಿನಲ್ಲಿ ಕಳೆದ [illegible] ಬಕ್ರೀದ್ ಹಬ್ಬದ ದಿನ ಹಿಂದೂಗಳಿಗೂ ಮಹಮ್ಮದೀಯರಿಗೂ ಪೂರಾ ಮಾರಾಮಾರಿ ನಡೆಯಿತು. ಇಬ್ಬರು ಕೊಲ್ಲಲ್ಪಟ್ಟರು, ಹತ್ತಾರು ಮಂದಿ ಗಾಯಪಟ್ಟು ಆಸ್ಪತ್ರೆಗಳಲ್ಲಿದ್ದಾರೆ. ಪೋಲೀಸಿನವರು ಹೋಗಿ ಸಮುದಾಯವನ್ನು ಹಿಂಡಿ ಹಾಕಿ ಪ್ರಜಾ ನೆಮ್ಮದಿಯನ್ನು ಕಾಪಾಡುತ್ತಿದಾರೆಂದು ತಂತೀವರ್ತಮಾನ ಬಂದಿದೆ.

****

ಬೊಂಬಾಯಿ ಪಟ್ಟಣದಲ್ಲಿ ಪುರಾಭಿವೃದ್ಧಿ ಸಂಘದವರು ಒಂದು ಕಿರು ರಸ್ತೆಯನ್ನು ವಿಸ್ತರಿಸಬೇಕಾಗಿ ಬಂದಿದೆ. ಈ ರಸ್ತೆಯಲ್ಲಿ ಲಿಂಗಾಯಿತರ ಒಂದು ದೇವಸ್ಥಾನವಿರುವುದು. ಅದನ್ನು ಕೆಡವುವ ಭಾಗದಲ್ಲಿ ಅಲ್ಲಿನ ಲಿಂಗಾಯತ ಪ್ರಜೆಗಳು ಒಗ್ಗಟ್ಟಾಗಿ ಅಡ್ಡಿ ಮಾಡಿದರು. ಅಧಿಕಾರಿಗಳು ಆ ದೇವಸ್ಥಾನವಿರುವಷ್ಟು ಸ್ಥಳಕ್ಕೆ ೩,೦೦೦ ರೂಪಾಯನ್ನೂ ಲಿಂಗವನ್ನು ಬೇರೆಕಡೆ ಪ್ರತಿಷ್ಠೆ ಮಾಡುವ ಪೂಜೆ ಅಭಿಷೇಕಾದಿ ಕಾರ್ಯಗಳಿಗೆ ೩೦೦ ರೂಪಾಯನ್ನು ಪ್ರತಿಫಲ ಕೊಡುವುದಾಗಿ ಹೇಳಿದಾಗ್ಯೂ ಲಿಂಗಾಯಿತ ಜನರು ಒಪ್ಪಲಿಲ್ಲ. ಈಗ ಇನ್ನೊಂದು ಕಡೆ ಅಂಥಾ ದೇವಸ್ಥಾನವನ್ನೇ ಸರ್ಕಾರಿಯಾಗಿ ಕಟ್ಟಿಸಿಕೊಟ್ಟು, ಪ್ರತಿಷ್ಠೆ ಅಭಿಷೇಕಗಳಿಗೆ ವಿಶೇಷ ಪ್ರತಿಫಲವನ್ನು ಕೊಡಬೇಕೆಂದು ಯೋಚಿಸಿರುತ್ತಾರೆ.

****

ಕಳೆದ ಸೆಪ್ಟೆಂಬರ್ ತಿಂಗಳಲ್ಲಿ ಸಿಮ್ಲಾ ಪಟ್ಟಣದಲ್ಲಿ ಹಿಂದೂಸ್ಥಾನದ ಎಲ್ಲಾ ಭಾಗಗಳಿಂದಲೂ ಪರಸ್ಪರ ಸಹಾಯಕ ಸಂಘಗಳ ರೆಜಿಸ್ಟ್ರಾರುಗಳು ಸಭೆ ಸೇರಿದ್ದರಷ್ಟೆ. ಮೈಸೂರು ಗವರ್ನ್‌ಮೆಂಟ್ ರೆಜಿಸ್ಟ್ರಾರ್ ಮಿ॥ ಎಂ. ಶಾಮರಾಯರು ಆ ಸಮಯದಲ್ಲಿ ಈ ಸಂಸ್ಥಾನದವರು ಮಾಡಿರುವ ಹೊಸ ಕಾನೂನನ್ನು ವಿವರಿಸಿ ತಿಳಿಸಿದ್ದಲ್ಲದೆ ಅದರಂತೆ ಅನೇಕ ಪರಸ್ಪರ ಸಹಾಯಕ ಸಂಘಗಳು ಸ್ಥಾಪನೆಯಾಗಿ ನಡೆಯುತ್ತಿವೆ ಎಂದು ವಿವರಿಸಿದರು. ಕಳೆದ ೧೯೦೬ನೆ ಮಾರ್ಚಿ ಆಖೈರಿನೊಳಗೆ ಹಿಂದೂಸ್ಥಾನದಲ್ಲೆಲ್ಲಾ ೮೯೦ ಸಂಘಗಳಿದ್ದುವು. ಈ ಪೈಕಿ ೮೩೩ ಸಂಘಗಳು ಹಳ್ಳಿಗಳಲ್ಲೂ ಉಳಿದವು ಪಟ್ಟಣಗಳಲ್ಲೂ ಜಾರಿಯಲ್ಲಿದ್ದವು. ಇಂಥಾ ಸಂಘಗಳನ್ನು ಇನ್ನೂ ಹಿರಿದಾಗಿ ಏರ್ಪಾಡು ಮಾಡುವುದರ ಮೂಲಕ ಪ್ರಜೆಗಳಲ್ಲಿ ಪರಸ್ಪರವಾದ ನಂಬಿಕೆಯನ್ನೂ ಮಿತ ವ್ಯಯವನ್ನೂ ವೃದ್ಧಿ ಪಡಿಸಬೇಕೆಂದು ಆ ಸಮಾಜದ ಮೆಂಬರುಗಳು ಒಪ್ಪಿ ತೀರ್ಮಾನ ಮಾಡಿರುತ್ತಾರೆ.

****

ವಿಲಾಯಿತಿಯ ಮಹಾರಾಜಾಧಿರಾಜಚಕ್ರವರ್ತಿಯವರ ಸಹೋದರರಾದ ಡ್ಯೂಕ್ ಆಫ್ ಕನಾಟ್ ಯವರ ಪತ್ನಿ ಪರಿವಾರ ಸಹಿತ ಕಳೆದ ವಾರ ಸಿಲೋನ್ ದ್ವೀಪಕ್ಕೆ ಸೇರಿದ ಕೊಲಂಬೋ ನಗರಕ್ಕೆ ಬಂದು ಬಿಡಾರ ಇಳಿದರು. ಅಲ್ಲಿನ ಸರ್ಕಾರದವರು ಯಥಾಮರ್ಯಾದೆಯಿಂದ ಅವರನ್ನು ಎದುರುಗೊಂಡು, ರಾಣಿಭವನವೆಂಬ ಬಂಗಲೆಗೆ ಕರೆದೊಯ್ದು ಇಳಿಸಿದರು. ಒಂದು ದಿನವೆಲ್ಲಾ ಡ್ಯೂಕರವರು ಅಲ್ಲಿ ತಂಗಿದ್ದು ಅಲ್ಲಿನವರು ಮಾಡಿದ ಸತ್ಕಾರಗಳನ್ನು ಸ್ವೀಕರಿಸಿ ಮರುದಿನ ದೆಹಲಿ ಎಂಬ ಹಡಗು ಹತ್ತಿ ಪ್ರಯಾಣ ಮಾಡಿ ಬರ್ಮಾ ಆಧಿಪತ್ಯಕ್ಕೆ ದಯಮಾಡಿ ರಂಗೂನ್, ಮಾಂಡಲೇ, ಪ್ರೋಂ ಮೊದಲಾದ ಮುಖ್ಯ ನಗರಗಳಲ್ಲಿ ಸಂಚಾರ ಮಾಡುತ್ತಿರುವರು. ಮುಂದೆ ಮಾರ್ಚಿ ೫ ಕ್ಕೆ ಅಲ್ಲಿಂದ ಕಲ್ಕತ್ತೆಗೆ ಬಿಜಯಿಸಿ, ಒಂದು ವಾರದ ತನಕ ವೈಸರಾಯಿ ಯವರ ಆತಿಥ್ಯದಲ್ಲಿದ್ದು ಮಾರ್ಚಿ ತಾ. ೧೩ ರಲ್ಲಿ ಕೊಲಂಬೋ ಪಟ್ಟಣವನ್ನು ಸೇರಿ, ಅಲ್ಲಿಂದ ಹಡಗು ಹತ್ತಿ ತಾ. ೧೯ಕ್ಕೆ ವಿಲಾಯಿತಿಯಲ್ಲಿ ಇಳಿಯುವರೆಂದು ಪ್ರಕಟವಾಗಿದೆ.

***

ಬಂಗಾಳಾ ಆಧಿಪತ್ಯದ ಲೆಫ್ಟಿನೆಂಟ್ ಗವರ್ನರ್ ಸರ್ ಆಂಡ್ರು ಫ್ರೇಸರ್ ಯವರು ಸ್ತ್ರೀವಿದ್ಯಾಭ್ಯಾಸವನ್ನು ಇನ್ನೂ ಹೆಚ್ಚಾಗಿಯೂ ವಿಸ್ತಾರವಾಗಿಯೂ ಮಾಡಿಸುವುದಕ್ಕೆ ಒಂದು ಹೊಸ ಏರ್ಪಾಡನ್ನು ಮಾಡುವುದಾಗಿ ಅಪ್ಪಣೆ ಕೊಡಿಸಿದೆ. ವಯಸ್ಸು ಮೀರಿದ ಬಾಲಿಕೆಯರನ್ನು ದೊಡ್ಡ ಮನುಷ್ಯರ ಮನೆಗಳ ಹೆಂಗಸರು ಮಕ್ಕಳನ್ನೂ ಬಹಿರಂಗವಾದ ಪಾಠಶಾಲೆಗಳಿಗೆ ಕಳುಹಿಸದೇನೂ ಅವರ ವಿದ್ಯಾಭ್ಯಾಸಕ್ಕೆ ಮನೆಗಳಲ್ಲೇ ಏರ್ಪಾಡನ್ನು ಮಾಡದೇನೂ ಇರುವುದು ಎಲ್ಲರಿಗೂ ತಿಳಿದೇ ಇದೆ. ಹುಡುಗಿಯರಿಗಾಗಿ ಶಾಲೆಗಳನ್ನಿಟ್ಟು ನಡಿಸುವುದೇ ಸಾಲದು. ಗವರ್ನ್‌ಮೆಂಟಿನವರು ಒಂದು ವಿದ್ಯಾಶಾಲೆಯಲ್ಲಿ ಉಪಾಧ್ಯಾಯಿನಿಯರನ್ನು ತರಪೇತು ಮಾಡಿ, ಈ ಉಪಾಧ್ಯಾಯಿನಿಯರನ್ನು ಮನೆಮನೆಗೂ ಕಳುಹಿಸುವಿಯೂ, ಇವರ ಮೂಲಕ ಜನಾನಗಳಲ್ಲಿರುವ ಸಮಸ್ತ ಸ್ತ್ರೀಯರೂ ವಿದ್ಯೆ ಕಲಿಸುವಂತೆಯೂ ಏರ್ಪಾಡು ಮಾಡುವುದರಲ್ಲಿದಾರೆ. ಲೆಫ್ಟಿನೆಂಟ್ ಗವರ್ನರವರು ಈ ಉದ್ದೇಶಕ್ಕೆ ಒಂದು ಹುಕುಂ ಮಾಡಿ ಪ್ರಕಟಿಸಿರುವರು.

****

ಹಿಂದೂಸ್ಥಾನದಲ್ಲೂ ಏಷ್ಯಾಖಂಡದಲ್ಲೂ ಮೊದಲನೆಯ ಪಟ್ಟಣವೆಂದು ಪ್ರಸಿದ್ಧಿ ಹೊಂದಿರುವ ಕಲ್ಕತ್ತಾ ನಗರವನ್ನು ಈಗಿನ ಕಾಲಕ್ಕೆ ತಕ್ಕಂತೆ ಅಭಿವೃದ್ಧಿ ಮಾಡಿ ಕಟ್ಟಬೇಕೆಂದು ಗವರ್ನ್‌ಮೆಂಟಿನವರು ತೀರ್ಮಾನಿಸಿರುತ್ತಾರೆ. ಅಲ್ಲಿನ ಮ್ಯುನಿಸಿಪಾಲಿಟಿಯ ಉತ್ಪತ್ತಿಯಿಂದ ಈ ಅಭಿವೃದ್ಧಿ ಕಾರ್ಯಗಳನ್ನು ನಡಿಸುವುದಕ್ಕೆ ಸಾಕಾಗುವುದಿಲ್ಲವೆಂಬಂಶವನ್ನು ತಿಳಿದು ಬಂಗಾಳಾ ಸರ್ಕಾರದವರು ಒಂದೇ ಗಂಟಿನಲ್ಲಿ [illegible] ಲಕ್ಷ ರೂಪಾಯಿಯಂತೆ ಪುರಾಭಿವೃದ್ಧಿಗಾಗಿ ಸ್ಯಾಂಕ್ಷನ್ ಮಾಡುತ್ತಾ ಇರುವುದಾಗಿಯೂ ವಾಗ್ದಾನ ಮಾಡುವವರಾಗಿದಾರೆ. ಮ್ಯುನಿಸಿಪಲ್ ಉತ್ಪತ್ತಿಯ ಒಟ್ಟಿನಲ್ಲಿ ಪ್ರತಿ ವರುಷವೂ ಸುಮಾರು ಆರು ಲಕ್ಷ ರೂಪಾಯನ್ನು ಸರ್ಕಾರಕ್ಕೆ ಕಟ್ಟಬೇಕೆಂದು ಕೇಳುವರು. ಮ್ಯುನಿಸಿಪಾಲಿಟಿಯವರು ಕಲ್ಕತ್ತೆಯಿಂದ ಹೊರಕ್ಕೆ ಸಾಗಿಹೋಗುವ ನಾರಿನ ಮೇಲೆ [illegible]ಡಾ ೪ ಆಣೆಯಂತೆಯೂ, ಪ್ರಜೆಗಳು ಆಸ್ತಿಯನ್ನು ಪರಾಧೀನಪಡಿಸುವುದರ ಮೇಲೆ ಸೇಕಡಾ ೨ ರೂಪಾಯಿಯಂತೆಯೂ ಹೊಸ ತೆರಿಗೆಗಳನ್ನು ವಿಧಿಸುವರೆಂದು ತಿಳಿದುಬಂದಿದೆ.

****

ಕಲ್ಕತ್ತಾ ಪಟ್ಟಣದಲ್ಲಿ ಲಾರ್ಡ್ ಕರ್ಜನರವರು ವೈಸರಾಯರಾಗಿದ್ದಾಗ ವಿಕ್ಟೋರಿಯಾ ಮೆಮೋರಿಯಲ್‌ಹಾಲ್ ಎಂಬ ಭವ್ಯವಾದ ದೊಡ್ಡಕಟ್ಟಡವನ್ನು ಕಟ್ಟಿಸಬೇಕೆಂದು ಏರ್ಪಾಡುಮಾಡಿ ಹಿಂದೂಸ್ಥಾನದ ಸಕಲ ಪ್ರಜೆಗಳಿಂದಲೂ ದೇಶೀಯರಾಜರುಗಳಿಂದಲೂ ಅಪಾರವಾದ ಹಣವನ್ನು ಚಂದಾಮೂಲಕ ಕೂಡಿಸಿಟ್ಟು, ಆ ಕಟ್ಟಡಕ್ಕೆ [illegible] ಪ್ರಸಿದ್ಧ ಶಿಲ್ಪಿಗಳನ್ನೂ ಇಂಜನಿಯರುಗಳನ್ನೂ ಕರೆಸಿ ಅವರಿಂದ ಪ್ಲಾನ್, ಅಂದಾಜುಪಟ್ಟಿ ಮುಂತಾದುವನ್ನು ತಯಾರ್ಮಾಡಿಸಿದ್ದಲ್ಲದೆ, ೧೯೦೫ನೆ ಇಸವಿಯಲ್ಲಿ ಆ ಕಟ್ಟಡದ ತಳಹದಿಯನ್ನೂ ಹಾಕಿರುತ್ತಾರಷ್ಟೆ. ಹೀಗೆ ಆರಂಭೋತ್ಸವದಿಂದ ಆದ ಕಾಮಗಾರಿಯು ನಿಲ್ಲಿಸಲ್ಪಟ್ಟಿತ್ತು. ಈಗ ಅದರ ತಳಹದಿಯ ಮೇಲೆ ಕಟ್ಟಡವನ್ನು ಕಟ್ಟಬೇಕೆಂದು ನೋಡಿದಾಗ ಹದಿಯು ಅರ್ಧಂಗುಲ ಕುಸಿದು ಹೋಗಿದೆ ಎಂದು ಕಂಡುಬಂದಕಾರಣ ಇಂಡಿಯಾ ಗವರ್ನ್‌ಮೆಂಟಿನವರು ಮೂರು ಇಂಜನಿಯರುಗಳನ್ನು ನೇಮಕಮಾಡಿ, ಆ ಹದಿಯ ಶಕ್ತಿ ವಗೈರಾದ್ದನ್ನು ಪರೀಕ್ಷೆ ಮಾಡಿ ಅದರ ಮೇಲೆ ಕಟ್ಟಡವನ್ನು ಕಟ್ಟಬಹುದೇ ಎಂಬೀ ವಿಚಾರದಲ್ಲಿ ರಿಪೋರ್ಟು ಕೊಡಬೇಕೆಂದು ಹುಕುಂ ಕೊಟ್ಟಿದಾರೆ.

****

ಜುನಾಘಢ ಸಂಸ್ಥಾನದಲ್ಲಿರುವ ಲವಶಂಕರ ಲಕ್ಷ್ಮೀದಾಸ್ ಎಂಬ ಪುಣ್ಯಾತ್ಮನು ಉತ್ತರ ದೇಶದಲ್ಲಿ ಗೋಕಾಯಿಗಳೇ ಮೊದಲಾದ ಮೂಗುಪ್ರಾಣಿಗಳ ಸಂರಕ್ಷಣೆಗಾಗಿ ಬಹಳ ಧರ್ಮ ಕೆಲಸಗಳನ್ನು ಮಾಡಿ ಪ್ರಖ್ಯಾತಿ ಪಡೆದಿರುತ್ತಾನೆ. ಅಫಘಾನಿಸ್ಥಾನದ ಅಮೀರರು ಬಕ್ರೀದ್ ಹಬ್ಬದಲ್ಲಿ ಮಹಮ್ಮದೀಯರ್ಯಾರೂ ಗೋವುಗಳನ್ನು ಕೊಲ್ಲಕೂಡದು ಅಪ್ಪಣೆ ಕೊಡಿಸಿರುವದನ್ನು ಈ ಪುಣ್ಯಾತ್ಮನು ಕೇಳಿ ಹಿಂದೂಸ್ಥಾನದವರಿಗೆಲ್ಲಾ ಸೂಚಿಸಿರುವುದೇನೆಂದರೆ— ಇಂಥಾ ದಯಾಪೂರಿತ ಅಮೀರರು ಹಿಂದೂಸ್ಥಾನಕ್ಕೆ ಕಾಲಿಟ್ಟ ದಿನವನ್ನು ಪ್ರತಿ ವರುಷ ಈ ರಾಷ್ಟ್ರದ ಸಕಲ ಪ್ರಜೆಗಳೂ ದೊಡ್ಡ ಹಬ್ಬದಂತೆ ಆಚರಿಸಿ ಸಂತೋಷದಿಂದ ಕಳೆಯಬೇಕು. ಇದಲ್ಲದೆ ಹಿಂದುಗಳೆಲ್ಲಾ ಚಂದಾ [illegible] ದೆಹಲಿ ಪಟ್ಟಣದಲ್ಲಿ ಮಹಮ್ಮದೀಯ ಬಾಲಕರಿಗಾಗಿ ಒಂದು ವಿದ್ಯಾಲಯವನ್ನು ಕಟ್ಟಿಸಿಕೊಡಬೇಕು. ಅಫಘಾನಿಸ್ಥಾನದಲ್ಲಿರುವ ಮಹಮ್ಮದೀಯ ವಿದ್ಯಾಶಾಲೆಯಲ್ಲಿ ವಿದ್ಯಾರ್ಥಿಗಳ ಪೈಕಿ ಒಂದು ಉಪನ್ಯಾಸವನ್ನು [illegible]ಯುವಂಥಾತನಿಗೆ ಪ್ರತಿ ವರುಷವೂ ಅಮೀರರ ಹೆಸರು ಹೇಳಿ [illegible] ಒಂದು ಬಹುಮಾನವನ್ನು ಕೊಡಬೇಕೆಂತ ಇದಕ್ಕೆ ೧,೦೦೦ ರೂಪಾಯಿ ಫಂಡು ಹಾಕುತ್ತೇನೆ ಎಂಬುದೇ.

****

ಕಲ್ಕತ್ತಾ ಪಟ್ಟಣದಲ್ಲಿ ಥ್ಯಾಕರ್ ಸ್ಪಿಂಕ್ ಎಂಬ ಕಂಪನಿಯವರು ಒಂದು ಭಾರೀ ಪುಸ್ತಕದ ಅಂಗಡಿಯನ್ನಿಟ್ಟಿದಾರೆ. ಮುರ್ಷದಾಬಾದ್ ಪಟ್ಟಣಕ್ಕೆ ಸೇರಿದ ಅಜೀಂಗಂಜ್ ಎಂಬ ಪೋಸ್ಟ್ ಆಫೀಸಿನಿಂದ ಕಿಶೋರ್ ಮೋಹನ್ ಮಿಸ್ಸರ್ ಎಂಬೊಬ್ಬ ಬಂಗಾಳಿಯು ಮೇಲ್ಕಂಡ ಡಿಪೋವಿಗೆ ಕಾಗದ ಬರೆದು—"ನಮ್ಮ ಮಹಾರಾಜ ಕುಮಾರರಿಗೆ ೧,೫೦೦—೨,೦೦೦ ರೂಪಾಯಿಗಳ ಕ್ರಯಬಾಳುವಷ್ಟು ಪುಸ್ತಕಗಳು ಬೇಕಾಗಿವೆ. ನನ್ನ ಖರ್ಚುಗಳನ್ನೆಲ್ಲಾ ನೀನೇ ವಹಿಸಿ ಕೊಳ್ಳುವುದಾದರೆ ನಿಮ್ಮ ಡಿಪೋವಿನಲ್ಲೇ ನಾನು ಅಷ್ಟು ಪುಸ್ತಕಗಳನ್ನೂ ಕೊಂಡುಕೊಳ್ಳುತ್ತೇನೆ" ಎಂದು ಕಾಗದ ಬರೆದನು. ಡಿಪೋದವರು ಹಾಗೇ ಆಗಲೆಂದು ಒಪ್ಪಿಕೊಂಡರು. ಕಳೆದ ನವಂಬರ್ ೫ ರಲ್ಲಿ ಅವನು ಡಿಪೋಗೆ ಕಾಗದಾ ಬರೆದು—"ಇಂತಿಂಥಾ ಪುಸ್ತಕಗಳನ್ನೆಲ್ಲಾ ನನಗೋಸ್ಕರ ಬೇರೆತೆಗೆದಿಡಿ. ನಾನು ಬಂದು ದುಡ್ಡುಕೊಟ್ಟು ತೆಗೆದು ಕೊಳ್ಳುವೆನು" ಎಂದು ತಿಳಿಸಿದನು. ಅಂಗಡಿಯವರು ಹಾಗೇ ಅವನ ಪಟ್ಟಿಪ್ರಕಾರ ಪುಸ್ತಕಗಳನ್ನೂ ತೆಗೆದಿಟ್ಟು, ಅವನನ್ನು ಎದುರು ನೋಡುತಿದ್ದರು. ಅವನು ಅವರ ಅಂಗಡಿಗೆ ಹೋಗಿ ಮೊದಲನೆಯ ದಿನ ೪೫ ರೂಪಾಯಿ, ಎರಡನೆಯ ದಿನ ೧೨ ರೂಪಾಯಿ, ಈ ರೀತಿ ತನ್ನ ಖರ್ಚಿಗೆ ತೆಗೆದುಕೊಂಡನು. ತರುವಾಯ ಅಂಗಡಿಯವರಿಗೆ ಅವನು ಸಿಕ್ಕಲೇ ಇಲ್ಲ. ಅವರು ಪೋಲೀಸಿಗೆ ತಿಳಿಸಿದರು. ಪೋಲೀಸಿನವರು ಅವನನ್ನು ನಾಲ್ಕು ದಿನಗಳ ಮೇಲೆ ಹಿಡಿದರು. ಇವನು ಮೇಲ್ಕಂಡ ರೀತಿಯಾಗಿ ಕಲ್ಕತ್ತೆಯ ಇನ್ನೂ ಕೆಲವು ಪುಸ್ತಕಗಳ ಅಂಗಡಿಯವರನ್ನು ಮೋಸಮಾಡಿರುವನೆಂದೂ ತಿಳಿದು ಬಂದಿದೆ.

****

ಕಲ್ಕತ್ತಾ ಪಟ್ಟಣದಲ್ಲಿ ಬಂಗಾಳಾ ಸ್ತ್ರೀಯರು "ಸಾಧಕ ಹಿತ" ಎಂಬೊಂದು ಸಂಘವನ್ನು ಮಾಡಿಕೊಂಡು, ಸ್ತ್ರೀಯರು ಪರದೇಶಗಳಿಂದ ಬರುವ ಪದಾರ್ಥಗಳನ್ನು ಕೊಂಡು ಉಪಯೋಗಿಸಕೂಡದೆಂತಲೂ ಸ್ವದೇಶೀ ವಸ್ತುಗಳನ್ನೇ ಕೊಂಡುಕೊಳ್ಳಬೇಕೆಂತಲೂ ಸಂಕಲ್ಪ ಮಾಡಿಕೊಂಡಿದಾರೆ. ಹಿಂದಿನ ಸೋಮವಾರ ಕಾಳೀಘಾಟಿನಲ್ಲಿ ಸಾವಿರಾರು ಮಂದಿ ಗಂಡಸರೂ ಹೆಂಗಸರೂ ಗಂಗಾ ಸ್ನಾನಕ್ಕೆ ಸೇರಿದ್ದಾಗ ಮೇಲ್ಕಂಡ ಸ್ತ್ರೀ ಸಂಘದವರು ಅಲ್ಲಲ್ಲಿ ಸ್ತ್ರೀಯರ ಕುರಿತು—"ನಮಗೆ ಒಂದು ದಾನವನ್ನು ಮಾಡಬೇಕು" ಎಂಬು

...ಮಾಡಿದರು ಸ್ತ್ರೀಯರೆಲ್ಲಾ—"ಜ್ಞಾಮನಿವಾರಣಾರ್ಥವಾಗಿ ...ದಂತೆ ದ್ರವ್ಯ ಧವಸ ಧಾನ್ಯಾದಿಗಳನ್ನೇ ಕೊಟ್ಟಿರುತ್ತೀವಲ್ಲ ...ನ್ನೇನಾಗಬೇಕೆಂದು ಅಪೇಕ್ಷಿಸುತ್ತೀರಿ? ಎಂದು ಕೇಳಿದರು ...ಆ ಸಂಘದ ಸ್ತ್ರೀಯರು—"ನೀವು ಕೊಟ್ಟದ್ದು ಸರಿ ಈಗ ...ರಾಷ್ಟ್ರದಿಂದ ಕ್ಷಾಮವನ್ನು ನಿರ್ನಾಮ ಮಾಡುವಂಥಾ ವಿಚಾರ ...ಅದನ್ನು ನೀವುಗಳೆಲ್ಲಾ ಆಲಿಸಿ ನಡೆಸಿಕೊಡಬೇಕು ಅದೇ ...ಈ ದಿನ ಈ ಗಂಗೆಯ ದಡದಲ್ಲಿ ನಿಂತು ನೀವುಗಳೆಲ್ಲಾ ಈ ...ಈ ರಾಷ್ಟ್ರದಲ್ಲಿ ತಯಾರಾಗುವಂಥಾ ವಸ್ತುಗಳನ್ನೇ ...ಉಪಯೋಗಿಸುತ್ತೇವೆಂತಲೂ, ಅನ್ಯ ದೇಶಗಳ ಸರಕನ್ನ...

ರಷ್ಯಾ ರಾಜ್ಯದಲ್ಲಿ ಲಕ್ಷಾಂತರ ಜನರು ಕ್ಷಾಮ ಪೀಡಿತರಾಗಿ ಬಹಳ ಕಷ್ಟಪಡುತ್ತಿದ್ದಾರೆ. ಅವರ ಕಷ್ಟವನ್ನು ನಿವಾರಣೆ ಮಾಡುವುದಕ್ಕೆ ಯೂರೋಪಿನವರೆಲ್ಲಾ ಧನಿಕರವಿಟ್ಟು ದ್ರವ್ಯಾದಿ ಸಹಾಯ ಸಂಪತ್ತಿಗಳನ್ನು ಒದಗಿಸುವುದು ಪರಮಾವಶ್ಯವಾಗಿದೆ ಎಂದು ಲಂಡನ್ ಪಟ್ಟಣದಲ್ಲಿ ಟೈಂಸ್ ಎಂಬ ಪತ್ರಿಕೆಗೆ ಅಲ್ಲಿಂದ ಒಬ್ಬ ದೊಡ್ಡ ಮನುಷ್ಯನು ಬರೆದಿರುತ್ತಾನೆ.

* * * *

ದಕ್ಷಿಣ ಆಫ್ರಿಕಕ್ಕೆ ಸೇರಿದ ಆರೆಂಜ್ ನದೀ ಸ್ವಾಸ್ಥ್ಯದಲ್ಲಿ ಗುಣಗಳ ಇನ್ಸ್‌ಪೆಕ್ಟರು ಆ ಪ್ರಾಂತ್ಯದ ಅನೇಕ ಕಡೆಗಳಲ್ಲಿ ಸಂಚಾರ ಮಾಡಿ...

...ಗಳಿಗೆ ಹೋಗಿ ತಮ್ಮ ಸಮ್ಮತಿಯನ್ನು ಹಾಕಿಬರುವದಿಲ್ಲ. ಕೆಲವರು ತಮಗೆ ಆ ಹಕ್ಕಿದ್ದರೂ ಇಲ್ಲದಂತೆ ಸುಮ್ಮನೆ ತಟಸ್ಥರಾಗಿದ್ದುಬಿಡುತ್ತಾರೆ. ಇದರಿಂದ ಬಹು ಪ್ರಜಾ ಸಮ್ಮತಿಯನ್ನು ಪಡೆದು ಚುನಾಯಿಸಲ್ಪಟ್ಟ ಮೆಂಬರುಗಳ್ಯಾರೆಂಬುದು ಗೊತ್ತಾಗುವದಿಲ್ಲ. ಆದಕಾರಣ ಅಲ್ಲಿನ ಗವರ್ನಮೆಂಟಿನವರು ಈ ವಿಷಯದಲ್ಲಿ ಬಹು ಖಂಡಿತವಾದ ಕಾನೂನ್ ಮಾಡಿ ಜಾರಿಗೆ ತರುವುದರಲ್ಲಿದ್ದಾರೆ. ಸಮ್ಮತಿ ಕೊಡುವ ಅಧಿಕಾರವುಳ್ಳಂಥಾ ಪ್ರಜೆಗಳೆಲ್ಲರೂ ಚುನಾವಣೆಯ ಕಾಲದಲ್ಲಿ ತಪ್ಪಿಸಿಕೊಳ್ಳದೆ ಹಾಜರಾಗಿದ್ದು, ತಮ್ಮ ಇಷ್ಟ ಬಂದವರಿಗೆ ಸಮ್ಮತಿ ಹಾಕಲೇಬೇಕು. ಯಾರಾದರ... ...ಸರ್ಕಾರದವರು ...ಗಳವರಿಗೆ ತಪ್ಪಿಸಿ ...ಮೋಸಗಾರಿಕೆ ...ರನ್ನು ತಕ್ಕದಾಗಿ ...ಯ ಕಾಲದಲ್ಲಿ ...ಜಿಸ್ಟ್ರೇಟರಿಗೆ

...ಗಳು ಯುದ್ಧ ...ನ್ನು ತವಿತ ...ಗ್ ಪಟ್ಟಣ ...ದನ್ನ ಈ ...ವು ವಿಷಯ ...ರ ವಿಲ ...ರ್ ಬ್ಯಾನ ...ಸಮಾಜಕ್ಕೆ ...ರ್ಚ್‌ಸಬೇ ...ಸೆ ರಿರುವ ...ವರಿರಿಗೆ ...ಗ ತಿಳಿಸಿ, ...ಅಂದರೆ, ...ಕೆ ನೋಡಿ (೨) ಈ ...ವಾದ್ಯಗಳ ...ದಂತಾಗಿ ...ಸುಂಚಿ, ...ದಿನಗಳ ...ಸ್ತಾಪಗ ...ಗಳನ್ನು ... ಈ ...ಗಲ್ಲಾ ...ಗವಾ...

...ನಿಗಾ ...ಸೋ ...ದ್ಯಾ ...ಕೂ ...ರಾ

...ಟಿ ಕಮ್ಮ ಮಿತ್ರಿಗೆ ... [illegible]   SUPPLEMENT TO THIS ISSUE

ಇತ್ತ ನೋಡಿ! ಇದು ಓದಿ!! ಶೀಘ್ರ ಮಾಡಿ!!!

...ಪಡೆಯಿರಿ!!!!

[illegible]

Dhanvantari Medical Hall,

DEVANHALLI TOWN

ಜ್ವರಸುಧಾ [illegible]

ವಾತಹರೀ ತೈಲ. [illegible]

ಶ್ರೀ ತಾಂಬೂಲ. [illegible]

M. GOVINDA SETTY,
Medical Practitioner,
DEVANHALLI TOWN.

ನಮ್ಮ ವಿಳಾಸ:— ಎಮ್. ಗೋವಿಂದಶೆಟ್ಟಿ,
ಮೆಡಿಕಲ್ ಪ್ರಾಕ್ಟೀಷನರ್,
ದೇವನಹಳ್ಳಿ ಟೌನ್.

...AT THE WESLEYAN MISSION PRESS MYSORE—1907

...ರಾಜ್ಯದ ರಾಜರು ...ವರ್ಷದ ವಿಶೇಷವಾಗಿ ...ಗಳ ... ...ವರ್ಷಕರಿಗೆ ... ...ಹೋಗಿ ನಷ್ಟವಾಗಿರುವದೆ

* *

...ರಾಜ್ಯದಲ್ಲಿ ಕೆಲವು ಕಾಲ ಪ್ರಜಾ ನೆಮ್ಮದಿಯು ಇನ್ನು ...ವಾಗಿಲ್ಲ. ಹಿಂದಿನ ... ರಾಜಧಾನಿಯಾದ ಸೇಂಟ್ ಪೀಟ ...ರ್ಸ್‌ಬರ್ಗಿನಲ್ಲಿಯೇ ಜನರಲ್ ಮಾಸಲಾಫ್, ಜನರಲ್ ಲಾನಿಟ್ಸ್ ಎಂಬ ...ಅಧಿಕಾರರನ್ನು ಕೊಂದುಹಾಕಿದರೆಂತಲೂ, ಕೊಲೆಗಾರರು ಆ ...ಆತ್ಮಹತ್ಯ ಮಾಡಿಕೊಂಡರೆಂತಲೂ ತಿಳಿಯುವುದು.

...ಯೋಗವನ್ನುಂಟುಮಾಡಿದೆ. ಪಕ್ಷಿ ಪಕ್ಷಿಗಳ ಬುದ್ಧಿಯು ಇದರಿಂದ ಗೊತ್ತಾಗುವುದು.

* * * *

ಕನಸಾ ಎಂಬ ಇಂಗ್ಲಿಷ್ ಸ್ವಾಸ್ಥ್ಯದಲ್ಲಿ ಪಾರ್ಲಿಮೆಂಟಿಗೆ ಮೆಂಬರುಗಳನ್ನು ಚುನಾಯಿಸತಕ್ಕ ಹಕ್ಕನ್ನು ಪ್ರಜೆಗಳಿಗೆಲ್ಲಾ ಪಡಿಸಿರುತ್ತಾರೆ. ಚುನಾವಣೆಯ ಕಾಲದಲ್ಲಿ ಅನೇಕ ಪ್ರಜೆಗಳು ಆಯಾ ಸ್ಥಳ...

...ಗಳ ವಿಚಾರದಂಗಳ ...ನ್ನು ಉದ್ದೇಶವನ್ನು ಈ ಮೂಲಕದಿಂದಾದರೂ ದಿವಾನರಲ್ಲಿ ತೋರಿಸಿದ ಅಭಿಮಾನವನ್ನು ನೋಡಿ ಬಹಳ ಸಂತೋಷ ಪಡುವೆನಲ್ಲದೆ, ದಿವಾನರವರು ಈ ರೀಡಿಂಗ್ ರೂಮಿನ ಅಭ್ಯುದಯಕ್ಕಾಗಿ ಪಬ್ಲಿಕ್ ...ಫಂಡಿನಿಂದಲಾಗಲಿ ಮುನಿಸಿಪಲ್ ಫಂಡಿನಿಂದಲಾಗಲಿ ಏನಾದರೂ ದ್ರವ್ಯ ಸಹಾಯ ಕೊಡಿಸಬಹುದೆಂತಲೂ ನಂಬುತ್ತೇನೆ. ಈ ರೂಂ ಮಾಡಿರುವ ಸ್ಥಳವೂ ಬಹಳ ಅನುಕೂಲವಾದ ಪ್ರದೇಶದಲ್ಲಿದೆ. ಪರ ಸ್ಥಳದವರಿಗೆ ಬಹಳ ಸೌಕರ್ಯವನ್ನು ತೋರಿಸುತ್ತಿದ್ದಾರೆ. ಈ ವಿಚಾರ...

ಒಕ್ಕಲಿಗರ ಸಂಘ.

ಕಳೆದ ಜನವರಿ ೨೭ನೆ ತಾರೀಖು ಭಾನುವಾರದ ದಿವಸ ಈ ಸಂಘದ ಕಾರ್ಯನಿರ್ವಾಹಕ ಸಭೆಯವರು ಮೀಟಿಂಗ್ ನಡೆಸಿ ಕೆಲವು ಮುಖ್ಯವಾದ ತೀರ್ಮಾನಗಳನ್ನು ಮಾಡಿಕೊಂಡರು. ಯಾವುವೆಂದರೆ—

(೧) ಸಬ್ ಕಮಿಟಿಯವರು ಸಿದ್ಧ ಮಾಡಿದ ಸಂಘದ ನಿಬಂಧನೆಗಳನ್ನು ಅಂಗೀಕರಿಸಿ ಅವುಗಳಿಗನುಸಾರವಾಗಿ ಸಂಘವನ್ನು ಸರ್ಕ್ಯುಲರ್... ಅವನಿಗೆ ಮೂರು ವರುಷ ಕಠಿಣ ಸಜವನ್ನೂ ೧,೫೦೦ ರೂಪಾಯಿ ಜುಲ್ಮಾನೆಯನ್ನು ವಿಧಿಸಿರುತ್ತಾರೆ.

✤✤✤✤

ಬಳ್ಳಾರಿ ಜಿಲ್ಲೆಯಲ್ಲಿ ವ್ಯಸನರು ಸರಹದ್ದಿನಿಂದ ೬ ಮೈಲಿ ಆಚೆ ಮ್ಯಾಂಗನೀಸ್ ಎಂಬ ಲೋಹವು ಸಿಕ್ಕುವ ವಿಸ್ತಾರವಾದ ಭೂಪ್ರದೇಶವನ್ನು ಬೇಂಗಳೂರಿನ ಕಂಪನಿಯವರು ಕಂಡುಹಿಡಿದಿದ್ದಾರೆ. ಆ ಪ್ರದೇಶದಲ್ಲಿ ಅರೆಸಿಗಿಂತಲೂ ಹೆಚ್ಚಾಗಿಯೇ ಲೋಹವಿದೆ ಎಂದಲ್ಲದೆ, ಆ

ಹಿಂದೂಸ್ಥಾನದಲ್ಲೂ ಏಷ್ಯಾಖಂಡದಲ್ಲೂ ಮೊದಲನೆಯದೆಂದು ಪ್ರಸಿದ್ಧಿ ಹೊಂದಿರುವ ಕಲ್ಕತ್ತಾ ನಗರವನ್ನು ಈಗಿನ ಕಾಲಕ್ಕೆ ತಕ್ಕಂತೆ ಅಭಿವೃದ್ಧಿ ಮಾಡ ಕಟ್ಟಬೇಕೆಂದು ಗವರ್ನಮೆಂಟಿನವರು ತೀರ್ಮಾನಿಸಿರುತ್ತಾರೆ. ಅಲ್ಲಿನ ಮ್ಯುನಿಸಿಪಾಲಿಟಿಯು ಉತ್ಪತ್ತಿ ಈ ಅಭಿವೃದ್ಧಿ ಕಾರ್ಯಗಳನ್ನು ನಡೆಸುವುದಕ್ಕೆ ಸಾಕಾಗುವುದಿಲ್ಲವೆಂಬ ಅಂಶವನ್ನು ತಿಳಿದು ಬಂಗಾಳಿ ಸರ್ಕಾರದವರು ಒಂದೇ ಗಂಟಿನಲ್ಲಿ ಲಕ್ಷ ರೂಪಾಯಿಯಂತೆ ಪ್ರದೇಶಾಭಿವೃದ್ಧಿಗಾಗಿ ಸ್ಯಾಂಕ್ಷನ್ ಮಾಡುತ್ತಾ ... ಎಷ್ಟನ್ನು ನಡೆಸುವವರಾಗಿದ್ದಾರೆ. ಮ್ಯುನಿಸಿಪಲ್ ... ನಲ್ಲಿ ಪ್ರತಿ ವರುಷವೂ ಸುಮಾರು ಆರು ಲಕ್ಷ ರೂ...

...೧೦ ರೂಪಾಯಿನ ಬಾಬತು ಒಂದು ಸಾವಿರ ನೋಟುಗಳನ್ನು ತನ್ನ ಜವಾನನಾಗಿದ್ದ ಜಯರಾಮ ಉಪಾಧ್ಯಾಯ ಎಂಬುವವನ ವಶಕ್ಕೆ ಕೊಟ್ಟು ಆ ಹಣವನ್ನು ಬ್ಯಾಂಕಿಗೆ ಕಟ್ಟಿಬಾ ಎಂದು ಹೇಳಿ ಕಳುಹಿಸಿದರು. ಇನ್ನೂ ಹಣವೂ ಜವಾನನೂ ಪತ್ತೆಯೇ ಇಲ್ಲ.

✤✤✤✤

ಬೊಂಬಾಯಿ ಪಟ್ಟಣದ ವೈಟ್ ಎಂಬ ಭಾರೀ ಕಂಪನಿಯಲ್ಲಿ ಅಸಿ॥ ಸೂಪರಿಂಟೆಂಡೆಂಟಾಗಿದ್ದ ಥಾಮಸ್ ವಿಲ್ಯಂ ಸೆಸ್ಪ್ರೆಟ್ ಎಂಬುವನು ಆ ಕಂಪನಿಯವರಿಗೆ ಮೋಸ ಪಡಿಸಿ ೧೭ ಸಾವಿರ ರೂಪಾಯಿ ತನಗೆ ತಿಂದು ಬಿಟ್ಟನು. ಇವನನ್ನು ದರ್ಯಾಫ್ತು ಮಾಡಿ ಅಲ್ಲಿನ ಮ್ಯಾಜಿ...

ಬಹಿರಂಗವಾದ ಪಾಠಶಾಲೆಗಳಿಗೆ ಕಳುಹಿಸದೇನೂ ಅವರ ವಿದ್ಯಾಭ್ಯಾಸಕ್ಕೆ ಮನೆಗಳಲ್ಲೇ ಏರ್ಪಾಡನ್ನೂ ಮಾಡದೇನೂ ಇರುವುದು ಎಲ್ಲರಿಗೂ ತಿಳಿದೇ ಇದೆ. ಹುಡುಗಿಯರಿಗಾಗಿ ಶಾಲೆಗಳನ್ನಿಟ್ಟು ನಡಿಸುವುದೇ ಸಾಲದು. ಗವರ್ನಮೆಂಟಿನವರು ಇದು ವಿದ್ಯಾಶಾಲೆಯಲ್ಲಿ ಉಪಾಧ್ಯಾಯಿನಿಯರನ್ನು ತರಬೇತು ಮಾಡುತ್ತಾ, ಈ ಉಪಾಧ್ಯಾಯಿನಿಯರನ್ನು ಮನೆಮನೆಗೂ ಕಳುಹಿಸುವುದಾಗಿಯೂ, ಇವರ ಮೂಲಕ ಜನಾನಗಳಲ್ಲಿರುವ ಸಮಸ್ತ ಸ್ತ್ರೀಯರೂ ವಿದ್ಯೆ ಕಲಿಸುವಂತೆಯೂ ಏರ್ಪಾಡು ಮಾಡುವುದರಲ್ಲಿದ್ದಾರೆ. ಸ್ಟೀವನ್ಸ್ ಗವರ್ನರವರು ಈ ಅರ್ಥಕ್ಕೆ ಒಂದು ಹುಕುಂ ಮಾಡಿ ಕಳಿಸಿರುವರು.

... ಪ್ರಶಸ್ತಕಗಳ ಅಂಗಡಿಯವರನ್ನು ಮೋಸಮಾಡಿರುದು ಬಂದಿದೆ.

✤✤✤✤

ಕಲ್ಕತ್ತಾ ಪಟ್ಟಣದಲ್ಲಿ ಬಂಗಾಳಾ ಸ್ತ್ರೀಯರು "ಸಾಧಕಹಿತ" ಎಂಬೊಂದು ಸಂಘವನ್ನು ಮಾಡಿಕೊಂಡು, ಸ್ತ್ರೀಯರು ಪರದೇಶಗಳಿಂದ ಬರುವ ಪದಾರ್ಥಗಳನ್ನು ಕೊಂಡು ಉಪಯೋಗಿಸಕೂಡದೆಂತಲೂ ಸ್ವದೇಶೀ ವಸ್ತುಗಳನ್ನೇ ಕೊಂಡುಕೊಳ್ಳಬೇಕೆಂತಲೂ ಸಂಕಲ್ಪ ಮಾಡಿಕೊಂಡಿದ್ದಾರೆ. ಹಿಂದಿನ ಸೋಮವಾರ ಕಾಳೀಘಾಟಿನಲ್ಲಿ ಸಾವಿರಾರು ಮಂದಿ ಗಂಡಸರೂ ಹೆಂಗಸರೂ ಗಂಗಾ ಸ್ನಾನಕ್ಕೆ ಸೇರಿದ್ದಾಗ ಮೇಲ್ಕಂಡ ಸ್ತ್ರೀ ಸಂಘದವರು ಅಲ್ಲಲ್ಲಿ ಸ್ತ್ರೀಯರ ಕುರಿತು—"ನಮಗೆ ಒಂದು ದಾನವನ್ನು ಮಾಡಬೇಕು" ಎಂ...

ಮಾಡಿದರು ಸ್ತ್ರೀಯರೆಲ್ಲಾ—"ಕ್ಷಾಮನಿವಾರಣಾರ್ಥವಾಗಿ ಕೇಳಿದಂತೆ ದ್ರವ್ಯ ದವಸ ಧಾನ್ಯಾದಿಗಳನ್ನೇ ಕೊಟ್ಟರುತ್ತೇವಲ್ಲ ಇನ್ನೇನಾಗಬೇಕೆಂಬು ಅಪೇಕ್ಷಿಸುತ್ತೀರಿ? ಎಂದು ಕೇಳಿದರು ಆ ಸಂಘದ ಸ್ತ್ರೀಯರು—" ನೀವು ಕೊಟ್ಟದ್ದು ಸರಿ ಈಗ ರಾಷ್ಟ್ರದಿಂದ ಕ್ಷಾಮವನ್ನು ನಿರ್ನಾಮ ಮಾಡುವಂಥಾ ವಿಚಾರ ವಿದೆ ಅದನ್ನು ನೀವುಗಳೆಲ್ಲ ಆಲಿಸಿ ನಡೆಸಿಕೊಡಬೇಕು ಅದೇ ನೆಂದರೆ—ಈ ದಿನ ಈ ಗಂಗೆಯ ದಡದಲ್ಲಿ ನಿಂತು ನೀವುಗಳೆಲ್ಲಾ ಈ ಹೊತ್ತು ಈ ರಾಷ್ಟ್ರದಲ್ಲಿ ತಯಾರಾಗುವಂಥಾ ವಸ್ತುಗಳನ್ನೇ ಕೊಂಡು ಉಪಯೋಗಿಸುತ್ತೇವೆಂತಲೂ, ಅನ್ಯ ದೇಶಗಳ ಸರಕನ್ನು ಕೊಂಡುಕೊಳ್ಳುವದಿಲ್ಲವೆಂತಲೂ ನಮಗೆ ವಾಗ್ದಾನ ಮಾಡಬೇಕಾಗಿದೆ ಹೀಗೆಂದು ಪ್ರಾರ್ಥನೆಯನ್ನು ನೀವುಗಳೆಲ್ಲಾ ನಡಿಸಿ ಕೊಡುವುದಾದರೆ ಕ್ಷಾಮವು ನಮ್ಮ ದೇಶದಲ್ಲೇ ಇರಲಾರದು" ಎಂದು ಕರಗೊಡ್ಡಿ ಪ್ರತಿ ಸ್ತ್ರೀಯನ್ನೂ ಬೇಡಿಕೊಂಡರು. ಆಗ ಸ್ತ್ರೀಯರೆಲ್ಲಾ ಅದೇ ಕ್ಷಣ—" ಇನ್ನು ಮುಂದೆ ನಾವು ಪರದೇಶಗಳ ಪದಾರ್ಥಗಳನ್ನು ಉಪಯೋಗಿಸುವುದಿಲ್ಲ " ಎಂದು ಮಾತು ಕೊಟ್ಟರು.

****

ಅಫ್ಘಾನಿಸ್ಥಾನದ ಅಮೀರರು ಹಿಂದುಸ್ಥಾನಕ್ಕೆ ದಯಮಾಡಿ, ನಾನಾ ಸಂಗತಿಗಳನ್ನು ತಿಳಿಯುತ್ತಲಿದ್ದಾರಷ್ಟೆ ಇವರು ಹಿಂದುಸ್ಥಾನಕ್ಕೆ ಹೊರಡುವುದಕ್ಕೆ ಮುಂಚೆ ಈ ಸಮಾಚಾರವನ್ನು ಕೇಳಿದ ಮುಲ್ಲಾ ಎಂಬ ವೈದಿಕ ಗುರುವು ಕಾಬೂಲ್ ರಾಜಧಾನಿಗೆ ಬಂದ ಅಮೀರರನ್ನು ಕಂಡು ಅವರನ್ನು ಕುರಿತು—" ನಾನು ನಮ್ಮ ಕುರಾನನ್ನೂ ಹಿಂದಿನ ತತ್ವಜ್ಞಾನಿಗಳು ಬರೆದಿರುವ ವಾಕ್ಯಗಳನ್ನೂ ಶೋಧನೆ ಮಾಡಿಕೊಂಡು ಬಂದಿದ್ದೇನೆ ನೀವು ಹಿಂದುಸ್ಥಾನಕ್ಕೆ ಹೋಗುವುದು ಸರಿಯಲ್ಲ ಅಮೀರರು ಹಿಂದುಸ್ಥಾನಕ್ಕೆ ಹೋಗಿ ಕಾಲವಾಗುವರು ಎಂದು ಬರೆದಿದೆ ಈ ವಾಕ್ಯಗಳನ್ನು ಓದಿ ನೋಡಿ, ನಿಮ್ಮ ಹಿಂದೂಸ್ಥಾನದ ಪ್ರಯಾಣವನ್ನು ನಿಲ್ಲಿಸಬೇಕು " ಎಂದು ಆತುರವಾಗಿ ಕೇಳಿಕೊಂಡನು. ಆಗ ಅಮೀರರು ಆ ಗುರುವಿಗೆ ಉತ್ತರ ಹೇಳುವುದೇನೆಂದರೆ ನಿಮ್ಮ ಬಲದಿಂದ ನನ್ನ ಪ್ರಾಣಗಳನ್ನು ಭಗವಂತನಿಗೆ ಒಪ್ಪಿಸಿರುತ್ತೇನೆ ಬ್ರಿಟಿಷ್ ಗವರ್ನಮೆಂಟಿನ ರಾಜ್ಯದ ಪತ್ರಿಕೆಯ ಪ್ರಕಾರ ವೈಸರಾಯರವರನ್ನು ಆಗ್ರಾ ಪಟ್ಟಣದಲ್ಲಿ ನೋಡುತ್ತೇನೆಂದು ವಾಗ್ದಾನ ಮಾಡಿಬಿಟ್ಟಿರುವೆನು ಈ ವಾಗ್ದಾನವನ್ನು ತಪ್ಪಿಬಿಟ್ಟರೆ ನಾನು ಅಲ್ಪನೆನಿಸಿಕೊಳ್ಳುವೆನಲ್ಲದೆ ಎಲ್ಲರಿಗೂ ಅಲ್ಪನಾಗುವೆನು. ಆದಕಾರಣ ಈ ಪ್ರಯಾಣವನ್ನು ನಾನು ಎಂದು ಮಾತ್ರಕ್ಕೂ ನಿಲ್ಲಿಸಲಾರೆನು " ಎಂದು ಹೇಳಿಬಿಟ್ಟು ಪ್ರಯಾಣ ಮಾಡಿದರು. ಪ್ರಜೆಗಳಿಗೆಲ್ಲಾ ನಾನಾತರದ ಭಯಗಳೂ ಹೆದರಿಕೆಯೂ ಉಂಟಾಗಿ ತಮ್ಮ ಕೈಲಾದ ಮಟ್ಟಿಗೂ ಪ್ರಾರ್ಥನೆಗಳನ್ನು ತಂದುಕೊಂಡಿದ್ದರು. ಅಮೀರರು ಎಲ್ಲವನ್ನೂ ಕೇಳಿ ಪ್ರಯಾಣ ಮಾಡಿಕೊಂಡು ಒಂದು ಜಲಾಲಾಬಾದ್ ಎಂಬ ಸ್ಥಳದಲ್ಲಿ ತಂಗಿದರು. ಅಲ್ಲಿ ಒಬ್ಬ ಮುಲ್ಲಾ ಗುರುವು ಅಮೀರರನ್ನು ಕುರಿತು " ನೀವು ಹಿಂದುಸ್ಥಾನದೊಳಗೆ ತಲೆ ಹಾಕಬೇಡಿ ಇಂಡಿಯಾ ಗವರ್ನಮೆಂಟಿನವರು ನಿಮ್ಮನ್ನು ಕೈಸೆರೆ ಹಿಡಿದು ಬಂದೀಖಾನೆಯಲ್ಲಿಡುತ್ತಾರೆ ನೀವು ಜೀವ ಸಹಿತ ವಾಪಸು ಕಾಬೂಲ್ ನಗರಕ್ಕೆ ಬಾರರು " ಎಂದು ಹೇಳಿದನು ಆಗ ಅಮೀರರಿಗೆ ತುಂಬಾ ಕೋಪ ಉಂಟಾಗಿ ಅವನನ್ನು ಸುಮ್ಮನೆ ಬಿಡದೆ ಅವನು ಮತ್ತೊಂದು ಸಲ ಇಂಥಾ ಅಲ್ಪ ಮಾತುಗಳನ್ನಾಡದಂತೆ ಅವನ ಎರಡು ತುಟಿಗಳನ್ನೂ ಹೊಲಿಸಿ ಸೆರೆಯಲ್ಲಿಡಬೇಕೆಂದು ಅಪ್ಪಣೆ ಕೊಟ್ಟರಂತೆ ಈ ವಿಷಯದಲ್ಲಿ ಅಮೀರರ ಪ್ರಯಾಣದ ವಿಷಯದಲ್ಲಿ ಈ ಸಲ ನಾನಾ ತರದ ಚರ್ಚೆಗಳುಂಟಾದವೆಂದು ಉತ್ತರ ದೇಶದ ಪತ್ರಿಕೆಯೊಂದು ತಿಳಿಸುತ್ತದೆ.

ವಿದೇಶ ವರ್ತಮಾನಗಳು

ಅಮೇರಿಕಕ್ಕೆ ಸೇರಿದ ವರ್ಜೀನಿಯಾ ಡಿಸ್ಟ್ರಿಕ್ಟಿನಲ್ಲಿ ಒಂದು ಗಣಿಗೆ ಬೆಂಕಿ ಹತ್ತಿ ೪೫ ಜನರು ಅಲ್ಲೇ ಪ್ರಾಣ ಬಿಟ್ಟರೆಂದು ವರ್ತಮಾನ ಬಂದಿದೆ.

****

ಜಾವ ದ್ವೀಪದಲ್ಲಿ ೩೦೦ ಸ್ವದೇಶೀಯ ದಂಗೆಯೆದ್ದು ಪೋಲೀಸ್ ಸ್ಟೇಷನ್ನಿನ ನಾಲ್ಕು ಜನ ಕೆಲಸದವರನ್ನು ಕೊಂದು ಹಾಕಿ ಠಾಣೆಯ ಅಧಿಕಾರಿಯನ್ನು ಗಾಯಪಡಿಸಿದರೆಂತಲೂ, ಈ ದಂಗೆಯನ್ನು ಅಡಗಿಸುವುದಕ್ಕೆ ಡಚ್ ಸರ್ಕಾರದವರು ಅಲ್ಲಿಗೆ ಸೈನ್ಯವನ್ನು ಕಳುಹಿಸಿದಾರೆಂತಲೂ ತಂತೀ ವರ್ತಮಾನ ಬಂದಿದೆ.

****

ಚೀನಾ ರಾಜ್ಯಕ್ಕೆ ಸೇರಿದ ಹಾಂಕಾಂಗ್ ಪಟ್ಟಣದ ಸಮುದ್ರ ತೀರದಲ್ಲಿ ಇತ್ತೀಚೆಗೆ ಕೆಲವು ದಿವಸಗಳ ತನಕ ಬಹು ವಿನಾಶಕರವಾದ ಸುಂಟರಗಾಳಿ ಯಿಂದ ಘೋರವಾದ ಮಳೆಯೂ ಬಿರುಸಾಗಿ ಅನೇಕಾನೇಕ ಹಡಗು ದೋಣಿಗಳೂ ಮುಳುಗಿಹೋದವು ೧೦೦ ಜನ ಬೆಸ್ತರು ಸತ್ತುಹೋದರು.

****

ಸಯಾಂ ರಾಜ್ಯದ ರಾಜಧಾನಿಯಾದ ಬ್ಯಾಂಕಾಕ್ ನಗರದಲ್ಲಿ ವರ್ತಕರು ವಿಶೇಷವಾಗಿ ಕಟ್ಟಿಕೊಂಡಿದ್ದ ಮಹಾ ದೊಡ್ಡ ಸರಕು ಉಗ್ರಾಣಗಳೆಲ್ಲಾ ಬೆಂಕಿ ಬಿದ್ದು ಸಂಪೂರ್ಣವಾಗಿ ಉರಿದು ಹೋದವು ಆ ವರ್ತಕರಿಗೆ ೧೩ ಲಕ್ಷ ರೂಪಾಯಿ ಸರಕುಗಳೂ ಸುಟ್ಟು ಹೋಗಿ ನಷ್ಟವಾಗಿರುತ್ತದೆ.

****

ರಷ್ಯಾ ರಾಜ್ಯದಲ್ಲಿ ಕೆಲವು ಕಡೆ ಪ್ರಜಾ ನೆಮ್ಮದಿಯು ಇನ್ನು ಬಂದಿಲ್ಲ ಹಿಂದಿನ ವಾರ ರಾಜಧಾನಿಯಾದ ಸೆಂಟ್ ಪೀಟರ್ಸ್‌ಬರ್ಗಿನಲ್ಲಿಯೂ ಜನರಲ್ ಪಾವಲಾಫ್, ಜನರಲ್ ಲಾನಿಟ್ಸ್ ಎಂಬ ಸೈನ್ಯಾಧಿಕಾರಿಗಳನ್ನು ಕೊಂದುಹಾಕಿದರೆಂತಲೂ, ಕೊಲೆಗಾರರು ಆತ್ಮಹತ್ಯ ಮಾಡಿಕೊಂಡರೆಂತಲೂ ತಿಳಿಯಬಂದಿದೆ.

ರಷ್ಯಾ ರಾಜ್ಯದಲ್ಲಿ ಲಕ್ಷಾಂತರ ಜನರು ಕ್ಷಾಮ ಪೀಡಿತರಾಗಿ ಬಹಳ ಕಷ್ಟಪಡುತ್ತಿದ್ದಾರೆ ಅವರ ಕಷ್ಟವನ್ನು ನಿವಾರಣೆ ಮಾಡುವುದಕ್ಕೆ ಯೂರೋಪಿನವರೆಲ್ಲಾ ಕನಿಕರವಿಟ್ಟು ದ್ರವ್ಯಾದಿ ಸಹಾಯ ಸಂಪತ್ತಿಗಳನ್ನು ಒದಗಿಸುವುದು ಪರಮಾವಶ್ಯಕವಾಗಿದೆ ಎಂದು ಲಂಡನ್ ಪಟ್ಟಣದಲ್ಲಿ ಟೈಂಸ್ ಎಂಬ ಪತ್ರಿಕೆಗೆ ಅಲ್ಲಿಂದ ಒಬ್ಬ ದೊಡ್ಡ ಮನುಷ್ಯನು ಬರೆದಿರುತ್ತಾನೆ.

****

ದಕ್ಷಿಣ ಆಫ್ರಿಕಕ್ಕೆ ಸೇರಿದ ಆರೆಂಜ್ ನದೀ ಸ್ವಾತಂತ್ರ್ಯದಲ್ಲಿ ಗಣಿಗಳ ಇನ್ಸ್‌ಪೆಕ್ಟರು ಆ ಪ್ರಾಂತ್ಯದ ಅನೇಕ ಕಡೆಗಳಲ್ಲಿ ಸಂಚಾರ ಮಾಡಿ ಹೊಸದಾಗಿ ಕೆಲವು ವಜ್ರದ ಗಣಿಗಳನ್ನು ಕಂಡು ಹಿಡಿದು ಇನ್ನು ಸ್ವಲ್ಪ ಕಾಲದಲ್ಲೇ ವಜ್ರಗಳು ಅಪಾರವಾಗಿ ಸಿಕ್ಕುವುದರಲ್ಲಿ ನಿಜಯಾದ್ದರಿಂದ ಬೆಲೆಯು ಈಗ್ಗಿಂತಲೂ ಬಹಳ ಮಟ್ಟಿಗೆ ಕಡಿಮೆಯಾಗುವುದೆಂದು ಎಚ್ಚರಿಕೆ ಹೇಳುತ್ತಿದ್ದಾರೆ.

****

ವಿಲಾಯತಿಗೆ ಸೇರಿದ ಕೆಂಟ್ ಡಿಸ್ಟ್ರಿಕ್ಟಿನಲ್ಲಿ ಸೇಠ್ ಜರ್ಜ ಶರಿಯರ್ ಎಂಬಾತನು ಅಲ್ಲಿನ ಕೆಲವು ಧರ್ಮ ಕಾರ್ಯಗಳಿಗೆ ತನ್ನ ಆಸ್ತಿಯಿಂದ ೭೫,೦೦೦ ರೂಪಾಯನ್ನು, ಬ್ರಿಗ್ಸ್ ಟ್ರೀಸ್ಟ್ಲೆ ಎಂಬಾತನು ೬೩,೦೦೦ ರೂಪಾಯನ್ನೂ, ಕ್ಯಾಪ್ಟನ್ ಲೌರಿ ಎಂಬಾತನು ೧,೩೪,೦೦೦ ರೂಪಾಯನ್ನೂ ವಿನಿಯೋಗಿಸಬೇಕೆಂದು ಮರಣಶಾಸನವನ್ನು ಬರೆದಿಟ್ಟು ಕಾಲವಾದರು.

****

ಪ್ರಷ್ಯಾ ರಾಜ್ಯಕ್ಕೆ ಸೇರಿದ ಸೆಂಟ್ ಬೋರ್ಹಾನ್ ಎಂಬ ಸ್ಥಳದಲ್ಲಿ ಒಂದು ಗಣಿಯೊಳಗೆ ಬೆಂಕಿ ಹುಟ್ಟಿ ಅಪಾರ ನಷ್ಟವನ್ನುಂಟುಮಾಡಿದೆ ಈ ಅಪಘಾತ ನಡೆದ ಕಾಲದಲ್ಲಿ ಆ ಗಣಿಯೊಳಗೆ ೧೬೪ ಜನರು ಕೆಲಸ ಮಾಡುತ್ತಿದ್ದರು ಆ ಪೈಕಿ ಒಬ್ಬನಾದರೂ ಬದುಕಿ ಬರಲಿಲ್ಲ ೭೭ ಶವಗಳನ್ನು ಹುಡುಕಿ ಹೊರಕ್ಕೆ ಸಾಗಿಸಿದ್ದಾಯಿತು ಉಳಿದ ಶವಗಳನ್ನು ತೆಗೆಯುವುದು ಸಾಧ್ಯವಿಲ್ಲ ಬೆಂಕಿಯು ಇನ್ನೂ ಉರಿಯುತ್ತಿದೆ.

****

ರಷ್ಯಾ ಚಕ್ರವರ್ತಿಯವರ ಬಾಡಿಗಾರ್ಡ್ ಎಂಬ ಅಂಗರಕ್ಷಕರಾದ ಸೈನ್ಯದ ಉದ್ಯೋಗಸ್ಥರು ಚಕ್ರವರ್ತಿಯವರಿಗೆ ಅನೇಕ ಅರ್ಜಿಗಳನ್ನು ಬರೆದು, ಡೂಮಾ ಎಂಬ ಅಲ್ಲಿನ ಹೊಸ ಪಾರ್ಲಿಮೆಂಟನ್ನು ಸಂಪೂರ್ಣವಾಗಿ ತೆರೆದುಹಾಕಿ ಪೂರ್ವದಂತೆಯೇ ಮಂತ್ರಿಗಳೂ ಸರ್ವಾಧಿಕಾರಿಗಳೂ ರಾಜ್ಯಭಾರ ನಡಸುವಂತೆ ಸ್ವಾತಂತ್ರ್ಯಗಳನ್ನು ಕೊಡುವುದು ಅವಶ್ಯವಾಗಿದೆ ಎಂತಲೂ, ಹಾಗೆ ಮಾಡದೆ ಹೋಗುವ ಪಕ್ಷದಲ್ಲಿ ಆ ಸೈನಿಕರು ಒಟ್ಟಾಗಿ ಚಕ್ರವರ್ತಿಯವರನ್ನು ತೆಗೆದುಹಾಕಿ, ಅವರ ಸ್ಥಾನಕ್ಕೆ ಅವರ ದಾಯಾದಿಗಳ್ಯಾರನ್ನಾದರೂ ನೇಮಕ ಮಾಡುತ್ತೇವೆಂತಲೂ ತಿಳಿಸಿರುತ್ತಾರೆ.

****

ಅಮೇರಿಕದಲ್ಲಿ ಭಾರೀ ಉಕ್ಕಿನ ಕಾರ್ಖಾನೆಯನ್ನು ಪಡೆದಿರುವ ಪಿಟ್ಸ್‌ಬರ್ಗಿನಲ್ಲಿ ಹಿಂದಿನ ವಾರ ಬಹು ಭಯಂಕರವಾದ ಅಪಘಾತ ವಾಯಿತು ಉಕ್ಕನ್ನು ನೀರಿನಂತೆ ಕರಗಿಸಿ ನಾನಾ ಸಾಮಾನುಗಳನ್ನು ತಯಾರು ಮಾಡುವ ಜೋನ್ಸ್ ಲಾಫ್ಲಿನ್ ಎಂಬ ಕಾರ್ಖಾನೆಯೊಳಗೆ ಸುಮಾರು ಯಂತ್ರಗಳು ಅಕಸ್ಮಾತ್ತಾಗಿ ಮಹಾ ಶಬ್ದದೊಡನೆ ಹಾರಿ ಒಡೆದುಹೋದವು ಆಗ್ಗೆ ಅಲ್ಲಿ ಕೆಲಸ ಮಾಡುತ್ತಿದ್ದವರಲ್ಲಿ ೩೦ ಮಂದಿ ಕರಗಿದ ಉಕ್ಕಿನ ಆವಿಯೊಳಗೆ ಸಿಕ್ಕಿ ಒಂದು ಮೂಳೆಯಾದರೂ ಸಿಕ್ಕದಂತೆ ನಿರ್ನಾಮವಾದರು ಏಳು ಜನರು ಘೋರಾ ಗಾಯಪಟ್ಟು ಆಸ್ಪತ್ರೆಯಲ್ಲಿದ್ದಾರೆ ಇವರು ಬದುಕುವುದು ತುಂಬಾ ಪ್ರಯಾಸವೆಂದು ತಿಳಿಯುವುದು.

****

ಚೀನಾ ಚಕ್ರಾಧಿಪತ್ಯದ ರಾಜಧಾನಿಯಾದ ಪೀಕಿಂಗ್ ನಗರದಲ್ಲಿ ಸರ್ಕಾರದವರು ಅಫೀಂ ವಿಕರಿ ಮಾಡುವ ಅಂಗಡಿಗಳನ್ನೂ ಅದನ್ನು ಕೊಂಡು ಸೇವಿಸುವುದಕ್ಕಾಗಿ ಚೀನೀಯರು ಮಾಡಿಕೊಂಡಿದ್ದ ಕಟ್ಟಡಗಳನ್ನು ಸಂಪೂರ್ಣವಾಗಿ ಮುಚ್ಚಿಸಿರುತ್ತಾರೆ ಅಲ್ಲಿನ ಅಫೀಂ ವರ್ತಕರು ತಮ್ಮ ಕೋಠಿಗಳಲ್ಲಿ ತುಂಬಿಟ್ಟುಕೊಂಡಿರುವ ಸುಮಾರು ೨೦ ಲಕ್ಷ ರೂಪಾಯಿನ ಅಫೀಮೆಲ್ಲಾ ಹಾಳಾಗಿ ತಮಗೆ ತುಂಬಾ ನಷ್ಟವಾಗುತ್ತಿದೆ ಎಂತಲೂ ಈ ವಿಷಯದಲ್ಲಿ ಪರರಾಜ್ಯಗಳವರು ತನಿಖೆ ಮಾಡಿ, ತಮಗೆ ನಷ್ಟವಾಗದಂತೆ ಏರ್ಪಾಡು ಮಾಡಿಕೊಡಬೇಕೆಂತಲೂ ಇಂಗ್ಲಿಷ್ ಗವರ್ನಮೆಂಟಿಗೆ ಅರ್ಜಿ ಬರೆದಿರುತ್ತಾರೆ ಇವರೆಲ್ಲಾ ಇಂಗ್ಲೀಷ್ ವರ್ತಕರೆಂದು ತಿಳಿಯುವುದು ಇತ್ತಲಾಗಿ ಹಿಂದುಸ್ಥಾನದ ಸರ್ಕಾರದವರಿಗೂ, ವರ್ತಕರಿಗೂ ರೈತ ಪ್ರಜೆಗಳಿಗೂ ಚೈನಾ ಗವರ್ನಮೆಂಟಿನವರ ದೆಸೆಯಿಂದ ಈಗಲೇ ತುಂಬಾ ನಷ್ಟವಾಗಿರುತ್ತದೆ.

****

ವಿಲಾಯತಿಗೆ ಸೇರಿದ ಡೋವರ್ ಪಟ್ಟಣದಲ್ಲಿ ಮಿ॥ ಮಾರಿಸ್ ಎಂಬಾತನು ಒಂದು ಜೋಡಿ ಪಾರಿವಾಳ ಪಕ್ಷಿಗಳನ್ನು ಸಾಕುತ್ತಿದ್ದಾನೆ ಸುಮಾರು ಎರಡು ವಾರಗಳ ಕೆಳಗೆ ಹೆಣ್ಣು ಪಕ್ಷಿಯು ಎಲ್ಲಿಯೋ ತಪ್ಪಿಸಿಕೊಂಡು ಹೋಯಿತು ಎರಡು ಮೂರು ದಿನಗಳ ತನಕ ಎಲ್ಲಿ ಹುಡುಕಿದರೂ ಅದು ಸಿಕ್ಕಲಿಲ್ಲ ಈ ಮಧ್ಯೆ ಗಂಡು ಪಕ್ಷಿಯು ಆಗಾಗ್ಗೆ ತನ್ನ ಆಹಾರಕ್ಕಿಟ್ಟ ಕಾಳನ್ನು ಕಚ್ಚಿ ಹೆಚ್ಚಾಗಿ ಬಾಯಲ್ಲಿ ಇಟ್ಟುಕೊಂಡು ಹಾರಿ ಹೋಗಿ ಒಂದು ಆಳವಾದ ಕಟ್ಟಡದ ಕೊಳವೆಯೊಳಕ್ಕೆ ಸುರಿದು ಬರುತ್ತಾ ಇದ್ದಿತು. ಇದನ್ನು ಆ ಮನೆಯವರು ನೋಡುತ್ತಿದ್ದು, ಅನುಮಾನದಿಂದ ಆ ಕೊಳವೆಯನ್ನು ಕೀಳಿಸಿ ನೋಡಿದಾಗ ತಪ್ಪಿಸಿಕೊಂಡು ಹೋಗಿದ್ದ ತಮ್ಮ ಹೆಣ್ಣು ಪಕ್ಷಿಯನ್ನು ತಳದಲ್ಲಿ ಕಂಡರು ಈ ಸುದ್ದಿಯು ಆ ಪ್ರಾಂತ್ಯದಲ್ಲೆಲ್ಲಾ ತುಂಬಾ ಆಶ್ಚರ್ಯವನ್ನುಂಟುಮಾಡಿದೆ ಪಕ್ಷಿ ಪಕ್ಷಿಗಳ ಬುದ್ಧಿಯು ಇದರಿಂದ ಗೊತ್ತಾಗುವುದು.

****

ಕನಡಾ ಎಂಬ ಇಂಗ್ಲಿಷ್ ಸ್ವಾಸ್ಥ್ಯದಲ್ಲಿ ಪಾರ್ಲಿಮೆಂಟಿಗೆ ಮೆಂಬರುಗಳನ್ನು ಚುನಾಯಿಸತಕ್ಕ ಹಕ್ಕನ್ನು ಪ್ರಜೆಗಳಿಗೆಲ್ಲಾ ವಹಿಸಿರುತ್ತಾರೆ. ಚುನಾವಣೆಯ ಕಾಲದಲ್ಲಿ ಅನೇಕ ಪ್ರಜೆಗಳು ಆಯಾ ಸ್ಥಳಗಳಿಗೆ ಹೋಗಿ ತಮ್ಮ ಸಮ್ಮತಿಯನ್ನು ಹಾಕಿಬರುವದಿಲ್ಲ ಕೆಲವರು ತಮಗೆ ಆ ಹಕ್ಕಿದ್ದರೂ ಇಲ್ಲದಂತೆ ಸುಮ್ಮನೆ ತಟಸ್ಥರಾಗಿದ್ದುಬಿಡುತ್ತಾರೆ ಇದರಿಂದ ಬಹು ಪ್ರಜಾ ಸಮ್ಮತಿಯನ್ನು ಪಡೆದು ಚುನಾಯಿಸಲ್ಪಟ್ಟ ಮೆಂಬರುಗಳ್ಯಾರೆಂಬುದು ಗೊತ್ತಾಗುವುದಿಲ್ಲ. ಆದಕಾರಣ ಅಲ್ಲಿನ ಗವರ್ನಮೆಂಟಿನವರು ಈ ವಿಷಯದಲ್ಲಿ ಬಹು ಖಂಡಿತವಾದ ಕಾನೂನ್ ಮಾಡಿ ಜಾರಿಗೆ ತರುವುದರಲ್ಲಿದ್ದಾರೆ ಸಮ್ಮತಿ ಕೊಡುವ ಅಧಿಕಾರವುಳ್ಳಂಥಾ ಪ್ರಜೆಗಳೆಲ್ಲರೂ ಚುನಾವಣೆಯ ಕಾಲದಲ್ಲಿ ತಪ್ಪಿಸಿಕೊಳ್ಳದೆ ಹಾಜರಾಗಿದ್ದು, ತಮ್ಮ ಇಷ್ಟ ಬಂದವರಿಗೆ ಸಮ್ಮತಿ ಹಾಕಲೇ ಬೇಕು ಯಾರಾದರೂ ತಪ್ಪಿಸಿಕೊಂಡರೆ ಅಂಥವರಿಗೆ ಸರ್ಕಾರದವರು ಕೊಟ್ಟಿರುವ ಚುನಾವಣೆಯ ಹಕ್ಕನ್ನು ಆರು ವರುಷಗಳವರೆಗೆ ತಪ್ಪಿಸಿಬಿಡುತ್ತಾರೆ ಹೀಗೆ ಹಕ್ಕು ಕಳಕೊಂಡವರು ಮೋಸಗಾರಿಕೆಯಿಂದ ಸಮ್ಮತಿ ಹಾಕಿದಲ್ಲಿ ಸರ್ಕಾರದವರು ಅಂಥವರನ್ನು ತಕ್ಕಹಾಗೆ ಶಿಕ್ಷಿಸುತ್ತಾರೆ ಒಂದುವೇಳೆ ಹಕ್ಕುಳ್ಳವರು ಚುನಾವಣೆಯ ಕಾಲದಲ್ಲಿ ಹಾಜರಾಗಲು ಅನಿವಾರ್ಯಗಳಿದ್ದರೆ ಮೊದಲೇ ಮ್ಯಾಜಿಸ್ಟ್ರೇಟರಿಗೆ ತಿಳಿಸಿ ಅಪ್ಪಣೆ ಪಡೆಯಬೇಕು.

****

ರಾಜ್ಯ ರಾಜ್ಯಗಳಿಗೆ ಕಾರಣಾಂತರದಿಂದ ಮನಸ್ತಾಪಗಳೂ ಯುದ್ಧಗಳೂ ಉಂಟಾಗದಂತೆ ಅವರವರಿಗಿರುವ ಅಸಮಾಧಾನಗಳನ್ನು ತನಿಖೆ ಮಾಡಿ ಪಂಚಾಯಿತಿಯಲ್ಲೇ ಇತ್ಯರ್ಥಪಡಿಸುವುದಕ್ಕೆ ಹೇಗ್ ಪಟ್ಟಣದಲ್ಲಿ ಒಂದು ಪಂಚಾಯಿತಿ ಸಭೆಯು ಏರ್ಪಾಡಾಗಿರುವದಷ್ಟೆ ಈ ಪಂಚಾಯಿತಿ ಸಾಮಾಜಿಕರು ಈ ವರುಷ ಅಲ್ಲಿ ಸೇರಿ ಕೆಲವು ವಿಷಯಗಳನ್ನು ಗೊತ್ತು ಮಾಡಬೇಕೆಂದು ತೀರ್ಮಾನಿಸಿಕೊಂಡಿದ್ದಾರೆ ವಿಲಾಯತಿ ರಾಜ್ಯದ ಮಂತ್ರಿ ಶ್ರೇಷ್ಠರಾದ ಸರ್ ಹೆನ್ರಿ ಕ್ಯಾಂಬೆಲ್ ಬ್ಯಾನರ್ಮನ್‌ರವರು ಇಂಗ್ಲಿಷ್ ರಾಜ್ಯದ ಪ್ರತಿನಿಧಿಯಾಗಿ ಆ ಸಮಾಜಕ್ಕೆ ಹೋಗುವರು ಇಂಗ್ಲಿಷ್ ಪ್ರತಿನಿಧಿಗಳು ಆ ಸಭೆಯಲ್ಲಿ ಚರ್ಚಿಸಬೇಕೆಂದಿರುವ ವಿಷಯಗಳ್ಯಾವವೆಂದರೆ—(೧) ಈ ಸಮಾಜಕ್ಕೆ ಸೇರಿರುವ ರಾಜ್ಯಗಳವರು ಪರಸ್ಪರ ಯುದ್ಧಕ್ಕೆ ಹೋಗಕೂಡದು, ಅವರವರಿಗೆ ಹುಟ್ಟುವ ಮನಸ್ತಾಪಗಳನ್ನು ಈ ಪಂಚಾಯಿತಿ ಕೋರ್ಟಿಗೆ ತಿಳಿಸಿ, ಈ ಕೋರ್ಟಿನಲ್ಲಿ ತೀರ್ಮಾನವಾಗುವಂತೆ ನಡೆದುಕೊಳ್ಳಬೇಕು ಅಂದರೆ, ಪ್ರಪಂಚದಲ್ಲಿ ಇನ್ನು ಮುಂದಕ್ಕೆ ಯುದ್ಧಗಳೇ ನಡೆಯದಂತೆ ನೋಡಿಕೊಳ್ಳುವುದು ಈ ಸಮಾಜದ ಮುಖ್ಯ ಕೆಲಸವಾಗಿದೆ (೨) ಈ ಪಂಚಾಯಿತಿ ಕೋರ್ಟಿನವರಿಗೆ ತಗಲುವ ಖರ್ಚನ್ನು ಎಲ್ಲಾ ರಾಜ್ಯಗಳವರೂ ಹಂಚಿಕೊಂಡು ಕೊಡಬೇಕು (೩) ಮನಸ್ತಾಪಗಳುಂಟಾಗಿರುವ ರಾಜ್ಯಗಳವರು ಯುದ್ಧಾರಂಭ ಮಾಡುವುದಕ್ಕಿಂತ ಮುಂಚೆ, ತಮ್ಮ ಮನಸ್ತಾಪಗಳನ್ನು ಈ ಕೋರ್ಟಿಗೆ ತಿಳಿಸಿ, ಇಪ್ಪತ್ತು ದಿನಗಳ ಅವಧಿಕೊಟ್ಟು, ಅಷ್ಟರೊಳಗೆ ಈ ಕೋರ್ಟಿನವರು ಆ ಮನಸ್ತಾಪಗಳನ್ನು ಇತ್ಯರ್ಥಪಡಿಸದೆ ಹೋದ ಪಕ್ಷದಲ್ಲಿ ಯುದ್ಧ ಕಾರ್ಯಗಳನ್ನು ಆರಂಭಿಸಬಹುದು ಎಂಬುದಾಗಿ ಒಂದು ಕಟ್ಟು ಮಾಡಬೇಕು. ಈ ವಿಷಯಗಳನ್ನೆಲ್ಲಾ ಮಿ॥ ಸ್ಟೆಡ್ ಎಂಬುವರು ಮೆಂಬರುಗಳಿಗೆಲ್ಲಾ ತಿಳಿಸಿ ಅವರನ್ನೆಲ್ಲಾ ಹೇಗ್ ಪಟ್ಟಣದಲ್ಲಿ ಜಗತ್ಯವಾಗಿ ಹಾಜರಾಗುವಂತೆ ಪ್ರೋತ್ಸಾಹ ಪಡಿಸುತ್ತಿದ್ದಾರೆ.

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸಬೇಕಲ್ಲದೆ ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ನಿಗಾ ಕೊಡಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬುದನ್ನು ಸಕಲರೂ ತಿಳಿಯತಕ್ಕದ್ದು—ಎಡಿ.

ಶ್ರೀ ಸ್ವಯಂ ಪ್ರಕಾಶಾನಂದ ಮುದ್ರಾಕ್ಷರಶಾಲೆ, ಗುರುಕಾರು ದ್ಯಾವಂಣ, ಕೆ ವಿ ನಂಜಪ್ಪ—ಪ್ರಕಟಿಸಲಾರೆವು.

ಕರೆಸ್‌ಪಾಂಡೆನ್ಸ್.

ಶ್ರೀರಂಗಪಟ್ಟಣದ ರೀಡಿಂಗ್ ರೂಮ್

ಅಯ್ಯಾ,

ನಾನು ಈ ಶ್ರೀರಂಗಪಟ್ಟಣಕ್ಕೆ ಬಂದು ಒಂದು ದಿವಸವನ್ನು ಒಂದು ಯುಗವಾಗಿ ಕಳೆಯಬೇಕಾದ ಬೇಜಾರಿಗೆ ಗುರಿಯಾಗಿದ್ದೆನು. ನನ್ನ ಮಿತ್ರರಾದ ಕಾರಖಾನೆ ಅಣ್ಣಪ್ಪನವರು ಒಂದು ಕಡೆಗೆ ಕರೆದುಕೊಂಡು ಹೋದರು ಅಲ್ಲಿ ಹೋಗಿ ನೋಡಿದ್ದರಲ್ಲಿ ಅನೇಕ ವರ್ತಮಾನ ಪತ್ರಿಕೆಗಳು ಕೈಗೆ ಸಿಕ್ಕಿದವು. ಓದುತ್ತ ಇರುವಲ್ಲಿ ಹೊತ್ತು ಕಳೆದು ಹೋದದ್ದು ಗೊತ್ತಾಗಲಿಲ್ಲ.

ವಿಚಾರಿಸಿದ್ದರಲ್ಲಿ ನಮ್ಮ ದಿವಾನ್ ಬಹದ್ದೂರ್ ಮಿ॥ ವಿ ಪಿ ಮಾಧವರಾಯರು ದಿವಾನಗಿರಿ ಪದವಿಯನ್ನು ಅಲಂಕರಿಸಿದ ವೇಳೆ ಶ್ರೀರಂಗಪಟ್ಟಣದ ನಿವಾಸಿಗಳೊಡನೆ ತಾವು ಸಬ್‌ಡಿವಿಜನ್ ಆಫೀಸರಾಗಿದ್ದ ಕಾಲದಲ್ಲಿ ಅನುಭವಿಸಿದ ಸೌಹಾರ್ದಪೂರ್ತಿಕೆಯನ್ನು ಸ್ಮರಿಸಿಕೊಂಡು ತಾವು ಬಹುಮಾನದಿಂ ಶ್ರೀರಂಗನಾಥನಿಗೆ ಶಾಶ್ವತವಾದ ಕೈಂಕರ್ಯ ಮಾಡಿಸಬೇಕೆಂದಾಲೋಚಿಸಿದಾಗ, ಇದು ಈ ಪುರಜನಗಳು ಸ್ಥಾಪಿಸಿದ ಕನ್ನಡ ರೀಡಿಂಗ್ ರೂಂ ಎಂದು ಕೇಳಿದರು ಅವರುಗಳ ಏರ್ಪಾಡುಗಳನ್ನೂ ಉದ್ದೇಶವನ್ನೂ ಈ ಮೂಲಕದಿಂದಾದರೂ ದಿವಾನರಲ್ಲಿ ತೋರಿಸಿದ ಅಭಿಮಾನವನ್ನು ನೋಡಿ ಬಹಳ ಸಂತೋಷ ಪಡುವೆನಲ್ಲದೆ, ದಿವಾನರವರು ಈ ರೀಡಿಂಗ್ ರೂಮಿನ ಅಭ್ಯುದಯಕ್ಕಾಗಿ ಮುಜರಾಯಿ ಫಂಡಿನಿಂದಲಾಗಲಿ ಮುನಿಸಿಪಲ್ ಫಂಡಿನಿಂದಲಾಗಲಿ ಏನಾದರೂ ದ್ರವ್ಯ ಸಹಾಯ ಕೊಡಿಸಬಹುದೆಂತಲೂ ನಂಬುತ್ತೇನೆ ಈ ರೂಂ ಮಾಡಿರುವ ಸ್ಥಳವೂ ಬಹಳ ಅನುಕೂಲವಾದ ಕೈರೋಡಿನಲ್ಲಿದೆ ಪರಸ್ಥಳದವರಿಗೆ ಬಹಳ ಸೌಕರ್ಯವನ್ನು ತೋರಿಸುತ್ತಿದ್ದಾರೆ. ಈ ಏರ್ಪಾ

ಪಗಳನ್ನೆಲ್ಲಾ ಮಾಡಿಸಿದ ಮಹಾರಾಜಶ್ರೀ ಪ್ಲೀಡರ್ ಪಿ ಕಾಮುರಾಯ ರವರನ್ನು ಈ ಸಂದರ್ಭದಲ್ಲಿ ನನ್ನಂತೆ ಬಹು ಜನರು ಸ್ತೋತ್ರಮಾಡ ಬಿ ಮಾನಿಸಿ ಮಾಡಲಾಗಬೇಕೆಂಬು ನಂಬುತ್ತೇನೆ.

ಈ ರೀತಿಯಾಗಿ ಪುರಜನರು ಪ್ರತಿಯೊಂದು ಹೋಬಳಿಗಳಲ್ಲಿಯೂ ಒಂದೊಂದು ರೀಡಿಂಗ್ ರೂಂ ಮಾಡಿಕೊಂಡು ಪ್ರಚಾರವಾಗುತ್ತಿರುವ ವೃತ್ತಾಂತ ಪತ್ರಿಕೆಗಳನ್ನು ತರಿಸಿಕೊಂಡು ಓದುತ್ತ ಬಂದರೆ ಎಷ್ಟೋ ವಿಷಯಗಳು ಗೊತ್ತಾಗುವದಲ್ಲದೆ ಬುದ್ಧಿಯು ಚುರುಕಾಗಿ ತಮ್ಮ ತಮ್ಮ ಜೀವನೋಪಾಯ ಸಂಪಾದಿಸಿಕೊಳ್ಳುವ ಮಾರ್ಗವು ಸ್ಫುರಿಸುತ್ತದೆ ಜನರಲ್ಲಿ ರಾಗದ್ವೇಷಾದಿಗಳು ಕಡಮೆಯಾಗಿ ಏಕಮತ್ಯವು ವೃದ್ಧಿಯಾಗುತ್ತೆ.

ನಮ್ಮ ಮೈಸೂರು ಸಂಸ್ಥಾನದಲ್ಲಿ ರಾಜ್ಯಭಾರಸ್ತ್ರೀಯು ಚೆನ್ನಿನ ಮೂಳೆಯ ಸ್ಥಾನಾಪನ್ನರಾಗಿರುವ ಆರ್ಡಿನರಿ ಮ್ಯಾನ್ ಎಂಬ ಪ್ರಜೆಗಳನ್ನು ಸರ್ವ ವಿಷಯದಲ್ಲಿ ಸುಲಭವಾಗಿ ವಿದ್ಯಾವಂತರನ್ನು ಮಾಡಬೇಕೆಂತ ಕುತೂಹಲವುಳ್ಳವರಾಗಿರುವ ನಮ್ಮ ದಿವಾನ್ ಬಹದ್ದೂರು ಮೆ॥ ವಿ. ಪಿ. ಮಾಧವರಾಯರು, ಈ ರೀಡಿಂಗ್ ರೂಂ ಗಾಗಿ ಮಾಹೆಯಾನಾ ಯಥೋಚಿತ ಸಹಾಯದ್ರವ್ಯ ದೊರೆಯುವಂತೆ ಏರ್ಪಾಡು ಮಾಡಿ ಇದೇ ಮೇರಿಗೆ ಪ್ರತಿ ಹೋಬಳಿಗಳಲ್ಲಿಯೂ ಮಾಡಿಕೊಳ್ಳುವ ರೀಡಿಂಗ್ ರೂಮಿಗೆಲ್ಲಾ ಸಹ ಪ್ರೋತ್ಸಾಹದ್ರವ್ಯ ಕೊಡುತ್ತೇವೆಂದು ಮೈಸೂರು ಗೆಜೆಟ್ ಮೂಲಕ ಪಬ್ಲಿಷ್ ಮಾಡುವದಲ್ಲದೆ ಪ್ರತಿಯೊಂದು ರೀಡಿಂಗ್ ರೂಮಿಗೂ ಸರ್ಕಾರಿ ಗೆಜೆಟ್‌ಟನ್ನು ಬಗರ್ ಛಾರ್ಜಿನಿಂದ ಸರಬರಾಜು ಮಾಡಿಸಿ ಸರ್ಕಾರದಿಂದ ಪಬ್ಲಿಷ್ ಮಾಡುವ ಎಲ್ಲಾ ವಿಧವಾದ ಪ್ರೊಸಿಡಿಂಗ್ಸ್‌ನ ಕಾಪಿಯೊಂದನ್ನು ರವಾನಿಸಿ ಕೊಡುವದರದ್ವಾರ ಪ್ರೋತ್ಸಾಹಗೊಳಿಸುವರೆಂದು ನಂಬಿರುತ್ತೇನೆ.

ಮೈಸೂರು ದೇಶಾಭಿಮಾನಿ ಎಡಿಟರಾಗಿದ್ದ,

ಬಿ. ಸಿ. ಶ್ರೀನಿವಾಸೈಯ್ಯಂಗಾರ್ರು.

ಭತ್ತ ಕುಟ್ಟುವ ಯಂತ್ರ.

ಅಯ್ಯಾ,

ಮೇಲ್ಕಂಡ ಭತ್ತಕುಟ್ಟುವಯಂತ್ರವು ಸಿಕ್ಕುವ ಕಂಪೆನಿಯ ಹೆಸರು ಮತ್ತು ವಿಳಾಸವನ್ನು ಕಳೆದ ವಾರದಲ್ಲೇ ನಿಮ್ಮ ಪತ್ರಿಕಾದ್ವಾರ ಪ್ರಚುರಪಡಿಸಿರುವದು ಸರಿಯಷ್ಟೆ, ಆದಾಗ್ಯೂ ವಾಚಕರಿಗೆ ವಿಳಾಸವು ನಿಷ್ಕೃಷ್ಟವಾಗಿ ಗೊತ್ತಾಗದೆ ಅನೇಕ ಮಂದಿ ಪುನಃ ನನ್ನನ್ನು ವಿಳಾಸ ವಿವರವಾಗಿ ತಿಳಿಯಪಡಿಸಬೇಕೆಂದು ಲೇಖನಗಳು ಬೆಳೆಸುತ್ತಲೇ ಇರುವದ್ದರಿಂದ ವಾಚಕರ ಆಕರ್ಷಣೆಗಾಗಿ ಈ ಕೆಳಗೆ ವಿಳಾಸವನ್ನು ವಿವರವಾಗಿ ಬರೆಯಲಾಗಿದೆ.

“ಉತ್ತರ ಅಮೇರಿಕಾ ಖಂಡದಲ್ಲಿ ಕೆನಡಾ ರಾಜ್ಯಕ್ಕೆ ಸೇರಿರುವ ಲಂಡನ್ ಪಟ್ಟಣದಲ್ಲಿರುವ ಸ್ಟ್ರ ಮೋಟಾರ್ ಕಂಪೆನಿಗೆ” ಎಂದು ಇಂಗ್ಲೀಷಿನಲ್ಲಿ ವಿಳಾಸವನ್ನು ವಿವರವಾಗಿ ಬರೆದು, ಕ್ಯಾಟಲಾಗ್ ತರಿಸಿಕೊಂಡು ನೋಡಿ ನಿಮ್ಮ ನಿಮ್ಮಗಳ ಶಕ್ತ್ಯನುಸಾರ, ಬೆಲೆಯುಳ್ಳ ಯಂತ್ರವನ್ನು ತರಿಸಿಕೊಳ್ಳ ಬಹುದು ವಾಚಕರ ಅವಗಾಹನೆಗೋಸ್ಕರವಾಗಿ ಪುನಃ ಪ್ರಕಟಿಸ ಬೇಕಾಗಿ ಕೋರುತ್ತೇನೆ.

ಬಿ ಸಿ. ಎಸ್ ರಾಜಗೋಪಾಲಶರ್ಮ.

ಬಿಡದಿ.

ಉಪಾಧ್ಯಾಯರ ಸಂಬಳ

ಅಯ್ಯಾ,

ಮುಂದಿನ ತಿಂಗಳಲ್ಲಿ ೧೫ ಅದಕ್ಕೆ ಮೇಲ್ಪಟ್ಟ ದಿನಗಳಾದರೂ ಹಿಂದಿನ ತಿಂಗಳ ಸಂಬಳ ದೊರಿಯದೆ ಈ ಊರಿನ ಸ್ಕೂಲ್ ಮಾಸ್ಟರುಗಳು ಪಡುವ ತೊಂದರೆಯನ್ನು ನೋಡಿ ಸಹಿಸಲಸಾಧ್ಯವಾಗಿಲ್ಲ. ಸಾಧಾರಣವಾಗಿ ಪ್ರತಿ ತಿಂಗಳಲ್ಲೂ ಇದೇ ರೀತಿಯಾಗುವದಲ್ಲದೆ ಕಲವು ತಿಂಗಳಲ್ಲಿ ಇನ್ನೂ ಹೆಚ್ಚು ಕಾಲದ ಮೇಲೆ ಸಂಬಳವನ್ನು ಹೊಂದಿರುತ್ತಾರೆ, ಅಂದರೆ ಸೆಪ್ಟಂಬರ್ ತಿಂಗಳ ಸಂಬಳವು ನವಂಬರ್ ಮೊದಲಿನಲ್ಲೂ, ನವಂಬರ್ ಮಾಹೆತಲಬು ಡಿಸೆಂಬರ್ ೨೬ ರಲ್ಲೂ ದೊರೆತಿರುತ್ತಲ್ಲದೆ ಡಿಸೆಂಬರ್ ಮಾಹೆತಲಬು ಅದ್ಯಾಪಿ ದೊರೆತಿಲ್ಲ. ಹೀಗೆ ಮಾಡಿದರೆ ಪರಸ್ಥಳಗಳಲ್ಲಿ ಅದನ್ನೇ ಕ್ರೌಂಚಕ ಪಕ್ಷಿಗಳಂತೆ ನಂಬಿಕೊಂಡಿರುವ ಇವರುಗಳು ಹೇಗೆ ಜೀವಿಸ ಬೇಕೆಂಬುದು ವಾಚಕರಿಗೆ ತಿಳಿದ ಅಂಶವೇ ಆಗಿರುತ್ತದೆ. ತಾಲ್ಲೂಕು ಮತ್ತು ಸಬ್‌ತಾಲ್ಲೂಕುಗಳೆರಡರ ಮಧ್ಯದಲ್ಲಿ ಇವರು ಸಿಕ್ಕಿಕೊಂಡಿರುವದರಿಂದ ಈ ತೊಂದರೆಯನ್ನನುಭವಿಸುತ್ತಿದ್ದಾರೆಂದು ನಂಬ ಬಹುದಾಗಿರುತ್ತೆ. ಆದರೂ ಸರಿಯಾದ ಏರ್ಪಾಟನಿಂದ ಕಾಲಕಾಲಕ್ಕೆ ಸಂಬಳ ಪಾವತಿ ಆಗುವಂತೆ ಮಾಡಿಸಿ ಈ ಬಡಮ್ಯಾಸ್ಟರುಗಳ ಗೋಳಾಟವನ್ನು ನಿವಾರಣೆ ಮಾಡುವವರ ಮುಖೇನ ಕೀರ್ತಿಪ್ರತಿಷ್ಟರಾಗಬೇಕೆಂದು ಕೋರುತ್ತೇನೆ.

ಬಿ. ಸಿ. ಎಸ್. ರಾ.

ಭಂಡಿಯವರ ಅಜಾಗರೂಕತೆ.

ಅಯ್ಯಾ,

ಇದೇ ಜನವರಿ ೨೯ ನೇ ಮಂಗಳವಾರ ಬೆಳಗಿನಝಾಮ ೫ ಘಂಟೆಸಮಯದಲ್ಲಿ, ಬೆಂಗಳೂರು ಸಂಡಲ್‌ಕೋಠಿ ಸಪ್ಲೈಗೋಸ್ಕರವಾಗಿ ಕಲ್ಲೀಸ್ಟೇಷಿಯಿಂದ ಗಂಧದ ಕೊರಡುಗಳನ್ನು ಭರ್ತಿ ಮಾಡಿಕೊಂಡು ಹೋಗುತ್ತಿದ್ದ ೪—೫ ಗಾಡಿಗಳಪೈಕಿ, ನಾಲ್ಕು ಗಾಡಿಗಳ ಎತ್ತುಗಳು ಚುರುಕಾಗಿದ್ದದ್ದರಿಂದಲೂ, ವೇಗವಾಗಿ ಹೋಗಲುದ್ಯುಗಿಸಿ ಒಂದು ಗಾಡಿಯನ್ನು ಮಾತ್ರ ಹಿಂದೆ ಬಿಟ್ಟುಬಿಟ್ಟರು. ಹಿಂದಿನ ಗಾಡಿ ಯವನಾದ ಹನುಮಂತರಾಯನ ಮಗ ೧೭ ವಯಸ್ಸುಳ್ಳ ಮುನಸಾಮಿ ಯೆಂಬುವನು ಗಾಡಿಯಮೇಲೆ ಹೆಚ್ಚುನಿದ್ರೆ ಹೋಗುತ್ತಿದ್ದುದರಿಂದ ಸದರಿ ಭಂಡಿಯ ಎತ್ತುಗಳು ಏನನ್ನೋ ಕಂಡು ಬೆದರಿ ಮಾರ್ಗತಪ್ಪಿ ಮನಸ್ಸಿ ಎಳೆದುಕೊಂಡು ಹೋಗಿ ಬಿಡದಿ ರೈಲ್ವೆಸ್ಟೇಷನ್‌ಬಳಿ ಇದ್ದ ಗೇಟಿನ ಆಚೆ ಪಬ್ಲಿಕ್ ರಸ್ತೆ ಬಲಭಾಗದಲ್ಲಿದ್ದ ಕೊರಕಲಿಗೆ ನುಗ್ಗಿ ಗಾಡಿಕೆಡವಿದವು. ಮೇಲಿದ್ದ ಮಾಲೀಕನಿಗೆ ಅಪಾಯವೇನೂ ಸಂಭವಿಸಲಿಲ್ಲ. ಎತ್ತುಗಳಿಗೆ ಮಾತ್ರ ಸ್ವಲ್ಪ ಘಾಯವಾಗಿದೆ ಸೂರ್ಯೋದಯಾನಂತರ ಈ ವರ್ತಮಾನವನ್ನು ತಿಳಿದು ಇತರರು ಬಂದು ಪುನಃ ಭಂಡಿ ಪೂರ್ವದಂತೆ ತುಂಬಿ ಗಾಡಿಯವನಿಗೆ ಸಹಾಯಮಾಡಿ ಬೆಂಗಳೂರಿಗೆ ರವಾನೆಕಳಿಸಿದರು. ಇನ್ನು ಸ್ವಲ್ಪ ಮುಂಚಿತವಾಗಿಯೂ ಸ್ವಲ್ಪ ಹಿಂದೂ ಈ ಕೃತ್ಯ ನಡದಿದ್ದರೆ ಬಹಳ ಅಪಾಯ ಸಂಭವಿಸುತಲಿತ್ತು. ಏಕೆಂದರೆ ರೈಲ್ ಸಮೀಪವಾಗಿತ್ತು ಮತ್ತು ಮೈಸೂರಿಂದ ಬೆಂಗಳೂರಿಗೆ ಹೊರಡುವ ರಾತ್ರಿಗಾಡಿಯು ಅಲ್ಲಿಗೆ ಬೆಳಗಿನಝಾಮ ೩॥ ಘಂಟೆಗೆ ಬರುವದಕ್ಕಿತ್ತು.

ಯಥಾರ್ಥವಾದಿ.

ಮಿಷನ್ ಗರ್ಲ್‌ಸ್ಕೂಲುಗಳೂ ಅನ್ಯೋನ್ಯ ಮಿತ್ರತ್ವವೂ.

ಅಯ್ಯಾ,

ದಾವಣಗೆರೆಯಲ್ಲಿ ಪಬ್ಲಿಕ್ ಆಗತಕ್ಕ ಧನುರ್ಧಾರಿ ಪೇಪರಿನಲ್ಲಿ ನಗರಸಭಾ ಮೆಂಬರ್ ಮತ್ತು ಮ॥ ಹೊಸೂರು ಸುಬ್ಬರಾವ್ ಇವರ ಪ್ರೋತ್ಸಾಹದಿಂದ,ದಾವಣಗೆರೆಯಲ್ಲಿ ಒಂದು ಸಭಾ ಸೇರಿತ್ತೆಂತಲೂ ಅದರಲ್ಲಿ—೧. ಇನ್ನು ಮುಂದೆ ನಮ್ಮ ಹೆಣ್ಣು ಮಕ್ಕಳನ್ನು ವಿದ್ಯಾಭ್ಯಾಸಕ್ಕಾಗಿ ಮಿಷನರಿಗಳ ಸ್ಕೂಲಿಗೆ ಕಳುಹಿಸುವದನ್ನು ಬಿಟ್ಟು ಸ್ವಂತವಾಗಿ ಗರಲ್‌ಸ್ಕೂಲ್ ಮಾಡಿಕೊಳ್ಳಬೇಕೆಂತಲೂ ಅದಕ್ಕಾಗಿ ಚಂದಾ ರೂಪವಾಗಿ ಪ್ರಜೆಗಳಿಂದಲೂ ಗ್ರ್ಯಾಂಟ್ ಪಡೆಯತಕ್ಕದ್ದರ ಮೂಲಕ ಗವರ್ನಮೆಂಟಿನಿಂದಲೂ ಹಣ ಕೊಡಿಸಬೇಕು ೨. ಪ್ರತಿ ಮನುಷ್ಯನು ಮತ ಸಂಬಂಧವಾದ ಅಸೂಯೆಗಳನ್ನು ಬಿಟ್ಟು ಪರಸ್ಪರ ಅನ್ಯೋನ್ಯ ಭಾವದಲ್ಲಿರುತ್ತ ಸರ್ವಜನ ಸಮ್ಮತವಾದ ಸಭಾಕ್ಕೆ ದ್ರವ್ಯಸಹಾಯಮಾಡುತ್ತಿರಬೇಕೆಂತ ವಗೈರೆ ಇತ್ಯರ್ಥಪಡಿಸಿದಂತೆ ನಮೂದಿಸಿದೆ. ಈ ವಿಷಯ ಮೈಸೂರ್ ದೇಶದ ಎಲ್ಲಾ ಪ್ರಜೆಗಳಿಗೂ ಅನ್ವಯಿಸುತ್ತಾದ್ದರಿಂದ ಈ ಇತ್ಯರ್ಥದ ವಿಷಯದಲ್ಲಿ ನನಗೆ ತೋರುವ ಸಾಧಕ ಬಾಧಕಗಳನ್ನ ಅರಿಕೆ ಮಾಡುತ್ತೇನೆ—ಮಿಷನ್ ಗರಲ್‌ಸ್ಕೂಲ್ ವಿಷಯ ಮಿಷನರಿಗಳು ಇಂಡಿಯಾದಲ್ಲಿ ಸ್ಕೂಲುಗಳನ್ನು ಸ್ಥಾಪಿಸಿ ೨೦೦ ವರುಷಕ್ಕಿಂತಲೂ ಜಾಸ್ತಿಯಾಯಿತು ಪುರು ಲಾಗಾಯಿತು ಈ ವರಿವಿಗೂ ಕೋಟ್ಯಂತರ ಬಾಲಕ ಬಾಲಕಿಯರು ಅವರಲ್ಲಿ ಓದಿ ವಿವೇಕಶಾಲಿಗಳಾಗಿ ನಮ್ಮ ಜನ್ಮಭೂಮಿಯಾದ ಹಿಂದೂಸ್ಥಾನದಲ್ಲೇ ಸುಖವಾಗಿ ಬಾಳುತ್ತಾ ತಮ್ಮ ಅಭಿವೃದ್ಧಿಗಾಗಿ ಸಾಹಸಪಡುತ್ತಿಧಾರಂದರೆ ಪಶ್ಚಿಮ ದೇಶದವರಂತೆ ದ್ರವ್ಯಾರ್ಜನೆಗೆ ಆಕರವಾದ ಕೃಷಿಗಳನ್ನು ಅಭ್ಯಾಸಿಸಿ ತಾವು ತಮ್ಮನ್ನ ಹೊಂದಿದವರು ಸಹ ಚನ್ನಾಗಿ ಜೀವಿಸುತ್ತಾ ಸುಕೀರ್ತಿವಂತರಾಗಿ ಬಾಳಬೇಕೆಂಬುವ ಪ್ರಯತ್ನದಲ್ಲಿಧಾರೆ. ಮತ್ತು ಹೊರಗೆ ಹೇಳಿದರೆ ಪಾಪಬರುತ್ತೆ. ಬ್ರಾಹ್ಮಣರ ಹೊರತು ಇತರ ಜನಗಳು ಓದಬಾರದಂತ ಬಚ್ಚಿಟ್ಟಿದ್ದ ಗ್ರಂಥಗಳೆಲ್ಲಾ ಹೊರಕ್ಕೆ ಬಂದು ಎಲ್ಲಾ ಜನಗಳು ಅದನ್ನು ಓದಿ ಅದರಿಂದ ನಮ್ಮ ನಡವಳಿಕೆಯಲ್ಲಿ ಇರತಕ್ಕ ತಪ್ಪುಗಳನ್ನು ತಾವೇ ಗೊತ್ತುಮಾಡಿಕೊಳ್ಳುತ್ತಿದಾರೆ ಈ ವಗೈರೆ ಕಾರಣಗಳಿಂದ ಈಗೀಗ ಮೌಢ್ಯವೆಂಬ ರಾಕ್ಷಸನು ನಮ್ಮನ್ನ ಬಿಡಬೇಕಾಗಿ ಬಂದೀತೆಂಬ ವ್ಯಸನದಿಂದಿದಾನೆ ಇಂಥಾ ಸುಸಮಯದಲ್ಲಿ ನಾವು ನಮಗೆ ಪರಮೋಪಕಾರಿಗಳಾದ ಮಿಷನವರ ಸ್ಕೂಲ್‌ಬಿಟ್ಟು ನಾವೇ ಕೆಡಲಿಕ್ಕೆ ಮಾರ್ಗಮಾಡಿಕೊಳ್ಳಬಹುದೇ? ಮಿಷನರಿಗಳು ನಮ್ಮಗಳಿಗೆ ಜಗತ್ತನ್ನು ಸೃಷ್ಟಿಸಿ ಸಮಸ್ತ ವಿಷಯದಲ್ಲೂ ನಮ್ಮನ್ನ ಕಾಪಾಡುತ್ತಿರತಕ್ಕ ಸರ್ವಶಕ್ತನಾದ ಭಗವಂತನನ್ನು ನಾವು ಸತ್ಯವಾಗಿ ನಡೆಯತಕ್ಕಹಾಂಗೂ ಮನಃಪೂರ್ವಕವಾದ ಭಕ್ತಿಯಿಂದ ಧ್ಯಾನಿಸಿ ಅತನ ಸೇವಾ ನಡಿಸಬೇಕು ಎಂತಾ ಬೋಧಿಸುತ್ತಾರೆಯೇ ಹೊರತು ನಮ್ಮನ್ಯಾವನ್ನೂ ಜುಲುಮಿನಿಂದ ಅವರ ಮತಕ್ಕೆ ಸೇರಿಸಿಕೊಳ್ಳುವುದಿಲ್ಲ. ಅಂಥಾ ಕೆಟ್ಟ ತಾತ್ಪರ್ಯವು ಅವರಿಗೆ ಇಲ್ಲ.

ಇನ್ನೊಂದು ವಿಷಯ ಅಂದರೆ—ಅನ್ಯೋನ್ಯ ಮಿತ್ರತ್ವ—ನಮ್ಮ ಮೈಸೂರ್ ಸಂಸ್ಥಾನದಲ್ಲಿ—೧. ಹಿಂದುಗಳು, ಇವರಲ್ಲಿ ಸಹಸ್ರಾರು ಪ್ರಭೇದಗಳು—೨. ಮುಸಲ್ಮಾನರು—ಇವರಲ್ಲಿ ೨ ಮತ ಸೇರಿಹದೆ, ಸುನ್ನಿ ಷಿಯ—೩. ಎಹೋದ್ಯರು—ಜ್ಯೂಸ್—೪ ಪಾರಶಿ—ಅಗ್ನಿ ಆರಾಧಕರು—೫. ಬೌದ್ಧರು—೬. ಕ್ರಿಶ್ಚಿಯನ್ಸ್—ಇವರೂ ಇನ್ನೂ ಅನೇಕ ಮತದವರು ಸಹ ವಾಸವಾಗಿರುತ್ತ್, ಎಲ್ಲಾ ಜನಗಳು ಒಂದೇ ಸಮನಾದ ಹಕ್ಕುಳ್ಳ ನಮ್ಮ ಮಹಾರಾಜರ ಪ್ರಜೆಗಳಾಗಿದ್ದೇವೆ. ಅವರು ನಾವು ಸಹೋದರರಂತೆ ಆಗಬೇಕಾದರೆ ಸರ್ವಸಮ್ಮತವಾದ ಏಕೋಭಾವ ಬೇಕು ಅಂಥಾ ಸುಗುಣ ನಮ್ಮಲ್ಲಿ ಹುಟ್ಟಬೇಕಾದರೆ ನಮ್ಮಲ್ಲಿರತಕ್ಕ ಜಾತಿ ಮತ್ಸರ ಮೌಢ್ಯ ಇವುಗಳನೆಲ್ಲಾ ಬಿಟ್ಟು ಎಲ್ಲಾ ಪ್ರಜೆಗಳು ಒಂದೇ ಸಮನಾಗಿಧಾರೆಂತ ಎಣಿಸಿ ವಿದ್ಯಾವಂತರಾದ ದೊಡ್ಡ ಮನುಷ್ಯರು ಹಿಂದೆ ಬಿದ್ದಿರತಕ್ಕ ಜನಗಳನ್ನು ತಮ್ಮಂತೆ ಮಾಡಿಕೊಂಡು ಅವರನ್ನು ತಮ್ಮ ಜೊತೆಗೆ ಸೇರಿಸಿಕೊಂಡು ಅವರು ತಾವು ಸಹ ವಿದ್ಯ, ಅನುಭವ, ಯಾವ ಕೆಲಸಕ್ಕೂ ಖಂಡಿತವಾದ ಸ್ಥೈರ್ಯ, ಸತ್ಯತ್ವ, ಇವು ಇರತಕ್ಕಹಾಂಗೂ ನಮ್ಮ ಮೌಢ್ಯದಿಂದ ನಮ್ಮ ಭೂಮಿಯಲ್ಲಿರತಕ್ಕ ಐಶ್ವರ್ಯವನ್ನೆಲ್ಲಾ ತೆಗದುಕೊಂಡು ಹೋಗುತ್ತಿರತಕ್. ಇಂಗ್ಲೀಷಿನವರ ಶಿಷ್ಯರಾಗಿ ಸೇರಿ ಅವರಿಂದ ತಯಾರಾಗಿ ನಾವು ನಮ್ಮ ಸಹೋದರರು ಸಹ ಒಂದೇ ಮನಸ್ಸಿನಿಂದ ಚನ್ನಾಗಿ ಬದುಕತಕ್ಕ ಕಾಲ ಬಂದರೆ ಎಲ್ಲಾ ಪ್ರಜೆಗಳಿಗೂ ಅನ್ಯೋನ್ಯ ಭಾವ ಹುಟ್ಟೀತು. ಆ ಪ್ರಯತ್ನಕ್ಕೆ ಕೃಷಿಮಾಡದೆ ಎಲ್ಲರಿಗೂ ಹಿತವಾಗಿರತಕ್ಕ ಮಿಷನ್ ಸ್ಕೂಲುಗಳನ್ನ ತೆಗೆದು ತೊಂದರೆಗೆ ಕಾರಣಮಾಡಿಕೊಳ್ಳಕ್ಕೆ ಎಲ್ಲಾ ಪ್ರಜೆಗಳು ಸಮ್ಮತಿಸ್ಯಾರೆ? ಹಾಂಗೂ ಇಂಥಾ ಪ್ರಯತ್ನಗಳು ಒಳ್ಳೇ ನಡವಳಿಕೆಗೆ ಪ್ರತಿಬಂಧಕಗಳಲ್ಲವೆ? ಈ ಕಾರಣಗಳಿಂದ ವಿದ್ಯಾನಿಧಿಗಳಾದ ಸಭಾಸದರಿಗೆ ನಾನು ಬೇಡಿಕೊಳ್ಳುವುದೇನಂದರೆ—ಇಂಡಿಯಾ ದೇಶಕ್ಕೆ ಇಂಗ್ಲಿಷರ ಪ್ರಭುತ್ವ ಯಾವಾಗ ಬಂತೋ ಅದರ ಜೊತೆಯಲ್ಲೇ ಮಿಷನರಿಗಳೂ ಬಂದರು. ಆಗಿನಿಂದಲೂ ನಾವು ವಿವೇಕಿಗಳಾಗಿ ಚನ್ನಾಗಿ ಬದುಕಲಿ ಎಂಬ ತಾತ್ಪರ್ಯದಿಂದ ನಮ್ಮನ್ನಾಳತಕ್ಕ ಪ್ರಭುಗಳು ಅನೇಕ ದ್ರವ್ಯ ಖರ್ಚುಮಾಡಿ ನಮ್ಮನ್ನ ವಿದ್ಯಾವಂತರಾಗಿ ಮಾಡುತ್ತಿದಾರೆ ರಾಜರಿಗೆ ಸಹಾಯಕರು ಪ್ರಜೆಗಳಿಗೆ ಹಿತರು ಆಗಿರತಕ್ಕ ಸತ್ಯವಂತರಾದ ಮಿಷನರಿಗಳು ತಮ್ಮ ಸ್ವಂತ ಖರ್ಚಿನಿಂದ ವಿದ್ಯದಿಂ ತಿಳಿಯತಕ್ಕ ಸುಗುಣಗಳನ್ನು ನಾವು ಚನ್ನಾಗಿ ಬದುಕತಕ್ಕ ಮಾರ್ಗವನ್ನು ಸಹ ನಮಗೆ ಅನುಭವದಿಂದ ತೋರಿಸುತ್ತಾ ಬಂದಿದಾರೆ ಮತ್ತು ಅನೇಕ ಜನ ಸ್ತ್ರೀಯರು ವಿದ್ಯಾವಂತರಾಗಿ ತಮ್ಮ ತಮ್ಮ ಮೌಢ್ಯ ನಡವಳಿಕೆಯನ್ನು ತಾವೇ ತಿಳಿದು ಅದನ್ನ ಬಿಡಲಿಕ್ಕೆ ಎಣಿಸುತ್ತಿಧಾರೆ ಹೀಗಿರತಕ್ಕದ್ದರಲ್ಲಿ ಅಂಥಾ ವಿವೇಕ ಹೆಚ್ಚಿ ದೇಶ ಸೌಖ್ಯವಾಗತಕ್ಕ ಪ್ರಯತ್ನ ನಾವು ಮಾಡಬೇಕೇ ಹೊರತು ಅದಕ್ಕೆ ಪ್ರತಿ ಬಂಧಕ ಪಡಿಸಬಾರದಲ್ಲವೇ? ಆದ್ದರಿಂದ ಇಂಥಾ ಪ್ರಯತ್ನಗಳನ್ನು ಬಿಟ್ಟು ನಿಜವಾಗಿ ನಾವು ಚನ್ನಾಗಿ ಬಾಳತಕ್ಕ ಪ್ರಯತ್ನ ಮಾಡಬೇಕೆಂಬುವದೆ ನನ್ನ ಪ್ರಾರ್ಥನೆ. ನಮ್ಮ ಚಕ್ರವರ್ತಿ ಸಾರ್ವಭೌಮರು ನಮ್ಮನ್ನಾಳತಕ್ಕ ಶ್ರೀಮನ್ ಮಹಾರಾಜರವರು ಹ್ಯಾಂಗೆ ನಮ್ಮ ಹಿತ ಕೋರತಕ್ಕವರೋ ಮಿಷನರಿಗಳೂ ಅವರ ಜೊತೆಯಲ್ಲಿ ಸೇರಿದವರಾಗಿಧಾರೆ ಅದನ್ನು ಖಂಡಿತವಾಗಿ ತಿಳಿಯಬೇಕು.

ಒಬ್ಬ ಬ್ರಾಹ್ಮಣ ಆಫೀಸರ್.

ವೈಶ್ಯಮಂಡಲಿ.

ಅಯ್ಯಾ,

ನಮ್ಮ ಮತವಿಚಾರವಾದ ಆಕ್ಷೇಪಣೆಗಳನ್ನ ತಮ್ಮ ಪೇಪರಿನ ಬರೆಯಹೋಗುವಾಗ ನಾನು ಅರಿಕೆ ಮಾಡಿಕೊಂಡಿದ್ದಕ್ಕೆ ತಮ್ಮ ೧೩—೧—೯೦೭ ನೇ ಪೇಪರಿನಲ್ಲಿ ಪ್ರಿಂಟು ಹಾಕಿದ್ದು ನೋಡಿ ಸಂತೋಷವಾಯ್ತು ನಾನು ತಮ್ಮ ಪೇಪರಿಗೆ ಬರೆಯುವಾಗ್ಗೆ ಡಿಸೆಂಬರು ತಾರೀಖು ೨೪ ನೇ ಮೈಸೂರು ಸ್ಟಾರು ಪತ್ರಿಕೆಯವರು ಬರೆ ಆಕ್ಷೇಪಕರವಾದ ವಿಷಯಗಳೆಲ್ಲಾ ಅವರೇ ನಮ್ಮ ದ್ವೇಷಿಗಳ ಮನ್ನು ಕೇಳಿ ಬರೆದಿರ ಬಹುದೆಂದು ಊಹಿಸಿದ್ದೆನು ಈಚೆಗೆ ಅಂ ತಾ ೩—೧—೯೦೭ ನೇ ಸದರಿ ಸ್ಟಾರು ಪತ್ರಿಕೆಯಲ್ಲಿ ಮೇಲ್ಕಂಡ ವಿಷಯವಾಗಿ ನಮೂದಿಸಿರುವದನ್ನೆ ನೋಡುವಲ್ಲಿ ಕೆಳಗೆ ಬರ ಕ್ಕ ಅಭಿಪ್ರಾಯವಾಗಿರುತ್ತೆ. ಜನಾಂಗವರ್ಣನೆ—ಸರ್ಕಾರದಿಂದ ಮಿತರಾಗಿರುವ ಮೆ॥ ಹೆಚ್. ವಿ ನಂಜುಂಡೈಯ್ಯ ಯಂ ಎ ಯಲ್ ರವರು ಮೈಸೂರು ದೇಶದಲ್ಲಿರುವ ಪ್ರತಿಯೊಂದು ಮ ಕುಲಗಳ ವರ್ಣನವನ್ನು ಬರದು ಅದರಲ್ಲಿ ಆಕ್ಷೇಪಕರವಾದ ಳಿರುವವೆಂದು ತಿಳಿದು ಬಂದರೆ ಸರಿಮಾಡಿಸಿ ನಮಗೆ ಕಳುಹಿಸಿಕೊ ಆ ಪ್ರತಿಗಳನ್ನ ನಾವು ಕನ್ನಡದಲ್ಲಿ ಪರಿವರ್ತಿಸಿ ಆಯಾ ಜಾ ಜನಗಳು ಅದರಲ್ಲಿ ತಮಗೆ ವಿರುದ್ಧವಾದ ಲೇಖನಗಳೇನಾದರು ಯ ಅವನ್ನು ಮೆ॥ನಂಜುಂಡೈಯ್ಯನವರ ಗಮನಕ್ಕೆ ತಂದು ಸರಿಪಡಿಸಿ ಳ್ಳಬೇಕೆಂಬುದಕ್ಕಾಗಿಯೆ ಪ್ರಕಟಿಸುತ್ತಿರುವೆವು. ಇದುವರಿಗೆ ಪ್ರಕಟಿಸಿದವುಗಳಲ್ಲಿ ವೈಶ್ಯರಿಗೆ ಸಂಬಂಧಿಸಿದ ಬರವಣಿಗೆಯು ಲ್ಲಿಲ್ಲದ ಪದ್ಧತಿಗಳನ್ನು ಒಳಗೊಂಡಿದೆ ಎಂಬುದಾಗಿ ನಮಗೆ ರಾಜ ಯ ವೈಶ್ಯಮಂಡಲೂ ಬೆಂಗಳೂರು ಮೊದಲಾದ ಕೆಲವು ಕಡೆಯ ವೈ ದಲೂ ತಿಳಿಯಬಂದಿರುತ್ತದೆ ಈ ಸಂದರ್ಭದಲ್ಲಿ ಇವರು ಮಾ ಆಕ್ಷೇಪವು ಯಥಾರ್ಥವಾಗಿರುತ್ತದೆ. ಆಯಾಯ ಜನಾಂಗಕ್ಕೆ ಸಂಬ ಪಟ್ಟ ವಿಷಯಗಳನ್ನು ಅವರಿಂದಲೆ ತಿಳಿದು ಬರೆಯಬೇಕು ಅದರ ಮ ತಮ್ಮ ಅಭಿಪ್ರಾಯವೇನಾದರು ಇದ್ದರೆ ತಿಳಿಸುವದು ಯುಕ್ತ ಗಿದೆ ಒಬ್ಬರ ಸಂಗತಿಯನ್ನು ಅವರ ಹಗೆಗಳಿಂದ ತಿಳಿದುಕೊಂ ಅದನ್ನ ಸರ್ಕಾರದ ರಿಕಾರ್ಡುಗಳಲ್ಲಿ ಸೇರಿಸಿ ಇಡುವದು ಉಚಿ ಗಿಲ್ಲಪ್ರತಿಯೊಂದು ಕುಲಜಪರವಿಷಯದಲ್ಲಿ ಅವರ ಹಗೆಗ ಇತರರು ಹಲವು ಕಟ್ಟು ಕಥೆಗಳನ್ನೆ ಕಲ್ಪಿಸಿ ಹೇಳುತ್ತಿರುತ್ತಾರೆ ಸ ಣೀಯಗಳು ಅಲ್ಲದ ಅಂಥಾ ಕಥೆಗಳನ್ನೆಲ್ಲಾ ಇಂಥಾ ರಿಕಾರ್ಡುಗ ಸೇರಿಸಿ ಬಿಟ್ಟು ಅದರ ಕೆಳಗೆ ಇವುಗಳು ಸುಳ್ಳೆಂದು ಅಭಿಪ್ರಾಯ ಪ ದರಿಂದ ಆಗುವ ಭಾಗ್ಯವೇನು? ಬೆಟ್ಟದ ಮೇಲಿನಿಂದ ಒಬ್ಬನನ್ನು ಕೆಳಗೆ ಬಿದ್ದನಂತರ ಅವನ ವಿಷಯದಲ್ಲಿ ಪರಿತಾಪ ಪಡುವುದೂ ಇ ಒಂದೆಯೇ ಆಗುವದು ಮತ್ತು ಹಾಳು ಕಥೆಗಳನ್ನು ಸರ್ಕಾರಿ ರಿಕಾ ಗಳಿಗೆ ಸೇರಿಸುವವರಿಂದ ಅವುಗಳಿಗೆ ಪ್ರಶಂಸೆಯನ್ನೆ ಕೊಟ್ಟಂತಾಗು ಲ್ಲದೆ ಒಳ್ಳೇದನ್ನೆ ಮಾಡುವದಕಿಂತಲು ಅನರ್ಥವನ್ನೆ ಹೆಚ್ಚಿಸಿದಂ ವುದು. ಆದಕಾರಣ ಇಂಥಾ ಕಟ್ಟು ಕಥೆಗಳನ್ನು ಸೇರಿಸುವ ವಿಷ ದಲ್ಲಿ ಮೆ॥ ನಂಜುಂಡೈಯ್ಯನವರು ದೂರಾಲೋಚನೆಯನ್ನು ಮಾ ರೆಂದು ನಂಬುತ್ತೇವೆ ಎಂದು ಬರದಿರುತ್ತಾರೆ ಈ ಬರವಣಿಗೆಯ ನೋಡಿದನಂತರ ಈ ವಿಷಯದಲ್ಲಿ ಪೇಪರಿನವರ ಕಸೂರಿ ಏನು ಇ ವೆಂದು ತಿಳಿದಂತಾಯಿತು ಆದರೆ ನಾವು ವೈಶ್ಯರಲ್ಲವೆಂದು ಅ ಕೊಡಿಸಿರುತ್ತಾರೆ. ನಾವು ವೈಶ್ಯರೆನ್ನುವದಕ್ಕೆ ವ್ಯಾಸರಿಂದ ನಿರ್ಮಿತವಾ ಅಷ್ಟಾದಶಪುರಾಣಗಳಲ್ಲಿ ಸ್ಕಂದಪುರಾಣದಲ್ಲಿ ವೈಶ್ಯಪುರಾಣವೆಂ ಪ್ರಸಿದ್ಧವಾದ ಪುರಾಣವೆಯಿರುತ್ತೆ. ನಮ್ಮ ಮತವಿಚಾರವನ್ನು ತಿಳಿ ಲೋಸುಗ ಮಹಾರಾಜಶ್ರೀಗಳಾದ ಮೆ॥ ಚೀಫ್ ಜಡ್ಜಿಗಳಾದ ನಂ ಡೈಯ್ಯನವರು ಒಂದು ವರುಷದ ಕೆಳಗೆ ಮೈಸೂರಿಗೆ ತಾವೆ ಖು ದಯಮಾಡಿಸಿ ನಮ್ಮ ಜನಗಳನ್ನೆ ಕರಿಸಿ ನಮ್ಮ ಮತವಿಚಾರ ತಿಳಿದು ಕೊಂಡಂತೆ ರಾಜಧಾನಿ ವೈಶ್ಯರಿಂದ ತಿಳಿದು ಬರುತ್ತೆ. ಮ ತುಮಕೂರು ಡಿಸ್ಟ್ರಿಕ್ಟ್‌ನಲ್ಲಿ ಒಬ್ಬ ಅಸಿಷ್ಟೆಂಟರು ಪ್ರತಿ ತಾಲೂ ಗೂ ದಯಮಾಡಿಸಿ ನಮ್ಮ ಮತಸ್ಥರಲ್ಲಿ ಮುಖಂಡರಾದವರನ್ನ ಕ ಕೊಂಡು ನಮ್ಮ ಮತವಿಚಾರವೆಲ್ಲಾ ತಿಳಿದು ಕೊಂಡು ದಯಮಾ ರುತ್ತಾರೆ ಹೀಗಿದ್ದರೂ ನಮ್ಮ ಮತಸ್ಥರು ಖರಸಿದ್ಧ ವಿಷಯವ

ಬರಸದೆ ನಮಗೆ ದ್ವೇಷಿಗಳಾದವರ ಮಾತನ್ನು ಕೇಳಿ ನಮ್ಮ ಮ ...ಮಾನಕರವಾದ ಬರವಣಿಗೆಯನ್ನು ಬರೆಯುವದಕ್ಕೆ ಮೆ॥ ...ಯ್ಯನವರಿಗೆ ನಮ್ಮ ಜನಗಳು ಏನು ಅಪರಾಧ ಮಾಡಿದ್ದರೊ ...ಬಲ್ಲ. ಅವರು ಅಪ್ಪಣೆ ಕೊಡಿಸಿರತಕ್ಕ ವಿಷಯಗಳಲ್ಲಿ ಕೇಡಿ ...ಮೋಸಗಾರರೆಂದು ಅಪ್ಪಣೆಕೊಡಿಸಿರುತ್ತಾರೆ. ಕೇಡಿಗಳ್ಯಾ ...ತಮ್ಮ ಕುಟುಂಬವನ್ನು ತಾವೇ ಕಾಪಾಡಿಕೊಳ್ಳಲಾರದೆ ಪರರ ...ಯಿಸಿ ಜೀವನ ಮಾಡತಕ್ಕವರೆಂದು ಹೇಳ ಬಹುದು. ಅಂಥಾ ...ವನ್ನು ಮಾಡತಕ್ಕವರು ನಮ್ಮಲ್ಲಿ ಇಲ್ಲವೇ ಇಲ್ಲ. ಮೋಸವನ್ನು ...ಕ್ಕಂಥಾವರು ಅನೇಕ ಜನಗಳು ಸರ್ಕಾರದಲ್ಲಿ ಶಿಕ್ಷೆಯನ್ನು ಅ ...ಸುವದಕ್ಕೆ ಅಡ್ಡಿಯಿಲ್ಲ. ಅಂಥಾ ಮೋಸವನ್ನು ಮಾಡಿ ಶಿಕ್ಷೆಯು ...ನುಭವಿಸಿದಂಥಾವರು ನಮ್ಮ ಜನರಲ್ಲಿ ಇರಲಾರರೆಂದು ಎಣಿಸು ... ಮತ್ತು ಕೋಮುಟ ಶಬ್ದಕ್ಕೆ ದನಾಕಾಯುವವನೆಂದು ಅರ್ಥ ...ತ್ತೆ. ಈ ಮಾತು ಜನಗಳು ಒಪ್ಪುವದಿಲ್ಲವೆಂದು ಅಪ್ಪಣೆಕೊಡಿಸಿ ...ರೆ. ಅದು ಸಹಜವೆ. ಯಾಕೆಂದರೆ ಅಲ್ಲದಮಾತನ್ನು ಹೇಳಿದರೆ ...ಒಪ್ಪುವದಿಲ್ಲವು. ಮತ್ತು ಬ್ರಾಹ್ಮಣ ವಚನಕ್ಕೆ ಸಾಲಷ್ಟು ಶಬ್ದ ...ತ್ತು ಏನಂದರೆ "ಜನ್ಮನಾಜಾಯತೆಶೂದ್ರಃ । ಕರ್ಮಣಾಜಾಯತೆ ...। ವೇದಾಭ್ಯಾಸಂತುವಿಪ್ರಃ । ಬ್ರಹ್ಮಜ್ಞಾನಂತುಬ್ರಾಹ್ಮಣಃ" ...ಇರುತ್ತೆ. ಇದರಲ್ಲಿ ಹುಟ್ಟಿದ ಮಕ್ಕಳಿಗೆ ಕರ್ಮಾಧಿಕಾರ ...ಶೂದ್ರಶಬ್ದವೆ ಇರುತ್ತೆ. ಬ್ರಾಹ್ಮಣರ ಮಕ್ಕಳನ್ನು ಶೂದ್ರ ...ಕರದರೆ ಯಾರೂ ಒಪ್ಪಲಾರರು. ಅದರಂತೆ ನಮ್ಮ ಜನಗಳನ್ನು ...ವರೆಂದು ಕರದರೆ ಯಾರು ಒಪ್ಪಲಾರರು. ಮತ್ತು ...ಅನೇಕ ಮತಸ್ಥರು ಬ್ರಾಹ್ಮಣರೇ ಗುರುಗಳೆಂದು ಭಾವಿ ...ಶುಭಾಶುಭಗಳನ್ನೆಲ್ಲಾ ಬ್ರಾಹ್ಮಣರ ಮೂಲಕವೆ ನಡೆಸಿಕೊ ...ಇದ್ದರು. ೧೦—೩೦ ವರುಷಗಳಿಂದ ಈಚೆಗೆ ಅನೇಕ ಮತಸ್ಥ ...ತಮ್ಮ ಮತಗಳಲ್ಲಿಗ ರುಗಳನ್ನು ಪುರೋಹಿತರನ್ನು ನೇಮ ...ಕೊಂಡು ಬ್ರಾಹ್ಮಣರನ್ನು ಕರೆಯುವದನ್ನು ಬಿಟ್ಟರು. ನಮ ...ಮತ್ತು ಪೂರ್ವಪದ್ಧತಿಯನ್ನು ಬಿಡಲಾರದೆ ಶಿಷ್ಟ ಕಾರ್ಯಗಳ ...ಬ್ರಾಹ್ಮಣರ ಮೂಲಕ ನಡಿಸಿಕೊಳ್ಳುತ್ತಾ ಇರುತ್ತೇವೆ. ಇಷ್ಟುತ್ತು ...ವೈಶ್ಯರವು ಇರತಕ್ಕ ಒಂದು ಗ್ರಾಮ ಪರಮೇಶ್ವರಿ ಪೂಜೆ ...ಯಾವ ಗ್ರಾಮದಲ್ಲಾದರು ಬ್ರಾಹ್ಮಣರಿಂದಲೆ ಪೂಜೆಮಾಡಿಸತ ...ಇಂಥಾದ್ದರಲ್ಲಿ ಮೈಲಾರಿ ಕುಲದವರಿಗೆ ಅಮ್ಮನವರ ಪೂಜೆ ...ಕೊಟ್ಟರುವದಾಗಿ ಅಪ್ಪಣೆ ಕೊಡಿಸಿರುತ್ತಾರೆ, ಅಂಥಾ ವಿಚಾ ...ಹಾತೆ ಕಿವಿಯಲ್ಲಿ ಕೂಡ ಕೇಳಿಲ್ಲ. ಅದು ಯಾರಿಂದ ತಿಳಿ ...ದೇವರು ಬಲ್ಲ. ಈಗಲು ಈವಿಚಾರವೆಲ್ಲಾ ನಮ್ಮ ಜನಗ ...ಚನ್ನಾಗಿ ಮನಸಿಗೆ ತಂದುಕೊಂಡು ಈ ಅಪಮಾನವನ್ನು ಹೋಗ ...ಯಾರೆಂದು ನಂಬಿ ಬರದಿರುತ್ತೇನೆ. ಮೈಸೂರಲ್ಲಿ ಮತ ...ದ ಮೇಲೆ ದೃಷ್ಟಿಯಿಟ್ಟು ನಾಪಿತರ ಪಂಚಾಯಿತಿಯೊಂದು ...ಪತ್ರಿಕೆಯಲ್ಲಿ ಎರಡುಸಾರ ಪ್ರಕಟಿಸಿರುವದು ಸರ್ವರಿಗೂ ...ತ್ತೆ. ಅದ್ದರಿಂದ ಎಲ್ಲಾ ಮತಸ್ಥರಿಗೂ ಮತವಾಂಛಲ್ಯವೆನ್ನು ...ದ್ದಿಲ್ಲ. ಆದದರಿಂದ ನಮ್ಮ ಮತಸ್ಥರು ಸರ್ವರೂ ಪೂರ್ಣ ...ಮನಸ್ಸಿತಂದು ಚನ್ನಾಗಿ ಆಲೋಚನೆ ಮಾಡಿ ಈ ಅಪಮಾನ ...ಹೋಗಲಾಡಿಸಿಯಾರೆಂದು ನಂಬಿ ಸರ್ವರಿಗೂ ಅರಿಕೆ ಮಾಡಿ ...ದೆ.

ತಮ್ಮ ವಿಧೇಯ ಅರಸಿಕೆರೆ ಕೋಲ್ಲ ಚೆನ್ನಯ್ಯ ಶೆಟ್ಟಿ

ಕರ್ಪೂರವು

...ವಸ್ತುವಿನ ಧಾರಣೆಯು ಹೆಚ್ಚುತ್ತಲೆ ಬರುತ್ತಿರುವುದು ಸರ್ವ ...ತಿದ ಸಂಗತಿಯಷ್ಟೆ. ಕೆಲ ಕಾಲಕ್ಕೆ ಮುಂಚೆ ೧೧೨ ಪೌಂ ...ಡ ಕರ್ಪೂರಕ್ಕೆ ೩೩ ಚಿಲ್ಲರೆ ರೂಪಾಯಿ ಇದ್ದದ್ದು ಈಗ ೩೦೦ ...ಯಾಗಿದೆ. ಹೀಗೆ ಬೆಲೆಯು ಹೆಚ್ಚಿರುವದಕ್ಕೆ ಉತ್ಪತ್ತಿಗಿಂತ ...ಖರ್ಚಾಗಿರುವದೇ ಕಾರಣವಾಗಿದೆ. ಕರ್ಪೂರವು ಅತಿ ವಿಶೇಷ ...ಉತ್ಪತ್ತಿಯಾಗುತ್ತಿರುವ ಸೀಮೆಯು ಫಾರ್ಮೋಸಾದ್ವೀಪವೇ. ...ನಡೆದ ರಷ್ಯ ಜಪಾನ್ ಯುದ್ಧ ಕಾಲದಲ್ಲಿ ಈ ದ್ವೀಪದಲ್ಲಿಂದ ...ಮರು ಅನೇಕಮಂದಿ ಕೊರಟು ಹೋಗಿರುವುದರಿಂದ ದ್ವೀಪ ನಿವಾ ... ಈ ಕರ್ಪೂರದ ಮರಗಳನ್ನು ಅನೇಕವಾಗಿ ಕಡಿದು ಹಾಕಿಬಿ ...ದ ಕರ್ಪೂರದ ಉತ್ಪತ್ತಿಯು ಕ್ಷೀಣವಾಗುವುದಕ್ಕೆ ಕಾರಣವಾ ... ಭೂಮಂಡಲದ ಸಮಸ್ತ ಕಡೆಗಳಿಗೂ ಕರ್ಪೂರವು ಈ ...ರ್ಮೋಸಾ ದ್ವೀಪದಿಂದಲೇ ಹೆಚ್ಚಾಗಿ ರಫ್ತಾಗುತ್ತಿದ್ದ ಪ್ರಕಾರವೇ ...ಆಗಬೇಕಾಗಿದ್ದರೆ ಇನ್ನು ಅನೇಕ ಸಂವತ್ಸರಗಳು ಹಿಡಿಯುವು ...ತಿಳಿದವರು ಹೇಳುವರು. ಹೀಗೆ ಇದರ ಉತ್ಪತ್ತಿಯು ಕಡಮೆ ...ವಲ್ಲಿ ಈ ಪದಾರ್ಥದ ವಿನಿಯೋಗವಂತೂ ಕಡಮೆಯಾಗದ ... ಬದಲಾಗಿ ಹೆಚ್ಚುತ್ತಲೆ ಇದೆ. ದಂತಪಟ್ಟಿ ... ಹೊಗೆಸುವ ಕಡೆಯಲ್ಲಿ ಈಚೇಚೆಗೆ ಸೆಲ್ಯುಲಾಯಿಡ್ ಎಂಬೊಂ ...ವಾದ ಪದಾರ್ಥವನ್ನು ತಯಾರುಮಾಡುವದರಲ್ಲಿ ಕರ್ಪೂರವನ್ನು ...ಗಿ ಉಪಯೋಗಿಸುತ್ತಾರೆ. ಇದಲ್ಲದೆ ಹೊಗೆ ಕಾಣದ ತುಪಾಕಿ ...ನ್ನು ಮಾಡುವದರಲ್ಲಿಯೂ ಇದನ್ನು ವಿಶೇಷವಾಗಿ ಉಪಯೋ ...ತ್ತಾರೆ. ಔಷಧಗಳನ್ನು ತಯಾರುಮಾಡುವದರಲ್ಲಿಯೂ ಕರ್ಪೂರವು ...ವಾಗಿ ಉಪಯೋಗಿಸಲ್ಪಡುತ್ತಿದೆಯೆಂಬುದು ಸರ್ವರಿಗೂ ವೇದ್ಯ ...ವಷ್ಟೆ.

ಕರ್ಪೂರವು ಇಷ್ಟು ಹೆಚ್ಚಾಗಿ ಉಪಯೋಗಿಸಲ್ಪಡುತ್ತಿರುವಲ್ಲಿ ...ಳೆಯನ್ನು ವೃದ್ಧಿಮಾಡಿಕೊಳ್ಳುವದರಲ್ಲಿ ನಮ್ಮ ದೇಶೀಯರು ...ಪ್ರಯತ್ನಶಾಲಿಗಳಾಗಬೇಕೆಂದು ನಾವು ಕೋರುತ್ತೇವೆ. ಕಾಫಿ ...ಟರನ್ನಿಟ್ಟಿರುವವರು ಈಗೀಗ ಆ ಫಸಲಿನಿಂದ ಲಾಭವನ್ನು ಪಡೆ ...ದೆ ಚಿಂತಾಕ್ರಾಂತರಾಗಿರುವದು ವೇದ್ಯವಾಗಿಯೇ ಇದೆ. ಇವರು ...ರದ ಗಿಡಗಳನ್ನು ಹೆಚ್ಚಾಗಿ ಬೆಳೆಯಿಸಬಾರದೇ ಎಂದು ಕೇಳಿ ...ವರಿಗೆ ಈ ಗಿಡಗಳ ಎಲೆಗಳಿಂದಲೂ ಸಣ್ಣ ರೆಂಬೆಗಳಿಂದಲೂ ...ರವನ್ನು ಉತ್ಪತ್ತಿ ಮಾಡಿಕೊಳ್ಳುವ ವಿಧವು ತಿಳಿಯದು. ಸಿಲೋ ...ರುವ ಪ್ಲಾಂಟರುಗಳಿಗಾದರೋ ಈ ವಿಷಯವು ಚನ್ನಾಗಿ ತಿಳಿ ...ದಿರುವದಂತೆ. ಇನ್ನೊಂದು ಕಾರಣವೇನಂದರೆ—ಕರ್ಪೂರದ ಸಸಿಗಳನ್ನು ತರಿಸುವುದು ಕಷ್ಟ. ಸಿಲೋನಿನ ಪ್ಲಾಂಟರುಗಳು ಕೆಲವರು ಜಪಾನಿನಿಂದ ಬೀಜಗಳನ್ನು ಅಪಾರವಾಗಿ ತರಿಸಿ ಹುಟ್ಟುಹಾಕಿ ನೋಡಲಾಗಿ ಅಷ್ಟು ಬೀಜಗಳಲ್ಲಿ ಒಂದಾದರೂ ಹುಟ್ಟಲಿಲ್ಲ. ಜಪಾನಿನವರು ಈ ಬೆಳೆಯನ್ನು ಇತರ ದೇಶಗಳಲ್ಲಿ ಹಬ್ಬಿಸಬಾರದೆಂಬ ಅಸೂಯೆಯಿಂದ ಅವುಗಳನ್ನು ರಫ್ತು ಮಾಡುವದಕ್ಕೆ ಮುಂಚಿತವಾಗಿ ಬಿಸಿನೀರಿನಲ್ಲಿ ಹಾಕಿಟ್ಟು ಕಳುಹಿಸುವದರಿಂದಲೇ ಹೀಗಾಯಿತೆಂದು ಅಲ್ಲಿನವರು ನೆನಸುತ್ತಾರೆ. ಇದು ನಿಜವಾಗಿದ್ದರೂ ಇರಬಹುದು. ಇದಂತಿರಲಿ ಹಿಂದೆ ಜಪಾನಿನಿಂದ ತರಿಸಿದ ಬೀಜಗಳಿಂದ ಸಿಲೋನಿನಲ್ಲಿ ಗಿಡಗಳನ್ನು ಬೆಳಸಿಕೊಂಡದ್ದು ಉಂಟು. ಇದನ್ನು ನೋಡಿದರೆ ಇತರ ದೇಶಗಳಿಂದ ಬೀಜಗಳನ್ನು ತರಿಸಿಕೊಂಡು ಈ ಬೆಳೆಯನ್ನು ವೃದ್ಧಿಪಡಿಸಿಕೊಳ್ಳುವುದು ಬಹು ಲಾಭಕರವೆಂದು ತಿಳುವಳಿಕೆಗೆ ಬಾರದಿರದು. ಕೆಲವು ಜಾತಿ ಬೀಜಗಳಿಂದ ಮೊಳಕೆ ಬೇಗ ಹೊರಡುವದಿಲ್ಲವೆಂಬುದು ಎಲ್ಲರಿಗೂ ಗೊತ್ತು. ಅಂಥ ಬೀಜಗಳನ್ನು ಮೊದಲು ಒಂದು ಸೀಸೆಯಷ್ಟು ನೀರಿನಲ್ಲಿ ಹೆಬ್ಬೆಟ್ಟಿನ ಗಾತ್ರದಷ್ಟು ಕರ್ಪೂರದ ತುಂಡನ್ನು ಹಾಕಿ ಆ ನೀರಿನೊಳಗೆ ನೆನಸಿ ಆ ಮೇಲೆ ಹುಟ್ಟುಹಾಕಿದರೆ ಮೊಳಕೆ ಬೇಗ ಹೊರಡುವದೆಂದು ಶಾಸ್ತ್ರಜ್ಞರು ಅನುಭವದಿಂದ ತಿಳಿದು ಬರದಿದ್ದಾರೆ.

ಬೀಜಗಳಿಂದ ಗಿಡಗಳನ್ನು ಬೆಳಸಿಕೊಳ್ಳುವದಕ್ಕಿಂತ ಗಿಡಗಳಿಂದಲೆ ಕಡ್ಡಿಗಳನ್ನು ಕೊಯ್ದು ನೆಟ್ಟು ಸಸಿಗಳನ್ನು ಹುಟ್ಟಿಸಿಕೊಳ್ಳುವ ಪ್ರಯತ್ನವನ್ನು ಮಾಡಿದರೆ ಫಲವೇನಾಗುವದೋ ಪರೀಕ್ಷಿಸಿದಲ್ಲಿ ತಿಳಿದುಬಂದೀತು. ಅಂಥ ಕಡ್ಡಿಗಳಿಂದ ಮೊಳಕೆಯನ್ನು ಬೇಗ ಹೊರಡಿಸಿಕೊಳ್ಳುವುದಕ್ಕಾಗಿ ಮೇಲೆ ಹೇಳಿರುವ ಪ್ರಕಾರ ಕರ್ಪೂರದ ನೀರಿನಲ್ಲಿ ಕೊನೆಗಳನ್ನು ಅದ್ದಿ ನೆಟ್ಟರೆ ಬೇಗ ಹುಟ್ಟಬಹುದು. ಅತಿ ಲಾಭಕರವಾದ ಈ ಬೆಳೆಯನ್ನು ನಮ್ಮ ಸಂಸ್ಥಾನದ ವ್ಯವಸಾಯಗಾರರು ವೃದ್ಧಿಗೆ ತರುವರೆಂದು ಅಪೇಕ್ಷಿಸುತ್ತೇವೆ.

ಮೈಸೂರು ಗೆಜೆಟ್ ಸಂಗ್ರಹ

ಮೆ॥ ಎಂ. ಚಂಗೈಯ್ಯಚೆಟ್ಟಿಯವರನ್ನು ಜನವರಿ ೧ ರ ಲಾಗಾಯತು ೩ ನೆ ಕ್ಲಾಸ್ ಡೆಪ್ಟಿಕಮಿಷನರಾಗಿ ಖಾಯಂ ಮಾಡಿದೆ.

ಮೆ॥ ಲಕ್ಷ್ಮಣ ಶಾಸ್ತ್ರಿಯವರಿಗೆ ಕಡೂರ್ ಡಿಸ್ಟ್ರಿಕ್ಟಿನಲ್ಲಿ ಎಕ್ಸ್ಟ್ರಾ ಅ॥ ಕಮಿಷನರಾಗಿ ಬದಲಿ ನೋಡುವಾಗ್ಗೆ ೧ ನೆ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ಕೊಟ್ಟಿದೆ.

ಹಾಸನ ಡಿಸ್ಟ್ರಿಕ್ಟ್ ಅ॥ ಕಮಿಷನರ್ ಮೆ॥ ಬಿ ರಾಮಸ್ವಾಮಯ್ಯನವರನ್ನು ರೆವಿನ್ಯೂ ಕಮಿಷನರವರ ಆಫೀಸಿನಲ್ಲಿ ಕೆಲಸ ಮಾಡುವಂತೆ ಬೆಂಗಳೂರಿಗೆ ವರ್ಗಮಾಡಿದೆ.

ಮೆ॥ ರಾಮಸ್ವಾಮಯ್ಯನವರು ಮೇಲ್ಕಂಡಂತೆ ಬೆಂಗಳೂರಿನಲ್ಲಿರುವ ತನಕ ಮೆ॥ ಟಿ. ಧರ್ಮರಾಜ ಚೆಟ್ಟಿಯವರು ಎಕ್ಸ್ಟ್ರಾ ಅ॥ ಕಮಿಷನರಾಗಿ ಹಾಸನ ಡಿಸ್ಟ್ರಿಕ್ಟ್ ಖಜಾನೆಯ ಛಾರ್ಜಿನಲ್ಲಿರತಕ್ಕದ್ದು.

ರೆವಿನ್ಯೂ ಕಮಿಷನರ್ ಮೆ॥ ಎ. ರಂಗಸ್ವಾಮಯ್ಯಂಗಾರ್‌ರಿಗೆ ಫೆಬ್ರವರಿ ೧ ರಿಂದ ... ಕೆಲಸಗಳ ಛಾರ್ಜನ್ನು ವಹಿಸಿರತಕ್ಕದ್ದು.

ಚಿಕ್ಕಬಳ್ಳಾಪುರದ ಸಬ್‌ಡಿವಿಜನ್ ಅ॥ ಕಮಿಷನರ್ ಮೆ॥ ಜಿ. ಅರವಾಮುದು ಐಯ್ಯಂಗಾರ್‌ರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿನೈದು ದಿವಸಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಕೋಲಾರ್ ಡಿಸ್ಟ್ರಿಕ್ಟ್ ಡೆಪ್ಟಿ ಕಮಿಷನರವರೇ ಚಿಕ್ಕಬಳ್ಳಾಪುರದ ಸಬ್‌ಡಿವಿಜನ್ ಛಾರ್ಜನ್ನು ವಹಿಸಿರುವರು.

ತೀರ್ಥಹಳ್ಳಿ ತಾಲ್ಲೂಕ್ ಅಮಲ್ದಾರ್ ಮೆ॥ ಕೆ. ಆರ್. ಸುಬ್ಬರಾಯರಿಗೆ ಫೆಬ್ರವರಿ ೨ ರಿಂದ ಹನ್ನೆರಡು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಶಿರಸ್ತೆದಾರ್ ನಾಗಭೂಷಣಶಿವಾರಿಯವರು ತಾಲ್ಲೂಕ್ ಛಾರ್ಜನ್ನು ವಹಿಸಿರತಕ್ಕದ್ದು.

ಚಿಕ್ಕಬಳ್ಳಾಪುರದ ತಾಲ್ಲೂಕ್ ಮೆ॥ ಜೆ. ನಾರಾಯಣರಾಯರಿಗೆ ಫೆಬ್ರವರಿ ೨ ರಿಂದ ಹತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಶಿರಸ್ತೆದಾರ್ ಎಂ. ಲಕ್ಷ್ಮೀನಾರಣಪ್ಪನವರು ತಾಲ್ಲೂಕ್ ಛಾರ್ಜನ್ನು ವಹಿಸಿರತಕ್ಕದ್ದು.

ಶಿವಮೊಗ್ಗಾ ಡಿವಿಜನ್ ಅ॥ ಇಂಜನಿಯರ್ ಮೆ॥ ಎ. ಪುಟ್ಟಸ್ವಾಮಯ್ಯನವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಎರಡೂವರೆ ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಕೃಷ್ಣರಾಜಪೇಟೆ ತಾಲೂಕ್ ಅಮಲ್ದಾರ್ ಮೆ॥ ವಿ. ಎಸ್. ರಾಜಗೋಪಾಲಾಚಾರ್‌ರಿಗೆ ಅವರು ಉಪಯೋಗಿಸಿ ಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಅವರ ಗೈರ್ ಹಾಜರಿಯಲ್ಲಿ ಶಿರಸ್ತೆದಾರ್ ಕೆ. ಎನ್. ರಾಮಚಂದ್ರೈಯ್ಯನವರು ತಾಲ್ಲೂಕಿನ ಚಾಲ್ತಿ ಕೆಲಸಗಳ ಛಾರ್ಜನ್ನು ವಹಿಸತಕ್ಕದ್ದು.

ಹುಜೂರ್ ಖಜಾನೆಯ ಆಫಿಸರ್ ಮೆ॥ ಕೆ. ಕೃಷ್ಣಐಯ್ಯರಿಗೆ ಜನವರಿ ೧೬ ರಿಂದ ಒಂದು ತಿಂಗಳ ಸಂಬಳವಿಲ್ಲದ ರಜಾಕೊಟ್ಟಿದೆ.

ಅಕೌಂಟೆಂಟ್ ಮೆ॥ ಬಿ. ಶ್ರೀಕಂಠ ಉಪಾಧ್ಯಾಯರು ಹುಜೂರ್ ಖಜಾನೆಯ ಛಾರ್ಜನ್ನು ವಹಿಸತಕ್ಕದ್ದು.

ತಾಲ್ಲೂಕು ವರ್ತಮಾನಗಳು

ಚಿಕ್ಕಮಗಳೂರು—ಈ ಊರಿನಲ್ಲಿ ಎರಡು ದಿನದಿಂದಲೂ ಮೋಡವಾಡುತ್ತಿರುವದರಿಂದ ಚಳಿಯು ಸ್ವಲ್ಪ ಕಮ್ಮಿಯಾಗಿದೆ. ಆದರೆ ಕೆಲವರು ಜ್ವರ ಕೆಮ್ಮು ಮೊದಲಾದ ರೋಗಗಳಿಂದ ಪೀಡಿತರಾಗಿದ್ದಾರೆ. ಹೊರಗಿನಿಂದ ಬಂದಂಥಾ ಕೆಲವರಿಗೆ ಸಿಡುಬುರೋಗವು ಸಹ ಉಂಟೆಂದು ವರ್ತಮಾನ. ಜನರು ಬೇರೆ ಬೇರೆ ಕಡೆಗಳಿಗೆ ಚದರಿ ಹೋಗಿದ್ದವರು ಈಗತಾನೆ ಬಂದು ಸೇರಿಕೊಳ್ಳುತ್ತಿದ್ದರು. ಅಷ್ಟರಲ್ಲಿಯೇ ಕಳೆದ ಶನಿವಾರ ಮೂವರಿಗೆ ಪ್ಲೇಗ್ ರೋಗವು ತಗಲಿ ಸತ್ತರೆಂತಲೂ ಆ ಬೀದಿಗೆ ಅದೇ ದಿನ ಬಂದು ಇಳಿದುಕೊಂಡಿದ್ದವರು ಮತ್ತೆ ಯಥಾಪ್ರಕಾರ ತಾವು ಬಿಟ್ಟುಬಂದ ಸ್ಥಳಕ್ಕೆ ಹೋದರೆಂತಲೂ ಕೇಳುತ್ತೇನೆ. ಮ್ಯುನಿಸಿಪಾಲಿಟಿಯವರಾದರೋ ಮನೆಗಳನ್ನು ಡಿಸಿಂಪೆಕ್ಟ್ ಮಾಡಿಸುವಾಗ ಆ ಮನೆಯಲ್ಲಿರುವ ಕಸ ಕಡ್ಡಿ ಹಳೇ ಬಟ್ಟೆ ಮೊದಲಾದ ಅಸಹ್ಯಕರವಾದ ಪದಾರ್ಥಗಳನ್ನು ಮನೆಯ ಹಿಂಭಾಗದಲ್ಲಿ ಹಾಕಿ ಸುಡಿಸುವುದಕ್ಕೆ ಬದಲಾಗಿ ಜನರು ಸಂದಣೆಯಾಗಿ ತಿರುಗುವ ರಸ್ತೆಯಲ್ಲಿ ಹಾಕಿ ಸುಡಿಸುವದರಿಂದ ಪಥಿಕರಿಗೆ ಅದರಿಂದ ತೊಂದರೆಯಲ್ಲವೇ? ನಮ್ಮ ಡೆಪ್ಯುಟಿ ಕಮಿಷನರೂ ಜನರಲ್ ಅ॥ ಕಮಿಷನರೂ ಪೋಲೀಸ್ ಸೂಪರೆಂಟರು ತರೀಕೆರೆ ಪ್ರಾಂತ್ಯ ಸರ್ಕೀಟು ಹೊರಟಿದ್ದಾರೆ. ಪ್ರಾಯಶಃ ಶೃಂಗೇರಿಗೆ ಹೊರಡುವ ಶ್ರೀಮನ್ಮಹಾರಾಜರವರನ್ನು ತರೀಕೆರೆಯಲ್ಲಿ ಸಂಧಿಸಿ ಅವರ ಜೊತೆಯಲ್ಲಿ ಶೃಂಗೇರಿಯ ವರಿಗೂ ಹೊರಡುವರೆಂದು ಕಾಣುತ್ತೆ. ಕಳೆದ ತಿಂಗಳು ೧೮ ರಲ್ಲಿ ಅಲ್ಲಂಪುರದ ನಾರಪ್ಪನ ಎತ್ತನ್ನು ಕಳವು ಮಾಡಿದ ಸೈಯದ್ ಖಾದರನಿಗೆ ಇಲ್ಲಿನ ಅಮಲ್ದಾರ ಕೋರ್ಟಿನಲ್ಲಿ ನಾಲ್ಕು ತಿಂಗಳು ಸಜಾವಾಯಿತೆಂದು ವರ್ತಮಾನವಾದರೂ ಅವನಿಗೆ ಸಹಾಯಕರಾಗಿ ಎತ್ತನ್ನು ವಿಕ್ರಯ ಮಾಡಿಸಿದ ಪೋಲೀಸಿನವರಿಗೆ ಏನಾಯಿತೋ ತಿಳಿಯದು. ಮೈಸೂರಿನಿಂದ ಎಜುಕೇಷನ್ ಇಲಾಖೆಯ ಸರ್ಕಲ್ ಇನ್ಸ್‌ಪೆಕ್ಟರ್ ಶ್ರೀನಿವಾಸರಾಯರು ಇಲ್ಲಿಗೆ ಬಂದು ಮೂರು ನಾಲ್ಕು ದಿನಗಳಿಂದಲೂ ಎಲ್ಲಾ ಸ್ಕೂಲುಗಳನ್ನು ಪರೀಕ್ಷಿಸುತ್ತಿದ್ದಾರೆ. ತಾರೀಖು ೩ ಕ್ಕೆ ಇಲ್ಲಿಂದ ಮುಂದೆ ಹೊರಡುವರೆಂದು ಕೇಳುತ್ತೇನೆ. ಘನ ರೆಡ್ಮಂಡ್ ಸಾಹೇಬರು ಕೊಪ್ಪದ ಪ್ರಾಂತ್ಯ ಸರ್ಕೀಟಿನಲ್ಲಿದ್ದಾರೆ. ಬರುವ ವಾರದಲ್ಲಿ ಹೆಡ್ ಕ್ವಾರ್ಟರಿಗೆ ಬರುವರು.

ಬೇಲೂರು—ಇಲ್ಲಿನ ಮುನಸಿಪಾಲಿಟಿಯು ದೊಡ್ಡ ದೊಡ್ಡ ಆಫೀಸರವರ ಮುಂದೆ ಮಾತ್ರ ಅಲೆದಾಡುತ್ತಿದ್ದದರಿಂದ ಈಸಾರಿ ಅದರ ಕೃಪಾಕಟಾಕ್ಷಕ್ಕೆ ಒಳಗಾಗದವರು ಬಹುಮಂದಿ ಪ್ಲೇಗಿಗೆ ತುತ್ತಾದರು. ಪ್ಲೇಗಿಗಾಗಿ ಊರುಬಿಟ್ಟು ಪ್ರಜೆಗಳೆಲ್ಲರೂ ಷಡ್ಡಿನಲ್ಲಿ ವಾಸವಿರುವ ಸಮಯದಲ್ಲಿ ಪೇಟೆಯಲ್ಲಿ ಗಾಣಿಗರ ತಮ್ಮಯ್ಯಶೆಟ್ಟಿಯೆಂಬುವನೆಂಬುವನ ಹಿತ್ತಲ ಕಡೆಯಿಂದ ಒಡೆದು ಒಳಹೊಕ್ಕು ರಾಗಿ ಮತ್ತು ಭತ್ತವನ್ನು ಕದ್ದು ಸಾಗಿಸಿದ್ದುದನ್ನು ನಮ್ಮ ಆಕ್ಟಿಂಗ್ ದಫೇದಾರ್ ಪುಟ್ಟಯ್ಯನವರು ತಮ್ಮ ಸರ್ವ ಪ್ರಯತ್ನದಿಂದ ಪತ್ತೆ ಮಾಡಿದವರ ಪೈಕಿ ಅಬ್ದುಲ್‌ಗನೀ ಸಾಬಿಗೂ, ಒಬ್ಬ ಗಾಣಿಗನಿಗೂ ಆರು ಆರು ತಿಂಗಳು ಸಜಾ ಮಾಡಿ ಮಿಕ್ಕ ೫—೬ ಮಂದಿಯನು ಬಿಟ್ಟುಬಿಟ್ಟರು. ಈಗ ಪುನಹಾ ಪೇಟೆಯ ಷಡ್ಡಿನಲ್ಲಿ ಕಳುವಾಗುತ್ತಿರುವದು. ಕೋಟೆಯಲ್ಲಾದರೋ ಕಳೆದ ಎರಡು ಸಾರಿ ಪ್ಲೇಗಿಗಾಗಿ ಊರು ಬಿಟ್ಟದ್ದಾಗ್ಗ ಒಂದೊಂದು ರಾತ್ರಿ ೧೫—೨೦ ಮನೆಗಳ ಬೀಗ ಒಡೆದು ದೋಚಿಕೊಂಡು ಹೋದುದರಲ್ಲಿ ಪೋಲೀಸಿನವರು ತಮ್ಮ ಬುದ್ಧಿ ಪ್ರಯೋಗ ಮಾಡಿರಲಿಲ್ಲ. ಈಸಾರಿ ಪದ್ಧತಿಯಂತೆ ಹವಾಲ್ದಾರ್ ಸಣ್ಣಿಯಲ್ ಮೆ॥ ದಾಸಯ್ಯಂಗಾರ‍್ರ ಮನೆಯನ್ನು ಒಳನುಗ್ಗಿ ಸುಮಾರು ೨೦೦—೩೦೦ ರೂಪಾಯಿ ... ದಫೇದಾರ್ ಪುಟ್ಟಯ್ಯನವರು ತಮ್ಮ ಸರ್ವ ಪ್ರಯತ್ನದಿಂದ ಬಾತ್ಮಿಯಿಟ್ಟು ಗುಮಾನಿಯಿಂದ ಇಬ್ಬರನ್ನು ಹಿಡಿದು ಅವರು ಹೋಗುತ್ತಿದ್ದ ಸ್ಥಳವೆಲ್ಲಾ ಪತ್ತೆ ಮಾಡಿದ್ದರಲ್ಲಿ ಕೆಲವು ಮಾಲು ಸಿಕ್ಕಿದ್ದರಿಂದ, ಸದರಿಯವರಿಗೆ ಆರಾರು ತಿಂಗಳ ಸಜಾ ೨೦ ರೂಪಾಯಿ ಜುಲ್ಮಾನೆಯೂ ಊರೊಳಗಿದ್ದುಕೊಂಡು ಇವರಿಗೆ ಸಹಾಯಕನಾಗಿದ್ದ ಹೆಂಗಸಿಗೆ ಒಂದು ತಿಂಗಳು ಸಜಾ ೨ ರೂಪಾಯಿ ಜುಲ್ಮಾನೆಯೂ ಆಯಿತು. ಆಗಿನಿಂದ ನಮ್ಮ ಕೋಟೆಯಲ್ಲಿ ಕಳವು ಎಂಬ ಶಬ್ದವೇ ಇಲ್ಲ—ದೊಡ್ಡ ಈ ಊರು ತಾಲ್ಲೂಕು ಹೆಡ್‌ಕ್ವಾರ್ಟರ್ ಆದುದರಿಂದ ದೊಡ್ಡಿಗೆ ಸುತ್ತುಮುತ್ತಲಿನಿಂದ ಬಹು ದಾಸುಗಳು ಪ್ರತಿನಿತ್ಯವೂ ಬರುತ್ತಿರುವುದಲ್ಲದೆ, ಹರಾಜಿಗಾಗಿ ಬೇರೆ ಕಡೆಯಿಂದ ಬರುತ್ತಿರುವವು. ವಿಚಾರಣೆ ಇಲ್ಲದೆ ಮಳೆಗಾಲದಲ್ಲಿ ಬಹು ದಾಸುಗಳು ಹುಲ್ಲು ನೀರಿಲ್ಲದೆ ಮಳೆಯಲ್ಲಿ ನೆನೆದು ಸಾಯುತ್ತಿದ್ದವು. ಹರಾಜಿಗಾಗಿ ಬಂದಿದ್ದ ಒಂದು ಕುದುರೆಯು ಮೇವಿಲ್ಲದೆ ಮರಿಹಾಕಿದ್ದು ವಿಚಾರಣೆ ಇಲ್ಲದೆ ದನಗಳ ಕಾಲಿಗೆ ಸಿಕ್ಕಿ ಸತ್ತಿತ್ತು. ದೊಡ್ಡಿಯಲ್ಲೆಲ್ಲಾ ಹುಡುಕಿದರೂ ಒಂದು ಕಡ್ಡಿ ಹುಲ್ಲಿಲ್ಲ. ನೀರು ಕುಡಿಸುವವರೋ ಬಿಕ್ಕೇ ಇಲ್ಲ. ದಾಸು ಒಂದು ದಿವಸ ನಿಂತರೆ ಒಂದಾಣೆಗೆ ಚಾರ್ಜು ವಸೂಲಾಗುವದು. ಸುಮಾರು ೧೦—೧೫ ದಿವಸಗಳಿಂದಲೂ ಪ್ರತಿ ನಿತ್ಯವೂ ೨—೩ ವೇಳೆ ನಾನು ಪರೀಕ್ಷೆಗಾಗಿ ನೋಡುತ್ತಿದ್ದರೂ ಒಂದು ಹಿಡಿ ಹುಲ್ಲು ಹಾಕುತ್ತಿರಲಿಲ್ಲ. ಇದನ್ನು ನೋಡಿ ನಮ್ಮ ಅಮಲ್‌ದಾರರವರು ಈ ಬಡ ಮೂಗುಪ್ರಾಣಿಗಳ ವಿಷಯದಲ್ಲಿ ಸರಿಯಾದ ಏರ್ಪಾಡು ಮಾಡುವವರ ಮೂಲಕ ಪುಣ್ಯ ಸಂಪಾದಿಸುವರೆಂದು ಹಾರೈಸುವೆನು—ಊರಿನ ಹವಾ ಚನ್ನಾಗಿಲ್ಲ. ಎಲ್ಲೆಲ್ಲಿಯೂ ಛಳಿ ಜ್ವರ ಕೆಮ್ಮು ಜೋರಾಗಿ ಪ್ರತಿ ಷಡ್ಡಿನಲ್ಲಿಯೂ ಒಂದೆರಡು ಹಾಸಿಗೆಗಳಿದ್ದೇ ಇರುವವು. ನಮ್ಮ ಡಾಕ್ಟರ್ ನಾರಾಯಣರಾಯರವರಾದರೋ ಬಾರಿ ಮೂರ್ಧಿಕತೆಯಿಂದ ಬಹು ದೂರದಲ್ಲಿರುವ ಷಡ್ಡುಗಳಿಗೆಲ್ಲಾ ಹೋಗಿ ವಿಶ್ವಾಸದಿಂದ ರೋಗಿಗಳನ್ನು ನೋಡಿ ಒಳ್ಳೇ ಔಷಧಿ ಕೊಡುತ್ತಿರುವದರಿಂದ ಎಲ್ಲರೂ ಬೇಗ ಬೇಗ ಗುಣ ಹೊಂದುತ್ತಿರುವರು. ಈ ಊರಿನ ಪ್ಲಿದ್ದ ಆರೋಗ್ಯವಮ್ಮನಿಗೆ ವರ್ಗವಾಗಿ ಸುಮಾರು ೩—೪ ತಿಂಗಳಾದಾಗ್ಯೂ ಅವಳಿಗೆ ಪ್ರತಿಯಾಗಿ ಇದ್ವರೆವಿ ಯಾರೂ ಬಂದಿಲ್ಲ. ಗೌರ್ನಮೆಂಟಿನವರು ಈ ಊರು ಸ್ತ್ರೀಯರ ವಿಷಯದಲ್ಲಿ ಪೂರ್ಣ ವಿಶ್ವಾಸವಿಟ್ಟು ಇಲ್ಲಿಗೆ ಕೆಲವುಕಾಲ ಬದಲಿ ಬಂದಿದ್ದ ನಾಗಮ್ಮನವರನ್ನು ಕಳುಹಿಸಿಕೊಡಬೇಕೆಂದು ಇಲ್ಲಿನವರು ಯಾಚಿಸುವರು. ಪರೇಲಮೆಂಟು ಜೂರೆಲೆಯ ಆಟ ಬಹು ಜೋರಾಗಿದೆ. ಇದರಲ್ಲಿ ದಕ್ಷರಾದವರು ಈ ಊರಿನಲ್ಲಿ ಕೆಲವರಿರುವರು. ಅವರಿಗೆ ಬೇರೆ ಕಸಬಿಲ್ಲ. ಮನೆಮಠಗಳ್ಯಾವದೂ ಇಲ್ಲ. ತಿಂಗಳಿಗೆ ೨—೩ ರೂ. ಬಾಡಿಗೆ ಕೊಟ್ಟು ತೆಗದುಕೊಂಡು ಬಡವರನ್ನು ತಿಳಿಯದವರನ್ನು ತಮ್ಮ ಬಲೆಗೆಳದುಕೊಂಡು ಮೋಸಮಾಡುತ್ತಿರುವರು. ಇವರ ವಿಷಯವನ್ನು ದಕ್ಷರಾದ ನಮ್ಮ ದಫೇದಾರರು ಲಕ್ಷಿಸ್ಯಾರೆಂದು ಹಾರೈಸುವೆನು.

ಬಿಳಗಿ ರಾಜವೈದ್ಯರ ಒಳ್ಳೆ ಖಾತ್ರಿಯಾದ ಔಷಧಗಳು

೪೬

ಸುಖದಾಯಿನೀ ಗುಳಿಗೆ —ಇದರಿಂದ ಕೆಮ್ಮಿನ ಬಾಧೆ ಬಹು ಬೇಗನೆ ಗುಣಹೊಂದುವದು ೧೦ ವರುಷದ ಮೇಲಿನ ಯಾವ ಪ್ರಾಯದವರಾದರೂ ಸೇವಿಸಬಹುದು ಕ್ರಯ ೨೪ ಗುಳಿಗೆಗೆ ೧ ರೂಪಾಯಿ ವಿ ಪಿ ಚಾರ್ಜು ಆಣೆ ೪

ಚಿಕ್ಕಹುಡುಗರ ಬಾಲಗ್ರಹದ ಔಷಧ —ಜ್ವರಯುಕ್ತ ಅಥವಾ ಜ್ವರವಿಲ್ಲದೆ ಫಕ್ಕನೆ ಹುಟ್ಟುವ ಈ ಉಪಟತಿಗೆ ಇದರಿಂದ ಬೇಗನೆ ಗುಣಹುಟ್ಟುವದು ಕ್ರಯ ೧ ಕುಪ್ಪಿಗೆ ೮ ಆಣೆ ವಿ ಪಿ ೪ ಆಣೆ

ಗಜಕರ್ಣದ ಮಲಾಮು —೨ ಯಾ ೩ ಆವರ್ತಿ ಇದನ್ನು ಹಚ್ಚುವದರಿಂದ ಎಂಥ ಕಠಿಣವಾದ ಗಜಕರ್ಣ (ಹುಳಕಡ್ಡಿ) ಇದ್ದರೂ ಗುಣಹೊಂದುವದು ಕ್ರಯ ೧ ಡಬ್ಬಿಗೆ ೮ ಆಣೆ. ವಿ ಪಿ ಚಾರ್ಜು ಆಣೆ ೪

ಶತಮೂಲಿಕಾ ತೈಲವು —ಹಸೀಬೊಕ್ಕೆ ಹಸೀಕಜ್ಜಿ ತುರಿಗಜ್ಜಿ ವಣಗಜ್ಜಿ ಮುಂತಾದ ಆಬಾಲವೃದ್ಧರ ಚರ್ಮವ್ಯಾಧಿಯೂ ಗುಣಹೊಂದುವದು ಕ್ರಯ ೧ ಔನ್ಸಿನ ಕುಪ್ಪಿಗೆ ೧೦ ಆಣೆ, ೨ ಔನ್ಸಿನ ಕುಪ್ಪಿಗೆ ೧ ರೂಪಾಯಿ ವಿ ಪಿ ೫ ಆಣೆ

ವಾಯುಹಾರಕ ತೈಲವು —ಇದನ್ನು ಲೇಪಿಸಿದ ೫ ನಿಮಿಷದೊಳಗೆ ಸಂಧಿವಾತ, ಕಟಿವಾತ, ವ ಇತರ ವಾಯುಗಳ ನೋವು, ತಲೆನೋವು, ಚಿಕ್ಕಹುಡುಗರ ಉಬ್ಬಸ, ಕೆಮ್ಮು ಕೂಡ ಗುಣಹೊಂದುವದು ಕ್ರಯ ೧ ಕುಪ್ಪಿಗೆ ೧ ರೂಪಾಯಿ ವಿ ಪಿ ಚಾರ್ಜು ಆಣೆ ೪

ಜ್ವರಗಡ್ಡೆಗೆ ಸುಧಾಬಿಂದು —ಹೊಟ್ಟೆಯೊಳಗೆ ಸೇವಿಸಲಿಕ್ಕೆ. ಕ್ರಯ ೧ ಕುಪ್ಪಿಗೆ ೧೨ ಆಣೆ ವಿ ಪಿ ಚಾರ್ಜು ಆಣೆ ೪.

ಜ್ವರಗಡ್ಡೆಗೆ ಮುಲಾಮು —ಬಾಹ್ಯಲೇಪನಕ್ಕೆ ಕ್ರಯ ಡಬ್ಬಿ ೧ಕ್ಕೆ ೧ ರೂಪಾಯಿ ವಿ ಪಿ ಚಾರ್ಜು ಆಣೆ ೪

೧ನೇ ನಂಬರ ಶೀತಜ್ವರ ರಿಪುಗಳಿಗೆ —ಆಬಾಲವೃದ್ಧರಿಗೆ ಹುಟ್ಟುವ ಪ್ರತಿನಿತ್ಯದ ಮತ್ತು ೩ನೆ ವ ೪ನೆ ದಿವಸದ ಬಾರಿಯಾಗಿ ಕೂಡ ಬರುವ ಶೀತಜ್ವರಕ್ಕೆ ಕ್ರಯ ೧ ಡಬ್ಬಿಗೆ ೧ ರೂಪಾಯಿ ವಿ ಪಿ ಚಾರ್ಜು ಆಣೆ ೪

೨ನೇ ನಂಬರದ ಶೀತಜ್ವರ ರಿಪುಗುಳಿಗೆ —ಮೇಲೆ ವಿವರಿಸಿದಂಥ ಶೀತಜ್ವರಗಳು ಕಾಲಾವಧಿಯಾಗಿ ಮೈಯಲ್ಲಿ ವ್ಯಾಪಿಸಿಕೊಂಡು ಹಳೆ ತರಕ್ಕೆ ಬಿದ್ದು ಬರುವದಾದರೆ ಕ್ರಯ ೧ ಡಬ್ಬಿಗೆ ೧ ರೂಪಾಯಿ ವಿ ಪಿ ಚಾರ್ಜು ಆಣೆ ೪

ದಂತ ಶುದ್ಧಿಗೆ ಸುವಾಸಿಕ ಮಂಜನ —ಎಲ್ಲ ಪ್ರಕಾರದ ಹಲ್ಲಿನ ವೇದನೆಗಳ ಉಪಶಮನಕ್ಕೆ ಕ್ರಯ ೧ ಡಬ್ಬಿಗೆ ೮ ಆಣೆ ವಿ ಪಿ ೪ ಆಣೆ

ಪೀನಾಶಿಗೆ ಸುದರ್ಶನಚೂರ್ಣ —ಮೂಗಿನ ಒಳಭಾಗದಲ್ಲಿ ಕ್ರಿಮಿ ಅಥವಾ ವ್ರಣವಾಗಿ ಅದರಿಂದ ದುರ್ವಾಸನೆಯೂ ರಣಿಗೆ ಅಥವಾ ನೀರಿನಂಥ ದ್ರವವು ಸ್ರವಿಸುವದಕ್ಕೆ. ಕ್ರಯ ೧ ಡಬ್ಬಿಗೆ ೧ ರೂಪಾಯಿ ವಿ. ಪಿ ಚಾರ್ಜು ಆಣೆ ೪

ನವ ನಯನರೋಗಕ್ಕೆ ಸುಖಾಂಜನವು —ಹೊಸತಾಗಿ ಹುಟ್ಟಿದ ಅಥ [illegible] ಇರುತ್ತ ಕಣ್ಣಿನ ಎಲ್ಲಾ ಬಾಧೆಗಳು ಕಣ್ಣಿನಲ್ಲಿ ನೋಡಲಿಕ್ಕೆ ಆಗದೆ ಇರುವದು, ದೃಷ್ಟಿಮಾಂದ್ಯ, ಇತ್ಯಾದಿ [illegible] ಗಳೂ ಇದರಿಂದ ಬೇಗನೆ ಗುಣವಾಗುವದು ಕ್ರಯ ೧ ಡಬ್ಬಿಗೆ ೧ ರೂಪಾಯಿ ವಿ ಪಿ ಚಾರ್ಜು ಆಣೆ ೪

ಕರ್ಣಸ್ರಾವಕ್ಕೆ ವನೌಷಧಿ ತೈಲವು —ಚಿಕ್ಕ ಮತ್ತು ಥೋರ ಪ್ರಾಯದವರ ಕಿವಿಯಿಂದ ರಕ್ತ, ಕೀವು, ಅಥವಾ ನೀರಿನಂಥ ದ್ರವ ಹೊಸತಾಗಿ ಅಥವಾ ಬಹು ಕಾಲದಿಂದ ಸ್ರವಿಸುತ್ತಿದ್ದರೆ ಹಾಗೂ ನೋವೂ, ಶಳತವೂ, ತುರಿಸ ಕಿವಿಯೊಳಗೆ ಇದ್ದರೆ ಇದರಿಂದ ಪೂರ್ಣ ಗುಣ ಹೊಂದುವದು ಕ್ರಯ ೧ ಕುಪ್ಪಿಗೆ ೧ ರೂಪಾಯಿ ವಿ ಪಿ ೪

ಚಿಕ್ಕ ಮಕ್ಕಳ ಪುಷ್ಟಿಗೆ ಬಾಲಸುಧಾರಸ —ಚಿಕ್ಕ ಹುಡುಗರ ಅಶಕ್ತಿ ಕೆಡಿದ ಹಾಲಿನ ಅಥವಾ ಆಹಾರದ ವಾಂತಿ, ಅತಿಸಾರ, ಅನೇಕಾವರ್ತಿ ಮಲ ವಿಸರ್ಜನೆ, ಅಸ್ಥಿಗತಜ್ವರ, ಕೆಮ್ಮು ಇತ್ಯಾದಿ ಅನೇಕ ಉಪಟತಿಗಳು ಗುಣವಾಗಿ ಮೈಯಲ್ಲಿ ರಕ್ತ ಮಾಂಸ ಅಸ್ಥಿ ಇವುಗಳು ಬಲವಾಗಿ ಬೆಳೆದು ಚನ್ನಾಗಿ ಪುಷ್ಟಿಯಾಗುತ್ತಾರೆ ಕ್ರಯ ೧ ಕುಪ್ಪಿಗೆ ೧ ರೂಪಾಯಿ ವಿ ಪಿ ಚಾರ್ಜು ಆಣೆ ೬

ಸಕ್ಕರೆ ಪಾಕ ಕಫಕ್ಷಯ ವ ಕೆಮ್ಮು ಮುಂತಾದವುಗಳಿಗೆ —ಶ್ವಾಸ ಕಫರೋಗದ ಎಲ್ಲಾ ಉಪಟತಿಗಳು ಅಂದರೆ ಹೊಸ ಮತ್ತು ಹಳೆ ತರ ಕೆಮ್ಮು ಉಬ್ಬಸ [illegible] ಉಚ್ಛ್ವಾಸ ಕಫ ಕ್ಷಯ ಅಸ್ಥಿಜ್ವರ ಅಶಕ್ತ ಕ್ಷಯವ್ಯಾಧಿಯಲ್ಲಿ ಹುಟ್ಟುವ ಬೆವರು ಇತ್ಯಾದಿ ಬೇಗನೆ ಗುಣಹೊಂದುವದು ಕ್ರಯ ೧ ಕುಪ್ಪಿಗೆ ರೂ ೧-೪ ಆ ವಿ ಪಿ ಚಾರ್ಜು ಆಣೆ ೯

ನಯನ ಸುಖಕ್ಕೆ ಸೌವೀರಾಂಜನವು (ಕಪ್ಪು ಸುರ್ಮ) —ಬಿಸಿಲಲ್ಲಿ ತಿರುಗಾಟ ಮಾಡುವದರಿಂದ ಬೆಂಕಿಯ ಶಕೆಯ ಬಳಿ ಕೆಲಸ ಮಾಡುವದರಿಂದ ರಾತ್ರಿಯಲ್ಲಿ ಜಾಗ್ರಣ ಮಾಡುವದರಿಂದ ಅಥವಾ ಹೆಚ್ಚು ಕಾಲ ಓದುವದರಿಂದ ಸಹಾ ಉಂಟಾಗುವ ಕಣ್ಣಿನ ಬಾಧೆಯು ಕೆ ಮೀರುವಿಕೆ ಉರಿ ನವೆ ಮುಂತಾದವು ಗುಣಹೊಂದಿ ಕಣ್ಣಿಗೆ ಸುಖವು ಪ್ರಾಪ್ತವಾಗುತ್ತದೆ ಕ್ರಯ ೧ ಡಬ್ಬಿಗೆ ೮ ಆಣೆ ವಿ ಪಿ ಚಾರ್ಜು ಡಬ್ಬಿ ೧ ರಿಂದ ೧೨ ಡಬ್ಬಿಗೆ ೪ ಆಣೆ

ಶಾಂತಿಭೇದಿಗೆ ಮತ್ತು ಅತಿಸಾರಕ್ಕೆ [illegible] —ಈ ಉಪದ್ರಗಳಿಗೆ ಇದು ದಿವ್ಯ ಔಷಧವಾಗಿದೆ ವಿಶ್ವಾಸದ ಒಂದು ಕಂಪನಿಯಿಂದ ಇದನ್ನು ನಾವು ಸಂಗ್ರಹಿಸುತ್ತೇವೆ ಕ್ರಯ ೧ ಕುಪ್ಪಿಗೆ ೧೨ ಆಣೆ ವಿ ಪಿ ಚಾರ್ಜು ಆಣೆ ೪

ಸೂಚನೆ —ನಮ್ಮ ಔಷಧಗಳೊಳಗೆ ಅಪಾಯಕರವಾದ ಯಾವ ಜಿನಸಿನ ಮಿಶ್ರಣವೂ ಮಾಡಿಲ್ಲ ಪ್ರತಿ ಒಂದು ಔಷಧಿಗೆ ಜೊತೆಯಲ್ಲಿ ಛಾಪೆಯ ಅನುಪಾನ ಪತ್ರವನ್ನು ಕಳುಹಿಸುತ್ತಿರುತ್ತೇವೆ ಇನ್ನೂ ಅನೇಕ ಉತ್ತಮವಾದ ಔಷಧಗಳಿಗಾಗಿ ನಮ್ಮ ಕ್ಯಾಟ್ಲಾಗು ತರಿಸಿಕೊಂಡು ಓದಿನೋಡಿ

ನಮ್ಮ ಅಡ್ರೆಸು —ಕರ್ನಾಟಕ ರಾಜ ವೈದ್ಯ ಮತ್ತು ಕಂಪನಿ, ಪೋಸ್ಟ್ ಬಿಳಗಿ, ಉತ್ತರ ಕನ್ನಡಾ ಜಿಲ್ಲಾ.

Post Bilgi, North Kanara District

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟ್ರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು) ರೂ ೧—

ಪರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಪಾಸ್ಟೇಜ್ ಸೇರಿ ರೂ ೧—೧೪—೦

೬ ,, ,, ೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗ ರಿಜಿಸ್ಟರ್ ನಂಬರನ್ನು ಮರೆಯದೇ ಸಮೂದಿಸತಕ್ಕದ್ದು ನಮ್ಮ ವಿಳಾಸ —ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ಬೆಲೆಗೆ ಬೆಳ್ಳಿ—ಗುಣಕ್ಕೆ ಬಂಗಾರ.

86 37

ಕ್ಲೆಮೆಂಟ್ಸರವರ ಗಾರಿಡಿಬಾಧಾ ನಿವಾರಿಣಿ.

ಪಾರ್ಶ್ವನೋವು, ಕೀಲುಗಳ ನೋವುಗಳು, ಕಿಬ್ಬೊಟ್ಟೆನೋವು, ಬೆನ್ನು ಳಯುವದು, ತಲೆನೋವು, ಕೆಮ್ಮು ಕಿಲುಬುಗಳು, ಕೀಲುಗಳು ಕತ್ತರಿಸುವದು, ಬಗ್ಗಿರುವ ಬೆನ್ನುಗಳು, ಕೊರಳು ಊತ, ಇವುಗಳಿಂದುಂಟಾಗುವ ಬಾಧೆಗಳು, ಕೈಕಾಲು ಸಡೆತ, ಇವುಗಳಿಗೆ ಕ್ಲೆಮೆಂಟ್ಸರವರ ಗಾರಿಡಿ ಬಾಧೆ ನಿವಾರಿಣಿ ತೈಲವನ್ನು ಚನ್ನಾಗಿ ತಿಕ್ಕಿದರೆ ಈ ಬಾಧೆಗಳೆಲ್ಲಾ ಪರಿಹಾರವಾಗುವದು ಬಾಧೆಯನ್ನು ನಿಲ್ಲಿಸುವದಕ್ಕಾಗಿ ಕ್ಲೆಮೆಂಟ್ಸರವರ ಮ್ಯಾಜಿಕ್ ಬಾಂ ಹುಟ್ಟಿ ಇದೆ ಆ ಕೆಲಸವನ್ನು ಅದು ಮಾಡುವದು ಕೀಲುಗಳಲ್ಲಿ ಹಾಕಿ ವಾರವ ಔಷಧಗಳಲ್ಲಿ ಬಾಧೆಯನ್ನು ಶಮನಮಾಡುವದರಲ್ಲಿ ಕ್ಲೆಮೆಂಟ್ಸರವರ ಮ್ಯಾಜಿಕ್ ಬಾಂನಂತಹದು ಬೇರೊಂದಿಲ್ಲವು ಕ್ರಯ —೧ ಬಾಟ್ಲಿಗೆ ೧೨ ಆಣೆ ೩ ಕ್ಕೆ ೨ ರೂಪಾಯಿ ೬ ಕ್ಕೆ ೩॥ ರೂಪಾಯಿ ೧೨ ಕ್ಕೆ ೬ ರೂಪಾಯಿ ಅಂಚೆ ವೆಚ್ಚ ಒಂದರಿಂದ ಮೂರು ಬಾಟ್ಲ ವರಿಗೆ ೩ ಆಣೆ,

ನಮ್ಮ ವಿಳಾಸ —ಎಫ್ ಡಬ್ಲಿಯು ಆರ್ರ,
ಸಿಮೆಟ್ರಿ ರೋಡ್, ವೆಪೆರಿ, ಮದರಾಸ್

ಬೆಂಗಳೂರು ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪೆನಿ ಲಿಮಿಟೆಡ್.

122—21

ಮೈಸೂರು ಸರ್ಕಾರದವರು ಇಂಡಿಯಾ ಗವರ್ನಮೆಂಟಿನವರು ಈ ರೈಲನ್ನು ಸ್ಯಾಂಕ್ಷನ್ ಮಾಡುವ ಕಂಡಿಷನ್ ಮೇರೆ ಖರ್ಚಾಗುವ ಮೂಲಧನಕ್ಕೆ ಕೆಳಕಡ ನಾಲ್ಕರಂತೆ ಬಡ್ಡಿ ಕೊಡಲು ಜಾಮೀನಾಗಿರುತ್ತೇವೆಂದು ಈಚೆಗೆ ಪೈಸಲ್ ಮಾಡಿರುತ್ತಾರೆ

ನಿಯಮಿತ ಮೂಲಧನ ಷೇರು ಒಂದಕ್ಕೆ ೨೫ ರೂಪಾಯಿಗಳ ಬೆಲೆಯುಳ್ಳ ೪೮ ಸಾವಿರ ಷೇರುಗಳಿಂದಾಗುವ ೧೨ ಲಕ್ಷ ರೂಪಾಯಿಗಳು—ಈ ಷೇರು ವೆಂಬಲಗು ಷೇರು ಒಂದಕ್ಕೆ ಒಂದು ರೂಪಾಯಿ ನಂತೆ ಅಪ್ಲಿಕೇಷನ್ ಜೊತೆಯಲ್ಲಿ ಅಡ್ವಾನ್ಸಾಗಿ ಕೊಟ್ಟು ಬಾಕಿ ೨೪ ಬಾಬತಿ ಮಾಡತಕ್ಕದ್ದು [illegible] ನಂತರ ೧೨ ಕಿಸ್ತುಗಳಲ್ಲಿ

ಈ ಕಂಪೆನಿಯ ಷೇರುಗಳನ್ನು ಅಪೇಕ್ಷಿಸತಕ್ಕಂಥವರು ಈ ಕೆಳಗೆ ರುಜುವು ಮಾಡಿರುವವರಿಗೆ ಅಥವಾ ಸಬ್ ಏಜಂಟ್ರಿಗೆ ದರಖಾಸ್ತು ಮಾಡಿಕೊಳ್ಳಬೇಕು

ಷೇರು ಹಣವನ್ನು ಈ ಕೆಳಗೆ ರುಜು ಮಾಡಿರುವವರಿಗೆ, ಇವರಿಂದ ಲಿಖಿತ ಮೂಲಕ ಹಣ ವಸೂಲು ಮಾಡಲು ಅಧಿಕಾರ ಹೊಂದಿರುವ ಸಬ್ ಏಜಂಟರಿಗೆ, ಬೆಂಗಳೂರು ಬ್ರಾಂಚಾ ಮದ್ರಾಸು ಬ್ಯಾಂಕಿಗೆ (ಈ ಕಂಪನಿಯ ಕ್ರೆಡಿಟ್ಟಿಗೆ), ಅಥವಾ ಮೈಸೂರು ಸೀಮೆಯ ತಾಲೂಕು ಡಿಸ್ಟ್ರಿಕ್ಟು ಖಜಾನೆಗಳಿಗಾಗಲಿ ಪಾವತಿ ಮಾಡಬೇಕು

(ಸೈನ್) ಬಿ ವಿ ರಾಮಸ್ವಾಮಿ ಶೆಟ್ಟಿ, ಬಿ ಎ,
ಅಡ್ವೊಕೇಟ್, ಮತ್ತು ಬೆಂಗಳೂರು ಚಿಕ್ಕಬಳ್ಳಾಪುರ
ಲೈಟ್ ರೈಲ್ವೆ ಕಂಪನಿಯ ಚೀಫ್ ಏಜಂಟ್
ನಗರ್ತಪೇಟೆ, ಬೆಂಗಳೂರು ಸಿಟಿ

ಮಕ್ಕಳ ಆರೋಗ್ಯವನ್ನು

ಯಾವಾಗಲೂ ಕಾಪಾಡುವದು ಹೆತ್ತವರ ಮೇಲೆ ಬಿದ್ದ ಭಾರವಾಗಿದೆ

ಸಣ್ಣ ಮಕ್ಕಳು ಹೇಳದಂತೆ ಕೇಳದೆ ಸಿಟ್ಟಿಗೆ ಬಳಪಡುವಂಥವರಾಗಿದ್ದು ಆಹಾರರುಚಿ ಕಡಿಮೆಯುಳ್ಳವರಾಗಿದಾರೆಂದು ಕಂಡ ಕೂಡಲೇ

SCOTT'S EMULSION. 57-47

(ಸ್ಕಾಟ್ಸ್ ಇಮಲ್ಷನ್)

ಎಂಬೀ ಸೇವನಾ ಔಷಧವನ್ನು ಕೊಡಬೇಕು

ಹಾಲಿನಲ್ಲಿ ಕೆಲವು ತೊಟ್ಟು ಬೆರಸಿ ಕೊಟ್ಟ ಕೂಡಲೇ ದೊಡ್ಡ ವ್ಯತ್ಯಾಸ ತೋರುವುದು

ಅದು ಸಂತೋಷವೂ ಆನಂದವೂ ಪಡುವಾಗಿ ಆಹಾರದ ರುಚಿ ಹೊಂದಿ ಸುಖ ಚೆನ್ನ ತೋರಿಸುವದು

ಕೈಯಿಂದ ಮುಟ್ಟ ತಯಾರಿಸಿದ್ದಲ್ಲ

ಎಲ್ಲಾ ಔಷಧವ್ಯಾಪಾರಗಾರರಲ್ಲೂ ಸಿಕ್ಕುತ್ತದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,
ಔಷಧಗಳ ಕಾರ್ಖಾನೆ,
ಲಂಡನ್, ಇಂಗ್ಲೆಂಡ್

ಈ ವಿಧಾನ ಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ

18—1—907 ರಿಂದ 25—1—1907 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಹೊರಡ… ಈ ವಾರದ ಸಂಖ್ಯೆ
ಬೆಂಗಳೂರು ಪಟ್ಟಣ	15	13	17
ಮೈಸೂರು ,,	42	3	0
ಬೆಂಗಳೂರು ಡಿಸ್ಟ್ರಿಕ್ಟು	31	24	7
ಮೈಸೂರು ,	2	2	4
ಕೋಲಾರ್ ,,	0	0	3
ಕೋಲಾರ್ ಚಿನ್ನದ ಗಣಿಗಳು	0	0	3
ತುಂಕೂರು ಡಿಸ್ಟ್ರಿಕ್ಟು	0	0	0
ಹಾಸನ ,,	16	1	0
ಚಿತ್ರದುರ್ಗ ,,	0	0	4
ಕಡೂರ್ ,,	10	9	7
ಶಿವಮೊಗ್ಗಾ ,,	0	0	15
ಜುಮ್ಲಾ	116	52	63

ಶಾಲಿವಾಹನ ಶಕ ವರುಷಂಗಳು ೧೮೨೯ ನೇ ಪರಾಭವ ಸಂವತ್ಸರದ ಮಾಘ ಬಹುಳ ೯ ಗುರುವಾರದಿಂದ ಫಾಲ್ಗುಣ ಶುದ್ಧ ಪಾಡ್ಯಮಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೭ ನೇ ಇಸವಿ ಫೆಬ್ರವರಿ.

ತಾ	ವಾರ		ತಿಥಿ	ಘಳಿಗೆ	ನಕ್ಷತ್ರ	ಘಳಿಗೆ
7	ಗುರು	‡	ನವಮಿ	14 8	ಸ್ವಾ	30 2
8	ಶುಕ್ರ	*	ದಶಮಿ	8 32	ವಿ	20 56
9	ಶನಿವಾರ		ಏಕಾದಶಿ	2 31	ಉಪರಿ	54 18
10	ರವಿವಾರ	,,	ತ್ರಯೋ	51 4	ಪೂರ್ವಾ	17 42
11	ಚಂದ್ರ	¶	ಚತುರ್ದಶಿ	15 46	ಉತ್ತರಾ	13 59
12	ಕುಜ	T	ಅಮಾ	41 12	ಶ್ರ	10 28
13	ಬುಧ		ಪಾಡ್ಯ	37 58	ಧ	8 12

‡ ದಶಮಿತಿಥಿ * ಸ್ಮಾರ್ತ ಏಕಾದಶಿ ಭಾಗವತ ಮಧ್ವ… ನದ ಏಕಾದಶಿ, ಹರಿವಾಸರ ,, ಪ್ರದೋಷ ¶ ಮೃತ್ಯು… ಮಹಾಶಿವರಾತ್ರಿ, ನಂಜನಗೂಡಿನಲ್ಲಿ ಬೆಳ್ಳಿ ಕೈಲಾಸವಾಹನ, ಪಾ… T ಸರ್ವತ್ರ ಅಮಾವಾಸ್ಯ, ಶ್ರೀರಂಗಪಟ್ಟಣದಲ್ಲಿ ಗಂಗಾಧರಸ್ವಾಮಿ…

ಪೇಟೇ ಧಾರಣೆ.

ಜಿನಸು	[illegible]	ಬೆಂಗಳೂರು
ಕಣ್ಣೇ ಅಕ್ಕಿ ಪಲ್ಲಾ ೧ಕ್ಕೆ	ರೂ ೧೩-೮-೦	೧೩…
ಕೆಂಬತ್ತಿ ಅಕ್ಕಿ ಆನಲ್	೧೨-೪-೦	೧೨…
,, ,, ದುಯಂ	೧೨-೦-೦	೧…
ದಪ್ಪಾಣಿ ಅಕ್ಕಿ	೧೩-೬-೦	೧೩…
ಸಣ್ಣಕ್ಕಿ ಆನಲ್	೧೫-೦-೦	೧೫…
,, ದುಯಂ	೧೪-೦-೦	೧…
ತೊಗರೀ ಬೇಳೆ ಪಲ್ಲಾ ೧ಕ್ಕೆ	೧೧-೦-೦	೧೧…
,, ದುಯಂ	೧೦-೧೨-೦	೧೧…
ಹೈನ ರಾಗಿ ಪಲ್ಲಾ ೧ಕ್ಕೆ	೭-೪-೦	೭…
ಕಾರ್ರಾಗಿ	೬-೦-೦	೬…
ಜೋಳ	೫-೮-೦	೮…
ಹಲಸಂದೆ ಪಲ್ಲಾ ೧ಕ್ಕೆ	೧೦-೧೨-೦	೯…
ಬಿಳೀ ಅವರೆ	೯-೪-೦	೮…
ಹೆಸರು	೧೦-೮-೦	೯…
ಉದ್ದು	೧೨-೧೨-೦	೧…
ಕಡಲೆ	೧೧-೮-೦	೯…
ಎಳ್ಳು ಸೆ ೧೨ಕ್ಕೆ	೧೭-೦-೦	೧೭…
ಹುರುಳಿ	೭-೬-೦	೮…
ಹರಳು ೧೨ ಸೇರಿಗೆ	೧೯-೦-೦	೧೨…
ಸೀಗೇಕಾಯಿ ಮಣ ೧ಕ್ಕೆ	೨-೨-೦	೧…
ಮೆಣಸಿನಕಾಯಿ	೩-೪-೦	೨…
,, ದುಯಂ	೩-೦-೦	೨…
ಬೆಲ್ಲ ದೊಡ್ಡ ಅಚ್ಚು	೪-೪-೦	ಮ೧…
ಒಳ್ಳೆಣ್ಣೆ ಮಣ ೧ಕ್ಕೆ	೪-೮-೦	೫…
ಹರಳೆಣ್ಣೆ ,,	೬-೧೨-೦	೫…
ಕೊತ್ತುಂಬರಿ ಪಲ್ಲಾ ೧ಕ್ಕೆ	೯-೦-೦	೭…
ಉಪ್ಪು ,,	೫-೧೧-೦	೭…
ಹುಣಸೇ ಹಣ್ಣು	೦-೧೨-೦	೦…
,, ಹಳೇದು	೦-೮-೦	೦…
ತುಪ್ಪ ಮಣ ೧ಕ್ಕೆ	೧೬-೦-೦	೧೪…
ಸೀಮೆಯೆಣ್ಣೆ ಪಟ್ಟ ೧ಕ್ಕೆ	೫-೪-೦	೪…
ತೆಂಗಿನಕಾಯಿ ೧೦೦ಕ್ಕೆ	೬-೮-೦	೬…
ಅಳಲೇಕಾಯಿ ಮಣ ೧ಕ್ಕೆ	೧-೦-೦	೧…
ಅಂಟ್ವಾಳದ ಕಾಯಿ ಮಣ ೧ಕ್ಕೆ	೦-೧೨-೦	೦…
ಚಿನ್ನ (ಪೌನ್) ಕೆಂಪು	೧೫-೪-೦	೧೫…
,, ,, ಪಸಿಮೆ	೧೫-೧೧-೦	೧೫…
,, ,, ಗಟ್ಟಿ ತೊಲ ೧ಕ್ಕೆ	೨೩-೧೨-೦	೨೪…
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ	೮೫-೦-೦	೮೫…

Printed and published by the Rev E W Thompson, M A, the Proprietor and Manager Wesleyan Mission Press, Mysore 7/2/1907

REGISTERED
M 20.

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೦ ಮೈಸೂರು—ಸರ್ ೧೯೦೭ ನೇ ಇಸವಿ ಫೆಬ್ರವರಿ ತಾರೀಖು ೧೪ ನೇ ಗುರುವಾರ. ಸಂಚಿಕೆ ೭



ದಿ ಸಿಟಿ ಸಿಲ್ವರ್ ವಾಚ್

13-3

(ಚಿತ್ರದಲ್ಲಿ ಕಂಡದ್ದು.)

ಸ್ಟೆಂವಿಂಗ್ ಕೀಲಿ, ಮುಕ್ಕಾಲು ಪ್ಲೇಟ್, ಡೂಯಲ್ ಚಲನೆ, ಹಾಲ್‌ಮಾರ್ಕ್ ಉಳ್ಳ ಬೆಳ್ಳಿ ಆಲ್ಬರ್ಟ ಸರಪಣಿ ಮತ್ತು ಸೀಲ್ ಸಹಿತ, ಸಂಪೂರ್ಣ ದಮಾಸ್ ಪೆಟ್ಟಿಗೆಯಲ್ಲಿ ರವಾನೆ ಕ್ರಯ (ಹಿಂದುಸ್ಥಾನದ ಅಂಚೆ ವೆಚ್ಚ ಸೇರಿ) ರೂ ೧೩-೧೪ ೦.

ಮೇಲಾದ ಬೆಳ್ಳಿ ಗಡಿಯಾರಗಳು, ಮುಚ್ಚಳವಿಲ್ಲದ್ದು ಕೀಲಿ ತಿರುಗಿಸುವುದೂ, ಕೀಲಿ ಇಲ್ಲದ್ದು ಕ್ರಯ ರೂ. ೯-೬, ರೂ ೧೧-೧೦, ೧೬-೮, ರೂ. ೨೦-೮.

ಬಲವಾದ ಬೆಳ್ಳಿ ಅರ್ಧ ಹಂಟರ್ ಗಡಿಯಾರಗಳು.—ಕ್ರಯ ೧೯, ರೂ ೧೯-೧೪, ರೂ ೨೩-೪, ರೂ ೨೮-೧೪.

ಬಲವಾದ ಪೂರಾ ಹಂಟರ್ ಗಡಿಯಾರಗಳು.—ರೂ ೧೩-೮, ರೂ ೧೫, ರೂ ೧೬-೮, ೧೯-೨, ರೂ. ೨೩-೧೦.

ಗಾಷ್ಯೆಲರ್ ನಿಕ್ಕಲ್ ಗಡಿಯಾರಗಳು, ಸ್ವಲ್ಪ ಸುತ್ತುಳ್ಳವು, ಕೀಲಿ ಇಲ್ಲ, ಲೀವರ್ ಚಲನೆ, ಸುಂದರವಾದ ಬಿಳಿ ಸಮನಾದ ಮುಚ್ಚಳ, ನಂಬಿಕೆಯಾದ ಗಂಟೆ ತೋರಿಸುವದು, ಕ್ರಯ ರೂ ೪-೮, ರೂ ೫-೪, ರೂ ೬

ಬಹಳ ತೆಳುವಾದ ಚಪ್ಪಟೆಯಾಗಿರುವ ಗಡಿಯಾರಗಳು — ೧) ಕಪ್ಪು ಉಕ್ಕಿನ ಮುಚ್ಚಳ ಉಳ್ಳವು ಕ್ರಯ ರೂ ೧೦-೮,) ರೂ ೧೬-೧೪ (೨) ಬೆಳ್ಳಿಯ ಮುಚ್ಚಳ ಉಳ್ಳವು. ಕ್ರಯ ರೂ ೧೪ ೧೧, ರೂ ೨೧.

ಬೆಳ್ಳಿ ಆಲ್ಬರ್ಟ ಸರಪಣಿಗಳು ಕ್ರಯ ರೂ ೩-೧೪, ರೂ. ೪ ೮, ರೂ ೫-೩, ರೂ ೭-೧ ರೂ ೮-೧೦

ಚಿನ್ನ ಕಲಬೆರಕೆ ಸರಪಣಿಗಳು. ಕ್ರಯ ರೂ ೬-೬, ರೂ ೮-೧, ರೂ ೯-೩.

ಈ ಕ್ರಯದಲ್ಲಿ ಹಿಂದುಸ್ಥಾನದ ಅಂಚೆ ಹಾಸಲೂ ಸೇರಿದೆ

ಎಂಟು ದಿನಕ್ಕೊಮ್ಮೆ ಕೀಲಿ ತಿರಿಗಿಸುವಂಥಾ ವಾಚುಗಳೂ, ಇನ್ನೂ ಎಲ್ಲಾ ತರದ ತಯಾರಿ ಮತ್ತು ಚಿತ್ರಗಳುಳ್ಳ ಮಾಡಿದ ವಾಚುಗಳೂ, ವಿಲಾಯತಿಯಲ್ಲಿ ತಯಾರಾಗಿರುವಂಥಾ ಸಕಲ ವಿಧವಾದ ಸಾಮಾನುಗಳೂ, ದಿವಾಳಿ ನಗಗಳೂ ಕೇಳಿದವರಿಗೆಲ್ಲಾ ಕಳುಹಿಸಿಕೊಡುತ್ತೇವೆ

ನಗದು ಹಣ ಕಟ್ಟಿ ಇಂಗ್ಲೀಷಿನಲ್ಲೇ ನಮಗೆ ಬರೆಯಬೇಕು.

ವಿಳಾಸ:—Messrs Bride and Eastland, 29 to 35, City Road, London, E C

ಬೇಕಾಗಿದೆ.

153 9

ಇಂಗ್ಲಿಷ್ ಮತ್ತು ಕನ್ನಡ ಅಕ್ಷರ ಜೋಡಿಸುವವರು (ಕಂಪಾಜಿಟರುಗಳು) ಬೇಕಾಗಿದೆ. ಚೆನ್ನಾಗಿ ಕಲಿತಿರುವವರು ಮಾತ್ರ ಖುದ್ದಾಗಿ ಬಂದು ಮಾತನಾಡಬಹುದು.

ಮ್ಯಾನೇಜರ್, ಮಿರ್ಜ ಪ್ರೆಸ್, ಮೈಸೂರು.

ನೋಟೀಸ್.

19-1

T A. 46960. 28 ದೇವನಹಳ್ಳಿ T. A 46960. 28

ಈ ನಂಬರುಳ್ಳ ೧೦೦ ರೂಪಾಯಿಗಳ ಅರ್ಧ ನೋಟನ್ನು ಸುಬ್ಬರಾಯನ ಜಾತ್ರೆಯಲ್ಲಿ ಚೋರಿ ತೆಗೆದುಕೊಂಡು ಅರ್ಧ ನೋಟಿಗೆ ಐವತ್ತು ರೂಪಾಯಿಗಳೆಂದು ಭಾವಿಸಿ ತಿಳಿವಳಿಕೆ ಇಲ್ಲದ ರೈತನು ತಿಳುವಳಿಕೆಯಿಲ್ಲದ ನನ್ನ ರೈವಿನಿಗೆ ಕೊಟ್ಟಿರುತ್ತಾನೆ ಮೇಲ್ಕಂಡ ಈ ನಂಬರಿನ ಅರ್ಧನೋಟು ಯಾರಲ್ಲಿದ್ದಾಗ್ಯೂ ನನಗೆ ತಂದುಕೊಟ್ಟು ಐವತ್ತು ರೂಪಾಯಿ ಪಡೆಯಬಹುದು

ಅಂಬಟಿ ಸುಬ್ಬಶೆಟಿ, ದೇವನಹಳ್ಳಿ.

ವೃತ್ತಾಂತ ಪತ್ರಿಕೆಯ ಪಂಚಾಂಗವು.

ಸಿದ್ಧವಾಗಿದೆ. ಕ್ರಯ ಒಂದಾಣೆ.

೧೯೦೭ನೇ ವರ್ಷದ ಕ್ಯಾಲೆಂಡರು. ದೊಡ್ಡ ಸೈಜು ಇದರಲ್ಲಿ ನಮ್ಮ ಮಹಾರಾಜರವರ ಉತ್ಕೃಷ್ಟವಾದ ಫೋಟೋ, ದಿವಾನರವರ ಮತ್ತು ಛೀಫ್ ಜಡ್ಜರ ಫೋಟೋಗಳು ಬಹಳ ಸೊಗಸಾಗಿವೆ. ಇದುವರೆಗೆ ಇಂಥಾ ಚಿತ್ರಗಳ ಕ್ಯಾಲೆಂಡರಲ್ಲಿ ಯಾರೂ ನೋಡಿರಲಾರರು.

ಚಂದಾದಾರರಿಗೆ ಸೂಚನೆ—ಇದೇ ಜನವರಿ ಆಖೈರಿನೊಳಗಾಗಿ "ವೃತ್ತಾಂತ ಪತ್ರಿಕೆ"ಗೆ ಒಂದು ವರುಷದ ಚಂದಾ ಅಡ್ವಾನ್ಸು ಕಟ್ಟತಕ್ಕವರಿಗೆಲ್ಲಾ ಒಂದೊಂದು ಕ್ಯಾಲೆಂಡರನ್ನು ಧಗಸಟ್ಟೆ ಕೊಡುವೆವು. ಅನಂತರ ಖಂಡಿತವಾಗಿ ಸಿಕ್ಕುವದಿಲ್ಲ

ಎಚ್ಚರಿಕೆ—ಬಹಳ ಕೊಂಚ ಪ್ರತಿಗಳನ್ನು ಮಾತ್ರ ಪ್ರಿಂಟು ಮಾಡಿದೇವೆ ಕೂಡಲೆ ಚಂದಾಸಹಿತ ಬರೆಯಿರಿ. ವಿಳಾಸ:—

ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

11 3

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು? ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾರಿ ವಿಕರಿಯಾಗುತ್ತಿರುವ ಟೋಪಿಗಳ ಪಾದವೆಲ್ಲಾ ಬಹಳಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ಪಾದವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹೊಲಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕ ಪ್ರಿಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೆದಾದ, ಚನ್ನಾಗಿ ಹೊಸೆದ, ಬಹಳ ಜಳಕ ಬಂದ ಟೋಪಿಗಳು ಬೇಕಾದರೆ, ನಮಗೆ ನೇರಾ ಬರೆದು ತರಿಸಿಕೊಳ್ಳಿ ಅಗ್ಗವಾದದ್ದು ಚನ್ನಾಗಿಲ್ಲದದ್ದು ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ.

ಸಾದ, ಕೆಂಪು, ಕಪ್ಪು, ಬಿಳಿ, ಕಾಫಿ ಟೋಪಿಗಳು ೧ ರೂ ೮ ಆ; ೧ ರೂ ೪ ಆ

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ೧ ರೂ. ೮ ಆ, ೨ ರೂ

ಪಾಂಡ ಟೋಪಿಗಳು - ರೂ. ೧೨ ಆ ; ೧ ರೂ ೪ ಆ , ೧ ರೂ. ೬ ಆ.

ಉಣ್ಣೆಯ ಟೋಪಿಗಳು ೧ ರೂ. ೮ ಆ ; ೧ ರೂ ೬ ಆ

ಹೊಸಗಳ ಟೋಪಿ, ಸೂರ್ಯ ಮೇಜೋದು, ಅರ್ಧ ಮೇಜೋದು ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನ ಕೇಳಿದವರಿಗೆ ಕಳುಹಿಸುವೆವು

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ.

ಬೆಂಗಳೂರು ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪೆನಿ ಲಿಮಿಟೆಡ್.

122—22

ಮೈಸೂರು ಸರ್ಕಾರದವರು ಇಂಡಿಯಾ ಗವರ್ನಮೆಂಟಿನವರು ಇಷ್ಟು ಸ್ಯಾಂಕ್ಷನ್ ಮಾಡುವ ಕಂಡಿಷನ್ ಮೇಲೆ ಬಂಡವಾಳದ ನೂರಕ್ಕೆ ವರುಷ ನಾಲ್ಕರಂತೆ ಬಡ್ಡಿ ಕೊಡಲು ಜಾಮೀನಾಗಿರುವ ಈ ಕಂಪೆನಿಗೆ ಪ್ರೈಸಲ್ ಮಾಡಿರುತ್ತಾರೆ

ಷೇರ್ ಮುಖಧನ ಷೇರು ಒಂದಕ್ಕೆ ೨೫ ರೂಪಾಯಿಗಳ ರೈ ಸಾವಿರ ಷೇರುಗಳಿಂದಾಗುವ ೧೨ ಲಕ್ಷ ರೂಪಾಯಿ ಈ ಷೇರು ಕೇಳುಗರು ಷೇರು ಒಂದಕ್ಕೆ ಒಂದು ರೂಪಾಯಿ ಅಪ್ಲಿಕೇಷನ್ ಜೊತೆಯಲ್ಲಿ ಅಡ್ವಾನ್ಸಾಗಿ ಕೊಟ್ಟು ಬಾಕಿ ೨೪ ರೂಗಳನ್ನು ನೋಟೀಸು ಕೊಟ್ಟನಂತರ ೧೨ ಕಂತುಗಳಲ್ಲಿ ಕೊಡತಕ್ಕದ್ದು ... ನ ಸರ್ವೆ ಪೂರೈಸಲ್ಪಟ್ಟಿದೆ

ಕಂಪೆನಿಯ ಷೇರುಗಳನ್ನು ಅಪೇಕ್ಷಿಸತಕ್ಕಂಥಾವರು ಈ ಕೆಳಗೆ ಹೆಸರಿಸುವ ... ಅಥವಾ ಸಬ್ ಏಜಂಟ್ರಿಗೆ ದರಖಾಸ್ತು ಸಲ್ಲಿಸೇರು

ಮುಖಧನವನ್ನು ಈ ಕೆಳಗೆ ರುಜು ಮಾಡಿರುವವರಿಗೆ, ಇವರಿಂದ ವಿವಿಧ ರಣ ವಸೂಲು ಮಾಡಲು ಅಧಿಕಾರ ಹೊಂದಿರುವ ... ಬೆಂಗಳೂರು ಬ್ರಾಂಚು ಮದ್ರಾಸು ಬ್ಯಾಂಕಿಗೆ (ಈ ...), ಅಥವಾ ಮೈಸೂರು ಸೀಮೆಯ ತಾಲ್ಲೂಕು ಖಜಾನೆಗಳಿಗಾಗಲಿ ಪಾವತಿ ಮಾಡಬೇಕು

(ರು) ಬಿ ವಿ. ರಾಮಸ್ವಾಮಿ ಶೆಟ್ಟಿ, ಬಿ. ಎ,

ಅಡ್ವೊಕೇಟ್, ವಗೈರೆ, ಬೆಂಗಳೂರು ಚಿಕ್ಕಬಳ್ಳಾಪುರ

ಲೈಟ್ ರೈಲ್ವೆ ಕಂಪೆನಿಯ ಚೀಫ್ ಏಜಂಟ್

ನಗರ್ತಪೇಟೆ, ಬೆಂಗಳೂರು ಸಿಟಿ

ಅಪಾಯದ ಕುರುಹುಗಳು.

ಸ್ವಾಭಾವಿಕವಾಗಿ ಅಪಾಯ ಬರಬಹುದಾದ ಕುರುಹುಗಳನ್ನು ಕಂಡುಹಿಡಿಯಬಹುದು.

ಕೆಮ್ಮು ಅಪಾಯಕರ ಕುರುಹು!

ಶ್ವಾಸಕೋಶಗಳು ಬಲಹೀನವುಳ್ಳವುಗಳೆಂದು ಇದರಿಂದ ತೋರಿಬರುತ್ತದೆ ಅವನ್ನು ಬೇಗನೇ ಬಲಪಡಿಸತಕ್ಕದ್ದು ಬಹು ಅವಶ್ಯಕ

SCOTT'S EMULSION. 57-46

(ಸ್ಕಾಟ್ಸ್ ಇಮಲ್ಷನ್)

ಎಂಬೀ ಔಷಧವು ಈ ಕುರುಹುಗಳನ್ನು ಹೋಗಲಾಡಿಸುವದು. ಬಲಹೀನವಾದ ಶ್ವಾಸಕೋಶಗಳನ್ನು ಬಲಪಡಿಸಿ, ಕೆಮ್ಮನ್ನು ನಿಲ್ಲಿಸುತ್ತದೆ

ಕೈಯಿಂದ ಮುಟ್ಟಿ ಹುಷಾರಿಸಿದ್ದಲ್ಲ.

ಎಲ್ಲಾ ಔಷಧ ಮಾರಾಟಗಾರರಲ್ಲೂ ದೊರಕುತ್ತವೆ.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲಂಡ್

ಈ ವಿಶಾನು ಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ

ಬಿಳಿಗಿ ರಾಜವೈದ್ಯರ ಬಳ್ಳಿ ಖಾತ್ರಿಯಾದ ಔಷಧಗಳು.

೬೮

ಸುಖಬಾಯಿಹೇ ಗುಳಿಗೆ.—ಇದರಿಂದ ಶರೀರದ ಬಾಧೆ ಬಹು ಬೇಗನೆ ಗುಣಹೊಂದುವದು. ೧೦ ವರುಷದ ಮೇಲಿನ ಯಾವ ಪ್ರಾಯದವರಾದರೂ ಸೇವಿಸಬಹುದು. ಕ್ರಯ ೨೪ ಗುಳಿಗೆಗೆ ೧ ರೂಪಾಯಿ ವಿ ಪಿ ಚಾರ್ಜು ಆಣೆ ೩

ಚಿಕ್ಕಮಕ್ಕಳ ಬಾಲಗ್ರಹದ ಔಷಧ:—ಜ್ವರಯುಕ್ತ ಅಥವಾ ಜ್ವರವಿಲ್ಲದೆ ಘಳ್ಳನೆ ಹುಟ್ಟುವ ಈ ಉಪಸರ್ಗಕ್ಕೆ ಇದರಿಂದ ಬೇಗನೆ ಗುಣಹುಟ್ಟುವದು. ಕ್ರಯ ೧ ಕುಪ್ಪಿಗೆ ೮ ಆಣೆ ವಿ. ಪಿ ೩ ಆಣೆ

ಗರ್ಭರಕ್ಷಕ ಮುಲಾಮು.—ಯಾ ೩ ಆರ್ತಿ ಇದನ್ನು ಹಚ್ಚುವದರಿಂದ ಎಂಥ ಕಠಿಣವಾದ ಗರ್ಭಕಟ್ಟು (ಮಳಕಟ್ಟು) ಇದ್ದರೂ ಗುಣಹೊಂದುವದು. ಕ್ರಯ ೧ ಡಬ್ಬಿಗೆ ೮ ಆಣೆ. ವಿ. ಪಿ. ಚಾರ್ಜು ಆಣೆ ೩

ಶತಮೂಲಿಕಾ ತೈಲವು.—ದಕ್ಷೀಣಕ್ಕೆ ಹಳೇಕಜ್ಜಿ ತುರಿಗಜ್ಜಿ ಪಣಗಜ್ಜಿ ಮುಂತಾದ ಆಬಾಲವೃದ್ಧರ ಚರ್ಮವ್ಯಾಧಿಯು ಗುಣಹೊಂದುವದು ಕ್ರಯ ೧ ಔನ್ಸಿನ ಕುಪ್ಪಿಗೆ ೧೦ ಆಣೆ; ೨ ಔನ್ಸಿನ ಕುಪ್ಪಿಗೆ ೧ ರೂಪಾಯಿ ವಿ ಪಿ ೫ ಆಣೆ.

ವಾಯುಹಾರಕ ತೈಲವು.—ಇದನ್ನು ಲೇಪಿಸುವ ೫ ವಿಮಿಷದೊಳಗೆ ಸಂಧಿ ವಾತ, ಕಟಿವಾತ, ನ ವಿರದ ವಾಯುಗಳ ನೋವು, ತಲೆನೋವು, ಚಿಕ್ಕಮಕ್ಕಳ ಉಬ್ಬಸ, ಕೆಮ್ಮು ಕೂಡ ಗುಣಹೊಂದುವದು ಕ್ರಯ ೧ ಕುಪ್ಪಿಗೆ ೧ ರೂಪಾಯಿ ವಿ ಪಿ ಚಾರ್ಜು ಆಣೆ ೩.

ಜ್ವರಗಡ್ಡೆಗೆ ಸುಖಬಿಂದು.—ಹೊಟ್ಟೆಯೊಳಗೆ ಸೇವಿಸಲಿಕ್ಕೆ. ಕ್ರಯ ೧ ಕುಪ್ಪಿಗೆ ೧೨ ಆಣೆ. ವಿ. ಪಿ ಚಾರ್ಜು ಆಣೆ ೩.

ಜ್ವರಗಡ್ಡೆಗೆ ಮುಲಾಮು.—ಬಾಹ್ಯಲೇಪನಕ್ಕೆ ಕ್ರಯ ಡಬ್ಬಿಗೆ ೧ ರೂಪಾಯಿ. ವಿ ಪಿ ಚಾರ್ಜು ಆಣೆ ೩.

೧ನೇ ನಂಬರ ಶೀತಜ್ವರ ರಿಪುಗಳಿಗೆ.—ಆಬಾಲವೃದ್ಧರಿಗೆ ಹುಟ್ಟುವ ಪ್ರತಿನಿತ್ಯದ ಮತ್ತು ೩ನೆ ೪ನೆ ದಿವಸದ ಚಾರಿಯಾಗಿ ಕೂಡ ಬರುವ ಶೀತಜ್ವರಕ್ಕೆ ಕ್ರಯ ೧ ಡಬ್ಬಿಗೆ ೧ ರೂಪಾಯಿ ವಿ. ಪಿ. ಚಾರ್ಜು ಆಣೆ ೩

೨ನೇ ನಂಬರದ ಶೀತಜ್ವರ ರಿಪುಗಳಿಗೆ:—ಮೇಲೆ ವಿವರಿಸಿದಂಥ ಶೀತಜ್ವರಗಳು ಕಾಲಾವಧಿಯಾಗಿ ಮೈಯಲ್ಲಿ ವ್ಯಾಪಿಸಿಕೊಂಡು ಪಳೆ ಪಳಕ್ಕೆ ಬಿದ್ದು ಬರುವದಾದರೆ ಕ್ರಯ ೧ ಡಬ್ಬಿಗೆ ೧ ರೂಪಾಯಿ. ವಿ ಪಿ. ಚಾರ್ಜು ಆಣೆ ೩

ದಂತ ಶುದ್ಧಿಗೆ ಸುವಾಸಿಕ ಮಂಜನ.—ಎಲ್ಲಾ ಪ್ರಕಾರದ ಹಲ್ಲಿನ ವೇದನೆಗಳ ಉಪಶಮನಕ್ಕೆ ಕ್ರಯ ೧ ಡಬ್ಬಿಗೆ ೮ ಆಣೆ ವಿ ಪಿ. ೩ ಆಣೆ.

ಪೀನಾಸಿಗೆ ಸುಧಾಚೂರ್ಣ:—ಮೂಗಿನ ಒಳಭಾಗದಲ್ಲಿ ಕ್ರಿಮಿ ಅಥವಾ ವ್ರಣವಾಗಿ ಅದರಿಂದ ದುರ್ವಾಸನೆಯೂ ರಕ್ತೀಗೆ ಅಥವಾ ನೀರಿ ನಂಥ ದ್ರವವು ಸ್ರವಿಸುವದಕ್ಕೆ. ಕ್ರಯ ೧ ಡಬ್ಬಿಗೆ ೧ ರೂಪಾಯಿ ವಿ. ಪಿ ಚಾರ್ಜು ಆಣೆ ೩.

ನಯನರೋಗಕ್ಕೆ ಸುಖಾಂಜನವು.—ಹೊಸತಾಗಿ ಹುಟ್ಟಿದ ಅಥವಾ ... ಇರುತಿ ದ್ದ ಕಣ್ಣಿನ ಎಲ್ಲಾ ಬಾಧೆಗಳು ಕಣ್ಣಿನಲ್ಲಿ ನೋಡಲಿಕ್ಕೆ ಆಗದೆ ಇದ್ದರೂ, ದೃಷ್ಟಿಮಾಂದ್ಯ, ಇತ್ಯಾದಿ ... ಗಳೂ ಇದರಿಂದ ಬೇಗನೆ ಗುಣವಾಗುವದು ಕ್ರಯ ೧ ಡಬ್ಬಿಗೆ ೧ ರೂಪಾಯಿ ವಿ ಪಿ. ಚಾರ್ಜು ಆಣೆ ೩.

ಕರ್ಣಸ್ರಾವಕ್ಕೆ ವನೌಷಧಿ ತೈಲವು.—ಚಿಕ್ಕ ಮತ್ತು ಭರ್ತಿ ಪ್ರಾಯದವರ ಕಿವಿಯಿಂದ ರಕ್ತ, ಕೀವು, ಅಥವಾ ನೀರಿನಂಥ ದ್ರವ ಹೊಸತಾಗಿ ಅಥವಾ ಬಹು ಕಾಲದಿಂದ ಸ್ರವಿಸುತ್ತಿದ್ದರೆ ಹಾಗೂ ನೋವು, ಕಿವಿತವು, ಡುಸಿನವಿಕೆಯೂ ಇರುತ್ತಿದ್ದರೆ ಇದರಿಂದ ಪೂರ್ಣ ಗುಣ ಹೊಂದುವದು ಕ್ರಯ ೧ ಕುಪ್ಪಿಗೆ ೧ ರೂಪಾಯಿ ವಿ ಪಿ ೩.

ಚಿಕ್ಕ ಮಕ್ಕಳ ಮೈ ಪುಷ್ಟಿಗೆ ಬಾಲಸುಧಾರಸ.—ಚಿಕ್ಕ ಹುಡುಗರ ಅಶಕ್ತಿ, ಕೂಡದ ಹಾಲಿನ ಅಥವಾ ಆಹಾರದ ವಾಂತಿ, ಅತಿಸಾರ, ಅನೇಕ ವಾರ್ತಿಕ ಮಲ ವಿಸರ್ಜನೆ, ಅಸ್ಥಿಗತಜ್ವರ, ಕೆಮ್ಮು ಇತ್ಯಾದಿ ಅನೇಕ ಉಪಸರ್ಗಗಳು ಗುಣವಾಗಿ ಮೈಯಲ್ಲಿ ರಕ್ತ ಮಾಂಸ ಅಸ್ಥಿ ಇವುಗಳು ಬಲವಾಗಿ ಬೆಳೆದು ಚನ್ನಾಗಿ ಪುಷ್ಟಿಯಾಗುತ್ತಾರೆ. ಕ್ರಯ ೧ ಕುಪ್ಪಿಗೆ ೧ ರೂಪಾಯಿ ವಿ ಪಿ ಚಾರ್ಜು ಆಣೆ ೬.

ಸಕ್ಕರೆ ಪಾಕಕಲ್ಪವು ವ ಕೆಮ್ಮು ಮುಂತಾದವುಗಳಿಗೆ:—ಶ್ವಾಸ ಕೋಶದ ಎಲ್ಲಾ ಉಪದ್ರವಗಳು ಆ ದರೆ ಕೊಸ ಮತ್ತು ಹಳೆ ತರ ಕೆಮ್ಮುಗಳು ನೆಗಡಿ ಉಬ್ಬಸ ಕಫ ಕ್ಷಯ ಅಸ್ಥಿಜ್ವರ ಅಶಕ್ತಿ ಕ್ಷಯವ್ಯಾಧಿಯಲ್ಲಿ ಹುಟ್ಟುವ ಬೇನೆಗಳು ಇತ್ಯಾದಿ ಬೇಗನೆ ಗುಣಹೊಂದುವವು ಕ್ರಯ ೧ ಕುಪ್ಪಿಗೆ ೮ ... ವಿ ಪಿ ಚಾರ್ಜ ಆಣೆ ೯

ನಯನ ಸುಖಕ್ಕೆ ಸೌವೀರಾಂಜನವು (ಕಪ್ಪು ಸುರ್ಮು).—ದಿವಸ ಲಲ್ಲಿ ನಿರಂತರ ವಾಹನವಾಡುವದರಿಂದ ಬೆಂಕಿಯ ಕಳೆಯಲ್ಲಿ ಕೂಡುವದರಿಂದ ರಾತ್ರಿಯಲ್ಲಿ ಜಾಗ್ರಣ ಮಾಡುವದರಿಂದ ಅಥವಾ ಕೆಟ್ಟ ಕಾಲ ಒದಗುವದರಿಂದ ಸಹಾ ಉಂಟಾಗ ವ ಕಣ್ಣಿನ ಬಾಧೆಯು ಕಳೆಯುವಿಕೆ ಉರಿ ನವೆ ಮುಂತಾದವು ಗುಣಹೊಂದಿ ಕಣ್ಣಿಗೆ ಸುಖ ಪ್ರಾಪ್ತವಾಗುತ್ತದೆ ಕ್ರಯ ೧ ಡಬ್ಬಿಗೆ ೮ ಆಣೆ ವಿ ಪಿ ಚಾರ್ಜ ಡಬ್ಬಿ ೧ ರಿಂದ ೧೨ ಡಬ್ಬಿಗೆ ೩ ಆಣೆ

ವಾಂತಿಭೇದಿಗೆ ಮತ್ತು ಅತಿಸಾರಕ್ಕೆ ಕರ್ಪೂರಾದಿ ... —ಈ ಉಪದ್ರವಗಳಿಗೆ ಇದು ದಿವ್ಯ ಔಷಧವಾಗಿದೆ ವಿಶ್ವಾಸವಳ್ಳ ಬಿಡಿ ಕಂಪನಿಯು ದ ಇದನ್ನು ನಾವು ಸಂಗ ಹಿಸುತ್ತೇವೆ ಕ್ರಯ ೧ ಕುಪ್ಪಿಗೆ ೧೨ ಆಣೆ ವಿ. ಪಿ ಚಾರ್ಜು ಆಣೆ ೩

ಸೂಚನೆ.—ನಮ್ಮ ಔಷಧಗಳೊಳಗೆ ಅಪಾಯಕರವಾದ ಯಾವ ಜಿನಸಿನ ಮಿಶ್ರಣವೂ ಮಾಡಿಲ್ಲ ಪ್ರತಿ ಒಂದು ಔಷಧಿಗೆ ಜೊತೆಯಲ್ಲಿ ಛಾಪೆಯ ಅನುಪಾನ ಪತ್ರವನ್ನು ಕಳುಹಿಸುತ್ತಿರುತ್ತೇವೆ. ಇನ್ನೂ ಅನೇಕ ಉತ್ತಮವಾದ ಔಷಧಗಳಿಗಾಗಿ ನಮ್ಮ ಕ್ಯಾಟ್ಲಾಗು ತರಿಸಿಕೊಂಡು ಓದಿನೋಡಿ.

ನಮ್ಮ ಅಡ್ರೆಸು:—ಕರ್ನಾಟಕ ರಾಜ ವೈದ್ಯ ಮತ್ತು ಕಂಪನಿ, ಪ್ರೋಪ್ರೈ ಬಿಳಿಗಿ, ಉತ್ತರ ಕನ್ನಡಾ ಜಿಲ್ಲಾ.

Post Bilgi, North Kanara District.

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟ್ರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು) ... ರೂ. ೧—

ಪರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಪೋಸ್ಟೇಜ್ ಸೇರಿ ... ರೂ. ೧—೪—೦

... ,, ,, ... ೦—೧೪—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು. ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು ನಮ್ಮ ವಿಳಾಸ.—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು

ಬೆಲೆಗೆ ಬೆಳ್ಳಿ—ಗುಣಕ್ಕೆ ಭಂಗಾರ.

86 37

ಕ್ಲೆಮೆಂಟ್ಸ್‌ರವರ ಗಾರಿಡಿಬಾಧಾ ನಿವಾರಿಣಿ.

ಪಾರ್ಶ್ವನೋವು, ಕೀಲುಗಳ ನೋವುಗಳು, ಕಿಬ್ಬೊಟ್ಟೆನೋವು, ಬೆನ್ನುಳೆಯುವದು, ತಲೆನೋವು, ಕೆಮ್ಮು ಕೀಲುಬಂಗಗಳು, ಕೀಲುಗಳು ಕತ್ತರಿಸುವದು, ಬಗ್ಗಿರುವ ಬೆನ್ನುಗಳು, ಕೂರಳು ಊತ, ಇವುಗಳಿಂ ದುಂಟಾಗುವ ಬಾಧೆಗಳು, ಕೈಕಾಲು ಎಡೆತ, ಇವುಗಳಿಗೆ ಕ್ಲೆಮೆಂಟ್ಸ್‌ರವರ ಗಾರಿಡಿ ಬಾಧೆ ನಿವಾರಿಣಿ ತೈಲವನ್ನು ಚನ್ನಾಗಿ ತಿಕ್ಕಿದರೆ ಈ ಬಾಧೆಗಳೆಲ್ಲಾ ಪರಿಹಾರವಾಗುವದು ಬಾಧೆಯನ್ನು ನಿಲ್ಲಿಸುವದಕ್ಕಾಗಿ ಕ್ಲೆಮೆಂಟ್ಸ್‌ರವರ ಮ್ಯಾಜಿಕ್ ಬಾಂ ಹುಟ್ಟಿ ಇದೆ ಆ ಬೆಲಸವನ್ನು ಅದು ಮಾಡುವದು ಶೀಶಾಯುಗಳಲ್ಲಿ ಹಾಕಿ ಮಾರುವ ಔಷಧಗಳಲ್ಲಿ ಬಾಧೆಯನ್ನು ಶಮನಮಾಡುವದರಲ್ಲಿ ಕ್ಲೆಮೆಂಟ್ಸ್‌ರವರ ಮ್ಯಾಜಿಕ್ ಬಾಂನಂತಹದು ಬೇರೊಂದಿಲ್ಲವು ಕ್ರಯ.—೧ ಬಾಟ್ಲಿಗೆ ೧೨ ಆಣೆ ೩ ಕ್ಕೆ ೨ ರೂಪಾಯಿ ೬ ಕ್ಕೆ ೩॥ ರೂಪಾಯಿ. ೧೨ ಕ್ಕೆ ೬ ರೂಪಾಯಿ ಅಂಚೆ ವೆಚ್ಚ ಒಂದರಿಂದ ಮೂರು ಬಾಟ್ಲಿ ವರಿಗೆ ೩ ಆಣೆ,

ನಮ್ಮ ವಿಳಾಸ:—ಎಚ್. ಸಬ್ಲಿಯು ಆರ್. ಸಿವೆಟ್ರಿ ರೋಡ್, ವೇಪೆರಿ, ಮದರಾಸ್

ಬೆಂಗಳೂರು ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪೆನಿ ಲಿಮಿಟೆಡ್.

122—21

ಮೈಸೂರು ಸರ್ಕಾರದವರು ಇಂಡಿಯಾ ಗವರ್ನಮೆಂಟವರು ಈ ರೈಲಿನ ಸ್ಟ್ಯಾಂಡರ್ಡ್ ಗೇಜಾದ ಕಂಡಿಷನ್ ಮೇಲೆ ಖರ್ಚಾಗುವ ಮೂಲಧನಕ್ಕೆ ಶೇಕಡ ನಾಲ್ಕರಂತೆ ಬಡ್ಡಿ ಕೊಡಲು ಜಾಮೀನಾಗಿರುತ್ತೇವೆಂದು ಖಚಿತ ಪ್ಯಾಗಿಲ್ ಮಾಡಿರುತ್ತಾರೆ.

ನಿಯಮಿತ ಮೂಲಧನ ಶೇರು ಒಂದಕ್ಕೆ ೨೫ ರೂಪಾಯಿಗಳ ಬೆಲೆಯುಳ್ಳ ೮೦ ಸಾವಿರ ಶೇರುಗಳಿಂದಾಗುವ ೨೦ ಲಕ್ಷ ರೂಪಾಯಿಗಳು—ಈ ಶೇರು ಕೊಳಲು ಶೇರು ಒಂದಕ್ಕೆ ಒಂದು ರೂಪಾಯಿ ನಂತೆ ಅಪ್ಲಿಕೇಷನ್ ಜೊತೆಯಲ್ಲಿ ಅಡ್ವಾನ್ಸಾಗಿ ಕೊಟ್ಟು ಬಾಕಿ ೨೪ ದಾವತಿ ಮಾಡತಕ್ಕದ್ದೆಂದು ... ಕಂತುಗಳಲ್ಲಿ

ಈ ಕಂಪನಿಯ ... ಅಪೇಕ್ಷಿಸತಕ್ಕಂಥವರು ಈ ಕೆಳಗೆ ರುಜುವು ಮಾಡಿರುವವರಿಗೆ ಅಥವಾ ಸಬ್ ಏಜಂಟ್ರಿಗೆ ದರಖಾಸ್ತು ಮಾಡಿಕೊಳ್ಳಬೇಕು

ಶೇರು ಹಣವನ್ನು ಈ ಕೆಳಗೆ ರುಜು ಮಾಡಿರುವವರಿಗೆ, ಇವರಿಂದ ಲಿಖಿತ ಮೂಲಕ ಹಣ ವಸೂಲು ಮಾಡಲು ಅಧಿಕಾರ ಹೊಂದಿರುವ ಸಬ್ ಏಜಂಟರಿಗೆ, ಬೆಂಗಳೂರು ಬ್ರಾಂಚು ಮದ್ರಾಸು ಬ್ಯಾಂಕಿಗೆ (ಈ ಕಂಪನಿಯ ಕ್ರೆಡಿಟ್ಟಗೆ), ಅಥವಾ ಮೈಸೂರು ಸೀಮೆಯ ತಾಲ್ಲೂಕು ಡಿಸ್ಟ್ರಿಕ್ಟು ಖಜಾನೆಗಳಿಗಾಗಲಿ ದಾಖಲು ಮಾಡಬೇಕು

(ಸೈ) ಬಿ. ವಿ. ರಾಮಸ್ವಾಮಿ ಶೆಟ್ಟಿ, ಬಿ ಎ,
ಅಡ್ವೊಕೇಟ್, ಮತ್ತು ಬೆಂಗಳೂರು ಚಿಕ್ಕಬಳ್ಳಾಪುರ
ಲೈಟ್ ರೈಲ್ವೆ ಕಂಪನಿಯ ಚೀಫ್ ಏಜಂಟ್.
ನಗರ್ತಪೇಟೆ, ಬೆಂಗಳೂರು ಸಿಟಿ

ಮಕ್ಕಳ ಆರೋಗ್ಯವನ್ನು

ಯಾವಾಗಲೂ ಕಾಪಾಡುವದು ಕೆತ್ತವರ ಮೇಲೆ ಬಿದ್ದ ಭಾರವಾಗಿದೆ ಸಣ್ಣ ಮಕ್ಕಳು ಹೇಳಿದಂತೆ ಕೇಳದೆ ಸಿಟ್ಟಿಗೆ ಒಳಪಡುವಂಥವರಾಗಿದ್ದು ಆಹಾರರುಚಿ ಅರಿಮೆಯುಳ್ಳವರಾಗಿದ್ದಾರೆಂದು ಕಂಡ ಕೂಡಲೆ

SCOTT'S EMULSION. 57-47

(ಸ್ಕಾಟ್ಸ್ ಇಮಲ್ಷನ್)

ಎಂಬೀ ಸೇವನಾ ಔಷಧವನ್ನು ಕೊಡಬೇಕು.

ಹಾಲಿನಲ್ಲಿ ಕಲಸಿ ಕೊಟ್ಟು ಬೆರಸಿ ಕೊಟ್ಟ ಕೂಡಲೇ ದೊಡ್ಡ ವ್ಯತ್ಯಾಸ ತೋರುವದು

ಅದು ಸಂತೋಷವೂ ಆನಂದವೂ ಪ ಡುವದಾಗಿ ಆಹಾರದ ರುಚಿ ಹೊಂದಿ ಸುಖ ಚೆನ್ನೆ ತೋರಿಸುವದು

ಕೈಯಿಂದ ಮುಟ್ಟ ತಯಾರಿಸಿದ್ದಲ್ಲ

ಎಲ್ಲಾ ಔಷಧಮಾರಾಟಗಾರರಲ್ಲೂ ಸಿಕ್ಕುತ್ತದೆ.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,
ಔಷಧಗಳ ಕಾರ್ಖಾನೆ,
ಲಂಡನ್, ಇಂಗ್ಲಂಡ್

ಈ ಮೀನು ಮನುಷ್ಯ ಇರುವ ಔಷಧ ವನ್ನೇ ಕೊಂಡುಕೊಳ್ಳಿ.

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

16—1—1907 ರಿಂದ 25—1—1907 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕ್ವಾರ(ಡ... ಈ ಪ... ಸಂಖ್ಯೆ
ಬೆಂಗಳೂರು ಪಟ್ಟಣ	15	14	57
ಮೈಸೂರು ,,	48	3	0
ಬೆಂಗಳೂರು ಡಿಸ್ಟ್ರಿಕ್ಟು	31	24	7
ಮೈಸೂರು ,,	2	2	4
ಕೋಲಾರ್ ,,	0	0	3
ಕೋಲಾರ್ ಚಿನ್ನದ ಗಣಿಗಳು	0	0	3
ತುಂಕೂರು ಡಿಸ್ಟ್ರಿಕ್ಟು	0	0	0
ಹಾಸನ ,,	16	1	0
ಚಿತ್ರದುರ್ಗ ,,	0	0	1
ಕಡೂರ್ ,,	10	9	0
ಶಿವಮೊಗ್ಗಾ ,,	0	0	15
ಜುಮ್ಲಾ	116	82	83

ಶಾಲಿವಾಹನ ಶಕ ವರುಷಂಗಳು ೧೮೨೯ ನೇ ಪರಾಭವ ಸಂವತ್ಸರದ ಮಾಘ ಬಹುಳ ೯ನೇ ಗುರುವಾರದಿಂದ ಫಾಲ್ಗುಣ ಪಾಡ್ಯಮಿ ಬುಧವಾರದ ವರಿಗಿನ ಒಂದು ವಾರದ ಪಂಚಾಂಗ.

೧೯೦೭ ನೇ ಇಸವಿ ಫೆಬ್ರುವರಿ

ತಾ	ವಾರ		ತಿಥಿ	ಘಳಿಗೆ	ನಕ್ಷತ್ರ	ಘಳಿಗೆ
7	ಗುರು	‡	ನವಮಿ	14 8	ಮೂ	30 2
8	ಶುಕ್ರ	*	ದಶಮಿ	8 32	ಪೂ	25-56
9	ಶನಿವಾ	:	ಏಕಾದಶಿ	2 34	ಉತ್ತರ	51-18
10	ರವಿವಾ	,,	ತ್ರಯೋ	51 4	ಶ್ರವಣ	17 42
11	ಚಂದ್ರ	¶	ಚತುರ್ದಶಿ	46 18	ಧನಿಷ್ಠಾ	13 58
12	ಕುಜ	†	ಅಮಾ	41 12	ಶ	10 28
13	ಬುಧ		ಪಾಡ್ಯ	37 58	ಭ	8-12

‡ ದಶಮೀತಿಥಿ * ಸ್ಮಾರ್ತ ಏಕಾದಶಿ : ಭಾಗವತ ಮಧ್ವರ ಏಕಾದಶಿ, ಹರಿವಾಸರ ;, ಪ್ರದೋಷ ¶ ವ್ಯತೀಪಾತ ಮಹಾಶಿವರಾತ್ರಿ, ನಂಜನಗೂಡಿನಲ್ಲಿ ಬೆಳ್ಳಿ ಕೈಲಾಸವಾಹನ, ... † ಸರ್ವತ್ರ ಅಮಾವಾಸ್ಯೆ, ಶ್ರೀರಂಗಪಟ್ಟಣದಲ್ಲಿ ಗಂಗಾಧರಸ್ವಾಮಿ ...

ಪೇಟೇ ಧಾರಣೆ.

ಬಾಬು		ಮೈಸೂರು	ಬೆಂಗಳೂರು
ಸಣ್ಣ ಅಕ್ಕಿ ಪಲ್ಲಾ ೧ಕ್ಕೆ	ರೂ	೧೩-೮-೦	೧೩...
ಕೆಂಬೂತಿ ಅಕ್ಕಿ ಅವಲ್ ..		೧೨-೪-೦	೦...
,, ದೊಡ್ಡ ..		೦-೦-೦-೦	೦...
ಜಾವಾಣ ಅಕ್ಕಿ		೧೩-೬-೦	೦೩...
ಸಣ್ಣಕ್ಕಿ ಅವಲ್		೧೫-೦-೦	೧೫...
,, ದುಂಡು		೧೪-೦-೦	೧೪...
ತೊಗರೀ ಬೇಳೆ ಪಲ್ಲಾ ೧ಕ್ಕೆ		೧೧-೦-೦	೧೧...
,, ದುಂಡು		೧೬-೧೨-೦	೧೧...
ರಾಗಿ ಪಲ್ಲಾ ೧ಕ್ಕೆ		೭-೪-೦	೭...
ಸಾವ್ರಗಿ		೬-೦-೦	೭...
ಜೋಳ		೫-೮-೦	೮...
ಹುರುಳಿ ಪಲ್ಲಾ ೧ಕ್ಕೆ		೧೦-೧-೦	೯...
ಬಿಳೀ ಅವರೆ		೯-೪-೦	೮...
ಹೆಸರು		೧೧-೮-೦	೯...
ಉದ್ದು		೧೨-೦-೦	೧೦...
ಕಡಲೆ		೧೧-೮-೦	೯ ೧...
ಎಳ್ಳು ಸೆ. ೧೨೭ ಕ್ಕೆ		೧೭-೦-೦	೧೭...
ಹುರುಳಿ		೭ ೬-೦	೮...
ಹರಳು ೧೨೭ ಸೇರಿಗೆ		೧೯-೦-೦	೧೨-೦...
ಸೀಗೇಕಾಯಿ ಮಣ ೧ಕ್ಕೆ		೨-೨ ೦	೦-೦...
ಮೆಣಸಿನಕಾಯಿ		೩-೪ ೦	೨...
,, ದುಂಡು		೩-೦-೦	೨...
ಬೆಲ್ಲ ದೊಡ್ಡ ಅಚ್ಚು		೪-೪-೦	ಮ ೦-೧...
ಒಳ್ಳೆಣ್ಣೆ ಮಣ ೧ಕ್ಕೆ		೭-೮-೦	೫...
ಹರಳೆಣ್ಣೆ ,,		೬-೧೨-೦	೫...
ಕೊತ್ತುಂಬರಿ ಪಲ್ಲಾ ೧ಕ್ಕೆ		೯ ೦ ೦	೭-೧...
ಉಪ್ಪು ,,		೫ ೧೧-೦	೬...
ಮೆಣಸೇ ಹಣ್ಣು		೦-೧೨-೦	೦-೧೧...
,, ಹಳೇದು		೦-೮-೦	೦-೦...
ತುಪ್ಪ ಮಣ ೧ಕ್ಕೆ		೧೬-೦ ೦	೧೪...
ಸೀಮೆಯೆಣ್ಣೆ ಪಟ್ಟ ೧ಕ್ಕೆ		೫-೪-೦	೪...
ತೆಂಗಿನಕಾಯಿ ೧೦೦ ಕ್ಕೆ		೬-೮-೦	೭ ...
ಅಳಲೇಕಾಯಿ ಮಣ ೧ಕ್ಕೆ		೧-೦-೦	೧-೦...
ಅಂಟ್ವಾಳದ ಕಾಯಿ ಮಣ ೧ಕ್ಕೆ		೦-೧೨ ೦	೦ ೧೧...
ಚಿನ್ನ (ಪೌನ್) ಕೆಂಪು		೧೫-೪-೦	೧೫-...
,, ,, ಪಸಿಮೆ		೧೫-೧೧-೦	೧೫-...
,, ,, ಗಟ್ಟಿ ತೊಲ ೧ಕ್ಕೆ		೨೩-೧೨-೦	೨೪ ...
ಬೆಳ್ಳಿ ಗಟಿ ತೊಲ ೧೦೦ ಕ್ಕೆ		೮೫-೦-೦	೮೫-...

Printed and published by the Rev E W THOMPSON, M A, the Proprietor and Manager Wesleyan Mission Press, Mysore. 7/2/1907.

REGISTERED
M 20.

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

[illegible]೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೦ ಮೈಸೂರು—ಸರ್ ೧೯೦೭ ನೇ ಇಸವಿ ಫೆಬ್ರವರಿ ತಾರೀಖು ೧೪ ನೇ ಗುರುವಾರ. ಸಂಚಿಕೆ ೩೭



ದಿ ಸಿಟಿ ಸಿಲ್ವರ್ ವಾಚ್

13-3

(ಚಿತ್ರದಲ್ಲಿ ಕಂಡದ್ದು.)

ಸ್ಟೆಂವ್ ಕೀಲಿ, ಮುಕ್ಕಾಲು ಪ್ಲೇಟ್, ಜೂಯಲ್ ಚಲನೆ, ಹಾಲ್‌ಮಾರ್ಕ್ ಉಳ್ಳ ಬೆಳ್ಳಿ ಅಲ್ಬರ್ಟ್ ಸರಪಣಿ ಮತ್ತು ಸೀಲ್ ಸಹಿತ, ಸಂಪೂರ್ಣ ದಮಾಸ್ ಪೆಟ್ಟಿಗೆಯಲ್ಲಿರುವುದು. ಕ್ರಯ (ಹಿಂದುಸ್ಥಾನದ ಅಂಚೆ ವೆಚ್ಚ ಸೇರಿ) ರೂ [illegible].

ಮೇಲಾದ ಬೆಳ್ಳಿ ಗಡಿಯಾರಗಳು, ಮುಚ್ಚಳವಿಲ್ಲದ್ದು. ಕೀಲಿ ತಿರಿಗಿಸುವುದೂ, ಕೀಲಿ ಇಲ್ಲದ್ದೂ ಕ್ರಯ ರೂ. [illegible], ರೂ. [illegible], ರೂ. [illegible].

ಬಲವಾದ ಬೆಳ್ಳಿ ಅರ್ಧ ಹಂಟರ್ ಗಡಿಯಾರಗಳು.—ಕ್ರಯ [illegible], ರೂ [illegible], ರೂ [illegible], ರೂ [illegible]

ಬಲವಾದ ಪೂರಾ ಹಂಟರ್ ಗಡಿಯಾರಗಳು.—ರೂ [illegible], ರೂ [illegible], ರೂ [illegible], ರೂ. [illegible].

ಪಾಪ್ಯುಲರ್ ನಿಕಲ್ ಗಡಿಯಾರಗಳು, ಸ್ವಲ್ಪ ಸುತ್ತುಳ್ಳವು. ಕೀಲಿ ಇಲ್ಲ, ಲೀವರ್ ಚಲನೆ, ಸುಂದರವಾದ ಬಿಳಿ ನಮೂನೆ ಮುಚ್ಚಳ, ನಂಬಿಕೆಯಾದ ಗಂಟೆ ತೋರಿಸುವದು, ಕ್ರಯ ರೂ [illegible], ರೂ [illegible], ರೂ [illegible].

ಬಹಳ ತೆಳುವಾದ ಚಪ್ಪಟೆಯಾಗಿರುವ ಗಡಿಯಾರಗಳು:—
೧) ಕಪ್ಪು ಉಕ್ಕಿನ ಮುಚ್ಚಳ ಉಳ್ಳವು ಕ್ರಯ ರೂ [illegible], ರೂ. [illegible] (೨) ಬೆಳ್ಳಿಯ ಮುಚ್ಚಳ ಉಳ್ಳವು. ಕ್ರಯ ರೂ [illegible], ರೂ [illegible].

ಬೆಳ್ಳಿ ಅಲ್ಬರ್ಟ್ ಸರಪಣಿಗಳು. ಕ್ರಯ ರೂ. [illegible], ರೂ. [illegible], ರೂ [illegible], ರೂ [illegible], ರೂ. [illegible]

ಚಿನ್ನ ತುಂಬಿದ ಸರಪಣಿಗಳು. ಕ್ರಯ ರೂ. [illegible], ರೂ [illegible], ರೂ [illegible].

ಈ ಕ್ರಯದಲ್ಲಿ ಹಿಂದುಸ್ಥಾನದ ಅಂಚೆ ಹಾಸಲೂ ಸೇರಿದೆ

ಎಂಟು ದಿನಕ್ಕೊಮ್ಮೆ ಕೀಲಿ ತಿರಿಗಿಸುವಂಥಾ ವಾಚುಗಳೂ, ಇನ್ನೂ ಎಲ್ಲಾ ತರದ ತಯಾರಿ ಮತ್ತು ಚಿತ್ರಕೆಲಸ ಮಾಡಿದ ವಾಚುಗಳೂ, ವಿಲಾಯತಿಯಲ್ಲಿ ತಯಾರಾಗಲ್ಪಡುವಂಥಾ ಸಕಲ ವಿಧವಾದ ಸಾಮಾನುಗಳೂ, ಜವಾಹಿರಿ ನಗಗಳೂ ಕೇಳಿದವರಿಗೆಲ್ಲಾ ಕಳುಹಿಸಿಕೊಡುತ್ತೇವೆ

ನಗದು ಹಣ ಕಟ್ಟಿ ಇಂಗ್ಲಿಷಿನಲ್ಲೇ ನಮಗೆ ಬರೆಯಬೇಕು.

ವಿಳಾಸ:—Messrs. Bride and Eastland,
29 to 35, City Road, London, E.C.

ಬೇಕಾಗಿದೆ.

153 9

ಇಂಗ್ಲಿಷ್ ಮತ್ತು ಕನ್ನಡ ಅಕ್ಷರ ಜೋಡಿಸುವವರು (ಕಂಪಾಜಿಟರುಗಳು) ಬೇಕಾಗಿದೆ. ಚನ್ನಾಗಿ ಕಲಿತಿರುವವರು ಮಾತ್ರ ಖುದ್ದಾಗಿ ಬಂದು ಮಾತನಾಡಬಹುದು.

ಮ್ಯಾನೇಜರ್, ಮಿಷನ್ ಪ್ರೆಸ್, ಮೈಸೂರು.

ನೋಟೀಸ್.

19-1

T. A. 46960. 28 — ದೇವನಹಳ್ಳಿ — T. A. 46960. 28

ಈ ನಂಬರುಳ್ಳ ೧೦೦ ರೂಪಾಯಿಗಳ ಅರ್ಧ ನೋಟನ್ನು ಸುಬ್ಬರಾಯನ ಜಾತ್ರೆಯಲ್ಲಿ ಜೋರಿ ತೆಗೆದುಕೊಂಡು ಅರ್ಧ ನೋಟಿಗೆ ಐವತ್ತು ರೂಪಾಯಿಗಳೆಂದು ಭಾವಿಸಿ ತಿಳುವಳಿಕೆ ಇಲ್ಲದ ಲೈಡನು ತಿಳುವಳಿಕೆಯಿಲ್ಲದ ನಮ್ಮ ರೈತನಿಗೆ ಕೊಟ್ಟಿರುತ್ತಾನೆ ಮೇಲ್ಕಂಡ ಈ ನಂಬರಿನ ಅರ್ಧ ನೋಟು ಯಾರಲ್ಲಿದ್ದಾಗ್ಯೂ ನನಗೆ ತಂದುಕೊಟ್ಟು ಐವತ್ತು ರೂಪಾಯಿ ಪಡೆಯಬಹುದು

ತಿಂಬಟಿ ಸುಬ್ಬಶೆಟ್ಟಿ, ದೇವನಹಳ್ಳಿ.

ವೃತ್ತಾಂತ ಪತ್ರಿಕೆಯ ಪಂಚಾಂಗವು.

ಸಿದ್ಧವಾಗಿದೆ. ಕ್ರಯ ಒಂದಾಣೆ.

೧೯೦೭ನೆ ವರ್ಷದ ಕ್ಯಾಲೆಂಡರು. ದೊಡ್ಡ ಸೈಜು ಇದರಲ್ಲಿ ನಮ್ಮ ಮಹಾರಾಜರವರ ಉತ್ಕೃಷ್ಟವಾದ ಫೋಟೋ, ದಿವಾನರವರ ಮತ್ತು ಚೀಫ್ ಜಡ್ಜರ ಫೋಟೋಗಳು ಬಹಳ ಸೊಗಸಾಗಿವೆ. ಇದುವರೆಗೆ ಇಂಥಾ ಚಿತ್ರಗಳು ಕ್ಯಾಲೆಂಡರಲ್ಲಿ ಯಾರೂ ನೋಡಿರಲಾರರು.

ಚಂದಾದಾರರಿಗೆ ಸೂಚನೆ—ಇದೇ ಫೆಬ್ರವರಿ ಆಖೈರಿನೊಳಗಾಗಿ "ವೃತ್ತಾಂತ ಪತ್ರಿಕೆ"ಗೆ ಒಂದು ವರುಷದ ಚಂದಾ ಅಡ್ವಾನ್ಸು ಕಟ್ಟತಕ್ಕವರಿಗೆಲ್ಲಾ ಒಂದೊಂದು ಕ್ಯಾಲೆಂಡರನ್ನು ಧಗಸಟ್ಟೆ ಕೊಡುವೆವು. ಅನಂತರ ಖಂಡಿತವಾಗಿ ಸಿಕ್ಕುವುದಿಲ್ಲ.

ಎಚ್ಚರಿಕೆ—ಬಹಳ ಕೊಂಚ ಪ್ರತಿಗಳನ್ನು ಮಾತ್ರ ಪ್ರಿಂಟು ಮಾಡಿದೇವೆ ಕೂಡ್ಲೆ ಚಂದಾಸಹಿತ ಬರೆಯಿರಿ. ವಿಳಾಸ:—

ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

THE PLACE FOR HASSAN CAPS IS

HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

11 3

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು? ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ [illegible]? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? [illegible] ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ [illegible] ಟೋಪಿಗಳ ದಾರವೆಲ್ಲಾ ವಿಲಾಯತಿ [illegible] ಹಾಸನದ ಟೋಪಿಗಳು ಎಲ್ಲರೂ ಕೊಂಡುಕೊಂಡು ಮೋಸಹೋಗಬಾರದು.

ಅವರ ಇಲ್ಲಿ ನೋಡಿ—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನಮ್ಮ ಸ್ವದೇಶದ [illegible]. (೨) ಟೋಪಿಗಳನ್ನು [illegible] [illegible]

[illegible]

ಬೆಂಗಳೂರು ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪೆನಿ ಲಿಮಿಟೆಡ್.

122—22

ಮೈಸೂರು ಸರ್ಕಾರದವರು ಇಂಡಿಯಾ ಗವರ್ನ್ಮೆಂಟಿನವರು [illegible] ಸ್ಯಾಂಕ್ಷನ್ ಮಾಡುವ ಕಂಡಿಷನ್ ಮೇರೆ ಖರ್ಚಾಗುವ [illegible] ಸೇಕಡ ನಾಲ್ಕರಂತೆ ಬಡ್ಡಿ ಕೊಡಲು ಜಾಮೀನಾಗಿರುವ ಬಗ್ಗೆ ಪೈಸಲ್ ಮಾಡಿರುತ್ತಾರೆ.

[illegible] ಮೂಲಧನ ಷೇರು ಒಂದಕ್ಕೆ [illegible] ರೂಪಾಯಿಗಳ [illegible] ಸಾವಿರ ಷೇರುಗಳಿಂದಾಗುವ [illegible] ಲಕ್ಷ ರೂಪಾಯಿ [illegible] ಷೇರು ಬೇಕಾದವರು ಷೇರು ಒಂದಕ್ಕೆ ಒಂದು ರೂಪಾಯಿ [illegible] ಜೊತೆಯಲ್ಲಿ ಅಡ್ವಾನ್ಸಾಗಿ ಕೊಟ್ಟು ಬಾಕಿ [illegible] ಗಳನ್ನ ನೋಟೀಸು ಕೊಟ್ಟ ನಂತರ [illegible] ಕಂತುಗಳಲ್ಲಿ ಮಾಡತಕ್ಕದ್ದು [illegible] ಸರ್ವೆ ಪೂರೈಸಲ್ಪಟ್ಟಿದೆ.

ಕಂಪೆನಿಯ [illegible]ಗಳನ್ನು ಅಪೇಕ್ಷಿಸತಕ್ಕಂಥಾವರು ಈ ಕೆಳ[illegible] ನಾಯಿಂವವರಿಗೆ ಅಥವಾ ಸಬ್ ಏಜಂಟ್ರಿಗೆ ಬರಯಾಸ್ತು [illegible]ಳ್ಳಬೇಕು

[illegible] ಹಣವನ್ನು ಈ ಕೆಳಗೆ ರುಜು ಮಾಡಿರುವವರಿಗೆ, ಇವರಿಂದ [illegible] ವಸೂಲು ಮಾಡಲು ಅಧಿಕಾರ ಹೊಂದಿರುವ [illegible], ಬೆಂಗಳೂರು ಬ್ರಾಂಚು ಮದ್ರಾಸು ಬ್ಯಾಂಕಿಗೆ (ಈ[illegible] ಕ್ರೆಡಿಟ್ಟಿಗೆ), ಅಥವಾ ಮೈಸೂರು ಸೀಮೆಯ ತಾಲ್ಲೂಕು [illegible] ಖಜಾನೆಗಳಿಗಾಗಲಿ ಪಾವತಿ ಮಾಡಬೇಕು

[illegible]) ಟಿ. ವಿ. ರಾಮಸ್ವಾಮಿ ಶೆಟ್ಟಿ, ಬಿ. ಎ,
[illegible]ಕ್ಟರ್, ಮತ್ತು ಬೆಂಗಳೂರು ಚಿಕ್ಕಬಳ್ಳಾಪುರ
ಲೈಟ್ ರೈಲ್ವೆ ಕಂಪೆನಿಯ ಚೀಫ್ ಏಜಂಟ್
ನಗರ್ತಪೇಟೆ, ಬೆಂಗಳೂರು ಸಿಟಿ.

ಅಪಾಯದ ಕುರುಹುಗಳು.

ಸ್ವಾಭಾವಿಕವಾಗಿ ಅಪಾಯ ಬರಬಹುದಾದ ಕುರುಹುಗಳನ್ನು ಕಂಡುಹಿಡಿಯಬಹುದು

ಕೆಮ್ಮು ಅಪಾಯದ ಕುರುಹು!

ಶ್ವಾಸಕೋಶಗಳು ಬಲಹೀನವುಳ್ಳವುಗಳೆಂದು ಇದರಿಂದ ತೋರಿಬರುತ್ತವೆ ಅವನ್ನು ಬೇಗನೇ ಬಲಪಡಿಸತಕ್ಕದ್ದು ಬಹು ಅವಶ್ಯಕ

SCOTT'S EMULSION. 57-48

(ಸ್ಕಾಟ್ಸ್ ಇಮಲ್ಷನ್)

ಎಂಬೀ ಔಷಧವು ಈ ಕುರುಹುಗಳನ್ನು ಹೋಗಲಾಡಿಸುವದು

ಬಲಹೀನವಾದ ಶ್ವಾಸಕೋಶಗಳನ್ನು ಬಲಪಡಿಸಿ, ಕೆಮ್ಮನ್ನು ನಿಲ್ಲಿಸುತ್ತದೆ

ಕೈಯಿಂದ ಮುಟ್ಟಿ ತಯಾರಿಸಿದ್ದಲ್ಲ

ಎಲ್ಲಾ ಔಷಧ ವ್ಯಾಪಾರಿಗಳಲ್ಲಿ ದೊರಕುತ್ತವೆ.

[illegible]

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್
[illegible]
[illegible]

ಈ ವಿಧಾನ ಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ.

ನೋಟೀಸು.

20-1

ನೆಲಮಂಗಲದ ತಾಲ್ಲೂಕು ದಾಸನಪುರದ ಹೋಬಳಿ ನಗರೂರು ಶಿವಾಚಾರದ ನಂಜುಂಡಪ್ಪನವರ ಮಗ ದೊಡ್ಡ ಲಿಂಗಣ್ಣನ ಹೆಂಡತಿ ಸಿದ್ದಲಿಂಗಮ್ಮನಿಗೆ ಬುದ್ಧಿ ವೈಕಲ್ಯವಾದ ಈ ಕೆಳಗೆ ರುಜು ಮಾಡಿರುವ ಚಿಕ್ಕ ಲಿಂಗಣ್ಣನಾದ ನಾನು ಈಕೆಯ ಜೀವನಾಂಶಕ್ಕಾಗಿ ಕೊಟ್ಟಿರುವ ಸ್ಥಿರ ಸ್ವತ್ತುಗಳ್ಯಾವತ್ತು ಪರಾಧೀನ ಮಾಡುವುದಾಗಿ ವರ್ತಮಾನ ಕೇಳುತ್ತೇನೆ ಸದರಿ ಸ್ವತ್ತುಗಳನ್ನು ಕ್ರಯ, ದಾನ, ಭೋಗ್ಯ ವಗೈರೆ ಏನು ಮಾಡುವದಕ್ಕೂ ಈಕೆಗೆ ಹಕ್ಕಿಲ್ಲವಾದ್ದರಿಂದ ಯಾರೂ ತಗೊಂಡಾಗ್ಯೂ ಊರ್ಜಿತವಾಗಲಾರದೆಂದು ಈ ನೋಟೀಸಿನ ಮೂಲಕ ತಿಳಿಯಪಡಿಸಿರುತ್ತೇನೆ

ತಾ|| ೭-೨-೦೭. ಚಿಕ್ಕಲಿಂಗಣ್ಣನ ರುಜು.
ನಗರೂರು.

ಕೊಡಗು ದೇಶದ ಸ್ವಚ್ಛವಾದ ಉತ್ಕೃಷ್ಟ ಕಾಫಿಯು.

ಹುರಿಯದೆ ಇರುವದು ಅಥವಾ ಈಗತಾನೆ ಹುರಿದದ್ದು ತಯಾರಿಸಿದ ಸ್ಥಳದಿಂದಲೆ ನೆಟ್ಟಗೆ ರವಾನಿಸಲ್ಪಡುವದು.

18 2

ವ್ಯಾಪಾರದ ಹೆಗ್ಗುರ್ತು

ಕಾಸುಕೋಣದ ತಲೆಯ ಮುದ್ರೆ ಇದೆ.

ಸಂಪೂರ್ಣವಾಗಿ ಯಂತ್ರದಿಂದಲೆ ಸಿದ್ಧಪಡಿಸಿದ್ದು ಹೆಗ್ಗುರ್ತುಳ್ಳ ವಿಲಾಸದ ಚೀಟಿ ಸುತ್ತಿಲ್ಲದಿರುವವು ಸ್ವಚ್ಛವಾದವುಗಳಲ್ಲ. ಅವು ನಮ್ಮವಲ್ಲ. ಏಜೆಂಟರುಗಳು ಬೇಕು. ಅಂಥವರಿಗೆ ಅಲಾಯಿದ ದರ ಬರೆಯುವವರು ದಯವಿಟ್ಟು ಈ ಪತ್ರಿಕೆಯ ಹೆಸರನ್ನು ಸೂಚಿಸಿ

ವಿಳಾಸ:—ಮ್ಯಾನೇಜರ್, ಮ್ಯಾಥಿಸನ್ಸ್
ಕಾಫಿ ವರ್ಕ್ಸ್, ಹುಣಸೂರು.

ಉತ್ತಮವಾದ ಸಿದ್ಧೌಷಧಗಳು.

1-7

ಆಪ್ತೇರ್ಯದಿಂದಲೂ ಬಂದ ನಮ್ಮ ಔಷಧಿಗಳು ಲಕ್ಷಾಂತರ ರೋಗಿಗಳಿಗೆ ಉಪಯೋಗಿಸಿ ಗುಣ ಕಂಡುಬಂದವುಗಳಾಗಿವೆ. ಅವುಗಳೆಲ್ಲಾ ಮೂಲಿಕೆಗಳಿಂದ ತಯಾರಾಗಿರುತ್ತೆ. ತಿಂಗಳೊಂದಕ್ಕೆ ಅನೇಕರು ಔಷಧಿ ಸೇವಿಸುತ್ತಲೂ ಇರುವ ಸಂಗತಿ ಎಲರಿಗೂ ಗೊತ್ತಿದೆ

(೧) ಸಂಜೀವಿನಿ ತೈಲ ಸಮಸ್ತ ಮಹಾ ರೋಗಗಳಿಗೂ ಶಾಲು ಸೀಸೆಗೆ ೧-೪-೦ (೨) ಭೃಂಗರಾಜ ತೈಲ ಎಲ್ಲಾ ವಿಧದ ಶಿರೋರೋಗಗಳಿಗೆ ಶಾಲು ಸೀಸೆಗೆ ೦-೧೦-೦ (೩) ಭೇದಿ ಎಣ್ಣೆ ಸುಖಪ್ರವರ್ತಿಯಾಗುವುದು ಶಾಲು ಸೀಸೆಗೆ ೦-೧೦-೦ (೪) ಮಹಾಲೇಹ ಧಾತುಶಕ್ತಿಯನ್ನುಂಟುಮಾಡಿ ಪುಷ್ಟಿಮಾಡುತ್ತೆ ಸೇರಿಗೆ ೨-೦-೦ (೫) ಸೌಭಾಗ್ಯ ಶುಂಠಿಪಾಕ ಲೇಹ ಇದರ ಸೇವನೆಯಿಂದ ಬಾಣಂತಿಸನ್ನಿ ಕ್ಷಯ ಮೊದಲಾದ ರೋಗಗಳನ್ನು ಪರಿಹರಿಸುತ್ತೆ ಸೇರಿಗೆ ೨-೦-೦ ಹುಚ್ಚುನಾಯಿ, ಕೊಳತ ಮಂಡಲ ಇವುಗಳಿಂದುಂಟಾದ ಪ್ರಬಲ ರೋಗಿಗಳಿಗೂ ಚಿಕಿತ್ಸೆಯು ದೊರೆಯುವದು

ನಮ್ಮ ಕ್ಯಾಟಲಾಗು ತರಿಸಿ ನೋಡಿ—ಪಂಡಿತ ಕೃಷ್ಣಾಚಾರ್ಯ,
ನಿಖಿಲ ರೋಗಾಪಹರಿ ವೈದ್ಯಶಾಲಾ, ದೊಡ್ಡಪೇಟೆ, ಮೈಸೂರು.

ಮಕ್ಕಳಿಗೆ ಪಾಠಪುಸ್ತಕಗಳಿಲ್ಲದೆ ಪೇಚಾಡುವದೇಕೆ!

21 1

ಬಾಲಶಿಕ್ಷೆ ಎಂಬ ಪುಸ್ತಕವಿರಲಾಗಿ ಬೇರೆ ಪುಸ್ತಕವು ಬೇಕೇ? ಇದು ಈಗ ಎರಡನೆಯಾವೃತ್ತಿ ಮುದ್ರಿತವಾಗಿ ಅತಿ ಮನೋಹರವಾಗಿಯೂ ಬಾಲಕರ ಅಕ್ಷರಾಭ್ಯಾಸಕ್ಕೆ ಅತಿ ಸಹಾಯಕರವಾದ ಚಿತ್ರಗಳಿಂದ ಕೂಡಿದುದಾಗಿಯೂ ಇರುವದರಿಂದ ಅನೇಕ ಗವರ್ನಮೆಂಟು ಸ್ಕೂಲುಗಳಲ್ಲಿ ಉಪಯೋಗಿಸಲ್ಪಡುತ್ತಾ ಬಂದಿದೆ.

ಸರ್ವರೂ ಇದನ್ನು ತರಿಸಿಕೊಂಡು ನೋಡಿ ಅದರ ಬೆಲೆಯನ್ನು ತಿಳಿಯಬೇಕಾಗಿದೆ.

ಕ್ರಯ ೧ ಆಣೆ. ವಿ. ಪಿ. ಮೂಲಕ ಮೂರು ಆಣೆಗಳು.
ನೂರು ಪ್ರತಿಗಳಿಗೆ ಹನ್ನೆರಡು ಪ್ರತಿಗಳು ಕಮಿಷನ್.

ವಿಳಾಸ:—ಮ್ಯಾನೇಜರ್, ಸಿ. ಎಲ್. ಎಸ್.
ಬುಕ್ ಡಿಪೋ, ಮೈಸೂರು.

CHAMBERLAIN'S COLIC, CHOLERA AND DIARRHOEA REMEDY.

ಚೇಂಬರ್ಲೈನ್ ಯವರು ಹೊಟ್ಟೆಶೂಲೆ, ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು

4-7



ಕೆಳ ಹೊಟ್ಟೆಯ ನೋವು, ಬರೀ ಭೇದಿಯಾಗುವುದು, ಆಮಶಂಕೆ, ವಾಂತಿಭೇದಿ ಉಪದ್ರ, ಕೀಲು ನೋವು, ಹೊಟ್ಟೆಯ ನಾನಾ ತರದ ಶೂಲೆಗಳು—ಈ ರೋಗಗಳನ್ನೆಲ್ಲಾ ವಾಸಿಮಾಡುತ್ತದೆ ಈ ಪರಮ ಯುಕ್ತವಾದ ಔಷಧವು ಜನರನ್ನು ಬದುಕಿಸಿರುವಷ್ಟು ಮತ್ತು ನೋವನ್ನೂ ಬಾಧೆಯನ್ನೂ ನಿವಾರಣೆ ಮಾಡಿರುವಷ್ಟು ಪ್ರಪಂಚದಲ್ಲೇ ಇನ್ಯಾವ ಔಷಧವೂ ಮಾಡಿರುವುದಿಲ್ಲ.

ಜ್ಞಾಪಕದಲ್ಲಿಟ್ಟುಕೊಳ್ಳಿ—ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯೊಳಗಿರುವ ಎಲ್ಲಾ ತರದ ನೋವನ್ನೂ ನಿಲ್ಲಿಸಿಬಿಡುತ್ತದೆ ಬಹಳ ಕಠಿಣವಾದ ಭೇದಿಯೂ ಕೂಡ ಮೂರೇ ಹೊತ್ತಿನಲ್ಲಿ ಈ ಔಷಧದಿಂದ ನಿರ್ಮೂಲಮಾಡಿ ನಿಲ್ಲಿಸುತ್ತದೆ ಖಂಡಿತವಾಗಿ ವಾಸಿಮಾಡುವುದೇ ಇದರ ಗುಣ.

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ.

ಕೈಯಿಂದ ಸ್ವಲ್ಪವೂ ಮುಟ್ಟಿದ್ದಲ್ಲ.

ಇದು ಎಲ್ಲೆಲ್ಲೂ ವಿಕರಿಯಾಗುವುದು. ಸಣ್ಣ ಸೀಸೆಗೆ ೧ ರೂಪಾಯಿ ದೊಡ್ಡ ಸೀಸೆಗೆ ೨ ರೂಪಾಯಿ

ಮುಂಬಯಿ ವ್ಯಾಪಾರಮಾಡಲಿಚ್ಛೈಸುವವರು.

85 37

ಮುಂಬಯಿಯಲ್ಲಿ ಪ್ರತಿಯೊಂದು ಮಾಲಿನ ತೂಕ ಅಳತೆ ಮತ್ತು ಮಾಲಿನ ವರ್ಣನೆ ಹಾಗೂ ಅನೇಕ ಉಪಯುಕ್ತ ಮಾಹಿತಿಯುಳ್ಳ ಕನ್ನಡ ಪುಸ್ತಕ—ಕ್ರಯ ೧೦ ಆಣೆ ವಿ. ಪಿ. ಯಿಂದ ಕಳುಹಿಸುವೆವು ಟಪಾಲು ಖರ್ಚು ಬೇರೆ ಬುಕ್ಕ್ ಸೆಲರರಿಗೆ ಯೋಗ್ಯ ಕಮಿಷನ್ ದೊರೆಯುವದು ಮತ್ತು ಲಿಂಗಾಯತ ವರ್ತಸಂಬಂಧ ಏಂಕೋತ್ಪತ್ತಿ ಕ್ರಿಯಾಲಕ್ಷಣವೆಂಬುವ ಕನ್ನಡ ಪುಸ್ತಕ—ನಾಲ್ಕು ಆಣೆ ಚಲೋ ಅಕ್ಷರದಿಂದ ಬರಿಯಿರಿ ಪತ್ತಾ ಚನ್ನಬಸಪ್ಪ ಮಲ್ಲಪ್ಪ ನಾರದ, ಪೋಷ್ಟು ಮಾಂಡ್ವಿ, ಮುಂಬಯಿ.

ವೃತ್ತಾಂತ ಪತ್ರಿಕೆ.

ಸನ್ ೧೯೦೭ ನೇ ಇಸವಿ ಫೆಬ್ರವರಿ ತಾ|| ೧೪ನೇ ಗುರುವಾರ

ನ್ಯಾಷನಲ್ ಫಂಡು.

ಸುಮಾರು ಮೂರು ನಾಲ್ಕು ತಿಂಗಳಿಂದ ರಾಜಧಾನಿಯಲ್ಲಿ ನ್ಯಾಷನಲ್ ಫಂಡು ಎಂಬುವದೊಂದು ಏರ್ಪಾಟನ್ನು ಸ್ಥಾಪಿಸಬೇಕೆಂದು ಪ್ರಯತ್ನಗಳು ನಡೆಯುತ್ತಲೇ ಇವೆ. ಇದರ ವಿಷಯದಲ್ಲಿ ಉತ್ಸಾಹಿಗಳಾದವರು ಉಪನ್ಯಾಸಗಳನ್ನು ಮಾಡುತ್ತಲೂ ಪತ್ರಿಕೆಗಳಲ್ಲಿ ತಮ್ಮ ಅಭಿಪ್ರಾಯಗಳನ್ನು ಬರೆದು ತಿಳಿಸುತ್ತಲೂ ಬಂದಿರುವರು ಈ ಫಂಡನ್ನೇರ್ಪಡಿಸುವವರ ಉದ್ದೇಶವು ಎರಡು ವಿಧವಾಗಿವೆಯೆಂದು ಈ ಉಪನ್ಯಾಸಾದಿಗಳಿಂದ ಗೊತ್ತಾಗುವದು ಅದೇನೆಂದರೆ, ೧.—ವಿದ್ಯಾರ್ಥಿಗಳಾದವರಿಗೆ ವೇತನಗಳನ್ನು ಕೊಟ್ಟು ಬೊಂಬಾಯಿ, ಮದ್ರಾಸು ಮೊದಲಾದ ದೇಶೀಯ ಸ್ಥಳಗಳಿಗಾದರೂ ಯೂರೋಪ್ ಜಪಾನ್ ಮೊದಲಾದ ಅನ್ಯದೇಶೀಯ ಸ್ಥಳಗಳಿಗಾದರೂ ಕಳುಹಿಸಿ ಕೈಗಾರಿಕೆಗೆ ಸಂಬಂಧಪಟ್ಟ ವಿದ್ಯೆಯನ್ನು ಕಲಿಸಿಕೊಟ್ಟು ತರಪೇತು ಮಾಡಿಸುವದು ೨.—ದೇಶೀಯ ಕೈಗಾರಿಕೆಗಳಿಗೆ ಪ್ರೋತ್ಸಾಹವನ್ನು ಕೊಟ್ಟು ಅಭಿವೃದ್ಧಿಪಡಿಸುವದು. ಈ ಪ್ರಕಾರ ದೇಶದ ಐಶ್ವರ್ಯವನ್ನು ಹೆಚ್ಚಿಸುವುದರಿಂದ ಈ ದೇಶದ ಸುಖವನ್ನು ಹೆಚ್ಚಿಸಲಾಗುವುದೆಂದೂ ಐಶ್ವರ್ಯಾಭಿವೃದ್ಧಿಯನ್ನು ಪಡೆಯಬೇಕಾದರೆ ದೇಶದಲ್ಲಿರುವ ವ್ಯವಸಾಯವೆಂಬ ಕೆಲಸದೊಂದಿಗೆ ಕೈಗಾರಿಕೆಯನ್ನು ಹೆಚ್ಚಿಸುವುದೇ ಉತ್ತಮೋಪಾಯವೆಂದೂ ಈ ಫಂಡಿನ ಪ್ರೋತ್ಸಾಹಕರು ತಿಳಿದಿರುವರು.

ಈ ಉದ್ದೇಶವು ಸರ್ವಸಮ್ಮತವಾದುದೆಂಬುದರಲ್ಲಿ ಸಂಶಯವೇ ಇಲ್ಲ. ಮತ್ತು ಈ ಉದ್ದೇಶವನ್ನು ನೆರವೇರಿಸುವದಕ್ಕೆ ಪುರಜನಗಳಲ್ಲಿ ಪ್ರತಿಯೊಬ್ಬರೂ ಸರ್ವಪ್ರಯತ್ನದಿಂದಲೂ ಸಹಾಯಕರಾಗಬೇಕಾದುದು ಕರ್ತವ್ಯವು. ಸಕಲ ಪ್ರಜೆಗಳು ಮತ, ಜಾತಿ, ಕುಲಭೇದಗಳನ್ನು ನೋಡದೆ ಐಕಮತ್ಯದಿಂದ ಕೂಡಿ ಈ ಸಮಾಜದ ಉದ್ದೇಶಗಳನ್ನು ನೆರವೇರಿಸಿ ಕೊಡತಕ್ಕದು.

ಈ ನ್ಯಾಷನಲ್ ಫಂಡಿನ ವಿಷಯದಲ್ಲಿ ಕೆಲವರು ಮಾಡಬಹುದಾದ ಒಂದೆರಡು ಆಕ್ಷೇಪಣೆಗಳನ್ನು ವಾಚಕರ ಲಕ್ಷ್ಯಕ್ಕೆ ತರುವೆವು. ಕೆಲವರು—ಈ ಫಂಡು ಅನಾವಶ್ಯಕವು. ಸರ್ಕಾರದವರೇ ಈ ಭಾಗದಲ್ಲಿ ದೇಶಕ್ಕೆ ಅವಶ್ಯಕವಾದುದನ್ನೆಲ್ಲಾ ತಮ್ಮ ಕೈಲಾದಷ್ಟನ್ನು ಮಾಡುತ್ತಿದ್ದಾರೆಂದು ಹೇಳುವರು. ಸರ್ಕಾರದವರು ಹೀಗೆ ಮಾಡುವುದೇನೋ ನಿಜವೆಂದು ನಾವು ಒಪ್ಪಿಕೊಳ್ಳುತ್ತೇವೆ. ಸಂಸ್ಥಾನದಲ್ಲಿ ಕೈಗಾರಿಕೆಯ ವಿದ್ಯಾಶಾಲೆಗಳನ್ನು ಸ್ಥಾಪಿಸಿದ್ದಾರೆ, ಹತ್ತಿಯ ಕಾರ್ಖಾನೆಗಳಂತಿರುವ ವ್ಯಾಪಾರಸ್ಥಾನಗಳನ್ನು ಏರ್ಪಡಿಸಿದ್ದಾರೆ. ಕೈಗಾರಿಕೆಗಳನ್ನು ಕಲಿತುಬರುವಂತೆ ವಿದ್ಯಾರ್ಥಿಗಳನ್ನು ಯೂರೋಪ್ ಅಮೆರಿಕ ಖಂಡಗಳಿಗೆ ಕಳುಹಿಸಿದ್ದಾರೆ ಎಲ್ಲಾ ಸರಿಯೇ. ಆದರೆ ಸಕಲವನ್ನೂ ಸರ್ಕಾರದವರೇ ನಡೆಸಲಿ ಎಂಬ ಭಾವವು ಪ್ರಜೆಗಳಲ್ಲಿ ನೆಲೆಗೊಳ್ಳದಂತೆಯೂ ದೇಶೀಯರು ಸ್ವತಂತ್ರವಾಗಿ ಕಾರ್ಯಗಳನ್ನು ನಡಿಸಿಕೊಳ್ಳತಕ್ಕವರಾಗುವಂತೆಯೂ ಅನುಕೂಲವನ್ನು ಏರ್ಪಡಿಸಬೇಕು. ಇದೀಗ ಈ ಫಂಡಿನವರಲ್ಲಿ ಕಾಣುವ ಪ್ರಾಥಮಿಕವಾದ ಅಪೇಕ್ಷೆಯು. ಕಾರ್ಯಾರಂಭವು ಎಷ್ಟು ಅಲ್ಪವಾಗಿ ತೋರಿದಾಗ್ಯೂ ಜನರಲ್ಲಿ ಸ್ವಪ್ರಯತ್ನವನ್ನೂ ಸ್ವಾತಂತ್ರ್ಯವನ್ನೂ ಪ್ರೋತ್ಸಾಹಪಡಿಸತಕ್ಕಂಥ ಏರ್ಪಾಡು ಎಷ್ಟಿದ್ದರೂ ಸಾಲದೆಂದೇ ಹೇಳಬೇಕಾಗಿದೆ.

ಕೆಲವರು ಈ ದೇಶೀಯ ಕಾರ್ಯಗಳನ್ನು ಜನ ನಡಿಸತಕ್ಕ ರೀತಿಯು ಆಕ್ಷೇಪಣೀಯವಾದುದೆಂದು ಹೇಳುತ್ತಾರೆ. ಸಾರ್ವಜನಿಕವಾದ ಕೂಟಗಳನ್ನು ಅಗ ಮಾಡಿ ಪ್ರಜೆಗಳಿಂದ ಹಣವನ್ನು ಸಂಗ್ರಹಿಸುವದಕ್ಕಾಗಿ ಸ್ವಯಂ ಹುಡುಗರನ್ನು ನೇಮಿಸಿಕೊಂಡು ಅವರನ್ನು ಮೆರವಣಿಗೆ ಮಾಡಿಸುವುದೇ ಮೊದಲಾದ ರೀತಿಗಳು ಕೆಲವರಿಗೆ ಹಾಸ್ಯದವಾಗಿ ತೋರುವವು. ಇಷ್ಟೆಲ್ಲಾ ಆಡಂಬರದಿಂದ ಕಾರ್ಯಾರಂಭವನ್ನು ಮಾಡಿದಾಗ್ಯೂ ಇದುವರೆಗೂ ಹಣ ಸಂಗ್ರಹವಾಗಲಿಲ್ಲ. ಎಲ್ಲವೂ ಸುಮ್ಮನೆ ಹೋಗುತ್ತಿದ ಹಾಗಾಯಿತೇ ಹೊರತು ಸ್ಥಿರವಾದ ಕಾರ್ಯವೇನೂ ನಡೆಯಲಿಲ್ಲವೆಂದು ಆಕ್ಷೇಪಿಸುವರು. ಇವರು ಮಾಡುವ ಈ ಆಕ್ಷೇಪಣೆಯಲ್ಲಿ ಸ್ವಲ್ಪ ಆಧಾರವು ಇಲ್ಲದೆ ಇಲ್ಲ. ಏಕೆಂದರೆ, ಈ ಕಾರ್ಯವು ಸಂಪೂರ್ಣವಾಗಿ ವಿದ್ಯಾರ್ಥಿಗಳವರಕ್ಕೆ ಒಪ್ಪಿಸಿಕೊಡತಕ್ಕ ಕಾರ್ಯವಲ್ಲ. ವಿದ್ಯಾರ್ಥಿಗಳ ಮೊದಲನೇ ಕರ್ತವ್ಯವು ವಿದ್ಯಾಭ್ಯಾಸಂಗವೇ ಆದರೂ ಕೂಡ ಅವರಿಗೆ ಸರ್ಕಾರೀ ನೌಕರಿಗಳ ಮೇಲೆ ದೃಷ್ಟಿ ಬಿಡದೆ ದೇಶದ ಅಭಿವೃದ್ಧಿಗೆ ಹೇತುವಾದ ಕೈಗಾರಿಕೆಯ ಅಭಿವೃದ್ಧಿಯ ವಿಷಯದಲ್ಲಿ ಇವರ ಮನಸ್ಸು ಬೀಳುವ ಹಾಗೆ ಈಗಲೇ ಇವರ ಲಕ್ಷ್ಯಕ್ಕೆ ಇದನ್ನು ತರುವುದರಲ್ಲಿ ಪ್ರಯೋಜನವಿದೆಯೆಂಬುದನ್ನು ಯಾರೂ ಆಕ್ಷೇಪಿಸಲಾರರು. ಕೈಗಾರಿಕೆಯ ಉದ್ಯೋಗವು ಮಾನಕ್ಕೆ ಕಡಮೆಯಾದುದಲ್ಲವೆಂಬುದನ್ನು ವಿದ್ಯಾರ್ಥಿಗಳು ಈಗಲೆ ತಿಳುವಳಿಕೆಗೆ ತಂದುಕೊಳ್ಳುವದು ಒಳ್ಳೇದು. ಇದಲ್ಲದೆ ಕೈಗಾರಿಕೆಯನ್ನು ಉತ್ಕೃಷ್ಟವಾದ ರೀತಿಯಲ್ಲಿ ನಡಸುವುದಕ್ಕೆ ಮೊದಲು ಯೋಗ್ಯವಾದ ವಿದ್ಯೆಯನ್ನು ಕಲಿಯುವುದು ಆವಶ್ಯಕವೆಂಬುದನ್ನು ಇವರು ಗ್ರಹಿಸತಕ್ಕದ್ದು. ಇವರು ವಿದ್ಯಾಭ್ಯಾಸಗದಲ್ಲೇ ಹೆಚ್ಚು ಶ್ರದ್ಧೆಯನ್ನಿಟ್ಟು ಓದುವವರಾಗಿದ್ದು ತಿಂಗಳಿಗೊಂದಾವೃತ್ತಿ ಚಂದಾ ವಸೂಲ್ಮಾಡುವುದಕ್ಕೆ ಹೊರಟು ಉತ್ತರೋತ್ತರ ತಮಗೇ ಸಹಾಯಕವಾಗಿ ಪರಿಣಮಿಸತಕ್ಕಂಥ ಈ ನ್ಯಾಷನಲ್ ಫಂಡಿಗಾಗಿ ಕೆಲಸಮಾಡುವುದು ಉತ್ತಮವು. ವಿದ್ಯಾರ್ಥಿಗಳು ಇನ್ನೆಷ್ಟೇ ಮಾಡಿದಾಗ್ಯೂ ನಮ್ಮ ಪುರಜನಗಳು ಆರಂಭ ಮಾಡಿರುವ ಈ ಮಹಾ ಕಾರ್ಯವು ಆಲೋಚನಾಪರರಾದಂಥ ವಿವೇಕಿಗಳಾದ ದೊಡ್ಡವರು ಮಾಡಿದಲ್ಲದೆ ನೆರವೇರಲಾರದು. ಇದುವರೆಗೂ ನಡಸಿದ ತಮಾಷೆಯೂ ವಾಗ್ವೈಭವವೂ ಸಾಕು. ಮುಂದೆಯಾದರೋ ಚನ್ನಾಗಿ ಆಲೋಚಿಸಿ ಕಂಡುಹಿಡಿದ ಮಾರ್ಗವನ್ನನುಸರಿಸಿ ನಿಶ್ಶಬ್ದವಾಗಿ ಕಾರ್ಯಸಾಧನೆಯನ್ನು ಮಾಡುವ ಕಾಲವು ಬಂದೊದಗಿದೆಯೆಂದು ತಿಳಿಯತಕ್ಕದ್ದು.

ಈ ಫಂಡಿಗೆ ನಮ್ಮ ಶ್ರೀಮನ್ಮಹಾರಾಜರವರನ್ನು ಪೋಷಕರಾಗುವಂತೆ ಕೇಳಿಕೊಂಡುದಕ್ಕೆ ಅವರು ಪಾಲಿಸಿದ ಉತ್ತರವು ಸ್ವಭಾವಸಿದ್ಧವಾಗಿಯೇ ಇದ ಈ ಭಾಗದಲ್ಲಿ ಕಾರ್ಯತಃ ಇಷ್ಟನ್ನು ಮಾಡಿದ್ದೇ ತೋರ್ಪಡಿಸಿದರೆ, ಅನಂತರ ನಿಮಗೆ ಸಹಾಯಮಾಡ ವರೋ ಇಲ್ಲವೋ ನಾನು ಹೇಳುವೆನು" ಎಂಬುದೇ ಮಂತಂವರ ಅಭಿಪ್ರಾಯವು. ಇದು ಕೇವಲ ಬುದ್ಧಿ ಯೂ ವಿಚಾರಶೀಲರೂ ಆಗಿರುವಂಥವರೇ ಹೇಳತಕ್ಕ ವಾದ ಉತ್ತರವೆಂದು ಸರ್ವರೂ ಗ್ರಹಿಸಬಹುದು

ನಮ್ಮ ಪುರಜನಗಳು ಆರಂಭಿಸಿರುವ ಈ ಕಾರ್ಯ ನಮಗೆ ತೋರುವ ಒಂದು ಸಂಗತಿಯನ್ನು ಇಲ್ಲಿ ಬರೆಯುತ್ತೇವೆ. ಅದೇನೆಂದರೆ—ಫಂಡಿನ ಪ್ರೋತ್ಸಾಹ ಉದ್ದೇಶಿಸಿರುವ ಕೆಲವು ಸಂಗತಿಗಳು ಪ್ರಕೃತದಲ್ಲಿ ವಲ್ಲವೆಂದು ನಮಗೆ ತೋರುತ್ತದೆ. ಫಂಡಿನಲ್ಲಿ ರುವ ಹಣವು ಬಹಳವಾಗಿಲ್ಲವಾದ್ದರಿಂದ ವಿದ್ಯಾರ್ಥಿಗಳನ್ನು ಜಪಾನಿಗಾದರೂ ಅಮೆರಿಕಕ್ಕಾದರೂ ಕಳುಹಿಸುವದು ವಲ್ಲ. ಹಾಗೆ ಕಳುಹಿಸಬೇಕಾದರೆ ಫಂಡಿನ ವರ್ಷಾಂ ಆದಾಯವು ೪೦೦೦ ರೂಪಾಯಿಗಳಿಗೆ ಕಡಿಮೆಯಾಗಿರ ಬು ಫಂಡಿನ ಆದಾಯವು ಇಷ್ಟು ಹೆಚ್ಚಾಗಿಲ್ಲದೆ ಇರ ಸಂಸ್ಥಾನದಲ್ಲಿ ಉತ್ಪನ್ನವಾಗತಕ್ಕ ವ್ಯವಸಾಯ ಸಂಬಂಧವಾದ ವಸ್ತುಪ್ರದರ್ಶನವನ್ನು ಆಗಮಾಡುವದರಲ್ಲಿ ಅದನ್ನು ವಿನಿಯೋಗಿಸಿದರೆ ಉತ್ತಮವೆಂದು ನಮಗೆ ತೋರುತ್ತದೆ. ಒಳ್ಳೊಳ್ಳೇ ಜಾತಿಯ ದನ, ಹೋರಿ, ಕುರಿ, ಆಡು ಕುದುರೆ ಇವುಗಳನ್ನು ಒಂದೆಡೆಯಲ್ಲಿ ಸೇರಿಸಿ ಗಳ ಲಕ್ಷಣಗಳ ಮೇರೆಗೆ ಬಹುಮಾನಗಳನ್ನು ಮಿಸಿ ಕೊಟ್ಟರೆ ಹಣವೂ ಹೆಚ್ಚಾಗಿ ವ್ಯಯವಾಗ ದು, ವ್ಯವಸಾಯರಿಗೂ ಪ್ರೋತ್ಸಾಹಕರವಾಗುವುದು, ವ್ಯವಸಾಯಾಭಿವೃದ್ಧಿಗೂ ಸಹಾಯವಾಗಿರುವುದು.

ಇಂಡಿಯಾ ದೇಶದ ಹೀನಸ್ಥಿತಿಗೆ ಕಾರಣವೇನು.

ಹಿಂದೂ ಲೇಖಕರು ಸ್ವಾಮಿ ಮಾಧವಾನಂದರವರು ಮಾಡಿ ನ್ಯಾಸಗಳ ವಿಷಯದಲ್ಲಿ ಬರೆದು ಕಳುಹಿಸಿದ ಲೇಖನವನ್ನು ಪತ್ರಿಕೆಯಲ್ಲಿ ಪ್ರಕಟಿಸಿದ್ದೇವಷ್ಟೆ. ಇವರು ಹೇಳಿರುವದರೊಳ ಒಂದೆರಡು ಮಾತುಗಳನ್ನು ಹೇಳಬೇಕೆಂದಿದ್ದೇವೆ

ವೇದವು ಪೌರುಷೇಯವೋ ಅಪೌರುಷೇಯವೋ ಎಂಬ ಸಂ ನ್ನು ಚರ್ಚಿಸುವದಕ್ಕೆ ಇಲ್ಲಿ ಅವಕಾಶವಿಲ್ಲ. ಶಾಸ್ತ್ರಕಾರರು ಪಕ್ಷಗಳನ್ನು ಹಿಡಿದು ಅನೇಕ ಶತಮಾನಗಳಿಂದಲೂ ವಾದಿ ಬಂದರೂ ಇತ್ಯರ್ಥವಾಗಿಲ್ಲ. ಈ ವಿಷಯದಲ್ಲಿ ನಮ್ಮ ಅಭಿ ಯನ್ನು ಮಾತ್ರ ಸೂಚಿಸುವೆವು. ಮನುಷ್ಯರಿಂದ ಬರೆಯಲ್ಪ ಡುವ ಪುಸ್ತಕವಾದರೂ ಉಂಟಾಯಿತೆಂದು ಸಾಧಿಸುವದು ಬಹು ವಿರೋಧವಾದ ಸಂಗತಿ. ಮತ್ತು ವೇದಗಳನ್ನು ಮನುಷ್ಯರು ಬರೆ ದರೆಂದು ಸಿದ್ಧಾಂತ ಪಡಿಸುವದಕ್ಕೆ ಯಾವ ಆಧಾರವೂ ಇಲ್ಲ ಇಷ್ಟು ದೃಢವಾಗಿ ಹೇಳುತ್ತೇವೆ. ವೇದಗಳು ಅಪೌರುಷೇಯವೆಂದು ಸಾಧಿಸುವ ಅಭಿಪ್ರಾಯವು ಈಚೀಚೆಗೆ ಉಂಟಾಯಿತೇ ಹೊರ ದ ಋಷಿಗಳು ಸೂಕ್ತಗಳನ್ನು ಬರೆದವರಲ್ಲಿ ಇಲ್ಲವೇ ಇಲ್ಲವೆಂಬುದು ಆ ದರೆ ಗೊತ್ತಾಗುತ್ತದೆ. ಅವರು ಆಯಾ ಋಕ್ಕುಗಳನ್ನು ಬರೆ ಹಾಗೆ ಬರೆದಿದ್ದನ್ನು ಕೆಲವೆಡೆಗಳಲ್ಲಿ ಇದೊಂದು ಹೊಸ ಎಂದೂ ಹೇಳಿರುವರು. ಈ ಅಭಿಪ್ರಾಯಕ್ಕಾಧಾರವಾಗಿ ಎರಡು ವಾಕ್ಯಗಳನ್ನು ಮಾತ್ರ ಇಲ್ಲಿ ಬರೆಯುತ್ತೇವೆ. ಋಗ್ವೇದ 0 ದಲ್ಲಿ :—ಇಮಾಂ ತೇ ವಾಚಂ ವಸೂಯಂತ ಆಯವೋ ನಧೀರಃ ಸ್ವಪಾ ಅತಕ್ಷಿಷುಃ ॥ ಇದರ ಅಭಿಪ್ರಾಯ—ಸಮರ್ಥ ರಥವನ್ನು ನಿರ್ಮಿಸುವ ಪ್ರಕಾರ ಮನುಷ್ಯರು ಐಶ್ವರ್ಯ ಪೇಕ್ಷಿಸಿ ನಿನಗಾಗಿ ಈ ಸ್ತೋತ್ರವನ್ನು ನಿರ್ಮಿಸಿದ್ದಾರೆ. ಋ VII 15, 4 ದಲ್ಲಿ—ಯೇ ಚ ಪೂರ್ವೇ ಋಷಯೋ ಯೇ ಚ ಇಂದ್ರ ಬ್ರಹ್ಮಾಣಿ ಜನಯಂತ ವಿಪ್ರಾಃ ॥ ಅಭಿಪ್ರಾಯ —ಪೂರ್ವಿಕರೂ ಆಧುನಿಕರೂ ಆದ ಋಷಿಗಳು ಸ್ತೋ ಉತ್ಪತ್ತಿ ಮಾಡುತ್ತಾರೆ. ಕ್ರೈಸ್ತಮತಸ್ಥರ ವೇದ ಗ್ರಂಥ ಎಂಬುದರಲ್ಲಿ ಅಡಗಿರುವ ಬೇರೆ ಬೇರೆ ಪುಸ್ತಕಗಳು ಬೇರೆ ಮನುಷ್ಯರಿಂದಲೇ ಬರೆಯಲ್ಪಟ್ಟವೆಂದು ಕ್ರೈಸ್ತರು ನಂಬಿದ್ದಾರೆ ಆಧಾರವಾಗಿ ಆ ವೇದದಲ್ಲೇ ಹೇಳಿರುವುದು ಏನೆಂದರೆ—ಅವಿ ಕ್ರೈಸ್ತರಿಗೆ ಸದ್ಬುದ್ಧಿಕರು ದೇವರ ವಾಕ್ಯಗಳನ್ನು ನುಡಿದರು. ಮಾತಿನ ಪ್ರಕಾರ ವೇದವಚನಗಳಲ್ಲಿ ದೇವಾತ್ಮಪ್ರೇರಣೆಯೂ ಕೃತ್ಯವೂ ಕಾಣುತ್ತಿರುವದಕ್ಕಾಗಿ ವಿಶೇಷವಾಗಿರುವವೆಂದು ಬಳಿಯ ದೆ

ಭರತಖಂಡದಲ್ಲಿ ವಿದ್ಯೆಯೂ ತಿಳುವಳಿಕೆಯೂ ಅಭಿವೃದ್ಧಿ ಹೋಗಲು ವೇದವು ಅನಾದಿಯಾದದ್ದು, ಅಪೌರುಷೇಯವಾದು ಎಂದು ಕೆಲವರು ಸಾಧಿಸತಕ್ಕ ಬೋಧನೆಯು ಅಬದ್ಧವಾದದ್ದೆಂ ಈ ಬೋಧನೆಯನ್ನು ಈಚೀಚೆಗೆ ಕೆಲವರು ಅನಾವಶ್ಯಕವಾಗಿ ಕೊಂಡರೆಂಬುದೂ ತಿಳಿಯದೆ ಇರಲಾರರು

ವೇದಗಳಲ್ಲಿ ಸಕಲ ಭೌತಿಕ ಶಾಸ್ತ್ರಗಳೂ ಅಡಕವಾಗಿವೆ ಆ ಧನಿಕರು ನೂತನವಾಗಿ ಕಂಡು ಹಿಡಿಯತಕ್ಕ ವಿಷಯ ಅವುಗಳಲ್ಲಿ ಬರೆದಿವೆ ಎಂತಲೂ ಅನೇಕರು ಹೇಳತೊಡ ಗಿದ್ದಾರೆ. ಹೀಗೆ ಹೇಳತಕ್ಕವರ ಯೋಗ್ಯತೆಯೇನೆಂದು ವಿಚಾರಿಸಿದರೆ ಅವರಿಗೆ ಆ ಶಾಸ್ತ್ರಗಳೇನೆಂಬುದೂ ಗೊತ್ತಿಲ್ಲ. ಅವುಗಳಲ್ಲಿ ಯಾವ ಶಾಸ್ತ್ರವನ್ನಾದರೂ ತೆಗೆದುಕೊಂಡು ಯೂನಿವರ್ಸಿಟಿ ಪರೀಕ್ಷಕರು ಕೊಡತಕ್ಕ ಪ್ರಶ್ನೆಗಳಿಗೆ ಉತ್ತರವನ್ನು ಕೊಟ್ಟು ತೇರ್ಗಡೆಯನ್ನೂ ಹೊಂದಲಾರರು. ಈಗ ಇಂಡಿಯಾ ದೇಶದಲ್ಲಿ ಪಾಶ್ಚಾತ್ಯ ಭಾಷೆಯಾವು ದನ್ನೂ ಅರಿಯದ ಸಂಸ್ಕೃತ ಪಂಡಿತರನ್ನೆಲ್ಲಾ ಒಂದೆಡೆಯಲ್ಲಿ ಸೇರಿಸಿ ಅ ವರ ಮುಂದೆ ವಿದ್ಯುಚ್ಛಕ್ತಿಯಿಂದ ನಡೆಯುವ ಅತಿ ಸಾಧಾರಣವಾದ ಯಂ ತ್ರವೊಂದನ್ನಿರಿಸಿ ಇದರ ಮೂಲವನ್ನು ವಿವರಿಸಿ ಹೇಳಿರೆಂದು ನೇಮಿಸಿ ದರೆ ಅವರು ಸಂಸ್ಕೃತದಲ್ಲಿರುವ ವೇದಶಾಸ್ತ್ರಪುರಾಣೇತಿಹಾಸಗಳನ್ನೆ ಲ್ಲಾ ಬಲ್ಲವರೇ ಆಗಿದ್ದಾಗ್ಯೂ ಕೇವಲ ಭೌತಿಕ ಶಾಸ್ತ್ರಕ್ರಮಕ್ಕನು ಸಾರವಾಗಿ ನಿರ್ಮಿಸಲ್ಪಟ್ಟಿರುವ ಈ ಯಂತ್ರದ ಲಕ್ಷಣವನ್ನು ಎಷ್ಟು ಮಾತ್ರಕ್ಕೂ ತಿಳಿಸಲಾರರೆಂದು ನಾವು ಖಂಡಿತವಾಗಿ ಹೇಳಬಲ್ಲೆವು ವೇದಗಳಲ್ಲಿ ಸಕಲ ಶಾಸ್ತ್ರಗಳೂ ಅಡಗಿವೆಯೆಂಬ ಮಾತು ಸುಳ್ಳು ಅವುಗಳಲ್ಲಿ ಅಡಗಿರುವಂಥಾದ್ದು ಕೇವಲ ಆತ್ಮವಿಚಾರವೇ ಹೊರತು ಅದು ಸಕಲ ಭೌತಿಕ ಶಾಸ್ತ್ರಗಳ ಸಂಗ್ರಹವೆಂದು ಹೇಳುವದಕ್ಕೆ ಆಧಾರವೇ ಇಲ್ಲ. ಮತ್ತು ಅಂಥ ಮಾತನ್ನು ನಂಬುವದಕ್ಕೂ ಆಗುವ ದಿಲ್ಲ. ಯಾಕೆಂದರೆ ಮನುಷ್ಯನ ತಿಳುವಳಿಕೆಯೂ ನಿರಂತರವಾಗಿ ಹೆ ಚ್ಚುತ್ತಲೇ ಇರಬೇಕೆಂದು ಸೃಷ್ಟಿಕರ್ತನಾದ ಭಗವಂತನು ನಿಯಾಮಕ ಮಾಡಿದ್ದಾನೆ. ಈ ನಿಯಾಮಕಕ್ಕೆ ಅನುಸಾರವಾಗಿ ದಿನದಿನಕ್ಕೆ ಮನು ಷ್ಯರ ತಿಳುವಳಿಕೆಯು ಹೆಚ್ಚುತ್ತಲೇ ಇದೆ. ಹೀಗಿರುವಲ್ಲಿ ಸಾವಿರಾರು ವರ್ಷಗಳ ಹಿಂದೆ ನಿರ್ಮಿತವಾದ ವೇದಗಳಲ್ಲಿ ಸಕಲ ಶಾಸ್ತ್ರಗಳೂ ಅ ಡಗಿವೆಯೆಂದು ಹೇಳುವ ಮಾತನ್ನು ನಿಜವೆಂದು ನಂಬುವದು ಹ್ಯಾಗೆ?

ಧರ್ಮಂಜಿಜ್ಞಾಸಮಾನಾನಾಂಪ್ರಮಾಣಂಶ್ರುತಿಃ ॥ ಎಂದರೆ ಧರ್ಮ ವನ್ನೇ ವಿಚಾರಿಸತಕ್ಕವರಿಗೆ ಶ್ರುತಿಯು ಪ್ರಮಾಣವಾಗಿದೆಯೇ ಹೊರ ತು ಇತರ ವಿಷಯಕ್ಕೆ ಅಲ್ಲವು ಎಂದು ಮನು ಹೇಳುತ್ತಾನೆ

೩. ಪರದೇಶಸ್ಥರು ಬಂದು ಈ ದೇಶವನ್ನಾಕ್ರಮಿಸಿಕೊಂಡಿರುವದ ರಿಂದಲೂ ಅನ್ಯ ಮತಗಳು ಇಲ್ಲಿ ಪ್ರಬಲವಾಗುತ್ತಿವೆಯಾದುದರಿಂದ ಲೂ ಈ ಭರತಖಂಡವು ಹೀನಸ್ಥಿತಿಗೆ ಬರಬೇಕಾಯಿತೆಂದು ಸಾಧಿಸುವ ದು ಸಹ ನಿಜವಲ್ಲ. ಮುಸಲ್ಮಾನರು ಈ ದೇಶಕ್ಕೆ ಕ್ರಿ ಶ ೧೦ನೆಯ ಶತಮಾನಕ್ಕೆ ಹಿಂದೆ ಬರಲೇ ಇಲ್ಲ. ಕ್ರಿ ಶ ೫ನೆಯ ಶತಮಾನದಿಂದ ಹತ್ತನೆಯ ಶತಮಾನದವರೆಗೂ ಇಂಡಿಯಾ ದೇಶಕ್ಕೆ ಅನ್ಯ ದೇಶೀಯ ರ್ಯಾರೂ ದಂಡೆತ್ತಿ ಬರಲಿಲ್ಲ. ಆ ಕಾಲದಲ್ಲಿ ಈ ದೇಶದ ಹಿಂದೂ ಮ ತವು ಸ್ವೇಚ್ಛೆಯಾಗಿ ವೃದ್ಧಿಯನ್ನೈದುವದಕ್ಕೆ ಬಹು ಒಳ್ಳೇ ಅವಕಾಶವ ನ್ನು ಹೊಂದಿತ್ತು. ಆ ಕಾಲದಲ್ಲಿ ಹಿಂದೂ ದೇಶದ ವಿದ್ಯಮಾನವು ಹ್ಯಾ ಗಿತ್ತೆಂದು ಚರಿತ್ರಕಾರರನ್ನು ಕೇಳಿದರೆ ಏನು ಹೇಳುವರು? ಆ ಕಾಲದ ಲ್ಲಿ ಹಿಂದೂ ದೇಶವು ಅನೇಕಾನೇಕ ಸಣ್ಣ ರಾಜ್ಯಗಳಾಗಿ ಒಡೆದು ಅಂತಃಕಲಹಗಳಿಂದ ತುಂಬಿ ಮಹಾ ದುರವಸ್ಥೆಯನ್ನು ಹೊಂದಿತ್ತು. ಮತ್ತು ಅದಕ್ಕೆ ಮುಂಚೆ ಪ್ರವರ್ಧಮಾನಸ್ಥಿತಿಯಲ್ಲಿದ್ದ ಅನೇಕ ಕೌಶ ಲ ವಿದ್ಯೆಗಳು ಕ್ಷೀಣದೆಶೆಯನ್ನು ಹೊಂದಿದವು ಎಂದು ತಿಳಿದು ಬರುತ್ತದೆ.

ಮೊನ್ನೆ ದಿನ ಆಗ್ರಾ ನಗರದಲ್ಲಿ ಅಫ್ಘಾನಿಸ್ಥಾನದ ಅಮೀರರ ಮುಂ ದೆ ಬ್ರಿಟಿಷರ ಸೈನ್ಯವನ್ನು ಪ್ರಾರ್ದರ್ಶನೆ ಮಾಡಿಸಿದರಷ್ಟೆ. ಅದೆಲ್ಲಾ ತೀರಿದನಂತರ ಅವರು ಸ್ವಂತ ಸೇನಾಪತಿಗಳಿಂದಲೂ ಜುದ್ದೇದಾರರಿಂದ ಲೂ ಕೂಡಿ ಏಕಾಂತವಾಗಿರುವಾಗ ಅವರನ್ನು ಕುರಿತು—ನನ್ನ ಸೈನ್ಯ ವೇ ಭೂಮಂಡಲದಲ್ಲೆಲ್ಲಾ ಅತ್ಯುತ್ತಮವಾದುದ್ದೆಂದು ನೀವು ಹೇಳಿದಿ ರಲ್ಲ? ಇದೋ ಈ ಇಂಡಿಯಾ ದೇಶದ ಸೈನ್ಯದ ಒಂದು ತುಕಡಿಗೂ ನನ್ನ ಸೈನ್ಯವೆಲ್ಲಾ ಸೇರಿಸಿದರೂ ಸರಿಹೋಲುವದಿಲ್ಲ. ಈ ಇಂಡಿಯಾ ಸೈನ್ಯವಾದರೋ ಬ್ರಿಟಿಷ್ ಚಕ್ರಾಧಿಪತ್ಯದ ಸೈನ್ಯದಲ್ಲಿ ಒಂದು ಚಿಕ್ಕ ಭಾಗವಷ್ಟೆ. ಬ್ರಿಟಿಷ್ ಸೈನ್ಯವಾದರೋ ಭೂಲೋಕದ ಸೈನ್ಯಗಳಲ್ಲಿ ಅತ್ಯಲ್ಪವಾದದ್ದು. ಇಂತಿರುವಲ್ಲಿ ನನ್ನ ಸೈನ್ಯಕ್ಕೆ ಸಮಾನವಾದದ್ದು ಬೇರೆ ಯಾವದೂ ಇಲ್ಲವೆಂದು ನೀವು ಹೇಳಿದ್ದಕ್ಕೆ ಆಧಾರವೇನು? ನೀವು ಚೆನ್ನಾಗಿ ವಿವರಿಸದಿದ್ದರೆ ಸುಮ್ಮನೆ ಬಿಡಲಾರೆನು ಅಂದರಂತೆ ಇದೇ ಪ್ರಕಾರ ಈಗಲೂ ಅನೇಕರು ಹಿಂದೂ ದೇಶದಲ್ಲಿರುವ ಜನಗಳಿ ಗೆ—ನಮ್ಮಷ್ಟು ಬುದ್ಧಿಶಾಲಿಗಳಾದ ಜನರು ಭೂಲೋಕದಲ್ಲೇ ಇಲ್ಲ. ನಮ್ಮ ಮತ ನಾಗರಿಕತೆಗಳಿಗಿಂತ ಶ್ರೇಷ್ಠವಾದವುಗಳು ಇನ್ನೆಲ್ಲಿಯೂ ಇಲ್ಲ ಎಂದು ಹೇಳುತ್ತಾ ತಿರುಗುವರು. ಯಾರು ಚೆನ್ನಾಗಿ ಆಲೋಚಿ ಸುವುದಿಲ್ಲವೋ ಅವರೂ ಯಾರು ಏನೂ ತಿಳಿಯದವರಾಗಿದ್ದಾರೋ ಅಂಥವರೂ ಇವರ ಮಾತನ್ನು ಕೇಳಿ ನಿಜವೆಂದು ನಂಬಿ ಅವರನ್ನು ಬಹಳವಾಗಿ ಶ್ಲಾಘಿಸುತ್ತಾರೆ. ಆದರೆ ವಿವೇಕಿಗಳಾದವರು ಅಫ್ಘಾನಿ ಸ್ಥಾನದ ಅಮೀರರಂತೆ ವಿಚಾರಶೀಲರಾಗಿ ತಮ್ಮನ್ನು ಸ್ತುತಿಸುವಂಥವ ರನ್ನು ನೋಡಿ—ನೀವು ಹೇಳುವದು ನಿಜವಲ್ಲ. ನಾವು ಬಹು ಕಾಲ ದಿಂದ ಜಡರಾಗಿದ್ದು ಈಗತಾನೇ ಎಚ್ಚತ್ತಿದ್ದೇವೆ. ನಮ್ಮ ದೇಶವನ್ನೂ ಮತವನ್ನೂ ಉಚಿತ ಸ್ಥಿತಿಯಾರ್ಥವನ್ನು ಈಗತಾನೇ ತಿಳಿಯುತ್ತಲಿ ದ್ದೇವೆ. ನಾವು ಇನ್ನೂ ಅನೇಕ ಬದಲಾವಣೆಗಳನ್ನೂ ಅಭಿವೃದ್ಧಿಗಳ ನ್ನೂ ಮಾಡಿಕೊಳ್ಳಬೇಕಾಗಿದೆ. ನಾವು ಮತ ವಿಷಯಗಳಲ್ಲಿರುವ ದೋಷಗಳನ್ನು ತಿದ್ದಿಕೊಳ್ಳಬೇಕು. ಒಬ್ಬನೇ ಆಗಿರುವ ದೇವರನ್ನು ಆರಾಧಿಸುವಂತೆ ನಮ್ಮ ಮಕ್ಕಳಿಗೆ ಕಲಿಸಿಕೊಡಬೇಕು. ನಮ್ಮೊಳಗಿ ರುವ ಅನೇಕ ಹೀನ ಪದ್ಧತಿಗಳನ್ನು ತಿರಸ್ಕರಿಸಬೇಕು. ಸತ್ಯವನ್ನೂ ಪರಿಶುದ್ಧತೆಯನ್ನೂ ಧೈರ್ಯವನ್ನೂ ಅನುಷ್ಠಾನಕ್ಕೆ ತರಬೇಕು. ಹೀಗೆ ಮಾಡಿದರೇನೇ ನಮ್ಮ ದೇಶವು ಪುನಃ ಉಚ್ಛ್ರಾಯಸ್ಥಿತಿಗೆ ಬರು ವದು ಎಂದು ಹೇಳುವರು

ದೇಶಾಂತರದ ವಿಶೇಷ ಸಮಾಚಾರ.

ಜಮೇಕ ದ್ವೀಪದ ರಾಜಧಾನಿಯಾದ ಕಿಂಗ್ಸ್‌ಟನ್ ನಗರವು ಅಲ್ಲಿ ನಡೆದ ಭೂಕಂಪನದಿಂದ ನಷ್ಟವಾದುದರ ವಿಷಯವನ್ನು ಅಲ್ಲಿ ಪ್ರತ್ಯ ಕ್ಷದರ್ಶಿಗಳಾಗಿದ್ದ ದೊಡ್ಡ ಮನುಷ್ಯರು ಹೇಳಿರುವುದನ್ನು ಇಲ್ಲಿ ಸಂಗ್ರ ಹಿಸಿ ಬರೆಯುತ್ತೇವೆ —

ಕಳೆದ ತಿಂಗಳ ೧೪ ರಲ್ಲಿ ಇಂಗ್ಲಾಂಡಿನಿಂದ ಕೆಲವು ದೊಡ್ಡ ಮನುಷ್ಯರು ಆ ಕಿಂಗ್ಸ್‌ಟನ್ ನಗರದಲ್ಲಿ ವ್ಯವಸಾಯ ಸಂಬಂಧವಾದ ಒಂದು ಮಹಾಸಭೆಯನ್ನು ಜರುಗಿಸಬೇಕೆಂದು ಹೋಗಿದ್ದರು. ಅವರ ಲ್ಲಿ ಸರ್ ಜೇಂಸ್ ಫೆರ್ಗಸ್ ಎಂಬವರು ಪ್ರಾಣಿ ಶಾಲಿವೆಯ ವಿಷ ಯದಲ್ಲಿ ಅತಿ ಮನೋಹರವಾದ ಒಂದು ಉಪನ್ಯಾಸವನ್ನು ಮಾಡಿ ದರು. ಇದಾದ ಒಂದು ಗಂಟೆಯ ಹೊತ್ತಿನಲ್ಲೇ ಭೂಮಿಯು ಆಕಸ್ಮಿ ಕವಾಗಿ ಗುಡುಗಿತು. ಅವರು ನಿಂತಿದ್ದ ಮಂದಿರವು ಕುಸಿದು ಬಿದ್ದು ಅವರು ಭೂಗತರಾದರು. ಮಿ॥ ಹೇರ್ಟ್ ಎಂಬವರು ಮಧ್ಯಾಹ್ನದ ಊ ಟವಾದ ಮೇಲೆ ಸ್ನೇಹಿತರೊಬ್ಬರನ್ನು ಕರೆದುಕೊಂಡು ಪೋಸ್ಟಾಫೀ ಸನ್ನು ನೋಡುವದಕ್ಕೆ ಹೋಗಿದ್ದು ಹಿಂದಿರುಗಿ ಬರುವಾಗ್ಯೆ ದಾರಿ ಯಲ್ಲಿ ಆಕಸ್ಮಿಕವಾಗಿ ಭೂಕಂಪವುಂಟಾಗಲು ಅವರ ಮುಂದೆ ಒಂದೇ ಒಂದು ಗಜದ ದೂರದಲ್ಲಿ ಬೀದಿಗಡ್ಡಲಾಗಿ ಪರ್ವತಶಿಖರದಂತೆ ಒಂದು ದೊಡ್ಡ ಮನೆಯು ಕಡುಕೊಂಡು ಬಿತ್ತು. ಅವರ ಹಿಂದೆಯೂ ಪಕ್ಕ ದಲ್ಲೂ ಮನೆಗಳು ಧಡುಮ್ಮನೆ ಬಿದ್ದು ರಸ್ತೆಯನ್ನೇ ನಿರ್ನಾಮಮಾಡಿ ಬಿಟ್ಟವು. ಕೂಡಲೆ ಆ ಪ್ರಾಂತ್ಯವೆಲ್ಲಾ ಗಾಢಾಂಧಕಾರಮಯವಾಯಿ ತು. ಸುಮಾರು ೫ ನಿಮಿಷಗಳ ವರೆಗೂ ಅಂತರಿಕ್ಷವೆಲ್ಲಾ ಗಾರೆ ಕಲ್ಲು ಮಣ್ಣುಗಳಿಂದ ತುಂಬಿ ಹೋಯಿತು. ಆ ರಾತ್ರಿಯೊಳಗಾಗಿ ಮೂರು ಸಾರಿಗೆ ಎಡವಿಲ್ಲದೆ ಭೂಮಿಯು ಕಂಪಿಸಿತು. ಭೂಕಂಪದ ಸಂ ಗಡಲೇ ಬೆಂಕಿಯೂ ಉತ್ಪನ್ನವಾಗಿ ಪಟ್ಟಣವನ್ನು ದಹಿಸತೊಡಗಿತು. ಕಿಂಗ್ಸ್‌ಟನ್ ನಗರದಲ್ಲಿ ಕೇ॥ ೯೮ ಮನೆಗಳು ನಿರ್ನಾಮವಾದವು. ಆದ ರೂ ಈ ಮನೆಗಳೆಲ್ಲಾ ಪುರಾತನವಾದುವುಗಳಾಗಿಯೂ ಶಿಥಿಲವಾಗಿ ಯೂ ಇದ್ದುವು. ಸುಮಾರು ೧೦೦೦ ಜನರು ಸತ್ತರೆಂತಲೂ ಸುಮಾರು ೯೦ ಸಾವಿರ ಜನಗಳಿಗೆ ಮನೆಗಳೇ ಇಲ್ಲವಾಗಿದೆಯೆಂತಲೂ ತಿಳಿದು ಬಂದಿದೆ. ನಷ್ಟವು ಸುಮಾರು ೩,೦೦,೦೦,೦೦೦ ರೂ॥ ಆಗಬಹುದೆಂದು ಅಂದಾಜಾಗಿದೆ. ಇಂಥ ನಷ್ಟವು ಸುಮಾರು ೨೫೦ ವರ್ಷಗಳಿಂದೀಚೆಗೆ ಆ ದೇಶದಲ್ಲಿ ನಡೆದಿಲ್ಲವೆಂದು ಗೊತ್ತಾಗಿದೆ

ಈ ಅನಾಹುತದಲ್ಲಿ ಸಿಕ್ಕಿ ನಷ್ಟಪಟ್ಟವರಿಗೆ ಆಹಾರಸಾಮಗ್ರಿಗಳ ನ್ನು ಕಳುಹಿಸಿಕೊಡುವದಕ್ಕಾಗಿ ಕ್ಯಾನಡಾ ಸರ್ಕಾರದವರು ೧೦೦೦೦ ಪೌನುಗಳನ್ನೂ ಅಮೆರಿಕದವರೂ ಫ್ರೆಂಚ್ ಸರಕಾರದವರೂ ಸದ್ಯಕ್ಕೆ ಒಂದು ಹಡಗಿನ ತುಂಬಾ ಸರಕನ್ನೂ ಕಳುಹಿಸಿದ್ದಾರೆ

ಒಳದೇಶದ ವೃತ್ತಾಂತಗಳು.

ಈಸಾರಿ "ಬಹುಮಾನದ ಮೇಲಾಟಕ್ಕೆ" ಒಂದೇ ಒಂದು ಲೇ ಖನವು ಬಂತು. ಅದೂ ತೃಪ್ತಿಕರವಾಗಿರಲಿಲ್ಲವಾದದರಿಂದ ಈ ವಾರದ ಬಹುಮಾನವು ಒಬ್ಬರಿಗೂ ದೊರಕುವದಿಲ್ಲ

****

ಘನವನ್ನು ಹೊಂದಿದ ನಮ್ಮ ರೆಸಿಡೆಂಟ್ ಮಿ॥ ಫ್ರೇಜರವರು ರಜಾದ ಮೇಲೆ ಹೋಗುವಾಗ ಕ್ವೆಟ್ಟಾದ ರೆವಿನ್ಯೂ ಕಮಿಷನರ್ ಮಿ॥ ಎ ವಿಲಿಯಂಸ್ ಎಂಬುವರು ಬಂದು ಬದಲಿ ನೋಡುವರು ಎಂದು ವದಂತಿಯುಂಟು

****

ಕಳೆದ ಜನವರೀ ತಿಂಗಳು ೨೫ ನೇ ತಾರೀಖಿನಲ್ಲಿ ೧೦೩ ಜನ ಗಳಿಗೆ ಈ ಸಂಸ್ಥಾನದಲ್ಲಿ ಪ್ಲೇಗ್ ತಗಲಿತು. ೯೩ ಜನಗಳು ಮೃತರಾ ದರು. ಇದೇ ವಾರದಲ್ಲಿ ೧೩ ಜನಗಳು ಈ ಸಂಸ್ಥಾನದಲ್ಲಿ ಕಾಲರಾ ದಿಂದ ಮೃತಪಟ್ಟಿರುತ್ತಾರೆ

****

ರಾಜಧಾನಿಯಲ್ಲಿನ ಮಹಾರಾಣಿಯವರ ಕಾಲೇಜಿನಲ್ಲಿ ಓದಿ ಮೆಟ್ರಿ ಕ್ಯುಲೇಷನ್ ಪರೀಕ್ಷೆಗೆ ಹೋಗಿದ್ದ ಸೌ॥ ರುಕ್ಮಿಣಿ ಅಮ್ಮನವರು ತೇ ರ್ಗಡೆಯನ್ನು ಹೊಂದಿರುತ್ತಾರೆ. ಇವರು ನಮ್ಮ ಡಿ॥ ಕೌ ಜಡ್ಜಾದ ಮಾ॥ ರಾ॥ ಶ್ರೀ ವೆಂಕಟವರದಯ್ಯಂಗಾರರವರ ಪುತ್ರಿ.

****

ಮೈಸೂರಿನ ಗವರ್ನ್‌ಮೆಂಟ್ ಚೀಫ್ ಸೆಕ್ರೆಟರಿಗಳಾಗಿದ್ದ ಮಿ॥ ಟಿ. ಕೆ ವೆಂಕಟವರದ ಐಯ್ಯಂಗಾರ್ಯರವರು ಎರಡು ಸಾವಿರ ರೂಪಾಯಿಗಳ ನ್ನು ಗವರ್ನ್‌ಮೆಂಟ್ ಸೇವಿಂಗ್ಸಿನಲ್ಲಿ ಇಟ್ಟು ಆ ಮೊಬಲಗಿನಿಂದ ಬ ರತಕ್ಕ ಬಡ್ಡಿಯಿಂದ ಬೆಂಗಳೂರು ಸೆಂಟ್ರಲ್ ಕಾಲೇಜಿನ ಒಬ್ಬ ಮ್ಯಾಥ ಮ್ಯಾಟಿಕ್ಸ್ ವಿದ್ಯಾರ್ಥಿಗೆ ಸ್ಕಾಲರ್‌ಷಿಪ್ ಕೊಡಲ್ಪಡುವಂತೆ ಏರ್ಪಡಿಸಿ ರುವುದಾಗಿ ಗೊತ್ತಾಗುತ್ತದೆ

****

ಗುಂಡ್ಲುಪೇಟೆ ತಾಲ್ಲೂಕು ಕಸಬಾ ಟವನಿನಲ್ಲಿ ಹುಟ್ಟಿ ಅದೇ ಸ್ಥಳದ ಆಂಗ್ಲೋವರ್ನಾಕ್ಯುಲರ್ ಸ್ಕೂಲಿನಲ್ಲಿ ಹೆಡ್ಮಾಸ್ತರಾಗಿ ಇಪ್ಪ ತ್ತೆಂಟು ವರುಷಗಳ ಕಾಲ ಏಕನಾಗಿ ಒಂದೇ ಊರಲ್ಲಿ ಉತ್ಸಾಹದಿಂದ ಕೆಲಸ ಮಾಡಿ ವಿದ್ಯಾಭಿವೃದ್ಧಿಯನ್ನುಂಟುಮಾಡಿದ ಮಿ॥ ಜಿ ಶ್ರೀಕಂಠ ಯ್ಯನವರು ಕಳೆದ ಜನವರಿ ೩೦ ನೇ ತಾರೀಖು ಬುಧವಾರ ರಾತ್ರಿ ಸ್ವರ್ಗ ಸ್ಥರಾದ ಸಂಗತಿ ತಿಳಿಸಲು ತುಂಬಾ ವಿಷಾದಪಡಬೇಕಾಗಿದೆ

****

ನಮ್ಮ ಮಹಾರಾಜರವರಿಗೆ ಬೆಂಗಳೂರು ಮಹಾಜನಗಳು ತಾ॥ ೯ ನೇ ಶನಿವಾರದ ದಿನ ಲಾಲ್ ಬಾಗಿನಲ್ಲಿ ಒಂದು ಭಾರಿ ಸತ್ಕಾರವನ್ನು ಮಾಡಿ ಒಂದು ಅಡ್ರೆಸ್ಸನ್ನು ಒಪ್ಪಿಸಿದರು. ಅವರಿಗೆ ಶ್ರೀಮದಿಂಡಿಯಾ ಸಾರ್ವಭೌಮರಿಂದ ಲಭಿಸಿದ ಬಿರುದಿನ ಸಂತೋಷವನ್ನು ಈ ಪ್ರಕಾ ರವಾಗಿ ಬೆಂಗಳೂರಿನ ಪುರಜನಗಳು ಪ್ರದರ್ಶನ ಪಡಿಸಿದರು. ರಾಜ ಧಾನಿಯಲ್ಲಿಯೂ ನಡಿಯಬೇಕೆಂಬ ಉದ್ದೇಶದಿಂದ ಕೆಲವರು ಮಹಾ ಜನಗಳು ಟೌನ್‌ಹಾಲ್ ಬಂಗಲೆಯಲ್ಲಿ ಕಳೆದ ಶನಿವಾರ ಸಭೆ ಕೂಡಿದ್ದರು

****

ಜಾತ್ರೆಗಳ ಕಾಲದಲ್ಲಿ ರೈಲು ಮಾರ್ಗವಾಗಿ ಪ್ರಯಾಣ ಮಾಡತಕ್ಕ ಜನಗಳಿಗೆ ಟಿಕಿಟು ಸುಲಭವಾಗಿ ಸಿಕ್ಕದೆ ಬಹಳ ತೊಂದರೆಯಾಗುವದ ರಿಂದ ಇದನ್ನು ತಪ್ಪಿಸಿ ಸೌಲಭ್ಯವನ್ನು ಕಲ್ಪಿಸಿ ಕೊಡುವ ಬಗ್ಗೆ ಸರ್ಕಾರದವರು ರೈಲ್ವೆ ಅಧಿಕಾರಿಗಳಿಗೆ ತಿಳಿಯಪಡಿಸಬೇಕೆಂದು ಕಳೆದ ಪ್ರಜಾಪ್ರತಿನಿಧಿ ಸಭೆಯಲ್ಲಿ ಕೇಳಿಕೊಂಡ ಪ್ರಕಾರ ಸರ್ಕಾರದವರು ರೈಲ್ವೆ ಅಧಿಕಾರಿಗಳಿಗೆ ತಿಳಿಸಲಾಗಿ ಈಗ ಅವರು ಆಯಾ ಸ್ಟೇಷನುಗಳ ಲ್ಲಿ ೩ ನೇ ಕ್ಲಾಸ್ ಪ್ರಯಾಣಿಕರಿಗೆ ಯಾವಾಗ ಬೇಕಾದರೂ ಅವಾಗ ಟಿಕೆಟುಗಳನ್ನು ಕೊಡಬಹುದೆಂದು ಅಪ್ಪಣೆ ಕೊಟ್ಟಿದ್ದಾರೆ

ಕಳ್ಳರನ್ನು ಹಿಡಿಯುವ ವಿಧ.

ನಾನು ತಾ॥ ೨೫ ನೆ ಶುಕ್ರವಾರದ ದಿನ ಇಲ್ಲಿಗೆ ಸುಮಾರು ೧ ಮೈಲಿ ದೂರವಿರತಕ್ಕ ಹೊಸೂರು ಎಂಬ ಗ್ರಾಮಕ್ಕೆ ನನ್ನ ಸ್ವಂತ ಕೆಲಸದ ಉದ್ದಿಶ್ಯ ಹೋಗಿದ್ದೆನು. ಆಗ ನನಗೆ ತಮಟೆ, ಡಂಡೋಲ್, ವಾಲಗ ಮುಂತಾದ ಶಬ್ದಗಳು ಕೇಳಿಸಿತು. ಅದು ಏನು ಶಬ್ದ ಎಂದು ಆ ಊರಿನವರನ್ನು ಕೇಳಲಾಗಿ ಈ ಊರಲ್ಲಿ ಮಾರಮ್ಮ ಎಂಬ ದೇವತೆಯುಂಟು. ಆ ದೇವತೆಯ ಮೆರವಣಿಗೆಯೆಂದು ಹೇಳಿದರು. ಯಾಕೆ ತೆಗಿಸಿರುತ್ತಾರೆಂದು ನಾನು ಕೇಳಿದೆನು. ಅದಕ್ಕವರು ಹೇಳಿದ್ದೇನಂದರೆ—ಈ ಊರಿನಲ್ಲಿ ವಾಸವಾಗಿರತಕ್ಕ ವಾಜರ ಮುನಿಸ್ವಾಮಿ ಎಂಬಾತನ ಮನೆಯಲ್ಲಿ ಕೊಂಚ ಬಂಗಾರವು ಬೆಳ್ಳಿಯು ಸಹ ಎಲ್ಲಿಯೋ ಹೋಯಿತು. ಆದಕ್ಕಾಗಿ ಅದನ್ನು ಯಾರು ತೆಗೆದುಕೊಂಡಿರುತ್ತಾರೆ ಹೇಳಬೇಕೆಂದು ಮೇಲ್ಕಂಡ ಮಾರಮ್ಮನ ಗುಡಿಗೆ ಹೋಗಿ ಕೇಳಲಾಗಿ ಆ ಮಾರಿ ನೊಡ್ಡ ಮರಳಿ ವಾಸಸ್ಥನಾದ ಕುರುಬರ ದಳ್ಳ ನಂಜಯೆಂಬವನ ಮೈಮೇಲೆ ಬಂದು ಬಹಳವಾಗಿ ಕುಣಿದಾಡಿ ಶಕ್ತಿಯಿಂದ ಸಾಧನೆ ಮಾಡಿ ಮುಗಿದ ಮೇಲೆ ಅಲ್ಲಿದ್ದ ಇತರ ಹಳ್ಳಿ ಜನಗಳು ಅಮ್ಮನವರಿಗೆ ಈ ದಿನವೇನೋ ಕೋಪ ಬಂದಿರುತ್ತೆ, ಆಹಾರ ಸಾಲದು ಎಂದು ಕೋಳಿಗಳೆರಡನ್ನು ತಂದು ಗುಡಿಯ ಮುಂದೆ ಅದನ್ನು ಸಂಹಾರ ಮಾಡಿ ಅಮ್ಮನನ್ನ ಕೇಳಿಕೊಳ್ಳುವದಕ್ಕೆ ಪ್ರಾರಂಭ ಮಾಡಿದರು. ಆಗ ಮೇಲ್ಕಂಡ ಮುನಿಸ್ವಾಮಪ್ಪನ ಪದಿವೆಗಳು ಹೋಗಿರುವ ವಿಚಾರ ಕೇಳುವಲ್ಲಿ ಈ ದಿನ ಸಾಯಂಕಾಲಕ್ಕೆ ನನ್ನ ಮೆರವಣಿಗೆ ವಿಗ್ರಹವನ್ನು ಮೆರಿಸುವರೆ ನಾನು ತೋರಿಸುತ್ತೇನೆಂದು ಹೇಳಿತಂತೆ. ಅದಕ್ಕಾಗಿ ಈಗ ಮೆರಿಸುತ್ತಾರೆಂದು ಹೇಳಿದರು. ಆಗ ನಾನು ಮೆರಿಸತಕ್ಕ ಸ್ಥಳಕ್ಕೆ ಹೋಗಿ ನೋಡುತ್ತಾ ಇರುವಲ್ಲಿ ಆ ದೇವರನ್ನು ನಾಲ್ಕು ಜನ ಹೊತ್ತುಕೊಂಡಿದ್ದರು. ಈ ನಾಲ್ಕು ಜನವು ಹಿಂದಕ್ಕೆ ಮುಂದಕ್ಕೆ ಹೋಗುತ್ತಾ ಅಲ್ಲಿದ್ದ ಒಂದು ನೆಲ್ಲಿನ ಕುಪ್ಪೆಯನ್ನು ತವಿದರು. ಅಲ್ಲಿದ್ದ ಜನಗಳು—ಓಹೋ! ಈ ನೆಲ್ಲಿನ ಕುಪ್ಪೆಯಲ್ಲಿರುತ್ತೆ, ಹಾಗಿಲ್ಲದ ಪಕ್ಷಕ್ಕೆ ಅಮ್ಮನು ಈ ರೀತಿ ತೋರಿಸಲಾರಳು ಎಂದು ಆ ಕುಪ್ಪೆಯನ್ನು ಕಿತ್ತು ಹುಡುಕಿ ನೋಡಿದರು. ಅಲ್ಲಿರಲಿಲ್ಲ. ಆಗ ಅವರೆಲ್ಲರೂ ಭಗ್ನಮನೋರಥರಾಗಿ ದೇವರನ್ನು ಅಲ್ಲಿಯೇ ಇಳಿಸಿ ಆ ದೇವರಿಗೆ ಪೂಜೆ ಮಾಡುವಲ್ಲಿ ಅಮ್ಮನು ಪುನಃ ಮೇಲ್ಕಂಡ ನಂಜಯೆಂಬವನ ಮೈಮೇಲೆ ಬಂತು. ಆಗ ಮುನಿಸ್ವಾಮಿ ಎಂಬಾತನು ಪದಿವೆ ಪತ್ತೆ ಮಾಡಿ ಕೊಡು ಎಂದು ಕೇಳುವಲ್ಲಿ ಅಮ್ಮನು ಹೇಳಿದ್ದೇನಂದರೆ—ಈ ಊರಿಗೆ ದಕ್ಷಿಣ ಭಾಗದಲ್ಲಿರತಕ್ಕ [illegible] ಹುಳಿ [illegible] ಹಾಕಿಟ್ಟಿರುತ್ತಾರೆಂದು ಹೇಳಿತು. ಆಗ ಇದನ್ನೆಲ್ಲಾ ನೋಡುತ್ತಲೂ ಕೇಳುತ್ತಲೂ ಇದ್ದ ಹೊಂಕಟದಾಸಪ್ಪ ಎಂಬಾತನು ದೇವರ ಸಮೀಪಕ್ಕೆ ಹೋಗಿ ತಾಯಿ ಹುಡುಕಿಟ್ಟಿರತಕ್ಕ ಸ್ಥಳವನ್ನು ತಾವೆ ತೋರಿಸಬೇಕೆಂದು ಕೇಳಿದ. ಆಗ ನಂಜಯೆಂಬವನ ಮೇಲೆ ಬಂದಿದ್ದ ಅಮ್ಮನು—ನನ್ನನ್ನು ನೀವೆಲ್ಲರು ಪರೀಕ್ಷಿಸುವದಕ್ಕೆ ಬಂದಿದ್ದೀರಿ ನಾನು ತೋರಿಸುವದಿಲ್ಲವೆಂದು ಮರೆಯಾಯಿತು. ಮುನಿಸ್ವಾಮಪ್ಪನ ಪದಿವೆ ಸಿಕ್ಕಲಿಲ್ಲ. ಆದಿನದ ಪೂಜೆಗಾಗಿ ಸುಮಾರು ೨೫ ರೂಪಾಯಿನ ವರೆಗೂ ಖರ್ಚಾಗಿರುತ್ತೆ. ಇಷ್ಟು ಹೊರ್ತು ಇನ್ನೇನು ಪ್ರಯೋಜನವಿಲ್ಲ. ಇಂಥಾ ನಾಗರಿಕ ಕಾಲದಲ್ಲಿಯೂ ಕೂಡ ಜನಗಳು ಮರುಳಾಗಿ ವೃಥಾ ಖರ್ಚುಗಳನ್ನು ಮಾಡಿ ಮೋಸಹೋಗುತ್ತಾರಲ್ಲ ಎಂಬದಾಗಿ ನಾಗರಿಕರೆಲ್ಲರು ಚಿಂತಿಸಬೇಕಾಗಿ ಇದೆ.

ರಾ. ಟಿ.

ಕಳಲೆ ಕಲ್ಲಾದೇವಿ ಕೊಂಡದಲ್ಲಿ ನಡೆದ ಅನಾಹುತ.

ಕಳೆದ ಫೆಬ್ರವರಿ ತಾ॥ ೨ ನೇ ಶನಿವಾರದ ದಿನ ಕಳಲೆ ಕಲ್ಲಾದೇವಿ ಕೊಂಡವಾಗಬೇಕಾಗಿದ್ದುದರಿಂದ ತಾ॥ ೧ ನೇ ಶುಕ್ರವಾರ ರಾತ್ರಿ ಊರಿನವರೆಲ್ಲರೂ ಅಂದರೆ ದೊಡ್ಡ ತೊರಗೇರಿ, ಕಲ್ಲಹಳ್ಳಿ ಕೇರಿ, ಹೊಲಗೇರಿ ಜನಗಳೆಲ್ಲರೂ ಪ್ರತ್ಯೇಕ ಪ್ರತ್ಯೇಕವಾಗಿ ಮರಗಳನ್ನು ತರುವದಕ್ಕೆ ಹೊರಟರು. ಅವರ ಪೈಕಿ ಹೊಲೆಯರು ತಮ್ಮ ಬೀದಿಯ ಕೊಂಡಕ್ಕೆ ಭಾರೀ ಮರಗಳನ್ನು ತಂದು ಹಾಕಿದರು. ಕಲ್ಲಹಳ್ಳಿ ಕೇರಿಯವರೂ ಹೊಲಗೇರಿ ಕೊಂಡಕ್ಕೊಂದು ಮರವನ್ನೂ ಅಗ್ರಹಾರದ ಕೊಂಡಕ್ಕೊಂದು ಮರವನ್ನೂ ಹಾಕಿದರು. ದೊಡ್ಡ ತೊರಗೇರಿಯವರು ಮರವನ್ನು ಹುಡುಕಿ ಸಿಕ್ಕದ ಕಾರಣ ಬೆಳಗಿನ ಝಾವ ೪ ಗಂಟೆ ಸಮಯದಲ್ಲಿ ಈ ಊರಿಗೆ ೩ ಮೈಲಿ ದೂರದಲ್ಲಿರುವ ಮುದ್ದಹಳ್ಳಿ ದಡದಲ್ಲಿದ್ದ ಸುಮಾರು ೧೦ ಅಡಿ ಸುತ್ತಳತೆಯೂ ೩೦ ಅಡಿ ಉದ್ದವೂ ಉಳ್ಳ ಬೇವಿನ ಮರವನ್ನು ಹೊತ್ತುಕೊಂಡು ಬಂದು ಅಗ್ರಹಾರದ ಕೊಂಡಕ್ಕೆ ಹಾಕಿದರು. ಅಷ್ಟರಲ್ಲಿಯೇ ಬೆಳಗಾದ್ದರಿಂದ ತಮ್ಮ ತಮ್ಮ ಮನೆಗಳಿಗೆ ಹೊರಟು ಹೋದರು. ಪುನಃ ಶನಿವಾರ ಮಧ್ಯಾಹ್ನ ೪ ಗಂಟೆಗೆ ದೊಡ್ಡ ತೊರಗೇರಿ ಜನಗಳು ಬಂದು ಸದರೀ ಅಗ್ರಹಾರದ ಕೊಂಡದಲ್ಲಿ ಬೇಯುತಿದ್ದ ಮರಗಳನ್ನು ತೆಗೆದು ಹಾಕಿ ಕೆಂಡಗಳನ್ನು ಸಮ ಮಾಡಿದರು. ಅಷ್ಟರಲ್ಲಿಯೇ ಹೊಲಗೇರಿ ಕೊಂಡಕ್ಕೆ ಪೂಜೆ ಮಾಡಿ ಇಲ್ಲಿಗೂ ಚಕ್ರಕೇಲಿಗರು ಬಂದು ಈ ಕೊಂಡಕ್ಕೂ ಪೂಜೆ ಮಾಡಿ ಸುಮಾರು ೨೫ ಕಟ್ಟು ವೀಳೆಯದೆಲೆಯನ್ನು ಮೇಲಕ್ಕೆಸೆದುಕೊಂಡು ಹಾಯ್ದುಕೊಂಡು ಹೊರಟು ಹೋದ ಕೂಡಲೇ ನೋಡುವದಕ್ಕೆ ಬಂದಿದ್ದ ಜನಗಳೆಲ್ಲರೂ ಒಬ್ಬರಾಗುತ್ತಲೊಬ್ಬರು ಹಾಯುತಿದ್ದರು. ಅಷ್ಟರಲ್ಲಿಯೇ ದೊಡ್ಡ ತೊರಗೇರಿ ಜನಗಳೂ ಅವರ ಗರಡಿಯವರೂ ತಮ್ಮ ಕೇರಿಯಿಂದ ಹೊರಟು ಸಾಂ ಮಾಡುತ್ತಾ ಕೊಂಡದ ಬಳಿಗೆ ಬಂದು ಕೊಂಡವನ್ನು ಹಾಯ್ದುಕೊಂಡು ಶ್ರೀಲಕ್ಷ್ಮೀಕಾಂತಸ್ವಾಮಿ ದೇವಸ್ಥಾನದ ಹಿಂಭಾಗಕ್ಕಾಗಿ ಪುನಃ ಕೊಂಡದ ಬಳಿಗೆ ಬರುವದಕ್ಕೆ ಮುಂಚೆಯೇ ಕಲ್ಲಹಳ್ಳಿ ಕೇರಿ ಜನಗಳೂ ಮತ್ತು ಅಲ್ಲಿಯ ಗರಡಿಯವರೂ ಮತ್ತು ಹೊಲಗೇರಿ ಜನಗಳೂ ಸಹ ವಾದ್ಯಗಳ ಸಮೇತ ಕಟಕಿ ವರಸೆ, ಪಟ್ಟೆ ವರಸೆ, ಬರಾಟೆ ಈ ಸಾಂಗಳನ್ನು ಮಾಡುತ್ತಾ ಬಂದು ಕೃಷ್ಣರಾಯರವರ ಮನೆ ಬಳಿ ಅಖಾಡಾ ಹಾಕಿಕೊಂಡು ಸಾಂ ಮಾಡುತಿದ್ದರು. ಅಷ್ಟರಲ್ಲಿಯೇ ದೊಡ್ಡ ತೊರಗೇರಿ ಜನಗಳು ಬಂದು ಅವರ ಅಖಾಡದ ಮಧ್ಯೆ ತಮ್ಮ ಮಾಮೂಲಿನಂತೆ ನುಗ್ಗಿದರು. ಆಗ ಕಲ್ಲಹಳ್ಳಿ ಕೇರಿ ಯಜಮಾನನಾದ ಇಬ್ಬಾಲ್ ಸಿದ್ದನಾಯ್ಕನ ಮಗ ಸಿದ್ದನಾಯ್ಕನೆಂಬುವವನು ತಮ್ಮ ಅಖಾಡದ ಮಧ್ಯೆ ನುಗ್ಗಬೇಡವೆಂದು ಹೇಳಿ ಅವರನ್ನು ತಡೆದು ಇವನು ತಡೆದ್ದನ್ನು ನೋಡಿ ತೊರೆಯರ ಯಜಮಾನನು ಅವರನ್ನು ತಡೆಯಬೇಡವೆಂದು ಹೇಳಿದರೂ ಕೇಳದೆ ಗರಡಿಯವನಾದ ಯಾಲಕ್ಕಿರಂಗನೆಂಬುವವನು ಅವರನ್ನು ಬೈಯುತ್ತಾ ಕಾರೆಮುಳ್ಳು ಮೇಸ್ತ್ರಿನಾಯ್ಕನ ಮಗ ಬಸವನನ್ನು ತನ್ನ ಕೈಯಲ್ಲಿದ್ದ ದೊಣ್ಣೆಯಿಂದ ಎರಡೇಟು ಹೊಡೆದನು. ಕೂಡಲೆ ಎರಡು ಕಡೆಯ ಜನಗಳೂ ತಮ್ಮ ತಮ್ಮ ಕೈಯಲ್ಲಿದ್ದ ದೊಣ್ಣೆಗಳಿಂದ ಹೊಡೆದು ಘಾಯ ಮಾಡಿ ರಕ್ತದ ಹೊಳೆಯನ್ನು ಹರಿಸಿದರು. ಕಲ್ಲಹಳ್ಳಿ ಕೇರಿ ಜನಗಳ ಹತ್ತಿರ ಸರಿಯಾದ ದೊಣ್ಣೆಗಳಿಲ್ಲದ್ದರಿಂದ ಪಕ್ಕದಲ್ಲಿದ್ದ ಮನೆಗಳ ಗಳುಗಳನ್ನೇ ಕಿತ್ತುಕೊಂಡು ಹೊಡೆದು ದೊಂಬಿ ಮಾಡಿದರು. ಕೂಡಲೆ ಈ ಕೊಂಡದ ನೋಟವನ್ನು ನೋಡುವದಕ್ಕೆ ಬಂದಿದ್ದ ಜನಗಳೆಲ್ಲರೂ ತಂಡತಂಡವಾಗಿ ಓಡುತ್ತಾ ನಮ್ಮ ಹುಡುಗನನ್ನು ಕಾಣೆನಲ್ಲಾ! ತಮ್ಮ ಹುಡುಗನನ್ನು ಕಾಣೆನಲ್ಲಾ ಎಂದು ವ್ಯಸನ ಪಡುತ್ತಾ ಓಡುತ್ತಿದ್ದರು. ಇವರ ಜಗಳವು ಇನ್ನೂ ನಿಲ್ಲಲಿಲ್ಲ. ಎರಡು ಕಡೆಯಲ್ಲಿಯೂ ಸುಮಾರು ೧೦—೧೨ ಜನಗಳು ಏಟುತಿಂದು ರಕ್ತ ಹರಿಯುತ್ತಿದ್ದರೂ ಬಿಡದೆ ಕಾದುತ್ತಿದ್ದರು. ಈ ಮಧ್ಯೆ ದೊಡ್ಡ ತೊರಗೇರಿಯ ಗುಡಿ ಸುಬ್ಬನಾಯ್ಕನ ಹೆಂಡತಿ ಸುಮಾರು ೬೦ ವರುಷ ವಯಸ್ಸುಳ್ಳ ಮಾದಿ ಎಂಬುವಳು ಜಗಳಕ್ಕೆ ಹೋಗಿ ಕಲ್ಲಹಳ್ಳಿ ಕೇರಿ ಗರಡಿಯ ೨—೩ ಜನಗಳನ್ನು ಹೊಡೆದಳು. ಇವಳ ಧೈರ್ಯವು ಎಂಥಾದ್ದೋ! ಪಟೇಲರು ಆಗಲೇ ಬಂದು ನೋಡಿ ರಿಪೋರ್ಟು ಮಾಡಿದರು. ತಕ್ಷಣವೇ ಪೋಲೀಸ್ ಇನ್ಸ್‌ಪೆಕ್ಟರಾದ ಕೃಷ್ಣೇಗೌಡರು ಬಂದು ವಿಚಾರಣೆ ಮಾಡಿ ಘಾಯವಾಗಿದ್ದ ಜನಗಳನ್ನು ನಂಜನಗೂಡಿನ ಆಸ್ಪತ್ರೆಗೆ ಕಳುಹಿಸಿದರು.

ವಾಂ

ಇಂಡಿಯಾ ದೇಶದ ವೃತ್ತಾಂತಗಳು.

ಬೊಂಬಾಯಿಯಲ್ಲಿ ಅಲ್ಲಿನ ಇಲಿಗಳನ್ನು ಕೊಲ್ಲಲು ಒಂದು ಗುಂಪನ್ನು ಮುನಿಸಿಪಾಲಿಟಿಯವರು ನೇಮಿಸಿರುವರು.

****

ಪಾಳ್ಯಾಗಿರುವ ಸೀಸ್ಟನ್ ದೇಶದ ವಿಷಯವಾಗಿ ಚರಿತ್ರೆಯನ್ನು ಬರೆದುದಕ್ಕೋಸ್ಕರ ಸರ್ವೆ ಡಿಪಾರ್ಟುಮೆಂಟಿನ ಮಿ॥ ಟೇಟ್ ಸಾಹೇಬರಿಗೆ ಇಂಡಿಯಾ ಸರ್ಕಾರದವರು ೧೦೦೦ ರೂ॥ ಬಹುಮಾನವನ್ನು ದಯಪಾಲಿಸಿರುವರು.

****

ಹಿಂದೂದೇಶದಿಂದ ಅಮೀರರು ತಮ್ಮ ದೇಶಕ್ಕೆ ವಾಪಸು ಹೋದ ಮೇಲೆ ಬರುವ ಮಾರ್ಚಿ ಇಪ್ಪತ್ತೈದರಲ್ಲಿ ಒಂದು ದೊಡ್ಡ ಸಾರ್ವಜನಿಕವಾದ ದರ್ಬಾರನ್ನು ಕಾಬೂಲಿನಲ್ಲಿ ನಡೆಸಬೇಕೆಂದು ಗೊತ್ತುಮಾಡಿರುವಂತೆ ವರ್ತಮಾನ ಕೇಳುತ್ತೇವೆ.

****

ನಾಗಪಟ್ಟಣದಲ್ಲಿರುವ ಸ್ವದೇಶಿ ಸ್ಟೀಲ್ ಟ್ರಂಕ್ ಮ್ಯಾನುಫ್ಯಾಕ್ಟರಿಂಗ್ ಕಂಪನಿಯವರು ಪೆಟ್ಟಿಗೆಗಳನ್ನು ಹೊಸ ಮನೋಹರವಾದ ನಿಕಲ್ ಲೋಹದ ಹಿಡಿಗಳಿಂದ ಕೂಡಿ, ಲೀವರ್ ಬೀಗಗಳುಳ್ಳ [illegible] ಉಕ್ಕಿನ ಪೆಟ್ಟಿಗೆಗಳನ್ನು ಮಾಡಿ ಮಾರುವರೆಂದು ಕೇಳುತ್ತೇವೆ.

****

ಅಹಮ್ಮದಾಬಾದಿನಲ್ಲಿ ಮೂವತ್ತುನಾಲ್ಕು ವರ್ಷಗಳಿಂದಲೂ ವಾರಕೊಮ್ಮೆ ಪ್ರಕಟಿಸುವ "ಹಿತೈಷಿ" ಎಂಬ ಗುಜರಾತಿ ಪತ್ರಿಕೆಯು ಅದರ ಎಡಿಟರವರಿಗೆ ಸಂಭವಿಸಿದ ಮೃತ್ಯುವಿನ ದೆಸೆಯಿಂದಲೂ ಇನ್ನು ಮೇಲೆ ಪ್ರಕಟಿಸುವದಿಲ್ಲವೆಂದು ತಿಳಿಯಬರುವದು.

****

ಆಗ್ರಾಪಟ್ಟಣದಲ್ಲಿ ಪೀಪಲ್ಸ್ ಹೆರಲ್ಡ್ ಎಂಬ ವರ್ತಮಾನ ಪತ್ರಿಕಾಕರ್ತನಾದ ಮಿ॥ ಫ್ರೈದರವರು ಎಲ್ಲಿಸ್ ಎಂಬುವರ ಮೇಲೆ ತಮ್ಮ ಪತ್ರಿಕೆಯಲ್ಲಿ ದೂಷಣೆ ಮಾಡಿದ್ದಕ್ಕೋಸ್ಕರ ಮ್ಯಾಜಿಸ್ಟ್ರೇಟರು ಸದರಿ ಫ್ರೈದರವರಿಗೆ ಒಂದು ವರ್ಷದ ಜೈಲನ್ನೂ ೧,೦೦೦ ರೂ ಜುಲ್ಮಾನೆಯನ್ನೂ ವಿಧಿಸಿದಾರೆ.

****

ಬೊಂಬಾಯಿಯಲ್ಲಿ ತಾಪಿಬಾಯಿಯೆಂಬ ಇಪ್ಪತ್ತೈದು ವರ್ಷ ವಯಸ್ಸುಳ್ಳ ಒಬ್ಬ ಹೆಂಗಸು ತನ್ನ ಮನೆಯ ಮೇಲ್ಭಾವಣಿಯ ಬೆಳಕಿಂಡಿಯನ್ನು ಮುಚ್ಚುವದಕ್ಕೆ ಹೋಗಿ ಅದರ ಮೇಲೆ ತನ್ನ ಕಾಲನ್ನಿಡಲು ಛಾವಣಿಯು ಮುರಿದುಹೋಗಿ ಐವತ್ತು ಅಡಿಯಿಂದ ಕೆಳಕ್ಕೆ ಬಿದ್ದು ತಲೆ ಒಡೆದು ತಕ್ಷಣವೇ ಸತ್ತುಹೋದಳು.

****

ಇಂಡಿಯನ್ ಟಿ ಅಸೋಸಿಯೇಷನ್‌ಯವರು ಸುರ್ಮಾ ಕಣಿವೆಯಲ್ಲಿ ಜಾನುವಾರುಗಳಿಗೆ ಪ್ರಾಪ್ತವಾಗುವ ಖಾಯಿಲೆಯನ್ನು ಗುಣಪಡಿಸುವದಕ್ಕೋಸ್ಕರ ಒಬ್ಬ ವೆಟರಿನೆರಿ ಡಾಕ್ಟರನ್ನು ನೇಮಿಸಲು ಈ ವರುಷ ೫,೦೦೦ ರೂ ಗಳನ್ನೂ ಮುಂದಿನ ವರುಷ ೧೦,೦೦೦ ರೂ. ಗಳನ್ನೂ ಸ್ಯಾಂಕ್ಷನ್ ಮಾಡಬೇಕೆಂದು ಸರ್ಕಾರದವರನ್ನು ಕೇಳಿರುತ್ತಾರೆ.

****

ಮೆಸರ್ಸ್ ಪ್ರಸಾದ್ ಬೋರಲ್ ಕಂಪನಿಗೆ ಸೇರಿದ ಬ್ಯಾಗೋವಿಂದ ಉಪಾಧ್ಯನೆಂಬುವನು ಕೆಲವು ದಿನಗಳ ಕೆಳಗೆ ಸದರಿ ಕಂಪನಿ ಬಾಬ್ತು ೧೫,೦೦೦ ರೂ ಬೆಲೆಯುಳ್ಳ ನೋಟುಗಳನ್ನು ತೆಗೆದುಕೊಂಡು ಓಡಿ ಹೋಗಿದ್ದವನನ್ನು ಈಗ ಪತ್ತೆ ಮಾಡಿರುತ್ತಾರೆ. ಅವನನ್ನು ಕೇಳಿದರೆ ಹಣವನ್ನು ತನ್ನ ನೆಂಟರಿಗೂ ಇತರರಿಗೂ ಹಂಚಿದೆನೆಂದು ಹೇಳುತ್ತಾನೆ. ಪೋಲೀಸಿನವರು ಕಳುವಿನ ನೋಟುಗಳ ವಿಷಯವಾಗಿ ಪತ್ತೆ ತರದೂದನ್ನು ಮಾಡುತ್ತಿದಾರೆ.

೪೦,೦೦೦ ಪೌಂಡಿನ ಬಂಡವಾಳದಿಂದ ಟ್ರಾವಂಕೂರಿನಲ್ಲಿ ಒಂದು ರಬ್ಬರ್ ಕಂಪನಿಯನ್ನು ಸ್ಥಾಪನೆ ಮಾಡಿರುವರು. ಈ ಕಂಪನಿಯ ಉದ್ದೇಶವೇನಂದರೆ ರಬ್ಬರ್ ವ್ಯವಸಾಯವನ್ನು ಆ ದೇಶದಲ್ಲಿ ಅಭಿವೃದ್ಧಿಪಡಿಸಬೇಕೆಂದುದು. ಇದಕ್ಕಾಗಿ ಸದರಿ ಕಂಪನಿಯವರು ೨೧ ಎಕರೆಗಳನ್ನು ಕೊಂಡು ಆಗಲೆ ೯೦೦ ಎಕರೆಗಳಲ್ಲಿ ರಬ್ಬರ್ ಗಿಡವು ಬೆಳಸಿರುವರು. ಈ ಕಂಪನಿಗೆ ಮಿ॥ ಜೆ. ಎಲ್. ಆಕ್ವರ್ತ್‌ರವರು ಡೈರೆಕ್ಟರಾಗಿರುತ್ತಾರೆ.

****

ಕಲ್ಕತ್ತದ ಫೊಟೋಗ್ರಾಫರ್ ಮೆಸರ್ಸ್ ಬೌರ್ನ್ ಅಂಡ್ ಷೆಫರ್ಡ್ ಕಂಪನಿಯವರು ಆಗಾಗ್ಯೆ ತಮ್ಮಿಂದ ಕೆಲಸ ಮಾಡಿಸಿ ಸಾಮಾನುಗಳನ್ನು ಸರಬರಾಜು ಮಾಡಿಸಿಕೊಂಡ ಹಳ್ಳಿಕೋಟೆ ಮಹಾರಾಜರ ಮೇಲೆ ಕಲ್ಕತ್ತಾ ಹೈಕೋರ್ಟಿನಲ್ಲಿ ರೂ ೬೦೧೩—೮—೦ ಗೆ ದಾವಾ ತಂದಿದ್ದರು. ಅಲ್ಲಿನ ಜಡ್ಜಿಯವರಾದ ಮಿ॥ ಜಸ್ಟಿಸ್ ಸ್ಟೀವೆನ್ಸರು ಸದರಿ ಕಂಪನಿಯವರಿಗೆ ದಾವಾ ಮೊಬಲಗನ್ನು ಆದರ ಖರ್ಚನ್ನೂ ಮಹಾರಾಜರು ಕೊಟ್ಟು ಬಿಡುವಂತೆ ಡಿಕ್ರಿ ಕೊಟ್ಟಿರುತ್ತಾರೆ.

****

ರಂಗೂನಿನ ಅಗಸರೂ ಈ ತಿಂಗಳು ಗುಡ್ಡೆಲಾಗಾಯಿತು ಬಟ್ಟೆ ಒಗೆಯುವದಿಲ್ಲವೆಂದೂ ಮುಷ್ಕರಹೂಡಿರುವರು. ಇದಕ್ಕೆ ಕಾರಣವೇನಂದರೆ ಅಲ್ಲಿನ ಮುನಿಸಿಪಾಲಿಟಿಯವರು ಅವರಿಗೆ ಇದುವರೆವಿಗೂ ಮುಫ್ತಾಗಿ ಬಟ್ಟೆ ಒಗೆಯುವ ಮುನಿಸಿಪಲ್ ಸ್ಥಳವನ್ನು ಬಿಟ್ಟುಕೊಟ್ಟಿರು. ಇಂದಾಸ್ಥಳಗಳಿಗೆ ಮುನಿಸಿಪಾಲಿಟಿಯವರು ತಾವು ಖರ್ಚುಮಾಡಿರುವ ಎರಡು ಲಕ್ಷ ರೂಪಾಯಿಗಳನ್ನು ಭರ್ತಿ ಮಾಡಿಕೊಳ್ಳುವದಕ್ಕೋಸ್ಕರ ಈಗ ಪ್ರತಿ ತಿಂಗಳಲ್ಲಿಯೂ ಒಂದು ತಲೆಗೆ ೨ ರೂ ನಂತೆ ತಗಾದೆ ಮಾಡಬೇಕೆಂದು ವಿಧಿಸಿರುತ್ತಾರೆ.

****

ಶತಾವಧಾನದಲ್ಲಿ ಪ್ರಸಿದ್ಧಿಯನ್ನು ಹೊಂದಿದ ವಿದ್ವಾನ್ [illegible] ಶ್ರೀರಾಮಸ್ವಾಮಿ ಯವರನ್ನು [illegible] ಕೇಳುತ್ತೇವೆ. ಇವರು ಅನೇಕ ದೇಶಗಳನ್ನು ಸಂಚಾರಮಾಡಿ [illegible] ಅನೇಕ ಬಿರುದುಗಳನ್ನು [illegible] ಪಡೆದಿರುತ್ತಾರೆ. ಒಂದೇ ಸಲ ನೂರು ವಿಷಯಗಳಿಗೆ ಗಮನಕೊಡುವ ಆಶ್ಚರ್ಯಕರವಾದ [illegible] ದೇಶದ [illegible] ತಮ್ಮ ಅದ್ಭುತ ಶಕ್ತಿಯನ್ನು ಈಗ ತೋರಿಸುತ್ತಿದಾರೆಂದು ಕೇಳುತ್ತೇವೆ.

****

ಎಲ್ಲಾ ದೇಶಗಳಿಗಿಂತಲೂ ಜಾವಾ ದ್ವೀಪದಿಂದಲೇ ಹಿಂದೂ ದೇಶಕ್ಕೆ ಹೆಚ್ಚಾಗಿ ಸಕ್ಕರೆಯು ರಫ್ತಾಗುತ್ತದೆಂಬದಾಗಿ ತಿಳಿಯಬರುವದು. ಗತವರ್ಷದ ಆಕ್ಟೋಬರು ಒಂದೇ ತಿಂಗಳಿನಲ್ಲಿ ಆ ದ್ವೀಪದಿಂದ ಈ ದೇಶಕ್ಕೆ ೧೬,೦೦೦ ಟನ್ ಸಕ್ಕರೆಯನ್ನು ಕಳುಹಿಸಿರುವರು. ಅದಕ್ಕೆ ಎರಡನೇದಾದ ಜರ್ಮನಿಯು ೧೯ ಕಳುಹಿಸಿದ್ದು ಸುಮಾರು ೪,೦೦೦ ಟನ್ನುಗಳಾಗಿರುತ್ತವೆ. ಮೂರನೇದಾದ ಮಾರಿಷಸ್ಸಿನಿಂದ ೧,೦೦೦ ಟನ್ನುಗಳು, ಆಸ್ಟ್ರಿಯಾ ಹಂಗೇರಿಯಾದಿಂದ ೫,೦೦೦ ಟನ್ನುಗಳು. ಕಳೆದ ೧೯೦೫ ನೇ ಇಸವಿಗಿಂತಲೂ ೧೫,೦೦೦ ಟನ್ನು ಹೆಚ್ಚಾಗಿಯೇ ಇಲ್ಲಿಗೆ ರಫ್ತಾಗಿರುತ್ತದೆ.

****

ಕರ್ನೂಲ್ ಪಟ್ಟಣದಲ್ಲಿ ಉಬೇದ ಕೊಲೆಗಳು ಹೆಚ್ಚಾಗುತ್ತಲಿವೆ. ಒಂದು ವಾರದಲ್ಲಿ ಮೂರು ಕೊಲೆಗಳು ನಡೆದವು. ಇತ್ತಲ್ಲಿ ಒಂದು ಬಳಿ ಘಾಯಪಟ್ಟವನೆಂದು ಮೊದಲು ಯೋಚಿಸಿದ್ದರಾಗಿತ್ತು. ಕೊನೆಯಲ್ಲಿ ಘಾಯಪಟ್ಟ ಮನುಷ್ಯನನ್ನು [illegible] ಗಂಟನ್ನು ಊರಿಕೊಂಡಿರುವದೆಂದು ಆಸ್ಪತ್ರೆಗೆ ಕಳುಹಿಸಿದ್ದರು. ಘಾಯಪಟ್ಟದ್ದರಿಂದ ಧನುರ್ವಾಯು [illegible] ಹೇಳಿದ್ದರ ಮೇಲೆ ಆತನ ಹೆಂಡತಿ [illegible] ಪಡೆದ [illegible] ಅವನನ್ನು ಪೋಲೀಸಿನ ವಶಕ್ಕೆ ಒಪ್ಪಿಸಿದರು. ಪೋಲೀಸಿನವರು ಸಾಯುವವನ ವಾಂಗ್ಮೂಲವನ್ನು ತೆಗೆದುಕೊಂಡಿರುತ್ತಾರೆ.

****

ಕೊಯಮತ್ತೂರಿನಲ್ಲಿ ಪ್ರಾಚೀನಾನ್ವೇಷಣ ಇತ್ಯಾದಿ ವ್ಯವಸಾಯಕ ವಿದ್ಯಾನಿಲಯವು ಮುಂದಿನ ವರ್ಷದ ಮಧ್ಯಭಾಗದ ವರೆಗೂ ತೆರೆಯಲ್ಪಡುವದಿಲ್ಲ. ಅಷ್ಟರಲ್ಲಿ ಸೈದಾಪೇಟೆಯಲ್ಲಿನ ವ್ಯವಸಾಯ ವಿದ್ಯಾನಿಲಯವು ಮತ್ತೊಂದು ವರ್ಷದ ವರೆವಿಗೂ ಹೊಸವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುವಂತೆ ತೋರುವದು. ಕಾಲೇಜಿನ ಅಧ್ಯಕ್ಷರಾದ ಮಿ॥ ಬೆನ್ಸನ್‌ರವರು ವ್ಯವಸಾಯ ಶಾಸ್ತ್ರಜ್ಞರಾದ ಮಿ॥ ಸ್ಯಾಂಪ್ಸನ್‌ರವರು ಡಿಸೆಂಬರ್ ತಿಂಗಳಲ್ಲಿ ಮದ್ರಾಸಿಗೆ ಬಂದು ತಲಪಿದರು. ಮಿ॥ ಬೆನ್ಸನ್‌ರವರೂ ಕೊಯಮುತ್ತೂರಿನಲ್ಲಿ ಹೊಸ ಕಟ್ಟಡವನ್ನು ನೋಡಿಕೊಳ್ಳುತ್ತಿದಾರೆ. ಮಿ॥ ಸ್ಯಾಂಪ್ಸನ್‌ರವರು ಪೂಸಾ ವಿದ್ಯಾನಿಲಯದಲ್ಲಿ ಶಿಕ್ಷೆಯನ್ನು ಹೊಂದುತ್ತಿದಾರೆ.

****

ಹೂಗ್ಲಿಯಲ್ಲಿ ಲೇವಾದೇವಿ ಮಾಡತಕ್ಕ ಮಾಲಿಕ್‌ಖಾನ್ ಎಂಬ ಕಾಬೂಲಿಯನ್ನು ಆ ಪ್ರದೇಶದ ಸುಮಾರು ೧೫೦ ಹಳ್ಳಿಯ ಜನರು ಗುಂಪುಕೂಡಿ ಹೊಡೆದು ಘಾಯಪಡಿಸಿದರೆಂದು ಈಗ ಆತನು ಅಲ್ಲಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿದಾನೆ. ಈತನು ಮೋನಿಬಾಗ್ದಿಯೆಂಬ ವ್ಯಕ್ತಿಗೆ ಸಾಲಕೊಟ್ಟಿದ್ದ ಬಡ್ಡಿ ಸಹಿತವಾದ ೩೫ ರೂ ಗಳನ್ನು ವಾಪಸು ಕೇಳಲು ಇಬ್ಬರಿಗೂ ವಾಗ್ವಾದ ನಡೆದು, ಇದು ಮೇಲೆ ಹೇಳಿದ ಹಳ್ಳಿಯವರಿಗೆ ತಿಳಿದು ಅಲ್ಲಿನ ಜನಗಳು ದೊಣ್ಣೆ ಮತ್ತು ಇತರ ಆಯುಧಗಳನ್ನು ತೆಗೆದುಕೊಂಡು ಮಾಲಿಕ್‌ಖಾನ್ ಸಂಗಡ ಬಂದಿದ್ದ ಇಬ್ಬರು ಮುವ್ವರು ಕಾಬೂಲಿಗಳ ಮೇಲೆ ಬೀಳಲು ಅವರು ಪೆಟ್ಟು ತಿಂದು ಓಡಿಹೋದ ಹಾಗೂ ಮಾಲಿಕ್‌ಖಾನ್‌ಗೆ ಮಾತ್ರ ದವಡೆ ಒಡೆದು ಹೋಗಿ ಬುರುಡೆ ಮೇಲೆ ಪೆಟ್ಟು ಬಿದ್ದು ಮೈಯೆಲ್ಲಾ ಘಾಯವಾಗಿದೆಯೆಂದು ತಿಳಿಯಬರುತ್ತದೆ.

...ಬೇಕೆಂಬ ನಿರ್ಬಂಧದ ಕಾನೂನಿನ ವಿಷಯ ಸರಕಾರದವರು ಅನುಕೂಲವಾದ ಉತ್ತರ ಕೊಡಲಿಲ್ಲ ... ಎನಿಸಿಕೊಳ್ಳುವವರೂ ತಮ್ಮ ಅಭಿಪ್ರಾಯವನ್ನು ... ಗವರ್ನರವರಿಗೆ ತಿಳಿಸುವುದಕ್ಕೋಸ್ಕರ ಪುನಃ ಕಮಿಟಿಯನ್ನು ... ಕೆಂದು ನಿಶ್ಚಯಿಸಿರುತ್ತಾರೆ ಅಲ್ಲಿನ ಸಾನಿಟರಿ ಕಮಿಷನರ್ ಕರ್ನಲ್ ಕಿಂಗರವರೂ ಗತವರ್ಷದಲ್ಲಿ ೩೯೭೫ ಜನರಿಗೆ ಸಿಡುಬು ... ಇವರ ಪೈಕಿ ೧೬೭೫ ಮೃತಪಟ್ಟರೆಂದೂ ೧೮೮೩ನೇ ವರ್ಷದ ... ಈ ಲಾಗಾಯ್ತು ಇಂಥಾ ಸಾಂಕ್ರಾಮಿಕವು ಸಂಭವಿಸಿರಲಿಲ್ಲ ... ಸರ್ಕಾರಕ್ಕೆ ರಿಪೋರ್ಟುಮಾಡಿದ್ದರು ಈ ವಿಷಯವನ್ನು ... ಕಳೆದವಾರದಲ್ಲಿ ಡಾಕ್ಟರ್ ಪಶ್ಲೆಯವರೇ ನಿಂತು ಒಂದು ಸ್ಪೆಷಲ್ ಮೀಟಿಂಗನ್ನು ನಡೆಸುವವರಾಗಿದ್ದಾರೆ

❖❖❖❖

ಬಾರಿಸಾಲ್‌ನಲ್ಲಿ ಹಿಂದೆ ನಡೆದ ಸರಸ್ವತಿ ಪೂಜೆಯಲ್ಲಿ ಬ್ರಾಹ್ಮಣರು ... ದೇಶದ ಬಟ್ಟೆಗಳನ್ನು ಉಪಯೋಗ ಮಾಡಕೂಡದೆಂದು ಕಟ್ಟುಮಾಡಿದ್ದರೂ ಕೇಳದೆ ಹಾಗೆ ನಡಿಸುತ್ತಿದ್ದ ಕೆಲವು ವರ್ತಕರ ಮನೆಗೆ ... ಭೋಜನಮಾಡಲು ತಿರಸ್ಕರಿಸಿದರು ಐನೂರು ರೂಪಾಯಿಗಳಿಂದ ... ರೂಪಾಯಿಗಳ ವರೆಗೂ ಕೊಡುತ್ತೇವೆಂದರೂ, ಅಲ್ಪ ಲಾಭಕ್ಕೆ ... ತಮ್ಮ ದೇಶದವರ ಸಂಕಲ್ಪಕ್ಕೆ ವಿರೋಧನಾಗಿ ನಡೆದು ... ಬಡವೆ ಇರುವ ಈ ... ಯಾವ ಸಂಬಂಧವನ್ನೂ ... ಬೇಕಾಗಿಲ್ಲವೆಂದು ಹಟವನ್ನು ಹಿಡಿದರು ಈ ವರ್ತಕರು ... ಅವರನ್ನು ... ಟರ ಮುಂದೆ ಹೇಳಿಕೊಳ್ಳಲು ಹೋಗಿ ... ಆತನು ಊರಲ್ಲಿರಲಿಲ್ಲ ಮತ್ತು ಆತನ ಕೆಳಗಿನ ಅಧಿಕಾರಿಗಳು ತಮ್ಮ ಮೇಲೆ ಜವಾಬ್ದಾರಿಯನ್ನು ಹಾಕಿಕೊಳ್ಳದೆ ತಟಸ್ಥರಾಗಿ ... ಅದೂ ಅಲ್ಲದೆ ಈ ವರ್ತಕರು ಅಲ್ಲಿನ ಒಂದು ಜಾತ್ರೆಗೆ ಹೋಗ ... ಅಲ್ಲಿನ ಜನಗಳು ಅಂಗಡಿಗಳಲ್ಲಿ ... ಕಂಡು ಬಟ್ಟೆಗೆ ... ಹೋದರೆಂದು ಕೇಳುತ್ತೇವೆ

❖❖❖❖

ಹಿಂದೂದೇಶದ ಷಾ ಯವರ ಮರಣದ ವಿಷಯವಾಗಿ ತಮ್ಮ ವ್ಯಸನವನ್ನು ತೋರ್ಪಡಿಸುವುದಕ್ಕೆ ಲಾಹೋರಿನ ... ಒಂದು ಸಭೆ ಕೂಡಿದ್ದರು ಸಭೆಯಲ್ಲಿ ಎಲ್ಲಾ ಮತಸ್ಥರೂ ... ಸೇರಿದ್ದರು ಮೌಲ್ವಿ ... ಮೌಲ್ವಿ ... ಮೌಲ್ವಿ ... ಮತ್ತು ... ಎಂಬುವರು ಮಹಮ್ಮದೀಯ ಷಾ ಯವರ ಜೀವ ... ಪರವಾಗಿ ಉಪನ್ಯಾಸ ಮಾಡಿದರು ... ಷಾ ಯವರ ... ಮರಣದಿಂದ ವ್ಯಸನವನ್ನು ... ನಿಶ್ಚಯಿಸಿದರೂ ಷಾ ಯವರ ಹೆಸರನ್ನು ಶಾಶ್ವತ ಸ್ಮಾರಕ ... ಹಣವನ್ನು ಎತ್ತಿ ಕಲ್ಕತ್ತದಲ್ಲಿ ... ಷಾ ಯವರ ಹೆಸರಿನಿಂದ ... ಬರ್ಷೇರಿಯಾ ಎಂಬ ವಿದ್ಯಾನಿಲಯದಲ್ಲಿ ... ವಿದ್ಯಾರ್ಥಿಗಳಿಗೆ ವೇತನವನ್ನು ಕೊಡಬೇಕೆಂದು ಸೂಚಿಸಿ ... ಸಭೆಯ ಸೂಚನೆಯನ್ನು ಷಾ ಯವರ ... ಹಬೀಬುಲ್ಲಾ ... ಯವರಿಗೆ ತಿಳಿಸುವಂತೆ ಕಲ್ಕತ್ತಾ ... ಬಾಯಿಗೆ ತಂತೀವರ್ತಮಾನವನ್ನು ಕಳುಹಿದರು

ವಿದೇಶ ವರ್ತಮಾನಗಳು.

ಆಸ್ಟ್ರೇಲಿಯಾದ ... ಪಟ್ಟಣದಲ್ಲಿ ೧೧ ಪ್ಲೇಗು ಕೇಸುಗಳಾದವು ... ಇಬ್ಬರು ಮರಣವನ್ನು ಹೊಂದಿರುತ್ತಾರೆ

❖❖❖❖

ಫಿಸಿಲ್ವೇನಿಯಾದ ... ಎಂಬ ಪ್ರದೇಶದ ಮನೆಗಳಿಗೆ ಬೆಂಕಿ ಬಿದ್ದು ದೊಡ್ಡ ಅನಾಹುತವು ನಡೆಯಿತು ಅನೇಕ ಗಂಟೆಗಳ ಕಾಲ ಬೆಂಕಿಯನ್ನು ... ಪ್ರಯತ್ನ ಪಟ್ಟಾಗ್ಯೂ ಆರಿಸುವುದಕ್ಕೆ ಆಗದೆ ಹೋಯಿತು ಇದರಿಂದ ಇಪ್ಪತ್ತೈದು ಲಕ್ಷ ರೂಪಾಯಿಗಳಷ್ಟು ನಷ್ಟವಾಗಿರುವದು

❖❖❖❖

ಸೆಂಟ್‌ಪೀಟರ್ಸ್‌ಬರ್ಗಿನಲ್ಲಿ ರಾಜದ್ರೋಹಿಗಳನ್ನು ಪತ್ತೆ ಹಚ್ಚುವ ... ಜನರನ್ನು ಕೆಲವು ದಿನಗಳ ಕೆಳಗೆ ... ಬೀದಿಯಲ್ಲಿ ... ಕೊಲ್ಲಲ್ಪಟ್ಟನು ಅಲ್ಲಿರತಕ್ಕ ಪ್ರಮುಖರನ್ನು ಈತನು ... ಹಿಡಿಸುತ್ತಿದ್ದನೆಂಬುದೇ ಇದಕ್ಕೆ ಕಾರಣವು ಕೊಲೆಪಾತಕರು ... ತಿಳಿದಿಲ್ಲ

❖❖❖❖

ಜರ್ಮನಿ ದೇಶಕ್ಕೆ ಸಂಬಂಧಪಟ್ಟ ತೋಟಗಳ ಹಣಗನ್ನು ಮಂತ್ರಿಗ ... ರಬ್ಬಿಜ್‌ ಕ್ರೈಸ್ಟ್‌ನಲ್ಲಿ ... ಪೋಲೀಸಿಗೆ ಮುಖ್ಯಸ್ಥನಾಗಿ ... ಗೆ ಶರಣಾಗತನಾದ ... ಎಂಬುವನನ್ನು ಶಿಕ್ಷೆ ಮಾಡಬೇಕೆಂದು ಅಲ್ಲಿರುವ ಜರ್ಮನಿ ರಾಯಭಾರಿಯು ತುರ್ಕಿ ಸರ್ಕಾರದವರನ್ನು ಕೇಳಿರುತ್ತಾನೆ

❖❖❖❖

ಕೆಲವು ದಿವಸಗಳ ಕೆಳಗೆ ಹಾಂಗ್‌ಕಾಂಗಿನಲ್ಲಿ ಒಂದು ಭಯಂಕರವಾದ ಸುಂಟರಗಾಳಿಯು ಎತ್ತು ನಿಮಿಷಗಳ ವರಿಗೂ ಬೀಸಿ ಅಲ್ಲಿರುವ ... ಗಳಲ್ಲಿ ಕೆಲವನ್ನು ನಾಶಪಡಿಸಿತು ಸುಮಾರು ನೂರು ಜನ ಚೀನಾ ... ಪ್ರಾಣವನ್ನು ಕಳೆದುಕೊಂಡರು ಆದರೆ ಇಂಗ್ಲಿಷ್ ಯುದ್ಧ ... ಗಳು ಅನೇಕರನ್ನು ಬದುಕಿಸಿತು

❖❖❖❖

ಬ್ರಿಟಿಷ್ ಕೊಲಂಬಿಯಾದ ಸರಹದ್ದಿನ ಪಟ್ಟಣಗಳಲ್ಲಿ ಕೆಲಸಮಾಡುತ್ತಿದ್ದ ನೂರು ಜನ ಹಿಂದೂ ಕೂಲಿಗಳು ಪುರುಷವೇಷದಲ್ಲಿನ ಹೆಣ್ಣು ... ಗಳೆಂದು ತಿಳಿದು ಬಂದಿರುತ್ತದೆ ಇವರು ಸೌದೆ ಕಡಿಯುವದರಲ್ಲಿ ಬಹಳ ನಿಪುಣರೆಂದೂ ತಮ್ಮ ಗಂಡಂದಿರಿಗಿಂತಲೂ ಶ್ರಮಪಟ್ಟು ಕೆಲಸ ಮಾಡತಕ್ಕವರೆಂದೂ ವರ್ತಮಾನವಿದೆ

ಜರ್ಮನಿ ದೇಶದ ಹಂಗೇರಿಯಲ್ಲಿ ಅಡಾಲ್ಫ್ ಕಹಲ್‌ಬ್ರಕ್ ಎಂಬ ಹಳೇ ಖೈದಿಯು ಆ ದೇಶದ ಚಕ್ರವರ್ತಿಯೆಂದು ಹೇಳಿಕೊಂಡು ಜನರಿಗೆ ಮೋಸಮಾಡುತ್ತಿದ್ದು ಪತ್ತೆಯಾಗಿ ಸರ್ಕಾರದವರ ವಶದಲ್ಲಿ ಈಗ ಸಿಕ್ಕಿಬಿದ್ದಿರುವನು ಈತನು ಜನಗಳನ್ನು ಉತ್ತಮಸ್ಥಿತಿಗೆ ತರುವದಕ್ಕಿಂತ ಮುಂಚೆ ಅವರವರ ಸ್ಥಿತಿಗತಿಗಳನ್ನು ವಿಚಾರಿಸಲು ತನ್ನ ವೇಷವನ್ನು ಮರೆಮಾಚಿಕೊಂಡು ಬಂದಿರುವೆನೆಂದು ರೈತರಲ್ಲಿ ಹೇಳಿಕೊಳ್ಳುತ್ತಿದ್ದನು ಸಂದೇಹಪಟ್ಟ ರೈತರಿಗೆ ಅಲ್ಲಿನ ನಾಣ್ಯದಮೇಲಿರುವ ರೂಪನ್ನು ತೋರಿಸಿ ಭ್ರಮೆಯನ್ನುಂಟುಮಾಡಿದನು ನೂರರಷ್ಟು ವಾಪಸು ಮಾಡುತ್ತೇನೆಂದೂ ಜನಗಳಲ್ಲಿ ಸಾಲ ತೆಗೆಯುತ್ತಿದ್ದನು ಹಾಗೆಯೇ ಒಬ್ಬ ಹೆಂಗಸು ತನ್ನ ಆಸ್ತಿಗಳನ್ನು ಮಾರಿ ತನಗೆ ಹಣ ಒದಗಿಸಿಕೊಡುತ್ತೇನೆಂದು ಹೇಳಿ ತನ್ನ ಆಸ್ತಿಯನ್ನು ಮಾರಲು ಇದು ಸರ್ಕಾರದವರಿಗೆ ತಿಳಿದು ಆಗ ಖೈದಿಯು ಹಿಡಿಯಲ್ಪಟ್ಟ ನೋಡುವಲ್ಲಿ ಆತನು ಒಬ್ಬ ಹಳೇ ಖೈದಿಯಾಗಿದ್ದನೆಂದು ತಿಳಿದುಬಂತು

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸ್ಥಳ ಕೊಡಲಾರೆವು ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ಸ್ಥಳ ಕೊಡಲಾರೆವು

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬುದನ್ನು ಸಕಲರೂ ತಿಳಿಯತಕ್ಕದ್ದು—ಎಡಿ

H N K ಮಳೂರು ತಿಮ್ಮಪ್ಪ ಪ್ರಕಟಿಸಲಾರೆವು

"ಲೋಕೋಪಕಾರದಲ್ಲಿ ಇದೊಂದು" ವಿಷಯ ಪ್ರಕಟಿಸುವದರಲ್ಲಿ ಫಲವಿಲ್ಲವೆಂದು ತೋರುತ್ತೆ

ಕರೆಸ್‌ಪಾಂಡೆನ್ಸ್.

ವಿದ್ಯಾಭಿವೃದ್ಧಿಗಾಗಿ ಬಹುಮಾನ

ಅಯ್ಯಾ,

ಈ ಜಗಲೂರು ಎ ವಿ ಸ್ಕೂಲಿನಲ್ಲಿ ಇದುವರೆಗೂ ರೈತರ ಮಕ್ಕಳು ಯಾರೂ ಲೋಯರ್‌ಸೆಕೆಂಡರಿಯಲ್ಲಿ ಪ್ಯಾಸಾಗಿಯಿಲ್ಲ ಈ ವರುಷ ೪ನೆ ಕ್ಲಾಸಿನಲ್ಲಿ ಓದುತ್ತಿರುವ ಮತ್ತು ಕೇವಲ ಬೇಸಾಯದಿಂದ ಜೀವಿಸುವ ಇಬ್ಬರು ವಿದ್ಯಾರ್ಥಿಗಳನ್ನು ಲೋಯರ್‌ಸೆಕೆಂಡರಿ ಪರೀಕ್ಷೆಯಲ್ಲಿ ತೇರ್ಗಡೆಹೊಂದಿಸಿದರೆ ಮತ್ತು ವಿದ್ಯಾರ್ಥಿಗಳು ಪ್ಯಾಸಾಗಿ ಸರ್ಟಿಫಿಕೇಟು ಪಡೆದರೆ ಆ ಕ್ಲಾಸಿನ ಮ್ಯಾಸ್ಟರಿಗೆ ಐದು ರೂಪಾಯಿಗಳನ್ನು ಬಹುಮಾನವಾಗಿ ಕೊಡುತ್ತೇನೆಯೆಂದು ಈ ಮೂಲಕ ವಾಗ್ದಾನ ಮಾಡಿದ್ದೇನೆ

ರುದ್ರ ... ಬಸೇನಾಬಿ

ಜಗಲೂರು

ವಿಲೇಜ್ ಪೋಸ್ಟ್ ಪಿನ್ನಗಳು

ಅಯ್ಯಾ,

ಮೈಸೂರು ಸಿ ಮೊಯಿದಿ ಪೋಸ್ಟ್ ಇಲಾಖೆಯ ವಿಲೇಜ್ ಪೋಸ್ಟ್ ಪಿನ್ನಗಳು ... ಗ್ರಾಮಗಳನ್ನು ಸುತ್ತ ... ಹೀಗೆ ಸುತ್ತುವರಿಗೆ ... ಸಂಬಳ ಇದು ಇವರ ಜೀವನಕ್ಕೆ ಸಾಲದೆ ... ಈಗ ಎಲ್ಲಾ ದಿನಸುಗಳು ಬಹು ಪ್ರಿಯವಾಗಿವೆ ಆದ್ದರಿಂದ ದಯವಿಟ್ಟು ಅಧಿಕಾರಿಗಳು ಇದನ್ನು ಚಿತ್ತಕ್ಕೆ ತಂದುಕೊಳ್ಳಬೇಕಾಗಿದೆ ... ದೇಶದಲ್ಲಿ ತಿಂಗಳಿಗೆ ... ೧೨, ... ೩೦, ರೂ ವರೆಗೆ ಕೊಡುತ್ತಿದ್ದಾರೆಂದು ಕೇಳಿ, ಈ ಕಡೆಯವರಿಗೆ ಸ್ವಲ್ಪ ನಿರೀಕ್ಷೆ ಉಂಟಾಗಿದೆ ಯಾವಾಗ ನಮಗೆ ಅಂಥಾ ಕಾಲವು ಬಂದೀತೋ ಎಂದು ಕಾಯ್ತಿರುತ್ತಾರೆ ಈ ದೇಶದವರಿಗೆ ೧೦ ರೂಪಾಯಿ ಜಾಸ್ತಿ ಮಾಡಿದರೆ ತಮ್ಮ ಕೆಲಸಗಳನ್ನು ಇನ್ನೂ ತೃಪ್ತಿಯಾಗಿ ಮಾಡುವರೆಂದು ಕೋರುತ್ತೇನೆ N P

ನ್ಯಾಚಿಕ್‌ಲ್ಯಾಟ್ರಿ ಬೇಕಾಗಿದೆ

ಅಯ್ಯಾ,

ನನಗೆ ನ್ಯಾಚಿಕ್‌ಲ್ಯಾಟ್ರಿ ಎಂಬ ಅದ್ಭುತ ದೀಪ ಯಂತ್ರವು ಬೇಕಾಗಿದೆ ಒಬ್ಬರ ಅಥವಾ ಇಬ್ಬರ ಸಹಾಯದಿಂದ ಕೆಲಸ ನಡಿಯಬೇಕು ಪ್ರತಿಮೆಗಳು ಪುರುಷಪ್ರಮಾಣ ಪರದೆಯ ಮೇಲೆ ಕಾಣಬೇಕು ದೊಡ್ಡ ಪರದೆ ಉಳ್ಳದ್ದಾಗಿರಬೇಕು ಮಧ್ಯೆ ಹೊಲದಿರಕೂಡದು ಶ್ರೇಷ್ಠವಾದ ಲೆನ್ಸ್ ಉಳ್ಳದ್ದಾಗಿರಬೇಕು ಸೆಕೆಂಡ್‌ಹ್ಯಾಂಡ್ ಆದರೂ ಚೆನ್ನಾಯಲ್ಲಿ ಸುಲಭ ಕ್ರಯ ಉಳ್ಳದ್ದಾಗಿಯೂ ವ ... ಇರಬೇಕು ಈ ವಿಷಯವನ್ನು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಿ ತಾವಾಗಲಿ ತಮ್ಮ ವಾಚಕರಲ್ಲಿ ಯಾರಾದರೂ ಸದರಿ ಯಂತ್ರವು ಮೈಸೂರು ದೇಶದಲ್ಲಿ ಸಿಕ್ಕುವ ವಿಸ್ತಾರ ಯಾ, ಕಂಪೆನಿಯ ಹೆಸರು ವಿಳಾಸಗಳನ್ನು ತಿಳಿಸಿದಲ್ಲಿ ತುಂಬಾ ಸಹಾಯ ಮಾಡಿದಂತಾಗುವದು ನಂತರ ನಾನೇ ಖುದ್ದು ನೋಡಿ ಒಪ್ಪಿ ತರಬಹುದಾಗಿರುತ್ತೆ

ತಮ್ಮ ವಿಧೇಯ,

ಎಸ್ ಲಕ್ಷ್ಮೀನರಸಿಂಹೈಯಂಗಾರ್

ಮಾಧವ ಮಂದಿರಂ,

ಬಸವನ ಗುಡಿ ಎಕ್ಸ್‌ಟೆನ್ಷನ್,

ಬೆಂಗಳೂರು ಸಿಟಿ

ನೀರಿನ ಕಷ್ಟ

ಅಯ್ಯಾ,

ಕಡೂರಿನಲ್ಲಿ ಈಗ ೭—೪ ದಿನಗಳಿಂದಲೂ ನೀರು ಕಡಿಮೆಯಾದ್ದರಿಂದ ಇಲ್ಲದೆ ಜನಗಳು ಬಹಳ ಸಂಕಟಪಡುತ್ತಾರೆ ಮತ್ತು ಈ ಊರಲ್ಲಿ ಪ್ಲೇಗ್‌ಗಲಾಟೆಯಿಂದ ಊರುಬಿಟ್ಟು ಕ್ಯಾಂಪುಗಳಲ್ಲಿರುವುದರಿಂದ ಒಂದು ಮೈಲಿ ದೂರದಿಂದ ನೀರು ತರಬೇಕಾಗಿರುವುದರಿಂದ ಜನಗಳು ಬಹಳ ತೊಂದರೆ ಪಡುತ್ತಾರೆ ಅದೂ ಅಲ್ಲದೆ ಈ ವರ್ಷ ದೇವರು ಮಳೆ ಚನ್ನಾಗಿ ನಡಿಸಿದ್ದರಿಂದ ಮದಗದ ಕೆರೆ ತುಂಬಿತುಳುಕಾಡುತ್ತದೆ ಹೀಗೆ ಆದಾಗ್ಯೂ ನಾಲೆ ಮಸೇಗಾರರು ನೀರು ಬಿಡದೆ ಇರುವುದರಿಂದ ಜನಗಳು ಪ್ಲೇಗ್‌ಗಲಾಟೆಯಿಂದ ಕ್ಯಾಂಪುಗಳಿಗೆ ಬಂದು ಮೂರು ತಿಂಗಳು ಸಹ ನೆಟ್ಟಗೆ ಆಗಿಲ್ಲ ಇಷ್ಟು ದಿವಸಗಳಿಗೇನೇ ನೀರಿಗೆ ತೊಂದರೆ ಆದ್ದರಿಂದ ಜನಗಳು ಊರಿಗೆ ಹೋಗಬೇಕಾಗಿ ಬಹಳ ಯೋಚನೆಮಾಡುತ್ತಾರೆ ಅದೂ ಅಲ್ಲದೆ ಸುತ್ತು ಮುತ್ತು ಹಳ್ಳಿಗಳಲ್ಲೂ ಚಿಕ್ಕಮಗಳೂರಿನಲ್ಲೂ ... ಪಟ್ಟಣದಲ್ಲೂ ಗಲಾಟೆಯಾಗಿದೆ ಮತ್ತು ಈ ನೀರಿನ ತೊಂದರೆಗೇನೇ ಊರಿಗೆ ಹೋದರೆ ಪುನಃ ಕ್ಯಾಂಪಿಗೆ ಎಲ್ಲಿ ಬರಬೇಕೋ ಎಂಬದಾಗಿ ಯೋಚನೆ ಮಾಡುತ್ತಾರೆ ಈ ನೀರಿನ ಕಷ್ಟವನ್ನು ತಾಲೋಕು ಅಮಲ್ದಾರರವರು ಇನ್ನಾದರೂ ನೀರು ಬಿಡಿಸಿ ಜನಗಳಿಗೆ ಬಹಳ ಸಂತೋಷವುಂಟುಮಾಡ ಬೇಕೆಂದು ನಂಬಿದ್ದೇನೆ.

ಮಳಲಿಪಾಪಣ್ಣಶೆಟ್ಟಿ

ದೇವಭಕ್ತಿಯೂ ದೇಶಾಭಿಮಾನವೂ

ಅಯ್ಯಾ,

ದಾವಣಗೆರೆಯಲ್ಲಿರುವ ವಿಶ್ವಬ್ರಹ್ಮ ಮತದ ಶಿಲ್ಪಕಲಾ ಕುಶಲರಾದ ವೈ-ಜ್ಞ ಅಂಬಾಚಾರ್ಯ ಗೋತ್ರಗಾಮಿಯವರು ಮಾಯಾಚಾರ್ಯ ಚನ್ನಪ್ಪ ಆಕಾರಾಚಾರ್ಯ ರಾಚಪ್ಪ ಇರಣೆ ಆಕಾರಾಚಾರ್ಯ ಪಕ್ಕೀರಪ್ಪ ಗೋತ್ರಗಾಮಿ ಮಗ್ಗರೆಯವರು ಶಂಭು, ವಿಷ್ಣು, ಗಣಪತಿ, ದೇವಿ, ಸೂರ್ಯ ಈ ಮೂರ್ತಿಗಳನ್ನು ಶಿಲ್ಪಶಾಸ್ತ್ರೋಕ್ತ ಪ್ರಕಾರ ಸ್ವತಃ ತಯಾರಿಸಿ ಇದೇ ಪರಾಭವನಾಮ ಸಂವತ್ಸರದ ಫಾಲ್ಗುಣ ಶುದ್ಧ ೧೦ ಶುಕ್ರವಾರ ಶುಭ ಮುಹೂರ್ತದಲ್ಲಿ ಇದೇ ದಾವಣಗೆರೆ ದೇವಾಂಗದ ಪೇಟೆಗೆ ಲಗತ್ತಿರುವ ಮಹೇಶ್ವರಮಠದ ಇದಿರ್ಭಾಗದಲ್ಲಿ ನೂತನವಾಗಿ ರಚಿಸಿರುವ ಶಿಲಾಮಂಟಪದಲ್ಲಿ ಶಿವಪಂಚಾಯತನ ಪ್ರತಿಷ್ಠೆಯಂ ಮಾಡಲು ನಿಶ್ಚೈಸಿ ತಮ್ಮ ಶಕ್ತ್ಯನುಸಾರ ಕೇವು ದ್ರವ್ಯವನ್ನು ಕೂಡ ಅನುಕೂಲಿಸಿಕೊಳ್ಳುವಲ್ಲಿ ಇವರು ಮಾಡುವ ಮಹತ್ಕಾರ್ಯಕ್ಕಾಗಿ ಈ ಊರಿನಲ್ಲಿನ ದೊಡ್ಡ ಮನುಷ್ಯರುಗಳಲ್ಲಾ ದ್ರವ್ಯಸಹಾಯ ಮಾಡಿದ್ದಾರೆ, ಮತ್ತೂ ಸಹಾಯ ಮಾಡತಕ್ಕವರಿದ್ದಾರೆ ಇಂಥಾ ಮಹತ್ಕಾರ್ಯವು ನಿರ್ವಿಘ್ನವಾಗಿ ಪರಿಸಮಾಪ್ತಿಯನ್ನೈದಲೆಂದೂ ಈ ಸತ್ಕಾರ್ಯಕ್ಕೆ ಸಹಾಯ ಮಾಡಿದ ಮಹಾಜನಂಗಳಿಗೆ ಚಿರಾಯುರಾರೋಗ್ಯವನ್ನೀಯಬೇಕೆಂತಲೂ ಇದಕ್ಕೆ ಮುಂದಾಳುಗಳಾಗಿ ನಿಂತಿದ್ದ ಗೌಡರು ಮತ್ತು ಶಾನುಭೋಗರಿಗೆ ಸಹ ಕಲ್ಯಾಣವನ್ನೆಸಗಬೇಕೆಂತಲೂ ಜಗದೀಶನಾದ ಈಶ್ವರನನ್ನು ಅನನ್ಯಭಾವದಿಂದ ಪ್ರಾರ್ಥಿಸುತ್ತೇನೆ ದೇಶಾಭಿಮಾನಿ

ಬೆಂಕಿಯ ಅನಾಹುತ

ಅಯ್ಯಾ,

ತಮ್ಮ ಪತ್ರಿಕೆಯಲ್ಲಿ ಬೆಂಕಿಯಿಂದ ಉಂಟಾಗುತ್ತಿರುವ ಅನೇಕ ಅನಾಹುತಗಳನ್ನು ಆಗಾಗ್ಗೆ ಪ್ರಕಟಿಸುತ್ತಾ ಇರುತ್ತೀರಿ ಅದನ್ನು ಓದಿದವರೆಲ್ಲರು ಸರ್ವರಿಗೂ ತಿಳಿಸದೆ ಇರಲಾರರು ಹಾಗೆ ತಿಳಿಸುತ್ತಿದ್ದಾಗ್ಯೂ ಜ್ಞಾಪಕವಿಲ್ಲದೆ ಅನೇಕರು ಇಂಥಾ ಅನಾಹುತಕ್ಕೆ ಗುರಿಯಾಗುತ್ತಿರುವರು ಈ ತಿಂಗಳು ... ತಾರೀಖು ಶನಿವಾರ ಹಗಲು ೩ ಘಂಟೆಯಲ್ಲಿ ಶೆಂಗೇರಿ ಪಟೇಲ್‌ರ ತಮ್ಮ ಆಪ್ಪಾಜಿ ನಂಜಪ್ಪನ ... ಮನೆಗೆ ಬೆಂಕಿ ಬಿದ್ದು ಹತ್ತಿಕೊಂಡಿತು ಇದರಲ್ಲಿ ದನಗಳು ಕಟ್ಟಿದ್ದರು ಒಂದು ಪಕ್ಕದಲ್ಲಿ ಅಡಿಗೆ ಮಾಡುತ್ತಿದ್ದರು ದಿನಸಿ ವಗೈರೆ ಸಾಮಾನು ಏನು ಇರಲಿಲ್ಲ ಆರಂಭದ ಸಾಮಾನು ಮರದ ಸಾಮಾನು, ಸೌದೆ ಇಷ್ಟಲ್ಲದೆ ಯಾವ ಸಾಮಾನು ಇರಲಿಲ್ಲ ದನಗಳ ಪೈಕಿ ನಾಲ್ಕು ಕರುಗಳು ಮಾತ್ರ ಒಳಗೆ ಇದ್ದವು ಅರ್ಧ ಮುಕ್ಕಾಲು ಭಾಗ ಹತ್ತಿಕೊಂಡ ಮೇಲೆ ಒಳಗಿದ್ದ ಕರುಗಳನ್ನೂ ... ನಂಜಪ್ಪ ಒಳಕ್ಕೆ ಹೋಗಿ ೨ ಕರುಗಳನ್ನು ಮಾತ್ರ ಹೊರಕ್ಕೆ ತಂದನು ಇನ್ನೆರಡಕ್ಕೆ ಆತನಿಗೆ ಸಾಧ್ಯವಾಗಲಿಲ್ಲ ಆ ಎರಡು ಯಜ್ಞೇಶ್ವರನ ಭಾಗವಾದವು. ೨ ರಿಂದಲೂ ಈಗ ನೂರು ರೂಪಾಯಿ ಬೆಲೆ ಬಾಳತಕ್ಕವುಗಳಾಗಿದವು ... ಸೋಮಣ್ಣಪ್ಪ ತಿಮ್ಮಪ್ಪ ನಂಜುಂಡಪ್ಪ ಇನ್ನು ಅನೇಕರು ಸೇರಿ ಸುತ್ತಲೂ ಇದ್ದ ಹುಲ್ಲಿನ ... ಯವರ ಹಂಚಿನ ಮನೆಗಳು ಸಹ ಅಪಾಯವಾಗದಂತೆ ನೀರಿನ ಸಹಾಯದಿಂದ ಆರಿಸಿದರು ಈ ಸಮಯದಲ್ಲಿ ನೀರಿಗಾಗಿ ಸಹಾಯಮಾಡಿದ ದಾಸಪ್ಪನ ಕಷ್ಟವು ಧೈರ್ಯವು ಕಾಗದದ ಮುಖಾಂತ್ರ ತಿಳಿಸಲು ಶಕ್ಯವಲ್ಲ ಬೆಂಕಿಬಿದ್ದ ಕಾರಣ ಹೇಗೆಂಬುದು ಗೊತ್ತಿಲ್ಲ ಶೆಂಗೇರಿ ಚಂದಾದಾರ್.

ಅಂತರಗಟ್ಟೆ ಜಾತ್ರೆ ತೇರಿನಿಂದಾದ ತೊಂದರೆ

ಅಯ್ಯಾ,

ಕಡೂರು ತಾಲ್ಲೋಕು ಹಿರೆಸಲ್ಲೂರು ಮಾಗಣಿ ಅಂತರಗಟ್ಟೆಯೆಂಬ ಗ್ರಾಮದಲ್ಲಿ ಈ ಪೆಬ್ರುವರಿ ತಾರೀಕು ೧ ನೆ ೯ ಕ್ಕಾವಾರ ಪ್ರತಿ ವರ್ಷವೂ ನಡೆಯುವ ಪದ್ಧತಿಯಂತೆ, ಗ್ರಾಮದೇವತೆಯ ರಥೋತ್ಸವವು ನಡೆಯಿತು ಈ ಜಾತ್ರೆಗೋಸ್ಕರ ಅನೇಕ ದೂರದೇಶಗಳಿಂದ ಅನೇಕ ಜನಗಳು ವ್ಯಾಪಾರಸ್ಥರು ಭಕ್ತಾದಿಗಳು ಸೇರಿದ್ದರು ಹಾನಕದ ಭಂಡಿಗಳ ಸಂಖ್ಯೆಯು ಎರಡು ಸಾವಿರಕ್ಕೆ ಮೇಲ್ಪಟ್ಟಿದ್ದವು ಎರಡು ನಾಟಕದ ಸಂಘವು ಬಂದಿದ್ದವು ಯಾವ ಯಾವ ಕಡೆ ನೋಡಿದಾಗ್ಯೂ ಊದಿನ ಕಡ್ಡಿಯನ್ನು ಹಚ್ಚಿ ಕಿವಿಗೆ ಚುಚ್ಚಿಕೊಂಡು ನಾಲ್ಕಾರು ಜನಗಳು ಗುಂಪು ಸೇರಿ ... ಗಳಿಂದ ಇತ್ತ ಕಡೆಯಿಂದ ಅತ್ತ ಕಡೆಗೆ ಅತ್ತ ಕಡೆಯಿಂದ ಇತ್ತ ಕಡೆಗೆ ಓಡಾಡುವದು ಕಾಣಿಸುತ್ತಿದ್ದಿತು ಅಮ್ಮನವರ ರಥಾರೋಹಣ ಕಾಲದಲ್ಲಿ ಮಾಮೂಲಿನಂತೆ ಕೋಣಗಳ ಸಮರ್ಪಣೆಯೂ ನಡೆಯಿತು ಕುರಿಗಳ ವಧೆಯನ್ನು ಕೇಳತೀರದು ಆ ಪ್ರಾಂತ್ಯವೆಲ್ಲಾ ಮದ್ಯಮಾಂಸ ಶೋಣಿತಮಯವಾಗಿದೆಯೆಂದೂ, ಜಲಾಶಯಗಳು ಬತ್ತಿ ಮತ್ತು ರೊಟ್ಟಿ, ಮುದ್ದೆ ತಾಂಬೂಲಗಳಿಂದ ಕೂಡಿರುವದೆಂದೂ ಹೇಳಬೇಕಾದ್ದು ಇಲ್ಲ ವಿಶೇಷವಾಗಿ ವ್ಯಾಪಾರ ನಡೆಯುವದರಿಂದಲೂ, ಅನೇಕ ಜನಗಳು ಸೇರುವುದರಿಂದಲೂ, ಕಡೂರು ತಾಲ್ಲೋಕಿನಿಂದ ಅಮಲ್ದಾರರವರೂ ಪೋಲೀಸ್ ಇನ್

ಸ್ವೆಷ್ಟರವರೂ ಜಮಾದಾರರವರೂ ತಕ್ಕ ಜರಿಗಾಂಡ್ಯೆದಿಗೆ ದಯಮಾಡಿಸಿದ್ದರು ಮಧ್ಯಾಹ್ನದಲ್ಲಿ ನಡೆಯತಕ್ಕ ಕೆಲಸಗಳೆಲ್ಲವೂ ನಡದವು ರಾತ್ರಿ ಅಮಲ್ದಾರರವರು ಕೆಲವು ಹೊತ್ತು ರಥದ ಸಂಗಡ ಇದ್ದು ದಯಮಾಡಿಸಿದನಂತರ ಬೆಳಗಿನ ಝಾವದಲ್ಲಿ ಅತ್ಯಂತ ಕೋಲಾಹಲದ ದಿಂದ ಎಳೆಯಲ್ಪಡುತ್ತಿದ್ದ ರಥವು ದಿಬ್ಬಕ್ಕೆ ಹತ್ತಿ ತಗ್ಗಿಗೆ ಕೆಳೆಯಲ್ಪಟ್ಟಾಗ ಅದು ರಭಸದಿಂದುರುಳಿ, ಗಾಲಿಯು ಪಕ್ಕದಲ್ಲಿದ್ದ ಮೂರು ಜನಗಳ ಮೇಲೆ ಹರಿಯಲು, ಒಬ್ಬನು ಮೃತನಾದನು ಮತ್ತೊಬ್ಬನ ಮೋಟಕಾಲಿನ ಕೆಳಗೆ ತುಂಡ್ರಿಸಿದೆ ಮತ್ತೊಬ್ಬನ ತೊಡೆಗಳಿಗೆ ತಂಬಾ ಗಾಸಿಯಾಗಿದೆ ಒಡನೆ ಅಮಲ್ದಾರರವರಿಗೆ ರಿಪೋರ್ಟಾಯಿತು ಬೀರೂರು ಮತ್ತು ಅಜ್ಜಂಪುರದ ಹಾಸ್ಪಟಲ್ ಅಸಿಸ್ಟೆಂಟರವರಿಗೆ ಏಕ್ಸ್ಪ್ರೆಸ್ ಹೋದ್ದರಿಂದ ಇಬ್ಬರೂ ದಯಮಾಡಿಸಿ, ತಕ್ಕ ಮಟ್ಟಿಗೆ ಉಪಚಾರಗಳನ್ನು ಮಾಡಿ ಒಬ್ಬನನ್ನು ಅಜ್ಜಂಪುರಕ್ಕೆ ಕರೆತಂದಿರುತ್ತಾರೆ ಇ ಸ್ಥಿಬ್ಬರನ್ನು ಆ ಸಂದಿಗೆ ಕರೆದುಕೊಂಡು ಹೋದಂತೆಯೂ ಇವರುಗಳು ಕಾಳಿದರೆ ಹೊಸದಾಗಿ ಹುಟ್ಟಿದಂತೆಯೂ ಹೇಳುತ್ತಾರೆ ಇವರುಗಳ ತಾಯಿತಂದೆಗಳಿಗೇನೆ ಎಷ್ಟು ರವಟ್ಟಿಗಿರಬೇಕೋ ಪಾಳಕರೇಗಳ ಉಹಿಸಿರಿ ಮುಖ್ಯ ಇಂತಾ ಜಾತ್ರೆಗಳಲ್ಲಿ ಕಾಳ್ತನಕ್ಕೆ ಬಂದವರ ಮೋಸಕ್ಕೆ ಒಳಗಾಗದೆ ಇಂತಹ ತೊಂದರೆಗಳಿಗೆ ಸಿಲುಕದೆ, ರೋಗಗಳಿಗೆ ಅಧೀನನಾಗದೆ ಹಿಂತಿರಿಗಿ ಬರುವುದು ಬಹಳ ದುಸ್ತರವು ಮುಖ್ಯ ಇಂತಹ ಕಡೆಗೆ ಹೋಗತಕ್ಕವರು ಬಹಳ ಹುಷಾರಾಗಿರಬೇಕು

ಸತ್ಯವೃತ್ತಾಂತಗ್ರಾಹಿ

ವೈಶ್ಯ ಮಹನೀಯರಿಗೆ ವಿದ್ಯಾಪ್ರೋತ್ಸಾಹ ಬೇಕು

ಅಯ್ಯಾ,

ಮುಖ್ಯ ವ್ಯಾಪಾರಾದಿಗಳಿಂದ ಜೀವಿಸುವ ಈ ಜನರಿಗೆ ವಿದ್ಯೆ ಮುಖ್ಯವಾಗಿ ಬೇಕು ಈ ಸಂಗತಿಯನ್ನು ತಿಳಿದ ಕೆಲವು ಬುದ್ಧಿಶಾಲಿಗಳು ತಮ್ಮ ಮಕ್ಕಳನ್ನು ಚನ್ನಾಗಿ ವಿದ್ಯೆ ಕಲಿಯದೇ ವ್ಯಾಪಾರ ನೋಡಲಾದವುಗಳಿಗೆ ನೇಮಿಸುವದಿಲ್ಲ ಇನ್ನು ಕೆಲರು ಸ್ವಲ್ಪ ವಿದ್ಯೆಯು ಕಲಿಯುತ್ತಲೆ ವ್ಯಾಪಾರಾದಿಗಳಿಗೆ ಸೇರಿಕೊಳ್ಳುವರು ಮತ್ತೆ ಕೆಲವರು ವಿದ್ಯೆ ಕಲಿಯಬೇಕೆಂಬ ಕುತೂಹಲವು ಇದ್ದಾಗ್ಯೂ ಹಣದ ತೊಂದರೆಯಿಂದ ವಿದ್ಯೆಯನ್ನು ಕಲಿಯಲು ಅಶಕ್ತರಾಗಿರುತ್ತಾರೆ ಈ ಸಂಗತಿಯು ಅನೇಕರಿಗೆ ತಿಳಿದೇ ಇದೆ ಈ ವೈಶ್ಯ ಜನರಲ್ಲಿ ಅನೇಕರು ಧನಿಕರಾಗಿರುತ್ತಾರೆ ಈ ಮಹನೀಯರು ತಮ್ಮ ಮತದ ಬಡ ಜನರಿಗೆ ವಿದ್ಯೆ ಕಲಿಯುವದಕ್ಕಾಗಿ ತಮ್ಮ ಕೈಲಾಗುವ ಧನವನ್ನು ಸಹಾಯ ಮಾಡಬೇಕೆಂತಲೂ, ವಿದ್ಯೆ ಕಲಿಯದೆ ವ್ಯಾಪಾರಾದಿಗಳಿಗೆ ಸೇರುವ ಜನರಿಗೆ ವಿದ್ಯಾ ವಿಷಯವಾಗಿ ತಕ್ಕ ಪ್ರೋತ್ಸಾಹಗೊಳಿಸಿ ವಿದ್ಯೆ ಕಲಿತನಂತರ ವ್ಯಾಪಾರಾದಿಗಳಿಗೆ ಸೇರುವಂತೆ ಬುದ್ಧಿ ಹೇಳಿ, ಈ ವೈಶ್ಯ ಕುಲವನ್ನು ಅಭಿವೃದ್ಧಿಗೆ ತಂದಾರೆಂದು ನನ್ನ ಕೋರಿಕೆ

ಕೆ ವೆಂಕಟರಾಯಶೆಟ್ಟಿ, ಬೆಲಗೂರು

ನಾಸಿಕಮರ್ದನಾ

ಅಯ್ಯಾ,

ತಲೆಕಲಾಂತ್ರದಿಂದಲೂ ಸೇವಿಸುವವರನ್ನು ದೂಷಿಸುವದು ಧರ್ಮ ವಿರುದ್ಧ ವಲ್ಲವೆ? ಸ್ವಾಮಿ ಭಕ್ತರನ್ನು ದೂಷಿಸುವದು ಯಾವ ನ್ಯಾಯ? ಅವರಿಲ್ಲದೆ ವೈದಿಕ ಕರ್ಮವು ಸಿದ್ಧಿ ಸಲಾರವು ಹೀಗಿರೋದರಲ್ಲಿ ಆ ಜನಗಳನ್ನ ಮುಟ್ಟಬಾರದು ನೋಡಬಾರದೆಂಬ ಯುಕ್ತಿ ಶಾಸ್ತ್ರವಿರುದ್ಧವಾಗಿ ಹೇಳುವದು ಸರ್ವಥಾ ತಪ್ಪಲ್ಲವೆ? ನಾಸಿಕರು ಶ್ರೀರಾಮಚಂದ್ರ ಮಂಕೆಯರಾದ ಉದಯಪುರದ ಮಹಾರಾಜರವರ ಮನೆಂಬಲ್ಲಿ ಉಪಚಾರಗಳನು ಮಾಡಿಕೊಂಡಿಲ್ಲವೆ? ಜಗನ್ನಾದದಲ್ಲಿ ಈ ಜನಗಳಿಂದ ದೇವರಿಗೆ ಸ್ನಾನೇಸ್ವಾದಿ ಉಪಚಾರಗಳು ನಡೆಯುವದನ್ನು ಸರ್ವರೂ ಅಂಗೀಕರಿಸಿಲ್ಲವೆ? ಮತ್ತು ಈ ನಾವನ್ನ ಕುರಿತು ಪಾರಾಶರ ಮಾಧವೀಯ ಎಂಬ ಧರ್ಮಶಾಸ್ತ್ರದಲ್ಲಾ ಅದಿತ್ಯ ಪುರಾಣದಲ್ಲಾ ನಯನ ಪುರಾಣದಲ್ಲೂ ಕಂಚಿ ಶಾಸನದಲ್ಲು ಹೇಳುವ ಮಾತು ಸುಳ್ಳೆ? ಶಾಸ್ತ್ರ ಒಂದಲ್ಲದೆ ಒಂದೇ ಒಂದು ದೇಶಕ್ಕೆ ಒಂದೊಂದು ಶಾಸ್ತ್ರವೇ? ಶುಭಕರ್ಮಂಗಳ ಕಾಲದಲ್ಲಿ ಮಂಗಳನಾದ್ಯವನ್ನು ಮಾಡದೆ ನೋಡರೆ ಅದು ಶುಭಕರ್ಮವೆನ್ನಿಸಿಕೊಳ್ಳುವದಿಲ್ಲ ಹೀಗಿರುವದರಲ್ಲಿ ಅವರನ್ನು ತ್ಯಜಿಸಿರುವವರ ಅವರಿಗೆ ಎಷ್ಟು ದುಃಖ ವಿರಬಹುದು ಅವರ ದುಃಖವನ್ನು ಯಾರಲ್ಲಿ ಹೇಳಿಕೊಳ್ಳಬೇಕು? ಸ್ವರ್ಯರನ್ನು ಮಾನದಿಂದ ಕಾಪಾಡತ್ತೇವೆಂಬ ದೇಶಗಳಿಗೆ ಹೋಗಿ ಆ ಜನಗಳು ಸೇರಿಕೊಂಡರೆ ಇದು ಯಾರಿಗ ಹಾನಿಯಾಗುತ್ತೆ? ಅಯ್ಯ ನ್ಯಾಯಾಧಿಪತಿಗಳಾಗಿ ಘನವನ್ನು ಹೊಂದಿದ ಮಹಾತ್ಮರೇ ತಾವೇ ಯೋಚನೆ ಮಾಡಿರಿ ಯೋಚನೆ ಮಾಡತಕ್ಕದ್ದಾಗಿದೆ ಅನ್ಯಾಯವೆಂಬ ಅಂಧಕಾರಸಮುದ್ರದಲ್ಲಿ ಆ ಜನಗಳು ಮುಳುಗಬಾರದೆ? ನಾ ಹಿಟ್ಟದರೆ ಸ್ನಾನ ಮಾಡಬೇಕೆಂದೇರ್ಪಡಿಸಿದರೆ ಅದೆಲ್ಲ ಶಾಸ್ತ್ರವಿರುದ್ಧ ಮತ್ತು ಹಾಸ್ಯಕರವಾಗಿದೆ ಕೆಲವರು ನಾಲ್ಕು ವರ್ಷಕ್ಕೊಮ್ಮೆ ವಿದೇಶಕ್ಕೆ ಜನಗಳ ರಾಜವಿದ್ವಾಂಸರ ಶ್ರೀಕೃಷ್ಣನ ಕಿವಿಯನ್ನು ಮುಟ್ಟುತ್ತಾರೆ ನನಸಮಾನರಿಗೆ ಕೋಪತೊಳ್ಳುತ್ತಾರೆ ಇಂಥಾ ವಿಶ್ವಾಸಘಾತು ಸೇವಕರನ್ನ ತಿರಸ್ಕಾರ ಮಾಡುವದು ಸರಿಯಾಗಿ ತೋರುತ್ತದೆಯೇ? ಆ ಜನಗಳು ಕ್ಷೌರ ಸಮಯದಲ್ಲಿ ಕೆರ್ಸ್ಸಿನ ಮೇಲೆ ನೀರು ಹಾಕುತ್ತಾರೆ ಆ ನೀರು ಶರೀರದೊಳಕ್ಕೆ ಪ್ರವೇಶ ಆಗುತ್ತದೆಯೇ ಇಲ್ಲವೆ? ಶರೀರದೊಳಕ್ಕೆ ಪ್ರವೇಶ ಮಾಡಿದ ನೀರು ಸ್ನಾನದಿಂದ ಹೊರಟು ಆಗುತ್ತದೆಯೇ? ಯಾವಾಗಲೂ ಇಲ್ಲ ತಸ್ಮಾತ್ ಕ್ಷೌರವಾದ ಮೇಲೆ ಸ್ನಾನ ಪದ್ಧತಿ ಕಾದಲು ಮೊದಲಿಂದ ಪ್ರಚೀನ ಪರಿಪಾಠ ಕುಪ್ತಿಗೋಸ್ಕರವೇ ಹೊರತು ಆ ಜನಗಳನ್ನ ಮುಟ್ಟಿದ್ದಕ್ಕಾಗಲಿಲ್ಲ.—ಮೇಲೆ ಕಂಡ ವಿಷಯಗಳನ್ನು ವಿದ್ವಾಂಸರ ವಿಚಾರಕ್ಕೋಸ್ಕರ ವಿಜ್ಞಾಪಿಸಿರುತ್ತೇನೆ

ಬಿ ಕೃಷ್ಟಯ್ಯ, ಮೊದ್ದವ್ಯಾಲಗೇರಿ, ಮೈಸೂರು

ಜಗಲೂರು ನಿರ್ಭಾಗ್ಯ ರೈತರ ಪ್ರಲಾಪವು

ಅಯ್ಯಾ,

ಮೆ॥ ಡೆಪ್ಯುಟಿ ಕಮಿಷನರ್ ಸಾಹೇಬರವರು ಕಳೆದ ತಿಂಗಳಲ್ಲಿ ಜಮಾಬಂದಿಗೋಸ್ಕರ ಬಂದಾಗ ಸ್ಕ್ಯಾಲ್ ತನಿಖೆ ಮಾಡುವಾಗ ಮ್ಯುನಿಸಿಪಲ್ ಕಮಿಷನರುಗಳು ವಗೈರೆ ದೊಡ್ಡಮನುಷ್ಯರು ಸ್ಕೂಲಿನ ಹೀನಸ್ಥಿತಿಯನ್ನೆಲ್ಲಾ ತಿಳಿಸಲಾಗಿಯೂ, ಸ್ವತಃ ನೋಡಿಯೂ, ರೈತರಿಗೆ ಇರತಕ್ಕ ಸಂಕಟವನ್ನು ತಿಳಿದು ಕನಿಕರಪಟ್ಟು, ಈ ವಿಷಯವನ್ನು ಇನ್ಸ್ಪೆಕ್ಟರ್ ಜನರಲ್ ಸಾಹೇಬರಿಗೆ ಬರೆಯುತ್ತೇನೆ ಎಂದು ಹೇಳಿ ಅಭಯವನ್ನು ಕೊಟ್ಟರು ಇದಲ್ಲದೇ ಪ್ರಜೆಗಳ ಮನೋಲಿಕಕ್ಕ ನಿಜವಾದ ಪ್ರೀತಿಯು! ಮುಂಚಿನ ಹೆಡ್ಮಾಸ್ಟರ್ ನಾರಾಯಣರಾಯರು ಇಲ್ಲಿಂದ ವರ್ಗವಾಗಿ ಹೋಗುವದಕ್ಕೆ ಕೆಲವು ದಿವಸ ಮುಂಚೆನಿಂದಲೂ ಈ ಸ್ಕೂಲ್ ವಿಚಾರವು ಅನನುಕೂಲವನ್ನು ಹೊಂದುತ್ತಾ ಬಂದು ಕಡೆಗೆ ಪ್ರಜೆಗಳಿಗೆ ಘೋರ ಸಂಕಟ ಉಂಟಾಗಲು ಆಸ್ಪದವಾಯಿತು ಈಗಲಾದರೋ ಮಾಸ್ಟರುಗಳಲ್ಲಿನ ಕಲಹವನ್ನು ಜಗಳದ ಬೊಬ್ಬೆಯನ್ನು ವಿದ್ಯಾರ್ಥಿಗಳು ಪಾಠ ಮಾಡಿಕೊಂಡು ಮನೆಗಳಿಗೆ ಬರುತ್ತಲಿದ್ದಾರೆ ನಾಲ್ಕನೇ ಕ್ಲಾಸಿಗೆ ಖಾಯಂ ಮೇಷ್ಟರಿಲ್ಲದೆ ತಮ್ಮ ಪಾಠಗಳನ್ನೆಲ್ಲಾ ಮುಂದಿನಿಂದ ಹಿಂದಕ್ಕೆ ಓದಿಕೊಂಡು ಬರುತ್ತಾರೆ ಬಹಳ ನೇರ್ಪಡಿಸಂದರೆ ಕಾಚೀ ಮೇಲೆ ಕೂಡಬೇಕಿಲ್ಲಾ ಮೇಷ್ಟರೇ ಇದಂತಿರಲಿ. ಮೆ॥ ಡೆಪ್ಯುಟಿ ಇನ್ಸ್ಪೆಕ್ಟರವರು ಪರೀಕ್ಷೆಗೆ ಬಂದಾಗ್ಗೆ ಮಾಸ್ಟರುಗಳ ದ್ವೇಷಾಸೂಯೆಗಳನ್ನೂ, ಮನಸ್ತಾಪಗಳನ್ನೂ, ಅವರ ಅರ್ಥವ್ಯಾಗಳನ್ನೂ ವಿದ್ಯಾರ್ಥಿಗಳು ಸ್ಕೂಲಿನಲ್ಲಿ ಗಲಾಟೆ ಮಾಡತಕ್ಕದ್ದನ್ನೂ ಸ್ವತಃ ನೋಡಿದರು ಮತ್ತು ಕೆಲವು ಜನ ದೊಡ್ಡಮನುಷ್ಯರು ಅವರು ಇಳಿದಿದ್ದ ಬಂಗಲೆಗೆ ಹೋಗಿ ತಮ್ಮ ಕಷ್ಟನಿಷ್ಟುರಗಳನ್ನ ಹೇಳಿಕೊಂಡರು ಅದಾಗ್ಯೂ ಸಾಹೇಬರು ತಮ್ಮ ಶಾಹೇಬರಾದ ಮಾಸ್ಟರುಗಳ ಕ್ಷೇಮಾಭಿವೃದ್ಧಿಯನ್ನು ಬಯಸಿದರೇ ಹೊರ್ತಾ ಪ್ರಜೆಗಳ ಕಡೆ ಸ್ವಲ್ಪವೂ ಲಕ್ಷ್ಯಕೊಡಲಿಲ್ಲ ಸಾವಿರಗಟ್ಟಲೆ ರೂಪಾಯಿಗಳನ್ನು ಖರ್ಚುಮಾಡತಕ್ಕದ್ದು ಪ್ರಜೆಗಳ ಸಲುಗೋ? ಮಾಸ್ಟರುಗಳ ಸುಖ ಜೀವನಕ್ಕೋ? ಇನ್ನೊಂದಾನ್ನತಿ ಮೆ॥ ಸರ್ಕಲ್ ಇನ್ಸ್ಪೆಕ್ಟರ್ ಸಾಹೇಬರವರು ಸ್ಕೂಲ್ ತನಿಖೆಗೆ ಬಂದರು ಇವರು ಸಹ ಸ್ಕೂಲಿನ ಹೀನಸ್ಥಿತಿಯನ್ನ ಪರಾಂಬರಿಸಿದ್ದಲ್ಲದೆ ಮಾಸ್ಟರುಗಳಲ್ಲಿರತಕ್ಕ ಕಲಹ ಮನಸ್ತಾಪಗಳನ್ನ ತಮ್ಮ ಗಮನಕ್ಕೆ ತೆಗದುಕೊಂಡರು ಆದರೆ ಪ್ರಜೆಗಳಾದ ನಾವೇ ಅದೃಷ್ಟಹೀನರು, ನಿರ್ಭಾಗ್ಯರು ಆಗಿರುವಲ್ಲಿ ಸ್ವದೇಶಿಗಳು, ಪ್ರಜಾನುರಾಗಿಗಳು ಆದ ಆ ಮಹನೀಯರ ಕರುಣವು ಸ್ವಾಗತಾನೆ ನಮ್ಮ ಮೇಲೆ ಬಂದೀತು ಅವಿದ್ಯಾಮಂತಕಾರವೂ, ಅನಾಗರೀಕರಾಗಿಯೂ, ಘೋರಾಕಾರ ಸಂಸಾರ ಸಮುದ್ರದಲ್ಲಿ ಮುಳುಗುತ್ತಾ ಏಳುತ್ತಾ ನಾನಾ ವಿಪತ್ಪರಂಪರೆಗಳನ್ನು ಸಹಿಸಿಕೊಂಡು ನಮ್ಮ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಿ ನವನಾಗರೀಕತೆ ಎಂಬ ತೆಪ್ಪವನ್ನಾದರೂ ಹತ್ತಿಸೋಣವೆಂದರೆ ನಮ್ಮ ದ ರದೃಷ್ಟವೇ ವಿಘ್ನಕಾರಿಯಾಗಿದೆಯಲ್ಲಾ ನಮ್ಮ ಅಧೋಗತಿಯೇ ನಮ್ಮ ಮಕ್ಕಳಿಗೆ ಒದಗುತ್ತದೆಯಲ್ಲಾ ಅನೇಕ ಭೂಮ್ಯಾಸ್ತ್ರರು ಸರ್ಕಾರದವರ್ಯ್ಯನ್ನು ದೇಶದ ಪ್ರಜೆಗಳಿಗೆ ವಿದ್ಯಾದಾನ ಮಾಡಿ ಹೊಸರೀತಿ ವ್ಯವಸಾಯ ಕಲಿಸಿಕೊಟ್ಟು ಉನ್ನತಸ್ಥಿತಿಗೆ ತರಬೇಕೆಂಬ ಮಹಾ ಪ್ರಯತ್ನವು ನಮ್ಮ ಪಾಲಿಗೆ ಇಲ್ಲದಂತೆ ಆಯಿತೆ, ಓ ಜಗದೀಶನೇ! ನೀನು ಕರುಣಿಸಿರುವ ಈ ಇಂಗ್ಲೀಷು ಪ್ರಭುತ್ವದಲ್ಲಿ ಯಾದರೂ ಏಶಗಳಿಂತ ಕೃಪ ನನ್ನು ಸಹಿಸುತ್ತಿರುವ ನಮ್ಮ ನಿರ್ಭಾಗ್ಯತ್ವವನ್ನು ಹೋಗಲಾಡಿಸದೆ ಇರಬೇಯಾ? ಪಾಠಪ್ರಯತ್ನ ವಕ್ಕ ದೇಶವತ್ಸಲರಿಂದ ನಮ್ಮ ಮಕ್ಕಳ ವಿದ್ಯೆಯು ವ್ಯವಸಾಯವೂ ಊರ್ಜಿತ ಹೊಂದುವದು ಹ್ಯಾಗೆ? ಎಂದು ನಾನಾ ರೀತಿಯಾಗಿ ಹಂಬಲಿಸುತ್ತಿರುವ ರೈತರ ಪ್ರಲಾಪವನ್ನು ನಾನು ವಿನಂತಿ ಹೇಳಲಿ! ಶಾಂತ ಸಮುದ್ರದಲ್ಲಿ ಬಿತಬಾಗ್ಗಿಯು ಅನೇಕ ದಿವಸಗಳ ವರೆಗೂ ಅವಿಕಾಶ ಒಂದಿದ್ದ ಒಂದಾನೊಂದು ದಿವಸ ಕೇರವಸುವದಿಲ್ಲವೇ? ಹಾಗೆಯೇ ಶಾಂತರಾದ ನಮ್ಮ ರೈತರಲ್ಲಿ ೨ ವರ್ಷಗಳಿಂದಲೂ ಅವಿರುಕೊಂಡಿದ್ದ ಸಂಕಟವು ಇನ್ನೆಷ್ಟು ದಿವಸ ಅಡಗಿಕೊಂಡಿರುತ್ತದೆ? ಈ ಸ್ಕೂಲಿನ ಹಾಳಾಗೋಂತು ಅತ್ಯಾಶ್ಚರ್ಯಕರವಾಗಿರುತ್ತದೆ ಹೊಸದಾಗಿ ಬಂದ ಮಾಸ್ಟರುಗಳಲ್ಲಾ ಕಲಹ ಮನಸ್ತಾಪಗಳಿಂದ 'ಅವೇಕಳರಿಂದಾಗುತ್ತಾರೆ ಸರ್ಕಾರದ ದ್ರವ್ಯವೂ, ಪ್ರಜೆಗಳ ದುಡ್ಡೂ, ಅವರ ಆಪೇಕ್ಷವೂ, ವಿದ್ಯಾರ್ಥಿಗಳ ಅಮೂಲ್ಯವಾದ ವಯಸ್ಸು ವ್ಯರ್ಥವಾಗುತ್ತಿದ್ದಾಗ್ಯೂ ವಿದ್ಯಾ ಇಲಾಖೆಯ ಈ ಸ್ಕೂಲಿನ ಕಡೆಗೆ ಸದ್ಯ ದೃಷ್ಟಿಸಿ ನೋಡುವಂತೆ ಕಾಣುವದಿಲ್ಲ ದಯಾಳು ಸರ್ಕಾರದವರು ಇದನ್ನೆಲ್ಲಾ ಪರ್ಯಾಲೋಚಿಸಿ ಮುಂದೆ ಯಾವ ರೀತಿ ಏರ್ಪಾಡು ಮಾಡಬೇಕಾಗಿದೆಯೋ ಅದನ್ನೆಲ್ಲಾ ಜಾಗ್ರತೆಯಾಗಿ ನಡಿಸಿ ರೈತರಲ್ಲಿರತಕ್ಕ ಮನೋವ್ಯಥೆಯನ್ನು ಹೋಗಲಾಡಿಸಿ ಕಾಪಾಡುವರೆಂಬ ಕುತೂಹಲವು ತುಂಬ ಇರುತ್ತದೆ

ರೂಪಾ ಬಡೇಸಾಬಿ,
ಜಗಲೂರು

ಮೈಸೂರು ಗೆಜೆಟ್ ಸಂಗ್ರಹ

ಗವರ್ನಮೆಂಟ್ ಅಂಡರ್ ಸೆಕ್ರಿಟರಿ ಮೆ॥ ಕೆ ಮತ್ತ್ಕರವಂಗ ಜನವರಿ ೧೭ ರಿಂದ ಎರಡು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಅವರು ರಜದಿಂದ ವಾಪಸು ಬರುವ ವರಗೆ ಮೆ॥ ಟಿ ತಂಬೂಶೆಟ್ಟಿಯವರು ರೆವಿನ್ಯೂ ಜನರಲ್ ಸೆಕ್ರಿಟೆರಿಯಟನಲ್ಲೂ ಮೆ॥ ಎ ಕೃಷ್ಣಸ್ವಾಮಯ್ಯಂಗಾರ್ರು ಎಕ್ಸ್ಟ್ರಾ ಅ॥ ಕಮಿಷನರಾಗಿಯೂ ಕೆಲಸ ನೋಡತಕ್ಕದ್ದು

ಚಿಕ್ಕನಾಯಕನಹಳ್ಳಿ ತಾಲ್ಲೂಕ್ ಅಮಲ್ದಾರ್ ಮೆ॥ ವಿ ಗೋಪಾಲರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳು ಇಪ್ಪತ್ತಾರು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ನೆಲಮಂಗಲದ ತಾಲ್ಲೂಕ್ ಶಿರಸ್ತೇದಾರ್ ಸಿ ಕಾಶೀನಾಥರಾಯರು ಚಿಕ್ಕನಾಯಕನಹಳ್ಳಿ ತಾಲ್ಲೂಕ್ ಅಮಲ್ದಾರು ಮತ್ತು ೩ ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಒದಲಿ ಕೇಲಸತಕ್ಕದ್ದು

ಅ॥ ಕಮಿಸ್ನರ್ ಮೆ॥ ಬಿ ವೆಂಕಟರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಐವತ್ತೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಪೊಲೀಸ್ ಡಿಪ್ಯು ಅ॥ ಕಮಿಷನರ್ ಮೆ॥ ಟಿಪ್ಪೂಸುಲ್ತಾನ್ ಅಲ್ಲೀಖಾನರವರಿಗೆ ಡಿಸೆಂಬರ್ ೧೦ ರಿಂದ ಒಂದು ತಿಂಗಳು ಇಪ್ಪತ್ತೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಹಾಸನ ಡಿಸ್ಟ್ರಿಕ್ಟಿನಲ್ಲಿ ಎಕ್ಸ್ಟ್ರಾ ಅ॥ ಕಮಿಷನರಾಗಿ ನೇಮಿಸಲ್ಪಟ್ಟಿದ್ದ ನಾಗಮಂಗಲ ತಾಲ್ಲೂಕಿನ ಅಮಲ್ದಾರ್ ನೆ॥ ಟಿ ಧರ್ಮರಾಜ ಚೆಟ್ಟಿಯವರಿಗೆ ೧೧ ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ರೆವಿನ್ಯೂ ಕಮಿಷನರವರ ಅಸಿಸ್ಟೆಂಟರಾದ ಮೆ॥ ವಿ ಆರ್ ಗರುಡ ಐಯ್ಯರವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದೂವರೆ ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಕಂಟ್ರೋಲರವರ ಚೀಫ್ ಅಸಿಸ್ಟೆಂಟ್ ಮೆ॥ ಟಿ ವೈಯಾಸೆಟ್ಟರವರಿಗೆ ೧೦ ನೇ ಜನವರಿ ೧೯೦೭ ರಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು.

ಮೆ॥ ವೈಯಾಪುರಿ ಸೆಟ್ಟರವರು ರಜದ ನೇಲಿರುವಾಗ ೪ ಘನಃ ಅರ್ಥ... ಪರ್ಯಂತರ ಮೆ॥ ಜೆ ಪೌಟ್ಸ್ ಯು ಕಂಟ್ರೋಲರ್ ಆಫೀಸಿನ ಸೀನಿಯರ್ ಎಗ್ಸಾಮಿನರಾಗಿರತಕ್ಕದ್ದು

ಕಡೂರು ೨॥ ಟ್ರಷರಿ ಚಾರ್ಜಿನಲ್ಲಿರುವ ಅ॥ ಕ॥ ಮೆ॥ ವೇದವೇಶಿಂಗ್ ಅಯ್ಯಂಗಾರರ್ರಿಗೆ ೧ ನೇ ಫೆಬ್ರವರಿಯಿಂದ ೧೫ ದಿನ ಪ್ರಿವಿಲೆಜ್ ರಜಾ ಕೊಟ್ಟಿದೆ

ಮೈಸೂರು ಸಂಸ್ಥಾನದ ಚೀಫ್ ಇಂಜನಿಯರನ್ನೂ ರಸ್ತೆ ಮತ್ತು ವೆಸ್ಟರ್ನ್ ಸರ್ಕಲ್ ಸೂ॥ ಇಂಜನಿಯರುಗಳನ್ನೂ ಅವರ ಆಫೀಸತ್ಯಕ್ಕೆ ಒಳಪಟ್ಟ ಸರಹದ್ದಿನೊಳಗೆ ಟ್ರಾಂವೆ ಇನ್ಸ್ಪೆಕ್ಟರು ತಕ್ಕ ಇಂಜನಿಯರುಗಳಾಗಿ ನೇಮಕ ಮಾಡಲ್ಪಟ್ಟಿದ್ದಾರೆ

ಪೋ॥ ಹೆಡ್ಕ್ವಾರ್ಟರ್ ಅ॥ ಮೆ॥ ಪಿ ಸುಬ್ಬರಾವ್ ಬಿ. ಬಿ ಎಲ್ ರವರು ಮಾಲೂರಿನ ಅಮಲ್ದಾರಾಗಿಯೂ ೩ ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿಯೂ ಮತ್ತೊಂದು ಹುಕುಂ ಕೊಡುವ ತನಕ ನಿಯಮಿತರಾಗಿದ್ದಾರೆ ಮೆ॥ ಕೇಶವಯ್ಯನವರು ತಮ್ಮ ಪೂರ್ವದ ಸಕ್ಕೆ ಹೋಗತಕ್ಕದ್ದು.

ಮಧ್ಯಪ್ರಾಂತ್ಯಗಳ ಪಿ ಆನರಬಲ್ ಚೀಫ್ ಕಮಿಷನರ್ ಸಾಹೇಬರವರು ಮೈಸೂರ್ ಸಂಸ್ಥಾನಕ್ಕೆ ಹಂಗಾಮಿಯಾಗಿ ಕಳುಹಿಸಿ ಕೊಟ್ಟಿದ್ದ ಎಕ್ಸ್ಟ್ರಾ ಅ॥ ಕನ್ಸರ್ವೇಟರು ಮೆ॥ ಇನಾಂತಿ ಶಾಮರಾವ್ ರವರು ೧೭ ನೇ ಡಿಸೆಂಬರ್ ೧೯೦೬ ರಿಂದ ೨ ನೇ ಗ್ರೇಡ್ ಸೂಪರ್ನ್ಯೂಮರರಿ ಅ॥ ಕನ್ಸರ್ವೇಟರಾಗಿ ನೇಮಕ ಮಾಡಲ್ಪಟ್ಟು ಹಾಸನ ಡಿ॥ ನಿಯಮಿತರಾಗಿದ್ದಾರೆ

ಮೆ॥ ವಿ ಎಸ್ ರಾಜಗೋಪಾಲಾಚಾರ್ಯ ತೆಗೆದುಕೊಂಡಿದ್ದ ಒಂದು ತಿಂಗಳ ಪ್ರಿವಿಲೆಜ್ ರಜವು ಪೂರಯಿಸುವವರೆಗೂ ಮೆ॥ ಕೆ. ರಾಮಚಂದ್ರಯ್ಯನವರು ಕೃಷ್ಣರಾಜಪೇಟೆ ತಾ॥ ಶಿರಸ್ತೇದಾರರಾಗಿಯೂ ೩ ನೇ ಕ್ಲಾ॥ ಮ್ಯಾಜಿಸ್ಟ್ರೇಟರಾಗಿಯೂ ಇರತಕ್ಕದ್ದು

ನಾಟರ್ಸ್ಸು ಮತ್ತು ಸ್ಟೋರ್ಸ್ ಡಿವಿಜನ್ನಿಗೆ ಸೇರಿದ ಅ॥ ಇ॥ ಮೆ॥ ಕೆ ಶ್ರೀನಿವಾಸ್ಯಯ್ಯಂಗಾರರಿಗೆ ೨ ನೇ ತಾರೀಖಿನಿಂದ ೪ ದಿನ ಪ್ರಿವಿಲೆಜ್ ರಜ ಕೊಟ್ಟಿತ್ತು.

ತಾಲ್ಲೋಕು ವರ್ತಮಾನಗಳು

ಯಳೇಹಳ್ಳಿ.—ಬೆಳಿಗ್ಗೆ ಮಂಜು ಸುರಿಯುತ್ತಲೂ, ಮಧ್ಯಾಹ್ನ ಸಿಲು ಕಾಯುತ್ತಲೂ ಇದೆ ರೋಗಾದಿಗಳೇನೂ ಇಲ್ಲ ಜನಸಿಕಿ ಬಹಳ ಚಪ್ಪಾಗಿದೆ ಇಲ್ಲಿನ ಕನ್ನಡ ಲೋವರ್ ಸೆಕೆಂಡರಿ ಸ್ಕೂಲ್ ಎಟ್ ಮಲ್ಲಯ್ಯನವರೂ, ಹೆಡ್ಮಾಸ್ಟರ್ ಬಿ ವೆಂಕಟರಾಮಯ್ಯನವರೂ ಹಗಲು ಸ್ಕೂಲಿನಲ್ಲಿಯೂ, ರಾತ್ರಿಯಲ್ಲಿ ಮನೆಯಲ್ಲಿಯೂ ಹುಡುಗರಿಗೆ ಬಹಳ ಮುತುವರ್ಜಿಯಿಂದ ಪಾಠವನ್ನು ಹೇಳಿಕೊಡುತ್ತಿರುವದರಿಂದಲೇ ಈ ವರ್ಷ ಪರೀಕ್ಷೆಗೆ ಹೋದ ಪ್ರತಿ ಹುಡುಗರೂ ತೇರ್ಗಡೆಯಾಗಲು ಕಾರಣವಾಯಿತು ಇದೇ ತಾರೀಖು ಶ್ರೀ ಸೋಮವಾರ ಶ್ರೀಮನ್ ಮಹಾರಾಜಾ ರಾಜಾಸಾಹೇಬ್ ಬಹದೂರವರ ಸವಾರಿಯು ಮೋಟರ್ ಕಾರಿನಲ್ಲಿ ಇದೇ ಮಾರ್ಗವಾಗಿ ಶೃಂಗೇರಿ ಚಿಕ್ಕೈಸೆ ಸ್ವಾಮಿಗಳ ದರ್ಶನವನ್ನು ಮಾಡಿಕೊಂಡು ತಾರೀಖು ೬ ನೇ ಬುಧವಾರ ಮಧ್ಯಾಹ್ನ ೩॥ ಘಂಟೆಸಮಯದಲ್ಲಿ ಇಲ್ಲಿಗೆ ದಯಮಾಡಿಸಿ ಸಾಹುಕಾರ ಕೃಷ್ಣಪ್ಪನವರ ಮನೆ ಮುಂದೆ ಆಟ್ಸಿದ್ದ ಪಂಟಪದಲ್ಲಿ ಕಾಲು ಘಂಟೆ ಹೊತ್ತು ನಿಂತಿದ್ದರು ಸುಮಾರು ೬೦೦—೭೦೦ ಜನರೈನಾಗನಿಂತಿದ್ದರು ಮೆ॥ ಪ್ಲೀಡರ್ ರಾಮರಾಯರು ಅಡ್ರೆಸ್ಸನ್ನು ಓದಿದರು ಮೆ॥ ಪ್ಲೀಡರ್ ಭಾನಪ್ಪನವರು ಆ ಅಡ್ರೆಸನ್ನು ಚಿತ್ರಕೆಲ್ಸ ಮಾಡಿದ್ದ ಬೆಳ್ಳಿ ಪೆಟ್ಟಿಗೆಯಲ್ಲಿಟ್ಟು ಮಹಾರಾಜರವರಿಗೆ ಒಪ್ಪಿಸಿದರು ಹೆಣ್ಣಾಗುಂಡ ಗುಲ್ಲಾ ಹಾಡುಗಳನ್ನು ಹೇಳಿ ಆರತಿಯನ್ನ ಎತ್ತಿದರು ಸ್ಕೂಲ್ ಬಾಯ್ಸ್ಗಳೆಲ್ಲರೂ "ಗಾಡ್ ಸೇವ್ ಅವರ್ ಕಿಂಗ್ ರಾಜಾ" ಎಂಬದಾಗಿ ಜಯ ಘೋಷವನ್ನು ಮಾಡಿದರು ತರುವಾಯ ಮಹಾರಾಜರವರ ಸವಾರಿಯು ಕಡೂರಿಗೆ ಬಿಜ್ಜೈಸಿತು ಈ ಊರು ಎಲ್ಲಿ ನೋಡಿದರೂ, ತೋರಣಗಳಿಂದಲೂ, ಮಂಟಪಗಳಿಂದಲೂ, ಬಾವುಟಗಳಿಂದಲೂ ನೋಡತಕ್ಕದ್ದಾಗಿ ಬಹಳ ಸೊಗಸಾಗಿ ಕಾಣುತ್ತಾ ಇತ್ತು.

ಬಾಣಾವಾರ—ಈ ಊರು ಕಾಫೀ ಬೆಳೆಯ ಸೀಮೆಯಾಗಿ ಸುತ್ತ ಮುತ್ತಾ ಇರುವ ಆಗಳಿಗಳಲ್ಲಿ ನೀರುತುಂಬಿ ಊರಿನ್ನ ಸಿಗೆ ಹರುಡಾಗಿ ಎಂದು ಹಿಂದಕ್ಕೆ ಮೂರು ಕೇಸುಗಳಿಂತ ಆಗತ್ತ ಇತ್ತು ಈಗ ದೇವರ ಅನುಗ್ರಹದಿಂದ ೯—೧೦ ದಿನದಿಂದ ಏನೂ ಯಾವ ಭಾಗದ ಆದ್ದಲ್ಲವೂ ಗಲಾಟೆ ಇರುವದಿಲ್ಲ ಈ ಊರಿನ ನಾಲ್ಕು ರಸ್ತೆಯಲ್ಲಿಯೂ ವರ್ತಕರು ಮತ್ತು ರೈತರು ಮುಂತಾದರು ಕಡ್ಡಗಳನ್ನು ಹಾಕಿಕೊಂಡಿರುತ್ತಾರೆ ಕಳ್ಳರ ಉಪಾತ ಮಾತ್ರ ಬಹಳ ಅಧಿಕವಾಗಿಯೂ ಆಗತ್ತೆ ಇದೆ ಮೆ ಗೆ ೯—೧೦ ಪತ್ರ ಸಿಟ್ಟಂತೆ ಆಯಿತು. ಇದೇ ತಿಂಗಳು ೩ ನೇ ತಾರೀಖಿನ ದಿವಸ ಸೂರ್ಯಕಾಲ ಕ ಘಂಟೆ ಸಮಯದಲ್ಲಿ ಬ್ರಾ ಊರ ಕೆಳ ಆಕಸ್ಮಾತ್ತಾಗಿ ಬೆಂಕಿ ಬಿದ್ದು ಸುಟ್ಟದ್ದಲ್ಲದೆ ಸ್ವಲ್ಪ ಸಾಮಾನು ನಷ್ಟವಾಯಿತು ಪೊಲೀಸು ಆಫೀಸು ಕ್ಲಾರ್ಕ್ ಮೆ॥ ಕೆ ಸುಬ್ಬರಾವ್ ಎಂಬುವರು ಈ ಸಮಯದಲ್ಲಿ ಬಹಳ ಶ್ರಮಪಟ್ಟು ಧೈರ್ಯದಿಂದ ಕಳ್ಳಗಳಿಂದ ಅದನ್ನು ಆರಿಸಿದರು ಉಳಿಯುತ್ತಿದ್ದ ಬೆಳೆಕನ್ನ ಕಮ್ಮಿ ಮಾಡಿದರು ಬೆಂಕಿಯು ಆಗ ಅವರಿಗೆ ವ್ಯಾಪಿಸಿದಾಗ ಅವರನ್ನು

ಷಷ್ಟಿಗೆ ತೋಳು ಮೇಲೆ ಎತ್ತಿಕೊಂಡು ಹೋದರು ಅವರಿ ಗೆ ಎಂಟು ಘಂಟೆಗೆ ಸ್ವಲ್ಪ ಮಾತನಾಡಲು ಬಾಯಿ ಬಂತು.—[illegible] ಸಮೀಪವಾಗಿರುವ ಚೋವ್ಮನಹಳ್ಳಿ ಎಂಬ ಕ್ರೈಸ್ತರ ಗ್ರಾಮ [illegible] ವರಿ ತಾ. ೨೮ ರಲ್ಲಿ ಘನ ಪಾದ್ರಿಗಳಾದ ಟ್ರನೆಲ್ಲಾ ಸಾಹೇ ಬರು ತಮ್ಮ ಅರ್ಧಾಂಗಿ ಸಹಿತವೂ, ಘನ ನೇಟೀವ್ ಪಾದ್ರಿ ಜಾ [illegible] ಯ್ಯನವರೊಡನೆಯೂ ಇಲ್ಲಿಗೆ ದಯಮಾಡಿಸಿ, ಇಲ್ಲಿನ ವಿ ಶೇಷಗಳನ್ನು ವಿಚಾರಿಸಿ, ಅನಂತರ, ಸ್ಕೂಲ್ ಬಾಲಕ ಬಾಲಕಿಯ ರಿಗೆ ಗೊಂಬೆ, ಗೋಲಿ, ಚೆಂಡು, ಹೆಣ್ಣು ಮಕ್ಕಳಿಗೆ ಬಟ್ಟೆ, ಕು [illegible] ಮುಂತಾದ ಇನಾಮುಗಳನ್ನು ಧೊರೆಸಾನಿಯವರ ಕೈಯಿಂದ ಕೊಡಿಸಿದರು ಬಳಿಕ ಎಲ್ಲಾ ಮಕ್ಕಳಿಗೂ ತಿಂದಿ ಪದಾರ್ಥಗಳನ್ನು [illegible] ಮಕ್ಕಳ ತಂದೆ ತಾಯಿಗಳನ್ನೂ ಸಂತೋಷ ಪಡಿಸಿದರು ಆ ಗ್ರಾಮಸ್ಥರನ್ನೆಲ್ಲಾ ದೇವಸ್ಥಾನದ ಮುಂದೆ ನಿಲ್ಲಿಸಿ ಅವರೆಲ್ಲರ ಚಿತ್ರವನ್ನು ಫೋಟೋ ತೆಗೆದುಕೊಂಡು, ಆ ದಿನ ಗುಬ್ಬಿಗೆ ತೆರ ಳಿದರು

ತಿಪ್ಟೂರು.—ಕೆಲವು ದಿನಗಳ ಕೆಳಗೆ ಸಿದ್ರಾಮಸೆಟ್ಟಿ ಎಂಬಾತನ ಮನೆ ಹಿಂದಲಿಂದ ಕನ್ನಾ ಹಾಕಿ—ಕಳ್ಳರು ಸುಮಾರು ೫೦—೬೦ [illegible] ನ್ನು ಹೊತ್ತು ಕೊಂಡು ಹೋದರೆಂದು ತಿಳಿಯಿತು. ಟವನು (ದಫೇದಾರು) ರಜಾ ತೆಗೆಸಿಕೊಂಡು ತುಮಕೂರು ಕಡೆಯಿಂದ ರೈಲಿನಲ್ಲಿ ಬರಲು ತಿಪ್ಟೂರು ಗೇಟಿನಲ್ಲಿ ಗಾಡಿಯು ನಿಂತಿತು ಸಂಗಡ ಕೊ ನೆತ್ತರವನೆ ಒಪ್ಪಿನಾ ದಫೇದಾರರ ಮೂಟೆಯನ್ನು ಕೆಳಗೆ ಇಳಿಸಾರಿ [illegible] ಕಾನ್ಸ್ಟೇ ದಫೇದಾರರು ಗಾಬರಿಮಾಡದೆ ಮೆಲ್ಲಗೆ ಕೆಳಗಿಳಿದು ಪೋಲೀಸಿನವರನ್ನು ಕರಕೊಂಡು, ಮೂಟೆಯನ್ನು ನೋಡುವಾಗ ಸ [illegible] ಟನ್ನು ಪಾಪಿಗರ ಗುರವ ಎಂಬವನು ಬಿಚ್ಚುತ್ತಿದ್ದನು ಕೂಡಲೆ [illegible] ಯನ್ನು ಹಿಡಿದು ಪಾಲಿನೊಂದಿಗೆ ಬೆಳಗಿನವರೆಗೂ ಕಾದಿರ [illegible] ದರಾಗ ಸ್ಟೇಷನ್ನು ಮಾಸ್ಟರ್ ಮ॥ ಪಚ್ಚಪ್ಪಚಾರ್‌ರವರು ದಫೇದಾರನ್ನು ಕರತರಿಸಿ ಮಹಜರ್ ಬರಸಿ ರೈಲ್ವೆ ಪೋಲೀಸ್ [illegible] ರ ಬಳಿಗೆ ಕೇಸನ್ನು ಸಾಗಿಸಿದರೆಂದು ತಿಳಿಯಿತು. ಈ ಸಾಲಿನ [illegible] ಮನೆ [illegible] ಅಧಿಕಾರಿಗಳಿಂದ ವಸೂಲ್‌ಗುತ್ತಿದೆ ಕಣ [illegible] ದ್ದರಿಂದ ಈ ಕಿಜನರು ಒಲಿಗೆ ಸೌದೆಯಿಲ್ಲ ಮನೆಗಳಲಿ ಇ [illegible] ದಿನಗಳನ್ನಾದರೆ [illegible] ಒಲೆಗೆ ಇಡ ಸಂಗಾಗಿದೆ ಘನ ಅ [illegible] ವಾಸಿಯಲ್ಲಿ ಮ॥ ಪೀತಾಂಬರಯ್ಯ ಎಂಬುವರು ಸಂಗೀತ [illegible] ಕಾರರನ್ನು ಸಂತೋಷಗೊಳಿಸಿದರು ಸಬ್ ರಿಜಿಸ್ಟ್ರಾ[illegible] ಲಕ್ಷ್ಮೀಕಾಂತಯ್ಯಂಗಾರು ಕೂಸಿಗೆ ಸ್ವಸ್ಥವಾದ್ದರ ನಿಮಿತ್ತ [illegible] ಅರಸೀಕೆರೆ ಕಡೆಗಳಿಂದ ನೆಂಟರುನ್ನು [illegible], ತಂಡ ತಂಡವಾಗಿ ಬಂದು ಕೂಡಿದ್ದರು. ಮತ್ತು ದೊಡ್ಡ ಮನುಷ್ಯರು ಸಹ ನೆರೆದಿರಲು ಸಂಗೀತಗಾರ್ ಮ॥ ಪಿ. [illegible] ಯ್ಯನವರು ವಾದ್ಯಗಳೊಡನೆ ಸಂಗೀತವಾಡ ಎದ್ದರು ಸಭಿ ಕರ [illegible] ಕರತಾಡನಗಳೂ ಧ್ವನಿಸುತಿದ್ದವು ವ ರೆಡ್ಡಿಬ್ಬರೂ [illegible] ಗ್ರಾಮೋಫೋನ್ ವಾದ್ಯವನ್ನು ನುಡಿಸುತ್ತಿದ್ದರು [illegible] ಇದ್ದ ಕಾಲ ಸಭಾ ಮಧ್ಯದಲ್ಲಿತ್ತು. ಸಭಿಕರ ಮನ ಸು ಸಂಗೀತ ಪಟ್ಟಿಯಲ್ಲಿ ತೇಲುವಂತಿದ್ದವು ಪನ್ನೀರು ಪುಷ್ಪ ತಾಂಬೂಲಾದಿಗಳು ಎಲ್ಲರಿಗೂ ಮ॥ ಅಯ್ಯಂಗಾರರನ್ನು [illegible] ರವರ ಉಪಕಾರವನ್ನು ಕೊಂಡಾಡುತ್ತಾ ತಮ್ಮ ತಮ್ಮ ಬಿಡಾ ರಕ್ಕೆ ತೆರಳಿದರು

ದೊಡ್ಡಬಳ್ಳಾಪುರ.—ಈ ಪ್ರಾಂತ್ಯದಲ್ಲಿ [illegible] ಬಹು ದೊಡ್ಡದೆಂದು ಸರ್ವಮಾನ್ಯವಾಗಿದೆ [illegible] ಬೆಲೆಯುಳ್ಳ ವಸ್ತುಗಳು ಬರುತ್ತವೆ ಈ ಸಾಲಿ ಭಾರಿ ವಸ್ತುಗಳಿಗೆ ಇನಾಂ ದೊರೆಯಿತು. ಈ ವಸ್ತುಗಳನ್ನು ಕೊಳ್ಳುವದಕ್ಕೆ ಜನ [illegible] ಮಿಂಟ್ ದೊರೆಯುವರು. ಒಂದು ವಸ್ತುಗಳನ್ನು [illegible] ಈ ಜಾತ್ರೆಯು ಇನ್ನು ಕಟ್ಟಿನ ಜಾಗ ಸರ್ಕಾರದವರು ಕೆಲ ಅನುಕೂಲಗಳನ್ನು ಮಾಡುವದಕ್ಕೆ ಯತ್ನ ಮಾಡುತ್ತಾರೆ. ಇದಕ್ಕಾ ಗಿ ಕಮಿಷನರ್ ಮ॥ ಸ್ಪಾರ್ಕ್ಸ್ ಸಾಹೇಬರು ಜನವರಿಯಲ್ಲಿ ಈ ಸ್ಥಳಕ್ಕೆ ಹೋಗಿ, ಅವಶ್ಯಕ ಮಾಡಿಕೊಂಡು ಒಂದು, [illegible] ಉತ್ತರ ಹಳ್ಳಕ್ಕೆ ಕಟ್ಟ ಹಾಕಿಸಿ ಕೆರೆಯನ್ನು [illegible] ಸುವ ಹಾಗೆ ಒಂದು ಚಿತ್ರವನ್ನು ಕಟ್ಟುವಂತೆಯೂ ಇನಾಂ [illegible] ಸ್ಥಳಕ್ಕೆ ವಸ್ತುಗಳೆಲ್ಲಾ ಹೋಗುವ ಮಾರ್ಗದ ಹತ್ತಿರ ನೇಮಕ [illegible] ಸ್ಥಳದಲಿಯೇ ಕೊಡುವ ಹಾಗೂ ಗೊತ್ತುಮಾಡಿಕೊಂಡು [illegible] ಇಂಥಾ ಜಾತ್ರೆಯಲ್ಲಿ ಜೂಜುಗಾರರ ಹಾವಳಿಯನ್ನು [illegible] ಮಾಡುವ ಏರ್ಪಾಡು ಸಹ ಮಾಡಬೇಕೆಂದು ತಿಳಿಯಿ [illegible] ದೇವಾಂಗದ ಸುಬ್ಬರಾಯಪ್ಪನವರ ಮಗಳು [illegible] ಹಿಂದಿನ ವಾರದಲ್ಲಿ ೩ ಹೆಣ್ಣು ಮಕ್ಕಳನ್ನು ಹೆತ್ತಳು. ಈಗ [illegible] ಮಕ್ಕಳು ಸತ್ತು ಹೋದವು. ಒಂದು ಮಗುವಿಗೆ ನಾಲಿಗೆಯು ಮೇಲೆ ಒಂದು ಕೆಳಗೊಂದು ಕೂಡ ಎರಡು ನಾಲಿಗೆಗಳು ಇ ದ್ದುವು. ಈಗ ಈ ಮಕ್ಕಳ ತಾಯಿಗೆ ಸ್ವಲ್ಪ ಕಾಯಿಲೆ ಇವೆ ನಮ್ಮ [illegible] ರವರ ಪ್ರಯತ್ನದಿಂದ ವಾಸಿಯಾಗುವದರಲ್ಲಿ ಸಂದೇಹವಿಲ್ಲ. [illegible] ವರ್ಷದಿಂದಲೂ ವೆಂಕಟಪ್ಪನು ಇಲ್ಲಿನ ಆಸ್ಪತ್ರೆಯಲ್ಲಿ ಕಂಪೌಂ ಡರ್ ಕೆಲಸವನ್ನು ಮಾಡಿಕೊಂಡು ಬರತಕ್ಕ ಎಲ್ಲಾ ಡಾಕ್ಟರುಗಳು ಮೆ ಚ್ಚುವ ರೀತಿಯಿಂದ ಕೆಲಸ ಮಾಡಿಕೊಂಡೂ, ಬಹು ವಿಧೇಯನಾಗಿ ನಡೆಯುತ್ತಾ ಇದ್ದನು ಇದಲ್ಲದೆ ಇಲ್ಲಿನ ಎಲ್ಲಾ ಜನರ ಪ್ರೀತಿ ವಿಶ್ವಾ ಸವನ್ನು ಹೊಂದಿ ಕೊಂಡು, ಬಹು ಸಾತ್ವಿಕನಾಗಿದ್ದನು. ಇಂಥ [illegible] ವನನ್ನು ಇಲ್ಲಿಂದ ವರ್ಗ ಮಾಡುವದಕ್ಕೆ ಆಜ್ಞೆ ಬಂದಿದೆ. ಈ ಸಂಗತಿಯನ್ನು ಇಲ್ಲಿನ ಜನರು ಕೇಳಿ ಬಹು ಸಂತಾಪ ಪಡುತ್ತಾರೆ. [illegible] ಮೇಲಿನ ಅಧಿಕಾರಿಗಳು ಇದನ್ನು ತಮ್ಮ ಚಿತ್ತಕ್ಕೆ ತಕ್ಕೊಂ ಡು ಅವನನ್ನು ಇಲ್ಲಿಯೇ ಇರಿಸುವ ಹಾಗೆ ಬೇಡುತ್ತಾರೆ. ಜನರ ಕೋ ರಿಕೆಯನ್ನು ಮೇಲಿನವರು ನೆರವೇರಿಸುವರೆಂದು ನಿರೀಕ್ಷಿಸುತ್ತೇವೆ [illegible] ಇಲ್ಲಿನ ಮುನಿಸಿಪಲ್ ರಸ್ತೆಗಳು ಬಹು ಮಟ್ಟಿಗೆ ಶುಚಿಯಾಗು ತ್ತಿವೆ. ಇದಕ್ಕಾಗಿ ಪ್ರಯಾಸ ಪಡುತ್ತಾ ಇದ್ದಾರೆ. ಇಲ್ಲಿ ಹಾಳು ಗೋಡೆಗಳು ಬಹಳ ಇರುವದರಿಂದ ಅಂಥಾ ಕಡೆ ಹೇಸಿಗೆಯು ಇದ್ದೇ ಇ ದೆ. ಇಂಥ ಹಾಳು ಗೋಡೆಗಳಿಗೆ ಏನಾದರೂ ಮಾಡಿದರೆ ಉತ್ತಮ

ಇಲ್ಲಿನ ಸಂಕಟದವರಿಂದ ವರ್ತಕರಿಗೆ ಇನ್ನೂ ಕಷ್ಟವಿದೆ ಎಂದು ವರ್ತ ಕರು ಗುಣಗುಟ್ಟುತ್ತಾರೆ ಇಂಥಾ ತೊಂದ್ರೆಗಳನ್ನು ಮುಂದಾದರೂ ಸರಿಮಾಡಿಕೊಂಡಾರೆಂದು ಕೋರುತ್ತೇವೆ

ನಂಜನಗೂಡು.—ಈ ಟವನಿನಲ್ಲಿ ೬—೭ ದಿವಸಗಳಿಂದಲೂ ಕಾಲರಾ ಉಪದ್ರವವು ಪ್ರಾಪ್ತವಾಗಿ ದಿನ ಒಂದಕ್ಕೆ ೩—೪ ಮರಣಗಳಂ ತೆ ಆಗುತ್ತಿದೆ. ಇದಲ್ಲದೆ ಮೈಸೂರಿಂದ ಇಲ್ಲಿಗೆ ಬಂದವರ ಪೈಕಿ ಇ ಬ್ಬರು ಪ್ಲೇಗಿನಿಂದ ಮೃತಪಟ್ಟರು. ಇಲ್ಲಿ ಟವನ ಪೋಲೀಸ್ ಎಂದು ಏರ್ಪಡಿಸಿ ೨—೩ ವರುಷಗಳಾಗುತ್ತಾ ಬಂತು ರಾತ್ರಿ ಗಸ್ತು ಎಂ ಬುವದು ಸ್ವಪ್ನಪ್ರಾಯವಾಗಿದೆ ಕಪಿಗಳ ತೊಂದರೆಯನ್ನು ಎಷ್ಟು ಹೇಳಿದರೂ ಸ್ವಲ್ಪವೇ. ಈಗ್ಯೆ ೬—೭ ದಿವಸಗಳಲ್ಲಿ ಒಂದು ಮರ್ಕ ಟವು ಮಳೂರು ಪುಟ್ಟಣ್ಣ ಎಂಬುವರ ಮನೆಗೆ ಪ್ರವೇಶ ಮಾಡಿ ಹಜಾರ ದಲ್ಲಿ ಆಡುತ್ತಾ ಮಲಗಿದ್ದ ೯ ತಿಂಗಳ ಮಗುವಿನ ತಲೆಯನ್ನು ತನ್ನ ಹಸ್ತದಿಂದ ಸ್ಪರ್ಶ ಮಾಡಿತು, ಕೂಡಲೆ ಆದ ಘಾಯದಿಂದ ರಕ್ತ ವು ಧಾರೆಯಾಗಿ ಹರಿಯಲು ಆರಂಭಿಸಲು ಆ ಮಗುವಿನ ತಾಯಿಯು ವ್ಯಸನದಿಂದ ಮಗುವನ್ನು ಕರದುಕೊಳ್ಳುವದಕ್ಕೆ ಬರಲು, ಆಕೆಯ ಕಾಲನ್ನು ಮೊಣಕಾಲುವರೆಗೆ ಪರಚಿ ಘಾಯಮಾಡಿ, ಪಲಾಯನಸೂ ಕ್ತನನ್ನು ಹೇಳಿತು. ನಂತರ ಕೆಲವರೆಲ್ಲಾ ಸೇರಿ ಉಪಾಯಾಂತರದಿಂದ ಅದನ್ನು ಹಿಡಿದರು ಆ ವೇಳೆಯಲ್ಲಿ ಪೋಲೀಸ್ ಜಮಾದಾರರವರು ದಯಮಾಡಿಸುತ್ತಿರಲು. ಈ ವಿಷಯವನ್ನೆಲ್ಲಾ ಅವರಿಗೆ ಹೇಳಿಕೊಳ್ಳ ಲು ಅದನ್ನು ಈ ರಾತ್ರಿಗೆ ಗ್ರಾಮಾಂತರ ಬೀಟಿಗೆ ಹೋಗುವರ ಸಂ ಗಡ ಗಡಿಪಾರ್ ಮಾಡುವದಾಗಿ ಹೇಳಿ ಟವನ ಪೋಲೀಸಿನಲ್ಲಿದ್ದ ಒಬ್ಬ ಕಿಂಕರನ ವಶಕ್ಕೆ ಕೊಡಿಸಿ ದಯಮಾಡಿಸಿದರು ಮಹಾರಾಜಶ್ರೀ ಯುವ ರು ಕಣ್ಮರೆಯಾದ ಒಡನೆ ದಿಟ್ಟೋ ಯುವನು ಕಪಿಯನ್ನು ಬಿಟ್ಟು ಬಿಟ್ಟನು ಅದು ಪುನಸ್ವೈರವಾಗಿ ಜನಗಳಿಗೆ ತೊಂದರೆಯನ್ನೂ ನಷ್ಟ ವನ್ನೂ ಉಂಟುಮಾಡುತ್ತಿದೆ ಈ ವಿಷಯವನ್ನು ಆಮೂಲಾಗ್ರವಾಗಿ ಮುನಿಸಿಪಲ್ ಕಮಿಷನರುಗಳು ತಿಳಿದಾಗ್ಯೂ ಕಪಿಗಳನ್ನು ಹಿಡಿಯು ವ ಏರ್ಪಾಡು ತಾಲ್‌ವರಿಗೆ ಮಾಡಿಸದೆ ಉಪೇಕ್ಷೆಯಿಂದಿರುವದು ಶೋಚ ನೀಯವಾಗಿರುತ್ತೆ.—ಇಲ್ಲಿನ ಕನ್ನಡ ಗೌರ್ನಮೆಂಟು ಸ್ಕೂಲಿನಲ್ಲಿ ೧೪ ಜನ ಬಾಲಕರು ೧೯೦೬ ನೆ ಇಸವಿಯಲ್ಲಿ ನಡೆದ ಲೋವರ್ ಸೆಕಂ ಡರಿ ಪರೀಕ್ಷೆಗೆ ದರಖಾಸ್ತುದಾರರು ಆಗಿದ್ದದ್ದಕ್ಕೆ ೧೦ ಜನ ಬಾಲಕರು ಪ್ಯಾಸಾಗಿರುತ್ತಾರೆ ಇಲ್ಲಿನ ಮುನ್ಸಿಫ್ ಕೋರ್ಟಿಗೆ ಮೈಸೂರಿಂದ ಶ್ರೀನಿವಾಸರಾವ್ ಎಂಬುವರು ವರ್ಗವಾಗಿ ಬಂದು ೨೯ ನೆ ತಾರೀಖಿನ ದಿವಸ ಛಾರ್ಜು ತೆಗೆದುಕೊಂಡರು ಇವರಿಗೆ ೨ ನೆ ತಾ. ಕಾಲರಾ ತಗಲಿ ೩ ನೆ ತಾ ಸ್ವರ್ಗಸ್ಥರಾದರು ಈ ವಿಷಯವು ತುಂಬಾ ವ್ಯಸ ನಕರವಾಗಿದೆ ಈ ಊರಿನಲ್ಲಿ ಮರ್ಚೆಂಟರವರು ಅಮಲ್‌ದಾರ್‌ರವರು ಲಾಯರುಗಳು ವರ್ತಕರು ಇನ್ನು ದೊಡ್ಡ ಮನುಷ್ಯರುಗಳು ಎಲ್ಲ ರು ಒಂದು ಸಭೆ ಸೇರಿ ಈ ಊರಿನಲ್ಲಿ ಒಂದು ಟವನ್‌ಹಾಲ್ ಕಟ್ಟಬೇ ಕೆಂತ ಅನುಮೋದಿಸಲು, ೧,೦೦೦ ರೂಪಾಯಿನವರೆಗೆ ಆ ದಿವಸವೇ ಚಂದ ಸಹಾ ವಸೂಲ್ ಆಯಿತು ಇಲ್ಲಿ ಈ ಏರ್ಪಾಡು ಮಾಡಿದ್ದು ಜನಗಳಿಗೆ ತುಂಬಾ ಸಂತೋಷವನ್ನುಂಟುಮಾಡುತ್ತಿದೆ

ಚಿತ್ರದುರ್ಗ.—ಈ ಚಿತ್ರದುರ್ಗದ ಟವನ್ ಬೆಟ್ಟದ ಮಗ್ಗುಲಲ್ಲೂ ಬೆಟ್ಟದ ಮೇಲೂ ಸಹ ಮನೆಗಳು ಕಟ್ಟಿ ಜನಗಳು ವಾಸಮಾಡುತ್ತಿರ್ಪ ರೆ ಈಗ ಛಳಿಗಾಲ ಪ್ರಾಪ್ತವಾದುದರಿಂದ ಅಲ್ಲಲ್ಲಿ ಚಳಿ ಜ್ವರ ತಲೆನೋವು ಮೊದಲಾದ ಸಣ್ಣಗೆ ಜಾಡ್ಯಗಳಿದ್ದು ಸ್ಮಾಲ್‌ಪಾ ಕ್ಸ್, ಇದ್ದ ಇದ್ದ ಇವೆ ಮುನಿಸಿಪಾಲಿಟಿಯವರ ಅಪ್ಪಣೆ ಇದೆಯೆಂದು ಪ್ರತ್ಯೇಕವಾಗಿ ಬಂಕೆ ಮಾಡಿಕೊಳ್ಳುತ್ತೇನೆ. ಮೆ॥ ಎಂ ಚಂಗ ಲ್ವ ಶೆಟ್ಟಿ ಸಾಹೇಬರವರೂ ಡೆಪ್ಯುಟಿ ಕಮಿಷನರ್‌ಯವರಾಗಿ ದಯ ಮಾಡಿಸಿದ್ದಾರಾದ್ದರಿಂದ ಮುನಿಸಿಪಾಲಿಟೀ ಲಿರತಕ್ಕ ಲೋಪವೆಲ್ಲಾ ಸರಿಪ ಡಿಸುವರಾಗಿ ಎಲ್ಲಾ ಪ್ರಜೆಗಳಿಗೂ ನಂಬಿಕೆ ಇದೆ ಮೆ॥ ಆರ್ ಬಿ ಕ್ಲ ಮ್ಯಾರ್ ಸಾಹೇಬರವರು ಇಲ್ಲಿಗೆ ದಯಮಾಡಿಸಿ ೧೫ ದಿವಸದಿಂದ ಸೆಷ ನ್ಸ್ ನಡಸುತ್ತಾ ಇದ್ದಾರೆ ಇವರ ಕೋರ್ಟಿನ ಕ್ರಮ, ವಿಚಾರಣೆ ನಡಿಸ ತಕ್ಕ ವಿಚಾರ, ಅವರ ಸತ್ಯತ್ವ, ಇತ್ಯಾದಿಗಳನ್ನು ನೋಡಿ ಜನಗಳೆಲ್ಲಾ ಅವರನ್ನು ಶ್ಲಾಘಿಸುತ್ತಿದಾರೆ ಅಂತು ಮೈಸೂರ್ ದೇಶದ ಪ್ರಜೆಗಳು ಯೂರೋಪಿಯನ್ ಆಫೀಸರನ್ನು ನೋಡಿದರೆ ದೇವತೆಗಳನ್ನು ಕಂಡಂತೆ ಭಕ್ತಿಯಿಂದ ನಡಿಸುತ್ತಿದ್ದಾರೆ ಅವರ ಜ್ಞಾಪಕ ಅವರ ಸತ್ಯವಾದ ಹಿಂ ದಿನ ನಡವಳಿಕೆ ಸಹ ಇನ್ನೂ ಪ್ರಜೆಗಳು ಮರೆತಿಲ್ಲ ಇಲ್ಲಿಂದ ಬೆಂಗ ಳೂರಿಗೆ ವರ್ಗಪಟ್ಟ ಡಿ॥ ಮೆಡಿಕಲ್ ಆಫೀಸರ್ ಅಪ್ಪಾದೊರೆ ಮೊ ದಲಿಯಾರ್‌ರಿಗೆ ಈ ಟವನಿನ ಪ್ರಜೆಗಳು ಶ್ರೀ ಚಾಮರಾಜೇಂದ್ರಮೆಮೋರಿ ಯಲ್ ಹಾಲಿನಲ್ಲಿ ವಿಜ್ಞಾಪನಾ ಪತ್ರಿಕೆಯನ್ನು ಒಪ್ಪಿಸಿದರು. ಮೆ॥ ಮೊದಲಿಯಾರ್‌ರು ಇಲ್ಲಿಗೆ ಬಂದು ೭ ತಿಂಗಳೇ ಇಲ್ಲಿ ಇದ್ದ ದ್ದು. ಅವರು ಬಂದ ಕಾಲಕ್ಕೆ ಸರಿಯಾಗಿ ಜಾಸ್ತಿ ಮಳೆಯಿಂದ ಕ್ಷೇ ತ್ರವೂ ಅದನ್ನು ಹಿಂಬಾಲಿಸಿಕೊಂಡು ಹಿಮಂತಋತು ಸಹ ಬಂದು ಅದ ರಿಂದ ಎಲ್ಲಾ ಜನಗಳು ಕಾಹಿಲೆ ಆಗಿಬಿಟ್ಟರು ಈ ಡಾಕ್ಟರ್ ಸಾಹೇಬ ರವರು ಜಾತಿ ದೊಡ್ಡವರು ಚಿಕ್ಕವರು ಎಂಬ ಭೇದವಿಲ್ಲದೆ ಪ್ರತಿ ಮ ನುಷ್ಯನಿಗೂ ವಿಶ್ವಾಸದಿಂದ ಔಷಧಿ ಕೊಟ್ಟು ಗುಣಪಡಿಸಿದ್ದಲ್ಲದೆ ದಿನ ೧ ಕ್ಕೆ ೨ ದಫಾ ಊರೆಲ್ಲಾ ಸುತ್ತಿ ಪ್ರತಿ ಒಬ್ಬ ಕಾಹಿಲೆ ಇಂತಕ್ಕವರ ಮನೆಗೆ ಹೋಗಿ ವಿಚಾರಿಸುತ್ತಾ ಅವರನ್ನು ಉಪಚರಿಸಿದರು ಈ ಚಿತ್ರ ದುರ್ಗದಲ್ಲಿ ಲೇಟ ಪೋಲೀಸ್ ಕಾನ್‌ಸ್ಟೇಬಲ್ ಕುರುಬರಜಾತಿ ಸಂ ಣ್ಣಪ್ಪನೆಂಬುವನು ವಾಸವಾಗಿದ್ದಾನೆ. ಆತನಿಗೆ ಸುಮಾರು ೪೦—೫೦ ವರುಷ ವಯಸ್ಸಾಗಿದೆ ಆತನಿಗೆ ಮದುವೇ ಇಲ್ಲ ಈತನಿಗೆ ಯಾ ರೋ ದೊಡ್ಡ ಮನುಷ್ಯರು ಯಾವ ಗಂಡಸಾಗಲಿ ಮದುವೆಯಾಗದೇ ಸತ್ತರೆ ಅವನನ್ನು ಗುಂಡಿಯಲ್ಲಿ ಮುಖ ಅಡಿಯಾಗಿ ಹಾಕಿ ಹೂಳುತ್ತಾರೆ. ಆದರಿಂದ ಅವನಿಗೆ ಮೋಕ್ಷವಾಗುವದಿಲ್ಲ ಅಂಥಾವರು ಜೀವಂತರಾಗಿ ದ್ದಾಗಲೆ ಮದುವೆಗೆ ಬದಲಾಗಿ ಗೋರಮಯ್ಯಗಳಲ್ಲಿ ಹೋಗಿ ಶಾಸ್ತ್ರವಿ ಧಿ ಪ್ರಕಾರ ಮುದ್ರಾಧಾರಣೆ ಮಾಡಿಸಿಕೊಂಡು ಜಾತಿಯವರಿಗೆಲ್ಲಾ ಒಂ ದು ದಿನ ಊಟಮಾಡಿಸಿದರೆ ಅಲ್ಲಿಗೆ ಮದುವೆ ಆದಂತೆ ಆಯಿತು, ಅವನು ಸತ್ತರೆ ಅಂಗತಲಾಗಿ ಗುಂಡಿಯಲ್ಲಿ ಹಾಕುತ್ತಾರೆ. ಅವನಿಗೆ ಮೋಕ್ಷ ವಾಗುತ್ತೆಂತ ಹೇಳಿದರಂತೆ ಆದರ ಮೇಲೆ ಈ ಸಣ್ಣಪ್ಪನು ೬—೨ ೦೩ ನೆ ತಾರೀಖಿನ ದಿವಸ ಇಲ್ಲಿಂದ ೫ ಮೈಲ್ ದೂರದಲಿರತಕ್ಕ ಓಬಾರಕ್ಕೆ ಹೋಗಿ ಅಲ್ಲಿ ಮುದ್ರಾಧಾರಣೆ ಮಾಡಿಸಿಕೊಂಡು ಆದೇ ದಿನ ಸಾಯಂ ಕಾಲ ಅಲ್ಲಿಂದ ಹೊಸಮದವಣಿಗನಂತೆ ಉತ್ಸವದಿಂದ ಊರಿಗೆ ಬಂದು ಮೂರನೇ ದಿನ ಅನ್ನ ಸಂತರ್ಪಣೆ ವಗೈರೆ ಮಾಡಿದ. ಇದರಿಂದ ಈ ಬ ಡವ ಸಣ್ಣಪ್ಪಗೆ ೩೦—೪೦ ರೂಪಾಯಿ ಸಾಲವಾಯಿತು.

ಚೆನ್ನಪಟ್ಟಣ.—ಈಗಿನ ಬಿಸಲಿನ ತಾಪವು ಈಗಲೇ ಅಧಿಕವಾಗಿ ರುವುದು. ಋತುಧರ್ಮದ ಛಳಿ ಜ್ವರಗಳು ಪ್ರಜೆಗಳಿಗೆ ಇನ್ನೂ ತಪ್ಪ ಲಿಲ್ಲವು ಇಲ್ಲಿನ ಆಸ್ಪತ್ರೆಗಳಿಗೆ ಬರುವ ರೋಗಿಗಳ ಸಂಖ್ಯೆ ದಿನದಿನ ಕ್ಕೂ ಹೆಚ್ಚುತ್ತಲೇ ಇದೆ. ಕಳೆದ ತಾರೀಖು ೪ರಲ್ಲಿ ರೆವೆರೆಂಡ್ ರೀಸ್ ದೊರೆಗಳು ದೊರಸಾನಮ್ಮನವರೂ ಮಿಸೆಸ್ ಫುಲ್ಲರವರೂ ಮಿಸ್ ಶಾ ವರ್ತಮ್ಮನವರೂ ಮಿಸ್ ಮತ್ತು ಡಾಕ್ಟರು ಲಾಕ್‌ಉಡಮ್ಮನವರೂ ಮೊದಲಾದ ದೊಡ್ಡ ಮನುಷ್ಯರು ಇಲ್ಲಿ ಇಂಡಸ್ಟ್ರಿಯಲ್ ಸ್ಕೂಲ ನ್ನು ಪರಾಂಬರಿಸಿ, ಬಹು ಸಂತೋಷಪಟ್ಟು ಈ ಸ್ಕೂಲನ್ನು ಖಾಯಂ ಮಾಗಿ ಇರಿಸಿದರೆ ಪ್ರಜೆಗಳಿಗೆ ತುಂಬಾ ಪ್ರಯೋಜನಕರವಾಗಿರುವದೆಂತ ಲೂ ಇಲ್ಲಿನ ಮ್ಯಾನೇಜರಿಗೆ ಹೈಸ್ಕೂಲಿನಲ್ಲೂ ಇಂಡಸ್ಟ್ರಿಯಲ್ ಸ್ಕೂ ಲಿನಲ್ಲೂ ಉಭಯ ಕಡೆಯಲ್ಲೂ ಕೆಲಸವಿರುವದು ತುಂಬಾ ಅನನು ಕೂಲವಾದಕಾರಣ ಒಂದೇ ಕಡೆ ಇದ್ದರೆ ಇವರ ಕೆಲಸ ತುಂಬಾ ತೃಪ್ತಿ ಕರವಾಗಿರಬಹುದೆಂತಲೂ ರಿಪೋರ್ಟಿಗೆ ಬರೆದಿರುವರು ನಿನ್ನೆ ರಾತ್ರಿ ಇಲ್ಲಿನ ಕುಡಿಗರ ಜಾತಿಯ ಸುಮಾರು ೨೫—೩೦ ಪ್ರಾಯದ ಒಬ್ಬ ಹೆಂಗಸು ನೇಣುಹಾಕಿಕೊಂಡು ಮೃತಪಟ್ಟಳು ಆಕೆಯ ಈ ದುರ್ಮ ರಣಕ್ಕೆ ಆಕೆಗೂ ಆಕೆಯ ಗಂಡನಿಗೂ ಏನೋ ವೈಮನಸ್ಸು ಇದ್ದದ್ದು ಕಾರಣವೆಂತ ಜನಗಳು ಆಡಿಕೊಳ್ಳುತಾರು ಇಲ್ಲಿನ ಕೆಲವರು ಅತಿಶ ಯೋಕ್ತಿಯಾಗಿ ಪೋಲೀಸ್ ಉಸ್ತುವಾರಿಮೇಲೆ ಇದ್ದ ಸದರಿ ಶವವನ್ನು ಅಮಲ್ದಾರರು ಖುದ್ದಾಗಿ ಪರಾಂಬರಿಸಿ ಮೆಡಿಕಲ್ ಆಫೀಸರು ಊರಿನಲ್ಲಿ ಹಾಜರಿದ್ದರೂ ಅವರ ಮಾಯಿನ್ಸುಬಗ್ಗೆ ಅವರ ಗಮನಕ್ಕೆ ತಾರದೆ ಶವವನ್ನು ದಹನಕ್ಕೆ ಆರ್ಡರು ಮಾಡಿರುವ ವಿಷಯದಲ್ಲಿ ಬಹು ಜನರಿಗೆ ಆಶ್ಚ ರ್ಯವನ್ನುಂಟುಮಾಡುತ್ತಿದೆ. ಎಲಕೇರಿಯಲ್ಲಿ ಕೆಲವು ದುರ್ಜನರು ಏರ್ಪಟ್ಟು ಜೂಟಾ ಪಿರ್ಯಾದಿಗಳನ್ನು ನಿರಾಟಂಕವಾಗಿ ಕೋರ್ಟಿಗೆ ತರಲು ಧೈರ್ಯಪಡುತ್ತಲಿದ್ದರು. ಅದನ್ನು ತಿಳಿದುಕೊಂಡ ನಮ್ಮ ಅಮಲ್ದಾರರು ಒಂದು ಕೇಸಿನಲ್ಲಿ ಪಿರ್ಯಾದಿಗೇನೆ ಮೊದಲನೇಸಾರಿ ೧೫ ರೂ ಜುಲ್ಮಾನೆ ವಿಧಿಸಿದರು ೨ನೇ ಸಾರಿ ಡಿಸ್‌ಮಿಸ್ ಮಾಡಿರು ವರು ಇನ್ನುಮೇಲಾದರೂ ಜನರು ಇಂಥಾ ದುರ್ನಡತೆಗಳಿಗೆ ಅಂಜಿ ನಡಿಯುವರೆಂದು ನಂಬುತ್ತೇನೆ. ೧೯೦೭ನೆಯ ಇಸವಿ ಫೆಬ್ರವರಿ ೪ನೆ ತಾರೀಖು ಶುಕ್ರವಾರದ ಮಧ್ಯಾಹ್ನ ಬಾಲಕಿಯರುಗೆ ಬಹುಮಾನ ಕೊ ಡುವುದಕ್ಕಾಗಿ ಪೇಟೆಯಲ್ಲಿರುವ ಮಿಷನ್ ಬಾಲಿಕಾ ಪಾಠಶಾಲೆಯಲ್ಲಿ ಯೇ ಸಭೆಯು ನಡೆಯಿಸಲ್ಪಟ್ಟಿತು ಈ ಸಭೆಗೆ ಮಿಷನ್ ಚೇರ್‌ಮ್ಯಾನ್ ರಾದ ರೆವರೆಂಡ್ ರೀಸ್ ಸಾಹೇಬರವರು ಅಗ್ರಾಸನಾಧಿಪತಿಗಳಾಗಿದ್ದ ರು. ರೆವರೆಂಡ್ ಬ್ರೂಕ್‌ಬ್ಯಾಂಕ್ ಸಾಹೇಬರವರೂ ಸಾಲ್ವರೂ ಮಿ ಸೆಸ್ ದೊರೆಸಾನಿ ಅಮ್ಮನವರೂ ಮತ್ತು ಈ ಊರಿನ ದೊಡ್ಡ ಮನು ಷ್ಯರುಗಳಾದ ಕೈಸರ್‌ಲ್ ಕೆ॥ ಮಾ॥ ಮ॥ ರಾ॥ ನಾರಣಯ್ಯಂಗಾರ್ ಬಿ ಎ ಯವರು, ಸಬ್ ರಿಜಿಸ್ಟ್ರಾರ್‌ರಾದ ಮಾ॥ ರಾ॥ ನರಸಿಂಹಯ್ಯಂ ಗಾರ್ ಬಿ. ಎ ಯವರೂ, ಅಸಿಸ್ಟೆಂಟ್ ಆಸಿಸ್ಟೆಂಟರವರು, ವಾಕಂ ಮಾ॥ ರಾ॥ ರಾಮಸು ಜೀವೈಯ್ಯ ಸೆಟ್ಟರು ಮೊದಲಾದ ಅನೇಕ ದೊಡ್ಡ ಮನು ಷ್ಯರೆಲ್ಲರೂ ಸಭೆಯನ್ನು ಅಲಂಕರಿಸಿದ್ದರು. ಸ್ಕೂಲು ಮನೆಯನ್ನು ಬಹ ಳ ಚನ್ನಾಗಿ ಅಲಂಕರಿಸಿದ್ದರು ಪ್ರಾರಂಭದಲ್ಲಿ ರೆ॥ ರೀಸ್ ಸಾಹೇಬ ರವರು ದೇವತಾ ಪ್ರಾರ್ಥನೆಯ ಮೂಲಕ ಸ್ಕೂಲ್ ಪುರೋಭಿವೃದ್ಧಿಗೂ ಬಾಲಕಿಯರ ವಿದ್ಯಾಭಿವೃದ್ಧಿಗೂ ಸಹಾಯಕವಾಗಿರುವಂತೆ ದೇವರನ್ನು ಪ್ರಾರ್ಥಿಸಿದರು ಬಳಿಕ ಬಾಲಕಿಯರಿಂದ ಗಾನರೂಪವಾಗಿ ದೇವತಾ ಪ್ರಾರ್ಥನೆಯು ನೆರವೇರಿಸಲ್ಪಟ್ಟಿತು ಈ ಸ್ಕೂಲಿನ ಬಾಲಿಕಾ ಶಿರೋ ಮಣಿಯಾದ ಸೌ॥ ರಂಗಮ್ಮನವರಿಂದ ಈ ಸ್ಕೂಲ್ ಹೆಡ್‌ಮಾಸ್ಟರು ಮೊದಲೇ ರಚಿಸಿದ್ದ ಸ್ಕೂಲಿನ ರಿಪೋರ್ಟು ಎಲ್ಲರಿಗೂ ಶ್ರಾವ್ಯವಾಗಿ ರುವಂತೆ ಓದಲ್ಪಟ್ಟಿತು ಬಳಿಕ ಬಗೆಬಗೆಯಾದ ಬೊಂಬೆಗಳೂ ಪೆಟ್ಟಿ ಗೆ ಮುಂತಾದ ವಿಚಿತ್ರವಾದ ಸಾಮಾನುಗಳೂ ಮಿಸೆಸ್ ಫುಲ್ಲರ್ ಲೇಡಿ ದೊರೆಸಾನಿ ಅಮ್ಮನವರಿಂದ ಸ್ಕೂಲ್ ಬಾಲಕಿಯರಿಗೆಲ್ಲಾ ಬಹು ಮಾನವಾಗಿ ಕೊಡಲ್ಪಟ್ಟಿತು ಮಿಸೆಸ್ ಡಾವರ್ ಅಮ್ಮನವರು ಸ್ಕೈಬಿ ಲ್ಲಿನಲ್ಲಿ ಪರೀಕ್ಷೆ ಕೊಟ್ಟ ಬಾಲಕಿಯರಿಗೆ ವಿಶೇಷವಾದ ಎರಡನೆಯ ಬಹುಮಾನವನ್ನು ದಯಪಾಲಿಸಿದರು ಬಾಲಕಿಯರು ಸಭಾವಣಿಗಾನೆ ಯನ್ನೂ ಮಂಗಳಗೀತವನ್ನೂ ರಮ್ಯವಾಗಿ ಗಾನಮಾಡಿ ಸಭಿಕರಿಗೆ ಲ್ಲಾ ಆನಂದವನ್ನುಂಟುಮಾಡಿದರು ತರುವಾಯ ಸಭಿಕರಿಗೆಲ್ಲಾ ಗಂಧ ಪುಷ್ಪಾದಿಗಳೂ ಬಾಲಕಿಯರಿಗೆಲ್ಲಾ ಮಿಠಾಯಿಗಳೂ ಹಂಚಲ್ಪಟ್ಟವು. ಅಗ್ರಾಸನಾಧಿಪತಿಗಳು ಆಮೇಲೆ ಎದ್ದು ನಿಂತು ಈ ಪಾಠಶಾಲೆಯ ಅಭಿ ವೃದ್ಧಿ ವಿಷಯದಲ್ಲಿ ತಮ್ಮ ಸಂತೋಷವನ್ನು ಸೂಚಿಸಿದುದಲ್ಲದೆ, ಹೆಡ್‌ಮಾಸ್ಟರ್ ಮಾ॥ ರಾ॥ ಸೂರಪ್ಪನವರು ಮಾಡಿದ ಮೊಹನತ್ತನ್ನು ಬಹಳವಾಗಿ ಕೊಂಡಾಡಿ ಅಲ್ಲಿದ್ದ ಸಭಿಕರಿಗೆಲ್ಲಾ, ತಾವು ದಯಮಾಡಿ ಈ ಸ್ಕೂಲಿಗೆ ನಿಮ್ಮ ಬಾಲಕಿಯರನ್ನು ಕಳುಹಿಸಿ ನಾವು ಮಾಡುವ ಕೆಲಸಕ್ಕೆ ಸಹಾಯ ಮಾಡಬೇಕೆಂತಲೂ ಮಿಷನರಿಗಳು ಈ ಸ್ತ್ರೀವಿದ್ಯಾ ಭ್ಯಾಸದಲ್ಲಿ ಮೊದಲು ಬಹಳ ಕಷ್ಟವನ್ನು ತೆಗೆದುಕೊಂಡು ಪ್ರಯತ್ನ ಮಾಡಿದ್ದರ ಮೇಲೆ ಆದಿಯಲ್ಲಿ ಹೆಣ್ಣು ಮಕ್ಕಳನ್ನು ವಿದ್ಯಾಭ್ಯಾಸ ಮಾ ಡಲು ತಡೆದಿದ್ದವರೆಲ್ಲರೂ ಈಗ ಧಾರಾಳವಾಗಿ ತಮ್ಮ ಹೆಣ್ಣು ಮಕ್ಕಳಿ ಗೆ ವಿದ್ಯಾಭ್ಯಾಸವನ್ನು ಮಾಡಿಸುತ್ತಿದ್ದಾರೆಂತಲೂ, ಸರಕಾರದವರೂ ಇವರಿಂದಲೇ ಬಾಲಿಕಾ ಪಾಠಶಾಲೆಗಳನ್ನು ಸ್ಥಾಪಿಸಿ ಸ್ತ್ರೀವಿದ್ಯಾಭ್ಯಾ ಸದ ಪ್ರೋತ್ಸಾಹವನ್ನು ಅನುಸರಿಸುವರೆಂದೂ, ಸ್ತ್ರೀವಿದ್ಯಾಭ್ಯಾಸವು ಪುರುಷ ವಿದ್ಯಾಭ್ಯಾಸದಂತೆ ನಡೆದರೆ ಅದರಿಂದ ಲೋಕವು ಉತ್ತಮ ಸ್ಥಿತಿಗೆ ಬರುತ್ತದೆ ಎಂದು ಮೊದಲಾಗಿ ನುಡಿದು ದೇವರ ಅನುಗ್ರಹವು ತಮ್ಮ ಸ್ಕೂಲಿನ ಮೇಲೆ ಇರಲಿ ಎಂದು ಪ್ರಾರ್ಥಿಸಿದರು. ತರುವಾಯ ಸಭೆಯು ಬರಖಾಸ್ತು ಆಯಿತು.

ಬಿಳಗಿ ರಾಜವೈದ್ಯರ ಒಳ್ಳೆ ಖಾತ್ರಿಯಾದ ಔಷಧಗಳು.

೪೪

ಸುಖದಾಯಿನೀ ಗುಳಿಗೆ—ಇದರಿಂದ ಕೆಮ್ಮಿನ ಬಾಧೆ ಬಹು ಬೇಗನೆ ಗುಣಹೊಂದುವದು ೧೦ ವರುಷದ ಮೇಲಿನ ಯಾವ ಪ್ರಾಯದವರಾದರೂ ಸೇವಿಸಬಹುದು ಕ್ರಯ ೨೪ ಗುಳಿಗೆಗೆ ೧ ರೂಪಾಯಿ ವಿ. ಪಿ. ಚಾರ್ಜು ಆಣೆ ೪

ಚಿಕ್ಕಹುಡುಗರ ಬಾಲಗ್ರಹದ ಔಷಧ—ಜ್ವರಯುಕ್ತ ಅಥವಾ ಜ್ವರವಿಲ್ಲದೆ ಫಕ್ಕನೆ ಹುಟ್ಟುವ ಈ ಉಪಹತಿಗೆ ಇದರಿಂದ ಬೇಗನೆ ಗುಣಹುಟ್ಟುವದು ಕ್ರಯ ೧ ಕುಪ್ಪಿಗೆ ೮ ಆಣೆ ವಿ ಪಿ ೪ ಆಣೆ

ಗಜಕರ್ಣದ ಮುಲಾಮು—೨ ಯಾ ೩ ಆವರ್ತಿ ಇದನ್ನು ಹಚ್ಚುವದರಿಂದ ಎಂಥ ಕಠಿಣವಾದ ಗಜಕರ್ಣ (ಹುಳಕಡ್ಡಿ) ಇದ್ದರೂ ಗುಣಹೊಂದುವದು, ಕ್ರಯ ೧ ಡಬ್ಬಿಗೆ ೮ ಆಣೆ ವಿ. ಪಿ ಚಾರ್ಜು ಆಣೆ ೪

ಶತಮೂಲಿಕಾ ತೈಲವು.—ಹಕ್ಕೀಬೊಕ್ಕೆ ಹಕ್ಕೀಕಜ್ಜಿ ತುರಿಗಜ್ಜಿ ಹಣಗಜ್ಜಿ ಮುಂತಾದ ಅಬಾಲವೃದ್ಧರ ಚರ್ಮವ್ಯಾಧಿಯೂ ಗುಣಹೊಂದುವದು ಕ್ರಯ ೧ ಔನ್ಸಿನ ಕುಪ್ಪಿಗೆ ೧೦ ಆಣೆ, ೨ ಔನ್ಸಿನ ಕುಪ್ಪಿಗೆ ೧ ರೂಪಾಯಿ ವಿ ಪಿ ೫ ಆಣೆ

ವಾಯುಹಾರಕ ತೈಲವು—ಇದನ್ನು ಲೇಪಿಸಿದ ೫ ನಿಮಿಷದೊಳಗೆ ಸಂಧಿವಾತ, ಕಟಿವಾತ, ವ ಇತರ ವಾಯುಗಳ ನೋವು, ತಲೆನೋವು, ಚಿಕ್ಕಹುಡುಗರ ಉಬ್ಬಸ, ಕೆಮ್ಮು ಕೂಡ ಗುಣಹೊಂದುವದು ಕ್ರಯ ೧ ಕುಪ್ಪಿಗೆ ೧ ರೂಪಾಯಿ ವಿ. ಪಿ. ಚಾರ್ಜು ಆಣೆ ೪.

ಜ್ವರಗಡ್ಡೆಗೆ ಸುಧಾಬಿಂದು—ಹೊಟ್ಟೆಯೊಳಗೆ ಸೇವಿಸಲಿಕ್ಕೆ. ಕ್ರಯ ೧ ಕುಪ್ಪಿಗೆ ೧೨ ಆಣೆ ವಿ. ಪಿ ಚಾರ್ಜು ಆಣೆ ೪.

ಜ್ವರಗಡ್ಡೆಗೆ ಮುಲಾಮು—ಪಾರ್ಶ್ವಲೇಪನಕ್ಕೆ ಕ್ರಯ ಡಬ್ಬಿ ೧ಕ್ಕೆ ೧ ರೂಪಾಯಿ ವಿ ಪಿ ಚಾರ್ಜು ಆಣೆ ೪

೧ನೇ ನಂಬರ ಶೀತಜ್ವರ ರಿಪುಗಳಿಗೆ—ಅಬಾಲವೃದ್ಧರಿಗೆ ಹುಟ್ಟುವ ಪ್ರತಿನಿತ್ಯದ ಮತ್ತು ೩ನೆ ವ ೪ನೆ ದಿವಸದ ಪಾಳಿಯಾಗಿ ಕೂಡ ಬರುವ ಶೀತಜ್ವರಕ್ಕೆ ಕ್ರಯ ೧ ಡಬ್ಬಿಗೆ ೧ ರೂಪಾಯಿ ವಿ ಪಿ ಚಾರ್ಜು ಆಣೆ ೪

೨ನೇ ನಂಬರದ ಶೀತಜ್ವರ ರಿಪುಗಳಿಗೆ—ಮೇಲೆ ವಿವರಿಸಿದಂಥ ಶೀತಜ್ವರಗಳು ಕಾಲಾವಧಿಯಾಗಿ ಮೈಯಲ್ಲಿ ವ್ಯಾಪಿಸಿಕೊಂಡು ಹಳೆ ತರಕ್ಕೆ ಬಿದ್ದು ಬರುವದಾದರೆ ಕ್ರಯ ೧ ಡಬ್ಬಿಗೆ ೧ ರೂಪಾಯಿ ವಿ ಪಿ ಚಾರ್ಜು ಆಣೆ ೪

ದಂತ ಶುದ್ಧಿಗೆ ಸುವಾಸಿಕ ಮಂಜನ—ಎಲ್ಲ ಪ್ರಕಾರದ ಹಲ್ಲಿನ ವೇದನೆಗಳ ಉಪಶಮನಕ್ಕೆ ಕ್ರಯ ೧ ಡಬ್ಬಿಗೆ ೮ ಆಣೆ ವಿ ಪಿ ೪ ಆಣೆ

ಪೀನಾಶಿಗೆ ಸುಗಂಧಚೂರ್ಣ—ಮೂಗಿನ ಒಳಭಾಗದಲ್ಲಿ ಕ್ರಿಮಿ ಅಥವಾ ವ್ರಣವಾಗಿ ಅದರಿಂದ ದುರ್ವಾಸನೆಯೂ ರೆಸಿಗೆ ಅಥವಾ ನೀರಿನಂಥ ದ್ರವವು ಸ್ರವಿಸುವದಕ್ಕೆ. ಕ್ರಯ ೧ ಡಬ್ಬಿಗೆ ೧ ರೂಪಾಯಿ ವಿ ಪಿ ಚಾರ್ಜು ಆಣೆ ೪

ನವ ನರೋಗಕ್ಕೆ ಸುಖಾಂಜನವು—ಹೊಸದಾಗಿ ಹುಟ್ಟಿದ ಅಥವಾ ಬಹುಕಾಲದಿಂದ ಇರುತ್ತಿದ್ದ ಕಣ್ಣಿನ ಎಲ್ಲಾ ಬಾಧೆಗಳು ಕಣ್ಣಿನಲ್ಲಿ ಕೆಂಪೇರುವಿಕೆ, ಕಣ್ಣಿನಿಂದ ನೀರು ಪಿಸರು ಬರುತ್ತಿರುವದು, ಬೆಳಕಿಗೆ ನೋಡಲಿಕ್ಕೆ ಆಗದೆ ಇರುವದು, ದೃಷ್ಟಿಮಾಂದ್ಯ, ಇತ್ಯಾದಿ ಎಲ್ಲ ಬಾಧೆಗಳೂ ಇದರಿಂದ ಬೇಗನೆ ಗುಣವಾಗುವದು ಕ್ರಯ ೧ ಡಬ್ಬಿಗೆ ೧ ರೂಪಾಯಿ ವಿ ಪಿ ಚಾರ್ಜು ಆಣೆ ೪

ಕರ್ಣಸ್ರಾವಕ್ಕೆ ವನೌಷಧಿ ತೈಲವು—ಚಿಕ್ಕ ವ ತಾರುಣ್ಯ ಭರ್ತಿ ಪ್ರಾಯದವರ ಕಿವಿಯಿಂದ ರಕ್ತ, ಕೀವು, ಅಥವಾ ನೀರಿನಂಥ ದ್ರವ ಹೊಸತಾಗಿ ಅಥವಾ ಬಹು ಕಾಲದಿಂದ ಸ್ರವಿಸುತ್ತಿದ್ದರೆ ಹಾಗೂ ನೋವು, ಕಳತವು, ತುರಿಸುವಿಕೆಯೂ ಇರುತ್ತಿದ್ದರೆ ಇದರಿಂದ ಪೂರ್ಣ ಗುಣ ಹೊಂದುವದು ಕ್ರಯ ೧ ಕುಪ್ಪಿಗೆ ೧ ರೂಪಾಯಿ ವಿ ಪಿ ೪

ಚಿಕ್ಕ ಮಕ್ಕಳ ಮೈ ಪುಷ್ಟಿಗೆ ಬಾಲಕ ಧಾವಕ—ಚಿಕ್ಕ ಹುಡುಗರ ಅಶಕ್ತಿ, ಕುಡಿದ ಹಾಲಿನ ಅಥವಾ ಆಹಾರದ ವಾಂತಿ, ಅತಿಸಾರ, ಅನೇಕಾವರ್ತಿ ಮಲ ವಿಸರ್ಜನೆ, ಅಸ್ಥಿಗತಜ್ವರ, ಕೆಮ್ಮು ಇತ್ಯಾದಿ ಅನೇಕ ಉಪಹತಿಗಳು ಗುಣವಾಗಿ ಮೈಯಲ್ಲಿ ರಕ್ತ ಮಾಂಸ ಅಸ್ಥಿ ಇವುಗಳು ಬಲವಾಗಿ ಬೆಳೆದು ಚನ್ನಾಗಿ ಪುಷ್ಟಿಯಾಗುತ್ತಾರೆ. ಕ್ರಯ ೧ ಕುಪ್ಪಿಗೆ ೧ ರೂಪಾಯಿ ವಿ ಪಿ ಚಾರ್ಜು ಆಣೆ ೬

ಸಕ್ಕರೆ ಪಾಕಕಫಕ್ಷಯ ವ ಕೆಮ್ಮು ಮುಂತಾದವುಗಳಿಗೆ—ಶ್ವಾಸ ಕೋಶದ ಎಲ್ಲಾ ಉಪಹತಿಗಳು ಅಂದರೆ ಹೊಸ ಮತ್ತು ಹಳೆ ತರ ಕೆಮ್ಮು ಪಳು ನೆಗಡಿ ಉಬ್ಬಸ ಕಫ ಕ್ಷಯ ಅಸ್ಥಿಜ್ವರ ಅಶಕ್ತಿ ಕ್ಷಯವ್ಯಾಧಿಯಲ್ಲಿ ಹುಟ್ಟುವ ಬೆವರು ಇತ್ಯಾದಿ ಬೇಗನೆ ಗುಣಹೊಂದುವದು ಕ್ರಯ ೧ ಕುಪ್ಪಿಗೆ ರೂ ೧—೪ ಆ ವಿ ಪಿ ಚಾರ್ಜು ಆಣೆ ೯

ನಯನ ಸುಖಕ್ಕೆ ಸೌವೀರಾಂಜನವು (ಕಪ್ಪು ಸುರ್ಮ)—ಬಿಸಿಲಲ್ಲಿ ತಿರುಗಾಟ ಮಾಡುವದರಿಂದ ಬೆಂಕಿಯ ಶಕೆಯಲ್ಲಿ ಕೂಡ್ರುವದರಿಂದ ರಾತ್ರಿಯಲ್ಲಿ ಜಾಗ್ರಣ ಮಾಡುವದರಿಂದ ಅಥವಾ ಹೆಚ್ಚು ಕಾಲ ಓದುವದರಿಂದ ಸಹಾ ಉಂಟಾಗುವ ಕಣ್ಣಿನ ಬಾಧೆಯು ಕೆಂಪೇರುವಿಕೆ ಉರಿ ನವೆ ಮುಂತಾದವು ಗುಣಹೊಂದಿ ಕಣ್ಣಿಗೆ ಸುಖವು ಪ್ರಾಪ್ತವಾಗುತ್ತದೆ ಕ್ರಯ ೧ ಡಬ್ಬಿಗೆ ೮ ಆಣೆ ವಿ ಪಿ ಚಾರ್ಜು ಡಬ್ಬಿ ೧ ರಿಂದ ೧೨ ಡಬ್ಬಿಗೆ ೪ ಆಣೆ

ವಾಂತಿಭೇದಿಗೆ ಮತ್ತು ಅತಿಸಾರಕ್ಕೆ ಕ್ಲೋರೋಡಾಯಿನ್—ಈ ಉಪದ್ರಗಳಿಗೆ ಇದು ದಿವ್ಯ ಔಷಧವಾಗಿದೆ ವಿಶ್ವಾಸವುಳ್ಳ ಒಂದು ಕಂಪನಿಯಿಂದ ಇದನ್ನು ನಾವು ಸಂಗ್ರಹಿಸುತ್ತೇವೆ ಕ್ರಯ ೧ ಕುಪ್ಪಿಗೆ ೧೨ ಆಣೆ ವಿ ಪಿ ಚಾರ್ಜು ಆಣೆ ೪

ಸೂಚನೆ—ನಮ್ಮ ಔಷಧಗಳೊಳಗೆ ಅಪಾಯಕರವಾದ ಯಾವ ಜಿನಸಿನ ಮಿಶ್ರಣವೂ ಮಾಡಿಲ್ಲ. ಪ್ರತಿ ಒಂದು ಔಷಧಿಗೆ ಜೊತೆಯಲ್ಲಿ ಛಾಪಿಸಿದ ಅನುಪಾನ ಪತ್ರವನ್ನು ಕಳುಹಿಸುತ್ತಿರುತ್ತೇವೆ. ಇನ್ನೂ ಅನೇಕ ಉತ್ತಮವಾದ ಔಷಧಗಳಿಗಾಗಿ ನಮ್ಮ ಕ್ಯಾಟ್ಲಾಗು ತರಿಸಿಕೊಂಡು ಓದಿನೋಡಿ.

ನಮ್ಮ ಅಡ್ರೆಸು:—ಕರ್ನಾಟಕ ರಾಜ ವೈದ್ಯ ಮತ್ತು ಕಂಪನಿ, ಪೋಸ್ಟು ಬಿಳಗಿ, ಉತ್ತರಕನ್ನಡಾ ಜಿಲ್ಲಾ.

Post Bilgi, North Kanara District.

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟು ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು) . . . ರೂ. ೧—೦—

ಪರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಹಾಸಲ್ ಸೇರಿ .. .. ರೂ. ೧—೧೪—೦

,, ,, ೬ ,, ,, ೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು. ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗ ರಿಜಿಸ್ಟರ್ ನಂಬರನ್ನು ಮರೆಯಾಗ ನಮೂದಿಸತಕ್ಕದ್ದು

ನಮ್ಮ ವಿಳಾಸ:—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು

ಬೆಲೆಗೆ ಬೆಳ್ಳಿ—ಗುಣಕ್ಕೆ ಬಂಗಾರ.

೬೬ ೩೩

ಕ್ಲೆಮೆಂಟ್ಸ್‌ರವರ ಗಾರಿಡಿಬಾಧಾ ನಿವಾರಿಣಿ.

ಪಾರ್ಶ್ವನೋವು, ಕೀಲುಗಳ ನೋವುಗಳು, ಕಿಬ್ಬೊಟ್ಟೆನೋವು, ಬೆನ್ನು ಳೆಯುವದು, ತಲೆನೋವು, ಕೆಮ್ಮು ಕಿಲುಬುಗಳು, ಕೀಲುಗಳು ಕತ್ತರಿಸುವದು, ಬಗ್ಗಿರುವ ಬೆನ್ನುಗಳು, ಕೊರಳು ಊತ, ಇವುಗಳಿಂದುಂಟಾಗುವ ಬಾಧೆಗಳು, ಕೈಕಾಲು ವಡೆತ, ಇವುಗಳಿಗೆ ಕ್ಲೆಮೆಂಟ್ಸ್‌ರವರ ಗಾರಿಡಿ ಬಾಧೆ ನಿವಾರಿಣಿ ತೈಲವನ್ನು ಚನ್ನಾಗಿ ತಿಕ್ಕಿದರೆ ಈ ಬಾಧೆಗಳೆಲ್ಲಾ ಪರಿಹಾರವಾಗುವದು ಬಾಧೆಯನ್ನು ನಿಲ್ಲಿಸುವದಕ್ಕಾಗಿ ಕ್ಲೆಮೆಂಟ್ಸ್‌ರವರ ಮ್ಯಾಜಿಕ್ ಬಾಂ ಹುಟ್ಟಿ ಇದೆ ಆ ಳಲಸವನ್ನು ಅದು ಮಾಡುವದು ಕೀಳಾಯಿಗಳಲ್ಲಿ ಹಾಕಿ ಮಾರುವ ಔಷಧಗಳಲ್ಲಿ ಬಾಧೆಯನ್ನು ಶಮನಮಾಡುವದರಲ್ಲಿ ಕ್ಲೆಮೆಂಟ್ಸ್‌ರವರ ಮ್ಯಾಜಿಕ್ ಬಾಂನಂತಹದು ಬೇರೊಂದಿಲ್ಲವು ಕ್ರಯ—೧ ಬಾಟ್ಲಿಗೆ ೧೨ ಆಣೆ ೩ ಕ್ಕೆ ೨ ರೂಪಾಯಿ ೬ ಕ್ಕೆ ೩½ ರೂಪಾಯಿ ೧೨ ಕ್ಕೆ ೬ ರೂಪಾಯಿ ಅಂಚೆ ವೆಚ್ಚ ಒಂದರಿಂದ ನೂರು ಬಾಟ್ಲಿ ವರಿಗೆ ೩ ಆಣೆ

ನಮ್ಮ ವಿಳಾಸ—ಎಫ್ ಡಬ್ಲ್ಯು ಆರ್ಮ,

ಸಿವೆಟ್ರಿ ರೋಡ್, ವೆಪರಿ, ಮದರಾಸ್

ಜ್ವರಹರಿ.

೧೫ ೨

ಇದು ಸಾಧಾರಣ ಜ್ವರ, ಹಳೇಜ್ವರ, ಮೋರೇಜ್ವರ, ಪಿತ್ಥಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮುದಾಮತ್ ಇಲಾಖಾ ಸಬ್ ಡಿವಿಜನ್ ಆಫಿಸರ್ ಎಸ್ ಟಿ ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಡಜಸಿನ ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು ಇನ್ನೂ ಜನಗಳು ಶಾಹಿಲೇ ಕೇಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨೦ ಡಜಸಿನ ಸೀಸೆಯನ್ನು ವಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ—ಸೀಸೆ ೧ ಕ್ಕೆ ೮ ಆಣೆ, ೦ ರೂ , ೧—೮ ರೂ ; ರೂ. ೨—೧೨ ಆ , ೧೧ ರೂ., ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು

****

ಓಮಂಕರ್ಪೂರ.

Omum Carpoor

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳಕುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯ ಹೊಟ್ಟೇನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆಸ್ರಿಯ ಓಮಂ ಕರ್ಪೂರವನ್ನು ನಾನೂ ನನ್ನ ತಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧವೆಂತ ಬರೆದಿದ್ದಾರೆ

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ—

ಹೆಸ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,

ಸೆಕೆಂಡ್ ಬೀಚ್ ಲೈನ್, ಮದ್ರಾಸ್

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

೨೫—1—1907 ರಿಂದ 1—2—1907 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು.	ಪ್ಲೇಗ್ ಸತ್ತದ್ದು	ಹೋದ ... ಈ ವಾ... ಸಂಖ್ಯೆ	
ಬೆಂಗಳೂರು ಪಟ್ಟಣ	19	19	25	1
ಮೈಸೂರು ,,	67	51	0	
ಬೆಂಗಳೂರು ಡಿಸ್ಟ್ರಿಕ್ಟು	26	18	10	
ಮೈಸೂರು ,,	3	4	0	
ಕೋಲಾರ್ ,,	0	0	9	
ಕೋಲಾರ್ ಚಿನ್ನದ ಗಣಿಗಳು	4	3	6	
ತುಂಕೂರು ಡಿಸ್ಟ್ರಿಕ್ಟು	7	4	0	
ಹಾಸನ ,,	10	13	2	
ಚಿತ್ರದುರ್ಗ ,,	0	0	6	
ಕಡೂರ್ ,,	4	3	1	
ಶಿವಮೊಗ್ಗ ,,	0	0	34	2
ಜುಮ್ಲಾ	140	109	86	6

ಶಾಲಿವಾಹನ ಶಕ ವರುಷಂಗಳು ೧೮೨೯ ನೇ ಪರಾಭವ ಸಂವತ್ಸರದ ಫಾಲ್ಗುಣ ಶುದ್ಧ ಬಿದಿಗೆ ಗುರುವಾರದಿಂದ ಫಾಲ್ಗುಣ ಶುದ್ಧ ಅಷ್ಟಮಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೭ ನೇ ಇಸವಿ ಫೆಬ್ರವರಿ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಅ... ಸಂ... ಮಾ...
14	ಗುರು †	ಬಿದಿಗೆ	35 12	ಶ	6 48	3
15	ಶುಕ್ರ *	ತದಿಗೆ	33 58	ಪೂಭಾ	6 12	4
16	ಶನಿವಾ	ಚೌತಿ	32 12	ಉಭಾ	6 30	5
17	ರವಿವಾ	ಪಂಚಮಿ	33 11	ರೇ	8 18	6
18	ಚಂದ್ರ ¶	ಷಷ್ಟಿ	35 42	ಅ	10 18	7
19	ಕುಜ	ಸಪ್ತಮಿ	39 2	ಭ	15 28	8
20	ಬುಧ ‡	ಅಷ್ಟಮಿ	43 16	ಕೃ	20 40	9

† ಚಂದ್ರೋದಯ * ಮೊಹರಂ ಚಂದ. ¶ ಮಹಾ... ಧೃತಿ. ‡ ಅಮೃತಯೋಗ

ಪೇಟೇ ಧಾರಣೆ.

ದಿನಸಿ	ಮೈಸೂರು	ಬೆಂಗಳೂರು
ಕಡ್ಡೀ ಅಕ್ಕಿ ಪಲ್ಲಾ ೧ಕ್ಕೆ ರೂ	೧೩-೮-೦	೧೩ ...
ಕಂಬಳೀ ಅಕ್ಕಿ ಅಸಲ್ ..	೧೨-೪-೦	೧೨ ೮
,, [illegible]	೧೨ ೦-೦	೧೨-೦
ಜಾಸ್ತ್ರಾಪ ಅಕ್ಕಿ	೧೩-೬-೦	೧೩ ೮
ಸಣ್ಣಕ್ಕಿ ಅಸಲ್ .	೧೫-೦-೦	೧೫-೦
,, ದುಯ್ಯಂ ..	೧೪-೦-೦	೧೪ ೦
ತೊಗರೀ ಬೇಳೆ ಪಲ್ಲಾ ೧ಕ್ಕೆ	೧೧ ೦-೦	೧೦ ೪
,, ದುಯ್ಯಂ ..	೧೦-೧೨-೦	೧೦-೦
ಹೈನ ರಾಗಿ ಪಲ್ಲಾ ೧ಕ್ಕೆ	೩-೪ ೦	೩ ೪
ಕಾರ‍್ರಾಗಿ	೬-೦-೦	೩ ೦
ಜೋಳ	೫-೮-೦	೮-೮
ಹಲಸಂದೆ ಪಲ್ಲಾ ೧ಕ್ಕೆ	೧೦-೧೨-೦	೯-೦೦
ಬಿಳೀ ಅವರೆ . .	೯-೪ ೦	೯-೦
ಹೆಸರು . .	೧೧-೮-೦	೯ ೪
ಉದ್ದು .	೧೨-೦-೦	೧೦-೦
ಕಡಲೆ .. .	೧೧-೮-೦	೯ ೦
ಎಳ್ಳು ಸ, ೧೨೩ ಕ್ಕೆ .	೧೩-೦-೦	೧೬-೮
ಹುರುಳಿ	೩-೬-೦	೮ ೪
ಹರಳು ೧೨೩ ಸೇರಿಗೆ .. .	೧೯ ೦-೦	೧೨-೬
ಸೀಗೇಕಾಯಿ ಮಣ ೧ಕ್ಕೆ . ..	೨-೨-೦	೧ ೦
ಮೆಣಸಿನಕಾಯಿ ..	೩ ೪ ೦	೨-೮
,, ದುಯ್ಯಂ ..	೩-೦-೦	೨ ೪
ಬೆಲ್ಲ ದೊಡ್ಡ ಅಚ್ಚು .	೪-೪ ೦	ಮ ೧-೦೦
ಒಳ್ಳೆಣ್ಣೆ ಮಣ ೧ಕ್ಕೆ .	೪-೮-೦	೫-೬
ಹರಳೆಣ್ಣೆ ,, .. .	೬-೧೨ ೦	೫-೪
ಕೊತ್ತುಂಬರಿ ಪಲ್ಲಾ ೧ಕ್ಕೆ	೯ ೦-೦	೭-೧೨
ಉಪ್ಪು ,, ..	೫-೧೧ ೦	೩-೦
ಹುಣಿಸೇ ಹಣ್ಣು .	೦ ೧೨-೦	೦-೦೦
,, ಹಳೇದು	೦ ೮-೦	೦-೦೦
ತುಪ್ಪ ಮಣ ೧ಕ್ಕೆ ..	೧೬-೦ ೦	೧೪ ೦
ಸೀಮೆಯೆಂಣೆ ಪೆಟ್ಟಿ ೧ಕ್ಕೆ ..	೫-೪ ೦	೪ ೦
ತೆಂಗಿನಕಾಯಿ ೧೦೦ ಕ್ಕೆ ..	೬-೮-೦	೩-೦
ಅಳಲೇಕಾಯಿ ಮಣ ೧ಕ್ಕೆ .	೧-೦ ೦	೦-೦
ಅಂಟ್ವಾಳದ ಕಾಯಿ ಮಣ ೧ಕ್ಕೆ	೦ ೧೨ ೦	೦ ೦೦
ಚಿನ್ನ (ಪೌನ್) ಕೆಂಪು	೧೫ ೪-೦	೧೫-೬
,, ,, ಪಸಿಮೆ ..	೧೫-೧೦-೦	೧೫ ...
,, ,, ಗಟ್ಟಿ ತೊಲ ೧ಕ್ಕೆ .	೨೩-೧೨-೦	೨೪ ...
ಬೆಳ್ಳಿ ಗಟಿ ತೊಲ ೧೦೦ ಕ್ಕೆ	೮೫-೦-೦	೮೫ ...

Printed and Published by the Rev E W Thompson, M. A., Proprietor and Manager, Wesleyan Mission Press, Mysore 14/2/1907

REGISTERED
M 20.

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೦ ಮೈಸೂರು—ಸನ್ ೧೯೦೭ ನೇ ಇಸವಿ ಫೆಬ್ರುವರಿ ತಾರೀಖು ೨೧ ನೇ ಗುರುವಾರ. ಸಂಚಿಕೆ ೩೮



ದಿ ಸಿಟಿ ಸಿಲ್ವರ್ ವಾಚ್

134

(ಚಿತ್ರದಲ್ಲಿ ಕಂಡದ್ದು.)

ಸ್ಟೆಂವಿಂಗ್ ಕೀಲಿ, ಮುಕ್ಕಾಲು ಪ್ಲೇಟ್, ಜೂಯಲ್ ಚಲನೆ, ಹಾಲ್‌ಮಾರ್ಕ್ ಉಳ್ಳ ಬೆಳ್ಳಿ ಅಲ್ಬರ್ಟ್ ಸರಪಣಿ ಮತ್ತು ಸೀಲ್ ಸಹಿತ, ಸಂಪೂರ್ಣ ದಮಾಸ್ ಪೆಟ್ಟಿಗೆಯಲ್ಲಿ ರುವುದು. ಕ್ರಯ (ಹಿಂದುಸ್ಥಾನದ ಅಂಚೆ ವೆಚ್ಚ ಸೇರಿ) ರೂ ೧೩-೧೪-೦.

ಮೇಲಾದ ಬೆಳ್ಳಿ ಗಡಿಯಾರಗಳು, ಮುಚ್ಚಳವಿಲ್ಲದ್ದು ಕೀಲಿ ತಿರುಗಿಸುವುದೂ, ಕೀಲಿ ಇಲ್ಲದ್ದೂ ಕ್ರಯ ರೂ ೯-೬, ರೂ ೧೧-೧೦, ೧೬-೮, ರೂ. ೨೦-೮

ಬಲವಾದ ಬೆಳ್ಳಿ ಲಿವರ್ ಹಂಟರ್ ಗಡಿಯಾರಗಳು – ಕ್ರಯ ರೂ ೧೯-೧೪, ರೂ ೨೩ ೪, ರೂ ೨೮ ೧೪

ಬಲವಾದ ಫುಲ್ ಹಂಟರ್ ಗಡಿಯಾರಗಳು.—ರೂ ೧೩-೮, ರೂ ೧೫, ರೂ ೧೩-೮, ೧೯ ೨, ರೂ. ೨೩-೧೦.

ಪಾಲ್ಸಿಲರ್ ನಿಕ್ಕಲ್ ಗಡಿಯಾರಗಳು, ಸ್ವಲ್ಪ ಸುತ್ತುಳ್ಳವು, ಕೀಲಿ ಇಲ್ಲ, ಲೀವರ್ ಚಲನೆ, ಸುಂದರವಾದ ಬಿಳಿ ನಮೂನೆ ಮುಚ್ಚಳ ನಂಬಿಕೆಯಾದ ಗಂಟೆ ತೋರಿಸುವದು, ಕ್ರಯ ರೂ ೪-೮, ರೂ ೬-೪, ರೂ ೭

ಬಹಳ ತೆಳುವಾದ ಚಪ್ಪಟೆಯಾಗಿರುವ ಗಡಿಯಾರಗಳು.—(೧) ಕಪ್ಪು ಉಕ್ಕಿನ ಮುಚ್ಚಳ ಉಳ್ಳವು ಕ್ರಯ ರೂ ೧೦-೮,) ರೂ ೧೩-೧೪ (೨) ಬೆಳ್ಳಿಯ ಮುಚ್ಚಳ ಉಳ್ಳವು ಕ್ರಯ ರೂ ೧೪ ೧೧, ರೂ ೨೧.

ಬೆಳ್ಳಿ ಅಲ್ಬರ್ಟ್ ಸರಪಣಿಗಳು ಕ್ರಯ ರೂ ೩-೧೪, ರೂ. ೪-೮, ರೂ ೬-೧೩, ರೂ ೭-೧, ರೂ ೮-೧೦

ಚಿನ್ನ ತುಂಬಿದ ಸರಪಣಿಗಳು ಕ್ರಯ ರೂ. ೬-೬, ರೂ ೮-೧, ರೂ ೯-೩.

ಈ ಕ್ರಯದಲ್ಲಿ ಹಿಂದುಸ್ಥಾನದ ಅಂಚೆ ಹಾಸಲೂ ಸೇರಿದೆ.

ಎಂಟು ದಿನಕ್ಕೊಮ್ಮೆ ಕೀಲಿ ತಿರುಗಿಸುವಂಥಾ ವಾಚುಗಳೂ, ಇನ್ನೂ ಎಲ್ಲಾ ತರದ ತಯಾರಿ ಮತ್ತು ಚಿತ್ರಕೆಲಸ ಮಾಡಿದ ವಾಚುಗಳೂ, ವಿಲಾಯತಿಯಲ್ಲಿ ತಯಾರಾಗಿರತಕ್ಕಂಥಾ ಸಕಲ ವಿಧವಾದ ಸಾಮಾನುಗಳೂ, ಜವಾಹೆರಿ ನಗಗಳೂ ಕೇಳಿದವರಿಗೆಲ್ಲಾ ಕಳುಹಿಸಿಕೊಡುತ್ತೇವೆ

ನಗದು ಹಣ ಕಳ್ಸಿ ಇಂಗ್ಲಿಷಿನಲ್ಲೇ ನಮಗೆ ಬರೆಯಬೇಕು.

ವಿಳಾಸ.—Messrs. Bride and Eastland, 29 to 35, City Road, London, E.C

ಬೇಕಾಗಿದೆ.

153-10

ಇಂಗ್ಲಿಷ್ ಮತ್ತು ಕನ್ನಡ ಅಕ್ಷರ ಜೋಡಿಸುವವರು (ಕಂಪಾಜಿಟರುಗಳು) ಬೇಕಾಗಿದೆ ಚನ್ನಾಗಿ ಕಲಿತಿರುವವರು ಮಾತ್ರ ಖುದ್ದಾಗಿ ಬಂದು ಮಾತನಾಡಬಹುದು.

ಮ್ಯಾನೇಜರ್, ಮಿಷನ್ ಪ್ರೆಸ್, ಮೈಸೂರು.

ಇಲ್ಲಿ ನೋಡಿ !

22 1

ತುಮಕೂರು ಡಿಸ್ಟ್ರಿಕ್ಟ್ ಇಲಾಖೆಯಲ್ಲಿ, ಯೂರೋಪಿಯನ್ ಮೇಲ್ವಿಚಾರಣೆಯಿಂದ, ಉತ್ತಮ ದರ್ಜದ ಹಾಸನದ ಟೋಪಿಗಳು ಅತಿ ಶ್ರೇಷ್ಠವಾದ ಊಲ್‌ದಾರದಿಂದ ತಯಾರಾಗುತ್ತವೆ ಕ್ರಯ ೧೦ ಆಣೆಯಿಂದ ೧ ರೂ ೧೨ ಆಣೆವರಿಗೂ ದೊರಕುವವು ಅಪೇಕ್ಷಿಸುವವರಿಗೆ ಕ್ರಯದ ಪಟ್ಟಿಯನ್ನು ರವಾನಿಸುವೆವು ವಿಳಾಸ – ಮೇನೇಜರ್, ಹಾಸನದ ಟೋಪಿ ಕಾರ್ಖಾನೆ, ಮಿಷನ್ ಇಲಾಖೆ, ತುಮಕೂರು.

ವೃತ್ತಾಂತ ಪತ್ರಿಕೆಯ ಪಂಚಾಂಗವು

ಸಿದ್ಧವಾಗಿದೆ. ಕ್ರಯ ಒಂದಾಣೆ.

೧೯೦೭ನೆ ವರ್ಷದ ಕ್ಯಾಲೆಂಡರು ದೊಡ್ಡ ಸೈಜು ಇದರಲ್ಲಿ ನಮ್ಮ ಮಹಾರಾಜರವರ ಉತ್ಕೃಷ್ಟವಾದ ಫೋಟೋ, ದಿವಾನರವರ ಮತ್ತು ಚೀಫ್ ಜಡ್ಜರ ಫೋಟೋಗಳು ಬಹಳ ಸೊಗಸಾಗಿವೆ ಇದುವರೆಗೆ ಇಂಥಾ ಚಿತ್ರಗಳು ಕ್ಯಾಲೆಂಡರಲ್ಲಿ ಯಾರೂ ನೋಡಿರಲಾರರು.

ಚಂದಾದಾರರಿಗೆ ಸೂಚನೆ—ಇದೇ ಫೆಬ್ರುವರಿ ಆಖೈರಿನೊಳಗಾಗಿ "ವೃತ್ತಾಂತ ಪತ್ರಿಕೆ"ಗೆ ಒಂದು ವರುಷದ ಚಂದಾ ಅಡ್ವಾನ್ಸು ಕಟ್ಟತಕ್ಕವರಿಗೆಲ್ಲಾ ಒಂದೊಂದು ಕ್ಯಾಲೆಂಡರನ್ನು ಪುಗಸಟ್ಟೆ ಕೊಡುವೆವು ಅನಂತರ ಖಂಡಿತವಾಗಿ ಸಿಕ್ಕುವದಿಲ್ಲ.

ಎಚ್ಚರಿಕೆ—ಬಹಳ ಕೊಂಚ ಪ್ರತಿಗಳನ್ನು ಮಾತ್ರ ಪ್ರಿಂಟು ಮಾಡಿದೇವೆ. ಕೂಡ್ಲೆ ಚಂದಾಸಹಿತ ಬರಿಯಿರಿ. ವಿಳಾಸ:—

ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

11-4

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಪ್ರಬಲಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇಳಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಪರೀಕ್ಷಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ನೇರಾ ಬರೆದು ತರಿಸಿಕೊಳ್ಳಿ ಅಗ್ಗವಾದದ್ದು ಚನ್ನಾಗಿಲ್ಲದ್ದೂ ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ.

ಸಾದ, ಕೆಂಪು, ಕಪ್ಪು, ಬಿಳಿ, ಕಾಫಿ ಟೋಪಿಗಳು ೧ ರೂ. ೮ ಆ; ೧ ರೂ ೬ ಆ; ೧ ರೂ ೪ ಆ

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ೧ ರೂ ೮ ಆ, ೨ ರೂ

ಬಾದದ ಟೋಪಿಗಳು ೧ ರೂ. ೧೨ ಆ, ೧ ರೂ ೮ ಆ, ೧ ರೂ. ೬ ಆ.

ಉಸುಕಿನ ಟೋಪಿಗಳು ೧ ರೂ. ೮ ಆ, ೧ ರೂ ೬ ಆ.

ಕೂಸುಗಳ ಟೋಪಿ, ಸಾಕ್ಸ್ ಮೇಜೋಡು, ಅರ್ಧ ಮೇಜೋಡು. ಆತ್ತಿನ ಪಟ್ಟಿ ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ.

ಬೆಂಗಳೂರು ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪನಿ ಲಿಮಿಟೆಡ್.

122—23

ಮೈಸೂರು ಸರ್ಕಾರದವರು ಇಂಡಿಯಾ ಗವರ್ನಮೆಂಟಿನವರು ರೈಲನ್ನು ಸ್ಯಾಂಕ್ಷನ್ ಮಾಡುವ ಕಂಡಿಷನ್ನಮೇಲೆ ಖರ್ಚಾಗುವ ಮೂಲಧನಕ್ಕೆ ಶೇಕಡ ನಾಲ್ಕರಂತೆ ಬಡ್ಡಿ ಕೊಡಲು ಜಾಮೀನಾಗಿರುವೆಂದು ಈಚೆಗೆ ಫೈಸಲ್ ಮಾಡಿರುತ್ತಾರೆ

ನಿಯಮಿತ ಮೂಲಧನ ಶೇರು ಒಂದಕ್ಕೆ ೨೫ ರೂಪಾಯಿಗಳ ಬೆಲೆಯುಳ್ಳ ೪೮ ಸಾವಿರ ಷೇರುಗಳೆಂದಾಗುವ ೧೨ ಲಕ್ಷ ರೂಪಾಯಿ —ಈ ಷೇರು ಮೊಬಲಗು ಷೇರು ಒಂದಕ್ಕೆ ಒಂದು ರೂಪಾಯಿ ಅಪ್ಲಿಕೇಷನ್ ಜೊತೆಯಲ್ಲಿ ಅಡ್ವಾನ್ಸಾಗಿ ಕೊಟ್ಟು ಬಾಕಿ ೨೪ ರೂಪಾಯಿಗಳನ್ನ ನೋಟೀಸು ಕೊಟ್ಟನಂತರ ೧೨ ಕಿಸ್ತುಗಳಲ್ಲಿ ... ಮಾಡತಕ್ಕದ್ದು ... ಲೈನಿನ ಸರ್ವೆ ಪೂರೈಸಲ್ಪಟ್ಟಿದೆ.

ಈ ಕಂಪೆನಿಯ ಷೇರುಗಳನ್ನು ಅಪೇಕ್ಷಿಸತಕ್ಕಂಥಾವರು ಈ ಕೆಳಕಂಡ ... ಮಾಡಿರುವವರಿಗೆ ಅಥವಾ ಸಬ್ ಏಜೆಂಟ್ರಿಗೆ ದರಖಾಸ್ತು ... ಕೊಳ್ಳಬೇಕು

ಷೇರು ಹಣವನ್ನು ಈ ಕೆಳಗೆ ರುಜು ಮಾಡಿರುವವರಿಗೆ, ಇವರಿಂದ ... ಮೂಲಕ ಹಣ ವಸೂಲು ಮಾಡಲು ಅಧಿಕಾರ ಹೊಂದಿರುವ ... ಏಜೆಂಟರಿಗೆ, ಬೆಂಗಳೂರು ಬ್ರಾಂಚು ಮದ್ರಾಸು ಬ್ಯಾಂಕಿಗೆ (ಈ ಕಂಪೆನಿಯ ಕ್ರೆಡಿಟ್ಟಿಗೆ), ಅಥವಾ ಮೈಸೂರು ಸೀಮೆಯ ತಾಲ್ಲೂಕು ಟ್ರೆಷರಿ ಖಜಾನೆಗಳಿಗಾಗಲಿ ಪಾವತಿ ಮಾಡಬೇಕು

(ಸ್ವ) ಬಿ. ವಿ. ರಾಮಸ್ವಾಮಿ ಶೆಟ್ಟಿ, ಬಿ. ಎ.,

ಅಡ್ವೊಕೇಟ್, ಮತ್ತು ಬೆಂಗಳೂರು ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪೆನಿಯ ಚೀಫ್ ಏಜೆಂಟ್.

ನಗರ್ತಪೇಟೆ, ಬೆಂಗಳೂರು ಸಿಟಿ.

ಹಿಂದುಸ್ಥಾನದಲ್ಲಿ ಮಕ್ಕಳು

ಬಹಳ ಉಷ್ಣವಾದ್ದರಿಂದ ನಾನಾ ದೇಹಬಾಧೆಗಳನ್ನು ಸಹಿಸಿಕೊಂಡು ಬೆಳೆಯಬೇಕಾಗಿದೆ

ಅವರ ಸಣ್ಣ ಸಣ್ಣ ಮೂಳೆಗಳೂ ಮಾಂಸಖಂಡಗಳೂ ಸರಿಯಾಗಿ ಬಲಹೊಂದಿ ಬೆಳೆಯುವುದಕ್ಕೆ ಅವರಿಗೆ ಚಿಕ್ಕಂದಿನಿಂದಲೇ ಬಲಕಾರಿಯಾದ ಸೇವನಾ ಔಷಧವನ್ನು ಕೊಡುವುದು ಅವಶ್ಯಕ

SCOTT'S EMULSION 57-49

(ಸ್ಕಾಟ್ಸ್ ಇಮಲ್‌ಷನ್)

ಎಂಬೀ ಸೇವನಾ ಔಷಧದಲ್ಲಿ ಮಕ್ಕಳ ಸಮಸ್ತ ಅಂಗಗಳನ್ನೂ ಬಲಪಡಿಸಿ ಬೆಳೆಸುವಂಥಾ ಬಹು ಉತ್ಕೃಷ್ಟವಾದ ಗುಣಗಳಿರುತ್ತವೆ

ಮೀನುಹೊತ್ತ ಮನುಷ್ಯ ಇರುವ ಈ ಔಷಧದ ಗುರುತು

ಇದಕ್ಕೆ ಸಮಾನವಾದದ್ದು ಮತ್ತೊಂದೂ ಇಲ್ಲ.

ಈ ಔಷಧವನ್ನು ಸೇವನೆ ಮಾಡುತ್ತಾ ಬಂದ ಒಡನೆಯೇ ಅದರ ಗುಣಗಳು ಕಂಡು ಬರುವವು

ಕೈಯಿಂದ ಮುಟ್ಟದೇನೇ ತಯಾರಾದದ್ದು.

ಎಲ್ಲಾ ಔಷಧ ವ್ಯಾಪಾರಸ್ಥರಲ್ಲೂ ಬಿಕರಿಯಾಗುತ್ತಿದೆ.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್, ಔಷಧಗಳ ಕಾರ್ಖಾನೆ, ಲಂಡನ್, ಇಂಗ್ಲೆಂಡ್,

ಮುಂಬಯಿ ವ್ಯಾಪಾರವಾಡಲಿಚ್ಛೈಸುವವರು

86-38

ಮುಂಬಯಿಯಲ್ಲಿ ಪ್ರತಿಯೊಂದು ಮಾಲಿನ ತುಕ ಅಳತೆ ಮತ್ತು ಮಾಲಿನ ವರ್ಣನೆ ಹಾಗೂ ಅನೇಕ ಉಪಯುಕ್ತ ಮಾಹಿತಿಯುಳ್ಳ ಕನ್ನಡ ಪುಸ್ತಕ.—ಕ್ರಯ ೧೦ ಆಣೆ. ವಿ. ಪಿ ಯಿಂದ ಕಳಿಸುವೆವು. ಟಪಾಲು ಖರ್ಚು ಬೇರೆ ಬುಕ್ಕು ಸೇಲರರಿಗೆ ಯೋಗ್ಯ ಕಮಿಷನ್ ದೊರೆಯುವದು. ಮತ್ತು ಲಿಂಗಾಯತ ಧರ್ಮಸಂಬಂಧ ವಿರಕ್ತೋತ್ಪತ್ತಿ ಕ್ರಿಯಾಲಕ್ಷಣವೆಂಬುವ ಕನ್ನಡ ಪುಸ್ತಕ—ನಾಲ್ಕು ಆಣೆ. ಇಲ್ಲಿ ಅಕ್ಷರದಿಂದ ಬರೆಯಿರಿ ಪತ್ತಾ ಚನ್ನಬಸಪ್ಪ ಮಲ್ಲಪ್ಪ ಸಾರದ, ಪೋಷ್ಟು ಮಾಂಡ್ವಿ, ಮುಂಬಯಿ.

ಕೊಡಗು ದೇಶದ ಶ್ರೇಷ್ಠವಾದ ಉತ್ಕೃಷ್ಟ ಕಾಫಿಯು

ಹುರಿಯದೆ ಇರುವದು ಅಥವಾ ಆಗತಾನೆ ಹುರಿದದ್ದು ಶೇರವಾಡಿದ ಸ್ಥಳದಿಂದಲೆ ನೆಟ್ಟಗೆ ರವಾನಿಸಲ್ಪಡುವದು.

18-3

ವ್ಯಾಪಾರದ ——— ಹೆಗ್ಗುರ್ತು

ಕಾಡುಕೋಣದ ತಲೆಯು ಮುದ್ರೆ ಇದೆ.

ಸಂಪೂರ್ಣವಾಗಿ ಯಂತ್ರದಿಂದಲೆ ಸಿದ್ಧಪಡಿಸಿದ್ದು. ಹೆಗ್ಗುರ್ತುಳ್ಳ ವಿಳಾಸದ ಚೀಟಿ ಸುತ್ತಿಲ್ಲದಿರುವವು ಸ್ವಚ್ಛವಾದವುಗಳಲ್ಲ. ಅವು ನಮ್ಮದಲ್ಲ. ಏಜಂಟರುಗಳು ಬೇಕು. ಇಂಥವರಿಗೆ ಅಲಾಯದ ದರ ಬರೆಯುವವರು ದಯವಿಟ್ಟು ಈ ಪತ್ರಿಕೆಯ ಹೆಸರನ್ನು ಸೂಚಿಸಿ.

ವಿಳಾಸ—ಮ್ಯಾನೇಜರ್, ಮ್ಯಾಥಿಸನ್ಸ್ ಕಾಫಿ ವರ್ಕ್ಸ್, ಹುಣಸೂರು.

ಮಕ್ಕಳಿಗೆ ಪಾಠಪುಸ್ತಕಗಳ ಚಿಲ್ಲರೆ ಪೇಚಾಡುವದೇಕೆ!

21-2

ಬಾಲಶಿಕ್ಷೆ ಎಂಬ ಪುಸ್ತಕವಿರಲಾಗಿ ಬೇರೆ ಪುಸ್ತಕವು ಬೇಕೇ? ಇದು ಈಗ ಎರಡನೆಯಾವೃತ್ತಿ ಮುದ್ರಿತವಾಗಿ ಅತಿ ಮನೋಹರವಾಗಿಯೂ ಬಾಲಕರ ಅಕ್ಷರಾಭ್ಯಾಸಕ್ಕೆ ಅತಿ ಸಹಾಯಕರವಾದ ಚಿತ್ರಗಳಿಂದ ಕೂಡಿದುದಾಗಿಯೂ ಇರುವದರಿಂದ ಅನೇಕ ಗವರ್ನಮೆಂಟು ಸ್ಕೂಲುಗಳಲ್ಲಿ ಉಪಯೋಗಿಸಲ್ಪಡುತ್ತಾ ಬಂದಿದೆ.

ಸರ್ವರೂ ಇದನ್ನು ತರಿಸಿಕೊಂಡು ನೋಡಿ ಅದರ ಬೆಲೆಯನ್ನು ತಿಳಿಯಬೇಕಾಗಿದೆ.

ಕ್ರಯ ೧ ಆಣೆ. ವಿ. ಪಿ. ಮೂಲಕ ಮೂರು ಆಣೆಗಳು. ನೂರು ಪ್ರತಿಗಳಿಗೆ ಹನ್ನೆರಡು ಪ್ರತಿಗಳು ಕಮಿಷನ್.

ವಿಳಾಸ:—ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

ತಾವಾಗಿ ಇಂಗ್ಲೀಷು ಕಲಿಯುವಿಕೆ.

23-1

ಸ್ವಲ್ಪ ಪ್ರತಿಗಳೇ ಉಳಿದಿವೆಯಾದ್ದರಿಂದ ಬೇಗ ಬರೆಯಿರಿ! ಇಂಗ್ಲೀಷು ಭಾಷೆಯನ್ನು ಬರೆಯುವದಕ್ಕೂ, ಓದುವುದಕ್ಕೂ, ಮಾತಾಡುವುದಕ್ಕೂ, ಬೋಧಕರ ಸಹಾಯ ಸ್ವಲ್ಪವೂ ಇಲ್ಲದಂತೆ ಒಂದೆರಡು ತಿಂಗಳುಗಳಲ್ಲಿ ತಾವಾಗಿ ಕಲಿಸುವ ಅತ್ಯುತ್ತಮ ಪುಸ್ತಕವಿದು. ೨ನೆ ಛಾಪು. ಬಿಕರಿಗೆ ಸಿದ್ಧವಾಗಲು ಸಾವಕಾಶವಾದೀತಾದ್ದರಿಂದ ಬೇಗ ಬರೆಯಿರಿ ಕ್ರಯ ೧—೩—೦

ಸುಭಾಷಿತ ಸಮುದಾಯವು.

ಶ್ರೀಮನ್ಮಹಾಭಾರತ, ಭೋಜ ಚರಿತ್ರೆ, ಇವುಗಳಿಂದ ಆರಿಸಿದ ಕಾಲೋಚಿತವಾಗಿರುವ ರೀತಿಯಾಗಿ ೩೦೦ ಶ್ಲೋಕಗಳನ್ನು ಬರೆದು ಇಂಗ್ಲೀಷಿನಲ್ಲೂ ಕನ್ನಡದಲ್ಲೂ ಸಹ ಅರ್ಥ ಬರೆದಿರುತ್ತೆ! ಶ್ಲೋಕ॥ ತೃಷ್ಣಾಂ ಚೇದಪರಿತ್ಯಜ್ಯ ಕೋದರಿದ್ರಃ ಕ ಈಶ್ವರಃ । ತಸ್ಯಾಶ್ಚೇತ್ಪ್ರಸರೋದತ್ತೋ ದಾಸ್ಯಂ ಚ ಶಿರಸಿ ಸ್ಥಿತಂ ॥ ಕನ್ನಡ ಅರ್ಥ— ಆಸೆಯನ್ನು ಬಿಟ್ಟರೆ ಬಡವನ್ಯಾರು? ಧನಿಕನ್ಯಾರು? ಅದಕ್ಕೆ ಅಸ್ಪದ ಕೊಟ್ಟರೆ ಸೇವಕತ್ವವು ತಲೆಯ ಮೇಲೆಯೇ ಇರುವದು. ಇಂಗ್ಲೀಷು ತಾತ್ಪರ್ಯ—

If only the desire is given up who is and who is rich? But slavery is on the head of one who has it.

ಈ ರೀತಿಯಾಗಿ ೩೦೦ ಶ್ಲೋಕಗಳಿಗೆ ಇಂಗ್ಲೀಷಿನಲ್ಲೂ ಕನ್ನಡದಲ್ಲೂ ಅರ್ಥವನ್ನು ಬರೆದಿರುತ್ತೆ. ಗೀರ್ವಾಣ ಭಾಷಾಭಿಮಾನಿಗಳೆಲ್ಲಾ ಒಂದೊಂದು ಪ್ರತಿಯನ್ನು ಸಂಗ್ರಹಿಸಬೇಕಾದ್ದು. ಬೇಗ ಬರೆಯಿರಿ!

ವಿಳಾಸ.— ಬಿ. ಕೆ. ಮಾರ್ಟಿನ್ ಕಂಪನಿ, ಉಕ್ಕೂರು ಪೋಸ್ಟು, ಕೋಲಾರ ಡಿಸ್ಟ್ರಿಕ್ಟ್.

CHAMBERLAIN'S COUGH REMEDY.

ಚೇಂಬರ್ಲೈನ್ ಯವರು ಕಂಡು ಹಿಡಿದ ಕೆಮ್ಮಿನ ಔಷಧವು.

4-8

ಶೀತದ ಕೆಮ್ಮು, ಗಂಟಲು ಗೊರಗೊರವೆನ್ನುವುದು, ಹುಬ್ಬಸವನ್ನು, ನಾಯಿಕೆಮ್ಮನ್ನು, ಎಲ್ಲಾ ತರದ ಶೀತ, ಗಂಟಲು ಸಲ್ಲು ಎದೆಯಲ್ಲಿ ಕಟ್ಟಿನ ಸಮಸ್ತ ವ್ಯಾಧಿಗಳೂ—ಇವಕ್ಕೆಲ್ಲಾ ಈ ಔಷಧವು ಬಾಣದ ಗುಣವುಳ್ಳದ್ದಾಗಿದೆ.

ಆ ಕೆಮ್ಮನ್ನು ಅಲಕ್ಷ್ಯಮಾಡಬೇಡಿ. ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ. ಅದರ ವೇಲೆ ನ್ಯೂಮೋನಿಯಾ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವುದು. ತರುವಾಯ ಉಗುಳಿನಲ್ಲಿ ರಕ್ತ ಬೀಳುವುದು. ಹಾಗೆಯೇ ಕ್ಷಯರೋಗಕ್ಕೆ ಆಸ್ಪದವಾಗುವುದು.

ಚೇಂಬರ್ಲೈನರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟಲಿನಲ್ಲಿ ಶ್ಲೇಷ್ಮ ಕಟ್ಟುವುದನ್ನೂ ಶ್ಲೇಷ್ಮ ಬೀಳುವುದನ್ನೂ ಎದಿರಾಗಿ ನಿವಾರಣೆಮಾಡುತ್ತದೆ. ಉಸುರು ಹೋಗುವುದು ಕಷ್ಟವಾಗಿದ್ದರೆ ಅದನ್ನು ಕೂಡಲೇ ಪರಿಹರಿಸುತ್ತದೆ. ಅಪಾಯಕರವಾದ ಕೆಮ್ಮಿನ ಕಫವನ್ನು ನಿಲ್ಲಿಸಿಬಿಡುತ್ತದೆ. ಎದೆ ಒಣಗುವಂಥಾ ಕೆಟ್ಟಸ್ಥಿತಿಯನ್ನು ಸಂಪೂರ್ಣವಾಗಿ ವಾಸಿಮಾಡಬಲ್ಲದು. ಕೆಮ್ಮನ್ನು ಶಮನಮಾಡಿ, ನೀವು ಸುಖವಾಗಿ ನಿದ್ರೆಮಾಡುವಂತೆ ಮನಸ್ಸಿಗೆ ಉಲ್ಲಾಸಕೊಡುತ್ತದೆ.

ಚೇಂಬರ್ಲೈನರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇರಿಸಿರುವುದಿಲ್ಲ.

ಈ ಔಷಧವು ವನಸ್ಪತಿಗಳ ತಯಾರಿ. ಕೈಯಿಂದಮುಟ್ಟದೆ ತಯಾರಾಗಿದೆ.

ಎಲ್ಲ ಬಿಕರಿಯಾಗುವದು. ಸಣ್ಣ ಸೀಸೆಗೆ ೧ ರೂಪಾಯಿ. ದೊಡ್ಡ ಸೀಸೆಗೆ ೨ ರೂಪಾಯಿ.

ಮೆಕ್ಮಿಲನರ ಕನ್ನಡ ೫ನೇ ರೀಡರ್ ನೋಟ್ಸು.

25-1

ಬಹಳ ಸ್ವಲ್ಪ ಪ್ರತಿ ಉಳಿದಿರುವದರಿಂದ ಪತ್ರಿಕೆ ಬಂದಾಕ್ಷಣ ಕ್ರಯಕ್ಕೆ ಇಳಿಸಿರುತ್ತದೆ. ಗ್ರಂಥಕರ್ತರು ಮಾತ್ತು ಅಡ್ರೆಸ್ಸು—ಕೆ. ನಾರಾಯಣ ಶಾಸ್ತ್ರಿ, ಕನ್ನಡ ಪಂಡಿತ, ಮಹಾರಾಜ ಕಾಲೇಜು, ಮೈಸೂರು.

ಉತ್ತಮವಾದ ಸಿದ್ಧೌಷಧಗಳು.

15

ಆರ್ವೇಗದಿಂದಲೂ ಬಂದ ನಮ್ಮ ಔಷಧಿಗಳು ಲಕ್ಷಾಂತರ ರೋಗಿಗಳಿಗೆ ಉಪಯೋಗಿಸಿ ಗುಣ ಕಂಡುಬಂದವುಗಳಾಗಿವೆ. ಅವುಗಳೆಲ್ಲಾ ಮೂಲಿಕೆಗಳಿಂದ ತಯಾರಾಗಿರುತ್ತೆ. ತಿಂಗಳೊಂದಕ್ಕೆ ಅನೇಕರು ಔಷಧಿ ಸೇವಿಸುತ್ತಲೂ ಇರುವ ಸಂಗತಿ ಎಲ್ಲರಿಗೂ ಗೊತ್ತಿದೆ

(೧) ಸಂಜೀವಿನಿ ತೈಲ ಸಮಸ್ತ ಮಹಾ ರೋಗಗಳಿಗೂ ಕಾಲು ಸೀಸೆಗೆ ೦-೪-೦ (೨) ಭೃಂಗರಾಜ ತೈಲ ಎಲ್ಲಾ ವಿಧವ ಶಿರೋರೋಗಗಳಿಗೆ ಕಾಲು ಸೀಸೆಗೆ ೦-೧೦-೦ (೩) ಭೀಮ ವೀರ್ಯ ಸುಖಪ್ರವರ್ತಿಯಾಗುವುದು ಕಾಲು ಸೀಸೆಗೆ ೧-೦-೦. (೪) ವ ಕಾರೀಕ ಪಾತಶಕ್ತಿಯನ್ನುಂಟುಮಾಡಿ ಪುಷ್ಟಿಮಾಡುತ್ತೆ. ಸೇರಿಗೆ ೨-೦-೦. (೫) ಸೌಭಾಗ್ಯ ಶುಂಠಿ ಪಾಕ ದೇಹ ಇದರ ಸೇವನೆಯಿಂದ ಬಾಣಂತಿಯನ್ನು ಕ್ಷಯ ಮೊದಲಾದ ರೋಗಗಳನ್ನು ಪರಿಹರಿಸುತ್ತೆ. ಸೇರಿಗೆ ೧-೦-೦ ಹುಚ್ಚುನಾಯಿ, ಕೊಳತೆ ಮಂಡಲ ಇವುಗಳಿಂದುಂಟಾದ ಪ್ರಬಲ ರೋಗಗಳಿಗೂ ಚಿಕಿತ್ಸೆಯು ದೊರೆಯುವದು

ನಮ್ಮ ಕ್ಯಾಟಲಾಗು ತರಿಸಿ ನೋಡಿ—ಪಂಡಿತ ಕೃಷ್ಣಾಚಾರ್ಯ ನಿಖಿಲ ರೋಗಾರಿ ವೈದ್ಯಶಾಲಾ, ದೊಡ್ಡಪೇಟೆ, ಮೈಸೂರು.

ಪೊಳ್ಳದ ವೆಂಕಟಾಚಲ ಪಂಡಿತ, ಶ್ರೀನಿವಾಸ ರಾಘವ ವೈದ್ಯಶಾಲಾ, ಕೊಳ್ಳೇಗಾಲ, ಇವರ ಸಿದ್ಧೌಷಧಗಳು.

26-1



೧. ಲೋಕಕಾಮಾಯಪರ ಕಸ್ತೂರಿ ಮಾತ್ರೆ.—ಈ ಮಾತ್ರೆಗಳನ್ನು ಹವಳದ ಭಸ್ಮ ಚಿನ್ನದ ರೇಕುಗಳ ಮಿಶ್ರದಿಂದ ತಯಾರಿಸಿದೆ. ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಸ್ಫೋಟ ಜ್ವರ, ಛಳಿಜ್ವರ, ದ್ವಾರ, ಅಗ್ನಿನಷ್ಟ, ನಿಶ್ಶಕ್ತಿ, ಕೆಮ್ಮು, ಹೊಟ್ಟೆ, ತಿರುಗೋಕ್ಷೆ, ಎದೆಗಳ ನೋವು ಇವಕ್ಕೆ ಹಾರಿಹೋಗುವದು; ಮಕ್ಕಳ ಎಲ್ಲಾ ರೋಗಕ್ಕೂ ಗುಣಕಾರಿ. ನೀರು ಮತ್ತು ಎದೆ ಬಡಿ ಬಾವನೆಗೆ ಒಳ್ಳೆಯದು. ೨೦ ಮಾತ್ರೆಯುಳ್ಳ ಡಬ್ಬಿಗೆ ೪ ಆಣೆ. ಪೋಸ್ಟು ಮೂಲಕ ೫ ಸೀಸೆಗೆ ಒಂದು ಪ್ಯಾಕೆಟ್ಟು ೧ ರಿಂದ ೫ ರವರೆಗೆ ಟಪಾಲು ಖರ್ಚು ೩ ಆಣೆ.

೨. ಪ್ಲೇಗಿಗೆ ಸಿದ್ಧೌಷಧ.—ಪ್ಲೇಗಿಗೆ ಔಷಧಿಯೇ ಇಲ್ಲವೆಂದು ಹೇಳದೆ ಈ ನಮ್ಮ ಔಷಧವನ್ನು ತರಿಸಿ ಉಪಯೋಗಿಸಿ ನೋಡಿ. ಯೋಗ್ಯತಾಪತ್ರಗಳನ್ನು ವಿವರಿಸಲು ಸ್ಥಳ ಸಾಲದು. ಗೆಡ್ಡೆ ಮೊದಲಾದ ಬಾಧೆ ಇಲ್ಲದಂತೆ ಉದ್ಭವ ಔಷಧಿ ಸೇರಿ ಕ್ರಯ ೧ ರೂಪಾಯಿ

೩. ಕೆ. ಸಿ. ಇ. ಸರ್ವಾಂಗಬಲಕಾರಿ.—ಕಾಫಿ, ಟೀ, ಕೋಕೋಗಳಿಗೆ ಬದಲಾಗಿ ಉಪಯೋಗಿಸುವ ಪುಡಿ. ಕಾಫಿ, ಟೀಗಳಲ್ಲಿ ರುವ ದುರ್ಗುಣಗಳು ಇದರಲ್ಲಿಲ್ಲ. ಎದೆ, ಅನ್ನಕೋಶ, ನರಗಳು, ಸಂದುಗಳು, ಪಿತ್ತ, ಶಿರಸ್ಸುಗಳು, ಇವುಗಳ ಸಂಬಂಧವಾದ ಎಲ್ಲಾ ರೋಗಗಳನ್ನೂ ಚೆನ್ನಾಗಿ ಹೋಗಲಾಡಿಸಿ ಧಾತುಶಕ್ತಿಯನ್ನು ಕ್ರಮವಾಗಿ ವೃದ್ಧಿಪಡಿಸುವದು. ೨೦ ಲೋಟ ಕಾಫಿಯಾಗುವ ಡಬ್ಬಿ ೬ ಆಣೆ, ೬೦ ಲೋಟ ಆಗುವುದು ೭ ಆಣೆ

೪. ಕಾಲರಾ ಔಷಧ —ಮಾತ್ರೆ ಕಟ್ಟಿ ಹೊಟ್ಟೆಯುಬ್ಬರಿಸುವ ಅಪಾಯವಾಗದಂತೆ ಖಂಡಿತ ಗುಣವಾಗುತ್ತೆ. ಕ್ರಯ ೧ ಆಣೆ.

ವಿಳಾಸ:—ಎಸ್. ಎಸ್. ಆರ್. ವೈದ್ಯಶಾಲಾ, ಲಕ್ಷ್ಮೀವಿಲಾಸ ರೋಡ್, ಮೈಸೂರು.

ಕನ್ನಡ ಹೊಸ ೨ನೇ ರೀಡರಿನ ಟಿಪ್ಪಣಿ.

24-1

ಗದ್ಯಪದ್ಯಗಳ ಪ್ರತಿ ಒಂದು ಪಂಕ್ತಿಯಲ್ಲಿಯೂ ಸ್ಪಷ್ಟವಾದ ಪದಗಳ ಅರ್ಥಗಳೂ, ಆಯಾ ಪಾಠಗಳ ಮೇಲೆ ಅಭ್ಯಾಸದ ಪ್ರಶ್ನೆಗಳೂ, ಇವು ತ್ತೆಗೆ ತಕ್ಕಂತೆ ಪ್ರತಿ ಪಾಠದಲ್ಲಿನ ವ್ಯಾಕರಣ ವಿಷಯಗಳೂ ಬರೆಯಲ್ಪಟ್ಟಿವೆ. ಅಟ್ಟಾಗುತ್ತಲಿದೆ. ಪ್ರತಿ ೧ಕ್ಕೆ ಸಿರೂಪಾಯಿ ೩ ತ್ರಕ್ಕೆ ೧ಡಜ್ಜು ಸಿಕ್ಕುವದು ವಿಳಾಸ.—ಕೆ. ರಾಮಸ್ವಾಮಯ್ಯಂಗಾರ್, ಮಾಗಡಿ

ವೃತ್ತಾಂತ ಪತ್ರಿಕೆ.

———:o:———

ಸ್ ೧೯೦೭ ನೇ ಇಸವಿ ಫೆಬ್ರವರಿ ತಾ॥ ೨೧ನೇ ಗುರುವಾರ

ಗತಿಸಿದ ಮೆ॥ ಪಿ. ವೇದಮಿತ್ರಯ್ಯನವರು

ನಮ್ಮ ಈ ಪತ್ರಿಕೆಯನ್ನು ನಡಸುವುದರಲ್ಲಿ ಬಹಳ ಗಾಢವಾಗಿದ್ದು ಅನೇಕ ವಿಷಯಗಳನ್ನು ಕುರಿತ ಬಾತ್ಮಿಗಳನ್ನು ಬರೆಯುತ್ತಾ ಬಂದಿದ್ದ ಮೆ॥ ಪಿ. ವೇದಮಿತ್ರಯ್ಯನವರು ಪ್ಲೇಗ್ ಉಪದ್ರವಗಳಿ ಕಾಲವಾದರೆಂದು ತಿಳಿಸಲು ತುಂಬಾ ದುಃಖಪಡುತ್ತೇವೆ. ಅವರು ರಾಜಧಾನಿಯ ಚಾಮರಾಜಮೊಹಲ್ಲೆಯಲ್ಲಿ ವಾಸಮಾಡುತ್ತಿದ್ದರು. ನೊನ್ನೆ ಭಾನುವಾರ ಅವರ ಇಬ್ಬರು ಮಕ್ಕಳಿಗೆ ಜ್ವರ ಕಾಣಿಸಿಕೊಂಡಿತು. ಸೋಮವಾರ ಪ್ರಾತಃಕಾಲವಾಗುವಾಗ್ಗೆ ತಂದೆಗೂ ಜ್ವರಪ್ರಾಪ್ತವಾಯಿತು. ಡಾಕ್ಟರು ನೋಡಿ ಮೂರು ಮಂದಿಗೂ ಪ್ಲೇಗ್ ತಗಲಿದೆ ಎಂದು ಹೇಳಿದರು. ಸೋಮವಾರವೇ ಆ ಇಬ್ಬರು ಮಕ್ಕಳಲ್ಲಿ ಸುಮಾರು ೭ ವರುಷದ ಹುಡುಗನು ಕಾಲವಾದನು, ಮರುದಿನ ರಾತ್ರಿ ಮೆ॥ ವೇದಮಿತ್ರಯ್ಯನವರೂ ಪರಲೋಕವನ್ನೈದಿದರು.

ಮೆ॥ ಪಿ. ವೇದಮಿತ್ರಯ್ಯನವರ ತಂದೆತಾಯಿಗಳು ಕ್ರೈಸ್ತರಾಗಿದ್ದರು. ಅವರ ತಂದೆ ಕೆಲವು ಕಾಲ ದಕ್ಷಿಣ ಆಫ್ರಿಕದಲ್ಲಿದ್ದರು. ಚಿಕ್ಕಂದಿನಲ್ಲಿ ಮೆ॥ ವೇದಮಿತ್ರಯ್ಯನವರು ಬೆಂಗಳೂರಿಗೆ ಬಂದು ಅಲ್ಲಿನ ವೆಸ್ಲಿಯನ್ ಹೈಸ್ಕೂಲಿಗೆ ಸೇರಿ ವಿದ್ಯಾಭ್ಯಾಸಮಾಡಿ, ಮೈಸೂರಿಗೆ ಬಂದು ಅನೇಕ ವರುಷಗಳ ತನಕ ಇಲ್ಲಿನ ವೆಸ್ಲಿಯನ್ ಹೈಸ್ಕೂಲಿನಲ್ಲಿ ಸಹಾಯೋಪಾಧ್ಯಾಯರಾಗಿದ್ದುಕೊಂಡು, ಅನೇಕಾನೇಕ ಬಾಲಕರಿಗೆ ವಿದ್ಯೆಕಲಿಸಿರುತ್ತಾದ್ದರಿಂದ ಅವರೆಲ್ಲಾ ಈ ಸುದ್ದಿಯನ್ನು ಕೇಳಿ ತುಂಬಾ ವ್ಯಸನಪಟ್ಟಾರೆನ್ನುವುದಕ್ಕೆ ಸಂಶಯವಿಲ್ಲ. ಈಚೆಗೆ ಕಳೆದ ಆರು ವರ್ಷಗಳಿಂದಲೂ ಮೆ॥ ವೇದಮಿತ್ರಯ್ಯನವರು ನಮ್ಮ ಪ್ರೆಸ್ಸಿನಲ್ಲಿದ್ದುಕೊಂಡು ತಮ್ಮ ಸಮಯವನ್ನೆಲ್ಲಾ ಗ್ರಂಥರಚನಾ ಕಾರ್ಯದಲ್ಲೇ ವಿನಿಯೋಗಮಾಡುತ್ತಾ ಬಂದಿದ್ದರು. ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಅವರಿಗಿದ್ದ ಪರಿಶ್ರಮವೂ ಸಾಮರ್ಥ್ಯವೂ ಗ್ರಂಥರಚನೆಯಲ್ಲಿ ಅವರನ್ನು ಅತ್ಯಂತ ಅಮೌಲ್ಯವಾದ ಬರವಣಿಗಸ್ತರನ್ನಾಗಿ ಮಾಡಿದ್ದವು. ಅವರು ಬರೆದಿರುವ ಮತ್ತು ಅವರಿಂದ ಪರಿಷ್ಕರಿಸಲ್ಪಟ್ಟಿರುವ ಅನೇಕ ಪುಸ್ತಕಗಳು ಈ ಸಂಸ್ಥಾನದ ಎಲ್ಲಾ ಭಾಗಗಳಲ್ಲಿ ಮಾತ್ರವೇ ಅಲ್ಲ; ಇತರ ಕಡೆಗಳಲ್ಲೂ ಬಹು ವಿಶೇಷವಾಗಿ ಪ್ರಚಾರವಾಗಿರುತ್ತವೆ. ಅವರು ಕ್ರೈಸ್ತ ಭಕ್ತಿ ಪೂರಿತರಾಗಿದ್ದರು. ಅವರ ಸದ್ಭಕ್ತಿ ಸದಾಚಾರ ಸಚ್ಚರಿತ್ರೆಗಳನ್ನು ನೋಡಿ ತಿಳಿದಿದ್ದವರೆಲ್ಲಾ ಅವರನ್ನು ತುಂಬಾ ಗೌರವದಿಂದಲೂ ಭರವಸೆಯಿಂದಲೂ ಕಾಣುತ್ತಿದ್ದರು. "ವೃತ್ತಾಂತ ಪತ್ರಿಕೆ"ಯನ್ನು ನಡಸುವುದರಲ್ಲಿ ಅವರ ಸಹ

...ಜೆಗಳಾಗಿರುವವರು ಅವರ ವಿಷಯದಲ್ಲಿ ತಮಗಿರುವ ಪ್ರೀತಿವಾತ್ಸಲ್ಯಾದಿಗಳನ್ನು ಈ ಮೂಲಕ ಪ್ರಕಾಶಪಡಿಸಿ ...ವರ ಪತ್ನಿ ಪುತ್ರಾದಿಗಳಿಗುಂಟಾಗಿರುವ ಇಂಥಾ ಅಪಾರವಾದ ವಿಯೋಗದ ದುಃಖಕ್ಕಾಗಿ ತುಂಬಾ ಸಂತಾಪಪಡುವರು.

ಕಾಮ ದಹನವು.

ಈ ಭರತಖಂಡದಲ್ಲಿ "ಕಾಮದಹನ" ಅಥವಾ "ಹೋಳೀ ಹಬ್ಬ" ವೆಂಬೀ ಹಬ್ಬವನ್ನು ಜನರು ಕಾಲಾಂತರದಿಂದಲೂ ವರ್ಷ ವರ್ಷ ಆಚರಿಸುತ್ತಾ ಬಂದಿದ್ದಾರೆ. ಈ ವಿಷಯ ಈ ಹಬ್ಬವು ಮುಂದಿನ ಬುಧವಾರ ನಡೆಯತಕ್ಕುದೆಂದು ಪಂಚಾಂಗ ಕರ್ತರು ಬರೆದಿರುವ ... ಈ ಹಬ್ಬವನ್ನು ಪ್ರಜೆಗಳು ಯಾವ ರೀತಿಯಲ್ಲಿ ಆಚರಿಸುತ್ತಾರೆಂಬುದನ್ನು ನಾವು ವಿವರಿಸಲು ಲಜ್ಜೆ ಪಡುತ್ತೇವೆ. ವೇಷಗಳನ್ನು ... ಗುಲಾಲ್ ರಂಗನ್ನು ಬಟ್ಟೆಗಳಿಗೆ ಹಾಕಿ ಉಟ್ಟು ಹೊದ್ದುಕೊಂಡು ... ಅಸಹ್ಯವೂ ಆದ ಭಂಡಪದಗಳನ್ನು ಕಟ್ಟಿ ದೇಶವಿಶ್ರುತ... ಜೀವಿಸುವವರನ್ನು ಕಟ್ಟಿಕೊಂಡು ಬೀದಿಬೀದಿಗಳಲ್ಲಿ ಹಾಡು... ಬರುವರು. ಆ ಜನರ ಮಾತುಗಳನ್ನು ಕೇಳುವುದರಲ್ಲಿ ಅನೇಕಾ... ಉತ್ಸಾಹಪಡುತ್ತಾರೆ. ಇದರಿಂದ ಈ ಹಬ್ಬವನ್ನು ಈ ರೀತಿ ... ಸುವವರ ಗುಣನಡತೆಗಳು ಎಷ್ಟು ಕೆಟ್ಟು ಹೋಗಿವೆ ಎಂಬುವು ... ಪ್ರಕಾಶವಾಗುತ್ತದೆ. ಅವರು ತಾವು ಮಾತ್ರ ಕೆಟ್ಟ ಚಾಲಿನವರಾಗು... ಲ್ಲದೆ ಪ್ರಜಾಕೋಟಿಗಳನ್ನೂ ಮಾನಹೀನರನ್ನಾಗಿ ಮಾಡುವವರಾ... ತ್ತಾರೆ. ಸದ್ಭಕ್ತಿ, ಸದ್ಗುಣ, ಮಾನ, ಗಾಂಭೀರ್ಯ, ಗೌರವಾದಿ... ಲ್ಲಿ ಆಚಂಚಲವಾದ ಪ್ರೀತಿಯನ್ನಿಟ್ಟುಕೊಂಡಿರುವವರೆಲ್ಲಾ ಈ ಹ... ನ್ನು ಈ ರೀತಿ ಆಚರಿಸುವುದು ಯೋಗ್ಯವಾದುದಾಗಿಲ್ಲವೆಂದೇ ... ಹೇಳುವರು. ಎರಡನೆಯದಾಗಿ ಇಂಥಾ ದುಷ್ಕಾರ್ಯಪ್ರವರ್ತ... ದಿಂದ ದೇಶೋನ್ನತಿಯು ಎಷ್ಟು ಮಾತ್ರವೂ ಆಗಲಾರದು. ಆದ... ಇಂಥಾ ಲಜ್ಜಾಸ್ಪದವಾದ ರೀತಿಯಲ್ಲಿ ಈ ಹಬ್ಬವನ್ನು ಆಚರಿ... ದು ಯಾರಿಗೂ ಸರ್ವಥಾ ಯೋಗ್ಯವೆನಿಸಿಕೊಳ್ಳುವುದಿಲ್ಲ. ಹೀಗೆ ... ಬೇಕಾದದ್ದು ಶಾಸ್ತ್ರವಿಧಿಯೇ ಎಂದು ವಿಚಾರ ಮಾಡಿದಲ್ಲಿ ... ಕ್ಕೆ ಯಾವ ಶಾಸ್ತ್ರವಿಧಿಯೂ ಸಿಕ್ಕುವುದಿಲ್ಲ.

ಇದು ಮತಾಚರಣೆಗೆ ಸಂಬಂಧಪಟ್ಟುದಾದ್ದರಿಂದ ಸರ್ಕಾರದವರು ... ಡಿಸುವುದಕ್ಕೆ ಮಾರ್ಗ ಕಾಣುವುದಿಲ್ಲ. ಪ್ರಜೆಗಳೇ ತಾವಾಗಿ ತಿ... ಕೊಂಡು ತಮ್ಮ ದುಷ್ಕಾರ್ಯ ಪ್ರವರ್ತನೆಗಳನ್ನು ಅಸಹ್ಯಪಟ್ಟು ... ಬಿಡಬೇಕಾಗಿದೆ. ವಿದ್ಯಾವಂತರೂ ಗೌರವಸ್ಥರೂ ಪ್ರಜೆಗಳ ... ದರೂ ತಟಸ್ಥರಾಗಿರದೆ ಮುಂದೆ ಬಂದು ಅಲ್ಪಜ್ಞರಾದ ಜನರಿಗೆ ... ಭಾಗದಲ್ಲಿ ವಿವೇಕ ಹೇಳಿಕೊಟ್ಟು, ಭಂಡ ಪದಗಳನ್ನು ಹಾಡಿ ... ಕೆಟ್ಟ ಇತರರನ್ನೂ ಕೆಡಿಸದಂತೆಯೂ, ಸದ್ಗುಣ ಸದ್ಭಕ್ತಿ... ಚಾರಗಳನ್ನು ಅಭಿವೃದ್ಧಿ ಪಡಿಸುವುದಕ್ಕೆ ಸಹಾಯಕಗಳಾದಂಥಾ ... ನಾಮ ಸಂಕೀರ್ತನೆಗಳನ್ನು ಹಾಡಿ ಹಬ್ಬವನ್ನು ಆಚರಿಸುವಂತೆ ... ಪ್ರೋತ್ಸಾಹ ಪಡಿಬೇಕು. ಇದಕ್ಕೆ ದೃಷ್ಟಾಂತವಾಗಿ ಉತ್ತರ ... ಲ್ಲಿ ರಾಯಿ ದೇವಿ ಪ್ರಸಾದ್ ಎಂಬೊಬ್ಬ ಹಿಂದೂ ದೊಡ್ಡ ... ಮನುಷ್ಯನು ಮಾಡಿದ ಕಾರ್ಯವು ಸ್ತೋತ್ರಾರ್ಹವಾಗಿರುವುದೆಂದು ... ಸಂದರ್ಭದಲ್ಲಿ ಸೂಚಿಸುವೆವು. ಅವರಿರುವ ಊರು ದೊಡ್ಡದು ... ಕಾಲದಿಂದಲೂ ಆ ಜನರು ಈ ಹಬ್ಬವನ್ನು ಮೇಲ್ಕಂಡಂತೆ ಹೇ... ವಾದ ರೀತಿಯಲ್ಲಿ ಆಚರಿಸುತ್ತಾ ಇದ್ದರು. ಇದನ್ನು ರಾಯಿ ದೇವಿ ಪ್ರಸಾದರವರು ನೋಡಿ ಅವರಿಗೆಲ್ಲಾ ಬಹು ಪ್ರೀತಿ ಆದರಪೂರ್ವಕವಾ... ವಿವೇಕ ಹೇಳಿ, ಅವರ ಅವಜ್ಞತೆಯನ್ನೂ ಆ ಲಜ್ಜಾಸ್ಪದವಾದ ಆ... ದರಿಂದುಂಟಾಗುವ ಕೆಡಕನ್ನೂ ತೋರಿಸಿಕೊಟ್ಟುದರಿಂದ ಒಂ... ವರುಷದಲ್ಲಿ ಅಲ್ಲಿನ ಜನರೆಲ್ಲಾ ಆ ದುಷ್ಟವಾದ ಆಚರಣೆಯನ್ನು ... ಪೂರ್ಣವಾಗಿ ವರ್ಜಮಾಡಿ, ಆ ಹಬ್ಬ ಬಂದಾಗ್ಗೆ ಭಗವನ್ನಾಮಸಂ... ಕೀರ್ತನೆಗಳನ್ನು ಅರ್ಚನಾದಿಗಳನ್ನೂ ಮಾಡಿಕೊಂಡು ಸದ್ಭಕ್ತರಾಗಿ ... ಸದಾಚಾರಿಗಳಾಗಿಯೂ ಆಗಿರುತ್ತಾರೆ. ಇದನ್ನು ನೋಡಿ ನಮ್ಮ ... ವಿದ್ಯಾವಂತರೂ ತಮ್ಮ ಬುದ್ಧಿಶಕ್ತಿಯನ್ನು ಪ್ರಯೋಗಮಾಡಿ ಈ ... ರ್ಯ ನಡೆಯುವ ಈ ಹಬ್ಬದ ದುರಾಚಾರಗಳನ್ನೆಲ್ಲಾ ನಿರ್ಮೂಲ... ಡಿಸಲು ಪ್ರಯತ್ನಪಡುವರೆಂದು ಹಾರೈಸುತ್ತೇವೆ. ಯಾಕೆಂದರೆ ಇಂ... ಮೌಢ್ಯಾಚಾರಗಳಿಂದ ನಮ್ಮ ದೇಶವಾಗಲಿ ಪ್ರಜೆಗಳಾಗಲಿ ಎಷ್ಟು ... ಮಾತ್ರವೂ ಅಭಿವೃದ್ಧಿಗೆ ಬರಲಾಗದು.

ಬಳದೇಶದ ವೃತ್ತಾಂತಗಳು

ನಾಳೆಯ ದಿನ ಶ್ರೀಮನ್ ಮಹಾರಾಜರವರು ಪರಿವಾರ ಸಹಿತ ರಾಜ... ನಿಗೆ ಚಿತ್ತೈಸುವವರಾಗಿದ್ದಾರೆಂದು ಕೇಳುತ್ತೇವೆ.

* * * *

ರಾಜಧಾನಿಯ ಕೃಷ್ಣರಾಜ ಮೊಹಲ್ಲೆಯಲ್ಲಿ ಟ್ರಸ್ಟ್ ಬೋರ್ಡಿನವರು ಮನೆಗಳನ್ನು ಒಡೆದು ಆರೋಗ್ಯಾಭಿವೃದ್ಧಿ ಕಾರ್ಯಗಳನ್ನು ನಡ... ಸುತ್ತಿರುತ್ತಾರೆ.

* * * *

ಮಹಾಮಾತೃಶ್ರೀಯವರೂ ರಾಜವರ್ಗಕ್ಕೆ ಸೇರಿದ ಜನಾನಿಯವರು ಪರಿವಾರ ಸಹಿತ ಕಳೆದ ಗುರುವಾರ ರಾಜಧಾನಿಗೆ ದಯಮಾಡಿದರು. ಗೌರವಾರ್ಥವಾದ ತೋಪುಗಳು ಹಾರಿಸಲ್ಪಟ್ಟವು.

* * * *

ಶಿಕಾರಿಪುರದ ತಾಲ್ಲೂಕು ಹುಣಸೇಕೊಪ್ಪದ ಬಯಲಿನಲ್ಲಿ ... ಸುಮಾರು ಕೆಳಗೆ ಸುಮಾರು ೧,೦೦೦ ರೂಪಾಯಿನ ನಗನಾಣ್ಯಗಳು ... ಸಿಕ್ಕಿರುತ್ತದೆ. ಅದು ಯಾರದೋ ಅವರು ಬಿಟ್ಟು ಶಾಮಿ... ಲಾತು ಕೊಟ್ಟು ಪಡೆದುಕೊಳ್ಳಬಹುದಾಗಿದೆ.

ದಿವಾನರವರು ಶಾಸನಕ್ಕೆ ದಯಮಾಡಿದಾಗ್ಗೆ ಅವರಿಗೆ ಅಲ್ಲಿನ ಪ್ರಜೆಗಳು ಒಂದು ಆಡ್ರೆಸ್ಸನ್ನು ಓದಿ ಸುಂದರವಾದ ಕೈಪಟ್ಟಿಗೆಯಲ್ಲಿಟ್ಟು ಒಪ್ಪಿಸಬೇಕೆಂದು ಗೊತ್ತು ಮಾಡಿಕೊಂಡಿದ್ದಾರೆ.

* * * *

ಸರ್ದಾರ್ ಗೋಪಾಲರಾಜೇ ಅರಸಿನವರು ನೆನ್ನೆ ಬೆಳಿಗ್ಗೆ ... ಮುಂಚೆ ಮೋಟಾರ್ ಗಾಡಿಯಲ್ಲಿ ರಾಜಧಾನಿಗೆ ಬಂದರು. ಇವರು ಚನ್ನರಾಯಪಟ್ಟಣಕ್ಕೆ ಹೋಗಿ ಬ್ರಿಟಿಷ್ ರೆಸಿಡೆಂಟ್ ಮಿ॥ ಫ್ರೇಸರ್‌ರವರನ್ನು ಕರೆದುಕೊಂಡು ಶನಿವಾರ ಬರುವರೆಂದು ಕೇಳುತ್ತೇವೆ.

* * * *

ಹೊಳಲ್ಕೆರೆ ತಾಲ್ಲೂಕಿನ ಒಬ್ಬ ಮುತ್ಸದ್ದಿ ಎಚ್. ಸುಬ್ಬರಾಯರು ತಲೆ ತಪ್ಪಿಸಿಕೊಂಡು ಹೋಗಿದ್ದಾರೆ. ಇನ್ನು ಎರಡು ತಿಂಗಳೊಳಗೆ ಕೆಲಸದ ಮೇಲೆ ಹಾಜರಾಗದಿದ್ದರೆ ಅವರನ್ನು ಆ ಕೆಲಸದಿಂದ ವಜಾ ಮಾಡುವುದಾಗಿ ದಾವಣಗೆರೆ ಸಬ್ ಡಿವಿಜನ್ ಆಫೀಸರು ತಿಳಿಸಿರುವರು.

* * * *

ಬೆಂಗಳೂರು ಸಿಟಿ ಮುನಿಸಿಪಾಲಿಟಿಯಲ್ಲಿ ವೆಂಕಟರಮಣನೆಂಬ ಹಿಜ್ಜ ನೇಯ್ಗೆ ಜಾತಿಯ ಯೌವನಸ್ಥನು ೧೦—೧೧ ವಯಸ್ಸಿನವಳಾದ ತನ್ನ ಹೆಂಡತಿಯನ್ನು ಚೂರಿಯಿಂದ ಇತ್ತುಕೊಂದು ಕೊಂದುಹಾಕಿದನು. ಸೆಷನ್ಸ್ ಜಡ್ಜರು ಅವನಿಗೆ ಮರಣದಂಡನೆಯನ್ನು ವಿಧಿಸಿದರು.

* * * *

ರಾಜಧಾನಿಯಿಂದ ಅಶ್ವಯಿ ಸಂಚಕವುಳ್ಳ ಸರಕು ಹೊರಕ್ಕೆ ರಫ್ತಾದರೆ ಅಂಥಾ ಪ್ರತಿ ಗಾಡಿಗೂ ಒಂದಾಣೆಯಂತೆ ಸುಂಕ ಹಾಕಿ ವಸೂಲ್ಮಾಡುತ್ತೇವೆಂದು ಮ್ಯುನಿಸಿಪಾಲಿಟಿಯವರು ತಿಳಿಸಿರುವರು. ಇದು ಯಾವ ತಾರೀಖಿನಿಂದ ಜಾರಿಗೆ ಬರುವುದೋ ಇನ್ನು ಮುಂದೆ ತಿಳಿಯಬೇಕಾಗಿದೆ.

* * * *

ಮೊನ್ನೆ ಮಂಗಳವಾರ ರಾತ್ರಿ ಬೆಂಗಳೂರು ಕೋಟೆಯ ಬಾಗಿಲ ಬಳಿ ಒಂದು ಹೆಣ ಬಿದ್ದು ಕೊಳೆಯುತ್ತಿತ್ತು. ಪೋಲೀಸಿನವರು ವಿಚಾರಿಸಿದ್ದರಲ್ಲಿ ವಾರಸುದಾರರೇ ಸಿಕ್ಕಲಿಲ್ಲ. ಇದಲ್ಲದೆ ಸುಮಾರು ೫೦ ವರುಷದ ಒಬ್ಬ ಬ್ರಾಹ್ಮಣ ಸ್ತ್ರೀಯು ಸೋಮವಾರ ರಾತ್ರಿ ಕೋಟೆಯಲ್ಲಿ ಕಾಲವಾದಳು. ಮನೆಯವರು ಶವವನ್ನು ಬೆಳಗಾಗುವುದರೊಳಗೇ ಸಾಗಿಸಿ ದಹನಕ್ಕೆ ಸಿದ್ಧಮಾಡಿದರು. ಪ್ಲೇಗ್ ಇಲಾಖೆಯವರು ಹೋಗಿ ದಹನವನ್ನು ಆಟಂಕಪಡಿಸಿದರೆಂದು ಪ್ರಕಟವಾಗಿದೆ.

* * * *

ಮೊನ್ನೆ ಸೋಮವಾರ ಸಾಯಂಕಾಲ ರಾಜಧಾನಿಯಲ್ಲಿ ಪದ್ಧತಿಯ ಪ್ರಕಾರ ಮಾರಿ ಸಿಡಿ ಆಯಿತು. ಕೋಟೆ ಮಾರಮ್ಮನ ಪೂಜಾರಿಯೂ ಈರನಗೆರೆ ಮಾರಮ್ಮನ ಪೂಜಾರಿಯೂ ಸಿಡಿಗಳ ಮೇಲೆ ತೂಗಾಡುತ್ತಾ ಪದ್ಧತಿಯ ಪ್ರಕಾರ ಬೊಂಬೆಗಳನ್ನು ಹಿಡಿದು ಕಡಿದಾಡಿದರು. ಆಕಸ್ಮಾತ್ತಾಗಿ ಈರನಗೆರೆ ಸಿಡಿಯು ಚಕ್ರದಿಂದ ಮುರಿದು ಬಿದ್ದುಬಿಟ್ಟಿತು. ಅದಕ್ಕೆ ಕಟ್ಟಿದ್ದ ಪೂಜಾರಿ ತಿಮ್ಮಯ್ಯನು ಕೆಳಗೆ ಬಿದ್ದು ಬಡಿಯಲ್ಪಟ್ಟು ಮರುದಿನ ಸತ್ತುಹೋದನು. ಇನ್ನೊಬ್ಬನಿಗೆ ಸ್ವಲ್ಪ ಗಾಯವಾಯಿತು.

ಬಹುಮಾನ ಪಡೆದ ವರ್ತಮಾನವು

[(೧) ಪ್ರತಿ ಮೇಲಾಟದ ಲಕೋಟೆಯ ಮೇಲೆ "ಬಹುಮಾನದ ಮೇಲ್ಬರಹ" ವೆಂದು ಬರೆದು ಲೇಖಕರ ಹೆಸರನ್ನೂ ವಿಳಾಸವನ್ನೂ ಪರಿಷ್ಕಾರವಾಗಿ ತಿಳಿಸಬೇಕು (೨) ಲೇಖನವು ವಾರ್ತೆ ದಾರರು ವಾಸಿಸುವ ಸ್ಥಳದ ಬಳಿಯಲ್ಲಿ ಎಂಟು ಹತ್ತು ದಿನಗಳೊಳಗೆ ನಡೆದ ವಿಷಯವಾಗಿರಬೇಕು. ಅರ್ಧ ಕಾಲಮಿಗಿಂತ ಕಡಿಮೆಯಾಗಿದ್ದರೂ ಒಂದು ಕಾಲಮಿಗಿಂತ ಹೆಚ್ಚಾಗಿದ್ದರೂ ಆಗದು (೩) ಪ್ರತಿಯೊಂದು ಲೇಖನವು ನಮ್ಮ ಆಫೀಸಿಗೆ ಪ್ರತಿವಾರವೂ ಸೋಮವಾರ ಪ್ರಾತಃಕಾಲವೇ ತಲುಪಬೇಕು (೪) ಬಹುಮಾನ ಪಡೆದವರ ಹೆಸರನ್ನು ವಾರ ವಾರವೂ ಪ್ರಕಟಿಸುವುದಲ್ಲದೆ, ಹಣವನ್ನು ಮನಿಯಾರ್ಡರಿನ ಮೂಲಕ ರವಾನಿಸುವೆವು (೫) ಎಷ್ಟುವಾರಗಳ ಸಮಾಚಾರ ನಮಗೆ ಬರೆದು ಬರುವಂಥ ಲೇಖನಗಳೆಲ್ಲಾ ವೃತ್ತಾಂತ ಪತ್ರಿಕಾ ಕರ್ತರ ಸೊತ್ತಾಗಿ ಭಾವಿಸಲ್ಪಡುವವು. ಒಂದೇ ತಿಂಗಳಲ್ಲಿ ಒಬ್ಬ ಲೇಖಕನಿಗೇನೇ ಎರಡು ಸಲ ಬಹುಮಾನ ದೊರೆಯಲಾರದು.]

[ಈ ವಾರ್ತೆ ಬರೆದ ಮ॥ ಎಚ್. ಹುಚ್ಚಪ್ಪ, ಗರ್ಲ್ಸ್ ಸ್ಕೂಲ್ ಮಾಸ್ಟರ್, ಶಿಕಾರಿಪುರ ಇವರಿಗೆ ಈ ವಾರದ ಬಹುಮಾನ ಕಳುಹಿಸಿದೆ.]

ಕಾಡ ಹಂದಿಯಿಂದ ಮರಣ

ತಾ॥ ೯ನೇ ಶನಿವಾರ ಶಿಕಾರಿಪುರ ತಾಲ್ಲೂಕು ಚುರ್ಚಿಗುಂಡಿ ಎಂಬ ಗ್ರಾಮದಲ್ಲಿ ಕುರುಬರ ಜಾತಿ ಸುಮಾರು ೨೫ ವರುಷ ವಯಸ್ಸಿನ ಕುಷ್ಟಪ್ಪನೆಂಬುವನೂ ಇನ್ನು ಕೆಲವರೂ ಸೇರಿ ಮಾಧ್ಯಾಹ್ನ ಊಟಮಾಡಿಕೊಂಡು ಗದ್ದೆಗೆ ಕೆಲಸದ ನಿಮಿತ್ತ ಹೊರಟುಹೋದರು. ಇವನ ಸಂಗಡ ಹೋದ ಜನಗಳು ತಮ್ಮತಮ್ಮ ಗದ್ದೆಗೆ ಹೋದರು. ಇವನೂ ತನ್ನ ಗದ್ದೆಗೆ ಹೊರಟುಹೋಗಿ ಸ್ವಲ್ಪ ಹೊತ್ತಿನ ಮೇಲೆ ಹೊರಕಡೆಗೆ ಹೋಗಬೇಕಾಗಿ ಬಂದದ್ದರಿಂದ ಆ ಗದ್ದೆಗೆ ಸ್ವಲ್ಪ ದೂರದಲ್ಲಿ ಹೋಗಿ ಹೊಂಡಕಸೆಗೆ ಕೂತುಕೊಂಡನು. ತರುವಾಯ ಅಲ್ಲೇ ಪೊದೆಗಳಲ್ಲಿ ಅಡಗಿಕೊಂಡಿದ್ದ ಒಂದು ಕಾಡುಹಂದಿಯು ಇವನ ಹಿಂದಿನಿಂದ ಬಂದು ಒಮ್ಮೆಗೆ ಎರಡು ತೊಡೆಗಳ ಸಂದಿನಲ್ಲಿ ನುಗ್ಗಿತು. ಕ್ರೂರವಾದ ಅದರ ಕೋರೆಗಳು ಅರೆದು ಎರಡು ತೊಡೆಗಳನ್ನು ಸೀಳಿಬಿಟ್ಟವು. ತರುವಾಯ ಅವನು ಭಯಾಕ್ರಾಂತನಾಗಿ ಅರಚಿಕೊಂಡನು. ಪುನಃ ಆ ಹಂದಿಯು ಬೆದರಿ ಓಡಿಬಂದು ಇವನನ್ನು ಬಡಿಯಿತು. ಆ ರಭಸಕ್ಕೆ ಇವನು ಬೆದರಿ ಕೆಳಕ್ಕೆ ಬಿದ್ದನು. ಗಾಯ ಪೂರಾ ಆಗಿ ರಕ್ತವು ಬಹಳ ಸುರಿಯಲು ಪ್ರಾರಂಭಿಸಿತು. ತರುವಾಯ ಜನರು ಬಂದು ಇದನ್ನು ನೋಡಿ ಓಡಿಹೋಗಿ ಈ ಸಮಾಚಾರವನ್ನು ಆ ಊರ ಗೌಡರಿಗೆ ಹೇಳಿದರು. ಗೌಡರು ಕೆಲವು ಜನರನ್ನು ಕರೆದುಕೊಂಡು ಬಂದು ಆ ಹಂದಿಯನ್ನು ಹುಡುಕಿ ಪೊದೆಗಳಲ್ಲೇ ಅಡಗಿಕೊಂಡಿದ್ದ ಹಂದಿಯನ್ನು ಕಂಡು ಹೊಡೆದು ಕೊಂದುಹಾಕಿದರು. ಸದರಿ ಕುಷ್ಟಪ್ಪನೆಂಬುವನು ಪೂರಾ ಆಯಾಸಪಡುತ್ತಾ ತನ್ನನ್ನು ಶಿಕಾರಿಪುರದ ಆಸ್ಪತ್ರೆಗೆ ಕಳುಹಿಸಿ ಎಂದು ಹೇಳಿದನು. ಇವನನ್ನು ಆಸ್ಪತ್ರೆಗೆ ತರುವ ಏರ್ಪಾಡು ಮಾಡುವಷ್ಟರಲ್ಲಿ ಈತನ ಜೀವರತ್ನವು ಈ ಪ್ರಪಂಚಸುಖವನ್ನು ತೊರೆದು ಊರ್ಧ್ವಲೋಕವನ್ನು ಸೇರಿತು. ಮರನೇ ದಿವಸ ಪೋಲೀಸ್ ಆಫೀಸರು ದಯಮಾಡಿ ಮಹಜರ್ ಮೊದಲಾದವುಗಳನ್ನು ಮಾಡಿದರು.

ಆರ್ಯಧರ್ಮೋಪನ್ಯಾಸವು.

ತಾ॥ ೧೦ರಲ್ಲಿ ವೆಂ॥ ಭುಜಂಗಾಚಾರ್ಯರೆಂಬುವರು ಈ ಊರಿನ ಎ. ವಿ. ಸ್ಕೂಲಿನಲ್ಲಿ ಮೇಲ್ಕಂಡ ಉಪನ್ಯಾಸವನ್ನು ಮಾಡಿದರು. ಆ ಕಾಲದಲ್ಲಿ ನಮ್ಮ ಅಮಲ್ದಾರ್‌ರವರೂ ಕಛೇರಿ ನೌಕರರೇ ಮೊದಲಾದ ಎಲ್ಲಾ ಜನಗಳೂ ಸೇರಿದ್ದರು. ಅವರು ಹೇಳಿದ ಅಭಿಪ್ರಾಯವೇನೆಂದರೆ—ನಮ್ಮದು ಎಂಬುವುದೇ ಬಹಳ ಮೇಲಾದುದು. ನಮ್ಮ ದರ್ಶೋಸ್ಕರ ನಾವು ಬಹಳ ಶ್ರಮಪಡಬೇಕು. ಬಂಗಾಳ ಮೊದಲಾದ ಪ್ರಾಂತ್ಯದಲ್ಲಿ ಸ್ವದೇಶೀ ವಸ್ತುಗಳು ಬಹಳ ವೃದ್ಧಿಹೊಂದುತ್ತಲಿರುವವು. ನಾವು ಹಣಸಹಾಯವಿಲ್ಲದವರಾಗಿದ್ದೇವೆ. ಆದದರಿಂದ ಅಂಥದು ಮಾಡಲಿಕ್ಕಾಗದಿದ್ದರೂ ನಮ್ಮ ಧರ್ಮವನ್ನು ಮಾತ್ರ ಎಂದಿಗೂ ಬಿಡಬಾರದು. ನಾವು ಆರ್ಯಾವರ್ತದಲ್ಲಿ ವಾಸಮಾಡಿಕೊಂಡಿದ್ದು ಪೂರ್ವನಿವಾಸಿಗಳಾದುದರಿಂದ ನಮಗೆ ಆರ್ಯರೆಂಬ ಹೆಸರು ಬಂದಿದೆ. ಸ್ವರ್ಗವನ್ನೂ ತುಂಬಿಕೊಂಡಿದ್ದ ನಮ್ಮ ಆರ್ಯಧರ್ಮವು ಈಗ ನಮ್ಮನ್ನು ಸಂಪೂರ್ಣವಾಗಿ ಬಿಟ್ಟುಬಿಟ್ಟಿದೆ. ಕಾರಣವೇನೆಂದರೆ— ಪಾದವಲ್ಲಿ ವಾಸಮಾಡಲು ಬೂಟ್ಸುಗಳು ಬಂದು ಆ ಧರ್ಮವನ್ನು ನೆರೆಹಿಡಿದವು. ಕಾಲಿನಲ್ಲಿ ವಾಸಮಾಡಲು ಪಾಜಾಮಗಳು ಕಾಲನ್ನು ಆಕ್ರಮಿಸಿಕೊಂಡವು. ಸೊಂಟದಲ್ಲಿ ವಾಸಮಾಡಲು ಬೆಲ್ಟುಗಳು ಬಿಗಿದುಬಿಟ್ಟವು. ಮೈಯಲ್ಲಿ ವಾಸಮಾಡಲು ಷರ್ಟು ಕೋಟು ಬನೀನುಗಳು ಮುತ್ತಿಗೆ ಹಾಕಿರುವವು. ಕುತ್ತಿಗೆಯಲ್ಲಿ ಸೇರಲು ಕೊರಲ ಪಟ್ಟಿಗಳು ಉರುಲಿಕ್ಕಿರುವವು. ನಾಲಿಗೆಯಲ್ಲಿ ವಾಸಮಾಡಲು ಬೇರೆ ಭಾಷೆಗಳು ಸೇರಿರುವವು. ಕೊನೆಗೆ ವಿದ್ಯುಳ್ಳವರ ಆಶ್ರಯಿಸೋಣವೆಂದರೆ ಅಲ್ಲಿ ಸ್ಥಳವೇ ಇರಲಿಲ್ಲ. ಆದುದರಿಂದ ಆ ಆರ್ಯಧರ್ಮವು ನಮ್ಮ ಆಶೆಯನ್ನೇ ಬಿಟ್ಟಿರುವುದು. ಮತ್ತು ಅರ್ಕನಾಲಿಗರೇ ಮೊದಲಾದವರು ತಮ್ಮ ತಮ್ಮ ಕಸಬುಗಳಲ್ಲಿ ಮೋಸಪಡಿಸಲು ಪ್ರಾರಂಭಿಸಿದ್ದರಿಂದ ಆಯಾಯ ಕಸಬಿನ ಹೆಸರೇ ತೊಡೆದುಹೋಗುವ ಹೊತ್ತು ಬಂದಿದೆ. ಜನಗಳಲ್ಲಿ ಐಕಮತ್ಯವಿಲ್ಲದೇ ಹೋದದರಿಂದಲೇ ಹಿಂದೂ ರಾಜ್ಯಕ್ಕೆ ಚ್ಯುತಿಯುಂಟಾಗಿರುವುದು. ಮತ್ತು ನಾವು ಪರಭಾಷೆಯನ್ನು ಕಲಿತು ನಮ್ಮ ಜೀವನವನ್ನು ಮಾಡಿಕೊಳ್ಳಬೇಕಾದುದರಿಂದ ನಮ್ಮ ಗ್ರಂಥ ಪರೀಕ್ಷಣಾ ಭಾಷೆಯು ಅಳಿಸಿಹೋಗಿರುವುದು. ನಮ್ಮ ಶಾಸ್ತ್ರಜ್ಞರು ನಮ್ಮ ನಡವಳಿಕೆ ರೀತಿಯನ್ನು ಬರೆದಿಟ್ಟಂತೆ ನಾವು ನಡೆಯುತ್ತಿದ್ದರೆ ಆಯುರಾರೋಗ್ಯವು ಎಂದಿಗೂ ನಮ್ಮನ್ನು ಕೈಬಿಡಲಾರದು. ಅದನ್ನು ಬಿಟ್ಟು, ಶಾಸ್ತ್ರಜ್ಞರು ನಿಷೇಧಿಸಿರುವ ಮಾದಕಪದಾರ್ಥಗಳನ್ನು ತೆಗೆದುಕೊಳ್ಳುವುದೂ ಅನ್ಯಾಹಾರವನ್ನಪೇಕ್ಷಿಸುವುದೂ ಮನ್ನಿಯೇ ಮೊದಲಾದ ವಿಕಾರಗಳನ್ನು ಮಾಡಿಕೊಳ್ಳುವುದೂ ನಮ್ಮ ದೇಶಕ್ಕೆ ಅಂಟದ ಪಥ್ಯವಾಗಿರುತ್ತೆ. ನಮ್ಮ ಶಾಸ್ತ್ರಜ್ಞರು ಹೇಳುವ ಪ್ರತಿದಿನಸ್ನಾನ, ಅಸಹ್ಯಕ್ಕಾಸ್ಪದವಾಗದ ಮಡಿ, ಭಕ್ತಿಯನ್ನುಂಟುಮಾಡುವ ಜಪತಪಗಳು, ಸುಖವನ್ನಪೇಕ್ಷಿಸುವ ದೇವತಾರ್ಚನೆ, ಪರೋಪಕಾರಾರ್ಥದಾನ, ಜ್ಞಾನಾರ್ಥದ ನೈವೇದ್ಯ ಭೋಜನ, ಆರೋಗ್ಯಾರ್ಥದ ವ್ರತ, ದೇಶಪರಿಶೀಲನಾರ್ಥದ ಯಾತ್ರೆ, ಸಂತೋಷಾರ್ಥದ ಹಬ್ಬ ಮೊದಲಾದವುಗಳನ್ನು ಸಾಧ್ಯವಾದಷ್ಟು ಬಿಡದೇ ಆಚರಿಸಬೇಕು. ಇವುಗಳಲ್ಲಿ ಕೆಲವು ಈಗಿನ ಕಾಲದ ಸೈನ್ಸಿಗೆ ಕೂಡ ಸಂಬಂಧಪಟ್ಟಿರುತ್ತವೆ. ದೇವಸ್ಥಾನದಲ್ಲಿ ನಡೆಯುವ ಪುರಾಣಾದಿಗಳನ್ನು ಬಿಟ್ಟು ರೀಡಿಂಗ್ ರೂಂ ಸೊಸೈಟಿ ಮೊದಲಾದುವುಗಳನ್ನು ಮಾಡಿಕೊಳ್ಳುವುದು ಯೋಗ್ಯವಲ್ಲ. ಕಸಬಿಲ್ಲದ ಕೆಲವು ಜನರು ಪರಭಾಷೆಯನ್ನು ಕಲಿತು ಅದರಂತೆ ನಡೆನುಡಿಗಳನ್ನು ಹಿಡಿಯಲಪೇಕ್ಷಿಸುವರು. ಇದು ಸರಿಯಲ್ಲ. ಕಸಬುದಾರರು ಕೂಡ ಸರ್ಕಾರಿ ಕೆಲಸದ ಅಪೇಕ್ಷೆಯಿಂದ ವಿದ್ಯೆ ಕಲಿತು ತಮ್ಮ ತಮ್ಮ ಕಸಬುಗಳನ್ನು ಬಿಡುವವರಾಗಿರುತ್ತಾರೆ. ಹೊಸದು ಬಿಡದರೆ ಹೊಸತಾಳುವಳಿಕೆ ಬರುತ್ತೆ. ಅದು ಹ್ಯಾಗೆಂದರೆ, ಇಂಗ್ಲೀಷ್ ಶಾಸ್ತ್ರಜ್ಞರು ಭೂಮಿ ಗುಂಡಾಗಿದೆ ಎಂದು ಹೇಳುತ್ತಾರೆ. ನಾನು ಇದು ಕೇವಲ ಚಪ್ಪಟೆಯಾಗಿದೆ ಎಂದು ಮಾಡಿಕೊಡುತ್ತೇನೆ. ಈಗ ಕಾಲಾತೀತವಾದ್ದರಿಂದ ಇಲ್ಲಿಗೆ ಸಾಕುಮಾಡುತ್ತೇನೆ ಎಂಬದಾಗಿ ಹೇಳಿದರು. ಪಾಶ್ಚಾತ್ಯರ್ಯವುಳ್ಳವರು ಏನಾದರೂ ದೃಢಪಡಿಸಬಹುದಲ್ಲವೇ. ತರುವಾಯ ಸಭಿಕರೆಲ್ಲರೂ ಎದ್ದು ಸಂತೋಷಸೂಚನೆಯನ್ನುಂಟುಮಾಡಿ ಮನೆಗೆ ಹೋದರು.

ಭಾವಿಯಲ್ಲಿ ಬಿದ್ದು ಸತ್ತದ್ದು

ತಾ. ೧೧ ನೇ ಸೋಮವಾರ ಶಿವರಾತ್ರಿ ಹಬ್ಬ ಸರಿಯಷ್ಟು. ಆರೇರ ನರಸಿಂಗಪ್ಪನೆಂಬುವನು ಆ ದಿವಸ ರಾತ್ರಿ ಜಾಗರಣೆ ಮಾಡುವದಕ್ಕೆ ಇನ್ನು ಕೆಲವರೊಂದಿಗೆ ಸೇರಿ ಭಾವಾಜಿ ಮಠಕ್ಕೆ ಹೋದನು. ಈತನಿಗೆ ಸುಮಾರು ೩೦ ವರುಷ ವಯಸ್ಸಾಗಬಹುದು. ಆ ಭಾವಾಜಿ ಮಠದಲ್ಲಿ ಎಲ್ಲರೂ ಸೇರಿ ಆ ರಾತ್ರಿ ಭಂಗಿಬೆಲ್ಲ (ಭಂಗಿಸೊಪ್ಪಿನಿಂದ ಮಾಡಿದ ಪಾಸಕ) ವನ್ನು ಮಾಡಿ ತೆಗೆದುಕೊಂಡಿದ್ದರು. ರಾತ್ರಿ ಬಹಳ ಹೊತ್ತಿನ ವರೆವಿಗೂ ಎಚ್ಚರಿದ್ದು ಕೆಲವರು ಮನೆಗೆ ಹೋದರು. ಈತನೂ ಕೆಲವರೂ ಅಲ್ಲೇ ಮಲಗಿದ್ದರು. ಸದರಿ ನರಸಿಂಗಪ್ಪನು ರಾತ್ರಿ ಯಾವಾಗಲೋ ಬಹಿರ್ದೆಶೆಗೋಸ್ಕರವೋ ಆ ಮಠದ ಸಮೀಪದಲ್ಲಿರುವ ಭಾವಾಜಿ ಹೊಂಡಕ್ಕೆ ಹೋಗಿ ಆ ಹೊಂಡದಲ್ಲಿ ಬಿದ್ದನು. ಮಾರನೇ ದಿವಸ ಶಿವರಾತ್ರಿ ಪಾರಣೆ ಸರಿಯಷ್ಟು. ಆ ಪಾರಣೆ ಊಟಕ್ಕೋಸ್ಕರ ಆತನ ಮನೆಯವರೂ ಇನ್ನೂ ಕೆಲವರೂ ಹುಡುಕಿ ಕೊನೆಯಲ್ಲಿ ಈ ಹೊಂಡದಲ್ಲಿ ಬಿದ್ದದ್ದನ್ನು ಕಂಡು ಬಹಳ ದುಃಖಪಟ್ಟರು. ಹೆಣವು ಮಬ್ಬು ಕೆಳಗಾಗಿ ಬಿದ್ದು ತೇಲುತ್ತಲಿತ್ತು. ತರುವಾಯ ಪೋಲೀಸ್ ಆಫೀಸರೇ ಮೊದಲಾದವರು ಬಂದು ನೋಡಿ ಮಹಜರ್ ಮೊದಲಾದ್ದನ್ನು ಮಾಡಿಕೊಂಡು ಶವ ಸಂಸ್ಕಾರಮಾಡಿದರು. ಆದರೆ ಇಂಥ ಶಿವರಾತ್ರಿ ಹಬ್ಬದ ದಿವಸ ಈತನು ಶಿವಾಧೀನನಾದದ್ದು ಆತನ ಮನೆಯವರಿಗೂ ಮತ್ತು ನಮಗೂ ವ್ಯಸನವನ್ನುಂಟುಮಾಡಿತು.

ಮುಂಬಯಿ ವ್ಯಾಪಾರವಮಾಡಲಿಚ್ಛಿಸುವವರು.

85-38

ಮುಂಬಯಿಯಲ್ಲಿ ಪ್ರತಿಯೊಂದು ಮಾಲಿನ ತೂಕ ಅಳತೆ ಮತ್ತು ಮಾಲಿನ ವರ್ಣನೆ ಹಾಗೂ ಅನೇಕ ಉಪಯುಕ್ತ ಮಾಹಿತಿಯುಳ್ಳ ಕನ್ನಡ ಪುಸ್ತಕ.—ಕ್ರಯ ೧೦ ಆಣೆ. ವಿ. ಪಿ. ಯಿಂದ ಕಳಿಸಲಾಗುವೆವು. ಟಪಾಲು ಖರ್ಚು ಬೇರೆ. ಬುಕ್ಕು ಸೇಲರರಿಗೆ ಯೋಗ್ಯ ಕಮಿಷನ್ ದೊರೆಯುವದು ಮತ್ತು ಲಿಂಗಾಯತ ಧರ್ಮಸಂಬಂಧ ವಿಂಶೋತ್ಪತ್ತಿ ಕ್ರಿಯಾಲಕ್ಷಣವೆಂಬುವ ಕನ್ನಡ ಪುಸ್ತಕ— ನಾಲ್ಕು ಆಣೆ. ಮೇಲೆ ಅಕ್ಷರದಿಂದ ಬರೆಯಿರಿ ಪತ್ತಾ ಚನ್ನಬಸಪ್ಪ ಮಲ್ಲಪ್ಪ ವಾರದ, ಫೋಷ್ಟ ಮಾಂಡ್ವಿ, ಮುಂಬಯಿ.

ಕೊಡಗು ದೇಶದ ಸ್ವಚ್ಛವಾದ ಉತ್ಕೃಷ್ಟ ಕಾಫಿಯು

ಹುರಿಯದೆ ಇರುವದು ಅಥವಾ ಆಗತಾನೆ ಹುರಿದದ್ದು ಕೆಲಸಮಾಡಿದ ಸ್ಥಳದಿಂದಲೆ ನೆಟ್ಟಗೆ ರವಾನಿಸಲ್ಪಡುವದು.

18 3

ವ್ಯಾಪಾರದ ಹೆಗ್ಗುರ್ತು

ಕಾಷಾಯ ಲೇಬಲ್ ಬಣ್ಣದ ತಲೆಯ ಮುದ್ರೆ ಇದೆ.

ಸಂಪೂರ್ಣವಾಗಿ ಯಂತ್ರದಿಂದಲೆ ಸಿದ್ಧಪಡಿಸಿದ್ದು. ಹೆಗ್ಗುರ್ತು ಉಳ್ಳ ವಿಲಾಸದ ಚೀಟಿ ಸುತ್ತಿಲ್ಲದಿರುವವು ಸ್ವಚ್ಛವಾದವುಗಳಲ್ಲ. ಅತಿ ಹೆಚ್ಚು ಮಟ್ಟದಲ್ಲಿ ಏಜೆಂಟರುಗಳು ಬೇಕು. ಇಂಥವರಿಗೆ ಅಲಾಯಿದ ದರ ಬರೆಯುವವರು ದಯವಿಟ್ಟು ಈ ಪತ್ರಿಕೆಯ ಹೆಸರನ್ನು ಸೂಚಿಸಿ

ವಿಳಾಸ.—ಮ್ಯಾನೇಜರ್, ಮ್ಯಾಥಿಸನ್ಸ್
ಕಾಫಿ ವರ್ಕ್ಸ್, ಹುಣಸೂರು.

ಮಕ್ಕಳಿಗೆ ಪಾಠಪುಸ್ತಕಗಳಿಲ್ಲದೆ ಪೇಚಾಡುವದೇಕೆ!

21 2

ಬಾಲಶಿಕ್ಷೆ ಎಂಬ ಪುಸ್ತಕವಿರಲಾಗಿ ಬೇರೆ ಪುಸ್ತಕವು ಬೇಕೇ? ಇದು ಈಗ ಎರಡನೆಯಾವೃತ್ತಿ ಮುದ್ರಿತವಾಗಿ ಅತಿ ಮನೋಹರವಾಗಿಯೂ ಬಾಲಕರ ಅಕ್ಷರಾಭ್ಯಾಸಕ್ಕೆ ಅತಿ ಸಹಾಯಕರವಾದ ಚಿತ್ರಗಳಿಂದ ಕೂಡಿದುದಾಗಿಯೂ ಇರುವದರಿಂದ ಅನೇಕ ಗವರ್ನಮೆಂಟು ಸ್ಕೂಲುಗಳಲ್ಲಿ ಉಪಯೋಗಿಸಲ್ಪಡುತ್ತಾ ಬಂದಿದೆ.

ಸರ್ವರೂ ಇದನ್ನು ತರಿಸಿಕೊಂಡು ನೋಡಿ ಅದರ ಬೆಲೆಯನ್ನು ತಿಳಿಯಬೇಕಾಗಿದೆ.

ಕ್ರಯ ೧ ಆಣೆ. ವಿ. ಪಿ. ಮೂಲಕ ಮೂರು ಆಣೆಗಳು.

ನೂರು ಪ್ರತಿಗಳಿಗೆ ಹನ್ನೆರಡು ಪ್ರತಿಗಳು ಕಮಿಷನ್.

ವಿಳಾಸ—ಮ್ಯಾನೇಜರ್, ಸಿ. ಎಲ್. ಎಸ್.
ಬುಕ್ ಡಿಪೋ, ಮೈಸೂರು.

ತಾವಾಗಿ ಇಂಗ್ಲೀಷು ಕಲಿಯುವಿಕೆ.

23-1

ಸ್ವಲ್ಪ ಪ್ರತಿಗಳೇ ಉಳಿದಿವೆಯಾದ್ದರಿಂದ ಬೇಗ ಬರೆಯಿರಿ! ಇಂಗ್ಲೀಷು ಭಾಷೆಯನ್ನು ಬರೆಯುವುದಕ್ಕೂ, ಓದುವುದಕ್ಕೂ ಮಾತಾಡುವುದಕ್ಕೂ, ಬೋಧಕರ ಸಹಾಯ ಸ್ವಲ್ಪವೂ ಇಲ್ಲದಂತೆ ಒಂದೆರಡು ತಿಂಗಳುಗಳಲ್ಲಿ ತಾನಾಗಿ ಕಲಿಸುವ ಅತ್ಯುತ್ತಮ ಪುಸ್ತಕವಿದು ೨ನೆ ಭಾಗ ಬಿಕರಿಗೆ ಸಿದ್ಧವಾಗಲು ಸಾವಕಾಶವಾದೀತಾದ್ದರಿಂದ ಬೇಗ ಬರೆಯಿರಿ ಕ್ರಯ ೧—೬—೦

ಸುಭಾಷಿತ ಸಮುದಾಯವು.

ಶ್ರೀಮದ್ ಮಹಾಭಾರತ, ಭೋಜ ಚರಿತ್ರೆ, ಇವುಗಳಿಂದ ಈ ಕೆಳಗೆ ಕಾಣಿಸಿರುವ ರೀತಿಯಾಗಿ ೫೦೦ ಶ್ಲೋಕಗಳನ್ನು ಬರೆದು ಇಂಗ್ಲೀಷಿನಲ್ಲೂ ಕನ್ನಡದಲ್ಲೂ ಸಹ ಅರ್ಥ ಬರೆದಿರುತ್ತೆ! ಶ್ಲೋ॥ ತೃಷ್ಣಾಂ ಚೇಹ ಪರಿತ್ಯಜ್ಯ ಕೋ ದರಿದ್ರಃ ಕ ಈಶ್ವರಃ । ತಸ್ಯಾಶ್ಚೇತ್ಪ್ರಸರೋ ದತ್ತೋ ದಾಸ್ಯಂಚ ಶಿರಸಿ ಸ್ಥಿತಂ॥ ಕನ್ನಡ ಅರ್ಥ— ಆಶೆಯನ್ನು ಬಿಟ್ಟರೆ ಬಡವನ್ಯಾರು? ಧನಿಕನ್ಯಾರು? ಅದಕ್ಕೆ ಆಸ್ಪದ ಕೊಟ್ಟರೆ ಸೇವಕತ್ವವು ತಲೆಯ ಮೇಲೆಯೇ ಇರುವದು ಇಂಗ್ಲೀಷು ತಾತ್ಪರ್ಯ—

If only the desire is given up who is and who is rich? But slavery is on the head of one who has it.

ಈ ರೀತಿಯಾಗಿ ೫೦೦ ಶ್ಲೋಕಗಳಿಗೆ ಇಂಗ್ಲಿಷಿನಲ್ಲೂ ಕನ್ನಡದಲ್ಲೂ ಅರ್ಥವನ್ನ ಬರೆದಿರುತ್ತೆ ಗೀರ್ವಾಣ ಭಾಷಾಭಿಮಾನಿಗಳೆಲ್ಲಾ ಒಂದೊಂದು ಪ್ರತಿಯನ್ನು ಸಂಗ್ರಹಿಸಬೇಕಾದ್ದು. ಬೇಗ ಬರೆಯಿರಿ!

ವಿಳಾಸ — ಬಿ. ಕೆ ಮೂರ್ತಿ ಕಂಪನಿ,
ಲಕ್ಕೂರು ಪೋಸ್ಟು, ಕೋಲಾರ ಡಿಸ್ಟ್ರಿಕ್ಟ್.

CHAMBERLAIN'S COUGH REMEDY.

ಚೇಂಬರ್ಲೇನ್ ಯವರು ಕಂಡು ಹಿಡಿದ ಕೆಮ್ಮಿನ ಔಷಧವು.



18

ಕ್ಷೀರದ ಕೆಮ್ಮು, ಗಂಟಲು ಗಾರೆನು ವಾದು, ನಾಯಿಕೆಮ್ಮು, ನಾಯಿಂಗೆಮ್ಮು, ಎಲ್ಲಾ ತರದ ಶೀತ ಗಂಟಲಲ್ಲಿ ಎದೆಯಲ್ಲಿ ಹುಟ್ಟುವ ಸಮಸ್ತ ವ್ಯಾಧಿಗಳು—ಇವಕ್ಕೆಲ್ಲಾ ಈ ಔಷಧವು ಬಾಣಪ್ರಾಯವಾಗಿದೆ

ಆ ಕೆಮ್ಮನ್ನು ಅಲಕ್ಷ್ಯಮಾಡಬೇಡಿ. ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ ಅದರ ಮೇರೆ ನ್ಯೂಮೋನಿಯಾ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವುದು. ತರುವಾಯ ಉಗುಳಿನಲ್ಲಿ ರಕ್ತಬೀಳುವುದು, ಹಾಗೆಯೇ ಕ್ಷಯರೋಗಕ್ಕೆ ಆಸ್ಪದವಾಗುವುದು

ಚೇಂಬರ್ಲೇನರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟಲಲ್ಲಿ ಶ್ಲೇಷ್ಮ ಕಟ್ಟುವುದನ್ನೂ ಶ್ಲೇಷ್ಮ ಬೀಳುವದನ್ನೂ ಖಚಿತವಾಗಿ ನಿವಾರಣೆಮಾಡುತ್ತದೆ ಉಸುರು ಹೊಯ್ಯುವುದು ಕಷ್ಟವಾಗಿದ್ದರೆ ಅದನ್ನು ಕೂಡಲೇ ಪರಿಹರಿಸುತ್ತದೆ ಅಪಾಯಕರವಾದ ಕೆಮ್ಮಿನ ಶಬ್ದವನ್ನು ನಿಲ್ಲಿಸಿಬಿಡುತ್ತದೆ ಎನೆ ಒಳಗಿನಂಥಾ ಕೆಟ್ಟಸ್ಥಿತಿಯನ್ನು ಸಂಪೂರ್ಣವಾಗಿ ನಾಶಮಾಡಬಲ್ಲದು ಕೆಮ್ಮನ್ನು ಶಮನಮಾಡಿ, ನೀವು ಸುಖವಾಗಿ ನಿದ್ರೆಮಾಡುವಂತೆ ಮನಸ್ಸಿಗೆ ಉಲ್ಲಾಸಕೊಡುತ್ತದೆ

ಚೇಂಬರ್ಲೇನರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇರಿಸಿರುವುದಿಲ್ಲ.

ಈ ಔಷಧವು ವನಸ್ಪತಿಗಳ ತಯಾರಿಕೆಯಿಂದಮುಟ್ಟದೆ ತಯಾರಾಗಿದೆ.

ಎಲ್ಲೆಲ್ಲೂ ಬಿಕರಿಯಾಗುತ್ತಾದು. ಸಣ್ಣ ಸೀಸೆಗೆ ೧ ರೂಪಾಯಿ. ದೊಡ್ಡ ಸೀಸೆಗೆ ೨ ರೂಪಾಯಿ

ಮೆಕ್ಮಿಲನರ ಕನ್ನಡ ೫ನೆ ರೀಡರ್ ನೋಟ್ಸ್.

25 1

ಬಹಳ ಸ್ವಲ್ಪ ಪ್ರತಿ ಉಳಿದಿರುವದರಿಂದ ಪ್ರತಿ ೧ಕ್ಕೆ ಎಂಟಾಣೆ ಕ್ರಯಕ್ಕೆ ಇಳಿಸಿರುತ್ತದೆ ಗ್ರಂಥಕರ್ತರು ಮತ್ತು ಅಕ್ರೆಸ್ಸು—ಕೆ ನಾರಾಯಣ ಶಾಸ್ತ್ರಿ, ಕನ್ನಡ ಪಂಡಿತ, ಮಹಾರಾಜಾ ಕಾಲೇಜು, ಮೈಸೂರು

ಉತ್ತಮವಾದ ಸಿದ್ಧೌಷಧಗಳು.

1 5

ಆರೋಗ್ಯದಿಂದಲೂ ಬಂದ ನಮ್ಮ ಔಷಧಿಗಳು ಲಕ್ಷಾಂತರ ರೋಗಿಗಳಿಗೆ ಉಪಯೋಗಿಸಿ ಗುಣ ಕಂಡುಬಂದವುಗಳಾಗಿವೆ ಅವುಗಳೆಲ್ಲಾ ಮೂಲಿಕೆಗಳಿಂದ ತಯಾರಾಗಿರುತ್ತೆ ತಿಂಗಳೊಂದಕ್ಕೆ ಅನೇಕರು ಔಷಧಿ ಸೇವಿಸುತ್ತಲೂ ಇರುವ ಸಂಗತಿ ಎಲ್ಲರಿಗೂ ಗೊತ್ತಿದೆ

(೧) ಸಂಜೀವಿನಿ ತೈಲ ಸಮಸ್ತ ಮಹಾ ರೋಗಗಳಿಗೆ ಕಾಲು ಸೀಸೆಗೆ ೧-೮-೦

(೨) ಭೃಂಗರಾಜ ತೈಲ ಎಲ್ಲಾ ವಿಧವ ಶಿರೋರೋಗಗಳಿಗೆ ಕಾಲು ಸೀಸೆಗೆ ೦-೧೦-೦ (೩) ಥೇದಿ ಎಣ್ಣೆ ಸುಖಪ್ರಸವ್ಯಾಗುವುದು ಕಾಲು ಸೀಸೆಗೆ ೦-೧೦-೦. (೪) ಮಹಾಬೀಜ ಪಾತುಶಕ್ತಿ ಪುಷ್ಟಿಮಾಡಿ ತೃಪ್ತಿಮಾಡುತ್ತೆ ಸೇರಿಗೆ ೨-೦-೦ (೫) ಸೌಭಾಗ್ಯ ಶುಂಠಿಪಾಕ ಮೃತ ಲೇಹ ಇದರ ಸೇವನೆಯಿಂದ ಬಾಣಂತಿಸನ್ನಿ ಕ್ಷಯ ಮೊದಲಾದ ರೋಗಗಳನ್ನು ಪರಿಹರಿಸುತ್ತೆ. ಸೇರಿಗೆ ೨ ೦ ೦ ಮಚ್ಚಿನಾಮ, ಕೊಳತ ಮಂಡಲ ಇವುಗಳಿಂದುಂಟಾದ ಪ್ರಬಲ ರೋಗಿಗಳಿಗೂ ಚಿಕಿತ್ಸೆಯು ದೊರೆಯುವದು

ನಮ್ಮ ಕ್ಯಾಟಲಾಗು ತರಿಸಿ ನೋಡಿ—ಪಂಡಿತ ಕೃಷ್ಣಾಚಾರ್ಯರು ನಿಖಿಲ ರೋಗಾರಿ ವೈದ್ಯಶಾಲಾ, ದೇವರ್ಧ ಪೇಟೆ, ಮೈಸೂರು

ಬಾಳ್ಯದ ವೆಂಕಟಾಚಲ ಪಂಡಿತ, ಶ್ರೀಸೀತಾರಾಮ ವೈದ್ಯಶಾಲಾ, ಕೊಳ್ಳೇಗಾಲ, ಇವರ ಸಿದ್ಧೌಷಧಗಳು.

26 1

೧. ಲೋಕಾನಾಯಕರ ಕಸ್ತೂರಿ ಮಾತ್ರೆ.—ಈ ಮಾತ್ರೆಗಳನ್ನ ಹವಳದ ಭಸ್ಮ ಚಿನ್ನದ ರೇಕುಗಳ ಮಿಶ್ರದಿಂದ ತಯಾರಿಸಿದೆ ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಪ್ಲೇಗು ಜ್ವರ, ಚಳೀಜ್ವರ, ಜ್ವರ, ಅಗ್ನಿ ನಷ್ಟ, ನಿಶ್ಶಕ್ತಿ, ಕೆಮ್ಮು, ಹೊಟ್ಟೆ, ಕಿಬ್ಬೊಟ್ಟೆ, ಎದೆಗಳ ನೋವು ಇವಕ್ಕೆ ದಾರಿಗೊಡದು; ಮಕ್ಕಳ ಎಲ್ಲಾ ರೋಗಗಳಿಗೂ ಗುಣಕಾರಿ ನೀರು ಮತ್ತು ಹಾಲು ಬದಲಾವಣೆಗೆ ಬಳ್ಳೇದು ೨೦ ಮಾತ್ರೆಯುಳ್ಳ ಕುಪ್ಪಿಗೆ ೪ ಆಣೆ. ಪೋಸ್ಟು ಮೂಲಕ ೫ ಸೀಶಗೆ ಒಂದು ಸೀಶೆ ಹೆಚ್ಚು ೧ ರಿಂದ ೬ ರ ವರೆಗೆ ಟಪಾಲು ಖರ್ಚು ೪ ಆಣೆ

೨. ಪ್ಲೇಗಿಗೆ ಸಿದ್ಧೌಷಧ.—ಪ್ಲೇಗಿಗೆ ಔಷಧಿಯೇ ಇಲ್ಲವೆಂದು ಹೇಳದೆ ಈ ನಮ್ಮ ಔಷಧವನ್ನು ತರಿಸಿ ಉಪಯೋಗಿಸಿ ನೋಡಿ ಯೋಗ್ಯತಾಪತ್ರಗಳನ್ನು ವಿವರಿಸಲು ಸ್ಥಳ ಸಾಲದು ಗಡ್ಡೆ ಮೊದಲಾದ ಬಾಧೆ ಇಲ್ಲದಂತೆ ಉಜ್ಜುವ ಔಷಧಿ ಸೇರಿ ಕ್ರಯ ೧ ರೂಪಾಯಿ

೩. ಎಸ್. ಸಿ. ಇ. ಸಪ್ತರಂಗಬಲಕಾರಿ—ಕಾಫಿ, ಟೀ, ಕೋಕೋಗಳಿಗೆ ಬದಲಾಗಿ ಉಪಯೋಗಿಸ ಬಹುದು ಕಾಫಿ, ಟೀಗಳಲ್ಲಿರುವ ದುರ್ಗುಣಗಳು ಇದರಲ್ಲಿಲ್ಲ ಎದೆ, ಅನ್ನಾಶಯ, ನರಗಳು, ಸಂದುಗಳು, ಮೆದುಳು, ಶಿರಸ್ಸು ಮೊದಲು, ಇವುಗಳ ಸಂಬಂಧವಾದ ಎಲ್ಲಾ ರೋಗಗಳನ್ನೂ ಚೆನ್ನಾಗಿ ಹೋಗಲಾಡಿಸಿ ಧಾತುಶಕ್ತಿಯನ್ನು ಕ್ರಮವಾಗಿ ವೃದ್ಧಿಪಡಿಸುವದು ೨೦ ಲೋಟ ಕಾಫಿಯಾಗುವ ಡಬ್ಬಿ ೪ ಆಣೆ ೪೦ ಲೋಟಾ ಆಗುವುದು ೭ ಆಣೆ

೪ ಕಾಲರಾ ಔಷಧ —ಮಾತ್ರೆ ಕಟ್ಟಿ ಹೊಟ್ಟೆಯುಬ್ಬರಿಸಿ ಅಪಾಯವಾಗದಂತೆ ಖಂಡಿತ ಗುಣವಾಗುತ್ತೆ. ಕ್ರಯ ೧-೦ ಆಣೆ.

ವಿಳಾಸ—ಎಸ್ ಎಸ್ ಆರ್. ವೈದ್ಯಶಾಲಾ,
ಲಕ್ಷ್ಮೀವಿಲಾಸ ರೋಡ್, ಮೈಸೂರು.

ಕನ್ನಡ ಹೊಸ ೨ ನೇ ರೀಡರಿನ ಟಿಪ್ಪಣಿ.

24 1

ಗದ್ಯಪದ್ಯಗಳ ಪ್ರತಿ ಒಂದು ಪಾಠದಲ್ಲಿಯೂ ಸ್ಪಷ್ಟವಾದ ಪದಗಳ ಅರ್ಥಗಳೂ, ಆಯಾ ಪಾಠಗಳ ಮೇಲೆ ಅಭ್ಯಾಸದ ಪ್ರಶ್ನೆಗಳೂ, ಇಯತ್ತೆಗೆ ತಕ್ಕಂತೆ ಪ್ರತಿ ಪಾಠದಲ್ಲಿನ ವ್ಯಾಕರಣ ವಿಷಯಗಳೂ ಬರೆಯಲ್ಪಟ್ಟು ಅಚ್ಚಾಗುತ್ತಲಿದೆ ಪ್ರತಿ ೧ಕ್ಕೆ ಎರಡಾಣೆ ಹತ್ತಕ್ಕೆ ೧ ಹೆಚ್ಚು ಸಿಕ್ಕುವುದು ವಿಳಾಸ —ಕೆ ರಾಮಸ್ವಾಮಿಅಯ್ಯಂಗಾರ್, ಮಾಗಡಿ

ವೃತ್ತಾಂತ ಪತ್ರಿಕೆ.

—:0:—

ಸನ್ ೧೯೦೭ ನೇ ಇಸವಿ ಫೆಬ್ರವರಿ ತಾ॥ ೨೧ನೇ ಗುರುವಾರ

ಗತಿಸಿದ ಮ॥ ಪಿ. ವೇದಮಿತ್ರೈಯ್ಯನವರು

—!—

ನಮ್ಮ ಈ ಪತ್ರಿಕೆಯನ್ನು ನಡಸುವುದರಲ್ಲಿ ಜೊತೆಯಾಗಿದ್ದು ಅನೇಕ ವಿಷಯಗಳನ್ನು ಕುರಿತ ಬಾತ್ಮಿಗಳನ್ನು ಬರೆಯುತ್ತಾ ಬಂದಿದ್ದ ಮ॥ ಪಿ. ವೇದಮಿತ್ರೈಯನವರು ಪ್ಲೇಗ್ ಉಪದ್ರವದಿಂದ ಕಾಲವಾದರೆಂದು ತಿಳಿಸಲು ತುಂಬಾ ದುಃಖಪಡುತ್ತೇವೆ. ಅವರು ರಾಜಧಾನಿಯ ಚಾಮರಾಜಪೇಟೆಯಲ್ಲಿ ವಾಸಮಾಡುತ್ತಿದ್ದರು. ಮೊನ್ನೆ ಭಾನುವಾರ ಅವರ ಇಬ್ಬರು ಮಕ್ಕಳಿಗೆ ಜ್ವರ ಕಾಣಿಸಿಕೊಂಡಿತು ಸೋಮವಾರ ಪ್ರಾತಃಕಾಲವಾಗುವಾಗ್ಗೆ ತಂದೆಗೂ ಜ್ವರಪ್ರಾಪ್ತವಾಯಿತು. ಡಾಕ್ಟರು ನೋಡಿ ಮೂರು ಮಂದಿಗೂ ಪ್ಲೇಗ್ ತಗಲಿದೆ ಎಂದು ಹೇಳಿದರು. ಸೋಮವಾರವೇ ಆ ಇಬ್ಬರು ಮಕ್ಕಳಲ್ಲಿ ಸುಮಾರು ೭ ವರುಷದ ಹುಡುಗನು ಕಾಲವಾದನು, ಮರುದಿನ ರಾತ್ರಿ ಮ॥ ವೇದಮಿತ್ರೈಯ್ಯನವರೂ ಪರಲೋಕವನ್ನೈದಿದರು.

ಮ॥ ಪಿ. ವೇದಮಿತ್ರೈಯ್ಯನವರ ತಂದೆತಾಯಿಗಳು ಕ್ರೈಸ್ತರಾಗಿದ್ದರು. ಅವರ ತಂದೆ ಕೆಲವು ಕಾಲ ದಕ್ಷಿಣ ಆಫ್ರಿಕದಲ್ಲಿದ್ದರು. ಚಿಕ್ಕಂದಿನಲ್ಲಿ ಮ॥ ವೇದಮಿತ್ರೈಯ್ಯನವರು ಬೆಂಗಳೂರಿಗೆ ಬಂದು ಅಲ್ಲಿನ ವೆಸ್ಲಿಯನ್ ಹೈಸ್ಕೂಲಿಗೆ ಸೇರಿ ವಿದ್ಯಾಭ್ಯಾಸಮಾಡಿ, ಮೈಸೂರಿಗೆ ಬಂದು ಅನೇಕ ವರುಷಗಳ ತನಕ ಇಲ್ಲಿನ ವೆಸ್ಲಿಯನ್ ಹೈಸ್ಕೂಲಿನಲ್ಲಿ ಸಹಾಯೋಪಾಧ್ಯಾಯರಾಗಿದ್ದುಕೊಂಡು, ಅನೇಕಾನೇಕ ಬಾಲಕರಿಗೆ ವಿದ್ಯೆಕಲಿಸಿರುತ್ತಾದ್ದರಿಂದ ಅವರೆಲ್ಲಾ ಈ ಸುದ್ದಿಯನ್ನು ಕೇಳಿ ತುಂಬಾ ವ್ಯಸನಪಟ್ಟಾರೆನ್ನುವುದಕ್ಕೆ ಸಂಶಯವಿಲ್ಲ, ಈಚೆಗೆ ಕಳೆದ ಆರು ವರ್ಷಗಳಿಂದಲೂ ಮ॥ ವೇದಮಿತ್ರೈಯ್ಯನವರು ನಮ್ಮ ಪ್ರೆಸ್ಸಿನಲ್ಲಿದ್ದುಕೊಂಡು ತಮ್ಮ ಸಮಯವನ್ನೆಲ್ಲಾ ಗ್ರಂಥರಚನಾ ಕಾರ್ಯದಲ್ಲೇ ವಿನಿಯೋಗಮಾಡುತ್ತಾ ಬಂದಿದ್ದರು. ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಅವರಿಗಿದ್ದ ಪರಿಶ್ರಮವೂ ಸಾಮರ್ಥ್ಯವೂ ಗ್ರಂಥರಚನೆಯಲ್ಲಿ ಅವರನ್ನು ಅತ್ಯಂತ ಅಮೌಲ್ಯವಾದ ಬರವಣಿಗಸ್ತರನ್ನಾಗಿ ಮಾಡಿದ್ದವು. ಅವರು ಬರೆದಿರುವ ಮತ್ತು ಅವರಿಂದ ಪರಿಷ್ಕರಿಸಲ್ಪಟ್ಟಿರುವ ಅನೇಕ ಪುಸ್ತಕಗಳು ಈ ಸಂಸ್ಥಾನದ ಎಲ್ಲಾ ಭಾಗಗಳಲ್ಲಿ ಮಾತ್ರವೇ ಅಲ್ಲ; ಇತರ ಕಡೆಗಳಲ್ಲೂ ಬಹು ವಿಶೇಷವಾಗಿ ಪ್ರಚಾರವಾಗಿರುತ್ತವೆ. ಅವರು ಕ್ರೈಸ್ತಭಕ್ತಿ ಪೂರಿತರಾಗಿದ್ದರು. ಅವರ ಸದ್ಭಕ್ತಿ ಸದಾಚಾರ ಸಚ್ಚರಿತ್ರೆಗಳನ್ನು ನೋಡಿ ತಿಳಿದಿದ್ದವರೆಲ್ಲಾ ಅವರನ್ನು ತುಂಬಾ ಗೌರವದಿಂದಲೂ ಭರವಸೆಯಿಂದಲೂ ಕಾಣುತ್ತಿದ್ದರು. "ವೃತ್ತಾಂತ ಪತ್ರಿಕೆ"ಯನ್ನು ನಡಸುವುದರಲ್ಲಿ ಅವರ ಸಹ

...ಗಳಾಗಿರುವವರು ಅವರ ವಿಷಯದಲ್ಲಿ ತಮಗಿರುವ ಪ್ರೀತಿವಾತ್ಸಲ್ಯಾದಿಗಳನ್ನು ಈ ಮೂಲಕ ಪ್ರಕಾಶಪಡಿಸಿ ಅವರ ಪತ್ನಿ ಪುತ್ರಾದಿಗಳಿಗುಂಟಾಗಿರುವ ಇಂಥಾ ಅಪಾರವಾದ ವಿಯೋಗದ ದುಃಖಕ್ಕಾಗಿ ತುಂಬಾ ಸಂತಾಪಪಡುವೆವು.

ಕಾಮದಹನವು.

ಈ ಭರತಖಂಡದಲ್ಲಿ "ಕಾಮದಹನ" ಅಥವಾ "ಹೋಳೀ ಹಬ್ಬ" ವೆಂಬೀ ಹಬ್ಬವನ್ನು ಜನರು ಕಾಲಾಂತರದಿಂದಲೂ ಪ್ರತಿವರ್ಷ ಆಚರಿಸುತ್ತಾ ಬಂದಿದಾರೆ. ಈ ವರುಷ ಈ ಹಬ್ಬವು ಮುಂದಿನ ಬುಧವಾರ ನಡೆಯತಕ್ಕದೆಂದು ಪಂಚಾಂಗ ಕರ್ತರು ಬರೆದಿರುವ... ಈ ಹಬ್ಬವನ್ನು ಪ್ರಜೆಗಳು ಯಾವ ರೀತಿಯಲ್ಲಿ ಆಚರಿಸುತ್ತಾ ಇರುವದನ್ನು ನಾವು ವಿವರಿಸಲು ಲಜ್ಜೆ ಪಡುತ್ತೇವೆ. ವೇಷಗಳನ್ನು ಹಾಕಿ, ಗುಲಾಲ್ ರಂಗನ್ನು ಬಟ್ಟೆಗಳಿಗೆ ಹಾಕಿ ಉಟ್ಟು ಹೊದ್ದುಕೊಂಡು ಅಶ್ಲೀಲವೂ ಅಸಭ್ಯವೂ ಆದ ಭಂಡಪದಗಳನ್ನು ಕಟ್ಟಿ ದೇಹವಿಕ್ರಯದಿಂದ ಜೀವಿಸುವವರನ್ನು ಕಟ್ಟಿಕೊಂಡು ಬೀದಿಬೀದಿಗಳಲ್ಲಿ ಹಾಡುತ್ತಾ ಬರುವರು. ಆ ಜನರ ಹಾಡುಗಳನ್ನು ಕೇಳುವುದರಲ್ಲಿ ಅನೇಕಾನೇಕರು ಉತ್ಸಾಹಪಡುತ್ತಾರೆ. ಇದರಿಂದ ಈ ಹಬ್ಬವನ್ನು ಈ ರೀತಿ ಆಚರಿಸುವವರ ಗುಣನಡತೆಗಳು ಎಷ್ಟು ಕೆಟ್ಟು ಹೋಗಿವೆ ಎಂಬುವುದು ಪ್ರಕಾಶವಾಗುತ್ತದೆ. ಅವರು ತಾವು ಮಾತ್ರ ಕೆಟ್ಟ ಚಾಲಿನವರಾಗುವುದಲ್ಲದೆ ಪ್ರಜಾಕೋಟಿಗಳನ್ನು ಮಾನಹೀನರನ್ನಾಗಿ ಮಾಡುವವರಾಗುತ್ತಾರೆ. ಸದ್ಭಕ್ತಿ, ಸದ್ಗುಣ, ಮಾನ, ಗಾಂಭೀರ್ಯ, ಗೌರವಾದಿಗಳಲ್ಲಿ ಆಚಂಚಲವಾದ ಪ್ರೀತಿಯನ್ನಿಟ್ಟುಕೊಂಡಿರುವವರೆಲ್ಲಾ ಈ ಹಬ್ಬವನ್ನು ಈ ರೀತಿ ಆಚರಿಸುವುದು ಯೋಗ್ಯವಾದುದಾಗಿಲ್ಲವೆಂದೇ ಹೇಳುವರು. ಎರಡನೆಯದಾಗಿ ಇಂಥಾ ದುಷ್ಕಾರ್ಯಪ್ರವರ್ತನೆಯಿಂದ ದೇಶೋನ್ನತಿಯು ಎಷ್ಟು ಮಾತ್ರಕ್ಕೂ ಆಗಲಾರದು. ಆದ್ದರಿಂದ ಇಂಥಾ ಲಜ್ಜಾಸ್ಪದವಾದ ರೀತಿಯಲ್ಲಿ ಈ ಹಬ್ಬವನ್ನು ಆಚರಿಸುವುದು ಯಾರಿಗೂ ಸರ್ವಥಾ ಯೋಗ್ಯವೆನಿಸಿಕೊಳ್ಳುವುದಿಲ್ಲ. ಹೀಗೆ ಆಚರಿಸಬೇಕಾದದ್ದು ಶಾಸ್ತ್ರವಿಧಿಯೇ ಎಂದು ವಿಚಾರ ಮಾಡಿದಲ್ಲಿ ಇದಕ್ಕೆ ಯಾವ ಶಾಸ್ತ್ರವಿಧಿಯೂ ಸಿಕ್ಕುವುದಿಲ್ಲ.

ಇದು ಮತಾಚರಣೆಗೆ ಸಂಬಂಧಪಟ್ಟುದಾದ್ದರಿಂದ ಸರ್ಕಾರದವರು ಇದನ್ನು ತಿದ್ದುಪಡಿಸುವುದಕ್ಕೆ ಮಾರ್ಗ ಕಾಣುವುದಿಲ್ಲ. ಪ್ರಜೆಗಳೇ ತಾವಾಗಿ ತಿಳಿದುಕೊಂಡು ತಮ್ಮ ದುಷ್ಕಾರ್ಯ ಪ್ರವರ್ತನೆಗಳನ್ನು ಅಸಹ್ಯಪಟ್ಟು ಬಿಡಬೇಕಾಗಿದೆ. ವಿದ್ಯಾವಂತರೂ ಗೌರವಸ್ಥರೂ ಪ್ರಜೆಗಳ ಮುಖಂಡರೂ ತಟಸ್ಥರಾಗಿರದೆ ಮುಂದೆ ಬಂದು ಅಲ್ಪಜ್ಞರಾದ ಜನರಿಗೆ ಸಭೆಗಳಲ್ಲಿ ವಿವೇಕ ಹೇಳಿಕೊಟ್ಟು, ಭಂಡ ಪದಗಳನ್ನು ಹಾಡಿ ತಾವು ಕೆಟ್ಟು ಇತರರನ್ನೂ ಕೆಡಿಸದಂತೆಯೂ, ಸದ್ಗುಣ ಸದ್ಭಕ್ತಿ ಸದಾಚಾರಗಳನ್ನು ಅಭಿವೃದ್ಧಿ ಪಡಿಸುವುದಕ್ಕೆ ಸಹಾಯಕಗಳಾದಂಥಾ ಭಜನೆ, ನಾಮ ಸಂಕೀರ್ತನೆಗಳನ್ನು ಹಾಡಿ ಹಬ್ಬವನ್ನು ಆಚರಿಸುವಂತೆಯೂ ಪ್ರೋತ್ಸಾಹ ಪಡಿಸಬೇಕು. ಇದಕ್ಕೆ ದೃಷ್ಟಾಂತವಾಗಿ ಉತ್ತರ ಹಿಂದೂಸ್ಥಾನದಲ್ಲಿ ರಾಯಿ ದೇವಿ ಪ್ರಸಾದ್ ಎಂಬೊಬ್ಬ ಹಿಂದೂ ದೊಡ್ಡ ಮನುಷ್ಯನು ಮಾಡಿದ ಕಾರ್ಯವು ಸ್ತೋತ್ರಾರ್ಹವಾಗಿರುವುದೆಂದು ಈ ಸಂದರ್ಭದಲ್ಲಿ ಸೂಚಿಸುವೆವು. ಅವರಿರುವ ಊರು ದೊಡ್ಡದು. ಬಹು ಕಾಲದಿಂದಲೂ ಆ ಜನರು ಈ ಹಬ್ಬವನ್ನು ಮೇಲ್ಕಂಡಂತೆ ಹೇಯವಾದ ರೀತಿಯಲ್ಲಿ ಆಚರಿಸುತ್ತಾ ಇದ್ದರು. ಇದನ್ನು ರಾಯಿ ದೇವಿ ಪ್ರಸಾದರವರು ನೋಡಿ ಅವರಿಗೆಲ್ಲಾ ಬಹು ಪ್ರೀತಿ ಆದರಪೂರ್ವಕವಾಗಿ ವಿವೇಕ ಹೇಳಿ, ಅವರ ಅವಜ್ಞತೆಯನ್ನೂ ಆ ಲಜ್ಜಾಸ್ಪದವಾದ ಆಚರಣೆಯಿಂದುಂಟಾಗುವ ಕೆಡಕನ್ನೂ ತೋರಿಸಿಕೊಟ್ಟದರಿಂದ ಒಂದು ವರುಷದಲ್ಲಿ ಅಲ್ಲಿನ ಜನರೆಲ್ಲಾ ಆ ದುಷ್ಟವಾದ ಆಚರಣೆಯನ್ನು ಪೂರ್ಣವಾಗಿ ವರ್ಜಮಾಡಿ, ಈ ಹಬ್ಬ ಬಂದಾಗ್ಗೆ ಭಗವನ್ನಾಮಸಂಕೀರ್ತನೆಗಳನ್ನೂ ಅರ್ಚನಾದಿಗಳನ್ನೂ ಮಾಡಿಕೊಂಡು ಸದ್ಭಕ್ತರಾಗಿಯೂ ಸದಾಚಾರಿಗಳಾಗಿಯೂ ಆಗಿರುತ್ತಾರೆ. ಇದನ್ನು ನೋಡಿ ನಮ್ಮ ದೇಶದ ವಿದ್ಯಾವಂತರೂ ತಮ್ಮ ಬುದ್ಧಿ ಶಕ್ತಿಯನ್ನು ವ್ಯಯಮಾಡಿ ಈ ಪ್ರತಿವರ್ಷ ನಡೆಯುವ ಈ ಹಬ್ಬದ ದುರಾಚಾರಗಳನ್ನೆಲ್ಲಾ ನಿರ್ಮೂಲಮಾಡಲು ಪ್ರಯತ್ನ ಪಡಬೇಕೆಂದು ನಾವು ಕೋರುತ್ತೇವೆ. ಯಾಕೆಂದರೆ ಇಂಥಾ ದುರ್ವ್ಯಾಪಾರಗಳಿಂದ ನಮ್ಮ ದೇಶವಾಗಲಿ ಪ್ರಜೆಗಳಾಗಲಿ ಎಷ್ಟು ಮಾತ್ರಕ್ಕೂ ಅಭಿವೃದ್ಧಿಗೆ ಬರಲಾಗದು.

ಒಳದೇಶದ ವೃತ್ತಾಂತಗಳು

ನಾಳೆಯ ದಿನ ಶ್ರೀಮನ್ ಮಹಾರಾಜರವರು ಪರಿವಾರ ಸಹಿತ ರಾಜಧಾನಿಗೆ ಚಿತ್ತೈಸುವವರಾಗಿದಾರೆಂದು ಕೇಳುತ್ತೇವೆ.

❖❖❖❖

ರಾಜಧಾನಿಯ ಕೃಷ್ಣರಾಜ ಮೊಹಲ್ಲೆಯಲ್ಲಿ ಟ್ರಸ್ಟ್ ಬೋರ್ಡ್, ನಲವು ಮನೆಗಳನ್ನು ಒಡೆದು ಆರೋಗ್ಯಾಭಿವೃದ್ಧಿ ಕಾರ್ಯಗಳನ್ನು ನಡೆಸಲು ಆರಂಭಿಸಿರುತ್ತಾರೆ.

❖❖❖❖

ಮಹಾಮಾತೃಶ್ರೀಯವರೂ ರಾಜವರ್ಗಕ್ಕೆ ಸೇರಿದ ದಿವಾನಿಯವರೂ ಪರಿವಾರ ಸಹಿತ ಕಳೆದ ಗುರುವಾರ ರಾಜಧಾನಿಗೆ ದಯಮಾಡಿದರು. ಗೌರವಾರ್ಹವಾದ ತೋಪುಗಳು ಹಾರಿಸಲ್ಪಟ್ಟವು.

❖❖❖❖

ಶಿಕಾರಿಪುರದ ತಾಲ್ಲೂಕು ಹುಣಸೇಕೊಪ್ಪದ ಜಮೀನಿನಲ್ಲಿ ಹುಣಸೆ ಮರದ ಕೆಳಗೆ ಸುಮಾರು ೧,೦೦೦ ರೂಪಾಯಿಯ ನಗನಾಣ್ಯಗಳು ದೊರೆತದ್ದು ಸಿಕ್ಕಿರುತ್ತದೆ. ಅದು ಯಾರದೋ ಅವರು ಹೆಚ್ಚು ಕಾವಿಗಾರಿಗೆ ರುಜುವಾತು ಕೊಟ್ಟು ಪಡೆದುಕೊಳ್ಳಬಹುದಾಗಿದೆ.

ದಿವಾನರವರು ಹಾಸನಕ್ಕೆ ದಯಮಾಡುವಾಗ್ಗೆ ಅವರಿಗೆ ಅಲ್ಲಿನ ಪ್ರಜೆಗಳು ಒಂದು ಅಡ್ರೆಸ್ಸನ್ನು ಓದಿ ಸುಂದರವಾದ ಪೆಟ್ಟಿಗೆಯಲ್ಲಿಟ್ಟು ಒಪ್ಪಿಸಬೇಕೆಂದು ಗೊತ್ತು ಮಾಡಿಕೊಂಡಿದಾರೆ.

❖❖❖❖

ಸರ್ದಾರ್ ಗೋಪಾಲರಾಜೇ ಅರಸಿನವರು ನೆನ್ನೆ ಬೆಳಿಗ್ಗೆ ೮ ಗಂಟೆಗೆ ಮುಂಚಿ ಮೋಟಾರ್ ಗಾಡಿಯಲ್ಲಿ ರಾಜಧಾನಿಗೆ ಬಂದರು. ಇವರು ಚನ್ನರಾಯಪಟ್ಟಣಕ್ಕೆ ಹೋಗಿ ಬ್ರಿಟಿಷ್ ರೆಸಿಡೆಂಟ್ ಮ॥ ಫ್ರೇಸರ್‌ರವರನ್ನು ಕರೆದುಕೊಂಡು ಶನಿವಾರ ಬರುವರೆಂದು ಕೇಳುತ್ತೇವೆ.

❖❖❖❖

ಹೊಳಲ್ಕೆರೆ ತಾಲ್ಲೂಕಿನ ಒಟ್ಟು ಮುತ್ಸದ್ದಿ ಎಚ್. ಸುಬ್ಬರಾಯರು ತಲೆ ತಪ್ಪಿಸಿಕೊಂಡು ಹೋಗಿದಾರೆ. ಇನ್ನು ಎರಡು ತಿಂಗಳೊಳಗೆ ಕೆಲಸದ ಮೇಲೆ ಹಾಜರಾಗದಿದ್ದರೆ ಅವರನ್ನು ಆ ಕೆಲಸದಿಂದ ವಜಾ ಮಾಡುವುದಾಗಿ ದಾವಣಗೆರೆ ಸಬ್ ಡಿವಿಜನ್ ಆಫೀಸರು ತಿಳಿಸಿರುವರು.

❖❖❖❖

ಬೆಂಗಳೂರು ಸಿಟಿ ಜೋಗೀಪೇಟೆಯಲ್ಲಿ ವೆಂಕಟರಮಣನೆಂಬೊಬ್ಬ ನೇಯ್ಗೆ ಜಾತಿಯ ಯೌವನಸ್ಥನು ೧೦—೧೨ ವಯಸ್ಸಿನವಳಾದ ತನ್ನ ಹೆಂಡತಿಯನ್ನು ಚೂರಿಯಿಂದ ಕತ್ತುಕೊಯ್ದು ಕೊಂದುಹಾಕಿದನು. ಸೆಷನ್ಸ್ ಜಡ್ಜರು ಅವನಿಗೆ ಮರಣದಂಡನೆಯನ್ನು ವಿಧಿಸಿದರು.

❖❖❖❖

ರಾಜಧಾನಿಯಿಂದ ಆಶ್ರಯ ಸುಂಕವುಳ್ಳ ಸರಕು ಬೇರೆಕಡೆಗೆ ರಫ್ತಾದರೆ ಅಂಥಾ ಪ್ರತಿ ಗಾಡಿಗೂ ಒಂದಾಣೆಯಂತೆ ಸುಂಕ ಹಾಕಿ ವಸೂಲ್ಮಾಡುತ್ತೇವೆಂದು ಮ್ಯುನಿಸಿಪಾಲಿಟಿಯವರು ತಿಳಿಸಿರುವರು. ಇದು ಯಾವ ತಾರೀಖಿನಿಂದ ಜಾರಿಗೆ ಬರುವುದೋ ಇನ್ನು ಮುಂದೆ ತಿಳಿಯಬೇಕಾಗಿದೆ.

❖❖❖❖

ಮೊನ್ನೆ ಮಂಗಳವಾರ ಬೆಳಿಗ್ಗೆ ಬೆಂಗಳೂರು ಕೋಟೆಯ ಬಾಗಿಲ ಬಳಿ ಒಂದು ಹೆಣ ಬಿದ್ದು ಕೊಳೆಯುತ್ತಿತ್ತು. ಪೋಲೀಸಿನವರು ವಿಚಾರಿಸಿದ್ದರಲ್ಲಿ ವಾರಸ್‌ದಾರರೇ ಸಿಕ್ಕಲಿಲ್ಲ. ಇದಲ್ಲದೆ ಸುಮಾರು ೫೦ ವರುಷದ ಒಬ್ಬ ಬ್ರಾಹ್ಮಣ ಸ್ತ್ರೀಯು ಸೋಮವಾರ ರಾತ್ರಿ ಕೋಟೆಯಲ್ಲಿ ಕಾಲವಾದಳು. ಮನೆಯವರು ಶವವನ್ನು ಬೆಳಗಾಗುವುದರೊಳಗೇ ಸಾಗಿಸಿ ದಹನಕ್ಕೆ ಸಿದ್ಧಮಾಡಿದರು. ಪ್ಲೇಗ್ ಇಲಾಖೆಯವರು ಹೋಗಿ ದಹನವನ್ನು ಆಟಂಕಪಡಿಸಿದರೆಂದು ಪ್ರಕಟವಾಗಿದೆ.

❖❖❖❖

ಮೊನ್ನೆ ಸೋಮವಾರ ಸಾಯಂಕಾಲ ರಾಜಧಾನಿಯಲ್ಲಿ ಪದ್ಧತಿಯ ಪ್ರಕಾರ ಮಾರಿ ಸಿಡಿ ಆಯಿತು. ಕೋಟೆ ಮಾರಮ್ಮನ ಪೂಜಾರಿಯೂ ಕಾರಸಗೆರೆ ಮಾರಮ್ಮನ ಪೂಜಾರಿಯೂ ಸಿಡಿಗಳ ಮೇಲೆ ತೂಗಾಡುತ್ತಾ ಪದ್ಧತಿಯ ಪ್ರಕಾರ ದೊಣ್ಣೆಗಳನ್ನು ಹಿಡಿದು ಆಡಮಾಡಿದರು. ಅಕಸ್ಮಾತ್ತಾಗಿ ಕಾರಸಗೆರೆ ಸಿಡಿಯು ಚಕ್ರದಿಂದ ಮುರಿದು ಬಿದ್ದುಬಿಟ್ಟಿತು. ಅದಕ್ಕೆ ಕಟ್ಟಿದ್ದ ಪೂಜಾರಿ ತಿಮ್ಮಯ್ಯನು ಕೆಳಗೆ ಬಿದ್ದು ಬಡಿಯಲ್ಪಟ್ಟು ಮರುದಿನ ಸತ್ತೇ ಹೋದನು. ಇನ್ನೊಬ್ಬನಿಗೆ ಸ್ವಲ್ಪ ಗಾಯವಾಯಿತು.

ಬಹುಮಾನ ಪಡೆದ ವರ್ತಮಾನವು

[(೧) ಪ್ರತಿ ಮೇಲಾಟದ ಲೇಖದ ಮೇಲು "ಬಹುಮಾನದ ಮೇಲು"ವೆಂದು ಬರೆದು ಲೇಖಕರ ಹೆಸರನ್ನೂ ವಿಳಾಸವನ್ನೂ ಪರಿಷ್ಕಾರವಾಗಿ ತಿಳಿಸಬೇಕು. (೨) ಲೇಖನವು ಬಾತ್ಮಿದಾರರು ವಾಸಿಸುವ ಸ್ಥಳದ ಬಳಿಯಲ್ಲಿ ಎಂಟು ಹತ್ತು ದಿನಗಳೊಳಗೆ ನಡೆದ ವಿಷಯವಾಗಿರಬೇಕು. ಅರ್ಧ ಕಾಲಮಿಗಿಂತ ಕಡಿಮೆಯಾಗಿದ್ದರೂ ಒಂದು ಕಾಲಮಿಗಿಂತ ಹೆಚ್ಚಾಗಿದ್ದರೂ ಆಗಲಾಗದು. (೩) ಪ್ರತಿಯೊಂದು ಲೇಖನವು ನಮ್ಮ ಆಫೀಸಿಗೆ ಪ್ರತಿವಾರವೂ ಸೋಮವಾರ ಪ್ರಾತಃಕಾಲವೇ ತಲುಪಬೇಕು. (೪) ಬಹುಮಾನ ಪಡೆದವರ ಹೆಸರನ್ನು ವಾರ ವಾರವೂ ಪ್ರಕಟಿಸುವುದಲ್ಲದೆ ಹಣವನ್ನು ಮನಿಆರ್ಡರಿನ ಮೂಲಕ ರವಾನಿಸುವೆವು. (೫) ಬಹುಮಾನ ನಿಮಿತ್ತವಾಗಿ ನಮ್ಮಲ್ಲಿಗೆ ಬರೆದು ಬರುವಂಥ ಲೇಖನಗಳೆಲ್ಲಾ ವೃತ್ತಾಂತ ಪತ್ರಿಕಾ ಕರ್ತರ ಸೊತ್ತಾಗಿ ಭಾವಿಸಲ್ಪಡುವವು. ಒಂದೇ ತಿಂಗಳಲ್ಲಿ ಒಬ್ಬ ಲೇಖಕನಿಗೇನೇ ಎರಡು ಸಾರಿ ಬಹುಮಾನ ದೊರೆಯಲಾರದು.]

[ಈ ಬಾತ್ಮಿ ಬರೆದ ಮ॥ ಎಸ್. ಯಜ್ಞಪ್ಪ, ಗರ್ಲ್‌ಸ್ಕೂಲ್ ಮಾಸ್ಟರ್, ಶಿಕಾರಿಪುರ ಇವರಿಗೆ ಈ ವಾರದ ಬಹುಮಾನ ಕಳುಹಿಸಿದೆ]

ಕಾಡುಹಂದಿಯಿಂದ ಮರಣ.

ತಾ. ೯ನೇ ಶನಿವಾರ ಶಿಕಾರಿಪುರ ತಾಲ್ಲೂಕು ಚುರ್ಚುಗುಂಡಿ ಎಂಬ ಗ್ರಾಮದಲ್ಲಿ ಕೊರಮರ ಜಾತಿ ಸುಮಾರು ೨೫ ವರುಷ ವಯಸ್ಸಿನ ಪುಟ್ಟಹನುಮ ಎಂಬುವನೂ ಇನ್ನೂ ಕೆಲವರೂ ಸೇರಿ ಮಧ್ಯಾಹ್ನ ಊಟಮಾಡಿಕೊಂಡು ಗದ್ದೆಗೆ ಕೆಲಸದ ನಿಮಿತ್ತ ಹೊರಟುಹೋದರು. ಇವನ ಸಂಗಡ ಹೋದ ಜನಗಳು ತಮ್ಮ ತಮ್ಮ ಗದ್ದೆಗೆ ಹೋದರು. ಇವನೂ ತನ್ನ ಗದ್ದೆಗೆ ಹೊರಟುಹೋಗಿ ಸ್ವಲ್ಪ ಹೊತ್ತಿನ ಮೇಲೆ ಹೊರಕಡೆಗೆ ಹೋಗಬೇಕಾಗಿ ಬಂದದ್ದರಿಂದ ಆ ಗದ್ದೆಗೆ ಸ್ವಲ್ಪ ದೂರದಲ್ಲಿ ಕೋಲ್ ಹೊಲಕಡೆಗೆ ಕುಳಿತುಕೊಂಡನು. ತರುವಾಯ ಅಲ್ಲಿ ಪೊದೆಗಳಲ್ಲಿ ಅಡಗಿಕೊಂಡಿದ್ದ ಒಂದು ಕಾಡುಹಂದಿಯು ಇವನ ಹಿಂದಿನಿಂದ ಬಂದು ಒಮ್ಮೆಗೆ ಎರಡು ತೊಡೆಗಳ ಸಂದಿನಲ್ಲಿ ನುಗ್ಗಿತು. ಕ್ರೂರವಾದ ಅದರ ಕೋರೆಗಳು ತಗಲಿ ಎರಡು ತೊಡೆಗಳನ್ನೂ ಸೀಳಿಬಿಟ್ಟವು. ತರುವಾಯ ಅವನು ಭಯಾಕ್ರಾಂತನಾಗಿ ಅರಚಿಕೊಂಡನು. ಪುನಃ ಆ ಹಂದಿಯು ಬೆದರಿ ಓಡಿಬಂದು ಇವನನ್ನು ಬಡಿಯಿತು. ಆ ರಭಸಕ್ಕೆ ಇವನು ಬೆದರಿ ಕೆಳಕ್ಕೆ ಬಿದ್ದನು. ಗಾಯ ಪೂರಾ ಆಗಿ ರಕ್ತವು ಬಹಳ ಸುರಿಯಲು ಪ್ರಾರಂಭಿಸಿತು. ತರುವಾಯ ಜನರು ಬಂದು ಇದನ್ನು ನೋಡಿ ಓಡಿಹೋಗಿ ಈ ಸಮಾಚಾರವನ್ನು ಆ ಊರ ಗೌಡರಿಗೆ ಹೇಳಿದರು. ಗೌಡರು ಕೆಲವು ಜನರನ್ನು ಕರೆದುಕೊಂಡು ಬಂದು ಆ ಹಂದಿಯನ್ನು ಹುಡುಕಿ ಪೊದೆಗಳಲ್ಲೇ ಅಡಗಿಕೊಂಡಿದ್ದ ಹಂದಿಯನ್ನು ಕಂಡು ಹೊಡೆದು ಕೊಂದುಹಾಕಿದರು. ಸದರಿ ಪುಟ್ಟಹನುಮನು ಪೂರಾ ಆಯಾಸಪಡುತ್ತಾ ತನ್ನನ್ನು ಶಿಕಾರಿಪುರದ ಆಸ್ಪತ್ರೆಗೆ ಕಳುಹಿಸಿ ಎಂದು ಹೇಳಿದನು. ಇವನನ್ನು ಆಸ್ಪತ್ರೆಗೆ ತರುವ ಏರ್ಪಾಡು ಮಾಡುವಷ್ಟರಲ್ಲೇ ಈತನ ಜೀವರತ್ನವು ಈ ಪ್ರಪಂಚಸುಖವನ್ನು ತೊರೆದು ಊರ್ಧ್ವಲೋಕವನ್ನು ಸೇರಿತು. ಮಾರನೇ ದಿವಸ ಪೋಲೀಸ್ ಆಫೀಸರು ದಯಮಾಡಿ ಮಹಜರ್ ಮೊದಲಾದವುಗಳನ್ನು ಮಾಡಿದರು.

ಆರ್ಯಧರ್ಮೋಪನ್ಯಾಸವು.

ತಾ॥ ೧೮ರಲ್ಲಿ ವೇ॥ ಭುಜಂಗಾಚಾರ್ಯರೆಂಬುವರು ಈ ಊರಿನ ಎ. ವಿ. ಸ್ಕೂಲಿನಲ್ಲಿ ಮೇಲ್ಕಂಡ ಉಪನ್ಯಾಸವನ್ನು ಮಾಡಿದರು. ಆ ಕಾಲದಲ್ಲಿ ನಮ್ಮ ಅಮಲ್ದಾರ್ರವರೂ ಕಛೇರಿ ನೌಕರರೇ ಮೊದಲಾದ ಎಲ್ಲಾ ಜನಗಳೂ ಸೇರಿದ್ದರು. ಅವರು ಹೇಳಿದ ಅಭಿಪ್ರಾಯವೇನೆಂದರೆ—ನಮ್ಮದು ಎಂಬುವುದೇ ಬಹಳ ಮೇಲಾದುದು. ನಮ್ಮ ದೇಶಕ್ಕೆ ಸ್ವರಾಜ್ಯ ಬಹಳ ಅವಶ್ಯಕ. ಬಂಗಾಳ ಮೊದಲಾದ ಪ್ರಾಂತ್ಯದಲ್ಲಿ ಸ್ವದೇಶೀ ಏರ್ಪಾಡುಗಳು ಬಹಳ ವೃದ್ಧಿಹೊಂದುತ್ತಲಿರುವವು. ನಾವು ಹಣಸಹಾಯವಿಲ್ಲದವರಾಗಿದ್ದೇವೆ. ಆದುದರಿಂದ ಅಂಥದು ಮಾಡಲಿಕ್ಕಾಗದಿದ್ದರೂ ನಮ್ಮ ಧರ್ಮವನ್ನು ಮಾತ್ರ ಎಂದಿಗೂ ಬಿಡಬಾರದು. ನಾವು ಆರ್ಯಾವರ್ತದಲ್ಲಿ ವಾಸಮಾಡಿಕೊಂಡಿದ್ದ ಪೂರ್ವನಿವಾಸಿಗಳಾದುದರಿಂದ ನಮಗೆ ಆರ್ಯರೆಂಬ ಹೆಸರು ಬಂದಿದೆ. ಸರ್ವಾಂಗವನ್ನೂ ತುಂಬಿಕೊಂಡಿದ್ದ ನಮ್ಮ ಆರ್ಯಧರ್ಮವು ಈಗ ನಮ್ಮನ್ನು ಸಂಪೂರ್ಣವಾಗಿ ಬಿಟ್ಟುಬಿಟ್ಟಿದೆ. ಕಾರಣವೇನೆಂದರೆ— ಪಾದದಲ್ಲಿ ವಾಸಮಾಡಲು ಬೂಟ್ಸುಗಳು ಬಂದು ಆ ಧರ್ಮವನ್ನು ಸೆರೆಹಿಡಿದವು. ಕಾಲಿನಲ್ಲಿ ವಾಸಮಾಡಲು ಪಾಜಾಮೆಗಳು ಕಾಲನ್ನು ಆಕ್ರಮಿಸಿಕೊಂಡವು. ಸೊಂಟದಲ್ಲಿ ವಾಸಮಾಡಲು ಬೆಲ್ಟುಗಳು ಬಿಗಿದುಬಿಟ್ಟವು. ಮೈಯಲ್ಲಿ ವಾಸಮಾಡಲು ಷರ್ಟು ಕೋಟು ಬನೀನುಗಳು ಮುತ್ತಿಗೆ ಹಾಕಿರುವವು. ಕುತ್ತಿಗೆಯಲ್ಲಿ ಸೇರಲು ಕೊರಲ ಪಟ್ಟಿಗಳು ಉರುಲಿಕ್ಕಿರುವವು. ನಾಲಿಗೆಯಲ್ಲಿ ವಾಸಮಾಡಲು ಬೇರೆ ಭಾಷೆಗಳು ಬೇರೂರಿರುವವು. ಕೊನೆಗೆ ಏನುಳಿನ್ನಾದರೂ ಆಶ್ರಯಿಸೋಣವೆಂದರೆ ಅಲ್ಲಿ ಸ್ಥಳವೇ ಇರಲಿಲ್ಲ. ಆದುದರಿಂದ ಆ ಆರ್ಯಧರ್ಮವು ನಮ್ಮ ಆಶೆಯನ್ನೇ ಬಿಟ್ಟಿರುವದು. ಮತ್ತು ಆರ್ಕಸಾಲಿಗರೇ ಮೊದಲಾದವರು ತಮ್ಮ ತಮ್ಮ ಕಸಬುಗಳಲ್ಲಿ ಮೋಸಪಡಿಸಲು ಪ್ರಾರಂಭಿಸಿದ್ದರಿಂದ ಆಯಾಯ ಕಸಬಿನ ಹೆಸರೇ ತೊಡೆದುಹೋಗುವ ಹೊತ್ತು ಬಂದಿದೆ. ಜನಗಳಲ್ಲಿ ಐಕಮತ್ಯವಿಲ್ಲದೇ ಹೋದುದರಿಂದಲೇ ಹಿಂದೂ ರಾಜ್ಯಕ್ಕೆ ಚ್ಯುತಿಯುಂಟಾಗಿರುವುದು. ಮತ್ತು ನಾವು ಪರಭಾಷೆಯನ್ನು ಕಲಿತು ನಮ್ಮ ಜೀವನವನ್ನು ಮಾಡಿಕೊಳ್ಳಬೇಕಾದುದರಿಂದ ನಮ್ಮ ಗ್ರಂಥ ಪರಿಶೀಲನಾ ಭಾಷೆಯು ಅಳಿಸಿಹೋಗಿರುವದು. ನಮ್ಮ ಶಾಸ್ತ್ರಜ್ಞರು ನಮ್ಮ ನಡವಳಿಕೆ ರೀತಿಯನ್ನು ಬರೆದಿಟ್ಟಂತೆ ನಾವು ನಡೆಯುತ್ತಿದ್ದರೆ ಆಯುರಾರೋಗ್ಯವು ಎಂದಿಗೂ ನಮ್ಮನ್ನು ಕೈಬಿಡಲಾರದು. ಅದನ್ನು ಬಿಟ್ಟು, ಶಾಸ್ತ್ರಜ್ಞರು ನಿಷೇಧಿಸಿರುವ ಮಾದಕಪದಾರ್ಥಗಳನ್ನು ತೆಗೆದುಕೊಳ್ಳುವದೂ ಅನ್ಯಾಹಾರವನ್ನಪೇಕ್ಷಿಸುವದೂ ಪನ್ನಿಯೇ ಮೊದಲಾದ ವಿಕಾರಗಳನ್ನು ಮಾಡಿಕೊಳ್ಳುವದೂ ನಮ್ಮ ದೇಹಕ್ಕೆ ಅಂಟದ ಪಥ್ಯವಾಗಿರುತ್ತೆ. ನಮ್ಮ ಶಾಸ್ತ್ರಜ್ಞರು ಹೇಳುವ ಪ್ರತಿದಿನಸ್ನಾನ, ಅಸಹ್ಯಕ್ಕಾಸ್ಪದವಾಗದ ಮಡಿ, ಭಕ್ತಿಯನ್ನುಂಟುಮಾಡುವ ಜಪತಪಗಳು, ಸುಖವನ್ನಪೇಕ್ಷಿಸುವ ದೇವತಾರ್ಚನೆ, ಪರೋಪಕಾರಾರ್ಥದಾನ, ಜ್ಞಾನಾರ್ಥದ ನೈವೇದ್ಯ ಭೋಜನ, ಆರೋಗ್ಯಾರ್ಥದ ವ್ರತ, ದೇಹಪರಿಶೀಲನಾರ್ಥದ ಯಾತ್ರೆ, ಸಂತೋಷಾರ್ಥದ ಹಬ್ಬ ಮೊದಲಾದವುಗಳನ್ನು ಸಾಧ್ಯವಾದಷ್ಟು ಬಿಡದೇ ಆಚರಿಸಬೇಕು. ಇವುಗಳಲ್ಲಿ ಕೆಲವು ಈಗಿನ ಕಾಲದ ಸೈನ್ಸಿಗೆ ಕೂಡ ಸಂಬಂಧಪಟ್ಟಿರುತ್ತವೆ. ದೇವಸ್ಥಾನದಲ್ಲಿ ನಡೆಯುವ ಪುರಾಣಾದಿಗಳನ್ನು ಬಿಟ್ಟು ರೀಡಿಂಗ್ ರೂಂ ಸೊಸೈಟಿ ಮೊದಲಾದುವುಗಳನ್ನು ಮಾಡಿಕೊಳ್ಳುವುದು ಯೋಗ್ಯವಲ್ಲ. ಕಸಬಿಲ್ಲದ ಕೆಲವು ಜನರು ಪರಭಾಷೆಯನ್ನು ಕಲಿತು ಅದರಂತೆ ನಡೆನುಡಿಗಳನ್ನು ಹಿಡಿಯಲಪೇಕ್ಷಿಸುವರು. ಇದು ಸರಿಯಲ್ಲ. ಕಸಬುದಾರರು ಕೂಡ ಸರ್ಕಾರಿ ಕೆಲಸದ ಅಪೇಕ್ಷೆಯಿಂದ ವಿದ್ಯೆಕಲಿತು ತಮ್ಮ ತಮ್ಮ ಕಸಬುಗಳನ್ನು ಬಿಡುವವರಾಗಿರುತ್ತಾರೆ. ಹೊಸದು ಒಬ್ಬರ ಹೊಸತಿಳುವಳಿಕೆ ಬರುತ್ತೆ. ಅದು ಹ್ಯಾಗೆಂದರೆ, ಇಂಗ್ಲೀಷ್ ಶಾಸ್ತ್ರಜ್ಞರು ಭೂಮಿ ಗುಂಡಾಗಿದೆ ಎಂದು ಹೇಳುತ್ತಾರೆ. ನಾನು ಇದು ಕೇವಲ ಚಪ್ಪಟೆಯಾಗಿದೆ ಎಂದು ಮಾಡಿಕೊಡುತ್ತೇನೆ. ಈಗ ಕಾಲಾತೀತವಾದ್ದರಿಂದ ಇಲ್ಲಿಗೆ ಸಾಕುಮಾಡುತ್ತೇನೆ ಎಂಬದಾಗಿ ಹೇಳಿದರು. ಪಾಶ್ಚಾತ್ಯರ್ಯವುಳ್ಳವರು ಏನಾದರೂ ದೃಢಪಡಿಸಬಹುದಲ್ಲವೇ. ತರುವಾಯ ಸಭಿಕರೆಲ್ಲರೂ ಎದ್ದು ಸಂತೋಷಸೂಚನೆಯನ್ನುಂಟುಮಾಡಿ ಮನೆಗೆ ಹೋದರು.

ಭಾವಿಯಲ್ಲಿ ಬಿದ್ದು ಸತ್ತದ್ದು.

ತಾ. ೧೧ ನೇ ಸೋಮವಾರ ಶಿವರಾತ್ರಿ ಹಬ್ಬ ಸರಿಯಷ್ಟೆ. ಆರೇರ ನರಸಿಂಗಪ್ಪನೆಂಬುವನು ಆ ದಿವಸ ರಾತ್ರಿ ಜಾಗರಣೆ ಮಾಡುವದಕ್ಕೆ ಇನ್ನೂ ಕೆಲವರೊಂದಿಗೆ ಸೇರಿ ಭಾವಾಜಿ ಮಠಕ್ಕೆ ಹೋದನು. ಈತನಿಗೆ ಸುಮಾರು ೫೦ ವರುಷ ವಯಸ್ಸಾಗಬಹುದು. ಆ ಭಾವಾಜಿ ಮಠದಲ್ಲಿ ಎಲ್ಲರೂ ಸೇರಿ ಆ ರಾತ್ರಿ ಭಂಗಿಬೆಲ್ಲ (ಭಂಗಿಸೊಪ್ಪಿನಿಂದ ಮಾಡಿದ ಪಾಕ) ವನ್ನು ಮಾಡಿ ತೆಗೆದುಕೊಂಡಿದ್ದರು. ರಾತ್ರಿ ಬಹಳ ಹೊತ್ತಿನ ವರಿವಿಗೂ ಎಚ್ಚರಿದ್ದು ಕೆಲವರು ಮನೆಗೆ ಹೋದರು. ಈತನೂ ಕೆಲವರೂ ಅಲ್ಲೇ ಮಲಗಿದ್ದರು. ಸದರಿ ನರಸಿಂಗಪ್ಪನು ರಾತ್ರಿ ಯಾವಾಗಲೋ ಯಾತಕ್ಕೋಸ್ಕರವೋ ಆ ಮಠದ ಸಮೀಪದಲ್ಲಿರುವ ಭಾವಾಜಿ ಕೊಂಡಕ್ಕೆ ಹೋಗಿ ಆ ಕೊಂಡದಲ್ಲಿ ಬಿದ್ದನು. ಮಾರನೇ ದಿವಸ ಶಿವರಾತ್ರಿ ಪಾರಣೆ ಸರಿಯಷ್ಟೆ. ಆ ಪಾರಣೆ ಊಟಕ್ಕೋಸ್ಕರ ಆತನ ಮನೆಯವರೂ ಇನ್ನೂ ಕೆಲವರೂ ಹುಡುಕಿ ಕೊನೆಯಲ್ಲಿ ಈ ಕೊಂಡದಲ್ಲಿ ಬಿದ್ದದ್ದನ್ನು ಕಂಡು ಬಹಳ ದುಃಖಪಟ್ಟರು. ಹೆಣವು ಮುಖ ಕೆಳಗಾಗಿ ಬಿದ್ದು ತೇಲುತ್ತಲಿತ್ತು. ತರುವಾಯ ಪೋಲೀಸ್ ಆಫೀಸರೇ ಮೊದಲಾದವರು ಬಂದು ನೋಡಿ ಮಹಜರ್ ಮೊದಲಾದ್ದನ್ನು ಮಾಡಿಕೊಂಡು ಶವ ಸಂಸ್ಕಾರಮಾಡಿದರು. ಅಪರೆ ಇಂಥ ಶಿವರಾತ್ರಿ ಹಬ್ಬದ ದಿವಸ ಈತನು ಶಿವಾಧೀನನಾದದ್ದು ಆತನ ಮನೆಯವರಿಗೂ ಮತ್ತು ನಮಗೂ ವ್ಯಸನವನ್ನುಂಟುಮಾಡಿತು.

ಅಫ್ಘಾನಿಸ್ಥಾನದ ಅಮೀರರಿಗೆ ಕಪಟವೆಂದರೆ ಆಗದು.

ಅಮೀರರವರು ಈ ದೇಶಕ್ಕೆ ಸಂದರ್ಶನಾರ್ಥವಾಗಿ ಬರಲು ಅವರಿಗೆ ಈ ದೇಶಸ್ಥರು ಎಲ್ಲಿನೋಡಿದರೂ ವಂದನಾ ಪತ್ರಿಕೆಗಳನ್ನೊಪ್ಪಿಸುವದಕ್ಕೆ ಉದ್ಯೋಗಿಸಿದರು. ಅಂಥ ವಂದನಾ ಪತ್ರಿಕೆಗಳ ನಕಲುಗಳಲ್ಲಿ ಕೆಲವನ್ನು ಅಮೀರರವರು ತಮ್ಮ ಬಳಿಗೆ ತರಿಸಿಕೊಂಡು ಓದಿನೋಡಿ— ಇದೆಂಥ ಆಶ್ಚರ್ಯ! ಇವರು ನನ್ನನ್ನು ಎಂದೂ ಅರಿಯದವರು ಆದರೂ ನನ್ನ ಗುಣಕಥನವನ್ನು ಇಷ್ಟರಮಟ್ಟಿಗೆ ಮಾಡುವದಕ್ಕೆ ಹ್ಯಾಗಾದೀತು? ಇದಲ್ಲದೆ ನನ್ನನ್ನಿವರು ಇಷ್ಟು ಸ್ತೋತ್ರಮಾಡುವದಕ್ಕೆ ನನ್ನಿಂದ ಯಾವ ಉಪಕಾರವನ್ನಾದರೂ ಹೊಂದಿದವರಲ್ಲ! ಹೀಗಿರುವದರಿಂದ ಇವರು ನನ್ನನ್ನು ಸ್ತೋತ್ರಮಾಡುವದರಲ್ಲಿ ಏನೋ ಸ್ವಾರ್ಥಾಪೇಕ್ಷೆಯಿರುವಂತೆ ಕಾಣುತ್ತದೆ! ಇಂಥ ಉದ್ದೇಶದಿಂದ ಎಷ್ಟು ವಂದನಾ ಪತ್ರಿಕೆಗಳನ್ನು ಒಪ್ಪಿಸಿದರೂ ನಾನು ಎಷ್ಟುಮಾತ್ರವೂ ಅಂಗೀಕರಿಸಲಾರೆನು ಎಂದು ತಿರಸ್ಕರಿಸಿದರಂತೆ ಇಷ್ಟೇ ಅಲ್ಲ ಇವರು ಒಂದಾನೊಂದು ಉಪಚಾರ ಸಮಾಜಕ್ಕೆ ಹೋಗಬೇಕೆಂದಿದ್ದುದನ್ನು ನಿಲ್ಲಿಸಿಬಿಟ್ಟರಷ್ಟೆ. ಇದಕ್ಕೇನು ಕಾರಣವೆಂದರೆ—ಆ ದಿನ ಆ ಮಸೀದಿಗೆ ಎಂದಿಗಿಂತಲೂ ಹೆಚ್ಚಾಗಿ ಬಹುಮಂದಿ ಜಪಮಾಡುವದಕ್ಕೆ ಬರುವದಕ್ಕಿದ್ದಾರೆಂದು ತಿಳಿದು. ಇವರೆಲ್ಲರೂ ದೇವರ ಜಪವನ್ನು ಮಾಡುವದಕ್ಕೆ ಬರುವವರಲ್ಲ, ನನ್ನನ್ನು ನೋಡಬೇಕೆಂತಲೇ ಬರುತ್ತಾರೆ. ನನ್ನನ್ನು ನೋಡಬೇಕಾದರೆ ಬೀದಿಯಲ್ಲಿ ನಿಂತು ನೋಡಲಾಗದೇ? ದೇವರ ಧ್ಯಾನವನ್ನು ಮಾಡತಕ್ಕ ಸ್ಥಾನಕ್ಕೆ ಬಂದು ಅಲ್ಲಿ ದೇವರನ್ನು ಅವಮಾನಪಡಿಸಿದಂತಾಗುವದಿಲ್ಲವೇ? ಇಂಥಾ ಅಪಭಕ್ತಿಯ ಕೃತ್ಯಕ್ಕೆ ನಾನು ಅವಕಾಶವನ್ನು ಕೊಡಲಾರೆನು ಅಂದರಂತೆ

ರಷ್ಯಾ ಚಕ್ರಾಧಿಪತ್ಯದಲ್ಲಿ ನಡೆಯುವ ಕ್ರೂರಕೃತ್ಯಗಳು.

ರಷ್ಯಾ ದೇಶದಲ್ಲಿ ರೀಗವೆಂಬ ಊರಿರುವದು ಆ ಊರಿನ ಸೆರೆಮನೆಯಲ್ಲಿ ಅಧಿಕಾರಿಗಳು ತಮ್ಮ ಕೈಗೆ ಸಿಕ್ಕಿದ ನಿರ್ಭಾಗ್ಯಶಾಲಿಗಳನ್ನು ಹಿಂಸಿಸುವ ವಿಧಾನವನ್ನು ಕುರಿತು ಬೆರ್ಲಿನ್ ನಗರದ ಒಂದಾನೊಂದು ಪತ್ರಿಕೆಯಲ್ಲಿ ತಿಳಿಯಪಡಿಸುತ್ತದೆ ಹಿಂಸೆಗೊಳಪಡತಕ್ಕವರು ರಾಜದ್ರೋಹಿಗಳನ್ನಿಸಿಕೊಳ್ಳುವವರೇ ಅಧಿಕಾರಿಗಳಿಗೆ ಯಾರ ಮೇಲಾದರೂ ಅನುಮಾನವು ಹುಟ್ಟಿದರೆ ಅವರನ್ನು ಕೂಡಲೆ ಹಿಡಿದುಕೊಂಡು ಹೋಗಿ ಆ ಸೆರೆಮನೆಯಲ್ಲಿ ಹಾಕುವರು. ಬಳಿಕ ಹಿಂಸೆಗಬೇಕಾದ ಸಲಕರಣೆಗಳೆಲ್ಲಾ ಇಟ್ಟಿರುವ ಒಂದು ಗುಪ್ತ ಮಂದಿರಕ್ಕೆ ತೆಗೆದುಕೊಂಡು ಹೋಗುವರು. ಅಲ್ಲಿ ಅವನ ಬಟ್ಟೆಬರೆಗಳನ್ನೆಲ್ಲಾ ತೆಗೆದುಹಾಕಿ - ನಿನ್ನ ಜೊತೆಗೆ ಸೇರಿಕೊಂಡಿರುವವರು ಯಾರು? ಎಂದು ಪ್ರಶ್ನಿಸುವರು ಅದಕ್ಕವನು ತಿಳಿಯಪಡಿಸದೆ ಹೋದರೆ ಅಲ್ಲೊಂದು ಕಬ್ಬಿಣದ ಹಾಸಿಗೆಯ ಮೇಲೆ ಕಟ್ಟಿ ಮಲಗಿಸಿ ರಬ್ಬರಿನಿಂದ ಮಾಡಿದ ದೊಣ್ಣೆಯಿಂದ ಹೊಡೆಯುವರು ಕೆಲವು ಸಂದರ್ಭಗಳಲ್ಲಿ ೪೦೦-೫೦೦ ಪೆಟ್ಟುಗಳನ್ನು ಹೊಡೆಯುವದುಂಟಂತೆ ಒಂದೊಂದು ವೇಳೆ ಗಾಯದಲ್ಲಿ ಉಪ್ಪು ಅರೆದು ಹಾಕಿ ಆ ಮನುಷ್ಯನಿಗೆ ಸ್ಮೃತಿ ತಪ್ಪುವ ಪರಿಯಂತವೂ ಹೊಡೆಯುವುದುಂಟಂತೆ ಇಷ್ಟು ದಂಡನೆಗೂ ಅವನು ಜಗ್ಗದೆ ಇದ್ದರೆ ದೊಡ್ಡ ದೊಡ್ಡ ಸೂಜಿಗಳಿಂದ ಚುಚ್ಚಿ ಉಗುರುಗಳನ್ನು ಕಿತ್ತುಹಾಕುವರು, ಕೂದಲನ್ನು ಕೀಳುವರು, ಕಾದಿರುವ ಸಲಿಕೆಗಳಿಂದ ಹಸ್ತಗಳನ್ನು ಸುಡುವರು ಇದಕ್ಕೂ ಹೇಳದೆ ಇದ್ದ ಪಕ್ಷದಲ್ಲಿ ಕಾಯ್ದ ಚಿಮಟಿಯಿಂದ ಕಿವಿಯಿಂದ ಮಾಂಸವನ್ನು ಕಿತ್ತು ತೆಗೆಯುವರು, ಹಲ್ಲುಗಳನ್ನು ಉದುರಿಸುವರು. ಒಂದಾನೊಂದು ಸಂದರ್ಭದಲ್ಲಿ ೧೬ ವರ್ಷದವನಾದ ಒಬ್ಬ ಯೌವನಸ್ಥನು ಹಿಂಸಕರಿಗೆ ರಹಸ್ಯವನ್ನು ತಿಳಿಸದೆ ಹೋದ ಕಾರಣ ಸಕಲವಿಧವಾದ ಹಿಂಸೆಗಳನ್ನೂ ಮಾಡಿ ಸುಮಾರು ಮೂರುವಾರಗಳ ತರುವಾಯ ಗುಂಡಿನಿಂದ ಹೊಡೆದು ಕೊಂದರಂತೆ ಇದನ್ನೆಲ್ಲಾ ಪ್ರತ್ಯಕ್ಷವಾಗಿ ನೋಡಿದವನೊಬ್ಬ ಮನುಷ್ಯನೇ ಮೇಲೆ ಕಂಡ ಪತ್ರಿಕೆಗೆ ಬರೆದು ತಿಳಿಸಿದ್ದಾನೆ

ಬಡವರಾದ ಉಪಾಧ್ಯಾಯರು.

ಬೊಂಬಾಯಿಯಲ್ಲಿ ಮ್ಯುನಿಸಿಪಲ್ ಆಡಳಿತಕ್ಕೆ ಒಳಪಟ್ಟಿರುವ ಪ್ರೈಮರಿ ಸ್ಕೂಲುಗಳಲ್ಲಿ ಉಪಾಧ್ಯಾಯರುಗಳಿಗೆ ಸಲ್ಲುತ್ತಿರುವ ಅತ್ಯಲ್ಪವಾದ ಸಂಬಳಗಳ ವಿಷಯವಾಗಿ ಬೊಂಬಾಯಿ ಗಜೆಟ್ಟೆಂಬ ವಾರಪತ್ರಿಕೆಯಲ್ಲಿ ಬರೆದಿರುವಂಥಾದ್ದು ನಮ್ಮ ಸಂಸ್ಥಾನಿಕರ ಅವಗಾಹನೆಗೆ ಬರತಕ್ಕದಾಗಿದೆ ಬೊಂಬಾಯಿಯಲ್ಲಿ ಕೂಲಿಯಿಂದ ಜೀವಿಸತಕ್ಕವರು ದಿನವೊಂದಕ್ಕೆ ೬—೮ ಆಣೆಗಳಿಗೆ ಕಡಮೆಯಿಲ್ಲದೆ ಸಂಪಾದಿಸುವವರಾಗಿದ್ದಾರೆ. ಹೀಗಿರುವಲ್ಲಿ ಆ ನಗರದ ಲಕ್ಷ್ಮೀಪುತ್ರರಾದ ಐಶ್ವರ್ಯವಂತರ ಮಕ್ಕಳಿಗೆ ವಿದ್ಯೆಯನ್ನು ಹೇಳಿಕೊಟ್ಟು ಐಶ್ವರ್ಯ ಸಂಪಾದನೆಗೆ ಸಹಾಯವನ್ನು ಮಾಡತಕ್ಕ ಪ್ರೈಮರಿ ಸ್ಕೂಲುಗಳ ಬಡ ಮಾಸ್ಟರುಗಳಿಗೆ ದಿನಕ್ಕೆ ೪ ಆಣೆಯಂತೆ ಸಲ್ಲುವ ಸಂಬಳವನ್ನು ಕಲ್ಪನೆಮಾಡಿಕೊಟ್ಟಿರುವದು ಬಹು ಅನ್ಯಾಯವಾಗಿಯೂ ಅವಮಾನಕರವಾಗಿಯೂ ಇದೆ. ಆ ನಗರದ ಮ್ಯುನಿಸಿಪಲ್ ಮುಕ್ತಸ್ವಿಗಳಿಗೆ ತಿಂಗಳ ಸಂಬಳವನ್ನು ೩೫ ರೂ ಗೆ ಕಡಮೆಯಿಲ್ಲದೆ ಹೆಚ್ಚಿಸುವುದಾಗಿ ನಿರ್ಣಯಿಸಿರಲು ಈ ಬಡಮಾಸ್ಟರುಗಳ ಹೀನಸ್ಥಿತಿಯನ್ನು ಆ ಮ್ಯುನಿಸಿಪಾಲಿಟಿಯವರು ಲಕ್ಷ್ಯಕ್ಕೆ ತಂದುಕೊಳ್ಳದೆ ಇರುವುದು ಶೋಚನೀಯವಾಗಿದೆ. ಕೇವಲ ಪಶುಗಳಂಥ ಕೂಲಿಯಾಳುಗಳು ತಿಂಗಳಿಗೆ ೨೦ ರೂ. ಸಂಪಾದಿಸುವುದನ್ನೂ ವಿದ್ಯಾವಂತರಾಗಿಯೂ ವಿದ್ಯಾದಾನಮಾಡುವವರಾಗಿಯೂ ಇರುವ ಉಪಾಧ್ಯಾಯರುಗಳು ತಿಂಗಳಿಗೆ ೧೦—೧೨ ರೂಪಾಯಿಗಳನ್ನೂ ಸಂಪಾದಿಸಲವಕಾಶವಿಲ್ಲದಿರುವುದನ್ನೂ ನೋಡಿದರೆ ಕೂಲಿಯಾಳುಗಳು ದೊರಕುವುದು ಕಠಿನವೆಂಯೆಂದೂ ಪಾಠಹೇಳಿಕೊಡುವ ಉಪಾಧ್ಯಾಯರುಗಳು ದೊರಕುವುದು ಸುಲಭವೆಂದೂ ತಿಳಿಯಬೇಕಾಯಿತು ಉಪಾಧ್ಯಾಯರ ಕೆಲಸಕ್ಕೆ ನೇಮಿಸುವವರಿಗೆ ಸುಲಭವಾಗಿದ್ದರೆ ತಾನೇ ಏನು? ಅವರು ಕಡಮೆ ಸಂಬಳಕ್ಕೆ ದೊರಕುತ್ತಾರೆಂದ ಮಾತ್ರಕ್ಕೆ ಕಬ್ಬಿನಿಂದ ರಸವನ್ನು ಹಿಂಡುವ ಪ್ರಕಾರ ಈ ಬಡವರ ಜೀವರಸವನ್ನು ಹಿಂಡಿ ತಾವು ಆದಾಯವನ್ನು ಪಡೆಯುವುದು ಮ್ಯುನಿಸಿಪಾಲಿಟಿಯವರಿಗಾಗಲಿ ಬೇರೆ ಯಾವ ಮಂಡಲಿಯವರಿಗಾಗಲಿ ಉಚಿತವಲ್ಲ ಎಂದು ಮೇಲೆ ಸೂಚಿಸಿರುವ ಪತ್ರಿಕೆಯಲ್ಲಿ ಬರೆದಿದೆ.

ಗತಿಸಿದ ಮೆ॥ ಬಿ. ಮಲ್ಲಪ್ಪನವರು.

ಪ್ರಸಿದ್ಧ ಕನ್ನಡ ಪಂಡಿತರು.

ಮೈಸೂರು ಸಂಸ್ಥಾನದ ಕನ್ನಡ ವಿದ್ಯಾವಂತರಲ್ಲೊಬ್ಬರಾದ ಬಿ. ಮಲ್ಲಪ್ಪನವರು ಇದೇ ತಿಂಗಳು ೫ ನೆ ತಾರೀಖಿನಲ್ಲಿ ವ್ಯಾಧಿಪೀಡಿತರಾಗಿ ೧೪ನೇ ತಾರೀಖು ರಾತ್ರಿ ೧೧ ಘಂಟೆಯಲ್ಲಿ ಸ್ವರ್ಗಸ್ಥರಾದ ವಿಚಾರವು ತುಂಬ ಶೋಚನೀಯವಾಗಿರುತ್ತೆ ಇವರು ೧೮೩೫ನೆ ಮನ್ಮಥ ಸಂವತ್ಸರದ ಭಾದ್ರಪದ ಬಹುಳ ೧೨ ದಿನ ಗುಂಡ್ಲುಪೇಟೆ ತಾಲ್ಲೂಕ್ ಬೇಗೂರು ಗ್ರಾಮದಲ್ಲಿ ಜನಿಸಿ, ಮೈಸೂರಿನಲ್ಲಿಯೇ ವಿದ್ಯಾಭ್ಯಾಸಂಗೈದು, ಘನವನ್ನು ಹೊಂದಿದ ಲೇಟ್ ಮುಮ್ಮಡಿ ಕೃಷ್ಣರಾಜ ಒಡೆಯರವರ ಅಪ್ಪಣೆಯನ್ನನುಸರಿಸಿ ೧೮೬೬ ನೆ ಇಸವಿ ಜನವರಿ ೧ ರಲ್ಲಿ ಮೈಸೂರು ಸಿಟಿ ಗೌ॥ ಕನ್ನಡಾ ಸ್ಕೂಲ್ ಹೆಡ್ ಮಾಸ್ಟರಾಗಿ ನೇಮಿಸಲ್ಪಟ್ಟು, ತದಾರಭ್ಯ ೩೪ ವರ್ಷ ದಿಟ್ಟೋ ಸ್ಕೂಲಿನಲ್ಲಿಯೇ ಕೆಲಸನಡಿಸಿ ೧೯೦೦ನೆ ಡಿಸೆಂಬರ್ ೧೫ರಲ್ಲು ಪೆನ್ಷನ್ ಪಡೆದು ರಿಟೈರ್ ಆದರು ಇವರ ವಿಯೋಗ ದುಃಖವನ್ನು ಅನುಭವಿಸುವುದಕ್ಕಾಗಿ ಪ್ರಾಪ್ತವಯಸ್ಕರಾದ ಇಬ್ಬರು ಗಂಡುಮಕ್ಕಳಿರುತ್ತಾರೆ ಮೇಲೆ ಕಂಡ ಬಿ. ಮಲ್ಲಪ್ಪನವರು ಸ್ಕೂಲ್ ವಿದ್ಯಾರ್ಥಿಗಳ ಉಪಯೋಗಾರ್ಥವಾಗಿ ಸ್ವಕಲ್ಪನೆಯಿಂದ ಶಬ್ದದರ್ಪಣವೆಂಬ ಕನ್ನಡ ವ್ಯಾಕರಣವನ್ನು ರಚಿಸಿ ಪ್ರಚಾರ ಪಡಿಸಿರುತ್ತಾರೆ ರಾಜಶೇಖರವಿಲಾಸ, ಕನ್ನಡಸಾವಿಗನ್ನಡಿ, ಮೊದಲಾದ ಪುರಾತನ ಹಳೆಗನ್ನಡ ಗ್ರಂಥಗಳ ಪರಿಶೋಧನೆಗೆ ಸಹಕಾರಿಗಳಾಗಿದ್ದುದಲ್ಲದೆ, ಕನ್ನಡ ಕಾವ್ಯಾವಲೋಕನವೆಂಬ ಅಲಂಕಾರಶಾಸ್ತ್ರವನ್ನೂ ಕಾದಂಬರಿಯೆಂಬ ಕನ್ನಡ ಕಾವ್ಯವನ್ನೂ ತಾವೇ ಪರಿಶೋಧಿಸಿ ಪ್ರಿಂಟುಮಾಡಿಸಿರುತ್ತಾರೆ ಮತ್ತು ಮೈಸೂರು ಸ್ಕೂಲ್ ಟೆಕ್ಸ್ಟ್ ಬುಕ್ಸ್ ಕಮಿಟಿಗೂ, ದೇಶೀಯ ಪರೀಕ್ಷಾ ಕಮಿಟಿಗೂ, ಘನವನ್ನು ಹೊಂದಿದ ಮಹಾರಾಣಿಯವರ ಕಾಲೇಜ್, ಮರಿಮಲ್ಲಪ್ಪನವರ ಹೈಸ್ಕೂಲ್ ಕಮಿಟಿಗಳಿಗೂ ತಹಲ್‌ನವರಿಗೂ ಮೆಂಬರಾಗಿದ್ದುದಲ್ಲದೆ, ಸ್ವಮತದ ಇತರ ಕೆಲವು ವಿದ್ಯಾಶಾಲೆಗಳಿಗೂ ನಂಬಿಕಾರ್ಹರಾದ ಅಧ್ಯಕ್ಷರಾಗಿದ್ದರು ಮತ್ತು ಶ್ರೀ ಚಾಮರಾಜೇಂದ್ರ ಕರ್ಣಾಟಕ ನಾಟಕಸಭೆಯಲ್ಲೂ ಅಧ್ಯಕ್ಷರಾಗಿದ್ದುಕೊಂಡು ಇದ್ದರು ಕಾಳಿದಾಸ, ಭವಭೂತಿ, ಶ್ರೀಹರ್ಷ, ಬಿಂದ್ರಕ, ಷೇಕ್ಸ್‌ಪಿಯರ್ ಮೊದಲಾದ ಪೂರ್ವ ಕವಿಗಳು ಬರೆದಿರುವ ಸಂಸ್ಕೃತ ಮತ್ತು ಇಂಗ್ಲಿಷ್ ನಾಟಕಗಳನ್ನು ಕನ್ನಡಕ್ಕೆ ಭಾಷಾಂತರಮಾಡಿದ ಲೇಟ್ ಬಸವಪ್ಪಶಾಸ್ತ್ರಿಗಳೇ ಮೊದಲಾದ ಕನ್ನಡ ಕವಿಗಳಲ್ಲಿ ಇವರ ಸಹಾಯವನ್ನು ಪಡೆಯದವರು ಪಾಲ್ಯರು ಇಲ್ಲ ಹೀಗೆ ತಮ್ಮ ಜೀವಿತಕಾಲವನ್ನೆಲ್ಲಾ ಪರರ ಸಹಾಯದಲ್ಲಿಯೇ ವೆಚ್ಚಮಾಡಿರುವ ಈ ಮಹನೀಯರ ಮರಣಕ್ಕಾಗಿ ಮೈಸೂರು ಸೀಮೆಯೇ ವ್ಯಸನಪಡುವುದರಲ್ಲಿ ಸಂಶಯವಿಲ್ಲ

ಸುಬ್ಬರಾಯಪ್ಪ

ಮೈಸೂರು ಸರ್ಕಾರಿ ಹುಕುಮುಗಳು.

ಕೆರೆಗಳ ಏರಿಗಳ ಮೇಲೆ ಬೆಳೆಯುವ ಸತ್ತೆ, ಸೆದೆ ಕಾಡುಗಿಡಗಳು ಮುಂತಾದವುಗಳನ್ನು ಕಡಿದು ಹಾಕುವದಕ್ಕೆ ಏರ್ಪಾಡಿಬೇಕೆಂದು ೧೯೦೬ ನೆ ಇಸವಿಯಲ್ಲಿ ನಡೆದ ಪ್ರಜಾಪ್ರತಿನಿಧಿ ಸಭೆಯಲ್ಲಿ ಚರ್ಚೆ ನಡೆದಿರುವದರಿಂದ ಸದ್ರೀ ವಿಷಯದಲ್ಲಿ ಡೆಪ್ಯುಟಿ ಕಮಿಷನರುಗಳು ಗವರ್ನಮೆಂಟ್ ಪ್ರೊಸೀಡಿಂಗ್ಸ್ ಅನುಸರಿಸಿ ಪಾಯಿಷ್ ಆಗಿರುವ ಟ್ಯಾಂಕ್ ಮೇಂಟನೆನ್ಸ್ ರೂಲ್ಸ್ (ಕೆರೆಗಳ ದುರಸ್ತು ವಿಚಾರದ ನಿಬಂಧನೆಗಳ) ಅಪೆಂಡಿಕ್ಸ್ ಎ ೩—೪ ನೇ ಪ್ಯಾರಾಗಳಿಗೆ ನಿಗಾಕೊಟ್ಟು, ಅವುಗಳಲ್ಲಿ ಹೇಳಿರುವಂತೆ ಕಾಡುಗಿಡ ಮುಂತಾದವುಗಳನ್ನು ಕಡಿದು ಹಾಕುವ ಜವಾಬ್ದಾರಿಯು ರೈತರದೇ ಆದ್ದರಿಂದ ರೂಲ್ಸಿನಂತೆ ಜಾರಿಮಾಡಿ ಸದರಿ ಕೆಲಸವನ್ನು ರೈತರ ಕೈಯಿಂದಲೇ ಮಾಡಿಸಬೇಕು.

ಒಬ್ಬ ಮನುಷ್ಯನು ಜಮೀನಿನ ಕಂದಾಯವನ್ನು ೧೨ ವರುಷಗಳ ಪರ್ಯಂತರ ತಪ್ಪದೆ ತಾನೇ ಕೊಡುತ್ತಾ ಬಂದಿರುವ ಸಬಬು ಸದರಿ ಜಮೀನಿನ ಖಾತೆಯು ತನ್ನ ಹೆಸರಿಗೆ ಬದಲಾವಣೆ ಆಗಬೇಕೆಂದು ಪಾಯಿಷ್ ಮಾಡಿ ಮೇಲ್ಕಂಡ ಕಾಲದಲ್ಲಿ ತಾನು ಕಂದಾಯ ಕೊಟ್ಟದ್ದಕ್ಕಾಗಿ ಪಡೆದ ರಶೀದಿಗಳನ್ನು ಹಾಜರುಪಡಿಸಲಾರದ ಸಂದರ್ಭಗಳಲ್ಲಿ ಅವಶ್ಯಕವಾದ ತಾಲ್ಲೂಕು ಮತ್ತು ಗ್ರಾಮ ದಾಖಲೆಗಳನ್ನು ಹಾಜರುಪಡಿಸಲು ಸಂಬಂಧಪಟ್ಟ ನೌಕರರುಗಳಿಗೆ ಸರ್ಕಾರ ಮಾಡಿಸ ಬಹುದು ಅದರೆ ಇದಕ್ಕಾಗುವ ರುಸುಮನ್ನು ದರಖಾಸ್ತುದಾರನು ಕೊಡಬೇಕು ಈ ಬಗ್ಗೆ ಎಲ್ಲಾ ಅಮಲ್‌ದಾರರಿಗೂ ಡೆಪ್ಯುಟಿ ಕಮಿಷನರುಗಳು ಹುಕುಂ ಕೊಡತಕ್ಕದ್ದು.

ಸಾಗುವಳಿಗೋಸ್ಕರ ಖರಾಬು ಜಮೀನ್ ಬಗ್ಗೆ ಬರುವ ದರಖಾಸ್ತುಗಳನ್ನು ಸುಸ್ತಿ ಇಲ್ಲದೆ ವ್ಯವಸ್ಥೆಮಾಡುವದರಲ್ಲಿ ಡೆಪ್ಯುಟಿ ಕಮಿಷನರುಗಳು ನಿಗಾ ಇಡಬೇಕೆಂತಲೂ ಅಮಲ್ದಾರರ ರೆವಿನ್ಯೂ ನಡವಳಿಕೆ ತಖ್ತೆಗಳನ್ನೂ ತಾಲ್ಲೂಕ್ ದರಖಾಸ್ತು ರಿಜಿಸ್ಟರುಗಳನ್ನೂ ಪದೇ ಪದೇ ಚೆನ್ನಾಗಿ ತನಿಖೆಮಾಡಬೇಕೆಂತಲೂ ಮತ್ತು ಸುಸ್ತಿ ಕಂಡುಬಂದು ಆ ಬಗ್ಗೆ ಸಮರ್ಪಕವಾದ ಸಂಜಾಯಿಷಿ ಇಲ್ಲದಿದ್ದರೆ ಸಹಾಯ್ಯವ ಹುಕುಂ ಕೊಡಬೇಕೆಂತಲೂ ರೆವಿನ್ಯೂ ಕಮಿಷನರವರು ಸರ್ಕ್ಯುಲರ್ ಕೊಟ್ಟಿರುತ್ತಾರೆ.

ಅನೇಕ ಗ್ರಾಮಗಳಲ್ಲಿ ರಾತ್ರಿ ಉಸ್ತುವಾರಿಗೋಸ್ಕರ ಜನಗಳು ಸರದಿ ಪ್ರಕಾರ ಸೇರುವದಕ್ಕೋಸ್ಕರ ಗ್ರಾಮ ಪೋಲೀಸ್ ರೂಲ್ಸಿನಲ್ಲಿ ಹೇಳಿರುವ ಮೇರೆಗೆ ಚಾವಡಿಗಳು ಏರ್ಪಡಿಸಲ್ಪಟ್ಟಿಲ್ಲವೆಂಬುದು ಗವರ್ನಮೆಂಟಿನವರ ತಿಳುವಳಿಕೆಗೆ ಬಂದು ಅವರು ಗ್ರಾಮಚಾವಡಿಗಳನ್ನು ಗ್ರಾಮಸ್ಥರಿಂದ ಕಟ್ಟಿಸಬೇಕೆಂತಲೂ, ಇದಕ್ಕೆ ಬೇಕಾಗುವ ಸಾಮಾನುಗಳನ್ನು ಮುಫತ್ತಾಗಿ ಕೊಡಬೇಕೆಂತಲೂ ಹಾಗೆ ಚಾವಡಿಗಳು ತಯಾರಾಗುವ ವರಿವಿಗೆ ದೇವಸ್ಥಾನ, ಸ್ಕೂಲಿನ ಮನೆ ಅಥವಾ ಮನೆ ಬಿಗಲಿ ಮುಂತಾದ ಇದುವರಿವಿಗ ರಾತ್ರಿ ಉಸ್ತುವಾರಿಗೋಸ್ಕರ ಗೊತ್ತುಮಾಡಿಕೊಂಡಿದ್ದ ಯಾವ ಸ್ಥಳವನ್ನಾಗಲಿ ಅಥವಾ ಅಮಲ್ದಾರರು ಪಂಡೋರೆ ಮೂಲಕ ತಿಳಿಯಪಡಿಸುವ ಇನ್ಯಾವ ಸ್ಥಳವನ್ನಾಗಲಿ ಗ್ರಾಮಚಾವಡಿಯೆಂದೇ ಭಾವಿಸಬೇಕೆಂದು ಹುಕುಂಮಾಡಿ ಅದಕ್ಕನುಸಾರವಾಗಿ ಪೋಲೀಸ್ ರೂಲ್ಸನ್ನು ತಿದ್ದುಪಾಟು ಮಾಡಿರುತ್ತಾರೆ ಕ್ರಮವಾದ ಚಾವಡಿಯು ತಯಾರಾಗುವ ವರಿವಿಗೆ ತಾಲ್ಲೂಕು ಅಮಲ್ದಾರರು ಚಾವಡಿ ಇಲ್ಲದ ಗ್ರಾಮಗಳಲ್ಲೆಲ್ಲಾ ಗಸ್ತು ಜಾಗವನ್ನು ಚಾಪಯಲ್ಲಿ ಪಂಡೋರೆ ಮೂಲಕ ಸ್ಥಳವನ್ನು ಗ್ರಾಮಸ್ಥರಿಗೆ ತಿಳಿಯಪಡಿಸಬೇಕೆಂತಲೂ ಆದರೆ ಇಪ್ಪತ್ತಕ್ಕಿಂತ ಕಮ್ಮಿ ಮನೆಗಳುಳ್ಳ ಹಳ್ಳಿಗಳಲ್ಲಿಯೂ ಮಲೆನಾಡುಪ್ರದೇಶದಲ್ಲಿ ವಿರಳವಾಗಿ ಮನೆಗಳುಳ್ಳ ಹಳ್ಳಿಗಳಲ್ಲಿಯೂ ಈ ಮೇರೆಗೆ ನಡಿಸಬೇಕಾದದ್ದು ಅವಶ್ಯಕವಿಲ್ಲವೆಂತಲೂ ಸೂಚಿಸಲ್ಪಟ್ಟಿದೆ

ಕಾಲಕ್ರಮೇಣ ಪ್ರತಿವರುಷವು ಹಿಡಿವಳಿದಾರನು ಹೊಸ ನಮೂನೆ (ಗ್ರಾಮ ನಮೂನೆ ನಂ. ೧೧) ಯಲ್ಲಿ ಪಟ್ಟಿ ಯನ್ನಿಟ್ಟುಕೊಳ್ಳಬೇಕೆಂದು ರೆವಿನ್ಯೂ ಕಮಿಷನರವರು ಅಪೇಕ್ಷಿಸುತ್ತಾರೆ ಈ ಪಟ್ಟಿಗಳನ್ನು ಗವರ್ನಮೆಂಟ್ ಪ್ರೆಸ್ ಸೂಪರಿಂಟೆಂಡೆಂಟರವರು ಪ್ರತಿಯೊಬ್ಬ ಡೆಪ್ಯುಟಿ ಕಮಿಷನರವರಿಗೂ ಕಳುಹಿಸಿಕೊಡುತ್ತಿರುತ್ತಾರೆ ಈ ಉದ್ದೇಶವ ನೆರವೇರುವದಕ್ಕೆ ಸಂಚಿಕೆಯು ನಾಲ್ಕುವರುಷಗಳ ಕಾಲ ನಡಿಯುವುದು ಪ್ರತಿ ವರ್ಷವೂ ಡೆಪ್ಯುಟಿ ಕಮಿಷನರವರು ಕಳುಹಿಸಿದ ಪಟ್ಟಿಗಳು ಆ ಡಿಸ್ಟ್ರಿಕ್ಟಿನಲ್ಲಿರತಕ್ಕ ಹಿಡುವಳಿ ಜಮೀನುಗಳ ಕೇಕಡಾ ೨೫ರಷ್ಟು ಆಗುತ್ತದೆ ಒಟ್ಟು ಪಟ್ಟಿಗಳಲ್ಲಿ ಪದರಲ್ಲಿ ಒಂದು ಭಾಗದಷ್ಟು ೮ ಪುಟಗಳುಳ್ಳ (ಕ್ರಯ ೬ ಕಾಸುಳ್ಳ) ಪುಸ್ತಕರೂಪವಾಗಿರುತ್ತವೆ ಉಳಿದ ೪ ಭಾಗದಷ್ಟು ನಾಲ್ಕು ಪುಟಗಳುಳ್ಳ (ಕ್ರಯ ೩ ಕಾಸುಳ್ಳ) ಬೇರೆ ಬೇರೆ ಹಾಳೆಗಳುಳ್ಳದ್ದಾಗಿರುತ್ತವೆ ಚಾಲ್ತಿ ಸಾಲಿನಲ್ಲಿಯೂ, ಮುಂದಿನ ಮೂರು ವರುಷಗಳಲ್ಲಿಯೂ ಡೆಪ್ಯುಟಿ ಕಮಿಷನರವರು ಪ್ರತಿಯೊಂದು ತಾಲ್ಲೂಕಿನಲ್ಲಿ ಇರುವ ಹಿಡುವಳಿ ಜಮೀನುಗಳ ಕೇಕಡಾ ೨೫ ರಷ್ಟನ್ನು ಅಮಲ್‌ದಾರರಿಗೆ ಹಂಚುತ್ತಾರೆ ಅವರು ಅನೇಕ ಹ್ರಾ ಪ್ರತಿ ಪ್ರ್ಯಾಸನ್‌ಭಾಗದ ಸರ್ಕಲಿನಲ್ಲಿರತಕ್ಕ ಹಿಡುವಳಿಜಮೀನುಗಳ ಕೇಕಡಾ ೨೫ ರಷ್ಟನ್ನು ಪಾರ್ಟ ಭಾಗರಿಗೆ ಹಂಚುತ್ತಾರೆ ಪೈಕಿ ಪಟ್ಟಿಗಳನ್ನು ಅಸಲ್ ಖಾತೆದಾರರಿಗೆ ಕೊಡುವದಕ್ಕೆ ಶಾನುಭೋಗನು ಜವಾಬ್ದಾರನಾಗಿರುತ್ತಾನೆ. ಶಾನುಭೋಗನ ವಶಕ್ಕೆ ಸಾಗುವಳಿಗೋಸ್ಕರ ಕೊಟ್ಟ ಪಟ್ಟಿಗಳ ಖರೀದಿಯನ್ನು ಅವನ ಆ ವರ್ಷದ ಫೀಸುಗಳಿಂದ ವಜಾ ಮಾಡಿಕೊಳ್ಳಬೇಕು

ಕಳೆದ ಕೆಲವು ವರ್ಷಗಳಿಂದಲೂ ಕಾಡುಗಳನ್ನು ಸಾಗುವಳಿಗೆ ಕೊಡುವ ವಿಚಾರವು ಪ್ರಜಾಪ್ರತಿನಿಧಿ ಸಭೆಯಲ್ಲಿ ಚರ್ಚೆಯಾಗುತ್ತಿತ್ತು. ಪ್ರಕೃತ ಫಾರೆಸ್ಟ್ ಇಲಾಖೆಯವರು ಕಾಡು ಪ್ರದೇಶಗಳಲ್ಲಿ ಎಷ್ಟರಮಟ್ಟಿಗೆ ಕಾಡುಗಳನ್ನು ಉಳಿಸಿಕೊಳ್ಳುವುದು ಅತ್ಯವಶ್ಯಕವೆಂದು ತಪ್ಪಿಲ್ಲ ತನಿಖೆ ಮಾಡುತ್ತಲಿರುವದರಿಂದ ಸ್ಟೇಟ್ ಫಾರೆಸ್ಟುಗಳಾಗಿ ಉಳಿಸಿಕೊಳ್ಳಬೇಕಾದ ಪ್ರದೇಶಗಳನ್ನು ಚುನಾಯಿಸುವುದು ಮುಗಿಯುವ ವರಿವಿಗೆ ಕಾಡುಗಳನ್ನು ಸಾಗುವಳಿಗೆ ಕೊಡುವ ವಿಚಾರವು ಮತ್ತು ಹಾಗೆ ಕೊಡುವುದಾದರೆ ಯಾವ ಷರತ್ತುಗಳ ಮೇಲೆ ಕೊಡಬೇಕೆಂಬುದೂ, ಅಮಾನತ್‌ನಲ್ಲಿರುವದಾಗಿ ಗೌವರ್ನಮೆಂಟಿನವರು ಕೊಟ್ಟಿರುವ ಹುಕುಮಿನಲ್ಲಿ ಅಭಿಪ್ರಾಯ ಪಟ್ಟಿರುತ್ತಾರೆ

ಕೆಟ್ಟ ಕಾಲಸ್ಥಿತಿ, ಕೊಳೆರೋಗ, ಹಿರಿಬಾಗಾಯಿತು ಕಂದಾಯ, ಗಾಳಿತದ ತೆರಿಗೆಯಿಂದ ಉಂಟಾಗುವ ಕೆಡಕುಗಳು, ಇವೇ ಮೊದಲಾದ ಕಾರಣಗಳಿಂದ ಅಡಿಕೆ ತೋಟಗಾರರು ಕ್ರಮವಾಗಿ ಹೀನಸ್ಥಿತಿಗೆ ಬಂದಿರುವದಾಗಿ ತಿಳಿಯಬಂದಿದೆ ಈ ತೋಟಗಾರರಿಗೆ ಸ್ವಲ್ಪ ಸಹಾಯವಾಗಬೇಕೆಂಬ ವಿಷಯವನ್ನು ಎಲ್ಲರೂ ಒಪ್ಪಿಕೊಂಡಿದ್ದಾರೆ ಆದರೆ ಈ ಸಹಾಯವು ಯಾವ ರೀತಿಯಲ್ಲಿ ಎಷ್ಟು ಮಟ್ಟಿಗೆ ನಡೆಯಬೇಕೆಂಬ ವಿಷಯವನ್ನು ಎಲ್ಲರೂ ಒಪ್ಪಿಕೊಂಡಿದ್ದಾರೆ ಆದರೆ ಈ ಸಹಾಯವು ಯಾವ ರೀತಿಯಲ್ಲಿ ಎಷ್ಟು ಮಟ್ಟಿಗೆ ನಡೆಯಬೇಕೆಂಬ ವಿಷಯವು ಇನ್ನೂ ಚರ್ಚೆಯಲ್ಲಿದೆ ಗಾಳಿತದ ತೆರಿಗೆಯನ್ನು ಪೂರಾ ತೆಗೆದುಹಾಕುವುದು ಅವಶ್ಯವೆಂಬ ವಿಷಯದಲ್ಲಿ ಎಲ್ಲರ ಅಭಿಪ್ರಾಯವೂ ಕಾರ್ಯತಃ ಏಕರೀತಿಯೇ ಆಗಿದೆ ಆದರೂ ಈ ವಿಷಯವು ತೀರ್ಮಾನವಾಗುವದಕ್ಕೆ ಮುಖ್ಯವಾಗಿ ಸಂಸ್ಥಾನದ ಆಯವ್ಯಯ ಸಂಬಂಧವಾದ ಯೋಚನೆಗಳೇ ತಡೆಯಾಗಿರುವುವು. ಈ ಗಾಳಿತದ ವಿಷಯವಲ್ಲದೆ ಮಲ್ನಾಡು ಸೀಮೆಯ ರೈತರಿಗೆ ಬಾಗಾಯಿತು ಕಂದಾಯವನ್ನು ಕಡಿಮೆ ಮಾಡಿಕೊಡುವದು ಕೂಡ ಬಹುಶಃ ಅವಶ್ಯವಾಗಿರಬಹುದು ಈ ವಿಷಯವನ್ನು ಎಲ್ಲಾ ವಿಧದಲ್ಲಿಯೂ ಪೂರ್ತಿ ವಿಚಾರಮಾಡುವದಕ್ಕಾಗಿ ಮಲ್ನಾಡು ಪ್ರಾಂತ್ಯದ ವಿದ್ಯಮಾನವನ್ನೆಲ್ಲಾ ಚೆನ್ನಾಗಿ ತಿಳಿದುಕೊಳ್ಳುವದಕ್ಕಾಗಿ ಕರ್ನಲ್ ಗ್ರಾಂಟರವರನ್ನು ಮುಂದಿನ ಜನವರಿಯಿಂದ ನೇಮಕಮಾಡುವದಾಗಿ ನಿಶ್ಚಯಿಸಿದೆ ಇದರಿಂದ ಕರ್ನಲ್ ಗ್ರಾಂಟರವರು ಮುಂದಿನ ಜೂಲೈ ತಿಂಗಳಲ್ಲಿ ಮೈಸೂರು ನೌಕರಿಯಿಂದ ನಿವೃತ್ತರಾಗುವದಕ್ಕೆ ಮೊದಲೇ ಈ ಕಠಿಣವಾದ ವಿಷಯದ ತೀರ್ಮಾನದಲ್ಲಿ ಅವರ ಅನುಭವದ ಪ್ರಯೋಜನವನ್ನು ಸರ್ಕಾರದವರು ಪಡೆದುಕೊಳ್ಳುವಂತೆ ಆಗುವುದು.

ಇಂಡಿಯಾ ದೇಶದ ವೃತ್ತಾಂತಗಳು.

ರಂಗೂನಿನ ಸರಹದ್ದೀ ಪ್ರಾಂತ್ಯದಲ್ಲಿರುವ ಕೋತಿಗಳ ಪೈಕಿ ಕೆಲವಕ್ಕೆ ಪ್ಲೇಗು ರೋಗವು ತಗಲಿ ಸತ್ತುಹೋದ ಕಾರಣ ಜನರನ್ನು ಅಲ್ಲಿಗೆ ಬಿಡದಂತೆ ಕಟ್ಟು ಮಾಡಿದ್ದಾರೆ

❖❖❖❖

ದರ್ಭಂಗ ಡಿಸ್ಟ್ರಿಕ್ಟಿನಲ್ಲಿ ಕ್ಷಾಮಪೀಡಿತರಾಗಿರುವ ಜನಗಳಿಗೆ ಸಹಾಯಾರ್ಥವಾಗಿ ರಿಲೀಫ್ ಕಾಮಗಾರಿಯನ್ನು ನಡಿಸುವುದಕ್ಕೋಸ್ಕರ ೧೭ ಲಕ್ಷ ರೂಪಾಯಿಗಳು ಅವಶ್ಯವೆಂದು ಗೊತ್ತಾಗಿದೆ

❖❖❖❖

ಇಂಡಿಯಾ ಸ್ಟೇಟ್ ಸೆಕ್ರೆಟರಿಯವರು ಆಸ್ಟ್ರೇಲಿಯಾದ್ವೀಪದಿಂದ ೬೫೦೦೦ ಸವರನುಗಳನ್ನು ಕೊಂಡು ಈ ದೇಶಕ್ಕೆ ಚಲಾವಣೆಗಾಗಿ ಕಳುಹಿಸಿಕೊಡುವವರಾಗಿದ್ದಾರೆ ಆ ಹಣವು ಮುಂದಿನ ತಿಂಗಳ ೬ನೇ ತಾರೀಖಿನಲ್ಲಿ ಈ ದೇಶವನ್ನು ತಲಪುವದೆಂದು ಗೊತ್ತಾಗಿದೆ

ಸಿಲೋನಿನಲ್ಲಿ ಒಬ್ಬಾತನಿಗೆ ಒಂದು ಭೂಮಿಯಲ್ಲಿ ರೂ ೩,೫೦೦ ಬೆಲೆ ಬಾಳುವಂಥ ಒಂದು ರತ್ನವು ದೊರಕಿತು ಇದಕ್ಕೆ ಹಿಂದೆ ಆ ಪ್ರಾಂತ್ಯದಲ್ಲಿ ಬಹು ಬೆಲೆ ಬಾಳತಕ್ಕಂಥ ಕಲ್ಲುಗಳು ಸಿಕ್ಕಿದುದರಿಂದ ಸರ್ಕಾರದವರು ಆ ಪ್ರಾಂತ್ಯದ ಭೂಮಿಯನ್ನು ಹರಾಜು ಹಾಕಲಾಗಿ ನೂರಾರು ಮಂದಿ ದರಖಾಸ್ತು ದಾರರು ಬಂದರು ಸರ್ಕಾರಕ್ಕೆ ಸಾವಿರಾರು ರೂಪಾಯಿಗಳ ಫಾಯಿದೆಯಾಯಿತು

❖❖❖❖

ಸಿಲೋನಿನ ಸರ್ಕಾರೀ ಕಬ್ಬಿಣದ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದ ಮೂರು ಮಂದಿ ಕೂಲಿಯಾಳುಗಳು ಕಾರ್ಖಾನೆಗೆ ಸೇರಿದ ಕ್ವಾರೀ ಗಾಡಿಯಲ್ಲಿ ಕೆಲವು ಕಬ್ಬಿಣದ ಸಾಮಾನುಗಳನ್ನು ತುಂಬಿಸಿಕೊಂಡು ಹೋಗುತ್ತಿರಲು ಪೋಲೀಸಿನವರು ಅನುಮಾನಪಟ್ಟು ಅವರನ್ನು ಹಿಡಿದು ವಿಚಾರಿಸಲಾಗಿ ಅದು ಚೋರೀ ಮಾಲೆಂದು ತಿಳಿಯಿತು ಆಸಾಮಿಗಳನ್ನು ಹಿಡಿದು ಲಾಕಪ್ಪಿನಲ್ಲಿಟ್ಟರು

❖❖❖❖

ಅಫ್ಘಾನಿಸ್ಥಾನದ ಅಮೀರರವರು ಬಂಗಾಳಕ್ಕೆ ಬಂದಿರುವಾಗ್ಗೆ ಒಬ್ಬ ಬಡ ಬ್ರಾಹ್ಮಣನು ಅವರಲ್ಲಿ ಯಾಚನೆಗೆ ಹೋಗಿರಲು ಅವರು ಆತನ ವಿದ್ಯಾಮಾನವನ್ನೆಲ್ಲಾ ತಿಳಿದು ತಮ್ಮ ಸಂಸ್ಥಾನದ ರವಿನ್ಯು ಡಿಪಾರ್ಟ್ಮೆಂಟಿನಲ್ಲಿ ರೂ ೫೦ ತಲಬಿನ ಒಂದು ಉದ್ಯೋಗಕ್ಕೆ ನೇಮಿಸಿ ಇಲ್ಲಿಂದ ಕಾಬೂಲಿನ ವರೆಗೂ ದಾರೀ ಖರ್ಚನ್ನು ಸಹ ಕೊಡುವುದಾಗಿ ಹೇಳಿದರೆಂದು ಒಂದಾನೊಂದು ದೇಶೀಯ ಪತ್ರಿಕೆಯಲ್ಲಿ ಬರೆದಿದೆ

❖❖❖❖

ದಕ್ಷಿಣ ಇಂಡಿಯದ ತಿರುಚನಾಪಲ್ಲಿಯ ರೈಲ್ವೆ ಇಂಜನಿಯರ್ ಮಿ ವ್ಯಾಲೆಂಟೈನರವರು ಪ್ರಯಾಣ ಮಾಡುತ್ತಿರುವಾಗ ಆ ರೈಲ್ವೆಗೆ ಸೇರಿದ ಒಬ್ಬ ಕಂಟ್ರಾಕ್ಟರು ಅವರನ್ನು ಕಾಣುವುದಕ್ಕೆ ರೂ ೧,೦೦೦ ಬೆಲೆಯ ಒಂದು ನೋಟನ್ನು ಅವರ ಕೈಯಲ್ಲಿ ಕೊಟ್ಟನಂತೆ ಇವನು ಹೀಗೆ ಈ ರೀತಿಯಾಗಿ ಲಂಚ ಕೊಡುವುದಕ್ಕೆ ಬಂದನೆಂದು ಹೇಳಿ ಪೋಲೀಸಿನವರಿಗೆ ತಿಳಿಸಲು ಆ ಕಂಟ್ರಾಕ್ಟರನ್ನು ದಸ್ತಗಿರಿ ಮಾಡಿದರು.

❖❖❖❖

ಮದ್ರಾಸಿನಲ್ಲಿ ಮರಾಮ್ಮತ್ ಇಲಾಖೆಗೆ ಸಂಬಂಧಪಟ್ಟ ವರ್ಕ್ ಷಾಪುಗಳಲ್ಲಿ ಯಂತ್ರವೇ ಮೊದಲಾದ ಸಾಮಗ್ರಿಗಳೆಲ್ಲಾ ಛಿದ್ರವಾಗಿರುವುದರಿಂದ ಎಲ್ಲವನ್ನೂ ತೆಗೆದುಹಾಕಿ ಹೊಸ ಯಂತ್ರ ಸಾಮಗ್ರಿಗಳನ್ನು ಸ್ಥಾಪಿಸಬೇಕೆಂಬ ಉದ್ದೇಶದಿಂದ ಮದ್ರಾಸು ಸರ್ಕಾರದವರು ರೂ ೩೫,೦೦೦ ಸ್ಯಾಂಕ್ಷನ್ ಮಾಡಿದ್ದಾರೆ ೩೫ ಕುದುರೆ ಬಲದ ಬಲವುಳ್ಳ ಒಂದು ಇಂಜಿನನ್ನು ಕೊಳ್ಳುವುದಕ್ಕಾಗಿ ರೂ ೧೦,೦೦೦ ಕೊಡತಕ್ಕದ್ದೆಂದು ಗೊತ್ತುಮಾಡಿದ್ದಾರೆ

❖❖❖❖

ಯೂನಿವರ್ಸಿಟಿ ಪರೀಕ್ಷೆಗಳಿಗೆ ಹೋದವರು ತೇರ್ಗಡೆಯಾಗದೆ ಹೋದಲ್ಲಿ ತಾವು ಯಾವ ಯಾವ ಭಾಗಗಳಲ್ಲಿ ತೇರ್ಗಡೆಯಾಗಲಿಲ್ಲವೆಂಬುವನ್ನು ತಿಳಿಯುವುದಕ್ಕಾಗಿ ಯೂನಿವರ್ಸಿಟಿ ಅಧಿಕಾರಿಗಳಿಗೆ ಎರಡು ರೂಪಾಯಿ ಫೀಜನ್ನು ಕಟ್ಟ ಬೇಕೆಂಬುವಂತೆಯೂ ಯೂನಿವರ್ಸಿಟಿಯವರು ಇಂಥಿಂಥ ಭಾಗಗಳೆಂದು ಸವಿಾಧಿಸುವುದಲ್ಲದೆ ಇಂಥಿಂಥ ಭಾಗದಲ್ಲಿ ಇಷ್ಟಿಷ್ಟು ನಂಬರುಗಳು ಬಂದಿವೆಯೆಂದು ತಿಳಿಸಿದರೆ ಬಹಳ ಸಹಾಯವಾಗಿರುವದೆಂಬುದಾಗಿ ಅಲಹಾಬಾದ್ ಯೂನಿವರ್ಸಿಟಿಯವರಿಗೆ ಕೆಲವು ವಿದ್ಯಾರ್ಥಿಗಳು ಮನವಿಯನ್ನು ಬರೆದುಕೊಂಡಿದ್ದಾರೆ.

❖❖❖❖

ತುತ್ತುಕುಡಿ ಎಂಬಲ್ಲಿ ಕಾಲರಾ ರೋಗವು ತುಂಬಾ ಹೆಚ್ಚುತ್ತಲಿರುವುದು ಆ ಊರಿನಲ್ಲಿ ಹತಗಳಿಯುವ ರೋಗ ಯಾವ ಸ್ಥಿತಿಯಲ್ಲಿ ಇರುವುದೋ ತಿಳಿಯಬೇಕೆಂಬುದಕ್ಕೋಸ್ಕರ ಸರ್ಕಾರದವರು ಕೆಲವು ಅಧಿಕಾರಿಗಳನ್ನು ವಿಚಾರಣಾ ಸಮಿತಿಯನ್ನಾಗಿ ನೇಮಿಸಿ ಕಳುಹಿಸಿದರು ಅದಕ್ಕಿಂತಲೂ ಪ್ರಜೆಗಳು ಅಕಾಲಮರಣಕ್ಕೆ ಗುರಿಯಾಗುವಂತೆ ಮಾಡುವ ಊರಿನ ಅನಾರೋಗ್ಯಸ್ಥಿತಿಯನ್ನು ಅತ್ಯಂತವಾಗಿ ಪರೀಕ್ಷಿಸಿ ರಿಪೋರ್ಟು ಮಾಡುವಂತೆ ಸರ್ಕಾರದವರು ಯಾರನ್ನಾದರೂ ನೇಮಿಸಿ ಕಳುಹಿಸಿದ್ದರೆ ಉತ್ತಮವಾಗಿದೆಯೆಂದು ಅಲ್ಲಿನ ಒಬ್ಬ ಲೇಖಕನು ಬರೆಯುತ್ತಾನೆ.

❖❖❖❖

ಕಳೆದ ಸೂರ್ಯಗ್ರಹಣದ ದಿನ ಬಂಗಾಳ ದೇಶದಲ್ಲಿ ದಂಪತಿಗಳಿಬ್ಬರು ಗಂಗಾ ನದಿಗೆ ಒಂದು ಆಡುಮರಿಯನ್ನು ಅರ್ಪಿಸಬೇಕೆಂಬ ಅಭಿಪ್ರಾಯದಿಂದ ದೋಣಿಯಲ್ಲಿ ಕುಳಿತುಕೊಂಡು ನಡು ಹೊಳೆಗೆ ಹೋಗಿ ಅದನ್ನು ನದಿಗೆ ಸಮರ್ಪಿಸುವದಕ್ಕಿರಲು ದೋಣಿಯವನು ಆ ಸಂದರ್ಭದಲ್ಲಿ ತನಗೇ ಆ ಆಡು ಸಲ್ಲತಕ್ಕ ಪದ್ಧತಿಯುಂಟೆಂದು ವಾದ ಮಾಡುತ್ತಿರಲಾಗಿ ಆ ಗಂಡನು ಹೆಂಡತಿಗೆ ಅದನ್ನು ನದಿಯಲ್ಲಿ ಬಿಟ್ಟುಬಿಡೆಂದು ಸಂಜ್ಞೆ ಮಾಡಿದನು ಆ ಹೆಂಗಸು ಒಂದು ಕೈಯಲ್ಲಿ ಅದನ್ನೂ ಮತ್ತೊಂದು ಕೈಯಲ್ಲಿ ತನ್ನ ಮಗುವನ್ನೂ ಹಿಡಿದಿದ್ದವಳು ಅದನ್ನು ಬಿಡುವದಕ್ಕೆ ಬದಲಾಗಿ ಆತುರದಿಂದ ಮಗುವನ್ನೇ ನದಿಯಲ್ಲಿ ಹಾಕಿದಳು

❖❖❖❖

ಕಲ್ಕತ್ತಾ ನಗರದಲ್ಲಿ ಕಾಳಿಚರಣಬಾನರ್ಜಿ ಎಂಬೊಬ್ಬ ಪ್ರಸಿದ್ಧ ಕ್ರೈಸ್ತನು ಕಳೆದ ವಾರದಲ್ಲಿ ಸ್ವರ್ಗಸ್ಥನಾದನು ಈತನು ದೇಶೀಯ ಕ್ರೈಸ್ತನು, ಕಾಂಗ್ರೆಸ್ ಎಂಬ ರಾಷ್ಟ್ರೀಯ ಸಭೆಯಲ್ಲಿ ಅತ್ಯಂತ ಉತ್ಸಾಹಿಗಳಲ್ಲಿ ಒಬ್ಬನು, ಪ್ರಾರಂಭದಿಂದಲೂ ಆ ಸಭೆಯ ಕಾರ್ಯಗಳಲ್ಲಿ ಬಹಳ ಆಸಕ್ತಿಯಿಂದ ಸಹಾಯ ಮಾಡುತ್ತಿದ್ದವನು. ಸ್ವದೇಶಿಗಳ ಅಭಿವೃದ್ಧಿಯಲ್ಲಿ ಮಾತ್ರವಲ್ಲದೆ ಈ ಇಂಡಿಯಾ ದೇಶದ ಎಲ್ಲರ ಶ್ರೇಯೋಭಿವೃದ್ಧಿಯಲ್ಲಿ ಅತ್ಯಂತ ಕುತೂಹಲವುಳ್ಳವನು, ಈತನ ಮರಣದ ದೆಸೆಯಿಂದ ಈ ದೇಶಕ್ಕೆ ದೊಡ್ಡ ನಷ್ಟವಾಗಿದೆಯೆಂದು "ಬಂಗಾಳಿ" ಎಂಬ ಪತ್ರಿಕಾಕರ್ತರು ಹೇಳಿದ್ದಾರೆ

❖❖❖❖

ಬೆಂಗಾಳದಲ್ಲಿ ಆಭರಣಗಳನ್ನು ಮಾರುವ ಒಬ್ಬ ದೇಶೀಯ ವರ್ತಕನ ಅಂಗಡಿಗೆ ಸುಮಾರು ೧೦ ವರ್ಷಗಳ ವಯಸ್ಸಿನವನಾದ ಇಬ್ಬರು ಹುಡುಗರು ಹೋಗಿ ಚಿನ್ನ ಸೇದುತ್ತಿರಲು ಆತನು ಅವರನ್ನು ಸೇದಕೂಡದೆಂದು ತಡೆದನು ಅದಕ್ಕವರು ನೀನೊಬ್ಬ "ಪ್ಲಾಂಡರ್" ಎಂದು ಅಪಹಾಸ್ಯ ಮಾಡಿದರಂತೆ ಅದರ ಮೇಲೆ ವರ್ತಕನಿಗೂ ಅವರಿಗೂ ಮಾತುಗಳು ನಡೆದು ಆ ಹುಡುಗರಿಬ್ಬರೂ ಅವನನ್ನು ದೊಣ್ಣೆಯಿಂದ ಹೊಡೆದು ತೊಂದರೆ ಮಾಡಿದರು. ಅದಕ್ಕಾತನು ಮ್ಯಾಜಿಸ್ಟ್ರೇಟರಲ್ಲಿ ಫಿರ್ಯಾದು ಮಾಡಲು ಆತನು ಪ್ರತಿವಾದಿಗಳು ಚಿಕ್ಕ ಹುಡುಗರೆಂಬುದಾಗಿ ಹೇಳಿ ಫಿರ್ಯಾದನ್ನು ವಜಾಮಾಡಿದರು

❖❖❖❖

ರಂಗೂನಿನಲ್ಲಿ ೩೦ ವರ್ಷದ ಮುದುಕನಾದ ಚೀನರವನು ಅಂಗಡಿಯಿಟ್ಟುಕೊಂಡಿದ್ದನು. ಕಳೆದ ವಾರ ೯ ಮಂದಿ ಚೀನರು ಆ ಅಂಗಡಿಗೆ ಬಂದು ಆ ಮುದುಕನು ಸಾಮಾನುಗಳನ್ನು ತೋರಿಸುತ್ತಿರುವಾಗ್ಗೆ ಒಬ್ಬನು ಆಕಸ್ಮಿಕವಾಗಿ ಅವನ ಮೇಲೆ ಬಿದ್ದು ಗಟ್ಟಿಯಾಗಿ ಹಿಡಿದುಕೊಂಡನು ಮತ್ತೊಬ್ಬನು ಅವನ ಬಾಯಿಗೆ ಬಟ್ಟೆ ತುರುಕಿದನು ಇನ್ನೊಬ್ಬನು ಅವನ ಕಣ್ಣಿಗೆ ಮೆಣಸಿನ ಪುಡಿಯನ್ನು ಹಾಕಿದನು ತರುವಾಯ ಎಲ್ಲರೂ ಆ ಅಂಗಡಿಯಲ್ಲಿಟ್ಟಿದ್ದ ಪೆಟ್ಟಿಗೆಗಳನ್ನು ಒಡೆದು ಎಷ್ಟು ಹುಡುಕಿದರೂ ಕೆಲವು ರೂಪಾಯಿಗಳು ಮಾತ್ರ ಅವರಿಗೆ ಸಿಕ್ಕಿತು ಅಂಗಡಿಯ ಮುದುಕನಿಗೆ ಘೋರ ಗಾಯವಾಗಿ ಆಸ್ಪತ್ರೆಗೆ ಕೈಯಬಿಟ್ಟನು ಆವನ ಕುಮಾರರಲ್ಲಿಬ್ಬನು ಕೂಗಿಕೊಂಡದ್ದರಿಂದ ಘೋರ ಏಟು ತಿಂದರು ಅವನನ್ನು ಹಿಂದಟ್ಟಿ ಒಡಿಸಿಕೊಂಡು ಹೋದ ಮತ್ತೊಬ್ಬನಿಗೆ ಸಾಯುವ ಮೇಲೆ ಕತ್ತಿಯ ಏಟು ಬಿತ್ತು ಈ ದಗಾಯಿತಿಯನ್ನು ನಡಸಿದ ಕಳ್ಳರೊಳಗೆ ಐದು ಮಂದಿ ಸಿಕ್ಕಿರುತ್ತಾರೆ

❖❖❖❖

ಪಂಜಾಬಿನಲ್ಲಿ ನಾಲ್ಕೈದು ಮಂದಿ ಮುಸಲ್ಮಾನರು ಸೇರಿಕೊಂಡು ತಾವು ಅಂಬಾಲಾ ಪಟ್ಟಣದ ವರ್ತಕನೊಬ್ಬನ ಏಜೆಂಟರೆಂದು ಹೇಳಿ ನಂಬಿಕೆ ತೋರಿಸಿ—ಯಾರು ರೂ ೧! ರೂಪಾಯಿ ಕೊಟ್ಟು ಟಿಕೇಟು ಕೊಳ್ಳುವರೋ ಅಂಥವರಿಗೆ ಅದರ ಎರಡರಷ್ಟು ಬೆಲೆ ಬಾಳತಕ್ಕಂಥ ಸಾಮಾನುಗಳನ್ನು ಆ ವರ್ತಕನು ಕೊಡುವದಾಗಿ ವಾಗ್ದಾನ ಮಾಡುತ್ತಾನೆಂದು ಹೇಳಿ ಅನೇಕರಿಂದ ಹಣವನ್ನು ತಕ್ಕೊಂಡು ಅದೇ ಪ್ರಕಾರ ಅವರವರು ಅಪೇಕ್ಷಿಸಿದ ಸಾಮಾನುಗಳನ್ನು ಕಳುಹಿಸಿಕೊಟ್ಟರು ಹೀಗೆ ಎರಡು ಮೂರು ತಿಂಗಳಾದ ಬಳಿಕ ಅವರು ಅದೇ ಗ್ರಾಮಕ್ಕೆ ಪುನಃ ಹೋಗಿ ಮೊದಲಿನಂತೆಯೇ ಕೇಳಲಾಗಿ ಹಿಂದೆ ಲಾಭವನ್ನು ಪಡೆದಿದ್ದ ಆಶೆಗೆ ಈಗ ವತ್ತೂ ಅನೇಕರು ಹಣಗಳನ್ನು ಅವರ ವಶಕ್ಕೆ ಕೊಟ್ಟರು ಹಣಕ್ಕೆ ಪ್ರತಿಯಾಗಿ ಯಾವ ಸಾಮಾನೂ ಎಷ್ಟು ದಿನವಾದರೂ ಬರಲಿಲ್ಲ ಮೋಸಕ್ಕೆ ಸಿಕ್ಕಿದವರಲ್ಲೊಬ್ಬನು ಆ ಅಂಬಾಲಾ ವರ್ತಕನಿಗೆ ಈ ವಿವರವನ್ನು ತಿಳಿಸಲು ಅವನು ಇದರ ವಿಷಯ ತನಗೇನೂ ತಿಳಿಯದೆಂದು ಹೇಳಿಬಿಟ್ಟನು ಆ ವಂಚಕರಿಗೆ ಸುಮಾರು ೩,೦೦೦ ರೂಪಾಯಿಗಳ ವರೆಗೂ ದಕ್ಕಿತು

❖❖❖❖

ಮಿ॥ ಗೋಖಲೆಯವರು ಅಲಹಾಬಾದಿನಲ್ಲಿ ಉಪನ್ಯಾಸವನ್ನು ಮಾಡಿದಾಗ ಸರ್ಕಾರದ ಪರವಾಗಿಯೂ ಸ್ವದೇಶೀಯರ ಪರವಾಗಿಯೂ ಹೇಳಿದ ಬುದ್ಧಿವಾದವು ಎರಡು ಪಕ್ಷದವರಿಗೂ ಇಂಪಾಗಿರುವುದಾಗಿ ಕಾಣ್ಬರುವುದಿಲ್ಲ ರಾಜ್ಯಭಾರವನ್ನು ದೇಶೀಯರೇ ನೋಡಿಕೊಳ್ಳುವಂತೆ ಇಂಡಿಯಾ ಸಾರ್ವಭೌಮರು ಅವಕಾಶವನ್ನು ಕಲ್ಪಿಸಿ ಕೊಡಬೇಕು ಎಂದು ಹೋರಾಡುವ ಈ ದೇಶೀಯರ ಪರವಾಗಿ ಮಿ॥ ಗೋಖಲೆಯವರು ಹೇಳುವದೇನೆಂದರೆ ಇಂಗ್ಲಿಷ್ ಸರಕಾರದವರು ತಮ್ಮ ಸಾರ್ವಭೌಮತ್ವಕ್ಕೆ ಒಳಪಟ್ಟರುವ ಆಫ್ರಿಕಾ, ಕ್ಯಾನಡಾ ಮೊದಲಾದ ಅನ್ಯದೇಶೀಯ ವಸತಿಗಳಿಗೆ ಅಪ್ಪಣೆ ಕೊಟ್ಟಿರುವ ರಾಜ್ಯಾಧಿಕಾರವನ್ನೇ ಇಂಡಿಯಾ ದೇಶದಲ್ಲಿಯೂ ಸ್ಥಾಪಿಸಿ ಕೊಡಬೇಕು ಎಂಬುದೇ ಇದು ಪ್ರಕೃತದಲ್ಲಿರುವ ಬ್ರಿಟಿಷ್ ಪ್ರಭುತ್ವ ಕನುಸಾರವಾಗಿಯೂ ಒಳ್ಳೆಯದೆಂದು ಅನುಮೋದಿಸತಕ್ಕವರಿಗೆ ಸಂಬಳಗಳನ್ನು ಅತ್ತ ಬ್ರಿಟಿಷರನ್ನೇ ಈ ದೇಶದಿಂದ ಓಡಿಸಿ ಬಿಡಬೇಕೆಂದು ಆತುರ ಪಡತಕ್ಕ ಸ್ವದೇಶೀಯರೆಂಬುವರು ಈ ಪ್ರಕಾರವಾಗಿ ಆಲೋಚಿಸುವುದು ಕೇವಲ ಕೃತಘ್ನತೆಯಾಗಿಯೂ ಮರದ ಮೇಲೇರಿದ್ದುಕೊಂಡು ಬುಡವನ್ನು ಕಡಿಯಲೆತ್ನಿಸುವಂಥ ಹುಚ್ಚು ಕೆಲಸವಾಗಿಯೂ ಇದೆಯೆಂದು ಹೇಳಿದರು.

ವಿದೇಶ ವರ್ತಮಾನಗಳು.

ಟ್ರಾನ್ಸ್ವಾಲಿನಲ್ಲಿ ಜಾತಿಭೇದಗಳು ಅತಿ ವಿಪರೀತವಾಗಿ ಪರಿಣಮಿಸಿವೆ ಜೋಹಾನ್ಸ್‌ಬರ್ಗಿನಲ್ಲಿ ಒಂದಾನೊಂದು ವಿಾಟಿಂಗಿನಲ್ಲಿ ಉಭಯ ಪಕ್ಷಗಾರರು ಕಾಸಿಗೆ ಒಬ್ಬರನೊಬ್ಬರು ಹೊಡೆದಾಡಿ ಜಗಳ ಮಾಡಿದರು

❖❖❖❖

ರಷ್ಯಾ ದೇಶದ ಮೊಸ್ಕೋ ನಗರದಲ್ಲಿ ಒಂದು ಸ್ತ್ರೀಯರ ಪಾಠಶಾಲೆಯಲ್ಲಿ ೫೦ ಪೌಂಡುಗಳ ಸಿಡಿಮದ್ದು ತುಂಬಿದ ಒಂದು ತೋಟಾ ಸಿಕ್ಕಿತು ಅದುದರಿಂದ ಸರ್ಕಾರದವರು ಎಂಟು ಮಂದಿ ಸ್ತ್ರೀಯರನ್ನು ದಸ್ತಗಿರಿ ಮಾಡಿದ್ದಾರೆ

❖❖❖❖

ವಿಲಾಯಿತಿಯಲ್ಲಿ ಎರಡು ಕೈಗಳೂ ಇಲ್ಲದ ಒಬ್ಬ ಕುಂಟನು ತನ್ನ ಪಾದಗಳಿಂದಲೇ ಎಡ್ವರ್ಡ್ ಚಕ್ರವರ್ತಿಗಳ ಚಿತ್ರಪಟವನ್ನು ಬರೆದನು. ಇದಕ್ಕಾಗಿ ಅವನಿಗೆ ಚಕ್ರವರ್ತಿಯವರು ೬ ಪೌಂಡುಗಳನ್ನು ಇನಾಮಾಗಿ ಕಳುಹಿಸಿಕೊಟ್ಟರು

❖❖❖❖

ರಷ್ಯಾ ಚಕ್ರವರ್ತಿಯವರು ತಮ್ಮ ರಾಜ್ಯದಲ್ಲಿ ಪ್ರಬಲವಾಗಿರುವ ಕ್ಷಾಮಪೀಡಿತರುಗಳ ನಿಮಿತ್ತವಾಗಿ ಕೇಕಡಾ ೫ ರಂತೆ ಬಡ್ಡಿಯನ್ನು ಕೊಟ್ಟು ೧೫ ಕೋಟಿ ೫೦ ಲಕ್ಷ ರೂಪಾಯಿಗಳ ಸಾಲವನ್ನು ತೆಗೆಯಬೇಕಾಗಿದ್ದಾರೆಂದು ಗೊತ್ತಾಗಿದೆ

❖❖❖❖

ಟ್ರಾನ್ಸ್ವಾಲಿನಲ್ಲಿ ವಾಸಿಸುತ್ತಿರುವ ೬೦,೦೦೦ ಚೀನಿಜನಗಳು ಕಳೆದ ೧೯೦೬ ನೆಯ ಸಂವತ್ಸರದಲ್ಲಿ ೬೦,೦೦೦ ಪ್ಯಾಲನುಗಳ ಚಿನ್ನವನ್ನು ಪಾಡುಮಾಡಿದರಂತೆ ಇದರ ಒಟ್ಟು ಬೆಲೆ ೫೫,೦೦,೦೦೦ ಪೌಂಡುಗಳು ಇದರಲ್ಲಿ ಅರ್ಧಕ್ಕಿಂತ ಹೆಚ್ಚು ಬೀನರನ್ನು ಟ್ರಾನ್ಸ್ವಾಲಿನಲ್ಲೇ ಇಟ್ಟುಕೊಂಡಿರುವದೆಂದು ಅಮೇರಿಕ ದೇಶದ ಒಬ್ಬ ಅಧಿಕಾರಿಯು ತಿಳಿಯಪಡಿಸಿದ್ದಾನೆ

ಚೀನ ಸರ್ಕಾರದವರು ಕ್ಯಾಂಟನ್ನಿಂದ ಕೌಲೂನಿನ ವರೆಗೂ ರೈಲ್ವೆ ಹಾಕುವುದಕ್ಕೆ ಅನುಮತಿಯನ್ನು ಕೊಟ್ಟಿದ್ದಾರೆ ಈ ರೈಲ್ ರಸ್ತೆಗೆ ಅವಶ್ಯಕವಾದ ದ್ರವ್ಯವನ್ನು ಬ್ರಿಟಿಷ್ ವರ್ತಕರೇ ಒದಗಿಸಿ ಕೊಡುವರು. ರಸ್ತೆ ಕಾಮಗಾರಿಯನ್ನು ನಡಿಸುವವರೂ ಬ್ರಿಟಿಷರ ಕಡೆಯ ಇಂಜನಿಯರುಗಳೇ.

❖❖❖❖

ಅಮೇರಿಕದ ಕೋಟೀಶ್ವರನಾದ ರೊಕ್ಫೆಲರಂಬಾತನು ಆ ದೇಶೀಯರ ವಿದ್ಯಾಪ್ರೋತ್ಸಾಹಕ್ಕಾಗಿ ೪೦ ಕೋಟಿ ೭೫ ಲಕ್ಷ ರೂಪಾಯಿಗಳನ್ನು ದಾನ ಮಾಡಿದನು. ಈತನು ಈಗ ಈ ಉದ್ದೇಶಕ್ಕೋಸ್ಕರ ಕೊಟ್ಟಿರುವ ಒಟ್ಟು ದ್ರವ್ಯವು ೬೦ ಕೋಟಿಯೂ ೪೦ ಲಕ್ಷ ರೂಪಾಯಿಗಳಾಗುತ್ತದೆ

❖❖❖❖

ಪರ್ಷಿಯಾ ದೇಶದಲ್ಲಿ ಆಹಾರ ಜಿನಸುಗಳು ದುರ್ಲಭವಾಗಿರುವುದರಿಂದಲೂ ಈ ತೊಂದರೆಯನ್ನು ಪರಿಹರಿಸುವ ವಿಷಯದಲ್ಲಿ ಮಂತ್ರಿಗಳೇ ಜವಾಬ್ದಾರರು ತಟಸ್ಥರಾಗಿರುವುದರಿಂದಲೂ ಪ್ರಜೆಗಳು ದೊಂಬಿಯೆಬ್ಬಿಸುತ್ತಿದ್ದಾರೆಂದು ಅಲ್ಲಿನ ರಾಜಧಾನಿಯಿಂದ ತಂತೀ ವರ್ತಮಾನ ಬಂದಿರುವುದು.

❖❖❖❖

ಜರ್ಮನಿಯ ಸರ್ಕಾರದವರು ಆಫ್ರಿಕ ದೇಶದ ನೈಋತ್ಯ ಭಾಗದಲ್ಲಿ ತಮಗೆ ಸೇರಿದ ವಸತಿಗೆ ಸಂಬಂಧಪಟ್ಟದಾಗಿ ಸಮುದ್ರ ತೀರದಲ್ಲಿ ಹಡಗಿಳಿಯತಕ್ಕ ಒಂದು ಬಂದರನ್ನು ಕಟ್ಟಿಸಿಕೊಳ್ಳಬೇಕೆಂದು ಉದ್ದೇಶಪಟ್ಟು ಆಲೋಚಿಸುತ್ತಾ ಇದ್ದಾರೆ ಈ ವಿಶೇಷವಾದ ಕಾರ್ಯಕ್ಕೆ ೩,೫೦,೦೦೦ ಪೌಂಡುಗಳು ವ್ಯಯವಾಗಬಹುದೆಂದು ಊಹಿಸಲಾಗಿದೆ.

❖❖❖❖

ಅಮೇರಿಕದ ಮೆಕ್ಸಿಕೋ ಬಳಿಯಲ್ಲಿರುವ ಎಣ್ಣೆ ಬಾವಿಗಳಲ್ಲಿ ಉತ್ಪತ್ತಿಯು ಮೊದಲಿಗಿಂತಲೂ ಶೇಕಡ ೬೫ ರಷ್ಟು ಕಡಮೆಯಾಗಿರುವುದೆಂದೂ ಇದಕ್ಕೆ ಕಾರಣವು ವೆಸ್ಟ್ ಇಂಡೀಸ್ ದ್ವೀಪಗಳ ಕಿಂಗ್‌ಸ್ಟನ್ ನಗರ ಪ್ರಾಂತ್ಯದಲ್ಲಿ ಉಂಟಾದ ಭೂಕಂಪವೇ ಎಂದೂ ಹೇಳುತ್ತಾರೆ. ಟೆಕ್ಸಾಸ್ ಎಂಬೊಂದು ಸ್ಥಳದಲ್ಲೇ ೧೭ ಬಾವಿಗಳು ಸಂಪೂರ್ಣವಾಗಿ ಬತ್ತಿಹೋಗಿವೆಯಂತೆ

❖❖❖❖

ಚೀನ ಸರ್ಕಾರದವರು ಹೊಸದಾಗಿ ನಾಲ್ಕು ನೌಕಾಸೇನೆಗಳನ್ನು ಕಟ್ಟುವವರಾಗಿದ್ದಾರಂತೆ ಟೀಂಟ್ಸಿನಿನಲ್ಲಿಯೂ ನಾಂಕಿಂಗ್ ಫೂಚಾಂಗ್ ಕ್ಯಾಂಟನ್ ವಾಂಪೋ ಎಂಬ ಸ್ಥಳಗಳಲ್ಲಿ ನೌಕಾಸೈನಿಕರ ಶಿಕ್ಷಣಾರ್ಥವಾಗಿ ಪಾಠಶಾಲೆಗಳನ್ನು ಸ್ಥಾಪಿಸಿ ಇಂಗ್ಲಾಂಡ್ ಮತ್ತು ಜರ್ಮನ್ ದೇಶಗಳಿಂದ ಶಿಕ್ಷಕರನ್ನು ಕರೆಯಿಸಿಕೊಳ್ಳುವವರಾಗಿದ್ದಾರೆಂದು ಒಂದಾನೊಂದು ಪತ್ರಿಕೆಯಿಂದರಿತೆವು

❖❖❖❖

ಇಂಗ್ಲಾಂಡಿನ ಒಂದು ಧರ್ಮ ಸಮಾಜದವರು ಆ ದೇಶದ ನಿರ್ಗತಿಕರಾದ ಅನಾಥರೊಳಗೆ ೫ ವಯಸ್ಸಿಗಿಂತ ಕಡಮೆಯಾದ ಹೆಣ್ಣುಮಕ್ಕಳನ್ನೆಲ್ಲಾ ಕ್ಯಾನಡಾ ರಾಜ್ಯಕ್ಕೆ ಸಾಗಕಳುಹಿಸುವ ಯತ್ನವನ್ನು ಮಾಡುವುದರಲ್ಲಿದ್ದಾರೆ ಇಂಗ್ಲಾಂಡಿನಲ್ಲಿ ಪುರುಷರ ಸಂಖ್ಯೆಗಿಂತ ಸ್ತ್ರೀಯರ ಸಂಖ್ಯೆಯು ಹೆಚ್ಚುವುದಕ್ಕೆ ಅವಕಾಶವಿಲ್ಲದಂತೆ ಮಾಡಬೇಕೆಂಬುದೇ ಈ ಸಾಮಾಜಿಕರ ಉದ್ದೇಶವೆಂದು ತಿಳಿದುಬಂದಿದೆ.

❖❖❖❖

ಆಸ್ಟ್ರಿಯಾ ದೇಶದ ದಕ್ಷಿಣ ಭಾಗದಲ್ಲಿ ಒಂದಾನೊಂದು ಕಣಿವೆಯಲ್ಲಿ ಹೆಪ್ಪುಕಟ್ಟಿಕೊಂಡಿದ್ದ ಹಿಮವು ಸುಮಾರು ೩,೦೦೦ ಗಜಗಳಷ್ಟು ವಿಸ್ತಾರವಾಗಿ ಒಂದು ಬೆಟ್ಟದಿಂದ ಅನಾಮತ್ತಾಗಿ ಕುಸಿದುಕೊಂಡು ಉರುಳುತ್ತಾ ದಾರಿಗಡ್ಡವಾಗಿ ಸಿಕ್ಕಿದ ಪ್ರಾಣಿಗಳನ್ನು ಒಂದು ಕಾಡನ್ನೇ ನಿರ್ನಾಮಮಾಡಿ ಕಡೆಯಲ್ಲಿ ರೈಲ್ವೆ ರಸ್ತೆಯನ್ನೇ ಕವಿದು ಮುಚ್ಚಿಕೊಂಡುಬಿಟ್ಟಿತು ಆ ದೇಶದಲ್ಲಿ ಇದ ಅನಾಹುತವು ಇಷ್ಟು ಭಯಂಕರವಾಗಿ ಇದುವರೆಗೂ ನಡೆದಿಲ್ಲವೆಂದು ತಿಳಿದು ಬಂದಿದೆ

❖❖❖❖

ಚೀನ ಸರ್ಕಾರದವರು ತಮ್ಮ ದೇಶದಲ್ಲಿ ಅಫೀಮಿನ ಮಾರಾಟಕ್ಕೆ ಸಾಧ್ಯವಾದ ಮಟ್ಟಿಗೂ ಅಭ್ಯಂತರವನ್ನು ಕಲ್ಪಿಸುವವರಾಗಿದ್ದಾರಷ್ಟೆ. ಈ ವಿಷಯದಲ್ಲಿ ಅವರು ಮಾಡಿಕೊಂಡಿರುವ ಕಾನೂನುಗಳನ್ನು ಆ ದೇಶದಲ್ಲಿ ವಸತಿಗಳನ್ನೇರ್ಪಡಿಸಿಕೊಂಡಿರುವ ಜರ್ಮನಿ ಫ್ರಾನ್ಸು ಇಂಗ್ಲಾಂಡ್ ಮೊದಲಾದ ಅನ್ಯದೇಶೀಯರೂ ತಮ್ಮ ತಮ್ಮ ವಸತಿಗಳಲ್ಲಿ ಜಾರಿಗೆ ತರಬೇಕೆಂದು ಕೇಳಿಕೊಂಡಿರುವರೆಂದೂ ಇಂಗ್ಲಾಂಡಿನವರು ಇದಕ್ಕೊಪ್ಪುವವರಾಗಿದ್ದಾರೆಂದೂ ಪಿಯೆನ್ನಪಟ್ಟಣದ ಒಬ್ಬ ಪತ್ರಿಕಾ ಲೇಖಕನು ಹೇಳುತ್ತಾನೆ

❖❖❖❖

ಅಮೇರಿಕದ ಸಂಯುಕ್ತ ಸಂಸ್ಥಾನಗಳಲ್ಲಿ ಪರದೇಶಗಳಿಂದ ಬಂದು ನೆಲೆಗೊಂಡು ಅನಾಯಕತ್ವವನ್ನುಂಟುಮಾಡುತ್ತಲಿರುವ ಅನೇಕ ಪುಂಡರುಂಟು ಇಂಥವರನ್ನು ಹಿಡಿದು ಶಿಕ್ಷಿಸುವದರಲ್ಲಿ ಬಹಳ ನಿಪುಣನೂ ಆಸಕ್ತನೂ ಆಗಿದ್ದ ಒಬ್ಬ ಅಧಿಕಾರಿಗೆ ಆ ಪುಂಡರ ಗುಂಪಿನಲ್ಲಿ ಯಾವನೋ ಒಬ್ಬನು ಎಕ್ಸ್‌ಪ್ರೆಸ್ ಪೋಸ್ಟು ಮೂಲಕ ಒಂದು ಭಾಂಗಿಯನ್ನು ಕಳುಹಿಸಿದನು ಅದನ್ನು ಆ ಅಧಿಕಾರಿಯು ಬಿಚ್ಚುತ್ತಿರುವಾಗ್ಗೆ ಒಳಗೆ ಸೇರಿದ್ದ ಸಿಡಿಮದ್ದು ಸಿಡಿದು ಆತನನ್ನು ಚೂರು ಚೂರು ಮಾಡಿಬಿಟ್ಟಿತು ಅತನ ಮಗನಿಗೂ ಘೋರ ಗಾಯವಾಯಿತು ಆಫೀಸು ಕಟ್ಟಡವೆಲ್ಲಾ ಸಂಪೂರ್ಣವಾಗಿ ನಾಶವಾಯಿತು.

❖❖❖❖

ಅಮೇರಿಕ ದೇಶದ ಪ್ರಿಮೋಂಟ ಎಂಬಲ್ಲಿ ಚಿನ್ನದ ಗಣಿಗಳು ಬಹು ಲಾಭಕರವಾಗಿವೆ ಆದರೆ ಗಣಿ ಅಗೆಯುವ ಕೆಲಸದವರು ಸಿಕ್ಕುವುದು ಕಷ್ಟವಾಗಿದೆ ಹೀಗಿರುವಲ್ಲಿ ಈ ಕೂಲಿಯಾಳುಗಳಲ್ಲಿ ಸುಮಾರು ೧೦೦ ಮಂದಿ ಸೇರಿಕೊಂಡು ಆ ಪ್ರಾಂತ್ಯದ ಗಣಿಗಳೊಳಗಿಂದ ಚಿನ್ನದ ಅದುರನ್ನು ಬಹಳವಾಗಿ ಕದ್ದುಕದ್ದು ಸ್ವಾರ್ಥಪರಸಿಕ್ಸೊ ಎಂಬಲ್ಲಿರುವ ಒಂದು ಕಂಪನಿಯವರಿಗೆ ಕಳುಹಿಸಿ ಅದುದನ್ನು ಕರಗಿಸಿ ಬಹಳ ಲಾಭವನ್ನು ಪಡೆಯುತ್ತಿದ್ದರು. ಇವರ ಈ ಅಕೃತ್ಯಗಳನ್ನು ಗಣಿಗಳ ಯಜಮಾನರು ತಿಳಿದಿದ್ದಾಗ್ಯೂ ತಮ್ಮ ಲೈಸೆನ್ಸ್ ಕಾಲವು ಕೆಲವು ದಿವಸಗಳಲ್ಲಿ ಮುಗಿದು ಹೋಗುವುದಕ್ಕಿದ್ದುದರಿಂದ ಅಷ್ಟರೊಳಗೆ ಸಾಧ್ಯವಾ

ದಷ್ಟು ಚಿನ್ನವನ್ನು ತೆಗೆಯಬೇಕೆಂದು ಸುಮ್ಮನೆ ಇದ್ದ ಕೆಲಸ ತೆಗೆಯುತ್ತಲಿದ್ದರು ಕೆಲಸದವರಾದರೋ ಬರುತ್ತ ಬರುತ್ತ ಹೆಚ್ಚು ಹೆಚ್ಚಾಗಿ ಕಳುತ್ತಾ ಹಡಗುಗಳಲ್ಲಿ ತುಂಬಿ ಕಳುಹಿಸುತ್ತಾ ಬರುವವರಾದರು. ಕಡೆಗೆ ಗಣಿಗಳ ಯಜಮಾನರು ಸುಮ್ಮನಿರುವದನ್ನು ಬಿಟ್ಟು ಚಿನ್ನದ ಅದುರನ್ನು ಸಾಗಿಸುತ್ತಿದ್ದ ಒಂದು ಹಡಗನ್ನು ಕ್ಯಾಲಿಫೋರ್ನಿಯದ ಬಳಿಯಲ್ಲಿ ನಿಲ್ಲಿಸಿ ಶೋಧಿಸಲಾಗಿ ಅದರಲ್ಲಿ ೨೫,೦೦೦ ಪೌಂಡುಗಳ ಬೆಲೆಯುಳ್ಳ ಅದುರು ಸಿಕ್ಕಿತು ಹೀಗೆ ಗಣಿ ಕೆಲಸದವರು ಕಳ್ಳತನದಿಂದಲೇ ಇಸಂ ಒಂದಕ್ಕೆ ತಿಂಗಳಿಗೆ ೧,೦೦೦ ಪೌನುಗಳಷ್ಟು ಸಂಪಾದನೆ ಮಾಡುತ್ತಿದ್ದಾರೆಂದು ಗೊತ್ತಾಯಿತು.

****

ರಷ್ಯಾ ರಾಜಧಾನಿಯಾದ ಸೆಂಟ್ ಪೀಟರ್ಸ್‌ಬರ್ಗಿನ ಬ್ಯಾಂಕಿಗೆ ಕಂದಾಯ ವಸೂಲಿ ಹಣವು ತುಂಬಿದ ಒಂದು ಗಾಡಿಯು ಸಹರೆ ಸಮೇತ ಬರುತ್ತಿರುವಾಗ ಅದನ್ನು ಹಿಡಿದು ಕೊಳ್ಳೆ ಹೊಡೆಯಬೇಕೆಂದು ಒಂದು ಗುಂಪು ಕಳ್ಳರು ಹಾರೀ ಕಾಯುತ್ತಿದ್ದರು. ಇದರ ಸುಳಿವನ್ನು ರಾಜಧಾನಿಯ ಪೋಲೀಸಿನವರು ತಿಳಿದು ಆ ಗುಂಪಿನವರಲ್ಲಿ ಆರು ಮಂದಿಯನ್ನು ಹಿಡಿದರು. ಉಳಿದವರೆಲ್ಲರೂ ಪರಾರಿಯಾದರು ಮೊಸ್ಕೋ ನಗರಕ್ಕೆ ಸರ್ಕಾರದವರು ಪೈಯುತ್ತಿದ್ದ ಕೆಂದಿ ಖಜಾನೆಯನ್ನು ಮತ್ತು ಮಂದಿ ಕೂಡಿ ಹಿಡಿದು ೧ ಲಕ್ಷ ೧೦ ಸಾವಿರ ರೂಪಾಯಿಗಳನ್ನು ದೋಚಿಕೊಂಡು ಹೋದರು. ಬಟೋಮಿನಲ್ಲಿಯೂ ಕಳ್ಳರು ಇದೇ ಮೇರೆಗೆ ೬೦ ಸಾವಿರ ರೂಪಾಯಿಗಳ ಖಜಾನೆಯನ್ನು ಲೂಟಮಾಡಿಕೊಂಡು ಹೋದರು.

****

ಚೀನ ದೇಶದಲ್ಲಿ ಬ್ರಿಟಿಷರಿಗೆ ಸಂಬಂಧಪಟ್ಟ ಹೊಂಗ್‌ಕೊಂಗೆಂಬ ದ್ವೀಪದ ಹತ್ತಿರ ಮಹಾ ಭಯಂಕರವಾದ ಸಮುದ್ರ ಸುಂಟರಗಾಳಿಯು ಬಿದಿದು ಅನೇಕ ಹಡಗುಗಳೂ ದೋಣಿಗಳೂ ನಾಶವಾದುವಷ್ಟೆ. ಆಗ್ಯೆ ಒಬ್ಬ ಹೆಂಗಸು ಅತಿ ಶ್ಲಾಘನೀಯವಾದ ಧೈರ್ಯದಿಂದಲೂ ಸಾಮರ್ಥ್ಯದಿಂದಲೂ ಅನೇಕ ಜನರನ್ನು ವಿಪತ್ತಿನಿಂದ ತಪ್ಪಿಸಿದಳು. ಆ ದೇಶೀಯರಾದ ಗಂಡಸರು ಇಂಥ ಸಂದರ್ಭಗಳಲ್ಲಿ ತಮಗೆ ಸ್ವಭಾವಕ್ಕನುಗುಣವಾಗಿ ನಗುತ್ತಲೂ ಅಪಹಾಸ್ಯ ಮಾಡುತ್ತಲೂ ಇದ್ದರೂ ಆಕೆಯು ಲಕ್ಷ್ಯ ಮಾಡದೆ ಪ್ರಕಟಿಸಿದ ಈ ಪರೋಪಕಾರ ಬುದ್ಧಿಗೆ ಬ್ರಿಟಿಷ್ ಸರ್ಕಾರದವರು ಮೆಚ್ಚಿ ಆಕೆಗೊಂದು ಬಿರುದಿನ ಬಿಲ್ಲೆಯನ್ನು ಬಹುಮಾನವಾಗಿ ಕೊಟ್ಟರು. ಆ ದೇಶದಲ್ಲಿ ಸ್ತ್ರೀಯರು ಇಂಥ ಬಹುಮಾನವನ್ನು ಸಂಪಾದಿಸಿಕೊಂಡುದು ಇದೇ ಮೊದಲೆಂದು ಸರ್ಕಾರದ ಅಧಿಕಾರಿಯು ಹೇಳಿದನು.

ಅಮೀರರೂ ಬೊಂಬಾಯಿ ಪಟ್ಟಣವೂ.

ಘನವನ್ನು ಹೊಂದಿದ ಕಾಬೂಲು ದೇಶದ ಅಮೀರರು ತಾರೀಖು ೧೭ ರಲ್ಲಿ ಬೊಂಬಾಯಿಗೆ ಬಲ್ಲರ್‌ಪೋರ್ ಮಾರ್ಗವಾಗಿ ಬಂದು ಸೇರಿದರು. ರೈಲ್ವೆ ಸ್ಟೇಷನ್ ಪ್ಲಾಟ್‌ಫಾರಂ ಬಹು ರಮ್ಯವಾಗಿ ಅಲಂಕರಿಸಿತ್ತು. ಅವರು ಬರುವದು ಕೊಂಚ ಹೊತ್ತಿಗೆ ಮುಂಚೆ ಈ ದೇಶದ ಗವರ್ನರ್ ಜನರಲ್ ಸಾಹೇಬರವರು ದಯಮಾಡಿದ್ದರು ಅವರು ಬಂದ ತರುವಾಯ ಮಂಗಳವಾದ್ಯಗಳೂ ಮರ್ಯಾದೆಗಳೂ ಬಹು ವಿಜೃಂಭಣೆಯಾಗಿ ನಡೆದವು. ಈ ಸೌಂದರ್ಯ ಪಟ್ಟಣದಲ್ಲಿ ಅಲಂಕಾರವು ಬೇಕಾಗಿರಲಿಲ್ಲ. ಸ್ಟೇಷನ್ ಹತ್ತಿರ ಅನೇಕ ಮಂದಿಗಳು ಸೇರಿದ್ದರು. ಬಹಳ ಗಲಾಟೆಯಾಗಿತ್ತು ಮಾರುದಿವಸ ರಾತ್ರಿ ಬೀದಿಗಳಲ್ಲಿ ಪ್ರಜೆಗಳಿಂದ, ಮುಖ್ಯವಾಗಿ ಮಹಮದಿಯ ಧನಿಕರಿಂದಲೂ ಮತ್ತು ಪಾರಸಿ ಜನಗಳಿಂದಲೂ ದೀಪೋತ್ಸವವು ನಡೆಸಲ್ಪಟ್ಟಿತು ಅನೇಕ ದಾನಧರ್ಮಗಳು ನಡೆಸಿದರು ನಮ್ಮ ಮೈಸೂರಲ್ಲಾದರೋ ಸರಕಾರದಿಂದಲೇ ನಡೆಯಬೇಕಾಗಿದೆ ಪ್ರಜೆಗಳಾದರೋ ದುಡ್ಡುಗಳನ್ನು ದಾನಧರ್ಮ ಕೀರ್ತಿ ಇವುಗಳನ್ನು ಸಂಪಾದಿಸದೆ ಆರ್ಬತ್ನಾಟ್ ಎಂಬ ಘೋರವಾದ ಸಮುದ್ರದಲ್ಲಿ ಹಾಕಿ ಕಳೆದರು ಬಾತ್ಮಿದಾರ್.

ಮೈಸೂರು ಗೆಜೆಟ್ ಸಂಗ್ರಹ.

ತಿಪಟೂರು ತಾಲ್ಲೂಕ್ ಅಮಲ್ದಾರ್ ಮ॥ ಸಿ. ಗೋಪಾಲಾಚಾರ್ರಿಗೆ ೧೯೦೭ ನೆ ಇಸವಿ ಫೆಬ್ರವರಿ ೧ ನೆ ತಾರೀಖು ಲಾಗಾಯತು ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯ್ತು ಮೂರು ವಾರಗಳ ಪ್ರಿವಿಲೆಜ್ ರಜಾ ಮಂಜೂರ್ಮಾಡಿರುತ್ತೆ. ಅವರ ಗೈರ್‌ಹಾಜರ್ ಕಾಲದಲ್ಲಿ ತಾಲ್ಲೂಕ್ ಶಿರಸ್ತೇದಾರ್ ಪಿ ಸಂಜೀವರಾಯರು ತಾಲ್ಲೂಕು ಛಾರ್ಜಿನಲ್ಲಿರತಕ್ಕದ್ದು

ನಗರದ ತಾಲ್ಲೂಕ್ ಅಮಲ್‌ದಾರ್ ಮ॥ ಡಿ ನರಸಿಂಗರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯ್ತು ೧೫ ದಿನಗಳ ಪ್ರಿವಿಲೆಜ್ ರಜಾ ಮಂಜೂರ್ಮಾಡಿದೆ. ಅವರ ಗೈರ್‌ಹಾಜರಿ ಕಾಲದಲ್ಲಿ ತಾಲ್ಲೂಕ್ ಶಿರಸ್ತೇದಾರ್ ಎಂ. ನಾರಾಯಣರಾವ್, ಬಿ. ಎ ಯವರು ತಾಲ್ಲೂಕು ಛಾರ್ಜಿನಲ್ಲಿರತಕ್ಕದ್ದು

ಪೋಲೀಸ್ ಪ್ರೊ॥ ಅ॥ ಸೂಪರಿಂಟೆಂಡೆಂಟ್ ಮ॥ ಬಪ್ಪೂಸುಲ್ತಾನ್ ಅಲ್ಲಿಖಾನ್‌ರವರಿಗೆ ಕೊಟ್ಟಿರುವ ಒಂದು ತಿಂಗಳು ಹದಿನೈದು ದಿನಗಳ ಪ್ರಿವಿಲೆಜ್ ರಜವನ್ನು ಇನ್ನೊಂದು ತಿಂಗಳಿಗೆ ಜಾಸ್ತಿ ಮಾಡಿದೆ.

ಶೃಂಗೇರಿ ಜಹಗೀರಿಯಲ್ಲಿ ಕೆಲಸ ಮಾಡುವಂತೆ ಕಳುಹಿಸಿರುವ ಮ॥ ಬಿ. ಸಿ ಕೃಷ್ಣಶಾಸ್ತ್ರಿಗಳು ಶೃಂಗೇರಿಯಲ್ಲಿ ಸಬ್ ರೆಜಿಸ್ಟ್ರಾರಾಗಿಯೂ ಇರತಕ್ಕದ್ದು

ರೆವಿನ್ಯೂ ಸರ್ವೆ ಇಲಾಖೆಯಲ್ಲಿ ಕೆಲಸ ಮಾಡುವ ಅ॥ ಕಮೀಷನರ್ ಮ॥ ಸಿ ರಾಜಗೋಪಾಲಾಚಾರ್ಲು ಯವರನ್ನು ಡಿಸೆಂಬರ್ ೧೧ ರಿಂದ ೨ ನೆ ಕ್ಲಾಸ್ ಎಕ್‌ಸ್ಟ್ರಾ ಅ॥ ಕಮೀಷನರ ದರ್ಜೆಗೆ ಬಡ್ತಿ ಮಾಡಿದೆ.

ಮ॥ ಎಚ್. ರಾಮಾನುಜೈಯ್ಯಂಗಾರ್ರು ಪೆನ್ಷನ್ ಪಡೆದು ಕೆಲಸ ಬಿಟ್ಟಕಾರಣ ಜಾಸ್ತಿ ಡಿಸ್ಟ್ರಿಕ್ಟ್ ಡೆಪ್ಟಿ ಕಮೀಷನರಾದ ಮ॥ ಪಿ ಆರ್. ಡಲ್ಲಿಯು. ವೆದರಾಲ್‌ಯವರನ್ನು ಆ ತಾರೀಖಿನಿಂದ ೨ ನೇ ಕ್ಲಾಸ್‌ಗೆ ಬಡ್ತಿ ಮಾಡಿದೆ.

ಗುಡಿಬಂಡೆ ಸಬ್ ತಾಲ್ಲೂಕ್ ಡಿಪ್ಟಿ ಅಮಲ್ದಾರ್ ಎಸ್. ಅನಂತರಾಮೈಯ್ಯಂಗಾರ್ರಿಗೆ ಹತ್ತು ದಿನಗಳ ಪ್ರಿವಿಲೆಜ್ ರಜಾಕೊಟ್ಟಿತ್ತು. ಆ ಕಾಲದಲ್ಲಿ ಬಾಗೆಪಲ್ಲಿ ತಾಲ್ಲೂಕ್ ಅಮಲ್ದಾರ್ರೇ ಗುಡಿಬಂಡೆಯ ಛಾರ್ಜನ್ನೂ ವಹಿಸಿದ್ದರು

ನಾಗಮಂಗಲ ತಾಲ್ಲೂಕಿನ ಅಮಲ್ದಾರ್ ಮ॥ ಎಚ್. ಎಸ್. ವೆಂಕಟಾಚಾರ್ರಿಗೆ ಹದಿನೈದು ದಿನಗಳ ಪ್ರಿವಿಲೆಜ್ ರಜಾಕೊಟ್ಟಿದೆ. ಶಿರಸ್ತೆದಾರ್ ಎಚ್. ಶ್ರೀನಿವಾಸೈಯ್ಯಂಗಾರ್ರು ತಾಲ್ಲೂಕಿನ ಚಾಲ್ತಿ ಕೆಲಸಗಳ ಛಾರ್ಜನ್ನು ವಹಿಸಿರತಕ್ಕದ್ದು.

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು ; ಇಂಥವುಗಳಿಗೆ ನಾವು ನಿಗಾ ಕೊಡಲಾರೆವು

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು—ಎಡಿ

ವೈಶ್ಯ , ಪ್ಲೀಡರ್ , ಯಥಾರ್ಥವಾದಿ, ಯಡೆಹಳ್ಳಿ ; ಹಿತವಾದಿ, ಆಲೂರು ; ಹೊಳಲ್ಕೆರೆ ವೃತ್ತಾಂತ , ಧೈರ್ಯ, ತುಮಕೂರು :—ಈ ಬಾತ್ಮಿಗಳನ್ನು ಪ್ರಕಟಿಸಲಾರೆವು

ಎ ಪಿ. ರಾವ್, ಜೋಳಘಾಳು .—ಈ ಬಾತ್ಮಿದಾರರು ಚಂದಾ ಕಟ್ಟಿರುವ ಹುಬ್ಬಳ್ಳಿಯ ಆರ್ಯಧರ್ಮಪತ್ರಿಕೆಯೂ, ಮೈಸೂರು ಅವಕಾಶತೋಷಿಣಿ ಪತ್ರಿಕೆಯೂ, ಕಾರವಾರದ ವಿನೋದಿನಿ ಪತ್ರಿಕೆಯೂ, ಬೆಂಗಳೂರಿನ ವಿಕಟಪ್ರತಾಪಪತ್ರಿಕೆಯೂ ತಮಗೆ ಕ್ರಮವಾಗಿ ಬರುತ್ತಾ ಇಲ್ಲವೆಂತಲೂ ಅನೇಕಾವರ್ತಿ ಕಾಗದಗಳನ್ನು ಬರೆದು ನಿಷ್ಫಲವಾಗಿದೆ ಎಂತಲೂ ಆಕ್ಷೇಪಣೆ ಮಾಡಿರುತ್ತಾರೆ

ಮ್ಯಾಜಿಕ್ ಲ್ಯಾಂಟರ್ನ್ ಬೇಕೆಂದು ಅಪೇಕ್ಷಿಸುವ ಬಾತ್ಮಿದಾರರು ಮ್ಯಾನೇಜರ್ ಸಿ. ಎಂ. ಸುಬ್ಬೈಯ್ಯನವರು, ಕೊಳ್ಳೇಗಾಲ ಈ ವಿಳಾಸದಾರರಿಗಾಗಲಿ, ಮ॥ ಪೊನ್ನೈಯ್ಯ ರೇಜರ್ನ್, ಅ॥ ಸ್ಟೇಷನ್ ಮಾಸ್ಟರ್, ಬಿಡದಿ, ದಕ್ಷಿಣ ಮರಾಟ ರೈಲ್ವೆ ಈ ವಿಳಾಸದಾರರಿಗಾಗಲಿ ಕಾಗದ ಬರೆದು ಕ್ರಯ ಮುಂತಾದದ್ದನ್ನು ಗೊತ್ತುಮಾಡಿ ತರಿಸಿಕೊಳ್ಳಬಹುದೆಂದು ಅವರು ಬರೆದಿರುತ್ತಾರೆ —ಎಡಿಟರ್.]

ಕರೆಸ್‌ಪಾಂಡೆನ್ಸ್.

ತಿಳಿಯಬೇಕಾಗಿದೆ.

ಅಯ್ಯಾ,

ಎಲ್ಲಾ ಜನರ ಉಪಯೋಗಕ್ಕಾಗಿ ತೆಂಗಿನ ಮರದ ಕಾಯಿಗಳನ್ನು ಕದ್ದುಕೊಂಡು ಹೋಗದಂತೆ ಅದಕ್ಕೆ ಕಟ್ಟುವ ಒಂದು ಹೊಸ ನಮೂನೆ ಮುಳ್ಳಿನ ಯಂತ್ರ ತಯಾರಿಸಿದೆ ಎಂತ ಕೇಳುತ್ತೇನೆ. ಅದು ಮತ್ತು ೬೦—೫೦ ಫೀಟು ಆಳವಾದ ಭಾವಿಯ ನೀರನ್ನು ಸುಲಭವಾಗಿ ತೆಗೆಯಬಹುದಾದ ಪಂಪು ಕೂಡಾ ಎಲ್ಲಿ ಸಿಕ್ಕುತ್ತದೆ, ಎಷ್ಟು ಕ್ರಯ ಎಂಬೀ ವಿವರವನ್ನು ನಿಮ್ಮ ಪತ್ರಿಕೆಯಲ್ಲಿ ತಾವಾಗಲೀ ವಾಚಕಮಹಾನುಭಾವರಾಗಲೀ ಛಾಪಿಸಿ ಪ್ರಕಟಿಸಿದರೆ ಬಹಳ ಉಪಕಾರವಿತ್ತು.

ಮಾಸ್ತರ ರಾಮೈಯ್ಯ, ಚಂದ್ರಗಿರಿ, ದ ಕನ್ನಡಾ.

೩೦೦ ರೂಪಾಯಿ ಕಳೆದುಕೊಂಡದ್ದು.

ಅಯ್ಯಾ,

ದಾವಣಗೆರೆ ತಾಲ್ಲೋಕು ಮಾಯಕೊಂಡೆ ಗ್ರಾಮದಲ್ಲಿ ಇದೇ ತಿಂಗಳು ೨ ನೇ ತಾ ಕಣಕಟ್ಟೆ ರಾಮಣ್ಣನವರು ದಂಪತಿಯುಕ್ತ ಪರಿಚಾರಕರ ಸಮೇತರಾಗಿ ಒಂದು ಶ್ರೀ ಚನ್ನಕೇಶವ ಸ್ವಾಮಿಯ ದೇವಸ್ಥಾನದಲ್ಲಿ ಇದ್ದರು. ಅವರಿಗೆ ದಾರಿ ಖರ್ಚಿಗೆ ಇಲ್ಲದಿದ್ದರಿಂದ ನೋಟುಗಳನ್ನು ತೆಗೆದುಕೊಂಡು ಅಲ್ಲಿದ್ದ ಜನರನ್ನು ವಿಚಾರಿಸಲು ರೂಪಾಯಿಗಳು ಸಿಕ್ಕಲಿಲ್ಲ. ಅಲ್ಲಿಂದ ಬಂದು ತಮ್ಮ ಕೈ ಪೆಟ್ಟಿಗೆ ಮೇಲೆ ಇಟ್ಟುಕೊಂಡು, ಜನರ ಸಂಗಡ ಮಾತನಾಡುತ್ತಿದ್ದರು. ಸ್ವಲ್ಪ ಹೊತ್ತಿನ ಮೇಲೆ ಜನಗಳು ಹೊರಟುಹೋದರು ತಾವು ಅವರ ಜೊತೆಗೆ ಹೊರಗೆ ಬಂದರು. ಅವರಲ್ಲಿದ್ದ ಒಬ್ಬ ಪರಿಚಾರಕಳು ಅದನ್ನು ನೋಡಿ ಕೈ ಪೆಟ್ಟಿಗೆ ಮೇಲಿದ್ದ ನೋಟುಗಳನ್ನು ಎತ್ತಿ ಹಾಕಿಕೊಂಡು, ತಾನು ಬಯಲು ಪ್ರದೇಶಕ್ಕೆ ಹೋಗುವಹಾಗೆ ಕೈಯಲ್ಲಿ ಒಂದು ತಂಬಿಗೆಯನ್ನು ಹಿಡಿದುಕೊಂಡು, ಬಾಬು ಕಾಳಮ್ಮ ದೇವಸ್ಥಾನದಲ್ಲಿ ಇದ್ದ ಸಂದಿನಲ್ಲಿ ಒಬ್ಬ ಬ್ರಾಹ್ಮಣ ಆಕೆ ಮಾತನಾಡಿ ನಿಂತುಕೊಂಡಿದ್ದರು ಅಷ್ಟೊತ್ತಿಗೆ ಬಂದು ನೋಡಿದರು ನೋಟುಗಳು ಇರಲಿಲ್ಲವಾದ್ದರಿಂದ ಆಕೆ ಬಯಲು ಪ್ರದೇಶಕ್ಕೆ ಹೋಗಿದ್ದವಳು ೨—೩ ಘಂಟೆಯ ಜೊತ್ತು ನೋಡಿದರೂ ಬರಲಿಲ್ಲ. ಅಲ್ಲಿಂದ ಊರಲ್ಲಿ ಗಲಭೆ ಆಯಿತು. ವಿಚಾರಿಸಲಾಗಿ ನಮ್ಮಲ್ಲಿ ಒಬ್ಬ ಪರಿಚಾರಕಳು ಇದ್ದಳು. ಆಕೆಯು ನನ್ನ ೩೦೦ ರೂಪಾಯಿ ನೋಟು ಕಳುವು ಮಾಡಿಕೊಂಡು ಹೋಗಿದಾಳೆ ಎಂದು ಹೇಳಿದರು. ಅಷ್ಟೊತ್ತಿಗೆ ಒಬ್ಬ ಬ್ರಾಹ್ಮಣ ಒಬ್ಬ ಅಕ್ಕಾಚಾರಿಕೊಂಡು ಕಾಲಿಗೆ ಬುದ್ಧಿ ಹೇಳಿಸಿ, ಇಲ್ಲಿಗೆ ಸಮೀಪವಾಗಿ ಇಂದರೆ ೨ ಮೈಲಿ ಫಾಸಲೆ ಇರುವ ಗುಬ್ಬುಕೊಂಡವೆಂಬ ಗ್ರಾಮಕ್ಕೆ ಕರೆದುಕೊಂಡು ಹೋಗಿ ಅಲ್ಲಿ ಬಿಳಿಜೋಳದಲ್ಲಿ ಬಚ್ಚಿಕ್ಕಿದ್ದರು. ರಾಮಣ್ಣನವರು ಪೋಲೀಸಿಗೆ ಫಿರ್ಯಾದು ಕೊಟ್ಟರು ಜಮೇದಾರು ಬಂದರು ಅವರೇ ಖುದ್ದು ಫಿರ್ಯಾದು ತೆಗೆದುಕೊಂಡರು ಆ ವೇಳೆ ಆಳವರನ್ನು ಪತ್ತೆ ತಲಾಷಿಗೆ ಕಳುಹಿಸಿದರು. ಇಲ್ಲಿ ಸಿಕ್ಕಲಿಲ್ಲ. ಆ ಪೈಕಿ ಒಬ್ಬನು ಬಾತ್ಮಿಕೊಟ್ಟನು, ಫಲಾನಿ ಜಾಗದಲ್ಲಿ ಇದಾಳೆಂತ ಹೇಳಿದ ಇವರು ಆ ಸ್ಥಳ ಅಜಮಾಯಿಸಿ ನೋಡಿದರು. ಅಲ್ಲಿ ಇದ್ದಳು. ಆಕೆಯನ್ನು ಕರೆದುಕೊಂಡು ಬಂದು ವಿಚಾರಿಸಲಾಗಿ—ನಿನಗೆ ಯಾರು ಹೇಳಿ ಕಳುಹಿಸಿದರು ? ಎಂದು ಕೇಳಲಾಗಿ ಆಕೆ—ಸ್ವಾಮಿ, ನನಗೆ ಈ ಬ್ರಾಹ್ಮಣ ಈ ಅಕ್ಕಾಚಾರಿ ಕೂಡಿಕೊಂಡು ನನ್ನನ್ನು ಕಳುಹಿಸಿದರು ಅಂದಳು ಆಗ ಜಮಾದಾರರು—ನೋಟು ತೆಗೆದುಕೊಂಡೆಯಾ ಎಂದು ವಿಚಾರಿಸಲಾಗಿ—ಅಯ್ಯೋ ಸ್ವಾಮಿ ನಾನು ಕಾಣೆನೆಂತ ಹೇಳಿದಳು ಅಕ್ಕಾಚಾರಿಯನ್ನೂ ಬ್ರಾಹ್ಮಣನನ್ನೂ ಕರೆಯಿಸಿ ವಿಚಾರಿಸಲಾಗಿ ಅವರು ಈ ಮಾತಿಗೆ ಒಪ್ಪಲಿಲ್ಲ ಅವರುಗಳಿಂದ ಕೈಫಿಯತ್ತು ತೆಗೆದುಕೊಂಡು ಬಿಟ್ಟಿರುತ್ತಾರೆ ಜಿ ಎಸ್

ಬಿನ್ನೂರಿನ ಬೇಬಂದು.

ಅಯ್ಯಾ,

ಈಗ ನಾನು ವಾಸಿಸುವ ಬಿನ್ನೂರು ಗ್ರಾಮವು ಟಿ ನರಸೀಪುರದ ತಾಲ್ಲೂಕಿಗೆ ಸೇರಿದೆ ಈ ಬಿನ್ನೂರು ಗ್ರಾಮವು ಬಹಳ ಕಾಲದಿಂದ ಖೂನಿ ದರೊಡೆ ಮುಂತಾದ ಘಂದು ಕೃತ್ಯಗಳಿಗೆ ಬಹಳ ಪ್ರಸಿದ್ಧಿ ಹೊಂದಿರುವದು ಸರ್ವರಿಗೂ ವೇದ್ಯವೇ ಇರುವದು ಇದಕ್ಕಾಗಿ ದಯಾಳುಗಳಾದ ಸರ್ಕಾರದವರು ಜನಗಳ ಸಂರಕ್ಷಣೆಗೋಸ್ಕರ ಈ ಊರಲ್ಲಿ ವಿಶೇಷವಾದ ಪೋಲೀಸು ಶಿಬ್ಬಂದಿಯನ್ನು ಏರ್ಪಾಡು ಮಾಡಿರುತ್ತಾರೆ ಪೋಲೀಸು ಸಿಬ್ಬಂದೀಗೋಸ್ಕರ ಸರ್ಕಾರದವರು ಸಾವಿರಾರು ರೂಪಾಯಿಗಳನ್ನು ಖರ್ಚು ಮಾಡಿ ಊರು ಮುಂಭಾಗದಲ್ಲಿ ಪ್ರತಿ ಒಬ್ಬ ಕಾನ್‌ಸ್ಟೆಬಲ್, ದಫೆದಾರ್ ಮತ್ತು ಜಮೇದಾರರಿಗೂ ಅವರವರ ಸಂಸಾರಗಳಿಗೆ ಅನುಕೂಲವಾಗುವಂತೆ ಸ್ಪೇಷಲ್ ಕಟ್ಟಿಸಿಟ್ಟಿಸಿರುತ್ತಾರೆ ಇತರ ಸ್ಥಳಗಳಲ್ಲಿ ಇರುವ ಪೋಲೀಸ್ ಶಿಬ್ಬಂದಿಗಳಿಗಿಂತಲೂ ಈ ಮಾಹುಸ್ಥಳದಲ್ಲಿ ಅತಿಶಯವಾಗಿ ಇದ್ದಾಗ್ಯೂ ಈ ಊರಲ್ಲಿ ನಡಿಯತಕ್ಕ ಘಂಡುತನ ಕಳ್ಳತನ ಮೊದಲಾದ್ದು ದಿನೆದಿನೆ ಹೆಚ್ಚುತ್ತಲೇ ಇದೆ. ಕೆಲವು ದಿನಗಳ ಹಿಂದೆ ಇವುಗಳೆಲ್ಲಾ ಸ್ವಲ್ಪ ಕಡಿಮೆಯಾಗಿದ್ದು ಕೆಲವು ದಿವಸಗಳಿಂದೀಚೆಗೆ ರಾತ್ರಿ ಕಾಲದಲ್ಲಿ ಕಳ್ಳರ ಅವಾಂತ್ರ ಬಹಳವಾಗಿ ಇದೆ ಇಲ್ಲಿ ವಾಸಮಾಡುವ ಜನರು ರಾತ್ರಿ ಕಾಲವನ್ನು ಪ್ರತಿ ದಿವಸವೂ ಒಂದು ಯುಗದೋಪಾದಿಯಲ್ಲಿ ಕಳಿಯಬೇಕಾಗಿ ಇರುತ್ತೆ ಪ್ರತಿ ಒಂದು ಮನೆಯಲ್ಲೂ ನಿರ್ಭೀತಿಯಿಂದ ರಾತ್ರಿ ನಿದ್ರೆ ಮಾಡುವವರು ಯಾರೂ ಇಲ್ಲ. ಪ್ರತಿದಿವಸ ಬೆಳಿಗ್ಗೆ ಎದ್ದು ಹೊರಕ್ಕೆ ಬಂದಾಗ "ರಾತ್ರಿ ನಮ್ಮ ಮನೆಯಲ್ಲಿ ಕಳವಾಯಿತು," "ನಮ್ಮ ಮನೆಯಲ್ಲಿ ಕಳವಾಯಿತು" ಎಂದು ಜನಗಳು ಪರಸ್ಪರ ಮಾತನಾಡುತ್ತಿರುವದೇ ಒಂದು ವಿಶೇಷ ವರ್ತಮಾನವಾಗಿದೆ ಮೊನ್ನೆ ದಿನ ರಾತ್ರಿ ಅಂಗಡಿ ಬೀದಿಯಲ್ಲಿ ತಿಪ್ಪಯ್ಯಶೆಟ್ಟಿ ಮನೆಗೆ ಕಳ್ಳರು ಬಿದ್ದು ಸುಮಾರು ಒಂದು ಸಾವಿರ ರೂಪಾಯಿ ಬಾಳತಕ್ಕ ನಗಗಳನ್ನೂ, ನಗದು ಸ್ವಲ್ಪ ಹಣವನ್ನೂ, ಪಾತ್ರೆ ಪದಾರ್ಥಗಳನ್ನೂ ಹೊತ್ತುಕೊಂಡು ಹೋದರು ಅದೇ ದಿವಸ ರಾತ್ರಿ ಭತ್ತದ ವ್ಯಾಪಾರ ಮಾಡುವ ಗಂಗಡಕಾರ ಜಾತಿ ಕೇಶಿ ಎಂಬವಳ ಮನೆಗೆ ನುಗ್ಗಿ ಅವಳ ಬಾಯಿಗೆ ಬಟ್ಟೆ ತುರುಕಿ ಕಂಠದಲ್ಲಿದ್ದ ಚಿನ್ನದ ಗುಂಡುಗಳನ್ನು ಕಿತ್ತುಕೊಂಡು ಹೋದರು ಈಗ್ಗೆ ಎಂಟು ದಿವಸಗಳ ಹಿಂದೆ ರಾಮಸ್ವಾಮಿ ನಾಲಾ ಮಣೇಗಾರರ ಮನೆ ಬೀಗ ಮುರಿದು, ಇದ್ದ ಸಾಮಾನುಗಳನ್ನೆಲ್ಲಾ ಹೊತ್ತುಕೊಂಡು ಹೋದರು ಸ್ಕೂಲ್ ಮಾಸ್ಟರು ಗೋಪಾಲಯ್ಯನವರ ಮನೆಗೆ ಸುಮಾರು ೧೫ ದಿನಗಳ ಕೆಳಗೆ ನುಗ್ಗಿ ಇದ್ದ ಸಾಮಾನುಗಳನ್ನೆಲ್ಲಾ ಹೊತ್ತುಕೊಂಡು ಹೋದರು ಇಲ್ಲಿ ಇರತಕ್ಕಂಥಾ ಬಡಬಗ್ಗರು ಈ ಕಳ್ಳರ ಅವಾಂತ್ರದಿಂದ ಜೀವಿಸುವದೇ ಬಹಳ ಕಷ್ಟ ಈ ಊರು ಸುಮಾರು ನಾಲ್ಕೈದುಸಾವಿರ ಪ್ರಜಾಸಂಖ್ಯೆಯುಳ್ಳದ್ದಾಗಿದೆ. ಇಷ್ಟು ದೊಡ್ಡ ಗ್ರಾಮವಾಗಿದ್ದಾಗ್ಯೂ ಮತ್ತು ಪೋಲೀಸ್ ಶಿಬ್ಬಂದಿ ಹೆಚ್ಚಾಗಿ ಇಟ್ಟಿದ್ದಾಗ್ಯೂ ಇಂಥಾ ಅನಾಹುತಗಳು ನಡಿಯುತ್ತಾ ಇವೆ ಒಂದು ದಿವಸವಾದರೂ ಪೋಲೀಸಿನವರು ರಾತ್ರಿ ಬೀಟು ಬಂದದ್ದೇ ಕಾಣುವದಿಲ್ಲ ಇಲ್ಲಿನ ಜನಗಳ ಗೋಳಾಟ ಇಷ್ಟಿಷ್ಟೆಂದು ಹೇಳಲಿಕ್ಕೆ ಆಗುವದಿಲ್ಲ. ದಯಾಳುವಾದ ಸರ್ಕಾರದವರು ಈ ಗ್ರಾಮವಾಸಿಗಳ ಚೋರಭಯ ಪ್ರಳಾಪವನ್ನು ಪರಿಹರಿಸುವದಕ್ಕೋಸ್ಕರ ತಕ್ಕ ಏರ್ಪಾಡುಗಳನ್ನು ಶೀಘ್ರದಲ್ಲೇ ಮಾಡುತ್ತಾರೆಂದು ನಂಬಿ ಇದೇವೆ. ಬಿನ್ನೂರು ನಿವಾಸಿ

ತಾಲ್ಲೋಕು ವರ್ತಮಾನಗಳು

ತಿಪಟೂರು.—ಈಗ ಸುಗ್ಗಿ ಕಾಲವಾದಾಗ್ಯೂ ಧಾರಣೆವಾಸಿಗಳು ಇನ್ನೂ ಇಳಿದಿಲ್ಲ. ಬಡಬಗ್ಗರಿಗೆ ತುಂಬಾ ತೊಂದರೆಯಾಗಿದೆ ಇದೇ ತಿಂಗಳು ತಾ ೧೭ ರಲ್ಲು ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್ ಮ॥ ಹಾರ್ ಸಾಹೇಬರವರು ಇಲ್ಲಿಗೆ ದಯಮಾಡಿಸಿ ಪೋಲೀಸ್ ಆಫೀಸ್ ಇನ್ಸ್‌ಪೆಕ್ಷನ್ ಮಾಡಿಕೊಂಡು ಪೇಟೆಗೆ ಬಂದು ವರ್ತಕರು ಮಾಡಿದ ಮರ್ಯಾದೆಯನ್ನು ಸಂತೋಷದಿಂದ ಸ್ವೀಕರಿಸಿ ಪ್ರಜೆಗಳ ಅಹವಾಲನ್ನು ವಿಚಾರಿಸಿಕೊಂಡು, ಟವನ್ನೆಲ್ಲಾ ನೋಡಿಕೊಂಡು ದಯಮಾಡಿದರು. ಈ ಊರಿಗೆ ಹೊಸದಾಗಿ ಬಂದಿರುವ ಹಾಸ್ಪಿಟಲ್ ಅಸಿಸ್ಟೆಂಟ್ ಮ॥ ಪಾಪಯ್ಯನವರು ಬಹಳ ಶಾಂತ ಮನಸ್ಸುಳ್ಳವರಾಗಿಯೂ, ತುಂಬಾ ಚಾಳಿಗಳಾಗಿಯೂ ಇರುತ್ತಾರೆ ಮೊದಲಿದ್ದ ಆಸ್ಪಿಟಲ್ ಅಸಿಸ್ಟೆಂಟರು ಜನಾನುರಾಗಿಗಳಾಗಿರಲಿಲ್ಲವಾದ್ದರಿಂದ ಈಗ ಬಂದವರು ಆ ರೀತಿ ಮಾಡದೆ ರೋಗಿಗಳ ಕಷ್ಟಸುಖಗಳನ್ನು ವಿಚಾರಿಸಿ ಮುತುವರ್ಜಿ ಮಾಡಬಹುದೆಂದು ನಂಬಿದ್ದೆವು. ಈಗ ನಮ್ಮ ಅಸಿಸ್ಟೆಂಟರು ಇನ್ನು ಮೇಲಾದರೂ ಆಸ್ಪತ್ರೆ ಸಮಯದಲ್ಲಿ ಸ್ನೇಹಿತರೊಂದಿಗೆ ಸಂಗಲ ಸಂಭಾಷಣೆಯನ್ನು ಬಿಟ್ಟು ಬಡ ರೋಗಿಗಳ ಮೇಲೆ ಅಭಿಮಾನವಿಟ್ಟು ಅವರ ಕಷ್ಟಸುಖಗಳನ್ನು ವಿಚಾರಿಸಿ ಔಷಧಿಯನ್ನು ಕೊಟ್ಟು ಕಷ್ಟಗಳನ್ನು ನಿವಾರಣೆ ಮಾಡಿ ಕೀರ್ತಿಭಾಜನರಾದಾರೆಂದು ನಂಬಿದ್ದೇನೆ

ಹೊಸದುರ್ಗ.—ಕೆಲವು ಕಡೆ ಕಣದ ಕೆಲಸ ಮುಗಿಯುತ್ತಾ ಬಂತು ಈಗ ಧಾರಣೆವಾಸಿ ರಾಗಿ ಸೇರು ೨೦, ಅಕ್ಕಿ ಸೇರು ೧೦ ಮಾರಾಟವಾಗುತ್ತೆ. ಇಲ್ಲಿಗೆ ಚಿಕ್ಕನಾಯ್ಕನ ಹಳ್ಳಿ ನಾಟಕದ ಕಂಪನಿಯವರು ಬಂದು ಕೆಲವು ನಾಟಕಗಳನ್ನು ಆಡಿದರು ಇವರು ಇಲ್ಲಿಂದ ಬೆಲಗೂರಿಗೆ ಹೋಗುವರೆಂದು ವಾಹಿನಿ —ಬೋಧಿಕಾಲ್‌ಗೆ ತಾ. ೧೭ ನೇ ದಿನ ದಾವಣಗೆರೆಯಿಂದ ಮ॥ ಚಾಂದೀ ಸಾಹೇಬರು ಹುಜೂರ್ ಜಮಾಬಂದಿಗಾಗಿ ಬಂದಿದ್ದರು. ಅಮಲ್ದಾರರೊಂದಿಗೆ ಜಮಾಬಂದಿ ನಡೆಯಿತು ರಹಿತಾಪಿ ಜನರು ಬಹು ಜನ ಸೇರಿದ್ದರು ಸುಮಾರು ರಾತ್ರಿ ೯ ಘಂಟೆ ವರೆಗೆ ಜಮಾಬಂದಿ ನಡಿಯಿತು ಅನೇಕರ ತಕರಾರುಗಳನ್ನು ವಿಚಾರಿಸಲು ಸಮಯ ಸಾಲದೆ ಯಾವದಾದರೊಂದು ನೆಪದಿಂದ

ಜೇಗಳು ಕೆಲವು ವಾಪಸು ಆದವು ಬೆಲಗೂರು ಗ್ರಾಮದಲ್ಲಿ ಈಗ್ಗೆ ಮೂಕು ಅರ್ಜಿಗಳನ್ನು ಯಾರೋ ಬರೆಯುತ್ತಿರುವರು. ವಿಷಯದ ಸಂಗತಿಗಳು ಇದ್ದ ಧೈರ್ಯದಿಂದ ರೂಬರೂಬು ಅರ್ಜಿಗಳನ್ನು ಕೋರ್ಟ್ ಸರ್ಕಾರದವರು ವಿಚಾರಿಸ್ಯಾರು. ಈ ಗ್ರಾಮದ ಕೆಲ ದ್ವೇಷ ಮನುಷ್ಯರು ಸಂಗಡಗಳನ್ನು ಕಟ್ಟುವುದನ್ನು ಬಿಟ್ಟು ಅನ್ಯೋನ್ಯವಾಗಿ ಇದ್ದರೆ ಗ್ರಾಮ ಅಭಿವೃದ್ಧಿಗೆ ಬಂದೀತು. ಬೆಲಗೂರಿಗೆ ೩ ಮೈಲು ದೂರದಲ್ಲಿರುವ ನಾಗಪ್ಪರು ತಿಮ್ಮನೆಂಬುವನು ನಿಂಗ ಸಂಬಂಧವಾದ ಕೇಸನ್ನು ಕ್ರಿಮಿನಲ್ ವಿಚಾರಣೆಯಿಂದ ೧೦ ರೂ ಜುಲ್ಮಾನೆಯೂ ೩ ದಿನ ಸಜಾವೂ ಆಗಿತ್ತಷ್ಟೆ. ಈಚೆ ಅಪೀಲಿನಲ್ಲಿ ಅವರಿಗೆ ಶಿಕ್ಷೆ ಖುಲಾಸ್ ಆಯಿತೆಂದು ಕೇಳುತ್ತೇವೆ.

ಬ್ರಾಹ್ಮಾವಾರ — ಈ ಊರಿನಲ್ಲಿ ಪ್ಲೇಗ್ ಪ್ರಾರಂಭವಾಗಿ ಸುಮಾರು ಒಂದು ತಿಂಗಳಾಗುತ್ತಾ ಬಂತು ಇನ್ನೂ ಶಾಂತವಾಗಲಿಲ್ಲ ಪ್ರತಿ ದಿನ ೨-೩ ಕೇಸುಗಳು ಆಗುತ್ತಲೇ ಇವೆ. ಹೊಸದುರ್ಗದಿಂದ ಈ ಗ್ರಾಮಕ್ಕೆ ಬಂದ ಈ ರೋಗದಿಂದ ಈವರಿಗೆ ೪೦ ಜನಗಳವರೆಗೆ ಕಾಲವಾದರು. ಅಂಟುಜಾಡ್ಯವೆಂಬುದು ಜನಗಳಿಗೆ ಗೊತ್ತಿದ್ದರೂ ಮಂಕು ಜನಗಳ ಮತಿಗೆ ಮರುಳಾಗಿ ಊರನ್ನು ಬಿಡದೆ ರೋಗವನ್ನು ಹಬ್ಬಿಸಿದರು. ಕೆಲವರು ಮನಸ್ಸಿನ ರೋಗವನ್ನು ಅಡಗಿಸುವುದಕ್ಕೆ ಈ ಸೀಮೆಯ ನಲ್ಲ ಗ್ರಾಮದೇವತೆಗಳನ್ನು ಬಹಳವಾಗಿ ಬಲಿ ಪೂಜೆ ನಮಸ್ಕಾರಗಳಿಂದ ಸಂತವಿಟ್ಟರೂ ರೋಗನಿವಾರಣೆಯಾಗಲಿಲ್ಲ. ನಮ್ಮ ಆಸ್ಪತ್ರೆ ಅಸಿಸ್ಟೆಂಟರು ಬಹಳ ವಿಶ್ವಾಸದಿಂದ ಪ್ರತಿ ರೋಗಿಗೂ ಔಷಧ ಕೊಡುತ್ತಾರೆ. ಆದರೆ ನಮ್ಮ ಗ್ರಹಚಾರದಿಂದ ಔಷಧಿಗೆ ಹೋದ ಕಾಲದಲ್ಲಿ ಕವಾಟಬಂಧನವಾಗೇ ಇರುತ್ತದೆ — ಪ್ಲೇಗ್ ಷೆಡ್ಡಿನಲ್ಲಿ ಪೋಲೀಸು ಗಸ್ತು ಚೆನ್ನಾಗಿ ನಡೆಯುತ್ತಾ ಇದೆ. ಇಲ್ಲಿಗೆ ಸಮೀಪ ಒಂದು ಮೈಲಿ ಫಾಸಲೆಯಲ್ಲಿರುವ ಸುಳಿದಿಮ್ಮನಹಳ್ಳಿ ಎಂಬ ಗ್ರಾಮದಲ್ಲಿ ೧೦ನೆ ತಿಂಗಳು ರಾತ್ರಿ ಮಧ್ಯಾಹ್ನ ೩ ಘಂಟೆ ಸಮಯದಲ್ಲಿ ಬೆಂಕಿ ಬಿದ್ದು ೨೦ ಮನೆಗಳು ಅದರಲ್ಲಿದ್ದ ಕಾಳು ಕಡ್ಡಿ ಬಟ್ಟೆ ಬರೆ ಸಹಾ ಬೆಂಕಿಯ ಪಾಲಾಯಿತು. ದೈವಾನುಗ್ರಹದಿಂದ ಪ್ರಾಣನಷ್ಟವೇನೂ ಉಂಟಾಗಲಿಲ್ಲ. ಬಡ ಜನಗಳ ಗೋಳಾಟವು ಹೇಳತೀರದು. ಈ ಅನಾಹುತವನ್ನು ಆಶ್‌ಮಾಷ್ ಗ್ರಾಮಸ್ಥರು ಕಂಡು ಓಡಿಬಂದು ೬ — ೭ ಮನೆಗಳನ್ನು ಉರಿಯಿಂದ ತಪ್ಪಿಸಿದರು. ಬೆಂಕಿಯು ೨—೩ ದಿವಸಗಳ ಮೇಲೆ ಎಲ್ಲೋ ಹಾಗೆ ಧಗಿಸಿಬಿಟ್ಟಿತು. ಈ ಸಮಯದಲ್ಲಿ ತಂಟೆ ಮತ್ತು ವರ್ಜಿಯ ನನ್ನ ಉಪಕಾರವನ್ನು ಸ್ವಾಮಿ ಆರಕೆರೆ ಶ್ಯಾನಭೋಗರ ನವರು ಬಡ ಜನಗಳಿಗೆ ಒಟ್ಟು ಸ್ವಲ್ಪ ಜೋಳವನ್ನು ಕೊಟ್ಟರು. ಇವರಿಗೂ ಬೆಂಕಿಯನ್ನು ಸಾಹಸಪಟ್ಟು ಆರಿಸಿದವರನ್ನು ಕಾಪಾಡಿದಂಥಾ ಮೆಂಬರ್ ರಾಮಣ್ಣನವರಿಗೂ ಶ್ಯಾನಭೋಗ ಕೃಷ್ಣಪ್ಪನವರಿಗೂ, ಇನ್ನೂ ಮುಂತಾದ ಮಹನೀಯರಿಗೂ ಈ ಸಮಯದಲ್ಲಿ ಸಹಾಯಮಾಡಿದ ಇತರ ಗ್ರಾಮಸ್ಥರಿಗೂ ಭಗವಂತನು ಶ್ರೇಯಸ್ಸನ್ನು ಮಾಡಲೆಂದು ಹಾರೈಸುತ್ತೇನೆ.

ಚಿಕ್ಕಮಗಳೂರು — ಶೃಂಗೇರಿಗೆ ದಯಮಾಡಿಸಿದ್ದ ನಮ್ಮ ಮಹಾರಾಜರವರ ದರ್ಶನಕ್ಕಾಗಿ ತರೀಕೆರೆಗೆ ಹೋಗಿದ್ದ ಈ ಡಿಸ್ಟ್ರಿಕ್ಟಿನ ಅಧಿಕಾರಿಗಳೆಲ್ಲಾ ಸುಮಾರು ಎರಡು ವಾರಗಳಿಂದಲೂ ಆ ಪ್ರಾಂತ್ಯದಲ್ಲೇ ತಮ್ಮ ಕೆಲಸವನ್ನಿಟ್ಟುಕೊಂಡಿದ್ದು ಶೃಂಗೇರಿಗೆ ಹೋಗಿರುವ ಈ ಸಂಸ್ಥಾನದ ದಿವಾನರವರನ್ನು ಸಂಧಿಸಿ ಅವರ ಸಂಗಡಲೇ ಬರುವರೆಂದು ವರ್ತಮಾನ. ನಮ್ಮ ಸಂಸ್ಥಾನದ ದಿವಾನರಾದ ಮಿ॥ ವಿ ಪಿ ಮಾಧವರಾಯರು ಇದೇ ತಿಂಗಳು ೭ನೇ ಶೃಂಗೇರಿಯಿಂದ ಮುಡೇಹಳ್ಳಿ ಮತ್ತೀಕೆರೆ ಮಾರ್ಗವಾಗಿ ಇಲ್ಲಿಗೆ ಬಂದ ಎರಡು ದಿವಸಗಳಿದ್ದು ೮ನೇ ತಾ ಇಲ್ಲಿಂದ ಬೂಕನಕೆರೆ ಮಾರ್ಗವಾಗಿ ಸಕಲೇಶಪುರದ ಕಡೆ ಹೊರಟರೆಂದು ತಿಳಿದು ಬಂದಿದೆ. ಸಂಸ್ಥಾನದ ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್ ಸಾಹೇಬರವರು ೧೧ ನೇ ಬೇಲೂರು ಮಾರ್ಗವಾಗಿ ಇಲ್ಲಿಗೆ ಬಂದು ಇಲ್ಲಿಂದ ೧೨ನೇ ಕಡೂರು ಮಾರ್ಗವಾಗಿ ಹೊರಡುವರೆಂದು ಕೇಳುತ್ತೇನೆ — ಈಗ ಈ ಊರಿನಲ್ಲಿ ಸಂತೆ ನಡೆಯುವ ಸ್ಥಳವು ಊರಿಗೆ ಕಡೆಯಲ್ಲಿರುವುದರಿಂದ ಇಲ್ಲಿನ ಕೋಟೆಯ ಕಡೆಯಿಂದ ಸಂತೆಗೆ ಹೋಗುವ ಜನರಿಗೆ ಬಹಳ ತೊಂದರೆಯಾಗಿದೆ. ಈ ಬಿಸಿಲು ಕಾಲದಲ್ಲಿ ಅಷ್ಟು ದೂರ ಹೋಗಿ ಸಾಮಾನು ಸಾಗಿಸಿಕೊಂಡು ಬರುವುದು ಕಷ್ಟ. ಇದೂ ಅಲ್ಲದೆ ಆ ಸಂತೆ ನಡೆಯುವ ಜಾಗದಲ್ಲಿ ಮುಸ್ಲಮಾನರ ಗೋರಿಗಳು ಇವೆ. ಆ ಗೋರಿಗಳು ಇರುವ ಜಾಗದಲ್ಲಿ ಮರಗಳ ಕೆಳಗೆ ಜನರು ಬಿಸಿಲಿನ ತಾಪಕ್ಕಾಗಿ ನೆರಳಿನಲ್ಲಿ ಕೂತುಕೊಳ್ಳುವುದಕ್ಕಾಗಿ ಹೋದರೆ ಆ ಜನರ ಕೂತುಕೊಳ್ಳುವ ಜನರನ್ನು ಹೊಡಿಯುವುದೂ ಕೈಯ್ಯುವುದೂ ಅವಮಾನಕರವಾದ ಮಾತುಗಳನ್ನಾಡುವುದೂ ಹೀಗೆಲ್ಲಾ ಮಾಡುತ್ತಾರಾದ್ದರಿಂದ ಮೊದಲಿನ ಸ್ಥಳದಲ್ಲಿಯೇ ಸಂತೆ ನಡೆಯುವಂತೆ ಮಾಡಿದುದಾದರೆ ಮೇಲೆ ಹೇಳಿದ ಕಷ್ಟಗಳೆಲ್ಲಾ ತಪ್ಪಿಹೋಗುವದರಲ್ಲಿ ಸಂದೇಹವಿಲ್ಲ. ಇದನ್ನು ನಮ್ಮ ಡೆಪ್ಯುಟಿ ಕಮಿಷನರ್ ಸಾಹೇಬರವರು ಯೋಚಿಸಿ, ಸುತೆಕೆಯನ್ನು ಮೊದಲಿದ್ದ ಸ್ಥಳಕ್ಕೆ ಬದಲಾಯಿಸಲು ಅಪ್ಪಣೆ ಕೊಡುವುದಾದರೆ ತುಂಬಾ ಉಪಕಾರವಾಗುತ್ತದೆ. ಸಂಸ್ಥಾನದ ಸೀನಿಯರ್ ಸರ್ಜನ್ ಸಾಹೇಬರವರು ಸಹ ಇಲ್ಲಿಗೆ ಮುಂದಿನ ವಾರ ಬರುವರೆಂದು ವರ್ತಮಾನ. ದಿವಾನ್ ಸಾಹೇಬರವರು ಇಲ್ಲಿಗೆ ಬಂದಾಗ್ಗೆ ಇಲ್ಲಿನ ಹೈಸ್ಕೂಲಿನ ವಿದ್ಯಾರ್ಥಿಗಳಿಗೆ ಬಹುಮಾನ ಕೊಡುವ ಏರ್ಪಾಡು ನಡೆಯುವದೆಂದು ಕೇಳುತ್ತೇನೆ.

ಕುಣಿಗಲು — ತಾ ೧೬ ನೇ ದಿನ ೩ ಘಂಟೆಗೆ ಸರಿಯಾಗಿ ಮೈಸೂರು ಧೊರೆಗಳು ಯುವರಾಜರೊಡನೆಯೂ ಮಿತ್ರರೊಡನೆಯೂ ಮೋಟಾರ್ ಗಾಡಿಯಲ್ಲಿ ದಯಮಾಡಿಸಿದರು. ಇವರ ಆಗಮನಕ್ಕೆ ತಕ್ಕ ಅವಶ್ಯ ಏರ್ಪಾಡುಗಳೆಲ್ಲಾ ಪೂರ್ಣ ಭಾವಿಯಾಗಿ ಏರ್ಪಡಿಸಲ್ಪಟ್ಟವು. ಅಮಲ್ದಾರರು ಡಿ ಕ ಸಾಹೇಬರು ಖಾಸಾ ಭೇಟಿ ಆದಕೂಡಲೇ ವೈದಿಕ ಮಂಡಲಿಯಿಂದ ಶ್ರೀಯಾಶೀರ್ವಾದನೆಯು ಘನಮಂತ್ರಾಕ್ಷತೆ ಅರ್ಪಿಸಲಾಯಿತು. ಕೆಲವು ಮುಖ್ಯರ ಭೇಟಿಯೂ ಹಾರ ತುರಾಯಿಗಳ ಮರ್ಯಾದೆಯೂ ಜರಗಿತು. ನೋಟಕರು ಮೂರು ಮೈಲಿ ವರಿಗೂ ಸಾಲುಕಟ್ಟಿದ್ದರು. ಪೋಲೀಸಿನವರ ಅನಿಕಾರವೂ ವಿವೇಕವೂ ವಿಶಿಷ್ಟವಾಗಿತ್ತು. ಅವಲ್ದಾರರ ಮೊಕನತ್ತು ಬಹು ಹೆಚ್ಚಾಗಿದೆ. ಖಾವಂದರೂ ಯುವರಾಜರೂ ಸೆಕ್ರೆಟರಿಗಳೂ ಇಲ್ಲಿರುವ ಕಾದಂಬರಿ ಘರಂಗಳನ್ನು ನೋಡಲಿಕ್ಕೆ ಚಿತ್ತೈಸಿದಂತೆ ತಿಳಿಯಲಾಗಿದೆ. ಅಂತು ಈ ವಿಧವಾಗಿ ಮೈಸೂರು ಶ್ರೀಮನ್ಮಹಾರಾಜರವರು ಆಗಾಗ್ಗೆ ತಮ್ಮ ಪ್ರಜೆಗಳಿಗೆ ಮುಖ್ಯ ದರ್ಶನವನ್ನು ಕೊಡುವದಲ್ಲದೆ ಇಲ್ಲಿರುವ ಪ್ರಜೆಗಳ ಕಷ್ಟ ಸುಖಗಳನ್ನು ಸ್ವತಹಾ ತಿಳಕೊಳ್ಳುವುದು ಅತ್ಯಂತ ಅನುಕೂಲವೇ ಸರಿ. ಅವರು ನಾಳೆ ಮಧ್ಯಾಹ್ನ ವಾಪಸು ಬೆಂಗಳೂರಿಗೆ ಚಿತ್ತೈಸುವರು — ಕಾದಂಬರಿ ಘರಂವಿನ ತೀರ್ಮಾನ ಪ್ರಕಟವಾಗಿಲ್ಲ. ಇಲ್ಲಿನ ಆರೋಗ್ಯವು ಕೂಡಿದ ಮಟ್ಟಿಗೆ ಅನುಕೂಲವಾಗಿದೆ. ಆದರೂ ಕೆಲ್ಲೆಗೆ ಸೀಪಟೆಯಷ್ಟು ಒಳ್ಳೇದಲ್ಲವೆಂತ ತೋರಿದೆ. ಬಾವಿ ಕೆರೆಗಳಿಂದ ನೀರಾವರಿ ಕಾಮಗಾರಿಗಳೂ ತೋಟ ಗದ್ದೆ ಮುಂತಾದವುಗಳಿಂದ ತುಂಬಿ ವಸತಿಯಾಗಿದೆ. ಕುಣಿಗಲು ಗ್ರಾಮ ಮಾತ್ರ ಪೂರಾ ಹಳೇದು. ಅಂಗಡಿಬೀದಿ ಅರ್ಧಮೈಲು ಉದ್ದವೂ ೮—೧೦ ಗಜಗಳ ಅಗಲ ಮಾತ್ರವೂ ಇದೆ. ಮನೆಗಳು ಬಹು ಒತ್ತಾಗಿ ಜನರಿಂದ ತುಂಬಲ್ಪಟ್ಟಿವೆ. ಸಂದು ಓಣಿಗಳಲ್ಲಿ ಹೇಸಿಕೆಯಂತೂ ಹೇಳತೀರದು. ನಾಗರೀಕವಾದ ನೂತನ ಮನೆಗಳಿಲ್ಲ. ಪೂರ್ವದಲ್ಲಿ ಈ ಊರು ಗಂಡೆಹೊಟ್ಟೆಗಳಿಂದ ತುಂಬಾ ಅನಾರೋಗ್ಯವಾಗಿತ್ತಂತೆ. ಈಗ ಹ್ಯಾಗೂ ನಾನು ಜನರು ದೃಢಕಾಯರಲ್ಲ. ಮ್ಯುನಿಸಿಪಾಲಿಟಿ ವಿಷಯ ತುಂಬಾ ವ್ಯಸನಪಡಬೇಕಾಗಿದೆ. ಗಲ್ಲಿ ಜು ಕೊಳೆಕೆಗೆ ಇದು ತವರುಮನೆಯಾಗಿದೆ. ಕಾದಂಬರಿ ಘರಂ ಮಾತ್ರ ಬಹು ರುಚಿಯೂ ಅಲಂಕಾರವಾಗಿಯೂ ಇರುವುದು. ಮಿಲ್ಟರಿ ಸೆಕ್ರೆಟರಿ ಜೋನ್ಸ್ ಸಾಹೇಬರೂ ಅವರ ಮಿತ್ರರೂ ಬಂದಿದ್ದಾರೆ. ಕಷ್ಟ ಸುಖಗಳನ್ನು ವಿಚಾರಿಸುವಂತೆಯೂ ಮುಖ್ಯಾಧಿಕಾರಿಗಳು ಆಗಾಗ್ಗೆ ದಯಮಾಡುತ್ತಾರೆ. ಈ ಊರು ಕೆರೆ ಸುತ್ತಳತೆ ೧೪ ಮೈಲಿಯಂತೆ, ಇಲ್ಲಿ ನಾಗರೀಕವು ವಿಶೇಷವಾಗಿದೆ.

ಶೃಂಗೇರಿ — ನಮ್ಮ ಜಗದ್ಗುರುಗಳಾದ ಶ್ರೀಶೃಂಗೇರಿ ಸ್ವಾಮಿಗಳವರು ಈಗ ಸುಮಾರು ೪—೫ ತಿಂಗಳಿಂದಲೂ ಮಹಾಯಾತ್ರೆಗಾಗಿ ಶ್ರೀಕಾಶೀಕ್ಷೇತ್ರಕ್ಕೆ ಹೊರಡುತ್ತಾರೆಂದು ಬಹಳವಾಗಿ ವರ್ತಮಾನ ಹುಟ್ಟಿತಷ್ಟೆ. ಈ ಮಧ್ಯೆ ನಮ್ಮ ಶ್ರೀಮನ್ಮಹಾರಾಜರವರು ಶ್ರೀಮದ್ಯುವರಾಜರವರು ಮಹಾಮಾತೋಶ್ರೀ ವಾಣೀವಿಲಾಸ ಸನ್ನಿಧಾನದವರೊಡನೆ ಕಲ್ಕತ್ತಾದಿಂದ ಬೆಂಗಳೂರಿಗೆ ದಯಮಾಡಿ, ಬಹಳ ಮಿತವಾದ ಪರಿವಾರದೊಡನೆ ತರೀಕೆರೆ ಮಾರ್ಗವಾಗಿ ಶೃಂಗೇರಿಗೆ ಚಿತ್ತೈಸಿ, ಶ್ರೀಜಗದ್ಗುರುಗಳವರ ದರ್ಶನಾಶೀರ್ವಾದಗಳನ್ನು ಮಾಡಿಕೊಂಡು ಶ್ರೀಜಗದ್ಗುರುಗಳನ್ನು ರಾಜಧಾನಿಯಾದ ಮೈಸೂರು ಪಟ್ಟಣಕ್ಕೆ ಬರಬೇಕೆಂಬದಾಗಿ ಕೇಳಿಕೊಂಡು ಸ್ವಾಮಿಗಳ ಅನುಗ್ರಹವನ್ನು ಪಡೆದುಕೊಂಡು ಬೆಂಗಳೂರಿಗೆ ವಾಪಸು ಚಿತ್ತೈಸಿದರು. ಈಚೆಗೆ ನಮ್ಮ ದಿವಾನರವರಾದ ಮಿ॥ ವಿ ಪಿ ಮಾಧವರಾಯರು ಶೃಂಗೇರಿಗೆ ದಯಮಾಡಿ ಶ್ರೀಗಳವರ ದರ್ಶನವನ್ನು ಮಾಡಿಕೊಂಡು ಬಂದರು. ಈ ಮಧ್ಯೆ ನಮ್ಮ ಜಗದ್ಗುರುಗಳ ದೇಶಸಂಚಾರಕ್ಕಾಗಿ ನಮ್ಮ ಶ್ರೀಮನ್ಮಹಾರಾಜಾ ಸರ್ಕಾರದವರು ಪ್ರತಿ ಒಂದು ತಾಲ್ಲೋಕಿಗೂ ಕೊಟ್ಟಿರುವ ನಿರೂಪ ಯಾ ರಹದಾರಿ ಫಲಿತಾಂಶವೇನೆಂದರೆ — ಶ್ರೀಶೃಂಗೇರಿ ಸಚ್ಚಿದಾನಂದ ಶ್ರೀಜಗದ್ಗುರು ಶ್ರೀಶಿವಾಭಿನವನರಸಿಂಹ ಭಾರತೀಸ್ವಾಮಿಗಳವರು ಸನ್ ೧೯೦೭ ನೆ ಇಸವಿ ಜನವರಿ ೧೮ ನೇ ತಾರೀಖು ಯಾ ಆ ಸುಮಾರಿನಲ್ಲಿ ಶೃಂಗೇರಿಯಿಂದ ಪ್ರಯಾಣ ಮಾಡಿ ಬೆಂಗಳೂರು ಮಾರ್ಗವಾಗಿ ಮೈಸೂರು ಸಂಸ್ಥಾನದ ಕೆಲವು ತಾಲ್ಲೋಕುಗಳ ಮೂಲಕ ತಿರುಮಕೂಡಲು ಸಂಸ್ಥಾನದಲ್ಲಿರುವ ಕಾಳಟ ಎಂಬ ಸ್ಥಳಕ್ಕೆ ದಯಮಾಡಿಸುವದರಿಂದ ಸ್ವಾಮಿಗಳವರು ನಿಮ್ಮ ನಿಮ್ಮ ತಾಲ್ಲೋಕುಗಳಿಗೆ ದಯಮಾಡಿಸಿದ ಕಾಲದಲ್ಲಿ ನೀವು ಇಸ್ತಕಬಾಲು ಹೋಗಿ ಕೈದುವಾರು ಜಾಗಾ ಕೊಡಿಸಿ ಹುಲ್ಲು ಸೌದೆ ಅಕ್ಕಿ ಬೇಳೆ ಸಾಮಾನು ಮುಂತಾದ್ದು ವಾಜಿಬಿ ಖರೀದಿಗೆ ಸರಬರಾಯಿ ಮಾಡಿಸಬೇಕು. ಸ್ವಾಮಿಗಳವರು ಮಜೂರಿ ಆಳುಗಳನ್ನೂ ಪಾಲಕಿ ಬೋಯಿಗಳನ್ನೂ ಭಂಡಿಯೆತ್ತುಗಳನ್ನೂ ಅಪೇಕ್ಷಿಸಿದರೆ ಅವುಗಳನ್ನು ಸರಬರಾಯಿ ಮಾಡಿ ಉಚಿತ ಮಜೂರಿ ಕೊಡಿಸಬೇಕು. ರಾತ್ರಿ ಕಾಲದಲ್ಲಿ ಸ್ವಾಮಿಗಳವರಿಗೂ ಅವರ ಹಮರಹಾ ಬರುವವರಿಗೂ ಯಾವ ಬಾಧೆಯೂ ಇಲ್ಲದಂತೆ ತಕ್ಕ ಏರ್ಪಾಡು ಮಾಡತಕ್ಕದ್ದು. ಮತ್ತು ಸ್ವಾಮಿಗಳವರ ಹಿಂದೆ ಬರತಕ್ಕ ಕಾಲ್ಬಲದ ತಪಸೀಲು — ೩ ಆನೆಗಳು ೭ ಒಂಟೆಗಳು, ೨೫ ತುಪಾಕಿಗಳು, ೨೫ ಕತ್ತಿಗಳು, ೩೫ ಭಂಡಿಗಳು, ೭೦ ಭರ್ಜಿಗಳು, ೮ ಛತ್ರಿಗಳು, ೭ ಚಾಮರಗಳು, ೪ ಟೆಂಟುಗಳು, ೭೦೦ ಜನ ಬ್ರಾಹ್ಮಣರು, ೭೦೦ ಜನ ಬ್ರಾಹ್ಮಣೇತರರು, ಮೈಸೂರು ಸೈನ್ಯದ ೭೦ ಶಿಲೇದಾರರು, ಮೈಸೂರು ಸೈನ್ಯದ ೭೦ ಕುದುರೆಗಳು, ಮೈಸೂರು ಕಾಲುಬಲದ ೮ ಸಿಪಾಯಿಗಳು. ಇಷ್ಟೆಲ್ಲಾ ಸ್ವಾಮಿಗಳ ಹಮರಹಾ ಬರುತ್ತಾರೆ. ನಿಮ್ಮ ನಿಮ್ಮ ತಾಲೋಕುಗಳಲ್ಲಿ ಇವುಗಳಿಗೆ ಅಟಂಕವಿಲ್ಲದಂತೆ ನೋಡಿಕೊಳ್ಳತಕ್ಕದ್ದು ಎಂಬುದಾಗಿ ಗವರ್ನಮೆಂಟಿನಿಂದ ಹುಕುಂ ಆಗಿರುವದು.

ಕಡೂರು — ಈಗ ೬—೮ ದಿವಸಗಳಿಂದ ನಾವುಗಳು ಇರತಕ್ಕ ಕ್ಯಾಂಪುಗಳಲ್ಲಿ ನೀರು ಇಲ್ಲ. ಬಹಳ ತೊಂದರೆಯಾಗಿದೆ. ಅದಕ್ಕೆ ಮುಂದೆ ನಾವು ಇರತಕ್ಕ ಸ್ಥಳದಲ್ಲಿ ಒಂದು ಭಾವಿಯು ನೀರು ತುಂಬಿ ಇತ್ತು. ಅದು ಒಂದೆರಡುಸಾವಿರ ಜನಗಳು ನೀರು ತರುವುದರಿಂದ ೭ ದಿನಗಳಲ್ಲೇ ಖಾಲಿಯಾಯಿತು. ಆ ಮೇಲೆ ೧॥ ಫರಲಾಂಗ್ ದೂರದಲ್ಲಿ ಇರುವ ಸ್ಪೆಷಲ್ ಬಂಗಲೆಯಲ್ಲಿ ತಂದರು. ಅದು ೭ ದಿವಸದಲ್ಲೇ ಮುಗಿದುಹೋಯಿತು. ಆ ಮೇಲೆ ಅರ್ಧ ಮೈಲಿ ದೂರದಲ್ಲಿರುವ ಗೌರಿನಲ್ಲಿಯಲ್ಲಿ ತಂದರು. ಅದು ದಿವಸಕ್ಕೆ ಒಂದು ಕಡೆ ಸರಿಯಾಗಿ ಬಿಳಿತ್ತು. ಇಷ್ಟೊಂದು ಕಡೆ ನಿಮಿಷ ಒಂದಕ್ಕೆ ಒಂದು ತಂಬಿಗೆ ನೀರು ಬರುತ್ತೆ. ಅಲ್ಲಿ ಮೂರು ದಿನಗಳು ನೀರು ಬಂದು ನಿಂತುಹೋಯಿತು. ಆ ಮೇಲೆ ಮುಕ್ಕಾಲ ಮೈಲಿ ದೂರದಲ್ಲಿರುವ ಹಳ್ಳದಲ್ಲಿ ಒಂದು ದಿವಸ ತಂದರು. ಈ ಪ್ರಕಾರ ಊರೆಲ್ಲರೂ ತಿಳಿಸಿದ ಮೇಲೆ ನೀರು ಬಂದು ಬಂಗಲೆ ಭಾವಿಯಲ್ಲಿ ಅರ್ಧವನ್ನು ಕ್ಯಾಂಪಿನ ಭಾವಿಗೆ ಅರ್ಧವನ್ನು ಬಿಟ್ಟರು. ಬಂಗಲೆ ಭಾವಿ ಎತ್ತರವಾದ್ದರಿಂದ ಜಾಸ್ತಿ ತಂಟಿತು. ಕ್ಯಾಂಪಿನ ಭಾವಿಯಲ್ಲಿ ಸ್ವಲ್ಪ ಭಾಗ ತಂಟಿತು. ಆ ಮೇಲೆ ನೀರು ನಿಂತುಹೋಯಿತು. ಕ್ಯಾಂಪಿನ ಭಾವಿಯನ್ನು ೫ ಮಿನಿಟಿನಲ್ಲಿ ಖಾಲಿ ಮಾಡಿದರು. ಯಥಾಪ್ರಕಾರ ಎರಡು ಫರಲಾಂಗ್ ದೂರದಲ್ಲಿರುವ ಬಂಗಲೆ ಭಾವಿಗೇನೇ ಹೋಗಬೇಕಾಯಿತು. ಈಗ ೫೦ ವರುಷಗಳಿಂದಲೂ ಕಡೂರಿಗೆ ಇಂಥಾ ನೀರಿನ ಕಷ್ಟ ಬಂದಿರಲಿಲ್ಲ ಎಂದು ಹಿಂದಿನ ಮುದುಕರುಗಳೆಲ್ಲರೂ ಹೇಳುತ್ತಾರೆ. ಈಗ ಬಹಳವಾಗಿ ದೇವರ ದಯದಿಂದ ಮಳೆ ಬಂದು ಮದಗದ ಕೆರೆ ನೀರು ಕಾಡಿಯ ಎವವರೇ ದಿಕ್ಕಿಲ್ಲದ ಹಾಗೆ ವಿಪರೀತ ನೀರು ಭರ್ತಿಯಾಗಿದೆ. ಹೀಗೆ ಇದ್ದೂ ಕೂಡ ಇಂಥಾ ನೀರಿನ ತೊಂದರೆಯನ್ನು ಅನುಭವಿಸಬೇಕಾಗಿದೆ. ಮತ್ತು ಇಲ್ಲಿ ಮ್ಯುನಿಸಿಪಾಲಿಟಿ ಇಲಾ ಖೆಸರಿಯಾಗಿದ್ದರೂ ಮ್ಯುನಿಸಿಪಲ್ ಕಸ ತೆಗೆಯುವದು ೮ ದಿನಕ್ಕೊಂದಾವರ್ತಿ. ಆದರೂ ಮಧ್ಯಾಹ್ನ ೯ ಘಂಟೆಗೆ ತೆಗೆಯುತ್ತಾರೆ. ಮ್ಯುನಿಸಿಪಲ್ ಲಾಂದ್ರವನ್ನು ಹಚ್ಚುವದು ಕಂಟ್ರಾಕ್ಟ್ ಕೊಟ್ಟಿರುತ್ತಾರೆ. ಅವರು ರಾತ್ರಿ ೯—೯॥ ಘಂಟೆಗೆ ಹಚ್ಚುತ್ತಾರೆ. ೧೨ ೧೨॥ಗೆ ದೀಪ ಆರಿಹೋಗುತ್ತದೆ. ಮತ್ತು ಆ ಲಾಂದ್ರಗಳ ಬೆಳಕನ್ನು ನೋಡದರೆ ರಾಹುವಿನಿಂದ ಮುಚ್ಚಲ್ಪಟ್ಟ ಸೂರ್ಯನನ್ನು ಕಪ್ಪುಹಿಡಿದ ಕನ್ನಡಿಯಿಂದ ನೋಡಿದರೆ ಯಾವ ರೀತಿ ಪ್ರಕಾಶವಾಗಿರುತ್ತದೆಯೋ ಅದೇರೀತಿ ಇರುತ್ತೆ. — ಈ ಊರಿನಲ್ಲಿ ಒಟ್ಟು ೧೦—೧೨ ನಲ್ಲಿಗಳು ಇವೆ. ಅವುಗಳು ಒಂದರಲ್ಲಿ ನೀರಿರುವುದಿಲ್ಲ. ಒಂದರಲ್ಲಿ ಒಂದೇ ಕಡೆ ಬರುತ್ತೆ. ಒಂದರಲ್ಲಿ ಒಂದೇ ತಿರುವು ಇರುತ್ತೆ. ಕೆಲವಕ್ಕೆ ೭ ಕಡೆಗಳೂ ಇರುವುದಿಲ್ಲ. ಒಂದಕ್ಕೆ ಅದರ ತಲೆಯಮೇಲೆ ಟೋಪಿಯೇ ಕೆಳಗೆ ಬಿದ್ದುಹೋಗಿರುತ್ತದೆ. ಈ ರೀತಿ ಬಹಳ ನಷ್ಟವಾಗಿರುತ್ತೆ — ಇದಕ್ಕೆ ಮುಂಚೆ ಕಳ್ಳತನ ವಿಪರೀತವಾಗಿದೆ. ಅವರನ್ನು ಹಿಡಿದುಕೊಟ್ಟರೆ ರುಜುವಾತಿಲ್ಲವೆಂದು ವಜಾಮಾಡುತ್ತಾರೆ. ಅವರಿಗೆ ಯಾರ ಭಯವೂ ಇಲ್ಲ. ಮನೆಗಳಿಗೆ ಎಂಥಾ ಬೀಗಗಳನ್ನು ಹಾಕಿದರೂ ತೆಗೆದು ರಾತ್ರಿಕಾಲದಲ್ಲಿ ಮನೆಯಲ್ಲೆಲ್ಲಾ ತಿರುಗಾಡಿ ಹೋಗುತ್ತಾರೆ. ಮೊದಲು ಕನ್ನ ಹಾಕಿದ ಮನೆಯ ಮಾಲು ಪತ್ತೆ ಆಗಿ ಕೇಸ್ ವಜಾ ಆಯಿತು. ವಜಾ ಆದ ಮೂರು ದಿವಸಗಳಲ್ಲೇ ಅದರ ಪಕ್ಕದ ಮನೆಯಲ್ಲಿ ಬಿದ್ದು ದೇವರುಗಳ ಮುಡುಪನ್ನು ತೆಗೆದುಕೊಂಡು ಹೋಗಿರುತ್ತಾರೆ.

ತುಮಕೂರು — ದಿನಸಿ ಗಾಡಿಗಳು ವಿಶೇಷವಾಗಿ ಮಂಡಿಗೆ ಬರುತ್ತಲಿದ್ದರೂ ಧಾರಣೆವಾಸಿಗಳು ಕಮ್ಮಿಯಾಗದಿರುವದು ತುಂಬಾ ಕಷ್ಟವಾಗಿದೆ — ಯಳಂದೂರು ಕಂಪನಿ ನಾಟಕದವರು ಕಳೆದ ವಾರ ಮುಂದಕ್ಕೆ ಪ್ರಯಾಣ ಮಾಡಿದರು. ಅವರ ಸ್ಥಾನಕ್ಕೆ ಈ ಊರಿನ ಎಮ್ಮೇಕೇರಿ ಕಂಪನಿಯವರು ಥೇರಾ ಹಾಕಿ ನಾಟಕವಾಡುತ್ತಿದ್ದಾರೆ. ಹಿಂದಿನ ವಾರ ತಿಪಟೂರು ಮಾರ್ಗವಾಗಿ ಗ್ರೇಟ್ ಇಂಡಿಯನ್ ಎಂಬುವ ಒಳ್ಳೆ ಸರ್ಕಸ್ ಆಟವು ಬಂದು ಆರು ಆಟಗಳನ್ನು ಇಲ್ಲಿ ಆಡಿದರು. ಹೆಚ್ಚು ಹಣ ವಸೂಲಾಗುವದೆಂಬ ಭಾವನೆಯಿಂದ ಇಲ್ಲಿನ ಕೆಲವರು ಐದು ಆಟಗಳನ್ನು ಎರಡು ಸಾವಿರ ರೂಪಾಯಿಗೆ ಕಂಟ್ರಾಕ್ಟು ಮಾಡಿಕೊಂಡರು. ಆದರೆ ಐದು ಆಟದಿಂದ ಒಂದು ಸಾವಿರ ಉತ್ಪತ್ತಿಯಾಗುವದೂ ದುರ್ಲಭವಾಯಿತು — ಮ್ಯುನಿಸಿಪಾಲಿಟಿಯವರು ನಾಯಿಕೊಲೆ ಮಾಡಿಸುತ್ತಿದ್ದಾರೆ. ಈ ಕೊಲೆಯು ಈಗಿನ ನವನಾಗರೀಕತೆಗೆ ತುಂಬಾ ವಿಷಾದಕರವಾಗಿದೆ. ನಾಯಿಗಳು ಮಲಗಿರುವಾಗ ಹೊಡಿಯುವನು ಹಿಂದಲಿಂದ ದೊಣ್ಣೆಯಿಂದ ಹೊಡದ ಕೂಡಲೇ ರಕ್ತ ಕಾರುತ್ತಾ ಬಹು ಸಂಕಟದಿಂದ ಪ್ರಾಣ ಬಿಡುತ್ತವೆ. ಈ ಭಯಂಕರ ನೋಟವು ತುಂಬಾ ಹೇಯವಾಗಿದೆ. ಹಾಗೆ ನಾಯಿಗಳನ್ನು ನಿರ್ಮೂಲ ಮಾಡಿಸಬೇಕಾದರೆ ಬೆಂಗಳೂರು, ಮೈಸೂರು ಪಟ್ಟಣಗಳಲ್ಲಿ ಅನುಸರಿಸುವ ಕ್ರಮಗಳನ್ನು ಇಲ್ಲಿ ಯಾಕೆ ಜಾರಿಗೆ ತರಬಾರದು. ಈ ವಿಷಯವಾಗಿ ಅಧಿಕಾರಿಗಳು ಖಂಡಿತ ಗಮನಿಸಬೇಕೆಂದು ಪ್ರಾರ್ಥಿಸುತ್ತೇವೆ — ಕಳೆದ ವಾರ ಇಲ್ಲಿಂದ ಅಗಸರವನೊಬ್ಬನು ಕಾರ್ಯಾಂತರದಿಂದ ಬೆಂಗಳೂರಿಗೆ ಹೋಗಿ ಬಂದವನು ಆಕಸ್ಮಾತ್ತಾಗಿ ಕಾಲವಾದನು. ಬಹುಶಾ ಆತನಿಗೆ ಪ್ಲೇಗು ತಗಲಿರಬಹುದೆಂದು ಸಂಶಯ ಉಂಟಾಗಿದೆ — ಈ ಊರಿನಲ್ಲಿ ಅನೇಕರು ಸೌದೆ ಕಂಟ್ರಾಕ್ಟು ಮಾಡಿಕೊಂಡಿರುತ್ತಾರೆ. ಹಾಗಿದ್ದರೂ ಜನರಿಗೆ ಸಕಾಲಕ್ಕೆ ಸೌದೆ ಒದಗದಿರುವದರಿಂದ ದೂರು ಯಾರಲ್ಲಿ ಹೇಳಿಕೊಳ್ಳಬೇಕೋ ತಿಳಿಯದು. ಅದಕ್ಕಿಂತ ಸರ್ಕಾರದವರೇ ಡಿಪೋ ಇಟ್ಟು ಮೊದಲಿನಂತೆ ನಡಿಸಿದರೆ ತುಂಬಾ ಅನುಕೂಲ. ಕಳೆದ ವಾರ ವಿ ಹರ್ಷ ಸೆಕ್ರೆಟರಿಗಳಾದ ರಾ॥ ಸಾಹೆ ದೊರೆಯವರು ಇಲ್ಲಿಗೆ ದಯಮಾಡಿಸಿ, ಸಭೆಯವರ ಸತ್ಕಾರಗಳನ್ನು ಕೈಕೊಂಡು ದಯಮಾಡಿಸಿದರು. ತಾ ೯ ರಲ್ಲಿ ಇಲ್ಲಿಗೆ ಪೋಲೀಸ್ ಇ॥ ಜ॥ ಮಿ॥ ಕಾರ್‌ಸಾಹೇಬರು ದಯಮಾಡಿಸಿ ಮೂರು ದಿನ ಇದ್ದು ಟೌನನ್ನು ಇನ್ಸ್‌ಪೆಕ್ಟ್ ಮಾಡಿದರು. ಹಿಂದೆ ಇವರು ದಯಮಾಡಿಸಿದಾಗ ಇಲ್ಲಿನ ಮಹಾ ಜನರ ಅಪೇಕ್ಷೆಯಂತೆ ಪೋಲೀಸ್ ಶಿಬ್ಬಂದಿ ಜಾಸ್ತಿ ಮಾಡಿ, ಮತ್ತೊಂದು ಪೋಲೀಸ್ ಸ್ಟೇಷನ್ ಮಾಡುತ್ತೇವೆಂದು ಅಪ್ಪಣೆ ಕೊಟ್ಟಿದ್ದರು. ಅದರಂತೆ ಈ ವರಿಗೂ ನಡಿಸಲಿಲ್ಲ. ಈ ಸಾರಿಯಾದರೂ ಪೋಲೀಸ್ ಶಿಬ್ಬಂದಿ ಹೆಚ್ಚಿಸ್ಯಾರೆಂಬ ನಿರೀಕ್ಷೆ ಇದೆ — ಟವನಿಗೆ ಪೂರ್ವಭಾಗದ ಮೂರು ಮೈಲಿಯಲ್ಲಿ ಸಿದ್ಧಗಂಗೆ ಎಂಬ ಲಿಂಗಾಯತ ಮತಸ್ಥರ ಕ್ಷೇತ್ರವಿದೆ. ಅಲ್ಲಿ ಈಗ ಮೂರು ವರುಷದಿಂದ ಶಿವರಾತ್ರಿಯಲ್ಲಿ ಜಾತ್ರೆಯೂ ದನಗಳ ಮಾರಾಟವೂ ನಡಿಯುವಂತೆ ಏರ್ಪಾಡು ಮಾಡಿರುತ್ತಾರೆ. ಈ ವರುಷ ಬಹಳ ದೂರದಿಂದ ಹೆಚ್ಚು ಕ್ರಯದ ಸಾವಿರಾರು ದನಗಳು ಬಂದಿರುತ್ತವೆ. ಜನರೂ ಸುಮಾರು ಐದು ಸಾವಿರದ ವರಿಗೂ ನೆರೆದಿರುತ್ತಾರೆ. ಈ ಜಾತ್ರೆಯು ಒಂದು ವಾರದ ವರೆಗೂ ನಡೆಸಲ್ಪಡುತ್ತೆ. ಈ ಸಂದರ್ಭದಲ್ಲಿ ಇಲ್ಲಿನ ಮಠಾಧಿಕಾರಿಗಳು ಬಹಳ ಖರ್ಚಿನಿಂದ ಜಾತ್ರೆಯ ಜನರಿಗೆ ಆಹಾರಪಾನಕ್ಕೆ ತಕ್ಕ ಏರ್ಪಾಡು ಮಾಡಿರುತ್ತಾರೆ. ಉತ್ತರೋತ್ತರ ಈ ಜಾತ್ರೆಯು ಪ್ರಸಿದ್ಧಿ ಹೊಂದಿರುವವುಗಳಲ್ಲಿ ಒಂದಾಗಬಹುದೆಂಬ ನಿರೀಕ್ಷೆ ಇದೆ — ಇದೇ ಫಾಲ್ಗುಣ ಮಾಸದಲ್ಲಿ ಜೈನ ಸಭೆ ಇಲ್ಲಿ ಕೂಡುವದೆಂದು ಹಿಂದೆ ಪ್ರಕಟಿಸಿತ್ತಷ್ಟೆ. ಆಚೆ ವಾರ ಮೈಸೂರಿಂದ ಸಾಹುಕಾರ್ ಮಿ॥ ಪೋತೇಖಾನೇ ಅನಂತರಾಜಯ್ಯನವರು ಇಲ್ಲಿಗೆ ದಯ ಮಾಡಿಸಿ, ಉತ್ತರ ದೇಶದ ಜನರೂ ಮತ್ತು ಕೊಲ್ಹಾಪುರದಿಂದ ಪಟ್ಟದ ಆಚಾರ್ಯರೂ ಈ ಸಭೆಗೆ ದಯಮಾಡಿಸುವದಾದ್ದರಿಂದ ಈ ಫಾಲ್ಗುಣಮಾಸದ ಅವಧಿ ತಪ್ಪಿಸಿ ಮುಂದೆ ವೈಶಾಖಮಾಸದ ಶುದ್ಧದಲ್ಲಿ ನಡಿಯುವಂತೆ ಏರ್ಪಾಡು ಮಾಡಿರುತ್ತಾರೆಂದು ವರ್ತಮಾನ ಕೇಳುತ್ತೇವೆ.

ಬಿಳಗಿ ರಾಜವೈದ್ಯರ ಒಳ್ಳೆ ಖಾತ್ರಿಯಾದ ಔಷಧಗಳು.

8-7

ಸುಖದಾಯಿನೀ ಗುಳಿಗೆ:—ಇದರಿಂದ ಕೆಮ್ಮಿನ ಬಾಧೆ ಬಹು ಬೇಗನೆ ಗುಣಹೊಂದುವದು. ೧೦ ವರುಷದ ಮೇಲಿನ ಯಾವ ಪ್ರಾಯದವರಾದರೂ ಸೇವಿಸಬಹುದು. ಕ್ರಯ ೨೪ ಗುಳಿಗೆಗೆ ೧ ರೂಪಾಯಿ. ವಿ. ಪಿ. ಚಾರ್ಜು ಆಣೆ ೪

ಚಿಕ್ಕಹುಡುಗರ ಬಾಲಗ್ರಹದ ಔಷಧ.—ಜ್ವರಯುಕ್ತ ಅಥವಾ ಜ್ವರವಿಲ್ಲದೆ ಘಕ್ಕನೆ ಹುಟ್ಟುವ ಈ ಉಪಸರ್ಗಿಗೆ ಇದರಿಂದ ಬೇಗನೆ ಗುಣಹುಟ್ಟುವದು ಕ್ರಯ ೧ ಕುಪ್ಪಿಗೆ ೮ ಆಣೆ ವಿ. ಪಿ ೪ ಆಣೆ.

ಗಜಕರ್ಣದ ಮಲಾಮು:—೨ ಯಾ ೩ ಆವರ್ತಿ ಇದನ್ನು ಹಚ್ಚುವದರಿಂದ ಎಂಥ ಕಠಿಣವಾದ ಗಜಕರ್ಣ (ಹುಳಕಡ್ಡಿ) ಇದ್ದರೂ ಗುಣಹೊಂದುವದು. ಕ್ರಯ ೧ ಡಬ್ಬಿಗೆ ೮ ಆಣೆ. ವಿ. ಪಿ ಚಾರ್ಜು ಆಣೆ ೪.

ಶತಮೂಲಿಕಾ ತೈಲವು:—ಹಸೀಬೊಕ್ಕೆ ಹಸೀಕಜ್ಜಿ ತುರಿಗಜ್ಜಿ ವಣಗಜ್ಜಿ ಮುಂತಾದ ಆಬಾಲವೃದ್ಧರ ಚರ್ಮವ್ಯಾಧಿಯೂ ಗುಣಹೊಂದುವದು. ಕ್ರಯ ೧ ಔನ್ಸಿನ ಕುಪ್ಪಿಗೆ ೧೦ ಆಣೆ: ೨ ಔನ್ಸಿನ ಕುಪ್ಪಿಗೆ ೧ ರೂಪಾಯಿ ವಿ. ಪಿ ೫ ಆಣೆ.

ವಾಯುಹಾರಕ ತೈಲವು.—ಇದನ್ನು ಲೇಪಿಸಿದ ೫ ನಿಮಿಷದೊಳಗೆ ಸಂಧಿವಾತ, ಕಟಿವಾತ, ವ ಇತರ ವಾಯುಗಳ ನೋವು, ತಲೆನೋವು, ಚಿಕ್ಕಹುಡುಗರ ಉಬ್ಬಸ, ಕೆಮ್ಮು ಕೂಡ ಗುಣಹೊಂದುವದು ಕ್ರಯ ೧ ಕುಪ್ಪಿಗೆ ೧ ರೂಪಾಯಿ ವಿ. ಪಿ. ಚಾರ್ಜು ಆಣೆ ೪.

ಜ್ವರಗಡ್ಡೆಗೆ ಸುಧಾಬಿಂದು.—ಹೊಟ್ಟೆಯೊಳಗೆ ಸೇವಿಸಲಿಕ್ಕೆ. ಕ್ರಯ ೧ ಕುಪ್ಪಿಗೆ ೧೨ ಆಣೆ. ವಿ. ಪಿ ಚಾರ್ಜು ಆಣೆ ೪.

ಜ್ವರಗಡ್ಡೆಗೆ ಮಲಾಮು:—ಬಾಹ್ಯಲೇಪನಕ್ಕೆ. ಕ್ರಯ ಡಬ್ಬಿ ೧ಕ್ಕೆ ೧ ರೂಪಾಯಿ ವಿ. ಪಿ ಚಾರ್ಜು ಆಣೆ ೪.

೧ನೇ ನಂಬರ ಶೀತಜ್ವರ ಲಿಕ್ವಿಡ್ (ಗುಳಿಗೆ).—ಆಬಾಲವೃದ್ಧರಿಗೆ ಹುಟ್ಟುವ ಪ್ರತಿನಿತ್ಯದ ಮತ್ತು ೩ನೆ ವ ೪ನೆ ದಿವಸದ ಪಾಳಿಯಾಗಿ ಕೂಡ ಬರುವ ಶೀತಜ್ವರಕ್ಕೆ ಕ್ರಯ ೧ ಡಬ್ಬಿಗೆ ೧ ರೂಪಾಯಿ ವಿ ಪಿ ಚಾರ್ಜು ಆಣೆ ೪.

೨ನೇ ನಂಬರದ ಶೀತಜ್ವರ ಲಿಕ್ವಿಡ್ (ಗುಳಿಗೆ).—ಮೇಲೆ ವಿವರಿಸಿದಂಥ ಶೀತಜ್ವರಗಳು ಕಾಲಾವಧಿಯಾಗಿ ಮೈಯಲ್ಲಿ ವ್ಯಾಪಿಸಿಕೊಂಡು ಪಳೆ ಪಳಕ್ಕೆ ಬಿಟ್ಟು ಬರುವದಾದರೆ ಕ್ರಯ ೧ ಡಬ್ಬಿಗೆ ೧ ರೂಪಾಯಿ ವಿ. ಪಿ ಚಾರ್ಜು ಆಣೆ ೪

ದಂತ ಶುದ್ಧಿಗೆ ಸುವಾಸಿಕ ಮಂಜನ.—ಎಲ್ಲಾ ಪ್ರಕಾರದ ಹಲ್ಲಿನ ವೇದನೆಗಳ ಉಪಶಮನಕ್ಕೆ ಕ್ರಯ ೧ ಡಬ್ಬಿಗೆ ೮ ಆಣೆ ವಿ ಪಿ. ೪ ಆಣೆ

ಪೀನಾಸಿಗೆ ಸುಧಾಚೂರ್ಣ:—ಮೂಗಿನ ಒಳಭಾಗದಲ್ಲಿ ಕ್ರಿಮಿ ಅಥವಾ ವ್ರಣವಾಗಿ ಅದರಿಂದ ದುರ್ಗಂಧವೂ ರಕ್ತ ಅಥವಾ ಕೀವು ನಂಥ ದ್ರವವು ಸ್ರವಿಸುವದಕ್ಕೆ. ಕ್ರಯ ೧ ಡಬ್ಬಿಗೆ ೧ ರೂಪಾಯಿ ವಿ ಪಿ ಚಾರ್ಜು ಆಣೆ ೪

ನಯನಾರೋಗ್ಯಕ್ಕೆ ಸುಮಾಂಜನವು:—ಹೊಸತಾಗಿ ಹುಟ್ಟಿದ ಅಥವಾ ಬಹುಕಾಲದಿಂದ ಇರುತ್ತಿದ್ದ ಕಣ್ಣಿನ ಎಲ್ಲಾ ಬಾಧೆಗಳು ಕಣ್ಣಿನಲ್ಲಿ ಕೆಂಪೇರುವಿಕೆ, ಕಣ್ಣಿನಿಂದ ನೀರು ಪಿಸರು ಬರುತ್ತಿರುವದು, ಬೆಳಕಿಗೆ ನೋಡಲಿಕ್ಕೆ ಆಗದೆ ಇರುವದು, ದೃಷ್ಟಿಮಾಂದ್ಯ, ಇತ್ಯಾದಿ ಎಲ್ಲ ಬಾಧೆಗಳೂ ಇದರಿಂದ ಬೇಗನೆ ಗುಣವಾಗುವದು ಕ್ರಯ ೧ ಡಬ್ಬಿಗೆ ೧ ರೂಪಾಯಿ. ವಿ ಪಿ ಚಾರ್ಜು ಆಣೆ ೪.

ಕರ್ಣಸ್ರಾವಕ್ಕೆ ವನೌಷಧಿ ತೈಲವು:—ಚಿಕ್ಕ ಮತ್ತು ಥರ್ಡ ಪ್ರಾಯದವರ ಕಿವಿಯಿಂದ ರಕ್ತ, ಕೀವು, ಅಥವಾ ನೀರಿನಂಥ ದ್ರವ ಹೊಸತಾಗಿ ಅಥವಾ ಬಹು ಕಾಲದಿಂದ ಸ್ರವಿಸುತ್ತಿದ್ದರೆ ಹಾಗೂ ನೋವು, ಕಳತವು, ತುರಿಸುವಿಕೆಯೂ ಇರುತ್ತಿದ್ದರೆ ಇದರಿಂದ ಪೂರ್ಣ ಗುಣ ಹೊಂದುವದು ಕ್ರಯ ೧ ಕುಪ್ಪಿಗೆ ೧ ರೂಪಾಯಿ. ವಿ ಪಿ ೪.

ಚಿಕ್ಕ ಮಕ್ಕಳ ಮೈ ಪುಷ್ಟಿಗೆ ಬಾಲಸುಧಾರಸ:—ಚಿಕ್ಕ ಹುಡುಗರ ಅಶಕ್ತಿ, ಕುಡಿದ ಹಾಲಿನ ಅಥವಾ ಆಹಾರದ ವಾಂತಿ, ಅತಿಸಾರ, ಅನೇಕ ಆವರ್ತಿ ಮಲ ವಿಸರ್ಜನೆ, ಅಸ್ತಿಗತಜ್ವರ, ಕೆಮ್ಮು ಇತ್ಯಾದಿ ಅನೇಕ ಉಪಸರ್ಗಗಳು ಗುಣವಾಗಿ ಮೈಯಲ್ಲಿ ರಕ್ತ ಮಾಂಸ ಅಸ್ತಿ ಇವುಗಳು ಬಲವಾಗಿ ಬೆಳೆದು ಚನ್ನಾಗಿ ಪುಷ್ಟಿಯಾಗುತ್ತದೆ ಕ್ರಯ ೧ ಕುಪ್ಪಿಗೆ ೧ ರೂಪಾಯಿ. ವಿ ಪಿ ಚಾರ್ಜು ಆಣೆ ೪.

ಸಕ್ಕರೆ ಪಾಕಕಷಾಯ ವ ಕೆಮ್ಮು ಮುಂತಾದವುಗಳಿಗೆ:—ಶ್ವಾಸ ಕೋಶದ ಎಲ್ಲಾ ಉಪಸರ್ಗಗಳು ಅಂದರೆ ಹೊಸ ಮತ್ತು ಹಳೆ ತರ ಕೆಮ್ಮು ಕಳು ನೆಗಡಿ ಉಬ್ಬಸ ಕಫ ಕ್ಷಯ ಅಸ್ತಿಜ್ವರ ಅಶಕ್ತಿ ಕ್ಷಯವ್ಯಾಧಿಯಲ್ಲಿ ಹುಟ್ಟುವ ಬೆವರು ಇತ್ಯಾದಿ ಬೇಗನೆ ಗುಣಹೊಂದುವದು. ಕ್ರಯ ೧ ಕುಪ್ಪಿಗೆ ರೂ ೧—೪ ಆ ವಿ ಪಿ ಚಾರ್ಜು ಆಣೆ ೯.

ನಯನ ಸುಖಕ್ಕೆ ಸೌವೀರಾಂಜನವು (ಕಪ್ಪು ಸುರ್ಮ).—ಇದು ಕಣ್ಣಲ್ಲಿ ತಿರುಗಾಟ ಮಾಡುವದರಿಂದ ಬೆಂಕಿಯ ಕಳೆಯಲ್ಲಿ ಕೂಡ್ರುವದರಿಂದ ರಾತ್ರಿಯಲ್ಲಿ ಜಾಗ್ರಣ ಮಾಡುವದರಿಂದ ಅಥವಾ ಹೆಚ್ಚು ಕಾಲ ಓದುವದರಿಂದ ಸಹಾ ಉಂಟಾಗುವ ಕಣ್ಣಿನ ಬಾಧೆಯು ಕೆಂಪೇರುವಿಕೆ ಉರಿ ನವೆ ಮುಂತಾದವು ಗುಣಹೊಂದಿ ಕಣ್ಣಿಗೆ ಸುಖವು ಪ್ರಾಪ್ತವಾಗುತ್ತದೆ ಕ್ರಯ ೧ ಡಬ್ಬಿಗೆ ೮ ಆಣೆ. ವಿ. ಪಿ. ಚಾರ್ಜು ಡಬ್ಬಿ ೧ ರಿಂದ ೨೦ ಡಬ್ಬಿಗೆ ೪ ಆಣೆ

ವಾಂತಿಭೇದಿಗೆ ಮತ್ತು ಅತಿಸಾರಕ್ಕೆ ಕ್ಲೋರೊಡಾಯಿನ್ :—ಈ ಉಪದ್ರಗಳಿಗೆ ಇದು ದಿವ್ಯ ಔಷಧವಾಗಿದೆ ವಿಶ್ವಾಸವುಳ್ಳ ಒಂದು ಕಂಪನಿಯಿಂದ ಇದನ್ನು ನಾವು ಸಂಗ್ರಹಿಸುತ್ತೇವೆ. ಕ್ರಯ ೧ ಕುಪ್ಪಿಗೆ ೧೨ ಆಣೆ ವಿ ಪಿ ಚಾರ್ಜು ಆಣೆ ೪

ಸೂಚನೆ.—ನಮ್ಮ ಔಷಧಗಳೊಳಗೆ ಅಪಾಯಕರವಾದ ಯಾವ ಜಿನಸಿನ ಮಿಶ್ರಣವೂ ಮಾಡಿಲ್ಲ. ಪ್ರತಿ ಒಂದು ಔಷಧಿಗೆ ಜೊತೆಯಲ್ಲಿ ಛಾಪೆಯ ಅನುಪಾನ ಪತ್ರವನ್ನು ಕಳುಹಿಸುತ್ತಿರುತ್ತೇವೆ. ಇನ್ನೂ ಅನೇಕ ಉತ್ತಮವಾದ ಔಷಧಗಳಿಗಾಗಿ ನಮ್ಮ ಕ್ಯಾಟ್ಲಾಗು ತರಿಸಿಕೊಂಡು ಓದಿನೋಡಿ.

ನಮ್ಮ ಅಡ್ರೆಸು:—ಕರ್ನಾಟಕ ರಾಜ ವೈದ್ಯ ಮತ್ತು ಕಂಪನಿ, ಪೋಷ್ಟು ಬಿಳಗಿ, ಉತ್ತರ ಕನ್ನಡಾ ಜಿಲ್ಲಾ.

Post Bilgi, North Kanara District.

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟ್ರ
ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ
(ಅಡ್ವಾನ್ಸು) . . . . ರೂ. ೧—೦
ಪರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿ
ಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಪಾಸಲ್
ಸೇರಿ . . . . . . ರೂ. ೧—೧೪—೦
" " ೬ " " ೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು. ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗ ರಿಜಿಸ್ಟರ್ ನಂಬರನ್ನು ಮರೆಯದೇ ತಿಳಿಸತಕ್ಕದ್ದು.

ನಮ್ಮ ವಿಳಾಸ:—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರ.

ಬೆಲೆಗೆ ಬೆಳ್ಳಿ—ಗುಣಕ್ಕೆ ಭಂಗಾರ.

88 39

ಕ್ಲೆಮೆಂಟ್ಸ್‌ರವರ ಗಾರಿಡಿಬಾಧಾ ನಿವಾರಿಣಿ.

ಪಾರ್ಶ್ವನೋವು, ಕೀಲುಗಳ ನೋವುಗಳು, ಕಿಬ್ಬೊಟ್ಟೆನೋವು, ಬೆನ್ನೆಳೆಯುವದು, ತಲೆನೋವು, ಕೆಮ್ಮು ಕಿಲುಬುಗಳು, ಕೀಲುಗಳು. ಕತ್ತರಿಸುವದು, ಬಿಗ್ಗಿರುವ ಬೆನ್ನುಗಳು, ಕೊರಳು ಊತ, ಇವುಗಳಿಂದುಂಟಾಗುವ ಬಾಧೆಗಳು, ಕೈಕಾಲು ಪಡೆತ, ಇವುಗಳಿಗೆ ಕ್ಲೆಮೆಂಟ್ಸ್‌ರವರ ಗಾರಿಡಿ ಬಾಧೆ ನಿವಾರಿಣಿ ತೈಲವನ್ನು ಚನ್ನಾಗಿ ತಿಕ್ಕಿದರೆ ಈ ಬಾಧೆಗಳೆಲ್ಲಾ ಪರಿಹಾರವಾಗುವದು ಬಾಧೆಯನ್ನು ನಿಲ್ಲಿಸುವದಕ್ಕಾಗಿ ಕ್ಲೆಮೆಂಟ್ಸ್‌ರವರ ಮ್ಯಾಜಿಕ್ ಬಾಂ ಹುಟ್ಟಿ ಇದೆ. ಆ ಛಲಸವನ್ನು ಅದು ಮಾಡುವದು ಶೀಘ್ರವಾಗಿಯೂ ಹಾಗೆ ಮಾರುವ ಔಷಧಗಳಲ್ಲಿ ಬಾಧೆಯನ್ನು ಶಮನಮಾಡುವದರಲ್ಲಿ ಕ್ಲೆಮೆಂಟ್ಸ್‌ರವರ ಮ್ಯಾಜಿಕ್ ಬಾಂನಂತಹದು ಬೇರೊಂದಿಲ್ಲವು. ಕ್ರಯ—೧ ಬಾಟ್ಲಿಗೆ ೧೨ ಆಣೆ. ೩ ಕ್ಕೆ ೨ ರೂಪಾಯಿ ೬ ಕ್ಕೆ ೩ ರೂಪಾಯಿ ೧೨ ಕ್ಕೆ ೬ ರೂಪಾಯಿ ಅಂಚೆ ವೆಚ್ಚ ಒಂದರಿಂದ ಮೂರು ಬಾಟ್ಲಿ ವರಿಗೆ ೩ ಆಣೆ.

ನಮ್ಮ ವಿಳಾಸ:—ಎಫ್, ಡಬ್ಲಿಯು ಆರ್ಚ, ಸಿವೆಟ್ರಿ ರೋಡ್, ವೇಪರಿ, ಮದರಾಸ್

ಜ್ವರಹರಿ. 15-3



ಇದು ಸಾಧಾರಣ ಜ್ವರ, ಹಳೇಜ್ವರ, ಮೋರೇಜ್ವರ, ಪಿತ್ತಜ್ವರ, ಶೀತಜ್ವರ, ವಿಷಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್ ಟಿ ವೆಂಕಟಪತಿ ಅಯ್ಯನವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಔನ್ಸಿನ ಸೀಸೆಯು ತೀರಿಹೋಯಿತು ಇದು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚನ್ನಾಗಿ ಗುಣ ಹೊಂದಿರುವರು ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವರಿಂದ ದಯವಿಟ್ಟು ಇನ್ನೊಂದು ೨೦ ಔನ್ಸಿನ ಸೀಸೆಯನ್ನು ವಿ ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ —ಸೀಸೆ ೧ ಕ್ಕೆ ೮ ಆಣೆ, ೧ ರೂ., ೧—೯ ರೂ., ೩—೧೨—೦ ರೂ., ೧೧ ರೂ., ಹನ್ನೆರಡು ಸೀಸೆ ತರಿಸಿಕೊಂಡರೆ ಡೋಸ್ವೇಜು ಮಾಫಿ ಬಿಡಲಾಗುವದು.

****

ಓಮಂ ಕರ್ಪೂರ.

Omum Carpoor

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಗೆ ಕೊಟ್ಟನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯದ ದರವು ಪ್ರಕಾರ ಎಂಬ ಔಷಧದಂತೆಯೇ. ಸೀಸೆಗಳಲ್ಲಿ ದೊರಕುವದು

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆನ್ರಿಯ ಓಮಂ ಕರ್ಪೂರವನ್ನು ನಾನೂ ನನ್ನ ಕಾಪೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣಭೇದಿ, ಅಜೀರ್ಣ ರೋಗಿಷ್ಠರಿಗೆ ಕೊಡುತ್ತೇವೆ ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧ ರೆಂತ ಬರೆದಿದ್ದಾರೆ.

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ವಾಪಾರಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ —

ಹೆನ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ

ಕೆಳಂಡ್ ಬ್ಲಾಕ್ ಟೌನ್, ಮದ್ರಾಸ್

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

1—2—1907 ರಿಂದ 8—2—1907 ರ ವರೆಗೆ

ಸ್ಥಳ.	ಪ್ಲೇಗ್ ಆಗಲಿ ಬಿದ್ದ.	ಸತ್ತದ್ದು.	ದೋಷದ ಸಾ[illegible] ಈ ವಾರದ ಸಂಖ್ಯೆ.	
ಬೆಂಗಳೂರು ಪಟ್ಟಣ	45	22	19	18
ಮೈಸೂರು "	67	54	0	0
ಬೆಂಗಳೂರು ಡಿಸ್ಟ್ರಿಕ್ಟ್	41	27	4	4
ಮೈಸೂರು "	3	2	1	1
ಕೋಲಾರ್ "	8	5	0	0
ಕೋಲಾರ್ ಚಿನ್ನದ ಗಣಿಗಳು	0	0	9	4
ತುಮಕೂರು ಡಿಸ್ಟ್ರಿಕ್ಟ್	4	3	0	0
ಹಾಸನ "	4	3	4	5
ಚಿತ್ರದುರ್ಗ "	0	0	8	4
ಕಡೂರ್ "	.	0	1	1
ಶಿವಮೊಗ್ಗ "	8	0	31	21
ಜುಮ್ಲಾ	158	116	75	53

ಶಾಲಿವಾಹನ ಶಕ ವರುಷಂಗಳು ೧೮೨೯ನೇ ಪರಾಭವ ಸಂವತ್ಸರದ ಫಾಲ್ಗುಣ ಶುದ್ಧ ನೌಮಿ ಗುರುವಾರದಿಂದ ಫಾಲ್ಗುಣ ಶುದ್ಧ ಚತುರ್ದಶಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ.

೧೯೦೭ನೇ ಇಸವಿ ಫೆಬ್ರವರಿ.

ತಾ	ವಾರ		ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಆದಿ ಶಿಂಥ ಮಾಸ
21	ಗುರು	†	ನೌಮಿ	48-18	ರೋ	26 43	10
22	ಶುಕ್ರ		ದಶಮಿ	53-36	ಮೃ	33-18	11
23	ಶನಿವಾ	*	ಏಕಾದಶಿ	59-2	ಆರ್ದ್ರಾ	38-46	12
24	ರವಿವಾ	,,	ದ್ವಾದಶಿ	60-0	ಪುನ	45-42	13
25	ಚಂದ್ರ	¶	ದ್ವಾದಶಿ	3-56	ಪುಷ್ಯ	51 22	14
26	ಕುಜ		ತ್ರಯೋ	7-37	ಶ್ಲೇ	55-38	15
27	ಬುಧ	‡	ಚತುರ್ದಶಿ	10-20	ಮ	58 48	16

† ಉತ್ಪಾತಯೋಗ * ಸ್ಮಾರ್ತ ಏಕಾದಶಿ ,, ಭಾಗವತ ಮಧ್ವರಾಮಾನುಜ ಏಕಾದಶಿ, ನರಸಿಂಹದ್ವಾದಶಿ, ಪರಿವಾಸರ. ¶ ಸೋಮಪ್ರದೋಷ, ತೊಂಡನೂರು ಗೋಪಾಲಕೃಷ್ಣಸ್ವಾಮಿರಥ, ಚಾಮರಾಜೇಶ್ವರ ರಥ ‡ ಶಾಮ[illegible]ದಹನ.

ಪೇಟೇ ಧಾರಣೆ.

ದಿನಸಿ		ಮೈಸೂರು,	ಬೆಂಗಳೂರು
ಕಡ್ಲೇ ಅಕ್ಕಿ ಪಲ್ಲಾ ೧ಕ್ಕೆ	೦ ೬	೧೩-೮-೦	೧೩ ೬-೦
ಕೆಂಬತ್ತಿ ಅಕ್ಕಿ ಅವಲ್	. .	೧೨-೭-೦	೧೨-೮-೦
" ೯ ಮೂ		೧೨-೦-೦	೧೨-೦-೦
ಜುವಾರಿ ಅಕ್ಕಿ	.	೧೩-೬-೦	೧೩-೮-೦
ಸಣ್ಣಕ್ಕಿ ಅವಲ್		೧೫-೦-೦	೧೫-೦-೦
" ಮುಯಂ	. .	೧೪-೦-೦	೧೪-೦-೦
ತೊಗರೀ ಬೇಳೆ ಪಲ್ಲಾ ೧ಕ್ಕೆ		೧೧-೦-೦	೧೧-೪-೦
" ದುಯಂ .		೧೬-೧೨-೦	೧೧-೦-೦
ಹ್ಯಾರ ರಾಗಿ ಪಲ್ಲಾ ೧ಕ್ಕೆ	. .	೬-೪ ೦	೬ ೪-೦
ಕಾರಾಗಿ	. .	೬-೧-೦	೬-೦-೦
ಜೋಳ	. .	೫-೮-೦	೮-೮-೦
ಹಲಸಂದೆ ಪಲ್ಲಾ ೧ಕ್ಕೆ	. .	೧೦-೧೨-೦	೯-೧೦-೦
ಬಿಳೀ ಅವರೆ	. .	೯-೬-೦	೯-೦-೦
ಹೆಸರು	. .	೧೧-೮-೦	೯-೪-೦
ಉದ್ದು	. .	೧೨-೦-೦	೧೦-೦-೦
ಕಡಲೆ	.	೧೧-೮-೦	೯ ೧೨ ೦
ಎಳ್ಳು ಸೆ ೧೨೩ ಶ್	. .	೧೩-೦-೦	೧೩-೮-೦
ಹುರುಳಿ	. .	೭-೬-೦	೮-೪ ೦
ಹರಳು ೧೨೩ ಸೇರಿಗೆ	.	೧೯-೦-೦	೧೨-೦-೦
ಸೀಗೇಕಾಯಿ ಮಣ ೧ಕ್ಕೆ	. .	೨-೨ ೦	೧ ೧೨-೦
ಮೆಣಸಿನಕಾಯಿ	. .	೩-೪ ೦	೨-೮-೦
" ದುಯಂ	.	೩-೦-೦	೨-೪-೦
ಬೆಲ್ಲ ದೊಡ್ಡ ಅಚ್ಚು	.	೩-೪-೦	ಮ ೧-೧೦-೦
ಒಳ್ಳೆಣ್ಣೆ ಮಣ ೧ಕ್ಕೆ	. .	೬-೮-೦	೫-೬-೦
ಹರಳೆಣ್ಣೆ "	. .	೬-೧೨-೦	೫-೪-೦
ಕೊತ್ತುಂಬರಿ ಪಲ್ಲಾ ೧ಕ್ಕೆ	. .	೯-೦-೦	೭-೧೨-೦
ಉಪ್ಪು "	. .	೫-೧೧-೦	೬-೦-೦
ಹುಣಸೇ ಹಣ್ಣು	. .	೦-೧೨-೦	೦-೧೧-೦
" ಹಳೇದು	. .	೦-೮-೦	೦-೧೦-೦
ತುಪ್ಪ ಮಣ ೧ಕ್ಕೆ	. .	೧೬-೦-೦	೧೪-೦-೦
ಸೀಮೆಯೆಂಣೆ ಪೆಟ್ಟಿ ೧ಕ್ಕೆ	. .	೫-೪-೦	೪-೦-೦
ತೆಂಗಿನಕಾಯಿ ೧೦೦ ಕ್ಕೆ	. .	೬-೮-೦	೭-೦-೦
ಅಳಲೇಕಾಯಿ ಮಣ ೧ಕ್ಕೆ	. .	೧-೦-೦	೧-೦-೦
ಅಂಟ್ವಾಳದ ಕಾಯಿ ಮಣ ೧ಕ್ಕೆ	. .	೦-೧೨-೦	೦-೧೧-೦
ಚಿನ್ನ (ಪೌನ್) ಕೆಂಪು	. .	೧೫-೪-೦	೧೫-೩-೦
" " ಪಸಿಮೆ	. .	೧೫-೧೦-೦	೧೫-೬-೦
" " ಗಟ್ಟಿ ತೊಲ ೧ಕ್ಕೆ	. .	೨೩-೧೨-೦	೨೪-೨ ೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	. .	೮೫-೦-೦	೮೫-೦-೦

Printed and Published by the Rev. E. W. Thomson, M. A., Proprietor and Manager, Wesleyan Mission Press, Mysore. 21/2/1907.

REGISTERED
M 20

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೦ ಮೈಸೂರು—ಸನ್ ೧೯೦೭ ನೇ ಇಸವಿ ಫೆಬ್ರವರಿ ತಾರೀಖು ೨೮ ನೇ ಗುರುವಾರ. ಸಂಚಿಕೆ ೩೯



ಡಿಸ್ಪೆಸಿಟಿ ಸಿಲ್ವರ್ ವಾಚ್

13 5

(ಚಿತ್ರದಲ್ಲಿ ಕಂಡದ್ದು.)

ಸ್ಟೆಂ ಕೀಲಿ, ಸುಕ್ಕಾಲು ವ್ಹೇಟ್, ಜೂಯಲ್ ಚಲನೆ, ಹಾಲ್‌ಮಾರ್ಕ್ ಉಳ್ಳ ಬೆಳ್ಳಿ ಅಲ್ಬರ್ಟ್ ಸರಪಣಿ ಮತ್ತು ಸೀಲ್ ಸಹಿತ, ಸಂಪೂರ್ಣ ದಮಾಸ್ ಪೆಟ್ಟಿಗೆಯಲ್ಲಿ ರವಾನಿಸುವ ಕ್ರಯ (ಹಿಂದ ಸ್ಥಾನದ ಅಂಚೆ ವೆಚ್ಚ ಸೇರಿ) ರೂ ೩೩-೧೪-೦

ಮೇಲಾದ ಬೆಳ್ಳಿ ಗಡಿಯಾರಗಳು ಮುಚ್ಚಳವಿಲ್ಲದ್ದು ಕೀಲಿ ತಿರುಗಿಸುವದು, ಕೀಲಿ ಇಲ್ಲದ್ದು ಕ್ರಯ ರೂ ೯-೬, ರೂ ೧೧-೧೦ ೧೬-೮ ರೂ. ೨೨-೮

ಬಲವಾದ ಬೆಳ್ಳಿ ಅರ್ಧ ಹಂಟರ್ ಗಡಿಯಾರಗಳು —ಕ್ರಯ ೧೫, ರೂ ೧೯ ೧೪, ರೂ ೨೩ ೩, ರೂ ೨೮ ೧೪

ಬಲವಾದ ಪೂರಾ ಹಂಟರ್ ಗಡಿಯಾರಗಳು —ರೂ ೧೩ ೮, ರೂ ೧೫ ರೂ ೧೬ ೮, ೧೯ ೨, ರೂ ೨೩-೧೦

ಪಾಪ್ಯುಲರ್ ನಿಕ್ಕಲ್ ಗಡಿಯಾರಗಳು, ಸ್ವಲ್ಪ ತೂಕವುಳ್ಳವು, ಕೀಲಿ ಇಲ್ಲ ಲೀವರ್ ಚಲನೆ, ಸುಂದರವಾಗಿ ಒಳ್ಳೆ ನಮೂನೆ ಮುಚ್ಚಳ ಸಂಬಂಧಿಸಿಯಾದ ಚೆತ್ತೇರಿಸುವದ, ಕ್ರಯ ರೂ ೭ ೮ ರೂ ೯ ೩, ರೂ ೬

ಒಳ್ಳೆ ಆಳವಾದ ಚಪ್ಪಟೆಯಾಗಿರುವ ಗಡಿಯಾರಗಳು —
೧) ಕಪ್ಪು ಉಕ್ಕಿನ ಮುಚ್ಚಳ ಉಳ್ಳವು ಕ್ರಯ ರೂ ೧೦-೮,) ರೂ ೧೩ ೧೪ (೨) ಬೆಳ್ಳಿಯ ಮುಚ್ಚಳ ಉಳ್ಳವು ಕ್ರಯ ರೂ ೧೪ ೧೧, ರೂ ೨೧.

ಅಲ್ಬರ್ಟ್ ಸರಪಣಿಗಳು ಕ್ರಯ ರೂ ೩ ೧೫, ರೂ ೩ ೮, ರೂ ೫ ೧೫, ರೂ ೬ ೦, ರೂ ೮-೧೦

ಚಿನ್ನದ ಬಿಡಿ ಸರಪಣಿಗಳು ಕ್ರಯ ರೂ ೬-೬, ರೂ ೮ ೯, ರೂ ೯ ೩

ಈ ಕ್ರಯದಲ್ಲಿ ಹಿಂದುಸ್ಥಾನದ ಅಂಚೆ ಹಾಸಲೂ ಸೇರಿದೆ

ಎಂಟು ದಿನಕ್ಕೊಮ್ಮೆ ಕೀಲಿ ತಿರುಗಿಸುವಂಥಾ ವಾಚ ಗಳೂ, ಇನ್ನೂ ಎಲ್ಲಾ ಬಗೆಯ ತಯಾರಿ ಮತ್ತು ಚಿತ್ರಗಳುಳ್ಳ ವಾಚ ಗಳೂ, ವಿಲಾಯತಿಯಲ್ಲಿ ತಯಾರಾಗತಕ್ಕ ಅಂಥಾ ಸಕಲ ವಿಧವಾದ ಸಾಮಾನುಗಳೂ ಜವಳಿ ನಗಗಳೂ ಕೇಳಿದವರಿಗೆಲ್ಲಾ ಕಳುಹಿಸಿಕೊಡುತ್ತೇವೆ

ನಗದು ಹಣ ಕಳ್ಳಿಸ್ಸಿ ಇಂಗ್ಲಿಷಿನಲ್ಲೇ ನಮಗೆ ಬರೆಯಬೇಕು.

ವಿಳಾಸ —Messrs. Bude and Eastland, 29 to 35 City Road, London E C

ಕೊಡಗು ದೇಶದ ಶ್ರೇಷ್ಠವಾದ ಉತ್ಕೃಷ್ಟ ಕಾಫಿಯು

ಅರೆಯದೆ ಇರುವದು ಅಥವಾ ಅಗತ್ಯ ನೆ ಹುರಿದದ್ದು ತೋಟದಿಂದ ಕಳುಹಿಸಲ್ಪಡುವದು.

18 4

ವ್ಯಾಪಾರದ [E] ಹೆಗ್ಗುರ್ತು

ಕಾಡುಕೋಣದ ತಲೆಯ ಮುದ್ರೆ ಇದೆ

ಸಂಪೂರ್ಣವಾಗಿ ಯಂತ್ರದಿಂದಲೇ ಸಿದ್ಧಪಡಿಸಿದ್ದು ಹೆಗ್ಗುರ್ತು ಉಳ್ಳ ವಿಲಾಸದ ಚೀಟ ಸುತ್ತಿಲ್ಲದಿರುವವು ಸ್ವಚ್ಛವಾದವುಗಳಲ್ಲ ಅವು ನಮ್ಮದಲ್ಲ ಏಜಂಟರುಗಳು ಬೇಕು ಇಂಥವರಿಗೆ ಅಲಾಯಿದ ದರ ಬರೆಯುವವರು ದಯವಿಟ್ಟು ಈ ಪತ್ರಿಕೆಯ ಹೆಸರನ್ನು ಸೂಚಿಸಿ

ವಿಳಾಸ —ಮ್ಯಾನೇಜರ್, ಮ್ಯಾಥಿಸನ್ಸ್ ಕಾಫಿ ವರ್ಕ್ಸ್, ಹುಣಸೂರು.

ಜ್ವರಹರಿ.

15 4

ಇದು ಸಾಧಾರಣ ಜ್ವರ, ಸನ್ನಿಪಾತ ಜ್ವರ, ಪಿತ್ಥಜ್ವರ ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚೀಫ್ ಕೋರ್ಟಿನಲ್ಲಿರುವ ಮದಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್ ಟಿ ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೫೦ ಟ್ಯೂಬಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು ಇನ್ನೂ ಜನಗಳು ಕಾಹಿಲೆ ಬೀಳುತ್ತಿರುವ ಕಾರಣ ದಯವಿಟ್ಟು ಇನ್ನೊಂದು ೫೦ ಟ್ಯೂಬಿನ ಸೀಸೆಯನ್ನು ವಿ ಪಿ ಪಿ ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ

ಕ್ರಯ —ಸೀಸೆ ೧ ಕ್ಕೆ ೮ ಆಣೆ, ೬ ರೂ , ೦—೮ ರೂ ; ರೂ ೨—೦ ಆ , ೧೧ ರೂ , ಹನ್ನೆರಡು ಸೀಸೆ ತರಿಸಿಕೊಂಡರೆ, ಪೋಸ್ಟೇಜು ಮಾಫಿ ಬಿಡಲಾಗುವದು

****

ಪ್ರಿಮುಂ ಕ್ಯಾರೇಜ ರ

Primum Caragee

ಈ ಔಷಧವು ಅಜೀರ್ಣ, ಶೀತಭೇದಿ ಸಾಧಾರಣ ಹೊಟ್ಟೆಶೂಲೆ ಮುಂತಾದ, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ ವ್ಯಾಧಿಗಳಿಗೆಲ್ಲಾ ಮಹೌಷಧವಾಗಿ ಪರಿಣಮಿಸಿ ಕೂಡಲೇ ಗುಣಕೊಡುವದು ಇದು ಹೆಂಗಸರು ತಿಂಗಳ ಬಿಂದಾಪತ್ತಿ ಹೊರಗೆ ಆಗುವಾಗ್ಯ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನ ಕೂಡ ಗುಣಪಡಿಸುತ್ತದೆ ಕ್ರಯದ ಪರವು ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ತಮ್ಮಿಂದ ಬಂದ ಅರ್ಧವನ್ನು ನಾನೂ ನನ್ನ ತಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಷ್ಠರಿಗೆ ಉಪಯೋಗಿಸುತ್ತೇವೆ ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧ ಎಂತ ಬರೆದಿದ್ದಾರೆ

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯರುಗಳ ಕೈಯಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ ಇದಲ್ಲದೆ ಕೆಳಗಿನ ವಿಳಾಸದವರಲ್ಲಿ ವಿಶೇಷ.—

ಹೆಡ್ಡಾಫೀಸು ಗ್ರೇಟ್ ಇಂಡಿಯಾ ಔಷಧಗಳ ಕಂಪೆನಿ, ಕೆಂಪಸ್ ಗೇಟ್ ಬಜಾರ್ ಮದ್ರಾಸ್

ಬೆಂಗಳೂರು ಚಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪೆನಿ ಲಿಮಿಟೆಡ್

122 21

ಮೈಸೂರು ಸರ್ಕಾರದವರು ಇಂಡಿಯಾ ಗವರ್ನಮೆಂಟಿನವರು ಕೈಯಿಂದ ಶ್ಯೂರ್ ಮಾಡಿದ ಕಂಡಿಷನ್ನಿನ ಮೇಲೆ ಬಡ್ಡಿಗಳ ವಾಯಿದೆಗಳನ್ನು ಕಟ್ಟುವ ಬಲ್ಲಿರಂತೆ ಬಡ್ಡಿ ಕೊಡಲು ಜವಾಬುದಾರರಾಗಿರುತ್ತಿರುವ ಈ ಕಂಪೆನಿಯ ವಿಭಾಗವು ಸುಮಾರು ಸರ್ಕಾರದ ಆಧಿಕೃತ ಪ್ರಕಾರ ಡಿಬೆಂಚರುಗಳು ...

ನೂರು ರೂಪಾಯಿ ... ನೂರು ರೂಪಾಯಿ ಬೆಲೆಯುಳ್ಳ ಷೇರುಗಳು ... ಒಂದು ಷೇರಿಗೆ ... ವರ್ಷಕ್ಕೆ ಶೇಕಡ ... ಬಡ್ಡಿ ಕೊಡುವ ... ಷೇರುಗಳನ್ನು ... ಕ್ರಮವಾಗಿ ... ಪ್ರಾರಂಭಿಸಲಾಗಿದೆ

ಈ ಕಂಪೆನಿಯ ... ಷೇರುಗಳನ್ನು ... ಪ್ರತಿಯೊಬ್ಬರಿಗೂ ಅಥವಾ ಸಬ್ ಏಜಂಟರಿಗೆ ... ಅರ್ಜಿ ಕಳುಹಿಸಬೇಕು

ಷೇರುಗಳನ್ನು ಈ ಕೆಳಗೆ ರುಜು ಮಾಡಿರುವವರಿಗೆ ಇಸ್ಸೂ ಮಾಡಲು ಅಧಿಕಾರ ಹೊಂದಿರುವ ... ಬೆಂಗಳೂರು ಬ್ರಾಂಚು ಎಂಬುದು ... (ಈ ... ೭, ಟ್ರಿಗ), ಅಥವಾ ಮೈಸೂರು ರೈಲ್ವೆ ... ಬ್ಯಾಂಕುಗಳಿಗಾಗಲಿ ಪಾವತಿ ಮಾಡಬೇಕು

(ಸೈ) ಬಿ ವಿ ರಾಮಸ್ವಾಮಿ ಚೆಟ್ಟಿ ಬಿ ಎ,
ಸೆಕ್ರೆಟರಿ, ಮತ್ತು ಬೆಂಗಳೂರು ಚಕ್ಕಬಳ್ಳಾಪುರ
ಲೈಟ್ ರೈಲ್ವೆ ಕಂಪೆನಿಯ ಏಜಂಟು
ನರ್ಸರಿ ಬೆಂಗಳೂರು ಸಿಟಿ

೧೮೭೬ ರಿಂದ ೧೯೦೬ ವರೆಗೆ.

ಕಾಲದ ಪರೀಕ್ಷೆ!

ಮೂವತ್ತಕ್ಕೂ ವರ್ಷಗಳಿಗಿಂತಲೂ ಹೆಚ್ಚಾಗಿ

SCOTT'S EMULSION

57 50

(ಸ್ಕಾಟ್ಸ್ ಇಮಲ್‌ಷನ್)

ಎಂಬೀ ಸೇವನಾ ಔಷಧಿಯನ್ನು ಘನ ಪಂಡಿತರೆಲ್ಲಾ ಅನೇಕ ವೇಳೆ ಪರಿಶೋಧನೆಮಾಡಿ, ಸರ್ವೋತ್ತಮವಾದದ್ದೆಂದು ಹೇಳಿರುತ್ತಾರೆ ಆದದರಿಂದ ಮುಂದಿನ ರೋಗಗಳಿಗೆ ಪ್ರಪಂಚದಲ್ಲೆಲ್ಲಾ ಈಗ ಈ ಔಷಧವು ಸರ್ವ ಶ್ರೇಷ್ಠವಾದದ್ದಾಗಿ ಪರಿಣಮಿಸಿದೆ —

ಶ್ವಾಸಕೋಶದ ಅಸ್ವಸ್ಥತೆಗಳು, ನಾನಾ ತರದ ಕೆಮ್ಮಲು, ಸಕಲವಿಧ ಶೈತ್ಯಗಳು, ಮಾಂಸಖಂಡಗಳ ಕ್ಷೀಣತೆ, ಆಹಾರದಲ್ಲಿ ಅರುಚಿ

ಇದಲ್ಲದೆ ತಂದೆಗೂ ಮಗನಿಗೂ ಬಲಕಾರಿಯಾದ ಮತ್ತು ಅಂಗ ಬೆಳೆಸುವ ಸೇವನಾ ಔಷಧವೂ ಇದೇ

ಕೈ ಸೋಕದೆ ತಯಾರಾದದ್ದು

ಔಷಧಗಳ ಅಂಗಡಿಗಳಲ್ಲೆಲ್ಲಾ ವಿಕರಿಯಾಗುವದು

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,
ಔಷಧಗಳ ಕಾರ್ಖಾನೆ,
ಲಂಡನ್, ಇಂಗ್ಲೆಂಡ್.

ಈ ಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ

ಬಿಳಗಿ ರಾಜವೈದ್ಯರ ಬಹಳ ಖಾತ್ರಿಯಾದ ಔಷಧಗಳು.

6-8

ಸುಖದಾಯಿನೀ ಗುಳಿಗೆ—ಇದರಿಂದ ಕೆಮ್ಮಿನ ಬಾಧೆ ಬಹು ಬೇಗನೆ ಗುಣಹೊಂದುವದು. ೧೦ ವರುಷದ ಮೇಲಿನ ಯಾವ ಪ್ರಾಯದವರಾದರೂ ಸೇವಿಸಬಹುದು. ಕ್ರಯ ೨೪ ಗುಳಿಗೆಗೆ ೧ ರೂಪಾಯಿ ವಿ. ಪಿ. ಚಾರ್ಜು ಆಣೆ ೪

ಚಿಕ್ಕಹುಡುಗರ ಬಾಲಗ್ರಹದ ಔಷಧ.—ಜ್ವರಯುಕ್ತ ಅಥವಾ ಜ್ವರವಿಲ್ಲದೆ ಥಟ್ಟನೆ ಹುಟ್ಟುವ ಈ ಉಪಹತಿಗೆ ಇದರಿಂದ ಬೇಗನೆ ಗುಣಹುಟ್ಟುವದು. ಕ್ರಯ ೧ ಕುಪ್ಪಿಗೆ ೮ ಆಣೆ ವಿ ಪಿ ೪ ಆಣೆ

ಗಜಕರ್ಣದ ಮುಲಾಮು.—೨ ಯಾ ೩ ಆವರ್ತಿ ಇದನ್ನು ಹಚ್ಚುವದರಿಂದ ಎಂಥ ಕಠಿಣವಾದ ಗಜಕರ್ಣ (ಹುಳಕಡ್ಡಿ) ಇದ್ದರೂ ಗುಣಹೊಂದುವದು. ಕ್ರಯ ೧ ಡಬ್ಬಿಗೆ ೮ ಆಣೆ. ವಿ. ಪಿ ಚಾರ್ಜು ಆಣೆ ೪.

ಶತಮೂಲಿಕಾ ತೈಲವು:—ಹಳೇಬೊಕ್ಕೆ ಹಳೇಕಜ್ಜಿ ತುರಿಗಜ್ಜಿ ಚಿಣಿಗಜ್ಜಿ ಮುಂತಾದ ಆಬಾಲವೃದ್ಧರ ಚರ್ಮವ್ಯಾಧಿಯೂ ಗುಣಹೊಂದುವದು ಕ್ರಯ ೧ ಟೀಸಿನ ಕುಪ್ಪಿಗೆ ೧೦ ಆಣೆ, ೨ ಟೀಸಿನ ಕುಪ್ಪಿಗೆ ೧ ರೂಪಾಯಿ. ವಿ ಪಿ ೫ ಆಣೆ.

ಪಾಯಿಂಕಾರಕ ತೈಲವು:—ಇದನ್ನು ಲೇಪಿಸಿದ ೫ ನಿಮಿಷದೊಳಗೆ ಸಂಧಿವಾತ, ಕಟಿವಾತ, ವ ಇತರ ವಾಯುಗಳ ನೋವು, ತಲೆನೋವು, ಚಿಕ್ಕಹುಡುಗರ ಉಬ್ಬಸ, ಕೆಮ್ಮು ಕೂಡ ಗುಣಹೊಂದುವದು ಕ್ರಯ ೧ ಕುಪ್ಪಿಗೆ ೧ ರೂಪಾಯಿ ವಿ. ಪಿ. ಚಾರ್ಜು ಆಣೆ ೪.

ಜ್ವರಗಡ್ಡೆಗೆ ಸಿದ್ಧಬಿಂದು:—ಹೊಟ್ಟೆಯೊಳಗೆ ಸೇವಿಸಲಿಕ್ಕೆ. ಕ್ರಯ ೧ ಕುಪ್ಪಿಗೆ ೧೨ ಆಣೆ ವಿ. ಪಿ ಚಾರ್ಜ ಆಣೆ ೪.

ಜ್ವರಗಡ್ಡೆಗೆ ಮುಲಾಮು.—ಬಾಹ್ಯಲೇಪನಕ್ಕೆ ಕ್ರಯ ಡಬ್ಬಿ ೧ಕ್ಕೆ ೧ ರೂಪಾಯಿ ವಿ ಪಿ ಚಾರ್ಜ ಆಣೆ ೪

೧ನೇ ನಂಬರ ಶೀತಜ್ವರ ರಿಪುಗಳಿಗೆ.—ಆಬಾಲವೃದ್ಧರಿಗೆ ಹುಟ್ಟುವ ಪ್ರತಿನಿತ್ಯದ ಮತ್ತು ೩ನೆ ವ ೪ನೆ ದಿವಸದ ಪಾಳಿಯಾಗಿ ಕೂಡ ಬರುವ ಶೀತಜ್ವರಕ್ಕೆ ಕ್ರಯ ೧ ಡಬ್ಬಿಗೆ ೧ ರೂಪಾಯಿ ವಿ ಪಿ ಚಾರ್ಜ ಆಣೆ ೪.

೨ನೇ ನಂಬರದ ಶೀತಜ್ವರ ರಿಪುಗುಳಿಗೆ—ಮೇಲೆ ವಿವರಿಸಿದಂಥ ಶೀತಜ್ವರಗಳು ಕಾಲಾವಧಿಯಾಗಿ ಮೈಯಲ್ಲಿ ವ್ಯಾಪಿಸಿಕೊಂಡು ಪಳೆ ತರಿಕ್ತ ಬಿದ್ದು ಬರುವದಾದರೆ. ಕ್ರಯ ೧ ಡಬ್ಬಿಗೆ ೧ ರೂಪಾಯಿ. ವಿ. ಪಿ. ಚಾರ್ಜ ಆಣೆ ೪

ದಂತಶುದ್ಧಿಗೆ ಸುವಾಸಿಕ ಮಂಜನ—ಎಲ್ಲ ಪ್ರಕಾರದ ಹಲ್ಲಿನ ವೇದನೆಗಳ ಉಪಶಮನಕ್ಕೆ ಕ್ರಯ ೧ ಡಬ್ಬಿಗೆ ೮ ಆಣೆ ವಿ ಪಿ ೪ ಆಣೆ

ಮೇಹಕ್ಕೆ ಸುಧಾಚೂರ್ಣ—ಮೂಗಿನ ಒಳಭಾಗದಲ್ಲಿ ಕ್ರಿಮಿ ಅಥವಾ ವ್ರಣವಾಗಿ ಅದರಿಂದ ದುರ್ವಾಸನೆಯೂ ರಕ್ತ ಅಥವಾ ನೀರಿನಂಥ ದ್ರವವು ಸ್ರವಿಸುವದಕ್ಕೆ. ಕ್ರಯ ೧ ಡಬ್ಬಿಗೆ ೧ ರೂಪಾಯಿ ವಿ ಪಿ ಚಾರ್ಜ ಆಣೆ ೪

ನಯನರೋಗಕ್ಕೆ ಸುಖಾಂಜನವು.—ಹೊಸತಾಗಿ ಹುಟ್ಟಿದ ಅಥವಾ ಬಹುಕಾಲದಿಂದ ಇರುತ್ತಿದ್ದ ಕಣ್ಣಿನ ಎಲ್ಲಾ ಬಾಧೆಗಳು ಕಣ್ಣಿನಲ್ಲಿ ಕೆಂಪೇರುವಿಕೆ, ಕಣ್ಣಿನಿಂದ ನೀರು ಪಿಸರು ಬರುತ್ತಿರುವದು, ಬೆಳಕಿಗೆ ನೋಡಲಿಕ್ಕೆ ಆಗದೆ ಇರುವದು ದೃಷ್ಟಿಮಾಂದ್ಯ, ಇತ್ಯಾದಿ ಎಲ್ಲ ಬಾಧೆಗಳೂ ಇದರಿಂದ ಬೇಗನೆ ಗುಣವಾಗುವದು ಕ್ರಯ ೧ ಡಬ್ಬಿಗೆ ೧ ರೂಪಾಯಿ ವಿ ಪಿ. ಚಾರ್ಜ ಆಣೆ ೪.

ಕರ್ಣಸ್ರಾವಕ್ಕೆ ವನೌಷಧಿ ತೈಲವು—ಚಿಕ್ಕ ಮತ್ತು ಪ್ರೌಢ ಪ್ರಾಯದವರ ಕಿವಿಯಿಂದ ರಕ್ತ, ಕೀವು, ಅಥವಾ ನೀರಿನಂಥ ದ್ರವ ಹೊಸತಾಗಿ ಅಥವಾ ಬಹು ಕಾಲದಿಂದ ಸ್ರವಿಸುತ್ತಿದ್ದರೆ ಹಾಗೂ ನೋವು, ಕಳಕಳ, ತುರಿಸುವಿಕೆಯೂ ಇರುತ್ತಿದ್ದರೆ ಇದರಿಂದ ಪೂರ್ಣ ಗುಣ ಹೊಂದುವದು ಕ್ರಯ ೧ ಕುಪ್ಪಿಗೆ ೧ ರೂಪಾಯಿ ವಿ ಪಿ ೪.

ಚಿಕ್ಕ ಮಕ್ಕಳ ಮೈ ಪುಷ್ಟಿಗೆ ಬಾಲಸುಧಾರಸ.—ಚಿಕ್ಕ ಹುಡುಗರ ಅಶಕ್ತಿ, ಕುಡಿದ ಹಾಲಿನ ಅಥವಾ ಆಹಾರದ ವಾಂತಿ, ಅತಿಸಾರ, ಅನೇಕಾವರ್ತಿ ಮಲ ವಿಸರ್ಜನೆ, ಅಸ್ಥಿಗತಜ್ವರ, ಕೆಮ್ಮು ಇತ್ಯಾದಿ ಅನೇಕ ಉಪಹತಿಗಳು ಗುಣವಾಗಿ ಮೈಯಲ್ಲಿ ರಕ್ತ ಮಾಂಸ ಅಸ್ಥಿ ಇವುಗಳು ಬಲವಾಗಿ ಬೆಳೆದು ಚನ್ನಾಗಿ ಪುಷ್ಟಿಯಾಗುತ್ತಾರೆ ಕ್ರಯ ೧ ಕುಪ್ಪಿಗೆ ೧ ರೂಪಾಯಿ. ವಿ ಪಿ ಚಾರ್ಜ ಆಣೆ ೬.

ಸಕ್ಕರೆ ಪಾಕಕಫಶ್ವಾಸಕ್ಕೆ ವ ಕೆಮ್ಮು ಮುಂತಾದವುಗಳಿಗೆ—ಶ್ವಾಸ ಕೋಶದ ಎಲ್ಲಾ ಉಪಹತಿಗಳು ಅಂದರೆ ಹೊಸ ಮತ್ತು ಹಳೆ ತರ ಕೆಮ್ಮು ಗಳು ನೆಗಡಿ ಉಬ್ಬಸ ಕಫ ಕ್ಷಯ ಅಸ್ಥಿಜ್ವರ ಅಶಕ್ತಿ ಕ್ಷಯವ್ಯಾಧಿಯಲ್ಲಿ ಹುಟ್ಟುವ ಬೆವರು ಇತ್ಯಾದಿ ಬೇಗನೆ ಗುಣಹೊಂದುವದು. ಕ್ರಯ ೧ ಕುಪ್ಪಿಗೆ ರೂ. ೧—೪ ಆ ವಿ ಪಿ ಚಾರ್ಜ ಆಣೆ ೯

ನಯನ ಸುಖಕ್ಕೆ ಸೌವೀರಾಂಜನವು (ಕಪ್ಪು ಸುರ್ಮ)—ಬಿಸಲಲ್ಲಿ ತಿರುಗಾಟ ಮಾಡುವದರಿಂದ ಬೆಂಕಿಯ ಕಳೆಯಲ್ಲಿ ಕೂಡ್ರುವದರಿಂದ ರಾತ್ರಿಯಲ್ಲಿ ಜಾಗ್ರಣ ಮಾಡುವದರಿಂದ ಅಥವಾ ಹೆಚ್ಚು ಕಾಲ ಓದುವದರಿಂದ ಸಹಾ ಉಂಟಾಗುವ ಕಣ್ಣಿನ ಬಾಧೆಯು ಕೆಂಪೇರುವಿಕೆ ಉರಿ ನವೆ ಮುಂತಾದವು ಗುಣಹೊಂದಿ ಕಣ್ಣಿಗೆ ಸುಖವು ಪ್ರಾಪ್ತವಾಗುತ್ತದೆ ಕ್ರಯ ೧ ಡಬ್ಬಿಗೆ ೮ ಆಣೆ ವಿ ಪಿ. ಚಾರ್ಜ ಡಬ್ಬಿ ೧ ರಿಂದ ೧೨ ಡಬ್ಬಿಗೆ ೪ ಆಣೆ

ವಾಂತಿಭೇದಿಗೆ ಮತ್ತು ಅತಿಸಾರಕ್ಕೆ ಕ್ಲೋರೋಡೈನ್—ಈ ಉಪದ್ರವಗಳಿಗೆ ಇದು ದಿವ್ಯ ಔಷಧವಾಗಿಧೆ ವಿಶ್ವಾಸವುಳ್ಳ ಒಂದು ಕಂಪನಿಯಿಂದ ಇದನ್ನು ನಾವು ಸಂಗ್ರಹಿಸುತ್ತೇವೆ. ಕ್ರಯ ೧ ಕುಪ್ಪಿಗೆ ೧೨ ಆಣೆ ವಿ ಪಿ ಚಾರ್ಜ ಆಣೆ ೪

ಸೂಚನೆ.—ನಮ್ಮ ಔಷಧಗಳೊಳಗೆ ಅಪಾಯಕರವಾದ ಯಾವ ಜಿನಸಿನ ಮಿಶ್ರಣವೂ ಮಾಡಿಲ್ಲ. ಪ್ರತಿ ಒಂದು ಔಷಧಿಗೆ ಜೊತೆಯಲ್ಲಿ ಛಾಪಿಸಿ ಅನುಪಾನ ಪತ್ರವನ್ನು ಕಳುಹಿಸುತ್ತಿರುತ್ತೇವೆ. ಇನ್ನೂ ಅನೇಕ ಉತ್ತಮವಾದ ಔಷಧಗಳಿಗಾಗಿ ನಮ್ಮ ಕ್ಯಾಟಲಾಗು ತರಿಸಿಕೊಂಡು ಓದಿನೋಡಿ.

ನಮ್ಮ ಅಡ್ರೆಸು:—ಕರ್ನಾಟಕ ರಾಜ ವೈದ್ಯ ಮತ್ತು ಕಂಪನಿ, ಪೋಸ್ಟು ಬಿಳಗಿ, ಉತ್ತರ ಕನ್ನಡಾ ಜಿಲ್ಲಾ.

Post Bilgi, North Kanara District.

CHAMBERLAIN'S PAIN BALM
ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವು

4-9



ಬೆನ್ನ ಒಟಿಸಲ್ಲಿನ ನೋವು, ಪಕ್ಕೆಗಳಲ್ಲಿ ಆಗುವ ನೋವು, ಖಂಡಗಳಲ್ಲಿ ಹುಟ್ಟುವ ನೋವು, ತಲೆನೋವು ಜಜ್ಜಿದ ಕಡೆಗಳ ನೋವು, ವಾಯುನೋವು—ಇವುಗಳನ್ನೆಲ್ಲಾ ಸಂಪೂರ್ಣವಾಗಿ ವಾಸಿಮಾಡುವಂಥಾ ಔಷಧ

ವಾಯುನೋವೆಂದರೇನು?

ಕೀಲುಗಳೆಲ್ಲಾ ಮಾಂಸಖಂಡಗಳೆಲ್ಲಾ ಗಾಯವಾಗುವುದು, ಊದಿಕೊಳ್ಳುವುದು, ಕೆಂಪಾಗಿ ಕಳೆಯುವ ಖಂಡಗಳಲ್ಲಿ ಇರಿಯುವುದು, ವಿಶ್ರಾಂತಿಕೊಡದೆ ಇರುವುದು, ನಿದ್ರೆಹತ್ತದೆ ಇರುವುದು—ಇವೇ ಇದೆಲ್ಲಾ ನಿಮಗೆ ಯಾವಾಗ ಉಂಟಾಗುವುದೋ ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು

ಆಗ ಚೇಂಬರ್ಲೇನಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹಾ ಕಾವು ಮೈಯೊಳಗೆ ವ್ಯಾಪಿಸುತ್ತದೆ. ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ. ಮನಸ್ಸಿಗೆ ಉಲ್ಲಾಸವಾಗುತ್ತೆ ಇದನ್ನೇ ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯುವಿನ ಹುಟ್ಟನ್ನೇ ಕಿತ್ತು ಹಾಕಿಬಿಡುವುದು

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ.

ಕೈಯಿಂದ ಮುಟ್ಟಿದ್ದೇನೂ ಇಲ್ಲ.

ಇದು ಎಲ್ಲೆಲ್ಲೂ ವಿಕರಿಯಾಗುವುದು ಸಣ್ಣ ಸೀಸೆಗೆ ೧ ರೂಪಾಯಿ ದೊಡ್ಡ ಸೀಸೆಗೆ ೨ ರೂಪಾಯಿ

ಇಲ್ಲಿನೋಡಿ !

22 2

ತುಮಕೂರು ವಿಕ್ಟರ್ ಇಲಾಖೆಯಲ್ಲಿ, ಯೂರೋಪಿಯನ್ ಮೇಸ್ತ್ರಿಗಳಿಂದ, ಉತ್ತಮ ತರದ ಸಾಸನದ ಟೋಪಿಗಳು ಅತಿ ಶ್ರೇಷ್ಠವಾದ ಉಲ್‌ದಾರದಿಂದ ತಯಾರಾಗುತ್ತವೆ ಕ್ರಯ ೧೦ ಆಣೆಯಿಂದ ೧ರೂ ೨ ಆಣೆವರೆಗೂ ಸಿಕ್ಕುವವು ಅಪೇಕ್ಷೆಯುಳ್ಳವರಿಗೆ ಕ್ರಯದ ಪಟ್ಟಿಯನ್ನು ರವಾನಿಸುವೆವು ವಿಳಾಸ — ಮೇನೇಜರ್, ಹಾಸನದ ಟೋಪಿ ಕಾರ್ಖಾನೆ, ವಿಕ್ಟರ್ ಇಲಾಖೆ, ತುಮಕೂರು.

ಮುಂಬಯಿ ವ್ಯಾಪಾರವನ್ನಾಡಲಿಚ್ಛಿಸುವವರು.

85 39

ಮುಂಬಯಿಯಲ್ಲಿ ಪ್ರತಿಯೊಂದು ಮಾಲಿನ ಧಾರಣೆ ಅಳತೆ ಮತ್ತು ಮಾಲಿನ ವರ್ಣನೆ ಹಾಗೂ ಅನೇಕ ಉಪಯುಕ್ತ ಮಾಹಿತಿಯುಳ್ಳ ಕನ್ನಡ ಪುಸ್ತಕ—ಕ್ರಯ ೧೦ ಆಣೆ ವಿ ಪಿ ಯಿಂದ ಕಳುಹಿಸುವೆವು ಟಪಾಲು ಖರ್ಚು ಬೇರೆ ಬುಕ್ಕು ಸೇಲರರಿಗೆ ಯೋಗ್ಯ ಕಮಿಷನ್ ದೊರೆಯುವದು ಮತ್ತು ಲಿಂಗಾಯತ ಧರ್ಮಸಂಬಂಧ ವಿಂಶೋತ್ಪತ್ತಿ ಕ್ರಿಯಾಲಕ್ಷಣನೆಂಬ ಸಾಕಷ್ಟು ಪುಸ್ತಕ—ನಾಲ್ಕು ಆಣೆ ಬರೇ ಅಕ್ಷರದಿಂದ ಬರೆಯಿರಿ ಪತ್ತಾ ಚನ್ನಬಸಪ್ಪ ಮಲ್ಲಪ್ಪ ಪಾರದ ಪ್ರೆಸ್ ಮಾಂಡ್ವಿ, ಮುಂಬಯಿ.

ಎಷ್ಟೋ ಹಳೇರೋಗವಾದರೂ ಗುಣಪಡಿಸುವ ಡಾಕ್ಟರ ಫರ್ನಾಂಡಿಸ್ ಸಾಹೇಬರ ಅನುಭವದಿಂದ ಖಾತ್ರಿಯಾದ ಚಮತ್ಕಾರಿಕ ವನಸ್ಪತಿ ಔಷಧಗಳು.

29 1

(೧) ಪಾಶಿರೋಗಕ್ಕೆ (ಪೀನ್ಸ) ಸದ್ವನಸ್ಪತಿಗಳಿಂದ ಯುಕ್ತವಾದಂಥ ವಿದ್ಯುಲ್ಲತಾ ಬತ್ತಿಗಳು ಮತ್ತು ಗಂಭೀರ ತೈಲ ಮೂಗಿನ ಸೊಳ್ಳೆಗಳಿಂದ ದುರ್ಗಂಧ ರಸೀವ ರಕ್ತ ಮಿಶ್ರಿತವಾಗಿ ಹೋಗುವಂಥವರಿಗೆ ಈ ಬತ್ತಿಗಳು ವ ತೈಲ ಕೂಡ್ಲೆ ಗುಣಪಡಿಸುತ್ತದೆ ಕಣ್ಣಿಗೆ ದೃಷ್ಟಿ ಮೆದುಳಿಗೆ ಅಭ್ಯುಕೊಡುವದಲ್ಲದೆ ಸಂಪೂರ್ಣ ಪುಷ್ಟಿ ಮಾಡುತ್ತದೆ ೨ ಬತ್ತಿ ಡಬ್ಬಿಗೆ ೮ ಆಣೆ ತೈಲ ಬಾಟ್ಲಿಗೆ ೪ ಆಣೆ

(೨) ಮೂಲವ್ಯಾಧಿ ೮ ಗುಳಿಗೆ ಡಬ್ಬಿಗೆ ೧ ರೂ. (೩) ಮಕ್ಕಳ ಚೇಷ್ಟ ರೋಗಕ್ಕೆ ೮ ಗುಳಿಗೆ ಡಬ್ಬಿಗೆ ೮ ಆಣೆ. (೪) ೨೪ ತರದ ಪಾಂಡುರೋಗಕ್ಕೆ ಅಮೃತ ಚೂರ್ಣ ಡಬ್ಬಿಗೆ ೧ರೂ (೫) ಸ್ತ್ರೀಯರಿಗೆ ರಕ್ತಪ್ರಸೂರ (ತಿಂಗಳುಗಟ್ಟೆ) ಕ್ರಮವಾಗಿ ಆಗಲಿಕ್ಕೆ ೧೨ ಗುಳಿಗೆ ಡಬ್ಬಿಗೆ ರೂ ೧—೮—೦

ಸದರಿ ೬ ಔಷಧಿಗಳಿದ್ದ ಸ್ಯಾಂಪಲ್ ಬೋಕ್ಸ್ (ನಮೂನೆ ಪೆಟ್ಟಿಗೆ) ಒಂದಕ್ಕೆ ೧—೮—೦ ಪ. ಖ ಬೇರೆ ವಿ ಪಿ ಮೂಲಕ ರವಾನಿಸಲಾಗುತ್ತದೆ ನಮ್ಮ ವಿಳಾಸ—

ಎ ಪಿ ಗೋನ್ಸಾಲ್ವಿಸ್, ಹೊನ್ನಾವರ, ಜಿಲ್ಲಾ ಉತ್ತರ ಕನಡಾ

ಉತ್ತಮವಾದ ಸಿದ್ಧೌಷಧಗಳು.

18

ಆರ್ಯರಿಂದಲೂ ಬಂದ ನಮ್ಮ ಔಷಧಿಗಳು ಲಕ್ಷಾಂತರ ರೋಗಿಗಳಿಗೆ ಉಪಯೋಗಿಸಿ ಗುಣ ಕಂಡುಬಂದವಾಗಿರುವವು ಅವುಗಳೆಲ್ಲಾ ಮೂರ್ಲಿಗಳಿಂದ ತಯಾರಾಗಿರುತ್ತವೆ ತಿಂಗಳೊಂದಕ್ಕೆ ಅನೇಕರು ಔಷಧಿ ಸೇವಿಸುತ್ತಲೂ ಇರುವಸಂಗತಿ ಎಲ್ಲರಿಗೂ ಗೊತ್ತಿದೆ



(೧) ಸಂಜೀವಿನಿ ತೈಲ ಸಮಸ್ತ ಮಹಾರೋಗಗಳಿಗೂ ಕಾಲು ಸೀಸೆಗೆ ೧-೮-೦

(೨) ಭೃಂಗರಾಜ ತೈಲ ಎಲ್ಲಾ ವಿಧದ ಶಿರೋರೋಗಗಳಿಗೆ ಕಾಲು ಸೀಸೆಗೆ ೦-೧೦-೦ (೩) ಭೇದಿ ಎಣ್ಣೆ ಸುಖಪ್ರವರ್ತಿಯಾಗುವುದು ಕಾಲು ಸೀಸೆಗೆ ೦-೧೦-೦ (೪) ಮಹೋದರ ಮಾತುಶಕ್ತಿಯನ್ನುಂಟುಮಾಡಿ ಪುಷ್ಟಿ ಮಾಡುತ್ತೆ, ಸೇರಿಗೆ ೨-೦-೦ (೫) ಸೌಭಾಗ್ಯ ಶುಂಠಿಪಾಕ ಲೇಹ ಇದರ ಸೇವನೆಯಿಂದ ಬಾಣಂತಿಯನ್ನು ಕ್ಷಯ ಮೊದಲಾದ ರೋಗಗಳನ್ನು ಪರಿಹರಿಸುತ್ತೆ. ಸೇರಿಗೆ ೨-೦-೦ ಹುಚ್ಚುನಾಯಿ ಕೊಳೆತ ಮುಂತಾದ ಇವುಗಳಿಗೂ ಹಾಗೆ ಪ್ರಬಲ ರೋಗಿಗಳಿಗೂ ಚಿಕಿತ್ಸೆಯು ದೊರೆಯುವುದು.

ನಮ್ಮ ಕ್ಯಾಟಲಾಗು ತರಿಸಿ ನೋಡಿ—ಪಂಡಿತ ಕೃಷ್ಣಾಚಾರ್ಯರು, ನಿಖಿಲ ರೋಗಾರಾಮ ವೈದ್ಯಶಾಲಾ, ದೇವರಾಜಪೇಟೆ, ಮೈಸೂರು

ವಿಜ್ಞಾಪನೆ.

೧೯೦೭ ನೇ ಮಾರ್ಚಿ ತಾ॥ ೧೫ ರಲ್ಲಿ ರಂಗಾಚಾರ್ಯರ ಮೆಮೋರಿಯಲ್ ಹಾಲಿನಲ್ಲಿ ಘನವನ್ನೈದಿದ ಪ್ರಿನ್ಸ್ ಮಹಾರಾಜರವರಿಗೆ ವಿನೋದೋತ್ಸವಗಳ ಮೂಲಕ ವಿಜ್ಞಾಪನಾಪತ್ರ ಕೊಡುವ ಒಪ್ಪಿಸುವುದಕ್ಕಾಗಿ ರಾಜಧಾನಿಯ ನಿವಾಸಿಗಳು ಚಂದಾದ ವ್ಯವಸ್ಥೆ ನಡೆಯುವವು. ಈ ಮೂಲಕ ಪ್ರಾರ್ಥಿಸಲ್ಪಟ್ಟಿರುತ್ತಾರೆ ಚಂದಾ ಕೊಡತಕ್ಕವರೆಲ್ಲ ದಯವಿಟ್ಟು ೧೯೦೭ ನೆ ಮಾರ್ಚಿ ೮ ನೆ ತಾ॥ ಕಳುಹಿಸತಕ್ಕದ್ದು ತದನಂತರ ಕೆ ಹಣ ಚಂದಾ ಹಣವನ್ನು ಸ್ವೀಕರಿಸುವದಿಲ್ಲ.

ರಂಗಾಚಾರ್ಯರ ಮೆಮೋರಿಯಲ್ ಹಾಲಿನಲ್ಲಿ ಸ್ಥಳವು ವಿಸ್ತಾರವಾಗಿರುವದರಿಂದ ಚಂದಾ ಕೊಡತಕ್ಕವರಲ್ಲಿ ಮುಖ್ಯರನ್ನು ಅಲ್ಲಿಗೆ ಆಹ್ವಾನಪತ್ರಿಕೆಗಳು ಕೊಡಲ್ಪಡುವವು

ಪ್ರಿನ್ಸ್ ಮಹಾರಾಜರವರು ಲ್ಯಾನ್ಸ್‌ಡೌನ್ ಬಜಾರ್, ದೊಡ್ಡಪೇಟೆ, ಚಿಕ್‌ರೋಡ್ ಮತ್ತು ಕೋಟೆಯ ಮುಖ್ಯ ಬೀದಿಗಳಲ್ಲಿ ಉತ್ಸವದೊಡನೆ ಚಿತ್ತೈಸುವ ಸಂಭವವಿರುವುದರಿಂದ ಮೇಲ್ಕಂಡ ಮಾರ್ಗಗಳಲ್ಲಿರತಕ್ಕವರು ತಮ್ಮತಮ್ಮ ಮನೆಗಳನ್ನು ತಳಿರು ತೋರಣಗಳಿಂದಲೂ ದೀಪಾವಳಿಗಳಿಂದಲೂ ಅಲಂಕರಿಸಿ ರಾಜಭಕ್ತಿಯನ್ನು ಪ್ರದರ್ಶನಮಾಡುವರೆಂದು ಅಪೇಕ್ಷಿಸುತ್ತೇವೆ.

ಎಚ್. ರಾಮಾನುಜೈಯ್ಯಂಗಾರ್
ಮತ್ತು
ಟಿ, ಎಸ್. ಸಂಜಪ್ಪ,
ಕಾರ್ಯದರ್ಶಿಗಳು.

ಮೈಸೂರು
21-2-07.

ಬೆಲಗೆ ಬೆಳ್ಳಿ—ಗುಣಕ್ಕೆ ಭಂಗಾರ.

66 10

ಇಂಥಾ ಕಾಗದಗಳು ನಮ್ಮಲ್ಲಿಗೆ ಅನೇಕ ಬಂದಿವೆ.

ಮಿ॥ ವಾಸುನಿಕಿನಿ, ಜನಳಿ ಮರ್ಚಂಟ, ಮಾಹೇಶ್ವರ, ಇವರು ಬರೆಯುವದು—"ಕೆವೆಂಟ್‌ಯವರ ಪ್ಯಾಲಿಕ್ ಬಾಂ ಬಹಳ ಪ್ರಶಂಸಾರವಾದದ್ದೆಂದು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ ಅದು ತುಂಬಾ ಗುಣಕೊಡುವಂಥಾದ್ದು ದಯವಿಟ್ಟು ಇನ್ನು ಮೂರು ಸೀಸೆಯನ್ನು ವಿ ಪಿ ಮೇಲೆ ಕಳುಹಿಸಿಕೊಡಿ" ಮಿ॥ ಜೆ. ಡಬ್ಲಿಯು ಸೆಮ್ಯುಯಲ್, ಪೋಸ್ಟ ಮಾಸ್ಟರ್, ಟ್ರಿವೆಂಡ್ರಂ, ಇವರು ಬರೆಯುವದು "ನಿಜವಾಗಿಯೂ ಇದು ಎಲ್ಲಾ ತರದ ನೋವುಗಳಿಗೂ ಅದ್ಭುತವಾದ ಔಷಧವೆನ್ನುವದಕ್ಕೆ ಸಂಶಯವಿಲ್ಲ" ಮಿಸೆಸ್ ಇ ಕ್ಯಾಂಪ್‌ಸಿಂಗ್, ಬೈಕಲ್ಲಾ, ಮೊಂಬಾಯಿ. ಇವರು ಬರೆಯುವದು—"ನಿಮ್ಮ ಪ್ಯಾಲಿಕ್ ಬಾಂ ಔಷಧವು ನನ್ನ ಕಾಲಿನ ಕೆಟ್ಟ ನೋವನ್ನು ಸಂಪೂರ್ಣವಾಗಿ ವಾಸಿಮಾಡಿದೆ." ಮಿಸೆಸ್ ಇ. ಮೇರಿ, ರಂಗೂನ, ಇವರು ಬರೆಯುವುದು—"ನಾನು ಯಾವಾಗಲೂ ನಿಮ್ಮ ಕ್ಲೇವೆಂಟ್ಸ್ ಪ್ಯಾಲಿಕ್ ಬಾಮನ್ನು ಗಂಟಲ ಎದೆಯ ನೋವುಗಳಿಗೆ ಉಪಯೋಗಿಸುತ್ತೇನೆ ಅದರಿಂದ ನನಗೆ ಪ್ರತಿ ಸಲವೂ ಚನ್ನಾಗಿ ವಾಸಿಯಾಗಿದೆ" ಈ ಔಷಧದಿಂದ ಪಾರ್ಶ್ವನೋವು, ಕೀಲುಗಳ ಬಾಧೆ, ಹೊಟ್ಟೆ ನೋವು, ಬೆನ್ನು ಳುಕುವುದು, ತಲೆನೋವು, ಕೆಮ್ಮು, ಕಿಲುಬುಗಳು, ಕೀಲುಗಳು ಕತ್ತರಿಸುವದು, ಕೊಂಬು ಊತ, ಕೈ ಕಾಲು ಒಡೆತ ಇವೆಲ್ಲಾ ಗುಣವಾಗುತ್ತವೆ ಇದನ್ನು ಹಾಕಿ ಚನ್ನಾಗಿ ತಿಕ್ಕಿದರೆ ಬಾಧೆ ಪರಿಹಾರವಾಗುವುದು. ಕ್ರಯ.—೧ ಬಾಟ್ಲಿಗೆ ೧೦ ಆಣೆ, ಪೋಸ್ಟೇಜ್ ೪ ಆಣೆ ೩ ಬಾಟ್ಲಿಗೆ ಅಂಚೆವೆಚ್ಚ ಸೇರಿ ರೂ. ೨—೪ ಆಣೆ

ನಮ್ಮ ವಿಳಾಸ — ಎಫ್ ಡಬ್ಲಿಯು. ಆರ್.
ಪಿಟೆ ಟ್ರ ರೋಡ್, ವೇಪೇರಿ, ಮದರಾಸ್

ವೃತ್ತಾಂತ ಪತ್ರಿಕೆ.

ಸನ ೧೯೦೭ ನೇ ಇಸವಿ ಫೆಬ್ರವರಿ ತಾ॥ ೨೮ ನೇ ಗುರುವಾರ

ಪ್ಲೇಗನ್ನು ನಿಲ್ಲಿಸುವ ವಿಚಾರವು.

ಕಳೆದ ಎರಡು ವರುಷಗಳಿಂದ ನಿರುಪಾಧಿಕವಾಗಿದ್ದ ರಾಜಧಾನಿಯಾದ ಮೈಸೂರು ಪಟ್ಟಣದಲ್ಲಿ ಈಗ ಪ್ಲೇಗ್ ಉಪದ್ರವು ಕಾಣಿಸಿಕೊಂಡು ಎಲ್ಲಾ ಮೊಹಲ್ಲೆಗಳಿಗೂ ಹರಡಿಕೊಂಡಿವೆ. ಈ ಸಲ ಕೋಟೆಯೊಳಗೂ ಇಟ್ಟಿಗೆ ಗೂಡಿನೊಳಗೂ ಪ್ಲೇಗ್ ಕಾಯಿಲೆಯಾದವರನ್ನು ಸರ್ಕಾರ

ವರು ಪ್ಲೇಗ್ ಆಸ್ಪತ್ರೆಗೂ ಅವರ ಸಂಪರ್ಕದಲ್ಲಿದ್ದವರನ್ನು ಆ ಆಸ್ಪತ್ರೆಯ ಆವರಣದಲ್ಲಿರುವ ಹೆಲ್ತ್ ಕ್ಯಾಂಪಿಗೂ ಸಾಗಿಸುತ್ತಾರೆಂಬುದಾಗಿ ಆಯಾ ಭಾಗದ ಪ್ರಜೆಗಳು ಕಳವಳಪಡುತ್ತಿರುವರು ಆದರೆ ಪ್ಲೇಗ್ ರೋಗಿಗಳಿಗೆ ಪ್ಲೇಗ್ ಕ್ಯಾಂಪಿನಲ್ಲಿ ದೊರಕುವ ಚಿಕಿತ್ಸೆಯೂ ಶುಶ್ರೂಷೆಯೂ ಊರಿನಲ್ಲಿ ದೊರಕಲಾರವೆಂತಲೂ ಈ ಪಟ್ಟಣದಲ್ಲಿರುವ ಆರೋಗ್ಯಕರವಾದ ಪ್ರದೇಶಗಳಿಗಿಂತ ಪ್ಲೇಗ್ ಆಸ್ಪತ್ರೆಯ ಬಳಿ ಇರುವ ಹೆಲ್ತ್ ಕ್ಯಾಂಪುಗಳು ಯಾವ ಭಾಗದಲ್ಲೂ ಕಡಿಮೆಯಾದವುಗಳಾಗಿಲ್ಲವೆಂತಲೂ ನಾವು ನಂಬುತ್ತೇವೆ ಆದರೆ ಕೆಲವು ಪ್ರಜೆಗಳು ಈ ಕ್ಯಾಂಪುಗಳಿಗೆ ಹೋಗಿರಲು ಸಮ್ಮತಿಸುವುದಿಲ್ಲ. ಹಾಗಾದರೆ ಇಂಥವರಿಗಾಗಿ ಏನು ಮಾಡಬಹುದು? ಮನೆಗಳಲ್ಲೇ ಪ್ಲೇಗ್ ರೋಗಿಗಳನ್ನು ಇಟ್ಟುಕೊಳ್ಳುವುದೂ, ಅದರ ಸುತ್ತುಮುತ್ತಲೂ ಪ್ಲೇಗ್ ಉಪದ್ರವ ಸೋಂಕನ್ನು ಹರಡುವಂತೆ ಮಾಡುವುದೂ ಎಷ್ಟುಮಾತ್ರಕ್ಕೂ ಯೋಗ್ಯವಾದುದಲ್ಲವೆಂದು ಈಗಲೂ ಪ್ರಜೆಗಳಿಗೆ ಎಚ್ಚರಿಕೆ ಹೇಳುತ್ತೇವೆ. ಇದಲ್ಲದೆ ಇಲಿ ಸತ್ತುಬಿದ್ದಂಥಾ ಅಥವಾ ಪ್ಲೇಗ್ ಬಂದಂಥಾ ಮನೆಮಠಗಳನ್ನು ಖಂಡಿತವಾಗಿ ತತ್ಕ್ಷಣವಲ್ಲೇ ಬಿಟ್ಟು ಹೋಗುವುದು ಪರಮಾವಶ್ಯಕವು. ಹೀಗೆ ಮಾಡದೆ ಹೋದುದರಿಂದ ಈ ವರುಷ ಬಹು ದುಃಖಕರವಾದ ಹಲವು ಸಂಗತಿಗಳು ನಡೆದಿರುತ್ತವೆ ಇದಕ್ಕೆ ಕಾರಣ ಪ್ರತಿ ಒಬ್ಬನೂ ತನ್ನ ಅನುಕೂಲ ಪ್ರತಿಕೂಲಗಳನ್ನು ಮಾತ್ರವೇ ಬಹು ವಿಶೇಷವಾಗಿ ಎಣಿಸದೆ ತನ್ನ ಸಂಸಾರಕ್ಕೂ ತನ್ನ ಊರಿಗೂ ಇತರ ಎಲ್ಲರ ಕ್ಷೇಮಲಾಭವನ್ನೂ ಮೊದಲು ಯೋಚಿಸತಕ್ಕದ್ದಾಗಿದೆ ಈ ಉಪದ್ರವನ್ನು ನಿರ್ಮೂಲವಮಾಡುವುದಕ್ಕೆ ಸರ್ಕಾರದವರು ಮಾಡುವ ಯೋಗ್ಯವಾದ ಸಮಸ್ತ ಏರ್ಪಾಡುಗಳಿಗೂ ಪ್ರಜೆಗಳು ಸಮ್ಮತಿಸಟ್ಟು ಅವುಗಳಂತೆ ಭಕ್ತಿಪೂರ್ವಕವಾಗಿ ಬಿಡಸಾವಹಿ ನಡೆದುಕೊಳ್ಳಬೇಕಾಗಿರುವುದು

ಆದರೂ ಸರ್ಕಾರದವರು ರಾಜಧಾನಿಯಲ್ಲಿ ಇನ್ನೂ ಕೆಲವು ಅನುಕೂಲವಾದ ಕ್ಯಾಂಪುಗಳನ್ನು ಮಾಡಿಸಿಕೊಟ್ಟರೆ ಪ್ರಜೆಗಳಿಗುಂಟಾಗಿರುವ ಚಿಂತೆಯು ನಿವಾರಣೆಯಾದೀತೆಂದು ನಂಬುತ್ತೇವೆ, ಯಾಕಂದರೆ ಪುರಾಭಿವೃದ್ಧಿ ಕಾರ್ಯಗಳನ್ನು ನಡೆಸುತ್ತಿರುವ ಟ್ರಸ್ಟ್ ಬೋರ್ಡಿನವರು ಅನೇಕ ಮನೆಮಠಗಳನ್ನು ಒಡೆದುಹಾಕಿದಾರೆ ಹೊಸ ಮನೆಗಳನ್ನು ಕಟ್ಟಿರುವುದು ಬಹಳ ಸ್ವಲ್ಪ ಇದರಿಂದ ಈಗಿರುವ ಮನೆಗಳನ್ನು ಇಲಿ ಸತ್ತೊಡನೆ ಪ್ಲೇಗ್ ಆಗಿಯೋ ಬಿಟ್ಟು ಹೋಗಬೇಕೆಂಬುವ ಜನರಿಗೆ ಎಲ್ಲಿ ವಾಸಮಾಡಬೇಕೆಂಬುವುದು ತೋರದೆ ಇದೆ ಆದುದರಿಂದ ಮನೆಗಳನ್ನು ಬಿಟ್ಟು ಹೋಗಲೇಬೇಕಾಗಿ ಬಂದವರಿಗೆ ಅನುಕೂಲವೂ ಹಂಗಾಮಿಯೂ ಆದ ಸ್ಥಳವಸತಿಯನ್ನು ಕಲ್ಪಿಸಿಕೊಡುವುದು ಅವಶ್ಯವೆಂದು ನಮಗೆ ತೋರುವುದು ಈ ವಿಷಯಕ್ಕೆ ಸರ್ಕಾರದವರು ಗಮನಕೊಡಬೇಕೆಂದು ಕೋರುವೆವು

ಒಳದೇಶದ ವೃತ್ತಾಂತಗಳು.

ಶ್ರೀಮನ್ ಮಹಾರಾಜರವರು ಪರಿವಾರ ಸಹಿತ ಮಾರ್ಚಿ ೨ನೇ ರಾಜಧಾನಿಯಿಂದ ನೀಲಗಿರಿಗೆ ಬೇಸಿಗೆ ಕಳೆಯುವುದಕ್ಕಾಗಿ ಪ್ರಯಾಣ ಹೊರಡಲಿರುವರೆಂದು ಕೇಳುತ್ತೇವೆ

****

ಬೌರಿಂಗ್‌ಪೇಟೆಗೆ ಸೇರಿದ ಒಂದು ಚಿನ್ನದ ಗಣಿಯಲ್ಲಿ ಕಳೆದ ವಾರ ಬೆಂಕಿಯು ಅನಾಹುತವಾಯಿತು ದೇವರ ದಯೆಯಿಂದ ಯಾರಿಗೂ ಯಾವ ವಿಧವಾದ ಅಪಾಯವೂ ಸಂಭವಿಸದಂತೆ ಬೆಂಕಿ ಆರಿಸಲ್ಪಟ್ಟಿತು

*****

ರಾಜಧಾನಿಗೆ ವಿದ್ಯುಚ್ಛಕ್ತಿಯ ದೀಪಗಳನ್ನು ರಾತ್ರಿ ಕೊಡತಕ್ಕ ಏರ್ಪಾಡನ್ನು ಸರ್ಕಾರದವರು ಸ್ಯಾಂಕ್ಷನ್ ಮಾಡಿ, ಇದಕ್ಕಾಗಿ ಮ್ಯುನಿಸಿಪಾಲಿಟಿಯವರು ವರುಷಕ್ಕೆ ೧೦,೦೦೦ ಪ್ರಕಾರ ಕೊಡಬೇಕೆಂದು ಹುಕುಂ ಕೊಟ್ಟಿದಾರೆ

****

ರಾಜಧಾನಿಯಲ್ಲಿ ಬಿಸಿಲು ಬಹಳ ತೀಕ್ಷ್ಣವಾಗಿದ್ದರೂ ಪ್ಲೇಗ್ ವಾಂತಿಬೇಧಿ ಜಾಡ್ಯಗಳು ಕಾಣಿಸಿ ಎಲ್ಲಾ ಮೊಹಲ್ಲಾಗಳಿಗೂ ಹರಡಿಕೊಂಡು ಪ್ರಜೆಗಳಿಗೆ ಕಳವಳವನ್ನುಂಟುಮಾಡಿರುವುದು ಇದರಲ್ಲಿ ಕೋಟೆ ಇಟ್ಟಿಗೆಗಾರರು, ಇವರು ಕಸಗಳಲ್ಲೂ ಕಾಯಿಲೆಯಾದವರನ್ನು ಸರ್ಕಾರದವರು ಬಲಾತ್ಕಾರದಿಂದ ಕ್ಯಾಂಪಿಗೆ ಸಾಗಿಸುತ್ತೇವೆಂದು ಸಾರಿಸಿರುವುದು ಜನರ ಭೀತಿಯನ್ನು ಇನ್ನಷ್ಟು ಹೆಚ್ಚುಮಾಡಿದೆ.

****

ರಾಜಧಾನಿಯಲ್ಲಿ ಕಳೆದ ನವರಾತ್ರಿ ಉತ್ಸವಕಾಲದಲ್ಲಿ ಪೋಲೀಸಿನವರು ಕೆಲವು ಹುಡುಗರನ್ನು ಹಿಡಿದು ಅವರು ಕಳ್ಳತನ ಮಾಡಿದರೆಂದು ಅವರಿಂದ ಹೇಳಿಸುವುದಕ್ಕೆ ಹೊಡೆದರೆಂದು ಬಂದ ಕಷ್ಟವು ಸಿಟಿ ಮ್ಯಾಜಿಸ್ಟ್ರೇಟರು ವಿಚಾರಣೆಯಿಂದ ಅಪರಾಧಿಗಳಾದ ಪೋಲೀಸಿನವರನ್ನು ಸೆಷನ್ ವಿಚಾರಣೆಗೆ ಗುರಿಮಾಡಿದ್ದರು ಈ ಮೊಕದ್ದಮೆಯು ಮೊನ್ನೆ ಸೋಮವಾರದಿಂದ ಸೆಷನ್ ಕೋರ್ಟಿನಲ್ಲಿ ವಿಚಾರಣೆಯಾಗುತ್ತಿದೆ

ಬೆಂಗಳೂರಿಗೆ ಯಾವ ಜಾತಿಯವನೋ ಒಬ್ಬನು ಬಂದು ಒಂದು ೧೦೧ ರೂಪಾಯಿನ ಕೃತಕ ನೋಟನ್ನು ಅಲ್ಲಿನ ಚಿಕ್ಕಪೇಟೆ ಸಾಹುಕಾರ್ ಮೆ॥ ಗುರುಬಾಬಯ್ಯರವರ ಅಂಗಡಿಯಲ್ಲಿ ಕೊಟ್ಟು ಚಿಲ್ಲರೆ ಕೇಳಲು ಅವರು ಅನುಮಾನಪಟ್ಟು ಕೊಡದೆ ತಮ್ಮಲ್ಲಿ ಹಣವಿಲ್ಲವೆಂದು ಹೇಳಿದರು. ಅವನು ನಡುವ ಕೃತಕ ನೋಟನ್ನು ಎದುರಿಗಿರುವ ಮರ್ಚೆಂಟ್ ಸಂಕಪ್ಪ ಬಸಪ್ಪನವರ ಅಂಗಡಿಯಲ್ಲಿ ಕೊಟ್ಟು ಹಣ ತೆಗೆದುಕೊಂಡು ಸ್ವಲ್ಪ ದೂರ ಹೋಗುವಷ್ಟರಲ್ಲಿ ನೋಟಿನ ಕಾಗದದಲ್ಲಿ ಒಳಗಡೆ ಗಂಭೀರವಾದ ವಾಟರ್ ಮಾರ್ಕ್ ಇಲ್ಲದ್ದರಿಂದ ಓಡಿಹೋಗಿ ಕೃತಕ ನೋಟಿನವನನ್ನು ಹಿಡಿದು ಪೋಲೀಸಿಗೆ ಕೊಟ್ಟರು

****

ಕಳೆದ ಗುರುವಾರ ಶ್ರೀಮನ್ಮಹಾರಾಜರವರು ಮೆ॥ ಕಾಂತರಾಜೇ ಅರಸಿನವರನ್ನೂ ಮೆ॥ ಚಾಮಪ್ಪಾಜಿ ಅರಸಿನವರನ್ನೂ ಮೋಟಾರ್ ಗಾಡಿಯಲ್ಲಿ ಕುಳ್ಳಿರಿಸಿಕೊಂಡು ಬೆಳಿಗ್ಗೆ ೧೧॥ ಗಂಟೆಗೆ ರಾಜಧಾನಿಯನ್ನು ಸುರಕ್ಷಿತವಾಗಿ ತಲಪಿದರು ಪಟ್ಟಣವು ಬಹಳ ನೇತ್ರಾನಂದಕರವಾಗಿ ಅಲಂಕರಿಸಲ್ಪಟ್ಟಿತ್ತು ಅರಮನೆಯಲ್ಲಿ ಅರಸುಗಳೂ ಅಧಿಕಾರಿಗಳೂ ಸಾಹುಕಾರರೂ ಮ್ಯುನಿಸಿಪಲ್ ಕಮಿಷನರುಗಳೂ ಕಾದಿದ್ದು ಶ್ರೀಮನ್ಮಹಾರಾಜರವರಿಗೆ ಸುಸ್ವಾಗತವನ್ನು ಬಯಸಿ ಪುಷ್ಪಮಾಲಿಕೆಯನ್ನು ಒಪ್ಪಿಸಿದರು. ಸೈನಿಕರು ಸನ್ಮಾನ ಮಾಡಿದರು ಗೌರವಾರ್ಥವಾದ ೨೧ ತೋಪುಗಳು ಹಾರಿಸಲ್ಪಟ್ಟವು

****

ಬೆಂಗಳೂರು ಸಿಟಿಯ ತರಕಾರಿ ಮಾರ್ಕೆಟ್ಟನ್ನು ದಿವಾನರೇ ಮುಂತಾದವರು ಕೆಲವು ತಿಂಗಳ ಕೆಳಗೆ ಅಜಮಾಯಿಷಿ ಮಾಡಿ, ಅದನ್ನು ಬೇರೆ ಕಡೆ ಕಟ್ಟಬೇಕೆಂದು ಅಭಿಪ್ರಾಯಪಟ್ಟು ಮ್ಯುನಿಸಿಪಾಲಿಟಿಗೆ ಸೂಚಿಸಿದ್ದಕ್ಕೆ ಮ್ಯುನಿಸಿಪಾಲಿಟಿಯವರು ಮಾರ್ಕೆಟ್ಟನ್ನು ಬದಲಾಯಿಸಕೂಡದೆಂತಲೂ ಅದು ಈಗಿರುವ ಸ್ಥಳದಲ್ಲೇ ಇರಬೇಕೆಂತಲೂ ತೀರ್ಮಾನ ಮಾಡಿದರಷ್ಟೆ ಈಗ ಸೀನಿಯರ್ ಸರ್ಜನರವರು ಮಾರ್ಕೆಟ್ಟನ್ನು ನೋಡಿ ಅದು ಬಹಳ ಕೊಳಕಾದ ಮತ್ತು ಅನಾರೋಗ್ಯಕರವಾದ ಭಾಗದಲ್ಲಿದೆಯಾದ್ದರಿಂದ ಅದನ್ನು ಬೇರೆ ಕಡೆ ಕಟ್ಟಬೇಕೆಂದು ಮ್ಯುನಿಸಿಪಾಲಿಟಿಗೆ ಬರೆದಿರುತ್ತಾರೆ ಮ್ಯುನಿಸಿಪಲ್ ಕಮಿಷನರು ಈ ದಿನ ಮೀಟಿಂಗಿನಲ್ಲಿ ಈ ವಿಷಯವನ್ನು ಹ್ಯಾಗೆ ತೀರ್ಮಾನ ಮಾಡುವರೋ ನೋಡಬೇಕಾಗಿದೆ

****

ರಾಜಧಾನಿಯಲ್ಲಿ ಅನೇಕರು ತಮ್ಮ ಮನೆಗಳ ನಲ್ಲಿಗಳನ್ನು ಇಡಿಸಿಕೊಂಡು ನೀರು ಉಪಯೋಗಿಸಿಕೊಳ್ಳುತ್ತಲೂ ಅದಕ್ಕಾಗಿ ತೆರಿಗೆ ಕೊಡುತ್ತಲೂ ಬಂದಿದಾರಷ್ಟೆ ಈ ನಲ್ಲಿಗಳಿಗೆ ಮೀಟರ್ ಎಂಬ ನೀರಿನ ಅಳತೆ ಯಂತ್ರಗಳನ್ನು ತಂದು ಇಡಬೇಕೆಂದು ಚೀಫ್ ಇಂಜನಿಯರವರು ಗೊತ್ತುಮಾಡಿ ಆ ಯಂತ್ರಗಳಿಗೆ ತಗಲುವ ೩,೦೦೦ ರೂಪಾಯನ್ನು ಮ್ಯುನಿಸಿಪಾಲಿಟಿಯವರೇ ವಹಿಸಿಕೊಳ್ಳಬೇಕೆಂದು ತಿಳಿಸಿದರು ಕಳೆದ ಶನಿವಾರ ನಡೆದ ಮ್ಯುನಿಸಿಪಲ್ ಮೀಟಿಂಗಿನಲ್ಲಿ ಕಮಿಷನರು ಈ ವಿಚಾರವನ್ನು ಚರ್ಚಿಸಿ, ಈ ಪಟ್ಟಣಕ್ಕೆ ಒದಗಿಸಿರುವ ನೀರು ಧರ್ಮಾರ್ಥವಾದದ್ದರಿಂದಲೂ ನಲ್ಲಿ ಇಟ್ಟುಕೊಂಡಿರುವವರು ನೀರಿನ ತೆರಿಗೆ ಕೊಡುತ್ತಿದ್ದಾರಾದ್ದರಿಂದಲೂ ಈಗ ಹೆಚ್ಚು ಹಣ ವ್ಯಯಪಡಿಸಿ ಅಳತೆ ಯಂತ್ರಗಳನ್ನು ತಂದಿಡಬೇಕಾದ ಆಗತ್ಯವಿಲ್ಲವೆಂದು ತೀರ್ಮಾನಮಾಡಿರುತ್ತಾರೆ

****

ಬ್ರಿಟಿಷ್ ರೆಸಿಡೆಂಟ್ ಮೆ॥ ಫ್ರೇಜರ್ ಸಾಹೇಬರವರು ಸರ್ಕೀಟು ತೀರಿಸಿಕೊಂಡು ಕಳೆದ ಶನಿವಾರ ಸರ್ದಾರ್ ಗೋಪಾಲರಾಜೇ ಅರಸಿನವರ ಸಂಗಡ ಮೋಟಾರ್ ಗಾಡಿಯಲ್ಲಿ ರಾಜಧಾನಿಗೆ ದಯಮಾಡಿ ಊಟ ತೀರಿಸಿಕೊಂಡು ಅವರ ಸಂಗಡ ಅದೇ ಗಾಡಿಯಲ್ಲಿ ಅನಂತರ ಬೆಂಗಳೂರಿಗೆ ಪ್ರಯಾಣಮಾಡಿದರು ಇವರು ಈ ಸಲ ಕೊಡಗಿಗೆ ಹೋಗಿದ್ದಾಗ ಕ್ಯಾಸನೂರಿನ ಜಂಬಿನಲ್ಲಿ ಕೆಲವು ಸರ್ದಾರರ ಕೂಡ ಕಾಡಿನಲ್ಲಿ ಹೋಗುತ್ತಿದ್ದಾಗ ಒಂದು ಸಲಗವು ಅವರ ಎದುರಿಗೆ ಬಂದಿತು ಅದನ್ನು ಕಂಡು ಆ ಸರ್ದಾರರೆಲ್ಲಾ ಮೆ॥ ಫ್ರೇಜರ್‌ರವರನ್ನು ಎಚ್ಚರಿಸಿ ತಮ್ಮ ತಮ್ಮ ಕುದುರೆಗಳನ್ನೇರಿ ಗಂಡಾಂತರಕ್ಕೆ ಸಿಕ್ಕದೆ ಓಡಿಹೋದರು ಮೆ॥ ಫ್ರೇಜರ್‌ರವರು ಕುದುರೆಯನ್ನೇರಿ ಒಂದು ಮರದ ಕೊಂಬೆಯನ್ನು ತಪ್ಪಿಸಿಕೊಂಡಾಗ ಕುದುರೆ ಓಡಿತು ಅವರು ಕೈ ತಪ್ಪಿ ನೆಲದ ಮೇಲೆ ಬಿದ್ದರು ಕೂಡಲೆ ಹಿಂದೆ ಬರುತ್ತಿರುವ ಆನೆಯನ್ನು ಕಂಡು ಓಡಿಹೋಗಿ ಒಂದು ದಾರಿ ದೂರದ ಹಿಂದೆ ಅವಿತುಕೊಂಡರು ಆನೆ ಬಹಳ ಹೊತ್ತು ಸುತ್ತಿ ತನ್ನ ಶತ್ರುವನ್ನು ಹುಡುಕಲಾರಂಭಿಸಿತು. ಅವರು ಅದರ ಕಣ್ಣಿಗೆ ಬೀಳದಂತೆ ಅದು ತಿರುಗಿದ ಹಾಗೆಲ್ಲಾ ಮರದ ಮರೆಯಲ್ಲೇ ಸುತ್ತುತ್ತಾ ಬಂದರು ಕಡೆಗೆ ಆನೆಯು ನಿರಾಶೆಯಾಗಿ ಗಿಡದೊಳಕ್ಕೆ ನುಗ್ಗಿ ಹೊರಟುಹೋಯಿತು ಸ್ವಲ್ಪ ಹೊತ್ತಿನ ಮೇಲೆ ಮೆ॥ ಫ್ರೇಜರ್‌ರವರು ತಮ್ಮ ಜೊತೆಗಾರರನ್ನು ಸಂಧಿಸಿ ಹೊರಟು ಬಂದರು ಅವರು ಈ ಗಂಡಾಂತರದಿಂದ ಬಿಡುಗಡೆಹೊಂದಿ ಬಂದುದಕ್ಕಾಗಿ ತುಂಬಾ ಸಂತೋಷಪಡುವೆವು

ಮೈಸೂರು ಗಜೆಟ್ ಸಂಗ್ರಹ

ಮೆ॥ ಜಮೀನ್ದಾರ್ ಸುಬ್ಬಭಟ್ಟರನ್ನು ಪಾವಗಡದ ಮ್ಯುನಿಸಿಪಲ್ ಪ್ರೆಸಿಡೆಂಟಾಗಿ ನೇಮಿಸಿದೆ

ಸಂಸ್ಥಾನದ ಹುಜೂರ್ ಟ್ರೆಜರಿ ಆಫೀಸರ್ ಮೆ॥ ಕೆ ಕೃಷ್ಣಯ್ಯರವರಿಗೆ ಕೊಟ್ಟಿದ್ದ ಬಿಗರ್ ಕಲಬಿನ ಒಂದು ತಿಂಗಳ ರಜವನ್ನು ಇನ್ನೂ ಎರಡು ತಿಂಗಳಿಗೆ ಜಾಸ್ತಿ ಮಾಡಿದೆ

ಅ॥ ಕಂಟ್ರೋಲರ್ ಮೆ॥ ಎಲ್ ಬಿಷ್ಣೋಪಂತ್ ಬಾದಾಮಿಯವರೇ ಹುಜೂರು ಖಜಾನೆಯ ಛಾರ್ಜಿನಲ್ಲಿರತಕ್ಕದ್ದು

ಚಳ್ಳಕೆರೆ ತಾಲ್ಲೂಕ್ ಆಕ್ಟಿಂಗ್ ಅಮಲ್ದಾರ್ ಮೆ॥ ಮಹಮ್ಮದ್ ಮೀರ್ ಯವರಿಗೆ ೨ ನೆ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ಕೊಟ್ಟಿದೆ

ಹೊಸದುರ್ಗ ತಾಲ್ಲೂಕ್ ಅಮಲ್ದಾರ್ ಮೆ॥ ಟಿ ಕೆ ಲಕ್ಷ್ಮಣ ಐಯ್ಯರವರಿಗೆ ೨ ನೆ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ಕೊಟ್ಟಿದೆ

ಮೆ॥ ಕೆ ವೆಂಕಟಕೃಷ್ಣಯ್ಯನವರನ್ನು ಡಿಸೆಂಬರ್ ೩ ರ ಲಾಗಾಯತು ೩ ನೆ ಕ್ಲಾಸ್ ಫಾರೆಸ್ಟ್ ಅ॥ ಕನ್ಸರ್ವೆಟರ್ ದರ್ಜೆಯಲ್ಲಿ ಖಾಯಂಮಾಡಿದೆ

ತಿಪ್ಟೂರ್ ತಾಲ್ಲೂಕ್ ಶಿರಸ್ತೆದಾರ್ ಬಿ ಸಂಜೀವರಾಯರು ಆ ತಾಲ್ಲೂಕ್ ಛಾರ್ಜನ್ನು ವಹಿಸಿರುವ ತನಕ ೩ ನೆ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರಗಳನ್ನು ಚಲಾಯಿಸತಕ್ಕದ್ದು

ಬೆಂಗಳೂರ್ ಡಿವಿಜನ್ ಅ॥ ಇಂಜನಿಯರ್ ಮೆ॥ ಎಂ ಎ ಅನಂದಾಳ್ವಾರ್ ಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂಬತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ನಗರ್ ತಾಲ್ಲೂಕ್ ಅಮಲ್ದಾರ್ ಮೆ॥ ಡಿ ನರಸಿಂಗರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಶಿರಸ್ತೆದಾರ್ ಎಂ ನಾರಾಯಣರಾಯರು ಅವರ ಗೈರುಹಾಜರಿಯಲ್ಲಿ ತಾಲ್ಲೂಕಿನ ಚಾಲ್ತಿ ಕೆಲಸಗಳ ಛಾರ್ಜನ್ನು ವಹಿಸತಕ್ಕದ್ದು.

ಬಹುಮಾನ ಪಡೆದ ವರ್ತಮಾನವು

[ಈ ಬಾತ್ಮಿ ಬರೆದವರಿಗೆ ಈ ವಾರದ ಬಹುಮಾನವನ್ನು ಕಳಿಸಿರುತ್ತೇವೆ]

ಮಡಕಶಿರಾ ತಾಲ್ಲೂಕು ಅಮರಾಪುರದಲ್ಲಿ ನಡೆದ
ಭಯಂಕರವಾದ ಮುಷ್ಕಾಲ್ ಲೂಟಿ

ಈ ತಿಂಗಳು ತಾ ೧೨ನೆ ಮಂಗಳವಾರದ ರಾತ್ರಿ ೧೦ ಘಂಟೆ ಸಮಯದಲ್ಲಿ ಸುಮಾರು ೧೦೦—೨೦೦ ಮಂದಿ ಪಂಜಿನಕಳ್ಳರು ಮೈತುಂಬಾ ಬಟ್ಟೆ ಹೊದ್ದುಕೊಂಡು ಕಂಕುಳಲ್ಲಿ ಒಂದೊಂದು ದೊಣ್ಣೆಯನ್ನೂ ಕೈಯಲ್ಲಿ ಒಂದೊಂದು ಪಂಜನ್ನೂ ಹಿಡಿದು ಕುಬಳಿಯಲ್ಲಿ ತುಂಬಿಯಾದಗೆ ಕಟ್ಟಿಕೊಂಡು ಇರುವ ಕವಣೆ ಕಲ್ಲುಗಳನ್ನು ಬಿರನೆ ಬೀಸುತ್ತಾ ಭಯಂಕರವಾದ ಧ್ವನಿಯಿಂದ ಕೇಕೆ ಹೊಡೆಯುತ್ತಾ ಗ್ರಾಮ ಪ್ರವೇಶಮಾಡಿ, ಊರಿನ ಮಧ್ಯಭಾಗದಲ್ಲಿ ಇರುವ ಸಾಹುಕಾರ ಬೈಸರ ಪದ್ಮಣ್ಣನೆಂಬಾತನ ಮನೆಯ ಸುತ್ತಲೂ ಕೆಲವರು ನಿಂತು ಪತ್ತೆ ಕೆಲವರು ಕೋಟೆ ಕಡೆಯಿಂದಲೂ ಪೇಟೆ ಕಡೆಯಿಂದಲೂ ಜನಗಳು ಬಾರದಹಾಗೆ ಕಲ್ಲುವೃಷ್ಟಿಯಂತೆ ಕಲ್ಲುಗಳನ್ನು ಬೀರತೊಡಗಿದರು. ಇನ್ನೂ ಕೆಲವರು ಪದ್ಮಣ್ಣನ ಮನೆಗೆ ನುಗ್ಗಿ ಆತನನ್ನು ದೊಣ್ಣೆಗಳಿಂದ ಹೊಡೆದು ಒಳಗಿದ್ದ ಪೆಟ್ಟಿಗೆಗಳನ್ನು ಚೂರುಚೂರು ಮಾಡಿ ನಗನಾಣ್ಯಗಳನ್ನೆಲ್ಲಾ ತೆಗೆದುಕೊಂಡು ಗಡಗಡನೆ ನಡುಗುತ್ತಿದ್ದ ಆತನ ಹೆಂಡತಿಯನ್ನು ಬಯಲಿಗೆ ಎಳೆದು ಆಕೆಯ ಮೈಮೇಲಿದ್ದ ಒಡವೆ ವಸ್ತುಗಳನ್ನು ಕಿತ್ತುಕೊಂಡು ಮೈಯೆಲ್ಲಾ ರಕ್ತಮಯವಾಗುವ ಹಾಗೆ ಹೊಡೆದು ಬೇಡಿಕೊಂಡರೂ ಬಿಡದೆ ಆಕೆಯ ಒಂದು ಕಿವಿಯನ್ನು ಕೊಯಿದುಹಾಕಿಬಿಟ್ಟರು ಈ ಊರಿನಲ್ಲಿ ಈ ಸಾಹುಕಾರನ ಬಂಧುಗಳು ಒಂದು ಮದುವೆಯು ಬಹು ವಿಜೃಂಭಣೆಯಿಂದ ನಡೆಯುತ್ತಿತ್ತಾದ್ದರಿಂದ ಈ ಸಡಗರಕ್ಕಾಗಿ ಈತನ ಮನೆಯ ಬಹಳ ವಸ್ತುಗಳೆಲ್ಲವೂ ಕಸಕ್ಕೆ ತೆಗೆಯಲ್ಪಟ್ಟಿದ್ದವು ಇದೇ ಕಾರಣ ನಗನಾಣ್ಯವು ಸುಲಭಸಾಧ್ಯವಾಗಿ ಕಳ್ಳರ ಪಾಲಾದವು ಅಲ್ಲಿಗೂ ತೃಪ್ತಿಗೊಳ್ಳದೆ ಸಾಹುಕಾರನನ್ನು ಹಣ ಹೂಳಿಟ್ಟಿರುವ ಸ್ಥಳವನ್ನು ತೋರಿಸೆಂದು ಪಂಜುಗಳಿಂದ ಮೈಯನ್ನು ಸುಡುತ್ತಾ ನಗಾರಿಯ ಮೇಲೆ ಹೊಡೆಯುವಂತೆ ದೊಣ್ಣೆಗಳಿಂದ ಹೊಡೆಯುತ್ತಾ ವಿಚಿತ್ರ ಹಿಂಸೆಯನ್ನು ಮಾಡಿ ಆತನ ಶಿರವನ್ನು ಒಂದುಕಡೆಗೆ ತಿರುಗಿಸಿಬಿಟ್ಟರು ಇಷ್ಟು ಗಲಭೆಯೊಳಗೆ ಕೋಟೆಗೂ ಪೇಟೆಗೂ ಮಧ್ಯೆ ಆ ಮನೆಯ ಸಮೀಪದಲ್ಲಿ ಇರುವ ಗ್ರಾಮದ ಚಾವಡಿಯಲ್ಲಿ ಮಲಗಿದ್ದ ನೀರುಗಂಟಿ ಮಸ್ತಾನ್ ಸಾಬಿ ಎಂಬುವನು ಮದುವೆಯ ಮೆರವಣಿಗೆ ಎಂದು ಎದ್ದುಬಂದು ನೋಡಿ ಘಾಬರಿಯಾಗಿ ಸಾಹುಕಾರನ ಮನೆಯ ಬಾಗಿಲಲ್ಲಿ ರೂಪವನ್ನು ಮರೆಸಿಕೊಂಡು ನಿಂತು ಇದ್ದ ಒಬ್ಬೊಬ್ಬರನ್ನು ಪಂಜಿನ ಬೆಳಕಿನಿಂದ ಗುರ್ತು ಹಿಡಿದು ಊರೊಳಗೆ ತಿಳಿಸುವುದಕ್ಕಾಗಿ ಹೋಗುತ್ತಿದ್ದನು. ಇವನನ್ನು ಬಿಟ್ಟರೆ ಮುಂದೆ ತಮಗೆ ತೊಂದರೆ ಉಂಟಾದೀತೆಂಬ ಭಯದಿಂದ ಕಳ್ಳರಲ್ಲಿ ಒಬ್ಬನು ಈತನ ತಲೆಯ ಮೇಲೆ ದೊಣ್ಣೆಯಿಂದ ಹೊಡೆಯಲು ತಲೆ ಒಡೆದು ಈತನು ಅಲ್ಲಿಯೇ ದೀರ್ಘ ನಿದ್ದೆಯನ್ನು ಮಾಡಿದನು ಇವನು ಬಹಳ ಬಲಶಾಲಿ ಕೈಯಲ್ಲಿ ಏನಾದರೂ ಆಯುಧವಿದ್ದಿದ್ದರೆ ಈತನು ಪೆಟ್ಟು ತಿನ್ನುವುದಕ್ಕೆ ಮುಂಚೆ ನಾಲ್ಕೈದು ಮಂದಿಯನ್ನಾದರೂ ಬಲಿ ತೆಗೆದುಕೊಳ್ಳದೆ ಬಿಡುತ್ತಿರಲಿಲ್ಲ ಇವರು ಮಾಡುವ ಗಲಭೆಯಿಂದ ಊರಿನ ಆಬಾಲವೃದ್ಧರೆಲ್ಲರೂ ಎದ್ದರೂ ದುರ್ಭಾಗ್ಯ ಕವಣೆ ಕಲ್ಲುಗಳ ಏಟಿಗೆ ಹೆದರಿ ಈ ಮನೆಯವರಿಗೆ ಸಹಾಯ ಮಾಡಲು ಯಾರೂ ಹೋಗಲಿಲ್ಲ ಅದೃಷ್ಟಗಾರನ ಭದ್ರಪ್ಪನೆಂಬುವನು ಗಲಭೆ ಮಾಡಿಕೊಂಡು ಬರಲು ಆತನ ಕಣ್ಣಿಗೆ ಬಿದ್ದ ಕವಣೆ ಕಲ್ಲಿನ ಒಂದೇ ಪೆಟ್ಟಿನಿಂದ ಅಲ್ಲಿಯೇ ಸ್ಮರಣೆ ತಪ್ಪಿ ಬಿದ್ದನು. ಕಳ್ಳರು ಅರ್ಧ ರಾತ್ರಿ ವರೆಗೂ ಇದ್ದು ಹೊರಟುಹೋದರು ಮೊದಲು ಈ ಚೋರರು ಮನೆಗೆ ಬರುವ ಸದ್ದನ್ನು ಕೇಳಿದ ಕೂಡಲೇ ಸಾಹುಕಾರನ ಹೆಂಡತಿಯು ನಿಲುವಾಭರಣಸಹಿತ ತನ್ನ ಎರಡು ವರ್ಷದ ಮಗುವನ್ನು ಒಂದು ಮೂಲೆಯಲ್ಲಿ ನೆಲದ ಮೇಲೆ ಮಲಗಿಸಿ ಮೇಲೆ ಒಂದು ಹಳೇ ಗೋಣಿಯನ್ನು ಮುಚ್ಚಿಟ್ಟಿದ್ದಳು. ಆ ಮಗು ಒಂದು ಮಾತ್ರ ಈ ಪಾಪಿಗಳ ಕೈಗೆ ಸಿಕ್ಕದೇನೂ ಎಚ್ಚರವಾಗಿ ಕೂಗಿಕೊಳ್ಳದೇನೂ ಇದ್ದದ್ದು ಪರಮಾಶ್ಚರ್ಯವಾಗಿದೆ ಇವರು ಹೊರಟುಹೋದ ಒಂದೆರಡು ಘಂಟೆಯ ಮೇಲೆ ಊರಿನವರು ಬಂದು ನಡೆದ ಯಾವತ್ತು ವಿದ್ಯಮಾನವನ್ನು ಸಾಹುಕಾರನ ಹೆಂಡತಿಯಿಂದ ತಿಳಿದು ಕುಟುಕು ಜೀವದೊಂದಿಗೆ ಇದ್ದ ಮಸ್ತಾನು ಸಾಬಿಯನ್ನೂ ಮನೆ ಯಜಮಾನನನ್ನೂ ಉಪಚರಿಸಿ ಕೇಳಲು ಕಳ್ಳರ ಪೈಕಿ ಇಬ್ಬರ ಮೇಲಿನ ಗುರ್ತನ್ನು ಹೇಳಿದರು. ಈಗ ಪೋಲೀಸು ಅಧಿಕಾರಿಗಳು ಅವರನ್ನು ಹಿಡಿದಿರುವುದಲ್ಲದೆ ನಾನಾ ಕಡೆಗೂ ಪ್ಯಾಟಿಸಿ ಪತ್ತೆಮಾಡುವುದರಲ್ಲಿ ಇದಾರೆ ಮಸ್ತಾನನು ಮರು ದಿನವೇ ತೀರಿಕೊಂಡನು. ಸಾಹುಕಾರನು ಬದುಕುವ ಹಾಗಿಲ್ಲ ಸುಮಾರು ೫೦೦ ಮನೆಗೆ ಮೇಲ್ಪಟ್ಟ ಪೇಟೆ ಮನೆಯಾಗಿಯೂ ಭಾರಿ ಪೋಲೀಸ್ ಸ್ಟೇಷನ್ ಉಳ್ಳದ್ದಾಗಿ ಇರುವ ಸ್ಥಳಗಳಲ್ಲಿಯೇ ಈ ರೀತಿ ನಡೆದ ಮೇಲೆ ಇನ್ನು ಹಳ್ಳಿಹಳ್ಳಿಗಳ ಪಾಡೇನು!

ಚಂದಾದಾರ

ಇಂಡಿಯಾ ದೇಶದ ವೃತ್ತಾಂತಗಳು.

ಮಿ॥ ಜೆ ಎಚ್ ಕೋಟ್ಸ್ ಎಂಬಾತನು ಲಾಹೋರ್ ಪಟ್ಟಣದಲ್ಲಿ ತನ್ನ ಮೊಮ್ಮಗನ ಮನೆಯಲ್ಲಿ ಕಳೆದ ವಾರ ಕಾಲವಾದನು. ಈ ವೃದ್ಧನಿಗೆ ಮರಣಕಾಲದಲ್ಲಿ ೧೦೮ ವರುಷವೂ ನಾಲ್ಕು ತಿಂಗಳು ತುಂಬಿದ್ದಿತು.

****

ಕೊಚ್ಚಿ ಸಂಸ್ಥಾನದ ರಾಜರು ಕುಂಭಕೋಣದಲ್ಲಿ ಸಬ್ ಕಲೆಕ್ಟರಾಗಿರುವ ಮಿ॥ ಎ. ಆರ್ ಬಾನರ್ಜಿ ಎಂಬುವರನ್ನು ತಮ್ಮ ದಿವಾನರನ್ನಾಗಿ ನೇಮಿಸಿಕೊಳ್ಳಬೇಕೆಂದು ಪ್ರಯತ್ನ ಪಡುತ್ತಿರುವಂತೆ ಪ್ರಕಟವಾಗಿದೆ.

****

ಅಹಮದಾಬಾದಿನಲ್ಲಿ ಕಳೆದ ತಾ ೧೬, ೧೭, ೧೮, ಈ ಮೂರು ದಿನವೂ ಜೈನಮಹಾ ಸಭೆಯು ಜರುಗಿತು. ಅರ್ಜೆಂಗಂಜಿನ ಜೈನ ಶ್ವೇತಾಂಬರ ಐವನೆ ಸಮಾಜದ ರಾಯಿ ಬೇಟಬ್ ಚಂದ್ರ ನಹಾರ್ ಬಹದೂರ್ ಎಂಬುವರು ಸಭಾನಾಯಕರಾಗಿದ್ದರು.

****

ರಂಗೂನ್ ಪಟ್ಟಣದಲ್ಲಿ ವ್ಯಾಘ್ರ ಪಕ್ಷಿ ಮುಂತಾದ ಪ್ರಾಣಿಗಳನ್ನು ಇಟ್ಟಿರುವ ಪ್ರದರ್ಶನಶಾಲೆಯಲ್ಲಿ ಪ್ಲೇಗ್ ಉಪದ್ರ ಕಾಣಿಸಿಕೊಂಡು ೮—೧೦ ಇಲಿಗಳು ಸತ್ತುಹೋದವು. ಆದುದರಿಂದ ನೋಟಕ್ಕಾಗಿ ಹೋಗುವ ಜನರನ್ನು ಆ ಉದ್ಯಾನದೊಳಕ್ಕೆ ಬಿಡಕೂಡದೆಂದು ಸರ್ಕಾರದವರು ಕಟ್ಟುಮಾಡಿದಾರೆ.

****

ದಿವಾಳಿಯಾದ ಮದರಾಸ್ ಆರ್ಬತ್ನಾಟ್ ಕಂಪನಿಯಲ್ಲಿ ಅಲ್ಲಿನ ರಾಜಾ ಸರ್ ಸಾವಳೆ ರಾಮಸ್ವಾಮಿ ಮೊದಲಿಯಾರ್ರು ಅವರ ಕುಮಾರ ಎಸ್. ವಿ. ರಾಮಸ್ವಾಮಿ ಮೊದಲಿಯಾರ್ರು ಜಾಮೀನಿಗಾಗಿ ೩೦,೦೦೦ ರೂಪಾಯಿನ ಸರ್ಕಾರಿ ಪತ್ರಗಳನ್ನು ಠೇವಣಿ ಇಟ್ಟಿದ್ದರು. ಈ ಹಣವನ್ನು ಈಗ ಕೊಡಿಸಿಕೊಡಬೇಕೆಂದು ದಾವಾ ತಂದಿದಾರೆ.

****

ಮಣಿಪುರ ಸಂಸ್ಥಾನದಲ್ಲಿ ಕಳೆದ ವಾರ ರಾಜಾ ಶಿವಮಂಗಳಸಿಂಗ್ ಎಂಬುವರಿಗೆ ಪಟ್ಟಾಭಿಷೇಕೋತ್ಸವವು ೮—೧೦ ದಿನಗಳ ವರೆಗೆ ಅನೇಕ ದಾನಧರ್ಮಗಳೂ ಔತಣ ಉಡುಗೊರೆಗಳೂ ನಡೆದವು. ದೆಹಲಿಯಲ್ಲಿ ಚಕ್ರವರ್ತಿಯಾಗಿದ್ದ ಪ್ರಸಿದ್ಧ ಪೃಥಿವಿರಾಜರವರ ವಂಶದಲ್ಲಿ ಈ ರಾಜರು ೩೭ ನೆಯ ತಲೆಯವರೆಂದು ತಿಳಿದು ಬಂದಿದೆ.

****

ಪೂರಿ ಪಟ್ಟಣದ ಡೆಪ್ಯುಟಿ ಕಲೆಕ್ಟರಾದ ಮಿ॥ ಪಿ. ಸಿ. ಮಿತ್ರ ಎಂಬುವರು ಸರ್ಕಾರಿ ಕೆಲಸದ ಉದ್ದೇಶ್ಯ ಕಲ್ಕತ್ತೆಗೆ ಹೋಗಿ ವಾಪಸು ರೈಲಿನಲ್ಲಿ ಬರುತ್ತಿದ್ದಾಗ ದಾರಿಯಲ್ಲೇ ಯಾವನೋ ಒಬ್ಬನು ಅವರ ಗಾಡಿಗೆ ಹತ್ತಿ ಅವರ ಬಳಿ ಇದ್ದ ನಗದು ೧,೬೦೦ ರೂಪಾಯನ್ನು ಅಪಹರಿಸಿಕೊಂಡು ಹೋದನು. ಇನ್ನೂ ಸಿಕ್ಕಿ ಇಲ್ಲವೆಂದು ತಿಳಿದು ಬಂದಿದೆ.

****

ಬಂಗಾಳಾ ಗವರ್ನಮೆಂಟಿನವರು ಆ ಪ್ರಾಂತ್ಯ ಧಾನ್ಯಗಳ ಬೆಲೆ ಬಹಳ ಪ್ರಿಯವಾಗಿರುವುದನ್ನು ನೋಡಿ ಅಲ್ಲಿನ ಸರ್ಕಾರಿ ನೌಕರರಿಗೆಲ್ಲಾ ಅಂದರೆ ೩೦ ರೂಪಾಯಿನೊಳಗಿರುವ ಸಂಬಳಗಾರರಿಗೆ ಮೂರು ತಿಂಗಳ ವರೆಗೆ ಸ್ವಲ್ಪ ಅಲೋವೆನ್ಸು ಕೊಡುತ್ತಾ ಬರಬೇಕೆಂದು ಹುಕುಂ ಕೊಟ್ಟಿದಾರೆ. ಅಲ್ಪ ನೌಕರರ ಜೀವನಕ್ಕೆ ಇದರಿಂದ ಸ್ವಲ್ಪ ಸಹಾಯವಾದಂತಾಯಿತು.

****

ಭಾವನಗರದಲ್ಲಿ ಸೇಟ್ ರಹಿಮತುಲ್ಲಾ ಎಂಬ ಮಹಮದೀಯನು ಇದುವರೆಗೆ ನಾನಾ ಧರ್ಮಕಾರ್ಯಗಳನ್ನು ಮಾಡಿ ಪ್ರಖ್ಯಾತಿ ಪಡೆದಿರುತ್ತಾನೆ. ಈಗ ಅಲ್ಲಿನ ಮಹಮದೀಯರಿಗಾಗಿ ೧೫,೦೦೦ ರೂ. [illegible] ಒಂದು ಭಾರೀ ಮಸೀದಿಯನ್ನು ಕಟ್ಟಿಸಿಕೊಟ್ಟನು. ಕಳೆದ ವಾರ ಈ ಮಸೀದಿಯನ್ನು ಪ್ರತಿಷ್ಠೆ ಮಾಡಿ ಮಹಮದೀಯರು ಆ ಪುಣ್ಯಾತ್ಮನಿಗೆ ಒಂದು ಅಡ್ರೆಸ್ಸನ್ನು ಓದಿ ಒಪ್ಪಿಸಿದರು.

****

ಹಿಂದುಸ್ಥಾನದಲ್ಲಿ ಈಗ ಪ್ಲೇಗ್ ಉಪದ್ರವು ವಾರವಾರಕ್ಕೆ ಹೆಚ್ಚುತ್ತಿದೆ. ಕಳೆದ ವಾರ ಈ ಉಪದ್ರದಲ್ಲಿ ೨೦,೬೦೬ ಮಂದಿ ಕಾಲವಾದರು. ಈ ಪೈಕಿ ಬೇರೆ ಬೇರೆ ಕಡೆಯ ಸಂಖ್ಯೆಗಳೆಷ್ಟೆಂದರೆ—ಪಂಜಾಬ್ ೭,೯೮೭; ಸಂಯುಕ್ತ ಅಧಿಪತ್ಯಗಳು ೬,೬೫೨, ಬೊಂಬಾಯಿ ಅಧಿಪತ್ಯ ೨,೪೬೧, ಬಂಗಾಳಾ ೧,೨೦೫; ಮಧ್ಯಪ್ರಾಂತ್ಯಗಳು ೧,೩೪೭; ಮಧ್ಯ ಇಂಡಿಯಾ ೧೭೩, ಬರ್ಮಾ ೪೭೫.

****

ಬೀಜಾಪುರ್ ಡಿಸ್ಟ್ರಿಕ್ಟಿನಲ್ಲಿ ಕ್ಷಾಮವು ಇನ್ನೂ ನಿವಾರಣೆಯಾಗಲಿಲ್ಲ. ಈಗ ೮೫,೦೦೦ ಜನರು ಕ್ಷಾಮಪೀಡಿತರಾಗಿ ರಿಲೀಫ್ ಕಾಮಗಾರಿಗಳಲ್ಲಿ ಸೇರಿಕೊಂಡು ಜೀವನ ಮಾಡುತ್ತಿರುವರು. ಆ ಪೈಕಿ ಬೀಜಾಪುರ್ ಪಟ್ಟಣದವರೇ ೮೦,೦೦೦ ಮಂದಿಯಾಗುವರು. ಅಲ್ಲಿ ಈಗ ಮಳೆ ಇಲ್ಲದೆ ಬೆಳೆಯೆಲ್ಲಾ ಕೆಟ್ಟುಹೋಗಿದೆಯಾದುದರಿಂದ ಸರ್ಕಾರದವರೇ ಅಲ್ಲಿನ ಪ್ರಜೆಗಳನ್ನು ಇನ್ನೂ ಕೆಲವು ಕಾಲ ಕಾಪಾಡಬೇಕಾಗಿದೆ.

****

ಬರ್ಮಾ ಅಧಿಪತ್ಯಕ್ಕೆ ಸೇರಿದ ಪ್ರೋಂ ನಗರದಿಂದ ಸುಮಾರು ಒಂದು ನೂರು ಮಂದಿ ದರೋಡೆಕೋರರು ತೌಂಗೂ ನಗರಕ್ಕೆ ಹೋಗುತ್ತಿದಾರೆಂದು ವರ್ತಮಾನ ಹುಟ್ಟಿ ಅಲ್ಲಿನ ಜನರೆಲ್ಲಾ ತುಂಬಾ ಗಾಬರಿಪಡುತ್ತಿದಾರೆ. ಸರ್ಕಾರದವರು ಅವರನ್ನು ಹಿಡಿಯುವುದಕ್ಕೋಸ್ಕರ ಸ್ವಲ್ಪ ಸೈನ್ಯವನ್ನೂ ಪೋಲೀಸ್ ಸಿಬ್ಬಂದಿಯನ್ನೂ ಕಳುಹಿಸಿರುವುದಲ್ಲದೆ ಪ್ರಜೆಗಳಿಗೆಲ್ಲಾ ಎಚ್ಚರಿಕೆಯಿಂದಿರಬೇಕೆಂದು ಮುಂತಿಳಿಸಿರುವರು.

****

ಕಲ್ಕತ್ತಾ ಪಟ್ಟಣದ ಸೆಷನ್ಸ್ ಕೋರ್ಟಿನಲ್ಲಿ ಸರ್ಕಾರದವರು ಒಬ್ಬನ ಮೇಲೆ ದುಷ್ಟ ಜೀವನ ಮಾಡುತ್ತಿದ್ದನೆಂಬ ಕೇಳಿ ಮೊಕದ್ದಮೆ ತಂದಿದಾರೆ. ಇದುವರೆಗೆ ಈ ಮೊಕದ್ದಮೆಗೆ ಸರ್ಕಾರದಿಂದ ೫೦,೧೦೦ ರೂಪಾಯಿ ಖರ್ಚಾಗಿದೆ. ಮದರಾಸಿನಲ್ಲಿದ್ದ ಪ್ರಸಿದ್ಧ ಮಿ॥ ನಾರ್ಟನ್ ಎಂಬ ವಕೀಲರಿಗೆ ದಿನಕ್ಕೆ ೧,೦೦೦ ರೂಪಾಯಿ ಪ್ರಕಾರ ಫೀಜು ಗೊತ್ತುಮಾಡಿ ಸರ್ಕಾರದ ಕಡೆ ಆ ಮೊಕದ್ದಮೆ ನಡಸುವಂತೆ ನೇಮಿಸಿಕೊಂಡಿದಾರೆ.

****

ಕಲ್ಕತ್ತಾ ಪಟ್ಟಣದಲ್ಲಿ ಬಾಬು ಹರಿಗೋಪಾಲನೆಂಬೊಬ್ಬ ಸಾಹುಕಾರನು ತನ್ನ ಸೇವಕನ ಮೂಲಕ ೧೨,೦೦೦ ರೂಪಾಯಿನ ಕರೆನ್ಸಿ ನೋಟುಗಳನ್ನು ಬ್ಯಾಂಕಿಗೆ ಕೊಟ್ಟು ಕಳುಹಿಸಿದನು. ಆದರೆ ಆ ಸೇವಕನು ಹಣವನ್ನು ಬ್ಯಾಂಕಿಗೆ ಪಾವತಿಮಾಡದೆ ಎತ್ತಿಹಾಕಿ ತಲೆತಪ್ಪಿಸಿಕೊಂಡನು. ಪೋಲೀಸಿನವರು ಪತ್ತೆಯಿಂದ ಅವನನ್ನು ಹಿಡಿದು ೧೨,೦೦೦ ರೂಪಾಯನ್ನೂ ಅವನಿಂದ ವಸೂಲ್ಮಾಡಿ, ದರ್ಯಾಫ್ತಿಯಿಂದ ಅವನಿಗೆ ಆರು ತಿಂಗಳ ಸಜಾ ವಿಧಿಸಿದರು.

****

ಸಿಂಲಾ ಪ್ರಾಂತ್ಯಕ್ಕೆ ಸೇರಿದ ಬಘಾಟ್ ಎಂಬೊಂದು ಸಣ್ಣ ದೇಶೀಯ ಸಂಸ್ಥಾನದಲ್ಲಿ ರಾಜರಿಗೆ ಬುದ್ಧಿಯು ಸ್ಥಿಮಿತವಾಗಿಲ್ಲವೆಂದು ಕಂಡುಬಂದ ಕಾರಣ ಇಂಡಿಯಾ ಗವರ್ನಮೆಂಟಿನವರು ಆ ಸಂಸ್ಥಾನದ ಕಾರುಬಾರುಗಳನ್ನು ರಾಯ ಸಾಹೆಬ್ ಮಂಗಳರಾಂ ಎಂಬುವರಿಗೆ ವಹಿಸಿಕೊಟ್ಟಿದಾರೆ. ಈ ಏರ್ಪಾಡು ಆ ಸಂಸ್ಥಾನದ ಸಮಸ್ತ ಪ್ರಜೆಗಳಿಗೂ ತೃಪ್ತಿಯನ್ನೂ ಸಮಾಧಾನವನ್ನೂ ಉಂಟುಮಾಡಿರುವುದು. ಆ ರಾಜರನ್ನು ಔಷಧ ಕೊಟ್ಟು ವಾಸಿಮಾಡುತ್ತಿದಾರೆ.

****

ಹರಿದ್ವಾರದ ಹತ್ತಿರ ಒಂದು ಸಣ್ಣ ಆಶ್ರಮದಲ್ಲಿ ಕೆಲವು ಸ್ತ್ರೀಯರೇ ಸೇರಿಕೊಂಡು ವಾಸ ಮಾಡುತ್ತಿದಾರೆ. ಒಬ್ಬ ಬಂಗಾಳಾ ಸ್ತ್ರೀಯು ಪಶ್ಚಿಮ ಪ್ರಾಂತ್ಯಗಳಿಗೆ ಬಂದು ಅಲ್ಲಿದ್ದ ಒಬ್ಬ ಐಶ್ವರ್ಯವತಿಯನ್ನು ತನ್ನ ಶಿಷ್ಯವರ್ಗಕ್ಕೆ ಸೇರಿಸಿಕೊಂಡು, ಆಕೆಯನ್ನು ಹರಿದ್ವಾರಕ್ಕೆ ಕರೆದು ತಂದಳು. ಆಕೆಯಿಂದಲೇ ಮೇಲ್ಕಂಡ ಆಶ್ರಮವು ಪ್ರಾರಂಭಿಸಲ್ಪಟ್ಟಿತು. ಅದರೊಳಕ್ಕೆ ಗಂಡಸರ್ಯಾರನ್ನೂ ಬಿಡುವುದಿಲ್ಲ. ಅಲ್ಲಿರುವ ಸ್ತ್ರೀಯರು ಹಿಂದೂ ಗ್ರಂಥಗಳನ್ನು ಓದಿಕೊಳ್ಳುತ್ತಿದಾರೆ.

****

ಕಲ್ಕತ್ತಾ ಪಟ್ಟಣದಲ್ಲಿ ವೈಕುಂಠನಾಥನೆಂಬುವನು— ವರದಚರಣನೆಂಬ ತನ್ನ ಅಡಿಗೆಯವನನ್ನು ಗಲೀನ ಹಣ್ಣು ಕದ್ದನೆಂದು ಅವನನ್ನು ಕರಸಿ ಅವನ ಸಮ್ಮತಿಯನ್ನು ಪಡೆದು ಅವನ ತಲೆ ಬೋಳಿಸಿ ಮುಖಕ್ಕೆ ಮಸಿಯನ್ನು ಬಳಿಸಿದನು. ಇಲ್ಲವಾದರೆ ಪೋಲೀಸಿಗೆ ಕಳಿಸುತ್ತೇನೆಂದು ಹೆದರಿಸಿದ್ದರಿಂದ ಅವನು ಆ ಶಿಕ್ಷೆಗೆ ಒಪ್ಪಿಕೊಂಡನು. ತರುವಾಯ ಆ ಅಡಿಗೆಯವನು ತನ್ನ ಯಜಮಾನನ ಮೇಲೆ ಫಿರ್ಯಾದು ತಂದನು. ಮ್ಯಾಜಿಸ್ಟ್ರೇಟರು ಆ ಯಜಮಾನನಿಗೆ ೨೫ ರೂ ಜುಲ್ಮಾನೆ ಹಾಕಿದರು.

****

ಕಲ್ಕತ್ತಾ ಪಟ್ಟಣದ ಪ್ರಾವಿಡೆಂಟ್ ಫಂಡೆಂಬ ನಿಧಿಯ ಲೇಟ್ ಮ್ಯಾನೇಜರ್ ಜೆ. ಕೆ. ಬೋಸ್ ಎಂಬಾತನ ಮೇಲೆ ಮೋಸಮಾಡಿದನೆಂಬ ನಾಲ್ಕು ಮೊಕದ್ದಮೆಗಳು ದಾಖಲಾಗಿ ಕೊನೆಗಿನ ೧ನೇ ಕ್ಲಾಸ್ ಮ್ಯಾಜಿಸ್ಟ್ರೇಟರಲ್ಲಿ ದರ್ಯಾಫ್ತು ಆಗುತ್ತಿತ್ತಷ್ಟೆ. ಕಳೆದ ವಾರ ಆ ನಾಲ್ಕು ಮೊಕದ್ದಮೆಗಳೂ ಅಪರಾಧಿಯ ಮೇಲೆ ರುಜುವಾತಾಗಿ ಮ್ಯಾಜಿಸ್ಟ್ರೇಟರು ಅವನಿಗೆ ನಾಲ್ಕೂವರೆ ವರುಷ ಕಠಿಣಸಜಾ, ೨,೫೦೦ ರೂಪಾಯಿ ಜುಲ್ಮಾನೆ, ಜುಲ್ಮಾನೆ ಕೊಡದಿದ್ದರೆ ಇನ್ನೂ ೧೫ ತಿಂಗಳ ಕಠಿಣಸಜಾ ಎಂಬ ಶಿಕ್ಷೆಯನ್ನು ವಿಧಿಸಿರುತ್ತಾರೆ.

****

ಲಾಹೋರ್ ಪಟ್ಟಣದಲ್ಲಿ ಜಸವಂತರಾವ್, ಲಾಲಾ ಅಥವಲ್ಲೆ ಎಂಬುವರು ಸೇರಿಕೊಂಡು ಪಂಜಾಬಿ ಎಂಬ ಹೆಸರಿನ ಪತ್ರಿಕೆಯನ್ನು ನಡಸುತ್ತಾ, ಅದರಲ್ಲಿ ಕೆಲವು ತಿಂಗಳ ಕೆಳಗೆ ಸರ್ಕಾರದವರನ್ನು ದೂರಿ ಒಂದು ಟಿಪ್ಪಣಿಯನ್ನು ಪ್ರಕಟ ಮಾಡಿದರು. ಇದಕ್ಕಾಗಿ ಸರ್ಕಾರದವರು ಅವರಿಬ್ಬರ ಮೇಲೂ ಫಿರ್ಯಾದು ತಂದರು. ಮ್ಯಾಜಿಸ್ಟ್ರೇಟರು ಈ ಮೊಕದ್ದಮೆಯನ್ನು ದರ್ಯಾಫ್ತು ಮಾಡಿ, ಇಬ್ಬರ ಮೇಲೂ ಅಪರಾಧ ರುಜುವಾತಾದ್ದರಿಂದ ಮೊದಲನೆ ಅಪರಾಧಿಗೆ ೨ ವರುಷ ಸಜಾ ೧,೦೦೦ ರೂ ಜುಲ್ಮಾನೆಯನ್ನೂ, ಎರಡನೆ ಅಪರಾಧಿಗೆ ೬ ತಿಂಗಳ ಸಜಾ ೨೦೦ ರೂ ಜುಲ್ಮಾನೆಯನ್ನೂ ವಿಧಿಸಿದರು. ಇವರಿಬ್ಬರೂ ಈಗ ಅಪೀಲ್ ಮಾಡಿಕೊಂಡಿದಾರೆ.

****

ಮಡಗಾಸ್ಕರ್ ದ್ವೀಪವು ಫ್ರೆಂಚ್ ಸರ್ಕಾರದವರಿಗೆ ಸೇರಿದೆ. ಈಗ ಆ ದ್ವೀಪದ ಐಶ್ವರ್ಯವನ್ನು ಅಭಿವೃದ್ಧಿ ಮಾಡಬೇಕೆಂದೂ ಅದಕ್ಕಾಗಿ ಹಿಂದೂಸ್ಥಾನದಿಂದ ಅನೇಕ ಸಂಸಾರಗಳನ್ನು ಕರೆದುಕೊಂಡು ಹೋಗಿ ಅಲ್ಲಿ ವಾಸ ಮಾಡುವಂತೆ ಮಾಡಬೇಕೆಂದೂ ಪ್ರಯತ್ನ ಪಟ್ಟಿದಾರೆ. ಹಾಗೆ ಅಲ್ಲಿಗೆ ಹೋಗತಕ್ಕವರಿಗೆ ಅಲ್ಲಿ ಮುಫತ್ತಾಗಿ ವ್ಯವಸಾಯದ ಜಮೀನನ್ನೂ ಇತರ ಸಹಾಯಗಳನ್ನೂ ಕೊಡುವುದಲ್ಲದೆ, ತಕ್ಕಮಟ್ಟಿಗೆ ಹಣವೂ ಕೊಡುವರೆಂದು ಪ್ರಕಟವಾಗಿದೆ. ಅಲ್ಲಿನ ಭೂಗುಣವು ಧಾನ್ಯಗಳನ್ನೂ ಹತ್ತಿಯನ್ನೂ ಬೆಳೆ ಮಾಡುವುದಕ್ಕೆ ತುಂಬಾ ಹುಲುಸಾಗಿದೆ ಎಂದು ಹೇಳುವರು. ಅಲ್ಲಿಗೆ ಹೋಗಬೇಕೆನ್ನುವವರು ಮದರಾಸಿನಲ್ಲಿರುವ ಫ್ರೆಂಚ್ ರಾಯಭಾರಿಗೆ ಬರೆದುಕೊಂಡಲ್ಲಿ ಎಲ್ಲಾ ವಿಷಯಗಳೂ ಗೊತ್ತಾಗುವುವು.

****

ಮದರಾಸ್ ಪಟ್ಟಣದಲ್ಲಿ ಮ್ಯುನಿಸಿಪಾಲಿಟಿಯವರು ಮಾಂಸಕ್ಕಾಗಿ ಕಸಾಬರು ಕೊಲ್ಲುವ ಕುರಿ ಆಡುಗಳಿಗೆ ಹಾಕಿದ್ದ ತೆರಿಗೆಯನ್ನು ಸ್ವಲ್ಪ ಹೆಚ್ಚಿಸಿದರು. ಕಸಾಬರು ಜಾಸ್ತಿ ಹಣವನ್ನು ಕೊಡಲಾರದೆ ನಾವು ಕುರಿ ಆಡನ್ನು ಕೊಂದು ಮಾಂಸ ಬಿಕರಿ ಮಾಡುವುದೇ ಇಲ್ಲವೆಂದು ಹಟ ಹಿಡಿದು ಸುಮಾರು ಎರಡು ತಿಂಗಳಿಗೆ ಬಂದಿದೆ. ಇದುವರೆಗೆ ಆ ಪಟ್ಟಣದ ಪ್ರಜೆಗಳಿಗೆ ಆ ಮಾಂಸ ಸಿಕ್ಕುವುದು ದುರ್ಲಭವಾಗಿರುವುದು. ತೆರಿಗೆಯನ್ನು ಕಮ್ಮಿ ಮಾಡಿಕೊಡಬೇಕೆಂದು ಆ ಕಸಾಬರೆಲ್ಲಾ ಸೇರಿ ಗವರ್ನರವರಿಗೂ ಮ್ಯುನಿಸಿಪಾಲಿಟಿಗೂ ಅರ್ಜಿ ಬರೆದಾಗ್ಯೂ ಪ್ರಯೋಜನವಾಗಲಿಲ್ಲ. ಕಳೆದ ಶುಕ್ರವಾರ ಮತ್ತೆ ಅವರೆಲ್ಲಾ ತಿರುವಲಿಕ್ಕೇಣಿಯೊಳಗಿರುವ ಒಂದು ಮಸೀದಿಯಲ್ಲಿ ಸಭೆ ಸೇರಿ, ಅದೇ ವಿಷಯವಾಗಿ ಚಕ್ರವರ್ತಿಯವರಿಗೂ ಸ್ಟೇಟ್ ಸೆಕ್ರೆಟರಿಯವರಿಗೂ ವಿಜ್ಞಾಪನಾ ಪತ್ರಿಕೆಗಳನ್ನು ಒಪ್ಪಿಸಬೇಕೆಂದು ತೀರ್ಮಾನ ಮಾಡಿದರು.

****

ಕಲ್ಕತ್ತಾ ಪಟ್ಟಣದ ಬಳಿ ಮಥುರಾಪುರದಲ್ಲಿ ಎರಡು ವಾರಗಳ ಕೆಳಗೆ ಶಾಂತಿಭೇದ ಉಪದ್ರವು ಬಹಳ ಕೇಳಾಗಿತ್ತು. ತಾ ೧೧ರಲ್ಲಿ ಆ ಗ್ರಾಮದೊಳಗೆ ಗೋಪಾಲಚಂದ್ರನೆಂಬ ಸಾಹುಕಾರನು ಸತ್ತುಹೋದನು. ಅವನು ಸತ್ತ ಸ್ವಲ್ಪ ಹೊತ್ತಿನೊಳಗೇ ಅವನಿಗಿದ್ದ ಒಂದೇ ಗಂಡು ಒಂದೇ ಹೆಣ್ಣು ಈ ಎರಡು ಮಕ್ಕಳೂ ಕಾಲವಾದರು. ಅವನ ಹೆಂಡತಿಯೂ ರಕ್ತಸಂಬಂಧಿಗಳೂ ಮೂರು ಹೆಣಗಳನ್ನೂ ಹಾಕಿಕೊಂಡು ಗೋಳಾಡುತ್ತಿರುವಲ್ಲಿ ಒಬ್ಬ ಕಳ್ಳನು ಗೋಡೆ ಹತ್ತಿ ಮನೆಯೊಳಕ್ಕೆ ಹೋಗಿ ಬೀದಿ ಬಾಗಿಲು ತೆರೆದನು. ಇನ್ನು ಕೆಲವ ಕಳ್ಳರು ಒಳಕ್ಕೆ ನುಗ್ಗಿದರು. ಅವರೆಲ್ಲಾ ಆಯುಧಪಾಣಿಗಳಾಗಿ ಬಂದುದನ್ನು ಮನೆಯ ಸೇವಕನು ಕಂಡು ಕೂಗಲಾರಂಭಿಸಿದನು. ಕೂಡಲೇ ಕಳ್ಳರು ಅವನ ತಲೆಯನ್ನು ಒಡೆದು, ಒಳಕ್ಕೆ ನುಗ್ಗಿ ನಗನಾಣ್ಯಗಳನ್ನೆಲ್ಲಾ ಹೊತ್ತುಕೊಂಡು ಪರಾರಿಯಾದರು. ಪೋಲೀಸಿನವರು ಆ ದುಷ್ಟ ಕ್ರೂರಾತ್ಮರುಗಳನ್ನು ಹ್ಯಾಗಾದರೂ ಹಿಡಿಯಬೇಕೆಂದು ಬಹಳ ಸಾಹಸಪಡುತ್ತಿದಾರೆ.

****

ತಿರುಪತಿ ಮಹಂತರು ಆ ದೇವಸ್ಥಾನದ ಹಣ ಕಾಸನ್ನು ದುಂದು ಖರ್ಚುಮಾಡುತ್ತಾರೆಂದು ಹಿಂದೆಯೇ ಮೊಕದ್ದಮೆ ಬಂದು, ಮದರಾಸ್ ಹೈಕೋರ್ಟಿನವರು ಮಹಂತರಿಗೆ ವಿರೋಧವಾಗಿ ತೀರ್ಮಾನ ಮಾಡಿದ್ದರಷ್ಟೆ. ಮಹಂತರು ವಿಲಾಯತಿಯಲ್ಲಿ ಲಾಯರನ್ನಿಟ್ಟು ಅಲ್ಲಿನ ಪ್ರಿವಿ ಕೌನ್ಸಿಲ್ ಎಂಬ ನ್ಯಾಯಸ್ಥಾನದಲ್ಲಿ ಅಪೀಲ್ ನಡಸಿದ್ದರು. ಅಲ್ಲಿನ ಜಡ್ಜಿಗಳು ಮಹಂತರ ಇಷ್ಟ ಪ್ರಕಾರ ತೀರ್ಮಾನ ಮಾಡಿರುವುದೇನೆಂದರೆ—ಉತ್ತರ ಆರ್ಕಾಟಿನ ಡಿಸ್ಟ್ರಿಕ್ಟ್ ಕೋರ್ಟಿನವರು ಆ ದೇವಸ್ಥಾನದ ವರಮಾನದಿಂದ ಒಬ್ಬ [illegible] ನೇಮಿಸಬೇಕು. ಆಯಾವರುಷ ದೇವಸ್ಥಾನದ ಕೆಲಸಕಾರ್ಯಗಳಿಗೆ ಎಷ್ಟು ಹಣ ಬೇಕಾಗುವುದೋ ಅದನ್ನೆಲ್ಲಾ ಮಹಂತರು ಆಯಾ ವರುಷಾರಂಭದಲ್ಲೇ ಪಟ್ಟಿ ಬರೆದು ಡಿಸ್ಟ್ರಿಕ್ಟ್ ಕೋರ್ಟಿಗೆ ಹಾಜರ್ಮಾಡಿ, ಅನಂತರ ಸ್ಯಾಂಕ್ಷನ್ ಪಡೆದು ಆ ಪಟ್ಟಿಯ ಪ್ರಕಾರ ಮೇಲ್ಕಂಡ [illegible] ಹಣ ತೆಗೆದುಕೊಳ್ಳಬೇಕು. ಮಹಂತರಿಂದ ಸ್ವಲ್ಪವೂ ಹಣದ ದುರ್ವಿನಿಯೋಗವಾಗದಂತೆ ಆ ಕೋರ್ಟಿನವರು ಕೆಲವು ಕಾನೂನು [illegible] ಮಾಡಬೇಕು. ಇದರಂತೆ ನಡೆಯುಕೊಳ್ಳುವುದಾಗಿ ಮಹಂತರು ಒಪ್ಪಿಕೊಂಡಿದಾರೆ.

****

ಲಾಹೋರ್ ಪಟ್ಟಣದ ಬಳಿ ಬಾಗ್ಬಾನ್ಪುರವೆಂಬ ದೊಡ್ಡ ಊರಿಗೆ ಯೂಸುಫ್ ಎಂಬುವನು ಮೂವರು ಸಂಗಡಿಗರೊಡನೆ ಹೋಗಿ ಜನರುಗಳಿಗೆಲ್ಲಾ ೧ ರೂಪಾಯಿ ಕೊಟ್ಟರೆ ಅದಕ್ಕೆ ಎರಡರಷ್ಟು ಬೆಲೆ ಬಾಳುವ ಪದಾರ್ಥಗಳನ್ನು ತಂದು ಕೊಡುತ್ತೇನೆಂದು ನಂಬಿಕೆ ಹುಟ್ಟಿಸಿ ಅನೇಕರಿಂದ ಹಣ ಇಸಿದುಕೊಂಡು ಹೋದನು. ಆರು ತಿಂಗಳ ಮೇಲೆ ಅವರು ಅದೇ ಪ್ರಕಾರ ಸಾಮಾನು ಸಹಿತ ಆ ಊರಿಗೆ ಬಂದು ಹಣ ಕಟ್ಟಿದ್ದವರಿಗೆಲ್ಲಾ ನಿಜವಾಗಿಯೂ ಎರಡರಷ್ಟು ಬೆಲೆಯಾಗುವ ಪದಾರ್ಥಗಳನ್ನು ಕೊಟ್ಟು ಹೋದರು. ಅನಂತರ ಮೂರನೇ ವರುಷವೂ ಅವರು ಅಲ್ಲಿಗೆ ಹೋಗಿ ಮೊದಲಿನಂತೆಯೇ ಜನರಿಗೆ ಮಾತುಕೊಟ್ಟು ಈ ಸಲ ೩೦೦ ರೂಪಾಯಿ ತನಕ ವಸೂಲ್ಮಾಡಿಕೊಂಡು ಹೋಗಿ ವಾಪಸು ಬರಲೇ ಇಲ್ಲ. ಹಣ ಕೊಟ್ಟವರ ಪೈಕಿ ಒಬ್ಬನಿಗೆ ಅನುಮಾನವಾಗಿ ಅಂಬಾಲಾ ಪಟ್ಟಣಕ್ಕೆ ಕಾಗದಾ ಬರೆದನು. "ಅವರ್ಯಾರೋ ನಾವು ಕಾಣೆವು" ಎಂಬ ಜವಾಬು ಬಂದಿತು. ಆಗ ಪೋಲೀಸಿಗೆ ತಿಳಿಸಿದರು. ಆ ನಾಲ್ಕು ಜನರೂ ಸಿಕ್ಕಿಬಿದ್ದರು. ಚೀಫ್ ಕೋರ್ಟಿನ ಇಬ್ಬರು ಜಡ್ಜಿಗಳು ಮೊಕದ್ದಮೆಯನ್ನು ದರ್ಯಾಫ್ತು ಮಾಡಿ, ಆ ನಾಲ್ವರಿಗೂ ತಲಾ ಆರು ತಿಂಗಳಂತೆ ಕಠಿಣ ಸಜಾ ವಿಧಿಸಿದರು.

****

ಭಾವಲ್ಪುರದ ನವಾಬರವರು ಎರಡು ತಿಂಗಳ ಕೆಳಗೆ ನೂರಾರು ಮಂದಿ ಮಹಮದೀಯರನ್ನು ತಮ್ಮ ಜೊತೆಯಲ್ಲಿ ಕರೆದುಕೊಂಡು ಮಕ್ಕಾ ಮದೀನಾ ಎಂಬ ತಮ್ಮ ಪುಣ್ಯಭೂಮಿಗೆ ಯಾತ್ರೆ ಹೋಗಿದ್ದರಷ್ಟೆ. ಅವರು ಯಾತ್ರೆಯನ್ನೆಲ್ಲಾ ಮಾಡಿಕೊಂಡು ಆಫ್ಘಾನಿಸ್ಥಾನದ ಅಮೀರರಿಗೆ ತಮ್ಮ ಸಂಸ್ಥಾನದಲ್ಲಿ ಅತಿಥಿಸತ್ಕಾರಗಳನ್ನು ನಡಸುವುದಕ್ಕೋಸ್ಕರ ಬೇಗನೆ ಹಿಂತಿರುಗಿ ಪ್ರಯಾಣ ಮಾಡಿಬರುತ್ತಿರುವಲ್ಲಿ ದಾರಿಯಲ್ಲೇ ಒಂದೆರಡು ದಿನ ಕಾಯಿಲೆ ಬಿದ್ದು ಹಾಗೇ ಕಾಲವಾದರೆಂದು ತಂತೀ ವರ್ತಮಾನ ಬಂದಿದೆ. ಅವರ ಶವವನ್ನು ಸುಗಂಧದ್ರವ್ಯಗಳ ಸಮೇತ ಪೆಟ್ಟಿಗೆಯಲ್ಲಿಟ್ಟು ಹಡಗಿನ ಮೇಲೆ ಸಾಗಿಸಿಕೊಂಡು ಬಂದು ಭಾವಲ್ಪುರದಲ್ಲಿ ಕಳೆದ ವಾರ ಯಥಾವಿಧಿಯಾಗಿ ಸಮಾಧಿ ಮಾಡಿದರು. ಈ ನವಾಬರು ಕಳೆದ ೧೮೬೦ ರಲ್ಲಿ ಜನಿಸಿ ನಾಲ್ಕನೇ ವಯಸ್ಸಿನಲ್ಲೇ ಗದ್ದಿಗೆಯನ್ನು ಹತ್ತಿದರು. ಅನೇಕ ವರುಷಗಳ ತನಕ ಇಂಡಿಯಾ ಗವರ್ನಮೆಂಟಿನವರು ಆ ಸಂಸ್ಥಾನವನ್ನು ಮೇಲ್ವಿಚಾರಣೆ ನೋಡಿಕೊಳ್ಳುತ್ತಾ, ಸಂಸ್ಥಾನದಲ್ಲಿ ಅನೇಕ ನೀರಾವರಿ ಕಾಮಗಾರಿಗಳನ್ನು ಮಾಡಿಸಿ, ಕಾರುಬಾರುಗಳನ್ನು ಕ್ರಮಕ್ಕೆ ತಂದಿಟ್ಟು, ಉತ್ಪತ್ತಿಯನ್ನು ಎರಡಷ್ಟು ಹೆಚ್ಚುವಂತೆ ಮಾಡಿದರು. ಈ ಸಂಸ್ಥಾನವು ೧೫,೨೮೫ ಚದರಮೈಲಿ ವಿಸ್ತಾರವಾಗಿಯೂ ಐದು ಲಕ್ಷಕ್ಕಿಂತ ಸ್ವಲ್ಪ ಹೆಚ್ಚಾದ ಪ್ರಜಾ ಸಂಖ್ಯೆಯನ್ನುಳ್ಳದ್ದಾಗಿಯೂ ಇರುವುದು.

****

ಬರ್ಮಾ ಅಧಿಪತ್ಯದಲ್ಲೆಲ್ಲಾ ಎಳೆಮಕ್ಕಳ ಸಾವನ್ನು ಕಡಿಮೆಮಾಡಬೇಕೆಂದು ಕೆಲವು ದೊಡ್ಡಮನುಷ್ಯರು ಸೇರಿ ಒಂದು ಸಂಘವನ್ನು ಮಾಡಿಕೊಂಡು ಸಾಹಸಪಡುತ್ತಿದಾರೆ. ಸರ್ಕಾರದವರೂ ಡಾಕ್ಟರುಗಳೂ ಆ ಸಂಘದವರಿಗೆ ಬೇಕಾದಷ್ಟು ಸಹಾಯ ಸಂಪತ್ತುಗಳನ್ನು ಒದಗಿಸಿಕೊಡುತ್ತಿರುವರು. ಈಗ ಈ ಸಂಘದವರು ಗವರ್ನಮೆಂಟ್ ಸೆಕ್ರೆಟರಿಯವರಿಗೆ ಒಂದು ಅರ್ಜಿ ಬರೆದು ಅವರನ್ನು ಕೇಳಿಕೊಂಡಿರುವ ಅಂಶಗಳೇನೆಂದರೆ—ರಂಗೂನ್ ಪಟ್ಟಣಕ್ಕೆ ಸಮೀ

ಫಲವತ್ತಾದ ಗೋಮಾಳ ಭೂಮಿಯನ್ನು ಕೊಡಿಸಿಕೊಡಬೇಕು ಅಲ್ಲಿ ಗೋವುಗಳನ್ನು ಈ ಸಂಘದವರು ಕಟ್ಟಿ ಸಾಕಿ, ಅವುಗಳ ಹಾಲನ್ನು ಕರೆದಿಸಿ ಬಡಬಗ್ಗರ ಮಕ್ಕಳಿಗೆಲ್ಲಾ ಹಂಚುವರು ಇದಲ್ಲದೆ ಅಲ್ಲಿನ ಬಾಲಿಕಾ ಪಾಠಶಾಲೆಗಳ ಉಪಯೋಗಾರ್ಥವಾಗಿ ವಿಚಾರವನ್ನು ಅಲ್ಪಸ್ವಲ್ಪ ಬೋಧಿಸುವಂಥಾ ಪುಸ್ತಕಗಳನ್ನು ಬರೆಯಿಸುವರು ಇದಲ್ಲದೆ ಆಗಾಗ್ಗೆ ಒಂದೊಂದು ಊರಿನಲ್ಲಿ ಪ್ರದರ್ಶನವನ್ನು ನಡಿಸಿ, ಆಯಾ ವರುಷದ ಚಿಕ್ಕಮಕ್ಕಳಲ್ಲಿ ಯಾರನ್ನಾಗಿ ಬೆಳಸಿ ಸಾಕಿರುತ್ತಾರೋ ಅಂಥಾ ತಂದೆ ತಾಯಿಗಳಿಗೆ ಬಹುಮಾನ ಕೊಡಲು ಒಂದು ಸಂಘವನ್ನು ಮಾಡಿರುತ್ತಾರೆ ಈ ಬಹುಮಾನಗಳು ಯಥಾರ್ಥವಾದ ಬಿರ್ಮಿಯರಂತೆ ತಾಯಿತಂದೆಗಳಲ್ಲದೆ ಇತರ ಜಾತಿಯವರಿಗೆ ಕೊಡಲ್ಪಡುವುದಿಲ್ಲ.

ವಿದೇಶ ವರ್ತಮಾನಗಳು.

ಬ್ರಿಸ್ಟಲ್ ಕಡಲು ಕಾಲುವೆಯಲ್ಲಿ ಕಳೆದ ವಾರ ಎರಡು ಜಹಜು ಢಕ್ಕಾ ಹೊಡೆದು ಒಂದು ಜಹಜು ಮುಳುಗಿ ಹೋಯಿತು ೫ ಜನರು ಸಮುದ್ರದ ಪಾಲಾದರು.

****

ಸ್ವೀಡ್ ದ್ವೀಪದ ಬಳಿ ಕಳೆದ ವಾರ ಸಮುದ್ರದಲ್ಲಿ ಎರಡು ಜಹಜು ಢಕ್ಕಾ ಹೊಡೆದು ಆ ಪೈಕಿ ಲಾರ್ಷಿಂಗ್‌ಟನ್ ಎಂಬುದು ಮುಳುಗಿಹೋಯಿತು ಅದರಲ್ಲಿದ್ದ ೧೪೦ ಮಂದಿ ಪ್ರಯಾಣಿಕರಲ್ಲಿ ಮಂದಿ ಮಾತ್ರ ಬದುಕಿ ಬಂದಿರುತ್ತಾರೆಂದು ತಂತೀವರ್ತಮಾನ ಬಂದಿದೆ

****

ಬಂದರಿನಿಂದ ಅಕ್ಕಿಯನ್ನು ಬರ್ತಿ ಮಾಡಿಕೊಂಡು ಹೊರಟಿದ್ದ ಲೇಪ್ರೋಸ್ ಎಂಬ ಜಹಜು ಸೇಂಟ್ ನಜ್ಯೆರ್ ಎಂಬ ಬಂದರಿನ ಬಳಿ ಮಂಜಿನೊಳಗೆ ಸಿಕ್ಕಿ ದಾರಿತಪ್ಪಿ ಒಂದು ಬಂಡೆಗೆ ಬಡಿದು ಪೂರ್ಣವಾಗಿ ಒಡೆದುಹೋಯಿತು ಕೆಲವು ಸಾವಿರ ಪಲ್ಲಗಳಷ್ಟು ಅಕ್ಕಿಯೆಲ್ಲಾ ಸಮುದ್ರದ ಪಾಲಾಯಿತು ದೇವರ ದಯದಿಂದ ಅದರ ನೌಕರರೊಬ್ಬರೂ ಪ್ರಾಣಕಳಕೊಳ್ಳಲಿಲ್ಲ.

****

ವಿಲಾಯಿತಿಯಲ್ಲಿ ಸರ್ಕಾರದವರು ಸಕಲ ಪ್ರಜೆಗಳನ್ನೂ ಅವರ ಮಕ್ಕಳಿಗೆ ಸಿಡುಬು ಹಾಕಿಸಲೇಬೇಕೆಂದು ವಿಧಿಸಿ ಬಲಾತ್ಕಾರವಾಗಿ ಸಿಡುಬು ಹಾಕಿಸಲು ಹಾಕಿಸಿಕೊಳ್ಳದ ಮಕ್ಕಳ ತಂದೆ ತಾಯಿಗಳನ್ನು ಶಿಕ್ಷೆಗೆ ಗುರಿಮಾಡುವ ಈಗ ಇಂಥಾ ಬಲಾತ್ಕಾರವಾದ ಕಾನೂನನ್ನು ರದ್ದು ಮಾಡಬೇಕೆಂದು ೧೯೯ ಮಂದಿ ಪಾರ್ಲಿಮೆಂಟ್ ಮೆಂಬರುಗಳು ಅರ್ಜಿ ಬರೆದು ರುಜು ಹಾಕಿ ಮಂತ್ರಿಗಳಿಗೆ ಒಪ್ಪಿಸಿರುತ್ತಾರೆ

****

ವಿಲಾಯಿತಿಗೆ ಸೇರಿದ ಪರ್ಟ್‌ವರ್ಥ್ ಸ್ಕ್ವೇರ್ ಎಂಬ ಡಿಸ್ಟ್ರಿಕ್ಟಿನಲ್ಲಿ ಬಿಗ್ಸ್ ಎಂಬ ೩೩ ವರುಷದ ಹೆಂಗಸು ಐವತ್ತು ವರುಷದವನಿಗೆ ತನ್ನ ಪ್ರೀತಿಯನ್ನು ಸಂಪಾದಿಸಿಕೊಂಡ ಪುರುಷನನ್ನು ಮದುವೆಮಾಡಿಕೊಂಡು ಆಸ್ಟ್ರೇಲಿಯಾ ದ್ವೀಪಕ್ಕೆ ಪ್ರಯಾಣ ಮಾಡಿದಳು ಹೀಗೆ ಆಗಲೇ ಅವಳಿಗೆ ಮೂವರು ಗಂಡಂದಿರಾಗಿ ತೀರಿಹೋದರು ಹಿಂದಿನವರ್ಯಾರೋ ನಾಲ್ಕು ಮಂದಿ ಹೆಂಡತಿಯರನ್ನು ಕಳೆದುಕೊಂಡಿರುತ್ತಾನೆ

****

ಇಟಲಿ ರಾಜ್ಯದಲ್ಲೆಲ್ಲಾ ಬಹು ಪ್ರಖ್ಯಾತಿ ಪಡೆದಿದ್ದ ಕಾರ್ಡೂಸಿ ಕವಿಯು ಕಳೆದ ವಾರ ಬೊಲೋಗ್ನಾ ನಗರದಲ್ಲಿ ಕಾಲವಾದ ಈ ರಾಜ್ಯದವರೆಲ್ಲಾ ಆತನ ಮರಣವಾರ್ತೆಯನ್ನು ಕೇಳಿ ದುಃಖಪಟ್ಟರು ಅನೇಕಾನೇಕರು ಗೋಳಾಡುತ್ತಾ ಆತನ ಶವದ ಹಿಂದೆ ಹೋದರು ಸುಮಾರು ೪೦,೦೦೦ ಪ್ರಜೆಗಳೂ ಸರ್ಕಾರಿ ಅಧಿಕಾರಿಗಳೂ ಪಾರ್ಲಿಮೆಂಟ್ ಮೆಂಬರುಗಳೂ, ಮಂತ್ರಿಸಾಮಾಜಿಕರೂ ಶವಸಮಾಧಿಯವರೆಗೆ ಬಂದರೆಂದು ತಂತೀ ವರ್ತಮಾನ ಬಂದಿದೆ

****

ರಷ್ಯಾ ರಾಜ್ಯಕ್ಕೆ ಸೇರಿದ ಮಾಸ್ಕೋ ನಗರದಲ್ಲಿ ಬಾಲಕಿಯರ ಹೈಸ್ಕೂಲಿನೊಳಗೆ ೨೦ ಪೌಂಡು ತೂಕದ ಡೈನಮೈಟೆಂಬ ಮದ್ದು ಸಿಕ್ಕಿತು ಅಲ್ಲಿ ಇದ್ದ ೮ ಮಂದಿಯನ್ನು ಸರ್ಕಾರದವರು ಸೆರೆಹಿಡಿದಿರುವರು ಅತ್ತಲಾಗಿ ಈಗಿನ ರಾಜ್ಯಾಧಿಕಾರಗಳನ್ನೇ ತಲೆಕೆಳಗು ಮಾಡಬೇಕೆಂಬುದರಲ್ಲಿ ಬದ್ಧಕಂಕಣರಾಗಿರುವ ಜನರು ತಮ್ಮ ಗುಪ್ತಾಲೋಚನಾ ಮಂದಿರದೊಳಗೆ ಸಭೆ ಸೇರಿ, ನ್ಯಾಯಾಧಿಪತಿಗಳ ಕೊಂದುಹಾಕಿಬಿಡಬೇಕೆಂದು ಸಂಕಲ್ಪಮಾಡಿಕೊಂಡಿದ್ದಾರೆಂದು ವರ್ತಮಾನ ಬಂದಿದೆ.

****

ಅಮೇರಿಕಕ್ಕೆ ಸೇರಿದ ಸ್ಯಾನ್‌ಫ್ರಾನ್ಸಿಸ್ಕೋ ಪಟ್ಟಣದಲ್ಲಿ ಭೂಕಂಪದಿಂದಲೂ ಅಗ್ನಿಯಿಂದಲೂ ಸುಟ್ಟು ಹಾಳಾದ ಕಟ್ಟಡಗಳಲ್ಲಿ ಕೆಲವು ಸ್ವತಃ ಕಟ್ಟಿ ಕೆಲವು ಜನರನ್ನು ವಿಮಾ ಕಂಪನಿಯಲ್ಲಿ ಇನ್ಶೂರ್ ಮಾಡಿದ್ದರು ಲಂಡನ್ ಮತ್ತು ಲಾಂಕೆಷೈರ್ ಎಂಬ ವಿಮಾ ಕಂಪನಿಯವರು ಆ ನಷ್ಟ ಪಟ್ಟ ೨೯೯೫ ಮಂದಿಗೆ ೨೩೩ ಲಕ್ಷ ರೂಪಾಯಿ ಕೊಟ್ಟಿರುತ್ತಾರೆ ಆದರೂ ಆ ಕಂಪನಿಯು ಅಷ್ಟರಿಂದ ಮುಳುಗಿಹೋಗಲಿ ಕೆಡಲಿಲ್ಲ ಅವರ ಹಣವೆಲ್ಲಾ ರುಪಾಯಿ ನೀಡಿ ಕಂಪನಿಯು ಅಷ್ಟು ಇನ್ನೂ ೩೮ ಲಕ್ಷ ಪೌಂಡು ಇದ್ದೇ ಇದೆ ತಿಳಿಯುವುದು

****

ವಿಲಾಯಿತಿಗೆ ಸೇರಿದ ಉಲಿಚ್ ಪಟ್ಟಣದ ಆಯುಧಶಾಲೆಯ ಆಯುಧ ಮಂದಿರದಲ್ಲಿ ಕಳೆದ ಸೋಮವಾರ ಬೆಳಗಿನ ಝಾಮ ಮೂರುಗಂಟೆ ಸಮಯದಲ್ಲಿ ಯಂತ್ರಗಳೂ ಮದ್ದೂ ಹತ್ತಿಕೊಂಡು ಬಿದ್ದೊಡನೆ ಹಾರಿದವು ಆ ಶಬ್ದವು ಆ ಕಟ್ಟಡವನ್ನೆಲ್ಲಾ ಪೂರ್ಣವಾಗಿ ನಾಶಮಾಡಿದ್ದಲ್ಲದೆ ಊರಿಗೆ ಊರೆಲ್ಲಾ ಅಲ್ಲಾಡಿಹೋಯಿತು ಸಮಸ್ತವಾದ ಮನೆ ಮಠಗಳ ಕಿಟಕಿ ಕದಗಳೂ ಕನ್ನಡಿಗಳೂ ಒಡೆದವು ಅಂಗಡಿ ಮುಂಗಟ್ಟುಗಳೆಲ್ಲಾ ತೆರೆದುಬಿದ್ದವು ಈ ನಷ್ಟದಿಂದ ಮೂರು ಲಕ್ಷ ರೂಪಾಯಿ ನಾನಾವಿಧನಷ್ಟ ಕಡಿಮೆ ಇಲ್ಲದೆ ಉಂಟಾಗಿರುತ್ತದೆ.

ಅಮೇರಿಕಕ್ಕೆ ಸೇರಿದ ನ್ಯೂಯಾರ್ಕ್ ಪಟ್ಟಣದಿಂದ ಒಂದು ರೈಲ್ ಗಾಡಿಯು ವಿದ್ಯುಚ್ಛಕ್ತಿಯ ಸಹಾಯದಿಂದ ಓಡಿಸಲ್ಪಡುತ್ತಿದೆ ಈ ರೈಲ್ ಗಾಡಿಗೆ ನಾಲ್ಕೇ ಗಾಡಿಗಳನ್ನು ಕಟ್ಟಿ ಕಳೆದ ರವಿವಾರ ಇನ್ನೊಂದೂರಿಗೆ ಬಹು ವೇಗವಾಗಿ ಅಂದರೆ ಗಂಟೆಗೆ ೩೦ ಮೈಲಿಯ ಪ್ರಕಾರ ಓಡಿಸಿಕೊಂಡು ಹೋಗುತ್ತಿರುವಲ್ಲಿ ಆ ಗಾಡಿಗಳು ಕಂಬಿಗಳ ಮೇಲೆ ತಲೆಕೆಳಗಾಗಿ ಮಗುಚಿಕೊಂಡು ಅನಾಹುತವಾಯಿತು ಅದರಲ್ಲಿ ಪ್ರಯಾಣಮಾಡುತ್ತಿದ್ದವರೆಲ್ಲಾ ಸುಮಾರಾಗಿ ಸ್ತ್ರೀಯರಾಗಿಯೇ ಇದ್ದರು ತಲೆಕೆಳಗಾಗಿ ಬಿದ್ದರೂ ಗಾಡಿಗಳು ಕಾಲು ಮೈಲಿ ದೂರ ಓಡುತ್ತಲೇ ಇದ್ದದರಿಂದ ಅನೇಕ ಮಂದಿ ಅದರ ಕೆಳಗೆ ಸಿಕ್ಕಿ ಜಜ್ಜುಗುಜ್ಜಾದರು ಸತ್ತವರು ೨೫ ಮಂದಿ ಎಂತಲೂ ಗಾಯಪಟ್ಟವರು ೭೩ ಜನರೆಂತಲೂ ತಂತೀವರ್ತಮಾನ ಬಂದಿದೆ

****

ರಷ್ಯಾ ರಾಜ್ಯದ ರಾಜಧಾನಿಯಾದ ಸೆಂಟ್ ಪೀಟರ್ಸ್‌ಬರ್ಗಿನಲ್ಲಿ ಕಳೆದ ವಾರ ಸರ್ಕಾರದ ಹಣವನ್ನು ಖಜಾನೆಗೆ ಗಾಡಿಗಳಲ್ಲಿ ಸಾಗಿಸಿಕೊಂಡು ಹೋಗುತ್ತಿರುವಾಗ ಕೆಲವು ದಂಗೆಕೋರರು ಆ ಗಾಡಿಗಳನ್ನು ಲೂಟಿ ಮಾಡಬೇಕೆಂದು ಹೊಂಚುಹಾಕಿಕೊಂಡಿದ್ದರು ಪೋಲೀಸಿನವರಿಗೆ ನೋಡಲೇ ಅದರ ಸೂಕ್ಷ್ಮ ತಿಳಿದು ಆಯುಧಪಾಣಿಗಳಾಗಿ ಹೋಗಿ ಆ ಗುಂಪಿನ ಮೇಲೆ ಬಿದ್ದು ಹಿಡಿಯುವುದಕ್ಕೆ ಪ್ರಯತ್ನಪಟ್ಟರು ಆರು ಮಂದಿ ವಿನಾ ಉಳಿದವರ್ಯಾರೂ ಸಿಕ್ಕದೆಹೋದರು ಅದಾದ ಮೇಲೆ ಸೋಮವಾರ ಮಾಸ್ಕೋ ಪಟ್ಟಣದಲ್ಲಿ ಸರ್ಕಾರಿ ಹಣ ಭರ್ತಿಯಾಗಿ ಹೋಗುತ್ತಿದ್ದ ಗಾಡಿಗೆ ಹತ್ತು ಮಂದಿ ದರೋಡೆಕೋರರು ಬಿದ್ದು ೪೫,೦೦೦ ದ್ರವ್ಯವನ್ನು ಲೂಟಿ ಮಾಡಿ ಎತ್ತಿಕೊಂಡು ಹೋದರು ಅತ್ತಲಾಗಿ ಬೇಟೂಂ ನಗರದಲ್ಲೂ ಇದೇ ರೀತಿ ಸರ್ಕಾರದ ೧೬,೦೦೦ ದ್ರವ್ಯವನ್ನು ಅಪಹಾರ ಮಾಡಿರುತ್ತಾರೆಂದು ತಿಳಿಯುವುದು

****

ವಿಲಾಯಿತಿಯಲ್ಲಿ ವಿದ್ಯಾವತಿಯರಾದ ಕೆಲವು ಸ್ತ್ರೀಯರು ಪಾರ್ಲಿಮೆಂಟಿಗೆ ಮೆಂಬರುಗಳನ್ನು ಚುನಾಯಿಸುವ ಹಕ್ಕು ತಮಗೆ ಕೊಡಲ್ಪಡುವಂತೆ ಕಾನೂನು ಆಗಬೇಕೆಂದು ಹೋರಾಡುತ್ತಿದ್ದಾರಷ್ಟೆ. ಕಳೆದ ವಾರ ಹೌಸ್ ಆಫ್ ಕಾಮನ್ಸ್ ಎಂಬ ಸಭೆ ಮನೆಯೊಳಗೆ ಮೆಂಬರುಗಳು ಸೇರಿ ರಾಜಕೀಯ ವಿಷಯಗಳನ್ನು ಚರ್ಚೆ ಮಾಡುತ್ತಿರುವಲ್ಲಿ ಎಂಟುನೂರು ಮಂದಿ ಸ್ತ್ರೀಯರು ಗುಂಪು ಕಟ್ಟಿಕೊಂಡು ಸಭಾಮಂದಿರವನ್ನು ಪ್ರವೇಶಿಸಬೇಕೆಂದು ತುಂಬಾ ಗಲಭೆ ಮಾಡಿದರು ಪೋಲೀಸ್ ನವಾರರಿಗೆ ಅವರನ್ನು ಒಳಕ್ಕೆ ಬಿಡದೆ ತಡೆಯುವುದು ತುಂಬಾ ಪ್ರಯಾಸವಾಯಿತು ಕಡೆಗೆ ಸ್ತ್ರೀಯರು ಬಲಾತ್ಕಾರದಿಂದ ಚದರಿಸಲ್ಪಟ್ಟರು ಆ ಪೈಕಿ ಮುಖಂಡರಾಗಿದ್ದ ೬೫ ಮಂದಿಯನ್ನು ದಸ್ತಗಿರಿ ಮಾಡಿ, ಅವರಿಗೆ ತಲಾ ೮—೧೦ ರೂಪಾಯಿಯಂತೆ ಜುಲ್ಮಾನೆ ಹಾಕಿಸಿದರು ಅವರಾರೂ ಜುಲ್ಮಾನೆ ಕೊಡದೆ ಪ್ರತಿಭಟಿಸಿ ಜೈಲಿಗೆ ಹೋಗಿರುತ್ತಾರೆ ಅವರೆಲ್ಲಾ ತುಂಬಾ ಘನ್ಯನಂತರೇ ಆಗಿರುವರು

****

ಅಮೇರಿಕಕ್ಕೆ ಸೇರಿದ ಸ್ಯಾನ್‌ಫ್ರಾನ್ಸಿಸ್ಕೋ ಪಟ್ಟಣದಲ್ಲಿ ಅಮೇರಿಕದವರು ಜಪಾನ್ ಪ್ರಜೆಗಳ ಮಕ್ಕಳನ್ನು ತಮ್ಮ ಸ್ಕೂಲುಗಳಿಗೆ ಸೇರಿಸಿಕೊಳ್ಳುವುದಿಲ್ಲವೆಂದೂ ಅವರಿಗಾಗಿ ಬೇರೇ ಸ್ಕೂಲುಗಳನ್ನು ಇಟ್ಟು ಓದಿಸಿಕೊಳ್ಳಬಹುದೆಂದೂ ಹೇಳಿ, ಜಪಾನ್ ಮಕ್ಕಳನ್ನು ಓಡಿಸಿಬಿಟ್ಟುದರಿಂದ ಜಪಾನ್ ರಾಜ್ಯದವರಿಗೂ ಅಮೇರಿಕದವರಿಗೂ ಅಮೇರಿಕದವರಿಗೂ ಮನಸ್ತಾಪಗಳುಂಟಾಗಿ ಕಾಗದ ಪತ್ರಗಳು ನಡೆಯುತ್ತಿದ್ದುವಷ್ಟೆ. ಈಚೆಗೆ ಈ ವಿಷಯಕ್ಕಾಗಿ ಅವೆರಡು ರಾಜ್ಯಗಳಿಗೂ ಯುದ್ಧ ಸಂಭವಿಸಲೂ ಬಹುದೆಂದು ಕೆಲವರು ಯೋಚಿಸಿಕೊಂಡಿದ್ದರು ಆದರೆ ಅಮೇರಿಕದವರು ಈಗ ಒಂದು ಕಾನೂನು ಮಾಡಿ ಜಾರಿಗೆ ತರುವಂತೆಯೂ ಅದರಿಂದ ಮೇಲ್ಕಂಡ ಮನಸ್ತಾಪಗಳೆಲ್ಲಾ ನಿವಾರಣೆಯಾಗುವಂತೆಯೂ ಕಾಣುತ್ತಿದೆ ಈ ಕಾನೂನು ಜಾರಿಗೆ ಬಂದ ಮೇಲೆ ಜಪಾನ್ ಮಕ್ಕಳನ್ನು ಅಮೇರಿಕದ ಮಕ್ಕಳು ಓದುವ ಪಾಠಶಾಲೆಗಳಿಗೂ ಸೇರಿಸಿಕೊಳ್ಳುವುದಾಗಿ ಸ್ಯಾನ್‌ಫ್ರಾನ್ಸಿಸ್ಕೋ ಪುರಾಧಿಕಾರಿಗಳು ಒಪ್ಪಿಕೊಂಡಿದ್ದಾರೆಂದು ತಂತೀ ವರ್ತಮಾನ ಬಂದಿರುವುದು.

ಸ್ಕೂಲ್ ಬಹುಮಾನ ಸಭೆಯು.

ವಡಿಗೇನಹಳ್ಳಿ

ದೇವನಹಳ್ಳಿ ತಾಲ್ಲೂಕು ವಡಿಗೇನಹಳ್ಳಿ ಗವರ್ನಮೆಂಟ್ ಡಾ ಲ್ಲೂಕ್ ಗ್ರಾಂಟ್ ಸ್ಕೂಲು ಈಗ್ಗೆ ೩೦ ವರ್ಷಗಳ ಹಿಂದೆ ಸ್ಥಾಪಿಸಲ್ಪಟ್ಟು, ತುಂಬಾ ಅಭಿವೃದ್ಧಿ ಸ್ಥಿತಿಯಲ್ಲಿದೆ. ಕಳೆದ ಲೋವರ್ ಸೆಕೆಂಡರಿ ಪರೀಕ್ಷೆಗೆ ಹೋದ ೪ ಜನ ವಿದ್ಯಾರ್ಥಿಗಳ ಪೈಕಿ ೩ ಮಂದಿ ತೇರ್ಗಡೆ ಹೊಂದಿದರು ತಾ ೧೦ ರಲ್ಲಿ ಅಮಲ್ದಾರ್ ಮೆ॥ ಸಿ ಕೃಷ್ಣನಾಯುಡುರವರು ಪ್ರಾತಃಕಾಲ ೮ ಗಂಟೆಗೆ ಸ್ಕೂಲಿಗೆ ದಯಮಾಡಿಸಿದರು ಮೊದಲೇ ಏರ್ಪಡು ಮಾಡಿದ್ದಂತೆ ಸ್ಕೂಲ್ ಬಾಲಕರಿಗೆ ಬಂದು ಇದ್ದ ಇನಾಂ ಪುಸ್ತಕಗಳನ್ನು ಕೊಡುವ ಉದ್ದಿಶ್ಯವಾಗಿಯೂ, ಅಮಲ್ದಾರರವರ ನೂತನಾಗಮನದ ಸಂತೋಷಸೂಚಕವಾಗಿಯೂ ಸ್ಕೂಲನ್ನು ಅಲಂಕರಿಸಿದ್ದರು. ಈ ಗ್ರಾಮದ ದೊಡ್ಡ ಮನುಷ್ಯರೂ ಸಾಹುಕಾರರೂ, ಮುನಿಸಿಪಲ್ ಮೆಂಬರುಗಳೂ, ಕಂಟ್ರಾಕ್ಟುದಾರರೂ ಹಾಜರಿದ್ದರು ಈ ಸಭೆಗೆ ಅಮಲ್ದಾರರವರೇ ಸಭೆಯವರ ಕೋರಿಕೆಯ ಪ್ರಕಾರ ಅಗ್ರಾಸನಾಧಿಪತ್ಯವನ್ನು ವಹಿಸಿದರು. ಹೆಡ್ ಮಾಸ್ಟರು ಸ್ಕೂಲಿನ ಸ್ಥಿತಿಯ ರಿಪೋರ್ಟನ್ನು ಓದಿದ ನಂತರ ಅಮಲ್ದಾರರು ವಿದ್ಯಾಭಿವೃದ್ಧಿಯನ್ನೂ ಗ್ರಾಮಸ್ಥರಿಗೆ ಸ್ಕೂಲಿನ ವಿಷಯವಾಗಿರುವ ಅನುರಾಗವನ್ನು ಮಾ॥ ಶೀನಪ್ಪನವರು ಸ್ಕೂಲಿನ ವಿಷಯವಾಗಿ ತೋರಿಸಿರುವ ಶ್ರದ್ಧೆಯನ್ನೂ ಕುರಿತು ಮಾತನಾಡಿ ತುಂಬಾ ಸಂತೋಷಪಟ್ಟು, ಬಾಲಕರಿಗೆ ಇನಾಂ ಪುಸ್ತಕಗಳನ್ನು ಹಂಚಿದರು. ಗ್ರಾಮಸ್ಥರು ಈ ಹೆಡ್ ಮಾಸ್ಟರವರ ಸಹಾಯಕ್ಕೆ ಒಬ್ಬ ಇಂಗ್ಲಿಷ್ ಅಸಿಸ್ಟೆಂಟ್ ಮಾಸ್ಟರನ್ನು ಕೊಟ್ಟರೆ ಬಾಲಕರು ರಾಜಭಾಷೆಯಾದ ಇಂಗ್ಲೀಷನ್ನು ಕಲಿತು ಇನ್ನೂ ಅಭಿವೃದ್ಧಿಸ್ಥಿತಿಗೆ ಬರಬಹುದೆಂತಲೂ ಹೊಸ ಕಟ್ಟಡಕ್ಕೋಸ್ಕರ ೫೦೦ ರೂಪಾಯಿ ಚಂದಾ ಕೊಡುತ್ತೇವೆಂತಲೂ ಅಮಲ್ದಾರರವರಲ್ಲಿ ಹೇಳಿಕೊಂಡರು ಸರ್ಕಾರದವರು ಈ ವಿಷಯವನ್ನು ಚಿತ್ತಕ್ಕೆ ತಂದುಕೊಂಡು ಪ್ರಜೆಗಳಾದ ನಿಮ್ಮ ಕೋರಿಕೆಯನ್ನು ಸಫಲಗೊಳಿಸ್ಯಾರೆಂದು ನಿರೀಕ್ಷಿಸುತ್ತೇನೆಂಬದಾಗಿ ಅಮಲ್ದಾರರು ಉತ್ತರವನ್ನು ದಯಪಾಲಿಸಿದರು. ನಂತರ ಸಭಿಕರಿಗೆ ಗಂಧ ಪುಷ್ಪ ತಾಂಬೂಲಗಳನ್ನು ಕೊಟ್ಟು, ಬಾಲಕರಿಗೆ ಸಕ್ಕರೆ ಹಂಚಿ ಸಭೆಯು ಮುಕ್ತಾಯವಾಯಿತು ತರುವಾಯ ಅಮಲ್ದಾರರವರು ಹೊಸದಾಗಿ ಸ್ಥಾಪಿಸಲ್ಪಟ್ಟಿರುವ ಶ್ರೀಲಕ್ಷ್ಮೀವಿಲಾಸ ರೀಡಿಂಗ್ ರೂಂ ಮತ್ತು ಕರ್ನಾಟಕ ವೈದ್ಯಶಾಲೆ ಮೊದಲಾದವುಗಳನ್ನು ನೋಡಿಕೊಂಡು ಸ್ವಸ್ಥಾನಕ್ಕೆ ತೆರಳಿದರು.

ಚನ್ನರಾಯಪಟ್ಟಣ.

ಕಸಬಾದಲ್ಲಿ ರೋಗಾದಿಗಳೇನೂ ಇಲ್ಲ. ಸುತ್ತುಮುತ್ತು ಒಂದೆರಡು ಗ್ರಾಮಗಳಲ್ಲಿ ಕಲರಾ ಮತ್ತು ಪ್ಲೇಗ್ ಕಾಣಿಸಿಕೊಂಡಿತು ನಮ್ಮ ಅಮಲ್ದಾರ್ ಮೆ॥ ಅಪ್ಪಣ್ಣೈಯ್ಯಂಗಾರರೂ ಆಸ್ಪಿಟಲ್ ಅಸಿಸ್ಟೆಂಟ್ ಮೆ॥ ಶ್ರೀನಿವಾಸಯ್ಯಂಗಾರರೂ ಅಂಥಾ ಸ್ಥಳಗಳಿಗೆ ದಯಮಾಡಿಸಿ, ಜನಗಳನ್ನು ಉಪಚರಿಸಿ ತಕ್ಕ ಏರ್ಪಾಡುಗಳು ಮಾಡಿದ್ದರಿಂದಲೂ ಭಗವತ್ಕೃಪಾಕಟಾಕ್ಷದಿಂದಲೂ ಅಷ್ಟೇನೂ ಗಲಾಟೆಯಾಗದೆ ಒಂದೆರಡು ಮರಣಗಳು ಮಾತ್ರ ಆಗಿ ಈಗ ಶಮನವಾಗುತ್ತಲಿದೆ

ಇದೇ ತಿಂಗಳು ತಾ ೧೩ ರಲ್ಲು ಹಾಸನದ ಸರ್ಕಲ್ ಮಿಡ್ಲ್ ಇನ್ಸ್‌ಪೆಕ್ಟರ್ ಸೂಪರೆಂಟರಾದ ರಾ॥ ಎಚ್ ಎಚ್ ನ್ಯೂಹಾಂ ಧೊರೆಗಳೂ ಧೊರೆಸಾನಿಯವರೂ ಇಲ್ಲಿಗೆ ಬಂದು ಇಲ್ಲಿನ ಮಿಡ್ಲ್ ಸ್ಕೂಲ್ ಬಾಲಕಿಯರಿಗೆ ಬಹುಮಾನಕೊಡುವ ಏರ್ಪಾಡು ಮಾಡಿದರು ಸ್ಕೂಲನ್ನು ಕೆಲವು ವಿಧವಾಗಿ ಅಲಂಕಾರ ಮಾಡಿದ್ದರು ಬಹುಮಾನದ ಸಭೆಗೆ ಸದರಿ ರಾ॥ ಧೊರೆ, ಧೊರಸಾನಿಗಳೂ ಅಮಲ್ದಾರ್ ಮೆ॥ ಅಪ್ಪಣ್ಣೈಯ್ಯಂಗಾರರೂ ಶಿರಸ್ತೆದಾರ್ ಮೆ॥ ಜೀವಣ್ಣರಾಯರೂ ಪೋಲೀಸ್ ಇನ್ಸ್‌ಪೆಕ್ಟರ್ ಮೆ॥ ತಿರುಮಲರಾಯರೂ ಕಂಪನಿ ಮೆ॥ ಮೂಡಗೆರೆ ವೆಂಕಟರಾಯರೂ ರಿಟೈರ್ಡ್ ಅಮಲ್ದಾರ್ ಮೆ॥ ತಿರುನಾರಣೈಯ್ಯಂಗಾರರೂ ಮೊದಲಾದ ದೊಡ್ಡಮನುಷ್ಯರು ಸಭೆಯನ್ನು ಅಲಂಕರಿಸಿದ್ದರು ರಾ॥ ನ್ಯೂಹಾಂ ಧೊರೆಗಳು ಸಭಿಕರಿಗೆ ಶುಭವಾರ್ತೆಗಳನ್ನು ಹೇಳಿ, ಅಮಲ್ದಾರ್ ಮೆ॥ ಅಪ್ಪಣ್ಣೈಯ್ಯಂಗಾರರನ್ನು ಅಗ್ರಾಸನವನ್ನು ವಹಿಸುವಂತೆ ಕೇಳಿಕೊಂಡರು ಅದರಂತೆ ಅವರು ಒಪ್ಪಿ ಅಗ್ರಾಸನವನ್ನಲಂಕರಿಸಿ ರಾ॥ ನ್ಯೂಹಾಂ ಧೊರೆಗಳೂ ಧೊರೆಸಾನಿಯವರೂ ಮಕ್ಕಳ ವಿದ್ಯಾ ಪ್ರೋತ್ಸಾಹಕ್ಕಾಗಿ ಇಷ್ಟು ಏರ್ಪಾಡುಗಳನ್ನು ಮಾಡುವದಕ್ಕೋಸ್ಕರ ಅವರನ್ನು ವಂದಿಸಿ ಘನ ಧೊರೆಸಾನಿಯವರೇ ಬಹುಮಾನಗಳನ್ನು ಹಂಚುವಂತೆ ಕೇಳಿಕೊಂಡರು ಮಕ್ಕಳ ಪಟ್ಟಿಯನ್ನು ಅಗ್ರಾಸನಾಧಿಪತಿಗಳು ಓದುತ್ತಿರುವಲ್ಲಿ ಧೊರೆಸಾನಿಯವರು ಅಲಂಕಾರವಾದ ಬೊಂಬೆ ಪಟ್ಟಿಗೆ ವಗೈರೆ ಬಹುಮಾನಗಳನ್ನು ಬಾಲಕಿಯರಿಗೆ ಹಂಚಿದರು ಬಾಲಕಿಯರು ಸಂಗೀತವನ್ನು ಹೇಳಿ ಸಭಿಕರನ್ನು ಸಂತೋಷಪಡಿಸಿದರು ಅಗ್ರಾಸನಾಧಿಪತಿಗಳು ಉತ್ಕೃಷ್ಟವಾದ ಉಪನ್ಯಾಸವನ್ನು ಮಾಡಿದರು. ಸ್ವದೇಶೀಯರಾದ ನಾವುಗಳು ಮಾಡಬೇಕಾದ ಪ್ರೋತ್ಸಾಹಗಳನ್ನು ಮಿಷನರಿಗಳಾದ ಇವರು ಮಾಡುವದು ನಮಗೆ ನಾಚಿಕೆ. ಮಿಷನರಿಗಳು ಇಲ್ಲಿ ಮಾತ್ರವಲ್ಲ, ಎಲ್ಲಾ ಕಡೆಗಳಲ್ಲೂ ಇದೇ ಪ್ರಕಾರ ಮಾಡುತ್ತಾರೆ ನಾನು ಮದ್ರಾಸಿನಲ್ಲಿ ಕ್ರಿಶ್ಚಿಯನ್ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡಿದೆನು. ಅಲ್ಲಿ ನನಗೆ ಕೆಲಟ್ ಮುಂತಾದ ಮಿಷನರಿಗಳು ಉಪಾಧ್ಯಾಯರಾಗಿದ್ದರು ಅವರು ನನಗೆ ಉತ್ತಮವಾದ ಮಾದರಿಯನ್ನೂ ಬೋಧನೆಯನ್ನೂ ಕೊಟ್ಟದ್ದಾರೆ ಅವುಗಳು ಈಗಲೂ ನನಗೆ ಪ್ರೋತ್ಸಾಹವನ್ನು ಕೊಡುತ್ತಿವೆ ಎಂಬದಾಗಿ ತಿಳಿಸಿದ್ದಲ್ಲದೆ, ನಮ್ಮ ಹೆಣ್ಣು ಮಕ್ಕಳು ವಿದ್ಯಾವತಿಯರಾದರೆ ತಂದೆತಾಯಿಗಳಿಗೆ ಒಳ್ಳೇ ಮಕ್ಕಳಾಗಿಯೂ ಗಂಡಂದಿರಿಗೆ ಉತ್ತಮ ಸತಿಯರಾಗಿಯೂ ಮಕ್ಕಳಿಗೆ ಒಳ್ಳೇ ತಾಯಿಗಳಾಗಿಯೂ ದೇಶೋನ್ನತಿಗೆ ಸಹಾಯಕರಾಗಿಯೂ ಆಗುವರು ಆದ್ದರಿಂದ ನಾವು ಯಾವ ಜಾತಿ ಮತ ನಂಬಿಕೆಗಳುಳ್ಳವರಾಗಿದ್ದರೂ ನಮ್ಮ ಮಕ್ಕಳಿಗೆ ವಿದ್ಯಾದಾನಮಾಡಿಸುವದಕ್ಕೆ ಹಿಂದೆಗೆಯಬಾರದು ಎಂದು ಉತ್ತಮವಾದ ಬುದ್ಧಿ ಮಾತುಗಳನ್ನು ಹೇಳಿದರು ಮಾತಿನಲ್ಲಿ ಮಾತ್ರವಲ್ಲದೆ ಕಾರ್ಯತಃ ಅವರು ಇಲ್ಲಿಗೆ ಬಂದ ಮೇಲೆ ಇಂಥಾ ಪ್ರೋತ್ಸಾಹಗಳನ್ನು ಕೊಡುತ್ತಲೇ ಇದ್ದಾರೆ ಕಳೆದ ಜನವರಿ ಮೊದಲನೇ ತಾರೀಖು ಬಾಲಕ ಬಾಲಕಿಯರನ್ನು ಕರೆಸಿ ನಾನಾ ಆಟಪಾಟಗಳನ್ನು ಮಾಡಿಸಿ ಬಾಲಕರಿಗೆ ಸ್ಕೂಲಿಗೆ ಅನುಕೂಲವಾದ ಬಹುಮಾನಗಳನ್ನು ಕೊಟ್ಟರು. ಇಂಥಾ ವಿದ್ಯಾವಂತರೂ ವಿದ್ಯಾ ಪ್ರೋತ್ಸಾಹಕರೂ ಆದ ಇವರ ಮಾತು ಮಾದರಿಗಳನ್ನು ಕೇಳಿನೋಡಿ ತಂದೆತಾಯಿಗಳು ತಮ್ಮ ಮಕ್ಕಳನ್ನು ಸ್ಕೂಲಿಗೆ ಕ್ರಮವಾಗಿ ಕಳುಹಿಸಿ ವಿದ್ಯಾವಂತರನ್ನಾಗಿ ಮಾಡುವರೆಂದು ಹಾರೈಸುತ್ತೇನೆ ಹೂವು ಗಂಧ ಸಭಿಕರಿಗೆ ಅರ್ಪಿಸಿದನಂತರ ಸಭೆಯು ವಿಸರ್ಜಿಸಲ್ಪಟ್ಟಿತು ಬಾಲಕಿಯರಿಗೆ ಮಿಠಾಯಿ ವಗೈರೆ ತಿಂಡಿ ಹಂಚಿದರು

ಈ ತಿಂಗಳು ೨೭ ಕ್ಕೆ ದಿವಾನರವರು ಇಲ್ಲಿಗೆ ಬರುತ್ತಾರೆಂಬ ವರ್ತಮಾನವಿದ್ದದ್ದರಿಂದ ನಮ್ಮ ಅಮಲ್ದಾರರು ಬಹಳ ಮುಂತಾದ ಶೃಂಗಾರವನ್ನು ಪ್ರಾರಂಭಿಸಿದ್ದರು ಈಚೆಗೆ ಅವರು ಬರುವದಿಲ್ಲವೆಂಬ ವರ್ತಮಾನ ಬಂದು ಕೆಲಸಗಳು ನಿಂತಿವೆ. ಮುಂದಿನ ತಿಂಗಳು ಶ್ರಿಂಗೇರಿ ಗುರುಗಳು ಬರುತ್ತಾರೆಂಬ ವರ್ತಮಾನ. ಅಮಲ್ದಾರರು ಈಗ ಮಾಡಿದ್ದ ಏರ್ಪಾಡುಗಳೆಲ್ಲಾ ಆಗ್ಗೆ ಅನುಕೂಲವಾಗಬಹುದು.

ಶಿಕಾರಿಪುರ

ತಾ ೨೦ ನೇ ಗುರುವಾರ ಮಧ್ಯಾಹ್ನ ಶಿಕಾರಿಪುರ ಟವನ್ ಪೇಟೆ ಮಿಡ್ಲ್ ಬಾಲಿಕಾ ಪಾಠಶಾಲೆಯಲ್ಲಿ ಬಹುಮಾನ ಹಂಚುವದಕ್ಕಾಗಿ ಸಭೆಯು ನಡೆಯಿಸಲ್ಪಟ್ಟಿತು ಸಭೆಯು ಶಾರದಾನಿಲಯದಂತೆ ಪುಷ್ಪಗಳಿಂದಲೂ ತೋರಣಗಳಿಂದಲೂ ಅನೇಕ ಚಿತ್ರಪಟಗಳಿಂದಲೂ ಅಲಂಕರಿಸಲ್ಪಟ್ಟಿತ್ತು ಈ ಸಭೆಯಲ್ಲಿ ರಾ॥ ಎ ಇ. ನೈಟಿಂಗೇಲ್ ಧೊರೆಗಳವರು ಅಗ್ರಾಸನವನ್ನು ವಹಿಸಿದ್ದರು. ಈ ಊರಿನ ಅನೇಕ ದೊಡ್ಡ ಮನುಷ್ಯರೂ ಮೆಂಬರುಗಳು ಸಾಹುಕಾರರು ಸಭೆಯನ್ನು ಅಲಂಕರಿಸಿದ್ದರು ಪೇಟೆ ಮತ್ತು ಹಳೆಯೂರ್ ಬಾಲಿಕಾ ಪಾಠಶಾಲೆಯ ವಿದ್ಯಾರ್ಥಿನಿಯರು ಸೇರಿದ್ದರು ಮೆ॥ ಜಾನ್‌ಮಾಳೆಗೆಯವರು ಸ್ಕೂಲಿನ

ಯು ಪುರೋಭಿವೃದ್ಧಿಗೂ ಬಾಲಕಿಯರ ವಿದ್ಯಾಭಿವೃದ್ಧಿಗೂ ಸಹಾಯಕವಾಗಿರುವಂತೆ ದೇವರನ್ನು ಪ್ರಾರ್ಥಿಸಿದರು. ಬಳಿಕ ಬಾಲಕಿಯರಿಂದ ಗಾನರೂಪವಾಗಿ ದೇವರ ಪ್ರಾರ್ಥನೆಯು ನೆರವೇರಿದ ಮೇಲೆ ಆ॥ ಮಾ॥ ಹುಚ್ಚಪ್ಪದಾಯರಿಂದ ಸ್ತ್ರೀವಿದ್ಯಾಭಿವೃದ್ಧಿಯ ವಿಷಯದಲ್ಲಿ ಒಂದು ಉಪನ್ಯಾಸವೂ ಶ್ರೀಮನ್ಮಹಾರಾಜರವರ ಶ್ರೇಯಃ ಪ್ರಾರ್ಥನೆಯು ಬಾಲಕಿಯರಿಂದ ಗಾನರೂಪವಾಗಿಯೂ ನಡೆದವು ಮ॥ ಎ॥ ನಾಗೇಶಶಾಸ್ತ್ರಿಗಳು ಸ್ತ್ರೀವಿದ್ಯಾಭ್ಯಾಸವನ್ನು ದೂಷಿಸುವ ಕೇವಲ ಅಮೋಘವಾದ ತಮ್ಮ ಅಜ್ಞಾನಾಂಧಕಾರ ಚಂದ್ರೋದಯವೆಂಬ ಉಪನ್ಯಾಸದಲ್ಲಿ ವಿದ್ಯಾಭ್ಯಾಸದ ಆವಶ್ಯಕತೆ ಸ್ತ್ರೀವಿದ್ಯಾಭ್ಯಾಸವು ಅತ್ಯಾವಶ್ಯವೆಂಬುದನ್ನು ಸಮಯಸಂಶೋಧದಲ್ಲಿ ವಿಶದಪಡಿಸಿದರು ಹೃದಯಂಗಮವಾದ ಈ ಉಪನ್ಯಾಸದಿಂದ ಸಭಿಕರೆಲ್ಲರಿಗೂ ಅಪಾರ ಸಂತೋಷವುಂಟಾಗಿ ರೆ॥ ನೈಟಿಂಗೇಲ್ ದೊರೆಗಳವರು ಕೇವಲ ಕೃತಜ್ಞತೆಯಿಂದ ತಮಗೆ ಉಂಟಾದ ಸಂತೋಷವನ್ನು ಸಭಿಕರ ಮೂಲಕವೂ ತಾವೂ ಆದರದಿಂದ ಎದ್ದು ನಿಂತು ಮ॥ ನಾಗೇಶಶಾಸ್ತ್ರಿಗಳಿಗೆ ವಂದನಾಪೂರ್ವಕವಾಗಿ ತಿಳಿಸಿದರು ಪಾಠಶಾಲೆಯ ಹೆ॥ ಮಾಸ್ಟರು ಸ್ಕೂಲ್ ರಿಪೋರ್ಟನ್ನು ಓದಿದರು ಬಾಲಕಿಯರಿಂದ ಆನಂದವಾದ ಗಾಯನವು ಪಿಟೀಲಿನೊಂದಿಗೆ ಹಾಡಲ್ಪಟ್ಟಿತು ಬಾಲಕಿಯರುಗಳಿಗೆ ಬಹುಮಾನಗಳು ಹಂಚಲ್ಪಟ್ಟವು ನಂತರ ರೆ॥ ಎ ಇ ನೈಟಿಂಗೇಲ್ ದೊರೆಗಳವರ ಶ್ರೇಯಃ ಪ್ರಾರ್ಥನೆಯೂ ದೇವರ ಸ್ತೋತ್ರಗಳೂ ಮಂಗಳಪದಗಳೂ ಶ್ಲಾಘ್ಯತರವಾಗಿ ಬಾಲಕಿಯರಿಂದಲೇ ಹಾಡಲ್ಪಟ್ಟವು ಸಭಿಕರಿಗೆಲ್ಲಾ ಪುಷ್ಪ ತಾಂಬೂಲಾದಿಗಳು ಹಂಚಲ್ಪಟ್ಟವು ಆ ತರುವಾಯ ದೇಶೀಯ ಪಾದ್ರಿಗಳು ಸ್ತ್ರೀವಿದ್ಯಾಭ್ಯಾಸವು ಪುರುಷವಿದ್ಯಾಭ್ಯಾಸವಂತೆ ನಡೆದರೆ ಅದರಿಂದ ದೇಶವು ಉತ್ತಮಸ್ಥಿತಿಗೆ ಬರುವುದೆಂದು ಮೊದಲಾಗಿ ನುಡಿದು, ದೇವರ ಅನುಗ್ರಹವು ಆ ಸ್ಕೂಲಿನ ಮೇಲೆ ಇರಲಿ ಎಂದು ಪ್ರಾರ್ಥಿಸಿದರು ಅಲ್ಲಿಗೆ ಸಭೆಯು ಮುಕ್ತಾಯವಾಗಿ ಸಮಸ್ತರೂ ಸಂತೋಷದಿಂದ ಮನೆಗಳಿಗೆ ತೆರಳಿದರು

ಬಾತ್ಮೀದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸ್ಥಳ ಕೊಡಲಾರೆವು ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ಸ್ಥಳ ಕೊಡಲಾರೆವು

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು—ಎಡಿ

ಗ॥ ಪ॥ ಬಾತ್ಮೀದಾರ್, ಬಾತ್ಮೀವಾರ್ ಕಣಿಗಲ್ —ಈ ಎರಡು ಬಾತ್ಮಿಗಳನ್ನು ಬರೆದವರು ತಮ್ಮ ಹೆಸರು ವಿಳಾಸಗಳನ್ನು ತಿಳಿಸಿಲ್ಲವಾದ್ದರಿಂದ ಆ ಬಾತ್ಮಿಗಳನ್ನು ಪ್ರಕಟಿಸಲಿಲ್ಲ ಬಿ ಸಿ ಎಸ್ ಮತ್ತು ಜೆ ಗಣಪ್ಪ, ಬೆಂಗಳೂರು —ಇವನ್ನು ಪ್ರಕಟಿಸಲಾರೆವು

ಚಿತ್ರದುರ್ಗದ ತಾ॥ ತುರುವನೂರು ಪಟೇಲ್ ಹೇಮಣ್ಣನವರು ಬರೆದಂತೆ ತಾ ೩ ನೆ ಸಂಚಿಕೆಯಲ್ಲಿ ಪ್ರಕಟವಾದ ಬಂಗಾರಕ್ಕನಹಳ್ಳಿಯಲ್ಲಿ ಪ್ರಹ್ಲಾದನ ಚರಿತ್ರೆ ಆಟದಲ್ಲಿ ಯಜನೆಂಬುವನಿಗೆ ಯಾವ ಅಪಾಯವೂ ಆಗಲಿಲ್ಲವೆಂಬದಾಗಿ ಆ ಗ್ರಾಮದ ಒಬ್ಬ ಬಾತ್ಮಿದಾರರು ಬರೆದಿರುವರು — ಎಡಿಟರ್]

ಕರೆಸ್ಪಾಂಡೆನ್ಸ್.

ಬೆಂಕಿಯಿಂದಾದ ಅನಾಹುತ

ಅಯ್ಯಾ,

ನಾವು ವಾಸವಾಗಿರುವ ಚಿಕ್ಕಬಳ್ಳಾಪುರದ ತಾಲ್ಲೂಕು ದಿಬ್ಬೂರು ಗ್ರಾಮದಲ್ಲಿ ಇದೇ ತಿಂಗಳು ೧೭ ನೇ ತಾ ಸಾಯಂಕಾಲ ೪ ಗಂಟೆ ವೇಳೆಯಲ್ಲಿ ಒಡರ ಮುನಿಚನ್ನಿಗ ಎಂಬುವನ ಗುಡಿಸ್ಲು ಮನೆಗೆ ಆಕಸ್ಮಾತ್ ಬೆಂಕಿ ಬಿದ್ದು ಉರಿಯುತ್ತಿದ್ದಾಗಲೇ ಪಕ್ಕದ ಈಡಿಗ ಗುರುವನೆಂಬುವನ ಹುಲ್ಲಿನ ಮನೆಗೂ ವ್ಯಾಪಿಸಿ ಹತ್ತಿಕೊಂಡಿತು ಅಷ್ಟರಲ್ಲಿ ಗ್ರಾಮಸ್ಥರು ನೂರಾರು ಜನಗಳು ಜಮಾಯಿಸಿ ಆರಿಸುವದಕ್ಕೆ ಪ್ರಯತ್ನಿಸುತ್ತಿರುವಲ್ಲಿ ಪಕ್ಕದ ವರ್ತಕನಾದ ನಾಯ್ಡನೆಂಬುವರ ನಾಲ್ಕು ಮನೆಗೂ ವ್ಯಾಪಿಸಿ ೫ ಅಂಕಣಗಳು ಭಸ್ಮವಾಯಿತು ಅಷ್ಟರಲ್ಲಿ ಸಾವಿರಾರು ಕೊಡಗಳ ನೀರು ಬಂದು ಆರಿಸಿದ್ದರಿಂದಲೂ, ಬಹಳ ಜನಗಳ ಇತರ ಪ್ರಯತ್ನಗಳಿಂದಲೂ ಉರಿಯು ಶಾಂತವಾಯಿತು ಆ ದಿನ ಗಾಳಿ ಇದ್ದಿದ್ದಲ್ಲಿ ಇನ್ನೆಷ್ಟು ಮನೆಗಳು ಆಹುತಿಯಾಗುತ್ತಿತ್ತೋ ತಿಳಿಯದು ಮೇಲ್ಕಂಡ ಮನೆಗಳು ಕಳೆದುಕೊಂಡ ಬಡ ಮಾಲೀಕರಿಗೆ ೨೦೦—೩೦೦ ರೂಪಾಯಿ ನಷ್ಟ ಸಂಭವಿಸಿತು ಅವರ ವ್ಯಸನವು ಅಪಾರವಾದದ್ದಾಗಿದೆ ಇಷ್ಟು ಬೇಗ ಅಷ್ಟು ನಷ್ಟವನ್ನುಂಟುಮಾಡಿದಾಗ್ಯೂ ಜನ ದನಗಳಿಗೆ ಅಪಾಯ ಸಂಭವಿಸದೇ ಇದ್ದದ್ದು ಸಂತೋಷವೇ ಸರಿ

ಡಿ ಹ

ವಾಚಕಮಂದಿರ

ಅಯ್ಯಾ,

ಇದರ ಉಪಯೋಗವು ಸರ್ವರಿಗೂ ವಿದಿತವಾಗಿಯೇ ಇರುವದಷ್ಟೆ ಇಂತಹ ಮಂದಿರಗಳನ್ನು ಪ್ರತಿ ಊರಿನಲ್ಲಿಯೂ ಸ್ಥಾಪಿಸುವದರ ಪ್ರಯೋಜನಗಳನ್ನು ದೊಡ್ಡಬಳ್ಳಾಪುರದ ತಾಲ್ಲೂಕ್ ಕೊಡಿಗೇಹಳ್ಳಿ ಸ್ಕೂಲ್ ಮಾಸ್ಟರ್ ಮ॥ ಎಂ ವಿ ಶ್ರೀಪಾದಾಚಾರ್ಯರು ಗ್ರಾಮಸ್ಥರಿಗೆ ಆಗಾಗ ಬೋಧಿಸುತ್ತಾ ಬಂದುದು ಸಫಲವಾಗಿ ಸದರಿ ಗ್ರಾಮದಲ್ಲಿ ಒಂದು ವಾಚಕ ಮಂದಿರವು ಏರ್ಪಾಡಾಗಿರುವುದನ್ನು ತಮ್ಮ ಪತ್ರಿಕಾಮುಖೇನ ಇತರ ಗ್ರಾಮದವರಿಗೂ ಉತ್ತೇಜನ ರೂಪವಾಗಿರುವುದಕ್ಕಾಗಿ ತಿಳಿಸಲು ಸಂತೋಷಿಸುತ್ತೇನೆ ಸದ್ಯಕ್ಕೆ ವೃತ್ತಾಂತ ಪತ್ರಿಕೆ, ವೃತ್ತಾಂತ ಚಿಂತಾಮಣಿ, ಸೂರ್ಯೋದಯ ಪ್ರಕಾಶಿಕಾ, ನಡೆಗನ್ನಡಿ, ಮೈಸೂರುಸ್ಟಾರ್, ೬ ಈ ಕನ್ನಡ ವಾರ ಪತ್ರಿಕೆಗಳು ಬರುತ್ತಿವೆ ಕ್ಷಿಪ್ರದಲ್ಲಿಯೇ ಸರ್ಕಾರೀ ವ್ಯವಸಾಯಕ ಗೆಜೆಟ್, ಕನ್ನಡ ಮೈಸೂರು ಗೆಜೆಟ್ ಇವುಗಳನ್ನೂ ತರಿಸುವ ಯೋಚನೆ ಇದೆ, ಪತ್ರಿಕೆಗಳನ್ನು ತರಿಸುವ ವಿಚಾರದಲ್ಲಿ ಪೂರ್ಣ ಸಹಾಯ ಮಾಡಲು ಮ॥ರಾ॥ ಗಳಾದ ಪ ಅರಸೆಗೌಡರು, ಸಾ ಶಿವಣ್ಣನವರು, ದೊಡ್ಡ ಮುನಿಯಪ್ಪನವರು, ಶಾಂ ಅಣ್ಣಯ್ಯಪ್ಪನವರು, ೩ ಅಂಗಡಿ ನಾಗಪ್ಪನವರು ಬದ್ಧಾದರರಾಗಿದಾರೆ ಮಂದಿರಕ್ಕೆ ಸ್ಥಳ ವಸತಿಯನ್ನು ಮ॥ ದೊಡ್ಡ ಮುನಿಯಪ್ಪನವರು ಕಲ್ಪಿಸಿ ಕೊಟ್ಟಿದ್ದಾರೆ ಸ್ಕೂಲಿನ ವಿದ್ಯಾರ್ಥಿಗಳೂ, ಗ್ರಾಮಸ್ಥರೂ ಇದರಿಂದ ಪೂರ್ಣ ಪ್ರಯೋಜನಗಳನ್ನು ಪಡೆಯುತ್ತಿದಾರೆ ಮಂದಿರವನ್ನು ಏರ್ಪಡಿಸಿ ಸಾಂಗವಾಗಿ ನಡೆಸಿಕೊಡು ಬರುತ್ತಿರುವ ಮೇಲ್ಕಂಡ ದೊಡ್ಡ ಮನುಷ್ಯರ ಉಪಕಾರವು ಸ್ಮರಣೀಯವೂ ಅನುಸರಣೀಯವೂ ಆಗಿದೆ

ಆಚಾರ್ ರಂಗಪ್ಪ

ತಲಕಾಯಲ ಬೆಟ್ಟದ ರಥೋತ್ಸವ

ಅಯ್ಯಾ,

ಶಿಡ್ಲಘಟ್ಟ ತಾಲ್ಲೂಕು ಸಾದಲಿ ಹೋ॥ ಗೆ ತಲಕಾಯಲ ಬೆಟ್ಟದ ಶ್ರೀವೆಂಕಟರಮಣಸ್ವಾಮಿಯ ರಥೋತ್ಸವವು ಜನವರಿ ತಾ ೨೩ರ ಲಾಗಾಯತು ೧೦ ದಿನವು ಬಹಳ ವಿಜೃಂಭಣೆಯಿಂದ ನಡೆಯಿತು ಏತನ್ಮಧ್ಯೆ ಪೌರ್ಣಮಿ ದಿನ ಗ್ರಹಣವಾದ್ದರಿಂದ ಅನೇಕರು ನದೀಸ್ನಾನಕ್ಕಾಗಿ ಬಂದಿದ್ದರು ಆ ದಿನವೇ ರಥೋತ್ಸವವು ಆಯಿತು ಈ ವರುಷ ದೇವರ ಫಂಡು ಅಭಿವೃದ್ಧಿಪಡಿಸುವದಕ್ಕಾಗಿ ಹೊಸದಾಗಿ ಎತ್ತಿಗೆ ೧ ಆಣೆಯಂತೆಯೂ ಕರುವಿಗೆ ಅರ್ಧಾಣೆಯಂತೆಯೂ ರುಸುಂ ವಸೂಲು ಮಾಡಲ್ಪಟ್ಟಿತು ಸುಮಾರು ಹತ್ತು ಹದಿನೈದು ಸಹಸ್ರ ಎತ್ತುಗಳು ಜಮಾಯಿಸಿದ್ದವು ಸುಮಾರು ೧೦೦—೧೫೦ ಅಂಗಡಿಗಳು ಬಂದಿದ್ದವು ನಮ್ಮ ಅಮಲ್ದಾರರು ಪೋಲೀಸ್ ಇನ್ಸ್ಪೆಕ್ಟರು ಮತ್ತು ಶೇಕದಾರು ಮುಂತಾದವರು ದಯಮಾಡಿಸಿ ಕಾರ್ಯವನ್ನು ಬಹಳ ಮುತುವರ್ಜಿಯಿಂದ ನೆರವೇರಿಸಿದರು ಅಂಗಡಿಗಳಿಗೆಲ್ಲಾ ಇತರ ವರುಷಗಳಂತೆ ಅಂದಾಯ ವಸೂಲ್ಮಾಡಿದ್ದಲ್ಲದೆ ಅಂಗಡಿಗಳು ಹರಾಜುಹಾಕಲ್ಪಟ್ಟವು ಛತ್ರೇಶ್ವರ ಪಟ್ಟವರ್ದನ ಸರ್ಕಸ್ ಕಂಪನಿಯವರು ತುಂಬಾ ಚಮತ್ಕಾರದಿಂದ ತಮ್ಮ ಸಾಹಸವನ್ನು ತೋರ್ಪಡಿಸಿ ಸಂತೋಷವನ್ನುಂಟುಮಾಡಿದರು ಇವರು ಇಲ್ಲಿಂದ ಮುಂದಕ್ಕೆ ನಂದೀಜಾತ್ರೆಗೆ ತೆರಳುವರು ಕೋಳಿಗೆ ಕೊಂಬು ಹುಟ್ಟಿದೆ ಎಂದೂ ಮನುಷ್ಯನು ಅಂತರಿಕ್ಷದಲ್ಲಿ ನಿಂತಿದ್ದಾನೆಂದೂ ಹೇಳುತ್ತಾ ಇಸಂ ೧ಕ್ಕೆ ಕಾಲಾಣೆಯಂತೆ ಸುಮಾರು ಮೂವತ್ತು ನಲವತ್ತು ರೂಪಾಯಿ ವಸೂಲ್ಮಾಡಿಕೊಂಡರು ಮುಂದೆ ಈ ಜಾತ್ರೆಯು ಬಹಳ ಅಭಿವೃದ್ಧಿಯನ್ನೈದುವದೆಂಬುದಾಗಿ ಹಾರೈಸುತ್ತೇನೆ

ಪ್ರತ್ಯಕ್ಷದರ್ಶಿ

ಮೂಲೆತಾಣಿನಲ್ಲಿ ನಡೆಯುವ ಕೃತ್ಯಗಳು

ಅಯ್ಯಾ,

ಮದ್ದಗಿರಿ ತಾಲ್ಲೂಕು ಅಯ್ಯನಹಳ್ಳಿ ಜೋಡಿ ಗ್ರಾಮದಲ್ಲಿ ಕುಂಚಿಟಿಗ ಒಕ್ಕಲಿಗರ ಕರಿಯನೆಂಬುವನು ವಾಸವಾಗುತ್ತಾ ಇದ್ದನು ಅನಂತಪುರದ ಡಿಸ್ಟ್ರಿಕ್ಟ್ ಮಡಕಶಿರಾ ತಾಲ್ಲೂಕು ಮಂದಲಹಳ್ಳಿ ಗಂಪಿಗೆ ಸೇರಿದ ದಬ್ಬರ ಚಿಕ್ಕನಹಳ್ಳಿ ಗ್ರಾಮದಲ್ಲಿರುವ ಮರಿರಂಗಪ್ಪನೆಂಬುವನ ಹೆಂಡತಿ ಲಕ್ಕಮ್ಮನೆಂಬುವಳು ಗಂಡನ ಕೂಡ ಜಗಳಮಾಡಿಕೊಂಡು ಗಂಡನ ಮನೆ ಬಿಟ್ಟು ಸದರಿ ಅಯ್ಯನಹಳ್ಳಿಯಲ್ಲಿ ವಾಸಮಾಡುತ್ತಿದ್ದ ಕರಿಯನೆಂಬುವನ ಮನೆಗೆ ಬಂದು ಸುಖವಾಗಿದ್ದಳು ಈ ರೀತಿ ೧೫ ದಿವಸಗಳಾದ ಮೇಲೆ ಅವಳ ಗಂಡ ಬಂದು ಇಷ್ಟರ ಪಸ್ಸೀರೇ ಒಂದ ಬಹಳವಾಗಿ ಕರೆದದ್ದಕ್ಕೆ ಸದರಿ ಲಕ್ಕಮ್ಮನೆಂಬುವಳು ಬರುವದಿಲ್ಲವೆಂಬುದಾಗಿ ಹೇಳಿದಳು ಆಗ ಅವರು ಊರುಗಳಿಗೆ ಹೊರಟು ಹೋದರು ಮೊನ್ನೆ ದಿವಸ ಸುಮಾರು ಹಗಲು ೩ ಗಂಟೆ ವೇಳೆಯಲ್ಲಿ ದಬ್ಬರ ಚಿಕ್ಕನಹಳ್ಳಿಯಿಂದ ಸದರಿ ಲಕ್ಕಮ್ಮನ ಗಂಡ ಮರಿರಂಗಪ್ಪನೆಂಬುವನು ಸುಮಾರು ೨೦—೩೦ ಜನಗಳ ಪರವಿಗೂ ಕುಮ್ಮಕ್ಕು ತೆಗೆದುಕೊಂಡು ಸದರಿ ಅಯ್ಯನಹಳ್ಳಿ ಗ್ರಾಮಕ್ಕೆ ಬಂದು ಅವನ ಮನೆಗೆ ನುಗ್ಗಿ ಮನೆಯಲ್ಲಿ ಇದ್ದ ಸಾಮಾನು ಮಗ್ಗಿಗಳನ್ನು ದೋಚಿಕೊಂಡು ಕರಿಯನೆಂಬುವನಿಗೆ ಸಾಯಲಾರದಷ್ಟು ಹಿಂಸೆಯನ್ನು ಪಡಿಸಿ ಲಕ್ಕಮ್ಮನನ್ನು ಜುಟ್ಟು ಹಿಡಿದು ಈ ಊರು ಮುಂದೆ ಇರುವ ರಸ್ತೆಗೆ ಎಳೆದುಕೊಂಡು ಹೋಗಿ ಒಂದು ಕಂಬಳಿಯನ್ನು ಹಾಸಿ ಅದರಲ್ಲಿ ಅವಳನ್ನು ಮೂಟೆ ಕಟ್ಟಿಕೊಂಡು ಸತ್ತ ಹೆಣವನ್ನು ಹೊತ್ತುಕೊಂಡು ಹೋಗುವ ಹಾಗೆ ಹೊತ್ತುಕೊಂಡು ಹೋದರು

ಜನಗಳ ಹಿತಚಿಂತಕ

ವೈಶ್ಯ ವಿದ್ಯಾ ಪ್ರೋತ್ಸಾಹ

ಅಯ್ಯಾ,

ಈ ನಮ್ಮ ವೈಶ್ಯ ಮಹನೀಯರು ತಮ್ಮ ಹೆಣ್ಣು ಮಕ್ಕಳನ್ನು ಮದುವೆ ಮಾಡಿಕೊಡ ವಾಗ್ಗೆ ವರನನ್ನು ಹುಡುಕುವಾಗ ಮುಖ್ಯವಾಗಿ ವರನ ಮನೆಯವರು ಒಪ್ಪಿದ್ದರಾಗಿದ್ದರೆ ಸಾಕೆಂತಲೂ ಸದ್ಯ ತಮ್ಮ ಹೆಣ್ಣುಮಕ್ಕಳಿಗೆ ಪಂಕಿ, ಸರಿಗೆ, ಜೋಮಾಲೆ ಮೊದಲಾದ ಭಾರೀ ನಗಗಳು ಸಿಕ್ಕಿ ನಮ್ಮ ಮಗಳು ಧರಿಸಿದ್ದನ್ನು ಕಣ್ಣಿಂದ ನೋಡಿ ಬಿಟ್ಟರೆ ಧನ್ಯರಾದೆವು ಎಂತಲೂ ಅಭಿಪ್ರಾಯವನ್ನು ಇಟ್ಟುಕೊಂಡಿರುತ್ತಾರೆ ಒಡವೆಗಳು ಹೆಚ್ಚಿಗೆ ಕೊಡದೆಹೋದರೂ ತಿಳಿದ ಕೂಡಲೇ ಮನೆಯವರನ್ನು ವಿಚಾರಿಸಿ ಕೇಳುತ್ತೇವೆ ಎನ್ನುವರು ಮನೆಯಲ್ಲಿ [illegible]ಸರನ್ನು ವಿಚಾರಿಸುತ್ತಲೇ ಮಾತ್ರ “ಸೊಮ್ಮುಲು ಏಮಿ ಇಸ್ತಾರಟ” ಎಂದು ಕೇಳುವದು ಹೊರತು ವರನಿಗೆ ವಿದ್ಯೆ ಇರುವದೇ [illegible] ಎಂಬ ಮಾತೇ ಇಲ್ಲ ವರನು ವಿದ್ಯಾವಿಹೀನನಾಗಿ ಯಾತಕ್ಕೂ ಬಾರದವನಾಗಿದ್ದಾಗ್ಯೂ ಒಡವೆಗಳನ್ನು ಕೊಡುತ್ತಾರೆಂದರೆ ಒಪ್ಪಿ ಒಂದುವೇಳೆ ೬೫ ವರ್ಷದ ಒಬ್ಬ ಮುದುಕನಾದಾಗ್ಯೂ ತಮ್ಮ ಕನ್ಯೆಯನ್ನು ಕೊಟ್ಟು ಒಂದು ದಿವಸ ನಗಗಳಿಂದ ಅಲಂಕೃತಳಾದ ಕನ್ಯೆಯನ್ನು ಕಣ್ಣಿಂದ ನೋಡಿ ಸಂತೋಷಪಡುವರು ಮೂರು ನಾಲ್ಕು ಹೆಂಡರು ಸತ್ತ ವರನಿಗಾದರೂ ಒಡವೆಗಳಾಸೆಯಿಂದ ಕುಮಾರಿಯನ್ನು ಕೊಟ್ಟುಬಿಡುತ್ತಾರೆ ಇನ್ನು ಮುಂದೆ ಈ ಜನರು ತಮ್ಮ ಕುಮಾರಿಯರನ್ನು ಹುಡುಕುವಾಗ್ಗೆ ಮುಖ್ಯವಾಗಿ ವರನು ಚೆನ್ನಾಗಿ ವಿದ್ಯೆ ಕಲಿತಿರುವನೇ ? ವಿದ್ಯೆಯಲ್ಲಿ ಯಾವ ಪ್ಯಾಸ್ ಮಾಡಿರುತ್ತಾನೆ ವರನ ಗುಣಗಳು ಎಷ್ಟರಮಟ್ಟಿಗೆ ಚೆನ್ನಾಗಿರುತ್ತವೆ ? ಎಂಬೀ ವಿಷಯಗಳನ್ನು ಚೆನ್ನಾಗಿ ವಿಚಾರಿಸಿಕೊಡುವ ಪದ್ಧತಿಯನ್ನು ಉಪಯೋಗಿಸುವಲ್ಲಿ ನಗಗಳಿಗೆ ಬದಲಾಗಿ ವಿದ್ಯೆಯೇ ಅಭಿವೃದ್ಧಿಯಾಗಿ ಮುಂದಿನ ಕಾಲದ ಬಾಲಕರೆಲ್ಲರೂ ವಿದ್ಯಾವಂತರಾದಾರೆಂದು ನಂಬುತ್ತೇನೆ

ಕೆ ವೆಂಕಟರಾಯಶೆಟ್ಟಿ, ಬೆಂಗಳೂರು

ಮೋಸದ ಊಟ.

ಅಯ್ಯಾ,

ಈ ದೊಡ್ಡಬಳ್ಳಾಪುರದ ತಾಲ್ಲೂಕಿನಲ್ಲಿ ಪ್ರತಿ ಸಾಲಿನಲ್ಲಿಯು ದೇವನಹಳ್ಳಿ ತಾ ಬೀರಸಂದ್ರದಲ್ಲಿ ಕೆಲವು ದಿವಸವಿರುವ ಇಂಗ್ಲಿಷ್ ಮತ್ತು ನೇಟಿವ್ ಕ್ಯಾಂಪು ಅಲ್ಲಲ್ಲಿ ವಸತಿಮಾಡಿ ಮುಂದಕ್ಕೆ ತೆರಳುತ್ತಿರುವದು ಸರಿಯಷ್ಟೆ ಇವರಿಗೆ ಬೇಕಾದ ಸಹಾಯ ಸಂಪತ್ತುಗಳನ್ನು ಒದಗಿಸುವ ಭಾರ ಆಯಾ ಅಮಲ್ದಾರು ಮತ್ತು ಅವರ [illegible]ನ ನೌಕರರದಾಗಿರುತ್ತೆ ಲೋಕದಲ್ಲಿ ಅಲ್ಪನೌಕರನಿಂದ ಅದ[illegible] ಕೈಕಷ್ಟವು ಉನ್ನತಾಧಿಕಾರಿಗಳಿಂದಾಗ ಗುವುದಿಲ್ಲ ಹಾಗೆಯೇ ಬೇ[illegible]ಗಿದ್ದ ಹುಲ್ಲು, ಸೌದೆ, ತಪ್ಪ ಮೊದಲಾದವುಗಳನ್ನು ತೆಗೆಸಿಕೊ[illegible] ಅನೇಕ ಪಟೇಲರು ಸಹಾಯಕ್ಕಾಗಿ ತಳವಾರರೂ ಒರ ವ್ರಮ[illegible] ಈ ಊರು ಮುಸಾಫರಖಾನೆಗೆ ಸಮೀಪದಲ್ಲಿರುವ ಪ್ಲಾಂಟೇಷ[illegible] ಕಳೆದ ತಿಂಗಳ ಆಖೈರಿನಲ್ಲಿ ಮೊಕ್ಕಾಮು ಮಾಡಿದ್ದ ರಿಜಿವೆ ಟಿಗ[illegible] ಬಿದಾಯಿಗೋಸ್ಕರ ಬಂದಿದ್ದ ಬಸವಾಪುರದ ತಳವಾರನಾಯಕರ ಗಂ[illegible]ನೂ ಇನ್ನಿಬ್ಬರೂ ಹಿಂತಿರುಗಿ ತಮ್ಮ ಗ್ರಾಮಗಳಿಗೆ ಹೋಗುತ್ತಿದ್ದ[illegible] ಇವರ ಜೊತೆಯಲ್ಲೇ ನಾಯಕರಾಳಹಳ್ಳಿ ತಳವಾರ ಎಡಗೈ ರಂಗ[illegible] ಬರುತ್ತಿರಲು ನಾಯಕರಾಳಹಳ್ಳಿಗೆ ಕತ್ತಲಾಯಿತು ಒಬ್ಬೊಬ್ಬ[illegible] ಒಂದೊಂದು ಕಡೆಗೆ ಊಟಕ್ಕೆ ಹೊರಟರು ಮೇಲ್ಕಂಡ ನಾಯ[illegible]ಕಹಳ್ಳಿ ತಳವಾರನನ್ನು ಬಸವಾಪುರದ ತಳವಾರನು—ನೀವು ಯಾರು[illegible] ಕೇಳಿದ್ದಕ್ಕೆ —ನಾನು ತಳವಾರನೆಂದು ಹೇಳಿದ್ದರಿಂದ ಒಂದೇ[illegible]ಯವನೆಂದು ನಂಬಿ ಊಟಕ್ಕೆ ಬಿಟ್ಟನು ಅವನ ಕೋರಿಕೆಯ[illegible] ಗ್ರಾಮಕ್ಕೆ ಕೊಂಚ ದೂರವಾಗಿರುವ ತನ್ನ ಮನೆಯಲ್ಲಿ ಅವನಿಗೆ ಭೋಜನಮಾಡಿಸಿ ಕಳುಹಿಸಿದನು ರಾತ್ರಿ ಅವನ ಜೊತೆಯವರು ನಾಯಕರವನೂ ಚಾವಡಿಗೆ ಬಂದು ಮಲಗಿದರು ಮಾದಿಗ ತಳವಾ[illegible] ಕಾವಲಿಗಾಗಿ ಬಂದು ಬೆಂಕಿಹಾಕುತ್ತಿದ್ದನು ಪ್ರಸ್ತಾಪನೇನ ತಮ[illegible]ಗೆ ಅನುಕೂಲಿಸಿದ ಊಟವನ್ನು ಹೇಳುತ್ತಾ ಬಸವಾಪುರದ ಗಂ[illegible] ತಾನು ಈತನ ಮನೆಯಲ್ಲಿ ಉಂಡೆನೆಂದು ಆ ಮಾದಿಗ ತಳವಾರನ[illegible] ತೋರಿಸಿದನು ಈ ಮಾತು ಪಾಪಿ ಕಾವಲಿನವರು ಕೇಳಿ—ಅ[illegible] ಮಾದಿಗನವನು, ಅಲ್ಲಿ ಊಟ ಮಾಡಬಹುದೇ ? ಎಂದು ನಗಲಾರಂ[illegible]ದರು ಇದು ಕ್ರಮೇಣ ಪ್ರಕಾರಾಗಿ ಅವನಿಗೆ ಕುಲಸ್ಥರೆಲ್ಲ ಬಹಿ[illegible] ಹಾಕಿದಾರೆ ಇದು ಎಂಥಾ ಮೋಸ ! ನಮ್ಮ ಹಿಂದುಗಳಲ್ಲಿ ಪ್ರಾ[illegible]ಶ್ಚಿತ್ತರೂಪವಾದ ಶಿಕ್ಷೆಯುಂಟಷ್ಟೆ ಈತನಿಗೆ ಆ ಸಹಾಯವೂ ಲಭ[illegible] ಹೋಗಿದೆ

ಕೆ ಜ ವಿ

ಮೋಸಕೃತ್ಯ

ಅಯ್ಯಾ,

ಈ ತಿಂಗಳು ತಾ ೧೪ನೆ ಗುರುವಾರ ಚಿತ್ರದುರ್ಗ ಡಿಸ್ಟ್ರಿಕ್ಟ್ ಹಿರಿಯೂರ್ ತಾಲ್ಲೋಕು ಮರಡಿಹಳ್ಳಿ ಗ್ರಾಮಕ್ಕೆ ಇದೇ ತಾಲ್ಲೂಕು ಬಿಜ್ಜಿನ ರ[illegible]ಪ್ಪದ ಕಮ್ಮರಡ್ಡಿಗರ ಜಾತಿ ಪ್ರಾಣಿಟ ಹನುಮಂತನೆಂಬುವನು ಬಳ್ಳಾರಿ ಜಿಲ್ಲಾ ಕಲ್ಯಾಣದುರ್ಗದ ತಾಲ್ಲೋಕು ನಾರ[illegible]ಪುರದ ಜೀಮರೆಡ್ಡಿ ಎಂಬುವನನ್ನು ಕರೆದುಕೊಂಡು ಈ ಗ್ರಾಮದ ಗೌಡರ ಚೆನ್ನಪ್ಪನವರ ಮನೆಗೆ ಬಂದು—ಈ ಭೀಮರೆಡ್ಡಿಗೆ ಒಂದು ಕನ್ಯಾ ಬೇಕಾಗಿದೆ ನಿಮ್ಮಲ್ಲಿಗೆ ಬಂದಿದೇವೆ ಇದೇ ಗ್ರಾಮದ ಯ[illegible] ಲಚ್ಚಯ್ಯನೆಂಬಾತನ ಮಗಳನ್ನು ಕೊಡಿಸಿಕೊಡಿ ಈ ಕನ್ಯೆ[illegible] ಒಂದುಸಾವಿರ ರೂಪಾಯಿ ದಕ್ಷಿಣೆಯಾಗಿ ಕೊಡುತ್ತೇನೆ ಇದ[illegible] ನೀವು ತುಂಬಾ ಸಹಾಯಮಾಡಬೇಕಾಗಿ ಹೇಳಿದ್ದರ ಮೇಲೆ ವಿಚಾ[illegible] ಕೇಳುತ್ತೇನೆ ಎಂದು ಗೌಡ ಚೆನ್ನಪ್ಪನವರು ಹೇಳಿದರು ಸ[illegible] ಒಂದು ಘಂಟೆ ಮೇಲೆ ಯದ್ರಾಲಚ್ಚಯ್ಯನೆಂಬುವನನ್ನು ಕರೆಸಿ [illegible] ಪಲ್ಲಿ ಕೊಡುವದಕ್ಕೆ ಆಗುವದಿಲ್ಲವೆಂದು ಹೇಳಿದ ಈ ವಿಷಯ[illegible] ಯವರಿಗೆ ತಿಳಿಸಿದರು ಅದೇ ದಿವಸ ರಾತ್ರಿ ೭ ಘಂಟೆ ಸಮಯ[illegible] ಇದೇ ಗ್ರಾಮದ ಗೊಂಚಿಕಾರ ಕೇರಡ್ಡಿ ತಿಮ್ಮಪ್ಪನವರಲ್ಲಿಗೆ ಬಂ[illegible] ನರಾಡುಗಮ್ಮನೆಂಬಾಕೆಯ ಮಗಳನ್ನು ಕೊಡಿಸಿಕೊಡಿ ಎಂದು[illegible] ದರಂತೆ, ಅದಕ್ಕೆ ಅವರು ಆಕೆ ತಮ್ಮ ಫಸಲ್ ಗೋವಿಂದಪ್ಪನೆ[illegible]ನನ್ನು ಕೇಳುವಲ್ಲಿ ತಾಯಿ ಒಪ್ಪಿ ಕೊಟ್ಟರೆ ಆಗಬಹುದು ಎಂದು [illegible]ಳಿದನಂತೆ, ಈ ವಿಷಯ ತಿಳಿದ ಕೊಂಡು ರಾತ್ರಿಗೆ ಬಿಂಜಿನ[illegible] ಹೋಗಿ ಪುನಃ ಬೆಳಗ್ಗೆ ಎದ್ದು ಈ ಮರಡಹಳ್ಳಿಗೆ ಬಂದು ಸದರಿ [illegible] ಪ್ಪನವರ ಮನೆಗೆ ಹೋಗಿ ಊಟಮಾಡಿಕೊಂಡು ಊರಿಗೆ [illegible]

...ನಾಗಿ ಹೇಳಿ ಹೊರಟುಹೋದನು. ಹೋಗುವಾಗ್ಗೆ ಗವುಡ ...ಪ್ಪನವರ ಸಂಗಡ—ಸದರಿ ಕನ್ಯಾ ಕೊಟ್ಟದ್ದರೆ ಆತನ ಸಾಲ ...ದ ವಗ್ಯೆರೆ ೫,೦೦೦ ರೂಪಾಯಿ ಆಗಿದ್ದಾಗ್ಯೂ ಕೊಡಲು ಇಷ್ಟ ... ಎಂದು ಹೇಳಿ ಹೊರಟುಹೋದನು. ಆ ದಿವಸವೆಲ್ಲಾ ಈ ಊರ ... ಇದ್ದು ಸದರಿ ಯರ್ರಾಲಚ್ಚಯ್ಯನ ಸಂಬಂಧವಾದ ಬಾತ್ಮಿಗಳ ... ಪರಭಾರೆ ವಿಚಾರಮಾಡಿಕೊಂಡು ಪ್ರಯಾಣ ಮಾಡಿ ಸಾಯಂ ... ಚಿತ್ರದುರ್ಗ ತಾಲ್ಲೂಕು ಪಲ್ಲವಗೆರೆಯಲ್ಲಿರುವ ಯರ್ರಾಲಚ್ಚ ... ಹಸೇ ಮಗಳು ದುರುಗವ್ವ ಈಕೆ ಗಂಡ ಸಂಜೀವಪ್ಪ ಇವರ ...ಹೋಗಿ ತನ್ನ ವಿಷಯವೂ ತಾನು ಮೇಲ್ಕಂಡ ಮರಡಿಹಳ್ಳಿಯಿಂದ ... ಅಲ್ಲಿ ಯರ್ರಾಲಚ್ಚಯ್ಯನ ಮಗಳನ್ನು ತನಗೆ ಕೊಡುವಂತೆ ... ಇದಕ್ಕಾಗಿ ೩೦೦ ರೂಪಾಯಿ ಗೊತ್ತುಮಾಡಿ ನಗದು ೩೫೦ ...ಕೊಟ್ಟು ಬಾಕಿ ರೂಪಾಯಿ ತೆಗೆದುಕೊಂಡು ಇನ್ನು ೧೫ ...ದಲ್ಲಿ ಬರುತ್ತೇನೆ ಎಂದು ಹೇಳಿ ಬಂದಿದ್ದೇನೆ. ಈ ವಿಷಯವನ್ನು ...ವುಗೆ ತಿಳಿಸಿ ನಿಮ್ಮನ್ನು ನೋಡಿಕೊಂಡು ಊಟ ಉಪಚಾರ ...ಕೊಂಡು ಹೋಗು ಎಂದು ಗವುಡ ಚನ್ನಪ್ಪ ವಗ್ಯೆರೇರು ಹೇಳಿ ...ಸಿದರು ಎಂದು ಹೇಳಿದ್ದರ ಮೇಲೆ ನಂಬಿ ಅವನಿಗೆ ಊಟ ಉಪ ...ಗಳೆಲ್ಲಾ ಮಾಡಿಸಿ ಸದರಿ ಸಂಜೀವಯ್ಯ—ಚಿತ್ರದುರ್ಗಕ್ಕೆ ...ಕೆಲಸಕ್ಕೆ ಹೋಗುತ್ತೇನೆ. ನೀವು ಬೆಳಿಗ್ಗೆ ಎದ್ದು ಬುತ್ತಿ ...ಸಿಕೊಂಡು ಹೊರಟುಹೋಗಿ ಎಂದು ಹೇಳಿದನಂತೆ. ಅದಕ್ಕೆ ಆ ...ನು—ಅಣ್ಣಾ ನನಗೆ ಗಾಡಿ ಬಾಡಿಗೆ ೫ ರೂಪಾಯಿ ಬೇಕು, ... ಎಂದು ಕೇಳಿದನಂತೆ. ಅದರಂತೆ ಆತ ರೂಪಾಯಿ ಕೊಟ್ಟು ...ಯುಹೋದನು. ನಂತರ ಈ ಮೋಸಗಾರನು ರಾತ್ರಿ ಅಲ್ಲೇ ... ವಿದ್ರ ಪ್ಯಾಳ್ಯದಲ್ಲಿ ಪಟೇಲ ಮುಂದಿದು ಅದರಲ್ಲಿದ್ದ ಸೀರೆ ಧೋತ್ರ ...೦ ರೂಪಾಯಿನ ಮಾಲ್ ತೆಗೆದುಕೊಂಡು ಪರಾರಿಯಾಗಿದ್ದಾನೆ ...ತ ಮೋಸಗಾರರು ಒಂದು ಕಡೇ ಸರ್ಕೆ ಮೋಸಪಡಿಸುತ್ತಲೇ ..., ಇಂಥಾದ್ದರಲ್ಲಿ ಪುನಃ ನಂಬಿಕೆ ಇಟ್ಟುಕೊಂಡು ಇರುವುದು ...ದರೆ ಬಹಳ ಆಶ್ಚರ್ಯವಾಗುತ್ತೆ. ಇನ್ನು ಮೇಲಾದರೂ ಹೊಸ ... ನಂಬದೆ ಇರುವುದು ಕ್ಷೇಮಾಕರ.

ಶಾ. ಚಿ.

ಸ್ತ್ರೀವಿದ್ಯಾಭ್ಯಾಸ.

ಹೆಣ್ಣು ಮಕ್ಕಳಿಗೆ ವಿದ್ಯೆಯನ್ನು ಕಲಿಸಬೇಕೆಂಬ ಅಭಿಪ್ರಾಯವು ...ಮೈಸೂರು ಸೀಮೆಯಲ್ಲಿ ಎಲ್ಲಾ ಜಾತಿಯವರಲ್ಲಿಯೂ ನೆಲೆಗೊಂ...ಡಿರುವುದಕ್ಕೆ ಸಂದೇಹವೇನಿದೆ? ನಮ್ಮ ಘನವನ್ನು ಹೊಂದಿದ ...ಮಹಾರಾಜರವರು ವಿದ್ಯಾಪಕ್ಷಪಾತಿಗಳಾದ್ದರಿಂದ ಪ್ರತಿ ತಾಲ್ಲೂ...ಕು ದೊಡ್ಡ ದೊಡ್ಡ ಹೋಬಳಿಗಳಲ್ಲಿಯೂ ಹುಡುಗಿಯರ ...ಪಾಠಶಾಲೆಗಳನ್ನು ಏರ್ಪಡಿಸಿರುತ್ತಾರೆ

...ಇದರಂತರಾದರೂ ಕೂಡ ತಮ್ಮ ತಮ್ಮ ಮಕ್ಕಳಿಗೆ ವಿದ್ಯೆ ...ಕಲಿಸಬೇಕೆಂಬುವುದೇ ಉದ್ದೇಶ. ಏಕೆಂದರೆ ಸ್ವಲ್ಪಮಟ್ಟಿಗೆ ...ಮಕ್ಕಳಿಗೆ ವಿದ್ಯೆ ಬಂದಾಗ್ಯೂ ನನಸೋದೆಯುವರಲ್ಲಿಯೂ ...ಜನಗಳಲ್ಲಿಯೂ ಗೌರವ ಉಂಟೆಂತಲೂ ಈಗಿನ ಪದ್ಧತಿ ...ಪ್ರತಿ ಒಬ್ಬ ಹುಡುಗನಿಗೂ ತಂದೆತಾಯಿಗಳು ಮದುವೆ ಮಾಡಿ ...ಬೇಕೆಂದು ಕೇಳಿದಾಗ, ನನಗೆ ನೋಡಿರುವ ಹೆಣ್ಣಿಗೆ ಓದು ...ಬರುವುದೇ ಎಂಬದಾಗಿ ಪ್ರಶ್ನೆಮಾಡೋಣದರಿಂದಲಾದರೂ ...ನ್ನು ಕಲಿಸಬೇಕಾಗಿದೆ. ಯೂರೋಪ್ ಮತ್ತು ಅಮೇರಿಕ ...ಗಳಲ್ಲಿ ಸ್ತ್ರೀ ವಿದ್ಯಾಭ್ಯಾಸವು ಎಷ್ಟು ಉನ್ನತಸ್ಥಿತಿಗೆ ಬಂದಿರು... ಅಷ್ಟು ಉನ್ನತಸ್ಥಿತಿಗೆ ಕೆಲವು ವರ್ಷಗಳಲ್ಲಿಯೇ ನಮ್ಮ ...ಭ್ಯಾಸವೂ ಬರುವುದು.

ವಿದ್ಯೆಯನ್ನು ನಮ್ಮ ಹಿಂದೂಗಳಲ್ಲಿ ಕಲಿಸಲು ವಿರಾವವು ಬಹಳ ... ಏಕೆಂದರೆ ಚಿಕ್ಕ ವಯಸ್ಸಿನಲ್ಲೇ ಅವರಿಗೆ ಮದುವೆ ಮಾಡೋ...ದರಿ ಅವರುಗಳನ್ನು ೧೦—೧೧ ವರ್ಷಗಳು ತುಂಬುವಾಗ್ಗೆ ಪಾಠ ...ಗೆ ಹೋಗದ ಹಾಗೆ ಮಾಡಬೇಕಾಗುತ್ತೆ. ಆದುದರಿಂದ ಅಷ್ಟ...ರಾಗಿ ಅವರಿಗೆ ಸ್ವಲ್ಪಮಟ್ಟಿಗೇ ಶಿಕ್ಷಣವಾದರೂ ಓದಿ ಬರೆಯಲೂ ... ಬಂದಿರುತ್ತೆ. ಹಿಂದೂಗಳಿಲ್ಲದ ಇತರ ಮತದವರಿಗೆ ಇಂಥಾ ...ಕೂಲಗಳು ಏನೂ ಇಲ್ಲದಿರೋಣದರಿಂದ ಅವರು ಬಹಳ ...ಸೀಗೂ ವಿದ್ಯಾಕಾಲಕ್ಷೇಪಮಾಡಿ, ಹಲವು ಪರೀಕ್ಷೆಗಳಲ್ಲಿ ತೇರ್ಗ...ಹೊಂದಿ ದೊಡ್ಡ ದೊಡ್ಡ ಅಧಿಕಾರಗಳಲ್ಲಿಯೂ ಇರುತ್ತಾರೆ. ...ಶಿನ ಕಾಲದ ಈಗ ಇತರ ಮತಸ್ಥರಂತೆ ಪರೀಕ್ಷೆಗಳಲ್ಲಿ ತೇರ್ಗ...ಹೊಂದಿ ದೊಡ್ಡ ಪದವಿಗೆ ಬರುವುದು ಪ್ರಾರಂಭವಾಗಿದೆ.

...ವಿದ್ಯೆಯೊಂದರೆ ಅನೇಕ ವಿಷಯಗಳಲ್ಲಿ ವಿಚಾರಮಾಡತಕ್ಕದ್ದಕ್ಕೆ ... ನನ್ನ ಸಹೋದರಿಯರಲ್ಲಿ ಕೆಲವರು ಪ್ಯಾಸ್ ಮಾಡಿರುವ ...ವು ಅಂಗ್ಲೇಯ ಭಾಷೆಯನ್ನೇ ಓದಿ ಪ್ಯಾಸ್ ಮಾಡತಕ್ಕ...ಲ್ಲ ಏಕೆಂದರೆ ಆಂಗ್ಲೇಯ ಭಾಷೆಯನ್ನೇ ಓದಿ ಪ್ಯಾಸ್ ... ದೊಡ್ಡ ಅಧಿಕಾರವನ್ನು ಸಂಪಾದಿಸಿ ಯಾರನ್ನು ಕಾಪಾಡ...? ನಮಗೆ ಬಾಲ್ಯದಲ್ಲಿ ತಂದೆತಾಯಿಗಳೂ ಯೌವನದಲ್ಲಿ ... ವೃದ್ಧಾಪ್ಯದಲ್ಲಿ ಮಕ್ಕಳೂ ಕಾಪಾಡುವವರಿರುವಾಗ ನಾವು ... ಮಾಡಿ ಸಂಪಾದಿಸತಕ್ಕ ಆವಶ್ಯವಿಲ್ಲ. ಸಂಸ್ಕೃತ ಮತ್ತು ...ಭಾಷೆಯಲ್ಲಿಲ್ಲದ ಹೆಚ್ಚು ಸಮಾಚಾರಗಳೇನೂ ಆಂಗ್ಲೇಯ ...ಲ್ಲ. ಆದುದರಿಂದ ಇವೆರಡರ ಸಾಧನಕ್ಕೂ ಅನುಕೂಲವಾ...ಭಾರತ ರಾಮಾಯಣ ಭಾಗವತ ಜೈಮಿನಿ ಮುದ್ರಾಮಂಜೂಷ... ಶಬರಶಂಕರವಿಲಾಸ, ನಾಟಕಗಳಲ್ಲಿ ಕಾಳಿದಾಸ ಮಹಾ...ಶಾಕುಂತಳ ವಿಕ್ರಮೋರ್ವಶೀಯ ಮಾಳವಿಕಾಗ್ನಿಮಿತ್ರ ಮುಂ... ಗ್ರಂಥಗಳನ್ನು ಓದೋಣದರಿಂದ ಸಕಲ ವಿಷಯದಲ್ಲಿಯೂ ...ವನ್ನು ಹೊಂದುವವಿಲ್ಲವೇ?

...ಆಂಗ್ಲೇಯ ಭಾಷೆಯನ್ನು ಸ್ವಲ್ಪಮಟ್ಟಿಗೆ ಓದಿದ ನನ್ನ ಸಖೀ... ಕೆಲವರು ತಮ್ಮ ಸಮಾನ ಬುದ್ಧಿವಂತೆಯರು ಇಲ್ಲವೆಂ...ದು ತಲೆಹೊಡೆಯಿಸಿಕೊಳ್ಳುತ್ತಾರೆ. ಅಲ್ಲದೆ ತಾವು ದೇವಲೋಕದಿಂದ ಇಳಿದುಬಂದವರೆಂಬ ದುರಭಿಪ್ರಾಯವುಳ್ಳವರಾಗಿದಾರೆ. ದುರಹಂಕಾರದಿಂದ ಅವರಿಗೆ ಯಾರನ್ನು ಕಂಡರೂ ಅಲಕ್ಷ್ಯ. ಅವರು ಮನೆಯಲ್ಲಿ ಅಡಿಗೆ ಮಾಡುವುದು, ಪಾತ್ರೆಗಳನ್ನು ತೊಳೆಯುವುದು, ಮನೆಯನ್ನು ಸಾರಿಸುವುದು, ಕೆರೆಯಿಂದಗಲೀ ಭಾವಿಯಿಂದಾಗಲೀ ನೀರು ತರುವುದು ತಮ್ಮಗಳ ಮಾನಕ್ಕೆ ಕಡಿಮೆ ಎಂದು ಭಾವಿಸಿರುತ್ತಾರೆ. ಅವರುಗಳ ಪ್ರಕೃತಿ ಯಾರ ಗಂಡನಾದರೂ ಬಡವನಾಗಿದ್ದರೆ ಅವನ ಪಾಡೇ ಬೇಡ. "ಅಲ್ಪವಿದ್ಯಾ ಮಹಾಗರ್ವಿ" ಎನ್ನುವಂತೆ ಸಂಪೂರ್ಣವಿದ್ಯೆ ಇಲ್ಲದಿರೋಣವೇ ಎಲ್ಲದಕ್ಕೂ ಕಾರಣ. ನಾವು ವಿದ್ಯಾವತಿಯರಾದ ಹಾಗೆಲ್ಲಾ ದುರಹಂಕಾರವೇ ಮುಂತಾದವುಗಳನ್ನು ಬಿಟ್ಟು, ಗುರುಹಿರಿಯರಲ್ಲಿ ಭಕ್ತಿ ವಿಶ್ವಾಸಗಳನ್ನಿಟ್ಟು, ಸಕಲ ಜನರೂ ಮೆಚ್ಚುವಂತೆ ನಡೆದುಕೊಂಡು ಒಳ್ಳೆಯ ಹೆಸರನ್ನು ಪಡೆದರೇನೇ ನಾವು ವಿದ್ಯೆಯನ್ನು ಕಲಿತುದಕ್ಕೆ ಫಲ

ಕೋಲಾರದ ಪದ್ಮಾವತಿಬಾಯಮ್ಮ.

ಕಾಲ್ಲೋಕು ವರ್ತಮಾನಗಳು.

ಚಿತ್ರದುರ್ಗ:—ಬಿಸಲಿನ ತಾಪವು ಬಹಳವಾಗಿದೆ. ಸಮೀಪದ ಗುಡ್ಡಗಳಲ್ಲಿ ಚಿಂತೆ ಹುಲಿಗಳು ಸೇರಿಕೊಂಡು ದನಗಳನ್ನು ಕೊಲ್ಲುತ್ತಿವೆ. ಅವುಗಳನ್ನು ಶಿಕಾರಿಮಾಡಲು ಯಾರೂ ಗತಿ ಇಲ್ಲವಾಗಿ ಅವುಗಳ ತೊಂದರೆ ಹೆಚ್ಚಾಗಿದೆ. ಸಂತೆಯಲ್ಲಿ ಕಂಡ ಬಟ್ಟು ಕಲ್ಲುಗಳನ್ನೂ ಸೇರುಗಳನ್ನೂ ಇಟ್ಟುಕೊಂಡು ಮಾರುತ್ತಾರೆ. ಸರಕಾರದವರು ತಕ್ಕ ನಿಬಂಧನೆ ಗೊತ್ತುಮಾಡಿ ತನಿಖೆಯಿಂದ ಬಯಲ್ಪಡಿಸುವದು ಒಳ್ಳೇದು. ಈ ಊರಿನಲ್ಲಿಯೂ ಸಂತೆಯಲ್ಲಿಯೂ ಜೂಜುಕೋರರು ಎಲೆ ಆಡುವಲ್ಲಿ ನಿರ್ಭಯವಾಗಿ ಆಡುತ್ತಾರೆ. ಇವರನ್ನು ಕೇಳುವರೇ ಇಲ್ಲ. ಈ ಸಲ ಸೆಷನ್ಸಿನಲ್ಲಿ ಕೆಲವು ಅಪರಾಧಿಗಳಿಗೆ ತಕ್ಕ ಶಿಕ್ಷೆಯಾಗಿದೆ. ಖೋಟಾ ನಾಣ್ಯಗಳನ್ನು ಮಾಡಿದ ಅಪರಾಧಿಗಳಿಗೆ ತಲಾ ೭ ವರುಷ ಕಠಿಣ ಸಜಾ ಆಯಿತು. ಊರಿನಲ್ಲಿ ನಡೆದ ಪಂಚಿನ ದರೋಡೆಯಲ್ಲಿ ಸಿಕ್ಕಿದ ಐದುಮಂದಿ ಅಪರಾಧಿಗಳ ಪೈಕಿ ಒಬ್ಬನ ಮೇಲೆ ತಕ್ಕ ಸಾಕ್ಷಿ ಬರದೇ ಖುಲಾಸ್ ಆಯಿತು. ಬಾಕಿ ನಾಲ್ಕು ಮಂದಿಗೆ ತಲಾ ೧೦ ವರುಷಗಳ ಕಠಿಣ ಸಜಾ ಆದರೂ ಜನಗಳು ಇದರ ವಿಷಯ ಬೇರೆ ಬೇರೆ ವಿಧವಾಗಿ ಅಭಿಪ್ರಾಯಪಡುತ್ತಾರೆ. ಇಂತಹ ದುಷ್ಟ ನಿಗ್ರಹವೂ, ಪ್ರಜಾ ನೆಮ್ಮದಿಯೂ ಸ್ಥಾಪಿತವಾಗಿ ಊರನಿವಾಸಿಗಳು ನಿರ್ಭಯವಾಗಿ ವಾಸ ಮಾಡುವಂತೆ ನಂಬಿಕೆ ಹುಟ್ಟಿಸಿದರೆ ಪೋಲೀಸಿನವರ ಮೆಹನತ್ತು ಬಹಳ ಮಾದೀತು. ಕೋಳಿಕೆರೆಗೂ ಬೈಲ್ ಸ್ಟೇಷನಿಗೂ ಮಧ್ಯೆ ಆದ ಚೋರಿ ಪತ್ತೆ ಆಗುವುದರಲ್ಲಿದೆ. ಅಲ್ಲಲ್ಲಿ ಪ್ಲೇಗ್ ರೋಗವು ಹೆಚ್ಚುತ್ತಾ ಇದೆ. ಈ ಪ್ರಾಂತ್ಯ ಸದ್ಯ ಆದರ ಗಲಾಟೆ ಏನೂ ಇಲ್ಲ. ಅದು ಇಲ್ಲಿ ತಲೆ ಎತ್ತದಂತೆ ಮುನಿಸಿಪಾಲಿಟಿಯವರು ತಕ್ಕ ನಿಗಾ ಇಡುವರೆಂದು ನಿರೀಕ್ಷಿಸಲ್ಪಟ್ಟಿದೆ

ಹಿಂದೂಪುರ.—ಇಲ್ಲಿ ಕಳೆದ ನವಂಬರು ೧ ನೇ ತಾ. ಕಾರ್ತೀಕ ಶು ೧೫ ದಿನ ಕೃತ್ತಿಕೋತ್ಸವದ ಉದ್ದಿಶ್ಯ ಶ್ರೀವೆಂಕಟೇಶ್ವರ ಸ್ವಾಮಿ ಉತ್ಸವ ಮಾಮೂಲಿನಂತೆ ಮೇಳತಾಳಗಳಿಂದ ಮಸೀದಿ ಮುಂದೆ ಹೋದ ಕಾಲದಲ್ಲಿ ಅಟಕಾವು ಮಾಡದೆ ಬರುವ ವೇಳೆಯಲ್ಲಿ ದೇವರನ್ನು ಕಲ್ಲುಗಳಿಂದ ಹೊಡೆದು ನಿಲ್ಲಿಸಿ ಬಿಟ್ಟರು. ಆಗ ಹಿಂದೂ ಜನಗಳೆಲ್ಲರು ಪೋಲೀಸಿಗೆ ರಿಪೋರ್ಟು ಮಾಡಿದರು. ದೇವರನ್ನು ಸಹ ಅಲ್ಲೇ ನಿಲ್ಲಿಸಿ ಗ್ರಾಮಸ್ಥರಿಗೆ ರಿಪೋರ್ಟು ಮಾಡಲು ಅವರು ಬಂದು ದೇವರ ಮೇಲೆ ಇರತಕ್ಕ ಆಭರಣಗಳ ನಿಗಾವಳಿಯಿಂದ ಇದ್ದರು. ಎರಡನೇ ದಿನ ತಹಸೀಲ್ದಾರರು ಬಂದು ದೇವರನ್ನು ಯಥಾಸ್ಥಾನ ಸೇರಿಸಿರೆಂದು ಅಪ್ಪಣೆ ಕೊಟ್ಟದ್ದರಿಂದ ಅದೇ ಪ್ರಕಾರ ಸೇರಿಸಿ ಸಂಪ್ರೋಕ್ಷಣೆ ಮಾಡಿ ಮೇಲ್ಕಂಡ ಸಂಗತಿಗಳನ್ನು ಕುರಿತು ತಾಲ್ಲೂಕು ತಹಸೀಲ್ದಾರರಲ್ಲಿ ಫಿರ್ಯಾದು ಮಾಡಿದರು. ಉಭಯತ್ರರನ್ನೂ ವಿಚಾರಣೆ ಮಾಡಿದ್ದರಲ್ಲಿ ಹಿಂದೂ ಜನಗಳಿಂದ ಸರಿಯಾದ ರುಜುವಾತು ಆಗಲಿಲ್ಲವೆಂದು ಮೊಕದ್ದಮೆ ವಜಾ ಮಾಡಿದರು. ಹೀಗೆ ವಜಾ ಮಾಡಿದ್ದರಿಂದ ಮಹಮ್ಮದೀ ಜನಗಳಿಗೆ ಬಲ ಹೆಚ್ಚಾಗಿ ಮೊನ್ನೆ ಫೆಬ್ರವರಿ ೩ ನೇ ತಾ. ಈ ಊರಿನ ಶ್ರೀವೆಂಕಟೇಶ್ವರಸ್ವಾಮಿ ರಥೋತ್ಸವ ನಡೆಯಬೇಕಾದ್ದರಿಂದ ಪೋಲೀಸು ಇನಸ್ಪೆಕ್ಟರಿಂದಲೂ ಪೋಲೀಸು ಸಿಬ್ಬಂದಿಯಿಂದಲೂ ರಥೋತ್ಸವವು ನೆರವೇರಿಸಲ್ಪಟ್ಟಿತು. ಪುನಃ ಫೆಬ್ರವರಿ ೮ ನೇ ತಾ. ಬರೀ ರಥವನ್ನು ವಾದ್ಯಗಳ ಸಮೇತ ಯಥಾಸ್ಥಾನಕ್ಕೆ ಸೇರಿಸುವ ಉದ್ದಿಶ್ಯವನ್ನು ಮಹಮ್ಮದೀಯರು ತಿಳಿದುಕೊಂಡು ತಮ್ಮ ಮಸೀದಿ ಹತ್ತಿರ ವಾದ್ಯಗಳ ಸಮೇತ ರಥವನ್ನು ನಿಲ್ಲಿಸಿ ಜಲ್ಲಗಳ ಮಾಡಬೇಕೆಂದು ಯೋಚಿಸಿದ ಸಂಗತಿ ಹಿಂದೂಗಳು ಕೇಳಿ ಪೋಲೀಸು ಇನಸ್ಪೆಕ್ಟರಿಗೆ ರಿಪೋರ್ಟು ಮಾಡಿದರು. ಅವರು ಜಿಲ್ಲಾ ಕಲೆಕ್ಟರಿಗೂ ಪೋಲೀಸು ಸೂಪರಿಂಟೆಂಡೆಂಟರವರಿಗೂ ಟೆಲಿಗ್ರಾಂ ಕೊಟ್ಟದ್ದಕ್ಕೆ ಅವರುಗಳು ರಿಜರ್ವ್ ಪೋಲೀಸು ಸಮೇತ ಬಂದು ರಥವನ್ನು ಯಥಾ ಸ್ಥಾನಕ್ಕೆ ಮಾಮೂಲಿನಂತೆ ಮೇಳ ವಾದ್ಯಗಳಿಂದ ಸೇರಿಸಿ ಹಿಂತಿರುಗಿ ಮಸೀದಿ ಮುಂದೆ ರಿಜರ್ವ್ ಪೋಲೀಸು ಸಮೇತ ಕಲೆಕ್ಟರವರು ಬಂದಾಗ್ಗೆ ಕೆಲವರು ಮಹಮ್ಮದೀಯರು ಕಲೆಕ್ಟರ್ ಕೈ ಹಿಡಿದು ನಿಲ್ಲಿಸಿದ್ದಕ್ಕೆ ಅವರ ಆಟವನ್ನು ಪರಿಗಣಿಸದೆ ಮುಂದಕ್ಕೆ ಹೊರಟುಹೋದರು. ಸದರಿ ರಿಜರ್ವ್ ಪೋಲೀಸಿನವರನ್ನು ಈ ಕಾಮನ ಹಬ್ಬದಲ್ಲಿ ಮಹಮ್ಮದೀಯರು ಗಲಾಟೆ ಮಾಡುವರೆಂದು ಇಲ್ಲೇ ಇರಿಸಿ ಕಲೆಕ್ಟರವರು ತಮ್ಮ ಸ್ವಸ್ಥಾನವಾದ ಅನಂತಪುರವನ್ನು ತಲಪಿದರು

ಚನ್ನಪಟ್ಟಣ.—ಮೊನ್ನೆ ಗುರು ಶಿಕ್ಷಾಸಾರಗಳಲ್ಲಿ ಡೆಪ್ಯುಟಿ ಕಮಿಷನರ್ ಮೆ॥ ಸ್ಪಾರ್ಕ್ಸ್ ಸಾಹೇಬರು ಇಲ್ಲಿ ಮೊಕ್ಕಾಂ ಮಾಡಿ, ಸರ್ಕಾರಿ ಸಿಬ್ಬಂದಿ ಮೂಲಕ ಮೊಹರಂ ಮೆರವಣಿಗೆ ನಡೆಸುತ್ತಾ ಬಂದಿದ್ದರಿಂದ ಯಾವ ಗಲಾಟೆಗೂ ಆಸ್ಪದವಿಲ್ಲದೆ ನಡೆಯಿತು. ಇಲ್ಲಿ ಹೋದ ವರುಷ ಹೋಳಿ ಹಬ್ಬ ನಡೆಯಲಿಲ್ಲ. ಕೆಲವು ಕಾಲದ ಹಿಂದೆ ಇಲ್ಲಿನ ಗಂಡೆ...ವ್ವಾಡು, ಕೋಟೆ ಕಾಮನ ಮೆರವಣಿಗೆಗಳು ಪೇಟೆಯ ದೇಶದ ವರ್ತಕರ ಕಾಮನ ಮೆರವಣಿಗೆಯ ಜೊತೆಯಲ್ಲಿ ಹೋಗಕೂಡದೆಂಬ ಮುಸಲ್ಮಾನರ ತಕರಾರಿನಿಂದ ನಿಲ್ಲಿಸಲ್ಪಟ್ಟಿತು. ಇದೇ ವಿಷಯಕ್ಕೆ ಹೋದ ವರುಷ ಹಿಂದೂಗಳಿಗೂ ಮುಸಲ್ಮಾನರಿಗೂ ಮಾತು ನಡೆದು ಇದುವರೆಗೂ ಗವರ್ನಮೆಂಟಿನಲ್ಲಿ ಚರ್ಚಿಸುತ್ತ ಬಂದರು. ಮೊನ್ನೆ ಡೆಪ್ಯುಟಿ ಕಮಿಷನರು ಬಂದಿದ್ದಾಗ್ಗೆ ಇಲ್ಲಿನ ದೇಶದ ವರ್ತಕಮಂಡಲಿಯವರು ವಿಜ್ಞಾಪಿಸಿಕೊಳ್ಳಲು, ವರ್ತಕರ ಪ್ರಾರ್ಥನೆಯಂತೆ ಕ್ರಮಪ್ರಕಾರ ಉತ್ಸವಾದಿಗಳು ನಡಿಸಬಹುದೆಂದು ಹುಕುಂ ಮಾಡಿರುವಂತೆ ಕೇಳುತ್ತೇನೆ. ಮೊಹರಂ ಉತ್ಸವ ನಡಿಯುತ್ತಿರುವಾಗ್ಗೆ ಮುಸಲ್ಮಾನರು ಮಾಮೂಲಿಗೆ ವಿರೋಧವಾಗಿ ನಡದಾಗ್ಯೂ ಹಿಂದೂಗಳು ಯಾವ ಅಭ್ಯಂತರವನ್ನೂ ಮಾಡಲಿಲ್ಲ. ಅವರ ಉತ್ಸವಾದಿಗಳು ವಿಜೃಂಭಣೆಯಿಂದ ನಡಿಯುವುದು ಸಂತೋಷವೇ. ಅದರಂತೆಯೇ ಹಿಂದೂಗಳ ಕಾಮೋತ್ಸವ ಕಾರ್ಯಗಳನ್ನು ಸರ್ಕಾರದವರೇ ನಿಂತು ನಡಿಸಿಕೊಟ್ಟು ಹಿಂದೂ ಮುಸಲ್ಮಾನರಿಗೆ ಯಾವ ವೈಷಮ್ಯಗಳೂ ಇಲ್ಲದೆ ಸೋದರಭಾವದಿಂದ ಇರತಕ್ಕ ಏರ್ಪಾಡು ಮಾಡಿದರೆ ತುಂಬಾ ಉತ್ತಮ [ಈ ಹಬ್ಬವನ್ನು ಪ್ರಜೆಗಳು ಅವಮಾನಕರವಾಗಿಯೂ ಲಜ್ಜಾಸ್ಪದವಾದ ರೀತಿಯಲ್ಲೂ ಆಚರಿಸಲಾರರೆಂದು ನಿರೀಕ್ಷಿಸುತ್ತೇವೆ —ಎಡಿ]—ಇಲ್ಲಿ ಪುರಾತನ ಕಾಲದ ನೀಲಕಂಠೇಶ್ವರಸ್ವಾಮಿ ಶಿವಾಲಯವಿದೆ. ಇದು ದೊಡ್ಡದಾಗಿದ್ದರೂ ಪ್ರಾಕಾರದ ಗೋಡೆ ಬಾಗಿಲು ವಗ್ಯೆರೆ ಬಹಳ ಶಿಥಿಲಹೊಂದಿದೆ. ಪರಿತರ ದೀಪಾರಾಧನೆಗೆ ಸರ್ಕಾರದಿಂದ ಮಾಹೆಯಾನ ೧॥ ರೂ ಮಾತ್ರ ಸಲ್ಲುತ್ತದೆ. ಮುಜರಾಯಿ ಸೆಕ್ರಿಟರಿಗಳು ದಯಮಾಡಿದ್ದಾಗ್ಗೆ ಅಮಲ್ದಾರ್ ಮೆ॥ ರಾಮಚಂದ್ರರಾಯರ ಮೂಲಕ ಇಲ್ಲಿನ ಮುಖಂಡರು ಸದರಿ ದೇವಸ್ಥಾನವನ್ನು ತೋರಿಸಿ ಇದನ್ನು ಜೀರ್ಣೋದ್ಧಾರ ಮಾಡಬೇಕೆಂದು ಕೇಳಿಕೊಳ್ಳಲು ಅರ್ಧ ಹಣ ಪ್ರಜೆಗಳು ಕೂಡಿಸಿದಲ್ಲಿ ಅರ್ಧ ಹಣ ಗವರ್ನಮೆಂಟಿನಿಂದ ಸ್ಯಾಂಕ್ಷನ್ ಮಾಡಬಹುದೆಂದು ಅಪ್ಪಣೆಯಾಗಿತ್ತು. ಮೆ॥ ಮುನ್ನಾರಪ್ಪನವರೂ ಪಂಕಜಾಚಲ ಜೋಯಿಸರೂ ಗ್ರಾಮಸ್ಥರುಗಳನ್ನೆಲ್ಲಾ ತಿರಿಗಿ ೫೦೦ ರೂ. ಚಂದಾ ಮೂಲಕ ವಸೂಲ್ಮಾಡಿ ತಾಲ್ಲೂಕ್ ಸೇವಿಂಗ್ಸ್ ಬ್ಯಾಂಕಿನಲ್ಲಿ ಹಾಕಿ, ಆ ಶಿವಾಲಯಕ್ಕೆ ೯೯೪ ರೂ. ಕಾಮಗಾರಿ ಪಟ್ಟಿ ಸಹಿತ ಗವರ್ನಮೆಂಟಿಗೆ ಅರ್ಜಿ ಬರೆದುಕೊಳ್ಳಲು ಅವರು ಅದನ್ನು ಒಪ್ಪಿ ಸರ್ಕಾರದಿಂದ ೪೯೪ ರೂಪಾಯಿ ಸ್ಯಾಂಕ್ಷನ್ ಮಾಡಿ ಆಲಯ ರಿಪೇರಿಗೆ ಹುಕುಂ ಕೊಟ್ಟ ಮೇರೆ ಸದರಿ ಕಾಮಗಾರಿಯು ಎರಡು ತಿಂಗಳಿಂದ ನಡಿಯುತ್ತಾ ಇದೆ.

ಬೆಂಗಳೂರು.—ಶ್ರೀ ರಾಮಕೃಷ್ಣ ಪರಮಹಂಸರ ಜಯಂತ್ಯೋತ್ಸವವು ಈ ಫೆಬ್ರುವರಿ ೧೭ ನೇ ತಾ ಜರಗಿತು. ಈ ದಿನ ಭಜನೆ, ಬಡವರಿಗೆ ಅನ್ನ ಹಾಕುವುದು, ಸಂಗೀತ, ಮೊದಲಾದ ಕಾರ್ಯಗಳನ್ನು ಬಹಳ ವಿಜೃಂಭಣೆಯಿಂದ ನಡೆಸಿದರು. ಇಂಥಾ ಸತ್ಕಾರ್ಯಗಳು ಉದಾರಿಗಳ ಸಹಾಯವಿಲ್ಲದೆ ನಡೆಯತಕ್ಕವುಗಳಲ್ಲವಾದ ಪ್ರಯುಕ್ತ, ಇದಕ್ಕಾಗಿ ಕೈಲಾದ ಮಟ್ಟಿಗೂ ಸರ್ವರೂ ದ್ರವ್ಯ ಸಹಾಯ ಮಾಡಬೇಕೆಂಬದಾಗಿ ಸುಮಾರು ಒಂದು ವಾರ ತತ್ಪೂರ್ವ ಪತ್ರಿಕೆಗಳು ಪ್ರಕಟಿಸಲ್ಪಟ್ಟವು. ಇಂಥಾ ಧರ್ಮಕಾರ್ಯದಲ್ಲಿ ನಿರತನಾಗಬೇಕೆಂಬ ಕುತೂಹಲದಿಂದ ಕೆ. ನಾರಾಯಣಸ್ವಾಮಿ ಎಂಬ ವಿದ್ಯಾರ್ಥಿಯೂ ಆತನ ಸಹ ಪಾಠಿಗಳೂ ಮನಃಪೂರ್ವಕವಾಗಿ ಶಕ್ತ್ಯಾನುಸಾರ ಚಂದಾ ಹಣ ಫಂಡಿಗೆ ಒಪ್ಪಿಸಿದರು. ಈ ರೀತಿ ವಿದ್ಯಾರ್ಥಿಗಳು ಧರ್ಮ ಮಾರ್ಗದಲ್ಲಿಯೂ, ಪರಾರ್ಥದಲ್ಲಿಯೂ ನಿರತರಾಗಿರುವುದು ಬಹಳ ಶ್ಲಾಘನೀಯವಾಗಿದೆ. ಇವರ ಮೇಲ್ಪಂಕ್ತಿಯನ್ನು ಇತರ ವಿದ್ಯಾರ್ಥಿ ಮಂಡಲಿಯು ಅನುಸರಿಸಿದಲ್ಲಿ ಇಹದಲ್ಲಿ ಕೀರ್ತಿಯೂ, ಪರದಲ್ಲಿ ಶಾಶ್ವತ ಸೌಖ್ಯವೂ ದೊರೆಯಲು ಸಂಶಯವಿಲ್ಲ.—ಬೆಂಗಳೂರು ಸಿಟಿಗೆ ಪೂರ್ವದಿಗ್ಭಾಗದಲ್ಲಿ ಸುಮಾರು ಎರಡು ಮೈಲು ಫಾಸಲೆ ಇರುವ ಅಕ್ಕಿತಿಮ್ಮನಹಳ್ಳಿ ಎಂಬ ಚಿಕ್ಕ ಗ್ರಾಮಕ್ಕೆ ನಾನು ೧೭ ನೇ ತಾ ಸಾಯಂಕಾಲ ನನ್ನ ಮಿತ್ರರೊಡನೆ ಹೋಗುತ್ತಿರಲು ಆ ಗ್ರಾಮದ ಬಳಿ ರಸ್ತೆಯ ಒಂದು ಪಾರ್ಶ್ವದಿಂದ ದೊಂಬಿ ಶಬ್ದವು ಕೇಳಬಂತು. ಈ ಶಬ್ದಕ್ಕೆ ಕಾರಣವೇನೆಂಬದಾಗಿ ಕೇಳಲು, ಈ ಬಳಿ ಒಬ್ಬ ಈಡಿಗನು ದೊಡ್ಡ ಕಂದದ ಅಂಗಡಿಯನ್ನಿಟ್ಟಿರುವನೆಂದು ಹೇಳಿದನು. ಅಷ್ಟರಲ್ಲೇ ಗೌರವಕ್ಕೆ ಅರ್ಹನಾದ ದೊಡ್ಡ ಮನುಷ್ಯನಂತೆ ಉಡುಪುಗಳನ್ನು ಧರಿಸಿದ್ದ ಮನುಷ್ಯನೊಬ್ಬನು ಬಹಳ ಕೋಪಾವೇಶದಿಂದ ನೇತ್ರಗಳನ್ನು ಕೆಂಪಗಾಗುವಂತೆ ಮಾಡಿಕೊಂಡು ಸ್ವೇಚ್ಛೆಯಾಗಿ ಅಸಂಬದ್ಧ ಮಾತುಗಳನ್ನಾಡುತ್ತಾ ನಮ್ಮ ಬಳಿಗೆ ಬಂದು ಬೈಯ್ಯಲಾರಂಭಿಸಿದನು. ಆಗ ಸುಮಾರು ೧೩—೧೪ ವಯಸ್ಸುಳ್ಳ ಹುಡುಗನು ಕುರಿಗಳ ಮಂದೆಯನ್ನು ಹೊಡೆದುಕೊಂಡು ಹೋಗುತ್ತಿರಲು, ನಮ್ಮ ಬಳಿ ಇದ್ದ ಹೆಂಡಕುಡುಕನು ಆ ಹುಡುಗನನ್ನು ಅಡ್ಡಕಟ್ಟಿ ಯದ್ವಾತದ್ವಾ ಬೈಯ್ಯಲಾರಂಭಿಸಲು, ಅವನು ಬಹಳ ಕೋಪಗೊಂಡು ತಾನು ಹಿಡಿದಿದ್ದ ಬಿದಿರು ಕೋಲಿನಿಂದ ನಾಲ್ಕೈದು ಏಟು ಹಾಕಿ ಕೆಡವಿದನು. ಆ ಮಹಾತ್ಮನು ನಮ್ಮ ಮೇಲೆ ತಿರುಗಿಬಿದ್ದಾನೆಂಬ ಶಂಕೆಯಿಂದ ಹೆದರಿ ಒಂದೆರಡು ಫರ್ಲಾಂಗು ದೂರ ಓಡಿಹೋದೆವು. ಈ ಸಮಾಚಾರವು ಸದರಿ ಹೆಂಡಕುಡುಕನ ಮನೆಯವರಿಗೆ ತಿಳಿದು ಅವನನ್ನು ಸ್ವಗೃಹಕ್ಕೆ ನೂಗಿಸಿಕೊಂಡು ಹೋದರು. ಈ ರೀತಿ ಸುರಾಪಾನವೆಂಬ ದುರಭ್ಯಾಸಕ್ಕೆ ಒಳಗಾದ ಮಾನವರು ಬಹಳ ಕಷ್ಟದಿಂದ ಆರ್ಜಿಸಿದ ದ್ರವ್ಯವನ್ನು ದುರುಪಯೋಗ ಮಾಡುವುದೂ ಅಲ್ಲದೆ ಮಾನಹಾನಿ ಮಾಡಿಕೊಳ್ಳುವರು. ಬೆಂಗಳೂರು ಸಿಟಿಯಲ್ಲಿ ಸ್ಥಾಪಿತವಾಗಿರುವ "ಟೆಂಪರೇನ್ಸ್ ನ್ಯೂಸ್" ಎಂಬ ವರ್ತಮಾನ ಪತ್ರಿಕೆಯು ನಾನಾವಿಧವಾದ ದೃಷ್ಟಾಂತಗಳಿಂದಲೂ, ಬುದ್ಧಿವಾದಗಳಿಂದಲೂ ಮೇಲ್ಕಂಡ ಹಾನಿಗಳಿಗೆ ಕಾರಣಭೂತವಾದ ಸುರಾಪಾನವನ್ನು ತ್ಯಜಿಸಬೇಕೆಂದು ವಾದಿಸುತ್ತಿರುವುದು. ಈ ನೀತಿಮಾರ್ಗಗಳನ್ನನುಸರಿಸಿ ಮದ್ಯಪಾನವನ್ನು ತ್ಯಜಿಸಿ ತಾವು ಕಷ್ಟಪಟ್ಟು ಸಂಪಾದಿಸಿದ ಧನವನ್ನು ಸದ್ವಿನಿಯೋಗಪಡಿಸಿದಲ್ಲಿ ಈ ಅಶಾಶ್ವತವಾದ ಪ್ರಪಂಚದಲ್ಲಿ ಸೌಖ್ಯವನ್ನು ಪಡೆಯಬಹುದು

WILLIAM & CO., BOMBAY.

ವಿಲಿಯಂ ಮತ್ತು ಕಂಪೆನಿ, ಫೋರ್ಟು, ಮುಂಬಯಿ.

ಅಮೃತಾಂಜನ

27-1

ಬಾಟ್ಲಿ ಒಂದಕ್ಕೆ ಕಿಮ್ಮತ್ತು ೮ ಆಣೆ. ವಿ. ಪಿ. ೧೨ ಆಣೆ.

ಅಮೃತಾಂಜನ—ಸುಖಾಂಜನ.
ಅಮೃತಾಂಜನ—ಸಂಜೀವನ
ಅಮೃತಾಂಜನ—ಪರಮಾಂಜನ
ಅಮೃತಾಂಜನ—ದಿವ್ಯಾಂಜನ.
ಅಮೃತಾಂಜನ—ಶೀತಭಂಜನಿ.
ಅಮೃತಾಂಜನ—ಶ್ವಾಸಭಂಜನವಿಮರ್ದಿನಿ
ಅಮೃತಾಂಜನ—ಅಪೂರ್ವದರ್ಶಿನಿ.
ಅಮೃತಾಂಜನ—ಕ್ಷಣ ಪರಿಹಾರಿನಿ
ಅಮೃತಾಂಜನ—ಸಂಧಿವಾತಕ್ಕೆ.
ಅಮೃತಾಂಜನ—ತಲೆನೋವಿಗೆ.
ಅಮೃತಾಂಜನ—ಜಬವನ್ ಮತ್ತು ಘಾಯಕ್ಕೆ.
ಅಮೃತಾಂಜನ—ಗಂಟ್ಲುನೋವಿಗೆ

ಶಿರೋವೇಧನ ವಾತ, ಎದೆನೋವು, ಗಂಟ್ಲುನೋವು, ಸಂಧಿವಾತ, ತಲೆನೋವು, ಶಿರೋಭಾರ, ಈ ಎಲ್ಲಾತರದ ರೋಗಕ್ಕೆ ಅಮೃತಾಂಜನವು ದಿವ್ಯವಾದ ಔಷಧವಾಗಿದೆ. ಇದನ್ನು ತರಿಸಿ ಮನೆಯಲ್ಲಿ ಸದಾಕಾಲ ಇಟ್ಟರೆ, ಮೇಲೆ ಹೇಳಿದ ಯಾವತರದ ರೋಗಕ್ಕೂ ಎಡೆ ಸಿಕ್ಕುವದಿಲ್ಲ. ಅಮೃತಾಂಜನದಿಂದ ಗುಣವು ಕಂಡುಬರದಿದ್ದರೆ ಹಣ ಹಿಂತಿರುಗಿ ಕೊಡಲ್ಪಡುವದು.

ಗಜಕರ್ಣದ ಮುಲಾಮು ಡಬ್ಬಿ ಒಂದಕ್ಕೆ ೬ ಆಣೆ, ವಿ. ಪಿ. ೧೨ ಆಣೆ.—ಇದನ್ನು ಹಾಗಿಸುವದರಿಂದ ಎಲ್ಲಾ ತರದ ಕಜ್ಜಿ ನಾಶವಾಗುವದು. ಮೂರು ಸಾರಿ ಹಾಗಿಸುವದರೊಳಗೆ ಗಜಕರ್ಣವು [illegible] ಒಂದು ಸಾರಿ ಪರೀಕ್ಷಿಸಿ ನೋಡಿರಿ ಕ್ರಯ ಕಮ್ಮಿ, ಗುಣ ಹೆಚ್ಚು. ಇದನ್ನು ಹಚ್ಚಿದಲ್ಲಿ ಉರಿ ಬರುವದಿಲ್ಲ, ಚರ್ಮ ಕಪ್ಪಾಗುವದಿಲ್ಲ ಇದರಿಂದ ಗುಣವು ಕಂಡುಬರದಿದ್ದರೆ ಹಣ ಪರತು ಕೊಡಲ್ಪಡುವದು

ಕೇಶವರ್ಧಿನೀ ತೈಲ—ಇದು ತಲೆಯ ಮೆದುಳನ್ನು ತಂಪುಮಾಡಿ ಆಯಾಸವನ್ನು ತೆಗೆದು ಕೂದಲು ಬೆಳೆಸುತ್ತದೆ ಇದಕ್ಕೆ ಹಲೋ ಪರಿಮಳವು ಬರುತ್ತದೆ ಮೂರು ಔನ್ಸು ಬಾಟ್ಲಿಗೆ ೧ ೦-೦

ಕಜ್ಜಿಮುಲಾಮು—ಇದು ಅತಿಶಯ ಅಗ್ಗವೂ ಗುಣದಾಯಕವೂ ಆಗಿರುತ್ತದೆ . . ೦-೩-೦

ಕಫಹಾರಿ—ಕೆಮ್ಮು, ದಮ್ಮು, ಕ್ಷಯ, ಕೊರಳಿನಲ್ಲಿ ಕಫ ಸುಂತಾದ್ದಕ್ಕೆ ಇದು ಉತ್ತಮವಾದದ್ದು, ಬಾಟ್ಲಿ ೧ಕ್ಕೆ ೧-೪-೦

ಜೀರ್ಣರಸಾಯನ—ಹೊಟ್ಟೆಯಲ್ಲಿ ಹಸಿವೆ ಆಗಲಿಕ್ಕೂ ನಾಲಿಗೆಗೆ ರುಚಿ ಬರಲಿಕ್ಕೂ ಉತ್ತಮವಾದದ್ದು . ೧-೪-೦

ಜ್ವರಹಾರಿ—ಎಲ್ಲಾ ತರದ ಜ್ವರಗಳ ಮೇಲೆ ಈ ಔಷಧವು ಚಲೋದಾದದ್ದು . . . ೦-೧೨-೦

ಸುಂದರೀ ತೈಲ—ಈ ತೈಲವನ್ನು ನಿರಂತರವಾಗಿ ಮೋರೆಯ ಮೇಲೆ ಹಾಗಿಸುವದರಿಂದ ಮೋರೆಯ ಮೇಲೆ ಇರುವ ಘಾಯದ ಕಲೆಗಳನ್ನೂ ಕಪ್ಪಾದ ಕಳಂಕಗಳನ್ನೂ ತೆಗೆದು ಚರ್ಮವನ್ನು ಮೃದುವಾಗಿ ಚಲುವಿಕೆಯನ್ನು ಕೊಡುತ್ತದೆ ಹೆಂಗಸರಿಗೂ ಗಂಡಸರಿಗೂ ಉತ್ತಮವಾದದ್ದು ೦-೮-೦

ದಂತಮಂಜನ—ಹಲ್ಲುಸ್ವಚ್ಛವಾಗುತ್ತೆ, ಘಟ್ಟಿಯಾಗುತ್ತೆ, ವಸಡಿನಿಂದಾಗುವ ರಕ್ತವನ್ನು ನಿಲ್ಲಿಸುತ್ತದೆ ಕ್ರಯ ಬಹಳ ಕಮ್ಮಿ ೦-೨-೦

ನೇತ್ರಾಂಜನ ೪ ಆಣೆ ವಜ್ರಗುಟಿಕ ೧ ರೂಪಾಯಿ. ಕುಮಾರಿ ಗುಟಿಕ ೨ ರೂಪಾಯಿ ದಂತಮಾರಕ ೮ ಆಣೆ ಕಫನಾಶಕ ಚೂರ್ಣ ೮ ಆಣೆ. ಚೇಳು ಕಡಿತದ ಮದ್ದು ೮ ಆಣೆ ರೋಮಹಾರಿ ೮ ಆಣೆ ಕಸ್ತೂರಿಮಾತ್ರೆ ೧೦ ಆಣೆ

ಎಲ್ಲಾ ತರದ ಔಷಧಗಳು ಇರುವದರಿಂದ ಕೆಟಲಾಗು ಬೇಕಾದವರು ಬರದು ತರಿಸಿಕೊಳ್ಳಬಹುದು

ವಿಲಿಯಂ ಮತ್ತು ಕಂಪನಿ, ಫೋರ್ಟು, ಮುಂಬಯಿ.

ಲಾ ಗೆಜೆಟ್.

28-1

ಈ ಮಾಸಿಕ ಪುಸ್ತಕದಲ್ಲಿ ಸಿವಿಲ್ ಕ್ರಿಮಿನಲ್ ರೆವಿನ್ಯು, ವಿಷಯಗಳನ್ನು ವಿವರಿಸುವದಲ್ಲದೆ ಹೈ, ಕೋರ್ಟು ಅಪೀಲ್‌ಗಳನ್ನು ತಿಳಿಯಪಡಿಸುವದು ಈ ಗೆಜೆಟ್ ಸರ್ವರಿಗೂ ಅವಶ್ಯಕವಾದದ್ದು "ಕೂಡ್ಲೆ ಚಂದಾ ಕಳುಹಿಸಿ" ಇದರ ಚಂದಾ ವರ್ಷ ಒಂದಕ್ಕೆ ಟಪ್ಪಾಲ್ ಹಾಸಲ್ ಸೇರಿ ಒಂದೇ ರೂಪಾಯಿ ವಿಳಾಸ —

ಬಿ ನರಸಿಂಗರಾವ್, ಎಡಿಟರ್, ಲಾ, ಗಜೆಟ್ (ಬೆಂಗಳೂರು.)

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

11 5

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೀಳಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇವಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಸೀದಾ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ.

ಸಾದ, ಕೆಂಪು, ಕಪ್ಪು, ಬೆರಕೆ, ಕಾಫಿ ಟೋಪಿಗಳು ೧ ರೂ ೮ ಆ.; ೧ ರೂ ೬ ಆ., ೧ ರೂ. ೪ ಆ.

ದೇಶ್ಮಿ ಚುಕ್ಕೆಯುಳ್ಳ ಟೋಪಿಗಳು ೧ ರೂ. ೮ ಆ; ೨ ರೂ.

ದಾರದ ಟೋಪಿಗಳು ೧ ರೂ. ೧೨ ಆ, ೧ ರೂ. ೮ ಆ; ೧ ರೂ. ೬ ಆ.

ಉಣ್ಣೆಯ ಟೋಪಿಗಳು ೧ ರೂ. ೮ ಆ.; ೧ ರೂ. ೬ ಆ.

ಕೂಸುಗಳ ಟೋಪಿ, ಸೂರ್ಯ ಮೋಚೋದು, ಅರ್ಧ ಮೋಚೋದು ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ

ಮೆಕ್ಮಿಲನ ಕನ್ನಡ ಫಸ್ಟ್ ರೀಡರ್ ನೋಟ್ಸು.

21 2

ಬಹಳ ಸ್ವಲ್ಪ ಪ್ರತಿ ಉಳಿದಿರುವದರಿಂದ ಪ್ರತಿ ೧ಕ್ಕೆ ಎರಡಾಣೆ ಕ್ರಯಕ್ಕೆ ಇಳಿಸಿರುತ್ತದೆ ಗ್ರಂಥಕರ್ತರು ಮತ್ತು ಅಡ್ರೆಸ್ಸು—ಕೆ ನಾರಾಯಣ ಶಾಸ್ತ್ರಿ, ಕನ್ನಡ ಪಂಡಿತ, ಮಹಾರಾಣಿ ಕಾಲೇಜು,

ಮೈಸೂರು.

ಪಾಳ್ಯದ ವೆಂಕಟಾಚಲ ಪಂಡಿತ. ಶ್ರೀಸೀತಾರಾಮ ವೈದ್ಯಶಾಲಾ, ಕೊಳ್ಳೇಗಾಲ, ಇವರ ಸಿದ್ಧೌಷಧಗಳು.

26 2

೧. ಶೋಕಾಮಯಹರ ಕಸ್ತೂರಿ ಮಾತ್ರೆ.—ಈ ಮಾತ್ರೆಗಳನ್ನು ಹವಳದ ಭಸ್ಮ ಚಿನ್ನದ ರೇಖುಗಳ ಮಿಶ್ರದಿಂದ ತಯಾರಿಸಿದೆ ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಪ್ಲೇಗು ಜ್ವರ, ಛಳೀಜ್ವರ, ಜ್ವರ, ಅಗ್ನಿನಷ್ಟ, ನಿಶ್ಶಕ್ತಿ, ಕೆಮ್ಮು, ಹೊಟ್ಟೆ ಕಿಬ್ಬೊಟ್ಟೆ, ಎದೆಗಳ ನೋವು ಇವಕ್ಕೆ ದಾರಿಗೊಡದು; ಮಕ್ಕಳ ಎಲ್ಲಾ ರೋಗಗಳಿಗೂ ಗುಣಕಾರಿ ನೀರು ಮತ್ತು ಹವಾ ಬದಲಾವಣೆಗೆ ಒಳ್ಳೇದು ೨೦ ಮಾತ್ರೆಯುಳ್ಳ ಕುಪ್ಪಿಗೆ ೪ ಆಣೆ ಪೋಸ್ಟು ಮೂಲಕ ೫ ಸೀಸೆಗೆ ಒಂದು ಸೀಸೆ ಹೆಚ್ಚು ೧ ರಿಂದ ೬ ರ ವರೆಗೆ ಟ ಖರ್ಚು ೪ ಆಣೆ



೩. ಎಸ್. ಸಿ. ಇ. ಸರ್ವಾಂಗಬಲಕಾರಿ.—ಕಾಫಿ, ಟೀ, ಕೋಕೋಗಳಿಗೆ ಬದಲಾಗಿ ಉಪಯೋಗಿಸುವ ಶುದ್ಧಿ ಕಾಫಿ, ಟೀಗಳಲ್ಲಿರುವ ದುರ್ಗುಣಗಳು ಇದರಲ್ಲಿಲ್ಲ. ಎದೆ, ಅಜೀರ್ಣ, ನರಗಳು, ಸಂದುಗಳು, ಮೆದಳು, ಶಿರಸುಮಾಯ, ಇವುಗಳ ಸಂಬಂಧವಾದ ಎಲ್ಲಾ ರೋಗಗಳನ್ನೂ ಚನ್ನಾಗಿ ಹೋಗಲಾಡಿಸಿ ಧಾತುಶಕ್ತಿಯನ್ನು ಕ್ರಮವಾಗಿ ವೃದ್ಧಿಪಡಿಸುವದು ೨೦ ಲೋಟ ಕಾಫಿಯಾಗುವ ಡಬ್ಬಿ ೪ ಆಣೆ, ೪೦ ಲೋಟ ಆಗುವದು ೭ ಆಣೆ

೨. ಪ್ಲೇಗಿಗೆ ಸಿದ್ಧೌಷಧ.—ಪ್ಲೇಗಿಗೆ ಔಷಧಿಯೇ ಇಲ್ಲವೆಂದು ಹೇಳದೆ ಈ ನಮ್ಮ ಔಷಧವನ್ನು ತರಿಸಿ ಉಪಯೋಗಿಸಿ ನೋಡಿ ಯೋಗ್ಯತಾಪತ್ರಗಳನ್ನು ವಿವರಿಸಲು ಸ್ಥಳ ಸಾಲದು ಗಡ್ಡೆ ಮೊದಲಾದ ಬಾಧೆ ಇಲ್ಲದಂತೆ ಉಜ್ಜುವ ಔಷಧಿ ಸೇರಿ ಕ್ರಯ ೧ ರೂಪಾಯಿ.

೪. ಕಾಲರಾ ಔಷಧ.—ಮಾತ್ರ ಕಟ್ಟಿ ಹೊಟ್ಟೆಯುಬ್ಬರಿಸಿ ಅಪಾಯವಾಗದಂತೆ ಖಂಡಿತ ಗುಣವಾಗುತ್ತದೆ. ಕ್ರಯ ೧೨ ಆಣೆ.

ವಿಳಾಸ:—ಎಸ್. ಎಸ್. ಆರ್. ವೈದ್ಯಶಾಲಾ,

ಲಕ್ಷ್ಮೀವಿಲಾಸ ರೋಡ್, ಮೈಸೂರು.

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

೮—೨—೧೯೦೭ ರಿಂದ ೧೫—೨—೧೯೦೭ ರ ವರೆಗೆ

ಸ್ಥಳ.	ಪ್ಲೇಗ್ ತಗಲಿದ್ದು.	ಪ್ಲೇಗ್ ಸತ್ತದ್ದು	ಕೋ[illegible] ಈ ವಾರದ ಸಂಖ್ಯೆ	
ಬೆಂಗಳೂರು ಪಟ್ಟಣ	34	29	14	18
ಮೈಸೂರು ,,	51	48	0	6
ಬೆಂಗಳೂರು ಡಿಸ್ಟ್ರಿಕ್ಟು	60	35	7	3
ಮೈಸೂರು ,,	7	3	1	1
ಕೋಲಾರ್ ,,	3	3	2	1
ಕೋಲಾರ್ ಚಿನ್ನದ ಗಣಿಗಳು	5	3	14	13
ತುಮಕೂರು ಡಿಸ್ಟ್ರಿಕ್ಟು	0	0	2	1
ಹಾಸನ ,,	15	10	0	0
ಚಿತ್ರದುರ್ಗ ,,	0	0	2	2
ಕಡೂರ್ ,,	21	14	0	0
ಶಿವಮೊಗ್ಗ ,,	0	0	40	11
ಜುಮ್ಲಾ	196	138	62	40

ಶಾಲಿವಾಹನ ಶಕ ವರುಷಂಗಳು ೧೮೨೯ ನೇ ಪರಾಭವ ಸಂವತ್ಸರದ ಫಾಲ್ಗುಣ ಶುದ್ಧ ಪೌರ್ಣಿಮೆ ಗುರುವಾರದಿಂದ ಫಾಲ್ಗುಣ ಬಹುಳ ಸಪ್ತಮಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ.

೧೯೦೭ ನೇ ಇಸವಿ ಫೆಬ್ರವರಿ, ಮತ್ತು ಮಾರ್ಚ.

ತಾ	ವಾರ.	ತಿಥಿ.	ಘಳಿಗೆ	ನಕ್ಷತ್ರ	ಘಳಿಗೆ	ತಾರೀಖು ವಾರ
28	ಗುರು T	ಪೌರ್ಣಮಿ	11-15	ಪುಬ್ಬ	60 0	17
1	ಶುಕ್ರ *	ಪಾಡ್ಯಮಿ	11 50	ಪುಬ್ಬ	0.56	18
2	ಶನಿವಾ ,,	ಬಿದಿಗೆ	11-12	ಉತ್ತ	1-18	19
3	ರವಿವಾ ¶	ತದಿಗೆ	8 58	ಹಸ್ತ	1 20	20
4	ಚಂದ್ರ .	ಚೌತಿ	5-36	ಸ್ವಾ	57-2	21
5	ಕುಜ ‡	ಪಂಚಮಿ	1 28	ಅನುರಾ	51 58	22
6	ಬುಧ	ಸಪ್ತಮಿ	51 2	ಸ್ವಾ	50 32	23

T ಹೋಳಿಕೋತ್ಸವ, ಪ್ರಸನ್ನ ಸಂಜುಂಡೇಶ್ವರರಥ. * ಘಟ್ಟದ ಶ್ರೀನಿವಾಸಸ್ವಾಮಿರಥ. ,, ಉತ್ಪಾತಯೋಗ ¶ ಸಂಕಷ್ಟ ಚತುರ್ಥಿ ಮಹಾವ್ಯತೀಪಾತ ‡ ದಗ್ಧಯೋಗ, ಬೆಟ್ಟದಲ್ಲಿ [illegible] ಸಾಬಲೇಶ್ವರರಥ

ಪೇಟೇ ಧಾರಣೆ.

ದಿನಸಿ		ಮೈಸೂರು	ಬೆಂಗಳೂರು
ಹಳೇ ಅಕ್ಕಿ ಪಲ್ಲ ೧ಕ್ಕೆ	ರೂ	೧೩-೯-೮	೧೩ ೦-
ಕೆಂಬೂತಿ ಅಕ್ಕಿ ಅವಲ್	..	೧೨-೪-೦	೧೪-೦-
,, ೯ ಮಯಂ	.	೧೨-೦-೦	೧೩ ೮-
ಜಾಪಾಳ ಅಕ್ಕಿ	..	೧೩-೬-೦	೧೫-೦-
ಸಣ್ಣಕ್ಕಿ ಅವಲ್	..	೧೫-೦-೦	೧೪-೦-
,, ಮಯಂ	.	೧೪-೦-೦	೧೩-೮-
ತೊಗರೀ ಬೇಳೆ ಪಲ್ಲ ೧ಕ್ಕೆ		೧೧-೦-೦	೧೨ ೮-
,, ಮಯಂ	..	೧೦-೧೨-೦	೧೨-೦-
ಸ್ವರ್ಣ ರಾಗಿ ಪಲ್ಲ ೧ಕ್ಕೆ	..	೬-೪-೦	೬ ೪-
ಹಾರಾಗಿ	..	೬-೦-೦	೬-೦-
ಜೋಳ	..	೫-೮-೦	೮-೦-
ಹಲಸಂದೆ ಪಲ್ಲ ೧ಕ್ಕೆ	..	೧೧-೧೨-೦	೧೨-೦-
ಬಿಳೀ ಅವರೆ	.	೯-೪-೦	೭-೮-
ಹೆಸರು	..	೧೧-೮-೦	೧೨-೪-
ಉದ್ದು	..	೧೨-೦-೦	೧೧-೦-
ಕಡಲೆ	.	೧೧-೮-೦	೧೦-೧೨-
ಎಳ್ಳು ಸೆ ೧೨೭ ಕ್ಕೆ	.	೧೭-೦-೦	೨೨-೦-
ಹುರುಳಿ	..	೭-೬-೦	೭-೦-
ಹರಳು ೧೨೭ ಸೇರಿಗೆ		೧೯-೦-೦	೧೫-೦-
ಸೀಗೇಕಾಯಿ ಮಣ ೧ಕ್ಕೆ	..	೨-೨-೦	೨-೪-
ಮೆಣಸಿನಕಾಯಿ	..	೩-೪-೦	೩-೦-
,, ಮಯಂ	..	೩-೦-೦	೨-೧೨-
ಬೆಲ್ಲ ದೊಡ್ಡ ಅಚ್ಚು	..	೩-೪-೦	ಮ ೧-೦-
ಒಳ್ಳೆಣ್ಣೆ ಮಣ ೧ಕ್ಕೆ	..	೪-೮-೦	೫-೦-
ಹರಳೆಣ್ಣೆ ,,	..	೬-೧೨-೦	೫-೨-
ಕೊತ್ತುಂಬರಿ ಪಲ್ಲ ೧ಕ್ಕೆ	..	೯-೦-೦	೭-೪-
ಉಪ್ಪು ,,	..	೫-೧೧-೦	೬-೧೨-
ಹುಣಸೇ ಹಣ್ಣು	..	೦-೧೨-೦	೦-೧೦-
,, ಹಳೇದು	..	೦-೮-೦	೦-೯-
ತುಪ್ಪ ಮಣ ೧ಕ್ಕೆ	..	೧೬-೦-೦	೧೩-೮-
ಸೀಮೆಯೆಣ್ಣೆ ಪೆಟ್ಟಿಗೆ ೧ಕ್ಕೆ	..	೫-೪-೦	[illegible]
ತೆಂಗಿನಕಾಯಿ ೧೦೦ ಕ್ಕೆ	..	೬-೮-೦	[illegible]
ಆಳಲೇಕಾಯಿ ಮಣ ೧ಕ್ಕೆ	..	೧ ೦-೦	[illegible]
ಅಂಟುವಾಳದ ಕಾಯಿ ಮಣ ೧ಕ್ಕೆ	.	೦-೧೨-೦	[illegible]
ಚಿನ್ನ (ಪೌನ್) ಕೆಂಪು	..	೧೫-೪-೦	೧೫-[illegible]
,, ,, ಹಸಿರು	..	೧೫-೧೦-೦	೧೫-[illegible]
,, ,, ಗಟ್ಟಿ ತೊಲ ೧ಕ್ಕೆ	..	೨೩-೧೨-೦	೨೪-[illegible]
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	..	೮೫-೦-೦	[illegible]

Printed and Published by the Rev. E. W. THOMPSON, M. A., Proprietor and Manager, Wesleyan Mission Press, Mysore. 28/2/1907.

REGISTERED
M. 20

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೦ ಮೈಸೂರು—ಸನ್ ೧೯೦೭ ನೇ ಇಸವಿ ಮಾರ್ಚಿ ತಾರೀಖು ೭ ನೇ ಗುರುವಾರ. ಸಂಚಿಕೆ ೪೦



ದಿ ಸಿಟಿ ಸಿಲ್ವರ್ ವಾಚ್.

13 6

(ಚಿತ್ರದಲ್ಲಿ ಕಂಡದ್ದು.)

ಸ್ಟೆಂವ್ ಕೀಲಿ, ಮುಕ್ಕಾಲು ಪ್ಲೇಟ್, ಜೂಯಲ್ ಚಲನೆ, ಹಾಲ್‌ಮಾರ್ಕ್ ಉಳ್ಳ ಬೆಳ್ಳಿ ಆಲ್ಬರ್ಟ್ ಸರಪಣಿ ಮತ್ತು ಸೀಲ್ ಸಹಿತ, ಸಂಪೂರ್ಣ ದಮಾಸ್ ಪೆಟ್ಟಿಗೆಯಲ್ಲಿರುವುದು. ಕ್ರಯ (ಹಿಂದುಸ್ಥಾನದ ಅಂಚೆ ವೆಚ್ಚ ಸೇರಿ) ರೂ ೧೩-೧೪-೦.

ಮೇಲಾದ ಬೆಳ್ಳಿ ಗಡಿಯಾರಗಳು, ಮುಚ್ಚಳವಿಲ್ಲದ್ದು. ಕೀಲಿ ತಿರಿಗಿಸುವುದಕ್ಕೆ, ಕೀಲಿ ಇಲ್ಲದ್ದು ಕ್ರಯ ರೂ. ೯-೩, ರೂ. ೧೧-೧೦, ೧೨-೮, ರೂ. ೨೭-೮.

ಬಲವಾದ ಬೆಳ್ಳಿ ಅರ್ಧ ಹಂಟರ್ ಗಡಿಯಾರಗಳು —ಕ್ರಯ ೧೫, ರೂ ೧೯-೧೪, ರೂ ೨೩-೪, ರೂ ೨೮-೧೪

ಬಲವಾದ ಪೂರಾ ಹಂಟರ್ ಗಡಿಯಾರಗಳು.—ರೂ ೧೩-೮, ರೂ ೧೫, ರೂ ೧೭-೮, ೧೯-೨, ರೂ ೨೩-೧೦.

ಪಾರ್ಟಿಕುಲರ್ ನಿಕ್ಕಲ್ ಗಡಿಯಾರಗಳು, ಸ್ವಲ್ಪ ಸುತ್ತುಳ್ಳವು, ಕೀಲಿ ಇಲ್ಲ, ಲೀವರ್ ಚಲನೆ, ಸುಂದರವಾದ ಬಿಳಿ ಸಮಾನ ಮುಚ್ಚಳ, ನಂಬಿಕೆಯಾದ ಗಂಟೆ ತೋರಿಸುವದು, ಕ್ರಯ ರೂ ೪-೮, ರೂ ೫-೪, ರೂ ೬

ಬಹಳ ತೆಳುವಾದ ಚಪ್ಪಟೆಯಾಗಿರುವ ಗಡಿಯಾರಗಳು — ೧) ಕಪ್ಪು ಉಕ್ಕಿನ ಮುಚ್ಚಳ ಉಳ್ಳವು ಕ್ರಯ ರೂ ೧೦-೮,) ರೂ ೧೬-೧೪ (೨) ಬೆಳ್ಳಿಯ ಮುಚ್ಚಳ ಉಳ್ಳವು ಕ್ರಯ ರೂ ೧೪-೧೧, ರೂ ೨೧,

ಬೆಳ್ಳಿ ಆಲ್ಬರ್ಟ್ ಸರಪಣಿಗಳು ಕ್ರಯ ರೂ ೩-೧೫, ರೂ ೪-೮, ರೂ ೫-೩, ರೂ ೬-೧, ರೂ ೮-೧೦

ಚಿನ್ನ ತುಂಬಿದ ಸರಪಣಿಗಳು ಕ್ರಯ ರೂ ೬-೩, ರೂ ೮-೧, ರೂ ೯-೩

ಈ ಕ್ರಯದಲ್ಲಿ ಹಿಂದುಸ್ಥಾನದ ಅಂಚೆ ಹಾಸಲೂ ಸೇರಿದೆ.

ಎಂಟು ದಿವಸಕ್ಕೊವ್ಮೆ ಕೀಲಿ ತಿರಿಗಿಸುವಂಥಾ ವಾಚುಗಳೂ, ಇನ್ನೂ ಎಲ್ಲಾ ತರದ ತಯಾರಿ ಮತ್ತು ಚಿತ್ರಕೆಲಸ ಮಾಡಿದ ವಾಚುಗಳೂ, ವಿಲಾಯತಿಯಲ್ಲಿ ತಯಾರಾಗಲ್ಪಡುವಂಥಾ ಸಕಲ ವಿಧವಾದ ಸಾಮಾನುಗಳೂ, ಜವಾಹಿರಿ ನಗಗಳೂ ಕೇಳಿದವರಿಗೆಲ್ಲಾ ಕಳುಹಿಸಿಕೊಡುತ್ತೇವೆ

ನಗದು ಹಣ ಕಳ್ಸಿ ಇಂಗ್ಲಿಷಿನಲ್ಲೇ ನಮಗೆ ಬರೆಯಬೇಕು.

ವಿಳಾಸ —Messis Bude and Eastland, 29 to 35, City Road, London, E C

ಕೊಡಗು ದೇಶದ ಶ್ರೇಷ್ಠವಾದ ಉತ್ಕೃಷ್ಟ ಕಾಫಿಯು.

ಹುರಿಯದೆ ಇರುವದು ಅಥವಾ ಆಗತಾನೆ ಹುರಿದದು ಕದವಮಾಡಿದ ಸ್ಥಳದಿಂದಲೆ ನೆಟ್ಟಗೆ ರವಾನಿಸಲ್ಪಡುವದು.

18-5

ವ್ಯಾಪಾರದ C E C ಹೆಗ್ಗುರ್ತು

ಕಾಡುಕೋಣದ ತಲೆಯ ಮುದ್ರೆ ಇದೆ.

ಸಂಪೂರ್ಣವಾಗಿ ಯಂತ್ರದಿಂದಲೆ ಸಿದ್ಧಪಡಿಸಿದ್ದು ಹೆಗ್ಗುರ್ತುಳ್ಳ ವಿಲಾಸದ ಚೀಟ ಸುತ್ತಿಲ್ಲದಿರುವವು ಸ್ವಚ್ಛವಾದವುಗಳಲ್ಲ. ಆವು ನಮ್ಮಲ್ಲಿ ಏಜಂಟರುಗಳು ಬೇಕು. ಇಂಥವರಿಗೆ ಅಲಾಯದ ದರ ಬರೆಯುವವರು ದಯಾಪಟ್ಟು ಈ ಪತ್ರಿಕೆಯ ಹೆಸರನ್ನು ಸೂಚಿಸಿ

ವಿಳಾಸ —ಮ್ಯಾನೇಜರ್, ಮ್ಯಾಥಿಸನ್ಸ್ ಕಾಫಿ ವರ್ಕ್ಸ್, ಹುಣಸೂರು.

ಜ್ವರಹರಿ.

15-5

ಇದು ಸಾಧಾರಣ ಜ್ವರ, ಹಳೇಜ್ವರ, ಮೊರೇಜ್ವರ, ಪಿತ್ತಜ್ವರ ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನು ಬಹು ಬೇಗನೆ ನಾಶಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್ ಟಿ ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಡ್ರಾಸಿನ ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨೦ ಡ್ರಾಸಿನ ಸೀಸೆಯನ್ನು ವಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ:—ಸೀಸೆ ೦ ಕ್ಕೆ ೮ ಆಣೆ, ೧ ರೂ, ೧—೮ ರೂ.; ರೂ. ೨—೦೨ ಆ., ೧೦ ರೂ.; ಹನ್ನೆರಡು ಸೀಸೆ ತರಿಸಿಕೊಂಡರೆ, ಪೋಸ್ಟೇಜು ಮಾಫಿ ಬಿಡಲಾಗುವದು.

****

ಓಮ್‌ಕರ್ಪೂರ.

Omum Carpoor

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು ಇದು ಹೆಂಗಸರು ತಿಂಗಳ ಬಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ಹೊರಕಾವದು

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆಪ್ರಿಯ ಓಮುಂ ಕರ್ಪೂರವನ್ನು ನಾನೂ ನನ್ನ ಕಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ಮಾಸಗಳಿಂದಲೂ ಕಾಲರಾ, ಅಜೀರ್ಣಭೇದಿ, ಅಜೀರ್ಣ ರೋಗಿಷ್ಠರಿಗೆ ಕೊಡುತ್ತೇನೆ ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧಗೆಂತ ಬರೆದಿದ್ದಾರೆ.

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ:—

ಸಪ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ, ಸೆಕೆಂಡ್ ಬೀಚ್ ಲೈನ್, ಮದ್ರಾಸ್

ಮಕ್ಕಳ ಹಿತಕಾರಿ ಎಂದು SCOTT'S EMULSION

57-51

(ಸ್ಕಾಟ್ಸ್ ಇಮಲ್‌ಷನ್)

ಎಲ್ಲಾ ಸೇವನಾ ಔಷಧಕ್ಕೆ ಕೋಟ್ಯಾಂತರ ತಂದೆತಾಯಿಗಳು ಇಷ್ಟಪಡಾರೆ ಯಾಕೆಂದರೆ ಇದು ಮಕ್ಕಳ ಆರೋಗ್ಯವನ್ನು ವೃದ್ಧಿ ದೇಹವನ್ನು ಪುಷ್ಟಿಯಾಗಿ ಬೆಳೆಸಿರುತ್ತದೆ

ಇದು ತುಂಬಾ ರುಚಿಯಾಗಿರುವುದರಿಂದ ಮಕ್ಕಳು ಬಹು ಸಂತೋಷವಾಗಿ ಸೇವನೆಮಾಡುತ್ತಾರೆ.

ಇದು ಕಾಯಿಲೆ ಮಕ್ಕಳನ್ನು ಆರೋಗ್ಯಮಾಡುವುದು, ಅಶಕ್ತ ಮಕ್ಕಳನ್ನು ಬಲಿಷ್ಠರನ್ನಾಗಿ ಮಾಡುವುದು

ಕೈಸೋಕದೆ ತಯಾರಾದದ್ದು.

ಎಲ್ಲಾ ಔಷಧ ವ್ಯಾಪಾರಸ್ಥರಲ್ಲೂ ಬಿಕರಿಯಾಗುತ್ತೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್, ಔಷಧಗಳ ಕಾರ್ಖಾನೆ, ಲಂಡನ್, ಇಂಗ್ಲೆಂಡ್,

ಮನುಷ್ಯ ಇರುವ [illegible] ನ್ನೇ ಕೊಂಡುಕೊಳ್ಳಿ.

ಬೆಲಗೆ ಬೆಳ್ಳಿ—ಗುಣಕ್ಕೆ ಭಂಗಾರ.

86 41

ಇಂತಾ ಕಾಗದಗಳು ನಮ್ಮಲ್ಲಿಗೆ ಅನೇಕ ಬಂದಿವೆ.

ಮೆ॥ ವಾಮನಿಕಿಪಿ, ಜವಳಿ ವರ್ತಕ, ಮಹೇಶ್ವರ, ಇವರು ಬರೆಯುವುದು—" ಕ್ಲೆಮೆಂಟ್‌ಯವರ ಮ್ಯಾಜಿಕ್ ಬಾಂ ಬಹಳ ತೃಪ್ತಿಕರವಾದದ್ದೆಂದು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ ಅದು ತುಂಬಾ ಗುಣಕೊಡುವಂಥಾದ್ದು ದಯವಿಟ್ಟು ಇನ್ನೂ ಮೂರು ಸೀಸೆಯನ್ನು ವಿ ಪಿ ಮೇಲೆ ಕಳುಹಿಸಿಕೊಡಿ " ಮೆ॥ ಜೆ ಡಬ್ಲಿಯು ಸಾಮ್ಯುಯಲ್, ಪೋಸ್ಟ್ ಮಾಸ್ಟರ್, ತ್ರಿವನ್ದ್ರಂ, ಇವರು ಬರೆಯುವುದು " ನಿಜವಾಗಿಯೂ ಇದು ಎಲ್ಲಾ ತರದ ನೋವುಗಳಿಗೂ ಅದ್ಭುತವಾದ ಔಷಧವೆನ್ನುವುದಕ್ಕೆ ಸಂಶಯವಿಲ್ಲ " ಮಿಸೆಸ್ ಇ ಕ್ಯಾಂಪ್‌ಸಿಂಗ್, ಪೈಕಲ್ಲಾ, ಬೆಂಗಾಲ, ಇವರು ಬರೆಯುವದು—" ನಿಮ್ಮ ಮ್ಯಾಜಿಕ್ ಬಾಂ ಔಷಧವು ನನ್ನ ಕಾಲಿನ ಕೆಟ್ಟ ನೋವನ್ನು ಸಂಪೂರ್ಣವಾಗಿ ವಾಸಿಮಾಡಿದೆ " ಪಿ ಸೆಸ್ ಇ. ಮೇಸನ್, ರಂಗೂನ್, ಇವರು ಬರೆಯುವುದು—" ನಾನು ಯಾವಾಗಲೂ ನಿಮ್ಮ ಕ್ಲೇಮೆಂಟ್ಸ್ ಮ್ಯಾಜಿಕ್ ಬಾಮನ್ನು ಗಂಟ್ಲು, ಎದೆಯ ನೋವುಗಳಿಗೆ ಉಪಯೋಗಿಸುತ್ತೇನೆ ಆದರಿಂದ ನನಗೆ ಪ್ರತಿ ಸಲವೂ ಚೆನ್ನಾಗಿ ವಾಸಿಯಾಗಿದೆ ಈ ಔಷಧದಿಂದ ಪಾರ್ಶ್ವನೋವು, ಕೀಲುಗಳ ಬಾಧೆ, ಕಿಬ್ಬೊಟ್ಟೆ ನೋವು, ಬೆನ್ನೆಳೆಯುವುದು, ತಲೆನೋವು, ಕೆಮ್ಮು, ಳಿಬ್ಬುಗಳು, ಕೀಲುಗಳು ಕತ್ತರಿಸುವುದು, ಕೊರಳು ಊತ, ಕೈ ಕಾಲು ಒಡೆತ ಇವೆಲ್ಲಾ ಗುಣವಾಗುತ್ತವೆ ಇದನ್ನು ಹಾಕಿ ಚೆನ್ನಾಗಿ ತಿಕ್ಕಿದರೆ ಬಾಧೆ ಪರಿಹಾರವಾಗುವುದು ಕ್ರಯ —೧ ಬಾಟ್ಲಿಗೆ ೧೨ ಆಣೆ, ಪೋಸ್ಟೇಜ್ ೪ ಆಣೆ ೩ ಬಾಟ್ಲಿಗೆ ಅಂಚೆವೆಚ್ಚ ಸೇರಿ ರೂ ೨—೪ ಆಣೆ

ನಮ್ಮ ವಿಳಾಸ —ಎಫ್. ಡಬ್ಲಿಯು ಆರನ್, ಸಿಮೆಟ್ರಿ ರೋಡ್, ವೇಪೇರಿ, ಮದರಾಸ್

ಬಿಳಗಿ ರಾಜವೈದ್ಯರ ಒಳ್ಳೆ ಖಾತ್ರಿಯಾದ ಔಷಧಗಳು.

6-9

ಸುಖದಾಯಿನೀ ಗುಳಿಗೆ—ಇದರಿಂದ ಕೆಮ್ಮಿನ ಬಾಧೆ ಬಹು ಬೇಗನೆ ಗುಣಹೊಂದುವದು ೧೦ ವರುಷದ ಮೇಲಿನ ಯಾವ ಪ್ರಾಯದವರಾದರೂ ಸೇವಿಸಬಹುದು ಕ್ರಯ ೨೪ ಗುಳಿಗೆಗೆ ೧ ರೂಪಾಯಿ. ವಿ ಪಿ ಚಾರ್ಜು ಆಣೆ ೪

ಚಿಕ್ಕಹುಡುಗರ ಬಾಲಗ್ರಹದ ಔಷಧ—ಜ್ವರಯುಕ್ತ ಅಥವಾ ಜ್ವರವಿಲ್ಲದೆ ಥಟ್ಟನೆ ಹುಟ್ಟುವ ಈ ಉಪಟತಿಗೆ ಇದರಿಂದ ಬೇಗನೆ ಗುಣಹುಟ್ಟುವದು ಕ್ರಯ ೧ ಕುಪ್ಪಿಗೆ ೮ ಆಣೆ ವಿ ಪಿ ೪ ಆಣೆ

ಗಜಕರ್ಣದ ಮುಲಾಮು—೨ ರೂ ೩ ಆರ್ಚಿ ಇದನ್ನು ಹಚ್ಚುವದರಿಂದ ಎಂಥ ಕಠಿಣವಾದ ಗಜಕರ್ಣ (ಹುಳಕಡ್ಡಿ) ಇದ್ದರೂ ಗುಣಹೊಂದುವದು. ಕ್ರಯ ೧ ಡಬ್ಬಿಗೆ ೮ ಆಣೆ ವಿ ಪಿ ಚಾರ್ಜು ಆಣೆ ೪

ಶತಮೂಲಿಕಾ ತೈಲವು—ಹಳೀಬೊಕ್ಕೆ ಹಸೀಕಜ್ಜಿ ತುರಿಗಜ್ಜಿ ಮಣಿಗಜ್ಜಿ ಮುಂತಾದ ಆಬಾಲವೃದ್ಧರ ಚರ್ಮವ್ಯಾಧಿಯೂ ಗುಣಹೊಂದುವದು ಕ್ರಯ ೧ ಬೇಸಿನ ಕುಪ್ಪಿಗೆ ೧೦ ಆಣೆ, ೨ ಬೇಸಿನ ಕುಪ್ಪಿಗೆ ೧ ರೂಪಾಯಿ ವಿ ಪಿ ೫ ಆಣೆ.

ವಾಯುಹಾರಕ ತೈಲವು—ಇದನ್ನು ಲೇಪಿಸಿದ ೫ ನಿಮಿಷದೊಳಗೆ ಸಂಧಿವಾತ, ಕಟಿವಾತ, ವ ಇತರ ವಾಯುಗಳ ನೋವು, ತಲೆನೋವು, ಚಿಕ್ಕಹುಡುಗರ ಉಬ್ಬಸ, ಕೆಮ್ಮು ಕೂಡ ಗುಣಹೊಂದುವದು ಕ್ರಯ ೧ ಕುಪ್ಪಿಗೆ ೧ ರೂಪಾಯಿ ವಿ ಪಿ, ಚಾರ್ಜು ಆಣೆ ೪

ಜ್ವರಗಡ್ಡೆಗೆ ಸುಧಾಬಿಂದು—ಹೊಟ್ಟೆಯೊಳಗೆ ಸೇವಿಸಲಿಕ್ಕೆ. ಕ್ರಯ ೧ ಕುಪ್ಪಿಗೆ ೧೨ ಆಣೆ ವಿ. ಪಿ ಚಾರ್ಜು ಆಣೆ ೪.

ಜ್ವರಗಡ್ಡೆಗೆ ಮುಲಾಮು—ಬಾಹ್ಯಲೇಪನಕ್ಕೆ ಕ್ರಯ ಡಬ್ಬಿ ೧ಕ್ಕೆ ೧ ರೂಪಾಯಿ ವಿ ಪಿ ಚಾರ್ಜು ಆಣೆ ೪

೧ನೇ ನಂಬರ ೪ ತಜ್ವರ ರಿಪುಗುಳಿಗೆ—ಆಬಾಲವೃದ್ಧರಿಗೆ ಹುಟ್ಟುವ ಪ್ರತಿನಿತ್ಯದ ಮತ್ತು ೩ನೆ ವ ೪ನೆ ದಿವಸದ ಪಾಳಿಯಾಗಿ ಕೂಡ ಬರುವ ಶೀತಜ್ವರಕ್ಕೆ ಕ್ರಯ ೧ ಡಬ್ಬಿಗೆ ೧ ರೂಪಾಯಿ ವಿ ಪಿ ಚಾರ್ಜು ಆಣೆ ೪

೨ನೇ ನಂಬರದ ಶೀತಜ್ವರ ರಿಪುಗುಳಿಗೆ—ಮೇಲೆ ವಿವರಿಸಿದಂಥ ಶೀತಜ್ವರಗಳು ಕಾಲಾವಧಿಯಾಗಿ ಮೈಯಲ್ಲಿ ವ್ಯಾಪಿಸಿಕೊಂಡು ಹಳೆ ತರಕ್ಕೆ ಬಿದ್ದು ಬರುವದಾದರೆ ಕ್ರಯ ೧ ಡಬ್ಬಿಗೆ ೧ ರೂಪಾಯಿ ವಿ ಪಿ ಚಾರ್ಜು ಆಣೆ ೪

ದಂತ ಶುದ್ಧಿಗೆ ಸುಪರಿಮಳ ಮಂಜನ—ಎಲ್ಲ ಪ್ರಕಾರದ ಹಲ್ಲಿನ ವೇದನೆಗಳ ಉಪಶಮನಕ್ಕೆ ಕ್ರಯ ೧ ಡಬ್ಬಿಗೆ ೮ ಆಣೆ ವಿ ಪಿ ೪ ಆಣೆ

ಕಿವಿನಾಶಿಗೆ ಸುಧಾಚೂರ್ಣ—ಮೂಗಿನ ಒಳಭಾಗದಲ್ಲಿ ಕ್ರಿಮಿ ಅಥವಾ ವ್ರಣಾಗಿ ಅದರಿಂದ ದುರ್ಗಂಧವೂ ರಕ್ತ ಅಥವಾ ನೀರಿನಂಥ ದ್ರವವು ಸ್ರವಿಸುವದಕ್ಕೆ. ಕ್ರಯ ೧ ಡಬ್ಬಿಗೆ ೧ ರೂಪಾಯಿ ವಿ ಪಿ ಚಾರ್ಜು ಆಣೆ ೪

ನವ ನರೋಗಕ್ಕೆ ಸುಯಾಂಜನವು—ಹೊಸತಾಗಿ ಹುಟ್ಟಿದ ಅಥವಾ ಬಹುಕಾಲದಿಂದ ಇರುತ್ತಿದ್ದ ಕಣ್ಣಿನ ಎಲ್ಲಾ ಬಾಧೆಗಳು ಕಣ್ಣಿನಲಿ ಕೆಂಪೇರುವಿಕೆ, ಕಣ್ಣಿನಿಂದ ನೀರು ಪಿಸರು ಬರುತ್ತಿರುವದು, ಬೆಳಕಿಗೆ ನೋಡಲಿಕ್ಕೆ ಆಗದ ಇರುವದು ದೃಷ್ಟಿಮಾಂದ್ಯ, ಇತ್ಯಾದಿ ಎಲ್ಲ ಬಾಧೆಗಳೂ ಇದರಿಂದ ಬೇಗನೆ ಗುಣವಾಗುವದು ಕ್ರಯ ೧ ಡಬ್ಬಿಗೆ ೧ ರೂಪಾಯಿ ವಿ ಪಿ. ಚಾರ್ಜು ಆಣೆ ೪

ಕರ್ಣಸ್ರಾವಕ್ಕೆ ವನೌಷಧಿ ತೈಲವು—ಚಿಕ್ಕ ಮತ್ತು ಥರ್ಡ ಪ್ರಾಯದವರ ಕಿವಿಯಿಂದ ರಕ್ತ, ಕೀವು, ಅಥವಾ ನೀರಿನಂಥ ದ್ರವ ಹೊಸತಾಗಿ ಅಥವಾ ಬಹುಕಾಲದಿಂದ ಸ್ರವಿಸುತ್ತಿದ್ದರೆ ಹಾಗೂ ನೋವು, ಕಳತವೂ, ತುರಿಸುವಿಕೆಯೂ ಇರುತಿದ್ದರೆ ಇದರಿಂದ ಪೂರ್ಣ ಗುಣ ಹೊಂದುವದು ಕ್ರಯ ೧ ಕುಪ್ಪಿಗೆ ೧ ರೂಪಾಯಿ ವಿ ಪಿ ೪

ಚಿಕ್ಕ ಮಕ್ಕಳ ಮೈ ಪುಷ್ಟಿಗೆ ಬಾಲಸುಧಾರಸ—ಚಿಕ್ಕ ಹುಡುಗರ ಅಶಕ್ತಿ, ಕುಡಿದ ಹಾಲಿನ ಅಥವಾ ಆಹಾರದ ವಾಂತಿ, ಅತಿಸಾರ, ಅನೇಕಾವರ್ತಿ ಮಲ ವಿಸರ್ಜನೆ, ಅಸ್ಥಿಗತಜ್ವರ, ಕೆಮ್ಮು ಇತ್ಯಾದಿ ಅನೇಕ ಉಪಟತಿಗಳು ಗುಣವಾಗಿ ಮೈಯಲ್ಲಿ ರಕ್ತ ಮಾಂಸ ಅಸ್ಥಿ ಇವುಗಳು ಬಲವಾಗಿ ಬೆಳೆದು ಚನ್ನಾಗಿ ಪುಷ್ಟಿಯಾಗುತ್ತಾರೆ. ಕ್ರಯ ೧ ಕುಪ್ಪಿಗೆ ೧ ರೂಪಾಯಿ ವಿ ಪಿ ಚಾರ್ಜು ಆಣೆ ೩

ಸಕ್ಕರೆ ಪಾಕ ಕಫಕ್ಷಯ ವ ಕೆಮ್ಮು ಮುಂತಾದವುಗಳಿಗೆ—ಶ್ವಾಸ ಕೋಶದ ಎಲ್ಲಾ ಉಪಟತಿಗಳು ಅಂದರೆ ಹೊಸ ಮತ್ತು ಹಳೆ ತರ ಕೆಮ್ಮುಗಳು ನೆಗಡಿ ಉಬ್ಬಸ ಕಫ ಕ್ಷಯ ಅಸ್ಥಿಜ್ವರ ಅಶಕ್ತಿ ಜ್ವರ ವ್ಯಾಧಿಯಲ್ಲಿ ಹುಟ್ಟುವ ಬೇನೆ ಇತ್ಯಾದಿ ಬೇಗನೆ ಗುಣಹೊಂದುವದು. ಕ್ರಯ ೧ ಕುಪ್ಪಿಗೆ ರೂ ೧—೪ ಆ ವಿ. ಪಿ ಚಾರ್ಜು ಆಣೆ

ನಯನ ಸುಖಕ್ಕೆ ಸೌವೀರಾಂಜನವು (ಕಪ್ಪು ಸುರ್ಮ)—ಬಿಸಿಲಲ್ಲಿ ತಿರುಗಾಟ ಮಾಡುವದರಿಂದ ಬೆಂಕಿಯ ಶಕೆಯಲ್ಲಿ ಕೆಲಸದ ರಿಂದ ರಾತ್ರಿಯಲ್ಲಿ ಜಾಗ್ರಣ ಮಾಡುವದರಿಂದ ಅಥವಾ ಹೆಚ್ಚು ಕಾಲ ಓದುವದರಿಂದ ಸಹಾ ಉಂಟಾಗುವ ಕಣ್ಣಿನ ಬಾಧೆಯು ಕೆಂಪೇರುವಿಕೆ ಉರಿ ನವೆ ಮುಂತಾದವು ಗುಣಹೊಂದಿ ಕಣ್ಣಿಗೆ ಸುಖವು ಪ್ರಾಪ್ತವಾಗುತ್ತದೆ ಕ್ರಯ ೧ ಡಬ್ಬಿಗೆ ೮ ಆಣೆ ವಿ ಪಿ ಚಾರ್ಜು ಡಬ್ಬಿ ೧ ರಿಂದ ೧೨ ಡಬ್ಬಿಗೆ ೪ ಆಣೆ

ವಾಂತಿಭೇದಿಗೆ ಮತ್ತು ಅತಿಸಾರಕ್ಕೆ ಕ್ಲೋರೋಡಾಯಿನ್—ಈ ಉಪದ್ರಗಳಿಗೆ ಇದು ದಿವ್ಯ ಔಷಧವಾಗಿದೆ ವಿಶ್ವಾಸವುಳ್ಳ ಒಂದು ಕಂಪನಿಯಿಂದ ಇದನ್ನು ನಾವು ಸಂಗ್ರಹಿಸುತ್ತೇವೆ ಕ್ರಯ ೧ ಕುಪ್ಪಿಗೆ ೧೨ ಆಣೆ ವಿ ಪಿ ಚಾರ್ಜು ಆಣೆ ೪

ಸೂಚನೆ—ನಮ್ಮ ಔಷಧಗಳೊಳಗೆ ಅಪಾಯಕರವಾದ ಯಾವ ಜಿನಸಿನ ಮಿಶ್ರಣವೂ ಮಾಡಿಲ್ಲ ಪ್ರತಿ ಒಂದು ಔಷಧಿಗೆ ಜೊತೆಯಲ್ಲಿ ಛಾಪಿಸಿ ಅನುಪಾನ ಪತ್ರವನ್ನು ಕಳುಹಿಸುತ್ತಿರುತ್ತೇವೆ ಇನ್ನೂ ಅನೇಕ ಉತ್ತಮವಾದ ಔಷಧಗಳಿಗಾಗಿ ನಮ್ಮ ಕ್ಯಾಟ್ಲಾಗು ತರಿಸಿಕೊಂಡು ಓದಿನೋಡಿ

ನಮ್ಮ ಅಡ್ರೆಸು—ಕರ್ನಾಟಕ ರಾಜ ವೈದ್ಯ ಮತ್ತು ಕಂಪನಿ, ಪೋಸ್ಟು ಬಿಳಗಿ, ಉತ್ತರ ಕನ್ನಡಾ ಜಿಲ್ಲಾ.

Post Bilgi North Kanara District

CHAMBERLAIN'S COLIC, CHOLERA AND DIARRHOEA REMEDY.

ಚೇಂಬರ್ಲಿನ್ ಯವರು ಹೊಟ್ಟೆಶೂಲೆ, ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು

4-10



ಕೆಳ ಹೊಟ್ಟೆಯ ನೋವು, ಬರೀ ಭೇದಿಯಾಗುವುದು, ಆಮಶಂಕೆ, ವಾಂತಿಭೇದಿ ಉಪದ್ರ, ಶೂಲಾಗಿ ನೋವು, ಹೊಟ್ಟೆಯ ನಾನಾ ತರದ ಶೂಲೆಗಳು—ಈ ರೋಗಗಳನ್ನೆಲ್ಲಾ ವಾಸಿಮಾಡುತ್ತದೆ ಈ ಪರಮಾಶ್ಚರ್ಯಯುಕ್ತವಾದ ಔಷಧವು ಜನರನ್ನು ಬದುಕಿಸಿರುವಷ್ಟು ಮತ್ತು ನೋವನ್ನೂ ಬಾಧೆಯನ್ನೂ ನಿವಾರಣೆ ಮಾಡಿರುವಷ್ಟು ಪ್ರಪಂಚದಲ್ಲೇ ಇನ್ಯಾವ ಔಷಧವೂ ಮಾಡಿರುವುದಿಲ್ಲ

ಜ್ಞಾಪಕದಲ್ಲಿಟ್ಟುಕೊಳ್ಳಿ—ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯೊಳಗಿರುವ ಎಲ್ಲಾ ತರದ ನೋವನ್ನೂ ನಿಲ್ಲಿಸಿಬಿಡುತ್ತದೆ ಬಹಳ ಕಠಿಣವಾದ ಭೇದಿಯೂ ಕೂಡ ಮರೆ ಹೊತ್ತಿನಲ್ಲಿ ಈ ಔಷಧದಿಂದ ನಿರ್ಮೂಲನಮಾಡಿ ನಿಲ್ಲಿಸುತ್ತದೆ ಖಂಡಿತವಾಗಿ ವಾಸಿಮಾಡುವುದೇ ಇದರ ಗುಣ

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಸ್ವಲ್ಪವೂ ಮುಟ್ಟಿದ್ದಲ್ಲ

ಇದು ಎಲ್ಲೆಲ್ಲೂ ವಿಕರಯವಾಗುವದು ಸಣ್ಣ ಶೀಸೆಗೆ ೧ ರೂಪಾಯಿ ದೊಡ್ಡ ಶೀಸೆಗೆ ೨ ರೂಪಾಯಿ

ಚಳಿಕಾಲಕ್ಕೆ ಇದರ ಸಮಾನ ಉಂಟೇ,

0 1

೫೦೦ ಕ್ಲಾಲವಾ ಟೋಪಿಗಳು.

೧ ಟೋಪಿಗೆ ಕ್ರಯ ೧—೧—೦

ಈ ಟೋಪಿ ಇದ್ದವರು ಶಾಲ್ ಆಗತ್ಯವಿಲ್ಲ ವಿ ಪಿ ಮೂಲಕ ಕಳುಹಿಸುತ್ತೇವೆ ವಿಳಾಸ— ಸಿ ರಘುನಾಥಕಾಮತ್

ಬೋಳಾರ ಮಂಗಳೂರು

ಎಷ್ಟೇ ಹಳೇರೋಗವಾದರೂ ಗುಣಪಡಿಸುವ ಡಾಕ್ಟರ ಫರ್ನಾಂಡಿಸ್ ಸಾಹೇಬರ ಅನುಭವದಿಂದ ಖಾತ್ರಿಆದ ಚಮತ್ಕಾರಿಕ ವನಸ್ಪತಿ ಔಷಧಗಳು

29 2

(೧) ಮೂಲರೋಗಕ್ಕೆ (ಪೈಲ್ಸ್) ಸಸ್ಯವನಸ್ಪತಿಗಳಿಂದ ಯುಕ್ತವಾದಂಥ ವಿದ್ಯಲ್ಲಿಲಾ ಬತ್ತಿಗಳು ವ ತ್ತು ಗಂಬೀರ ತೈಲ ವ ಗಿನ ಸೆಳ್ಳೆಗಳಿಂದ ದುರ್ಗಂಧ ರಕ್ತವ ರಕ್ತವಿ ಕ್ರಿಕವಾಗಿ ಸೋಗ ನಂಧನ ರಿಗೆ ಈ ಬತ್ತಿಗಳು ವ ತೈಲ ಕೆಲ್ಪೆ ಗುಣಪಡಿಸುತ್ತದೆ ಕಣ್ಣಿಗೆ ದೃಷ್ಟಿ ನೆದುಳಿಗೆ ತಂಪುಕೊಡುವದಲ್ಲದೆ ಸುಲ್ಲ ಘಟ್ಟ ಮಾಡುತ್ತದೆ ೬ ಬತ್ತಿ ಡಬ್ಬಿಗೆ ೮ ಆಣೆ ತೈಲ ಬಾಟ್ಲಿಗೆ ೪ ಆಣೆ

(೨) ಮೂಲವ್ಯಾಧಿ ೮ ಗುಳಿಗೆ ಡಬ್ಬಿಗೆ ೧ ರೂ (೩) ಮಕ್ಕಳ ಚೇಷ್ಟೆ ರೋಗಕ್ಕೆ ೮ ಗುಳಿಗೆ ಡಬ್ಬಿಗೆ ೮ ಆಣೆ (೪) ೨೪ ತರದ ಪಂಡುರೋಗಕ್ಕೆ ಅಮೃತ ಚೂರ್ಣ ಡಬ್ಬಿಗೆ ೧ ರೂ (೫) ಸ್ತ್ರೀಯರಿಗೆ ರಕ್ತಪ್ರಸಾದ (ತಿಂಗಳ ಗಟ್ಟಿ) ಕ್ರಮವಾಗಿ ಆಗುವಿಕ್ಕೆ ೨ ಗುಳಿಗೆ ಡಬ್ಬಿಗೆ ರೂ ೧—೮—೦

ಸದರಿ ೬ ಔಷಧಿಗಳಿದ್ದ ಸ್ಯಾಂಪಲ್ ಬೋಕ್ಸ್ (ನಮೂನೆ ಪೆಟಿಗೆ) ಒಂದಕ್ಕೆ ೧—೮—೦ ಪ ಖ ಬೇರೆ ವಿ ಪಿ ಮೂಲಕ ರವಾನಿಸಲಾಗುತ್ತದೆ ನಮ್ಮ ವಿಳಾಸ—

ಎ ಪಿ ಗೊನ್ಸಾಲ್ವಿಸ್, ಹೊನ್ನಾವರ, ಜಿಲ್ಲಾ ಉತ್ತರ ಕನ್ನಡಾ

ಪಾಳ್ಯದ ವೆಂಕಟಾಚಲ ಪಂಡಿತ, ಶ್ರೀಸೀತಾರಾಘವ ವೈದ್ಯ ಶಾಲಾ, ಕೊಳ್ಳೇಗಾಲ, ಇವರ ಸಿದ್ಧೌಷಧಗಳು

26 1

೧. ಲೋಕಾನುಗ್ರಹ ಕಸ್ತೂರಿ ಮಾತ್ರೆ—ಈ ಮಾತ್ರೆಗಳನ್ನು ಹವಳದ ಭಸ್ಮ ಚಿನ್ನದ ರೇಖುಗಳ ಮಿಶ್ರದಿಂದ ತಯಾರಿಸಿದೆ ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಪ್ಲೇಗು ಜ್ವರ, ಛಳಿಜ್ವರ, ಜ್ವರ, ಅಗ್ನಿನಷ್ಟ, ನಿಶ್ಶಕ್ತಿ, ಕೆಮ್ಮು, ಹೊಟ್ಟೆ, ಕಿಬ್ಬೊಟ್ಟೆ, ಎದೆಗಳ ನೋವು ಇವಕ್ಕೆ ದಾರಿಗೊಡದು, ಮಕ್ಕಳ ಎಲ್ಲಾ ರೋಗಕ್ಕೂ ಗುಣಕಾರಿ ನೀರು ಮತ್ತು ಹಾಲು ಒದಗುವಾಗ ಒಳ್ಳೇದು ೨೦ ಮಾತ್ರೆಯುಳ್ಳ ಕುಪ್ಪಿಗೆ ೧ ಆಣೆ ಪೋಸ್ಟು ಮೂಲಕ ೫ ಸೀಸೆಗೆ ಒಂದು ಸೀಸೆ ಬಿಟ್ಟು ೧ ರಿಂದ ೬ ರ ವರೆಗೆ ಟಪಾಲು ಖರ್ಚು ೪ ಆಣೆ



೩ ಎಸ್ ಸಿ ಇ ಸರ್ವಾಂಗಬಲಕಾರಿ—ಕಾಫಿ, ಟೀ, ಕೋಕೋಗಳಿಗೆ ಬದಲಾಗಿ ಉಪಯೋಗಿಸುವ ಪುಡಿ ಕಾಫಿ, ಟೀಗಳಲ್ಲಿರುವ ದುರ್ಗುಣಗಳು ಇದರಲ್ಲಿಲ್ಲ ಎದೆ, ಅನ್ನಾಶಯ, ನರಗಳು, ಸಂದುಗಳು, ಮೆದಳು, ಶಿರಸ್ಸು, ಇವುಗಳ ಸಂಬಂಧವಾದ ಎಲ್ಲಾ ರೋಗಗಳನ್ನೂ ಚನ್ನಾಗಿ ಹೋಗಲಾಡಿಸಿ ಧಾತುಶಕ್ತಿಯನ್ನು ಕ್ರಮವಾಗಿ ವೃದ್ಧಿಪಡಿಸುವದು ೨೦ ಲೋಟ ಕಾಫಿಯಾಗುವ ಡಬ್ಬಿ ೪ ಆಣೆ ೬೦ ಲೋಟ ಆಗುವುದ ೭ ಆಣೆ.

೨ ಪ್ಲೇಗಿಗೆ ಸಿದ್ಧೌಷಧ—ಪ್ಲೇಗಿಗೆ ಔಷಧಿಯೇ ಇಲ್ಲವೆಂದು ಹೇಳಬೇಡಿ ಈ ನಮ್ಮ ಔಷಧವನ್ನು ತರಿಸಿ ಉಪಯೋಗಿಸಿ ನೋಡಿ ಯೋಗ್ಯತಾಪತ್ರಗಳನ್ನು ವಿವರಿಸಲು ಸ್ಥಳ ಸಾಲದು ಗಡ್ಡೆ ಮೊದಲಾದ ಒಂದೂ ಇಲ್ಲದಂತೆ ಉಪ್ಪಿನ ಔಷಧಿ ಸೇರಿ ಕ್ರಯ ೧ ರೂಪಾಯಿ

೪. ಕಾಲರಾ ಔಷಧ—ಮಾತ್ರ ಕಟ್ಟ ಹೊಟ್ಟೆಯುಬ್ಬರಿಸಿ ಅಪಾಯವಾಗದಂತೆ ಖಂಡಿತ ಗುಣವಾಗುತ್ತದೆ ಕ್ರಯ ೧೦ ಆಣೆ

ವಿಳಾಸ—ಎಸ್ ಎಸ್. ಆರ್. ವೈದ್ಯಶಾಲಾ,

ಲಕ್ಷ್ಮೀವಿಲಾಸ ರೋಡ್, ಮೈಸೂರು.

ವಿಜ್ಞಾಪನಾ.

೧೯೦೭ ನೇ ಮಾರ್ಚ ತಾ॥ ೧೪ ರಲ್ಲಿ ರಂಗಾಚಾರ್ಯರ ಮೆಮೋರಿಯಲ್ ಹಾಲಿನಲ್ಲಿ ಘನವನ್ನೈದಿದ ಶ್ರೀಮನ್ ಮಹಾರಾಜರವರಿಗೆ ವಿನೋದೋತ್ಸವಗಳ ಮೂಲಕ ವಿಜ್ಞಾಪನಾಪತ್ರಿಕೆಯನ್ನು ಒಪ್ಪಿಸುವುದಕ್ಕಾಗಿ, ರಾಜಧಾನಿಯ ನಿವಾಸಿಗಳು ಈ ದಾಭ್ಯವನ್ನು ಸಹಾಯಮಾಡಲು ಈ ಮೂಲಕ ಪ್ರಾರ್ಥಿಸಲ್ಪಟ್ಟಿರುತ್ತಾರೆ ಚಂದಾ ಕೊಡತಕ್ಕವರೆಲ್ಲ ದಯವಿಟ್ಟು ೧೯೦೭ ನೆ ಮಾರ್ಚ ೮ ರೊಳಗಾಗಿ ಕಳಿಸತಕ್ಕದ್ದು ತದನಂತರ ಕೊಡುವ ಚಂದಾಹಣವನ್ನು ಸ್ವೀಕರಿಸುವುದಿಲ್ಲ

ರಂಗಾಚಾರ್ಯರ ಮೆಮೋರಿಯಲ್ ಹಾಲಿನಲ್ಲಿ ಸ್ಥಳವು ಮಿತವಾಗಿರುವುದರಿಂದ ಚಂದಾ ಕೊಡತಕ್ಕವರಲ್ಲಿ ಮುಖ್ಯರನ್ನು ಆರಿಸಿ ಆಹ್ವಾನಪತ್ರಿಕೆಗಳು ಕೊಡಲ್ಪಡುವವು

ಶ್ರೀಮನ್ ಮಹಾರಾಜರವರು ಲ್ಯಾನ್ಸ್‌ಡೌನ್ ಬಜಾರ್, ದೊಡ್ಡಪೇಟೆ, ಚರ್ಚ್ ರೋಡ್ ಈ ತ್ತು ಕೋಟೆಯ ಮುಖ್ಯ ಬೀದಿಗಳಲ್ಲಿ ಉತ್ಸವದೊಡನೆ ಚಿತ್ತೈಸಲು ಸರ್ವಚಿತ್ತರಾಗಿರುವುದರಿಂದ ಮೇಲ್ಕಂಡ ಮಾರ್ಗಗಳಲ್ಲಿರತಕ್ಕವರು ತಮ್ಮ ತಮ್ಮ ಮನೆಗಳನ್ನು ತಳಿರು ತೋರಣಗಳಿಂದಲೂ ದೀಪಾವಳಿಗಳಿಂದಲೂ ಅಲಂಕರಿಸಿ ರಾಜಭಕ್ತಿಯನ್ನು ಪ್ರದರ್ಶನಮಾಡ ಬರೆಂದು ಅಪೇಕ್ಷಿಸುತ್ತೇವೆ

ಎಚ್ ರಾಮಾನುಜೈಯ್ಯಂಗಾರ್

ಮೈಸೂರು ಮತ್ತು

21-2 07 ಟಿ ಎಸ್ ನಂಜಪ್ಪ,

ಕಾರ್ಯದರ್ಶಿಗಳು

ವೃತ್ತಾಂತ ಪತ್ರಿಕೆ.

ಸನ್ ೧೯೦೭ ನೇ ಇಸವಿ ಮಾರ್ಚ ತಾ॥ ೭ ನೇ ಗುರುವಾರ

"ಪಂಜಾಬಿ" ಎಂಬ ಪತ್ರಿಕೆಯು.

ಲಾಹೋರ್ ಪಟ್ಟಣದಲ್ಲಿ ಪ್ರಕಟವಾಗುವ "ಪಂಜಾಬಿ" ಎಂಬ ವರ್ತಮಾನಪತ್ರಿಕೆಯ ಎಡಿಟರನ್ನೂ ಮಾಲೀಕನನ್ನೂ ಸರ್ಕಾರದವರು ಹಿಡಿದು ದಸ್ತಗಿರಿ ಮಾಡಿ ಶಿಕ್ಷಿಸಿರುತ್ತಾರೆ ಇದಕ್ಕೆ ಕಾರಣವೇನೆಂದರೆ, ಅವರು ಆ ಪತ್ರಿಕೆಯಲ್ಲಿ ಕೆಲವು ವಾರಗಳ ಕೆಳಗೆ ಒಂದು ವಿಷಯವನ್ನು ಪ್ರಕಟಿಸಿದರು, ಏನೆಂದರೆ—ಒಬ್ಬಾನೊಬ್ಬ ಇಂಗ್ಲಿಷ್ ಪೋಲೀಸ್ ಅಧಿಕಾರಿಯು ಕಳೆದ ೧೯೦೬ ನೆ ಇಸವಿಯಲ್ಲಿ ಕಾಡಿಗೆ ಹೋಗಿ ಒಂದು ಹಂದಿಯನ್ನು ಶಿಕಾರಿಮಾಡಿ ಅದನ್ನು ತನ್ನ ಸಂಗಡಿದ್ದ ರಫತ್ ಅಲಿ ಎಂಬ ಪೋಲೀಸ್ ಜವಾನನನ್ನು ಹೊತ್ತುಕೊಂಡು ಬರಬೇಕೆಂದು ಆಜ್ಞೆ ಮಾಡಿದನು ರಫತ್ ಅಲಿಯು ತಿರಸ್ಕರಿಸಿದ್ದರ ಮೇಲೆ ಆ ಅಧಿಕಾರಿಯು ಅವನನ್ನು ಗುಂಡಿನಿಂದ ಹೊಡೆದು ಕೊಂದುಹಾಕಿದನು ಇದರ ಮೇಲೆ ಗವರ್ನಮೆಂಟಿನವರು ತನಿಖೆ ಮಾಡಿ ಆ ಅಧಿಕಾರಿಯನ್ನು ವರ್ಗಮಾಡಿದರು ಎಂಬೀ ರೀತಿಯಾಗಿ ಬರೆದು ಪ್ರಕಟಿಸಿದರು ಗವರ್ನಮೆಂಟಿನವರು ಅದರ ನಿಜಸ್ಥಿತಿಯನ್ನು ತಿಳಿಯುವುದಕ್ಕಾಗಿ ಅವರಿಬ್ಬರ ಮೇಲೂ ಫಿರ್ಯಾದು ಮಾಡಿದರು ದಸ್ತಗಿರಿಯಾಗುವಾಗ್ಗೆ ಗೌರವಸ್ಥರಾದ ಸಾಕ್ಷಿಗಳ ಶೃಫಿಯತ್ತಿನಿಂದಲೂ ಸರ್ಕಾರಿ ರಿಕಾರ್ಡುಗಳಿಂದಲೂ ರುಜುವಾತಾದ ಸಂಗತಿಯೇನೆಂದರೆ—ರಫತ್ ಅಲಿಯು ಕುದುರೆಯಿಂದ ಬಿದ್ದು ಪ್ರಾಣ ಕಳೆದುಕೊಂಡನು ಅವನು ಗುಂಡೇಟಿನಿಂದ ಸತ್ತನೆಂಬ ಸುದ್ದಿಯು ಕೆಲವು ಕಾಲದ ಮೇಲೆ ಹುಟ್ಟಿತು. ಸರ್ಕಾರದವರು ಆ ಕೂಡಲೇ ಅದರ ನಿಜಸ್ಥಿತಿಯನ್ನು ಗೊತ್ತುಮಾಡಿ ಆ ಸುದ್ದಿಯು ಬರೀ ಸುಳ್ಳೆಂದು ತಿಳಿದುಕೊಂಡರು ರಫತ್ ಅಲಿಯು ಅವನನ್ನು ಪರೀಕ್ಷೆ ಮಾಡಿಸಿದ ಕಾಲದಲ್ಲಿ ಅವನ ಸಹೋದರನೇ ಹಾಜರ

...ಗಿದ್ದು ಗುಂಡಿನೇಟು ಬಿದ್ದ ಗುರುತು ಶರೀರದ ಮೇಲೆ ...ಳೇ ಇಲ್ಲವೆಂದು ವಾಜ್ಮೂಲ ಬರೆಸಿ ಒಪ್ಪಿಕೊಂಡಿರು ...ನೆ ಎಂಬುದೇ.

ನಡೆದ ಸಂಗತಿ ಹೀಗಿರುವಲ್ಲಿ ಮೇಲ್ಕಂಡ "ಪಂಜಾಬಿ ...ತ್ರಿಕೆಯವರು ಪ್ರಕಟಿಸಿದ ಬಾತ್ಮಿ ನಿಜವಾದುದೆಂದು ...ವರುತಾನೇ ಊಹಿಸುವುದಕ್ಕಾದೀತು ಆ ಪತ್ರಿಕೆಯ ...ವು ವಾಹಮದೀಯರಲ್ಲಿ ಸರ್ಕಾರದವರ ಮೇಲೆ ಅಸೂಯೆ ...ಭಾವಗಳನ್ನು ಹುಟ್ಟಿಸುವುದಕ್ಕಾಗಿ ಸಾಹೆಬರು ಹಂದಿ ...ನ್ನು ಷಿಕಾರಿ ಮಾಡಿದರೆಂಬ ಸುಳ್ಳು ಸುದ್ದಿಯನ್ನು ಕಲ್ಪಿ ...ರೆಂದು ಕಾಣುವುದು ಓಂದುಸಾ ನದಲ್ಲಿ ವರ್ತಮಾನ ...ತ್ರಿಕೆಯು ಮೊದಲು ಯಥಾರ್ಥವಾದ ಸಂಗತಿಗಳನ್ನು ...ಪಾದ ಮತ್ತು ನಿಷ್ಪಕ್ಷಪಾತವಾದ ರೀತಿಯಲ್ಲಿ ಪ್ರಕಟ ...ತ್ತಾ ಬರಬೇಕಾಗಿದೆ; ಮತ್ತು ಅವಶ್ಯಬಿದ್ದಾಗ ಹಿಂಸೆ ...ನ್ಯಾಯಾದಿ ದುಷ್ಕಾರ್ಯಗಳನ್ನು ಹಿಂಜರಿಯದೆ ಎತ್ತಿ ...ಬೇಕು ಆ ಪತ್ರಿಕೆಯ ಎಡಿಟರು ಅಪದ್ಧವನ್ನು ...ಕಟನಮಾಡಿದ್ದೂ ಅಲ್ಲದೆ, ಅದು ನಿಜವೆಂದೇ ವಾದಿಸುತ್ತಾ ...ರುವದರಿಂದ ಅವರಿಗೆ ಶಿಕ್ಷೆಯಾಯಿತೆಂದು ನಾವು ವ್ಯಸನ ...ಲಾರೆವು ಯಾಕೆಂದರೆ ಇಂಥಾ ಜನರಿಂದ ನಮ್ಮ ದೇಶವು ...ವೃದ್ಧಿ ಹೊಂದುವುದಕ್ಕೆ ಸಹಾಯವಾಗಲಾರದು

ಕಾಮನಹಬ್ಬ

ಪತ್ರಿಕೆಯ ವಾಚಕರು ಈ ವಾರದ ಪತ್ರಿಕೆಯಲಿ ಒಂದೆರಡು ...ಗಳ ಹಿಂದೆ ನಡೆದ ಮೊಹರಂ ಮತ್ತು ಕಾಮನಹಬ್ಬಗಳಲ್ಲಿ ಹಿಂದು ...ಮಹಮದೀಯರಿಗೂ ಪರಸ್ಪರ ಮನಸ್ತಾಪಗಳುಂಟಾಗಿ ಜಗಳ ...ಂಬ ಸಂಗತಿಯನ್ನು ಓದಬಹುದು ಆಯಾ ಪಂಗಡದವರು ...ಥಾ ಬೀದಿಗಳಲ್ಲಿಯೇ ತಮ್ಮ ಮೆರವಣಿಗೆಗಳನ್ನು ತರಬೇಕೆಂತ ...ಥಾ ಇಂಥಾ ನಿಶಾನಿಗಳನ್ನೇ ಹಿಡಿಯಬೇಕೆಂತಲೂ ಸಾಮಿ ...ಬುದ್ಧಿವಂತರಿಗೆ ಗಣನೆಗೆ ತರುವದಕ್ಕೆ ಅತ್ಯಲ್ಪ ಸಂಗತಿಯಾಗಿ ...ದು ತೋರುತ್ತದೆ ಸತ್ಯತೆ, ನೀತಿ, ಪರಿಶುದ್ಧತ್ವ, ಇವೇ ಮೊ ...ಉನ್ನತ ಗುಣಗಳು ನಿಜವಾದ ಆಭರಣಗಳೆಂತಲೂ, ಇವುಗ ... ಮನುಷ್ಯನು ಹೆಚ್ಚಾದ ಗಮನವನ್ನು ಕೊಡಬೇಕೆಂತಲೂ, ...ಪ ಕಟ್ಟಿಕೊಂಡ ಹೊರಗೆ ಎಷ್ಟೇ ಆಡಂಬರಗಳಿದ್ದಾಗ್ಯೂ ಅವು ಮನುಷ್ಯನನ್ನು ಲೇಶಮಾತ್ರವೂ ಆತ್ಮಿಕಸಂಬಂಧವಾದವುಗಳಲ್ಲಿ ...ಗೆ ತರಲಾರವೆಂತಲೂ ನಿಜವಾದ ವೈರಾಗಿಗಳು ತಿಳಿದುಕೊಂಡಿ ... ಸರ್ಕಾರದ ರಸ್ತೆಗಳನ್ನು ತಿರುಗಾಡುವ ಜನಗಳಿಗೆ ಅಡಚ ...ಣೆ ಆಗದಂತೆಯೂ, ಮತಕಲಹಗಳುಂಟಾಗದಂತೆಯೂ ಜನರು ಉಪ ...ಯೋಗಿಸಿಕೊಳ್ಳುವದಕ್ಕೆ ಹಕ್ಕನ್ನು ಪಡೆದಿರುತ್ತಾರೆ ಹಿಂದೂಜನರು ...ಮಹಮದೀಯರ ಮಸೀದಿಗಳ ಬಳಿಯಲ್ಲಿಯೂ ಮಹಮದೀಯರು ಹಿಂದೂ ...ದೇವಸ್ಥಾನಗಳ ಬಳಿಯಲ್ಲಿಯೂ ಮೆರವಣಿಗೆಗಳನ್ನು ಮಾಡಿಕೊಂ ...ಹೋಗುವಾಗ್ಗೆ ಉಭಯರು ಪರಸ್ಪರ ಗಾಂಭೀರ್ಯ ಸ್ವಭಾವವನ್ನು ...ಬ್ಬರು ಮತಸ್ಥರನ್ನು ಕೆಣಕದೆ ಸೈರಣೆಯನ್ನು ತೋರಿ ...ಶಾಂತವಾಗಿ ಮಾರ್ಗವನ್ನು ಕೊಂಡದಿರಬೇಕೆಂಬುವದೇ ನಮ್ಮ ...ಯ ಈ ರೀತಿಯಲ್ಲಿ ಜನರು ನಡೆದುಕೊಂಡಿದ್ದರೆ ಚನ್ನಪಟ್ಟ ...ಣ ಇನ್ನು ಕೆಲವು ಕಡೆಗಳಲ್ಲಿ ಜಗಳಗಳೆಂದಿಗೂ ಆಗುತ್ತಿರ ...ನಮ್ಮ ಹಿಂದೂ ಸ್ನೇಹಿತರಿಗೆ ಹೇಳತಕ್ಕ ಒಂದು ಮಾತಿರುವದು ...ದೇನೆಂದರೆ, ಹೋಳಿಹಬ್ಬಗಳಲ್ಲಿ ಗುಣ ನಡತೆಗಳನ್ನು ಸಂಪೂ ...ಗಿ ಹಾಳುಮಾಡಿಕೊಂಡಿರುವ ಪೋಲೀ ಹುಡುಗರೂ ಮತ್ತು ...ಗರೂ ಮೆರವಣಿಗೆಗಳಲ್ಲಿ ಸೇರಿಕೊಂಡು ಕೇವಲ ಲಜ್ಜಾಸ್ಪ ...ವು ಮನಸ್ಸಿಗೆ ಅಸಹ್ಯವನ್ನುಂಟುಮಾಡುವ ಪದಗಳನ್ನಾಡುತ್ತ ...ದಿಯಲ್ಲಿ ತಿರುಗಾಡುವ ಜನರಿಗೆ ಮುಖ್ಯವಾಗಿ ಹೆಂಗಸರಿಗೆ ...ರ್ಯಾದೆಯನ್ನು ತೋರಿಸುತ್ತಾ ಹೋಗುವದೂ ವಾಚಕರಿಗೆ ...ಗತಿಯಲ್ಲ ಇಂಥವರ ಗುಂಪಿನಲ್ಲಿ ಮಾನವಂತರು ಸೇರುವ ...ದ್ಯ ಹೋಳಿ ಹಬ್ಬಗಳ ಲಜ್ಜಾಸ್ಪದವಾದ ಅಭಿನಯಗಳನ್ನು ...ವ ಅಥವಾ ಲಜ್ಜಾಸ್ಪದವಾದ ದುರ್ಭಾಷೆಗಳನ್ನಾಡುವ ಜನರ ...ಸರ್ಕಾರದವರು ಪೋಲೀಸಿನ ಕಟ್ಟಳೆಗಳಿಗನುಸಾರವಾಗಿ ಶಿಕ್ಷಿ ...ದು ಕೆಲವು ಹಿಂದೂಗಳು ಅಭಿಪ್ರಾಯಪಡುತ್ತಾರೆ ಇದಕ್ಕಾ ...ಗಿ ತಮ್ಮ ನಡೆ ನುಡಿಗಳಲ್ಲಿ ಅವರು ಪಡುವ ಅಭಿಪ್ರಾಯಗಳ ...ಭ್ಯಾಸಿಸಿ ತೋರಿಸಿದರೆ ಕಾಮನ ಹಬ್ಬದಲ್ಲಿರುವ ಅನೇಕ ಕೆ ...ನಿವಾರಣೆಯಾಗಬಹುದೆಂದು ನಂಬಿರುತ್ತೇವೆ

ಒಳದೇಶದ ವೃತ್ತಾಂತಗಳು

...ಮಾನ ಪಡೆಯಲು ಯೋಗ್ಯವಾದ ಬಾತ್ಮಿಯಾವುದೂ ಈ ...ಯಲ್ಲವೆಂದು ಸೂಚಿಸುತ್ತೇವೆ

****

...ರ್ ವೆ॥ ವಿ ಪಿ ಮಾಧವರಾಯರು ಮಲೆನಾಡಿನ ಸರ್ಕೀ ...ಮುಗಿಸಿಕೊಂಡು ಮೊನ್ನೆ ಸೋಮವಾರ ಬೆಳಗ್ಗೆ ಪರಿವಾರ ಸಹಿತ ...ರಿಗೆ ವಾಪಸು ಬಂದಿರುತ್ತಾರೆ

****

...ತಿಂಗಳ ೨೩ಕ್ಕೆ ಶ್ರೀಮನ್ಮಹಾರಾಜರವರು ಪರಿವಾರ ಸಹಿತ ...ಳೆಯುವುದಕ್ಕಾಗಿ ರಾಜಧಾನಿಯಿಂದ ನೀಲಗಿರಿಗೆ ದಯಮಾ ...ಡಿಸುವರೆಂದು ವರ್ತಮಾನವಿದೆ

****

...ರಾಜಧಾನಿಯಲ್ಲಿ ಪ್ಲೇಗ್ ಉಪದ್ರವು ಸ್ವಲ್ಪ ಕಡಿಮೆಯಾ ...ವು ಈಗ ಸುಗ್ಗಿಯಕಾಲವಾದರೂ ದವಸಗಳ್ಯಾವೂ ಅಗ್ಗವಾ ...ಪ್ರಿಯವಾಗಿರುವುದರಿಂದ ಬಡಬಗ್ಗರ ಜೀವನಕ್ಕೆ ಕಷ್ಟ

ಬ್ರಿಟಿಷ್ ರೆಸಿಡೆಂಟ್ ಮೆ॥ ಎಸ್ ಎಂ ಫ್ರೇಜರ್‌ಯವರು ಮುಂದಿನ ಗುರುವಾರದಿಂದ ಎಂಟು ತಿಂಗಳ ರಜಾ ಉಪಯೋಗಿಸಿಕೊಂಡು ಪತ್ನೀಸಹಿತ ಸೀಮೆಗೆ ಪ್ರಯಾಣಮಾಡುವರು ಅವರ ಬದಲಿಗೆ ವೆ॥ ಎ ಪಿಲ್ಲಿಯಂಸ್‌ಯವರು ನೇಮಕವಾಗುತ್ತಾರೆ

****

ಶ್ರೀ ಶೃಂಗೇರಿ ಸ್ವಾಮಿಗಳವರು ಪರಿವಾರ ಸಹಿತ ಕಳೆದ ಗುರುವಾರ ತರೀಕೆರೆಯಿಂದ ಬೀರೂರಿಗೆ ದಯಮಾಡಿ ಎರಡು ದಿನಗಳು ಅಲ್ಲಿದ್ದು ಮರುದಿನ ಕಡೂರನ್ನು ತಲಪಿ ಒಂದು ದಿನ ಇದ್ದು ಅಲ್ಲಿಂದ ಚಿಕ್ಕಮಗಳೂರಿನ ಕಡೆ ಪ್ರಯಾಣಮಾಡಿರುತ್ತಾರೆಂದು ತಿಳಿಯುವುದು

****

ಈ ಸಂಸ್ಥಾನದ ಪ್ರತಿ ಒಂದು ಗ್ರಾಮಕ್ಕೂ ಒಬ್ಬ ಪಟೇಲನಿರುವಂತೆ ಏರ್ಪಾಡುಮಾಡಬೇಕೆಂದು ಗವರ್ನಮೆಂಟ್ ಹುಕುಂ ಆಗಿರುವುದನ್ನು ಜಾರಿಗೆ ತರಬೇಕೆಂದು ರೆವಿನ್ಯೂ ಕಮಿಷನರವರು ಡೆಪ್ಟಿ ಕಮಿಷನರುಗಳಿಗೆ ಸರ್ಕ್ಯುಲರ್ ಕಳುಹಿಸಿದ್ದಾರೆಂದು ತಿಳಿಯುವೆವು

****

ರಜಾ ಪಡೆದು ಸೀಮೆಗೆ ಹೋಗಿದ್ದ ಮೆ॥ ಎಚ್ ಜೆ ಭಾಭಾಯವರು ಮೊನ್ನೆ ಸೋಮವಾರ ಬೆಂಗಳೂರಿಗೆ ಬಂದರು ಇವರು ಮರು ದಿನವೇ ಈ ಸಂಸ್ಥಾನದ ವಿದ್ಯಾಭ್ಯಾಸದ ಇಲಾಖೆಯ ಇನ್ಸ್‌ಪೆಕ್ಟರ್ ಜನರಲ್ ಕೆಲಸದ ಛಾರ್ಜನ್ನು ಮೆ॥ ವಿಯರ್‌ಯವರಿಂದ ಪಡೆದುಕೊಳ್ಳುವವರಾಗಿದ್ದರು

****

ಈ ತಿಂಗಳ ೧೬ ನೆ ತಾ ಶನಿವಾರದಿಂದ ಒಂದು ವಾರದ ತನಕ ಶಿವಮೊಗ್ಗಾ ತಾಲ್ಲೂಕು ಕೂಡ್ಲಿ ಗ್ರಾಮದಲ್ಲಿ ನಡೆಯುವ ರಥೋತ್ಸವಕಾಲದಲ್ಲಿ ದನಗಳ ಪ್ರದರ್ಶನವು ನಡೆಯುವದು ಈ ಜಾತ್ರೆಗೆ ಬಹಳ ಜನಗಳೂ ಜಾನುವಾರುಗಳೂ ಸೇರುವುದರಿಂದ ವ್ಯಾಪಾರ ಚೆನ್ನಾಗಿ ನಡೆಯಿತೆನ್ನುವುದಕ್ಕೆ ಸಂಶಯವಿಲ್ಲ

****

ಚಿಕ್ಕಬಳ್ಳಾಪುರದ ತಾಲ್ಲೂಕು ನಂದಿ ಗ್ರಾಮದಲ್ಲಿ ಕಳೆದ ತಿಂಗಳು ಒಂದು ವಾರದ ತನಕ ದನಗಳ ಪ್ರದರ್ಶನವು ನಡೆಯಿತು ಸುಮಾರು ೩೦ ಸಾವಿರ ದನಗಳು ವ್ಯಾಪಾರಕ್ಕಾಗಿ ಸೇರಿದ್ದವು ಆ ಪೈಕಿ ಉತ್ಕೃಷ್ಟವಾದ ಎತ್ತುಗಳಿಗೆ ದರ್ಜಾವಾರಾಗಿ ೩೦ ರೂ ನಿಂದ ೧೦ ರೂ ವರೆಗೆ ೧೪ ಇನಾಮುಗಳು ಕೊಡಲ್ಪಟ್ಟವು

****

ಹಳೇಬೀಡು ದೇವಸ್ಥಾನವನ್ನು ಜೀರ್ಣೋದ್ಧಾರಮಾಡಬೇಕೆಂದು ಕಳೆದ ವಾರ ದಿವಾನರವರೂ ಅರಮನೆಯನ್ನು ಕಟ್ಟುತ್ತಿರುವ ಮೆ॥ ರಾಘವಲುನಾಯ್ಡು ಯವರೂ ಪರಾಂಬರಿಸಿಕೊಂಡು ಬಂದರು ಇದಕ್ಕಾಗಿ ಮುಂದಿನ ಸಾಲಿನಲ್ಲಿ ಒಂದು ಲಕ್ಷ ರೂಪಾಯಿ ಸ್ಯಾಂಕ್ಷನ್ ಮಾಡುತ್ತಾರೆಂದು ವರ್ತಮಾನವಿದೆ

****

ಮೈಸೂರು ಕೋಟೆಯಲ್ಲಿ ಮ್ಯುನಿಸಿಪಲ್ ಕಮಿಷನರಾಗಿರುವ ಮೆ॥ ಕೃಷ್ಣಪ್ಪಾಜಿ ಅರಸಿನವರು ತಮ್ಮ ಮನೆ ಆವರಣದಲ್ಲಿ ಪ್ಲೇಗ್ ಕಾಯಿಲೆ ಸಂಭವಿಸಿದ ಸುದ್ದಿಯನ್ನು ಸರ್ಕಾರಕ್ಕೆ ಕೂಡಲೇ ರಿಪೋರ್ಟು ಮಾಡಲಿಲ್ಲವೆಂದು ಮೊಕದ್ದಮೆ ಆಗಿ ಇಲ್ಲಿನ ಟೌನ್ ಮ್ಯಾಜಿಸ್ಟ್ರೇಟರು ತನಿಖೆಮಾಡುವವರಾಗಿದಾರೆ

****

ಶ್ರೀಮನ್ಮಹಾರಾಜರವರಿಗೆ ಬಿರುದು ಬಂದದ್ದಕ್ಕಾಗಿ ಅರಸುಗಳೆಲ್ಲಾ ಸೇರಿ ನಾಳೆ ೧೧ ನೆ ತಾ ಸೋಮವಾರ ಶ್ರೀಮನ್ಮಹಾರಾಜರವರಿಗೆ ಮೊದಲನೆಯ ಮಹಾರಾಜಕುಮಾರಿಯವರ ಬಂಗಲೆಯಲ್ಲಿ ಔತನಾದಿ ಸಂತೋಷೋತ್ಸವಗಳನ್ನು ಮಾಡಿ, ಅಡ್ರೆಸ್ಸು ಒಪ್ಪಿಸಿ ತಮ್ಮ ಕೃತಜ್ಞತೆಯನ್ನೂ ಆನಂದವನ್ನೂ ಪ್ರಕಾಶಪಡಿಸುವವರಾಗಿದ್ದಾರೆ

****

ರೆವಿನ್ಯೂ ಕಮಿಷನರವರು ಮೈಸೂರು ಡಿಸ್ಟ್ರಿಕ್ಟಿನಲ್ಲಿ ಸಂಚಾರ ಮಾಡಿ ಫ್ರೆಂಚ್ ರಾಕ್ಸ್ ಸಬ್ ಡಿವಿಜನ್ ಆಫೀಸುಗಳನ್ನು ಅಲ್ಲಿಂದ ತೆಗೆದು ಇನ್ನೆಲ್ಲಿ ಇಡಬೇಕೆಂದು ಆಲೋಚನೆ ಮಾಡಿ, ಆಯಾ ಕಡೆಗಳಲ್ಲಿರುವ ಮುಖಂಡರನ್ನು ಕರೆಸಿ ಅವರ ಅಭಿಪ್ರಾಯಗಳನ್ನು ಕೇಳಿ ತಿಳಿದುಕೊಂಡು ಹೋಗಿರುತ್ತಾರೆಂದೂ ಇಷ್ಟರಲ್ಲೇ ಗವರ್ನಮೆಂಟಿಗೆ ತಮ್ಮ ತೀರ್ಮಾನವನ್ನು ತಿಳಿಸುತ್ತಾರೆಂದೂ ವರ್ತಮಾನ ಬಂದಿದೆ.

****

ರಾಜಧಾನಿಯಲ್ಲಿ ಸೆಂಟ್ರಲ್ ನಾಯಬಾಗಿದ್ದ ರಾಘವೇಂದ್ರರಾಯರು ಸರ್ಕಾರಿ ಹಣವನ್ನು ತಿಂದುಹಾಕಿದರೆಂದು ಮೊಕದ್ದಮೆ ಆಗಿ ಇಲ್ಲಿನ ಟೌನ್ ಮ್ಯಾಜಿಸ್ಟ್ರೇಟರು ದರ್ಯಾಫ್ತು ಮಾಡಿ, ಅಪರಾಧ ರುಜುವಾತಾಗಲಿಲ್ಲವೆಂದು ಅವರನ್ನು ಖುಲಾಸ್ ಮಾಡಿದ್ದರು ಈಚೆಗೆ ಗವರ್ನಮೆಂಟಿನವರು ಬೆಂಗಳೂರು ಛೀಫ್ ಕೋರ್ಟಿನಲ್ಲಿ ಅಪೀಲ್ ಮಾಡಿದರು ಅಲ್ಲಿ ಅಪರಾಧ ರುಜುವಾತಾಗಿದೆ ಎಂದು ಜಡ್ಜಿಗಳು ತೀರ್ಮಾನಿಸಿ ಅಪರಾಧಿಗೆ ಒಂದು ವರುಷ ಕಠಿಣ ಸಜವನ್ನೂ ೩೦೦ ರೂಪಾಯಿ ಜುಲ್ಮಾನೆಯನ್ನೂ ವಿಧಿಸಿದರೆಂದು ತಿಳಿಯುವುದು

****

ಹೊಳೆಹೊನ್ನೂರು ಪೇಟೆಯಲ್ಲಿ ತಂಬಾಕು ವ್ಯಾಪಾರಿ ಇಸ್ಮಾಲ್ ಸಾಬರ ಮನೆಯೊಳಗೆ ಹಿಂದಿನ ವಾರ ಹೆಂಗಸರು ಹಿತ್ತಲಲ್ಲಿ ಕೆಲಸ ಮಾಡುತ್ತಿದ್ದಾಗ ಅವರ ೧॥ ವರುಷದ ಮಗುವು ಭಾವಿಯೊಳಕ್ಕೆ ಬಿದ್ದುಕೊಂಡಿತು ಬಂದರ್‍ಸಾಬರು ಕೂಡಲೇ ಭಾವಿಯಲ್ಲಿಳಿದು ಮಗುವನ್ನು ಮೇಲಕ್ಕೆತ್ತಿ ಉಪಚರಿಸಿದ್ದರ ಮೇಲೆ ಬದುಕಿಕೊಂಡಿತೆಂತಲೂ, ಮಗು ಬಿದ್ದುದಕ್ಕೂ ಎದ್ದುದಕ್ಕೂ ಸುಮಾರು ಒಂದು ಗಂಟೆ ಸಾವಕಾಶವಾದರೂ ಅದುವರೆಗೆ ಮಗುವಿನ ಪ್ರಾಣ ಹೋಗದೆ ಇದ್ದುದು ಆಶ್ಚರ್ಯವಾಗಿದೆ ಎಂತಲೂ ಒಬ್ಬ ಬಾತ್ಮಿದಾರರು ಬರೆದಿದಾರೆ

****

ರಾಜಧಾನಿಯ ಕೋಟೆ ಆವರಣದೊಳಗೆ ಪ್ಲೇಗ್ ಬಾಧಿಸುತ್ತಿರುವರನ್ನೂ ಅವರ ಸಂಪರ್ಕದಲ್ಲಿರುವವರನ್ನೂ ಸರ್ಕಾರದವರು ಬಲಾತ್ಕರಿಸಿ ಕ್ಯಾಂಪಿಗೆ ಸಾಗಿಸುವುದಾಗಿ ಪ್ರಕಟಿಸಿದ್ದಾರಂತೆ ಅಲ್ಲಿನ ನಿವಾಸಿಗಳು ಸಭೆಗಳನ್ನು ನಡಿಸಿ ಇಂಥಾ ನಿರ್ಬಂಧವು ಇದುವರೆಗೆ ಮೈಸೂರು ಪಟ್ಟಣಕ್ಕೆ ಇಲ್ಲದೆ ಇದ್ದು ಈಗ ಮಾತ್ರ ಜಾರಿಗೆ ಬಂದಿರುವುದರಿಂದ ಅನಾವಶ್ಯವಾದ ಹಿಂಸೆಯೂ ಮನೋವ್ಯಥೆಯೂ ಉಂಟಾಗಿದೆ ಎಂತಲೂ ಈ ನಿರ್ಬಂಧವನ್ನು ವಜಾ ಮಾಡಿಕೊಟ್ಟು ಕಾಪಾಡಬೇಕೆಂತಲೂ ಶ್ರೀಮನ್ಮಹಾರಾಜರವರಿಗೂ ಮಹಾಮಾತೃಶ್ರೀಯವರಿಗೂ ವಿಜ್ಞಾಪನಾ ಪತ್ರಿಕೆಗಳನ್ನು ಒಪ್ಪಿಸಿದರು ಒಂದೆರಡು ದಿನಗಳು ನಿರೀಕ್ಷಿಸಿ ಅದಕ್ಕೆ ಜವಾಬೇ ಬರಲಿಲ್ಲವೆಂದು ಶ್ರೀಮನ್ಮಹಾರಾಜರವರಿಗೆ ಈಚೆಗೆ ಟೆಲಿಗ್ರಾಮನ್ನು ಕೊಟ್ಟಿರುತ್ತಾರೆ

****

ಒಬ್ಬ ಬಾತ್ಮಿದಾರರು ಬರೆಯುವುದು —ಕಲ್ಕತ್ತಾದಲ್ಲಿ ನಡೆದ ಸರ್ವವಸ್ತುಪ್ರದರ್ಶನ ಶಾಲೆಯಲ್ಲಿ ಮೈಸೂರ್ ಇಂಡಸ್ಟ್ರಿಯಲ್ ಸ್ಕೂಲಿನಿಂದ ಕೆಲವು ಸಾಮಾನುಗಳು, ಕುರುಡ ಮೂಕರ ಸ್ಕೂಲಿನಿಂದ ಬಟ್ಟೆಗಳು ಮತ್ತು ಕೆಲವು ಸಾಮಾನುಗಳು, ಯಂ ರ್ಯ ಯಸ್ ಕೃಷ್ಣಮೂರ್ತಿರಾಯರಿಂದ ತಯಾರು ಮಾಡಿದ ದೀಪದ ಕಡ್ಡಿಗಳು, ಸಹ ಪ್ರದರ್ಶನ ಮಾಡಿರುತ್ತೆ ದಾರ, ತೆಂಗಿನಕಡ್ಡಿ, ಬಿದರುಕಡ್ಡಿ, ಇವುಗಳಿಂದ ಮಾಡಿದ ದೀಪದಕಡ್ಡಿಯು ಬಹು ಚೆನ್ನಾಗಿ ಉರಿಯುತ್ತದೆ. ಇವರು ಬೊಂಬಾಯಿಗೆ ಬಂದು ಅನೇಕ ದೊಡ್ಡ ಮನುಷ್ಯರನ್ನು ನೋಡಿ ಮೈಸೂರಿನಲ್ಲಿ ಒಂದು ಕಂಪನಿಯನ್ನು ಸ್ಥಾಪಿಸಬೇಕೆಂದು ಏರ್ಪಾಡು ಮಾಡುತ್ತಿದ್ದಾರೆ ಮೈಸೂರಿನ ದೊಡ್ಡ ಮನುಷ್ಯರು ಈ ವಿಷಯದಲ್ಲಿ ಸಹಾಯ ಮಾಡುವಂತೆ ತೋರಬಹುದು

****

ಈ ತಿಂಗಳ ತಾ ೧೪ನೆ ಶುಕ್ರವಾರ ರಾಜಧಾನಿಯ ಪ್ರಜೆಗಳು ಶ್ರೀಮನ್ಮಹಾರಾಜರವರಿಗೆ ಇಲ್ಲಿನ ಟೌನ್ ಹಾಲ್ ಬಂಗಲೆಯಲ್ಲಿ ಒಂದು ಅಡ್ರೆಸ್ಸನ್ನು ಒಪ್ಪಿಸುವುದಕ್ಕೆ ಸನ್ನಾಹ ಮಾಡುತ್ತಿದಾರೆ. ಸರ್ಕಾರಿ ಅಧಿಕಾರಿಗಳೂ ಸಾಹುಕಾರರೂ ದೊಡ್ಡ ಮನುಷ್ಯರೂ ವಿಶೇಷವಾಗಿ ಚಂದಾ ಕೊಡಿಸುತ್ತಲೂ ಆ ಉತ್ಸವಕ್ಕಾಗಿ ನಾನಾ ಬಗೆಯ ಏರ್ಪಾಡುಗಳನ್ನು ಮಾಡುತ್ತಲೂ ಬಂದಿದಾರೆ ಆ ದಿನ ಇಲ್ಲಿರುವ ಸಮಸ್ತ ಕೋಮುಗಳ ಬಡಬಗ್ಗರಿಗೂ ಸುಭೋಜನ ಮಾಡಿಸಿ, ಬಡವರಿಗೂ ಕುಂಗಳರಿಗೂ ಬಟ್ಟೆ ಕೊಡುತ್ತಾರೆ ಸಾಯಂಕಾಲ ಕುದುರೆ ಸವಾರರು ರೆಸಿಡೆನ್ಸಿ ಬಂಗಲೆಯಲ್ಲಿ ಶ್ರೀಮನ್ಮಹಾರಾಜರವರ ಎದುರಿನಲ್ಲಿ ನಾನಾ ವಿನೋದಕರವಾದ ಕಸರತ್ತುಗಳನ್ನು ನಡಿಸಿ ಸಂತೋಷಪಡಿಸಬೇಕೆಂದಿದಾರೆ ಸಾಹುಕಾರ್ ಮೆ॥ ಚೆನ್ನಯ್ಯಾಜಿರಾಯರು ಸ್ಕೂಲ್ ಹುಡುಗರಿಗೆಲ್ಲಾ ಮಿಠಾಯಿ ಹಂಚುತ್ತೇವೆ ದು ಒಪ್ಪಿಕೊಂಡಿರುವರು. ಶ್ರೀಮನ್ಮಹಾರಾಜರವರನ್ನು ಮೆರವಣಿಗೆಯಲ್ಲಿ ಪುರಜನರು ಸಂತೇಪೇಟೆ ಮಾರ್ಗವಾಗಿ ಟೌನ್ ಹಾಲ್ ಬಂಗಲೆಗೆ ಬಿಜಯಮಾಡಿಸಿಕೊಂಡು ಬಂದ , ಅಲ್ಲಿ ಆಟಪಾಟ ವಿನೋದಗಳನ್ನು ನಡಿಸಿ, ಅಡ್ರೆಸ್ಸನ್ನು ಇಂಗ್ಲಿಷ್, ಕನ್ನಡ, ಹಿಂದುಸ್ಥಾನಿ ಈ ಮೂರು ಭಾಷೆಗಳಲ್ಲೂ ಓದಿ ಕೈಪಟ್ಟಿಗೆಯಲ್ಲಿಟ್ಟು ಒಪ್ಪಿಸಬೇಕೆಂದು ಏರ್ಪಾಡು ಮಾಡುತ್ತಿದಾರೆ. ಶ್ರೀಮನ್ಮಹಾರಾಜರವರು ಟೌನ್ ಹಾಲ್ ಬಂಗಲೆಯಿಂದ ಉತ್ಸವವಾಗಿ ದೊಡ್ಡ ಪೇಟೆ, ಚಿಟ್ಟ್ ರೋಡ್, ಕರ್ಜನ್ ಪಾರ್ಕ್ ಈ ಸ್ಥಳಗಳಲ್ಲಿ ದಯಮಾಡಿ ಅಲ್ಲಿಂದ ಕೋಟೆಯೊಳಗೆ ನಾಲ್ಕು ಬೀದಿಗಳಲ್ಲೂ ಚಿತ್ತೈಸಿ, ದೀಪೋತ್ಸವವನ್ನೂ ಬಾಣಬಿರುಸನ್ನೂ ಪರಾಂಬರಿಸಿಕೊಂಡು ಅರಮನೆಗೆ ಚಿತ್ತೈಸುವರೆಂದು ಕಾಣುವುದು

ಮೈಸೂರು ಗೆಜೆಟ್ ಸಂಗ್ರಹ

ಬೆಂಗಳೂರ್ ಸಿಟಿ ಗವರ್ನಮೆಂಟ್ ಕನ್ನಡ ಬಾಲಿಕಾ ಪಾಠಶಾಲೆಯ ಮೇಲ್ವಿಚಾರಣಾ ಕಮಿಟಿಗೆ ಪ್ರೆಷರ್ ಸಬ್ ಜಡ್ಜಿ ಮೆ॥ಪಿ ಶಿಂಗ್ರಾಚಾರ್ಯರನ್ನು ಮೆಂಬರಾಗಿ ನೇಮಿಸಿದೆ

ಅಸಿಸ್ಟಂಟ್ ಸರ್ಜನ್ ಮಿಸ್ ಎಂ ಜೆ ಡಿಮಾಸ್‌ಯವರಿಗೆ ಮಾರ್ಚ ೩ ರಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಫಾರೆಸ್ಟ್ ಸಬ್ ಅಸಿಸ್ಟೆಂಟ್ ಕನ್ಸರ್ವೇಟರ್ ಮೆ॥ಎಂ ಶ್ರೀನಿವಾಸರಾಯರಿಗೆ ಒಂದು ತಿಂಗಳು ಹದಿನೆಂಟು ದಿನಗಳ ಪ್ರಿವಿಲೆಜ್ ರಜವನ್ನೂ ಅದರ ಜೊತೆಗೆ ಒಂದು ವರುಷ ಹತ್ತು ತಿಂಗಳ ಹನ್ನೆರಡು ದಿನಗಳ ಫರ್ಲೋ ರಜವನ್ನೂ ಕೊಟ್ಟಿದೆ

ಕೋಲಾರ್ ಡಿಸ್ಟ್ರಿಕ್ಟ್ ಎಕ್ಸೈಸ್ ಅಸಿಸ್ಟಂಟ್ ಕಮಿಷನರ್ ಮೆ॥ ಬಿ ಶ್ಯಾಮಣ್ಣನವರಿಗೆ ನೊವೆಂಬರ್ ೨೪ ರಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು

೧ ನೇ ಹೈದರಾಬಾದ್ ಇಂಪೀರಿಯಲ್ ಸರ್ವಿಸ್ ಲ್ಯಾನ್ಸರ್ಸ್ ಎಂಬ ಸೈನ್ಯದ ಕೋಟೆ ದಫೆದಾರ್ ಫೈಯಜ್ ಮಹಮದ್ ಖಾನ್‌ಯವರನ್ನು ಕಳೆದ ಡಿಸೆಂಬರ್ ೧೩ ರ ಲಾಗಾಯತು ಲೋಕಲ್ ಸರ್ವಿಸ್ ರೆಜಿಮೆಂಟಿನಲ್ಲಿ ೪ ನೆ ಗ್ರೇಡ್ ಜಮಾದಾರರನ್ನಾಗಿ ನೇಮಕಮಾಡಿದೆ

ಮೈಸೂರು ಇನ್‌ಫೆಂಟ್ರಿ ೧ ನೆ ಬಟಾಲಿಯನ್ ಕಮಿಷನ್ ರ್‍ಯಾಂಕಿಯಲ್ಲಿ ಕೃಷ್ಣಸಿಂಗ್‌ಯವರನ್ನು ಫೆಬ್ರವರಿ ೧೩ ಲಾಗಾಯತು ಹವಾಲ್ದಾರ್ ಮೇಜರ್ ದರ್ಜೆಯಿಂದ ೩ ನೆ ಗ್ರೇಡ್ ಜಮಾದಾರಿಗೆ ಬಡ್ತಿ ಮಾಡಿದೆ

ಎಕ್ಸಿಕ್ಯುಟಿವ್ ಇಂಜನಿಯರ್ ಮೆ॥ ವಿ ಎಚ್ ಕರ್ನಿಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಡಿಸ್ಟ್ರಿಕ್ಟ್ ಡಿವಿಜನ್ ಅಸಿಸ್ಟಂಟ್ ಇಂಜನಿಯರ್ ಮೆ॥ ವೆಂಕಟರಾವ್ ನಿಜಗಲ್‌ಯವರಿಗೆ ಕೊಟ್ಟಿರುವ ಎರಡು ತಿಂಗಳ ಪ್ರಿವಿಲೆಜ್ ರಜವನ್ನು ಇನ್ನೂ ಒಂದು ತಿಂಗಳಿಗೆ ಜಾಸ್ತಿ ಮಾಡಿದೆ

ಸಿವಿಲ್ ಸರ್ಜನ್ ಮೆ॥ ಇ ಕೃಷ್ಣಸ್ವಾಮಿ ಐಯ್ಯರವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಪೋಲೀಸ್ ಪ್ರೊ॥ ಅಸಿಸ್ಟಂಟ್ ಸೂಪರಿಂಟೆಂಡೆಂಟ್ ಮೆ॥ ಮಿರ್ಜಾ ಮಹಮದ್ ಇಸ್ಮಾಯಿಲ್‌ರವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಅಸಿಸ್ಟಂಟ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರವರ ಅಸಿಸ್ಟಂಟರಾದ ಮೆ॥ ಪಲ್ಪುರವರಿಗೆ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಅಫ್ಘಾನಿಸ್ಥಾನದ ಅಮೀರರು.

[ಒಬ್ಬ ಬಾತ್ಮಿದಾರರಿಂದ.]

ಘನವನ್ನು ಹೊಂದಿದ ಅಫ್ಘಾನಿಸ್ಥಾನದ ಅಮೀರರು ಹೋದ ಶುಕ್ರವಾರ ಬೊಂಬಾಯಿ ಪಟ್ಟಣದ ಜುಮ್ಮಾ ಮಸೀದಿಗೆ ದಯಮಾಡಿದ್ದರು. ಅನೇಕ ಮಹಮದೀಯರು ಅವರವರ ಪೂರ್ವ ಪದ್ಧತಿಯಂತೆ ಮೊಹರಂ ಹಬ್ಬದ ಮೊದಲನೆ ದಿವಸ ಹಿಂದೂ ಉಡುಪುಗಳನ್ನು ಹಾಕಿಕೊಂಡು ಮಸೀದಿಗೆ ಹೋಗುವ ಸಂಭ್ರಮವು ನೋಡುವದಕ್ಕೆ ಬಹಳ ಉಂಟಾಗಿತ್ತು. ಪ್ರಾತಃಕಾಲ ೮ ಘಂಟೆಗೆ ಸರಿಯಾಗಿ ಅಮೀರರು ದಯಮಾಡಿದರು. ಆಗ ಪುಷ್ಪವೃಷ್ಟಿಯು ಮಾಡಿದಂತೆ ಅನೇಕ ಕಡೆಗಳಿಂದ ಹೂವುಗಳು ಹಾಕಲ್ಪಟ್ಟವು ಎಲ್ಲರನ್ನು ಒಂದೇ ಸಮನಾಗಿ ನೋಸವಾದು ಮಾಡುವ ಸ್ಥಳಕ್ಕೆ ದಯಮಾಡಿದರು ಬೊಂಬಾಯಿನಲ್ಲಿರತಕ್ಕ ಮಹಮದೀಯರೆಲ್ಲ ಬಂದಿದ್ದರು ನಮಾಜು ಮುಗಿದಮೇಲೆ ಅಮೀರರು ಮಸೀದಿಯ ಖಾಜಿಯವರಿಗೆ ಸುಮಾರು ೭೦೦—೮೦೦ ರೂಪಾಯಿ ಬಾಳುವ ಒಂದು ಅಂಗರೇಖನ್ನು ದಯಪಾಲಿಸಿದರು ಆ ಕಾಲದಲ್ಲಿ ಹೊರಗಡೆ ಇದ್ದ ಬಡ ಜನಗಳಿಗೆ ಸರಕಾರದ ನಿರ್ಬಂಧನೆಗಳು ಏನೂ ಇರಲಿಲ್ಲ. ಪ್ರತಿಯೊಬ್ಬ ಬಡವನಿಗೂ ಒಂದೊಂದು ಅಂಗರೇಖನ್ನು ಮಹಮದೀಯ ಧನಿಕರು ಧರ್ಮ ಮಾಡಿದರು ಅಮೀರರು ಸುಮಾರು ೧೦ ಘಂಟೆಗೆ ಹೊರಗೆ ದಯಮಾಡಿ ತಾವು ಇಳಿದಿದ್ದ ಸ್ಥಳಕ್ಕೆ ಹೊರಟುಹೋದರು ಸಾಯಂಕಾಲದಲ್ಲಿ ಇಲ್ಲಿನ ವಿಕ್ಟೋರಿಯಾ ತೋಟಕ್ಕೆ ದಯಮಾಡಿದರು ಈ ತೋಟವು ಪ್ರಜೆಗಳಿಗೆಲ್ಲಾ ಆನಂದವನ್ನುಂಟು ಮಾಡುವಂತೆ ಇತ್ತು ಪ್ರಜೆಗಳ ತಿಳುವಳಿಕೆ ಬಗ್ಗೆ ಪ್ರತಿಯೊಂದು ಗಿಡಕ್ಕೂ ಅದರ ಹೆಸರುಗಳನ್ನು ಬರೆದು ಇರುತ್ತಾರೆ ನಲ್ಲಿಗಳ ಮೂಲಕ ಅಲ್ಲಲ್ಲಿ ಕಾಲುವೆಗಳನ್ನು ಮಾಡಿ ನೀರನ್ನು ಬಿಟ್ಟಿರುತ್ತಾರೆ ಅದೂ ಅಲ್ಲದೆ ಅನೇಕ ತರಹ ಮೃಗ ಪಕ್ಷಿಗಳನ್ನು ಅವುಗಳು ಹ್ಯಾಗೆ ಅರಣ್ಯದಲ್ಲಿ ವಾಸಿಸುತ್ತವೆಯೊ ಹಾಗೆಯೇ ಅವುಗಳಿಗೆ ಸರಿಯಾದ ಪಸ್ಥಳಗಳನ್ನು ಮಾಡಿ ಇಟ್ಟಿರುತ್ತಾರೆ ಪ್ರಖ್ಯಾತರಾದ ಬರೋಡಾ ಗಾಯಕವಾಡ ಮಹಾರಾಜರು ಇಲ್ಲಿಗೆ ಒಂದು ಆನೆಯನ್ನು ಬಹುಮಾನವಾಗಿ ದಯಪಾಲಿಸಿರುತ್ತಾರೆ ಅಮೀರರು ಇವುಗಳನ್ನೆಲ್ಲಾ ನೋಡಿ ಬಹಳ ಸಂತೋಷಪಟ್ಟಿರುತ್ತಾರೆ ಮರುದಿವಸ ಅಮೀರರು ಹಡಗನ್ನು ಹತ್ತಿ ಕರಾಚಿಗೆ ಪ್ರಯಾಣ ಬೆಳಸಿದರು

ಇಂಡಿಯಾ ದೇಶದ ವೃತ್ತಾಂತಗಳು.

ಕೊಡಗಿನ ಫಾರೆಸ್ಟ್ ಇಲಾಖೆಯವರು ದಂಗಲಿನಲ್ಲಿ ಅನೇಕ ಆನೆಗಳನ್ನು ಈಗ ತಾನೇ ಹಿಡಿದಿರುತ್ತಾರೆಂದು ತಿಳಿಯುವುದು

◆◆◆◆

ಬೀಜಾವರದ ಮಹಾರಾಜರವರಿಗೆ ಕಳೆದ ವಾರ ಯುವರಾಜರು ಜನಿಸಿದರು ಪಟ್ಟಣದಲ್ಲೂ ಸಂಸ್ಥಾನದಲ್ಲೂ ಹಲವು ಉತ್ಸವಗಳು ನಡೆಯುತ್ತಲಿವೆ.

◆◆◆◆

ಬಂಗಾಳಾ ಅಧಿಪತ್ಯದಲ್ಲಿ ಕ್ಷಾಮ ಪೀಡಿತರಾದ ಪ್ರಜೆಗಳು ವಾರ ವಾರಕ್ಕೆ ಹೆಚ್ಚುತ್ತಿರುವರು ಈಗ ೭೦,೦೦೦ ಜನರು ಅಂದರೆ ಹಿಂದಿನ ವಾರಕ್ಕಿಂತ ೧೦,೦೦೦ ಜಾಸ್ತಿಯಾಗಿ ಸರ್ಕಾರದವರ ಪೋಷಣೆಯಲ್ಲಿ ಸೇರಿಕೊಂಡು ಜೀವನಮಾಡುವರು.

◆◆◆◆

ಆಸ್ಟ್ರೇಲಿಯಾ ದ್ವೀಪದ ಒಂಟೆಗಳ ವ್ಯಾಪಾರಿಯೊಬ್ಬನು ಸಿಂಧು ದೇಶಕ್ಕೆ ಬಂದು ೫೦೦ ಒಂಟೆಗಳನ್ನು ಕ್ರಯಕ್ಕೆ ತೆಗೆದುಕೊಂಡು, ಅವುಗಳನ್ನೆಲ್ಲಾ ಜಹಜುಗಳ ಮೇಲೆ ಬೊಂಬಾಯಿನಿಂದ ಆಸ್ಟ್ರೇಲಿಯಾ ದ್ವೀಪಕ್ಕೆ ಸಾಗಿಸುವುದಕ್ಕೆ ಸನ್ನಾಹಮಾಡುತ್ತಿದಾನೆ.

◆◆◆◆

ಕಲ್ಕತ್ತಾ ಪಟ್ಟಣದಲ್ಲಿ ಒಂದು ಹಿಂದೂ ಸಂಸಾರದಲ್ಲಿ ಅತ್ತೆ ಮಾವ ಗಂಡ ಈ ಮೂವರೂ ಸೇರಿಕೊಂಡು ೧೬ ವರುಷದ ಸೊಸೆಯನ್ನು ಹಿಡಿದು ಮೈಗೆಲ್ಲಾ ಬರೆ ಎಳೆದು ಕೊಂದು ಹಾಕಿದರೆಂತಲೂ, ಈಗ ಅವರನ್ನೆಲ್ಲಾ ದಸ್ತಗಿರಿ ಮಾಡಿದಾರೆಂತಲೂ ತಿಳಿಯುವುದು

◆◆◆◆

ಕಲ್ಕತ್ತಾ ಪಟ್ಟಣದಲ್ಲಿ ಕೈಗಾರಿಕೆಗಳ ವಸ್ತು ಪ್ರದರ್ಶನ ಶಾಲೆಯನ್ನು ನೋಡುವುದಕ್ಕೆ ಹೋಗಿದ್ದ ದೊಡ್ಡ ಕಂಪನಿಯ ಮ್ಯಾನೇಜರಾದ ಮಿ॥ ಗ್ರೀರ್ ಎಂಬಾತನು ಅಕ್ರಮ ನಡವಳಿಕೆಯನ್ನು ನಡಿಸಿದ್ದರಿಂದ ಆತನಿಗೆ ಮ್ಯಾಜಿಸ್ಟ್ರೇಟರು ನಾಲ್ಕಾಣೆ ಜುಲ್ಮಾನೆ ವಿಧಿಸಿದರು.

◆◆◆◆

ಜಾಂ ನಗರವೆಂಬ ಸಂಸ್ಥಾನದ ಆಳ್ವಿಕೆಯನ್ನು ಇಂಡಿಯಾ ಗವರ್ನಮೆಂಟಿನವರು ರಂಜಿತ್‌ಸಿಂಗ್‌ಜಿಯವರಿಗೆ ವಹಿಸಿರುತ್ತಾರೆ. ಈ ರಾಜಕುಮಾರರು ಇದುವರೆಗೆ ವಿಲಾಯತಿಯಲ್ಲಿದ್ದು ವಿದ್ಯಾಭ್ಯಾಸ ಮಾಡಿ, ಕ್ರಿಕೆಟ್ ಎಂಬ ಚಂಡಿನಾಟದಲ್ಲಿ ಪ್ರವೀಣತೆಯನ್ನು ಹೊಂದಿ ವಿಲಾಯತಿಯ ಪ್ರಜೆಗಳ ಪ್ರೀತಿ ಗೌರವಗಳನ್ನು ಸಂಪಾದಿಸಿಕೊಂಡಿರುವರು.

◆◆◆◆

ಕುಂಭಕೋಣದ ಜಿಲ್ಲಾ ಸಬ್ ಕಲೆಕ್ಟರ್ ಮಿ॥ ಆರ್. ಬ್ಯಾನರ್ಜಿಯವರು ಮೂರು ತಿಂಗಳ ರಜಾ ಪಡೆದು ವಿಲಾಯತಿಗೆ ಪ್ರಯಾಣ ಮಾಡಿದರು ಮುಂದಿನ ಜೂನ್ ತಿಂಗಳಲ್ಲಿ ಅವರು ವಾಪಸು ಬಂದು ಕೊಚ್ಚಿ ಸಂಸ್ಥಾನದ ದಿವಾನಗಿರಿಯನ್ನು ವಹಿಸಿಕೊಳ್ಳುವವರಾಗಿದಾರೆಂದು ಪ್ರಕಟವಾಗಿದೆ

◆◆◆◆

ಮದರಾಸ್ ಪಟ್ಟಣದಲ್ಲಿ ಮಹಮ್ಮದೀಯ ಬಾಲಕರ ವಿದ್ಯಾಪ್ರೋತ್ಸಾಹಕ್ಕಾಗಿ ಮುಸಲ್ಮಾನ ಪ್ರಜೆಗಳು ಒಂದು ಧರ್ಮಫಂಡನ್ನು ಏರ್ಪಡಿಸಿ ಚಂದಾ ಕೂಡಿಸುತ್ತಿದಾರೆ ಯಾವನೋ ಒಬ್ಬ ಪುಣ್ಯಾತ್ಮನು ಈ ಫಂಡಿಗೆ ತನ್ನ ಹೆಸರು ಮುಂತಾದುವೇನೂ ತಿಳಿಸದೆ ೧೦,೦೦೦ ರೂಪಾಯಿ ಒಂದೇ ಗಂಟಿನಲ್ಲಿ ಕಳುಹಿಸಿರುತ್ತಾನೆ.

ಕರಾಚಿ ಪಟ್ಟಣದ ಬಳಿ ಮಿಯಾನಾ ಎಂಬೊಂದು ಗ್ರಾಮದಲ್ಲಿ ೨೫ ಮಂದಿ ಪಠಾಣಿಯತಿ ಕಳ್ಳರು ಭಾಟಿಯಾ ಎಂಬೊಬ್ಬ ಹಿಂದುವಿನ ಮನೆಗೆ ನುಗ್ಗಿ ಸುಮಾರು ೧೫—೨೦ ಸಾವಿರ ರೂಪಾಯಿನ ನಗ ನಾಣ್ಯಗಳನ್ನು ಎತ್ತಿಕೊಂಡು ಹೋದರೆಂತಲೂ ಪೋಲೀಸಿನವರು ಆ ಗ್ರಾಮಕ್ಕೆ ಹೋಗಿ ತನಿಖೆಮಾಡುತ್ತಿದ್ದಾರೆಂತಲೂ ತಿಳಿಯುವುದು.

◆◆◆◆

ಕಳೆದ ವಾರ ಒಂದು ದಿನ ಪಂಜಾಬಿನಿಂದ ಬೊಂಬಾಯಿಗೆ ಬರುತ್ತಿದ್ದ ಮೆಯಿಲ್ ರೈಲ್ ಗಾಡಿಯು ಬಿನಾ ಎಂಬ ಸ್ಟೇಷನ್ನಲ್ಲಿ ಒಂದು ಎಂಜಿನ್‌ಗಾಡಿಗೆ ಬಡಿದು, ಆ ಗಾಡಿ ನಡಸುತ್ತಿದ್ದವನೂ ಅವನ ಕೂಡ ಕೆಲಸ ಮಾಡುತ್ತಿದ್ದ ಬೇರೆ ಮೂರು ಮಂದಿಯೂ ಮೃತಪಟ್ಟರು ಒಬ್ಬ ಪಾರ್ಸಿ ಪ್ರಯಾಣಿಕನಿಗೆ ಗಾಯವಾಯಿತು.

◆◆◆◆

ಕಲ್ಕತ್ತಾ ಪಟ್ಟಣದ ಹತ್ತಿರ ಬತ್ತಿಕರ್ಬ ಎಂಬ ಗ್ರಾಮದಲ್ಲಿ ಭತ್ತ ಕುಟ್ಟಿ ಜೀವನ ಮಾಡುತ್ತಿದ್ದ ಒಬ್ಬ ಹಿಂದೂ ವಿಧವೆಯು ತನ್ನ ಒಡವೆಯನ್ನು ಮೊದಲನೆಯ ದಿನ ೨೦೦ ರೂಪಾಯಿಗೆ ವಿಕರಿ ಮಾಡಿ ಹಣ ತಂದಳು ಮರುದಿನವೇ ಅವಳ ಶವವು ಮನೆಯಲ್ಲಿ ಬಿದ್ದಿತ್ತು ಹಣ ಕಳುವಾಗಿದ್ದಿತು. ಕೊಲೆಗಾರನ್ಯಾರೋ ಪೋಲೀಸಿನವರಿಗೆ ಇನ್ನೂ ಸಿಕ್ಕಿ ಇಲ್ಲ

◆◆◆◆

ಬರ್ಮಾ ಅಧಿಪತ್ಯದಲ್ಲಿ ಈ ವರುಷ ಭತ್ತದ ಬೆಳೆ ಸ್ವಲ್ಪ ಕಡಿಮೆ. ಈ ಸಲ ಆಗಿರುವ ಭತ್ತದಿಂದ ಅಲ್ಲಿಗೆ ಬೇಕಾಗಿರುವಷ್ಟು ಉಳಿಸಿಕೊಂಡು, ಇತರ ಕಡೆಗಳಿಗೆ ೨೩ ಲಕ್ಷ ಪಲ್ಲಾಗಳನ್ನು ರಫ್ತುಮಾಡುವರು. ಈ ಪೈಕಿ ೪೦ ಲಕ್ಷ ಪಲ್ಲಾ ಅಕ್ಕಿಯು ವಿಕರಿಗೆ ಬಂದು ಮಾರಾಟವಾಯಿತು. ಈ ಸಲ ಬಹಳ ಅಕ್ಕಿಯನ್ನು ಬಂಗಾಳೀ ಪ್ರಜೆಗಳೇ ಕೊಂಡುಕೊಳ್ಳುತ್ತಿದಾರೆ

◆◆◆◆

ಅಮೃತಸಾರ ಡಿಸ್ಟ್ರಿಕ್ಟಿಗೆ ಸೇರಿದ ನೌಷೆರಾ ಢಾಲಾ ಎಂಬ ಗ್ರಾಮದಲ್ಲಿ ಪ್ರಜೆಗಳು ತುಂಟರಾಗಿ ಕಾರುಕರ್ದಿಗಳನ್ನು ನಡಸುತ್ತಾ ಬಂದದನ್ನು ನೋಡಿ ಸರ್ಕಾರದವರು ಅವರನ್ನು ಶಿಕ್ಷಿಸುವುದಕ್ಕಾಗಿ ಕೆಲವು ಮಂದಿ ಪೋಲೀಸಿನವರನ್ನು ಆ ಗ್ರಾಮದ ಕಾವಲಿಗೆ ನೇಮಕ ಮಾಡಿ, ಅವರ ಸಂಬಳವನ್ನು ಗ್ರಾಮಸ್ಥರಿಂದಲೇ ವಸೂಲ್ಮಾಡಬೇಕೆಂದು ಹುಕುಂ ಕೊಟ್ಟಿದಾರೆ

◆◆◆◆

ಬೊಂಬಾಯಿ ಪಟ್ಟಣದಲ್ಲಿ ಬಾಲಕೃಷ್ಣನಾರಾಯಣ ಪಥಕ್ ಎಂಬಾತನು ತನ್ನ "ವಿಹಾರಿ" ಎಂಬ ಮರಾಟಿ ವರ್ತಮಾನ ಪತ್ರಿಕೆಯಲ್ಲಿ ಇಂಗ್ಲಿಷ್ ಗವರ್ನಮೆಂಟನ್ನು ನರಕಕ್ಕೆ ಹೋಲಿಸಿ ಒಂದು ಬಾತ್ಮಿಯನ್ನು ಪ್ರಕಟಿಸಿದ್ದನು ಮ್ಯಾಜಿಸ್ಟ್ರೇಟರು ವಿಚಾರಣೆ ಮಾಡಿ ಇದಕ್ಕಾಗಿ ಆತನಿಂದ ೧,೦೦೦ ರೂಪಾಯಿಗೆ ಪತ್ರ ಬರೆಸಿಕೊಂಡುದಲ್ಲದೆ ೫೦೦ ರೂಪಾಯಿನ ಇಬ್ಬರು ಜಾಮೀನ್‌ದಾರರನ್ನು ತೆಗೆದುಕೊಂಡಿರುವರು

◆◆◆◆

ವಿಲಾಯತಿಯ ದೊರೆಯವರ ಸಹೋದರರಾದ ಡ್ಯೂಕ್ ಆಫ್ ಕನ್ನಾಟ್‌ಯವರು ಪತ್ನಿ ಪರಿವಾರ ಸಹಿತ ಕಳೆದ ಎರಡು ವಾರಗಳಿಂದ ಬರ್ಮಾ ಅಧಿಪತ್ಯದಲ್ಲಿ ಸಂಚಾರ ಮಾಡಿ ಅಲ್ಲಿ ನಡೆದ ಸತ್ಕಾರಗಳನ್ನು ಸ್ವೀಕರಿಸಿ, ಅಲ್ಲಿಂದ ಪ್ರಯಾಣ ಮಾಡಿದರು ಅವರು ಈ ದಿನ ಕಲ್ಕತ್ತೆಗೆ ದಯಮಾಡಿ ವೈಸ್‌ರಾಯಿಯವರ ಆತಿಥ್ಯದಲ್ಲಿದ್ದು ತಾ ೧೨ನೆ ಮಂಗಳವಾರ ಅಲ್ಲಿಂದ ಜಹಜು ಹತ್ತಿ ವಿಲಾಯತಿಯನ್ನು ಕುರಿತು ತೆರಳುವವರಾಗಿದಾರೆ.

◆◆◆◆

ಹಿಂದಿನ ವಾರ ಪ್ಲೇಗ್ ಉಪದ್ರದಲ್ಲಿ ಹಿಂದುಸ್ಥಾನದಲ್ಲೆಲ್ಲಾ ಒಟ್ಟು ೨೦,೭೦೬ ಜನರು ಕಾಲವಾದರು ಕಳೆದ ವಾರ ಅದಕ್ಕಿಂತ ಹೆಚ್ಚಾಗಿ ಅಂದರೆ ೨೩,೪೧೧ ಜನರು ಈ ರೋಗದಲ್ಲಿ ತೀರಿಹೋದರು ಈ ಪೈಕಿ ಬೇರೆ ಬೇರೆ ಸ್ಥಳದ ಸಂಖ್ಯೆ ಎಷ್ಟೆಂದರೆ— ಪಂಜಾಬ್ ೯,೪೧೦, ಸಂಯುಕ್ತ ಅಧಿಪತ್ಯಗಳು ೬,೫೭೬, ಬೊಂಬಾಯಿ ಅಧಿಪತ್ಯ ೨,೫೭೩, ಬಂಗಾಳಾ ೨,೦೭೧, ಮಧ್ಯಪ್ರಾಂತ್ಯಗಳು ೧,೬೬೭, ಮಧ್ಯ ಇಂಡಿಯಾ ೩೮೬, ಬರ್ಮಾ ೪೦೯,

◆◆◆◆

ಕಳೆದ ವಾರ ಪಿಠಾಪುರದ ರಾಜರಿಗೆ ಪಟ್ಟಾಭಿಷೇಕೋತ್ಸವವಾಯಿತು ಗೋದಾವರಿ ಮೊದಲಾದ ಸಮೀಪ ಸ್ಥಳಗಳಿಂದ ಸುಮಾರು ೫೦,೦೦೦ ಪ್ರಜೆಗಳು ಹೋಗಿ ಆ ಉತ್ಸವವನ್ನು ನೋಡಿ ಬಂದರು ರಾಜರು ಕಡೆಯ ದಿನ ರಾತ್ರಿ ಬೆಳ್ಳಿಯ ಹೌದಾ ಮೇಲೆ ಕುಳಿತು ಮೆರವಣಿಗೆ ಮಾಡಿಕೊಂಡರು ಈ ಉತ್ಸವಗಳಿಗೆಲ್ಲಾ ೭೫,೦೦೦ ರೂಪಾಯಿ ಖರ್ಚಾಯಿತೆಂದೂ ಆದರೆ ರಾಜರು ಸೂಳೆಯರ ಆಟ ಮುಂತಾದ್ದಕ್ಕೆ ಅವಕಾಶಕೊಡಲಿಲ್ಲವೆಂದೂ ಪ್ರಕಟವಾಗಿದೆ

◆◆◆◆

ಹಿಂದುಸ್ಥಾನದಲ್ಲಿ ಅಂಚೆ ಇಲಾಖೆಯ ಆದಾಯವು ಗವರ್ನಮೆಂಟಿಗೆ ತುಂಬಾ ಬರುತ್ತಿರುವುದರಿಂದ ಇನ್ನು ಮೇಲೆ ಒಂದು ತೊಲಾ ತೂಕದ ಕಾಗದವನ್ನು ಅರ್ಧಾಣೆ ಸ್ಟಾಂಪಿನಲ್ಲೇ ಊರಿಂದೂರಿಗೆ ಸಾಗಿಸಿ ಬಟವಡಿಮಾಡಬೇಕೆಂದು ಚರ್ಚೆ ನಡೆಯುತ್ತಿದೆ. ಇದಲ್ಲದೆ ಈಗ ಸರ್ಕಾರದವರು ವಸೂಲ್ಮಾಡುತ್ತಿರುವ ಉಪ್ಪಿನ ಸುಂಕವನ್ನು ಸಂಪೂರ್ಣವಾಗಿ ಬಿಟ್ಟುಬಿಡಬೇಕೆಂದೂ ಯೋಚಿಸುತ್ತಿದಾರೆ. ಈ ವಿಚಾರಗಳೆಲ್ಲಾ ಏಪ್ರಿಲ್ ತಿಂಗಳ ಆದಿಯಲ್ಲಿ ಸ್ಪಷ್ಟವಾಗಿ ಗೊತ್ತಾಗುವವು

◆◆◆◆

ಕಡಪೆ, ಕರ್ನೂಲ್, ಬಳ್ಳಾರಿ, ಈ ಜಿಲ್ಲೆಗಳ ಪುಣ್ಯವಂತರೂ ದೇಶವತ್ಸಲರೂ ಸೇರಿ ಮಿ॥ ಎಸ್ ರಾಮರಾವ್ ಎಂಬವರಿಗೆ ದ್ರವ್ಯಸಹಾಯಮಾಡಿ, ಅವರನ್ನು ಜಪಾನ್ ರಾಜ್ಯಕ್ಕೆ ಕಳುಹಿಸಿದ್ದರು ಇವರು ಅಲ್ಲಿದ್ದು ಸಾಬೂನಿನ ತಯಾರಿ, ಮೋಂಬತ್ತಿ, ಗಾಜು, ಪೀಪದಕಡ್ಡಿಗಳನ್ನು ಮಾಡುವುದು, ಇದನ್ನೆಲ್ಲಾ ಕಲಿತುಕೊಂಡು ಕಳೆದ ವಾರ ಬಳ್ಳಾರಿಗೆ ಬಂದಿರುತ್ತಾರೆ. ಈಗ ಅಲ್ಲಿನ ದೊಡ್ಡ ಮನುಷ್ಯರ ಸಹಾಯದಿಂದ ಆ ಪದಾರ್ಥಗಳನ್ನು ತಯಾರುಮಾಡುವುದಕ್ಕೆ ಅವಶ್ಯವಾದ ಏರ್ಪಾಡುಗಳನ್ನು ಮಾಡಲಾರಂಭಿಸಿದಾರೆ.

◆◆◆◆

ಬಂಗಾಳಾ ಅಧಿಪತ್ಯಕ್ಕೆ ಸೇರಿದ ಘೋಕ್ ಲಾಸವೆಂಬ ಹಿಂದೂ ಯಾತ್ರಾಸ್ಥಳದಲ್ಲಿ ಒಬ್ಬ ಮಾರ್ವಾಡಿ ಸ್ತ್ರೀಯು ನಿಲುವಾಭರಣವನ್ನು ಧರಿಸಿಕೊಂಡು, ದೇವಸ್ಥಾನಕ್ಕೆ ಹೋಗಿ ದೇವರ ಸೇವೆ ಮಾಡುತ್ತ ಇರುವಾಗ್ಗೆ ಒಬ್ಬ ದುಷ್ಟ ಚೋರನು ಆಕೆಯ ಹಿಂಭಾಗದಿಂದ ಹೋಗಿ ಆಕೆಯ ಕತ್ತಿನಲ್ಲಿದ್ದ ಜವಾಹಿರಿಯ ಚಂದ್ರಹಾರ ಪದಕಗಳನ್ನು ಝಟಕಾಯಿಸಿ ಕಿತ್ತುಕೊಂಡು ಓಡಿದನು ಆಕೆ ಕೂಡಲೇ ಗಲ್ಲು ಮಾಡಿದಳು ಪೋಲೀಸಿನವರು ಕಳ್ಳನ ಬೆನ್ನು ಹತ್ತಿ ಹೋಗಿ ಹಿಡಿದು ಒಡವೆಯನ್ನು ಕಿತ್ತು ತಂದು ಆಕೆಗೆ ಕೊಡಿಸಿದ್ದಲ್ಲದೆ ಆ ದುಷ್ಟನಿಗೆ ಎರಡು ವರುಷ ಸಜಾ ಹಾಕಿಸಿದರು.

◆◆◆◆

ಬೊಂಬಾಯಿ ಪಟ್ಟಣದಲ್ಲಿ ಅಂಚೆ ಜವಾನರು ಒಟ್ಟಾಗಿ ತಮ್ಮ ಸಂಬಳ ಜಾಸ್ತಿ ಕೊಡದಿದ್ದರೆ ಕೆಲಸಕ್ಕೆ ಬರುವದಿಲ್ಲವೆಂದು ನಿಂತುಬಿಟ್ಟಾಗ ಅಂಚೆ ಇಲಾಖೆಯ ಅಧಿಕಾರಿಗಳು ಅವರನ್ನು ಕರೆಸಿಕೊಂಡು ಅವರ ಮನೋವ್ಯಥೆಯನ್ನು ವಿಚಾರಿಸಿ ಅವರ ಸಂಬಳಗಳನ್ನೆಲ್ಲಾ ಜಾಸ್ತಿ ಮಾಡಿ, ಕೆಲಸದ ಮೇಲೆ ಕಳುಹಿಸಿದರು ಈಗ ಅದೇ ಇಲಾಖೆಯ ಸುಮಾರು ೧೦೦ ಮಂದಿ ಗುಮಾಸ್ತರು ಏಕವಾಗಿ ಸಭೆಗಳನ್ನು ನಡಿಸಿ ಜವಾನರಿಗೇ ಸಂಬಳ ಜಾಸ್ತಿ ಕೊಡಬಹುದಾದರೆ ತಮಗು ಬತ್ತಿ ಕೊಡುವುದು ನ್ಯಾಯವಾಗಿರುವುದು ಎಂದು ಒಂದು ಅರ್ಜಿ ಬರೆದು ಎಲ್ಲರೂ ರುಜುಮಾಡಿ, ಅಧಿಕಾರಿಗಳಿಗೆ ಒಪ್ಪಿಸಿದಾರೆ.

◆◆◆◆

ಪೂನಾ ಪಟ್ಟಣದಲ್ಲಿ ರನ್ನನೆಂಬ ಅಪರಾಧಿಗೆ ಐದು ವರುಷ ಕಠಿಣ ಸಜಾ ಆಯಿತು ಪೋಲೀಸಿನವರು ಅವನನ್ನು ಜೈಲ್‌ಖಾನೆಗೆ ಕರೆದುಕೊಂಡು ಹೋಗುತ್ತಿರುವಲ್ಲಿ ಅವನು ಹೇಗೋ ತಪ್ಪಿಸಿಕೊಂಡನು ಮತ್ತೆ ಅವನನ್ನು ಪೋಲೀಸಿನವರು ಹಿಡಿದು ತಂದು ಮೊಕದ್ದಮೆ ನಡಿಸಿದಾಗ ಮ್ಯಾಜಿಸ್ಟ್ರೇಟರು ಅವನಿಗೆ ಇನ್ನೂ ಮೂರು ವರುಷ ಕಠಿಣ ಸಜಾ ವಿಧಿಸಿದರು. ಆಗ ಅವನನ್ನು ಸರಿಯಾದ ಪಹರೆ ಇಟ್ಟು ಬಂದೀಖಾನೆಗೆ ಕರೆದುಕೊಂಡು ಹೋಗಿ ಒಂದು ಕೊಠಡಿಯಲ್ಲಿ ಕೂಡಿಟ್ಟು ಬೀಗ ಹಾಕಿದರು ಮರುದಿನವೇ ಒಳಗಿದ್ದ ರನ್ನನು ತನ್ನ ಮೈಮೇಲಿದ್ದ ಬಟ್ಟೆಯನ್ನು ಹರಿ ಮಾಡಿ, ಬಾಗಿಲ ಸಲಾಕೆಗೆ ಕಟ್ಟಿ ಉರುಲು ಹಾಕಿಕೊಂಡು ಪ್ರಾಣ ಬಿಟ್ಟನು

◆◆◆◆

ಬರೋಡಾ ಸಂಸ್ಥಾನದ ಗಾಯಕವಾಡ ಮಹಾರಾಜರವರು ಪಟ್ಟಾಭಿಷಿಕ್ತರಾಗಿ ೨೫ ಸಂವತ್ಸರಗಳಾದವು ಈ ೨೫ ವರುಷಗಳಲ್ಲಿ ಅವರು ತಮ್ಮ ಸಂಸ್ಥಾನದ ಶ್ರೇಯೋಭಿವೃದ್ಧಿಗಾಗಿ ಕೆಲವು ವಿಧಗಳಾದ ಏರ್ಪಾಡುಗಳನ್ನು ಮಾಡಿ ಪ್ರಜೆಗಳ ಪ್ರೀತಿಗೌರವಗಳನ್ನು ಸಂಪಾದಿಸಿಕೊಂಡರು ಈಗ ಪ್ರಜೆಗಳು ತಮ್ಮಲ್ಲಿರುವ ರಾಜಭಕ್ತಿ ವಿಶ್ವಾಸಗಳನ್ನು ಪ್ರಕಾಶಪಡಿಸುವುದಕ್ಕೋಸ್ಕರ ಮಹಾರಾಜರವರ ಹೆಸರನ್ನು ಶಾಶ್ವತಪಡಿಸುವ ಏರ್ಪಾಡು ಮಾಡಿ, ನೆನ್ನೆ ಮೊನ್ನೆಯಿಂದ ಉತ್ಸವಗಳನ್ನು ನಡಿಸುತ್ತಿದಾರೆ ಚಂದಾ ಮೂಲಕ ಹಣ ಕೂಡಿಸಿ ರಾಜಧಾನಿಯಲ್ಲಿ ಮಹಾರಾಜರವರ ಭಾವಪ್ರತಿಮೆಯನ್ನು ಅಲಂಕಾರ ಮಾಡಿ ನಿಲ್ಲಿಸಬೇಕೆಂದು ಗೊತ್ತು ಮಾಡಿರುವರು

◆◆◆◆

ಹಿಂದುಗಳಲ್ಲಿ ಜನನ, ವಿವಾಹ, ಮರಣಾದಿಗಳು ನಡೆಯುವಾಗಲೆಲ್ಲಾ ಮನೆಯ ಯಜಮಾನನು ಪುಣ್ಯವಂತನಾಗಿರಲಿ ದರಿದ್ರನಾಗಿರಲಿ ಸಮಾರಾಧನೆಗಳನ್ನು ಮಾಡುವುದಕ್ಕಾಗಿ ತುಂಬಾ ದ್ರವ್ಯ ಖರ್ಚು ಮಾಡಬೇಕಾಗಿದೆ ಈಚೆಗೆ ಬೊಂಬಾಯಿನಲ್ಲಿ ೮—೧೦ ಮನೆಗಳವರು ಒಂದಾಗಿ ಹೀಗೆ ಸಮಾರಾಧನೆಗಳನ್ನು ಮಾಡಲೇ ಕೂಡದೆಂತಲೂ ಅವುಗಳಿಗೆ ಬದಲಾಗಿ ಹಣವನ್ನು ಬಡಬಗ್ಗರ ವಿದ್ಯಾ ಪ್ರೋತ್ಸಾಹ ಮುಂತಾದ ಪುಣ್ಯಕಾರ್ಯಗಳಿಗೆ ವಿನಿಯೋಗಿಸಬೇಕೆಂತಲೂ ಸಂಕಲ್ಪಮಾಡಿಕೊಂಡು ಅದೇ ರೀತಿ ಆಚರಿಸುತ್ತಾ ಬಂದರು ಅವರನ್ನು ನೋಡಿ ಇತರ ಜನರು ಅವರನ್ನು ದೂರಮಾಡುವುದು, ನಾನಾ ಬಗೆಯಿಂದ ದೂರಿ ಅಲ್ಲಗಳೆಯುವುದು, ಹೀಗೆಲ್ಲಾ ಅವಮಾನಪಡಿಸುತ್ತಿದಾರೆ.

◆◆◆◆

ಹಿಂದುಸ್ಥಾನದಿಂದ ಮಕ್ಕಾ ಮದೀನಾ ಎಂಬ ಯಾತ್ರಾಸ್ಥಳಗಳಿಗೆ ಹೋಗುವ ಮಹಮದೀಯರ ವಿಷಯದಲ್ಲಿ ಡಾಕ್ಟರ್ ಫೋಲ್ ಎಂಬ ದೊಡ್ಡ ಮನುಷ್ಯರು ತಿಳಿಸಿರುವುದೇನೆಂದರೆ—ಹಿಂದುಸ್ಥಾನದಿಂದ ಮಕ್ಕೆಗೆ ಹೋಗುವುದಕ್ಕೂ ಅಲ್ಲಿಂದ ವಾಪಸು ಬರುವುದಕ್ಕೂ ಮಹಮದೀಯರು ಹಿಂದುಸ್ಥಾನದಲ್ಲೇ ಭಾಡಿಗೆ ಪಾವತಿ ಮಾಡಿ ಟಿಕೆಟ್ ಪಡೆಯುವುದಿಲ್ಲ ಇದರಿಂದ ಅವರಿಗೆ ನಾನಾ ಕಷ್ಟಗಳು ಪ್ರಾಪ್ತವಾಗುತ್ತವೆ. ಇತರ ದೇಶಗಳಿಂದ ಅಲ್ಲಿಗೆ ಯಾತ್ರಾರ್ಥಿಗಳಾಗಿ ಬರತಕ್ಕವರನ್ನು ಆಯಾ ದೇಶದ ಸರ್ಕಾರದವರು ಬಲಾತ್ಕರಿಸಿ, ಹೋಗುವುದಕ್ಕೂ ಬರುವುದಕ್ಕೂ ಒಂದೇಸಲ ಟಿಕೆಟ್ ಕೊಂಡುಕೊಳ್ಳುವಂತೆ ಮಾಡುತ್ತಾರೆ. ಹಿಂದುಸ್ಥಾನದಲ್ಲಿ ಇಂಥಾ ನಿರ್ಬಂಧವೇನೂ ಇಲ್ಲದ ಕಾರಣ ಇಲ್ಲಿಂದ ಹೋಗಿರತಕ್ಕವರು ವಾಪಸು ಬರುವುದಕ್ಕೆ ಚೈತನ್ಯವಿಲ್ಲದೆ ಸುಮಾರು ೩೦,೦೦೦ ಮಂದಿ ಯಾತ್ರಾರ್ಥಿಗಳು ಜಿದ್ದಾ ಪಟ್ಟಣದಲ್ಲಿ ಈಗ ಉಳುಕೊಂಡು ಕಷ್ಟಪಡುತ್ತಿದಾರೆ. ಇಂಡಿಯಾ ಗವರ್ನಮೆಂಟಿನವರು ಅಂಥಾ ನಿರ್ಬಂಧವನ್ನು ಕಲ್ಪಿಸಬೇಕಾದ ಅಗತ್ಯವೇನೂ ಕಾಣುವುದಿಲ್ಲ. ಇಲ್ಲಿನ ಮಹಮದೀಯ ಸಂಘದವರೇ ಈ ವಿಷಯವನ್ನು ಪರ್ಯಾಲೋಚಿಸಿ ಏರ್ಪಾಡು ಮಾಡಿಕೊಳ್ಳಬೇಕಾಗಿದೆ.

◆◆◆◆

ಭೂಪಾಲ್‌ಪುರದ ನವಾಬರು ಮಕ್ಕೆಗೆ ಯಾತ್ರೆ ಹೋಗಿದ್ದು ವಾಪಸು ಬರುವಾಗ್ಗೆ ಕಾಲವಾದರೆಂಬ ಸಂಕ್ಷೇಪವೃತ್ತಾಂತವನ್ನು ಕಳೆದ ವಾರ ತಿಳಿಸಿದೆವು. ಈಚೆಗೆ ಈ ವಿಷಯದಲ್ಲಿ ಕೆಲವು ಹೊಸ ಸಂಗತಿಗಳು

ಣವಾಗಿರುವವು. ಏನೆಂದರೆ—ನವಾಬರ ಕಳೇಬರಸಹಿತವಾದ ಕರಾಚಿ ಪಟ್ಟಣವನ್ನು ತಲಪಿತು ಅವರ ಸಂಸಾರಕ್ಕೆ ಸೇರಿ ಇತರರೂ ಸೇರಿ ೫೫೦ ಮಂದಿ ಯಾತ್ರಾರ್ಥಿಗಳು ವಾಪಸು ಜಹಜಿನಲ್ಲಿ ಬಂದಿಳಿದರು. ಈ ಪ್ರಯಾಣದಲ್ಲಿ ೧೦ ಮಂದಿ ಯಲ್ಲೇ ಮೃತಪಟ್ಟರು ನವಾಬರಿಗಾದರೋ ಯಾತ್ರೆಹೊರಡುವು ಮುಂಚೆಯೇ ಒಂದು ತಿಂಗಳಿಂದ ಕಾಯಿಲೆಯಾಗಿದ್ದು ತಮ್ಮ ಹಕೀಮರಿಂದಲೇ ಔಷಧಿ ತೆಗೆದುಕೊಳ್ಳುತ್ತಿದ್ದರು. ಮದೀನಾ ಪುಣ್ಯಸ್ಥಳವನ್ನು ತಲಪಿದ ಕೂಡಲೇ ಅವರಿಗೆ ಪಾರ್ಶ್ವವಾಯು ವಾಗಿ ಕಾಲು ಸೇದಿಕೊಂಡಿತು ಅಂಥಾದ್ದರಲ್ಲೇ ಯಾತ್ರೆಯನ್ನು ಮುಗಿಸಿಕೊಂಡು ಜಿಡ್ಡಾಪಟ್ಟಣದಿಂದ ವಾಪಸುಬರುವಾಗ್ಗೆ ಭೇದಿ ಹಿಡಿತು ತರುವಾಯ ಅವರ ಎದೆಯು ಒಣಗಿಹೋಗಿ ಐದು ದಿನಗ ಳಲ್ಲಿ ಕಾಲವಾದರು ಕರಾಚಿ ಪಟ್ಟಣದಲ್ಲಿ ಒಂದು ಸ್ಪೆಷಲ್ ರೈಲು ಸಿದ್ಧ ವಾಗಿತ್ತು. ಈ ಗಾಡಿಗಳ ಸುತ್ತಾ ಕನಾತುಕಟ್ಟಿ ನವಾಬರ ಶವವನ್ನು ದಲ್ಲೇ ಜಹಜಿನಿಂದ ರೈಲ್‌ಗಾಡಿಯೊಳಕ್ಕೆ ಸಾಗಿಸಿ ಅದೊಂದು ಯನ್ನೇ ಪ್ರತ್ಯೇಕವಾಗಿ ಭಾವಲ್‌ಪುರಕ್ಕೆ ರವಾನೆಮಾಡಿದರು. ಮತ್ತೊಂದು ಸ್ಪೆಷಲ್ ರೈಲಿನಲ್ಲಿ ನವಾಬರ ಅರಮನೆಯ ಜನಾನಿಯು ಸೇವಕಾಳಿಗಳೂ ಪ್ರಯಾಣಮಾಡಿದರು. ಜನಾನಿಯಲ್ಲಿ ಹೆಂಗ ಸರೇ ೭೦ ಮಂದಿ ಇದ್ದರು.

ವಿದೇಶ ವರ್ತಮಾನಗಳು.

ಅಮೇರಿಕಕ್ಕೆ ಸೇರಿದ ಮಾಂಟ್ರೇಲ್ ಪಟ್ಟಣದಲ್ಲಿ ಕಳೆದ ವಾರ ಒಂದು ವಿದ್ಯಾಶಾಲೆಗೆ ಬೆಂಕಿ ಬಿದ್ದು ಹದಿನೇಳು ಮಂದಿ ವಿದ್ಯಾರ್ಥಿಗಳು ಬೆಂಕಿಗೆ ಸಿಕ್ಕಿ ಮೃತಪಟ್ಟರೆಂದು ತಂತೀ ವರ್ತಮಾನ ಬಂದಿದೆ

*****

ಮಿ॥ ಜೆ ಡಿ ರಾಕ್‌ಫೆಲರ್ ಎಂಬ ಅಮೇರಿಕದ ಮಹದೈಶ್ವ ರ್ಯವಂತನು ಅಲ್ಲಿನ ವಿದ್ಯಾಪ್ರೋತ್ಸಾಹಕ ಸಂಘಗಳಿಗೂ ವಿದ್ಯಾನಿಲ ಯಗಳಿಗೂ ಇದುವರೆಗೆ ೯೬೦ ಲಕ್ಷ ರೂಪಾಯಿ ಕೊಟ್ಟಿರುತ್ತಾನೆಂದು ಸುದ್ದಿ ಬಂದಿದೆ.

*****

ರಷ್ಯಾ ರಾಜ್ಯಕ್ಕೆ ಸೇರಿದ ವಾರ್ಸಾ ಪಟ್ಟಣದಲ್ಲಿ ಒಂದು ಗುಂಪಿನ ದರೋಡೆಕಾರರು ಅಂಚೆ ಕಛೇರಿಗೆ ನುಗ್ಗಿ ಒಳಗಿದ್ದ ನೌಕರರಲ್ಲಿ ೬ ಮಂದಿಯನ್ನು ಕೊಂದು, ಐದು ಜನರಿಗೆ ಗಾಯ ಮಾಡಿ, ... ರೂಪಾಯಿ ಎತ್ತಿಕೊಂಡು ಗಾಡಿಗಳಲ್ಲಿ ಕುಳಿತು ಪರಾರಿಯಾ ದರು

*****

ಬಲ್ಗೇರಿಯಾ ರಾಜ್ಯದಲ್ಲಿ ಕೆಲವು ದುಷ್ಟರು ಸೇರಿ ಒಬ್ಬ ಜರ್ಮನ ಪ್ರಜೆಯನ್ನು ಕೊಂದು ಹಾಕಿ ಇನ್ನೊಬ್ಬನಿಗೆ ಗಾಯಪಡಿಸಿದ್ದಾರೆಂ ದು ಇದಕ್ಕಾಗಿ ಪ್ರತಿಫಲ ಕೊಡಬೇಕೆಂದು ಜರ್ಮನಿ ಸರ್ಕಾರ ದ ಪರ್ಷಿಯಾದವರನ್ನು ಕೇಳಿದಾರೆಂತಲೂ ತಂತೀ ವರ್ತಮಾನ ಬಂದಿದೆ

*****

ಕೆನಡಾ ಸ್ವಾಸ್ಥ್ಯಕ್ಕೆ ಸೇರಿದ ಒಂಟೇರಿಯೋ ಎಂಬ ಪಟ್ಟಣದ ಒಂದು ಬ್ಯಾಂಕಿನ ಮಾನೇಜರಾಗಿದ್ದ ಛಾರ್ಲಸ್ ಮೆಗ್ಗಿಲ್ ಎಂಬಾತನು ದು ನ್ಯಾಯಗಳನ್ನು ಸುಳ್ಳುಸುಳ್ಳಾಗಿ ಬರೆದು ಸರ್ಕಾರಕ್ಕೆ ರಿ ಪೋರ್ಟು ಮಾಡಿದನೆಂದು ಕಂಡು ಬಂದ ಕಾರಣ ಸರ್ಕಾರದವರು ನಿಗೆ ಐದು ವರುಷ ಸಜಾ ವಿಧಿಸಿದರು.

*****

ಅಮೇರಿಕದಲ್ಲಿ ನ್ಯೂಯಾರ್ಕ್ ನಗರದಿಂದ ಚಿಕಾಗೋ ಪಟ್ಟ ಣಕ್ಕೆ ಬಹು ವೇಗವಾಗಿ ಹೋಗುತ್ತಿದ್ದ ಎಕ್ಸ್‌ಪ್ರೆಸ್ ಎಂಬ ರೈಲ್‌ಗಾ ಡಿಯು ಜರ್ಸಿಟ್ರ ಪಟ್ಟಣದ ಬಳಿ ಕಂಬಿಗಳನ್ನು ಬಿಟ್ಟು ನೆಲದ ಮೇಲೆ ಬಿದ್ದು ಅನಾಹುತವಾಯಿತು ಐವತ್ತು ಮಂದಿ ಪ್ರಯಾಣಿಕರಿಗೆ ಗಾ ಯಗಳಾದವು ಈ ಪೈಕಿ ಹಲವರು ಬದುಕುವ ಹಾಗೆ ಕಾಣುವುದಿಲ್ಲ

*****

ರಷ್ಯಾ ರಾಜ್ಯದ ಡ್ಯೂಮಾ ಎಂಬ ಹೊಸ ಪಾರ್ಲಿಮೆಂಟ್ ಸಭೆ ಯು ಮೊನ್ನೆ ೫ನೆ ತಾ ಕೂಡುವುದಾಗಿದ್ದಿತು ಈ ಸಭೆಗೆ ಪ್ರಜೆ ಗಳು ೬೫೯ ಮೆಂಬರುಗಳನ್ನು ಚುನಾಯಿಸಿ ಕಳುಹಿಸಿದಾರೆ ಈ ಪೈ ಕಿ ೬೫ ಮಂದಿ ಮಾತ್ರ ಈಗಿನ ರಾಜ್ಯಭಾರ ಕ್ರಮಗಳನ್ನು ಮೆಚ್ಚುತ ರುವರು ೫೯೪ ಮಂದಿಗೆ ಈಗಿನ ರಾಜ್ಯಭಾರದಲ್ಲಿ ಅಭಿಮತವಿಲ್ಲ.

*****

ಯೂರೋಪಿನಲ್ಲಿ ಹಾರ್ವಿಚ್ಚಿನಿಂದ ಹೊಲ್ಲಾಂಡಿಗೆ ಹೋಗುತ್ತಿ ದ್ದ ಬರ್ಲಿನ್ ಎಂಬ ಹಡಗು ಬಂಡು ಬಂಡೆಗೆ ಬಡಿದು ೧೫೧ ಜನ ಪ್ರ ಯಾಣಿಕರು ಸಮುದ್ರದ ಪಾಲಾದರು. ಇವರಲ್ಲಿ ಜರ್ಮನಿ, ಹಾ ಲೆಂಡ್, ಬೆಲ್ಜಿಯಂ ರಾಜ್ಯಗಳವರೇ ವಿಶೇಷವಾಗಿದ್ದರು. ಮಿ॥ ಆರ್ಥರ್ ಹರ್ಬರ್ಟ್ ಎಂಬ ರಾಜ್ಯಭಾರಿಯು ಇದ್ದು ಕಾಲವಾದನು. ಜೀವವಿ ದ್ದವರನ್ನು ದಡಕ್ಕೆ ಕರೆದುತಂದು ಶೈತ್ಯೋಪಚಾರ ಮಾಡುವುದರಲ್ಲಿ ಬಹು ಸಾಹಸಪಟ್ಟ ಪ್ರಿನ್ಸ್ ಹೆನ್ರಿ ಎಂಬ ರಾಜಕುಮಾರನಿಗೆ ವಿಲಾ ಯತಿಯ ದೊರೆಯವರು ಒಂದು ಬಿರುದನ್ನು ದಯಪಾಲಿಸಿರುತ್ತಾರೆ

*****

ಇಂಗ್ಲಿಷ್ ಗವರ್ನಮೆಂಟಿನವರು ಈಗತಾನೇ ಯುದ್ಧ ಮಾಡಿ ಗೆದ್ದುಕೊಂಡಿರುವ ದಕ್ಷಿಣ ಆಫ್ರಿಕಾ ದೇಶಕ್ಕೆ ಸ್ವತಂತ್ರಾಧಿಕಾರವನ್ನು ಕೊಟ್ಟರೆ ಅಲ್ಲಿನ ಪ್ರಜೆಗಳೇ ಸರ್ಕಾರವನ್ನು ಏರ್ಪಡಿಸಿಕೊಂಡು ರಾಜ್ಯ ಭಾರ ನಡಸುವಂತೆ ಸ್ವಾತಂತ್ರ್ಯವನ್ನು ವಹಿಸಿರುತ್ತಾರೆ ಈಗ ಈ ಅಧಿಕಾರವನ್ನನುಸರಿಸಿ ದಕ್ಷಿಣ ಆಫ್ರಿಕದ ಪ್ರಜೆಗಳು ಸಭೆಮನೆಗಳ ನ್ನು ಮಾಡಿಕೊಂಡು ತಮಗೆ ಬೇಕಾದ ದೊಡ್ಡ ಮನುಷ್ಯರನ್ನು ಚು ನಾಯಿಸಿ ಮೆಂಬರುಗಳಾಗಿ ಗೊತ್ತು ಮಾಡಿದ್ದಾಯಿತು. ಟ್ರಾನ್ಸ್‌ವಾಲ್ ಯುದ್ಧದಲ್ಲಿ ಇಂಗ್ಲಿಷರ ಮೇಲೆ ಸೈನ್ಯವನ್ನು ಕಟ್ಟಿತಂದು ಯುದ್ಧ ಮಾಡಿದ ಜನರಲ್ ಬೋಥಾ ಎಂಬೀ ಮೊದಲಾದ ಬೋಅರ್ ಪ್ರಮು ಖರು ಈಗ ಹೊಸ ಗವರ್ನಮೆಂಟಿನಲ್ಲಿ ಮುಂದಾಳುಗಳಾಗಿ ಚುನಾ ಯಿಸಲ್ಪಟ್ಟಿರುವರು ಇವರೇ ಸ್ವತಂತ್ರಿಸಿ ಆ ದೇಶವನ್ನು ಆಳಬೇಕಾ ಗಿರುವುದು. ಈ ಹೊಸ ಏರ್ಪಾಡು ಮುಂದಿನ ತಿಂಗಳಲ್ಲಿ ಪ್ರಾರಂಭ ವಾಗುವುದು.

*****

ವಿಲಾಯತಿ ರಾಜ್ಯದಲ್ಲಿ ದೊಡ್ಡ ಮನೆತನಸ್ಥರನ್ನೂ ಭಾರಿ ಭಾರಿ ಉದ್ಯೋಗ ಮಾಡಿದವರನ್ನೂ ವೈದಿಕರಲ್ಲಿ ಮುಖಂಡರಾದವರನ್ನೂ ಸೇ ರಿಸಿ ಹೌಸ್ ಆಫ್ ಲಾರ್ಡ್ಸ್ ಎಂಬ ಸಭೆಮನೆಯನ್ನು ಮಾಡಿದಾರೆ. ಪ್ರಜೆಗಳಿಂದ ಚುನಾಯಿಸಲ್ಪಟ್ಟ ಮೆಂಬರುಗಳಿಂದ ಕೂಡಿದ ಹೌಸ್ ಆಫ್ ಕಾಮರ್ಸ್ ಎಂಬ ಸಭೆಯಲ್ಲಿ ಮೊದಲು ಚರ್ಚೆಯಾಗಿ ತೀ ರ್ಮಾನ ಹೊಂದಿದಂಥ ಸಮಸ್ತ ಕಾನೂನುಗಳೂ ಜಮಾಖರ್ಚಿನ ಲೆಕ್ಕ ಗಳೂ ಸರ್ಕಾರಿ ಬದಲಾವಣೆಗಳೂ ಮೇಲ್ಕಂಡ ಹೌಸ್ ಆಫ್ ಲಾ ರ್ಡ್ಸ್ ಎಂಬ ಸಭೆಗೆ ತಿಳಿಸಲ್ಪಡುವವು. ಅವರು ಆ ವಿಷಯಗಳನ್ನೆಲ್ಲಾ ಒಪ್ಪಿಕೊಂಡರೆ ತರುವಾಯ ದೊರೆಯವರ ಸನ್ನಿಧಾನದಲ್ಲಿ ಅರಿಕೆ ಮಾ ಡುವರು ದೊರೆಯವರು ಸಮ್ಮತಿಪಟ್ಟು ಜಾರಿಗೆ ತರುವಂತೆ ಅಪ್ಪಣೆ ಕೊಡುತ್ತಾರೆ. ಇದೇ ವಿಲಾಯತಿಯಲ್ಲಿ ಇಂಗ್ಲೀಷ್ ರಾಜ್ಯಭಾರದ ನಡವಳಿಕೆಯ ಮುಖ್ಯಕ್ರಮ. ಕೆಲವು ಸಂದರ್ಭಗಳಲ್ಲಿ ಹೌಸ್ ಆಫ್ ಕಾಮರ್ಸ್ ಸಭಿಕರು ಆಗಬೇಕೆಂದುತೀರ್ಮಾನಿಸಿ ಕಳುಹಿಸಿದ ವಿಷಯ ಗಳನ್ನು ಕಳೆದ ವರುಷ ಹೌಸ್ ಆಫ್ ಲಾರ್ಡ್ಸ್ ಎಂಬ ಸಭೆಯವರು ಅವಶ್ಯವಿಲ್ಲವೆಂದು ಹೇಳಿ ತಿರಸ್ಕಾರ ಮಾಡಿದರು. ಇದಕ್ಕಾಗಿ ಆವೆರಡು ಸಭೆಗಳ ಮೆಂಬರುಗಳಿಗೂ ವಾಗ್ವಾದ ಬಿದ್ದಿದಿದೆ ಹೌಸ್ ಆಫ್ ಕಾ ಮರ್ಸ್ ಮೆಂಬರುಗಳು ತಮಗೆ ಮೇಲ್ಪಟ್ಟಿರುವಂಥಾ ಹೌಸ್ ಆಫ್ ಲಾರ್ಡ್ಸ್ ಸಭೆ ಮನೆಯ ಸಾಮಾಜಿಕರಲ್ಲಿ ಕೆಲವು ಬದಲಾವಣೆಗಳನ್ನು ಮಾಡಬೇಕೆಂತಲೂ ಹಾಗಿಲ್ಲ ದಿದ್ದರೆ ಆ ಸಭೆಯನ್ನೇ ಸಂಪೂರ್ಣವಾಗಿ ತೆಗೆದು ಹಾಕಬೇಕೆಂತಲೂ ಕೆಲವರು ವಾದಿಸಲು ಆರಂಭಿಸಿರುತ್ತಾರೆ ಈ ಮಧ್ಯೆ ಹೌಸ್ ಆಫ್ ಲಾರ್ಡ್ಸ್ ಸಭೆಯಲ್ಲಿ ಮೆಂಬರುಗಳ ಪೈಕಿ ಲಾರ್ಡ್ಸ್ ನ್ಯೂಟರ್ ಎಂಬ ದೊಡ್ಡ ಮನುಷ್ಯನು ಒಂದು ಕಾನೂನು ಆಗಬೇಕೆಂದು ಸೂಚಿಸಿರುತ್ತಾನೆ. ಅದರ ಅಭಿಪ್ರಾಯವೇನಂದರೆ-ಭಾರಿ ಭಾರಿ ಉದ್ಯೋಗಗಳನ್ನು ಮಾಡಿ ಬಂದವರು, ಹೌಸ್ ಆಫ್ ಕಾಮರ್ಸ್ ಸಭೆಮನೆಗೆ ಎರಡುವರ್ಷ ಮೆಂಬರುಗಳಾಗಿ ಚುನಾಯಿಸಲ್ಪಟ್ಟವ ರು ಈ ಸಭೆ ಮನೆಯಲ್ಲಿ ಮೆಂಬರಾಗಿರತಕ್ಕದ್ದು ಉಳಿದ ದೊಡ್ಡ ಮನೆತನಸ್ಥರೆಲ್ಲಾ ಸೇರಿ ತಮ್ಮಲ್ಲೇ ನಾಲ್ಕನೇ ಒಂದುಭಾಗದಷ್ಟು ಮೆಂ ಬರುಗಳನ್ನು ಚುನಾಯಿಸಬೇಕು ವೈದಿಕ ಮೆಂಬರುಗಳ ಸಂಖ್ಯೆಯ ನ್ನು ಈಗಿರುವುದಕ್ಕಿಂತ ಕಡಮೆ ಮಾಡಬೇಕು ಈ ರೀತಿಯಾಗಿ ಬದ ಲಾವಣೆ ಆಗುವುದು ಶ್ರೇಯಸ್ಕರವಾದ್ದೆಂದು ಲಾರ್ಡ್ ಕರ್ಜನರವರು ಕೂಡ ಅಭಿಪ್ರಾಯಪಟ್ಟು ತಿಳಿದಿರುತ್ತಾರೆ

ತಾಲ್ಲೋಕು ವರ್ತಮಾನಗಳು.

ಕೊಪ್ಪ.—ಕೊಪ್ಪದ ಟವರ್ನಿಗೆ ಎಂದರೆ ಮೇಲಿನ ಪೇಟೆಗೂ ಕೆಳ ಗಿನ ಪೇಟೆಗೂ ಮಧ್ಯೆ ಬೇಲಿಕಳ್ಳಿ ಎಂಬ ಚಿಕ್ಕ ಹಳ್ಳಿ ಇದೆ ಈ ಹಳ್ಳಿ ಯಲ್ಲಿ ಫೆಬ್ರವರಿ ತಾ ೧೯ ನೇ ಮಂಗಳವಾರ ಮಧ್ಯಾಹ್ನ ಕೊಪ್ಪದ ಪಟೇಲ್ ಕಾಳಪ್ಪನವರ ಮನೆ ಕೊಟ್ಟಿಗೆಯಲ್ಲಿ ಬಿಡಾರವಿದ್ದ ಗೌಳಿ ಗರು ನೀರು ಕಾಯಿಸಿಕೊಳ್ಳಲೋಸ್ಕರಲೋ ಅಡಿಗೆ ಮಾಡಲೋಸ್ಕ ರಲೋ ಹಾಕಿದ್ದ ಬೆಂಕಿಯು ಮಾಡಿಗೆ ಹತ್ತಿ ಮನೆಗೂ ವ್ಯಾಪಿಸಲಾರಂ ಭಿಸಿತು ಗಲಾಟೆ ಹೆಚ್ಚಾಗಿ ತಕ್ಕಷ್ಟು ಜನರು ಸೇರಿ ಉರಿ ಆರಿಸುತ್ತಿ ರುವಾಗ ಗಾಳಿ ಬಂತು ಆದಾಗ್ಯೂ ಬಹಳ ಶ್ರಮ ಪಟ್ಟು ಶಮನ ಮಾಡಿ ದರು ಸ್ವಲ್ಪ ಭಾಗ ಮನೆಯ ಮಾಡು ಹೋಯಿತು ಆದರೆ ಇವರ ಮನೆಗೆ ಸುಮಾರು ಅರ್ಧ ಫರ್ಲಾಂಗಿನಲ್ಲಿದ್ದ ಶ್ಯಾನುಭೋಗ ಪುಟ್ಟಶೆಟ್ಟಿ ಯ್ಯನವರ ಹುಲ್ಲಿನ ಮನೆಗೆ ಹೇಗೋ ಜನರಿಗೆ ಕಾಣದಂತೆ ಬೆಂಕಿ ಹಾರಿ ಅಲ್ಲಿ ದೊಡ್ಡದಾಗಿ ಮನೆಯ ನೆತ್ತಿಯ ಮೇಲೆ ಉರಿ ಕಾಣಿಸಿ ಕೊಂಡಿತು ಎಲ್ಲಾ ಜನರೂ ಪಟೇಲರ ಮನೆ ಕಡೆ ಇದ್ದದರಿಂದ ಅಲ್ಲಿ ಯಾರೂ ಇರಲಿಲ್ಲ ದೊಡ್ಡದಾಗಿ ಹತ್ತಿ ಉರಿ ಕಂಡ ಮೇಲೆ ಅಲ್ಲಿಗೆ ಹೋಗಿ ನೋಡುವಲ್ಲಿ ಒಳಕ್ಕೆ ಪ್ರವೇಶ ಮಾಡುವುದಕ್ಕೆ ಸಹಾ ಆಗಲಿಲ್ಲ ಹತ್ತಿರ ನಿಲ್ಲುವದಕ್ಕೆ ಸಹಾ ಜ್ವಾಲೆ ಹೆಚ್ಚಿದ್ದರಿಂದ ಅವಕಾಶವಾಗಲಿಲ್ಲ ಆ ಮನೆ ಸಂಪೂರ್ಣವಾಗಿ ಅಗ್ನಿಗೆ ಆಹುತಿಯಾಯ್ತು. ಈ ಶಾನುಭೋ ಗರು ಗ್ರಾಮಾಂತರಕ್ಕೆ ಹೋಗಿದ್ದರು. ಮನೆಯವರು ಈ ಪಟೇಲರ ಮನೆ ಕಡೆ ಗಾಬರಿಯಿಂದ ಬಂದಿದ್ದರು ಈ ಶ್ಯಾನುಭೋಗರು ಕೇವಲ ಬಡವ ಮತ್ತು ದೊಡ್ಡ ಸಂಸಾರೀಕರು ಕಾಲಕ್ಷೇಪ ಮಾಡುವದು ಬಹಳ ದುಸ್ತರವಾಗಿತ್ತು ಇಂಥಾದ್ದರಲ್ಲಿ ಬಟ್ಟೆ ಬರೆ ಸರ್ಕಾರಿ ಕಾಗದ ಪತ್ರಗಳು ಪೆಟ್ಟಿಗೆ ಹೋಗಿ ನಿಲ್ಲುವುದಕ್ಕೆ ಸಹಾ ನೆರಳಿಲ್ಲವಾಯಿತು ಮನೆಯಲ್ಲಿ ೧೦—೧೫ ಮಣ ಅಡಿಕೆ ಇಟ್ಟುಕೊಂಡಿದ್ದರು ಇದೇ ಇವರ ಮುಖ್ಯವಾದ ಬಂಡವಾಳ ಎಲ್ಲಾ ನಷ್ಟವಾಗಿ ಹೋಯಿತು.

ತುಂಕೂರು.—ಮೂರು ನಾಲ್ಕು ದಿನಗಳಿಂದ ಪಟ್ವರ್ಧನ ಬ್ರದರ್ಸ್ ಎಂಬ ಸರ್ಕಸ್ ಕಂಪನಿಯವರು ಚಮತ್ಕಾರವಾದ ಆಟಗ ಳನ್ನು ಆಡುತ್ತಿದ್ದಾರೆ.—ಕಳೆದವಾರ ಒಬ್ಬಾನೊಬ್ಬ ಬ್ರಾಹ್ಮಣ ವೃದ್ಧ ವಿಧವೆಯು ಕೋಟೆಯಲ್ಲಿರುವ ಶ್ಮಶಾನದ ಭಾವಿಯಲ್ಲಿ ಬಿದ್ದಳು ಮೂರನೇ ದಿನ ತೇಲುತ್ತಿದ್ದ ಶವವನ್ನು ಸರ್ಕಾರದವರ ಮಾಜರು ಮಾಡಿದರು ಜೀವನದ ಆ ಭಾನವೇ ಈ ಮರಣಕ್ಕೆ ಕಾರಣವೆಂದು ಕೇಳುತ್ತಾರೆ —ಈಗ ಬೇಸಿಗೆಯಾದ್ದರಿಂದ ಚರಂಡಿಗಳ ಅನೇಕ ಭಾಗಗ ಳಲ್ಲಿ ಮ್ಯುನಿಸಿಪಾಲಿಟಿಯವರ ನಿಗಾ ಇಲ್ಲದೆ ದುರ್ಗಂಧವನ್ನು ಹರಡು ತ್ತಲಿವೆ —ಇಲ್ಲಿನ ಸೆಂಟ್ರಲ್ ಕೋ ಆಪರೇಟಿವ್ ಸೊಸೈಟಿಯು ನೆನ್ನೆ ೨೭ ನೆ ತಾ. ಗೌರ್ನಮೆಂಟಿನವರಿಂದ ಮಂಜೂರಾಗಿ ಬಂದದ್ದರಿಂದ ಮಿ॥ ಸಿ ಡಿ ರಾಮಸ್ವಾಮಯ್ಯನವರ ಬಂಗಲೆಯಲ್ಲಿ ಇದಕ್ಕಾಗಿ ಮೆಂಬರುಗಳು ಸೇರಿ ಆ ದಿವಸದಿಂದ ಸೊಸೈಟಿಯನ್ನು ಪ್ರಾರಂಭ ಮಾಡಿ ರುತ್ತಾರೆ ಮುಂದೆ ಇದರಿಂದ ಬಹುಜನರಿಗೆ ದೀರ್ಘಕಾಲ ಪ್ರಯೋ ಜನ ಉಂಟಾಗಲಿ ಎಂದು ಹಾರೈಸುತ್ತೇವೆ —ಕಳೆದವಾರ ಇಲ್ಲಿ ಮೊಹರಂ ಹಬ್ಬವು ತುಂಬಾ ವಿಜೃಂಭಣೆಯಿಂದ ನಡೆಯಿತು. ಆ ಗಲಾಟೆಯಲ್ಲಿ ಪ್ರಜಾ ನೆಮ್ಮದಿಗೆ ಭಂಗಬಾರದಂತೆ ಪೋಲೀಸಿನವರು ಮಾಡಿದ ಮೊಹ ನತ್ತು ತೃಪ್ತಿಕರವಾಗಿತ್ತು. ಮೊಹರಂ ಕಡೇ ದಿನ ಪದ್ಧತಿ ಪ್ರಕಾರ ಮಂಡಿ ಪೇಟೆಯಲ್ಲಿ ಎಲ್ಲಾ ಡಾಬೂತುಗಳೂ ಮಧ್ಯಾಹ್ನ ೪ ಗಂಟೆಗೆ ಸೇರಿದವು. ಆಗ ಅಧಿಕಾರಿಗಳಲ್ಲಿ ಅಮಲ್ದಾರರೂ ಪ್ರೊ॥ ಸೂ॥ ರವರೂ, ಟ್ರಿ॥ ಅಸಿಸ್ಟೆಂಟು ಸಾಹೇಬರೂ ಪೋಲೀಸ್ ಶಿಬ್ಬಂದಿಯೊಡನೆ ಸಯಮಾಡಿಸಿ ಗಲಾಟೆ ಉಂಟಾಗದಂತೆಯೂ ತಮಾಷೆಗಳನ್ನು ನೋಡುತ್ತಿರುವಾಗ ಅಕಸ್ಮಾತ್ತಾಗಿ ಮಂಡಿ ಪೇಟೆಯಲ್ಲಿರುವ ಕೀಮೋಯನ್ನ ಮಳಿಗೆಗೆ ಬೆಂಕಿ ಬಿದ್ದಿದೆ ಎಂಬ ಸಮಾಚಾರ ಬಂತು. ಕೂಡಲೇ ಅಧಿಕಾರಿಗಳೇ ಆದಿಯಾಗಿ ತುಂಬಾ ಗಾಬರಿಯಿಂದ ಬಹು ಜನರು ಆ ಮಳಿಗೆ ಹತ್ತಿ ರಕ್ಕೆ ಹೋಗಿ ಸಣ್ಣಗೆ ಹೊಗೆಯಾಡುತ್ತಿದ್ದದ್ದನ್ನು ತಿಳಿದು ಮಾಲೀಕ ದಿಂದ ಬೀಗ ತೆಗಿಸಿ ಒಳಗಿದ್ದ ಎಣ್ಣೆ ಡಬ್ಬಿಗಳೆಲ್ಲವನ್ನೂ ಹೊರಕ್ಕೆ ತೆಗೆ ಸಿ ನೋಡುವಾಗ ಬೆಂಕಿ ಹತ್ತಿರುವದು ಕಾಣಲಿಲ್ಲ. ಆಶ್ಚರ್ಯದಿಂದ ಸುತ್ತಲೂ ಪರೀಕ್ಷಿಸುತ್ತಿರುವಾಗ ವಾಸನೆಗಾಗಿ ಹತ್ತಿಸಿ ಇಟ್ಟಿದ್ದ ಊದು ಬತ್ತಿಯಿಂದ ಮಗ್ಗುಲಲ್ಲಿ ಇದ್ದ ಕೊಡೆ ಸುಟ್ಟು ಹೋಗಿ ಹೊಗೆ ಹೊರ ಟಿತೆಂದು ತಿಳಿಯಬಂತು. ಅನಂತರ ಜನರು ಸಂತೋಷಪಟ್ಟು ಹೊರಟು ಹೋದರು.

ಹಿಂದೂಪುರ—ಕಳೆದ ವಾರ ಅಂದರೆ ಫೆಬ್ರವರಿ ೧೯ನೇ ತಾ. ಜಿ ಲ್ಲಾ ಕಲೆಕ್ಟರವರು ಅನಂತಪುರದಲ್ಲಿ ಇಲ್ಲಿ ನಡದಿರುವ ರಿಕಾರ್ಡ ನ್ನು ಹೆಡ್ ಅಸಿಸ್ಟೆಂಟ್ ಕಲೆಕ್ಟರವರಿಗೆ ವಿಚಾರಣೆ ಮಾಡಲು ಕಟ್ಟ ನ್ನು ಕಳುಹಿಸಿರುವರು. ಇವರು ಆ ರಿಕಾರ್ಡನ್ನು ಕಾಗದವನ್ನು ನೋಡಿ ವಿಚಾರಣೆ ಮಾಡುತ್ತಿರುವಷ್ಟರೊಳಗೇ ಹಿಂದುಗಳ ಪದ್ಧತಿ ಯಂತೆ ಕಾಮನನ್ನೂ ರತೀದೇವಿ ಸಮೇತ ಶ್ರೀ ವೆಂಕಟೇಶ್ವರ ಸ್ವಾಮಿಯ ದೇವಾಲಯಕ್ಕೂ ಮಸೀದಿಗೂ ಮಧ್ಯೆ ಜವಳಿ ಅಂಗಡಿ ಮುಂಭಾಗದ ಲ್ಲಿ ಇಟ್ಟರು ಮೊಹರಂ ಹಬ್ಬದ ೭ ಸರಗಸ್ತಿಯಾದ್ದರಿಂದ ಮಹಮದೀ ಯರು ಗುಂಪು ಕೂಡಿಕೊಂಡು ಬಂದು, ಕಾಮನ ಎದುರಿಗೇ ಸುಮಾ ರು ೧ ಘಂಟೆ ಹೊತ್ತು ನಿಂತು ಕಾಮನನ್ನು ಅಲ್ಲಿ ದಹಿಸಬಾರದೆಂತಲೂ, ಹಾಗೆ ಇಡುವ ಪಕ್ಷದಲ್ಲಿ ಅಲಾವು ಅಗ್ನಿಕುಂಡದಲ್ಲಿ ಹಾಕುತ್ತೇವೆಂತ ಲೂ ದೌರ್ಜನ್ಯದ ಮಾತುಗಳನ್ನು ಆಡಿದ್ದಲ್ಲದೆ ಭಯಂಕರವಾದ ಗದ್ದಲ ನಡಿಸಿದರು ಆಗ್ಗೆ ಅಲ್ಲಿದ್ದ ಜನಗಳ ಪೈಕಿ ಕೆಲವರು ಹೋಗಿ ತಾಲ್ಲೂ ಕು ಮೇಜಿಸ್ಟ್ರೇಟರಿಗೂ ಪೋಲೀಸ್ ಇನ್ಸ್‌ಪೆಕ್ಟರಿಗೂ ಹೇಳಿಸಿದರು. ಮೇಲ್ಕಂಡ ಅಧಿಕಾರಿಗಳು ಬಂದು, ಹಿಂದೂ ಜನಗಳು ಅಲ್ಲಿ ಇರದಂತೆ ಕಳುಹಿಸಿ ಕಾಮನ ಉಸ್ತುವಾರಿಗಾಗಿ ರಿಜರ್ವ್ ಪೋಲೀಸನ್ನು ಇಟ್ಟು ತಹಸಿಲ್ದಾರರು ಪೋಲೀಸ್ ಇನ್ಸ್‌ಪೆಕ್ಟರಾದ ರಾಮಸ್ವಾಮಿ ನಾಯ್ಡುರ ವರು ಸಹಾ ಮಹಮದೀಯರಿಗೆ ಎಷ್ಟು ಹೇಳಿದಾಗ್ಯೂ ಕೇಳದೆ ಇದ್ದದ್ದ ನ್ನು ನೋಡಿ, ತಹಶೀಲ್ದಾರರು ಪೋಲೀಸ್ ಇನ್ಸ್‌ಪೆಕ್ಟರನ್ನು ನೇಮಕ ಮಾಡಿ ಹೊರಟು ಹೋದರು. ಇನ್ಸ್‌ಪೆಕ್ಟರು ಇಲ್ಲಿ ಹಿಂದುಗಳಿಲ್ಲ ಪೋ ಲೀಸು ಸಿಬ್ಬಂದಿ ಇರುತ್ತೆ. ಈಗ ನೀವು ಕಾಮನನ್ನು ಕಿತ್ತು ಅಲಾವು ಆಡುವ ಅಗ್ನಿಕೊಂಡದಲ್ಲಿ ಹಾಕಿದರೆ ನಿಮ್ಮ ಕೆಲಸ ಏನಾಗುವದೋ ನಿಮಗೇ ಗೊತ್ತಾಗುವದೆಂದು ಮಹಮದಿಯರಿಗೆ ಹೇಳಿದ್ದಕ್ಕೆ ಅವರು ಇನ್ಸ್‌ಪೆಕ್ಟರ ಮಾತಿಗೆ ಭಯಪಟ್ಟು ಹೊರಟು ಹೋದರು ಆ ಮೇಲೆ ೧ ಘಂಟೆ ಹೊತ್ತು ಇನ್ಸ್‌ಪೆಕ್ಟರು ಅಲ್ಲೇ ಇದ್ದು ಗಲಾಟೆ ಏನೂ ಇಲ್ಲ ದೆ ಇದ್ದದ್ದನ್ನು ನೋಡಿ ತರುವಾಯ ಹೆಡ್ ಅ॥ ಕಲೆಕ್ಟರು ಉಭಯ ಕಕ್ಷಿಗಾರರನ್ನೂ ಕರಸಿ ವಿಚಾರಣೆ ಮಾಡಿ ಹಿಂದುಗಳಿಂದ ಏನೂ ತಪ್ಪಿ ತ ಇಲ್ಲದ್ದರಿಂದ ಅವರನ್ನು ಬಿಟ್ಟು ಬಿಟ್ಟರು ಮಹಮ್ಮದೀಯರನ್ನು ವಿಚಾರಿಸಿ ೮ ಜನ ಮಹಮ್ಮದೀಯರನ್ನು ಜಾಮೀನು ತೆಗದುಕೊಂಡು ಬಿಟ್ಟಿರುತ್ತಾರೆ ಕಾಮನ ಹಬ್ಬವು ಪೌರ್ಣಮಿ ವರಿವಿಗೂ ಅತಿ ಉಲ್ಲಾ ಸದಿಂದಲೂ ನೃತ್ಯ ಗೀತ ವಾದ್ಯಗಳಿಂದಲೂ ಗಂಧ ಪುಷ್ಪ ತಾಂಬೂಲಾ ದಿ ವಿಶೇಷಗಳಿಂದಲೂ ಅಪರಿಮಿತ ಜನಗಳಿಂದಲೂ ಅತಿ ವಿಜೃಂಭಣೆ ಯಿಂದ ನಡಿಸುತ್ತಿದ್ದು ಪೌರ್ಣಮಿ ದಿವ ಹೆಡ್ ಅ॥ ಕಲೆಕ್ಟರಿಗೆ ತಿ ಳಿಸಲು, ಅವರೂ ತಹಸಿಲ್ದಾರ್ ರಿಜರ್ವ್ ಪೋಲಿಸು ಸಮೇತ ಬಂ ದು, ಅತ್ಯಾನಂದ ಸಂತೋಷಕರವಾಗಿ ಮಾಮೂಲಿನಂತೆ ವಾದ್ಯ ವಿಶೇ ಷಗಳೊಡನೆ ಮಸೀದಿ ಮುಂದೆ ಹೊರಟು ದೊಡ್ಡಪೇಟೆ ಆಪ್ಪೆರು ವರಿವಿಗೆ ಹೋಗಿ ಪುನಃ ಹಿಂತಿರುಗಿ ಉತ್ಸವವನ್ನು ಯಥಾಸ್ಥಾನವನು ಸೇರಿಸಿ, ಆ ಅಧಿಕಾರಸ್ಥರೆಲ್ಲರೂ ಹೊರಟುಹೋದರು ಹೀಗೆ ಹೋಳೆ ಹಬ್ಬ ಆದ ಮಾರನೇ ದಿನ ಹೆಡ್ ಅ॥ ಕಲೆಕ್ಟರವರು ಹಿಂದುಗಳನ್ನೂ ಮಹಮದೀಯರನ್ನೂ ಕರೆಸಿಕೊಂಡು ರಾಜೀ ಮಾಡಬೇಕೆಂಬ ಉದ್ದೇ ಶದಿಂದ ಮಹಮದೀಯರನ್ನು ಕೇಳಲು ಅವರು ಹೇಳಿದ್ದೇನಂದರೆ—ನಿ ಮ್ಮ ದೇವಸ್ಥಾನದ ಮುಂದೆ ವಾದ್ಯಗಳು ನಿಲ್ಲಿಸಿ ಹೋಗುತ್ತೇವೆ. ನಮ್ಮ ಮಸೀದಿ ಮುಂದೆ ನೀವು ವಾದ್ಯಗಳು ನಿಲ್ಲಿಸಬೇಕು ಹಾಗೆ ನಿಲ್ಲಿಸದೇ ಇದ್ದಾಗ್ಯೂ ನಮ್ಮ ನಮಾಜ್‌ಕಾಲಗಳಲ್ಲಾದರೂ ನಿಲ್ಲಿಸಿ ಹೋಗಬೇ ಕೆಂತ ಹೇಳಿದರು ಇದಕ್ಕೆ ಹಿಂದುಗಳು ಹೆಡ್ ಅಸಿಸ್ಟೆಂಟರ ಮುಂದೆ ಹೇಳಿದ್ದೇನಂದರೆ—ಮುಸಲ್ಮಾನರು ಅವರ ಇಷ್ಟಪ್ರಕಾರ ಎಲ್ಲಿ ಬೇಕಾ ದರೂ ನಿಲ್ಲಿಸಬಹುದು ನಾವು ಮಾತ್ರ ಮಾಮೂಲಿನಂತೆ ಹೋಗಬೇಕೇ ಹೊರ್ತು ಈಗ ಹೊಸದಾಗಿ ಮಸೀದಿ ಮುಂದೆ ವಾದ್ಯಗಳು ನಿಲ್ಲಿಸುವ ದಿಲ್ಲ ಮತ್ತು ಅವರ ನಮಾಜು ಕಾಲಗಳಲ್ಲಿ ಹಿಂದುಗಳಿಗೆ ವಾದ್ಯಗಳ ನ್ನು ನಿಲ್ಲಿಸಿ ಹೋಗುವಹಕ್ಕೆ ಅನುಕೂಲವಿಲ್ಲವಾದ್ದರಿಂದ ನಾವು ಮೇಲ್ಕಂಡ ರಿಕಾರ್ಡಿನಲ್ಲಿ ಮಾಮೂಲು ಆರ್ಡರುಗಳನ್ನು ಪರಾಂಬರಿ ಸಿ ಅದರಂತೆಯೇ ಹುಕುಂ ಕೊಡುವ ಪಕ್ಷದಲ್ಲಿ ನಾವು ಒಪ್ಪಿಕೊಳ್ಳು ತ್ತೇವೆಂದು ಹೇಳಿದ್ದರಿಂದ ಮಹಮದಿಯರಿಗೆ ನಿಮ್ಮ ಹಕ್ಕನ್ನು ಸ್ಥಿರಪ ಡಿಸಿಕೊಳ್ಳುವದಕ್ಕೆ ಸಿವಿಲ್ಲಿನಲ್ಲಿ ದಾವಾ ಮಾಡಬೇಕೇ ಹೊರತು ದು ಮ್ಮಿಕ್ಕಿಗೆ ಹೋಗಕೂಡದೆಂತಲೂ, ಹಿಂದುಗಳಿಗೆ ನಾವು ಮಾಡಿದ ಕಾಲ ನಿರ್ಣಯಗಳಂತೆ,ನಡೆಯಬೇಕೆಂತಲೂ ಹೇಳಿ ವಿಚಾರಣೆ ನಿಲ್ಲಿಸಿದರು.

ಚಿಕ್ಕಮಗಳೂರು.—ಕಳೆದ ೨೦ ನೆ ತಾ ದಿವಾನ್ ಸಾಹೇ ಬರೂ ಅವರ ಪರಿವಾರವೆಲ್ಲವೂ ಈ ಊರಿಗೆ ದಯಮಾಡಿ ೨೩ ಕ್ಕೆ ಕುದುರೆಗಳ ಮೇಲೆ ಸವಾರಿ ಹೊರಟು ಊರಿನಲ್ಲಿ ನೋಡಬೇಕಾದವುಗ ಳನ್ನು ನೋಡಿಕೊಂಡು ತಮ್ಮ ಬಿಡಾರಕ್ಕೆ ಬಂದರು ಸಾಯಂಕಾಲ ೫ ಘಂಟೆಗೆ ಇಲ್ಲಿ ಹೈಸ್ಕೂಲಿನಲ್ಲಿ ವಿದ್ಯಾರ್ಥಿಗಳಿಗೆ ಬಹುಮಾನವನ್ನು ಕೊಡಲು ಬಂದರು ಆ ಕಾಲದಲ್ಲಿ ಹೆಡ್ ಮಾಸ್ಟರ್ ಮಿ॥ ಎಂ. ಬಿ. ಶ್ರೀನಿವಾಸಯ್ಯಂಗಾರು ಹೈಸ್ಕೂಲನ್ನು ಶೃಂಗರಿಸಿ ಊರಿನ ಎಲ್ಲಾ

ಯೂರೋಪಿಯರ್ ಮತ್ತು ದೇಶೀಯ ದೊಡ್ಡ ಮನುಷ್ಯರಿಗೂ ಆಹ್ವಾನ ಪತ್ರಿಕೆಗಳನ್ನು ಕಳುಹಿಸಿ ಬರಮಾಡಿಕೊಂಡಿದ್ದರು. ಸ್ಕೂಲಿನ ಕಟ್ಟಡವು ಹೈಸ್ಕೂಲ್ ವಿದ್ಯಾರ್ಥಿಗಳಿಂದಲೂ ಗೌರ್ನಮೆಂಟ್ ಕನ್ನಡ ಬಾಲಿಕಾ ಪಾಠಶಾಲೆಯ ಹುಡುಗಿಯರಿಂದಲೂ ತುಂಬಿತ್ತು. ದಿವಾನ್ ಸಾಹೇಬರು ಬಂದನಂತರ ಕೆಲವು ಹುಡುಗಿಯರು ಹಾಡಿದರು. ಇನ್ನೊಂದು ಹುಡುಗಿಯು ವೀಣೆಯನ್ನು ನುಡಿಸುತ್ತಾ ಹಾಡಿದಳು. ಅನಂತರ ಹೈಸ್ಕೂಲಿನ ಹುಡುಗರಲ್ಲಿ ನಾಲ್ವರು ಹುಡುಗಿಯರಲ್ಲಿ ಇಬ್ಬರು ಸ್ವಲ್ಪ ಹೊತ್ತು ಸಂಭಾಷಣೆ ರೂಪವಾಗಿ ಮಾತನಾಡಿದರು. ತರುವಾಯ ಹೆಡ್ ಮಾಸ್ಟರು ಸ್ಕೂಲಿನ ರಿಪೋರ್ಟನ್ನು ಓದಿದರು. ಆ ಮೇಲೆ ದಿವಾನರವರು ವಿದ್ಯಾರ್ಥಿಗಳಿಗೆ ಬಹುಮಾನಗಳನ್ನು ಕೊಟ್ಟನಂತರ ಕಾಲೋಚಿತವಾದ ಕೆಲವು ಮಾತುಗಳನ್ನಾಡಿ ಕುಳಿತುಕೊಂಡರು. ಹೆಡ್ ಮಾಸ್ಟರು ಅವರಿಗೆ ಹಾರ ಹಾಕಿ ತುರಾಯಿ ಕೊಟ್ಟರು. ಆ ಹುಡುಗಿಯರು ಮಹಾರಾಜರವರ ಶ್ರೇಯಸ್ಸನ್ನು ಸೂಚಿಸುವ ಹಾಡನ್ನು ಹೇಳುವಾಗ ಎಲ್ಲರೂ ಎದ್ದು ನಿಂತರು. ಕಡೆಯಲ್ಲಿ ದಿವಾನರವರಿಗೂ ಮಹಾರಾಜರವರಿಗೂ ಕೆಲವು ಜಯಧ್ವನಿಗಳು ಆದನಂತರ ಎಲ್ಲರೂ ತಮ್ಮ ತಮ್ಮ ಬಿಡಾರಗಳಿಗೆ ತೆರಳಿದರು.

ಕಳೆದ ೨೦ ಕ್ಕೆ ಮೊಹರಂ ಹಬ್ಬದ ೭ ನೇ ದಿನವಾದ್ದರಿಂದ ಆ ದಿನ ಮುಸಲ್ಮಾನರು ತಮ್ಮ ಪಂಜಾಗಳನ್ನು ಪದ್ಧತಿಯಂತೆ ಮೆರವಣಿಗೆ ಮಾಡಿಕೊಂಡು ಹೊರಟರು. ಸಾಯಂಕಾಲ ಆರು ಘಂಟೆಗೆ ಸರಿಯಾಗಿ ಪೋಸ್ಟಾಫೀಸಿನಿಂದ ಮೇಲ್ ಟಾಂಗಾ ಗಾಡಿಯು ಹೊರಟಿತು. ಪೇಟೆಯ ಪೋಲೀಸ್ ಸ್ಟೇಷನಿನ ಮುಂಭಾಗದಲ್ಲಿ ಸ್ವಲ್ಪ ಗಲಾಟೆಯಾಗಿದ್ದದರಿಂದ ಟಾಂಗಾ ಗಾಡಿಯು ಹೋಗಲು ತಡೆಯಾಗಿತ್ತು. ಆಗ ಟರ್ನ್ (ಜಮಾದಾರ) ಕೆಲವು ಕಾನ್ಸ್ಟೇಬಲ್ಲರೂ ಉಪಾಯಾಂತರದಿಂದ ಗಾಡಿಗೆ ಸ್ಥಳ ಬಿಡಿಸಿ ಕಳುಹಿಸಿದ್ದಾಯಿತು. ಆಗ ಮುಸಲ್ಮಾನರು ಟಾಂಗಾಗಾಡಿಯು ತಮ್ಮ ದೇವರ ಮುಂದಾಗಿ ಹೋದದ್ದು ತಮ್ಮ ದೇವರಿಗೆ ಅವಮಾನವಾಯಿತೆಂದು ತಿಳಿದೋ ಏನೋ ತಮ್ಮ ಪಂಜಾಗಳನ್ನು ಸ್ಟೇಷನಿನ ಮುಂಭಾಗದಲ್ಲಿಯೇ ಇಳಿಸಿ ಸುಮಾರು ಮೂರು ದಿನಗಳ ವರೆಗೂ ಅಲ್ಲಿಯೇ ಇಟ್ಟುಕೊಂಡಿದ್ದು ತಾ ೨೨ ಕ್ಕೆ ದಿವಾನರವರ ಜೊತೆಯಲ್ಲಿ ಬಂದ ಡೆಪ್ಯುಟಿ ಕಮೀಷನರವರಿಗೆ ತಿಳಿಸಲು ಅವರು ಪೋಲೀಸ್ ಸ್ಟೇಷನ್ಗೆ ಬಂದು ಯಾರು ನಿಮ್ಮ ದೇವರಿಗೆ ಅವಮಾನವಾಗುವಂತೆ ಟಾಂಗಾ ಗಾಡಿಗೆ ದಾರಿ ಬಿಡಿಸಿದವರೆಂದು ವಿಚಾರಿಸುವಲ್ಲಿ ಮುಸಲ್ಮಾನರು ತೋರಿಸಿದ ಜಮಾದಾರರೂ ದಫೇದಾರರೂ ಮೂವರು ಕಾನ್ಸ್ಟೇಬಲ್ಲರೂ ಸೇರಿ ಐದು ಮಂದಿಯಾದರು. ಈ ಜನರನ್ನು ಡೆಪ್ಯುಟಿ ಕಮೀಷನರು ಮನೆಗೆ ಹೋಗ ಬಂತೆ ಅಪ್ಪಣೆ ಕೊಟ್ಟ ಹಾಗೂ ಅವರು ಈ ವರೆಗೂ ಮನೆಯಲ್ಲಿರುವ ಹಾಗೂ ವರ್ತಮಾನವಿದೆ. ಅದೇ ದಿನದ ಗಲಾಟೆ ಏನೆಂದರೆ— ೨೩ ನೇ ತಾ. ದಿವಾನರ ಸವಾರಿಯು ಮೂಡಿಗೆರೆ ಮಾರ್ಗವಾಗಿ ಹೋಗುವಾಗ ಡೆಪ್ಯುಟಿ ಕಮೀಷನರೂ ಅವರ ಜೊತೆಯಲ್ಲಿ ಹೋದರಷ್ಟೆ. ಆ ಕಾಲದಲ್ಲಿ ಮುನಿಸಿಪಲ್ ವೈಸ್ ಪ್ರಸಿಡೆಂಟರು ಪುನಃ ಟಾಂಗಾ ಗಾಡಿ ಹೊರಡುವದಕ್ಕೆ ಏನಾದರೂ ಅಡ್ಡಿಯಾದೀತೆಂದು ತಿಳಿದು ಅದನ್ನು ಸಲೀಸಾಗಿ ಕಳುಹಿಸಲು ಪ್ರಯತ್ನಿಸುತ್ತಿರುವಾಗ ದಂಗೆಯೇನಾದರೂ ಆದೀತೆಂದು ಊಹಿಸಿ ಮಿಲಿಟರಿ ಇಲಾಖೆಗೆ ಬರೆದು ೨೫ ಮಂದಿ ಶಿಪಾಯಿಗಳನ್ನು ಕರಸಿಕೊಂಡು ಪೋಲೀಸ್ ಶಿಬ್ಬಂದಿ ಸಹಿತವಾಗಿ ವೈಸ್ ಪ್ರಸಿಡೆಂಟರೂ ತಾಲ್ಲೋಕು ಅಮಲ್ದಾರರೂ ಮಹಮದೀಯರಿಗೆ ಬಹು ತರವಾಗಿ ಹೇಳಿ ಎಚ್ಚರಿಸಿದಾಗ್ಯೂ ಕಡೆಯಲ್ಲಿ ಮೇಲ್ ಟಾಂಗಾಕ್ಕೆ ದಾರಿ ಸಿಕ್ಕದೆಹೋದಕಾರಣ ಅದನ್ನು ಒಂದು ಚಿಕ್ಕದಾದ ಅಡ್ಡದಾರಿಯಲ್ಲಿ ತಿರುಗಿಸಿ ಕಳುಹಿದರಂತೆ. ಆ ದಿನ ಸುಮಾರು ಮೇಲ್ ಟಾಂಗಾ ಗಾಡಿಯು ಇಲ್ಲಿಂದ ಹೊರಡುವದಕ್ಕೆ ಒಂದು ಘಂಟೆ ಸಾವಕಾಶವಾಯಿತೆಂದು ಹೇಳುತ್ತಾರೆ. ಈಗಲಾದರೇ ಮುಖಂಡರಾದ ಮುಸಲ್ಮಾನರಲ್ಲಿ ಸುಮಾರು ಮೂವತ್ತು ಜನರ ವರೆಗೂ ಹಿಡಿದು ಅವರ ಮೇಲೆ ಮೊಕದ್ದಮೆ ಮಾಡಿದ್ದಾರೆಂದೂ ಅದು ಮೆ॥ ಕೆ ವೈಲಾರಿದಾಯರ ಕೋರ್ಟಿನಲ್ಲಿ ಮಾರ್ಚಿ ೪ ಕ್ಕೆ ತನಿಖೆನಡಿಯುವದೆಂದೂ ವರ್ತಮಾನ.

ಫ್ರೆಂಚ್‌ರಾಕ್ಸ್.—ಸುತ್ತುಮುತ್ತಲೂ ಹಳ್ಳಿಗಳಲ್ಲಿ ಕಾಲರಾ ಉಪದ್ರದಿಂದ ಜನರು ತಲ್ಲಣಪಡುತ್ತಾರೆ. ಈ ಕಾಲದಲ್ಲಿ ಊರು ಶುಚಿಯಾಗಿರಬೇಕು. ಝಾಡಮಾಲಿಗಳು ಕೆಲವು ದೊಡ್ಡ ರಸ್ತೆಗಳನ್ನು ಮಾತ್ರ ಶುಚಿಮಾಡಿ ಬೇರೆ ಸ್ಥಳಗಳು ತಮಗೆ ಸೇರಲಿಲ್ಲವೆನ್ನುತ್ತಾರೆ. ಈ ಭಾಗದಲ್ಲಿ ಅಮಲ್ದಾರರು ಹೆಚ್ಚು ಗಮನ ಕೊಡಬೇಕು. ಅಮಲ್ದಾರರು ಊರನ್ನು ಗಸ್ತು ಮಾಡುವದರಿಂದ ಇದನ್ನು ತಿಳಿಯಬಹುದು.—ಇಲ್ಲಿನ ಜನರಿಗೆ ಕೆರೆಯ ನೀರೇ ಆಧಾರವಾಗಿದೆ. ಇಂಥಾ ನೀರಿನಲ್ಲಿ ಅನೇಕ ಜನರು ಕೊಳಕು ಬಟ್ಟೆಗಳನ್ನು ಒಗೆದು ಪಕ್ಕದಲ್ಲಿ ಮಲಮೂತ್ರಗಳನ್ನು ವಿಸರ್ಜಿಸಿ ನೀರನ್ನು ಕೆಡಿಸುತ್ತಾರೆ. ಅಮಲ್ದಾರರು ಈ ಕೆಟ್ಟ ಕೆಲಸವನ್ನು ನಿಲ್ಲಿಸಿದರೆ ಜನರಿಗೆ ಬಹಳ ಪ್ರಯೋಜನವಾಗುತ್ತೆ.

ಹೊಳೆನರಸೀಪುರ.—ಇಲ್ಲಿಂದ ಪರಸ್ಥಳಗಳಿಗೆ ದಿನಸಿಗಳು ರಫ್ತಾಗುವದರಿಂದ ಧಾರಣೆಮಾಸಿ ಹೆಚ್ಚುತ್ತಲಿದೆ. ಪ್ಲೇಗ್ ಗಲಾಟೆಯಿಂದ ಬ್ರಾಹ್ಮಣರು ವೈಶ್ಯರು ಕೆಲವು ಶೂದ್ರಾದಿಗಳು ಮಾತ್ರ ಊರು ಬಿಟ್ಟು ಗುಡಿಸಲು ಹಾಕಿಕೊಂಡಿದ್ದಾರೆ. ಕೋಟೆಯಲ್ಲಿ ಒಕ್ಕಲಿಗರೂ ಪೇಟೆಯಲ್ಲಿ ಬಳೆ ಮಗ್ಗದವರೂ ಊರು ಬಿಡದೆ ಇರುವದರಿಂದ ಆಗಾಗ್ಗೆ ಜನಗಳು ಖಾಲಿಯಾಗುವರು. ಆದ್ದರಿಂದ ಗುಡಿಸಲಿನಲ್ಲಿರತಕ್ಕವರು ಊರು ಸೇರುವದಕ್ಕೆ ಮಾರ್ಗವಿಲ್ಲದೆ ಅಗಚಾಟ್ಲು ಪಡುತ್ತಲಿದ್ದಾರೆ. ನಮ್ಮ ಪೋಲೀಸ್ ಇನ್ಸ್ಪೆಕ್ಟರೂ, ಅಮಲ್ದಾರರೂ ಮುತುವರ್ಜಿಯಿಂದ ಗ್ರಾಮದ ಉಸ್ತುವಾರಿ ನೋಡಿಕೊಂಡಾಗ್ಯೂ ಚಿಲ್ಲರೆ ನೌಕರರ ಅಜಾಗ್ರತೆಯಿಂದಲೂ ಅಶ್ರದ್ಧೆಯಿಂದಲೂ ಕಳ್ಳತನಗಳು ಜರುಗುತ್ತಲಿವೆ. ಈ ಊರು ಬಾಸನಾಯಕನ ಮಗ ವೆಂಕಟಾಚಲನೆಂಬವನು ಇಲ್ಲಿ ಪೋಲೀಸ್ ದಫೇದಾರನಾಗಿದ್ದು ಈಚೆಗೆ ಚನ್ನರಾಯಪಟ್ಟಣಕ್ಕೆ ವರ್ಗಪಟ್ಟು ಪುನಃ ರಜಾ ಮೇಲೆ ಬಂದಿರುವದಾಗಿ ಹೇಳಿಕೊಂಡು ತಿರುಗುತ್ತಿದ್ದನು. ಈತನನ್ನು ಯಾರೋ ಈಗ್ಗೆ ಸುಮಾರು ೭—೮ ದಿವಸದಲ್ಲಿ ಕಾಲು ಮುರಿದು ಹಳ್ಳದಲ್ಲಿ ಹಾಕಿದ್ದರು. ಈಗ ಈ ಮನುಷ್ಯನು ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಲಿರುತ್ತಾನೆ. ಈ ಊರಿಗೆ ಶೃಂಗೇರಿ ಸ್ವಾಮಿಗಳು ಬರುತ್ತಾರೆಂದು ನಮ್ಮ ಅಮಲ್ದಾರರು ಉತ್ತರಾದಿಮಠದ ಶೃಂಗಾರತೋಟವನ್ನು ಅಲಂಕರಿಸುತ್ತಲಿದ್ದಾರೆ.

ಚನ್ನಪಟ್ಟಣ:—ಈಗ ಸುಗ್ಗೀ ಕಾಲವಾದರೂ ಧಾರಣೆಮಾಸಿಗಳು ಇಳಿಯಲೇ ಇಲ್ಲ. ಬಡ ಬಗ್ಗರಿಗೆ ತುಂಬಾ ತೊಂದರೆಯಾಗಿದೆ. ಈ ಟವನ್ನಿನಲ್ಲಿ ನಡಿಯುತ್ತಿರುವ ಮೂಗು ಪ್ರಾಣಿಗಳ ಹಿಂಸೆಯ ವಿಷಯದಲ್ಲಿ ವರ್ತಕ ಶಿರೋಮಣಿಗಳಾದರೂ ಅಧಿಕಾರಿಗಳಾದರೂ ಕನಿಕರ ತೋರಿಸಿದರೆ ಬಹು ಪುಣ್ಯಕರವಾಗಿರುವದು. ಒಂದೆತ್ತಿನ ಗಾಡಿಗೆ ೮—೧೦ ಮೂಟೆಗಳನ್ನೂ ಜೋಡೆತ್ತಿಗೆ ೧೬—೧೮ ಮೂಟೆಗಳನ್ನೂ ಹೇರುವದಲ್ಲದೆ ಒಂದೊಂದು ಸಮಯ ನಾಲ್ಕಾರು ಜನರನ್ನೂ ಕೂರಿಸುವರು! ಅವು ಎಳೆಯಲಾರದೆ ಸಂಕಟ ಪಡುವಾಗ್ಗೆ ಸ್ವಲ್ಪವು ಕನಿಕರವಿಲ್ಲದೆ ತೊಗಲಿನ ಚಾವಟಿಯಿಂದ ಬಾಸುಂಡೆ ಬರುವಂತೆಯೂ, ರಕ್ತ ಸೋರುವಂತೆಯೂ ಹೊಡೆಯುವರು!—ಇಲ್ಲಿನ ಮಹಮ್ಮದೀಯರ ಗಲಭೆಯಿಂದ ಕಳೆದ ವರುಷ ಕಾಮೋತ್ಸವಕ್ಕೆ ಯತ್ನವಿಲ್ಲದೆ ಹೋಗಿತ್ತು. ದೇಶೀಯರೆಲ್ಲ ಈ ವಿಷಯದಲ್ಲಿ ಸರ್ಕಾರಕ್ಕೆ ಮೊರೆಯಿಡುತ್ತಲೇ ಬಂದರು. ಈ ಸಲ ಮೊಹರಂ ಹಬ್ಬವು ಸರ್ಕಾರದ ಕುಮ್ಮಕ್ಕಿನಿಂದ ತುಂಬಾ ವಿಜೃಂಭಣೆಯಾಗಿ ನಡೆದಾಗ್ಯೂ, ಕಾಮೋತ್ಸವಕ್ಕೆ ಹಿಂದಿನ ಕುಂದಕಗಳು ಬಂದೇ ಬರುವವೆಂಬ ಶಂಕೆಯು ಬಹಳವಾಗಿತ್ತು. ತಾ ೨೬, ೨೭ ರಲ್ಲಿ ಡೆಪ್ಯುಟಿ ಕಮೀಷನರು ಇಲ್ಲಿಗೆ ದಯಮಾಡಿ ಮಹಮ್ಮದಿಯ ದೊಡ್ಡ ಮನುಷ್ಯರಾದ ಮೆ॥ ಸಾ ಮುಸ್ತಫ್‌ಸಾಬರು, ಶೇಕ್ ಮೊಹಿದೀನ್‌ಸಾಬರು, ಗುಲಾಬ್‌ಖಾನ್‌ಸಾಬರು, ಯಾಕೂಬ್ ಸಾಬರೇ ಮೊದಲಾದವರನ್ನು ಬರಮಾಡಿಕೊಂಡು, ಸಮಾಧಾನ ಹೇಳಿದಹಾಗೂ, ಅವರು ಸಮ್ಮತಿಸಿದರೂ ಕಾಮೋತ್ಸವಕ್ಕೆ ಲೈಸೆನ್ಸು ಕೊಟ್ಟರೆ ಅನಾಹುತಗಳು ನಡಿಯಬಹುದೆಂದು ಅಭಿಪ್ರಾಯಪಟ್ಟಂತೆಯೂ, ಆದರ ಮೇಲೆ ಡೆಪ್ಯುಟಿ ಕಮೀಷನರಿಗೂ ಸಾಹುಕಾರರಿಗೂ ಕೆಲವು ತೀಕ್ಷ್ಣ ಮಾತುಗಳು ನಡೆದಂತೆಯೂ ತಿಳಿಯಬರುತ್ತೆ. ಅಂತು ತಾ ೨೭ ರಲ್ಲಿ ಆಗಬೇಕಾಗಿದ್ದ ಕಾಮೋತ್ಸವವು ತಾ ೨ ಕ್ಕೆ ನೆರವೇರಿತು. ತಾ ೧ ರಲ್ಲಿ ಸಬ್‌ಡಿವಿಜನ್ ಆಫೀಸರು ಅಮಲ್ದಾರರು, ಪೊ॥ ಇನ್ಸ್ಪೆಕ್ಟರುಗಳು ಬಂದು ದೇಶೀಯರಿಗೆ ಬೆಂಬಲವಾಗಿ ನಿಂತು, ತಾ ೨ ನೆ ಶನಿವಾರದ ಬೆಳಿಗ್ಗೆ ೩ ರಿಂದ ರಾತ್ರಿ ೮ ಘಂಟೆವರಿಗೂ, ಯಾರಾದರೂ ಸರಿಯೆ ಕೈಯಲ್ಲಿ ಬೆತ್ತ, ದೊಣ್ಣೆ, ಕತ್ತಿ, ಹತ್ಯಾರುಗಳೇನಾದರೂ ಹಿಡಿದದ್ದೇ ಆದರೆ ಅಂಥವರು ಲಾಕಪ್ಪಿಗೆ ಗುರಿಯಾಗುವರೆಂಬ ವಿಧಿಯನ್ನು ಡಂಗೂರದ ಮೂಲಕ ತಿಳಿಸಿದರು. ಅದೇ ರಾತ್ರಿ ಬೆಂಗಳೂರಿನಿಂದ ೫೦ ಜನ ರಿಜರ್ವ್ ಪೋಲೀಸಿನವರೂ ಅವರ ಒಬ್ಬ ಯೂರೋಪಿಯನ್ ಕಮ್ಯಾಂಡರೂ ಬಂದರು. ಮಹಮ್ಮದಿಯರ ಪೆಂಡಲ್ಲುಗಳೆಲ್ಲಾ ಬಂಧಿಸಲ್ಪಟ್ಟವು. ತಾ ೨ ನೆ ಶನಿವಾರದ ಬೆಳಿಗ್ಗೆ ಗಲ್ಲಿ ಗಲ್ಲಿಗೂ ಪೋಲೀಸ್ ಪಹರೆ ನಿಲ್ಲಿಸಿ, ಕಾಮೋತ್ಸವ ನಡಿಸಲಾಯಿತು. ನೇಟ್ಟುಂಡ ಅಧಿಕಾರಿಗಳು ರಿಜರ್ವ್ ಪೋಲೀಸ್ ಬೆಂಗಾವಲಿನಿಂದ ಎಲಿಕೇರಿಯ ಕಾಮವು ಮಾಮೂಲಿನ ಮೇರೆಗೆ ಕುಂಬಾರ ಬೀದಿಯಲ್ಲಿ ಹಾದು ಕಾನ್ನಿರಕೆ ಬಳಿ ಸೇರಿ ಅಲ್ಲಿಂದ ದೊಡ್ಡ ಬಜಾರಿನಲ್ಲಿ ಮೆರವಣಿಗೆ ಹೊರಟಿತು. ಪೇಟೆ ಕೋಟೆಗಳ ಕಾಮಗಳು ಏಕೀಭವಿಸಿ, ಕೋಟೆಗಳ ಬಾಗಲಿನ ಮೈದಾನದಲ್ಲಿ ಸೇರಿದವು. ವಿಶ್ರಮ ಕಾಲದಲ್ಲಿ ಒಂದು ಅಖಾಡಾ ನೇಮಕವಾಗಿ ಜಟ್ಟಿಗಳ ಕುಸ್ತಿ, ಕತ್ತಿ ದೊಣ್ಣೆಗಳ ಸಾಧಕಗಳು ನಡಿಸಲಾದವು. ಕೋಟೆ ಕಾಮವು ಕೋಟೆಗೆ ಹೋಯಿತು. ಪೇಟೆ ಎಲಿಕೇರಿಗಳ ಕಾಮಗಳು ದೊಡ್ಡ ಬಜಾರದಲ್ಲಿ ಹೊರಟು, ಬಂದ ಮಾರ್ಗವಾಗಿಯೇ ತಮ್ಮ ಸ್ಥಳಗಳಿಗೆ ತೆರಳಿದವು. ಸಾಯಂಕಾಲ ರತೀದೇವಿಯ ಮೆರವಣಿಗೆಯೂ ಮೇಟ್ಟುಂಡ ಕ್ರಮದಂತೆ ನಡಿಸಲಾಯಿತು. ಸುಮಾರು ೨—೩ ಸಹಸ್ರ ಜನಗಳು ಸೇರಿದ್ದರು. ಮೆ॥ ಸಾ ಪಟ್ಣದ ಶೆಟ್ರು, ನಾರಿಕಿಟ್ಟಪ್ಪನವರೇ ಮೊದಲಾದವರುಗಳಿಂದ ಪರಸ್ಥಳದ ನೂರಾರು ಜನರಿಗೆ ಊಟ ಉಪಚಾರಗಳು ನಡಿಸಲ್ಪಟ್ಟವು. ಆದರೆ ಅನಾಹುತಗಳೇನೂ ನಡೆಯದೆ ಉತ್ಸವವು ಪೂರೈಸಿದ್ದು ಗವರ್ನಮೆಂಟಿನ ಧರ್ಮ ಪ್ರಕಾಶಕ್ಕೂ, ದೇಶೀಯರ ಸಂತೋಷಕ್ಕೂ ಅವಕಾಶವಾದದ್ದಲ್ಲದೆ ಈಗಲೂ ಇನ್ನು ಮುಂದೆಯೂ ಹಿಂದೂ ಮುಸಲ್ಮಾನರಲ್ಲಿ ಸೋದರಭಾವವೇ ನೆಲಸೀತೆಂಬ ನಿರೀಕ್ಷೆಗೆ ಶುಭ ಸೂಚನೆಯಾಯಿತು. ಮುಖ್ಯ ಆಗ ಪೊ॥ ಇನ್ಸ್ಪೆಕ್ಟರ್ ಮೆ॥ ನಟರಾಜೈಯ್ಯನವರು ತೋರಿಸಿದ ಧೈರ್ಯ ಚತುರತೆಗಳು ಶ್ಲಾಘ್ಯವಾಗಿದ್ದವು.

ಥೀಬ್ಸ್ ಪಟ್ಟಣದಲ್ಲಿ ಸಿಕ್ಕಿರುವ ಆಶ್ಚರ್ಯಕರವಾದ ಗೋರಿಯು.

ಪುರಾತನ ಈಜಿಪ್ಟ್ ದೇಶದ ಪ್ರಖ್ಯಾತ ರಾಣಿಗಳ ಸಮಾಧಿಗಳು ಈಗ್ಗೆ ಗೋಚರಕ್ಕೆ ಬಂದಿರುತ್ತವೆ. ಇವುಗಳನ್ನು ಕಂಡುಹಿಡಿದವರು ಪ್ರಸಿದ್ಧ ಲಿಪ್ಯನ್ವೇಷಕರಾದ ಥಿಯೊಡೋರ್ ಡೇವಿಸ್‌ರವರು. ಇವರು ಪ್ರಖ್ಯಾತ ರಾಣಿಯಾದ ಟೀಯ್ ಎಂಬವಳ ಸಮಾಧಿಯನ್ನು ಕಂಡುಹಿಡಿದಿರುತ್ತಾರೆ. ಈ ರಾಣಿಯು ಏಮೇನ್‌ಹೋಟಿಪ್ ಎಂಬ ಪ್ರಸಿದ್ಧ ರಾಜನ ತಾಯಿಯು. ಈ ಏಮೇನ್‌ಹೋಟಿಪ್ ರಾಜನು ಈಜಿಪ್ಟ್ ದೇಶದ ಮತಸಂಪ್ರದಾಯಗಳನ್ನು ಬಹುಮಟ್ಟಿಗೆ ಬದಲಾಯಿಸಿ ಅದ್ವೈತ ಸಿದ್ಧಾಂತಕ್ಕೆ ಹೋಲುವ ಒಂದು ನೂತನ ಮತವನ್ನು ಸ್ಥಾಪಿಸಬೇಕೆಂದು ಉದ್ದೇಶಪಟ್ಟಿದ್ದನು. ತನ್ನ ಪೂರ್ವಿಕರ ದೇವರಾದ ಅಮಾನನ ಪೂಜೆಯು ನಿಲ್ಲಿಸಲ್ಪಡಬೇಕೆಂಬದಾಗಿಯೂ, ಇನ್ನು ಮೇಲೆ ಆ ದೇವರನ್ನು ಪೂಜಿಸುವರಿಗೆ ಮರಣದಂಡನೆಯಾಗುವದೆಂತಲೂ ಈತನು ಸಾರಿಸಿದನು. ಈಜಿಪ್ಟ್ ದೇಶದ ಚರಿತ್ರೆಯಲ್ಲಿ ಈ ಅರಸನ ಕಾಲದಲ್ಲಿಯೇ ಮತಸಂಬಂಧವಾದ ಹಿಂಸೆಗಳು ತೊಡಗಿದವು. ಥೀಬ್ಸ್ ಪಟ್ಟಣದ ವೈದೀಕಮಂಡಲಿಗೂ, ರಾಜನಿಗೂ ಪರಸ್ಪರ ಮನಸ್ತಾಪ ಕಲಹಗಳುಂಟಾಗಿ ರಾಜನು ಅಪಜಯವನ್ನು ಹೊಂದಿ ತನ್ನ ರಾಜಧಾನಿಯನ್ನು ಬೇರೊಂದುಕಡೆ ಸ್ಥಾಪಿಸಿದನು. ಈ ಹೊಸ ರಾಜಧಾನಿಯಲ್ಲಿ ಏಮೇನ್‌ಹೋಟಿಪನು ಏಸ್ಯಾಖಂಡದಿಂದ ಬಂದ ಜನರಿಂದಲೂ ಮತ್ತು ತನ್ನ ನೂತನ ಮತವನ್ನವಲಂಬಿಸಿದ ಜನರಿಂದಲೂ ಕೂಡಿದವನಾಗಿ "ಸರ್ವವ್ಯಾಪಿಯಾಗಿಯೂ, ಜಗತ್ ಸೃಷ್ಟಿಕರ್ತನಾಗಿಯೂ ಭೂಮಂಡಲದ ಎಲ್ಲಾ ಮನುಷ್ಯರಿಗೆ ಯಾವ ಭೇದವಿಲ್ಲದೆ ತಂದೆಯಾಗಿಯೂ ಇರುವ ದೇವರಿಗೆ" ಒಂದು ದೇವಸ್ಥಾನವನ್ನು ಕಟ್ಟಿಸಿದನು. ದೇವಸ್ಥಾನವನ್ನು ಇವನು ಕಟ್ಟಿಸಿದ್ದಲ್ಲದೆ ನೂತನ ಮತ ತತ್ವಗಳನ್ನು ಸಹಾ ಜನರಿಗೆ ಬೋಧಿಸುತ್ತಿದ್ದನು. ದೇವಸ್ಥಾನದ ಪಕ್ಕದಲ್ಲಿ ಮಹಾ ಅಲಂಕೃತವಾದ ಒಂದು ರಾಜಭವನವನ್ನು ಈ ರಾಜನು ಕಟ್ಟಿಸಿದನು. ಟೀಯ್‌ರಾಣಿಯು ತನ್ನ ಮಗನಾದ ಏಮೇನ್‌ಹೋಟಿಪನ ರಾಜ್ಯವು ಮಹದೈಶ್ವರ್ಯದಿಂದ ಕೂಡಿದ ಉಚ್ಚಸ್ಥಿತಿಯಲ್ಲಿರುವಾಗ್ಗೆ ತೀರಿಹೋದಳೆಂದು ಹೇಳಬಹುದು. ಈಕೆಯ ದೇಹವು ತನ್ನ ಮಗನು ಸ್ಥಾಪಿಸಿದ ಹೊಸ ರಾಜಧಾನಿಯಲ್ಲಿ ಹೂಳಲ್ಪಡದೆ ಥೀಬ್ಸ್ ಪಟ್ಟಣದಲ್ಲಿಯೇ ಭೂಸ್ಥಾಪನೆಯಾಯಿತೆಂದು ಗೊತ್ತಾಗುವದು. ಈಕೆಯ ಸಮಾಧಿಯು ಬಂಡೆಯಿಂದ ಚೌಕವಾಗಿ ಕೆತ್ತಲ್ಪಟ್ಟಿರುತ್ತದೆ. ಇದಕ್ಕೆ ಹೋಗುವ ದಾರಿಯಲ್ಲಿ ಇಪ್ಪತ್ತು ಮೆಟ್ಲುಗಳಿರುತ್ತವೆ. ಈ ಸಮಾಧಿಯ ಪಕ್ಕದಲ್ಲಿಯೇ ಪ್ರಸಿದ್ಧರಾಜನಾದ ಒಂಬತ್ತನೇ ರಾಮ್‌ಸಿಸ್‌ನ ಸಮಾಧಿ ಇರುವದು. ಈ ನೂತನ ಸಮಾಧಿಯನ್ನು ಕಂಡುಹಿಡಿಯುವದಕ್ಕೆ ಮುಂಚೆ ಇದರ ಮೇಲೆ ಸುಮಾರು ಇಪ್ಪತ್ತು ಅಡಿಗಳ ತನಕ ಕಸಕುಪ್ಪೆಗಳು ಬಿದ್ದಿದ್ದವೆಂತಲೂ ಹೇಳುತ್ತಾರೆ. ಇದರಿಂದ ಈ ಸಮಾಧಿಯು ಬಹು ಪುರಾತನವೆಂದು ಸ್ಥಾಪಿಸಬಹುದು. ಅಂದರೆ ಆರ್ಯರು ಈ ಹಿಂದೂದೇಶಕ್ಕೆ ಬರುವದಕ್ಕೆ ಪ್ರಾರಂಭಿಸಿದಾಗ್ಗೆ (ಸುಮಾರು ಮೂರು ಸಾವಿರದ ಐನೂರು ವರ್ಷಗಳ ಹಿಂದೆ) ಈ ಸಮಾಧಿಯು ಕಟ್ಟಲ್ಪಟ್ಟಿತೆಂದು ಹೇಳಬಹುದು. ಈ ಸಮಾಧಿಯು ನದಿಯ ಪಕ್ಕದಲ್ಲಿ ಕಟ್ಟಲ್ಪಟ್ಟಿರುವದರಿಂದ ಬಂಡೆಯೊಳಗೆ ನೀರು ಜಿನಿದು ರಾಣಿಯ ಪ್ರೇತದ ಸುತ್ತಲಿದ್ದ ಮರದ ಕೆತ್ತನೆ ಕೆಲಸಗಳನ್ನೂ ರಾಣಿಯ ಶವವನ್ನೂ ಕೂಡ ಕೆಡಿಸಿಬಿಟ್ಟಿರುತ್ತದೆ. ಇಷ್ಟಲ್ಲದೆ ಬೇರೆ ಎಲ್ಲಾ ಪದಾರ್ಥಗಳು ಪೂರ್ವದಲ್ಲಿ ಅರ್ಚಕರು ಯಾವರೀತಿಯಲ್ಲಿ ಬಿಟ್ಟು ಹೋದರೋ ಅದೇ ರೀತಿಯಲ್ಲಿಯೇ ಇರುವವು. ಏಮೇನ್‌ಹೋಟಿಪನ ಮತ ಬದಲಾವಣೆಗಳು ದೀರ್ಘಕಾಲ ನಿಲ್ಲಲಿಲ್ಲ. ಈಜಿಪ್ಟ್ ದೇಶದ ಪುರಾತನ ಮತವೇ ಜಯಗೊಂಡಿತು. ಏಮೇನ್‌ಹೋಟಿಪನ ಪ್ರೇತವನ್ನು ಜನರು ಛಿನ್ನಾಭಿನ್ನವಾಗಿ ಹರಿದು ಅವನ ಹಿಂಬಾಲಕರಲ್ಲಿ ಕೆಲವರನ್ನು ಕೊಂದು, ಉಳಿದವರನ್ನು ಚದರಿಸಿದರು. ಅವನ ರಾಜಧಾನಿಯು ನಿರ್ಜನವಾಯಿತು. ಅವನು ಕಟ್ಟಿಸಿದ ದೇವಸ್ಥಾನವು ನಿರ್ಮೂಲವಾಯಿತು. ಜನರು ಬದುಕಿದ್ದವರ ಮೇಲೆ ತಮ್ಮ ಕೋಪವನ್ನು ತೋರಿಸಿದ್ದಲ್ಲದೆ ಸತ್ತವರ ಪ್ರೇತಗಳನ್ನು ಕೂಡ ಅವಮಾನಪಡಿಸಿದರೆಂದು ಗೊತ್ತಾಗುವದು. ಅವರು ಆಗ್ರಹದೊಡನೆ ಟೀಯ್‌ರಾಣಿಯ ಸಮಾಧಿ ಇರುವ ಕೊಠಡಿಯ ಕದವನ್ನು ಮುರಿದು ಒಳಕ್ಕೆ ನುಗ್ಗಿ ಪ್ರೇತದ ಸುತ್ತಲೂ ಅಲಂಕಾರವಾಗಿ ಕಟ್ಟಿದ್ದ ಮಂಟಪವನ್ನು ಮುರಿದುಹಾಕಿ ಪ್ರೇತವನ್ನು ಮಗುಚಿಹಾಕಿ ಏಮೇನ್‌ಹೋಟಿಪನ ಹೆಸರು ಎಲ್ಲಿಯೂ ಕಾಣದಹಾಗೆ ಅವನ ಬಂಗಾರದ ಶಾಸನಗಳನ್ನೆಲ್ಲಾ ಹಾಳುಮಾಡಿದರು. ಅವನ ಹೆಸರು ಯಾವ ಸ್ಥಳದಲ್ಲಿ ಕಂಡುಬಂದರೂ ಅಂಥಾ ಸ್ಥಳಗಳನ್ನು ಕೆತ್ತಿ ನಾಶನಪಡಿಸಿರುತ್ತಾರೆ. ಇಂಥಾ ಅಮೂಲ್ಯಪದಾರ್ಥಗಳನ್ನು ನಾಶಪಡಿಸಿದ ಜನರು ದರೋಡೆಕಳ್ಳರೆಂದು ಯಾರೂ ಭಾವಿಸಬಾರದು. ರಾಣಿಯ ಅಪರಿಮಿತವಾದ ಒಡವೆಗಳೂ ಮತ್ತು ಬಂಗಾರದ ಪಾತ್ರೆಗಳೂ ಹೇರಳವಾಗಿ ಅಲ್ಲಲ್ಲಿ ಬಿದ್ದಿದ್ದರೂ ಅವುಗಳನ್ನು ಈ ಮತವೈರಾಗಿಗಳು ಮುಟ್ಟದೆ ಅಂಥಾ ಪಾಪದ ದ್ರವ್ಯದಿಂದ ತಮ್ಮ ಪೂರ್ವನಾತಕ್ಕೆ ಯಾವ ಸಹಾಯವೂ ಆಗಬಾರದೆಂದು ನಿಶ್ಚಯಿಸಿಕೊಂಡು ಹೊರಟುಹೋಗಿರುವಂತೆ ತೋರುತ್ತದೆ. ಸಮಾಧಿಯನ್ನು ತೋಡಿದ ಕೂಲಿಯಾಳುಗಳು ಯಾವ ಸ್ಥಳದಲ್ಲಿ ಕಾಲಿಟ್ಟರೂ ಅಲ್ಲೆಲ್ಲಾ ಚಿನ್ನವು ಬೇಕಾದಹಾಗೆ ಬಿದ್ದಿದೆ ಎಂದು ಈಗ್ಗೆ ಕಂಡು ಬಂದಿರುತ್ತದೆ. ರಾಣಿಯ ಶವವನ್ನು ಕಲ್ಲಿನ ಪೆಟ್ಟಿಗೆಯಲ್ಲಿಟ್ಟಿಲ್ಲ. ಆದರೆ ಅದಕ್ಕೆ ಬದಲಾಗಿ ಅದರ ಮೇಲೆ ಒಂದು ದೊಡ್ಡ ಮಂಟಪವನ್ನು ಕಟ್ಟಿಸಿ ಅದರ ಗೋಡೆಗಳಿಗೆ ಚಿನ್ನದ ತಗಡುಗಳನ್ನು ಜೋಡಿಸಿರುತ್ತಾರೆ. ಗೂಡಿನ ಹೊರಗೂ ಒಳಗೂ ಚಿನ್ನದ ತಗಡುಗಳ ಮೇಲೆ ಟೀಯ್ ರಾಣಿಯ ಮತ್ತು ಆಕೆಯ ಮಗನ ಹೆಸರುಗಳು ಕೆತ್ತಲ್ಪಟ್ಟಿವೆ. ಮತ್ತು ಪೂಜಿಸುತ್ತಿದ್ದ ಸೂರ್ಯನಿಗೆ ಸಂಬಂಧಪಟ್ಟ ಪ್ರತಿಮೆಗಳು ಸಹ ಕೆತ್ತಲ್ಪಟ್ಟಿವೆ. ಜನರು ಕೋಪೋದ್ರೇಕರಾಗಿ ಏಮೇನ್‌ಹೋಟಿಪನ ಪ್ರತಿಮೆಯನ್ನು ನಾಶಮಾಡಿರುವರೇ ಹೊರತು ಅವನ ಪಕ್ಕದಲ್ಲಿ ನಿಂತಿರುವ ಅವನ ತಾಯಿಯ ಪ್ರತಿಮೆಯನ್ನು ನಾಶಮಾಡಿಲ್ಲ. ಇದರಿಂದ ಈಜಿಪ್ಟ್ ದೇಶದ ಪೂಜಾರಿಗಳು ಹೆಂಗಸರ ಸಂಗಡ ಜಗಳವಾಡುತ್ತಿರಲಿಲ್ಲವೆಂದು ಊಹಿಸಬಹುದು. ಅಥವಾ ಮೇಲೆ ಟೀಯ್ ರಾಣಿಯು ಅನ್ಯದೇಶದವಳಾದಕಾರಣ ಆಕೆಯು ಇಷ್ಟಪಟ್ಟ ದೇವರನ್ನು ಪೂಜಿಸುವ ಹಕ್ಕನ್ನು ಪಡೆದಿದ್ದಳೆಂದು ಪೂಜಾರಿಗಳು ಅಂದುಕೊಂಡು ಆಕೆಯ ಶವವನ್ನು ನಾಶಪಡಿಸಲಿಲ್ಲವೆಂದು ಊಹಿಸಿದರೂ ಊಹಿಸಬಹುದು. ಗೋಪುರಕ್ಕೆ ಜೋಡಿಸಲ್ಪಟ್ಟಿದ್ದ ಹಲಿಗೆಗಳನ್ನು ಯಾವ ರೀತಿಯಲ್ಲಿ ಆ ಕಾಲದ ಜನರು ಗೋಡೆಗಳಿಗೆ ಒರಗಿಸಿದರೋ ಅವು ಅದೇ ರೀತಿಯಲ್ಲಿಯೇ ಇದುವರೆವಿಗೂ ನಿಂತಿವೆ. ಪ್ರೇತದ ಪೆಟ್ಟಿಗೆ ಮತ್ತು ಅದರಲ್ಲಿದ್ದ ರಾಣಿಯ ಶವ ಇವುಗಳನ್ನು ಒಂದು ಭಂಗಾರದ ಚಟ್ಟದ ಮೇಲೆ ಇಟ್ಟಿರುವರು. ಪ್ರೇತದ ಪೆಟ್ಟಿಗೆಯಂತು ಬಹು ಸುಂದರವಾದ ಕೆತ್ತನೆಯ ಕೆಲಸವಾಗಿದ್ದು ಅಕ್ಕಸಾಲೆಯ ಸಾಮರ್ಥ್ಯವನ್ನು ತೋರಪಡಿಸುತ್ತಿದೆ. ಪೆಟ್ಟಿಗೆಯ ಮೇಲೆ ಚಿನ್ನದ ತಗಡುಗಳನ್ನು ಹೊದಿಸಿ ಅನೇಕ ಬಣ್ಣಗಳ ಕನ್ನಡಿಗಳಿಂದ ಅಲಂಕಾರಮಾಡಿರುತ್ತಾರೆ. ಪೆಟ್ಟಿಗೆ ಮಧ್ಯದಲ್ಲಿ ಇದು ಟೀಯ್ ರಾಣಿಗೆ ಆಕೆಯ ಮಗನು ಮಾಡಿಸಿದ ಪೆಟ್ಟಿಗೆ ಎಂದು ಒಂದು ಶಾಸನವು ಬರೆಯಲ್ಪಟ್ಟಿರುತ್ತದೆ. ಈಜಿಪ್ಟ್ ದೇಶದಲ್ಲಿ ಶವಗಳನ್ನು ಪೆಟ್ಟಿಯಲ್ಲಿ ಸುಗಂಧದ್ರವ್ಯಗಳೊಡನೆ ಸುತ್ತಿಡುತ್ತಿದ್ದರು. ಆದರೆ ಮೇಲೆ ಹೇಳಿದಂತೆ ನೀರು ಜಿನಿದು ಪ್ರೇತದ ಪೆಟ್ಟಿಗೆಯೊಳಗೆ ನುಗ್ಗಿರುವದರಿಂದ ರಾಣಿಯ ಹೆಣವು ಮೆತುವಾಗಿ ಲಿಪ್ಯನ್ವೇಷಕರು ಪರೀಕ್ಷೆಮಾಡುತ್ತಿರುವಲ್ಲಿ ಬಿದ್ದು ಮಾರಿಹೋಯಿತು. ಕೈಗಳ ಮೇಲೆ ಬಳೆಗಳೂ, ಕುತ್ತಿಗೆಯ ಮೇಲೆ ರತ್ನಖಚಿತವಾದ ಕಂಠೀಸರವೂ ಮತ್ತು ಇತರ ಒಡವೆಗಳೂ ಯಾವ ರೀತಿಯಲ್ಲಿ ಆಕೆಯು ಧರಿಸಿಕೊಂಡಿದ್ದಳೋ ಅದೇ ರೀತಿಯಲ್ಲಿವೆಯೆಂದು ಕಂಡುಹಿಡಿದವರು ಹೇಳುತ್ತಾರೆ. ಇವೆಲ್ಲವುಗಳಿಗಿಂತ ಬಹು ಅಮೂಲ್ಯವಾದ ರಾಜಕಿರೀಟವು ಆಕೆಯ ತಲೆಯ ಮೇಲೆ ಇನ್ನೂ ಇರುತ್ತದೆಂದು ಕಂಡುಬರುತ್ತದೆ.

...ಕರೀಟವು ಸ್ಪಷ್ಟವಾದ ಚಿನ್ನದಿಂದ ಮಾಡಲ್ಪಟ್ಟಿರುತ್ತದೆ ಇದರ ಮೇಲೆ ಪದ್ಮದ ಆಕಾರವುಳ್ಳ ಒಂದು ಪ್ರತಿಮೆಯು ತನ್ನ ಎರಡು ಕಾಲುಗಳಲ್ಲಿಯೂ ಉಗುರುಗಳಿಂದ ರಾಜಮುದ್ರೆಯ ಉಂಗುರಗಳನ್ನು ಹಿಡಿದುಕೊಂಡು ತನ್ನ ರೆಕ್ಕೆಗಳಿಂದ ಆ ರಾಣಿಯ ತಲೆಯ ಮೇಲೆ ಹರಡಿಕೊಂಡಿದೆಯೋ ಎಂಬಂತೆ ಮಾಡಲ್ಪಟ್ಟಿರುವದು. ಇಂಥಾ ಪುರಾತನಕಾಲದ ಮಹಿಮೆಯ ಕೆಲಸಗಳನ್ನು ನೋಡುವಲ್ಲಿ ಯಾರಿಗೆ ತಾನೆ ವಿಸ್ಮಯ ಉಂಟಾಗಲಾರದು. ಪ್ರೇತದ ಪಕ್ಕದಲ್ಲಿ ಒಂದು ಪೆಟ್ಟಿಗೆಯ ತುಂಬಾ ಕೆಲವು ಸಣ್ಣ ಪದಾರ್ಥಗಳು ಕಂಡುಬಂದಿವೆ. ದ್ರಾಕ್ಷಿಗೊಂಚಲು, ಕವಚೆ, ಒರಳು, ಪಾತ್ರೆ ಮುಂತಾದವುಗಳ ಆಕಾರಗಳನ್ನು ಕೆತ್ತಿದಾರೆ ಈ ಸಮಾಧಿಯಲ್ಲಿ ಗೋಚರಕ್ಕೆ ಬಂದಿರುವ ಚಿತ್ರಕೆಲಸಗಳಲ್ಲಿ ರಾಣಿಯ ಭಾವಚಿತ್ರವೇ ಪ್ರಸಿದ್ಧವಾದದ್ದು ಈ ಚಿತ್ರವು ರಾಣಿಯನ್ನು ಲೇಶಮಾತ್ರವೂ ವ್ಯತ್ಯಾಸವಿಲ್ಲದೆ ಹೋಲುತ್ತದೆ ಈ ಪತ್ರಿಕೆಯ ವಾಚಕರು ಈಜಿಪ್ಟ್ ದೇಶದಲ್ಲಿ ವಿದ್ವನ್ಮೇಷಕರು ಕಂಡುಹಿಡಿಯುತ್ತಿರುವ ವಿಶೇಷ ಸಂಗತಿಗಳ ಉದ್ದೇಶವನ್ನು ತಪ್ಪಾಗಿ ತಿಳಿದುಕೊಳ್ಳಬಾರದು ಅವರು ದ್ರವ್ಯವನ್ನು ಹುಡುಕುವ ಉದ್ದೇಶವನ್ನಿಟ್ಟುಕೊಳ್ಳದೆ ಪೂರ್ವದ ಚರಿತ್ರೆಯನ್ನು ಸಾಂಗವಾಗಿ ತಿಳಿದುಕೊಳ್ಳುವದಕ್ಕೋಸ್ಕರವೇ ತಮ್ಮ ವಿದ್ಯೆ ಕೌಶಲತೆ ಸಮಯ ಮತ್ತು ಅಪಾರವಾದ ಹಣ ಇವುಗಳನ್ನು ವ್ಯಯಮಾಡಿ ಚರಿತ್ರಾರ್ಹವಾದ ಈಜಿಪ್ಟ್ ದೇಶದ ಪಾಳುಸ್ಥಳಗಳನ್ನು ಅಗೆದು ಶೋಧಿಸುತ್ತಿದಾರೆ

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಜಾಗ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ಜಾಗ ಕೊಡಲಾರೆವು

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು—ಎಡಿ.

ಯುಗಾದಿ ಹಬ್ಬ:—ರಾಜಧಾನಿಯಲ್ಲಿ ಯುಗಾದಿ ಹಬ್ಬವನ್ನು ತಿಂಗಳ ೧೫ ನೆ ತಾರೀಖು ಶುಕ್ರವಾರ ಆಚರಿಸುವರು ಅಧಿಕ ಮಾಸದಲ್ಲಿ ಹಬ್ಬವನ್ನು ಆಚರಿಸುವ ಪದ್ಧತಿ ಇಲ್ಲವೆನ್ನುತ್ತಾರೆ

ಕೆ. ಬಿ. ಎಸ್ ವಿಶ್ವಬ್ರಾಹ್ಮರು; ಮೇಲ್ಕೋಟೆ ವಿಷಯ.—ಈ ಪತ್ರಗಳನ್ನು ಪ್ರಕಟಿಸಲಾರೆವು.

—ಎಡಿಟರ್]

ಕರೆಸ್ಪಾಂಡೆನ್ಸ್.

ಭಾವಿಕೆಲಸ ಪೂರೈಸಿಕೊಡಲಿಲ್ಲ.

ಅಯ್ಯಾ,

ತರೀಕೆರೆ ತಾಲ್ಲೂಕು ಮಾಕನಹಳ್ಳಿ ಗ್ರಾಮದಲ್ಲಿ ಗ್ರಾಮಸ್ಥರಿಗೆ ನೀರಿನ ವಸತಿ ಇಲ್ಲದೆ ಬಹಳ ತೊಂದರೆಯುಂಟಾಗಿ ಮಾ॥ ರಾ. ಶ್ರೀನಿವಾಸಯ್ಯನವರು, ಪಟೇಲ್ ರಾಚಪ್ಪಯ್ಯನವರು, ಪಟೇಲ್ ಸಿದ್ದಾಮೈಲಪ್ಪನವರು, ಬುದ್ಧಿವಂತ ಚನ್ನವೀರಪ್ಪನವರು, ಬಿಲಿ ತಿಮ್ಮಪ್ಪನವರು ಮುಂತಾದವರು ಸೇರಿ ನೀರಿನ ವಿಷಯದಲ್ಲಿ ತಕ್ಕ ಏರ್ಪಾಡು ಮಾಡಿಕೊಡುವ ಮನೆ ಒಂದಕ್ಕೆ ಎಂಟು ರೂಪಾಯಿಯಂತೆ ಎತ್ತಿ ನಾವು ಈ ಭಾವಿಯನ್ನು ತೋಡಬೇಕೆಂದು ಗ್ರಾಮಸ್ಥರೆಲ್ಲಾ ಸೇರಿ ಒಡ್ಡಗುತ್ತಿಗೆ ಕೊಟ್ಟು ಭಾವಿ ತೋಡಿಸಿದರು. ಸದರಿ ತೋಡಿಸಿದ ಭಾವಿಯಲ್ಲಿ ಜಲ ಬೀಳುವದಕ್ಕೂ ದುಡ್ಡು ಮುಗಿಯುವದಕ್ಕೂ ಸರಿಯಾಯ್ತು. ನಂತರ ಭಾವಿ ಕಲ್ಲು ಕಟ್ಟಿಸುವದಕ್ಕೂ ಗವಗ ಪಗ್ಗೆ ಮಾಡುವದಕ್ಕೂ ದುಡ್ಡಿಲ್ಲದೆ ಗ್ರಾಮಸ್ಥರನ್ನು ವಿಚಾರಿಸುವಲ್ಲಿ ಬಡ ರೈತಾಪಿಗಳು ಕೇಡಲು ಕೊಟ್ಟ ಹಣವೇ ತಮ್ಮ ಯೋಗ್ಯತೆ ಮೀರಿ ಹೋಯಿತು ಆದ್ದರಿಂದ ನಮ್ಮಿಂದ ಆಗುವದಿಲ್ಲವೆಂದು ಹೇಳಿದ್ದರ ಮೇರೆ ಮಾ॥ ... ತಾಲ್ಲೂಕು ಅ॥ ಕೃಷ್ಣರಾಯರಲ್ಲಿ ಮೇಲ್ಕಂಡ ವಿಷಯವೆಲ್ಲಾ ಹೇಳಿಕೊಂಡದ್ದರ ಮೇಲೆ ಆ ಗ್ರಾಮಕ್ಕೆ ಬಂದಾಗ್ಗೆ ಪ್ರತ್ಯಕ್ಷ ನೋಡಿ ತಕ್ಕ ಏರ್ಪಾಡು ಮಾಡುತ್ತೇವೆಂದು ಅಪ್ಪಣೆ ದಯಪಾಲಿಸಿ ಕೆಲವು ದಿವಸಕ್ಕೆ ಮುಂಚೆ ಈ ಗ್ರಾಮಕ್ಕೆ ದಯಮಾಡಿಸಿ ಸದರಿ ಭಾವಿಯನ್ನು ಪ್ರತ್ಯಕ್ಷ ನೋಡಿ, ಈ ವಿಷಯದಲ್ಲಿ ಡಿಸ್ಟ್ರಿಕ್ಟಿಗೆ ಬರೆಯುತ್ತೇವೆ ಅಲ್ಲಿಂದ ಜವಾಬು ಬಂದ ನಂತರ ನಿಮ್ಮಗಳಿಗೆ ತಿಳಿಸುತ್ತೇವೆಂದು ಅಪ್ಪಣೆ ಮಾಡಿದರು. ಈಗ ಮೂರು ನಾಲ್ಕು ತಿಂಗಳಾದಾಗ್ಯೂ ಇದರ ಜವಾಬೇ ಇದ್ದಾಪಿ ಪ್ರಚುರಕ್ಕೆ ಬರಲಿಲ್ಲ. ಈ ಗ್ರಾಮವು ರಸ್ತೆ ಬಾಜಿನಲ್ಲಿಯೂ ಪೊಲೀಸ್ ಸ್ಟೇಷನ್ ಇರತಕ್ಕದ್ದಾಗಿಯೂ ಯಾವಾಗ್ಯೂ ಈ ರಸ್ತೆಯಲ್ಲಿ ಜನಗಳು ಬಂಡಿಯೂ ತಿರುಗಾಡತಕ್ಕದಾಗಿಯೂ ಇತ್ತೆ. ಆದ್ದರಿಂದ ಈ ಗ್ರಾಮಸ್ಥರು ಹಾತ್ತಾಗೋಡಿನಿಂದ ತೆಗಿಸಿರತಕ್ಕ ಭಾವಿಗೆ ಕಲ್ಲು ಕಾಮಗಾರಿ ಬಗ್ಗೆ ನಮ್ಮ ಅಮಲ್ದಾರ್ರು ಗಮನವಿಟ್ಟು ಸರ್ಕಾರದಿಂದ ಭಾವಿ ವಿಷಯದಲ್ಲಿ ತಕ್ಕ ಏರ್ಪಾಡು ಮಾಡಿ ಜನಗಳಿಗೆ ಉಂಟಾಗಿರುವ ನೀರಿನ ತೊಂದರೆ ತಪ್ಪಿಸಿ ಸುಖದಲ್ಲಿ ಇರುವಂತೆ ಮಾಡಬೇಕೆಂದು ಪ್ರಾರ್ಥಿಸುತ್ತೇನೆ

ಬ್ಯಾ ರಾ.

ಕಾಮನ ಹಬ್ಬದಲ್ಲಿ ನಡೆದ ದುಷ್ಕೃತ್ಯಗಳು

ಅಯ್ಯಾ,

ಮೈಸೂರು ಸಂಸ್ಥಾನದ ಅನೇಕ ಭಾಗಗಳಲ್ಲಿ ಕಳೆದ ಫೆಬ್ರವರಿ ತಿಂಗಳಲ್ಲಿ ಕಾಮನ ಹಬ್ಬ ನಡೆದದ್ದು ಜನಜನಿತವಾಗಿರುವುದು. ...ಗಳೂರು ಸಿಟಿಗೆ ಸೇರಿರುವ ನಾರಾಯಣಶೆಟ್ಟಿ ಪೇಟೆಯ ಬಳಿ ನಡೆದ ಕಾಮನ ಹಬ್ಬದ ವಿಜೃಂಭಣೆಯನ್ನು ಸ್ವಲ್ಪ ಮಟ್ಟಿಗೆ ವಿವರಿಸುತ್ತೇನೆ—ಸದರಿ ಪೇಟೆಯ ಸಮೀಪದಲ್ಲಿ ಒಂದು ಪಂಗಡದ ನಯ್ಗೆಯವರು ಪ್ರತಿ ವರ್ಷವೂ ಕಾಮನನ್ನು ಇಡುವ ಪದ್ಧತಿಯ ಪ್ರಕಾರ ಈ ... ಬಹಳ ಮನತು. ಜನಯಿಂದ ಶೋಭಾಯಮಾನವಾದ ಮಂಟಪವನ್ನಿಟ್ಟು ಕಾಮನನ್ನು ಕೂರಿಸಿದ್ದರು. ಇವರಿಗೂ ನಾರಾಯಣಶೆಟ್ಟಿಪೇಟೆ ನಿವಾಸಿಗಳಾದ ಕೆಲವರಿಗೂ ಕಾರಣಾಂತರದಿಂದ ದ್ವೇಷಾಸೂಯೆಗಳು ಒಳಗೇ ಹೊಗೆಯಾಡುತ್ತಲಿತ್ತು. ಕಳೆದ ೨೮ನೆ ತಾ ರಾತ್ರಿ ಸುಮಾರು ೮ ಘಂಟೆಯ ಸಮಯದಲ್ಲಿ ಕಾಮನನ್ನು ಇಟ್ಟಿದ್ದ ಜನರು ಕೋಲಾಹಲ ಧ್ವನಿಗಳಿಂದ ನೀಚವಾದ ಭಂಡ ಪದಗಳನ್ನು ಹಾಡುತ್ತಾ ತಮ್ಮ ದ್ವೇಷಿಗಳನ್ನು ಹೀಯಾಳಿಸುತ್ತಾ ಕೋಲಾಟಗಳನ್ನಾಡಿಕೊಂಡು ಸದರಿ ಪೇಟೆಯ ಮಧ್ಯಸ್ಥಾನಕ್ಕೆ ಬರಲು, ಇದನ್ನು ಹೊಂಚುಹಾಕಿಕೊಂಡಿದ್ದ ಇವರ ಪ್ರತಿ ಕಕ್ಷಿಗಳು ಏಕಾಏಕಿ ಅವರ ಮೇಲೆ ಬೀಳಲು, ಉಭಯತ್ರರಿಗೂ ಸುಮಾರು ಕಾಲು ಘಂಟೆ ಪರ್ಯಂತ ಮುಷ್ಟಿಯುದ್ಧವು ನಡೆಯಿತು. ದೈವವಶಾತ್ ಉಭಯ ಪಕ್ಷದವರು ಆಯುಧಪಾಣಿಗಳಾಗಿರಲಿಲ್ಲ. ಆದರೂ ಕೆಲವರಿಗೆ ಮೂಗು ಪೆಟ್ಟುಗಳೂ, ಗಾಯಗಳೂ ಆಗಿವೆಯೆಂದು ತಿಳಿಯಬರುತ್ತೆ. ಇವರು ಪೋಲೀಸ್ ಅಧಿಕಾರಿಗಳು ಬರುವಷ್ಟರಲ್ಲೇ ಚದರಿಹೋದರು. ಈ ರೀತಿ ಪೋಲೀ ಜನರು ತಮ್ಮ ದ್ವೇಷವನ್ನು ಸಾಧಿಸುವ ಉದ್ದಿಶ್ಯ ಯಾವುದಾದರೊಂದು ನೆಪದಿಂದ ಜಗಳವಾಡಿ ಅನಾಚಾರಗಳನ್ನು ಮಾಡಿಕೊಳ್ಳುವರು ಆದುದರಿಂದ ಸದರಿ ಜನರಿಗೆ ಕಾಮನ ಹಬ್ಬವು ಸಕಾಲವಾಗಿರಬಹುದೆಂದು ತೋರುತ್ತೆ. ಈ ಹಬ್ಬದ ಮಹಿಮೆಯು ಇಷ್ಟೇ ಅಲ್ಲ. ಇನ್ನೂ ಅನೇಕ ನೀಚಕೃತ್ಯಗಳು ಜರುಗಿದವು ಅವುಗಳಲ್ಲಿ ಒಂದನ್ನು ತಿಳಿಸುತ್ತೇನೆ.—ಅಶಿಕ್ಷೆಯಿಂದ ಬೆಳೆದ ಕೆಲವು ಪುಂಡು ಹುಡುಗರು, ಸಂದು ಗೊಂದುಗಳಲ್ಲಿ ಕಾರ್ಯಾರ್ಥಿಗಳಾಗಿ ಓಡ್ಯಾಡುತ್ತಿದ್ದ ಕುಲೀನ ಸ್ತ್ರೀಯರನ್ನು ಅವಮಾನ ಪಡಿಸಿದ್ದೂ ಅಲ್ಲದೆ, ಆ ರಾತ್ರಿಯೆಲ್ಲಾ ಅವರ ಮನೆಗಳ ಮೇಲೆ ಶಿಲಾವೃಷ್ಟಿಯಂತೆ ಕಲ್ಲುಗಳನ್ನು ಹಾಕಿದರೆಂಬ ವದಂತಿ ಇದೆ. ಇಂಥಾ ದುಷ್ಕಾರ್ಯಗಳಿಂದ ದೇಶಾಭಿವೃದ್ಧಿಗೆ ಕುಂದಕ ಬರಲು ಸ್ವಲ್ಪವೂ ಸಂಶಯವಿಲ್ಲ.

ಬಾತ್ಮಿದಾರ್.

ಬೆಂಗಾಡು ಹಳ್ಳಿಗಳ ವೃತ್ತಾಂತ.

ಅಯ್ಯಾ,

ಯಡತೊರೆ ತಾಲ್ಲೂಕು ಸಾಲಿಗ್ರಾಮದ ಹೋಬಳಿ ಪೈಕಿ ಈ ಕೆಳಗೆ ರುಜು ಹಾಕಲ್ಪಟ್ಟ ರೈತರು ಬರೆದುಕೊಂಡ ಕ್ಷಾಮದ ವೃತ್ತಾಂತವೇನಂದರೆ—ಈಗ್ಗೆ ಸುಮಾರು ನಾಲ್ಕೈದು ವರುಷಗಳಿಂದಲೂ ಹಿಂಗಾರು ಮುಂಗಾರು ಮಳೆ ಕಡಿಮೆಯಾಗಿ ಬುಟ್ಟೆ ಬೆಳೆ ಕಡಿಮೆಯಾಗಿ ತಿನ್ನುವದಕ್ಕೆ ಅನ್ನವಿಲ್ಲದೆ ದನಗಳಿಗೆ ಹುಲ್ಲು ನೀರು ಸಹ ಇಲ್ಲದೆ ಬಹಳ ಸಂಗಾವುಪಡುತ್ತಾ 'ಸಾಲಸೋಲ' ಕೊಡುವರನ್ನು ಜೋಡಿಸಿ ಕೊಡುವ ಕಷ್ಟವನ್ನು ಸೃಷ್ಟಿಕರ್ತನೇ ಬಲ್ಲ. ನಮ್ಮಗಳಿಗೆ ನಾಲೆ ದಾಖಲೆ ಫಸಲೆಯಾದ್ದರಿಂದ ಮಾರಾಗುತ್ತಿಗೆ ಎಷ್ಟು ಮಾಡುವದಕ್ಕೆ ಯತ್ನವಿಲ್ಲ. ಈ ಮೈಸೂರು ಸೀಮೆಯ ಕ್ಷಾಮಗಳನ್ನು ವಿಚಾರಿಸುವ ಬಗ್ಗೆ ಬರುವ ಸರ್ಕಾರದ ಉದ್ಯೋಗಸ್ಥರುಗಳು ಯಡತೊರೆ ಚುಂಚನಕಟ್ಟೆ ಮಿರ್ಲೆ ಸಾಲಿಗ್ರಾಮ ಈ ನಾಲ್ಕು ಪ್ರಾಂತ್ಯಗಳನ್ನೇ ನೋಡಿ ಕ್ಷಾಮವಿಲ್ಲವೆಂದು ಮೇಲಕ್ಕೆ ಬರೆಯುತ್ತಾರೆಯೇ ಹೊರತು ನಾವುಗಳು ಇರುವ ಕಾಡು ಹಳ್ಳಿಗಳನ್ನು ನೋಡದೆ ಕ್ಷಾಮದಿಂದ ಕಷ್ಟಪಡುವ ರೈತರನ್ನು ವಿಚಾರಿಸುವದೇ ಇಲ್ಲ. ಹಿಂದೆ ರಾಜ್ಯಭಾರ ಆಳಿದ ಶ್ರೀಮನ್ ಮಹಾರಾಜಾ ಚಾಮರಾಜ ಒಡೆಯರ್ ಬಹದ್ದೂರವರು ಹಿಂದೆ ಬಂದ ಕ್ಷಾಮವನ್ನು ನೋಡಿ ಪ್ರಜಾಪರಿಪಾಲನಾರ್ಥವಾಗಿ ಕ್ಷಾಮನಿವಾರಣೆ ಮಾಡಬೇಕೆಂತ ಅಭಿಪ್ರಾಯ ಪಟ್ಟು ತಮ್ಮ ಹೆಸರಿನ ಮೇಲೆ ಚಾಮರಾಜನಾಲೆ ಬಿಡಾವಣೆ ಮಾಡಿಸಿ ಪ್ರಜೆಗಳಿಗೂ ದನಗಳಿಗೂ ಸಹ ಜೀವನೋದ್ಧಾರ ಮಾಡಿ ಶಾಶ್ವತವಾದ ಧರ್ಮ ಕೀರ್ತಿಯಂ ಪಡೆದು ವಿಷ್ಣು ಪದವಿಯಂ ಹೊಂದಿದರು. ಅವರ ಹಿಂದೆ ರಾಜ್ಯಭಾರ ಆಳಿದ ಶ್ರೀಮನ್ ಮಹಾರಾಜಾ ಕೃಷ್ಣರಾಜ ಒಡೆಯರ್ ಬಹದ್ದೂರವರು ತಮ್ಮ ಹೆಸರಿನ ಮೇಲೆ ಕೃಷ್ಣರಾಜ ಕಟ್ಟೆ ಎಂಬ ಕಟ್ಟೆ ಕಟ್ಟಿಸಿ, ಎರಡು ಕಡೆ ಕೋಳುವಾಯಿಗಳನ್ನು ಇಡಿಸಿ ಉತ್ತರ ದಿಕ್ಕಿನ ನಾಲೆ ಅರಕಲಗೂಡು ತಾಲ್ಲೂಕು ರಾಮನಾಥಪುರದ ಬಳಿ ಒಂದು, ಕೇರಳಾಪುರದ ಕಡೆಗೆ ಒಂದು ನಿಂತು ಇದೆ ಆಳಿದ ಮಹಾಸ್ವಾಮಿಯವರು ಗರೀಬ ರೈತರುಗಳ ಜೀವನೋದ್ಧಾರ ಮಾಡಿ ಘನತರ ಕೀರ್ತಿಯಂ ಪಡೆದು ಶಾಶ್ವತವಾದ ಪದವಿಯಂ ಹೊಂದಿದರು ಕೇರಳಾಪುರದ ಬಳಿ ಬಂದು ನಿಂತು ಇರುವ ಕೃಷ್ಣರಾಜ ನಾಲೆಯು ಭೇರ್ಯ ಕೆರೆಗೆ ಅಂದಾಜು ಇರುವದನ್ನು ಬಿಡಾವಣೆ ಮಾಡಿಸಿ ಗರೀಬ ರೈತರಿಗೂ ದನಗಳಿಗೂ ಸಹ ಜೀವನೋದ್ಧಾರ ಮಾಡಿಸಿ ಕೊಡಬೇಕು ಈಗ್ಗೆ ಹತ್ತು ಹನ್ನೆರಡು ವರುಷದ ಕೆಳಗೆ ದಸರಾ ಮಿಟಿಂಗು ಕಾಲದಲ್ಲಿ ಮೆಂಬರಾಗಿದ್ದ ಯಡತೊರೆ ಶಿವ್ರೋಜರಾಯರು ಭೇರ್ಯದ ಕೆರೆ ಕೆಳಗೆ ಸುಮಾರು ಐದುನೂರು ರೂಪಾಯಿಗಳವರಿಗೂ ಕಂದಾಯ ಕೊಡುತ್ತೇನೆಂಬಲೂ, ಸದರೀ ಕೆರೆಗೆ ಸರ್ಕಾರದಿಂದ ೨೦ ಸಾವಿರ ರೂಪಾಯಿಗಳ ಕಾಮಗಾರಿ ಮಾಡಿಸಿ ಕೊಡಬೇಕೆಂದೂ ಕೇಳಿಕೊಂಡದ್ದರ ಮೇಲೆ ಛೀಫ್ ಇಂಜನಿಯರವರು ಒಬ್ಬ ರೈತನಿಗೋಸ್ಕರ ಇಪ್ಪತ್ತು ಸಾವಿರ ರೂಪಾಯಿ ಖರ್ಚು ಮಾಡುವದಕ್ಕಿಂತ ಇದರ ಜೊತೆಗೆ ಇನ್ನು ಕೆಲವು ಮೊಬಲಗು ಖರ್ಚು ಮಾಡಿ ಕೇರಳಾಪುರದ ಬಳಿ ಬಂದು ನಿಂತು ಇರುವ ಕೃಷ್ಣರಾಜ ನಾಲೆ ಬಿಡಾಯಿಸಿ ಭೇರ್ಯದ ಕೆರೆಗೆ ತರಬಹುದಾಗಿದೆ ಎಂದು ಸದರಿ ಶಿವ್ರೋಜರಾಯರಿಗೆ ಜವಾಬು ಮಾಡಿದರೆಂದು ವರ್ತಮಾನ ಕೇಳುತ್ತೇನೆ ಈ ಅಂದಾಜು ಇರುವದನ್ನು ಮೈಸೂರು ಪತ್ರಿಕೆಗಳಲ್ಲಿ ಸೂಚಿಸುತ್ತಾ ಇದ್ದಾರೆ. ಚಾಮರಾಜ ನಾಲೆಯು ಬಿಡಾವಣೆ ಆಗುವಾಗ್ಗೆ ಮೇಲ್ಭಾಗ ಅಂದರೆ ನಮ್ಮಗಳ ಪ್ರಾಂತ್ಯ ಬರುತ್ತೆಂದು ನಂಬಿಕೊಂಡು ಇದ್ದೆವು ನಮ್ಮಗಳ ದುರಾದೃಷ್ಟಕ್ಕೆ ಕಳೆ ನಾಲೆ ಪಾಯದಲ್ಲೇ ಹೋಯಿತು. ಪ್ರಜಾಪ್ರತಿನಿಧಿ ಸಭೆಗೆ ಸೇರತಕ್ಕ ಮೆಂಬರುಗಳು ಧನಿಕರಾಗಿರುವ ನಾಲೆ ಬಂದಿರತಕ್ಕ ಸ್ಥಳದವರಾಗಿಯೂ ಇರುತ್ತಾರೆ. ಇವರುಗಳು ತಮಗೆ ಅನುಕೂಲವಾದ ಸಂಗತಿಗಳನ್ನೇ ತಿಳಿಸುವರೇ ಹೊರತು ಬೆಂಗಾಡು ಗ್ರಾಮಗಳಲ್ಲಿ ಇರತಕ್ಕ ನಮ್ಮಗಳ ಕಷ್ಟವನ್ನು ಕೇಳುವವರೇ ಇಲ್ಲ ಬೆಂಗಾಡು ಗ್ರಾಮಗಳ ರೈತರ ಕ್ಷಾಮವನ್ನು ಈಗಲಾದರೂ ಶ್ರೀಮನ್ ಮಹಾಸ್ವಾಮಿಯವರು ಮನಸ್ಸಿಗೆ ತಂದುಕೊಂಡು ಜವಾಬು ದಯಪಾಲಿಸಬೇಕು

ಕರ್ಪೂರವಳ್ಳಿ ಕಾಳಶೆಟ್ಟಿ ಪಟೇಲ್, ದಡದಹಳ್ಳಿ ಪಟೇಲ್ ಕಾಡೇಗೌಡ, ಮೇಲ್ಲೂರು ಪಟೇಲ್ ಕುಳ್ಳ ಬೋಳೇಗೌಡ, ಯಲಾದ ಪಟೇಲ್ ವೆಂಕಟೇಗೌಡ, ಮುದ್ದನಹಳ್ಳಿ ಪಟೇಲ್ ಲಿಂಗರಾಜಯ್ಯ.

ಮಲೆನಾಡಿನ ಅವಿದ್ಯಾವಿಚಾರ.

ಅಯ್ಯಾ,

ಕಳೆದ ಡಿಸೆಂಬರ್ ಆಖೈರಿನಲ್ಲಿ ಮಂಜರಾಬಾದು ತಾಲ್ಲೂಕಿಗೆ ಸೇರಿದ ಮಂಗೇರಿಯೆಂಬ ಗ್ರಾಮದಲ್ಲಿ ಒಂದು ಖೂನಿ ಆಯ್ತು. ಚಿಕ್ಕನಳ್ಳಿ ಲಿಂಗೆಗೌಡನೆಂಬ ಒಕ್ಕಲಿಗನು ಹೊಸದಾಗಿ ಲಗ್ನವಾಗಿ ಒಂದು ತಿಂಗಳಾಗಿತ್ತು. ಮೃತನು ಅವಳ ತಾಯಿಗೆ ೧೫೦ ರೂಪಾಯಿ ಕೊಟ್ಟು ಲಗ್ನವಾಗಿದ್ದನು. ದುಡ್ಡಿನಾಶೆಯಿಂದ ಇವನಿಗೆ ಲಗ್ನಮಾಡಿಕೊಟ್ಟರು. ಈಚೆಗೆ ಸಾಯಂಕಾಲ ೮ ಘಂಟೆ ಸಮಯದಲ್ಲಿ ಗಂಡನಿಗೆ ಸ್ನಾನ ಮಾಡುವದಕ್ಕೆ ಬಿಸಿನೀರನ್ನು ಮನೆ ಮುಂದೆ ಅಂಗಳದಲ್ಲಿಟ್ಟು ಗಂಡನನ್ನು ಬರಮಾಡಿ ಬಿಸಿಯಾಗಿದೆ ತಣ್ಣೀರು ತರುತ್ತೇನೆ. ಹಾಕಿಕೊಳ್ಳುತ್ತಿರಿ ಎಂತ ಘಟ್ಟಿಯಾಗಿ ಹೇಳಿ ಒಳಕ್ಕೆ ಹೋದಳು. ಸಂಜ್ಞಾವಿಂಡನು ಬಂದೂಕಿನಿಂದ ನಿರ್ಭಾಗ್ಯ ಮನುಷ್ಯನನ್ನು ಉಡಾಯಿಸಿ ತನ್ನ ಊರಿಗೆ ರಾತ್ರಿಯೇ ಪಲಾಯನವಾದನು. ಮಾರನೇದಿನವೂ ಪೊಲೀಸಿನವರು ಬಂದು ಹಲವು ಯುಕ್ತಿಗಳಿಂದ ಸವರಿಯವಳನ್ನು ಪ್ರಸಲಾಯಿಸಿದರು. ಹ್ಯಾಗೋ ಅವಳು ನಡದ ವಿಷಯಗಳನ್ನೆಲ್ಲಾ ಸಾಂಗವಾಗಿ ಹೇಳಿದಳು. ನಂತರ ಆ ವಿಂಡನು ತನಗೆ ಒಳ್ಳೇ ಸಮೂನೆ ಆಗಿ ಸೋಲದು ಕೊಟ್ಟಿದ್ದ ಚೇಲವನ್ನು ಗುರ್ತಿಗೆ ಕೊಡುತ್ತೇನೆ. ಅವನಲ್ಲಿಗೆ ಯಾರನ್ನಾದರೂ ಕಳುಹಿಸಿದರೆ ಆಗತ್ಯ ಬರುತ್ತಾನೆಂತ ಹೇಳಿದ್ದರ ಮೇರೆ ೩ ಜನರನ್ನು ಕಳುಹಿಸಿದರು. ಅದರಂತೆ ಅವನು ಕೂಡಲೇ ಬಂದನು. ದಾರಿಯಲ್ಲಿ ಮರೆಯಾಗಿ ನಿಂತಿದ್ದ ಪೊಲೀಸಿನವರು ದಸ್ತಗಿರಿ ಮಾಡಿ ಸ್ಥಳಕ್ಕೆ ತಂದರು. ಕೂಡಲೇ ಬಂದೂಕದ ಪತ್ತೆಗಾಗಿಯೂ, ಕೊಡಗು ಸರ್ಕಾರದವರ ಮೊಖಾಬಿಲೆಗಾಗಿಯೂ ಜಮಾದಾರ್ರು, ಇನ್ಸ್ಪೆಕ್ಟರ್ರು, ೩ ಜನ ದಫೇದಾರ್ರು ೩ ಜನ ಕಾನಿಸ್ಟೇಬಲ್ರುಗಳೊಡನೆ ಖೈದಿಯನ್ನು ಕೊಡಗು ಸೀಮೆ ಕಲ್ಲಸ ಹಳ್ಳಿಗೆ ಕಳುಹಿಸಿ ಕೊಟ್ಟು, ನಮ್ಮ ಅಮಲ್ದಾರ್ರೂ ಪೊಲೀಸ್ ಸೂಪರಿಂಟೆಂಡೆಂಟರೂ ಜನವರಿ ೩ರಲ್ಲಿ ವಾಪಸುಬಂದರು.

ಆತ್ತಲಾಗೆ ಜಮೇದಾರ ಕರಕೊಂಡುಹೋಗಿ ಉಭಯ ಸೀಮೆಯವರೂ ಕಲೆತು ಬಂದೋಬಸ್ತು ನಡಿಸಿ ಖೈದಿಯನ್ನು ನಮ್ಮ ಸೀಮೆ ಸರ್ಕಾರದವರ ವಶಕ್ಕೆ ತಕ್ಕೊಂಡು ವಾಪಸು ಬರುವಾಗ್ಗೆ ಖೈದಿಯು ಕಾಡಿನಲ್ಲಿ ಮೃಗದಂತೆ ಓಡಿಬಿಟ್ಟನು. ಈ ವರಿವಿಗೂ ಸಿಕ್ಕಲಿಲ್ಲ. ಮೃತನ ಹೆಂಡತಿಯು ಲಾಕಪ್ಪಿನಲ್ಲಿರುತ್ತಾಳೆ. ಮತ್ತು ಆ ಹೆಂಡತಿಗೆ ಮಾಫಿ ವಾಗ್ದಾನದ ಮೇಲೆ ಬಿಡುಗಡೆ ಆದರೆ ಹೋದವನೇ ಕೆಟ್ಟನೆಂಬಂತಾಗುತ್ತದೆ ಖೂನಿಗೆ ಸಹಕಾರಿಯಾಗಿದ್ದವರನ್ನೂ ಮಾಫಿ ವಾಗ್ದಾನದ ಮೇಲೆ ಬಿಡುತ್ತಾ ಬರುವದರಿಂದ ನಿರಪರಾಧಿಗಳನ್ನು ವೃಥಾ ಜಣಿಸುವದಕ್ಕೂ ಕೇಸುಗಳು ಪತ್ತೆ ಆಗದೆಹೋಗುವದರಿಂದ ಅಕೃತ್ಯಗಳು ದಿನೇ ದಿನೇ ಹೆಚ್ಚುವದಕ್ಕೂ ಆಸ್ಪದವಲ್ಲವೇ?

ಈ ನಮ್ಮ ಮಲೆನಾಡಿನಲ್ಲಿ ಖೂನಿ ದರೋಡೆ ಹೆಚ್ಚುತ್ತಾ ಬಂದಿರುವದು ನೋಡಿದರೆ ಹೆಂಗಸರಿಂದಲೇ ೩ ಪಾಲೆಂತ ಹೇಳಬಹುದು ಹ್ಯಾಗೆಂದರೆ ತಂದೆ ತಾಯಿಗಳು ಹೆಣ್ಣಿನ ಲಗ್ನದ ವೇಳೆ ಕ್ರಯವನ್ನು ಕಾಲಕಾಲಕ್ಕೆ ಹೆಚ್ಚು ಹೇಳುತ್ತಾ ಬರುವದರಿಂದ ರಜಸ್ವತಿಯಾಗಿ ೬—೫ ವರ್ಷದ ವರಿವಿಗೂ ದುರಾಚಾರಕ್ಕೆ ಬಿದ್ದು ಗರ್ಭಚ್ಛೇದವೇ ಮೊದಲಾದ ಖೂನಿಗಳು ನಡಿಯುವದು. ಒಂದು ವೇಳೆ ವಿದ್ಯವನ್ನಾದರೂ ಕಲಿತಿದ್ದರೆ ಅಥವ ಅವರ ಗಂಡಸರಾದರೂ ಕಲಿತಿದ್ದರೆ ಪಾಪ ಕೃತ್ಯಗಳಿಗೆ ಅಲ್ಪವಾದರೂ ಹಿಂಜರಿಯುವ ಮಾನಸ್ಸು ಹುಟ್ಟುತ್ತಿತ್ತು ನಮ್ಮ ಒಕ್ಕಲಿಗರಲ್ಲಿ ಗಂಡಸರಿಗೆ ಮತ್ತು ಹೆಂಗಸರಿಗೆ ವಿದ್ಯೆ ಯಾತಕ್ಕೆಂತ ಕೆಲವರು ಬ್ರಾಹ್ಮಣರೆ ಮೊದಲಾಗಿ ಗುಣಿಗಟ್ಟಿರುವದನ್ನು ಕೇಳಿದೇನೆ. ನಮ್ಮ ಜನಗಳಲ್ಲಿನ ಈ ಆ ತದ್ವತ್ತಿನವರೇ ಆಗಿರುತ್ತಾರೆ ಒಂದು ವೇಳೆ ನಮ್ಮ ಜನರೆಲ್ಲೊಬ್ಬನು ಲಗ್ನಕ್ಕೆ ಪಣಸ್ಥರಲ್ಲಿ ಸಾಲ ೩೦೦—೪೦೦ ತೆಗೆಯುತ್ತಾನೆ ಬಡ್ಡಿಯು ಶೇಕಡ ತಿಂಗಳಿಗೆ ೧—೮—೦ ಅಸಲು ಬಡ್ಡಿ ೧—೨ ವರುಷ ಕಳೆದ ಕೂಡ್ಲೇ ಹೆಚ್ಚಿತು. ತೀರಿಸಲು ಆದಾಯವಿಲ್ಲ. ಕಾಫಿ ಬೆಳೆ ಸುತರಾಂ ಇಲ್ಲ ಸ್ವತ್ತುಗಳು ಬಿಡಬೇಕಾಗಿ ಬಂತು. ಕೂಡ್ಲೆ ಜೀವನಕ್ಕಿಲ್ಲ ಕಳ್ಳತನಕ್ಕೂ ಸುಲಿಗೆಗೂ ಮನಸ್ಸು ಹುಟ್ಟಿತು. ತನ್ನ ಹೊಟ್ಟೆಯಲ್ಲಿ ಹುಟ್ಟಿದ ಹೆಣ್ಣು ಮಕ್ಕಳಿಗೆ ಲಗ್ನ ಕಾಲಗಳಲ್ಲಿ ಕ್ರಯವನ್ನು ತಕ್ಕೊಂಡು ಅಪ್ರಯೋಜಕವಾದ ದುಂದುಖರ್ಚು ಮಾಡಿ ನಮ್ಮ ಜನಗಳ ನಾಶನಕ್ಕೆ ಪ್ರಯತ್ನಿಸಿರುವ ಮನುಷ್ಯರಿಗೆ ಏನು ಹೇಳೋಣ!

ಈ ವಿಷಯಗಳಲ್ಲಿ ನಮ್ಮ ಜಿಲ್ಲೆಯ ನಾಡು ಪಟೇಲರ ಮಂಗನಿಪ್ಪಣ್ಣಗೌಡರು ಮೊದಲು ಸಭೆ ಮಾಡಿ ೨ ನಾಡಿನವರಿಗೂ ತಿಳುವಳಿಕೆ ಕೊಟ್ಟು ಕೊಂಚ ಬಿಡುಗಡೆಗೆ ಆಸ್ಪದವಾಗಿರುತ್ತೆ ಈಗಲೂ ಪುನಃ ನಮ್ಮ ಅಕ್ಕಪಕ್ಕದ ಗ್ರಾಮಗಳಲ್ಲಾದ ೬—೫ ಲಗ್ನಗಳಿಗೆ ತಾನೇ ಹೋಗಿ ಚರ್ಚಿಸುವದೂ, ವಿದ್ಯಾ ಸಂಘಕ್ಕೆ ವಧೂವರರು ಧರ್ಮಸಹಾಯ ಮಾಡುವದು ಮುಖ್ಯವಾದೆಂತ ಹೇಳುವದೂ, ಹಣಗಳನ್ನು ತಕ್ಕೊಂಡಿರುವರಿಗೆ ಮತಸ್ಥರು ಹಾಕುವ ದಂಡಕ್ಕೆ ಪಾತ್ರರಾಗುತ್ತೀರೆಂತ ತಿಳಿಸುವದೂ ಈ ಮೇರೆ ೧೫—೨೦ ದಿನಗಳಿಂದ ಅಲೆಯುತ್ತಿದಾರೆ. ಒಕ್ಕಲಿಗರ ವಿದ್ಯಾಸಂಘಕ್ಕೆ ಲಗ್ನ ಒಂದಕ್ಕೆ ೨ ರೂಪಾಯಿ ಲಾಗಾಯ್ತು ೮ ರೂಪಾಯಿವರಿಗೂ ಓಟಾಐಟ್ಟಾಗಿ ಸಂಘದಿಂದ ಅನುಮತಿಪಡಲ್ಪಟ್ಟಿದೆ. ಕೆಲವು ಲಗ್ನಗಳ ಪೈಕಿ ೨—೩ ಜನರು ಹೆಣ್ಣಿಗೆ ಕ್ರಯ ತಕ್ಕೊಂಡೂ ಸಂಘಕ್ಕೆ ಕೊಡಲು ಏನೂ ಇಲ್ಲವೆಂದು ಹಿಂಜರಿದರು ಈ ನಿಪ್ಪಣ್ಣಗೌಡರು ಸಾಹಸಪಡುತ್ತಿರುವ ವಿಷಯದಲ್ಲಿ ಪ್ರಜಾ ನೆಮ್ಮದಿ ಪರಿಪಾಲರಾದ ಪೊಲೀಸ್ ಸೂಪರಿಂಟೆಂಡೆಂಟ್ ಸಾಹೇಬರು ಸರ್ಕಲ್ ದಯಮಾಡಿಸಿ ವಿಚಾರಕ್ಕೆ ತಂದು ಕೊಂಡಲ್ಲಿ ಅಪ್ರಯೋಜಕವಾದ ದುಂದು ಖರ್ಚುಗಳು ನಿಂತು ಆದಾಯ ಹೆಚ್ಚುವದಕ್ಕೂ ಆ ಕೃತ್ಯಗಳು ನಿಸ್ಸಂದೇಹವಾಗಿ ನಿಲ್ಲಲಿಕ್ಕೂ ಅನುಕೂಲವಾದೀತು. ತಾವು ಇದನ್ನು ಪ್ರಕಟಿಸಿದರೆ ನಮ್ಮ ಮಲೆನಾಡು ಒಕ್ಕಲಿಗ ಮಹನೀಯರಿಗೆ ಇನ್ನಾದರೂ ಜ್ಞಾನೋದಯವನ್ನು ಪತ್ರಿಕಾ ವಾಚಕರಾದರೂ ಹೇಳ್ಯಾರೆಂತ ತಮ್ಮನ್ನು ಬೇಡುತ್ತೇನೆ. ಇತರ ಮಾತು ಚೆನ್ನಾಗಿ ಕೇಳುವದು ನಮ್ಮ ಕಾಡುನಿವಾಸಿಗಳ ಹಳೇಪಾಡಿಕೆಯಾಗಿದೆ.

ತಮ್ಮೇಗೌಡ.

WILLIAM & CO., BOMBAY.
ವಿಲಿಯಂ ಮತ್ತು ಕಂಪೆನಿ, ಪೋರ್ಟು, ಮುಂಬಯಿ.

ಅಮೃತಾಂಜನ

27-2

ಬಾಟ್ಲಿ ಒಂದಕ್ಕೆ ಕಿಮ್ಮತು ೮ ಆಣೆ. ವಿ. ಪಿ. ೧೨ ಆಣೆ.

ಅಮೃತಾಂಜನ—ಸುಖಾಂಜನ.
ಅಮೃತಾಂಜನ—ಸಂಜೀವನ.
ಅಮೃತಾಂಜನ—ಪರಮಾಂಜನ.
ಅಮೃತಾಂಜನ—ದಿವ್ಯಾಂಜನ.
ಅಮೃತಾಂಜನ—ಆಶೀತಭಂಜನಿ.
ಅಮೃತಾಂಜನ—ಶ್ವಾಸಭಂಜನವಿಮರ್ದಿನಿ.
ಅಮೃತಾಂಜನ—ಅಪೂರ್ವದರ್ಶಿನಿ.
ಅಮೃತಾಂಜನ—ತಕ್ಷಣ ಪರಿಹಾರಿಣಿ
ಅಮೃತಾಂಜನ—ಸಂಧಿವಾತಕ್ಕೆ.
ಅಮೃತಾಂಜನ—ತಲೆನೋವಿಗೆ.
ಅಮೃತಾಂಜನ—ಬಾವು ಮತ್ತು ಗಾಯಕ್ಕೆ.
ಅಮೃತಾಂಜನ—ಗಂಟಲುನೋವಿಗೆ.

ಶಿರೋವೇಧನ ವಾತ, ಎದೆನೋವು, ಗಂಟಲುನೋವು, ಸಂಧಿವಾತ, ತಲೆನೋವು, ಶಿರೋಜ್ವರ, ಈ ಎಲ್ಲಾ ತರದ ರೋಗಕ್ಕೆ ಅಮೃತಾಂಜನವು ದಿವ್ಯವಾದ ಔಷಧವಾಗಿದೆ. ಇದನ್ನು ತರಿಸಿ ಮನೆಯಲ್ಲಿ ಸದಾಕಾಲ ಇಟ್ಟರೆ, ಮೇಲೆ ಹೇಳಿದ ಯಾವತರದ ರೋಗಕ್ಕೂ ಎದೆ ಸಿಕ್ಕುವದಿಲ್ಲ. ಅಮೃತಾಂಜನದಿಂದ ಗುಣವು ಕಂಡುಬರದಿದ್ದರೆ ಹಣ ಹಿಂತಿರುಗಿ ಕೊಡಲ್ಪಡುವದು

ಗಜಕರ್ಣದ ಮುಲಾಮು ಡಬ್ಬಿ ಒಂದಕ್ಕೆ ೬ ಆಣೆ, ವಿ. ಪಿ. ೧೨ ಆಣೆ.—ಇದನ್ನು ಹಾಗಿಸುವದರಿಂದ ಎಲ್ಲಾ ತರದ ಕಜ್ಜ ನಾಶವಾಗುವದು. ಮೂರು ಸಾರಿ ಹಾಗಿಸುವದರೊಳಗೆ ಗಜಕರ್ಣವು ಹೋಗುವದು ಒಂದು ಸಾರಿ ಪರೀಕ್ಷಿಸಿ ನೋಡಿರಿ ಕ್ರಯ ಕಮ್ಮಿ, ಗುಣ ಹೆಚ್ಚು ಇದನ್ನು ಹಚ್ಚಿದಲ್ಲಿ ಉರಿ ಬರುವದಿಲ್ಲ, ಚರ್ಮ ಕಪ್ಪಾಗುವದಿಲ್ಲ. ಇದರಿಂದ ಗುಣವು ಕಂಡುಬರದಿದ್ದರೆ ಹಣ ಪರತು ಕೊಡಲ್ಪಡುವದು

ಕೇಶವರ್ಧಿನೀ ತೈಲ—ಇದು ತಲೆಯ ಕೂದಲನ್ನು ತಂಪುಮಾಡಿ ಅದನ್ನು ತೆಗದು ಕೂದಲು ಬೆಳೆಸುತ್ತದೆ ಇದಕ್ಕೆ ಚಲೋ ಪರಿಮಳವು ಬರುತ್ತದೆ ಮೂರು ಔನ್ಸು ಬಾಟ್ಲಿಗೆ ೧-೦-೦

ಕಜ್ಜಿಮುಲಾಮು—ಇದು ಅತಿಶಯ ಅಗ್ಗವೂ ಗುಣದಾಯಕವೂ ಆಗಿರುತ್ತದೆ. ೦-೩-೦

ಕಫಹಾರಿ—ಕೆಮ್ಮು, ದಮ್ಮು. ಕ್ಷಯ, ಕೊರಳಿನಲ್ಲಿ ಕಫ ಮುಂತಾದ್ದಕ್ಕೆ ಇದು ಉತ್ತಮವಾದದ್ದು, ಬಾಟ್ಲಿ ೧ಕ್ಕೆ ೧-೬-೦

ಜೀರ್ಣರಸಾಯನ—ಹೊಟ್ಟೆಯಲ್ಲಿ ಹಸಿವೆ ಆಗದಿದ್ದರೂ ನಾಲಿಗೆಗೆ ರುಚಿ ಬರದಿದ್ದರೂ ಉತ್ತಮವಾದದ್ದು . . ೧-೬-೦

ಜ್ವರಹಾರಿ—ಎಲ್ಲಾ ತರದ ಜ್ವರಗಳ ಮೇಲೆ ಈ ಔಷಧವು ಚಲೋದಾದದ್ದು ೦-೧೨-೦

ಸುಂದರೀ ತೈಲ—ಈ ತೈಲವನ್ನು ನಿರಂತರವಾಗಿ ಮೋರೆಯ ಮೇಲೆ ಹಾಗಿಸುವದರಿಂದ ಮೋರೆಯ ಮೇಲೆ ಇರುವ ಗಾಯದ ಕಲೆಗಳನ್ನೂ ಕಪ್ಪಿನ ಕಲೆಗಳನ್ನೂ ತೆಗದು ಚರ್ಮವನ್ನು ಮೃದುಮಾಡಿ ಚಲುವಿಕೆಯನ್ನು ಕೊಡುತ್ತದೆ. ಹೆಂಗಸರಿಗೂ ಗಂಡಸರಿಗೂ ಉತ್ತಮವಾದದ್ದು ೦-೪-೦

ದಂತಮಂಜನ—ಹಲ್ಲು ಸ್ವಚ್ಛವಾಗುತ್ತೆ, ಘಟ್ಟಿಯಾಗುತ್ತೆ, ವಾಸನೆಯನ್ನೂ ರಕ್ತವನ್ನೂ ನಿಲ್ಲಿಸುತ್ತದೆ ಕ್ರಯ ಬಹಳ ಕಮ್ಮಿ ೦-೨-೦

ನೇತ್ರಾಂಜನ ೬ ಆಣೆ ವಜ್ರಗುಟಿಕ ೧ ರೂಪಾಯಿ. ಕುಸುಮಾರಿ ಗುಟಿಕ ೧ ರೂಪಾಯಿ. ದಂತಮಾತಕಾರಿ ೪ ಆಣೆ. ಕಫನಾಶಕ ಚೂರ್ಣ ೪ ಆಣೆ ಕೇಳು ಕಡಕದ ಮದ್ದು ೪ ಆಣೆ. ರೋಮಹಾರಿ ೪ ಆಣೆ. ಕಸ್ತೂರಿಮಾತ್ರೆ ೧೦ ಆಣೆ

ಎಲ್ಲಾ ತರದ ಔಷಧಗಳು ಇರುವದರಿಂದ ಕೆಟಲಾಗು ಬೇಕಾದವರು ಬರದು ತರಿಸಿಕೊಳ್ಳಬಹುದು.

ವಿಲಿಯಂ ಮತ್ತು ಕಂಪನಿ, ಪೋರ್ಟು, ಮುಂಬಯಿ.

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

15—2—1907 ರಿಂದ 22—2—1907 ರ ವರೆಗೆ

ಸ್ಥಳ.	ಪ್ಲೇಗ್ ತಗಲಿದ್ದು.	ಪ್ಲೇಗ್ ಸತ್ತದ್ದು.	ಕೋಳದ ಮಧ್ಯ ಈ ವಾರದ ಸಂಖ್ಯೆ	
ಬೆಂಗಳೂರು ಪಟ್ಟಣ	43	28	21	12
ಮೈಸೂರು ,,	72	50	0	0
ಬೆಂಗಳೂರು ಡಿಸ್ಟ್ರಿಕ್ಟು	64	47	13	7
ಮೈಸೂರು ,,	18	9	0	0
ಕೋಲಾರ್ ,,	9	2	1	2
ಕೋಲಾರ್ ಚಿನ್ನದ ಗಣಿಗಳು	1	8	18	7
ತುಂಕೂರು ಡಿಸ್ಟ್ರಿಕ್ಟು	3	2	0	0
ಹಾಸನ ,,	81	9	0	0
ಚಿತ್ರದುರ್ಗ ,,	0	0	7	4
ಕಡೂರ್ ,,	12	13	0	0
ಶಿವಮೊಗ್ಗಾ ,,	0	0	16	11
ಜುಮ್ಲಾ	330	182	70	43

ಶಾಲಿವಾಹನ ಶಕ ವರುಷಂಗಳು ೧೮೨೮ ನೇ ಪರಾಭವ ಸಂವತ್ಸರದ ಫಾಲ್ಗುಣ ಬಹುಳ ಅಷ್ಟಮಿ ಗುರುವಾರದಿಂದ ಫಾಲ್ಗುಣ ಬಹುಳ ಚತುರ್ದಶಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ.

೧೯೦೭ ನೇ ಇಸವಿ ಮಾರ್ಚಿ.

ತಾ.	ವಾರ.	ತಿಥಿ.	ಘಳಿಗೆ.	ನಕ್ಷತ್ರ.	ಘಳಿಗೆ.	ಅಧಿಕ ಕುಂಭ ಮಾಸ
7	ಗುರು	ಅಷ್ಟಮಿ	15-15	ಜ್ಯೆ	16 36	24
8	ಶುಕ್ರ	ನವಮಿ	39-19	ಮೂಲ	42-22	25
9	ಶನಿ	ದಶಮಿ	33-23	ಪೂಷಾ	38-28	26
10	ರವಿ ¶	ಏಕಾದಶಿ	27-50	ಉ.ಷಾ	34-40	27
11	ಚಂದ್ರ ::	ದ್ವಾದಶಿ	22-38	ಶ್ರ	31-21	28
12	ಕುಜ ‡	ತ್ರಯೋ	18-2	ಧ	28-10	29
13	ಬುಧ †	ಚತುರ್ದಶಿ	14-20	ಶ	26-12	30

¶ ಸರ್ವತ್ರ ಏಕಾದಶಿ : ತಿಥಿದ್ವಯಂ, ಸೋಮಪ್ರದೋಷ ಹಿಮವದ್ಗೋಪಾಲಕೃಷ್ಣಸ್ವಾಮಿ ರಥ. ‡ ಚತುರ್ದಶಿ ತಿಥಿ, ಉತ್ಪಾತ ಯೋಗ. † ಸರ್ವತ್ರ ಅಮಾವಾಸ್ಯೆ.

ಪೇಟೇ ಧಾರಣೆ.

ದಿನಸಿ.	ಮೈಸೂರು.	ಬೆಂಗಳೂರು.
ಕೆಸ್ತೀ ಅಕ್ಕಿ ಪಲ್ಲಾ ೧ಕ್ಕೆ ರೂ	೧೩-೪-೦	೧೩-೦-೦
ಕೆಂಬುತಿ ಅಕ್ಕಿ ಅವಲ್	೧೨-೬-೦	೧೬-೦-೦
,, ದ ಯಂ	೧೨-೦-೦	೧೩-೦-೦
ಜಾಬ್ರಾಣಿ ಅಕ್ಕಿ	೧೩-೭-೦	೧೫-೦-೦
ಸಣ್ಣಕ್ಕಿ ಅವಲ್	೧೫-೦-೦	೧೬-೦-೦
,, ದುಯಂ	೧೬-೦-೦	೧೩-೪-೦
ತೊಗರೀ ಬೇಳೆ ಪಲ್ಲಾ ೧ಕ್ಕೆ	೧೧-೦-೦	೧೨-೪-೦
,, ದುಯಂ	೧೦-೧೨-೦	೧೨-೦-೦
ಹೈಗ ರಾಗಿ ಪಲ್ಲಾ ೧ಕ್ಕೆ	೭-೬-೦	೭-೬-೦
ಕಾರಾಗಿ	೭-೦-೦	೭-೦-೦
ಜೋಳ	೫-೪-೦	೭-೪-೦
ಹಲಸಂದೆ ಪಲ್ಲಾ ೧ಕ್ಕೆ	೧೦-೧೨-೦	೧೧-೪-೦
ಬಿಳೀ ಅವರೆ	೯-೬-೦	೭-೧೨-೦
ಹೆಸರು	೧೧-೪-೦	೯-೪-೦
ಉದ್ದು	೧೨-೦-೦	೧೧-೪-೦
ಕಡಲೆ	೧೧-೪-೦	೧೧-೦-೦
ಎಳ್ಳು ಸೆ. ೧೨೭ ಕ್ಕೆ	೧೭-೦-೦	೨೨-೦-೦
ಹುರುಳಿ	೭-೩-೦	೭-೦-೦
ಹರಳು ೧೨೭ ಸೇರಿಗೆ	೧೯-೦-೦	೧೭-೪-೦
ಸೀಗೇಕಾಯಿ ಮಣ ೧ಕ್ಕೆ	೨-೨-೦	೧-೧೨-೦
ಮೆಣಸಿನಕಾಯಿ	೩-೬-೦	೩-೦-೦
,, ದುಯಂ	೩-೦-೦	೨-೧೨-೦
ಬೆಲ್ಲ ದೊಡ್ಡ ಅಚ್ಚು	೬-೬-೦	ಮ ೦-೧೦-೦
ಒಳ್ಳೆಣ್ಣೆ ಮಣ ೧ಕ್ಕೆ	೬-೪-೦	೫-೦-೦
ಹರಳೆಣ್ಣೆ ,,	೭-೧೨-೦	೫-೨-೦
ಕೊತ್ತಂಬರಿ ಪಲ್ಲಾ ೧ಕ್ಕೆ	೯-೦-೦	೭-೦-೦
ಉಪ್ಪು ,,	೫-೧೦-೦	೭-೪-೦
ಹುಣಸೇ ಹಣ್ಣು	೦-೧೨-೦	೧-೦-೦
,, ಹಳೇದು	೦-೪-೦	೦-೧೬-೦
ತುಪ್ಪ ಮಣ ೧ಕ್ಕೆ	೧೭-೦-೦	೧೩-೪-೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ	೫-೬-೦	೬-೦-೦
ತೆಂಗಿನಕಾಯಿ ೧೦೦ ಕ್ಕೆ	೭-೪-೦	೭-೬-೦
ಅಳಲೇಕಾಯಿ ಮಣ ೧ಕ್ಕೆ	೧-೦-೦	೧-೦-೦
ಅಂಟ್ವಾಳದ ಕಾಯಿ ಮಣ ೧ಕ್ಕೆ	೦-೧೨-೦	೦-೧೦-೦
ಚಿನ್ನ (ಪವನ್) ಕೆಂಪು	೧೫-೬-೦	೧೫-೩-೦
,, ,, ಪಸಿಮೆ	೧೫-೧೦-೦	೧೫-೭-೦
,, ,, ಗಟ್ಟಿ ತೊಲ ೧ಕ್ಕೆ	೨೩-೧೨-೦	೨೬-೬-೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	೪೫-೦-೦	೪೬-೦-೦

ಲಾ ಗೆಜೆಟ್.

28 2

ಈ ಮಾಸಿಕ ಪುಸ್ತಕದಲ್ಲಿ ಸಿವಿಲ್ ಕ್ರಿಮಿನಲ್ ರೆವಿನ್ಯೂ ವಿಷಯಗಳನ್ನು ವಿವರಿಸುವದಲ್ಲದೆ ಹೈ ಕೋರ್ಟು ಅಪೀಲುಗಳನ್ನು ತಿಳಿಯಪಡಿಸುವದು. ಈ ಗೆಜೆಟ್ ಸರ್ವರಿಗೂ ಅವಶ್ಯಕವಾದ್ದು "ಕೊಟ್ಟೆ ಚಂದಾ ಕಳುಹಿಸಿ" ಇದರ ಚಂದಾ ವರ್ಷ ಒಂದಕ್ಕೆ ಟಪ್ಪಾಲ್ ಹಾಸಲ್ ಸೇರಿ ಒಂದೇ ರೂಪಾಯಿ. ವಿಳಾಸ — ಬಿ ನರಸಿಂಗರಾವ್, ಎಡಿಟರ್, ಲಾ, ಗೆಜೆಟ್, (ಬೆಂಗಳೂರು.)

ಮುಂಬಯಿ ವ್ಯಾಪಾರಮಾಹಿತಿ ಪ್ರಸಿದ್ಧಿ ಪಡಿಸುವವರು.

85-40

ಮುಂಬಯಿಯಲ್ಲಿ ಪ್ರತಿಯೊಂದು ಮಾಲಿನ ತೂಕ ಅಳತೆ ಮತ್ತು ಮಾಲಿನ ವರ್ಣನೆ ಹಾಗೂ ಅನೇಕ ಉಪಯುಕ್ತ ಮಾಹಿತಿಯುಳ್ಳ ಕನ್ನಡ ಪುಸ್ತಕ.—ಕ್ರಯ ೧೦ ಆಣೆ ವಿ ಪಿ ಯಿಂದ ಕಳುಹಿಸುವೆವು ಟಪಾಲು ಖರ್ಚು ಬೇರೆ ಬುಕ್ಕು ಸೇಲರರಿಗೆ ಯೋಗ್ಯ ಕಮಿಷನ್ ದೊರೆಯುವದು ಮತ್ತು ಲಿಂಗಾಯತ ಧರ್ಮಸಂಬಂಧ ವೀರಶೈವೋತ್ಪತ್ತಿ ಕ್ರಿಯಾಲಕ್ಷಣವೆಂಬುವ ಕನ್ನಡ ಪುಸ್ತಕ—ನಾಲ್ಕು ಆಣೆ. ಚಲೋ ಅಕ್ಷರದಿಂದ ಬರಿಯಿರಿ ಪತ್ತಾ ಚನ್ನಬಸಪ್ಪ ಮಲ್ಲಪ್ಪ ವಾರದ, ಪೋಷ್ಟ್ ಮಾಂಡ್ವಿ, ಮುಂಬಯಿ.

ಉತ್ತಮವಾದ ಸಿದ್ಧೌಷಧಗಳು.

19

ಆರ್ಯವೇದದಿಂದಲೂ ಬಂದ ನಮ್ಮ ಔಷಧಿಗಳು ಲಕ್ಷಾಂತರ ರೋಗಿಗಳಿಗೆ ಉಪಯೋಗಿಸಿ ಗುಣ ಕಂಡುಬಂದವುಗಳಾಗಿವೆ ಅವುಗಳೆಲ್ಲಾ ಮೊದಲಿಂದ ತಯಾರಾಗಿರುತ್ತೆ ತಿಂಗಳೊಂದಕ್ಕೆ ಅನೇಕರು ಔಷಧ ಸೇವಿಸುತ್ತಲೂ ಇರುವಸಂಗತಿ ಎಲ್ಲರಿಗೂ ಗೊತ್ತಿದೆ

(೧) ಸಂಜೀವಿನಿ ತೈಲ ಸಮಸ್ತ ಮಹಾರೋಗಗಳಿಗೂ ಕಾಲು ಸೀಸೆಗೆ ೧-೪-೦ (೨) ಭೃಂಗರಾಜ ತೈಲ ಎಲ್ಲಾ ವಿಧದ ಶಿರೋರೋಗಗಳಿಗೆ ಕಾಲು ಸೀಸೆಗೆ ೦-೧೦-೦ (೩) ಭೇದಿ ಎಣ್ಣೆ ಸುಖಪ್ರವರ್ತಿಯಾಗುವುದು ಕಾಲು ಸೀಸೆಗೆ ೦-೧೦-೦ (೪) ಮಹಾಲೇಹ ಧಾತುಶಕ್ತಿಯನ್ನುಂಟುಮಾಡಿ ಪುಷ್ಟಿಮಾಡುತ್ತೆ. ಸೇರಿಗೆ ೨-೦-೦. (೫) ಸೌಭಾಗ್ಯ ಶಂಕರಾಮೃತ, ಲೇಹ ಇದರ ಸೇವನೆಯಿಂದ ಬಾಣಂತಿಸನ್ನಿ ಕ್ಷಯ ಮೊದಲಾದ ರೋಗಗಳನ್ನು ಪರಿಹರಿಸುತ್ತೆ. ಸೇರಿಗೆ ೨-೦-೦. ಹುಚ್ಚುನಾಯಿ, ಕೊಳತ ಮಂಡಲ ಇವುಗಳಿಂದುಂಟಾದ ಪ್ರಬಲ ರೋಗಿಗಳಿಗೂ ಚಿಕಿತ್ಸೆಯು ದೊರೆಯುವದು.

ನಮ್ಮ ಕ್ಯಾಟಲಾಗು ತರಿಸಿ ನೋಡಿ—ಪಂಡಿತ ಕೃಷ್ಣಾಚೆಟ್ಟಪ್ಪ, ನಿಖಿಲ ರೋಗಾಪಹರಿ ವೈದ್ಯಶಾಲಾ, ದೊಡ್ಡಪೇಟೆ, ಮೈಸೂರು.

ಇಲ್ಲಿನೋಡಿ !

22 3

ತುಮಕೂರು ಡಿಸ್ಟ್ರಿಕ್ಟ ಇಲಾಖೆಯಲ್ಲಿ, ಯೂರೋಪಿಯನ್ ಮೇಲ್ವಿಚಾರಣೆಯಿಂದ, ಉತ್ತಮ ತರದ ಹಾಸನದ ಟೋಪಿಗಳು ಅತಿ ಶ್ರೇಷ್ಠವಾದ ಉಲ್ಲನದಿಂದ ತಯಾರಾಗುತ್ತವೆ ಕ್ರಯ ೧೦ ಆಣೆ ಯಿಂದ ೧ರೂ ೧೨ ಆಣೆವರೆಗೂ ದೊರಕುವವು ಅಪೇಕ್ಷಿಸುವವರಿಗೆ ಕ್ರಯದ ಪಟ್ಟಿಯನ್ನು ರವಾನಿಸುವೆವು ವಿಳಾಸ.—ಮೇನೇಜರ್, ಹಾಸನದ ಟೋಪಿ ಕಾರ್ಖಾನೆ, ಡಿಸ್ಟ್ರಿಕ್ಟ ಇಲಾಖೆ, ತುಮಕೂರು

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು?
ಹಾಸನದ ಟೋಪಿ ಅಲ್ಲವೋ?
ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

116

ಒಳ್ಳೇ ಟೋಪಿಗಳು ಯಾವವು ? ಯಾಕೆ ? ಸಂದೇಹವೇನು ?
ಹಾಸನದ ಟೋಪಿಗಳ ಸಮಾನ ಉಂಟೇ ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು ! ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು ? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೀಳಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ:—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು. (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಸೀದಾ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ.
ಸಾದ, ಕೆಂಪು, ಕಪ್ಪು, ಬೆರಿಕೆ, ಕಾಫಿ ಟೋಪಿಗಳು ೧ ರೂ. ೪ ಆ.; ೧ ರೂ ೭ ಆ ; ೧ ರೂ ೬ ಆ.
ರೇಶ್ಮೆ ಚುಕ್ಕೆಯುಳ್ಳ ಟೋಪಿಗಳು ೧ ರೂ. ೪ ಆ.; ೨ ರೂ.
ದಾರದ ಟೋಪಿಗಳು ೧ ರೂ. ೧೨ ಆ ; ೧ ರೂ. ೪ ಆ.; ೧ ರೂ. ೭ ಆ
ಉಸುಕಿನ ಟೋಪಿಗಳು ೧ ರೂ. ೪ ಆ., ೧ ರೂ ೭ ಆ.

ಕೂಸುಗಳ ಟೋಪಿ, ಸೂರ್ಯ ಮೇಜೋಡು, ಅರ್ಧ ಮೇಜೋಡು. ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು.

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ

Printed and Published by the Rev. E. W. THOMPSON, M A., Proprietor and Manager, Wesleyan Mission Press, Mysore. 7/3/1907.

REGISTERED
M 20

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಕ್ರಯ ೧ ದುಡ್ಡು.

ಸಂಪುಟ ... ಮೈಸೂರು—ಸನ್ ೧೯೦೭ ನೇ ಇಸವಿ ಮಾರ್ಚಿ ತಾರೀಖು ೧೪ ನೇ ಗುರುವಾರ. ಸಂಚಿಕೆ ೪೧



ಡೆಸಿಟಿ ಸಿಲ್ವರ್ ವಾಚ್.

13-7

(ಚಿತ್ರದಲ್ಲಿ ಕಂಡದ್ದು.)

ಸ್ಟೇಂಪ್ ಕೀಲ್ಲಿ ವಾಕ್ಸಲ್ ಪ್ಲೇಟ್, ಜೂಯಲ್ ಚಲನ, ಹಾಲ್‌ಮಾರ್ಕ್ ಉಳ್ಳ ಬೆಳ್ಳಿ ಅಲ್ಬರ್ಟ್ ಸರಪಣಿ ಮತ್ತು ಸೀಲ್ ಸಹಿತ, ಸಂಪೂರ್ಣ ಬದಾಸ್ ಪೆಟ್ಟಿಗೆಯಲ್ಲಿರುವದು ಕ್ರಯ (ಹಿಂದ ಸ್ಥಾನದ ಅಂಚೆ ವೆಚ್ಚ ಸೇರಿ) ರೂ ೧೩-೧೪-೦

ವೇಲೂದ ಬೆಳ್ಳಿ ಗಡಿಯಾರಗಳು, ಮುಚ್ಚಳವಿಲ್ಲದ್ದು ಕೀಲಿ ತಿರಿಗಿಸುವ್ರದೂ, ಕೀಲಿ ಇಲ್ಲದ್ದೂ ಕ್ರಯ ರೂ ೯-೬, ರೂ ೧೧-೧೦, ೧೬ ೪, ರೂ ೨೭-೪

ಸೋಲವಾದ ಬೆಳ್ಳಿ ಅರ್ಧ ಹಂಟರ್ ಗಡಿಯಾರಗಳು — ಕ್ರಯ ೧೫, ರೂ ೧೯ ೧೪, ರೂ ೨೩ ೪, ರೂ ೨೪ ೧೪

ಬಲವಾದ ಪುರಾ ಹಂಟರ್ ಗಡಿಯಾರಗಳು — ರೂ ೧೩-೪, ರೂ ೧೫, ರೂ ೧೬ ೪, ೧೯ ೭, ರೂ ೨೩-೧೦.

ಪಾಪ್ಯುಲರ್ ಸಿಕ್ಸಲ್ ಗಡಿಯಾರಗಳು, ಸ್ವಲ್ಪ ಸುತ್ತುಳ್ಳವು, ಕೀಲಿ ಇಲ್ಲ ಲೀವರ್ ಚಲನೆ, ಸುಂದರವಾದ ಒಳ್ಳೆ ಸವಾಲನೆ ಮುಚ್ಚಳ ಸಂಖ್ಯೆಯಾದ ಗಂಟೆ ತೋರಿಸುವದ, ಕ್ರಯ ರೂ ೬-೪, ರೂ ೫-೬, ರೂ ೭

ಒಳಗೆ ತೆಳುವಾದ ಚಪ್ಪಟೆಯಾಗಿರುವ ಗಡಿಯಾರಗಳು — ೧) ಕಪ್ಪು ಉಕ್ಕಿನ ಮುಚ್ಚಳ ಉಳ್ಳವು ಕ್ರಯ ರೂ ೧೦-೪,) ರೂ ೧೬-೧೬ (೨) ಬೆಳ್ಳಿಯ ಮುಚ್ಚಳ ಉಳ್ಳವು ಕ್ರಯ ರೂ ೧೪ ೧೧, ರೂ ೨೧

ಬೆಳ್ಳಿ ಅಲ್ಬರ್ಟ್ ಸರಪಣಿಗಳು ಕ್ರಯ ರೂ ೩-೧೫, ರೂ ೬ ೪, ರೂ ೫-೧೩, ರೂ ೭-೧, ರೂ ೪-೧೦

ಚಿನ್ನ ತುಂಬಿದ ಸರಪಣಿಗಳು ಕ್ರಯ ರೂ ೬-೬, ರೂ ೪-೧, ರೂ ೯-೩

ಈ ಕ್ರಯದಲ್ಲಿ ಹಿಂದುಸ್ಥಾನದ ಅಂಚೆ ಹಾಸಲೂ ಸೇರಿದೆ

ಎಂಟು ದಿನಕ್ಕೊವ್ಮೆ ಕೀಲಿ ತಿರಿಗಿಸತಕ್ಕ ವಾಚುಗಳೂ, ಇನ್ನೂ ಎಲ್ಲಾ ತರದ ತಯಾರಿ ಮತ್ತು ಚಿತ್ರಕೆಲಸ ಮಾಡಿದ ವಾಚುಗಳೂ, ವಿಲಾಯತಿಯಲ್ಲಿ ತಯಾರಾದಲ್ಲದ ಪಂಥಾ ಸಕಲ ವಿಧವಾದ ಸಾಮಾನುಗಳೂ ಜವಾಹರಿ ನಗಗಳೂ ಕೇಳಿದವರಿಗೆಲ್ಲಾ ಕಳುಹಿಸಿಕೊಡುತ್ತೇವೆ

ನೆಗದು ಹಣ ಕೊಟ್ಟು ಇಂಗ್ಲಿಷಿನಲ್ಲೇ ನಮಗೆ ಬರೆಯಬೇಕು.

ವಿಳಾಸ —Messrs Bude and Eastland,
29 to 35,, City Road, London, E C

ಕೊಡಗು ದೇಶದ ಶ್ರೇಷ್ಠವಾದ ಉತ್ಕೃಷ್ಟ ಕಾಫಿಯು.

ಹುರಿಯದೆ ಇರುವದು ಅಥವಾ ಆಗ ತಾನೆ ಹುರಿದದು.
ಆದವಾಣಿದ ಸ್ಥಳದಿಂದಲೆ ನೆಟ್ಟಗೆ ರವಾನಿಸಲ್ಪಡುವದು.

18 6

ವ್ಯಾಪಾರದ ಹೆಗ್ಗುರ್ತು

ಕಾಡುಕೋಣದ ತಲೆಯ ಮುದ್ರೆ ಇದೆ

ಸಂಪೂರ್ಣವಾಗಿ ಯಂತ್ರದಿಂದಲೆ ಸಿದ್ಧಪಡಿಸಿದ್ದು ಹೆಗ್ಗುರ್ತು ಉಳ್ಳ ವಿಲಾಸದ ಚೀಟಿ ಸುತ್ತಿಲ್ಲದಿರುವವು ಸ್ವಚ್ಛವಾದವುಗಳಲ್ಲ ಆದ್ದರಿಂದ ನಮ್ಮಲ್ಲಿ ಏಜಂಟರುಗಳು ಬೇಕು ಇಂಥವರಿಗೆ ಅನುಕೂಲದ ದರ ಬರೆಯುವವರು ದಯವಿಟ್ಟು ಈ ಪತ್ರಿಕೆಯ ಹೆಸರನ್ನು ಸೂಚಿಸಿ

ವಿಳಾಸ.—ಮ್ಯಾನೇಜರ್, ಮ್ಯಾಥಿಸನ್ಸ್
ಕಾಫಿ ವರ್ಕ್ಸ್, ಹುಣಸೂರು.

ಜ್ವರಹರಿ.

15 6



ಇದು ಸಾಧಾರಣ ಜ್ವರ, ಚಳೀಜ್ವರ, ಮರೇಜ್ವರ, ಪಿತ್ತಜ್ವರ ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ಗುಣಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮದ್ರಾಸ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್ ಟಿ ವೆಂಕಟಪತಿ ಅಯ್ಯಂಗಾರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಔನ್ಸಿನ ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚನ್ನಾಗಿ ಗುಣ ಹೊಂದಿರುವರು ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವ್ರದರಿಂದ ದಯವಿಟ್ಟು ಇನ್ನೊಂದು ೨೦ ಔನ್ಸಿನ ಸೀಸೆಯನ್ನು ವಿ ಪಿ ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ

ಕ್ರಯ —ಸೀಸೆ ೧ ಕ್ಕೆ ೪ ಆಣೆ, ೧ ರೂ, ೧—೪ ರೂ ರೂ ೨—೧೨ ಆ, ೧೧ ರೂ, ಹನ್ನೆರಡು ಸೀಸೆ ಖರಿಸಿಕೊಂಡರೆ, ಪೋಸ್ಟೇಜು ಮಾಫಿ ಬಿಡಲಾಗುವದು.

****

ಓಮಂಕರ್ಪೂರ.

Omum Carpoor

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳ್ಳೆ ನೋವು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದವುಗಳೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು ಇದು ಹೆಂಗಸರು ತಿಂಗಳ ಋತುಪತಿ ಹೊರಗೆ ಆಗುವಾಗ್ಯೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನೂ ಕೂಡ ಗುಣಪಡಿಸುತ್ತದೆ ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು

ಕಡಪದ ಅಸಿಸ್ಟೆಂಟ್ ಸರ್ಜನ್ ಗೋಪಾಲಸ್ವಾಮಿ ಪಿಳ್ಳೆ ಅವರು—ಓಮಂ ಕರ್ಪೂರವನ್ನು ನಾನೂ ನನ್ನ ಜತೆಗಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ಪರೀಕ್ಷೆಗಳಿಂದಲೂ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಷ್ಟರಿಗೆ ಉಪಯೋಗಿಸುತ್ತೇವೆ ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧವೆಂತ ಬರೆದಿದ್ದಾರೆ

ಈ ನಾಲ್ಕು ಔಷಧಗಳು ಊರುಊರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಡಾಕ್ಟರುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಲ್ಲಿ ವಿಶೇಷ —

ಕೆಮ್ಮಿಸಾಮದ ಗ್ರೇಟ್ ಇಂಡಿಯಾ ಔಷಧಗಳ ಕಂಪೆನಿ,
ಕೊಂಡ್ ಬೀಚ್ ರೈನ್, ಮದ್ರಾಸ್

ಔಷಧಿ ತಕ್ಕೊಂಡು ಗುಣವಾಗುವದಕ್ಕಿಂತಲೂ ತಕ್ಕ ಕ್ರಮದಲ್ಲಿರುವದು ಉತ್ತಮ

SCOTT'S EMULSION. 57-52
(ಸ್ಕಾಟ್ಸ್ ಇಮಲ್ಷನ್)

ಶಕ್ತಿಯಿರುವಳ್ಳವರಿಗೆ ಪ್ಲೇಗ್, ಮಹಾಮಾರಿರೋಗ, ವಾಂತಿಭೇದಿ ಕ್ಷಯ ಮುಂತಾದ ಸಾಂಕ್ರಾಮಿಕ ರೋಗಗಳ ಭಯಕ್ಕೆ ಒಳಪಡುವ ಆಗತ್ಯವಿಲ್ಲ

ರೋಗದಿಂದ ಬಲಹೀನರನ್ನೂ ದುರ್ಬಲರನ್ನೂ ಬೇಗನೆ ಚಗಲಿ ಹಿಡಿಸುತ್ತದೆ

ಅಸ್ವಸ್ಥವನ್ನು ದೂರ ಹೋಗಲಾಡಿಸಿ ಶರೀರದಲ್ಲಿರುವ ಬಲಹೀನ ಭಾಗಗಳನು ಬಲಪ್ರಾಣಗೊಳಿಸಿ, ಸಂಪೂರ್ಣ ಸೌಖ್ಯವನ್ನು ಉಂಟುಮಾಡುತ್ತದೆ

ಕೈಸೋಕದೆ ತಯಾರಾದದ್ದು

ಎಲ್ಲಾ ಔಷಧ ವ್ಯಾಪಾರಗಾರರಲೂ ಮಾರಾಟವಾಗುತ್ತದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,
ಔಷಧಗಳ ಕಾರ್ಖಾನೆ,
ಲಂಡನ್, ಇಂಗ್ಲೆಂಡ್

ಮೀನಿನ ಎಣ್ಣೆ ಇರುವ ಔಷಧ
ಕೇಳಿ ... ಕೊಳ್ಳಿ.

ಬೆಲೆಗೆ ಬೆಳ್ಳಿ—ಗುಣಕ್ಕೆ ಭಂಗಾರ.

86 12

ಇಂಥಾ ಕಾಗದಗಳು ನಮ್ಮಲ್ಲಿಗೆ ಅನೇಕ ಬಂದಿವೆ

ಮಿ॥ ಪಾಪಾನಿಕಿನಿ, ಜನಳಿ ವರ್ತಕ, ಮಹೇಶ್ವರ, ಇವರು ಬರೆಯುವುದು—" ಕ್ರೆಮೆಂಟ್‌ಯವರ ಮ್ಯಾಜಿಕ್ ಬಾಂ ಬಹಳ ತೃಪ್ತಿಕರವಾದದ್ದೆಂದು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ ಅದು ತುಂಬಾ ಗುಣಕೊಡ ಪಂಥಾದ್ದು ದಯವಿಟ್ಟು ಇನ್ನೂ ಮೂರು ಸೀಸೆಯನ್ನು ವಿ ಪಿ ಮೇಲೆ ಕಳುಹಿಸಿಕೊಡಿ " ಮಿ॥ ಜೆ ಡಬ್ಲಿಯು ಸಾಮ್ಯುಯಲ್, ಪೋಸ್ಟ್ ಮಾಸ್ಟರ್, ಟ್ರಾವನ್ಕೋರ್, ಇವರು ಬರೆಯುವುದು " ನಿಜವಾಗಿಯೂ ಇದು ಎಲ್ಲಾ ತರದ ನೋವುಗಳಿಗೂ ಅದ್ಭುತವಾದ ಔಷಧವೆನ್ನುವದಕ್ಕೆ ಸಂಶಯವಿಲ್ಲ " ಮಿಸೆಸ್ ಇ ಕ್ಯಾಂಸಿಂಗ್, ... ಇವರು ಬರೆಯುವದು—" ನಿಮ್ಮ ಮ್ಯಾಜಿಕ್ ಬಾಂ ಔಷಧವು ನನ್ನ ಕಾಲಿನ ಕೀಲು ನೋವನ್ನು ಸಂಪೂರ್ಣವಾಗಿ ... " ಮಿಸೆಸ್ ಇ. ವೆ ... ರಂಗೂನ್, ಇವರು ಬರೆ... ' ನಾನು ಯವಾಗಲೂ ... ಕ್ಲೇಮೆಂಟ್ಸ್ ಮ್ಯಾಜಿಕ್ ಬಾಂ ... ಗಂಟ್ಲು, ಎದೆಯ ... ಉಪಯೋಗಿಸುತ್ತೇನೆ ಆದ್ದರಿಂದ ಎನಗೆ ಪ್ರತಿ ಸಲವೂ ಚನ್ನಾಗಿ ವಾಸಿಯಾಗಿದೆ ಈ ಔಷಧದಿಂದ ವಾಶ್ವನೋವು, ಕೀಲುಗಳ ಬಾಧೆ, ಕಿಬ್ಬೊಟ್ಟೆನೋವು, ಬೆನ್ನು ನೋವು, ತಲೆನೋವು, ಕೆಮ್ಮು, ಕಿಲುಬುಗಳು, ಕೀಲುಗಳು ಕತ್ತರಿಸುವದು, ಕೊರಳು ಊತ, ಕೈ ಕಾಲು ಒಡೆತ ಇವೆಲ್ಲಾ ಗುಣವಾಗುತವೆ ಇದನ್ನು ಹಾಕಿ ಚನ್ನಾಗಿ ತಿಕ್ಕಿದರೆ ಬಾಧೆ ಪರಿಹಾರವಾಗುವುದು. ಕ್ರಯ—೧ ಬಾಟ್ಲಿಗೆ ೧೨ ಆಣೆ, ಪೋಸ್ಟೇಜ್ ೪ ಆಣೆ ೩ ಬಾಟ್ಲಿಗೆ ಅಂಚೆವೆಚ್ಚ ಸೇರಿ ರೂ ೨—೪ ಆಣೆ

ನಮ್ಮ ವಿಳಾಸ.—ಎಫ್ ಡಬ್ಲಿಯು ಆರ್ನ,
ಸಿಮೆಟ್ರಿ ರೋಡ್, ವೇಪೇರಿ, ಮದರಾಸ್

ಬಿಳಗಿ ರಾಜವೈದ್ಯರ ಬಹಳ ಖಾತ್ರಿಯಾದ ಔಷಧಗಳು

0 10

ಸುಖದಾಯಿನೀ ಗುಳಿಗೆ—ಇದರಿಂದ ಕೆಮ್ಮಿನ ಬಾಧೆ ಬಹಳ ಬೇಗನೆ ಗುಣಹೊಂದುವದು. ೧೦ ವರುಷದ ಮೇಲಿನ ಯಾವ ಪ್ರಾಯದವರಾದರೂ ಸೇವಿಸಬಹುದು. ಕ್ರಯ ೩೨ ಗುಳಿಗೆಗೆ ೧ ರೂಪಾಯಿ. ವಿ. ಪಿ. ಚಾರ್ಜ ಆಣೆ ೪.

ಚಿಕ್ಕಹುಡುಗರ ಬಾಲಗ್ರಹದ ಔಷಧ—ಜ್ವರಯುಕ್ತ ಅಥವಾ ಜ್ವರವಿಲ್ಲದೆ ಘಕ್ಕನೆ ಹುಟ್ಟುವ ಈ ಉಪಹತಿಗೆ ಇದರಿಂದ ಬೇಗನೆ ಗುಣಹುಟ್ಟುವದು. ಕ್ರಯ ೧ ಕುಪ್ಪಿಗೆ ೮ ಆಣೆ. ವಿ. ಪಿ. ೪ ಆಣೆ.

ಗಜಕರ್ಣದ ಮುಲಾಮು—೨ ಪಾಕ ೩ ಆವರ್ತಿ ಇದನ್ನು ಹಚ್ಚುವದರಿಂದ ಎಂಥ ಕಠಿಣವಾದ ಗಜಕರ್ಣ (ಹುಳಕಡ್ಡಿ) ಇದ್ದರೂ ಗುಣಹೊಂದುವದು. ಕ್ರಯ ೧ ಡಬ್ಬಿಗೆ ೮ ಆಣೆ. ವಿ. ಪಿ. ಚಾರ್ಜ ಆಣೆ ೪.

ಕಥಮೂಲಿಕಾ ತೈಲವು—ಹಳೇಬೊಕ್ಕೆ, ಹಳೇಹಡ್ಡೆ, ತುರಿಗಜ್ಜಿ, ಹಸಿಗಜ್ಜಿ ಮುಂತಾದ ಆಬಾಲವೃದ್ಧರ ಚರ್ಮವ್ಯಾಧಿಯೂ ಗುಣಹೊಂದುವದು. ಕ್ರಯ ೧ ಔನ್ಸಿನ ಕುಪ್ಪಿಗೆ ೧೦ ಆಣೆ, ೨ ಔನ್ಸಿನ ಕುಪ್ಪಿಗೆ ೧ ರೂಪಾಯಿ. ವಿ. ಪಿ. ೫ ಆಣೆ.

ವಾಯುಹಾರಕ ತೈಲವು—ಇದನ್ನು ಲೇಪಿಸಿದ ೫ ನಿಮಿಷದೊಳಗೆ ಸಂಧಿವಾತ, ಕಟಿವಾತ, ವ ಇತರ ವಾಯುಗಳ ನೋವು, ತಲೆನೋವು ಚಿಕ್ಕಹುಡುಗರ ಉಬ್ಬಸ, ಕೆಮ್ಮು ಕೂಡ ಗುಣಹೊಂದುವದು. ಕ್ರಯ ೧ ಕುಪ್ಪಿಗೆ ೧ ರೂಪಾಯಿ. ವಿ. ಪಿ. ಚಾರ್ಜ ಆಣೆ ೪.

ಜ್ವರಗಡ್ಡೆಗೆ ಸುಧಾಬಿಂದು—ಹೊಟ್ಟೆಯೊಳಗೆ ಸೇವಿಸಲಿಕ್ಕೆ. ಕ್ರಯ ೧ ಕುಪ್ಪಿಗೆ ೧೨ ಆಣೆ. ವಿ. ಪಿ. ಚಾರ್ಜ ಆಣೆ ೪.

ಜ್ವರಗಡ್ಡೆಗೆ ಮುಲಾಮು—ಮೇಲೆ ಲೇಪಿಸಲಿಕ್ಕೆ. ಕ್ರಯ ಡಬ್ಬಿಗೆ ೧ ರೂಪಾಯಿ. ವಿ. ಪಿ. ಚಾರ್ಜ ಆಣೆ ೪.

೧ನೇ ನಂಬರ ಶೀತಜ್ವರ ರಿಪುಗಳಿಗೆ—ಆಬಾಲವೃದ್ಧರಿಗೆ ಹುಟ್ಟುವ ಪ್ರತಿನಿತ್ಯದ ಮತ್ತು ೩ನೇ ವ ೪ನೇ ದಿವಸದ ಪಾಳಿಯಾಗಿ ಕೂಡ ಬರುವ ಶೀತಜ್ವರಕ್ಕೆ. ಕ್ರಯ ೧ ಡಬ್ಬಿಗೆ ೧ ರೂಪಾಯಿ. ವಿ. ಪಿ. ಚಾರ್ಜ ಆಣೆ ೪.

೨ನೇ ನಂಬರದ ಶೀತಜ್ವರ ರಿಪುಗಳಿಗೆ—ಮೇಲೆ ವಿವರಿಸಿದಂಥ ಶೀತಜ್ವರಗಳು ಬಹಳ ದಿವಸಗಳಿಂದ ದೇಹದಲ್ಲಿ ವ್ಯಾಪಿಸಿಕೊಂಡು ಶರೀರಕ್ಕೆ ಬಿದ್ದು ಬರುವದಾದರೆ. ಕ್ರಯ ೧ ಡಬ್ಬಿಗೆ ೧ ರೂಪಾಯಿ. ವಿ. ಪಿ. ಚಾರ್ಜ ಆಣೆ ೪.

ದಂತಪಂಕ್ತಿಗೆ ಸುವಾಸಿಕ ಮಂಜನ—ಎಲ್ಲ ಪ್ರಕಾರದ ಹಲ್ಲಿನ ವೇದನೆಗಳ ಉಪಶಮನಕ್ಕೆ. ಕ್ರಯ ೧ ಡಬ್ಬಿಗೆ ೮ ಆಣೆ. ವಿ. ಪಿ. ೪ ಆಣೆ.

ಕಿವಿಗೆ ಸುಧಾಚೂರ್ಣ—ಕಿವಿಯ ಒಳಭಾಗದಲ್ಲಿ ಕ್ರಿಮಿ ಅಥವಾ ವ್ರಣವಾಗಿ ಅದರಿಂದ ದುರ್ವಾಸನೆಯೂ ರೆಸಿಗೆ ಅಥವಾ ನೀರಿನಂಥ ದ್ರವವು ಸ್ರವಿಸುವದಕ್ಕೆ. ಕ್ರಯ ೧ ಡಬ್ಬಿಗೆ ೧ ರೂಪಾಯಿ. ವಿ. ಪಿ. ಚಾರ್ಜ ಆಣೆ ೪.

ನವ ನಯನಗಳಿಗೆ ಸುಖಾಂಜನವು—ಹೊಸದಾಗಿ ಹುಟ್ಟಿದ ಅಥವಾ ಬಹುಕಾಲದಿಂದ ಇರುತ್ತಿದ್ದ ಕಣ್ಣಿನ ಎಲ್ಲಾ ಬಾಧೆಗಳು ಕಣ್ಣಿನಲ್ಲಿ ಕೆಂಪೇರುವಿಕೆ, ಕಣ್ಣಿನಿಂದ ನೀರು ಪಿಸರು ಬರುತ್ತಿರುವದು, ಬೆಳಕಿಗೆ ನೋಡಲಿಕ್ಕೆ ಆಗದೆ ಇರುವದು ದೃಷ್ಟಿಮಾಂದ್ಯ, ಇತ್ಯಾದಿ ಎಲ್ಲ ಬಾಧೆಗಳೂ ಇದರಿಂದ ಬೇಗನೆ ಗುಣವಾಗುವವು. ಕ್ರಯ ೧ ಡಬ್ಬಿಗೆ ೧ ರೂಪಾಯಿ. ವಿ. ಪಿ. ಚಾರ್ಜ ಆಣೆ ೪.

ಕರ್ಣಸ್ರಾವಕ್ಕೆ ವನೌಷಧಿ ತೈಲವು—ಚಿಕ್ಕ ಮತ್ತು ಪ್ರೌಢ ಪ್ರಾಯದವರ ಕಿವಿಯಿಂದ ರಕ್ತ, ಕೀವು, ಅಥವಾ ನೀರಿನಂಥ ದ್ರವ ಹೊಸತಾದರೂ ಅಥವಾ ಬಹು ಕಾಲದಿಂದ ಸ್ರವಿಸುತ್ತಿದ್ದರೆ ಹಾಗೂ ನೋವು, ಕಿವುಡತನವೂ, ತುರಿಸುವಿಕೆಯೂ ಇರುತ್ತಿದ್ದರೆ ಇದರಿಂದ ಪೂರ್ಣಗುಣ ಹೊಂದುವವು. ಕ್ರಯ ೧ ಕುಪ್ಪಿಗೆ ೧ ರೂಪಾಯಿ. ವಿ. ಪಿ. ೪.

ಚಿಕ್ಕ ಮಕ್ಕಳ ಮೈ ಪುಷ್ಟಿಗೆ ಬಾಲಸುಧಾರಸ—ಚಿಕ್ಕ ಹುಡುಗರ ಅಶಕ್ತಿ, ಕುಡಿದ ಹಾಲಿನ ಅಥವಾ ಆಹಾರದ ವಾಂತಿ, ಅತಿಸಾರ, ಅನೇಕಾವರ್ತಿ ಮಲ ವಿಸರ್ಜನೆ, ಅಸ್ತಿಗತಜ್ವರ, ಕೆಮ್ಮು ಇತ್ಯಾದಿ ಅನೇಕ ಉಪಹತಿಗಳು ಗುಣವಾಗಿ ಮೈಯಲ್ಲಿ ರಕ್ತ ಮಾಂಸ ಅಸ್ತಿ ಇವುಗಳು ಬಲವಾಗಿ ಬೆಳೆದು ಚನ್ನಾಗಿ ಪುಷ್ಟಿಯಾಗುತ್ತಾರೆ. ಕ್ರಯ ೧ ಕುಪ್ಪಿಗೆ ೧ ರೂಪಾಯಿ. ವಿ. ಪಿ. ಚಾರ್ಜ ಆಣೆ ೩.

ಸಕ್ಕರೆ ಪಾಕಕಫಕ್ಷಯ ವ ಕೆಮ್ಮು ಮುಂತಾದವುಗಳಿಗೆ—ಶ್ವಾಸ ಕೋಶದ ಎಲ್ಲಾ ಉಪಹತಿಗಳು ಅಂದರೆ ಹೊಸ ಮತ್ತು ಹಳೆ ತರ ಕೆಮ್ಮುಗಳು ನೆಗಡಿ ಉಬ್ಬಸ ಕಫ ಕ್ಷಯ ಅಸ್ತಿಜ್ವರ ಅಶಕ್ತಿ ಕ್ಷಯವ್ಯಾಧಿಯಲ್ಲಿ ಹುಟ್ಟುವ ಬೆವರು ಇತ್ಯಾದಿ ಬೇಗನೆ ಗುಣಹೊಂದುವದು. ಕ್ರಯ ೧ ಕುಪ್ಪಿಗೆ ರೂ ೧—೪ ಆ. ವಿ. ಪಿ. ಚಾರ್ಜ ಆಣೆ ೯.

ನಯನ ಸುಖಕ್ಕೆ ಸೌವೀರಾಂಜನವು (ಕಪ್ಪು ಸುರ್ಮ)—ಬಿಸಲಲ್ಲಿ ತಿರಗಾಟ ಮಾಡುವದರಿಂದ ಬೆಂಕಿಯ ಶಕೆಯಲ್ಲಿ ಕೂಡ್ರುವದರಿಂದ ರಾತ್ರಿಯಲ್ಲಿ ಜಾಗ್ರಣ ಮಾಡುವದರಿಂದ ಅಥವಾ ಹೆಚ್ಚು ಕಾಲ ಓದುವದರಿಂದ ಸಹಾ ಉಂಟಾಗುವ ಕಣ್ಣಿನ ಬಾಧೆಯೂ ಕೆಂಪೇರುವಿಕೆ ಉರಿ ನವೆ ಮುಂತಾದವು ಗುಣಹೊಂದಿ ಕಣ್ಣಿಗೆ ಸುಖವು ಪ್ರಾಪ್ತವಾಗುತ್ತದೆ. ಕ್ರಯ ೧ ಡಬ್ಬಿಗೆ ೮ ಆಣೆ. ವಿ. ಪಿ. ಚಾರ್ಜ ಡಬ್ಬಿ ೧ ರಿಂದ ೧೨ ಡಬ್ಬಿಗೆ ೪ ಆಣೆ.

ವಾಂತಿಭೇದಿಗೆ ಮತ್ತು ಅತಿಸಾರಕ್ಕೆ ಕ್ಲೋರೋಡಾಯಿನ—ಈ ಉಪದ್ರಗಳಿಗೆ ಇದು ದಿವ್ಯ ಔಷಧವಾಗಿದೆ. ವಿಶ್ವಾಸವುಳ್ಳ ಒಂದು ಕಂಪನಿಯಿಂದ ಇದನ್ನು ನಾವು ಸಂಗ್ರಹಿಸುತ್ತೇವೆ. ಕ್ರಯ ೧ ಕುಪ್ಪಿಗೆ ೧೨ ಆಣೆ. ವಿ. ಪಿ. ಚಾರ್ಜ ಆಣೆ ೪.

ಸೂಚನೆ—ನಮ್ಮ ಔಷಧಗಳೊಳಗೆ ಅಪಾಯಕರವಾದ ಯಾವ ಜಿನಸಿನ ಮಿಶ್ರಣವೂ ಮಾಡಿಲ್ಲ. ಪ್ರತಿ ಒಂದು ಔಷಧಿಗೆ ಜೊತೆಯಲ್ಲಿ ಭಾಷೆಯ ಅನುಪಾನ ಪತ್ರವನ್ನು ಕಳುಹಿಸುತ್ತಿರುತ್ತೇವೆ. ಇನ್ನೂ ಅನೇಕ ಉತ್ತಮವಾದ ಔಷಧಗಳಿಗಾಗಿ ನಮ್ಮ ಕ್ಯಾಟ್ಲಾಗು ತರಿಸಿಕೊಂಡು ನೋಡಿರಿ.

ನಮ್ಮ ಅಡ್ರೆಸು—ಕರ್ನಾಟಕ ರಾಜ ವೈದ್ಯ ಮತ್ತು ಕಂಪನಿ, ಪೋಷ್ಟು ಬಿಳಗಿ, ಉತ್ತರ ಕನ್ನಡಾ ಜಿಲ್ಲಾ.

Post Bilgi, North Kanara District

CHAMBERLAIN'S COUGH REMEDY.

ಚೇಂಬರ್ಲೇನಯವರು ಕಂಡು ಹಿಡಿದ ಕೆಮ್ಮಿನ ಔಷಧವು

4 11

ಶೀತದ ಕೆಮ್ಮು, ಗಂಟಲು ಗಾರೆನ್ನುವುದು, ಹುಡಿಗೆಮ್ಮು, ನಾಯಿಗೆಮ್ಮು, ಎಲ್ಲಾ ತರದ ಶೀತ, ಗಂಟಲು ಎದೆಯಲ್ಲೂ ಹುಟ್ಟುವ ಸಮಸ್ತ ವ್ಯಾಧಿಗಳು—ಇವಕ್ಕೆಲ್ಲಾ ಈ ಔಷಧವು ಬಹುಪ್ರಯೋಜನವಾಗಿದೆ.

ಆ ಕೆಮ್ಮನ್ನು ಅಲಕ್ಷ್ಯಮಾಡಬೇಡಿ. ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ. ಅದರ ಸೇರ ನ್ಯೂಮೋನಿಯಾ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವುದು. ತರುವಾಯ ಉಗುಳಿನಲ್ಲಿ ರಕ್ತ ಬೀಳುವುದು. ಹಾಗೆಯೇ ಕ್ಷಯರೋಗಕ್ಕೆ ಆಸ್ಪದವಾಗುವದು.

ಚೇಂಬರ್ಲೇನರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟಲಲ್ಲಿ ಶ್ಲೇಷ್ಮ ಕಟ್ಟುವುದನ್ನೂ ಶ್ಲೇಷ್ಮ ಬೀಳುವುದನ್ನೂ ನಿಶ್ಚಯವಾಗಿ ನಿವಾರಣಮಾಡುತ್ತದೆ. ಉಸಿರು ಹೊಯ್ಯುವುದು ಕಷ್ಟವಾಗಿದ್ದರೆ ಅದನ್ನು ಕೂಡಲೇ ಪರಿಹರಿಸುತ್ತದೆ. ಅಪಾಯಕರವಾದ ಕೆಮ್ಮಿನ ಕಟ್ಟನ್ನು ನಿಲ್ಲಿಸಿಬಿಡುತ್ತದೆ. ಎಷ್ಟೇ ಬಹಳಗಾಮಂಥಾ ಕೆಟ್ಟಸ್ಥಿತಿಯನ್ನು ಸಂಪೂರ್ಣವಾಗಿ ವಾಸಿಮಾಡಬಲ್ಲದು. ಕೆಮ್ಮನ್ನು ಶಮನಮಾಡಿ, ನೀವು ಸುಖವಾಗಿ ನಿದ್ರೆಮಾಡುವಂತೆ ಮನಸ್ಸಿಗೆ ಉಲ್ಲಾಸಕೊಡುತ್ತದೆ.

ಚೇಂಬರ್ಲೇನರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇರಿಸಿರುವುದಿಲ್ಲ.

ಈ ಔಷಧವು ವನಸ್ಪತಿಗಳ ತಯಾರಿ

ಕೈಯಿಂದಮುಟ್ಟದೆ ತಯಾರಾಗಿದೆ

ಎಲ್ಲೆಲ್ಲೂ ಬಿಕರಿಯಾಗುವುದು. ಸಣ್ಣಸೀಸೆಗೆ ೧ ರೂಪಾಯಿ. ದೊಡ್ಡಸೀಸೆಗೆ ೨ ರೂಪಾಯಿ.

ಪಾಳ್ಯದ ವೆಂಕಟಾಚಲ ಪಂಡಿತ, ಶ್ರೀಸೀತಾರಾಘವ ವೈದ್ಯಶಾಲಾ, ಕೊಳ್ಳೇಗಾಲ, ಇವರ ಸಿದ್ಧೌಷಧಗಳು

೧. ಶೋಕಾಮಯಹರ ಕಸ್ತೂರಿ ಮಾತ್ರೆ—ಈ ಮಾತ್ರೆಗಳನ್ನು ಹವಳದ ಭಸ್ಮ ಚಿನ್ನದ ರೇಕುಗಳ ವಿಶ್ರದಿಂದ ತಯಾರಿಸಿ ...



... ಗಿನ ಎಲ್ಲಾ ವಿಧವಾದ ಜ್ವರ, ಚಳೀಜ್ವರ, ಜ್ವರ, ಅಗ್ನಿನಷ್ಟ, ನಿಶ್ಶಕ್ತಿ, ಕೆಮ್ಮು, ಹೊಟ್ಟೆ ... ಎದೆ ... ಇವಕ್ಕೆ ... ನೀರು ... ೩೦ ಮಾತ್ರೆಯುಳ್ಳ ... ಆಣೆ ... ೧ ರಿಂದ ೬ ರವರೆಗೆ ...

೩. ಎಸ್. ಸಿ. ಇ. ಸರ್ವಾಂಗಬಲಕಾರಿ—... ರೋಗಗಳಿಗೆ ಬಹಳ ಉಪಯೋಗಿಸುವ ... ಇದರಲ್ಲಿಲ್ಲ ... ಎದೆ, ಅನ್ನಾಶಯ, ನರಗಳು, ಸಂದುಗಳು, ಪಿಡಳು, ಶಿರಸ್ಸು ವ ಜಬಡ್ಡು, ಇವುಗಳ ಸಂಬಂಧವಾದ ಎಲ್ಲಾ ರೋಗಗಳನ್ನೂ ಚೆನ್ನಾಗಿ ಹೋಗಲಾಡಿಸಿ ಧಾತುಶಕ್ತಿಯನ್ನು ಕ್ರಮವಾಗಿ ವೃದ್ಧಿಪಡಿಸುವದು. ... ಬಾಟಲು ... ಆಣೆ ...

೨. ಪ್ಲೇಗಿಗೆ ಸಿದ್ಧೌಷಧ—ಪ್ಲೇಗಿಗೆ ಔಷಧಿಯೇ ಇಲ್ಲವೆಂದು ಹೇಳಿಗೆ ಈ ನಮ್ಮ ಔಷಧವನ್ನು ತರಿಸಿಕೊಂಡು ... ಗುಣವಾಗುತ್ತನೆ. ಯೋಗ್ಯತಾಪತ್ರಗಳನ್ನು ವಿವರಿಸಲು ಸ್ಥಳ ಸಾಲದು. ಗಡ್ಡೆ ಮೊದಲಾದ ಬಾಧೆ ಇಲ್ಲದಂತೆ ಉಪಶಮನ ಔಷಧಿ ... ಕ್ರಯ ೧ ರೂಪಾಯಿ.

೪. ... ಧಾರಿಣಿ—ಹೊಟ್ಟೆ ... ನೋವು ... ತಲೆನೋವು, ಮುಂತಾದ್ದಕ್ಕೆ ಸಂಜೀವನ. ಡಬ್ಬಿ ... ಆಣೆ.

ವಿಳಾಸ—ಎಸ್. ಎಸ್. ಆರ್. ವೈದ್ಯಶಾಲಾ,

ಲಕ್ಷ್ಮೀವಿಲಾಸ ರೋಡ್, ಮೈಸೂರು

ನಮ್ಮ ಚಂದಾದಾರರು ಮೊದಲಾದವರು ಅವಶ್ಯವಾಗಿ ಗಮನಿಸಬೇಕಾದ ಟಪ್ಪಾಲ್ ಪ್ರಕಟನೆ

೧. ಖಾಸಗಿಯಾಗಿ ತಯಾರುಮಾಡಿದ ಕಾರ್ಡುಗಳ ಮೇಲೆ ವಿಳಾಸದ ವಿಳಾಸಕ್ಕೂ ಪೋಸ್ಟೇಜ್ ಸ್ಟಾಂಪು ಮತ್ತು ಸ್ಟಾಂಪುಗಳಿಗೂ ಮತ್ತು ಟಪ್ಪಾಲಾಫೀಸಿನ ಆಫೀಸು ಮುದ್ರೆಗಳಿಗೂ ಸಹ ಕಾರ್ಡಿನ ಸಮಾರ್ಧಕ್ಕಿಂತ ಕಡಿಮೆಯಾದ ಒಂದು ಭಾಗವನ್ನು ಬಿಡಬೇಕಾಗಿಯೂ ಮತ್ತು ಅಂಥ ಭಾಗವು ಸದರಿ ಕಾರ್ಡಿನ ಮಧ್ಯ ನೀಟವಾಗಿ ಅಥವಾ ಅಡ್ಡವಾಗಿ ಒಂದು ಗೆರೆ ಎಳೆದು ವಿಂಗಡಿಸಲ್ಪಡಬೇಕಾಗಿಯೂ ಸಹ ಸೇಲಂ ಇಂಡಿಯನ್ ಪೋಸ್ಟಲ್ ಗೈಡಿನ ೫೫ ನೇ ಪ್ರಕರಣಕ್ಕೆ ಎಲ್ಲರೂ ಗಮನವಿಡಬೇಕಾಗಿದೆ. ಅಂಥ ಕಾರ್ಡುಗಳ ಮೇಲೆ ವಿಳಾಸಭಾಗವನ್ನು ವಿಂಗಡಿಸಲು ಗೆರೆಯನ್ನು ನೀಟವಾಗಿ ಎಳೆಯಬೇಕೇ ಹೊರ್ತು ಅಡ್ಡವಾಗಿ ಎಳೆಯಕೂಡದು.

೨. ಖಾಸಗಿಯಾಗಿ ತಯಾರುಮಾಡಿದ ಕಾರ್ಡುಗಳ ಮೇಲೆ ವಿಳಾಸಿಯ ವಿಳಾಸಕ್ಕೂ ಪೋಸ್ಟೇಜು ಸ್ಟಾಂಪು ಮತ್ತು ಸ್ಟಾಂಪುಗಳಿಗೂ ಮತ್ತು ಟಪ್ಪಾಲಾಫೀಸಿನ ಆಫೀಸು ಮುದ್ರೆಗೂ ಸಹ ಆದರ ಬಲಗಡೆ ಕನಿಷ್ಠ ಅರ್ಧಾಂಶವನ್ನು ಪ್ರತ್ಯೇಕ ವಿಂಗಡಿಸದಿದ್ದರೆ ಅಂಥಾ ಕಾರ್ಡುಗಳು ಟಪ್ಪಾಲು ಕಾರ್ಡುಗಳಂತೆ ಎಣಿಸಲ್ಪಡಲಿಕ್ಕಿಲ್ಲ. ಹಾಗೆ ಬಿಟ್ಟ ಅರ್ಧಾಂಶದ ಮೇಲೆ ಏನೂ ಬರೆದಿರಕೂಡದು ಮತ್ತು ಅಚ್ಚು ಮುದ್ರೆ ಮೊದಲಾದವುಗಳನ್ನು ಸಹ ಹಾಕಿರಕೂಡದು. ಇಂಡಿಯನ್ ಪೋಸ್ಟಲ್ ಗೈಡಿನ ೫೫ನೇ ಪ್ರಕರಣದಲ್ಲಿ ತೋರುವ ಷರತ್ತುಗಳಿಗೊಳಪಡದ ಕಾರ್ಡುಗಳು ಕಾಗದಗಳಂತೆ ಎಣಿಸಲ್ಪಟ್ಟು ಅದೇ ಮೇರೆಗೆ ಚಾರ್ಜ ವಿಧಿಸಲ್ಪಡುವದು.

ಈ ಕಟ್ಟಳೆಗೆ ವಿರೋಧವಾಗಿ ಪ್ರಿಂಟ ಮಾಡಿರುವ ಕಾರ್ಡುಗಳಲ್ಲೇ ನಮ್ಮ ಚಂದಾದಾರರೇ ಮೊದಲಾದವರು ವಿಶೇಷವಾಗಿ ಕಾಗದಪತ್ರಗಳನ್ನು ನಡಿಸುವದರಿಂದ ನಮಗೆ ನಷ್ಟವಾಗುತ್ತಿದೆಯಾದಕಾರಣ ವಾಚಕರು ಮೇಲ್ಕಂಡ ಕಟ್ಟಳೆಗನುಸಾರವಾಗಿ ಮುದ್ರಿಸಿರುವ ಕಾರ್ಡುಗಳಲ್ಲೇ ಬರೆಯಬೇಕೆಂದು ಕೇಳಿಕೊಳ್ಳುತ್ತೇವೆ.—ಎಡಿಟರ್.

ವೃತ್ತಾಂತ ಪತ್ರಿಕೆ

ಸನ ೧೯೦೭ ನೇ ಇಸವಿ ಮಾರ್ಚ ತಾ|| ೧೪ ನೇ ಗುರುವಾರ

ಮತವಿಮರ್ಶೆಯು

ಅಫ್ಘಾನಿಸ್ಥಾನದ ಅಮೀರರ ಲಾಹೋರ್ ಪಟ್ಟಣದಲ್ಲಿ ಮಹಮದಿಯರ ವಿದ್ಯಾಸಲಯವನ್ನು ಪ್ರತಿಷ್ಠಮಾಡಿದಾಗ್ಗೆ ಪ್ರಸಂಗನುವಾದ ಉಪನ್ಯಾಸವನ್ನು ಮಾಡಿದರು. ಅದನ್ನು ಕೆಳಗೊಂದು ಭಾಗದಲ್ಲಿ ಓದಬಹುದು. ವಿದ್ಯಾಭ್ಯಾಸದಿಂದಲೂ ಮತಾಚರಣೆಗಳಿಂದಲೂ ಉಂಟಾಗುವ ಪ್ರಯೋಜನಗಳನ್ನು ಕುರಿತು ಅವರು ಮಾತನಾಡಿದರು. ಲೋಕದಲ್ಲಿ ಜೀವನವನ್ನು ಸಂಪಾದಿಸುವುದಕ್ಕೆ ಅಗತ್ಯವಾದ ವಿದ್ಯೆಯನ್ನು ಕಲಿಯಬೇಕೆಂತಲೂ ಆ ಮೂಲಕ ಸ್ವಮತಾಚರಣೆಗಳನ್ನು ಪ್ರತಿದಿನದ ನಡೆನುಡಿಗಳಲ್ಲಿ ಅಭ್ಯಾಸವಿಟ್ಟುಕೊಳ್ಳಬೇಕೆಂತಲೂ ಅಮೀರರು ತಿಳಿಸಿದರು. ವಿದ್ಯಾಭ್ಯಾಸದ ಫಲಗಳು ಒಣೀ ಲೌಕೀಕವಾದವುಗಳೆಂದು ಯಾರೂ ಭಾವಿಸಬಾರದು. ಜ್ಞಾನವು ಮನುಷ್ಯನ ಗುಣನಡತೆಗಳನ್ನು ಬಹುಮಟ್ಟಿಗೆ ಉತ್ತಮಸ್ಥಿತಿಗೆ ತಂದು ಮತಾಚಾರಗಳಲ್ಲಿರುವ ಲೋಪ ದೋಷಗಳನ್ನು ತೋರಿಸುವುದು. ವಿದ್ಯೆಯು ಬೇರೆ ಬೇರೆ ಮತಸ್ಥರಲ್ಲಿರುವ ಪರಸ್ಪರವಾಗ ವೈಷಮ್ಯವನ್ನು ಹೋಗಲಾಡಿಸುವುದರಲ್ಲಿ ಯಾವ ಸಂದೇಹವೂ ಇಲ್ಲ. ಕ್ರೈಸ್ತಮತಕ್ಕೂ ಮಹಮದಿಯರ ಮತಕ್ಕೂ ಇರತಕ್ಕ ಕೆಲವು ತಾರತಮ್ಯಗಳನ್ನು ಸಂಕ್ಷೇಪವಾಗಿ ಯೋಚಿಸೋಣ. ಯೇಸುಕ್ರಿಸ್ತನ ಜೀವನಾಸಚರಿತ್ರೆಯನ್ನು ಒಳಗೊಂಡಿರುವ ಸುವಾರ್ತೆಗಳು ಬದಲಾಯಿಸಲ್ಪಟ್ಟು ಕೆಟ್ಟುಹೋಗಿವೆಯೆಂದು ಮಹಮದಿಯರು ಸಾಧಿಸುತ್ತಾರೆ. ಚರಿತ್ರೆಯ ಪರಿಚಯ, ಮತಸಿದ್ಧಾಂತಕ್ಕೆ ಅನುಕೂಲವಾಗಿರುವ ತಾರ್ಕಿಕ ಭಾಷಾಜ್ಞಾನ, ಈ ಕೆಲವು ಮಹಮದಿಯರಲ್ಲಿ ಇಲ್ಲದೆ ಇರುವದರಿಂದ ಅವರ ಸಂಗಡ ಸಂಭಾಷಣೆ ಮಾಡುವುದು ಸಾಧ್ಯವಲ್ಲ. ಮಹಮದಿಯರಲ್ಲಿ ವಿದ್ಯಾವಂತರಾದವರು ಇಲ್ಲವೆನ್ನುವುದು ನಿಜವಲ್ಲ. ಅವರಲ್ಲಿ ವಿದ್ಯಾವಂತರು ಅನೇಕರಿರುತ್ತಾರೆ. ಇಂಥವರ ಜೊತೆಯಲ್ಲಿ ಕ್ರೈಸ್ತರು ಕಲೆತು ಮತಸಂಭಾಷಣೆಗಳನ್ನು ಬೆಳೆಸುವುದು ಸುಲಭಸಾಧ್ಯವಾಗಿದೆ. ಇವರಿಗೆ ಕ್ರೈಸ್ತಮತಗ್ರಂಥವು ಹುಟ್ಟಿ ಅನೇಕ ಶತಮಾನಗಳಾಗಿದ್ದರೂ ಅದು ಕೆಡದೆ ಈಗಲೂ ಶುದ್ಧವಾದ ರೀತಿಯಲ್ಲಿಯೇ ಇರುವುದೆಂದು ಸಾಧಿಸುವದೇನೂ ಕಷ್ಟವಲ್ಲ. ಯೇಸುಕ್ರಿಸ್ತನ ದೇವತ್ವವನ್ನು ಕುರಿತು ಯೋಚಿಸುವಲ್ಲಿ ಅನೇಕ ಮಹಮದಿಯರು—ಆತನು ದೇವರಮಗನಾಗಿದ್ದರೆ ದೇವರಿಗೆ ಒಬ್ಬ ಹೆಂಡತಿ ಇದ್ದಿರಬೇಕಲ್ಲವೇ ಎಂದು ಕೇಳುವರು. ಆದರೆ ವಿದ್ಯಾವಂತರಾದ ಮಹಮದಿಯರು ಇಂಥಾ ಪ್ರಶ್ನೆಯನ್ನು ಎಂದಿಗೂ ಕೇಳಲಾರರು. ಯಾಕಂದರೆ ಯೇಸುಕ್ರಿಸ್ತನು ನಮ್ಮಂತೆಯೇ ಭೂಲೋಕದಲ್ಲಿ ಪುರುಷಸಂಗಮದಿಂದ ಜನಿಸಿದನೆಂದು ಕ್ರೈಸ್ತರು ಎಂದಿಗೂ ಹೇಳುವುದಿಲ್ಲ. ಹಾಗೆ ಯಾರಾದರೂ ಬೋಧಿಸಿದರೆ ಅದು ದೇವದೂಷಣೆ ಎಂತಲೂ ಅಸಹ್ಯಕರವಾದ ಮಾತೆಂತಲೂ ಕ್ರೈಸ್ತರಿಗೆ ಕಾಣುತ್ತದೆ. ಅವರು ಯೇಸುಕ್ರಿಸ್ತನನ್ನು ಸಾಕ್ಷಾತ್ ದೇವರೆಂದೇ ಭಾವಿಸಿ, ಆತನು ಕನ್ಯಾಮರಿಯಳಲ್ಲಿ ಅದ್ಭುತವಾದ ರೀತಿಯಲ್ಲಿ ಜನಿಸಿದನೆಂದು ದೃಢವಾಗಿ ನಂಬುತ್ತಾರೆ. ಯೇಸುಕ್ರಿಸ್ತನು ಭೂಲೋಕದಲ್ಲಿ ಅವತರಿಸುವುದಕ್ಕೆ ಮುಂಚೆಯೂ ಲೋಕಾದಿಯಿಂದಲೂ ಇರುತ್ತಾನೆಂತಲೂ ಆತನು

ಮಾನುಷರೀತಿಯಲ್ಲಿ ಬದುಕಿ ಶೀರ್ಣಹೋದರೂ ದಿವಾರೋಹಣನಾಗಿ ಸದಾಕಾಲಕ್ಕೂ ಜೀವಿತನಾಗಿಯೇ ಇರುತ್ತಾನೆಂತಲೂ ನಂಬುವರು. ವಿದ್ಯಾಭ್ಯಾಸವು ಬೇರೆ ಬೇರೆ ಮತಸ್ಥರು ಒಬ್ಬೊಬ್ಬರು ಪರಿಪೂರ್ಣವಾಗಿ ತಿಳಿದುಕೊಳ್ಳುವುದಕ್ಕೂ ದೂಷಿತ ಹಿಂಸೆಗಳನ್ನು ಹೋಗಲಾಡಿಸುವುದಕ್ಕೂ ಬಹುಮಟ್ಟಿಗೆ ಸಹಾಯಮಾಡುತ್ತದೆ. ಮಹಮದೀಯರಲ್ಲಿ ಕೆಲವು ಮತಭ್ರಾಂತರು ಮುಸಲ್ಮಾನರಲ್ಲದವರನ್ನು ಕತ್ತಿಯಿಂದ ಕಡಿದುಹಾಕಬೇಕೆಂತಲೂ, ಹಾಗೆ ಮಾಡಿದಲ್ಲಿ ತಮಗೆ ಸ್ವರ್ಗವು ಪ್ರಾಪ್ತವಾಗುವುದೆಂತಲೂ ನಂಬಿಕೊಂಡು ನಾನಾ ಕ್ರೂರಕೃತ್ಯಗಳನ್ನು ಮಾಡುವರು. ತಮ್ಮ ಮತಸ್ಥರಲ್ಲಿ ಇಂಥಾ ಅಭಿಪ್ರಾಯವುಳ್ಳವರು ಈಗಲೂ ಇರುತ್ತಾರೆಂದು [illegible]ರು ತಿಳಿದು, ಮಹಮದೀಯರೆಲ್ಲಾ ವಿದ್ಯೆಯನ್ನು ಕಲಿಯಬೇಕೆಂದು ವಿವೇಕ ಹೇಳಿರುತ್ತಾರೆ. ಯಾಕೆಂದರೆ ವಿದ್ಯೆಯು ಅಂಥಾ ದುರಭಿಪ್ರಾಯಗಳನ್ನೂ ದುಷ್ಕೃತ್ಯಗಳನ್ನೂ ಸಂಪೂರ್ಣವಾಗಿ ತೊಲೆದುಬಿಡುವುದು.

ಏನಂದರೆ, ನಾವು ಯಾವ ಮತವನ್ನನುಸರಿಸಿದವರಾದರೂ 'ಓ ಮನುಷ್ಯನೇ, ದೇವರು ಉತ್ತಮವಾದದ್ದು ಯಾವುದೆಂಬುವುದನ್ನು ನಿನಗೆ ತಿಳಿಸಿರುವನು. ನ್ಯಾಯವನ್ನೇ ಮಾಡುವುದು, ಕೃಪೆಯುಳ್ಳವನಾಗಿ ನಡೆಯುವುದು, ದೇವರ ಸನ್ನಿಧಿಯಲ್ಲಿ ವಿನಯವಾಗಿ ನಡೆಸುವುದು. ಇಷ್ಟೇ ಹೊರತು ದೇವರು ನಿನ್ನಿಂದ ಹೆಚ್ಚೇನೂ ಕೇಳುವುದಿಲ್ಲ' ಎಂಬೀ ವೇದವಾಕ್ಯವನ್ನು ನಮ್ಮ ನೆನಪಿನಲ್ಲಿಟ್ಟುಕೊಳ್ಳೋಣ.

ಒಳದೇಶದ ವೃತ್ತಾಂತಗಳು

ಶ್ರೀಮನ್ಮಹಾರಾಜರವರೂ ಯುವರಾಜರವರೂ ಈ [illegible] ಮೈಸೂರ ರಾಜಧಾನಿಯಿಂದ ನೀಲಗಿರಿಗೆ ದಯಮಾಡುವವರಾಗಿದಾರೆ.

***

ರಾಜಧಾನಿಯ ಸಕಲ ಪ್ರಜೆಗಳೂ ಸೇರಿ ಶ್ರೀಮನ್ಮಹಾರಾಜರವರ ಟೌನ್ ಹಾಲ್ ಬೀಗಲೆಯಲ್ಲಿ ಅಡ್ರೆಸ್ಸನ್ನು ಒಪ್ಪಿಸ[illegible] ಉತ್ಸವಗಳು ನಾಳೆ ಸಾಯಂಕಾಲ ಜರುಗುವವು.

***

ರಾಜಧಾನಿಯ ಲ್ಯಾನ್ಸ್‌ಡೌನ್ ಬಜಾರಿನಲ್ಲಿರುವ ನಂ. ೧ ರಂಗ [illegible] ಕಾಲರಾ ಉಪದ್ರವಕ್ಕೆ ಔಷಧವನ್ನು ಉಚಿತವಾಗಿ ಕೊಡುವರು. ಬೇಕಾದವರು ಚೀಟಿ ಸಹಿತ ಹೋಗಿ ತಂದುಕೊಳ್ಳಬಹುದು.

***

[illegible] ಕರ್ನಲ್ ದೇಶರಾಜೆ ಅರಸಿನವರು [illegible]ರಿಂದ, [illegible] ದೇವರಾಜೇ ಅರಸಿನವರು ಚಿಕ್ಕಮಗಳೂರಿಂದಲೂ, [illegible] ಕೃಷ್ಣ ಅರಸಿನವರು ಗುಂಡ್ಲುಪೇಟೆಯಿಂದಲೂ ರಾಜಧಾನಿಗೆ ಬಂದಿರುತ್ತಾರೆ.

***

ಕಳೆದ ವಾರ ಇಲ್ಲಿನ ಕೋಟೆಯೊಳಗೆ ಎರಡು ಮನೆಗಳಿಗೆ ಕಳ್ಳರು ಬಿದ್ದದ್ದು ಸಿಕ್ಕಿಬಿಟ್ಟರು. ಆದರೆ ಕೋಟೆಯ ಹೊರಗೆ ಪಶ್ಚಿಮ ಭಾಗದ ಒಂದು ಮನೆಗೆ ಬಿದ್ದ ಕಳ್ಳರು ಕೆಲವು [illegible]ನ್ನು ಅಪಹರಿಸುತ್ತಾರೆ.

***

[illegible] ವಿಷಯದಲ್ಲಿ ಜನರು ತಮ್ಮ ಮನೆಮಠಗಳಲ್ಲಿ ಜಾಗರೂಕರಾಗಿದ್ದರೆ ಅನೇಕ ವಿಪತ್ತುಗಳು ಸಂಭವಿಸುವುದಿಲ್ಲವೆಂಬುದಕ್ಕೆ ಈ ವಾರದಲ್ಲಿ ಬಹುಮಾನ ಪಡೆದ ದುಃಖಕರವಾದ [illegible] ದೃಷ್ಟಾಂತವಾಗಿದೆ.

***

ಮೈಸೂರು ಗವರ್ನಮೆಂಟ್ ಕಂಟ್ರೋಲರ್ ಕೆಲಸಕ್ಕೆ ನೇಮಕವಾಗಿರುವ ಮಿ॥ ಉಮ್ಮೇದಲಾಲ್ ಮೊಜುಂದಾರ್ ಎಂಬುವರು ಮುಂದಿನ ವಾರ ಬೆಂಗಳೂರಿಗೆ ಬಂದು ಕೆಲಸದ ಚಾರ್ಜನ್ನು ವಹಿಸಿಕೊಳ್ಳುವವರಾಗಿದಾರೆ.

***

ಬೆಂಗಳೂರು ಕೋಟೆಯ ಎದುರಿಗಿರುವ [illegible] ಮಾರ್ಕೆಟ್ಟನ್ನು ಆ ಸ್ಥಳದಿಂದ ತೆಗೆದುಹಾಕಿ ಷಾಹುಕಾರ್ ದೊಡ್ಡಣ್ಣನವರ ಛತ್ರದ ಸಾಲಿನ ಹಿಂಭಾಗದಲ್ಲಿ ಕೋಟೆ ಅಗಳನ್ನು ಮುಚ್ಚಿ, ಅದರ ಮೇಲೆ ವಿಶಾಲವಾಗಿಯೂ ಆರೋಗ್ಯಕರವಾಗಿಯೂ ಕಟ್ಟಬೇಕೆಂದು ಮುನಿಸಿಪಾಲಿಟಿಯವರು ಒಪ್ಪಿಕೊಂಡಿದಾರೆ.

***

ಶಿಡ್ಲಘಟ್ಟದ ತಾ॥ [illegible]ಯಲ್ಲಿರುವ [illegible] ಗ್ರಾಮದ ಪಟೇಲ್ ಮುನಿಗೌಡರು, ವೆಂಕಟೇಗೌಡರು, ಬಚ್ಚಪ್ಪಗೌಡರು, ಸಣ್ಣಪ್ಪಗೌಡರು, ವ್ಯಾಸಪ್ಪಗೌಡರು, ಮುನಿಸ್ವಾಮಿಗೌಡರು, ಪೈರಪ್ಪಗೌಡರು, ಕೃಷ್ಣೇಗೌಡರು, ಇವರೆಲ್ಲಾ ಸೇರಿ ಮೇಲೂರ ಜಾತ್ರೆಗೆ ಬರುವ ಜನಗಳಿಗೆ ಅನ್ನದಾನ ಮಾಡುತ್ತಾ ಬಂದು [illegible] ಇದೆ.

***

ಕಳೆದ ಸೋಮವಾರ ಬೆಳಿಗ್ಗೆ ಶ್ರೀಮಾನ್ ಯುವರಾಜರವರು [illegible] ರಂಗಣ್ಣನವರ ಸಮೇತ ಬೆಂಗಳೂರಿಂದ ಬೆಳಿಗ್ಗೆ [illegible] ಗಾಡಿಯಲ್ಲಿ ಹೊರಟು ಮಧ್ಯಾಹ್ನ ಸುಮಾರು [illegible] ಗಂಟೆಗೆ ಸುರಕ್ಷಿತವಾಗಿ ತಲಪಿದರು. ಗೌರವಾರ್ಥ [illegible] ತೋಪುಗಳು ಹಾರಿಸಲ್ಪಟ್ಟವು. ಅರಮನೆಯೊಳಗೆ ಅರಸು ಅಧಿಕಾರಿಗಳೂ ಕಾದಿದ್ದು ಸನ್ಮಾನ ಮಾಡಿದರು.

***

ಬ್ರಿಟಿಷ್ ರೆಸಿಡೆಂಟ್ ಮಿ॥ ಎಸ್. ಎಂ. ಫ್ರೇಜರ್ ಅವರು ಈ [illegible] ಬೆಂಗಳೂರಿಂದ ಪತ್ನಿಸಹಿತ [illegible]ಗೆ ಪ್ರಯಾಣಮಾಡುವರು. ಅವರು ಕಳೆದ ಸೋಮವಾರ ಬೆಳಿಗ್ಗೆ ರಾಜಧಾನಿಗೆ ಬಂದು ಶ್ರೀಮನ್ಮಹಾರಾಜರವರ ಸಂಗಡ ಸುಮಾರು ಒಂದು ಗಂಟೆಯ ಕಾಲ ಮಾತನಾಡುತ್ತಿದ್ದು ಭೋಜನಾನಂತರ ಸುಮಾರು ೧೧॥ ಗಂಟೆಗೆ ಸ್ಪೆಷಲ್ ಗಾಡಿಯಲ್ಲಿ ಬೆಂಗಳೂರಿಗೆ ಪ್ರಯಾಣ ಮಾಡಿದರು. ಮಿ॥ ಪಿ. ರಘುನಾಥ[illegible] ಅವರ ಸಂಗಡ ಹೋಗಿದ್ದು ಮರುದಿನ ಬೆಳಿಗ್ಗೆ ವಾಪಸು ಬಂದರು.

***

ದಿವಾನ್ ಮಿ॥ ವಿ. ಪಿ. ಮಾಧವರಾಯರು ಕಳೆದ ಶನಿವಾರ ಸಾಯಂಕಾಲ ಬೆಂಗಳೂರಿನಲ್ಲಿರುವ [illegible] ಭವನವೆಂಬ ತಮ್ಮ ಬಂಗಲೆಗೆ ಬ್ರಿಟಿಷ್ ರೆಸಿಡೆಂಟರನ್ನೂ ಅವರ ಪತ್ನಿಯವರನ್ನೂ ಕರೆಸಿಕೊಂಡು ಅವರಿಗೆ ಔತಣವನ್ನು ಮಾಡಿದರು. ಅಲ್ಲಿ ಶ್ರೀಮನ್ ಯುವರಾಜರವರ, ಇಂಗ್ಲಿಷ್ ಸೈನ್ಯಾಧಿಪತಿ, ಸರ್ ಕೃಷ್ಣಮೂರ್ತಿಯವರು, ಮಿ॥ ತಂಬೂಚೆಟ್ಟಿಯವರು, ಕರ್ನಲ್ ದೇಶರಾಜೇ ಅರಸಿನವರು, ಸರ್ದಾರ್ ಗೋಪಾಲರಾಜೇ ಅರಸಿನವರು, ಅ॥ ರೆಸಿಡೆಂಟ್ ಮಿ॥ ರೆನ್ನಿಯವರೇ ಮೊದಲಾದ ಬಹುಮಂದಿ ದೊಡ್ಡ ಮನುಷ್ಯರೂ ಸರ್ಕಾರದ ಅಧಿಕಾರಿಗಳೂ ಆ ಸಂತೋಷೋತ್ಸವದಲ್ಲಿ ಹಾಜರಾಗಿದ್ದರು. ಯಕ್ಷಿಣಿ, [illegible], [illegible]ಗಳಾಟ, ಲಂಟಾಣಿಗಳ [illegible], ಇವೇ ಮೊದಲಾದ ವಿನೋದಗಳು ನಡೆದವು. ರಾತ್ರಿ ದೀಪೋತ್ಸವವಾಯಿತು. ಎಲ್ಲರೂ ಸುಮಾರು ೨॥ ಗಂಟೆಯ ತನಕ ಸಂತೋಷದಿಂದಿದ್ದು ತೆರಳಿದರು.

***

ರಾಜಧಾನಿಯ ಪೊಲೀಸಿನವರು ಕಳೆದ ನವರಾತ್ರಿ ಉತ್ಸವದ ಕಡೆಯ ದಿನ ಅಮಲ್ದಾರ್ ಮಿ॥ ಎಂ. ಎಸ್. ಪುಟ್ಟಣ್ಣನವರ ಇಬ್ಬರು [illegible]ರನ್ನೂ ಇನ್ಸ್ಪೆಕ್ಟರನ್ನೂ ಹಿಡಿದು ಕಳವುಮಾಡಿದರೆಂದು ಹೊಡೆದು ಹಿಂಸೆಪಡಿಸಿದರೆಂದು ಮೊಕದ್ದಮೆ ಆಗಿತ್ತಷ್ಟೆ. ಅ॥ ಸೆಷನ್ಸ್ ಜಡ್ಜ್ ಮಿ॥ [illegible] ರವರು ಈ ಮೊಕದ್ದಮೆಯನ್ನು ಒಂದು ವಾರದ ತನಕ ವಿಚಾರಣೆಮಾಡಿ, ಮೊನ್ನೆ ಸೋಮವಾರ ಮಧ್ಯಾಹ್ನ ತೀರ್ಮಾನ ಮಾಡಿದರು. ಮೊದಲನೆಯ ಅಪರಾಧಿ ಸಬ್ ಇನ್ಸ್ಪೆಕ್ಟರ್ ದೇವರಾಜೇ ಅರಸಿನವರಿಗೆ ಆರು ತಿಂಗಳ ಸಾದಾ ಸಜಾವೂ, ಐದನೆಯ ಅಪರಾಧಿ ಪೊಲೀಸ್ ಕಾನ್ಸ್ಟೇಬಲ್ [illegible]ಗೆ ಮೂರು ತಿಂಗಳ ಸಾದಾ ಸಜಾವೂ ವಿಧಿಸಲ್ಪಟ್ಟಿತು. ಉಳಿದ ಆರು ಮಂದಿ ಅಪರಾಧಿಗಳಿಗೂ (ಇವರೂ ಪೊಲೀಸಿನವರೇ) ಬಿಡುಗಡೆ ಆಗಿದೆ. ತೀರ್ಮಾನ ಹೇಳಿದ ಒಡನೆಯೇ ವಕೀಲರು ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ ಅಪೀಲ್ ಮಾಡುವ [illegible] ಮೊದಲನೆ ಅಪರಾಧಿಯನ್ನು ಜಾಮೀನಿ ಮೇಲೆ ಬಿಡಿಸಿರುತ್ತಾರೆ. ಈ ಮೊಕದ್ದಮೆಯ [illegible] ಬರುವುದು. ಈ ಮೊಕದ್ದಮೆಯಲ್ಲಿ ಅ॥ ಸೆಷನ್ಸ್ ಜಡ್ಜರು ಸುಮಾರು ಐವತ್ತು ಪುಟಗಳ ಜಡ್ಜಮೆಂಟನ್ನು ಬರೆದಿರುವಂತೆ ಕೇಳಿದೆವು.

ಬಹುಮಾನ ಪಡೆದ ವರ್ತಮಾನವು.

[ಈ ಟಿಪ್ಪಣಿ ಬರೆದ ಮ॥ ಬಿ. ವೆಂಗೇಶರಾವ್, [illegible], ಸೊರಬ ತಾಲ್ಲೂಕು ಇವರಿಗೆ ಈ ವಾರದ ಬಹುಮಾನ ಕಳಿಸಿದೆ.]

ಸೀಮೆ ಎಣ್ಣೆಯಿಂದಾದ ದೊಡ್ಡ ಅನಾಹುತ
ಹನ್ನೆರಡು ಜನರು ಮೃತಪಟ್ಟರು

ಉತ್ತರ ಕನಡಾ ಜಿಲ್ಲಾ ಸಿದ್ದಾಪುರ ತಾಲ್ಲೂಕು ಕಸಬಾಕ್ಕೆ ಸೇರಿದ [illegible]ಯಲ್ಲಿ ಶ್ರೀದತ್ತಾತ್ರೇಯ ದೇವತಾ ಪ್ರತಿಷ್ಠೆ ಕೆಲಸ ನಡೆಯುವುದರಿಂದ ನಾನೂ ಇನ್ನು ಕೆಲವರೂ ಸದರಿ ಮಹೋತ್ಸವಕ್ಕೆ ಹೋಗಿದ್ದೆವು. ತಾ ೩ನೆ ಭಾನುವಾರ ಬೆಳಿಗ್ಗೆ ಪ್ರತಿಷ್ಠಾ ಕೆಲಸವೂ ಮಧ್ಯಾಹ್ನ ಬ್ರಾಹ್ಮಣಸಂತರ್ಪಣೆಯೂ ಸಾಯಂಕಾಲ ಭಜನೆ ಮತ್ತು ಪುರಾಣಶ್ರವಣವೂ ಮುಗಿದನಂತರ ರಾತ್ರಿ ೯ ಘಂಟೆಗೆ ದೇವರ ಮೆರವಣಿಗೆ ಹೊರಟು ಕಾಲುಮೈಲಿ ಫಾಸಲೆಯಲ್ಲಿರುವ ಸಿದ್ದಾಪುರ ಕಸಬದಲ್ಲಿ ಮೆರವಣಿಗೆಯಾಗಿ [illegible] ಚನ್ನಮ್ಮನೆಂಬ ಲಿಂಗಾಯತ ವೃದ್ಧೆಯ ಮನೆ ಬಾಗಿಲಿಗೆ ದೇವರ ಉತ್ಸವವು ಬಂದಿತು. ದೇವರ ಸಂಗಡ ಸಾವಿರಾರು ಜನಗಳು ಮಹೋತ್ಸವ ನೋಡುವುದಕ್ಕಾಗಿ ಬಂದಿದ್ದರು. ಈ ಜನಗಳಲ್ಲಿ ಕೆಲವರು ಭಜನೆ ಮಾಡುತ್ತಿದ್ದರು. ಈ ಉತ್ಸವಕ್ಕೋಸ್ಕರ ಊರೆಲ್ಲಾ ಚಪ್ಪರ ತೋರಣ ಬಾಳೆಕಂದು ಮುಂತಾದವುಗಳಿಂದ ಅಲಂಕಾರ ಮಾಡಿ ಪ್ರತಿ ಮನೆಯವರೂ ತಮ್ಮ ತಮ್ಮ ಬಾಗಿಲಲ್ಲಿ ಕಾರ್ತೀಕ ಹಚ್ಚುವದಕ್ಕೆ ಏರ್ಪಾಟು ಮಾಡಿಕೊಂಡಿದ್ದರು. ಇದರಂತೆ ಸದರಿ ಚನ್ನಮ್ಮನು ತನ್ನ ಮನೆಯ ಬಾಗಿಲಲ್ಲಿ ಕಾರ್ತೀಕ ಹಚ್ಚಬೇಕೆಂದು ಒಂದು ಖಾಲಿ ಚಿಮ್ಣಿಯೆಣ್ಣೆ ಪೆಟ್ಟಿಗೆ ಇಟ್ಟು ಅದರ ಮೇಲೆ ಚಿಮ್ಣಿಯೆಣ್ಣೆ ತುಂಬಿದ ಡಬ್ಬಿಯನ್ನಿಟ್ಟು ಅದರ ಮೇಲೆ ಹಿತ್ತಾಳೆ ಕಾಲುದೀಪದಲ್ಲಿ ದೀಪವನ್ನು ಹಚ್ಚಿಟ್ಟು ಚಿಮ್ಣಿ ಡಬ್ಬದ ಮೇಲೂ ಖಾಲಿ ಪೆಟ್ಟಿಗೆಯ ಮೇಲೂ ಕರ್ಪೂರದ ಬಿಲ್ಲೆಗಳನ್ನು ಇಟ್ಟಿದ್ದಳು. ದೇವರ ಉತ್ಸವ ತನ್ನ ಬಾಗಿಲಿಗೆ ಬಂದ ಕೂಡಲೆ ಸದರಿ ಚನ್ನಮ್ಮನು ಕರ್ಪೂರವನ್ನೆಲ್ಲಾ ಹಚ್ಚಿದಳು. ಆಗ ಭಜನೆಯ ಜನಗಳು ಆನಂದಪರವಶರಾಗಿ ಆ ಪೆಟ್ಟಿಗೆಯ ಸುತ್ತಲೂ ತಿರುಗುತ್ತಾ ಭಜನೆ ಮಾಡುತ್ತಿದ್ದರು. ಆಗ ಕರ್ಪೂರದ ಉರಿಯಿಂದ ಚಿಮ್ಣಿಯೆಣ್ಣೆ ತುಂಬಿದ ಡಬ್ಬದ ಮುಚ್ಚಳಕ್ಕೆ ಬೆಸೆದ ತವರದ ಕರಗಿ ಬೆಂಕಿಯು ಡಬ್ಬದ ಒಳಕ್ಕೆ ಪ್ರವೇಶಿಸಿ ಫಿರಂಗಿ ಹಾರಿದಂತೆ "ದಡಂ" ಎಂದು ಮಹಾ ರಭಸದಿಂದ ಡಬ್ಬವು ಒಡೆದು ಉರಿಯುತ್ತಿರುವ ಎಣ್ಣೆಯು ಸಮೀಪದಲ್ಲಿರುವ ೩೦—೪೦ ಜನಗಳಿಗೆ ತಗಲಿ, ಆ ಪೈಕಿ ೧೪ ಜನಗಳಿಗೆ [illegible] ಮಟ್ಟಿಗೆ ಬೆಂಕಿಯು ಹತ್ತಿ, ತಮಗೆ ಸಂಭವಿಸಿದ ವಿಪತ್ತು ಎಂಥಾದ್ದೆಂಬುದು ತಿಳಿದುಕೊಳ್ಳಲಾರದೆ ಚಲನೆಯುಳ್ಳ ಬೆಂಕಿಯ ಮರಗಳಂತೆ ಕೂಗುತ್ತಾ ಓಡುವುದಕ್ಕೆ ಪ್ರಾರಂಭಿಸಿದರು. ಉಳಿದವರು ಬೆಂಕಿಯನ್ನು ಆರಿಸಿಕೊಂಡರು. ಇನ್ನು ಕೆಲವರು [illegible] ಮತ್ತೆ ಕೆಲವರು ಭಯದಿಂದ ದಿಗ್ಭ್ರಾಂತರಾಗಿ ಸಮೀಪದ ಮನೆಗಳಿಗೆ ಸೇರಿಕೊಂಡು ಕಪಾಟ ಬಂಧನ ಮಾಡಿದರು. ಈ ಪ್ರಕಾರ ಜನರು ತಮ್ಮ ಪ್ರಾಣವನ್ನು ಉಳಿಸಿಕೊಳ್ಳಲು ಪ್ರಯತ್ನಿಸಿದರೆ ಹೊರತು ಬೆಂಕಿಯ ಮರಗಳಂತೆ ಉರಿಯುತ್ತಿರುವ ಜನಗಳನ್ನು ಉಪಚರಿಸಲು ಯಾರೂ ಧೈರ್ಯಮಾಡಲಾರದೆ ಹೋದರು. ಉರಿಯು ಹತ್ತಿಕೊಂಡ ಜನಗಳ ಪೈಕಿ ಕೆಲವರು ಸ್ವಲ್ಪಮಟ್ಟಿಗೆ ಧೈರ್ಯದಿಂದ ತಮ್ಮ ಬಟ್ಟೆಗಳನ್ನು ಸಡಲಿಸಿಯೂ ಇನ್ನು ಕೆಲವರು ರಸ್ತೆಯ ಧೂಳಿನಲ್ಲಿ ಹೊರಳಾಡಿಯೂ ಇನ್ನು ಕೆಲವರು ರಸ್ತೆಯ ಉಭಯಪಾರ್ಶ್ವಗಳಲ್ಲಿರುವ ಕಾಲುವೆಯ ಮೋರಿಗಳಲ್ಲಿ ಸೇರಿಕೊಂಡೂ ಬೆಂಕಿಯನ್ನು ಆರಿಸಿಕೊಂಡರು. ಅನಂತರ ಮನೆಗಳಲ್ಲಿ ಸೇರಿಕೊಂಡಿದ್ದ ಜನಗಳು ಸಹಾಯಕರನ್ನು ಹೊತ್ತುಕೊಂಡು ತಮ್ಮ ತಮ್ಮ ಸ್ಥಾನಗಳಿಗೂ ಕೆಲವರು ಆಸ್ಪತ್ರೆಗೂ ಕರೆದುಕೊಂಡು ಹೋಗಿ ಎಷ್ಟು ಶ್ರಮಪಟ್ಟರೂ ನಿಷ್ಪ್ರಯೋಜನವಾಗಿ ಸೋಮವಾರ ಸಾಯಂಕಾಲದೊಳಗೆ ಹನ್ನೆರಡು ಜನರು ಸತ್ತರು. ಮಂಗಳವಾರ ಬೆಳಿಗ್ಗೆ ಸದರಿ ಪೇಟೆಗೆ ಹೋಗಿ ನೋಡಿದಾಗ ಸುಡಲ್ಪಟ್ಟು ರಾಶಿರಾಶಿಯಾಗಿ ಬಿದ್ದಿರುವ ಕೂದಲೂ ಬಟ್ಟೆಗಳೂ ತಂಬೂರಿಗಳೂ ತಾಳಗಳೂ ಛತ್ರಿ ಚಾಮರ ವಗೈರೆಗಳೂ ಕಾಣಬಂದವು. ೧೦ ಘಂಟೆಯಾದರೂ ಜನಗಳು ಬೀದಿಬಾಗಿಲುಗಳನ್ನು ತೆರೆದಿರಲೇ ಇಲ್ಲ. ನಂತರ ಪೊಲೀಸಿನವರು ಬಂದು ಮಹಜರು ವಗೈರೆ ಮಾಡಿಸಿ, ಇಲ್ಲಿದ್ದ ಸ್ವತ್ತನ್ನು ಸ್ವಾಧೀನಮಾಡಿಕೊಂಡು ಹೊರಟು ಹೋದರು. ಈ ರೀತಿಯಾಗಿ [illegible]ಯು ತಾನು ಹೋದ ಕಡೆ ಇನ್ನೊಬ್ಬರನ್ನು ಬರಲಿಕ್ಕೆ ಅಸ್ಪದ ಕೊಡದೆ ಸಾಮ್ರಾಜ್ಯ ಮಾಡಿದ್ದು ಸರ್ವರಿಗೂ ಮಹದ್ವ್ಯಸನಕ್ಕೆ ಕಾರಣವಾಗಿದೆ. ಇಂಥಾ ಅನಾಹುತಗಳನ್ನು ಅನೇಕಾವೃತ್ತಿ ಜನಗಳು ನೋಡಿಯೂ ಕೇಳಿಯೂ ತಿಳಿದೂ ಪುನಃ ಈ ವಿಧವಾದ ಕಷ್ಟನಷ್ಟಗಳಿಗೆ ಗುರಿಯಾಗುತ್ತಿರುವರಲ್ಲಾ! ಇಂಥಾ ಮೌಢ್ಯ ನಿವಾರಣೆಗೆ ಯಾವುದಾದರೂ ಸನ್ಮಾರ್ಗವನ್ನು ಭಗವಂತನೇ ತೋರಿಸಬೇಕಾಗಿದೆ. [ಈ ವಿಷಯವನ್ನೇ ಕುರಿತು ಇನ್ನೆರಡು ಟಿಪ್ಪಣಿಗಳು ಬಂದಿರುತ್ತವೆ —ಎಡಿ]

[ಬಹುಮಾನದ ಮೇಲಾಟಕ್ಕಾಗಿ ಬಂದ ಇನ್ನೊಂದು ಟಿಪ್ಪಣಿ]

ದುಃಖಕರವಾದ ಎರಡು ವಿಷಯಗಳು

ದೊಡ್ಡಬಳ್ಳಾಪುರ ತಾಲ್ಲೂಕಿಗೆ ಸಮೀಪದಲ್ಲಿರುವ [illegible] ಎಂಬ ಗ್ರಾಮದಲ್ಲಿ ನಂಜೇಗೌಡನು—[illegible] ಬಸುರಾಗಿರುವ ಕಾಲದಲ್ಲಿ ಅವರನ್ನು ಚೇಳು ಕಡಿದರೆ ಅವರ ಗರ್ಭದಲ್ಲಿ ಹುಟ್ಟತಕ್ಕ ಮಗುವಿಗೆ ವಿಷಜಂತುಗಳಿಂದ ಯಾವ ಅಪಾಯದ ಕಂಟಕವಿಲ್ಲವೆಂಬ ಸಂಗತಿಯನ್ನು ಅನೇಕರಿಂದ ಕೇಳಿರುವದರಿಂದ, ತನಗೆ ಹುಟ್ಟತಕ್ಕ ಮಗುವಿಗೆ ದುಷ್ಟಜಂತುಗಳ ಬಾಧೆಯನ್ನು ತಪ್ಪಿಸಬೇಕೆಂಬ ಆಶೆಯಿಂದ ಅನೇಕ ವರ್ಷಗಳಿಂದ ಪುತ್ರಸಂತಾನವಿಲ್ಲದೆ ಈಚೆಗೆ ನವಮಾಸ ಗರ್ಭಿಣಿಯಾದ ತನ್ನ ಹೆಂಡತಿ ಬೀರಮ್ಮನನ್ನು, ಚೇಳು ಅರಸಿಕೊಂಡು ತಂದದನ್ನೂ ಕೇಳದೆ ಒಂದು ಕರೀ ಚೇಳಿನಿಂದ ಕಡಿಸಿ, ಹುಟ್ಟತಕ್ಕ ಮಗುವಿಗೆ ತಾನು ಒಳ್ಳೇದು ಮಾಡುವೆನೆಂದು ಅದರ ಪೋಷಕಳಾದ ತನ್ನ ಹೆಂಡತಿಯನ್ನೇ ಕಳಕೊಂಡನು. ಬೀರಮ್ಮನು ಅವರ ಜಾತಿಯವರಂತೆ ಇಲ್ಲದೆ ಬಹಳ ನಾಜೂಕಾದ ಶರೀರದವಳಾದ್ದರಿಂದಲೂ, ಕಡಿದ ಚೇಳು ಬಹಳ ವಿಷವುಳ್ಳ ಜಾತಿಗೆ ಸಂಬಂಧಪಟ್ಟದ್ದರಿಂದಲೂ ಅದರ ಬಾಧೆಯನ್ನು ತಡೆಯಲಾರದೆ ಅದೇ ನಿಮಿತ್ತ ಜ್ವರಪೀಡಿತಳಾಗಿ ಒಂದೆರಡು ದಿನಗಳಲ್ಲಿಯೇ ಮೃತಾಧೀನಳಾದಳು. ನಂಜೇಗೌಡನಾದರೋ ಅವಿಚಾರದ ಮೇಲೆ ಬುದ್ಧಿ ಬಂತೆಂಬ ರೀತಿ ತಾನು ಒಂದೆಣಿಸಿದರೆ ದೈವ ಒಂದೆಣಿಸಿತು ಎಂದು ಕಂದಿ, ಸರಿಯಾದ ಅನ್ನ ಆಹಾರ ನಿದ್ರೆಯಂ ತೊರೆದು ಪತ್ನೀಶೋಕ ತಾಳಲಾರದೆ ಕೃಶವಾಗುತ್ತಿರುವನು.

ಇತ್ತಲಾಗಿ ಅದೇ ಗ್ರಾಮದಲ್ಲಿ ಈ ಸಂಗತಿ ನಡೆದ ಮಾರನೇ ದಿನವೇ ಮತ್ತೊಂದು ಅಪೂರ್ವ ವಿಷಯವು ನಡೆಯಿತು. [illegible] ಕಂಟ್ರಾಕ್ಟ ಕೆಲಸದಿಂದ ಸ್ವಲ್ಪ ಹಣವನ್ನು ಜೊತೆಗೂಡಿಸಿ ಆ ಗ್ರಾಮದ ಮುದ್ದುಮಲ್ಲೇಗೌಡನು ಒಂದು ಚಿಕ್ಕ ಮನೆಯನ್ನು ಹೊಸದಾಗಿ ಕಟ್ಟಿಕೊಂಡು ಒಂದು ವಾರಕ್ಕೆ ಮುಂಚೆ ಪ್ರವೇಶಿಸಿದನು. ಗೃಹಪ್ರವೇಶ ಮಾಡಿ ಸ್ವಲ್ಪದಿವಸವೇ ಆಗಿತ್ತು. ಆ ಮನೆಯಲ್ಲಿ ಒಂದು ದಿನವಾದರೂ ಅವರು ಮಲಗಿದವರಲ್ಲ. ಬೇಸಿಗೆ ಕಾಲವಾದುದರಿಂದ ಮನೆಯ ಹೊರಗಿನ [illegible]ದಲ್ಲಿ ದಂಪತಿಗಳಿಬ್ಬರೂ ಒಬ್ಬ ಮುದುಕಿಯೂ ಮಲಗಿ ನಿದ್ದೆಹೋಗುತ್ತಿದ್ದರು. ಆದರೆ ಕಳೆದ ಸೋಮವಾರ ಎಂದಿನಂತೆ ಅವರು ಮನೆಯ ಹೊರಗೆ ಮಲಗಲಿಲ್ಲ. ಕಾರಣವೇನೆಂದರೆ ಆ ದಿನ ಹೆಂಡತಿಯ ಮೈಗೆ ಸ್ವಲ್ಪ ಅಲಸ್ಯವಾಗಿದ್ದುದರಿಂದ ಹೊರಗಿನ ಬಾಗಿಲು ಭದ್ರವಾಗಿ ಮುಚ್ಚಿಕೊಂಡು ಒಳಗೆ ಗಂಡಹೆಂಡರು ಮಲಗಿಕೊಂಡರು. ಮುದುಕಿಯು ಹೊರಗೇ ನಿದ್ದೆಮಾಡಿದಳು. ಆ ಮನೆಯು ಹೊಸದಾಗಿ ಕಟ್ಟಿದ್ದುದರಿಂದ ಗಾಳಿಯ ಸಂಚಾರಕ್ಕೆ ತಕ್ಕಮಟ್ಟಿಗೆ ಕಿಟಕಿಗಳು ಇಟ್ಟಿಲ್ಲ. ಇದ್ದ ಒಂದು ಕಿಟಕಿಯನ್ನೂ ಹೆಂಡತಿ ಚಳಿಯಾಗುತ್ತದೆಂದು ಹೇಳಿದುದರಿಂದ ಗೌಡನು ಬಿಗಿಯಾಗಿ ಮುಚ್ಚಿಬಿಟ್ಟಿದ್ದನು. ಮಂಗಳವಾರ ಬೆಳಿಗ್ಗೆ ಮುದುಕಿಯು ಎದ್ದು ಬಾಗಿಲು ತಟ್ಟಿದಳು. ಎಷ್ಟು ಕೂಗು ಹಾಕಿದರೂ ಒಳಗೆ ಯಾರೂ ಎಚ್ಚರವಾಗಲಿಲ್ಲ. ಭಯಪಟ್ಟು ನೆರೆಹೊರೆಯವರನ್ನು ಕರೆದು ಮನೆಯ ಬಾಗಿಲನ್ನು ತೆರೆದು ಒಳಕ್ಕೆ ಪ್ರವೇಶಿಸಲು ಹೋಗುತ್ತಲೇ ಒಂದು ತರದ ಕೆಟ್ಟ ಗಾಳಿ ತುಂಬಿಕೊಂಡು ದುರ್ಗಂಧವಾಗಿತ್ತಂತೆ. ಪ್ರಾತಃಕಾಲವಾದರೂ ಬೆಳಕು ಅವಕಾಶವಿಲ್ಲದ್ದರಿಂದಲೂ, ಕೋಣೆಯು ಬಹಳ ಚಿಕ್ಕದಾಗಿದ್ದರಿಂದಲೂ ಒಳಗಿರುವವರು ಕಣ್ಣಿಗೆ ಜಾಗ್ರತೆ ಕಾಣಿಸಲಿಲ್ಲ. ಚೆನ್ನಾಗಿ ಬಾಗಿಲನ್ನು ತೆರೆದು ಹೊರಡುವ ಮಟ್ಟಿಗೆ ಬೆಳಕುಮಾಡಿ ನೋಡಲು ಕೈಕಾಲುಗಳನ್ನು ಒದರಿಕೊಳ್ಳುತ್ತಿರುವ ಗೌಡನನ್ನು ನೋಡಿದರು. ಅವರಲ್ಲಿ ಲೋವರ್ ಸೆಕಂಡರಿ ಪರೀಕ್ಷೆ ವರೆಗೆ ಓದಿದವರಾಗಿಯೂ ಸ್ವಲ್ಪ ತಿಳುವಳಿಕೆಯುಳ್ಳವರಾಗಿಯೂ ಇದ್ದ ಒಬ್ಬಿಬ್ಬರು ತಕ್ಷಣವೇ ಸಂದರ್ಭವನ್ನು ಗ್ರಹಿಸಿ, ಕೂಡಲೆ ಗೌಡನನ್ನೂ ಅವನ ಹೆಂಡತಿಯನ್ನೂ ಹೊರಗೆ ಎತ್ತಿಕೊಂಡು ಬಂದು, ಮುಖಕ್ಕೆ ನೀರು ಎರಚಿದರು. ಗಾಳಿ ಬೀಸ [illegible] ದ ಉಪಚಾರ ಮಾಡತೊಡಗಿದ ಸ್ವಲ್ಪ ನಿಮಿಷಗಳಲ್ಲೇ ಗೌಡನು [illegible] ಬಿಡುವುದನ್ನು ಬಿಟ್ಟು, [illegible] ಎಚ್ಚರವಾದನು. [illegible] ಬಣ್ಣಗೆಟ್ಟು ಕಪ್ಪಾಗಿದ್ದ [illegible] ಅಯ್ಯೋ ಪಾಪ! ಏನೇನು ಮಾಡಿದರೂ ಅವಳು [illegible] ನಿದ್ದೆಯನ್ನು ಬಿಟ್ಟು ಎಚ್ಚರಗೊಳ್ಳಲೇ ಇಲ್ಲ! ಈ ನವನಾಗರಿಕ ಕಾಲದಲ್ಲಿಯೂ ಕೆಲವು ಜನಗಳು ತಮ್ಮ ತಿಳಿಗೇಡಿತನದಿಂದ ವಿಪರೀತವನ್ನು ತಮ್ಮ ಮೇಲೆ ತಾವೇ ತಂದುಕೊಳ್ಳುತ್ತಿರುವುದು ಎಂದು ಶೋಕಿಸಬೇಕಾಗಿದೆ.

ಪಿ. ಎಸ್. ಬಿ

ರಾಜಧಾನಿಯಲ್ಲಿ ನಡೆದ ಎರಡು ಅಪಾಯಗಳು.

ಮನೆ ಬಿದ್ದದ್ದು.

ತಾ. ೬ನೆ ಬುಧವಾರ ಮಧ್ಯಾಹ್ನ ಸುಮಾರು ಒಂದು ಗಂಟೆ ಹೊತ್ತಿನಲ್ಲಿ ಅಟ್ಟಿಗೆಗೂಡಿನೊಳಗೆ ಖಾಸ್‌ಬಂಗಲೆಗೆ ಹೋಗುವ ದೊಡ್ಡ ರಸ್ತೆಯಲ್ಲಿ ಒಂದು ಭಾರೀ ಮನೆಯು ಬಿದ್ದು ಅನಾಹುತವಾಯಿತು. ಅಟ್ಟಿಗೆ ಗೂಡಿನ ಮ್ಯುನಿಸಿಪಲ್ ಕಮಿಷನರಾಗಿಯೂ ವರ್ತಕರೂ ಕಂಟ್ರಾಕ್ಟರೂ ಆಗಿಯೂ ಇರುವ ಮೆ॥ ಪಿ ತಿರುವೆಂಗಡ ಮೊದಲಿಯಾರ್ರು ಅಟ್ಟಿಗೆ ಗಾರೆಯಿಂದ ಒಂದು ಭಾರೀ ಮನೆಯನ್ನು ಕಟ್ಟಿಸುತ್ತಿದ್ದರು. ಎರಡು ಅಂತಸ್ತುಗಳ ಕಾಮಗಾರಿಯೂ ಪೂರೈಸಿತ್ತು. ಎರಡನೆ ಅಂತಸ್ತಿನಲ್ಲಿ ಜಂತಿಗಳ ಮೇಲೆ ತಾರಸಿ ಹಾಕಿ ಕಟ್ಟಿ ಚೂರುಗಳಂಥ ದೊಣ್ಣೆಗಳಿಂದ ಕೂಲಿಯಾಳುಗಳು ಬಡಿಯುತ್ತಾ ಗಟ್ಟಿ ಮಾಡುತ್ತಿದ್ದರು. ಅಗ್ಗ ನಾಲ್ವರು ಹೆಣ್ಣುಹುಡುಗಿಯರೂ ಮೂರುಮಂದಿ ಗಂಡು ಹುಡುಗರೂ ಸೇರಿ ಈ ಕೆಲಸವನ್ನು ಮಾಡುತ್ತಿದ್ದರು. ಗಟ್ಟಿ ಮಾಡುತ್ತಿರುವಾಗ ಕೆಳಗಿನ ತೊಲೆಯೂ ಕೆಲವು ಜಂತಿಗಳೂ ಭಾರವನ್ನೂ ದೊಣ್ಣೆ ಪೆಟ್ಟುಗಳನ್ನೂ ತಡೆದುಕೊಳ್ಳಲಾರದೆ ಮುರಿದು ಎರಡನೆಯ ಅಂತಸ್ತನ್ನು ಅನಾಮತ್ತಾಗಿ ಕಳಚಿ ಬೀಳುವಂತೆ ಮಾಡಿದವು. ಕೆಲಸ ಮಾಡುತ್ತಿದ್ದವರೆಲ್ಲಾ ಸ್ಥಾನಪಲ್ಲಟವಾಗಿ ಬಿದ್ದು ತಾರಸಿಯ ಕೆಳಗೆ ಸಿಕ್ಕಿಕೊಂಡರು. ಹೀಗೆ ಅಂತಸ್ತು ಬಿದ್ದ ಕಟ್ಟವನ್ನು ಕೇಳಿ ನೆರೆಹೊರೆಯವರೂ ತಿರುಗಾಡುತ್ತಿದ್ದವರೂ ಕೂಡಲೆ ಗಾಬರಿಬಿದ್ದು ಹೋಗಿ ಕೆಳಗೆ ಸಿಕ್ಕಿದವರನ್ನು ಹೊರಕ್ಕೆ ತೆಗೆಯಲು ಪ್ರಯತ್ನ ಮಾಡಿದರು. ಆದರೂ ಆ ಆಳುಗಳ ಪೈಕಿ ಇಬ್ಬರು ಹೆಣ್ಣುಮಕ್ಕಳಿಗೆ ಪ್ರಾಣಹೋಗಿತ್ತು. ಇನ್ನಿಬ್ಬರು ಹೆಣ್ಣುಮಕ್ಕಳಿಗೂ ಇಬ್ಬರು ಗಂಡಾಳುಗಳಿಗೂ ಪೂರಾ ಜಖಂ ಆಗಿ ನರಳುತ್ತಿದ್ದರು. ಇವರನ್ನು ಕೂಡಲೇ ಡೋಲಿಯಲ್ಲಿ ಹಾಕಿ ಇಲ್ಲಿನ ಆಸ್ಪತ್ರೆಗೆ ಕಳುಹಿಸಿಕೊಟ್ಟರು. ಈಚೆಗೆ ಆ ಪೈಕಿ ಒಂದು ಹುಡುಗಿಯು ತೀರಿಹೋಯಿತೆಂದೂ ಉಳಿದ ಮೂವರೂ ಆರೋಗ್ಯಹೊಂದುತ್ತಿದಾರೆಂದೂ ತಿಳಿಯುವುದು. ಈ ಆಕಸ್ಮಿಕವಾದ ಅನಾಹುತದಿಂದ ಮೆ॥ ತಿರುವೆಂಗಡಂ ಮೊದಲಿಯಾರ್ರಿಗೆ ೫,೦೦೦ ರೂಪಾಯಿ ನಷ್ಟವಾದದ್ದಲ್ಲದೆ ತಮ್ಮ ಕಟ್ಟಡದ ದೆಸೆಯಿಂದ ಈ ರೀತಿ ಪ್ರಾಣನಷ್ಟವುಂಟಾಗಿ ತುಂಬಾ ವ್ಯಸನವೂ ಪ್ರಾಪ್ತವಾಯಿತು. ಅತ್ತಲಾಗಿ ಮಕ್ಕಳನ್ನು ಕಳೆದುಕೊಂಡವರ ರಕ್ತಸಂಬಂಧಿಗಳಿಗುಂಟಾಗಿರುವ ವಿಯೋಗದುಃಖವು ಅಪಾರವಾಗಿರುವುದು.

ಭಾವಿಯಲ್ಲಿ ಬಿದ್ದದ್ದು

ತಾ ೭ನೆ ಗುರುವಾರ ಸಾಯಂಕಾಲ ಇಲ್ಲಿನ ಹೆಲ್ತ್ ಆಫಿಸರ್ ಮೆ॥ ಎಂ. ಜಗನ್ನಾಥಂ ಪಿಳ್ಳೆಯವರ ಪತ್ನಿಯು ಮನೆ ಭಾವಿಯಲ್ಲಿ ನೀರು ಸೇದುತ್ತಿರುವಾಗ ಮೇಲಕ್ಕೆ ಬಂದ ನೀರು ತುಂಬಿದ ಬಿಂದಿಗೆಯನ್ನು ತೆಗೆದುಕೊಳ್ಳುವುದಕ್ಕಾಗಿ ಮುಂದಕ್ಕೆ ಬೊಗ್ಗುವಲ್ಲಿ ಮುಂದಕ್ಕೆ ಜೋಕು ಬಂದು ಕೊಡ ಹಗ್ಗಸಹಿತವಾಗಿ ಭಾವಿಯೊಳಕ್ಕೆ ಬಿದ್ದುಬಿಟ್ಟರು. ಕೂಡಲೇ ಮನೆಯವರು ಗಾಬರಿಯಿಂದ ಜನರನ್ನು ಕರಸಿ, ಭಾವಿಯೊಳಕ್ಕೆ ಇಳಿಸಿ ಆಕೆಯನ್ನು ಮೇಲಕ್ಕೆ ಎತ್ತಿಸಿದರು. ಆದರೇನು ? ಬರೀ ಕಳೇಬರವಾಗಿತ್ತೇ ಹೊರತು ಪ್ರಾಣವಿರಲಿಲ್ಲ. ಆಕೆಗೆ ಈ ದುರ್ಮರಣಕಾಲದಲ್ಲಿ ಸುಮಾರು ೨೮ ವರುಷ ವಯಸ್ಸಾಗಿತ್ತು. ಸಣ್ಣಸಣ್ಣ ಮಕ್ಕಳು ಐದುಮಂದಿ ಇರುತ್ತಾರೆ. ಪತಿಗೂ ಆ ಮಕ್ಕಳಿಗೂ ಉಂಟಾದ ಈ ವಿಯೋಗದುಃಖವು ಅಪಾರವಾಗಿರುತ್ತದೆಂದು ವ್ಯಸನಪಡುವೆವು.

ವೈಸ್‌ರಾಯಿಯವರೂ ಅಮೀರರೂ

ಕಡೇದಿನದ ಶುಭವಾಕ್ಯಗಳು.

ಅಫ್ಘಾನಿಸ್ಥಾನದ ಅಮೀರರಾದ ಹಬೀಬುಲ್ಲಾಖಾನ್ ಬಹದ್ದೂರವರು ಕಳೆದ ಒಂಬತ್ತು ವಾರಗಳಿಂದಲೂ ಇಂಡಿಯಾ ಗವರ್ನಮೆಂಟಿನವರ ಆತಿಥ್ಯವನ್ನು ಸ್ವೀಕರಿಸುತ್ತಾ, ಕಲ್ಕತ್ತಾ, ಆಗ್ರಾ, ಬೊಂಬಾಯಿ, ಕರಾಚಿ, ಲಾಹೋರ್, ಗ್ವಾಲಿಯರ್, ಈ ಮೊದಲಾದ ಪಟ್ಟಣಗಳಲ್ಲಿ ಸಂಚಾರಮಾಡಿ, ಇಂಗ್ಲಿಷ್ ಗವರ್ನಮೆಂಟಿನವರ ರಾಜ್ಯಭಾರದ ವಿಚಕ್ಷಣೆಯನ್ನೂ ಪ್ರಜಾಸೌಖ್ಯಾದಿಯನ್ನೂ ಐಶ್ವರ್ಯಾಭಿವೃದ್ಧಿಯನ್ನೂ ಸಾಕ್ಷಾತ್ತಾಗಿ ಪರಾಂಬರಿಸಿ, ಕಳೆದ ೭ನೆ ತಾ ಗುರುವಾರ ಹಿಂತಿರಿಗಿ ತಮ್ಮ ಸಂಸ್ಥಾನವನ್ನೂ ರಾಜಧಾನಿಯನ್ನು ಕುರಿತು ತೆರಳಿದರು. ಇವರು ಲಾಹೋರ್ ಪಟ್ಟಣದಲ್ಲಿ ಇಸ್ಲಾಮಿಯಾ ಕಾಲೇಜ್ ಎಂಬ ಮಹಮದೀಯ ವಿದ್ಯಾಶಾಲೆಯ ಕಟ್ಟಡಕ್ಕೆ ಅಸ್ತಿಭಾರಶಿಲಾ ಸ್ಥಾಪನೆಮಾಡಿದಾಗ್ಗೆ ಹಿಂದುಸ್ಥಾನದ ಮಹಮದೀಯ ಪ್ರಜಾಕೋಟಿಗಳಿಗೆಲ್ಲಾ ಪರಮಾಪ್ತವಾದ ಮತ್ತು ಹೃದಯಂಗಮವಾದ ಸೂಕ್ತಿವಚನಗಳನ್ನು ತಿಳಿಸಿದರು. ಇದರ ವೃತ್ತಾಂತವನ್ನು ಇನ್ನೊಂದು ಭಾಗದಲ್ಲಿ ಪ್ರಕಟಿಸಿರುತ್ತೇವೆ. ವಾಚಕರು ಅದನ್ನು ಸಾವಧಾನದಿಂದ ಓದಿ ಗ್ರಹಿಸಿಕೊಂಡಾರೆಂದು ನಿರೀಕ್ಷಿಸುವೆವು.

ವೈಸ್‌ರಾಯಿಯವರ ಶುಭವಾದನವು.

ಅಮೀರರವರು ಹಿಂದುಸ್ಥಾನದ ಎಲ್ಲೆಕಟ್ಟನ್ನು ಬಿಟ್ಟು ಹಿಂತಿರಿಗಿದ ಸುದ್ದಿಯನ್ನು ಕೇಳಿ ವೈಸ್‌ರಾಯಿ ಲಾರ್ಡ್ ಮಿಂಟೋ ಪ್ರಭುಗಳು ಅವರಿಗೆ ಒಂದು ತಂತೀ ವರ್ತಮಾನವನ್ನು ಕಳುಹಿಸಿ, ತಿಳಿಸಿದ ಅಭಿಪ್ರಾಯವೇನೆಂದರೆ—ತಾವು ಹಿಂದುಸ್ಥಾನದ ಎಲ್ಲೆಯನ್ನು ದಾಟಿ ತಮ್ಮ ದೇಶಕ್ಕೆ ಹಿಂತಿರುಗುತ್ತಿರುವ ಈ ಸಮಯದಲ್ಲಿ ತಮಗೆ ಸುಖಸಂತೋಷಗಳೊಡನೆ ಕೂಡಿದ ಪ್ರಯಾಣವು ಲಭ್ಯವಾಗಲೆಂದೂ ತಮಗೆ ದೀರ್ಘಾಯುರಾರೋಗ್ಯಾದಿಗಳು ದೊರಕಲೆಂದೂ ತಮ್ಮ ಆಳ್ವಿಕೆಯಲ್ಲಿ ಅಫ್ಘಾನಿಸ್ಥಾನವು ಸಕಲ ವಿಷಯಗಳಲ್ಲೂ ಅಭಿವೃದ್ಧಿ ಹೊಂದಲೆಂದೂ ಮನಃಪೂರ್ವಕವಾಗಿ ಹಾರೈಸುತ್ತೇನೆ. ಈ ರಾಷ್ಟ್ರದಲ್ಲಿ ಚಕ್ರವರ್ತಿ ಸಾರ್ವಭೌಮರವರ ಪ್ರತಿನಿಧಿಯಾಗಿದ್ದುಕೊಂಡು ತಮ್ಮನ್ನು ಸತ್ಕಾರಮಾಡುವ ಶುಭಸಮಯವು ನನಗೆ ದೊರೆತುದಕ್ಕಾಗಿ ನಾನು ತುಂಬಾ ಕೃತಜ್ಞನಾಗಿರುತ್ತೇನೆ. ಈಗ ನಮನಮಗೆ ಉಂಟಾಗಿರುವ ಸಾಕ್ಷಾತ್ಕಾರದ ಸ್ನೇಹವು ನಮ್ಮನಮ್ಮ ದೇಶಗಳಿಗೂ ಗವರ್ನಮೆಂಟುಗಳಿಗೂ ಸೌಹೃದಯವನ್ನುಂಟುಮಾಡುವುದೆಂದು ನಿರೀಕ್ಷಿಸುತ್ತೇನೆ. ತಾವು ಹಿಂದುಸ್ಥಾನದಲ್ಲಿದ್ದ ಸ್ವಲ್ಪ ಕಾಲದಲ್ಲೇ ಅನೇಕ ಜನರ ಆತ್ಮಪರಿಚಯವನ್ನೂ ನಿರ್ದುಷ್ಟವಾದ ಸ್ನೇಹವನ್ನೂ ಬೆಳಸಿಕೊಂಡಿರುತ್ತೀರಾದಕಾರಣ ಅವರೆಲ್ಲರ ಶುಭವಾದನವೂ ಈಗ ತಮ್ಮನ್ನು ಸೇರಿದವುಗಳಾಗಿರುತ್ತವೆ. ತಾವು ಅವರುಗಳನ್ನೂ ಈ ರಾಷ್ಟ್ರದಲ್ಲಿ ನೋಡಿದ ಮತ್ತು ತಿಳಿದ ಸಕಲ ವಿಧ್ಯಮಾನಗಳನ್ನೂ ಸಂತೋಷಪೂರ್ವಕವಾಗಿ ನೆನಸಿಕೊಳ್ಳುತ್ತಾ ಬರುವಿರೆಂದು ಹಾರೈಸುವೆನು.

ಅಮೀರರವರ ಪ್ರತ್ಯುತ್ತರವು.

ಅಮೀರರವರು ವೈಸರಾಯಿಯವರ ಮೇಲ್ಕಂಡ ಶುಭವಾದನಪೂರ್ವಕವಾದ ತಂತೀವರ್ತಮಾನವನ್ನು ಪಿಷಾವರ್ ಪಟ್ಟಣದಲ್ಲಿ ಓದಿನೋಡಿ ತುಂಬಾ ಸಂತೋಷಪಟ್ಟುಕೊಂಡು, ತಾ. ೮ ನೆ ಶುಕ್ರವಾರ ಅಲ್ಲಿಂದ ಅದಕ್ಕೆ ಪ್ರತ್ಯುತ್ತರರೂಪವಾಗಿ ತಂತೀವರ್ತಮಾನ ಕೊಟ್ಟು ವೈಸ್‌ರಾಯಿಯವರಿಗೆ ತಿಳಿಸಿರುವುದೇನೆಂದರೆ—ನಾನು ಅಫ್ಘಾನಿಸ್ಥಾನದ ಕಡೆ ಹೊರಡುವುದಕ್ಕೆ ಮುಂಚೆ ಅಂದರೆ ಈ ದಿನ ತಮ್ಮ ತಂತೀವರ್ತಮಾನವು ನನಗೆ ಲಂಡಿ ಕೊಟಾಲ್ ಎಂಬೀ ಠಾಣ್ಯದಲ್ಲಿ ತಲಪಿ ನೋಡಿಕೊಂಡೆನು. ಅದಕ್ಕಾಗಿ ತಮ್ಮನ್ನು ಬಹಳವಾಗಿ ವಂದಿಸುತ್ತೇನೆ. ಈಗ ನಾನು ಹಿಂದುಸ್ಥಾನದ ಎಲ್ಲೆಯನ್ನು ದಾಟಿ ಅಫ್ಘಾನಿಸ್ಥಾನದೊಳಕ್ಕೆ ಪ್ರವೇಶಮಾಡಿರುತ್ತೇನೆ. ನಾನು ಹಿಂದುಸ್ಥಾನದಲ್ಲಿ ಅರವತ್ತನಾಲ್ಕು ದಿನಗಳನ್ನು ಬಹು ಸಂಭ್ರಮದಿಂದಲೂ ಸಂತೋಷಪೂರ್ವಕವಾಗಿಯೂ ಕಳೆದೆನು. ಇಂಡಿಯಾ ಗವರ್ನಮೆಂಟಿನವರು ನನಗೆ ತೋರಿಸಿದ ಸನ್ಮಾನ ಸತ್ಕಾರಾದಿಗಳಿಗೋಸ್ಕರ ನಾನು ತಮ್ಮನ್ನು ಮನಃಪೂರ್ವಕವಾಗಿ ವಂದಿಸುತ್ತೇನೆ. ನಾನು ಹಿಂದುಸ್ಥಾನದಲ್ಲಿದ್ದಾಗ್ಗೆ ನನ್ನ ಬಳಿ ಮೆಹಮಾನ್‌ದಾರ್ ಕೆಲಸಕ್ಕಾಗಿ ಸರ್ ಹೆನ್ರಿ ಮೆಕ್‌ಮೋಹನ್ ಎಂಬೀ ಸಮರ್ಥರಾದ ಅಧಿಕಾರಿಯನ್ನು ನೇಮಿಸಿಕೊಟ್ಟ ಭಾಗದಲ್ಲಿ ನಾನು ತಮ್ಮನ್ನು ಇನ್ನೂ ವಿಶೇಷವಾಗಿ ವಂದಿಸುತ್ತೇನೆ. ಈ ಅಧಿಕಾರಿಯೂ ಅವರ ತಾಬೇದಾರರೂ ನನಗೋಸ್ಕರ ತುಂಬಾ ಶ್ರಮಪಟ್ಟಿರುತ್ತಾರೆಂದು ಸಂತೋಷದಿಂದ ಸೂಚಿಸುವೆನು. ತಮಗೆ ಒಳ್ಳೇದಾಗಲಿ. ಸಿರಾಜ್-ಉಲ್-ಮಿಲ್ಲತ್-ವಾದ್-ದೀನ್.

ಬೆಂಕಿಯಿಂದ ಆದ ನಷ್ಟಗಳು.

ಪಟ್ಟಗೆರೆ

ಕೆಂಗೇರಿಯ: ಟೌನು ೧ ಮೈಲಿ ಫಾಸಲೆಯಲ್ಲಿರುವ ಪಟ್ಟಗೆರೆಯಲ್ಲಿ ಈ ಮಾಹೆ ತಾ ೭ ನೆ ಗುರುವಾರ ರಾತ್ರಿ ೬ ಘಂಟೆಯಲ್ಲಿ ಬಲಗೈನಾಗ ಈತನ ತಮ್ಮ ಕೆಂಪ ಇನ್ನೊಬ್ಬ ತಿಮ್ಮ ಈ ಮೂರು ಜನರ ಮನೆಗಳಿಗೂ ಬೆಂಕಿಬಿದ್ದು ಸುಟ್ಟುಹೋದವು. ಇವರು ಆಂಬ ಸಂಸಾರಿಗಳು. ಈಗ ಸುಗ್ಗಿಕಾಲವಾದ್ದರಿಂದ ಬೆಳದ ದವಸ ಧಾನ್ಯಗಳನ್ನು ಮನೆಯಲ್ಲಿ ತುಂಬಿದ್ದರು. ಸಂಸಾರಕ್ಕೆ ಮನೆ ಇಕ್ಕಟ್ಟೆಂದು ಇನ್ನೂ ಕಟ್ಟಿಸುವದಕ್ಕೆ ಗಳ, ಬಿದರು, ದೂಲ, ಹಂಚುಕಲ್ಲು ಮುಂತಾದ್ದನ್ನೂ ತಂದು ಇಟ್ಟುಕೊಂಡಿದ್ದರು. ಅದೂ ಅಲ್ಲದೆ ದವಸ ಧಾನ್ಯ ಸಾಮಾನೂ ಅಲ್ಲದೆ ೫ ಭಾರಿ ಮೇಕೆ, ೮೦—೯೦ ಕೋಳಿ, ೧ ಹೋರಿ, ೭ ವರುಷದ ೧ ಮಗು ಸಹಾ ಬೆಂಕಿಯ ಪಾಲಾದವು. ಬೆಳಗ್ಗೆ ೧೦ ಘಂಟೆವರಿವಿಗೂ ಉರಿಯು ಇಳಿಯಲಿಲ್ಲ. ಕತ್ತಲೆ ಕಾಲವಾದ್ದರಿಂದ ಆ ರಾತ್ರಿ ಯಾವ ಸಾಮಾನನ್ನೂ ಹೊರಕ್ಕೆ ತರಲು ಸಾಧ್ಯವಾಗಲಿಲ್ಲ. ದನ ಕುರಿ ಮೇಕೆ ಇವುಗಳನ್ನು ಸಾಗಿಸಿದ್ದೇ ತುಂಬಾ ಆಶ್ಚರ್ಯ. ಕಷ್ಟಪಟ್ಟೂ ನಾಶವಾದವು. ಬೆಂಕಿಯನ್ನು ಆರಿಸುವುದಕ್ಕೆ ಈ ಊರ ಬಳಿ ನೀರಿಗೇ ಅಭಾವವಾಗಿದೆ. ಪ್ರೀತಿಗೆ ಅನುಕೂಲ ಕೊಂಡಿದ ವೃತ್ತಿ ವಿಯೋಗವನ್ನೂ ವಾಸಿಸುವದಕ್ಕೆ ಸ್ಥಳವನ್ನೂ ಹೊದಿಯುವದಕ್ಕೆ ಬಟ್ಟೆಯನ್ನೂ ತಿನ್ನುವದಕ್ಕೆ ಆಹಾರವನ್ನೂ ಇಲ್ಲದಂತೆ ಎಲ್ಲಾ ಕಳೆದುಕೊಂಡಿರುವ ಇವರ ಸಂಕಟ ವಿವರಿಸುವದಕ್ಕೆ ಆಗದು. ಈ ಅನಾಹುತದಿಂದ ೭೦೦—೮೦೦ ರೂಪಾಯಿನ ಮೇಲೆ ಲುಕ್ಸಾನಾಗಿರಬಹುದೆಂದು ತೋರುವುದು.

ಕೆ ಎಲ್

ಆನೆಕಲ್ಲು

ಈ ಆನೆಕಲ್ ಟವ್ನಿಗೆ ಪ್ಲೇಗ್ ಉಪದ್ರವು ಈಗ್ಗೆ ಸುಮಾರು ಮೂರು ತಿಂಗಳಿಗೆ ಮೊದಲೆ ಪ್ರವೇಶಮಾಡಿ, ದಿನ ಒಕ್ಕೆ ೩—೪ ಈ ರೋಗಕ್ಕೆ ಜನರು ಕಾಲವಾಗುತ್ತಾ ಇದುವರಿವಿಗೆ ಸುಮಾರು ೧೫೦ ಜನಗಳ ತನಕ ತೀರಿಹೋದರು. ಈ ಊರು ದೊಡ್ಡಕೆರೆ ಏರಿ ಕೆಳಗೆ ತೋಟ ತುಡಿಕೆಗಳನ್ನು ಮಾಡಿಕೊಂಡು ಜೀವನ ಮಾಡಿಕೊಂಡು ಇದ್ದ ಕೇವಲ ಬಡವರಾದ ತಿಗಳರೇ ಏಳೆಂಟು ಸಂಸಾರಿಗಳ ಗುಡಿಸಲುಗಳಿಗೆ ಬೆಂಕಿಯು ೩ನೆ ತಾ ಸೋಮವಾರ ಮಧ್ಯಾಹ್ನ ೨ ಘಂಟೆಗೆ ಬಿದ್ದು ಗುಡಿಸಲುಗಳನ್ನೂ ಗುಡಿಸಲುಗಳ ಒಳಭಾಗದಲ್ಲಿದ್ದ ದಿನಸಿ ಬಟ್ಟೆ ಬರೆ ವಗೈರೆ ಎಲ್ಲಾ ಸಾಮಾನುಗಳನ್ನೂ ಸಂಪೂರ್ಣವಾಗಿ ಸುಟ್ಟುಹಾಕಿತು. ಬೆಂಕಿಯು ಉರಿಯುತ್ತಿರುವಾಗ್ಗೆ ಗುಡಿಸಲುಗಳಲ್ಲಿ ಯಾವಪ್ರಾಣಿಯೂ ಇಲ್ಲದೆ ಎಲ್ಲರೂ ತಮ್ಮ ತಮ್ಮ ಕೆಲಸಗಳ ಮೇಲೆ ಹೋಗಿದ್ದರು. ಬಂದು ನೋಡಿದ ಮೇಲೆ ಆ ಜನರು ಹಾಹಾಕಾರಪಟ್ಟು ಸುತ್ತಮುತ್ತಲಿದ್ದ ಇತರ ಜನಗಳ ಸಹಾಯದಿಂದ ಸಮೀಪದಲ್ಲಿ ಇದ್ದ ಯಾತದ ಭಾವಿಗಳಿಂದ ನೀರು ತೆಗೆದುಕೊಂಡು ಯರಚುತ್ತಲೂ ಯಾತದ ಬಾನೆಗಳಿಂದಲೇ ನೀರನ್ನು ಎತ್ತಿ ಸುರಿಯುತ್ತಲೂ ದೊಣ್ಣೆಗಳಿಂದ ಬೆಂಕಿಯನ್ನು ಬಡಿದು ಆರಿಸುತ್ತಲೂ, ಮಣ್ಣು ಎತ್ತಿ ಸುರಿಯುತ್ತಲೂ ಈ ಮೇರೆಗೆ ಅನೇಕ ವಿಧವಾದ ಪ್ರಯತ್ನಗಳಿಂದ ಹೆಂಗಸರು ಮಕ್ಕಳು ಕೂಡ ಕಷ್ಟಪಟ್ಟಾಗ್ಯೂ ಎಲ್ಲಾ ಸುಟ್ಟುಹೋಯಿತು. ಆದರೆ ಹಗಲು ವೇಳೆಯಾಗಿ ಜನಗಳೂ ದನಕರುಗಳೂ ಗುಡಿಸಲುಗಳಲ್ಲಿ ಇರದೇ ಇದ್ದದ್ದರಿಂದ ಯಾವ ಪ್ರಾಣಿಗಳಿಗೂ ಅಪಾಯವಾಗಲಿಲ್ಲ. ಮಾಲೀಕರಿಗೆ ೩೦೦—೪೦೦ ರೂಪಾಯಿವರೆಗೆ ನಷ್ಟವಾಗಿರುತ್ತೆ. ಇಷ್ಟನ್ನೆಲ್ಲಾ ಕಳೆದುಕೊಂಡು ನಷ್ಟ ಕಷ್ಟಗಳಿಗೆ ಗುರಿಯಾಗಿರುವ ಆ ಜನಗಳ ಮನೋವ್ಯಥೆಯನ್ನು ಎಷ್ಟೆಂದು ಹೇಳೋಣ !

ವಿ. ಆರ್

ಕಲಕೂರು ಗ್ರಾಮ

ಗೋರೆಬಿದನೂರು ತಾಲ್ಲೂಕು ಕಲಕೂರು ಗ್ರಾಮದ ಅಗಸರ ಆದಿಗನೆಂಬುವನು ದನಗಳು ಕಟ್ಟುವ ಹುಲ್ಲು ಮನೆಗೆ ಇದೇ ಮಾರ್ಚ ೫ ನೇ ತಾ. ಮಂಗಳವಾರ ರಾತ್ರಿ ಅಕಸ್ಮಾತ್ ಬೆಂಕಿಬಿದ್ದು ಮಾಳಿಗೆ ಕಟ್ಟುವದಕ್ಕಾಗಿ ಸಂಪಾದಿಸಿಟ್ಟುಕೊಂಡಿದ್ದ ತೊಲೆಗಳು ಜಂತಿಗಳು ವಗೈರೆ ಕೆಲವು ಬೆಲೆಬಾಳುವ ಸಾಮಾನುಗಳೂ, ಎತ್ತುಗಳು ಮೂರು ಗರ್ಭದ ಎಮ್ಮೆ ಒಂದು, ಸಣ್ಣಕರುವಿನ ಕರು ಒಂದು ಕೂಡಾ ಸುಮಾರು ೧೫೦ ರೂ ಬೆಲೆಬಾಳುವ ಸ್ವತ್ತುಗಳು ಸುಟ್ಟುಹೋದವು. ನಷ್ಟವಾದ ಸ್ವತ್ತುಗಳ ಬೆಲೆ ಎಷ್ಟು ಇದ್ದರೂ ಆಗಲಿ ಜೀವಸಹಿತ ೫ ಪ್ರಾಣಿಗಳು ಬೆಂಕಿಯ ಪಾಲಾದದ್ದನ್ನು ಕೇಳಿದವರೆಲ್ಲಾ ವ್ಯಸನಪಡುವರು. ಊರಿನಲ್ಲಿ ನೂರಾರು ಜನಗಳು ಬಂದು ನೋಡುತ್ತಿದ್ದರೂ ಬೆಂಕಿಯನ್ನು ಆರಿಸಿ ಉರಿಯಿಂದ ಆ ಮೂಗು ಪ್ರಾಣಿಗಳನ್ನು ಬಿಡಿಸಲಾಗದೆ ಹೋಯಿತು. ಒಂದು ಘಂಟೆಯೊಳಗಾಗಿ ಎಲ್ಲವೂ ನಿರ್ನಾಮವಾಯಿತು. ಸದರಿ ಆದಿಗನು ಬಹಳ ಬಡವನು. ಅವನ ಮನೆಯಲ್ಲಿ ೭—೮ ಜನರಿದ್ದಾರೆ. ಅವನಿಗೆ ಈ ಎತ್ತುಗಳೇ ಆಧಾರವಾಗಿದ್ದವು. ಅವನ ಗೋಳಾಟವನ್ನು ನೋಡಿ ಈ ಗ್ರಾಮದ ಮೆ॥ ಪಟೇಲ ನಾಗೇಗೌಡರೂ, ದೇವಸ್ಥಾನದ ಕೆಲಸಕ್ಕಾಗಿ ಬಂದಿರುವ (ಬೆಂಗಳೂರಿನ ಮೇಸ್ತ್ರಿ) ಸುಬ್ಬಣ್ಣನವರೂ, ಅಂಗಡಿ ಪುಟ್ಟಪ್ಪನವರೂ, ಅಂಗಡಿ ರುದ್ರಪ್ಪನವರೂ ಕರುಣಾರ್ದ್ರಚಿತ್ತರಾಗಿ ಗ್ರಾಮದಲ್ಲೆಲ್ಲ ಚಂದಾ ಎತ್ತಿ ೧೫೦ ರೂ. ವರೆಗೂ ಕೂಡಿಸಿ ಮೊದಲಿನದಕ್ಕಿಂತಲೂ ಚೆನ್ನಾಗಿರುವ ೩ ಎತ್ತುಗಳನ್ನು ಕೊಂಡುಕೊಟ್ಟು ಬಡವರಿಗೆ ಸಹಾಯ ಮಾಡಿ ಜೀವನವನ್ನು ಕಲ್ಪಿಸಿಕೊಟ್ಟು ಇಹಪರ ಸುಖ ಕೀರ್ತಿಗಳನ್ನು ಸಂಪಾದಿಸಿಕೊಂಡರು.

ಎಸ್ ವಿ

ತಿಳವಳ್ಳಿ ಗ್ರಾಮ

ಧಾರವಾಡ ಜಿಲ್ಲಾ ಹಾನಗಲ್ಲ ತಾಲ್ಲೂಕು ತಿಳವಳ್ಳಿ ಎಂಬ ಗ್ರಾಮದಲ್ಲಿ ಕಳೆದ ತಾ ೪ನೇ ಸೋಮವಾರ ಹಗಲು ೧ ಘಂಟೆಯಲ್ಲಿ ಸಾಲಾರಕೇರಿ ಎಂಬಲ್ಲಿ ಸೋಮಣ್ಣನವರ ರುಳಿಯಾ ಎಂಬವನ ಹಿತ್ತಲಲ್ಲಿರತಕ್ಕ ಹುಲ್ಲಿನ ಬಣವಿಗೆ ಅಕಸ್ಮಾತ್ ಬೆಂಕಿ ಕಾಣಿಸಿಕೊಂಡಿತು. ಈ ಬೆಂಕಿ ಯಾರಾದರೂ ಹಚ್ಚಿದರೋ ಆ ಚಿಪ್ಪಿನಲ್ಲಿ ಬಿದ್ದ ಬೂದಿಯಿಂದ ಹತ್ತಿತೋ ಬೀಡಿ ಚುಟ್ಟಿ ವಗೈರೆ ಸೇದಿ ಯಾರಾದರೂ ಬಿಸಾಡಿದ್ದರಿಂದ ಬೆಂಕಿ ಹುಟ್ಟಿತೋ ಅಥವಾ ಬಾಲಕರ ಲೀಲೆಯಿಂದಲೋ ಗೊತ್ತಾಗಲು ಅಸಾಧ್ಯ. ಹಾಲಿ ಸುಗ್ಗೀಕಾಲವಿರುವದರಿಂದ ಗಂಡಸರು ಹೆಂಗಸರು ಬಹುಮಂದಿ ತಂತಮ್ಮ ಕೆಲಸಕ್ಕೆ ಹಾಗೆ ಹೊಲಗಳಿಗೆ ಹೋಗಿದ್ದರಿಂದ ಊರಲ್ಲಿ ಜನಗಳು ಯಾರೂ ಇಲ್ಲದೆ ಇದ್ದ ಬೆಂಕಿಯನ್ನು ಕೂಡ್ಲೆ ಆರಿಸಲು ಅಸ್ಪದವಿಲ್ಲದೆ ಸದರಿ ತುಳಿದಾಸ ಮನೆಗೆ ಹತ್ತಿಕೊಂಡಿತು. ಗಾಳಿಯು ವಿಶೇಷ ಜೋರಾಗಿದ್ದರಿಂದ ಅದರ ಬಾಜೂ ಇರತಕ್ಕ ಮನೆಗಳಿಗೂ ಎದುರು ಸಾಲಿನ ಮನೆಗಳಿಗೂ ಅವಸರದಲ್ಲಿ ವ್ಯಾಪಿಸಿ ಅಗ್ನಿಯು ಪ್ರಜ್ವಲಿಸುತ್ತಾ ಆ ಓಣಿಯಲ್ಲಿರತಕ್ಕ ಹುಲ್ಲಿನ ಮನೆಗಳನ್ನು ಜನಗಳ ಆಗಮನಕ್ಕೆ ಮೊದಲು ಸುಟ್ಟುಬಿಟ್ಟಿತು. ಬೆಂಕಿಯನ್ನು ಆರಿಸುವದಕ್ಕೆ ಇಲ್ಲಿನ ಜನಗಳು ಕೂಡಿ ಪ್ರಯತ್ನ ಮಾಡುವಷ್ಟರಲ್ಲಿಯೇ ಬಿರುಗಾಳಿ ಬೀಸುತ್ತಿದ್ದುದರಿಂದ ಈ ಓಣಿಯ ಹಿಂಭಾಗದಲ್ಲಿರತಕ್ಕ ಅಗಸರಕೇರಿ ಎಂಬಲ್ಲಿ ಒಬ್ಬರ ಮನೆಯ ಹಿತ್ತಲಲ್ಲಿ ಹಾಕಿದ್ದ ಹುಲ್ಲಿನ ಬಣವಿಗೆ ಬೆಂಕಿ ಬಿದ್ದು ಕಿಡಿಗಳು ಹಾರಿ ಆ ಕೇರಿಯ ಆಜೂಬಾಜೂ ಮತ್ತು ಎದುರು ಸಾಲಿನಲ್ಲಿರತಕ್ಕ ಮನೆಗಳಿಗೆಲ್ಲಾ ಬೆಂಕಿ ಹತ್ತಿ ಯಾವದಕ್ಕೂ ಅವಕಾಶಕೊಡದೆ ಸುಟ್ಟು ಭಸ್ಮವಾದವು. ಜನಗಳೆಲ್ಲಾ ದುಃಖಿಸುತಾ ಇರುವ ಹಾಗೆ ಮಧ್ಯ ಕೆಲವು ಮನೆಗಳನ್ನು ಬಿಟ್ಟು ಪೂರ್ವದಿಕ್ಕಿಗೆ ಇರುವ ಸರ್ಕಾರಿ ಸ್ಕೂಲ್ ಕಟ್ಟಡದ ಎದುರಿಗೆ ಇರುವ ಮುಸಲ್ಮಾನರ ಓಣಿಯಲ್ಲಿ ಮೇವಿನ ಬಣವಿಗೆ ಬೆಂಕಿ ಹತ್ತಿ ಅಲ್ಲಿಯೂ ಕೂಡ ಇರತಕ್ಕ ಹುಲ್ಲಿನ ಮತ್ತು ಹಂಚಿನ ಮನೆಗಳನ್ನೆಲ್ಲಾ ಒಂದೇ ಸಲಕ್ಕೆ ಸುಟ್ಟು ಹಾಕಿದ್ದಲ್ಲದೆ ಎಲ್ಲರಿಗೂ ಆಶ್ಚರ್ಯವಾಗುವಂತೆ ಗಗನಚುಂಬಿತವಾದ ಜ್ವಾಲೆಯು ಕೇವಲ ಸಮೀಪ ಅಂದರೆ ೧೦—೧೫ ಅಡಿ ಅಂತರದಲಿರತಕ್ಕ ಹುಲ್ಲಿನ ೭—೮ ಮನೆಗಳನ್ನು ಬಿಟ್ಟು ಚದುರಂಗ ಆಟದಲ್ಲಿ ಕುದುರೆಯು ಆಡ್ಡ ಮನೆಯನ್ನು ಹಾರುವಂತೆ ಸುಮಾರು ೧೦೦—೧೫೦ ಅಡಿಗಳ ಅಂತರದ ಮೇಲೆ ಇರುವ ಒಬ್ಬ ಮುಸಲ್ಮಾನನ ಮನೆ (ಹುಲ್ಲು ಮನೆಗಳಲ್ಲಿರತಕ್ಕ ಬಡಬಗ್ಗರ ಆಹಾರವನ್ನು ರಕ್ಷಿಸತಕ್ಕ ಧನದ ಸಂಗ್ರಹಾಲಯವೆಂದರೂ ಅತಿಶಯೋಕ್ತಿಯಾಗಲಾರದು) ಯ ಎದುರಿಗೆ ಇರತಕ್ಕ ಹುಲ್ಲಿನಿಂದ ಮುಚ್ಚಿದ ದನವಿನ ಮನೆಗೆ ಬೆಂಕಿ ಕಾಣಿಸಿಕೊಂಡು ದಹಿಸಲು ಪ್ರಾರಂಭವಾಯಿತು. ಈ ಮನೆಯ ಗಂಡಾಳುಗಳೆಲ್ಲಾ ಸುಡುತ್ತಿರುವ ಇತರೆ ಜನರ ಮನೆಗಳನ್ನು ತಪ್ಪಿಸುವದರಲ್ಲಿ ತೊಡಗಿದ್ದರು. ಈ ಹಂಚಿನ ಮನೆಗೂ ದನವಿನ ಮನೆಗೂ ನಡುವೆ ವಿಶಾಲಜಾಗ ಇಲ್ಲದ್ದರಿಂದ ಒಮ್ಮಿಂದೊಮ್ಮೆ ಹಂಚಿನ ಮನೆಯು ಪ್ರಜ್ವಲಿಸುತ್ತಿ ಒಳಗೆ ಇರತಕ್ಕ ನಾನಾ ಹೆಂಗಸರುಗಳೆಲ್ಲಾ ಗಾಬರಿಯಾಗಿ ಮುಂಭಾಗದಲ್ಲಿ ಬರಲು ಮಾರ್ಗವಿಲ್ಲದೆ ಉಟ್ಟ ಬಟ್ಟೆಯಿಂದ ಹಿಂಬಾಗಲಿನಿಂದ ಹೊರಟು ದೊಡ್ಡ ಅಗಳದಲ್ಲಿ ಬಿದ್ದು ಜೀವ ಉಳಿಸಿಕೊಂಡು ಗೋಳಾಡುತ್ತಿದರು. ಇಕ್ಕಟ್ಟಾದ ಪ್ರದೇಶವಾದದರಿಂದ ಬೆಂಕಿಯನ್ನು ಶಾಂತಮಾಡಲು ಮಾರ್ಗವಿಲ್ಲದೆ ಎಲ್ಲರೂ ದುಃಖಿಸುತ್ತಿರುವಲ್ಲಿ ಬೆಂಕಿಯು ಕಡಿಮೆಯಾಗುತ್ತಾ ಬಂದಿತು. ಈ ಗ್ರಾಮದಲ್ಲಿ ಈಗ ಎರಡು ವರ್ಷದಿಂದ ಮಳೆಯಿಲ್ಲದೆ ತಿಂಡಿ, ಕುಡಿಯುವದಕ್ಕೆ ನೀರು ಇಲ್ಲದೆ ಕಷ್ಟಪಟ್ಟು ಈ ಸುಗ್ಗಿಕಾಲದಲ್ಲಿ ನಾಲ್ಕು ತಿಂಗಳ ಗಂಜಿಯನ್ನು ದಾಸ್ತಾನು ಮಾಡಿ ಇಟ್ಟುಕೊಂಡಿದ್ದರು. ದುಷ್ಕಾಲದಲ್ಲಿ ಅಧಿಕಮಾಸ ಎಂಬಂತೆ ಅಗ್ನಿಯು ಬಳಿದು ಬಾಚಿ ನುಂಗಿಕೊಂಡು ಉಳಿದ ಶೇಷವನ್ನು ರಕ್ಷಾಬಂಧನ ಮಾಡಿಕೊಳ್ಳಿರಿ ಎಂದು ಹೇಳಿ ಹೊರಟುಹೋಯಿತು. ಈಗ ಜನಗಳ ಹಾಹಾಕಾರವನ್ನು ವರ್ಣಿಸಲಸಾಧ್ಯವಾಗಿದೆ. ಜನಗಳು ಯಾವ ಒಡವೆಗಳನ್ನೂ ಹೊರತೆಗೆಯಲು ಮಾರ್ಗವಿಲ್ಲದೆ ಉಟ್ಟ ಬಟ್ಟೆಗಳ ಮೇಲೆ ಇದ್ದು ನಿಲ್ಲಲಿಕ್ಕೆ ನೆರಳೂ ತಿನ್ನಲಿಕ್ಕೆ ಅನ್ನವೂ ಉಡಲಿಕ್ಕೆ ಅರಿವೆಗಳೂ ಇಲ್ಲದೆ ಸುಮಾರು ೪೦೦—೫೦೦ ವರೆಗೆ ತಂಡ ತಂಡವಾಗಿ ತಿರುಗುವ ಗಂಡಸರೂ ಹೆಂಗಸರೂ ಮುದುಕರೂ ಬಾಣಂತಿಯರೂ ಎಳೇ ಕೂಸುಗಳೂ ಆದರು. ನಿರಾಧಾರವಾಗಿ ಇರುವ ಇವರಿಗೆ ಈ ಗ್ರಾಮದಲ್ಲಿ ಒಬ್ಬರೂ ಸಹಾಯಕರು ಇಲ್ಲದಂತಾಗಿದೆ. ಎರಡು ಮೇಕೆಗಳೂ ಒಂದು ಯಮ್ಮೆ ಕರುವಿನ ವಿನಹಾ ವಿಶೇಷ ಪ್ರಾಣಹಾನಿ ಆಗದೇ ಇರುವದೇ ಕಷ್ಟದ್ದರಲ್ಲಿ ಒಳಿತಾಗಿದೆ. ಒಟ್ಟು ೬೦ ಹುಲ್ಲು ಮನೆಗಳೂ ೩ ಹೆಂಚಿನ ಮನೆಗಳೂ ಪೂರಾ ನಾಶವಾದವು. ಇನ್ನು ೩ ಹೆಂಚಿನ ಮನೆಗಳು ಸ್ವಲ್ಪ ಸುಟ್ಟಿರುತ್ತವೆ. ಸುಮಾರು ೨,೦೦೦ ರೂಪಾಯಿಯವರೆಗೆ ಮೇವು ಸುಟ್ಟುಹೋಗಿ ಜನಗಳಿಗಿಂತ ಈ ದನಗಳ ಕಷ್ಟವು ಬಹ

[illegible] ಆದಿವಸದ ಬೆಂಕಿಯು ಪ್ರಭಾವವನ್ನು ನೋಡಿದವರಿಗೆಲ್ಲಾ [illegible]ಮಂತನು ಲಂಕೆಯನ್ನು ದಹನಮಾಡಿದ ಕಥೆಯು ಜ್ಞಾಪಕಕ್ಕೆ [illegible] ಭತ್ತದ ವ್ಯಾಪಾರ ಮಾಡತಕ್ಕ ಕೊಟ್ಟಣದ ಹೆಂಗಸರಿಗೂ [illegible] ಮಾಡತಕ್ಕ ೩ ಮನೆತನಗಳಿಗೂ ಬಹಳೇ ಲುಕ್ಸಾನು ಆ[illegible] ಈ ತಾಲ್ಲೂಕಿನ ಅಮಲದಾರರು ಬಂದು ಬಡಜನಗಳ [illegible]ರ್ಥವಾಗಿ ಪ್ರಯತ್ನ ಪಡುತ್ತಲಿದಾರೆ

ಎಂ ಎಸ್. ಎಂ

ಬೋದಿಹಾಳು ಗ್ರಾಮ

ಹೊಸದುರ್ಗದ ತಾ ಬೋದಿಹಾಳ್ ಗ್ರಾಮದಲ್ಲಿ ಮಾರ್ಚ ೩ನೇ [illegible] ಭಾನುವಾರ ಬೆಳಿಗ್ಗೆ ರಜಪುತ್ರ ನರಸಿಂಗಪ್ಪನವರ ಮಾಳಿಗೆ ಮನೆಗೆ [illegible]ದ ಸೋಗೆಯಿಂದ ಕಟ್ಟಲ್ಪಟ್ಟ ಒಪ್ಪಾರಿಗೆ ಆಕಸ್ಮಾತ್ತಾಗಿ ಬೆಂಕಿ [illegible] ಮುಂದಿನ ಪ್ರಾಕಾರವೂ ಅದರಲ್ಲಿದ್ದ ಮರದ ಸಾಮಾನುಗಳೂ [illegible]ವಾಗಿ ಸುಟ್ಟು ಹೋದದ್ದಲ್ಲದೆ ಅವರ ಮತ್ತೊಂದು ಮನೆಗೂ [illegible] ಕೊಳ್ಳುವುದರೊಳಗಾಗಿ ನೂರಾರು ಮಂದಿ ಗ್ರಾಮಸ್ಥರು ಸೇರಿ [illegible] ಕ್ರಮ ಪಟ್ಟು ಆರಿಸಿದರು ಆ ಕಾಲದಲ್ಲಿ ಗಾಳಿ ಇದ್ದಿದ್ದಲ್ಲಿ ಇನ್ನೆ[illegible] ಮನೆಗಳು ಈ ಅಪಾಯಕ್ಕೆ ಸಿಕ್ಕುತ್ತಿದ್ದವೋ ತಿಳಿಯದು ಗ್ರಾಮ[illegible] ಮಾಡಿದ ಸಾಹಸವನ್ನು ಎಷ್ಟು ಕೊಂಡಾಡಿದರೂ ತೀರದು ಮನೆ[illegible] ಮಾಲೀಕನಿಗೆ ನೂರಾರು ರೂಪಾಯಿ ನಷ್ಟವಾಯಿತು ಜನ[illegible]ವಾರುಗಳಿಗೇನೂ ಅಪಾಯ ಉಂಟಾಗದ್ದು ಬಹಳ ಸಂತೋಷ[illegible] ಮರುದಿನ ಬೆಳಿಗ್ಗೆ ಇದೇ ಗ್ರಾಮದಲ್ಲಿ ಶಂಕರಶೆಟ್ಟರ ಹತ್ತಿ[illegible] ಹೋಳಿದ ಕಂತೆಗೆ ಆಕಸ್ಮಾತ್ತಾಗಿ ಬೆಂಕಿಬಿದ್ದು ಸುಟ್ಟು ಮನೆ[illegible] ಕೊಳ್ಳುವದರೊಳಗಾಗಿ ಈ ವರ್ತಮಾನವನ್ನು ಗ್ರಾಮಸ್ಥರು ಕೇಳಿ [illegible]ರುಮಂದಿ ಬಂದು ಜಾಗ್ರತೆ ಆರಿಸಿದರು ಆರಿಸುವುದು ಒಂದು [illegible] ತಡವಾಗಿದ್ದರೆ ಆ ಭಾರೀ ಸಂಸಾರಿಕನಿಗೆ ೩-೪ ಸಾವಿರ ರೂಪಾ[illegible] ಮಾಲು ನಷ್ಟವಾಗುತ್ತಿತ್ತಲ್ಲದೆ ಆ ಚೌಕದಲ್ಲಿದ್ದ ಮನೆಗಳೂ [illegible] ಬಣವೆಗಳೂ ಸಂಪೂರ್ಣವಾಗಿ ಸುಟ್ಟುಹೋಗುತ್ತಿದ್ದವು ಈ [illegible] ಕಾಲದಲ್ಲಿ ಬೆಂಕಿ ವಿಷಯವಾಗಿ ಬಹಳ ಎಚ್ಚರಿಕೆಯಾಗಿದ್ದರೆ ಸಕಲ[illegible] ಕ್ಷೇಮವಾಗಿರುತ್ತದೆ

ಪಿ ಬಿ

ಲಾಹೋರ್ ಪಟ್ಟಣವೂ ಮಹಮದೀಯರ ವಿದ್ಯಾಶಾಲೆಯೂ

ಕಾಬೂಲ್ ಅಮೀರರ ಅಪೂರ್ವಭಾಷಣವು

ಕಳೆದ ೩ ನೆ ತಾ ಭಾನುವಾರ ಅಫ್ಘಾನಿಸ್ಥಾನದ ಅಮೀರ್ ಹ[illegible]ಲ್ಲಾಖಾನರವರು ಲಾಹೋರ್ ಪಟ್ಟಣದಿಂದ ಅಮೃತಸಾರನಗರಕ್ಕೆ [illegible] ಮೇಲೆ ಹೋಗಿ ಅಲ್ಲಿನ ವರ್ತಕರ ಅಂಗಡಿಗಳೊಳಗೆ ಬಹು ಅ[illegible]ವಾದ ಶಾಲುಗಳನ್ನೂ ಅಲಂಕಾರಯೋಗ್ಯವಾದ ನಾನಾ ಪದಾ[illegible]ಗಳನ್ನೂ ಅಪಾರವಾಗಿ ಕೊಂಡುಕೊಂಡು, ಅಲ್ಲಿರುವ ಸಿಕ್ಕರ ಸು[illegible] ದೇವಾಲಯಕ್ಕೆ ಹೋಗಿ ಅಲ್ಲಿ ಬಹಳ ಹೊತ್ತಿದ್ದು ಆ ದೇವಸ್ಥಾನ[illegible] ಸೊಬಗನ್ನೆಲ್ಲಾ ನೋಡಿಕೊಂಡು, ಅಲ್ಲಿಂದ ಸಿಕ್ಕರ ವಿದ್ಯಾಶಾಲೆಯಾ[illegible] ಖಾಲ್ಸಾ ಕಾಲೇಜಿಗೆ ಬಂದು ಆ ವಿದ್ಯಾಶಾಲೆಯಲ್ಲಿ ನಡೆಯತಕ್ಕ ಕಾ[illegible]ಗಳನ್ನೆಲ್ಲಾ ತಿಳಿದವರಾಗಿ ಅದರ ಮೂಲಧನಕ್ಕೆ ೬,೦೦೦ ರೂಪಾ[illegible] ಧರ್ಮ ಕೊಟ್ಟು ರೈಲುಹತ್ತಿ ವಾಪಸು ಲಾಹೋರಿಗೆ ಬಂದು, ಅಲ್ಲಿ[illegible] ವರ್ತಕರ ಅಂಗಡಿಗೆ ದಯಮಾಡಿ ಹತ್ತಾರು ಸಹಸ್ರ ರೂ[illegible] ಬಂಗಾರದ ನಗಗಳನ್ನು ಕ್ರಯಮಾಡಿಕೊಂಡು, ಸಾಯಂಕಾ[illegible]ಹೊತ್ತಿಗೆ ಮಹಮದೀಯರ ಇಸ್ಲಾಮಿಯಾ ಕಾಲೇಜೆಂಬ ವಿದ್ಯಾಶಾ[illegible]ಯನ್ನು ಕಟ್ಟುವದಕ್ಕೆ ಅಸ್ತಿಭಾರವನ್ನು ಹಾಕಿದರು ಆ ಸ್ಥಳದಲ್ಲಿ [illegible] ಪಟ್ಟಣದ ದೊಡ್ಡಮನುಷ್ಯರೂ ಪ್ರಜೆಗಳೂ ದಿವ್ಯವಾದ ಭವನವನ್ನು [illegible] ನೇತ್ರಾನಂದಕರವಾಗಿ ಅಲಂಕರಿಸಿದ್ದರು ಅಮೀರರು [illegible]ಗೆ ಬರುವದಕ್ಕೆ ಮೊದಲೆ ಅನೇಕ ಸಹಸ್ರ ಮುಸಲ್ಮಾನ ಪ್ರಜೆಗ[illegible] ಲಾಹೋರಿನಲ್ಲಿರುವ ದೊಡ್ಡಮನುಷ್ಯರೂ ದೊಡ್ಡ ಉದ್ಯೋಗಸ್ಥ[illegible] ಸರ್ದಾರರೂ ತಪ್ಪದಾಗಿ ಕುಳಿತಿದ್ದರು ಅಮೀರರನ್ನು ವಾದ್ಯಸ[illegible] ಆ ಭವನದೊಳಕ್ಕೆ ಕರೆತಂದರು ಅವರು ಒಂದು ಎತ್ತರವಾದ [illegible]ನದಲ್ಲಿ ಅಂದರೆ ಸಿಂಹಾಸನದ ಮೇಲೆ ಕುಳಿತುಕೊಂಡರು ಕೂಡ[illegible] ಅಲ್ಲಿನ ಅಂಜುಮಾನ್ ಸೆಕ್ರಟರಿ ನಾಜೆ ಷಾಂಸುದ್ದೀನರವರು [illegible] ಅನುಜ್ಞೆಯನ್ನು ಪಡೆದು ಅವರಿಗೆ ಒಂದು ವಿಜ್ಞಾಪನಾ ಪತ್ರಿ[illegible]ಯನ್ನು ಓದಿ ಒಪ್ಪಿಸಿದರು ಅದರಲ್ಲಿ ಕಂಡ ಮುಖ್ಯವಿಷಯಗಳೇ[illegible]ದರೆ—

ಅಂಜುಮಾನ್ ಅಡ್ರೆಸ್ಸು

ಈ ದಿನ ತಾವು ಇಸ್ಲಾಮಿಯಾ ಕಾಲೇಜಿನ ಕಟ್ಟಡಕ್ಕೆ ಅಸ್ತಿಭಾರ[illegible]ಯನ್ನು ಹಾಕುವದಕ್ಕಾಗಿ ಒಪ್ಪಿ ದಯಮಾಡಿದ್ದನ್ನು ನೋಡಿ ಅಂ[illegible] ಮೆಂಬರುಗಳೆಲ್ಲಾ ತಮ್ಮನ್ನು ಮನಃಪೂರ್ವಕವಾಗಿ ವಂದಿ[illegible]ತ್ತಾರೆ ತಾವು ಪಟ್ಟಾಭಿಷಿಕ್ತರಾದಮೇಲೆ ಷೇಕ್ ಗುಲಾಂಮಹಿಯು[illegible] ಸೂಫಿಯವರು ನಮ್ಮ ಪ್ರತಿನಿಧಿಯಾಗಿ ತಮ್ಮಲ್ಲಿಗೆ ಬಂದು ನಮ[illegible] ಉಂಟಾದ ಸಂತೋಷಾತಿಶಯವನ್ನು ತಮಗೆ ಅರಿಕೆ ಮಾಡಿದರು [illegible] ತಾವು ನಮ್ಮ ಅಂಜುಮಾನ್ ಸಭೆಗೋಸ್ಕರ ಅವರ ಮೂಲಕ [illegible]೦೦ ರೂಪಾಯಿಗಳನ್ನು ಕಳುಹಿಸಿಕೊಟ್ಟಿರಿ ಈಚೆಗೆ ಹಿಂದೂಸ್ಥಾನ[illegible] ವಿದ್ಯಾ ವಿಷಯಕವಾದ ಕಾನೂನು ಬದಲಾವಣೆ ಮಾಡಲ್ಪಟ್ಟಾಗ[illegible] ಈ ವಿದ್ಯಾಶಾಲೆಯ ಸ್ಥಿತಿಯು ತೃಪ್ತಿಕರವಾಗಿರಲಿಲ್ಲ ತಾವು [illegible] ವಿಷಯವನ್ನು ತಿಳಿದು, ಇದರ ಮೂಲಧನಕ್ಕೆ ೩೦,೦೦೦ ರೂಪಾ[illegible] ಕಳುಹಿಸಿಕೊಡೋಣವಾಯಿತು ಅಂದಿನಿಂದ ಈ ವಿದ್ಯಾಶಾಲೆಗೆ [illegible]ಯೆಲ್ಲಾ ನಿವಾರಣೆಯಾಗಿರುತ್ತದೆ ತಾವು ಈಗ ಬಿತ್ತರಿಸಿರುವ ಈ [illegible] ಪ್ರದೇಶವನ್ನು ಈಗ ಕೊಡೋಣವಾದ ೩೦,೦೦೦ ರೂಪಾಯಿ[illegible] ಕೊಂಡುಕೊಂಡು ಈ ವಿದ್ಯಾಶಾಲೆಯನ್ನು ಬದಾಯಿಸಿ ಕಟ್ಟ[illegible]ಬೇಕೆಂದು ತೀರ್ಮಾನಿಸಿರುತ್ತೇವೆ ತಾವು ಮಾಡಿರುವ ಈ ಪ್ರತ್ಯಕ್ಷ [illegible] ಲಾಹೋರಿನಲ್ಲೂ ಈ ಹಿಂದೂಸ್ಥಾನದಲ್ಲೂ ಇರುವಂಥಾ ಸಮಸ್ತ[illegible] ಮುಸಲ್ಮಾನರೂ ಕೃತಜ್ಞತಾ ಪೂರ್ವಕವಾಗಿ ತಮ್ಮನ್ನು ವಂದಿಸುತ್ತ[illegible]

[illegible]ವರು ನಮಗೆ ನೀತಿಯು ಸ್ತ್ರಾದಂಥಾ ಸವನಿಗಳಿದ ಘಾ ಗವ[illegible]ಯನ್ನು ದಯಪಾಲಿಸಿರುವುದಕ್ಕಾಗಿ ನಾವು ಆತನನ್ನು ಕೊಂಡಾಡುವೆವು ನಾವು ಈ ಗವರ್ನಮೆಂಟಿನವರ ಪೋಷಣೆಯಲ್ಲಿ ಸಂಪೂರ್ಣ ಸ್ವಾತಂತ್ರ್ಯವನ್ನು ಪಡೆದು ನೆಮ್ಮದಿಯಾಗಿ ನಮ್ಮ ನಮ್ಮ ಮತಕೃತ್ಯಗಳನ್ನು ನಡಿಸಿಕೊಂಡು ಬರುತ್ತಾ ಸುಖದಿಂದಿರುವೆವು ಈಗ ಇಂಥಾ ನಮ್ಮ ಗವರ್ನಮೆಂಟಿಗೂ ತಮ್ಮ ರಾಜ್ಯಕ್ಕೂ ಅಚಂಚಲವಾದ ಸ್ನೇಹ ಪ್ರೀತಿಗಳು ಹುಟ್ಟಿ ಹಬ್ಬುತ್ತಿರುವುದು ನಮ್ಮ ಸಂತೋಷವನ್ನು ಇನ್ನಷ್ಟು ಹೆಚ್ಚು ಮಾಡಿದೆ

ಈಚೀಚೆಗೆ ಹೊಸ ಅಭಿಪ್ರಾಯಗಳೂ ನೂತನ ತತ್ವಾರ್ಥಗಳೂ ಹುಟ್ಟಿ ಪ್ರಚಾರಕ್ಕೆ ಬಂದಿರುವುದರಿಂದಲೂ ಅನ್ಯಮತಾವಲಂಬಿಗಳು ಇಸ್ಲಾಂ ಮತ ತತ್ವಗಳನ್ನು ಖಂಡನೆ ಮಾಡುತ್ತಿರುವುದರಿಂದಲೂ ಅನೇಕ ಮುಸಲ್ಮಾನ ಬಾಲಕರ ಮತಭಕ್ತಿಯೂ ಆಚಾರವ್ಯವಹಾರಗಳೂ ಸಡಿಲವಾಗುತ್ತಾ ಬಂದಿರುವವು ಆದಕಾರಣ ಲಾಹೋರ್ ಪಟ್ಟಣದ ಮಹಮದೀಯರು ಈ ದುಃಖಕರವಾದ ಸ್ಥಿತಿಯನ್ನು ನೋಡಿ, ಒಂದು ಅಂಜುಮಾನ್ ಸಭೆಯನ್ನು ಏರ್ಪಾಡು ಮಾಡಿಕೊಂಡಿದಾರೆ ಈ ಸಭೆಯ ಉದ್ದೇಶಗಳೇನೆಂದರೆ—(೧) ಇತರರು ಮಾಡತಕ್ಕ ನಮ್ಮ ಮತದ ಖಂಡನೆಗೆ ಸಮಾಧಾನಗಳನ್ನು ಕೊಡುವದು, (೨) ಮುಸಲ್ಮಾನ ಜನರ ಗಂಡು ಹೆಣ್ಣು ಮಕ್ಕಳಿಗೆ ಮತಭಕ್ತಿಯು ಮತ್ತು ಲೌಕಿಕದ ವಿದ್ಯೆಗಳನ್ನು ಕ್ರಮಪಡಿಸಿ ಕಲಿಸುವದಕ್ಕೆ ಏರ್ಪಾಡು ಮಾಡುವದು, (೩) ದಿಕ್ಕಿಲ್ಲದೆ ಅಲೆಯುವಂಥಾ ಮಹಮದಿಯ ಮಕ್ಕಳಿಗೋಸ್ಕರ ಒಂದು ಅನಾಥಾಲಯವನ್ನು ಕಲ್ಪಿಸಿ ಅವರಿಗೆಲ್ಲಾ ವಿದ್ಯೆ ಬುದ್ಧಿಗಳನ್ನು ಕಲಿಸುವುದು, (೪) ಮುಸಲ್ಮಾನರಲ್ಲಿರುವಂಥಾ ಆಚಾರವ್ಯವಹಾರಗಳನ್ನು ಬದಲಾವಣೆಮಾಡುವುದು, (೫) ಇಂಗ್ಲೀಷ್ ಗವರ್ನಮೆಂಟಿನ ಫಲ ಪ್ರಯೋಜನಾದಿಗಳನ್ನು ಮುಸಲ್ಮಾನರಿಗೆಲ್ಲಾ ಸ್ಪಷ್ಟವಾಗಿ ತಿಳಿಯಪಡಿಸುವುದು, (೬) ಮತ ತತ್ವಗಳನ್ನು ಬೋಧಿಸುವುದಕ್ಕೆ ಬೋಧಕರನ್ನು ನೇಮಿಸುವುದು

ಮೇಲ್ಕಂಡ ಉದ್ದೇಶದಿಂದ ನಾವು ಈಗ ಮಾಡಿರುವ ಕಾರ್ಯಗಳೇನೆಂದರೆ— ಅನೇಕ ಬಾಲಿಕಾ ಪಾಠಶಾಲೆಗಳನ್ನು ಸ್ಥಾಪಿಸಿರುತ್ತೇವೆ ಇದುವರೆಗೆ ೫೦೦ ಬಾಲಿಕೆಯರು ಓದಿ ಮನೆಗಳಲ್ಲಿ ಸಂಸಾರಿಕರಾಗಿರುತ್ತಾರೆ ಈಗಲೂ ನಮ್ಮ ಒಂಬತ್ತು ಪಾಠಶಾಲೆಗಳಲ್ಲಿ ೪೦೦ ಬಾಲಕಿಯರು ವ್ಯಾಸಂಗಮಾಡುತ್ತಿರುವರು ಹುಡುಗರಿಗಾಗಿ ಒಂದು ಪಾಠಶಾಲೆಯನ್ನು ಸ್ಥಾಪಿಸಿದೆವು ಇದೇ ಈಗ ಅಭಿವೃದ್ಧಿ ಹೊಂದಿ ದೊಡ್ಡ ವಿದ್ಯಾಶಾಲೆಯಾಗಿರುವುದು ಇದರಲ್ಲಿ ಬಾಲಕರೆಲ್ಲಾ ನಮ್ಮ ಮತ ತತ್ವಗಳನ್ನು ಕಲಿಯಲೇ ಬೇಕೆಂದು ವಿಧಿಸಿರುತ್ತೇವೆ ಈಗ ವಿದ್ಯಾಶಾಲೆಯಲ್ಲಿ ೧,೫೦೬ ಮಂದಿ ಬಾಲಕರು ವಿದ್ಯಾರ್ಥಿಗಳಾಗಿದಾರೆ ಇದುವರೆಗೆ ಅಪ್ಪರ್ ಪ್ರೈಮರಿ ತರಗತಿಯನ್ನು ೧,೧೧೯ ಮಂದಿ, ಮಿಡಲ್ ತರಗತಿಯನ್ನು ೪೯೪ ಮಂದಿ, ಮೆಟ್ರಿಕ್ಯುಲೇಷನ್ ತರಗತಿಯನ್ನು ೨೩೬ ಮಂದಿ, ಎಫ್ ಎ ತರಗತಿಯನ್ನು ೯೩ ಮಂದಿ, ಬಿ ಎ ತರಗತಿಯನ್ನು ೧೯ ಮಂದಿ ತೇರ್ಗಡೆ ಹೊಂದಿರುತ್ತಾರೆ ಇದಲ್ಲದೆ ಅರಬ್ಬಿ ಭಾಷೆಯನ್ನು ಕಲಿಯುವುದಕ್ಕೆ ಪ್ರತ್ಯೇಕವಾದ ತರಗತಿಗಳನ್ನು ಏರ್ಪಡಿಸಿರುವೆವು ಇವರಲ್ಲೂ ಅನೇಕರು ಪಂಡಿತರಾಗಿ ತೇರ್ಗಡೆ ಹೊಂದಿರುತ್ತಾರೆ ಮತ್ತು ಕೊರಾನ್ ವೇದವನ್ನು ಕಂಠಪಾಠವಾಗಿ ಕಲಿಯತಕ್ಕವರಿಗಾಗಿ ಇನ್ನೊಂದು ಪಾಠಶಾಲೆಯನ್ನಿಟ್ಟಿರುತ್ತೇವೆ ಈ ಪಾಠಶಾಲೆಯ ಖರ್ಚನ್ನೆಲ್ಲಾ ಸೂಫಿ ಗುಲಾಂ ಮಹಿಯುದ್ದೀನರವರೇ ವಹಿಸಿಕೊಂಡು ಕೊಡುತ್ತಿದಾರೆ ಇಷ್ಟೇ ಅಲ್ಲ, ಒಂದು ಅನಾಥಾಲಯವನ್ನು ಇಟ್ಟು ನಡಸುತ್ತಾ ಬಂದಿದ್ದೇವೆ ಇದುವರೆಗೆ ೩೭೨ ಮಂದಿ ಅನಾಥ ಮಕ್ಕಳು ಈ ಆಲಯದಲ್ಲಿ ಪೋಷಣೆಯನ್ನು ಹೊಂದಿ, ವಿದ್ಯೆ ಬುದ್ಧಿಗಳನ್ನು ಕಲಿತು ಬೇರೆಬೇರೆ ವಿಧವಾದ ಜೀವನೋಪಾಯಗಳನ್ನು ಹುಡುಕಿಕೊಂಡು ಸತ್ಪ್ರಜೆಗಳಾಗಿ ಬದುಕುತ್ತಿದಾರೆ ಈಗಲೂ ಈ ಅನಾಥಾಲಯದಲ್ಲಿ ೧೦೩ ಮಂದಿ ಅನಾಥ ಗಂಡು ಹೆಣ್ಣುಮಕ್ಕಳು ಇದ್ದುಕೊಂಡು ತರಬೇತಾಗುತ್ತಿರುವರು ಗವರ್ನಮೆಂಟಿನವರು ಈಚೆಗೆ ಮುಸಲ್ಮಾನರಲ್ಲಿ ಅನಾಥರಾದಂಥಾ ಮಕ್ಕಳನ್ನೆಲ್ಲಾ ಈ ಆಲಯಕ್ಕೆ ಕಳುಹಿಸಬೇಕೆಂದು ಎಲ್ಲಾ ಕಡೆಗಳಿಗೂ ಸರ್ಕ್ಯುಲರ್ ಹುಕುಂ ಕಳುಹಿಸಿರುತ್ತಾರೆ ಇದು ನಮಗೆಲ್ಲಾ ಪರಮ ಸಂತೋಷವನ್ನುಂಟುಮಾಡಿರುವುದು

ಈ ಮೇಲ್ಕಂಡ ಸಮಸ್ತ ಬಾಬುಗಳ ಖರ್ಚಿಗೂ ನಮ್ಮ ಜನರು ಆಗಿಂದಾಗ್ಗೆ ದ್ರವ್ಯಸಹಾಯ ಮಾಡುತ್ತಾ ಬಂದಿದಾರೆಂದು ಈ ಸಂದರ್ಭದಲ್ಲಿ ತಮಗೆ ಅರಿಕೆ ಮಾಡುವೆವು ಈ ಸಂಘದಿಂದ ಇದುವರೆಗೆ ಎಂಟು ಲಕ್ಷ ರೂಪಾಯಿ ಖರ್ಚಾಗಿರುವುದು ಆದರೂ ಖರ್ಚಿಗೆ ಬೇಕಾಗುವಷ್ಟು ಖಂಡಿತವಾದ ವರಮಾನವಿರುವದಿಲ್ಲ ತಾವು ತಮ್ಮ ರಾಜಧಾನಿಯಲ್ಲಿ ವಿದ್ಯಾಶಾಲೆಗಳನ್ನು ಏರ್ಪಡಿಸುವುದಕ್ಕೆ ಏರ್ಪಾಡು ಮಾಡಿರುತ್ತೀರೆಂದು ಕೇಳಿ ನಮಗೆಲ್ಲ ತುಂಬಾ ಆನಂದವಾಗಿರುವುದು ದೇವರು ತಮಗೆ ದೀರ್ಘಾಯುಸ್ಸನ್ನೂ ಅವಿಚ್ಛಿನ್ನವಾದ ಸುಖಸಂತೋಷಗಳನ್ನೂ ದಯಪಾಲಿಸಬೇಕೆಂತಲೂ ತಮಗೂ ಎಡ್ವರ್ಡ್ ಚಕ್ರವರ್ತಿಯವರಿಗೂ ಇರತಕ್ಕ ಪ್ರೀತಿ ಸ್ನೇಹಗಳನ್ನು ವೃದ್ಧಿಪಡಿಸುತ್ತಾ ಬರಬೇಕೆಂತಲೂ ಪ್ರಾರ್ಥಿಸುತ್ತೇವೆ

ಅಮೀರರ ಪ್ರತ್ಯುತ್ತರವು

ತರುವಾಯ ಅಮೀರರು ಆ ಅಡ್ರೆಸ್ಸನ್ನು ಕೈಯಲ್ಲೇ ಹಿಡಿದು ಅವನ್ನೇ ನೋಡುತ್ತಾ ಸಭಿಕರನ್ನು ಕುರಿತು ಅತ್ಯಂತ ಹೃದಯಂಗಮವಾದ ಭಾಷಣವನ್ನು ಮಾಡಿದರು ಸಭಿಕರೆಲ್ಲಾ ಗಂಭೀರಯುಕ್ತರಾಗಿ ಅಮೀರರು ಹೇಳಿದ ಪ್ರತಿ ಮಾತನ್ನು ಬಿಡದೆ ಕೇಳಿ ಬೆರಗಾದರು ಅವರು ತಿಳಿಸಿದ ಮುಖ್ಯ ವಿಷಯಗಳೇನೆಂದರೆ—

ಮೊದಲು ದೇವರನ್ನು ವಂದಿಸುತ್ತೇನೆ ಆತನ ಪ್ರವಾದಿಯನ್ನು (ಪೈಗಂಬರರು) ವಂದಿಸುತ್ತೇನೆ ಸಹೋದರರೇ, ನಿಮಗೆ ಅಂದರೆ ಹಿಂದೂಸ್ಥಾನದಲ್ಲಿರುವ ಪಂಜಾಬಿನ ಮಹಮದೀಯರಿಗೆ, ಈ ದಿನ ಸಭಿಕರಾಗಿರುವ ನಿಮಗೆ ಹೇಳುತ್ತೇನೆ ಕೇಳಿ ನೀವು ನಿಮ್ಮ ಅಡ್ರೆಸ್ಸನ್ನು ನನಗೆ ಓದಿಹೇಳಿದಿರಿ ಅದರಿಂದ ನಿಮ್ಮ ಮನೋಗತವಾದ ಅಭಿಪ್ರಾಯಗಳು ನನಗೆ ತಿಳಿದವು ಅದಕ್ಕೆ ನನ್ನ ಉತ್ತರ ಇದೇ ಗಮನವಿಟ್ಟು ಆಲಿಸಿ ಇದು ವಿಶೇಷವಾಗಿ ನಿಮ್ಮ ಕ್ಷೇಮಲಾಭವನ್ನೇ ಕುರಿತದ್ದಾಗಿರುವುದು ಇತರವಾದ ಯಾವ ವಿಷಯವನ್ನು ಹೇಳುವುದಕ್ಕಿಂತಲೂ ಮೊದಲು ಇಂಡಿಯಾ ಗವರ್ನಮೆಂಟಿನವರು ಎಷ್ಟು ಪರೋಪಕಾರಿಗಳೆಂತಲೂ ಎಷ್ಟು ಪರಮತ ಸಹನ ಶೀಲಿಗಳೆಂತಲೂ ವಿವರಿಸಲಾರೆನು ನನ್ನ ಸಹೋದರಪ್ರಾಯರಾಗಿರುವಂಥಾ ಲಕ್ಷಾಂತರ ಮಹಮದೀಯರು ಈ ಗವರ್ನಮೆಂಟಿನವರ ಔದಾರ್ಯಗುಣದಿಂದ ತಮ್ಮ ಮತ ಕೃತ್ಯಗಳನ್ನು ಯಾವಾಗಬೇಕಾದರೂ ಯಾವಸ್ಥಳದಲ್ಲಿ ಬೇಕಾದರೂ ಯಾವರೀತಿಯಲ್ಲಿ ಇಷ್ಟಪಟ್ಟರೂ ಆಚರಿಸುವುದಕ್ಕೆ ಸಂಪೂರ್ಣವಾದ ಸೌಲಭ್ಯಗಳನ್ನು ಕಲ್ಪಿಸಿಕೊಟ್ಟಿರುವುದು ನನಗೆ ಪರಮಸಂತೋಷವಾಗಿದೆ ಮೊದಲು ಇದನ್ನು ನಾನು ಒಪ್ಪಿಕೊಳ್ಳುತ್ತೇನೆ ಯಾಕೆಂದರೆ ಇದೇ ನನ್ನ ಮನಸಿನಲ್ಲಿರುವ ಮೊದಲನೆಯ ಅಭಿಪ್ರಾಯವು. ಈಗ ನಾನು ನಿಮಗೆ ಅಂದರೆ ಹಿಂದುಸ್ಥಾನದಲ್ಲಿರುವ ಲಕ್ಷಾಂತರ ಮುಸಲ್ಮಾನರಿಗೆಲ್ಲಾ ತಿಳಿಸಬೇಕೆಂದಿರುವ ಮುಖ್ಯ ವಿಷಯವನ್ನು ಪ್ರಾರಂಭಿಸುತ್ತೇನೆ ನಾನು ಹೇಳುವುದನ್ನೆಲ್ಲಾ ಒಂದೇ ಒಂದು ಮಾತಿನಲ್ಲಿ ಕ್ರೋಡೀಕರಿಸುತ್ತೇನೆ ಅದೇನೆನ್ನುವಿರೋ ? ವಿದ್ಯಾವಂತರಾಗಿ ನಿಮಗೆಲ್ಲಾ ಕೇಳಿಬಂತೇ ? ವಿದ್ಯಾವಂತರಾಗಿ ಮೂರನೆಯ ಸಲ ಹೇಳುತ್ತೇನೆ ವಿದ್ಯಾವಂತರಾಗಿ. ಓ ನನ್ನ ಅಣ್ಣತಮ್ಮಂದಿರುಗಳಿರಾ, ಮೂಢರಾಗಿರಬೇಡಿ ನಿಮ್ಮ ಮತವನ್ನು ನೀವು ತಿಳಿದುಕೊಳ್ಳದಷ್ಟು ಮೂಢರಾಗಿರುವುದು ಇನ್ನೂ ಕೆಟ್ಟದ್ದೇ ಸರಿ ಅನೇಕರು ಬಂದು ಬಹು ಗಂಭೀರವಾಕ್ಯಗಳಿಂದ ಅಲ್ಲಗಳೆದು ಈಗಿನ ತತ್ವಜ್ಞಾನದ ವಿಚಾರವನ್ನು ಮಹಮದೀಯರು ಲಕ್ಷ್ಯಕ್ಕೆ ತರಬೇಕಾದದ್ದಿಲ್ಲವೆಂದು ನಿಮ್ಮ ಕಿವಿಗಳಲ್ಲಿ ಊದಿ ಹೇಳುತ್ತಾರೆ. ಆದರೆ ನೀವು ನಿಮ್ಮ ಕಿವಿಗಳನ್ನಾಗಲಿ ಕಣ್ಣುಗಳನ್ನಾಗಿ ಮುಚ್ಚಿಕೊಂಡಿರಬೇಕೆಂಬುದಾಗಿ ನಾನು ಎಷ್ಟುಮಾತ್ರಕ್ಕೂ ಹೇಳತಕ್ಕವನಲ್ಲ ಅದಕ್ಕೆ ಪ್ರತಿಯಾಗಿ ತಿಳುವಳಿಕೆಯೂ ಜ್ಞಾನವೂ ಎಲ್ಲೆಲ್ಲಿ ದೊರಕುವವೋ ಅಲ್ಲೆಲ್ಲಾ ನೀವು ಹುಡುಕಿ ಸಂಗ್ರಹಿಸಿಕೊಳ್ಳುತ್ತಾ ಬರಬೇಕು. ಇನ್ನೊಂದು ವಿಷಯವನ್ನು ನಾನು ನಿಮಗೆಲ್ಲಾ ಬಹು ಖಂಡಿತವಾಗಿ ಒತ್ತಿ ಹೇಳಬೇಕಾಗಿದೆ ತತ್ವಶಾಸ್ತ್ರವೇ ಮೊದಲಾದ ಬೇರೆಬೇರೆ ಶಾಸ್ತ್ರಗಳೆಲ್ಲಾ ಕಟ್ಟಡದ ಮೇಲ್ಭಾದ ಅಲಂಕಾರಗಳು ಅವು ತಳಹದಿ ಎಂದು ನಿಮಗೇನಾದರೂ ಭ್ರಮೆಯುಂಟಾದೀತು ! ಮತಭಕ್ತಿಯೇ ಕಟ್ಟಡದ ತಳಹದಿಯಾಗಿರುತ್ತದೆ ಇದು ವಿನಹ ಬೇರೆ ಯಾವುದೂ ತಳಹದಿಯಾಗಲಾರದು ಆದುದರಿಂದ ತಳಹದಿಯಿಂದ ನೀವು ಪ್ರಾರಂಭಿಸಬೇಕು ಯಾವುದನ್ನು ಕಲಿಸುವುದಕ್ಕಿಂತಲೂ ಮೊದಲು, ನಿಮ್ಮ ಮಕ್ಕಳಿಗೆ ಮಹಮ್ಮದೀಯ ಮತಭಕ್ತಿಯನ್ನೂ ಅದರ ಮುಖ್ಯಾಂಶಗಳನ್ನೂ ಕಲಿಸಿ ತರಬೇತುಮಾಡಿ ಹೃದಯದಿಂದ ಪ್ರಾರಂಭಮಾಡಿ ಅದು ಗಟ್ಟಿಯಾಗಿದೆ ಎಂದೂ ಸುರಕ್ಷಿತವಾಗಿದೆ ಎಂದೂ ತಿಳಿದ ಮೇಲೆ ತಲೆ ಕಡೆಗೆ ಹೊರಡಿ ಕೆಲವರು—ಹೃದಯವನ್ನು ಗಟ್ಟಿಮಾಡಿಕೊಂಡರೆ ಸಾಕೆನ್ನುತ್ತಾ ಶಿರಸ್ಸಿನ ಕಡೆ ಹೋಗಲು ಹೆದರುತ್ತಾರೆ ಹಾಗೆ ಮಾಡುವುದು ತಪ್ಪು ನಾನು ನಿಮಗೆ ಇನ್ನೂ ವಿವರವಾಗಿ ಹೇಳಬೇಕು ಮತಭಕ್ತಿಯಿಂದ ನೀವು ಜೀವನವನ್ನು ಸಂಪಾದಿಸಿಕೊಳ್ಳಲಾರಿರಿ ಮತಭಕ್ತಿಯು ನಿಮಗೆ ಬೇಕಾಗುವ ಬಟ್ಟೆಬರೆಗಳನ್ನು ಕೊಡಲಾರದು ಅದು ನಿಮಗೆ ವಾಸಕ್ಕೆ ಮನೆಯನ್ನು ಕಟ್ಟಿಕೊಡಲಾರದು ವಿದ್ಯೆಯನ್ನು ಸಂಪಾದಿಸಿಕೊಳ್ಳದೆ ಹೋದರೆ ನೀವು ಈ ಲೌಕಿಕ ಪ್ರಪಂಚದಲ್ಲಿ ಅಧಿಕಾರವನ್ನಾಗಲಿ ಸಾಮರ್ಥ್ಯವನ್ನಾಗಲಿ ಐಶ್ವರ್ಯವನ್ನಾಗಲಿ ಸಂಪಾದಿಸಲಾರಿರಿ ಇನ್ನೂ ಖಂಡಿಸಿ ಹೇಳುತ್ತೇನೆ ಕೇಳಿ ತಲೆಯನ್ನು ಆ ನಿಕೃಷ್ಟರೆ ನಿಮ್ಮ ಹೊಟ್ಟೆಯಲ್ಲಿ ನೋವು ಕಾಣಿಸಿಕೊಳ್ಳುವುದು ಆದರೆ ನಾನು ಹೇಳಿದ ಇತರ ಖಂಡಿತೋಕ್ತಿಗಳನ್ನು ಮರೆಯಬೇಡಿ ನಿಮ್ಮ ಮಕ್ಕಳಿಗೆ ಚಿಕ್ಕತನದಲ್ಲೇ ಮತಭಕ್ತಿಯನ್ನು ಚೆನ್ನಾಗಿ ಕಲಿಸಿಕೊಟ್ಟು ಅವರ ಹೃದಯವನ್ನು ಗಟ್ಟಿಮಾಡಿಕೊಳ್ಳಿ ಅದರಿಂದ ಅವರು ದೊಡ್ಡವರಾದ ಮೇಲೆ ಪಾಶ್ಚಾತ್ಯ ಅಲೆಗಳು ಬಡಿದರೂ ಅವರ ಮತಭಕ್ತಿಗೆ ಕುಂದಕ ಬರಲಾರದು ಯಾವುದೂ ಆ ಮತಭಕ್ತಿಯನ್ನು ಪಲ್ಲಟ ಮಾಡಲಾರದು ಅವರೊಳಗೆ ಮಹಮದೀಯ ಮತದಲ್ಲಿ ಅಚಂಚಲವಾದ ಭಕ್ತಿಯುಂಟಾಗುತ್ತದೆ ನಾನು ಹೇಳಿದ ಎರಡು ವಿಷಯಗಳೂ ಒಂದಕ್ಕೊಂದು ವಿರೋಧವಾದದ್ದೆಂದು ಎಂದಿಗೂ ಭಾವಿಸಬೇಡಿ ಒಂದು ಕಾಲನ್ನು ನಮ್ಮ ಪ್ರವಾದಿಯ ಸರ್ವಶ್ರೇಷ್ಠವಾದ ಬೋಧನೆಯಲ್ಲಿ ನೆಲೆಯಾಗಿಟ್ಟು, ಮತ್ತೊಂದು ಕಾಲನ್ನು ಪ್ರಪಂಚದ ಎಷ್ಟಸ್ತರದ ಮತತತ್ವಗಳ ಮೇಲೂ ಸುತ್ತಿಸುತ್ತಿದ್ದಾಗ್ಯೂ ನೀವು ನಿಮ್ಮ ಸ್ಥಾನದಿಂದ ಬಿದ್ದು ಹೋಗುವುದಿಲ್ಲ

ವಿದ್ಯಾಶಾಲೆಗೆ ದ್ರವ್ಯಸಹಾಯವು

ನಾನು ನಿಮಗೆ ಎಷ್ಟುಮಟ್ಟಿಗೆ ದ್ರವ್ಯಸಹಾಯ ಮಾಡಬೇಕೆಂದು ಕುತೂಹಲ ಪಡುತ್ತಿದ್ದೀರೆಯೋ ಅಷ್ಟುಮಟ್ಟಿಗೆ ಕೊಡಲು ನನ್ನಿಂದಾಗಲಾರದೆಂದು ತಿಳಿಸಲು ವಿಷಾದಿಸುವೆನು ನಾನು ಅಫ್ಘಾನಿಸ್ಥಾನದಲ್ಲಿ ವಿದ್ಯಾಭ್ಯಾಸಮಾಡಿಸುವುದಕ್ಕಾಗಿ ತುಂಬಾ ದ್ರವ್ಯವನ್ನು ಖರ್ಚು ಮಾಡುತ್ತಿದ್ದೇನೆ ಏಕೆಂದರೆ ನಾನು ನನ್ನ ದೇಶದವರಿಗೆ ಬೇಕಾದದ್ದನ್ನು ನೋಡುವುದು ನನ್ನ ಮೊದಲನೆಯ ಕೆಲಸವಾಗಿದೆ ಈ ನಿಮ್ಮ ವಿದ್ಯಾಶಾಲೆಯ ನಾನಾ ರಿಪೋರ್ಟುಗಳನ್ನು ನಾನು ಆಗಿಂದಾಗ್ಗೆ ವರ್ತಮಾನ ಪತ್ರಿಕೆಗಳಲ್ಲಿ ಓದುತ್ತಾ ಬಂದಿರುವೆನು ಇದು ದಿನೇ ದಿನೇ ಅಭಿವೃದ್ಧಿಹೊಂದುತ್ತಾ ಬಂದಿರುವ ಸಂಗತಿಯು ನನಗೆ ಅಪಾರವಾದ ಸಂತೋಷವನ್ನುಂಟುಮಾಡಿದೆ ಇದುವರೆಗೆ ನಾನು ನಿಮಗೆ ವರ್ಷಕ್ಕೆ ೬,೦೦೦ ರೂಪಾಯಿ ಕೊಡುತ್ತಾ ಬಂದಿದ್ದೇನಷ್ಟೆ ಈ ಬಾಗಾಯಿತು ಅದನ್ನು ೧೨,೦೦೦ಕ್ಕೆ ಹೆಚ್ಚಿಸಿಕೊಡುವೆನು (ಸಭಿಕರೆಲ್ಲಾ ಸಂತೋಷ ಧ್ವನಿ ಮಾಡಿದರು) ಆದರೆ ನಾನು ಹೆಚ್ಚಿನ ೬,೦೦೦ ರೂಪಾಯನ್ನು ಬೇರೆ ಕೆಲಸಕ್ಕೆ ಕೊಡುತ್ತೇನೆ ಮಹಮದೀಯ ಅನಾಥ ಮಕ್ಕಳ ಜೀವನಕ್ಕೂ ಅವರ ವಿದ್ಯೆಗೂ ಈ ಹಣವನ್ನು ನೀವು ಖರ್ಚುಮಾಡಬೇಕು ಇನ್ಯಾವ ವಿಷಯಕ್ಕಾದರೂ ಖರ್ಚು ಮಾಡಬೇಡಿ, ಜೋಕೆ! ಈ ಸಂದರ್ಭದಲ್ಲಿ ಮಹಮದೀಯ ಅನಾಥ ಮಕ್ಕಳನ್ನೆಲ್ಲಾ ನಿಮ್ಮ ಪೋಷಣೆಗೆ ಕಳುಹಿಸಿಕೊಡಬೇಕೆಂದು ಲೆಫ್ಟಿನೆಂಟ್ ಗವರ್ನರವರು ಹುಕುಂ ಕೊಟ್ಟಿರುವುದಕ್ಕಾಗಿ ನಾನು ತುಂಬಾ ಕೃತಜ್ಞನಾಗಿರುತ್ತೇನೆ ಅವರು ಅಂಥಾ ಹುಕುಂ ಕೊಡದಿದ್ದರೆ ನಿಮ್ಮ ಧರ್ಮಕಾರ್ಯದಿಂದ ಅಷ್ಟೇನೂ ಪ್ರಯೋಜನವಾಗುತ್ತಿರಲಿಲ್ಲ ಇನ್ನೊಂದು ಸಂಗತಿಯನ್ನು ಮಾತ್ರ ಹೇಳುವೆನು ಈಗ ನೀವು ಕಟ್ಟಬೇಕೆಂದಿರುವ ಈ ವಿದ್ಯಾಶಾಲೆಯ ಫಂಡಿಗೆ ಒಂದೇ ಗಂಟಿನಲ್ಲಿ ೨೦,೦೦೦ ರೂಪಾಯಿ ದ್ರವ್ಯಸಹಾಯಮಾಡುತ್ತೇನೆ (ಸಭಿಕರೆಲ್ಲಾ ಸಂತೋಷಧ್ವನಿ ಮಾಡಿದರು) ಇದನ್ನು ನನ್ನ ಹೆಸರಿನ ಮೇಲಲ್ಲ, ದೇವರ ಹೆಸರಿನ ಮೇಲೆ ಕೊಡುತ್ತೇ

ನೆಂದು ತಿಳಿಯಿರಿ. ಈ ಸಾಯಂಕಾಲವೇ ಈ ಹಣವನ್ನು ಕಳುಹಿಸುವೆನು. ಈಗ ಕೊಡುತ್ತಿರುವ ಪತ್ರಕ್ಕೆ ನಾಳೆ ಬೆಳಿಗ್ಗೆ ಕಳುಹಿಸಿ ಕೊಡುತ್ತೇನೆ. ಈಗ ನಾನು ಹೇಳಬೇಕಾದದ್ದೆಲ್ಲಾ ಮುಗಿಯಿತು ಇನ್ನು ದೇವರು ಮಹಮದೀಯಮತಕ್ಕೆ ಪ್ರಪಂಚದವರ ದೃಷ್ಟಿಯಲ್ಲಿ ಯೋಗ್ಯವಾದ ಸ್ಥಾನವನ್ನು ಕೊಟ್ಟು ಕಾಪಾಡಬೇಕೆಂತಲೂ, ದಿನಾಂಗಗಳಲ್ಲಿ ನಮ್ಮ ಮತಭಕ್ತಿಗೆ ಇದುವರೆಗಿದ್ದ ಗೌರವವೂ ಸನ್ಮಾನವೂ ಶಾಶ್ವತವಾಗಿರುವಂತೆ ಮಾಡಲಿ ಎಂತಲೂ ಪ್ರಾರ್ಥನೆಮಾಡಿ ಕುಳಿತುಕೊಳ್ಳುತ್ತೇನೆ

ತರುವಾಯ ಅಮೀರರು ಸಭಾಮಂಟಪಗಳ ಕೂಡ ಸಿಂಹಾಸನದಿಂದಿಳಿದುಬಂದು ಪೆಂಡಾಲಿನಲ್ಲಿ ಏರ್ಪಾಡಾಗಿದ್ದ ಸ್ಥಳದಲ್ಲಿ ಸ್ವಹಸ್ತದಿಂದ ಇಸ್ಲಾಮಿಯಾ ವಿದ್ಯಾಶಾಲೆಯ ಕಟ್ಟಡಕ್ಕೆ ಅಸ್ತಿಭಾರವನ್ನು ಹಾಕಿ, ಆ ದಿವಸದ ಕಾರ್ಯವನ್ನು ಮುಕ್ತಾಯಮಾಡಿದರು.

ಟ್ರಾನ್ಸ್‌ವಾಲಿನಲ್ಲಿರುವ ಹಿಂದೂ ಜನರ ಸ್ಥಿತಿ.

ಅನೇಕ ವರುಷಗಳಿಂದ ಟ್ರಾನ್ಸ್‌ವಾಲ್ ದೇಶದಲ್ಲಿ ವಸತಿ ಮಾಡಿಕೊಂಡಿರುವ ಹಿಂದೂ ಜನಗಳು ತಮಗೆ ಬ್ರಿಟಿಷ್ ಸರ್ಕಾರದವರಿಂದ ಅನೇಕ ತೊಂದರೆಗಳುಂಟಾಗಿವೆಯೆಂದು ಹಿಂದೆ ಗತಿಸಿದ ಮಹಾರಾಣಿಯವರಿಗೂ ಈಗಿನ ಚಕ್ರವರ್ತಿಗಳಾದ ಎಡ್ವರ್ಡ್ ಸಾರ್ವಭೌಮರಿಗೂ ಅರ್ಜಿಗಳ ಮೂಲಕವೂ ನಮ್ಮ ಕಡೆಯ ಪ್ರತಿನಿಧಿಗಳ ಮೂಲಕವೂ ತಿಳಿಸುತ್ತಿದ್ದರು ಇವರಿಗಿರುವ ತೊಂದರೆಗಳಲ್ಲಿ ಮುಖ್ಯವಾದವುಗಳು ಯಾವುವೆಂದರೆ ಮೊದಲನೇದಾಗಿ ಟ್ರಾನ್ಸ್‌ವಾಲಿನಲ್ಲಿ ಇವರು ವ್ಯಾಪಾರ ಮಾಡುವ ಹಕ್ಕನ್ನು ಪಡೆದಿಲ್ಲ. ಒಂದು ವೇಳೆ ಅವರಲ್ಲಿ ಯಾರಾದರೂ ಅಂಥಾ ಹಕ್ಕನ್ನು ಪಡೆದಿದ್ದರೆ ಅದನ್ನು ಸುಲಭ ಸಾಧ್ಯವಾಗಿ ಪಡೆದರೆಂದು ವಾಚಕರು ಭಾವಿಸಬಾರದು. ಎರಡನೇದಾಗಿ ಇವರು ತಮಗೆ ಸರಕಾರದವರು ನೇಮಿಸುವ ಸ್ಥಳದಲ್ಲಿಯೇ ವಾಸಮಾಡಬೇಕೆಂಬುವದು. ಮೂರನೇದಾಗಿ ಇವರು ಸ್ವಂತಕ್ಕೆ ಭೂಮಿ ಕಾಣಿಗಳನ್ನಿಟ್ಟುಕೊಂಡಿರಕೂಡದು ಇವುಗಳಲ್ಲದೆ ಮನುಷ್ಯನ ಸ್ವಾತಂತ್ರ್ಯವನ್ನು ಬಹುಮಟ್ಟಿಗೆ ಕಡಿಮೆ ಮಾಡತಕ್ಕ ಇನ್ನೂ ಅನೇಕ ಸಣ್ಣ ಸಣ್ಣ ನಿರ್ಬಂಧಗಳಿಗೆ ಅಲ್ಲಿನ ಹಿಂದೂ ಜನರು ಒಳಗಾಗಿರುತ್ತಾರೆ ಹೋದವರ್ಷದ ಅಂತ್ಯಭಾಗದಲ್ಲಿ ಅವರು ಮತ್ತೊಂದಾವರ್ತಿ ಒಟ್ಟಾಗಿ ಸೇರಿ ತಮ್ಮ ಪ್ರತಿನಿಧಿಗಳಾದ ಗಾಂಧಿ ಮತ್ತು ಅಲಿ ಎಂಬುವರನ್ನು ವಿಲಾಯತಿಗೆ ಕಳುಹಿಸಿಕೊಟ್ಟರು ವಿಲಾಯತಿಗೆ ಇವರಿಬ್ಬರು ಬಂದ ಮೇಲೆ ಅಲ್ಲಿನ ಜನರು ಇವರನ್ನು ಆದರಪೂರ್ವಕವಾಗಿ ಅಂಗೀಕರಿಸಿಕೊಂಡರು ಇವರು ಬ್ರಿಟಿಷ್ ವಸತಿಗಳ ಮಂತ್ರಿಗಳಾದ ಲಾರ್ಡ್ ಎಲ್ಗಿನ್ ರವರನ್ನು ನೋಡಿ ಅವರ ಹತ್ತಿರ ತಮಗೂ ತಮ್ಮ ಜನಗಳಿಗೂ ಇರತಕ್ಕ ಕಷ್ಟದುಃಖಗಳನ್ನು ಹೇಳಿಕೊಂಡರು. ಇವರ ಅಹವಾಲ್‌ಗಳನ್ನು ಎಲ್ಗಿನ್ ಪ್ರಭುಗಳು ಕೇಳಿ ತಕ್ಕ ಉತ್ತರಗಳನ್ನು ಕೊಟ್ಟರು. ಆಮೇಲೆ ಸದರಿ ಪ್ರತಿನಿಧಿಗಳು ಇಂಡಿಯಾದೇಶಕ್ಕೆ ಮಂತ್ರಿಗಳಾಗಿರುವ ಮೆ॥ ಮಾರ್ಲೀ ಯವರನ್ನು ಕಂಡು ತಮ್ಮ ಹಕ್ಕು ಬಾಧ್ಯತೆಗಳ ಚರ್ಚೆಯು ಪಾರ್ಲಿಮೆಂಟಿನಲ್ಲಿ ಬರುವಾಗ್ಗೆ ಅವರು ತಮ್ಮ ಪರವಾಗಿ ನಿಂತು ಮಾತನಾಡಬೇಕೆಂದು ಕೇಳಿಕೊಂಡರು ಮೆ॥ ಮಾರ್ಲೀ ಯವರು ಹಾಗೆಯೇ ಆಗಲೆಂದು ಒಪ್ಪಿಕೊಂಡರು ಪ್ರತಿನಿಧಿಗಳು ದಕ್ಷಿಣಾಫ್ರಿಕಕ್ಕೆ ಹಿಂತಿರುಗಿ ಬಂದ ಮೇಲೆ ಟ್ರಾನ್ಸ್‌ವಾಲಿನಲ್ಲಿ ಹಿಂದೂ ಜನಗಳಿಗೆ ಸಂಬಂಧಪಟ್ಟ ಸರ್ಕಾರದ ಕಾನೂನುಗಳನ್ನು ಬಹುಮಟ್ಟಿಗೆ ಅಲ್ಲಿನ ಅಧಿಕಾರಸ್ಥರು ಬದಲಾಯಿಸುವರೆಂದು ಜನರು ಮಾತನಾಡಿಕೊಳ್ಳುತಿದ್ದರು ಅದರಂತೆಯೇ ಎಲ್ಗಿನ್ ಪ್ರಭುಗಳು (ಇವರು ಕೆಲವು ವರ್ಷಗಳ ಹಿಂದೆ ಹಿಂದೂ ದೇಶದ ವೈಸರಾಯರಾಗಿದ್ದರು) ಹಿಂದೂ ಜನಗಳಿಗೆ ಅನುಕೂಲವಾಗಿರುವ ಕಾನೂನುಗಳನ್ನು ಜಾರಿಯಲ್ಲಿ ತರಬೇಕೆಂತಲೂ ದಕ್ಷಿಣಾಫ್ರಿಕದ ವಸತಿಗಳ ಮುಖ್ಯಾಧಿಕಾರಿಗಳಾಗಿರುವ ಲಾರ್ಡ್ ಸೆಲ್‌ಬೋರ್ನ್ ರವರು ಕಳುಹಿಸಿಕೊಟ್ಟ ಸಲಹೆಗಳನ್ನು ಅನುಮೋದಿಸುವದಕ್ಕಾಗುವದಿಲ್ಲವೆಂತಲೂ ತಿಳಿಸಿ ಹಾಗೆ ಅನುಮೋದಿಸಿದ್ದಾದರೆ ಹಿಂದೂ ಜನಗಳಿಗೂ ಮತ್ತು ಇಂಗ್ಲೀಷರಿಗೂ ಪರಸ್ಪರ ವೈರತ್ವ ಕಲಹಗಳುಂಟಾಗುವವೆಂತಲೂ ತಿಳಿಸಿದರು ಲಾರ್ಡ್ ಎಲ್ಗಿನ್‌ರವರ ಅಭಿಪ್ರಾಯಗಳಿಗನುಸಾರವಾಗಿ ದಕ್ಷಿಣಾಫ್ರಿಕದಲ್ಲಿ ಹಿಂದೂ ಜನಗಳಿಗೆ ಅನುಕೂಲವಾಗಿರುವ ಕಾಯಿದೆ ಕಾನೂನುಗಳನ್ನು ಜಾರಿಗೆ ತಂದರೆ ಅಲ್ಲಿರುವ ಇಂಗ್ಲಿಷ್ ಜನರಿಗೆ ಅಸಮಾಧಾನ ಉಂಟಾಗುವದೆಂತಲೂ, ದಕ್ಷಿಣಾಫ್ರಿಕದಲ್ಲಿ ಒಂದು ದೊಡ್ಡ ಆಂಗ್ಲೇಯರ ವಸತಿಯನ್ನು ಕಟ್ಟಬೇಕೆಂಬುವ ಅಭಿಪ್ರಾಯಕ್ಕೆ ಕುಂದಕ ಬರುವದೆಂತಲೂ, ತಾವು ತರುವದಕ್ಕಿರುವ ಕಾನೂನುಗಳು ಹಿಂದೂ ಜನಗಳ ಏಳಿಗೆಗೆ ಅಷ್ಟು ಹಾನಿಕರವಲ್ಲವೆಂತಲೂ ಮತ್ತು ಅವುಗಳಿಂದ ಹಿಂದೂಗಳಿಗೆ ಕೊನೆಯಲ್ಲಿ ಪ್ರಯೋಜನವೇ ಉಂಟಾಗುವದೆಂತಲೂ ಲಾರ್ಡ್ ಸೆಲ್‌ಬೋರ್ನ್‌ರವರು ಪ್ರತ್ಯುತ್ತರ ಕೊಟ್ಟು ಪ್ರಶ್ನೆಗಳನ್ನು ದೀರ್ಘವಾಗಿ ಯೋಚಿಸಬೇಕೆಂದು ಬೇಡಿಕೊಂಡಿದ್ದಾರೆ ಈ ಹೊಸ ಬದಲಾವಣೆಗಳು ಯಾವ ರೀತಿಯಲ್ಲಿ ಪರಿಣಮಿಸುವವೋ ಅವುಗಳನ್ನು ಈಗಲೇ ತಿಳಿಸುವದಸಾಧ್ಯ ಅಂತೂ ಎಲ್ಗಿನ್‌ರವರು ಹಿಂದೂ ಜನಗಳಿಗೆ ಯಾವ ರೀತಿಯಲ್ಲಿಯೂ ಕುಂದಕ ಬಾರದಂತೆ ಕಾನೂನುಗಳನ್ನು ಮಾಡಬೇಕೆಂಬುವ ಉದ್ದೇಶವನ್ನು ತಮ್ಮ ಮಾತುಗಳಲ್ಲಿ ತೋರ್ಪಡಿಸಿರುತ್ತಾರೆ

ರಾಜಧಾನಿಯಲ್ಲಿ ಸಂತೋಷೋತ್ಸವವು

ಶ್ರೀಮನ್ಮಹಾರಾಜರವರಿಗೆ ಅರಸುಗಳು ಮಾಡಿದ ಆತಿಥ್ಯವು

ಶ್ರೀಮದಿಂಡಿಯಾ ಚಕ್ರವರ್ತಿ ಸಾರ್ವಭೌಮರವರು ನಮ್ಮ ಮಹಾರಾಜರವರಿಗೆ ಈ ವರುಷ ಪ್ರಾರಂಭದಲ್ಲಿ ಜಿ ಸಿ ಎಸ್ ಐ ಎಂಬ ಮಹಾ ಘನತರವಾದ ಬಿರುದನ್ನು ದಯಪಾಲಿಸಿರುವ ವಿಷಯದಲ್ಲಿ ಶ್ರೀಮನ್ಮಹಾರಾಜರವರ ಸಕಲ ಪ್ರಜೆಗಳೂ ಅತ್ಯಾನಂದಭರಿತರಾಗಿರುತ್ತಾರೆ ರಾಜಧಾನಿಯಲ್ಲಿರುವ ರಾಜಪಂಕ್ತಿಯವರು ತಮ್ಮ ಸಂತೋಷವನ್ನೂ ಕೃತಜ್ಞತೆಯನ್ನೂ ಪ್ರಕಾಶಪಡಿಸುವುದಕ್ಕೆ ಇಲ್ಲಿನ ಪಟ್ಟಮಾಭಿವೃದ್ಧಿಯಲ್ಲಿ ಕಟ್ಟಿರುವ ಜಯಲಕ್ಷ್ಮೀವಿಲಾಸವೆಂಬ ರಾಜಭವನದಲ್ಲಿ ಶ್ರೀಮನ್ಮಹಾರಾಜರವರಿಗೆ ಬಹು ವಿಶೇಷವಾದ ಸತ್ಕಾರವನ್ನು ಮಾಡಿದರು. ಈ ಉತ್ಸವದಲ್ಲಿ ಬೆರೆಯುವುದಕ್ಕಾಗಿ ಆ ದಿನವೇ ಅಂದರೆ ಕಳೆದ ತಾ ೧೧ ನೇ ಸೋಮವಾರ ಬೆಂಗಳೂರಿಂದ ಶ್ರೀಮದ್ಯುವರಾಜರವರೂ, ಚಿಕ್ಕಮಗಳೂರಿಂದ ಡೆಪ್ಯುಟಿ ಕಮಿಷನರ್ ಮೆ॥ ಡಿ. ದೇವರಾಜೇ ಅರಸಿನವರೂ, ಗುಂಡ್ಲುಪೇಟೆಯಿಂದ ಅಮಲ್ದಾರ್ ಮೆ॥ ಕೃಷ್ಣೇಅರಸಿನವರೂ ರಾಜಧಾನಿಗೆ ಬಂದರು. ಜಯಲಕ್ಷ್ಮೀ ವಿಲಾಸ ಭವನವನ್ನೂ ಅರಮನೆಯಿಂದ ಅಲ್ಲಿನ ವರೆಗೆ ಹೋಗುವ ರಸ್ತೆಯನ್ನೂ ಶೃಂಗಾರ ಮಾಡಿದ್ದರು. ಸಾಯಂಕಾಲ ೫ ಗಂಟೆಗೆ ಶ್ರೀಮನ್ಮಹಾರಾಜರವರೂ ಯುವರಾಜರವರೂ ಸರ್ದಾರ್ ಗೋಪಾಲರಾಜೇ ಅರಸಿನವರೊಡನೆ ಸಾರೋಟಿನಲ್ಲಿ ಕುಳಿತು ಹಿಂದೆಯೂ ಮುಂದೆಯೂ ಬಾಡಿಗಾರ್ಡ್ ಎಂಬ ತುರುಷ್ಕ ಸವಾರರನ್ನು ಬಿಟ್ಟುಕೊಂಡು ಮೇಲ್ಕಂಡ ರಾಜಭವನಕ್ಕೆ ದಯಮಾಡಿಸಿದರು. ಮೆ॥ ಕಾಂತರಾಜೇ ಅರಸಿನವರೇ ಮೊದಲಾದ ಸರ್ದಾರರೂ ಅರಸುಮಕ್ಕಳೂ ಕಾದಿದ್ದು ಪುಷ್ಪಗಳನ್ನೆರಚಿ ಶ್ರೀಮನ್ಮಹಾರಾಜರವರಿಗೆ ಸುಸ್ವಾಗತವನ್ನು ಬಯಸಿ, ಸಾರೋಟಿನಿಂದ ಇಳಿಸಿಕೊಂಡು, ರಾಜಭವನದೊಳಕ್ಕೆ ಬಿಜಮಾಡಿಸಿದರು ಪೋಲೀಸ್ ಬ್ಯಾಂಡ್ ವಾದ್ಯಗಾರರು ಸಂತೋಷಪ್ರದವಾದ ಹಾಡುಗಳನ್ನೆತ್ತಿ ಇಂಪಾಗಿ ನುಡಿಸುತ್ತಿದ್ದರು ದರ್ಬಾರ್ ಮಂದಿರದೊಳಗೆ ಶ್ರೇಷ್ಠವಾದ ಬೆಳ್ಳಿಯ ಕುರ್ಚಿಯ ಮೇಲೆ ಶ್ರೀಮನ್ಮಹಾರಾಜರವರೂ ಅವರ ಬಲಪಾರ್ಶ್ವದಲ್ಲಿ ಯುವರಾಜರವರೂ ಕುಳಿತುಕೊಂಡರು. ಶ್ರೀಮನ್ಮಹಾರಾಜರವರು ಕಂಠದಲ್ಲಿ ಧರಿಸಿಕೊಂಡಿದ್ದ ಸೂರ್ಯಕಿರಣಗಳಂತೆ ಹೊಳೆಯುತ್ತಿದ್ದ ಮುತ್ತುಸಾಲಿನ ವಜ್ರಗಳ ಪದಕವೂ ವಜ್ರಮಣಿಗಳೂ, ಅವರ ಎಡಪಾರ್ಶ್ವದ ಎದೆಯ ಮೇಲೆ ಥಳಥಳನೆ ಪ್ರಕಾಶಿಸುತ್ತಿದ್ದ ಸ್ಟಾರ್ ಆಫ್ ಇಂಡಿಯಾ ಎಂಬ ಬಿರುದಿನ ನವೀನವಾದ ನಕ್ಷತ್ರವೂ, ಅವರ ಬಲಭುಜದಿಂದ ಎಡಭಾಗಕ್ಕೆ ಸೊಂಟದ ತನಕ ಇಳಿಯಬಿದ್ದಿದ್ದ ಅದೇ ಬಿರುದಿನ ಅಗಲವಾದ ಹೊಳಪುಳ್ಳ ಮೇಘವರ್ಣದ ಮಾಲಿಕೆಯೂ ಶ್ರೀಮನ್ಮಹಾರಾಜರವರನ್ನು ಅತ್ಯಂತ ಸುಂದರವಾಗಿ ಮಾಡಿದ್ದವು ಅವರ ಪೀಠದ ಎದುರಿಗೆ ಉಭಯ ಪಾರ್ಶ್ವಗಳಲ್ಲೂ ಸರ್ದಾರರೂ ಅಧಿಕಾರಿಗಳೂ ದೊರೆಸಾನಿಗಳೂ ರಾಜನಗರದವರೂ ದೊಡ್ಡಮನುಷ್ಯರೂ ಸಾಲುಸಾಲಾಗಿ ಕುಳಿತಿದ್ದರು

ಅಡ್ರೆಸ್ಸನ್ನು ಓದಿ ಒಪ್ಪಿಸಿದ್ದು

ಮೆ॥ ಎಂ. ಕಾಂತರಾಜೇ ಅರಸಿನವರು ಕೂಡಲೇ ಮುಂದೆ ಬಂದು ಅರಸುಗಳ ಸಂಘದ ಪರವಾಗಿ ಒಂದು ಅಡ್ರೆಸ್ಸನ್ನು ಓದಿ ಒಪ್ಪಿಸಿದರು ಅದರಲ್ಲಿದ್ದ ಮುಖ್ಯ ಅಭಿಪ್ರಾಯವೇನೆಂದರೆ—ಚಕ್ರವರ್ತಿ ಸಾರ್ವಭೌಮರವರು ತಮಗೆ ಇಂಥಾ ವಿಶೇಷತರವಾದ ಬಿರುದನ್ನು ದಯಪಾಲಿಸಿದ್ದಕ್ಕಾಗಿ ನಾವೆಲ್ಲಾ ನಮ್ಮ ಪರಮಾನಂದವನ್ನು ಭಯಭಕ್ತಿಪೂರ್ವಕವಾಗಿ ಪ್ರಕಾಶಪಡಿಸುತ್ತೇವೆ. ಹಿಂದುಸ್ಥಾನದಲ್ಲೆಲ್ಲಾ ಮೈಸೂರು ಸಂಸ್ಥಾನವು ಬಹು ಜನರಂಜಕವಾಗಿ ಆಳಲ್ಪಡುತ್ತಿದೆ ಎಂಬ ಕೀರ್ತಿಯನ್ನು ಪಡೆದುಕೊಂಡಿರುವುದು ಚಕ್ರವರ್ತಿಯವರು ತಮ್ಮ ಆಳ್ವಿಕೆಯ ವಿಚಕ್ಷಣೆಯನ್ನು ನೋಡಿ ಮೆಚ್ಚಿಕೊಂಡಿರುವುದಕ್ಕೆ ಈ ಬಿರುದೇ ಸಾಕ್ಷಿಯಾಗಿರುತ್ತದೆ ತಾವು ನಮ್ಮ ಸಂಘಕ್ಕೆ ಸೇರತಕ್ಕವರನ್ನೆಲ್ಲಾ ಎಲ್ಲಾ ವಿಷಯಗಳಲ್ಲೂ ಅಭಿವೃದ್ಧಿಸ್ಥಿತಿಗೆ ತರಬೇಕೆಂದು ಸಾಹಸಪಟ್ಟು ನಾನಾ ಉಪಕಾರಗಳನ್ನು ಮಾಡುತ್ತಾ ಬಂದಿರುತ್ತೀರಿ. ಈ ಸಂತೋಷೋತ್ಸವಕಾಲದಲ್ಲಿ ನಾವು ನಮ್ಮ ಕೃತಜ್ಞತೆಯನ್ನು ಭಕ್ತಿಪೂರ್ವಕವಾಗಿ ಅರ್ಪಿಸುತ್ತೇವೆ ತಾವು ಇತೋಪ್ಯತಿಶಯವಾದ ಸತ್ಕೀರ್ತಿಯನ್ನು ಸಂಪಾದಿಸಿಕೊಳ್ಳುತ್ತಾ ಚಿರಕಾಲ ಆಯುರಾರೋಗ್ಯಾದಿ ಸಂಪದ್ಯುಕ್ತರಾಗುವಂತೆ ಹಾರೈಸುವೆವು ದೇವರು ತಮ್ಮ ಮೇಲೂ ಪ್ರಖ್ಯಾತವಾದ ಈ ಮೈಸೂರು ರಾಜವಂಶೀಯರ ಮೇಲೂ ತನ್ನ ಸರ್ವಶ್ರೇಷ್ಠವಾದ ಆಶೀರ್ವಾದಗಳನ್ನು ವೃಷ್ಟಿಸುವವನಾಗಲೆಂದು ಪ್ರಾರ್ಥಿಸುತ್ತೇವೆ.

ಈ ಅಡ್ರೆಸ್ಸನ್ನು ಒಂದು ಸುಂದರವಾದ ಪೆಟ್ಟಿಗೆಯಲ್ಲಿಟ್ಟು ಶ್ರೀಮನ್ಮಹಾರಾಜರವರಿಗೆ ಒಪ್ಪಿಸಿದರು

ಶ್ರೀಮನ್ಮಹಾರಾಜರವರ ಪ್ರತ್ಯುತ್ತರವು.

ತರುವಾಯ ಶ್ರೀಮನ್ಮಹಾರಾಜರವರು ಅಡ್ರೆಸ್ಸಿಗೆ ಪ್ರತ್ಯುತ್ತರವನ್ನು ಅಪ್ಪಣೆ ಕೊಡುವುದಕ್ಕೋಸ್ಕರ ತಮ್ಮ ಶ್ರೇಷ್ಠಾಸನದಿಂದೆದ್ದರು. ಕೂಡಲೇ ಸಭಾಮಂದಿರದಲ್ಲಿದ್ದ ಸಮಸ್ತರೂ ಭಕ್ತಿಪೂರ್ವಕವಾಗಿ ಎದ್ದು ನಿಂತುಕೊಂಡರು. ಆ ಪ್ರತ್ಯುತ್ತರದ ಮುಖ್ಯಾಭಿಪ್ರಾಯವೇನೆಂದರೆ—ನೀವುಗಳು ನಿಮ್ಮ ಅಡ್ರೆಸ್ಸಿನಲ್ಲಿ ನಮ್ಮನ್ನು ಬಹಳವಾಗಿ ಹೊಗಳಿರುತ್ತೀರಿ ಆದರೂ ನಿಮ್ಮಲ್ಲಿ ಪ್ರೀತಿಯೂ ರಾಜಭಕ್ತಿಯೂ ವಿಶೇಷವಾಗಿರುವವೆಂದು ಒಪ್ಪಿಕೊಳ್ಳುತ್ತೇವೆ ನಿಮ್ಮ ಸಂಘದವರ ಅಭಿವೃದ್ಧಿಗೆ ನಾವು ಮಾಡಿರತಕ್ಕ ಸಹಾಯಗಳು ಅಲ್ಪವಾಗಿರುತ್ತವೆ ಅಷ್ಟನ್ನೆಲ್ಲಾ ಸಂತೋಷದಿಂದ ಮಾಡಿರುತ್ತೇವಲ್ಲದೆ ಮತ್ತೆ ಬೇರೆ ಅಲ್ಲ ಇನ್ನು ಮುಂದೆಯೂ ನಿಮ್ಮ ಅಭಿವೃದ್ಧಿಗೆ ಬೇಕಾದುದನ್ನು ಮಾಡಲು ಯಾವ ಅಡ್ಡಿಗಳೂ ಬರಲಾರವೆಂದು ನಿರೀಕ್ಷಿಸುವೆವು ಈ ದಿನ ನೀವು ಮಾಡಿದ ಈ ಉತ್ಸವಗಳಿಗೋಸ್ಕರ ನಿಮ್ಮನ್ನು ವಂದಿಸುತ್ತೇವೆ

ವಿನೋದಾದಿಗಳು.

ಅನಂತರ ಸುಮಾರು ಮುಕ್ಕಾಲು ಗಂಟೆಯ ಹೊತ್ತು ತಿರುಚನಾಪಳ್ಳಿಯ ಪ್ರಸಿದ್ಧ ಪಿಟೀಲ್ ವಾದ್ಯಗಾರರ ಮನೋಹರವಾದ ಸಂಗೀತವಾಯಿತು. ಅಲ್ಲಿಂದ ಶ್ರೀಮನ್ಮಹಾರಾಜರವರೂ ಸಭಿಕರೂ ಇನ್ನೊಂದು ಅಂಗಳಕ್ಕೆ ದಯಮಾಡಿ ಕುಳಿತುಕೊಂಡರು. ಕಾನ್ವೆಂಟ್ ಎಂಬ ಸ್ಕೂಲಿನ ಸುಮಾರು ೨೦ ಮಂದಿ ಬಾಲಿಕೆಯರು ಬಹು ಸ್ವಾರಸ್ಯವಾದ ನಾಟಕಾದಿಗಳನ್ನೂ ಆಟಗಳನ್ನೂ ಹಾಡುತ್ತಾ ಆಡುತ್ತಾ ಸಂತೋಷಪಡಿಸಿದರು.

ಮಹಾರಾಜರವರಿಗೆ ಔತಣವು.

ಇಷ್ಟೆಲ್ಲಾ ೬॥ ಗಂಟೆಯೊಳಗೆ ಮುಕ್ತಾಯವಾಯಿತು. ಶ್ರೀಮನ್ಮಹಾರಾಜರವರು ಯಥಾಪ್ರಕಾರ ಸಾರೋಟಿನಲ್ಲಿ ಕುಳಿತು ಸಲಾಂ ಬಾಜಾ ಆಗುತ್ತಿರುವಲ್ಲಿ ಆ ಭವನದಿಂದ ಹಿಂತಿರುಗಿದರು. ಮತ್ತೆ ರಾತ್ರಿ ೮ ಗಂಟೆ ಸುಮಾರಿಗೆ ಶ್ರೀಮನ್ಮಹಾರಾಜರವರೂ ಯುವರಾಜರವರೂ ಸಾರೋಟಿನಲ್ಲಿ ಕುಳಿತು ಅರಮನೆಯಿಂದ ಮೇಲ್ಕಂಡ ಭವನಕ್ಕೆ ದಯಮಾಡಿದರು. ಅಲ್ಲಿ ಅವರಿಗೂ ಮಹಾಮಾತೃಶ್ರೀಯವರೇ ಮೊದಲಾದ ಅರಮನೆಯ ಜನಾನಿಯವರಿಗೂ ಅರಸು ಮಕ್ಕಳಿಗೂ ದಿವ್ಯವಾದ ಭೋಜನವಾಯಿತು ಅರಮನೆಯ ಬಿಡದಿ ಭಕ್ಷಿ ಮೆ॥ ಮಹಾರಾಜೇ ಅರಸಿನವರು ಅಡಿಗೆ ಮನೆಯ ಮೇಲ್ವಿಚಾರಣೆಯನ್ನು ತೆಗೆದುಕೊಳ್ಳುತ್ತಾ, ಸಕಲ ಭಕ್ಷ್ಯಭೋಜ್ಯ ಲೇಹ್ಯಚೋಷ್ಯಾದಿಗಳನ್ನೂ ಅತ್ಯಂತ ಮಾಧುರ್ಯಯುಕ್ತವಾಗಿ ಮಾಡಿಸಿದ್ದರೆಂತಲೂ ಭೋಜನಮಾದವರೆಲ್ಲಾ ಅವರ ಸಾಹಸ ಸಾಮರ್ಥ್ಯಾದಿಗಳನ್ನು ನೋಡಿ ವಂದಿಸಿದರೆಂತಲೂ ತಿಳಿದುಬಂದಿದೆ.

ಮೈಸೂರು ಗೆಜೆಟ್ ಸಂಗ್ರಹ.

ಕೀರ್ಯದಲ್ಲೂ, ಮಾಲ್ಯಾಪುರ, ಗುಮ್ಮನಹಳ್ಳಿ, ಕಳ್ಳಕೋಟೆ, ಕುಸ್ಕಂಡೆ, ಹಲ್ಕೂರು, ಚನ್ನನಕೋಟೆ, ತಗ್ಗಹಳ್ಳಿ, ಹದ್ಯಾಪುರ, ಪೂಜಿಕೋಟೆ, ಒಂಭತ್ತು ಗ್ರಾಮಗಳಲ್ಲೂ ತೊಂಡು ದನಗಳನ್ನು ಹಿಡಿದ ಕೀರ್ಯದ ದೊಡ್ಡಿಗೆ ಕೂಡಿದರೆ ಪ್ರತಿ ಒಂದು ರಾಸಿಗೂ ಮಾಮೂಲಿಗಿಂತ ಎರಡರಷ್ಟು ದರಗಳುಳ್ಳ ಛಾರ್ಜನ್ನು ವಸೂಲ್ಮಾಡಬೇಕೆಂದು ಪ್ರಸಿದ್ಧಪಡಿಸಿದೆ.

ತಿರುಮಕೂಡ್ಲುನರಸೀಪುರದ ತಾಲ್ಲೂಕು ಸೋಸಲೆಯಲ್ಲಿರುವ ಶ್ರೀ ವ್ಯಾಸರಾಯ ಸ್ವಾಮಿಗಳ ಮಠದ ಶ್ರೀಮದ್ವಿದ್ಯಾಶ್ರೀರತ್ನಾಕರತೀರ್ಥಶ್ರೀಪಾದಂಗಳವರನ್ನು ಸಿವಿಲ್ ಕೋರ್ಟುಗಳಲ್ಲಿ ಸ್ವತಃ ಹಾಜರಾಗಬೇಕಾದದ್ದಿಲ್ಲವೆಂದು ವಿನಾಯಿತಿ ಮಾಡಿದೆ.

ಅ॥ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರವರ ಪರ್ಸನಲ್ ಅ॥ ಮೆ॥ ಪಿ. ಪಲ್ಪಯ್ಯನವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ಪೊಲೀಸ್ ಪ್ರೊ॥ ಅ॥ ಸೂಪರಿಂಟೆಂಡೆಂಟ್ ಮೆ॥ ಮಿರ್ಜಾ ಮಹಮದ್ ಇಸ್ಮೈಲ್ ಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಟ್ಟಿದೆ

ಸಿವಿಲ್ ಸರ್ಜನ್ ಮೆ॥ ಇ. ಎಸ್ ಕೃಷ್ಣಸ್ವಾಮಿ ಐಯ್ಯರವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಟ್ಟಿದೆ

ಹಾಸನ ಡಿವಿಜನ್ ಅ॥ ಎಕ್ಸಿಕ್ಯೂಟಿವ್ ಇಂಜನಿಯರ್ ಮೆ॥ ಎಫ್. ಎ ಸ್ಟೀಲ್ ರವರಿಗೆ ಫೆಬ್ರವರಿ ೧೨ ರಲಾಗಾಯಿತು ಹದಿನೈದು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ

ಚಿತ್ರದುರ್ಗದ ಡಿವಿಜನ್ ಎಕ್ಸಿಕ್ಯೂಟಿವ್ ಇಂಜನಿಯರ್ ಮೆ॥ ಕೆ ಪ್ರಸನ್ನರಾಯರಿಗೆ ಮಾರ್ಚಿ ೪ ರಿಂದ ಹತ್ತು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ಭೂಗರ್ಭ ಇಲಾಖೆಯ ಕ್ಯೂರೇಟರ್ ಮೆ॥ ವಿ ಎಸ್ ಸಾಂಬಶಿವಯ್ಯರವರಿಗೆ ಮೊದಲು ಕೊಟ್ಟಿರುವ ಪ್ರಿವಿಲೇಜ್ ರಜಾ ಜೊತೆಗೆ ನಾಲ್ಕು ತಿಂಗಳ ಫರ್ಲೋ ರಜಾ ಕೊಟ್ಟಿದೆ

ಮಾಂಡ್ಯದ ತಾಲ್ಲೂಕು ಸಬ್ [illegible] ಅಮಲ್ದಾರ್ ಮೆ॥ ಬಿ ಟಿ. ಸೀತಾರಾಮಯ್ಯನವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಇಪ್ಪತ್ತೆರಡು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ

ಇವರ ಗೈರುಹಾಜರಿಯಲ್ಲಿ ಶಿರಸ್ತೇದಾರ್ ಎಂ ನಾರಣಪ್ಪಯ್ಯಂಗಾರ್ರು ತಾಲ್ಲೂಕು ಛಾರ್ಜನ್ನು ವಹಿಸತಕ್ಕದ್ದು

ಮೈಸೂರು ಸಂಸ್ಥಾನದಿಂದ ಪ್ರಜೆಗಳ್ಯಾರೂ ಕ್ಯಾನಡಾ ಎಂಬ ಇಂಗ್ಲಿಷ್ ಸ್ವಾಸ್ಥ್ಯಕ್ಕೆ ಹೋಗಕೂಡದು ಅಲ್ಲಿನ ಸರ್ಕಾರದವರು ಹಾಗೆ ಹೋದವರನ್ನು ವಾಪಸು ಕಳುಹಿಸಿಬಿಡುತ್ತಾರೆ ಮತ್ತು ಅಲ್ಲಿ ಯಾವ ವಿಧವಾದ ಜೀವನೋಪಾಯವೂ ಸಿಕ್ಕುವುದಿಲ್ಲವೆಂದು ಈ ಮೂಲಕ ಪ್ರಸಿದ್ಧಮಾಡಿದೆ

ತಾಲ್ಲೋಕು ವರ್ತಮಾನಗಳು

ಚನ್ನಪಟ್ಟಣ.—ಈಗ್ಗೆ ೮—೧೦ ದಿವಸ ಕೆಳಗೆ ಈ ಟವನ್ನಲ್ಲಿ ಕಾಲರಾ ಉಪದ್ರವ ಕಾಣಿಸಿಕೊಂಡು ನಾಲ್ಕಾರು ಜನರು ಮೃತಪಟ್ಟರು. ಈಚೆಗೆ ಏನೂ ಇಲ್ಲದಂತೆ ತೋರುತ್ತೆ ಇಲ್ಲಿನ ಸಮೀಪ ಗ್ರಾಮವಾದ ಕೂಡ್ಲೂರಿನಲ್ಲೂ ಕಳೆದ ಮೊಹರಂ ಕಾಲದಿಂದೀಚೆಗೆ ಸದರಿ ಉಪದ್ರದಿಂದ ೮—೧೦ ಜನರು ಮೃತರಾದಂತೆ ಕೇಳುತ್ತೇನೆ ಇದಕ್ಕಾಗಿ ಕಳೆದ ತಾ ೯ ರಲ್ಲಿ ಡೆಪ್ಯುಟಿ ಕಮಿಷನರು ಇಲ್ಲಿಗೆ ದಯಮಾಡಿ ಇಲ್ಲಿನ ಸಬ್ ಡಿವಿಜನ್ ಆಫೀಸರೂ ಅಮಲ್ದಾರರೂ, ಡಾಕ್ಟರೇ ಮೊದಲಾದವರು ಸದರಿ ಕೂಡ್ಲೂರಿನ ಜನರನ್ನು ಕರೆಯಿಸಿ, ನಾನಾ ಎಚ್ಚರಿಕೆಗಳನ್ನು ಹೇಳಿ ಗ್ರಾಮಕ್ಕೆ ಶುದ್ಧವಾದ ನೀರನ್ನು ಒದಗಿಸುವದಕ್ಕೆ ಮೂರು ಅಬ್ಸೀನಿಯಾ ನಳ್ಳಿ ಬಾವಿ ಎಂಬ ಜಲಶೋಧಕ ಯಂತ್ರಗಳನ್ನು ಏರ್ಪಡಿಸಿ, ಗ್ರಾಮದ ಬಾವಿಗಳನ್ನೂ ರೋಗಿಗಳಿದ್ದ ಮನೆಗಳನ್ನೂ ಶುದ್ಧಿ ಮಾಡಿಸಿ ವಾಪಸು ಬಂದರು ಒಬ್ಬ ರೋಗಿಗೆ ಡಾಕ್ಟರು ಇಲಾಜು ಮಾಡುತ್ತಿದ್ದಾರೆ. ಡೆಪ್ಯುಟಿ ಕಮಿಷನರವರು ಜನ ಸ್ವೈರ ವಿಷಯದಲ್ಲಿ ಇಷ್ಟು ದಯಾಳುಗಳಾಗಿರುವದು ಸಂತೋಷಕರವಾಗಿದೆ

ನಂಜನಗೂಡು —ಇಲ್ಲಿ ಕಾಲರಾ ಉಪದ್ರವ ಇನ್ನೂ ನಿಂತಿಲ್ಲ. ದಿನಕ್ಕೆ ೨—೩ ರಂತೆ ಸಾಯುತ್ತಲೇ ಇದಾರೆ ಈ ತಿಂಗಳು ದೊಡ್ಡ ಜಾತ್ರೆ ನಡೆಯುತ್ತದೆ. ಆಗ್ಗೆ ನಾನಾ ಕಡೆಗಳಿಂದ ಜನರು ಬಂದು ಸೇರುತ್ತಾರೆ ಆ ಗಲಾಟೆಯಲ್ಲಿ ರೋಗ ನಾನಾ ಕಡೆಗಳಿಗೆ ಹರಡಿಕೊಳ್ಳುತ್ತದೆಂಬುದಕ್ಕೆ ಸಂದೇಹವಿಲ್ಲ —ಕೆಲವು ದಿನಗಳ ಹಿಂದೆ ತಾಲ್ಲೋಕ್ ಟ್ರೆಜರಿಯಲ್ಲಿ ಇಲ್ಲಿನ ಸಾಹುಕಾರ್ ಅಹಮದ್ ಸಾಬರು ದವಲೇ ಮೂಟೆಯನ್ನು ಸುಂಕ ತೀರಿಸಲು ಹಾಕಿದ್ದರು. ತಾಲ್ಲೋಕಿನವರು ಜಾಗ್ರತೆಯಾಗಿ ವಸೂಲ್ ತೆಗೆದುಕೊಳ್ಳದ ಕಾರಣ ಯಾರೋ ಮೂಟೆಯನ್ನು ಬಿಚ್ಚಿ ೬೦—೭೦ ರೂ ಹುಳಿಯನ್ನು ಹೊಡಕೊಂಡು ಹೋದರು ಕಛೇರಿಗೆ ಸುಮಾರು ಜನರು ಬರುವದೂ ಹೋಗುವದೂ ಸರಿಯಷ್ಟೆ ಮತ್ತು ಕಕ್ಷಿಗಾರರು ರಾತ್ರಿ ೮—೯ ಗಂಟೆಯವರೆಗೂ ಕಚೇರಿಯಲ್ಲಿರುತ್ತಾರೆ. ಆ ಮೂಟೆ ಕೊಂಗಡೆ ಪೋಲೀಸ್ ಆಫೀಸಿನ ಮಗ್ಗುಲಲ್ಲಿಟ್ಟಿದ್ದರು ಪೋಲೀಸಿನವರ ಸಿಬ್ಬಂದಿ ಕಡಿಮೆ·

...ಆಫೀಸಿನಲ್ಲಿ ರಾತ್ರಿವೇಳೆ ಬಿಟ್ಟಿದ್ದರು ಇರುವದು ಅಪರೂಪ ... ಅಧಿಕಾರಿಗಳು ಪೊಲೀಸ್ ಸಿಬ್ಬಂದಿಯನ್ನು ಹೆಚ್ಚಿಸಿದರೆ ... ಈಗ ಇನ್‌ಸ್ಪೆಕ್ಟರ್ ಕೃಷ್ಣಪ್ಪನವರು ಬಹು ಜಾಗರೂಕತೆಯಿಂ... ನಡಿಸುತ್ತಾರೆ ಕನ್ನ ಕಳುವು ಮಾರಾಮಾರಿ ಸಹ ಪತ್ತೆ ಮಾ...ವೆಂದು ನಂಬುತ್ತೇನೆ ಬಡವೆ ಮಾಲುಗಳನ್ನು ಭದ್ರವಾದ ಒಂದು ...ಯಲ್ಲಿ ಕಾಪಾಡುವ ಏರ್ಪಾಡನ್ನು ಮಾಡಿದರೆ ಇಂಥಾ ತೊಂದರೆ ... ಅವಕಾಶವಿರುವದಿಲ್ಲ.

ಅರಸಿಕೆರೆ.—ತಾ ೭ ನೆ ಶನಿವಾರ ಸಾಯಂಕಾಲ ೫॥ ಘಂಟೆಗೆ ...ಗಾಡಿಯಲ್ಲಿ ಬ ...ವಾರದ ಕಡೆಯಿಂದ ದಿವಾನ್ ಪಿ॥ ಎ ಪಿ ...ದಲಿಯಾರವರು ಇಲ್ಲಿಗೆ ದಯಮಾಡಿದರು ಡೆಪ್ಯುಟಿ ಕಮೀಷನರು ಅ...ರು ಮುನಿಸಿಪಲ್ ಕಮೀಷನರು) ಶೆಟ್ಟಿ ವರ್ತಕರು ಅಧಿಕಾರ ...ಸ್ಟೇಷನ್ ಬಳಿ ಹಾಜರಿದ್ದರು. ಅಗ್ಗ ನಡಿಯಬೇಕಾದ ಮ...ದಗಳೆಲ್ಲಾ ನಡಿಸಲ್ಪಟ್ಟವು ರೈಲ್ವೆ ಸ್ಟೇಷನ್ ಬಹಳ ಚನ್ನಾಗಿ ಅ...ರ ಮಾಡಿದ್ದರು. ಮತ್ತು ಟವನ್ನೆಲ್ಲಾ ಗಲೀಜು ಇಲ್ಲದ ಹಾಗೆ ... ಮಾಡಿ ತೋರಣ ಬಾವುಟಗಳಿಂದ ಅಲಂಕರಿಸಿದ್ದಲ್ಲದೆ ಟ್ರಾವ...ರ್ ಬಂಗ್ಲಾದಲ್ಲಿ ಬಹಳ ಸುಂದರವಾದ ಚಪ್ಪರವನ್ನು ಹಾಕಿ...ದು. ದಿವಾನರನ್ನು ಇಲ್ಲಿನ ರೀಡಿಂಗ್ ರೂಮಿಗೆ ದಯಮಾಡಬೇ...ದು ಕೇಳಿಕೊಂಡ ಮೇರೆ ರೈಲ್ವೆ ಸ್ಟೇಷನಿನಿಂದ ರೀಡಿಂಗ್ ರೂಮಿಗೆ ...ಮಾಡಿದರು ಅಲ್ಲಿ ಬೆಳ್ಳಿ ಪೆಟ್ಟಿಗೆಯಲ್ಲಿ ಅಡ್ರೆಸ್ಸನ್ನು ಇಟ್ಟು ಅ...ಒಪ್ಪಿಸಿದರು. ಇದನಂತರ ದಿವಾನರವರು ಟೌನ್ ಇನ್‌ಸ್ಪೆಕ್ಷನ್ನು ...ಟ್ರಾವಲರ್ಸ್ ಬಂಗ್ಲಾದಲ್ಲಿ ಸ್ವಲ್ಪ ಹೊತ್ತು ವಿಶ್ರಮಿಸಿ ...ವಾಗ್ಗೆ ಬಾಣ ಬಿರುಸುಗಳ ತಮಾಷೆ ಆಯಿತು ಅದನ್ನು ...ರು ನೋಡಿಕೊಂಡು ಸ್ಟೇಷನಿಗೆ ದಯಮಾಡಿ ಅದೇ ರಾತ್ರಿ ಬೆಂಗ...ಗೆ ಪ್ರಯಾಣ ಬೆಳಸಿದರು.—ತಾ ೧೦ನೆ ಬುಧವಾರದ ಕಡೆ ...ದಕೃಂ ... ಐಗಂಗಾರಂಗನವರು ಇಲ್ಲಿಗೆ ದಯಮಾಡಿ ದಿನ ನು ...ಷ್ಣ ಇಲ್ಲೇ ಇದ್ದು ... ಮಾರ್ಗವಾಗಿ ಹಾಸನಕ್ಕೆ ಪ್ರಯಾ...ಣಿಸಿತ್ತಾರೆ ಇಲ್ಲಿನ ಅಮಲ್ದಾರರು ಮೂರು ದಿವಸ ರಜಾ ಪಡೆದು ...ದಿನ ಬೆಂಗಳೂರಿಗೆ ... ಅವರ ಬದಲಿಗೆ ಚನ್ನರಾಯಪ... ಅಮಲ್ದಾರರು ಈ ದಿನ ಚಾರ್ಜ ತೆಗೆದುಕೊಂಡರು ಇಲ್ಲಿನ ...ನ್ ಇನ್‌ಸ್ಪೆಕ್ಟರನ್ನು ಸ್ಪೆಷಲ್ ಡ್ಯೂಟಿಗೆ ತೆಗೆದುಕೊಂಡರು. ...ಹುಟ್ಟಣದ ಇನ್‌ಸ್ಪೆಕ್ಟರು ... ಚಾರ್ಜ್ ಪಡೆದಿದ್ದಾರೆ.

ಪುಲೀಸ್ ಪೇಟೆ.—ಈ ಊರಿನ ಕ್ಷೇಮವನ್ನು ಕೋರುವ ಅಧಿಕಾ...ದ ಅಮಲ್ದಾರರೂ ಆಸ್ಪತ್ರೆ ಅಸಿಸ್ಟೆಂಟರೂ ಮುನಿಸಿಪಾಲಿಟಿ ...ತಂ ... ನೋಡಿ ಸಂತೋಷಪಡುತ್ತಿದ್ದರು.—ರೆಸಿಡೆಂಟರವರು ಕೋ... ಪ್ರಾಂತ್ಯ ಆನೆಯ ಮೂಲಕ ಉಂಟಾಗುತ್ತಿದ್ದ ವಿಪತ್ತಿನಿಂದ ತಪ್ಪಿ...ಸ್ಕೆ ಸಂಗತಿಯನ್ನು ಕಳೆದ ವಾರದ ಪತ್ರಿಕೆಯಲ್ಲಿ ಓದಿ, ಅಲ್ಲಿಂದ ...ದು ಬರುವಾಗಲೇ ಅವರ ಮೋಟಾರ್ ಗಾಡಿ ಈ ಪೋಲೀಸ್‌ಪೇಟೆ...ಕಿನ ಅಮಲ್ದಾರರ ಮನೆಯ ಮುಂದೆಯೇ ಕೆಟ್ಟುಹೋಗಲು ...ಅಮಲ್ದಾರರು ರೆಸಿಡೆಂಟರಿಗಾಗಿ ಮುಸಾಫರಿ ಬಂಗ್ಲೆಯಲ್ಲಿ ಏತ...ಸಿದ್ದಪಡಿಸಿ ಅವರಿಗೆ ಬೇಕಾದ ಎಲ್ಲಾ ಸಹಾಯಗಳನ್ನೂ ಒದ...ಗಿಸಿಟ್ಟು ಅವರು ಗಾಡಿ ದುರಸ್ತಿಯಾಗುವವರೆಗೆ ಇಬ್ಬರು ಸೇವಕರಿಂದ ...ಕಾಯಿಸಿದ್ದನ್ನು ನೋಡಿ ರೆಸಿಡೆಂಟರು ಅಮಲ್ದಾರರನ್ನು ವಂದಿ...ಸಿ ಮುಂದಕ್ಕೆ ತೆರಳಿದರು.—ಈ ಊರಿನಲ್ಲಿ ದೋಸೆ ಮಾರುವ ಒಬ್ಬ ...ಮ್ಮನ ಮುದುಕಿಯ ಮನೆಗೆ ಬೆಂಗಳೂರಿನಲ್ಲಿ ಖಾಯಿಲೆಯಾದ ...ಒಬ್ಬನೆಂಟನು ಬಂದಿದ್ದಾನೆ ಡಾಕ್ಟರು ಆ ರೋಗಿಯನ್ನು ...ಕ್ಷಿಸಲು ಅವನಿಗೆ ಪ್ಲೇಗ್‌ರೋಗ ಉಂಟೆಂದು ತಿಳಿಯಿತು ಕೂಡ... ...ಮ್ಲಾದಾರರು ಮುತುವರ್ಜಿ ವಹಿಸಿ ರೋಗಿಯು ಪೋಷಣೆಗೆ ದಿನ ...ಟು ಚಾಕರರನ್ನು ಮಾಡಿಸಿ ಬೇರೆ ಜನರಿಗೆ ತೊಂದರೆ ಉಂ...ಟಾಗದಂತೆ ರೋಗಿಗೋಸ್ಕರ ಜೋಪಡಿ ಹಾಕಿಸಿ ಗ್ರಾಮದ ಪಟೇಲರಿಗೆ ...ಯಾದರೂ ಇಲಿ ಸತ್ತರೆ ಕೂಡಲೇ ಡಾಕ್ಟರಿಗೆ ತಿಳಿಸಬೇಕೆಂದು ...ವಾದ ಆರ್ಡರು ಕೊಟ್ಟಿರುವುದೆ ರೋಗಿಯ ಪಕ್ಕದ ಮನೆಯವರ ...ಮ್ಮ ಮನೆಗಳಿಗೆ ಡಿಸಿನ್‌ಫೆಕ್ಷನ್ ಮಾಡಿಸುವಂತೆ ಏರ್ಪಾಡು ಮಾ...ಡಿ.

ಚಿಕ್ಕನಾಯಕನಹಳ್ಳಿ.—ತೊಕರಂ ಮತ್ತು ಹೋಳಿ ಹಬ್ಬ ಪದ್ಧತಿಯ ... ನಡಿಯುತ್ತ ಇಲಿಗಳು ಅಲ್ಲಲ್ಲಿ ಸಾಯುತ್ತವೆ ಉಳ್ಳಾಳದಿಂದ ...ದವಿನ ವರಗೆ ಕನರೂ ಜಟಕಾ ಕಂಪನಿಯವರ ಜಟಕಾಗಳು ಓಡಿ...ಸುತ್ತಿವೆ ಇವರು ಜಟಕಾ ಹೊಡೆಯುವವನು ಕೂತುಕೊಳ್ಳುವ ...ಲ್ಲಿ ಕೂಡಾ ಜನರನ್ನು ಕೂಡಿಸಿಕೊಳ್ಳುತ್ತಾರೆ ದಾರಿಯಲ್ಲಿ ...ಸಂದರನು ಘಂಟೆಗೆ ಹತ್ತು ಹನ್ನೆರಡು ಸಾರಿ ಇಳಿಯಲಿಕ್ಕೆ ...ಮಾಸನು ಅಪ್ಪಣೆ ಕೊಡುತ್ತಾನೆ ಗಾಡಿಗಳಿಗೆ ಕಟ್ಟಿರುವ ...ಕುದುರೆಗಳಿಗೆ ಕಣ್ಣಿಲ್ಲ ಬಾಕಿ ಕೆಲವು ಕುದುರೆಗಳ ಬೆನ್ನಿಂದ ...ಸುರಿಯುವದಕ್ಕೆ ಮಿತಿಯೇ ಇಲ್ಲ ಅಂಥಾ ಕುದುರೆಗಳನ್ನು ಸಹ ...ಕಟ್ಟುತ್ತಾರೆ. ಈ ಮೂಗುಪ್ರಾಣಿಗಳನ್ನು ಕಟ್ಟಿ ದಾರಿಯಲ್ಲಿ ...ನ್ನು ಹೊಡೆಯುವ ಪೆಟ್ಟಿಗೆ ಲೆಕ್ಕವೇ ಇಲ್ಲ ಎಂಥಾ ನಿಷ್ಠುರ...ರೂ ಅವನು ಹೊಡೆಯುವ ಪೆಟ್ಟನ್ನು ನೋಡಿದರೆ ಕನಿಕರವಾ...ಗದಿರಲ್ಲ. ರೂಪಾಯಿ ಕೊಟ್ಟು ನಡದುಬಂದದ್ದಲ್ಲದೆ ಜಟಕಾ ...ಳಿದಕೂಡಲೆ ಕೇಳುವೆ ನನಗೆ ಇನಾಮು ಕೊಟ್ಟೇಬಿಡಬೇಕು ...ಟಾ ಬಂಡಿಗಿಂತಲೂ ಜೋಡು ಮೋರಿಗಳ ಗಾಡಿಯೇ ಲೇಸು ...ಳೆ ಹೊಳೆಯ ಮುರುಕುಂದಕಗಳನ್ನು ತೆಗದು ಹಾಕಿಸು...ತ್ತಾರೆ ಕುಂಬಳೆ ಹೊಳೆಯ. ಆಚೆ ಈಗ ರೈಲು ಗಾಡಿಗ...ಯುತ್ತವೆ ಹೊಳೆಯು ಆಚೆ ಕರೆಯಿಂದ ಉಳ್ಳಾಳದ ವರೆಗೆ ...ಬಂಡಿಗಳು ಬರುವಹಾಗಿಲ್ಲವೆಂತ ಹೇಳುತ್ತಾರೆ ರೈತರು ಸುಗ್ಗಿ ...ಮ್ಮ ಕಟಾವುಮಾಡಿ ಧಾನ್ಯದ ಬಿತ್ತನೆ ಕೆಲಸವನ್ನು ನಡಿಸು...ತೆ ಪೇಟೆ ಧಾರಣೆವಾಸಿಗಳು ಚಪಾವಿನಲ್ಲಿದೆ ಹಲಸು ಮಾವಿನ ...ಈ ಸಾರಿ ಜಾಸ್ತಿಯೆಂತ ಹೇಳುತ್ತಾರೆ. ಕಾಸರಗೋಡಿನಲ್ಲಿ ...ಕೋರಕಡೆಯಲ್ಲಿ ಜನರು ಸರಳುತ್ತಾರೆಂತ ಕೇಳುತ್ತೇನೆ.—...ರಲ್ಲಿ ಇದೇ ತಿಂಗಳ ತಾ ೨ರಲ್ಲಿ ಸಾಧಾರಣ ಮಳೆ ಬಂದಿ... ...ಲ್ಲಿ ಪ್ಲೇಗ್ ಕೇಸುಗಳಾಗುತ್ತವೆಂತ ಹೇಳುತ್ತಾರೆ ಈ ಸಾರಿ ಗಟ್ಟದಿಂದ ಬಂದ ಕಾಫಿ ಕಮ್ಮಿಯೆಂತ ಹೇಳುತ್ತಾರೆ ಮರುಷ ವರುಷ ಕಾಫಿ ಹೆಕ್ಕುವ ಸ್ತ್ರೀಯರಿಗೆ ದಿನಕ್ಕೆ ಎರಡಾಣೆ ಸಿಕ್ಕುತ್ತಿತ್ತಂತಲೂ ಈ ಸಾರಿ ಒಂದು ಆಣೆ ಕೂಡ ಸಿಕ್ಕುವದಿಲ್ಲವೆಂತಲೂ ಹೇಳುತ್ತಾರೆ.

ಬೇಲೂರು.—ಕಳೆದ ತಿಂಗಳು ೨೦ ರಲ್ಲಿ ನಮ್ಮ ಪೊಲೀಸ್ ಇನ್‌ಸ್ಪೆಕ್ಟರ್ ಜನರಲ್ ಸಾಹೇಬರವರು ದಂಪತಿ ಸಹಿತರಾಗಿ ಇಲ್ಲಿಗೆ ಹಾಸನದ ಮಾರ್ಗವಾಗಿ ಬಂದು, ಇಲ್ಲಿನ ಸ್ಟೇಷನ್ ಅಜಮಾಯಿಷಿಮಾಡಿ ಅದರಿಂದ ಈ ಊರು ಕಳ್ಳತನಕ್ಕೆ ತೌರೂರೆಂದು ತಿಳಿದು, ಬರುವ ಗುರ್ತ್ರಿಯಿಂದ ಇಲ್ಲಿ ಒಂದು ಟವನ್ ಪೋಲೀಸ್ ಸ್ಟೇಷನ್ ಏರ್ಪಾಡು ಮಾಡುವದಾಗಿ ತಿಳಿಸಿ ಮುಂದೆ ತೆರಳಿದರು.—ಊರೊಳಗೆ ಬಹು ಮನೆಗಳು ಡಿಸಿಕೇಷನ್ ಆಜಾಗ್ರತ ಸುತ್ತುಮುತ್ತಲಿನ ಹಳ್ಳಿಗಳಲ್ಲಿ ಪ್ಲೇಗು ಈಗೀಗ ಉಲ್ಬಣವಾಗುತ್ತಿರುವದರಿಂದ ಪ್ರಜೆಗಳು ಊರು ಪ್ರವೇಶ ಮಾಡಲು ಅಂಜುತ್ತಿರುವರು. ನೀರಿನ ಕೊರತೆಯಿಂದ ಪ್ರತಿ ಪೆಡ್ಡಿನಲ್ಲಿಯೂ ಛಳಿ ಜ್ವರವು ಜೋರಾಗಿದೆ. ತಾ. ೧ ನೇ ಶುಕ್ರವಾರ ಈ ಊರಿನ ಪ್ರತಿಯೊಂದು ರಾಜ ಬೀದಿಯೂ ಕದಳೀ ಸ್ತಂಭ ತೋರಣ ಬಾವಟ ಮಂಟಪಗಳಿಂದ ಅಲಂಕರಿಸಲ್ಪಟ್ಟಿತ್ತು. ಬೆಳಿಗ್ಗೆ ದಿವಾನರವರ ಸವಾರಿಯು ಹಾಸನದ ಮಾರ್ಗವಾಗಿ ಚಪ್ಪರಕ್ಕೆ ದಯಮಾಡಿತು ನಮ್ಮ ಸಬ್ ಡಿವಿಜನ್ ಆಫೀಸರೂ ಅಮಲ್‌ದಾರರೂ ಮ್ಯುನಿಸಿಪಲ್ ಕಮೀಷನರುಗಳೂ ದೇವಸ್ಥಾನದ ಮರ್ಯಾದೆಯೊಂದಿಗೆ ಅವರನ್ನು ಎದುರುಗೊಂಡರು ಸ್ಕೂಲ್ ಬಾಲಕ ಬಾಲಕಿಯರ ಜಯಧ್ವನಿಯೊಂದಿಗೆ ಅಲಂಕರಿಸಲ್ಪಟ್ಟಿದ್ದ ಟ್ರಾವೆಲರ್ಸ್ ಬಂಗ್ಲೆಗೆ ದಯಮಾಡಿ ವಿಶ್ರಮಿಸಿಕೊಂಡರು ಮಧ್ಯಾಹ್ನ ಮುಖ್ಯಸ್ಥರೂ ಮ್ಯುನಿಸಿಪಲ್ ಕಮೀಷನರುಗಳೂ ಸೇರಿ, ಈ ಊರಿನವರಿಂದಲೇ ಸುಂದರವಾಗಿ ತಯಾರಿಸಿದ್ದ ಬೆಳ್ಳಿಯ ಪೆಟ್ಟಿಗೆಯಲ್ಲಿ ಅಡ್ರಸ್ ಓದಿ ದಿವಾನರಿಗೆ ಒಪ್ಪಿಸಿದರು ದಿವಾನರವರು ಸದರಿ ಪರ ಕೋರಿಕೆಯಂತೆ ದೇವಸ್ಥಾನಕ್ಕೆ ವಿಮಾನವಿಲ್ಲದ ಕೊರತೆಯನ್ನು ಸಧ್ಯದಲ್ಲಿ ನಿವಾರಿಸುವದಾಗಿಯೂ, ಉಪ್ಪರಿಗೆಯನ್ನು ದುರಸ್ತಿ ಮಾಡಿಸಿ ಕೊಡುವದಾಗಿಯೂ ವಾಗ್ದಾನಮಾಡಿ, ಮಧ್ಯಾಹ್ನ ೪ ಘಂಟೆಗೆ ದೇವಸ್ಥಾನವನ್ನು ನೋಡಲು ಹೊರಟು ದಾರಿಯಲ್ಲಿದ್ದ ಎ. ವಿ ಸ್ಕೂಲಿಗೆ ದಯಮಾಡಿ ಅಲ್ಲಿನ ಬಾಲಕರಲ್ಲಿ ಇಬ್ಬರು ಷೇಕ್ಸ್‌ಪಿಯರ್ ಕವಿಯ ಒಂದಾನೊಂದು ಸಂಭಾಷಣೆ ಅನುಕರಿಸಿದ್ದನ್ನು ನೋಡಿ, ಅವರ ಡ್ರಿಲ್ ಸಂಗೀತ ಮುಂತಾದ್ದನ್ನು ನೋಡಿ ಹೆಡ್‌ಮಾಸ್ಟರು ಓದಿದ ೯ ತ್ರಸ್ ಕೇಳಿ ತನ್ಮೂಲಕ ಸದರಿ ಸ್ಕೂಲಿನಲ್ಲಿ ಈ ಸಾರಿ ೧೦ ಮಂದಿಗೆ ೯ ಮಂದಿ ಪ್ಯಾಸಾಗಿರುವದನ್ನೂ ಬಾಲಕರ ಒಳ್ಳೇ ನಡತೆಯನ್ನೂ ವಿದ್ಯಾಸಕ್ತಿಯನ್ನೂ ಬೋಧನಾವಿಚಕ್ಷಣೆಯನ್ನೂ ಶ್ಲಾಘಿಸಿ ಸದರಿ ಎ ವಿ ಸ್ಕೂಲಿನ ಕಾಂಪೌಂಡಿನಲ್ಲಿಯೇ ಸೇರಿದ್ದ ಮಿಷನ್ ಬಾಲಿಕಾ ಪಾಠಶಾಲೆಯ ಬಾಲಕಿಯರ ಮೃದು ಮಧುರ ಗಾನವನ್ನು ಕೇಳಿ ಸಂತೋಷಪಟ್ಟು ಉಭಯ ಸ್ಕೂಲಿಗೂ ಬಹುಮಾನ ಕೊಟ್ಟು ದೇವಸ್ಥಾನಕ್ಕೆ ದಯಮಾಡಿದರು ದಕ್ಷಿಣ ಇಂಡಿಯಾವಲ್ಲೆಲ್ಲಾ ಅತ್ಯಂತ ಸುಂದರವಾದ ಈ ಊರು ದೇವಸ್ಥಾನವನ್ನು ದಿವಾನರವರ ಆಗಮನ ನಿರೀಕ್ಷಣೆಯಿಂದ ಅಲಂಕರಿಸಿದ್ದರು ದೇವಸ್ಥಾನದಲ್ಲಿ ದೇವರ ದರುಶನಮಾಡಿ, ತೆಪ್ಪೋತ್ಸವ ಪರಾಂಬರಿಸಿ ಕಾಲುವೆಗಳಲ್ಲಿಯೇ ಉತ್ಸವದೊಂದಿಗೆ ವಿಷ್ಣು ಸಮುದ್ರಕ್ಕೆ ದಯಮಾಡಿ ರೆಸಿಡೆನ್ಸಿಗೆ ಬಂದು ವಿಶ್ರಮಿಸಿಕೊಂಡರು ಮಾರನೇ ಬೆಳಿಗ್ಗೆ ಈ ಊರು ಕಾಫಿ ಪ್ಲಾಂಟರು ನೆ.ತ ... ಮ್ಮಯ್ಯನವರೂ ಕೇಶವೈಯ್ಯಂಗಾರ್ರೇ ಮುಂತಾದ ದೊಡ್ಡ ಮನುಷ್ಯರು ಇಂಗ್ಲೀಷ್ ಬ್ಯಾಂಡ್ ಮುಂತಾದ ಬಾಜಾ ಬಜಂತ್ರಿಗಳೊಡನೆ ದಿವಾನರನ್ನು ಹಳೇಬೀಡಿಗೆ ಕಳುಹಿಸಿಕೊಟ್ಟರು

ಹಾಸನ.—ಧಾರಣೆವಾಸಿಗಳು ಸ್ವಲ್ಪ ಉತ್ತಮಸ್ಥಿತಿಯಲ್ಲಿವೆ ಗುಡಿಸಲುಗಳಿದ್ದವರೆಲ್ಲ ಊರು ಸೇರುತ್ತಬಿಡಾರೆ ವೇಷರಂ ಹಬ್ಬವು ಗುಡಿಸಲಿನ ವಾಸದ ದೆಸೆಯಿಂದ ಸಾಮಾನ್ಯವಾಗಿ ನಡೆಯಿತು ಯುಗಾದಿ ಹಬ್ಬದ ವೇಳೆಗೆ ಪ್ರಾಯಶಃ ಎಲ್ಲರೂ ಊರಿನೊಳಕ್ಕೆ ಸೇರಬಹುದೆಂದು ತೋರುತ್ತದೆ.—ನಮ್ಮ ದಿವಾನರಾದ ಮೆ॥ ಎ ಪಿ ಮಾಧವರಾವ್, ಸಿ ಐ ಇ. ಯವರು ತಾ. ೭ನೆ ಬುಧವಾರ ಬೆಳಿಗ್ಗೆ ಸಕಲೇಶಪುರದ ಮಾರ್ಗವಾಗಿ ಈ ಊರನ್ನು ತಲಪಿದರು ಸಿವಿಲ್ ಆಸ್ಪತ್ರೆಯ ಬಳಿ ರಾಜಮಾರ್ಗದಲ್ಲಿ ಅಲಂಕಾರವಾದ ಒಂದು ಭುವನೇಶ್ವರಿ ಮಂಟಪವನ್ನು ಕಟ್ಟಿದ್ದರು ಅಲ್ಲಿ ಅಧಿಕಾರಿಗಳೂ ಮುನಿಸಿಪಲ್ ಮೆಂಬರುಗಳೂ ಸೇರಿ ಬಹು ಸಂಭ್ರಮದಿಂದ ದಿವಾನರನ್ನು ಎದುರುಗೊಂಡು, ಫಲಪುಷ್ಪಗಳನ್ನು ಅರ್ಪಿಸಿದರು ಶೆಟ್ಟಿ ವರ್ತಕರೂ ವೈದಿಕ ಬ್ರಾಹ್ಮಣರೂ ಮಾಕಮ್ಮದೇವಿಯರೂ ಅವರನ್ನು ಕಂಡು ಮರ್ಯಾದೆಮಾಡಿದರು ದಿವಾನರು ಬಂಗ್ಲೆಗೆ ದಯಮಾಡಿ ವಿಶ್ರಮಿಸಿಕೊಂಡರು ಸುಮಾರು ೪ ಘಂಟೆಗೆ ಇಲ್ಲಿನ ನಿವಾಸಿಗಳ ಪ್ರತಿನಿಧಿಗಳು ಇಂಗ್ಲಿಷ್ ಕನ್ನಡ ಹಿಂದೂಸ್ಥಾನಿ ಭಾಷೆಗಳಲ್ಲಿ ಬರೆದಿದ್ದ ವಿಜ್ಞಾಪನಾ ಪತ್ರಿಕೆಗಳನ್ನು ಓದಿ, ಸುಂದರವಾದ ಬೆಳ್ಳಿಯಪೆಟ್ಟಿಗೆಯಲ್ಲಿ ಇಟ್ಟು ದಿವಾನರಿಗೆ ಒಪ್ಪಿಸಿದರು ಅವರು ಅವುಗಳನ್ನು ಆದರಪೂರ್ವಕವಾಗಿ ಅಂಗೀಕರಿಸಿ, ಅವುಗಳಲ್ಲಿ ಈ ಪುರವಾಸಿಗಳು ಕೇಳಿಕೊಂಡಿದ್ದ ಆರು ವಿಷಯಗಳಲ್ಲಿ ಕುಡಿಯುವ ನೀರಿನ ಅನುಕೂಲ್ಯತೆಗೆ ತಕ್ಕ ಏರ್ಪಾಡನ್ನು ಯೋಚಿಸುತ್ತಲೇ ಇರುವುದಾಗಿಯೂ, ರೈಲ್ವೆಯನ್ನು ತ್ವರ್ಯವಾಗಿಯೇ ಈ ಮಾರ್ಗವಾಗಿ ತರುವವರಾಗಿದ್ದೇವೆಂತಲೂ, ಇಲ್ಲಿನ ಸಬ್ ಜಡ್ಜ್ ಕೋರ್ಟನ್ನು ತಗೆದು ಮೊದಲಿನಂತೆಯೇ ಮುನ್‌ಸಿಫ್ ಕೋರ್ಟನ್ನು ಇಡಬೇಕೆಂದು ತೀರ್ಮಾನವಾಗಿರುವುದರಿಂದ ಪುನಃ ಈ ಕೋರ್ಟನ್ನು ಇಡಲಾಗುವುದೆಂತಲೂ, ಗೋರೂರು ಬಳಿ ಹೇಮಾವತಿ ನದಿಗೆ ಸಾವಕಾಶವಾಗಿ ಸೇತುವೆಯನ್ನು ಕಟ್ಟಿಸುವುದಾಗಿಯೂ, ಚೆನ್ನರಾಯಪಟ್ಟಣದ ತಾಲ್ಲೂಕು ಶ್ರವಣಬೆಳಗೊಳದಲ್ಲಿರುವ ಗೋಮಟೇಶ್ವರ ಪ್ರತಿಮೆಯ ಮೇಲ್ಗಡೆ ಸೀತಾತಪಗಳಿಗೆ ಅಪಕಾರವಾಗದ ಹಾಗೆ ಕನ್ನಡಿಯ ಮೇಲ್ಛಾವಣಿಯನ್ನು ಕಟ್ಟುವ ವಿಷಯದಲ್ಲಿ ಜನರು ಸಾಧ್ಯವಾದ ಸಹಾಯವನ್ನು ಮಾಡುವ ಪಕ್ಷದಲ್ಲಿ ಸರ್ಕಾರದವರು ಪ್ರವರ್ತಿಸಿ ಮಾಡುವುದಾಗಿಯೂ, ಗ್ರಾಮ ಪಂಚಾಯುತಿ ಕೋರ್ಟನ್ನು ಸಧ್ಯದಲ್ಲಿಯೇ ಏರ್ಪಡಿಸುವುದಾಗಿಯೂ ಉತ್ತರವನ್ನು ದಯಪಾಲಿಸಿದರು. ಸಾಯಂಕಾಲ ೬ ಘಂಟೆಗೆ ವೆಸ್ಲಿಯನ್ ಮಿಷನ್ ಆಸ್ಪತ್ರೆಗೆ ದಯಮಾಡಿ ನೋಡಿಕೊಂಡು ಆರ್ಫನೇಜ್ ಸ್ಕೂಲಿಗೆ ಹೋಗಿ ಅಲ್ಲಿ ಸುಮಾರು ೧೫—೨೦ ನಿಮಿಷಗಳ ವರಿವಿಗೆ ಇದ್ದು ಬಾಲಕಿಯರು ಹಾಡಿದ ವಂದನಾ ಕೀರ್ತನೆಯನ್ನು ಲಾಲಿಸಿ, ಚಿಕ್ಕಮಕ್ಕಳು ಡ್ರಿಲ್‌ಮಾಡಿದುದನ್ನು ಪರಾಂಬರಿಸಿ, ಮಕ್ಕಳ ತಿಂಡಿ ಮುಂತಾದುದಕ್ಕೆ ಕೆಲವು ರೂಪಾಯಿ ಬಹುಮಾನ ಕೊಟ್ಟು, ಬಾರ್ಕನ್ನು ಪ್ರವೇಶಿಸಿ ನೋಡಿಕೊಂಡು ಬಂಗ್ಲೆಗೆ ದಯಮಾಡಿದರು. ಮಾರನೆ ಗುರುವಾರ ಪ್ರಾತಃಕಾಲ ಪಟ್ಟಣದ ಮುಖ್ಯಮುಖ್ಯ ಭಾಗಗಳನ್ನು ನೋಡಿಕೊಂಡು, ಜುಬಿಲಿ ಹಾಲ್‌ಗೆ ದಯಮಾಡಿ, ದೇಶೀಯ ಬಾಲಿಕಾ ಪಾಠಶಾಲಾ ಬಾಲಕಿಯರಿಗೆ ಬಹುಮಾನಗಳನ್ನು ಕೊಟ್ಟು, ಆ ಮಕ್ಕಳ ತಿಂಡಿಗಾಗಿಯೂ ಆ ಸ್ಕೂಲಿನ ಮೂಲಧನಕ್ಕೂ ತಕ್ಕಮಟ್ಟಿಗೆ ದ್ರವ್ಯಸಹಾಯಮಾಡಿದರು. ಆ ಸಾಯಂಕಾಲ ಇಂಗ್ಲಿಷ್ ಹೈಸ್ಕೂಲಿನಲ್ಲಿ ವಿಶೇಷ ಸಂಭ್ರಮದಿಂದ ನಡೆಸಿದ ವಿದ್ಯಾರ್ಥಿಗಳ ಸಂಭಾಷಣೆ ಸಂಸ್ಕೃತ ನಾಟಕಾದಿಗಳ ವೈಖರಿಯನ್ನು ಪರಾಂಬರಿಸಿ, ಅಲ್ಲಿನ ಬಾಲಕರಿಗೆ ಬಹುಮಾನ ದಯಪಾಲಿಸಿದರು. ರಾತ್ರಿ ದಿವಾನರ ಬಿಡಾರವಾದ ಬಂಗ್ಲೆ ಬಳಿ ವಿಚಿತ್ರವಾದ ಬಾಣಬಿರುಸು ತಾರಾಮಂಡಲಗಳನ್ನು ಹಾರಿಸಿದರು. ಮಾರನೆ ಶುಕ್ರವಾರ ಪ್ರಾತಃಕಾಲ ೭ ಘಂಟೆಗೆ ನಮ್ಮ ದಿವಾನರು ಬೇಲೂರಿಗೆ ಪ್ರಯಾಣಮಾಡಿದರು. ಈ ಮಹನೀಯರ ಆಗಮನದಿಂದ ಈ ಡಿಸ್ಟ್ರಿಕ್ಟ್ ನಿವಾಸಿಗಳು ವಿಶೇಷ ಪ್ರಯೋಜನವಾಗುವುದೆಂಬ ನಿರೀಕ್ಷೆಯುಳ್ಳವರಾಗಿದ್ದಾರೆ.

ಶಿಕಾರಿಪುರ.—ಕಳೆದ ವರ್ಷ ತರೀ ಫಸಲಾಗದ್ದರಿಂದ ಇಂದಿನವರೆಗೆ ಧಾರಣೆವಾಸಿಗಳು ಹಾಗೆಯೇ ಪ್ರಿಯವಾಗಿವೆ. ಇಲ್ಲಿಗೆ ಹೊಸದಾಗಿ ಬಂದಿರುವ ಅಮಲ್ದಾರ್ ಮೆ॥ ಗುಲಾಂ ಮಹಮದ್ ಮೊಕ್ಕೆಯವರು ಬಂದ ಸ್ವಲ್ಪ ಕಾಲದಲ್ಲಿಯೇ ಪೇಟೆಯು ಉದ್ದಕ್ಕೂ ಎರಡು ಕಡೆಗಳಲ್ಲಿಯೂ ಕಲ್ಲಿನ ಕಟ್ಟೆಯನ್ನು ಜನರನ್ನು ಪ್ರೋತ್ಸಾಹಿಸಿ ಅವರ ಲಾಗೋಡಿನಿಂದ ಕಟ್ಟಿಸಿಕೊಳ್ಳುವಂತೆ ಮಾಡಿ, ಈಗ ಅದೇ ಕಟ್ಟೆಯ ಮೇಲೆ ಸಂತೆಯು ಊರಿನೊಳಗೇ ಕೂಡುವಂತೆ ಕ್ರಮಪಡಿಸಿದಾರೆ. ಇದರಿಂದ ಜನರಿಗೆ ಸ್ವಲ್ಪ ಕಷ್ಟ ತಪ್ಪಿದೆ ಎಂದು ಹೇಳಬಹುದು ಈ ಕಲ್ಲುಕಟ್ಟೆಯು ಊರಿನ ಅಲಂಕಾರಕ್ಕೆ ಮಾತ್ರವಲ್ಲದೆ ನೀರಿನ ಅಪಾಯಕ್ಕೂ ತಪ್ಪಿಸಲ್ಪಡಬಹುದಾಗಿ ಊಹಿಸಲ್ಪಟ್ಟಿದೆ.—ಇಲ್ಲಿ ಜನರು ಈಗ ನೀರಿಗಾಗಿ ಪಡುತ್ತಿರುವ ಕಷ್ಟವನ್ನು ಹೇಳತೀರದು. ಇಲ್ಲಿ ಕುಮುದ್ವತಿ ನದಿಯು ಹರಿಯುತ್ತಿರುವದು ತಿರುಗಣೆ ಮಠದ ಹತ್ತರ ಒಂದು ಅಣೆಕಟ್ಟು ಮಾಡಿಸಿದರೆ ಶಿಕಾರಿಪುರಕ್ಕೆ ಮಾತ್ರವೇ ಅಲ್ಲದೆ ಹೊನ್ನಾಳಿಗೂ ಹೇರಳ ಪ್ರಯೋಜನವಾಗುವದು ಗವರ್ನಮೆಂಟಿನವರು ಈ ಕೆಲಸವನ್ನು ಅವಶ್ಯ ನೆರವೇರಿಸಿಕೊಡಬೇಕಾಗಿ ಜನರೆಲ್ಲರೂ ಪ್ರಾರ್ಥಿಸುವವರಾಗಿದಾರೆ ಮತ್ತು ಜನರು ಆಗಲೇ ಈ ವಿಷಯ ಬರೆದೂ ಇರುವರು.—ಕಳೆದ ವಾರ ಘನ ಎ. ಇ ನೈಟಿಂಗೇಲ್ ಸಾಹೇಬರು ದಯಮಾಡಿ ಇಲ್ಲಿನ ಮಿಷನ್ ಬಾಲಿಕಾ ಪಾಠಶಾಲೆಗಳಲ್ಲಿ ಇನಾಮುಗಳನ್ನು ಕೊಟ್ಟು ಸ್ತ್ರೀ ವಿದ್ಯಾಭ್ಯಾಸವನ್ನು ಇನ್ನೂ ಅಭಿವೃದ್ಧಿಗೆ ತರಬೇಕೆಂದು ಉಪನ್ಯಾಸಮಾಡಿ ತೆರಳಿದರು.—ಇಲ್ಲಿನ ಎ. ವಿ. ಸ್ಕೂಲಿನಲ್ಲಿ ಕಳೆದ ಲೋವರ್ ಸೆಕೆಂಡರಿ ಪರೀಕ್ಷೆಯಲ್ಲಿ ಇಂಗ್ಲೀಷಿನಲ್ಲಿ ಇಬ್ಬರೂ, ಕನ್ನಡದಲ್ಲಿ ಮೂವರೂ ತೇರ್ಗಡೆಯಾದರು. ತೊಗರ್ಸಿ ಗ್ರಾಮವು ಶಿಕಾರಿಪುರಕ್ಕೆ ಸುಮಾರು ೧೭ ಮೈಲಿ ದೂರವಾಗಿ, ಈ ತಾಲ್ಲೋಕಿನ ಸೇರಿದ್ದಾಗಿದೆ. ಇದು ಕಲ್ಲು ಮುಳ್ಳು ಮರಗಳಿಂದ ಮುಚಲ್ಪಟ್ಟು ಅಲಂಕಾರ ರಹಿತವಾಗಿದೆ ಆದರೂ ಕಳೆದವಾರ ಇಲ್ಲಿ ನಡೆದ ಜಾತ್ರೆಗೆ ಸುಮಾರು ೧೦—೧೫ ಸಹಸ್ರ ಜನರು ಸೇರಿದ್ದದ್ದನ್ನು ನೋಡಿದರೆ ಆಶ್ಚರ್ಯವಾಗುತ್ತೆ. ಸುಮಾರು ೪ ವರ್ಷಗಳಿಂದಲೂ ಇಷ್ಟು ಜನರು ಸೇರಲಿಲ್ಲವೆಂದು ಹೇಳುವರು ಬಹು ದೂರ ದೇಶಗಳಿಂದ ಬಂದ ನಾನಾ ಬಗೆಯ ಅಂಗಡಿಗಳೂ ವಿನೋದಗಳೂ ಅಲ್ಲಿ ತುಂಬಿದ್ದವು ಈ ಜಾತ್ರೆಯಲ್ಲಿ ಒಂದು ಸಂಗತಿಮಾತ್ರ ವಿಷವಾಗಿತ್ತು. ಏನಂದರೆ, ದ್ಯೂಜಾಟ, ನಾನಾ ರೀತಿಯಾಗಿ ಇವು ನಡಿಯುತ್ತಿದ್ದವು ಇವು ಎಂದಿಗೆ ನಿರ್ನಾಮವಾಗಿ ಹೋಗುವವೋ ತಿಳಿಯದು. ಇಂಥಾ ದುರಭ್ಯಾಸವನ್ನು ಅಣಗಿಸುವ ವಿಚಾರದಲ್ಲಿ ಹೆಚ್ಚು ಗಮನಕೊಡಬೇಕಾಗಿದೆ ದೊಡ್ಡ ತೇರಿನ ಬಾವುಟದ ಕೆಲಸ ಪ್ರಾರಂಭವಾಗಿ ಜನರು ಬಹು ಮೆಹನತ್ತಿನಿಂದ ಬೇಗ ಕಟ್ಟಿದರು ಬರೀ ಬಾವುಟಗಳು ಮಾತ್ರ ಇದ್ದವು ಆ ರಾತ್ರಿ ಎಲ್ಲಿ ನೋಡಿದರೂ ಜನರು ಬೆಳಕುಗಳನ್ನು ಕೈಯಲ್ಲಿ ಹಿಡಿದಿದ್ದರು ಎಣ್ಣೆಯು ಉಚಿತವಾದುದಾಗಿತ್ತು. ಆ ರಥವು ಸುಮಾರು ೪೦ ಅಡಿ ಉದ್ದವಿದ್ದಿರಬಹುದು ಅದರ ಅದರ ಎರಡು ಗಾಲಿಗಳೇ ಪ್ರತಿಯೊಂದು ಸುಮಾರು ೧೨ಅಡಿ ಎತ್ತರವಾಗಿತ್ತು. ಇವುಗಳಿಗೆಲ್ಲಾ ಎಣ್ಣೆಯಿಂದಲೇ ತೊಳೆಯುತ್ತಿದ್ದರು. ಸುಮಾರು ೨೦೦ ಮಣ ಎಣ್ಣೆ ಖರ್ಚಾಗಿರಬಹುದು ಇದೆಲ್ಲಾ ಹರಿಕೆ ಎಣ್ಣೆಯಂತೆ. ಅಲ್ಲಲ್ಲಿ ನಂದಿಕೋಲುಗಳೂ, ವಾದ್ಯಮೇಳಗಳೂ ಗುಂಪು ಗುಂಪು ಜನರೂ ಭೋರ್ಗರೆಯುತ್ತಿದ್ದವು ಆ ರಾತ್ರಿ ಸುಮಾರು ೩ ಘಂಟೆಗೆ ತೇರನ್ನು ಎಳೆಯಲು ಪ್ರಾರಂಭಿಸಿದರು ಕೂಡಲೇ ಸಾವಿರಾರು ತೆಂಗಿನ ಕಾಯಿಗಳು ಆ ರಥದ ಚಕ್ರಕ್ಕೆ ಎಸೆಯಲ್ಪಟ್ಟವು ಜನರ ತಲೆಗಳು ಒಡೆದುಹೋಗದೇ ಇದ್ದದ್ದು ಆಶ್ಚರ್ಯ. ಆ ರಥವು ದಾರಿಯಲ್ಲಿ ಬರುವಾಗ್ಗೆ ಒಂದು ತೆಂಗಿನ ಮರಕ್ಕೆ ಸಿಕ್ಕಿಕೊಂಡಿತು ಜನರು ಬಹು ಪ್ರಯಾಸದಿಂದ ಅದನ್ನು ಬಿಡಿಸಬೇಕಾಯಿತು ಯಾರೋ ಒಬ್ಬರು ಎಸೆದ ತೆಂಗಿನಕಾಯಿಯ ಚಿಪ್ಪು ಬೇರೊಬ್ಬರ ಕುಂಭಸ್ಥಾನಕ್ಕೆ ಹಾರಿ ಬಂದು ಬಿಡಿದು ರಕ್ತ ಸುರಿಯಿತು ಅವನು ಕೂಡಲೇ ಮನೆಗೆ ಹೋದನು ಇದು ಮಲ್ಲೇಶ್ವರ ಸ್ವಾಮಿಯಂತೆ. ಈ ರಥದ ಮೇಲೆ ಸುಮಾರು ೩೩ ಪ್ರತಿಮೆಗಳಿದ್ದವು ಈ ತೇರಿನ ಸಂದರ್ಭದಲ್ಲಿ ಆ ಬೆಟ್ಟದ ಮೇಲಿರುವ ಕೊಳದ ನೀರನ್ನು ಕುಡಿ ಮಾಡಿಸುವ ವಿಷಯವೂ, ಆ ರಥದ ಗಾಲಿಗಳಿಗೆ ತೆಂಗಿನ ಕಾಯಿಗಳನ್ನು ಎಸೆಯುವ ವಿಷಯವೂ, ಆ ರಥವು ಬರುವಾಗ್ಗೆ ದಾರಿ ಸರಿಯಾಗಿರುವ ವಿಷಯವೂ, ಎತ್ತು ಗಾಡಿಗಳೂ ಅಂಗಡಿಗಳೂ ಇನ್ನೂ ಹೆಚ್ಚು ದೂರವಾಗಿರುವ ವಿಷಯವೂ ಯೋಚಿಸಿ ಯಾರೊಬ್ಬರಿಗಾದರೂ ಯಾವ ಅಪಾಯವಾದರೂ ಸಂಭವಿಸದ ರೀತಿ ಏರ್ಪಾಡು ಮಾಡುವದು ಉತ್ತಮವಾಗಿದೆ.

WILLIAM & CO., BOMBAY.

ವಿಲಿಯೆಂ ಮತ್ತು ಕಂಪೆನಿ, ಫೋರ್ಟು, ಮುಂಬಯಿ.

ಅಮೃತಾಂಜನ

27-3

ಬಾಟ್ಲಿ ಒಂದಕ್ಕೆ ಕಿಮ್ಮತು ೮ ಆಣೆ. ವಿ. ಪಿ. ೧೨ ಆಣೆ.

ಅಮೃತಾಂಜನ—ಸುಖಾಂಜನ.
ಅಮೃತಾಂಜನ—ಸಂಜೀವನ
ಅಮೃತಾಂಜನ—ಪರಮಾಂಜನ.
ಅಮೃತಾಂಜನ—ದಿವ್ಯಾಂಜನ.
ಅಮೃತಾಂಜನ—ಶೀತಭಂಜನಿ
ಅಮೃತಾಂಜನ—ಶಿರೋಭಂಜನವಿಮರ್ದಿನಿ
ಅಮೃತಾಂಜನ—ಅಪೂರ್ವ ದರ್ಶಿನಿ.
ಅಮೃತಾಂಜನ—ತಕ್ಷಣ ಪರಿಹಾರಿಣಿ
ಅಮೃತಾಂಜನ—ಸಂಧಿವಾತಕ್ಕೆ.
ಅಮೃತಾಂಜನ—ತಲೆನೋವಿಗೆ
ಅಮೃತಾಂಜನ—ಜುಖಮ್ ಮತ್ತು ಗಾಯಕ್ಕೆ.
ಅಮೃತಾಂಜನ—ಗಂಟ್ಲುನೋವಿಗೆ.

ಶಿರೋವೇಧನ ವಾತ, ಎದೆನೋವು, ಗಂಟ್ಲುನೋವು, ಸಂಧಿವಾತ, ತಲೆನೋವು, ಶಿರೋಭಾರ, ಈ ಎಲ್ಲಾ ತರದ ರೋಗಕ್ಕೆ ಅಮೃತಾಂಜನವು ದಿವ್ಯವಾದ ಔಷಧವಾಗಿದೆ ಇದನ್ನು ತರಿಸಿ ಮನೆಯಲ್ಲಿ ಸದಾಕಾಲ ಇಟ್ಟರೆ, ಮೇಲೆ ಹೇಳಿದ ಯಾವತರದ ರೋಗಕ್ಕೂ ಎದೆ ಸಿಕ್ಕುವದಿಲ್ಲ. ಅಮೃತಾಂಜನದಿಂದ ಗುಣವು ಕಂಡುಬರದಿದ್ದರೆ ಹಣ ಹಿಂತಿರುಗಿ ಕೊಡಲ್ಪಡುವದು

ಗಜಕರ್ಣದ ಮುಲಾಮು ಡಬ್ಬಿ ಒಂದಕ್ಕೆ ೭ ಆಣೆ, ವಿ. ಪಿ. ೧೧ ಆಣೆ.—ಇದನ್ನು ಹಾಗುವದರಿಂದ ಎಲ್ಲಾ ತರದ ಕಜ್ಜಿ ನಾಶವಾಗುವದು. ಮೂರು ಸಾರಿ ಹಾಗುವದರೊಳಗೆ ಗಜಕರ್ಣವು ಹೋಗುವದು ಒಂದು ಸಾರಿ ಪರೀಕ್ಷಿಸಿ ನೋಡಿರಿ ಕ್ರಯ ಕಮ್ಮಿ, ಗುಣ ಹೆಚ್ಚು. ಇದನ್ನು ಹಚ್ಚಿದಲ್ಲಿ ಉರಿ ಬರುವದಿಲ್ಲ, ಚರ್ಮ ಕಪ್ಪಾಗುವದಿಲ್ಲ. ಇದರಿಂದ ಗುಣವು ಕಂಡುಬರದಿದ್ದರೆ ಹಣ ಪರತು ಕೊಡಲ್ಪಡುವದು

ಕೇಶವರ್ಧಿನೀ ತೈಲ—ಇದು ತಲೆಯ ಮೆದುಳನ್ನು ತಂಪುಮಾಡಿ ಅದನ್ನು ತೆಗದು ಕೂದಲು ಬೆಳೆಸುತ್ತದೆ ಇದಕ್ಕೆ ಚಲೋ ಪರಿಮಳವು ಬರುತ್ತದೆ. ಮೂರು ಔನ್ಸು ಬಾಟ್ಲಿಗೆ ೧-೦-೦

ಕಜ್ಜಿ ಮುಲಾಮು—ಇದು ಅತಿಶಯ ಅಗ್ಗವೂ ಗುಣದಾಯಕವೂ ಆಗಿರುತ್ತದೆ ೦-೩-೦

ಕಫಹಾರಿ—ಕೆಮ್ಮು, ದಮ್ಮು ಕ್ಷಯ, ಕೊರಳಿನಲ್ಲಿ ಕಫ ಮುಂತಾದ್ದಕ್ಕೆ ಇದು ಉತ್ತಮವಾದದ್ದು, ಬಾಟ್ಲಿ ೧ ಕ್ಕೆ. . ೧-೪-೦

ಜೀರ್ಣರಸಾಯನ—ಹೊಟ್ಟೆಯಲ್ಲಿ ಹಸಿವೆ ಆಗಲಿಕ್ಕೂ ನಾಲಿಗೆಗೆ ರುಚಿ ಬರಲಿಕ್ಕೂ ಉತ್ತಮವಾದದ್ದು . . ೧-೪-೦

ಜ್ವರಹಾರಿ—ಎಲ್ಲಾ ತರದ ಜ್ವರಗಳ ಮೇಲೆ ಈ ಔಷಧವು ಚಲೋದಾದದ್ದು ೦-೧೨-೦

ಸುಂದರೀ ತೈಲ—ಈ ತೈಲವನ್ನು ನಿರಂತರವಾಗಿ ಮೋರೆಯ ಮೇಲೆ ಹಾಗುವದರಿಂದ ಮೋರೆಯ ಮೇಲೆ ಇರುವ ಗಾಯದ ಕಲೆಗಳನ್ನೂ ಕಪ್ಪಾದ ಕಲಂಕಗಳನ್ನೂ ತೆಗದು ಚರ್ಮವನ್ನು ಮೃದುಮಾಡಿ ಚಲುವಿಕೆಯನ್ನು ಕೊಡುತ್ತದೆ ಹೆಂಗಸರಿಗೂ ಗಂಡಸರಿಗೂ ಉತ್ತಮವಾದದ್ದು ೦-೮-೦

ದಂತಮಂಜನ—ಹಲ್ಲು ಸ್ವಚ್ಛವಾಗುತ್ತೆ, ಘಟ್ಟಿಯಾಗುತ್ತೆ, ವಾಸನೆಯನ್ನೂ ರಕ್ತವನ್ನೂ ನಿಲ್ಲಿಸುತ್ತದೆ ಕ್ರಯ ಬಹಳ ಕಮ್ಮಿ ೦-೨-೦

ನೇತ್ರಾಂಜನ ೪ ಆಣೆ. ವಜ್ರಗುಟಿಕೆ ೧ ರೂಪಾಯಿ. ಕುಸುಮಾರಿ ಗುಟಿಕೆ ೧ ರೂಪಾಯಿ. ದಂತವಾತಹಾರ ೮ ಆಣೆ. ಕಫನಾಶಕ ಚೂರ್ಣ ೮ ಆಣೆ. ಚೇಳು ಕಡಿತದ ಮದ್ದು ೮ ಆಣೆ. ರಕ್ತವಾಹಾರಿ ೮ ಆಣೆ. ಕಸ್ತೂರಿಮಾತ್ರೆ ೧೦ ಆಣೆ ತಾಂಬೂಲಗುಟಿಕೆ ೮ ಆಣೆ.

ಎಲ್ಲಾ ತರದ ಔಷಧಗಳು ಇರುವದರಿಂದ ಕೆಟಲಾಗು ಬೇಕಾದವರು ಬರದು ತರಿಸಿಕೊಳ್ಳಬಹುದು

ವಿಲಿಯೆಂ ಮತ್ತು ಕಂಪೆನಿ, ಫೋರ್ಟು, ಮುಂಬಯಿ.

ಚಳಿಕಾಲಕ್ಕೆ ಇದರ ಸಮಾನ ಉಂಟೇ,

30-2

೫೦೦ ಕಾಲವಾ ಟೋಪಿಗಳು.

೧ ಟೋಪಿಗೆ ಕ್ರಯ ೧—೧—೦

ಈ ಟೋಪಿ ಇದ್ದರೆ ರುಮಾಲ್ ಅಗತ್ಯವಿಲ್ಲ ವಿ ಪಿ ಮೂಲಕ ಕಳುಹಿಸುತ್ತೇವೆ ವಿಳಾಸ — ಸಿ. ರಘುನಾಥಕಾಮತ್

೨ ಬಜಾರ ಬೆಂಗಳೂರು

ಮುಂಬಯಿ ವ್ಯಾಪಾರಮಾಡಲಿಚ್ಛಿಸುವವರು.

85-41

ಮುಂಬಯಿಯಲ್ಲಿ ಪ್ರತಿಯೊಂದು ಮಾಲಿನ ಥೋಕ ಅಳತೆ ಮತ್ತು ಮಾಲಿನ ವರ್ಣನೆ ಹಾಗೂ ಅನೇಕ ಉಪಯುಕ್ತ ಮಾಹಿತಿಯಿರುವ ಕನ್ನಡ ಪುಸ್ತಕ—ಕ್ರಯ ೧೦ ಆಣೆ ವಿ ಪಿ ಯಿಂದ ಕಳುಹಿಸುವೆವು ಟಪಾಲು ಖರ್ಚು ಬೇರೆ ಬುಕ್ಕು ಸೇಲರರಿಗೆ ಯೋಗ್ಯ ಕಮಿಷನ್ ದೊರೆಯುವದು. ಮತ್ತು ಲಿಂಗಾಯತ ಧರ್ಮಸಂಬಂಧ ವೀರಶೈವೋತ್ಪತ್ತಿ ಕ್ರಿಯಾಲಕ್ಷಣವೆಂಬುವ ಕನ್ನಡ ಪುಸ್ತಕ—ನಾಲ್ಕು ಆಣೆ ಅಲ್ಲದೆ ಆಕ್ಷರದಿಂದ ಬರೆಯಿರಿ ಪತ್ತಾ ಚನ್ನಬಸಪ್ಪ ಮಲ್ಲಪ್ಪ ವಾರದ, ಪೋಸ್ಟ್ ಮಾಂಡ್ವಿ, ಮುಂಬಯಿ.

ಉತ್ತಮವಾದ ಸಿದ್ಧೌಷಧಗಳು.

1-10

ಆರ್ಯವೇದದಿಂದಲೂ ಬಂದ ನಮ್ಮ ಔಷಧಿಗಳು ಲಕ್ಷಾಂತರ ರೋಗಿಗಳಿಗೆ ಉಪಯೋಗಿಸಿ ಗುಣ ಕಂಡುಬಂದವುಗಳಾಗಿವೆ. ಅವುಗಳೆಲ್ಲಾ ಮೂಲಿಕೆಗಳಿಂದ ತಯಾರಾಗಿರುತ್ತೆ ತಿಂಗಳೊಂದಕ್ಕೆ ಅನೇಕರು ಔಷಧಿ ಸೇವಿಸುತ್ತಲೂ ಇರುವ ಸಂಗತಿ ಎಲ್ಲರಿಗೂ ಗೊತ್ತಿದೆ

(೧) ಸಂಜೀವಿನಿ ತೈಲ ಸಮಸ್ತ ಮಹಾರೋಗಗಳಿಗೂ ಕಾಲು ಸೀಸೆಗೆ ೧-೯-೦ (೨) ಭೃಂಗರಾಜ ತೈಲ ಎಲ್ಲಾ ವಿಧದ ಶಿರೋರೋಗಗಳಿಗೆ ಕಾಲು ಸೀಸೆಗೆ ೦-೧೦-೦ (೩) ಭೇದಿ ಎಣ್ಣೆ ಸುಖಪ್ರವರ್ತಿತವಾಗುವುದು. ಕಾಲು ಸೀಸೆಗೆ ೦-೧೧-೦ (೪) ಮಹಾಲಕ್ಷ್ಮೀ ಧಾತುಶಕ್ತಿಯನ್ನುಂಟುಮಾಡಿ ಪುಷ್ಟಿಮಾಡುತ್ತೆ. ಸೇರಿಗೆ ೨-೦-೦. (೫) ಸೌಭಾಗ್ಯ ಶಂಕರಾಮೃತ, ದೇಹ ಇದರ ಸೇವನೆಯಿಂದ ಬಾಣಂತಿಸನ್ನಿ ಕ್ಷಯ ಮೊದಲಾದ ರೋಗಗಳನ್ನು ಪರಿಹರಿಸುತ್ತೆ ಸೇರಿಗೆ ೨-೦-೦ ಹುಚ್ಚುನಾಯಿ, ಕೊಳತ ಮಂಡಲ ಇವುಗಳಿಂದುಂಟಾದ ಪ್ರಬಲ ರೋಗಗಳಿಗೂ ಚಿಕಿತ್ಸೆಯು ದೊರೆಯುವದು

ನಮ್ಮ ಕ್ಯಾಟಲಾಗು ತರಿಸಿ ನೋಡಿ—ಪಂಡಿತ ಕೃಷ್ಣಾಚಾರ್ಯ, ನಿಖಿಲ ರೋಗಾಪಹರಿ ವೈದ್ಯಶಾಲಾ, ದೊಡ್ಡಪೇಟೆ, ಮೈಸೂರು.

ಇಲ್ಲಿನೋಡಿ !

22 4

ತುಮಕೂರು ವಿಕ್ಟರ ಇಲಾಖೆಯಲ್ಲಿ, ಯೂರೋಪಿಯನ್ ಮೇಲ್ವಿಚಾರಣೆಯಿಂದ, ಉತ್ತಮ ತರದ ಹಾಸನದ ಟೋಪಿಗಳು ಅತಿ ಶ್ರೇಷ್ಠವಾದ ಊಲ್‌ದಾರದಿಂದ ತಯಾರಾಗುತ್ತವೆ ಕ್ರಯ ೧೦ ಆಣೆ ಯಿಂದ ೧ರೂ ೧೨ ಆಣೆವರಿಗೂ ದೊರಕುವವು ಅಪೇಕ್ಷಿಸುವವರಿಗೆ ಕ್ರಯದ ಪಟ್ಟಿಯನ್ನು ರವಾನಿಸುವೆವು ವಿಳಾಸ:—ಮೇನೇಜರ್, ಹಾಸನದ ಟೋಪಿ ಕಾರ್ಖಾನೆ, ವಿಕ್ಟರ ಇಲಾಖೆ, ತುಮಕೂರು

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

11 7

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಟೀಳಾದದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ:—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು. (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಸೀದಾ ಬರೆದು ತರಿಸಿಕೊಳ್ಳಿ ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ. ಸಾದ, ಕೆಂಪು, ಕಪ್ಪು, ಬೆರಿಕೆ, ಕಾಫಿ ಟೋಪಿಗಳು ೧ ರೂ. ೮ ಆ; ೧ ರೂ ೬ ಆ; ೧ ರೂ. ೪ ಆ.

ರೇಷ್ಮೆ ಚುಕ್ಕೆಯುಳ್ಳ ಟೋಪಿಗಳು ೧ ರೂ. ೮ ಆ.; ೨ ರೂ.

ದಾರದ ಟೋಪಿಗಳು ೧ ರೂ. ೧೨ ಆ.; ೧ ರೂ. ೮ ಆ.; ೧ ರೂ. ೬ ಆ

ಉಸುಕಿನ ಟೋಪಿಗಳು ೧ ರೂ. ೮ ಆ ; ೧ ರೂ. ೬ ಆ.

ಕೂಸುಗಳ ಟೋಪಿ, ಸೂರ್ಯ ಮೇಜೋಡು, ಅರ್ಧ ಮೇಜೋಡು. ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು.

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

22—2—1907 ರಿಂದ 1—3—1907 ರ ವರೆಗೆ

ಸ್ಥಳ.	ಪ್ಲೇಗ್ ಹಿಡಿದದ್ದು.	ಪ್ಲೇಗ್ ಸತ್ತದ್ದು	ಹೊರಗಿನ ... ಈ ವಾರದ ಸಂಖ್ಯೆ	
ಬೆಂಗಳೂರು ಪಟ್ಟಣ	33	25	23	17
ಮೈಸೂರು ,,	60	47	0	0
ಬೆಂಗಳೂರು ಡಿಸ್ಟ್ರಿಕ್ಟು	33	25	13	7
ಮೈಸೂರು ,,	10	6	4	3
ಕೋಲಾರ್ ,,	0	0	8	1
ಕೋಲಾರ್ ಚಿನ್ನದ ಗಣಿಗಳು	11	7	15	11
ತುಮಕೂರು ಡಿಸ್ಟ್ರಿಕ್ಟು	1	1	0	0
ಹಾಸನ ,,	7	8	11	4
ಚಿತ್ರದುರ್ಗ ,,	0	0	5	7
ಕಡೂರ್ ,,	8	6	4	3
ಶಿವಮೊಗ್ಗ ,,	0	0	16	9
ಜುಮ್ಲಾ	163	125	96	61

ಶಾಲಿವಾಹನ ಶಕ ವರುಷಂಗಳು ೧೮೨೯ ನೇ ಪರಾಭವ ಸಂವತ್ಸರದ ಫಾಲ್ಗುಣ ಬಹುಳ ಅಮಾವಾಸ್ಯ ಗುರುವಾರದಿಂದ ಶಕ ವರುಷಗಳು ೧೮೩೦ ನೇ ಪ್ಲವಂಗ ಸಂವತ್ಸರದ ಅಧಿಕ ಚೈತ್ರ ಶುದ್ಧ ಷಷ್ಠಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ.

೧೯೦೭ ನೇ ಇಸವಿ ಮಾರ್ಚಿ.

ತಾ.	ವಾರ.	ತಿಥಿ.	ಘಳಿಗೆ.	ನಕ್ಷತ್ರ	ಘಳಿಗೆ.	ಆದಿ ಸಂಘಟನ ವಾಸ
14	ಗುರು ¶	ಅಮಾ	11-31	ಪೂಭಾ	25 58	1
15	ಶುಕ್ರ †	ಪಾಡ್ಯ	9-30	ಉ ಭಾ	25-56	2
16	ಶನಿವಾ ::	ಬಿದಿಗೆ	9-2	ರೇ	27-28	3
17	ರವಿವಾ	ತದಿಗೆ	9-56	ಅ	30-13	4
18	ಚಂದ್ರ	ಚೌತಿ	12-2	ಭ	33 56	5
19	ಕುಜ ‡	ಪಂಚಮಿ	15-16	ಕೃ	39-9	6
20	ಬುಧ	ಷಷ್ಠಿ	19-8	ರೋ	44-58	7

¶ ಷಡಶೀತಿಪುಣ್ಯಕಾಲ, ಕಾಲಾಷ್ಟಕಪಟ್ಟಿ † ಚಾಂದ್ರಸಂವತ್ಸರಾರಂಭ, ಪಂಚಾಂಗಶ್ರವಣಂ, ಆರೋಗ್ಯಪ್ರತಿಪತ್. :: ಮಹಾವಿಷ್ಣು ಸಪರ್ ಚಂದು ೧ ‡ ಷಷ್ಟಿತಿಥಿ, ದಗ್ಧಯೋಗ.

ಪೇಟೇ ಧಾರಣೆ.

ದಿನಸಿ	ಮೈಸೂರು.	ಬೆಂಗಳೂರು
ಸಣ್ಣ ಅಕ್ಕಿ ಪಲ್ಲ ೧ಕ್ಕೆ ರೂ	೧೩-೮-೦	೧೩-೦-೦
ಕಂಬೂತಿ ಅಕ್ಕಿ ಅವಲ್	೧೨-೪-೦	೧೬-೦-೦
,, ಗಟ್ಟಿ	೧೨-೦-೦	೧೩-೦-೦
ದಪ್ಪ ಅಕ್ಕಿ	೧೩-೬-೦	೧೪ ೮-೦
ಸಣ್ಣಕ್ಕಿ ಅವಲ್	೧೫-೦-೦	೧೪-೦-೦
,, ಮಧ್ಯಮ	೧೪-೦-೦	೩-೮-೦
ತೊಗರೀ ಬೇಳೆ ಪಲ್ಲ ೧ಕ್ಕೆ	೧೧-೦-೦	೯-೭-೮-೦
,, ಮಧ್ಯಮ	೧೦-೧೨-೦	೭-೨-೦
ಹುರಿ ರಾಗಿ ಪಲ್ಲ ೧ಕ್ಕೆ	೭-೪-೦	೬ ೮-೦
ಜೋಳ	೬-೦-೦	೬-೪-೦
ಹುರುಳಿ	೫-೮-೦	೭-೮-೦
ಹಲಸಂದೆ ಪಲ್ಲ ೧ಕ್ಕೆ	೧೦-೧೨-೦	೧೧-೧೦-೦
ಬಿಳೀ ಅವರೆ	೯-೪-೦	೭-೧೦-೦
ಹೆಸರು	೧೧-೮-೦	೯-೮-೦
ಉದ್ದು	೧೨-೦-೦	೧೦-೧೨-೦
ಕಡಲೆ	೧೧-೮-೦	೧೦-೦-೦
ಎಳ್ಳು ಸ. ೧೨೭ ಕ್ಕೆ	೧೭-೦-೦	೨೨-೦-೦
ಹುರುಳಿ	೭-೬-೦	೭-೪-೦
ಹರಳು ೧೨೭ ಸೇರಿಗೆ	೧೯-೦-೦	೧೬-೮-೯
ಸೀಗೇಕಾಯಿ ಮಣ ೧ಕ್ಕೆ	೨-೨-೦	೧ ೧೨ ೯
ಮೆಣಸಿನಕಾಯಿ	೩-೪-೦	೩-೦-೦
,, ಮಧ್ಯಮ	೩-೦-೦	೨-೧೨-೯
ಬೆಲ್ಲ ದೊಡ್ಡ ಅಚ್ಚು	೪-೪-೦	ಮ ೧-೧೦-೦
ಒಳ್ಳೆಣ್ಣೆ ಮಣ ೧ಕ್ಕೆ	೪-೮-೦	೫-೦ ೦
ಹರಳೆಣ್ಣೆ ,,	೬-೧೨-೦	೫-೨-೦
ಕೊತ್ತುಂಬರಿ ಪಲ್ಲ ೧ಕ್ಕೆ	೯-೦-೦	೭-೨-೮
ಉಪ್ಪು ,,	೫-೧೧-೦	೬-೧೦-೮
ಹುಣಸೇ ಹಣ್ಣು	೦-೧೨-೦	೧-೦ ೦
,, ಹಳೇದು	೦-೮-೦	೦-೧೪-೦
ತುಪ್ಪ ಮಣ ೧ಕ್ಕೆ	೧೬-೦ ೦	೧೩ ೮-೦
ಸೀಮೆಯೆಣ್ಣೆ ಟಿನ್ ೧ಕ್ಕೆ	೫-೪-೦	೪ ೦ ೦
ತೆಂಗಿನಕಾಯಿ ೧೦೦ ಕ್ಕೆ	೬-೮-೦	೬ ೪-೦
ಅಡಿಕೆಕಾಯಿ ಮಣ ೧ಕ್ಕೆ	೧-೦-೦	೧ ೦-೦
ಅಂಟುವಾಳದ ಕಾಯಿ ಮಣ ೧ಕ್ಕೆ	೦-೧೨-೦	೯೦ ೯
ಚಿನ್ನ (ಪವನ್) ಕೆಂಪು	೧೫-೪-೦	೧೫-೩-೦
,, ,, ಪಸಿಮೆ	೧೫-೧೦-೦	೧೫-೬-೦
,, ,, ಗಟ್ಟಿ ತೊಲ ೧ಕ್ಕೆ	೨೩ ೧೨-೦	೨೪-೪-೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	೮೫-೦ ೦	೮೪-೦-೦

Printed and Published by the Rev. E. W. THOMPSON, M. A., Proprietor and Manager, Wesleyan Mission Press, Mysore. 14/3/1907.

REGISTERED
M 20

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಕ್ರಯ ೧ ದುಡ್ಡು. | ಕ್ರಯ ೧ ದುಡ್ಡು.

ಸಂಪುಟ ೨೦ | ಮೈಸೂರು—ಸರ್ ೧೯೦೭ ನೇ ಇಸವಿ ಮಾರ್ಚಿ ತಾರೀಖು ೨೧ ನೇ ಗುರುವಾರ. | ಸಂಚಿಕೆ ೪೨



ದಿ ಸಿಟಿ ಸಿಲ್ವರ್ ವಾಚ್.

13 S

(ಚಿತ್ರದಲ್ಲಿ ಕಂಡಂತೆ.)

ಸ್ಟೆಂಪ್ ಕೀಲಿ—ಮುಕ್ಕಾಲು ಪ್ಲೇಟ್, ಜೂಯಲ್ ಚಲನೆ ಹಾಲ್‌ಮಾರ್ಕ್ ಉಳ್ಳ ಬೆಳ್ಳಿ ಅಲ್ಬರ್ಟ್ ಸರಪಣಿ ಮತ್ತು ಸೀಲ್ ಸಹಿತ, ಸಂಪೂರ್ಣ ದಸ್ತಾನ್ ಪೆಟ್ಟಿಗೆಯಲ್ಲಿರುವುದು ಕ್ರಯ (ಹಿಂದ ಸ್ಥಾನದ ಅಂಚೆ ವೆಚ್ಚ ಸೇರಿ) ರೂ ೧೩ ೧೪ ೦

ಮೇಲಾದ ಬೆಳ್ಳಿ ಗಡಿಯಾರಗಳು ಮುಚ್ಚಳವಿಲ್ಲದ್ದು ಕೀಲಿ ತಿರಿಗಿಸ ವಷ್ಟೂ, ಕೀಲಿ ಇಲ್ಲದ್ದು ಕ್ರಯ ರೂ ೯ ೬, ರೂ ೧೧-೧೦ ೧೬-೮, ರೂ ೨೦ ೮

ಬಲವಾದ ಬೆಳ್ಳಿ ಅರ್ಧ ಹಂಟರ್ ಗಡಿಯಾರಗಳು — ಕ್ರಯ ೧೪, ರೂ ೧೯ ೧೪, ರೂ ೨೩ ೪, ರೂ ೨೮-೧೪

ಬಲವಾದ ಫುಲ್ ಹಂಟರ್ ಗಡಿಯಾರಗಳು — ರೂ ೧೩ ೮, ರೂ ೧೪ ರೂ ೧೬ ೮, ೧೯-೨ ರೂ ೨೩ ೧೦

ಪಾಕೆಟ್ಯುಲರ್ ನಿಕ್ಕಲ್ ಗಡಿಯಾರಗಳು, ಸ್ವಲ್ಪ ಸ ದ್ದುಳ್ಳವು, ಕೀಲಿ ಇಲ್ಲ, ಲೀವರ್ ಚಲನೆ, ಸುಂದರವಾದ ಒಳ್ಳೆ ಸಮಾನ ಮುಚ್ಚಳ ನಂಬಿಕೆಯಾದ ಗಂಟೆ ತೋರಿಸುವದ, ಕ್ರಯ ರೂ ೪ ೮, ರೂ ೫-೪, ರೂ ೬

ಬಳೆ ತಳೆಯಾದ ಚಪ್ಪಟೆಯಾಗಿರುವ ಗಡಿಯಾರಗಳು — ೧) ಕಪ್ಪು ಉಕ್ಕಿನ ಮುಚ್ಚಳ ಉಳ್ಳವು ಕ್ರಯ ರೂ ೧೦-೮,) ರೂ ೧೬ ೧೪ (೨) ಒಳ್ಳೆಯ ಮುಚ್ಚಳ ಉಳ್ಳವು ಕ್ರಯ ರೂ ೧೪ ೧೦, ರೂ ೨೯

ಬೆಳ್ಳಿ ಆಲ್ಬರ್ಟ್ ಸರಪಣಿಗಳು ಕ್ರಯ ರೂ ೩ ೧೪, ರೂ ೪ ೮, ರೂ ೫ ೧೩ ರೂ ೭ ೧, ರೂ ೮-೧೦

ಚಿನ್ನ ತಂಬಿದ ಸರಪಣಿಗಳು ಕ್ರಯ ರೂ ೬-೬, ರೂ ೮ ೧, ರೂ ೯ ೩

ಈ ಕ್ರಯದಲ್ಲಿ ಹಿಂದುಸ್ಥಾನದ ಅಂಚೆ ಹಾಸಲೂ ಸೇರಿದೆ

ಎಂಟು ದಿನಕ್ಕೊಮ್ಮೆ ಕೀಲಿ ತಿರಿಗಿಸುವಂಥ ವಾಚುಗಳು, ಇನ್ನೂ ಎಲ್ಲಾ ತರದ ತಯಾರಿ ಮತ್ತು ಚಿತ್ರಕೆಲಸ ಮಾಡಿದ ವಾಚುಗಳೂ, ವಿಲಾಯತಿಯಲ್ಲಿ ತಯಾರಾದಲ್ಪಡ ಸಂಥಾ ಸಕಲ ವಿಧವಾದ ಸಾಮಾನುಗಳೂ ಜವಾಹರಿ ನಗಗಳು ಕೇಳಿದವರಿಗೆಲ್ಲಾ ಕಳುಹಿಸಿಕೊಡುತ್ತೇವೆ

ನಗದು ಹಣ ಕಟ್ಟಿ ಇಂಗ್ಲಿಷಿನಲ್ಲೇ
ನಮಗೆ ಬರೆಯಬೇಕು.

ವಿಳಾಸ —Messrs Bride and Eastland
29 to 35 City Road London, E C

ಕೊಡಗು ದೇಶದ ಶ್ರೇಷ್ಠವಾದ ಉತ್ಕೃಷ್ಟ ಕಾಫಿಯು.

ಹುರಿಯದೆ ಇರುವದು ಅಥವಾ ಆಗತಾನೆ ಹುರಿದದು.
ಪೈದಮಾಡಿದ ಸ್ಥಳದಿಂದಲೆ ನೆಟ್ಟಗೆ ರವಾನಿಸಲ್ಪಡುವದು.

187

ವ್ಯಾಪಾರದ (C C E C) ಹೆಗ್ಗುರ್ತು

ಕಾಡುಕೋಣದ ತಲೆಯ ಮುದ್ರೆ ಇದೆ

ಸಂಪೂರ್ಣವಾಗಿ ಯಂತ್ರದಿಂದಲೆ ಸಿದ್ಧಪಡಿಸಿದ್ದು ಹೆಗ್ಗುರ್ತು ಉಳ್ಳ ವಿಲಾಸದ ಚೀಟಿ ಸುತ್ತಿಲ್ಲದಿರುವ ಸಿಕ್ಕುವುವುಗಳಲ್ಲ ಅವು ನಮ್ಮದಲ್ಲ ಏಜಂಟರುಗಳು ಬೇಕು ಇಂಥವರಿಗೆ ಅನುಕೂಲದ ದರ ತಿಳಿಯುವವರು ದಯವಿಟ್ಟು ಈ ಪತ್ರಿಕೆಯ ಹೆಸರನ್ನು ಸೂಚಿಸಿ

ವಿಳಾಸ —ಮ್ಯಾನೇಜರ್, ಮ್ಯಾಥಿಸನ್ಸ್
ಕಾಫಿ ವರ್ಕ್ಸ್, ಹುಣಸೂರು.

ಜ್ವರಹರಿ.

157



ಇದು ಸಾಧಾರಣ ಜ್ವರ, ಚಳಿ ಜ್ವರ ಮರೆಜ್ವರ, ಪಿತ್ಥಜ್ವರ ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನು ಬಹು ಬೇಗನೆ ವಾಸಿಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ವ ರಾಮತ್ ಕಲಾವಾ ಸಬ್ ಡಿವಿಜನ್ ಆಫೀಸರ್ ಎಸ್ ಓ ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಡೋಸಿನ ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚನ್ನಾಗಿ ಗುಣ ಹೊಂದಿರುವರು ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವರು ಕರಿಂದ ದಯವಿಟ್ಟು ಇನ್ನೊಂದು ೨೦ ಡೋಸಿನ ಸೀಸೆಯನ್ನು ವಿ. ಪಿ ಪಿ ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ

ಕ್ರಯ —ಸೀಸೆ ೧ ಕ್ಕೆ ೮ ಆಣೆ, ೧ ರೂ, ೧—೮ ರೂ ರೂ ೨—೧೨ ಆ, ೧೦ ರೂ, ಹನ್ನೆರಡು ಸೀಸೆ ತರಿಸಿಕೊಂಡರೆ, ಪೋಸ್ಟೇಜು ಮಾಫಿ ಬಿಡಲಾಗುವದು.

****

ಓಮುಂ ಕರ್ಪೂರ.

Omum-Carpoor

ಈ ಔಷಧವು ಅಜೀರ್ಣ, ಶೀತಭೇದಿ ಸಾಧಾರಣ ಹೊಟ್ಟೆ ಕಳ್ಳುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು ಇದು ಹೆಂಗಸರು ತಿಂಗಳ ಬಿಂದುವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕಡ ಗುಣಪಡಿಸುತ್ತದೆ ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ಸಿಕ್ಕುವದು

ಕೌತಪಡ ಅಸಿಸ್ಟೆಂಟ್ ಸರ್ಜನ್ ಗಣಪತಿಯ ಮ— ತೆನ್ನಿಯು ೦ಂ ಕರ್ಪೂರವನ್ನು ನಾನೂ ನನ್ನ ಕಾರ್ಯದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ಮನುಷ್ಯರಿಗೆಂದಲೂ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧವೆಂತ ಬರೆದಿದ್ದಾರೆ

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ —
ಹೆಸ್ರಿಯವರ ಸ್ಟೇಟ್ ಇಂಡಿಯಾ ಔಷಧಗಳ ಕಂಪನಿ,
ಸೆಕೆಂಡ್ ಬೀಚ್ ಲೈನ್, ಮದ್ರಾಸ್

ಮಕ್ಕಳ ಆರೋಗ್ಯವನ್ನು

ಯಾವಾಗಲೂ ಕಾಪಾಡುವದು ಹತ್ತಾವರ ಮೇಲೆ ಬಿದ್ದ ಭಾರವಾಗಿದೆ ಸಣ್ಣ ಮಕ್ಕಳ ಹೇಳಿದಂತೆ ಕೇಳದೆ ಸಿಟ್ಟಿಗೆ ಒಳಪಡುವಂಥವ ಗಟ್ಟಿ ಆಹಾರರುಚಿ ಕಡಿಮೆಯುಳ್ಳವನಾಗಿದ್ದರೆ ಕಂಡ ಕ ...

SCOTT'S EMULSION

11

(ಸ್ಕಾಟ್ಸ್ ಇಮಲ್ಷನ್)

ಎಂಬೀ ಸೇವನಾ ಔಷಧವನ್ನು ಕೊಡಬೇಕು

ಹಾಲಿನಲ್ಲಿ ಕೆಲವು ತೊಟ್ಟು ಬೆರಸಿ ಕೊಟ್ಟ ಕೂಡಲೇ ದೊಡ್ಡ ವ್ಯತ್ಯಾಸ ತೋರುವದು

ಅದು ಸಂತೋಷವೂ ಆನಂದವೂ ಉಂಟುಮಾಡುವದಾಗಿ ಆಹಾರದ ರುಚಿ ಹೊಂದಿಸುವ ಚನ್ನಾಗಿ ತೋರಿಸುವದು.

ಕೈಯಿಂದ ಮುಟ್ಟಿ ತಯಾರಿಸಿದ್ದಲ್ಲ

ಎಲ್ಲಾ ಔಷಧಮಾರಾಟಗಾರರಲ್ಲೂ ಸಿಕ್ಕುತ್ತದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್
ಔಷಧಗಳ ಕಾರ್ಖಾನೆ,
ಲಂಡನ್, ಇಂಗ್ಲೆಂಡ್

ಮೀನು ಮನುಷ್ಯ ಇರುವ ಔಷಧ ಕೇಳಿ ಕೊಂಡು ಕೊಳ್ಳಿ.

ಬೆಲಗ ಬೆಳ್ಳಿ—ಗುಣಕ್ಕೆ ಭಂಗಾರ.

86 43

ಇಂಥಾ ಕಾಗದಗಳು ನಮ್ಮಲ್ಲಿಗೆ ಅನೇಕ ಬಂದಿವೆ

ಮೆ॥ ನಾರಾಯಣ, ಜವಳಿ ವರ್ತಕ, ಮಹೇಶ್ವರ, ಇವರು ಬರೆಯುವದು—" ಕ್ಲೆಮೆಂಟ್‌ಯವರ ಮ್ಯಾಜಿಕ್ ಬಾಂ ಬಹಳ ತೃಪ್ತಿಕರವಾದದ್ದೆಂದು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ ಅದು ತುಂಬಾ ಗುಣಕೊಡುವಂಥಾದ್ದು ದಯವಿಟ್ಟು ಇನ್ನೂ ಮೂರು ಸೀಸೆಯನ್ನು ವಿ ಪಿ ಮೇಲೆ ಕಳುಹಿಸಿಕೊಡಿ " ಮೆ॥ ಜೆ ಡಬ್ಲಿಯು ಸಾಮ್ಯುಯಲ್, ಪೋಸ್ಟ್ ಮಾಸ್ಟರ್, ಟ್ರಾವನ್ಕೋರ್, ಇವರು ಬರೆಯುವದು " ನಿಜವಾಗಿಯೂ ಇದು ಎಲ್ಲಾ ತರದ ನೋವುಗಳಿಗೂ ಅದ್ಭುತವಾದ ಔಷಧವೆನ್ನುವದಕ್ಕೆ ಸಂಶಯವಿಲ್ಲ " ಮಿಸೆಸ್ ಇ ಕ್ಯಾಂಪ್‌ಸಿಂಗ್, ವೈಕಲ್ಲಾ, ಬೊಂಬಾಯಿ, ಇವರು ಬರೆಯುವದು—" ನಿಮ್ಮ ಮ್ಯಾಜಿಕ್ ಬಾಂ ಔಷಧವು ನನ್ನ ಕಾಲಿನ ಕೆಟ್ಟ ನೋವನ್ನು ಸಂಪೂರ್ಣವಾಗಿ ವಾಸಿಮಾಡಿದೆ " ಮಿ ಸೆಸ್ ಇ ವೇಸ್ಟ್, ರಂಗೂನ್, ಇವರು ಬರೆಯುವದು—" ನಾನು ಯಾವಾಗಲೂ ನಿಮ್ಮ ಕ್ಲೇಮೆಂಟ್ಸ್ ಮ್ಯಾಜಿಕ್ ಬಾಮನ್ನು ಗಂಟು, ಎದೆಯ ನೋವುಗಳಿಗೆ ಉಪಯೋಗಿಸುತ್ತೇನೆ ಆದದರಿಂದ ನನಗೆ ಪ್ರತಿ ಸಲವೂ ಚನ್ನಾಗಿ ವಾಸಿಯಾಗಿದೆ ಈ ಔಷಧದಿಂದ ಪಾರ್ಶ್ವನೋವು, ಕೀಲುಗಳ ಬಾಧೆ, ಹೊಟ್ಟೆನೋವು, ಬೆನ್ನು ಳೆಯುವುದು, ತಲೆನೋವು, ಕೆಮ್ಮು, ಕಿಲುಬು ಗಳು, ಕೀಲುಗಳು ಕತ್ತರಿಸುವುದು, ಕೊರಳು ಊತ, ಕೈ ಕಾಲು ಊತ ಇವೆಲ್ಲಾ ಗುಣವಾಗುತ್ತವೆ ಇದನ್ನು ಹಾಕಿ ಚನ್ನಾಗಿ ಒತ್ತಿದರೆ ಬಾಧೆ ಪರಿಹಾರವಾಗುವುದು ಕ್ರಯ —೧ ಬಾಟ್ಲಿಗೆ ೧೨ ಆಣೆ, ಪೋಸ್ಟೇಜ್ ೪ ಆಣೆ ೩ ಬಾಟ್ಲಿಗೆ ಅಂಚೆವೆಚ್ಚ ಸೇರಿ ರೂ ೨—೪ ಆಣೆ

ನಮ್ಮ ವಿಳಾಸ —ಎಚ್ ಡಬ್ಲಿಯು ಅರ್ನ್,
ಸಿಮೆಟ್ರಿ ರೋಡ್, ವೇಪೇರಿ, ಮದರಾಸ್

ಬಿಳಗಿ ರಾಜವೈದ್ಯರ ಬಳ್ಳಿ ಖಾತ್ರಿಯಾದ ಔಷಧಗಳು.

6-11

ಸುಖದಾಯಿನೀ ಗುಳಿಗೆ:—ಇದರಿಂದ ಕೆಮ್ಮಿನ ಬಾಧೆ ಬಹು ಬೇಗನೆ ಗುಣಹೊಂದುವದು. ೧೦ ವರುಷದ ಮೇಲಿನ ಯಾವ ಪ್ರಾಯದವರಾದರೂ ಸೇವಿಸಬಹುದು ಕ್ರಯ ೨೪ ಗುಳಿಗೆಗೆ ೧ ರೂಪಾಯಿ. ವಿ. ಪಿ. ಚಾರ್ಜು ಆಣೆ ೪

ಚಿಕ್ಕಹುಡುಗರ ಬಾಲಗ್ರಹದ ಔಷಧ—ಜ್ವರಯುಕ್ತ ಅಥವಾ ಜ್ವರವಿಲ್ಲದೆ ಥಕ್ಕನೆ ಹುಟ್ಟುವ ಈ ಉಪಹತಿಗೆ ಇದರಿಂದ ಬೇಗನೆ ಗುಣಹುಟ್ಟುವದು. ಕ್ರಯ ೧ ಕುಪ್ಪಿಗೆ ೮ ಆಣೆ ವಿ ಪಿ ೪ ಆಣೆ.

ಗಜಕರ್ಣದ ಮುಲಾಮು.—೨ ಯಾ ೩ ಆವರ್ತಿ ಇದನ್ನು ಹಚ್ಚುವದರಿಂದ ಎಂಥ ಕಠಿಣವಾದ ಗಜಕರ್ಣ (ಹುಳಕಡ್ಡಿ) ಇದ್ದರೂ ಗುಣಹೊಂದುವದು. ಕ್ರಯ ೧ ಡಬ್ಬಿಗೆ ೮ ಆಣೆ. ವಿ. ಪಿ ಚಾರ್ಜು ಆಣೆ ೪.

ಶತಮೂಲಿಕಾ ತೈಲವು:—ಚಳೀಬೋಕ್ಕೆ ಹಳೇಕಜ್ಜಿ ತುರಿಗಜ್ಜಿ ಬಣಗಜ್ಜಿ ಮುಂತಾದ ಆಬಾಲವೃದ್ಧರ ಚರ್ಮವ್ಯಾಧಿಯೂ ಗುಣಹೊಂದುವದು. ಕ್ರಯ ೧ ಔನ್ಸಿನ ಕುಪ್ಪಿಗೆ ೧೦ ಆಣೆ; ೨ ಔನ್ಸಿನ ಕುಪ್ಪಿಗೆ ೧ ರೂಪಾಯಿ ವಿ. ಪಿ. ೫ ಆಣೆ.

ವಾಯುಹಾರಕ ತೈಲವು.—ಇದನ್ನು ಲೇಪಿಸಿದ ೫ ನಿಮಿಷದೊಳಗೆ ಸಂಧಿವಾತ, ಕಟಿವಾತ, ವ ಇತರ ವಾಯುಗಳ ನೋವು, ತಲೆನೋವು, ಚಿಕ್ಕಹುಡುಗರ ಉಬ್ಬಸ, ಕೆಮ್ಮು ಕೂಡ ಗುಣಹೊಂದುವದು ಕ್ರಯ ೧ ಕುಪ್ಪಿಗೆ ೧ ರೂಪಾಯಿ ವಿ ಪಿ. ಚಾರ್ಜು ಆಣೆ ೪.

ಜ್ವರಗಳಿಗೆ ಸುಧಾಬಿಂದು.—ಹೊಟ್ಟೆಯೊಳಗೆ ಸೇವಿಸಬೇಕು. ಕ್ರಯ ೧ ಕುಪ್ಪಿಗೆ ೧೨ ಆಣೆ. ವಿ. ಪಿ ಚಾರ್ಜು ಆಣೆ ೪.

ಜ್ವರಗಳಿಗೆ ಮುಲಾಮು.—ಬಾಹ್ಯಲೇಪನಕ್ಕೆ. ಕ್ರಯ ಡಬ್ಬಿ ೧ಕ್ಕೆ ೧ ರೂಪಾಯಿ ವಿ ಪಿ ಚಾರ್ಜು ಆಣೆ ೪

೧ನೇ ನಂಬರ ಶೀತಜ್ವರ ಗುಳಿಗೆಗಳು.—ಆಬಾಲವೃದ್ಧರಿಗೆ ಹುಟ್ಟುವ ಪ್ರತಿನಿತ್ಯದ ಮತ್ತು ೩ನೆ ವ ೪ನೆ ದಿವಸದ ಪಾಳಿಯಾಗಿ ಕೂಡ ಬರುವ ಶೀತಜ್ವರಕ್ಕೆ ಕ್ರಯ ೧ ಡಬ್ಬಿಗೆ ೧ ರೂಪಾಯಿ ವಿ ಪಿ ಚಾರ್ಜು ಆಣೆ ೪

೨ನೇ ನಂಬರದ ಶೀತಜ್ವರ ಗುಳಿಗೆಗಳಿಗೆ.—ಮೇಲೆ ವಿವರಿಸಿದಂಥ ಶೀತಜ್ವರಗಳು ಬಹುಕಾಲಪರ್ಯಂತವಾಗಿ ಮೈಯಲ್ಲಿ ವ್ಯಾಪಿಸಿಕೊಂಡು ಹಳೆತರಕ್ಕೆ ಬಿದ್ದು ಬರುವದಾದರೆ ಕ್ರಯ ೧ ಡಬ್ಬಿಗೆ ೧ ರೂಪಾಯಿ. ವಿ ಪಿ ಚಾರ್ಜು ಆಣೆ ೪

ದಂತರೋಗಕ್ಕೆ ಶೂಲನಾಶಕ ಮಂಜನ—ಎಲ್ಲ ಪ್ರಕಾರದ ಹಲ್ಲಿನ ವೇದನೆಗಳ ಉಪಶಮನಕ್ಕೆ ಕ್ರಯ ೧ ಡಬ್ಬಿಗೆ ೮ ಆಣೆ ವಿ ಪಿ ೪ ಆಣೆ

ಪಿತ್ತಕ್ಕೆ ಸುಧಾಚೂರ್ಣ—ಮೂಗಿನ ಒಳಭಾಗದಲ್ಲಿ ಕ್ರಿಮಿ ಅಥವಾ ವ್ರಣವಾಗಿ ಅದರಿಂದ ದುರ್ವಾಸನೆಯೂ ರಕ್ತ ಅಥವಾ ನೀರಿನಂಥ ದ್ರವವು ಸ್ರವಿಸುವದಕ್ಕೆ. ಕ್ರಯ ೧ ಡಬ್ಬಿಗೆ ೧ ರೂಪಾಯಿ ವಿ ಪಿ. ಚಾರ್ಜು ಆಣೆ ೪

ನವ ನೇತ್ರರೋಗಕ್ಕೆ ಸುಖಾಂಜನವು.—ಹೊಸದಾಗಿ ಹುಟ್ಟಿದ ಅಥವಾ ಬಹುಕಾಲದಿಂದ ಇರುತ್ತಿದ್ದ ಕಣ್ಣಿನ ಎಲ್ಲಾ ಬಾಧೆಗಳು ಕಣ್ಣು ಕಳ್ಳೆ ಕೆಂಪೇರುವಿಕೆ, ಕಣ್ಣಿನಿಂದ ನೀರು ಪಿಸರು ಬರುತ್ತಿರುವದು, ಬೆಳಕಿಗೆ ನೋಡಲಿಕ್ಕೆ ಆಗದೆ ಇರುವದು, ದೃಷ್ಟಿಮಾಂದ್ಯ, ಇತ್ಯಾದಿ ಎಲ್ಲ ಬಾಧೆಗಳೂ ಇದರಿಂದ ಬೇಗನೆ ಗುಣವಾಗುವದು ಕ್ರಯ ೧ ಡಬ್ಬಿಗೆ ೧ ರೂಪಾಯಿ. ವಿ ಪಿ ಚಾರ್ಜು ಆಣೆ ೪

ಕರ್ಣಸ್ರಾವಕ್ಕೆ ವನೌಷಧಿ ತೈಲವು.—ಚಿಕ್ಕ ಮತ್ತು ಥೋರ ಪ್ರಾಯದವರ ಕಿವಿಯಿಂದ ರಕ್ತ, ಕೀವು, ಅಥವಾ ನೀರಿನಂಥ ದ್ರವ ಹೊಸತಾಗಿ ಅಥವಾ ಬಹು ಕಾಲದಿಂದ ಸ್ರವಿಸುತ್ತಿದ್ದರೆ ಹಾಗೂ ನೋವು, ಕಳಿತವು, ತುರಿಸುವಿಕೆಯೂ ಇರುತ್ತಿದ್ದರೆ ಇದರಿಂದ ಪೂರ್ಣ ಗುಣ ಹೊಂದುವದು ಕ್ರಯ ೧ ಕುಪ್ಪಿಗೆ ೧ ರೂಪಾಯಿ ವಿ ಪಿ ೪.

ಚಿಕ್ಕ ಮಕ್ಕಳ ಮೈ ಪುಷ್ಟಿಗೆ ಬಾಲಸುಧಾರಸ.—ಚಿಕ್ಕ ಹುಡುಗರ ಅಶಕ್ತಿ, ಕುಂದ ಹಾಲಿನ ಅಥವಾ ಆಹಾರದ ವಾಂತಿ, ಅತಿಸಾರ, ಅನೇಕಾವರ್ತಿ ಮಲ ವಿಸರ್ಜನೆ, ಅಸ್ತಿಗತಜ್ವರ, ಕೆಮ್ಮು ಇತ್ಯಾದಿ ಅನೇಕ ಉಪಹತಿಗಳು ಗುಣವಾಗಿ ಮೈಯಲ್ಲಿ ರಕ್ತ ಮಾಂಸ ಅಸ್ತಿ ಇವುಗಳು ಬಲವಾಗಿ ಬೆಳದು ಚನ್ನಾಗಿ ಪುಷ್ಟಿಯಾಗುತ್ತಾರೆ ಕ್ರಯ ೧ ಕುಪ್ಪಿಗೆ ೧ ರೂಪಾಯಿ. ವಿ. ಪಿ. ಚಾರ್ಜು ಆಣೆ ೬.

ಸಕ್ಕರೆ ನಾಶಕಕಫಕ್ಷಯ ವ ಕೆಮ್ಮು ಮುಂತಾದವುಗಳಿಗೆ.—ಶ್ವಾಸಕೋಶದ ಎಲ್ಲಾ ಉಪಹತಿಗಳು ಅಂದರೆ ಹೊಸ ಮತ್ತು ಹಳೆ ತರ ಕೆಮ್ಮು ಕಳು ನೆಗಡಿ ಉಬ್ಬಸ ಕಫ ಕ್ಷಯ ಅಸ್ತಿಜ್ವರ ಅಶಕ್ತಿ ಕ್ಷಯವ್ಯಾಧಿಯಲ್ಲಿ ಹುಟ್ಟುವ ಜ್ವರ ಇತ್ಯಾದಿ ಬೇಗನೆ ಗುಣಹೊಂದುವದು. ಕ್ರಯ ೧ ಕುಪ್ಪಿಗೆ ರೂ. ೧—೪ ಆ ವಿ ಪಿ ಚಾರ್ಜು ಆಣೆ ೯.

ನಯನ ಸುಖಕ್ಕೆ ಸೌವೀರಾಂಜನವು (ಕಪ್ಪು ಸುರ್ಮಾ):—ಬಿಸಿಲಲ್ಲಿ ತಿರುಗಾಟ ಮಾಡುವದರಿಂದ ಬೆಂಕಿಯ ಶಕೆಯಲ್ಲಿ ಕೂಡ್ರುವದರಿಂದ ರಾತ್ರಿಯಲ್ಲಿ ಜಾಗ್ರಣ ಮಾಡುವದರಿಂದ ಅಥವಾ ಹೆಚ್ಚು ಕಾಲ ಓದುವದರಿಂದ ಸಹಾ ಉಂಟಾಗುವ ಕಣ್ಣಿನ ಬಾಧೆಯು ಕೆಂಪೇರುವಿಕೆ ಉರಿ ನವೆ ಮುಂತಾದವು ಗುಣಹೊಂದಿ ಕಣ್ಣಿಗೆ ಸುಖವು ಪ್ರಾಪ್ತವಾಗುತ್ತದೆ ಕ್ರಯ ೧ ಡಬ್ಬಿಗೆ ೮. ಆಣೆ. ವಿ ಪಿ. ಚಾರ್ಜು ಡಬ್ಬಿ ೧ ರಿಂದ ೧೨ ಡಬ್ಬಿಗೆ ೪ ಆಣೆ.

ವಾಂತಿಭೇದಿಗೆ ಮತ್ತು ಅತಿಸಾರಕ್ಕೆ ಕ್ಲೋರೋಡಾಯಿನ್:—ಈ ಉಪದ್ರಗಳಿಗೆ ಇದು ದಿವ್ಯ ಔಷಧವಾಗಿದೆ. ವಿಶ್ವಾಸವುಳ್ಳ ಒಂದು ಕಂಪನಿಯಿಂದ ಇದನ್ನು ನಾವು ಸಂಗ್ರಹಿಸುತ್ತೇವೆ. ಕ್ರಯ ೧ ಕುಪ್ಪಿಗೆ ೧೨ ಆಣೆ ವಿ ಪಿ ಚಾರ್ಜು ಆಣೆ ೪.

ಸೂಚನೆ.—ನಮ್ಮ ಔಷಧಗಳೊಳಗೆ ಅಪಾಯಕರವಾದ ಯಾವ ಜಿನಸಿನ ಮಿಶ್ರಣವೂ ಮಾಡಿಲ್ಲ. ಪ್ರತಿ ಒಂದು ಔಷಧಿಗೆ ಜೊತೆಯಲ್ಲಿ ಭಾಷೆಯ ಅನುಪಾನ ಪತ್ರವನ್ನು ಕಳುಹಿಸುತ್ತಿರುತ್ತೇವೆ. ಇನ್ನೂ ಅನೇಕ ಉತ್ತಮವಾದ ಔಷಧಗಳಗಾಗಿ ನಮ್ಮ ಕ್ಯಾಟ್ಲಾಗು ತರಿಸಿಕೊಂಡು ಓದಿನೋಡಿ.

ನಮ್ಮ ಅಡ್ರೆಸು:—ಕರ್ನಾಟಕ ರಾಜ ವೈದ್ಯ ಮತ್ತು ಕಂಪನಿ, ಪೋಸ್ಟು ಬಿಳಗಿ, ಉತ್ತರ ಕನ್ನಡಾ ಜಿಲ್ಲಾ.

Post Bilgi, North Kanara District.

CHAMBERLAIN'S PAIN BALM
ಚೇಂಬರ್ಲೆನ್ ಯವರು ಮಾಡಿದ ನೋವುಹರ ಔಷಧವು



4-12

ಬೆನ್ನೆಲುಬಿನಲ್ಲಿನ ನೋವು, ಪಕ್ಕಗಳಲ್ಲಿ ಆಗುವ ನೋವು, ಖಂಡಗಳಲ್ಲಿ ಹುಟ್ಟುವ ನೋವು, ತಲೆನೋವು ಬಚ್ಚಿದ ಕಡೆಗಳ ನೋವು, ವಾಯುನೋವು—ಇವುಗಳನ್ನೆಲ್ಲಾ ಸಂಪೂರ್ಣವಾಗಿ ವಾಸಿಮಾಡುವಂಥಾ ಔಷಧ

ವಾಯುನೋವೆಂದರೇನು?

ಕೀಲುಗಳಲ್ಲೂ ಮಣಿಕಟ್ಟುಗಳಲ್ಲೂ ಗಾಯವಾಗುವುದು, ಊದಿಕೊಳ್ಳುವುದು, ಕಠಿಣವಾಗಿ ಕಳೆಯುವ ಬಾಧೆಗಳಲ್ಲಿ ಇರಿಯುವುದು, ವಿಶ್ರಾಂತಿಕೊಡದೆ ಇರುವುದು, ನಿದ್ದೆಹತ್ತದೆ ಇರುವುದು—ಇದೇ ಇದೆಲ್ಲಾ ನಿಮಗೆ ಯಾವಾಗ ಉಂಟಾಗುವುದೋ ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು.

ಆಗ ಚೇಂಬರ್ಲೆನ್ ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ.

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹಾ ಕಾವು ಮೂಳೆಯೊಳ ವ್ಯಾಪಿಸುತ್ತದೆ. ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ. ಮನಸ್ಸಿಗೆ ಉಲ್ಲಾಸವಾಗುತ್ತ ಅದನ್ನೇ ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯುವಿನ ಹುಟ್ಟನ್ನೇ ಕಿತ್ತುಹಾಕಿಬಿಡುವುದು.

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ.

ಇದು ಎಲ್ಲೆಲ್ಲೂ ಬಿಕರಿಯಾಗುವುದು. ಸಣ್ಣ ಸೀಸೆಗೆ ೧ ರೂಪಾಯಿ ಕೈಯಿಂದ ಮುಟ್ಟಿದ್ದೇನೂ ಅಲ್ಲ ದೊಡ್ಡ ಸೀಸೆಗೆ ೨ ರೂಪಾಯಿ

ಪಾಳ್ಯದ ವೆಂಕಟಾಚಲ ಪಂಡಿತ, ಶ್ರೀಸೀತಾರಾಘವ ವೈದ್ಯಶಾಲಾ, ಕೊಳ್ಳೇಗಾಲ, ಇವರ ಸಿದ್ಧೌಷಧಗಳು.

26-9

೧. ಲೋಕಾಪವಾಯುಹರ ಕಸ್ತೂರಿ ಮಾತ್ರೆ.—ಈ ಮಾತ್ರೆಗಳನ್ನು ಹವಳದ ಭಸ್ಮ ಚಿನ್ನದ ರೇಖುಗಳ ಮಿಶ್ರದಿಂದ ತಯಾರಿಸಿ



ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಪ್ಲೇಗು ಜ್ವರ, ಛಳೀಜ್ವರ, ಜ್ವರ, ಅಗ್ನಿಮಾಂದ್ಯ, ನಿಶ್ಶಕ್ತಿ, ಕೆಮ್ಮು, ಹೊಟ್ಟೆ, ಕಿಬ್ಬೊಟ್ಟೆ, ಎದೆಗಳ ನೋವು ಇವಕ್ಕೆ ದಾರಿಗೊಡದು, ಮಕ್ಕಳ ಎಲ್ಲಾ ರೋಗಗಳಿಗೆ ಗುಣಕಾರಿ ನೀರು ... ಲಾಭಕ್ಕೆ ಒಳ್ಳೇದು ೨೦ ಮಾತ್ರೆಯುಳ್ಳ ಡಬ್ಬಿ ೪ ಆಣೆ ಪೋಸ್ಟು ಮೂಲಕ ೫ ಸೀಸೆಗೆ ಒಂದು ಸೀಸೆ ... ಬಿಟ್ಟರೆ ೪ ಆಣೆ

೨. ಎಸ್. ಸಿ. ಡಿ. ಸರ್ವಾಂಗಬಲಕಾರಿ—ಕಾಫಿ, ಟೀ, ಕೋಕೋಗಳಿಗೆ ಬದಲಾಗಿ ಉಪಯೋಗಿಸುವ ಪ್ರತಿ. ಕಾಫಿ. ಟೀಗಳಲ್ಲಿರುವ ದುರ್ಗುಣಗಳು ಇದರಲ್ಲಿಲ್ಲ. ವಾಯು, ಎದೆ, ಅಜೀರ್ಣ, ನರಗಳು, ಸಂದುಗಳು, ಮೆದುಳು, ಶಿರಸ್ಸು, ಮಲಬದ್ಧ, ಇವುಗಳ ಸಂಬಂಧವಾದ ಎಲ್ಲಾ ರೋಗಗಳನ್ನೂ ಚನ್ನಾಗಿ ಹೋಗಲಾಡಿಸಿ ಧಾತುಶಕ್ತಿಯನ್ನು ಕ್ರಮವಾಗಿ ವೃದ್ಧಿಪಡಿಸುವದು ೨೦ ಲೋಟ ಕಾಫಿಯಾಗುವ ಡಬ್ಬಿ ೪ ಆಣೆ, ... ಲೋಟಾ ಆಗುವದು ೩ ಆಣೆ

೩. ಪ್ಲೇಗಿಗೆ ಸಿದ್ಧೌಷಧ—ಪ್ಲೇಗಿಗೆ ಔಷಧಿಯೇ ಇಲ್ಲವೆಂದು ಹೇಳದೆ ಈ ನಮ್ಮ ಔಷಧವನ್ನು ತರಿಸಿಕೊಂಡಿ ಖಂಡಿತ ಗುಣವಾಗುತ್ತದೆ ಯೋಗ್ಯತಾಪತ್ರಗಳನ್ನು ವಿವರಿಸಲು ಸ್ಥಳ ಸಾಲದು ಗಡ್ಡೆ ಮೊದಲಾದ ಬಾಧೆ ಇಲ್ಲದಂತೆ ಉದ್ಭವ ಔಷಧಿ ಸೇರ ಕ್ರಯ ೧ ರೂಪಾಯಿ

೪. ಬಾಧಾನಿವಾರಿಣಿ.—ಪೆಟ್ಟು ತಗಲಿದ ನೋವು, ವಾಯು, ತಲೆನೋವು, ಮುಂತಾದ್ದಕ್ಕೆ ಸಂಜೀವನ ಡಬ್ಬಿ ೫ ಆಣೆ.

ವಿಳಾಸ:—ಎಸ್ ಎಸ್. ಆರ್. ವೈದ್ಯಶಾಲಾ,
ಲಕ್ಷ್ಮೀವಿಲಾಸ ರೋಡ್, ಮೈಸೂರು.

ನಮ್ಮ ಚಂದಾದಾರರು ಮೊದಲಾದವರು ಅವಶ್ಯವಾಗಿ ಗಮನಿಸಬೇಕಾದ ಟಪ್ಪಾಲ್ ಪ್ರಕಟನೆ.

ಖಾಸಗಿಯಾಗಿ ತಯಾರ್ಮಾಡಿದ ಕಾರ್ಡುಗಳ ಮೇಲೆ ವಿಲಾಸಿಯ ವಿಲಾಸಕ್ಕೂ ಪೋಸ್ಟೇಜ್ ಸ್ಟಾಂಪು ಮತ್ತು ಸ್ಟಾಂಪುಗಳಿಗೂ ಮತ್ತು ಟಪ್ಪಾಲಾಫೀಸಿನ ಆಫೀಸು ಮುದ್ರೆಗಳಿಗೂ ಸಹ ಕಾರ್ಡಿನ ಸಮಾರ್ಧಕ್ಕಿಂತ ಕಡಿಮೆಯಾದ ಒಂದು ಭಾಗವನ್ನು ಬಿಡಬೇಕಾಗಿಯೂ ಮತ್ತು ಅಂಥ ಭಾಗವು ಸದರಿ ಕಾರ್ಡಿನ ಮಧ್ಯ ನೀಟವಾಗಿ ಅಥವಾ ಅಡ್ಡವಾಗಿ ಒಂದು ಗೆರೆ ಎಳೆದು ವಿಂಗಡಿಸಲ್ಪಡಬೇಕಾಗಿಯೂ ಸಹ ಹೇಳುವ ಇಂಡಿಯನ್ ಪೋಸ್ಟಲ್ ಗೈಡಿನ ೫೫ ನೇ ಪ್ರಕರಣಕ್ಕೆ ಎಲ್ಲರೂ ಗಮನವಿಡಬೇಕಾಗಿದೆ. ಅಂಥ ಕಾರ್ಡುಗಳ ಮೇಲೆ ವಿಲಾಸಭಾಗವನ್ನು ವಿಂಗಡಿಸಲು ಗೆರೆಯನ್ನು **ನೀಟವಾಗಿ ಎಳೆಯಬೇಕೇ ಹೊರತು ಅಡ್ಡವಾಗಿ ಎಳೆಯಕೂಡದು.**

೨. ಖಾಸಗಿಯಾಗಿ ತಯಾರ್ಮಾಡಿದ ಕಾರ್ಡುಗಳ ಮೇಲೆ ವಿಲಾಸಿಯ ವಿಲಾಸಕ್ಕೂ ಪೋಸ್ಟೇಜು ಸ್ಟಾಂಪು ಮತ್ತು ಸ್ಟಾಂಪುಗಳಿಗೂ ಮತ್ತು ಟಪ್ಪಾಲಾಫೀಸಿನ ಆಫೀಸು ಮುದ್ರೆಗೂ ಸಹ ಅದರ ಬಲಗಡೆ ಕನಿಷ್ಟ ಅರ್ಧಾಂಶವನ್ನು ಪ್ರತ್ಯೇಕ ವಿಂಗಡಿಸದಿದ್ದರೆ ಅಂಥಾ ಕಾರ್ಡುಗಳು ಟಪ್ಪಾಲು ಕಾರ್ಡುಗಳಂತೆ ಎಣಿಸಲ್ಪಡಲಿಕ್ಕಿಲ್ಲ. ಹಾಗೆ ಬಿಟ್ಟ ಅರ್ಧಾಂಶದ ಮೇಲೆ ಏನೂ ಬರೆದಿರಕೂಡದು. ಮತ್ತು **ಅಚ್ಚು ಮುದ್ರೆ ಮೊದಲಾದವುಗಳನ್ನು ಸಹ ಹಾಕಿರಕೂಡದು.** ಇಂಡಿಯನ್ ಪೋಸ್ಟಲ್ ಗೈಡಿನ ೫೫ನೇ ಪ್ರಕರಣದಲ್ಲಿ ತೋರುವ ಷರತ್ತುಗಳಿಗೊಳಪಡದ ಕಾರ್ಡುಗಳು ಕಾಗದಗಳಂತೆ ಎಣಿಸಲ್ಪಟ್ಟು ಅದೇ ಮೇರೆಗೆ ಚಾರ್ಜು ವಿಧಿಸಲ್ಪಡುವದು.

ಈ ಕಟ್ಟಳೆಗೆ ವಿರೋಧವಾಗಿ ಪ್ರಿಂಟುಮಾಡಿರುವ ಕಾರ್ಡುಗಳಲ್ಲೇ ನಮ್ಮ ಚಂದಾದಾರರೇ ಮೊದಲಾದವರು ವಿಶೇಷವಾಗಿ ಕಾಗದ ಪತ್ರಗಳನ್ನು ನಡಿಸುವದರಿಂದ ನಮಗೆ ನಷ್ಟವಾಗುತ್ತಿದೆಯಾದಕಾರಣ ವಾಚಕರು ಮೇಲ್ಕಂಡ ಕಟ್ಟಳೆಗನುಸಾರವಾಗಿ ಮುದ್ರಿಸಿರುವ ಕಾರ್ಡುಗಳಲ್ಲೇ ಬರೆಯಬೇಕೆಂದು ಕೇಳಿಕೊಳ್ಳುತ್ತೇವೆ — ಎಡಿಟರ್.]

ತ್ವರಿತವಾಗಿ ಇಂಗ್ಲಿಷ್ ಕಲಿಯುವಿಕೆ

12

ಕ್ರಯ. ವಿ ಪಿ ಖರ್ಚು ಸೇರಿ ೧—೩—೦ ಮುಗಿದುಹೋಗುವ ನಂತರ ಖಂಡಿತ ದೊರೆಯುವದಿಲ್ಲ ಬೇಗ ಬರೆಯಿರಿ ಇಂಗ್ಲಿಷನ್ನು ಓದುವದಕ್ಕೂ ಬರೆಯುವದಕ್ಕೂ ಮಾತನಾಡುವದಕ್ಕೂ ಬೋಧಕರ ಸಹಾಯವಿಲ್ಲದೆ ತಾನಾಗಿಯೇ ಕಲಿಸುವ ಅತ್ಯುತ್ತಮವಾದ ಪುಸ್ತಕವಿದು

ಸುಭಾಷಿತ ಸಮುದಾಯ.

ಸಂಸ್ಕೃತ ಶ್ಲೋಕಗಳಿಗೆ ಕನ್ನಡದಲ್ಲೂ ಇಂಗ್ಲಿಷಿನಲ್ಲೂ ಅರ್ಥ ಬರೆದಿರುತ್ತೆ ಕ್ರಯ ರೂ ೦—೬—೦ ವಿಳಾಸ —

ಬಿ ಕೆ. ಮೂರ್ತಿ ಕಂಪನಿ, ಬಳೆಪೇಟೆ ಪೋಸ್ಟ್, ಬೆಂಗಳೂರು.

ಹೊಸ ಪುಸ್ತಕ.

1

ಈಗತಾನೆ ಹೊರಟಿದೆ! ಹಳೇದು ಹೊಸದಾಗಿದೆ

ಪುರಾಣೇತಿಹಾಸಗಳಿಂದಲೂ, ಪಂಚತಂತ್ರ ಮೊದಲಾದ ಇನ್ನೂ ಅನೇಕ ಪ್ರಾಚೀನ ಗ್ರಂಥಗಳಿಂದಲೂ ಸಂಗ್ರಹಿಸಲ್ಪಟ್ಟ ಅನೇಕಾನೇಕ ಸ್ವಾರಸ್ಯವಾದ ಕಥಾಮಾಲೆಯಿಂದ ಬಿಡಿಸಿ ತಾತ್ಪರ್ಯ ಸಹಿತವಾಗಿ ... ವಿನೋದವಾಗಿಯೂ ... ಇದ "ಕಥಾಸಂಗ್ರಹ" ವೆಂಬ ಗ್ರಂಥವನ್ನು ಪ್ರಕಟಿಸಬೇಕೆಂದು ಉದ್ದೇಶಿಸಿ ಮೊದಲನೆಯ ಮೂರು ಭಾಗಗಳನ್ನೊಳಗೊಂಡಿರುವ ಪ್ರಥಮ ಸಂಪುಟವನ್ನು ೧೯೦೪ ನೇ ಇಸವಿಯಲ್ಲಿ ಪ್ರಕಟಿಸಿದೆವು ಈ ಸಂಪುಟದ ಅನೇಕ ಪ್ರತಿಗಳನ್ನು ಕೊಂಡು ನಮ್ಮ ಪ್ರೋತ್ಸಾಹವನ್ನು ಕೊಟ್ಟ ಕರ್ನಾಟಕ ಭಾಷಾಭಿಮಾನಿಗಳಲ್ಲರಿಗೂ ನಾವು ಬಹಳ ಕೃತಜ್ಞರಾಗಿದ್ದೇವೆಂದು ಈ ದ್ವಾರ ತಿಳಿಸಲು ಸಂತೋಷಪಡುತ್ತೇವೆ

ಪರಂತು ನಮ್ಮಲ್ಲಿ ವ್ಯಾಪಾರಕ್ಕಾಗಿ ಬರುತಿದ್ದವರನೇಕರು ಈ ಅಮೂಲ್ಯವಾದ ಗ್ರಂಥದ ಉತ್ತರಾರ್ಧವು ಮುದ್ರಣವಾಯಿತೇ ಎಂದು ಪದೇ ಪದೇ ಕೇಳುತ್ತಲೇ ಇದ್ದರು ಈ ಕಡೆಯ ಮೂರು ಭಾಗಗಳುಳ್ಳ ದ್ವಿತೀಯ ಪುಸ್ತಕವು ಈಗತಾನೆ ಮಾರುವದಕ್ಕೆ ಸಿದ್ಧವಾಗಿದೆ ಅನೇಕ ವರುಷಗಳಿಂದಲೂ ಸಜ್ಜನ ಸಮ್ಮತಿಯನ್ನೂ ವಿದ್ವಜ್ಜನಗಳ ಆದರಣೆಯನ್ನೂ ಪಡೆಯುತ್ತಿರುವ ಈ ಅಸಮಾನವಾದ ಗ್ರಂಥದ ಗುಣಾಧಿಕ್ಯವನ್ನು ಇಲ್ಲಿ ವರ್ಣಿಸುವದು ಅನಾವಶ್ಯವು ಈ ಹೊಸ ಪುಸ್ತಕದಲ್ಲಿ ಅಕ್ಷರಗಳು ಬಹು ಸ್ಫುಟವಾಗಿಯೂ, ವಿರಳವಾಗಿಯೂ ಇರುವದಲ್ಲದೆ ಮೇಲ್ತರದ ಕಾಗದವನ್ನೇ ಉಪಯೋಗಿಸಿರುವೆವು ಬೈಂಡು ಬದ್ರವಾಗಿದೆ ಇದು ಎಲ್ಲಾ ವಿಷಯದಲ್ಲಿಯೂ ವಾಚಕಮಹಾಶಯರಿಗೆ ಸಮರ್ಪಕವಾಗಿರುವದು ಎಂದು ಹೇಳುವದರಲ್ಲಿ ಯಾವ ಸಂಶಯವೂ ಇರುವದಿಲ್ಲ ಅಪೇಕ್ಷೆಯುಳ್ಳವರು ಈ ಪುಸ್ತಕಗಳನ್ನು ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು

ಕಥಾಸಂಗ್ರಹ ಪ್ರಥಮ ಪುಸ್ತಕ ಕ್ರಯ.		೧—೦—೦
ವಿ ಪಿ. ಮೂಲಕ	,,	೧—೨—೦
ಕಥಾಸಂಗ್ರಹ ದ್ವಿತೀಯ ಪುಸ್ತಕ	,,	೧—೦—೦
ವಿ ಪಿ. ಮೂಲಕ	,,	೧—೩—೦

ವಿಳಾಸ:—ಮ್ಯಾನೇಜರ್, ಸಿ. ಎಲ್. ಎಸ್.
ಬುಕ್ ಡಿಪೋ, ಮೈಸೂರು.

ವೃತ್ತಾಂತ ಪತ್ರಿಕೆ.

ಸನ್ ೧೯೦೭ ನೇ ಇಸವಿ ಮಾರ್ಚಿ ತಾ॥ ೨೧ ನೇ ಗುರುವಾರ

ಸುಪಾರಿಹಾಲತ್ ಎಂಬ ಅಡಿಕೆಯ ಸುಂಕವನ್ನು ವಜಾಮಾಡಿದ್ದು

ಮೈಸೂರು ಗವರ್ನಮೆಂಟಿನವರು ಕಳೆದ ೧೮೩೪ ನೆಯ ಇಸವಿ ಲಾಗಾಯಿತು ಅಡಿಕೆಯ ಮೇಲೆ ಮಣಕ್ಕೆ ೧೨ ಆಣೆಯಂತೆ ವಸೂಲ್ಮಾಡುತ್ತಾ ಬಂದಿರುವ ಹಾಲತ್ ಯೆನ್ನೆ ಸುಂಕವನ್ನು ಇದೇ ವರ್ಷದ ಜುಲೈ ಪ್ರಾರಂಭದಿಂದಾಚೆಗೆ ವಜಾಮಾಡಿರುವುದಾಗಿ ಈಗತಾನೇ ಹುಕುಂ ದಯಪಾಲಿಸಿರುತ್ತಾರೆಂದು ತಿಳಿಸಲು ತುಂಬಾ ಸಂತೋಷವುಳ್ಳವರಾಗಿದ್ದೇವೆ. ಈ ಸುಂಕದಿಂದ ಸರ್ಕಾರಕ್ಕೆ ಪ್ರತಿ ಸಾಲಿನಲ್ಲೂ ೩॥ ಲಕ್ಷ ರೂಪಾಯಿ ಉತ್ಪತ್ತಿಯಾಗುತ್ತಿದ್ದಿತು. ಆದರೆ

ಮಲ್ನಾಡಿನ ರೈತಪ್ರಜೆಗಳು ಈಚೆಗೆ ಅಡಿಕೆ ಧಾರಣೆ ಇಳಿದುದರಿಂದಲೂ ಮಳೆ ತೃಪ್ತಿಕರವಾಗಿ ಆಗದ ಅನೇಕ ಗಿಡಗಳು ಒಣಗಿಹೋದುದರಿಂದಲೂ ಇರುವ ಗಿಡಗಳಲ್ಲೂ ಫಲವು ಕಡಿಮೆಯಾಗುತ್ತಾ ಬಂದಿದ್ದುದರಿಂದಲೂ ಇತ್ತೀಚೆಗಂತಲೂ ಹೆಚ್ಚಾಗಿ ಕೊಳೆ ರೋಗವೆಂಬುದು ಹುಟ್ಟಿ ಪ್ರಾರಂಭವಾಗಿ ಅಡಿಕೆ ಫಸಲನ್ನೇ ಹಾಳುಮಾಡುತ್ತಾ ಬಂದಿರುವುದರಿಂದಲೂ ಬಹಳ ಕಷ್ಟನಷ್ಟಗಳಿಗೆ ಗುರಿಯಾಗಿ ಕಂದಾಯ ಕೌಲಗೆಗಳನ್ನು ಕೊಡಲು ಚೈತನ್ಯವಿಲ್ಲದೆ ತುಂಬಾ ವ್ಯಥೆಪಡುತ್ತಾ, ಹಾಲತ್ ಎಂಬೀ ಸುಂಕವನ್ನಾದರೂ ಬಿಟ್ಟುಕೊಡಬೇಕೆಂಬುದಾಗಿ ವರ್ಷೇ ವರ್ಷ ಪ್ರತಿನಿಧಿ ಸಭೆಯಲ್ಲಿ ಗವರ್ನಮೆಂಟಿನವರನ್ನು ಕೇಳಿಕೊಳ್ಳುತ್ತಾ ಬಂದರು. ಮೊನ್ನೆ ನಡೆದ ಪ್ರತಿನಿಧಿಸಭೆಯಲ್ಲಿ ದಿವಾನರವರು "ಇಷ್ಟರಲ್ಲೇ ಮಲ್ನಾಡಿನ ಕಡೆ ನಾವು ಬಂದು ಅಲ್ಲಿನ ವಿದ್ಯಮಾನಗಳನ್ನು ತನಿಖೆಮಾಡಿ ಹುಕುಂ ಕೊಡುತ್ತೇವೆ" ಎಂದು ಅಭಯವನ್ನಿತ್ತ ಪ್ರಕಾರ ಅವರು ಸಂಚಾರಮಾಡಿ ಪ್ರಜೆಗಳ ಸ್ಥಿತಿಗತಿಯನ್ನು ಪರಾಂಬರಿಸಿ ಬಂದರು. ಶ್ರೀಮನ್ಮಹಾರಾಜರವರು ದಿವಾನರವರ ಮತ್ತು ಕೌನ್ಸಿಲ್ ಮೆಂಬರುಗಳ ಅಭಿಪ್ರಾಯವನ್ನು ಪಡೆದು ಈ ಸುಂಕವನ್ನು ವಜಾಮಾಡಿದಂತೆ ಅಪ್ಪಣೆ ದಯಪಾಲಿಸಿರುತ್ತಾರೆ. ಇಂಥಾ ದಯೆಯನ್ನು ತೋರಿಸಿದ್ದಕ್ಕಾಗಿ ರೈತಪ್ರಜೆಗಳು ತುಂಬಾ ಸಂತೋಷಪಟ್ಟು ಶ್ರೀಮನ್ಮಹಾರಾಜರವರನ್ನೂ ಗವರ್ನಮೆಂಟಿನವರನ್ನೂ ಕೃತಜ್ಞತಾಪೂರ್ವಕವಾಗಿ ವಂದಿಸುತ್ತಾರೆ ಎನ್ನುವುದಕ್ಕೆ ಸಂಶಯವಿಲ್ಲ.

ಆತ್ಮದ ಮೂರು ಶತ್ರುಗಳು

ಕೆಲವು ದಿನಗಳ ಹಿಂದೆ ಸ್ವನಗರಿನಲ್ಲಿ ರಾಜಕೀಯ ವಾದದ ರಣ ಜಿತ್ ಸಿಂಜಿಯವರಿಗೆ ಪಟ್ಟಾಭಿಷೇಕವಾದುದು ಎಂಬ ಸಂಗತಿಯನ್ನು ಈ ಪತ್ರಿಕೆಯ ಹಿಂದಿನ ಸಂಚಿಕೆಯಲ್ಲಿ ಪ್ರಕಟಿಸಿರುತ್ತೇವೆ (ನವಾನಗರದ ದೊರೆಗೆ ಜಾಂ ಎಂಬುದಾಗಿ ಹೆಸರುಂಟು). ತಮ್ಮ ಪಟ್ಟಾಭಿಷೇಕಕಾಲದಲ್ಲಿ ಮಹಾರಾಜರಾದ ರಣಜಿತ್ ಸಿಂಜಿಯವರು ಹೃದಯಂಗಮವಾಗಿ ಒಂದು ಭಾಷಣವನ್ನು ಮಾಡಿದರೆಂದು ಓದುಗರು ಓದಬಹುದು. ಆ ಮಾಡಿದ ಉಪನ್ಯಾಸದಲ್ಲಿ ಕೆಲವು ಅರ್ಥಗರ್ಭಿತವಾದ ಮಾತುಗಳನ್ನು ಹೇಳಿದರು. 'ನಾನು ರಾಜ್ಯದ ಪ್ರಭುತ್ವವನ್ನು ವಹಿಸಿಕೊಂಡಿದ್ದೇನೆ. ಆದರೆ ಈ ಕೆಲಸದಲ್ಲಿ ನಾನು ಸೋಮಾರಿಯಾಗಿಯಾಗಲಿ ವಿಷಯಾಸಕ್ತನಾಗಿಯಾಗಲಿ ಅಥವಾ ಸ್ವಾರ್ಥಪರನಾಗಿಯಾಗಲಿ ಇದ್ದರೆ ಖಂಡಿತವಾಗಿಯೂ ನನಗೂ ನನ್ನ ವಶಕ್ಕೆ ಒಪ್ಪಿಸಲ್ಪಟ್ಟ ಪ್ರಜೆಗಳಿಗೂ ಕೇಡುಂಟಾಗುವದೆಂದು ನಂಬಿರುತ್ತೇನೆ' ಎಂಬುದಾಗಿ ಉಪನ್ಯಾಸದಲ್ಲಿ ತಿಳಿಸಿದರು. ಇಂತಾ ಭಾಷಣವು ಶ್ಲಾಘನೀಯವಾದದ್ದೆನ್ನುವದರಲ್ಲಿ ಯಾವ ಸಂಶಯವಿರಬಾರದು. ಈ ರಾಜರು ಆತ್ಮಕ್ಕೆ ಮೂರು ಶತ್ರುಗಳಿರುವರೆಂಬುವದನ್ನು ಪರಿಷ್ಕಾರವಾಗಿ ತಿಳಿಸಿರುತ್ತಾರೆ. ಆತ್ಮದ ಮೊದಲನೆಯ ಶತ್ರುವು ಯಾವುದೆಂದರೆ ಸೋಮಾರಿತನ. ಎರಡನೆಯ ಶತ್ರುವು ವಿಷಯಾಸಕ್ತಿ ಅಥವಾ ಸುಖಭೋಗಗಳ ಮೇಲೆ ವಿಶೇಷವಾದ ಪ್ರೀತಿಯನ್ನಿಡುವದು. ಮೂರನೆಯ ಶತ್ರುವು ಯಾವುದೆಂದರೆ ಸ್ವಾರ್ಥತ್ವ ಅಥವಾ ಪರರಿಗೆ ಕೇಡನ್ನು ಬಯಸುವದು. ಈ ಮೂರು ಶತ್ರುಗಳನ್ನು ಸಂಪೂರ್ಣವಾಗಿ ಅಲಕ್ಷಿಸಿ ತಮ್ಮ ವಿಷಯವನ್ನೇ ರಾತ್ರಿಯೂ ಹಗಲೂ ಚಿಂತಿಸುವ ಶ್ರೀಮದ್ ಪ್ರಕಾರ ಮೈಸೂರು ಪಟ್ಟಣದ ಜನರು ದಿವಾನರಿಗೆ ತಮ್ಮ ಕೃತಜ್ಞತೆಯನ್ನು ತೋರಿಸುವದಕ್ಕಾಗಿ ಅವರು ತಮ್ಮ ತಮ್ಮ ಬೀದಿಗಳಲ್ಲಿ ಬರಮಾಡಿಕೊಂಡು ಅವರಿಗೆ ತಮ್ಮ ಪೂರ್ಣ ಹೃದಯದ ಮಾನಮರ್ಯಾದೆಗಳನ್ನು ಸಲ್ಲಿಸಿದರಷ್ಟೆ. ಇದಕ್ಕೆ ಕಾರಣವೇನೆಂದರೆ ನಮ್ಮ ಮಹಾರಾಜರವರ ಕಳೆದ ನಾಲ್ಕು ವರ್ಷದ ರಾಜ್ಯಭಾರದಲ್ಲಿ ಮೇಲೆ ಹೇಳಿದ ಮೂರು ಶತ್ರುಗಳಿಗೆ ತಮ್ಮ ಹೃದಯದಲ್ಲಿ ಸ್ಥಳವನ್ನು ಕೊಡದಿರುವದೇ ಇದರ ಕಾರಣವು. ಅವರು ತಮ್ಮ ವಶಕ್ಕೆ ಕೊಡಲ್ಪಟ್ಟಿರುವ ಪ್ರಜೆಗಳನ್ನು ವಿವೇಕದಿಂದ, ಸಚ್ಚರಿತ್ರೆಯಿಂದಲೂ, ಕೇವಲ ಪ್ರೀತಿಯಿಂದಲೂ ಆಳುತ್ತಾ ಬಂದಿರುತ್ತಾರೆ. ನಾವು ಧೈರ್ಯವಾಗಿ ಹೇಳಬಲ್ಲೆವು. ಇಂಥಾ ಶ್ರೇಷ್ಠವಾದ ಗುಣಗಳು ಅವರಲ್ಲಿರುವದರಿಂದಲೇ ಜನರೆಲ್ಲರೂ ಅವರ ವಿಷಯದಲ್ಲಿ ಸಂತೋಷಪಡುತ್ತಾರೆ. ಲೋಕದಲ್ಲಿ ಆದರ್ಶರಾಗಿ ಪ್ರಭುತ್ವಮಾಡುವವರು ಕೆಲವರೇ ಆಗಿರುತ್ತಾರೆ. ಪ್ರಜೆಗಳಾದರೋ ಅನೇಕ ಕೋಟಿಗಳಿರುವರು. ಪ್ರತಿಯೊಬ್ಬ ಮನುಷ್ಯನು ತಾನು ಯಾವ ಸ್ಥಿತಿಯಲ್ಲಿದ್ದರೂ ಯಾವ ಉದ್ಯೋಗವನ್ನು ಮಾಡುತ್ತಿದ್ದರೂ ಮೇಲೆ ವಿವರಿಸಿದ ಆತ್ಮದ ಮೂರು ಶತ್ರುಗಳಾದ ಸೋಮಾರಿತನ, ಭೋಗಾಸಕ್ತಿ, ಸ್ವಾರ್ಥತ್ವ ಇವುಗಳ ವಿಷಯ ಬಹಳ ಎಚ್ಚರಿಕೆಯಾಗಿರಬೇಕು. 'ದೆವ್ವಗಳು ಸೈತಾನನಿಗೆ ಉಪಯೋಗವಾದ ಆಯುಧವಾಗಿರುವವು' ಎಂಬುವದು ಇಂಗ್ಲೀಷು ಭಾಷೆಯಲ್ಲಿ ಒಂದು ಗಾಧೆ. ಇಂಗ್ಲಿಷಿನಲ್ಲಿ ಪ್ರಸಿದ್ಧನಾದ ಒಬ್ಬ ಗುರುವು "ಮನುಷ್ಯನು ಎಂದಿಗಾದರೂ ಕೆಲಸವಿಲ್ಲದೆ ಸೋಮಾರಿಯಾಗಿರಬಾರದು" ಎಂಬುದಾಗಿ ತಿಳಿಸಿದ್ದಾರೆ. ನಾವು ಸೋಮಾರಿಗಳಾಗಿದ್ದಾಗಲೇ ದುರಾಲೋಚನೆಗಳು ಹುಟ್ಟಿ ನಮ್ಮನ್ನು ಭೋಗಾಸಕ್ತಿಯಲ್ಲಿ ಕೆಡವುತ್ತವೆ. ಆದ್ದರಿಂದ ನಾವು ಯಾವಾಗಲೂ ಕೆಲಸಮಾಡುತ್ತಿರಬೇಕು. ಸ್ವಂತಪ್ರಯೋಜನವನ್ನು ಮುಂದಿಟ್ಟುಕೊಂಡು ಕೆಲಸಮಾಡಬೇಕೆಂಬುವದು ನಮ್ಮ ಅಭಿಪ್ರಾಯವಲ್ಲ. ಆದರೆ ನಮ್ಮ ನೆರೆಹೊರೆಯವರಿಗೂ, ಬಂಧುಮಿತ್ರರಿಗೂ, ನಮ್ಮ ದೇಶದ ಎಲ್ಲರಿಗೂ ಮತ್ತು ಭೇದವಿಲ್ಲದೆ ಎಲ್ಲಾ ಜನಗಳಿಗೂ ಶ್ರೇಯಸ್ಸೂ ಪ್ರಯೋಜನವೂ ಆಗುವಂತೆ ನಾವು ಕೆಲಸ ಮಾಡುತ್ತಿರಬೇಕು. ಸ್ವಾರ್ಥಕ್ಕೆ ಜೀವಿಸುವ ಮನುಷ್ಯನ ಗತಿಯು ನಿಜವಾಗಿಯೂ ಶೋಚನೀಯವಾದುದೆಂಬುವದರಲ್ಲಿ ಯಾವ ಸಂಶಯವಿಲ್ಲ.

ಮೇಲೆ ವಿವರಿಸಿದ ವಿಷಯವನ್ನೆಲ್ಲಾ ಶ್ರೀ ಯೇಸುಸ್ವಾಮಿಯು ಎರಡೇ ಕಟ್ಟಳೆಗಳಲ್ಲಿ ಸಂಗ್ರಹಿಸಿರುತ್ತಾನೆ. ಅವು ಯಾವವೆಂದರೆ —

ಮೊದಲನೆಯದು ನಿನ್ನ ದೇವರಾಗಿರುವ ಕರ್ತನನ್ನು ನಿನ್ನ ಪೂರ್ಣ ಮನಸ್ಸಿನಿಂದಲೂ ನಿನ್ನ ಪೂರ್ಣ ಹೃದಯದಿಂದಲೂ ನಿನ್ನ ಪೂರ್ಣ ಬುದ್ಧಿಯಿಂದಲೂ ನಿನ್ನ ಪೂರ್ಣ ಶಕ್ತಿಯಿಂದಲೂ ಪ್ರೀತಿಸಬೇಕು.

ಎರಡನೆಯದು ನಿನ್ನನ್ನು ಪ್ರೀತಿಸಿಕೊಳ್ಳುವಂತೆ ನೀನು ನಿನ್ನ ನೆರೆಯವನನ್ನು ಪ್ರೀತಿಸಬೇಕು.

ಬಳದೇಶದ ವೃತ್ತಾಂತಗಳು

ಶ್ರೀಮನ್ಮಹಾರಾಜರವರ ಪ್ರೈವೆಟ್ ಸೆಕ್ರಿಟರಿ ಮೆ॥ ಇ ವಿ ಕಾನಕಿಯವರು ಏಪ್ರಿಲ್ ತಿಂಗಳ ಕಡೇ ವಾರದಲ್ಲಿ ಕ್ಷೇಮದಿಂದ ವಾಪಸುಬಂದು ಕೆಲಸದ ಛಾರ್ಜನ್ನು ವಹಿಸಿಕೊಳ್ಳುವದಾಗಿ ಪ್ರಕಟವಾಗಿದೆ.

❖❖❖

ವಿದ್ಯಾಭ್ಯಾಸದ ಇಲಾಖೆಯ ಇನ್ಸ್‌ಪೆಕ್ಟರ್ ಜನರಲ್ ಮೆ॥ ಭಾಭಾ ಯವರು ಕಳೆದ ಗುರುವಾರ ರಾಜಧಾನಿಗೆ ಬಂದು ಎರಡು ದಿನ ಇದ್ದು ಶ್ರೀಮನ್ಮಹಾರಾಜರವರ ಭೇಟಿ ಮಾಡಿಕೊಂಡು ವಾಪಸು ಹಿಂದಿರುಗಿದರು.

❖❖❖

ಇಲ್ಲಿನ ಕೆಲವು ವರ್ತಕರೂ ಸಾಹುಕಾರರೂ ಶ್ರೀಮನ್ಮಹಾರಾಜರವರ ಶ್ರೇಯಸ್ಸನ್ನು ಬಯಸಿ ಕಳೆದ ವಾರ ಬಡಬಗ್ಗರಿಗೆ ಅಕ್ಕಿ ಪಡಿಗಳನ್ನು, ಬಟ್ಟೆಬರೆಗಳನ್ನೂ ದಾನಮಾಡಿ ತಮ್ಮ ರಾಜಭಕ್ತಿವಿಶ್ವಾಸಾದಿಗಳನ್ನು ಪ್ರಕಾಶಪಡಿಸಿರುತ್ತಾರೆ.

❖❖❖

ರಾಜಧಾನಿಯ ವಾಸ್ ಬಂಗಲೆಯಲ್ಲಿಟ್ಟಿರುವ ಪ್ರಾಣಿಗಳ ಆಲಯದ ಸೂಪರಿಂಟೆಂಡೆಂಟ್ ಮೆ॥ ಸಿ ಎಚ್ ಸೂಡಸ್ ಯವರ ಪತ್ನಿಯು ಖಾಯಿಲೆಯಾಗಿದ್ದು ಬೆಂಗಳೂರು ಸೆಂಟ್ ಮಾರ್ಥಾ ಆಸ್ಪತ್ರೆಯಲ್ಲಿ ಕೆಲವು ದಿವಸದ ರಾತ್ರಿ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ.

❖❖❖

ಮೈಸೂರು ಸಂಸ್ಥಾನದಲ್ಲಿ ಒಂದು ಮಂತ್ರಾಲೋಚನಾ ಸಭೆಯನ್ನು ಸ್ಥಾಪಿಸಿಕೊಳ್ಳಬಹುದೆಂದು ಇಂಡಿಯಾ ಗವರ್ನಮೆಂಟಿನವರು ಸ್ವೀಕಾರ ಮಾಡಿರುತ್ತಾರೆ. ನಮ್ಮ ಸರ್ಕಾರದವರು ಅದನ್ನು ಪ್ರಾರಂಭಿಸುವದಕ್ಕೆ ಮೆಂಬರುಗಳನ್ನು ನೇಮಕಮಾಡ ಬೇಕಾದ ಸಲಕರಣೆಗಳನ್ನು ಒದಗಿಸಿಕೊಳ್ಳುತ್ತಿದ್ದಾರೆ.

❖❖❖

ಬೆಂಗಳೂರು ಒಕ್ಕಲಿಗರ ಸಂಘದವರು "ಒಕ್ಕಲಿಗರ ಪತ್ರಿಕೆ" ಎಂಬ ವಾರಪತ್ರಿಕೆಯನ್ನು ಮೊನ್ನೆ ಯುಗಾದಿ ಹಬ್ಬದ ದಿನ ಪ್ರಕಟಿಸಲಾರಂಭಿಸಿ ಮೊದಲನೇ ಸಂಚಿಕೆಯನ್ನು ನಮ್ಮಲ್ಲಿಗೆ ಕಳುಹಿಸಿದ್ದಾರೆ. ಇದರಿಂದ ಆ ಸಂಘದ ಉದ್ದೇಶಗಳು ಕೈಗೂಡಲು ಬಹಳಮಟ್ಟಿಗೆ ಸಹಾಯವಾಗಿ ಅಭಿವೃದ್ಧಿಗೆ ಬರಲೆಂದು ಹಾರೈಸುತ್ತೇವೆ.

❖❖❖

ಕಳೆದ ಗುರುವಾರ ರಾತ್ರಿ ಮೆ॥ ಫ್ರೇಜರ್ ಯವರು ಪತ್ನಿ ಸಹಿತ ರೈಲು ಹತ್ತಿ ಬೆಂಗಳೂರಿಂದ ಸೀಮೆಗೆ ಪ್ರಯಾಣಮಾಡಿದರು. ಆಗ್ಗೆ ದಂಡಿನ ಉದ್ಯೋಗಸ್ಥರು, ಸರ್ದಾರರು, ಮೈಸೂರು ಸಂಸ್ಥಾನದ ದಿವಾನರು, ಕೌನ್ಸಿಲ್ ಮೆಂಬರುಗಳು, ಚೀಫ್ ಕೋರ್ಟ್ ಜಡ್ಜಿಗಳು ಮೊದಲಾದವರೆಲ್ಲಾ ಸ್ಟೇಷನಿನಲ್ಲಿ ಕಾದಿದ್ದು ಆ ದಂಪತಿಗಳನ್ನು ಸಾಗಕಳುಹಿ ಬಂದರು.

❖❖❖

ಶಿವಸಮುದ್ರದಲ್ಲಿ ಸಾಕೇಬೆಂಬುವ ಒಬ್ಬ ಸೇವಕನಿಗೆ ವಿಷ ಹಾಕಿ ಕೊಂದರೆಂಬ ಮೊಕದ್ದಮೆಯಲ್ಲಿ ಬೆಂಗಳೂರು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ದರ್ಯಾಪ್ತುಮಾಡಿ ಅವರ ಮೇಲೆ ಅಪರಾಧ ರುಜುವಾತಾಗಲಿಲ್ಲವೆಂದು ಬಿಟ್ಟಿದ್ದರಷ್ಟೆ. ಈ ಮೊಕದ್ದಮೆಯು ಮದರಾಸ್ ಹೈಕೋರ್ಟಿನಲ್ಲಿ ಅಪೀಲ್ ಆಗಿರುವುದು. ಈ ತಿಂಗಳ ೨೭ ಕ್ಕೆ ವಿಚಾರಣೆಯಾಗುವುದೆಂದು ತಿಳಿದುಬಂದಿದೆ.

❖❖❖

ಮೊನ್ನೆ ಮಂಗಳವಾರ ಬೆಳಗ್ಗೆ ಸುಮಾರು ೭ ಗಂಟೆಗೆ ದಿವಾನ್ ಮೆ॥ ಮಾಧವರಾಯರು ತಮ್ಮ ಪ್ರೈವೆಟ್ ಸೆಕ್ರೆಟರಿಯವರ ಸಂಗಡ ಮೋಟಾರ್ ಗಾಡಿಯಲ್ಲಿ ಬೆಂಗಳೂರಿಂದ ಹೊರಟು ಸುಮಾರು ೧೧॥ ಗಂಟೆಗೆ ರಾಜಧಾನಿಯನ್ನು ಸುರಕ್ಷಿತವಾಗಿ ತಲಪಿದರು. ಸೆಕ್ರೆಟರಿಗಳೂ ಪರಿವಾರದವರೂ ಮಧ್ಯಾಹ್ನದ ರೈಲಿನಲ್ಲಿ ಬಂದಿರುತ್ತಾರೆ. ದಿವಾನರವರು ಸೋಮವಾರದ ತನಕ ರಾಜಧಾನಿಯಲ್ಲಿದ್ದು, ತರುವಾಯ ವಾಪಸು ಬೆಂಗಳೂರಿಗೆ ಹೋಗಿ, ಅಲ್ಲಿಂದ ನೀಲಗಿರಿಬೆಟ್ಟಕ್ಕೆ ದಯಮಾಡುವರೆಂದು ಕೇಳುತ್ತೇವೆ.

❖❖❖

ಹೋದ ವಾರ ಬೆಂಗಳೂರು ಡಿಸ್ಟ್ರಿಕ್ಟ್ ಹೊಸಕೋಟೆ ತಾಲ್ಲೂಕು ಬಿದರಹಳ್ಳಿ ಪೋಲೀಸ್ ಸ್ಟೇಷನ ಕಾನ್‌ಸ್ಟೆಬಲ್ ಒಬ್ಬನು ತನ್ನ ಹೆಂಡತಿ ಅಕಸ್ಮಾತ್ ಭಾವಿಗೆ ಬೀಳಲು ತಾನೂ ಅದೇ ಭಾವಿಗೆ ಬೀಳುವದಕ್ಕೆ ಹೋದಾಗ ಅಲ್ಲಿದ್ದ ಜನರು ಅವನನ್ನು ತಡೆದು ನಿಲ್ಲಿಸಿದರೆಂತಲೂ ಅನಂತರ ಅವನು ಸ್ಟೇಷನಿಗೆ ಹೋಗಿ ಬಂದೂಕನ್ನು ಒಡಮಾಡಿ ಕೊಂದುಕೊಂಡನೆಂತಲೂ ಸ್ಟೇಷನಿನಲ್ಲಿದ್ದ ಕಾಗದಗಳು ಕೆಲವು ಸುಟ್ಟುಹೋಗಿದ್ದವೆಂತಲೂ ಒಬ್ಬ ಬಾತ್ಮಿದಾರರು ಬರೆಯುತ್ತಾರೆ.

❖❖❖

ನಾಳೆ ಭಾನುವಾರ ಬೆಳಿಗ್ಗೆ ಶ್ರೀಮನ್ಮಹಾರಾಜರವರು ಮೋಟಾರ್ ಗಾಡಿಯಲ್ಲಿ ರಾಜಧಾನಿಯನ್ನು ಬಿಟ್ಟು ಸುಮಾರು ೧೧ ಘಂಟೆಗೆ ಸೀಗೂರನ್ನು ತಲಪಿ ಅಲ್ಲಿ ಸ್ನಾನಾದಿಗಳನ್ನು ತೀರಿಸಿಕೊಂಡು ಮೋಟಾರ್ ಗಾಡಿಯನ್ನು ವಾಪಸ್ ಕಳುಹಿಸಿ, ಅಲ್ಲಿಂದ ಮುಂದಕ್ಕೆ ಸಾರೋಟಿನಲ್ಲಿ ನೀಲಗಿರಿ ಬೆಟ್ಟವನ್ನು ತಲಪುವವರಾಗಿದಾರೆ. ಆ ದಿವಸವೇ ಮಹಾಮಾತೃಶ್ರೀಯವರೂ ಶ್ರೀಮನ್ ಮಹಾರಾಣಿಯವರೂ ಯುವರಾಜರವರೂ ಮಕ್ಕಳ ಸಹಿತ ಮಧ್ಯಾಹ್ನ ಸುಮಾರು ೧೨ ಘಂಟೆಗೆ ಸ್ಪೆಷಲ್ ರೈಲ್ ಹತ್ತಿ ರಾಜಧಾನಿಯಿಂದ ಹೊರಟು ಬೆಂಗಳೂರು ಮಾರ್ಗವಾಗಿ ನೀಲಗಿರಿಗೆ ದಯಮಾಡುವರು. ಶ್ರೀಮನ್ಮಹಾರಾಜರವರೇ ಮೊದಲಾದವರು ವಾಪಸು ರಾಜಧಾನಿಗೆ ಬರಲು ಸುಮಾರು ಎರಡುವರೆ ತಿಂಗಳಾಗುವುದೆಂದು ಊಹಿಸಲ್ಪಟ್ಟದೆ.

ಮೈಸೂರು ಗೆಜೆಟ್ ಸಂಗ್ರಹ

ಬೆಂಗಳೂರು ಪಟ್ಟಣದಲ್ಲಿ ಇಂಡಿಯಾ ಗವರ್ನಮೆಂಟಿನವರು ಲೇಟ್ ಮೆ॥ ಜೆ ಎನ್ ಟಾಟಾರವರ ಹೆಸರಿನ ಮೇಲೆ ಹಿಂದೂಸ್ಥಾನದ ಶಾಸ್ತ್ರಪರಿಶೋಧನಾ ವಿದ್ಯಾಶಾಲೆಯನ್ನು ಸ್ಥಾಪಿಸಬೇಕೆಂದು ತೀರ್ಮಾನಮಾಡಿರುತ್ತಾರಾದಕಾರಣ ಬೆಂಗಳೂರು ಸ್ಯಾಂಕಿ ಕೆರೆಯ ಒಳಭಾಗಕ್ಕೆ ಸೇರಿರುವ ೩೭೧ ಎಕರೆ ೧೬ ಗುಂಟೆ ಜಮೀನನ್ನು ಶ್ರೀಮನ್ ಮಹಾರಾಜಾ ಗವರ್ನಮೆಂಟಿನವರು ಇಂಡಿಯಾ ಗವರ್ನಮೆಂಟಿನವರ ಸುಪರ್ದಿಗೆ ೧೯೦೭ ನೆ ಮಾರ್ಚಿ ೧೪ ರಿಂದ ವಹಿಸಿಕೊಟ್ಟಿರುತ್ತಾರೆ. ಆ ಉದ್ದೇಶಕ್ಕೆ ಉಪಯೋಗಿಸಲ್ಪಡುವ ತನಕ ಆ ಜಮೀನು ಅವರ ಸ್ವತಂತ್ರಾಧಿಕಾರದಲ್ಲಿರತಕ್ಕದ್ದು.

ಫಾರೆಸ್ಟ್ ಅ॥ ಕನ್ಸರ್ವೇಟರ್ ಮೆ॥ ಸುಬ್ರಹ್ಮಣ್ಯನವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಆಸ್ಪತ್ರೆ ಅ॥ ಎಂ ಶ್ರೀನಿವಾಸರಾಯರನ್ನು ಜನವರಿ ಒಂದಾರಭ್ಯ ೧ ನೆ ಕ್ಲಾಸಿಗೆ ಬಡ್ತಿ ಮಾಡಿದೆ.

ಮುಂದೆ ಹೇಳುವ ವೈದ್ಯ ಇಲಾಖಾ ಅಧಿಕಾರಿಗಳ ವರ್ಗಾವರ್ಗಿ ಹುಕುಂಮಾಡಿದೆ.—ಅ॥ ಸರ್ಜನ್ ಮೆ॥ ಸಿ ಎ ನಂಜಪ್ಪನವರನ್ನು ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಗೆ, ಅ॥ ಸರ್ಜನ್ ಮೆ॥ ಮಹಮದ್ ಉಸ್ಮಾನರವರನ್ನು ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯಿಂದ ಶಿವಮೊಗ್ಗಕ್ಕೆ, ಆಕ್ಟಿಂಗ್ ಸಿವಿಲ್ ಸರ್ಜನ್ ಮೆ॥ ಡಬ್ಲ್ಯು ಶ್ರೀನಿವಾಸಯ್ಯಂಗಾರ್ಯರನ್ನು ಶಿವಮೊಗ್ಗೆಯಿಂದ ಚಿತ್ರದುರ್ಗಕ್ಕೆ, ಅ॥ ಸರ್ಜನ್ ಮೆ॥ ಸಿ ಅಪ್ಪಾದೊರೆಮೊದಲಿಯಾರನ್ನು ಚಿತ್ರದುರ್ಗದಿಂದ ಬೆಂಗಳೂರು ಸೀನಿಯರ್ ಸರ್ಜನರವರ ಆಫೀಸಿಗೆ.

ಮೆ॥ ಎಚ್ ಜೆ ಭಾಭಾಯವರು ಮಾರ್ಚಿ ೪ ರಲ್ಲಿ ಮೆ॥ ಜೆ ವೀರ್ ಯವರಿಂದ ವಿದ್ಯಾಭ್ಯಾಸದ ಇಲಾಖಾ ಇನ್ಸ್‌ಪೆಕ್ಟರ್ ಜನರಲ್ ರವರ ಆಫೀಸ್ ಛಾರ್ಜನ್ನು ವಹಿಸಿಕೊಂಡರು.

ಮೈಸೂರ್ ಡಿವಿಜನ್ ಅ॥ ಇಂಜನಿಯರ್ ಮೆ॥ ಬಿ ಸಿ ಶ್ರೀನಿವಾಸಯ್ಯಂಗಾರ್ಯರಿಗೆ ಜನವರಿ ೩೧ರಿಂದ ಒಂದು ತಿಂಗಳು ಆರು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದಾರೆ.

ಅ॥ ಜಿಯಾಲಜಿಸ್ಟ್ ಮೆ॥ ಪಿ ಸಂಪತ್ತಯ್ಯಂಗಾರ್ಯರನ್ನು ಕಳೆದ ಡಿಸೆಂಬರ್ ೧೩ ರಿಂದ ೩ನೆ ಕ್ಲಾಸಿಗೆ ಬಡ್ತಿ ಮಾಡಿದೆ.

ಬಹುಮಾನಪಡೆದ ವರ್ತಮಾನವು

[ಈ ಬಾತ್ಮಿ ಬರೆದ ಮ॥ ಸುಬ್ಬಣ್ಣಭಟ್ಟರು, ಹೆ ಮಾ, ಬೋರ್ಡ್ ಸ್ಕೂಲು ಮಿತ್ತನಡ್ಕ, ವಿಟ್ಲ, ಇವರಿಗೆ ಈ ವಾರದ ಬಹುಮಾನ ಕಳುಹಿಸಿದೇವೆ.]

ಕಳ್ಳರ ಹಾವಳಿ.

ದಕ್ಷಿಣ ಕನ್ನಡಾ ಜಿಲ್ಲಾ ಉಪ್ಪಿನಂಗಡಿ ತಾಲ್ಲೂಕು ವಿಟ್ಲಮಾಗಣೆಗೆ ಸೇರಿದ ಕನ್ಯಾನ ಗ್ರಾಮದ ಕನ್ನಾಜೆ ಎಂಬಲ್ಲಿ ಇರುವ ಮಿತ್ತಾಯಾನೆ ಕೃಷ್ಣಭಟ್ಟರೆಂಬವರು ಲಕ್ಷಾಧಿಪತಿಗಳಾದ ಧನಿಕರು. ಇವರಿಗೆ ಇಬ್ಬರು ಸಹೋದರರಿರುವರು. ಇವರ ಪೈಕಿ ಜ್ಯೇಷ್ಠ ಸಹೋದರನ ಮಗ ವೆಂಕಟರಮಣನೆಂಬವನಿಗೆ ಇದೇ ಮಾರ್ಚಿ ತಾ ೭ ನೇ ರಾತ್ರಿಗೆ ಅಲ್ಲಿಂದ ಸುಮಾರು ೮ ಮೈಲು ಫಾಸಲೆ ಪೂಕಳ ಎಂಬಲ್ಲಿ ವಿವಾಹಲಗ್ನವಾದ್ದರಿಂದ ೭ ನೇ ತಾ ಬೆಳಿಗ್ಗೆ ಇಲ್ಲಿಂದ ದಿಬ್ಬಣ ಹೊರಟು ರಾತ್ರಿ ಅಲ್ಲಿ ತಲಪಿ ಅನೇಕ ತರದ ವಾದ್ಯಘೋಷಗಳಿಂದಲೂ ಬಾಣ ಬಿರುಸುಗಳಿಂದಲೂ ಬಹಳ ವಿಜೃಂಭಣೆಯಿಂದ ಸದರಿ ವಿವಾಹ ಲಗ್ನವು ನೆರವೇರಿಸಿಕೊಂಡು, ತಾ ೮ ನೇ ಶುಕ್ರವಾರ ಬೆಳಿಗ್ಗೆ ಅಲ್ಲಿಂದ ಸ್ವಂತ ಮನೆಗೆ ಹೊರಟರು. ಇವರ ಪೈಕಿ ಕನಿಷ್ಠ ಸಹೋದರ ಭಟ್ಟಣ್ಣ ಭಟ್ಟರೆಂಬವರು ಸದರಿ ಲಗ್ನಕ್ಕಾಗಿ ಕೊಂಡುಹೋದ ಸುಮಾರು ಮೂರು ನಾಲ್ಕು ಸಾವಿರ ರೂಪಾಯಿ ಕ್ರಯ ಬಾಳುವ ಚಿನ್ನಾಭರಣ ಮತ್ತು ನಗದು ೨೫೦ ರೂಪಾಯಿಗಳನ್ನು ಕೈದಾ ಒಂದು ಪೆಟ್ಟಿಗೆಯಲ್ಲಿ ಭದ್ರ ಪಡಿಸಿ ಇವರ ಕೆಲಸದ ಅಣ್ಣಪ್ಪ ಎಂಬವನಿಂದ ಹೊರಿಸಿಕೊಂಡು ಬೆಳಿಗ್ಗೆ ಸುಮಾರು ೯ ಘಂಟೆ ಸಮಯಕ್ಕೆ ಕಲ್ಲಂಕ್ರಿ ಎಂಬ ದೊಡ್ಡ ಕಾಡಿನಲ್ಲಿ ಬರುವಾಗ್ಗೆ ಇಬ್ಬರು ಕಳ್ಳರು ಮೈಸರ್ವಾಂಗಕ್ಕೆ ಕಪ್ಪು ಮಸಿ ಹಚ್ಚಿಕೊಂಡು ತಲೆಗೆ ಬಾಳೆ ಮರದ ಹಾಳೆಯಿಂದ ಮಾಡಿದ ಮುಖವಾಡವನ್ನು ಕಟ್ಟಿ ಗುರ್ತ ತಿಳಿಯದಂತೆ ವೇಷ ಬದಲಾಯಿಸಿಕೊಂಡು, ಪೊದೆಯಲ್ಲಿ ಅಡಗಿಕೊಂಡಿದ್ದು ಥಟ್ಟನೆ ಎದ್ದು ಸದರಿ ಪೆಟ್ಟಿಗೆಯನ್ನು ಹೊತ್ತ ಅಣ್ಣಪ್ಪ ಎಂಬವನ ಕೈ ಭುಜಕ್ಕೆ ದೊಣ್ಣೆಯಿಂದ ಹೊಡದರು. ಅವನು ಕೂಡಲೆ ಪೆಟ್ಟಿಗೆ ಬಿಟ್ಟು ಬಿದ್ದುಕೊಂಡನು. ಇನ್ನೊಬ್ಬ ಕಳ್ಳನು ೨—೩ ಕತ್ತಿಯಿಂದ ಕಡಿದನು. ಇವನು ಮೂರ್ಛೆತಪ್ಪಿ ಬಿದ್ದನು. ಕೂಡಲೆ ಕಳ್ಳನು ಪೆಟ್ಟಿಗೆಯನ್ನು ತಲೆಗೆ ಇಡುವಷ್ಟರಲ್ಲಿ ಜೊತೆಯಲ್ಲಿದ್ದ ಸದರಿ ಭಟ್ಟಣ್ಣ ಭಟ್ಟರೆಂಬವರು ಇವನ ತಲೆಯಿಂದ ಪೆಟ್ಟಿಗೆಯನ್ನು ಎಳೆಯುತ್ತಲೇ ಇವರಿಗೆ ಬೆನ್ನಿಗೆ ಕೈಗೆ ಸಹ ಚೆನ್ನಾಗಿ ೩—೪ ಕತ್ತಿಘಾಯಗಳು ಮಾಡಿ ಕೆಡವಿದರು. ಇವರ ಬೊಬ್ಬೆಯಿಂದ ಸದರಿ ಲಗ್ನಕ್ಕೆ ಹೋದ ಇತರ ಸಂಗಡಿಗರು ಸುಮಾರು ೨೦ ಜನರು ಓಡಿ ಬರುತ್ತಿರುವದನ್ನು ನೋಡಿ ಪೆಟ್ಟಿಗೆಯನ್ನು ಬಿಸಾಡಿ ಕಳ್ಳರು ಪರಾರಿಯಾದರು. ಕೂಡಲೆ ಇವರಿಬ್ಬರನ್ನು ಪುತ್ತೂರು ಆಸ್ಪತ್ರೆಗೆ ಸಾಗಿಸಿ ಚಿಕಿತ್ಸೆಮಾಡಿಸುತ್ತಿದಾರೆ. ಇವರಲ್ಲಿ ಒಬ್ಬರು ಬದುಕುವದೇ ಕಷ್ಟವೆಂತ ಹೇಳುತ್ತಾರೆ. ಇಂಥಾ ಶುಭ ಸಂತೋಷದ ಸಮಯದಲ್ಲಿ ಇಂಥಾ ಕಷ್ಟವಾದ ವ್ಯಸನವು ಪ್ರಾಪ್ತವಾದದ್ದು ಎಲ್ಲರಲ್ಲಿಯೂ ತುಂಬಾ ಶೋಕವನ್ನುಂಟುಮಾಡಿದೆ. ಪೋಲೀಸಿನವರು ತಲಾಷೆಯಿಂದ ಇದ್ದಾರೆ. ಅವರು ಬಹಳ ಜಾಗ್ರತೆಯಿಂದ ತಲಾಷು ಮಾಡುವವರಾಗಿ ನಂಬುತ್ತೇನೆ. ಇನ್ನುಮುಂದೆ ಹಗಲು ಹೊತ್ತಿನಲ್ಲಾದರೂ ಒಬ್ಬಿಬ್ಬರೇ ಹಣವಗೈರೆ ಸಾಗಿಸಿಕೊಂಡು ಹೋಗುವವರು ಬಹಳ ಜಾಗ್ರತೆಯಿಂದಿರಲಿ!

ಕೂನೂರಿನಲ್ಲಿ ಹೊಸ ಆಸ್ಪತ್ರೆಯು.

ದ್ರವ್ಯಸಹಾಯ ಬೇಕಾಗಿದೆ.

ಹುಚ್ಚುನಾಯಿ ಮುಂತಾದ ಮೂಗು ಪ್ರಾಣಿಗಳಿಂದ ಕಡಿಸಿಕೊಂಡವರು ಚಿಕಿತ್ಸೆಯಿಲ್ಲದೆ ಈ ಹಿಂದುಸ್ಥಾನದಲ್ಲಿ ತೀರಿಹೋಗುವುದನ್ನು ನೋಡಿ ಕೆಲವು ವರುಷಗಳ ಕೆಳಗೆ ಉತ್ತರ ದೇಶಕ್ಕೆ ಸೇರಿದ ಕಸೌಲಿ ಪಟ್ಟಣದಲ್ಲಿ ಒಂದು ಆಸ್ಪತ್ರೆಯನ್ನು ಏರ್ಪಾಡು ಮಾಡಿದ್ದಾರೆ. ಈ ಆಸ್ಪತ್ರೆಗೆ ಸರ್ಕಾರದವರೂ ಐಶ್ವರ್ಯವಂತರೂ ದ್ರವ್ಯ ಸಹಾಯ ಮಾಡಿ, ಹಿಂದುಸ್ಥಾನದ ನಾನಾ ಕಡೆಗಳಿಂದ ಬರುವ ರೋಗಿಗಳನ್ನು ಔಷಧಾದ್ಯುಪಚಾರಗಳಿಂದ ವಾಸಿಮಾಡುವಂತೆ ಅವಕಾಶವನ್ನುಂಟುಮಾಡಿದ್ದಾರೆ. ಮೈಸೂರು ಸಂಸ್ಥಾನದಲ್ಲೂ ಯಾರಾದರೂ ಹುಚ್ಚುನಾಯಿ ಕಡಿದು ಚಿಕಿತ್ಸೆ ಮಾಡಿಸಿಕೊಳ್ಳಬೇಕೆಂದು ಕುತೂಹಲಪಟ್ಟರೆ ಅಂಥವರಿಗೂ ಅವರ ಜೊತೆಯಲ್ಲಿ ಹೋಗಬೇಕಾದವರಿಗೂ ಸರ್ಕಾರದಿಂದಲೇ ದ್ರವ್ಯಸಹಾಯ ಮಾಡುತ್ತೇವೆಂದು ಹುಕುಂ ಕೊಟ್ಟಿರುವುದನ್ನು ನಮ್ಮ ವಾಚಕರು ಮರೆತಿರಲಾರರು. ಆದರೆ ದಕ್ಷಿಣದೇಶದಿಂದ ಉತ್ತರ ದೇಶಕ್ಕೆ ಅಂಥಾ ರೋಗಿಗಳು ಚಿಕಿತ್ಸೆಗಾಗಿ ಹೋಗಿ ಬರುವುದು ಕಷ್ಟ. ಅನೇಕ ಮಂದಿ ಅಷ್ಟು ದೂರ ಹೋಗಿ ಬರಲು ಹಿಂತೆಗೆಯುವರು. ಇದರಿಂದ ಹುಚ್ಚುನಾಯಿ ಕಡಿದ ರೋಗಿಗಳು ನಾನಾತರದ ಹಿಂಸೆಯನ್ನನುಭವಿಸಿ ಪ್ರಾಣಬಿಟ್ಟಿರುವುದು ಅಪರೂಪವಲ್ಲ. ಇಂಥಾ ಅನಾನುಕೂಲಗಳನ್ನು ತಪ್ಪಿಸುವುದಕ್ಕಾಗಿ ದಕ್ಷಿಣ ದೇಶದಲ್ಲೇ ಒಂದು ಆಸ್ಪತ್ರೆಯನ್ನು ಕಟ್ಟಿ, ಅದರಲ್ಲಿ ರೋಗಿಗಳನ್ನಿಟ್ಟು ಚಿಕಿತ್ಸೆ ಮಾಡುವಂತೆ ಏರ್ಪಾಡು ಮಾಡಬೇಕೆಂದು ಕೆಲವರು ಪ್ರಯತ್ನಪಟ್ಟರು. ಮಿ॥ ಫಿಪ್ಸ್ ಎಂಬ ಅಮೇರಿಕದ ಶ್ರೀಮಂತನು ಕಲ್ಕತೆಗೆ ಬಂದಿದ್ದಾಗ ಕೆಲವು ದ್ರವ್ಯವನ್ನು ವೈಸ್‌ರಾಯಿ ಲಾರ್ಡ್ ಕರ್ಸನ್‌ರವರ ವಶಕ್ಕೆ ಕೊಟ್ಟು, ಆ ದ್ರವ್ಯವನ್ನು ಈ ರಾಷ್ಟ್ರದ ಪ್ರಜೆಗಳಿಗೆ ಉಪಕಾರವಾಗುವಂಥಾ ಸತ್ಕಾರ್ಯಗಳಿಗೆ ವಿನಿಯೋಗಿಸಬೇಕೆಂದು ತಿಳಿಸಿದನು. ಲಾರ್ಡ್ ಕರ್ಸನ್‌ರವರು ಆ ದ್ರವ್ಯದಲ್ಲಿ ಕೆಲವು ಭಾಗವನ್ನು ದಕ್ಷಿಣದೇಶದಲ್ಲಿ ಅಂಥಾ ಆಸ್ಪತ್ರೆಯನ್ನು ಕಟ್ಟಿಸುವುದಕ್ಕಾಗಿ ದಯಪಾಲಿಸಿದರು. ಇಂಡಿಯಾ ಗವರ್ನಮೆಂಟಿನಿಂದಲೂ ಮದರಾಸ್ ಸರ್ಕಾರಿ ಖಜಾನೆಯಿಂದಲೂ ಕೆಲ ಕೆಲವು ಹಣ ಕೈ ಸೇರಿದಾಯಿತು. ಈ ಹಣದಿಂದ ನೀಲಗಿರಿ ಬೆಟ್ಟಗಳ ಸರಹದ್ದಿಗೆ ಸೇರಿದ ಕೂನೂರೆಂಬ ಪಟ್ಟಣದಲ್ಲಿ ಒಂದು ಆಸ್ಪತ್ರೆಯನ್ನು ಕಟ್ಟಿ ಪೂರೈಸಿರುತ್ತಾರೆ. ಈ ಆಸ್ಪತ್ರೆಯಲ್ಲಿ ರೋಗಿಗಳಿಗೆ ಔಷಧಾದಿಗಳನ್ನು ಕೊಟ್ಟು ಚಿಕಿತ್ಸೆ ಮಾಡುವುದಕ್ಕೆ ಮದರಾಸ್ ಸರ್ಕಾರದವರು ವೈದ್ಯದಲ್ಲಿ ಗಟ್ಟಿಗರಾದ ಕ್ಯಾಪ್ಟನ್ ಜೆ. ಡಬ್ಲ್ಯು. ಕಾರ್ನ್‌ವಾಲ್ ಎಂಬುವರನ್ನು ಅಧ್ಯಕ್ಷ ಪಂಡಿತರನ್ನಾಗಿ ಕೊಟ್ಟಿರುವರು. ಈಗ ಈ ಪಂಡಿತರು ಈ ಹೊಸ ಆಸ್ಪತ್ರೆಯ ವಿಷಯದಲ್ಲಿ ಬರೆದು ತಿಳಿಸುವುದೇನೆಂದರೆ—

ಹುಚ್ಚು ಹಿಡಿದಿದೆ ಎಂಬ ಅನುಮಾನ ಕಂಡುಬರುವಂಥಾ ನಾಯಿ, ಬೆಕ್ಕು, ನರಿ, ಕೋತಿ (ಕಪಿ), ಈ ಮೊದಲಾದ ಯಾವ ಮೂಗು ಪ್ರಾಣಿಯಾದರೂ ಕಚ್ಚಿದಲ್ಲಿ ಕಡಿಸಿಕೊಂಡವರಿಗೆ ಬಹುಶಃ ಹುಚ್ಚು ಹಿಡಿದು ವಿಶೇಷವಾಗಿ ಅದರಲ್ಲೇ ಸತ್ತುಹೋಗುವರು. ಇಂಥಾ ರೋಗಿಗಳಿಗೆ ಈ ಆಸ್ಪತ್ರೆಯಲ್ಲಿ ೨೦ ದಿನಗಳೊಳಗಾಗಿ ಚಿಕಿತ್ಸೆಯು ಮುಗಿಯುವುದು. ಲೋಕದ ನಾನಾ ಭಾಗಗಳಲ್ಲಿ ಇಂಥಾ ಆಸ್ಪತ್ರೆಗಳು ೩೫—೪೦ ಇರುತ್ತವೆ. ಚಿಕಿತ್ಸೆ ಹೊಂದಿದವರು ಆ ರೋಗದಲ್ಲಿ ಸಾಯುವುದು ಅಪರೂಪವೆಂದು ದೃಷ್ಟಾಂತಕ್ಕೆ ಬಂದಿದೆ. ಚಿಕಿತ್ಸೆಗಾದರೋ ಯಾವ ರುಸುಮನ್ನೂ ರೋಗಿಯಿಂದ ಕೇಳಿ ತೆಗೆದುಕೊಳ್ಳುವುದಿಲ್ಲ. ಚಿಕಿತ್ಸೆ ಹೊಂದಿ ವಾಪಸು ಹೋಗುವಾಗ್ಗೆ ಆಸ್ಪತ್ರೆಗೆ ದ್ರವ್ಯಸಹಾಯ ಮಾಡಿದರೆ ತೆಗೆದುಕೊಳ್ಳುವರು. ಇದು ಸರ್ಕಾರಿ ಆಸ್ಪತ್ರೆಯಲ್ಲ. ಧರ್ಮಬುದ್ಧಿಯುಳ್ಳ ಪರೋಪಕಾರಿಗಳ ಸಹಾಯದಿಂದ ನಡೆಯಬೇಕಾಗಿರುತ್ತದೆ. ಆದಕಾರಣ ದಕ್ಷಿಣದೇಶದಲ್ಲಿರುವ ಮಹನೀಯರು ತಮ್ಮ ಶಕ್ತ್ಯನುಸಾರ ದ್ರವ್ಯಸಹಾಯ ಮಾಡಬೇಕಾಗಿದೆ. ಈ ಆಸ್ಪತ್ರೆಯ ಮೇಲ್ವಿಚಾರಣೆಗೆ ಒಂದು ಸಂಘವು ಏರ್ಪಾಡಾಗಿರುವುದು. ವರುಷಕ್ಕೆ ೫ ರೂಪಾಯಿನಂತೆ ಚಂದಾ ಕೊಡತಕ್ಕವರು ಆ ಸಂಘದಲ್ಲಿ ಮೆಂಬರಾಗಿ ದಾಖಲಾಗಬಹುದು. ಈ ಆಸ್ಪತ್ರೆಯ ರಿಪೋರ್ಟುಗಳೂ ಇತರ ಪ್ರಕಟನೆಗಳೂ ಅಂಥಾ ಮೆಂಬರುಗಳು ಕೇಳಿದರೆ ಉಚಿತವಾಗಿ ಕಳುಹಿಸಲಾಗುತ್ತದೆ. ಇಂಥಾ ಆಸ್ಪತ್ರೆಗೆ ದ್ರವ್ಯಸಹಾಯಮಾಡಲಪೇಕ್ಷಿಸುವವರು ಹಣವನ್ನು ಕೂನೂರಿನಲ್ಲಿರುವ ಪೇಸ್ಟ್ಯೂರ್ ಆಸ್ಪತ್ರೆಯ ಡೈರೆಕ್ಟರ್ ಕ್ಯಾಪ್ಟನ್ ಜೆ. ಡಬ್ಲ್ಯು. ಕಾರ್ನ್‌ವಾಲ್ ಇವರಿಗೆ ಕಳುಹಿಸತಕ್ಕದ್ದು.

ಬರೋಡೆಯಲ್ಲಿ ಸಂತೋಷೋತ್ಸವಗಳು.

ಮಹಾರಾಜಾ ಸೈಯ್ಯಾಜಿರಾವ್ ಗಾಯಿಕವಾಡ್‌ರವರ ಪಟ್ಟಾಭಿಷೇಕೋತ್ಸವವು.

ಬರೋಡಾ ಸಂಸ್ಥಾನದ ಮಹಾರಾಜರಾದ ಸೈಯಾಜಿರಾವ್ ಯವರು ಸಂಸ್ಥಾನವನ್ನಾಳುವುದಕ್ಕಾರಂಭಿಸಿ ಇಪ್ಪತ್ತೈದು ಸಂವತ್ಸರಗಳಾದವು. ಇದುವರೆಗೆ ಅವರು ತಮ್ಮ ದೇಶಾಭ್ಯುದಯಕ್ಕಾಗಿ ನಾನಾ ಪ್ರಜಾರಂಜಕವಾದ ಏರ್ಪಾಡುಗಳನ್ನು ಮಾಡಿ, ಪ್ರಜೆಗಳ ಬಹು ವಿಶೇಷವಾದ ಪ್ರೀತಿಯನ್ನೂ ಗೌರವವನ್ನೂ ಪರದೇಶಗಳಲ್ಲಿ ಸತ್ಕೀರ್ತಿಯನ್ನೂ ಸಂಪಾದಿಸಿಕೊಂಡಿರುತ್ತಾರೆ. ಪ್ರಜೆಗಳು ಇಂಥಾ ಮಹಾರಾಜರವರ ಆಳ್ವಿಕೆಯನ್ನು ಅನೇಕ ಸಂತೋಷೋತ್ಸವಗಳ ಮೂಲಕ ಶಾಶ್ವತಪಡಿಸಬೇಕೆಂದು ಉದ್ದೇಶಪಟ್ಟು, ಬಹು ಸಡಗರದಿಂದ ಕಾರ್ಯಗಳನ್ನು ನಡಸುತ್ತಿದ್ದರೆಂದು ವಾಚಕರಿಗೆ ತಿಳಿಸಿದ್ದೇವಷ್ಟೆ. ಈ ಉತ್ಸವಗಳೆಲ್ಲಾ ಕಳೆದ ೫ ನೇ ತಾ ನಿಂದ ಪ್ರಾರಂಭವಾಗಿ ೯—೧೦ ದಿನಗಳ ತನಕ ವಿರಾಮವಿಲ್ಲದೆ ನಡಸಲ್ಪಟ್ಟವೆಂತಲೂ ಅವುಗಳಲ್ಲಿ ಸಮಸ್ತ ಪ್ರಜೆಗಳೂ ಬೆರೆದು ತಮ್ಮ ಕೃತಜ್ಞತೆ ರಾಜಭಕ್ತಿ ಪ್ರೀತಿ ವಿಶ್ವಾಸಾದಿಗಳನ್ನು ಪ್ರಕಾಶಪಡಿಸಿದರೆಂತಲೂ ಪ್ರಕಟವಾಗಿದೆ. ಈ ಉತ್ಸವಗಳಲ್ಲಿ ಮುಖ್ಯ ಮುಖ್ಯವಾದವುಗಳನ್ನೆಲ್ಲಾ ತೆಗೆದು ಕೊಂಡು ಸಂಕ್ಷೇಪಿಸಿ ನಮ್ಮ ವಾಚಕರ ತಿಳುವಳಿಕೆಗಾಗಿ ಪ್ರಕಟಿಸಿರುತ್ತೇವೆ.

ಬರೋಡಾ ಸಂಸ್ಥಾನದ ರಾಜಧಾನಿಯನ್ನೂ ಸುತ್ತುಮುತ್ತಲಿನ ಪ್ರದೇಶಗಳನ್ನೂ ಬಾವುಟ, ಕಂಬಗಳು, ತೋರಣಗಳು, ಚಪ್ಪರಗಳು, ಹಸುರುವಾಣಿಯ ಮಂಟಪಗಳು, ಈ ಮೊದಲಾದವುಗಳಿಂದ ಅಲಂಕಾರ ಮಾಡಿದ್ದರು. ಅನೇಕ ಸಹಸ್ರ ಪ್ರಜೆಗಳು ರಾಜಧಾನಿಯಲ್ಲಿ ಸೇರಿದ್ದರು. ಮೊದಲನೆಯ ದಿನ ಗೌರವಾರ್ಥವಾದ ೨೧ ತೋಪುಗಳು ಹಾರಿಸಲ್ಪಟ್ಟವು. ಬಂದೀಖಾನೆಯಲ್ಲಿದ್ದ ಖೈದಿಗಳ ಪೈಕಿ ೨೧ ಮಂದಿಗೆ ಮಾಫ್‌ಮಾಡಿ ಬಿಟ್ಟುಬಿಟ್ಟರು. ಗಲ್ಲಿಗೆತ್ತಬೇಕೆಂದು ಶಿಕ್ಷೆ ವಿಧಿಸಲ್ಪಟ್ಟಿದ್ದ ಒಬ್ಬ ಅಪರಾಧಿಗೆ ಮರಣದಂಡನೆಯನ್ನು ತಪ್ಪಿಸಿ ಸಜಾ ಅನುಭವಿಸುವಂತೆ ಹುಕುಂ ಆಯಿತು. ಮಹಾರಾಜರ ಶ್ರೇಯಃಪ್ರಾರ್ಥನಾ ಪೂರ್ವಕವಾದ ಪೂಜೆ ಅಭಿಷೇಕ ಉತ್ಸವಾದಿಗಳು ಸಮಸ್ತ ದೇವಾಲಯಗಳಲ್ಲೂ ನಡೆದವು. ಹತ್ತು ಸಹಸ್ರ ಸ್ಕೂಲ್ ಮಕ್ಕಳಿಗೆ ರುಚಿಯಾದ ಸಿಹಿಪದಾರ್ಥಗಳನ್ನು ಹಂಚಿದರು. ಆರು ಸಾವಿರ ಬಡವರಿಗೂ ಅಂಗಹೀನರಿಗೂ ರೋಗಿಗಳಿಗೂ ಸುಖಭೋಜನವನ್ನು ಮಾಡಿಸಿ ಬಟ್ಟೆ ಬರೆಗಳನ್ನು ಕೊಟ್ಟರು. ಮೈದಾನಿನಲ್ಲಿ ಮಹಾ ಅಲಂಕಾರಯುಕ್ತವಾದ ಒಂದು ದೊಡ್ಡ ಮಂಟಪವನ್ನು ಕಟ್ಟಿ ಎಲ್ಲಾ ಕೋಮುಗಳ ಪ್ರತಿನಿಧಿಗಳೂ ಅಧಿಕಾರಿಗಳೂ ಸರದಾರರೂ ಸೇರಿ ಶ್ರೀಮನ್ಮಹಾರಾಜರನ್ನು ಕರೆಸಿಕೊಂಡು ಅವರು ಕಳೆದ ಇಪ್ಪತ್ತೈದು ವರುಷಗಳಲ್ಲಿ ಮಾಡಿರುವ ಉಪಕಾರಗಳನ್ನೆಲ್ಲಾ ವಿವರಿಸಿ ವಿಜ್ಞಾಪನಾಪತ್ರಿಕೆಯನ್ನು ಒಪ್ಪಿಸಿದರು. ಮಹಾರಾಜರು ಸೈನ್ಯ ಸಮೇತರಾಗಿ ಬಂದ ಉತ್ಸವದ ಅಟ್ಟಹಾಸವು ಅಪೂರ್ವವಾದದ್ದಾಗಿತ್ತು. ಸಾವಿರಾರು ಪ್ರಜೆಗಳು ಜಯಧ್ವನಿಮಾಡಿ ತಮ್ಮ ಪ್ರೀತಿ ಭಕ್ತಿಗಳನ್ನು ಪ್ರಕಾಶಪಡಿಸಿದರು. ಅಲ್ಲಲ್ಲಿ ಮಹಾರಾಜರನ್ನು ನಿಲ್ಲಿಸಿಕೊಂಡು ಫಲಪುಷ್ಪತಾಂಬೂಲಗಳನ್ನು ಒಪ್ಪಿಸಿದರು.

ಮಹಾರಾಜರವರ ಔದಾರ್ಯ.

ಮಂಟಪದ ಒಳಿ ಸೇಟ್ ಹರಿಭಕ್ತಿ ಎಂಬುವರೂ ಸರದಾರರೂ ಮುಖಂಡರೂ ಮಹಾರಾಜರನ್ನು ಎದುರುಗೊಂಡು, ಕರೆದುಕೊಂಡುಹೋಗಿ ಒಳಗೆ ಏರ್ಪಡಿಸಿದ್ದ ಸಿಂಹಾಸನದ ಮೇಲೆ ಜಿಬಮಾಡಿಸಿದರು. ಅಡ್ರೆಸ್ ಓದಿ ಮಹಾರಾಜರವರಿಗೆ ಒಪ್ಪಿಸಿದ ತರುವಾಯ ಮೇ॥ ಫ್ರೇಸ್ ಎಂಬ ವಿದ್ವತ್ ಪಾತ್ರಿಗಳು ಸಭೆಯ ಮುಂದೆ ಒಂದು ಶ್ರೀಮನ್ಮಹಾರಾಜರವರ ಪ್ರಜಾವಾತ್ಸಲ್ಯವನ್ನೂ ಅವರ ಸದ್ಗುಣವನ್ನೂ ಅವರು ಪ್ರಜೆಗಳನ್ನು ಅಭಿವೃದ್ಧಿಗೆ ತರಬೇಕೆಂಬ ಉದ್ದೇಶದಿಂದ ಮಾಡುತ್ತಾ ಬಂದಿರುವ ಮಹೋಪಕಾರಕ ಕಾರ್ಯಗಳನ್ನು ಸಂಕ್ಷೇಪವಾಗಿ ವಿವರಿಸಿ ವಂದಿಸಿದರು. ಅನಂತರ ಮಹಾರಾಜಾ ಸೈಯ್ಯಾಜಿರಾವ್ ಯವರು ಪ್ರತ್ಯುತ್ತರವನ್ನಿತ್ತು ಹೇಳಿದ ಅಭಿಪ್ರಾಯವೇನೆಂದರೆ —ನನ್ನ ಪ್ರಜೆಗಳನ್ನು ಎಲ್ಲಾ ವಿಷಯಗಳಲ್ಲೂ ಮುಂದಕ್ಕೆ ತರಬೇಕಾದದ್ದು ನನ್ನ ಮುಖ್ಯಕರ್ತವ್ಯವಾಗಿರುತ್ತದೆ. ನಾನು ಈ ಇಪ್ಪತ್ತೈದು ಸಂವತ್ಸರಗಳಲ್ಲಿ ಮಾಡಿರುವ ಕಾರ್ಯಗಳನ್ನು ಪ್ರಜೆಗಳಾದ ನೀವೆಲ್ಲಾ ಮೆಚ್ಚಿಕೊಂಡಿರುತ್ತೀರೆಂಬುದನ್ನು ನೋಡುವಾಗ್ಗೆ ನನಗೆ ತುಂಬಾ ತೃಪ್ತಿಯುಂಟಾಗುವುದು. ಈ ಸಂತೋಷೋತ್ಸವಕಾಲದಲ್ಲಿ ನಾನು ನನ್ನ ಪ್ರಜೆಗಳಿಗೆ ಕೆಲವು ರಿಯಾಯಿತಿಗಳನ್ನು ತೋರಿಸಬೇಕೆಂದು ಗೊತ್ತು ಮಾಡಿರುತ್ತೇನೆ. ಮಂತ್ರಿಯಾದ ಕೇಶವಜಿ ರುಸ್ತುಂಜಿಯವರು ಅವುಗಳನ್ನು ವಿವರಿಸುತ್ತಾರೆ ಎಂದು ಹೇಳಿ ಕುಳಿತುಕೊಂಡರು. ಮಂತ್ರಿಯವರು ಓದಿ ತಿಳಿಸಿದ ರಿಯಾಯಿತಿಗಳ್ಯಾವವೆಂದರೆ—(೧) ಕೆಲವು ಗ್ರಾಮಗಳಲ್ಲಿ ವಸೂಲಾಗದೆ ಬಾಕಿಯಿದ್ದ ಕಂದಾಯಗಳನ್ನು ಮಾಫಿ ಬಿಟ್ಟಿದೆ. (೨) ಮಾತೃಭಾಷೆಯನ್ನು ಸಕಲ ಪಾಠಶಾಲೆಗಳಲ್ಲೂ ಎಲ್ಲಾ ತರಗತಿಗಳಲ್ಲೂ ಫೀಜಿಲ್ಲದೆ ಧರ್ಮಾರ್ಥವಾಗಿ ಪ್ರಜೆಗಳಿಗೆ ಕಲಿಸಲಾಗುವುದು. (೩) ಪಟ್ಟಣಗಳಲ್ಲೂ ಅಂಗ್ರೂತಿಯಲ್ಲೂ ಹೊಸದಾಗಿ ಎರಡು ವಿದ್ಯಾರ್ಥಿನಿಲಯಗಳನ್ನು (ಬೋರ್ಡಿಂಗ್ ಹೌಸ್) ಕಟ್ಟುವರು. (೪) ಯೂರೋಪಿನ ರಾಜ್ಯಗಳಿಗೆ ಹೋಗಿ ವಿದ್ಯೆ ಕಲಿತು ಬರುವುದಕ್ಕೆ ಐದು ವಿದ್ಯಾರ್ಥಿವೇತನಗಳು ಕೊಡಲ್ಪಡುವವು. (೫) ರಾಜಧಾನಿಯಾದ ಬರೋಡಾ ಷಹರಿನಲ್ಲಿ ಸರ್ಕಾರಿ ಹಣದಿಂದ ಒಂದು ದೊಡ್ಡ ಮಾರ್ಕೆಟ್ಟನ್ನು ಕಟ್ಟಿಸಲ್ಪಡುವುದು. (೬) ಬಡಬಗ್ಗರನ್ನೂ ಅನಾಥರನ್ನೂ ಪೋಷಣೆ ಮಾಡುವಂಥಾ ಒಂದು ಧರ್ಮಸತ್ರವನ್ನು ರಾಜಧಾನಿಯಲ್ಲಿ ಕಟ್ಟುತ್ತಾರೆ. (೭) ಹೊಸದಾಗಿ ನಾಲ್ಕು ಆಸ್ಪತ್ರೆಗಳು ತೆರೆಯಲ್ಪಡುವವು. (೮) ಕೀಳು ಜಾತಿಯ ಪ್ರಜೆಗಳ ಉಪಯೋಗಾರ್ಥವಾಗಿ ಬಾವಿಗಳನ್ನು ತೋಡಿಸಿಕೊಡುವುದಕ್ಕೆ ಐದೂವರೆ ಲಕ್ಷ ರೂಪಾಯಿ ಸ್ಯಾಂಕ್ಷನ್ ಮಾಡುವರು. (೯) ರಾಜಧಾನಿಯಲ್ಲಿ ಪ್ರಜೆಗಳಿಗೆ ಒಳ್ಳೇ ಗಾಳಿಯ ಪ್ರಯೋಜನಗಳು ಲಭ್ಯವಾಗುವಂತೆ ಒತ್ತಾದ ಮನೆಗಳನ್ನು ಒಡೆದು ವಿಸ್ತಾರವಾದ ಒಂದು ಉದ್ಯಾನವನವನ್ನು ಕಲ್ಪಿಸುತ್ತಾರೆ. ಈ ವಿಧವಾದ ರಿಯಾಯಿತಿಗಳನ್ನು ಕೇಳಿ ಪ್ರಜೆಗಳೆಲ್ಲಾ ಪರಮಾನಂದಭರಿತರಾಗಿ ಶ್ರೀಮನ್ಮಹಾರಾಜರನ್ನು ಹೊಗಳಿ ಕೊಂಡಾಡಿದರು.

ರಾಜಧಾನಿಯಲ್ಲಿ ಸಂತೋಷೋತ್ಸವವು.

ಮೈಸೂರು ಪುರನಿವಾಸಿಗಳು ಶ್ರೀಮನ್ಮಹಾರಾಜರವರಿಗೆ ಮಾಡಿದ ಆತಿಥ್ಯಗಳು.

ಮೈಸೂರು ಪಟ್ಟಣದ ಸಕಲ ಪ್ರಜೆಗಳೂ ಶ್ರೀಮನ್ಮಹಾರಾಜರವರಿಗೆ ಜಿ. ಸಿ. ಎಸ್. ಐ. ಎಂಬ ಬಿರುದು ಬಂದದ್ದಕ್ಕಾಗಿ ತಮ್ಮ ಸಂತೋಷಾತಿಶಯವನ್ನೂ ಕೃತಜ್ಞತೆಯನ್ನು ಭಕ್ತಿಪ್ರೀತಿ ಪೂರ್ವಕವಾಗಿ ಪ್ರಕಾಶಪಡಿಸುವುದಕ್ಕೆ ಕಳೆದ ಯುಗಾದಿ ಹಬ್ಬದ ದಿನ ಅಂದರೆ ತಾ. ೧೫ನೆ ಶುಕ್ರವಾರ ಸಾಯಂಕಾಲ ಬಹು ಅಪೂರ್ವವಾದ ಸಂತೋಷೋತ್ಸವವನ್ನು ಮಾಡಿದರು.

ಪಟ್ಟಣ ಶೃಂಗಾರ ಮುಂತಾದದ್ದು.

ಪ್ರಜೆಗಳೆಲ್ಲಾ ಕೆಲವು ದಿನಗಳಿಗೆ ಮುಂಚೆ ಸಭೆಸೇರಿ ಒಂದು ಕಮಿಟಿಯನ್ನು ನೇಮಿಸಿ, ಶ್ರೀಮನ್ಮಹಾರಾಜರವರಿಗೆ ಒಂದು ಅಡ್ರೆಸ್ಸನ್ನು ಭಕ್ತಿಪೂರ್ವಕವಾಗಿ ಅರ್ಪಿಸಬೇಕೆಂದು ತೀರ್ಮಾನಮಾಡಿಕೊಂಡಂತೆ ಆ ಕಮಿಟಿಯವರು ಚಂದಾ ಕೂಡಿಸಿ ಎಲ್ಲಾ ಏರ್ಪಾಡುಗಳನ್ನೂ ಮಾಡಿದರು. ಪಟ್ಟಣದ ಮುಖ್ಯಭಾಗಗಳನ್ನು ತೋರಣ ಬಾವುಟ ಮೊದಲಾದವುಗಳಿಂದ ಶೃಂಗರಿಸಿದರು. ಕರ್ಜನ್ ಪಾರ್ಕನ್ನು ಬಹು ವಿಶೇಷವಾಗಿ ಅಲಂಕಾರಮಾಡಿದರು. ಶ್ರೀಮನ್ಮಹಾರಾಜರವರು ಉತ್ಸವದಲ್ಲಿ ದಯಮಾಡತಕ್ಕ ಬೀದಿಗಳೆಲ್ಲಾ ಚಪ್ಪರ, ತಳಿರು ತೋರಣ ಕಾಮಾನು ಮೊದಲಾದವುಗಳಿಂದ ಶೃಂಗರಿಸಲ್ಪಟ್ಟವು. ಶ್ರೀಮನ್ಮಹಾರಾಜರವರಿಗೆ ಅಡ್ರೆಸ್ಸನ್ನು ಒಪ್ಪಿಸುವುದಕ್ಕಾಗಿ ರಂಗಾಚಾರ್ಲು ಮೆಮೋರಿಯಲ್ ಹಾಲ್ ಎಂಬ ಟೌನ್ ಹಾಲ್ ಭವನವನ್ನು ಬಹು ವಿಶೇಷವಾಗಿ ಅಲಂಕಾರಮಾಡಿದರು. ಒಳಗಡೆ ಶ್ರೀಮನ್ಮಹಾರಾಜರವರನ್ನು ಬಿಜಮಾಡಿಸುವುದಕ್ಕೆ ಶೃಂಗಾರವಾದ ಮಂಟಪವನ್ನು ಕಟ್ಟಿ ಅದರ ಎದುರು ಪಾರ್ಶ್ವದಲ್ಲೂ ಎಡಬಲಪಾರ್ಶ್ವಗಳಲ್ಲೂ ಸಾಲುಸಾಲಾಗಿ ದೊಡ್ಡಮನುಷ್ಯರೂ ಸರ್ದಾರರೂ ಕುಳಿತುಕೊಳ್ಳುವುದಕ್ಕೆ ಕುರ್ಚಿ, ಸೋಫಾಗಳನ್ನು ಹಾಕಿಸಿದರು. ಕೆಲವು ವರ್ತಮಾನ ಪತ್ರಿಕಾ ಪ್ರತಿನಿಧಿಗಳಿಗೆ ಸ್ಥಳವನ್ನು ಅನುಕೂಲಮಾಡಿಕೊಟ್ಟಿದ್ದರು. ಮಂಟಪದ ಎದುರು ಪಾರ್ಶ್ವದಲ್ಲಿ ಮೇಲ್ಗಡೆ ಎರಡನೆಯ ಅಂತಸ್ಥಿನ ಬಾಲಾಖಾನೆಯಲ್ಲಿ ಕುರ್ಚಿಗಳನ್ನು ಹಾಕಿಸಿ ಮಹಾ ಮಾತೃಶ್ರೀಯವರೇ ಮೊದಲಾದ ಅರಮನೆಯ ಪರಿವಾರದವರು ಕುಳಿತುಕೊಳ್ಳುವುದಕ್ಕೆ ಶ್ರೇಷ್ಠವಾದ ಆಸನಗಳನ್ನು ಕಲ್ಪಿಸಿದ್ದರು.

ಉತ್ಸವ ಮುಂತಾದದ್ದು.

ನವೀನವಾದ ಬಿರುದನ್ನು ಧರಿಸಿಕೊಂಡು ಶ್ರೀಮನ್ಮಹಾರಾಜರವರೂ ಯುವರಾಜರವರೂ ಮತ್ತು ಸರ್ದಾರ್ ಕಾಂತರಾಜೇ ಅರಸಿನವರೂ ಸರ್ದಾರ್ ಗೋಪಾಲರಾಜೇ ಅರಸಿನವರೊಡನೆ ದಿವ್ಯವಾದ ನಾಲ್ಕು ಕುದುರೆ ಕಟ್ಟಿದ ಸಾರೋಟಿನಲ್ಲಿ ಕುಳಿತು, ಸಿಲೇದಾರ್ ಕುದುರೆ ಸವಾರರನ್ನೂ ಬಾಡಿಗಾರ್ಡೆಂಬ ತುರುಫ್ ಸವಾರರನ್ನೂ ಭಲದವರನ್ನೂ ಸಾರೋಟಿನ ಹಿಂದೆಯೂ ಮುಂದೆಯೂ ಪಕ್ಕಗಳಲ್ಲೂ ಬಿಟ್ಟುಕೊಂಡು, ಶ್ವೇತಚ್ಛತ್ರಿಚಾಮರಾದಿಗಳ ಸಮೇತ ಸಾಯಂಕಾಲ ಸುಮಾರು ೫॥ ಘಂಟೆಗೆ ಅರಮನೆ ಕರೀಕಲ್ಲು ತೊಟ್ಟಿಯಿಂದ ಬಿಜಮಾಡಿ, ಸಂತೇಪೇಟೆಯಲ್ಲೂ ಗಫ್ರಿನ್ ಫೌಂಟನ್ ಮಾರ್ಗವಾಗಿ ವೆಂಕಟಕೃಷ್ಣ ಸಾಹೇಬರ ಬಂಗ್ಲಾ ಪಶ್ಚಿಮದ ರಸ್ತೆ ಅಂದರೆ ಕಾಳಮ್ಮನ ಗುಡಿಬೀದಿಯಲ್ಲೂ ದಯಮಾಡಿ, ಅಲ್ಲಿಂದ ಪೂರ್ವಕ್ಕೆ ತಿರುಗಿ ಲಷ್ಕರ್ ಮೊಹಲ್ಲಾ ವೀರನಗೆರೆ ಬಳಿ ದೊಡ್ಡಪೇಟೆ ರಸ್ತೆಯನ್ನು ಸೇರಿ, ದೊಡ್ಡಪೇಟೆ ಮಾರ್ಗವಾಗಿ ರಂಗಾಚಾರ್ಲು ಮೆಮೋರಿಯಲ್ ಹಾಲ್ ಎಂಬ ಭವನಕ್ಕೆ ಚಿತ್ತೈಸಿದರು. ಉತ್ಸವವು ಈ ಮಾರ್ಗಗಳಲ್ಲಿ ದಯಮಾಡುವಾಗ್ಗೆ ಪ್ರಜೆಗಳು ಅಲ್ಲಲ್ಲಿ ಚಪ್ಪರ ಕಮಾನುಗಳನ್ನು ಕಟ್ಟಿ ಅವುಗಳ ಬಳಿ ಕಾದಿದ್ದು ಶ್ರೀಮನ್ಮಹಾರಾಜರವರ ಮೇಲೆ ಪುಷ್ಪಗಳನ್ನೆರಚಿ ಹಾರ ತುರಾಯಿ ಫಲಗಳನ್ನು ಒಪ್ಪಿಸಿದರು. ಆ ಭವನದ ಹೊರಭಾಗದಲ್ಲಿ ಹಾಕಿದ್ದ ದಿವ್ಯವಾದ ಕಮಾನಿನ ಬಳಿ, ಈ ಉತ್ಸವಕ್ಕಾಗಿ ಏರ್ಪಟ್ಟ ಕಮಿಟಿಯ ಮೆಂಬರುಗಳ ಪೈಕಿ ಮೆ॥ ಗಳಾದ ಬಿ. ತಿರುಮಲಾಚಾರ್ಯ, ಎಚ್. ರಾಮಾನುಜಯ್ಯಂಗಾರ್ಯ, ಟಿ. ಕೆ. ಸುಂದರರಾಜಯ್ಯಂಗಾರ್ಯ, ಅಂಬಳೆ ಅಣ್ಣಯ್ಯಪಂಡಿತರು ಈ ದೊಡ್ಡಮನುಷ್ಯರು ಕಾದಿದ್ದು ಶ್ರೀಮನ್ಮಹಾರಾಜರವರಿಗೆ ಸುಸ್ವಾಗತವನ್ನು ಬಯಸಿದರು. ತರುವಾಯ ಒಳಗಡೆ ಮೈದಾನಿನಲ್ಲಿ ಸಾಲುಸಾಲಾಗಿ ಗ್ಯಾಲರಿಗಳ ಮೇಲೆ ಕುಳಿತಿದ್ದ ಬಾಲಕಿಯರು ಮಂಗಳಗೀತವನ್ನು ಹಾಡಿ ಎದುರುಗೊಂಡರು. ಅಲ್ಲಿಂದ ಮುಂದಕ್ಕೆ ಕಟ್ಟಡದ ಒಳಬಾಗಿಲ ಬಳಿ ದಯಮಾಡುವಲ್ಲಿ ಬ್ಯಾಂಡ್ ವಾದ್ಯಗಾರರು ಬಹು ಇಂಪಾದ ರಾಗವನ್ನೆತ್ತಿ ನುಡಿಸುತ್ತಾ ಇರುವಾಗ್ಗೆ ಅದೇ ಕಮಿಟಿಯ ಇನ್ನು ಕೆಲವು ಮೆಂಬರುಗಳು ಅಂದರೆ ಸರ್ದಾರ್ ಲಕ್ಷ್ಮೀಕಾಂತರಾಜೇ ಅರಸಿನವರು, ಡಾಕ್ಟರ್ ನಂಜಪ್ಪನವರು, ಮೆ॥ ಗಳಾದ ಬಿಡ್ಡಣ್ಣನವರು, ಮರಿಯಣ್ಣನವರು, ಚಿಕ್ಕಣ್ಣನವರು, ಅನಂತರಾಜೈಯ್ಯನವರು, ರೆವ್ ಇ. ಡಬ್ಲ್ಯು. ಥಾಂಪ್‌ಸನ್ ಸಾಹೇಬರು, ನಾನಾ ಆಪಿನಾರಾಯಣಶೆಟ್ಟಿ, ರಹಿಮತುಲ್ಲಾ ಅಹ್ಮದ್‌ಸೇಟರು, ಶೆಟ್ಟಿ ಜಿರಾಯರು, ಈ ದೊಡ್ಡಮನುಷ್ಯರು ಕಾದಿದ್ದು ಶ್ರೀಮನ್ಮಹಾರಾಜರವರನ್ನು ಗಾಡಿಯಿಂದಿಳಿಸಿಕೊಂಡು, ಒಳಕ್ಕೆ ಬಿಜಮಾಡಿಸಿದರು. ಕೂಡಲೇ ಆ ಮಂದಿರದೊಳಗೆ ಕುಳಿತಿದ್ದ ಸಕಲ ದೊಡ್ಡಮನುಷ್ಯರೂ ಎದ್ದುನಿಂತು, ಶ್ರೀಮನ್ಮಹಾರಾಜರವರು ಮಂಟಪದೊಳಕ್ಕೆ ದಯಮಾಡಿ ಸುಂದರವಾದ ಚಿನ್ನದ ಕುರ್ಚಿಯನ್ನಲಂಕರಿಸಿದ ಮೇಲೆ ಕುಳಿತುಕೊಂಡರು. ಯುವರಾಜರವರು ಮಂಟಪದೊಳಗೇ ಅವರ ಬಲಭಾಗದಲ್ಲಿ ಬಂಗಾರದ ಕುರ್ಚಿಯ ಮೇಲೆ ದಯಮಾಡಿದರು.

ಧರ್ಮಕಾರ್ಯಗಳು.

ಈ ಸಂತೋಷೋತ್ಸವಕ್ಕಾಗಿ ವಸೂಲಾದ ಚಂದಾ ಮೊಬಲಗಿನಲ್ಲಿ ಬಹು ಭಾಗವನ್ನು ಧರ್ಮ ಕಾರ್ಯಗಳಿಗೆ ವಿನಿಯೋಗಿಸಿದರು. ಆ ದಿನ ರಾಜಧಾನಿಯ ಸಕಲ ದೇವಸ್ಥಾನಗಳಲ್ಲೂ ಮಸೀತಿಗಳಲ್ಲೂ ಶ್ರೀಮನ್ಮಹಾರಾಜರವರ ಶ್ರೇಯಃ ಪ್ರಾರ್ಥನೆಗಾಗಿ ಅಭಿಷೇಕಗಳೂ ಪೂಜೆ ಪುನಸ್ಕಾರಗಳೂ ಉತ್ಸವಗಳೂ ನಡಸಲ್ಪಟ್ಟವು. ಸುಮಾರು ಇಪ್ಪತ್ತಾರು ಪಲ್ಲಾ ಅಕ್ಕಿಯನ್ನೂ ದುಡ್ಡನ್ನೂ ಬಡಬಗ್ಗರಿಗೂ ರೋಗಿಗಳಿಗೂ ಅಂಗಹೀನರಿಗೂ ಬಟವಾಡೆ ಮಾಡಿದರು. ಇದಲ್ಲದೆ ಅವರಿಗೆಲ್ಲಾ ಹೊಸ ಬಟ್ಟೆಗಳನ್ನು ಕೊಡಿಸಿದರು. ಈ ಕೆಲಸಗಳನ್ನು ವರ್ತಕರೂ ಪ್ರಜೆಗಳ ಮುಖಂಡರೂ ವಹಿಸಿಕೊಂಡು ಸ್ವಲ್ಪವೂ ಲೋಪವಿಲ್ಲದಂತೆ ಬಹು ತೃಪ್ತಿಕರವಾಗಿ ನೆರವೇರಿಸಿರುತ್ತಾರೆ. ರಾಜಧಾನಿಯಲ್ಲಿರುವ ಚೀಣಾ ಜವಳಿ ಸಾಹುಕಾರ್ ಮೆ॥ ಶೆಟ್ಟೋಜಿ ರಾಯರು ತನ್ನ ಸ್ವಂತ ಖರ್ಚಿನಿಂದಲೇ ಅಪಾರವಾಗಿ ಮಿಠಾಯಿ ತಯಾರ್ ಮಾಡಿಸಿ, ಗಾಡಿಯಲ್ಲಿ ತುಂಬಿ ಶ್ರೀಮನ್ ಮಹಾರಾಜರವರ ಮೆರವಣಿಗೆಯ ಹಿಂಭಾಗದಲ್ಲಿ ಬಿಡಿಸಿಕೊಂಡು ಹೋಗುತ್ತಾ ಪ್ರಜೆಗಳಿಗೆ ಹಂಚಿರುತ್ತಾರೆ. ಇದಲ್ಲದೆ ಈಚೆಗೆ ಈ ಪಟ್ಟಣದಲ್ಲಿರುವ ಸಮಸ್ತವಾದ ಪಾಠಶಾಲೆಗಳಿಗೂ ಮಿಠಾಯಿ ಸಾಗಿಸಿಕೊಂಡು ಹೋಗಿ, ಎಲ್ಲಾ ಬಾಲಕರಿಗೂ ಬಾಲಕಿಯರಿಗೂ ಕ್ರಮವಾಗಿ ಹಂಚಿಕೊಟ್ಟರು. ಈ ಕಾರ್ಯವು ಅವರಲ್ಲಿರುವ ರಾಜ ಭಕ್ತಿ ವಿಶ್ವಾಸಾದಿಗಳನ್ನು ಪ್ರಕಾಶಪಡಿಸುವುದು.

ಅಡ್ರೆಸ್ಸು ಒಪ್ಪಿಸಿದ್ದು.

ಸಭೆಯು ಪ್ರಾರಂಭವಾದ ಕೂಡಲೇ ಶ್ರೀಮನ್ಮಹಾರಾಜರವರ ಅನುಜ್ಞೆಯನ್ನು ಪಡೆದು ಮೆ॥ ಕಾಂತರಾಜೇ ಅರಸಿನವರು ಇಂಗ್ಲಿಷಿನಲ್ಲೂ, ಮೆ॥ ಎಂ. ವೆಂಕಟಕೃಷ್ಣಯ್ಯನವರು ಕನ್ನಡದಲ್ಲೂ ಮೆ॥

ಜಮಾನ್ ಜಾಫರ್'ಯವರು ಹಿಂದುಸ್ಥಾನಿಯಲ್ಲೂ ಪ್ರಜೆಗಳ ಪರವಾಗಿ ಜ್ಞಾಪನಾ ಪತ್ರಿಕೆಗಳನ್ನು ಓದಿದರು. ಮೆ॥ ಕರೂರು ಜೋಯಿಸ ಕೆಲವು ಸಂಸ್ಕೃತ ಪದ್ಯಗಳನ್ನು ಓದಿದರು

ಕನ್ನಡ ಅಡ್ರೆಸು.

ಶ್ರೀಕೃಷ್ಣೇಂದ್ರಮುಖ್ಯೈಸ್ಸ್ವಕುಲಸುರವರೈಸ್ಸೇವ್ಯಮಾನಾಂಘ್ರಿಪದ್ಮಃ।
ಕರ್ಣಾಟಕ್ಷೋಣಿಪಾಲಾನ್ವಯಜಲಧಿಶಶಾಂಕ್ಯಂದ್ರಿಕಾ ಚಂದ್ರಚೂಡಃ॥
ಸಂತಾನಂದದಾತ್ರಿ ಶ್ರಿತಜನವರದಾ ಸಚ್ಚಿದಾನಂದರೂಪಾ। ದೋಃ॥
ಚಾಮುಂಡಿಕಾಂಬಾ ಕುಲಯುತಕುಶಲಂ ಕೃಷ್ಣರಾಜ ಕ್ಷಿತೀಂ

ಮೈಸೂರು ಸಂಸ್ಥಾನವನ್ನಾಳುವ ಮಹಾಸ್ವಾಮಿಯವರಾದ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್, ಜಿ. ಸಿ ಎಸ್ ಐ. ರವರ ಪಾದ ಸನ್ನಿಧಾನದಲ್ಲಿ —

ಮೈಸೂರು ಪುರನಿವಾಸಿಗಳು ರಾಜಭಕ್ತಿ ವಿಶ್ವಾಸಪೂರ್ವಕವಾಗಿ ಮಾಡುವ ಅನಂತಾನಂತ ಭಿನ್ನಹ ಮಹಾಸ್ವಾಮಿ

ರಾಜಾಧಿರಾಜ ಶ್ರೀಮದಿಂಡಿಯಾ ಚಕ್ರವರ್ತಿಗಳವರು ಕೃಪಾಪೂರ್ವಕವಾಗಿ ಮಹಾಸ್ವಾಮಿಯವರಿಗೆ ಅನನ್ಯಸಾಧಾರಣವಾದ ಈ ನೈಟ್ ಗ್ರಾಂಡ್ ಕಮಾಂಡರ್ ಆಫ್ ದಿ ಮೋಸ್ಟ್ ಎಗ್ಸಾಲ್ಟೆಡ್ ಆರ್ಡರ್ ಆಫ್ ದಿ ಸ್ಟಾರ್ ಆಫ್ ಇಂಡಿಯಾ ಎಂಬ ಬಿರುದನ್ನು ದಯಪಾಲಿಸಿದ್ದರಿಂದ ಈ ಪುರನಿವಾಸಿಗಳಾದ ನಮಗೆ ಉಂಟಾಗಿರುವ ಆನಂದಾತಿಶಯವನ್ನು ಮಹಾಸ್ವಾಮಿಯವರ ಸನ್ನಿಧಿಯಲ್ಲಿ ವಿಜ್ಞಾಪಿಸಲು ಅಪ್ಪಣೆಯಂ ಬೇಡುತ್ತೇವೆ ಮಹಾಸ್ವಾಮಿ

ಮಹಾಸ್ವಾಮಿಯವರು ಸಾಕ್ಷಾತ್ತಾಗಿ ರಾಜ್ಯಭಾರವಾಡುವದಕ್ಕೆ ಪ್ರಾರಂಭಿಸಿದ್ದು ಮೊದಲುಗೊಂಡು ಪ್ರಜೆಗಳ ವಿದ್ಯಾವಿನಯಸಂಪನ್ನರಾಗುವದಕ್ಕೂ, ಭಾಗ್ಯಶಾಲಿಗಳಾಗುವದಕ್ಕೂ, ಧರ್ಮಾತ್ಮರಾಗುವದಕ್ಕೂ ಬೇಕಾದ ಕಾರ್ಯಗಳನ್ನು ಚಿಂತಿಸುತ್ತಾ ಅವಕ್ಕಾಗಿ ಅನವರತ ಪ್ರಯತ್ನಗಳಂ ಮಾಡುತ್ತಾ ರಾಜ್ಯಭಾರವನ್ನು ವಹಿಸಿದ ನಾಲ್ಕು ವರ್ಷಕಾಲದೊಳಗೆಯೇ ತೋರ್ಪಡಿಸಿದ ಅಸಾಧಾರಣವಾದ ಪ್ರಜಾರಂಜಕವಾದ ಪ್ರಭುಶಕ್ತಿಯನ್ನು ಶ್ರೀಮದಿಂಡಿಯಾಚಕ್ರವರ್ತಿಯವರು ಮೆಚ್ಚಿ ಇಂತಹ ಬಿರುದನ್ನು ದಯಮಾಡಿದ್ದಕ್ಕಾಗಿ ಮಹಾಸ್ವಾಮಿಯವರ ಪ್ರಜೆಗಳಾದ ನಾವುಗಳು ಅದೃಷ್ಟಶಾಲಿಗಳೆಂದು ಭಾವಿಸುತ್ತೇವೆ ಮಹಾಸ್ವಾಮಿ

ಇದರಿಂದ ನಮಗೂ ಈ ಸಂಸ್ಥಾನದ ಇತರ ಪ್ರಜೆಗಳಿಗೂ ಉಂಟಾಗಿರುವ ಕೃತಜ್ಞತೆಯನ್ನು ವಿಜ್ಞಾಪಿಸಿಕೊಳ್ಳುವದಕ್ಕೆ ಈ ಸಂತೋಷಕರವಾದ ಸಂವತ್ಸರಾದಿಯ ಸುದಿನವು ಲಭಿಸಿದ್ದಕ್ಕಾಗಿ ಸಂತೋಷಿಸುತ್ತೇವೆ ಮಹಾಸ್ವಾಮಿ

ಮಹಾಸ್ವಾಮಿಯವರಿಗೆ ಲಭಿಸಿರುವ ಬಿರುದಿನ ನಿಯಮವು "ಪರಮೇಶ್ವರನ ಕೃಪಾಕಟಾಕ್ಷವು ನಮಗೆ ಮಾರ್ಗದರ್ಶಕವಾಗಿರಲಿ" ಎಂಬುದಾಗಿದೆ. ಅಂತಹ ಪರಮೇಶ್ವರನ ಕೃಪಾಕಟಾಕ್ಷದಿಂದ ಮಹಾಸ್ವಾಮಿಯವರು ದೀರ್ಘಾಯುಗಳಾಗಿ ಮಾಡುವ ಪ್ರಜಾಕ್ಷೇಮಕರವಾದ ಈಶ್ವರಶಕ್ತಿಯು ಸಕಲಕಾರ್ಯಗಳಲ್ಲಿಯೂ ಸರ್ವಕಾಲದಲ್ಲೂ ಸಹಕಾರಿಯಾಗಿ ಮಹಾಸ್ವಾಮಿಯವರ ಮನಸ್ಸಿಗೆ ಸ್ಥಿರವಾಗಿರುವಂತೆ "ಸತ್ಯಮೇವೋದ್ಧರಾಮ್ಯಹಂ" ಎಂಬ ಬಿರುದಿನ ಅರ್ಥವನ್ನು ಪ್ರಕಾಶಪಡಿಸುತ್ತಿರಲೆಂದು ಪ್ರಾರ್ಥಿಸುತ್ತೇವೆ ಮಹಾಸ್ವಾಮಿ

ಮಹಾಸ್ವಾಮಿಯವರಿಗೂ ಮಹಾಸ್ವಾಮಿಯವರ ಕುಟುಂಬದವರಿಗೂ ಜಗದೀಶ್ವರನು ಆಯುರಾರೋಗ್ಯ ಐಶ್ವರ್ಯಾದಿಗಳನ್ನಿತ್ತು ಪುತ್ರಪೌತ್ರರೊಡನೆ ದಿವ್ಯ ರತ್ನಸಿಂಹಾಸನಾರೂಢರಾಗಿ ಮಹಾಸ್ವಾಮಿಯವರು ಧರ್ಮದಿಂದ ಈ ಸಂಸ್ಥಾನದ ಪ್ರಜೆಗಳನ್ನು ಕಾಪಾಡುವಂತೆ ಮಾಡಬೇಕೆಂದು ನಿರಂತರದಲ್ಲೂ ದೇವರನ್ನು ಪ್ರಾರ್ಥಿಸುತ್ತೇವೆ ಮಹಾಸ್ವಾಮಿ

ಮಂಗಳಂ ಕೃಷ್ಣರಾಜಾಯ।
ಚಾಮರಾಜೇಂದ್ರಸೂನವೇ।
ಕೆಂಪನಂಜಾಂಬಿಕಾಗರ್ಭ ದುಗ್ಧಾಂಬುಧಿ ಸುಧಾಂಶವೇ॥

ಅಡ್ರೆಸನ್ನಿಟ್ಟು ಒಪ್ಪಿಸಿದ ಕೈ ಪೆಟ್ಟಿಗೆಯು ಬೆಳ್ಳಿ ಬಂಗಾರಗಳಿಂದ ತಯಾರಾದದ್ದು. ಬಹು ವಿಚಿತ್ರವಾದ ಸಣ್ಣ ಕೆಲಸದ ವಿಗ್ರಹಗಳು ಕೆತ್ತಲ್ಪಟ್ಟಿರುವವು. ಮರದ ಪೀಠದ ಮೇಲೆ ನಾಲ್ಕು ಮೂಲೆಗಳಲ್ಲೂ ನಿಂತಿರುವ ಚಿನ್ನದ ಆನೆಗಳು ವಿಗ್ರಹಗಳನ್ನುಳ್ಳ ಬೆಳ್ಳಿಯ ಪೆಟ್ಟಿಯನ್ನು ಹೊತ್ತಿವೆ. ಈ ಪೆಟ್ಟಿಗೆಯ ಮೇಲ್ಭಾಗದ ನಾಲ್ಕು ಮೂಲೆಗಳಲ್ಲೂ ಚಿನ್ನದ ಸುಂದರವಾದ ನವಿಲುಗಳು ರೆಕ್ಕೆಗಳನ್ನು ಹರಡಿ ಎತ್ತಿ ನಿಂತಿರುವವು. ಪೆಟ್ಟಿಗೆಯ ಮೇಲೆ ಮಧ್ಯಭಾಗದಲ್ಲಿ ಎರಡು ವಿಗ್ರಹಗಳ ನಡುವೆ ಮೈಸೂರು ಮಹಾರಾಜರವರ ಕುಲದೇವತೆಯಾದ ಚಾಮುಂಡಾ ದೇವಿಯ ವಿಗ್ರಹವು ಆಯುಧಪಾಣಿಯಾಗಿ ಸಿಂಹ ವಾಹನಾ ರೂಢಳಾಗಿರುವಂತೆ ಚಿತ್ರಿಸಲ್ಪಟ್ಟಿದೆ. ಇಂಥಾ ಕೈ ಪೆಟ್ಟಿಗೆಯನ್ನು ಸರ್ದಾರ್ ಕಾಂತರಾಜೇ ಅರಸಿನವರೂ ಸರ್ದಾರ್ ಲಕ್ಷ್ಮೀಕಾಂತರಾಜೇ ಅರಸಿನವರು ಒಪ್ಪಿಸಿದ ಮೇಲೆ ಸರ್ದಾರ್ ಕಾಂತರಾಜೇ ಅರಸಿನವರು ದರ್ಬಾರ್ ಭಕ್ಷಿ ಮೆ॥ ಲಿಂಗರಾಜೇ ಅರಸಿನವರ ಸಹಾಯದಿಂದ ಶ್ರೀಮನ್ಮಹಾರಾಜರವರಿಗೂ ಯುವರಾಜರವರಿಗೂ ಹಾರ ತುರಾಯಿ ಅತ್ತರು ಪನ್ನೀರು ಮುಂತಾದವುಗಳನ್ನು ಸಮರ್ಪಿಸಿದರು.

ಶ್ರೀಮನ್ಮಹಾರಾಜರವರ ಪ್ರತ್ಯುತ್ತರವು

ಶ್ರೀಮನ್ಮಹಾರಾಜರವರು ಅಡ್ರೆಸ್ಸನ್ನು ಸ್ವೀಕರಿಸಿ ತಮ್ಮ ಪೀಠದಿಂದೆದ್ದು ಪ್ರಜೆಗಳನ್ನು ಕುರಿತು ಪ್ರತ್ಯುತ್ತರವನ್ನಿತ್ತರು. ಸಭಿಕರೆಲ್ಲ ರಾಜ ಭಕ್ತಿಯಿಂದ ಕೂಡಲೇ ಎದ್ದು ನಿಂತು ಮಹಾರಾಜರವರು ಅಪ್ಪಣೆ ಕೊಡಿಸಿದ ಮಾತುಗಳನ್ನು ಕೇಳಿ ಸಂತೃಪ್ತರಾಗಿ ಅವರನ್ನು ವಂದಿಸಿದರು. ಅವರು ಅಪ್ಪಣೆ ಕೊಟ್ಟ ಮುಖ್ಯಾಭಿಪ್ರಾಯ ಏನೆಂದರೆ—

ಚಕ್ರವರ್ತಿ ಸಾರ್ವಭೌಮರವರು ನಮಗೆ ದಯಪಾಲಿಸಿರುವ ಈ ಘನತರವಾದ ಬಿರುದಿನ ವಿಷಯದಲ್ಲಿ ಪ್ರಜೆಗಳಾದ ನೀವು ಆನಂದಪಟ್ಟು ನಿಮ್ಮ ಕೃತಜ್ಞತೆಯನ್ನೂ ಪ್ರೀತಿಯನ್ನೂ ಇಷ್ಟು ಅಟ್ಟಹಾಸದಿಂದ ಪ್ರಕಟಪಡಿಸುತ್ತೀರಿ. ಇದು ನಮಗೆ ಪರಮಸಂತೋಷವನ್ನೂ ಯಥಾರ್ಥವಾದ ತೃಪ್ತಿಯನ್ನೂ ಉಂಟು ಮಾಡಿರುವುದು. ಆದಕಾರಣ ನಾವು ನಿಮ್ಮನ್ನು ವಿಶೇಷ ಕೃತಜ್ಞತೆಯಿಂದ ಮನಃಪೂರ್ವಕವಾಗಿ ವಂದಿಸುತ್ತೇವೆ.

ನೀವುಗಳು ರಾಜ ಭಕ್ತಿ ಪೂರಿತವಾದಂಥಾ ಪ್ರೀತಿ ಪಾತ್ರರಾದಂಥಾ ಪ್ರಜೆಗಳಾಗಿರುತ್ತೀರಿ. ನಿಮ್ಮ ಅಡ್ರೆಸ್ಸಿನಲ್ಲಿ ನಾವು ನಾಲ್ಕು ವರುಷಗಳಿಂದ ಸ್ವತಂತ್ರಿಸಿ ಸಂಸ್ಥಾನವನ್ನು ಆಳುತ್ತಾ ಬಂದುದಕ್ಕೆ ಈಗ ಬಿರುದುಬಂದಿರುವುದು ಯೋಗ್ಯವಾದ ಪ್ರತಿಫಲವೆಂದು ಸೂಚಿಸಿರುತ್ತೀರಿ. ನಿಮ್ಮ ವಿಶೇಷವಾದ ಭಕ್ತಿ ಪ್ರೀತಿಗಳೇ ನಿಮ್ಮನ್ನು ಹಾಗೆ ಹೊಗಳುವಂತೆ ಮಾಡಿರುವುದಲ್ಲದೆ ನೀವು ಹೇಳಿರುವುದನ್ನೆಲ್ಲಾ ಅಂಗೀಕರಿಸಲು ನಮಗೆ ಅಧೈರ್ಯವಾಗುತ್ತಿದೆ ಎಂದು ನಾವು ಮನಸ್ಪೂರ್ವಕ ಒಪ್ಪಿಕೊಳ್ಳುವೆವು. ಈಗೀಗ ನಾವು ನಮ್ಮ ಕರ್ತವ್ಯಗಳನ್ನು ನಡಿಸಲು ಪ್ರಾರಂಭಿಸಿರುತ್ತೇವೆಂತಲೂ ಮಾಡಬೇಕಾದ ಕಾರ್ಯಗಳು ಅಪಾರವಾಗಿರುವವೆಂತಲೂ ಇದುವರೆಗೆ ನಡಿಸಲ್ಪಟ್ಟುದಾದ ಕಾರ್ಯಗಳು ನಿಜವಾಗಿಯೂ ಬಹಳ ಸ್ವಲ್ಪವೆಂತಲೂ ನಾವು ತಿಳಿದಿರುತ್ತೇವೆ. ಕಾರ್ಯ ನಡಸುವ ಜವಾಬ್ದಾರಿಯು ಬಹು ವಿಶೇಷವಾಗಿ ನಮ್ಮ ಮೇಲೆ ಹೊತ್ತುಕೊಂಡಿದೆ. ಆದರೂ ಆ ಜವಾಬ್ದಾರಿಯ ಲಕ್ಷಣವನ್ನೂ ಆದರ ವಿಶೇಷತೆಯನ್ನೂ ನಾವು ಸಂಪೂರ್ಣವಾಗಿ ಮಂದಟ್ಟು ಮಾಡಿಕೊಂಡಿರುವೆವು. ಅಚೇತನನೂ ಸರ್ವಶಕ್ತನೂ ಆದ ದೇವರು ನಮ್ಮ ಮೇಲೆ ಕೃಪಾಕಟಾಕ್ಷವನ್ನಿಟ್ಟು ನಮಗೆ ಈ ವಿಶೇಷವಾದ ಜವಾಬ್ದಾರಿಯನ್ನು ವಹಿಸಿ ಅದನ್ನು ನಾವು ನಿರ್ವಹಿಸ ಬೇಕೆಂದು ಗೊತ್ತು ಮಾಡಿರೋಣದರಿಂದ ನಾವು ಅಂಥಾ ಅಚೇತನಾತ್ಮಕನ ಚಿತ್ತಕ್ಕೆ ಒಳಗಾಗುವುದಲ್ಲದೆ ಬೇರೇನೂ ಮಾಡಲಾರೆವು. ಆ ಪರಮಾತ್ಮನ ಆಶೀರ್ವಾದ ಬಲದಿಂದ ನಮ್ಮ ಸರ್ವ ಶಕ್ತಿಯನ್ನೂ ಪ್ರಯೋಗಿಸಿ ಸೌಂದರ್ಯ ಯುಕ್ತವಾದ ಈ ನಮ್ಮ ಸಂಸ್ಥಾನವನ್ನು ಅಭಿವೃದ್ಧಿಗೆ ತಂದು ಅದರ ಐಶ್ವರ್ಯವನ್ನು ಹೆಚ್ಚಿಸಿ ನಮ್ಮ ಪ್ರೀತಿಗೆ ಪಾತ್ರರಾದ ಪ್ರಜೆಗಳ ನೆಮ್ಮದಿ ಸುಖ ಸಂತೋಷಾದಿಗಳನ್ನು ಕ್ರಮವಾಗಿ ವೃದ್ಧಿಪಡಿಸುತ್ತಾ ಬರುವುದೇ ಈಗಲೂ ಸರ್ವ ಕಾಲಗಳಲ್ಲಿಯೂ ನಮ್ಮ ಮುಖ್ಯೋದ್ದೇಶವಾಗಿಯೂ ನಮ್ಮ ಪರಮಾಪೇಕ್ಷೆಯಾಗಿಯೂ ಇರುವುದೆಂದು ತಿಳಿಯುವವರಾಗಿ ನಮ್ಮ ಇಂಥಾ ಪರಮಾಪೇಕ್ಷೆಯನ್ನೂ ಉದ್ದೇಶವನ್ನೂ ನೆರವೇರಿಸುವುದರಲ್ಲಿ ನಾವು ಕಿಂಚಿತ್ತಾದರೂ ಆಲಸ್ಯ ಮಾಡಲಾರೆವೆಂಬುದಾಗಿ ನಿಮಗೆ ದೃಢಭಾವದಿಂದ ಹೇಳಬಲ್ಲೆವು. ನಾವು ಸ್ಥಿರಮಾಡಿಕೊಂಡಿರುವ ಆ ಉದ್ದೇಶವು ನೆರವೇರುವುದಕ್ಕೆ ಹಿಡಿದ ಕಾರ್ಯವನ್ನು ಸಾಧನೆಮಾಡುವುದರಲ್ಲಾಗಲಿ ಸಾಹಸಪಡುವುದರಲ್ಲಾಗಲಿ ಯಾವ ಲೋಪವೂ ಎಂದಿಗೂ ಕಂಡುಬರಲಾರದೆಂದು ಬಹಳವಾಗಿ ನಂಬಿಕೊಂಡಿದ್ದೇವೆ

ಇದು ನಮಗೆಲ್ಲಾ ಯುಗಾದಿ ಎಂಬ ಸಂತೋಷಕರವಾದ ದಿನವು ಇಂಥಾ ಸುದಿನವೇ ನೀವು ನಮ್ಮನ್ನು ಕರೆದು ಈ ಉತ್ಸವಾದಿಗಳನ್ನು ಮಾಡಿದ್ದು ಆ ಸಂತೋಷವನ್ನು ಅತಿಶಯವಾಗಿ ಹೆಚ್ಚಿಸಿರುತ್ತದೆ. ಈಗ ನಮ್ಮ ಮಧ್ಯೆ ನೆಲೆಗೊಂಡಿರುವ ಮರಣಕರವಾದ ಎರಡು ರೋಗಗಳು— ಪ್ಲೇಗ್ ಮತ್ತು ಪಾಂಕಿಭೇದಿ ಉಪದ್ರಗಳು—ಈ ಯುಗಾದಿ ಹಬ್ಬದಿಂದಾಚೆಗೆ ಕಡಿಮೆಯಾಗುತ್ತಾ ಬರುವವೆಂದು ಹಾರೈಸುತ್ತೇವೆ. ಮತ್ತು ಈ ನೂತನ ಸಂವತ್ಸರವು ನಿಮ್ಮಗಳಿಗೆಲ್ಲಾ ನೆಮ್ಮದಿ ಸುಖ ಸಂತೋಷಾದಿಗಳನ್ನು ಕೊಡುವುದಾಗಲೆಂದು ಕೋರುವೆವು ಮತ್ತು ನೀವು ನಮ್ಮ ವಿಷಯದಲ್ಲಿ ಇಷ್ಟು ಭಕ್ತಿ ಪ್ರೀತಿಗಳನ್ನು ಪ್ರಕಾಶಪಡಿಸಿ, ಇಂಥಾ ಉತ್ಸವವನ್ನು ನಡಿಸಿರುವುದಕ್ಕಾಗಿ ನಿಮ್ಮನ್ನು ಬಹು ಸಂತೋಷದಿಂದ ಲೂ ಮನಃಪೂರ್ವಕವಾಗಿಯೂ ವಂದಿಸುತ್ತೇವೆ

ಕಮಿಟಿ ಮೆಂಬರುಗಳ ನಜರು ಮುಜರೆ ಮುಂತಾದ್ದು

ಮೆ॥ ಕಾಂತರಾಜೇ ಅರಸಿನವರು ಈ ಉತ್ಸವಕ್ಕಾಗಿ ಏರ್ಪಟ್ಟ ಕಮಿಟಿಯ ಮೆಂಬರುಗಳನ್ನೆಲ್ಲಾ ಕರೆದು, ಒಬ್ಬೊಬ್ಬರಾಗಿ ಮುಂದೆ ಬಂದು ಮಹಾರಾಜರವರಿಗೆ ಮುಜರೆ ಮಾಡುವಲ್ಲಿ ಅವರ ಹೆಸರುಗಳನ್ನು ತಿಳಿಯಪಡಿಸಿದರು. ಈ ರೀತಿ ಸುಮಾರು ೫೦—೬೦ ಮಂದಿ ದೊಡ್ಡ ಮನುಷ್ಯರು ಮುಜರೆ ಮಾಡಿದರು

ತರುವಾಯ ಮೆ॥ ಕಾಂತರಾಜೇ ಅರಸಿನವರು ಆ ಸಾಯಂಕಾಲ ಅಲ್ಲಿ ನಡೆಯುವ ವಿನೋದಗಳನ್ನು ಬರೆದಿದ್ದ ಪಟ್ಟಿಯನ್ನು ಶ್ರೀಮನ್ಮಹಾರಾಜರವರಿಗೂ ಯುವರಾಜರವರಿಗೂ ಒಪ್ಪಿಸಿದರು. ಮೆ॥ ಗಳಾದ ಶೇಷಣ್ಣನವರ ಮತ್ತು ಸುಬ್ಬಣ್ಣನವರ ವೀಣಾಗಾನವೂ, ಪಂಡಿತ ಸ್ವಾಮಿನಾಥ ಐಯ್ಯರ ಕೈ ಚಮತ್ಕಾರವೂ ದಕ್ಷಿಣೆಯೂ, ಮೆ॥ ಗೋವಿಂದಸ್ವಾಮಿಯವರು ಪಿಟೀಲ್ ನುಡಿಸಿದ್ದೂ, ಆರು ಮಂದಿ ಮಹಮದೀಯ ಬಾಲಕರು ಹಾಡಿದ ಹಿಂದುಸ್ಥಾನಿ ಪದಗಳೂ ಬಹು ಇಂಪಾಗಿದ್ದವು. ಇಲ್ಲಿನ ಕೆಲವು ಯುರೋಪಿಯನ್ ಹುಡುಗಿಯರೂ ಕಾನ್ವೆಂಟ್ ಸ್ಕೂಲಿನ ಹೆಣ್ಣು ಮಕ್ಕಳೂ ಶ್ರೀಮನ್ಮಹಾರಾಜರವರಿಗೆ ದೊರೆತ ಬಿರುದು ಮೊದಲಾದುದನ್ನು ಕುರಿತು ನಾಟಕ ರೂಪವಾಗಿ ಆಡಿ ತೋರಿಸಿ ಸಭಿಕರಿಗೆ ನೇತ್ರಾನಂದವನ್ನುಂಟುಮಾಡಿದರು. ಫಾದರ್ ಡಿಸ್‌ಪಾಚರ್ಸ್ ಯವರು ಇಂಗ್ಲಿಷ್ ರಾಗವನ್ನೆತ್ತಿ ಪಿಟೀಲ್ ನುಡಿಸಿದರು. ಮೆ॥ ಡಕ್ರೂಸ್‌ಯವರ ಪತ್ನಿಯವರು ಪಿಯಾನೋ ವಾದ್ಯ ಸಹಿತವಾಗಿ ಕೀರ್ತನೆಯನ್ನು ಇಂಗ್ಲಿಷಿನಲ್ಲಿ ಹಾಡಿದರು. ಕೂಡಲೇ ಸಲಾಂಬಾಜಾವನ್ನು ಹೊರಗಡೆ ಬ್ಯಾಂಡ್ ವಾದ್ಯಗಾರರು ನುಡಿಸಿ, ಆ ದಿನದ ಉತ್ಸವವನ್ನು ಮುಕ್ತಾಯಕ್ಕೆ ತಂದರು

ಮೆರವಣಿಗೆ ಮತ್ತು ಆತಿಥ್ಯ.

ತರುವಾಯ ಶ್ರೀಮನ್ಮಹಾರಾಜರವರೂ ಯುವರಾಜರವರೂ ಶ್ರೀಷ್ಠಾಸನದಿಂದೆದ್ದು ಹೊರಕ್ಕೆ ದಯಮಾಡಿ ಮೆ॥ ಕಾಂತರಾಜೇ ಅರಸಿನವರು ಮತ್ತು ಮೆ॥ ಗೋಪಾಲರಾಜೇ ಅರಸಿನವರೊಡನೆ ಸಾರೋಟಿನಲ್ಲಿ ಕುಳಿತು ಉತ್ಸವದಲ್ಲಿ ಹೊರಟು ಟೌನ್ ಹಾಲ್ ಬಂಗಲಿಯ ಆವರಣ, ಕರ್ಸನ್ ಪಾರ್ಕ್ ಎಂಬ ಉದ್ಯಾನವನ ಮೊದಲಾದ ಕಡೆಗಳಲ್ಲಿ ಮಾಡಿಸಿದ್ದ ನೇತ್ರಾನಂದಕರವಾದ ದೀಪೋತ್ಸವವನ್ನು ಪರಾಂಬರಿಸುತ್ತಾ ಕೋಟೆಯೊಳಕ್ಕೆ ಪ್ರವೇಶಿಸಿ ನಾಲ್ಕು ಬೀದಿಗಳಲ್ಲೂ ದಯಮಾಡಿ ಪ್ರತಿ ಮನೆಯವರೂ ರಾಜಭಕ್ತಿ ಪ್ರೀತಿಗಳೊಡನೆ ಒಪ್ಪಿಸಿದ ಹಾರ ತುರಾಯಿಗಳನ್ನೂ ಫಲತಾಂಬೂಲಾದಿಗಳನ್ನೂ ಸಾವಧಾನವಾಗಿಯೂ ಆದರಪೂರ್ವಕವಾಗಿಯೂ ಸ್ವೀಕರಿಸುತ್ತಾ ಅರಮನೆಗೆ ಚಿತ್ತೈಸಿದರು. ಈ ರೀತಿ ಪರಮ ಸಂತೋಷಕರವಾದ ಉತ್ಸವಗಳೆಲ್ಲಾ ಆದಿಯಿಂದ ಅಂತ್ಯದ ತನಕ ಸ್ವಲ್ಪವೂ ಲೋಪದೋಷಗಳಿಲ್ಲದೆ ಅತ್ಯಂತ ತೃಪ್ತಿಕರವಾಗಿ ನೆರವೇರಿದವು.

ತಾಲ್ಲೋಕು ವರ್ತಮಾನಗಳು

ಚಿತ್ರದುರ್ಗ.—ನಲ್ಲಿಗಳಲ್ಲಿ ಶೇಖಿಯಾಗಿರುವ ಹೊಂಡದ ನೀರನ್ನೆ ಕ್ರಮವಾಗಿ ಊರಿಗೆ ಬಿಡದೆ ಕೆಲವು ಕಾಲ ಒಂಡಾಗಿರುವ ಕೆರೆಯ ನೀರನ್ನೂ ಅನಂತರ ಒಡ್ಡಿನ ನೀರನ್ನೂ ಬದಲಾಯಿಸಿಬಿಡುವದರಿಂದ ನೆಗಡಿ ಕೆಮ್ಮಿನ ಉಪದ್ರಗಳು ತಲೆದೋರುತ್ತವೆಂದು ಕಾಣಬರುತ್ತೆ. ಈ ಊರಿಗೆ ನಾಟಕಗಳು ಬರುವದು ಬಹಳ ವಿಶೇಷ. ಈಗಲೂ ಒಂದು ನಾಟಕದವರು ಬಂದು ವಿಶೇಷ ರಂಜನೆಯಿಂದ ಆಡುತ್ತಿದಾರೆಂದು ಅಂದುಕೊಳ್ಳುತ್ತಾರೆ. ಯಾವನಾಟಕವೇ ಆಗಲಿ ಅತಿಯಾದರೆ ಹಣ ಲುಕ್ಸಾನು. ನಿದ್ದೆ ಪದೇಪದೇ ಕೆಡುವದರಿಂದ ದೇಹದ ಆಲಸ್ಯವೂ ಉಂಟಾಗುವದಲ್ಲದೆ ನಾಟಕಗಳು ನೀತಿಬೋಧಕಗಳಾಗಿಯೇ ಇರುವದಿಲ್ಲವೆಂದು ವಾಚಕರಿಗೆ ಗೊತ್ತಿದೆ. ಊರಲ್ಲಿ ಮದುವೆ ಗಲಾಟೆ ಕಾಮನಹಬ್ಬದ ಕಾಲದಲ್ಲಿ ಇಲ್ಲಿಯೂ ಸ್ವಲ್ಪ ಗಲಾಟೆ ಆಯಿತು. ಆದರೂ ವಿಶೇಷ ತೊಂದರೆ ಆಗದೆ ನಿಂತುಹೋದದ್ದು ನೆಮ್ಮದಿಯಾಯಿತು. ಅಂತು ಜನಗಳು ಕ್ರಮೇಣ ಈ ವಿಷಯದಲ್ಲಿ ತಮ್ಮ ತಪ್ಪು ತಿಳಿಯುತ್ತ ಸಾಧ್ಯವಾದ ಮಟ್ಟಿಗೂ ಉತ್ತಮ ಮಾರ್ಗವನ್ನು ಹಿಡಿಯುತ್ತ ಬರುವರೆಂಬ ನಿರೀಕ್ಷೆಯುಂಟು.

ಚಿಕ್ಕಮಗಳೂರು.—ಈ ಬೇಸಿಗೆಯಲ್ಲೂ ಜನರು ಜ್ವರದಲ್ಲಿ ಬೀಳುತ್ತಲಿದಾರೆ. ಸಿಡುಬು ರೋಗವು ಇದುವರೆಗೂ ಈ ಡಿಸ್ಟ್ರಿಕ್ಟಿನ ಬೇರೆ ಬೇರೆ ತಾಲ್ಲೋಕುಗಳಲ್ಲಿ ಜಾಸ್ತಿಯಾಗಿ, ಅನೇಕರು ಆ ರೋಗದಿಂದ ಮೃತಪಟ್ಟರು. ಈಗ ಈ ಊರಿನಲ್ಲಿಯೂ ಪ್ರಾರಂಭವಾಗಿರುವದಾಗಿ ವರ್ತಮಾನವಿರುವದಲ್ಲದೆ ಪ್ಲೇಗ್ ರೋಗವೂ ಸಹ ತಿರಿಗಿ ತಲೆಹಾಕಿರುವದಾಗಿಯೂ ಅದರಿಂದ ಮೂರೋ ನಾಲ್ಕೋ ಜನರು ಸತ್ತರೆಂತಲೂ ಕೇಳುತ್ತೇನೆ.—ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್ ಸಾಹೇಬರು ಇಲ್ಲಿಗೆ ೧೩ ನೆ ತಾ. ಮೂಡುಗೆರೆ ಕಡೆಯಿಂದ ಬಂದು ಮೊಕ್ಕಾಂ ಮಾಡಿ ತಮ್ಮ ಇಲಾಖೆಯ ಕೆಲಸಗಳನ್ನು ತನಿಖೆ ಮಾಡುತ್ತಾ ಪೊಲೀಸಿನವರ ಡ್ರೆಸ್ ಡ್ರಿಲ್ ಮೊದಲಾದವುಗಳನ್ನು ನೋಡಿದ್ದರಲ್ಲಿ ಡ್ರಿಲ್ ಮಾತ್ರ ಸರಿಯಾಗಿ ಮಾಡಲಿಲ್ಲವೆಂದು ಹೇಳಿಕೊಳ್ಳುತ್ತಾರೆ. ಸಾಹೇಬರು ತಮ್ಮ ಮೋಟಾರ್ ಗಾಡಿಯಲ್ಲಿ ಕಡೂರು ಕಡೆ ೧೬ ನೆ ಸಾಯಂಕಾಲ ಹೊರಡುವರೆಂದು ಹೇಳುತ್ತಾರೆ.—ಇಲ್ಲಿನ ಯುರೋಪಿಯನ್ ಕ್ಲಬ್ಬಿನ ಮೀಟಿಂಗು ಇದೇ ೧೪ ನೆ ತಾ. ನಡೆದಂತೆಯೂ ಇಲ್ಲಿನ ಕ್ಲಬ್ಬಿನ ಸೆಕ್ರಟರಿ ಮೆ॥ ಮಾರ್ಟಿನ್ ಸಾಹೇಬರು ಸೀಮೆಗೆ ಹೋಗುವ ಉದ್ದೇಶ್ಯ ಅವರ ಸ್ಥಾನಕ್ಕೆ ಬಸ್ಸೋಡ್ ಎಸ್ಟೇಟಿನ ಪ್ಲಾಂಟರ್ ಮೆ॥ ಚಿಕ್ಕ ಹಾಲಿನೇಸ್ ಸಾಹೇಬರು ಕ್ಲಬ್ಬಿನ ಸೆಕ್ರಟರಿಯಾಗಿ ನೇಮಕವಾದರೆಂದು ವರ್ತಮಾನ.—ಇಲ್ಲಿಗೆ ಇದೇ ತಿಂಗಳ್ಳು ೪ ನೆ ತಾ ಶೃಂಗೇರಿ ಗುರುಗಳು ಬಂದು ನಾಲ್ಕೈದು ದಿನಗಳಿದ್ದು ಕಳಸಾಪುರದ ಜಾವಗಲ್ಲು ಹಳೇಬೀಡು ಕಡೆ ಹೊರಟರೆಂದೂ ಅವರು ಇಲ್ಲಿ ಇದ್ದಾಗ ಇಲ್ಲಿನ ಚೆಟ್ಟಿಮಂಡಲಿಯವರು ಸುಮಾರು ೫ ಸಾವಿರ ರೂಪಾಯಿ ಕಾಣಿಕೆ ಕೊಟ್ಟರೆಂದೂ ಹೇಳುತ್ತಾರೆ.—ಮೆ॥ ನಾಯುಡ್ ಎಂಬುವರು ಇಲ್ಲಿಗೆ ಬಂದು ಇದೇ ತಿಂಗಳು ೧ ನೆ ತಾ ನಿಂದಲೂ ಕೆಲವು ಉಪನ್ಯಾಸಗಳನ್ನು ಮಾಡಿದರು. ಕಡೆಯಲ್ಲಿ ಒಂದು ನ್ಯಾಷನಲ್ ಫಂಡನ್ನು ಏರ್ಪಾಡು ಮಾಡುವದು ಒಳ್ಳೇದೆಂದು ಹೇಳಿದರು. ಅವರು ಹೇಳಿದಂತೆ ಆ ಫಂಡು ಇಲ್ಲಿ ಏರ್ಪಟ್ಟು ಊರ್ಜಿತವಾಗುವದೇನೋ ನೋಡಬೇಕು. ಅದರಿಂದ ಪ್ರಯೋಜನವಾಗುವದರಲ್ಲಿ ಸಂದೇಹವಿಲ್ಲ.—ಈ ದಿನ ಆಕಾಶದಲ್ಲಿ ಮೋಡ ಮುಚ್ಚಿಕೊಂಡು ಹನಿಗಳು ಬೀಳುತ್ತಾ ಇವೆ. ಮುಂಗಾರು ಪ್ರಾರಂಭವಾದಂತೆ ಕಾಣುತ್ತದೆ.

ಹುಣಸೂರು.—ಸುಮಾರು ೬೦ ವರ್ಷಗಳಿಂದಲೂ ಈ ಊರಿನಲ್ಲಿ ನೆಲೆಯಾಗಿದ್ದ ಅಮೃತಮಹಾಲ್ ದನಗಳ ಇಲಾಖೆಯಿಂದ ಬ್ರಿಟಿಷ್ ಸರ್ಕಾರಕ್ಕೆ ನಷ್ಟ ಕಂಡು ಬಂದದ್ದರಿಂದ ಮೇಲ್ಪಟ್ಟ ಅಧಿಕಾರಿಗಳು ಈ ಇಲಾಖೆಯನ್ನೇ ಇಲ್ಲಿಂದ ವಜಾ ಮಾಡುವದು ಒಳ್ಳೇದೆಂದು ಯೋಚಿಸಿ ಈ ತಿಂಗಳ ಆಖೈರಿನೊಳಗಾಗಿ ಇದನ್ನು ವಜಾ ಮಾಡಿಬಿಡುವಂತೆ ಹುಕುಂ ಕೊಟ್ಟಿರುತ್ತಾರೆ. ಇದಕ್ಕೆ ಸೇರಿದ ಕಟ್ಟಡಗಳನ್ನು ಮೈಸೂರು ಸರ್ಕಾರದವರು ತೆಗೆದುಕೊಂಡಿರುತ್ತಾರೆಂದು ವರ್ತಮಾನ. ಮತ್ತು ಇದಕ್ಕೆ ಸೇರಿದ ಜಮೀನುಗಳೆಷ್ಟೋ ಇವೆ. ಈ ವರಿವಿಗೂ ಮೈಸೂರು ಸರ್ಕಾರದಿಂದ ನಾಲ್ಕು ವರ್ಷದ ವಯಸ್ಸುಳ್ಳ ಹೋರಿಗಳನ್ನು ತೆಗೆದುಕೊಂಡು ಎರಡು ವರ್ಷದ ತನಕ ಪೋಷಣೆ ಮಾಡಿ ಆರು ವರ್ಷ ಪ್ರಾಯವಾದನಂತರ ಈ ಹೋರಿಗಳನ್ನು ಸೈನ್ಯದ ಕೆಲಸಕ್ಕೆ ಉಪಯೋಗಿಸುತ್ತಿದ್ದರು. ಇನ್ನು ಮೇಲೆ ಹಾಗೇನಾದರೂ ಹೋರಿಗಳು ಅವಶ್ಯವಾದರೆ ಆರು ವರ್ಷದ ದನಗಳನ್ನೇ ಕೊಂಡು ಉಪಯೋಗಿಸುವದು ಒಳ್ಳೇದೆಂದು ಮೇಲ್ಪಟ್ಟ ಇಂಗ್ಲೀಷ್‌ಸೈನ್ಯದ ಅಧಿಕಾರಿಗಳು ಯೋಚಿಸಿದಾರೆ. ಈ ಅಮೃತಮಹಲ್ ಇದ್ದದ್ದರಿಂದ ಅನೇಕ ಬಡಜನರಿಗೆ ಜೀವನಕ್ಕೆ ಮಾರ್ಗವಿತ್ತು. ಆದರೆ ಈ ಇಲಾಖೆಯಿಂದ ಇಲ್ಲಿ ಹೆಚ್ಚು ಜನರಿಗೆ ಅಂದರೆ ರೈತಾಪಿ ಜನರಿಗೆ ತುಂಬಾ ತೊಂದರೆಯೂ ಆಗುತ್ತಿತ್ತೆಂಬುವುದರಲ್ಲಿ ಯಾವ ಸಂದೇಹವಿಲ್ಲ.—ಕಳೆದ ಜುಲೈ ತಿಂಗಳಿನಲ್ಲಿ ಇಲ್ಲಿಗೆ ವರ್ಗವಾಗಿ ಬಂದ ಪೊಲೀಸ್ ಇನ್ಸ್‌ಪೆಕ್ಟರಿಗೆ ಇಲ್ಲಿಂದ ಕಡಿಮೆ ದರ್ಜೆಗೆ ಚನ್ನಗಿರಿ ತಾಲ್ಲೋಕಿಗೆ ವರ್ಗವಾಯಿತು.—ಇಲ್ಲೊಂದು ರೀಡಿಂಗ್ ಮತ್ತು ರೆಕ್ರಿಯೇಷನ್ ರೂಂ ಎಂಬುವುದು ಏರ್ಪಾಡಾಗಿರುತ್ತದೆ. ಇಲ್ಲಿ ಕಳೆದ ತಿಂಗಳಿನಲ್ಲಿ ನಡೆದ ಮೊಹರಂ ಹಬ್ಬದಲ್ಲಿ ಮುಸಲ್ಮಾನ್ ಪಾರ್ಟಿಯವರಿಗೆ ಜಗಳವಾದೀತೆಂಬ ಭಯದಿಂದ ಅಮಲ್ದಾರರವರು ಮೈಸೂರಿಂದ ರಿಜರ್ವ್ ಪೊಲೀಸಿನವರನ್ನೂ ಹೆಡ್ ಕ್ವಾರ್ಟರ್ ಇನ್ಸ್‌ಪೆಕ್ಟರನ್ನೂ ಕರೆಸಿದ್ದರು. ಯಾವ ಗಲಾಟೆಯೂ ಇಲ್ಲದೆ ಸಂತೋಷವಾಗಿ ಈ ಹಬ್ಬವು ನಡೆದು ಮುಗಿದದ್ದಕ್ಕಾಗಿ ತುಂಬಾ ಸಂತೋಷ.—ಕಳೆದ ತಿಂಗಳ ಕಡೇ ವಾರದಿಂದ ಇಲ್ಲಿ ಕಾಲರಾ ಉಪದ್ರವು ಪ್ರಾರಂಭವಾಗಿ ಈವರೆಗಲೇ ಕೆಲವರು ಅದಕ್ಕೆ ತುತ್ತಾದರು. ಇನ್ನು ಕೆಲವರು ನರಳುತ್ತಿದಾರೆ. ಇದು ಮಾತ್ರವಲ್ಲದೆ ಪ್ಲೇಗ್ ಕೇಸು ಸಹ ಆಯಿತು. ಜನರು ತುಂಬಾ ಘಾಬರಿಯಲ್ಲಿರುತ್ತಾರೆ. ಸ್ಕೂಲುಗಳಿಗೆ ಬಾಲಕರೂ ಬಾಲಕಿಯರೂ ಬರುವದು ಕಡಿಮೆ. ಈ ಕಾಲದಲ್ಲಿ

ಮ್ಯುನಿಸಿಪಾಲಿಟಿಯು ಬಹು ಚನ್ನಾಗಿರುವದು ಅವಶ್ಯವಾಗಿದೆ. ಗಲೀಜು ಸ್ವಲ್ಪವೂ ಇಲ್ಲದಂತೆ ಮಾಡುವದು ಅವಶ್ಯ. ಅಲ್ಲಲ್ಲಿ ಚರಂಡಿಗಳಲ್ಲಿ ನೀರು ಸಲೀಸಾಗಿ ಒಡದೆ ಒಂದೇ ಸ್ಥಳದಲ್ಲಿ ನಿಂತು ದುರ್ವಾಸನೆ ಬಡಿಯುತ್ತದೆ. ಇದರಿಂದ ರೋಗವು ಹೆಚ್ಚಾಗುವದೇ ಹೊರ್ತು ಕಡಿಮೆಯಾಗಲಾರದು. ಈ ಕಾಲದಲ್ಲಿ ಮುಖ್ಯವಾಗಿ ಹೆಚ್ಚು ಸಿಬ್ಬಂದಿಯನ್ನಾದರೂ ಇಟ್ಟು ಕೆಲಸ ಮಾಡಿಸುವದು ಒಳ್ಳೇದು. ಮತ್ತು ಜನರು ಕುಡಿಯುವಂಥಾ ನೀರಿನ ವಿಷಯದಲ್ಲಿ ತುಂಬಾ ಗಮನವಿಡುವದು ಉತ್ತಮ. ಈ ಬೇಸಿಗೆಯಲ್ಲಿ ಮಕ್ಕಳಿಗೆ ಸಿಡುಬು ಏಳುವದು ಹೆಚ್ಚಾದ್ದರಿಂದ ತಂದೆ ತಾಯಿಗಳು ತಮ್ಮ ಮಕ್ಕಳಿಗೆ ಮೊದಲೇ ಸಿಡುಬು ಹಾಕಿಸುವದು ಒಳ್ಳೇದು.

ನೆಲಮಂಗಲ.—ಈ ತಾಲ್ಲೂಕು ದಾಬಸ್ಪೇಟೆಗೆ ಸಮೀಪವಾಗಿರುವ ಗಿಡದಿಂದ ಸೌದೆ ತೆಗೆಸಿಕೊಂಡು ಹೋಗುವಾಗ ಸಾಯಂಕಾಲ ೬ ಘಂಟೆ ಆಗಿತ್ತು. ಆಗ ದಕ್ಷಿಣ ದಿಕ್ಕಿನಿಂದ ಉರಿಯೂ ಹೊಗೆಯೂ ಭೂಮ್ಯಾಕಾಶವನ್ನು ತುಂಬಿದ್ದವು. ಬಹಳ ಘಾಬರಿಯಿಂದ ಓಡಿಹೋಗಿ ನೋಡುವಲ್ಲಿ ಸ್ತ್ರೀಯರ ಆರ್ತ ಧ್ವನಿಯೂ ಜನಗಳ ಗೊಳಾಟವೂ ಕೇಳಲಶಕ್ಯವಾಗಿತ್ತು. ನೆಲಮಂಗಲದ ತಾಲ್ಲೋಕು ದುಗ್ಗೇನಹಳ್ಳಿ ಎಂಬ ೨೦ ಮನೆಗಳುಳ್ಳ ಗೊಲ್ಲರ ಹಳ್ಳಿಗೆ ಅಗ್ನಿಪ್ರವೇಶವಾಗಿರುವಂತೆ ಕೇಳಿ ಜಾಗ್ರತೆಯಾಗಿ ನೋಡಿದೆವು. ಉತ್ತರಭಾಗದಲ್ಲಿ ಕಟ್ಟಿಕೊಂಡಿದ್ದ ೯ ಮನೆಗಳೂ ಏಕಕಾಲದಲ್ಲಿ ಉರಿಯುತ್ತಿದ್ದದ್ದನ್ನು ನೋಡಿ ವ್ಯಸನಪಟ್ಟೆವು. ಅಕಸ್ಮಾತ್ತಾಗಿ ಬೆಂಕಿ ಬಿದ್ದು ಪಕ್ಕದಲ್ಲಿದ್ದ ಮನೆಗಳು ಹುಲ್ಲುಮನೆಗಳಾದ್ದರಿಂದ ಬಹು ಜಾಗ್ರತೆಯಾಗಿ ಎಲ್ಲಾ ಮನೆಗೂ ವ್ಯಾಪಿಸಿಕೊಂಡಿತು ಎಂದು ತಿಳಿದು ಬಂತು. ಆದರೆ ಸಾಯಂಕಾಲ ಸಮಯವಾದ್ದರಿಂದ ಯಾರೂ ಮನೆಗಳಲ್ಲಿರಲಿಲ್ಲ. ಹೊಲ ವಗೈರೆ ಸ್ಥಳಕ್ಕೆ ಹೋಗಿದ್ದರು. ಸುಗ್ಗಿಕಾಲವಾದ್ದರಿಂದ ಈ ಬಡಜನಗಳು ಕಾಳು ವಗೈರೆ ದಿನಸುಗಳನ್ನು ಮನೆಗಳಲ್ಲಿ ತುಂಬಿಕೊಂಡಿದ್ದರು. ಆಜೂ ಬಾಜೂ ಗ್ರಾಮದಿಂದ ನೂರಾರು ಜನರು ಬಂದು ಅರ್ಧ ಮೈಲಿ ಫಾಸಲೆಯಿಂದ ಎಷ್ಟು ನೀರು ತಂದು ಸುರಿದಾಗ್ಯೂ ಅವರ ಶ್ರಮವೆಲ್ಲವೂ ವ್ಯರ್ಥವಾಗಿ ಸಾವಿರಾರು ರೂಪಾಯಿನ ಸಾಮಾನುಗಳು ನಷ್ಟವಾದವು. ಈ ಸಮಯದಲ್ಲಿ ಕುಮ್ಮ ಎಂಬುವನು ಊರಲ್ಲಿರಲಿಲ್ಲ. ಈತನ ಹೆಂಡತಿಯು ಘಟ್ಟಿಯಾಗಿ ಅಳುತ್ತಾ ಧೈರ್ಯದಿಂದ ಒಳಕ್ಕೆ ನುಗ್ಗಿ ೨೦೦ ರೂಪಾಯಿ ಬಾಳುವ ಒಂದು ಜೊತೆ ಎತ್ತುಗಳನ್ನು ಹಗ್ಗ ಕುಯ್ದು ಸಜೀವವಾಗಿ ಹೊರಕ್ಕೆ ತೆಗೆದುಕೊಂಡು ಬಂದದ್ದು ತುಂಬಾ ಆಶ್ಚರ್ಯವಾಗಿದೆ. ಇಷ್ಟಾದಾಗ್ಯೂ ಯಾರಿಗೂ ಅಪಾಯವಾಗದೆ ಮೂರು ಕರುಗಳೂ ಈ ಬಡವರ ರಾಗಿ ಭತ್ತ ವಗೈರೆ ದಿನಸುಗಳೂ ಮಾತ್ರ ಸುಟ್ಟು ಹೋದವು. ಆ ಮಾರನೇ ದಿನವೇ ಇಲ್ಲಿಗೆ ಎರಡು ಮೈಲಿ ದೂರದ ಊರಿನಲ್ಲಿ ಒಬ್ಬ ಸಾಹುಕಾರನ ಮನೆಗೆ ಬೆಂಕಿ ಬಿತ್ತು. ತಕ್ಷಣವೇ ಜನಗಳ ಸಹಾಯದಿಂದ ಯಾವ ನಷ್ಟವೂ ಸಂಭವಿಸದಂತೆ ಆರಿಸಿದರು.

ಶಿವಮೊಗ್ಗಾ.—ಈಚೆಗೆ ಶಿವಮೊಗ್ಗಾದಿಂದ ಬೀರೂರಿಗೆ ಹೋಗುವ ಸಾಯಂಕಾಲದ ರೈಲಿನ ಮೆಯಿಲ್ ಗಾಡಿಯಲ್ಲಿ ಕಾಗದಗಳಿಗೆ ಲೇಟ್ ಲೆಟರ್ ಫೀ ಕೊಡಬೇಕಾಗಿ ಹೊಸದಾಗಿ ರೂಲಸು ಬಂದು ೮—೧೦ ದಿನಗಳಾಯಿತು. ಅದರಂತೆಯೇ ಬರೂರಾಗಿ ಕಳುಹಿಸುವ ಕಾಗದಗಳಿಗೆಲ್ಲಾ ಅರ್ಧ ಆಣೆ ಚೀಟಿ ಹಚ್ಚಿ ರೈಲಿನಲ್ಲಿ ಕೊಡಬೇಕಾಗಿ ಬಂದಿದೆ. ಸುಮಾರು ವರುಷದ ಕೆಳಗೆ ಪೋಸ್ಟ್ ಮಾಸ್ಟರ್ ಜನರಲ್ ಸಾಹೇಬರು ಬಂದಿದ್ದಾಗ್ಗೆ ಇಲ್ಲಿನ ಕೆಲವು ದೊಡ್ಡ ಮನುಷ್ಯರ ಕೇಳಿಕೆ ಮೇರೆ ಸದರಿ ದೊರೆಗಳು ಈ ರೈಲಿನಲ್ಲಿ ಮೆಯಿಲ್ ಕಂಪಾರ್ಟ್‌ಮೆಂಟಿನಲ್ಲಿ ಕಾಗದ ಹಾಕುವ ಪೆಟ್ಟಿಗೆ ಇಡಿಸಿ ಕೊಟ್ಟಿದ್ದರು. ಆದರೆ ಕಳೆದ ಮಳೆಗಾಲದಲ್ಲಿ ಆ ಪೆಟ್ಟಿಗೆಯಲ್ಲಿ ನೀರು ಬರಲು ಅವಕಾಶವಾದ್ದರಿಂದ ಅದನ್ನು ತೆಗೆದು ಗಾಡಿಯೊಳಗಿರುವ ಗುಮಾಸ್ತರ ಕೈಲಿ ಕಾಗದಗಳನ್ನು ಕೊಡಬಹುದೆಂದು ಆರ್ಡರ್ ಆಗಿದ್ದಂತೆ ಸದರಿಯವರು ಕಾಗದಗಳನ್ನು ತೆಗೆದುಕೊಳ್ಳುತ್ತಾ ಇದ್ದದ್ದರಿಂದ ಜನಗಳಿಗೆಲ್ಲಾ ಬಹಳ ಸಹಾಯವಾಗಿತ್ತು. ಇದು ಅಲ್ಲದೆ ರೈಲ್ವೆ ಸ್ಟೇಷನಿನಲ್ಲಿ ಕಾಗದ ಹಾಕುವ ಪೆಟ್ಟಿಗೆ ಇರುತ್ತದೆ. ಇದರಲ್ಲಿ ಹಾಕಿದ ಕಾಗದಗಳನ್ನೆಲ್ಲಾ ಮೊದಲು ೬.೩೫ ಕ್ಕೆ ಗಾಡಿಯೊಳಕ್ಕೆ ತೆಗೆದುಕೊಡುತ್ತಾ ಇದ್ದರು. ಈಗ ಅದರಲ್ಲಿ ಹಾಕಿದ ಕಾಗದಗಳನ್ನು ೬.೩೫ ಕ್ಕೆ ತೆಗೆದು ಗಾಡಿಯಲ್ಲಿ ಕೊಡದೆ ಮಾಡಸು ಪೋಸ್ಟ್ ಆಫೀಸಿಗೇ ಕಳುಹಿಸುವದರಿಂದ ಜನಗಳಿಗೆ ತುಂಬಾ ತೊಂದರೆಯಾಗಿರುತ್ತದೆ. ಆದ್ದರಿಂದ ನಮ್ಮ ದಯಾಳುಗಳಾದ ಅಂಚೆ ಸೂಪರಿಂಟೆಂಡೆಂಟರು ರೈಲ್ವೆ ಸ್ಟೇಷನ್ ಪೆಟ್ಟಿಗೆಯಲ್ಲಿ ಹಾಕತಕ್ಕ ಕಾಗದಗಳನ್ನೆಲ್ಲಾ ಮೊದಲಿನಂತೆ ಅದೇ ದಿನವೇ ಕಳುಹಿಸಿದರೆ ಜನಗಳೆಲ್ಲಾ ತುಂಬಾ ಕೃತಜ್ಞರಾಗಿರುತ್ತಾರೆ. ಮತ್ತು ರೈಲಿನಲ್ಲಿ ಹಾಕತಕ್ಕ ಕಾಗದಗಳಿಗೂ ಮೊದಲಿನಂತೆಯೇ ಲೇಟ್ ಲೆಟರ್ ಫೀ ಇಲ್ಲದೇನೇ ಕಾಗದಗಳನ್ನು ತೆಗೆದುಕೊಳ್ಳುವ ಏರ್ಪಾಟು ಮಾಡಿದರೆ ಬಹಳ ಸಹಾಯಕರವಾಗುತ್ತದೆ. ಇವೆರಡನ್ನೂ ಮಾಡಲು ಅನಾನುಕೂಲವಾದ ಪಕ್ಷಕ್ಕೆ ಆ ಪೆಟ್ಟಿಗೆ ಒಂದನ್ನಾದರೂ ಮಾಡಿಸಿ ಕೊಡುವರೆಂದು ನಂಬಿದ್ದೇನೆ.—ಶಿವಮೊಗ್ಗಾದಲ್ಲಿರುವ ಕೂಲಿಕಾರರ ರಾತ್ರಿ ಪಾಠಶಾಲೆಯನ್ನು ೧೯೦೨ ನೇ ಇಸವಿ ಸೆಪ್ಟೆಂಬರ್ ೧೫ ರಲ್ಲಿ ಇಲ್ಲಿ ಆಗ ಸಬ್ ಜಡ್ಜರಾಗಿದ್ದ ಮ|| ವರದರಾಜಯ್ಯಂಗಾರ್ರವರು ಇಲ್ಲಿನ ಮುನಸಿಪಲ್ ಮತ್ತು ಇತರೇ ಜನಗಳ ಉಪಯೋಗಾರ್ಥವಾಗಿ ಸ್ಥಾಪನೆ ಮಾಡಿದರು. ಅದು ಪೇಟೆಯಲ್ಲಿರುವ ಗವರ್ನ್‌ಮೆಂಟ್ ಹಿಂದುಸ್ಥಾನಿ ಸ್ಕೂಲಿನಲ್ಲಿ ಸಾಯಂಕಾಲ ೭ ರಿಂದ ೮ ಘಂಟೆವರೆಗೆ ನಡಿಸಲ್ಪಡುತ್ತೆ. ಸ್ಕೂಲಿನಲ್ಲಿ ಹಾಲಿ ೩೦ ಜನ ವಿದ್ಯಾರ್ಥಿಗಳು ಇರುತ್ತಾರೆ. ಅವರಿಗೆ ಕನ್ನಡ, ಇಂಗ್ಲೀಷ್, ಹಿಂದುಸ್ಥಾನಿ, ಪಾರ್ಸಿ, ಈ ಭಾಷೆಗಳನ್ನು ಕಲಿಸುತ್ತಾ ಇದಾರೆ. ಈ ಸ್ಕೂಲು ಸ್ಥಾಪಿತವಾದ ಲಾಗಾಯಿತು ೧೯೦೪ ನೇ ಇಸವಿ ಜನವರಿ ತಿಂಗಳವರಿಗೆ ಇಲ್ಲಿನ ದೊಡ್ಡ ಮನುಷ್ಯರು ಮತ್ತು ವರ್ತಕರ ಸಹಾಯದಿಂದ ನಡೆಯುತ್ತಾ ಇದ್ದು, ಮ|| ವರದರಾಜಯ್ಯಂಗಾರ್ರವರ ಶಿಫಾರಸ್ಸಿನ ಮೇಲೆ ಇನ್ಸ್‌ಪೆಕ್ಟರ್ ಜನರಲ್‌ರವರು ಮಾಹೆಯಾನ ೧೫ ರೂಪಾಯಿ ಗ್ರಾಂಟು ಸಲ್ಲಿಸುವಂತೆ ಅಪ್ಪಣೆ ಮಾಡಿರುತ್ತಾರೆ. ಸದರಿ ಸ್ಕೂಲಿನಲ್ಲಿ ನಾಲ್ಕು ಜನ ಮಾಸ್ತರುಗಳೂ ಒಬ್ಬ ಜವಾನನೂ ಕೆಲಸ ಮಾಡುತ್ತಾರೆ. ಮೇಲ್ಕಂಡ ೧ ಘಂಟೆ ಕಾಲವು ವಿದ್ಯಾರ್ಥಿಗಳಿಗೆ ಪಾಠಕ್ಕೆ ಸಾಲದೇ ಇರುವದರಿಂದ ಗಣಿತ ಮುಂತಾದ ಇತರ ಪಾಠಗಳನ್ನು ಹೇಳಿಕೊಡಲು ತುಂಬಾ ತೊಂದರೆಗೆ ಆಸ್ಪದವಾಗಿದೆ. ಈ ಕಾಲವನ್ನು ಹೆಚ್ಚು ಮಾಡಿ ಗ್ರಾಂಟನ್ನು ಇನ್ನೂ ೧೫ ರೂ. ಜಾಸ್ತಿಯಾಗಿ ಹೆಚ್ಚಿಸಿಕೊಟ್ಟು ಇಲ್ಲಿನ ಬಡಜನರ ಮತ್ತು ಅವಿದ್ಯಾವಂತರಾದ ದೊಡ್ಡವರನ್ನು ವಿದ್ಯಾವಂತರನ್ನಾಗಿ ಮಾಡಲು ಸಹಾಯ ಮಾಡುವರೆಂದು ಕೋರುತ್ತೇನೆ.

ಚನ್ನಪಟ್ಟಣ.—ಜನರು ಅಲ್ಲಲ್ಲಿ ಜ್ವರ ತಲೆನೋವಿನಿಂದ ಪೀಡಿತರಾಗಿರುವರು. ಇಲ್ಲಿ ಪುನಹಾ ಕಲರಾ ರೋಗವು ಅಂಕುರಿಸಿರುವಂತೆ ತೋರುತ್ತಲಿದೆ. ಬಾವಿಗಳನ್ನು ದ್ರಾವಕದಿಂದ ಶುದ್ಧಿಗೊಳಿಸುತ್ತಲಿರುವರು.—ಕಳೆದ ತಾ. ೧೨ ನೆ ಮಂಗಳವಾರ ಇಲ್ಲಿನ ಜನಾನಾ ಮಿಷನ್ ಆಸ್ಪತ್ರೆಯ ವಾರ್ಷಿಕೋತ್ಸವವು ನಡಿಸಲಾಯಿತು. ಮಿಸ್ ಲಾಕ್‌ವುಡ್ ಯವರು ಬೆಂಗಳೂರಿನಿಂದ ಘನ ಡಿ. ಎ. ರೀಸ್, ಘನ ಗೋಲ್ಡ್‌ಸ್ಮಿತ್, ಘನ ಥರ್ಸಿಂಗ್ ಮತ್ತು ಮ|| ನಸರುದ್ದೀನ್ ಬೋಧಕರನ್ನು ಬರಮಾಡಿಕೊಂಡು, ತಾ. ೧೨ ನೇ ಸಾಯಂಕಾಲ ೪|| ಘಂಟೆಗೆ ಬಂದು ಮೀಟಿಂಗ್ ನಡಿಸಿದರು. ಸದರಿ ಮೀಟಿಂಗಿಗೆ ಹೆಡ್ ಮಾಸ್ಟರ್ ಮ|| ಕೆ. ನಾರಾಯಣಸ್ವಾಮಿಯಂಗಾರ್ರು, ಸಬ್ ರಿಜಿಸ್ಟ್ರಾರ್ ಮ|| ನರಸಿಂಹಯ್ಯಂಗಾರ್ರು, ಮ|| ನಂಜುಂಡಯ್ಯನವರು, ಸಾ|| ರಾಮಸಂಜೀವಯ್ಯನವರು, ಮಾಕುಂರಾಮಶೆಟ್ಟಿಯವರೇ ಮೊದಲಾದ ಅನೇಕ ದೊಡ್ಡ ಮನುಷ್ಯರು ಸಭೆಯನ್ನು ಅಲಂಕರಿಸಿದ್ದರು. ಘನ ಗೋಲ್ಡ್‌ಸ್ಮಿತ್ ದೊರೆಗಳು ಅಗ್ರಾಸನವನ್ನು ವಹಿಸಿದರು. ದೇವರ ಪ್ರಾರ್ಥನೆ ಆದನಂತರ ಘನ ಥರ್ಸಿಂಗ್‌ರವರು ಸತ್ಯವೇದದ ಒಂದು ಭಾಗವನ್ನು ಓದಿ ಯೇಸುಸ್ವಾಮಿಯು ರೋಗಿಗಳನ್ನು ಸ್ವಸ್ಥಮಾಡುವದರಲ್ಲಿ ತೋರಿಸಿದ ಕರುಣಾತಿಶಯವನ್ನು ಸಭಿಕರಿಗೆ ವಿವರಿಸಿದರು. ಮ|| ನಸರುದ್ದೀನ್ ಸಾಹೇಬರೂ ಘನ ರೀಸ್ ಬೋಧಕರೂ ಸದರಿ ಆಸ್ಪತ್ರೆಯು ನಿರ್ಮಿತವಾದ ಉದ್ದೇಶವನ್ನೂ ಇದುವರೆಗೆ ಅದರಿಂದ ನೂರಾರು ರೋಗಿಗಳು ಕ್ಷೇಮ ಹೊಂದಿರುವದನ್ನೂ ಮಿಸ್ ಲಾಕ್‌ವುಡ್ ಯವರ ವೈದ್ಯವಿದ್ಯಾ ನಿಪುಣತೆಯನ್ನೂ ಬಹು ಗಂಭೀರವಾದ ವಾಕ್ಯಗಳಿಂದ ವಿವರಿಸಿ ಹೇಳಿದರು. ಸಭಿಕರು ತುಂಬಾ ಸಂತೋಷಪಟ್ಟರು. ಕೂಡ್ಲೆ ಸಭಿಕರಲ್ಲಿ ಕೆಲವರು ಸದರಿ ಆಸ್ಪತ್ರೆಗಾಗಿ ಸ್ವಲ್ಪ ಹಣವನ್ನು ವಾರ್ಷಿಕ ಮಾಸಿಕ ಚಂದಾ ಹಣವನ್ನೂ ಕೊಡುವಂತೆ ವಾಗ್ದಾನಮಾಡಿದ್ದಲ್ಲದೆ ಅನೇಕರು ಆಗಲೇ ಧರ್ಮರೂಪವಾಗಿ ಕೊಂಚ ಹಣವನ್ನು ಕೊಟ್ಟರು. ನಂತರ ಸಭಿಕರೆಲ್ಲಾ ಆಸ್ಪತ್ರೆಯನ್ನು ಹೊಕ್ಕು ಅಲ್ಲಿ ರೋಗಿಗಳ ಪರಾಂಬರಿಕೆಗಾಗಿ ಏರ್ಪಡಿಸಿರುವ, ಔಷಧ ಹಾಸಿಗೆ, ಮೊದಲಾದ ಸಲಕರಣೆಗಳನ್ನು ಪರಾಂಬರಿಸಿ ತೆರಳಿದರು. ಹಾಲಿ ಇರುವ ಈ ಆಸ್ಪತ್ರೆಯು ರೋಗಿಗಳ ಮಾತ್ತು ಅವರ ಪೋಷಕರ ವಾಸಕ್ಕೆ ಸಾಲದ್ದಾಗಿರುವದರಿಂದ ಅದರ ಪಕ್ಕದಲ್ಲೇ ಮತ್ತೊಂದು ವಿಸ್ತಾರವಾದ ಕಟ್ಟಡವನ್ನು ಕಟ್ಟಬೇಕೆಂಬ ಪ್ರಯತ್ನದಲ್ಲಿರುತ್ತಾರೆ. ಅದಕ್ಕಾಗಿ ಸಾಕಾದಷ್ಟು ಭೂಮಿಯನ್ನು ನಮ್ಮ ಶ್ರೀಮನ್ ಮಹಾರಾಜರವರು ಕೊಡುವದಾಗಿ ತಿಳಿದುಬಂದಿದೆ. ಈ ಕಟ್ಟಡವನ್ನು ಕಟ್ಟುವುದಕ್ಕಾಗಿ ಬೇಕಾಗುವ ದ್ರವ್ಯಕ್ಕಾಗಿ ಮಿಸ್ ಲಾಕ್‌ವುಡಮ್ಮನವರು ಬಹಳವಾಗಿ ಚಿಂತಿಸುತ್ತಲಿರುವರು. ನಮ್ಮ ಊರಿನಲ್ಲೂ ಇತರ ಕಡೆಗಳಲ್ಲೂ ಇರುವ ನಮ್ಮ ದೇಶೀಯ ಶ್ರೀಮಂತರುಗಳೆಲ್ಲಾ ನಮ್ಮ ಈ ಸ್ವದೇಶಸ್ತ್ರೀಯರ ಪ್ರಯೋಜನಾರ್ಥವಾಗಿ ಸದರಿ ಆಸ್ಪತ್ರೆಯವರು ಪಡುತ್ತಿರುವ ಚಿಂತೆಯಲ್ಲೂ ಮೆಹನತ್ತಿನಲ್ಲೂ ಸಹಭಾಗಿಗಳಾಗಿದ್ದು, ತಮ್ಮಿಂದಾದ ಮಟ್ಟಿಗೂ ದ್ರವ್ಯರೂಪವಾಗಿಯಾದರೂ ಆಸ್ಪತ್ರೆಗೆ ಬೇಕಾದ ವಸ್ತ್ರ ಮುಂತಾದ ಔಷಧಗಳ ರೂಪದಲ್ಲಾದರೂ ಸಹಾಯ ಮಾಡಿ ಧರ್ಮಕೀರ್ತಿಗಳನ್ನು ಪಡೆಯುವರೆಂದು ನಿರೀಕ್ಷಿಸುತ್ತೇವೆ. ಪಾದ್ರಿಗಳಾದ ಗೋಲ್ಡ್‌ಸ್ಮಿತ್ ರವರೂ ಸ್ವದೇಶಬೋಧಕರಾದ ಘನ ಥರ್ಸಿಂಗರವರೂ, ಹಜರತ್ ನಸರುದ್ದೀನ್ ಬೋಧಕರೂ ನಾಲ್ಕು ದಿನಗಳವರೆಗೂ ಇಲ್ಲಿದ್ದು ಚನ್ನಪಟ್ಟಣ, ನಿಡಗಟ್ಟ, ಹೊಂಗನೂರು, ಕುಲೀಸ್‌ಪೇಟೆಗಳಲ್ಲಿರುವ ಮಹಮದೀಯ ಪ್ರಜೆಗಳನ್ನು ಸಭೆಗಳಾಗಿ ಒಂದು ಸ್ಥಳದಲ್ಲಿ ಸೇರಿಸಿ ಅವರುಗಳಿಗೆ ಕ್ರೈಸ್ತಮತ ತತ್ವಗಳನ್ನು ತಿಳಿಸುತ್ತಾ ಬಂದರು. ಚನ್ನಪಟ್ಟಣ, ಕುಲೀಸ್‌ಪೇಟೆಯಲ್ಲಿ ಬಹುದೊಡ್ಡ ಸಮೂಹವು ಸೇರಿಬಂದು ತಮ್ಮ ತಮ್ಮ ಸಂಶಯಗಳನ್ನು ಕೇಳಿ ಬಹುಮಟ್ಟಿಗೂ ಸಮಾಧಾನಹೊಂದಿದರು. ಸದರಿ ಬೋಧಕರು ಮೊನ್ನೆ ಶನಿವಾರ ಬೆಂಗಳೂರನ್ನು ಕುರಿತು ತೆರಳಿದರು.

ಮೈಸೂರು ಪಟ್ಟಣದ ವಿದ್ವಾಂಸ ಮಂಡಲಿಯವರು ಮಾಡಿದ ಆತಿಥ್ಯವು.

ಸಂಸ್ಕೃತ ಕಾಲೇಜಿನಲ್ಲಿ ನಡೆದ ವೈದಿಕಸಭೆಯು

ರಾಜಧಾನಿಗೆ ಸೇರಿದ ರಾಜಪಿಂಡೆಯವರೂ ಪುರನಿವಾಸಿಗಳೂ ಪ್ರತ್ಯೇಕ ಪ್ರತ್ಯೇಕವಾಗಿ ಶ್ರೀಮನ್ ಮಹಾರಾಜರವರನ್ನು ಸತ್ಕರಿಸಿ ಅವರವರ ಕೃತಜ್ಞತೆ ರಾಜಭಕ್ತಿ ವಿಶ್ವಾಸಗಳನ್ನು ಪ್ರಕಾಶಪಡಿಸಿದ್ದನ್ನು ನೋಡಿ ಇಲ್ಲಿನ ವೈದಿಕ ಮಂಡಲಿಯವರು ಅಷ್ಟಕ್ಕೇ ತೃಪ್ತರಾಗದೆ ತಾವುತಾವೇ ಒಂದಾಗಿ ಶ್ರೀಮನ್ ಮಹಾರಾಜರವರನ್ನು ಬರಮಾಡಿಕೊಂಡು, ವೇದಘೋಷ ಪೂರ್ವಕವಾಗಿ ಅವರನ್ನು ಆಶೀರ್ವಾದ ಮಾಡಿ ಅವರಿಗೆ ಫಲಮಂತ್ರಾಕ್ಷತೆಗಳನ್ನು ಒಪ್ಪಿಸಬೇಕೆಂದು ಗೊತ್ತುಮಾಡಿಕೊಂಡರು. ಶ್ರೀಮನ್ ಮಹಾರಾಜರವರು ಈ ವೈದಿಕಮಂಡಲಿಯವರ ಕುತೂಹಲವನ್ನು ಈಡೇರಿಸುವುದಕ್ಕಾಗಿ ಮೊನ್ನೆ ಸೋಮವಾರ ಸಾಯಂಕಾಲ ಇಲ್ಲಿನ ಸಂಸ್ಕೃತ ಪಾಠಶಾಲೆಗೆ ಚಿತ್ತೈಸಿದರು. ಆ ಪಾಠಶಾಲಾ ಕಟ್ಟಡವೂ ಒಳಗಿನ ಸಭಾಸ್ಥಾನವೂ ರಾಜಯೋಗ್ಯವಾಗಿ ಅಲಂಕರಿಸಲ್ಪಟ್ಟಿದ್ದವು. ದರ್ಬಾರ್ ಮಂದಿರಕ್ಕೆಲ್ಲಾ ನೇತ್ರಾನಂದಕರವಾದ ಜಮಖಾನೆಗಳನ್ನು ಹಾಸಿ ಅನೇಕವಾದ ಕಂದೀಲು ಗುಳೋಪು ಮೊದಲಾದವುಗಳನ್ನು ಕಟ್ಟಿ ಕಳಕಳಿಸುವಂತೆ ಫರಾಷ್ ಮಾಡಿದರು. ಶ್ರೀಮನ್ ಮಹಾರಾಜರವರು ಕುಳಿತುಕೊಳ್ಳುವುದಕ್ಕೆ ಬೆಳ್ಳಿಯ ಕುರ್ಚಿಯನ್ನು ಹಾಕಿ ಹಿಂಭಾಗದಲ್ಲಿ ಕಾಥನಿ ತೆರೆಯನ್ನು ಕಟ್ಟಿ ಮುಂಭಾಗದಲ್ಲೂ ಪುಷ್ಪಮಾಲಿಕೆಯೇ ಮೊದಲಾದವುಗಳಿಂದ ಶೃಂಗಾರ ಮಾಡಿದ್ದರು. ಮಂದಿರದಲ್ಲಿ ಅರಮನೆಯ ಋತ್ವಿಕರು, ಪುರೋಹಿತರು, ಜೋಯಿಸರು, ಮಹಾ ವಿದ್ವಾಂಸರು, ಧರ್ಮಾಧಿಕಾರಿಗಳೇ ಮೊದಲಾದವರೂ ಸಂಸ್ಕೃತಕಾಲೇಜಿನ ಸಮಸ್ತ ವಿದ್ವಾಂಸರೂ ಬಹು ಮಂದಿ ವಿದ್ಯಾರ್ಥಿಗಳೂ ವೈದಿಕ ಲಕ್ಷಣಯುಕ್ತವಾದ ಉಡುಪುಗಳನ್ನು ಧರಿಸಿ ಫಲಮಂತ್ರಾಕ್ಷತೆಗಳ ಸಹಿತ ಸಾಲುಸಾಲಾಗಿ ಕುಳಿತಿದ್ದರು. ಬಲಪಾರ್ಶ್ವದಲ್ಲಿ ಅರಸು ಮಕ್ಕಳು, ಅರಮನೆಯ ಮತ್ತು ಸರ್ಕಾರಿ ಲೌಕಿಕ ಅಧಿಕಾರಿಗಳೂ ದೊಡ್ಡ ಮನುಷ್ಯರೂ ದರ್ಬಾರ್ ಡ್ರೆಸಿನಲ್ಲಿ ಸಭೆಯನ್ನಲಂಕರಿಸಿದ್ದರು. ಶ್ರೀಮನ್ ಮಹಾರಾಜರವರು ಸಾಮಾನ್ಯವಾದ ಉಡುಪುಗಳನ್ನು ಧರಿಸಿ ಸಾಯಂಕಾಲ ಸುಮಾರು ೭ ಘಂಟೆಗೆ ದಯಮಾಡಿದ ಕೂಡಲೇ ಸಭಾಮಂದಿರದ ಬಾಗಿಲಲ್ಲಿ ವೈದಿಕ ಮಂಡಲಿಯ ಕೆಲವು ಪ್ರತಿನಿಧಿಗಳು ಕಾದಿದ್ದು ಎದುರುಗೊಂಡು ಸುಸ್ವಾಗತವನ್ನು ಬಯಸಿ ಅವರನ್ನು ಮಂದಿರದೊಳಕ್ಕೆ ಕರೆದುಕೊಂಡು ಹೋದರು. ಶ್ರೀಮನ್ ಮಹಾರಾಜರವರು ನಿಂತುಕೊಂಡು ವೈದಿಕರ ಮುಖೇನ ಗಣಪತಿಯ ಮಂಗಳಾರತಿಯನ್ನು ಸಾಂಗವಾಗಿ ಮಾಡಿಸಿ ತಮಗಾಗಿ ಏರ್ಪಡಿಸಿದ್ದ ಶ್ರೇಷ್ಠಾಸನವನ್ನು ಅಲಂಕರಿಸಿದರು. ವೈದಿಕಮಂಡಲಿಯವರು ಕುಳಿತುಕೊಂಡು ಅನುಜ್ಞಾಪೂರ್ವಕವಾಗಿ ಋಗ್ವೇದ ಯಜುರ್ವೇದ ಸಾಮವೇದಗಳನ್ನು ಉದ್ಘೋಷಿಸಿ ಶ್ರೀಮನ್ ಮಹಾರಾಜರವರಿಗೆ ಆಶೀರ್ವಾದ ಮಾಡಿದರು. ವೆ|| ಎ. ರಾಘವೇಂದ್ರಾಚಾರ್ಯರು ಸಂಸ್ಕೃತದಲ್ಲಿ ಬರೆದಿದ್ದ ಅಭಿನಂದನ ಪತ್ರಿಕೆಯನ್ನು ಓದಿ ಶ್ರೀಮನ್ ಮಹಾರಾಜರವರಿಗೆ ಒಪ್ಪಿಸಿದರು. ವೆ|| ಗಳಾದ ಚಾಮರಾಜನಗರದ ರಾಮಶಾಸ್ತ್ರಿಗಳೂ ಅರಮನೆ ಪಂಡಿತ ವಿದ್ಯಾಶಾಸ್ತ್ರಿಗಳೂ ಸಂಸ್ಕೃತದಲ್ಲೂ ಆಶಾಟಂಟರು ಪ್ರಾಕೃತದಲ್ಲೂ ಶ್ಲೋಕಗಳನ್ನು ರಚನೆ ಮಾಡಿ ಅರ್ಥಸಹಿತವಾಗಿ ಶ್ರೀಮನ್ ಮಹಾರಾಜರವರಿಗೆ ಓದಿ ಅರಿಕೆಮಾಡಿದರು. ಈ ಪ್ರತಿ ಕೆಲವು ಶ್ಲೋಕಗಳ ತಾತ್ಪರ್ಯವನ್ನು ಇಲ್ಲಿ ಸೂಚಿಸುವೆವು.

ಶ್ರೀಮನ್ ಮಹಾರಾಜರವರಿಗೆ ಒಪ್ಪಿಸಿದ ಆಶೀರ್ವಚನಗಳು.

ಇಂಡಿಯಾದೇಶವೆಂಬ ಪ್ರಸಿದ್ಧವಾಗಿರುವ ಈ ನಮ್ಮ ಭರತಭೂಖಂಡದಲ್ಲಿ ತುಂಬಾ ಗುಣಾಢ್ಯರಾಗಿ ನಕ್ಷತ್ರದಂತೆ ಪ್ರಕಾಶಿಸುವರೆಂಬ ತಾತ್ಪರ್ಯವುಳ್ಳ ಸ್ಟಾರ್ ಆಫ್ ಇಂಡಿಯಾ ಎಂಬ ಬಹುಮಾನರೂಪವಾದ ಹೆಸರಿಗೆ ಪಾತ್ರರಾಗಿ ಎಷ್ಟು ಜನರುಂಟೋ ಅಂಥವರ ಗುಂಪಿಗೆಲ್ಲಾ ಇವರು ದೊಡ್ಡ ಅಧಿಪತಿಗಳೆಂಬ ಅರ್ಥವು ಸ್ಪಷ್ಟವಾಗಿ ತೋರುವಂತೆ ದೊಡ್ಡ ಬಿರುದಾಗಿ ತುಂಬಾ ಗೌರವಾಸ್ಪದವಾದ ಜಿ. ಸಿ. ಎಸ್. ಐ. ಎಂಬ ಹೆಸರನ್ನು ಈ ನಮ್ಮ ಶ್ರೀಮನ್ಮಹಾರಾಜರು ಹೊಂದಿರುವುದಕ್ಕಾಗಿ ನಾವೆಲ್ಲರೂ ಪರಿಪೂರ್ಣವಾದ ಸಂತೋಷವುಳ್ಳವರಾಗಿದೇವೆ.—ಈ ನಮ್ಮ ಶ್ರೀಮನ್ಮಹಾರಾಜರವರ ಗುಣಾತಿಶಯವನ್ನು ಚನ್ನಾಗಿ ತಿಳಿದು ಅದಕ್ಕೆ ತಕ್ಕಂತೆ ದೊಡ್ಡದಾದ ಹೆಸರನ್ನು ಕೊಟ್ಟು ಯೋಗ್ಯತಾನುಗುಣವಾಗಿ ಇವರನ್ನು ಬಹುಮಾನಿಸಿದ್ದರಿಂದ ಎಡ್ವರ್ಡ್ ಚಕ್ರವರ್ತಿಗಳು ತುಂಬಾ ಗುಣಜ್ಞರೆಂದು ಸರ್ವತ್ರ ಪ್ರಖ್ಯಾತವಾಗಿದೆ. ಆ ವಿಷಯದಲ್ಲಿ ನಾವುಗಳು ಆನಂದಭರಿತರಾಗಿದೇವೆ.—ನಮ್ಮ ಶ್ರೀಮನ್ಮಹಾರಾಜರವರು ಹೊಸದಾಗಿ ಹೊಂದಿರುವ ಜಿ. ಸಿ. ಎಸ್. ಐ. ಎಂಬ ಬಹುಮಾನರೂಪವಾದ ನಾಮಧೇಯದಿಂದ ನಮಗೆ ಉಂಟಾದ ಪ್ರೀತಿಯು ಈ ಪಾಠಶಾಲೆಯನ್ನು ಈ ದಿವಸ ಶ್ರೀಮನ್ಮಹಾರಾಜರವರ ಉದಾರವಾದ ಕಟಾಕ್ಷಕ್ಕೆ ಪಾತ್ರವನ್ನಾಗಿ ಮಾಡಿದೆಯಾದ್ದರಿಂದ ಇದು ಮೊದಲಾಗಿ ಈ ಪಾಠಶಾಲೆಯಲ್ಲಿ ಆಗಬೇಕಾದ ವಿಶೇಷಾಭಿವೃದ್ಧಿಗಳೆಲ್ಲವೂ ಸ್ವತಃ ಉಂಟಾಗುತ್ತವೆಂಬ ನಮ್ಮ ದೃಢನಿಶ್ಚಯವು ಸ್ವಲ್ಪವೂ ಕೊರತೆಯಿಲ್ಲದೆ ಸಫಲವಾಗುತ್ತೆಂತಲೇ ನಂಬುತ್ತೇವೆ.—ಈ ಪಾಠಶಾಲೆಯಲ್ಲಿ ವಿದ್ಯಾಪರೀಕ್ಷೆಯಲ್ಲಿ ಉತ್ತೀರ್ಣರಾದ ಕೆಲವು ಜನ ವಿದ್ವಾಂಸರು ಲೋಕೋಪಯುಕ್ತವಾದ ವಿಷಯಗಳನ್ನು ಆಗಾಗ್ಗೆ ಉಪನ್ಯಾಸ ಮಾಡುವದಕ್ಕಾಗಿ ಪಂಡಿತಸಭೆಯೆಂದು ಹೆಸರಿಟ್ಟು ನಡಸುತ್ತಿರುವ ಸಮಾಜವು ಶ್ರೀಮತ್ಕಾಂತರಾಜೇ ಅರಸಿನವರು ಪ್ರೆಸಿಡೆಂಟರಾಗಿ ಇರುವುದರಿಂದ ಪಲ್ಲವಿಸಿಯೂ ಪುಷ್ಪಿತವಾಗಿಯೂ ಆಗಿ, ಫಲಿತವಾಗುವ ಭಾಗದಲ್ಲಿ ಶ್ರೀಮನ್ಮಹಾರಾಜರವರು ಪೇಟ್ರನ್ ಆಗುವುದರ ಮೂಲಕ ಕೃಪಾರಸವನ್ನು ದಯಪಾಲಿಸಲು ಕೋರುತ್ತಿದೆಯೆಂದು ಆ ವಿದ್ವಾಂಸರು ಮಹಾಸನ್ನಿಧಾನದಲ್ಲಿ ವಿಜ್ಞಾಪಿಸಲು ಅಭಿಪ್ರಾಯವುಳ್ಳವರಾಗಿದಾರೆ.—ಲೋಕದಲ್ಲಿ ಮನೆಯ ಯಜಮಾನನಿಗೆ ಹೊಸದಾಗಿ ತುಂಬಾ ಅಭ್ಯುದಯವುಂಟಾದರೆ ಮನೆಯ ಜನರೆಲ್ಲರೂ ಸಂತೋಷಪಡುವಂತೆ ನಾವೆಲ್ಲರೂ ಈ ನಮ್ಮ ಶ್ರೀಮನ್ಮಹಾರಾಜರವರಿಗೆ ಉಂಟಾಗಿರುವ ಬಹುಮಾನಾಭ್ಯುದಯ ಮೂಲಕವಾಗಿ ಯಾವ ಭಗವಂತನ ಕೃಪೆಯಿಂದ ಪರಿಪೂರ್ಣವಾದ ಸಂತೋಷವನ್ನು ಅನುಭವಿಸುತ್ತೇವೆಯೋ ಅದೇ ಭಗವಂತನು ಈ ನಮ್ಮ ಶ್ರೀಮನ್ಮಹಾರಾಜರವರಿಗೆ ಇತೋಪ್ಯತಿಶಯವಾದ ಅಭ್ಯುದಯಗಳನ್ನು ಕೊಡುತ್ತಾ ನಮ್ಮನ್ನು ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇವೆ.

ತರುವಾಯ ವೇ|| ಲಕ್ಷ್ಮೀಪುರಂ ಶ್ರೀನಿವಾಸಾಚಾರ್ಯರು ಭಗವದ್ಗೀತೆಯ ವಿಷಯವಾದ ಒಂದು ಸಣ್ಣ ಉಪನ್ಯಾಸವನ್ನು ಬರೆದು ತಂದು ಓದಿ ವಿವರಿಸಿದರು. ಅದರಿಂದ ಆ ಗೀತೆಯಲ್ಲಿ ಹೇಳಿರುವ ಸಂಗತಿಗಳೂ ಅದರ ವಿಭಾಗಗಳೂ ಪ್ರತಿ ವಿಭಾಗದ ಉದ್ದೇಶವೂ ಭಗವದ್ಭಕ್ತಿಮಾರ್ಗವೂ ಅದರ ಫಲ ಪ್ರಯೋಜನಾದಿಗಳೂ ಶ್ರೀಮನ್ ಮಹಾರಾಜರವರಿಗೂ ಸಭಿಕರಿಗೂ ತಕ್ಕಮಟ್ಟಿಗೆ ಅರ್ಥವಾದವೆಂದು ಹೇಳಬಹುದು.

ಶ್ರೀಮನ್ ಮಹಾರಾಜರವರ ಪ್ರತ್ಯುತ್ತರವು

ಶ್ರೀಮನ್ ಮಹಾರಾಜರವರು ತಮ್ಮ ಶ್ರೇಷ್ಠಾಸನದಿಂದೆದ್ದು ನಿಂತು ವೈದಿಕ ಮಂಡಲಿಯನ್ನು ಕುರಿತು ಸ್ಫುಟವಾಗಿಯೂ ಗಾಂಭೀರ್ಯಯುಕ್ತವಾಗಿಯೂ ಅಪ್ಪಣೆ ಕೊಡಿಸಿದ ವಾಕ್ಯಗಳ ಮುಖ್ಯಾಂಶವೇನೆಂದರೆ—

'ಪಂಡಿತರೇ, ಚಿರಕಾಲದಿಂದ ಈ ನಿಮ್ಮ ಪಾಠಶಾಲೆಗೆ ಬರಬೇಕೆಂದು ಇದ್ದ ಅಭಿಲಾಷೆಯು ಈ ದಿವಸ ವ್ಯಾಜಾಂತರದಿಂದ ಕೈಗೂಡಿದ್ದಕ್ಕಾಗಿ ತುಂಬಾ ಸಂತೋಷಪಡುತ್ತೇವೆ. ನೀವುಗಳು ಈ ವಿದ್ಯಾಲಯದಲ್ಲಿ ಮಾಡುತ್ತಿರುವ ಒಳ್ಳೇ ಕೆಲಸವನ್ನು ಕೇಳಿ ಬಹಳ ತೃಪ್ತಿಯನ್ನು

ಕೊಂಡಿರುತ್ತೇವೆ ಸಾಧಾರಣವಾಗಿ ಇತರ ರಾಜಾಂಗಗಳಲ್ಲಿ ವಿಲುಪ್ತ ಹೊಂದುತ್ತಿರುವ ಗೀರ್ವಾಣಭಾಷೆಯು ಈ ನಮ್ಮ ದೇಶದಲ್ಲಿ ಪುಷ್ಟವಾದ ಸ್ಥಿತಿಯಲ್ಲಾದರೂ ಇರುವುದಕ್ಕೆ ನೀವೇ ಕಾರಣಭೂತರೆಂದು ನಂಬಿದ್ದೇವೆ

ಮತ್ತು ಈ ಕಾಲದಲ್ಲಿ ಎಲ್ಲೆಲ್ಲೂ ನಾಸ್ತಿಕವಾದವೆ ಹೆಚ್ಚಿ ಜನಗಳ್ಳ ಆಸ್ತಿಕತೆಯು ಬಹಳ ಮಟ್ಟಿಗೆ ಕಡಿಮೆಯಾಗುತ್ತಾ ಬರುವುದು ನಮಗೆ ತುಂಬಾ ವಿಷಾದಿಸಬೇಕಾಗಿದೆ ಇಂತಹ ದುರ್ದಶೆಯನ್ನು ಕ್ರಮಕ್ರಮವಾಗಿ ಹೋಗಲಾಡಿಸಲು ನೀವುಗಳು ನಮ್ಮ ರಾಜಧಾನಿಯಲ್ಲಿ ಒಂದು ವೈದಿಕ ಸಭೆಯನ್ನು ಸ್ಥಾಪಿಸಿರುವದು ಬಹಳ ಶ್ಲಾಘನೀಯವಾದದ್ದು ಇಂತಹ ನಿಮ್ಮ ಒಳ್ಳೆ ಪ್ರಯತ್ನಗಳನ್ನು ನಾವು ತುಂಬಾ ಅನುಮೋದಿಸುವುದಲ್ಲದೆ ಈ ವಿಷಯದಲ್ಲಿ ನಿಮಗೆ ಸಾಧ್ಯವಾದ ಸಹಾಯವನ್ನು ಮಾಡಲು ಇಷ್ಟವುಳ್ಳವರಾಗಿದ್ದೇವೆ

ಇನ್ನು ವಿಶೇಷ ಹೇಳಲು ಏನೂ ಇಲ್ಲ ನೀವುಗಳು ಈ ಸಾಯಂಕಾಲ ನಮಗಾಗಿ ಮಾಡಿದ ವಿಚಾರದಾಗಳಿಂದ ತುಂಬಾ ಸಂತೋಷವುಳ್ಳವರಾಗಿ ಈ ನಿಮ್ಮ ಪಾಠಶಾಲೆಗೂ ಮತ್ತು ಸಭೆಗೂ ಶ್ರೀ ಭಗವಂತನು ಇತೋಪ್ಯಧಿಕವಾದ ಉತ್ಕೃಷ್ಟಸ್ಥಿತಿಯನ್ನು ಕೊಟ್ಟು ಅಚಂಚಲವಾಗಿ ನಡಿಯುವ ಹಾಗೆ ಮಾಡಲೆಂದು ಪ್ರಾರ್ಥಿಸುತ್ತೇವೆ

ಈ ಪ್ರಕಾರ ಶ್ರೀಮನ್ ಮಹಾರಾಜರವರು ಅಪ್ಪಣೆಕೊಡಿಸಿದ ಉವಿಕ್ತಿಗಳನ್ನು ಕೇಳಿ ವಿದ್ವಜ್ಜನರೆಲ್ಲರೂ ಪರಮಾನಂದಭರಿತರಾದರು ಅನಂತರ ಅರಮನೆ ಆಫೀಸರ್ ಮಿ॥ ಬಿ [illegible] ವಿದ್ವಾಂಸರು [illegible] ಪಾಂಡಿತ್ಯವನ್ನು ವಿವರಿಸಿ ಶ್ರೀಮನ್ ಮಹಾರಾಜರಿಗೆ [illegible] ಪ್ರತಿ ಒಬ್ಬ ವಿದ್ವಾಂಸ [illegible] ಹಿಡಿದು [illegible] ಮಹಾರಾಜ [illegible] ವಚನಗಳಿಂದ ಆಶೀರ್ವದಿಸಿ [illegible] ಮೇಲೆ [illegible] ಮಹಾರಾಜರವರ ಶ್ರೀ [illegible]

ಕನೆಯಲ್ಲಿ ಶ್ರೀಮನ್ ಮಹಾರಾಜರವರು ತೃಪ್ತಿಪಟ್ಟು ಸಭೆಯು [illegible] ನಂತರ [illegible] ಸ್ವಕೀಯ [illegible] ಸಂತೋಷದಿಂದ [illegible]

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರೆಯುವ ಬಾತ್ಮಿಗಳಿಗೆ ನಾವು ಸ್ಥಳ ಕೊಡಲಾರೆವು ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಒಕ್ಕಣೆಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ಸ್ಥಳ ಕೊಡಲಾರೆವು

ಬಾತ್ಮಿದಾರರ ಮತದ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬುದನ್ನು ಸಕಲರೂ ತಿಳಿಯತಕ್ಕದ್ದು—ಎಡಿ

ಕರೆಸ್ಪಾಂಡೆನ್ಸ್.

ಕೋಲಾರ ಹೊಳೇನರಸೀಪುರದಲ್ಲಿ ಪ್ಲೇಗ್ ನಿರ್ಬಂಧಗಳು.

ಅಯ್ಯಾ,

ಈ ಊರಿನಲ್ಲಿ ಯಾವನಾದರೂ ಒಬ್ಬ ಮನುಷ್ಯನಿಗೆ ಯಾವ ತರಹದ ಜ್ವರ ಬಂದಾಗ್ಯೂ ಪ್ಲೇಗ್ ರೋಗವೆಂದು ಸರ್ಕಾರದವರು ಸಂಶಯಪಡುತ್ತಾರೆ ನಮ್ಮ ಮಂಗ್ಯದವರ ಬೀದಿಯಲ್ಲಿ ಅನುಕೂಲವಿದ್ದ ಮನೆ ಬಿಟ್ಟು ಸಡ್ಡು ಹಾಕಿಕೊಂಡಿರುತ್ತಾರೆ. ಅನಾನುಕೂಲಸ್ಥರು ಇಂಥ ಗರೀಬರು ಇದುವರೆಗೆ ೪—೫ ಸಾರಿ ಇದೇ ರೀತಿ ಊರು ಬಿಟ್ಟು ಅನೇಕ ಸಂಕಷ್ಟ ಪಡುತ್ತ ಜೀವಿಸಿರುವದಲ್ಲದೆ ಎರಡು ವರುಷಗಳಿಂದಲೂ ದವಸದ ಧಾರಣೆ ಜಾಸ್ತಿಯಾಗಿ ಜೀವನಕ್ಕೆ ಅನೇಕವಾಗಿ ಕಷ್ಟಪಡುತ್ತಾರೆ ಈ ಕ್ಷಾಮದ ದೆಸೆಯಿಂದ ನೇಯಿಗೆ ಕಸುಬಿನಿಂದ ಜೀವನ ಸರಿಯಾಗಿ ನಡಿಯುವದಿಲ್ಲ ತಮ್ಮ ತಮ್ಮ ಜೀವನೋಪಾಯ ಹುಡುಕುವದೇ ಕಷ್ಟವಾಗಿರುವಲ್ಲಿ ಷಡ್ಡುಹಾಕುವದಕ್ಕೆ ದುಡ್ಡು ಎಲ್ಲಿಂದ ಬರುತ್ತೆ? ಜೀವನಕ್ಕೆ ಎಲ್ಲಿ ದೊರೆಯುತ್ತೆಂಬುದನ್ನು ತಾವೇ ಯೋಚಿಸಬಹುದು. ಇಂಥಾದ್ದರಲ್ಲಿ ಅಮಲ್ದಾರರೂ ಇನ್‌ಸ್ಪೆಕ್ಟರೂ ಪೋಲೀಸಿನವರೂ ಬೀದಿಗಳಲ್ಲಿ ಬಂದು ಮನೆ ಒಳಕ್ಕೆ ಹೋಲಿಯನ್ನು ನುಗ್ಗಿಸಿ ಹಿಡಿದು ವೈರ್‌ ತೆಗಿಸಿ ಬಿಸಾಡುತ್ತೇವೆ ಎಂದು ಹೇಳಿದ್ದಲ್ಲದೆ ಒಬ್ಬ ನೇಕಾರನು ಸಂಸಾರಸ್ಥನ ಮನೆ ಒಳಕ್ಕೆ ಎಕ್ಕಡದ ಕಾಲಿನಲ್ಲಿ ನುಗ್ಗುವಾಗ್ಗೆ ಮನೆ ಮನುಷ್ಯನು ಒಳಕ್ಕೆ ಹೋಗಬ್ಯಾಡಿ ಎಂದು ಅಂದದ್ದಕ್ಕೆ ಅವನ್ನು ಜುಟ್ಟು ಹಿಡಿದು ಎಳೆದು ಅತನ ಚಿಕ್ಕಪ್ಪನು ಬಿಡಿಸಲಿಕ್ಕೆ ಹೋದವನಿಗೂ ಸಹಾ ನೂಕಿ ಹೊಡೆದು ಆರಂಭಿ ಒಳಕ್ಕೆ ನೂಕಿರುತ್ತಾರೆ ಗವರ್ನಮೆಂಟಿನವರೇ ಇಂಥಾ ನಿರ್ಬಂಧಪಡಿಸಿದರೆ ಬಡ ರೈತರು ಜೀವನಮಾಡುವದು ಹ್ಯಾಗೆ? ಈ ಬಡರೈತರ ಅಪಮಾನಗಳನ್ನು ಮೇಲ್ಪಟ್ಟ ಆಫೀಸರು ವಿಚಾರಿಸುವದಿಲ್ಲ ಈ ವಿಷಯದಲ್ಲಿ ಶಾಸನದ ಡೆಪ್ಯುಟಿ ಕಮಿಷನರಿಗೆ ಕೊಟ್ಟ ಅರ್ಜಿಗೆ ಇದುವರಿಗೂ ಜವಾಬು ದೊರೆತಿಲ್ಲ ಹಾಲಿ ಬಿಟ್ಟಿರುವವರ ಮನೆಯಲ್ಲಿ ಅನೇಕ ಕಳುವಾಗಿರುತ್ತೆ ಇದೇ ರೀತಿ ನಮ್ಮ ಕಸಬಿಗೆ ಸಂಬಂಧಪಡುವ ಸಾಮಾನು ಸಹಾ ಕಳುವಾಗುತ್ತೆಂಬ ಭಯವೂ ಪೂರ್ತಿ ಇರುತ್ತೆ ಇಂಥಾದ್ದರಲ್ಲಿ ಕೇವಲ ಗರೀಬರು ಜೀವನ ಮಾಡುವದು ಹ್ಯಾಗೆ? ಯೋಚಿಸಬಹುದು ೪.೦೦ ನೇ ಸೋಮವಾರ ಸಂತೆಯಲ್ಲಿ ಪೇಟೆಯಲ್ಲಿ ಸಹಾ ಊರು ಬಿಡಬೇಕು ಎಂದು ಸಾರಿಸಿ ಪುನಹಾ ಈ ರೀತಿ ರೈತರಿಗೆ ಇಜಾಪಡಿಸುವದು ಮಹಾ ಅನ್ಯಾಯ ಈಗ ಷೆಡ್ಡು ಹಾಕಿರುವ ಅನುಕೂಲಸ್ಥರು ಇವರಿಗೆ ಜುಲ್ಮಾನೆ ಹಾಕಿದರೆ ಬಿಡುತ್ತಾರೆ ವಗೈರೆಯಾಗಿ ಹೇಳುತ್ತಾರೆ. ಅಲ್ಲದೆ ಜುಲ್ಮಾನೆ ಹಣವಿಗೆ ಸಾಮಾನುಗಳನ್ನು ಕಾಲು ಕ್ರಯಕ್ಕೆ ತೆಗೆದುಕೊಳ್ಳಬಹುದು. ಮತ್ತು ಇವರುಇನ್ನು ಗರೀಬರಾದರೆ ಕೂಲಿ ಕೆಲಸಕ್ಕೆ ಹೋಗಬಹುದಲ್ಲದೆ ಇವರ ಮನೆಗಳನ್ನು ಸುಲಭ ಕ್ರಯಕ್ಕೆ ತೆಗೆದುಕೊಂಡು ದೊಡ್ಡದೊಡ್ಡ ಮನೆಗಳನ್ನು ಕಟ್ಟಿಸುವ ಯೋಚನೆಯಿಂದ ಜುಲ್ಮಾನೆ ವಗೈರೆ ಹಾಕಿ ಎಂದು ಹೇಳಿರುತ್ತಾರೆಂದು ವರ್ತಮಾನವಿದೆ.

[ಈ ಬಾತ್ಮಿಗೆ ೩೦ ಜನರು ರುಜು ಮಾಡಿದ್ದಾರೆ.—ಎಡಿ.]

ಕೊಡೂರೂ ಕಳ್ಳತನಗಳೂ.

ಅಯ್ಯಾ,

ಈಗ ಇಲ್ಲಿ ೪ ದಿನ ಗಳಿಂದಲೂ ಕಳ್ಳತನ ವಿಶೇಷವಾಗಿದೆ ತಾ ೧೧ ರಲ್ಲಿ ಕಟುಕರ ಮನೆಯಲ್ಲಿ ಬಿದ್ದು ಮಲಗಿದ್ದ ಹುಡುಗಿಯ ಕೊರಳಲ್ಲಿ ಒಂದು ಸೇರು ತೂಕದ ಬೆಳ್ಳಿ ಸರಿಗೆಯನ್ನು ಕೊಂಡಿ ತೆಗೆದು ಎಳೆಯಲು ಕೊರಳು ತರಿಯಿತು, ಅದಕ್ಕೆ ಆ ಹುಡುಗಿಯು—ಅವಮ್ಮ ಎಂಬ ಘಾಬರಿಯಿಂದ ಅದನ್ನು ಹಿಡಿದು ಕೊಳ್ಳಲು ಎಳೆದದ್ದರಿಂದ ಬೆರಳು ಕೊಯಿದು ಕೊಂಡು ಬಹಳ ಘಾಯಗಳಾಗಿ ಬಾಧೆಯಾಗಿದೆ. ದೇವರ ದಯದಿಂದ ಏನೂ ಅಪಾಯ ಮಾಡದೆ ಬಾಯಿಗೆ ಬಟ್ಟೆ ತುಂಬಿ ತೆಗೆದುಕೊಂಡು ಹೋದರು. ೧೨ ನೇ ತಾ. ರಾತ್ರಿ ೨ ಘಂಟೆ ಸಮಯದಲ್ಲಿ ಮಿ. ಹೊನ್ನಪ್ಪನವರ ಚಿಲ್ಲರೆ ಅಂಗಡಿಯ ಬೀಗವನ್ನು ತೆಗೆಯುವದಕ್ಕೆ ಪ್ರಯತ್ನ ಮಾಡಲು ಶಬ್ದವಾಯಿತು. ಅದನ್ನು ಕೇಳಿ ಆದರ ಬಲ ಭಾಗದ ಮನೆಯವರು ಗಾಬರಿಯಾಗಿ ಹಿತ್ತಲಮಾರ್ಗವಾಗಿ ಹೊರಟರು. ಎಡ ಭಾಗದ ಮನೆಯವರು ಜಲಬಾಧೆಗೆ ಹೊರಗೆ ಹೋಗುವುದಕ್ಕೆ ಬಂದು, ಬಾಗಲು ತೆಗೆಯಲು ಹೊರಗೆ ಚಿಲಕ ಹಾಕಿದ್ದರಿಂದ ಹೋಗಿ ಒಳಗೆ ಕೂತುಕೊಂಡು ಇದ್ದರು. ಆಗ್ಗೆ ಹಿತ್ತಲ ಮಾರ್ಗವಾಗಿ ಹೋಗಿದ್ದ ಹೆಂಗಸರು ಕಳ್ಳರು ಬಿದ್ದು ಇದ್ದಾರೆ ಎಂಬದಾಗಿ ಕೂಗಿದರು. ನಿಜವೆಂಬುದಾಗಿ ತಿಳಿದು ಅವರ ಮನೆಯೊಳಕ್ಕೆ ಹೋಗಿ ಬಾಗಲು ತಗೆಯಲು ಅಲ್ಲಿ ಕೂಡ ಚಿಲಕವನ್ನು ಹಾಕಿದ್ದರು ಆ ವೇಳೆ ಕೆಲರು ತಮ್ಮ ಮನೆಗೆ ಹೋಗಿ ಕಿಟಕಿಯಿಂದ ಹೊನ್ನಪ್ಪ ಎಂಬುವರಿಗೆ ಕೂಗಿ ಇದ್ದದ್ದರಿಂದ ಬಂದು ನೋಡಲು ಯಾರೂ ಇರಲಿಲ್ಲ ಚಿಲಕಗಳು ತೆಗೆದು ಇದ್ದವು ತಾ ೧೫ ನೇ ಶುಕ್ರವಾರ ರಾತ್ರಿ ಸುಮಾರು ೧೧॥ ಘಂಟೆಯಲ್ಲಿ ಒಂದು ಮನೆ ಹಿಂಭಾಗದಲ್ಲಿ ಸ್ವಲ್ಪ ಸಣ್ಣಾಗಿರುವ ಹಾಗೆ ಬಾಗಲ ಪಕ್ಕದಲ್ಲಿ ಕನ್ನವನ್ನು ಕೊರೆಯುತಾ ಇದ್ದರು ಒಬ್ಬ ಹೆಂಗಸು ಉಬ್ಬಸದ ಕೆಮ್ಮಿನಿಂದ ಬೀಸಣಿಕೆಯಿಂದ ಬೀಸಿಕೊಳ್ಳುತ್ತಾ ಇರುವಾಗ್ಗೆ ಒಂದು ಕಿಂಟಿ ಬಿದ್ದ ಶಬ್ದವಾಯಿತು, ಕಳ್ಳರೆಂದು ಬಾಗಿಲು ಹಾಕಿಕೊಂಡು ಸುತ್ತಲೂ ಜನಗಳು ಬರಲೆಂದು ಅರ್ಧ ಘಂಟೆಯವರಿಗೂ ಕೂಗಲು ಯಾರೂ ಬರದೆ ಆ ವೇಳೆ ಮೇದಲಿಯಾರ್ ಜನಗಳು ನಾಲ್ಕೈದು ಮಂದಿ ದೀಪಿಗೆ ತೆಗೆದುಕೊಂಡು ಬಂದು ನೋಡಲಾಗಿ ಅಲ್ಲಿ ಕನ್ನ ಹಾಕಿದ್ದರು ಅಲ್ಲಿಂದ ಕಳ್ಳರು ಹೀರಟು ಕ್ಯಾಂಪಿಗೆ ಹೋಗಿ ಅಜ್ಜಂಪುರದ ರಾಮದಾಸಯ್ಯನೆಂಬುವನ ಮನೆಯಲ್ಲಿ ಕನ್ನ ಕೊರೆಯುವಾಗ್ಗೆ ಆವರ ಮನೆಯು ಮುದುಕಿಯು ಎಚ್ಚರವಾಗಿದ್ದರೂ ದನಗಳೆಂಬ ಭ್ರಾಂತಿಯಿಂದ ಸುಮ್ಮನಿದ್ದರು ಕನ್ನ ಕೊರೆದ ಮೇಲೆ ಹಿಳಲು ಬೀಳಲು ಮೇಲೆ ಬೆಂಗಟಿ ಹುಡಿಲ್ಲದೆ ಇದ್ದದ್ದರಿಂದ ಹುಡ್ರಸ ಹಿಳಲು ಬಿದ್ದಿದೆ ಎಂಬ ಭ್ರಾಂತಿಯಿಂದ ಮಲಗಿ ನಿದ್ದೆ ಹೋದರು ಕಳ್ಳರು ಅಲ್ಲಿ ಅಡ್ಡವಾಗಿರುವ ಪಾತ್ರೆಗಳನ್ನೆಲ್ಲಾ ತೆಗೆದು ಹೊರಗೆ ಹಾಕಿ ಒಡವೆ ನಗದು ರೂಪಾಯಿ ಹಾಕಿ ಸಣ್ಣ ಪೆಟ್ಟಿಗೆಯನ್ನು ತಲೆ ಕಳಗೆ ಇಟ್ಟು ಕೊಂಡಿದ್ದನ್ನು ತೆಗೆದುಕೊಂಡು ಹೋಗಿರುತ್ತಾರೆ ಜನಗಳು ಯಾರಾದರೂ ಬಂದಾರೆಂದು ಮ್ಯುನಿಸಿಪಲ್ ಲಾಂದ್ರಗಳನ್ನು ಕಲ್ಲಿನಿಂದ ಹೊಡೆದು ಆರಿಸಿ ಬಿಟ್ಟಿರುತ್ತಾರೆ ಇಷ್ಟೆಲ್ಲಾ ಆದ ಒಂದು ಗಂಟೆಯ ತರುವಾಯ ಪೋಲೀಸಿನವರು ಬರಲು ತೋರಿಸಿದ್ದರಿಂದ ಅವರು—ನಾವುಗಳು ಏನು ಮಾಡಬೇಕು? ೧೦ ಘಂಟೆಯಲ್ಲಿ ನಮ್ಮನ್ನು ಗಸ್ತಿಗೆ ಹೋಗಬೇಕೆಂದು ನಿಯಮವನ್ನು ಮಾಡುತ್ತಾರೆ ಅಲ್ಲಿಂದ ಬಂದು ಊಟ ಮಾಡಿ ಬರುವದು ೧೨ ಘಂಟೆಯಾಗುತ್ತದೆಂದು ಹೇಳಿದರು. ಬೆಳಿಗ್ಗೆ ೪ ಗಂಟೆಯಲ್ಲಿ ಅಮಲ್ದಾರರೂ ಪೋಲೀಸು ಇನ್‌ಸ್ಪೆಕ್ಟರೂ ಬಂದು ಮಹಜರು ಮಾಡಿದರು ಅವರಿಗೆ ತಿಳಿಸಿದ್ದರಿಂದ ಅವರು—೧೨ ಘಂಟೆ ಮೇಲೆ ನಮಗೆ ಗಸ್ತು ಆರ್ಡರು ಇದೆ ಆದರ ಒಳಗೆ ಆದರೆ ನಾವೇನುಮಾಡಬೇಕು ಎಂಬದಾಗಿ ಹೇಳಿದರು ಈ ಊರಿನಲ್ಲಿ ಎಲ್ಲರೂ ಒಬ್ಬೀಟಿಗರಾಗಿರುತ್ತಾರೆ ಅವರುಗಳೆಲ್ಲಾ—ನಮ್ಮ ಗತಿ ಏನು? ನಮ್ಮಗತಿ ಏನು? ಸರ್ಕಾರದ ಬಂದೋಬಸ್ತು ಸ್ವಲ್ಪವಾದರೂ ಇಲ್ಲವೆಂದು ಬಹಳ ಚಿಂತೆಯಿಂದ ತಪಿಸುತ್ತಾರೆ ಈಗ ನಮ್ಮ ಊರಿನಲ್ಲಿ ಪೋಲೀಸಿನವರ ಗಸ್ತು ನಾವು ಕಂಡೇ ಇಲ್ಲ ಇಲ್ಲಿ ಇರತಕ್ಕ ಪೋಲೀಸಿನವರಲ್ಲಿ ಸ್ಥಳದವರು ವಿಶೇಷವಾಗಿ ರುವುದರಿಂದ ಹೀಗಾಗುವದೋ ಏನೋ. ಈಗ ನಾಲ್ಕಾವರ್ತಿ ಹಿಂದೆ ಕ್ಯಾಂಪುಗಳಿಗೆ ಹೋದಾಗ್ಗ ಕಳ್ಳತನವೆಂಬುದು ಜನಗಳಿಗೆ ಕನಸಿನಲ್ಲಿ ಕೂಡಾ ಇರಲಿಲ್ಲ.

ಕ. ಗ. ಯ.

ಉಂಡಮನೆಗೆ ಎರಡು ಬಗೆದುದು

ಕೋಲಾರದ ಭಂಗಾರದ ಗಣಿ ರಾಬರ್ಟ್‌ಸನ್ ಪೇಟೆಯಲ್ಲಿ ವಾಸವಾಗಿರುವ ನಂದೀದುರ್ಗದ ಗಣಿ ಕಂಟ್ರಾಕ್ಟುದಾರ್ ಮಿ॥ ಮಣ್ಣಾಖಂ ಮೊದಲಿಯಾರ್ರು ಸುಮಾರು ೬ ತಿಂಗಳಿಂದ ತಮ್ಮ ಮಗಳು ಸುಮಾರು ೪ ವರ್ಷದ ವಯಸ್ಸಿನ ಬಾಲಿಕೆಗೆ ಅರವ ವಿದ್ಯೆ ಕಲಿಸುವುದಕ್ಕಾಗಿ ಮಾಸಕ್ಕೆ ೧೫ ರೂ ವೇತನಕೊಟ್ಟು, ತಿರುಚನಾಪಲ್ಲಿಯಿಂದ ಬಂದು ತಿಂಡಿಗೆ ಅಭಾವವಾಗಿ ಅಲೆಯುತ್ತಿದ್ದ ವೆಂಕಟಾಚಲೈಯ್ಯನೆಂಬೊಬ್ಬ ದ್ರಾವಿಡ ಬ್ರಾಹ್ಮಣನನ್ನು ನೇಮಿಸಿಕೊಂಡಿದ್ದರು. ಈ ಬ್ರಾಹ್ಮಣನು ತುಂಬಾ ಬಡವನಾಗಿದ್ದುದರಿಂದಲೂ ೩—೪ ಮಕ್ಕಳುಳ್ಳವನಾಗಿದ್ದುದರಿಂದಲೂ ಗಣಿ ಪ್ರಾಂತ್ಯದಲ್ಲಿ ಜನರ ಜೀವನವು ಕಷ್ಟತರವೆಂಬುದು ಜಗದ್ವಿದಿತವಾಗಿರುವುದರಿಂದಲೂ ಉದಾರಿಗಳಾದ ಮೊದಲಿಯಾರ್ರು ಬಟವಾಡೆ ಮುಂತಾದ ಕಾಲಗಳಲ್ಲಿ ತಿಂಗಳಿಗೆ ೪—೫ ರೂ. ಹೆಚ್ಚಾಗಿ ವರಮಾನ ಮಾಡಿಕೊಟ್ಟದ್ದರು ಎಲ್ಲವೂ ಸೇರಿ ತಿಂಗಳಿಗೆ ೨೦ ರೂ. ಗಳ ಕಡಮೆ ಇಲ್ಲದೆ ಸಿಕ್ಕುತ್ತಿತ್ತು. ಇದರಿಂದ ಆತನು ಸುಖವಾಗಿ ಜೀವನ ಮಾಡುತ್ತಿದ್ದನು. ಈತನು ದಿನಂಪ್ರತಿಯಲ್ಲೂ ಬೆಳಿಗ್ಗೆ ೨ ಗಂಟೆ ಹೊತ್ತು ಮಧ್ಯಾಹ್ನ ೨ ಗಂಟೆ ಹೊತ್ತು ಮಾತ್ರ ಹೋಗಿ ಆ ಮಗುವಿಗೆ ಪಾಠ ಹೇಳಿ ಬರುತ್ತಿದ್ದನು. ಈತನು ಏನು ಪಾಠವನ್ನು ಹೇಳುತ್ತಾನೆ! ಹೇಗೆ ಕೇಳುತ್ತಾನೆ? ಎಂಬದನ್ನು ಮಾತ್ರ ಆ ಮನೆಯವರ ಪೈಕಿ ಯಾರೂ ವಿಚಾರಿಸುತ್ತಿರಲಿಲ್ಲ ಸದರಿ ವೆಂಕಟಾಚಲಯ್ಯನು ದಿನಂಪ್ರತಿಯಲ್ಲೂ ಮೇತ್ರುಹಸ್ತನಾಗಿ ಮೊದಲಿಯಾರ್ರ ಮನೆಗೆ ಹೋಗಿ ಮಗುವನ್ನು ಚೆನ್ನಾಗಿ ಹೊಡೆದು, ತಾನು ಕೇಳಿದುದನ್ನೆಲ್ಲಾ ತಂದುಕೊಟ್ಟರೆ ಸರಿ. ಇಲ್ಲವಾದರೆ ನಿನ್ನನ್ನು ಕೊಂದುಬಿಡುತ್ತೇನೆಂದು ಭಯೋತ್ಪಾತವನ್ನುಂಟುಮಾಡಿ, ಒಂದು ದಿನ ಬೆಳ್ಳಿಯ ಬಟ್ಟಲು, ಇನ್ನೊಂದು ದಿನ ತಟ್ಟೆ, ಮತ್ತೊಂದುದಿನ ಭಂಗಾರದ ಸೆರಟ್ಯೂಬಡ್ಡಿಕೆ, ಬೇರೊಂದು ದಿನ ಅಂಗಿ, ಮಗದೊಂದು ದಿನ ಶೀರೆ, ರುಮಾಲು, ಈ ರೀತಿ ದಿನಂಪ್ರತಿಯಲ್ಲೂ ಬೆಲೆಯುಳ್ಳ ವಸ್ತುಗಳನ್ನೆಲ್ಲಾ ತರಿಸಿಕೊಳ್ಳುತ್ತಾ ಬಂದನು ಆ ಚಿಕ್ಕ ಹುಡುಗಿಯು ಕೆತ್ತದ ಪೆಟ್ಟಿಗೆ ಬಂಜಿ ಅವನು ಹೇಳಿದಂತೆ ಮನೆಯಲ್ಲಿ ತನ್ನ ಕೈಗೆ ಸಿಕ್ಕಿದುದನ್ನೆಲ್ಲವನ್ನೂ ತನ್ನ ಉಪಾಧ್ಯಾಯರಿಗೆ ಸಮರ್ಪಿಸುತ್ತಾ ಬಂದು ಉಪಾಧ್ಯಾಯನು ಈ ರೀತಿ ೩—೪ ತಿಂಗಳಲ್ಲಿ ಸುಮಾರು ೧,೦೦೦ ರೂ. ವರೆಗೂ ಬೆಲೆ ಬಾಳುವ ವಸ್ತುಗಳನ್ನು ಸಂಗ್ರಹಿಸಿದನು ದಿನಚರಿಯಲ್ಲಿ ಈ ರೀತಿ ಒಡವೆಗಳು ಹೋಗುತ್ತಿದ್ದುದರಿಂದ ಮನೆಯಲ್ಲಿದ್ದ ನಂಬಿಕೆಯಾದ ಸೇವಕರ ಮೇಲೆಲ್ಲಾ ಅನುಮಾನಪಟ್ಟು ದಾಯಿತು ನೆಂಟರಿಷ್ಟರ ಮೇಲೆಲ್ಲಾ ಗುಮಾನಿಯಾಯಿತು. ಗೃಹಿಣಿಯೊಡನೆ ಕಲಹವಾಯಿತು. ಇಷ್ಟಾದರೂ ಒಡವೆಗಳು ಹೋಗುತ್ತಲೆ ಇವೆ. ಹೋಗುವ ವಿಧವೇನೋ ಒಬ್ಬರಿಗೂ ಗೊತ್ತಾಗಲಿಲ್ಲ. ಕಟ್ಟಕಡೆಗೆ ಮನೆಯಲ್ಲಿ ಯಾವುದೋ ಒಂದು ಭೂತವು ಸೇರಿಕೊಂಡು ಈ ರೀತಿ ಮಾಯ ಮಾಡುತ್ತಿರುವುದರಿಂದ ಅದನ್ನು ಬಿಡಬೇಕೆಂದು ಗೊತ್ತು ಮಾಡಿಕೊಂಡರು. ಹೀಗಿರುವಲ್ಲಿ ಸದರಿ ವೆಂಕಟಾಚಲೈಯ್ಯನ ಗೃಹಿಣಿಯು ಗರ್ಭಿಣಿಯಾಗಿದ್ದುದರಿಂದ ಆಕೆಯನ್ನು ತನ್ನ ಊರಾದ ತಿರುಚನಾಪಲ್ಲಿಗೆ ಕರದುಕೊಂಡು ಹೋಗುವ ಉದ್ದೇಶದಿಂದ ತಾನು ಸಂಗ್ರಹಿಸಿದ್ದ ವಸ್ತುಗಳನ್ನೆಲ್ಲಾ ತೆಗೆದುಕೊಂಡು ಮೊದಲಿಯಾರ್ರ ಮನೆಯಲ್ಲಿ ಹೇಳದೇ ಸಕುಟುಂಬವಾಗಿ ನಿಶಿ ಸಮಯದಲ್ಲಿ ರೈಲು ಹತ್ತಿ ಕಾಲಿಗೆ ಬುದ್ಧಿ ಹೇಳಿದನು ಇಷ್ಟಾದರೂ ಯಾರಿಗೂ ಆತನ ಮೇಲೆ ಅನುಮಾನ ಹುಟ್ಟಲಿಲ್ಲ ಉಪಾಧ್ಯಾಯರಿಗೆ ಮಾತ್ರ ಅಪಾಯವು ಸ್ವಲ್ಪವೂ ಸಫಲವಾಗಲೇ ಇಲ್ಲ. ಇವರು ತಮ್ಮ ಊರಲ್ಲಿ ಒಂದು ಪಕ್ಷವರಿಯಂತ ಇದ್ದು ಸಂಗ್ರಹಿಸಿ ತಂದಿದ್ದ ಪದಾರ್ಥಗಳನ್ನೆಲ್ಲಾ ವಿಕ್ರಯಾದಿಗಳ ಮೂಲಕ ವಿನಿಯೋಗ ಪಡಿಸಿ, ಮೊದಲಿಯಾರ್ರ ಮನೆಯಲ್ಲಿದ್ದ ಕಬ್ಬಿಣದ ಪೆಟ್ಟಿಗೆಗಳಿಗೆ ಕಳ್ಳ ಬೀಗದಕ್ಕೆಗಳನ್ನು ಮಾಡಿಸಿಕೊಂಡು ಭಾರಿಯಾದ ಜೋಮಾಲೆ ಕಾಸಿನ ಸರ ಮುಂತಾದ ಒಡವೆಗಳನ್ನು ಪಡೆದು ಧನಿಕನಾಗಿ ಊರಿಗಕ್ಕೆ ರಾಜೀನಾಮೆಯನ್ನು ಕೊಟ್ಟು ಒರುವೆನೆಂದು ಭಾರ್ಯಾ ವಿಯೋಗಿಣಿಯನ್ನು ಸಂತೈಸಿ ಮರಳಿ ರಾಬರ್ಟ್‌ಸನ್ ಪೇಟೆಗೆ ಬಂದರು. ನೇಷ್ಟರು ಮೊದಲಿಯಾರ್ರ ಮನೆಗೆ ಕಾಲಿಟ್ಟ ದಿನವೇ ಬೆಳ್ಳಿಯ ಚೊಂಬು ಮಾಯವಾಯಿತು ಮಾರನೆಯ ದಿನ ಉಪಾಧ್ಯಾಯರನ್ನು ಶಿಷ್ಯಳಿಗೆ ತಾವು ತಂದಿದ್ದ ಬೀಗದ ಕೈಗಳ ಉಪಯೋಗದ ವಿಷಯವಾಗಿ ಉಪನ್ಯಾಸವಾಗುತ್ತಿತ್ತು. ಅವಕಾಶಾಗಿ ಅದನ್ನು ಆಕರ್ಣಿಸುತ್ತಿದ್ದ ವೃದ್ಧಯುವತಿಯು ಉಪಾಧ್ಯಾಯರ ಗಮನಾನಂತರ ಹುಡುಗಿಯನ್ನು ಹೆದರಿಸಿ ಉಪನ್ಯಾಸಿದ ವಿಷಯವೇನೆಂದು ಕೇಳಿದಳು. ಆ ಹುಡುಗಿಯು ಹೆದರಿ ತಂದೆ ತಾಯಿಗಳೊಡನೆ ಹೇಳಕೂಡದೆಂದು ಪಾಠವು ತೆಗೆದುಕೊಂಡು, ಕಡೆಗೆ ಎಲ್ಲವನ್ನೂ ತನ್ನ ಉಪಾಧ್ಯಾಯರ ಉಪಯೋಗಕ್ಕಾಗಿ ಬೆತ್ತದೇಟಿನ ಭಕ್ತಿಯಿಂದ ಕೊಟ್ಟೆನೆಂದು ಬಾಯಿ ಬಿಟ್ಟಿತು. ತರುವಾಯ ತಿಳಿದೇ ಇದೆ ಕರೀ ಕೋಟುಗಳನ್ನು ತಳೆದ ಕಮೀಷನಾಕೃತಿಗಳು ಬಂದು ಕುಟಿಲೋಪಾಧ್ಯಾಯರಿಗೆ ತಾಪೋರ್ನ್ನಿನ ಕಡಗವನ್ನು ತೊಡಿಸಿ ಕತ್ತಲೆಯ ಮನೆಗ ಕಳುಹಿಸಿದವು ಕಟ್ಟಕಡೆಗೆ ಗಣಿ ಮೇಜಿಸ್ಟ್ರೇಟರಲ್ಲಿ ಮೊಕದ್ದಮೆ ನಡೆದು ೨ ವರ್ಷಗಳ ಕಠಿಣ ಸಜಾ ಆಯಿತು ಆದುದರಿಂದ "ಉಪ್ಪಿಕ್ಕಿದವರನ್ನು ಮುಪ್ಪಿನ ತನಕ ನೆನೆ" ಎಂಬುವದನ್ನೂ, "ಪತ್ಯ ವಿಜ್ಞಾತ ಶೀಲಾಯ ಗೃಹೆ ದದ್ಯಾತ್ಪ್ರತಿಶ್ರಯಂ" ಎಂಬದನ್ನೂ ಯಾರೂ ಮರೆಯಬಾರದು

ಚಂದಾದಾರ.

ಪ್ರಕಟನೆ.

ಬಾಲಶಿಕ್ಷೆ ೧ನೇ ಭಾಗ!

ಬಾಲಶಿಕ್ಷೆ ೧ನೇ ಭಾಗ!!

ಬಾಲಶಿಕ್ಷೆ ೧ನೇ ಭಾಗ!!!

ಬೇಗ ತರಿಸಿಕೊಳ್ಳಿ.

33-1

ಕ್ರಯ ೧ ಆಣೆ. ವಿ. ಪಿ. ಮೂಲಕ ಮೂರು ಆಣೆಗಳು.

ನೂರು ಪ್ರತಿಗಳಿಗೆ ಹನ್ನೆರಡು ಪ್ರತಿಗಳು ಕಮಿಷನ್.

ವಿಳಾಸ:—ಮ್ಯಾನೇಜರ್, ಸಿ. ಎಲ್. ಎಸ್.

ಬುಕ್ ಡಿಪೋ, ಮೈಸೂರು.

WILLIAM & CO., BOMBAY.

ವಿಲಿಯಂ ಮತ್ತು ಕಂಪೆನಿ, ಪ್ರೋಟರ್ಸ್, ಮುಂಬಯಿ.

ಅಮೃತಾಂಜನ

27 1

ಬಾಟ್ಲಿ ಒಂದಕ್ಕೆ ಕಿಮ್ಮತು ೮ ಆಣೆ, ವಿ. ಪಿ. ೧೨ ಆಣೆ

SAFE ★ EFFICACIOUS ★ SURE ★ PILLS ★ OINTMENTS ★ POWDERS — WILLIAM & Co. BOMBAY

ಅಮೃತಾಂಜನ—ಸುಖಾಂಜನ
ಅಮೃತಾಂಜನ—ಸಂಜೀವನ
ಅಮೃತಾಂಜನ—ಪರಮಾಂಜನ
ಅಮೃತಾಂಜನ—ದಿವ್ಯಾಂಜನ
ಅಮೃತಾಂಜನ—ಆರ್ತಿಭಂಜನಿ
ಅಮೃತಾಂಜನ—ಪ್ರಾಭಂಜನವಿವರ್ಧಿನಿ
ಅಮೃತಾಂಜನ—ಅಪೂರ್ವದರ್ಶಿನಿ
ಅಮೃತಾಂಜನ—ತಕ್ಷಣ ಪರಿಹಾರಿಣಿ
ಅಮೃತಾಂಜನ—ಸಂಧಿವಾತಕ್ಕೆ
ಅಮೃತಾಂಜನ—ತಲೆನೋವಿಗೆ
ಅಮೃತಾಂಜನ—ಜಖಮ್ ಮತ್ತು ಘಾಯಕ್ಕೆ
ಅಮೃತಾಂಜನ—ಗಂಟ್ಲುನೋವಿಗೆ

ಶಿರೋವೇದನ ವಾತ, ಎದೆನೋವು, ಗಂಟ್ಲುನೋವು, ಸಂಧಿವಾತ, ತಲೆನೋವು, ಶರೀರಭಾರ ಈ ಎಲ್ಲಾ ತರದ ರೋಗಕ್ಕೆ ಅಮೃತಾಂಜನವು ದಿವ್ಯವಾದ ಔಷಧವಾಗಿದೆ. ಇದನ್ನು ತರಿಸಿ ಮನೆಯಲ್ಲಿ ಸದಾಕಾಲ ಇಟ್ಟರೆ, ಮೇಲೆ ಹೇಳಿದ ಯಾವತರದ ರೋಗಕ್ಕೂ ಎಡೆ ಸಿಕ್ಕುವದಿಲ್ಲ. ಅಮೃತಾಂಜನದಿಂದ ಗುಣವು ಕಂಡ ಬರದಿದ್ದರೆ ಹಣ ಹಿಂತಿರುಗಿ ಕೊಡಲ್ಪಡುವದು.

ಗಜಕರ್ಣದ ಮುಲಾಮು ಡಬ್ಬಿ ಒಂದಕ್ಕೆ ೬ ಆಣೆ, ವಿ. ಪಿ. ೧೧ ಆಣೆ—ಇದನ್ನು ಹಾಗಿಸವದರಿಂದ ಎಲ್ಲಾ ತರದ ಕಜ್ಜಿ ನಾಶವಾಗುವದು. ಮೂರು ಸಾರಿ ಹಾಗಿಸುವದರೊಳಗೆ ಗಜಕರ್ಣವು ಹೋಗುವದು. ಒಂದು ಸಾರಿ ಪರೀಕ್ಷಿಸಿ ನೋಡಿರಿ. ಕ್ರಯ ಕಮ್ಮಿ, ಗುಣ ಹೆಚ್ಚು. ಇದನ್ನು ಹಚ್ಚಿದಲ್ಲಿ ಉರಿ ಬರುವದಿಲ್ಲ, ಚರ್ಮ ಕಪ್ಪಾಗುವದಿಲ್ಲ. ಇದರಿಂದ ಗುಣವು ಕಂಡುಬರದಿದ್ದರೆ ಹಣ ಪರತು ಕೊಡಲ್ಪಡುವದು.

ಕೇಶವರ್ಧಿನೀ ತೈಲ—ಇದು ತಲೆಯ ಮಿದುಳನ್ನು ತಂಪುಮಾಡಿ ಅದಸನ್ನು ತೆಗದು ಕೂದಲು ಬೆಳಸುತ್ತದೆ. ಇದಕ್ಕೆ ಚಲೋ ಪರಿಮಳವು ಬರುತ್ತದೆ. ಮೂರು ಔನ್ಸು ಬುಡ್ಡಿಗೆ ೧-೦-೦

ಕಜ್ಜಿಮುಲಾಮು—ಇದು ಅತಿಶಯ ಅಗ್ಗವೂ ಗುಣದಾಯಕವೂ ಆಗಿರುತ್ತದೆ ೦-೩-೦

ಕಫಹಾರಿ—ಕೆಮ್ಮು, ದಮ್ಮು, ಕ್ಷಯ, ಕೊಂಬಿನಲ್ಲಿ ಕಫ ಮುಂತಾದ್ದಕ್ಕೆ ಇದು ಉತ್ತಮವಾದದ್ದು ಬಾಟ್ಲಿ ೧ಕ್ಕೆ ೧-೪-೦

ಜೀರ್ಣರಸಾಯನ—ಹೊಟ್ಟೆಯಲ್ಲಿ ಹಸಿವೆ ಆಗಲಿಕ್ಕೂ ನಾಲಿಗೆಗೆ ರುಚಿ ಬರಲಿಕ್ಕೂ ಉತ್ತಮವಾದದ್ದು ೦-೪-೦

ಜ್ವರಹಾರಿ—ಎಲ್ಲಾ ತರದ ಜ್ವರಗಳ ಮೇಲೆ ಈ ಔಷಧವು ಚಲೋದಾದದ್ದು ೦-೨-೦

ಸುಂದರೀ ತೈಲ—ಈ ತೈಲವನ್ನು ನಿರಂತರವಾಗಿ ಮೋರೆಯ ಮೇಲೆ ಹಾಗಿಸುವದರಿಂದ ಮೋರೆಯ ಮೇಲೆ ಇರುವ ಘಾಯದ ಕಲೆಗಳನ್ನೂ ಕಪ್ಪಾದ ಕಲಂಕಗಳನ್ನೂ ತೆಗದು ಚರ್ಮವನ್ನು ಮೃದುಮಾಡಿ ಚಲುವಿಕೆಯನ್ನು ಕೊಡುತ್ತದೆ. ಹೆಂಗಸರಿಗೂ ಗಂಡಸರಿಗೂ ಉತ್ತಮವಾದದ್ದು ೦-೮-೦

ದಂತಮಂಜನ—ಹಲ್ಲು ಸ್ವಚ್ಛವಾಗುತ್ತೆ, ಘಟ್ಟಿಯಾಗುತ್ತೆ, ವಾಸನೆಯನ್ನೂ ರಕ್ತವನ್ನೂ ನಿಲ್ಲಿಸುತ್ತದೆ. ಕ್ರಯ ಬಹಳ ಕಮ್ಮಿ ೦-೨-೦

ನೇತ್ರಾಂಜನ ೪ ಆಣೆ. ಪ್ರಮೇಹ ಟಿಕ್ ೧ ರೂಪಾಯಿ. ಕುಸುಮಾರಿ ಗುಟಿಕ ೧ ರೂಪಾಯಿ. ದಂತವಾತಹಾರಿ ೮ ಆಣೆ. ಕಫನಾಶಕ ಚೂರ್ಣ ೮ ಆಣೆ. ಚೇಳು ಕಡಿತದ ಮದ್ದು ೮ ಆಣೆ. ರೋಮನಾಶಕಾರಿ ೮ ಆಣೆ. ಕಸ್ತೂರಿಮಾತ್ರೆ ೧೦ ಆಣೆ. ತಾಂಬೂಲಗುಟಿಕ ೮ ಆಣೆ.

ಎಲ್ಲಾ ತರದ ಔಷಧಗಳೂ ಇರುವದರಿಂದ ಕೆಟಲಾಗು ಬೇಕಾದವರು ಬರದು ತರಿಸಿಕೊಳ್ಳಬಹುದು.

ವಿಲಿಯಂ ಮತ್ತು ಕಂಪೆನಿ, ಪ್ರೋಟರ್ಸ್, ಮುಂಬಯಿ.

ಚಳಿಕಾಲಕ್ಕೆ ಇದರ ಸಮಾನ ಉಂಟೇ,

30 3

೫೦೦ ಬಾಲಕಲಾ ಟೋಪಿಗಳು

೧ ಟೋಪಿಗೆ ಕ್ರಯ ೧—೧—೦

ಈ ಟೋಪಿ ಇದ್ದರೆ ರುಮಾಲ್ ಅಗತ್ಯವಿಲ್ಲ. ವಿ. ಪಿ. ಮೂಲಕ ಕಳುಹಿಸುತ್ತೇವೆ. ವಿಳಾಸ — ಸಿ. ರಘುನಾಥಕಾಮತ್

ಕೊಡಿಯಾಲಬೈಲ್ ಮಂಗಳೂರು

ಮುಂಬಯಿ ವ್ಯಾಪಾರಮಾಡಲಿಚ್ಛಿಸುವವರು

35 42

ಮುಂಬಯಿಯಲ್ಲಿ ಪ್ರತಿಯೊಂದು ಮಾಲಿನ ಥೋಕ ಅಳತೆ ಮತ್ತು ಮಾಲಿನ ವರ್ಣನೆ ಹಾಗೂ ಅನೇಕ ಉಪಯುಕ್ತ ಮಾಹಿತಿಯುರುವ ಕನ್ನಡ ಪುಸ್ತಕ—ಕ್ರಯ ೧೦ ಆಣೆ. ವಿ. ಪಿ. ಯಿಂದ ಕಳುಹಿಸುವೆವು. ಟಪಾಲು ಖರ್ಚು ಬೇರೆ. ಬುಕ್ಕು ಸೇಲರರಿಗೆ ಯೋಗ್ಯ ಕಮೀಷನ್ ದೊರೆಯುವದು. ಮತ್ತು ಲಿಂಗಾಯತ ಧರ್ಮಸಂಬಂಧ ವೀರಶೈವೋತ್ಪತ್ತಿ ಕ್ರಿಯಾಲಕ್ಷಣವೆಂಬುವ ಕನ್ನಡ ಪುಸ್ತಕ—ನಾಲ್ಕು ಆಣೆ. ಚಲೋ ಅಕ್ಷರದಿಂದ ಎಬಿಯರಿ ಹತ್ತಾ ಚನ್ನಬಸಪ್ಪ ಮಲ್ಲಪ್ಪ ವಾರದ, ಪೋಷ್ಟು ಮಾಂಡ್ವಿ, ಮುಂಬಯಿ.

ಉತ್ತಮವಾದ ಸಿದ್ಧೌಷಧಗಳು

I 11

ಆರ್ಸೇಯದಿಂದಲೂ ಬಂದ ನಮ್ಮ ಔಷಧಿಗಳು ಲಕ್ಷಾಂತರ ರೋಗಿಗಳಿಗೆ ಉಪಯೋಗಿಸಿ ಗುಣ ಕಂಡುಬಂದವುಗಳಾಗಿವೆ. ಅವುಗಳೆಲ್ಲಾ ಮೂಲಿಕೆಗಳಿಂದ ತಯಾರಾಗಿರುತ್ತೆ. ತಿಂಗಳೊಂದಕ್ಕೆ ಅನೇಕರು ಔಷಧಿ ಸೇವಿಸುತ್ತಲೂ ಇರುವಸಂಗತಿ ಎಲ್ಲರಿಗೂ ಗೊತ್ತಿದೆ.

(೧) ಸಂಜೀವಿನಿ ತೈಲ ಸಮಸ್ತ ಮಹಾರೋಗಗಳಿಗೂ ಕಾಲು ಸೀಸೆಗೆ ೧-೮-೦ (೨) ಭೃಂಗರಾಜ ತೈಲ ಎಲ್ಲಾ ವಿಧದ ಶಿರೋರೋಗಗಳಿಗೆ ಕಾಲು ಸೀಸೆಗೆ ೨-೧೦-೦ (೩) ಭೇದಿ ಎಣ್ಣೆ ಸುಖಪ್ರವರ್ತಿಯಾಗುವುದು ಕಾಲು ಸೀಸೆಗೆ ೦-೧೦-೦ (೪) ಮಹಾದೇವ ಧಾತುಶಕ್ತಿಯನ್ನುಂಟುಮಾಡಿ ಪುಷ್ಟಿಮಾಡುತ್ತೆ ಸೇರಿಗೆ ೨-೦-೦ (೫) ಸೌಭಾಗ್ಯ ಶಂಕರಾಮೃತ, ಲೇಹ ಇದರ ಸೇವನೆಯಿಂದ ಬಾಣಂತಿಸನ್ನಿ ಕ್ಷಯ ಮೊದಲಾದ ರೋಗಗಳನ್ನು ಪರಿಹರಿಸುತ್ತೆ. ಸೇರಿಗೆ ೨-೦-೦. ಹುಚ್ಚುನಾಯಿ, ಕೊಳಕ ಮಂಡಲ ಇವುಗಳಿಂದುಂಟಾದ ಪ್ರಬಲ ರೋಗಿಗಳಿಗೂ ಚಿಕಿತ್ಸೆಯು ದೊರೆಯುವದು.

ನಮ್ಮ ಕ್ಯಾಟಲಾಗು ತರಿಸಿ ನೋಡಿ—ಪಂಡಿತ ಕೃಷ್ಣಾಶೆಟ್ಟಪ್ಪ, ನಿಖಿಲ ರೋಗಾಪಹರಿ ವೈದ್ಯಶಾಲಾ, ದೇವಾಂಗಪೇಟೆ, ಮೈಸೂರು.

ಇಲ್ಲಿನೋಡಿ!

22 1

ತುಮಕೂರು ಡಿಸ್ಟ್ರಿಕ್ಟ್ ಇಲಾಖೆಯಲ್ಲಿ, ಯೂರೋಪಿಯನ್ ಮೇಲ್ವಿಚಾರಣೆಯಿಂದ, ಉತ್ತಮ ತರದ ಹಾಸನದ ಟೋಪಿಗಳು ಅತಿ ಶ್ರೇಷ್ಠವಾದ ಉಲ್‌ದಾರದಿಂದ ತಯಾರಾಗುತ್ತವೆ. ಕ್ರಯ ೧೦ ಆಣೆಯಿಂದ ೧ರೂ ೧೨ ಆಣೆವರಿಗೂ ದೊರಕುವವು. ಅಪೇಕ್ಷಿಸುವವರಿಗೆ ಕ್ರಯದ ಪಟ್ಟಿಯನ್ನು ರವಾನಿಸುವೆವು. ವಿಳಾಸ — ಮೇನೇಜರ್, ಹಾಸನದ ಟೋಪಿ ಕಾರ್ಖಾನೆ, ಮಿರ್ಷ ಇಲಾಖೆ ತುಮಕೂರು

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

11 8

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇರಾದದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು. (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಸೀದಾ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ.

ಸಾದ, ಕೆಂಪು, ಕಪ್ಪು, ಬೆರಿಕೆ ಕಾಫಿ ಟೋಪಿಗಳು ೧ ರೂ ೮ ಆ, ೧ ರೂ ೬ ಆ, ೧ ರೂ ೪ ಆ.

ರೇಶ್ಮೆ ಚುಕ್ಕಿಯುಳ್ಳ ಟೋಪಿಗಳು ೧ ರೂ ೮ ಆ, ೨ ರೂ

ದಾರದ ಟೋಪಿಗಳು ೧ ರೂ ೧೨ ಆ, ೧ ರೂ ೮ ಆ, ೧ ರೂ ೬ ಆ

ಉಸುಕಿನ ಟೋಪಿಗಳು ೧ ರೂ ೮ ಆ, ೧ ರೂ ೬ ಆ

ಕೂಸುಗಳ ಟೋಪಿ, ಸೂರ್ಥಿ ಮೋಜೋಡು, ಅರ್ಧ ಮೋಜೋಡು ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು.

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

1—3—907 ರಿಂದ 8—3—1907 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ರೋಗದ ಈ ವಾರ ಸಂಖ್ಯೆ	
ಬೆಂಗಳೂರ ಪಟ್ಟಣ	37	23	0	1
ಮೈಸೂರು ,,	24	19	0	[illegible]
ಬೆಂಗಳೂರು ಡಿಸ್ಟ್ರಿಕ್ಟ್	35	23	11	[illegible]
ಮೈಸೂರು ,,	2	2	0	[illegible]
ಕೋಲಾರ್ ,,	1	1	0	[illegible]
ಕೋಲಾರ್ ಚಿನ್ನದ ಗಣಿಗಳು	13	10	0	[illegible]
ತುಂಕೂರು ಡಿಸ್ಟ್ರಿಕ್ಟ್	0	0	0	[illegible]
ಹಾಸನ ,,	9	9	3	4
ಚಿತ್ರದುರ್ಗ ,,	0	0	12	6
ಕಡೂರ್ ,,	4	3	0	0
ಶಿವಮೊಗ್ಗ ,,	0	0	29	22
ಜುಮ್ಲಾ	115	90	74	35

ಶಾಲಿವಾಹನ ಶಕ ವರುಷಂಗಳು ೧೮೩೦ ನೇ ಪ್ಲವಂಗನಾಮ ಸಂವತ್ಸರದ ಅಧಿಕ ಚೈತ್ರ ಶುದ್ಧ ಸಪ್ತಮಿ ಗುರುವಾರದಿಂದ ಅಧಿಕ ಚೈತ್ರ ಶುದ್ಧ ತ್ರಯೋದಶಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೭ ನೇ ಇಸವಿ ಮಾರ್ಚಿ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಆಂಗ್ಲ ಮಾಸ
21	ಗುರು	ಸಪ್ತಮಿ	21 38	ಮೃ	51 28	8
22	ಶುಕ್ರ	ಅಷ್ಟಮಿ	29 19	ಆರ್ದ್ರಾ	57 18	9
23	ಶನಿ	ನವಮಿ	31 48	ಪು	60 0	10
24	ರವಿ ‡	ದಶಮಿ	36 21	ಪು	1 10	11
25	ಚಂದ್ರ ¶	ಏಕಾದಶಿ	13 10	ಪುಷ್ಯ	9 12	12
26	ಕುಜ	ದ್ವಾದಶಿ	45 50	ಶ್ಲೇ	11 16	13
27	ಬುಧ	ತ್ರಯೋದಶಿ	47 10	ಮಘ	17 50	14

ನಂಜನಗೂಡಿನಲ್ಲಿ ಶ್ರೀಕಂಠಮುಡಿ ಉತ್ಸವ ‡ ಮೇಲುಕೋಟೆಯಲ್ಲಿ ವೈರಮುಡಿ ಉತ್ಸವ ¶ ಸರ್ವತ್ರಏಕಾದಶಿ. ಪ್ರದೋಷ ನಂಜನಗೂಡಿನಲ್ಲಿ ಪಂಚರಥ, ತಿರುಮಕೂಡಲು ಅಗಸ್ತ್ಯೇಶ್ವರರಥ, ಶಿವನಸಮುದ್ರದ ಸೋಮೇಶ್ವರ ರಥ

ಪೇಟೇ ಧಾರಣೆ.

ದಿನಸು	ಮೈಸೂರು	ಬೆಂಗಳೂರ
ಕಡ್ಡೀ ಅಕ್ಕಿ ಪಲ್ಲಾ ೧ಕ್ಕೆ ರೂ	೯೩-೮-೦	೯೩ ೨ ೦
ಕಂಪೂರಿ ಅಕ್ಕಿ ಅವಲ್	೧೨-೯ ೦	೯೪ ೦ ೦
,, ,, ದುಯಂ	೧೨ ೧ ೦	೧೩ ೦ ೦
ಜಾವಾಳಿ ಅಕ್ಕಿ	೧೩-೬-೦	೧೪ ೧೨ ೦
ಸಣ್ಣಕ್ಕಿ ಅವಲ್	೧೫ ೦ ೦	೯೪ ೪ ೦
,, ದುಯಂ	೧೪-೦-೦	೯೩ ೮ ೦
ತೊಗರೀ ಬೇಳೆ ಪಲ್ಲಾ ೧ಕ್ಕೆ	೧೧ ೦ ೦	೯ ೨ ೮ ೦
,, ದುಯಂ	೧೦ ೧೨-೦	೧೨ ೦ ೦
ಹುರಿ ರಾಗಿ ಪಲ್ಲಾ ೧ಕ್ಕೆ	೭ ೪ ೦	೬ ೮ ೦
ಕಾರ್‍ರಾಗಿ	೬ ೦-೦	೬ ೪ ೦
ಜೋಳ	೫-೮-೦	೮ ೦-೦
ಕಡಲೆಹಿಂಡಿ ಪಲ್ಲಾ ೧ಕ್ಕೆ	೧೦ ೧-೦ ೦	೧೧ ೧೦-೦
ಬಿಳೀ ಅವರೆ	೯-೪-೦	೭ ೮ ೦
ಹೆಸರು	೧೦-೮-೦	೯ ೮-೦
ಉದ್ದು	೧-೨-೦ ೦	೧೦ ೧೨ ೦
ಕಡಲೆ	೧೦-೮ ೦	೧೦ ೦-೦
ಎಳ್ಳು ಸೇ ೧-೦೭ಕ್ಕೆ	೧೩-೦-೦	೨೨ ೪ ೦
ಹುರುಳಿ	೭ ೬-೦	೭ ೪ ೦
ಹರಳು ೧-೦೭ ಸೇರಿಗೆ	೯೯-೦-೦	೧೬-೮ ೦
ಸೀಗೆಕಾಯಿ ಮಣ ೧ಕ್ಕೆ	೨-೨ ೧	೦ ೧-೨ ೦
ಮೆಣಸಿನಕಾಯಿ	೩ ೪ ೦	೨ ೧-೨-೦
,, ದುಯಂ	೩-೦-೦	೨ ೮ ೦
ಬೆಲ್ಲ ದೊಡ್ಡ ಅಚ್ಚು	೪-೪-೦	ಮು ೧ ೭ ೦
ಒಳ್ಳೆಣ್ಣೆ ಮಣ ೧ಕ್ಕೆ	೪-೮-೦	೫ ೦ ೦
ಹರಳೆಣ್ಣೆ ,,	೨-೧-೨-೦	೫ ೨ ೦
ಕೊತ್ತುಂಬರಿ ಪಲ್ಲಾ ೧ಕ್ಕೆ	೯-೦ ೦	೭ ೨ ೦
ಉಪ್ಪು ,,	೫-೧೧ ೦	೬ ೧೦-೦
ಹುಣಸೇ ಹಣ್ಣು	೦-೧-೨-೦	೧ ೨-೦
,, ಹಳೇದು	೦-೮-೦	೦ ೧೫-೦
ತುಪ್ಪ ಮಣ ೧ಕ್ಕೆ	೧೬-೦ ೦	೧೩ ೧೦ ೦
ಸೀಮೆಯೆಣ್ಣೆ ಪಟ್ಟಿ ೧ಕ್ಕೆ	೫-೪ ೦	೪ ೦-೦
ತೆಂಗಿನಕಾಯಿ ೧೦೦ಕ್ಕೆ	೬-೮-೦	೬ ೪-೦
ಅಳಲೇಕಾಯಿ ಮಣ ೧ಕ್ಕೆ	೦ ೦-೦	೦ ೦-೦
ಅಂತ್ವಾಳದ ಕಾಯಿ ಮಣ ೧ಕ್ಕೆ	೦-೧-೨ ೦	೦ ೧೦ ೦
ಚಿನ್ನ (ಪೌನ್) ಕೆಂಪು	೧೫-೪-೦	೧೫ ೩ ೦
,, ,, ಹಸಿಮೆ	೧೫-೯೦-೦	೧೫ ೬ ೦
,, ,, ಗಟ್ಟಿ ತೊಲ ೧ಕ್ಕೆ	೨೩-೧-೨ ೦	೨೪ ೩ ೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	೮೫-೦-೦	೮೪ ೦-೦

Printed and Published by the Rev E W. THOMPSON M A, Proprietor and Manager, Wesleyan Mission Press Mysore 21/3/1907

REGISTERED
M. 20.

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೦ ಮೈಸೂರು—ಸನ್ ೧೯೦೨ ನೇ ಇಸವಿ ಮಾರ್ಚಿ ತಾರೀಖು ೨೭ ನೇ ಗುರುವಾರ. ಸಂಚಿಕೆ ೪೨



ದಿ ಸಿಟಿ ಸಿಲ್ವರ್ ವಾಚ್.

13-9

(ಚಿತ್ರದಲ್ಲಿ ಕಂಡದ್ದು.)

ಸ್ಟೆಂವು ಕೀಲಿ, "ಮುಕ್ಕಾಲು ಪ್ಲೇಟು", ಡೂಯಲ್ ಚಲನೆ; ಹಾಲ್‌ಮಾರ್ಕ್ ಉಳ್ಳ ಬೆಳ್ಳಿ ಅಲ್ಬರ್ಟ್ ಸರಪಣಿ ಮತ್ತು ಸೀಲ್ ಸಹಿತ; ಸಂಪೂರ್ಣ ದಮಾಸ್ ಪೆಟ್ಟಿಗೆಯಲ್ಲಿ ಭಾವುಕು. ಕ್ರಯ (ಹಿಂದುಸ್ಥಾನದ ಅಂಚೆ ವೆಚ್ಚ ಸೇರಿ) ರೂ. ೧೩-೧೪-೦.

ಮೇಲಾದ ಬೆಳ್ಳಿ ಗಡಿಯಾರಗಳು, ಮುಚ್ಚಳವಿಲ್ಲದ್ದು. ಕೀಲಿ ತಿರಿಗಿಸುವದೂ, ಕೀಲಿ ಇಲ್ಲದ್ದೂ. ಕ್ರಯ ರೂ. ೯-೬, ರೂ. ೧೧-೧೦, ೧೬-೮, ರೂ. ೨೨-೮.

ಬಲವಾದ ಬೆಳ್ಳಿ ಆರ್ಧ ಹಂಟರ್ ಗಡಿಯಾರಗಳು.—ಕ್ರಯ ೧೫, ರೂ. ೧೯-೧೪, ರೂ ೨೩-೪, ರೂ. ೨೮-೧೪.

ಬಲವಾದ ಫುಲ್ ಹಂಟರ್ ಗಡಿಯಾರಗಳು —ರೂ. ೧೩-೮, ರೂ. ೧೫, ರೂ. ೧೬-೮, ೧೯-೨, ರೂ. ೨೩-೧೦.

ಹಾಶ್ಯುಲರ್ ನಿಕ್ಕಲ್ ಗಡಿಯಾರಗಳು, ಸ್ವಲ್ಪ ಸುತ್ತುಳ್ಳವು, ಕೀಲಿ ಇಲ್ಲ, ಲೀವರ್ ಚಲನೆ, ಸುಂದರವಾದ ಒಳ್ಳೆ ನಮೂನೆ ಮುಚ್ಚಳ, ಸಂಚಿಕೆಯಾದ ಗಂಟೆ ತೋರಿಸುವದು, ಕ್ರಯ ರೂ. ೪-೮, ರೂ ೫-೪, ರೂ. ೬.

ಬಹಳ ತೆಳುವಾದ ಚಪ್ಪಟೆಯಾಗಿರುವ ಗಡಿಯಾರಗಳು:— ೧) ಕಪ್ಪು ಉಕ್ಕಿನ ಮುಚ್ಚಳ ಉಳ್ಳವು. ಕ್ರಯ ರೂ. ೧೦-೮,) ರೂ. ೧೬-೧೪ (೨) ಬೆಳ್ಳಿಯ ಮುಚ್ಚಳ ಉಳ್ಳವು: ಕ್ರಯ ರೂ. ೧೪-೧೦, ರೂ ೨೧

ಬೆಳ್ಳಿ ಅಲ್ಬರ್ಟ್ ಸರಪಣಿಗಳು. ಕ್ರಯ ರೂ. ೩-೧೫, ರೂ ೪-೮, ರೂ. ೫-೧೩, ರೂ ೭-೧, ರೂ. ೮-೧೦

ಚಿನ್ನ ತುಂಬಿದ ಸರಪಣಿಗಳು. ಕ್ರಯ ರೂ. ೬-೬, ರೂ. ೮-೧, ರೂ. ೯-೩.

ಈ ಕ್ರಯದಲ್ಲಿ ಹಿಂದುಸ್ಥಾನದ ಅಂಚೆ ಹಾಸಲೂ ಸೇರಿದೆ.

ಎಂಟು ದಿವಸಕ್ಕೊಮ್ಮೆ ಕೀಲಿ ತಿರಿಗಿಸುವಂಥಾ ವಾಚುಗಳೂ, ಇನ್ನೂ ಎಲ್ಲಾ ತರದ ತಯಾರಿ ಮತ್ತು ಚಿತ್ರಕೆಲಸ ಮಾಡಿದ ವಾಚುಗಳೂ, ವಿಲಾಯತಿಯಲ್ಲಿ ತಯಾರಾಗಲ್ಪಡುವಂಥಾ ಸಕಲ ವಿಧವಾದ ಸಾಮಾನುಗಳೂ, ಜವಾಹಿರಿ ನಗಗಳೂ ಕೇಳಿದವರಿಗೆಲ್ಲಾ ಕಳುಹಿಸಿಕೊಡುತ್ತೇವೆ.

ನಗದು ಹಣ ಕಳ್ಸಿ ಇಂಗ್ಲಿಷಿನಲ್ಲೇ ನಮಗೆ ಬರೆಯಬೇಕು.

ವಿಳಾಸ:—Messrs. Bride and Eastland, 29 to 35, City Road, London, E.C.

ಕೊಡಗು ದೇಶದ ಸ್ವಚ್ಛವಾದ ಉತ್ಕೃಷ್ಟ ಕಾಫಿಯು.

ಹುರಿಯದೆ ಇರುವದು ಅಥವಾ ಆಗತಾನೆ ಹುರಿದದ್ದು.
ಶುದ್ಧಮಾಡಿದ ಸ್ಥಳದಿಂದಲೆ ನೆಟ್ಟಗೆ ರವಾನಿಸಲ್ಪಡುವದು.

18-8

ವ್ಯಾಪಾರದ ಹೆಗ್ಗುರ್ತು

ಕಾಡುಕೋಣದ ತಲೆಯ ಮುದ್ರೆ ಇದೆ.

ಸಂಪೂರ್ಣವಾಗಿ ಯಂತ್ರದಿಂದಲೆ ಸಿದ್ಧಪಡಿಸಿದ್ದು. ಹೆಗ್ಗುರ್ತು ಉಳ್ಳ ವಿಲಾಸದ ಚೀಟಿ ಸುತ್ತಿಲ್ಲದಿರುವವು ಸ್ವಚ್ಛವಾದವುಗಳಲ್ಲ. ಅವು ನಮ್ಮವಲ್ಲ. ಏಜಂಟರುಗಳು ಬೇಕು. ಇಂಥವರಿಗೆ ಅಲಾಯದ ದರ ಬರೆಯುವವರು ದಯವಿಟ್ಟು ಈ ಪತ್ರಿಕೆಯ ಹೆಸರನ್ನು ಸೂಚಿಸಿ.

ವಿಳಾಸ —ಮ್ಯಾನೇಜರ್, ಮ್ಯಾಥಿಸನ್ಸ್ ಕಾಫಿ ವರ್ಕ್ಸ್, ಹುಣಸೂರು.

ಜ್ವರಹರಿ.

15-8



ಇದು ಸಾಧಾರಣ ಜ್ವರ, ಹಳೇಜ್ವರ, ಮೋರೇಜ್ವರ, ಪಿತ್ಥಜ್ವರ ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್. ಟಿ. ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨ ಔನ್ಸಿನ ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವ ಕಾರಿಂದ ದಯವಿಟ್ಟು ಇನ್ನೊಂದು ೨ ಔನ್ಸಿನ ಸೀಸೆಯನ್ನು ವಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದಾರೆ.

ಕ್ರಯ:—ಸೀಸ ೧ ಕ್ಕೆ ೮ ಆಣೆ, ೧ ರೂ., ೧—೮ ರೂ. ೧೨ ೨—೧೨ ಆ., ೧೧ ರೂ.; ಡಜನ್ನು ಸೀಸೆ ತರಿಸಿಕೊಂಡರೆ, ಪೋಸ್ಟೇಜು ಮಾಫಿ ಬಿಡಲಾಗುವದು.

****

ಓ ಮುಂ ಕ ರ್ಪೂ ರ.



ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಕಳೆ ಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳು ಒಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೇನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ. ಸೀಸೆಗಳಲ್ಲಿ ದೊರಕುವದು

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆಸ್ರಿರುವ ಓಮುಂ ಕರ್ಪೂರವನ್ನು ನಾನೂ ನನ್ನ ತಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಷ್ಠರಿಗೆ ಕೊಡುತ್ತೇವೆ ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧ ವೆಂತ ಬರೆದಿದಾರೆ.

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ:—

ಕೆಪ್ರಿಯಸ್ ಸೌತ್ ಇಂಡಿಯನ್ ಔಷಧಗಳ ಕಂಪೆನಿ,
ಕೇಶವ್ ಚೀಫ್ ಕ್ವೈರ್, ಮದ್ರಾಸ್.

ಅಪಾಯದ ಕುರುಹುಗಳು.

ಸ್ವಾಭಾವಿಕವಾಗಿ ಅಪಾಯ ಬರಬಹುದಾದ ಕುರುಹುಗಳನ್ನು ನೋಡಿಯುಕೊಳ್ಳುವದು

ಕೆಮ್ಮು ಅಪಾಯದ ಕುರುಹು!

ಶ್ವಾಸಕೋಶಗಳು ಬಲಹೀನವುಳ್ಳವುಗಳೆಂದು ಇದರಿಂದ ತೋರಿಸುತ್ತದೆ ಅವನ್ನು ಬೇಗನೇ ಬಲಪಡಿಸತಕ್ಕದ್ದು ಬಹು ಅವಶ್ಯಕ

SCOTT'S EMULSION.

31-2

(ಸ್ಕಾಟ್ಸ್ ಇಮಲ್ ಷನ್.

ಎಂಬೀ ಔಷಧವು ಈ ಕುರುಹುಗಳನ್ನು ಹೋಗಲಾಡಿಸುವದು.



ಬಲಹೀನವಾದ ಶ್ವಾಸಕೋಶಗಳನ್ನು ಬಲಪಡಿಸಿ, ಕೆಮ್ಮನ್ನು ನಿಲ್ಲಿಸುತ್ತದೆ

ಕೈಯಿಂದ ಮುಟ್ಟಿ ತಯಾರಿಸಿದ್ದಲ್ಲ

ಎಲ್ಲಾ ಔಷಧ ಮಾರಾಟಗಾರರಲ್ಲೂ ದೊರಕುತ್ತದೆ.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್
ಔಷಧಗಳ ಕಾರ್ಖಾನೆ,
ಲಂಡನ್, ಇಂಗ್ಲೆಂಡ್

ಮೀನು ಮನುಷ್ಯ ಇರುವ ಗುರ್ತನ್ನು ನೋಡಿಕೊಳ್ಳಿ.

ಬೆಲೆಗೆ ಬೆಳ್ಳಿ—ಗುಣಕ್ಕೆ ಭಂಗಾರ.

86 44

ಇಂಥಾ ಕಾಗದಗಳು ನಮ್ಮಲ್ಲಿಗೆ ಅನೇಕ ಬಂದಿವೆ.

ಮಿ॥ ವಾಮನಿಕಿನಿ, ಜವಳಿ ವರ್ತಕ, ಮಹೇಶ್ವರ, ಇವರು ಬರೆಯುವದು—"ಕ್ಲೆಮೆಂಟ್‌ಯವರ ಮ್ಯಾಜಿಕ್ ಬಾಂ ಬಹಳ ತೃಪ್ತಿಕರವಾದದ್ದೆಂದು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ಅದು ತುಂಬಾ ಗುಣಕೊಡುವಂಥಾದ್ದು ದಯವಿಟ್ಟು ಇನ್ನೂ ಮೂರು ಸೀಸೆಯನ್ನು ವಿ. ಪಿ. ಮೇಲೆ ಕಳುಹಿಸಿಕೊಡಿ." ಮಿ॥ ಜೆ. ಡಬ್ಲಿಯು. ಸಾಮ್ಯುಯಲ್, ಪೋಸ್ಟ್ ಮಾಸ್ಟರ್, ತ್ರಾವನ್ಕೋರ್, ಇವರು ಬರೆಯುವದು "ನಿಜವಾಗಿಯೂ ಇದು ಎಲ್ಲಾ ತರದ ನೋವುಗಳಿಗೂ ಅದ್ಭುತವಾದ ಔಷಧವೆನ್ನು ಪ್ರಶಕ್ತಿಸಂಶಯವಿಲ್ಲ." ಮಿಸೆಸ್ ಇ ಕ್ಯಾನ್‌ಸಿಂಗ್, ನೈಕಲ್ಲಾ, ಬೊಂಬಾಯಿ, ಇವರು ಬರೆಯುವದು—"ನಿಮ್ಮ ಮ್ಯಾಜಿಕ್ ಬಾಂ ಔಷಧವು ನನ್ನ ಕಾಲಿನ ಕಟ್ಟ ನೋವನ್ನು ಸಂಪೂರ್ಣವಾಗಿ ವಾಸಿಮಾಡಿದೆ." ಮಿಸೆಸ್ ಇ. ಪೇಸರ್, ರಂಗೂನ್, ಇವರು ಬರೆಯುವದು—"ನಾನು ಯಾವಾಗಲೂ ನಿಮ್ಮ ಕ್ಲೇಮೆಂಟ್ಸ್ ಮ್ಯಾಜಿಕ್ ಬಾಮನ್ನು ಗಂಟ್ಲು, ಎದೆಯ ನೋವುಗಳಿಗೆ ಉಪಯೋಗಿಸುತ್ತೇನೆ. ಅದರಿಂದ ನನಗೆ ಪ್ರತಿ ಸಲವೂ ಚನ್ನಾಗಿ ವಾಸಿಯಾಗಿದೆ ಈ ಔಷಧದಿಂದ ಪಾರ್ಶ್ವನೋವು, ಕೀಲುಗಳ ಬಾಧೆ, ಕಿಬ್ಬೊಟ್ಟೆನೋವು, ಬೆನ್ನೆಳೆಯುವುದು, ತಲೆನೋವು, ಕೆಮ್ಮು, ಕಿಲುಬುಗಳು, ಕೀಲುಗಳು ಕತ್ತರಿಸುವುದು, ಕೂರಳು ಊತ, ಕೈ ಕಾಲು ಒಡೆತ ಇವೆಲ್ಲಾ ಗುಣವಾಗುತ್ತವೆ. ಇದನ್ನು ಹಾಕಿ ಚನ್ನಾಗಿ ತಿಕ್ಕಿದರೆ ಬಾಧೆ ಪರಿಹಾರವಾಗುವುದು

ಕ್ರಯ:—೧ ಬಾಟ್ಲಿಗೆ ೧೨ ಆಣೆ, ಪೋಸ್ಟೇಜ್ ೪ ಆಣೆ ೬ ಬಾಟ್ಲಿಗೆ ಅಂಚೆವೆಚ್ಚ ಸೇರಿ ರೂ. ೨—೪ ಆಣೆ.

ನಮ್ಮ ವಿಳಾಸ:—ಎಫ್. ಡಬ್ಲಿಯು. ಆರ್,
ಸಿಮೆಟ್ರಿ ರೋಡ್, ವೇಪೇರಿ, ಮದರಾಸ್.

ಬಿಳಗಿ ರಾಜವೈದ್ಯರ ಬಹಳ ಖಾತ್ರಿಯಾದ ಔಷಧಗಳು.

6-12

ಸುಖದಾಯಿನೀ ಗುಳಿಗೆ:—ಇದರಿಂದ ಕೆಮ್ಮಿನ ಬಾಧೆ ಬಹು ಬೇಗನೆ ಗುಣಹೊಂದುವದು. ೧೦ ವರುಷದ ಮೇಲಿನ ಯಾವ ಪ್ರಾಯದವರಾದರೂ ಸೇವಿಸಬಹುದು. ಕ್ರಯ ೨೪ ಗುಳಿಗೆಗೆ ೧ ರೂಪಾಯಿ. ವಿ. ಪಿ ಚಾರ್ಜ ಆಣೆ ೪.

ಚಿಕ್ಕಹುಡುಗರ ಬಾಲಗ್ರಹದ ಔಷಧ:—ಜ್ವರಯುಕ್ತ ಅಥವಾ ಜ್ವರವಿಲ್ಲದೆ ಫಕ್ಕನೆ ಹುಟ್ಟುವ ಈ ಉಪಶತಿಗೆ ಇದರಿಂದ ಬೇಗನೆ ಗುಣಹುಟ್ಟುವದು. ಕ್ರಯ ೧ ಕುಪ್ಪಿಗೆ ೮ ಆಣೆ. ವಿ. ಪಿ. ೪ ಆಣೆ.

ಗಜಕರ್ಣದ ಮುಲಾಮು:—೨ ಯಾ ೩ ಆವರ್ತಿ ಇದನ್ನು ಹಚ್ಚುವದರಿಂದ ಎಂಥ ಕಠಿಣವಾದ ಗಜಕರ್ಣ (ಹುಳಕಡ್ಡಿ) ಇದ್ದರೂ ಗುಣಹೊಂದುವದು. ಕ್ರಯ ೧ ಡಬ್ಬಿಗೆ ೮ ಆಣೆ. ವಿ ಪಿ. ಚಾರ್ಜ ಆಣೆ ೪.

ಶತಮೂಲಿಕಾ ತೈಲವು:—ಜಕೀಬೊಕ್ಕೆ ಹರೀಕಜ್ಜಿ ತುರಿಗಜ್ಜಿ ನಾಗಜ್ಜಿ ಮುಂತಾದ ಅಬಾಲವೃದ್ಧರ ಚರ್ಮವ್ಯಾಧಿಯೂ ಗುಣಹೊಂದುವದು. ಕ್ರಯ ೧ ಔನ್ಸಿನ ಕುಪ್ಪಿಗೆ ೧೦ ಆಣೆ; ೨ ಔನ್ಸಿನ ಕುಪ್ಪಿಗೆ ೧ ರೂಪಾಯಿ. ವಿ ಪಿ ೫ ಆಣೆ.

ವಾಯುಹಾರಕ ತೈಲವು.—ಇದನ್ನು ಲೇಪಿಸಿದ ೫ ನಿಮಿಷದೊಳಗೆ ಸಂಧಿವಾತ, ಕಟವಾತ, ನ ಇತರ ವಾಯುಗಳ ನೋವು, ತಲೆನೋವು, ಚಿಕ್ಕಹುಡುಗರ ಉಬ್ಬಸ, ಕೆಮ್ಮು ಕೂಡ ಗುಣಹೊಂದುವದು ಕ್ರಯ ೧ ಕುಪ್ಪಿಗೆ ೧ ರೂಪಾಯಿ ವಿ. ಪಿ. ಚಾರ್ಜ ಆಣೆ ೪.

ಜ್ವರಗಡ್ಡೆಗೆ ಸುಧಾಬಿಂದು:—ಹೊಟ್ಟೆಯೊಳಗೆ ಸೇವಿಸಲಿಕ್ಕೆ. ಕ್ರಯ ೧ ಕುಪ್ಪಿಗೆ ೧೨ ಆಣೆ. ವಿ. ಪಿ. ಚಾರ್ಜ ಆಣೆ ೪

ಜ್ವರಗಡ್ಡೆಗೆ ಮುಲಾಮು:—ಬಾಹ್ಯಲೇಪನಕ್ಕೆ ಕ್ರಯ ಡಬ್ಬಿ ೧ಕ್ಕೆ ೧ ರೂಪಾಯಿ. ವಿ ಪಿ ಚಾರ್ಜ ಆಣೆ ೪.

೧ನೇ ನಂಬರ ಶೀತಜ್ವರ ರಿಪುಗಳಿಗೆ:—ಆಬಾಲವೃದ್ಧರಿಗೆ ಹುಟ್ಟುವ ಪ್ರತಿನಿತ್ಯದ ಮತ್ತು ೩ನೆ ವ ೪ನೆ ದಿವಸದ ಪಾಳಿಯಾಗಿ ಕೂಡ ಬರುವ ಶೀತಜ್ವರಕ್ಕೆ ಕ್ರಯ ೧ ಡಬ್ಬಿಗೆ ೧ ರೂಪಾಯಿ ವಿ. ಪಿ ಚಾರ್ಜ ಆಣೆ ೪

೨ನೇ ನಂಬರದ ಶೀತಜ್ವರ ರಿಪುಗುಳಿಗೆ:—ಮೇಲೆ ವಿವರಿಸಿದಂಥ ಶೀತಜ್ವರಗಳು ಕಾಲಾವಧಿಯಾಗಿ ಮೈಯಲ್ಲಿ ವ್ಯಾಪಿಸಿಕೊಂಡು ಹಳೆ ಜರಕ್ಕೆ ಬಿದ್ದು ಒದಗಿದ್ದವೆ ಕ್ರಯ ೧ ಡಬ್ಬಿಗೆ ೧ ರೂಪಾಯಿ. ವಿ ಪಿ ಚಾರ್ಜ ಆಣೆ ೪

ದಂತಶುದ್ಧಿಗೆ ಸುವಾಸಿಕ ಮಂಜನ.—ಎಲ್ಲ ಪ್ರಕಾರದ ಹಲ್ಲಿನ ವೇದನೆಗಳ ಉಪಶಮನಕ್ಕೆ. ಕ್ರಯ ೧ ಡಬ್ಬಿಗೆ ೮ ಆಣೆ ವಿ. ಪಿ. ೪ ಆಣೆ

ಪೀನಾಸಿಗೆ ಸುಧಾಚೂರ್ಣ:—ಮೂಗಿನ ಒಳಭಾಗದಲ್ಲಿ ಕ್ರಿಮಿ ಅಥವಾ ವ್ರಣವಾಗಿ ಅದರಿಂದ ದುರ್ವಾಸನೆಯೂ ರಸಿಗೆ ಅಥವಾ ನೀರಿನಂಥ ದ್ರವವು ಸ್ರವಿಸುವದಕ್ಕೆ. ಕ್ರಯ ೧ ಡಬ್ಬಿಗೆ ೧ ರೂಪಾಯಿ. ವಿ. ಪಿ. ಚಾರ್ಜ ಆಣೆ ೪

ನಯನರೋಗಕ್ಕೆ ಸುಖಾಂಜನವು:—ಹೊಸದಾಗಿ ಹುಟ್ಟಿದ ಅಥವಾ ಬಹುಕಾಲದಿಂದ ಇರುತ್ತಿದ್ದ ಕಣ್ಣಿನ ಎಲ್ಲಾ ಬಾಧೆಗಳು ಕಣ್ಣಿನಲ್ಲಿ ಕೆಂಪೇರುವಿಕೆ, ಕಣ್ಣಿನಿಂದ ನೀರು ಪಿಸರು ಬರುತ್ತಿರುವದು, ಬೆಳಕಿಗೆ ನೋಡಲಿಕ್ಕೆ ಆಗದೆ ಇರುವದು, ದೃಷ್ಟಿಮಾಂದ್ಯ, ಇತ್ಯಾದಿ ಎಲ್ಲ ಬಾಧೆಗಳೂ ಇದರಿಂದ ಬೇಗನೆ ಗುಣವಾಗುವದು ಕ್ರಯ ೧ ಡಬ್ಬಿಗೆ ೧ ರೂಪಾಯಿ. ವಿ ಪಿ. ಚಾರ್ಜ ಆಣೆ ೪.

ಕರ್ಣಸ್ರಾವಕ್ಕೆ ವನೌಷಧಿ ತೈಲವು.—ಚಿಕ್ಕ ಮತ್ತು ಥರ್ತ ಪ್ರಾಯದವರ ಕಿವಿಯಿಂದ ರಕ್ತ, ಕೀವು, ಅಥವಾ ನೀರಿನಂಥ ದ್ರವ ಹೊಸದಾಗಿ ಅಥವಾ ಬಹು ಕಾಲದಿಂದ ಸ್ರವಿಸುತ್ತಿದ್ದರೆ ಹಾಗೂ ನೋವು, ಕಳಕವು, ತುರಿಸುವಿಕೆಯೂ ಇರುತ್ತಿದ್ದರೆ ಇದರಿಂದ ಪೂರ್ಣ ಗುಣ ಹೊಂದುವದು. ಕ್ರಯ ೧ ಕುಪ್ಪಿಗೆ ೧ ರೂಪಾಯಿ ವಿ ಪಿ ೪.

ಚಿಕ್ಕ ಮಕ್ಕಳ ಮೈ ಪುಷ್ಟಿಗೆ ಬಾಲಸುಧಾರಸ.—ಚಿಕ್ಕ ಹುಡುಗರ ಅಶಕ್ತಿ, ಕೆಟ್ಟದ ಹಾಲಿನ ಅಥವಾ ಆಹಾರದ ವಾಂತಿ, ಅತಿಸಾರ, ಅನೇಕಾವರ್ತಿ ಮಲ ವಿಸರ್ಜನೆ, ಅಸ್ತಿಗತಜ್ವರ, ಕೆಮ್ಮು ಇತ್ಯಾದಿ ಅನೇಕ ಉಪಶತಿಗಳು ಗುಣವಾಗಿ ಮೈಯಲ್ಲಿ ರಕ್ತ ಮಾಂಸ ಅಸ್ತಿ ಇವುಗಳು ಬಲವಾಗಿ ಬೆಳೆದು ಚೆನ್ನಾಗಿ ಪುಷ್ಟಿಯಾಗುತ್ತಾರೆ ಕ್ರಯ ೧ ಕುಪ್ಪಿಗೆ ೧ ರೂಪಾಯಿ. ವಿ ಪಿ. ಚಾರ್ಜ ಆಣೆ ೬.

ಸಕ್ಕರೆ ಪಾಕ ಕಫಕ್ಷಯ ವ ಕೆಮ್ಮು ಮುಂತಾದವುಗಳಿಗೆ.—ಶ್ವಾಸ ಕೋಶದ ಎಲ್ಲಾ ಉಪಶತಿಗಳು ಅಂದರೆ ಹೊಸ ಮತ್ತು ಹಳೆ ತರ ಕೆಮ್ಮು ಕಳೆ ಸೆಗು ಉಚ್ಛ್ವಾಸ ಕಫ ಕ್ಷಯ ಅಸ್ತಿಜ್ವರ ಅಶಕ್ತಿ ಕ್ಷಯವ್ಯಾಧಿಯಲ್ಲಿ ಹುಟ್ಟುವ ಬೆವರು ಇತ್ಯಾದಿ ಬೇಗನೆ ಗುಣಹೊಂದುವದು ಕ್ರಯ ೧ ಕುಪ್ಪಿಗೆ ರೂ ೧—೪ ಆ ವಿ. ಪಿ ಚಾರ್ಜ ಆಣೆ ೯.

ನಯನ ಸುಖಕ್ಕೆ ಸೌವೀರಾಂಜನವು (ಕಪ್ಪು ಸುರ್ಮ):—ಬಿಸಲಲ್ಲಿ ತಿರುಗಾಟ ಮಾಡುವದರಿಂದ ಬೆಂಕಿಯ ಶಕೆಯಲ್ಲಿ ಕೂಡ್ರುವದರಿಂದ ರಾತ್ರಿಯಲ್ಲಿ ಜಾಗ್ರಣ ಮಾಡುವದರಿಂದ ಅಥವಾ ಹೆಚ್ಚು ಕಾಲ ಓದುವದರಿಂದ ಸಹಜ ಉಂಟಾಗುವ ಕಣ್ಣಿನ ಬಾಧೆಯು ಕೆಂಪೇರುವಿಕೆ ಉರಿ ನವೆ ಮುಂತಾದವು ಗುಣಹೊಂದಿ ಕಣ್ಣಿಗೆ ಸುಖವು ಪ್ರಾಪ್ತವಾಗುತ್ತದೆ ಕ್ರಯ ೧ ಡಬ್ಬಿಗೆ ೮ ಆಣೆ ವಿ ಪಿ. ಚಾರ್ಜ ಡಬ್ಬಿ ೧ ರಿಂದ ೧೨ ಡಬ್ಬಿಗೆ ೪ ಆಣೆ.

ವಾಂತಿಭೇದಿಗೆ ಮತ್ತು ಅತಿಸಾರಕ್ಕೆ ಕ್ಲೋರೋಡಾಯಿನ್:—ಈ ಉಪದ್ರಗಳಿಗೆ ಇದು ದಿವ್ಯ ಔಷಧವಾಗಿದೆ. ವಿಶ್ವಾಸವುಳ್ಳ ಒಂದು ಕಂಪನಿಯಿಂದ ಇದನ್ನು ನಾವು ಸಂಗ್ರಹಿಸುತ್ತೇವೆ. ಕ್ರಯ ೧ ಕುಪ್ಪಿಗೆ ೧೨ ಆಣೆ ವಿ ಪಿ ಚಾರ್ಜ ಆಣೆ ೪.

ಸೂಚನೆ.—ನಮ್ಮ ಔಷಧಗಳೊಳಗೆ ಅಪಾಯಕರವಾದ ಯಾವ ಜಿನಸಿನ ಮಿಶ್ರಣವೂ ಮಾಡಿಲ್ಲ. ಪ್ರತಿ ಒಂದು ಔಷಧಿಗೆ ಜೊತೆಯಲ್ಲಿ ಭಾಷೆಯ ಅನುಪಾನ ಪತ್ರವನ್ನು ಕಳುಹಿಸುತ್ತಿರುತ್ತೇವೆ. ಇನ್ನೂ ಅನೇಕ ಉತ್ತಮವಾದ ಔಷಧಗಳಗಾಗಿ ನಮ್ಮ ಕ್ಯಾಟಲಾಗು ತರಿಸಿಕೊಂಡು ಓದಿನೋಡಿ.

ನಮ್ಮ ಅಡ್ರೆಸು:—ಕರ್ನಾಟಕ ರಾಜ ವೈದ್ಯ ಮತ್ತು ಕಂಪನಿ, ಪೋಸ್ಟು ಬಿಳಗಿ, ಉತ್ತರ ಕನ್ನಡಾ ಜಿಲ್ಲಾ.

Post Bilgi, North Kanara District.

CHAMBERLAIN'S COLIC, CHOLERA AND DIARRHOEA REMEDY.

ಚೇಂಬರ್ಲಿನ್ ಯವರು ಹೊಟ್ಟೆಶೂಲೆ, ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು.

4-13



ಕೆಳ ಹೊಟ್ಟೆಯ ನೋವು, ಬರೀ ಭೇದಿಯಾಗುವುದು, ಆಮಶಂಕೆ, ವಾಂತಿಭೇದಿ ಉಪದ್ರ, ಕೀಲುಗಳ ನೋವು, ಹೊಟ್ಟೆಯ ನಾನಾ ತರದ ಶೂಲೆಗಳು—ಈ ರೋಗಗಳನ್ನೆಲ್ಲಾ ವಾಸಿಮಾಡುತ್ತದೆ. ಈ ಪರಮಾಶ್ಚರ್ಯಯುಕ್ತವಾದ ಔಷಧವು ಜನರನ್ನು ಬದುಕಿಸಿರುವಷ್ಟು ಮತ್ತು ನೋವನ್ನೂ ಬಾಧೆಯನ್ನೂ ನಿವಾರಣೆ ಮಾಡಿರುವಷ್ಟು ಪ್ರಪಂಚದಲ್ಲೇ ಇನ್ಯಾವ ಔಷಧವೂ ಮಾಡಿರುವುದಿಲ್ಲ.

ಜ್ಞಾಪಕದಲ್ಲಿಟ್ಟುಕೊಳ್ಳಿ—ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯೊಳಗಿರುವ ಎಲ್ಲಾ ತರದ ನೋವನ್ನೂ ನಿಲ್ಲಿಸಿಬಿಡುತ್ತದೆ ಬಹಳ ಕಠಿಣವಾದ ಭೇದಿಯೂ ಕೂಡ ಮೂರೇ ಹೊತ್ತಿನ ಈ ಔಷಧದಿಂದ ನಿರ್ಮೂಲವಾಗಿ ನಿಲ್ಲುತ್ತದೆ ಖಂಡಿತವಾಗಿ ವಾಸಿಮಾಡುವುದೇ ಇದರ ಗುಣ.

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಸ್ವಲ್ಪವೂ ಮುಟ್ಟಿದ್ದಲ್ಲ.

ಇದು ಎಲ್ಲೆಲ್ಲೂ ಬಿಕರಿಯಾಗುವುದು ಸಣ್ಣ ಕೇಸಿಗೆ ೧ ರೂಪಾಯಿ ದೊಡ್ಡ ಕೇಸಿಗೆ ೨ ರೂಪಾಯಿ

ತ್ವರಾಗಿ ಇಂಗ್ಲೀಷ್ ಕಲಿಯುವಿಕೆ.

3-2

ಕ್ರಯ ವಿ. ಪಿ ಖರ್ಚು ಸೇರಿ ೧—೬—೦. ಮುಗಿದುಹೋಗುತ್ತೆ ನಂತರ ಖಂಡಿತ ದೊರೆಯುವದಿಲ್ಲ ಬೇಗಬರೆಯಿರಿ ಇಂಗ್ಲೀಷನ್ನು ಓದುವದಕ್ಕೂ ಬರೆಯುವದಕ್ಕೂ ಮಾತನಾಡುವದಕ್ಕೂ ಬೋಧಕರ ಸಹಾಯವಿಲ್ಲದೆ ತಾನಾಗಿಯೇ ಕಲಿಸುವ ಅತ್ಯುತ್ತಮವಾದ ಪುಸ್ತಕವಿದೇ

ಸುಭಾಷಿತ ಸಮುದಾಯ.

ಸಂಸ್ಕೃತ ಶ್ಲೋಕಗಳಿಗೆ ಕನ್ನಡದಲ್ಲೂ ಇಂಗ್ಲೀಷಿನಲ್ಲೂ ಅರ್ಥ ಬರೆದಿರುತ್ತೆ ಕ್ರಯ ರೂ ೦—೬—೦ ವಿಳಾಸ —

ಬಿ. ಕೆ. ಮೂರ್ತಿ ಕಂಪನಿ, ಅತ್ತೂರ್ ಪೋಸ್ಟು.

ನೋಡಿರಿ.

ಯೋಗ್ಯ ಕ್ರಯ ಮತ್ತು ತಾಜಾ ಶಕ್ತು.

ಹಾರ್ಸ್ ಶೂ ಲಾಡ್ ಡಾರ.

135 11

೩,೦೦೦ ಕಾಸನ ದ ಟೋಪಿ ಗಳ ಲಿಯಾನ

ಸುಪೀರಿಯರ್ ಪೌಲ್ಡ್ ಡಾರ ಮಾತ್ರ

	ರೂ	ಆ	ಪೈ
೧ ಟೋಪಿ ಆಗುವ ಪೌಲ್ಡ್ ಡಾರದ ಕ್ರಯ	೨	೮	೦
೬೦ ತೊಲೆಯ ಒಂದು ಬಂಡಲ್ ಡಾರದ ಕ್ರಯ	೨	೪	೦
ಹಾರ್ಸ್ ಟೋಪಿ ಕೆಲಸ್ ಮ ಕೊಕ್ಕೆ ಸೂಜಿಗಳಿಕ್ಕೆ	೦	೧	೯
ಈ ದಾರದಲ್ಲಿ ಆದ ಟೋಪಿ ಸಹಾ ಒಕ್ಕೆ	೧೩	೩	೦

ವಿ ಪಿ ಯಿಂದಲೂ ರವಾನಿಸುತ್ತೇವೆ

ವಿಳಾಸ—ಸಿ. ರಘುನಾಥ ಕಾಮತ್,

ಪೌಲ್ಡ್ ಮರ್ಚಂಟ್, ಬೋಳಾರ, ಮಂಗಳೂರು.

ಪಾಳ್ಯದ ವೆಂಕಟಾಚಲ ಪಂಡಿತ, ಶ್ರೀಸೀತಾರಾಘವ ವೈದ್ಯಶಾಲಾ, ಕೊಳ್ಳೇಗಾಲ, ಇವರ ಸಿದ್ಧೌಷಧಗಳು

26 6

೧. ಗೋರೋಚನಾದಿ ಸಹಿತ ಕಸ್ತೂರಿ ಮಾತ್ರೆ.—ಈ ಮಾತ್ರೆಗಳನ್ನು ಹವಳದ ಭಸ್ಮ ಚಿನ್ನದ ರೇಖುಗಳ ಮಿಶ್ರದಿಂದ ತಯಾರಿಸಿದೆ ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಪ್ಲೇಗು ಜ್ವರ, ಛಳೀಜ್ವರ, ಜ್ವರ, ಅಗ್ನಿನಷ್ಟ, ನಿಶ್ಶಕ್ತಿ, ಕೆಮ್ಮು, ಹೊಟ್ಟೆ, ಕಿಬ್ಬೊಟ್ಟೆ, ಎದೆಗಳ ನೋವು ಇವಕ್ಕೆ ದಾರಿಗೂಡದು; ಮಕ್ಕಳ ಎಲ್ಲಾ ರೋಗಗಳಿಗೂ ಗುಣಕಾರಿ ನೀರು ಮತ್ತು ಹಾಲು ಬದಲಾವಣೆಗೆ ಒಳ್ಳೇದು ೨೦ ಮಾತ್ರೆಯುಳ್ಳ ಕುಪ್ಪಿಗೆ ೪ ಆಣೆ ಪೋಸ್ಟು ಮೂಲಕ ೫ ಸೀಸೆಗೆ ಒಂದು ಸೀಸೆ ಕೆಚ್ಚು ೧ ರಿಂದ ೬ ರ ವರೆಗೆ ಟ. ಖರ್ಚು ೪ ಆಣೆ

೩. ಎಸ್ ಸಿ. ಇ. ಸರ್ವಾಂಗಬಲಕಾರಿ.—ಕಾಫಿ, ಟೀ, ಕೋಕೋಗಳಿಗೆ ಬದಲಾಗಿ ಉಪಯೋಗಿಸುವ ಪುಡಿ. ಕಾಫಿ, ಟೀಗಳಲ್ಲಿರುವ ದುರ್ಗುಣಗಳು ಇದರಲ್ಲಿಲ್ಲ. ವಾಯು, ಎದೆ, ಅನ್ನಾಶಯ, ನರಗಳು, ಸಂದುಗಳು, ಮೆದುಳು, ಶಿರಸ್ಸು, ಮಲಬದ್ಧ, ಇವುಗಳ ಸಂಬಂಧವಾದ ಎಲ್ಲಾ ರೋಗಗಳನ್ನೂ ಚೆನ್ನಾಗಿಹೋಗಲಾಡಿಸಿ ಧಾತುಶಕ್ತಿಯನ್ನು ಕ್ರಮವಾಗಿ ವೃದ್ಧಿಪಡಿಸುವದು. ೨೦ ಲೋಟ ಕಾಫಿಯಾಗುವ ಡಬ್ಬಿ ೪ ಆಣೆ, ೬೦ ಲೋಟ ಆಗುವುದು ೭ ಆಣೆ

೨. ಪ್ಲೇಗಿಗೆ ಸಿದ್ಧೌಷಧ.—ಪ್ಲೇಗಿಗೆ ಔಷಧಿಯೇ ಇಲ್ಲವೆಂದು ಹೇಳದೆ ಈ ನಮ್ಮ ಔಷಧವನ್ನು ತರಿಸಿಕೊಡಿ ಖಂಡಿತ ಗುಣವಾಗುತ್ತದೆ ಯೋಗ್ಯತಾಪತ್ರಗಳನ್ನು ವಿವರಿಸಲು ಸ್ಥಳ ಸಾಲದು ಗಡ್ಡೆ ಮೊದಲಾದ ಬಾಧೆ ಇಲ್ಲದಂತೆ ಉದ್ಭವ ಔಷಧಿ ಸೇರಿ ಕ್ರಯ ೧ ರೂಪಾಯಿ.

೪ ಬಾಧಾಹಾರಿಣಿ.—ಪಟ್ಟು ಆಗದ ನೋವು, ವಾಯು, ತಲೆನೋವು, ಮುಂತಾದ್ದಕ್ಕೆ ಸಂಜೀವನ ಡಬ್ಬಿ ೫ ಆಣೆ

ವಿಳಾಸ—ಎಸ್ ಎಸ್. ಆರ್. ವೈದ್ಯಶಾಲಾ,

ಲಕ್ಷ್ಮೀವಿಲಾಸ ರೋಡ್, ಮೈಸೂರು.

ವೃತ್ತಾಂತ ಪತ್ರಿಕೆ.

ಸನ್ ೧೯೦೭ ನೇ ಇಸವಿ ಮಾರ್ಚಿ ತಾ|| ೨೮ ನೇ ಗುರುವಾರ.

ಮೈಸೂರು ಲೆಜಿಸ್ಲೆಟಿವ್ ಕೌನ್ಸಿಲ್ಲು.

ಮೈಸೂರು ಸಂಸ್ಥಾನದಲ್ಲಿ ಹೊಸ ಕಾನೂನುಗಳನ್ನು ಚರ್ಚಿಸಿ ಗೊತ್ತುಮಾಡುವುದಕ್ಕೆ ಶ್ರೀಮನ್ಮಹಾರಾಜರವರ ಗವರ್ನಮೆಂಟಿನವರು ಏರ್ಪಡಿಸಿರುವ ನೂತನವಾದ ಸಭೆಯ ಕೆಲವು ಮುಖ್ಯಾಂಶಗಳನ್ನು ಇನ್ನೊಂದು ಭಾಗದಲ್ಲಿ ಪ್ರಕಟಿಸಿದ್ದೇವೆ. ಈ ಏರ್ಪಾಡು ನಮ್ಮ ಸಂಸ್ಥಾನದ ಪ್ರಜೆಗಳಿಗೆ ಸಹಕಾರಿಯಾಗಿದೆಯೆಂದು ಒಪ್ಪಿಕೊಂಡು ಅದಕ್ಕಾಗಿ ಗವರ್ನಮೆಂಟಿನವರ ಕೂಡ ನಾವೂ ಸಂತೋಷಪಡುವೆವು ಇದುವರೆಗೆ ಏನಾಗಿತ್ತೆಂದರೆ, ಗವರ್ನಮೆಂಟಿನವರೇ ಕಾನೂನಿನ ಮಸೂದೆಯನ್ನು ತಯಾರುಮಾಡಿ, ಸರ್ಕಾರಿ ಗೆಜೆಟ್ಟಿನಲ್ಲಿ ಎರಡು ಮೂರು ತಿಂಗಳ ವರೆಗೆ ಪ್ರಕಟಿಸಿ, ಆ ತರುವಾಯ ಅದನ್ನು ಜಾರಿಗೆ ತರುತಲಿದ್ದರು. ಇಂಥಾ ಮಸೂದೆಯು ಪೂರ್ವೋತ್ತರವಾಗಲಿ, ಅದರ ವಿಷಯದಲ್ಲಿ ನಡೆದ ಚರ್ಚೆಗಳಾಗಲಿ ಪ್ರಜೆಗಳಿಗೆ ತಿಳಿಯುತ್ತಲೇ ಇರಲಿಲ್ಲವು. ಈ ಕೌನ್ಸಿಲ್ ಸಭೆಯ ಪ್ರಯೋಜನವೇನೆಂದರೆ, ಪ್ರತಿ ಒಂದು ಹೊಸ ಕಾನೂನೂ ಈ ಸಭೆಯಲ್ಲಿ ಚೆನ್ನಾಗಿ ಚರ್ಚೆಯಾಗುವುದು. ಚರ್ಚೆಮಾಡತಕ್ಕ ಮೆಂಬರುಗಳಲ್ಲಿ ಸರ್ಕಾರಿ ಉದ್ಯೋಗಸ್ಥರೇ ವಿಶೇಷವಾಗಿದ್ದಾಗ್ಯೂ ಪ್ರಜಾಪಕ್ಷದವರೂ ಕೆಲವರು ಸೇರಿರೋಣವರಿಂದಲೂ, ಯಾವ ಯಾವ ವಿಷಯಕ್ಕೆ ಯಾರು ಯಾರು ಏನೇನು ಹೇಗೆ ಚರ್ಚೆಮಾಡುವರೋ ಅದೆಲ್ಲಾ ಸಕಲ ಪ್ರಜೆಗಳಿಗೂ ತಿಳಿಯುವಂತೆ ಪ್ರಕಟವಾಗೋಣವರಿಂದಲೂ, ಈ ಸಭೆಯಿಂದ ವಿಶೇಷ ಪ್ರಯೋಜನವಾದೀತೆನ್ನುವುದಕ್ಕೆ ಸಂಶಯವಿಲ್ಲ.

ಹೊಸ ಕಾನೂನುಗಳ ವಿಷಯದಲ್ಲಿ ಪ್ರಜೆಗಳ ಕುಂದುಕೊರತೆಗಳನ್ನೂ ಅವರ ಕೋರಿಕೆ ಅಪೇಕ್ಷೆಗಳನ್ನೂ ಸರ್ಕಾರದವರು ತಿಳಿದುಕೊಳ್ಳುವುದು ಅವಶ್ಯವಾದ್ದರಿಂದ ಈ ಸಭೆಯ ಮೂಲಕ ಈ ಉದ್ದೇಶವು ಬಹುಮಟ್ಟಿಗೆ ನೆರವೇರುವುದೆಂದು ನಿರೀಕ್ಷಿಸಲ್ಪಟ್ಟಿದೆ. ಈ ಕೌನ್ಸಿಲ್‌ನಲ್ಲಿ ಸದ್ಯ ೯ ಮಂದಿ ಅಧಿಕಾರಿಗಳೂ ೪ ಮಂದಿ ಪ್ರಜಾಪಕ್ಷದ ಬೇರೋಜುಗಾರರೂ ಮೆಂಬರುಗಳಾಗಿ ನೇಮಕವಾಗಿದ್ದಾರೆ. ಗವರ್ನಮೆಂಟಿನವರು ಉದ್ದೇಶಪಡುವಷ್ಟು ಮೆಂಬರುಗಳನ್ನೂ ನೇಮಿಸಿದ ಪಕ್ಷದಲ್ಲಿ ೧೨ ಮಂದಿ ಉದ್ಯೋಗಸ್ಥರೂ ೬ ಜನ ಪ್ರಜಾಪಕ್ಷದವರೂ ಇದ್ದಾರು. ಇದರಿಂದ ಪ್ರಜೆಗಳ ಪಕ್ಷದವರ ಸಂಖ್ಯೆಯು ಬಹಳ ಸ್ವಲ್ಪವೆಂದು ಹೇಳಬಹುದಾಗಿದೆ ಇದೂ ಅಲ್ಲದೆ ಇವರನ್ನು ನೇಮಿಸುವವರೂ ಗವರ್ನಮೆಂಟಿನವರೇ. ಇತ್ತಲಾಗಿ ಮದರಾಸ್ ಬೊಂಬಾಯಿ ಕಲ್ಕತ್ತಾ ಈ ಮೊದಲಾದ ಕಡೆಗಳಲ್ಲಿ ಇಂಡಿಯಾ ಗವರ್ನಮೆಂಟಿನವರು ಇಂಥಾ ಸಭೆಯನ್ನು ಏರ್ಪಡಿಸಿರುವರಷ್ಟೆ. ಆ ಸಭೆಗಳಿಗೆ ಪ್ರಜಾಪಕ್ಷದ ಮೆಂಬರುಗಳನ್ನು ಪ್ರಜೆಗಳೇ ಚುನಾಯಿಸಿ ಕಳುಹಿಸತಕ್ಕದ್ದೆಂದು ಗವರ್ನಮೆಂಟಿನವರು ರಿಯಾಯತಿ ತೋರಿಸಿರುವರು. ಮೈಸೂರು ಗವರ್ನಮೆಂಟಿನವರೂ ಹಾಗೆಯೇ ಮೆಂಬರುಗಳನ್ನು ಚುನಾಯಿಸುವ ಹಕ್ಕನ್ನು ಇಲ್ಲಿನ ಪ್ರಜೆಗಳಿಗೆ ಕೊಡದೆ ತಾವೇ ವಹಿಸಿಕೊಂಡು ಇದ್ದಾರಲ್ಲಾ ಎಂದು ಆಕ್ಷೇಪಣೆ ಮಾಡಬಹುದು.

...ಥಾ ಹಕ್ಕು ಪ್ರಜೆಗಳಿಗೆ ಏಕಾಏಕಿ ವಹಿಸಲ್ಪಡುವುದು ...ಮಕರವಲ್ಲವೆಂದು ನಮಗೆ ತೋರುವುದು. ಹೀಗೆಯೇ ...ವುಕಾಲ ನಡೆದು, ಪ್ರಜೆಗಳು ವಿವೇಕಶಾಲಿಗಳಾಗಿ ಪರಾ...ವನ್ನೇ ಬಯಸುವಂಥಾ ದೇಶವತ್ಸಲರಾಗುತ್ತಾ ಬಂದ ...ಸೆಲ್ಲಾ ಗವರ್ನಮೆಂಟಿನವರು ಅವರಿಗೆ ರಿಯಾಯತಿಗ...ನ್ನು ತೋರಿಸಿ ಅಭಿವೃದ್ಧಿಗೆ ತಂದಾರೆನ್ನುವುದಕ್ಕೆ ಈಗ ...ಪಡಿಸಿರುವ ಮೇಲ್ಕಂಡ ಸಭೆಯೇ ದೃಷ್ಟಾಂತವಾಗಿದೆ ...ದೂ ಅಲ್ಲದೆ ಸರ್ಕಾರದವರು ಕ್ರಮೇಣ ಪ್ರಜಾಪಕ್ಷದ ...ಂಬರುಗಳ ಸಂಖ್ಯೆಯನ್ನೂ ಹೆಚ್ಚಿಸಬಹುದಾಗಿದೆ. ಕಣ್ಣು ...ಟ್ಟಿಕೊಂಡಿರತಕ್ಕವರನ್ನು ಓಡಿಸುವುದಕ್ಕಿಂತಲೂ ಕಣ್ಣು ...ಟ್ಟಿರುವವರನ್ನು ಓಡಿಸಿಕೊಂಡು ಹೋಗುವುದು ಕ್ಷೇಮ...ವು. ಪ್ರಜೆಗಳನ್ನು ಅಭಿವೃದ್ಧಿಗೆ ತರುವುದಕ್ಕೆ ಗವರ...ಂಟಿನವರು ಈಗ ಮಾಡಿರುವ ಅಲ್ಪಾರಂಭವೇ ಸಹಜ...ಗಿರುವುದು

...ನ್ಯಾಯವಾದದ್ದನ್ನು ಮಾಡುವವಕ್ಕೆ ಹೆದರಿಕೊಳ್ಳುವದು.

ನಾಳೆ ದಿನವು ಯೇಸುಕ್ರಿಸ್ತನು ಶಿಲುಬೆಯ ಮೇಲೆ ಸತ್ತ ದಿನವಾ...ಗಿದೆ. ಇದನ್ನು ಕ್ರೈಸ್ತರು ಶುಭ ಶುಕ್ರವಾರವೆಂದು ಕರೆಯು...ತ್ತಾರೆ. ಯೆಹೂದ್ಯರ ಯಾಜಕರೂ ಮತ್ತು ಅಧಿಕಾರಿಗಳೂ ಯೇಸು ...ಕ್ರಿಸ್ತನನ್ನು ಹಿಡಿದು ರೋಮಾಯರ ಅಧಿಪತಿಯಾದ ಪಿಲಾತನ ...ಬಳಿ ತಂದು ನಿಲ್ಲಿಸಿ ಕೈಸರನಿಗೆ ವಿರೋಧವಾಗಿ ಈ ಮನುಷ್ಯ...ನು ತನ್ನನ್ನು ಅರಸನೆಂದು ಹೇಳಿಕೊಂಡು ದಂಗೆಯನ್ನು ಎಬ್ಬಿಸು...ವನಾಗಿರುತ್ತಾನೆಂದು ದೂರು ಹೇಳಿದರು. ಪಿಲಾತನು ಯೆಹೂದ್ಯ...ರು ಹೇಳಿದ ದೂರುಗಳನ್ನು ಕೇಳಿ ಯೇಸುವನ್ನು ಅವುಗಳ ವಿಷಯ ...ಪ್ರಶ್ನಿಸಿದನು. ಪಿಲಾತನಿಗೆ ಯೇಸು ಪ್ರತ್ಯುತ್ತರವಾಗಿ ಹೇಳಿದ್ದೇ...ನಂದರೆ "ನನ್ನ ರಾಜ್ಯವು ಈ ಲೋಕದ್ದಲ್ಲ, ನನ್ನ ರಾಜ್ಯವು ಈ ಲೋ...ಕದ್ದಾಗಿದ್ದರೆ ನಾನು ಯೆಹೂದ್ಯರ ಕೈಯಲ್ಲಿ ಬೀಳದಂತೆ ನನ್ನ ಪರಿ...ವಾರದವರು ಕಾದಾಡುತ್ತಿದ್ದರು" ಎಂದು ಹೇಳಿದನು. ಯೇಸುಕ್ರಿ...ಸ್ತನು ಮರಣದಂಡನೆಗೆ ಪಾತ್ರವಾದ ಯಾವ ತಪ್ಪನ್ನೂ ಮಾಡಲಿಲ್ಲ...ವೆಂದೂ, ಯೆಹೂದ್ಯರು ಬರೀ ದ್ವೇಷದಿಂದ ಕೂಡಿದವರಾಗಿ ಈತನ...ನ್ನು ತನ್ನ ಮುಂದೆ ಕರೆದುಕೊಂಡು ಬಂದಿದ್ದಾರೆಂತಲೂ ಪಿಲಾತನು ...ಚೆನ್ನಾಗಿ ತಿಳಿದುಕೊಂಡಿದ್ದನು ಹಾಗೆ ತಿಳಿದುಕೊಂಡಿದ್ದರೂ ಅವನು ...ಜನರ ಗುಂಪಿಗೆ ಹೆದರಿಕೊಂಡು ಅವರನ್ನು ಮೆಚ್ಚಿಸುವದಕ್ಕೋಸ್ಕರ ...ಯೇಸುವನ್ನು ಬಿಟ್ಟುಬಿಡದೆ ಹೆರೋದನೆಂಬ ಮತ್ತೊಬ್ಬ ಅಧಿ...ಕಾರಿಯ ಬಳಿಗೆ ವಿಚಾರಣೆಗೋಸ್ಕರ ಕಳುಹಿಸಿಬಿಟ್ಟು ತಾನು ಯಾವ ...ತಪ್ಪಿಗೂ ಅಪರಾಧಕ್ಕೆ ಸಿಕ್ಕದಂತೆ ತಪ್ಪಿಸಿಕೊಳ್ಳುವ ಪ್ರಯತ್ನ ...ಮಾಡಿದನು. ಹೆರೋದನು ಯೇಸುವನ್ನು ವಿಚಾರಿಸಿ ಅವನಲ್ಲಿ ಯಾವ ...ತಪ್ಪನ್ನೂ ಕಾಣಲಿಲ್ಲವೆಂದು ಹೇಳಿ ಅವನನ್ನು ಪಿಲಾತನ ಬಳಿಗೆ ಪುನಃ ...ಕಳುಹಿಬಿಟ್ಟನು. ಪಿಲಾತನು ಯೇಸುವನ್ನು ಬಿಟ್ಟುಬಿಡದೆ ಆತನನ್ನು ...ಚಾಟಿಗಳಿಂದ ಹೊಡೆದು ಬಿಟ್ಟುಬಿಡುತ್ತೇನೆಂದು ಯೆಹೂದ್ಯರಿಗೆ ಹೇ...ಳಿದ. ಇದನ್ನು ಯೆಹೂದ್ಯರು ಕೇಳಿದಕೂಡಲೇ « ಅವನನ್ನು ಶಿಲು...ಬೆಗೆ ಹಾಕು, ಶಿಲುಬೆಗೆ ಹಾಕು » ಎಂದು ಕೂಗಿದರು ಜನಗಳ ಗುಂ...ಪಿಗೆ ಪಿಲಾತನು ಹೆದರಿ ಮತ್ತೊಂದು ಉಪಾಯವನ್ನು ಹುಡುಕಿದನು. ...ಅದೇನಂದರೆ ಯೆಹೂದ್ಯರಲ್ಲಿ ಪಸ್ಕ ಹಬ್ಬಕಾಲ ಬಂದಾಗ್ಯೆ ಒಬ್ಬ ಕೈ...ದಿಯನ್ನು ಕ್ಷಮಿಸುವ ಪದ್ಧತಿ ಇತ್ತು. ಆದ್ದರಿಂದ ಪಿಲಾತನು ...ಯೆಹೂದ್ಯರಿಗೆ ಕೇಳಿದ್ದೇನಂದರೆ « ಪಸ್ಕ ಹಬ್ಬದಲ್ಲಿ ನಾನು ಒಬ್ಬನ...ನ್ನು ನಿಮಗೆ ಬಿಟ್ಟುಕೊಡುವ ಪದ್ಧತಿ ಉಂಟಷ್ಟೆ? ನಾನು ಯೆಹೂ...ದ್ಯರ ಅರಸನನ್ನು ಬಿಟ್ಟುಕೊಡುವದು ನಿಮಗೆ ಇಷ್ಟವೋ » ಎಂದು ...ಅವರನ್ನು ಕೇಳಿದನು. ಅದಕ್ಕೆ ಅವರು ಮತ್ತಷ್ಟು ಹೆಚ್ಚಾಗಿ « ಅವ...ನನ್ನು ಶಿಲುಬೆಗೆ ಹಾಕು » ಎಂದು ಕೂಗಿದರು. ಪಿಲಾತನು ಜನಗಳಿಗೆ ...ಹೆದರಿ ಯೇಸುವನ್ನು ಮರಣದಂಡನೆಗೆ ಒಪ್ಪಿಸಿದನು.

...ನಾವು ಅನೇಕಾವೇಳೆಗಳಲ್ಲಿ ಜನಸಮುದಾಯಕ್ಕೆ ಹೆದರಿ ಅವರು ...ಮೆಚ್ಚಿಗೆಯಕ್ಕ ಅಭಿಮಾನವು ಎಲ್ಲಿ ತಪ್ಪಿಹೋಗುವದೋ ಎಂದು ...ಒಂದು ಸತ್ಯವಾದದ್ದನ್ನು ಮಾಡುವದಕ್ಕೆ ಹಿಂತೆಗೆಯುತ್ತಾರೆಂ...ಬುದು ಪಿಲಾತನ ನಡತೆಯಿಂದ ನಮಗೆ ಸ್ಪಷ್ಟವಾಗಿ ತೋರುತ್ತ...ದೆ. ಪಿಲಾತನ ಹೇಡಿತನವು ಈ ಕಾಲದ ಸಮಾಜ ಉಪದೇಶಿಗಳ ಚರಿ...ತ್ರೆಯಲ್ಲಿರುವದಲ್ಲವೇ! ನ್ಯಾಯವಾದದ್ದನ್ನು ತಿಳಿದುಕೊಂಡ ಕೂ...ಡಲೇ ಅದರಿಂದ ಒದಗತಕ್ಕ ಫಲಿತಾಂಶಗಳಿಗೆ ಹೆದರದೆ ಕೆಲಸಕ್ಕೆ ಕೈಹಾಕುವವರು ಸ್ಮರಣೆ ಸಾಧನೆ ಮಾಡುವವರು ನಮ್ಮೆಲ್ಲರ ಕರ್ತವ್ಯವಾಗಿರುವುದೆ ...ಹೇಡಿಯಾದ ಪಿಲಾತನಿಗೂ ಅವರ ಮುಂದೆ ನಿಂತಿರುವ ಕ್ರಿಸ್ತನಾದ ...ಯೇಸುವಿಗೂ ಎಷ್ಟೋ ವ್ಯತ್ಯಾಸವಿರುತ್ತದೆ. ಪಿಲಾತನು ಜನಸಮು...ದಾಯಕ್ಕೆ ಹೆದರಿ ಒಂದು ಕ್ಷಣದಲ್ಲಿ ಉನ್ನತಸ್ಥಾನವನ್ನು ಕಳೆದುಕೊಂಡ...ನು. ಯೇಸುವಾದರೋ ಸತ್ಯಕ್ಕೆ ತನ್ನ ಪ್ರಾಣವನ್ನು ಕೊಟ್ಟು ...ತನ್ನ ಶಿಷ್ಯರಿಗೂ ಮತ್ತು ಲೋಕಾಂತ್ಯದವರೆಗೂ ಜನರಿಂದ ಪೂಜಿಸಲ್ಪ...ಡುತ್ತಾನಲ್ಲವೇ! ಆತನು ಜನಗಳಿಗೆ ಹೆದರಿ ತನ್ನ ಪ್ರಾಣವನ್ನು ರಕ್ಷಿಸಿ...ಕೊಳ್ಳುವದಕ್ಕೆ ಅಸತ್ಯವನ್ನು ನುಡಿಯುವದಕ್ಕೂ ಅನ್ಯಾಯ ಮಾಡು...ವುದಕ್ಕೂ ಕಿಂಚಿತ್ತಾಗಿಯೂ ಒಡಂಬಡಲಿಲ್ಲವೆಂದು ನಾವು ತಿಳಿದು...ಕೊಳ್ಳುತ್ತೇವಲ್ಲವೇ?

...ಹಾಗಾದರೆ ಆತನು ನಾಶವಾದನೋ? ಆತನು ಲೋಕದಲ್ಲಿ ಮಾ...ಡಿದ ಕೆಲಸಗಳು ವ್ಯರ್ಥವಾಗಿ ಹೋದವೋ? ಎಂದಿಗೂ ಇಲ್ಲ. ಆತನು ...ಲೋಕವನ್ನು ಜಯಿಸಿದನು. ಆತನ ಮರಣದ ಮೂಲಕವೇ ಆತನು ...ಮಾಡಿದ ಕೆಲಸಗಳಿಗೆ ಭೂಲೋಕದಲ್ಲಿ ಹೇಳಕೂಡದಷ್ಟು ಜಯವಾ...ಯಿತು. ಆವನ ಸ್ವಂತ ಪ್ರಮಾದನೆಯಿಂದಲೇ ಇವರ ನಿಜತ್ವವು ನಮ...ಗೆ ತೋರಿಬರುವದು. ಹ್ಯಾಗಂದರೆ—ಆತನು ಒಂದು ಕಾಲದಲ್ಲಿ ಶಿಷ್ಯರಿಗೆ "ನಿಮಗೆ ನಿಜ ನಿಜವಾಗಿ ಹೇಳುತ್ತೇನೆ. ಗೋಧಿಯ ಕಾಳು ಭೂಮಿಯಲ್ಲಿ ಬಿದ್ದು ಸಾಯದಿದ್ದರೆ ಒಂದೇಯಾಗಿ ಉಳಿಯುವದು. ಸತ್ತರೆ ಬಹಳ ಫಲ ಕೊಡುವದು. ತನ್ನ ಪ್ರಾಣದ ಮೇಲೆ ಮಮತೆ ಇಡುವವನು ಅದನ್ನು ಕಳಕೊಳ್ಳುವನು. ಇಹಲೋಕದಲ್ಲಿ ತನ್ನ ಪ್ರಾಣವನ್ನು ಹಗೆ ಮಾಡುವವನು ನಿತ್ಯ ಜೀವಕ್ಕಾಗಿ ಅದನ್ನು ಕಾದುಕೊಳ್ಳುವನು. ಆದರೆ ನಾನು ಭೂಮಿಯಲ್ಲಿಂದ ಮೇಲಕ್ಕೆ ಎತ್ತಲ್ಪಟ್ಟಾಗ ಎಲ್ಲರನ್ನೂ ನನ್ನ ಬಳಿಗೆ ಎಳಕೊಳ್ಳುವೆನು" ಎಂದು ಹೇಳಿದನು ಈ ಪಾಪಲೋಕದಲ್ಲಿ ಸತ್ಯವನ್ನೂ ಪರೋಪಕಾರವನ್ನೂ ಮಾಡುವ ಜನರಿಗೆ ಯೇಸುಕ್ರಿಸ್ತನು ನಿಜವಾದ ಸ್ನೇಹಿತನಾಗಿರುತ್ತಾನೆ. ನಾವು ನ್ಯಾಯವಾದದ್ದನ್ನು ಮಾಡುವಾಗ್ಯೆ ತೊಂದರೆಗಳೂ ಹಿಂಸೆಗಳೂ ಒಂದರೆ ಯೇಸುಕ್ರಿಸ್ತನು ನಮ್ಮ ಸಂಗಡಿಗನಾಗಿರುತ್ತಾನೆಂಬುದನ್ನು ನಾವು ಮರೆಯಬಾರದು.

ಒಳದೇಶದ ವೃತ್ತಾಂತಗಳು.

ದೊಡ್ಡಬಳ್ಳಾಪುರದ ಸಬ್ ಡಿವಿಜನ್ ಮೆ॥ ಕೆ. ಆರ್. ಶ್ರೀನಿವಾಸೈಯಂಗಾರ್ರು ಎರಡು ಮಾಸ ರಜಾ ಪಡಕೊಳ್ಳುವುದರಿಂದ ಮೆ॥ ಎ ಕೃಷ್ಣಸ್ವಾಮೈಯ್ಯಂಗಾರ್ರು ಆ ಸಬ್‌ಡಿವಿಜನ್ ಛಾರ್ಜನ್ನು ವಹಿಸಿರುತ್ತಾರೆ

***

ಚಾಮರಾಜನಗರದ ತಾಲ್ಲೂಕು ಕುದೇರು ಗ್ರಾಮದಲ್ಲಿ ಕೆಲವು ಮುಖಂಡರು ಒಂದಾಗಿ ಸರ್ವಮಂಗಳ ಎಂಬೊಂದು ವಾಚಕಮಂದಿರವನ್ನು ಸ್ಥಾಪಿಸಿಕೊಂಡು ಈ ಸಂಸ್ಥಾನದಲ್ಲಿ ಪ್ರಕಟವಾಗುವ ವರ್ತಮಾನ ಪತ್ರಿಕೆಗಳನ್ನು ತರಿಸಿ ಓದುತ್ತಿದ್ದಾರೆಂದು ಕೇಳಿ ಸಂತೋಷಪಡುವೆವು

***

ಬೆಂಗಳೂರಿನಲ್ಲಿ ಹೆಂಡತಿಯನ್ನು ಕತ್ತರಿಸಿ ಹಾಕಿದ ವೆಂಕಟರಾಮೈಯ್ಯನೆಂಬ ೧೬—೧೭ ವರುಷದ ದೇವಾಂಗದ ಹುಡುಗನಿಗೆ ಸೆಷನ್ಸ್ ಜಡ್ಜರು ವಿಧಿಸಿದ್ದ ಮರಣದಂಡನೆಯನ್ನು ಛೀಫ್ ಕೋರ್ಟಿನ ಇಬ್ಬರು ಜಡ್ಜಿಗಳು ಬದಲಾಯಿಸಿ ಯಾವಜ್ಜೀವವೂ ಸಜಾ ಅನುಭವಿಸುವಂತೆ ಶಿಕ್ಷೆ ವಿಧಿಸಿದಾರೆ.

***

ಕಳೆದ ಭಾನುವಾರ ರಾತ್ರಿ ೯ ಗಂಟೆಗೆ ಸ್ಪೆಷಲ್ ರೈಲಿನಲ್ಲಿ ಶ್ರೀಮನ್ ಯುವರಾಜರವರೂ ಮಹಾಮಾತೃಶ್ರೀಯವರ ಮಹಾರಾಣಿಯವರೇ ಮೊದಲಾದ ಜನಾನಿಯವರೆಲ್ಲಾ ಬೆಂಗಳೂರು ಮುಖಾಂತರ ನೀಲಗಿರಿಗೆ ಪ್ರಯಾಣಮಾಡಿದರು ಮರುದಿನ ಗೌರವಾರ್ಥವಾದ ೨೧ ತೋಪುಗಳು ಹಾರಿಸಲ್ಪಟ್ಟವು.

***

ಕಳೆದ ೧೪ ನೇ ತಾ ಗುರುವಾರ ಮಧ್ಯಾಹ್ನ ಕೋಲಾರದ ಚಿನ್ನದ ಗಣಿಗಳ ಪೈಕಿ ನಂದಿದುರ್ಗಕ್ಕೂ ಮಾರಿಕುಪ್ಪಕ್ಕೂ ನಡುವೆ ಒಂದು ಗಣಿಯಲ್ಲಿ ಗಾಳಿಯು ಭಯಂಕರವಾದ ಶಬ್ದದೊಡನೆ ಹಾರಿ ಅನಾಹುತವಾಯಿತು ಅದರಿಂದ ಮೂರು ಜನ ಕೂಲಿಕಾರರು ಮೃತಪಟ್ಟರು ಐದು ಮಂದಿಗೆ ಗಾಯಗಳಾದವು.

***

ಪ್ರವಣಿ ಶಿರಗುಳಿಂದ ಸಾಲಿಗ್ರಾಮಕ್ಕೆ ಹೋಗಿ ವೈದ್ಯಮಾಡುತ್ತಾ ಜನರ ಪ್ರೀತಿಯನ್ನು ಸಂಪಾದಿಸಿಕೊಂಡಿದ್ದ ಮೆ॥ ಪಂಡಿತ ದೇವಚಂದ್ರಯ್ಯನವರೂ, ಒಂದು ಗಂಡು ಕೂಸೂ, ಅವರ ತಾಯಿಯೂ ಪ್ಲೇಗಿನಲ್ಲಿ ಕಾಲವಾದರೆಂದೂ ಆ ಪ್ರಾಂತ್ಯದಲ್ಲಿ ಅನೇಕರು ವ್ಯಸನಪಡುತ್ತಿದ್ದಾರೆಂದೂ ಒಬ್ಬ ಜಾತ್ಮದಾರರು ಬರೆಯುತ್ತಾರೆ

***

ಆಕ್ಟಿಂಗ್ ಬ್ರಿಟಿಷ್ ರೆಸಿಡೆಂಟ್ ಮೆ॥ ಎ. ವಿಲ್ಲಿಯಂಸ್‌ಯವರು ಪತ್ನಿ ಸಹಿತ ಕಳೆದ ಗುರುವಾರ ಬೆಳಿಗ್ಗೆ ರಾಜಧಾನಿಗೆ ದಯಮಾಡಿ, ಶ್ರೀಮನ್ ಮಹಾರಾಜರವರ ಭೇಟಿಮಾಡಿಕೊಂಡು ಮರುದಿನ ಸಾಯಂಕಾಲ ಬೆಂಗಳೂರನ್ನು ತಲಪಿದರು ಗೌರವಾರ್ಥವಾದ ೧೩ ತೋಪುಗಳು ಹಾರಿಸಲ್ಪಟ್ಟವು ದಿವಾನರೇ ಮೊದಲಾದವರು ರೆಸಿಡೆಂಟರನ್ನು ಎದುರುಗೊಂಡು ಸ್ವಾಗತ ಸ್ವೀಕರಿಸಿದರು.

***

ರಾಜಧಾನಿಯ ಮತ್ತು ಶಿಕಾರಿಪುರ್ ಮೊಹಲ್ಲೆಗಳಲ್ಲಿ ಡೆಪ್ಯುಟಿ ಕಮೀಷನರು ಜಾರಿಗೆ ತಂದಿರುವ ಕಂಪಲ್ಸರಿ ಸೆಗ್ರಿಗೇಷನ್ ಎಂಬ ಪ್ಲೇಗ್ ಬಲಾತ್ಕಾರದ ರೂಲನ್ನು ರದ್ದು ಮಾಡಿಸಿಕೊಟ್ಟು ಕಾಪಾಡಬೇಕೆಂದು ಆ ಎರಡು ಮೊಹಲ್ಲೆಗಳ ಪ್ರಜೆಗಳೂ ಸಭೆಗಳನ್ನು ನಡಿಸಿ, ಶ್ರೀಮನ್ ಮಹಾರಾಜರವರಿಗೆ ಅರಿಕೆ ಮಾಡಿಕೊಂಡಿದ್ದಾರೆ. ಈ ಅರ್ಜಿಗಳು ದಿವಾನರವರ ಬಳಿಗೆ ಹೋಗಿರುತ್ತವೆ ಆದರೆ ಡೆಪ್ಯುಟಿ ಕಮಿಷನರು ಇಷ್ಟಪಟ್ಟ ಹೊರತು ಈ ರೂಲನ್ನು ರದ್ದಾಗುವುದಿಲ್ಲವೆಂದು ತಿಳಿದು ಬಂದಿದೆ

***

ಕಳೆದ ಭಾನುವಾರ ಬೆಳಿಗ್ಗೆ ೬ ಗಂಟೆಗೆ ಸರಿಯಾಗಿ ಶ್ರೀಮನ್ ಮಹಾರಾಜರವರು ರಾಜಧಾನಿಯಿಂದ ಮೋಟಾರ್ ಗಾಡಿಯಲ್ಲಿ ಸೀಗೂರ್ ಘಾಟಿ ಮಾರ್ಗವಾಗಿ ನೀಲಗಿರಿ ಬೆಟ್ಟಕ್ಕೆ ದಯಮಾಡಿದರು ದಿವಾನರು, ಅರಸುಗಳು, ಅಧಿಕಾರಿಗಳು, ಮ್ಯುನಿಸಿಪಲ್ ಕಮಿಷನರುಗಳು ಮೊದಲಾದವರು ಕರೀಕಲ್ಲುತೊಟ್ಟಿಯಲ್ಲಿ ಹಾಜರಾಗಿದ್ದು ಶ್ರೀಮನ್ಮಹಾರಾಜರವರಿಗೆ ಸುಖಪ್ರಯಾಣವನ್ನು ಬಯಸಿದರು ಗೌರವಾರ್ಥವಾದ ೨೧ ತೋಪುಗಳು ಹಾರಿಸಲ್ಪಟ್ಟವು ಸೈನಿಕರೇ ಮೊದಲಾದವರು ಕಾದಿದ್ದು ಸನ್ಮಾನಮಾಡಿದರು

ಕಳೆದ ೧೫ ನೆ ತಾರೀಖಿಗೆ ಆಖೈರಾದ ಒಂದು ವಾರದಲ್ಲಿ ಮೈಸೂರು ಸಂಸ್ಥಾನಕ್ಕೆ ಸೇರಿದ ೬೩ ಸ್ಥಳಗಳಲ್ಲಿ ವಾಂತಿಭೇದಿ ಉಪದ್ರವು ೨೦೫ ಮಂದಿಗೆ ತಗಲಿತು, ೧೪೦ ಮಂದಿ ತೀರಿಹೋದರು. ಈ ಪೈಕಿ ಮೈಸೂರು ಪಟ್ಟಣದಲ್ಲಿ ೧೩—೫; ಬೆಂಗಳೂರು ಡಿಸ್ಟ್ರಿಕ್ಟ್ ೩—೨; ಮೈಸೂರ್ ಡಿಸ್ಟ್ರಿಕ್ಟ್ ೧೮೯—೧೪೦; ಈ ಪ್ರಕಾರ ಉಪದ್ರ ಆಗಲಿ ಕಾಲವಾಗಿದಾರೆ ಈ ಉಪದ್ರವು ಮೈಸೂರು ಡಿಸ್ಟ್ರಿಕ್ಟಿಗೆ ಸೇರಿದ ೬೧ ಗ್ರಾಮಗಳಲ್ಲೂ ಬೆಂಗಳೂರು ಡಿಸ್ಟ್ರಿಕ್ಟಿಗೆ ಸೇರಿದ ಎರಡು ಸ್ಥಳಗಳಲ್ಲೂ ವ್ಯಾಪಿಸಿಕೊಂಡಿದೆ.

***

ದಿವಾನ್ ಮೆ॥ ವಿ. ಪಿ. ಮಾಧವರಾಯರು ತಮ್ಮ ಪ್ರೈವೇಟ್ ಸೆಕ್ರೆಟರಿಯವರ ಸಮೇತ ಕಳೆದ ಭಾನುವಾರ ಬೆಳಿಗ್ಗೆ ೬॥ ಗಂಟೆಗೆ ಮೋಟಾರ್ ಬಂಡಿಯಲ್ಲಿ ರಾಜಧಾನಿಯಿಂದ ಹೊರಟು, ಸುಮಾರು ೧೧ ಗಂಟೆಗೆ ಬೆಂಗಳೂರನ್ನು ಸುರಕ್ಷಿತವಾಗಿ ತಲಪಿದರು ಅವರು ಈ ದಿನ ಬೆಳಿಗ್ಗೆ ಬೆಂಗಳೂರಿಂದ ಮೋಟಾರ್ ಗಾಡಿಯಲ್ಲಿ ಕುಣಿಗಲಿಗೆ ಹೋಗಿ ಸಾಯಂಕಾಲ ವಾಪಸು ಬಂದು, ನಾಳೆ ಸಾಯಂಕಾಲ ಬೆಂಗಳೂರಲ್ಲಿ ರೈಲ್ ಹತ್ತಿ ನೀಲಗಿರಿ ಬೆಟ್ಟಕ್ಕೆ ಪ್ರಯಾಣಮಾಡುವರು. ಅವರು ಅಲ್ಲಿಂದ ವಾಪಸು ಬರಲು ಒಂದು ತಿಂಗಳಾಗುವುದೆಂದು ಕೇಳುತ್ತೇವೆ.

ಕಾನೂನ್ ಮಾಡುವುದಕ್ಕೆ ಒಂದು ಕೌನ್ಸಿಲ್ಲು.

ಮೈಸೂರು ಗವರ್ನಮೆಂಟಿನ ಹೊಸ ಏರ್ಪಾಡು.

ಮೈಸೂರು ಗವರ್ನಮೆಂಟಿನವರು ಈ ಸಂಸ್ಥಾನದ ಪ್ರಜೆಗಳನ್ನು ಪರಿಪಾಲನೆ ಮಾಡುವುದಕ್ಕೆ ಅವಶ್ಯವಾದ ಕಾನೂನುಗಳನ್ನು ಮಾಡಿ ಜಾರಿಗೆ ತರಬೇಕಾಗಿರುವುದು ಈ ಭಾಗದಲ್ಲಿ ಪ್ರಜೆಗಳ ಅಭಿಪ್ರಾಯಗಳನ್ನು ತಿಳಿದು ಆ ರೀತಿ ಸರ್ವಸಮರ್ಪಕವಾದಂಥಾ ಕಾನೂನುಗಳನ್ನೇ ಮಾಡಬೇಕೆಂಬ ಉದ್ದೇಶದಿಂದ ಒಂದು ನ್ಯಾಯ ವಿಧಾಯಕ ಸಭೆಯನ್ನು ಕಲ್ಪಿಸುವುದಾಗಿ ಕಳೆದ ವಾರದ ಗೆಜೆಟ್ಟಿನಲ್ಲಿ ಪ್ರಕಟಿಸಿರುತ್ತಾರೆ ಈ ಸಭೆಯು ಇನ್ನು ಮೂರು ತಿಂಗಳಿಗೆ ಕಾರ್ಯಾರಂಭ ಮಾಡುವುದು. ಅದರಲ್ಲಿ ದಿವಾನರೂ ಕೌನ್ಸಿಲ್ ಮೆಂಬರುಗಳೂ ಅಲ್ಲದೆ, ಮೆಂಬರುಗಳೇ ಹತ್ತುಮಂದಿಗೆ ಕಡಿಮೆಯಾಗದೆಯೂ ಹದಿನೈದಕ್ಕೆ ಹೆಚ್ಚಾಗದೆಯೂ ನೇಮಕವಾಗುವರು ಅವರು ಎರಡು ವರುಷದ ತನಕ ಆ ಸಭೆಯ ಮೆಂಬರಾಗಿರುವರು ಒಟ್ಟು ಮೆಂಬರುಗಳ ಸಂಖ್ಯೆಯಲ್ಲಿ ಐದನೇ ಎರಡು ಭಾಗದಷ್ಟು ಮೆಂಬರುಗಳು ಬೇರೋದ್ಯೋಗದವರಲ್ಲಿ ದೊಡ್ಡಮನುಷ್ಯರಾಗಿಯೂ ವಿದ್ಯಾವಂತರಾಗಿಯೂ ಇರತಕ್ಕದ್ದು. ಗವರ್ನಮೆಂಟಿನವರೇ ಈ ಮೆಂಬರುಗಳನ್ನು ಚುನಾಯಿಸುತ್ತಾರೆ. ಸದ್ಯದಲ್ಲಿ ಈ ಸಭೆಯು ಹತ್ತುಮಂದಿ ಮೆಂಬರುಗಳನ್ನುಳ್ಳದ್ದಾಗಿರುವುದು. ಕ್ರಮೇಣ ಈ ಮೆಂಬರುಗಳನ್ನು ನೇಮಕ ಮಾಡುವ ಭಾಗದಲ್ಲೂ ಬೇರೆಬೇರೆ ಸಂಘಗಳಿಂದ ಪ್ರತಿನಿಧಿಗಳನ್ನು ಚುನಾಯಿಸುವ ಭಾಗದಲ್ಲೂ ಅನುಭವ ಕಂಡುಬಂದ ಪ್ರಕಾರ ಬದಲಾವಣೆಗಳನ್ನು ಮಾಡುವರು

ಎಲ್ಲಾ ಕಾನೂನುಗಳನ್ನೂ ಎಲ್ಲಾ ರೂಲ್ಸುಗಳನ್ನೂ ಮೊದಲು ಈ ನ್ಯಾಯವಿಧಾಯಕ ಸಭೆಯಲ್ಲಿ ಚರ್ಚೆ ಮಾಡಿ ನಿರ್ಧಾರಕ ಮಾಡುವರು ಶ್ರೀಮನ್ ಮಹಾರಾಜರವರು ಅದರಂತೆ ಒಪ್ಪಿ ಜಾರಿಗೆ ತರುವದಕ್ಕೂ ಕೂಡದೆಂದು ನಿರಾಕರಿಸುವದಕ್ಕೂ ಅಧಿಕಾರ ಉಳ್ಳವರಾಗಿರುತ್ತಾರೆ. ಅತುರವಾದ ಸಂದರ್ಭಗಳಲ್ಲಿ ಅವಶ್ಯವಾದಂಥಾ ಕಾನೂನನ್ನು ಗವರ್ನಮೆಂಟಿನವರೇ ಸ್ವತಂತ್ರಿಸಿ ಈ ಸಭೆಯ ಅನುಮತಿ ಪಡೆಯದೆ ಜಾರಿಗೆ ತರಬಹುದು ಆದರೆ ಇಂಥಾ ಕಾನೂನು ಆರುತಿಂಗಳ ತನಕ ಮಾತ್ರ ಜಾರಿಯಲ್ಲಿ, ಅಷ್ಟರೊಳಗೆ ಈ ಸಭೆಯಲ್ಲಿ ಚರ್ಚೆಯಾಗಿ ನಿರ್ಧಾರವಾಗಬೇಕು ಈ ಸಭೆಯಲ್ಲಿ ಸಾರ್ವಭೌಮರವರ ಗವರ್ನಮೆಂಟಿಗೂ ಮೈಸೂರು ಗವರ್ನಮೆಂಟಿಗೂ ಸಂಬಂಧಪಡುವ ವಿದ್ಯಮಾನಗಳನ್ನು ಕುರಿತಾಗಲಿ, ಗವರ್ನಮೆಂಟಿನವರೇ ಇತ್ಯರ್ಥಪಡಿಸಬೇಕೆಂದು ಶ್ರೀಮನ್ ಮಹಾರಾಜರವರು ವಿಧಾಯಕ ಮಾಡಿರುವ ಸಂಗತಿಗಳನ್ನು ಕುರಿತಾಗಲಿ, ಶ್ರೀಮನ್ ಮಹಾರಾಜರವರ ಗೃಹಕೃತ್ಯವೇ ಮೊದಲಾದ ವಿಷಯಗಳನ್ನು ಕುರಿತಾಗಲಿ ಮೆಂಬರುಗಳು ಚರ್ಚೆ ಮಾಡಕೂಡದೆಂದು ನಿಷೇಧ ಮಾಡಲ್ಪಟ್ಟಿದೆ

ಕೌನ್ಸಿಲ್ ಮೆಂಬರುಗಳು

ದಿವಾನರೂ ಕೌನ್ಸಿಲ್ ಮೆಂಬರುಗಳೂ ಅಲ್ಲದೆ ಮುಂದೆ ಹೇಳುವ ದೊಡ್ಡಮನುಷ್ಯರು ಮೈಸೂರು ನ್ಯಾಯವಿಧಾಯಕ ಮಂತ್ರಾಲೋಚನಾ ಸಭೆಯ ಮೆಂಬರುಗಳಾಗಿರತಕ್ಕದ್ದೆಂದು ಶ್ರೀಮನ್ಮಹಾರಾಜರವರ ಗವರ್ನಮೆಂಟಿನವರು ನೇಮಕಮಾಡಿರುತ್ತಾರೆ.—

೧ ಸರ್ಕಾರಿ ಉದ್ಯೋಗಸ್ಥರು --(೧) ರೆವಿನ್ಯೂ ಕಮಿಷನರ್ ಮೆ॥ ಎ ರಂಗಸ್ವಾಮೈಯ್ಯಂಗಾರ್ರು, (೨) ಎಕ್ಸೈಜ್ ಕಮಿಷನರ್ ಮತ್ತು ರೆಜಿಸ್ಟ್ರೇಷನ್ ಇಲಾಖೆ ಇನ್ಸ್‌ಪೆಕ್ಟರ್ ಜನರಲ್ ಮೆ॥ ಪಿ. ಎನ್ ಪೂರ್ಣಯ್ಯನವರು, (೩) ವಿದ್ಯಾಭ್ಯಾಸ ಇಲಾಖಾ ಇನ್ಸ್‌ಪೆಕ್ಟರ್ ಜನರಲ್ ಮೆ॥ ಎಚ್. ಜೆ ಭಾಭಾಯವರು, (೪) ಗವರ್ನಮೆಂಟ್ ಜನರಲ್ ರೆವಿನ್ಯೂ ಸೆಕ್ರೆಟರಿ ಮೆ॥ ಕೆ ಎಸ್. ಚಂದ್ರಶೇಖರ ಅಯ್ಯರವರು, (೫) ಡೆಪ್ಯುಟಿ ಕಮಿಷನರ್ ಮೆ॥ ಎಂ. ಕಾಂತರಾಜ್ ಅರಸಿನವರು, (೬) ಗವರ್ನಮೆಂಟ್ ಅಡ್ವೋಕೇಟ್ ಮೆ॥ ಎಸ್ ನಾರಾಯಣರಾಯರು

೨ ಉದ್ಯೋಗಸ್ಥರಲ್ಲದ ದೊಡ್ಡ ಮನುಷ್ಯರು.— (೧) ರಾಜಧರ್ಮ ಪ್ರವೀಣ ಮೆ॥ ಟಿ. ಆರ್. ಎ ತಂಬೂಚೆಟ್ಟಿಯವರು, (೨) ರಾಜಮಂತ್ರಪ್ರವೀಣ ಮೆ॥ ಸಿ. ಶ್ರೀನಿವಾಸೈಯ್ಯಂಗಾರ್ರು, (೩) ಮೈಸೂರು ಅಡ್ವೋಕೇಟ್ ಮೆ॥ ಎಂ. ಸಿ. ರಂಗೈಯ್ಯಂಗಾರ್ರು, (೪) ಬೆಂಗಳೂರು ಬ್ಯಾರಿಸ್ಟರ್ ಮೆ॥ ಬಿ. ನಾಗಪ್ಪನವರು.

ಇಂಡಿಯಾ ಗವರ್ನಮೆಂಟಿನ ಜಮಾಖರ್ಚು.

ಪ್ರಜೆಗಳಿಗೆ ಎರಡು ಹೊಸ ರಿಯಾಯತಿಗಳು.

ಉಪ್ಪು ಮತ್ತು ಅಂಚೆ

ಕಳೆದ ೨೦ ನೆ ತಾ ಬುಧವಾರ ಕಲ್ಕತ್ತಾ ಪಟ್ಟಣದಲ್ಲಿ ವೈಸ್‌ರಾಯಿಯವರು ಮಂತ್ರಾಲೋಚನಾ ಸಭೆಯಲ್ಲಿ ಇಂಡಿಯಾ ಗವರ್ನಮೆಂಟಿನ ಖಜಾನಾ ಛಕ್ಷಯವರಾದ ಮೆ॥ ಇ ಎನ್ ಬೇಕರ್‌ಯವರು ೧೯೦೬—೦೭ ನೆ ಸಾಲಿನ ಆದಾಯವ್ಯಯಗಳನ್ನೂ ೧೯೦೭—೦೮ ನೆ ಸಾಲಿನ ಜಮಾಖರ್ಚಿನ ಅಂದಾಜಾ ಪಟ್ಟಿಯನ್ನು ಬರೆದಂತು ಓದಿದರು ಅದರಲ್ಲಿ ಕಂಡು ಬರುವ ಮುಖ್ಯ ಬಾಬುಗಳನ್ನು ಇಲ್ಲಿ ತಿಳಿಯಪಡಿಸುವೆವು

೧೯೦೬—೦೭ ನೆ ಸಾಲಿನ ವಿಷಯಗಳು

ಇದೇ ಮಾರ್ಚಿ ಆಖೈರಿಗೆ ಮುಕ್ತಾಯವಾಗುವ ಸಾಲಿನಲ್ಲಿ ಇಂಡಿಯಾ ಗವರ್ನಮೆಂಟಿನ ರಾಜಾದಾಯವು ೭,೫೬,೨೬,೮೦೦ ಪೌಂಡು (ಪೌಂಡು ೧ ಕ್ಕೆ ೧೫ ರೂಪಾಯಿನಂತೆ ಲೆಕ್ಕಮಾಡಿಕೊಳ್ಳಬೇಕು) ಒಟ್ಟು ಖರ್ಚು ೭,೪೩೦೦,೮೦೦ ಪೌಂಡು ಅಂದರೆ ಒಟ್ಟಿನಲ್ಲಿ ಖರ್ಚು ಕಳೆದು ೧೩,೨೬,೦೦೦ ಪೌಂಡು ಶಿಲ್ಕು ಉಳಿಯಿತು ಈ ಸಾಲಿನ ಪ್ರಾರಂಭದಲ್ಲಿ ಹಿಂದುಸ್ಥಾನದ ಹಲವು ಭಾಗಗಳಲ್ಲಿ ವ್ಯವಸಾಯ ಕಾರ್ಯಗಳು ಅಷ್ಟು ತೃಪ್ತಿಕರವಾಗಿರಲಿಲ್ಲ. ಸುಮಾರು ಐದು ಲಕ್ಷ ಪ್ರಜೆಗಳು ಕ್ಷಾಮಪೀಡಿತರಾಗಿ ಸರ್ಕಾರದವರ ಪೋಷಣೆಯಲ್ಲಿದ್ದರು. ಆದರೆ ಕೆಲವು ಕಾಲದ ಮೇಲೆ ಕಾಲಸ್ಥಿತಿಯು ಸ್ವಲ್ಪಸ್ವಲ್ಪವಾಗಿ ಸುಭಿಕ್ಷವಾಗುತ್ತಾ ಬಂದಿತು ಕ್ಷಾಮ ಪಟ್ಟಿಯೆಂಬ ಗಾಬರಿಯು ನಿವಾರಣೆಯಾಯಿತು. ಯಾಕಂದರೆ ಎಲ್ಲಾ ಪ್ರದೇಶಗಳಲ್ಲೂ ತೃಪ್ತಿಕರವಾಗಿ ಮಳೆ ಬಂದು ವ್ಯವಸಾಯಕಾರ್ಯಗಳು ಚೆನ್ನಾಗಿ ನಡಿಸಲ್ಪಟ್ಟವು ಸಾಮಾನ್ಯವಾಗಿ ಎಲ್ಲೆಲ್ಲೂ ಫಸಲು ಬಹಳ ಚಾಲಸಾಯಿತು ವಿಶೇಷ ಕಷ್ಟವನ್ನನುಭವಿಸುತ್ತಿದ್ದ ಬೊಂಬಾಯಿ ಅಧಿಪತ್ಯದ ರೈತ ಪ್ರಜೆಗಳಿಗೆ ಒಳ್ಳೇ ಫಸಲು ಕೈಗೆ ಬಂದು ತೃಪ್ತಿಯನ್ನುಂಟುಮಾಡಿರುತ್ತದೆ ಜಮೀನ್ ಕಂದಾಯದ ಬಾಬಿನಲ್ಲಿ ಅಂದಾಜಾಗಿದ್ದ ಹುಟ್ಟುವಳಿ ಮೊಬಲಗಿಗಿಂತಲೂ ೨೦ ಲಕ್ಷ ರೂಪಾಯೂ, ಕಂದಾಯಗಳ ಬಾಬಿನಲ್ಲಿ ೧೦ ಲಕ್ಷ ರೂಪಾಯೂ, ಸ್ಟಾಂಪುಟಿನಲ್ಲಿ ೮ ಲಕ್ಷ ರೂಪಾಯೂ, ಅಫೀಂ ಬಾಬಿನಲ್ಲಿ ೧೧೬ ಲಕ್ಷ ರೂಪಾಯೂ, ನಿರಾವರಿ, ಬಡ್ಡಿ, ಮಾರ್ಗ, ಟಂಕಸಾಲೆ, ಈ ಬಾಬುಗಳಲ್ಲಿ ೧೪೮ ಲಕ್ಷ ರೂಪಾಯೂ ಚಾಲ್ತಿ ಸಾಲಿನಲ್ಲಿ ಉತ್ಪತ್ತಿಯಾಗಿರುತ್ತದೆ ಆದರೆ ಉಪ್ಪಿನ ಮೇಲೆ ಮತ್ತು ಸುಂಕ ಎಂಬೀ ಎರಡು ಬಾಬುಗಳ ಹುಟ್ಟುವಳಿ ಮಾತ್ರ ಅಂದಾಜು ಕಟ್ಟಿದ್ದುದಕ್ಕಿಂತಲೂ ೪೦ ಲಕ್ಷ ರೂಪಾಯಿ ಕಡಿಮೆಯಾಗಿರುವವು ರೈಲ್ವೆ ಬಾಬಿನಲ್ಲಿಯೂ ೪೬,೧೦೦ ಪೌಂಡು ಉತ್ಪತ್ತಿ ಹೆಚ್ಚಿದೆ

ಖರ್ಚುಬಾಬುಗಳಲ್ಲಿ ಗವರ್ನಮೆಂಟಿನವರು ಮೊದಲೇ ಅಂದಾಜು ಕಟ್ಟಿದ್ದುದಕ್ಕಿಂತಲೂ ೩೪ ಲಕ್ಷ ರೂಪಾಯಿ ಕಡಿಮೆಯಾಗಿರುತ್ತದೆ ಆದಕಾರಣ ಚಾಲ್ತಿ ವರುಷದ ಹುಟ್ಟುವಳಿಯಲ್ಲಿ ೧೯೯ ಲಕ್ಷ ರೂಪಾಯಿ ಶಿಲ್ಕು ಉಳಿಯುವುದೆಂದು ಹೇಳಬಹುದಾಗಿದೆ

೧೯೦೭—೦೮ ನೆ ಸಾಲಿನ ಅಂದಾಜಾ

ಮುಂದಿನ ತಿಂಗಳಿಂದ ಪ್ರಾರಂಭವಾಗುವ ಸಾಲಿನಲ್ಲಿ ಇಂಡಿಯಾ ಗವರ್ನಮೆಂಟಿಗೆ ೧೧,೨೫೨ ಲಕ್ಷ ರೂಪಾಯಿ ಉತ್ಪತ್ತಿಯಾಗಬಹುದೆಂತಲೂ ಅದರಲ್ಲಿ ೧೧,೧೩೬ ಲಕ್ಷ ರೂಪಾಯಿ ಖರ್ಚಾಗಿ ವರುಷಾಂತ್ಯದಲ್ಲಿ ೧೧೬ ಲಕ್ಷ ರೂಪಾಯಿ ಶಿಲ್ಕು ಉಳಿಯಬಹುದೆಂತಲೂ ಅಂದಾಜಾ ಪಟ್ಟಿಯನ್ನು ತಯಾರ್ಮಾಡಿರುತ್ತಾರೆ.

ರಿಯಾಯತಿಗಳು.

ಇಂಡಿಯಾ ಗವರ್ನಮೆಂಟಿಗೆ ಕಳೆದ ಮೂರು ಸಾಲುಗಳಿಂದಲೂ ಜಾಸ್ತಿ ಹುಟ್ಟುವಳಿಯೇ ಆಗುತ್ತಾ ಬಂದಿರುವುದರಿಂದ ಅವರು ಈ ರಾಷ್ಟ್ರದ ಪ್ರಜೆಗಳಿಂದ ವಸೂಲ್ಮಾಡುವ ತೆರಿಗೆ ಸುಂಕಗಳಲ್ಲಿ ಇನ್ನೂ ಸ್ವಲ್ಪ ಭಾಗವನ್ನು ಬಿಟ್ಟುಕೊಟ್ಟು, ಪ್ರಜೆಗಳ ಹೊರೆಯನ್ನು ಇಳಿಸಬೇಕೆಂದು ತೀರ್ಮಾನಮಾಡಿರುತ್ತಾರೆ. ಹಿಂದುಸ್ಥಾನದಲ್ಲಿ ಗವರ್ನಮೆಂಟನವರು ಈಗ ಉಪ್ಪಿನ ಮೇಲೆ ಬಂಗಾಳಾ ಮಣ ಒಂದಕ್ಕೆ ೧॥ ರೂಪಾಯಿನಂತೆ ಸುಂಕ ತಗೆದುಕೊಳ್ಳುತ್ತಿದ್ದರು ಬರ್ಮಾ ಅಧಿಪತ್ಯದಲ್ಲಿ ಮಾತ್ರ ಈ ಸುಂಕವು ಒಂದೇ ರೂಪಾಯಾಗಿದೆಯಾದ್ದರಿಂದ ಹಿಂದುಸ್ಥಾನದಲ್ಲೂ ಬರ್ಮಾದಲ್ಲಿರುವಂತೆಯೇ ಮಣಕ್ಕೆ ಒಂದೇ ರೂಪಾಯಿನಂತೆ ಸುಂಕ ತೆಗೆದುಕೊಳ್ಳುವುದಾಗಿಯೂ, ಜಾಸ್ತಿಯಾದ ಎಂಟಾಣೆ ಸುಂಕವನ್ನು ಕಳೆದ ೨೦ ನೆ ತಾರೀಖು ಲಾಗಾಯಿತು ವಜಾ ಮಾಡಿರುವುದಾಗಿಯೂ ಪ್ರಕಟಿಸಿರುತ್ತಾರೆ ಇದರಂತೆ ವಸೂಲಾಗುವ ಉಪ್ಪಿನ ಸುಂಕವನ್ನು ಈ ರಾಷ್ಟ್ರದ ಪ್ರಜೆಗಳಿಗೆಲ್ಲಾ ಹಂಚಿಹಾಕಿದಲ್ಲಿ ತಲೆಗೆ ವರುಷಕ್ಕೆ ೨।।। ಆಣೆಯಂತೆ ಬೀಳುವುದು ಈಗ ಐದು ವರುಷಗಳ ಹಿಂದೆ ಈ ಉಪ್ಪಿನ ಸುಂಕವು ಮಣಕ್ಕೆ ೨॥ ರೂಪಾಯಿ ಇದ್ದಿತು ಹೀಗೆ ಗವರ್ನಮೆಂಟನವರು ಈ ಸುಂಕವನ್ನು ಕಡಿಮೆಮಾಡಿದುದ್ದರಿಂದ ಅವರಿಗೆ ಪ್ರತಿ ವರುಷವೂ ೧೯೦ ಲಕ್ಷ ರೂಪಾಯಿನಂತೆ ನಷ್ಟವಾಗುತ್ತಿದೆ

ಅಫೀಂ ಬಾಬಿನ ಉತ್ಪತ್ತಿಯು ಇನ್ನು ಮುಂದೆ ಕ್ರಮೇಣ ಕಡಿಮೆಯಾಗುತ್ತಾ ಬರುವುದೆಂದು ಕಾಣುತ್ತದೆ ಚೀನಾ ಗವರ್ನಮೆಂಟಿನವರು ತಮ್ಮ ಚಕ್ರಾಧಿಪತ್ಯದಲ್ಲೆಲ್ಲಾ ಪ್ರಜೆಗಳು ಅಫೀಂ ಸೇವನೆಯನ್ನು ಸಂಪೂರ್ಣವಾಗಿ ಬಿಟ್ಟುಬಿಡುವಂತೆ ಏರ್ಪಾಡು ಮಾಡಿಕೊಂಡಿರೋಣದರಿಂದ ಇನ್ನುಮೇಲೆ ಹಿಂದುಸ್ಥಾನದ ಅಫೀಮು ಅಲ್ಲಿಗೆ ರಫ್ತಾಗುವುದೂ ಬಿಕರಿಯಾಗುವುದೂ ಕಡಿಮೆಯಾದೀತು ಬ್ರಿಟಿಷ್ ಗವರ್ನಮೆಂಟಿನವರು ಚೀಣಾದವರ ಉದ್ದೇಶವನ್ನು ನೆರವೇರಿಸಿಕೊಡುವುದಾಗಿ ತೋರುವುದರಿಂದ ಇಂಡಿಯಾ ಗವರ್ನಮೆಂಟಿನವರು ಈ ರಾಷ್ಟ್ರದಲ್ಲಿ ಅಫೀಂ ಬೆಳೆ ಮಾಡುವುದನ್ನೇ ಕಡಿಮೆಮಾಡಿರುತ್ತಾರೆ ಮುಂದಿನ ಸಾಲಿನಲ್ಲಿ ಒಂಬತ್ತು ಲಕ್ಷ ಬೈಗಾ ಜಮೀನಿನಲ್ಲಿ ಮಾತ್ರ ಅಫೀಂ ಬೆಳೆಯುವರು ಇದುವರೆಗೆ ತಿಂಗಳೊಂದಕ್ಕೆ ೪,೪೦೦ ಪೆಟ್ಟಿಗೆಗಳ ಅಫೀಮನ್ನು ಬಿಕರಿ ಮಾಡಿಸುತ್ತಿದ್ದುದನ್ನು ತಪ್ಪಿಸಿ, ಮುಂದಿನ ಸಾಲಿನಲ್ಲಿ ತಿಂಗಳಿಗೆ ೪,೦೦೦ ಪೆಟ್ಟಿಗೆಯನ್ನನ್ನೇ ಬಿಕರಿ ಮಾಡಬೇಕೆಂದು ಹುಕುಂ ಮಾಡಿರುತ್ತಾರೆ ಆದಕಾರಣ ಮುಂದಿನ ಸಾಲಿನಲ್ಲಿ ಅಫೀಂ ಉತ್ಪತ್ತಿಯು ೯೬ ಲಕ್ಷ ರೂಪಾಯಿ ಕಡಿಮೆಯಾಗುವುದೆಂದು ಅಂದಾಜಾ ಆಗಿದೆ.

ಇಂಡಿಯಾ ಗವರ್ನಮೆಂಟಿನವರು ಪ್ರಜೆಗಳಿಗೆ ಇನ್ನೊಂದು ಬಾಬಿನಲ್ಲಿ ರಿಯಾಯತಿ ತೋರಿಸಬೇಕೆಂದು ತೀರ್ಮಾನಿಸಿರುತ್ತಾರೆ. ಇದು ಅಷ್ಟೇನೂ ವಿಶೇಷವಾದ ರಿಯಾಯತಿಯಲ್ಲವಾದರೂ ಹಿಂದುಸ್ಥಾನದ ಬಹು ಪ್ರಜಾಕೋಟಿಗೆ ಅನ್ವಯಿಸುವುದಾಗಿರುತ್ತದೆನ್ನುವುದಕ್ಕೆ ಸಂಶಯವಿಲ್ಲ ಈ ರಿಯಾಯತಿಯು ಪೋಸ್ಟ್ (ಅಂಚೆ) ಇಲಾಖೆಗೆ ಸಂಬಂಧಪಟ್ಟಿರುತ್ತದೆ ಈಗ ಅರ್ಧ ಆಣೆಗೆ ಮುಕ್ಕಾಲು ತೋಲೆಯಷ್ಟು ಭಾರವಾದ ಕಾಗದಗಳನ್ನೂ ಒಂದು ಆಣೆಗೆ ೧॥ ತೊಲೆಯಷ್ಟು ಭಾರವಾದ ಕಾಗದಗಳನ್ನೂ ಅಂಚೆಯವರು ಅಂಗೀಕರಿಸಿ ಊರಿಂದೂರಿಗೆ ಸಾಗಿಸಿಕೊಂಡು ಹೋಗಿ ವಿಳಾಸದಾರರಿಗೆ ಪಾವತಿ ಮಾಡುತ್ತಿದ್ದರಷ್ಟೆ ಇನ್ನು ಮುಂದೆ ಅಂದರೆ ಬರುವ ಅಕ್ಟೋಬರ್ ೧ ರ ಲಾಗಾಯತು ಅರ್ಧ ಆಣೆಗೆ ಒಂದು ತೋಲಾ ತೂಗುವ ಕಾಗದವನ್ನೂ ಒಂದು ಆಣೆಗೆ ಮೂರು ತೋಲಾ ತೂಗುವ ಕಾಗದವನ್ನೂ ಅಂಗೀಕರಿಸಿ ವಿಳಾಸದಾರರಿಗೆ ಪಾವತಿಮಾಡುವುದಾಗಿ ನಿಷ್ಕರ್ಷೆಮಾಡಿರುವರು ಈ ರಿಯಾಯತಿಯಿಂದ ಇಂಡಿಯಾ ಗವರ್ನಮೆಂಟಿಗೆ ಅದೇ ಅಕ್ಟೋಬರ್ ಲಾಗಾಯತು ಮುಂದಿನ ಮಾರ್ಚಿ ಆಖೈರು ವರೆಗೆ ಉತ್ಪತ್ತಿಲ್ಲಿ ೧೧ ಲಕ್ಷ ರೂಪಾಯಿ ಕಡಿಮೆಯಾಗುವದು

ಸೈನ್ಯದ ಇಲಾಖೆಯ ಸಾಮಾನ್ಯವಾದ ಖರ್ಚು ಬಾಬುಗಳಲ್ಲಿ ೬೮ ಲಕ್ಷ ರೂಪಾಯನ್ನೂ ವಿಶೇಷವಾದ ಖರ್ಚು ಬಾಬುಗಳಲ್ಲಿ ೭೫ ಲಕ್ಷ ರೂಪಾಯನ್ನೂ ಕೋತಾಮಾಡಲಾಗಿದೆ ಆದರೂ ಆಹಾರ ಮೊದಲಾದ ದಿನಸಿ, ಹುಲ್ಲು ಮೊದಲಾದ ಸಾಮಗ್ರಿಗಳ ಬೆಲೆಯು ಈಗ ಹೆಚ್ಚಿರೋಣದರಿಂದ ಈ ಸೈನ್ಯದ ಇಲಾಖೆಗೆ ಮುಂದಿನ ಸಾಲಿನಲ್ಲಿ ಒಟ್ಟು ೩,೧೮೭ ಲಕ್ಷ ರೂಪಾಯಿ ಖರ್ಚಾಗುವಂತೆ ಅಂದಾಜು ಕಟ್ಟಿದೆ ಅತ್ತಲಾಗಿ ಪೋಲೀಸ್ ಇಲಾಖೆಯ ಶಿಬ್ಬಂದಿಯನ್ನು ಕ್ರಮಪಡಿಸಿ ಹೊಸ ಬದಲಾವಣೆಗಳನ್ನು ಮಾಡುವುದಕ್ಕೆ ಮುಂದಿನ ಸಾಲಿನಲ್ಲಿಯೂ ೩೦॥ ಲಕ್ಷ ರೂಪಾಯನ್ನು ತೆಗೆದಿಟ್ಟು ಖರ್ಚುಮಾಡುವರು

ಕಳೆದ ೧೯೦೬ ನೆ ಮಾರ್ಚಿ ಆಖೈರಿನಲ್ಲಿ ಹಿಂದುಸ್ಥಾನದಲ್ಲಿ ಒಟ್ಟು ೨೮,೬೦೪ ಮೈಲಿ ದೂರ ರೈಲ್ ರಸ್ತೆ ಹಾಕಿತ್ತು ಚಾಲ್ತಿ ಸಾಲಿನಲ್ಲಿ ಹೊಸದಾಗಿ ೯೫೨ ರೈಲ್ ರಸ್ತೆಯನ್ನು ಕಾಮಗಾರಿ ಮಾಡಿ ಸಿದ್ಧಪಡಿಸಿರುತ್ತೆ ಬರುವ ವರುಷ ೮೩೨ ಮೈಲಿ ರಸ್ತೆಯನ್ನು ತಯಾರ್ಮಾಡುವುದಕ್ಕೂ ಹಳೆಯ ರಸ್ತೆಗಳನ್ನು ದುರಸ್ತು ಮಾಡುವುದಕ್ಕೂ ಹೊಸದಾಗಿ ಸಾಮಾನು ಗಾಡಿಗಳನ್ನೂ ಎಂಜಿನ ಗಾಡಿಗಳನ್ನೂ ಕೊಂಡುತರಿಸುವುದಕ್ಕೂ ೧೩॥ ಕೋಟಿ ರೂಪಾಯಿ ಖರ್ಚು ಮಾಡುವಂತೆ ಗೊತ್ತುಮಾಡಿದಾರೆ

ತಾಂಬ್ರದ ನಾಣ್ಯಗಳಿಗೆ ಪ್ರತಿಯಾಗಿ ಇನ್ನು ಮುಂದೆ ಕಂಚಿನ ನಾಣ್ಯಗಳನ್ನು ಛಾಪಾ ಹಾಕಬೇಕೆಂದು ಕಾನೂನು ಆಗಿ ಜಾರಿಯಲ್ಲಿ ಬಂದುದರಿಂದ ಕಳೆದ ೧೯೦೬ ನೆ ಆಗಸ್ಟ್ ೧ ರ ಲಾಗಾಯಿತು ಹಿಂದುಸ್ಥಾನದ ಟಂಕಸಾಲೆಗಳಲ್ಲಿ ಕಳೆದ ಫೆಬ್ರವರಿ ಆಖೈರ್ ವರೆಗೆ ೧೪,೯೧,೫೦೦ ರೂಪಾಯಿನ ಕಂಚಿನ ನಾಣ್ಯಗಳು ಛಾಪಾ ಆಗಿ ಚಲಾವಣೆಗೆ ತರಲ್ಪಟ್ಟವು ಈ ಕಂಚಿನ ನಾಣ್ಯಗಳ ಆಕಾರವು ತಾಂಬ್ರದ ನಾಣ್ಯಗಳಂತೆಯೇ ಇದ್ದಾಗ್ಯೂ ತೂಕದಲ್ಲಿ ತಾಂಬ್ರದ ನಾಣ್ಯಗಳ ಮುಕ್ಕಾಲಷ್ಟಿರುತ್ತದೆ ಒಂದಾಣೆಯ ಬಾಬತು ಹೊಸನಾಣ್ಯಗಳನ್ನು ಇನ್ನೂ ಛಾಪಾ ಮಾಡುವುದಕ್ಕಾರಂಭವಾಗಿಲ್ಲ ಅದರ ಮೇಲೆ ಅಚ್ಚಾಗತಕ್ಕ ನಕ್ಷೆಯನ್ನು ಈಗತಾನೇ ಚಕ್ರವರ್ತಿ ಸಾರ್ವಭೌಮರವರು ಒಪ್ಪಿ ಸ್ಯಾಂಕ್ಷನ್ ಮಾಡಿರುತ್ತಾರೆ. ವಿಲಾಯತಿಯಿಂದ ಅದಕ್ಕೆ ಬೇಕಾಗುವ ಅಚ್ಚುಗಳೂ ಯಂತ್ರಗಳೂ ಹೊರಟುಬರುತ್ತಿರುವವಾದಕಾರಣ ಇಷ್ಟರಲ್ಲೇ ಈ ಹೊಸ ಒಂದಾಣೆಯ ನಿಕ್ಕಲ್ ಲೋಹದ ನಾಣ್ಯಗಳನ್ನು ಛಾಪಾ ಮಾಡಿ ಚಲಾವಣೆಗೆ ತರುವರೆಂದು ಕಾಣುವುದು. ಕಳೆದ ೧೨ ತಿಂಗಳಲ್ಲಿ ಬೊಂಬಾಯಿ ಮತ್ತು ಕಲ್ಕತ್ತೆಯ ಟಂಕಸಾಲೆಗಳು ೨,೫೭೦ ಲಕ್ಷ ರೂಪಾಯಿಗಳನ್ನು ಛಾಪಾ ಮಾಡಿರುತ್ತವೆ.

ಕ್ಷಾಮನಿವಾರಣೆಯ ಏರ್ಪಾಡು.

ಚಾಲ್ತಿ ವರ್ಷದ ಪ್ರಾರಂಭದಲ್ಲಿ ಹಿಂದುಸ್ಥಾನದ ಕ್ಷಾಮನಿವಾರಣೆಗೋಸ್ಕರ ಗವರ್ನಮೆಂಟನವರು ತೆಗೆದಿಟ್ಟ ಹಣವೆಲ್ಲಾ ಖಜಾನೆಗದೆ ಅದರಲ್ಲಿ ೨,೨೬,೫೦೦ ಪೌಂಡು ಉಳಿಕೊಂಡಿದೆ ಬಂಗಾಳಾದಲ್ಲಿ ಈ ಉದ್ದೇಶಕ್ಕೆ ಸರ್ಕಾರದವರು ೫೩,೩೦೦ ಪೌಂಡು ವಿನಿಯೋಗಿಸಬೇಕಾಯಿತು ಇನ್ನು ಮುಂದೆ ಇಂಡಿಯಾ ಗವರ್ನಮೆಂಟನವರು ಕ್ಷಾಮನಿವಾರಣೆಗೋಸ್ಕರ ಪ್ರತಿ ವರುಷವೂ ರಾಜಾದಾಯದಿಂದ ೨॥ ಲಕ್ಷ ಪೌಂಡಿನ ಪ್ರಕಾರ ತೆಗೆದಿಡುತ್ತಾ ಬಂದು, ಈ ಹಣವನ್ನು ಬೇರೆಬೇರೆ ಅಧಿಪತ್ಯಗಳಿಗೆ ಹಂಚಿಹಾಕಿ, ಆಯಾ ಅಧಿಪತ್ಯದಲ್ಲಿ ಸಂಭವಿಸುವ ಕ್ಷಾಮವನ್ನು ನಿವಾರಣೆಮಾಡಿಕೊಳ್ಳುವಂತೆ ಕೊಡುವರು ಇದರಿಂದ ಆಯಾ ಅಧಿಪತ್ಯಗಳವರಿಗೆ ತಮ್ಮ ಉತ್ಪತ್ತಿಯಲ್ಲೇ ಕ್ಷಾಮನಿವಾರಣೆಗೂ ಹಣ ಕೊಡತಕ್ಕದ್ದು ತಪ್ಪುವುದು ಮೇಲ್ಕಂಡ ೨॥ ಲಕ್ಷ ಪೌಂಡವನ್ನು ಹಂಚಿಹಾಕಿರುವ ಕ್ರಮ ಹೇಗೆಂದರೆ—

ಮದರಾಸ್	ಅಧಿಪತ್ಯ	೨,೫೦,೦೦೦	ರೂ
ಬೊಂಬಾಯಿ	,,	೧೩,೩೦,೦೦೦	,,
ಬಂಗಾಳ	,,	೨,೬೦,೦೦೦	,,
ಸಂಯುಕ್ತ	,,	೬ ೫೦,೦೦೦	,,
ಪಂಜಾಬ್	,,	೧,೪೦,೦೦೦	,,
ಮಧ್ಯ	,,	೧೨,೯೦,೭೦೦	,,

ವಿದ್ಯಾಭ್ಯಾಸವಿಚಾರವು

ಚಾಲ್ತಿ ಸಾಲಿನಲ್ಲಿ ವಿದ್ಯಾಭ್ಯಾಸದ ಇಲಾಖೆಗೆ ೨೩೦ ಲಕ್ಷ ರೂಪಾಯಿ ಸ್ಯಾಂಕ್ಷನ್ ಮಾಡಿದ್ದರು ಮುಂದಿನ ಸಾಲಿನಲ್ಲಿ ೩೦೩ ಲಕ್ಷ ರೂಪಾಯಿ ಖರ್ಚುಮಾಡುವಂತೆ ಗೊತ್ತುಮಾಡಿರುತ್ತಾರೆ ಈ ಹಣವನ್ನು ಎಲ್ಲಾ ಅಧಿಪತ್ಯಗಳಿಗೂ ಹಂಚಿಹಾಕುತ್ತಾರಾದಾಗ್ಯೂ ಬೊಂಬಾಯಿ ಮತ್ತು ಮದರಾಸ್ ಅಧಿಪತ್ಯಗಳೇ ಉಳಿದ ಎಲ್ಲಾ ಅಧಿಪತ್ಯಗಳಿಗಿಂತಲೂ ಹೆಚ್ಚು ಹಣವನ್ನು ಪಡೆಯುತ್ತವೆ ಬಾಲಪಾಠಶಾಲೆಗಳಲ್ಲಿ ಸಕಲ ಬಾಲಕರಿಗೂ ಫೀಜು ತೆಗೆದುಕೊಳ್ಳದೇನೇ ಪ್ರೈಮರಿ ವಿದ್ಯೆಯನ್ನು ಕಲಿಸುವ ಹೊಸ ಏರ್ಪಾಡಿಗಾಗಿ ಈಗ ಹಣವೇನೂ ತೆಗೆದಿಡವಿಲ್ಲ. ಈ ವಿಷಯದಲ್ಲಿ ಒಳದೇಶದ ಅಧಿಪತ್ಯದ ಅಧಿಕಾರಿಗಳು ತಮ್ಮ ಅಭಿಪ್ರಾಯವನ್ನು ಬರೆದು ತಿಳಿಸಿರುತ್ತಾರೆ ಅದನ್ನೆಲ್ಲಾ ಇಂಡಿಯಾ ಗವರ್ನಮೆಂಟಿನವರು ಕ್ರೋಢೀಕರಿಸಿ ವಿಲಾಯತಿಯಲ್ಲಿರುವ ಸ್ಟೇಟ್ ಸೆಕ್ರೆಟರಿಯವರ ಅನುಮತಿ ಪಡೆಯುವುದಕ್ಕಾಗಿ ಕಳುಹಿಸಲಾಗಿ ಅವರು ಈ ಏರ್ಪಾಡನ್ನು ಸ್ಯಾಂಕ್ಷನ್ ಮಾಡಿದ ಒಡನೆಯೇ ಈಗ ಇದಕ್ಕಾಗಿ ಹಣ ತೆಗೆದಿಡದಿದ್ದರೂ ಸಾಧ್ಯವಾದರೆ ಬೇರೆ ಹಣವನ್ನು ವಿನಿಯೋಗಿಸಿ ಅದನ್ನು ಜಾರಿಗೆ ತರುತ್ತಾರೆ

ನಿರಾವರಿ ಕಾಮಗಾರಿಗಳು

ಮುಂದಿನ ವರುಷ ದೊಡ್ಡದೊಡ್ಡ ನಿರಾವರಿ ಕಾಮಗಾರಿಗಳಿಗೋಸ್ಕರ ೧೨೫ ಲಕ್ಷ ರೂಪಾಯನ್ನೂ, ಸಣ್ಣ ಕಾಮಗಾರಿಗಳಿಗೆ ೫೦ ಲಕ್ಷ ರೂಪಾಯನ್ನೂ ತೆಗೆದಿಟ್ಟದಾರೆ

ಇದೇ ಹಿಂದುಸ್ಥಾನದ ಜಮಾಖರ್ಚಾಗಿರುತ್ತದೆ ಇದನ್ನು ನೋಡಲಾಗಿ ಈ ರಾಷ್ಟ್ರವು ದಿನೇದಿನೇ ಸುಭಿಕ್ಷವನ್ನೇ ಸೂಚಿಸುವುದಲ್ಲದೆ ಯಾವ ವಿಧವಾದ ಭೀತಿಗೂ ಕಳವಳಕ್ಕೂ ಅವಕಾಶವಿರುವುದಿಲ್ಲವೆಂದು ತಿಳಿಯಬಹುದು

ಇಂಡಿಯಾ ದೇಶದ ವೃತ್ತಾಂತಗಳು.

ಬಳ್ಳಾರಿಯಲ್ಲಿ ೧೬೫ ವರುಷ ತುಂಬಿದ ಒಬ್ಬ ಮುಹಮ್ಮದೀಯ ಹೆಂಗಸು ಕಳೆದ ವಾರ ಕಾಲವಾದಳು

***

ಕಲ್ಕತ್ತಾ ಪಟ್ಟಣದಲ್ಲಿರುವ ಅರ್ಬತ್ನಾಟ್ ಕಂಪನಿಯ ನಾರಿನ ಕಾರ್ಖಾನೆಗೆ ಬೆಂಕಿಬಿದ್ದು ಸುಮಾರು ಎರಡು ಲಕ್ಷ ರೂಪಾಯಿನ ನಾರಿನ ಗಟ್ಟುಗಳು ನಷ್ಟವಾಗಿದೆ

***

ದಿವಾನ್ ಮೆ॥ ಪಟ್ಟಾಬಿರಾಮರಾಯರು ರಜದಮೇಲೆ ಹೋದದ್ದರಿಂದ ಛೀಫ್ ಜಡ್ಜ್ ಮೆ॥ ಲಾಳ್‌ಯವರು ಕೊಚ್ಚಿಸಂಸ್ಥಾನದ ದಿವಾನಗಿರಿಯ ಛಾರ್ಜನ್ನು ವಹಿಸಿಕೊಂಡಿದಾರೆ

***

ಕಳೆದ ಭಾನುವಾರ ಪಿಷಾವರ್ ಪಟ್ಟಣದ ಅಂಗಡೀ ಬೀದಿಯಲ್ಲಿ ಬೆಂಕಿ ಬಿದ್ದು ಸಣ್ಣ ಸಣ್ಣ ಅಂಗಡಿಗಳು ಸುಮಾರು ೫೦ ಕ್ಕಿಂತಲು ಹೆಚ್ಚಾಗಿಯೇ ಉರಿದು ನೆಲಸಮವಾದವು

***

ಕಲ್ಕತ್ತೆಯ ಹತ್ತಿರ ನಾಯಹಟ್ಟಿಗ್ರಾಮದಲ್ಲಿ ೩೦ ಮಂದಿ ಕಳ್ಳರು ಇಬ್ಬರು ಸಾಹುಕಾರರ ಮನೆಗಳಿಗೆ ನುಗ್ಗಿ ಮನೆಯವರನ್ನೆಲ್ಲಾ ಗಾಯಮಾಡಿ, ನಗನಾಣ್ಯಗಳನ್ನೆಲ್ಲಾ ಅಪಹರಿಸಿಕೊಂಡು ಹೋದರು

***

ಗಯಾ ಪಟ್ಟಣದ ಬಜಾರ್ ಬೀದಿಯಲ್ಲಿ ಸೀಮೆಯೆಣ್ಣೆ ಪಟ್ಟಿಗಗಳು ತುಂಬಿದ್ದ ಅಂಗಡಿಯು ಹತ್ತಿಕೊಂಡು ಅಕ್ಕಪಕ್ಕ ಇದ್ದ ೧೦—೧೨ ಅಂಗಡಿಗಳ ಸಹಿತ ಸುಟ್ಟು ಲಕ್ಷಾಂತರ ರೂಪಾಯಿ ನಷ್ಟವಾಯಿತು

***

ಬೊಂಬಾಯಿ ಪಟ್ಟಣದ ಮಾಣೆಕಜಿ ಪಟಿಟ್‌ಯವರ ನೂಲಿನ ಕಾರ್ಖಾನೆಯಲ್ಲಿ ನೆಯ್ಗೆಯವರು ಯಂತ್ರಗಳನ್ನು ಉಜ್ಜಿ ಚೊಕ್ಕಟ ಮಾಡುವುದಿಲ್ಲವೆಂದು ಹಟಹಿಡಿದು ಸುಮಾರು ೪,೦೦೦ ಕೂಲಿಯವರು ಕೆಲಸಬಿಟ್ಟಿರುತ್ತಾರೆ

***

ಆಫ್ಘಾನಿಸ್ಥಾನದ ಅಮೀರ್ ಅಬಿಬುಲ್ಲಾಖಾನರವರನ್ನು ಅಟ್ಟಹಾಸದಿಂದ ಎದುರುಗೊಂಡು ಸತ್ಕರಿಸುವುದಕ್ಕಾಗಿ ಅವರ ರಾಜಧಾನಿಯಾದ ಕಾಬೂಲ್ ಪಟ್ಟಣದಲ್ಲಿ ಬಹು ವಿಶೇಷವಾದ ಸಂಭ್ರಮಕಾರ್ಯಗಳು ನಡೆಯುತ್ತಲಿವೆ.

***

ಹಿಂದುಸ್ಥಾನದ ಪ್ರಜೆಗಳ ಪಕ್ಷವಾಗಿ ಗವರ್ನಮೆಂಟಿನಲ್ಲಿ ಹೊಡೆದಾಡುತ್ತಿರುವ ಮೆ॥ ಗೋಖಲೆಯವರು ಕಳೆದ ವಾರ ವೈಸ್‌ರಾಯಿ ಲಾರ್ಡ್ ಮಿಂಟೋರವರ ಬಂಗಲೆಗೆ ದಯಮಾಡಿ ಅವರ ಸಂಗಡ ಅಂತರಂಗವಾಗಿ ಸ್ವಲ್ಪಹೊತ್ತು ಮಾತನಾಡಿಕೊಂಡು ಬಂದರು

***

ಬಂಗಾಳಾ ಅಧಿಪತ್ಯಕ್ಕೆ ಸೇರಿದ ದರ್ಭಾಂಗವೆಂಬ ಡಿಸ್ಟ್ರಿಕ್ಟಿನಲ್ಲಿ ಪ್ರಜೆಗಳು ಇನ್ನೂ ಕ್ಷಾಮದಿಂದ ಬಿಡುಗಡೆ ಹೊಂದಲಿಲ್ಲ ಕಳೆದ ವಾರ ೬೬ ಸಾವಿರ ಜನರು ಸರ್ಕಾರದ ಧರ್ಮಸತ್ರಗಳಲ್ಲೂ ರಿಲೀಫ್ ಕಾಮಗಾರಿಗಳಲ್ಲೂ ಜೀವನ ಸಂಪಾದಿಸಿಕೊಳ್ಳುತ್ತಿದ್ದರು

***

ಹಿಂದುಸ್ಥಾನದಿಂದ ಫೀಜೀ ದ್ವೀಪಗಳಿಗೆ ಹೋಗಿ ಕೆಲಸಮಾಡುತ್ತಿರುವವರ ಪೈಕಿ ೬೦೦ ಮಂದಿ ಕಳೆದ ವಾರ ಕಲ್ಕತ್ತೆಗೆ ಬಂದಿಳಿದರು. ಅವರು ಆ ದ್ವೀಪದಲ್ಲಿ ಸಂಪಾದಿಸಿದ ಒಂದು ಲಕ್ಷವೂ ಎಂಬತ್ತು ಸಾವಿರ ರೂಪಾಯಿನ ಆಸ್ತಿಯನ್ನು ತಮ್ಮ ಜೊತೆಯಲ್ಲಿ ತಂದಿದಾರೆ

***

ಹೋದ ವಾರ ಹಿಂದುಸ್ಥಾನದಲ್ಲಿ ೪೧,೬೬೭ ಜನರು ಪ್ಲೇಗು ಉಪದ್ರ ತಗಲಿ ಮೃತಪಟ್ಟರು ಬೇರೆ ಬೇರೆ ಕಡೆಗಳ ಸಂಖ್ಯೆ ಎಷ್ಟೆಂದರೆ— ಪಂಜಾಬ್ ೧೪,೮೫೪ ಸಂಯುಕ್ತ ಅಧಿಪತ್ಯಗಳು ೧೪,೬೦೧, ಬೊಂಬಾಯಿ ೩,೭೪೪, ಬಂಗಾಳಾ ೪,೭೮೩೬; ಮಧ್ಯಪ್ರಾಂತ್ಯಗಳು ೩,೨೪೮, ಬರ್ಮಾ ೩೪೦.

***

ಝಾನ್ಸಿ ನಗರದಲ್ಲಿ ೨೦ ವರುಷದ ಜಾನಕೀದೇವಿ ಎಂಬೊಬ್ಬ ಬ್ರಾಹ್ಮಣ ಬಾಲವಿತಂತುವನ್ನು ಲಾಲಾದೇವಿ ದಯಾಳು ಎಂಬವನಿಗೆ ಕೊಟ್ಟು ಪುನರ್ವಿವಾಹ ಮಾಡಿದರು ಅಗ್ಗ ನೂರಾರುಮಂದಿ ಹಿಂದು ದೊಡ್ಡಮನುಷ್ಯರು ಹಾಜರಾಗಿದ್ದು ದಂಪತಿಗಳಿಗೆ ಉಡಿಗೊರೆಗಳನ್ನು ಕೊಟ್ಟರು ವಿವಾಹವು ವೇದೋಕ್ತವಾಗಿಯೇ ನಡಸಲಾಯಿತು

***

ಕಲ್ಕತ್ತೆಯ ಬಳಿ ಧನದ ವೈದ್ಯವೆಂಬ ರೈಲ್ವೆ ಸ್ಟೇಷನಿನಲ್ಲಿ ಪ್ರಯಾಣೀಕರು ಕುಳಿದ್ದ ಒಂದು ರೈಲ್ ಗಾಡಿಯು ಎದುರಿಗಿದ್ದ ಇನ್ನೊಂದು ಗಾಡಿಗೆ ಬಡಿದು ಅನಾಹುತವಾಯಿತು ಗಾಡಿಯಲ್ಲಿದ್ದ ಇಪ್ಪತ್ತು ಮಂದಿ ಪ್ರಯಾಣಿಕರಿಗೆ ಗಾಯಗಳಾಗಿ ಆಸ್ಪತ್ರೆಗೆ ಸಾಗಿಸಲ್ಪಟ್ಟರು. ಅದೇ ಗಾಡಿಯಲ್ಲಿದ್ದ ಲಕ್ಷ್ಮೀಪುರದ ರಾಜರಿಗೆ ಅಪಾಯವೇನೂ ಆಗಲಿಲ್ಲ

...ಸೆಯ ಬಳಿ ಇರುವ ಬೆಂದ್ ಎಂಬೊಂದು ಸಣ್ಣ ಸಂಸ್ಥಾನದಲ್ಲಿ ...ರು ತಮ್ಮ ಮಂತ್ರಿಯನ್ನೂ ಇನ್ನು ಕೆಲವರನ್ನೂ ಕೊಲ್ಲಿಸಿದರೆಂ ... ಬೇರೆ ಅನ್ಯಾಯಕೃತ್ಯಗಳನ್ನು ನಡಿಸಿದರೆಂತಲೂ ಮೊಕದ್ದಮೆ ... ಗವರ್ನಮೆಂಟಿನವರು ಅದರ ತನಿಖೆಗಾಗಿ ಮೂವರು ಜಡ್ಜಿಗಳ ... ನೇಮಿಸಿರುತ್ತಾರೆ. ಈ ಮೊಕದ್ದಮೆಯು ಮುಂದಿನ ಬುಧವಾರ ... ವಿಚಾರಣೆಗೆ ಪ್ರಾರಂಭವಾಗುವುದು.

❖❖❖

...ಹಿಂದುಸ್ಥಾನದ ವೈಸ್‌ರಾಯಿ ಲಾರ್ಡ್ ಮಿಂಟೋ ಪ್ರಭುಗಳ ...ಯವರೂ ಇಬ್ಬರು ಹೆಣ್ಣು ಮಕ್ಕಳೂ ಬೊಂಬಾಯಿಗೆ ಬಂದು ... ವಾರ ಪರ್ಷಿಯಾ ಎಂಬ ಹಡಗು ಹತ್ತಿ ದೇಶಾರೋಗ್ಯಕ್ಕಾಗಿ ...ಗೆ ಪ್ರಯಾಣಮಾಡಿದರು. ಬೊಂಬಾಯಿ ಗವರ್ನರೇ ಆದಿಯಾಗಿ ... ಮನುಷ್ಯರನೇಕರು ಸಮುದ್ರತೀರದ ವರೆಗೆ ಹೋಗಿ ಅವರನ್ನು ...ನಯಪೂರ್ವಕವಾಗಿ ಸಾಗಕಳುಹಿಸಿ ಬಂದರು.

❖❖❖

ಬರ್ಮಾ ಆಧಿಪತ್ಯಕ್ಕೆ ಸೇರಿದ ಅಕ್ಯಾಬ್ ಎಂಬ ಊರಿನ ಬಳಿ ಒಂ ದೊಡ್ಡ ದೋಣಿಯು ಆಕಸ್ಮಾತ್ತಾಗಿ ಬಂದ ಸುಂಟರಗಾಳಿಗೆ ಸಿಕ್ಕಿ ...ಮತ್ತು ತಲೆಕೆಳಗಾಗಿ ಮಗುಚಿಕೊಂಡಿತು. ಅದರಲ್ಲಿದ್ದ ಪ್ರಯಾ...ರೆಲ್ಲಾ ನೀರಿನಪಾಲಾದರು. ಸರ್ಕಾರದವರು ಜನರನ್ನು ಉಳಿಸಿ ...ಕಿಸಿದ್ದರಲ್ಲಿ ಸುಮಾರು ೭೦ ಹೆಣಗಳ ತನಕ ಸಿಕ್ಕಿರುತ್ತವೆ. ...ನ್ನು ೪೦—೫೦ ಜನರು ಸಿಕ್ಕಿ ಇಲ್ಲವೆಂದು ತಿಳಿಸಿದಾರೆ

❖❖❖

ಬೊಂಬಾಯಿ ಪಟ್ಟಣದಲ್ಲಿ ಸಮುದ್ರದ ಮೇಲೆ ಬರತಕ್ಕ ಸರಕು ... ಸುಂಕವಸೂಲುಮಾಡುವ ಕೆಲಸದಲ್ಲಿದ್ದ ಮೆ॥ ಪಿ ಆರ್ ಕಾಡೆ ...ಎಂಬವರನ್ನು ಗವರ್ನರರವರು ತಮ್ಮ ಪ್ರೈವೆಟ್ ಸೆಕ್ರೆಟರಿ ಕೆಲಸ ...ಕ್ಕೆ ನೇಮಕಮಾಡಿಕೊಂಡರು. ಇದು ಅಲ್ಲಿನ ವರ್ತಕಮಂಡಲಿಯ ...ಸಮ್ಮತವಾಗಲಿಲ್ಲ. ಅವರೆಲ್ಲಾ ಸೇರಿ, ಅನುಭವಸ್ಥರಾದವರನ್ನು ... ಕೆಲಸಕ್ಕೆ ನೇಮಿಸಿಕೊಂಡದ್ದು ನ್ಯಾಯವಲ್ಲವೆಂಬುದಾಗಿ ಗವ ...ರವರಿಗೆ ಅರ್ಜಿ ಹಾಕಿದಾರೆ

❖❖❖

...ಶಾಂತಿ ಭೇದಿ ಉಪದ್ರವಿರುವ ಪ್ರದೇಶಗಳಲ್ಲಿ ಜನರು ಅರ್ಧಾಣೆ ...ಗಲದ ಒಂದು ತಾಂಬ್ರದ ಬಿಲ್ಲೆಯನ್ನು ಹೊಕ್ಕುಳಿನ ಮೇಲೆ ಕಟ್ಟಿಕೊಂಡಿದ್ದರೆ ಆ ಉಪದ್ರ ತಗಲುವುದಿಲ್ಲವೆಂದು ...ಡಾಕ್ಟರುಗಳು ಹೇಳಿದ್ದಾರೆ. ಜರ್ಮನಿ ರಾಜ್ಯದಲ್ಲಿ ಡಾಕ್ಟರುಗ...ಳು ಶಾಂತಿ ಭೇದಿ ತಗಲಿದ ರೋಗಿಗಳಿಗೆ ಚಿಕಿತ್ಸೆ ಮಾಡುವಲ್ಲಿ ತಮ್ಮ ...ಹೊಕ್ಕುಳಿಗೆ ತಾಂಬ್ರದ ಪಟ್ಟಿಯನ್ನು ಕಟ್ಟಿಕೊಂಡಿದ್ದುದನ್ನು ಕೇಳ ...ನೋಡಿ, ಆದರಿಂದ ಪ್ರಯೋಜನವಿದೆ ಎಂದು ತಿಳಿಸಿರುವರು.

❖❖❖

ಪಾಟ್ನಾ ನಗರದಲ್ಲಿ ಐಶ್ವರ್ಯವಂತನಾಗಿಯೂ ಪ್ರಜೆಗಳಲ್ಲಿ ...ನಾಗಿಯೂ ಮ್ಯುನಿಸಿಪಲ್ ಕಮಿಷನರರಾಗಿಯೂ ಇದ್ದ ಷಾ ಹೈದ್ ...ಹರ್ ಎಂಬವನು ಬಹು ಕಾಲದಿಂದ ಪ್ರಜೆಗಳನ್ನು ಹಿಂಸೆ ಪಡಿಸಿ ... ಕಿತ್ತುಕೊಳ್ಳುತ್ತಿದ್ದನೆಂದು ಮೊಕದ್ದಮೆ ಆಗಿ ಸೆಷನ್ಸ್ ...ನು ಅವನಿಗೆ ಎರಡು ವರುಷದ ಸಾದಾ ಸಜಾ ವಿಧಿಸಿದರು. ಕಲ್ಕತ್ತಾ ...ಕೋರ್ಟಿನ ಇಬ್ಬರು ಜಡ್ಜಿಗಳು ಈ ಮೊಕದ್ದಮೆಯ ಅಪೀಲನ್ನು ...ನೋಡಿ ಕೆಳಕೋರ್ಟಿನ ತೀರ್ಪನ್ನೇ ಖಾಯಂಮಾಡಿರುತ್ತಾರೆ

❖❖❖

ಕಲ್ಕತ್ತಾ ಪಟ್ಟಣದಲ್ಲಿ ಪ್ರೇಮಲಾಲ್ ಮಲ್ಲಿಕ್ ಎಂಬವನು ಬಂ ...ಡರಿಫರ್ ಎಂಬವನ ಮೇಲೆ ದಾವಾಮಾಡಿ, ತಾನು ಖಾಯಿಲೆ ...ದ್ದೇನೆಂತಲೂ ತನ್ನ ವಿಚಾರಣೆಯನ್ನು ತನ್ನ ಮನೆಯಲ್ಲೇ ಕ ...ಮಿಷನ್ ಮೂಲಕ ಮಾಡಿಸಬೇಕೆಂತಲೂ ಡಾಕ್ಟರ್ ಸರ್ಟಿಫಿಕೇಟ್ ...ಸಹಾಗಿ ಜಡ್ಜಿಗೆ ಅರ್ಜಿ ಬರೆದುಕೊಂಡನು. ಜಡ್ಜಿಯು ಅದರಂತೆ ...ಲ್ಲ ವಿಚಾರಣೆಯ ದಿನ ವಾದಿಯನ್ನು ಡೋಲಿಯಲ್ಲಿ ಹಾಕಿ ...ತ್ತಿಕೊಂಡುಬಂದರು. ಜಡ್ಜಿಯು ವಿಚಾರಣೆಗೆ ಪ್ರಾರಂಭಮಾಡಿ ...ದನ್ನು ಕೂಗಿಸಿದರು. ಡೋಲಿಯಲ್ಲಿ ನೋಡುವಾಗ್ಗೆ ವಾದಿ ...ಸತ್ತಿದ್ದನು

❖❖❖

...ಸಿಲೋನ್ (ಲಂಕಾ) ದ್ವೀಪಕ್ಕೆ ಸೇರಿದ ಬ್ಯಾಟಿಕಲೋವಾ ದಿ ...ನಲ್ಲಿ ಭಯಂಕರವಾದ ಸುಂಟರಗಾಳಿ ಪ್ರಾಪ್ತವಾಗಿ ಬಹುನಷ್ಟ ...ಟುಮಾಡಿದೆ. ಒಂದು ಆಸ್ಪತ್ರೆಯಲ್ಲಿ ರೋಗಿಗಳ ಮೇಲೆ ಮಾಳಿ...ಗೆಗಳು ಬಿದ್ದು, ಐದು ಮಂದಿ ಖಾಯಿಲೆಯವರು ಮೃತಪಟ್ಟರು ... ಅನೇಕರಿಗೆ ನಾನಾ ಗಾಯಗಳಾದವು. ಈ ಪೈಕಿ ಕೆಲವರು ಬ...ದುಕಲಿಲ್ಲ. ಸಮುದ್ರ ತೀರದಲ್ಲಿದ್ದ ಎರಡು ಭಾರೀ ಕಟ್ಟಡಗಳೂ ...ಗಳೂ ನೆಲಸಮನಾದವು. ಎರಡು ಗ್ರಾಮಗಳು ಸಂಪೂರ್ಣವಾ...ಗಿ ನಷ್ಟವಾದವು. ಸುಮಾರು ಎರಡು ಸಹಸ್ರ ಪ್ರಜೆಗಳು ಮನೆ ಮ...ಠವಿಲ್ಲದೆ ಅಲೆಯುತ್ತಿದಾರೆ.

❖❖❖

...ಗೌರವಸ್ಥರಾದ ದರ್ಭಾಂಗ ಮಹಾರಾಜರು, ನವಾಬ್ ಸೈಯದ್ ...ವ್ ಹಸನ್‌ರವರು, ವಕೀಲ್ ಸೈಯದ್ ಸಂಸುಲ್‌ಹುದಾಯವರು, ಸುರೇಂದ್ರನಾಥಬಾನರ್ಜಿಯವರು, ಬ್ಯಾರಿಸ್ಟರ್ ಬಾಬುಲಕಾಂತಾ...ಪ್ರಿಯವರು, ಬಾಬುನರೇಂದ್ರನಾಥಸೇನರವರು, ಬ್ಯಾರಿಸ್ಟರ್ ...ಬ್‌ರಸೂಲ್‌ರವರು — ಈ ದೊಡ್ಡ ಮನುಷ್ಯರು ಬಂಗಾಳಾ ಅಧಿ...ನ್ನಿ ಹಿಂದುಗಳಿಗೂ ಮಹಮದೀಯರಿಗೂ ಉಂಟಾಗಿರುವ ಪರಸ್ಪ...ರ ವೈಷಮ್ಯಗಳನ್ನು ಕಡಿಮೆ ಮಾಡಬೇಕೆಂತಲೂ, ಸರ್ಕಾರದವರು ...ಉಭಯ ಸಂಗಡದ ಪ್ರಜೆಗಳನ್ನೂ ಒಂದೇ ಸಮನಾಗಿ ಪಕ್ಷಪಾತವಿಲ್ಲದೆ ...ನಡಿಸಿಕೊಂಡು ಬರಬೇಕೆಂತಲೂ ವೈಸ್‌ರಾಯಿ ಲಾರ್ಡ್ ಮಿಂಟೋ...ರ ಭೇಟಿಮಾಡಿ ಅವರಿಗೆ ಅರಿಕೆಮಾಡಿಕೊಂಡಿದಾರೆ.

❖❖❖

ಬೊಂಬಾಯಿಪಟ್ಟಣದ ಪೋಲೀಸಿನವರು ಒಂದು ಸಂಘವನ್ನು ...ಕೊಂಡು ಸಭೆಗಳನ್ನು ನಡಸುತ್ತಿದಾರೆ. ಅವರು ಗವರ್ನಮೆಂ...ಟಿಗೆ ತಮ್ಮ ಮನೋವ್ಯಥೆಗಳನ್ನು ಕ್ರಮವಾಗಿ ಅರಿಕೆಮಾಡಿಕೊಳ್ಳಬೇ...ಕೆಂದು ತೀರ್ಮಾನಮಾಡಿಕೊಂಡರು. ಅವರು ಪ್ರಾರ್ಥಿಸಿಕೊಳ್ಳುವುದೇ...ನೆಂದರೆ — ಈಗಿರುವ ತಮ್ಮ ಸಂಬಳವು ಬಹಳ ಕಡಿಮೆ. ಅದನ್ನು ೧೫ ರಿಂದ ೧೭ ರೂ. ವರೆಗೆ ಬಡ್ತಿ ಮಾಡಿಕೊಡಬೇಕು. ಸರ್ಕಾರಿ ನೌಕರರಿಗೆಲ್ಲಾ ಕೊಡುವ ಪ್ರಿವಿಲೆಜ್ ರಜವೂ ಇತರ ವಿಧದ ರಜವೂ ತ ಮಗೂ ಸಿಕ್ಕುವಂತಾಗಬೇಕು. ಹದಿನೈದು ವರುಷ ಸರ್ವಿಸ್ ಮಾಡಿದ ಮೇಲೆ ತಮಗೆ ಪೆನ್ಷನ್ ದೊರಕಬೇಕು. ನಾಲ್ಕು ರೂಪಾಯಿ ಪೆನ್ಷನ್ ಗೊತ್ತುಮಾಡಿರುವುದು ಬಹಳ ಸ್ವಲ್ಪವಾದ್ದರಿಂದ ಅದನ್ನು ಹೆಚ್ಚು ಮಾಡಿಕೊಡಬೇಕು.

❖❖❖

ಆಫ್ಘಾನಿಸ್ಥಾನದ ಅಮೀರರು ಹಿಂದುಸ್ಥಾನಕ್ಕೆ ದಯಮಾಡಿದ್ದಾಗ ಅಲ್ಲಿನ ಕೆಲವು ಮುಲ್ಲಾಗಳು ಅವರ ಮೇಲೆ ಜನರನ್ನು ಎತ್ತಿಕಟ್ಟಬೇಕೆಂದು ಸಭೆಗಳನ್ನು ನಡಿಸಿ ಕೆಲವು ಮಸಲತ್ತುಗಳನ್ನು ಮಾಡಿದರು. ಕೂಡಲೇ ಈ ಸಂಗತಿಯನ್ನು ಸರ್ದಾರ್ ನಸ್ರುಲ್ಲಾಖಾನರವರು ಕೇಳಿ, ಕೆಲವು ಮುಖಂಡರನ್ನು ಕರೆಸಿ ಅವರನ್ನು ತಕ್ಕ ಹಾಗೆ ನಿರ್ಬಂಧಪಡಿಸಿದ್ದರಿಂದ ಆ ಮುಲ್ಲಾಗಳ ಸಾಹಸವೇನೂ ನಡಿಯಲಿಲ್ಲ. ಅಮೀರರು ಹಿಂದುಸ್ಥಾನಕ್ಕೆ ಬಂದು ಇಲ್ಲಿ ಇಂಗ್ಲಿಷ್ ಸರದಾರರ ಪಙ್ತಿಯಲ್ಲಿ ಕುಳಿತು ಭೋಜನ ಮಾಡಿದ್ದೂ, ಅವರು ಇಂಗ್ಲಿಷರಲ್ಲಿ ಸ್ನೇಹ ಬೆಳಸಿದ್ದೂ, ಇಂಗ್ಲಿಷರಂತೆ ಬಟ್ಟೆಬರೆ ಹಾಕಿಕೊಳ್ಳುವುದೂ, ಇಂಗ್ಲಿಷರಿಂದ ತಯಾರಾದ ಅನೇಕಾನೇಕ ಪದಾರ್ಥಗಳನ್ನು ಕೊಂಡುಕೊಂಡದ್ದೂ, ಇಂಗ್ಲಿಷರು ಮಾಡಿಕೊಂಡಿರುವ ಮೇಸಾನಿಕ್ ಎಂಬ ಸಂಙ್ಞಾ ಸಭೆಗೆ ಮೆಂಬರಾಗಿ ಸೇರಿಕೊಂಡದ್ದೂ ಅಫ್ಘಾನಿಸ್ಥಾನದ ಮುಲ್ಲಾಗಳಲ್ಲಿ ಸಂಕಟವನ್ನೂ ದುರಭಿಮಾನವನ್ನೂ ಉಂಟುಮಾಡಿರುತ್ತವೆಂದು ತಿಳಿದು ಬಂದಿದೆ

❖❖❖

ಕಚ್ಛವಾಡ ಸಂಸ್ಥಾನಗಳಲ್ಲಿ ಹಿಂದಿನ ಭಾನುವಾರ ಸಾಯಂಕಾಲ ಅಪೂರ್ವವಾದ ಆನೆಕಲ್ಲಿನ ಮಳೆಯಿಂದ ವಿಶೇಷ ಅನಾಹುತವಾದಂತೆ ತಂತೀ ವರ್ತಮಾನ ಬಂದಿದೆ. ಲಿಂಬ್ಡಿ ಸಂಸ್ಥಾನದ ದಿವಾನರು ತಿಳಿಸುವುದೇನೆಂದರೆ — ಈ ಆನೆಕಲ್ಲುಮಳೆಯಲ್ಲಿ ಇಪ್ಪತ್ತ ಮೂರು ಜನರು ಸಿಕ್ಕಿ ಮೃತಪಟ್ಟರು; ಇಪ್ಪತ್ತು ಮಂದಿಗೆ ಗಾಯಗಳಾಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆಹೊಂದುತ್ತಿದಾರೆ. ಲೆಕ್ಕವಿಲ್ಲದಷ್ಟು ಪ್ರಾಣಿಗಳೂ ಪಕ್ಷಿಗಳೂ ಸತ್ತು ಬಿದ್ದವೆ. ಜಮೀನುಗಳಲ್ಲಿ ಪೈರಿನ ಬೆಳೆಯೆಲ್ಲಾ ಸಂಪೂರ್ಣವಾಗಿ ನಾಶಹೊಂದಿರುವುದು. ಮೆ॥ ಡಾಟ್ಸನ್ ಎಂಬೊಬ್ಬ ತೋಟಗಾರನು ಹೇಳುವುದೇನೆಂದರೆ — ನಾನು ಈ ಕಲ್ಮಳೆಗೆ ಸಿಕ್ಕಿ ಬಹಳ ಪೆಟ್ಟು ತಿಂದೆನು. ಆನೆಕಲ್ಲುಗಳು ಗುಂಡಿನ ಮಳೆಯಂತೆ ಸುರಿದವು. ಗಾತ್ರದಲ್ಲಿ ಚೆಂಡಿನಷ್ಟು ಇದ್ದವು. ಹೊರಕ್ಕೆಹೋಗುವಾಗ್ಗೆ ಅನೇಕ ಜನರು ಈ ಕಲ್ಮಳೆಗೆ ಸಿಕ್ಕಿ ಪ್ರಾಣ ಪೆಟ್ಟು ತಿಂದು ನರಳುತ್ತಿದ್ದವರನ್ನು ಕಂಡೆನು. ಸುತ್ತಮುತ್ತಲೂ ಕುರಿ ಆಡು ಕಾಗೆ ನೊಲ ಗುಬ್ಬಚ್ಚಿ ಪಾರಿವಾಳಗಳೇ ಮೊದಲಾದ ಪ್ರಾಣಿಗಳು ಅನೇಕವಾಗಿ ಸತ್ತು ಬಿದ್ದಿದ್ದವು

ತಾಲ್ಲೂಕು ವರ್ತಮಾನಗಳು

ತಿಪಟೂರು.—ಸದ್ಯ ಕುಡಿಯುವದಕ್ಕೆ ನೀರು ಎಲ್ಲೆಲ್ಲಿಯೂ ಇರುತ್ತೆ. ಈ ವರ್ಷ ದಿನಸಿಗಳು ಬಹಳವಾಗಿ ಬೆಳೆದರೂ ಧಾರಣೆವಾಸಿಗಳು ಯಥಾಪ್ರಕಾರನಾಗಿದೆ. ಬಡಬಗ್ಗರ ಆಶೆ ನಿರಾಶೆಯಾಯಿತು.— ಪೋಲೀಸ್ ಕಾನ್ಸ್ಟೆಬಲನ್ನು ಹೊಡೆದು ಅವಮಾನಪಡಿಸಿದ ಕುರುಬರ ಸಂಜ ಎಂಬುವನಿಗೆ ೧೫ ದಿವಸ ಕಠಿಣಸಜ ೨೦ ರೂ. ಜುಲ್ಮಾನೆ ಆಯಿತು.— ಈ ಊರಿನಲ್ಲಿ ಮೊದಲಿನಿಂದಲೂ ನಡೆಯುತ್ತಿರುವ ಪರೇಲ್ ಮತ್ತು ಬಿರುಸ್ ಎಂಬುವ ಜೂಜಾಟದಿಂದ ಕಳ್ಳತನ ಹೆಚ್ಚಾಗುವದೆಂಬ ಭೀತಿ ತುಂಬಾ ಇರುತ್ತೆ. ಆದ್ದರಿಂದ ಪೋಲೀಸಿನವರು ಈ ವಿಷಯದಲಿ ತುಂಬಾ ನಿಗಾ ತೆಗೆದುಕೊಳ್ಳಬೇಕಾಗಿದೆ — ಕೆರೆ ಸಮೀಪದಲ್ಲಿ ಗಲೀಜು ನಾತವು ಜೋರಾಗಿದೆ. ಇದು ಜನಗಳ ಆರೋಗ್ಯಕ್ಕೆ ಕುಂದಕವಾದ್ದರಿಂದ ಮ್ಯುನಿಸಿಪಾಲಿಟಿಯವರು ಕೂಡಲೇ ನಿಗಾ ತೆಗೆದುಕೊಳ್ಳಬೇಕಾಗಿದೆ.— ತಾ ೨೯ ಕ್ಕೆ ಶ್ರೀ ಶೃಂಗೇರಿ ಜಗದ್ಗುರುಗಳವರ ಸವಾರಿಯು ಇಲ್ಲಿಗೆ ದಯಮಾಡಿಸುವದು. ಅವರ ಬಿಡಾರಕ್ಕೆ ಸರಿಯಾದ ಸ್ಥಳವು ಇಲ್ಲಿನ ಮೆ॥ ನರಸಿಂಹಯ್ಯಂಗಾರ್ರ ಛತ್ರವೇ. ಸ್ವಾಮಿಗಳು ಇಲ್ಲಿ ೩ ದಿವಸ ಇದ್ದು ನಂತರ ಹೊನ್ನಹಳ್ಳಿ, ನಾರ್ಥವಳ್ಳಿ, ಹಾಲ್ಕುರಿಕೆ, ಈ ಕಡೆ ಹೊರಟು ಚಿಕ್ಕನಾಯಕನಹಳ್ಳಿಗೆ ದಯಮಾಡುತ್ತಾರೆ

ಹೊಸದುರ್ಗ.—ಈ ಪ್ರಾಂತ್ಯ ಅನೇಕ ಪ್ರಜೆಗಳು ತಲೆಶೂಲೆ ಜ್ವರ ಮೊದಲಾದವುಗಳಿಂದ ನರಳುತ್ತಿದಾರೆ. ಸಂತೆಯಲ್ಲಿ ರಾಗಿ ಸೇರು ೧೮, ಅಕ್ಕಿ ೧೦ ಮಾರುತ್ತೆ. ತಾಲ್ಲೂಕಿನ ಕೆಲವು ಹಳೇ ನೌಕರರ ಪೈಕಿ ಒಬ್ಬ ನೌಕರರು ವರ್ಗಪಟ್ಟಂತಾಯಿತು. ಇನ್ನೂ ಎರಡು ಮೂರು ಜನರಿರುತ್ತಾರೆ — ಪೋಲೀಸ್ ಇನ್ಸ್ ಪೆಕ್ಟರ್‌ರವರು ರಜಾ ಹೋಗಿದಾರೆ. ಬೂದಿಹಾಳ್ ಗ್ರಾಮದಲ್ಲಿ ಮೊನ್ನೆ ಕೃಷ್ಣಸಿಂಗ್‌ರವರ ಮನೆಗೆ ಬೆಂಕಿ ಬಿದ್ದು ನೂರಾರು ರೂಪಾಯಿ ನಷ್ಟವಾಯಿತಂತೆ. ಇಲ್ಲಿ ಒಬ್ಬರ ಮನೆಗೆ ಕಳ್ಳರು ಕನ್ನಹಾಕಿ ನುಗ್ಗಿರುತ್ತಾರೆ. ಮಾಲೇನೂ ಹೋದದ್ದು ಪತ್ತೆ ಇಲ್ಲ. ಬೆಲಗೂರು ಭಾನಪ್ಪನವರ ನರಸಪ್ಪನವರ ಮನೆಗೆ ಕಳೆದ ತಾ ೧೦ ನೆ ರಾತ್ರಿ ಯಾರೋ ಕನ್ನಕೊರೆದು ನುಗ್ಗಿದ್ದಾರು. ಮಾಲು ಹೋದಂತೆ ಕಾಣುವದಿಲ್ಲ. ಈ ಗ್ರಾಮದ ರಾ॥ ಕೃಷ್ಣಪ್ಪನವರು ಕಟ್ಟಿಸುತ್ತಿರುವ ಶಿವಾಲಯವು ಮುಗಿಯುತ್ತಾ ಬಂತು. ಸ್ಕೂಲ್ ಕಟ್ಟಡವು ಕ್ಷೀಣವಾಗುತ್ತಬಿಟೆ — ಕಾರೇಹಳ್ಳಿಪೇಟೆ ಎಂಬ ಬೀದಿಯಲ್ಲಿ ಕಸಾ ಕಡ್ಡಿ ಸಗಣಿ ರೊಚ್ಚೆಯಿಂದ ಸದಾ ದುರ್ವಾಸನೆ ಬಡಿಯುತ್ತದೆ.— ಇಲ್ಲಿಗೆ ೩ ಮೈಲಿ ಫಾಸ್ಲೆಯಲ್ಲಿರುವ ತಂಡಗ ಗ್ರಾಮದಲ್ಲಿ ಜನರು ಎರಡು ಪಾರ್ಟಿಯಾಗಿ ವಾಜ್ಯ ದೊಂಬಿ ನಡಿಸಿಕೊಂಡು ಕೋರ್ಟು ಕಚೇರಿಗಳಿಗೆ ತಿರುಗಾಡುತ್ತಲಿರುವರು. ಶ್ರೀಮತು ಉಜ್ಜಯಿನಿ ಮಠದ ಏಜಂಟ್ ಚನ್ನಬಸವಾರಾಧ್ಯರು ಸಕೀರ್ಟು ಮುಗಿಸಿಕೊಂಡು ಹಾಲಗಟ್ಟಕ್ಕೆ ಹೊರಟುಹೋದರು

ಹಾಸನ.—ಈಗೀಗ ಜನಗಳು ಷೆಡ್ಡುಗಳಿಂದ ಊರು ಸೇರಿದರು ಶ್ರೀ ಶೃಂಗೇರೀ ಜಗದ್ಗುರುಗಳವರು ಈ ಊರಿಗೆ ದಯಮಾಡಿಸುತ್ತಾರೆಂದು ಊರೊಳಗೆ ಅನೇಕ ಭಾಗಗಳನ್ನು ಅಲಂಕರಿಸಿ ಅವರು ಇಲ್ಲಿಗೆ ದಯಮಾಡಿಸಿದ ಕಾಲದಲ್ಲಿ ಏನೇನು ಮಾಡಬೇಕೆಂಬ ಬಗ್ಗೆ ಮುನಿಸಿಪಲ್ ಸಂಘದವರೂ ಗ್ರಾಮಸ್ಥರೂ ಸೇರಿ ಮೀಟಿಂಗ್ ನಡಿಸಿ ನಿಷ್ಕರ್ಷಿಸಿಕೊಂಡಿದ್ದರು. ಕಳೆದ ೨೦ ನೇ ತಾ. ಬೆಳಿಗ್ಗೆ ೮ ಘಂಟೆಗೆ ಸ್ವಾಮಿಗಳ ಸವಾರಿಯು ಭೀಮಣ್ಣನ ಛತ್ರದ ಬಳಿಗೆ ಬಂದಿತು. ಡೆಪ್ಯುಟಿ ಕಮಿಷನರು, ಅಸಿಸ್ಟೆಂಟರು, ಸಬ್ ಜಡ್ಜರೇ ಮೊದಲಾದ ಸಕಲ ಲೌಕಿಕ ವೈದಿಕ ಮಹಾ ಜನಗಳೂ ಅವರನ್ನು ಕಾಣಿಸಿಕೊಂಡರು. ಆ ಮೇಲೆ ಭಂಗಾರದ ಪಲ್ಲಕ್ಕಿಮೇಲಕ್ಕೆ ಮೇನಾದಿಂದ ದಯಮಾಡಿಸಿದರು. ಇಲ್ಲಿನ ಉಭಯ ಭಾಷಾಪಂಡಿತ ಅಪ್ರಮೇಯ ಐಯ್ಯಂಗಾರ್‍ಯರು ದೊಡ್ಡ ವಿಙ್ಞಾಪನಾ ಪತ್ರಿಕೆಯನ್ನು ಓದಿ ಸಮರ್ಪಿಸಿದರು. ಅನಂತರ ವೇದಘೋಷದೊಡನೆ ಬೀದಿಗಳಲ್ಲಿ ಮೆರವಣಿಗೆ ಬಂದು ಬಿಡಾರವನ್ನು ಸೇರಿದರು. ತಾ. ೨೧ ಮತ್ತು ೨೨ ರಲ್ಲಿ ಅನೇಕರು ಪಾದಪೂಜೆಗಳನ್ನು ನೆರವೇರಿಸಿದರು. ಎಲ್ಲಾ ಬಹು ಸಂಭ್ರಮವಾಗಿ ನಡೆಯಿತು. ೨೨ ನೇ ಸಾಯಂಕಾಲ ಡೆಪ್ಯುಟಿ ಕಮಿಷನರು ಸ್ವಾಮಿಗಳನ್ನು ಕಾಣಿಸಿಕೊಂಡರು. ಸಾಯಂಕಾಲ ವಿದ್ವಾಂಸರಿಗೆ ಬಹುಮಾನವು ನಡೆಯಿತು. ಅದೇ ೨೩ ನೇ ತಾ. ರಾತ್ರಿ ೨ ಘಂಟೆಯಲ್ಲಿ ಅರಕಲಗೂಡಿಗೆ ಪ್ರಯಾಣ ಮಾಡಿದರು. ಸ್ವಾಮಿಗಳ ದರ್ಶನಕ್ಕೆ ಸುತ್ತುಮುತ್ತಲಿನ ಗ್ರಾಮಗಳಿಂದಲೂ ಸಾವಿರಾರು ಮಂದಿ ಬಂದಿದ್ದರು.

ಚಿಕ್ಕಬಳ್ಳಾಪುರ.—ಇಲ್ಲಿ ಮೊನ್ನೆ ಸುಮಾರಾಗಿ ಮಳೆ ಬಿತ್ತು. ಇನ್ನೂ ಮೋಡಗಳು ಆಗುತ್ತಲಿವೆ. ರೈತರೆಲ್ಲ ಕಣಗಳಲ್ಲಿ ರಾಗಿ ತುಳಿಸುತ್ತಾ ಇದಾರೆ — ಇಲ್ಲಿನ ಡಾಕ್ಟರು ೨ ತಿಂಗಳ ರಜಾ ಪಡೆದು ಮದ್ರಾಸಿಗೆ ಹೋಗಿರುವದರಿಂದ ಇವರ ಬದಲಿಗೆ ವಿಕ್ಟೋರಿಯಾ ಆಸ್ಪತ್ರೆಯಿಂದ ಬೇರೊಬ್ಬರು ಬಂದಿದಾರೆ. ಬೆಂಗಳೂರು ಕಡೆಯಿಂದ ಬಂದ ಜನಗಳಿಗೆ ಅಬ್ಸರ್ವೇಷನ್ ಫಾರಂ ಕೊಟ್ಟು ಊರೊಳಕ್ಕೆ ಬಿಡುತ್ತಿದಾರೆ.— ಮೊನ್ನೆ ಮಂಗಳವಾರ ರಾತ್ರಿ ಸುಬ್ಬರಾಯನ ಪೇಟೆಯಲ್ಲಿ ಕಳ್ಳರು ಮನೆಗಳಿಗೆ ಕನ್ನಾಹಾಕಿ ಸುಮಾರು ೩೦೦ ರೂ. ವರಿಗೂ ಚೋರಿಮಾಡಿಕೊಂಡು ಹೋದರು. ಮಾರನೆ ದಿನ ರಾತ್ರಿ ಮುಷ್ಟೂರಬಾಗಲಿನಲ್ಲಿ ೩ ಮನೆಗಳಿಗೂ, ವಾಪಸಂದ್ರದಲ್ಲಿ ೪ ಮನೆಗಳಿಗೂ ಕಳ್ಳರು ಕನ್ನಾಹಾಕಿ ಸಿಕ್ಕಿದ್ದನ್ನು ಚೋರಿಮಾಡಿಕೊಂಡು ಹೋದರು. ಇಲ್ಲಿಗೆ ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್ ಸಾಹೇಬರು ಬಂದಿದ್ದವೇಳೆ ಇಲ್ಲಿನ ಪ್ರಜೆಗಳು, ಪೋಲೀಸಿನವರು ಪ್ರಜೆಗಳಿಗೆ ಕೊಡುವ ಕಷ್ಟ, ನಷ್ಟಗಳ ವಿಷಯವಾಗಿ ಅರಿಕೆನಾಮೆ ಅರ್ಜಿ ಸಹಾ ಕೊಟ್ಟರು. ಇದರ ಮೇಲೆ ಇಲ್ಲಿನ ಜಮೇದಾರ್ರುಗಳಿಬ್ಬರೂ ಬೇರೆ ಸ್ಥಳಗಳಿಗೆ ವರ್ಗಾಯಿಸಲ್ಪಟ್ಟು ಹೊರಟುಹೋದರು. ಇನ್ಸ್‌ಪೆಕ್ಟರಿಗೆ ಹಗ್ಗದದೇವನಕೋಟೆಗೆ ವರ್ಗವಾದ ಸಂಗತಿ ಕೇಳಿದರು.— ಹೈ ಸ್ಕೂಲ್ ಹೆಡ್ ಮಾಸ್ಟರು ಮೆ॥ ಕೆ. ಕೃಷ್ಣಸ್ವಾಮಯ್ಯರು ಬಂದ ಮೇಲೆ ಸ್ಕೂಲ್ ಬಹು ಅಭಿವೃದ್ಧಿಸ್ಥಿತಿಯಲ್ಲಿದೆ. ಸ್ಟೂಡೆಂಟ್ಸ್ ಹೋಂ ವಿಷಯದಲ್ಲಿ ಬಹು ಜಾಗರೂಕತೆಯಿಂದ ನೋಡಿಕೊಳ್ಳುತ್ತಿದಾರೆ. ಪರಸ್ಥಳದವರು ಬಂದು ಓದಲು ಅನುಕೂಲವಾಗಿದೆ. ಅನೇಕ ಕಡೆಗಳಿಂದ ಹುಡುಗರು ಬಂದು ಸೇರುತ್ತಿದಾರೆ.

ಹುಣಸೂರು.—ಈಗ ನಾಲ್ಕು ದಿನಗಳಿಂದಲೂ ಕಾಲರಾ ಉಪದ್ರವು ಈ ಊರಿನಲ್ಲಿ ನಿಂತಿದೆ. ಊರಿನ ಸ್ಯಾನಿಟೇಷನ್ ವಿಷಯ ಮೇಲ್ಪಟ್ಟ ಅಧಿಕಾರಿಗಳು ತುಂಬಾ ನಿಗಾಕೊಡಬೇಕಾಗಿದೆ. ಊರಿನ ಗಲೀಜು ನೀರು ಓಡುವ ಚರಂಡಿಗಳ ಪೈಕಿ ಕೆಲವು ಚರಂಡಿಗಳಲ್ಲಿ ನೀರು ಸಲೀಸಾಗಿ ಹರಿಯದೆ ಒಂದೇ ಸ್ಥಳದಲ್ಲಿ ನಿಂತು ದುರ್ವಾಸನೆ ಬಡಿಯುವದು. ಕಾಲರಾ ರೋಗವು ಈ ತಾಲ್ಲೂಕಿಗೆ ಸೇರಿದ ಬೇರೆಬೇರೆ ಗ್ರಾಮಗಳಲ್ಲಿ ಹರಡಿಕೊಂಡಿದೆ. ಅನೇಕರು ಈ ರೋಗಕ್ಕೆ ಆಹುತಿಯಾದರೆಂದು ಕೇಳಲು ವ್ಯಸನವಾಗುವದು. ಡಾಕ್ಟರೂ ಪ್ಲೇಗ್ ಇನ್ಸ್‌ಪೆಕ್ಟರೂ ಆಯಾ ಸ್ಥಳಗಳಿಗೆ ಹೋಗುತ್ತಾ ಬರುತ್ತಾ ಇದಾರೆ. ರಾಮೇನಹಳ್ಳಿ ಸಿದ್ದಲಿಂಗೇಗೌಡನ ನೆಂಟಳಾದ ಲಿಂಗಿ ಎಂಬವಳು ಚಿಕ್ಕ ವಯಸ್ಸಿನ ಎರಡು ಹೆಣ್ಣುಮಕ್ಕಳನ್ನು ಬಿಟ್ಟು ಸತ್ತುಹೋದಳು. ಇವಳಿಗೆ ಸ್ವಲ್ಪ ಜಮೀನು ಇತ್ತು. ಈ ಜಮೀನನ್ನು ನಿಲುವಾಗಲದ ಕೃಷ್ಣೇಗೌಡನ ಮಗ ವೆಂಕಟೇಗೌಡನು, ಇದೇ ಗ್ರಾಮದ ಕೆಂಪಿ ಎಂಬವಳನ್ನು ಲಿಂಗಿ ಎಂಬದಾಗಿ ಸುಳ್ಳು ಹೇಳಿ ಕರೆದುಕೊಂಡುಬಂದು ಮೇಲ್ಕಂಡ ರಾಮೇನಹಳ್ಳಿ ಲಿಂಗಿಯ ಜಮೀನನ್ನು ಸುಬ್ರಾಯರೆಂಬವರಿಗೆ ಮೋಸದಿಂದ ವಿಕ್ರಯಮಾಡಿದ್ದರಿಂದ ಮೈಸೂರು ಅ॥ ಸೆಷನ್ ಜಡ್ಜರು ವೆಂಕಟೇಗೌಡನಿಗೆ ೫ ವರುಷ ಕಠಿಣ ಸಜಾ ೩೦೦ ರೂ ಜುಲ್ಮಾನೆಯನ್ನೂ, ಕೆಂಪಿ ಎಂಬವಳು ಲಿಂಗಿ ಎಂಬದಾಗಿ ಹೇಳಿ ಮೋಸಮಾಡಿದ್ದರಿಂದ ಆವಳಿಗೆ ೩ ವರ್ಷ ಕಠಿಣ ಸಜಾ ೧೦೦ ರೂ. ಜುಲ್ಮಾನೆಯನ್ನೂ ವಿಧಿಸಿದರು — ಈ ಟವನಲ್ಲಿ ಹೆಡ್ ಬ್ರೂಸ್ ಪರೇಲ್ ಮುಂತಾದ ಜೂಜಾಟವು ಬಹು ಜೋರಾಗಿದೆ. ಇದನ್ನು ನಿಲ್ಲಿಸುವವರೇ ಇಲ್ಲವೇ ?

ತುಮಕೂರು.—ಊರಿನಲ್ಲಿ ಅಲ್ಲಲ್ಲಿ ಆಮಶಂಕೆ ಉಪದ್ರವಿದೆ. ನೆನ್ನೆ ಗುರುವಾರ ಗುಡುಗು ಮಿಂಚಿನಿಂದ ಸ್ವಲ್ಪ ಮಳೆ ಆಯಿತು. ಆದಿನ ಬಡಿದ ಸಿಡಿಲು ಸಮೀಪ ಗ್ರಾಮ ಸಾರಂಗಿಯ ಬಳಿ ಮಳೆಗಾಗಿ ಎಮ್ಮೆಯನ್ನು ಹಿಡಿದುಕೊಂಡು ಆಲದ ಮರದ ಕೆಳಗೆ ನಿಂತಿದ್ದ ಕರಳೆ ಊಡುವ ಓಬಳಾ ಎಂಬುವನಿಗೆ ತಗಲಿತು. ದೈವವಶದಿಂದ ಅದರ ಹಬೆಯು ಸ್ವಲ್ಪಮಟ್ಟಿಗೆ ತಾಗಿದ್ದರಿಂದ ಬದುಕಿಕೊಂಡನು. ಹಾಗೆ ಸುಗ್ಗೀಕಾಲವಾದಾಗ್ಯೂ ಧಾರಣೆವಾಸಿಗಳು ಅನುಕೂಲವಾಗದೆ ಇವೆ. ಹಿಂದಲ ಕಾಲದಲ್ಲಿ ಧಾರಣೆ ಎಷ್ಟುಮಟ್ಟಿಗಿತ್ತೋ ಅದಕ್ಕೆ ಈಗಲೂ ತತ್ಸಮವಾಗಿವೆ. ಮಂಡಿಗಳಿಗೆ ವಿಶೇಷ ಗಾಡಿಗಳು ದಿನಸಿ ಬರುತ್ತಲಿದೆ. ಹೋದ ವಾರ ಮಂಡಿ ವರ್ತಕರಿಗೂ ಹೊರಗಿನಿಂದ ಬಂದು ಇವರಲ್ಲಿ ದಿನಸಿ ತೆಗೆಯುತ್ತಿರುವ ವರ್ತಕರಿಗೂ ತೆಗೆದುಕೊಂಡ ದಿನಸಿಗಾಗಿ ರೂಪಾಯಿ ಜಾಗ್ರತೆ ಕೊಡುವದಿಲ್ಲವೆಂಬ ಮಾತು ನಡೆದು ಇದಕ್ಕಾಗಿಯೆ ತಮಗೆ ನಾವಕಾಶದ ನಷ್ಟ ಉಂಟಾಗದಂತೆ ಮಂಡಿ ವರ್ತಕರೇ ಸೇರಿ ಬಂದ ದಿನಸಿಯನ್ನು ತೆಗೆದು ಗಿರಾಕಿಗಳಿಗೆ ವಿಕ್ರಯಮಾಡಲು ಅನುಕೂಲವಾಗುವಂಥಾ ಒಂದು ಕಂಪನಿಯನ್ನು ಏರ್ಪಡಿಸಿರುತ್ತಾರೆ. ಹೀಗೆ ಸಾರ್ವೋದ್ಧಾರವಾಗಿ ನಡದರೆ ಅನುಕೂಲವೇ ಸರಿ — ತಾ॥ ೨೦ ನೇ ಬುಧವಾರ ಸಾಯಂಕಾಲ ೬ ಗಂಟೆ ಸಮಯದಲ್ಲಿ ಕೋಟೆಯ ಅಗ್ರಹಾರದ ಬ್ರಾಹ್ಮಣರ ಶ್ರೇಣಿಯಲ್ಲಿ ಕೆಲವು ತಿಗಳರ ಹೆಂಗಸರು ಯಾವದೋ ಒಂದು ದುಷ್ಕಾರ್ಯದ ಸಲುವಾಗಿ ಒಬ್ಬರಿಗೊಬ್ಬರು ವ್ಯಾಜ್ಯವಾಡುತ್ತಾ ಮನಸ್ವೀ ಹೈರೋಡಿನಲ್ಲಿ ಕೆಟ್ಟಮಾತುಗಳನ್ನು ಉಪಯೋಗಿ

ಸುತ್ತಿದ್ದಷ್ಟು ಪ್ರಜಾ ನಷ್ಟವಿದಿಗೆ ತುಂಬಾ ಕಿಂದಕಾಯಿತು. ಆ ಸಮಯದಲ್ಲಿ ಅಲ್ಲಿನ ಸಂಸಾರಿಕರು ಈ ದುಷ್ಟ ಹೆಂಗಸಿನ ಅಸಹ್ಯಕರವಾದ ಗಲಾಟೆಯನ್ನು ನಿಲ್ಲಿಸುವದಕ್ಕಾಗಿ ಆ ಜೀವನ ಪೊಲೀಸಿನವನನ್ನು ನೋಡುವಾಗ ಅವನೇ ಇಲ್ಲ. ಕೊನೆಗೆ ಎಲ್ಲರೂ ಆ ಶಬ್ದಗಳನ್ನು ಕೇಳಲಾರದೆ ಬಾಗಲು ಹಾಕಿಕೊಂಡರು.—ಕಳೆದ ವಾರ ಇಲ್ಲಿಗೆ ಸೆಷನ್ಸ್ ಕೋರ್ಟು ಬಂದು ಎರಡು ಕೇಸುಗಳು ವಿಚಾರಣೆಗೆ ಆದವು. ತಾ॥ ೧೧ ರಲ್ಲಿ ದಳಾಯತ ರಂಗಣ್ಣನು ಸುಣಕಮರ ಹತ್ತಿ ಪವನ ಟ್ಟಿ ಬಿದ್ದು ರಕ್ತಕಾರಿ ಪ್ರಾಣಬಿಟ್ಟನು ಇಲ್ಲಿನ ಕೋಟೆಯ ಚಿಕ್ಕ ಪೇಟೆ ಚರಂಡೀ ನೀರು ಕೆರೆಯಿಂದ ಜರಿದು ಬರುವ ಕಾಲುವೇ ನೀರಿನೊಡನೆ ನಿಂತ್ರವಾಗುತ್ತೆ. ಇದೇ ನೀರನ್ನು ಬಹುಜನರು ಸ್ನಾನಪಾನಗಳಿಗೆ ಉಪಯೋಗಿಸುತ್ತಿರುವರು ಇದರಿಂದ ಅನಾರೋಗ್ಯಕ್ಕೆ ಕಾರಣವಾಗಿರುವದರಿಂದ ಮ್ಯುನಿಸಿಪಾಲಿಟಿಯವರು ದೊಡ್ಡ ಮೋರಿ ಸ್ವಲ್ಪ ದೂರದಲ್ಲಿ ಕಟ್ಟಿಸಿರುವ ಚರಂಡಿಯನ್ನು ಚಿಕ್ಕಪೇಟೆ ಕಾಲುವೆಯ ವರೆಗೂ ತಯಾರುಮಾಡಿಸುವದರಿಂದ ವೆಚ್ಚಕ್ಕಿಂತ ಹೆಚ್ಚೊಂದರೆ ನಿವಾರಣೆಯಾಗುವದರಲ್ಲಿ ಸಂಶಯವಿಲ್ಲ.

ನೆಲಮಂಗಲ.—ಇಲ್ಲಿ ಪ್ಲೇಗ್ ರೋಗವು ನಿವಾರಣೆಯಾಗಿ ಈಗೀಗ ಜನಗಳು ಊರಿಗೆ ಸೇರುತ್ತಾ ಇದ್ದಾರೆ. ಈ ಸಲ ಸುಮಾರು ೧೪೦ ಜನಗಳಿಗೆ ಹೆಚ್ಚು ಇಲ್ಲದೆ ಪ್ಲೇಗಿನಲ್ಲಿ ಮೃತಪಟ್ಟರು. ಜನರು ಹೀಗೆ ಸಂಕಟ, ಕಷ್ಟಗಳನ್ನು ಅನುಭವಿಸಿದ್ದಲ್ಲದೆ ಕಳೆದ ಯುಗಾದಿ ಹಬ್ಬದ ದಿವಸ ಊರೀಚೆ ೧೧ ಗುಡಿಸಲು ನೊಡೆಗಳು ಬೆಂಕಿಬಿದ್ದು ಸುಟ್ಟುಹೋಯಿತು. ಮೆಡೆಯೊಳಗೆ ಹಾಕಿದ್ದ ಹುರುಳಿ ಅವರೆ ಮೂಟೆಗಳು ಸುಟ್ಟು ಹೋದವು ಸುಮಾರು ೨೦೦—೩೦೦ ರೂಪಾಯಿ ನಷ್ಟವಾಗಿರಬಹುದು.—೨೭ನೆ ತಾ॥ ಭಾನುವಾರ ಬೆಳಿಗ್ಗೆ ಉಡುಪಿ ಸ್ವಾಮಿಗಳನ್ನು ಇಲ್ಲಿನ ಮಾಧ್ವ ಮಂಡಲಿಯವರು ಪೊಲೀಸು ಸಿಬ್ಬಂದಿಯೊಡನೆ ವಾದ್ಯಘೋಷ ಸಹಿತ ಕರೆದುಕೊಂಡುಬಂದು ಭಿಕ್ಷಾವಪೂಜೆಗಳನ್ನು ಮಾಡಿಸಿದರು ನಮ್ಮ ಅಮಲ್ದಾರ್ ಮೆ॥ ಸುಬ್ಬರಾಯಲುನಾಯ್ಡು ಯವರು ಸ್ವಾಮಿಗಳನ್ನು ತಮ್ಮ ಮನೆಗೆ ತಾ ೨೩ರಲ್ಲಿ ಮರ್ಯಾದೆಯೊಡನೆ ಕರೆದುಕೊಂಡುಹೋಗಿ ಯಥೋಚಿತವಾದ ಭಿಕ್ಷೆಪಾದಪೂಜೆಗಳನ್ನು ಮಾಡಿಸಿದ್ದಲ್ಲದೆ ಮಠದವರಿಗೂ ಊರಲ್ಲಿರುವ ಬ್ರಾಹ್ಮಣರಲ್ಲರಿಗೂ ಭಾರೀ ಸಂತರ್ಪಣೆ ಮಾಡಿಸಿದರು ಈ ದಿನ ರಾತ್ರಿ ಅರ್ಧಪದ ಮಳೆ ಆಯಿತು

ದೊಡ್ಡಬಳ್ಳಾಪುರ—ಈಗ ಈ ಊರಿನಲ್ಲಿ ಛಳಿ ಜ್ವರದಿಂದ ಬಹು ಜನರು ಕಷ್ಟಪಡುತ್ತಾರೆ ಇದು ಸುಗ್ಗಿ ಕಾಲವಾಗಿದ್ದರೂ ರೂಪಾಯಿಗೆ ೧೪ ಸೇರುರಾಗಿ, ೩—೮ ಸೇರು ಅಕ್ಕಿ ಮಾರುವದು ತಾ ೧೧ನೇ ನಗರ್ತರ ಬೀದಿಯಲ್ಲಿ ಬಾಣಾಸುರನ ಆಟವನ್ನು ಆಡಿದರು. ಆ ರಾತ್ರಿ ಆಟವಾಡುವ ಸಮಯದಲ್ಲಿ ಈ ಆಟದ ಕಡೆಯವರ ಪೈಕಿ ಚಿಕ್ಕಬಳ್ಳಾಪುರದ ಚನ್ನರಾಯಿ ಗೌಡನನ್ನು ರಕ್ತ ಬರುವ ಹಾಗೆ ತಲೆಯ ಮೇಲೆ ಹೊಡೆದರಂತೆ ಏಟು ತಿಂದವನನ್ನು ಆಸ್ಪತ್ರೆಗೆ ತಂದು ಇದ್ದರು. ಕಡೆಯಲ್ಲಿ ಅವನಿಗೆ ಸ್ವಲ್ಪ ಹಣ ಕೊಡಿಸಿ ದಫೆದಾರರು ಇಬ್ಬರಿಗೂ ರಾಜಿ ಮಾಡಿಸಿದರೆಂದು ಹೇಳುತ್ತಾರೆ ಕಟ್ಟೆಯವರ ಮನೆಯಲ್ಲಿ ದೇವಾಂಗದ ಚಿಕ್ಕಮ್ಮನೆಂಬುವಳು ಭಾವಿಯಲ್ಲಿ ಬಿದ್ದು ಸತ್ತು ಹೋದಳು.—೧೬ ನೇ ತಾ ಸಬ್ಬಿ ಕೋಟೆ ಗರಡಿಯವರಲ್ಲಿ ಒಬ್ಬನಿಗೂ ಪೇಟೆ ಗರಡಿಯವರಲ್ಲಿ ಒಬ್ಬನಿಗೂ ಕುಸ್ತಿ ಬಿಟ್ಟರು ಪೇಟೆ ಗರಡಿಯ ಕಡೆಯವರು ಗೆದ್ದರೆಂದು ಪಂದ್ಯ ಕಟ್ಟಿದ್ದ ೩೦ ರೂ ಕೊಟ್ಟರಂತೆ. ಆದರೆ ಕೋಟೆ ಗರಡಿಯವರು ಕರಾರಿನ ಪ್ರಕಾರ ಕುಸ್ತಿಯಾಗಲಿಲ್ಲವೆಂದು ಹೇಳುತ್ತಾರೆ ಇಂಥಾ ಅನುಮಾನವಾದ ಕುಸ್ತಿಗಳು ನಡೆಯದ ಹಾಗೂ ಊರ ಕದನ ಗಲಭೆಗೂ ಕಾರಣವಾಗದ ಹಾಗೂ ಪಂಚಾಯಿತರು ಎಚ್ಚರಿಕೆಯಾಗಿರುವದು ಒಳ್ಳೇದು—ತಾ ೧೩ ರಲ್ಲಿ ಚೀಫ್ ಕೋರ್ಟ್ ಜಡ್ಜಿ ಮೆ॥ ನಂಜುಂಡಯ್ಯನವರು ಇಲ್ಲಿಗೆ ಬಂದು ಮುನ್ಸಿಫ್ ಕೋರ್ಟಿನ ಲೆಕ್ಕಗಳನ್ನು ನೋಡಿ ಇಲ್ಲಿನ ಸ್ಕೂಲುಗಳನ್ನು ಪರೀಕ್ಷಿಸಿದರು ಹೆಣ್ಣುಮಕ್ಕಳ ಸ್ಕೂಲಿಗೆ ವಿಜಯ ಮಾಡಿಸಿದರು ಇವರು ಬಂದ ಕಾಲವು ಒಳ್ಳೆದೆಂದು ಮಂಬರಗಳೂ ಟೌನ್ ವರ್ತಕರೂ ಮೆ॥ ನಂಜುಂಡಯ್ಯನವರಲ್ಲಿ ಮುನ್ಸೀಫ್ ಕೋರ್ಟು ಇಲ್ಲಿಯೇ ಇರಿಸುವ ವಿಚಾರದಲ್ಲಿ ಬಹು ಮನವಿ ಮಾಡಿಕೊಂಡರು ಕಡೆಯಲ್ಲಿ ಇಸರು ಅವನ್ನು ಕೊಡಿಸಿದ್ದೇನೆಂದರೆ—ಕೋರ್ಟನ್ನು ಇಲ್ಲಿಯೇ ಇರಿಸುವದಕ್ಕೆ ಆಗುವದಿಲ್ಲ ನೀವೆ ಕಾನೆ ವರ್ಗಾಯಿಸಿ ನೋಡುತ್ತಾರೆ ಇದೂ ಸರಿಯಾಗಿ ತೋರದ ಪಕ್ಷದಲ್ಲಿ ಕಡೆಗೆ ತಿರಿಗಿ ಇಲ್ಲಿಗೆ ವರ್ಗಾಯಿಸಬಹುದೆಂದು ಹೇಳಿದರಂತೆ—ಇಲ್ಲಿದ್ದ ಪೊಲೀಸ್ ಇನ್ಸ್‌ಪೆಕ್ಟರ್ ಮೆ॥ ಕೃಷ್ಣಯ್ಯನವರು ಚನ್ನಪಟ್ಟಣಕ್ಕೆ ವರ್ಗವಾಗಿ ಹೋದರು ಇವರಿಗೆ ಬದಲಿ ಮೆ॥ ರಾಜಾರಾವನಾಯಿಡು ಬಂದು ಇದ್ದಾರೆ ಇವರು ಪೊಲೀಸಿನವರ ಉಪಯೋಗಗಳನ್ನು ಬಹಳವಾಗಿ ತಿದ್ದುವದರಿಂದ ಕೆಲವು ಪೊಲೀಸ್‌ನವರು ರಾಜೀನಾಮೆ ಕೊಡುತಾರೆಂದು ವರ್ತಮಾನವುಂಟು.—ಹುಬ್ಬಳಿ ರು ಸರ್ಕಾರದವರು ಬಂದು ಕೆಲವು ಆಟಗಳನ್ನು ಆಡಿದರು ಆದರೆ ಫಲವು ಕಮ್ಮಿ ಈಗ ದೊಡ್ಡಬಳ್ಳಾಪುರದ ಚಿಕ್ಕಪೇಟೆಯವರಲ್ಲಿ ಕೆಲವರು ಇನ್ನಲ್ಲಿ ನಾಟಕವನ್ನು ಆಡುತ್ತಾರೆ—ಕಳೆದ ತಿಂಗಳಲ್ಲಿ ಈ ಅಬ್ದುಲ್ ಖಾದರ್ ಸಾಹೇಬರ ಮನೆಯಲ್ಲಿ ಸುಮಾರು ೧೪೦ ರೂಪಾಯಿನ ಜವಾ ಕಳುವಾಯಿತು. ಇದುವರಿಗೂ ಏನೂ ಪತ್ತೆ ಆದ ಹಾಗೆ ಕಾಣಲಿಲ್ಲ.

ಬೆಂಕಿಯಿಂದಾದ ಕಷ್ಟನಷ್ಟಗಳು.

ಬೆಂಗಳೂರು ನಗರ್ತರ ಪೇಟೆ

ಬೆಂಗಳೂರ ಸಿಟಿ ನಗರ್ತರ ಪೇಟೆಯಲ್ಲಿ ಸರಾಫ್ ವ್ಯಾಪಾರ ಮಾಡುತಲಿದ್ದ ೩—೪ ತಿಂಗಳಿಂದ ಆದರ ಜೊತೆಗೆ ಎವಳಿ ವ್ಯಾಪಾರವ ಮಾಡುತಲಿದ್ದ ಮೆ॥ ಕೃಷ್ಣಗಿರಿ ಮಲ್ಲಿಯಪ್ಪನವರ ಅಂಗಡಿಯಲ್ಲಿ ೨೦ನೇ ತಾ ಶುಕ್ರವಾರದ ರಾತ್ರಿ ಸುಮಾರು ೮॥ ಗಂಟೆಗೆ ಅಂಗಡಿಯಲ್ಲಿ ಹಚ್ಚಿಸಿದ್ದ ಊದುಕಡ್ಡಿಯನ್ನು ಆರಿಸದೆ ಕದಗಳನ್ನು ಹಾಕಿಕೊಂಡು ಹೋದ್ದರಿಂದ ಆ ಕಡ್ಡಿಯು ಕೆಳಕ್ಕೆ ಬಿದ್ದು ಹಾಸಿದ್ದ ಗೋಣಿ ಮತ್ತು ಜಮಖಾನಗಳಲ್ಲೆಲ್ಲಾ ಆದರ ಉರಿಯು ವ್ಯಾಪಿಸಿ ಹೋಗೆಯು ಸುತ್ತ ಮುತ್ತಲೂ ಇದ್ದ ೩—೪ ಅಂಗಡಿಗಳಲ್ಲೆಲ್ಲಾ ತುಂಬಿಕೊಂಡು, ಹೊರಗೆ ಸಹ ಹೋಗೆಯಾಡುತ್ತಿದ್ದದ್ದನ್ನು ತರಗಿನ ಮಂಡಿ ಮೆ॥ ವಿ. ನಂಜುಂಡಪ್ಪ ಮತ್ತು ಪಾಪಣ್ಣ ಸಹ ಆ ರಾತ್ರಿ ಸುಮಾರು ೧೦॥ ಗಂಟೆ ತಮ್ಮ ಮನೆಗೆ ಆ ಮಾರ್ಗವಾಗಿ ಹೋಗುತ್ತಿರುವಾಗ ಕಂಡು ಗಾಬರಿಯಿಂದ ಆ ೩—೪ ಅಂಗಡಿಗಳ ವರ್ತಕರ ಮನೆಗಳಿಗೆ ಬೇಗನೆ ಹೋಗಿ ತಿಳಿಸಲು ಎಲ್ಲರೂ ಓಡಿಬಂದು ನೋಡುವಾಗ ಹೊರಗಡೆಯೆಲ್ಲೆಲ್ಲಾ ಹೊಗೆ ತುಂಬಿಕೊಂಡಿತ್ತು. ಅಂಗಡಿ ಬಾಗಲು ತೆಗದು ಒಳಕ್ಕೆ ಹೋಗಲು ಎಲ್ಲರೂ ಹೆದರಿದರು ಆಗ ಧೈರ್ಯ ಮಾಡಿ ಆ ಅಂಗಡಿ ಒಳಕ್ಕೆ ನುಗ್ಗಿ ಅಲ್ಲಿದ್ದ ಸಾಮಾನುಗಳನ್ನೆಲ್ಲಾ ಹೊರಕ್ಕೆ ತೆಗೆದುಹಾಕಿದ ಮೆ॥ ಬಿ ಗೋಪಾಲಶೆಟ್ಟಿ ಧೈರ್ಯಕ್ಕೂ ಆಗ ಮನೆಗಳಿಗೆ ಓಡಿಹೋಗಿ ಬಿಂದಿಗೆಗಳನ್ನು ತೆಗೆದುಕೊಂಡು ಬಂದು ನೀರು ಒದಗಿಸಿ ಬೆಂಕಿ ಆರಿಸಿದ ಮೆ॥ ನಂಜುಂಡಪ್ಪ, ಪಾಪಣ್ಣ ಮುಂತಾದವರ ಸಾಹಸಕ್ಕೂ ಎಲ್ಲರೂ ಸಂತೋಷಪಟ್ಟರು.

ಕೆ ಎಸ್.

ತೊರವಂಡಗ್ರಾಮ.

ಸೊರಬ ತಾಲ್ಲೂಕಿಗೆ ಸೇರಿದ ಹೋಬಳಿ ತೊರವಂಡವೆಂಬ ಗ್ರಾಮದಲ್ಲಿ ಕಳೆದ ೧೪ ನೆ ತಾ. ಶುಕ್ರವಾರ ಹಗಲು ೨ ಗಂಟೆ ಸುಮಾರಿನಲ್ಲಿ ಪೂಜಾರಿ ಹೂಜಿಮಾಬಟ್ಟ ಎಂಬವನ ಮನೆ ಕೊಟ್ಟಿಗೆಗೆ ಬೆಂಕಿ ಹತ್ತಿ ಉರಿಯುತ್ತಿದೆ ಎಂದು ಗದ್ದಲವಾಯಿತು ಆ ಗದ್ದಲವನ್ನು ಕೇಳಿ ಜನಗಳು ಸೇರಿದರೂ ಬಹು ಬಿಸಿಲಾದ್ದರಿಂದಲೂ ನೀರು ಸ್ವಲ್ಪ ದೂರ ಇದ್ದದ್ದರಿಂದಲೂ ಬೆಂಕಿಯನ್ನು ಆರಿಸಲು ಸಾಧ್ಯವಿಲ್ಲದಂತಾಗಿ ಬೆಂಕಿಯು ೪—೬ ಹುಲ್ಲಿನ ಮನೆಗಳನ್ನೂ, ೨ ಹಂಚಿನ ಮನೆಗಳನ್ನೂ ದಹಿಸಿಬಿಟ್ಟಿತು ಜನಗಳು ಸೇರದಿದ್ದರೆ ಊರೆಲ್ಲಾ ನಿರ್ನಾಮವಾಗುತ್ತಿತ್ತು. ಈ ಎಂಟು ಮನೆಗಳೂ ದೊಡ್ಡ ರೈತರ ಮನೆಗಳು ಜನಗಳನ್ನೂ, ದನಗಳನ್ನೂ ಹೊರಗೆ ಸಾಗಿಸುವದೇ ಕಷ್ಟವಾಯಿತು ಸಾಮಾನುಗಳು ಯಾವದೂ ತೆಗೆಯಲು ಸಾಧ್ಯವಾಗಲಿಲ್ಲ ಸುಮಾರು ೬೦೦—೭೦೦ ರೂಪಾಯಿ ಮಾಲು ನಷ್ಟವಾಯಿತು. ಈ ಗ್ರಾಮದಲ್ಲಿ ಹೋದ ವರ್ಷ ಏನೂ ಬೆಳೆಯಾಗದೆ ಕೋಳಿಯಿತು ಈ ವರ್ಷ ಕಷ್ಟದಿಂದ ಸ್ವಲ್ಪ ಮಾತ್ರ ಅದನ್ನು ನಕ್ಕಿ ಮನೆಯಲ್ಲಿ ದಾಸ್ತಾನು ಮಾಡಿಕೊಂಡಿದ್ದರು ಅದೆಲ್ಲಾ ಸುಟ್ಟು ಹೋಯಿತು. ಬೇಸಾಯದ ಸಾಮಾನುಗಳೂ ಅರಿವೆ ಅಂಚಡಿಗಳೂ ಎಲ್ಲವೂ ಸುಟ್ಟುಹೋಗಿವೆ. ಈ ಬೆಂಕಿಯು ಸದರಿಯವನ ಮನೆ ಕೊಟ್ಟಿಗೆಯಲ್ಲಿ ಒಲೆಯೊಳಗಿನ ಬೂದಿಯನ್ನು ಹಾಕಿದ್ದು ಆದರಲ್ಲಿ ಕೆಂಡವಿದ್ದು ಹತ್ತಿತೆಂದು ತಿಳಿಯಿತು ಹೀಗೆ ಈ ವಿಪತ್ತಿನಿಂದ ಈ ಜನಗಳು ಧನಧಾನ್ಯವಸ್ತ್ರವಿಹೀನರಾಗಿ ಯಾವ ಬೇಸಾಯದ ಸಾಮಾನನ್ನು ಕಳಕೊಂಡ ಬಾಗಿಯೂ ಹೊಟ್ಟೆಗೂ ಬಟ್ಟೆಗೂ ಜನಗಳನ್ನು ಕೇಳುತ್ತ ಅಲೆದಾಡುವದು ನೋಡಿದರೆ ಬಹು ಪಶ್ಚಾತ್ತಾಪ ಉಂಟಾಗುತ್ತದೆ ಹುಲ್ಲು ಮನೆಯವರು ಬೆಂಕಿಯ ವಿಷಯದಲ್ಲಿ ಬಹು ಹುಷಾರಾಗಿರಬೇಕು.

ಎಂ ಎಸ್. ಜಿ

ನಿಲೋಗಲ್ಲು ಗ್ರಾಮ.

ಕಳೆದ ಸೋಮವಾರದ ದಿವಸ ಕಡಗಿ ತಾಲ್ಲೋಕ ಪೈಕಿ ನಿಲೋಗಲ್ಲುವೆಂಬಲ್ಲಿ ಬೆಂಕಿಯಿಂದಾದ ನಷ್ಟವು ದುಃಖಕರವಾಗಿರುತ್ತೆ. ಆ ಊರಿನ ಸೈಡರಲ್ಲಿ ಮುಖಂಡನಾದ ಬಸಪ್ಪ ಎಂಬವನ ಮನೆಯಲ್ಲಿ ದನಾ ಕಾಯುವ ಇಬ್ಬರು ಹುಡುಗರು ಬತ್ತ ಸೇದುವದಕ್ಕೆ ಬೆಂಕಿ ತಕ್ಕೊಂಡು ಹತ್ತಲಿಗೆ ಹೋಗಿ ಬತ್ತ ಸೇದಿ ದನಾ ಹೊಡೆದುಕೊಂಡು ಗಿಡವಿಗೆ ಹೊರಟು ಹೋದರು. ಒಳಗಿಂದ ತಂದಿದ್ದ ಬೆಂಕಿಯು ಅಲ್ಲಿಯೇ ಉಳಿಯಿತು ಸುಗ್ಗಿಯ ದಿವಸ ಇದ್ದದರಿಂದ ಹತ್ತಲದಲ್ಲಿ ಯೇ ಒಳಸ್ಥಿನ ಕೆಲಸ ನಡೆದಿತ್ತು ಮಧ್ಯಾಹ್ನ ೧೦ ಘಂಟೆಯ ಸುಮಾರಿಗಿತ್ತು ಆಳುಗಳೆಲ್ಲಾ ಕೆಲವರು ಊಟಕ್ಕೆ ಮತ್ತು ಕೆಲವರು ಹೊಲಕ್ಕೆ ಹೋಗಿದ್ದರು ಇಲ್ಲಿ ಬೆಂಕಿಯು ಹುಲ್ಲಿನಲ್ಲಿದ್ದ ೩ ಲ್ಲಿ ಮೆದೆಗೆ ತಗಲಿ ಅಲ್ಲಿಯೇ ಹತ್ತಿಕೊಂಡಿತು. ಅದಕ್ಕೆ ಗಾಳಿಯು ಸಹಾಯವೂ ಸಿಕ್ಕಿದ್ದರಿಂದ ತಕ್ಷಣ ಅದರಿಂದ ಜ್ವಾಲೆಯು ಉತ್ಪನ್ನವಾಗಿ ಹತ್ತಿರದ ಹೊಟ್ಟಿನ ಬಣವೆಗೆ ತಗಲಿಕೊಂಡಿತು. ಅನಂತರ ಅದರ ಸಮೀಪದಲ್ಲಿ ದೊಡ್ಡ ಸೊಪ್ಪಿನ ಬಣವೆಗೂ ತಗಲಿತು. ಆ ವೇಳೆ ಮನೆ ಜನರು ಅದನ್ನು ನೋಡಿ ಗಾಬರಿಯಾಗಿ ಗದ್ದಲ ಮಾಡುವಷ್ಟರಲ್ಲಿ ಊರ ಜನರು ಕಲೆತರು ಆದರೆ ಪ್ರಯೋಜನವೇನು? ಸಮೀಪದಲ್ಲಿ ನೀರೇ ಇರಲಿಲ್ಲ ಜನಗಳು ತಮ್ಮ ಮನೆಗಳಿಂದ ಕೊಡಪಾನಗಳನ್ನು ತಂದು ನೀರು ಹೊತ್ತು ಹಾಕಿ ಬೆಂಕಿಯನ್ನು ನೊಂದಿಸುವ ಪ್ರಯತ್ನ ಮಾಡಿದರು ಅಷ್ಟರಲ್ಲಿ ಗಾಳಿಯು ಬಲವತ್ತರವಾದ್ದರಿಂದ ಕಿಡಿಗಳು ಪ್ರಸಾರವಾಗಿ ಸುತ್ತಮುತ್ತಲಿನ ಬೇರೆ ಜನರ ಬಣವೆಗಳಿಗೆ ತಗಲಿತು. ಮೊದಲೇ ಈ ಊರಲ್ಲಿ ನೀರಿನ ತಾಪತ್ರಯ, ಅದರಲ್ಲಿ ಪ್ರಚಂಡವಾದ ಬೇಸಿಗೆ, ಕೇಳುವದೇನು? ಜನಗಳ ಪ್ರಯತ್ನವೆಲ್ಲಾ ನಿಷ್ಫಲವಾಗಿ ಹೋಯಿತು ಸುಮಾರು ಮೂರು ತಾಸಿನೊಳಗೆ ೫೦—೬೦ ದೊಡ್ಡ ದೊಡ್ಡ ಬಣವೆಗಳು ಅಗ್ನಿಯ ಪಾಲಾದದ್ದಲ್ಲದೆ ಬೆಂಕಿಯನ್ನು ಆರಿಸುವದರಲ್ಲಿ ಒಬ್ಬ ಮನುಷ್ಯನಿಗೆ ಅಪಾಯವಾದನು ಮನೆಗಳಿಗೇನೂ ತಗಲಲಿಲ್ಲ ಸದರಿ ಬಸಪ್ಪನ ಹತ್ತಲಲ್ಲಿ ಕಟ್ಟಿದ್ದ ಎರಡು ಎತ್ತುಗಳ ಪೈಕಿ ಒಂದು ಜೀವ ಉಳಿಸಿಕೊಳ್ಳಲಿಕ್ಕೆ ಕಟ್ಟಿದ್ದ ಹಗ್ಗ ಹರಿದು ಪಲಾಯನ ಹೇಳಿತು ಮತ್ತೊಂದಕ್ಕೆ ಮಾತ್ರ ಸ್ವಲ್ಪ ಇಜಾ ಆಗಿರುತ್ತದೆ ಇದರಿಂದ ಆ ಊರಿನ ದನಗಳಿಗೆಲ್ಲಾ ಒಂದು ವರ್ಷದ ಗ್ರಾಸವು ಹಾನಿಯಾದ್ದರಿಂದ ಅಲ್ಲಿನ ಜನಗಳೆಲ್ಲಾ ತುಂಬಾ ವ್ಯಥೆಪಡುತ್ತಲಿದ್ದಾರೆ.

ಎಸ್. ಎಚ್.

ಚಿಕ್ಕನಾಯಕನ ಹಳ್ಳಿ

ತುಂಕೂರ್ ಡಿ॥ ಚಿಕ್ಕನಾಯಕನ ಹಳ್ಳಿಯಲ್ಲಿ ಜನರು ಪ್ಲೇಗಿನಿಂದ ಊರು ಬಿಟ್ಟು ಸುಮಾರು ೪—೬ ತಿಂಗಳಿಂದಲೂ ಷೆಡ್ಡುಗಳಲ್ಲಿ ವಾಸಮಾಡುತ್ತಾರೆ. ಈಗ ೨—೩ ತಿಂಗಳಿಂದ ರೋಗವು ನಿಂತು ಸರ್ಕಾರದವರು ಊರಿನ ಮನೆಗಳನ್ನು ಡಿಸಿಫೆಕ್ಟ್ ಮಾಡುತ್ತಾರೆ. ಜನಗಳು ಇನ್ನೂ ಗುಡಿಸಲುಗಳಿಂದ ಊರಿಗೆ ಬಂದು ಸೇರಿಲ್ಲ ಇಂಥಾದ್ದರಲ್ಲಿ ತಾ ೨೦ ನೇ ಶುಕ್ರವಾರ ಊರೊಳಗೆ ಆಕಸ್ಮಾತ್ ಬೆಂಕಿ ತಗಲಿ ಉರಿಯುತ್ತಾ ಇದ್ದು ಸುಮಾರು ೧೦೦ ಅಡಿಗಳ ವರೆಗೆ ಎತ್ತರಕ್ಕೆ ಸುತ್ತುಮುತ್ತಲೂ ೧—೨ ಮೈಲಿಗಳ ವರೆಗೆ ಜ್ವಾಲೆಯು ಯಂತೆ ಬೆಳಕು ಆಗಿ ಉರಿಯುತ್ತಿರುವಲ್ಲಿ ಊರಿಗೆ ಸುಮಾರು ೧ ಫರ್ಲಾಂಗ್ ದೂರ ಗುಡಿಸಲಿನಲ್ಲಿದ್ದ ಗಾಣಿಗರ ಚಿಕ್ಕಣ್ಣನೆಂಬುವ ಸುಮಾರು ರಾತ್ರಿ ೧೦ ಗಂಟೆಯ ಸಮಯದಲ್ಲಿ ತನ್ನ ಗುಡಿಸಲಿನಿಂದ ಹೊರಗೆ ಎದ್ದು ಬರುತ್ತಲೇ ಆಕಾಶಕ್ಕೆ ಮುಟ್ಟುವಂತೆ ಉರಿ ಎದ್ದು ಬರುತ್ತಿದ್ದದ್ದನ್ನು ನೋಡಿ ಊರೊಳಗೆ ಯಾವದೋ ಮನೆಗೆ ಬೆಂಕಿ ತಗಲಿದೆ ಎಂದು ಬಹಳ ಶಬ್ದದಿಂದ ಕೂಗಿಕೊಳ್ಳಲು ಸುತ್ತಲೂ ಇದ್ದ ಗುಡಿಸಲವರು ಎದ್ದು ನುಡುತ್ತಿದ್ದ ಮನೆಯ ಬಳಿಗೆ ಬಂದು ಸದರಿ ಉರಿಯನ್ನು ನೋಡಿ ಸ್ತಂಭೀಭೂತರಾಗಿ ನಿಂತರು ಅಷ್ಟರಲ್ಲೇ ನಾನು ನನ್ನ ಗುಡಿಸಲ ಬಳಿ ಇದ್ದ ೧೫—೨೦ ಜನಗಳೂ ಹೋಗಿ ಸದರಿ ಮನೆಯು ಹತ್ತಿಕೊಂಡು ಗಾಳಿಯಿಂದ ಹಾರಾಡುತ್ತಿದ್ದ ಸಣ್ಣ ಸಣ್ಣ ಬೆಂಕಿಯ ಕಿಡಿಗಳಿಂದಲೂ, ಬೆಂಕಿಯಿಂದ ಸುಟ್ಟು ಒಡೆದು ಬಿದ್ದು ಹಾರುತ್ತಿದ್ದ ಹೆಂಚುಗಳ ಚಲ್ಲಾಟದಿಂದಲೂ, ಕಂಭಗಳು ಸುಟ್ಟು ನೆಲಕ್ಕೆ ಬೀಳುವ ಕಿಡಿಗಳಿಂದಲೂ ಉರಿಯುತ್ತಿದ್ದದ್ದನ್ನು ನೋಡಿ ನಾನು ಮೊದಲು ಸುಮಾರು ೭ ಆಳಿನುದ್ದದ ಗೋಡೆಹತ್ತಿ, ನಂತರ ೩ ಯಾತ್ ಸಾಹೇಬರು, ಕರೀಂ ಸಾಹೇಬರು, ಮಾಮದ್ ಮುರ್ಷೇ ಸಾಹೇಬರು ಮೊದಲಾದ ಅಲ್ಲಿ ಸಾಹೇಬರು, ಮುಂತಾಗಿ ೧೦—೧೦ ಜನಗಳನ್ನು ಮೇಲಕ್ಕೆ ಬರಮಾಡಿಕೊಂಡು ಉರಿಯುತ್ತಿದ್ದ ಮನೆಯ ಹಂಚುಗಳನ್ನು ದೊಣ್ಣೆಗಳಿಂದ ಹೊಡೆದು ಕೆಡವಿಸಿತು. ಅಷ್ಟರಲ್ಲೇ ಅದೇ ಮನೆಗೆ ಜಂಟಿಯಾದ ೩ ಮನೆಗಳಿಗೆ ಉರಿಯು ವ್ಯಾಪಿಸಿತು ಆಗ್ಗೆ ಸುಮಾರು ೧೦॥ ಗಂಟೆಯ ವೇಳೆಯಾಗಿತ್ತು ಸದರಿ ಬಹಾದ್ದೂರರೂ ನೀರಿನ ಕಾಪನ್ನು ಮಾಡಿದ್ದರಿಂದ ಉರಿ ಅಂಟಿದ್ದ ಪಕ್ಕದ ಮನೆಗಳನ್ನು ಅರಿಸಿ ಕೆಳಕ್ಕಿಳಿದು ಉರಿ ತಗಲಿ ಮುರಿದು ಬಿದ್ದ ತೊಲೆ ಕಂಭಗಳನ್ನು ಬೆಳಗಿನ ೬ ಗಂಟೆ ತನಕ ಆರಿಸಿದೆವು ಸಂಪೂರ್ಣವಾಗಿ ಬೆಂದುಹೋದ ಮನೆಯು ಇದೇ ಊರಿನ ದೇವಾಂಗದ ತಿಮ್ಮದಾಸಯ್ಯನವರದಾಗಿದೆ ಮನೆಯು ಬಹಳ ನಾಜೂಕಾಗಿ ಮರದ ಸಾಮಾನುಗಳ ಶೃಂಗಾರಿಕೆಯಿಂದ ಮಾಡಿದ ಮಹಡಿ ಕಂಭಗಳದಾಗಿ ಸುಮಾರು ಎರಡು ಸಾವಿರ ರೂಪಾಯಿ ಬಾಳುತ್ತಿತ್ತು. ಸದರಿ ಬೆಂಕಿಯನ್ನು ಆರಿಸದೆ ಇದ್ದರೆ ಸುತ್ತಲೂ ಇದ್ದ ಬಡವರ ೧೦೦—೧೫೦ ಮನೆಗಳು ಸುಟ್ಟು ಹೋಗಿ ಬಡಜನರಿಗೆ ತುಂಬಾ ತೊಂದರೆಯಾಗುತ್ತಿತ್ತು ಅದ್ದರಿಂದ ಸದರಿ ಗಾಣಿಗರ ಚಿಕ್ಕಣ್ಣನ ಮನೆಯ ಮೇಲೆ ಹತ್ತಿ ಉರಿ ಆರಿಸಿದ ೧೦—೧೨ ಜನ ಮನುಷ್ಯರ ಮತ್ತು ಪೊಲೀಸ್ ಜಮಾದಾರ್ ಮುಂತಾದವರ ಶ್ರಮವನ್ನು ಎಷ್ಟೆಂದು ಹೇಳಿದರೂ ತೀರದು ಮತ್ತು ಪ್ರಾಣ ನಷ್ಟವಾಗದೇ ಇದ್ದದ್ದಕ್ಕೂ ನಷ್ಟವಾಗುತ್ತಿದ್ದ ೧೦—೧೫ ಸಾವಿರ ರೂಪಾಯಿ ಪದಾರ್ಥಗಳ ಬಡವರ ಮನೆಗಳು ಅಪಾಯದಿಂದ ಉಳಿಕೊಂಡಿದ್ದಕ್ಕೂ ಎಲ್ಲರೂ ಸಂತೋಷಪಡ ಬೇಕೆಂದು ನಂಬುತ್ತೇನೆ.

ಎಸ್ ಐ

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರುವ ಬಾತ್ಮಿಗಳಿಗೆ ನಾವು ಏನಾ ಹೊಣೆಯಲ್ಲ ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸಬೇಕಲ್ಲದೆ ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು. ಇಂಥವುಗಳಿಗೆ ನಾವು ವಿನಾ ಹೊಣೆಯಲ್ಲ

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರು ಆಗುವದಿಲ್ಲ ಎಂಬೋದನ್ನು ಸಕಲರೂ ತಿಳಿಯತಕ್ಕದ್ದು.—ಎಡಿ

ಕರೆಸ್‌ಪಾಂಡೆಂಸ್.

ತಾಲ್ಲೂಕ್ ರೆಕಾರ್ಡು ಬೇಕಾಗಿದೆ

ಅಯ್ಯಾ,

ಮಂಡ್ಯದ ತಾಲ್ಲೂಕ ಮಾದನಾಯಕನಹಳ್ಳಿ ಗ್ರಾಮದ ಪಟೇಲಿ ಹೋಕಾದ್ದುಮೆಯಲ್ಲಿ ನನಗೆ ಅನಗತ್ಯವಾಗಿ ಮೈಸೂರು ಗವರ್ನಮೆಂಟಿನ ವರು ಕೌನ್ಸಿಲರವರ ಸನ್ನಿಧಾನದಿಂದ ಹುಕುಮು ಆಗಿರುವ ಹುಕುಂ ಆನುಸರಿಸಿ ನನ್ನ ತಿಳುವಳಿಕೆ ಬಗ್ಗೆ ಸದರಿ ಮೊಕದ್ದಮಾ ರಿಕಾರ್ಡಿನಲ್ಲಿ ಕೆಲವು ಕಾಪಿಗಳನ್ನು ಅಪೇಕ್ಷಿಸಿ ಆ ಬಾಗಾಯಿತುದಾರ್‌ಗಳನ್ನು ಗವರ್ನಮೆಂಟಿನವರಿಗೆ ಗುಮಾಯಿಸಿಕೆ ಕೃಪೆ ಬಿಂದದ್ದರ ಮೇಲೆ ಆ ಬ್ಯಾಗೆ ಫ್ರೆಂಚ್ ದಾಕ್ಸ್ ಡಿವಿಜನ್ ಆಫೀಸರವರು ಕೃಪೆ ದಯಪಾಲಿಸಿರುವದರಲ್ಲಿ "ನೀನು ನಮಗೆ ಬರೆದಿರುವ ಪಟೇಲಿ ಸಂಬಂಧವಾದ ಸವಾಲಿಗೆ ತಾಲ್ಲೂಕಿನಿಂದ ಬಂದದ್ದನ್ನು ಮೇಲಾಗಿ ನೀನು ಕೇಳುವ ದಾಖಿಲೆ ಯಾವ ೨ ಪೋಲಿ ರುಲ್ಲವಾಗಿ ನಿನ್ನ ಹೋಲಿಕೆ ಕಾಪಿ ಕೊಡಲು ಆ ಶಾಖೆಯಲ್ಲಿ ತಿಳಿಯುವದು" ಎಂಬದಾಗಿ ನಮೂದಿಸಿರುತ್ತಾರೆ ಒಟ್ಟಾರೆ, ತಾವೇ ಆಗಲಿ ತಮ್ಮ ಪತ್ರಿಕಾ ವಾಚಕ ಮಹಾಶಯರೇ ಆಗಲಿ ಈ ಕಾಪಿಗಳನ್ನು ಹೊಂದಲು ಏನು ಮಾಡಿನೆ ನಡಿಸಬೇಕಾದ ರೀತಿಯನ್ನು ತಮ್ಮ ಈ ಪತ್ರಿಕೆಯ ದ್ವಾರ ದಯವಿಟ್ಟು ತಿಳಿಸಿದಲ್ಲಿ ತುಂಬಾ ಕೃತಾರ್ಥನಾಗುವೆನು.

ಪ॥ ಮಲ್ಲೇಗೌಡ

ಮಲೆನಾಡಿನ ಹುಲಿಕಾಟ.

ಅಯ್ಯಾ,

ಕೊಡಗುಜಿಲ್ಲಾ ಪಾಡಿನಾಲ್ಕುನಾಡು ತಾಲ್ಲೋಕು ಕಡಿಯತ್ತು ನಾಡು ನಲ್ಲಿಯಂಡವೆಂಬ ಹಳ್ಳಿಯಲ್ಲಿ ಕೊಡಗರು ಬೇಟೆ ಉದ್ದೇಶ ವಾಗ್ಗೈದು ಪಸರ ೮ ತಾ ೨೭ನೆ ದಿನ ಸಂಜೆ ೬ ಗಂಟೆ ಸಮಯದಲ್ಲಿ ಬೇಗೆ ಕಾಗಿಗೆ ಬೇಟೆ ನಾಯಿಗಳು ಬಿಟ್ಟು ಕೆಲರೂ ಬಡಿನ ಬಡಿಯ ಪೊದೆಯೊಳಗೆ ಹೋಗಿ ಕೂಗಿಕೊಂಡದ್ದು ಇದೇನೆಂದು ನೋಡುವಾ

ನೋ ಒಂದು ಚಿಕ್ಕ ಪ್ರಾಣಿ ಎಂದು ಭಾವಿಸಿ ಗುಂಡುಹೊಡೆದರು ಆ ಪೊದೆಯಿಂದ ದೊಡ್ಡದಾದ ಒಂದು ವ್ಯಾಘ್ರವು ಹೊರಟು ಪಕ್ಕ ದಲ್ಲಿ ನಿಂತಿದ್ದ ಬೇಟೆಗಾರರ ಪೈಕಿ ಒಬ್ಬನನ್ನು ಅಂದರೆ ಕೋ ಟಿಕೃಷ್ಣನೆಂಬ ಒಡಗನ ಮೇಲೆ ಹಾರಿ ಆತನ ಬಲದ ತೋಳ ನ್ನು ಕಚ್ಚಿ ಸೀಳಿ ಅವನನ್ನು ಅಲ್ಲಿಯೇ ಕೆಡವಿಬಿಟ್ಟಿತು. ಆ ಕೂಡ್ಲೆ ಬೇಟೆಗಾರರಲ್ಲಿ ಒಬ್ಬಿಬ್ಬರು ಮೂರು ನಾಲ್ಕು ಗುಂಡು ಹೊಡೆದಾಗ್ಯೂ ಅದು ಸಿಕ್ಕದೆ ೨-೩ ನಾಯಿಗಳನ್ನು ಸಹ ಕಚ್ಚಿ ಕೆಡವಿ ಅನಾಹುತ ಮಾಡಿತು. ಅಷ್ಟರಲ್ಲೇ ಕತ್ತಲೆಯಾದ್ದರಿಂದ ಹಾಗೆ ಊರಿನವರೆಲ್ಲ ಹಿಂದಿರುಗುವದಕ್ಕೆ ಹೋದನರು ಈ ಅನಾಹುತಕ್ಕೆ ಗುರಿಯಾದ ಮನುಷ್ಯ ನನ್ನೂ ನಾಯಿಗಳನ್ನೂ ಸಹ ಹೊತ್ತುತಂದದ್ದಾಯಿತು. ಅದೇ ದಿವಸ ರಾತ್ರಿ ಹುಲಿಯು ಅಲ್ಲಿಂದ ಒಂದು ಮೈಲಿ ದೂರ ಹೋಗಿ, ಮಾರನೆದಿನ ಬ್ರಾಹ್ಮಣ ಶ್ರೀನಿವಾಸನೆ ಎಂಬವರ ೧ ಫರ್ಲಾಂಗ್ ದೂರದಲ್ಲಿ ಅವಿತುಕೊಂಡಿತು ಆ ಮನೆಗೆ ಕೂಲಿಗೋಸ್ಕರ ಹೋಗುತ್ತಿದ್ದ ಒಬ್ಬ ಹೊಲೆಯನು ಹುಲಿಯನ್ನು ಕಂಡು ಆ ಮನೆಯವರಿಗೆ ತಿಳಿಸಿದನು. ಯಜಮಾನನು ತನ್ನ ಸಂಗಡ ಕರೆದುಕೊಂಡು ಫಲಾನೆ ಸ್ಥಳಕ್ಕೆ ಬಂದು ನೋಡುವ ಷ್ಟರಲ್ಲಿಯೇ ಹುಲಿಯು ಆರ್ಭಟದಿಂದ ಎದ್ದು ಸಡರಿ ಮನೆ ಸುಬ್ಬೈ ಯನ ಮೇಲೆ ಹಾರಿ ಆತನ ಎಡದ ತೋಳನ್ನು ಕಡಿದು ವಿಪರೀತವಾಗಿ ಗಾಯಮಾಡಿ ಹೋಗಬೇಕೋಗುವಷ್ಟರಲ್ಲೇ ಆಳು ಓಡಿಹೋಗಿ ಆ ಮನೆ ಯವರಿಗೂ ಊರಿನವರಿಗೂ ತಿಳಿಸಿ ಬಂದು ನೋಡುವಾಗ್ಯೆ ಮೂರ್ಛೆ ಯಾಗಿ ಬಿದ್ದಿದ್ದನು. ತರುವಾಯ ಎಲ್ಲರೂ ಸೇರಿ ಆತನನ್ನು ಹೊತ್ತು ಕೊಂಡು ಹೋಗಿಬಿಟ್ಟರು. ಅಲ್ಲಿಂದ ಹುಲಿಯು ಎಲ್ಲಿಯೋ ಹೋ ಯಿತು. ಇಂಥಾ ಕಷ್ಟಕ್ಕೆ ಗುರಿಯಾದ ನಮಗೆ ಕೊಟ್ಟಿರುವ ಬಂದೂಕು ಗಳನ್ನು ಬಿಡುವದು ಒಂಟಿಯಾಗಿ ಆಯುಧವಿಲ್ಲದೆ ತಿರುಗುವ ದು ಪ್ರಯಾಸವಾಗಿದೆ. ಆದುದರಿಂದ ನಮ್ಮ ಡಿಸ್ಟ್ರಿಕ್ಟ್ ಮೆಜಿಸ್ಟ್ರೇ ಟರವರು ಸದಾ ಬಂದೂಕ್ ವಗೈರೆ ಆಯುಧವನ್ನು ಹಿಡಿಯುವಂತೆ ಇ ನ್ನು ಮುಂದೆ ಲೈಸೆನ್ಸ್ ಕೊಟ್ಟು ನಿರ್ಭೀತರಾಗಿ ತಿರುಗಾಡುವಂತೆ ಮಾ ಡಬೇಕಾಗಿ ಬೇಡುತ್ತೇವೆ

ಎಸ್ ಎಂ ಎಸ್

ನಾಯಿಗಿರುವ ಸ್ವಾಮಿಭಕ್ತಿಯು

ಸ್ವಾ

ಮಂಡ್ಯದ ತಾಲ್ಲೂಕ್ ಬಸರಾಳು ಹೋಬಳಿ ಪೈಕಿ ಚಂದಗಾಲ್ ಗ್ರಾಮದಲ್ಲಿರುವ ಗಂಗಡಕಾರ ಒಕ್ಕಲಿಗರ ಜಾತಿ ಸಂಬೂಗೌಡನಿಗೆ ೭ ವರ್ಷಗಳ ಕೆಳಗೆ ಮೃತಪಟ್ಟವ ಹೆಂಡತಿ ಚಿಣ್ಣಮಕ್ಕಳು ಅವರಲ್ಲಿ ೩ ವರುಷ ವಯಸ್ಸಿನ ಕಟ್ಟ ಎಂಬ ಹೆಸರುಳ್ಳ ೧ ಗಂಡುಮಗು ಇವೆ. ಇದೇ (ಕಳೆದ ಫೆಬ್ರುವರಿ) ಮಾಹೆ ತಾ ೧೬ ನೇ ರವಿವಾರ ೨ನೆ ಘಂಟೆಯ ಸಮಯದಲ್ಲಿ ಚಿಟ್ಟೋ ಸಂಬೂಗೌಡನ ಹೆಂಡತಿ ಚಿಕ್ಕಮ್ಮನೆಂಬವಳು ತನ್ನ ಮಗನನ್ನು ತೊಟ್ಲಿನಲ್ಲಿ ಮಲಗಿಸಿ ತೂಗಿ ಹತ್ತಿರದ ನಾಲೆಯ ಊರಿಗೆ ಪಶ್ಚಿಮ ದಿಕ್ಕಿನಲ್ಲಿರುವ ಕಟ್ಟೆಗೆ ನೀರಿನ ಬಿಂದಿಗೆಯನ್ನು ತೆಗೆದುಕೊಂಡು ನೀರಿಗೆ ಹೋದ ಸಮಯದಲ್ಲಿ ಮನೆಯೊಳಗೆ ಇದ್ದ ಅವರ ನಾಯಿ ಮನೆಗೆ ಒಂದು ಮಗು ಮಲಗಿಸಿದ್ದ ಹೊರಬಾಗಿಲಿನಲ್ಲಿ ಕಾಲಿನ ಮೇಲೆ ತಲೆ ಇಟ್ಟುಕೊಂಡು ಮಲಗಿತ್ತು. ಜನರೆಲ್ಲಾ ಸುಗ್ಗಿ ಕಾಲವಾದ್ದರಿಂದ ಕಣದ ಕೆಲಸದಲ್ಲಿದ್ದರು ತೊಟ್ಲಿನಲ್ಲಿ ಮಲಗಿರುವ ಬಾಲಕ ಈ ನಾಯಿ ವಿನಹಾ ಮತ್ಯಾರೂ ಇರಲಿಲ್ಲ. ನೀರಿನ ಕಟ್ಟೆಯ ಸುಮಾರು ೪-೫ ಫರ್ಲಾಂಗು ಹೆಂಗಸು ಹೊರಟು ಹೋಗುತ್ತಲೇ ಗುಡಾಣದ ಸಂದಿನಿಂದ ಸು ಮಾರು ೭ ಗೇಣು ಗಾತ್ರವೂ ೫ ಅಡಿ ಉದ್ದವೂ ಇದ್ದ ಕರಿ ನಾಗರ ಹಾವು ಮಗುವಿನ ತೊಟ್ಲಿನ ಹತ್ತಿರಕ್ಕೆ ಬರುತ್ತಿರಲಾಗಿ ನಾಯಿ ಯು ಬೊಗಳಿ ಆ ಹಾವನ್ನು ೩ ತುಂಡಾಗಿ ಕತ್ತರಿಸಿ ರಕ್ತದ ಬಾ ಯಿಂದ ಬಾಗಿಲಲ್ಲಿ ಮಲಗಿತ್ತು. ನೀರಿಗೆ ಹೋಗಿದ್ದ ಯಜಮಾನಗಿತ್ತಿ ಯು ಬಂದ ನಾಯಿಯ ಬಾಯ ರಕ್ತವನ್ನು ನೋಡಿ ತನ್ನ ಮಗು ವನ್ನು ಕಚ್ಚಿ ಕೊಂದಿದೆಯೆಂಬ ಆಕ್ರೋಶದಿಂದ ಕೋಪದಲ್ಲಿ ನೀರಿನ ಬಿಂದಿಗೆಯನ್ನು ಎಸೆದು ಬಿಟ್ಟು ನಾಯಿ ಕೊಲ್ಲುವದಕ್ಕೆ ಕೊಲ್ಲು ಮತ್ತು ಕಡುಗೋಪದಿಂದ ಕರೆದು ತಡುಕಿದಳು. ನಾಯಿಯ ಸುಕೃತಕ್ಕೆ ಆ ಹೆಂಗಸಿಗೆ ಯಾವ ಆ ಯುಧವೂ ಸಿಕ್ಕಲಿಲ್ಲ. ನ ತರ ಮಗು ಮಲಗಿಸಿದ್ದ ಮನೆಗೆ ಆಯುಧ ತೆಗೆಯುವದಕ್ಕೆ ಹೋದಾಗ ತೊಟ್ಲಿನಲ್ಲಿ ಸುಖನಿದ್ರೆ ಮಾಡುತ್ತಿದ್ದ ಮಗುವನ್ನೂ ಆ ತೊಟ್ಲಿನ ಬಳಿ ತುಂಡಾಗಿಬಿದ್ದಿದ್ದ ಹಾವನ್ನೂ ನೋಡಿ, ಆಹಾ! ಸ್ವಲ್ಪ ನಿಧಾನಿಸದಿದ್ದರೆ ನನ್ನ ಕೈಯನ್ನು ಕಾಪಾ ಡಿದ ನಾಯಿಯನ್ನು ಅನ್ಯಾಯವಾಗಿ ಕೊಂದು ಪಾಪ ಕಟ್ಟಿಕೊಳ್ಳುತ್ತಿದ್ದೆ ನಲ್ಲ!" ಎಂದು ವಿಸ್ಮಯಪಟ್ಟು ಈ ಸಂಗತಿಯನ್ನು ಊರಿನ ಇತರರಿಗೆ ತಿಳಿಸಿದಳು. ನಾನು ಆ ಗ್ರಾಮಕ್ಕೆ ಹೋಗಿದ್ದ ಈ ಆಶ್ಚರ್ಯ ವನ್ನು ಕೇಳಿ ಹೋಗಿ ನೋಡಿದೆನು. ಮನೆಯಲ್ಲಿ ಹಾವೆಲ್ಲಿಂದ ಬಂತೆಂ ದು ವಿಚಾರಿಸಿದಾಗ ಗುಡಾಣದ ಸಂದಿನಲ್ಲಿ ಒಂದು ಇಲಿಯ ಬಿಲವಿ ದ್ದು ಅದರಿಂದಲೇ ಹಾವು ಇಲಿಗೆ ಬಂದ ಗುರುತುಗಳಿದ್ದವು. ಉಳಿದ ವನ್ನು ಕಂಡು ಅವರ ತಂತೆತಾಯಿಗಳ ಸಂತೋಷಾತಿಶಯವೂ ನಾಯಿ ತೋರಿಸಿದ ಸ್ವಾಮಿಭಕ್ತಿಯೂ ಅಪಾರವಾಗಿತ್ತನೆ

ಎಚ್. ಕೆ

[ಈ ವಾರ್ತೆ ನಮಗೆ ತಲುಪಿ ಸುಮಾರು ಒಂದು ತಿಂಗಳಾಯಿತು. ಇದ ಕೆಲವರ ಮಕ್ಕಳು ಓದುವಂತಾ ಕಾರ್ಯಾಲಯ ಲಕ್ಷ್ಯವಾದ ದು ಜ್ಞಾಪಕಕ್ಕೆ ಬಂದು, ಇದರ ನಿಜಸ್ಥಿತಿಯನ್ನು ಪರಭಾರೆ ವಿಚಾರ ಮಾಡಿದೆವು. ಇದು ಯಥಾರ್ಥವಾಗಿ ನಡೆದಿರುವಂಥಾ ವೃತ್ತಾಂತವೇ ಹೌದೆಂದು ತಿಳಿದುಬಂದಿದೆ.]—ಎಡಿ

ವಿಶ್ವಕರ್ಮವಾಂಶಸ್ಥರ ವಿದ್ಯಾಭ್ಯಾಸ.

ಸ್ವಾ

ಪೂರ್ವಕಾಲದಿಂದ ಮತಸ್ಥರು ಈ ನಮ್ಮ ಮೈಸೂರು ದೇಶದಲ್ಲಿ ಬಹುಮಂದಿ ಇದ್ದಾರೆ. ಇವರು ಅನಾದಿಯಿಂದಲೂ ಒಂದೇ ಕಸಬಿ ನಲ್ಲಿ ಪ್ರವರ್ತಿಸಿದ್ದಾರಲ್ಲದೆ ಬೇರೆ ಚಮತ್ಕಾರವಾದ ಯಾವ ಕೈಗಾರಿಕೆ ಯನ್ನೂ ತಮ್ಮ ಬುದ್ಧಿಕುಶಲತೆಯಿಂದ ಕಂಡುಹಿಡಿದದ್ದನ್ನು ಕೇಳಿ ಯೂ ನೋಡಿಯೂ ಇಲ್ಲ. ನಾಗರೀಕರಾದ ಆಂಗ್ಲೇಯರ ರಾಜ್ಯ ಭಾರವು ಬಂದನಂತರ ಅನೇಕ ಜನಗಳು ಸೀಮೆಯಲ್ಲಿ ಯಂತ್ರಗಳಿಂದ ಮಾಡಲ್ಪಟ್ಟ ನೂತನ ಒಡವೆಗಳನ್ನು ತರಿಸಿ ಈ ದೇಶದಲ್ಲಿ ವಿಕ್ರಯ ಮಾಡಿ ಲಾಭವನ್ನು ಹೊಂದಿ ಸುಖಪಡುತ್ತಾರೆ. ಈ ನಮ್ಮ ಜಾತಿಯ ವರು ಮಾಡುವ ಒಡವೆಗಳಾದರೋ ಸೀಮೆಯ ಒಡವೆಗಳನ್ನು ಹೋಲ ದಿರುವುದರಿಂದಲೂ ಮತ್ತು ಹೆಚ್ಚು ಬೆಲೆಯಾದ್ದರಿಂದಲೂ ಇವುಗಳನ್ನು ಯಾರೂ ಅಪೇಕ್ಷಿಸುವುದಿಲ್ಲ. ಆದ್ದರಿಂದ ಇವರ ಜೀವನ ನಡೆವುದು ದು ರ್ಲಭವಾಗಿದೆ. ಹೀಗಿರುವಲ್ಲಿ ಇವರಿಗೆ ಅಕಸ್ಮಾತ್ತಾಗಿ ಯಾವುದಾದ ರೊಂದು ವ್ಯಾಧಿ ಸಂಭವಿಸಿದ್ದೇ ಆದರೆ, ಅದನ್ನು ಗುಣಪಡಿಸಿಕೊಳ್ಳು ವುದಕ್ಕೆ ಇತರರಲ್ಲಿ ಸಾಲಮಾಡಬೇಕಾಗುವದು. ಈ ಸಾಲವನ್ನೂ ಮತ್ತು ಅವರ ಬಡ್ಡಿಯನ್ನೂ ತೀರಿಸುವುದರಲ್ಲಿಯೇ ಮುಖ್ಯವಾಗಿ ಈ ಲೋಕವನ್ನು ಬಿಡುವರು. ಈ ಸಾಲಕ್ಕೆ ಆತನ ಪತ್ನೀ ಪುತ್ರರು ಋಣ ಭಾರಕ್ಕೆ ಪಾತ್ರರಾಗಿ ಗ್ರಾಸವಿಲ್ಲದೆ, ದಾರಿದ್ರ್ಯಕ್ಕೆ ಜನ್ಮಗೃಹರಾಗಿರು ವರು. ಈ ಮತಸ್ಥರು ಸರ್ಕಾರಿ ಉದ್ಯೋಗದಲ್ಲಿ ಪ್ರವೇಶಿಸುವುದಾದ ರೇನೇ ವಿದ್ಯೆಯನ್ನು ಕಲಿಯಬೇಕೇ ಹೊರತು ಇಲ್ಲದಿದ್ದರೆ ವಿದ್ಯೆ ಯನ್ನು ಕಲಿಯುವುದು ಅನಾವಶ್ಯಕವೆಂದು ತಿಳಿದು, ಮೌಢ್ಯದಿಂದ ತಮ್ಮ "ಕುಲಕಸಬೇ" ಶ್ರೇಷ್ಠವೆಂದು ತಮ್ಮ ಮಕ್ಕಳಿಗೂ ಸಹ ಅದ ರಿಂದುಂಟಾಗುವ ಪ್ರಯೋಜನಾಪ್ರಯೋಜನಗಳನ್ನು ತಿಳಿಯದೆ ಅಭ್ಯಾ ಸ ಮಾಡಿಸುತ್ತಿರುವರು. ಇನ್ನು ಮೇಲಾದರೂ ಇವರು ತಮ್ಮ ಮಕ್ಕ ಳಿಗೆ ಬಾಲ್ಯದಲ್ಲಿ ವಿದ್ಯೆಯನ್ನು ಕಲಿಸಿ ಒಳ್ಳೇ ಮಾರ್ಗಕ್ಕೆ ತಂದಲ್ಲದೆ ತಮ್ಮ "ಕುಲಕಸಬಿ"ನಿಂದ ಉನ್ನತ ಸ್ಥಿತಿಗೆ ಎಂದಿಗೂ ಬರಲಾ ರರು. ವಿದ್ಯೆಯು ಸಮಸ್ತ ಕೈಗಾರಿಕೆಗಳಿಗೆ ಮಾತೃಪ್ರಾಯವಾದ್ದು, ಇಹಲೋಕ ಪರಲೋಕಗಳ ಸುಖಗಳಿಗೆ ಸಾಧನವಾದ್ದು, ಬುದ್ಧಿಕುಶ ಲತೆಯನ್ನು ಹೆಚ್ಚಿಸುವಂಥಾದ್ದು, ಕಾಮಧೇನುವಿನಂತೆ ಸಕಲ ಇಷ್ಟಾ ರ್ಥಗಳನ್ನೂ ನೆರವೇರಿಸುವಂಥಾದ್ದು. ಇಂಥಾ ಶ್ರೇಷ್ಠವಾದ ವಿದ್ಯೆ ಯನ್ನು ತಮ್ಮ ಮಕ್ಕಳಿಗೆ ಅಭ್ಯಾಸಮಾಡಿಸಿ ಸುಖಪಡದೆ ಬಡತನ ವೆಂಬ ಸಮುದ್ರದಲ್ಲಿ ಹೊರಳಾಡುತ್ತಿರುವರು. ಈ ನಮ್ಮ ಮೈಸೂರು ಸರ್ಕಾರದವರು ಸಮಸ್ತರೂ ವಿದ್ಯೆಯನ್ನು ಕಲಿತುಕೊಳ್ಳುವುದಕ್ಕೋ ಸ್ಕರ ಪಾಠಶಾಲೆಗಳನ್ನಿಟ್ಟಿರುವರು. ಈ ಅಜ್ಞಾನಿಗಳಿಗೆ ತಿಳಿಯದೆ ಇರದು. ಇವರುಗಳು ವಿದ್ಯೆಯನ್ನು ಕಲಿತ ಅದರ ಸಹಾಯದಿಂದ ನೂತನವಾದ ಕೈಗಾರಿಕೆಗಳನ್ನು ಕಂಡುಹಿಡಿದು ಕೀರ್ತಿಯನ್ನು ಪಡೆ ಯದೆ ಬುದ್ಧಿಹೀನರಾಗಿ "ಕುಲಕಸಬೇ" ಶ್ರೇಷ್ಠವೆಂಬ ಅಭಿಮಾನ ವನ್ನು ಬಿಡದೆ ತಾವೂ ಕೆಡುವದಲ್ಲದೆ ತಮ್ಮ ಕುಮಾರರನ್ನೂ ಹೀನಸ್ಥಿ ತಿಗೆ ತರುತ್ತಾರೆ. ಆದ್ದರಿಂದ ಈ ಅಕ್ಷರವಿದ್ಯೆ ಮುಖ್ಯವಾದದ್ದು. ಇ ದನ್ನು ಸಮಸ್ತರೂ ತಮ್ಮ ಬಾಲಕರಿಗೆ ಕಲಿಸಿದನಂತರ ಇತರ ಎಲ್ಲಾ ಕೈಗಾರಿಕೆಗಳನ್ನೂ ಕಲಿಸುವುದು ಅವಶ್ಯಕವಾಗಿದೆ. ಯಾವ ಮನುಷ್ಯ ನೇ ಆಗಲಿ ವಿದ್ಯೆಯನ್ನು ಕಲಿಯಲುಪಕ್ರಮಿಸಿದರೆ ಆತನನ್ನು ಶಾರದೆ ಒಲಿಯದೆ ಇರಲಾರಳು. ಆದುದರಿಂದ ಇನ್ನು ಮೇಲಾದರೂ ಈ ನಮ್ಮ ವಿಶ್ವಕರ್ಮ ಮಂಡಲಿಯವರು ತಮ್ಮ ಬಾಲಕರಿಗೆ ಚಿಕ್ಕವಯಸ್ಸಿನಲ್ಲಿ ವಿದ್ಯೆಯನ್ನು ಕಲಿಸುವರೆಂಬದಾಗಿ ನಂಬಿದ್ದೇವೆ

ವಿಶ್ವಕರ್ಮಮತಾಭಿಮಾನಿ.

ಮೈಸೂರು ಗೆಜೆಟ್ ಸಂಗ್ರಹ.

ಶ್ರೀಮನ್ ಮಹಾರಾಜರವರ ಪ್ರೈವೆಟ್ ಸೆಕ್ರೆಟರಿ ಮೆ॥ ಇ ವೆಂಕಟರಾಯರವರಿಗೆ ಕೊಟ್ಟಿರುವ ಮೂರು ತಿಂಗಳ ಪ್ರಿವಿಲೆಜ್ ರಜ ವನ್ನು ಇನ್ನು ಮೂರು ತಿಂಗಳಿಗೆ ಜಾಸ್ತಿ ಮಾಡಿದೆ

ಮೆ॥ ಬಿ ಕಾಮಗಾಂಡಯನ್ನು ರೆವಿನ್ಯೂ ಸರ್ವೆ ಮತ್ತು ಸೆಟ್ಲ್ಮೆಂ ಟ್ ಸೂಪರಿಂಟೆಂಡೆಂಟರಾಗಿ ನೇಮಿಸಿರೋದರಿಂದ ಮೆ॥ ಕೆ ರಾಮ ಸ್ವಾಮಿ ಐಯ್ಯಂಗಾರನ್ನು ಜನವರಿ ೧ ರಿಂದ ರೆವಿನ್ಯೂ ಸರ್ವೆ ಡಿಪ್ಟಿ ಸೂಪರಿಂಟೆಂಡೆಂಟರಾಗಿ ನೇಮಕಮಾಡಿದೆ

ಚಿತ್ರದುರ್ಗದ ಡಿವಿಜನ್ ಎಕ್ಸಿಕ್ಯುಟಿವ್ ಇಂಜನಿಯರ್ ಮೆ॥ ಕೆ ಕೃಷ್ಣರಾಯರಿಗೆ ಕೊಟ್ಟಿರುವ ಇಪ್ಪತ್ತು ದಿನಗಳ ಪ್ರಿವಿಲೆಜ್ ರಜ ವನ್ನು ಇನ್ನು ಐದು ದಿನ ಜಾಸ್ತಿ ಮಾಡಿದೆ.

ತುಂಕೂರ್ ಡಿವಿಜನ್ ಎಕ್ಸಿಕ್ಯುಟಿವ್ ಇಂಜನಿಯರ್ ಮೆ॥ ಪಿ ಎ ಮಹಾದೇವಶಾಸ್ತ್ರಿಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಮೂರು ತಿಂಗಳ ಪ್ರಿವಿಲೆಜ್ ರಜ ಕೊಟ್ಟಿದೆ

ಅ॥ ಇಂಜನಿಯರ್ ಮೆ॥ ಆರ್ ಎಸ್ ನವರತ್ನ ಯವರು ತುಂಕೂರ್ ಡಿವಿಜನ್ ಆ। ಎಕ್ಸಿಕ್ಯುಟಿವ್ ಇಂಜನಿಯರಾಗಿ ನೇಮಿ ಸಲ್ಪಟ್ಟಿದಾರೆ.

ಛೀಫ್ ಇಂಜನಿಯರ್ ಮೆ॥ ಡಬ್ಲ್ಯು ಮೆಕ್‍ಹಚ್ಚಿಸನ್ ಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಕ್ಯಾಪ್ಟನ್ ಎ ಜೆ ಡಿ ಹಾಸ್ಯೆಯವರು ಛೀಫ್ ಇಂಜನಿಯರ ವರ ಆಫೀಸ್ ಛಾರ್ಜನ್ನು ವಹಿಸಿರತಕ್ಕದ್ದು

ಮೆ॥ ವಿ ಎಸ್. ಸಾಂಬಶಿವ ಐಯ್ಯರವರು ರಜದ ಮೇಲಿರುವಾಗ್ಗೆ ಆ॥ ಜಿಯಾಲಜಿಸ್ಟ್ ಮೆ॥ ಪಿ ಸಂಪತ್ಕುಮಾರಯ್ಯಂಗಾರ್ರು ಆ॥ ಕ್ಯುರೆಟ ರಾಗಿಯೂ ಬೆಂಗಳೂರ್ ಸೆಂಟ್ರಲ್ ಕಾಲೆಜ್ ಬೋಧಕರಾಗಿಯೂ ಕೆಲಸನೋಡತಕ್ಕದ್ದು.

ಚಳ್ಳಕೆರೆ ತಾಲ್ಲೂಕ್ ಅಮಲ್ದಾರ್ ಮೆ॥ ಮಹಮದ್ ಪೀರ್ ಯವ ರಿಗೆ ೧೬ನೆ ತಾರೀಖಿನಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊ ಟ್ಟಿದೆ

ಅವರು ವಾಪಸು ಬರುವತನಕ ಶಿರಸ್ತೆದಾರ್ ನರಸಿಂಗರಾಯರು ತಾಲ್ಲೂಕಿನ ಚಾಲ್ತಿ ಕೆಲಸಗಳ ಛಾರ್ಜನ್ನು ವಹಿಸಿರತಕ್ಕದ್ದು

ಪ್ರಕಟನೆಗಳು.

ಬಾಲಶಿಕ್ಷೆ ೧ನೇ ಭಾಗ!
ಬಾಲಶಿಕ್ಷೆ ೧ನೇ ಭಾಗ!!
ಬಾಲಶಿಕ್ಷೆ ೧ನೇ ಭಾಗ!!!

ಬೇಗ ತರಿಸಿಕೊಳ್ಳಿ.

332

ಕ್ರಯ ೧ ಆಣೆ ವಿ. ಪಿ. ಮೂಲಕ ಮೂರು ಆಣೆಗಳು. ನೂರು ಪ್ರತಿಗಳಿಗೆ ಹನ್ನೆರಡು ಪ್ರತಿಗಳು ಕಮಿಷನ್.

ವಿಳಾಸ:—ಮ್ಯಾನೇಜರ್, ಸಿ. ಎಲ್. ಎಸ್.,

ಬುಕ್ ಡಿಪೋ, ಮೈಸೂರು.

ಮೈಸೂರು ಸೀಮೆಯ ಎಕ್ಸೈಜು ಕಮಿಷನರವರ ಆಫೀಸು.

ತಾರೀಖು ೧೧ನೆ ಮಾರ್ಚ, ೧೯೦೨.

ನೋಟೀಸು.

358

೧೯೦೩ನೆ ಇಸವಿಯ ಜುಲೈ ಗುರ್ರ ತಾರೀಖು ಲಾಗಾ ಯಿತು ೧೯೦೬ನೆ ಇಸವಿಯ ಜುಲೈ ೩೦ನೆ ತಾರೀಖಿನ ವರೆಗೆ ಆಗುವ ಮೂರು ವರ್ಷಗಳ ಪರ್ಯಂತ ಬೆಂಗಳೂರು ಬಳ್ಳ ಯದಲ್ಲಿ ಸರ್ಕಾರಿ ಸೆಂಟ್ರಲ್ ಡಿಸ್ಟಿಲರಿಯಾ ಸಾರಾಯಿ ಕಾರ್ಖಾ ನೆಯಲ್ಲಿ ಶರಾಬನ್ನೂ ಇತರ ಒಳದೇಶದ ಮದ್ಯಗಳನ್ನೂ ತಯಾರುಮಾಡುವುದಕ್ಕೂ, ಅವುಗಳನ್ನು ಮೈಸೂರು ಸೀಮೆ ಗೂ ಬೆಂಗಳೂರು ಸಿವಿಲ್ ಮತ್ತು ಮಿಲಿಟರಿ ಸ್ಟೇಷನ್ ಯಾ ವಂದಿಗೂ ಸರಬರಾಯಿ ಮಾಡುವುದಕ್ಕೂ, ಒಟ್ಟು ಸಾತಂ ತ್ರ್ಯಕ್ಕೋಸ್ಕರ ದರಖಾಸ್ತುಗಳು ಅಪೇಕ್ಷಿಸಲ್ಪಟ್ಟಿರುತ್ತವೆ.

೨. ಪ್ರತಿ ದರಖಾಸ್ತನ್ನೂ ೫,೦೦೦ ರೂಪಾಯಿ ಡೇಪಾಜಿ ಟಿ ಕಳುಹಿಸಬೇಕು. ಮತ್ತು ಅಂಥ ದರಖಾಸ್ತು ಈ ಕೆಳಗೆ ರುಜು ಮಾಡಿರುವವರಿಗೆ ೧೯೦೨ನೆ ಇಸವಿ ಏಪ್ರಿಲ್ ೩ನೆ ತಾರೀಖು ಬುಧವಾರ ಮಧ್ಯಾಹ್ನ ಅಥವ ಅದಕ್ಕೆ ಮುಂಚೆ ಸೇರಬೇಕು.

೩. ಇದರ ಷರತ್ತುಗಳಿಗೂ ಹೆಚ್ಚು ತಪಶೀಲುಗಳಿಗೂ ೧೯೦೨ನೆ ಇಸವಿ ಫೆಬ್ರುವರಿ ೨೨ನೆ ತಾರೀಖಿನ ಪೈ. ೬೫೦೧— ಯಸ್. ಆರ್ ೫೧—೦೭ನೆ ನಂಬರಿನ ಇಸ್ತಿಹಾರ್‌ನಾಮೆಯ ನ್ನು ಮೈಸೂರು ಗೆಜೆಟ್ಟಿನಲ್ಲಿ ನೋಡತಕ್ಕದ್ದು.

ಪಿ. ಯಸ್. ಪೂರ್ಣಯ್ಯ,

ಮೈಸೂರ ಸೀಮೆಯ ಎಕ್ಸೈಜು ಕಮಿಷನರು

ಜಡೆಕುಚ್ಚು, ಪಚ್ಚೆಯ ಜಡೆಬಿಲ್ಲೆ.

36 1

ನವೀನ ಆಭರಣಗಳು, ಬೇಗನೋಡಿ.

ಇದರಿಂದ ಸರ್ವರಿಗೂ ತಿಳಿಸುವದೇನಂದರೆ—ನಮ್ಮಲ್ಲಿ ಬಹಳ ಶ್ರೇ ಷ್ಠವಾದ ಎಲೆಕ್ಟ್ರಿಕ್ ಚಿನ್ನದ ಗಿಲ್ಟ್ ನಿಂದ ತಯಾರಿಸಲ್ಪಟ್ಟ ಬಂಗಾರದ ಆಭರಣಗಳು ಬಹಳ ಸುಲಭ ಕ್ರಯಕ್ಕೆ ದೊರೆಯುತ್ತವೆ. ಇದರಲ್ಲಿ ಕಂಡ ಆಭರಣಗಳನ್ನು ಚಿನ್ನದ ಕೆಲಸ ಮಾಡುವದರಲ್ಲಿ ಬಹಳ ಸಮರ್ಥರಾದ ಅಕ್ಕಸಾಲಿಗರಿಂದ ತಯಾರಿಸಲ್ಪಟ್ಟಿರುತ್ತೆ. ಇದು ಬಹಳ ಕಾಲ ಗಳ ವರಿವಿಗೂ ರಂಗು ಹೋಗದ ಹಾಗೆ ಒಳ್ಳೆಯದ ಎಲೆಕ್ಟ್ರಿಕ್ ಚಿನ್ನ ದ ಗಿಲ್ಟ್ ಹಾಕಲ್ಪಟ್ಟಿರುತ್ತೆ. ಇದರ ಕೆಲಸದ ನಾಜೂಕು, ಸ್ವಚ್ಛಭಂ ಗಾರದ ಆಭರಣಗಳನ್ನು ಹೋಲಿಸುತ್ತೆ. ಈ ಕೆಳಗೆ ಕಂಡ ಆಭರಣಗ ಳಲ್ಲಿ ಯಾವದಾದರೂ ಒಂದನ್ನು ತರಿಸಿ ಪರೀಕ್ಷಿಸಿ—

೧. ಜಡೆಕುಚ್ಚು.

ಕ್ರಯ ರೂ ೩—೮—೦

ಇದರ ಪ್ರತಿಯೊಂದು ಕುಚ್ಚುಗಳ ಸುತ್ತಲೂ ಸುಂದರವಾದ ಗೆಜ್ಜೆಗಳನ್ನು ಸುತ್ತಲ್ಪಟ್ಟ ನಾ ಜೂಕಾಗಿ ಗೊಂಡೆಗಳನ್ನು ಕಟ್ಟಿ ನೋಡುವವರಿಗೆ ನಿಜವಾದ ಬಂಗಾ ರದ ಆಭರಣವೆನ್ನುವಹಾಗೆ ತಯಾ ರಿಸಲ್ಪಟ್ಟಿರುತ್ತೆ.

೨. ಪಚ್ಚೆ ಕಲ್ಲು ಜಡೆಬಿಲ್ಲೆ. ಚಿನ್ನದ ಗಿಲ್ಟು ಮಾಡಿದ್ದು. ಒಕ್ಕೆ ಬೆಲೆ ರೂ ೨-೩-೧.

ಇದು ಮೇಲಾದ ನಕಾ ಸು ಕೆಲಸಗಳನ್ನು ಮಾಡ ಲ್ಪಟ್ಟು ಪಚ್ಚೆ ಕಲ್ಲಿನಿಂದಬಿ ಗಿಯಲ್ಪಟ್ಟಿರುತ್ತೆ. ಎಷ್ಟು ವರ್ಷಗಳ ಪರ್ಯಂತರ ಇಟ್ಟಾಗ್ಯೂ ರಂಗು ಹೋ ಗದು, ನೋಡುವವರ ಕಣ್ಣು ಚದರುವಷ್ಟು ಪ್ರ ಕಾಶವುಳ್ಳದ್ದು

ನಮ್ಮ ವಿಳಾಸ—ಜರ್ಮನ್ ಸಿಲ್ವರ್ ಜ್ಯುಯಲ್ ಡಿಪೋ, ಸೌಕಾರ್ ಪೇಟೆ, ಮದ್ರಾಸು

WILLIAM & CO., BOMBAY.

ವಿಲಿಯಂ ಮತ್ತು ಕಂಪೆನಿ, ಫೋರ್ಟು, ಮುಂಬಯಿ.

ಅಮೃತಾಂಜನ

27 5

ಬಾಟ್ಲ ಒಂದಕ್ಕೆ ಕಿಮ್ಮತು ೮ ಆಣೆ ವಿ ಪಿ ೧೨ ಆಣೆ.

ಅಮೃತಾಂಜನ—ಸುಖಾಂಜನ
ಅಮೃತಾಂಜನ—ಸಂಜೀವನ
ಅಮೃತಾಂಜನ—ಪರಮಾಂಜನ
ಅಮೃತಾಂಜನ—ದಿವ್ಯಾಂಜನ
ಅಮೃತಾಂಜನ—ಶೀತಭಂಜನಿ
ಅಮೃತಾಂಜನ—ಪ್ರಭಂಜನವಿಮರ್ದಿನಿ

ಅಮೃತಾಂಜನ—ಅಪೂರ್ವದರ್ಶಿನಿ
ಅಮೃತಾಂಜನ—ತಕ್ಷಣ ಪರಿಹಾರಿಣಿ
ಅಮೃತಾಂಜನ—ಸಂಧಿವಾತಕ್ಕೆ
ಅಮೃತಾಂಜನ—ತಲೆನೋವಿಗೆ.
ಅಮೃತಾಂಜನ—ಜಖಮ್ ಮತ್ತು ಗಾಯಕ್ಕೆ
ಅಮೃತಾಂಜನ—ಗಂಟ್ಲುನೋವಿಗೆ

ಶಿರೋವೇಧನ ವಾತ, ಎದೆನೋವು, ಗಂಟ್ಲುನೋವು, ಸಂಧಿವಾತ, ತಲೆನೋವು, ಶಿರೋಭಾರ, ಈ ಎಲ್ಲಾ ತರದ ರೋಗಕ್ಕೆ ಅಮೃತಾಂಜನವು ದಿವ್ಯವಾದ ಔಷಧವಾಗಿದೆ ಇದನ್ನು ತರಿಸಿ ಮನೆಯಲ್ಲಿ ಸದಾಕಾಲ ಇಟ್ಟರೆ, ಮೇಲೆ ಹೇಳಿದ ಯಾವತರದ ರೋಗಕ್ಕೂ ಎಡೆ ಸಿಕ್ಕುವದಿಲ್ಲ ಅಮೃತಾಂಜನದಿಂದ ಗುಣವು ಕಂಡುಬರದಿದ್ದರೆ ಹಣ ಹಿಂತಿರುಗಿ ಕೊಡಲ್ಪಡುವದು

ಗಜಕರ್ಣದ ಮುಲಾಮು ಡಬ್ಬಿ ಒಂದಕ್ಕೆ ೬ ಆಣೆ, ವಿ ಪಿ ೧೦ ಆಣೆ—ಇದನ್ನು ಹಾಗಿಸುವದರಿಂದ ಎಲ್ಲಾ ತರದ ಕಜ್ಜಿ ನಾಶವಾಗುವದು ಮೂರು ಸಾರಿ ಹಾಗಿಸುವದರೊಳಗೆ ಗಜಕರ್ಣವು ಹೋಗುವದು ಒಂದು ಸಾರಿ ಪರೀಕ್ಷಿಸಿ ನೋಡಿರಿ ಕ್ರಯ ಕಮ್ಮಿ, ಗುಣ ಹೆಚ್ಚು ಇದನ್ನು ಹಚ್ಚಿದಲ್ಲಿ ಉರಿ ಬರುವದಿಲ್ಲ, ಚರ್ಮ ಕಪ್ಪಾಗುವದಿಲ್ಲ ಇದರಿಂದ ಗುಣವು ಕಂಡುಬರದಿದ್ದರೆ ಹಣ ವಾಪಸು ಕೊಡಲ್ಪಡುವದು

ಕೇಶವರ್ಧಿನೀ ತೈಲ—ಇದು ತಲೆಯ ಮಿದುಳನ್ನು ತಂಪುಮಾಡಿ ಆಯಾಸವನ್ನು ತೆಗೆದು ಕೂದಲು ಬೆಳೆಸುತ್ತದೆ ಇದಕ್ಕೆ ಚಲೋ ಪರಿಮಳವು ಬರುತ್ತದೆ ಮೂರು ಔನ್ಸು ಬಾಟ್ಲಿಗೆ . ೧-೦-೦

ಕಜ್ಜಿ ಮುಲಾಮು—ಇದು ಅತಿಶಯ ಅಗ್ಗವೂ ಗುಣದಾಯಕವೂ ಆಗಿರುತ್ತದೆ . . ೦-೩-೦

ಕಫಹಾರಿ—ಕೆಮ್ಮು, ದಮ್ಮು ಕ್ಷಯ, ಕೊರಳಿನಲ್ಲಿ ಕಫ ಬಂದದ್ದಕ್ಕೆ ಇದು ಉತ್ತಮವಾದದ್ದು, ಬಾಟ್ಲ ೧ಕ್ಕೆ ೧ ೪-೦

ಜೀರ್ಣರಸಾಯನ—ಹೊಟ್ಟೆಯಲ್ಲಿ ಹಸಿವೆ ಆಗಲಿಕ್ಕೂ ನಾಲಿಗೆಗೆ ರುಚಿ ಬರಲಿಕ್ಕೂ ಉತ್ತಮವಾದದ್ದು ೧-೪-೦

ಜ್ವರಹಾರಿ—ಎಲ್ಲಾ ತರದ ಜ್ವರಗಳ ಮೇಲೆ ಈ ಔಷಧವು ಚಲೋದಾದದ್ದು . . ೦-೧೨-೦

ಸುಂದರೀ ತೈಲ—ಈ ತೈಲವನ್ನು ನಿರಂತರವಾಗಿ ಮೋರೆಯ ಮೇಲೆ ಹಾಗಿಸುವದರಿಂದ ಮೋರೆಯ ಮೇಲೆ ಇರುವ ಗಾಯದ ಕಲೆಗಳನ್ನೂ ಕಪ್ಪಾದ ಕಳಂಕಗಳನ್ನೂ ತೆಗೆದು ಚರ್ಮವನ್ನು ಮೃದುಮಾಡಿ ಚಲುವಿಕೆಯನ್ನು ಕೊಡುತ್ತದೆ ಹೆಂಗಸರಿಗೂ ಗಂಡಸರಿಗೂ ಉತ್ತಮವಾದದ್ದು ೦-೮-೦

ದಂತಮಂಜನ—ಹಲ್ಲು ಸ್ವಚ್ಛವಾಗುತ್ತೆ, ಘಟ್ಟಿಯಾಗುತ್ತೆ, ವಾಸನೆಯನ್ನೂ ರಕ್ತವನ್ನೂ ನಿಲ್ಲಿಸುತ್ತದೆ ಕ್ರಯ ಬಹಳ ಕಮ್ಮಿ ೦ ೨-೦

ನೇತ್ರಾಂಜನ ೪ ಆಣೆ ವಜ್ರಗುಟಿಕ ೧ ರೂಪಾಯಿ ಹನುಮಾರಿ ಗುಟಿಕ ೧ ರೂಪಾಯಿ ದಂತವಾಕಹಾರಿ ೮ ಆಣೆ ಕಫನಾಶಕ ಚೂರ್ಣ ೮ ಆಣೆ ಚೇಳು ಕಡಿತದ ಮದ್ದು ೮ ಆಣೆ ರೋಮಹಾರಿ ೮ ಆಣೆ ಕಸ್ತೂರಿಮಾತ್ರೆ ೧೦ ಆಣೆ ತಾಂಬೂಲಗುಟಿಕ ೮ ಆಣೆ

ಎಲ್ಲಾ ತರದ ಔಷಧಗಳು ಇರುವದರಿಂದ ಕೆಟಲಾಗು ಬೇಕಾದವರು ಬಿಗದು ತರಿಸಿಕೊಳ್ಳಬಹುದು

ವಿಲಿಯಂ ಮತ್ತು ಕಂಪೆನಿ, ೧೬ ಓಕ್ ಲೇನ್, ಫೋರ್ಟು, ಮುಂಬಯಿ.

ಚಳಿಕಾಲಕ್ಕೆ ಇದರ ಸಮಾನ ಉಂಟೇ,

30 4

೫೦೦ ಬಾಲಕಲಾ ಟೋಪಿಗಳು

೧ ಟೋಪಿಗೆ ಕ್ರಯ ೧—೧—೦

ಈ ಟೋಪಿ ಇದ್ದರೆ ರುಮಾಲ್ ಅಗತ್ಯವಿಲ್ಲ ವಿ ಪಿ ಮೂಲಕ ಕಳುಹಿಸುತ್ತೇವೆ ವಿಳಾಸ — ಸಿ ರಘುನಾಥಕಾಮತ್

ಬೋಳಾರ ಮಂಗಳೂರು

ಮುಂಬಯಿ ವ್ಯಾಪಾರವನ್ನು ತಿಳಿಚ್ಛಿಸುವವರು

8b 43

ಮುಂಬಯಿಯಲ್ಲಿ ಪ್ರತಿಯೊಂದು ಮಾಲಿನ ತೂಕ ಅಳತೆ ಮತ್ತು ಮಾಲಿನ ವರ್ಣನೆ ಹಾಗೂ ಅನೇಕ ಉಪಯುಕ್ತ ಮಾಹಿತಿಯಿರುವ ಕನ್ನಡ ಪುಸ್ತಕ —ಕ್ರಯ ೧೦ ಆಣೆ ವಿ ಪಿ ಯಿಂದ ಕಳುಹಿಸುವೆವು ಟಪಾಲು ಖರ್ಚು ಬೇರೆ ಬಹಳ್ತು ಸೇಲರಿಗೆ ಯೋಗ್ಯ ಕಮಿಷನ್ ದೊರೆಯುವದು ಮತ್ತು ಲಿಂಗಾಯತ ಧರ್ಮಸಂಬಂಧ ವಿರಕ್ತೋತ್ಪತ್ತಿ ಕ್ರಿಯಾಲಕ್ಷಣವೆಂಬುವ ಕನ್ನಡ ಪುಸ್ತಕ—ನಾಲ್ಕು ಆಣೆ ಚಲೂ ಅಕ್ಷರದಿಂದ ಬರೆಯಿರಿ ಪತ್ತಾ ಚನ್ನಬಸಪ್ಪ ಮಲ್ಲಪ್ಪ ವಾರದ, ಪೋಸ್ಟ್ ಮಾಂಡ್ವಿ, ಮುಂಬಯಿ

ಉತ್ತಮವಾದ ಸಿದ್ಧೌಷಧಗಳು

J 12

ಆರ್ಶೀರ್ವಾದದಿಂದಲೂ ಬಂದ ನಮ್ಮ ಔಷಧಿಗಳು ಲಕ್ಷಾಂತರ ರೋಗಿಗಳಿಗೆ ಉಪಯೋಗಿಸಿ ಗುಣ ಕಂಡುಬಂದವುಗಳಾಗಿವೆ ಅವುಗಳೆಲ್ಲಾ ಮೂಲಿಕೆಗಳಿಂದ ತಯಾರಾಗಿರುತ್ತೆ ತಿಂಗಳೊಂದಕ್ಕೆ ಅನೇಕರು ಔಷಧಿ ಸೇವಿಸುತ್ತಲೂ ಇರುವಸಂಗತಿ ಎಲ್ಲರಿಗೂ ಗೊತ್ತಿದೆ

(೧) ಸಂಜೀವಿನಿ ತೈಲ ಸಮಸ್ತ ಮಹಾರೋಗಗಳಿಗೂ ಕಾಲು ಸೀಸೆಗೆ ೧-೮-೦ (೨) ಭೃಂಗರಾಜ ತೈಲ ಎಲ್ಲಾ ವಿಧದ ಶಿರೋರೋಗಗಳಿಗೆ ಕಾಲು ಸೀಸೆಗೆ ೦-೧೦ ೦ (೩) ಭೇದಿ ಎಣ್ಣೆ ಸುಖಪ್ರವರ್ತಿಯಾಗುವುದು ಕಾಲು ಸೀಸೆಗೆ ೦-೧೨ ೦ (೪) ಮಹಾಲೇಹ ವಾತ ಶಕ್ತಿಯನ್ನುಂಟುಮಾಡಿ ಪುಷ್ಟಿಮಾಡುತ್ತೆ ಸೇರಿಗೆ ೨-೦-೦ (೫) ಸೌಭಾಗ್ಯ ಶಂಕರಾಮೃತ, ಲೇಹ ಇದರ ಸೇವನೆಯಿಂದ ಬಾಣಂತಿಸನ್ನಿ ಕ್ಷಯ ಮೊದಲಾದ ರೋಗಗಳನ್ನು ಪರಿಹರಿಸುತ್ತೆ ಸೇರಿಗೆ ೨-೦ ೦ ಹುಚ್ಚುನಾಯಿ, ಕೊಳತ ಮಂಡಲ ಇವುಗಳಿಂದುಂಟಾದ ಪ್ರಬಲ ರೋಗಿಗಳಿಗೂ ಚಿಕಿತ್ಸೆಯು ದೊರೆಯುವದು

ನಮ್ಮ ಕ್ಯಾಟಲಾಗು ತರಿಸಿ ನೋಡಿ—ಪಂಡಿತ ಕೃಷ್ಣಾಚೆಟ್ಟಪ್ಪ, ನಿಖಿಲ ರೋಗಾಪಹರಿ ವೈದ್ಯಶಾಲಾ, ದೊಡ್ಡಪೇಟೆ, ಮೈಸೂರು

ಇಲ್ಲಿನೋಡಿ!

22 6

ತುಮಕೂರು ಡಿಸ್ಟ್ರಿಕ್ಟ್ ಇಲಾಖೆಯಲ್ಲಿ, ಯೂರೋಪಿಯನ್ ಮೇಲ್ವಿಚಾರಣೆಯಿಂದ, ಉತ್ತಮ ತರಹದ ಹಾಸನದ ಟೋಪಿಗಳು ಅತಿ ಶ್ರೇಷ್ಠವಾದ ಊಲ್‌ದಾರದಿಂದ ತಯಾರಾಗುತ್ತವೆ ಕ್ರಯ ೧೦ ಆಣೆಯಿಂದ ೧ರೂ ೧೨ ಆಣೆವರೆಗೂ ದೊರಕುವವು ಅಪೇಕ್ಷಿಸುವವರಿಗೆ ಕ್ರಯದ ಪಟ್ಟಿಯನ್ನು ರವಾನಿಸುವೆವು ವಿಳಾಸ —ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ ವಿಂಸ್ಟ್ ಇಲಾಖೆ, ತುಮಕೂರು

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

11 9

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೀಳಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಸೀದಾ ಬರೆದು ತರಿಸಿಕೊಳ್ಳಿ ಅಗ್ಗವಾದ ದಪ್ಪ ಚನ್ನಾಗಿಲ್ಲದ್ದು ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ

ಹಸಿರು, ಕೆಂಪು, ಕಪ್ಪು, ಬೆರಿಕೆ, ಕಾಫಿ ಟೋಪಿಗಳು ೧ ರೂ ೮ ಆ, ೧ ರೂ ೬ ಆ, ೧ ರೂ ೪ ಆ.

ರೇಶ್ಮೆ ಚುಕ್ಕೆಯುಳ್ಳ ಟೋಪಿಗಳು ೧ ರೂ ೮ ಆ, ೨ ರೂ

ದಾರದ ಟೋಪಿಗಳು ೧ ರೂ. ೧೨ ಆ, ೧ ರೂ ೮ ಆ, ೧ ರೂ ೬ ಆ

ಉಸುಕಿನ ಟೋಪಿಗಳು ೧ ರೂ. ೮ ಆ, ೧ ರೂ ೬ ಆ

ಕೂಸುಗಳ ಟೋಪಿ, ಸೂರ್ಯ ಮೇಜೋಡು, ಅರ್ಧ ಮೇಜೋಡು, ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ

8—3—1907 ರಿಂದ 15—3—1907 ರ ವರೆಗೆ

ಸ್ಥಳ.	ಪ್ಲೇಗ್ ತಗಲಿದ್ದು.	ಪ್ಲೇಗ್ ಸತ್ತದ್ದು	ಕೋಲರಾ ಈ ವಾರದ ಸಂಖ್ಯೆ	
ಬೆಂಗಳೂರು ಪಟ್ಟಣ	26	19	11	7
ಮೈಸೂರು ,,	17	17	0	[illegible]
ಬೆಂಗಳೂರು ಡಿಸ್ಟ್ರಿಕ್ಟ್	20	14	9	7
ಮೈಸೂರು ,,	6	6	15	11
ಕೋಲಾರ್ ,,	0	0	2	4
ಕೋಲಾರ್ ಚಿನ್ನದ ಗಣಿಗಳು	0	2	7	[illegible]
ತುಮಕೂರು ಡಿಸ್ಟ್ರಿಕ್ಟ್	0	0	7	5
ಹಾಸನ ,,	8	6	0	0
ಚಿತ್ರದುರ್ಗ ,,	0	0	7	6
ಕಡೂರ್ ,,	5	4	0	0
ಶಿವಮೊಗ್ಗ ,,	0	0	32	'8
ಜುಮ್ಲಾ	82	67	80	60

ಶಾಲಿವಾಹನ ಶಕ ವರುಷಂಗಳು ೧೮೩೦ ನೇ ಪ್ಲವಂಗನಾಮ ಸಂವತ್ಸರದ ಅಧಿಕ ಚೈತ್ರ ಶುದ್ಧ ಚತುರ್ದಶಿ ಗುರುವಾರದಿಂದ ಅಧಿಕ ಚೈತ್ರ ಬಹುಳ ಪಂಚಮಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ ೧೯೦೭ ನೇ ಇಸವಿ ಮಾರ್ಚಿ, ಮತ್ತು ಏಪ್ರಿಲ್

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಆಂಗ್ಲ ತಿಂಗಳು ಮಾಸ
28	ಗುರು ‡	ಚತುರ್ದಶಿ	47 20	ಪು	20 2	15
29	ಶುಕ್ರ *	ಪೌರ್ಣಮಿ	46 10	ಉ	21 4	16
30	ಶನಿವಾ	ಪಾಡ್ಯ	43 50	ಹ	20 56	17
31	ರವಿವಾ	ಬಿದಿಗೆ	40 20	ಚಿ	18 54	18
1	ಚಂದ್ರ ¶	ತದಿಗೆ	36 13	ಸ್ವಾ	17 27	19
2	ಕುಜ	ಚೌತಿ	31 21	ವಿ	14-40	20
3	ಬುಧ ,	ಪಂಚಮಿ	26 55	ಅ	11 4	21

‡ ನರಸೀಪುರದಲ್ಲಿ ಪುಷ್ಪಾಮೋತ್ಸವ, ಮೇಲುಕೋಟೆಯಲ್ಲಿ ಚಲುವರಾಯಸ್ವಾಮಿ ರಥ * ಮಹಾವೈಶ್ಯ ಚಲುವರಾಯಜಯಂತಿ, ನರಸೀಪುರದಲ್ಲಿ ಗುಂಜಾನರಸಿಂಹಸ್ವಾಮಿ ರಥ ¶ ಸಂಕಷ್ಟಚತುರ್ಥಿ ,, ಅಮೃತಸಿದ್ಧಿಯೋಗ

ಪೇಟೇ ಧಾರಣೆ.

ದಿನಸು	ಮೈಸೂರು	ಬೆಂಗಳೂರ
ಕಡ್ಲೇ ಅಕ್ಕಿ ಪಲ್ಲಾ ೧ಕ್ಕೆ ರೂ	೧೩ ೦ ೦	೧೩ ೨
ಕಂಬಾತಿ ಅಕ್ಕಿ ಅವಲ್	೧೨-೨-೦	೧೪ ೦
ಸ ಯಂ	೧೨ ೯-೦	೧೩ ೦
ಜೀರಾಸಣ್ಣ ಅಕ್ಕಿ	೧೨-೮-೦	೧೪ ೧೨
ಸಣ್ಣಕ್ಕಿ ಅವಲ್	೧೫ ೦-೦	೧೪ ೪
, ಮಧ್ಯಮ	೧೪-೮-೦	೬೩-೮-
ತೊಗರೀ ಬೇಳೆ ಪಲ್ಲಾ ೧ಕ್ಕೆ	೧೩ ೦ ೦	೧೨ ೮
,, ಮಧ್ಯಮ	೯-೨-೧೨-೦	೧೨-೦-
ಹುರ್ಕಾಗಿ ಪಲ್ಲಾ ೧ಕ್ಕೆ	೩-೪ ೦	೬ ೮-
ಕಾರಾಗಿ	೬-೦-೦	೬-೪
ಜೋಳ	೫-೮-೦	೮-೦-
ಹಲಸಂದೆ ಪಲ್ಲಾ ೧ಕ್ಕೆ	೧೨-೧೨-೦	೧೧ ೦೦
ಬಿಳೀ ಅವರೆ	೮-೪-೦	೩-೮
ಹೆಸರು	೧೩-೮-೦	೯-೮-
ಉದ್ದು	೧೧-೮-೦	೧೦-೧೨-
ಕಡಲೆ	೧೦-೮ ೦	೧೦ ೦-
ಎಳ್ಳು ಸೆ ೧೨೦ ಕ್ಕೆ	೨೧-೦-೦	೨೨ ೪-
ಹುರಳಿ	೬-೮-೦	೩-೪-
ಹರಳು ೧೨೦ ಸೇರಿಗೆ	೧೮-೦-೦	೧೬-೮
ಸೀಗೇಕಾಯಿ ಮಣ ೧ಕ್ಕೆ	೨-೨ ೦	೧ ೧೨
ಮೆಣಸಿನಕಾಯಿ	೨-೧೨ ೦	೨-೧೨
,, ಮಧ್ಯಮ	೨-೮-೦	೨ ೮-
ಬೆಲ್ಲ ದೊಡ್ಡ ಅಚ್ಚು	೩-೮-೦	ಮ ೧-೩-
ಒಳ್ಳೆಣ್ಣೆ ಮಣ ೧ಕ್ಕೆ	೬-೮-೦	೫-೦
ಹರಳೆಣ್ಣೆ ,,	೬ ೦-೦	೫ ೨
ಕೊತ್ತುಂಬರಿ ಪಲ್ಲಾ ೧ಕ್ಕೆ	೬-೮-೦	೩-೨
ಉಪ್ಪು ,,	೫-೧೦-೦	೬-೧೦-
ಹುಣಸೇ ಹಣ್ಣು	೧-೪-೦	೧-೨
,, ಹಳೇದು	೦-೧೪-೦	೦-೧೫-
ತುಪ್ಪ ಮಣ ೧ಕ್ಕೆ	೧೫-೦-೦	೧೩ ೧೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ	೫-೦-೦	೪ ೦
ತೆಂಗಿನಕಾಯಿ ೧೦೦ ಕ್ಕೆ	೬-೮-೦	೬ ೪-
ಅಡಕೇಕಾಯಿ ಮಣ ೧ಕ್ಕೆ	೧-೦-೦	೦ ೦
ಅಲ್ಯಾಳದ ಕಾಯಿ ಮಣ ೧ಕ್ಕೆ	೦-೧೨-೦	೦ ೧೦
ಚಿನ್ನ (ಪೌನ್) ಕೆಂಪು	೧೫-೪-೦	೧೫-೩
,, ,, ಹಸಿರು	೧೫-೧೦-೦	೧೫-[illegible]
,, ,, ಗಟ್ಟಿ ತೊಲ ೧ಕ್ಕೆ	೨೩-೧೨-೦	೨೪-೩
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	೮೫-೦-೦	೮೪-೦-

Printed and Published by the Rev L W THOMPSON M A, Proprietor and Manager, Wesleyan Mission Press, Mysore 28/3/1907

REGISTERED
M. 20.

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಕ್ರಯ ೧ ದುಡ್ಡು.   ಕ್ರಯ ೧ ದುಡ್ಡು.

ಸಂಪುಟ ೨೦   ಮೈಸೂರು—ಸರ್ ೧೯೦೭ ನೇ ಇಸವಿ ಏಪ್ರಿಲ್ ತಾರೀಖು ೪ ನೇ ಗುರುವಾರ.   ಸಂಚಿಕೆ ೪೪



ದಿ ಸಿಟಿ ಸಿಲ್ವರ್ ವಾಚ್.

13-10

(ಚಿತ್ರದಲ್ಲಿ ಕಂಡದ್ದು.)

ಸ್ಟೆಂವರ್ ಕೀಲಿ, ಮುಕ್ಕಾಲು ಪ್ಲೇಟ್, ಡೂಯಲ್ ಚಲನೆ; ಹಾಲ್‌ಮಾರ್ಕ್ ಉಳ್ಳ ಬೆಳ್ಳಿ ಆಲ್ಬರ್ಟ್ ಸರಪಣಿ ಮತ್ತು ಸೀಲ್ ಸಹಿತ; ಸಂಪೂರ್ಣ ದಮಾಸ್ ಪೆಟ್ಟಿಗೆಯಲ್ಲಿ ರುವುದು. ಕ್ರಯ (ಹಿಂದುಸ್ಥಾನದ ಅಂಚೆ ವೆಚ್ಚ ಸೇರಿ) ರೂ. [illegible].

ಮೇಲಾದ ಬೆಳ್ಳಿ ಗಡಿಯಾರಗಳು, ಮುಚ್ಚಳವಿಲ್ಲದ್ದು. ಕೀಲಿ ತಿರುಗಿಸುವುದೂ, ಕೀಲಿ ಇಲ್ಲದ್ದೂ. ಕ್ರಯ ರೂ. [illegible], ರೂ. [illegible], ರೂ. [illegible].

ಬಲವಾದ ಬೆಳ್ಳಿ ಅರ್ಧ ಹಂಟರ್ ಗಡಿಯಾರಗಳು.—ಕ್ರಯ ರೂ. [illegible], ರೂ. [illegible], ರೂ. [illegible].

ಬಲವಾದ ಪೂರಾ ಹಂಟರ್ ಗಡಿಯಾರಗಳು—ರೂ. [illegible], ರೂ. [illegible], ರೂ. [illegible].

ಪಾಲಿಷ್ ನಿಕ್ಕಲ್ ಗಡಿಯಾರಗಳು, ಸ್ವಲ್ಪ ಸಂತ್ರಾಳಿವೆ, ಕೀಲಿ ಇಲ್ಲ; ಲೀವರ್ ಚಲನೆ, ಸುಂದರವಾದ ಬಿಳೀ ಸಮಾನ ಮುಚ್ಚಳ. ಸಂಖ್ಯೆಯಾದ ಗಂಟೆ ತೋರಿಸುವುದು, ಕ್ರಯ ರೂ. [illegible], ರೂ. [illegible], ರೂ. [illegible].

ಬಿಳೀ ತೆಳುವಾದ ಚಪ್ಪಟೆಯಾಗಿರುವ ಗಡಿಯಾರಗಳು.—(೧) ಕಪ್ಪು ಉಕ್ಕಿನ ಮುಚ್ಚಳ ಉಳ್ಳವು: ಕ್ರಯ ರೂ. [illegible] (೨) ಬೆಳ್ಳಿಯ ಮುಚ್ಚಳ ಉಳ್ಳವು: ಕ್ರಯ ರೂ. [illegible].

ಬೆಳ್ಳಿ ಆಲ್ಬರ್ಟ್ ಸರಪಣಿಗಳು: ಕ್ರಯ ರೂ. [illegible], ರೂ. [illegible], ರೂ. [illegible], ರೂ. [illegible], ರೂ. [illegible].

ಚಿನ್ನ ತುಂಬಿದ ಸರಪಣಿಗಳು: ಕ್ರಯ ರೂ. [illegible], ರೂ. [illegible], ರೂ. [illegible].

ಈ ಕ್ರಯದಲ್ಲಿ ಹಿಂದುಸ್ಥಾನದ ಅಂಚೆ ಹಾಸಲೂ ಸೇರಿದೆ.

ಎಂಬು ವಿನಕೋನ್ಸ್ ಕೀಲಿ ತಿರುಗಿಸುವಂಥಾ ವಾಚುಗಳೂ, ಇನ್ನೂ ಎಲ್ಲಾ ತರದ ಚಿನ್ನದ ಮತ್ತು ಚಿತ್ರಕೆಲಸ ಮಾಡಿದ ವಾಚುಗಳೂ, ವಿಲಾಯಿತಿಯಲ್ಲಿ ತಯಾರಾದಲ್ಪಡುವಂಥಾ ಸಕಲ ವಿಧವಾದ ಸಾಮಾನುಗಳೂ, ಜವಾಹಿರಿ ನಗಗಳೂ ಕೇಳಿದವರಿಗೆಲ್ಲಾ ಕಳುಹಿಸಿಕೊಡುತ್ತೇವೆ.

ನಗದು ಹಣ ಕಟ್ಟಿ ಇಂಗ್ಲಿಷಿನಲ್ಲೇ ನಮಗೆ ಬರೆಯಬೇಕು.

ವಿಳಾಸ:—Messrs. Bride and Eastland, 29 to 35, City Road, London. E.C.

ಕೊಡಗು ದೇಶದ ಶ್ರೇಷ್ಠವಾದ ಉತ್ಕೃಷ್ಟ ಕಾಫಿಯು

[illegible]ಯದೆ ಇರುವದು ಅಥವಾ ಆಗತಾನೆ ಹುರಿದದ್ದು. ಸಾವಕಾಶದ ಸ್ಥಳದಿಂದಲೆ ಸೆಟ್ಟಿಗೆ ರವಾನಿಸಲ್ಪಡುವದು.

18-9

ವ್ಯಾಪಾರದ C E C ಹೆಗ್ಗುರ್ತು

ಕಾಡುಕೋಣದ ತಲೆಯ ಮುದ್ರೆ ಇದೆ.

ಸಂಪೂರ್ಣವಾಗಿ ಯಂತ್ರದಿಂದಲೆ ಸಿದ್ಧಪಡಿಸಿದ್ದು. ಹೆಗ್ಗುರ್ತು ಉಳ್ಳ ವಿಲಾಸದ ಚೀಟಿ ಸುತ್ತಿಲ್ಲದಿರುವವು ಸ್ವಚ್ಛವಾದವುಗಳಲ್ಲ. ಅವು ನಮ್ಮದಲ್ಲ. ಏಜಂಟರುಗಳು ಬೇಕು. ಇಂಥವರಿಗೆ ಅನುಯುಕ್ತ ದರ ಬರೆಯುವವರು ದಯವಿಟ್ಟು ಈ ಪತ್ರಿಕೆಯ ಹೆಸರನ್ನು ಸೂಚಿಸಿ.

ವಿಳಾಸ.—ಮ್ಯಾನೇಜರ್, ಮ್ಯಾಥಿಸನ್ಸ್ ಕಾಫಿ ವರ್ಕ್ಸ್, ಹುಣಸೂರು.

ಜ್ವರಹರಿ.

15-9



ಇದು ಸಾಧಾರಣ ಜ್ವರ, ಹ[illegible]ಜ್ವರ, ಮೈಲಿಜ್ವರ, ಪಿತ್ತಜ್ವರ, [illegible]ಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಆಫೀಸಿನಲ್ಲಿರುವ ಮುದಾಮತ್ ಖಿಲಾಫ ಸಬ್ ಡಿವಿಜನ್ ಆಫೀಸರ್ ಎಸ್. ಟಿ. ವೆಂಕಟಪತಿ ಅಯ್ಯನವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಡ್ರಾಮಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಔಷಧಿ ಬೇಕೆನ್ನುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨೦ ಡ್ರಾಮಿನ ಸೀಸೆಯನ್ನು ವಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಾರೆ.

ಕ್ರಯ:—ಸೀಸೆ ೧ ಕ್ಕೆ ೮ ಆಣೆ, ೧ ರೂ., ೧—೮ ರೂ. ರೂ. ೨—೧೨ ಆ., ೧೦ ರೂ.; ಹನ್ನೆರಡು ಸೀಸೆ ತರಿಸಿಕೊಂಡರೆ, ಪೋಸ್ಟೇಜು ಮಾಫ಼ಿ ಬಿಡಲಾಗುವದು.

****

ಓಮಂ ಕರ್ಪೂರ.

Omum-Carpoor
TRADE MARK

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ. ಸೀಸೆಗಳಲ್ಲಿ ಹೊಂದುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹನ್ನಿಯ ಓಮಂ ಕರ್ಪೂರವನ್ನು ನಾನೂ ನನ್ನ ಹಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂತ ಬರೆದಿದಾರೆ.

ಈ ಸಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಅಂಗಡಿಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾತ್ರಲ್ಲಿ ವಿಶೇಷ —

ಹನ್ನಿಯವರ ಸೌತ್ ಇಂಡಿಯಾ ಔಷಧಗಳ ಕಂಪನಿ,
ಸೆಕೆಂಡ್ ಬೀಚ್ ಲೈನ್, ಮದ್ರಾಸ್

ಹಿಂದುಸ್ಥಾನದಲ್ಲಿ ಮಕ್ಕಳು

ಬಹಳ ಉಷ್ಣರಾಜ್ಯವಾದದ್ದರಿಂದ ನಾನಾ ರೋಗಬಾಧೆಗಳನ್ನು ಸಹಿಸಬೇಕಾಗಿದೆ.

ಅವರ ಸಣ್ಣ ಸಣ್ಣ ಮೂಳೆಗಳೂ ಮಾಂಸಖಂಡಗಳೂ ಸರಿಯಾಗಿ ಹೊಂದಿ ಬೆಳೆಯುವುದಕ್ಕೆ ಅವರಿಗೆ ಚಿಕ್ಕಂದಿನಿಂದಲೇ ಬಲಕಾರಿ ಸೇವನಾ ಔಷಧವನ್ನು ಕೊಡುವುದು ಅವಶ್ಯಕ.

SCOTT'S EMULSION 31-3

(ಸ್ಕಾಟ್ಸ್ ಇಮಲ್‌ಷನ್)

ಈ ಸೇವನಾ ಔಷಧದಲ್ಲಿ ಮಕ್ಕಳ ಸಮಸ್ತ ಅಂಗಗಳನ್ನೂ ಬಲಪಡಿಸುವಂಥಾ ಬಹು ಉತ್ಕೃಷ್ಟವಾದ ಗುಣಗಳಿರುತ್ತವೆ.

ಇದಕ್ಕೆ ಸಮಾನವಾದದ್ದು ಮತ್ತಾವುದೂ ಇಲ್ಲ.

ಈ ಔಷಧವನ್ನು ಸೇವನೆ ಮಾಡುತ್ತಾ ಬಂದ ಒಡನೆಯೇ ಅದರ ಗುಣಗಳು ಕಂಡು ಬರುವವು.

ಕೈಯಿಂದ ಮುಟ್ಟದೇನೇ ತಯಾರಾದದ್ದು.

ಎಲ್ಲಾ ಔಷಧ ವ್ಯಾಪಾರಸ್ಥರಲ್ಲೂ ಬಿಕರಿಯಾಗುತ್ತಿದೆ.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,
ಔಷಧಗಳ ಕಾರ್ಖಾನೆ,
ಲಂಡನ್, ಇಂಗ್ಲೆಂಡ್,

ಮನುಷ್ಯ ಇರುವ
ಔಷಧ ಗುರುತು.

ಬೆಲೆಗೆ ಬೆಳ್ಳಿ—ಗುಣಕ್ಕೆ ಭಂಗಾರ.

88-45

ಇಂಥಾ ಕಾಗದಗಳು ನಮ್ಮಲ್ಲಿಗೆ ಅನೇಕ ಬಂದಿವೆ.

ಟಿ. ರಾಮಸ್ವಾಮಿ, ಜವಳಿ ವರ್ತಕ, ಮಂಜೇಶ್ವರ, ಇವರು ಬರೆಯುವುದು—"ಕ್ಲೇಮೆಂಟ್‌ಯವರ ಮ್ಯಾಜಿಕ್ ಬಾಂ ಬಹಳ ತೃಪ್ತಿಕರವಾದದ್ದೆಂದು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ಅದು ತುಂಬಾ ಗುಣಕೊಡುವಂಥಾದ್ದು. ದಯವಿಟ್ಟು ಇನ್ನೂ ಮೂರು ಸೀಸೆಯನ್ನು ವಿ. ಪಿ. ಮೇಲೆ ಕಳುಹಿಸಿಕೊಡಿ." ಮಿ॥ ಜೆ. ಡಬ್ಲ್ಯು. ಸಾಮ್ಯುಯಲ್, ಪೋಸ್ಟ್ ಮಾಸ್ಟರ್, ಟ್ರಾನ್ಕೋಬಾರ್, ಇವರು ಬರೆಯುವುದು "ನಿಜವಾಗಿಯೂ ಇದು ಎಲ್ಲಾ ತರದ ನೋವುಗಳಿಗೂ ಅದ್ಭುತವಾದ ಔಷಧವೆನ್ನುವುದಕ್ಕೆ ಸಂಶಯವಿಲ್ಲ." ಮಿಸೆಸ್ ಇ. ಕ್ಯಾಮ್ಮಿಂಗ್, ಪ್ರೈಕಲ್ಲಾ, ಬೊಂಬಾಯಿ, ಇವರು ಬರೆಯುವುದು—"ನಿಮ್ಮ ಮ್ಯಾಜಿಕ್ ಬಾಂ ಔಷಧವು ನನ್ನ ಕಾಲಿನ ಕೆಟ್ಟ ನೋವನ್ನು ಸಂಪೂರ್ಣವಾಗಿ ವಾಸಿ ಮಾಡಿದೆ." ಮಿಸೆಸ್ ಇ. ಮೋರ್ಸ್, ರಂಗೂನ್, ಇವರು ಬರೆಯುವುದು—"ನಾನು ಯಾವಾಗಲೂ ನಿಮ್ಮ ಕ್ಲೇಮೆಂಟ್ಸ್ ಮ್ಯಾಜಿಕ್ ಬಾಮನ್ನು ಗಂಟ್ಲು, ಎದೆಯ ನೋವುಗಳಿಗೆ ಉಪಯೋಗಿಸುತ್ತೇನೆ. ಅದರಿಂದ ನನಗೆ ಪ್ರತಿ ಸಲವೂ ಚನ್ನಾಗಿ ವಾಸಿಯಾಗಿದೆ. ಈ ಔಷಧದಿಂದ ಪಾರ್ಶ್ವನೋವು, ಕೀಲುಗಳ ಬಾಧೆ, ಹೊಟ್ಟೆನೋವು, ಬೆನ್ನು ಳೆಯುವುದು, ತಲೆನೋವು, ಕೆಮ್ಮು, ಕಿಲುಬುಗಳು, ಕೀಲುಗಳು ಕತ್ತರಿಸುವುದು, ಕೊರಳು ಊತ, ಕೈ ಕಾಲು ಒಡೆತ ಇವೆಲ್ಲಾ ಗುಣವಾಗುತ್ತವೆ. ಇದನ್ನು ಹಾಕಿ ಚನ್ನಾಗಿ ತಿಕ್ಕಿದರೆ ಬಾಧೆ ಪರಿಹಾರವಾಗುವುದು. ಕ್ರಯ:—೧ ಬಾಟ್ಲಿಗೆ ೧೨ ಆಣೆ, ಪೋಸ್ಟೇಜ್ ೪ ಆಣೆ. ೩ ಬಾಟ್ಲಿಗೆ ಅಂಚೆವೆಚ್ಚ ಸೇರಿ ರೂ. ೨—೪ ಆಣೆ.

ನಮ್ಮ ವಿಳಾಸ:—ಎಫ್. ಡಬ್ಲ್ಯು. ಆರ್ನ್,
ಸಿಮೆಟ್ರಿ ರೋಡ್, ವೇಪೇರಿ, ಮದರಾಸ್.

ನೋಡಿರಿ.

ಯೆಷ್ಟೋ ಕೆಂಪು ಮತ್ತು ತಾಜಾ ಕಪ್ಪು.

ಹಾಸಿಗೆ ಊಲಿನ ದಾರ.

125-15

೩,೦೦೦ ಹಾಸಿಗೆಯ ಟೋಪಿ ಹೊಲೆಯುವ

ಸುಪೀರಿಯರ್ ವೂಲಿನ ದಾರ ಮಾತ್ರ

	ರೂ.	ಆ	ಪೈ
೧ ಟೋಪಿ ಆಗುವ ವೂಲಿನ ದಾರದ ಕ್ರಯ	೦	೪	೦
೬೦ ತೊಲೆಯ ಒಂದು ಬಂಡಲ್ ದಾರದ ಕ್ರಯ	೨	೬	೦
ಹಾಸಿಗೆ ಟೋಪಿ ಹೊಲೆಯುವ ಕೊಕ್ಕೆ ಸೂಜಿ ೧ಕ್ಕೆ	೦	೧	೯
ಈ ದಾರದಲ್ಲಿ ಆದ ಟೋಪಿ ಡಜನ್ ೧ಕ್ಕೆ	೧೩	೩	೦

ವಿ. ಪಿ ಯಿಂದಲೂ ರವಾನಿಸುತ್ತೇನೆ

ವಿಳಾಸ—ಸಿ. ರಘುನಾಥ ಕಾಮತ್,

ವೂಲಿನ ಮರ್ಚೆಂಟ್, ಬೋಳಾರ, ಮಂಗಳೂರು.

ಮೈಸೂರು ಸೀಮೆಯ ಎಕ್ಸೈಜು ಕಮಿಷನರವರ ಆಫೀಸು.

ತಾರೀಖು-೧೧ನೆ ಮಾರ್ಚಿ, ೧೯೦೭.

ನೋಟೀಸು.

35 2

೧೯೦೭ನೆ ಇಸವಿಯ ಜುಲೈ ಗುರ್‍ರಿ ತಾರೀಖು ಲಾಗಾಯಿತು ೧೯೧೦ನೆ ಇಸವಿಯ ಜೂನ್ ೩೦ನೆ ತಾರೀಖಿನ ವರೆಗೆ ಆಗುವ ಮೂರು ವರ್ಷಗಳ ಪರ್ಯಂತ ಬೆಂಗಳೂರು ಬಳಿಯಣ ಸರ್ಕಾರಿ ಸೆಂಟ್ರಲ್ ಡಿಸ್ಟಿಲರಿಯಾ ಸಾರಾಯಿ ಕಾರ್ಖಾನೆಯಲ್ಲಿ ಶರಾಬನ್ನೂ ಇತರ ಬಳದೇಶದ ಮದ್ಯಗಳನ್ನೂ ತಯಾರ್ಮಾಡುವುದಕ್ಕೂ, ಅವುಗಳನ್ನು ಮೈಸೂರು ಸೀಮೆಗೂ ಬೆಂಗಳೂರು ಸಿವಿಲ್ ಮತ್ತು ಮಿಲಿಟರಿ ಸ್ಟೇಷನ್ನಿಯಾದಂಡಿಗೂ ಸರಬರಾಯಿ ಮಾಡುವುದಕ್ಕೂ, ಒಟ್ಟು ಸ್ವಾತಂತ್ರ್ಯಕ್ಕೋಸ್ಕರ ದರಖಾಸ್ತುಗಳು ಅಪೇಕ್ಷಿಸಲ್ಪಟ್ಟಿರುತ್ತವೆ.

೨. ಪ್ರತಿ ದರಖಾಸ್ತಿನ್ನೂ ೫,೦೦೦ ರೂಪಾಯಿ ಠೇವಣಿ ನಿಶಿ ಕಳುಹಿಸಬೇಕು. ಮತ್ತು ಅಂಥ ದರಖಾಸ್ತು ಈ ಕೆಳಗೆ ರುಜು ಮಾಡಿರುವವರಿಗೆ ೧೯೦೭ನೆ ಇಸವಿ ಏಪ್ರಿಲ್ ೩ನೆ ತಾರೀಖು ಬುಧವಾರ ಮಧ್ಯಾಹ್ನ ಅಥವ ಅದಕ್ಕೆ ಮುಂಚೆ ಸೇರಬೇಕು.

೩. ಇದರ ಷರತ್ತುಗಳಿಗೂ ಹೆಚ್ಚು ತಪಸೀಲುಗಳಿಗೂ ೧೯೦೭ನೆ ಇಸವಿ ಫೆಬ್ರುವರಿ ೨೮ನೆ ತಾರೀಖಿನ ಫೈ. ೭೫೦೧—ಯಸ್. ಆರ್ ೫೧–೦೬ನೆ ನಂಬರಿನ ಇಸ್ತಿಹಾರ್‌ನಾಮೆಯನ್ನು ಮೈಸೂರು ಗೆಜೆಟ್ಟಿನಲ್ಲಿ ನೋಡತಕ್ಕದ್ದು.

ಪಿ. ಯನ್. ಪೂರ್ಣಯ್ಯ,

ಮೈಸೂರು ಸೀಮೆಯ ಎಕ್ಸೈಜು ಕಮಿಷನರು.

ಜಡೆಕುಚ್ಚು, ಪಚ್ಚೆಯ ಜಡೆಬಿಲ್ಲೆ.

36 2

ನವೀನ ಆಭರಣಗಳು; ಬೇಗನೋಡಿ.

ಇದರಿಂದ ಸರ್ವರಿಗೂ ತಿಳಿಸುವದೇನಂದರೆ—ನಮ್ಮಲ್ಲಿ ಬಹಳ ಶ್ರೇಷ್ಠವಾದ ಎಲೆಕ್ಟ್ರಿಕ್ ಚಿನ್ನದ ಗಿಲ್ಟಿನಿಂದ ತಯಾರಿಸಲ್ಪಟ್ಟ ಭಂಗಾರದ ಆಭರಣಗಳು ಬಹಳ ಸುಲಭ ಕ್ರಯಕ್ಕೆ ದೊರೆಯುತ್ತವೆ. ಇದರಲ್ಲಿ ಕಂಡ ಆಭರಣಗಳನ್ನು ಚಿನ್ನದ ಕೆಲಸ ಮಾಡುವದರಲ್ಲಿ ಬಹಳ ಸಮರ್ಥರಾದ ಅಕ್ಕಸಾಲಿಗರಿಂದ ತಯಾರಿಸಲ್ಪಟ್ಟಿರುತ್ತೆ. ಇದು ಬಹಳ ಕಾಲಗಳ ವರೆವಿಗೂ ರಂಗು ಹೋಗದ ಹಾಗೆ ಬಲವಾದ ಎಲೆಕ್ಟ್ರಿಕ್ ಚಿನ್ನದ ಗಿಲ್ಟ್ ಹಾಕಲ್ಪಟ್ಟಿರುತ್ತೆ. ಇದರ ಕೆಲಸದ ನಾಜೂಕು, ಸ್ವಚ್ಛ ಭಂಗಾರದ ಆಭರಣಗಳನ್ನು ಸೋಲಿಸುತ್ತೆ. ಈ ಕೆಳಗೆ ಕಂಡ ಆಭರಣಗಳಲ್ಲಿ ಯಾವದಾದರೂ ಒಂದನ್ನು ತರಿಸಿ ಪರೀಕ್ಷಿಸಿರಿ—

೧. ಜಡೆಕುಚ್ಚು.

ಕ್ರಯ ರೂ ೩—೪—೦.

ಇದರ ಪ್ರತಿಯೊಂದು ಕುಚ್ಚುಗಳ ಸುತ್ತಲೂ ಸುಂದರವಾದ ಗೆಜ್ಜೆಗಳನ್ನು ಸುತ್ತಲ್ಪಟ್ಟು ನಾಜೂಕಾಗಿ ಗೊಂಡೆಗಳನ್ನು ಕಟ್ಟಿ ನೋಡುವವರಿಗೆ ನಿಜವಾದ ಭಂಗಾರದ ಆಭರಣವೆನ್ನುವ ಹಾಗೆ ಗೆಯಾರಿಸಲ್ಪಟ್ಟಿರುತ್ತೆ.

೨. ಪಚ್ಚೆ ಕಲ್ಲು ಜಡೆಬಿಲ್ಲೆ. ಚಿನ್ನದ ಗಿಲ್ಟು ಮಾಡಿದ್ದು ೧ಕ್ಕೆ ಬೆಲೆ ರೂ. ೨-೪-೦.

ಇದು ಮೇಲಾದ ನಕಾಸು ಕೆಲಸಗಳನ್ನು ಮಾಡಲ್ಪಟ್ಟು ಪಚ್ಚೆ ಕಲ್ಲಿನಿಂದ ಬಿಗಿಯಲ್ಪಟ್ಟಿರುತ್ತೆ. ಎಷ್ಟು ವರ್ಷಗಳ ಪರ್ಯಂತರ ಇಟ್ಟಾಗ್ಯೂ ರಂಗು ಹೋಗದು, ನೋಡುವವರ ಕಣ್ಣು ಚದರುವಷ್ಟು ಪ್ರಕಾಶವುಳ್ಳದ್ದು.

ನಮ್ಮ ವಿಳಾಸ—ಜರ್ಮನ್ ಸಿಲ್ವರ್ ಜ್ಯೂಯಲ್ ಡಿಪೋ,

ಸಾವ್ಕಾರ್ ಪೇಟೆ, ಮದ್ರಾಸು.

CHAMBERLAIN'S COUGH REMEDY.

ಚೇಂಬರ್ಲೈನ್‌ರವರು ಕಂಡುಹಿಡಿದ ಕೆಮ್ಮಿನ ಔಷಧವು.



4-14

ಶೀತದ ಕೆಮ್ಮು, ಗಂಟಲು ಗಾರೆನ್ನುವುದು, ಹುಡಿಗೆಮ್ಮು, ನಾಯಿಗೆಮ್ಮು, ಎಲ್ಲಾ ತರದ ಶೀತ, ಗಂಟಲನಲ್ಲೂ ಎದೆಯಲ್ಲೂ ಹುಟ್ಟುವ ಸಮಸ್ತ ವ್ಯಾಧಿಗಳು—ಇವಕ್ಕೆಲ್ಲಾ ಈ ಔಷಧವು ಬಾಣಪ್ರಾಯವಾಗಿದೆ.

ಆ ಕೆಮ್ಮನ್ನು ಅಲಕ್ಷ್ಯಮಾಡಬೇಡಿ. ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ. ಅದರ ಮೇಲೆ ನ್ಯೂಮೋನಿಯಾ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವುದು. ತರುವಾಯ ಉಗುಳಿನಲ್ಲಿ ರಕ್ತ ಬೀಳುವುದು, ಹಾಗೆಯೇ ಕ್ಷಯರೋಗಕ್ಕೆ ಆಸ್ಪದವಾಗುವುದು.

ಚೇಂಬರ್ಲೈನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟಲಿನಲ್ಲಿ ಶ್ಲೇಷ್ಮ ಕಟ್ಟುವುದನ್ನೂ ಶ್ಲೇಷ್ಮ ಬೀಳುವುದನ್ನೂ ಖಂಡಿತವಾಗಿ ನಿವಾರಣೆಮಾಡುತ್ತದೆ. ಉಸುರು ಹೊಯ್ಯುವುದು ಕಷ್ಟವಾಗಿದ್ದರೆ ಅದನ್ನು ಕೂಡಲೇ ಪರಿಹರಿಸುತ್ತದೆ. ಅಪಾಯಕರವಾದ ಕೆಮ್ಮಿನ ಶಬ್ದವನ್ನು ನಿಲ್ಲಿಸಿಬಿಡುತ್ತದೆ. ಏಟ ಬಡಿಗುವಂಥಾ ಕೆಟ್ಟ ಸ್ಥಿತಿಯನ್ನು ಸಂಪೂರ್ಣವಾಗಿ ವಾಸಿಮಾಡಬಲ್ಲದು. ಕೆಮ್ಮನ್ನು ಶಮನಮಾಡಿ, ನೀವು ಸುಖವಾಗಿ ನಿದ್ರೆಮಾಡುವಂತೆ ಮನಸ್ಸಿಗೆ ಉಲ್ಲಾಸಕೊಡುತ್ತದೆ.

ಚೇಂಬರ್ಲೈನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇರಿಸಿರುವುದಿಲ್ಲ.

ಈ ಔಷಧವು ವನಸ್ಪತಿಗಳ ತಯಾರಿ.

ಕೈಯಿಂದಮುಟ್ಟದೆ ತಯಾರಾಗಿದೆ.

ಎಲ್ಲೆಲ್ಲೂ ಬಿಕರಿಯಾಗುವುದು. ಸಣ್ಣ ಶೀಸೆಗೆ ೧ ರೂಪಾಯಿ. ದೊಡ್ಡ ಶೀಸೆಗೆ ೨ ರೂಪಾಯಿ.

ಮಕ್ಕಳ ಮದುವೆ ನೋಟೀಸ್.

38—1

ಧುಮಕೂರು ತಾಲ್ಲೂಕ್ ಕ್ಯಾತ್ಸಂದ್ರದಲ್ಲಿರುವ ಚನ್ನಸೋಮಯ್ಯನವರ ಮಗ ಕೆ. ಚನ್ನಬಸವಯ್ಯನು ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ—ನಮ್ಮ ತಂದೆ ಚನ್ನಸೋಮಯ್ಯನವರು ನಮ್ಮ ತಾಯಿ ಸಹ ಈಗ್ಗೆ ೩—೪ ವರುಷದ ಕೆಳಗೆ ಪ್ಲೇಗಿನಿಂದ ಮೃತಪಟ್ಟರು. ಆಗ್ಗೆ ನಮಗೆ ಯಾರೂ ದಿಕ್ಕಿಲ್ಲದೆ ಹೋದಕಾರಣ ನಾನು ನನ್ನ ತಂಗಿಯರಾದ ಗಂಗಮ್ಮ, ಗೌರಮ್ಮ, ನನ್ನ ತಮ್ಮ ಸೋಮಶೇಖರ, ನಮ್ಮಕ್ಕ ಚನ್ನಮ್ಮ ಸಹ ನಮ್ಮ ದೊಡ್ಡಮ್ಮ ದೇವೀರಮ್ಮನ ಮನೆಯಲ್ಲಿ ಅವಳ ಪೋಷಣೆಯಲ್ಲೇ ಇರುತ್ತಿದ್ದೆವು. ಎಲ್ಲರೂ ಒಂದೇ ಕಡೆ ಇರೋಣದರಿಂದ ಗುಜರಾನ್ ಸಾಗುವುದು ಕಷ್ಟವಾದ್ದರಿಂದ ನಾನೂ ನನ್ನ ತಮ್ಮನೂ ಸುಮಾರು ಒಂದು ವರುಷದ ಕೆಳಗೆ ತಿಪಟೂರಿಗೆ ನಮ್ಮ ದೊಡ್ಡನ ಮನೆಗೆ ಬಂದೆವು. ನಾನು ಬಂದ ನಂತರ ನಮ್ಮ ಅಕ್ಕನು ಕೆಲವು ದಿನಗಳ ಪ್ರೇರಣೆಯಿಂದ ಆ ಎರಡು ಹುಡುಗರನ್ನು ನಮ್ಮ ದೊಡ್ಡಮ್ಮನ ಅಧೀನ ತಪ್ಪಿಸಿ, ಹಿರೇ ಹುಡುಗಿಯಾದ ಗಂಗಮ್ಮನನ್ನು ನನಗೆ ಭಾಗವಾದ ತುಮಕೂರಲ್ಲಿರುವ ಕುಲ್ಕುಂಟೆ ನಂಜುಂಡಪ್ಪನವರ ಮಗ ಸೋಮಶೇಖರಯ್ಯ ಉರುಫ್ ಚಿಕ್ಕಬಸವಯ್ಯನವರ ಮನೆಯಲ್ಲಿ ಬಿಟ್ಟು, ಚಿಕ್ಕ ಹುಡುಗಿಯಾದ ಗೌರಮ್ಮನನ್ನು ತನ್ನ ಸ್ವಾಧೀನದಲ್ಲಿಟ್ಟುಕೊಂಡು, ಡಿಟೋ ಕ್ಯಾತ್ಸಂದ್ರದಲ್ಲಿಯೇ ಪ್ರತ್ಯೇಕವಾಗಿ ಇರುತ್ತಾಳೆ. ಈಗ ನನ್ನ ತಂದೆಗೆ ಬದಲಾಗಿ ನಾನು ಸ್ವತಂತ್ರನಾಗಿಯೂ ಬಾಧ್ಯಸ್ಥನಾಗಿಯೂ ಇರುವುದರಿಂದ ನನ್ನ ಅನುಮತಿಯಿಲ್ಲದೆ ಯಾರಾದರೂ ಆ ಹುಡುಗರ ಲಗ್ನ ಮುಂತಾದ್ದನ್ನು ಮಾಡಿಕೊಂಡರೆ ಅಂಥಾ ಲಗ್ನವು ಶಾಸ್ತ್ರಸಮ್ಮತವಾಗಿ ಊರ್ಜಿತವಾಗಲಾರದು. ಹಾಗೆ ನನ್ನ ಅನುಮತಿಯಿಲ್ಲದೆ ಲಗ್ನಮಾಡಿಕೊಂಡವರು ನನ್ನ ನಾಲಿಷ್ ಫಲಿತಾಂಶಗಳಿಗೆಲ್ಲಾ ಗುರಿಯಾಗುತ್ತಾರೆಂದು ಸಕಲರಿಗೂ ತಿಳಿಸಿರುತ್ತೇನೆ.

ಕೆ. ಚನ್ನಬಸವಯ್ಯನ ರುಜು.

ಮಾಳ್ಯದ ವೆಂಕಟಾಚಲ ಪಂಡಿತ, ಶ್ರೀಸೀತಾರಾಘವ ವೈದ್ಯಶಾಲಾ, ಕೊಳ್ಳೇಗಾಲ, ಇವರ ಸಿದ್ಧೌಷಧಗಳು.

26-7

೧. ಲೋಕೋಪಕಾರ ಹರ ಕಸ್ತೂರಿ ಮಾತ್ರೆ.—ಈ ಮಾತ್ರೆಗಳನ್ನು ಹವಳದ ಭಸ್ಮ ಚಿನ್ನದ ರೇಕುಗಳ ಮಿಶ್ರದಿಂದ ತಯಾರಿಸಿದೆ. ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಪ್ಲೇಗು ಜ್ವರ, ಛಳೀಜ್ವರ, ಜ್ವರ, ಅಗ್ನಿನಷ್ಟ, ನಿಶ್ಶಕ್ತಿ, ಕೆಮ್ಮು, ಹೊಟ್ಟೆ, ಕಿಬ್ಬೊಟ್ಟೆ, ಎದೆಗಳ ನೋವು ಇವಕ್ಕೆ ದಾರಿಗೊಡದು; ಮಕ್ಕಳ ಎಲ್ಲಾ ರೋಗಗಳಿಗೂ ಗುಣಕಾರಿ. ನೀರು ಮತ್ತು ಹವಾ ಬದಲಾವಣೆಗೆ ಒಳ್ಳೇದು. ೨೦೦ ಮಾತ್ರೆಯುಳ್ಳ ಕುಪ್ಪಿಗೆ ೪ ಆಣೆ. ಪೋಸ್ಟು ಮೂಲಕ ೫ ಸೀಸೆಗೆ ಒಂದು ಸೀಸೆ ಹೆಚ್ಚು. ೧ ರಿಂದ ೩ ರ ವರೆಗೆ ಟ. ಖರ್ಚು ೪ ಆಣೆ.



೨. ಎಸ್. ಸಿ. ಇ. ಸರ್ವಾಂಗಬಲಕಾರಿ.—ಕಾಫಿ, ಟೀ, ಕೋಕೋಗಳಿಗೆ ಬದಲಾಗಿ ಉಪಯೋಗಿಸುವ ಶುದ್ಧಿ ಕಾಫಿ, ಟೀಗಳಲ್ಲಿರುವ ದುರ್ಗುಣಗಳು ಇದರಲ್ಲಿಲ್ಲ. ವಾಯು, ಎದೆ, ಅನ್ನಾಶಯ, ನರಗಳು, ಸಂದುಗಳು, ಮೆದುಳು, ಕಿಂಸ್ಸು, ಮಲಬದ್ಧ, ಇವುಗಳ ಸಂಬಂಧವಾದ ಎಲ್ಲಾ ರೋಗಗಳನ್ನೂ ಚೆನ್ನಾಗಿ ಹೋಗಲಾಡಿಸಿ ಧಾತುಶಕ್ತಿಯನ್ನು ಕ್ರಮವಾಗಿ ವೃದ್ಧಿಪಡಿಸುವದು. ೨೦ ಲೋಟ ಕಾಫಿಯಾಗುವ ಡಬ್ಬಿ ೪ ಆಣೆ; ೬೦ ಲೋಟಾ ಆಗುವುದು ೭ ಆಣೆ.

೩. ಪ್ಲೇಗಿಗೆ ಸಿದ್ಧೌಷಧ.—ಪ್ಲೇಗಿಗೆ ಔಷಧಿಯೇ ಇಲ್ಲವೆಂದು ಹೇಳದೆ ಈ ನಮ್ಮ ಔಷಧವನ್ನು ತರಿಸಿಕೊಡಿ. ಖಂಡಿತ ಗುಣವಾಗುತ್ತದೆ. ಯೋಗ್ಯತಾಪತ್ರಗಳನ್ನು ವಿವರಿಸಲು ಸ್ಥಳ ಸಾಲದು. ಗಡ್ಡೆ ಮೊದಲಾದ ಬಾಧೆ ಇಲ್ಲದಂತೆ ಉದ್ಭವ ಔಷಧಿ ಸೇರಿ ಕ್ರಯ ೧ ರೂಪಾಯಿ.

೪. ಬಾಧಾ ಹಾರಿಣಿ.—ಪಟ್ಟು ತಗಲಿದ ನೋವು, ವಾಯು, ತಲೆನೋವು, ಮುಂತಾದ್ದಕ್ಕೆ ಸಂಜೀವನ. ಡಬ್ಬಿ ೫ ಆಣೆ.

ವಿಳಾಸ:—ಎಸ್. ಎಸ್. ಆರ್. ವೈದ್ಯಶಾಲಾ,

ಲಕ್ಷ್ಮೀವಿಲಾಸ ರೋಡ್, ಮೈಸೂರು.

ವೃತ್ತಾಂತ ಪತ್ರಿಕೆ

ಸನ್ ೧೯೦೭ ನೇ ಇಸವಿ ಏಪ್ರಿಲ್ ತಾ॥ ೪ ನೇ ಗುರುವಾರ

ವೈಸ್‌ರಾಯಿಯವರ ಭಾಷಣವು.

ಹಿಂದುಸ್ಥಾನದ ಜಮಾಖರ್ಚಿನ ಲೆಕ್ಕಗಳನ್ನು ಕಳೆದ ವಾರ ತಿಳಿಸಿರುತ್ತೇವಷ್ಟೆ. ಇವುಗಳ ವಿಷಯದಲ್ಲಿ ಕಳೆದ ಬುಧವಾರ ವೈಸ್‌ರಾಯಿಯವರ ಮಂತ್ರಾಲೋಚನಾ ಸಭೆಯಲ್ಲಿ ಮೆಂಬರುಗಳು ತಮ್ಮ ಅಭಿಪ್ರಾಯಗಳನ್ನು ತಿಳಿಸಿದರು. ಕಡೆಯಲ್ಲಿ ವೈಸ್‌ರಾಯಿ ಲಾರ್ಡ್ ಮಿಂಟೋ ಪ್ರಭುಗಳು ಅಪ್ಪಣೆ ಕೊಡಿಸಿರುವ ಭಾಷಣವು ಬಹು ಸ್ವಾರಸ್ಯವಾಗಿರುತ್ತದೆ. ಹಿಂದುಸ್ಥಾನದ ಐಶ್ವರ್ಯವು ದಿನಕ್ರಮೇಣ ಅಭಿವೃದ್ಧಿ ಹೊಂದುತ್ತಿರುವುದನ್ನೂ ರಾಜಾದಾಯದಲ್ಲಿ ಖರ್ಚು ಕಳೆದು ಬಹಳ ಹಣ ಮಿಗುತ್ತಿರುವುದನ್ನೂ ಕೇಳಿ ಈ ರಾಷ್ಟ್ರದ ಸಮಸ್ತ ಪ್ರಜೆಗಳೂ ಸಂತೋಷಪಟ್ಟಾರೆನ್ನುವುದಕ್ಕೆ ಸಂಶಯವಿಲ್ಲ. ಮತ್ತು ಗವರ್ನಮೆಂಟಿನವರು ಉಪ್ಪಿನ ತೆರಿಗೆಯನ್ನು ಮಣಕ್ಕೆ ಒಂದೇ ರೂಪಾಯಿಗೆ ಇಳಿಸಿರುವುದರಿಂದ ಪ್ರತಿ ಒಬ್ಬ ಪ್ರಜೆಗೂ ಸಹಾಯವಾಯಿತು. ವೈಸ್‌ರಾಯಿಯವರು ಅಪ್ಪಣೆ ಕೊಡಿಸಿರುವಂತೆ ಈ ರಿಯಾಯತಿಯಿಂದ ಪ್ರತಿ ಒಬ್ಬ ಪ್ರಜೆಯೂ ಒಂದು ವರುಷಕ್ಕೊಂಡು ಉಪಯೋಗಿಸುವಷ್ಟು ಉಪ್ಪಿಗೆ ೨। ಆಣೆ ಮಾತ್ರ ಖರ್ಚಾಗುವಂತಾಗಿದೆ. ಆದರೆ ಈ ರಿಯಾಯತಿಯಿಂದ ಗವರ್ನಮೆಂಟಿಗೆ ಉತ್ಪತ್ತಿಯಲ್ಲಿ ೧೯೦ ಲಕ್ಷ ರೂಪಾಯಿ ಕಡಿಮೆಯಾಗಿರುವುದು. ಆದಾಗ್ಯೂ ಪ್ರಜೆಗಳು ಇನ್ನೂ ಹೆಚ್ಚಾಗಿ ಉಪ್ಪನ್ನು ಉಪಯೋಗಿಸುತ್ತಾರೆಂಬ ನಿರೀಕ್ಷೆ ಇರುವುದರಿಂದ ರಾಜಾದಾಯವು ಅಷ್ಟು ಕಡಿಮೆಯಾಗಲಾರದೆಂದು ತೋರುತ್ತಿದೆ. ಈಗ ಗವರ್ನಮೆಂಟಿನವರು ಈ ಸುಂಕವನ್ನು ಕಡಿಮೆಮಾಡಿರುವದರಿಂದ ವರ್ತಕರು ಮಾತ್ರ ಅದರ ಪ್ರಯೋಜನವನ್ನು ಪಡೆಯದೆ ಸಕಲ ಪ್ರಜೆಗಳಿಗೂ ಅದರ ಫಲ ಕಂಡುಬರುವಂತೆ ಉಪ್ಪನ್ನು ಇನ್ನೂ ಅಗ್ಗವಾಗಿ ಬಿಕರಿ ಮಾಡಿಯಾರೆಂದು ಹಾರೈಸುತ್ತೇವೆ. ಹಿಂದೆ ಗವರ್ನಮೆಂಟಿನವರು ಈ ಸುಂಕವನ್ನು ಕಡಿಮೆಮಾಡಿದಾಗ್ಗೆ ವರ್ತಕರು ಉಪ್ಪನ್ನು ಅಗ್ಗವಾಗಿ ಬಿಕರಿ ಮಾಡಲಿಲ್ಲವೆಂದು ಕೆಲವರು ಆಕ್ಷೇಪಣೆ ಮಾಡಿದರು.

ಇನ್ನೊಂದು ವಿಶೇಷ ಸಂಗತಿ ಏನೆಂದರೆ, ಹಿಂದುಸ್ಥಾನದಲ್ಲಿ ಬೆಳೆಯುವ ಅಫೀಮನ್ನು ಚೀನಾ ರಾಜ್ಯಕ್ಕೆ ಕಳುಹಿಸಿ ಬಿಕರಿ ಮಾಡುವುದನ್ನು ವರುಷೇ ವರುಷ ಕಡಿಮೆ ಮಾಡುತ್ತಾ ಬಂದು, ಇನ್ನು ಹತ್ತು ಸಂವತ್ಸರಗಳಲ್ಲಿ ಸಂಪೂರ್ಣವಾಗಿ ನಿಲ್ಲಿಸಿಬಿಡುವಂತೆ ಏರ್ಪಾಡು ಮಾಡಿದಾರೆ. ಇದರಿಂದಲೂ ಇಂಡಿಯಾ ಗವರ್ನಮೆಂಟಿನ ಉತ್ಪತ್ತಿಯು ಬಹಳ ಕಡಿಮೆಯಾಗುವುದು. ಈ ವ್ಯಾಪಾರದ ದೆಸೆಯಿಂದ ಚೀನಾ ರಾಜ್ಯದ ಪ್ರಜೆಗಳ ಕಾಯಪುಷ್ಟಿಗೂ ಅವರ ಸದ್ಗುಣಸಚ್ಚರಿತೆಗೂ ತುಂಬಾ ಹಾನಿಯಾಗುತ್ತಿದೆ ಎನ್ನುವುದಕ್ಕೆ ಯಾವ ಸಂಶಯವೂ ಇಲ್ಲ. ಚೀನಾ ಗವರ್ನಮೆಂಟಿನವರು ಈ ಕೆಟ್ಟ ಮಾದಕವಸ್ತುವನ್ನು ತಮ್ಮ ಪ್ರಜೆಗಳು ಉಪಯೋಗಿಸದಂತೆ ಬಹು ಮುತುವರ್ಜಿಯಿಂದ ತಡೆಯಲಾರಂಭಿಸಿದಾರೆ. ಮತ್ತು ಇಂಡಿಯಾ ಗವರ್ನಮೆಂಟಿನವರೂ ಇಂಗ್ಲಿಷ್ ಸರ್ಕಾರದವರೂ ಈ ಭಾಗದಲ್ಲಿ ಚೀನೀಯರಿಗೆ ಸಹಾಯ ಮಾಡುವುದು ಧರ್ಮವಾಗಿಯೂ ಸಹಜವಾಗಿಯೂ ಇರುತ್ತದೆ. ಯಾಕಂದರೆ ಈ ವ್ಯಾಪಾರವನ್ನು ಇಟ್ಟುಕೊಂಡಿರುವುದು ಇಂಗ್ಲಿಷ್ ರಾಜ್ಯಾಧಿಪತ್ಯಕ್ಕೇನೇ ತುಂಬಾ ಅವಮಾನಕರವಾಗಿರುತ್ತದೆ. ಈ ಅಫೀಮಿನ ವ್ಯಾಪಾರವನ್ನು

ಕಾರಣದಿಂದ ಕೆಲವುಕಾಲ ಇಂಡಿಯಾ ಗವರ್ನಮೆಂಟ ಉತ್ಪತ್ತಿಯಲ್ಲಿ ಕಡಿಮೆಯಾದಾಗ್ಯೂ ಇತರ ಬಾಬುಗಳ ಉತ್ಪತ್ತಿಯು ಹೆಚ್ಚುವುದರಿಂದ ಆ ನಷ್ಟವನ್ನು ಎತ್ತಿಕೊಳ್ಳಬಹುದಾಗಿದೆ.

ಮೇಲ್ಕಂಡ ವಿಷಯಗಳಿಗಿಂತಲೂ ವೈಸ್‌ರಾಯರವರು ಆಲೋಚಿಸಿರುವ ಮುಖ್ಯವಾದ ಇನ್ನೊಂದು ಭಾಗವೇನೆಂದರೆ, ಹಿಂದುಸ್ಥಾನದ ಮಂತ್ರಾಲೋಚನಾಸಭೆಯಲ್ಲಿ ಪ್ರಜೆಗಳ ಪಕ್ಷದ ಮೆಂಬರುಗಳ ಸಂಖ್ಯೆಯನ್ನು ಹೆಚ್ಚಿಸಬೇಕೆಂತಲೂ, ಈ ಪ್ರಜಾಪಕ್ಷದ ಮೆಂಬರುಗಳನ್ನು ಚುನಾಯಿಸುವುದಕ್ಕೆ ಪ್ರಜೆಗಳಿಗೆ ಅಧಿಕಾರ ವಹಿಸಬೇಕೆಂತಲೂ ವೈಸ್‌ರಾಯಿಯವರು ತೀರ್ಮಾನಿಸಿ, ಈ ವಿಷಯದಲ್ಲಿ ವಿಲಾಯತಿಗೆ ಬರೆದಿರುತ್ತಾರೆ. ಈ ವಿಚಾರವು ಈಗ ಇಂಡಿಯಾ ಸ್ಟೇಟ್ ಸೆಕ್ರೆಟರಿಯವರ ಸಭೆಯಲ್ಲಿ ಚರ್ಚೆಯಾಗುತ್ತಿದೆ. ಅದು ಸ್ಯಾಂಕ್ಷನ್ ಆಗಿ ಬಂದು ಪ್ರಕಟವಾಗುವ ವರೆಗೆ ಈ ಭಾಗವನ್ನು ನಾವು ಏನೊಂದೂ ಹೇಳಲಾರೆವು. ಹ್ಯಾಗೂ ಈಗ ಇಂಡಿಯಾ ಗವರ್ನಮೆಂಟಿನವರು ಕೊಟ್ಟಿರುವ ಈ ಸಲಹೆಯು ದೆಸೆಯಿಂದ ಈ ರಾಷ್ಟ್ರದಲ್ಲಿ ಸ್ವರಾಜ್ಯಾಧಿಕಾರವನ್ನು ಪ್ರಜೆಗಳಿಗೆ ಹೆಚ್ಚಿಸಿಕೊಡಬೇಕೆಂಬ ಕುತೂಹಲವು ಅವರಲ್ಲಿ ಉಂಟಾಗಿದೆ ಎಂದು ಗೊತ್ತಾಗುವುದು.

ಒಬ್ಬ ಪ್ರಸಿದ್ಧ ಉಪಾಧ್ಯಾಯನು ತನ್ನ ವಿದ್ಯಾರ್ಥಿಗಳಿಗೆ ಹೇಳಿದ ಕಡೇ ಬುದ್ಧಿವಾದಗಳು.

ಮದರಾಸ್ ಪಟ್ಟಣದಲ್ಲಿರುವ ಕ್ರಿಶ್ಚಿಯನ್ ಕಾಲೇಜ್ ಎಂಬ ಪ್ರಾಥಮಿಕ ವಿದ್ಯಾಶಾಲೆಯು ಹಿಂದೂದೇಶದಲ್ಲೆಲ್ಲಾ ಪ್ರಸಿದ್ಧವಾದುದೆಂದು ನಮ್ಮ ವಾಚಕರಿಗೆ ತಿಳಿದ ಸಂಗತಿಯಾಗಿದೆ. ಅದರಲ್ಲಿ ಸುಮಾರು ಎರಡು ಸಾವಿರ ವಿದ್ಯಾರ್ಥಿಗಳು ಓದುತ್ತಿರುವರು. ಈಗ್ಗೆ ಮೈಸೂರು ಸರ್ಕಾರದಲ್ಲಿ ದೊಡ್ಡ ಹುದ್ದೆಯ ಉದ್ಯೋಗಸ್ಥರಲ್ಲನೇಕರು ಸದರಿ ವಿದ್ಯಾಶಾಲೆಯಲ್ಲಿ ತಮ್ಮ ವ್ಯಾಸಂಗವನ್ನು ಪೂರೈಸಿ ಡಿಗ್ರಿಗಳನ್ನು ಪಡೆದುಕೊಂಡಿರುವರು. ಕ್ರಿಶ್ಚಿಯನ್ ಕಾಲೇಜಿನಲ್ಲಿ ಸುಮಾರು ನಲವತ್ತೈದು ವರುಷಗಳ ತನಕ ಮುಖ್ಯೋಪಾಧ್ಯಾಯರಾಗಿದ್ದ ಡಾಕ್ಟರ್ ಮಿಲ್ಲರ್ ಸಾಹೇಬರ ಹೆಸರು ಹಿಂದೂದೇಶದಲ್ಲೆಲ್ಲಾ ಪ್ರಸಿದ್ಧವಾಗಿದ್ದು ಎಲ್ಲರಿಂದಲೂ ಹೊಗಳಲ್ಪಡುತ್ತಿದೆ. ಅವರು ಈ ದೇಶದ ಯೌವನಸ್ಥರನ್ನು ವಿದ್ಯಾವಂತರನ್ನಾಗಿ ಮಾಡುವುದಕ್ಕೆ ತಮ್ಮ ಜೀವಮಾನವನ್ನೆಲ್ಲಾ ವಿನಿಯೋಗಿಸಿರುವುದರಲ್ಲಿ ಯಾವ ಸಂದೇಹವೂ ಇಲ್ಲ. ಅವರು ಐಶ್ವರ್ಯವಂತರಾಗಿದ್ದು ತಮ್ಮ ಆಸ್ತಿಯ ಹೆಚ್ಚಿನ ಭಾಗವನ್ನೆಲ್ಲಾ ಸದರಿ ವಿದ್ಯಾಶಾಲೆಗೆ ಸಂಬಂಧಪಟ್ಟ ಕಟ್ಟಡಗಳನ್ನು ಕಟ್ಟಿಸುವುದರಲ್ಲಿ ಉಪಯೋಗಿಸಿರುತ್ತಾರೆ. ತಮ್ಮ ವಿದ್ಯಾರ್ಥಿಗಳು ವ್ಯಾಸಂಗ ಮಾಡುವಲ್ಲಿ ತಕ್ಕ ಸಾಧಕಗಳಿಲ್ಲದೆ ತೊಂದರೆಪಡುವವರಾದರೆ ಡಾಕ್ಟರ್ ಮಿಲ್ಲರ್‌ರವರು ಬೇಕಾದಷ್ಟು ದ್ರವ್ಯಸಹಾಯ ಮಾಡಿ ಅಂಥಾ ತೊಂದರೆಗಳನ್ನು ಪರಿಹರಿಸುತ್ತಿದ್ದರು. ಮಿಲ್ಲರ್ ಸಾಹೇಬರು ಕೆಲವು ವರುಷಗಳಿಂದೀಚೆಗೆ ತಮ್ಮ ದೇಹಾರೋಗ್ಯವು ಕೆಟ್ಟುಹೋಗಿ ಶಾಯಿಲೆಸ್ಥಿತಿಯಲ್ಲಿದ್ದರು. ಈಗ್ಗೆ ಅವರ ದೃಷ್ಟಿಯು ಬಹುಮಟ್ಟಿಗೆ ಕಡಿಮೆಯಾಗುತ್ತಿದೆ. ಇವರು ತಮ್ಮ ದೃಷ್ಟಿಯನ್ನು ಉಳಿಸಿಕೊಳ್ಳಬೇಕಾದರೆ ಕೂಡಲೇ ಮದರಾಸನ್ನು ಬಿಟ್ಟು ಯೂರೋಪಿಗೆ ಹೊರಟುಹೋಗುವಂತೆ ವೈದ್ಯರು ತಿಳಿಸಿರುತ್ತಾರೆ. ಮಿಲ್ಲರ್ ಸಾಹೇಬರು ಈ ದೇಶವನ್ನು ಬಿಟ್ಟು ಹೋಗುವುದಕ್ಕೆ ಮುಂಚೆ ತಮ್ಮ ಪೂರ್ವದ ವಿದ್ಯಾರ್ಥಿಗಳಿಗೆ ಈ ರೀತಿಯಾಗಿ ತಮ್ಮ ಕಡೇ ಬುದ್ಧಿವಾದಗಳನ್ನು ತಿಳಿಸಿರುತ್ತಾರೆ:— "ನನ್ನ ಶಿಷ್ಯರೇ, ಈಗ್ಗೆ ನಿಮ್ಮನ್ನು ಬಿಟ್ಟು ನಾನು ಹೊರಟುಹೋಗಬೇಕಾಗಿರುತ್ತದೆ. ನನಗೆ ಬಹಳವು ಶಕ್ತಿಯಿರುವುದರಿಂದ ಪುನಃ ನಿಮ್ಮನ್ನು ಕಣ್ಣಿನಿಂದ ನೋಡುವದಕ್ಕಾಗುವದಿಲ್ಲವೆಂಬ ಯೋಚನೆಯು ನನ್ನ ಮನಸ್ಸಿಗೆ ಬಹಳ ದುಃಖವನ್ನುಂಟುಮಾಡುತ್ತಿದೆ. ನಾನು ಕಡೇ ಸಾರಿ ಇಂಗ್ಲೆಂಡ್ ದೇಶವನ್ನು ಬಿಟ್ಟು ಇಲ್ಲಿಗೆ ಬರುವಾಗ್ಗೆ ದೇವರು ನನಗೆ ಕೊಡಬಹುದಾದ ನನ್ನ ವೃದ್ಧಾಪ್ಯದ ಕೊಂಚಕಾಲವನ್ನು ನಿಮಗೂ ನಿಮ್ಮ ದೇಶಕ್ಕೂ ಸಾಧ್ಯವಾದಷ್ಟು ಪ್ರಯೋಜನವಾಗುವಂತೆ ವಿನಿಯೋಗಿಸಬೇಕೆಂದಿದ್ದೆನು. ನನಗಿರುವ ಅಲ್ಪಸ್ವಲ್ಪ ಶಕ್ತಿಯನ್ನೂ ಮತ್ತು ಜಾಗ್ರತೆಯಲ್ಲಿ ಕುಂದಿಹೋಗುತ್ತಿರುವ ದೃಷ್ಟಿಯನ್ನೂ ಉಳಿಸಿಕೊಳ್ಳಬೇಕಾದರೆ ನಾನು ನಿಮ್ಮನ್ನು ಬಿಟ್ಟು ಹೊರಟುಹೋಗಲೇ ಬೇಕೆಂದು ವೈದ್ಯರು ಅಭಿಪ್ರಾಯಪಡುತ್ತಾರೆ. ನಾನು ನನ್ನ ದೇಹಾರೋಗ್ಯವನ್ನು ಕಾಪಾಡಿಕೊಳ್ಳುವದು ನನ್ನ ಕರ್ತವ್ಯವೆಂದು ನೀವು ತಿಳಿದುಕೊಂಡಿರುತ್ತೀರಿ. ನನ್ನ ಸ್ವದೇಶಕ್ಕೆ ನಾನು ಹೋಗಿ ಅಲ್ಲಿ ನನಗೆ ಕ್ಷೇಮವುಂಟಾದರೆ ಪುನಃ ಈ ದೇಶಕ್ಕೆ ಬಂದು ನಿಮ್ಮ ಬಳಿಯಲ್ಲಿ ಕೆಲಕಾಲ ವಾಸಮಾಡಲು ನನಗೆ ಬಹಳ ಆಶೆ ಇರುವದು. ನಿಮಗೆ ದೀರ್ಘವಾಗಿ ಬರೆಯಲು ನನಗೆ ಇಷ್ಟವಿಲ್ಲ. ಈ ವಿದ್ಯಾನಿಲಯವು ನಿಮ್ಮನ್ನು ಯೋಗ್ಯರನ್ನಾಗಿಯೂ, ದೇಶೋಪಕಾರಿಗಳನ್ನಾಗಿಯೂ ಮಾಡುವದಕ್ಕೆ ಪ್ರಯತ್ನಪಟ್ಟಿತೆಂದು ನೀವು ತಿಳಿದಿರುತ್ತೀರಿ. ನೀವು ಕಲಿತಿರತಕ್ಕ ವಿದ್ಯೆಕ್ಕೆ ಯಾವ ಅವಮಾನವಾದರೂ ಬಾರದಂತೆ ಯೋಗ್ಯರಾಗಿ ನಡೆದುಕೊಳ್ಳಬೇಕೆಂಬುವದೇ ನನ್ನ ಅಭಿಲಾಷೆಯಾಗಿರುತ್ತದೆ. ನೀವು ಜನೋಪಕಾರಿಗಳಾಗಿದ್ದು ಅವರನ್ನು ಈಗಿನ ಸ್ಥಿತಿಗಿಂತಲೂ ಉತ್ತಮಸ್ಥಿತಿಗೆ ತರಬೇಕೆಂಬುವದು ದೇವರ ಘನವಾದ ಉದ್ದೇಶವಾಗಿರುತ್ತದೆ. ಈ ಉದ್ದೇಶವನ್ನು ನೀವು ಘನಪಡಿಸುವ ಶ್ರೀ ಯೇಸುಸ್ವಾಮಿಯ ಚರಿತ್ರೆಯಿಂದ ಚನ್ನಾಗಿ ತಿಳಿದುಕೊಂಡಿರುತ್ತೀರಿ. ನನ್ನ ಪ್ರಿಯ ಶಿಷ್ಯರೇ, ನಿಮಗೆ ಇದಕ್ಕಿಂತಲೂ ಹೆಚ್ಚಾಗಿ ಬರೆಯಲಾರೆನು. ದೇವರು ನಿಮ್ಮನ್ನು ಆಶೀರ್ವದಿಸಿ ಆಯುರಾರೋಗ್ಯಭಾಗ್ಯಗಳಿಂದ ತುಂಬಿಸಲೆಂದು ಪ್ರಾರ್ಥಿಸುತ್ತೇನೆ." ಈ ದೊಡ್ಡಮನುಷ್ಯರು ಮೇಲ್ಕಂಡ ತಮ್ಮ ಕಡೇ ಬುದ್ಧಿವಾದಗಳನ್ನು ತಿಳಿಸಿ ತಾವು ಬಹುವಾಗಿ ಪ್ರೀತಿಮಾಡಿದ ವಿದ್ಯಾರ್ಥಿಗಳನ್ನು ಬಿಟ್ಟು ಸ್ವದೇಶಕ್ಕೆ ಹೊರಟಿದ್ದಾರೆ. ಇವರ ಮಾತುಗಳಲ್ಲಿ ವಾಚಕರೆಲ್ಲರೂ ಜ್ಞಾಪಕದಲ್ಲಿಡತಕ್ಕ ಒಂದು ಸಂಗತಿಯುಂಟು. ಒಂದೆರಡು ವರುಷಗಳಿಂದ ಹಿಂದೂದೇಶದಲ್ಲೆಲ್ಲಾ ಜನರು ಅಭಿವೃದ್ಧಿಯಾಗಿ ಉತ್ತಮಸ್ಥಿತಿಗೆ ಬರಬೇಕೆಂದು ಕುತೂಹಲಪಡುತ್ತಿರುವರಷ್ಟೆ. ಇದಕ್ಕೆ ಕಾರಣವೇನಿರಬಹುದು? ಇದಕ್ಕೆ ಸರಿಯಾದ ಕಾರಣವು ಯೇಸುಕ್ರಿಸ್ತನೇ. ಆತನ ಬೋಧನೆಯು ಹಿಂದೂದೇಶದ ಅನೇಕ ಕಡೆಗಳಲ್ಲಿ ಹರಡಿಕೊಳ್ಳುತ್ತಾ ಜನರು ಉತ್ತಮಸ್ಥಿತಿಗೆ ಬರುವಂತೆ ಪ್ರೇರಿಸುತ್ತಿರುವದು. ಅನೇಕರು ಈ ಸಂಗತಿಯನ್ನು ತಿಳಿಯದವರಾಗಿರುತ್ತಾರೆ. ಅಲ್ಲಲ್ಲಿ ಕೆಲವರು ಇದು ಸುಳ್ಳೆಂದು ಸ್ಥಾಪಿಸುವದಕ್ಕೆ ಪ್ರಯತ್ನಪಡುವದುಂಟು. ಆದರೆ ಯಾರೇ ಆಗಲಿ ಯೇಸುಕ್ರಿಸ್ತನ ಜೀವಮಾನ ಚರಿತ್ರೆಯನ್ನು ಮನಃಪೂರ್ವಕವಾಗಿ ಓದಿದರೆ ಉತ್ತಮಗುಣಸ್ವಭಾವಗಳನ್ನು ಪಡೆದುಕೊಳ್ಳುವರೆಂಬುವದರಲ್ಲಿ ಯಾವ ಸಂಶಯವಿಲ್ಲ.

ಒಳದೇಶದ ವೃತ್ತಾಂತಗಳು.

ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್ ಮೆ॥ ಕಾರ್ ಯವರು ಕಳೆದ ವಾರ ನೀಲಗಿರಿ ಬೆಟ್ಟಕ್ಕೆ ಹೋಗಿದ್ದು ನೆನ್ನೆ ವಾಪಸು ಬೆಂಗಳೂರಿಗೆ ಬರುವವರಾಗಿದ್ದರು.

* * *

ಮೆ॥ ಟಿ. ಚೊಕ್ಕಣ್ಣನವರನ್ನು ಸರ್ಕಾರದವರು ಅ॥ ಕಮಿಷನರ ದರ್ಜೆಯಲ್ಲಿ ೩ನೆಯ ಕ್ಲಾಸಿಗೆ ಕಳೆದ ೧೯೦೬ನೆ ಜುಲೈ ೨೫ರ ಲಾಗಾಯಿತು ಬಡ್ತಿ ಮಾಡಿರುತ್ತಾರೆ.

* * *

ಆಕ್ಟಿಂಗ್ ರೆಸಿಡೆಂಟ್ ಮೆ॥ ಎ. ವಿಲ್ಲಿಯಂಸ್‌ವರು ಈ ಸಲ ಬೇಸಿಗೆ ಕಳೆಯುವದಕ್ಕೆ ಬೆಂಗಳೂರಿಂದ ನೀಲಗಿರಿಗೆ ದಯಮಾಡುವರೋ ಇಲ್ಲವೋ ಇನ್ನೂ ನಿಷ್ಕರ್ಷೆಯಾಗಿಲ್ಲವೆಂದು ಕೇಳುತ್ತೇವೆ.

* * *

ಈ ಸಲ ನವರಾತ್ರಿ ಉತ್ಸವಗಳ ಕಾಲದಲ್ಲಿ ರಾಜಧಾನಿಯಲ್ಲಿ ವ್ಯವಸಾಯ, ಕೈಗಾರಿಕೆ, ಗೋಕಾಯಿಗಳ ಪ್ರದರ್ಶನಗಳನ್ನು ನಡಸಬೇಕೆಂದು ಸರ್ಕಾರದವರು ತೀರ್ಮಾನಿಸಿರುವಂತೆ ಪ್ರಕಟವಾಗಿದೆ.

* * *

ರಾಜಧಾನಿಯಲ್ಲಿ ಸ್ಥಾಪಿಸಲ್ಪಟ್ಟು ನಡಿಯುತ್ತಿರುವ ಕೋಆಪರೇಟಿವ್ ಕ್ರೆಡಿಟ್ ಸೊಸೈಟಿ ಎಂಬ ಪರಸ್ಪರ ಸಹಾಯಕ ಸಂಘದವರು ಈ ತಿಂಗಳ ಮಧ್ಯಭಾಗದಲ್ಲಿ ಮೀಟಿಂಗ್ ನಡಿಸಿ ವಾರ್ಷಿಕ ರಿಪೋರ್ಟನ್ನು ಪ್ರಚುರಪಡಿಸುವವರಾಗಿದ್ದಾರೆ.

* * *

ದಿವಾನ್ ಮೆ॥ ಮಾಧವರಾಯರು ಪರಿವಾರ ಸಹಿತ ಕಳೆದ ಶುಕ್ರವಾರ ಸಾಯಂಕಾಲ ಬೆಂಗಳೂರು ದಂಡಿನಲ್ಲಿ ರೈಲ್ ಹತ್ತಿ ನೀಲಗಿರಿಗೆ ದಯಮಾಡಿದರು. ಅವರು ವಾಪಸು ಬರಲು ಇನ್ನೂ ನಾಲ್ಕಾರು ವಾರಗಳಾಗುವವೆಂದು ತಿಳಿದುಬಂದಿದೆ.

* * *

ಸರ್ಕಾರದವರು ಮುಂದೆ ಹೇಳುವವರನ್ನು ಕಳೆದ ಜನವರಿ ೧ ರಿಂದ ಸೀನಿಯರ್ ಅ॥ ಕಮಿಷನರ ದರ್ಜೆಗೆ ಬಡ್ತಿ ಮಾಡಿರುತ್ತಾರೆ.— ಮೆ॥ ಗಳಾದ ಸಿ. ರಾಮರಾಯರು, ಸಿ. ಬಿ. ಕೇಶಗಿರಿರಾಯರು, ಕೆ. ಆರ್. ಶ್ರೀನಿವಾಸೈಯ್ಯಂಗಾರು, ಬಿ. ಜೆ. ಕುಮಾರಸ್ವಾಮಿನಾಯಕರವರು, ಕೆ. ಶ್ರೀನಿವಾಸರಾಯರು.

* * *

ರಾಜಧಾನಿಯಲ್ಲಿರುವ ಅಡ್ವೋಕೇಟರುಗಳ ಪೈಕಿ ಮೆ॥ ಎಂ. ಸಿ. ರಂಗೈಯ್ಯಂಗಾರರನ್ನು ಗವರ್ನಮೆಂಟಿನವರು ನ್ಯಾಯ ನಿಬಂಧನಾ ಸಭೆಯ ಮೆಂಬರಾಗಿ ನೇಮಿಸಿದ್ದರಿಂದ ಇಲ್ಲಿನ ವಕೀಲರ ಸಂಘದವರು ಮೆ॥ ರಂಗೈಯ್ಯಂಗಾರ್ರಿಗೆ ಒಂದು ಅಡ್ರೆಸ್ಸನ್ನು ಒಪ್ಪಿಸಿ ತಮಗುಂಟಾಗಿರುವ ಸಂತೋಷವನ್ನು ಪ್ರಕಾಶಪಡಿಸಬೇಕೆಂದು ಯೋಚಿಸಿರುತ್ತಾರೆ. ಈ ಸಂತೋಷ ಕಾರ್ಯವು ನಾಳೆ ಭಾನುವಾರ ನಡೆಯುವುದಾಗಿ ತಿಳಿದುಬಂದಿದೆ.

* * *

ಗ್ರಾಮಾಂತರಗಳಲ್ಲಿ ಕಸ ಕಡ್ಡಿಗಳನ್ನೆಲ್ಲಾ ತೆಗಿಸಿ ನಿರ್ಮಲವಾಗಿ ಇಟ್ಟುಕೊಂಡಿರುವಂಥಾ ಪಟೇಲರುಗಳಿಗೆ ಸರ್ಕಾರದವರು ಬಹುಮಾನಗಳನ್ನು ಕೊಟ್ಟು ಪ್ರೋತ್ಸಾಹಪಡಿಸಬೇಕೆಂದು ಹುಕುಂ ಆಗಿದೆ. ಆದುದರಿಂದ ಪಟೇಲರು ಸರ್ಕಾರದವರ ಶಾಬಾಸ್‌ಗಿರಿಯನ್ನೂ ಬಹುಮಾನವನ್ನೂ ಸಂಪಾದಿಸಿಕೊಳ್ಳುವುದಕ್ಕಾದರೂ ತಮ್ಮ ತಮ್ಮ ಗ್ರಾಮಗಳ ಕಚಡಾವನ್ನೆಲ್ಲಾ ತೆಗಿಸಿ ಪ್ರಜಾ ಆರೋಗ್ಯಾಭಿವೃದ್ಧಿಗೆ ಸಹಾಯ ಮಾಡುತ್ತಾ ಬಂದಾರೆಂದು ನಿರೀಕ್ಷಿಸುತ್ತೇವೆ.

* * *

ಮೈಸೂರು ಅರಮನೆ ಜಪದ ಕಟ್ಟೆ ಎಂಬ ಪಟ್ಟದ ಸ್ವಾಮಿಗಳಾಗಿದ್ದ ಗುರುಬಾದ ಸ್ವಾಮಿಗಳೂ ಚರಂತಿಗಳಾಗಿದ್ದ ಗಂಗಾಧರ ಸ್ವಾಮಿಗಳೂ ದೈವಾಧೀನರಾದಕಾರಣ ಶ್ರೀಮನ್ ಮಹಾರಾಜರವರು ಕೆಲವು ದೊಡ್ಡ ಮನುಷ್ಯರನ್ನು ಸೇರಿಸಿ ಒಂದು ಕಮಿಟಿ ಮಾಡಿ, ಇವರು ಆ ಮಠದ ಮೇಲ್ವಿಚಾರಣೆಯನ್ನು ನೋಡಿಕೊಳ್ಳಬೇಕೆಂತಲೂ ಮಠದ ಪೀಠಕ್ಕೆ ಇನ್ನಿಬ್ಬರನ್ನು ಚುನಾವಣೆ ಮಾಡಿ ತಿಳಿಸಬೇಕೆಂತಲೂ ಅಪ್ಪಣೆ ಕೊಡಿಸಿರುತ್ತಾರೆ. ಈ ಕಮಿಟಿಗೆ ಮೆ॥ ಮದ್ದುರಾಜೇ ಅರಸಿನವರು ಪ್ರೆಸಿಡೆಂಟರಾಗಿಯೂ ಮೆ॥ ಗಳಾದ ವೈ. ವಿರೂಪಾಕ್ಷೈಯ್ಯನವರು, ಗು. ಬಸವಲಿಂಗಪ್ಪನವರು, ಬಿ. ಮಾದಪ್ಪನವರು, ಡಾ॥ ಟಿ. ಎಸ್. ನಂಜಪ್ಪನವರೇ ಮೊದಲಾದ ೧೨ ಮಂದಿ ಮೆಂಬರುಗಳಾಗಿಯೂ ನೇಮಕವಾಗಿರುತ್ತಾರೆ.

ರಾಜಧಾನಿಯೂ ವಿದ್ಯುಚ್ಛಕ್ತಿ ದೀಪವೂ.

ಸರ್ಕಾರದವರ ಹುಕುಂ

ಕಳೆದ ಡಿಸೆಂಬರ್ ೨೨ ನೇ ತಾರೀಖು ಮೆ॥ ಜೆಬ್ಸ್‌ಯವರು ಮೈಸೂರು ಪಟ್ಟಣಕ್ಕೆ ಬಂದು ಇಲ್ಲಿನ ಮ್ಯುನಿಸಿಪಲ್ ಕೌನ್ಸೆಲರುಗಳ ಮೀಟಿಂಗಿನಲ್ಲಿ ವಿದ್ಯುಚ್ಛಕ್ತಿ ದೀಪಗಳನ್ನು ಮೈಸೂರು ಪಟ್ಟಣಕ್ಕೆ ಇಡಿಸುವ ವಿಷಯವಾಗಿ ತಿಳಿಸಿದರು. ಅವರ ಮಾತಿನಂತೆ ಮ್ಯುನಿಸಿಪಾಲಿಟಿಯವರು ವರುಷಕ್ಕೆ ೧೦,೦೦೦ ರೂಪಾಯಿ ಕೊಡುತ್ತೇವೆಂತಲೂ ಮೆ॥ ಜೆಬ್ಸ್‌ಯವರು ೬೦೦ ದೀಪಗಳಿಗೆ ಕಡಿಮೆ ಇಲ್ಲದೆ ಇಟ್ಟುಕೊಡಬೇಕೆಂತಲೂ ಒಪ್ಪಿಕೊಂಡು, ಇದನ್ನು ಸ್ಯಾಂಕ್ಷನ್ ಮಾಡಿಕೊಡಬೇಕೆಂದು ಗವರ್ನಮೆಂಟಿಗೆ ಬರೆದರು. ಇದಲ್ಲದೆ ಪಟ್ಟಣದ ಕೆಲವು ದೂರವಾದ ಭಾಗಗಳಿಗೆ ವಿದ್ಯುಚ್ಛಕ್ತಿಯ ದೀಪಗಳು ಅಗತ್ಯವಿಲ್ಲವೆಂತಲೂ ಈಗಿನಂತೆ ಆ ಭಾಗಗಳಲ್ಲಿ ಕೆರೋಸಿನ್ ಯೆಣ್ಣೆಯ ದೀಪಗಳನ್ನೇ ಇಟ್ಟು ಉರಿಸುವುದಕ್ಕೆ ವರುಷಕ್ಕೆ ೨,೦೦೦ ರೂಪಾಯಿ ಖರ್ಚಾಗುವುದೆಂತಲೂ ತಿಳಿಸಿದರು.

ಚೀಫ್ ಇಂಜನಿಯರವರು ಮೆ॥ ಜೆಬ್ ಯವರಿಂದ ಬಂದ ರಿಪೋರ್ಟನ್ನು ಗವರ್ನಮೆಂಟಿಗೆ ಕಳುಹಿಸಿ ಬರೆದಿರುವದೇನಂದರೆ—ಹಿಂದೆ ನವಂಬರ್ ೧೩ರಲ್ಲಿ ಮೈಸೂರು ಗವರ್ನಮೆಂಟಿನವರು ನಗರನೆಯ ವಿದ್ಯುಚ್ಛಕ್ತಿ ಸಾಕೋಯಾವನ್ನು ಏರ್ಪಾಡು ಮಾಡಬೇಕೆಂದು ಹುಕುಂ ಕೊಟ್ಟು ಅವಕ್ಕಾಗಿ ೧೩ ಲಕ್ಷವೂ ೪೦ ಸಾವಿರ ರೂಪಾಯಿ ಸ್ಯಾಂಕ್ಷನ್ ಮಾಡಿರುತ್ತಾರಷ್ಟೆ. ಈ ಹಣದಲ್ಲೇ ಮೈಸೂರು ಪಟ್ಟಣಕ್ಕೆ ವಿದ್ಯುಚ್ಛಕ್ತಿಯ ದೀಪಗಳನ್ನಿಟ್ಟು ರಾತ್ರಿಸೊತ್ತು ಉರಿಸುವಂತೆ ಏರ್ಪಾಡು ಮಾಡಬಹುದಾಗಿದೆಯಾದ್ದರಿಂದ ಇದನ್ನೂ ಸ್ಯಾಂಕ್ಷನ್ ಮಾಡಿಕೊಡಬೇಕು. ಮೈಸೂರು ಪಟ್ಟಣದ ಪ್ರಜೆಗಳು ತಮ್ಮ ಮನೆಗಳಿಗೆ ದೀಪಗಳನ್ನಿಡಿಸಿಕೊಳ್ಳಬೇಕೆಂದರೂ ಕಾರ್ಖಾನೆಯವರು ಯಂತ್ರಗಳನ್ನು ಓಡಿಸುವುದಕ್ಕೆ ಶಕ್ತಿಯನ್ನು ಅಪೇಕ್ಷಿಸಿದರೂ ಈಗ ಬೆಂಗಳೂರು ಪಟ್ಟಣದಲ್ಲಿ ಜಾರಿಯಲ್ಲಿರುವಂಥಾ ದರಗಳನ್ನೇ ಹಾಕಿ ವಸೂಲ್ಮಾಡಬಹುದಾಗಿದೆ ಎಂಬೀ ರೀತಿಯಾಗಿ ಗವರ್ನಮೆಂಟಿಗೆ ಬರೆದು ತಿಳಿಸಿದರು.

ಮೆ॥ ಜೆಬ್ಸಿ ಯವರು ಗವರ್ನಮೆಂಟಿಗೆ ಬರೆದಿರುವ ರಿಪೋರ್ಟಿನ ಮುಖ್ಯಾಂಶವೇನಂದರೆ—ಮೈಸೂರು ಪಟ್ಟಣದ ಮಧ್ಯರಾಷ್ಟ್ರದಲ್ಲಿ ಒಂದು ಪವರ್ ಹೌಸ್ ಎಂಬ ವಿದ್ಯುಚ್ಛಕ್ತಿಯ ಮನೆಯನ್ನು ಕಟ್ಟಿದರೆ ಅದರ ಸುತ್ತಲೂ ಎರಡು ಮೈಲಿಗಳ ಫಾಸಲೆಗೆ ಒಳಪಟ್ಟ ಎಲ್ಲಾ ಬೀದಿಗಳಿಗೂ ರಸ್ತೆಗಳಿಗೂ ವಿದ್ಯುಚ್ಛಕ್ತಿಯ ದೀಪಗಳನ್ನಿಟ್ಟು ಉರಿಯುವಂತೆ ಮಾಡಬಹುದು. ನಾನು ಅಂದಾಜು ಕಟ್ಟುವ ಪ್ರಕಾರ ಒಟ್ಟು ೬೪೩ ದೀಪಗಳನ್ನಿಟ್ಟಲ್ಲಿ ಪಟ್ಟಣಕ್ಕೆಲ್ಲಾ ಸಾಕಾಗುವುದು. ಇದಲ್ಲದೆ ಪಟ್ಟಣದಿಂದ ಸ್ವಲ್ಪ ಹೊರಗಡೆ ಇರುವ ಭಾಗಗಳಿಗೂ ದೀಪಗಳು ಇಡಬೇಕೆಂದು ಅಪೇಕ್ಷಿಸಲ್ಪಟ್ಟಿದೆ. ಸಣ್ಣ ಸಣ್ಣ ಭಾಗಗಳಿಗೆ ಈ ದೀಪಗಳ ಆವಶ್ಯಕತೆ ಕಾಣುವುದಿಲ್ಲ. ಅಲ್ಲಿಗೆ ಈಗಿನಂತೆಯೇ ಕೆರೋಸಿನ್ ಯೆಣ್ಣೆಯ ದೀಪಗಳನ್ನಿಟ್ಟುಕೊಳ್ಳುವುದೇ ಸುಲಭ ಮತ್ತು ಅನುಕೂಲ. (೧) ೬೦೦ ವಿದ್ಯುಚ್ಛಕ್ತಿಯ ದೀಪಗಳ ವರಿಗೂ ಇಟ್ಟುಕೊಡಬಹುದು. (೨) ದೂರ ಫಾಸಲೆಯಲ್ಲಿರುವ ಸಣ್ಣ ಸಣ್ಣ ಭಾಗಗಳನ್ನು ಬಿಟ್ಟುಬಿಡಬೇಕು; (೩) ಮ್ಯುನಿಸಿಪಲ್ ಕೌನ್ಸೆಲರುಗಳು ಕೆಲವರು ಮುಖಂಡರಾಗಿ ನಿಂತು ವಿದ್ಯುಚ್ಛಕ್ತಿಯ ಇಂಜನಿಯರ ಕೂಡೆ ಸಂಚಾರ ಮಾಡಿ, ಎಲ್ಲೆಲ್ಲಿ ದೀಪಗಳನ್ನಿಡಬೇಕೋ ಸ್ಥಳ ಮುಂತಾದ್ದನ್ನು ನಿರ್ಧರಿಸಿಕೊಡಬೇಕು; (೪) ಇಷ್ಟೇ ದೀಪಗಳಿಡಬೇಕೆಂದು ಖಂಡಿಸಿ ಹೇಳಕೂಡದು, ಚನ್ನಾಗಿ ಬೆಳಕಾಗುವುದಕ್ಕೆ ಎಷ್ಟು ದೀಪಗಳು ಬೇಕಾಗುವವೋ ಅಷ್ಟನ್ನು ಇಟ್ಟುಕೊಡುವ ಭಾಗವು ಇಂಜನಿಯರಿಗೆ ಸೇರಿದ್ದಾಗಿದೆ; (೫) ಬೆಂಗಳೂರು ಮ್ಯುನಿಸಿಪಾಲಿಟಿಯವರು ಕೊಡುವಂತೆ ಮೈಸೂರು ಮ್ಯುನಿಸಿಪಾಲಿಟಿಯವರೂ ವರುಷಕ್ಕೆ ೧೦ ಸಾವಿರ ರೂಪಾಯಿ ಪ್ರಕಾರ ವಿದ್ಯುಚ್ಛಕ್ತಿಯ ಇಲಾಖೆಗೆ ಕೊಡುತ್ತಾ ಬರಬೇಕು. ಈ ಭಾಗಗಳನ್ನೆಲ್ಲಾ ಮ್ಯುನಿಸಿಪಲ್ ಕೌನ್ಸಲರುಗಳು ಒಪ್ಪಿಕೊಂಡಿರುತ್ತಾರೆ. ಇನ್ನು ಇಪ್ಪತ್ತು ತಿಂಗಳೊಳಗಾಗಿ ವಿದ್ಯುಚ್ಛಕ್ತಿಯ ದೀಪಗಳನ್ನು ತಂದಿಟ್ಟು ಉರಿಸುವುದಕ್ಕೆ ಒಪ್ಪಿರುವ ಕಾರಣ ಈ ಏರ್ಪಾಡನ್ನು ಗವರ್ನಮೆಂಟಿನವರು ಕೂಡಲೇ ಸ್ಯಾಂಕ್ಷನ್ ಮಾಡಿಕೊಡಬೇಕು.

ಅದೇ ಪ್ರಕಾರ ಮೇಲ್ಕಂಡ ಏರ್ಪಾಡನ್ನು ಗವರ್ನಮೆಂಟಿನವರು ಕಳೆದ ಫೆಬ್ರುವರಿ ೯ರಲ್ಲಿ ಸ್ಯಾಂಕ್ಷನ್ ಮಾಡಿರುತ್ತಾರೆ.

ಮೈಸೂರು ಪಟ್ಟಣದಲ್ಲಿ ಪವರ್ ಹೌಸ್ ಎಂಬ ವಿದ್ಯುಚ್ಛಕ್ತಿಯ ಮನೆಯನ್ನು ಕಟ್ಟಬೇಕಾಗಿದೆ ಎಂತಲೂ ಇದಕ್ಕೆ ಕಂಟ್ರಾಕ್ಟುದಾರರು ಬೇಕೆಂತಲೂ ಅಪೇಕ್ಷೆಯುಳ್ಳವರು ವಿದ್ಯುಚ್ಛಕ್ತಿಯ ಇಲಾಖಾ ಇಂಜನಿಯರವರಿಗೆ ಅರ್ಜಿ ಬರೆದುಕೊಳ್ಳಬೇಕೆಂತಲೂ ಕಳೆದ ವಾರದ ಸರ್ಕಾರಿ ಗೆಜೆಟ್ಟಿನಲ್ಲಿ ಪ್ರಕಟವಾಗಿದೆ.

ಮೈಸೂರು ಪೋಲೀಸ್ ಲಾಕಪ್ಪಿನಲ್ಲಿ ಮರಣ.

ಮೈಸೂರು ದೊಡ್ಡಪೇಟೆಯಲ್ಲಿ ಚಿನ್ನದ ವ್ಯಾಪಾರ ಮಾಡುತ್ತಿದ್ದ ಅನಂತಶೆಟ್ಟಿ ಎಂಬಾತನು ಕಳುವಿನ ಮಾಲನ್ನು ತೆಗೆದುಕೊಂಡಿರುತ್ತಾನೆಂದು ಪೋಲೀಸಿನವರು ಅವನನ್ನು ಹಿಡಿದು ಸರಹಿನ್ ಚಾವಡಿಯ ಲಾಕಪ್ಪಿನಲ್ಲಿ ಸುಮಾರು ಎಂಟು ದಿನಗಳಿಂದಲೂ ಇಟ್ಟುಕೊಂಡು ಪತ್ತೆ ತರದೂದು ನಡಿಸುತ್ತಿದ್ದರು. ಅವನ ಬಳಿ ಕಳುವಿನ ಮಾಲೇನೂ ಸಿಕ್ಕಲಿಲ್ಲವೆಂದು ಕೇಳುತ್ತೇವೆ. ನೆನ್ನೆ ಅಂದರೆ ಬುಧವಾರ ಬೆಳಿಗ್ಗೆ ಲಾಕಪ್ಪಿನಲ್ಲೇ ಈ ಶೆಟ್ಟಿಯು ಮೃತಪಟ್ಟಿರುವದಾಗಿ ಪ್ರಕಟವಾಯಿತು. ಡೆಪ್ಯುಟಿ ಕಮಿಷನರು, ಸಿಟಿ ಮ್ಯಾಜಿಸ್ಟ್ರೇಟರು, ಸಿವಿಲ್ ಸರ್ಜನರು, ಪೋಲೀಸ್ ಸೂಪರಿಂಟೆಂಡೆಂಟರು, ಇನ್ಸ್‌ಪೆಕ್ಟರೇ ಆದಿಯಾಗಿ ಸ್ಟೇಷನ್ನಿಗೆ ಹೋಗಿ ಐದು ಮಂದಿ ಪಂಚಾಯಿತರನ್ನಿಟ್ಟುಕೊಂಡು ಶವವನ್ನು ನೋಡಿ ಮಹಜರು ಮಾಡಿದರು. ಈ ಮಹಜರಿನಲ್ಲಿ ಕಂಡುಬಂದ ಮುಖ್ಯ ವಿಷಯಗಳೇನಂದರೆ—

ಶವದ ಕತ್ತಿಗೆ ಪಂಚೆ ಹುರಿ ಮಾಡಿ ಎರಡು ಸುತ್ತು ಬಂದು ಬಿಗಿದು ಗಂಟು ಹಾಕಿತ್ತು. ಇನ್ನೊಂದು ಕೊನೆ ಕಿಟಕಿಯ ಕಬ್ಬಿಣದ ಅಡ್ಡಕಂಬಿಗೆ ಗಂಟು ಹಾಕಿತ್ತು. ಆ ಕಂಬಿಯು ನೆಲದಿಂದ ಎಳದಂತೆ ಬೊಗ್ಗಿತ್ತು. ಶವವು ಗೋಡೆಗೆ ಒರಗಿ ಮಂಡಿ ಕಾಲು ಹಾಕಿಕೊಂಡು ಇತ್ತು. ಅದನ್ನು ಹೊರಕ್ಕೆ ತಂದು ಪರೀಕ್ಷೆ ಮಾಡಿದಾಗ ಮೈಮೇಲೆ ಗಾಯಗಳೇನೂ ಇರಲಿಲ್ಲ. ಜನಿವಾರವಾಗಲಿ ಉಡದಾರವಾಗಲಿ ಇರಲಿಲ್ಲ. ಪಂಚಾಯಿತರಲ್ಲಿ ಮೂವರು—ಮೃತಪಟ್ಟವನು ಆತ್ಮಹತ್ಯ ಮಾಡಿಕೊಂಡನೆಂತಲೂ, ಇನ್ನಿಬ್ಬರು—ಮೃತಪಟ್ಟವನ ಮರಣಕ್ಕೆ ಕಾರಣವೇನೋ ಡಾಕ್ಟರ ಅಭಿಪ್ರಾಯವಿಲ್ಲದೆ ಹೇಳುವುದಕ್ಕಾಗುವುದಿಲ್ಲವೆಂತಲೂ ಅಭಿಪ್ರಾಯ ಪಟ್ಟರು. ತರುವಾಯ ಶವವನ್ನು ಪರೀಕ್ಷೆ ಮಾಡುವುದಕ್ಕೆ ಗಾಡಿಯಲ್ಲಿ ಹಾಕಿ ಆಸ್ಪತ್ರೆಗೆ ಕಳುಹಿಸಿದರು. ಅಂತು ಈ ವಿಚಾರವು ಊರಿನಲ್ಲೆಲ್ಲಾ ತುಂಬಾ ಗಲಭೆಯನ್ನುಂಟುಮಾಡಿದೆ. ನೂರಾರು ಮಂದಿ ನೆನ್ನೆ ಬೆಳಿಗ್ಗೆ ಪೋಲೀಸ್ ಸ್ಟೇಷನಲ್ಲಿ ಜಮಾಯಿಸಿಕೊಂಡಿದ್ದರು.

ಪಶ್ಚಿಮ ಕರಾವಳಿಯಿಂದ ಮೈಸೂರಿಗೆ ನಾಲ್ಕು ರೈಲ್‌ಮಾರ್ಗಗಳು.

ಮೇಲ್ಕಂಡ ವಿಷಯವನ್ನು ಕುರಿತು ಮಂಗಳೂರಿನಲ್ಲಿ ನಮ್ಮ ಬಂಧುವಾದ "ಸತ್ಯದೀಪಿಕೆ" ಯು ಹೇಳುವುದೇನೆಂದರೆ— . . . ಈ ಸಂಬಂಧ ಹಿತನಂತಿರುವ ಸರಕಾರವು ಈ ಪಶ್ಚಿಮ ಕರಾವಳಿಯ ಉತ್ಪತ್ತಿಗಳನ್ನೂ ಪ್ರಜಾಭಿವೃದ್ಧಿಯನ್ನೂ ಕಂಠದ ಮಟ್ಟಿಗೂ ಬೆಳಸಿದರೆಂದು ಹೇಳೋಣ! ಘಟ್ಟಗಳ ಕಡೆ ಮೂಲೆ ಶಿಖರಗಳ ವರೆಗೂ ಸಾಧ್ಯವಾದಷ್ಟು ಹುಟ್ಟುವಳಿಯು ಬರುತ್ತದೆಂದು ಇಟ್ಟುಕೊಳ್ಳೋಣ! ಆದರೆ ರೈಲುಮಾರ್ಗಗಳಿಲ್ಲದೆ ಇದು ಪ್ರಜೆಗೂ ಪ್ರಯೋಜನವಿಲ್ಲ, ಸರಕಾರಕ್ಕೂ ಪ್ರಯೋಜನವಿಲ್ಲ. ಆ ಹುಟ್ಟುವಳಿಯು ಈಗಲೇ ಕೊಡಗಿನಲ್ಲಿ ಫಲಿಸುವ ಕಿತ್ತಳೆ ಹಣ್ಣಿನ ಹಾಗೆಯೂ ಘಟ್ಟಗಳ ಕಾಡುಗಳಲ್ಲಿ ಉರುಳಿ ಬಿದ್ದು ಕೊಳೆಯುವ ವೃಕ್ಷಗಳ ಹಾಗೆಯೂ ಹುಟ್ಟಿದ ಎಡೆಯಲ್ಲಿಯೇ ಕೊಳೆಯಬೇಕಾಗುವದು. ಬೇಕಾದಷ್ಟು ರೈಲುಮಾರ್ಗಗಳೂ ರಸ್ತೆಗಳೂ ಇದ್ದರೆ ಮಾತ್ರ ಈ ಅತಿ ಫಲವತ್ತಾದ ಪ್ರಾಂತ್ಯದ ಉತ್ಪತ್ತಿಯು ಪ್ರಯೋಜನಕ್ಕೆ ಬರಬಹುದು. ಈ ಸಂಗತಿಗಳನ್ನು ಸ್ವಲ್ಪ ಯೋಚಿಸುವವರು ಈ ಕರೆಗೆ ಒಂದು ಲೈನು ಅಲ್ಲ, ಎರಡು ಲೈನು ಅಲ್ಲ, ಆರೆಂಟು ರೈಲ್ವೇ ಲೈನುಗಳು ಅತ್ಯಗತ್ಯ ಎಂದು ಗ್ರಹಿಸುವರು. ಗೋವೆಯ ಉತ್ತರ ಕಡೆ ಎಷ್ಟು ಲೈನುಗಳು ವಿಹಿತವೆಂದು ಆ ಕಡೆಯವರು ನೋಡಲಿ. ಗೋವೆಯ ಈಚೆ ಕಡೆ ಹೊನ್ನಾವರದಿಂದ ಹರಿಹರಕ್ಕೆ, ಮಲ್ಪೆಯಿಂದ ಶಿವಮೊಗ್ಗಕ್ಕೆ, ಮಂಗಳೂರಿನಿಂದ ಅರಸೀಕೆರೆಗೆ, ತಲಚೇರಿಯಿಂದ ಮೈಸೂರಿಗೆ ಲೈನುಗಳು ಅಗತ್ಯವೆಂದು ನಮ್ಮ ಅಭಿಪ್ರಾಯ. ಈ ನಾಲ್ಕು ಮಾರ್ಗಗಳನ್ನು ಒನ್ನೇಲೇ ಪ್ರಾರಂಭಿಸಿದರೂ ಅವಿವೇಕದ ಕೆಲಸವಲ್ಲ. ಮಲ್ಪೆಯಿಂದ ಶಿವಮೊಗ್ಗಕ್ಕೆ ಮಟ್ಟಮೊದಲು ಆಗತಕ್ಕದ್ದೆಂದು ನಿಷ್ಪಕ್ಷಪಾತಿಗಳು ಹೇಳ್ಯಾರು. ಈ ಕರೆಯ ಮುಖ್ಯ ಸ್ಥಳವಾದ ಮಂಗಳೂರಿನಿಂದ ಅರಸೀಕೆರೆಗೆ ಆಗತಕ್ಕ ಮಾರ್ಗವು ಮೊದಲೇ ಆಗತಕ್ಕದ್ದೆಂದು ಮಂಗಳೂರಿನವರಾದ ನಾವು ಸಹಜವಾಗಿ ಕೇಳುವೆವು. ತಲಚೇರಿಯಿಂದ ಮೈಸೂರು, ಈ ಮಾರ್ಗವು ಅತಿ ಜರೂರಿನದು ಎಂದು ಕೊಡಗಿನ ಸ್ನೇಹಿತರು ವಿಶೇಷವಾಗಿ ವಾದಿಸುವರು. ನಾಲ್ಕೂ ಅಗತ್ಯ ಎಂದರೆ ಇದು ಮೊದಲು, ಅದು ಮೊದಲು ಎಂದು ಹೋರಾಡುವದರಲ್ಲಿ ಇನ್ನೇನು ಪ್ರಯೋಜನ?

ಈ ರೈಲ್ವೇಗಳನ್ನು ಕಟ್ಟಿಸುವ ಕೆಲಸವನ್ನು ಖಾಸಗಿ ಪ್ರಯತ್ನಕ್ಕೆ ಬಿಡುವದು ತಕ್ಕದ್ದಲ್ಲ. "ಡಿಸ್ಟ್ರಿಕ್ಟ್ ಬೋರ್ಡುಗಳೂ ಖಾಸಗಿ ವರ್ತಕರೂ ಯಾ ವರ್ತಕಮಂಡಲಿಗಳೂ ಸ್ವಂತರ ಸಂಘಗಳೂ ಮುಂದೆ ಬರಲಿ! ಅವರು ಇಂತಿಷ್ಟು ವಾಗ್ದತ್ತ ಕೊಟ್ಟ ಮೇಲೆ ಮಾತ್ರ ನಾವು ಕೈ ಹಾಕುವೆವು" ಎಂಬುದು ಸರಕಾರದ ತಾತ್ಪರ್ಯ. ಖಾಸಗಿ ಮಂಡಲಿಯವರು ಇಂಥಾ ದೊಡ್ಡ ಕೆಲಸಕ್ಕೆ ತಮ್ಮ ಜೀವರಸವನ್ನು ಅರ್ಪಿಸಲಾರರು. ಅಂಥವರು ಇಂಥಾ ಪ್ರಯತ್ನದ ದೆಸೆಯಿಂದ ದಿವಾಳಿಯಾದರೆ ಇಲ್ಲವೆ ಹಂದಾಡುವ ಸ್ಥಿತಿಗೆ ಬಂದರೆ ಸರಕಾರಕ್ಕಾದರೂ ಪ್ರಯೋಜನ ಒದಗುವದಿಲ್ಲ. ಅಂಥಾ ಮಂಡಲಿಗಳು ತಮ್ಮ ಸ್ವಂತ ಉದ್ದೇಶಕ್ಕೋಸ್ಕರ ಆದಷ್ಟು ಲಾಭ ಮಾಡಿಕೊಂಡು ಅಭಿವೃದ್ಧಿಗೆ ಮುಟ್ಟಿದರೆ ಸರಕಾರಕ್ಕೆ ಹೆಚ್ಚು ಪ್ರಯೋಜನ. ಸರಕಾರದವರು ಈ ಲೈನುಗಳನ್ನು ಖಾಸಗಿ ಮಂಡಲಿಗಳಿಗೆ ಬಿಡದೆ ತಾವೇ ಅವುಗಳನ್ನು ಮಾಡಿಸತಕ್ಕದ್ದು. ಮಾರ್ಗವನ್ನು ಕಟ್ಟಿಸುವ ಅಸಲಿಗೆ ಕೇಳದ ಇಂತಿಷ್ಟು ನಫೆಯನ್ನು ತುಂಬಿಸುತ್ತೇವೆ ಎಂತ ಸರಕಾರದವರು ಭರವಸ ಕೊಟ್ಟರೆ ಕೂಡಲೇ ಅವನ್ನು ಮಾಡುವದಕ್ಕೆ ರೈಲ್ವೇ ಕಂಪೆನಿಗಳಲ್ಲಿ ಸ್ಪರ್ಧೆ ಎಸಗುವದರಲ್ಲಿ ಸಂದೇಹವಿಲ್ಲ. ಈ ಸಂಬಂಧ ಸರಕಾರವು ವಿನಿಯೋಗಿಸುವ ದ್ರವ್ಯವು ಎಂದಿಗೂ ಹೊಳೆಯಲ್ಲಿ ಹೋಮ ಮಾಡಿದಂತಾಗದು. ಒಂದು ವೇಳೆ ಆರಂಭದಿಂದಲೇ ಹೆಚ್ಚು ನಫೆ ಪ್ರಾಪ್ತಿಸದಿದ್ದರೂ ನಿಶ್ಚಯವಾಗಿ ಕಾಲಾಂತರದಲ್ಲಿ ಹಣದ ನಫೆಯೂ ಪ್ರಜೆಯ ನಾನಾ ಬಗೆಯ ಅಭಿವೃದ್ಧಿಯೂ ಲಭಿಸುವದು. ಖಾಸಗಿ ಜನರು ತಾತ್ಕಾಲಿಕ ನಫೆಯನ್ನು ಆಶಿಸಿ ಕೆಲಸ ಮಾಡಬೇಕು. ತಾತ್ಕಾಲಿಕ ನಫೆ ಇಲ್ಲ ಎಂದು ಕಂಡರೆ ಕೈ ಹಿಂದೆಳೆಯಬೇಕು. ಸರಕಾರವೋ ತಾತ್ಕಾಲಿಕ ನಫೆಯನ್ನು ಮಾತ್ರ ಅಪೇಕ್ಷಿಸುವದು ಯೋಗ್ಯವಲ್ಲ, ಸರಕಾರವು ನಿರಂತರವಿರುವದರಿಂದ ದೀರ್ಘದೃಷ್ಟಿಯಿಂದ ಮುಂದಕ್ಕೆ ನೋಡಿ ದೇಶದ ಮುಂದಿನ ಅಭಿವೃದ್ಧಿಯನ್ನು ಆಲೋಚಿಸಿಕೊಂಡು ತತ್ಕಾಲಕ್ಕೆ ವಿನಿಯೋಗಿಸುವ ಹಣದಿಂದ ಸದಾಕಾಲಕ್ಕೆ ಬಿತ್ತಿಯೂ ಬೆಳೆಯೂ ಪ್ರಾಪ್ತಿಸುವದೆಂದು ತಿಳಿದು ಇಂಥಾ ಕಾರ್ಯಗಳಿಗೆ ಕೈ ಹಚ್ಚುವದು ಯೋಗ್ಯವಾಗಿದೆ.

ರಾಜಧಾನಿಯ ಮ್ಯುನಿಸಿಪಲ್ ಮೀಟಿಂಗು

ಮೈಸೂರು ಪಟ್ಟಣದ ಮ್ಯುನಿಸಿಪಲ್ ಕೌನ್ಸಲರುಗಳು ಕಳೆದ ಶನಿವಾರ ಇಲ್ಲಿನ ಟೌನ್ ಹಾಲ್ ಬಂಗಲೆಯಲ್ಲಿ ಸಭೆ ಸೇರಿ ತಿಂಗಳು ಕಟ್ಟಲೆಯ ಮ್ಯುನಿಸಿಪಲ್ ಮೀಟಿಂಗ್ ನಡಸಿದರು. ಕಳೆದ ಫೆಬ್ರವರಿ ಲೆಕ್ಕ ಮುಂತಾದ್ದನ್ನು ಓದಿಸ್ದರಲ್ಲಿ ಆ ತಿಂಗಳಲ್ಲಿ ಮ್ಯುನಿಸಿಪಾಲಿಟಿಗೆ ೯,೯೬೬ ಚಿಲ್ಲರೆ ರೂಪಾಯಿ ಜಮಾ ಆಯಿತೆಂತಲೂ ೮,೮೩೩ ರೂಪಾಯಿ ಖರ್ಚಾಯಿತೆಂತಲೂ ತಿಳಿಯಿತು. ಮತ್ತು ಆ ತಿಂಗಳಲ್ಲಿ ಜನನ ೯೨, ಮರಣ ೩೦೮ ಎಂದೂ ತಿಳಿಯಿತು. ಈ ಪೈಕಿ ಪ್ಲೇಗಿನಲ್ಲಿ ೧೯೮, ವಾಂತಿಭೇದಿಯಿಂದ ೦೮, ಜ್ವರಗಳಿಂದ ೭೩, ಇತರ ಕಾರಣಗಳಿಂದ ೧೬೯ ಜನರು ಕಾಲವಾಗಿರುತ್ತಾರೆ. ಆಕ್ಟ್ರಾಯಿ ಸುಂಕದ ಉತ್ಪತ್ತಿಯಲ್ಲಿ ೧,೩೦೦ ಚಿಲ್ಲರೆ ರೂಪಾಯಿ ಕಡಿಮೆಯಾಗಿರುತ್ತೆಂದು ತಿಳಿದ ಕಾರಣ ಈ ಬಾಬನ್ನು ಬಹಳ ಚನ್ನಾಗಿ ಮೇಲ್ವಿಚಾರಣೆಯಿಟ್ಟು ನೋಡಿಕೊಳ್ಳಬೇಕೆಂದು ತೀರ್ಮಾನಮಾಡಿದರು.

ಬೆಳಗೊಳದ ನೀರಿನ ಕಾರ್ಖಾನೆಯ ನೌಕರರು ಅಲ್ಲಿನ ಸಮಾವೆಸೆಯಿಂದ ಆಗಾಗ್ಗೆ ಕಾಯಿಲೆ ಬಿದ್ದು ನರಳುತ್ತಾರೆಂತಲೂ ಆ ನೌಕರರಿಗೆ ಮ್ಯುನಿಸಿಪಾಲಿಟಿಯಿಂದ ಸ್ವಲ್ಪ ಅಲೋವೇನ್ಸು ಕೊಡಬೇಕೆಂತಲೂ ಛೀಫ್ ಇಂಜನಿಯರವರು ಬರೆದು ಕೇಳಿದ್ದರು. ಮ್ಯುನಿಸಿಪಲ್ ಕೌನ್ಸಲರುಗಳು ಈ ವಿಷಯವನ್ನು ಚರ್ಚೆ ಮಾಡಿ, ಈ ನೀರುಸರಬರಾಯಿನ ಇಲಾಖೆಯನ್ನೇ ಛೀಫ್ ಇಂಜನಿಯರವರ ಸುಪರ್ದಿಗೆ ವಹಿಸಿ ಇದಕ್ಕಾಗಿ ಪ್ರತಿ ವರ್ಷವೂ ಒಟ್ಟಾಗಿ ಹಣವನ್ನು ಕೊಡುತ್ತೇವೆಂದು ನಿಷ್ಕರ್ಷೆ ಮಾಡಿರೋಣದರಿಂದ ಈ ಭಾಗದಲ್ಲಿ ಹೆಚ್ಚು ಹಣವನ್ನು ಸಂಬಳಕ್ಕಾಗಲಿ ಅಲೋವೇನ್ಸಿಗಾಗಲಿ ಮ್ಯುನಿಸಿಪಾಲಿಟಿಯಿಂದ ಕೊಡಲು ಕಾರಣವಿಲ್ಲವೆಂತಲೂ ಚೈತನ್ಯವೂ ಇಲ್ಲವೆಂತಲೂ ತಿಳಿಸುವಂತೆ ತೀರ್ಮಾನಮಾಡಿದರು.

ದೇವಣ್ಣರಾಯನಕಟ್ಟೆ ಬಳಿ ಒಂದು ದನಗಳ ದೊಡ್ಡಿ ಕಟ್ಟುವುದಕ್ಕೆ ೯೩೦ ರೂಪಾಯಿ ಸ್ಯಾಂಕ್ಷನ್ ಆಗಬೇಕೆಂದು ಅಂದಾಜುಪಟ್ಟಿ ತಯಾರಾಗಿತ್ತು. ಕೌನ್ಸಲರುಗಳು ಅಷ್ಟು ಹೆಚ್ಚು ಹಣ ಅಗತ್ಯವಿಲ್ಲವೆಂತಲೂ, ಕೋಟೆ ಮೊಹಲ್ಲೆಯ ದೊಡ್ಡಿ ಕಟ್ಟಿರುವಂತೆ ಕಟ್ಟಿಸಿದರೆ ಸಾಕಾಗಿದೆ ಎಂತಲೂ, ಅಂದಾಜುಪಟ್ಟಿಯನ್ನು ಬದಲಾಯಿಸಿ ತರಬೇಕೆಂತಲೂ ತಿಳಿಸಿದರು.

ನಜರ್ಬಾದ್ ಮೊಹಲ್ಲಾ ಆಸ್ಪತ್ರೆಯಲ್ಲಿ ಸೂಲಗಿತ್ತಿಯನ್ನು ನೇಮಿಸಿಲ್ಲವಾದ್ದರಿಂದ ಅಲ್ಲಿನ ಪ್ರಜೆಗಳಿಗೆ ತುಂಬಾ ಅನಾನುಕೂಲವಾಗುತ್ತಿದೆ ಎಂದು ತಿಳಿದು, ಒಬ್ಬ ಸೂಲಗಿತ್ತಿಯನ್ನು ಮುಂದಿನ ಸರ್ಕಾರಿ ವರ್ಷದಿಂದ ನೇಮಕ ಮಾಡಿಕೊಡಬೇಕೆಂದು ತೀರ್ಮಾನ ಮಾಡಿರುತ್ತಾರೆ.

ಮುಂದಿನ ವರುಷದ ಜಮಾ ಖರ್ಚಿನ ಅಂದಾಜುಪಟ್ಟಿಯು ತಯಾರಾಯಿತು. ೧,೩೦,೯೦೦ ಚಿಲ್ಲರೆ ರೂಪಾಯಿ ಜಮಾ ಆಗುವುದೆಂತಲೂ ಸುಮಾರು ೧,೬೩,೦೦೦ ರೂಪಾಯಿ ಖರ್ಚಾಗುವುದೆಂತಲೂ ಅಂದಾಜಾಗಿದೆ. ವಿದ್ಯಾಭ್ಯಾಸದ ಪ್ರೋತ್ಸಾಹಕ್ಕೆ ಇದುವರೆಗೆ ವರುಷಕ್ಕೆ ೯,೬೦೦ ರೂಪಾಯಿ ಖರ್ಚು ಮಾಡುತ್ತಿದ್ದರು. ಮುಂದಿನ ಸಾಲಿನಲ್ಲಿ ೧೭,೦೦೦ ರೂಪಾಯಿ ಬೇಕಾಗುವುದೆಂದು ಗೊತ್ತುಮಾಡಿದಾರೆ. ಮ್ಯುನಿಸಿಪಲ್ ರಸ್ತೆ ಚರಂಡಿ ಮೊದಲಾದ ಮ್ಯುನಿಸಿಪಲ್ ಮರಾಮತ್ ಬಾಬಿನ ಕೆಲಸಗಳಿಗೆ ಸುಮಾರು ೭೪,೦೦೦ ರೂಪಾಯಿ ತೆಗೆದಿಟ್ಟಿದಾರೆ.

ಮೈಸೂರು ಮ್ಯುನಿಸಿಪಾಲಿಟಿಗೆ ಒಬ್ಬ ಎಗ್ಸಿಕ್ಯೂಟಿವ್ ಇಂಜನಿಯರನ್ನು ನೇಮಿಸಿಕೊಳ್ಳಬೇಕೆಂದು ಪ್ರಯತ್ನಪಟ್ಟರು. ಸುಮಾರು ಮಂದಿ ಆ ಕೆಲಸಕ್ಕೆ ಉಮೇದುವಾರರಾಗಿ ಅರ್ಜಿ ಬರೆದುಕೊಂಡರು. ಈ ಮಹನೀಯರು ಮೈಸೂರು ಸಂಸ್ಥಾನದ ಪ್ರಜೆಗಳೇ. ಬಿ ಎ ಪರೀಕ್ಷೆಯಲ್ಲೂ ಆರೋಗ್ಯಶಾಸ್ತ್ರದಲ್ಲೂ ಇಂಜನಿಯರ್ ಪರೀಕ್ಷೆಯಲ್ಲೂ ತೇರ್ಗಡೆ ಹೊಂದಿದವರು. ಈ ಮಹನೀಯರ ಪೈಕಿ ಯಾರನ್ನು ನೇಮಕ ಮಾಡೋಣವೆಂದು ಕೌನ್ಸಲರುಗಳು ಚರ್ಚೆಮಾಡುವಾಗ್ಗೆ ಮೆ॥ ರಂಗೈಯ್ಯಂಗಾರ್ಯ—ನಾವು ಇಂಥವರನ್ನೇ ನೇಮಿಸಬೇಕೆಂದು ಹೇಳಬೇಕಾದ ಅಗತ್ಯವಿಲ್ಲ. ಈ ನಾಲ್ಕು ಮಂದಿ ಉಮೇದುವಾರರ ಪೈಕಿ ಆರೋಗ್ಯಶಾಸ್ತ್ರ ಪರೀಕ್ಷೆಯಲ್ಲಿ ಯಾರು ಮೇಲ್ತರವಾಗಿ ತೇರ್ಗಡೆ ಹೊಂದಿರುವರೋ ಅಂಥವರನ್ನು ನೇಮಿಸಬೇಕೆಂದು ಸೂಚಿಸಿ ಬಿಟ್ಟರೆ ಸಾಕಾಗಿದೆ. ಪ್ರೆಸಿಡೆಂಟರು ಯಾರನ್ನು ಬೇಕಾದರೂ ನೇಮಿಸಿಕೊಳ್ಳಲಿ ಎಂದು ಹೇಳಿದರು. ಮೆ॥ ಚಂದ್ರಶೇಖರೈಯ್ಯನವರು—ಈ ಮಹನೀಯರು ಉಮೇದುವಾರರ ಯೋಗ್ಯತೆಗಳು ಅವರು ಬರೆದುಕೊಂಡಿರುವ ಅರ್ಜಿಯಲ್ಲಿ ನಮೂದಾಗಿರುತ್ತವೆ. ಅವರ ಪೈಕಿ ನಾವಿಷ್ಟುಮಂದಿಯೂ ಯಾರನ್ನು ಒಪ್ಪುತ್ತೇವೆಯೋ ಅವರ ಹೆಸರನ್ನು ನಮೂದುಮಾಡುವುದು ಸಹಜವೆಂದು ಹೇಳಿದ್ದಲ್ಲದೆ ಆ ಮಹನೀಯರ ಪೈಕಿ ಮೆ॥ ಎಚ್ ಆರ್ ವೆಂಕಟಸುಬ್ಬರಾವ್, ಬಿ ಎ, ಎಲ್ ಸಿ ಇ ಎಂಬ ಉಮೇದುವಾರರು ಈಗ ೩—೮ ತಿಂಗಳಿಂದ ಬೊಂಬಾಯಿ ಗವರ್ನಮೆಂಟಿನಲ್ಲಿ ಒಂದು ಸಬ್ ಡಿವಿಷನ್ನು ವಹಿಸಿ ಕೆಲಸ ಮಾಡುತ್ತಿದಾರೆಂತಲೂ ಅವರಿಗೆ ಕೆಲಸದ ಅನುಭವವಿರುವುದರಿಂದ ಅವರನ್ನೇ ನೇಮಿಸಿಕೊಳ್ಳುವುದು ಅನುಕೂಲವೆಂತಲೂ ಸೂಚಿಸಿದರು. ಆಗ ಬಹು ಮಂದಿ ಕೌನ್ಸಲರುಗಳು ಮೆ॥ ಚಂದ್ರಶೇಖರೈಯ್ಯನವರ ಅಭಿಮತವನ್ನೇ ಅನುಮೋದಿಸಿದ್ದರಿಂದ ಮೇಲ್ಕಂಡ ಮೆ॥ ವೆಂಕಟಸುಬ್ಬರಾಯರಿಗೆ ಮ್ಯುನಿಸಿಪಲ್ ಇಂಜನಿಯರ್ ಕೆಲಸವಾಗಬೇಕೆಂದು ತೀರ್ಮಾನವಾಯಿತು.

ರಾಜಧಾನಿಯಲ್ಲಿ ಅಂಗಹೀನರನ್ನೂ ಬಡವರುಗಳನ್ನೂ ಸಾಕುವುದಕ್ಕೆ ಒಂದು ಲಂಗರ್ಖಾನೆಯನ್ನು ಏರ್ಪಾಡು ಮಾಡಬೇಕೆಂದೂ ಆದಕ್ಕೆ ಮ್ಯುನಿಸಿಪಾಲಿಟಿಯಿಂದ ತಿಂಗಳಿಗೆ ೧೦೦ ರೂಪಾಯಿ ಖರ್ಚು ಮಾಡಬೇಕೆಂದೂ ಹಿಂದೆ ತೀರ್ಮಾನವಾಗಿತ್ತು. ಗವರ್ನಮೆಂಟಿನವರು ಈ ವಿಷಯವನ್ನು ಒಪ್ಪದೆ, ಪ್ರಜೆಗಳು ಈ ಏರ್ಪಾಡಿಗೆ ಹಣ ಕೂಡಿಸಿ ಒಂದು ಕಟ್ಟಡವನ್ನು ಕಟ್ಟಿಕೊಟ್ಟಾಗ ಯೋಚನೆ ಮಾಡೋಣವೆಂದು ಹುಕುಂ ಕಳುಹಿಸಿದಾರೆ.

ಯುನಾನಿ ಆಸ್ಪತ್ರೆಯ ಎರಡನೇ ಹಕೀಮರು ತಮ್ಮ ಸಂಬಳವನ್ನು ಜಾಸ್ತಿಮಾಡಿ ಕೊಡಬೇಕೆಂದು ಅರ್ಜಿ ಬರೆದಿದ್ದರು. ಕೌನ್ಸಲರುಗಳು ಸದ್ಯ ಅವರ ತಲಬು ಜಾಸ್ತಿ ಮಾಡುವುದಕ್ಕಾಗುವುದಿಲ್ಲವೆಂದು ತೀರ್ಮಾನವಾದಿದಾರೆ.

ಇಂಡಿಯಾ ದೇಶದ ವೃತ್ತಾಂತಗಳು.

ಅಮೀರರಿಗೆ ಆಗ್ರಾ ಪಟ್ಟಣದಲ್ಲಿ ಇಂಗ್ಲೀಷ್ ಸೈನಿಕರ ಸಾಹಸ ಚಮತ್ಕಾರಗಳನ್ನು ತೋರ್ಪಡಿಸಿದ ಏರ್ಪಾಡಿಗೆ ೪। ಲಕ್ಷ ರೂಪಾಯಿ ಖರ್ಚಾಯಿತು.

***

ಕಲ್ಕತ್ತೆಯ ಬಳಿ ಇರುವ ಪ್ಲಾಸಿ ಎಂಬ ಯುದ್ಧಭೂಮಿಯಲ್ಲಿ ಒಂದು ರಣಗಂಬವನ್ನು ಶಿಲಾಶಾಸನಗಳ ಸಹಿತ ಕಟ್ಟಿಸಬೇಕೆಂದು ಬಂಗಾಳಾ ಗವರ್ನಮೆಂಟಿನವರು ೭೫,೦೦೦ ರೂಪಾಯಿ ಸ್ಯಾಂಕ್ಷನ್ ಮಾಡಿದಾರೆ.

***

ಕಲ್ಕತ್ತಾ ಪಟ್ಟಣದ ಮ್ಯುನಿಸಿಪಲ್ ಮಾರ್ಕೆಟ್ಟನ್ನು ಬಡಾವಣೆ ಮಾಡಿ ವಿಸ್ತಾರವಾಗಿಯೂ ಅಲಂಕಾರ ಯುಕ್ತವಾಗಿಯೂ ಕಟ್ಟುವುದಕ್ಕೆ ಬಂಗಾಳಾ ಗವರ್ನಮೆಂಟಿನವರು ಒಂಬತ್ತೂವರೆ ಲಕ್ಷ ರೂಪಾಯಿ ಸ್ಯಾಂಕ್ಷನ್ ಮಾಡಿದಾರೆ.

***

ಕೂಚ್ ಬೇಹಾರಿನ ಮಹಾರಾಜರವರು ತಮ್ಮ ಸಂಸ್ಥಾನದಲ್ಲಿ ಶಿಕಾರಿಗೆ ಹೋಗಿಬಂದರು. ಅವರು ಒಂದು ವಾರದಲ್ಲಿ ೪ ಹುಲಿ, ೭ ಕರಡಿ, ೭ ಚಿರತೆಗಳನ್ನೂ ಅನೇಕ ಕಾಡುಹಂದಿ ಸಾರಗ ಮೊದಲಾದವುಗಳನ್ನೂ ಹೊಡೆದಿರುತ್ತಾರೆಂದು ತಿಳಿಯುವುದು.

ಸಿಂಧು ದೇಶಕ್ಕೆ ಸೇರಿದ ಹೈದರಾಬಾದಿನಲ್ಲಿ ಒಬ್ಬ ದೊಡ್ಡ ಮನುಷ್ಯನ ಮನೆಯ ಮಾವರು ಹೆಂಗಸರು ಜ್ವರದ ಪುಡಿ ಎಂದು ವಿಷಪುಡಿಯನ್ನು ಸೇವನೆ ಮಾಡಿ, ಆ ಪೈಕಿ ಇಬ್ಬರು ತೀರಿಹೋದರು. ಒಂದು ಹುಡುಗಿ ಬದುಕಿಕೊಂಡಿತು. ಸರ್ಕಾರದವರು ತನಿಖೆ ಮಾಡುತ್ತಿದಾರೆ.

***

ಆಫ್ಘಾನಿಸ್ಥಾನದ ಅಮೀರರವರು ಜಲಾಲಾಬಾದನ್ನು ತಲಪಿದರು. ಕೇಳಿದ ಕೂಡಲೇ ಸರ್ದಾರ್ ನಸರುಲ್ಲಾ ಖಾನ್ ರವರು ಸೈನ್ಯವನ್ನು ಕೂಡಿಸಿ ಅಮೀರರ ಮುಂದೆ ಕವಾಯತುಮಾಡಿಸಿದರು. ಗೌರವಾರ್ಥವಾದ ೧೦೧ ತೋಪುಗಳು ಹಾರಿಸಲ್ಪಟ್ಟವು. ಪ್ರಜೆಗಳೆಲ್ಲಾ ವಿಶೇಷವಾದ ಸಂತೋಷೋತ್ಸವಗಳನ್ನು ನಡಿಸಿದರು.

***

ಟಿಬೆಟ್ ರಾಜ್ಯದವರು ಇಂಗ್ಲಿಷ್ ಗವರ್ನಮೆಂಟಿಗೆ ಕರಾರಿನಂತೆ ಕೊಡಬೇಕಾಗಿದ್ದ ಯುದ್ಧದ ಋಣದಲ್ಲಿ ಎರಡನೆಯ ಕಿಸ್ತಿನ ಎಂಟೂ ಕಾಲು ಲಕ್ಷ ರೂಪಾಯನ್ನು ಕಳೆದ ಜನವರಿಯಲ್ಲಿ ಪಾವತಿಮಾಡಿದರು. ಇನ್ನೊಂದು ಕಿಸ್ತು ಮಾತ್ರ ಮುಂದಿನ ಜನವರಿಯಲ್ಲಿ ಅವರು ಕೊಟ್ಟುಬಿಟ್ಟರೆ ಒಟ್ಟು ೨೫ ಲಕ್ಷವೂ ಪೂರ್ತಾ ಬಂದಂತಾಗುವುದು.

***

ಬರ್ಮಾ ಆಧಿಪತ್ಯದಲ್ಲಿ ಅಫೀಂ ಸೇವನೆಯನ್ನು ಪ್ರಜೆಗಳಲ್ಲಿ ಕಡಿಮೆ ಮಾಡಬೇಕೆಂದು ಗವರ್ನಮೆಂಟಿನವರು ಅಫೀಂ ಮಾರುವವರಿಗೆ ಲೈಸೆನ್ಸು ಕೊಡಕೂಡದೆಂತಲೂ ಅಂಥಾ ಅಂಗಡಿಗಳನ್ನು ಎಷ್ಟುಮಾತ್ರಕ್ಕೂ ಇಟ್ಟಿಸಕೂಡದೆಂತಲೂ, ಕೆಲವುಕಡೆ ಸರ್ಕಾರದವರೇ ಅಂಗಡಿ ಇಟ್ಟು ಬಹು ಎಚ್ಚರಿಕೆಯಿಂದ ಬಿಕರಿ ಮಾಡಬೇಕೆಂತಲೂ ಹುಕುಂ ಕೊಟ್ಟಿದಾರೆ.

***

ಬಂಗಾಳಾ ಆಧಿಪತ್ಯದಲ್ಲಿ ಕ್ಷಾಮವು ಕಡಿಮೆಯಾಗುತ್ತಿದೆ. ಸದ್ಯ ಮಹಾನವತ್ತು ಸಾವಿರ ಸಾವಿರ ಪ್ರಜೆಗಳು ಸರ್ಕಾರದವರ ಪೋಷಣೆಯಲ್ಲಿರುತ್ತಾರೆ, ಅಂದರೆ ಹಿಂದಿನ ವಾರದ ಸಂಖ್ಯೆಗಿಂತ ೧೭,೦೦೧ ಜನರು ಕಡಿಮೆ. ಅತ್ತಲಾಗಿ ಸಂಯುಕ್ತ ಆಧಿಪತ್ಯಗಳಲ್ಲಿ ರಿಲೀಫ್ ಕೆಲಸಗಳೆಲ್ಲಾ ನಿಲ್ಲಿಸಲ್ಪಟ್ಟವು. ೯೩೬ ಜನರು ಮಾತ್ರ ಕ್ಷಾಮ ಪೀಡಿತರಾಗಿದಾರೆಂದು ತಿಳಿಯುತ್ತದೆ.

***

ಕೂನೂರಿನಲ್ಲಿ ನಾಯಿ ನರಿ ಮುಂತಾದ ಪ್ರಾಣಿಗಳಿಂದ ಕಡಿಸಿಕೊಂಡವರಿಗೆ ಚಿಕಿತ್ಸೆ ಮಾಡುವುದಕ್ಕೆ ಒಂದು ಹೊಸ ಆಸ್ಪತ್ರೆಯನ್ನು ಕಟ್ಟಿಸಿರುತ್ತಾರೆಂದು ನಮ್ಮ ವಾಚಕರಿಗೆ ತಿಳಿಸಿರುತ್ತೇವಷ್ಟೆ. ಈ ಆಸ್ಪತ್ರೆಯನ್ನು ಮದರಾಸ್ ಗವರ್ನರವರು ಈ ತಿಂಗಳ ೭೫ ನೇ ತಾ ಪ್ರತಿಷ್ಠೆ ಮಾಡುವುದಕ್ಕೆ ಒಪ್ಪಿಕೊಂಡಿರುತ್ತಾರೆ. ಅಂದಿನಿಂದಾಚೆಗೆ ಅಲ್ಲಿ ರೋಗಿಗಳಿಗೆ ಚಿಕಿತ್ಸೆ ನಡೆಯುವುದು.

***

ಕಳೆದ ಗುರುವಾರ ಮದರಾಸ್ ಯೂನಿವರ್ಸಿಟಿ ಎಂಬ ವಿದ್ಯಾಸಂಘದ ಕಾನ್ವೊಕೇಷನ್ ಎಂಬ ವಿದ್ವನ್ಮಂಡಲಿಯಲ್ಲಿ ೭೩೦ ಮಂದಿ ಬಿ ಎ ಮೊದಲಾದ ಪ್ರೌಢ ಪರೀಕ್ಷೆಗಳನ್ನು ಕೊಟ್ಟು ಡಿಗ್ರಿ ಎಂಬ ಹೆಸರು ಪಡೆದುಕೊಂಡರು. ತಿರುಚನಾಪಲ್ಲಿಯ ಫಾದರ್ ಸೆವೆಲ್ ಎಂಬ ದೇಶದ್ದ ಮನುಷ್ಯರು ಅವರಿಗೆಲ್ಲಾ ಯೋಗ್ಯವಾದ ಬುದ್ಧಿವಾದಗಳನ್ನು ಹೇಳಿದರು. ಈ ಸಭೆಯಲ್ಲಿ ೭೬ ಮಂದಿ ಸ್ತ್ರೀಯರು ಹಾಜರಾಗಿದ್ದು ಡಿಗ್ರಿಯನ್ನು ಸಂಪಾದಿಸಿಕೊಂಡರು.

***

ಹಿಂದುಸ್ಥಾನದಲ್ಲಿ ಪ್ಲೇಗ್ ಉಪದ್ರವ ಈಗ ವಾರ ವಾರಕ್ಕೆ ಹೆಚ್ಚುತ್ತಾ ಬಂದಿದೆ. ಹಿಂದಿನ ವಾರ ಈ ಉಪದ್ರದಲ್ಲಿ ೪೧,೬೬೭ ಮಂದಿ ಮೃತಪಟ್ಟರು. ಕಳೆದ ವಾರವಾದರೋ ೪೯,೫೩೦ ಪ್ರಜೆಗಳು ಕಾಲವಾಗಿರುತ್ತಾರೆ. ಹ್ಯಾಗೆಂದರೆ—ಪಂಜಾಬ್ ೧೯,೫೬೫, ಸಂಯುಕ್ತ ಆಧಿಪತ್ಯಗಳು ೧೨,೫೦೯, ಬಂಗಾಳಾ ೫೬,೦೧೯, ಬೊಂಬಾಯಿ ಆಧಿಪತ್ಯ ೩,೯೩೪, ಮಧ್ಯಪ್ರಾಂತ್ಯಗಳು ೭,೯೦೬, ಮಧ್ಯ ಇಂಡಿಯಾ ೩೮೭; ರಾಜಪುಟಾನಾ ೩೭೩, ಬರ್ಮಾ ೩೩೪.

***

ಕರಾಚಿ ಪಟ್ಟಣದಲ್ಲಿ ಒಬ್ಬ ಮಹಮದೀಯನು ೭,೦೦೦ ರೂಪಾಯಿ ಡೌರಿ (ಬಳುವಳಿ) ಯನ್ನು ಗೊತ್ತುಮಾಡಿ, ಆ ಪೈಕಿ ೩೦೦ ರೂಪಾಯಿ ತೆಗೆದುಕೊಂಡು ಒಂದು ಹುಡುಗಿಯನ್ನು ಮದುವೆಯಾದನು. ಆ ಹುಡುಗಿ ೩—೪ ವರುಷಗಳು ಗಂಡನಕೂಡೆ ಬಾಳಿ ಒಂದು ಹೆಣ್ಣು ಮಗುವನ್ನು ಬಿಟ್ಟು ಸತ್ತಳು. ಈಚೆಗೆ ಆ ಹೆಣ್ಣು ಮಗುವೂ ತೀರಿಹೋಯಿತು. ಈಗ ಅವನು ತನಗೆ ಡೌರಿ ಬಾಬತು ಇನ್ನೂ ೧,೭೦೦ ರೂಪಾಯಿ ಬಂದಿಲ್ಲವಾದ್ದರಿಂದ ಬಡ್ಡಿ ಸಹಿತವಾಗಿ ಕೊಡಿಸಬೇಕೆಂದು ತನ್ನ ಭಾವಂದಿರಮೇಲೆ ದಾವಾ ತಂದಿದಾನೆ.

***

ಕಳೆದ ೧೯೦೪ನೆ ಇಸವಿಯಲ್ಲಿ ಲಾರ್ಡ್ ಕರ್ಜನರವರು ವೈಸರಾಯರಾಗಿ ಢಕ್ಕಾ ಪಟ್ಟಣಕ್ಕೆ ದಯಮಾಡಿದ್ದಾಗ ಮೂರ್ತಿಯೋಜ್ ಎಂಬವನು ಅವರ ಮುಂದೆ ಯಕ್ಷಿಣಿ ಆಟವನ್ನು ಆಡಿ ತೋರಿಸಿದನು. ಢಕ್ಕಾ ನವಾಬ್ ಸಲಿಮುಲ್ಲಾಯವರು ಆ ಯಕ್ಷಿಣಿಗಾರನಿಗೆ ೧,೭೦೦ ರೂಪಾಯಿ ಕೊಡುವುದಾಗಿ ವಾಗ್ದಾನಮಾಡಿ, ಆ ಪೈಕಿ ೭೫೦ ರೂಪಾಯಿ ಮಾತ್ರ ಕೊಟ್ಟರು. ಬಾಕಿ ಹಣಕ್ಕೆ ಅವನು ನವಾಬರ ಮೇಲೆ ದಾವಾ ಮಾಡಿದನು. ಕಳೆದ ವಾರ ಈ ಮೊಕದ್ದಮೆ ಕಲ್ಕತ್ತೆಯ ಕೋರ್ಟಿನಲ್ಲಿ ಫೈಸಲಾಗಿ ನವಾಬರು ಅವನಿಗೆ ಕೋರ್ಟು ಖರ್ಚುಸಹಿತವಾಗಿ ೪೭೦ ರೂಪಾಯಿ ಕೊಡತಕ್ಕದ್ದೆಂದು ಡಿಕ್ರಿ ಆಯಿತು.

***

ಬೊಂಬಾಯಿ ಪಟ್ಟಣದಲ್ಲಿ ಪ್ಲೇಗ್ ರೋಗವನ್ನು ಹರಡುವಂಥಾ ಇಲಿಗಳನ್ನೆಲ್ಲಾ ಸಂಪೂರ್ಣವಾಗಿ ಕೊಂದುಬಿಡಬೇಕೆಂದು ಸರ್ಕಾರದವರು ಪ್ರತಿ ಮೊಹಲ್ಲೆಯಲ್ಲೂ ಅದಕ್ಕಾಗಿ ದೊಡ್ಡ ಕಿಸ್ತಿಂದಯನ್ನಿಟ್ಟು ಕಾರ್ಯಾರಂಭ ಮಾಡಿರುತ್ತಾರೆ. ಆದರೆ ಅವರ ಕೆಲಸವು ಸಾರ್ಥಕವಾಗಲಾರದೆಂದು ಧಾರಾಳವಾಗಿ ಹೇಳಬಹುದಾಗಿದೆ. ಯಾಕಂದರೆ ಪರೇಲ್ ಎಂಬೊಂದು ಮೊಹಲ್ಲೆಯಲ್ಲಿ ಪ್ರತಿ ಒಂದು ಅಂಗಡಿಯ ಮೇಲ್ಭಾಗದಲ್ಲೂ ಅಂಗಡಿಯವರು "ಇಲಿ ಕೊಲ್ಲುವವರು ಈ ಅಂಗಡಿಯೊಳಕ್ಕೆ

ಪ್ರವೇಶ ಮಾಡಕೂಡದು" ಎಂಬದಾಗಿ ಇಂಗ್ಲೀಷಿನಲ್ಲೂ ಇತರ ಭಾಷೆಗಳಲ್ಲೂ ಬರೆಸಿ ಬೋರ್ಡುಗಳನ್ನು ತಗಲಿ ಹಾಕಿಕೊಂಡಿದ್ದಾರೆ ಇಂಥಾ ದುಷ್ಟ ಸರ್ಕಾರದವರು ಪ್ಲೇಗನ್ನು ಹೇಗೆ ನಿಲ್ಲಿಸುವರಕ್ಕಾದೀತು

* * *

ಕಲ್ಕತ್ತೆಯಲ್ಲಿ ರಾಮಚಂದ್ರ, ನರಗೋವಿಂದ ಎಂಬವರಿಬ್ಬರು ಹರಿಚರಣದೇವನೆಂಬ ಸಾಹುಕಾರನ ಬಳಿ ಐದು ೧,೨೦೦ ರೂಪಾಯಿ ಬೆಲೆಯ ನೋಟುಗಳನ್ನು ತೆಗೆದುಕೊಂಡು, ಒಂದೆರಡು ದಿವಸಗಳಲ್ಲಿ ಅವನಿಗೆ ಒಂದು ಟಕ್ಕೋಟೆಯನ್ನು ಕೊಟ್ಟು, ಇದನ್ನು ಇನ್ನು ನಾಲ್ಕು ತಿಂಗಳ ಮೇಲೆ ಒಡೆದು ನೋಡಿದರೆ ೧,೦೦೦ ರೂಪಾಯಿನ ಚಿತ್ತು ನಾಣ್ಯಗಳಿರುವವು ಎಂದೂ ಅದಕ್ಕೆ ಮುಂಚೆ ಲಕ್ಕೋಟೆಯನ್ನು ಒಡೆಯಕೂಡದೆಂತಲೂ ಹೇಳಿ ಹೋದರು ಅವನು ಅದೇ ರೀತಿ ನಾಲ್ಕು ತಿಂಗಳ ಮೇಲೆ ಲಕ್ಕೋಟೆಯನ್ನು ಒಡೆದು ನೋಡಿದಾಗ ಅದರಲ್ಲಿ ಕೆಲವು ಹಳೆಯ ಕಾಗದದ ಚೂರುಗಳು ಮಾತ್ರ ಇದ್ದವು ಆಗ ಅವನು ಅವರನ್ನು ಹಿಡಿದು ಪೋಲೀಸಿಗೆ ಕೊಟ್ಟನು ಮೊಕದ್ದಮೆ ನಡೆಯುತ್ತಾ ಇದೆ

* * *

ಮುಂದಿನ ಸಾಲಿನಲ್ಲಿ ಇಂಡಿಯಾ ಗವರ್ನಮೆಂಟಿನವರು ಬಾರಿಯಾಗಿ ಕೆಲವು ನೀರಾವರಿ ಕಾಮಗಾರಿಗಳನ್ನು ಮಾಡಿಸುವುದಕ್ಕೆ ೧೬೫ ಲಕ್ಷ ರೂಪಾಯಿ ತೆಗೆದಿಟ್ಟಿದ್ದಾರೆ ಈಗ ಹಿಂದುಸ್ಥಾನದಲ್ಲಿ ಒಟ್ಟು ೪೩,೩೦೦ ಮೈಲಿಗಳ ಉದ್ದವಿದ್ದ ನಾಲೆಗಳು ಇರುತ್ತವೆ ಇವುಗಳ ನೀರಿನಿಂದ ೨೨೬ ಲಕ್ಷ ಎಕರೆ ಜಮೀನಿನಲ್ಲಿ ಸರೀ ಫಸಲಾಗುತ್ತಿರುವುದು ಪಂಜಾಬಿನಲ್ಲಿ ಜೀಲಂ ನದಿಯಿಂದ ಚೇನಾಬ್ ನದಿಗೆ ನಾಲೆಗಳ ಮೂಲಕ ನೀರು ಹಾಯಿಸಿ ಇನ್ನೂ ೬ ಲಕ್ಷಾಂತರ ಎಕರೆ ಜಮೀನನ್ನು ತರೀ ಮಾಡಬೇಕೆಂದು ಗವರ್ನಮೆಂಟಿನವರು ಆಲೋಚನೆ ಮಾಡಿರುತ್ತಾರೆ ಈ ಕಾಮಗಾರಿಗೆ ೬೪೫ ಲಕ್ಷ ರೂಪಾಯಿ ಖರ್ಚಾದಾಗ್ಯೂ ಈ ಹಣ ಪ್ರತಿ ವರುಷಕ್ಕೆ ೧೦ ರಂತೆ ಬಡ್ಡಿ ಹುಟ್ಟುವುದೆಂದು ಗೊತ್ತಾಗಿರುವುದರಿಂದ ಆ ನಾಲೆಯ ಕಾಮಗಾರಿಯನ್ನು ಗವರ್ನಮೆಂಟಿನವರು ಇನ್ನೆರಡು ವರುಷದೊಳಗೆ ಪೂರೈಸುವರೆಂದು ಹೇಳಬಹುದಾಗಿದೆ

* * *

ಮದರಾಸ್ ರೈಲ್ ಕಂಪನಿಯವರನ್ನು ಇಂಡಿಯಾ ಗವರ್ನಮೆಂಟಿನವರು ಇದುವರೆಗೆ ಕಂಪನಿಯವರಿಗೆ ಕಂಟ್ರಾಕ್ಟು ವಹಿಸಿದ್ದರು ಕಂಪನಿಯವರೇ ರೈಲನ್ನು ನಡಿಸುತ್ತಾ ಬಂದಿದ್ದಾರೆ ಈಗ ಈ ಕಂಟ್ರಾಕ್ಟಿನ ಅವಧಿಯು ಪೂರೈಸಿ ಹೋಗಿರುವುದರಿಂದ ಆ ಕಂಪನಿಯವರಿಂದ ಗವರ್ನಮೆಂಟಿನವರೇ ವಾಪಸು ಪಡೆಯುವ ವಿಷಯದಲ್ಲಿ ಚರ್ಚೆ ನಡೆಯುತ್ತಿದೆ ಹಾಗೆ ತೆಗೆದುಕೊಳ್ಳುವುದಾದರೆ ಗವರ್ನಮೆಂಟಿನವರು ಕಂಪನಿಯವರಿಗೆ ೧,೯೫೦ ಲಕ್ಷ ರೂಪಾಯಿಯನ್ನು ಪಾವತಿ ಮಾಡಬೇಕಾಗುತ್ತದೆ ಆದರೆ ದಕ್ಷಿಣ ಮಹಾರಾಷ್ಟ್ರ ರೈಲ್ವೆ ಕಂಪನಿಯವರ ಕಂಟ್ರಾಕ್ಟು ಈ ವರುಷ ಡಿಸೆಂಬರು ತಿಂಗಳಿಗೆ ಮುಕ್ತಾಯವಾಗುತ್ತದೆ ಆ ಕಂಪನಿಯವರಿಗೆ ಮತ್ತೆ ರೈಲ್ ನಡಿಸುವಂತೆ ಕಂಟ್ರಾಕ್ಟು ಕೊಡದೆ ಎರಡು ಕಂಪನಿಗಳ ರೈಲನ್ನು ಅವರಿಂದ ಗವರ್ನಮೆಂಟಿನವರು ವಹಿಸಿಕೊಂಡು ನಡಸಬೇಕೆಂಬೀ ವಿಚಾರವಾಗಿ ಕಾಗದಪತ್ರ ನಡೆಯುತ್ತಲಿವೆ

* * *

ಬರ್ಮಾ ಆಧಿಪತ್ಯದಲ್ಲಿ ಯುವ್ರಾಂಗ್ ಎಂಬಾತನ ಮುಖಂಡತನದಲ್ಲಿ ಕೆಲವು ಬುದ್ಧಿಹೀನರಾದ ಜನರು ಇಂಗ್ಲಿಷ್ ಗವರ್ನಮೆಂಟನ್ನೇ ತಳ್ಳಿಬಿಟ್ಟು, ತಾವೇ ರಾಜ್ಯಾಧಿಪತ್ಯವನ್ನು ಪಡೆಯಬೇಕೆಂದು ಪ್ರಯತ್ನ ಮಾಡಿಕೊಂಡರು. ಆ ಮುಖಂಡನೂ ಅವನ ಅನುಚರರೂ ಗ್ರಾಮಾಂತರಗಳ ಮೇಲೆ ಸಂಚಾರ ಹೊರಟು ಜನರನ್ನು ಚಿತಾಯಿಸಿ ದಂಗೆಯೆಬ್ಬಿಸುತ್ತಾ ಪ್ರಜಾನೆಮ್ಮದಿಗೆ ಭಂಗವನ್ನುಂಟು ಮಾಡುತ್ತಾ ಬಂದರು. ಇಂಥವರನ್ನು ಗವರ್ನಮೆಂಟಿನವರು ಉಪೇಕ್ಷ್ಯದಿಂದ ಕಾಣಬಹುದಾಗಿದ್ದಾಗ್ಯೂ ಅವರನ್ನು ಸುಮ್ಮನೆ ಬಿಟ್ಟರೆ ಇತರ ಬುದ್ಧಿಹೀನರಾದ ಜನರೂ ಅವರಂತೆಯೇ ಎದ್ದು ಅಕೃತ್ಯಗಳನ್ನು ಮಾಡುವರೆಂದು ತಿಳಿದು ಕೆಲವರನ್ನು ಮಾತ್ರ ಹಿಡಿಸಿ ದರ್ಯಾಫ್ತು ಮಾಡಿಸಿದರು. ಸೆಷನ್ಸ್ ಜಡ್ಜರು ಅಪರಾಧಿಗಳ ಪೈಕಿ ೧೦ ಮಂದಿಗೆ ೩ ವರ್ಷ ಕೈದು, ಒಬ್ಬನಿಗೆ ೭ ವರ್ಷವೂ ಕಠಿಣಸಜಾ ವಿಧಿಸಿದರು. ಈ ಶಿಕ್ಷೆಯು ಅವರ ಅಪರಾಧಕ್ಕೆ ಬಹಳ ಕೊಂಚವಾಯಿತೆಂದು ಗವರ್ನಮೆಂಟಿನವರು ಚೀಫ್ ಕೋರ್ಟಿನಲ್ಲಿ ಅಪೀಲ್ ಮಾಡಿದರು. ಚೀಫ್ ಜಡ್ಜುಗಳು ಅದನ್ನು ದರ್ಯಾಫ್ತು ಮಾಡಿ, ಆ ಹನ್ನೊಂದು ಮಂದಿ ಅಪರಾಧಿಗಳಿಗೂ ತಲಾ ಏಳು ವರುಷದಂತೆ ಟ್ರಾನ್ಸ್‌ಪೋರ್ಟ್ ಸಜಾ ವಿಧಿಸಿದ್ದಾರೆ.

* * *

ಮದರಾಸ್ ಆಧಿಪತ್ಯದಲ್ಲಿ ಅನೇಕ ಸತ್ರ ದೇವಸ್ಥಾನಗಳೇ ಮೊದಲಾದ ಧರ್ಮಕಾರ್ಯಗಳಿಗೆ ಪೂರ್ವಿಕರು ಹಣಗಳನ್ನು ಹಾಕಿ ಅವೆಲ್ಲಾ ಬಹುಕಾಲ ಶಾಶ್ವತವಾಗಿ ನಡೆಯುವಂತೆ ಆಧಾರವಾದ ಪ್ರಮದುವಟ್ಟು ದಾನಗಳನ್ನು ಹಾಕಿ ಜಹಗೀರುಗಳನ್ನೂ ಗ್ರಾಮ ಭೂಮಿಗಳನ್ನೂ ಬಿಟ್ಟು ಇರುತ್ತಾರೆ ಈ ಧರ್ಮಕಾರ್ಯಗಳು ಧರ್ಮಮಾಡಿದಂಥಾ ಪೂರ್ವಿಕರ ಉದ್ದೇಶಕ್ಕೆ ಸರಿಯಾಗಿ ನಡೆಯದೆ ಈಗ ತುಂಬಾ ಹೀನಸ್ಥಿತಿಗೆ ಬಂದಿರುತ್ತವೆ ಅಲ್ಲಲ್ಲಿ ಜನರು ಸೇರಿಕೊಂಡು ಆ ಹಣದ ವರಮಾನಗಳನ್ನು ದುರುಪಯೋಗಪಡಿಸಿ ಧರ್ಮಕಾರ್ಯಗಳಿಗೆ ಲೋಪವನ್ನುಂಟುಮಾಡಿರುತ್ತಾರೆ ಮದರಾಸ್ ಪಟ್ಟಣದಲ್ಲಿ ಕೆಲವು ಹಿಂದು ಮುಖ್ಯಮನುಷ್ಯರು ಈಗ ತಾವೇ ಧರ್ಮರಕ್ಷಣ ಸಭಾ ಎಂಬ ಸಂಘವನ್ನು ಕಲ್ಪಿಸಿಕೊಂಡು, ಅಂಥಾ ಧರ್ಮಕಾರ್ಯಗಳನ್ನೆಲ್ಲಾ ಮೂಲ ಕರ್ತರ ಉದ್ದೇಶದಂತೆ ನಡಸುತ್ತಾ ಬರಬೇಕೆಂತಲೂ ಮೇಲ್ವಿಚಾರಣೆ ಮಾಡಿಕೊಳ್ಳಬೇಕೆಂತಲೂ ತೀರ್ಮಾನಮಾಡಿರುತ್ತಾರೆ ಈ ಧರ್ಮ ಸಭೆಯನ್ನು ಸರ್ಕಾರದಲ್ಲಿ ರಿಜಿಸ್ಟರ್ ಮಾಡಿಸಿರುವರು ಈ ಸಭೆಗೆ ಹೈಕೋರ್ಟ್ ವಕೀಲ್ ಮಿ॥ ಪಿ ಕೃಷ್ಣಸ್ವಾಮಿ ಐಯ್ಯರವರು ಪ್ರೆಸಿಡೆಂಟರಾಗಿಯೂ ಮಿ॥ ಆರ್ ನಾರಾಯಣ ಐಯ್ಯರವರೂ ಮಿ॥ ಕೆ ನಾರಾಯಣಸ್ವಾಮಿ ಐಯ್ಯರವರೂ ಸೆಕ್ರೆಟರಿಗಳಾಗಿಯೂ ಚುನಾಯಿಸಲ್ಪಟ್ಟಿದ್ದಾರೆ

ಬೊಂಬಾಯಿ ಪಟ್ಟಣದಲ್ಲಿ ಸರ್ ಫೆರೋಜ್‌ಷಹಾ ಮೆಹತಾ ಎಂಬ ಪಾರ್ಸಿ ದೊಡ್ಡ ಮನುಷ್ಯನು ಬಹು ಕಾಲದಿಂದ ಅಲ್ಲಿನ ಮ್ಯುನಿಸಿಪಾಲಟಿಯಲ್ಲಿ ತುಂಬಾ ಪ್ರಾಮುಖ್ಯವಾದ ಸ್ಥಾನವನ್ನು ಸಂಪಾದಿಸಿಕೊಂಡು ಪ್ರಜೋಪಕಾರಕವಾದ ಅನೇಕ ಕಾರ್ಯಗಳನ್ನು ನಡಸಿರುತ್ತಾನೆ ಈ ಸಲ ನಡೆದ ಚುನಾವಣೆಯಲ್ಲಿ ಯಾವ ಕಾರಣದಿಂದಲೋ ಆತನಿಗೆ ಮ್ಯುನಿಸಿಪಲ್ ಮೆಂಬರ ಕೆಲಸ ತಪ್ಪಿಹೋಯಿತು ಪ್ರಜೆಗಳು ಹಾಕಿದ ಸಮ್ಮತಿಗಳು ಸಾಕಾಗದೆ ಆತನಿಗೆ ಬದಲಾಗಿ ಇನ್ನೊಬ್ಬ ಮೆಂಬರು ಚುನಾಯಿಸಲ್ಪಟ್ಟನು ಆದರೆ ಇಂಥಾ ಪ್ರಜಾವತ್ಸಲನಿಗೆ ಮೆಂಬರ ಕೆಲಸ ತಪ್ಪಿಹೋಯಿತಲ್ಲಾ ಎಂದೂ ಆತನಿಗೆ ಹ್ಯಾಗಾದರೂ ಮೆಂಬರ ಕೆಲಸ ದೊರಕಿಸಬೇಕೆಂದೂ ಬೇರೊಂದು ಮೊಹಲೆಯ ಮೆಂಬರು ಯೋಚಿಸಿ, ತನ್ನ ಮೆಂಬರ್ ಕೆಲಸಕ್ಕೆ ರಾಜೀನಾಮೆ ಕೊಟ್ಟನು ಕಡೆಗೆ ಎರಡನೆಯ ಚುನಾವಣೆ ಆದದ್ದರಲ್ಲಿ ಆ ದೊಡ್ಡ ಮನುಷ್ಯನಿಗೆ ಮೆಂಬರ್ ಕೆಲಸ ದೊರಕಿತು ಈ ಸಂಭ್ರಮವು ಪಟ್ಟಣದಲ್ಲೆಲ್ಲಾ ತುಂಬಾ ಸಂತೋಷವನ್ನುಂಟುಮಾಡಿರುತ್ತದೆ ಪ್ರಜೆಗಳು ಆ ದೊಡ್ಡ ಮನುಷ್ಯನ ಹೆಸರನ್ನು ಶಾಶ್ವತ ಪಡಿಸುವದಕ್ಕಾಗಿ ಮ್ಯುನಿಸಿಪಲ್ ಕಚೇರಿಯ ಮುಂಭಾಗದಲ್ಲೇ ಆತನ ಒಂದು ಪ್ರತಿಮೆಯನ್ನು ಮಾಡಿಸಿ ನಿಲ್ಲಿಸಬೇಕೆಂದು ತೀರ್ಮಾನಿಸಿಕೊಂಡು, ಅದಕ್ಕೆ ಚಂದಾ ಕೂಡಿಸುತ್ತಿದ್ದಾರೆ ಇದುವರೆಗೆ ಈ ಫಂಡಿಗೆ ೩೦,೦೦೦ ರೂಪಾಯಿ ವಸೂಲಾಗಿರುವುದು ಬರೋಡಾ ಸಂಸ್ಥಾನದ ಮಹಾರಾಜರವರೂ ೧೦,೦೦೦ ರೂಪಾಯಿ ಚಂದಾ ಕೊಟ್ಟಿದ್ದಾರೆ

ವಿದೇಶ ವರ್ತಮಾನಗಳು

ಅಮೇರಿಕಕ್ಕೆ ಸೇರಿದ ಚಿಕಾಗೋ ಪಟ್ಟಣದ ಸರ್ಕಾರಿ ಖಜಾನೆಗೆ ಕಳ್ಳರು ಬಿದ್ದು ಆರು ಲಕ್ಷ ರೂಪಾಯನ್ನು ಎತ್ತಿಕೊಂಡು ಹೋದರು ಅವನ್ಯಾರೋ ಹ್ಯಾಗೆ ಕಳುವುಮಾಡಿದರೋ ಯಾರಿಗೂ ಇನ್ನೂ ತಿಳಿಯಲಿಲ್ಲ

* * *

ಮಧ್ಯ ಅಮೇರಿಕದಲ್ಲಿ ನಿಕರಾಗುವಾ, ಕಾಸ್ಟರಿಕಾ, ಹಾಂಡುರಾಸ್ ಎಂಬೀ ರಾಜ್ಯಗಳವರು ಕೆಲವು ಕಾಲದಿಂದ ಕಾದಾಡಲಾರಂಭಿಸಿದ್ದಾರೆ ಅಮೇರಿಕದ ಗವರ್ನಮೆಂಟಿನವರು ಆ ರಾಜ್ಯಗಳ ಮಂತ್ರಿಗಳನ್ನು ಕರೆಸಿ ಸಮಾಧಾನದಿಂದಿರಬೇಕೆಂತ ವಿವೇಕ ಹೇಳಿದರು

* * *

ಸಯಾಂ ರಾಜ್ಯವು ಫ್ರೆಂಚರಿಗೆ ಕಳೆದ ವಾರ ಒಂದು ಕರಾರಾಯಿತು ಸಯಾಂನಲ್ಲಿ ಸುಮಾರು ೧೫,೦೦೦ ಚದರ ಮೈಲಿಯಷ್ಟು ಪ್ರದೇಶಗಳು ಫ್ರೆಂಚರಿಗೆ ಸಿಕ್ಕಿದವು ಸಯಾಂ ದೊರೆಯವರು ಫ್ರಾನ್ಸಿಗೆ ಹೋಗಿಬರಬೇಕೆಂದು ಮೊನ್ನೆ ತಾನೇ ಪ್ರಯಾಣಮಾಡಿರುತ್ತಾರೆ

* * *

ದಕ್ಷಿಣ ಆಫ್ರಿಕಕ್ಕೆ ಸೇರಿದ ಪ್ರಿಮಿಯರ್ ಮತ್ತು ಡಿ ಬಿಯರ್ಸ್ ಎಂಬೀ ಎರಡು ವಜ್ರದ ಗಣಿಗಳಲ್ಲಿ ಕಳೆದ ೧೯೦೬ ನೆ ಇಸವಿಯಲ್ಲಿ ಸಿಕ್ಕಿದ ವಜ್ರಗಳ ಬಿಕರಿಯಿಂದ ಗಣಿಗಳ ಖರ್ಚು ಮುಂತಾದ್ದೆಲ್ಲಾ ಕಳೆದು ೧೧೦ ಲಕ್ಷ ರೂಪಾಯಿ ಲಾಭ ಬಂದಿದೆ ಈ ಕಂಪನಿಗಳವರು ಸರ್ಕಾರಕ್ಕೆ ೩೦ ಲಕ್ಷ ಕಂದಾಯ ಪಾವತಿಮಾಡಿರುತ್ತಾರೆ

* * *

ಅಮೇರಿಕಕ್ಕೆ ಸೇರಿದ ಸ್ಯಾನ್‌ಫ್ರಾನ್ಸಿಸ್ಕೋ ಪಟ್ಟಣದಲ್ಲಿ ಮ್ಯುನಿಸಿಪಲ್ ಬೋರ್ಡ್ ಮೆಂಬರುಗಳು ಕೆಲವು ವರ್ತಕರಿಂದ ಬಹಳ ಹಣಗಳನ್ನು ಗುಟ್ಟಾಗಿ ತೆಗೆದುಕೊಂಡು ಅವರಿಗೆ ರಿಯಾಯತಿಗಳನ್ನು ತೋರಿಸಿರುವುದಾಗಿ ಅವರೇ ಹೇಳಿ ಒಪ್ಪಿಕೊಂಡಿದ್ದಾರೆ ಷ್ಮಿಡ್ಜ್ ಎಂಬ ಅವರ ಅಧ್ಯಕ್ಷನೊಬ್ಬನೇ ಒಂಭತ್ತು ಲಕ್ಷ ರೂಪಾಯಿ ಲಂಚ ತೆಗೆದುಕೊಂಡಿರುತ್ತಾನೆ ಈತನ ದರ್ಯಾಫ್ತು ಈ ತಿಂಗಳು ೮ ಕ್ಕೆ ಪ್ರಾರಂಭವಾಗುವುದು

* * *

ವಿಲಾಯತಿಗೆ ಸೇರಿದ ಲೀಡ್ಸ್ ಪಟ್ಟಣದಲ್ಲಿ ಕ್ಷಯರೋಗ ಪೀಡಿತರಿಗೆ ಚಿಕಿತ್ಸೆ ಮಾಡುವದಕ್ಕಾಗಿ ಒಂದು ಹೊಸ ತರಹಾ ಆಸ್ಪತ್ರೆಯನ್ನಿಟ್ಟು ಕಳೆದ ಏಳು ವರುಷಗಳಿಂದಲೂ ನಡಸುತ್ತಾ ಬಂದಿದ್ದಾರೆ ಈ ಏಳು ವರುಷಗಳಲ್ಲಿ ಅಲ್ಲಿನ ಡಾಕ್ಟರುಗಳು ೩೩೬ ಮಂದಿ ರೋಗಿಗಳಿಗೆ ಚಿಕಿತ್ಸೆ ಮಾಡಿದರು ಆ ಪೈಕಿ ೨೮೯ ಮಂದಿ ಸಂಪೂರ್ಣವಾಗಿ ವಾಸಿಯಾಗಿರುತ್ತದೆ ಉಳಿದವರಿಗೂ ಬಹಳ ಮಟ್ಟಿಗೆ ರೋಗವು ಶಮನವಾಯಿತೆಂದು ತಿಳಿಯುವುದು

* * *

ವಿಲಾಯತಿಯಿಂದ ಹಿಂದೂಸ್ಥಾನಕ್ಕೆ ಕಳೆದ ಡಿಸೆಂಬರಿನಲ್ಲಿ ಬಂದು ಕಲ್ಕತ್ತಾ ಪಟ್ಟಣದಲ್ಲಿ ಕಾಲವಾದ ಮಿ॥ ಸಾಮ್ಯುಯಲ್ ಸ್ಮಿತ್ ಎಂಬಾತನು ತನ್ನ ಆಸ್ತಿಯಲ್ಲಿ ೧೪॥ ಲಕ್ಷ ರೂಪಾಯನ್ನೂ, ಲೆಫ್ಟಿನೆಂಟ್ ಜನರಲ್ ಜೆ ಬಿ ಬೆಯುನೆಸ್ ಎಂಬಾತನು ೬। ಲಕ್ಷ ರೂಪಾಯನ್ನೂ, ಎಸ್ ಫ್ರಾಸನ್ ಬಟ್ಲರ್ ಸ್ತ್ರೀ ಎಂಬಾಕೆಯು ೧೨ ಲಕ್ಷ ರೂಪಾಯನ್ನೂ, ಮಿ॥ ಸಿ ಜೆ ಓಲ್ಡ್‌ಹಂ ಎಂಬಾತನು ೧೦ ಲಕ್ಷ ರೂಪಾಯನ್ನೂ, ನಾನಾ ಧರ್ಮಕಾರ್ಯಗಳಿಗೆ ವಿನಿಯೋಗಿಸುವಂತೆ ಉಯಿಲು ಬರೆದಿರುತ್ತಾರೆ

* * *

ಕ್ಯಾನಡಾ ಎಂಬ ಇಂಗ್ಲಿಷ್ ಸಾಮ್ರಾಜ್ಯಕ್ಕೆ ಸೇರಿದ ವಿಕ್ಟೋರಿಯಾ ಪಟ್ಟಣದಲ್ಲಿ ಹೆಂಗಸರು ಮನೆಯ ಕೆಲಸಗಳನ್ನು ಮಾಡುವುದಕ್ಕೆ ಚೀನಾ ಕೂಲಿಯವರನ್ನು ನೇಮಿಸಿಕೊಳ್ಳುವರು ಸರ್ಕಾರದವರು ಈ ಚೀನೆಯವರಿಗೆ ತಲೆತೆರಿಗೆಯನ್ನು ಹಾಕಿ ಪ್ರತಿ ಒಬ್ಬನಿಂದಲೂ ವರುಷಕ್ಕೆ ೧,೫೦೦ ರೂಪಾಯಿನಂತೆ ವಸೂಲುಮಾಡುತ್ತಾರೆ, ಆದ್ದರಿಂದ ಚೀನೆಯವರು ಅಲ್ಲಿಗೆ ಹೋಗುವುದೇ ಅಪರೂಪವಾಗಿದೆ ಇದನ್ನು ಅಲ್ಲಿನ ಸ್ತ್ರೀಯರು ನೋಡಿ ತಮ್ಮ ಮನೆ ಕೆಲಸಕ್ಕೆ ಸೇವಕರೇ ಸಿಕ್ಕದೆ ತಮಗೆಲ್ಲಾ ತುಂಬಾ ಕಷ್ಟವಾಗಿರುತ್ತದೆಂದು ಅರ್ಜಿ ಬರೆದು ಗವರ್ನಮೆಂಟಿಗೆ ಕೊಟ್ಟಿದ್ದಾರೆ

* * *

ಫ್ರಾನ್ಸಿನ ಮುಖ್ಯ ಪಟ್ಟಣವಾದ ಪ್ಯಾರಿಸ್ ನಗರದಲ್ಲಿ ಕೊಲೆ ಮಾಡಿದವರನ್ನು ಗಲ್ಲಿಗೆ ಏತ್ತಕೂಡದೆಂಬ ಒಂದು ಕಾನೂನು ಚರ್ಚೆಯಾಗುತ್ತಿದೆ ಆದರೆ ಅಲ್ಲಿನ ಪ್ರಜೆಗಳು ಇದಕ್ಕೆ ವಿರೋಧವಾಗಿ ನಿಂತಿರುತ್ತಾರೆ ಯಾಕೆಂದರೆ ಕಳೆದ ತಿಂಗಳಲ್ಲಿ ಒಬ್ಬನು ೧೩ ವರುಷದ ಹುಡುಗಿಯನ್ನು ಕೊಲೆ ಮಾಡಿದನು ಆ ಹುಡುಗಿಯ ಶವವನ್ನು ದಫನ ಮಾಡುವಾಗ್ಗೆ ಸುಮಾರು ೫೦,೦೦೦ ಪ್ರಜೆಗಳು ಸ್ಮಶಾನದಲ್ಲಿ ಸಭೆ ಸೇರಿ, ಅಂಥಾ ಕ್ರೂರ ಕೃತ್ಯವನ್ನು ನಡಿಸಿದ ಮನುಷ್ಯನನ್ನು ಕೊಲ್ಲುವದು ಸಹಜವೆಂದು ತೀರ್ಮಾನ ಮಾಡಿದರು ಆದ್ದರಿಂದ ಆ ಕಾನೂನು ಜಾರಿಗೆ ಬರಲಾರದೆಂದು ನಿರೀಕ್ಷಿಸಬಹುದಾಗಿದೆ

* * *

ಯುದ್ಧಕಾಲದಲ್ಲಿ ಗಾಯಪಟ್ಟವರನ್ನು ಉಪಚರಿಸುವುದಕ್ಕಾಗಿ ಕೆಲವು ಸ್ತ್ರೀಯರು ಒಂದು ಸಂಘವನ್ನು ಮಾಡಿಕೊಂಡಿದ್ದಾರೆ. ಇದಕ್ಕೆ ರೆಡ್ ಕ್ರಾಸ್ ಸಂಘವೆಂದು ಹೆಸರು ಈ ಸಂಘದವರು ಸ್ತ್ರೀ ಡಾಕ್ಟರುಗಳನ್ನು ತರಪೇತು ಮಾಡಿ ಆ ಕೆಲಸಕ್ಕೆ ಕಳುಹಿಸುವರು ಇವರು ಯುದ್ಧ ಮಾಡುವ ಎರಡು ಕಕ್ಷಿಯ ಸೈನಿಕರಲ್ಲೂ ಪಕ್ಷಪಾತವಿಡದೆ ಗಾಯಪಟ್ಟವರನ್ನು ಆಸ್ಪತ್ರೆಗಳಲ್ಲಿಟ್ಟು ಔಷಧಿ ಚಿಕಿತ್ಸೆಗಳನ್ನು ಮಾಡಿ ಉಪಚರಿಸುವರು ಇಂಥಾ ಪುಣ್ಯಕರವಾದ ಸಂಘಕ್ಕೆ ಯೂರೋಪಿನ ಸಕಲ ರಾಜ್ಯಗಳವರೂ ಐಶ್ವರ್ಯವಂತರೂ ದ್ರವ್ಯ ಸಹಾಯಮಾಡುವದು ಸಾಮಾನ್ಯವಾಗಿರುತ್ತದೆ ರಷ್ಯಾ ಚಕ್ರವರ್ತಿಯವರ ಮಾತೃಶ್ರೀಯವರು ಕಳೆದ ವಾರ ಈ ಸಂಘದ ಫಂಡಿಗೆ ಒಂದೂವರೆ ಲಕ್ಷ ದ್ರವ್ಯವನ್ನು ಕಳುಹಿಸಿಕೊಟ್ಟರು

* * *

ಈಜಿಪ್ಟ್ ದೇಶದಲ್ಲಿ ಇಂಗ್ಲಿಷ್ ಗವರ್ನಮೆಂಟಿನವರು ಕೋಟ್ಯಾಂತರ ದ್ರವ್ಯವನ್ನು ಖರ್ಚುಮಾಡಿ, ಅಸ್ಸೌವಾನ್ ಎಂಬ ಸ್ಥಳದಲ್ಲಿ ಬಹು ವಿಸ್ತಾರವಾದ ಮತ್ತು ಎತ್ತರವಾದ ಅಣೆಯನ್ನು ಕಟ್ಟಿ, ನೈಲ್ ನದಿಯ ನೀರನ್ನು ತರುಗಿಸಿ, ಲಕ್ಷಾಂತರ ಎಕರೆ ಜಮೀನು ತರೀ ಫಸಲಿಗೆ ಬರುವಂತೆ ಮೊನ್ನೆ ತಾನೇ ಕಾಮಗಾರಿ ಮಾಡಿ ಮುಗಿಸಿರುತ್ತಾರಷ್ಟೆ ಈಗ ಅದನ್ನೇ ಅಭಿವೃದ್ಧಿಪಡಿಸಬೇಕೆಂದು ಆ ಅಣೆಯನ್ನು ಇನ್ನೂ ಎತ್ತರಿಸಿ ಕಟ್ಟಿ ಇನ್ನಷ್ಟು ಹೆಚ್ಚು ನೀರನ್ನು ಭೂಮಿಗಳಿಗೆ ಹಾಯಿಸಬೇಕೆಂದೂ ತೀರ್ಮಾನ ಮಾಡಿರುತ್ತಾರೆ ಇದರಿಂದ ಇನ್ನೂ ಹತ್ತು ಲಕ್ಷ ಎಕರೆ ಜಮೀನು ಫಲಭರಿತವಾಗುವದು ಹತ್ತಿಯ ಫಸಲನ್ನು ಹೆಚ್ಚಿಸಬೇಕೆಂಬುದೇ ಇದರ ಮುಖ್ಯ ಉದ್ದೇಶವಾಗಿದೆ ಈ ಕಾಮಗಾರಿಗೆ ೧೪ ಕೋಟಿ ದ್ರವ್ಯ ಹಿಡಿಯುವದೆಂತಲೂ ಕಾಮಗಾರಿಯು ಇನ್ನೂ ಆರು ವರುಷಗಳಲ್ಲಿ ಪೂರೈಸುವದೆಂತಲೂ ತಿಳಿದು ಬಂದಿದೆ

* * *

ವಿಲಾಯತಿಯಲ್ಲಿ ಪಾರ್ಲಿಮೆಂಟಿಗೆ ಮೆಂಬರುಗಳನ್ನು ಚುನಾಯಿಸುವ ಹಕ್ಕನ್ನು ಸರ್ಕಾರದವರು ಸ್ತ್ರೀಯರಿಗೂ ಕೊಡಬೇಕೆಂದು ಅಲ್ಲಿನ ಸ್ತ್ರೀ ಸಂಘದವರು ಹೊಡೆದಾಡುತ್ತಿದ್ದಾರೆ ಆಗಾಗ್ಗೆ ಅವರು ಪಾರ್ಲಿಮೆಂಟ್ ಸಭೆಯ ಮುಂದೆ ಹೋಗಿ ದೊಂಧಳೆ ಮಾಡುವರು ಮಂತ್ರಿ ಶ್ರೇಷ್ಠರಾದ ಸರ್ ಹೆನ್ರಿ ಕ್ಯಾಂಬೆಲ್ ಬ್ಯಾನರ್ಮನ್‌ರವರು ಆ ಸಂಘದವರಿಗೆ ಸಮಾಧಾನ ಹೇಳಿ, ನಿಮಗೂ ಆ ಹಕ್ಕನ್ನು ಕ್ರಮೇಣ ಕೊಡುತ್ತೇವೆ ಎಂದು ಪ್ರತ್ಯುತ್ತರ ಕೊಟ್ಟದ್ದರೂ ಅವರು ತಾಳ್ಮೆಯನ್ನು ವಹಿಸದೆ, ಕೂಡಲೇ ತಮ್ಮ ಇಷ್ಟಾರ್ಥ ನೆರವೇರಬೇಕೆಂದ, ಗುಂಪು ಕಟ್ಟಿಕೊಂಡು ಹೋಗಿ, ಆ ಸಭಾಮನೆಗೆ ನುಗ್ಗಲು ಬಲಾತ್ಕಾರದಿಂದ ಪ್ರಯತ್ನ ಮಾಡಲಾರಂಭಿಸಿರುತ್ತಾರೆ ಕಾವಲುಗಾರರೂ ಪೋಲೀಸಿನವರೂ ತಡೆದರೆ ಅವರ ಮೇಲೆ ಕೈ ಮಾಡುವದಕ್ಕೂ ಹೊರಟಿರುವರು ಇವರುಗಳಲ್ಲಿ ಎರಡಾವರ್ತಿ ಅಂಥಾ ಗುಂಪಿನ ಮುಖಂಡರಾದ ಹೆಂಗಸರನ್ನು ಪೋಲೀಸಿನವರು ಹಿಡಿದು ಅವರ ಮೇಲೆ ಫಿರ್ಯಾದು ತಂದರು ಮ್ಯಾಜಿಸ್ಟ್ರೇಟರು ಅವರನ್ನು ಆಕ್ರಮ ಕೂಟ ನಡಿಸಿದರೆಂದು ತೀರ್ಮಾನಿಸಿ, ಸ್ವಲ್ಪ ಜುಲ್ಮಾನೆ ವಿಧಿಸಿದರು ಸ್ತ್ರೀಯರಾದರೋ ಜುಲ್ಮಾನೆ ಕೊಡದೆ ಸಜಾ ಅನುಭವಿಸುತ್ತೇವೆಂದು ಒಪ್ಪಿ ಬಂದೀಖಾನೆಗೆ ಹೋಗಿರುತ್ತಾರೆ ಇನ್ನೊಂದು ಕಡೆ ಸರ್ಕಾರದವರು ಒಂದು ಮನೆಗೆ ಹೋಗಿ ಯಜಮಾನಗಿತ್ತಿಯಿಂದ ಕಂದಾಯ ವಸೂಲುಮಾಡಬೇಕೆಂದು ಪ್ರಯತ್ನಪಟ್ಟರು ಆಗ ಆ ಯಜಮಾನಗಿತ್ತಿ ಬಂದು ಅವರನ್ನು ಕುರಿತು ಸ್ತ್ರೀಯರಿಗೆ ಚುನಾವಣೆ ಹಕ್ಕು ಕೊಡದೆ ಗಂಡಸರೇ ಸೇರಿಕೊಂಡು ವಿಧಿಸಿರುವಂಥಾ ಕಂದಾಯವನ್ನು ನಾನೆಂದಿಗೂ ಕೊಡುವದಿಲ್ಲ ಎಂದು ಹೇಳಿ ಕಂದಾಯ ಕೊಡದೆ ಕಳುಹಿಸಿರುತ್ತಾಳೆ

* * *

ಯೂರೋಪಿಗೆ ಸೇರಿದ ರೊಮ್ಯಾನಿಯಾ ರಾಜ್ಯದಲ್ಲಿ ರೈತಪ್ರಜೆಗಳು ದಂಗೆಯೆದ್ದು ಕಳೆದ ಎರಡು ವಾರಗಳಿಂದ ಅನೇಕ ಅಕೃತ್ಯಗಳನ್ನು ನಡಿಸಿ ಪ್ರಜಾ ನೆಮ್ಮದಿಗೆ ಭಂಗವನ್ನುಂಟುಮಾಡಿದ್ದಾರೆ ಗವರ್ನಮೆಂಟಿನವರು ಈ ದಂಗೆಯನ್ನಡಗಿಸುವುದಕ್ಕೆ ೩೦,೦೦೦ ಸರ್ಕಾರಿ ಸೈನ್ಯವನ್ನು ಸಹಾಯ ಕೊಟ್ಟು ಕಳುಹಿಸಿರುವರು ಈ ದಂಗೆಗೆ ಕಾರಣವೇನೆಂದರೆ— ಕೆಲವು ಸಾಹುಕಾರರು ಸೇರಿ, ೩೦ ಲಕ್ಷವೂ ೮೮ ಸಾವಿರ ಎಕರೆ ಜಮೀನನ್ನು ತಮ್ಮ ಸ್ವಾಧೀನ ಮಾಡಿಕೊಂಡು, ಅದನ್ನು ರೈತರಿಗೆ ವ್ಯವಸಾಯಕ್ಕೆ ಗೇಣಿಕೊಡುತ್ತಾ ಅವರಿಂದ ಹೆಚ್ಚು ದರದ ಕಂದಾಯವನ್ನು ವಸೂಲುಮಾಡುವುದಕ್ಕಾರಂಭಿಸಿದರು ಅದರ ಮೇಲೆ ರೈತರಿಗೆ ಕಷ್ಟನಷ್ಟಗಳು ಸಂಭವಿಸುತ್ತವೆಂಬ ಭೀತಿ ಹುಟ್ಟಿ ಸುಮಾರು ೬,೦೦೦ ಮಂದಿ ಆಯುಧಪಾಣಿಗಳಾಗಿ ಹೊರಟು ಸಾಹುಕಾರರನ್ನು ಹಿಂಸೆಪಡಿಸಬೇಕೆಂದು ಹೊರಟರು ಆಗ ಸರ್ಕಾರಿ ಸೈನಿಕರು ದಂಗೆಯನ್ನು ಅಡಗಿಸುವದರಲ್ಲಿ ಸುಮಾರು ೩೦-೪೦ ರೈತರನ್ನು ಕೊಂದು ಅನೇಕರನ್ನು ಗಾಯಪಡಿಸಿದರು. ಆದರೂ ರೈತರೂ ಅವರ ಸಹಾಯಕರಾದ ಇತರ ಪ್ರಜೆಗಳೂ ಬೀದಿ ಬೀದಿಗಳ ಮೇಲೆ ಹೋಗುತ್ತಾ ಸುಡುತ್ತಾ ಕೊಳ್ಳೆ ಹೊಡೆಯುತ್ತಾ ದಂಗೆ ಮಾಡುತ್ತಾ ಇದ್ದಾರೆ ಆತ್ತಲಾಗಿ ಸರ್ಕಾರಿ ಅಧಿಕಾರಿಗಳು ವೇಗನೆ ಸಭೆಗಳನ್ನು ನಡಸಿ ಪ್ರಜೋಪಕಾರಕವಾದ ಅನೇಕ ಹೊಸ ಏರ್ಪಾಡುಗಳನ್ನು ಕೂಡಲೇ ಮಾಡಿ ಜಾರಿಗೆ ತಂದರು ಇದರಿಂದ ರೈತರ ಕಷ್ಟನಷ್ಟಗಳು ಕಡಿಮೆಯಾಗುವವು ಹಿಂಸಕರವಾದ ಕೆಲವು ಕಂದಾಯಗಳು ವಜಾ ಆದವು ಒಟ್ಟೊಟ್ಟಿಗೆ ಜಮೀನನ್ನು ಜನರು ತೆಗೆದುಕೊಳ್ಳದಂತೆ ಅಡ್ಡಿಯಾಯಿತು ಈಚೆಗೆ ಬಂದಿರುವ ತಂತೀವರ್ತಮಾನವೇನೆಂದರೆ—ರೊಮ್ಯಾನಿಯಾ ಸೈನಿಕರು ರೈತ ಪ್ರಜೆಗಳಲ್ಲಿ ೬೦೦ ಮಂದಿಯು

ವರೆಗೆ ಕೊಂದು ಗಾಯಮಾಡಿದ್ದಲ್ಲದೆ ಎರಡು ಡಿಸ್ಟ್ರಿಕ್ಟುಗಳಲ್ಲಿ ಅವರ ಮನೆ ಮಠಗಳನ್ನು ಕೊಳ್ಳೆ ಹೊಡೆದರು ರೈತರಾದರೋ ಇದುವರೆಗೆ ಕೈಸೆರೆ ಹಿಡಿದುಕೊಂಡಿರುವ ಜಮೀನ್ದಾರರುಗಳನ್ನು ನಾನಾಪ್ರಕಾರವಾಗಿ ಹಿಂಸೆಪಡಿಸುತ್ತಿದ್ದಾರೆ. ದಂಗೆಸರು ಮಕ್ಕಳುಗಳನ್ನು ಕೂಡ ತುಂಬಾ ಕ್ರೂರವಾದ ಮರಣಕ್ಕೆ ಗುರಿಮಾಡುತ್ತಾ ಬಂದಿರುವರು ಪ್ಲಾಷಿಯಾ ಎಂಬಲ್ಲಿ ಸರ್ಕಾರಿ ಸೈನಿಕರು ರೈತರ ಮೇಲೆ ಗುಂಡಿನ ಮಳೆಗರೆದು ೭೦ ಮಂದಿಯನ್ನು ಕೊಂದು ಮಲಗಿಸಿದರು ; ೨೦೦ ಮಂದಿಗೆ ಗಾಯಗಳಾಗಿವೆ ಸರ್ಕಾರದವರು ಈ ರೈತರ ದಂಗೆಯನ್ನು ಅಡಗಿಸುವುದಕ್ಕೆ ಬಹು ಕಠಿಣವಾದ ಏರ್ಪಾಡುಗಳನ್ನು ಮಾಡಿರುತ್ತಾರೆ. ದಂಗೆಯೆದ್ದಿರುವ ಗ್ರಾಮಗಳಿಗೆ ಗುಂಡು ಹೊಡೆದು ತಹಬಂದಿಗೆ ತರಬೇಕೆಂದು ಹುಕುಂ ಆಗಿರುವುದು

ಮೈಸೂರು ಗೆಜೆಟ್ ಸಂಗ್ರಹ.

ದೊಡ್ಡಬಳ್ಳಾಪುರದ ಮುನ್ಸಿಫ್ ಕೋರ್ಟ್ ನಾಜರ್ ರಾಘವೇಂದ್ರರಾಯರನ್ನು ಕಳೆದ ನವಂಬರ್ ೧೬ ಲಾಗಾಯತು ಡಿಸ್ಮಿಸ್ ಮಾಡಿರೋಣದರಿಂದ ಅವರು ಮತ್ತೆ ಸರ್ಕಾರಿ ನೌಕರಿಗೆ ಬರಲು ಅರ್ಹರಲ್ಲವೆಂದು ತಿಳಿಯತಕ್ಕದ್ದು.

ಆಕ್ಟಿಂಗ್ ಎಕ್ಸ್ಟ್ರಾ ಅ॥ ಕಮೀಷನರ್ ಮೆ॥ ಬಿ ರಾಮಸ್ವಾಮಯ್ಯನವರಿಗೆ ಮಾರ್ಚಿ ೫ ರಿಂದ ಹತ್ತು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ಮೈಸೂರು ಗವರ್ನಮೆಂಟ್ ಓರಿಯಂಟಲ್ ಲೈಬ್ರರಿ ಕ್ಯೂರೇಟರ್ ಮೆ॥ ಎ ಮಹಾದೇವಶಾಸ್ತ್ರಿಗಳಿಗೆ ಮಾರ್ಚಿ ೧೧ ರಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಲೈಬ್ರೇರಿಯನ್ ಮೆ॥ ಆರ್. ಶಾಮಶಾಸ್ತ್ರಿಯವರು ಕ್ಯೂರೇಟರ್ ಆಫೀಸ್ ಚಾರ್ಜು ಕೆಲಸಗಳ ಛಾರ್ಜನ್ನು ವಹಿಸಿರತಕ್ಕದ್ದು.

ಪೊಲೀಸ್ ಫ್ರೊ॥ ಅ॥ ಸೂಪರಿಂಟೆಂಡೆಂಟ್ ಮೆ॥ ಮಿರ್ಜಾ ಮಹಮದ್ ಇಸ್ಮೈಲ್ ಯವರು ಮಾರ್ಚಿ ೧೨ ರಲ್ಲಿ ರಜದಿಂದ ವಾಪಸು ಬಂದು ಕೆಲಸದ ಮೇಲೆ ಹಾಜರಾದ್ದರಿಂದ ಅವರು ಉಪಯೋಗಿಸಿಕೊಳ್ಳದ ರಜವನ್ನು ರದ್ದುಮಾಡಿದೆ.

ಚಿಕ್ಕನಾಯಕನಹಳ್ಳಿ ತಾಲ್ಲೂಕ್ ಅಮಲ್ದಾರ್ ಮೆ॥ ಎ. ಗೋಪಾಲರಾಯರಿಗೆ ಕೊಟ್ಟಿರುವ ಒಂದು ತಿಂಗಳ ಪ್ರಿವಿಲೆಜ್ ರಜವನ್ನು ಇನ್ನೂ ಎರಡು ತಿಂಗಳಿಗೆ ಜಾಸ್ತಿ ಮಾಡಿದೆ.

ದೊಡ್ಡಬಳ್ಳಾಪುರದ ಸಬ್ ಡಿವಿಜನ್ ಛಾರ್ಜನ್ನು ವಹಿಸಿರುವ ಅ॥ ಕಮೀಷನರ್ ಮೆ॥ ಕೆ. ಆರ್. ಶ್ರೀನಿವಾಸೈಯಂಗಾರ್ರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಆಕ್ಟಿಂಗ್ ಎಕ್ಸ್ಟ್ರಾ ಅ॥ ಕಮೀಷನರ್ ಮೆ॥ ಎ. ಕೃಷ್ಣಸ್ವಾಮೈಯಂಗಾರ್ರು ದೊಡ್ಡಬಳ್ಳಾಪುರದ ಸಬ್ ಡಿವಿಜನ್ ಛಾರ್ಜಿನಲ್ಲಿರತಕ್ಕದ್ದು.

ಸೂಪರಿಂಟೆಂಡಿಂಗ್ ಇಂಜನಿಯರ್ ಮೆ॥ ಜೆ ಜೆ. ವೈಟ್ಲೀಯವರು ಶ್ರೀಮನ್ಮಹಾರಾಜರವರ ಪ್ರೈವೆಟ್ ಸೆಕ್ರೆಟರಿಯಾಗಿ ಬದಲಿ ನೋಡತಕ್ಕದ್ದು

ಮಾರಿಕಣಿವೆ ಡಿವಿಜನ್ ಎಕ್ಸಿಕ್ಯುಟಿವ್ ಇಂಜನಿಯರ್ ಮೆ॥ ಎಚ್. ಡಿ. ರೈಸ್‌ಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಎರಡು ತಿಂಗಳು ಐದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಅ॥ ಇಂಜನಿಯರ್ ಮೆ॥ ಕೆ. ಅನಂತಾಚಾರ್ಯರು ಆ ಡಿವಿಜನ್ ಛಾರ್ಜನ್ನು ತಮ್ಮ ಇತರ ಕೆಲಸಗಳೊಂದಿಗೆ ವಹಿಸಿರತಕ್ಕದ್ದು

ಅರಸಿಕೆರೆ ತಾಲ್ಲೂಕ್ ಅಮಲ್ದಾರ್ ಮೆ॥ ಕೆ. ಶ್ರೀನಿವಾಸರಾಯರಿಗೆ ಮಾರ್ಚಿ ೮ ರಿಂದ ಹತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು.

ಮೆ॥ ಎಸ್. ಎ. ಅಪ್ಪಣ್ಣಯ್ಯಂಗಾರ್ರು ಅರಸಿಕೆರೆ ತಾಲ್ಲೂಕ್ ಛಾರ್ಜನ್ನೂ ತಾಲ್ಲೂಕ್ ಶಿರಸ್ತೆದಾರ್ ಎಂ ಚೆನ್ನಪ್ಪರಾಯರು ಚನ್ನರಾಯಪಟ್ಟಣದ ತಾಲ್ಲೂಕ್ ಛಾರ್ಜನ್ನೂ ವಹಿಸಿದ್ದರು

ಮೈಸೂರು ಸರ್ಕಾರಿ ಹುಕುಮುಗಳು.

ಇಸ್ತಿಹಾರ್ನಾಮೆ

ಶ್ರೀಮನ್ಮಹಾರಾಜಾ ಗವರ್ನಮೆಂಟನವರು ೧೯೦೨ ನೇ ಜೂಲೈ ಗುರ್ರು ಲಾಗಾಯತು ಅಡಿಕೆಯ ಹಾಲತ್ ಎಂಬ ಕಂದಾಯವನ್ನು ವಜಾ ಮಾಡಿರುವುದಾಗಿ ಕಳೆದ ಮಾರ್ಚಿ ೧೩ರಲ್ಲಿ ಹುಕುಂ ದಯಪಾಲಿಸಿರುತ್ತಾರಷ್ಟೆ. ಈ ಸಂಸ್ಥಾನದಲ್ಲಿ ೧೯೦೨—೦೮ನೇ ಸಾಲ್ ಲಾಗಾಯತು ಬಾಗಾಯಿತು ಅಡಿಕೆ ತೋಟಗಳ ಕಂದಾಯದ ಮೇಲೆ ರೂಪಾಯಿ ಒಂದಕ್ಕೆ ಒಂದಾಣೆಯಂತೆ ಒಂದು ವರಿ (ಸೆಸ್) ಯನ್ನು ವಸೂಲ್ಮಾಡಬೇಕೆಂದು ಅಪ್ಪಣೆ ಕೊಡಿಸಿದಾರೆ ಈ ವರಿ (ಸೆಸ್) ಯಿಂದ ವಸೂಲಾಗುವ ಹಣವನ್ನೆಲ್ಲಾ ಪ್ರತ್ಯೇಕವಾಗಿ ತೆಗೆದಿಟ್ಟು ಒಂದು ಫಂಡು ಮಾಡುವರು. ಆ ಹಣದಿಂದ ಅಡಿಕೆ ಮರಗಳ ಕೊಳೆರೋಗ, ಅವುಗಳ ಬೆಳವಳಿಗೆಯೇ ಮೊದಲಾದ ವಿಚಾರಗಳನ್ನು ಪರಿಶೋಧನೆ ಮಾಡುವುದಕ್ಕೆ ವಿನಿಯೋಗಿಸಬೇಕೆಂದು ತೀರ್ಮಾನವಾಗಿರುತ್ತದೆ

ಗ್ರಾಮಗಳ ಆರೋಗ್ಯವಿಚಾರವು

ಗ್ರಾಮಾಂತರಗಳ ಆರೋಗ್ಯ ವಿಚಾರವನ್ನು ಕಾಪಾಡುವುದಕ್ಕೆ ಸರ್ಕಾರದವರು ೧೮೯೮ ರಲ್ಲಿ ಕೆಲವು ರೂಲುಸು ಮಾಡಿ ಜಾರಿಗೆ ತಂದಿದ್ದಾರಷ್ಟೆ. ಈ ಭಾಗದಲ್ಲಿ ತುಂಕೂರು ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರು ಬರೆದಿರುವ ರಿಪೋರ್ಟಿನಿಂದ ತಿಳಿದುಬರುವುದೇನೆಂದರೆ— ೪೩೯ ಗ್ರಾಮಗಳಲ್ಲಿ ಗೊಬ್ಬರಗೋಡನ್ನು ಊರ ಹೊರಗೆ ಸಾಗಿಸಿ ಇಡುವುದಕ್ಕೆ ಏರ್ಪಾಡು ಮಾಡಿದೆ. ೨೦ ಗ್ರಾಮಗಳಲ್ಲಿ ರೈತರು ಗೊಬ್ಬರವನ್ನು ತಮ್ಮ ಜಮೀನುಗಳಿಗೇ ಸಾಗಿಸಿ ಇಡುತ್ತಾರೆ. ಸರ್ಕಾರಿ ಜಮೀನು ಸಿಕ್ಕದೆ ಇರುವಂಥಾ ಕಡೆಗಳಲ್ಲೆಲ್ಲಾ ರೈತರ ಜಮೀನನ್ನೇ ಈ ಕೆಲಸಕ್ಕೆ ವಿನಿಯೋಗಿಸಲಾಗಿದೆ. ಇದರ ಮೇಲೆ ಗವರ್ನಮೆಂಟನವರು— ಈ ಏರ್ಪಾಡು ತೃಪ್ತಿಕರವಾಗಿದೆ ಎಂತಲೂ ಗ್ರಾಮಾಧಿಕಾರಿಗಳು ತುಂಬಾ ಎಚ್ಚರಿಕೆಯಾಗಿ ಉಸ್ತುವಾರಿ ನೋಡಿಕೊಳ್ಳುತ್ತಾ, ತಮ್ಮ ಗ್ರಾಮಗಳಲ್ಲಿ ಗೊಬ್ಬರಗೋಡನ್ನು ಊರ ಹೊರಗೆ ಗೊತ್ತಾದ ಗುಂಡಿಗಳಲ್ಲೂ ಸ್ಥಳಗಳಲ್ಲೂ ಹಾಕುವಂತೆ ಮಾಡುತ್ತಾ ಬರಬೇಕು ಎಂಬುದಾಗಿ ಹುಕುಂ ಕೊಟ್ಟಿದಾರೆ.

ವಾರಸ್ ಸರ್ಟಿಫಿಕೇಟ್ ನೋಟಿಸ್ ಛಾರ್ಜು.

ಕಳೆದ ಪ್ರಜಾಪ್ರತಿನಿಧಿ ಸಭೆಯಲ್ಲಿ ಮೆಂಬರುಗಳು ವಾರಸ್ ಸರ್ಟಿಫಿಕೇಟಿನ ಕೋರ್ಟ್ ಫೀಜನ್ನು, ಮೊಬಲಗು ೫೦೦ ರೂಪಾಯಿನೊಳಗಿದ್ದರೆ, ವಜಾಮಾಡಿಕೊಡಬೇಕೆಂತಲೂ, ಅದಕ್ಕಿಂತಲೂ ಮೇಲ್ಪಟ್ಟ ಮೊಬಲಗಿನ ಕೋರ್ಟ್ ಫೀಜನ್ನು ಕಡಿಮೆಮಾಡಿಕೊಡಬೇಕೆಂತಲೂ ಕೇಳಿಕೊಂಡರು ಮೆ॥ ಬಾಲಕೃಷ್ಣರಾಯರು ಸಾಲದ ಮೊಬಲಗು ೨೦೦ ರೂಪಾಯಿನೊಳಗಿದ್ದರೆ ಅಂಥಾ ಸರ್ಟಿಫಿಕೇಟಿನ ಕೋರ್ಟ್ ಫೀಜನ್ನು ವಜಾಮಾಡಿಕೊಡಬೇಕೆಂದು ಸೂಚಿಸಿದರು ಆಗ್ಗೆ ದಿವಾನರವರು ಈ ಭಾಗವನ್ನು ಯೋಚಿಸುವುದಾಗಿ ಅಪ್ಪಣೆಕೊಟ್ಟು, ಈಚೆಗೆ ಈ ವಿಷಯದಲ್ಲಿ ಛೀಫ್ ಕೋರ್ಟಿನ ಅಭಿಪ್ರಾಯವನ್ನು ಕೇಳಿದರು ಈಗ ಅವರ ಒಪ್ಪಿಗೆಯನ್ನು ಪಡೆದು ಹುಕುಂ ಕೊಟ್ಟಿರುವುದೇನೆಂದರೆ—ಬರಬೇಕಾದ ಸಾಲವು ೨೦೦ ರೂಪಾಯಿ ಅಥವಾ ಅದಕ್ಕಿಂತ ಕಡಿಮೆಯಾಗಿದ್ದು ವಾರಸ್ ಸರ್ಟಿಫಿಕೇಟ್ ಅಪೇಕ್ಷಿಸಿದಲ್ಲಿ ರೂಲಸಿನಂತೆ ಕೋರ್ಟ್ ಫೀಜೇನೋ ಕೊಡಬೇಕು ಆದರೆ ಅಂಥಾ ನೋಟೀಸನ್ನು ಗವರ್ನಮೆಂಟ್ ಗೆಜೆಟ್ಟಿನಲ್ಲಿ ಪಬ್ಲಿಷ್ ಮಾಡಬೇಕಾಗಿದೆಯಷ್ಟೆ. ಇವಕ್ಕೆ ಕಕ್ಷಿಗಾರರು ಕೊಡಬೇಕಾಗುವ ಪ್ರಕಟನೆಯ ಛಾರ್ಜನ್ನು ಅರ್ಧ ಪಾಲು ಕೊಡ ಬೇಕಾದ್ದಿಲ್ಲವೆಂದು ರಿಯಾಯತಿ ತೋರಿಸಲಾಗಿದೆ.

ಸಬ್ ರಜಿಸ್ಟ್ರರೂ ಪ್ರಮಾಣಪತ್ರಿಕೆಗಳೂ

ಗ್ರಾಮಾಂತರಗಳಲ್ಲಿರುವ ಪ್ರಜೆಗಳು ಕೋರ್ಟುಗಳಿಗೆ ಪ್ರಮಾಣ ಪತ್ರಿಕೆಗಳನ್ನು ಕಳುಹಿಸಿಕೊಡಬೇಕಾದರೆ ಮ್ಯಾಜಿಸ್ಟ್ರೇಟರ ರುಜು ಆಗಬೇಕೆಂದು ಕಾನೂನು ಇರುತ್ತದೆ. ಅಮಲ್ದಾರರು ತಾಲ್ಲೂಕ್ ಹೆಡ್ ಕ್ವಾರ್ಟರಿನಲ್ಲಿದ್ದರೆ ಅಂಥಾ ಪ್ರಮಾಣ ಪತ್ರಿಕೆಯನ್ನು ಅವರ ರೂಬರೂಬು ಬರೆದು ಅವರ ರುಜು ಮಾಡಿಸುವದು ಸುಲಭ. ಆದರೆ ಅಮಲ್ದಾರರು ಸರ್ಕೀಟು ಹೋಗಿರುವಾಗ್ಗೆ ಅಂಥಾ ಪ್ರಮಾಣ ಪತ್ರಿಕೆ ಕಳುಹಿಸುವ ವಿಷಯದಲ್ಲಿ ಪ್ರಜೆಗಳಿಗೆ ತುಂಬಾ ತೊಂದರೆಯಾಗುತ್ತಿತ್ತು. ಕಳೆದ ಪ್ರಜಾಪ್ರತಿನಿಧಿ ಸಭೆಯಲ್ಲಿ ಈ ವಿಷಯವನ್ನು ಮೆಂಬರುಗಳು ಚರ್ಚೆಗೆ ತಂದು, ಅಮಲ್ದಾರರು ಹೆಡ್ ಕ್ವಾರ್ಟರಿನಲ್ಲಿ ಇಲ್ಲದಿರುವಂಥಾ ಸಂದರ್ಭಗಳಲ್ಲಿ ಸಬ್ ರೆಜಿಸ್ಟ್ರಾರುಗಳಿಗೂ ತಾಲ್ಲೂಕು ಶಿರಸ್ತೇದಾರುಗಳಿಗೂ ಪ್ರಮಾಣ ಪತ್ರಿಕೆಗೆ ರುಜು ಹಾಕಿ ಕೊಡುವ ಅಧಿಕಾರವನ್ನು ವಹಿಸಿ ಕೊಟ್ಟರೆ ತುಂಬಾ ಸಹಾಯವಾಗುತ್ತೆಂದು ಕೇಳಿಕೊಂಡಿದ್ದರು ಈಗ ಗವರ್ನಮೆಂಟನವರು ಅದರಂತೆ ಪ್ರಜೆಗಳಿಗೆ ರಿಯಾಯತಿಯನ್ನು ತೋರಿಸಿ ಹುಕ್ಕುಂ ಕೊಟ್ಟದ್ದಾರೆ ಇದರಿಂದ ಸಬ್ ರಜಿಸ್ಟ್ರಾರುಗಳಿಗೂ ಸಬ್ ರಜಿಸ್ಟ್ರಾರ್ ಕೆಲಸ ನಡಸತಕ್ಕಂಥಾ ತಾಲ್ಲೂಕ್ ಶಿರಸ್ತೇದಾರುಗಳಿಗೂ ಪ್ರಮಾಣ ಪತ್ರಿಕೆಗಳಿಗೆ ರುಜು ಹಾಕಿ ಕೊಡುವ ಅಧಿಕಾರ ಕೊಟ್ಟದ್ದಾರೆ.

ದೇವಸ್ಥಾನದ ಪುದುವಟ್ಟಿನ ಹಣಗಳು

ಅನೇಕ ದೇವಸ್ಥಾನಗಳ ಪುದುವಟ್ಟಿನ ಹಣಗಳನ್ನು ಹಲವರು ಸಾಲ ತೆಗೆದುಕೊಂಡು ಅದರ ಬಡ್ಡಿಯನ್ನಾಗಲಿ ಅಸಲನ್ನಾಗಲಿ ಪಾವತಿ ಮಾಡಿಲ್ಲವೆಂಬ ಅಂಶವು ಗವರ್ನಮೆಂಟಿಗೆ ತಿಳಿದು ಬಂದಿದೆ ಪ್ರತಿಯೊಬ್ಬರಿಂದಲೂ ಅಸಲೆಷ್ಟು ಬರಬೇಕು, ಬಡ್ಡಿ ಎಷ್ಟು ಸಲ್ಲಬೇಕು, ಎಲ್ಲಿನ ವರೆಗೆ ಪಾವತಿ ಆಗಿದೆ, ಯಾವ ಪತ್ರಗಳಾದರೂ ಲಿಮಿಟೇಷನ್ ಮೀರಿದೆಯೇ ಎಂಬೀ ವಿಷಯಗಳನ್ನು ತಪಶೀಲುವಾರು ಡೆಪ್ಯುಟಿ ಕಮೀಷನರು ಅಮಲ್ದಾರರಿಂದ ಬರೆಸಿ ತರಿಸಿಕೊಳ್ಳಬೇಕು ಸಾಲಪಡೆದುಕೊಂಡವರು ಅಂಥಾ ಪತ್ರ, ಲಿಮಿಟೇಷನ್ ಮೀರಿದ್ದರೆ ಅದರ ಬಡ್ಡಿ ಸರಿಯಾಗಿ ಪಾವತಿಮಾಡದಿರುವ ಸಂದರ್ಭಗಳಲ್ಲಿ ಅಮಲ್ದಾರರು ಆಗಾಗೆ ನೋಟೀಸುಗಳನ್ನು ಕೊಟ್ಟು ಬಡ್ಡಿಯನ್ನೇ ಅಸಲನ್ನೇ ಬರಮಾಡಿಕೊಳ್ಳಬೇಕು. ಸಾಕಾದಷ್ಟು ಮಾಯಿದೆ ಕೊಟ್ಟು ಹಣ ಬಾರದಿದ್ದರೆ ಕೂಡಲೆ ಅಂಥಾವರ ಹೆಸರು ಮುಂತಾದವುಗಳನ್ನು ಗವರ್ನಮೆಂಟಿಗೆ ರಿಪೋರ್ಟು ಮಾಡಿದಲ್ಲಿ ಅವರ ಮೇಲೆ ಸಿವಿಲ್ ಕೋರ್ಟುಗಳಲ್ಲಿ ದಾವಾ ಮುಂತಾದ್ದು ಮಾಡಲಾಗುವುದು. ಪತ್ರಗಳಿಗೆ ಮಾಯಿದೆ ಮೀರಿಹೋಗಿದ್ದರೆ ಅಮಲ್ದಾರರು ಅಂಥಾ ಸಾಲಗಾರರನ್ನು ಕರೆಸಿಕೊಂಡು ಅವರ ಸಂಗಡ ಚರ್ಚೆ ಮುಂತಾದ್ದು ಮಾಡಿ ಹಣ ಬರಮಾಡಿಕೊಳ್ಳುವ ಪ್ರಯತ್ನ ನಡಿಸಬೇಕು. ಅಮಲ್ದಾರರುಗಳೇ ಕಾಲಹರಣ ಮಾಡಿದ್ದರಿಂದ ಪತ್ರದ ಮಾಯಿದೆ ಗತಿಸಿಹೋಗಿದ್ದ ಪಕ್ಷದಲ್ಲಿ ಅಂಥಾ ಹಣಕ್ಕೆ ಅವರನ್ನೇ ಜವಾಬ್ದಾರರನ್ನಾಗಿ ಮಾಡಲಾಗುವುದೆಂದು ಎಚ್ಚರಿಸತಕ್ಕದ್ದು ಈ ಎಲ್ಲಾ ಭಾಗಗಳಲ್ಲೂ ಡೆಪ್ಯುಟಿ ಕಮೀಷನರು ಯಾವ ಏರ್ಪಾಡುಗಳನ್ನು ನಡಸುವರೋ ಅದರ ಫಲಿತಾಂಶಗಳನ್ನು ಗವರ್ನಮೆಂಟಿಗೆ ೧೯೦೩ ನೆ ಮೇ ತಿಂಗಳ ಆಖೈರಿನೊಳಗೆ ರಿಪೋರ್ಟು ಮಾಡಬೇಕಾಗಿದೆ. ಇದಲ್ಲದೆ ಗವರ್ನಮೆಂಟ್ ಸೇವಿಂಗ್ಸ್ ಬ್ಯಾಂಕಿನಲ್ಲಿ ಇಟ್ಟಿರುವ ಅಥವಾ ಸರ್ಕಾರಿ ಪತ್ರಗಳ ರೂಪವಾಗಿ ಇಟ್ಟಿರುವ ಪುದುವಟ್ಟಿನ ಹಣಗಳಿಗೆ ಆಗಾಗ್ಗೆ ಬರುವ ಬಡ್ಡಿ ಹಣವನ್ನು ತೆಗೆದುಕೊಳ್ಳದೇಲೂ ಆಯಾ ಸೇವಾರ್ಥ ಮೊದಲಾದ ಧರ್ಮ ಕಾರ್ಯಗಳನ್ನು ನಡಸದೇಲೂ ಇರುತ್ತಾರೆಂದು ಗವರ್ನಮೆಂಟಿಗೆ ತಿಳಿದು ಬಂದಿದೆ ಈ ವಿಷಯದಲ್ಲೂ ಡೆಪ್ಯುಟಿ ಕಮೀಷನರು ಅಮಲ್ದಾರರುಗಳಿಗೆ ಸರಿಯಾದ ಹುಕುಮನ್ನು ಕೊಡಬೇಕಾಗಿರುವುದು.

ತಾಲ್ಲೋಕು ವರ್ತಮಾನಗಳು

ಸಕಲೇಶಪುರ.—ಈ ಪ್ರಾಂತ್ಯ ಮೋಡವಾಡುತ್ತಾ ಮುಂಗಾರು ಗುಡುಗೂ ಮಳೆಯೂ ಈ ತಾಲ್ಲೋಕಿನ ಬೇರೆ ಬೇರೆ ಕಡೆಗಳಲ್ಲಿ ಸುಮಾರು ಮೂರು ದಿನಗಳಿಂದಲೂ ಬೀಳುತ್ತಾ ೨೯ನೆ ತಾ. ಈ ಊರಿನಲ್ಲಿ ಒಂದು ಅಂಗುಲ ಮಳೆಯಾಗಿ ಕಾಫಿ ತೋಟದ ಪ್ಲಾಂಟರುಗಳಿಗೆಲ್ಲಾ ಸಂತೋಷವನ್ನುಂಟುಮಾಡಿದೆ. ಇನ್ನೂ ಮಳೆಯು ಈಗಲೇ ಆದರೆ ಕಾಫಿ ಗಿಡಗಳಿಗೆ ತಂಪಾಗಿ ಮೊಗ್ಗುಗಳೆಲ್ಲಾ ಅರಳಿ ಒಳ್ಳೆ ಫಲವಾಗುವದೆಂದು ಹೇಳುತ್ತಾರೆ ಕಳೆದ ಫಸಲು ಬಹು ಕಮ್ಮಿಯಾಗಿ ಅನೇಕ ತೋಟಗಳಲ್ಲಿ ಕಾಗಪಾಲಿಗೂ ಕಮ್ಮಿಯಾಗಿವೆ ಎಂದೂ ಈ ವರುಷ ಚನ್ನಾಗಿ ಮಳೆಯಾದರೆ ಮುಂದೆ ಒಳ್ಳೆ ಫಸಲಾಗುವದೆಂದೂ ಹೇಳುತ್ತಾರೆ.—ಇದೇ ೨೮ನೆ ತಾ ಇಲ್ಲಿನ ಯೂರೋಪಿಯನ್ ಕ್ಲಬಿನಲ್ಲಿ ಪ್ಲಾಂಟರುಗಳ ಮೀಟಿಂಗ್ ನಡೆಯಿತು. ಅದಕ್ಕೆ ಸುಮಾರು ಹನ್ನೆರಡು ಜನ ಪ್ಲಾಂಟರುಗಳು ಬಂದು ವ್ಯವಸಾಯ ಸಂಬಂಧವಾದ ಬೇರೆ ಬೇರೆ ವಿಷಯಗಳನ್ನು ಕುರಿತು ಮಾತಾಡಿದರೆಂದು ಕೇಳುತ್ತೇನೆ.. ಫನ ರಡ್‌ಮಂಡ್ ದೊರೆಯವರು ತಾ ೨೧ಕ್ಕೆ ಚಿಕ್ಕಮಗಳೂರನ್ನು ಬಿಟ್ಟು ಈ ಪ್ರಾಂತ್ಯ ಸರ್ಕೀಟುಮಾಡುತ್ತಾ ಅಲ್ಲಲ್ಲಿ ಬೇಪಾಸಾಧ ನಡಿಸುತ್ತಾ ಏಪ್ರಿಲ್ ೧ಕ್ಕೆ ಇಲ್ಲಿಂದ ಶನಿವಾರ ಸಂತೆ ಕಡೆ ಹೊರಡುರೆಂದೂ ಆ ಪ್ರಾಂತ್ಯವನ್ನೆಲ್ಲಾ ತೀರಿಸಿಕೊಂಡು ಏಪ್ರಿಲ್ ೨೦ಕ್ಕೆ ಚಿಕ್ಕಮಗಳೂರನ್ನು ಸೇರುವರೆಂದೂ ವರ್ತಮಾನವಿದೆ.

ಚಿತ್ರದುರ್ಗ.—ಕಳೆದ ಗುರುವಾರ ರಾತ್ರಿ ಇಲ್ಲಿ ಒಂದು ಹದ ಮಳೆಯಾಗಿ ಬಿಸಲಿನ ತಾಪವು ಕಡಿಮೆಯಾಗಿದೆ ಎಂದು ಹೇಳಬಹುದು ಆದರೂ ರೈತರು ಈಗ ಮಳೆ ಹತ್ತಿ ಬೆಳೆಗೆ ಅಡ್ಡಿ ಎಂತಲೂ ರಾ[illegible] ನವಣೆ ಮುಂತಾದ ಹುಲ್ಲು ತುಳಿಸಿಕೊಳ್ಳುವದಕ್ಕೂ ಅಡ್ಡಿ ಎಂತಲೂ ಅಂದುಕೊಳ್ಳುತ್ತಾರೆ. ಬಂದ ಮಳೆ ಇನ್ನೂ ಎರಡು ಮೂರು ಹದ ಚನ್ನಾಗಿ ಸುರಿದಿದ್ದರೆ ಬವನ್ನಿನ ಕಕ್ಕಲ ಪರಿಹಾರವಾಗಿ ರೋಗಗಳು ನಿವಾರಣೆಯಾಗುವದಕ್ಕಾದರೂ ಅನುಕೂಲವಿತ್ತು. ಸಂತೆಯಲ್ಲಿ ದವಸ ಧಾನ್ಯಗಳು ಅಗ್ಗವಾದಾವೆಂಬ ನಿರೀಕ್ಷೆಯು ಈ ಸಾಲಿನಲ್ಲಿ ಎಲ್ಲಾ ಕಡೆಗಳಲ್ಲೂ ಆದ ಒಳ್ಳೇ ಬೆಳೆಯಿಂದ ಅಂಕುರಿಸಿತ್ತು ಆದರೂ ಧಾರಣೆವಾಸಿಗಳು ಸ್ವಲ್ಪ ಹೆಚ್ಚುಕಡಿಮೆ ಏಕರೀತಿಯಾಗಿಯೇ ಇವೆ ಇದರಲ್ಲಿ ತರಹಾವಾರಿ ಸೇರು ಬಟ್ಟುಗಳ ಅವಾಂತ್ರ ಬೇರೆ ಸಾಲದ್ದಕ್ಕೆ ಎಲೆ ಅಡುವವರೂ ಅದರಲ್ಲಿ ದುಡ್ಡು ಕಳಕೊಂಡು ಚಿಂತಿಸುವರೂ ಹೆಚ್ಚುತ್ತಾ ಇದಾರೆ. ಸರಕಾರದ ಭಯ ಇವರಿಗೆ ಏನೂ ಇಲ್ಲ ಬಾರ್ ಇನ್‌ಫೆಂಟ್ರಿ ಶಿಪಾಯಿಗಳ ಕಷ್ಟ ಎಷ್ಟು ಹೇಳಿದರೂ ತೀರದು ಅವರ ಸಂಬಳದಲ್ಲಿ ಡ್ರೆಸ್, ಮನೆ ಬಾಡಿಗೆ ಮುಂತಾದ್ದು ಹೋಗಲಾಗಿ ೬ ಅಥವಾ ೭ ರೂಪಾಯಿ ಮಾತ್ರ ಕೈಗೆ ಬರುತ್ತೆ ಕೆಲವು ಸಾರಿ ೫ ರೂಪಾಯಿ ಸಿಕ್ಕುತ್ತದೆ ಇದರಲ್ಲಿ ೮—೧೦ ಮಂದಿ ೩೦ ದಿನಗಳು ಗುಜರಾನ್ ಮಾಡುವದು ಬಹಳ ಕಷ್ಟವಾಗಿದೆ. ಕೆಲವರು ಒಂದೇ ಹೊತ್ತು ಊಟ ಮಾಡುತ್ತಾರೆ. ಸರ್ಕಾರದವರು ಇವರ ಮೇಲೆ ಕನಿಕರವಿಟ್ಟು ಡ್ರೆಸ್ ಮುಂತಾದ್ದನ್ನು ಬೇರೆ ಇಲಾಖೆಯವರಿಗೆ ಕೊಡುವಂತೆ ಇವರಿಗೂ ಮಾಫಿಯಾಗಿ ಕೊಡುವದರಿಂದಲೋ ಸಂಬಳ ಹೆಚ್ಚು ಮಾಡುವದರಿಂದಲೋ ಸ್ವಲ್ಪ ರಿಯಾಯತಿ ತೋರಿಸಿದರೆ ಬಡಬಗ್ಗರಿಗೆ ಬಹಳ ಉಪಕಾರವಾದೀತೆಂದು ರಾತ್ರಿಹಗಲೂ ಮರುಗುತ್ತಾರೆ ಇದರ ವಿಷಯ ಸ್ವಲ್ಪನಿಗಾ ಸರ್ಕಾರದವರು ಕೊಟ್ಟಾರೆಂದು ನಿರೀಕ್ಷಿಸುತ್ತೇವೆ

ಚಿಕ್ಕಮಗಳೂರು.—ಈ ಊರಿಗೆ ೨೦ ಮೈಲಿ ಫಾಸಲೆಯಲ್ಲಿರುವ ಕಣತಿ ಎಂಬ ಗ್ರಾಮದ ದಾಖಲೆ ಹ್ಯಾರಂಬಿ ಗ್ರಾಮದಲ್ಲಿ ಸುಮಾರು ೮—೧೦ ದಿವಸಗಳ ಹಿಂದೆ ಅಣ್ಣಪ್ಪ ಗೌಡನೆಂಬುವನು ಸಿದ್ಧ, ಬೀರ ಕೋಗಿಲ ಎನ್ನುವವರನ್ನೂ ಇನ್ನೂ ಕೆಲವು ಮಂದಿ ಹೊಲೆಯರುಗಳನ್ನೂ ಕರೆದುಕೊಂಡು ಹೋಗಿರುವಾಗ್ಗೆ ಅಗಾಧವಾದ ಒಂದು ಗಿಡದಲ್ಲಿ ಅಡಗಿಕೊಂಡಿದ್ದ ಕಾಡು ಬೆಕ್ಕನ್ನು ಓಡಿಸಲು ಮೇಲ್ಕಂಡವರ ಪೈಕಿ ಬೀರನನ್ನು ಮರದ ಮೇಲೆ ಹತ್ತಿಸಿದ ಕೂಡಲೆ ಮೇಲಿದ್ದ ಮಾರ್ಜಾಲವು ತನ್ನ ಶತ್ರುವನ್ನು ಕಂಡು ಭಯದಿಂದ ಮರದಿಂದಿಳಿದು ಓಡಲು ಪ್ರಯತ್ನಿಸುತ್ತಿದ್ದದ್ದನ್ನು ಕಂಡು, ಬೇಟೆಯಲ್ಲಿ ನಿಸ್ಸೀಮನಾದ ಅಣ್ಣಪ್ಪ ಗೌಡನು ಬಂದೂಖನ್ನು ಗುರಿ ಇಟ್ಟು ಹಾರಿಸಿದ ಕೂಡಲೇ ಮೇಲಿದ್ದ ಕಾಡು ಮೃಗವು ಬೀಳುವದಕ್ಕೆ ಬದಲಾಗಿ ನರ ಮೃಗವೇ ಬಿದ್ದದ್ದನ್ನು ಕಂಡ ಬೀರನ ಅಣ್ಣನಾದ ಕೋಗಿಲ ನಾನಾ ವ್ಯಸನಕರವಾದ ಧ್ವನಿಯು ಗೌಡನ ಎದೆಯನ್ನು ಶಸ್ತ್ರದಂತೆ ಭೇದಿಸಿತು ಆ ಕೂಡಲೆ ಗೌಡನು ಹಿಂದೆ ನಿಂತಿದ್ದ ಜನಗಳನ್ನು ಸಮಾಧಾನ ಮಾಡಿ ಮೃತಪಟ್ಟವನ ಶವವನ್ನು ಒಂದು ಕೊರಕಲಿನಲ್ಲಿ ಸುಟ್ಟು, ಪರಾರಿಯಾಗಿರುವದಾಗಿ ಕೇಳುತ್ತೇನೆ —ಇದೇ ತಾಲ್ಲೂಕು ಹಾಳ್‌ಗುಮಾರಿ ಎಂಬ ಗ್ರಾಮದಲ್ಲಿ ಯಂ. ಸಿದ್ದಪ್ಪ ಶೆಟ್ಟರೆಂಬವರ ತೋಟದಲ್ಲಿ ಒಂದು ಹೊಸ ಬಂಗ್ಲೆ ಕಟ್ಟಿಸುತ್ತಿದ್ದಾರೆ ಆ ಬಂಗ್ಲೆಗೆ ತೀರು ಹಾಸಿ ರಿಪೀಸು ಹೊಡೆಯುತ್ತಾ ಸಾವೇರನೆಂಬ ಬಡಗಿಯು ಕೂತಿರುವಾಗ್ಗೆ ದಿಣ್ಣೆಯ ಮೇಲ್ಗಡೆ ನಿಂತಿದ್ದ ಒಂದು ದೊಡ್ಡ ಮರವನ್ನು ಮತ್ತೊಬ್ಬನು ಕಡಿದು ಮರದ ಕೆಳಗೆ ಇರುವ ಬಂಗ್ಲೆಗೆ ಪೆಟ್ಟಾಗದಂತೆ ಹಿಂದಕ್ಕೆ ಕೆಡಹಲು ಪ್ರಯತ್ನಿಸುತ್ತಿದ್ದನು ಆಗ ಆ ಮರವು ಬಿರುಗಾಳಿಯ ಪೆಟ್ಟಿನಿಂದ ಮುರಿದು ಬಿದ್ದ ಶಬ್ದವು ಮನೆಯ ಮೇಲೆ ಕುಳಿತು ಕೆಲಸ ಮಾಡುತ್ತಿರುವ ಸಾವೇರನ ಕ್ಷೇಮಲಾಭವನ್ನು ವಿಚಾರಿಸಲು ಅತ್ಯಾತುರದಿಂದ ಕೂಗುವನೋಪಾದಿಯಲ್ಲಿ ಘೋರ್ಗರೆಯುತ್ತಾ ಉಸಿರಾಡಲು ಸಹಾ ಅಸ್ಪದ ಕೊಡದೆ ಬಾಚಿ ತಬ್ಬಿಕೊಂಡು ಪರಲೋಕದ ಮಾರ್ಗವನ್ನು ತೋರಿಸಿತು

ಚನ್ನಪಟ್ಟಣ.—ಕಳೆದ ಮಾರ್ಚಿ ತಾ॥ ೩೦ ನೆ ಬುಧವಾರ ಇಲ್ಲಿ ನೂತನವಾಗಿ ಕ್ರಿಕೆಟ್ ಮತ್ತು ಫುಟ್‌ಬಾಲ್ ಎಂಬ ಚೆಂಡಾಟದ ಒಂದು ಸಂಘವು ಏರ್ಪಾಡಾಯಿತು. ಆ ದಿವಸ ಮಧ್ಯಾಹ್ನ ೪ ಘಂಟೆ ಹೊತ್ತಿಗೆ ಟ್ರಾವೆಲರ್ಸ್ ಬಂಗ್ಲೆ ಎದುರಿಗಿರುವ ಮೈದಾನದಲ್ಲಿ ಸಭೆ ಸೇರಿತು. ಮೆ॥ ಗಳಾದ ಅಮಲ್ದಾರ್ ವಿ ಪಾರ್ಥಸಾರಥಿ ಅಯ್ಯಂಗಾರ್ಯರೂ, ಫ್ರೊ॥ ಇಂ॥ ಸಿ ಆರ್ ನಟರಾಜ ಅಯ್ಯರವರೂ, ಹೈಸ್ಕೂಲ್ ಹೆ॥ ಮಾ॥ ಕೆ. ನಾರಾಯಣ ಅಯ್ಯಂಗಾರ್, ಬಿ ಎ ಯವರೂ, ಅ॥ ಮಾ॥ ಸಿ ನಂಜುಂಡಯ್ಯ, ಬಿ ಎ. ಯವರೂ, ಡಾಕ್ಟರ್ ಎಂ ಮುತ್ತುಸ್ವಾಮಿಯವರೂ, ಸ್ಟೇಷನ್ ಮಾಸ್ಟರ್ ನಾಗೇಶರಾಯರೂ, ಕನ್ನಡ ಸ್ಕೂಲ್ ಹೆ॥ ಮಾ॥ ಕೆ. ವೆಂಕಟದಾಸಪ್ಪನವರೂ, ಮ್ಯುನಿಸಿಪಲ್ ಮೆಂಬರು ಸಾಹುಕಾರ್ ರಾಮಸಂಜೀವಶೆಟ್ರೂ ಅಲ್ಲದೆ ಅನೇಕ ದೊಡ್ಡ ಮನುಷ್ಯರೂ, ವರ್ತಕರೂ, ವಿದ್ಯಾರ್ಥಿಗಳೂ, ಕಛೇರಿ ನೌಕರರೂ ಸಭೆಯನ್ನಲಂಕರಿಸಿದ್ದರು ಮೆ॥ ನಟರಾಜಯ್ಯರು ಅಗ್ರಾಸನವನ್ನು ವಹಿಸಿ ಚೆಂಡಾಟದ ವಿಷಯವಾಗಿ ಉಪನ್ಯಾಸ ಹೇಳಿದರು. ಸಭಾ ಸಾಮಾಜಿಕರು ಮೆ॥ ನಟರಾಜಯ್ಯರನ್ನು ಈ ಸಂಘಕ್ಕೆ ಪ್ರೆಸಿಡೆಂಟಾಗಿಯೂ, ಡಾಕ್ಟರ್ ಮುತ್ತುಸ್ವಾಮಿಯವರನ್ನು ಸೆಕ್ರೆಟರಿಯಾಗಿಯೂ, ಮೆ॥ ಕೃಷ್ಣರಾಯರನ್ನು ಕ್ಯಾಪ್ಟನ್ ಆಗಿಯೂ, ಮೆ॥ ಗೋವಿಂದರಾಜುಲುವರನ್ನು ಟ್ರೆಜರರ್ ಆಗಿಯೂ [illegible] ಸಂತೋಷದಿಂದ ಸಭಾ ಬರಖಾಸ್ತು ಮಾಡಿ, ಈ ಸಂಘಕ್ಕೆ ನೇಟಿವ್ ಇಲೆವನ್ ಎಂಬ ಹೆಸರಿಟ್ಟು ಆಟಕ್ಕೆ ಆರಂಭಿಸಿದರು. ಮೆ॥ ಜಿ ಕೃಷ್ಣರಾಯರ ಏರ್ಪಾ

ವಾದ್ಯಘೋಷದೊಡನೆ ಮೆ॥ ನಟರಾಜ ಅಯ್ಯರೂ, ಮೆ॥ ನಾರಾ ಅಯ್ಯಂಗಾರರೂ ಆಟವಾಡುವದಕ್ಕೆ ಉಪಕ್ರಮ ಮಾಡಿದರು. ಸೆಕ್ರಿಟರಿ ಮುಂತಾದವರು ಸಭೆಯವರನ್ನೂ ಅಲ್ಲಿ ನೆರೆದಿದ್ದ ಜನ್ನು ವಾದ್ಯಘೋಷದೊಡನೆ ಸಮೀಪದಲ್ಲಿರುವ ಬಂಗ್ಲೆಗೆ ಕರೆದುಕೊಂಡು ಹೋಗಿ ಅವರನ್ನು ಗಂಧ, ಪುಷ್ಪ, ಫಲ, ತಾಂಬೂಲ, ಸಾದರಗಳಿಂದ ಬಹುಮಾನಗೊಳಿಸಿದರು. ಆ ದಿನವು ಅತ್ಯಂತ ಸಂ ತೋಷಕರವಾದ ದಿನವಾಗಿತ್ತು. ಮಾರನೇ ದಿನದ ಲಾಗಾಯಿತು ಸಂಘ ಸಭಿಕರುಗಳು ಪ್ರತಿ ದಿನವೂ ಆಟವಾಡಲು ಉಪಕ್ರಮಿಸಿರುತ್ತಾರೆ. ಈ ಸಂಘವು ಚಿರಕಾಲ ಅಭಿವೃದ್ಧಿಯನ್ನೈದಲೆಂದು ಹಾರೈಸುತ್ತೇನೆ.

ಹೊಸದುರ್ಗ.—ಅಮಲ್ದಾರರು ಜಿಲ್ಲೆಗೆ ಬೆಳಗೂರು ಪ್ರಾಂತ್ಯ ಪರ್ಯಟನೆ ಮಾಡಿದರು. ರೈತರೆಲ್ಲಾ ತೆಂಗಿನ ಮರಗಳಿಗೆ ಗೊಬ್ಬರ ಮಣ್ಣು ಏರಿ ಹಾಕುವ ಈ ಪ್ರಾಂತ್ಯ ಕಳುವು ಹೆಚ್ಚಿರುವುದರಿಂದ ಪೊ॥ ಇ॥ ಸುಬ್ಬರಾಯರು ಸ್ಪೆಷಲ್ ಡ್ಯೂಟಿಗೆ ಹೊರಟಿರುತ್ತಾರೆ. ತಾ. ೧೬ ನೆಯ ಸ್ಟೇಷನ್ ಇನ್ಸ್‌ಪೆಕ್ಟರಗೋಸ್ಕರ ಪೊ॥ ಇ॥ ಬಾಲ್ ಸಾಹೇಬರು ಬೆಳಗೂರಿಗೆ ಬಂದರು. ಭಾನಪ್ಪನವರ ನರಸಪ್ಪನವರ ಮನೆ ಯಲ್ಲಿ ನಡೆದ ಕಳುವಿನ ವಿಷಯವಾಗಿ ತನಿಖೆಗೋಸ್ಕರ ಪೋಲೀಸ್ ಶ್ಯಾಮಸ್ವಾಮಯ್ಯನವರೂ ಅಮಲ್ದಾರರೂ ದಯಮಾಡಿಸಿ ಠಾಣ್ಯ ದಲ್ಲಿದ್ದವನ್ನು ಪರಾಂಬರಿಸಿ ಪಟೇಲರನ್ನು ಕರಿಸಿ ರಾತ್ರಿವೇಳೆ ಗಸ್ತು ಜಾಗ್ರತೆಯಾಗಿ ಇಡುವಂತೆ ತಿಳಿಸಿದರು. ಸೇರ್ಸ ಇನ್ಸ್‌ಪೆಕ್ಟ್ರು ಮಾಡುವ ಕಾಲದಲ್ಲಿ ರೈಟರು ರಾಮಣ್ಣನವರನ್ನು ಬಾಲ್ ಸಾಹೇಬರು ಬರೆದಿರುತ್ತಾರೆಂದು ಸಾಕ್ಷಿಯಿಟ್ಟು ಸ್ಟ್ಯಾಂಪ್ ನಿಶಿ ಅರ್ಜಿ ಕೊಟ್ಟ ಈ ಕೇಸು ಇನ್ನೂ ನಡೆಯುವದರಲ್ಲೇ ಇರುತ್ತದೆ. ನಂತರ ದೊಡ್ಡಕೆರೆ ರವರೂ ಅಮಲ್ದಾರರೂ ಗ್ರಾಮದ ಬೀದಿಗಳೆಲ್ಲಾ ಚೆನ್ನಾಗಿ ಗುಡಿಸಿ ಶುದ್ಧಮಾಡಿ ಕಸ ಕಡ್ಡಿ ಗಲೀಜು ಇರಕೂಡದೆಂದು ತಾಕೀತು ಹೇಳಿದರು. ಈ ಗ್ರಾಮದಲ್ಲಿ ಈಗ ರಾತ್ರಿವೇಳೆ ಚಪಟೀ ಹೊಡೆದುಕೊಂಡು ಬೀದಿಗಳಲ್ಲಿ ಬೀಟ್ ತಿರುಗುತ್ತಿರುವರು. ಇದೇ ರೀತಿ ನಿಗಾ ಇಟ್ಟರೆ ಒಳ್ಳೇದು. ಇಲ್ಲಿಗೆ ತಾ. ೨೯ ರಲ್ಲಿ ಸ್ಕೂಲ್ ಇನ್ಸ್‌ಪೆಕ್ಟ ರಸ್ಸಿ ಡೆಪ್ಯುಟಿ ಇನ್ಸ್‌ಪೆಕ್ಟರು ಬಂದು ಇದ್ದರು. ಸ್ಕೂಲ್ ಕಟ್ಟ ಡದ ವಿಷಯವಾಗಿ ಗ್ರಾಮಸ್ಥರನ್ನು ಕರಿಸಿ ೩ ತಿಂಗಳಲ್ಲಿ ರಿಪೇರಿ ಮಾ ಡದೆಹೋದಪಕ್ಷದಲ್ಲಿ ಸ್ಕೂಲ್ ವಜಾಮಾಡಿಬಿಡುತ್ತೇವೆ ಎಂದು ಹೇಳಿ ಸ್ಕೂಲಿಗೆ ತೆಗೆದುಕೊಂಡರು. ಈ ಗ್ರಾಮಸ್ಥರಿಗೆ ವಿದ್ಯಾವಿಷಯ ದಲ್ಲಿ ಲಕ್ಷ್ಯವೂ ನಿಗಾ ಇರುವದಿಲ್ಲ. ಕೆಲವು ದೊಡ್ಡ ಮನುಷ್ಯರು ಸ್ಕೂಲ್ ಬೇಕಿಲ್ಲ; ಈ ಕೊತ್ತೇ ತೆಗಿಯಲಿ ಎಂದು ಮಾ ತಾಡುತಿದ್ದರು. ಈ ದೊಡ್ಡ ಮನುಷ್ಯರು ತಮ್ಮ ಗ್ರಾಮಕ್ಕೆ ದೊಡ್ಡ ಸ್ಕೂಲು ಬಂದರೆ ವೇಳೆ ಅವರವರ ಮೇರೆ ಪ್ಯಾಪ್ಯ ಹೇಳಿ ಅರ್ಜಿಕೊಡು ವುದಕ್ಕೆ ಸಿದ್ಧರಾಗಿರುತ್ತಾರೆಯೇ ಹೊರತು ಗ್ರಾಮವನ್ನು ಯಾವ ರೀ ತಿಯಲ್ಲಿ ಅಭಿವೃದ್ಧಿಗೆ ತರುವದು ಎಂಬ ಅಭಿಮಾನವೇ ಇಲ್ಲ. ಬೆಳಗೂ ರು ಪೈಲು ಫಿಸ್ಕಲ್ಲೆಯಲ್ಲಿರುವ ತಂಡಗ, ಹೊಸಕೆರೆ ಗ್ರಾಮಗಳಲ್ಲಿ ಕಳವಿಗೆ ಪ್ಯಾಪ್ಯಗಳು ಹೆಚ್ಚುತ್ತಲಿವೆ. ಪ್ರತಿ ನಿತ್ಯವೂ ಕೋರ್ಟ ನಲ್ಲಿ ಹಾಜರಾಗಿ ತಿರುಗುವದರಲ್ಲಿಯೇ ಇರುತ್ತಾರೆ.

ಹಿರೇನಗರೂರು.—ಮಾರ್ಚಿ ೨೫ ರಲ್ಲಿ ಇಲ್ಲಿ ದೊಡ್ಡ ಜಾತ್ರೆ ನಡೆಯಿತು. ಅದಕ್ಕೆ ಮುಂಚೆ ಅನೇಕ ಜನರು ಜಾತ್ರೆಗೆ ಬಂದರು. ಜನ ಬಂದವರನ್ನೆಲ್ಲಾ ಪೋಲೀಸಿನವರು ಸರ್ಕಾರದ ಅಪ್ಪಣೆಯ ಪ್ರ ಕಾರ ಹಿಂದಕ್ಕೆ ಕಳುಹಿಸಿ ಬಿಟ್ಟರು. ಇಲ್ಲಿ ಕಾಲರಾ ಖಾಯಿಲೆ ಇರುವ ದರಿಂದ ಹೊರಗಿನಿಂದ ಜನರು ಬಂದು ಈ ರೋಗಕ್ಕೆ ಬಲಿಯಾಗಿ ತ ಮ್ಮ ಊರಿನವರಿಗೂ ಹಿಂಸೆಯನ್ನು ಉಂಟುಮಾಡುತ್ತಿದ್ದರು. ಅದು ತಪ್ಪಿ ಹೋಯಿತು. ಜಾತ್ರೆಯ ದಿನ ದೊಡ್ಡ ತೇರನ್ನು ಎಳೆಯುವುದ ಕ್ಕೆ ಸ್ಥಳಿಕರೂ ಸುತ್ತು ಮುತ್ತಿನ ಹಳ್ಳಿಯ ಜನರೂ ಬಂದು ಬಹು ಕಷ್ಟದಿಂದ ಎಳೆದುಕೊಂಡು ಹೋಗಿ ಅದರ ಸ್ಥಾನಕ್ಕೆ ಸೇರಿಸಿದ ರು. ನಂತರ ಚಿಕ್ಕ ನಾಲ್ಕು ಚಿಕ್ಕ ತೇರುಗಳನ್ನೂ ಸುಲಭವಾಗಿ ಎ ಳೆದರು. ಇಂಥಾ ಸಮಯದಲ್ಲಿ ಪೋಲೀಸಿನವರು ಯಾರಿಗೂ ಆಪಾಯ ವಾಗದ ಹಾಗೆ ಎಚ್ಚರಿಕೆಯಿಂದ ನೋಡಿಕೊಂಡದ್ದು ದೊಡ್ಡಸ್ತಾ ಕಾಶ್ಯ ಕಾಣರು ಯಾರನ್ನೂ ಸೇರಿಸಲಿಲ್ಲ. ಜೂಜುಗಾರರು ಅಂ ಗಡಿಯಲ್ಲಿ ಆಡುತ್ತಿದ್ದರೇ ಹೊರತು ಬಹಿರಂಗವಾಗಿ ಜಾತ್ರೆಯ ಲ್ಲಿ ಇಲ್ಲ.—ಆದರೆ ಕಾಲರಾ ಉಪದ್ರ ಮಾತ್ರ ವಿಪರೀತವಾಗಿದೆ. ಜಾತ್ರೆ ನಡೆದ ದಿನ ೧೧—೧೨ ಜನರು ತೀರಿಹೋದರು. ವೆಂಕಟರಾ ಮಯ್ಯನ ಮನೆಯಲ್ಲಿ ಐದು ಜನರು ಇದ್ದರು; ನಾಲ್ಕು ಜನರು ಒಂದೇ ದಿನದಲ್ಲಿ ತೀರಿಹೋದರು. ಅವರು ಒಬ್ಬರುಮಾತ್ರ ಉಳಿದರು. ಇದು ಬಹಳ ಶೋಚನೀಯವಾದ ವಿಷಯ. ನಮ್ಮ ಅಮಲ್ದಾರರು ಬಹು ದಯಾ ಳುಗಳು. ಮೃತಪಟ್ಟವರ ಶವಗಳನ್ನು ದಹನಮಾಡಲು ಬೇಕಾದ ಸಹಾ ಯವನ್ನು ಒದಗಿಸಿಕೊಟ್ಟರು. ಡಾಕ್ಟರೂ ಅಮಲ್ದಾರರೂ ಕಾಲ ರಾ ಬಂದಿರುವ ಮನೆಗಳಿಗೆ ಹೋಗಿ ವಿಚಾರಿಸಿಕೊಂಡು ಬರುತ್ತಾ ರೋಗಿಗಳಿಗೆ ಬೇಕಾದ ಔಷಧ ಕೊಡುತ್ತಾ ಧೈರ್ಯ ಹೇಳುತ್ತಾ ಬ ರುತ್ತಾರೆ. ಆದರೆ ಕಾಲರಾ ಇನ್ನೂ ನಿಂತಿಲ್ಲ. ಹತ್ತು ಹದಿನೈದು ರೋ ಗಿಗಳು ಇನ್ನೂ ನರಳುತ್ತಿದ್ದಾರೆ. ದೇವರು ಆದಷ್ಟುಬೇಗ ಈ ರೋಗ ವನ್ನು ಓಡಿಸಿ ಕ್ಷೇಮ ಕೊಡಬೇಕೆಂದು ನಿರೀಕ್ಷಿಸುತ್ತಿರುವರು.—ಈ ಹಳ್ಳಿಗೆ ಈ ಪ್ರಾಂತ್ಯ ಕೊಂಚ ಮಳೆಯಾಯಿತು. ಕೆಲವು ಸಂದು ಗೊಂದಿಗಳಲ್ಲಿದ್ದ ಕಸ ಗೊಬ್ಬರ ಕೊಳೆತು ದುರ್ವಾಸನೆ ಬರುತ್ತಿರುವುದು ಸುಸಿಕಾಯಿತು. ಕೆಲವು ಜನರು ನೋಡುವ ಹಾಗೆ ನೊಡ್ಡ ರ ಸ್ತೆಯನ್ನು ಮಾತ್ರ ಶುಚಿಮಾಡಿಸುತ್ತಾರೆ. ಸಂದು ಗೊಂದುಗಳಲ್ಲಿರು ವ ಕಸವನ್ನು ತೆಗೆಸುವದಿಲ್ಲ. ಮುನಿಸಿಪಾಲಿಟಿಯವರು ಸಹಾ ಪ್ರಜೆಗಳ ಕ್ಷೇಮವನ್ನು ತೋ ರಿಸುವ ವಾಸಿಸುವ ಬೀದಿಗಳನ್ನು ಗಲೀಜು ಆಗದಂತೆ ನೋಡಿಕೊ ಳ್ಳಲು ಅಧಿಕಾರಿಗಳ ಧರ್ಮವಾಗಿದೆ. ಕಳೆದ ಎರಡು ತಿಂಗಳಲ್ಲಿ ಗಿರಿ ಜಾ ಕ್ಯಾಂಪ್ ನಡೆಯಿತು. ಪೆಟ್ಟು ಕಡಿಮೆ. ಆ ಲಾಗಾಯಿತು ಕಾಲರಾ ಉಪದ್ರವು ಈ ಊರಿನಲ್ಲಿ ಇರುವದನ್ನು ನೋಡಿ ಅತ್ಯಗತ್ಯ ಪಡಬೇಕಾಗಿ ದೆ. ಈ ಊರಿನ ಆರೋಗ್ಯ ವಿಚಾರ ಬಹುಮಟ್ಟಿಗೆ ಕೆಟ್ಟದೆಯೆಂದು ಹೇಳಬೇಕಾಗಿದೆ. ಮೈಸೂರಲ್ಲಿ ಕಾಲರಾ ಜಾಸ್ತಿಯಾದಾಗ ಪ್ರತಿ ಒಂದು ಸಾರಿ ಸಹ ನೀರನ್ನು ಚೆನ್ನಾಗಿ ಕಾಯಿಸಿ ಕುಡಿಯಬೇಕೆಂದು ಒಂ

ದೊಂದು ನೋಟೀಸನ್ನು ಮನೆ ಮನೆಗೂ ಹಂಚಿ ಎಚ್ಚರಿಕೆ ಕೊಟ್ಟರು. ಅದರಂತೆ ಇಲ್ಲಿಯೂ ಮಾಡಿದರೆ ಒಳ್ಳೇದು. ಮತ್ತು ಜನರು ತಮ್ಮ ಮನೆಯ ಸುತ್ತು ಮುತ್ತು ಇರುವ ಕಸ ಕಡ್ಡಿ ತೆಗೆದುಹಾಕಿ ಶುದ್ಧವಾ ಗಿ ಇಟ್ಟುಕೊಳ್ಳುವದಕ್ಕೆ ಪ್ರಯತ್ನಿಸಿದರೆ ಈ ಊರು ಆರೋಗ್ಯವಾಗಿ ರುವದು ಅಂಟುರೋಗಕ್ಕೆ ಆಸ್ಪದವಿರುವುದಿಲ್ಲ.

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರೆತಕ್ಕ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋ ಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂ ಡದು; ಇಂಥವುಗಳಿಗೆ ನಾವು ನಿಗಾ ಕೊಡಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಜೋಕೆಗಾರರು ಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿ.

ಕರೆಸ್‌ಪಾಂಡೆನ್ಸ್.

ಇಂಗ್ಲೆಂಡ್ ದೇಶದಲ್ಲಿ ವೀರಶೈವವಿದ್ಯಾರ್ಥಿಯು.

ಅಯ್ಯಾ,

ಮೈಸೂರು ಸ್ಟಾರ್ ಪತ್ರಿಕೆಯಲ್ಲಿ ಬೆಂಗಳೂರು ನಿವಾಸಿಗಳಾದ ಮೆ॥ ಜಿ. ರುದ್ರಪ್ಪನವರು ಈ ದೇಶದಿಂದ ಇಂಗ್ಲೆಂಡ್ ದೇಶಕ್ಕೆ ಹೋಗಿ ಮೂರು ತಿಂಗಳಲ್ಲಿ ಅಲ್ಲಿನ ವಿದ್ಯಾಶಾಲೆಯಲ್ಲಿ ರೋರ್ಮ ಲಾ ಎಂಬ ಪರೀಕ್ಷೆಯಲ್ಲಿ ತೇರ್ಗಡೆಹೊಂದಿದವರೆಂಬದಾಗಿ ತಿಳಿಯಲಾಗುತ್ತೆ. ಈ ವಿಷಯವೇನೋ ಸಕಲರಿಗೂ ಸಂತೋಷವೇ. ಆದರೆ ಇವರು ಇಂ ಗ್ಲೆಂಡ್ ದೇಶದಲ್ಲಿ ಆ ದೇಶದ ಪದ್ಧತಿ ಅನುಸರಿಸದೆ ದುರಾಚಾರಗಳನ್ನು ಮಾಡದೆ ಸ್ವಮತಕ್ಕೆ ಅನುಸಾರವಾಗಿ ಇರುತ್ತಾರೆಂಬದಾಗಿ ತಿಳಿಸಿರು ತ್ತಾರೆ. ಇಂಗ್ಲೆಂಡ್ ದೇಶದಲ್ಲಿ ಸಕಲ ಮತಸ್ಥರಿಗೂ ಅವರವರ ಜಾತಿ ಮತಾನುಸಾರವಾಗಿ ನಡೆದುಕೊಳ್ಳಲು ಏನೂ ತೊಂದರೆ ಇಲ್ಲವೇ? ಅಲ್ಲಿ ಸಕಲ ಮತಸ್ಥರೂ ವಾಸವಾಗಿರುತ್ತಾರೆಯೇ? ಈ ದೇಶದಿಂದ ಇಂಗ್ಲೆಂ ಡ್ ದೇಶಕ್ಕೆ ಹೋಗಿ ಅಲ್ಲಿನ ಪದ್ಧತಿ ಅನುಸರಿಸದೆ ಹೋದಲ್ಲಿ ಅಲ್ಲಿ ಅಲ್ಲಿನ ಜನಗಳಿಗೆ ಆರೋಗ್ಯವಿಲ್ಲವೆಂಬದಾಗಿ ಹೇಳುತ್ತಾರೆ. ಇಲ್ಲಿಂದ ಸಮುದ್ರದ ಮೇಲೆ ಹಡಗಿನಲ್ಲಿ ಹೋಗುವಾಗ್ಗೆ ಸರ್ವರೂ ಒಂದೇ ಆಗಿರಬೇಕೆಂಬದಾಗಿಯೂ ಇವರಲ್ಲಿ ಆ ಪದ್ಧತಿ ಇಲ್ಲವೇಹೋದಲ್ಲಿ ಹಡ ಗಿನಲ್ಲಿ ನಮ್ಮಗಳಿಗೆ ತೊಂದರೆ ಎಂಬದಾಗಿಯೂ ತಿಳಿಯಲಾಗುತ್ತೆ. ಈ ದೇಶದಿಂದ ಇಂಗ್ಲೆಂಡ್ ದೇಶಕ್ಕೆ ಹೋಗಿ ಇಲ್ಲಿಗೆ ಬಂದಲ್ಲಿ ಇಲ್ಲಿನ ಮತಸ್ಥರು ದೂರವಾಡುತ್ತಾರೆಂಬದಾಗಿಯೂ ಇಲ್ಲಿನ ಜನಗಳು ತಿಳಿ ಸುತ್ತಾರೆ. ಆದರೆ ಮೆ॥ ಜಿ. ರುದ್ರಪ್ಪನವರು ಅಲ್ಲಿಂದ ಆರೋಗ್ಯವಾಗಿ ಇಲ್ಲಿಗೆ ಬಂದಾಗ್ಗೆ ಇಲ್ಲಿನ ವೀರಶೈವಮತಸ್ಥರು ದೂರೀಕರಿಸಬಾರದೆಂ ಬದಾಗಿ ಸರ್ವರನ್ನೂ ಬೇಡುತ್ತೇನೆ. ಈ ವಿಷಯದಲ್ಲಿ ಆ ದೇಶದ ಪದ್ಧ ತಿಯನ್ನು ತಾವು ಪತ್ರಿಕೆಯ ಮೂಲಕ ತಿಳಿಸಬೇಕಾಗಿ ಬೇಡುತ್ತೇನೆ.

ಚಂದಾದಾರ್.

[ವೀರಶೈವ ಮತದ ರುದ್ರಪ್ಪನವರು ವಿಲಾಯಿತಿಗೆ ಹೋಗಿ ಪರೀಕ್ಷೆ ಗಳಲ್ಲಿ ತೇರ್ಗಡೆ ಹೊಂದಿ ಅಭಿವೃದ್ಧಿಗೆ ಬರುತ್ತಿರಾರೆಂದು ಓದಿ ಸಂ ತೋಷಪಡುವೆವು. ವಿಲಾಯಿತಿಗೆ ಹೋಗತಕ್ಕವರು ಹಡಗಿನಲ್ಲಿ ಪ್ರ ಯಾಣ ಮಾಡುವಾಗಲೂ ಲಂಡನ್ ಮೊದಲಾದ ಪಟ್ಟಣಗಳಲ್ಲಿ ರುವಾ ಗಲೂ ತಮ್ಮ ಜಾತಿ ಮತಗಳ ಆಚಾರ ವ್ಯವಹಾರಗಳಿಗೆ ಲೋಪ ಬಾರ ದಂತೆ ಅಡಿಗೆ ಊಟಗಳನ್ನು ಪ್ರತ್ಯೇಕವಾಗಿ ಮಾಡಿಕೊಳ್ಳುತ್ತಾ ಇದ್ದು ಬರುವುದು ಸಾಧ್ಯವೆಂದು ನಮಗೆ ತೋರುತ್ತದೆ. ಆದರೆ ಉಂಡು ತಿನ್ನುವು ದರಲ್ಲೇ ಯಾರೂ ಸತ್ಯಸಂಧರೆನಿಸಿಕೊಳ್ಳುವುದಿಲ್ಲ. ಸತ್ಯಸಂಧತೆಗೆ ಮನುಷ್ಯನ ಗುಣ ನಡತೆ ಶೀಲಸ್ವಭಾವಗಳೇ ಮುಖ್ಯವಲ್ಲದೆ ಆಹಾರಾದಿ ಗಳು ಪ್ರಾಧಾನ್ಯವೆನಿಸಿಕೊಳ್ಳಲಾರವು. ಆದುದರಿಂದ ರುದ್ರಪ್ಪನವರು ವಾಪಸು ಬಂದಾಗ್ಗೆ ವೀರಶೈವರು ಅವರನ್ನು ಬಹಿಷ್ಕಾರ ಮುಂತಾದ ಕಷ್ಟ ಗಳಿಗೆ ಗುರಿಮಾಡಲಾರರೆಂದು ಹಾರೈಸುತ್ತೇವೆ.—ಎಡಿ.]

ವೈಶ್ಯಮಂಡಲಿಯ ಪುರೋಭಿವೃದ್ಧಿಯು.

ಅಯ್ಯಾ,

ಕೊಂಚ ದಿವಸಗಳ ಕೆಳಗೆ ಬೆಂಗಳೂರು ದಂಡಿನಲ್ಲಿರತಕ್ಕ ವೈಶ್ಯ ಮಹಾಸಭೆಯವರು ಬಡಮಕ್ಕಳ ವಿದ್ಯಾಭ್ಯಾಸಕ್ಕೋಸ್ಕರ ಚಂದಾ ವಗ್ಗೈರೆ ವಸೂಲಿಯಿಂದ ಕುಂಬಾ ಸಹಾಯ ಮಾಡುತ್ತಾರೆಂಬದಾಗಿ ತಮ್ಮ ಪತ್ರಿಕೆಯಲ್ಲಿ ಬರಸೋಣವಾಗಿತ್ತು. ಒಂದು ಗ್ರಾಮದವರು ಮಾಡಿದ ಮಾತ್ರವೇ ಪ್ರಪಂಚದಲ್ಲಿ ಎಲ್ಲರಿಗೂ ಅನುಕೂಲವಾಗುವದಿಲ್ಲ. ಆದ್ದರಿಂದ ಆ ಮಹನೀಯರು ವೈಶ್ಯಮತ ಪ್ರಕಾಶಿಕೆ ಎಂಬ ಹೆಸರಿನಿಂ ದ ಪಕ್ಷಪತ್ರಿಕೆಯಾಗಲಿ, ಮಾಸಪತ್ರಿಕೆಯಾಗಲಿ ಅಲ್ಪ ಚಂದಾದಿಂದ ಜನಗಳಿಗೆ ಅನುಕೂಲವಾಗುವಂತೆ ಒಂದು ಪತ್ರಿಕೆಯನ್ನು ಪ್ರಚುರಪ ಡಿಸಿದರೆ ಮೈಸೂರು ದೇಶದಲ್ಲಿರತಕ್ಕ ವೈಶ್ಯರು ಮತ್ತು ಮದರಾಸು, ಬೊಂಬಾಯಿ ದೇಶಗಳಲ್ಲಿರತಕ್ಕ ವೈಶ್ಯರು ಸಹ ತರಿಸಿಕೊಳ್ಳಲು ಯಾವ ಅಭ್ಯಂತರವೂ ಇಲ್ಲ. ಆ ರೀತಿ ಪತ್ರಿಕೆ ಮಾಡೋಣವಿಂದ ಆ ಪತ್ರಿಕೆ ಯಲ್ಲಿ ಪ್ರತಿ ಮಾಸವೂ ಜನಗಳಿಗೆ ಪ್ರೋತ್ಸಾಹ ಉಂಟಾಗುವಂತೆಯೂ ವಿದ್ಯಾಭ್ಯಾಸಕ್ಕೆ ಏರ್ಪಾಡು ಅಲ್ಲಲ್ಲಿ ನಡಿಸುವಂತೆಯೂ ಬರೆಯುತ್ತಾ ಬಂದರೆ ಐಶ್ವರ್ಯವಂತರಾದ ಪುಣ್ಯಾತ್ಮರು ಅದನ್ನು ನೋಡಿ ತಮ್ಮ ತಮ್ಮ ತಾಲ್ಲೋಕುಗಳಲ್ಲಿ ಒಂದೊಂದು ವಿದ್ಯಾಶಾಲೆಯನ್ನು ಏರ್ಪಡಿ ಸಿದರೆ ವೈಶ್ಯಮಕ್ಕಳಿಗೆ ಸಂಸ್ಕೃತ ವಿದ್ಯೆ ಬರಲು ಏನೂ ಅಭ್ಯಂತರವಿಲ್ಲ. ವೈಶ್ಯರೆಲ್ಲಾ ವಿದ್ಯಾವಂತರಾದರೆ ನಮ್ಮ ಮತವನ್ನು ಕೇವಲ ತಿರಸ್ಕಾರ ವಾಗಿ ಹಾಸ್ಯಮಾಡತಕ್ಕಂಥಾ ಪರಮತಸ್ಥರ ಕುಚೋದ್ಯವೆಲ್ಲಾ ನಿಂತೀತು. ಈಗ ವೀರಶೈವ ಮತದವರು ಮೈಸೂರು ಸ್ಟಾರ್ ಪತ್ರಿಕೆ ಇಟ್ಟುಕೊಂ ಡು ಇರುತ್ತಾರೆ. ಮತ್ತು ಒಕ್ಕಲಿಗರ ಮಹಾ ಸಭೆಯವರು ಒಂದು

ಪತ್ರಿಕೆಯನ್ನು ಹಜೂರುಮಾಡಿಸಿರುತ್ತಾರೆ. ಅವರವರ ಮತಗಳಲ್ಲಿ ಒಂದೊಂದು ಪೇಪರು ಇರುವದರಿಂದ ಆಯಾ ಮತಗಳು ಪ್ರಕಾಶಕ್ಕೆ ಬರಲು ಅನುಕೂಲವಾಗುತ್ತೆ. ನಮ್ಮ ವೈಶ್ಯಮತದಲ್ಲಿ ಗುಂಟೂರಲ್ಲಿ ಆರ್ಯವೈಶ್ಯ ಮಹಾ ಸಭಾ ಎಂದು ಒಂದು ಸಭೆಮಾಡಿಕೊಂಡು ಆ ಸಭೆಯಲ್ಲಿ ವೈಶ್ಯ ಎಂಬ ಹೆಸರಿನಿಂದ ಪಕ್ಷಪತ್ರಿಕೆಯನ್ನು ಜನವರಿ ಗುರ್ರೆ ಲಾಗಾಯಿತು ಪ್ರಚುರಪಡಿಸುತ್ತಾ ಇದಾರೆ. ಆ ಪತ್ರಿಕೆಗೆ ವರುಷ ಒಂದಕ್ಕೆ ಅಂಚೆಮಾಲು ಹಾಸಲು ಸೇರಿ ಒಂದು ರೂಪಾಯಿ ಎರಡಾಣೆ ಚಂದಾ ನೇಮಿಸಿರುತ್ತಾರೆ. ಆ ಪತ್ರಿಕೆಯನ್ನು ನಮ್ಮ ಮೈಸೂರು ದೇಶದಲ್ಲಿ ಎಲ್ಲರೂ ತರಿಸಿಕೊಳ್ಳಬಹುದು. ಅದು ಶುದ್ಧ ಆಂಧ್ರಭಾಷೆ ಯಾದ್ದರಿಂದ ನಮ್ಮ ಮೈಸೂರು ದೇಶದ ಅರ್ಧಭಾಗದ ಜನಕ್ಕೆ ಓದಲು ಸ್ವಷ್ಟವಾಗುವದಿಲ್ಲ. ಆದಾಗ್ಯೂ ತರಿಸಿಕೊಳ್ಳತಕ್ಕವರು ಆ ಪತ್ರಿಕೆಗೆ ಚಂದಾ ಕಳುಹಿಸತಕ್ಕವರು "ಗುಂಟೂರು ಆರ್ಯವೈಶ್ಯ ಮಹಾಸಭಾ ಪ್ಯಾಟ್ರೇಜ್‌ಮೆಂಟಗೂ ಸೆಕ್ರಿಟರಿ ಜನಗವಲ್ಲಿ ರಾಮಸ್ವಾಮಿ ಗುಪ್ತ ಇವ ರ ಹೆಸರಿಗೆ ಚಂದಾ ಮೊಬಲಗು ಕಳಿಸಿದರೆ ಪೇಪರುಗಳು ಬರಲು ಯಾವ ಅಡ್ಡಿಯೂ ಇಲ್ಲ.

ಅರಸೀಕೆರೆ ಕೋಲ್ಲಾ ಚೆನ್ನಿಶ್ರೇಯ್ಯಶೆಟ್ಟಿ.

ಉಪನ್ಯಾಸದ ಆಕ್ಷೇಪಣೆ.

ಅಯ್ಯಾ,

ಫೆಬ್ರವರಿ ತಾ. ೨೮ ನೆಯ "ವೃತ್ತಾಂತ ಪತ್ರಿಕೆ"ಯಲ್ಲಿ ಮೆ॥ ಭು ಜಂಗಾಚಾರ್ಯರೆಂಬುವವರು ತಾ. ೧೧ ರಲ್ಲಿ ಉಪನ್ಯಾಸ ಮಾಡಿದ ವಿಷ ಯದ ಅಭಿಪ್ರಾಯವನ್ನು ಓದಿದೆನು. ಇವರ ಉಪನ್ಯಾಸದಲ್ಲಿ ತಾವು ಆರ್ಯರೆಂತಲೂ, ತಮ್ಮ ಆರ್ಯ ಧರ್ಮವು ತಮ್ಮನ್ನು ಬಿಟ್ಟು ಬಿಟ್ಟ ದೆ ಯೆಂತಲೂ ಹೇಳುತ್ತಾರೆ. ಕಾರಣವೇನಂದರೆ ಮೊಟ್ಟನ್ನುಗಳೇ ಮುಂತಾದ ದೇಶ ಸಂರಕ್ಷಕ ಸಾಧನಾನುಗಳನ್ನು ಧರಿಸುತ್ತಿರುವದರಿಂದ ಆರ್ಯ ಧರ್ಮವು ತಮ್ಮ ಆಕೆಯನ್ನೇ ತೊರೆಯಿತಂತೆ. ಇದೆಂಥಾ ಆಶ್ಚರ್ಯ. ಇವರ ಧರ್ಮವೋ ದೇಹದ ಹೊರಗೆ ಮಾತ್ರ ವ್ಯಾಪಿಸಿಕೊ ಳ್ಳುತ್ತೋ ಸರ್ವತ್ರ ವ್ಯಾಪಕ ಶಕ್ತಿಯುಳ್ಳದ್ದೋ ತಿಳಿಯಲಿಲ್ಲ. ಧರ್ಮ ಕ್ಕೆ ನಾಶವಿಲ್ಲವೆಂಬುವದನ್ನು ಹಿರಿಯರು ಹೇಳುತ್ತಾರೆ. ಆರ್ಯ ಧರ್ಮ ವನ್ನು ನಾವು ಬಿಟ್ಟರೋ ಧರ್ಮವೇ ನಮ್ಮನ್ನು ಬಿಟ್ಟಿತೋ ವಾಚಕ ರೇ ಊಹಿಸಬೇಕು. ನಮ್ಮಲ್ಲಿ ಧರ್ಮ ಹೆಚ್ಚಾದರೆ ಎಂಥಾ ಅಂತಃ ಶತ್ರು ಬಹಿಃ ಶತ್ರುಗಳು ಕೂಡ ನಾಶವಾಗುತ್ತವೆ. ಇಂಥಾ ಧರ್ಮವು ಕಾಲಿನಲ್ಲಿ ಹಾಕತಕ್ಕ ಪಾದರಕ್ಷೆಗೂ ಸೊಂಟಕ್ಕೆ ಕಟ್ಟತಕ್ಕ ನಡುಕ ಟ್ಟಿಗೂ ಮುಂತಾದಕ್ಕೆ ಹೆದರಿಕೊಂಡು ಹೋಯಿತಂತೆ. ಇದರಿಂದ ಧರ್ಮವನ್ನು ನಾವೆ ಆಚರಿಸಲಾರದೆ ನಮ್ಮನ್ನು ಧರ್ಮ ಬಿಟ್ಟು ಹೋ ಯಿತೆಂಬುದು ಸಕಾರಣವಾಗಿಲ್ಲ.

ಹಿಂದೂ ರಾಜ್ಯಕ್ಕೆ ಜನಗಳಲ್ಲಿ ಐಕಮತ್ಯವಿಲ್ಲದ್ದರಿಂದ ಚ್ಯುತಿ ಯುಂಟಾಯಿತೆಂತ ಹೇಳಿರುತ್ತಾರೆ. ನಮ್ಮ ರಾಜ್ಯಕ್ಕೆ ಯಾವ ಚ್ಯುತಿ ಯೂ ಬಂದಿಲ್ಲ. ಹಿಂದಿನ ಕಾಲಕ್ಕಿಂತಲೂ ಈಗ ಸುಭಾವಾಗಿರುತ್ತೇ ವೆಂತ ಖಂಡಿತವಾಗಿ ಹೇಳಬಹುದು. ಆದರೆ ಜನಗಳಲ್ಲಿ ಐಕಮತ್ಯ ವೆಂಬುದು ಕೆಲವು ಕಾರಣಗಳಿಂದ ಕಡಿಮೆಯಾಗಿತ್ತು. ಈಗ ಶುಕ್ಲ ಪಕ್ಷದ ಚಂದ್ರನ ಸಮಾಟಯಾಗಿರುತ್ತೆ.

ದೇವಸ್ಥಾನದಲ್ಲಿ ನಡೆಯುವ ಪುರಾಣಾದಿಗಳನ್ನು ಬಿಟ್ಟು ರೀಡಿಂಗ್ ರೂಂ, ಸೊಸೈಟಿ ಮೊದಲಾದವುಗಳನ್ನು ಮಾಡಿಕೊಳ್ಳುವದು ಯೋಗ್ಯ ವಲ್ಲವೆಂತ ಉಪನ್ಯಾಸಿಸುತ್ತಾರೆ. ಮೆ॥ ಭುಜಂಗಾಚಾರ್ಯರೆಂಬು ವರಿಗೆ ಪುರಾಣ ಹೇಳುವದರಲ್ಲಿ ಬಹಳ ಅಭಿಲಾಷೆಯು. ಬಹಳವಾಗಿ ಪುರಾಣಾದಿಗಳನ್ನು ಹೇಳುವದಕ್ಕೆ ಗ್ರಾಮಾಂತರ ಸಂಚಾರದಲ್ಲಿರು ತ್ತಾರೆ. ಆದರೆ ಶಿಕಾರಿಪುರದ ಮಹನೀಯರು ತಮ್ಮತಮ್ಮ ಸದಾಚಾರ ಗಳನ್ನು ಬಿಟ್ಟು ರೀಡಿಂಗ್ ರೂಂ ಸ್ಥಾಪಿಸಬೇಕೆಂತ ಏರ್ಪಾಡು ಮಾ ಡಿಕೊಂಡಿಲ್ಲ. ಯಾರಾದರೂ ಪುರಾಣಾದಿಗಳನ್ನು ಹೇಳಕೂಡದೆಂದಾ ಗಲೀ ಹೇಳುವದನ್ನು ಕೇಳಕೂಡದೆಂದಾಗಲೀ ಈ ಸೊಸೈಟಿಗಳ ತಾತ್ಪ ರ್ಯವಲ್ಲ. ಇವರ ಉಪನ್ಯಾಸದಿಂದಲೇ ಐಕಮತ್ಯವಿರಬೇಕಾಗಿ ಹೇ ಳುತ್ತದೆ. ಐಕಮತ್ಯವೆಂದರೆ ಎಲ್ಲರೂ ಒಂದೇ ಮನಸ್ಸುಳ್ಳವರಾಗಿರ ಬೇಕೆಂಬುದೇ ಅಭಿಪ್ರಾಯ. ಒಂದು ಕಾರ್ಯದಲ್ಲಿ ಎಲ್ಲರೂ ಏಕ ಮನಸ್ಸಾದಾಗಬೇಕಾದರೆ ಒಂದು ಕಡೆ ಸೇರಬೇಕು. ಅದರಿಂದ ಅವರವ ರ ಮನಸ್ಸಿನ ನಿಜವಾದ ಅಭಿಪ್ರಾಯ ತಿಳಿದು ಸಾಧಕ ಬಾಧಕಗಳು ಹೊರಪಡುವವಲ್ಲದೆ ವ್ಯಾಪಾರಾದಿ ವಿಷಯಗಳಿಗೂ ಪಾಕ್ಯಾರ್ಥ ನಿಜ ಸ್ವಭಾವವನ್ನು ಕಂಡು ಹಿಡಿಯುವಕ್ಕೂ ಪತ್ರಿಕೆಗಳನ್ನು ಓದುವದ ರಿಂದ ವರ್ತಮಾನ ಕಾಲಕ್ಕೆ ಬೇಕಾದ ಸಮಸಾಮಯಿಕ ಮುಂತಾದ ವಿ ದ್ಯಾಸಂಬಂಧ ಸಲಕರಣೆಗಳನ್ನು ತಿಳಿದುಕೊಳ್ಳುವದಕ್ಕೂ ತುಂಬಾ ಅನು ಕೂಲವಾಗುತ್ತೆ. ಪುರಾಣಾದಿಗಳನ್ನು ಹೇಳುವದರಿಂದ ಕರ್ಮಾನಂದ ವೂ ಪಾರತ್ರಿಕಸಾಧನಕ್ಕೆ ಜ್ಞಾನಮಾರ್ಗವೂ ಯತ್ಕಿಂಚಿತು ಏರ್ಪಡ ಬಹುದು. ಹೇಳುವವರಿಗೆ ಕೇಳುವವರಿಗೆ ಕೂಡಾ ಆಗಬಹುದು. ಆದರೆ ಇದರಿಂದ ಐಕಮತ್ಯ ಹೆಚ್ಚುವದಿಲ್ಲ. ಯಾಕೆಂದರೆ ಬ್ರಾಹ್ಮಣರು ಪುರಾಣಾದಿಗಳನ್ನು ಹೇಳತಕ್ಕ ಸ್ಥಳದಲ್ಲಿ ಸಕಲ ಮತಸ್ಥರೂ ಹೋಗು ವದಕ್ಕೂ ಇತರರ ತಮ್ಮತಮ್ಮ ಮತದವರು ಹೇಳಿಕೊಳ್ಳತಕ್ಕ ಪುರಾಣ ವೇ ಮುಂತಾದ ಕಾಲಗಳಲ್ಲಿ ಬ್ರಾಹ್ಮಣರು ಬರುವದಕ್ಕೂ ಕೆಲವು ನಿರ್ಬಂಧವಿದೆ. ಆದರೆ ಆಯಾ ಮತದವರೇ ಐಕಮತ್ಯವುಳ್ಳವರಾಗ ಬೇಕೆನ್ನುವದು ಶುದ್ಧ ತಪ್ಪು. ಆದ್ದರಿಂದ ಸಕಲರೂ ಒಂದೇ ಕಡೆ ಸೇರಿ ಪ್ರಜೆಗಳ ಸುಖವನ್ನು ತಮ್ಮಗಳಿಗೆ ಬೇಕಾದ ಸಕಲ ಶೃಂಗಾರಿಕೆ ಮುಂ ತಾದ ವಿದ್ಯೆವನ್ನೂ ಸುಲಭವಾಗಿ ತಿಳಿದುಕೊಳ್ಳಲು ಅತಿ ಉತ್ತಮವಾದ ಮಾರ್ಗವೆಂದು ಸಕಲರೂ ಇದನ್ನು ಆಚರಣೆಯಲ್ಲಿ ತಂದಿರುತ್ತಾರೆ. ಇಂಥಾ ಸದ್ವಿದ್ಯಾಪ್ರಚುರ್ಯವು ಈ ಶಿಕಾರಿಪುರದಲ್ಲಿ ಹೆಚ್ಚಾಗಿ ಇ ದುವರೆಗೆ ಅಭಿವೃದ್ಧಿಗೆ ಬಾರದೆ ಇರುವದನ್ನು ನೋಡಿ ರೀಡಿಂಗ್ ರೂಂ, ಸೊಸೈಟಿಗಳನ್ನು ಸ್ಥಾಪಿಸಿ ಈ ಮೂಲಕ ಸದ್ವಿದ್ಯಾಭಿವೃದ್ಧಿಯನ್ನು ಹೆಚ್ಚಿಸಬೇಕೆಂದು ಯೋಚಿಸಿರುತ್ತಾರೆ.

ಗರುಡಾಚಾರ್ಯ.

WILLIAM & CO., BOMBAY.

ವಿಲಿಯಂ ಮತ್ತು ಕಂಪನಿ, ಫೋರ್ಟು, ಮುಂಬಯಿ.

ಅಮೃತಾಂಜನ

276

ಬಾಟ್ಲಿ ಒಂದಕ್ಕೆ ಕಿಮ್ಮತು ೮ ಆಣೆ. ವಿ. ಪಿ. ೧೨ ಆಣೆ.

ಅಮೃತಾಂಜನ—ಸುಖಾಂಜನ.
ಅಮೃತಾಂಜನ—ಸಂಜೀವನ
ಅಮೃತಾಂಜನ—ಪರಮಾಂಜನ.
ಅಮೃತಾಂಜನ—ದಿವ್ಯಾಂಜನ.
ಅಮೃತಾಂಜನ—ಶೀತಭಂಜನಿ.
ಅಮೃತಾಂಜನ—ಸ್ವಾಭಂಜನವಿನಾಶಿನಿ

SAFE · EFFICACIOUS · SURE · PILLS · OINTMENTS · POWDERS · WILLIAM & Co. · BOMBAY

ಅಮೃತಾಂಜನ—ಅಪೂರ್ವದರ್ಶಿನಿ.
ಅಮೃತಾಂಜನ—ತತ್ಕ್ಷಣ ಪರಿಹಾರಿಣಿ.
ಅಮೃತಾಂಜನ—ಸಂಧಿವಾತಕ್ಕೆ.
ಅಮೃತಾಂಜನ—ತಲೆನೋವಿಗೆ.
ಅಮೃತಾಂಜನ—ಜಬುನ್ ಮತ್ತು ಥಾಯಕ್ಕೆ.
ಅಮೃತಾಂಜನ—ಗಂಟ್ಲುನೋವಿಗೆ.

ಶಿರೋವೇದನ ವಾತ, ಎದೆನೋವು, ಗಂಟ್ಲುನೋವು, ಸಂಧಿವಾತ, ತಲೆನೋವು, ಶರೀರಭಾರ, ಈ ಎಲ್ಲಾ ತರದ ರೋಗಕ್ಕೆ ಅಮೃತಾಂಜನ ವು ದಿವ್ಯವಾದ ಔಷಧವಾಗಿದೆ ಇದನ್ನು ತರಿಸಿ ಮನೆಯಲ್ಲಿ ಸದಾಕಾಲ ಇಟ್ಟರೆ, ಮೇಲೆ ಹೇಳಿದ ಯಾವತರದ ರೋಗಕ್ಕೂ ಎಡೆ ಸಿಕ್ಕುವದಿಲ್ಲ. ಅಮೃತಾಂಜನದಿಂದ ಗುಣವು ಕಂಡುಬಂದಿದ್ದರೆ ಹಣ ಹಿಂತಿರುಗಿ ಕೊಡಲ್ಪಡುವದು

ಗಜಕರ್ಣದ ಮುಲಾಮು ಡಬ್ಬಿ ಒಂದಕ್ಕೆ ೬ ಆಣೆ, ವಿ. ಪಿ. ೧೦ ಆಣೆ.—ಇದನ್ನು ಹಾಗಿಸುವದರಿಂದ ಎಲ್ಲಾ ತರದ ಕಜ್ಜಿ ನಾಶವಾಗುವದು. ಮೂರು ಸಾರಿ ಹಾಗಿಸುವದರೊಳಗೆ ಗಜಕರ್ಣವು ಹೋಗುವದು. ಒಂದು ಸಾರಿ ಪರೀಕ್ಷಿಸಿ ನೋಡಿರಿ ಕ್ರಯ ಕಮ್ಮಿ, ಗುಣ ಹೆಚ್ಚು. ಇದನ್ನು ಹಚ್ಚಿದಲ್ಲಿ ಉರಿ ಬರುವದಿಲ್ಲ ಚರ್ಮ ಕಪ್ಪಾಗುವದಿಲ್ಲ. ಇದರಿಂದ ಗುಣವು ಕಂಡುಬರದಿದ್ದರೆ ಹಣ ಪರತಾ ಕೊಡಲ್ಪಡುವದು

ಕೇಶವರ್ಧಿನೀ ತೈಲ—ಇದು ತಲೆಯ ಮೆದುಳನ್ನು ತಂಪುಮಾಡಿ ಆಡನ್ನು ತೆಗೆದು ಕೂದಲು ಬೆಳೆಸುತ್ತದೆ ಇದಕ್ಕೆ ಜಿರೋ ಪರಿಮಳವು ಬರುತ್ತದೆ ಮೂರು ಔನ್ಸು ಬಾಟ್ಲಿಗೆ ೧-೦-೦

ಕಜ್ಜಿ ಮುಲಾಮು—ಇದು ಅತಿಶಯ ಅಗ್ಗವೂ ಗುಣದಾಯಕವೂ ಆಗಿರುತ್ತದೆ ೦-೨-೦

ಕಫಹಾರಿ—ಕೆಮ್ಮು, ದಮ್ಮು, ಕ್ಷಯ, ಗೂರಲಿನಲ್ಲಿ ಕಫ ಮುಂತಾದ್ದಕ್ಕೆ ಇದು ಉತ್ತಮವಾದದ್ದು, ಬಾಟ್ಲಿ ೧ಕ್ಕೆ . ೦-೬-೦

ಜೀರ್ಣರಸಾಯನ—ಹೊಟ್ಟೆಯಲ್ಲಿ ಹಸಿವೆ ಆಗಲಿಕ್ಕೂ ನಾಲಿಗೆಗೆ ರುಚಿ ಬರಲಿಕ್ಕೂ ಉತ್ತಮವಾದದ್ದು . . ೦-೩-೦

ಜ್ವರಹಾರಿ—ಎಲ್ಲಾ ತರದ ಜ್ವರಗಳ ಮೇಲೆ ಈ ಔಷಧವು ಚಲೋದಾದದ್ದು . . . ೦-೧-೦-೦

ಸುಂದರೀ ತೈಲ—ಈ ತೈಲವನ್ನು ನಿರಂತರವಾಗಿ ಮೋರೆಯ ಮೇಲೆ ಹಾಗಿಸುವುದರಿಂದ ಮೋರೆಯ ಮೇಲೆ ಇರುವ ಘಾಯದ ಕಲೆಗಳನ್ನೂ ಕಪ್ಪಿನ ಕಲಂಕಗಳನ್ನೂ ತೆಗೆದು ಚರ್ಮವನ್ನು ಮೃದುಮಾಡಿ ಚಲುವಿಕೆಯನ್ನು ಕೊಡುತ್ತದೆ ಹೆಂಗಸರಿಗೂ ಗಂಡಸರಿಗೂ ಉತ್ತಮವಾದದ್ದು ೦-೮-೦

ದಂತಮಂಜನ—ಹಲ್ಲನ್ನು ಸ್ವಚ್ಛವಾಗುತ್ತೆ, ಘಟ್ಟಿಯಾಗುತ್ತೆ, ವಾಸನೆಯನ್ನು ರಕ್ತವನ್ನು ನಿಲ್ಲಿಸುತ್ತದೆ ಈ ಡಬ್ಬಿಗೆ ಕಮ್ಮಿ ೦-೨-೦

ನೇತ್ರಾಂಜನ ೪ ಆಣೆ ಪಾಚುಗುಳಿಗೆ ೧ ರೂಪಾಯಿ. ಕುಸುಮಾವಳಿ ಗುಳಿಗೆ ೧ ರೂಪಾಯಿ. ದಂತಮಾಲಾ ೮ ಆಣೆ ಕಫನಾಶಕ ಚೂರ್ಣ ೮ ಆಣೆ ಚೇಳು ಕಡಿತದ ಮದ್ದು ೮ ಆಣೆ, ನೋವುಹಾರಿ ೮ ಆಣೆ. ಕಸ್ತೂರಿಮಾತ್ರೆ ೧೦ ಆಣೆ ಕಾಂಬೋಲಗುಳಿಗೆ ೮ ಆಣೆ

ಎಲ್ಲಾ ತರದ ಔಷಧಗಳು ಇರುವದರಿಂದ ಬೇಕಾಗು ಬೇಕಾದವರು ಬರೆದು ತರಿಸಿಕೊಳ್ಳಬಹುದು

ವಿಲಿಯಂ ಮತ್ತು ಕಂಪನಿ, ೧೯೬ ಓಕ್ ಲೇನ್, ಫೋರ್ಟು, ಮುಂಬಯಿ.

ಮುಂಬಯಿ ವ್ಯಾಪಾರವಾಡಲಿಚ್ಛೈಸುವವರು.

85 44

ಮುಂಬಯಿಯಲ್ಲಿ ಪ್ರತಿಯೊಂದು ಮಾಲಿನ ದಲಾಳಿ ಆಳಿತ ಮತ್ತು ಮಾಲಿನ ವರ್ಣನೆ ಹಾಗೂ ಅನೇಕ ಉಪಯುಕ್ತ ವಿಷಯಗಳುಳ್ಳ ಕನ್ನಡ ಪುಸ್ತಕ —ಕ್ರಯ ೧೦ ಆಣೆ ವಿ. ಪಿ. ಯಿಂದ ಕಳಿಸುವೆವು. ಟಪಾಲು ಖರ್ಚು ಬೇರೆ ಬುಕ್ಕು ಸೇಲರರಿಗೆ ಯೋಗ್ಯ ಕ ಮಿಶನ್ ದೊರೆಯುವದು ಮತ್ತು ಲಿಂಗಾಯತ ಧರ್ಮಸಂಬಂಧ ವೀರ ಶೈವೋತ್ಪತ್ತಿ ಕ್ರಿಯಾಲಕ್ಷಣವೆಂಬುವ ಕನ್ನಡ ಪುಸ್ತಕ—ನಾಲ್ಕು ಆಣೆ ಚಲೋ ಅಕ್ಷರದಿಂದ ಬರೆದು ಸಿದ್ಧಾಪ್ಪ ಚನ್ನಬಸಪ್ಪ ವಾಲ್ಕಿವ್ ವಾರದ, ಫೋರ್ಟು ಮಾರ್ಕೆಟ್, ಮುಂಬಯಿ.

ಹೊಸ ಪುಸ್ತಕ.

122

ಜಗತ್ತಾನ ಪೂರಿಸಿದೆ! ಹಳೇದು ಹೊಸದಾಗಿದೆ!

ಪುರಾಣೇತಿಹಾಸಗಳಿಂದಲೂ, ಪಂಚತಂತ್ರ, ಮೊದಲಾದ ಇನ್ನೂ ಅನೇಕ ಪ್ರಾಚೀನ ಗ್ರಂಥಗಳಿಂದಲೂ ಸಂಗ್ರಹಿಸಲ್ಪಟ್ಟ ಅನೇಕಾನೇಕ ಸ್ವಾರಸ್ಯವಾದ ಕಥಾವಳಿಯಿಂದ ರಚಿಸಲ್ಪಟ್ಟು ಸರ್ವರಿಗೆ ಅತ್ಯಂತ ಸಂತೋಷದಾಯಕವಾದ್ದಾಗಿಯೂ ಬುದ್ಧಿಪ್ರದವಾಗಿಯೂ ಇದ್ದ "ಕಥಾಸಂಗ್ರಹ" ವೆಂಬ ಗ್ರಂಥವನ್ನು ಪುನಃ ಪರಿಷ್ಕರಿಸಿ ಛಾಪಿಸಬೇಕೆಂದು ಉದ್ದೇಶಿಸಿ ನೊದಲನೆಯ ಮೂರು ಭಾಗಗಳನ್ನೊಳಗೊಂಡಿರುವ ಪ್ರಥಮ ಸಂಪುಟವನ್ನು ೧೯೦೬ ನೇ ಇಸವಿಯಲ್ಲಿ ಪ್ರಚುರಗೊಳಿಸಿದೆವು ಈ ಸಂಪುಟದ ಅನೇಕ ಪ್ರತಿಗಳನ್ನು ಕೊಂಡು ನಮಗೆ ಪ್ರೋತ್ಸಾಹವನ್ನು ಕೊಟ್ಟ ಕರ್ನಾಟಕ ಭಾಷಾಭಿಮಾನಿಗಳಿಗೆಲ್ಲರಿಗೂ ನಾವು ಬಹಳ ಕೃತಜ್ಞರಾಗಿದ್ದೇವೆಂದು ಈ ದ್ವಾರ ತಿಳುಹಿಸಲು ಸಂತೋಷಪಡುತ್ತೇವೆ

ಪರಂತು ನಮ್ಮಲ್ಲಿ ವ್ಯಾಪಾರಕ್ಕಾಗಿ ಬರುತಿದ್ದವರನೇಕರು ಈ ಅಮೂಲ್ಯವಾದ ಗ್ರಂಥದ ಉತ್ತರಾರ್ಧವು ಮುದ್ರಣವಾಯಿತೇ ಎಂದು ಪದೇ ಪದೇ ಕೇಳುತ್ತಲೇ ಇದ್ದರು ಈ ಕಡೆಯ ಮೂರು ಭಾಗಗಳುಳ್ಳ ದ್ವಿತೀಯ ಪುಸ್ತಕವು ಈಗತಾನೆ ಮಾರುವದಕ್ಕೆ ಸಿದ್ಧವಾಗಿದೆ ಅನೇಕ ವರುಷಗಳಿಂದಲೂ ಸಜ್ಜನ ಸಮ್ಮತಿಯನ್ನೂ ವಿದ್ವಜ್ಜನಗಳ ಆದರಣೆಯನ್ನೂ ಪಡೆಯುತ್ತಿರುವ ಈ ಅಸಮಾನವಾದ ಗ್ರಂಥದ ಗುಣಕಥನವನ್ನು ಇಲ್ಲಿ ವರ್ಣಿಸುವದು ಅನಾವಶ್ಯವು ಈ ಹೊಸ ಪುಸ್ತಕದಲ್ಲಿ ಅಕ್ಷರಗಳು ಬಹು ಸ್ಫುಟವಾಗಿಯೂ, ವಿರಳವಾಗಿಯೂ ಇರುವದಲ್ಲದೆ ಮೇಲ್ತರದ ಕಾಗದವನ್ನೇ ಉಪಯೋಗಿಸಿರುವೆವು. ಬೈಂಡು ಭದ್ರವಾಗಿದೆ. ಇದು ಎಲ್ಲಾ ವಿಷಯದಲ್ಲಿಯೂ ಬಾಲಕಮನೋಹರವಾಗಿರುವದು ಎಂದು ಹೇಳುವದರಲ್ಲಿ ಯಾವ ಸಂಶಯವೂ ಇರುವದಿಲ್ಲ. ಅಪೇಕ್ಷೆಯುಳ್ಳವರು ಈ ಪುಸ್ತಕಗಳನ್ನು ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು.

ಕಥಾಸಂಗ್ರಹ ಪ್ರಥಮ ಪುಸ್ತಕ ಕ್ರಯ.		೧—೦—೦
ವಿ. ಪಿ. ಮೂಲಕ	,,	೧—೩—೦
ಕಥಾಸಂಗ್ರಹ ದ್ವಿತೀಯ ಪುಸ್ತಕ	,,	೧—೦—೦
ವಿ. ಪಿ. ಮೂಲಕ	,,	೧—೩—೦

ವಿಳಾಸ:—ಮ್ಯಾನೇಜರ್, ಸಿ. ಎಲ್. ಎಸ್.

ಬುಕ್ ಡಿಪೋ, ಮೈಸೂರು.

ಇಲ್ಲಿನೋಡಿ!

227

ಬೆಂಗಳೂರು ವಿಕ್ಟೋರಿಯ ಇಲಾಖೆಯಲ್ಲಿ, ಮೈಸೂರು ಪ್ರಿನ್ಸ್ ಮೆಟ್ರಿಕ್ಯುಲೇಶನ್‌ದಿಂದ, ಉತ್ತಮ ತರದ ಹಾಸನದ ಟೋಪಿಗಳ ಅನುಕೂಲವಾದ ಉಲ್ಲೇಖದಿಂದ ಯಾರಾಗಲಿ ಕ್ರಯ ೧೦ ಆಣೆ ಯಿಂದ ೧ ರೂ ೧೨ ಆಣೆವರೆಗೂ ದೊರಕುವವು ಅಪೇಕ್ಷಿಸುವವರಿಗೆ ಕ್ರಯದ ಪಟ್ಟಿಯನ್ನು ರವಾನಿಸುವೆವು ವಿಳಾಸ—ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ವಿಕ್ಟೋರಿಯ ಇಲಾಖೆ, ಬೆಂಗಳೂರು.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾಗದಿದ್ದರೆ ಬೇಗ ಬರೆದು ತರಿಸಿಕೊಳ್ಳಿ.

11 10

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಪಸರಿಸಿಕೊಂಡವು? ಖಂಡಿತವಾಗಿಯೂ ಹಾಸನ ದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ವಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೀಳಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯಿತಿಯಿಂದಲೇ ಬರುವದು. (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಸೇರಿದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ನೇರಾ ಬರೆದು ತರಿಸಿಕೊಳ್ಳಿ. ಅಗ್ಗವಾದ ಪ್ಪೂ ಚನ್ನಾಗಿಲ್ಲದ್ದೂ ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ.

ಸಾದ, ಕೆಂಪು, ಕಪ್ಪು, ಬಿಳಿಕೆ, ಕಾಫಿ ಟೋಪಿಗಳು ೧ ರೂ ೮ ಆ, ೧ ರೂ. ೬ ಆ ; ೧ ರೂ ೪ ಆ.

ರೇಷ್ಮೆ ಜುಚ್ಚಿಯುಳ್ಳ ಟೋಪಿಗಳು ೧ ರೂ. ೮ ಆ.; ೨ ರೂ.

ದಾರದ ಟೋಪಿಗಳು ೧ ರೂ. ೧೨ ಆ , ೧ ರೂ. ೮ ಆ., ೧ ರೂ. ೬ ಆ.

ಉಸುಕಿನ ಟೋಪಿಗಳು ೧ ರೂ. ೮ ಆ ; ೧ ರೂ. ೬ ಆ.

ಕೂಸುಗಳ ಟೋಪಿ, ಸೂರ್ಥಿ ಮೇಜೋಡು, ಅರ್ಧ ಮೇಜೋಡು. ಕತ್ತಿನ ಪಟ್ಟಿ ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ.

ಮೈಸೂರು ಸೀಮೆಯಲ್ಲಿ ಪ್ಲೇಗಿನಸ್ಥಿತಿ.

15—3—1907 ರಿಂದ 22—3—1907 ರ ವರೆಗೆ

ಸ್ಥಳ.	ಪ್ಲೇಗ್ ಹಿಡಿದದ್ದು.	ಸತ್ತದ್ದು.	ಹೋದ ವಾ ಈ ವಾರದ ಸಂಖ್ಯೆ	
ಬೆಂಗಳೂರು ಪಟ್ಟಣ	29	21	13	6
ಮೈಸೂರು ,,	6	7	0	0
ಬೆಂಗಳೂರು ಡಿಸ್ಟ್ರಿಕ್ಟ್	22	19	2	1
ಮೈಸೂರು ,,	4	3	1	2
ಕೋಲಾರ್ ,,	0	0	3	3
ಕೋಲಾರ್ ಚಿನ್ನದ ಗಣಿಗಳು	4	3	10	4
ತುಂಕೂರು ಡಿಸ್ಟ್ರಿಕ್ಟ್	0	0	3	3
ಹಾಸನ ,,	2	3	3	1
ಚಿತ್ರದುರ್ಗ ,,	0	0	7	6
ಕಡೂರ್ ,,	0	0	1	1
ಶಿವಮೊಗ್ಗ ,,	0	0	1	13
ಜುಮ್ಲಾ	67	56	34	42

ಶಾಲಿವಾಹನ ಶಕ ವರುಷಂಗಳು ೧೮೨೯ ನೇ ಪ್ಲವಂಗನಾಮ ಸಂವತ್ಸರದ ಅಧಿಕ ಚೈತ್ರ ಬಹುಳ ಷಷ್ಟಿ ಗುರುವಾರದಿಂದ ಅಧಿಕ ಚೈತ್ರ ಬಹುಳ ತ್ರಯೋದಶಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೭ ನೇ ಇಸವಿ ಏಪ್ರಿಲ್

ತಾ	ವಾರ.	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ.	ಶ್ರೀದ ಪಂಚಾಂಗ ಮಾಸ
4	ಗುರು ‡	ಷಷ್ಟಿ	20-12	ಜ್ಯೇ	7 20	22
5	ಶುಕ್ರ	ಸಪ್ತಮಿ	13 55	ಮೂಲ	3-5	23
6	ಶನಿವಾರ	ಅಷ್ಟಮಿ	8 1	ಪೂರ್ವಾಷಾ	55-9	24
7	ರವಿವಾರ	ನವಮಿ	2 20	ಉತ್ತರಾ	57 16	25
8	ಚಂದ್ರ ¶	ಏಕಾದಶಿ	52 32	ಶ್ರ	18 30	26
9	ಕುಜ *	ದ್ವಾದಶಿ	18 34	ಧ	16 16	27
10	ಬುಧ ,,	ತ್ರಯೋದಶಿ	45 50	ಪೂರ್ವಾಭಾ	45 50	28

‡ ತಿಥಿದ್ವಯ, ದಗ್ಧಯೋಗ. ¶ ದಗ್ಧಯೋಗ, ಸ್ಮಾರ್ತರ ಏಕಾದಶಿ * ಭಾಗವತರ ಮಾಧ್ವರ ಏಕಾದಶಿ, ಉಪವಾಸ, ವ್ಯತೀಪಾತ ,, ಮಾಧ್ವ ವೈಷ್ಣವ, ಪ್ರದೋಷ

ಪೇಟೇ ಧಾರಣೆ.

ಏನಸು	ಮೈಸೂರು.	ಬೆಂಗಳೂರು.
ಕೊಳ್ಳೇ ಅಕ್ಕಿ ಪಲ್ಲಾ ೧ಕ್ಕೆ	ರೂ. ೧೨-೮-೦	೧೩-೨-೦
ಕಾಂಬು ತಿ ಅಕ್ಕಿ	೧೨-೮-೦	೧೪-೦-೦
,,	೧೨-೦-೦	೧೩-೦-೦
ಜೀರಾ ಅಕ್ಕಿ	೧೨-೮-೦	೧೪-೮-೦
ಸಣ್ಣಕ್ಕಿ ಅ ಲ್	೧೧-೦-೦	೧೪-೦-೦
,, ಮಧ್ಯಂ	೧೪-೮-೦	೧೬-೮-೦
ತೊಗರಿ ಬೇಳೆ ಪಲ್ಲಾ ೧ಕ್ಕೆ	೧೬-೮-೦	೧೨-೮-೦
,, ಮಧ್ಯಂ	೧೨-೧೨-೦	೧೨-೦-೦
ಗೋಧಿ ರಾಗಿ ಪಲ್ಲಾ ೧ಕ್ಕೆ	೩-೪-೦	೩-೪-೦
ಕಾರಾಗಿ	೫-೮-೦	೩-೦-೦
ಜೋಳ	೭-೮-೦	೮-೦-೦
ಹುರುಳಿ ಪಲ್ಲಾ ೧ಕ್ಕೆ	೧೧-೧೨-೦	೧೧-೧೨-೦
ಬಿಳೀ ಅವರೆ	೮-೪-೦	೭-೮-೦
ಹೆಸರು	೧೩-೮-೦	೯-೧೨-೦
ಉದ್ದು	೧೧-೮-೦	೧೦-೧೨-೦
ಕಡಲೆ	೧೬-೮-೦	೧೦-೦-೦
ಎಳ್ಳು ಸ ೧೨೭ ಕ್ಕೆ	೨೨-೮-೦	೨೨-೪-೦
ಹುರುಳಿ	೬-೮-೦	೭-೪-೦
ಹರಳು ೧೨೭ ಸೇರಿಗೆ	೧೭-೦-೦	೧೬-೮-೦
ಸೀಗೇಕಾಯಿ ಮಣ ೧ಕ್ಕೆ	೨-೨-೦	೧-೧೨-೦
ಮೆಣಸಿನಕಾಯಿ	೨-೧೨-೦	೨-೧೨-೦
,, ಮಧ್ಯಂ	೨-೮-೦	೨-೪-೦
ಬೆಲ್ಲ ದೊಡ್ಡ ಅಚ್ಚು	೩-೮-೦	ಮ ೧-೭-೦
ಒಳ್ಳೆಣ್ಣೆ ಮಣ ೧ಕ್ಕೆ	೫-೮-೦	೫-೮-೦
ಹರಳೆಣ್ಣೆ ,,	೬-೦-೦	೫-೨-೦
ಕೊತ್ತಂಬರಿ ಪಲ್ಲಾ ೧ಕ್ಕೆ	೬-೮-೦	೭-೨-೦
ಉಪ್ಪು ,,	೫-೬-೦	೬-೧೦-೦
ಹೊಗೆಸೊಪ್ಪು	೧-೪-೦	೧-೨-೦
,, ಹಳೇದು	೦-೧೪-೦	೦-೧೫-೦
ತುಪ್ಪ ಮಣ ೧ಕ್ಕೆ	೧೫-೦-೦	೧೩-೮-೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ	೫-೦-೦	೪-೦-೦
ತೆಂಗಿನಕಾಯಿ ೧೦೦ ಕ್ಕೆ	೬-೮-೦	೬-೪-೦
ಅಡಿಕೇಕಾಯಿ ಮಣ ೧ಕ್ಕೆ	೧-೦-೦	೧-೦-೦
ಅಂಟುವಾಳದ ಕಾಯಿ ಮಣ ೧ಕ್ಕೆ	೦-೧೨-೦	೦-೧೦-೦
ಚಿನ್ನ (ಪೌನ್) ಕೆಂಪು	೧೫-೪-೦	೧೫-೬-೦
,, ,, ಹಸಿಮೆ	೧೫-೧೦-೦	೧೫-೯-೦
,, ,, ಗಟ್ಟಿ ತೊಲ ೧ಕ್ಕೆ	೨೩-೧೨-೦	೨೪-೩-೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	೮೫-೦-೦	೮೪-೦-೦

Printed and Published by the Rev. E. W. Thompson, M. A., Proprietor and Manager, Wesleyan Mission Press, Mysore. 4/4/1907.

REGISTERED
M. 20.

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಕ್ರಯ ೧ ದುಡ್ಡು.   ಕ್ರಯ ೧ ದುಡ್ಡು.

ಸಂಪುಟ ೨೦   ಮೈಸೂರು—ಸನ್ ೧೯೦೭ ನೇ ಇಸವಿ ಏಪ್ರಿಲ್ ತಾರೀಖು ೧೧ ನೇ ಗುರುವಾರ.   ಸಂಚಿಕೆ ೪೫

WILLIAM & CO., BOMBAY.

ವಿಲಿಯಂ ಮತ್ತು ಕಂಪೆನಿ, ಫೋರ್ಟ್, ಮುಂಬಯಿ.

ಅಮೃತಾಂಜನ

27-7

ಬಾಟ್ಲಿ ಒಂದಕ್ಕೆ ಕಿಮ್ಮತ್ತು ೮ ಆಣೆ. ವಿ. ಪಿ. ೧೨ ಆಣೆ.

ಅಮೃತಾಂಜನ—ಸುಖಾಂಜನ.
ಅಮೃತಾಂಜನ—ಸಂಜೀವನ.
ಅಮೃತಾಂಜನ—ಪರಮಾಂಜನ.
ಅಮೃತಾಂಜನ—ದಿವ್ಯಾಂಜನ.
ಅಮೃತಾಂಜನ—ಶೀತಭಂಜನಿ.
ಅಮೃತಾಂಜನ—ಪ್ರಭಂಜನವಿಮರ್ದಿನಿ

ಅಮೃತಾಂಜನ—ಅಪೂರ್ವದರ್ಶಿನಿ.
ಅಮೃತಾಂಜನ—ತಕ್ಷಣ ಪರಿಹಾರಿಣಿ.
ಅಮೃತಾಂಜನ—ಸಂಧಿವಾತಕ್ಕೆ.
ಅಮೃತಾಂಜನ—ತಲೆನೋವಿಗೆ.
ಅಮೃತಾಂಜನ—ಜಖಮ್ ಮತ್ತು ಘಾಯಕ್ಕೆ.
ಅಮೃತಾಂಜನ—ಗಂಟ್ಲುನೋವಿಗೆ.

ಶೋಧನ ವಾತ, ಎದೆನೋವು, ಗಂಟ್ಲುನೋವು, ಸಂಧಿವಾತ, ತಲೆ ನೋವು, ಶಿರೋಭಾರ, ಈ ಎಲ್ಲಾ ತರಹ ರೋಗಕ್ಕೆ ಅಮೃತಾಂಜನ ಶ್ರೇಷ್ಠವಾದ ಔಷಧವಾಗಿದೆ ಇದನ್ನು ತರಿಸಿ ಮನೆಯಲ್ಲಿ ಸದಾಕಾಲ ಇಟ್ಟರೆ, ಮೇಲೆ ಹೇಳಿದ ಯಾವತರದ ರೋಗಕ್ಕೂ ಎಡೆ ಸಿಕ್ಕುವದಿಲ್ಲ ಉಪಯೋಗಿಸುವದರಿಂದ ಗುಣವು ಕಂಡುಬರದಿದ್ದರೆ ಹಣ ಹಿಂತಿರುಗಿ ಕೊಡಲ್ಪಡುವದು

ಗಜಕರ್ಣದ ಮುಲಾಮು ಡಬ್ಬಿ ಒಂದಕ್ಕೆ ೬ ಆಣೆ, ವಿ. ಪಿ. ೧೦ ಆಣೆ.—ಇದನ್ನು ಹಾಗಿಸುವದರಿಂದ ಎಲ್ಲಾ ತರದ ಕಜ್ಜಿ ವಾಸಿಯಾಗುವದು. ಮೂರು ಸಾರಿ ಹಾಗಿಸುವದರೊಳಗೆ ಗಜಕರ್ಣವು ಹೋಗುವದು. ಒಂದು ಸಾರಿ ಪರೀಕ್ಷಿಸಿ ನೋಡಿರಿ. ಕ್ರಯ ಕಮ್ಮಿ, ಗುಣ ಹೆಚ್ಚು. ಇದನ್ನು ಹಚ್ಚಿದಲ್ಲಿ ಉರಿ ಬರುವದಿಲ್ಲ, ಚರ್ಮ ಕಪ್ಪಾಗುವದಿಲ್ಲ. ಇದರಿಂದ ಗುಣವು ಕಂಡುಬರದಿದ್ದರೆ ಹಣ ಮರತು ಕೊಡಲ್ಪಡುವದು.

ಕೇಶವರ್ಧಿನೀ ತೈಲ—ಇದು ತಲೆಯ ಮೆದುಳನ್ನು ತಂಪುಮಾಡಿ ಅದನ್ನು ತೆಗದು ಕೂದಲು ಬೆಳಿಸುತ್ತದೆ. ಇದಕ್ಕೆ ಪರಿಮಳವು ಬರುತ್ತದೆ ಮೂರು ಔನ್ಸು ಬಾಟ್ಲಿಗೆ ೧-೦-೦

ಕಜ್ಜಿ ಮುಲಾಮು—ಇದು ಅತಿಶಯ ಅಗ್ಗವೂ ಗುಣದಾಯಕವೂ ಆಗಿರುತ್ತದೆ. ೦-೩-೦

ಕಫಹಾರಿ—ಕೆಮ್ಮು, ದಮ್ಮು, ಕ್ಷಯ, ಕೊರಳಿನಲ್ಲಿ ಕಫ ಮುಂತಾದ್ದಕ್ಕೆ ಇದು ಉತ್ತಮವಾದದ್ದು, ಬಾಟ್ಲಿ ೧ ಕ್ಕೆ .. ೧-೪-೦

ಜೀರ್ಣರಸಾಯನ—ಹೊಟ್ಟೆಯಲ್ಲಿ ಹಸಿವೆ ಆಗಲಿಕ್ಕೂ ನಾಲಿಗೆಗೆ ರುಚಿ ಬರಲಿಕ್ಕೂ ಉತ್ತಮವಾದದ್ದು. .. ೧-೪-೦

ಜ್ವರಹಾರಿ—ಎಲ್ಲಾ ತರದ ಜ್ವರಗಳ ಮೇಲೆ ಈ ಔಷಧವು ಚಲೋದಾದದ್ದು ೦-೧೨-೦

ಸುಂದರೀ ತೈಲ—ಈ ತೈಲವನ್ನು ನಿರಂತರವಾಗಿ ಮೋರೆಯ ಮೇಲೆ ಹಾಗಿಸುವದರಿಂದ ಮೋರೆಯ ಮೇಲೆ ಇರುವ ಕಪ್ಪು ಕಲೆಗಳನ್ನೂ ಕಪ್ಪಾದ ಕಲಂಕಗಳನ್ನೂ ತೆಗದು ಚರ್ಮವನ್ನು ಮೃದುಮಾಡಿ ಚಲುವಿಕೆಯನ್ನು ಕೊಡುತ್ತದೆ. ಹೆಂಗಸರಿಗೂ ಗಂಡಸರಿಗೂ ಉತ್ತಮವಾದದ್ದು ೦-೮-೦

ದಂತಮಂಜನ—ಹಲ್ಲು ಸ್ವಚ್ಛವಾಗುತ್ತೆ, ಘಟ್ಟಿಯಾಗುತ್ತೆ, ವಾಸನೆಯನ್ನೂ ರಕ್ತವನ್ನೂ ನಿಲ್ಲಿಸುತ್ತದೆ. ಕ್ರಯ ಬಹಳ ಕಮ್ಮಿ ೦-೨-೦ ನೇತ್ರಾಂಜನ ೪ ಆಣೆ ವಜ್ರಗುಟಿಕ ೧ ರೂಪಾಯಿ. ಕಾಮನಾರಿ ಗುಟಿಕ ೧ ರೂಪಾಯಿ. ದಂತುವಾತಹಾರಿ ೮ ಆಣೆ. ಕಫನಾಶಕ ೮ ಆಣೆ. ಚೇಳು ಕಡಿತದ ಮದ್ದು ೮ ಆಣೆ. ರೋಮಹಾರಿ ೮ ಆಣೆ. ಕಸ್ತೂರಿಮಾತ್ರೆ ೧೦ ಆಣೆ. ತಾಂಬೂಲಗುಟಿಕ ೮ ಆಣೆ.

ಎಲ್ಲಾ ತರದ ಔಷಧಗಳು ಇರುವದರಿಂದ ಕೆಟಲಾಗು ಬೇಕಾದವರು ಬರದು ತರಿಸಿಕೊಳ್ಳಬಹುದು.

ವಿಲಿಯಂ ಮತ್ತು ಕಂಪೆನಿ, ೧೬ ಓಕ್ ಲೇನ್, ಫೋರ್ಟ್, ಮುಂಬಯಿ.

ಕೊಡಗು ದೇಶದ ಶ್ರೇಷ್ಠವಾದ ಉತ್ಕೃಷ್ಟ ಕಾಫಿಯು

ಹುರಿಯದೆ ಇರುವದು ಅಥವಾ ಆಗತಾನೆ ಹುರಿದದ್ದು.
ಪೈದಾಮಾಡಿದ ಸ್ಥಳದಿಂದಲೆ ನೆಟ್ಟಗೆ ರವಾನಿಸಲ್ಪಡುವದು.

18-10

ವ್ಯಾಪಾರದ   ಹೆಗ್ಗುರ್ತು

ಕಾಡುಕೋಣದ ತಲೆಯ ಮುದ್ರೆ ಇದೆ.

ಸಂಪೂರ್ಣವಾಗಿ ಯಂತ್ರದಿಂದಲೆ ಸಿದ್ಧಪಡಿಸಿದ್ದು. ಹೆಗ್ಗುರ್ತು ಉಳ್ಳ ವಿಲಾಸದ ಚೀಟಿ ಸುತ್ತಿಲ್ಲದಿರುವವು ಸ್ವಚ್ಛವಾದವುಗಳಲ್ಲ. ಅವು ನಮ್ಮದಲ್ಲ. ಏಜಂಟರುಗಳು ಬೇಕು, ಇಂಥವರಿಗೆ ಅಲಾಯಿದ ದರ ಬರೆಯುವವರು ದಯವಿಟ್ಟು ಈ ಪತ್ರಿಕೆಯ ಹೆಸರನ್ನು ಸೂಚಿಸಿ.

ವಿಳಾಸ.—ಮ್ಯಾನೇಜರ್, ಮ್ಯಾಥಿಸನ್ಸ್
ಕಾಫಿ ವರ್ಕ್ಸ್, ಹುಣಸೂರು.

ಜ್ವರಹರಿ.

15-10

ಇದು ಸಾಧಾರಣ ಜ್ವರ, ಚಳೀಜ್ವರ, ಮೊರೇಜ್ವರ, ಪಿತ್ಥಜ್ವರ ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹುಬೇಗನ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್. ಟಿ. ವೆಂಕಟಪತಿ ಅಯ್ಯಂಗಾರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಔನ್ಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೆ ಬೀಳುತ್ತಿರುವದರಿಂದ ದಯವಿಟ್ಟು ಇನ್ನೊಂದು ೨೦ ಔನ್ಸಿನ ಸೀಸೆಯನ್ನು ವಿ. ಪಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದಾರೆ.

ಕ್ರಯ:—ಸೀಸೆ ೧ ಕ್ಕೆ ೮ ಆಣೆ, ೧ ರೂ., ೧—೮ ರೂ., ೨—೧೨ ಆ., ೧೧ ರೂ.; ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

****

ಓಮಂಕರ್ಪೂರ.

Omum Carpoor

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಕಳ್ಳೆ ಮುರಿವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ. ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಜೆಪ್ರಿಯ ಓಮಂ ಕರ್ಪೂರವನ್ನು ನಾನೂ ನನ್ನ ತಾಬೇದಾರನೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇನೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧವೆಂತ ಬರೆದಿದಾರೆ.

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇವಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ:—

ಜೆಪ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,
ಸೆಕೆಂಡ್ ಬೀಚ್ ಲೈನ್, ಮದ್ರಾಸ್.

ಮುಂಬಯಿ ವ್ಯಾಪಾರಮಾಡಲಿಚ್ಛೈಸುವವರು.

85-45

ಮುಂಬಯಿಯಲ್ಲಿ ಪ್ರತಿಯೊಂದು ಮಾಲಿನ ತೂಕ ಅಳತೆ ಮತ್ತು ವರ್ಣನೆ ಹಾಗೂ ಅನೇಕ ಉಪಯುಕ್ತ ಮಾಹಿತಿಯಿರುವ ಪುಸ್ತಕ.—ಕ್ರಯ ೧೦ ಆಣೆ. ವಿ. ಪಿ. ಯಿಂದ ಕಳುಹಿಸುವ ಅಂಚೆ ಖರ್ಚು ಬೇರೆ ಬುಕ್ಕು ಸೇಲರರಿಗೆ ಯೋಗ್ಯ ಕಮಿಷನ್ ದೊರೆಯುವದು. ಮತ್ತು ಲಿಂಗಾಯತ ಧರ್ಮಸಂಬಂಧ ವಿರಕ್ತ ಕ್ರಿಯಾಲಕ್ಷಣವೆಂಬುವ ಕನ್ನಡ ಪುಸ್ತಕ—ನಾಲ್ಕು ಆಣೆ. ಅಕ್ಷರದಿಂದ ಬರಿಯಿರಿ ಪತ್ತಾ ಚನ್ನಬಸಪ್ಪ ಮಲ್ಲಪ್ಪ ವಾರದ ಮಾಂಡ್ವಿ, ಮುಂಬಯಿ.

ನೋಡಿರಿ.

ಬೆಸ್ಟ್ ಕೆಂಪು ಮತ್ತು ತಾಜಾ ಕಪ್ಪು
ಹಾಸನ ಊಲನ್ ದಾರ.

125-15

೩,೧೦೦ ಹಾಸನದ ಟೋಪಿ ಹೊರೆಯುವ
ಸುಪೀರಿಯರ್ ವೂಲನ್ ದಾರ ಮಾತ್ರ.

	ರೂ	ಆ.	ಪೈ
೧ ಟೋಪಿ ಆಗುವ ವೂಲನ್ ದಾರದ ಕ್ರಯ	೦	೮	೦
೧ ಪೌಂಡು ಒಂದು ಬಂಡಲ್ ದಾರದ ಕ್ರಯ	೨	೪	೦
ಟೋಪಿ ಹೊಲಿಯುವ ಕೊಕ್ಕೆ ಸೂಜಿ ೧ಕ್ಕೆ	೦	೧	೯
ದಾರದಲ್ಲಿ ಆದ ಟೋಪಿ ಡಜನ್ ೧ಕ್ಕೆ	೧೩	೩	೦

ವಿ ಪಿ ಯಿಂದಲೂ ರವಾನಿಸುತ್ತೇವೆ.

ವಿಳಾಸ—ಸಿ. ರಘುನಾಥ ಕಾಮತ್,
ವೂಲನ್ ಮರ್ಚಂಟ್, ಬೋಳಾರ, ಮಂಗಳೂರು.

ಬೆಲೆಗೆ ಬೆಳ್ಳಿ—ಗುಣಕ್ಕೆ ಭಂಗಾರ.

86-40

ಇಂಥಾ ಕಾಗದಗಳು ನಮ್ಮಲ್ಲಿಗೆ ಅನೇಕ ಬಂದಿವೆ.

ಮೋ| ವಾಮನಶೆಣೈ, ಜವಳಿ ವರ್ತಕ, ಮಹೇಶ್ವರ, ಇವರು ಬರೆಯುವುದು—"ಕ್ಲೆಮೆಂಟ್‌ಯವರ ಮ್ಯಾಜಿಕ್ ಬಾಂ ಬಹಳ ತೃಪ್ತಿಕರವಾದದ್ದೆಂದು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ಅದು ತುಂಬಾ ಗುಣಕೊಡುವಂಥಾದ್ದು ದಯವಿಟ್ಟು ಇನ್ನೂ ಮೂರು ಶೀಸೆಯನ್ನು ವಿ. ಪಿ ಮೇಲೆ ಕಳುಹಿಸಿಕೊಡಿ." ಮೋ| ಜೆ. ಡಬ್ಲಿಯು. ಸಾಮ್ಯುಯಲ್, ಪೋಸ್ಟ್ ಮಾಸ್ಟರ್, ತ್ರಿವಂದ್ರಂ, ಇವರು ಬರೆಯುವುದು "ನಿಜವಾಗಿಯೂ ಇದು ಎಲ್ಲಾ ತರದ ನೋವುಗಳಿಗೂ ಅದ್ಭುತವಾದ ಔಷಧವೆನ್ನುವುದಕ್ಕೆ ಸಂಶಯವಿಲ್ಲ." ಮಿಸೆಸ್ ಇ. ಕ್ಯಾಂಪ್‌ಸಿಂಗ್, ಬೈಕಲ್ಲಾ, ಬೊಂಬಾಯಿ, ಇವರು ಬರೆಯುವುದು—"ನಿಮ್ಮ ಮ್ಯಾಜಿಕ್ ಬಾಂ ಔಷಧವು ನನ್ನ ಕಾಲಿನ ಕೆಟ್ಟ ನೋವನ್ನು ಸಂಪೂರ್ಣವಾಗಿ ವಾಸಿಮಾಡಿದೆ." ಮಿಸೆಸ್ ಇ. ಮೋರಿಸ್, ರಂಗೂನ್, ಇವರು ಬರೆಯುವುದು—"ನಾನು ಯಾವಾಗಲೂ ನಿಮ್ಮ ಕ್ಲೇಮೆಂಟ್ಸ್ ಮ್ಯಾಜಿಕ್ ಬಾಮನ್ನು ಗಂಟ್ಲು, ಎದೆಯ ನೋವುಗಳಿಗೆ ಉಪಯೋಗಿಸುತ್ತೇನೆ. ಅದರಿಂದ ನನಗೆ ಪ್ರತಿ ಸಲವೂ ಚನ್ನಾಗಿ ವಾಸಿಯಾಗಿದೆ ಈ ಔಷಧದಿಂದ ಪಾರ್ಶ್ವನೋವು, ಕೀಲುಗಳ ಬಾಧೆ, ಕಿಬ್ಬೊಟ್ಟೆನೋವು, ಬೆನ್ನೆಳೆಯುವುದು, ತಲೆನೋವು, ಕೆಮ್ಮು, ಕಿಲುಬುಗಳು, ಕೀಲುಗಳು ಊತರಿಸುವುದು, ಕೊರಳು ಊತ, ಕೈ ಕಾಲು ಒಡೆತ ಇವೆಲ್ಲಾ ಗುಣವಾಗುತ್ತವೆ. ಇದನ್ನು ಹಾಕಿ ಚನ್ನಾಗಿ ತಿಕ್ಕಿದರೆ ಬಾಧೆ ಪರಿಹಾರವಾಗುವುದು. ಕ್ರಯ:—೧ ಬಾಟ್ಲಿಗೆ ೧೨ ಆಣೆ, ಪೋಸ್ಟೇಜ್ ೪ ಆಣೆ. ೩ ಬಾಟ್ಲಿಗೆ ಅಂಚೆವೆಚ್ಚ ಸೇರಿ ರೂ. ೨—೪ ಆಣೆ.

ನಮ್ಮ ವಿಳಾಸ:—ಎಫ್. ಡಬ್ಲ್ಯು. ಆರ್ಗ,
ಸಿಮೆಟ್ರಿ ರೋಡ್, ವೇಪೇರಿ, ಮದರಾಸ್.

ಬಾಲಶಿಕ್ಷೆ ೧ನೇ ಭಾಗ!
ಬಾಲಶಿಕ್ಷೆ ೧ನೇ ಭಾಗ!!
ಬಾಲಶಿಕ್ಷೆ ೧ನೇ ಭಾಗ!!!

ಬೇಗ ತರಿಸಿಕೊಳ್ಳಿ.

63 8

ಕ್ರಯ ೧ ಆಣೆ. ವಿ. ಪಿ ಮೂಲಕ ಮೂರು ಆಣೆಗಳು

ನೂರು ಪ್ರತಿಗಳಿಗೆ ಹನ್ನೆರಡು ಪ್ರತಿಗಳು ಕಮಿಷನ್.

ವಿಳಾಸ.—ಮ್ಯಾನೇಜರ್, ಸಿ. ಎಲ್. ಎಸ್.

ಬುಕ್ ಡಿಪೋ, ಮೈಸೂರು.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

11 11

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಚಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾರಿ ಬಿಕರಿಯಾಗುತ್ತಿರುವ ಟೋಪಿಗಳ ಬಾರವೆಲ್ಲಾ ಬೇಳಾದದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ.—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ಬಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೊಲೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಸೀದಾ ಬರೆದು ತರಿಸಿಕೊಳ್ಳಿ ಅಗ್ಗವಾದದ್ದು ಚನ್ನಾಗಿಲ್ಲದ್ದು ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ.

ಸಾದ, ಕೆಂಪು, ಕಪ್ಪು, ಬೂದು, ಕಾಫಿ ಟೋಪಿಗಳು ೧ ರೂ ೮ ಆ., ೧ ರೂ ೩ ಆ, ೧ ರೂ ೬ ಆ.

ರೇಶ್ಮೆ ಚುಕ್ಕಿಯುಳ್ಳ ಟೋಪಿಗಳು ೧ ರೂ ೮ ಆ. ೨ ರೂ

ದಾರದ ಟೋಪಿಗಳು ೧ ರೂ. ೧೨ ಆ, ೧ ರೂ ೮ ಆ, ೧ ರೂ. ೩ ಆ

ಉಸುಕಿನ ಟೋಪಿಗಳು ೧ ರೂ. ೮ ಆ, ೧ ರೂ. ೩ ಆ

ಕೊಡಗಿನ ಟೋಪಿ, ಸೂಫಿ ಮೇಜೋಡು, ಅರ್ಧ ಮೇಜೋಡು ಕತ್ತಿನ ಪಟ್ಟಿ ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ.

ಜಡೆಕುಚ್ಚು, ಪಚ್ಚೆಯ ಜಡೆಬಿಲ್ಲೆ.

36-3

ನವೀನ ಆಭರಣಗಳು; ಬೇಗನೋಡಿ.

ಇದರಿಂದ ಸರ್ವರಿಗೂ ತಿಳಿಸುವದೇನಂದರೆ—ನಮ್ಮಲ್ಲಿ ಬಹಳ ಶ್ರೇಷ್ಟವಾದ ಎಲೆಕ್ಟ್ರಿಕ್ ಚಿನ್ನದ ಗಿಲ್ಟ್‌ನಿಂದ ತಯಾರಿಸಲ್ಪಟ್ಟ ಬಂಗಾರದ ಆಭರಣಗಳು ಬಹಳ ಸುಲಭ ಕ್ರಯಕ್ಕೆ ದೊರೆಯುತ್ತವೆ ಇದರಲ್ಲಿ ಕಂಡ ಆಭರಣಗಳನ್ನು ಚಿನ್ನದ ಕೆಲಸ ಮಾಡುವದರಲ್ಲಿ ಬಹಳ ಸಮರ್ಥರಾದ ಅಕ್ಕಸಾಲಿಗರಿಂದ ತಯಾರಿಸಲ್ಪಟ್ಟಿರುತ್ತೆ ಅದು ಬಹಳ ಕಾಲಗಳ ವರಿವಿಗೂ ರಂಗು ಹೋಗದ ಹಾಗೆ ಬಲವಾದ ಎಲೆಕ್ಟ್ರಿಕ್ ಚಿನ್ನದ ಗಿಲ್ಟ್ ಹಾಕಲ್ಪಟ್ಟಿರುತ್ತೆ ಇದರ ಕೆಲಸದ ನಾಜೂಕು, ಸ್ವಚ್ಛಭಂಗಾರದ ಆಭರಣಗಳನ್ನು ಸೋಲಿಸುತ್ತೆ ಈ ಕೆಳಗೆ ಕಂಡ ಆಭರಣಗಳಲ್ಲಿ ಯಾವುದಾದರೂ ಒಂದನ್ನು ತರಿಸಿ ಪರೀಕ್ಷಿಸಿ—

೧ ಜಡೆಕುಚ್ಚು.

ಕ್ರಯ ರೂ ೩—೮—೦.

ಇದರ ಪ್ರತಿಯೊಂದು ಕುಚ್ಚಿಗೆ ಸುತ್ತಲೂ ಸುಂದರವಾದ ಗೆಜ್ಜೆಗಳನ್ನು ಸುತ್ತಲ್ಪಟ್ಟ ನಾಜೂಕಾಗಿ ಗೊಂಡೆಗಳನ್ನು ಕಟ್ಟಿ ನೋಡುವವರಿಗೆ ಸಿಜವಾದ ಭಂಗಾರದ ಆಭರಣವೆನ್ನುವ ಹಾಗೆ ತಯಾರಿಸಲ್ಪಟ್ಟಿರುತ್ತೆ

೨ ಪಚ್ಚೆ ಕಲ್ಲು ಜಡೆಬಿಲ್ಲೆ.

ಚಿನ್ನದ ಗಿಲ್ಟು ಮಾಡಿದ್ದು.

ಒಂದಕ್ಕೆ ಬೆಲೆ ರೂ. ೨—೬—೦.

ಇದು ಮೇಲಾದ ಹಜಾಸು ಕೆಲಸಗಳನ್ನು ಮಾಡಲ್ಪಟ್ಟ ಪಚ್ಚೆ ಕಲ್ಲಿನಿಂದಬಿಗಿಯಲ್ಪಟ್ಟಿರುತ್ತೆ ಎಷ್ಟು ವರ್ಷಗಳ ಪರ್ಯಂತರ ಇಟ್ಟುಕೊಂಡಾಗ್ಯೂ ರಂಗು ಹೋಗದು ... ಇದುವವರ ಕಣ್ಣು ಬಿಡದಂತಹ ... ಕಾಣಿಸುವದ್ದು

ನಮ್ಮ ವಿಳಾಸ—ಜರ್ಮನ್ ಸಿಲ್ವರ್ ಜ್ಯೂಯಲ್ ಡಿಪೋ, ಸಾಹುಕಾರ್ ಪೇಟೆ, ಮದ್ರಾಸು.

CHAMBERLAIN'S PAIN BALM

ಚೇಂಬರ್ಲಿನ್ ಯವರು ಮಾಡಿದ ನೋವುಪರಿಹರ ಔಷಧವು

4-15



ಚೆನ್ನೆಲುಬಿನಲ್ಲಿನ ನೋವು, ಪಕ್ಕೆಗಳಲ್ಲಿ ಆಗುವ ನೋವು, ಖಂಡಗಳಲ್ಲಿ ಹುಟ್ಟುವ ನೋವು, ತಲೆನೋವು ಜಜ್ಜಿದ ಕಡೆಗಳ ನೋವು, ವಾಯುನೋವು—ಇವುಗಳೆಲ್ಲಾ ಸಂಪೂರ್ಣವಾಗಿ ವಾಸಿಮಾಡುವಂಥಾ ಔಷಧ ವಾಯುನೋವೆಂದರೇನು?

ಕೀಲುಗಳೆಲ್ಲಾ ಮಾಂಸಖಂಡಗಳೆಲ್ಲಾ ಗಾಯವಾಗುವುದು, ಊದಿಕೊಳ್ಳುವುದು, ಕಠಿಣವಾಗಿ ಕಳೆಯುವ ಬಾಧೆ ಖಂಡಗಳಲ್ಲಿ ಇರುವುದು. ವಿಶ್ರಾಂತಿಕೊಡದೆ ಇರುವುದು, ನಿದ್ರೆಹತ್ತದೆ ಇರುವುದು—ಇದೇ ಇದೆಲ್ಲಾ ನಿಮಗೆ ಯಾವಾಗ ಉಂಟಾಗುವುದೋ ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು

ಆಗ ಚೇಂಬರ್ಲೆನ್‌ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ.

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹ ಕಾವು ಮೂಳೆಯೊಳಕ್ಕೆ ವ್ಯಾಪಿಸುತ್ತದೆ ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ. ಮನಸ್ಸಿಗೆ ಉಲ್ಲಾಸವಾಗುತ್ತದೆ ಅದನ್ನೇ ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯುವಿನ ಹುಟ್ಟನ್ನೇ ಕಿತ್ತು ಹಾಕಿಬಿಡುವುದು

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ.

ಇದು ಎಲ್ಲೆಲ್ಲೂ ಬಿಕರಿಯಾಗುವುದು — ಸಣ್ಣ ಸೀಸೆಗೆ ೧ ರೂಪಾಯಿ — ಕೈಯಿಂದ ಮುಟ್ಟಿದ್ದೇನೂ ಅಲ್ಲ, ದೊಡ್ಡ ಸೀಸೆಗೆ ೨ ರೂಪಾಯಿ

ಹೊಸ ಪುಸ್ತಕ.

23

ಈಗತಾನೆ ಹೊರಟಿದೆ! ಹಳೇದು ಹೊಸದಾಗಿದೆ!

ಪುರಾಣೇತಿಹಾಸಗಳಿಂದಲೂ, ಪಂಚತಂತ್ರ ಮೊದಲಾದ ಇನ್ನೂ ಅನೇಕ ಪ್ರಾಚೀನ ಗ್ರಂಥಗಳಿಂದಲೂ ಸಂಗ್ರಹಿಸಲ್ಪಟ್ಟ ಅನೇಕಾನೇಕ ಸ್ವಾರಸ್ಯವಾದ ಕಥಾಮಾಲೆಯಿಂದ ರಂಜಿಸುತ್ತಾ ಸರ್ವರಿಗೆ ಅತ್ಯಂತ ಸಂತೋಷದಾಯಕವಾದುದಾಗಿಯೂ ಬುದ್ಧಿಪ್ರದವಾಗಿಯೂ ಇದ್ದ "ಕಥಾಸಂಗ್ರಹ" ವೆಂಬ ಗ್ರಂಥವನ್ನು ಪುನಃ ತಿದ್ದಿ ಛಾಪಿಸಬೇಕೆಂದು ಉದ್ದೇಶಿಸಿ ಮೊದಲನೆಯ ಮೂರು ಭಾಗಗಳನ್ನೊಳಗೊಂಡಿರುವ ಪ್ರಥಮ ಸಂಪುಟವನ್ನು ೧೯೦೬ ನೇ ಇಸವಿಯಲ್ಲಿ ಪ್ರಚುರಗೊಳಿಸಿದೆವು ಈ ಸಂಪುಟದ ಅನೇಕ ಪ್ರತಿಗಳನ್ನು ಕೊಂಡು ನಮಗೆ ಪ್ರೋತ್ಸಾಹವನ್ನು ಕೊಟ್ಟ ಕರ್ನಾಟಕ ಭಾಷಾಭಿಮಾನಿಗಳೆಲ್ಲರಿಗೂ ನಾವು ಬಹಳ ಕೃತಜ್ಞರಾಗಿದ್ದೇವೆಂದು ಈ ದ್ವಾರ ತಿಳಿಯಿಸಲು ಸಂತೋಷಪಡುತ್ತೇವೆ

ಹರಂತು ನಮ್ಮಲ್ಲಿ ವ್ಯಾಪಾರಕ್ಕಾಗಿ ಬರುತಿದ್ದವರನೇಕರು ಈ ಅಮೂಲ್ಯವಾದ ಗ್ರಂಥದ ಉತ್ತರಾರ್ಧವು ಮುದ್ರಣವಾಯಿತೇ ಎಂದು ಪದೇ ಪದೇ ಕೇಳುತ್ತಲೇ ಇದ್ದರು ಈ ಕಡೆಯ ಮೂರು ಭಾಗಗಳ ದ್ವಿತೀಯ ಪುಸ್ತಕವು ಈಗತಾನೆ ಮಾರುವದಕ್ಕೆ ಸಿದ್ಧವಾಗಿದೆ ಅನೇಕ ವರುಷಗಳಿಂದಲೂ ಸಜ್ಜನ ಸಂಸ್ಕೃತಿಯನ್ನು ವಿದ್ವಜ್ಜನಗಳ ಆದರಣೆಯನ್ನೂ ಪಡೆಯುತ್ತಿರುವ ಈ ಅಸಮಾನವಾದ ಗ್ರಂಥದ ಗುಣಕಥನವನ್ನು ಇಲ್ಲಿ ವರ್ಣಿಸುವದು ಅನಾವಶ್ಯಕವು ಈ ಹೊಸ ಪುಸ್ತಕದಲ್ಲಿ ಅಕ್ಷರಗಳು ಬಹು ಸ್ಫುಟವಾಗಿಯೂ, ವಿರಳವಾಗಿಯೂ ಇರುವದಲ್ಲದೆ ಮೇಲ್ದರದ ಕಾಗದವನ್ನೇ ಉಪಯೋಗಿಸಿರುವೆವು ಬೈಂಡು ಭದ್ರವಾಗಿದೆ ಇದು ಎಲ್ಲಾ ವಿಷಯದಲ್ಲಿಯೂ ವಾಚಕಮಹಾಶಯರಿಗೆ ಸಮರ್ಪಕವಾಗಿರುವದು ಎಂದು ಹೇಳುವದರಲ್ಲಿ ಯಾವ ಸಂಶಯವೂ ಇರುವದಿಲ್ಲ. ಅಪೇಕ್ಷೆಯುಳ್ಳವರು ಈ ಪುಸ್ತಕಗಳನ್ನು ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು

ಕಥಾಸಂಗ್ರಹ ಪ್ರಥಮ ಪುಸ್ತಕ ಕ್ರಯ	೧—೦—೦
ವಿ. ಪಿ ಮೂಲಕ ,,	೧—೩—೦
ಕಥಾಸಂಗ್ರಹ ದ್ವಿತೀಯ ಪುಸ್ತಕ ,,	೧—೦—೦
ವಿ. ಪಿ. ಮೂಲಕ ,,	೧—೩—೦

ವಿಳಾಸ:—ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

ಪಾಳ್ಯದ ವೆಂಕಟಾಚಲ ಪಂಡಿತ, ಶ್ರೀಸೀತಾರಾಘವ ವೈದ್ಯಶಾಲಾ, ಕೊಳ್ಳೇಗಾಲ, ಇವರ ಸಿದ್ಧೌಷಧಗಳು.

26 6

೧. ಲೋಕಾಮೃತಯುತರ ಕಸ್ತೂರಿ ಮಾತ್ರೆ.—ಈ ಮಾತ್ರೆಗಳನ್ನು ಹವಳದ ಭಸ್ಮ ಚಿನ್ನದ ರೇಕುಗಳ ಮಿಶ್ರದಿಂದ ತಯಾರಿಸಿದೆ. ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಪ್ಲೇಗು ಜ್ವರ, ಛಳೀಜ್ವರ, ಜ್ವರ, ಅಗ್ನಿಮಾಂದ್ಯ, ನಿಶ್ಶಕ್ತಿ, ಕೆಮ್ಮು, ಹೊಟ್ಟೆ ಕಿಬ್ಬೊಟ್ಟೆ, ಎದೆಗಳ ನೋವು ಇವಕ್ಕೆ ಮೀರಿಗೊಡದು; ಮಕ್ಕಳ ಎಲ್ಲಾ ರೋಗಕ್ಕೂ ಗುಣಕಾರಿ. ನೀರು ಮತ್ತು ಹವಾ ಬದಲಾವಣೆಗೆ ಒಳ್ಳೆಯದು ೨೦೦ ಮಾತ್ರೆಯುಳ್ಳ ಕಾಟ್ಟಿಗೆ ೬ ಆಣೆ ಪೋಸ್ಟು ಮೂಲಕ ೫ ಸೀಸೆಗೆ ಒಂದು ಸೀಸೆ ಹೆಚ್ಚು ೧ ರಿಂದ ೩ ರ ವರೆಗೆ ಟಪಾಲ್ ಖರ್ಚು ೪ ಆಣೆ

೩. ಎಸ್. ಸಿ. ಇ. ಸರ್ವಾಂಗಬಲಕಾರಿ.—ಕಾಫಿ, ಟೀ, ಕೋಕೋಗಳಿಗೆ ಬದಲಾಗಿ ಉಪಯೋಗಿಸುವ ಪುಡಿ ಕಾಫಿ, ಟೀಗಳಲ್ಲಿರುವ ದುರ್ಗುಣಗಳಿಲ್ಲ ಇದರಲ್ಲಿಲ್ಲ ವಾಯು, ಎದೆ, ಅನ್ನಾಶಯ, ನರಗಳು, ಸಂದುಗಳು, ಮೆದುಳು, ಕಿಡ್ನಿ, ನಾಲಬದ್ಧ, ಇವುಗಳ ಸಂಬಂಧವಾದ ಎಲ್ಲಾ ರೋಗಗಳನ್ನೂ ಚನ್ನಾಗಿ ಗುಣಪಡಿಸಿ ಧಾತುಶಕ್ತಿಯನ್ನು ಕ್ರಮವಾಗಿ ವೃದ್ಧಿಪಡಿಸುವದು. ೨೦ ಲೋಟ ಕಾಫಿಯಾಗುವ ಡಬ್ಬಿ ೬ ಆಣೆ; ೪೦ ಲೋಟ ಆಗುವುದು ೧೨ ಆಣೆ

೨. ಪ್ಲೇಗಿಗೆ ಸಿದ್ಧೌಷಧ.—ಪ್ಲೇಗಿಗೆ ಔಷಧಿಯೇ ಇಲ್ಲವೆಂದು ಹೇಳದೆ ಈ ನಮ್ಮ ಔಷಧವನ್ನು ತರಿಸಿ ನೋಡಿ ಖಂಡಿತ ಗುಣವಾಗುತ್ತದೆ ಯೋಗ್ಯತಾಪತ್ರಗಳನ್ನು ವಿವರಿಸಲು ಸ್ಥಳ ಸಾಲದು ಗಡ್ಡೆ ಮೊದಲಾದ ಬಾಧೆ ಇಲ್ಲದಂತೆ ಉಜ್ಜುವ ಔಷಧಿ ಸೇರಿ ಕ್ರಯ ೧ ರೂಪಾಯಿ.

೪. ಬಾಧಾನಿವಾರಿಣಿ.—ಪೆಟ್ಟು ತಗಲಿದ ನೋವು, ವಾಯು, ತಲೆನೋವು, ಮಾಂಸಖಂಡಕ್ಕೆ ಸಂಜೀವನ ಡಬ್ಬಿ ೫ ಆಣೆ

ವಿಳಾಸ:—ಎಸ್. ಎಸ್. ಆರ್. ವೈದ್ಯಶಾಲಾ, ಲಕ್ಷ್ಮೀವಿಲಾಸ ರೋಡ್, ಮೈಸೂರು.

ಇಲ್ಲಿನೋಡಿ!

21

ತುಮಕೂರು ಡಿಸ್ಟ್ರಿಕ್ಟ್ ಇಲಾಖೆಯಲ್ಲಿ, ಯಾವ ಟೇಪಿಯ ಮೇಲ್ವಿಚಾರಣೆಯಿಂದ, ಉತ್ತಮ ತರದ ಹಾಸನದ ಟೋಪಿಗಳು ಶ್ರೇಷ್ಠವಾದ ಊಲ್‌ದಾರದಿಂದ ತಯಾರಾಗುತ್ತವೆ ಕ್ರಯ ೧೦ ಆಣೆಯಿಂದ ೧ರೂ ೧೨ ಆಣೆವರೆಗೂ ದೊರಕುವವು ಅಪೇಕ್ಷಿಸುವವರು ಕ್ರಯದ ಪಟ್ಟಿಯನ್ನು ರವಾನಿಸುವೆವು ವಿಳಾಸ—ಮೇನೇಜರ್, ಹಾಸನದ ಟೋಪಿ ಕಾರ್ಖಾನೆ, ಡಿಸ್ಟ್ರಿಕ್ಟ್ ಇಲಾಖೆ, ತುಮಕೂರು

೧೮೭೬ ರಿಂದ ೧೯೧೪ ವರೆಗೆ

ಕಾಲದ ಪರೀಕ್ಷೆ!

ಮೂವತ್ತೆಂಟು ವರ್ಷಗಳಿಂದಲೂ ಕಟ್ಟಾಗಿ

SCOTT'S EMULSION

31-4

(ಸ್ಕಾಟ್ಸ್ ಇಮಲ್‌ಷನ್)

ಎಂಬೀ ಸೇವನಾ ಔಷಧಿಯನ್ನು ಘನ ಪಂಡಿತರೆಲ್ಲ ಅನೇಕ ವೇಳೆ ಉಪದೇಶಿಸುತ್ತಾ, ಸನ್ಮಾನಿಸುತ್ತಾ ಬಂದಿದ್ದಾರೆ. ಹೇಳಿರುವಂತಾ ರೀತಿ. ಆದಕಾರಣ ಮತ್ತೆ ಎಂದಿನ ರೋಗಗಳಿಗೆ ಪ್ರಪಂಚದಲ್ಲೆಲ್ಲಾ ಈ ಔಷಧವು ಸರ್ವಶ್ರೇಷ್ಠವಾದದ್ದಾಗಿ ಪರಿಣಮಿಸಿದೆ.

ಕ್ಷಯರೋಗದ ಆಕ್ರಮಣಗಳು, ನಾನಾ ತರದ ಕೆಮ್ಮಲು;

ಸಕಲವಿಧ ದೌರ್ಬಲ್ಯಗಳು, ಮಾಂಸಖಂಡಗಳ ಕ್ಷೀಣತೆ;

ಆಹಾರದಲ್ಲಿ ಅರುಚಿ

ಇದಲ್ಲದೆ ರಂಗಿಗೂ ಮಗನಿಗೂ ಬಲಕಾರಿಯಾದ ಮತ್ತು ಅಂಗ ಬೆಳೆಸುವ ಸೇವನಾ ಔಷಧವೂ ಇದೇ

ಕೈಸೋಕದೆ ತಯಾರಾದದ್ದು.

ಔಷಧಗಳ ಅಂಗಡಿಗಳಲ್ಲೆಲ್ಲಾ ಬಿಕರಿಯಾಗುವದು.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್, ಔಷಧಗಳ ಕಾರ್ಖಾನೆ, ಲಂಡನ್, ಇಂಗ್ಲೆಂಡ

ಈ ಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ

ಮೈಸೂರು ಸೀಮೆಯ ಎಕ್ಸೈಜು ಕಮಿಷನರವರ ಆಫೀಸ

ತಾರೀಖು ೧೧ನೆ ಮಾರ್ಚಿ, ೧೯೧೪

ನೋಟೀಸು.

35 3

೧೯೧೪ನೆ ಇಸವಿಯ ಜುಲೈ ಮೊದಲನೆ ತಾರೀಖು ಲಾಗಾಯಿತು ೧೯೧೭ನೆ ಇಸವಿಯ ಜೂನ್ ೩೦ನೆ ತಾರೀಖಿನ ವರೆಗೆ ಆಗುವ ಮೂರು ವರ್ಷಗಳ ಪರ್ಯಂತ ಬೆಂಗಳೂರು ಬಳಿಯ ಸರ್ಕಾರಿ ಸೆಂಟ್ರಲ್ ಡಿಸ್ಟಿಲೆರಿಯ ಸಾರಾಯಿ ಕಾರ್ಖಾನೆಯಲ್ಲಿ ಪರಾಬನ್ನೂ ಇತರ ಬಳದೇಶದ ಮದ್ಯಗಳನ್ನೂ ತಯಾರಿಸ್ತಾ ಮಾಡುವುದಕ್ಕೂ, ಅವುಗಳನ್ನು ಮೈಸೂರು ಸೀಮೆಗೂ ಬೆಂಗಳೂರು ಸಿವಿಲ್ ಮತ್ತು ಮಿಲಿಟರಿ ಸ್ಟೇಷನ್ ಯದಂಡಿಗೂ ಸರಬರಾಯಿ ಮಾಡುವುದಕ್ಕೂ, ಟೆಂಡ್ಟು ಸ್ವಾಕ್ಯಕ್ಕೋಸ್ಕರ ದರಖಾಸ್ತುಗಳು ಅಪೇಕ್ಷಿಸಲ್ಪಟ್ಟಿರುತ್ತವೆ

೨. ಪ್ರತಿ ದರಖಾಸ್ತಿನ್ನೂ ೫೦೦೦ ರೂಪಾಯಿ ರೇವಣಿ ಕಳುಹಿಸಬೇಕು. ಮತ್ತು ಅಂದ ದರಖಾಸ್ತು ಈ ಕೆಳಗೆ ರುಜು ಮಾಡಿರುವವರಿಗೆ ೧೯೧೪ನೆ ಇಸವಿ ಏಪ್ರಿಲ್ ೩ನೆ ತಾರೀಖು ಬುಧವಾರ ಮಧ್ಯಾಹ್ನ ಅಥವ ಅದಕ್ಕೆ ಮುಂಚೆ ಸೇರಬೇಕು.

೩. ಇದರ ಷರತ್ತುಗಳಿಗೂ ಹೆಚ್ಚು ತಪಸೀಲುಗಳಿಗೂ ೧೯೧೪ನೆ ಇಸವಿ ಫೆಬ್ರವರಿ ೨೧ನೆ ತಾರೀಖಿನ ಪೈ. ೩ಳ೦— ಯಸ್. ಆರ್ ೫೧—೦೩ನೆ ನಂಬರಿನ ಇಸಿ ಹಾರ್‌ನಾಮೆಯನ್ನು ಮೈಸೂರು ಗೆಜೆಟ್ಟಿನಲ್ಲಿ ನೋಡತಕ್ಕದ್ದು.

ಪಿ. ಯಸ್. ಪುಟ್ಟಣ್ಣಯ್ಯ

ಮೈಸೂರು ಸೀಮೆಯ ಎಕ್ಸೈಜು ಕಮಿಷನರು

ವೃತ್ತಾಂತ ಪತ್ರಿಕೆ.

—:o:—

೧೯೦೭ ನೇ ಇಸವಿ ಏಪ್ರಿಲ್ ತಾ॥ ೧೧ ನೇ ಗುರುವಾರ.

ನಮ್ಮ ಹೊಸ ಬಹುಮಾನದ ಕ್ರಮವು.

ಕೆಲವು ಕಾಲದಿಂದೀಚೆಗೆ ನಮ್ಮಲ್ಲಿಗೆ ಬರೆದು ಬರುತ್ತಿರುವ ವರ್ತಮಾನಗಳಲ್ಲಿ ಉತ್ತಮವಾಗಿಯೂ ಉತ್ಸಾಹಕರವಾಗಿಯೂ ಇರತಕ್ಕವುಗಳಿಗೆ ಎರಡು ರೂಪಾಯಿನಂತೆ ಬಹುಮಾನ ಕೊಡುತ್ತಾ ಬಂದಿರುವೆವಷ್ಟೆ. ಈ ಬಹುಮಾನಕ್ಕಾಗಿ ಅನೇಕ ಬಾತ್ಮಿಗಳು ಬಂದಿರುತ್ತವೆ. ಆದರೆ ಅವುಗಳಲ್ಲಿ ಕೆಲವು ನಡೆದಂತೆಯೇ ನಮಗೆ ನಂಬಿಕೆಯುಂಟಾಗಲಿಲ್ಲ; ಇನ್ನು ಕೆಲವು ಅತ್ಯಲ್ಪ ವಿಚಾರಗಳಾದ್ದರಿಂದ ಪ್ರಕಟನೆಗೇ ಅರ್ಹವಾಗಲಿಲ್ಲ; ಮತ್ತೆ ಕೆಲವು ಯೋಗ್ಯವಾಗಿಯೂ ಸ್ವಾರಸ್ಯವಾಗಿಯೂ ಇದ್ದವು. ಅಂತು ಬಾತ್ಮಿಗಳಲ್ಲಿ ಬಹು ಭಾಗವು ಬೆಂಕಿಯ ಅನಾಹುತ, ಭಾವಿ ಕೊಳಗಳಲ್ಲಿ ಬಿದ್ದದು, ಕಾಡು ಮೃಗಗಳ ಹಿಂಸೆ ಈ ಮೊದಲಾದ ಸಂಗತಿಗಳು. ಸಿವಾಯಿ ನಡೆದಿರುವ ಉತ್ಸಾಹಕರವಾದ ವರ್ತಮಾನಗಳಿಗೆ ಇನ್ನು ಮುಂದೆಯೂ ಎರಡು ರೂಪಾಯಿ ಬಹುಮಾನ ಕೊಡುತ್ತಾ ಬರುವೆವು.

ಇತ್ತಲಾಗಿ ನಮ್ಮ ವಾಚಕರಲ್ಲಿ ಸಕಲ ಪ್ರಜೆಗಳಿಗೂ ಸಂಬಂಧಪಡುವ ಸರ್ಕಾರಿಯೇ ಮೊದಲಾದ ಪಬ್ಲಿಕ್ ವಿಷಯಗಳನ್ನು ಹಿಡಿದು ಚನ್ನಾಗಿ ಆಲೋಚಿಸಿ ಚರ್ಚಿಸುವಂಥಾ ಶಕ್ತಿಯನ್ನು ಉಂಟುಮಾಡಿ ಅಭಿವೃದ್ಧಿಗೆ ತರಬೇಕೆಂದು ಕುತೂಹಲ ಪಡುತ್ತೇವೆ. ಮೊದಲೇ ನಾವು ಯಾವದಾದರೊಂದು ವಿಷಯವನ್ನು ನಮ್ಮ ವಾಚಕರಿಗೆ ತಿಳಿಸುವೆವು. ಆ ವಿಷಯವನ್ನು ಕುರಿತು ವಾಚಕರು ಚನ್ನಾಗಿ ಆಲೋಚನೆ ಮಾಡಿ ಅವರ ಪಕ್ಷ ಪರಪಕ್ಷಗಳನ್ನು ಚರ್ಚಿಸಿ ಬಾತ್ಮಿಯನ್ನು ಬರೆದು ಕಳುಹಿಸಬೇಕು. ಇಂಥಾ ಬಾತ್ಮಿಗಳಲ್ಲಿ ಬಹಳ ಉತ್ಕೃಷ್ಟವಾಗಿರುವುದಕ್ಕೆ ನಾಲ್ಕು ರೂಪಾಯಿ ಬಹುಮಾನ ಕೊಡುವೆವು. ಮೊದಲನೆಯದಾಗಿ "ಮೈಸೂರು ನ್ಯಾಯವಿಧಾಯಕ ಕೌನ್ಸಿಲ್" ಎಂಬೀ ವಿಷಯವನ್ನು ಗೊತ್ತು ಮಾಡಿರುತ್ತೇವೆ. ಈ ಕೌನ್ಸಿಲ್ ಸಭೆಯ ವಿಚಾರದ ವಿಷಯದಲ್ಲಿ ನಾವೇನೋ ಸ್ವಲ್ಪಮಟ್ಟಿಗೆ ನಮ್ಮ ಅಭಿಪ್ರಾಯವನ್ನು ತಿಳಿಸಿರುವೆವು. ಆದರೂ ಬಾತ್ಮಿ ಬರೆಯತಕ್ಕವರು ನಮ್ಮ ಅಭಿಪ್ರಾಯವನ್ನೇ ಅನುಮೋದಿಸಿ ಬರೆಯಬೇಕೆಂದು ನಾವು ಅಪೇಕ್ಷಿಸುವುದಿಲ್ಲ. ಬಾತ್ಮಿದಾರರು ತಮಗೆ ತೋರುವ ಅಭಿಪ್ರಾಯಗಳನ್ನು ಗಂಭೀರವಾಗಿಯೂ ಕಾರಣಸಹಿತವಾಗಿಯೂ ಚರ್ಚಿಸಿ ಬರೆಯಬೇಕಾಗಿದೆ. ಗವರ್ನಮೆಂಟನ್ನಾಗಲಿ ಅಧಿಕಾರಿಗಳನ್ನಾಗಲಿ ಬರೀ ದೂಷಣೆ ಮಾಡಿ ಬರೆಯಲ್ಪಡುವ ಬಾತ್ಮಿಗಳನ್ನು ನಾವು ಪ್ರಕಟಿಸುವುದೇ ಇಲ್ಲ. ಆದರೂ ಗವರ್ನಮೆಂಟಿನವರ ನಡವಳಿಕೆಯನ್ನೂ ಕಾರುಕರ್ದಿಗಳನ್ನೂ ವಿವರಿಸಿ ಕಾರಣಸಹಿತವಾಗಿ ಎಷ್ಟು ಖಂಡಿಸಿ ಬರೆದಾಗ್ಯೂ ಅಂಥಾ ಬಾತ್ಮಿಗಳನ್ನು ನಾವು ಪ್ರಕಟನೆಮಾಡುವುದಕ್ಕೆ ಹಿಂತೆಗೆಯುವುದಿಲ್ಲ. ಮೇಲ್ಕಂಡ ವಿಷಯವಾದ ಬಾತ್ಮಿ ಇದೇ ಏಪ್ರಿಲ್ ೨೫ ನೆ ತಾ. ಒಳಗಾಗಿ ನಮ್ಮಲ್ಲಿಗೆ ತಲಪಿರಬೇಕು; ಅಂಥ ಬಾತ್ಮಿಗಳಲ್ಲಿ ಉತ್ತಮವಾದದ್ದನ್ನು ಮೇ ತಿಂಗಳ ೨ ನೆ ತಾ. ಪತ್ರಿಕೆಯಲ್ಲಿ ಪ್ರಕಟಿಸುವೆವು.

ಈ ಬಾತ್ಮಿ ಬರೆಯುವುದರಲ್ಲಿ ವಾಚಕರು ತಿಳಿದಿರಬೇಕಾದ ಸಂಗತಿಗಳೇನೆಂದರೆ:—

(೧) ಬಾತ್ಮಿಯು ಕಾಗದದ ಒಂದೇ ಪಕ್ಕದಲ್ಲಿ ಬರೆದಿರಬೇಕು (೨) ಬಾತ್ಮಿಯನ್ನು ಪ್ರಕಟಿಸಿದರೆ ಈ ಪತ್ರಿಕೆಯಲ್ಲಿ ಎರಡು ಕಾಲಂಗಿಂತ ಹೆಚ್ಚಾಗಕೂಡದು, ಮತ್ತು ಸುಲಭವಾದ ಕನ್ನಡಮಾತುಗಳನ್ನುಪಯೋಗಿಸಿ ಬರೆದಿರಬೇಕು (೩) ಬಾತ್ಮಿದಾರರ ಹೆಸರು ವಿಳಾಸಗಳನ್ನು ತಿಳಿಸಿರಬೇಕು, ಅಪೇಕ್ಷೆಪಟ್ಟರೆ ಅಂಥಾ ಹೆಸರು ವಿಳಾಸಗಳನ್ನು ಪ್ರಕಟಿಸುವುದಿಲ್ಲ (೪) ಬಾತ್ಮಿಗಳ ಯೋಗ್ಯತಾಪಕ್ಷವನ್ನು ಗೊತ್ತುಮಾಡುವ ಅಧಿಕಾರವು ಎಡಿಟರದಾಗಿರುತ್ತದೆ, ಅವರ ತೀರ್ಮಾನದ ಮೇಲೆ ಆಕ್ಷೇಪಣೆ ಇರಕೂಡದು (೫) ಎಲ್ಲಾ ಬಾತ್ಮಿಗಳೂ ಈ ಪತ್ರಿಕೆಯ ಸೊತ್ತಾಗಿರುವವು.

ಬಳದೇಶದ ವೃತ್ತಾಂತಗಳು.

ಸರ್ಕಾರದವರು ಡಾಕ್ಟರ್ ಅನಂತರಾಮೈಯ್ಯಂಗಾರ್ರನ್ನು ಸಕಲೇಶಪುರದಿಂದ ದಾವಣಗೆರೆಗೆ ವರ್ಗಮಾಡಿದಾರೆ.

❖❖❖

ಸುಮಾರು ೨೦—೨೫ ವರುಷಗಳಿಂದ ಬೆಂಗಳೂರಿನಲ್ಲಿ ಪ್ರಕಟವಾಗುತ್ತಿದ್ದ "ಈವಿನಿಂಗ್ ಮೆಯಿಲ್" ಎಂಬ ಇಂಗ್ಲಿಷ್ ಪತ್ರಿಕೆಯು ನಿಂತುಹೋಯಿತೆಂದು ತಿಳಿದುಬಂದಿದೆ.

ಛೀಫ್ ಜಡ್ಜಿ ಮೆ॥ ಮೂರ್ ಯವರು ಬೇಸಿಗೆ ರಜಾ ಉಪಯೋಗಿಸಿಕೊಂಡು ಸೀಮೆಗೆ ಹೋಗಿ ಬರುವವರಾಗಿದಾರೆಂದು ಕೇಳುತ್ತೇವೆ.

❖❖❖

ಪ್ರಿನ್ಸ್ ಡೆವಿಡಾಫ್ ಎಂಬೊಬ್ಬ ಇಟಲಿ ರಾಜಕುಮಾರರು ಮೆ॥ ಥಿಯೊಬಾಲ್ಡ್ ಎಂಬ ಶಿಕಾರಿದಾರರೊಡನೆ ಕಾಕನಕೋಟೆ ಜಂಗಲಿಗೆ ಹೋಗಿ ಮೂರು ವಾರಗಳಿಂದ ಶಿಕಾರಿಮಾಡುತ್ತಿದಾರೆ.

❖❖❖

ಕಳೆದ ವಾರ ಕೌನ್ಸಿಲರ್ ಮೆ॥ ಕೆ. ಪಿ ಪುಟ್ಟಣ್ಣ ಚೆಟ್ಟಿಯವರೂ, ಸೆಕ್ರಟರಿ ಮೆ॥ ಕೆ. ಎಸ್ ಚಂದ್ರಶೇಖರೈಯ್ಯರವರೂ ಬೇಸಿಗೆ ಕಳೆಯುವುದಕ್ಕಾಗಿ ಬೆಂಗಳೂರಿಂದ ನೀಲಗಿರಿಗೆ ಪ್ರಯಾಣಮಾಡಿದರು.

❖❖❖

ರಾಜಧಾನಿಯ ಕೋ ಆಪರೆಟಿವ್ ಕ್ರೆಡಿಟ್ ಸೊಸೈಟಿ ಎಂಬ ಪರಸ್ಪರ ಸಹಾಯಕ ಸಂಘದವರು ನಾಳೆ ಭಾನುವಾರ ಬೆಳಿಗ್ಗೆ ಸದ್ವಿದ್ಯಾ ಪಾಠಶಾಲಾ ಕಟ್ಟಡದಲ್ಲಿ ಜನರಲ್ ಮೀಟಿಂಗ್ ನಡಸುವವರಾಗಿದಾರೆ.

❖❖❖

ಈ ಸಂಸ್ಥಾನದಲ್ಲಿ ಸರಕುಗಳನ್ನು ಊರಿಂದೂರಿಗೆ ಹೊತ್ತುಕೊಂಡು ಹೋಗಿ ಬಿಕರಿಮಾಡತಕ್ಕ ಜಂಗಾಮಿ ವರ್ತಕರಿಗೆ ಇದುವರೆಗೆ ಹಾಕುತ್ತಿದ್ದ ವ್ಯಾಪಾರದ ಆಂದಾಯವನ್ನು ಸರ್ಕಾರದವರು ಸಂಪೂರ್ಣವಾಗಿ ವಜಾಮಾಡಿರುತ್ತಾರೆಂದು ತಿಳಿಯುವುದು.

❖❖❖

ಮಾರ್ಚ್ ೨೯ ಕ್ಕೆ ಆಖೈರಾದ ವಾರದಲ್ಲಿ ಈ ಸಂಸ್ಥಾನದೊಳಗೆ ೩೦೩ ಪ್ರಜೆಗಳಿಗೆ ವಾಂತಿಭೇದಿ ಉಪದ್ರ ತಗಲಿ ೨೦೬ ಜನರು ಕಾಲವಾದರು. ಈ ಉಪದ್ರವು ಮೈಸೂರು ಡಿಸ್ಟ್ರಿಕ್ಟಿಗೆ ಸೇರಿದ ೧೦೪ ಗ್ರಾಮಗಳಲ್ಲಿ ಹರಡಿಕೊಂಡು ೧೩೬ ಜನರನ್ನು ಕೊಂದುಬಿಟ್ಟಿದೆ.

❖❖❖

ರಾಜಧಾನಿಯ ಪಸುವಿನ ಕಲ್ಲೋಣಿ ಹಿಂದೆ ಇರುವ ಮ॥ ಅಯ್ಯಾಶಾಸ್ತ್ರಿಗಳ ಮನೆಯಲ್ಲಿ ಕಳುವಾದ ಮಾಲಿನ ಪೈಕಿ ಸುಮಾರು ೧,೨೦೦ ರೂಪಾಯಿನಷ್ಟು ಸಿಕ್ಕಿರುತ್ತದೆ. ಕಾಲ್ಕೂಶ್ ಪೊಲೀಸಿನವರೂ ಬರ್ನಾನವರೂ ಸಾಹಸಪಟ್ಟು ಐದು ಮಂದಿಯನ್ನು ಹಿಡಿದು ಮೊಕದ್ದಮೆ ಮಾಡಿರುತ್ತಾರೆ.

❖❖❖

ರಾಜಧಾನಿಯಲ್ಲಿ ಶಾಪ ಎಂಬುವನು ಮಾರ್ಕೆಟ್ಟಿನಲ್ಲಿ ವೀಳ್ಯದೆಲೆ ಕೊಂಡುಕೊಂಡು, ಸೀಸದ ದೊಡ್ಡಾಣೆಯನ್ನು ಕೊಟ್ಟನು. ಅವನ ಮೈ ಶೋಧನೆಮಾಡಿದಾಗ ಅಂಥಾ ದೊಡ್ಡಾಣೆಗಳು ಇನ್ನೇಳು ಸಿಕ್ಕಿದವು. ಇದು ಮೊಕದ್ದಮೆ ಆಗಿ ಸೆಷನ್ಸ್ ಜಡ್ಜರು ದಯಾರ್ದ್ರಹೃದಯದಿಂದ ಅವನಿಗೆ ನಾಲ್ಕು ವರುಷ ಕಠಿಣ ಸಜಾ ವಿಧಿಸಿರುತ್ತಾರೆ.

❖❖❖

ರಾಜಧಾನಿಯ ಮಹಾರಾಜಾ ಕಾಲೇಜ್ ಉಪಾಧ್ಯಾಯರಾದ ಮೆ॥ ಕೃಷ್ಣಮೂರ್ತಿಯವರು ಕಳೆದ ವಾರ ಕಳೆದುಕೊಂಡ ೧೦೦ ರೂಪಾಯಿನ ಕರೆನ್ಸಿ ನೋಟನ್ನು ಸ್ಕೂಲ್ ಹುಡುಗರಿಬ್ಬರು ತೆಗೆದುಕೊಂಡು ಹೋಗಿ, ತಮ್ಮ ಹೆಡ್ ಮಾಸ್ಟರ ವಶಕ್ಕೆ ಕೊಟ್ಟರು. ಅದರ ಮಾಲೀಕರಿಗೆ ಅದು ತಲಪಿದ್ದರಿಂದ ಅವರು ಆ ಹುಡುಗರಿಗೆ ಬಹುಮಾನ ಕೊಟ್ಟು ಇರುತ್ತಾರೆ.

❖❖❖

ಹಾಸನದ ಡೆಪ್ಟಿ ಕಮಿಷನರ್ ಮೆ॥ ಪಿ ಆರ್ ಡಬ್ಲಿಯು ಪೆದರಾಲ್ ಯವರಿಗೆ ಬಾಗೂರುವಾಯಿ ಎಸ್ಟೇಟಿನ ಕಾಫಿ ಪ್ಲಾಂಟರ್ ಮೆ॥ ಆರ್ ಎ ಚಂದ್ರಶೇಖರವರ ಕುಮಾರ್ತೆಯನ್ನು ಕೊಟ್ಟು ಅದೇ ತೋಟದ ಬಂಗಲೆಯಲ್ಲಿ ಈ ತಿಂಗಳ ೩೦ ನೆ ತಾ ವಿವಾಹವಾಗುವುದು. ಆ ತರುವಾಯ ಮೆ॥ ಪೆದರಾಲ್ ಯವರು ಮೂರು ತಿಂಗಳ ರಜಾ ಪಡೆದುಕೊಳ್ಳುವರು. ಅವರ ಬದಲಿಗೆ ಮೆ॥ ಕೆ. ಆರ್. ಶ್ರೀನಿವಾಸೈಯ್ಯಂಗಾರು ನೇಮಿಸಲ್ಪಟ್ಟಿದಾರೆ.

❖❖❖

ಬೆಂಗಳೂರು ಸೆಂಟ್ರಲ್ ಕಾಲೇಜ್ ರೈಟರ್ ನಾರಾಯಣಮೂರ್ತಿಯು ಸರ್ಕಾರಕ್ಕೆ ೪,೦೦೦ ರೂಪಾಯಿಗೆ ದ್ರೋಹ ಮಾಡಿದನೆಂದು ಮೊಕದ್ದಮೆ ಆಗಿ ೭ ವರುಷ ಕಠಿಣ ಸಜ ೪,೦೦೦ ರೂಪಾಯಿ ಜುಲ್ಮಾನೆ ವಿಧಿಸಲ್ಪಟ್ಟರು. ಈಚೆಗೆ ಆತನು ಛೀಫ್ ಕೋರ್ಟಿನಲ್ಲಿ ಅಪೀಲ್ ಮಾಡಿಕೊಂಡಿದ್ದನು. ಇಬ್ಬರು ಜಡ್ಜಿಗಳು ಈ ಮೊಕದ್ದಮೆಯನ್ನು ಪರಿಶೋಧನೆ ಮಾಡಿ, ಸಜವನ್ನು ೪ ವರುಷಕ್ಕೂ ಜುಲ್ಮಾನೆಯನ್ನು ೧,೦೦೦ ರೂಪಾಯಿಗೂ ಇಳಿಸಿರುತ್ತಾರೆ.

❖❖❖

ಬರೋಡಾ ಸಂಸ್ಥಾನದ ಮಹಾರಾಜರವರ ಸಹೋದರರಾದ ಶ್ರೀಮಂತ ಸಂಪತ್ ರಾವ್ ಯವರು ಕಳೆದ ಗುರುವಾರ ರಾಜಧಾನಿಗೆ ಬಂದು ಜಗನ್ಮೋಹನಬಂಗಲೆಯಲ್ಲಿ ಇದ್ದು ನಮ್ಮ ಮಹಾರಾಜರವರ ಆತಿಥ್ಯವನ್ನು ಸ್ವೀಕರಿಸುತ್ತಿದಾರೆ. ಅವರ ಸಂಗಡ ಮೂವರು ಹುದ್ದೇದಾರರೂ ದನ್ನೊಂದುಮಂದಿ ಪರಿವಾರದವರೂ ಬಂದಿರುವರು. ಕಳೆದವಾರ ಅವರು ಅರಮನೆ, ಖಾಸಾ ತಬೇಲೆ, ಪಬ್ಲಿಕ್ ಕಟ್ಟಡಗಳು, ಚಾಮುಂಡಿಬೆಟ್ಟ, ಶ್ರೀರಂಗಪಟ್ಟಣ ಮೊದಲಾದ್ದನ್ನು ನೋಡಿದರು.

❖❖❖

ಶಿವಮೊಗ್ಗ ಡಿಸ್ಟ್ರಿಕ್ಟು ಶಿಕಾರಿಪುರದ ತಾಲ್ಲೂಕು ಶಿರಾಳಕೊಪ್ಪದಲ್ಲಿ ಏಪ್ರಿಲ್ ೧ ನೇ ತಾ ಸೋಮವಾರ ಮಧ್ಯಾಹ್ನ ೪ ಗಂಟೆಯಲ್ಲಿ ಇದೇ ಊರುವಾಸಿ ಕೆಲುವಿ ಬಸವನ ಹೆಂಡತಿ ಶಾಮಂತ್ರಿ ಎಂಬವಳು ಮೂರು ಗಂಡುಮಕ್ಕಳನ್ನು ಹೆತ್ತಳು. ಈಕೆಗೆ ಎಂಟು ತಿಂಗಳಾದ್ದರಿಂದ ಹೆತ್ತ ಅರ್ಧ ಗಂಟೆಯಲ್ಲೆ ಮೃತಪಟ್ಟಳು. ಆ ಮೇಲೆ ಸ್ವಲ್ಪ ಹೊತ್ತಿನಲ್ಲಿಯೇ ಹುಟ್ಟಿದ ಮೂರು ಗಂಡು ಕೂಸುಗಳೂ ಸತ್ತುಹೋದವ. ಜನನಕಾಲದಲ್ಲಿ ಅವಳು ಕಷ್ಟಪಟ್ಟದ್ದು ನೋಡಿದವರು ಬಹಳ ವ್ಯಸನಪಡುತ್ತಾರೆ. ಎಂದೊಬ್ಬ ಬಾತ್ಮಿದಾರರು ಬರೆಯುವರು.

ಕಳೆದ ನವರಾತ್ರಿಯಲ್ಲಿ ರಾಜಧಾನಿಯ ಪೊಲೀಸಿನವರು ಮೂವರು ಹುಡುಗರನ್ನು ಕಳುವುಮಾಡಿದರೆಂದು ಹಿಡಿದು ಹಿಂಸೆಪಡಿಸಿದರೆಂಬುದಾಗಿ ಪೊಲೀಸಿನವರ ಮೇಲೆ ಮೊಕದ್ದಮೆ ಆಗಿ ಆ॥ ಸೆಷನ್ ಜಡ್ಜಿಗಳು ಸಬ್ ಇನ್ಸ್ಪೆಕ್ಟರ್ ಮೆ॥ ದೇವರಾಜೇ ಅರಸಿನವರಿಗೂ ಒಬ್ಬ ಕಾನ್ಸ್ಟೆಬಲಿಗೂ ಸಾದಾ ಸಜಾ ವಿಧಿಸಿದ್ದರು. ಈ ಮೊಕದ್ದಮೆ ಅಪೀಲಾಗಿ ಡಿಸ್ಟ್ರಿಕ್ಟ್ ಜಡ್ಜಿಯವರು ತನಿಖೆಯಿಂದ ಆ ಹುಡುಗರನ್ನು ಹಗಲುಹೊತ್ತಿನಲ್ಲಿ ಮಾರ್ಕೆಟ್ಟಿನ ಸ್ಟೇಷನ್ ಒಳಗೆ ಹಿಂಸೆಪಡಿಸಿದರೆಂಬ ಮಾತನ್ನು ನಂಬಲಿಕ್ಕಾಗುವುದಿಲ್ಲವೆಂದು ಹೇಳಿ, ಕೆಳಕೋರ್ಟಿನ ಶಿಕ್ಷೆಯನ್ನು ರದ್ದುಮಾಡಿ, ಮೆ॥ ದೇವರಾಜೇ ಅರಸಿನವರನ್ನೂ ಕಾನ್ಸ್ಟೆಬಲನ್ನೂ ನಿರಾಪರಾಧಿಗಳೆಂದು ತೀರ್ಮಾನಿಸಿ ಖುಲಾಸ್ ಮಾಡಿದರು.

ಮೈಸೂರು ಪೊಲೀಸ್ ಲಾಕಪ್ಪಿನಲ್ಲಿ ಮರಣವು.

ಈ ವಾರ ನಡೆದಿರುವ ಸಮಾಚಾರಗಳು

ಕಳೆದ ೩ ನೆ ತಾ ಬುಧವಾರ ಬೆಳಿಗ್ಗೆ ರಾಜಧಾನಿಯ ದೊಡ್ಡಪೇಟೆಯಲ್ಲಿರುವ ಸರವಿಸ್ ಚಾವಡಿ ಎಂಬ ಪೊಲೀಸ್ ಠಾಣಾ ಲಾಕಪ್ಪಿನಲ್ಲಿ ಅನಂತಶೆಟ್ಟಿ ಎಂಬ ಸುಮಾರು ೪೦—೪೫ ವಯಸ್ಸಿನ ಸರಾಫ್ ವೈಶ್ಯ ವರ್ತಕನು ಮೃತಪಟ್ಟಿದ್ದನೆಂಬ ಸಂಗತಿಯನ್ನು ಸಂಕ್ಷೇಪವಾಗಿ ಕಳೆದ ವಾರ ತಿಳಿಸಿರುತ್ತೇವಷ್ಟೆ. ಆ ದಿನ ಡೆಪ್ಟಿ ಕಮಿಷನರವರೂ ಪೊಲೀಸ್ ಸೂಪರೇಂಟರೂ ಟೌನ್ ಮ್ಯಾಜಿಸ್ಟ್ರೇಟರೂ ಸಿವಿಲ್ ಸರ್ಜನರೂ ಮಧ್ಯಾಹ್ನ ಸುಮಾರು ಒಂದು ಗಂಟೆಯ ತನಕ ಪೊಲೀಸ್ ಠಾಣದಲ್ಲೇ ಇದ್ದು ಜನರಲ್ಲಿ ದುರಭಿಪ್ರಾಯಗಳೇನಾದರೂ ಉಂಟಾಗದಂತೆ ಮೃತಪಟ್ಟವನ ಸಂಬಂಧೀಕರನ್ನು ಇಟ್ಟುಕೊಂಡು ಮಹಜರು ಮಾಡಿಸಿದರು. ಮತ್ತು ಆಗ ಯಾರು ಯಾರು ಯಾವ ಯಾವ ರೀತಿಯಲ್ಲಿ ಸಂಶಯಪಟ್ಟು ಕೇಳಿದರೂ ಅವರಿಗೆಲ್ಲಾ ಮನಸ್ಸಮಾಧಾನವಾಗುವಂತೆ ಬಹು ತಾಳ್ಮೆಯಿಂದ ಸಮಾಧಾನಹೇಳಿ ಸಂತೈಸಿದರು. ಆ ಸಂಬಂಧೀಕರು ಅಪೇಕ್ಷಿಸಿದಂತೆ ಅವರ ಕೂಡೆ ಶವವನ್ನು ಆಸ್ಪತ್ರೆಗೆ ಪರೀಕ್ಷೆ ಮಾಡುವುದಕ್ಕೆ ಕಳುಹಿಸಿದರು. ಅಲ್ಲಿ ಸಿವಿಲ್ ಸರ್ಜನರವರು ಖುದ್ದಾಗಿ ಶವವನ್ನು ಶಸ್ತ್ರಗಳಿಂದ ಕತ್ತರಿಸಿ ಹೊಟ್ಟೆಯೊಳಗಣ ಅಂಗಾಂಗಳನ್ನೆಲ್ಲಾ ತಾವೇ ಪರೀಕ್ಷೆಮಾಡಿ, ಕಡೆಯಲ್ಲಿ ಅವನು ಉಸಿರುಕಟ್ಟಿ ಮೃತಪಟ್ಟಿರುತ್ತಾನೆಂದು ಅಭಿಪ್ರಾಯಪಟ್ಟು ಮ್ಯಾಜಿಸ್ಟ್ರೇಟರಿಗೆ ತಿಳಿಸಿದಂತೆ ಕೇಳುತ್ತೇವೆ. ಶೆಟ್ಟಿಯ ಸಂಬಂಧಿಗಳು ಪೊಲೀಸಿನವರ ಹಿಂಸೆಯಿಂದಲೇ ಅವನು ಮೃತಪಟ್ಟಿರಬೇಕೆಂದು ಇಟ್ಟುಕೊಂಡು, ಡಾಕ್ಟರ ಸರ್ಟಿಫಿಕೇಟಿನ ಕಾಪಿ ಕೊಡಬೇಕೆಂದು ಮ್ಯಾಜಿಸ್ಟ್ರೇಟರನ್ನು ಕೇಳಿಕೊಂಡರು. ಸಾಮಾನ್ಯವಾಗಿ ಗಾಯಪಟ್ಟವರನ್ನು ಪರೀಕ್ಷೆ ಮಾಡಿದರೆ ಪರೀಕ್ಷೆಮಾಡಿದ ಡಾಕ್ಟರು ರುಜು ಹೊಂದುಕೊಂಡು ಗಾಯದ ವಿವರ ಮುಂತಾದದ್ದನ್ನು ನಮೂದಿಸಿ ಸರ್ಟಿಫಿಕೇಟ್ ಕೊಡುತ್ತಾರೆ. ಆದರೆ ಶವಗಳನ್ನು ಕೊಯ್ದು ಪರೀಕ್ಷೆಮಾಡಿದರೆ ಡಾಕ್ಟರು ತಮ್ಮ ಅಭಿಪ್ರಾಯವನ್ನು ಸಂಬಂಧೀಕರಿಗೆ ಕೊಡುವುದಿಲ್ಲ, ಮ್ಯಾಜಿಸ್ಟ್ರೇಟರಿಗೆ ಕಳುಹಿಸುವರು. ಆದ್ದರಿಂದ ಮ್ಯಾಜಿಸ್ಟ್ರೇಟರು ಶೆಟ್ಟಿಯ ಸಂಬಂಧೀಕರಿಗೆ ಡಾಕ್ಟರ್ ಸರ್ಟಿಫಿಕೇಟ್ ಕೊಡಲಿಲ್ಲ. ಅವರು ಅನುಮಾನಪಟ್ಟು ಶವವನ್ನು ಆಸ್ಪತ್ರೆಯಲ್ಲೇ ಬಿಟ್ಟು ಬೆಂಗಳೂರು ದಂಡಿನಿಂದ ಡಾಕ್ಟರ್ ನೆಯಿಲರ್ ಎಂಬ ಇಂಗ್ಲಿಷ್ ವೈದ್ಯನನ್ನು ತಾವಾಗಿಯೇ ಕರಸಿ, ಆತನಿಂದ ಶವವನ್ನು ಪರೀಕ್ಷೆಮಾಡಿಸಬೇಕೆಂದು ಪ್ರಯತ್ನಪಟ್ಟರು. ಗುರುವಾರ ಸಾಯಂಕಾಲದ ತನಕ ಆ ಡಾಕ್ಟರು ಬರಲಿಲ್ಲ. ಶವವು ಆಸ್ಪತ್ರೆಯಲ್ಲೇ ಇತ್ತು. ಅದನ್ನು ಕೊಯ್ದುಬಿಟ್ಟದ್ದರಿಂದ ಬಹುಕಾಲ ಹಾಗೇ ಬಿಟ್ಟಿರುವುದು ಸರಿಯಲ್ಲವೆಂತಲೂ ದುರ್ಗಂಧ ಬಡಿಯುವುದಕ್ಕೂ ಆಸ್ಪತ್ರೆಯಲ್ಲಿರುವ ರೋಗಿಗಳ ಆರೋಗ್ಯ ಕೆಡುವುದಕ್ಕೂ ಕಾರಣವಾಗುತ್ತದೆಂದು ಸಿವಿಲ್ ಸರ್ಜನರವರು ಮ್ಯಾಜಿಸ್ಟ್ರೇಟರಿಗೆ ತಿಳಿಸಿದರು. ಆಗ ಮ್ಯಾಜಿಸ್ಟ್ರೇಟರು ವಾರಸುದಾರರಿಗೆ ಕೆಲವು ಗಂಟೆಗಳ ವಾಯಿದೆ ಕೊಟ್ಟು ಅಷ್ಟರೊಳಗೆ ಶವವನ್ನು ಅವರ ಸುಪರ್ದಿಗೆ ತೆಗೆದುಕೊಳ್ಳದೆ ಹೋದರೆ ಪೊಲೀಸಿನವರ ಮೂಲಕ ಅದನ್ನು ಅಲ್ಲಿಂದ ಸಾಗಿಸಿಬಿಡುವುದಾಗಿ ತಿಳಿಸಿದರು. ಆ ಸಂಬಂಧೀಕರು ತಮ್ಮ ಡಾಕ್ಟರು ಬೆಳಿಗ್ಗೆ ಬರುತ್ತಾರೆಂತಲೂ ಅದುವರೆಗೆ ತಾವು ಶವವನ್ನು ತಮ್ಮ ಸ್ವಾಧೀನಕ್ಕೆ ತೆಗೆದುಕೊಳ್ಳುವದಿಲ್ಲವೆಂತಲೂ ಹೇಳಿಹೋದರು. ಅದೇ ಗುರುವಾರ ರಾತ್ರಿ ಮ್ಯಾಜಿಸ್ಟ್ರೇಟರ ಅಪ್ಪಣೆಪಡೆದು ಪೊಲೀಸಿನವರು ಶವವನ್ನು ಆಸ್ಪತ್ರೆಯಿಂದ ಸಾಗಿಸಿ ದಫನ್ ಮಾಡಿದರು. ಶುಕ್ರವಾರ ಬೆಳಿಗಿನ ರೈಲಿನಲ್ಲಿ ಬಂಧುಗಳು ಡಾಕ್ಟರ್ ನೆಯಿಲರ್ ಎಂಬವರನ್ನು ಕರೆದುತಂದರು. ಶವವು ಪರೀಕ್ಷೆಮಾಡುವುದಕ್ಕೆ ಸಿಕ್ಕಲಿಲ್ಲವೆಂದು ಕೇಳಿ ಡಾಕ್ಟರು ಹಿಂತಿರುಗಿ ಆ ದಿನವೇ ಬೆಂಗಳೂರಿಗೆ ಹೊರಟುಹೋದರು. ಕೆಲವರು ಅವರಿಗೆ ಪೂರಾ ಫೀಜನ್ನು ಪಾವತಿಮಾಡದಿಲ್ಲವಾದ್ದರಿಂದ ಅವರು ನಿಲ್ಲದೆ ವಾಪಸು ಹೋದರೆಂದೂ ಹೇಳುತ್ತಾರೆ. ಆ ದಿನ ಅಂದರೆ ಶುಕ್ರವಾರ ಮಧ್ಯಾಹ್ನ ಶೆಟ್ಟಿಯ ಹೆಂಡತಿಯು ಅರ್ಜಿ ಬರೆಸಿಕೊಟ್ಟು, ಶವವನ್ನು ತನ್ನ ವಶಕ್ಕೆ ಡಾಕ್ಟರ ಪರೀಕ್ಷೆಗೂ ಉತ್ತರಕ್ರಿಯಾದಿಗಳನ್ನು ನಡಸುವುದಕ್ಕೂ ಕೊಡಿಸಬೇಕೆಂದು ಸಿಟಿ ಮ್ಯಾಜಿಸ್ಟ್ರೇಟರನ್ನು ಕೇಳಿಕೊಂಡಳು. ಮ್ಯಾಜಿಸ್ಟ್ರೇಟರು ಶವವನ್ನು ಅವರ ವಶಕ್ಕೆ ಕೊಡಬೇಕೆಂದು ಪೊಲೀಸಿನವರಿಗೆ ಹುಕುಂ ಕೊಟ್ಟರು. ಪೊಲೀಸಿನವರೂ ಕೂಡ ಆಕೆಗೆ ಶವವನ್ನು ತೆಗೆದುಕೊಳ್ಳಬಹುದೆಂದು ತಿಳಿಸಿದರು. ಇಷ್ಟರಲ್ಲೇ ಆಕೆಯ ಬಂಧುಗಳು ಪರೀಕ್ಷೆಮಾಡಿಸುವುದಕ್ಕೆ ಅದೇ ಡಾಕ್ಟರನ್ನು ಬೆಂಗಳೂರಿಂದ ಕರಸಬೇಕೆಂದು ತಂದೂದು ನಡಿಸಿದಂತೆ ಕಾಣುತ್ತದೆ. ಹ್ಯಾಗೂ ಆ ಡಾಕ್ಟರು ಬಾರದೆ ಹೋದರು. ಶುಕ್ರವಾರವೂ ಶನಿವಾರವೂ ಆ ಬಂಧುಗಳು ಆಲೋಚನೆಮಾಡುವುದರಲ್ಲೇ ಕಳೆದರು. ಶವವೇನೋ ಭೂಗತವಾಗಿಯೇ ಇದ್ದಿತು. ಮಾರು ದಿನ ಅಂದರೆ ಭಾನುವಾರ ಶೆಟ್ಟಿಯ ಹೆಂಡತಿಯೂ ರಕ್ತಸಂಬಂಧಿಗಳೂ ಹೋಗಿ ಪೊಲೀಸಿನವರ ಉಸ್ತುವಾರಿಯಲ್ಲಿದ್ದ ದಫನ್ ಆದ ಶವವನ್ನು ಕೀಳಿಸಿ, ತಮ್ಮ ಸ್ವಾಧೀನಮಾಡಿಕೊಂಡು, ತಮ್ಮ ಮತ ಶಾಸ್ತ್ರ ರೀತಿಯ ಪ್ರಕಾರ ದಹನಕಾರ್ಯಗಳನ್ನು ಮಾಡಿಸಿದರು. ಇಲ್ಲಿಗೆ ಈ ಗಲಭೆಯೆಲ್ಲಾ ಮುಕ್ತಾಯವಾದ ಹಾಗೆ ಕಾಣುತ್ತದೆ.

ಬಾಲಶಿಕ್ಷೆ ೧ನೇ ಭಾಗ!
ಬಾಲಶಿಕ್ಷೆ ೧ನೇ ಭಾಗ!!
ಬಾಲಶಿಕ್ಷೆ ೧ನೇ ಭಾಗ!!!

ಬೇಗ ತರಿಸಿಕೊಳ್ಳಿ.

23-3

ಕ್ರಯ ೧ ಆಣೆ. ವಿ. ಪಿ. ಮೂಲಕ ಮೂರು ಆಣೆಗಳು. ನೂರು ಪ್ರತಿಗಳಿಗೆ ಹನ್ನೆರಡು ಪ್ರತಿಗಳು ಕಮೀಷನ್.

ವಿಳಾಸ:—ಮ್ಯಾನೇಜರ್, ಸಿ. ಎಲ್. ಎಸ್.

ಬುಕ್ ಡಿಪೋ, ಮೈಸೂರು.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

11-11

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನ ದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ನಾವಿ ಬಿಕರಿಯಾಗುತ್ತಿರುವ ಟೋಪಿಗಳ ಪಾರವೆಲ್ಲಾ ಬೀಳಾದದ್ದು. ಆದ್ದರಿಂದ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ:—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ಪಾರವೆಲ್ಲಾ ನೆಟ್ಟಗೆ ವಿಲಾಯಿತಿಯಿಂದಲೇ ಬರುವದು. (೨) ಟೋಪಿಗಳನ್ನು ಬಿಟ್ಟದ್ದಾಗಿ ನಾವೇ ಸ್ವಂತ ಚನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ, ಚನ್ನಾಗಿ ಕಸಿದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಸೀದಾ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದೂ ಚನ್ನಾಗಿಲ್ಲದ್ದು ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ.

ಸಾದ, ಕೆಂಪು, ಕಪ್ಪು, ಬಿಳಿ, ಕಾಗೆ ಟೋಪಿಗಳು ೧ ರೂ ೮ ಆ; ೧ ರೂ ೬ ಆ; ೧ ರೂ ೪ ಆ

ರೇಷ್ಮೆ ಜರಿಕೆಯುಳ್ಳ ಟೋಪಿಗಳು ೧ ರೂ. ೮ ಆ.; ೨ ರೂ ಪಾರದ ಟೋಪಿಗಳು ೧ ರೂ. ೧೨ ಆ; ೧ ರೂ. ೮ ಆ.; ೧ ರೂ. ೬ ಆ

ಉಸುಕಿನ ಟೋಪಿಗಳು ೧ ರೂ. ೮ ಆ; ೧ ರೂ. ೬ ಆ.

ಹೊಸಗಳ ಟೋಪಿ, ಸೂರ್ತಿ ಮೇಜೋಡು, ಅರ್ಧ ಮೇಜೋಡು, ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು.

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ.

ಜಡೆಕುಚ್ಚು, ಪಚ್ಚೆಯ ಜಡೆಬಿಲ್ಲೆ.

36-3

ನವೀನ ಆಭರಣಗಳು; ಬೇಗನೋಡಿ.

ಇದರಿಂದ ಸರ್ವರಿಗೂ ತಿಳಿಸುವದೇನಂದರೆ—ನಮ್ಮಲ್ಲಿ ಬಹಳ ಶ್ರೇಷ್ಠವಾದ ಎಲೆಕ್ಟ್ರಿಕ್ ಚಿನ್ನದ ಗಿಲ್ಟ್ ನಿಂದ ತಯಾರಿಸಲ್ಪಟ್ಟ ಭಂಗಾರದ ಆಭರಣಗಳು ಬಹಳ ಸುಲಭ ಕ್ರಯಕ್ಕೆ ದೊರೆಯುತ್ತವೆ. ಇದರಲ್ಲಿ ಕಂಡ ಆಭರಣಗಳನ್ನು ಚಿನ್ನದ ಕೆಲಸ ಮಾಡುವದರಲ್ಲಿ ಬಹಳ ಸಮರ್ಥರಾದ ಅಕ್ಕಸಾಲಿಗರಿಂದ ತಯಾರಿಸಲ್ಪಟ್ಟಿರುತ್ತದೆ. ಇದು ಬಹಳ ಕಾಲಗಳ ವರೆವಿಗೂ ರಂಗು ಹೋಗದ ಹಾಗೆ ಬಲವಾದ ಎಲೆಕ್ಟ್ರಿಕ್ ಚಿನ್ನದ ಗಿಲ್ಟ್ ಹಾಕಲ್ಪಟ್ಟಿರುತ್ತದೆ. ಇದರ ಕೆಲಸದ ನಾಜೂಕು, ಸ್ವಚ್ಛ ಭಂಗಾರದ ಆಭರಣಗಳನ್ನು ಸೋಲಿಸುತ್ತೆ. ಈ ಕೆಳಗೆ ಕಂಡ ಆಭರಣಗಳಲ್ಲಿ ಯಾವದಾದರೂ ಒಂದನ್ನು ತರಿಸಿ ಪರೀಕ್ಷಿಸಿ.—

೧. ಜಡೆಕುಚ್ಚು.

ಕ್ರಯ ರೂ. ೩—೮—೦.

ಇದರ ಪ್ರತಿಯೊಂದು ಕುಚ್ಚಿಗೆ ಸುತ್ತಲೂ ಸುಂದರವಾದ ಗಚ್ಚುಗಳನ್ನು ಸುತ್ತಲ್ಪಟ್ಟ ನಾಜೂಕಾಗಿ ಗೊಂಡೆಗಳನ್ನು ಕಟ್ಟಿ ನೋಡುವವರಿಗೆ ನಿಜವಾದ ಭಂಗಾರದ ಆಭರಣವೆನ್ನುವ ಹಾಗೆ ತಯಾರಿಸಲ್ಪಟ್ಟಿರುತ್ತೆ.

೨. ಪಚ್ಚೆ ಕಲ್ಲು ಜಡೆಬಿಲ್ಲೆ. ಚಿನ್ನದ ಗಿಲ್ಟು ಮಾಡಿದ್ದು. ಒಕ್ಕ ಸೆಲೆ ರೂ. ೨—೦—೦. ಇದು ಮೇಲಾದ ನಕಾಸಿ ಕೆಲಸಗಳನ್ನು ಮಾಡಿ ಪಚ್ಚೆ ಕಲ್ಲಿನಿಂದಲಿ ಇಡಲ್ಪಟ್ಟಿರುತ್ತೆ. ಎಷ್ಟು ವರ್ಷಗಳ ಪರ್ಯಂತರ ಇಟ್ಟಾಗ್ಯೂ ರಂಗು ಹೋಗದು, ... ಕಣ್ಣು ಚದುರುವಷ್ಟು ಪ್ರಕಾಶವುಳ್ಳದ್ದು.

ನಮ್ಮ ವಿಳಾಸ—ಜರ್ಮನ್ ಸಿಲ್ವರ್ ಜ್ಯುಯಲ್ ಡಿಪೋ, ಸಾವುಕಾರ್ ಪೇಟೆ, ಮದ್ರಾಸು.

CHAMBERLAIN'S PAIN BALM

ಚೇಂಬರ್ಲಿನ್ ಯವರು ಮಾಡಿದ ನೋವುಹರ ಔಷಧವು.

4-15



ಬೆನ್ನು ಉಳುಕಿನಲ್ಲಿನ ನೋವು, ಪಕ್ಕಗಳಲ್ಲಿ ಆಗುವ ನೋವು, ಖಂಡಗಳಲ್ಲಿ ಹುಟ್ಟುವ ನೋವು, ತಲೆನೋವು, ಅಜ್ಜಿದ ಕಡೆಗಳ ನೋವು, ವಾಯುನೋವು—ಇವುಗಳನ್ನೆಲ್ಲಾ ಸಂಪೂರ್ಣವಾಗಿ ವಾಸಿಮಾಡುವಂಥಾ ಔಷಧ.

ವಾಯುನೋವೆಂದರೇನು?

ಕೀಲುಗಳೆಲ್ಲಾ ಮಣಿಕಟ್ಟುಗಳೆಲ್ಲಾ ಗಾಯವಾಗುವುದು, ಊದಿಕೊಳ್ಳುವುದು, ಕಠಿಣವಾಗಿ ಕಳೆಯುವ ಬಾಧೆ ಖಂಡಗಳಲ್ಲಿ ಇರಿಯುವುದು, ವಿಶ್ರಾಂತಿಕೊಡದೆ ಇರುವುದು, ನಿದ್ದೆ ಹತ್ತದೆ ಇರುವುದು—ಇದೇ ಇದೆಲ್ಲಾ ನಿಮಗೆ ಯಾವಾಗ ಉಂಟಾಗುವುದೋ ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು.

ಆಗ ಚೇಂಬರ್ಲಿನ್ ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ.

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹಾ ಕಾವು ಮೂಲೆಯೊಳಕ್ಕೆ ವ್ಯಾಪಿಸುತ್ತದೆ. ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ. ಮನಸ್ಸಿಗೆ ಉಲ್ಲಾಸವಾಗುತ್ತದೆ. ಅದನ್ನೇ ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯುವಿನ ಹುಟ್ಟನ್ನೇ ಕಿತ್ತುಹಾಕಿಬಿಡುವುದು.

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ.

ಕೈಯಿಂದ ಮುಟ್ಟಿದ್ದೇನೂ ಇಲ್ಲ.

ಇದು ಎಲ್ಲೆಲ್ಲೂ ಬಿಕರಿಯಾಗುವುದು. ಸಣ್ಣ ಸೀಸೆಗೆ ೧ ರೂಪಾಯಿ. ದೊಡ್ಡ ಸೀಸೆಗೆ ೨ ರೂಪಾಯಿ.

ಹೊಸ ಪುಸ್ತಕ.

62-3

ಜಗತಾನೆ ಹೊರಟಿದೆ! ಹಳೇದು ಹೊಸದಾಗಿದೆ!

ಪುರಾಣೇತಿಹಾಸಗಳಿಂದಲೂ, ಪಂಚತಂತ್ರ ಮೊದಲಾದ ಇನ್ನೂ ಅನೇಕ ಪ್ರಾಚೀನ ಗ್ರಂಥಗಳಿಂದಲೂ ಸಂಗ್ರಹಿಸಲ್ಪಟ್ಟ ಅನೇಕಾನೇಕ ಸ್ವಾರಸ್ಯವಾದ ಕಥಾವಳಿಯಿಂದ ರಚಿಸುತ್ತಾ ಸರ್ವರಿಗೆ ಅತ್ಯಂತ ಸಂತೋಷದಾಯಕವಾದುದಾಗಿಯೂ ಬುದ್ಧಿಪ್ರದವಾಗಿಯೂ ಇದ್ದ "ಕಥಾಸಂಗ್ರಹ" ವೆಂಬ ಗ್ರಂಥವನ್ನು ಪುನಃ ತಿದ್ದಿ ಛಾಪಿಸಬೇಕೆಂದು ಉದ್ದೇಶಿಸಿ ಮೊದಲನೆಯ ಮೂರು ಭಾಗಗಳನ್ನು ಕೆಳಗಿನ ರೀತಿ ಪ್ರಥಮ ಸಂಪುಟವನ್ನು ೧೯೦೬ ನೇ ಇಸವಿಯಲ್ಲಿ ಪ್ರಚುರಗೊಳಿಸಿದೆವು. ಈ ಸಂಪುಟದ ಅನೇಕ ಪ್ರತಿಗಳನ್ನು ಕೊಂಡು ನಮಗೆ ಪ್ರೋತ್ಸಾಹವನ್ನು ಕೊಟ್ಟ ಕರ್ನಾಟಕ ಭಾಷಾಭಿಮಾನಿಗಳೆಲ್ಲರಿಗೆ ನಾವು ಬಹಳ ಕೃತಜ್ಞರಾಗಿದ್ದೇವೆಂದು ಈ ದ್ವಾರ ತಿಳಿಸುತ್ತೇವೆ.

ಹೀಗಿರುವಲ್ಲಿ ನಮ್ಮಲ್ಲಿ ವ್ಯಾಪಾರಕ್ಕಾಗಿ ಬರುತ್ತಿದ್ದವರನೇಕರು ಈ ಅನುಕೂಲವಾದ ಗ್ರಂಥದ ಉತ್ತರಾರ್ಧವು ಮುದ್ರಣವಾಯಿತೇ ಎಂದು ಪದೇ ಪದೇ ಕೇಳುತ್ತಲೇ ಇದ್ದರು. ಈ ಕಡೆಯ ಮೂರು ಭಾಗಗಳು ದ್ವಿತೀಯ ಪುಸ್ತಕವು ಈಗತಾನೆ ಮಾರುವದಕ್ಕೆ ಸಿದ್ಧವಾಗಿದೆ. ಅನೇಕ ವರುಷಗಳಿಂದಲೂ ಸಜ್ಜನ ಸನ್ಮತಿಯನ್ನು ವಿದ್ವತ್ತಿನಗಳ ಆದರಣೆಯನ್ನೂ ಪಡೆಯುತ್ತಿರುವ ಈ ಅಸಮಾನವಾದ ಗ್ರಂಥದ ಗುಣಕಥನವನ್ನು ಇಲ್ಲಿ ವರ್ಣಿಸುವದು ಅನಾವಶ್ಯವು. ಈ ಹೊಸ ಪುಸ್ತಕದಲ್ಲಿ ಅಕ್ಷರಗಳು ಬಹು ಸ್ಪುಟವಾಗಿಯೂ, ವಿಂಗಡವಾಗಿಯೂ ಇರುವದಲ್ಲದೆ ಮೇಲ್ತರದ ಕಾಗದವನ್ನೇ ಉಪಯೋಗಿಸಿರುವೆವು. ಬೈಂಡು ಭದ್ರವಾಗಿದೆ. ಇದು ಎಲ್ಲಾ ವಿಷಯದಲ್ಲಿಯೂ ಪಾಠಕವಾಚಕರುಗಳಿಗೆ ಸಂತೋಷಕರವಾಗಿರುವದು ಎಂದು ಹೇಳುವದರಲ್ಲಿ ಯಾವ ಸಂಶಯವೂ ಇಲ್ಲ. ಅಪೇಕ್ಷೆಯುಳ್ಳವರು ಈ ಪುಸ್ತಕಗಳನ್ನು ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು.

ಕಥಾಸಂಗ್ರಹದ ಪ್ರಥಮ ಪುಸ್ತಕ ಕ್ರಯ.		೧—೦—೦
ವಿ. ಪಿ. ಮೂಲಕ	,,	೧—೩—೦
ಕಥಾಸಂಗ್ರಹ ದ್ವಿತೀಯ ಪುಸ್ತಕ	,,	೧—೦—೦
ವಿ. ಪಿ. ಮೂಲಕ	,,	೧—೩—೦

ವಿಳಾಸ:—ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

ಇಲ್ಲಿನೋಡಿ!

23-9

ತುಮಕೂರು ವಿಕ್ಟರ್ ಇಲಾಖೆಯಲ್ಲಿ, ಯುರೋಪಿಯನ್ ಮೇಲ್ವಿಚಾರಣೆಯಿಂದ, ಉತ್ತಮ ತರದ ಹಾಸನದ ಟೋಪಿಗಳು ಅತಿ ಶ್ರೇಷ್ಠವಾದ ಉಲ್ಲನ್ ದಾರದಿಂದ ತಯಾರಾಗುತ್ತವೆ. ಕ್ರಯ ೧೦ ಆಣೆ ಮೊದಲು ೧೪ ಆಣೆವರೆಗೂ ದೊರಕುವವು. ಅಪೇಕ್ಷಿಸುವವರಿಗೆ ಕ್ರಯದ ಪಟ್ಟಿಯನ್ನು ರವಾನಿಸುವೆವು. ವಿಳಾಸ:—ಮೇನೇಜರ್, ಹಾಸನದ ಟೋಪಿ ಕಾರ್ಖಾನೆ, ವಿಕ್ಟರ್ ಇಲಾಖೆ, ತುಮಕೂರು.

೧೯೬೫ ರಿಂದ ೧೯೦೬ ವರೆಗೆ.

ಕಾಲದ ಪರೀಕ್ಷೆ!

ಮೂವತ್ತೇಳು ವರ್ಷಗಳಿಗಿಂತಲೂ ಹೆಚ್ಚಾಗಿ

SCOTT'S EMULSION

31-4

(ಸ್ಕಾಟ್ಸ್ ಇಮಲ್ಷನ್)

ಎಂಬೀ ಸೇವನ ಔಷಧಿಯನ್ನು ಘನ ಪಂಡಿತರೆಲ್ಲಾ ಅನೇಕ ವೇಳೆ ಶೋಧನೆಮಾಡಿ, ಸರ್ವೋತ್ತಮವೆಂದು ಹೇಳಿರುತ್ತಾರೆ. ಆದದರಿಂದ ಮನುಷ್ಯರ ರೋಗಗಳಿಗೆ ಪ್ರಪಂಚದಲ್ಲೆಲ್ಲಾ ಈ ಔಷಧವು ಸರ್ವಶ್ರೇಷ್ಠವಾದದ್ದಾಗಿ ಪರಿಣಮಿಸಿದೆ:—

ಶ್ವಾಸಕೋಶದ ಅಶಕ್ತಿಗಳು; ನಾನಾ ತರದ ಕೆಮ್ಮಲು; ಸಕಲವಿಧ ಕೃಶತ್ವಗಳು, ನಾಡಿಸಂಬಂಧಗಳ ಕ್ಷೀಣತೆ; ಅಹಾರದಲ್ಲಿ ಅರುಚಿ ಇವಲ್ಲದೆ ತಂದೆಗೂ ಮಗನಿಗೂ ಬಲಕರವಾದ ಮತ್ತು ಅಂಗ ಬೆಳೆಸುವ ಸೇವನ ಔಷಧವೂ ಇದೇ.

ಕೈ ಸೋಕದೆ ತಯಾರಾದದ್ದು.

ಔಷಧಗಳ ಅಂಗಡಿಗಳಲ್ಲೆಲ್ಲಾ ಬಿಕರಿಯಾಗುವದು.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್, ಔಷಧಗಳ ಕಾರ್ಖಾನೆ, ಲಂಡನ್, ಇಂಗ್ಲೆಂಡ.

ಈ ಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ.

ವಾಳ್ಯದ ವೆಂಕಟಾಚಲ ಪಂಡಿತ, ಶ್ರೀಸೀತಾರಾಮನ ವೈದ್ಯಶಾಲಾ, ಕೊಳ್ಳೇಗಾಲ, ಇವರ ಸಿದ್ಧೌಷಧಗಳು.

26-5

೧. ಲೋಕಾಮಾಯಹರ ಕಸ್ತೂರಿ ಮಾತ್ರೆ.—ಈ ಮಾತ್ರೆಗಳನ್ನು ಹನಿಳದ ಭಸ್ಮ ಚಿನ್ನದ ರೇಕುಗಳ ಮಿಶ್ರದಿಂದ ತಯಾರಿಸಿದೆ. ತಾಂಬೂಲದೊಡನೆ ಅಥವಾ ಹಾಗೆ ಉಪಯೋಗಿಸುತ್ತಿದ್ದರೆ ಪ್ಲೇಗು ಜ್ವರ, ಛಳೀಜ್ವರ, ಜ್ವರ, ಅಗ್ನಿ ನಷ್ಟ, ನಿಶ್ಶಕ್ತಿ, ಕೆಮ್ಮು, ಹೊಟ್ಟೆ ಕಿಬ್ಬೊಟ್ಟೆ ಎದೆಗಳ ನೋವು ಇವಕ್ಕೆ ದಾರಿಗೊಡದು; ಮಕ್ಕಳ ಎಲ್ಲಾ ರೋಗಕ್ಕೂ ಗುಣಕಾರಿ. ನೀರು ಮತ್ತು ಹವಾ ಬದಲಾವಣೆಗೆ ಒಳ್ಳೆಯದು ೨೦೦ ಮಾತ್ರೆಯುಳ್ಳ ಡಬ್ಬಿಗೆ ೪ ಆಣೆ. ಪೋಸ್ಟು ಮೂಲಕ ೫ ಸೀಸೆಗೆ ಒಂದು ಸೀಸೆ ಹೆಚ್ಚು. ೧ ರಿಂದ ೬ ರ ವರೆಗೆ ಟ. ಖರ್ಚು ೩ ಆಣೆ.



೩. ಎಸ್. ಸಿ. ಇ. ಸರ್ವಾಂಗಬಲಕಾರಿ.—ಕಾಫಿ, ಟೀ, ಕೋಕೋಗಳಿಗೆ ಬದಲಾಗಿ ಉಪಯೋಗಿಸುವ ಪುಡಿ. ಕಾಫಿ, ಟೀಗಳಲ್ಲಿರುವ ದುರ್ಗುಣಗಳು ಇದರಲ್ಲಿಲ್ಲ. ವಾಯು, ಎದೆ, ಅನ್ನಾಶಯ, ನರಗಳು, ಸಂದುಗಳು, ಮೆದುಳು, ಕೀಲುಸ್ನು, ಮೂಲವ್ಯಾಧಿ, ಇವುಗಳ ಸಂಬಂಧವಾದ ಎಲ್ಲಾ ರೋಗಗಳನ್ನು ಚನ್ನಾಗಿಗೊಳಿಸುವ ಧಾತುಶಕ್ತಿಯನ್ನು ಕ್ರಮವಾಗಿ ವೃದ್ಧಿಪಡಿಸುವುದು. ೨೦ ಲೋಟ ಕಾಫಿಯಾಗುವ ಡಬ್ಬಿ ೪ ಆಣೆ, ೪೦ ಲೋಟ ಆಗುವುದಕ್ಕೆ ೬ ಆಣೆ.

೨. ಪ್ಲೇಗಿಗೆ ಸಿದ್ಧೌಷಧ.—ಪ್ಲೇಗಿಗೆ ಔಷಧಿಯೇ ಇಲ್ಲವೆಂದು ಹೇಳುವ ಈ ನಮ್ಮ ಔಷಧವನ್ನು ತರಿಸಿಕೊಡಿ ಖಂಡಿತ ಗುಣವಾಗುತ್ತದೆ. ಯೋಗ್ಯತಾಪತ್ರಗಳನ್ನು ವಿವರಿಸಲು ಸ್ಥಳ ಸಾಲದು ಗಡ್ಡೆ ಮೊದಲಾದ ಬಾಧೆ ಇಲ್ಲದಂತೆ ಉದ್ಭವದ ಔಷಧಿ ನೇರ ಕ್ರಯ ೧ ರೂಪಾಯಿ.

೪. ಬಾಧಾ ಹಾರಿಣಿ.—ಪಟ್ಟು ದಗದಿದ ನೋವು, ನಾಯು, ತಲೆನೋವು, ಮುಂತಾದ್ದಕ್ಕೆ ಸಂಜೀವಿನ. ಡಬ್ಬಿ ೫ ಆಣೆ.

ವಿಳಾಸ:—ಎಸ್. ಎಸ್. ಆರ್. ವೈದ್ಯಶಾಲಾ, ಲಕ್ಷ್ಮೀವಿಲಾಸ ರೋಡ್, ಮೈಸೂರು.

ಮೈಸೂರು ಸೀಮೆಯ ಎಕ್ಸೈಜು ಕಮಿಷನರವರ ಆಫೀಸ

ತಾರೀಖು ೧೧ನೇ ಮಾರ್ಚಿ, ೧೯೦೭

ನೋಟೀಸು.

33-3

೧೯೦೭ನೆ ಇಸವಿಯ ಜುಲೈ ಗುರ್ರೆ ತಾರೀಖು ಲಾಗಾಯಿತು ೧೯೧೦ನೆ ಇಸವಿಯ ಜೂನ್ ೩೦ನೇ ತಾರೀಖಿನ ವರೆಗೆ ಆಗುವ ಮೂರು ವರ್ಷಗಳ ಪರ್ಯಂತ ಬೆಂಗಳೂರು ಟೌನಿನ ಸರ್ಕಾರಿ ಸೆಂಟ್ರಲ್ ಡಿಸ್ಟಿಲರಿಯಾ ಸಾರಾಯಿ ಕಾರ್ಖಾನೆಯಲ್ಲಿ ಸರಾಬನ್ನೂ ಇತರ ಒಳದೇಶದ ಮದ್ಯಗಳನ್ನೂ ತಯಾರುಮಾಡುವದಕ್ಕೂ, ಅವುಗಳನ್ನು ಮೈಸೂರು ಸೀಮೆಗೂ ಬೆಂಗಳೂರು ಸಿವಿಲ್ ಮತ್ತು ಮಿಲಿಟರಿ ಸ್ಟೇಷನ್ನಿಯ ದಂಡಿಗೂ ಸರಬರಾಯಿ ಮಾಡುವುದಕ್ಕೂ, ಒಟ್ಟು ಸ್ವಾತ್ತ್ರ್ಯಕ್ಕೋಸ್ಕರ ದರಖಾಸ್ತುಗಳು ಅಪೇಕ್ಷಿಸಲ್ಪಟ್ಟಿರುತ್ತವೆ.

೨. ಪ್ರತಿ ದರಖಾಸ್ತಿನ್ನೂ ೫೦,೦೦೦ ರೂಪಾಯಿ ಠೇವಣಿ ಕಳುಹಿಸಬೇಕು. ಮತ್ತು ಅಂಥ ದರಖಾಸ್ತುಗಳು ಕೆಳಗೆ ರುಜು ಮಾಡಿರುವವರಿಗೆ ೧೯೦೭ನೆ ಇಸವಿ ಏಪ್ರಿಲ್ ೩ನೇ ತಾರೀಖು ಬುಧವಾರ ಮಧ್ಯಾಹ್ನ ಅಥವ ಅದಕ್ಕೆ ಮುಂಚೆ ಸೇರಬೇಕು.

೩. ಇದರ ಷರತ್ತುಗಳಿಗೂ ಹೆಚ್ಚು ತಪಶೀಲುಗಳಿಗೂ ೧೯೦೭ನೆ ಇಸವಿ ಫೆಬ್ರವರಿ ೨೮ನೇ ತಾರೀಖಿನ ಪೈ. ೬೫೫೦—ಯಸ್. ಆರ್ ೬೫೧—೦೬ನೇ ನೆಂಬರಿನ ಇಸಿ ಹಾರ್ನಾಮೆಯನ್ನು ಮೈಸೂರು ಗೆಜೆಟ್ಟಿನಲ್ಲಿ ನೋಡತಕ್ಕದ್ದು.

ಪಿ. ಎನ್. ಪೂರ್ಣಯ್ಯ,

ಮೈಸೂರು ಸೀಮೆಯ ಎಕ್ಸೈಜು ಕಮಿಷನರು

ವೃತ್ತಾಂತ ಪತ್ರಿಕೆ.

:o:

೧೯೦೭ ನೇ ಇಸವಿ ಏಪ್ರಿಲ್ ತಾ॥ ೧೧ ನೇ ಗುರುವಾರ.

ನಮ್ಮ ಹೊಸ ಬಹುಮಾನದ ಕ್ರಮವು

ಕೆಲವು ಕಾಲದಿಂದೀಚೆಗೆ ನಮ್ಮಲ್ಲಿಗೆ ಬರಮ ಬರುತ್ತಿದ್ದ ವರ್ತಮಾನಗಳಲ್ಲಿ ಉತ್ತಮವಾಗಿಯೂ ಉತ್ಸಾಹಕರವಾಗಿಯೂ ಇರತಕ್ಕವುಗಳಿಗೆ ಎರಡು ರೂಪಾಯಿನಂತೆ ಬಹುಮಾನ ಕೊಡುತ್ತಾ ಬಂದಿರುವೆವಷ್ಟೆ. ಈ ಬಹುಮಾನಕ್ಕಾಗಿ ಅನೇಕ ಬಾತ್ಮಿಗಳು ಬಂದಿರುತ್ತವೆ. ಆದರೆ ಅವುಗಳಲ್ಲಿ ಕೆಲವು ನಡೆದಂತೆಯೇ ನಮಗೆ ನಂಬಿಕೆಯುಂಟಾಗಲಿಲ್ಲ; ಇನ್ನು ಕೆಲವು ಅತ್ಯಲ್ಪ ವಿಚಾರಗಳಾದ್ದರಿಂದ ಪ್ರಕಟನೆಗೇ ಅರ್ಹವಾಗಲಿಲ್ಲ; ಮತ್ತೆ ಕೆಲವು ಯೋಗ್ಯವಾಗಿಯೂ ಸ್ವಾರಸ್ಯವಾಗಿಯೂ ಇದ್ದವು. ಅಂತು ಬಾತ್ಮಿಗಳಲ್ಲಿ ಬಹು ಭಾಗವು ಬೆಂಕಿಯ ಅನಾಹುತ, ಭಾವಿ ಕೊಳಗಳಲ್ಲಿ ಬಿದ್ದುದು, ಕಾಡು ಮೃಗಗಳ ಹಿಂಸೆ ಈ ಮೊದಲಾದ ಸಂಗತಿಗಳು. ನಿಜವಾಗಿ ನಡೆದಿರುವ ಉತ್ಸಾಹಕರವಾದ ವರ್ತಮಾನಗಳಿಗೆ ಇನ್ನುಮುಂದೆಯೂ ಎರಡು ರೂಪಾಯಿ ಬಹುಮಾನ ಕೊಡುತ್ತಾ ಬರುವೆವು.

ಇತ್ತಲಾಗಿ ನಮ್ಮ ವಾಚಕರಲ್ಲಿ ಸಕಲ ಪ್ರಜೆಗಳಿಗೂ ಸಂಬಂಧಪಡುವ ಸರ್ಕಾರಿಯೇ ಮೊದಲಾದ ಪಬ್ಲಿಕ್ ವಿಷಯಗಳನ್ನು ಹಿಡಿದು ಚೆನ್ನಾಗಿ ಆಲೋಚಿಸಿ ಚರ್ಚಿಸುವಂಥಾ ಶಕ್ತಿಯನ್ನು ಉಂಟುಮಾಡಿ ಅಭಿವೃದ್ಧಿಗೆ ತರಬೇಕೆಂದು ಆಲೋಚಿಸುತ್ತೇವೆ. ಮೊದಲು ನಾವು ಯಾವುದಾದರೊಂದು ವಿಷಯವನ್ನು ನಮ್ಮ ವಾಚಕರಿಗೆ ತಿಳಿಸುವೆವು. ಆ ವಿಷಯವನ್ನು ಕುರಿತು ವಾಚಕರು ಚೆನ್ನಾಗಿ ಆಲೋಚನೆ ಮಾಡಿ ಅದರ ಪಕ್ಷ ಪರಪಕ್ಷಗಳನ್ನು ಚರ್ಚಿಸಿ ಬಾತ್ಮಿಯನ್ನು ಬರೆದು ಕಳುಹಿಸಬೇಕು. ಇಂಥಾ ಬಾತ್ಮಿಗಳಲ್ಲಿ ಬಹಳ ಉತ್ಕೃಷ್ಟವಾಗಿರುವುದಕ್ಕೆ ನಾಲ್ಕು ರೂಪಾಯಿ ಬಹುಮಾನ ಕೊಡುವೆವು. ಮೊದಲನೆಯದಾಗಿ "ಮೈಸೂರು ನ್ಯಾಯವಿಧಾಯಕ ಕೌನ್ಸಿಲ್" ಎಂಬೀ ವಿಷಯವನ್ನು ಗೊತ್ತು ಮಾಡಿರುತ್ತೇವೆ. ಈ ಕೌನ್ಸಿಲ್ ಸಭೆಯ ವಿಚಾರದ ವಿಷಯದಲ್ಲಿ ನಾವೇನೋ ಸ್ವಲ್ಪಮಟ್ಟಿಗೆ ನಮ್ಮ ಅಭಿಪ್ರಾಯವನ್ನು ತಿಳಿಸಿರುವೆವು. ಆದರೂ ಬಾತ್ಮಿ ಬರೆಯತಕ್ಕವರು ನಮ್ಮ ಅಭಿಪ್ರಾಯವನ್ನೇ ಅನುಮೋದಿಸಿ ಬರೆಯಬೇಕೆಂದು ನಾವು ಅಪೇಕ್ಷಿಸುವುದಿಲ್ಲ. ಬಾತ್ಮಿದಾರರು ತಮಗೆ ತೋರುವ ಅಭಿಪ್ರಾಯಗಳನ್ನು ಗಂಭೀರವಾಗಿಯೂ ಕಾರಣಸಹಿತವಾಗಿಯೂ ಚರ್ಚಿಸಿ ಬರೆಯಬೇಕಾಗಿದೆ. ಗವರ್ನಮೆಂಟನ್ನಾಗಲಿ ಅಧಿಕಾರಿಗಳನ್ನಾಗಲಿ ಬರೀ ದೂಷಣೆ ಮಾಡಿ ಬರೆಯಲ್ಪಡುವ ಬಾತ್ಮಿಗಳನ್ನು ನಾವು ಪ್ರಕಟಿಸುವುದೇ ಇಲ್ಲ. ಆದರೂ ಗವರ್ನಮೆಂಟಿನವರ ನಡವಳಿಕೆಯಲ್ಲಿ ಕಾರುಕರ್ದಿಗಳನ್ನೂ ವಿವರಿಸಿ ಕಾರಣಸಹಿತವಾಗಿ ಎಷ್ಟು ಖಂಡಿಸಿ ಬರೆದಾಗ್ಯೂ ಅಂಥಾ ಬಾತ್ಮಿಗಳನ್ನು ನಾವು ಪ್ರಕಟಮಾಡುವುದಕ್ಕೆ ಹಿಂತೆಗೆಯುವುದಿಲ್ಲ. ಮೇಲ್ಕಂಡ ವಿಷಯವಾದ ಬಾತ್ಮಿ ಇದೇ ಏಪ್ರೈಲ್ ೨೫ ನೆ ತಾ. ಒಳಗಾಗಿ ನಮ್ಮಲ್ಲಿಗೆ ತಲುಪಿರಬೇಕು; ಅಂಥ ಬಾತ್ಮಿಗಳಲ್ಲಿ ಉತ್ತಮವಾದದ್ದನ್ನು ಮೇ ತಿಂಗಳ ೨ ನೆ ತಾ. ಪತ್ರಿಕೆಯಲ್ಲಿ ಪ್ರಕಟಿಸುವೆವು.

ಈ ಬಾತ್ಮಿ ಬರೆಯುವುದರಲ್ಲಿ ವಾಚಕರು ತಿಳಿದಿರಬೇಕಾದ ಸಂಗತಿಗಳೇನೆಂದರೆ:—

(೧) ಬಾತ್ಮಿಯು ಕಾಗದದ ಒಂದೇ ಪಕ್ಕದಲ್ಲಿ ಬರೆದಿರಬೇಕು (೨) ಬಾತ್ಮಿಯನ್ನು ಪ್ರಕಟಿಸಿದರೆ ಈ ಪತ್ರಿಕೆಯಲ್ಲಿ ಎರಡು ಕಾಲಂಗಳಿಗಿಂತ ಹೆಚ್ಚಾಗಕೂಡದು, ಮತ್ತು ಸುಲಭವಾದ ಕನ್ನಡಮಾತುಗಳನ್ನುಪಯೋಗಿಸಿ ಬರೆದಿರಬೇಕು (೩) ಬಾತ್ಮಿದಾರರ ಹೆಸರು ವಿಳಾಸಗಳನ್ನು ತಿಳಿಸಿರಬೇಕು, ಅಪೇಕ್ಷೆಪಟ್ಟರೆ ಅಂಥಾ ಹೆಸರು ವಿಳಾಸಗಳನ್ನು ಪ್ರಕಟಿಸುವುದಿಲ್ಲ (೪) ಬಾತ್ಮಿಗಳ ಯೋಗ್ಯತಾತಾರತಮ್ಯವನ್ನು ಗೊತ್ತುಮಾಡುವ ಅಧಿಕಾರವು ಎಡಿಟರದಾಗಿರುತ್ತದೆ, ಅವರ ತೀರ್ಮಾನದ ಮೇಲೆ ಆಕ್ಷೇಪಣೆ ಇರಕೂಡದು (೫) ಎಲ್ಲಾ ಬಾತ್ಮಿಗಳೂ ಈ ಪತ್ರಿಕೆಯ ಸ್ವತ್ತಾಗಿರುವವು

ಒಳದೇಶದ ವೃತ್ತಾಂತಗಳು.

ಸರ್ಕಾರದವರು ಡಾಕ್ಟರ್ ಅನಂತರಾಮೈಯ್ಯಂಗಾರ್ರನ್ನು ಸಕಲೇಶಪುರದಿಂದ ದಾವಣಗೆರೆಗೆ ವರ್ಗಮಾಡಿದಾರೆ.

***

ಸುಮಾರು ೨೦—೨೫ ವರುಷಗಳಿಂದ ಬೆಂಗಳೂರಿನಲ್ಲಿ ಪ್ರಕಟವಾಗುತ್ತಿದ್ದ "ಈವಿನಿಂಗ್ ಮೆಯಿಲ್" ಎಂಬ ಇಂಗ್ಲಿಷ್ ಪತ್ರಿಕೆಯು ನಿಂತುಹೋಯಿತೆಂದು ತಿಳಿದುಬಂದಿದೆ

ಛೀಫ್ ಜಸ್ಟೀಸ್ ಮೆ॥ ಮಾರ್ಟಯರು ಬೇಸಿಗೆ ರಜಾ ಉಪಯೋಗಿಸಿಕೊಂಡು ಸೀಮೆಗೆ ಹೋಗಿ ಬರುವವರಾಗಿದಾರೆಂದು ಕೇಳುತ್ತೇವೆ.

***

ಪ್ರಿನ್ಸ್ ಡೆಮಿಡಾಫ್ ಎಂಬೊಬ್ಬ ಇಟಲಿ ರಾಜಕುಮಾರರು ಮೆ॥ ಥಿಯೊಬಾಲ್ಡ್ ಎಂಬ ಶಿಕಾರಿದಾರರೊಡನೆ ಕಾಕನಕೋಟೆ ಜಂಗಲಿಗೆ ಹೋಗಿ ಮೂರು ವಾರಗಳಿಂದ ಶಿಕಾರಿಮಾಡುತ್ತಿದಾರೆ.

***

ಕಳೆದ ವಾರ ಕೌನ್ಸಿಲರ್ ಮೆ॥ ಕೆ. ಪಿ. ಪುಟ್ಟಣ್ಣ ಚೆಟ್ಟಿಯವರೂ, ಸೆಕ್ರಟರಿ ಮೆ॥ ಕೆ. ಎಸ್. ಚಂದ್ರಶೇಖರಯ್ಯರವರೂ ಬೇಸಿಗೆ ಕಳೆಯುವುದಕ್ಕಾಗಿ ಬೆಂಗಳೂರಿಂದ ನೀಲಗಿರಿಗೆ ಪ್ರಯಾಣಮಾಡಿದರು.

***

ರಾಜಧಾನಿಯ ಕೋ ಆಪರೆಟಿವ್ ಕ್ರೆಡಿಟ್ ಸೊಸೈಟಿ ಎಂಬ ಪರಸ್ಪರ ಸಹಾಯಕ ಸಂಘದವರು ನಾಳೆ ಭಾನುವಾರ ಬೆಳಿಗ್ಗೆ ಸದ್ವಿದ್ಯಾ ಪಾಠಶಾಲಾ ಕಟ್ಟಡದಲ್ಲಿ ಜನರಲ್ ಮೀಟಿಂಗ್ ನಡಸುವವರಾಗಿದಾರೆ.

***

ಈ ಸಂಸ್ಥಾನದಲ್ಲಿ ಸರಕುಗಳನ್ನು ಊರಿಂದೂರಿಗೆ ಹೊತ್ತುಕೊಂಡು ಹೋಗಿ ಬಿಕರಿಮಾಡತಕ್ಕ ಸಂಚಾರಿ ವರ್ತಕರಿಗೆ ಇದುವರೆಗೆ ಹಾಕುತ್ತಿದ್ದ ವ್ಯಾಪಾರದ ಕಂದಾಯವನ್ನು ಸರ್ಕಾರದವರು ಸಂಪೂರ್ಣವಾಗಿ ವಜಾಮಾಡಿರುತ್ತಾರೆಂದು ತಿಳಿಯುವುದು.

***

ಮಾರ್ಚಿ ೨೯ ನೇ ಆಖೈರಾದ ವಾರದಲ್ಲಿ ಈ ಸಂಸ್ಥಾನದೊಳಗೆ ೩೦೩ ಪ್ರಜೆಗಳಿಗೆ ವಾಂತಿಭೇದಿ ಉಪದ್ರ ತಗಲಿ ೨೦೬ ಜನರು ಕಾಲವಾದರು. ಈ ಉಪದ್ರವು ಮೈಸೂರು ಡಿಸ್ಟ್ರಿಕ್ಟಿಗೆ ಸೇರಿದ ೧೧೩ ಗ್ರಾಮಗಳಲ್ಲಿ ಹರಡಿಕೊಂಡು ೧೩೬ ಜನರನ್ನು ಕೊಂದುಬಿಟ್ಟಿದೆ

***

ರಾಜಧಾನಿಯ ಹನುಮಿನ ಕರೆಯ ಹತ್ತಿರ ಇರುವ ಮೆ॥ ಆಲ್ಯಾನ್ಸನ್‌ರವರ ಮನೆಯಲ್ಲಿ ಕಳುವಾದ ಮಾಲಿನ ಪೈಕಿ ಸುಮಾರು ೧,೨೦೦ ರೂಪಾಯಿನಷ್ಟು ಸಿಕ್ಕಿರುತ್ತದೆ. ಕಾಲ್ಸುಕ್ ಪೋಲೀಸಿನವರೂ ಟರ್ನರವರೂ ಶೋಧಿಸಲ್ಪಟ್ಟ ಐದು ಮಂದಿಯನ್ನು ಹಿಡಿದು ಮೊಕದ್ದಮೆ ಮಾಡಿರುತ್ತಾರೆ

***

ರಾಜಧಾನಿಯಲ್ಲಿ ಬಾಪ ಎಂಬುವನು ಮಾರ್ಕೆಟ್ಟಿನಲ್ಲಿ ವೀಳ್ಯದೆಲೆ ಕೊಂಡುಕೊಂಡು, ಸೀಸದ ದೊಡ್ಡಾಣೆಯನ್ನು ಕೊಟ್ಟನು. ಅವನ ಮನೆ ಶೋಧನೆಮಾಡಿದಾಗ ಅಂಥಾ ದೊಡ್ಡಾಣೆಗಳು ಇನ್ನೇಳು ಸಿಕ್ಕಿದವು. ಇದು ಮೊಕದ್ದಮೆ ಆಗಿ ಸೆಷನ್ಸ್ ಜಡ್ಜರು ದಯಾರ್ಹತೆಯಿಂದ ಅವನಿಗೆ ನಾಲ್ಕು ವರುಷ ಕಠಿಣ ಸಜಾ ವಿಧಿಸಿರುತ್ತಾರೆ

***

ರಾಜಧಾನಿಯ ಮಹಾರಾಜಾ ಕಾಲೇಜ್ ಉಪಾಧ್ಯಾಯರಾದ ಮೆ॥ ಕೃಷ್ಣಮೂರ್ತಿಯವರು ಕಳೆದ ವಾರ ಕಳೆದುಕೊಂಡ ೧೦೦ ರೂಪಾಯಿನ ಕರೆನ್ಸಿ ನೋಟನ್ನು ಸ್ಕೂಲ್ ಹುಡುಗರಿಬ್ಬರು ತೆಗೆದುಕೊಂಡು ಹೋಗಿ, ತಮ್ಮ ಹೆಡ್ ಮಾಸ್ಟರ ವಶಕ್ಕೆ ಕೊಟ್ಟರು. ಅವರ ಮೂಲಕ ಮಾಲೀಕರಿಗೆ ಅದು ತಲುಪಿದ್ದರಿಂದ ಅವರು ಆ ಹುಡುಗರಿಗೆ ಬಹುಮಾನ ಕೊಟ್ಟು ಇರುತ್ತಾರೆ

***

ಹಾಸನದ ಡೆಪ್ಟಿ ಕಮಿಷನರ್ ಮೆ॥ ಪಿ ಆರ್ ಪಟ್ಲಿಯು ಪೆದರಾರ್ ಯವರಿಗೆ ಬಾಗೂರುವಾಯು ಎಸ್ಟೇಟಿನ ಕಾಫಿ ಪ್ಲಾಂಟರ್ ಮೆ॥ ಆರ್ ಎ. ಅಂಡ್ರ್ಯೂಸ್‌ರವರ ಕುಮಾರ್ತೆಯನ್ನು ಕೊಟ್ಟು ಅದೇ ತೋಟದ ಬಂಗಲೆಯಲ್ಲಿ ಈ ತಿಂಗಳ ೩೦ ನೆ ತಾ ವಿವಾಹವಾಗುವುದು. ಆ ತರುವಾಯ ಮೆ॥ ಪೆದರಾಲ್ ಯವರು ಮೂರು ತಿಂಗಳ ರಜಾ ಪಡೆದುಕೊಳ್ಳುವರು. ಅವರ ಬದಲಿಗೆ ಮೆ॥ ಕೆ. ಆರ್. ಶ್ರೀನಿವಾಸೈಯ್ಯಂಗಾರ್ರು ನೇಮಿಸಲ್ಪಟ್ಟಿದಾರೆ

***

ಬೆಂಗಳೂರು ಸೆಂಟ್ರಲ್ ಕಾಲೇಜ್ ರೈಟರ್ ನಾರಾಯಣಮೂರ್ತಿಯು ಸರ್ಕಾರಕ್ಕೆ ೪,೦೦೦ ರೂಪಾಯಿಗೆ ಮೋಸ ಮಾಡಿದನೆಂದು ಮೊಕದ್ದಮೆ ಆಗಿ ೬ ವರುಷ ಕಠಿಣ ಸಜಾ ೪,೦೦೦ ರೂಪಾಯಿ ಜುಲ್ಮಾನೆ ವಿಧಿಸಲ್ಪಟ್ಟಿತು. ಇದಕ್ಕೆ ಅವನು ಛೀಫ್ ಕೋರ್ಟಿನಲ್ಲಿ ಅಪೀಲ್ ಮಾಡಿಕೊಂಡಿದ್ದನು. ಇಬ್ಬರು ಜಡ್ಜಿಗಳು ಈ ಮೊಕದ್ದಮೆಯನ್ನು ಪರಿಶೋಧನೆ ಮಾಡಿ, ಸಜವನ್ನು ೩ ವರುಷಕ್ಕೂ ಜುಲ್ಮಾನೆಯನ್ನು ೧,೦೦೦ ರೂಪಾಯಿಗೂ ಇಳಿಸಿರುತ್ತಾರೆ.

***

ಬರೋಡಾ ಸಂಸ್ಥಾನದ ಮಹಾರಾಜರವರ ಸಹೋದರರಾದ ಶ್ರೀಮಂತ ಸಂಪತ್ ರಾವ್ ಯವರು ಕಳೆದ ಗುರುವಾರ ರಾಜಧಾನಿಗೆ ಬಂದು ಜಗನ್ಮೋಹನಬಂಗಲೆಯಲ್ಲಿ ಇದ್ದು ನಮ್ಮ ಮಹಾರಾಜರವರ ಆತಿಥ್ಯವನ್ನು ಸ್ವೀಕರಿಸುತ್ತಿದಾರೆ. ಇವರ ಸಂಗಡ [illegible] ಬಂದಿರುವರು [illegible] ಅರಮನೆ, [illegible], ಪಬ್ಲಿಕ್ ಆಫೀಸುಗಳು, ಚಾಮುಂಡಿಬೆಟ್ಟ, ಶ್ರೀರಂಗಪಟ್ಟಣ ಮೊದಲಾದ್ದನ್ನು ನೋಡಿದರು

***

ಶಿವಮೊಗ್ಗ ಡಿಸ್ಟ್ರಿಕ್ಟ್ ಶಿಕಾರಿಪುರದ ತಾಲ್ಲೂಕು [illegible] ನ ೧ ನೇ ತಾ [illegible]

ಕಳೆದ ನವರಾತ್ರಿಯಲ್ಲಿ ರಾಜಧಾನಿಯ ಪೋಲೀಸಿನವರು ಮೂವರು ಹುಡುಗರನ್ನು ಕಳುವುಮಾಡಿದರೆಂದು ಹಿಡಿದು ಹಿಂಸೆಪಡಿಸಿದರೆಂಬುದಾಗಿ ಪೋಲೀಸಿನವರ ಮೇಲೆ ಮೊಕದ್ದಮೆ ಆಗಿ ಆ॥ ಸೆಷನ್ ಜಡ್ಜಿಗಳು ಸಬ್ ಇನ್ಸ್ಪೆಕ್ಟರ್ ಮೆ॥ ದೇವರಾಜೇ ಅರಸಿನವರಿಗೂ ಒಬ್ಬ ಕಾನ್ಸ್ಟೆಬಲಿಗೂ ಸಾದಾ ಸಜಾ ವಿಧಿಸಿದ್ದರು. ಈ ಮೊಕದ್ದಮೆ ಅಪೀಲಾಗಿ ಡಿಸ್ಟ್ರಿಕ್ಟ್ ಜಡ್ಜಿಯವರು ತನಿಖೆಯಿಂದ ಆ ಹುಡುಗರನ್ನು ಜಗಲಿಮೇಲೆ ಮಾರ್ಕೆಟ್ಟಿನ ಸ್ಟೇರ್ಸ್ ಒಳಗೆ ಹಿಂಸಿಸಿದರೆಂಬ ಮಾತನ್ನು ನಂಬಲಿಕ್ಕಾಗುವುದಿಲ್ಲವೆಂದು ಹೇಳಿ, ಕೆಳಕೋರ್ಟಿನ ಶಿಕ್ಷೆಯನ್ನು ರದ್ದುಮಾಡಿ, ಮೆ॥ ದೇವರಾಜೇ ಅರಸಿನವರನ್ನೂ ಕಾನ್ಸ್ಟೆಬಲನ್ನೂ ನಿರಪರಾಧಿಗಳೆಂದು ತೀರ್ಮಾನಿಸಿ ಖುಲಾಸ್ ಮಾಡಿದರು.

ಮೈಸೂರು ಪೋಲೀಸ್ ಲಾಕಪ್ಪಿನಲ್ಲಿ ಮರಣವು.

ಈ ವಾರ ನಡೆದಿರುವ ಸಮಾಚಾರಗಳು

ಕಳೆದ ೩ ನೆ ತಾ ಬುಧವಾರ ಬೆಳಿಗ್ಗೆ ರಾಜಧಾನಿಯ ದೊಡ್ಡಪೇಟೆಯಲ್ಲಿರುವ ಸರದಾರ್ ಚಾವಡಿ ಎಂಬ ಪೋಲೀಸ್ ಠಾಣಾ ಲಾಕಪ್ಪಿನಲ್ಲಿ ಅನಂತಶೆಟ್ಟಿ ಎಂಬ ಸುಮಾರು ೩೦—೩೫ ವಯಸ್ಸಿನ ಸರಾಫ್ ವೈಶ್ಯ ವರ್ತಕನು ಮೃತಪಟ್ಟಿದ್ದನೆಂಬ ಸಂಗತಿಯನ್ನು ಸಂಕ್ಷೇಪವಾಗಿ ಕಳೆದ ವಾರ ತಿಳಿಸಿರುತ್ತೇವಷ್ಟೆ. ಆ ದಿನ ಡೆಪ್ಟಿ ಕಮಿಷನರವರೂ ಪೋಲೀಸ್ ಸೂಪರಿಂಟೆಂಡರೂ ಟೌನ್ ಮ್ಯಾಜಿಸ್ಟ್ರೇಟರೂ ಸಿವಿಲ್ ಸರ್ಜನರೂ ಮಧ್ಯಾಹ್ನ ಸುಮಾರು ಒಂದು ಗಂಟೆಯ ತನಕ ಪೋಲೀಸ್ ಠಾಣೆಯಲ್ಲೇ ಇದ್ದು ಜನರಲ್ಲಿ ದೊಂಬಿಪ್ರಯತ್ನಗಳೇನಾದರೂ ಉಂಟಾಗದಂತೆ ಮೃತಪಟ್ಟವನ ಸಂಬಂಧೀಕರನ್ನು ಇಟ್ಟುಕೊಂಡು ಪಹರೆ ಮಾಡಿಸಿದರು. ಮತ್ತು ಆಗ ಯಾರು ಯಾರು ಯಾವ ಯಾವ ರೀತಿಯಲ್ಲಿ ಸಂಶಯಪಟ್ಟು ಕೇಳಿದರೂ ಅವರಿಗೆಲ್ಲಾ ಮನಸ್ಸೊಪ್ಪುವಂತೆ ಬಹು ತಾಳ್ಮೆಯಿಂದ ಸಮಾಧಾನಹೇಳಿ ಸಂತೈಸಿದರು. ಆ ಸಂಬಂಧೀಕರು ಅಪೇಕ್ಷಿಸಿದಂತೆ ಅವರ ಕಡೆ ಶವವನ್ನು ಆಸ್ಪತ್ರೆಗೆ ಪರೀಕ್ಷೆ ಮಾಡುವುದಕ್ಕೆ ಕಳುಹಿಸಿದರು. ಅಲ್ಲಿ ಸಿವಿಲ್ ಸರ್ಜನರವರು ಬುದ್ಧಾಗಿ ಶವವನ್ನು ವಸ್ತ್ರಗಳಿಂದ ಕತ್ತರಿಸಿ ಕೊಟ್ಟ ಮೇಲೆ ಅಂಗಾಂಗಳನ್ನೆಲ್ಲಾ ತಾವೇ ಪರೀಕ್ಷೆಮಾಡಿ, ಕಡೆಯಲ್ಲಿ ಅವನು ಉಸುರುಕಟ್ಟಿ ಮೃತಪಟ್ಟಿರುತ್ತಾನೆಂದು ಅಭಿಪ್ರಾಯಪಟ್ಟು ಮ್ಯಾಜಿಸ್ಟ್ರೇಟರಿಗೆ ತಿಳಿಸಿದಂತೆ ಕೇಳುತ್ತೇವೆ. ಶೆಟ್ಟಿಯ ಸಂಬಂಧಿಗಳು ಪೋಲೀಸಿನವರ ಹಿಂಸೆಯಿಂದಲೇ ಅವನು ಮೃತಪಟ್ಟನೆಂದು ಇಟ್ಟುಕೊಂಡು ಡಾಕ್ಟರ ಸರ್ಟಿಫಿಕೇಟಿನ ಕಾಪಿ ಕೊಡಬೇಕೆಂದು ಮ್ಯಾಜಿಸ್ಟ್ರೇಟರನ್ನು ಕೇಳಿಕೊಂಡರು. ಸಾಮಾನ್ಯವಾಗಿ ಗಾಯಪಟ್ಟವರನ್ನು ಪರೀಕ್ಷೆ ಮಾಡಿದರೆ ಪರೀಕ್ಷೆಮಾಡಿದ ಡಾಕ್ಟರು ರುಜು ತೆಗೆದುಕೊಂಡು ಗಾಯದ ವಿವರ [illegible] ಸರ್ಟಿಫಿಕೇಟ್ ಕೊಡುತ್ತಾರೆ. ಆದರೆ ಶವಗಳನ್ನು ಕೊಯ್ದು ಪರೀಕ್ಷಿಸಿದರೆ ಡಾಕ್ಟರು ತಮ್ಮ ಅಭಿಪ್ರಾಯವನ್ನು ಸಂಬಂಧೀಕರಿಗೆ ಕೊಡುವುದಿಲ್ಲ, ಮ್ಯಾಜಿಸ್ಟ್ರೇಟರಿಗೆ ಕಳುಹಿಸುವರು. ಆದ್ದರಿಂದ ಮ್ಯಾಜಿಸ್ಟ್ರೇಟರು ಶೆಟ್ಟಿಯ ಸಂಬಂಧೀಕರಿಗೆ ಡಾಕ್ಟರ್ ಸರ್ಟಿಫಿಕೇಟ್ ಕೊಡಲಿಲ್ಲ. ಅವರು ಅನುಮಾನಪಟ್ಟು ಶವವನ್ನು ಆಸ್ಪತ್ರೆಯಲ್ಲೇ ಬಿಟ್ಟು, ಬೆಂಗಳೂರು ದಂಡಿನಿಂದ ಡಾಕ್ಟರ್ ನೇಯಿಲರ್ ಎಂಬ ಇಂಗ್ಲಿಷ್ ವೈದ್ಯನನ್ನು ತಂತಿಯ ಮೂಲಕ ಕರೆಸಿ, ಆತನಿಂದ ಶವವನ್ನು ಪರೀಕ್ಷೆಮಾಡಿಸಬೇಕೆಂದು ಪ್ರಯತ್ನಪಟ್ಟರು. ಗುರುವಾರ ಸಾಯಂಕಾಲದ ತನಕ ಆ ಡಾಕ್ಟರು ಬರಲಿಲ್ಲ. ಶವವು ಆಸ್ಪತ್ರೆಯಲ್ಲೇ ಇತ್ತು. ಅದನ್ನು ಕೊಯ್ದುಬಿಟ್ಟದ್ದರಿಂದ ಬಹುಕಾಲ ಹಾಗೇ ಬಿಟ್ಟಿರುವುದು ಸರಿಯಲ್ಲವೆಂತಲೂ ದುರ್ಗಂಧ ಬಡಿಯುವುದರಿಂದ ಆಸ್ಪತ್ರೆಯಲ್ಲಿರುವ ರೋಗಿಗಳ ಆರೋಗ್ಯ ಕೆಡುವುದಕ್ಕೂ ಕಾರಣವಾಗುತ್ತದೆಂದು ಸಿವಿಲ್ ಸರ್ಜನರು ಮ್ಯಾಜಿಸ್ಟ್ರೇಟರಿಗೆ ತಿಳಿಸಿದರು. ಆಗ ಮ್ಯಾಜಿಸ್ಟ್ರೇಟರು ಸಾಯಂಕಾಲದೊಳಗೆ ಕೆಲವು ಗಂಟೆಗಳ ವಾಯಿದೆ ಕೊಟ್ಟು ಅಷ್ಟರೊಳಗೆ ಶವವನ್ನು ಅವರ ಸುಪರ್ದಿಗೆ ತೆಗೆದುಕೊಳ್ಳದೆ ಹೋದರೆ ಪೋಲೀಸಿನವರ ಮೂಲಕ ಅದನ್ನು ಅಲ್ಲಿಂದ ಸಾಗಿಸಬೇಕಾಗುವುದಾಗಿ ತಿಳಿಸಿದರು. ಆ ಸಂಬಂಧೀಕರು ತಮ್ಮ ಡಾಕ್ಟರು ಬೆಳಿಗ್ಗೆ ಬರುತ್ತಾರೆಂತಲೂ ಅದುವರೆಗೆ ತಾವು ಶವವನ್ನು ತಮ್ಮ ಸ್ವಾಧೀನಕ್ಕೆ ತೆಗೆದುಕೊಳ್ಳುವುದಿಲ್ಲವೆಂತಲೂ ಹೇಳಿ ಹೋದರು. ಅದೇ ಗುರುವಾರ ರಾತ್ರಿ ಮ್ಯಾಜಿಸ್ಟ್ರೇಟರ ಅಪ್ಪಣೆಯಂತೆ ಪೋಲೀಸಿನವರು ಶವವನ್ನು [illegible]

ಮೊದಲನೆಯ ವೈಶ್ಯ ಮಹಾ ಸಭೆಯು.

ಗುಂಟೂರಿನಲ್ಲಿ ನಡೆದದ್ದು.

ಕಳೆದ ತಿಂಗಳ ೨೮ ನೆ ತಾರೀಖು ಗುರುವಾರದಿಂದ ಗುಂಟೂರಿನಲ್ಲಿ ಮೊದಲನೆಯ ಆರ್ಯ ವೈಶ್ಯ ಮಹಾ ಸಭೆಯು ಪ್ರಾರಂಭವಾಗಿ ಮೂರು ದಿನಗಳ ವರೆಗೆ ನಡೆಯಿತು. ಮೈಸೂರಿನಿಂದಲೂ ಮದರಾಸ್ ಆಧಿಪತ್ಯದ ಎಲ್ಲಾ ಕಡೆಗಳಿಂದಲೂ ವೈಶ್ಯ ಪ್ರತಿನಿಧಿಗಳು ಹಾಜರಾಗಿದ್ದರು. ಪಂಡಿತ ದಾಸು ಶ್ರೀರಾಮುಲುಗಾರು ಯವರು ಸಭೆಯನ್ನು ಮಂಗಳಾಶೀರ್ವಾದ ವಚನಗಳಿಂದ ಪ್ರಾರಂಭಿಸಿದರು. ಮೆ॥ ಎಂ ಬುಚ್ಚಿ ಕಾಮಾಕ್ಷಿಯವರು ಭಗವತ್ಪ್ರಾರ್ಥನೆ ಮಾಡಿದರು. ಗುಂಟೂರು ವೇದ ಪಾಠಶಾಲೆಯ ವಿದ್ಯಾರ್ಥಿಗಳು ವೇದ ವಚನಗಳನ್ನು ಹೇಳಿದರು. ರಿಸೆಪ್ಷನ್ ಕಮಿಟಿಯವರ ಅಧ್ಯಕ್ಷರಾದ ಮೆ॥ ಪಿ ವೆಂಕಟರೆಡ್ಡಿ, ಬಿ. ಎ. ಯವರು ಪ್ರಥಮ ಉಪನ್ಯಾಸವನ್ನು ಓದಿ ಪ್ರತಿನಿಧಿಗಳಿಗೆ ಸುಸ್ವಾಗತವನ್ನು ಬಯಸಿದ್ದಲ್ಲದೆ ಆ ಸಭೆಯ ಉದ್ದೇಶ ಮೊದಲಾದದ್ದನ್ನು ಸಂಕ್ಷೇಪವಾಗಿ ವಿವರಿಸಿದರು. ನಂಬೂರಿನ ಒಬ್ಬ ವೈಶ್ಯ ದೊಡ್ಡ ಮನುಷ್ಯರು ಲೇಟ್ ಮೆ॥ ಎ. ಎಲ್ ನರಸುಂಹ ಸೋಮಯಾಜಿಗಳನ್ನು ಹೊಗಳಿ ಕೆಲವು ತೆಲುಗು ಪದ್ಯಗಳನ್ನು ಓದಿದರು. ವೆಂಕಟಗಿರಿ ಸಂಸ್ಥಾನದ ಮಾಜಿ ದಿವಾನ್ ಮೆ॥ ಎಸ್ ನಾರಾಯಣಸ್ವಾಮಿ ಚೆಟ್ಟಿ, ಬಿ ಎ ಯವರು ಸಭಾ ನಾಯಕರಾಗಿರಬೇಕೆಂದು ಎಲ್ಲರೂ ಒಪ್ಪಿ ತಿಳಿಸಿದರು. ಅವರು ಸಭಿಕರ ಇಷ್ಟದ ಪ್ರಕಾರ ಅಗ್ರಾಸನವನ್ನಲಂಕರಿಸಿ ಬಹು ಗಂಭೀರವೂ ಮಹಾ ಸ್ವಾರಸ್ಯವೂ ಆದ ಉಪನ್ಯಾಸವನ್ನು ಓದಿದರು. ಸೆಕ್ರೆಟರಿ ಮೆ॥ ರಾಮಸ್ವಾಮಿ ಗುಪ್ತರವರು ಆರ್ಯ ವೈಶ್ಯ ಮಹಾ ಸಭೆಯ ರಿಪೋರ್ಟನ್ನು ಓದಿದರು. ಸಭೆಯಲ್ಲಿ ಚರ್ಚೆಯಾಗುವ ವಿಷಯಗಳನ್ನು ಗೊತ್ತು ಮಾಡುವುದಕ್ಕೆ ಒಂದು ಕಮಿಟಿ ನೇಮಕವಾಯಿತು.

ತಾ ೩೦ ರಲ್ಲಿ ಪುನಹಾ ಸಭೆ ಸೇರಿತು ವೈಶ್ಯರೆಲ್ಲಾ ವೇದೋಕ್ತ ಕರ್ಮಗಳನ್ನೇ ಆಚರಣೆಯಲ್ಲಿಟ್ಟುಕೊಳ್ಳಬೇಕೆಂದು ಹೇಳುತ್ತಾ ಅದಕ್ಕಾಗಿ ತುಂಬಾ ಸಾಹಸ ಪಡುತ್ತಿದ್ದ ಮೆ॥ ಎ ಎಸ್ ನರಸುಂಹ ಸೋಮಯಾಜುಲುಗಾರು ಯವರು ಕಾಲವಾದ ವಿಷಯದಲ್ಲಿ ಸಭಿಕರೆಲ್ಲಾ ವ್ಯಸನಪಟ್ಟರು. ಇದಲ್ಲದೆ ಅವರು ವೈಶ್ಯ ಬಾಲಕರನ್ನೂ ಬಾಲಕಿಯರನ್ನೂ ಇಂಗ್ಲಿಷಿನಲ್ಲೂ ಮಾತೃ ಭಾಷೆಗಳಲ್ಲೂ ಕೈಗಾರಿಕೆ ಮೊದಲಾದವುಗಳಲ್ಲೂ ಚೆನ್ನಾಗಿ ತರಪೇತು ಮಾಡಬೇಕೆಂದು ಪ್ರೋತ್ಸಾಹಪಡಿಸುತ್ತಿದ್ದರು. ಇಷ್ಟೇ ಅಲ್ಲ ಅವರು ವೈಶ್ಯರಲ್ಲಿ ಬಾಲ್ಯವಿವಾಹಗಳು ನಡಿಯದಂತೆಯೂ ವಯಸ್ಸು ಕಳೆದುಹೋದವರು ವಿವಾಹವನ್ನು ಮಾಡಿಕೊಳ್ಳದಂತೆಯೂ ಬೋಧನೆ ಮಾಡುತ್ತಾ ಇದ್ದರು. ಇಂಥಾ ಪುಣ್ಯಾತ್ಮರು ಕಾಲವಾದದ್ದು ಸಭೆಯ ಅಭಿವೃದ್ಧಿಗೆ ತುಂಬಾ ಕುಂದಕವಾಯಿತೆಂದು ಸಭಿಕರೆಲ್ಲಾ ಪಶ್ಚಾತ್ತಾಪಪಟ್ಟರು. ಕಡೆಗೆ ಚಕ್ರವರ್ತಿ ಮಹಾರಾಜರವರ ಶ್ರೇಯಃ ಪ್ರಾರ್ಥನಾದಿಗಳನ್ನು ಮಾಡಿ ಆ ದಿನದ ಸಭೆಯನ್ನು ಮುಕ್ತಾಯ ಮಾಡಿದರು.

ಏಪ್ರಿಲ್ ತಾ. ೧ ರಲ್ಲಿ ಸಭೆಯು ಕೊನೇ ವಿಚಾರಣೆಗೆ ಕೂಡಿತು ವೈಶ್ಯ ವಿದ್ಯಾರ್ಥಿಗಳು ಐದು ಮಂದಿ ಐಕಮತ್ಯ, ಸ್ತ್ರೀ ವಿದ್ಯಾಭ್ಯಾಸ, ಕೈಗಾರಿಕೆಗಳು, ಸ್ವದೇಶೀ ಪದಾರ್ಥ, ವಿವಾಹ ಎಂಬೀ ವಿಷಯಗಳನ್ನು ಕುರಿತು ಬರೆದಿದ್ದ ಉಪನ್ಯಾಸಗಳನ್ನು ಓದಿದರು. ಸಭಿಕರೆಲ್ಲಾ ಕಡೆಗೆ ತೀರ್ಮಾನ ಮಾಡಿಕೊಂಡ ವಿಷಯಗಳ್ಯಾವವೆಂದರೆ—ಸ್ವದೇಶೀ ಪದಾರ್ಥಗಳನ್ನೇ ಸಕಲರೂ ಕೊಂಡು ಉಪಯೋಗಿಸಬೇಕು; ವ್ಯವಸಾಯ, ವ್ಯಾಪಾರ, ಕೈಗಾರಿಕೆಗಳನ್ನು ಈಗಿನ ಕಾಲಕ್ಕೆ ತಕ್ಕಂತೆ ಬದಲಾವಣೆ ಮಾಡಿಕೊಂಡು ಆಚರಣೆಯಲ್ಲಿ ತರಬೇಕು; ೧೯೦೧ ನೆ ಇಸವಿಯ ಸೆನ್ಸಸ್ ರಿಪೋರ್ಟಿನಲ್ಲೂ ಮೆ॥ ಎಚ್. ವಿ ನಂಜುಂಡೈಯ್ಯನವರು ಬರೆದಿರುವ ಪುಸ್ತಕದಲ್ಲೂ ಕೋಮಟಿಗರ ವಿಷಯವಾಗಿ ಬರೆದಿರುವ ವಿಚಾರಗಳು ಯೋಗ್ಯವಾಗಿಲ್ಲದಿರೋಣದರಿಂದ ಅವನ್ನು ವಜಾ ಮಾಡಿಸುವುದಕ್ಕೆ ಪ್ರಯತ್ನ ಪಡಬೇಕು. ಎರಡನೆಯ ವೈಶ್ಯ ಮಹಾ ಸಭೆಯು ಕೃಷ್ಣಾದಲ್ಲಿ ನಡೆಯಬೇಕೆಂದು ಕಡೆಯಲ್ಲಿ ತೀರ್ಮಾನವಾಗಿ ಸಭೆಯು ಮುಕ್ತಾಯವಾಯಿತು

ಮೈಸೂರು ಸರ್ಕಾರಿ ಹುಕುಮುಗಳು.

ಮಾದ್ರಿ ವ್ಯವಸಾಯೋಪಕರಣಗಳು

ಮೈಸೂರು ಸಂಸ್ಥಾನದ ರೆವಿನ್ಯೂ ಕಮಿಷನರವರು ನಮ್ಮ ಸೀಮೆಯ ರೈತ ಪ್ರಜೆಗಳಿಗೆ ಹೊಸ ತರಹಾ ವ್ಯವಸಾಯಸಾಮಗ್ರಿಗಳನ್ನು ತರಿಸಿ ಅವುಗಳ ಪ್ರಯೋಜನವನ್ನು ತೋರ್ಪಡಿಸಿ ಆ ಮೂಲಕ ರೈತರೇ ಅಂಥಾ ಉಪಕರಣಗಳನ್ನು ತರಿಸಿಕೊಳ್ಳುವಂತೆ ಪ್ರೋತ್ಸಾಹಪಡಿಸಬೇಕೆಂದು ಕುತೂಹಲಪಟ್ಟು ಕಳೆದ ಡಿಸೆಂಬರ್ ೧೧ ರಲ್ಲಿ ಗವರ್ನಮೆಂಟಿಗೆ ಬರೆದು ಅವರ ಸ್ಯಾಂಕ್ಷನ್ ಅಪೇಕ್ಷಿಸಿದರು. ಆ ಸಾಮಗ್ರಿಗಳ್ಯಾವವೆಂದರೆ—ಹೊಟ್ಟು ಕಾಳನ್ನು ಬೇರೆಬೇರೆ ಮಾಡುವ ತೂರುವ ಯಂತ್ರ ೧ ಕ್ಕೆ ೯೦ ರೂಪಾಯಿ, ಎರಡು ಬಿತ್ತನೆಯ ಯಂತ್ರಗಳು ೨೩ ರೂಪಾಯಿ, ಒಂದು ಹುಲ್ಲು ಕೊಯ್ಯುವ ಯಂತ್ರ ೧೩೦ ರೂಪಾಯಿ; ಈ ಯಂತ್ರಗಳ ಕೆಲವು ಉಪಕರಣಗಳು ೪೦ ರೂಪಾಯಿ; ಇವನ್ನು ತರಿಸುವ ಚಾರ್ಜು ಮುಂತಾದ್ದು ೨೭ ರೂಪಾಯಿ; ಅಂತು ೩೦೦ ರೂಪಾಯಿ ಸ್ಯಾಂಕ್ಷನ್ ಆಗಬೇಕೆಂದು ಕೇಳಿದರು. ಇದನ್ನು ಗವರ್ನಮೆಂಟಿನವರು ಮಾರ್ಚಿ ೬ ರಲ್ಲಿ ಸ್ಯಾಂಕ್ಷನ್ ಮಾಡಿ ಹುಕುಂ ಕೊಟ್ಟಿರುವುದೇನೆಂದರೆ—ಈ ವ್ಯವಸಾಯ ಸಾಮಗ್ರಿಗಳು ರೈತರಿಗೆ ಬಹಳ ಅವಶ್ಯವೂ ತುಂಬಾ ಉಪಯೋಗಕರವೂ ಆಗಿರುತ್ತವೆಂತಲೂ ಇವನ್ನು ತರಿಸಿ ರೈತರಿಗೆ ಅವುಗಳ ಉಪಯೋಗವನ್ನು ತೋರಿಸಿಕೊಡಬೇಕೆಂತಲೂ ರೆವಿನ್ಯೂ ಕಮಿಷನರವರು ಹೇಳುತ್ತಾರೆ ಮತ್ತು ಈಚೆಗೆ ಅವನ್ನು ಡಿಸ್ಟ್ರಿಕ್ಟ್ ಬೋರ್ಡುಗಳಿಗೆ ಕೊಟ್ಟುಬಿಟ್ಟು ರೆವಿನ್ಯೂ ಅಧಿಕಾರಿಗಳು ಅವುಗಳ ಉಪಯೋಗವನ್ನು ರೈತರಿಗೆ ತೋರಿಸುವಂತೆ ಮಾಡಬಹುದಾಗಿಯೂ ಸೂಚಿಸಿರುತ್ತಾರೆ. ಆದಕಾರಣ ಗವರ್ನಮೆಂಟಿನವರು ಆ ಉಪಕರಣಗಳನ್ನು ತರಿಸಿಕೊಳ್ಳಬಹುದೆಂದು ಸಂತೋಷದಿಂದ ಹಣ ಸ್ಯಾಂಕ್ಷನ್ ಮಾಡಿ, ರೈತರಿಗೆಲ್ಲಾ ಅವುಗಳ ಉಪಯೋಗವನ್ನು ಚೆನ್ನಾಗಿ ತೋರಿಸಿಕೊಡಬೇಕೆಂದು ರೆವಿನ್ಯೂ ಕಮಿಷನರಿಗೆ ಸೂಚಿಸಿರುತ್ತಾರೆ.

ಹೊಸ ಗ್ರಾಮವನ್ನು ಕಟ್ಟುವುದು

ಹಾಸನ ಡಿಸ್ಟ್ರಿಕ್ಟ್ ಆಲೂರ್ ಸಬ್ ತಾಲ್ಲೂಕಿಗೆ ಸೇರಿದ ಕಾರಿಗಳ್ಳಿ ಎಂಬ ಗ್ರಾಮದ ಕೆಲವು ರೈತರು ತಲಾ ವ್ಯವಸಾಯಕ್ಕೆ ಐದು ಎಕರೆ ಜಮೀನನ್ನೂ ಮನೆ ಕಟ್ಟಿಕೊಳ್ಳುವುದಕ್ಕೆ ನಿವೇಶನವನ್ನೂ ಮಾಫಿಯಾಗಿ ಕೊಡಿಸಿಕೊಟ್ಟರೆ ತಾವು ಹೋಗಿ ನಾಲ್ಕು ತಿಂಗಳೊಳಗಾಗಿ ಮನೆಗಳನ್ನು ಕಟ್ಟಿಕೊಂಡು ಶಾಶ್ವತವಾಗಿ ಅಲ್ಲೇ ವಾಸ ಮಾಡುತ್ತೇವೆಂದೂ ಅದಕ್ಕೆ ತಪ್ಪಿದರೆ ತಮ್ಮ ಮನೆಗಳನ್ನೆಲ್ಲಾ ಸರ್ಕಾರದವರು ಕಿತ್ತುಕೊಳ್ಳಬಹುದೆಂದೂ ಡೆಪ್ಟಿ ಕಮಿಷನರಿಗೆ ಅರಿಕೆ ಮಾಡಿಕೊಂಡರು. ಅವರೂ ಅಮೃತಮಹಲ್ ಸೂಪರಿಂಟೆಂಡೆಂಟರೂ ಆದ ಮಾಯಿಷಿ ಮಾಡಿ ಹಾಸನದಿಂದ ಬೇಲೂರಿಗೆ ಹೋಗುವ ರಸ್ತೆ ೮ನೆಯ ಮೈಲಿಕಲ್ಲಿನ ಬಳಿ ಮೂರು ತಾಕು ಜಮೀನನ್ನು ಕೊಡಲು ಸರಿಯಾಗಿದೆ ಎಂದು ನೋಡಿಕೊಂಡು ಬಂದು ಗವರ್ನಮೆಂಟಿಗೆ ರಿಪೋರ್ಟ್ ಮಾಡಿದರು ೧ನೆಯ ತಾಕಿನಲ್ಲಿ ೧೩೦ ಎಕರ ಜಮೀನಿದೆ ಇದು ಹೊಸದಾಗಿ ಮನೆ ಕಟ್ಟಿಕೊಳ್ಳುವುದಕ್ಕೆ ಯೋಗ್ಯವಾಗಿರುವುದು. ೨ನೆಯ ತಾಕಿನಲ್ಲಿರುವ ೩೧೨ ಎಕರೆ ಜಮೀನು ಕಡದರಹಳ್ಳಿ ಗ್ರಾಮದ ಪಕ್ಕದಲ್ಲಿರುತ್ತದೆ. ೩ನೆಯ ತಾಕಿನಲ್ಲಿ ೧೧೮ ಎಕರೆ ಜಮೀನಿದೆ. ಇದು ಚಿಕ್ಕಗಡವಳ್ಳಿಯ ಎಲ್ಲೆ ಕಟ್ಟೆ ಇರುವುದು. ಇವೆರಡು ತಾಕುಗಳ ನಡುವೆ ವ್ಯವಸಾಯಕ್ಕೆ ಅನುಪಯೋಗವಾದ ಒಂದು ಗುಡ್ಡವಿರುವುದರಿಂದ ಅದನ್ನು ವಜಾ ಮಾಡಿ ಉಳಿದ ಭಾಗಗಳಲ್ಲಿ ವ್ಯವಸಾಯಕ್ಕೆ ಜಮೀನು ಕೊಡಬಹುದಾಗಿದೆ. ಚನ್ನರಾಯಪಟ್ಟಣದ ಮಂಡಲಗೆರೆ ಅಮೃತಮಹಲ್ ಕಾವಲನ್ನು ವ್ಯವಸಾಯಕ್ಕೆ ಕೊಟ್ಟ ರೀತಿಯಲ್ಲೇ ಮೇಲ್ಕಂಡ ಜಮೀನನ್ನು ಆ ಜನರಿಗೆ ಕೊಡಿಸಬೇಕೆಂದು ಡೆಪ್ಟಿ ಕಮಿಷನರು ತಿಳಿಸಿದರು. ಕಳೆದ ಮಾರ್ಚಿ ತಾ. ೪ ರಲ್ಲಿ ಗವರ್ನಮೆಂಟಿನವರು ಹುಕುಂ ಕೊಟ್ಟಿರುವುದೇನೆಂದರೆ—ಪ್ರತಿ ಒಬ್ಬ ರೈತನಿಗೂ ಎರಡು ಎಕರೆಯಂತೆ ಜಮೀನನ್ನೂ ವ್ಯವಸಾಯಕ್ಕೆ ಮನೆಯ ನಿವೇಶನವನ್ನೂ ಮುಂದೆ ಹೇಳುವ ಕರಾರಿಗೊಳಪಡಿಸಿ ಮಾಫಿಯಾಗಿ ಕೊಡಬಹುದು. ಈ ಕರಾರಿನಂತೆ ಪ್ರತಿ ಒಬ್ಬನಿಂದಲೂ ಮುಚ್ಚಳಿಕೆ ತೆಗೆದುಕೊಳ್ಳಬೇಕು. ಒಪ್ಪಂದಗಳೇನೆಂದರೆ—(೧) ಅರ್ಜಿದಾರನು ತನ್ನ ವ್ಯವಸಾಯ ಸಾಮಗ್ರಿ ಮತ್ತು ಸಂಸಾರ ಸಮೇತ ಸಾಗುವಳಿ ಚೀಟಿ ಪಡೆದುಕೊಂಡ ಆರು ತಿಂಗಳೊಳಗಾಗಿ ಹೊಸ ಗ್ರಾಮದಲ್ಲಿ ಬಂದು ಖಾಯಂ ವಾಸ ಮಾಡಬೇಕು, (೨) ಅಲ್ಲೇ ಸಿಕ್ಕಬಹುದಾದ ದಬ್ಬ ಸಳ ಸುರ ಬೊಂಬು ಮುಂತಾದ ಸಾಮಾನನ್ನು ಮಾಫಿಯಾಗಿ ಕೊಡುತ್ತಾರಾದ್ದರಿಂದ ಆರೋಗ್ಯದ ರೂಲಿಸಿನಂತೆ ಮನೆ ಕಟ್ಟಿಕೊಳ್ಳುವುದಕ್ಕೆ ಒಪ್ಪಬೇಕು, (೩) ವ್ಯವಸಾಯಕ್ಕಾಗಿ ಅವನು ಪಡೆದುಕೊಂಡ ಜಮೀನನ್ನು ಮೊದಲನೆಯ ಆರಂಬ ಕಾಲದಲ್ಲೇ ಉತ್ತುಬಿತ್ತಿ ವ್ಯವಸಾಯ ಮಾಡಿ ಸಾಗುವಳಿಗೆ ತರಬೇಕು. ಈ ಭಾಗದಲ್ಲಿ ಎಷ್ಟು ಜಮೀನು ಕೊಡಲಾಗುವುದೋ, ಅವುಗಳ ಸಾಗುವಳಿ ಮುಂತಾದ್ದು ಹ್ಯಾಗೆ ನಡೆಯುವುದೋ ಈ ಮೊದಲಾದ ವಿನ್ಯಾಸಗಳನ್ನೆಲ್ಲಾ ಕುರಿತು ಡೆಪ್ಟಿ ಕಮಿಷನರು ಆಗಿಂದಾಗ್ಗೆ ರೆವಿನ್ಯೂ ಕಮಿಷನರಿಗೆ ರಿಪೋರ್ಟ್ ಮಾಡುತ್ತಾ ಬರಬೇಕು

ಇಂಡಿಯಾ ದೇಶದ ವೃತ್ತಾಂತಗಳು.

ನಮ್ಮ ವೈಸ್‌ರಾಯಿಯವರ ಪತ್ನೀರಾದ ಲೇಡಿ ಮಿಂಟೋರವರೂ ಮಕ್ಕಳೂ ಕಳೆದ ಭಾನುವಾರ ಲಂಡನ್ ಪಟ್ಟಣವನ್ನು ಸುರಕ್ಷಿತವಾಗಿ ತಲುಪಿದರು.

***

ಬೊಂಬಾಯಿ ಪಟ್ಟಣದ ಕೋಟೆಯಲ್ಲಿ ಒಂದು ಹಳೆ ಮನೆಗೆ ಬೆಂಕಿ ಬಿದ್ದು ಸುಮಾರು ೫೦,೦೦೦ ರೂಪಾಯಿನ ಮಾಲುಗಳು ಬೂದಿಯಾದವು.

***

ಹೈದರಾಬಾದಿನ ಕಾಡಿಗೆ ಮೂರುಮಂದಿ ಬಂದೂಕ ಹಿಡಿದುಕೊಂಡು ಹೋಗಿ ಆರು ದಿನಗಳಲ್ಲಿ ನಾಲ್ಕು ಭಾರೀ ಹುಲಿಗಳನ್ನು ಹೊಡೆದು ತಂದಿದಾರೆ.

***

ಕೂಚ್ ಬಿಹಾರ್ ಮಹಾರಾಜರವರು ಜಂಗಲಿಗೆ ಶಿಕಾರಿ ಮಾಡುವುದಕ್ಕೆ ಹೋಗಿ ಆರು ಹುಲಿ, ಏಳು ಕರಡಿ, ನಾಲ್ಕು ಚಿರತೆಗಳನ್ನು ಸಂಹಾರ ಮಾಡಿಕೊಂಡು ಬಂದರು.

***

ಬಂಗಾಳಾ ಆಧಿಪತ್ಯಕ್ಕೆ ಸೇರಿದ ಮಾಲ್ಡಾ ಪಟ್ಟಣದಲ್ಲಿ ಕಳೆದ ವಾರದ ಬಹು ಕಠಿಣವಾದ ಆನೆಕಲ್ಲಿನ ಮಳೆ ಸುರಿಯಿತು ಒಂದು ಠಾಣಾ ಸರಹದ್ದಿನಲ್ಲಿ ೧೪ ಜನರೂ ೧೦೧ ಗೋಕಾಯಿಗಳೂ ಮಳೆಗೆ ಸಿಕ್ಕಿ ಪ್ರಾಣ ಬಿಟ್ಟರು. ೧೮೬ ಜನರಿಗೆ ತುಂಬಾ ಗಾಯಗಳಾಗಿವೆ.

***

ಸಿಲೋನ್ (ಲಂಕಾ) ದ್ವೀಪದ ಸಮುದ್ರ ತೀರದಲ್ಲಿ ಮುತ್ತಿನ ಚಿಪ್ಪುಗಳನ್ನು ತೆಗೆಯಲಾರಂಭವಾಯಿತು. ೧೭೬ ದೋಣಿಗಳು ೩೨ ದಿನಗಳ ತನಕ ಕೆಲಸ ಮಾಡಿ ೬,೩೮,೦೦೧ ಮುತ್ತಿನ ಚಿಪ್ಪುಗಳನ್ನು ತೆಗೆದು, ಅವುಗಳೊಳಗಿದ್ದ ಮುತ್ತುಗಳನ್ನು ಒಡೆದು ೧೧ ತೆಗೆದು ಕೊಡಿಸಲಾಗಿ ೯ ಕೋಟಿ ೨೯ ಲಕ್ಷ ರೂಪಾಯಿನ ಮುತ್ತುಗಳು ಸಿಕ್ಕಿರುತ್ತವೆ

***

ಬಂಗಾಳಾ ಆಧಿಪತ್ಯಕ್ಕೆ ಸೇರಿದ ರಾಂಚಿ ಡಿಸ್ಟ್ರಿಕ್ಟಿನಲ್ಲಿ ಮದ್ಯದ ಅಂಗಡಿಗಳು ತುಂಬಾ ಹೆಚ್ಚಿ ಬಹು ಜನರು ಮದ್ಯಪಾನಿಗಳಾಗುತ್ತಿರುವದನ್ನು ಬಂಗಾಳಾ ಗವರ್ನಮೆಂಟನವರು ಸರ್ಕಾರಿಯಾಗಿಯೂ ಪ್ರಜೆಗಳ ಪ್ರತಿನಿಧಿಗಳ ಮೂಲಕವೂ ತಿಳಿದು ಆ ದುಷ್ಟವಾದ ವ್ಯಾಪಾರವನ್ನು ಕಾನೂನಿಗೆ ವಿರೋಧವಾಗದ ರೀತಿಯಲ್ಲಿ ಕಡಿಮೆ ಮಾಡುವುದಕ್ಕೆ ಪ್ರಯತ್ನಪಟ್ಟಿದಾರೆ.

***

ಕಲ್ಕತ್ತೆಯ ಬಳಿ ನಾರಾಯಣಗಂಜ್ ಎಂಬ ಸ್ಥಳದಲ್ಲಿ ಒಂದು ಭಾರೀ ಕಾರ್ಖಾನೆಯು ಬೆಂಕಿ ಬಿದ್ದು ಕಳೆದ ೧೭ ನೇ ತಾ. ನಲ್ಲಿ ೮—೧೦ ಲಕ್ಷ ರೂಪಾಯಿ ಸಾಮಾನುಗಳು ಸುಟ್ಟು ಹೋದವಷ್ಟೆ. ಆ ಕಾರ್ಖಾನೆಯ ಮ್ಯಾನೇಜರಾಗಿದ್ದವನೂ ಇನ್ನು ಮೂರು ಮಂದಿ ನೌಕರರೂ ಸೇರಿ ಬೆಂಕಿ ಹಾಕಿದರೆಂದು ತಿಳಿದು ಬಂದದ್ದರಿಂದ ಪೊಲೀಸಿನವರು ಅವರನ್ನು ಹಿಡಿದು ತನಿಖೆ ಮಾಡುತ್ತಿದಾರೆ.

***

ಹೈದರಾಬಾದ್ ರಾಜಧಾನಿಯಲ್ಲಿ ನೈಜಾಮರವರ ನಾಲ್ವತ್ತನೆಯ ವರ್ಧಂತಿ ಉತ್ಸವದ ಜ್ಞಾಪಕಾರ್ಥವಾಗಿ ಒಂದು ದೊಡ್ಡ ಟೌನ್ ಹಾಲ್ ಬಂಗಲೆಯನ್ನು ಕಟ್ಟಲಾರಂಭಿಸಿರುತ್ತಾರೆ ಇದಕ್ಕೆ ಎರಡು ಲಕ್ಷ ರೂಪಾಯಿಗಿಂತಲೂ ಹೆಚ್ಚಾಗಿಯೇ ಮುಟ್ಟುವುದೆಂದು ತಿಳಿದಿದೆ. ಕಳೆದ ೧೯೦೬ ನೆ ಇಸವಿ ಡಿಸೆಂಬರ್ ೨೬ ರಲ್ಲಿ ನೈಜಾಮರವರು ಈ ಕಟ್ಟಡದ ತಳಪಾಯವನ್ನು ಹಾಕಿ ಕಾಮಗಾರಿ ಪ್ರಾರಂಭಿಸಿದರು.

***

ಟೊಂಕ್ ಸಂಸ್ಥಾನದ ರಾಜರ ಪ್ರೈವೆಟ್ ಸೆಕ್ರೆಟರಿ ಖಾನ್ ಬಹದೂರ್ ಜಲ್ಲಾ ಟಕ್ಷ್‌ಯವರ ಮಗಳು ಗೃಹಕೃತ್ಯದ ವಿಚಾರದಲ್ಲಿ ಒಂದು ಪುಸ್ತಕವನ್ನು ಇಂಗ್ಲಿಷಿನಿಂದ ತೆಗೆದು ಉರ್ದು ಭಾಷೆಯಲ್ಲಿ ಬರೆದು ಅಚ್ಚು ಹಾಕಿಸಿ ವೈಸ್‌ರಾಯಿಯವರ ಪತ್ನೀರವರಿಗೂ ಲೆಫ್ಟಿನೆಂಟ್ ಗವರ್ನರವರ ಪತ್ನೀರವರಿಗೂ ಒಂದೊಂದು ಪ್ರತಿಯನ್ನು ಕಳುಹಿಸಿದ್ದಕ್ಕೆ ಅವರಿಬ್ಬರೂ ಆಕೆಯನ್ನು ನಂದಿಸಿ ಆಕೆಯ ಸಾಮರ್ಥ್ಯವನ್ನು ಕೊಂಡಾಡಿದರು.

***

ಸೋನಪುರ್ ಮೇಳದಲ್ಲಿದ್ದ ಮಹಾರಾಜಾ ಕರವಲ್ಲಭನಾರಾಯಣಸಿಂಗ್‌ಯವರನ್ನು ಯಾರೋ ಗುಂಡಿನಿಂದ ಹೊಡೆದು ಕೊಂದುಹಾಕಿರುತ್ತಾರೆಂದು ಭಾಗಲ್‌ಪುರದಿಂದ ಕಲ್ಕತ್ತೆಗೆ ತಂತೀ ವರ್ತಮಾನಬಂದಿದೆ. ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರೂ ಪೊಲೀಸ್ ಸೂಪರಿಂಟೆಂಡೆಂಟರೂ ಸಿವಿಲ್ ಸರ್ಜನರೂ ಅಲ್ಲಿಗೆ ಹೋಗಿದಾರೆ ಕೊಲೆ ಮಾಡಲ್ಪಟ್ಟ ಮಹಾರಾಜರಿಗೆ ಗಂಡುಮಕ್ಕಳಿಲ್ಲವೆಂತಲೂ ಹೆಣ್ಣುಮಕ್ಕಳು ಮಾತ್ರ ಇದಾರೆಂತಲೂ ತಿಳಿದುಬಂದಿದೆ

***

ಮೈಮನಸಿಂಗ್ ಡಿಸ್ಟ್ರಿಕ್ಟಿಗೆ ಸೇರಿದ ಕಿಷೋರ್‌ಗಂಜ್ ಎಂಬ ಸ್ಥಳದಲ್ಲಿ ಇಬ್ಬರು ಬಂಗಾಳಿ ವಿದ್ಯಾರ್ಥಿಗಳು ಕೆಲವು ಅಂಗಡಿಗಳಿಗೆ ಹೋಗಿ ಪರದೇಶದಿಂದ ಬಂದ ಬಟ್ಟೆ ಬರೆಗಳನ್ನು ತೆಗೆದುಕೊಂಡು ಬೆಂಕಿ ಇಟ್ಟು ಸುಟ್ಟುಹಾಕಿದರು. ಇದಕ್ಕಾಗಿ ಅವರಿಬ್ಬರಿಗೂ ಮ್ಯಾಜಿಸ್ಟ್ರೇಟರು ಎರಡುವರೆ ತಿಂಗಳಂತೆ ಕಠಿಣ ಸಜಾವನ್ನೂ ೧೫೦ ರೂಪಾಯಿನಂತೆ ಜುಲ್ಮಾನೆಯನ್ನೂ ವಿಧಿಸಿದರು. ಸಾವಿರಾರು ಜನರು ಕೋರ್ಟಿನಲ್ಲಿ ಇದ್ದು ಶಿಕ್ಷೆಯನ್ನು ಕೇಳಿದ ಕೂಡಲೇ ಆ ಇಬ್ಬರು ವಿದ್ಯಾರ್ಥಿಗಳಿಗೂ ಹೂಮಾಲೆಗಳನ್ನು ಹಾಕಿ "ವಂದೇಮಾತರಂ" ಎಂದು ಕೂಗುತ್ತಾ ಅವರನ್ನು ಬಂದೀಖಾನೆಗೆ ಕರೆದುಕೊಂಡು ಹೋದರು ಈ ಮೊಕದ್ದಮೆ ಅಪೀಲಾಗಿದೆ

***

ಬರ್ಮಾ ಆಧಿಪತ್ಯದಲ್ಲಿ ಬೌದ್ಧ ಸನ್ಯಾಸಿಗಳು ಹೆಣ್ಣು ಮಕ್ಕಳಿಗೆ ಅನೇಕ ಪಾಠಶಾಲೆಗಳನ್ನಿಟ್ಟು ಸಾಮಾನ್ಯ ವಿದ್ಯೆಯನ್ನೂ ಭಕ್ತಿ ಮಾರ್ಗವನ್ನೂ ಮನೆ ಕೆಲಸ ಕಾರ್ಯಗಳನ್ನೂ ಕಲಿಸುತ್ತಿದಾರೆ. ಗ್ರಾಮಾಂತರಗಳಲ್ಲೇ ಈ ಪಾಠಶಾಲೆಗಳು ವಿಶೇಷವಾಗಿ ಸ್ಥಾಪಿಸಲ್ಪಟ್ಟಿರುವವು ಸರ್ಕಾರದವರ ಸಹಾಯವನ್ನು ಅವರು ಅಪೇಕ್ಷಿಸುವದೇ ಇಲ್ಲ ಈ ಪಾಠಶಾಲೆಗಳು ತುಂಬಾ ತೃಪ್ತಿಕರವಾಗಿ ನಡೆಯುತ್ತಲಿವೆ. ಈಚೆಗೆ ಭಕ್ತಿಯ ಮಾರ್ಗವನ್ನು ಕಲಿಸುವುದಕ್ಕೆ ಬಾಲಕರಿಗೂ ಪಾಠಶಾಲೆಗಳನ್ನು ಮಾಡಿರುತ್ತಾರೆ ಭಾನುವಾರಗಳಲ್ಲೇ ಪಾಠಗಳನ್ನು ಹೇಳಿ ಕಲಿಸುವರು. ಜನವರಿಯಲ್ಲಿ ಮಾಂಡಲೆ ಪಟ್ಟಣದಲ್ಲಿ ಒಂದು ಪಾಠಶಾಲೆ ಇದ್ದದ್ದು ಈಗ ಇತರ ಕಡೆಗಳಲ್ಲೂ ೨೦—೩೦ ವರೆಗೆ ಹೆಚ್ಚಿವೆ.

***

ಫಿರೋಜ್‌ಪುರದ ರಾಂಜಿ ದಾಸ್ ಎಂಬವನು ಕಲ್ಕತ್ತೆಗೆ ಬಂದು ತಾನಾಗಿ ಪೊಲೀಸಿನವರ ಬಳಿಗೆ ಹೋಗಿ ಹೇಳಿಕೊಂಡದ್ದೇನೆಂದರೆ—ನಾನು ಸುಮಾರು ಮೂರು ವರುಷಗಳ ಕೆಳಗೆ ಭಗ್ಗನೆಂಬೊಬ್ಬ ಆಳನ್ನು ಇಟ್ಟುಕೊಂಡಿದ್ದೆನು. ಒಂದು ದಿನ ಅವನು ನನ್ನ ಸಂಗಡ ಜಗಳಕ್ಕೆ ಬಂದನು. ನಾನು ಅವನನ್ನು ಒಂದು ಚೂರಿಯಿಂದ ಬಗೆದು ಕೊಂದುಹಾಕಿ, ಅಲ್ಲಿಂದೀಚೆಗೆ ಹಿಂದುಸ್ಥಾನವನ್ನೆಲ್ಲಾ ಸುತ್ತಿದರೂ ನನ್ನ ಮನೋವ್ಯಥೆ ನಿವಾರಣೆಯಾಗದೆ ಇರುತ್ತೇನೆ. ನನಗೆ ನ್ಯಾಯವಿಧಿಯ ಪ್ರಕಾರ ಶಿಕ್ಷೆಮಾಡಿಸಿಬಿಡಿ ಎಂದು ಹೇಳಿದನು ಪೊಲೀಸಿನವರು ಅವನ ಹೇಳಿಕೆಯ ಪ್ರಕಾರ ಅವನನ್ನು ದಸ್ತಗಿರಿಮಾಡಿ, ಅವನು ಹೇಳಿದಂತೆ ಫಿರೋಜ್‌ಪುರದಲ್ಲಿ ಕೊಲೆ ನಡೆದದ್ದುಂಟೇ ಎಂದು ಅಲ್ಲಿಗೆ ವರ್ತಮಾನಕೊಟ್ಟು ಕೇಳಿರುತ್ತಾರೆ.

***

ಬಾಂಡಾ ಡಿಸ್ಟ್ರಿಕ್ಟಿನಲ್ಲಿ ಸಯ್ಯದ್ ಮಹಮದ್ ಹಮೀದ್ ಎಂಬ ತಹಶೀಲ್ದಾರನು ಚಿರತೆ ಬಂದಿದೆ ಎಂಬ ವರ್ತಮಾನವನ್ನು ಕೇಳಿ ಅದನ್ನು ಹೊಡೆಯಬೇಕೆಂದು ಜವಾನನ ಕೂಡೆ ಬಂದೂಕು ಸಹಿತ ಹೊರಟನು. ಕಾಡಿನಲ್ಲಿ ಹುಡುಕುವಾಗ್ಗೆ ಚಿರತೆ ಇದ್ದ ಗುಹೆ ಸಿಕ್ಕಿತು ಅದು ಕಣ್ಣಿಗೆ ಬೀಳದಿದ್ದರೂ ತಹಶೀಲ್ದಾರನು ಗುಹೆಗೆ ಗುಂಡು ಹೊಡೆದನು. ಚಿರತೆಯು ಇನ್ನೊಂದು ಕಡೆಯಿಂದ ಹಾರಿ ಬಂದು ಜವಾನನನ್ನು ಹಿಡಿದುಕೊಂಡಿತು. ತಹಶೀಲ್ದಾರನು ರೋಷದಿಂದ ಅದರ ಮೇಲೆ ಹಾರಿ ತನ್ನ ಬಲವನ್ನೆಲ್ಲಾ ಬಿಟ್ಟು ಅಮಿಕಿ ಹಿಡಿದುಕೊಂಡನು. ಚಿರತೆಯು ಬಿಡಿಸಿಕೊಳ್ಳಬೇಕೆಂದು ತುಂಬಾ ಸಾಹಸ ಪಟ್ಟಿತು. ಕಡೆಗೆ

ಪ್ಪಿಸಿಕೊಂಡು ಸ್ವಲ್ಪ ದೂರ ಓಡಿ ಹೋಗಿ ಮತ್ತೆ ಹಿಂತಿರುಗಿ ತಹಸೀಲ್ದಾರನ ಮೇಲೆ ಹಾರಿತು. ಸುಮಾರು ೨೦—೩೦ ನಿಮಿಷಗಳ ತನಕ ಆತನು ಅದರ ಕೂಡೆ ಹೆಣಗಾಡಿ, ಕಡೆಗೆ ತನ್ನ ಭುಜಬಲದಿಂದ ಅದನ್ನು ಗಟ್ಟಿಯಾಗಿ ಹಿಡಿದು ಅಮುಕಿಕೊಂಡನು. ಜವಾನನು ಅಷ್ಟರಲ್ಲೇ ಓಡಿಬಂದು ಕಡುಕತ್ತಿಯಿಂದ ಅದನ್ನು ಹೊಡೆದು ಕತ್ತರಿಸಿ ಹಾಕಿದನು. ತಹಸೀಲ್ದಾರನಿಗೂ ಜವಾನನಿಗೂ ಮೈಮೇಲೆಲ್ಲಾ ಗಾಯಗಳಾಗಿವೆ. ಅವರನ್ನು ಬಾಂಡಾ ನಗರದ ಆಸ್ಪತ್ರೆಯಲ್ಲಿಟ್ಟು ಚಿಕಿತ್ಸೆ ಮಾಡುತ್ತಿದಾರೆ. ಪ್ರಜೆಗಳೆಲ್ಲಾ ಈ ವರ್ತಮಾನವನ್ನು ಕೇಳಿ ಅವರ ಧೈರ್ಯ ಸಾಮರ್ಥ್ಯಗಳನ್ನು ವಿವರಿಸಿ ಹೊಗಳುತ್ತಾ ಇರುವರು.

***

ಒರಿಸಾ ಪ್ರಾಂತ್ಯಕ್ಕೆ ಸೇರಿದ ಕಟಕ್ ಎಂಬೂರಿನಲ್ಲಿರುವ ಮಿ॥ ಎ. ಎಸ್. ದಾಸ್, ಎಂ. ಎ. ಎಂಬ ದೇಶೀಯ ದೊಡ್ಡ ಮನುಷ್ಯನ ಮಗಳು ಈಗ ವಿಲಾಯತಿಯಲ್ಲಿರುತ್ತಾಳೆ. ಈಕೆಗೆ ಚಕ್ರವರ್ತಿಯು ಚಕ್ರವರ್ತಿನಿಯವರೂ ಕಳೆದ ತಿಂಗಳ ಆದಿಭಾಗದಲ್ಲಿ ಭೇಟಿ ಕೊಟ್ಟರು. ಆಕೆ ಆಗ್ಗೆ ಬಂಗಾಳಾ ಸ್ತ್ರೀಯರಿಗೆ ಯೋಗ್ಯವಾದಂಥಾ ನೀಲಪೀತಾಂಬರ ಮೊದಲಾದ ಸೀರೆ ಕುಪ್ಪಸಾದಿಗಳನ್ನು ಬಹು ಸಾಮಾನ್ಯವಾಗಿ ಉಟ್ಟುತೊಟ್ಟು ಹಿಂದು ಸ್ತ್ರೀಯರು ಧರಿಸಿಕೊಳ್ಳುವಂಥಾ ಆಭರಣಾದಿಗಳನ್ನು ಧರಿಸಿ ಅಲಂಕಾರ ಮಾಡಿಕೊಂಡು ಹೋಗಿ, ಹಿಂದುಗಳ ಹಾಗೆಯೇ ರಾಜದಂಪತಿಗಳನ್ನು ಕಂಡ ಕೂಡಲೇ ಸಾಷ್ಟಾಂಗ ನಮಸ್ಕಾರ ಮಾಡಿದಳು. ಆಕೆ ಕ್ರೈಸ್ತಳಾಗಿದ್ದರೂ ಹಿಂದುಗಳಂತೆಯೇ ನಡೆಸಿಕೊಂಡದ್ದನ್ನು ನೋಡಿ ಚಕ್ರವರ್ತಿನಿಯವರು ತುಂಬಾ ಸಂತೋಷಪಟ್ಟು ಆಕೆಯನ್ನು ಬಹು ಆದರಪೂರ್ವಕವಾಗಿ ಕಂಡು ಯೋಗಕ್ಷೇಮವನ್ನು ವಿಚಾರಿಸಿದರು. ಹಿಂದೂ ಸ್ತ್ರೀಯರು ಈ ಪ್ರಕಾರ ಹೋಗಿ ಚಕ್ರವರ್ತಿನಿಯವರ ಭೇಟಿ ಮಾಡಿಕೊಂಡು ಬಂದದ್ದು ಇದೇ ಮೊದಲು.

***

ಹಿಂದುಸ್ಥಾನದ ಕೆಲವು ಸಹಸ್ರ ಜನರು ದಕ್ಷಿಣ ಆಫ್ರಿಕದಲ್ಲಿ ನಾನಾ ಕೆಲಸ ಕಾರ್ಯಗಳನ್ನು ನಡಸುತ್ತಿರುವರು. ಇವರಿಗೆ ಅಲ್ಲಿನ ಗವರ್ನ್‌ಮೆಂಟಿನವರು ಕೆಲವು ಅಯೋಗ್ಯವಾದ ನಿರ್ಬಂಧಗಳನ್ನು ಕಲ್ಪಿಸಿ ಅವರ ಬಾಳುವೆಯನ್ನೇ ದುಃಖಕರವಾಗಿ ಮಾಡಿದಾರೆ. ಕಳೆದ ವಾರ ಟ್ರಾನ್ಸ್‌ವಾಲಿನ ಎಲ್ಲಾ ಭಾಗಗಳಿಂದಲೂ ಪ್ರತಿನಿಧಿಗಳು ಬಹು ಸಾವಿರ ಮಂದಿ ಜೋಹಾನಸ್‌ಬರ್ಗಿನಲ್ಲಿ ಸೇರಿ ಒಂದು ದೊಡ್ಡ ಸಭೆಯನ್ನು ನಡಿಸಿದರು. ಆಸ್ಯಾ ಖಂಡದ ಪ್ರಜೆಗಳನ್ನು ಸ್ಥಳಾಂತರಿಸುವಂಥಾ ಕಾನೂನನ್ನು ಟ್ರಾನ್ಸ್‌ವಾಲ್ ಸರ್ಕಾರದವರು ಜಾರಿಗೆ ತಂದಿರುವುದು ಅನಾವಶ್ಯವಾದದ್ದೆಂತಲೂ, ಅವಮಾನಕರವಾದದ್ದೆಂತಲೂ, ಹಿಂದುಸ್ಥಾನದ ಜನರು ಮೋಸಮಾಡಿ ಆ ಸೀಮೆಗೆ ಬಂದು ಸೇರಿಕೊಳ್ಳುತ್ತಾರೆಂಬ ಮಾತು ನಿಜವಲ್ಲವೆಂತಲೂ, ಒಂದು ವೇಳೆ ಹಾಗೆ ಆದರೆ ಹಿಂದುಸ್ಥಾನದ ಜನರು ಸರ್ಕಾರದ ನಿರ್ಬಂಧವಿಲ್ಲದೆ ತಾವಾಗಿಯೇ ಹೋಗಿ ತಮ್ಮ ಹೆಸರು ಕಸಬು ಮುಂತಾದ್ದನ್ನು ಬರೆಸಿಕೊಡುವುದಕ್ಕೆ ಸಿದ್ಧರಾಗಿದಾರೆಂತಲೂ ತೀರ್ಮಾನಗಳನ್ನು ಮಾಡಿಕೊಂಡು ಈ ತೀರ್ಮಾನಗಳನ್ನು ವಿಲಾಯತಿಯಲ್ಲಿರುವ ಸೆಕ್ರೆಟರಿಯವರಿಗೂ ಹಿಂದುಸ್ಥಾನದ ವೈಸ್‌ರಾಯವರಿಗೂ ತಿಳಿಸಿದಾರೆ.

***

ಲಕ್ನೋ ಪಟ್ಟಣದ ಪೋಸ್ಟ್ ಆಫೀಸುಗಳ ನೌಕರಮಾನೆಯವರೆಲ್ಲಾ ಸೇರಿ ಒಂದು ಮನವಿ ಅರ್ಜಿಯನ್ನು ಬರೆದುಕೊಂಡು ಎಲ್ಲರೂ ದಸ್ತಕ್ಕೆ ರುಜುಮಾಡಿ ಡೈರೆಕ್ಟರ್ ಜನರಲ್‌ರವರಿಗೆ ಒಪ್ಪಿಸಿರುತ್ತಾರೆ. ಅವರ ಪ್ರಾರ್ಥನೆ ಏನೆಂದರೆ—ನಮ್ಮ ಕಛೇರಿಗೂ ಇತರ ಸರ್ಕಾರಿ ಇಲಾಖೆಗಳ ನೌಕರಮಾನೆಯರ ತಲಬುಗೂ ಬಹಳ ವ್ಯತ್ಯಾಸವಿರುತ್ತದೆ. ನಮ್ಮಲ್ಲಿ ಕಡೇ ದರ್ಜೆಯ ನೌಕರನಿಗೆ ೩೦ ರೂಪಾಯಿ ಸಂಬಳ ಸಿಕ್ಕಬೇಕಾದರೆ ಕಾಲಕ್ರಮದಲ್ಲಿ ಅಂದರೆ, ಪೆನ್ಷನ್ ಪಡೆಯುವಾಗ್ಗೆ ೧೫೦ ರೂಪಾಯಿ ತನಕ ಅದು ಏರು ಆಗುವಂತೆಯೂ ಮಾಡಿಕೊಡಬೇಕು. ಈಗ ನಮಗಿರುವ ಕೆಲಸದ ಅವಧಿಯನ್ನು ಕಡಮೆ ಮಾಡಿಕೊಟ್ಟು, ನಾವು ನಮ್ಮ ಗೃಹಕೃತ್ಯ ನೋಡಿಕೊಳ್ಳುವುದಕ್ಕೆ ಸಮಯ ಸಿಕ್ಕುವಂತೆ ಮಾಡಿಕೊಡಬೇಕು. ಸರ್ಕಾರಿ ಗೆಜೆಟ್ಟಿನಲ್ಲಿ ಪ್ರಕಟವಾಗುವ ಮತ್ತು ಈ ಪಟ್ಟಣದಲ್ಲಿ ಕೊಡುವ ಸಮಸ್ತ ರಜಾ ದಿನಗಳೂ ನಮಗೆ ಸಿಕ್ಕುವಂತೆಯೂ, ನಾವು ಪ್ರಿವಿಲೆಜ್ ರಜಾ ಕ್ಯಾಜುಯಲ್ ರಜಾಗಳನ್ನು ಸುಲಭವಾಗಿ ಉಪಯೋಗಿಸಿಕೊಳ್ಳುವಂತೆಯೂ, ಪೋಸ್ಟ್ ಆಫೀಸಿನ ಸಮೀಪದಲ್ಲೇ ನಾವುಗಳೆಲ್ಲಾ ವಾಸಮಾಡಿಕೊಂಡಿರುವಂತೆ ನಮಗೆ ಸರ್ಕಾರಿ ಮನೆಗಳನ್ನು ಕಟ್ಟಿಸಿಕೊಡುವಂತೆಯೂ ಏರ್ಪಾಡು ಮಾಡಬೇಕೆಂಬುವುದೇ ನಮ್ಮ ಪ್ರಾರ್ಥನೆಯಾಗಿದೆ. ಇವರ ಅರ್ಜಿಯ ಮೇಲೆ ಆ ಅಧಿಕಾರಿಯು ಇನ್ನೂ ಯಾವ ಹುಕುಮನ್ನೂ ಮಾಡದೆ ಆಲೋಚನೆಮಾಡುತ್ತಿರುವುದಾಗಿ ತಿಳಿಯುವುದು.

***

ಬಂಗಾಳಾ ಆಧಿಪತ್ಯದ ಕೆಲವು ದೇಶೀಯ ದೊಡ್ಡ ಮನುಷ್ಯರು ದೇಶಾಭಿವೃದ್ಧಿಯ ಸಂಘವೆಂಬ ಒಂದು ಕೂಟವನ್ನು ಮಾಡಿಕೊಂಡು, ಅನೇಕಾನೇಕ ಜನರಿಂದ ಚಂದಾ ಕೂಡಿಸಿ ಫಂಡು ಮಾಡುತ್ತಲೂ, ಆ ಹಣದಲ್ಲಿ ವಿದ್ಯಾವಂತರಾದ ಯೌವನಸ್ಥರನ್ನು ವಿಲಾಯತಿಯೇ ಮೊದಲಾದ ಪರದೇಶಗಳಿಗೆ ನಾನಾ ಕಸಬುಗಳನ್ನು ಕಲಿತು ಬರುವಂತೆ ಖರ್ಚು ಕೊಟ್ಟು ಕಳುಹಿಸುತ್ತಲೂ ಇದಾರೆ. ಕಳೆದ ವಾರ ಕಲ್ಕತ್ತಾ ಪಟ್ಟಣದ ಟೌನ್ ಹಾಲ್ ಬಂಗಲೆಯಲ್ಲಿ ಈ ದೇಶಾಭಿವೃದ್ಧಿ ಸಂಘದವರು ಸಭೆ ಸೇರಿದ್ದರು. ಬಂಗಾಳಾ ಅಧಿಪತ್ಯದ ಲೆಫ್ಟಿನೆಂಟ್ ಗವರ್ನರರವರೂ ದಯಮಾಡಿ ಸಭಾನಾಯಕರಾಗಿದ್ದು, ಆ ಸಂಘದವರು ಪರದೇಶಗಳಿಗೆ ಕಳುಹಿಸುವುದಕ್ಕಾಗಿ ಚುನಾಯಿಸಿದ್ದ ವಿದ್ಯಾರ್ಥಿಗಳಿಗೆಲ್ಲಾ ಬಹು ಶ್ರೇಷ್ಠವಾದ ಬುದ್ಧಿಮಾತುಗಳನ್ನು ಹೇಳಿದರು. ಈ ಸಲ ೯೮ ಮಂದಿ ವಿದ್ಯಾರ್ಥಿಗಳು ಪ್ರಯಾಣ ಮಾಡಿರುತ್ತಾರೆ. ಅವರಲ್ಲಿ ಅರವಾಸಿ ಯೌವನರು ಅಮೇರಿಕಕ್ಕೂ, ೩೩ ಮಂದಿ ಜರ್ಮನಿ ರಾಜ್ಯಕ್ಕೂ, ೧೩ ಮಂದಿ ವಿಲಾಯತಿಗೂ, ಇಬ್ಬರು ಫ್ರಾನ್ಸಿಗೂ ಹೋಗಿ ಆಯಾ ಕಡೆಗಳಲ್ಲಿ ಪ್ರಚಲಿತವಿರುವಂಥಾ ಶಾಸ್ತ್ರ ಮತ್ತು ಕಸಬುದಾರಿ ವಿದ್ಯೆಗಳನ್ನು ಕಲಿತು ಬರುವವರಾಗಿದಾರೆ. ಈ ಫಂಡಿಗೆ ಚಂದಾರೂಪವಾಗಿ ೫೯,೯೭೭ ರೂಪಾಯಿ ವಸೂಲಾಯಿತೆಂತಲೂ, ಈ ಪೈಕಿ ವಿದೇಶಗಳಿಗೆ ಕಳುಹಲ್ಪಟ್ಟು ಅಲ್ಲಲ್ಲಿ ವಿದ್ಯಾಭ್ಯಾಸಂಗ ಮಾಡುತ್ತಿರುವಂಥಾ ಹಿಂದುಸ್ಥಾನದ ವಿದ್ಯಾರ್ಥಿಗಳಿಗೆ ವೇತನಾದಿಗಳನ್ನು ಕೊಡುವುದೇ ಮುಂತಾದ್ದಕ್ಕೆ ೪೧,೬೦೦ ರೂಪಾಯಿ ಖರ್ಚಾಗಿ, ಚಾಲ್ತಿ ವರುಷದ ಖರ್ಚಿಗೆ ೧೩,೨೫೫ ರೂಪಾಯಿ ಉಳಿದಿದೆ ಎಂತಲೂ ತಿಳಿದುಬಂದಿದೆ.

ವಿದೇಶ ವರ್ತಮಾನಗಳು.

ಸ್ಪೈಯಿನ್ ರಾಜ್ಯದ ಅಲ್ಫಾನ್ಸೋ ದೊರೆಯವರು ಬಹಳ ಕಠಿಣವಾದ ಕಾಯಿಲೆಯಲ್ಲಿ ಬಿದ್ದು ಇರುತ್ತಾರೆಂದು ತಂತೀವರ್ತಮಾನ ಬಂದಿದೆ

***

ಮಾಡಂ ಮೆಲ್ಬಾ ಎಂಬ ಪ್ರಸಿದ್ಧ ಸಂಗೀತಗಾರಳು ಅಮೇರಿಕದಿಂದ ವಿಲಾಯತಿಗೆ ಹೊರಟಳು. ಅಮೇರಿಕದಲ್ಲಿ ಗ್ರಾಮೊಫೋನ್ ಎಂಬ ಮಾತನಾಡುವ ಯಂತ್ರಕ್ಕೆ ಆಕೆಯ ಹಾಡುಗಾರಿಕೆಯನ್ನು ತೆಗೆದು ಶೇಖರಿಸಬೇಕೆಂದು ಆಕೆಯನ್ನು ಒಂದು ವಾರ ಅಲ್ಲೇ ತಡೆದು ನಿಲ್ಲಿಸಿಕೊಂಡಿದಾರೆ. ಇದಕ್ಕೆ ಆಕೆಗೆ ಒಂದೂವರೆ ಲಕ್ಷ ರೂಪಾಯಿ ಬಹುಮಾನ ಕೊಡುವಂತೆ ಗೊತ್ತಾಗಿದೆ.

***

ವಿಲಾಯತಿಯ ಮಹಾರಾಜಾ ಚಕ್ರವರ್ತಿಯವರ ಸಹೋದರರಾದ ಡ್ಯೂಕ್ ಆಫ್ ಕನ್ನಾಟ್‌ಯವರು ಪತ್ನಿ ಪರಿವಾರ ಸಹಿತ ಮೊನ್ನೆ ತಾನೆ ಬರ್ಮಾ ಕಲ್ಕತ್ತೆ ಸಿಲೋನ್ ಈ ಪ್ರಾಂತ್ಯಗಳಲ್ಲಿ ಸಂಚಾರಮಾಡಿಕೊಂಡು ವಾಪಸು ಪ್ರಯಾಣಮಾಡಿದರು. ಇವರು ಕಳೆದ ವಾರ ಈಜಿಪ್ಟ್ ದೇಶವನ್ನು ತಲಪಿ ಅಲ್ಲಿನ ಸರ್ಕಾರದವರ ಮತ್ತು ಖೆಡೈವ್ ರಾಜರ ಆತಿಥ್ಯವನ್ನು ಸ್ವೀಕರಿಸುತ್ತಿದಾರೆ

***

ಆಸ್ಯಾ ಮೈನರಿನಲ್ಲಿ ತುರ್ಕರವರಿಗೆ ಸೇರಿದ ಬಿಟ್ಲಿಸ್ ಎಂಬ ಊರಿನಲ್ಲಿ ಕಳೆದ ವಾರ ೨—೩ ದಿನಗಳು ಕಠಿಣವಾದ ಭೂಕಂಪವಾಯಿತು. ಅನೇಕ ಮನೆಮಠಗಳೂ ಆಸ್ತಿಪಾಸ್ತಿಗಳೂ ನಾಶವಾದವು. ಅನೇಕರು ಪ್ರಾಣ ಕಳೆದುಕೊಂಡರು. ಪ್ರಜೆಗಳು ಮನೆಮಠಗಳನ್ನು ಕಳೆದುಕೊಂಡು ಅಲೆಯುತ್ತಿದಾರೆ. ಅವರ ಕಷ್ಟಗಳೂ ದರಿದ್ರಾವಸ್ಥೆಯೂ ದುಃಖಕರವಾಗಿರುವವೆಂದು ತಂತೀವರ್ತಮಾನ ಬಂದಿದೆ

***

ಜರ್ಮನ್ ರಾಜಕುಮಾರರಾದ ಪ್ರಿನ್ಸ್ ಫ್ರೆಡ್ರಿಕ್ ವಿಲ್ಯಂಯವರು ಪರಿವಾರಸಹಿತ ವಿಲಾಯತಿ ರಾಜ್ಯಕ್ಕೆ ಪ್ರಯಾಣಮಾಡುತ್ತಾ ದಾರಿಯಲ್ಲಿ ಪ್ಯಾರಿಸಿನಲ್ಲಿ ತಂಗಿದರು. ಅಲ್ಲಿನ ಪ್ರೆಸಿಡೆಂಟರು ಅವರನ್ನು ಸಕಲ ಮರ್ಯಾದೆಗಳೊಡನೆ ಎದುರುಗೊಂಡು ಭಾರೀ ಔತಣಾದಿಗಳನ್ನು ನಡಿಸಿ ಸಂತೋಷಪಡಿಸಿ ಮುಂದಕ್ಕೆ ಸಾಗಕಳುಹಿಸಿದರು. ಈಗತಾನೇ ಲಂಡನ್ ಪಟ್ಟಣವನ್ನು ತಲಪಿ ಅವರು ಮಹಾರಾಜಾ ಚಕ್ರವರ್ತಿಯವರ ಆತಿಥ್ಯವನ್ನು ಸ್ವೀಕರಿಸುತ್ತಿದಾರೆ

***

ರಷ್ಯಾ ರಾಜ್ಯದ ಚಕ್ರವರ್ತಿ ಜಾರ್ ರವರ ಮಾತೃಶ್ರೀಯವರು ವಿಲಾಯತಿಗೆ ಹೋಗಿ ಮಹಾರಾಜ್ಞೀರವರ ಸತ್ಕಾರವನ್ನು ಸ್ವೀಕರಿಸಿ ಬಂದರು. ಲಂಡನ್ ಪಟ್ಟಣದಲ್ಲಿರುವ ನಾನಾ ನೋಟಸ್ಥಳಗಳನ್ನೂ ಕಟ್ಟಡ ಆಸ್ಪತ್ರೆ ಮೊದಲಾದವುಗಳನ್ನೂ ನೋಡಿ ತುಂಬಾ ಸಂತೋಷಪಟ್ಟರು. ಲಂಡನ್ ಆಸ್ಪತ್ರೆಯಲ್ಲಿ ೯೩೦ ರೋಗಿಗಳು ಇದ್ದುಕೊಂಡು ಔಷಧ ಪಡೆಯುತ್ತಿದ್ದರು. ರಷ್ಯಾ ಮಾತೃಶ್ರೀಯವರು ರೋಗಿಗಳನ್ನು ಬಹು ಪ್ರೀತಿಪೂರ್ವಕವಾಗಿ ಮಾತನಾಡಿಸಿದರು

***

ಅಮೇರಿಕಕ್ಕೆ ಸೇರಿದ ಪಶ್ಚಿಮ ವರ್ಜಿನಿಯಾ, ಪೆನ್ಸಿಲ್ವೇನಿಯಾ ಎಂಬೀ ಎರಡು ಆಧಿಪತ್ಯಗಳಲ್ಲಿ ಅಪಾರವಾದ ಪ್ರವಾಹಗಳು ಪ್ರಾಪ್ತವಾದವು. ಪಿಟ್ಸ್‌ಬರ್ಗ್, ಅಲ್ಲೆಗಾನಿ ಎಂಬೀ ನಗರಗಳು ಮುಳುಗಿಹೋದವು. ಕಾರ್ಖಾನೆಗಳೆಲ್ಲಾ ಮುಚ್ಚಲ್ಪಟ್ಟವು. ಒಂದು ಲಕ್ಷ ಜನರು ಕೂಲಿ ತಪ್ಪಿಹೋಗಿ ಜೀವನಕ್ಕಿಲ್ಲದೆ ಅಲೆಯುತ್ತಾರೆ. ೩೦,೦೦೦ ಜನರು ಮನೆಮಠಗಳನ್ನು ಪ್ರವಾಹದಲ್ಲಿ ಕಳೆದುಕೊಂಡು ನಿಲ್ಲುವುದಕ್ಕೆ ನೆರಳಿಲ್ಲದೆ ಕಷ್ಟಪಡುತ್ತಿದಾರೆ. ಹಲವರು ಪ್ರವಾಹಗಳಲ್ಲಿ ಸಿಕ್ಕಿ ಮೃತರಾದರು. ಸುಮಾರು ಮೂರು ಕೋಟಿ ದ್ರವ್ಯದ ಆಸ್ತಿಪಾಸ್ತಿಗಳು ನಾಶವಾಗಿರುತ್ತವೆ

***

ವಿಲಾಯತಿ ರಾಜ್ಯದ ಜಮಾಖರ್ಚಿನ ಲೆಕ್ಕಗಳು ಈಗ ತಾನೇ ಪ್ರಕಟವಾದವು. ಅದರ ಮುಖ್ಯ ವಿಷಯಗಳೇನೆಂದರೆ —ಕಳೆದ ಮಾರ್ಚಿ ಆಖೈರಿಗೆ ಮುಗಿದ ಒಂದು ವರುಷದಲ್ಲಿ ರಾಜಾದಾಯ ಪೌಂಡುಗಳು ೧೪,೪೯,೧೪,೦೨೨ (ಪೌಂಡು ೧ಕ್ಕೆ ೧೫ ರೂಪಾಯಿ), ಅಂದರೆ ಹಿಂದಿನ ಸಾಲ್ ಹುಟ್ಟುವಳಿಗಿಂತ ೯,೩೨,೪೯೭ ಪೌಂಡುಗಳು ಹೆಚ್ಚು. ಇದರಲ್ಲಿ ಹೋದ ವರುಷದ ಖರ್ಚು ಕಳೆಯಲಾಗಿ ಗವರ್ನಮೆಂಟಿಗೆ ಮೂವತ್ತೈದು ಲಕ್ಷ ಪೌಂಡು ಶಿಲ್ಕು ಉಳಿಯುತ್ತದೆ. ಸುಂಕಗಳ ಬಾಬಿನಲ್ಲಿ ೧೫ ಲಕ್ಷವೂ ೪೫ ಸಾವಿರ ಪೌಂಡುಗಳೂ, ವಾರಸ್ ಸರ್ಟಿಫಿಕೇಟ್ ರುಸುಂ ಎಂಬ ಬಾಬಿನಲ್ಲಿ ೧೪ ಲಕ್ಷವೂ ೩೦ ಸಾವಿರ ಪೌಂಡುಗಳೂ ಕಳೆದ ವರುಷ ಹುಟ್ಟುವಳಿ ಆಗಿರುತ್ತದೆ.

***

ಲಂಡನ್ ಪಟ್ಟಣದಲ್ಲಿ ರೇನರ್ ಎಂಬುವನು ವಿಲಿಯಂ ವೈಟ್ಲೆ ಎಂಬಾತನನ್ನು ಕೊಂದುಹಾಕಿದ್ದರಿಂದ ಆತನಿಗೆ ಮರಣದಂಡನೆ ವಿಧಿಸಲ್ಪಟ್ಟಿತು. ಸಾವಿರಾರು ಪ್ರಜೆಗಳು ಆತನಿಗೆ ಆ ಶಿಕ್ಷೆಯನ್ನು ತಪ್ಪಿಸಿ ಸಜಾ ವಿಧಿಸಬೇಕೆಂದು ಅರ್ಜಿ ಬರೆದು ರುಜು ಹಾಕಿ ಸರ್ಕಾರಕ್ಕೆ ಒಪ್ಪಿಸಿದರು. ಹತ್ತು ಲಕ್ಷ ಜನರು ಆ ಅರ್ಜಿಗೆ ರುಜು ಹಾಕಿದ್ದರೆಂದು ತಿಳಿದು ಬಂದಿದೆ. ಅವರಲ್ಲಿ ಸ್ತ್ರೀಯರೇ ಬಹು ಮಂದಿ ಇದ್ದರು. ಒಬ್ಬ ಹೆಂಗಸು ರೇನರಿಗೆ ಬದಲಾಗಿ ತನ್ನನ್ನು ಗಲ್ಲಿಗೆ ಹಾಕಬೇಕೆಂತಲೂ ಆತನನ್ನು ಕ್ಷಮಿಸಿ ಬಿಟ್ಟುಬಿಡಬೇಕೆಂತಲೂ ಪ್ರಾರ್ಥಿಸಿಕೊಂಡಿದ್ದಳು. ಇದಲ್ಲದೆ ಕೊಲ್ಲಲ್ಪಟ್ಟ ವೈಟ್ಲೆ ಎಂಬಾತನ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದವರು ಕೂಡ ಬಹು ಮಂದಿ ಮೇಲ್ಕಂಡ ಅರ್ಜಿಗೆ ರುಜು ಹಾಕಿದ್ದರು. ಇಂಥಾ ಪ್ರಜೆಗಳ ಪ್ರಾರ್ಥನೆಯುಳ್ಳ ಅರ್ಜಿಯನ್ನು ಸರ್ಕಾರದ ಸೆಕ್ರೆಟರಿಯು ಚಕ್ರವರ್ತಿಯವರಿಗೆ ಒಪ್ಪಿಸಿ, ಆ ಅಪರಾಧಿಗೆ ಕ್ಷಮಾಪಣೆಯಾಗಬೇಕೆಂದು ಶಿಫಾರಸು ಮಾಡಿದರು. ಚಕ್ರವರ್ತಿಯವರು ಆ ಅರ್ಜಿಯನ್ನು ನೋಡಿ ಸ್ತ್ರೀಯರೂ ಬಹು ವಿಶೇಷವಾಗಿ ಅದಕ್ಕೆ ರುಜು ಮಾಡಿರುವುದನ್ನು ಗ್ರಹಿಸಿ ಕನಿಕರಪಟ್ಟು, ರೇನರನ್ನು ಗಲ್ಲಿಗೆ ಎತ್ತಬೇಕಾದದ್ದಿಲ್ಲವೆಂತಲೂ ಅವನಿಗೆ ಟಾಪ್ ಸಜಾ ವಿಧಿಸಬೇಕೆಂತಲೂ ಅಪ್ಪಣೆ ದಯಪಾಲಿಸಿದರು.

***

ಯೂರೋಪಿಗೆ ಸೇರಿದ ರೋಮ್ಯಾನಿಯಾ ರಾಜ್ಯದಲ್ಲಿ ರೈತ ಪ್ರಜೆಗಳು ಭಾರಿ ಭಾರಿ ಜಮೀನ್ದಾರರ ಮೇಲೆ ದಂಗೆಯೆದ್ದು ನಾನಾ ಅನಾಹುತಗಳನ್ನು ನಡಸುತ್ತಿರುವ ಸಂಗತಿಯನ್ನು ಕಳೆದ ವಾರ ವಾಚಕರು ನಮ್ಮ ಪತ್ರಿಕೆಯಲ್ಲಿ ಓದಿ ತಿಳಿದಿರುತ್ತಾರೆ. ಈ ವಾರ ಬಂದಿರುವ ಮುಖ್ಯ ತಂತೀವರ್ತಮಾನಗಳೇನೆಂದರೆ—ರೋಮ್ಯಾನಿಯಾದಲ್ಲಿ ಭಾರೀ ಜಮೀನ್ದಾರರುಗಳೆಲ್ಲಾ ಸಭೆ ಸೇರಿಸಿ ಸರ್ಕಾರಕ್ಕೆ ಅರ್ಜಿ ಬರೆದು ತಾವು ಕೊಡಬೇಕಾಗಿರುವ ಸಾಲದ ಹಣವನ್ನು ಒಂದು ವರುಷ ನಿಧಾನಿಸಿ ವಸೂಲ್ಮಾಡಬೇಕೆಂತಲೂ, ತಮ್ಮ ಜಮೀನಿನ ಫಸಲನ್ನೂ ಆಸ್ತಿಯನ್ನೂ ಹಾಳುಮಾಡಿದಕ್ಕೆ ತಮಗೆ ಪ್ರತಿಫಲ ಕೊಡಿಸಬೇಕೆಂತಲೂ ಕೇಳಿಕೊಂಡರು. ಅತ್ತಲಾಗಿ ರೈತ ಪ್ರಜೆಗಳು ಕಾರ್ಪೇಥಿಯನ್ ಪರ್ವತ ಪ್ರಾಂತ್ಯದಲ್ಲೂ ದಂಗೆ ಏಳುತ್ತಿದಾರೆ. ಸರ್ಕಾರದವರು ಎಲ್ಲಾ ಪ್ರದೇಶಗಳಲ್ಲೂ ದಂಗೆಯನ್ನು ಅಣಗಿಸಿದೆವೆಂದು ಪ್ರಕಟ ಮಾಡಿರುತ್ತಾರೆ. ಸೈನಿಕರು ದಂಗೇಕೋರರನ್ನು ಮೃಗಗಳೋಪಾದಿಯಲ್ಲಿ ಓಡಿಸಿ ಕೊಲ್ಲುವರು. ಆದಾಗ್ಯೂ ಮೊದಲಿಗಿಂತ ಈಗಿನ ಸ್ಥಿತಿಯು ತುಂಬಾ ಉತ್ತಮವಾಗಿದೆ. ಸ್ಟೋನೆಸ್ಟಿ ಎಂಬಲ್ಲಿ ಸೈನಿಕರು ೬೦೦ ಮಂದಿ ರೈತರನ್ನು ಕೊಂದರು; ೪೦೦ ಮಂದಿಯನ್ನು ಗಾಯ ಮಾಡಿ ಕೆಡವಿದರು. ಬೈಲೆಷ್ಟಿ ಎಂಬ ಗ್ರಾಮದ ಮೇಲೆ ಸೈನಿಕರು ಫಿರಂಗಿ ಕಟ್ಟಿ ಹೊಡೆದು ಸಂಪೂರ್ಣವಾಗಿ ನಾಶ ಮಾಡಿದರು. ಅಲ್ಲಿ ೨೫೦ ಮಂದಿ ರೈತರು ಪ್ರಾಣಕೊಟ್ಟರು; ೩೦೦ ಮಂದಿಗೆ ಗಾಯಗಳಾಗಿವೆ. ದಂಗೆಗಳು ಶಮನವಾಗುತ್ತಿವೆ ಎಂದು ಸಮಾಚಾರ ಬರುತ್ತಿದ್ದಾಗ್ಯೂ ಕೆಲವು ಕಡೆ ಗ್ರಾಮಗಳೆಲ್ಲಾ ನಾಶನ ಮಾಡಲ್ಪಟ್ಟವೆ. ಅನೇಕ ಕಡೆಗಳಿಂದ ಸರ್ಕಾರದವರು ಸೈನ್ಯಗಳನ್ನು ಕರೆಸಿಕೊಂಡು ಇತರ ಕಡೆಗಳಿಗೆ ಕಳುಹಿಸಿದ್ದರಿಂದ ಆ ಸ್ಥಳಗಳ ಪ್ರಜೆಗಳು ದಂಗೆಯೆದ್ದು ದಾಂಧಲೆ ಮಾಡಿದರು. ಸುಮಾರು ಒಂದೂವರೆ ಲಕ್ಷ ಫೌಜನ್ನು ಸರ್ಕಾರದವರು ಈ ದಂಗೆ ಅಣಗಿಸುವುದಕ್ಕೆ ಹಂಚಿ ನೇಮಕ ಮಾಡಿದಾರೆ. ಈಚೆಗೆ ಎಲ್ಲಾ ಕಡೆಯಲ್ಲೂ ಗಲಭೆಯೆಲ್ಲಾ ಸಂಪೂರ್ಣವಾಗಿ ನಿಂತುಹೋಗಿದೆ ಎಂದು ಮೊನ್ನೆ ಬಂದ ತಂತೀವರ್ತಮಾನ ತಿಳಿಸಿದೆ.

ತಾಲ್ಲೋಕು ವರ್ತಮಾನಗಳು

ಅರಸೀಕೆರೆ.—ಶೃಂಗೇರಿ ಜಗದ್ಗುರುಗಳು ಚನ್ನರಾಯ ಪಟ್ಟಣದ ಮಾರ್ಗವಾಗಿ ಗಂಡಸಿಗೆ ಬಂದರು. ಆಗ್ಗೆ ಅಮಲ್ದಾರರು ಇನ್ಸ್‌ಪೆಕ್ಟರು ವ್ಯಾಸಭೋಗರು ವೈದಿಕ ಮಂಡಲಿಯವರು ಎಲ್ಲರೂ ಹಾಜರಿದ್ದು ಸ್ವಾಮಿಗಳ ಪಾದಪೂಜೆಗಳನ್ನು ಮಾಡಿ, ಒಂದು ಸಾವಿರ ರೂಪಾಯಿ ತನಕ ಕಾಣಿಕೆ ಕೊಟ್ಟು ಸ್ವಾಮಿಗಳನ್ನು ತಿಪಟೂರಿಗೆ ಸಾಗಕಳುಹಿಸಿದರು. ಸ್ವಾಮಿಗಳ ಪರಿವಾರಕ್ಕೆ ಸೇರಿದ ಒಬ್ಬ ಸೇವಕ ಶೀನ ಎಂಬುವನಿಗೆ ಕಾಲರಾ ತಗಲಿ ಅವತ್ತೇ ತೀರಿ ಹೋದನು. ಇಲ್ಲಿನ ಡಾಕ್ಟರಿಗೆ ವರ್ತಮಾನ ತಿಳಿಸಿದ ಒಡನೆಯೇ ಅವರು ಗಂಡಸಿಗೆ ಹೋಗಿ ವಾಪಸು ಬಂದರು. ಇಲ್ಲಿ ಸೊಸಾಲೀನ್ ಕಂಪನಿಯವರು ಸೀಮೆಎಣ್ಣೆಯ ಟ್ಯಾಂಕ್ ಕಟ್ಟಿ ಪೂರೈಸಿತು. ಬರುವ ತಿಂಗಳಿಂದ ಜನಗಳಿಗೆ ಎಣ್ಣೆಯನ್ನು ಬಿಕರಿ ಮಾಡಬಹುದು

ಹೊಸದುರ್ಗ:—ಈ ಪ್ರಾಂತ್ಯ ತಾ. ೩೦, ೩೧, ೧ ಈ ದಿನಗಳಲ್ಲಿ ಹದ ಮಳೆಯಾಯಿತು. ರೈತರೆಲ್ಲಾ ನೇಗಿಲುಗಳನ್ನು ಹೆಗಲಿಗೆ ಎತ್ತಿದರು. ವೇದಾವತಿ ನದಿಯಲ್ಲಿ ಕೊಂಚ ನೀರು ಹರಿಯಿತು. ಜನರೆಲ್ಲಾ ಆರೋಗ್ಯವಾಗಿರುತ್ತಾರೆ. ಗದ್ದೆಗಳಲ್ಲಿ ಭತ್ತವು ತೆನೆಯಾಗಿದೆ. ಸಂತೆ ಸಾಧಾರಣವಾಗಿ ಸೇರುತ್ತದೆ —ಈ ಗ್ರಾಮಕ್ಕೆ ಇಸ್ಪೀಟ್ ಆಟಕ್ಕೋಸ್ಕರ ಪರಸ್ಥಳದಿಂದ ಜನರು ಬರುತ್ತಾರೆ. ಇವರಿಗೆ ಪೋಲೀಸಿನವರ ಭಯವಿಲ್ಲ. ಬೆಲಗೂರು ಗ್ರಾಮದಲ್ಲಿ ಕಳ್ಳತನವು ನಡೆದ ಈಚೆ ಕೆಲವು ದಿವಸಗಳ ವರೆವಿಗೂ ರಾತ್ರೀ ವೇಳೆ ಗಸ್ತು ಪಹರೆ ಸಮೇತ ನಡಿಸುತ್ತಿದ್ದವರು ಈಚೆಗೆ ನಿಲ್ಲಿಸೇ ಬಿಟ್ಟರು. "ಸಂಕಟ ಬಂದಾಗ ವೆಂಕಟರಮಣ" ಎಂಬ ಗಾದೆಗೆ ಸರಿಯಾಗಿ ನಡಿಸುತ್ತಾರೆ —ಈ ಗ್ರಾಮಕ್ಕೆ ಬೀದಿಗಳಲ್ಲಿ ರಸ್ತೆ ಆಗಬೇಕೆಂದು ಪ್ರತಿ ವರ್ಷವೂ ಹಣ ಮಾತ್ರ ಸ್ಯಾಂಕ್ಷನ್ ಆಗಿ ಬರುತ್ತದೆಯೇ ಹೊರತು ರಸ್ತೆಗಳು ಬೇಗನೇ ಆಗಲಿಲ್ಲ. ಈ ವರ್ಷವಾದರೂ ಜಾಗ್ರತೆಯಾಗಿ ಬೀದಿ ರಸ್ತೆಗಳಾದರೆ ಮುನಿಸಿಪಾಲಿಟಿಯವರಿಗೆ ಧಯಂಕರಿದು ಕಣ್ಣುತೆರೆದಾರೆನ್ನುವುದಕ್ಕೆ ಸಂಶಯವಿಲ್ಲ.

ತಿಪ್ಟೂರು —ಕೆಲವು ತಿಂಗಳಿಂದಲೂ ರೋಗಾದಿಗಳಿಲ್ಲದೆ ಜನರು ಕ್ಷೇಮವಾಗಿರುತ್ತಾರೆ —ತಿಪ್ಟೂರ್ ರೀಡಿಂಗ್ ರೂಮಿಗೆ ಕನ್ನಡ ಪತ್ರಿಕೆಗಳು ೯, ಇಂಗ್ಲಿಷ್ ಪತ್ರಿಕೆಗಳು ೯, ಒಟ್ಟು ೧೮ ಪತ್ರಿಕೆಗಳು ಸದ್ಯಕ್ಕೆ ಬರುತ್ತವೆ. ವಿದ್ಯಾಭಿಮಾನಿಗಳನೇಕರು ಬಂದು ಓದುತ್ತಲಿರುವರು.—ತಾ. ೬ ರಲ್ಲಿ ಶ್ರೀಂಗೇರಿ ಗುರುಗಳು ದಯಮಾಡಿಸಿದರು. ನಮ್ಮ ಅಮಲ್ದಾರರು ಬಹಳ ಮುತುವರ್ಜಿಯಿಂದ ಪರ್ಣ ಶಾಲೆ ಮುಂತಾದವುಗಳನ್ನು ಶ್ರಮಪಡಿಸಿದ್ದರು. ಸಾಹುಕಾರ್ ರಾಮಯ್ಯನವರೂ, ಸಾ॥ ಶಿಂಗ್ರಿ ನಂಜಪ್ಪನವರೂ, ಸಾ॥ ಕಟ್ಟಸುಬ್ಬಶೆಟ್ಟರೂ ಚಪ್ಪರಗಳನ್ನು ಹಾಕಿಸಿದ್ದರು. ಪ್ರತಿ ಒಂದು ಬೀದಿಯಲ್ಲಿ ತೋರಣಗಳನ್ನು ಕಟ್ಟಿ ರಂಗೋಲೆಗಳನ್ನು ಹಾಕಿ ಶಿಷ್ಯಾದಿಗಳೆಲ್ಲಾ ಕಾದಿರಲು ಬ್ಯಾಂಡ್ ಮುಂತಾದ ವಾದ್ಯಗಳ ಸಹಿತ ಗುರುಗಳ ಸವಾರಿಯು ಸಿದ್ಧವಾಗಿದ್ದ

ಸ್ಥಳಗಳಲ್ಲಿ ಹೊರಟಿತು ಗ್ರಾಮಾಂತರಗಳಿಂದ ಬಹು ಜನ ನೋಟಕರು ಬಂದಿದ್ದರು ಮೆರವಣಿಗೆಯು ಬಹು ಸಂಭ್ರಮದಿಂದ ನಡೆಯಿತು ಡೆಪ್ಯುಟಿ ಕಮಿಷನರ್ ಸಾಹೇಬರು ಸಹಾ ಬಂದು, ಎಲ್ಲವನ್ನೂ ನೋಡಿ ಸಂತೋಷಪಟ್ಟರೆಂದು ತಿಳಿಯಿತು ಗುರುಗಳ ಹಿಂದೆ ಬಂದಿದ್ದ ಬೋವಿಗಳ ಪೈಕಿ ನಾಲ್ವರಿಗೆ ವಾಂತಿಭೇದಿ ತಗಲಿ ಇಬ್ಬರು ಬಂದ ದಾರೀ ಹಿಡಿಕೊಂಡು ಬೆತ್ತಲೆ ಹೋದರು ಇನ್ನು ಇಬ್ಬರು ಚೇತರಿಸಿಕೊಳ್ಳುತ್ತಿದ್ದಾರೆಂದು ತಿಳಿಯಿತು ಸದ್ಯ ಊರಿನ ಜನರು ಕಳವಳ ಪಡುತ್ತಿದ್ದಾರೆ—ಸಂತೆಯಲ್ಲಿ ಅಕ್ಕಿ ೭॥ ಸೇರಾಯಿತು ಮಾಂಗಾರಿಯ ಮೋಡಗಳಾಡುತ್ತವೆ ಕೆಲವು ಗ್ರಾಮಗಳ ಕಡೆ ಒಳ್ಳೆ ಮಳೆಯಾಯಿತು—ಫಾರ್‌ಶೀಸರ್ ಮ॥ ಸಭಾಪತಿ ಪಿಳ್ಳೆಯವರ ಪತ್ನಿಯು ಬಾಣಂತಿಯಾಗಿದ್ದು ವಿಷಮಜ್ವರದಿಂದ ಸತ್ತು ಹೋದರು ಕಳೆದ ವಾರ ಇವರ ಬಂಧುಗಳೆಲ್ಲಾ ಕೂಡಿ ಬಂದು ಶ್ರಾದ್ಧ ಮುಂತಾದ ಕರ್ಮಗಳನ್ನು ನೆರವೇರಿಸಿದರು

ಕಾನಕಾನಹಳ್ಳಿ,—ಇಲ್ಲಿ ಬಾಂದ್ರು ಕಂಬಗಳು ಅಳತ್ತಾ ಇವೆ ಕಳ್ಳರ ಮಾತ್ರ ಹೇಳುವ ಹಾಗೆಯೇ ಇಲ್ಲ. ಮತ್ತು ಕೋಟೆಯು ಕಂದಕಗಳಲ್ಲೂ ಕಂದಕದ ಮೇಲೆ ಇರತಕ್ಕ ದಿಣ್ಣೆಗಳ ಮೇಲೂ ಮನುಷ್ಯರ ಗೊಬ್ಬರದ ದುರ್ವಾಸನೆಯನ್ನು ಸಹಿಸುವುದಕ್ಕೆ ಪ್ರಜೆಗಳಿಂದ ಅಸಾಧ್ಯವಾಗಿರುತ್ತದೆ ಅಮಲ್ದಾರ್ರು ಈ ವಿಷಯದಲ್ಲಿ ನಿಗಾ ತೆಗೆದುಕೊಳ್ಳಬೇಕಾಗಿದೆ—ಇಲ್ಲಿನ ಸಾಹುಕಾರರ ಪೈಕಿ ಇಬ್ಬರು ಪ್ರಯಾಣಿಕರ ಉಪಕಾರಾರ್ಥವಾಗಿ ಕುದುರೆ ಟಪ್ಪಾಲ್ ಬಂಡಿಗಳನ್ನು ಏರ್ಪಡಿಸಿರುತ್ತಾರೆ ಆದರೆ ಅವುಗಳಲ್ಲಿ ಕೂತುಕೊಂಡ ಪ್ರಯಾಣಿಕರು ತಮ್ಮ ಸ್ಥಳದಲ್ಲಿ ಸೌಖ್ಯವಾಗಿ ಗಾಡಿಯಿಂದ ಈಚೆಗೆ ಇಳಿಯುವುದು ಕಷ್ಟಕರವಾಗಿದೆ ಎಂದು ಪ್ರಯಾಣಿಕರು ಹೇಳುತ್ತಾರೆ ಈ ವಿಷಯದಲ್ಲಿ ಅಮಲ್ದಾರ್ರು ಸರಿಯಾದ ಏರ್ಪಾಟು ಮಾಡಬೇಕೆಂದು ಕೋರುತ್ತೇವೆ

ಕುಣಿಗಲ್,—ಹಿರಿಸಾವೆ ಗ್ರಾಮದಿಂದ ಇಲ್ಲಿಗೆ ಇಬ್ಬರು ಮುಸಲ್ಮಾನರು ಬಂದು ಆಕಸ್ಮಾತ್ ರಕ್ತಭೇದಿಯಿಂದ ತೀರಿಹೋದರು ಇವರು ವಾಂತಿಭೇದಿ ರೋಗದಿಂದ ಮೃತಪಾದರೆಂದು ಊರೆಲ್ಲಾ ಗಲಿಬಿಲಿಯಾಗಿದೆ ಕೆಲವು ಕಾಲದ ಹಿಂದೆ ಈ ಗ್ರಾಮದಲ್ಲಿ ವಾಂತಿಭೇದಿ ತಗಲಿ ಅನೇಕರು ಮೃತರಾಗಿರುವದರಿಂದ ಪುನಹಾ ಈ ರೋಗ ಬಂದರೆ ಜನಗಳ ನಷ್ಟವೆಷ್ಟೆಂದು ಹೇಳಲಾಗದು—ಇಲ್ಲಿ ಪ್ರೊಫೆಸರ್ ಆ॥ ಕೆ॥ ಸಿ ಡಿ ರಾಮಸ್ವಾಮಿಯ್ಯನವರು ಒಳ್ಳೆ ಉಪನ್ಯಾಸ ಮಾಡಿ ಕೋ ಆಪರೇಟಿವ್ ಸಂಘವನ್ನು ಸ್ಥಾಪಿಸಿದರು ಆಗಲೇ ನಲವತ್ತು ರೂಪಾಯಿ ವಸೂಲಾಗಿ ಅನೇಕರು ಮೆಂಬರುಗಳಾಗಿದ್ದಾರೆ ರೆವಿನ್ಯೂ ಕಮಿಷನರವರು ಚಿತ್ತೈಸಿ ಈ ಕೆರೆ ಕೆಳಗೆ ಕಬ್ಬಿನ ಗದ್ದೆ ಆಟಾದು ಮಾಡುವಂಥ ಜನರಿಗೆ ಬಹು ಉಪಯೋಗವಾಗಿರುವ ವ್ಯವಸಾಯಾಭಿವೃದ್ಧಿ ಮಾರ್ಗಗಳನ್ನು ಮಾಡಿ ಗವರ್ನಮೆಂಟಿಗೆ ತಿಳಿಸುವ ಕಾರ್ಯಗಳ ಫಲಿತಾಂಶ ನಿರೀಕ್ಷಣೆಯಲ್ಲಿದೆ—ದಿವಾನ್ ಸಾಹೇಬರು ಇಲ್ಲಿನ ಕುದುರೆ ಫಾರಂ ಒಡವಣೆಗಾಗಿ ಬೆಂಗಳೂರು ರಸ್ತೆಯಲ್ಲಿ ಅರ್ಧ ಮೈಲುವರೆಗೆ ರೈತರ ಹೊಲಗಳನ್ನು ಪ್ರತಿಫಲ ಕೊಟ್ಟು ಸೇರಿಸುವಂತೆ ಏರ್ಪಾಡು ಮಾಡಿದಾರೆ ಈ ಪ್ರಾಂತ್ಯ ರೈತರಿಗೆ ವ್ಯವಸಾಯಕ್ಕೆ ಜಮೀನ್ ಸಿಕ್ಕುವದಿಲ್ಲವಾಗಿ ಇವರೆಲ್ಲಾ ಮಾದೀಕರಣವೆ ಕೆರೆಯ ಕೆಳಗೆ ಗದ್ದೆ ಮಾಡಿ ಅಭಿವೃದ್ಧಿಗೆ ಬರುವದು ಉತ್ತಮವು—ತುಮಕೂರಿಂದ ಹೊಸ ಸಬ್ ರೆಜಿಸ್ಟ್ರಾರು ಬರುತ್ತಾರಂತೆ ಸಧ್ಯ ಅಮಲ್ದಾರ್ರು ರಜದ ಮೇಲಿದಾರೆ—ಇಲ್ಲಿ ೫॥ ವರ್ಷಗಳಿಂದ ಸಬ್ ರೆಜಿಸ್ಟ್ರಾರಾಗಿಯೂ ಒಳ್ಳೇ ಸ್ಟ್ರೇಟೋಗ್ರಾಫರಾಗಿಯೂ ಇರುವ ವೆ॥ ವೆಂಕಟಾಚಲೈಯ್ಯಂಗಾರ್ರು ಉತ್ತರ ದೇಶದ ಪ್ರಯಾಣ ತೀರಿಸಿಕೊಂಡು ಬಂದ ಕೂಡಲೆ ಅವರಿಗೆ ಯಡತೊರೆಗೆ ವರ್ಗವಾಗಿರುವದಾಗಿ ತಿಳಿಯಬಂದು, ಇವರ ಮಿತ್ರರಿಗೆಲ್ಲಾ ತುಂಬಾ ಮನೋವ್ಯಥೆ ಉಂಟಾಗಿದೆ—ದಿನಸಿ ಧಾರಣೆ ದಿನ ದಿನಕ್ಕೆ ಜಾಸ್ತಿಯಾಗುತ್ತಿದೆ ಈ ಸಾರಿ ಮಾಗಡಿ ಜಾತ್ರೆ ಬಹು ವಿಶೇಷವಾಗಿತ್ತು ಲೆಕ್ಕವಿಲ್ಲದಷ್ಟು ಎತ್ತುಗಳೂ ಹೋರಿಗಳೂ ಮಾರಾಟಕ್ಕೆ ಬಂದಿದ್ದವು ಆಕಸ್ಮಾತ್ ಎರಡು ಭಾರಿ ಹೋರಿಗಳಿಗೆ ಸೆಲೆ ರೋಗ ತಗಲಿ ಮೃತವಾದವು ಒಂದರ ಕ್ರಯ ೨೦೦ ರೂಪಾಯಿ, ಮತ್ತೊಂದರ ಬೆಲೆ ೧೮೦ ರೂಪಾಯಿ ಒಬ್ಬ ಹುಡುಗನಿಗೆ ಕಾಲರಾ ತಗಲಿ ಅವನನ್ನು ಊರಿಗೆ ಸಾಗಿಸಿದರು ಕೆರೆ ನೀರು ಕೆಟ್ಟು ಗ್ರಾಮ ಪಾಕೀಜಾ ಇಲ್ಲದೆ ಗಬ್ಬು ನೀರು ಬಚ್ಚಲು ಕೊಳೆತ ರೊಚ್ಚು ತುಂಬಿ ಕೆಟ್ಟ ವಾಸನೆ ಸಹಿಸಲಾಗದು.

ಮದ್ದಗಿರಿ—ಕೆಲವು ದಿನಗಳ ಕೆಳಗೆ ಮದ್ದಗಿರಿ ತಾ॥ ಅಮಲ್ದಾರರು ಪಟೇಲ್, ಶ್ಯಾನುಭೋಗರಿಂದ ಆಯಾ ಊರಿನ ಮುಖ್ಯಸ್ಥರನ್ನು ಕರೆಸಿಕೊಂಡು, ಶೃಂಗೇರಿ ಗುರುಗಳು ಬರುತ್ತಾರೆಂದು ವಿಳಿಸಿ ಆಯಾ ಗ್ರಾಮದ ಸ್ಥಿತಿಗತಿಯಂತೆ ೪೦, ೩೦, ೨೦ ರೂಪಾಯಿಗಳ ಪ್ರಕಾರ ಕಂಟಿಕಾಣಿಕೆ ಹಣ ವಸೂಲ್ಮಾಡಿ ಕಳುಹಬೇಕೆಂದು ಅಪ್ಪಣೆಕೊಡಿಸಿದರು ಗುರುಗಳ ಶಿಷ್ಯರೇ ಅವರ ಭಕ್ತ್ಯನುಸಾರವೂ ಯೋಗ್ಯತಾನುಸಾರವೂ ವಸೂಲ್ ಮಾಡಿ ಕೊಟ್ಟಿದ್ದರೆ ಚನ್ನಾಗಿತ್ತು ರೈತರಿಗೆ ಇದು ಕಂದಾಯದ ಕಾಲ ಇದರಿಂದ ಅವರಿಗೆ ತೊಂದರೆಯೆಂದೇ ಹೇಳಬೇಕಾಗಿದೆ ಇದಕ್ಕಿಂತಲೂ ಆಯಾ ಗ್ರಾಮದ ಮುಖ್ಯಸ್ಥರನ್ನು ಕರೆಸಿಕೊಂಡು ಅವರವರು ತಮ್ಮ ತಮ್ಮ ಗ್ರಾಮಗಳಲ್ಲಿ ಜನರನ್ನೆಲ್ಲಾ ಸೇರಿಸಿ, ಅವರವರು ಕೊಟ್ಟ ಕಾಣಿಕೆಗನ್ನು ತೆಗೆದುಕೊಂಡಿದ್ದರೆ ಸಮಾಧಾನವಾಗಿತ್ತು—ನಿಟ್ರಹಳ್ಳಿಯವರಿಗೂ ಚನ್ನಸಾಗರದವರಿಗೂ ಕಾಲುವೆ ವ್ಯಾಜ್ಯವು ಸುಮಾರು ೪ ವರುಷಗಳಿಂದಲೂ ನಡೆಯುತ್ತಾ ಇತ್ತು. ಇದಕ್ಕಾಗಿ ಉಭಯ ಪಕ್ಷದವರಿಗೂ ಧನವ್ಯಯವೂ ಆಗಿತ್ತು ಕೆಲವು ದಿನಗಳ ಕೆಳಗೆ ಮದ್ದಗಿರಿ ಅಸಿಸ್ಟೆಂಟ್ ಸಾಹೇಬರು ದಯ ಮಾಡಿಸಿ, ಪೂರ್ವದಲ್ಲಿ ಯಾವ ರೀತಿ ಕಾಲುವೆಗಳನ್ನಿಟ್ಟುಕೊಂಡಿದ್ದರೋ ಅದರಂತೆಯೇ ಉಭಯರೂ ಹೋಗಬೇಕೆಂದು ಅಪ್ಪಣೆ ಕೊಡಿಸಿದರು ಆದ್ದರಿಂದ ಇವರು ದೀರ್ಘಾಲೋಚನೆಯಿಂದಲೇ ವಿಮರ್ಶೆಮಾಡಿ ತೀರ್ಮಾನಿಸಿರುವರೆಂದು ಆಯಾ ಗ್ರಾಮದವರು ಹೇಳಿಕೊಂಡು ಸಂತೋಷಿಸುತ್ತಲಿರುವರು—ಮೈಸೂರು ಸಂಸ್ಥಾನದ ಅನೇಕ ಭಾಗಗಳಲ್ಲಿ ಈ ಸಾರಿ ಪ್ಲೇಗ್ ಬೇದಿ ಉಪದ್ರವು ತಲೆ ಹಾಕಿದೆ ಆದ್ದರಿಂದ ಪ್ರತಿ ಗ್ರಾಮವೂ ನಿರ್ಮಲವಾಗಿರಬೇಕು ಮತ್ತು ಜನರು ಅದನ್ನು ಅರಿಯರು ಆದ್ದರಿಂದ ಈ ಊರಿನೊಳಗೆ ದನ ಕುರಿ ಮಂದೆಗಳನ್ನು ಇಟ್ಟುಕೊಂಡಿರುವದಲ್ಲದೆ ತಾವು ಮಲಗುವ ಇಕ್ಕಟ್ಟಾದ ಮನೆಗಳಲ್ಲಿಯೇ ಕುರಿ ಮೇಕೆಗಳ ಮಂದೆಯನ್ನು ಇಟ್ಟುಕೊಂಡು ವಾಸಮಾಡುವರು ಗ್ರಾಮದ ಗಲೀಜಿನ ವಿಷಯ ನಾವು ಸರ್ಕಾರದವರಿಗೆ ಹೇಳಿಕೊಂಡರೂ ಪಟೇಲರಿಗೆ ಅವರು ಬಂದು ಅಪ್ಪಣೆ ಕೊಡಿಸುವಾಗ "ಅಗತ್ಯವಾಗಿ ಎಲ್ಲಾ ಪಾಕ್ ಮಾಡಿಸುತ್ತೇನೆ" ಎಂದು ವಿನಯದಿಂದ ಹೇಳಿಕೊಂಡು, ಅವರು ಹೋದ ಮೇಲೆ ಪಟೇಲರು ಆ ಗ್ರಾಮಕ್ಕೆ ಬರುವದೇ ಕಷ್ಟ, ಬಂದರೂ ಅದರ ವಿಚಾರವೇ ಇಲ್ಲ ಆದ್ದರಿಂದ ದಯಾಳುಗಳಾದ ಸರ್ಕಾರದವರು ಈ ಸಾಂಕ್ರಾಮಿಕ ಜಾಡ್ಯವು ಗ್ರಾಮ ಪ್ರವೇಶಮಾಡುವದಕ್ಕೆ ಮುಂಚೆಯೇ ಗ್ರಾಮಪಾಕೀಜಾ ವಿಷಯಕ್ಕೆ ಗಮನಕೊಟ್ಟಾರೆಂದು ನಿರೀಕ್ಷೆ ಇದೆ

ಸೀಯರ್.—ದಿನಸಿನ ಧಾರಣೆವಾಸಿಗಳು ಇಳಿದಿಲ್ಲ. ರೂಪಾಯಿಗೆ ೧೮ ಸೇರು ರಾಗಿ, ೭—೭॥ ಸೇರು ಅಕ್ಕಿ ಮಾರುತ್ತೆ ರಾಗಿ ಪಕ್ವವಾದುದು ಪೂರೈಸಿ ಅಲ್ಲಲ್ಲಿ ಭತ್ತದ ಗದ್ದೆಗಳನ್ನು ಕೊಯ್ಯುತ್ತಲಿರುತ್ತಾರೆ ಕಳೆದ ಮಳೆಗಾಲದಲ್ಲಿ ಈ ಊರಿನ ದೊಡ್ಡಕೆರೆ ಚಿಕ್ಕಕೆರೆಗಳೆರಡೂ ತುಂಬಿ ಕೆರೆಗಳ ಕೆಳಗೆ ಭತ್ತದ ಬೆಳೆಯನ್ನು ಸಂಪೂರ್ಣಿಯಾಗಿ ಮಾಡಿದ್ದರು ಆದರೆ ಗದ್ದೆಗಳಿಗೆ ಬಹು ಮುಟ್ಟಿಗೆ ರೋಗ ತಗಲಿ ಮಾಮೂಲಿನ ಬೆಳೆಯಲ್ಲಿ ಅರ್ಧ ಬೆಳೆಯಾಗುವುದೂ ದುರ್ಲಭವಾಗಿದೆ ಮೂರು ವರುಷಗಳಿಂದಲೂ ಪರೀಬೆಳೆ ಇಲ್ಲದೆ ಈ ವರುಷ ಈ ರೀತಿಯಾದ್ದಕ್ಕೆ ರೈತರೆಲ್ಲರೂ ಚಿಂತಾಕ್ರಾಂತರಾಗಿರುತ್ತಾರೆ—ಕೆಲವು ದಿವಸಗಳ ಕೆಳಗೆ ನಮ್ಮ ಅಮಲ್ದಾರ್ ವೆ॥ ಎಂ ಎ ಶ್ರೀನಿವಾಸೈಯ್ಯಂಗಾರ್ರು ಟವರ್ ಇನ್‌ಸ್ಪೆಕ್ಷನ್ ಮಾಡುತ್ತಾ, ಹಿಂದುಸ್ಥಾನಿ ಸ್ಕೂಲಿಗೆ ದಯಮಾಡಿ ಕೆಲವು ಬಾಲಕರನ್ನೂ ಬಸವನ ಗುಡಿಯಲ್ಲಿಟ್ಟಿರುವ ಪ್ರೈವೇಟ್ ಸ್ಕೂಲಿಗೆ ದಯಮಾಡಿ ಕೆಲವು ಬಾಲಕರನ್ನೂ ಪರೀಕ್ಷಿಸಿ, ವಿದ್ಯಾಜ್ಞಾನ ಸಂಬಂಧವಾದ ಕೆಲವು ಬುದ್ಧಿವಾದಗಳನ್ನು ಮಾಸ್ತರುಗಳೂ ವಿದ್ಯಾರ್ಥಿಗಳಿಗೂ ತಿಳಿಸಿ, ಪಂಚಮರ ಸ್ಕೂಲಿಗೆ ದಯಮಾಡಿದರು ಈ ಸ್ಕೂಲಿನ ಬಾಲಕರನ್ನು ಪರೀಕ್ಷಿಸಿದರು ಮಿಕ್ಕ ಸ್ಕೂಲುಗಳಿಗಿಂತಲೂ ಇಲ್ಲಿ ಬಹಳ ಹೊತ್ತು ಇದ್ದು ತುಂಬಾ ವಿಶ್ವಾಸ ಪೂರ್ವಕವಾಗಿ ಪ್ರಶ್ನಿಸಿ, ಬಾಲಕರ ಉತ್ತರಗಳನ್ನು ಕೇಳಿ ತುಂಬಾ ಹರ್ಷಿತರಾದರು ಈ ಬಾಲಕರನ್ನೂ, ಇವರ ಪೋಷಕರನ್ನೂ ಕುರಿತು ಸ್ಕೂಲಿನಲ್ಲೂ ಸ್ಕೂಲಿನಿಂದ ಹೊರಟು ಬರುವಾಗಲೂ ವಿದ್ಯಾಪ್ರೋತ್ಸಾಹಕರವಾದ ಬುದ್ಧಿವಾದಗಳನ್ನು ಉಚಿತೋಕ್ತಿಗಳಿಂದ ಅಪ್ಪಣೆ ಕೊಡಿಸಿದರು ಇದನ್ನು ನೋಡಿದರೆ ನಮ್ಮ ಅಮಲ್ದಾರ್ರಿಗೆ ಕೀಳು ಜಾತಿಯವರಲ್ಲೂ ಸಹ ವಿಶೇಷರೀತಿಯಾದ ಮಮತೆಯು ಸಂಪೂರ್ಣವಾಗಿರುತ್ತದೆಂದು ಹೇಳಲು ಸಂದೇಹವಿಲ್ಲ ಈ ಪಂಚಮರ ಸ್ಕೂಲು ಇಲ್ಲಿ ಏರ್ಪಟ್ಟು ಸುಮಾರು ೩—೪ ಜನ ಮಾಸ್ತರುಗಳಿಂದ ನಡಿಸಲ್ಪಟ್ಟು ವರುಷದ ಕೆಳಗೆ ಸ್ಕೂಲನ್ನು ಎತ್ತಿ ಹಾಕುವ ಸಂಭವವಿದ್ದಿತು ನಂತರ ಸೆಪ್ಟಂಬರ್‌ನಿಂದ ಇಲ್ಲಿಗೆ ದಾವೂದ್ ಸಾಬ್ ಎಂಬವರು ವರ್ಗವಾಗಿ ಬಂದರು ಇವರು ಬಾಲಕರನ್ನು ತಕ್ಕ ರೀತಿಯಿಂದ ಸಮಾಧಾನಿಸಿ ಇವರ ಪೋಷಕರಿಗೆ ತಕ್ಕ ಪ್ರೋತ್ಸಾಹ ಕೊಟ್ಟು ಬಾಲಕರ ವಿದ್ಯಾಭಿವೃದ್ಧಿಯ ವಿಷಯದಲ್ಲಿ ತಕ್ಕ ಶಿಕ್ಷಕರಾಗಿರುತ್ತಾರೆ ನಮ್ಮ ಅಮಲ್ದಾರ್ರು ಪರೀಕ್ಷಿಸಿದಾಗ, ಬಾಲಕರು ಆಹ್ಲಾದಕರವಾಗಿಯೂ ಸ್ಪಷ್ಟವಾಗಿಯೂ ಕೊಟ್ಟ ಜವಾಬುಗಳನ್ನು ನೋಡುವಲ್ಲಿ ಮಾಸ್ತರ ಮೆಹನತ್ತು ವ್ಯಕ್ತಪಡುವುದು—ಶ್ರೀ ಶೃಂಗೇರಿ ಜಗದ್ಗುರುಗಳ ಸವಾರಿಯು ಇಲ್ಲಿಗೆ ಈ ಮಾಹೆ ೧೬—೧೭ ಕ್ಕೆ ದಯಮಾಡಿಸುವದಾಗಿ ವದಂತಿ ಇದೆ—ಇದೇ ಊರಿನ ಕೆಲವು ದೊಡ್ಡಮನುಷ್ಯರು ಸೇರಿ ನಾಟಕವನ್ನು ತಯಾರ್ಮಾಡಿ ದುರ್ಗಮ್ಮನ ದೇವಸ್ಥಾನದ ಬಳಿ ಡೇರಾ ಹಾಕಿ ಸುಮಾರು ಒಂದು ತಿಂಗಳಿಂದಲೂ ನಾಟಕವನ್ನು ಆಡಿಸುತ್ತಲಿದಾರೆ.

ಮಂಡ್ಯ—ಈಚೆಗೆ ಇಲ್ಲಿ ಎರಡು ಸಾರಿ ಮಳೆ ಬಂದಾಗ್ಯೂ ಬಿಸಿಲಿನ ಝಳವು ಅಧಿಕವಾಗಿದೆಯೇ ಹೊರತು ಕಮ್ಮಿಯಾಗಿಲ್ಲ ಧಾರಣೆವಾಸಿಗಳು ಏನೂ ಇಳಿದಿಲ್ಲ ಸದ್ಯಕ್ಕೆ ಊರಲ್ಲಿ ಯಾವ ವಿಧವಾದ ಕಾಯಿಲೆಯೂ ಇಲ್ಲದಿರುವದು ಸಂತೋಷವಾಗಿದೆ—ಕಳೆದ ಮಾರ್ಚಿ ತಿಂಗಳು ಪ್ರಾರಂಭದಿಂದ ಇಲ್ಲಿನ ಮಿಷನ್ ಇಂಗ್ಲಿಷ್ ಸ್ಕೂಲ್ ಕಟ್ಟಡದಲ್ಲಿ ತಾಲ್ಲೂಕು ಮಹನೀಯರೆಲ್ಲರೂ ಸೇರಿ ಒಂದು ವಾಚಕ ಮಂದಿರವನ್ನು ಸ್ಥಾಪಿಸಿರುತ್ತಾರೆ ಸದ್ಯದಲ್ಲಿ ಇದಕ್ಕೆ ೩೦ ಜನರು ಮೆಂಬರುಗಳಾಗಿ ಹಣವನ್ನು ಧಾರಾಳ ಮನಸ್ಸಿನಿಂದ ಕೊಟ್ಟಿರುತ್ತಾರೆ ಈ ಮಂದಿರದಲ್ಲಿ ಸದ್ಯಕ್ಕೆ ಇಂಗ್ಲಿಷ್ ವರ್ತಮಾನ ಪತ್ರಿಕೆಗಳಲ್ಲಿ ೩, ಕನ್ನಡದಲ್ಲಿ ೪ ಪತ್ರಿಕೆಗಳು ಬರುತ್ತವೆ ಇದು ಅಭಿವೃದ್ಧಿಗೆ ಬರಬೇಕಾದರೆ ಇಲ್ಲಿನ ಮಹನೀಯರೆಲ್ಲ ವಾಚಕ ಮಂದಿರಕ್ಕೆ ಕ್ರಮವಾಗಿ ಬಂದು ತನ್ನ ಚಂದಾ ಹಣವನ್ನು ಧಾರಾಳವಾಗಿ ಕೊಡಬೇಕಾಗಿರುವದು—ಕಳೆದ ಬುಧವಾರ ಏಪ್ರಿಲ್ ೩ ನೆ ತಾ ಮಿಷನ್ ಸೂಪರಿಂಟೆಂಡೆಂಟರಾದ ಘನ ಜೆ ಡಬ್ಲ್ಯು ಸಾರ್ಜೆಂಟ್ ದೊರೆಯವರು ಮೈಸೂರಿಂದ ಮೈಲ್ ಟ್ರೈನ್ನಲ್ಲಿ ದಯಮಾಡಿಸಿ, ಇಂಗ್ಲಿಷ್ ಸ್ಕೂಲಿನ ಬಾಲಕರನ್ನು ಪರೀಕ್ಷೆ ಮಾಡಿ, ಸ್ಕೂಲಿನ ರಿಜಿಸ್ಟರ್ ಮುಂತಾದ್ದು ನೋಡಿ, ರಕ್ಷಿಪಟ್ಟಿಗೂ ಬಾಲಕರು ಪರೀಕ್ಷೆಯಲ್ಲಿ ಉತ್ತರ ಕೊಟ್ಟದ್ದರಿಂದ ಸಂತೋಷಪಟ್ಟರು ಆ ಸಾಯಂಕಾಲವೇ ಘನ ಸಾರ್ಜೆಂಟ್ ದೊರೆಯವರು ಇಲ್ಲಿಗೆ ಎರಡು ಮೈಲಿ ದೂರದಲ್ಲಿರುವ ಕ್ಯಾತಿಂಗೆರೆ ಎಂಬ ಗ್ರಾಮಕ್ಕೆ ಕಾಲು ನಡಿಗೆಯಲ್ಲಿ ಹೋಗಿ ಅಲ್ಲಿರುವ ಮಿಷನ್ ಬಾಲಕರ ಪಾಠಶಾಲೆಯನ್ನು ಪರೀಕ್ಷಿಸಿ, ಸಂತೋಷಪಟ್ಟು ಬಂದರು ಆ ದಿನ ರಾತ್ರಿ ೮॥ ಘಂಟೆಗೆ ಇಲ್ಲಿನ ಕ್ರೈಸ್ತ ಸಭಿಕರನ್ನೆಲ್ಲ ಬಂಗ್ಲೆಗೆ ಕರಿಸಿ ಪ್ರಾರ್ಥನಾ ಕೂಟವನ್ನು ನಡಿಸಿ ಸಭಿಕರಿಗೆ ತಕ್ಕ ಬುದ್ಧಿ ಬೋಧನೆಗಳನ್ನು ತಿಳಿಸಿದರು ಮಾರನೆ ದಿನ ಬೆಳಿಗ್ಗೆ ಇಲ್ಲಿನ ಮಿಷನ್ ಇಂಗ್ಲಿಷ್ ಸ್ಕೂಲಿನಲ್ಲಿ ಗರಲ್ ಸ್ಕೂಲಿನ ಬಾಲಕಿಯರಿಗೆ ಬಹುಮಾನ ಕೊಡುವದಾಗಿ ಅಗ್ರಾಸನವನ್ನು ವಹಿಸಿದರು ಮಿಷನ್ ಸ್ಕೂಲಿನಲ್ಲಿ ತಾಲ್ಲೂಕು ದೊಡ್ಡ ಉದ್ಯೋಗಸ್ಥರು, ವರ್ತಕರು ಮುಂತಾದ ಮಹನೀಯರೆಲ್ಲರೂ ಸೇರಿದ್ದರು ಘನ ಸಾರ್ಜೆಂಟ್ ದೊರೆಯವರು ಮೊದಲು ದೇವರಿಗೆ ಪ್ರಾರ್ಥನೆ ಮಾಡಿದರು ಆ ಮೇಲೆ ಬಾಲಕಿಯರು ಬಂದು ಹಾಡನ್ನು ಹಾಡಿದರು ಸ್ಕೂಲಿನ ಹೆಡ್ ಮಾಸ್ಟರು ಬಾಲಕಿಯರ ಪರವಾಗಿಯೂ ಅಗ್ರಾಸನರ ಪರವಾಗಿಯೂ ಸ್ವಲ್ಪ ಉಪನ್ಯಾಸ ಮಾಡಿದರು. ತಾಲ್ಲೂಕು ಶಿರಸ್ತೇದಾರ್ ವೆ॥ ನಾರಣೈಯ್ಯಂಗಾರ್ರು ಸ್ಕೂಲಿನ ಸಂಬಂಧವಾದ ಕಾರ್ಯಗಳನ್ನು ನೋಡಿ ಶ್ಲಾಘಿಸಿದರು. ಅಗ್ರಾಸನರು ಸಭೆಯವರನ್ನೂ ಬಾಲಕಿಯರನ್ನೂ ಕುರಿತು ತಕ್ಕ ಉಪನ್ಯಾಸವನ್ನು ಮಾಡಿದ ಮೇಲೆ ಬಾಲಕಿಯರಿಗೆ ಬಹುಮಾನವು ಕೊಡಲ್ಪಟ್ಟಿತು ಆ ಮೇಲೆ ಸಭಿಕರಿಗೆ ತಾಂಬೂಲವನ್ನೂ ಬಾಲಕಿಯರುಗಳಿಗೆ ತಿಂಡಿ ಮುಂತಾದವುಗಳನ್ನೂ ಕೊಟ್ಟು ಸಂತೋಷಪಡಿಸಿದರು ಸಭೆಯು ಬರಖಾಸ್ತಾಯಿತು ಘನ ಸಾರ್ಜೆಂಟ್ ದೊರೆಯವರು ಮಿಷನ್ ಮನೆಯನ್ನೂ ಇಲ್ಲಿನ ಆಸ್ಪತ್ರೆ ಅಸಿಸ್ಟೆಂಟರನ್ನೂ ನೋಡಿಕೊಂಡು ರೈಲು ಹತ್ತಿ ಮೈಸೂರಿಗೆ ಪ್ರಯಾಣ ಬೆಳಸಿದರು

ಚನ್ನರಾಯಪಟ್ಟಣ—ಕಳೆದ ಮಾರ್ಚಿ ತಾ ೩೦ ನೇ ಶನಿವಾರ ಬೆಳಿಗ್ಗೆ ಶೃಂಗೇರಿ ಸ್ವಾಮಿಗಳ ಸವಾರಿಯು ಇಲ್ಲಿಗೆ ಹೊಳೆ ನರಸೀಪುರದಿಂದ ದಯಮಾಡಿತು ಅರ್ಧ ಮೈಲಿ ಆಚೆ ತಾಲ್ಲೂಕು ಅಧಿಕಾರಿಗಳೂ ವೈದಿಕರೇ ಮೊದಲಾಗಿ ಅನೇಕ ಜನರು ಕಾದಿದ್ದು ಎದುರುಗೊಂಡರು ಬಳಿಕ ಪಾಲ್ಕಿಯಲ್ಲಿ ಶ್ರೀಯವರು ಬಿಜಮಾಡಿ ಸಮಸ್ತ ಬಿರುದಾವಳಿಗಳಿಂದಲೂ ವೇದಘೋಷಗಳಿಂದಲೂ ಮಂಗಳಕರವಾದ ಅನೇಕ ವಾದ್ಯಗಳಿಂದಲೂ ಅಸ್ಪತ್ರೆ ಮಾರ್ಗವಾಗಿ ಹೊರಟು ಕೋಟೆಗೂ ನಂತರ ಪೇಟೆಗೂ ಸಹಾ ಆಡ್ಡಪಾಲ್ಕಿ ಮೇಲೆ ಮೆರವಣಿಗೆ ಆಗಿ ಸಂಸ್ಕೃತಪಾಠಶಾಲೆಯನ್ನು ತಲುಪಿದರು ಅನೇಕ ಜನರು ಪಾದಪೂಜೆಗಳನ್ನು ಮಾಡುವುದಕ್ಕೆ ಉಪಕ್ರಮಿಸಿದರು ಮಾರುದಿನ ಬಾಕಿ ಇದ್ದ ಸಾಹುಕಾರರೂ ಶ್ಯಾನುಭೋಗರೂ ಇತರ ದೊಡ್ಡ ಮನುಷ್ಯರೂ ಪಾದಪೂಜಾದಿಗಳನ್ನು ಮಾಡಿದರು ತಾ ೧, ೨ ರಲ್ಲಿ ಬಂದಿದ್ದ ಪರಸ್ಥಳದವರಿಗೂ ಈ ಊರಿನವರಿಗೂ ಸಂತರ್ಪಣೆ ನಡಸಿದ್ದಲ್ಲದೆ ಉಭಯ ದಿನಗಳಲ್ಲೂ ಪಾದಪೂಜೆಗಳೂ ಜರಗಿದವು ೨ ನೇ ತಾ ರಾತ್ರಿ ಸರ್ವರನ್ನೂ ಮಠಕ್ಕೆ ಕರಸಿಕೊಂಡು ಫಲಮಂತ್ರಾಕ್ಷತೆಗಳನ್ನು ಕೊಟ್ಟದ್ದಲ್ಲದೆ ಬಡಜನಗಳಿಗೂ ಪಾಠಶಾಲಾ ವಿದ್ಯಾರ್ಥಿಗಳಿಗೂ ವೈದಿಕರಿಗೂ ಸಂಭಾವನೆ ಸಲ್ಲಿಸಿದರು ಪಾಠಶಾಲೆಯಲ್ಲಿ ಒಂದು ಸರಸ್ವತಿ ಭಂಡಾರವನ್ನು ಇಡುವಂತೆ ಏರ್ಪಡಿಸಬೇಕೆಂದು ವೇ॥ ಗೋಪಾಲಕೃಷ್ಣಶಾಸ್ತ್ರಿಗಳು ಹೇಳಿಕೊಂಡಾಗ ೨೦೦ ರೂ ದಯಪಾಲಿಸಿದರು ತರುವಾಯ ೩ ನೇ ತಾ ಬೆಳಿಗ್ಗೆ ಶ್ರೀಯವರು ಇದೇ ತಾಲ್ಲೋಕಿಗೆ ಸೇರಿದ ಬಾಗೂರಿಗೆ ದಯಮಾಡಿ ಆ ದಿವಸ ಅಲ್ಲಿದ್ದು ಗ್ರಾಮಸ್ಥರು ನಡೆಸಿದ ಪಾದಪೂಜಾದಿಗಳನ್ನು ಸ್ವೀಕರಿಸಿ ೪ ನೇ ತಾ ಬೆಳಿಗ್ಗೆ ಅಲ್ಲಿಂದ ಗಂಡಸಿ ಮೊಕ್ಕಾಮಿಗೆ ದಯಮಾಡಿದರು—ಸರ್ವಮಾನ್ಯ ಶ್ರವಣಬೆಳಗುಳದಲ್ಲಿ ವಿಜಯಾವೃಷಭ ೭ ರಿಂದ ಒಂದು ವಾರ ಶ್ರೀನೇಮಿತೀರ್ಥಂಕರ ರಥೋತ್ಸವವೂ, ಒಟ್ಟು ೯ ದಿವಸ ಶ್ರೀದಿಗಂಬರ ಜೈನ ಹಿತೈಷಿಣಿ ಕರ್ನಾಟಕ ಸಭೆಯ ೩ ನೇ ಅಧಿವೇಶನವೂ ನಡೆಸಲ್ಪಡುವದರಿಂದ ಉತ್ತಮಾಂಗ್ಲಾದ ಸಮಸ್ತರೂ ದಯಮಾಡಿ ಸಭೆಯಭಿವೃದ್ಧಿಯನ್ನು ಮಾಡಿ ಅತ್ಯಂತ ನಷ್ಟಪಡುತ್ತಿರುವ ಈ ಜೈನಮತವನ್ನು ಪ್ರಚಾರಪಡಿಸಬೇಕಾಗಿದೆ—ಇದೆ ತಾಲ್ಲೋಕಿಗೆ ಸೇರಿದ ಬಾಗೂರಿನಲ್ಲಿ ಕುಡಿಯುವ ನೀರಿಗೆ ಬಹಳ ತೊಂದರೆಯಾಗಿ ಜನಗಳೂ, ಜಾನುವಾರುಗಳೂ ತುಂಬಾ ತೊಂದರೆ ಪಡುತ್ತಾ ಇರುತ್ತವೆ ಇದನ್ನು ಕುರಿತು ದೆಪ್ಯುಟಿ ಕಮಿಷನರ್ ಸಾಹೇಬರಿಗೆ ಅರ್ಜಿ ಬರೆದು ಅಸಲ್ ಬಳಿಸಿಕೊಂಡಾಗ್ಯೂ ಇನ್ನೂ ಊರಿನ ಕೆಲ್ಸಗೆ ತಂದುಕೊಂಡು ಬಡರೈತರಾದ ನಾವು ಕಷ್ಟಪಡುತ್ತಿರುವದನ್ನು ತಪ್ಪಿಸಿ ನೀರಿನ ಕಷ್ಟವನ್ನು ತಪ್ಪಿಸಲಿಲ್ಲ ಈಗಲೂ ದಯಾಳುಗಳಾದ ನಮ್ಮ ಅಮಲ್ದಾರರು ಮೇಲಕ್ಕೆ ಬರೆದು ಕೊಳ ತೆಗಿಸಿಕೊಟ್ಟು ಈಗ ನಮಗಿರುವ ನೀರಿನ ತೊಂದರೆಯನ್ನು ಹೋಗಲಾಡಿಸಿ ಯಶಸ್ಸು ಸಂಪಾದಿಸಿಕೊಳ್ಳಬೇಕೆಂದು ನಮ್ಮಗಳ ಪ್ರಾರ್ಥನೆ—ಇದೇ ತಾಲ್ಲೋಕು ಹಿರೀಸಾವೆಯಲ್ಲಿ ಈಗ್ಗೆ ಒಂದು ವಾರದ ಲಾಗಾಯಿತು ವಾಂತಿಭೇದಿ ಉಪದ್ರವು ಪ್ರಾರಂಭವಾಗಿ ಸುಮಾರು ೨೦—೨೫ ಜನಗಳ ವರಿಗೂ ಕಾಲವಾಗಿರುತ್ತಾರೆ ನಮ್ಮ ಡಾಕ್ಟರು ಶ್ರೀನಿವಾಸೈಯ್ಯಂಗಾರರೂ, ನಮ್ಮ ಅಮಲ್ದಾರರೂ ಸಹಾ ಹೋಗಿ ಜನಗಳಿಗೆ ಧೈರ್ಯ ಹೇಳಿ ರೋಗಿಗಳಿಗೆ ಒಳ್ಳೆ ಔಷಧಿಗಳನ್ನು ಕೊಟ್ಟು ಉಪಚರಿಸುತ್ತಿರುತ್ತಾರೆ

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ನಿಗಾ ಕೊಡಲಾರೆವು

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು—ಎಡಿ

ಕರೆಸ್‌ಪಾಂಡೆನ್ಸ್.

ಸಂಬಳಕಸ್ತೂರ ಕೈಗೆ ಸಿಕ್ಕಿದ್ದು

ಅಯ್ಯಾ,

ಈಗ್ಗೆ ಸುಮಾರು ಒಂದು ತಿಂಗಳ ಕೆಳಗೆ ಜಗರಾಯರು, ಅಪ್ಪಾದೊರೆ, ಪಾರ್ಥಸಾರಥಿನಾಯುಡು ಮತ್ತು ಜಗನ್ನಾಯಕಲು, ಈ ನಾಲ್ಕು ಜನಗಳೂ ಎಲ್ಲಿಯೋ ಹೋಗಿ ಬರುತ್ತಿರುವಾಗ ಚಾಮರಾಜಪೇಟೆ ಮೊದಲನೇ ರೋಡಿನಲ್ಲಿ ನೂರು ರೂಪಾಯಿನ ಒಂದು ಕರೆನ್ಸಿ ನೋಟು ಸಿಕ್ಕಿತು ಅವನ್ನು ಅವರು ಆ ಮಾರನೇ ದಿವಸವೇ ಪೋಲೀಸ್ ಇನ್‌ಸ್ಪೆಕ್ಟರ್ ಜನರಲ್‌ರವರ ಆಫೀಸಿಗೆ ತೆಗೆದುಕೊಂಡು ಹೋಗಿ ವಾರಸುದಾರರಿಗೆ ಕೊಡಬೇಕೆಂದು ಅರ್ಜಿ ಸಮೇತ ಒಪ್ಪಿಸಿದರು ಈಗ್ಗೆ ೪—೫ ದಿವಸಗಳ ಕೆಳಗೆ ನಮ್ಮ ಇನ್‌ಸ್ಪೆಕ್ಟರ್ ಜನರಲ್ ಮೆ॥ ಕಾರ್ ಸಾಹೇಬರು ಮೇಲ್ಕಂಡ ನಾಲ್ಕು ಜನಗಳನ್ನೂ ಆಫೀಸಿಗೆ ಕರೆಸಿಕೊಂಡು ಇವರುಗಳ ಸಾಚಿಕೆಯನ್ನು ಮೆಚ್ಚಿ, ಪ್ರತಿ ಒಬ್ಬನಿಗೂ ನಾಲ್ಕು ರೂಪಾಯಿನಂತೆ ಹದಿನಾರು ರೂಪಾಯಿ ಬಹುಮಾನವನ್ನು ಕೊಟ್ಟು

ಇವರು ಹೀಗೆ ಈ ನೋಟನ್ನು ಸರಿಯಾದ ವಾರಸುದಾರರಿಗೆ ತಲುಪಿಸಬೇಕೆಂದು ಕೊಟ್ಟದ್ದಕ್ಕಾಗಿಯೂ ಮತ್ತು ಅವರ ನಂಬಿಕೆಗೂ ಶ್ಲಾಘಿಸಬೇಕಾಗಿದೆ ಇದೇ ರೀತಿ ಎಲ್ಲರೂ ಯಾವದಾದರೂ ವಿಷಯದಲ್ಲಿ ನಮ್ಮ ನಂಬಿಕೆಯನ್ನು ತೋರಪಡಿಸಿ ನಂಬಿಕಸ್ತರಾಗಬೇಕೆಂಬುವದೇ ನನ್ನ ಕುತೂಹಲವಾಗಿರುತ್ತೆ.

ಎ ವಿ ಎಲ್ ಎನ್.

ಕಾಲರಾ ಅಥವಾ ವಾಂತಿಭೇದಿ ರೋಗವನ್ನು ತಡೆಯುವ ಕ್ರಮ.

ಅನೇಕ ಶತಮಾನಗಳಿಂದ ಕಾಲರಾ ಉಪದ್ರವು ನಮ್ಮ ದೇಶದಲ್ಲಿ ಹುಟ್ಟಿ ಬಂದಿರುವ ಹಾವಳಿಯನ್ನು ಜನರು ನೋಡಿಯೂ ಕೇಳಿಯೂ ಇರುವರಷ್ಟೆ. ಈ ದೀರ್ಘಾನುಭವದಿಂದ ಜನರು ಈ ಭಯಂಕರವಾದ ರೋಗದಿಂದ ತಪ್ಪಿಸಿಕೊಳ್ಳುವ ಕ್ರಮಗಳನ್ನು ತಿಳಿದಿರಬೇಕಾಗಿತ್ತು. ಆದರೆ ಅನೇಕರು ಇದರ ವಿಷಯ ಇನ್ನೂ ಮೌಢ್ಯದಲ್ಲಿರುವದು ಗೊತ್ತಾಗುವದು. ಹೋದ ವಾರ ಮೈಸೂರು ಡಿಸ್ಟ್ರಿಕ್ಟಿನ ಒಂದು ಗ್ರಾಮದಲ್ಲಿ ಕಾಲರಾ ಉಪದ್ರವು ಸುಮಾರು ಅರವತ್ತು ಮಂದಿಯನ್ನು ಹಿಡಿಸಿಕೊಂಡು ಅವರಲ್ಲಿ ಮೂವತ್ತು ಜನರನ್ನು ಕೊಂದು ಕಾಲವಶರನ್ನಾಗಿ ಮಾಡಿತು. ರೋಗ ತಗಲಿದವರೆಲ್ಲರೂ ಉತ್ತಮ ಜಾತಿಯವರಾಗಿದ್ದರು. ಅದೇ ಗ್ರಾಮದಲ್ಲಿ ಗುಡಿಸಿಲುಗಳಲ್ಲಿ ವಾಸಮಾಡಿಕೊಂಡಿದ್ದ ಮಾದಿಗರಿಗೆ ಆ ಉಪದ್ರವು ತಗಲಿಲ್ಲ. ಇದಕ್ಕೆ ಕಾರಣವೇನೆಂದರೆ ಆ ಗ್ರಾಮದ ಉತ್ತಮ ಜಾತಿಯ ಜನಗಳೆಲ್ಲಾ ಯಾವದೋ ಒಂದು ಕೊಳದ ನೀರನ್ನೇ ಉಪಯೋಗಿಸುತ್ತಿದ್ದರು. ಅವರು ಕುಡಿಯುತ್ತಿದ್ದ ನೀರನ್ನು ವೈದ್ಯರು ಪರೀಕ್ಷೆ ಮಾಡಲು ಅದರೊಳಗೆ ಸಾವಿರಾರು ಕಾಲರಾ ರೋಗದ ಕ್ರಿಮಿಗಳಿದ್ದವೆಂದು ಗೊತ್ತಾಯಿತು. ಮಾದಿಗರು ಈ ಕೊಳದ ನೀರನ್ನು ಮುಟ್ಟುವದಕ್ಕೆ ಉತ್ತಮ ಜಾತಿಯವರು ಬಿಟ್ಟಿರಲಿಲ್ಲವಾದ್ದರಿಂದ ಅವರು ಬೇರೆ ಒಂದು ಭಾವಿಯ ನೀರನ್ನು ಕುಡಿಯುತ್ತಿದ್ದರು. ಈ ನೀರನ್ನು ಪರೀಕ್ಷೆ ಮಾಡುವಲ್ಲಿ ಅದರಲ್ಲಿ ಕಾಲರಾ ಕ್ರಿಮಿಗಳಿರಲಿಲ್ಲ. ಇದರಿಂದ ಕಾಲರಾ ವ್ಯಾಧಿಗೆ ನೀರಿನ ದೋಷವೇ ಮುಖ್ಯ ಕಾರಣವಾಗಿದೆಯೆಂದು ಸಂಶಯವಿಲ್ಲದೆ ಸ್ಥಾಪಿಸಬಹುದು. ನೀರಿನಲ್ಲಿ ಕಣ್ಣಿಗೆ ಕಾಣದಷ್ಟು ಕಾಲರಾ ರೋಗದ ಸಣ್ಣ ಕ್ರಿಮಿಗಳು ಸೇರಿಕೊಂಡು, ಮನುಷ್ಯನು ಅಂಥಾ ನೀರನ್ನು ಕುಡಿದ ಮೇಲೆ ಹೊಟ್ಟೆಯಲ್ಲಿ ಸೇರಿ, ಅಲ್ಲಿ ಅನೇಕಮಡಿಗಳಷ್ಟು ಅಭಿವೃದ್ಧಿಯಾಗಿ ಅವನಿಗೆ ವಾಂತಿಭೇದಿ ರೋಗವನ್ನು ಉಂಟುಮಾಡುವದು. ಕಾಲರಾ ರೋಗವನ್ನು ತಡೆಯುವ ಕ್ರಮಗಳ್ಯಾವವೆಂದರೆ— ೧ ಪ್ರತಿಯೊಂದು ಗ್ರಾಮದ ಮುಖ್ಯವಾದ ನೀರಿನ ಭಾವಿಗಳು ಯಾವಾಗಲೂ ಶುಚಿಯಾಗಿಟ್ಟುಕೊಳ್ಳಬೇಕು. ಇವುಗಳ ಸಮೀಪದಲ್ಲಿ ಯಾರನ್ನೂ ಸ್ನಾನ ಮಾಡುವದಕ್ಕಾಗಲಿ, ಬಟ್ಟೆಗಳನ್ನು ಒಗೆಯುವದಕ್ಕಾಗಲಿ ಅಥವಾ ದನ ಕರುಗಳನ್ನು ತೊಳೆಯುವದಕ್ಕಾಗಲಿ ಬಿಡತಕ್ಕದ್ದಲ್ಲ. ಯಾವ ತರದ ಕೊಳಕು ಪದಾರ್ಥವಾಗಲಿ ಭಾವಿಯಲ್ಲಿ ಬೀಳದಂತೆ ನೋಡಿಕೊಳ್ಳುತ್ತಿರಬೇಕು. ೨ ಕಾಲರಾ ರೋಗವು ಕಾಣಿಸಿಕೊಂಡ ಮೇಲೆ ಚೆನ್ನಾಗಿ ಕುದಿಸಿದ ನೀರನ್ನು ಯಾವಾಗಲೂ ಉಪಯೋಗಿಸುತ್ತಿರಬೇಕು.

ಬಹುಮಾನಕ್ಕಾಗಿ ಬಂದ ಬಾತ್ಮಿಗಳು.

೧ ಹುಲಿಯ ಶಿಕಾರಿ

ನಾನು ಕಳೆದ ಶನಿವಾರ ೭ ನೇ ತಾರೀಖಿನ ಬೆಳಿಗ್ಗೆ ಸುಮಾರು ಏಳು ಗಂಟೆಗೆ ಚಿತ್ರದುರ್ಗದ ಬಂಗಲೆಯನ್ನು ಬಿಟ್ಟು ಹಿರಿಯೂರು ಮಾರ್ಗವಾಗಿ ಸುಮಾರು ಎರಡು ಮೂರು ಫರ್ಲಾಂಗ್ ಹೋಗುವದರೊಳಗಾಗಿ ಒಬ್ಬ ಹಳ್ಳಿ ಹೆಂಗಸು ಎದುರಿಗೆ ಬಂದು—ಅಗೋ, ಹುಲಿ ಬಂದಿರುವದು, ಜನಗಳು ತರುಬುತ್ತಲಿದ್ದಾರೆ ಎಂದು ನಡುಗುತ್ತ ಒದರಿದಳು. ನಾನು ಮಾರ್ಗದಲ್ಲಿ ಮುಂದೆ ನೋಡಲಾಗಿ ಸೇತುವೆ ಹತ್ತಿರ ಸುಮಾರು ಅರ್ಧ ಫರ್ಲಾಂಗಿನಲ್ಲಿ ೧೦, ೧೨ ಜನಗಳು ನಿಂತಿದ್ದರು. ಪಕ್ಕದ ಹೊಲದ ಹುಲ್ಲು ಗುಡಿಸಲುಗಳಿಂದ ಹೆಂಗಸರು ಮಕ್ಕಳನ್ನು ತಬ್ಬಿಕೊಂಡು ಊರು ಮುಖವಾಗಿ ಓಡುತ್ತಲಿದ್ದರು. ಗಂಡಸರು ತುಪಾಕಿಗಳನ್ನೂ ಕೊಡಲಿಗಳನ್ನೂ ಹಿಡಿದು ಸೇತುವೆಯ ಹತ್ತಿರ ಹೋದರು. ಸ್ವಲ್ಪದರೊಳಗಾಗಿ ಢಂ ಎಂಬ ಶಬ್ದ ಕೇಳಿಬರಲಾಗಿ ಸಮೀಪವಾಗಿ ನಿಂತಿದ್ದ ಜನಗಳು ಚೆಲ್ಲಾಪಿಲ್ಲಿಯಾಗಿ ಓಡಲಾರಂಭಿಸಿದರು. ಕೆಲವರು ಮರಗಳನ್ನು ಹತ್ತಿದರು. ಅಷ್ಟರಲ್ಲೇ ಒಬ್ಬನು ತಟ್ಟಾಡುತ್ತ ಊರ ಕಡೆಗೆ ಬರುತ್ತಿದ್ದನು. ಅವನನ್ನು ಬೀಳದ ಹಾಗೆ ಇನ್ನೊಬ್ಬನು ಹಿಡಿದಿದ್ದನು. ತಟ್ಟಾಡುತ್ತಿದ್ದವನ ತಲೆಯ ಮೇಲೆಯೂ ಕಪೋಲದ ಮೇಲೆಯೂ ಗಾಯಗಳಾಗಿ ರಕ್ತವು ಸುರಿಯುತ್ತಿತ್ತು. ಎಡ ಭುಜವೆಲ್ಲಾ ಛಿನ್ನಭಿನ್ನವಾಗಿ ಉಡುತ್ತಿದ್ದ ಲಂಗೋಟು ನೆನೆದು ರಕ್ತಧಾರೆಯು ನೆಲಕ್ಕೆ ಸುರಿಯುತ್ತಲಿದ್ದವು. ನಾನು ಅವನ ಸಂಗಡ ಬರುತ್ತಿದ್ದವನನ್ನು—ಏನಯ್ಯಪ್ಪ ಎಂದು ಕೇಳಲು ಗಾಯಪಟ್ಟಿದ್ದವನು—ಸ್ವಾಮಿ ನಾನು ಗುಂಡು ಹೊಡೆದೆ ಹೆಬ್ಬುಲಿಯು ಎಟ್ಟಿ ಬಂದು ನನ್ನ ಮೇಲೆ ಬಿದ್ದಿತು ಎಂದು ಹೇಳುವದರೊಳಗಾಗಿ ನಾನು ಅವನನ್ನು ಆಸ್ಪತ್ರೆಗೆ ಸಾಗಿಸುವಂತೆ ಹೇಳಿ ಇತ್ತ ನೋಡಲಾಗಿ ಹುಲಿಯು ಅಲ್ಲಿಂದ ದಕ್ಷಿಣ ಮುಖವಾಗಿ ಸುಮಾರು ೧೧ ಫರ್ಲಾಂಗ್ ಹೋಗಿ ಅಲ್ಲಿದ್ದ ಹುಲ್ಲು ಬಣವೆಗಳ ಮಧ್ಯೆ ಬಿದ್ದುಕೊಂಡಿತು. ಕೂಡಲೆ ೧೫—೨೦ ಜನ ಬಂದು ಕಾಗೆಗಳನ್ನು ಹೊಡೆದು ಸುತ್ತಲೂ ಘೇರಾಯಿಸಿದರು. ಒಬ್ಬ ಗುಂಡಿಕ್ಕಲು ಒಂದುಕಡೆ ಹಾರಿಸಲಿಕ್ಕೆ ಒಬ್ಬನಿಗೂ ಧೈರ್ಯ ಸಾಲದು. ಇಷ್ಟರಲ್ಲಿ ಹುಲಿ ಶಿಕಾರಿಯಲ್ಲಿ ಪರಿಚಯ ಹೊಂದಿದ್ದ ವೆಂಕಟರಂಗಣ್ಣನು ಧೈರ್ಯವಾಗಿ ಹತ್ತಿರ ಹೋಗಿ ಗುಂಡು ಹಾರಿಸಲು ಎದುರಿಗೆ ಬರುತ್ತಿದ್ದ ಮೃಗರಾಜನನ್ನು ಮತ್ತೊಂದು ಗೋಲಿಯಿಂದ ನೆಲಕ್ಕೆ ಮಲಗಿಸಿದನು. ಇಷ್ಟರೊಳಗಾಗಿ ಜನಗಳು ಸಹಸ್ರಶಃ ಸೇರಿ ಬಂದು ಮೃಗರಾಜನನ್ನು ಊರಿಗೆ ಎಳೆದು ತಂದರು. ಡೆಪ್ಯುಟಿ ಕಮಿಷನರ್ ಮ॥ ಚಂಗೈಯ್ಯ ಶೆಟ್ಟಿಯವರೂ ಪೋಲೀಸ್ ಸೂಪರೆಂಟರೂ ಬಂದು ನೋಡಿಕೊಂಡು ಹೋದರು. ಹುಲಿಯು ಬಹಳ ಚೆನ್ನಾಗಿ ಬೆಳೆದು ಬಲವಾಗಿ ಕೊಬ್ಬಿತ್ತು. ಉದ್ದ ಸುಮಾರು ಹತ್ತು ಹನ್ನೊಂದಡಿ ಇತ್ತು. ಎತ್ತರ ಸುಮಾರು ನಡುವಿಗೆ ಮೇಲೆ ಇರಬಹುದು. ಇದು ಈಗ ಮೂರು ವರುಷಗಳಿಂದ ಸಮೀಪದ ಗುಡ್ಡಗಳಲ್ಲಿ ಸೇರಿಕೊಂಡು ನೂರಾರು ದನಕರುಗಳನ್ನು ಕಡಿದು ತಿಂದಿದೆ. ಮೂರು ದಿನಗಳಿಗೆ ಮುಂಚೆ ಒಂದು ಎಮ್ಮೆಯನ್ನೂ ಮತ್ತೊಂದು ಕೋಣವನ್ನೂ ಕಡಿದು ತಿಂದಿದ್ದಿತು. ಹುಲ್ಲು ಸೊಪ್ಪಿಗೆ ಹೋಗುತ್ತಿದ್ದವರ ಭೀತಿ ತಪ್ಪಿತು. ಆದರೆ ಪಾಪ! ಗಾಯಪಟ್ಟ ಸಣ್ಣಪ್ಪನಿಗೆ ಮಾತ್ರ ಎಡಭಾಗದ ಕೈಯನ್ನು ತೆಗೆದುಹಾಕಿ ಚಿಕಿತ್ಸೆ ಆಸ್ಪತ್ರೆಯಲ್ಲಿ ಮಾಡುತ್ತಲಿದ್ದಾರೆ. ಅವನ ಗತಿ ಮುಂದೆ ಏನಾಗುವದೋ ನೋಡಬೇಕು. ಸಾಯಂಕಾಲ ಹುಲಿರಾಜನ ಮೆರವಣಿಗೆ ಆಯ್ತು.

೨ ಭಾವಿಯಲ್ಲಿ ಬಿದ್ದು ಬದುಕಿದ್ದು.

ಮೈಸೂರು ಕೃಷ್ಣರಾಜಮೊಹಲ್ಲಾಕ್ಕೆ ಸೇರಿದ ಹಳೇ ಅಗ್ರಹಾರದಲ್ಲಿ ವೀಣೆ ಶಾಮಣ್ಣನವರ ಬೀದಿಯಲ್ಲಿ ವಾಸಿಸುತ್ತಿರುವ ವ್ಯಾಸಾಚಾರ್ರ ಕುಟುಂಬ ಬಹಿಷ್ಟೆಯಾಗಿ ಹಿತ್ತಲುಕಡೆ ಹೊರಮನೆಯಲ್ಲಿ ಮಲಗಿದ್ದರಂತೆ. ಆಕೆಯು ನೆನ್ನೆ ರಾತ್ರಿ ಸುಮಾರು ೩ ಘಂಟೆ ಸಮಯದಲ್ಲಿ ಮನೆಯಲ್ಲಿದ್ದ ನೆಲಭಾವಿಗೆ ಕತ್ತಲಲ್ಲಿ ಕಾಣದೆ ಬಿದ್ದು ಬಿಟ್ಟರು. ಆ ಸಮಯದಲ್ಲಿ ಭಾವಿಗೆ ಬಿದ್ದ ಬಡಪ್ರಾಣಿಗೆ ಉಂಟಾದ ಘಾಬರಿಯೂ ಮತ್ತು ಹೆದರಿಕೆಯೂ ಹೇಳಲಸಾಧ್ಯವು. ಆದರೆ ಆಕೆಯು ಬಿದ್ದ ಸಮಯವು ಅಕಾಲವಾದ್ದರಿಂದ ಆಕೆಯ ಕೂಗಿಗೆ ಮನೆಯವರೇ ಆಗಲಿ ನೆರೆಹೊರೆಯವರೇ ಆಗಲಿ ಎದ್ದು ಆಕೆಯನ್ನು ಹೊರಕ್ಕೆ ಕರೆದುಕೊಳ್ಳುವದಕ್ಕೆ ಅನುಕೂಲವಾಗಲಿಲ್ಲ. ಆಕೆಯು ೨ ನೇ ಸಾರಿ ಮುಳುಗುವಾಗ್ಗೆ ದೈವಾಧೀನದಿಂದ ಆಕೆಯ ಕಾಲುಗಳು ಭಾವಿಯಲ್ಲಿದ್ದ ಕೊರಕಲಲ್ಲಿ ಸಿಕ್ಕಿಕೊಂಡು ಅವರು ಕುತ್ತಿಗೆ ಮಟ್ಟದ ನೀರಿನಲ್ಲೇ ದಡವನ್ನು ಒರಗಿಕೊಂಡು ಮೇಲೆ ಬಂದ ನೀರನ್ನು ಕುಡಿಯುತ್ತಾ ಪ್ರಾಣದ ಮೇಲೆ ನಿರಾಶರಾಗಿ ಕೂಗುವದಕ್ಕೆ ಸಹಾ ಚೈತನ್ಯವಿಲ್ಲದೆ ಕಾಲವನ್ನು ಕಳೆಯುತ್ತಿದರು. ಆಕೆಯ ಯಜಮಾನರು ಬೆಳಿಗ್ಗೆದ್ದು ಮನೆಯಲ್ಲಿ ಹೆಂಡತಿಯನ್ನು ನೋಡುವಾಗ್ಗೆ ಆಕೆ ಮಲಗಿದ್ದ ಸ್ಥಳದಲ್ಲಿ ಚಾಪೆ ಮತ್ತು ಚೆಂಬು ಇತ್ತೇ ವಿನಾ ಆಕೆಯು ಇರಲಿಲ್ಲ. ತುಂಬಾ ಘಾಬರಿಬಿದ್ದು ಹಿತ್ತಲುಕಡೆಯಲ್ಲಿ ಹುಡುಕಿ ನೋಡಿ ಎಷ್ಟು ಪ್ರಲಾಪಿಸಿದಾಗ್ಯೂ ವ್ಯರ್ಥವಾಗಿ ಪ್ರತಿಧ್ವನಿಯೇ ಬಾರದಿಲು ಎಲ್ಲೋ ಹೊರಗೆ ಹೋಗಿರಬಹುದೆಂದು ತಿಳಿದು ತಮ್ಮ ನಿತ್ಯ ಕರ್ಮವನ್ನು ನೆರವೇರಿಸಿಕೊಳ್ಳುವದಕ್ಕಾಗಿ ನೀರು ಸೇದುವದಕ್ಕೆ ಭಾವಿಗೆ ಹೋಗಿ ಬಗ್ಗಿ ನೋಡಲು ಅದರಲ್ಲಿ ತಲೆಬುರುಡೆಯು ತೇಲುತಿದ್ದದ್ದನ್ನು ಕಂಡು ತುಂಬಾ ಘಾಬರಿಯಿಂದ ತಕ್ಷಣವೇ ಭಾವಿಗಿಳಿದು ಆಕೆಯ ಜುಟ್ಟನ್ನು ಹಿಡಿದುಕೊಂಡು ಮೇಲಕ್ಕೆ ಎತ್ತುವದಕ್ಕೆ ಹೋದರು. ಆದರೆ ಅವರು ಕಾಯಿಲೆಯಿಂದ ಶುಷ್ಕವಾಗಿ ನಿಶ್ಶಕ್ತರಾಗಿದ್ದದ್ದರಿಂದ ಎತ್ತುವದಕ್ಕೆ ಕೈಲಾಗದೆ ಅಲ್ಲೇ ನಿಂತು ತಮ್ಮ ಸಹಾಯಕ್ಕಾಗಿ ಇತರರನ್ನು ಕೂಗಿ ಕರೆಯುತ್ತಿರಲು ಮನೆಯಲ್ಲಿ ಮಲಗಿದ್ದ ಸುಮಾರು ೮—೯ ವರುಷ ವಯಸ್ಸಿನ ಹೆಣ್ಣು ಮಗುವು ಎಚ್ಚತ್ತು ಭಾವಿಯ ತಡಿಗೆ ಬಂದು ತಂದೆಯಿಂದ ಸಮಾಚಾರವನ್ನು ತಿಳಿದು ಎದುರು ಮನೆಯಲ್ಲಿ ವಾಸಿಸುತ್ತಿರುವ ಮ॥ ವೆಂಕಟಾಚಾರ್ರನ್ನು ಕರೆದುಕೊಂಡು ಬಂದಿತು. ಅವರು ಬಂದು ಎಲ್ಲವನ್ನೂ ನೋಡಿ ತಮ್ಮ ಜೊತೆಗೆ ಸಹಾಯಕ್ಕೋಸ್ಕರ ಇನ್ನೊಬ್ಬನನ್ನು ಕರೆದುಕೊಂಡು ಬಂದು ಆಕೆಯ ಸೊಂಟಕ್ಕೂ ಮತ್ತು ಕಂಕುಳುಗಳಿಗೂ ಹಗ್ಗವನ್ನು ಕಟ್ಟಿಸಿ ಬಹಳ ಹುಷಾರಾಗಿ ಆಕೆಗೆ ಸ್ವಲ್ಪವೂ ಜಖಂ ಆಗದಂತೆ ಮೇಲಕ್ಕೆ ಕರೆದುಕೊಂಡರು ಮತ್ತು ಆಕೆಗೆ ಉಪಚಾರಾರ್ಥವಾಗಿ ಔಷಧಿ ವಗೈರೆಗಳನ್ನು ಕೊಡಿಸಿದರು. ಅವರೆ ನಿಶ್ಶಕ್ತರಾಗಿದ್ದಾಗ್ಯೂ ಸಮಯದಲ್ಲಿ ಧೈರ್ಯವಾಗಿ ಕೆಲಸ ಮಾಡಿದ ಆಕೆಯ ಯಜಮಾನರನ್ನೂ ಮತ್ತು ಅಂಥಾ ಸಮಯದಲ್ಲಿ ತುಂಬಾ ಸಹಾಯ ಮಾಡಿದ ಮ॥ ವೆಂಕಟಾಚಾರ್ರನ್ನೂ ಎಷ್ಟು ಶ್ಲಾಘಿಸಿದರೂ ಸ್ವಲ್ಪವೇ ಆಗುತ್ತೆ. ಇಂಥಾ ನವನಾಗರೀಕ ಕಾಲದಲ್ಲಿಯೂ ನಮ್ಮ ಜನಗಳು ವಾಸಿಸುವ ಕಟ್ಟಡಗಳನ್ನು ಅಪಾಯ ಸಂಭವಿಸನಂತೆ ಸರಿಯಾದ ರೀತಿಗಳಲ್ಲಿ ಕಟ್ಟಿಸಿಕೊಳ್ಳದೇನೇ ಇಂಥಾ ಅನಾಹುತಗಳಿಗೂ ಮತ್ತು ಕಷ್ಟ ನಿಷ್ಠೂರಗಳಿಗೂ ಗುರಿಯಾಗುವದನ್ನು ನೋಡಿದರೆ ತುಂಬಾ ಪಶ್ಚಾತ್ತಾಪ ಪಡಬೇಕಾಗಿರುತ್ತೆ. ಸರ್ಕಾರದವರು ನೆಲಭಾವಿಗಳಿಗೆ ಕಟ್ಟೆಗಳನ್ನು ಕಟ್ಟಿಸಬೇಕೆಂಬ ಹುಕುಂ ಜಾರಿಗೆ ತಂದರೆ ಇಂಥಾ ಅನಾಹುತಗಳು ಇನ್ನು ಮುಂದೆ ಎಂದೆಂದಿಗೂ ಸಂಭವಿಸಲಾರವೆಂದು ನಂಬಿರುತ್ತೇನೆ.

ವ್ಯವಸಾಯ ಮತ್ತು ಕೈಗಾರಿಕೆಗಳ ಪ್ರದರ್ಶನವು.

ನವರಾತ್ರಿ ಉತ್ಸವ ಕಾಲದಲ್ಲಿ ರಾಜಧಾನಿಯಲ್ಲಿ ನಡೆಯತಕ್ಕದ್ದು

ಹೋದ ವರುಷ ಮೈಸೂರು ಪ್ರಜಾಪ್ರತಿನಿಧಿ ಸಭೆಯಲ್ಲಿ ಮ॥ ಅಂಬಳೆ ಪಂಡಿತರೇ ಮೊದಲಾದ ಕೆಲವು ಮೆಂಬರುಗಳು ದಿವಾನರವರನ್ನು ಕುರಿತು ರಾಜಧಾನಿಯೊಳಗೆ ನವರಾತ್ರಿ ಉತ್ಸವ ನಡೆಯುವ ಕಾಲದಲ್ಲಿ ಸಾವಿರಾರು ಪ್ರಜೆಗಳು ಬಂದು ಸೇರುತ್ತಾರಾದ್ದರಿಂದ ಆಗ್ಗೆ ಒಂದು ಪ್ರದರ್ಶನವನ್ನು ನಡಸಿದರೆ ಎಲ್ಲಾ ಭಾಗಗಳಲ್ಲೂ ನಮ್ಮ ಸಂಸ್ಥಾನವು ಅಭಿವೃದ್ಧಿಗೆ ಬರಲು ತುಂಬಾ ಸಹಾಯವಾದೀತೆಂದು ಸೂಚಿಸಿದರು. ಆಗ ದಿವಾನರವರು ಈ ವಿಷಯವನ್ನು ಯೋಚಿಸುವುದಾಗಿ ಅಪ್ಪಣೆ ಕೊಡಿಸಿ, ಅದರ ಮೇಲೆ ರೆವಿನ್ಯು ಕಮಿಷನರ ಅಭಿಪ್ರಾಯವನ್ನು ಕೇಳಿದ್ದರು. ರೆವಿನ್ಯೂ ಕಮಿಷನರು ಕಳೆದ ಜನವರಿ ೨೮ ರಲ್ಲಿ ಗವರ್ನಮೆಂಟಿಗೆ ಈ ವಿಷಯವಾಗಿ ಬರೆದ ಸಂಗತಿಗಳೇನಂದರೆ.—

ರೆವಿನ್ಯೂ ಕಮಿಷನರ ಅಭಿಪ್ರಾಯ.

ಪ್ರತಿ ವರುಷವೂ ರಾಜಧಾನಿಯಾದ ಮೈಸೂರು ಪಟ್ಟಣದಲ್ಲಿ ನವರಾತ್ರಿ ಉತ್ಸವ ಕಾಲದಲ್ಲಿ ಪ್ರದರ್ಶನವನ್ನು ನಡಸುವುದರಲ್ಲಿ ತುಂಬಾ ಪ್ರಯೋಜನ ಉಂಟೆಂದು ನನಗೆ ತೋರುತ್ತದೆ. ವ್ಯವಸಾಯದ ಬೆಳಸುಗಳನ್ನೂ ಕೈಗಾರಿಕೆ ಪದಾರ್ಥಗಳನ್ನೂ ಇವೆರಡಕ್ಕೂ ಸಹಾಯವಾಗುವಂಥಾ ಯಂತ್ರವೇ ಮೊದಲಾದ ಆಯುಧಗಳನ್ನೂ ಉಪಕರಣಗಳನ್ನೂ ಪ್ರದರ್ಶನ ಮಾಡಬೇಕಾಗಿದೆ. ಬಹುರಿಗಾಗಿಯೇ ಪದಾರ್ಥಗಳನ್ನು ತರಿಸಿಟ್ಟು ಪ್ರದರ್ಶನ ಮಾಡುವುದರಲ್ಲಿ ಅಷ್ಟೇನೂ ಪ್ರಯೋಜನ ಕಾಣುವುದಿಲ್ಲ. ಈ ಭಾಗವನ್ನು ವರ್ತಕರಿಗೇ ಬಿಟ್ಟುಬಿಡಬೇಕು. ಪ್ರದರ್ಶನದಲ್ಲಿ ಇಡತಕ್ಕ ವಸ್ತು ಉಪಕರಣಾದಿಗಳನ್ನು ಆಯಾ ಕಸುಬುದಾರರು ನೋಡಿ, ಅವುಗಳ ತಯಾರಿ, ಯೋಗ್ಯತೆ, ಉಪಯೋಗ ಮುಂತಾದ್ದನ್ನು ಗ್ರಹಿಸಿಕೊಳ್ಳುವುದಕ್ಕೆ ಸಹಕಾರಿಯಾಗಿರಬೇಕು. ಈ ಭಾಗದಲ್ಲಿ ಕಸಬುದಾರರಿಗೆ ತಿಳುವಳಿಕೆಯುಂಟಾಗುವಂತೆ ಇಂಗ್ಲಿಷಿನಲ್ಲೂ ಕನ್ನಡದಲ್ಲೂ ಉಪನ್ಯಾಸಗಳನ್ನು ಬರೆಸಿ ಓದಿಸುವುದಕ್ಕೂ ಏರ್ಪಾಡಾಗಬೇಕು. ಈ ಉಪನ್ಯಾಸಗಳ ಮೂಲಕ ಯಂತ್ರಗಳೂ, ಉಪಕರಣಗಳೂ, ತಯಾರಿಗಾಗಿ ಬೇಕಾಗುವ ಪದಾರ್ಥಗಳೂ ಎಲ್ಲೆಲ್ಲಿ ಯಾವ ಬೆಲೆಗೆ ದೊರಕುತ್ತವೆ; ಅವುಗಳನ್ನು ಉಪಯೋಗಿಸುವುದು ಹ್ಯಾಗೆ; ಅವುಗಳನ್ನು ದುರಸ್ತು ಮಾಡಿಕೊಳ್ಳುವ ಕ್ರಮವೇನು ಎಂಬೀ ಸಂಗತಿಗಳೆಲ್ಲಾ ಜನರಿಗೆ ಸುಲಭವಾಗಿ ತಿಳಿಯುವಂತೆ ಆಗಬೇಕು. ಈ ಉದ್ದೇಶವು ನೆರವೇರುವುದಕ್ಕೆ ಕೆಲವು ಅಧಿಕಾರಿಗಳನ್ನು ಚುನಾಯಿಸಿ ಒಂದು ಕಮಿಟಿ ಮಾಡಬೇಕಾಗಿದೆ.

ವ್ಯವಸಾಯ, ವ್ಯಾಪಾರ, ಕೈಗಾರಿಕೆಗಳ ಉಪಕರಣಗಳನ್ನು ಯೂರೋಪಿಯರ್ ಮತ್ತು ದೇಶೀಯ ಕಸಬುದಾರರುಗಳ ಮೂಲಕ ತರಿಸಿಕೊಳ್ಳುವುದಕ್ಕೂ ಅವಕಾಶವನ್ನೂ ಬಗೆಸಬೇಕು. ಅಂಥವರು ಕಳುಹಿಸುವ ವಸ್ತುಗಳನ್ನು ಪ್ರದರ್ಶನಶಾಲೆಯಲ್ಲಿಡುವುದಕ್ಕೆ ಸ್ಥಳ ಬಾಡಿಗೆಯೇ ಮೊದಲಾದ ಯಾವ ರುಸುಮನ್ನೂ ತೆಗೆದುಕೊಳ್ಳಕೂಡದು. ಅಂಥಾ ಯಂತ್ರ ವಿಶೇಷಗಳನ್ನು ಕಳುಹಿಸುವುದಕ್ಕೆ ಆಯಾ ವರ್ತಕರೇ ಮುಂತಾದವರಿಗೆ ತಗಲುವ ರೈಲ್ ಛಾರ್ಜ್ ಮುಂತಾದ್ದಕ್ಕೆ ಸರ್ಕಾರದವರು ಸ್ವಲ್ಪ ದ್ರವ್ಯ ಸಹಾಯ ಮಾಡುವುದೂ ಅವಶ್ಯವೆಂದು ಕಾಣುತ್ತದೆ.

ಇದಲ್ಲದೆ ಕಮಿಟಿ ಮೆಂಬರುಗಳು ಸಾಕಷ್ಟು ತಮ್ಮ ಕಡೆಗಳಿಂದಲೂ ಪದಾರ್ಥಗಳನ್ನು ತರಿಸಿಟ್ಟು, ಬಿಕರಿ ಮಾಡುವುದಕ್ಕೂ ವಾಪಸು ಕಳುಹಿಸುವುದಕ್ಕೂ ಅವಕಾಶವಿರಬೇಕು. ಬರೀ ಮಾಟಕ್ಕಾಗಿಯೇ ಯಾವ ವಸ್ತುಗಳನ್ನೂ ತರಿಸಬೇಕಾದದ್ದಿಲ್ಲ; ಮಾದರಿಗಳಾಗಿ ಕೆಲವನ್ನು ತರಿಸಬಹುದು. ಹೀಗೆ ಮಾಡೋಣದರಿಂದ ಬರೀ ತಮಾಷೆ ನೋಡುವುದಕ್ಕೇ ಪ್ರದರ್ಶನ ಶಾಲೆಗೆ ಬರತಕ್ಕವರ ಸಂಖ್ಯೆ ಕಡಿಮೆಯಾಗುವುದು, ಆದರೆ ಉತ್ಸಾಹವುಳ್ಳ ಕಸಬುದಾರರು ವಿಶೇಷವಾಗಿ ಆ ಮಾದರಿ ವಸ್ತುಗಳನ್ನು ನೋಡಿ, ಅಲ್ಲಿ ತೋರಿಸುವ ಯಂತ್ರಗಳ ಮತ್ತು ಉಪಕರಣಗಳ ಪ್ರಯೋಜನಗಳನ್ನು ತಿಳಿದುಕೊಳ್ಳುವುದಕ್ಕೂ ತುಂಬಾ ಪ್ರೋತ್ಸಾಹವಾದೀತೆನ್ನುವುದರಲ್ಲಿ ಸಂಶಯವಿಲ್ಲ. ಬೆಂಗಳೂರು ಮ್ಯೂಜಿಯಂ ಮೊದಲಾದ ಸ್ಥಳಗಳಲ್ಲಿ ಇಟ್ಟಿರತಕ್ಕ ಮಾದರಿ ಪದಾರ್ಥಗಳನ್ನು ಈ ಪ್ರದರ್ಶನಕ್ಕೆ ತರಿಸಿಡುವುದರಲ್ಲಿ ಪ್ರಯೋಜನವುಂಟು.

ಗವರ್ನಮೆಂಟಿನವರ ಹುಕುಂ.

ಮೇಲ್ಕಂಡ ರೆವಿನ್ಯೂ ಕಮಿಷನರ ಅಭಿಪ್ರಾಯಗಳನ್ನು ಗವರ್ನಮೆಂಟಿನವರು ಅನುಮೋದಿಸಿ, ಮಾರ್ಚಿ ೮ ರಲ್ಲಿ ಹುಕುಂ ಕೊಟ್ಟಿರುವುದೇನೆಂದರೆ—

ಈ ಏರ್ಪಾಡು ನಮ್ಮ ಸಂಸ್ಥಾನದಲ್ಲಿ ಕೈಗಾರಿಕೆಗಳನ್ನು ವ್ಯವಸಾಯವನ್ನೂ ಅಭಿವೃದ್ಧಿಪಡಿಸುವುದಕ್ಕೆ ಸಹಕಾರಿಯಾಗಿರೋಣದರಿಂದಲೂ, ನವರಾತ್ರಿ ಉತ್ಸವ ಕಾಲದಲ್ಲಿ ಮೈಸೂರು ಪಟ್ಟಣಕ್ಕೆ ಅನೇಕಾನೇಕ ಪ್ರಜೆಗಳು ಬರುತ್ತಾರಾದ್ದರಿಂದಲೂ ಆ ಕಾಲದಲ್ಲಿ ಒಂದು ಪ್ರದರ್ಶನವನ್ನು ನಡಿಸಬೇಕೆಂದು ಗವರ್ನಮೆಂಟಿನವರು ತೀರ್ಮಾನಿಸಿರುತ್ತಾರೆ. ವ್ಯವಸಾಯದ ಬೆಳೆಗಳೂ ಕೈಗಾರಿಕೆಗಳ ಪದಾರ್ಥಗಳೂ ಇವೆರಡಕ್ಕೂ ಸಹಾಯವಾಗುವಂಥಾ ಯಂತ್ರಗಳೂ ಉಪಕರಣಗಳೂ ಪ್ರದರ್ಶನ ಮಾಡಲ್ಪಡಬೇಕು. ಈ ಸಂಸ್ಥಾನಕ್ಕೆ ನೂತನವಾದ ಇತರ ಫಸಲುಗಳನ್ನು ಬೆಳೆಯುವುದಕ್ಕೂ ಬೇರೇ ಕಸಬುಗಳನ್ನು ಅವಲಂಬಿಸುವುದಕ್ಕೂ ಈ ಸೀಮೆಯ ಕಸಬುದಾರರಿಗೆಲ್ಲಾ ಕುತೂಹಲವೂ ಪ್ರೋತ್ಸಾಹವೂ ಉಂಟಾಗುವುದಕ್ಕಾಗಿ ಹೊಸ ಫಸಲುಗಳನ್ನೂ ಕೈಗಾರಿಕೆ ಪದಾರ್ಥಗಳನ್ನೂ ಸಾಧ್ಯವಾಗುವ ಮಟ್ಟಿಗೂ ತರಿಸಿ ಪ್ರದರ್ಶನ ಮಾಡಲಾಗುತ್ತದೆ. ಇದಲ್ಲದೆ ಯಂತ್ರ ಉಪಕರಣಗಳ ವಿವರಣೆ, ಬೆಲೆ, ಉಪಯೋಗಾದಿಗಳನ್ನೆಲ್ಲಾ ಸ್ಪಷ್ಟವಾಗಿ ಕಸಬುದಾರರು ತಿಳಿದುಕೊಳ್ಳುವಂತೆ ಯೋಗ್ಯತಾಸಿದ್ಧಿಯನ್ನು ಪಡೆದಿರುವಂಥಾವರ ಮೂಲಕ ಇಂಗ್ಲಿಷಿನಲ್ಲೂ ಕನ್ನಡದಲ್ಲೂ ಉಪನ್ಯಾಸಗಳನ್ನು ಮಾಡಿಸಲಾಗುವುದು. ಇಷ್ಟೇ ಅಲ್ಲ, ಅದೇ ಸಮಯದಲ್ಲಿ ಗೋಕಾಯಿಕರಿ ಆದುಕೆಂದರೆ ಮುಂತಾದವುಗಳನ್ನು ತರಿಸಿಟ್ಟು ಪ್ರದರ್ಶನ ಮಾಡುವುದಕ್ಕೂ ಏರ್ಪಾಡು ಮಾಡಲ್ಪಡುತ್ತದೆ.

ಮೊದಲನೆಯ ಪ್ರದರ್ಶನವು ಇದೇ ೧೯೦೭ ನೇ ಇಸವಿಯ ನವರಾತ್ರಿ ಉತ್ಸವ ಕಾಲದಲ್ಲಿ ನಡೆಯಬೇಕಾಗಿರೋಣದರಿಂದ ಅದು ನೆರವೇರುವುದಕ್ಕೆ ಬೇಕಾದ ಸಲಕರಣಗಳನ್ನೆಲ್ಲಾ ಬೇಗ ಬೇಗನೆ ಒದಗಿಸಿ ಸಿದ್ಧಪಡಿಸಬೇಕಾಗಿದೆ. ಗವರ್ನಮೆಂಟಿನವರು ಇದಕ್ಕೋಸ್ಕರ ಒಂದು ಕಮಿಟಿಯನ್ನು ಏರ್ಪಾಡು ಮಾಡಿರುವರು. ಮೆಂಬರುಗಳ್ಯಾರೆಂದರೆ— ರೆವಿನ್ಯೂ ಕಮಿಷನರು (ಪ್ರೆಸಿಡೆಂಟರು), ಛೀಫ್ ಇಂಜನಿಯರವರು, ವ್ಯವಸಾಯದ ಅಧಿಕಾರಿ, ಫಾರೆಸ್ಟ್ ಕನ್ಸರ್ವೇಟರು, ಸರ್ಕಾರಿ ಉದ್ಯಾನವನಗಳ ಸೂಪರಿಂಟೆಂಡೆಂಟರು, ಮೈಸೂರು ಇಂಡಸ್ಟ್ರಿಯಲ್ ಸ್ಕೂಲ್ ಸೂಪರಿಂಟೆಂಡೆಂಟ್ ಮ॥ ಸುಬ್ಬಸ್ವಾಮಿ ಅಯ್ಯರವರು, ನೀರಿನ ಸರಬರಾಯಿ ಇಲಾಖಾ ಎಗ್ಜಿಕ್ಯೂಟಿವ್ ಇಂಜನಿಯರ್ ಮ॥ ವಿ. ರಂಗಸ್ವಾಮಿ ಅಯ್ಯಂಗಾರರು, ಮೈಸೂರು ಮತ್ತು ಬೆಂಗಳೂರು ಡೆಪ್ಯುಟಿ ಕಮಿಷನರುಗಳು. ಈ ಕಮಿಟಿಗೆ ರೆವಿನ್ಯೂ ಕಮಿಷನರ ಆಫೀಸ್ ಅಸಿಸ್ಟೆಂಟ್ ಕಮಿಷನರೊಬ್ಬರು ಸೆಕ್ರೆಟರಿಯಾಗಿ ನೇಮಕವಾಗಿರುವರೆ.

ಈ ಕಮಿಟಿಯವರು ಈ ವರುಷದ ಪ್ರದರ್ಶನಕ್ಕೆ ಮಾತ್ರವೇ ಅಲ್ಲ; ಪ್ರತಿ ವರುಷವೂ ರಾಜಧಾನಿಯಲ್ಲಿ ಇಂಥಾ ಪ್ರದರ್ಶನವನ್ನು ನಡಸುವುದಕ್ಕೆ ಅನುಕೂಲವಾಗುವಂತೆ ಒಂದು ಏರ್ಪಾಡನ್ನು ಆಲೋಚನೆಮಾಡಿ ಸೂಚಿಸಬೇಕಾಗಿದೆ.

ಪೆರೂನಾ ವಿಷಯದಲ್ಲಿ ಅತಿ ವಿಶೇಷವಾಗಿ ಹೇಳಲಾರವು.

38-I

ಈ ಸ್ತ್ರೀಯರು ಪ್ರಾಮುಖ್ಯವಾಗಿ ಪೆರೂನಾವನ್ನು ಸೇವಿಸುವುದಕ್ಕೆ ಮುಂಚೆ ಬಹಳ ಕಷ್ಟದೆಸೆಯಲ್ಲಿದ್ದೆವೆಂದು ಹೇಳುತ್ತಾರೆ.

ಅವರು ವಿಶೇಷ ದುರ್ಬಲರಾಗಿದ್ದರು; ಅವರ ಬಾಳು ಬಾಳಾಗಿರಲಿಲ್ಲ.

ಅವರ ಸ್ಥಿತಿಯೆಲ್ಲಾ ಈ ಒಂದೇ ಮಾತಿನಲ್ಲಿ ಮುಗಿದಿದೆ.

ಪೆರೂನಾ ಈ ಸ್ತ್ರೀಯರಿಗೆ ಇಂಥಾ ಅದ್ಭುತವನ್ನು ಮಾಡುವುದಾದರೆ ಅದು ನಿಮ್ಮ ದೇಹಕ್ಕೂ ಹಾಗೇ ಪರಿಣಮಿಸೀತು.

ಗೃಹಕೃತ್ಯದಲ್ಲಿ ಬೇಕಾಗುವ ಔಷಧಗಳ ಯೋಗ್ಯತಾಪಕ್ಷವನ್ನು ಯಜಮಾನಗಿತ್ತಿಯೊಬ್ಬಳೇ ತಿಳಿಯಬಲ್ಲಳು. ಸಂಸಾರದಲ್ಲಿ ಪೆರೂನಾ ಎಷ್ಟು ಪ್ರಯೋಜನವಾದದ್ದೋ ಆಕೆಗೇನೇ ಗೊತ್ತು. ಪೆರೂನಾವನ್ನು ಜನರು ಪ್ರೀತಿಸುವುದು ಮನೆಯಜಮಾನಗಿತ್ತಿ ಕೊಟ್ಟಿರುವ ಶಿಫಾರಸಿನಿಂದಲೇ.

MRS. E. T. GADDIS

MRS. A. E. STOUFFER

MRS. CAROLINE SUNDHEIMER

ಮೊದಲಿಗಿಂತ ಹೆಚ್ಚು ಕಾಯಪುಷ್ಟಿ.

ಮಿಸೆಸ್ ಕ್ಯಾರೊಲೀನ್ ಸಂಢೀಮರ್, ಕ್ಲಾರ್ಕ್ಸ್, ಟಾ: ಎಂಬಾಕೆ ಬರೆಯುವುದು:—

"ನಾನು ಈಗ ಚೆನ್ನಾಗಿದ್ದೇನೆ, ಮತ್ತೆ ಕೆಲಸಮಾಡಬಲ್ಲೆನು, ಮೊದಲಿಗಿಂತ ಈಗ ಬಲವಾಗಿದ್ದೇನೆ.

"ನೀವು ಹೇಳಿದ ಬುದ್ಧಿಮಾತಿಗೆ ನಿಮ್ಮನ್ನು ಬಹಳ ವಂದಿಸುತ್ತೇನೆ. ನನ್ನ ಕೈಲಾದವರಿಗೆಲ್ಲಾ ನಿಮ್ಮ ಔಷಧವನ್ನೇ ಸೇವಿಸುವಂತೆ ಪ್ರೇರೇಪಿಸುತ್ತೇನೆ."

ಪೆರೂನಾ ಆರೋಗ್ಯಕೊಟ್ಟಿತು.

ಮಿಸೆಸ್ ಎ. ಇ. ಸ್ಟೌಫರ್, ಕ್ಯಾಪಿಯೋಮ, ಕ್ಯಾನ್ಸಸ್, ಎಂಬಾಕೆ ಬರೆಯುವುದು:—

"ಪೆರೂನಾ ನನಗೆ ಆರೋಗವನ್ನೂ ಶಕ್ತಿಯನ್ನೂ ಕೊಟ್ಟಿದೆ. ಹೆಂಗಸರಿಗಾಗಿ ಮಾಡಿದ ಔಷಧಗಳಲ್ಲೆಲ್ಲಾ ಇದೇ ಉತ್ತಮವಾದದ್ದು. ಹೆಂಗಸಿನಲ್ಲಿ ಅಂಥಾ ಬದಲಾವಣೆಯಾದ್ದನ್ನು ಎಂದಿಗೂ ನೋಡಲಿಲ್ಲವೆಂದು ನನ್ನ ಸ್ನೇಹಿತರು ಹೇಳುತ್ತಾರೆ. ನಾನು ಪ್ರತಿ ಒಬ್ಬರ ಸಂಗಡಲೂ ಪೆರೂನಾವನ್ನು ಕುರಿತು ಮಾತನಾಡುತ್ತೇನೆ. ಅದರ ವಿಷಯವಾಗಿ ಒಂಟಾ ಸೊಗಳಬಲ್ಲೆನು."

ಮಿಸೆಸ್ ಸ್ಟೌಫರ್ ಒಂದು ಕಾಗದದಲ್ಲಿ ಹೀಗೆ ಬರೆದಿದ್ದಾಳೆ: "ನನಗೆ ವಿಷಮಶೀತಜ್ವರವಿತ್ತು. ಶಕ್ತಿಬರುವುದಕ್ಕೆ ಪೆರೂನಾವನ್ನು ತೆಗೆದುಕೊಂಡೆ. ನಾನು ನಿಜವಾದ ಒಳ್ಳೆ ಆರೋಗ್ಯವನ್ನು ಪಡೆದಿದ್ದೇನೆ."

ಹೆಂಗಸರಿಗೆ ಪರಿಹಾರ.

ಡಾಕ್ಟರ್ ಹಾರ್ಟ್‌ಮನ್ನರವರಿಗೆ ಹೆಂಗಸರು ಬರೆದ ಇ ಅಭಿಪ್ರಾಯವುಳ್ಳ ಸಾವಿರಾರು ಕಾಗದಗಳು ನಮ್ಮ ಬಳಿಯಿತ್ತವೆಂದು ಧಾರಾಳವಾಗಿ ಹೇಳಬಲ್ಲೆವು:—"ಹೆಂಗಸಿನಲ್ಲಿ ಅಂಥಾ ಬದಲಾವಣೆಯಾದದ್ದನ್ನು ಎಂದಿಗೂ ನೋಡಲಿಲ್ಲವೆಂದು ನನ್ನ ಸ್ನೇಹಿತರು ಹೇಳುತ್ತಾರೆ." ನಾವು ಇತರ ಹೆಂಗಸರಿಗೆ ಈ ಸಂಗತಿಯನ್ನು ತಿಳಿಸಿ ಅವರಿಗೆ ಪರಿಹಾರವನ್ನು ತೋರಿಸಲೆಂದು ತುಂಬಾ ಅಭಿಲಾಷೆಪಟ್ಟು ಅನೇಕ ಸ್ತ್ರೀಯರು ನಮಗೆ ಆಗಿಂದಾಗ್ಗೆ ಅನೇಕಾವರ್ತಿ ಬರೆಯುತ್ತಿದ್ದಾರೆ.

ಪೆರೂನಾ ಸ್ತ್ರೀಯರಿಗೆ ಬಹಳ ದೊಡ್ಡ ಔಷಧವಾಗಿದೆ. ಶರೀರದ ಹೊರಭಾಗವನ್ನು ನೀರು ಹ್ಯಾಗೆ ಶುದ್ಧಿಮಾಡುವುದೋ ಅದೇ ಪ್ರಕಾರ ಇದು ಒಳಭಾಗವನ್ನು ತೊಳೆದು ನಿರ್ಮಲವಾಗಿ ಮಾಡುತ್ತದೆ.

ಮಿಸೆಸ್ ಇ. ಟಿ. ಗಡ್ಡಿಸ್, ಮೆರಿಯನ್, ಎನ್. ಸಿ. ಎಂಬಾಕೆ ಬರೆಯುವುದು:—

"ಪೆರೂನಾ ಸೇವನೆಯನ್ನು ಪ್ರಾರಂಭಿಸುವುದಕ್ಕೆ ಮೊದಲು ನಾನು ಕಷ್ಟಕೆಲಸವ್ಯಾವುದನ್ನು ಮಾಡಿದರೂ ನನಗೆ ಬಹಳ ಬಾಧೆಯುಂಟಾಗುತ್ತಿತ್ತು. ನಾನು ಪೆರೂನಾ ಮತ್ತು ಮನಾಲಿನ್‌ಗಳನ್ನು ಸೇವಿಸಿದೆನು. ಇತರ ಎಲ್ಲಾ ಔಷಧಗಳಿಗಿಂತಲೂ ಅವು ನನಗೆ ತುಂಬಾ ಗುಣಕೊಟ್ಟವೆಂದು ಸಂತೋಷದಿಂದ ಹೇಳಬಲ್ಲೆನು. ಈಗ ನಾನು ಎಂದಿನಂತೆ ಬಹಳ ಚೆನ್ನಾಗಿರುತ್ತೇನೆ; ನನ್ನ ಕೆಲಸಗಳನ್ನೆಲ್ಲಾ ನಾನೇ ಮಾಡಿಕೊಳ್ಳುತ್ತೇನೆ; ನನಗೆ ಸ್ವಲ್ಪವೂ ಬಾಧೆ ಇಲ್ಲ. ಪೆರೂನಾ ಸ್ತ್ರೀಜಾತಿಗೆಲ್ಲಾ ದೊಡ್ಡ ಔಷಧವಾಗಿದೆ ಎಂದು ನೆನಸುತ್ತೇನೆ.

ಕೃತಜ್ಞತಾ ಸ್ತ್ರೀಯರುಗಳಿಂದ.

"ನನಗೆ ಮುಟ್ಟಾಗುವಾಗ್ಗೆ ಬಹಳ ಬಾಧೆಯಾಗುತ್ತಿತ್ತು. ನಿಮ್ಮ ಹೇಳಿಕೆಯ ಪ್ರಕಾರ ಪೆರೂನಾ ತೆಗೆದುಕೊಂಡೆನು. ಈಗ ನಾನು ಸೌಖ್ಯವಾಗಿದ್ದೇನೆ" ಎಂದು ಮಿಸೆಸ್ ಜೇಂಸ್ ಐವಿಮ, ಗ್ರೇಪ್, ಮಿಚ್, ಈಕೆ ಬರೆದಿದ್ದಾಳೆ.

"ನಾವು ಕೆಲವು ಕಾಲದಿಂದ ಪೆರೂನಾ ಉಪಯೋಗಿಸುತ್ತಿದ್ದೇವೆ. ಮನುಷ್ಯವರ್ಗಕ್ಕೆ ಪ್ರಾಪ್ತವಾಗುವ 'ಒಂದು ಸಾವಿರದ ಒಂದು' ಆಲಸ್ಯಗಳಿಗೆ ಅದನ್ನು ಉಪಯೋಗಿಸಬಹುದೆಂದು ಹೇಳುವುದರಲ್ಲಿ ನಾವು ಸಂದೇಹಪಡುವುದಿಲ್ಲ. ಅದನ್ನು ಪ್ರತಿ ಒಂದು ಮನೆಯಲ್ಲೂ ಇಟ್ಟೇ ಇರಬೇಕು. ಅದರಿಂದ ನಾನಾತರದ ಶೀತರೋಗಗಳು ಖಂಡಿತವಾಗಿ ನಾಶಿಯಾಗುವವು. ಗಸಿರೋಗವನ್ನು ತಡೆದು ವಾಸಿಮಾಡುವದಕ್ಕೆ ಇದು ಮಹಾ ಉತ್ಕೃಷ್ಟವಾದ ಔಷಧ. ಅನುಭವದಿಂದ ಹೇಳುವುದಾದರೆ ಪೆರೂನಾ ಎಂಬುವದು ಸ್ತ್ರೀಯರ ದುರ್ಬಲವನ್ನು ಹೋಗಲಾಡಿಸುವುದಕ್ಕೆ ಸರಿಯಾದ ಪರಿಹಾರವು.

"ಸ್ವಂತ ಅನುಭವದಿಂದಲೂ ಇತರ ಅನೇಕರ ಅನುಭವದ ಹೇಳಿಕೆಯಿಂದಲೂ ಈ ಔಷಧವನ್ನು ವಿಶೇಷವಾಗಿ ಕಷ್ಟಪಡುವ ಹೆಂಗಸರಿಗೆ ಉಪಯೋಗಿಸಬೇಕೆಂದು ಸಂಶಯವಿಲ್ಲದೆ ಹೇಳುತ್ತೇನೆ" ಎಂದು ಮಿಸೆಸ್ ಎಂ. ಎಚ್. ಜೋನ್ಸ್, ಬರ್ನಿಂಗ್ ಸ್ಪ್ರಿಂಗ್ಸ್, ಕೈ, ಎಂಬಾಕೆ ಬರೆದಿದ್ದಾಳೆ.

ಗೃಷ್ಟದ ರೋಗಗಳಿಗೆ ಪೆರೂನಾ.

"ಶೀತನೆಗಡಿಯಿಂದ ನಾನು ಅನೇಕ ವರುಷಗಳು ನರಳಿದೆನು. ಆದರೆ ಪೆರೂನಾ ತೆಗೆದುಕೊಂಡಾರಭ್ಯ ನನಗೆ ಶಕ್ತಿ ಬಂತು; ಆರೋಗ್ಯವಾದೆನು. ನನ್ನ ಜೀವಮಾನವು ಬದಲಾಗುವ ಸಂದರ್ಭದಲ್ಲಿ ಪೆರೂನಾ ಮತ್ತು ಮನಾಲಿನ್‌ಗಳನ್ನು ಸೇವಿಸಿದ್ದರಿಂದ ನನ್ನ ಎಲ್ಲಾ ತರದ ಆಲಸ್ಯಗಳನ್ನೂ ಬಹಳ ಚೆನ್ನಾಗಿ ನಿವಾರಣೆ ಮಾಡಿದ್ದಕ್ಕಾಗಿ ನಿಮ್ಮ ಪ್ರಯೋಜನಕರವಾದ ಔಷಧವನ್ನು ಕೊಂಡಾಡುತ್ತೇನೆ" ಎಂದು ಮಿಸೆಸ್ ಮೆಟಿಲ್ಡಾ ರಿಕ್ಟರ್, ದಾನಿಫನ್, ನೆಬ್, ಎಂಬಾಕೆ ಬರೆಯುತ್ತಾಳೆ.

"ನಾನು ಹಿಟ್ಟೊಟ್ಟೆಯ ಶೀತನೆಗಡಿಯಿಂದ ಕಷ್ಟಪಡುತ್ತಿದ್ದು ಡಾಕ್ಟರ್ ಹಾರ್ಟ್‌ಮನ್ನರಿಗೆ ಬರೆದೆನು. ಅವರು ಹೇಳಿದಂತೆ ಔಷಧಸೇವನೆ ಮಾಡಿದ ವೇಳೆ ಈ ಬಹು ಕಷ್ಟಕರವಾದ ರೋಗವು ನನಗೆ ವಾಸಿಯಾಯಿತು. ಅದಕ್ಕಾಗಿ ನಿಮ್ಮನ್ನು ವಂದಿಸುತ್ತೇನೆ. ನನಗೆ ಶರೀರದಲ್ಲಿ ಈಗಿರುವಷ್ಟು ಬಲಾವಿಕೆ ಹಿಂದೆ ಯಾವಾಗಲೂ ಇರಲಿಲ್ಲ" ಎಂದು ಮಿಸೆಸ್ ಎಟ್ಟಾ ಬೂಕರ್, ಡಂಡೂರ್ನ್, ಸಾಸ್ಕ್, ಎನ್. ಡಬ್ಲಿಯು. ಟಿ., ಕ್ಯಾನ್, ಎಂಬಾಕೆ ಬರೆದಿರುತ್ತಾಳೆ.

ಸೇವನೆ ಮುಂತಾದ್ದಕ್ಕೆ ಪ್ರತಿ ಬಾಟ್ಲಿ ಸಂಗಡ ಕಳಿಸುವ ನೋಟೀಸನ್ನು ಓದಿಕೊಳ್ಳಿ.

ಎಲ್ಲಾ ಔಷಧ ವ್ಯಾಪಾರಗಾರರಲ್ಲೂ ಪೆರೂನಾ ವಿಕರಿಯಾಗುತ್ತಿದೆ. ಒಂದು ಬಾಟ್ಲಿಗೆ ರೂ. ೩॥ ; ಆರು ಬಾಟ್ಲಿಗೆ ರೂ. ೧೮॥.

ಈ ಔಷಧ ಸಿಕ್ಕುವ ಸ್ಥಳಗಳು:—

(೧) ಹಿಂಚ್‌ಕಾಕ್ ಅಂಡ್ ಸನ್ಸ್, ಬೆಂಗಳೂರು.

(೨) ಇಂಗ್ಲಿಷ್ ಡ್ರಗ್ ಕಂಪನಿ, ೩೯೪ ಮಿಂಟ್ ಬೀದಿ, ಮದರಾಸ್.

ಮೈಸೂರು ಸೀಮೆಯಲ್ಲಿ ಪ್ಲೇಗಿನಸ್ಥಿತಿ.

22—3—1907 ರಿಂದ 29—3—1907 ರ ವರೆಗೆ

ಸ್ಥಳ.	ಪ್ಲೇಗ್ ತಗಲಿದ್ದು.	ಸತ್ತದ್ದು.	ಹೋದ ವಾರ ಈ ವಾರ ಸಂಖ್ಯೆ	
ಬೆಂಗಳೂರು ಪಟ್ಟಣ	24	17	9	
ಮೈಸೂರು ,,	5	5	0	
ಬೆಂಗಳೂರು ಡಿಸ್ಟ್ರಿಕ್ಟು	15	8	1	
ಮೈಸೂರು ,,	0	0	0	
ಕೋಲಾರ್ ,,	0	0	2	
ಕೋಲಾರ್ ಚಿನ್ನದ ಗಣಿಗಳು	2	2	5	
ತುಮಕೂರು ಡಿಸ್ಟ್ರಿಕ್ಟು	0	0	0	
ಹಾಸನ ,,	0	0	0	
ಚಿತ್ರದುರ್ಗ ,,	0	0	2	
ಕಡೂರ್ ,,	4	4	1	
ಶಿವಮೊಗ್ಗ ,,	0	0	7	
ಜುಮ್ಲಾ	50	36	27	8

ಶಾಲಿವಾಹನ ಶಕ ವರುಷಂಗಳು ೧೮೨೯ ನೇ ಪ್ಲವಂಗನಾಮ ಸಂವತ್ಸರದ ಅಧಿಕ ಚೈತ್ರ ಬಹುಳ ಚತುರ್ದಶಿ ಗುರುವಾರದಿಂದ ಅಧಿಕ ನಿಜ ಚೈತ್ರ ಶುದ್ಧ ಪಂಚಮಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ. ೧೯೦೭ ನೇ ಇಸವಿ ಏಪ್ರಿಲ್.

ತಾ.	ವಾರ.	ತಿಥಿ.	ಘಳಿಗೆ.	ನಕ್ಷತ್ರ.	ಘಳಿಗೆ.	ತೇದಿ ಸಂಗು ಮಾ
11	ಗುರು ‡	ಚತುರ್ದಶಿ	44-12	ಉ॥ಭಾ	45 48	29
12	ಶುಕ್ರ ¶	ಅಮಾವಾ	43-44	ರೇ	47-42	30
13	ಶನಿವಾ *	ಪಾಡ್ಯ	44-32	ಅ	49-20	1
14	ರವಿವಾ †	ಬಿದಿಗೆ	46-30	ಭ	53-0	2
15	ಚಂದ್ರ ..	ತದಿಗೆ	50-2	ಕೃ	57-52	3
16	ಕುಜ	ಚೌತಿ	53-50	ರೋ	60-0	4
17	ಬುಧ ;;	ಪಂಚಮಿ	58-36	ರೋ	3-32	5

‡ ಮಾಸಶಿವರಾತ್ರಿ. ¶ ಸರ್ವತ್ರ ಅಮಾವಾಸ್ಯಾ, ವಿಷ್ಣುತ್ರಿಗತ ಯೋಗ. * ಸೌರಸಂವತ್ಸರಾರಂಭ. † ಚಂದ್ರೋದಯ. .. ದೋಲಾಗೌರೀವ್ರತಂ, ಸೌಭಾಗ್ಯ ಗೌರೀವ್ರತಂ. ;; ಮತ್ಸ್ಯಜಯಂತಿ, ಲಕ್ಷ್ಮೀ ಪಂಚಮಿ

ಪೇಟೇ ಧಾರಣೆ.

ದಿನಸಿ.	ಮೈಸೂರು.	ಬೆಂಗಳೂರು.
ಕಡ್ಡೀ ಅಕ್ಕಿ ಪಲ್ಲ ೧ಕ್ಕೆ ..	ರೂ.. ೧೨-೮-೦	೧೩-೪-೦
ಕೆಂಬೂತಿ ಅಕ್ಕಿ ಅವಲ್ ..	೧೨-೮-೦	೧೪-೦-೦
,, ದುಯಂ ..	೧೨-೧-೦	೧೩-೦-೦
ಜವಾಪ್ರಾಣಿ ಅಕ್ಕಿ ..	೧೨-೮-೦	೧೪-೮-೦
ಸಣ್ಣಕ್ಕಿ ಅವಲ್ ..	೧೫-೦-೦	೧೪-೪-೦
,, ದುಯಂ ..	೧೪-೮-೦	೧೩-೪-೦
ತೊಗರೀ ಬೇಳೆ ಪಲ್ಲ ೧ಕ್ಕೆ ..	೧೩-೮-೦	೧೨-೮-೦
,, ದುಯಂ ..	೧೨-೧೨-೦	೧೨-೦-೦
ದ್ವೈ ರಾಗಿ ಪಲ್ಲ ೧ಕ್ಕೆ ..	೬-೪-೦	೬-೦-೦
ಕಾರ್ರಾಗಿ ..	೫-೮-೦	೫-೧೪-೦
ಜೋಳ ..	೭-೮-೦	೮-೧೨-೦
ಹಲಸಂದೆ ಪಲ್ಲ ೧ಕ್ಕೆ ..	೧೧-೧೨-೦	೧೧-೪-೦
ಬಿಳೀ ಅವರೆ ..	೮-೪-೦	೭-೮-೦
ಹೆಸರು ..	೧೩-೮-೦	೯-೧೨-೦
ಉದ್ದು ..	೧೧-೮-೦	೧೦-೮-೦
ಕಡಲೆ ..	೧೦-೮-೦	೯-೧೨-೦
ಎಳ್ಳು ಸೆ. ೧೨೭ ಕ್ಕೆ ..	೨೨-೮-೦	೨೨-೮-೦
ಹುರುಳಿ ..	೬-೮-೦	೭-೪-೦
ಹರಳು ೧೨೭ ಸೇರಿಗೆ ..	೧೩-೦-೦	೧೬-೮-೦
ಸೀಗೇಕಾಯಿ ಮಣ ೧ಕ್ಕೆ ..	೨-೨-೦	೦-೧೨-೦
ಮೆಣಸಿನಕಾಯಿ ..	೨-೧೨-೦	೨-೧೨-೦
,, ದುಯಂ ..	೨-೮-೦	೨-೪-೦
ಬೆಲ್ಲ ದೊಡ್ಡ ಅಚ್ಚು ..	೩-೮-೦	ಮು ೧-೭-೦
ಒಳ್ಳೆಣ್ಣೆ ಮಣ ೧ಕ್ಕೆ ..	೫-೮-೦	೫-೬-೦
ಹರಳೆಣ್ಣೆ ,, ..	೬-೦-೦	೫-೨-೦
ಕೊತ್ತುಂಬರಿ ಪಲ್ಲ ೧ಕ್ಕೆ ..	೬-೮-೦	೭-೨-೦
ಉಪ್ಪು ,, ..	೫-೬-೦	೬-೧೦-೦
ಹುಣಸೇ ಹಣ್ಣು ..	೧-೪-೦	೦-೨-೦
,, ಹಳೇದು ..	೦-೧೪-೦	೦-೧೫-೦
ತುಪ್ಪ ಮಣ ೧ಕ್ಕೆ ..	೧೫-೦-೦	೧೩-೮-೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ ..	೫-೦-೦	೪-೦-೦
ತೆಂಗಿನಕಾಯಿ ೧೦೦ ಕ್ಕೆ ..	೬-೮-೦	೬-೮-೦
ಅಳಲೇಕಾಯಿ ಮಣ ೧ಕ್ಕೆ ..	೧-೦-೦	೧-೦-೦
ಅಂಟ್ವಾಳದ ಕಾಯಿ ಮಣ ೧ಕ್ಕೆ ..	೦-೧೨-೦	೦-೧೦-೦
ಚಿನ್ನ (ಪೌ॥) ಕೆಂಪು ..	೧೫-೪-೦	೧೫-೭-೦
,, ,, ಪಸಿಮೆ ..	೧೫-೧೦-೦	೧೫-೧೦-೦
,, ,, ಗಟ್ಟಿ ತೊಲ ೧ಕ್ಕೆ ..	೨೩-೧೨-೦	೨೪-೩-೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ ..	೮೫-೦-೦	೮೪-೦-೦

Printed and Published by the Rev. E. W. Thompson, M. A., Proprietor and Manager, Wesleyan Mission Press, Mysore. 11/4/1907.

REGISTERED M. 20.

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೦ ಮೈಸೂರು—ಸನ್ ೧೯೦೭ ನೇ ಇಸವಿ ಏಪ್ರಿಲ್ ತಾರೀಖು ೧೮ ನೇ ಗುರುವಾರ. ಸಂಚಿಕೆ ೪೬

WILLIAM & CO., BOMBAY.

ವಿಲಿಯಂ ಮತ್ತು ಕಂಪೆನಿ, ಪೋರ್ಟು, ಮುಂಬಯಿ.

ಅಮೃತಾಂಜನ

27-8

ಬಾಟ್ಲಿ ಒಂದಕ್ಕೆ ಕಿಮ್ಮತ್ತು ೮ ಆಣೆ. ವಿ. ಪಿ. ೧೨ ಆಣೆ.

ಅಮೃತಾಂಜನ—ಸುಖಾಂಜನ.
ಅಮೃತಾಂಜನ—ಸಂಜೀವನ.
ಅಮೃತಾಂಜನ—ಪರಮಾಂಜನ.
ಅಮೃತಾಂಜನ—ದಿವ್ಯಾಂಜನ
ಅಮೃತಾಂಜನ—ಶೀತಭಂಜನಿ
ಅಮೃತಾಂಜನ—ವ್ಯಾಧಿಭಂಜನವಿಮರ್ದಿನಿ

SAFE ★ EFFICACIOUS ★ SURE ★ PILLS ★ OINTMENTS ★ POWDERS
WILLIAM & CO. BOMBAY

ಅಮೃತಾಂಜನ—ಅಪೂರ್ವದರ್ಶಿನಿ
ಅಮೃತಾಂಜನ—ತಕ್ಷಣ ಪರಿಹಾರಿಣಿ.
ಅಮೃತಾಂಜನ—ಸಂಧಿವಾತಕ್ಕೆ.
ಅಮೃತಾಂಜನ—ತಲೆನೋವಿಗೆ.
ಅಮೃತಾಂಜನ—ಜಖಮ್ ಮತ್ತು ಘಾಯಕ್ಕೆ
ಅಮೃತಾಂಜನ—ಗಂಟಲನೋವಿಗೆ.

ಶೋಷೇಧನ ವಾತ, ಎದೆನೋವು, ಗಂಟಲನೋವು, ಸಂಧಿವಾತ, ತಲೆನೋವು, ಶಿರೋಭಾರ, ಈ ಎಲ್ಲಾ ತರದ ರೋಗಗಳಿಗೆ ಅಮೃತಾಂಜನ ಸ್ವಮಂಚ ಔಷಧವಾಗಿದೆ ಇದನ್ನು ತರಿಸಿ ಮನೆಯಲ್ಲಿ ಸದಾಕಾಲ ಇಟ್ಟರೆ, ಮೇಲೆ ಹೇಳಿದ ಯಾವತರದ ರೋಗಗಳೂ ಎಡೆ ಸಿಕ್ಕುವದಿಲ್ಲ. ಅಮೃತಾಂಜನದಿಂದ ಗುಣವು ಕಂಡುಬರದಿದ್ದರೆ ಹಣ ಹಿಂತಿರುಗಿ ಕೊಡಲ್ಪಡುವದು

ಗಜಕರ್ಣದ ಮುಲಾಮು ಡಬ್ಬಿ ಒಂದಕ್ಕೆ ೬ ಆಣೆ, ವಿ. ಪಿ. ೧೦ ಆಣೆ.—ಇದನ್ನು ಹಾಗಿಸುವದರಿಂದ ಎಲ್ಲಾ ತರದ ಕಜ್ಜಿ ಹೋಗುವದು ಮೂರು ಸಾರಿ ಹಾಗಿಸುವದರೊಳಗೆ ಗಜಕರ್ಣವು ಹೋಗುವದು ಒಂದು ಸಾರಿ ಪರೀಕ್ಷಿಸಿ ನೋಡಿರಿ ಕ್ರಯ ಕಮ್ಮಿ, ಗುಣ ಹೆಚ್ಚು ಇದನ್ನು ಹಚ್ಚಿದಲ್ಲಿ ಉರಿ ಬರುವದಿಲ್ಲ, ಚರ್ಮ ಕಪ್ಪಾಗುವದಿಲ್ಲ. ಇದರಿಂದ ಗುಣವು ಕಂಡುಬರದಿದ್ದರೆ ಹಣ ಮರಳಿ ಕೊಡಲ್ಪಡುವದು

ಕೇಶವರ್ಧಿನೀ ತೈಲ—ಇದು ತಲೆಯ ಮಿದುಳನ್ನು ತಂಪುಮಾಡಿ ಕೂದಲನ್ನು ತೆಗೆದು ಕೂದಲು ಬೆಳೆಸುತ್ತದೆ. ಇದಕ್ಕೆ ಚಲೋ ವಾಸನೆ ಬರುತ್ತದೆ ಮೂರು ಔನ್ಸು ಬಾಟ್ಲಿಗೆ ೧-೦-೦
ಕಜ್ಜಿ ಮುಲಾಮು—ಇದು ಅತಿಶಯ ಅಗ್ಗವೂ ಗುಣದಾಯಕವೂ ಆಗಿರುತ್ತದೆ. ೦-೩-೨
ಕಫಹಾರಿ—ಕೆಮ್ಮು, ದಮ್ಮು, ಕ್ಷಯ, ಕೊರಳಿನಲ್ಲಿ ಕಫ ಮುಂತಾದ್ದಕ್ಕೆ ಇದು ಉತ್ತಮವಾದದ್ದು, ಬಾಟ್ಲಿ ೧ಕ್ಕೆ. ೧-೪-೦
ಜೀರ್ಣರಸಾಯನ—ಹೊಟ್ಟೆಯಲ್ಲಿ ಹಸಿವೆ ಆಗಲಿಕ್ಕೂ ನಾಲಿಗೆಗೆ ರುಚಿ ಬರಲಿಕ್ಕೂ ಉತ್ತಮವಾದದ್ದು .. ೧-೬-೦
ಜ್ವರಹಾರಿ—ಎಲ್ಲಾ ತರದ ಜ್ವರಗಳ ಮೇಲೆ ಈ ಔಷಧವು ಚಲೋದಾದದ್ದು ೦-೧೨-೦
ಸುಂದರೀ ತೈಲ—ಈ ತೈಲವನ್ನು ನಿರಂತರವಾಗಿ ಮೋರೆಯ ಮೇಲೆ ಹಾಗಿಸುವದರಿಂದ ಮೋರೆಯ ಮೇಲೆ ಇರುವ ಕಪ್ಪು ಕಲೆಗಳನ್ನೂ ಕಪ್ಪಾದ ಕಲಂಕಗಳನ್ನೂ ತೆಗೆದು ಚರ್ಮವನ್ನು ಮೃದುಮಾಡಿ ಚಲುವಿಕೆಯನ್ನು ಕೊಡುತ್ತದೆ ಹೆಂಗಸರಿಗೂ ಗಂಡಸರಿಗೂ ಉತ್ತಮವಾದದ್ದು ೦-೮-೦
ದಂತಮಂಜನ—ಹಲ್ಲು ಸ್ವಚ್ಛವಾಗುತ್ತೆ, ಘಟ್ಟಿಯಾಗುತ್ತೆ, ವಾಸನೆಯನ್ನೂ ರಕ್ತವನ್ನೂ ನಿಲ್ಲಿಸುತ್ತದೆ ಕ್ರಯ ಬಹಳ ಕಮ್ಮಿ ೦-೨-೦
ನೇತ್ರಾಂಜನ ೪ ಆಣೆ. ವಜ್ರಗುಟಿಕ ೧ ರೂಪಾಯಿ. ಕುಸುಮಾರಿ ಗುಟಿಕ ೧ ರೂಪಾಯಿ. ಜಂತುನಾಶಕಾರಿ ೮ ಆಣೆ ಕಫನಾಶಕ ಚೂರ್ಣ ೮ ಆಣೆ ಚೇಳು ಕಡಿತದ ಮದ್ದು ೮ ಆಣೆ ರೋಮನಾಶಿ ೮ ಆಣೆ. ಕಸ್ತೂರಿಮಾತ್ರೆ ೧೦ ಆಣೆ. ತಾಂಬೂಲಗುಟಿಕ ೮ ಆಣೆ

ಎಲ್ಲಾ ತರದ ಔಷಧಗಳು ಇರುವದರಿಂದ ಕೆಟಲಾಗು ಬೇಕಾದವರು ಬರೆದು ತರಿಸಿಕೊಳ್ಳಬಹುದು.

ವಿಲಿಯಂ ಮತ್ತು ಕಂಪೆನಿ, ೧೬. ಓಕ್ ಲೇನ್, ಪೋರ್ಟು, ಮುಂಬಯಿ.

ಕೊಡಗು ದೇಶದ ಶ್ರೇಷ್ಠವಾದ ಉತ್ಕೃಷ್ಟ ಕಾಫಿಯು.

ಹುರಿಯದೆ ಇರುವದು ಅಥವಾ ಆಗತಾನೆ ಹುರಿದದು.
ಹದಮಾಡಿದ ಸ್ಥಳದಿಂದಲೆ ನೆಟ್ಟಗೆ ರವಾನಿಸಲ್ಪಡುವದು.

16 21

ವ್ಯಾಪಾರದ C B C ಹೆಗ್ಗುರ್ತು

ಕಾಡುಕೋಣದ ತಲೆಯ ಮುದ್ರೆ ಇದೆ.

ಸಂಪೂರ್ಣವಾಗಿ ಯಂತ್ರದಿಂದಲೆ ಸಿದ್ಧಪಡಿಸಿದ್ದು. ಹೆಗ್ಗುರ್ತು ಉಳ್ಳ ವಿಳಾಸದ ಚೀಟಿ ಸುತ್ತಿಲ್ಲದಿರುವವು ಸ್ವಚ್ಛವಾದವುಗಳಲ್ಲ. ಅವು ನಮ್ಮದಲ್ಲ. ಏಜಂಟರುಗಳು ಬೇಕು. ಇಂಥವರಿಗೆ ಅಲಾಯದ ದರ ಬರೆಯುವವರು ದಯವಿಟ್ಟು ಈ ಪತ್ರಿಕೆಯ ಹೆಸರನ್ನು ಸೂಚಿಸಿ.

ವಿಳಾಸ.—ಮ್ಯಾನೇಜರ್, ಮ್ಯಾಥಿಸನ್ಸ್ ಕಾಫಿ ವರ್ಕ್ಸ್, ಹುಣಸೂರು.

ಜ್ವರಹರಿ

15-11



ಇದು ಸಾಧಾರಣ ಜ್ವರ, ಹಳೇಜ್ವರ, ಮೋರೇಜ್ವರ, ಪಿತ್ಥಜ್ವರ ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನು ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಸರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್. ಟಿ. ವೆಂಕಟಪತಿ ಅಯ್ಯಂಗಾರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಔನ್ಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨೦ ಔನ್ಸಿನ ಸೀಸೆಯನ್ನು ವಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ —ಸೀಸೆ ೧ ಕ್ಕೆ ೮ ಆಣೆ, ೧ ರೂ., ೧—೮ ರೂ., ಮತ್ತು ೨—೧೨ ರೂ., ೧೧ ರೂ.; ಇನ್ನೂರರ ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

ಓಮಂಕರ್ಪೂರ.

Omum Carpoor

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳ ಒಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ. ಸೀಸೆಗಳಲ್ಲಿ ಸಿಕ್ಕುವದು.

ಕಡಪ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆಸ್ರಿಯ ಓಮಂ ಕರ್ಪೂರವನ್ನು ನಾನೂ ನನ್ನ ಡಾಕ್ಟರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಆಪರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂದು ಬರೆದಿದ್ದಾರೆ.

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ:—

ಹೆಸ್ರಿಯವರ "ಈಸ್ಟ್ ಇಂಡಿಯನ್ ಔಷಧಗಳ ಕಂಪೆನಿ,
ಸೆಕೆಂಡ್ ಲೇನ್ ಬೀಚ್, ಮದ್ರಾಸ್

ಮುಂಬಯಿ ವ್ಯಾಪಾರಮಾಡಲಿಚ್ಛೈಸುವವರು.

85-46

ಮುಂಬಯಿಯಲ್ಲಿ ಪ್ರತಿಯೊಂದು ಮಾಲಿನ ಥೋಕ ಅಳತೆ ಮತ್ತು ವರ್ಣನೆ ಹಾಗೂ ಅನೇಕ ಉಪಯುಕ್ತ ಮಾಹಿತಿಯಿರುವ ಪುಸ್ತಕ.—ಕ್ರಯ ೧೦ ಆಣೆ ವಿ. ಪಿ. ಯಿಂದ ಕಳುಹಿಸುವೆವು. ಖರ್ಚು ಬೇರೆ ಬುಕ್ಕು ಸೇಲರರಿಗೆ ಯೋಗ್ಯ ಕಮಿಶನ್ ದೊರೆಯುವದು. ಮತ್ತು ಲಿಂಗಾಯತ ಧರ್ಮಸಂಬಂಧ ವಿರಕ್ತಿ ಕ್ರಿಯಾಲಕ್ಷಣವೆಂಬುವ ಕನ್ನಡ ಪುಸ್ತಕ—ನಾಲ್ಕು ಆಣೆ. ಅಕ್ಷರದಿಂದ ಬರೆಯಿರಿ. ಪತ್ತಾ ಚನ್ನಬಸಪ್ಪ ಮಲ್ಲಪ್ಪ ವಾರದ ಕಂಪನಿ, ಮುಂಬಯಿ.

ನೋಡಿರಿ.

ಯೆಳ್ಳೆ ಕೆಂಪು ಮತ್ತು ತಾಜಾ ಕಪ್ಪು

ಹಾಸಲ್ ಊಳ್ದಾರ.

125 16

೩,೦೦೦ ಜಾಸನದ ಬೋಟ ಹೊರೆಯುವ
ಸ್ಟೀಲಿಯರ್ ವ್ಹೂಲ್ದಾರ ಮಾತ್ರ

	ರೂ.	ಆ	ಪೈ
ಬೋಟ ಬಿಗುವ ವ್ಹೂಲ್ದಾರದ ಕ್ರಯ	೦	೮	೦
ತೋರಿಯ ಒಂದು ಬಂಡಲ್ ವಾರದ ಕ್ರಯ	೨	೪	೦
ಬೋಟ ಹೊಲಿಯುವ ಕೊಳ್ಳೆ ಸೂಜೆ ೧ಕ್ಕೆ	೦	೧	೯
ದಾರದಲ್ಲಿ ಆದ ಬೋಟ ದರ್ಜ ೧ಕ್ಕೆ	೧೩	೩	೦

ವಿ ಪಿ ಯಿಂದಲೂ ರವಾನಿಸುತ್ತೇವೆ

ವಿಳಾಸ—ಸಿ. ರಘುನಾಥ ಕಾಮತ್,
ಜನರಲ್ ಮರ್ಚಂಟ್, ಬೋಳಾರ, ಮಂಗಳೂರು.

ಬೆಲೆಗೆ ಬೆಳ್ಳಿ—ಗುಣಕ್ಕೆ ಭಂಗಾರ.

86 17

ಇಂಥಾ ಕಾಗದಗಳು ನಮ್ಮಲ್ಲಿಗೆ ಅನೇಕ ಬಂದಿವೆ.

ವೆ.ಕಿ ವಾಮನಿಕಿನಿ, ಜವಳಿ ವರ್ತಕ, ಮಾಹೇಶ್ವರ, ಇವರು ಬರೆಯುವುದು—"ಕ್ಲೆಮೆಂಟ್‌ಯವರ ಮ್ಯಾಜಿಕ್ ಬಾಂ ಬಹಳ ತೃಪ್ತಿಕರವಾದದ್ದೆಂದು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ಅದು ತುಂಬಾ ಗುಣಕೊಡುವಂಥಾದ್ದು ದಯವಿಟ್ಟು ಇನ್ನೂ ಮೂರು ಸೀಸೆಯನ್ನು ವಿ ಪಿ. ಮೇಲೆ ಕಳುಹಿಸಿಕೊಡಿ" ಮಿ| ಜೆ. ಡಬ್ಲಿಯು. ಸಾಮ್ಯುಯಲ್, ಪೋಸ್ಟ್ ಮಾಸ್ಟರ್, ತ್ರಿವೇಂದ್ರಂ, ಇವರು ಬರೆಯುವುದು "ನಿಜವಾಗಿಯೂ ಇದು ಎಲ್ಲಾ ತರದ ನೋವುಗಳಿಗೂ ಅದ್ಭುತವಾದ ಔಷಧವೆನ್ನುವುದಕ್ಕೆ ಸಂಶಯವಿಲ್ಲ." ಮಿಸೆಸ್ ಇ ಕ್ಯಾಂಪ್‌ಸಿಂಗ್, ಬೈಕಲ್ಲಾ, ಬೊಂಬಾಯಿ, ಇವರು ಬರೆಯುವುದು—"ನಿಮ್ಮ ಮ್ಯಾಜಿಕ್ ಬಾಂ ಔಷಧವು ನನ್ನ ಕಾಲಿನ ಕೆಟ್ಟ ನೋವನ್ನು ಸಂಪೂರ್ಣವಾಗಿ ವಾಸಿಮಾಡಿದೆ." ಮಿಸೆಸ್ ಇ. ಮೋಸಸ್, ರಂಗೂನ್, ಇವರು ಬರೆಯುವುದು—"ನಾನು ಯಾವಾಗಲೂ ನಿಮ್ಮ ಕ್ಲೇಮೆಂಟ್ಸ್ ಮ್ಯಾಜಿಕ್ ಬಾಮನ್ನು ಗಂಟಲು, ಎದೆಯ ನೋವುಗಳಿಗೆ ಉಪಯೋಗಿಸುತ್ತೇನೆ. ಅದರಿಂದ ನನಗೆ ಪ್ರತಿ ಸಲವೂ ಚನ್ನಾಗಿ ವಾಸಿಯಾಗಿದೆ ಈ ಔಷಧದಿಂದ ಪಾರ್ಶ್ವನೋವು, ಕೀಲುಗಳ ಬಾಧೆ, ಕಿಬ್ಬೊಟ್ಟೆನೋವು, ಬೆನ್ನೆಳೆಯುವುದು, ತಲೆನೋವು, ಕೆಮ್ಮು, ಕೆಲುಬುಗಳು, ಕೀಲುಗಳು ಕತ್ತರಿಸುವುದು, ಕೊರಳು ಊತ, ಕೈ ಕಾಲು ಒಡೆತ ಇವೆಲ್ಲಾ ಗುಣವಾಗುತ್ತವೆ ಇದನ್ನು ಹಾಕಿ ಚನ್ನಾಗಿ ತಿಕ್ಕಿದರೆ ಬಾಧೆ ಪರಿಹಾರವಾಗುವುದು.

ಕ್ರಯ:—೧ ಬಾಟ್ಲಿಗೆ ೧೨ ಆಣೆ, ಪೋಸ್ಟೇಜ್ ೪ ಆಣೆ. ೩ ಬಾಟ್ಲಿಗೆ ಅಂಚೆವೆಚ್ಚ ಸೇರಿ ರೂ. ೨—೪ ಆಣೆ.

ನಮ್ಮ ವಿಳಾಸ:—ಎಫ್. ಡಬ್ಲ್ಯು. ಆರ್ಲ್,
ಸಿಮೆಟ್ರಿ ರೋಡ್, ವೇಪೇರಿ, ಮದರಾಸ್.

ಪಾಳ್ಯದ ವೆಂಕಟಾಚಲ ಪಂಡಿತ, ಶ್ರೀಸೀತಾರಾಘವ ವೈದ್ಯ ಶಾಲಾ, ಕೊಳ್ಳೇಗಾಲ, ಇವರ ಸಿದ್ಧೌಷಧಗಳು.

20-9

೧. ಲೋಕಾಮಯಹರ ಕಸ್ತೂರಿ ಮಾತ್ರೆ.—ಈ ಮಾತ್ರೆಗಳನ್ನು ಹವಳದ ಭಸ್ಮ ಚಿನ್ನದ ರೇಖುಗಳ ಮಿಶ್ರದಿಂದ ತಯಾರಿಸಿದೆ. ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಪ್ಲೇಗು ಜ್ವರ, ಛಳೀಜ್ವರ, ಜ್ವರ, ಅಗ್ನಿ ನಷ್ಟ, ನಿಶ್ಶಕ್ತಿ, ಕೆಮ್ಮು, ಹೊಟ್ಟೆ, ಕಿಬ್ಬೊಟ್ಟೆ, ಎದೆಗಳ ನೋವು ಇವಕ್ಕೆ ಪರಿಗೊಡದು; ಮಕ್ಕಳ ಎಲ್ಲಾ ರೋಗಕ್ಕೂ ಗುಣಕಾರಿ. ನೀರು ಮತ್ತು ಹವಾ ಬದಲಾವಣೆಗೆ ಒಳ್ಳೇದು. ೨೦ ಮಾತ್ರೆಯುಳ್ಳ ಕಾಪ್ಪಿಗೆ ೪ ಆಣೆ. ಪೋಸ್ಟು ಮೂಲಕ ೫ ಸೀಶೆಗೆ ಒಂದು ಸೀಶೆ ಹೆಚ್ಚು ೧ ರಿಂದ ೬ ರ ವರೆಗೆ ಟ. ಖರ್ಚು ೪ ಆಣೆ

೩. ಎಸ್. ಸಿ. ಇ. ಸರ್ವಾಂಗಬಲಕಾರಿ.—ಕಾಫಿ, ಟೀ, ಕೋಕೋಗಳಿಗೆ ಬದಲಾಗಿ ಉಪಯೋಗಿಸುವ ಪುಡಿ. ಕಾಫಿ, ಟೀಗಳಲ್ಲಿರುವ ದುರ್ಗುಣಗಳು ಇದರಲ್ಲಿಲ್ಲ. ವಾಯು, ಎದೆ, ಆನ್ನಾಶಯ, ನರಗಳು, ಸಂದುಗಳು, ಮೊದಳು, ಶಿರಸ್ಸು, ಮಲಬದ್ಧ, ಇವುಗಳ ಸಂಬಂಧವಾದ ಎಲ್ಲಾ ರೋಗಗಳನ್ನೂ ಚೆನ್ನಾಗಿಹೋಗಲಾಡಿಸಿ ಧಾತುಶಕ್ತಿಯನ್ನು ಕ್ರಮವಾಗಿ ವೃದ್ಧಿಪಡಿಸುವದು. ೨೦ ಲೋಟ ಕಾಫಿಯಾಗುವ ಡಬ್ಬಿ ೪ ಆಣೆ; ೪೦ ಲೋಟ ಆಗುವುದು ೭ ಆಣೆ.

೨. ಪ್ಲೇಗಿಗೆ ಸಿದ್ಧೌಷಧ.—ಪ್ಲೇಗಿಗೆ ಔಷಧಿಯೇ ಇಲ್ಲವೆಂದು ಹೇಳದೆ ಈ ನಮ್ಮ ಔಷಧವನ್ನು ತರಿಸಿಕೊಡಿ ಖಂಡಿತ ಗುಣವಾಗುತ್ತದೆ. ಯೋಗ್ಯತಾಪತ್ರಗಳನ್ನು ವಿವರಿಸಲು ಸ್ಥಳ ಸಾಲದು. ಗಡ್ಡೆ ಮೊದಲಾದ ಬಾಧೆ ಇಲ್ಲದಂತೆ ಉದ್ಭವ ಔಷಧಿ ಸೇರಿ ಕ್ರಯ ೧ ರೂಪಾಯಿ.

೪. ಬಾಧಾಪಹಾರಿಣೀ.—ಹಟ್ಟು ಹಗಲಿದ ನೋವು, ವಾಯು, ತಲೆನೋವು, ಮುಂತಾದ್ದಕ್ಕೆ ಸಂಜೀವನ ಡಬ್ಬಿ ೩ ಆಣೆ

ವಿಳಾಸ:—ಎಸ್. ಎಸ್. ಆರ್. ವೈದ್ಯಶಾಲಾ,
ಲಕ್ಷ್ಮೀವಿಲಾಸ ರೋಡ್, ಮೈಸೂರು.

CHAMBERLAIN'S COLIC, CHOLERA AND DIARRHOEA REMEDY.

ಚೇಂಬರ್ಲೀನ್ ಯವರು ಹೊಟ್ಟೆಶೂಲೆ, ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು.



4-16

ಕೆಳ ಹೊಟ್ಟೆಯ ನೋವು, ಬರೀ ಭೇದಿಯಾಗುವುದು, ಆಮಶಂಕೆ, ವಾಂತಿಭೇದಿ ಉಪದ್ರ, ಕೀಲು ನೋವು, ಹೊಟ್ಟೆಯ ನಾನಾ ತರದ ಶೂಲೆಗಳು—ಈ ರೋಗಗಳನ್ನೆಲ್ಲಾ ವಾಸಿಮಾಡುತ್ತದೆ. ಈ ಪರಮಾಶ್ಚರ್ಯಯುಕ್ತವಾದ ಔಷಧವು ಜನರನ್ನು ಬದುಕಿಸಿರುವಷ್ಟು ಮತ್ತು ನೋವನ್ನೂ ಬಾಧೆಯನ್ನೂ ನಿವಾರಣೆ ಮಾಡಿರುವಷ್ಟು ಪ್ರಪಂಚದಲ್ಲೇ ಇನ್ಯಾವ ಔಷಧವೂ ಮಾಡಿರುವುದಿಲ್ಲ

ಜ್ಞಾಪಕದಲ್ಲಿಟ್ಟುಕೊಳ್ಳಿ—ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯೊಳಗಿರುವ ಎಲ್ಲಾ ತರದ ನೋವನ್ನೂ ನಿಲ್ಲಿಸಿಬಿಡುತ್ತದೆ. ಬಹಳ ಕಠಿಣವಾದ ಭೇದಿಯೂ ಕೂಡ ಮೂರೇ ಹೊತ್ತು ಈ ಔಷಧದಿಂದ ನಿರ್ಮೂಲಮಾಡಿ ನಿಲ್ಲಿಸುತ್ತದೆ ಖಂಡಿತವಾಗಿ ವಾಸಿಮಾಡುವುದೇ ಇದರ ಗುಣ

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಸ್ವಲ್ಪವೂ ಮುಟ್ಟಿದ್ದಲ್ಲ

ಇದು ಎಲ್ಲೆಲ್ಲೂ ಬಿಕರಿಯಾಗುವುದು. ಸಣ್ಣ ಸೀಸೆಗೆ ೧ ರೂಪಾಯಿ. ದೊಡ್ಡ ಸೀಸೆಗೆ ೨ ರೂಪಾಯಿ.

ಮಕ್ಕಳ ಹಿತಕಾರಿ
ಎಂದು

SCOTT'S EMULSION 31-5

(ಸ್ಕಾಟ್ಸ್ ಇಮಲ್ಷನ್)

ಎಂಬೀ ಸೇವನಾ ಔಷಧಕ್ಕೆ ಕೋಟ್ಯಾಂತರ ತಂದೆತಾಯಿಗಳು ಹೆಸರಿಟ್ಟಿದ್ದಾರೆ ಯಾಕೆಂದರೆ ಇದು ಮಕ್ಕಳ ಆರೋಗ್ಯವನ್ನು ವೃದ್ಧಿಪಡಿಸಿ ದೇಹವನ್ನು ಪುಷ್ಟಿಯಾಗಿ ಬೆಳೆಸಿರುತ್ತದೆ.

ಇದು ತುಂಬಾ ರುಚಿಯಾಗಿರುವುದರಿಂದ ಮಕ್ಕಳು ಬಹು ಸಂತೋಷವಾಗಿ ಸೇವನೆಮಾಡುತ್ತಾರೆ.

ಇದು ಕಾಯಿಲೆ ಮಕ್ಕಳನ್ನು ಆರೋಗ್ಯಮಾಡುವುದು; ಅಶಕ್ತರಾದ ಮಕ್ಕಳನ್ನು ಬಲಿಷ್ಠರನ್ನಾಗಿ ಮಾಡುವುದು

ಕೈಸೋಕದೆ ತಯಾರಾದದ್ದು.

ಎಲ್ಲಾ ಔಷಧ ವ್ಯಾಪಾರಸ್ಥರಲ್ಲೂ ಬಿಕರಿಯಾಗುತ್ತೆ.

ಸ್ಕಾಟ್ ಅಂಡ್ ಬೋರ್ನ್, ಲಿಮಿಟೆಡ್,
ಔಷಧಗಳ ಕಾರ್ಖಾನೆ,
ಲಂಡನ್, ಇಂಗ್ಲೆಂಡ್.

ಈ ಮನುಷ್ಯನ ಅರುಹು ಔಷಧವನ್ನೇ ಕೊಂಡುಕೊಳ್ಳಿ.

ಇಲ್ಲಿನೋಡಿ!

22-9

ತುಮಕೂರು ಡಿಸ್ಟ್ರಿಕ್ಟ್ ಇಲಾಖೆಯಲ್ಲಿ, ಯೂರೋಪಿಯನ್ ಮೇಲ್ವಿಚಾರಣೆಯಿಂದ, ಉತ್ತಮ ತರಹದ ಹಾಸನದ ಟೋಪಿಗಳು ಅತಿ ಶ್ರೇಷ್ಠವಾದ ಊಲ್‌ದಾರದಿಂದ ತಯಾರಾಗುತ್ತವೆ ಕ್ರಯ ೧೦ ಆಣೆ ಮೊದಲ್ಗೊಂಡು ೧ ರೂ ೧೨ ಆಣೆವರೆಗೂ ದೊರಕುವವು. ಅಪೇಕ್ಷಿಸುವವರಿಗೆ ಕ್ರಯದ ಪಟ್ಟಿಯನ್ನು ರವಾನಿಸುವೆವು. ವಿಳಾಸ—ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಡಿಸ್ಟ್ರಿಕ್ಟ್ ಇಲಾಖೆ, ತುಮಕೂರು.

ರೇಷ್ಮೆ ಮತ್ತು ಕಲಾಪತ್ತು ಸೀರೆಗಳು ಮತ್ತು ಪೀತಾಂಬರಗಳು.

10 1

ಖಾತರಿಯಾದ ಬಣ್ಣಗಳನ್ನು ಹಾಕಿ ನಮ್ಮ ಸ್ವಂತ ಮಗ್ಗಗಳಲ್ಲಿಯೇ ತಯಾರಾಗುವ ಉತ್ತಮವಾದ ಕೆಂಪು, ಊದಾ, ಹಸರು, ಹಳದಿ, ಕಪ್ಪು, ಮೇಘವರ್ಣದ ಸೀರೆಗಳು ಪೀತಾಂಬರಗಳು ನಮ್ಮ ಅಂಗಡಿಯಲ್ಲಿ ನಿಬರವಾದ ಕ್ರಯಕ್ಕೆ ಮಾರುತ್ತೇವೆ. ಇದಲ್ಲದೆ ಕಂಚಿ, ಕುಂಭಕೋಣ, ಕೊರನಾಡು, ಮಧುರೆ, ಕೊತ್ತಾಲ, ಶಾತ್ಯಾಂಗಾರಪೇಟೆ, ಸೇಲಂ, ಕೊಯಮುತ್ತೂರು, ಮುಂತಾದ ಸ್ಥಳಗಳಲ್ಲಿ ತಯಾರಾಗುವ ರಬಿಂಮಾದು ಜವಳಿಯು ನಮ್ಮಲ್ಲಿಯೂ ಸದಾ ಸುಲಭ ಖರೀದಿಗೆ ದೊರೆಯುತ್ತದೆ ಸದರಿ ಸರಗಳ ಕ್ರಯ ತಪಸೀಲ್, ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು ವಿ ಪಿ ದ್ವಾರ ಸದಾ ತರಿಸಿಕೊಳ್ಳಬಹುದು. ನಮ್ಮ ಸರಕುಗಳು ಶ್ರೇಷ್ಠವಾಗಿ ಸ್ವಂತಮಗ್ಗಗಳಲ್ಲಿ ತಯಾರಾಗುತ್ತವೆ ಎಂದು ಮೈಸೂರು ಶ್ರೀಮನ್ಮಹಾರಾಜಾ ಸರ್ಕಾರದ ವಸ್ತುಪ್ರದರ್ಶನದಲ್ಲಿ ಬೆಳ್ಳಿ ಬಿರುದಿನ ಬಿಲ್ಲೆ ಬಹುಮಾನಕೊಟ್ಟಿರುತ್ತಾರೆ

ನಮ್ಮ ವಿಳಾಸ.—ಶೆಟ್ ಸಂಕಪ್ಪ ಬಸಪ್ಪ
ಚಿಕ್ಕಪೇಟೆ ಬೆಂಗಳೂರು

ಜಡೆಕುಚ್ಚು, ಪಚ್ಚೆಯ ಜಡೆಬಿಲ್ಲೆ.

36-4

ನವೀನ ಆಭರಣಗಳು; ಬೇಗನೋಡಿ.

ಇದರಿಂದ ಸರ್ವರಿಗೂ ತಿಳಿಸುವದೇನಂದರೆ—ನಮ್ಮಲ್ಲಿ ಬಹಳ ಶ್ರೇಷ್ಠವಾದ ಎಲೆಕ್ಟ್ರಿಕ್ ಚಿನ್ನದ ಗಿಲ್ಟಿನಿಂದ ತಯಾರಿಸಲ್ಪಟ್ಟ ಬಂಗಾರದ ಆಭರಣಗಳು ಬಹಳ ಸುಲಭ ಕ್ರಯಕ್ಕೆ ದೊರೆಯುತ್ತವೆ. ಇದರಲ್ಲಿ ಕಂಡ ಆಭರಣಗಳನ್ನು ಚಿನ್ನದ ಕೆಲಸ ಮಾಡುವದರಲ್ಲಿ ಬಹಳ ಸಮರ್ಥರಾದ ಅಕ್ಕಸಾಲಿಗರಿಂದ ತಯಾರಿಸಲ್ಪಟ್ಟಿರುತ್ತೆ ಇದು ಬಹಳ ಕಾಲಗಳ ವರಿವಿಗೂ ರಂಗು ಹೋಗದ ಹಾಗೆ ಬಲವಾದ ಎಲೆಕ್ಟ್ರಿಕ್ ಚಿನ್ನದ ಗಿಲ್ಟ್ ಹಾಕಲ್ಪಟ್ಟಿರುತ್ತೆ. ಇದರ ಕೆಲಸದ ನಾಜೂಕು, ಸ್ವಚ್ಛ ಬಂಗಾರದ ಆಭರಣಗಳನ್ನು ಸೋಲಿಸುತ್ತೆ. ಈ ಕೆಳಗೆ ಕಂಡ ಆಭರಣಗಳಲ್ಲಿ ಯಾವದಾದರೂ ಒಂದನ್ನು ತರಿಸಿ ಪರೀಕ್ಷಿಸಿರಿ—



೧ ಜಡೆಕುಚ್ಚು.
ಕ್ರಯ ರೂ ೩—೮—೦.

ಇದರ ಪ್ರತಿಯೊಂದು ಕುಚ್ಚಗಳ ಸುತ್ತಲೂ ಸುಂದರವಾದ ಗೆಜ್ಜೆಗಳನ್ನು ಸುತ್ತಿಲ್ಪಟ್ಟ ನಾಜೂಕಾಗಿ ಗೊಂಡೆಗಳನ್ನು ಕಟ್ಟಿ ನೋಡುವವರಿಗೆ ನಿಜವಾದ ಬಂಗಾರದ ಆಭರಣವೆನ್ನಿಸುವ ಹಾಗೆ ತಯಾರಿಸಲ್ಪಟ್ಟಿರುತ್ತೆ.



೨ ಪಚ್ಚೆಕಲ್ಲು ಜಡೆಬಿಲ್ಲೆ.
ಚಿನ್ನದ ಗಿಲ್ಟುಮಾಡಿದ್ದು.
೧ಕ್ಕೆ ಬೆಲೆ ರೂ ೨-೪-೦.

ಇದು ಮೇಲಾದ ನಕಾಸು ಕೆಲಸಗಳನ್ನು ಮಾಡಲ್ಪಟ್ಟ ಪಚ್ಚೆ ಕಲ್ಲಿನಿಂದ ಬಿಗಿಸಲ್ಪಟ್ಟಿರುತ್ತೆ ಎಷ್ಟು ವರ್ಷಗಳ ಪರ್ಯಂತರ ಇಟ್ಟಾಗ್ಯೂ ರಂಗು ಹೋಗದು, ನೋಡುವವರ ಕಣ್ಣಿಗೆ ಚಪರುವಷ್ಟು ಪ್ರಕಾಶವುಳ್ಳದ್ದು.

ನಮ್ಮ ವಿಳಾಸ—ಜರ್ಮನ್ ಸಿಲ್ವರ್ ಜ್ಯೂಯಲ್ ಡಿಪೋ,
ಸಾಹುಕಾರ್ ಪೇಟೆ, ಮದ್ರಾಸು.

ತರಿಸಿಕೊಳ್ಳಿ ಬೇಗತರಿಸಿಕೊಳ್ಳಿ!! ಇದೇ ಒಳ್ಳೇ ಸಮಯ!!!

11 1

ತಡಮಾಡಿದರೆ ಪ್ರತಿಗಳು ಮುಗಿದುಹೋದಾವು.

ನೇತ್ರಾನಂದಕರಗಳಾದ ಚಿತ್ರಗಳಿಂದಲೂ, ನೀತಿರಸಪ್ರದವಾದ ವಿಷಯಗಳಿಂದಲೂ ರಂಜಿಸುವದಲ್ಲದೆ, ಸಕಲ ಜನಗಳೂ ಪಡೆಯುತಕ್ಕಷ್ಟು ಸುಲಭವಾದ ಕ್ರಯಕ್ಕೆ ಸಿಕ್ಕುವವುಗಳಾಗಿಯೂ ಇವೆ. ಇವುಗಳು ಯಾವವಂದರೆ:—

	ಕ್ರಯ
ಎಡ್ವರ್ಡ್ ಚಕ್ರವರ್ತಿಯವರ ಮತ್ತು ಅಲೆಕ್ಸಾಂಡ್ರಾ ಚಕ್ರವರ್ತಿನಿಯವರ ಚರಿತ್ರೆ	೦—೪—೦
ಎಡ್ವರ್ಡ್ ಸಾರ್ವಭೌಮರ ಕಿರೀಟಧಾರಣೆ ..	೦—೧—೬
ಘನತೆಯುಳ್ಳ ಸ್ತ್ರೀಯರ ಚರಿತ್ರೆ	೦—೦—೬
ದಕ್ಷಿಣ ಆಫ್ರಿಕವೂ ಅದರ ನಿವಾಸಿಗಳೂ ..	೦—೨—೬
ಚೀನಾ ಚಕ್ರಾಧಿಪತ್ಯವೂ ಅದರ ನಿವಾಸಿಗಳೂ ..	೦—೨—೬
ಬರ್ಮಾ ದೇಶವೂ ಬರ್ಮಿಯರೂ	೦—೨—೬
ಪುರಾತನ ಗ್ರೀಕರ ಕಥೆಗಳು . ..	೦—೨—೦
ಪುರಾತನ ರೋಮನರ ಕಥೆಗಳು .	೦—೨—೦
ಪಕ್ಷಿಗಳ ಚಿತ್ರಗಳೂ ಕಥೆಗಳೂ	೦—೧—೦
ಕ್ರಿಮಿವರ್ಗ ವರ್ಣನೆ	೦—೧—೦
ದೇಹವೆಂಬ ವಿಚಿತ್ರವಾದ ಸಣ್ಣ ಮನೆ . ..	೦—೧—೦
ಚಿಕ್ಕವರಿಗೆ ಹೇಳಿದ ಕಥೆಗಳು	೦—೧—೦
ಪ್ರಾಚೀನಕಾಲದ ವಿಲಕ್ಷಣ ಜಂತುಗಳ ವರ್ಣನೆ	೦—೧—೦
ಹೊಗೆ ಗಾಡಿಗಳನ್ನು ಕಲ್ಪಿಸಿದ ಜಾರ್ಜ್ ಸ್ಟೀವನ್ಸನ್ ಎಂಬಾತನ ಚರಿತ್ರೆ . . .	೦—೧—೦

"ಹಿಂದೂದೇಶ ಪ್ರದಕ್ಷಿಣ."—ಹಿಂದೂ ದೇಶವನ್ನೆಲ್ಲಾ ಸಂಚಾರ ಮಾಡುವದರಿಂದ ಉಂಟಾಗುವ ಪರಮಾನಂದವನ್ನು ಒಂದು ಸಾರಿ ಈ ಗ್ರಂಥವನ್ನು ಓದುವದರಿಂದ ಹೊಂದಬಹುದು ಇದು ಮೊದಲನೆ ಸಾರಿ ಪ್ರಿಂಟ್ ಆಗಿದ್ದು ಬಹು ಶೀಘ್ರವಾಗಿ ಎಲ್ಲಾ ಮುಗಿದುಹೋದವು ಈಗ ತಿರಿಗಿ ವಿಚಿತ್ರವಾಗಿಯೂ ಉಲ್ಲಾಸಕರವಾಗಿಯೂ ಇರುವ ಪ್ರತಿಬಿಂಬ ಚಿತ್ರಗಳೊಡನೆ ಮಾಡಿಸಿರುತ್ತೇವೆ. ಕ್ರಯ ೦—೮—೦, ವಿ. ಪಿ. ಮೂಲಕ ೦—೧೦—೦.

ವಿಳಾಸ:—ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪೋ,
ಮೈಸೂರು.

THE PLACE FOR HASSAN CAPS IS

HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

11 12

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೀಳಾದದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ.—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು. (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ನೇರಾ ಬರೆದು ತರಿಸಿಕೊಳ್ಳಿ. ಅಗ್ಗವಾದ ಬುದ್ಧಿ ಚನ್ನಾಗಿಲ್ಲದದ್ದು ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ.

ಊದ, ಕೆಂಪು, ಕಪ್ಪು, ಬಿಳಿ, ಕಾಫಿ ಟೋಪಿಗಳು ೧ ರೂ. ೮ ಆ.; ೧ ರೂ ೬ ಆ.; ೧ ರೂ ೪ ಆ

ರೇಷ್ಮೆ ಚುಕ್ಕೆಯುಳ್ಳ ಟೋಪಿಗಳು ೧ ರೂ. ೮ ಆ., ೨ ರೂ.

ದಾರದ ಟೋಪಿಗಳು ೧ ರೂ. ೧೨ ಆ; ೧ ರೂ. ೮ ಆ; ೧ ರೂ. ೬ ಆ.

ಉಸುಕಿನ ಟೋಪಿಗಳು ೧ ರೂ. ೮ ಆ.; ೧ ರೂ. ೬ ಆ.

ಕೂಸುಗಳ ಟೋಪಿ, ಸೂರ್ಥಿ ಮೇಜೋಡು, ಅರ್ಧ ಮೇಜೋಡು ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ.

ಬಾಲಶಿಕ್ಷೆ ೧ನೇ ಭಾಗ!

ಬಾಲಶಿಕ್ಷೆ ೧ನೇ ಭಾಗ!!

ಬಾಲಶಿಕ್ಷೆ ೧ನೇ ಭಾಗ!!!

ಬೇಗ ತರಿಸಿಕೊಳ್ಳಿ.

12 1

ಕ್ರಯ ೧ ಆಣೆ. ವಿ. ಪಿ. ಮೂಲಕ ಮೂರು ಆಣೆಗಳು. ನೂರು ಪ್ರತಿಗಳಿಗೆ ಪನ್ನೆರಡು ಪ್ರತಿಗಳು ಕಮಿಷನ್.

ವಿಳಾಸ.—ಮ್ಯಾನೇಜರ್, ಸಿ. ಎಲ್. ಎಸ್.
ಬುಕ್ ಡಿಪೋ, ಮೈಸೂರು.

ವೃತ್ತಾಂತ ಪತ್ರಿಕೆ.

ಸ್ ೧೯೦೨ ನೇ ಇಸವಿ ಏಪ್ರಿಲ್ ತಾ|| ೧೮ ನೇ ಗುರುವಾರ.

ಪೋಲೀಸ್ ಹಿಂಸೆಯು.

ಸುಮಾರು ಎರಡು ವಾರಗಳ ಕೆಳಗೆ ರಾಜಧಾನಿಯಾದ ಮೈಸೂರು ಪೋಲೀಸ್ ಸ್ಟೇಷನ್ ಲಾಕಪ್ಪಿನೊಳಗೆ ಕಿಟಕಿಕಂಬಿಗೆ ನೇಣುಹಾಕಿಕೊಂಡು ಪ್ರಾಣ ಬಿಟ್ಟಂತೆ ಕಂಡುಬಂದ ಒಬ್ಬ ಸರಾಫ್ ಶೆಟ್ಟಿಯ ಹೆಣವು ಸಿಕ್ಕಿತು. ಆ ಶೆಟ್ಟಿಯ ರಕ್ತಸಂಬಂಧಿಗಳೂ ಇತರ ಅನೇಕ ಪ್ರಜೆಗಳೂ ಆದನ್ನ ನೋಡಿ, ಪೋಲೀಸಿನವರು ಹಿಂಸೆ ಮಾಡಿದ್ದರಿಂದ ಅವನು ಪ್ರಾಣಬಿಟ್ಟಿರಬೇಕೆಂದು ಅನುಮಾನಪಟ್ಟರು. ಡಾಕ್ಟರವರು ಹೆಣವನ್ನು ಕೊಯಿದು ಪರೀಕ್ಷೆ ಮಾಡಿ, ಉಸುರುಕಟ್ಟಿದ್ದರಿಂದ ಶೆಟ್ಟಿಯ ಪ್ರಾಣ ಹೋಗಿದೆ ಎಂದು ತೀರ್ಮಾನ ಮಾಡಿದರು. ಸ್ಟೇಷನ್ ಲಾಕಪ್ಪಿನ ಬಳಿ ಮಹಜರಾದ ಕಾಲದಲ್ಲಿ ಪಂಚಾಯಿತರ ಪೈಕಿ ಮೂರು ಮಂದಿ, ಶೆಟ್ಟಿಯು ತಾನಾಗಿಯೇ ಆತ್ಮಹತ್ಯ ಮಾಡಿಕೊಂಡು ಪ್ರಾಣಬಿಟ್ಟನೆಂದು ಅಭಿಪ್ರಾಯ ಪಟ್ಟರು. ಆದರೆ ಡಾಕ್ಟರು ಕೊಟ್ಟಿರುವ ಸರ್ಟಿಫಿಕೇಟನ್ನೇ ಪ್ರಧಾನವಾಗಿ ಇಟ್ಟುಕೊಂಡರೆ ಮೃತನಿಗೆ ಯಾವ ರೀತಿ ಉಸುರುಕಟ್ಟುವಂತಾಯಿತು ಎಂಬ ಅನುಮಾನವು ಪರಿಹರವಾಗುವುದಿಲ್ಲ. ಬಹುಶಾ ಇನ್ನೊಂದು ಮೊಕದ್ದಮೆಯಲ್ಲಿ ಪೋಲೀಸಿನವರ ಮೇಲೆ ಜನಸಮುದಾಯದೊಳಗೆ ಉಂಟಾಗಿರುವ ಅನುಮಾನವೇ ಇದಕ್ಕೂ ಸಂಬಂಧಪಟ್ಟಿದೆ ಎಂದು ತೋರುವುದು. ಆ ಇನ್ನೊಂದು ವಿಷಯವೇನೆಂದರೆ, ಕಳೆದ ನವರಾತ್ರಿ ಉತ್ಸವದಲ್ಲಿ ಪೋಲೀಸಿನವರು ಕೆಲವು ಸ್ಕೂಲ್ ಹುಡುಗರನ್ನು ಕಳುವು ಮಾಡಿದರೆಂಬ ಅನುಮಾನದ ಮೇಲೆ ಠಾಣಾಕ್ಕೆ ಹಿಡಿದುಕೊಂಡು ಹೋದರು. ಪೋಲೀಸಿನವರಲ್ಲಿ ಯಾರೋ ಅವರನ್ನು ಠಾಣಾದಲ್ಲಿ ಹಿಂಸೆ ಪಡಿಸಿದರೆಂದು ಮೊಕದ್ದಮೆ ಹುಟ್ಟಿ, ಮ್ಯಾಜಿಸ್ಟ್ರೇಟರು ಎಂಟು ಮಂದಿ ಪೋಲೀಸಿನವರನ್ನು ಸಬ್ ಜಡ್ಜಿಯ ವಿಚಾರಣೆಗೆ ಕಳುಹಿಸಿದರು. ಸಬ್ ಜಡ್ಜಿಯವರು ವಿಚಾರಣೆ ಮಾಡಿ ಆರು ಮಂದಿಯನ್ನು ಖುಲಾಸ್ ಮಾಡಿ ಒಬ್ಬ ಛೀಫ್ ಕಾನ್‌ಸ್ಟೆಬಲನ್ನೂ ಒಬ್ಬ ಕಾನ್‌ಸ್ಟೆಬಲನ್ನೂ ಅಪರಾಧಿಗಳೆಂದು ತೀರ್ಮಾನ ಮಾಡಿದರು. ಆದರೆ ಅಪೀಲಿನಲ್ಲಿ ಸೆಷನ್ಸ್ ಜಡ್ಜರು ಅವರಿಬ್ಬರ ಮೇಲೂ ಅಪರಾಧ ರುಜುವಾತಾಗಲಿಲ್ಲವೆಂದು ಹೇಳಿ ಸಬ್ ಜಡ್ಜರ ತೀರ್ಮಾನವನ್ನು ರದ್ದು ಮಾಡಿರುತ್ತಾರೆ. ಆ ಹುಡುಗರ ವಾಙ್ಮೂಲದಲ್ಲಿ ಕೆಲವು ಭಾಗ ನಿಜವಲ್ಲದೆ ಇರಬೇಕೆಂದೂ ಅವರನ್ನು ಹೊಡದ ಪೆಟ್ಟುಗಳು ಬಹುಶಾ ಬಹಳ ಅಲ್ಪವಾದವುಗಳೆಂದೂ ನಾವು ಒಪ್ಪಿಕೊಳ್ಳುತ್ತೇವೆ. ಆದಾಗ್ಯೂ ಅವರನ್ನು ಹಿಂಸೆಮಾಡಿದರೆಂಬುವುದು ರುಜುವಾತಾಗಿರುವಂತೆ ನಮಗೆ ತೋರುವುದು.

ಸಬ್ ಜಡ್ಜಿಯವರು ಯಾವ ಕಾರಣದ ಮೇಲೆ ಅವರನ್ನು ತಪ್ಪಿತಸ್ಥರೆಂದು ಸಿದ್ಧಯಿಸಿ ಶಿಕ್ಷೆ ವಿಧಿಸಿದರೋ, ಸೆಷನ್ ಜಡ್ಜರು ಆ ಶಿಕ್ಷೆಯನ್ನು ಯಾಕೆ ರದ್ದುಮಾಡಿದರೋ ಈಗ ನಾವು ಸದ್ಯ ಆಕ್ಷೇಪಣೆ ಮಾಡಿ ಚರ್ಚಿಸುವುದಿಲ್ಲ. ಅವೆಲ್ಲ ಹ್ಯಾಗಾದರೂ ಇರಲಿ ಒಂದು ವಿಷಯವನ್ನು ಮಾತ್ರ ಖಚಿತವೆಂದು ಹೇಳಬಹುದಾಗಿ ಕಾಣುತ್ತದೆ. ಲಾಕಪ್ಪಿನಲ್ಲಿ ಅವನನ್ನು ಯಾರೋ ಆಕ್ರಮವಾಗಿ ಹಿಂಸೆಪಡಿಸಿರುತ್ತಾರೆ. ಈ ಭಾಗದಲ್ಲಿ ನಾವು ಅನುಮಾನಪಡುವಂತಿಲ್ಲವು. ಅವರೂ ಈ ಆಕ್ರಮವಾದ ಹಿಂಸೆಯನ್ನು ಇಂಥಿಂಥವರೇ ಮಾಡಿದರು ಸ್ಥಿರಪಡಿಸುವುದು ಸಾಕ್ಷಿಗಳಿಂದಲೂ ಇತರ ರುಜುವಾತುಗಳ ಮೂಲಕವೂ ಆಗದೆಹೋಗಿದ್ದರೂ ಇರಬಹುದು. ಇದರಿಂದ ಹಿಂಸೆಮಾಡಿದ್ದೇನೋ ಉಂಟು ಎಂಬದಾಗಿಯೂ ಜನರಲ್ಲೂ ಪ್ರಾಣಮಾನಧನಗಳನ್ನು ಸಂರಕ್ಷಣೆಮಾಡುವುದಕ್ಕಾಗಿ ನೇಮಿಸಲ್ಪಟ್ಟಿರುವವರೇ ಅವಮಾನಕರವಾದ ಕೃತ್ಯವನ್ನು ನಡಿಸಿರುತ್ತಾರೆಂಬುದಾಗಿಯೂ ಅನೇಕಾನೇಕರು ತಿಳುಕೊಂಡಿರುವರು; ಇಂಥಾ ಅಭಿಪ್ರಾಯಕ್ಕೆ ಕಾರಣವಿಲ್ಲದೆ ಇಲ್ಲವೆಂದು ನಾವು ನಂಬುತ್ತೇವೆ.

ಪೋಲೀಸಿನವರು ಪತ್ತೆ ತರದೂದು ನಡಸುವಲ್ಲಿ, ಹಿಡಿದವರನ್ನು ಅನೇಕ ವೇಳೆ ಹಿಂಸೆ ಪಡಿಸುತ್ತಾರೆಂದು ನಾವು ಕೇಳಿರುವುದನ್ನು ಬಹು ವಿಷಾದಪಟ್ಟು ಪ್ರಕಟಿಸಬೇಕಾಗಿದೆ. ಗುಮಾನಿಯಿಂದ ಹಿಡಿದವರನ್ನು ಭಯಪಡಿಸದಿದ್ದರೆ ಅಥವಾ ಹಿಂಸೆ ಮಾಡದಿದ್ದರೆ ರುಜುವಾತು ಸಿಕ್ಕುವುದೇ ಕಷ್ಟವಾಗುತ್ತದಲ್ಲಾ ಎಂದು ಪೋಲೀಸಿನವರು ಸಾಮಾನ್ಯವಾಗಿ ಹೇಳುವುದೂ ಉಂಟು. ಅಪರಾಧಗಳನ್ನು ಪತ್ತೆಮಾಡಿ ಅಪರಾಧಿಗಳಿಗೆ ಶಿಕ್ಷೆ ಮಾಡಿಸುವುದೇ ಪೋಲೀಸಿನವರ ಕೆಲಸವಾಗಿರುವಲ್ಲಿ ಭಯೋತ್ಪಾತಪಡಿಸದೇನೂ ಹಿಂಸೆಮಾಡದೇನೂ ಅವರು ತಮ್ಮ ಕರ್ತವ್ಯವನ್ನು ಹ್ಯಾಗೆ ಮಾಡುವುದಕ್ಕಾದೀತು ಎಂದು ಕೇಳಬಹುದು. ಇದು ಸಹಜವಾದ ಆಕ್ಷೇಪಣೆ ಎಂದು ತೋರಿಬಂದಾಗ್ಯೂ ಅದು ಯೋಗ್ಯವಾದದ್ದೆಂದು ನಾವು ಎಷ್ಟು ಮಾತ್ರಕ್ಕೂ ಒಪ್ಪಿಕೊಳ್ಳಲಾರೆವು. ಪೋಲೀಸಿನವರು ಈ ದುಷ್ಕಾರ್ಯದ ಮೂಲಕ ಕೆಲವು ಮೊಕದ್ದಮೆಗಳಲ್ಲಿ ರುಜುವಾತು ಕಂಡುಹಿಡಿಯಬಹುದು; ಆದರೆ ಅದರಿಂದ ಪ್ರಜೆಗಳು ಪೋಲೀಸಿನವರ ಮೇಲೆ ಪ್ರೀತಿ ಭರವಸೆಗಳನ್ನು ಇಟ್ಟು ಪತ್ತೆ ತರದೂದು ನಡಸುವುದರಲ್ಲೂ ಅವರ ಪರವಾಗಿ ನಿಂತು ಸಾಕ್ಷಿ ಕೊಡುವುದರಲ್ಲೂ ಕುತೂಹಲಪಡುವುದಕ್ಕೆ ಪ್ರತಿಯಾಗಿ ಪೋಲೀಸಿನವರನ್ನು ಕಂಡರೆ ಬೆದರುವರು, ಮತ್ತು ಅವರ ಸಹವಾಸವು ಯೋಗ್ಯವಾದದ್ದಲ್ಲವೆಂದು ಹಿಂಜರಿಯುವರು; ಅಂತು ಪ್ರಜೆಗಳು ಪೋಲೀಸಿನವರ ಕೆಲಸಕ್ಕೆ ಸಹಾಯಕರಾಗುವುದಿಲ್ಲ. ಆದರೆ ಪೋಲೀಸಿನವರಿಗೂ ಪ್ರಜೆಗಳಿಗೂ ಯಾವ ದೇಶದಲ್ಲೂ ಪರಸ್ಪರ ಸ್ನೇಹಭಾವ ಐಕಮತ್ಯಾದಿಗಳಿಲ್ಲವೆಂದು ಕೆಲವರು ಹೇಳಬಹುದು. ಹೀಗೆ ಹೇಳುವುದು ನಿಜವಲ್ಲವೆಂದು ದೃಷ್ಟಾಂತ ಪೂರ್ವಕವಾಗಿ ಇಲ್ಲಿ ತಿಳಿಸುವೆವು. ವಿಲಾಯತಿಯಲ್ಲಿ ಪೋಲೀಸಿನವರನ್ನು ಎಲ್ಲರೂ ಬಹಳ ಗೌರವದಿಂದ ಕಾಣುತ್ತಾರೆ. ಆಸರೆ ಅಲ್ಲಿಯೂ ಕೂಡ ದುಷ್ಕಾರ್ಯ ಮಾಡತಕ್ಕವರು ಪೋಲೀಸಿನವರಿಗೆ ಹೆದರುವರು, ಅವರನ್ನು ಹಗೆ ಮಾಡುವರು. ಪ್ರತಿ ಒಬ್ಬ ಸಾಮಾನ್ಯ ಪ್ರಜೆಯೂ ಪೋಲೀಸಿನವನನ್ನು ತನ್ನ ಸ್ನೇಹಿತನಂತೆಯೂ ತನ್ನ ಜೆಂಗಾವಲಿನವನಂತೆಯೂ ಭಾವಿಸಿಕೊಂಡಿರುತ್ತಾನೆ. ಆದಕಾರಣ ಎಂದಿನ ವರೆಗೆ ಈ ಹಿಂದುಸ್ಥಾನದಲ್ಲಿ ಪೋಲೀಸಿನವರು ಹಿಡಿದ ಜನರನ್ನು ಅಂತರಂಗದಲ್ಲಿ ಹಿಂಸೆಪಡಿಸುವಂಥಾ ಹೇಯವೂ ಅವಮಾನಕರವೂ ಆದ ದುಸ್ಸ್ವಭಾವವನ್ನು ಬಿಡುವುದಿಲ್ಲವೋ ಅಂದಿನ ವರೆಗೂ ಸಭ್ಯಪ್ರಜೆಗಳು ಅವರನ್ನು ಶತ್ರುಗಳಂತೆ ಕಾಣುತ್ತಾ ಬಂದಾರೆನ್ನುವುದಕ್ಕೆ ಸಂಶಯವಿಲ್ಲ: ಮತ್ತು ಅಂದಿನ ವರೆಗೂ ಅಪರಾಧಿಗಳನ್ನು ಕಂಡುಹಿಡಿದು ಶಿಕ್ಷಿಸುವುದು ಕೂಡ ಪೋಲೀಸಿನವರಿಗೆ ಕಷ್ಟಕರವಾಗುವುದೇ ಹೊರತು ಎಷ್ಟು ಮಾತ್ರಕ್ಕೂ ಸುಲಭವಾಗಲಾರದೆಂದು ಖಂಡಿತವಾಗಿ ಹೇಳಬಲ್ಲೆವು. ಇಷ್ಟೇ ಅಲ್ಲ. ಇದರಲ್ಲಿ ಇನ್ನೊಂದು ವಿಶೇಷವುಂಟು. ವಸ್ತಗಿರಿ ಮಾಡಿದವರನ್ನು ಭಯಪಡಿಸುವುದಾಗಲಿ ಹಿಂಸೆಪಡಿಸುವುದಾಗಲಿ ಯಾವ ಕಾನೂನೂ ಒಪ್ಪಲಾರದು. ಅದು ಕಾನೂನಿಗೂ ಅದರ ಉದ್ದೇಶಕ್ಕೂ ವಿರೋಧವಾದ ಕೃತ್ಯವಾಗಿರುತ್ತದೆ, ಮತ್ತು ಇಂಗ್ಲಿಷ್ ಪ್ರಭುತ್ವದಲ್ಲಿ ಪ್ರಜೆಗಳ ಮನೋವೃತ್ತಿಗೆ ಬಹು ಅಸಹ್ಯವಾದ ಕೃತ್ಯವೆನಿಸಿಕೊಂಡಿದೆ. ಈ ವಿಷಯವನ್ನು ಹಿಂದುಸ್ಥಾನದವರು ಎಷ್ಟು ಬೇಗ ತಿಳಿದುಕೊಂಡರೆ ಅಷ್ಟು ಕ್ಷೇಮಕರವು. ಚಿತ್ರವಿಚಿತ್ರವಾದ ಉಪಾಯಗಳನ್ನು ಪ್ರಯೋಗಿಸಿ ಅಂತರಂಗದಲ್ಲೇ ಬೈದಿಯನ್ನು ಹಿಂಸೆಪಡಿಸುವಂಥಾ ನೀಚರು ಪ್ರಜೆಗಳ ನಮ್ಮ ಮಾನ ಧನ ಪ್ರಾಣಗಳನ್ನು ಕಾಪಾಡುವುದಕ್ಕೆ ಎಷ್ಟು ಮಾತ್ರವೂ ಯೋಗ್ಯರಲ್ಲ.

ಈಗ ನಡೆದಿರುವ ಮೊಕದ್ದಮೆಗಳಲ್ಲಿ ಗವರ್ನಮೆಂಟಿನವರು ಬಹು ಕಠಿಣತರವಾದ ಹುಕುಂ ಕೊಟ್ಟಾರೆಂದು ನಿರೀಕ್ಷಿಸುವೆವು. ಗವರ್ನಮೆಂಟಿನವರು ಪೋಲೀಸ್ ಹಿಂಸೆಯನ್ನು ಸಮ್ಮತಿಸತಕ್ಕವರಲ್ಲವೆಂಬುವುದು ಅವಶ್ಯವಾಗಿಯೂ ಸ್ಪಷ್ಟವಾಗಿಯೂ ತಿಳಿದುಬರಬೇಕಾಗಿದೆ. ಕೋರ್ಟಿನಲ್ಲಿ ಪಬ್ಲಿಕ್ ಪ್ರಾಸಿಕ್ಯೂಟರಿಂದ ರುಜುವಾತು ಕೊಡುವುದಕ್ಕೆ ಸಾಧ್ಯವಾಗದೆ ಹೋದಾಗ್ಯೂ ಗವರ್ನಮೆಂಟಿನವರು ಇತರ ಮಾರ್ಗಗಳಲ್ಲಿ ತಮ್ಮ ವರ್ಣವನ್ನು ಪ್ರಕಾಶಪಡಿಸುವುದಕ್ಕೆ ಅವಕಾಶವುಂಟೆಂಬುವುದನ್ನು ಈಗ ಸ್ಪಷ್ಟಪಡಿಸಬೇಕಾಗಿರುತ್ತದೆ. ಇನ್‌ಸ್ಪೆಕ್ಟರ್ ಜನರಲ್‌ರವರೇ ಇಲಾಖೆಯ ಮೂಲಕ ತನಿಖೆ ಮಾಡಿಸಬಹುದು. ಹಿಂಸೆಮಾಡಿದ ಪೋಲೀಸಿನವನು ಒಬ್ಬನೋ ಅಥವಾ ಹೆಚ್ಚು ಮಂದಿಯೋ, ಕಂಡುಹಿಡಿಯಲಾಗದೆ ಹೋಗುವ ಪಕ್ಷದಲ್ಲಿ ಆ ಅಪರಾಧ ನಡೆದ ಪೋಲೀಸ್ ಠಾಣಾ ಸಿಬ್ಬಂದಿಯನ್ನೆಲ್ಲಾ ಒಟ್ಟಾಗಿ ಶಿಕ್ಷಿಸುವುದು ಅವಶ್ಯವೆಂದು ಈ ಸಂದರ್ಭದಲ್ಲಿ ಸೂಚಿಸಲು ನಾವು ಹಿಂತೆಗೆಯಲಾರೆವು. ಹೀಗೆ ಶಿಕ್ಷಿಸುವುದಕ್ಕೆ ಗವರ್ನಮೆಂಟಿಗೆ ಸಂಪೂರ್ಣವಾದ ಅಧಿಕಾರವಿರುತ್ತದೆ. ಅವರು ಹೀಗೆ ಮಾಡದೆ ಹೋದ ಪಕ್ಷದಲ್ಲಿ ಆ ಇಲಾಖೆಯ ದರ್ಪಗೌರವಗಳಿಗೆ ಲೋಪವೂ ಪ್ರಜೆಗಳ ನೆಮ್ಮದಿ ಮಾನಧನಪ್ರಾಣಗಳಿಗೆ ಕುಂದಕವೂ ಉಂಟಾಗುವುದರಲ್ಲಿ ಸಂಶಯವೇನೂ ತೋರುವುದಿಲ್ಲ.

ಒಳದೇಶದ ವೃತ್ತಾಂತಗಳು.

ಗವರ್ನಮೆಂಟಿನವರು ಮೈಸೂರಿಂದ ಹಾಸನಕ್ಕೆ ರೈಲು ಹಾಕಿಸಬೇಕೆಂದು ತೀರ್ಮಾನಮಾಡಿರುವಂತೆ ಕೇಳುತ್ತೇವೆ.

❦❦❦

ಕೋಲಾರ್ ಚಿನ್ನದ ಗಣಿಗಳಲ್ಲಿ ಕಳೆದ ವಾರ ಅನಾಹುತವಾಗಿ ಮೂರು ಮಂದಿ ಕೂಲಿಯವರು ಪ್ರಾಣ ಕಳೆದುಕೊಂಡರು.

❦❦❦❦

ಕಳೆದ ವಾರ ರಾಜಧಾನಿಯಲ್ಲಿ ೩—೪ ಸಲ ಒಳ್ಳೇ ಮಳೆಯಾಯಿತು. ಇನ್ನೂ ಧಾರಣೆವಾಸಿಗಳು ತುಂಬಾ ಪ್ರಿಯವಾಗಿರುತ್ತವೆ.

❦❦❦

ಬ್ರಿಟಿಷ್ ರೆಸಿಡೆಂಟರು ಮೊನ್ನೆ ಸೋಮವಾರ ಬೇಸಿಗೆ ಕಳೆಯುವುದಕ್ಕಾಗಿ ಬೆಂಗಳೂರಿಂದ ನೀಲಗಿರಿಗೆ ಪ್ರಯಾಣ ಮಾಡಿದರು.

❦❦❦

ಸಿವಿಲ್ ಸರ್ಜನ್ ಮೆ|| ಟಿ ಎಸ್ ನಂಜಪ್ಪನವರನ್ನು ಸರ್ಕಾರದವರು ಬೆಂಗಳೂರಿಗೂ ಸಿವಿಲ್ ಸರ್ಜನ್ ಮೆ|| ಇ. ಎಸ್. ಕೃಷ್ಣಸ್ವಾಮಿ ಅಯ್ಯರವರನ್ನು ಬೆಂಗಳೂರಿಂದ ಮೈಸೂರಿಗೂ ವರ್ಗಮಾಡಿರುತ್ತಾರೆ.

❦❦❦

ಸಾಬೂನನ್ನೂ ಮೋಂಬತ್ತಿಯನ್ನೂ ತಯಾರುಮಾಡುವ ವಿಧಾನಗಳನ್ನು ಕಲಿಸುವುದಕ್ಕೆ ನಾಳೆ ಸೋಮವಾರದಿಂದ ರಾಜಧಾನಿಯ ಮರಿಮಲ್ಲಪ್ಪನವರ ಹೈಸ್ಕೂಲಿನಲ್ಲಿ ಒಂದು ತರಗತಿಯು ಪ್ರಾರಂಭವಾಗುವುದಾಗಿದೆ.

❦❦❦

ಸ್ಯಾನಿಟರಿ ಇನ್‌ಸ್ಪೆಕ್ಟರೆಂಬ ನೌಕರಿಗೆ ಹುಡುಗರನ್ನು ತರಪೇತು ಮಾಡುವುದಕ್ಕೆ ಮೈಸೂರು ಇಂಜಿನಿಯರಿಂಗ್ ಸ್ಕೂಲಿಗೆ ಸಂಬಂಧಪಟ್ಟಂತೆ ಒಂದು ತರಗತಿಯನ್ನು ಮಾಡಿ, ಮುಂದಿನ ಜೂಲೈ ತಿಂಗಳಿಂದ ನಡಿಸುವದಾಗಿಯೂ ಅಪೇಕ್ಷೆಯುಳ್ಳವರು ಸೇರಬಹುದೆಂದೂ ಸರ್ಕಾರದವರು ಪ್ರಕಟಿಸಿದ್ದಾರೆ.

❦❦❦

ಬರುವ ವರುಷದಿಂದ ಮುನಸ್ಸಿಫರು ಮುನಸೀಫರಾಗಲಿ ಸಾವಿರ ಪ್ರಜೆಗಳಾಗಲಿ ಇರತಕ್ಕಂಥಾ ಗ್ರಾಮಗಳನ್ನು ಯೂನಿಯನ್ ಮಾಡಬೇಕೆಂದಲೂ, ಅವರಲ್ಲಿ ವಸೂಲಾಗುವ ಮನೆ ಅಂಗಡಿಗಳ ತೆರಿಗೆಯನ್ನು ಆಯಾ ಯೂನಿಯನ್ನಿಗೇ ಇಟ್ಟುಕೊಂಡು, ಗಾಣ ಮತ್ತು ಗಾಡಿಗಳ ತೆರಿಗೆಯನ್ನು ಸರ್ಕಾರಕ್ಕೆ ಕೊಡುತ್ತಾ ಬರಬೇಕೆಂತಲೂ ಸರ್ಕಾರದವರು ಹುಕುಂ ಕೊಟ್ಟಿದ್ದಾರೆ.

❦❦❦

ಬೆಂಗಳೂರು "ಸೂರ್ಯೋದಯ ಪ್ರಕಾಶಿಕೆ" ಎಂಬ ಪತ್ರಿಕೆಯ ಕಳೆದ ಫೆಬ್ರುವರಿ ೪ ನೆ ತಾ|| ಸಂಚಿಕೆಯಲ್ಲಿ "ಶ್ರೀಮನ್ಮಹಾರಾಜರವರ ಕಲ್ಕತ್ತಾ ಪ್ರಯಾಣ" ಎಂಬ ವಿಷಯವನ್ನು ಕುರಿತು ಒಂದು ಟಿಪ್ಪಣಿ ಪ್ರಕಟವಾಗಿತ್ತು. ಅಂಥಾ ನಿಜವಲ್ಲದ ಸಂಗತಿಗಳನ್ನು ಪ್ರಕಟಿಸುವುದಕ್ಕೆ ಕಾರಣವೇನೆಂದು ಸರ್ಕಾರದವರು ಆ ಪತ್ರಿಕೆಯ ಎಡಿಟರನ್ನು ಪ್ರಶ್ನೆ ಮಾಡಿದರು. ಇದಕ್ಕೆ ಎಡಿಟರು ಜವಾಬು ಕಳುಹಿಸಿದ್ದಾರೆ.

❦❦❦

ಕಳೆದ ವಾರ ಪೋಲೀಸ್ ಇನ್‌ಸ್ಪೆಕ್ಟರ್ ಜನರಲ್‌ರವರು ರಾಜಧಾನಿಗೆ ಬಂದು ಮೂರು ದಿನಗಳ ತನಕ ಇದ್ದು, ಶೆಟ್ಟಿ ಮೃತಪಟ್ಟ ಪೋಲೀಸ್ ಠಾಣಾ ಮತ್ತು ಲಾಕಪ್ಪುಗಳನ್ನೂ ಮಾರ್ಕೆಟ್ಟು ಪೋಲೀಸ್ ಸ್ಟೇಷನ್ ಲಾಕಪ್ಪಿನಲ್ಲಿ ಸ್ಕೂಲ್ ಹುಡುಗರನ್ನು ಹಿಂಸೆಪಡಿಸಿದರೆಂಬ ಭಾಗಗಳನ್ನೂ, ಪೋಲೀಸ್ ರಿಜಿಸ್ಟರ್ ವೈರಿ ಮುಂತಾದವುಗಳನ್ನೂ ಆ ಜಮಾಯಿಷಿ ಮಾಡಿಕೊಂಡು, ಭಾನುವಾರ ಫ್ರೆಂಚ್ ರಾಕ್ಸ್ ಮಾರ್ಗವಾಗಿ ಬೆಂಗಳೂರಿಗೆ ಪ್ರಯಾಣ ಮಾಡಿದರು.

❦❦❦

ಮೈಸೂರು ಪಟ್ಟಣದಲ್ಲಿ ಮಿಷನ್ ಸೂಪರಿಂಟೆಂಡೆಂಟರಾಗಿ ಕಳೆದ ಆರು ವರುಷಗಳಿಂದಲೂ ಇದ್ದು ಆಸ್ಪತ್ರೆ ಸ್ಕೂಲು ದೇವಾಲಯವೇ ಮೊದಲಾದ ಹಲವು ರಮ್ಯ ಕಟ್ಟಡಗಳನ್ನು ಕಟ್ಟಿಸಿದ್ದಲ್ಲದೆ ಪ್ರಜಾಸತ್ಕಾರ್ಯಕ್ಕಾಗಿ ನಾನಾ ಪ್ರಯತ್ನಗಳನ್ನು ಮಾಡುತ್ತಿರುವ ರೆವ್. ಜೆ. ಡಬ್ಲಿಯು. ಸಾಡೇಥೋರೆಯವರು ಶರೀರಸೌಖ್ಯಕ್ಕೋಸ್ಕರ ಕೆಲವು ಕಾಲ ಸೀಮೆಗೆ ಹೋಗಿ ಬರಲು ನಾಳೆ ರಾತ್ರಿ ಇಲ್ಲಿಂದ ಪ್ರಯಾಣ ಮಾಡುವವರಾಗಿದ್ದಾರೆ. ಕಳೆದ ವಾರ ಇಲ್ಲಿನ ಮಿಷನ್ ಸಂಘದವರೂ ವಿಕ್ಟೋರಿಯಾ ಗರ್ಲ್ಸ್ ಸ್ಕೂಲಿನವರೂ ಮಿಷನ್ ಪಾಠಶಾಲೆಗಳ ಉಪಾಧ್ಯಾಯರೂ ಅವರನ್ನು ಬರಮಾಡಿಕೊಂಡು ಸಂತೋಷಸಭೆಗಳನ್ನು ನಡಿಸಿ, ವಿಜ್ಞಾಪನಾ ಪತ್ರಿಕೆಗಳನ್ನು ಓದಿ ಒಪ್ಪಿಸಿ ತಮ್ಮ ಕೃತಜ್ಞತೆ ಭಕ್ತಿವಿಶ್ವಾಸಾದಿಗಳನ್ನು ಪ್ರಕಾಶಪಡಿಸಿದರು. ಆಗ ಘನ ಸಾಡೇಥೋರೆಯವರು ಕ್ರೈಸ್ತ ಯೌವನಸ್ಥರಿಗಾಗಿ ಒಂದು ನಿಲಯವನ್ನೂ ಮಿಷನ್ ಸ್ಕೂಲುಗಳಲ್ಲಿ ಓದತಕ್ಕ ಪರಸ್ಥಳದ ಬಾಲಕರಿಗೆ ಒಂದು ವಿದ್ಯಾರ್ಥಿ ನಿಲಯವನ್ನೂ ಕಟ್ಟಿಸಿಕೊಡುವುದು ಅವಶ್ಯವಾಗಿದೆ ಎಂತಲೂ ಮಿಷನ್ ಸ್ಕೂಲ್ ಉಪಾಧ್ಯಾಯರಿಗೂ ಇತರ ನೌಕರರಿಗೂ ಪೆನ್ಷನ್ ಸಿಕ್ಕುವಂತೆ ಪ್ರಯತ್ನಪಡಬೇಕಾಗಿದೆ ಎಂತಲೂ ತಿಳಿಸಿದರು.

ಬಿಂಧ್ ರಾಜರ ಮೇಲೆ ಕ್ರಿಮಿನಲ್ ಮೊಕದ್ದಮೆ.

ಕೋರ್ಟಿನಲ್ಲಿ ದರ್ಯಾಪ್ತಿಯಾಗುತ್ತಿದೆ.

ಬೊಂಬಾಯಿ ಆಧಿಪತ್ಯಕ್ಕೆ ಸೇರಿದ ಬಿಂಧ್ ಎಂಬೊಂದು ಸಣ್ಣ ಸಂಸ್ಥಾನದಲ್ಲಿ ರಾಜರು ತಮ್ಮ ಕಾರ್ಭಾರಿ ಎಂಬ ಮುಖ್ಯ ಮಂತ್ರಿಯನ್ನು ಕೊಲ್ಲಿಸಬೇಕೆಂತಲೂ ಅವರ ಮನೆಯನ್ನು ಲೂಟಿ ಮಾಡಿಸಬೇಕೆಂತಲೂ ಮಸಲತ್ತು ಮಾಡಿ, ಅದಕ್ಕಾಗಿ ಜನಗಳನ್ನು ಎತ್ತಿ ಕಟ್ಟಿ ಫಿತೂರಿ ನಡಿಸುತ್ತಿದ್ದರೆಂದು ಒಂದು ಮೊಕದ್ದಮೆ ಬಂದಿದೆ ಇಂಥಾ ಸಂಗತಿಯು ಆ ಪ್ರಾಂತ್ಯದಲ್ಲೆಲ್ಲಾ ವಿಶೇಷ ಗಲಭೆಯನ್ನೂ ಕಳವಳವನ್ನೂ ಉಂಟುಮಾಡಿರುವುದೇನೂ ಆಶ್ಚರ್ಯವಲ್ಲ. ಬೊಂಬಾಯಿ ಗವರ್ನಮೆಂಟಿನವರು ಈ ಮೊಕದ್ದಮೆಯನ್ನು ಸರಿಯಾಗಿ ತನಿಖೆ ಮಾಡುವುದಕ್ಕೋಸ್ಕರ ಒಂದು ಸ್ಪೆಷಲ್ ಕೋರ್ಟನ್ನು ಸಾತಾರೆ ಪಟ್ಟಣದಲ್ಲಿ ಸ್ಥಾಪಿಸಿದರು. ಮೆ॥ ಎ. ಸಿ. ಲೋಗನ್, ಮೆ॥ ಕಿನ್‌ಕೇಡ್, ಭೋರ್ ಸಂಸ್ಥಾನದ ಧಣಿ (ರಾಜರು), ಈ ಮೂರು ಮಂದಿಯನ್ನು ಜಡ್ಜಿಗಳಾಗಿ ನೇಮಕಮಾಡಿದರು ಆದರೆ ಭೋರ್ ಸಂಸ್ಥಾನದ ಧಣಿಯು ತಮಗೆ ಜಡ್ಜಿಯ ಕೆಲಸ ನಡಿಸಲು ಇಷ್ಟವಿಲ್ಲವೆಂದು ರಾಜೀನಾಮೆ ಕೊಟ್ಟುಬಿಟ್ಟರು. ಆಗ ಬಿಂಧ್ ರಾಜರು ಬೊಂಬಾಯಿ ಗವರ್ನಮೆಂಟಿಗೆ ತಂತೀವರ್ತಮಾನ ಕೊಟ್ಟು, ತಮ್ಮ ಮೇಲೆ ಬಂದಿರುವ ಅಪರಾಧವನ್ನು ತನಿಖೆ ಮಾಡುವುದಕ್ಕೆ ಕುಳಿತುಕೊಳ್ಳುವ ಜಡ್ಜಿಗಳಿಬ್ಬರೂ ಯೂರೋಪ್ಯರೇ ಆಗಿರುತ್ತಾರೆಂತಲೂ, ಅವರ ಸಹಾಯಕ್ಕೆ ಇನ್ನೊಬ್ಬ ದೇಶೀಯ ರಾಜರನ್ನು ಆರಿಸಿ ನೇಮಕಮಾಡಿ ಕೊಡಬೇಕೆಂತಲೂ ಕೇಳಿಕೊಂಡರು. ಇದರಿಂದ ಫಲವೇನೂ ಆಗಲಿಲ್ಲ.

ಸಾತಾರೆಯ ಕಲೆಕ್ಟರ್ ಆಫೀಸ್ ಕಟ್ಟಡದಲ್ಲಿ ಈ ಮೊಕದ್ದಮೆ ಪ್ರಾರಂಭವಾಗಿ ಕಳೆದ ೩ನೆ ತಾರೀಖು ಬುಧವಾರದಿಂದ ಪ್ರತಿ ದಿನವೂ ಸಾಕ್ಷಿಗಳ ವಿಚಾರಣೆ ನಡೆಯುತ್ತಿದೆ ಸರ್ಕಾರದ ಕಡೆ ಮೆ॥ ಜಿ. ಎಸ್. ರಾವ್‌ಸನವರೂ ಮೆ॥ ಕಾರ್ಲೇಯವರೂ ವಕೀಲರಾಗಿರುವರು; ರಾಜರ ಪಕ್ಷದಲ್ಲಿ ಬ್ಯಾರಿಸ್ಟರ್ ಮೆ॥ ಬ್ರಾನ್‌ಸನ್‌ರವರೂ, ಮೆ॥ ರಾವ್‌ಜಿ ಆಬಾಜಿ ಖಾರೆಯವರೂ, ಮೆ॥ ಪಿ. ಬಿ ಖಾರೆಯವರೂ, ಮೆ॥ ಕಾರಂದಿಕರ್ ರವರೂ ಮೊಕದ್ದಮೆಯನ್ನು ನಡಸುವುದಕ್ಕೆ ಒಪ್ಪಿಕೊಂಡಿದ್ದಾರೆ. ಈ ರಾಜರ ಮೇಲೆ ಬಂದಿರುವ ಅಪವಾದವೇನೆಂದರೆ—ಕಳೆದ ೧೯೦೬ನೆ ಫೆಬ್ರವರಿ ೯ನೆ ತಾರೀಖಿನ ಬಾಗಾಯತ ರಾಜರು ಬೆಂಚಿ ಎಂಬ ಊರಿನ ಪೇದಾಯ ಮಾಂಗ್ ಎಂಬುವನನ್ನು ಬಿಡಾರಕ್ಕೆ ಕರೆದು, ಅವನು ಜನರನ್ನು ಒದಗಿಸಿ ಕೊಡುವ, ಅವರ ಸಹಾಯದಿಂದ ಕಾರ್ಭಾರಿಯ ಮನೆಯನ್ನು ಲೂಟಿ ಮಾಡುವಂತೆಯೂ ಅವರನ್ನು ಕೊಂದುಹಾಕುವಂತೆಯೂ ಪ್ರಯತ್ನಪಟ್ಟದ್ದೇ ಈ ರಾಜರ ಪ್ರೈವೆಟ್ ಸೆಕ್ರೆಟರಿಯಾಗಿದ್ದ ಬಾಲ್ತ ಇಂಗ್ಲೆ ಎಂಬಾತನು ನಾಲ್ಕಾರು ತಿಂಗಳಿಂದ ತಲೆತಪ್ಪಿಸಿಕೊಂಡು ವೇಷಮರೆಸಿಕೊಂಡು ಬೇರೆ ಹೆಸರುಗಳನ್ನಿಟ್ಟುಕೊಂಡು ಅಲೆಯುತ್ತಿದ್ದನು. ಕಡೆಗೆ ಅವನು ಸಾತಾರೆಯಲ್ಲೇ ಬಚ್ಚಿಟ್ಟುಕೊಂಡಿದ್ದ ಸಮಯದಲ್ಲಿ ಪೋಲೀಸಿನವರು ಗುಟ್ಟಾಗಿ ಹೋಗಿ ಅವನನ್ನು ಹಿಡಿದು ತಂದಿರುತ್ತಾರೆ.

ಮಹಾರಾಜರನ್ನು ಕೊಂದು ಹಾಕಿದ್ದು.

ಬಂಗಾಳಾ ಆಧಿಪತ್ಯಕ್ಕೆ ಸೇರಿದ ಭಾಗಲ್ಪುರ ಡಿಸ್ಟ್ರಿಕ್ಟಿನಲ್ಲಿ ಶೋಣವರ್ಷವೆಂಬ ಭಾರೀ ಜಮೀನ್‌ದಾರಿಯ ಧಣಿಯಾಗಿದ್ದ ಮಹಾರಾಜಾ ಹರವಲ್ಲಭ ನಾರಯಣ ಸಿಂಗ್ ರವರನ್ನು ದುಷ್ಟರ್‍ಯಾರೋ ಕೊಂದುಹಾಕಿದರೆಂದು ಕಳೆದ ವಾರ ತಿಳಿಸಿದ್ದೆವಷ್ಟೆ. ಈ ಕೊಲೆಯ ವಿಷಯವಾಗಿ ಈಚೆಗೆ ತಿಳಿದುಬಂದಿರುವ ವರ್ತಮಾನಗಳೇನೆಂದರೆ—

ಈ ಮಹಾರಾಜರವರು ಕೆಲವು ಕಾಲದಿಂದೀಚೆಗೆ ತಮ್ಮನ್ನು ಕೊಲೆಗಾರರು ಕೊಲ್ಲುವದಕ್ಕೆ ಸಮಯನಿರೀಕ್ಷಣೆ ಮಾಡುತ್ತಿದ್ದಾರೆಂಬ ಭೀತಿ ಪಡುತ್ತಿದ್ದಂತೆ ತಿಳಿಯುತ್ತದೆ. ಅವರು ತಮ್ಮ ಜಮೀನುಗಳಿಗೆ ತಾವೇ ಸ್ವತಃ ಹೋಗಿ ರೈತರಿಂದ ಖುದ್ದಾಗಿ ಕಂದಾಯ ಕಾಣಿಕೆಗಳನ್ನು ವಸೂಲ್ಮಾಡುತ್ತಿದ್ದರು ಕಡೆಯ ಸಲ ಅವರು ಸಂಚಾರ ಮಾಡಿಕೊಂಡು ರೈತರಿಂದ ೩೬,೦೦೦ ರೂಪಾಯಿ ತನಕ ವಸೂಲು ಮಾಡಿ ಜತ್ತರಿಟ್ಟುಕೊಂಡಿದ್ದರು ಆ ಪೈಕಿ ಎಷ್ಟು ಹಣವನ್ನು ಕೊಲೆಗಾರರು ಅಪಹರಿಸಿದರೋ ಗೊತ್ತಾಗಲಿಲ್ಲ ಆದರೆ ಅವರ ಬಳಿ ಇದ್ದ ಹಣದಲ್ಲಿ ಬಹು ಭಾಗ ಇದ್ದೇ ಇದೆ ಎಂದು ತಿಳಿದು ಬಂದಿದೆ ಮರಣಕರವಾದ ಆ ಗುಂಪಿನೇಟು ತಗಲಿದ ಒಡನೆಯೇ ಮಹಾರಾಜರವರು ತಾವು ಬದುಕುವುದಿಲ್ಲವೆಂದು ತಿಳಿದುಕೊಂಡು, ತಮ್ಮ ತರುವಾಯ ತಮ್ಮ ಜಹಗೀರಿಗೆ ತಮ್ಮ ಮೊಮ್ಮಗನನ್ನು ಧಣಿಯಾಗಿ ನೇಮಕ ಮಾಡಬೇಕೆಂದು ನಾಮಕರಣ ಮಾಡಿದರು ಆ ಗುಂಡು ಅವರಿಗೆ ಬೆನ್ನ ಕಡೆಯಿಂದ ತಗಲಿ ಬಹು ಭಯಂಕರವಾದ ಗಾಯ ಮಾಡಿತು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರೂ ಸಿವಿಲ್ ಸರ್ಜನರೂ ಹೋಗಿ ಶವವನ್ನು ಚೆನ್ನಾಗಿ ಅಟಾಪ್ಸಿ ಮಾಡಿ, ದಹನ ಮಾಡಿಸಿದರು ಅವರ ಸೇವಕಾಳಿಗಳಲ್ಲಿ ಯಾವನೋ ಒಬ್ಬನು ಅವರನ್ನು ಕೊಂದು ಹಾಕಿರಬೇಕೆಂದು ಗುಮಾನಿ ಹುಟ್ಟಿ ಬಂದದ್ದರಿಂದ ಅವರಲ್ಲಿ ಇಬ್ಬರನ್ನು ಹಿಡಿದು ಸೆರೆ ಹಾಕಿಕೊಂಡು ಇನ್ನೊಬ್ಬನನ್ನು ತಲಾಷ್ ಮಾಡುತ್ತಿದ್ದಾರೆ ಈ ಕೊಲೆಗಾರರನ್ನು ಪತ್ತೆ ಮಾಡುವುದಕ್ಕೋಸ್ಕರ ಒಬ್ಬ ಪೋಲೀಸ್ ಉದ್ಯೋಗಸ್ಥನನ್ನೇ ಕೆಲವು ದಿನ ಅಲ್ಲೇ ಬಿಟ್ಟಿದ್ದಾರೆ ಇದಲ್ಲದೆ ಗತಿಸಿದ ಮಹಾರಾಜರವರ ಅರಮನೆ ಅವರ ಚರಜಂಗಮವೇ ಮೊದಲಾದ ಆಸ್ತಿಯನ್ನು ಭದ್ರವಾಗಿ ಕಾಪಾಡುವುದಕ್ಕೆ ಹತ್ತು ಮಂದಿ ದೊಡ್ಡ ಮನುಷ್ಯರನ್ನು ಕಾವಲಿಟ್ಟಿದ್ದಾರೆ

ಭಾಗಲ್ಪುರ ಡಿಸ್ಟ್ರಿಕ್ಟಿನಲ್ಲಿ ಈಚೆಗೆ ೨-೩ ತಿಂಗಳಿಂದ ಕೊಲೆಗಾರರ ಕಾಟ ಹೆಚ್ಚಿರುವಂತೆ ತಿಳಿಯುವುದು ಕೆಲವು ದಿನಗಳ ಕೆಳಗೆ ಭಾಗಲ್ಪುರದಲ್ಲಿ ಪ್ರಸಿದ್ಧವಾದ ಮತ್ತು ಮಹದೈಶ್ವರ್ಯಯುಕ್ತವಾದ ಒಂದು ಸಂಸಾರದಲ್ಲಿ ೮ ವರುಷದ ಒಬ್ಬ ಹುಡುಗನು ಕೊಲೆಯಾದನು, ಹಗಲಿನಲ್ಲಿ ರಾಜಾರೋಷವಾಗಿ ಕೊಲೆಗಾರರು ಅವನನ್ನು ಕೊಂದುಬಿಟ್ಟರು. ಶವವೇನೋ ಸಿಕ್ಕಿತು; ಆದರೆ ಅದರ ಮೈಮೇಲಿನ ಒಂದು ಆಭರಣವಾದರೂ ಇರಲಿಲ್ಲ. ಎರಡನೆಯದಾಗಿ ಒಬ್ಬ ದುರ್ಕಾಲಿನ ಸ್ತ್ರೀಯ ಕೊಲೆಯಾಯಿತು ಇದು ಯಾರಿಂದ ಹ್ಯಾಗೆ ಏತಕ್ಕಾಗಿ ನಡೆಯಿತೋ ಇದುವರಿಗೂ ತಿಳಿಯಲಿಲ್ಲ. ಪೋಲೀಸಿನವರು ಒಬ್ಬ ಮನುಷ್ಯನನ್ನು ಹಿಡಿದು ಅವನೇ ಅವಳನ್ನು ಕೊಂದನೆಂದು ಮೊಕದ್ದಮೆ ತಂದರು. ಆದರೆ ರುಜುವಾತು ಬರಲಿಲ್ಲವಾದ್ದರಿಂದ ಜಡ್ಜಿಯವರು ಅವನನ್ನು ಬಿಟ್ಟು ಬಿಟ್ಟರು. ಮೂರನೆಯದಾಗಿ ಸುಂದರಲಾಲನೆಂಬೊಬ್ಬ ಹೆಸರುವಾಸಿಯಾದ ವರ್ತಕನು ಕೊಲ್ಲಲ್ಪಟ್ಟನು ಪೋಲೀಸಿನವರು ಮೂರು ಮಂದಿಯನ್ನು ಹಿಡಿದು ಅವರೇ ಈ ಖೂನಿ ನಡಸಿದರೆಂದು ಕೇಸು ಮೊಕದ್ದಮೆ ಮಾಡಿದ್ದಾರೆ, ನಾಲ್ಕನೆಯ ಸಂಗತಿಯು ಬಹು ವಿಚಿತ್ರವಾದದ್ದೆಂದು ಹೇಳಬಹುದು. ಒಬ್ಬ ಬ್ಯಾರಿಸ್ಟರು ತನ್ನ ಬಂಗಲೆಯಲ್ಲಿ ಕುಳಿತಿರುವಾಗ್ಗೆ ಅವನ ಕಾಸ್ತಾರನು ಕುದುರೆಯನ್ನು ಎದುರಿಗೆ ರಸ್ತೆಯಲ್ಲಿ ಅಲಾಯಿಸುತ್ತಿದ್ದನು. ಇದ್ದಕ್ಕಿದ್ದ ಹಾಗೇ ನಾಲ್ವರು ಬಂದು ಆ ಕಾಸ್ತಾರನ ಮೇಲೆ ಬಿದ್ದು ಅವನನ್ನು ಘೋರಾ ಹೊಡೆದು ಗಾಯ ಮಾಡಿದರು ಆ ಪೈಕಿ ಒಬ್ಬನನ್ನು ಹಿಡಿದು ಬಂಗಲೆಯೊಳಕ್ಕೆ ಕರೆದು ತಂದರು. ಉಳಿದ ಮೂರು ಮಂದಿಯೂ ಬೀದಿಯಲ್ಲಿ ನಿಂತುಕೊಂಡು ತಿರುಗಾಡುವವರನ್ನೆಲ್ಲಾ ಬಹಳವಾಗಿ ಗಾಬರಿಪಡಿಸಲಾರಂಭಿಸಿದರು ಕಡೆಗೆ ಪೋಲೀಸ್ ಅಧಿಕಾರಿ ಬಂದು ಆ ಹಿಡಿದಿದ್ದ ಮನುಷ್ಯನನ್ನು ತನಿಖೆ ಮಾಡಿದಾಗ ಅವನು ರಿಸರ್ವ್ ಪೋಲೀಸ್ ಹೆಡ್ ಕಾನ್‌ಸ್ಟೇಬಲೆಂದು ಗೊತ್ತಾಯಿತು. ಅವನು ತಾನೊಬ್ಬನೇ ಆ ಕಾಸ್ತಾರನನ್ನು ಹೊಡೆದ ಹಾಗೂ ಉಳಿದ ಮೂವರು ತನಗೆ ಸಂಬಂಧಪಟ್ಟವರಲ್ಲವೆಂತಲೂ ಅವರನ್ನು ತಾನು ಕಾಣೆನೆಂತಲೂ ಹೇಳಿದ್ದಾನೆ. ಈ ವಿಚಾರಗಳೆಲ್ಲಾ ಪ್ರಜೆಗಳಲ್ಲಿ ಬಹಳ ಆಶ್ಚರ್ಯವನ್ನೂ ವಿಶೇಷ ಭೀತಿಯನ್ನೂ ಉಂಟುಮಾಡಿರುತ್ತವೆ ಈ ವಿಷಯದಲ್ಲಿ ಗವರ್ನಮೆಂಟಿನವರು ಯಾವ ಏರ್ಪಾಡು ಮಾಡುವರೋ ಮುಂದೆ ನೋಡಬೇಕು

ಇಂಡಿಯಾ ದೇಶದ ವೃತ್ತಾಂತಗಳು.

ಪುದುಕೋಟೆಯ ದಿವಾನರವರು ಆ ಸಂಸ್ಥಾನದಲ್ಲಿ ಸಮಸ್ತ ಬಾಲಕರಿಗೂ ಧರ್ಮಾರ್ಥವಾಗಿ ಫೀಜಿಲ್ಲದೆ ಸರ್ಕಾರಿ ಖರ್ಚಿನಿಂದಲೇ ವಿದ್ಯೆ ಕಲಿಸಬೇಕೆಂದು ಏರ್ಪಾಡು ಮಾಡುತ್ತಿದ್ದಾರೆ

❦❦❦

ಬೊಂಬಾಯಿ ಮ್ಯುನಿಸಿಪಾಲಿಟಿಯವರು ಆ ಪಟ್ಟಣದ ಪ್ರಜೆಗಳಿಗೋಸ್ಕರ ೨೫ ಸ್ಥಳಗಳಲ್ಲಿ ಸ್ನಾನಘಟ್ಟಗಳನ್ನು ಕಟ್ಟಿಸಿಕೊಡಬೇಕೆಂದು ೩೬,೦೦೦ ರೂಪಾಯಿ ಸ್ಯಾಂಕ್ಷನ್ ಮಾಡಿದ್ದಾರೆ.

❦❦❦

ಭವಾನಿಪುರದಲ್ಲಿ ೫೫ ವಯಸ್ಸಿನ ಕಲ್ಲಾಚಂದ್ ಎಂಬುವನು ೨೬ ವರುಷದ ತನ್ನ ಮೂರನೆಯ ಹೆಂಡತಿಯ ಮೇಲೆ ಅಪನಂಬಿಕೆ ಪಟ್ಟು ಅವಳನ್ನು ಕೊಂದುಬಿಟ್ಟು ತಾನೂ ನೇಣುಹಾಕಿಕೊಂಡು ಪ್ರಾಣಬಿಟ್ಟನು

❦❦❦

ಕಲ್ಕತ್ತೆಯಲ್ಲಿ ಹರಿದಾಸ್ ಪಾಲ್ ಎಂಬ ಬಂಗಾಳಿ ವರ್ತಕನು ಲೈಸೆನ್ಸು ಪಡೆಯದೇನೇ ಲಕ್ಷಾಂತರ ಬೀಪದಕಡ್ಡಿ ಪಟ್ಟಣಗಳನ್ನು ಅಂಗಡಿಯಲ್ಲಿ ತುಂಬಿಕೊಂಡಿದ್ದನು ಮ್ಯಾಜಿಸ್ಟ್ರೇಟರು ಅವನಿಗೆ ಜುಲ್ಮಾನೆ ವಿಧಿಸಿರುತ್ತಾರೆ.

❦❦❦

ಮೋಟರ್ ಕಾರ್ ಎಂಬ ಸ್ವತಂತ್ರವಾಗಿ ಓಡತಕ್ಕ ಗಾಡಿಗಳು ಹಿಂದುಸ್ಥಾನದಲ್ಲಿ ಬಹಳವಾಗಿ ಹೆಚ್ಚುತ್ತಿವೆ ಕಲ್ಕತ್ತಾ ಪಟ್ಟಣದಲ್ಲಿ ರುವವರು ೫೦೦ ಗಾಡಿಗಳನ್ನೂ, ಬೊಂಬಾಯಿನಲ್ಲಿರತಕ್ಕವರು ೮೦೦ ಗಾಡಿಗಳನ್ನೂ, ಮದರಾಸಿನವರು ೩೦ ಗಾಡಿಗಳನ್ನೂ ಇಟ್ಟಿರುತ್ತಾರೆ

❦❦❦

ಬೊಂಬಾಯಿ ಪಟ್ಟಣದಲ್ಲಿ ಬೀದಿಗಳಲ್ಲಿ ಏಳುವ ಧೂಳನ್ನು ಅಣಗಿಸುವುದಕ್ಕೆ ಮ್ಯುನಿಸಿಪಾಲಿಟಿಯವರು ಕೆರೋಸಿನ್ ಎಂಬ ದೀಪದ ಎಣ್ಣೆಯನ್ನು ಕೆಲವು ಕಡೆ ಚಲ್ಲಿಸುತ್ತಿದ್ದರು ಈಗ ಈ ಎಣ್ಣೆಗೆ ಬದಲಾಗಿ ಟಾರ್ ಎಂಬ ಗಟ್ಟಿ ಎಣ್ಣೆಯನ್ನು ಹಾಕಿಸಿದರೆ ಇನ್ನೂ ಅನುಕೂಲವೆಂದು ಆಲೋಚನೆ ಮಾಡಿ, ಒಂದೆರಡು ಬೀದಿಗಳಿಗೆ ಹಾಕಿಸಿ ಪರೀಕ್ಷಿಸುತ್ತಿದ್ದಾರೆ

❦❦❦

ಕರಾಚಿಪಟ್ಟಣದ ರೈಲ್ವೆಕಾರ್ಖಾನೆಯ ಮ್ಯಾನೆಜರು ಮೆ॥ ಲಿಂಡ್ಸೆ ಎಂಬಾತನು ತನ್ನ ಮಗನನ್ನು ಅಲ್ಲಿನ ಪಾಠಶಾಲೆಗೆ ಕಳುಹಿಸುತ್ತಿದ್ದನು. ಹೆಡ್ ಮಾಸ್ಟರ್ ಮೆ॥ ಬೆಟ್ಹಾಂ ಎಂಬಾತನು ಆ ಹುಡುಗನ ಅವಿಧೇಯತ್ವವನ್ನು ನೋಡಿ ಶಿಕ್ಷೆಮಾಡಿದನು. ತಂದೆಯು ಹೆಡ್ ಮಾಸ್ಟರ ಮೇಲೆ ಮೊಕದ್ದಮೆ ತಂದನು ಮ್ಯಾಜಿಸ್ಟ್ರೇಟರು ಆ ಹೆಡ್ ಮಾಸ್ಟರಿಗೆ ಎರಡು ರೂಪಾಯಿ ಜುಲ್ಮಾನೆ ವಿಧಿಸಿದರು.

❦❦❦

ಹಿಂದುಸ್ಥಾನದಲ್ಲಿ ಆಚೇ ವಾರ ೬೨,೧೫೫ ಜನರಿಗೆ ಪ್ಲೇಗ್ ತಗಲಿತು. ೫೩,೦೦೩ ಮಂದಿ ಮೃತಪಟ್ಟರು. ಬೇರೆ ಬೇರೆ ಆಧಿಪತ್ಯಗಳಲ್ಲಿ ಈ ಉಪದ್ರತಗಲಿದ ಮತ್ತು ಸತ್ತವರ ಸಂಖ್ಯೆ ಎಷ್ಟೆಂದರೆ— ಬೊಂಬಾಯಿ ಆಧಿಪತ್ಯ ೬.೪೬೧—೪,೮೧೧; ಮದರಾಸ್ ಆಧಿಪತ್ಯ ೨೧-೧೨, ಬಂಗಾಳಾ ೫,೩೯೪-೪ ೬೭೦; ಸಂಯುಕ್ತ ಆಧಿಪತ್ಯಗಳು ೧೯,೫೪೨ ೧೩,೯೪೬, ಪಂಜಾಬ್ ೨೬,೯೫೪—೨೩,೪೮೮, ಬಿಹಾರ್ ೩೩೦-೩೧೭, ಮಧ್ಯಪ್ರಾಂತ್ಯಗಳು ೨,೪೫೯-೨೦೧೮

❦❦❦

ಕಲ್ಕತ್ತಾ ಪಟ್ಟಣದಲ್ಲಿ ಒಬ್ಬ ಯೂರೋಪ್ಯರ್ ಪೋಲೀಸ್ ಇನ್‌ಸ್ಪೆಕ್ಟರು ತನ್ನ ಠಾಣಾ ಸರಹದ್ದಿನಲ್ಲಿ ಒಬ್ಬ ಮಹಮದೀಯ ವರ್ತಕನಿಗೆ ಕೈಚೀಟಿ ಬರೆದುಕೊಟ್ಟು ಅವನಿಂದ ೧೭೫ ರೂಪಾಯಿ ಸಾಲಾ ತೆಗೆದುಕೊಂಡಿದ್ದನು ಈ ಚೀಟಿಯು ಪೋಲೀಸ್ ಕಮಿಷನರ ವಶಕ್ಕೆ ಸಿಕ್ಕಿತು. ಅವರು ಆ ಇನ್‌ಸ್ಪೆಕ್ಟರನ್ನು ಕರಸಿ ಕೇಳಿದಾಗ ಇನ್‌ಸ್ಪೆಕ್ಟರು ಮಹಮದೀಯನಿಂದ ಸಾಲ ತೆಗೆದುಕೊಂಡದ್ದು ನಿಜವೆಂದು ಒಪ್ಪಿಕೊಂಡನು. ಕಮಿಷನರು ಅದಕ್ಕಾಗಿ ಆ ಇನ್‌ಸ್ಪೆಕ್ಟರನ ಕೂಡಲೇ ಕಂಪರಾ ಮಾಡಿರುತ್ತಾರೆ.

❦❦❦

ಬರ್ಮಾ ಆಧಿಪತ್ಯದಲ್ಲಿ ಗವರ್ನಮೆಂಟಿನವರು ಉಪ್ಪಿನ ತೆರಿಗೆಯನ್ನು ಮಣಕ್ಕೆ ಒಂದೇ ರೂಪಾಯಿನಂತೆ ವಸೂಲ್ಮಾಡುತ್ತಿದ್ದಾರೆ ಹಿಂದೆ ಪೂರ್ವಕಾಲದಿಂದಲೂ ನಡೆದುಬಂದಿರುವಂತೆ ಜನರಿಗೆ ತಲೆತೆರಿಗೆಯನ್ನು ಹಾಕಿ ವಸೂಲ್ಮಾಡುವರು ಈ ತೆರಿಗೆಯ ವಿಷಯದಲ್ಲಿ ಪ್ರಜೆಗಳು ಅಸಮಾಧಾನಪಡದೆ ಕೊಡುತ್ತಿದ್ದಾರೆ ಈಗ ಬರ್ಮಾದಲ್ಲೂ ಹಿಂದುಸ್ಥಾನದಲ್ಲೂ ಉಪ್ಪಿನ ತೆರಿಗೆ ಮಣಕ್ಕೆ ಒಂದೇ ರೂಪಾಯಿ ಆಗಿರುವುದನ್ನು ನೋಡಿ ಗವರ್ನಮೆಂಟನವರು ಆ ತಲೆತೆರಿಗೆಯನ್ನು ವಜಾ ಮಾಡಬಹುದೆಂದು ಅಲ್ಲಿನ ಪತ್ರಿಕೆಗಳು ಊಹಿಸುತ್ತವೆ

❦❦❦

ಕಲ್ಕತ್ತಾ ಪಟ್ಟಣದಲ್ಲಿ ಜೈಲಿನಿಂದ ಬಿಡುಗಡೆ ಹೊಂದಿದಂಥ ಖೈದಿಗಳು ಮತ್ತೆ ಕೆಟ್ಟಕೃತ್ಯಗಳನ್ನು ನಡಿಸದಂತೆ ಅಂಥವರಿಗೆ ಸರಿಯಾದ ಜೀವನೋಪಾಯ ನಡಿಯುವ ಏರ್ಪಾಡುಮಾಡಿಕೊಟ್ಟು ಸತ್ಪ್ರಜೆಗಳಾಗಿರುವಂತೆ ಪ್ರೋತ್ಸಾಹ ಬುದ್ಧಿಬೋಧನೆ ಸಹಾಯಾದಿಗಳನ್ನು ಮಾಡುವುದಕ್ಕಾಗಿ ಈಗಷ್ಟೇ ಒಂದು ಸಂಘವು ಏರ್ಪಟ್ಟಾಗಿದೆ. ಲೆಫ್ಟಿನೆಂಟ್ ಗವರ್ನರವರು ಈ ಸಂಘದ ಪ್ರೆಸಿಡೆಂಟರಾಗಿದ್ದಾರೆ. ಹಿಂದು ಮಹಮದೀಯ, ಯೂರೋಪ್ಯರ್ ದೊಡ್ಡಮನುಷ್ಯರೂ ವರ್ತಕರೂ ಮೆಂಬರುಗಳಾಗಿದ್ದುಕೊಂಡು ಅವಶ್ಯವಾದ ಏರ್ಪಾಡುಗಳನ್ನು ನಡಸುತ್ತಿರುವರು.

❦❦❦

ಬರ್ಮಾ ಆಧಿಪತ್ಯದಲ್ಲಿ ಕಾಗದಗಳನ್ನು ತಯಾರ್ಮಾಡುವುದಕ್ಕೆ ಅಲ್ಲಿನ ಗಿಡಗಳೂ ಪದಾರ್ಥಗಳೂ ತುಂಬಾ ಅನುಕೂಲವಾಗಿರುತ್ತವೆಂದು ಒಬ್ಬ ಸರ್ಕಾರಿ ಅಧಿಕಾರಿಯು ಪರೀಕ್ಷೆ ಮಾಡಿ ರಿಪೋರ್ಟು ಮಾಡಿದ್ದರಿಂದ ಇಂಡಿಯಾ ಗವರ್ನಮೆಂಟಿನವರು ಅಂಥಾ ಕಾಗದಗಳ ತಯಾರಿಗಾಗಿ ಕಾರ್ಖಾನೆಗಳನ್ನಿಡುತ್ತೇವೆಂದು ಒಪ್ಪಿಬರುವ ಸಾಹುಕಾರರಿಗೆ ಕೆಲವು ರಿಯಾಯ್ತಿಗಳನ್ನು ತೋರಿಸುವುದಾಗಿ ಅಪ್ಪಣೆ ಕೊಡಿಸಿದ್ದಾರೆ ಇದರಿಂದ ಬರ್ಮಾ ಆಧಿಪತ್ಯದಲ್ಲಿ ಇಷ್ಟರೊಳಗೇ ಕೆಲವು ಕಾಗದ ತಯಾರಾಗತಕ್ಕ ಕಾರ್ಖಾನೆಗಳು ಸ್ಥಾಪಿಸಲ್ಪಡಬಹುದೆಂದು ನಿರೀಕ್ಷಿಸುತ್ತೇವೆ.

❦❦❦

ಪೂನಾ ಪಟ್ಟಣದಲ್ಲಿ ಮ್ಯುನಿಸಿಪಾಲಿಟಿಯವರು ಮನೆಗಳ ಕಂದಾಯವನ್ನು ಪುನರ್ವಿಮರ್ಶೆಮಾಡಿ, ದರಗಳನ್ನು ಹೆಚ್ಚಿಸಿರುತ್ತಾರೆ. ಅಲ್ಲಿನ ಪ್ರಜೆಗಳು ಸುಮಾರು ೫೦೦ ಮಂದಿ ಸಭೆಸೇರಿ ಈ ವಿಷಯವನ್ನು ಚರ್ಚೆಮಾಡಿದರು ಸಭಾ ನಾಯಕರಾಗಿದ್ದ ಮೆ॥ ಸ್ಟ್ಯಾಡ್ಲಿಂಗ್ ರವರು ಸಭಿಕರನ್ನು ಕುರಿತು—ನಮ್ಮ ಮ್ಯುನಿಸಿಪಾಲಿಟಿಯು ಈಸ್ಟ್ ಇಂಡಿಯಾ ಕಂಪನಿಯ ಹಾಗಾಗಿದೆ. ಕಂದಾಯದ ದರಗಳನ್ನು ತಮ್ಮ ಮನಸ್ಸಿಗೆ ಬಂದಂತೆ ಹೆಚ್ಚು ಮಾಡಿರುತ್ತಾರೆ. ಈ ಭಾಗದಲ್ಲಿ ನಾವೆಲ್ಲಾ ಗವರ್ನಮೆಂಟಿಗೆ ಅರ್ಜಿ ಬರೆದುಕೊಳ್ಳಬೇಕು ಎಂದು ಹೇಳಿದರು. ಸಭಿಕರೆಲ್ಲಾ ಒಪ್ಪಿ ಸಮ್ಮತಿ ಹಾಕಿದರು

❦❦❦

ಲಾಹೋರ್ ಪಟ್ಟಣದ ಒಂದು ವಿದ್ಯಾಶಾಲೆಯಲ್ಲಿ ಕೆಲವು ಕಾಲದಿಂದ ಜರ್ಮನ್ ಭಾಷೆಯನ್ನು ಕಲಿಸುವುದಕ್ಕೆ ಒಬ್ಬ ಉಪಾಧ್ಯಾಯರನ್ನು ನೇಮಕಮಾಡಿದ್ದರು ಈ ವಿದ್ಯೆ ಕಲಿಯುವ ವಿದ್ಯಾರ್ಥಿಗಳ ಸಂಖ್ಯೆಯು ಯಾವಾಗಲೂ ೫-೬ ಕ್ಕಿಂತ ಹೆಚ್ಚಲೇ ಇಲ್ಲ. ಆದರೂ ಆ ತರಗತಿಯನ್ನು ನಡಸುತ್ತಲೇ ಬಂದರು ಈ ೩-೪ ವಾರಗಳ ಕೆಳಗೆ ಆ ಭಾಷಾ ಬೋಧಕನು ಕೆಲಸಕ್ಕೆ ರಾಜೀನಾಮೆಕೊಟ್ಟುಬಿಟ್ಟನು ಹಿಂದುಸ್ಥಾನದವರು ಜರ್ಮನರನ್ನು ಹೊಗಳಿ ಅವರಂತೆಯೇ ತಾವು ಆಗಬೇಕೆಂದು ಬಾಯಿಮಾತನ್ನು ಆಡುತ್ತಿದ್ದಾರಷ್ಟೆ. ಅವರ ಭಾಷೆಯನ್ನು ಕಲಿಯುವುದರಲ್ಲೇ ಇಷ್ಟು ಅನಾದರಣೆ ಮಾಡಿದ ಮೇಲೆ ಇತರವಿಷಯಗಳು ಹ್ಯಾಗೆ ಸಾಧ್ಯವಾದಾವು?

❦❦❦

ಕಲ್ಕತ್ತಾ ಪಟ್ಟಣದಲ್ಲಿ ಬಟ್ಟೆಗಳನ್ನು ತಯಾರ್ಮಾಡುವವುಕ್ಕೆ ಕೆಲವು ದೊಡ್ಡ ಮನುಷ್ಯರು ಸೇರಿ ಒಂದು ಸ್ವದೇಶೀ ಕಾರ್ಖಾನೆಯನ್ನು ಸ್ಥಾಪಿಸಿದರು ಈ ಕಾರ್ಖಾನೆಯಲ್ಲಿ ಯೂರೋಪ್ಯರನ್ನು ನೌಕರರನ್ನಾಗಿ ನೇಮಿಸಲಿಲ್ಲ ಬಂಗಾಳಿಗಳೇ ಎಲ್ಲಾ ಕೆಲಸಗಳನ್ನೂ ಮಾಡಿಕೊಳ್ಳುತ್ತಾ ಬಂದರು ಆದರೆ ಈ ಕಾರ್ಖಾನೆಯ ನಾಲ್ವರ ಮುಖ್ಯ ನೌಕರರು ಅಂದರೆ ಸೂಪರಿಂಟೆಂಡೆಂಟ್, ಮ್ಯಾನೆಜಿಂಗ್ ಡೈರೆಕ್ಟರ್, ಮ್ಯಾನೆಜಿಂಗ್ ಏಜಂಟ್, ಗುಮಾಸ್ತೆ ಎಂಬೀ ನಾಲ್ವರು ಬಂಗಾಳಿಗಳೂ ಕಾರ್ಖಾನೆಯ ಲೆಕ್ಕಕ್ಕೆ ಕೆಲವು ಪ್ರಯಾಣದ ಭತ್ಯ ಮುಂತಾದ ಖರ್ಚುಗಳನ್ನು ದಾಖಲ್ ಮಾಡಿ, ಸಾವಿರ ರೂಪಾಯಿಗಿಂತಲೂ ಹೆಚ್ಚಾಗಿ ತಿಂದು ಬಿಟ್ಟರು ಇದು ಈಗ ಮೊಕದ್ದಮೆ ಆಗಿದೆ

❦❦❦

ಪಂಜಾಬ್ ಆಧಿಪತ್ಯದಲ್ಲಿ ಗವರ್ನಮೆಂಟನವರು ಜಮೀನ್ ಸಾಗುವಳಿಗಾಗಿ ರೈತರಿಗೆ ಕೊಡುವ ನೀರಿಗೆ ತೆರಿಗೆಯ ದರವನ್ನು ಸ್ವಲ್ಪ ಹೆಚ್ಚು ಮಾಡಿದರು. ಕಳೆದ ವಾರ ಇದನ್ನು ಪ್ರತಿಭಟಿಸುವುದಕ್ಕೆ ಲಾಹೋರ್ ಡಿಸ್ಟ್ರಿಕ್ಟಿನ ಹಿಂದುಗಳು, ಮಹಮದೀಯರು, ಸಿಕ್ಕರು ಸುಮಾರು ೧೨,೦೦೦ ಮಂದಿ ಸಭೆ ಸೇರಿ, ಬೆಳಿಗ್ಗೆ ೧೦ ಘಂಟೆಯಿಂದ ಸಾಯಂಕಾಲ ೪ ಗಂಟೆಯ ತನಕ ಮೀಟಿಂಗ್ ನಡಿಸಿದರು. ನೀರಿನ ದರವು ಹೆಚ್ಚಾಗಿದೆ ಎಂಬ ವಿಷಯದಲ್ಲೂ ಅದರಿಂದ ರೈತರಿಗೆ ಆಗುವ ನಷ್ಟ ಕಷ್ಟಗಳ ವಿಷಯದಲ್ಲೂ ಬಹು ಜನ ರೈತರೇ ಎದ್ದು ಸಭಿಕರಿಗೆ ವಿವರಿಸಿದರು ಕಡೆಯಲ್ಲಿ ಎಲ್ಲಾ ಸಭಿಕರೂ ಒಪ್ಪಿ ಈ ತೆರಿಗೆಯ ದರವನ್ನು ಮೊದಲಿದ್ದಷ್ಟಕ್ಕೇ ಇಳಿಸಿಕೊಡಬೇಕೆಂತಲೂ ಇಲ್ಲವಾದರೆ ಜಮೀನಿಗೆ ನೀರು ಬಿಡಬೇಕಾದ ಅಗತ್ಯವಿಲ್ಲವೆಂತಲೂ ತೀರ್ಮಾನ ಮಾಡಿಕೊಂಡು, ಈ ತೀರ್ಮಾನವನ್ನು ಪಂಜಾಬ್ ಮತ್ತು ಇಂಡಿಯಾ

ರ್ಲಾಮೆಂಟುಗಳಿಗೂ ವಿಲಾಯತಿಯಲ್ಲಿರುವ ಸ್ಟೇಟ್ ಸೆಕ್ರೆಟರಿ ಮಿ॥ ಮಾರ್ಲಿಯವರಿಗೂ ತಂತೀ ವರ್ತಮಾನಗಳ ಮೂಲಕ ಅರಿಕೆ ಮಾಡಿಕೊಂಡಿರುತ್ತಾರೆ

❖❖❖

ರಂಜಿತ್‌ಸಿಂಗ್‌ಜೆಯವರಿಗೆ ಜಾಂನಗರ ಸಂಸ್ಥಾನದ ರಾಜ್ಯಾಭಿಷೇಕವಾದ ಒಡನೆಯೇ ಅವರು ತಮ್ಮ ಸಂಸ್ಥಾನದಲ್ಲಿ ಪ್ಲೇಗ್ ಉಪದ್ರವ್ರ ಹರಡುತ್ತಾ ಹಾವಳಿ ಮಾಡುತ್ತಾ ಇರುವುದನ್ನು ನೋಡಿ, ಪ್ರಜೆಗಳ ಮುಖಂಡರನ್ನೂ ಅಧಿಕಾರಿಗಳನ್ನೂ ದಿವಾನರನ್ನೂ ಕರೆಸಿ ಮಾತುಕೊಟ್ಟು ಏರ್ಪಾಡು ಮಾಡಿರುವುದೇನೆಂದರೆ—ಪ್ರಜೆಗಳಿಗೆ ಬೇಕಾದ ಸಹಾಯವನ್ನೆಲ್ಲಾ ಕೊಟ್ಟು ಪ್ರೋತ್ಸಾಹಪಡಿಸಿ ಜೋಪಡಿಗಳನ್ನು ಕಟ್ಟಿಕೊಟ್ಟು ಮ್ಯುನಿಸಿಪಲ್ ಏರ್ಪಾಡೂ ಪೋಲೀಸ್ ಪಹರೆಯೂ ಇಡಿಸುತ್ತಾರೆ ಯಾರನ್ನೂ ಯಾವ ಭಾಗದಲ್ಲೂ ಸ್ವಲ್ಪವೂ ಬಲಾತ್ಕರಿಸುವುದಿಲ್ಲ ಬಿಟ್ಟ ಮನೆಗಳನ್ನು ಸರ್ಕಾರಿ ಪಹರೆ ಇಟ್ಟು ಶುದ್ಧಿಮಾಡಿಸುತ್ತಿದ್ದಾರೆ ಹೊಸದಾಗಿ ಅನೇಕ ವೈದ್ಯರನ್ನು ನೇಮಕಮಾಡಿ ಧಾರಾಳವಾಗಿ ಔಷಧ ಕೊಡಿಸುವರು

❖❖❖

ಕಲ್ಕತ್ತಾ ಪಟ್ಟಣದ ಪ್ರಾವಿಡೆಂಟ್ ಇನ್ಸ್ಟಿಟ್ಯೂಷನ್ ಎಂಬ ನಿಧಿಯ ಮ್ಯಾನೇಜರ್ ಬೋಸ್, ಪ್ರೊಪ್ರೈಟರ್ ಮಿತ್ರ, ಎರಡನೆಯವರ ಭಾವ ಸೇನ್ ಎಂಬೀ ಮೂರು ಮಂದಿಯು ಆ ನಿಧಿಯ ಮೂರು ಮಂದಿ ಹಣದಾರರಿಗೆ ಮೋಸಮಾಡಿದರೆಂದು ಹುಟ್ಟಿರುವ ಮೊಕದ್ದಮೆಯು ರಾಜಮಂಡ್ರಿ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ದರ್ಯಾಫ್ತಿಯಾಗುತ್ತಿದೆ ಸರ್ಕಾರದ ಕಡೆ ಶಂಕರನಾಯರ್‌ಯವರೂ, ಅಪರಾಧಿಗಳ ಕಡೆ ಕಲ್ಕತ್ತೆಯ ಮಿ॥ ಘೋಸ್ ಎಂಬ ಬ್ಯಾರಿಸ್ಟರೂ ಹೈಕೋರ್ಟ್ ವಕೀಲ್ ಮಿ॥ ಮುಖರ್ಜಿಯವರೂ ಲಾಯರುಗಳಾಗಿರುತ್ತಾರೆ ಮೊದಲನೆಯವನ ಮೇಲೆ ಬಂದಿರುವ ಮೊಕದ್ದಮೆಯಲ್ಲಿ ಇಬ್ಬರು ಸಾಕ್ಷಿಗಳ ದರ್ಯಾಫ್ತಿಯಾಗಿ ಈ ತಿಂ ಏಪ್ರಿಲ್ ೪ಕ್ಕೆ ಮುಂದಕ್ಕೆ ಇಡಲ್ಪಟ್ಟಿದೆ ಎರಡನೆಯವನಮೇಲೆ ಆಗಿರುವ ಮೊಕದ್ದಮೆಯಲ್ಲಿ ಆತನು ಒಂದು ಮುಚ್ಚಳಿಕೆಯನ್ನು ಬರೆದು ಹಾಜರ್ಮಾಡಿ, ತಾನು ಆ ನಿಧಿಗೆ ಸಂಬಂಧಪಟ್ಟವನಲ್ಲವೆಂತಲೂ ತನ್ನ ಮೇಲೆ ಜವಾಬ್ದಾರಿ ಏನಾದರೂ ರುಜುವಾತಾಗುವ ಪಕ್ಷದಲ್ಲಿ ಅವಶ್ಯಬೇಕಾದಷ್ಟು ಹಣವನ್ನು ಕೊಟ್ಟುಬಿಡಲು ಸಿದ್ಧನಾಗಿರುತ್ತೇನೆಂತಲೂ ತಿಳಿಸಿದನು ಮೂರನೆಯವನು ತಾನು ಮಿತ್ರನ ಭಾವಮೈದನೇ ಅಲ್ಲವೆಂದು ಹೇಳಿಬಿಟ್ಟನು ಆದರೆ ಇಪ್ಪತ್ತು ಮಂದಿ ಸಾಕ್ಷಿಗಳು ಬಂದು ಇವನ ತಂಗಿಯನ್ನೇ ಮಿತ್ರನಿಗೆ ಕೊಟ್ಟಿದೆ ಎಂದು ದೃಷ್ಟಾಂತಪಡಿಸಿದ್ದರಿಂದ ಅವನು ಆ ಸಂಬಂಧವನ್ನು ಕಡೆಯಲ್ಲಿ ಒಪ್ಪಿಕೊಂಡನು ಬಿಸಾರ್ಪುರದ ಪ್ಲೀಡರ್ ಗೋಪಾಲಕೃಷ್ಣಪಂತಲು ಎಂಬ ಸಾಕ್ಷಿಯು ಕಳೆದ ೧೯೦೬ರಲ್ಲಿ ಕಲ್ಕತ್ತೆಗೆ ಹೋಗಿ ಈ ಫಂಡಿನ ಲೆಕ್ಕದ ಪುಸ್ತಕಗಳನ್ನು ಪರಿಶೀಲನೆ ಮಾಡಿದ್ದಾಗಿಯೂ, ಲೆಕ್ಕಾಚಾರ ಪ್ರಕಾರ ಫಂಡಿನಲ್ಲಿ ೪೦,೦೦೦ ರೂಪಾಯಿ ಶಿಲ್ಕು ಇರಬೇಕಾದದ್ದಕ್ಕೆ ಪ್ರತಿಯಾಗಿ ೩೦,೦೦೦ ರೂಪಾಯಿ ಇರುವಂತೆ ಕಂಡುಬಂದ ಕಾರಣ ಅದು ಮೋಸಕರವಾದ ಕಂಪನಿ ಎಂದು ತಿಳಿದುಕೊಂಡನೆಂತಲೂ ಹೇಳಿರುತ್ತಾನೆ ಈ ಮೊಕದ್ದಮೆಯು ಕಳೆದ ೪ರಲ್ಲಿ ನಡಿಯಬೇಕಾಗಿತ್ತು

ವಿದೇಶ ವರ್ತಮಾನಗಳು

ದಕ್ಷಿಣ ಆಫ್ರಿಕಕ್ಕೆ ಸೇರಿದ ಒಂದು ಚಿನ್ನದ ಗಣಿಯಲ್ಲಿ ಅನಾಹುತ ಸಂಭವಿಸಿ ೨೦ ಜನರು ಮೃತಪಟ್ಟರು, ೧೯ ಮಂದಿ ಗಾಯಪಟ್ಟಿರುತ್ತಾರೆ

❖❖❖

ಜರ್ಮನಿಗೆ ಸೇರಿದ ಕ್ಲೀವ್ಲೋಬರ್ಲ ಎಂಬ ಗಣಿಯಲ್ಲಿ ಹಿಂದಿನ ವಾರ ಅನಾಹುತವಾಯಿತು ಅದರಲ್ಲಿ ೪೯ ಮಂದಿ ಮೃತಪಟ್ಟರು ಹಲವು ಜನರಿಗೆ ಗಾಯಗಳಾಗಿರುತ್ತವೆ

❖❖❖

ವಿಲಾಯತಿಗೆ ಸೇರಿದ ನಾರ್ಫಕ್ ಡಿಸ್ಟ್ರಿಕ್ಟಿನಲ್ಲಿ ಸ್ವಾನಿಂಗ್‌ಟನ್ ಎಂಬ ಗ್ರಾಮವಾಸಿಯಾಗಿದ್ದ ೧೧೯ ವರುಷ ತುಂಬಿದ್ದ ಮಿಸೆಸ್ ಎಲಿಜಬೆತ್ ಎ ಎ ಕೆಂಗನು ಕಾಲವಾದಳು

❖❖❖

ಫಿಲಿಪೈನ್ ದ್ವೀಪಗಳಿಗೆ ಸೇರಿದ ಮ್ಯಾನಿಲಾ ಪಟ್ಟಣದಲ್ಲಿ ೧೫,೦೦೦ ಜನಗಳ ವಾಸ ಬಹಳ ಮಾಡಿದ್ದ ದೊಡ್ಡ ಕಟ್ಟಡಕ್ಕೆ ಬೆಂಕಿ ಬಿದ್ದು ಎಲ್ಲಾ ಉರಿದುಹೋಯಿತು ಸಾಹುಕಾರರಿಗೆ ೧೦ ಲಕ್ಷ ರೂಪಾಯಿ ನಷ್ಟವಾಗಿರುತ್ತದೆ

❖❖❖

ಜನರಲ್ ಬೋಥಾ ಯವರಿಗೆ ಗವರ್ನಮೆಂಟಿನವರು ವರ್ಷಕ್ಕೆ ೨,೦೦೦ ರೂಪಾಯನ್ನೂ ಅವರ ಸಹಾಯಕರಾದ ಇತರ ಮಂತ್ರಿಗಳಿಗೆ ತಲಾ ೧೫,೦೦೦ ರೂಪಾಯನ್ನೂ ಬಹುಮಾನ ವೇತನವಾಗುವಂತೆ ಸಂಬಳ ಗೊತ್ತುಮಾಡಿದಾರೆ

❖❖❖

ರಷ್ಯಾ ರಾಜ್ಯಕ್ಕೆ ಸೇರಿದ ಖಾರ್ಕಾಫ್ ಎಂಬ ಪಟ್ಟಣದಲ್ಲಿ ಪೋಲೀಸಿನವರು ಪಾಠಶಾಲಾ ವಿದ್ಯಾರ್ಥಿಗಳ ಮನೆಗಳನ್ನು ಶೋಧನೆ ಮಾಡುವಾಗ ಒಂದು ಮದ್ದಿನ ಗುಂಡು ಅವರ ಮಧ್ಯೆ ಮಹಾ ಶಬ್ದದಿಂದ ಒಡೆದು ಪೋಲೀಸ್ ಉದ್ಯೋಗಸ್ಥರನ್ನೂ ಮೂರು ಮಂದಿ ಪೋಲೀಸಿನವರನ್ನೂ ಇಬ್ಬರು ಪ್ರಜೆಗಳನ್ನೂ ಕೊಂದುಹಾಕಿತು ಆರು ಜನರಿಗೆ ಗಾಯಗಳಾದವು

❖❖❖

ದಕ್ಷಿಣ ಆಫ್ರಿಕಕ್ಕೆ ಸೇರಿದ ಡೆಲಗೋವಾ ಕೊಲ್ಲಿಯಿಂದ ಟಳಿರ್ದೇಶಕ್ಕೆ ಹೋಗುತ್ತಿದ್ದ ಒಂದು ರೈಲ್ ಗಾಡಿಯು ಅಲ್ಲಮಾರ್ ಎಂಬ ಸ್ಥಳದಲ್ಲಿ ಮಳೆಯ ದೆಸೆಯಿಂದ ಕುಸಿದು ಹೋಗಿದ್ದ ಸೇತುವೆಯ ಬಳಿ ಹಾಗೆ ಅನಾಹುತವಾಯಿತು ಮಾಜಿ ಕಮಿಷನರ್ ಡಾ॥ ಜೇಂಸ್ ಎಂಬಾತನೂ ೧೦ ಮಂದಿ ಪ್ರಯಾಣಿಕರೂ ಮೃತಪಟ್ಟರು, ೧೧ ಮಂದಿಗೆ ಗಾಯಗಳಾದವು

❖❖❖

ವಿಲಾಯತಿಗೆ ಸೇರಿದ ಯಾರ್ಕ್ ಡಿಸ್ಟ್ರಿಕ್ಟಿನಲ್ಲಿದ್ದು ಕಾಲವಾಗಿರುವ ಸರ್ಜನ್ ಜನರಲ್ ಆರ್ ಸಿ ಲಫ್ಟ್ಸ್ ಎಂಬಾತನು ತನ್ನ ಆಸ್ತಿಯಲ್ಲಿ ಸುಮಾರು ೫೦ ಸಾವಿರ ರೂಪಾಯನ್ನು ಮಾತ್ರ ತನ್ನ ಸಹೋದರರಿಗೆ ಕೊಟ್ಟು, ಉಳಿದ ಸುಮಾರು ಆರು ಲಕ್ಷ ರೂಪಾಯನ್ನು ಹಾರೊಗೇಟಿನಲ್ಲಿ ಆಸ್ಪತ್ರೆ, ವಿದ್ಯಾಶಾಲೆ, ದೇವಾಲಯಾದಿಗಳನ್ನು ಕಟ್ಟಿ ನಡಸುವುದಕ್ಕೆ ವಿನಿಯೋಗಿಸಬೇಕೆಂದು ಉಯಿಲು ಬರೆದಿರುತ್ತಾರೆ

❖❖❖

ಟ್ರಾನ್ಸ್ವಾಲ್ ಸ್ವಾಸ್ಥ್ಯದಲ್ಲಿ ಒಂದು ಪಾರ್ಲಿಮೆಂಟನ್ನು ಇಂಗ್ಲಿಷ್ ಗವರ್ನಮೆಂಟಿನವರು ಸ್ಥಾಪನೆಮಾಡಿದಾರೆ ಈ ಪಾರ್ಲಿಮೆಂಟಿನ ಮೆಂಬರುಗಳು ಜನರಲ್ ಬೋಥಾಯವರನ್ನು ಮುಖಂಡರನ್ನಾಗಿ ಚುನಾಯಿಸಿದರು ಜನರಲ್ ಬೋಥಾಯವರು ಸಭಿಕರನ್ನು ಕುರಿತು—ನಾವು ಇಂಗ್ಲಿಷ್ ಗವರ್ನಮೆಂಟಿನವರಲ್ಲಿ ಸೇರಿಹೋಗಿರುತ್ತೇವೆ ಅದನ್ನು ಬಲಪಡಿಸಿ ವೃದ್ಧಿಪಡಿಸುವುದಕ್ಕೆ ಸಹಾಯಪಡಬೇಕೆಂಬುವುದೇ ನಮ್ಮ ಉದ್ದೇಶವಾಗಿದೆ ಎಂದು ತಿಳಿಸಿದರು.

❖❖❖

ಯೂರೋಪ್ಪಿಗೆ ಸೇರಿದ ಫಿನ್‌ಲೆಂಡ್ ದೇಶದಲ್ಲಿ ಪಾರ್ಲಿಮೆಂಟಿಗೆ ಮೆಂಬರುಗಳನ್ನು ಚುನಾಯಿಸುವ ಹಕ್ಕನ್ನು ಸ್ತ್ರೀಯರಿಗೂ ಈಗ ತಾನೇ ವಹಿಸಿರುತ್ತಾರೆ ಹೆಲ್ಸಿಂಗ್‌ಫರ್ಸ್ ಎಂಬ ಮುಖ್ಯಪಟ್ಟಣದಲ್ಲಿ ಚುನಾವಣೆಯ ಹಕ್ಕು ಸಂಪಾದಿಸಿಕೊಂಡಿರುವ ೫೭,೫೦೦ ಮಂದಿ ಸ್ತ್ರೀಪುರುಷರ ಪೈಕಿ ೪೦,೦೦೦ ಜನರು ಕಚೇರಿಗೆ ಹೋಗಿ ತಮ್ಮ (ಓಟ್) ಸಮ್ಮತಿ ಹಾಕಿದರು ಆ ಪೈಕಿ ಶೇಕಡಾ ೫೫ ಮಂದಿಯಷ್ಟು ಸ್ತ್ರೀಯರಾಗಿದ್ದರು ೧೯ ಮಂದಿ ಸ್ತ್ರೀಯರು ಪಾರ್ಲಿಮೆಂಟ್ ಮೆಂಬರಾಗಿಯೂ ಚುನಾಯಿಸಲ್ಪಟ್ಟಿರುತ್ತಾರೆ

❖❖❖

ಅಮೇರಿಕಕ್ಕೆ ಸೇರಿದ ಸ್ಯಾನ್‌ಫ್ರಾನ್ಸಿಸ್ಕೋ ಪಟ್ಟಣದಲ್ಲಿ ಸ್ವದೇಶಿಗಳು ಜಪಾನ್ ಪ್ರಜೆಗಳ ಮಕ್ಕಳನ್ನು ತಮ್ಮ ಮಕ್ಕಳು ಓದುವ ವಿದ್ಯಾಶಾಲೆಗಳಿಗೆ ಸೇರಿಸಿಕೊಳ್ಳುವುದಿಲ್ಲವೆಂದು ಹಟಹಿಡಿದು, ಅಂಥಾ ಜಪಾನ್ ಹುಡುಗರ ಮೇಲೆ ಮೊಕದ್ದಮೆ ಮಾಡಿದ್ದರು ಈಚೆಗೆ ಜಪಾನಿನವರಿಗೂ ಅಮೇರಿಕದವರಿಗೂ ಈ ವಿಷಯವಾಗಿ ಕಾಗದಪತ್ರಗಳು ನಡೆದು, ಅಂಥಾ ನಿರ್ಬಂಧಗಳನ್ನೆಲ್ಲಾ ತೆಗೆದುಹಾಕಿದರು ಕೋರ್ಟಿನಲ್ಲಿ ದಾಖಲಾಗಿದ್ದ ಮೊಕದ್ದಮೆಗಳನ್ನು ವಾಪಸು ತೆಗೆದುಕೊಂಡರು ಇನ್ನು ಮುಂದೆ ಜಪಾನಿನವರು ಅಲ್ಲಿ ಹೋಗಿ ಇಳಿಯುವ ಭಾಗದಲ್ಲಿ ಕೆಲವು ನಿರ್ಬಂಧಗಳನ್ನು ಕಲ್ಪಿಸಬೇಕೆಂಬ ಈಗ ಚರ್ಚೆನಡೆಯುತ್ತಿದೆ

❖❖❖

ಲಂಡನ್ ಪಟ್ಟಣದ ವೆಸ್ಟ್ ಮಿನಿಸ್ಟರ್ ಎಂಬ ಭಾಗದಲ್ಲಿ ಕಳೆದ ತಿಂಗಳು ಒಂದು ಪ್ರದರ್ಶನೋತ್ಸವ ನಡೆಯಿತು ದಕ್ಷಿಣ ಆಫ್ರಿಕದ ಗಣಿಯಿಂದ ತೆಗೆದ ಸುಮಾರು ೨೩ ಸಾವಿರ ರೂಪಾಯಿ ಕ್ರಯಬಾಳುವ ಎರಡು ಚಿನ್ನದ ಗಟ್ಟಿಗಳನ್ನು ಕನ್ನಡಿಯ ಪೆಟ್ಟಿಗೆಯೊಳಗಿಟ್ಟು ಪ್ರದರ್ಶನಮಾಡಿದ್ದರು ಯಾವನೋ ಆ ಪೆಟ್ಟಿಗೆಯನ್ನೇ ಅನಾಮತ್ತಾಗಿ ಎತ್ತಿಕೊಂಡು ಹೋಗಿರುತ್ತಾನೆ ಪ್ರದರ್ಶನಶಾಲೆಯೊಳಗೆಲ್ಲಾ ಬಹು ಚತುರರಾದ ಪೋಲೀಸ್ ಪತ್ತೇದಾರರನ್ನು ಗೋಪ್ಯವಾಗಿ ಉಸ್ತುವಾರಿ ಇಟ್ಟಿದ್ದರು ಆದಾಗ್ಯೂ ಅದು ಹಗಲು ೧೦ ಗಂಟೆ ಹೊತ್ತಿನಲ್ಲಿ ಕಳುವಾಗಿರುತ್ತದೆ, ಇನ್ನೂ ಆ ಕಳ್ಳನು ಸಿಕ್ಕದೆ ಇರುವುದು ಪರಮಾಶ್ಚರ್ಯವೇ ಸರಿ

❖❖❖

ವಿಲಾಯತಿಯಲ್ಲಿ ಕಾಲವಾದ ಮಿ॥ ವೈಟ್ಲಿ ಎಂಬ ಪ್ರಖ್ಯಾತನು ತನ್ನ ಆಸ್ತಿಯಲ್ಲಿ ಒಂದೂವರೆ ಕೋಟಿ ರೂಪಾಯನ್ನು ಒಂದು ಫಂಡುಮಾಡಿ ಅದರ ಮೇಲ್ವಿಚಾರಕೆಗೂ ಸದ್ವಿನಿಯೋಗಕ್ಕೂ ಒಂದು ಕಮಿಟಿಯನ್ನು ನೇಮಿಸಿರುತ್ತಾನೆ ಈ ಕಮಿಟಿಯವರು ಫಂಡಿನ ಹಣದಲ್ಲಿ ಒಂದು ಅನಾಥಶಾಲೆಯನ್ನು ಏರ್ಪಡಿಸಿ, ಒಳ್ಳೇ ನಡತೆವಂತರಾಗಿಯೂ ಅಂಟುವ್ಯಾಧಿಗಳೇನೂ ಇಲ್ಲದವರಾಗಿಯೂ ವ್ಯಾಪಾರ ಅಥವಾ ವ್ಯವಸಾಯಕಾರ್ಯಗಳಲ್ಲಿ ಜೀವನಮಾಡುತ್ತಿದ್ದು ವಯಸ್ಸು ಮೀರಿದ್ದರಿಂದ ನಿರ್ಗತಿಕರಾಗಿರುವಂಥಾ ಗಂಡಸರನ್ನೂ ಹೆಂಗಸರನ್ನೂ ಆ ಅನಾಥಶಾಲೆಗೆ ಸೇರಿಸಿಕೊಂಡು ಸಾಕಿ ಸಲಹಬೇಕಾಗಿದೆ ೬೫ ವರುಷಕ್ಕೆ ಮೇಲ್ಪಟ್ಟ ಗಂಡಸರನ್ನೂ ೬೦ ವರುಷಕ್ಕೆ ಕಮ್ಮಿ ಇಲ್ಲದ ಹೆಂಗಸರನ್ನೂ ಈ ಅನಾಥಶಾಲೆಗೆ ಸೇರಿಸಿಕೊಳ್ಳಬೇಕೆಂದು ವಿಧಾಯಕಮಾಡಿರುತ್ತಾರೆ

❖❖❖

ರಷ್ಯಾ ರಾಜ್ಯದ ಕೆಲವು ಭಾಗಗಳಲ್ಲಿ ಕ್ಷಾಮಬಾಧೆಯು ಎಷ್ಟು ಮುಟ್ಟಿಗಿದೆ ಎಂದು ಕೆಲವು ಕರುಣಾಳುಗಳು ಹೋಗಿ ಪರೀಕ್ಷೆ ಮಾಡಿ ತಿಳಿಸಿರುವುದೇನೆಂದರೆ—ಸಮಾರಾ ಎಂಬ ಒಂದು ಆಧಿಪತ್ಯದಲ್ಲೇ ೭,೫೦,೦೦೦ ಪ್ರಜೆಗಳು ಹೊಟ್ಟೆಗಿಲ್ಲದೆ ಬಹಳ ಕಷ್ಟಪಡುತ್ತಿದ್ದಾರೆ ಈ ಪೈಕಿ ೩,೭೩,೦೦೦ ಜನರು ಮಾತ್ರ ಅಲ್ಪಸ್ವಲ್ಪ ಆಹಾರ ಪದಾರ್ಥಗಳನ್ನು ಧರ್ಮಕ್ಕೆ ಪಡೆಯುತ್ತಿರುವರು ಈ ಧರ್ಮ ಕೊಡತಿರುವುದೂ ಮೇ ತಿಂಗಳ ಪ್ರಾರಂಭದಿಂದ ನಿಂತುಹೋಗುತ್ತದೆ ಅಷ್ಟರೊಳಗೆ ಆ ಧರ್ಮದ ಫಂಡಿಗೆ ಹಣ ಹೆಚ್ಚಾಗಿ ವಸೂಲಾಗಬೇಕು ಆ ಆಧಿಪತ್ಯದ ಹೊರಭಾಗದಲ್ಲೂ ಕ್ಷಾಮವು ಬಹು ಭಯಂಕರವಾದ ಸ್ಥಿತಿಯಲ್ಲಿದೆ ಜಾಗ್ರತೆಯಲ್ಲೇ ಕಡೇ ಪಕ್ಷ ೭೫ ಲಕ್ಷ ರೂಪಾಯಿನಷ್ಟಾದರೂ ಒದಗದೆ ಹೋದರೆ ಎರಡು ಕೋಟಿ ಪ್ರಜೆಗಳು ಕ್ಷಾಮದಲ್ಲಿ ಲಯವಾಗುವುದಕ್ಕೆ ಸಂಶಯವೇ ಇಲ್ಲ

❖❖❖

ಅಯೋವಾ ಡಿಸ್ಟ್ರಿಕ್ಟಿನಲ್ಲಿ ಫೋರ್ಟ್ ಡಾಡ್ಜ್ ಎಂಬ ಪಟ್ಟಣದ ಪುರಾಧ್ಯಕ್ಷನು ಪ್ರಜಾಪ್ರತಿನಿಧಿಗಳ ಅನುಮತಿಯನ್ನು ಪಡೆದು ಪ್ರಕಟಿಸಿರುವ ಹೊಸ ವಿಧಿ ಏನೆಂದರೆ—ನಮ್ಮ ಪಟ್ಟಣದಲ್ಲಿ ೨೫ ವರುಷಕ್ಕೆ ಮೇಲ್ಪಟ್ಟು ೭೫ ವರುಷದೊಳಗಿರುವ ಸ್ತ್ರೀಪುರುಷರೆಲ್ಲಾ, ಅಶಕ್ತರೂ ರೋಗಿಗಳೂ ವಿನಾಯಿಸಿ, ಈ ಶಾಸನವಾಯಿತು ೬೦ ದಿನಗಳೊಳಗೆ ವಿವಾಹ ಮಾಡಿಕೊಳ್ಳಬೇಕು ಇಲ್ಲವಾದರೆ ಪ್ರತಿ ಒಬ್ಬ ಗಂಡಸಿಗೂ ಹೆಂಗಸಿಗೂ ೬೦ ರೂಪಾಯಿನಿಂದ ೩೦೦ ರೂಪಾಯಿ ವರೆಗೆ ಜುಲ್ಮಾನೆ ವಿಧಿಸಲ್ಪಡುವುದು ನಾನು ಯಾವಾಗಲೂ ಆಫೀಸಿನಲ್ಲಿ ಹಾಜರಾಗಿರುತ್ತೇನೆ ದಂಪತಿಗಳು ನನ್ನ ಎದುರಿಗೆ ಬಂದು ವಿವಾಹ ಮಾಡಿಕೊಳ್ಳಬಹುದು ಈ ವಿವಾಹಕ್ಕೆ ಸರ್ಕಾರಕ್ಕಾಗಲಿ ಇತರರಿಗಾಗಲಿ ಯಾವ ರುಸುಮನ್ನೂ ಕೊಡಬೇಕಾಗಿಲ್ಲ ವಿವಾಹ ಮಾಡಿಕೊಳ್ಳದೆ ಒಬ್ಬಂಟಿಗರಾಗಿರುವುದರಿಂದ ಅನೇಕ ದುಷ್ಕಾರ್ಯಗಳು ನಡೆಯುವುದಕ್ಕೂ ಜನರು ಒಳ್ಳೇ ಶೀಲಸ್ವಭಾವಾದಿಗಳನ್ನು ಕಲಿತು ಅಭ್ಯಾಸಮಾಡದೆ ಕೆಡುವುದಕ್ಕೂ ಆಸ್ಪದವಾಗಿರುತ್ತದೆ ಎಂಬುದೇ.

❖❖❖

ಅಮೇರಿಕಕ್ಕೆ ಸೇರಿದ ವರ್ಜಿನಿಯಾ ಎಂಬ ಆಧಿಪತ್ಯದಲ್ಲಿ ನಾರ್ಫಕ್ ಊರಿನಲ್ಲಿ ಫ್ರೋ ಎಂಬೊಬ್ಬ ಶಾಸ್ತ್ರಜ್ಞನು ಒಂದು ಯಂತ್ರವನ್ನು ಕಂಡುಹಿಡಿದಿರುತ್ತಾನೆ ಅದರಿಂದಾಗುವ ಫಲಗಳನ್ನೆಲ್ಲಾ ಇನ್ನೂ ಪರಿಷ್ಕಾರವಾಗಿ ಪರಿಶೋಧನೆಮಾಡುವುದಕ್ಕೆ ಮೂರು ಲಕ್ಷ ರೂಪಾಯಿನ ಫಂಡನ್ನು ಸಂಪಾದಿಸಿಕೊಂಡಿದಾನೆ ಹೊಗೆಯಿಂದಾಗಲಿ, ನೀರಿನಲ್ಲಿ ಮುಳುಗಿ ಆಗಲಿ, ದುಷ್ಟವಾಯುವನ್ನು ಸೇವನೆಮಾಡಿದ್ದರಿಂದಾಗಲಿ, ಉಸಿರುಕಟ್ಟಿಯಾಗಲಿ, ಜ್ಞಾನತಪ್ಪಿಹೋಗಿ ಮರಣವಾಗಿರುತ್ತೆಂದು ತಿಳಿಯಬರುವ ಸಂದರ್ಭಗಳಲ್ಲೆಲ್ಲಾ ಆ ಶಾಸ್ತ್ರಜ್ಞನು ಮಾಡಿರುವ ಯಂತ್ರದ ಸಹಾಯದಿಂದ ಕಾರ್ಬಾನಿಕ್ ಆಸಿಡ್ ಎಂಬ ವಿಷವಾಯು (ಇಂಗಾಲಾಮ್ಲ) ವನ್ನು ದೇಹದಿಂದ ಹೊರಕ್ಕೆ ಎಳೆದುಬಿಟ್ಟು, ಆಕ್ಸಿಜನ್ ಎಂಬ ಪ್ರಾಣವಾಯು (ಆಮ್ಲಜನಕ) ವನ್ನು ಶರೀರದೊಳಕ್ಕೆ ತುಂಬಿ ರೋಗಿಗೆ ಪ್ರಾಣಬರಿಸುವನು ಆದರೆ ಮೃತಪಟ್ಟವರನ್ನು ಅವನು ಇದುವರೆಗೆ ಜೀವಿಸಿತಂದಿಲ್ಲ ಆದಾಗ್ಯೂ ಸತ್ತೇಹೋಯಿತೆಂದು ನಿರಾಶೆಯಾಗಿ ಬಿಟ್ಟಿದ್ದಂಥಾ ಕೆಲವು ಸಾಯಿಗಳನ್ನು ಆತನು ಬದುಕಿಸಿರುತ್ತಾನೆ ಕಡಿದು ಸ್ಮರಣೆಯಿಲ್ಲದವರನ್ನು ಕ್ಷಣಮಾತ್ರದಲ್ಲಿ ಯಥಾಪ್ರಕಾರ ಸ್ಮರಣೆಗೆ ತಂದಿರುತ್ತಾನೆನ್ನುವುದಕ್ಕೆ ಸಂಶಯವಿಲ್ಲ

❖❖❖

ಬಲ್ಗೇರಿಯಾ ರಾಜ್ಯದ ಪ್ರಧಾನ ಮಂತ್ರಿಗಳಾದ ಎಂ ಪೆಟ್ಕಾಫ್ ಯವರು ಸಭೆ ಮನೆಯಿಂದ ಹೊರಟು ತಮ್ಮ ಸಹಾಯ ಅಧಿಕಾರಿಗಳಾದ ಯುದ್ಧದ, ವ್ಯಾಪಾರದ, ಮತ್ತು ಖಜಾನೆಯ ಮಂತ್ರಿಗಳ ಸಂಗಡ ಪಟ್ಟಣದ ಹೊರಭಾಗದಲ್ಲಿರುವ ಪಬ್ಲಿಕ್ ಉದ್ಯಾನವನಕ್ಕೆ ಹೋಗಿ ಅಲ್ಲಿ ಸಂಚಾರ ಮಾಡುತ್ತಾ ಇದ್ದರು ದುಷ್ಟದ್ರ್ಯೋಹಿ ಹೋಗಿ ಅವರ ಬೆಂಗಾವಲಿನವರ ದೃಷ್ಟಿಯನ್ನು ಬೇರೆ ಕಡೆಗೆ ತಿರುಗಿಸಿ ಬಂದೂಕು ರಿವಾಲ್ವರ್ ಗುರಿಕಟ್ಟಿ ಆ ಮಂತ್ರಿಗಳ ಸಮೂಹಕ್ಕೆ ಹೊಡೆದನು. ವ್ಯಾಪಾರದ ಇಲಾಖೆಯ ಮಂತ್ರಿಯಾದ ಜೆನ್ನಾಡೀಫ್ ಯವರ ತೋಳಿಗೆ ಗುಂಡು ತಗಲಿ ಸ್ವಲ್ಪ ಗಾಯವಾಯಿತು ಮೊದಲು ಗುಂಡುಹೊಡೆದವನು ಎರಡನೆಯ ಸಲವೂ ರಿವಾಲ್ವರ್ ಪ್ರಧಾನ ಮಂತ್ರಿಯವರಿಗೆ ಗುರಿಕಟ್ಟಿ ಹೊಡೆದನು ಆ ಗುಂಡು ಎಂ ಪೆಟ್ಕಾಫ್ ಎಂಬ ಮಂತ್ರಿಶ್ರೇಷ್ಠರ ಭುಜಕ್ಕೆ ತಗಲಿ ಎದೆಯೊಳಕ್ಕೆ ಇಳಿಯಿತು. ಅವರು ಕೂಡಲೇ ಬಿದ್ದು ಕೆಲವು ನಿಮಿಷದೊಳಗಾಗಿ ಸತ್ತುಹೋದರು ಈ ರೀತಿ ಗುಂಡು ಹೊಡೆದ ಕೊಲೆಗಾರನ ಹೆಸರು ಅಲೆಕ್ಸಾಂಡರ್ ಪೀಟ್ರಾಫ್ ಇವನಿಗೆ ವ್ಯವಸಾಯದ ಬ್ಯಾಂಕಿನಲ್ಲಿ ಕೆಲಸವಿತ್ತು ವ್ಯಾಪಾರದ ಮಂತ್ರಿಯು ಅವನನ್ನು ದುಷ್ಟನೆಂದು ತಿಳಿದು ಕೆಲಸದಿಂದ ವಜಾ ಮಾಡಿದ್ದರು ಅವನು ಆ ದಿನ ಎಲ್ಲಾ ಮಂತ್ರಿಗಳನ್ನೂ ಕೊಂದುಹಾಕಬೇಕೆಂದಿದ್ದನಂತೆ ಮಂತ್ರಿಗಳಿಬ್ಬರಿಗೆ ಗುಂಡು ಹೊಡೆದ ತರುವಾಯ ಅವನು ಅವರ ಸಂಗಡಿದ್ದ ಇನ್ನಿಬ್ಬರು ಮಂತ್ರಿಗಳನ್ನೂ ಕೊಲ್ಲಬೇಕೆಂದು ರಿವಾಲ್ವರ್ ಪಿಸ್ತೂಲನ್ನೆತ್ತಿ ಗುರಿಕಟ್ಟಿದನು ಅಷ್ಟರೊಳಗಾಗಿ ಅವನನ್ನು ಹಿಡಿದುಬಿಟ್ಟರು ಅವನು ಬರೆಸಿರುವ ಕೈಫಿಯತ್ತಿನಿಂದ ಈ ಕೊಲೆಗೆ ಅವನೊಬ್ಬನೇ ಕಾರಣನಲ್ಲವೆಂತಲೂ ಇನ್ನೂ ಕೆಲವರು ಸೇರಿ ಮಸಲತ್ತು ಮಾಡಿಕೊಂಡಿದ್ದವೆಂತಲೂ ತಿಳಿದುಬಂದಿದ್ದರಿಂದ ಅವನನ್ನೂ ಇತರ ಕೆಲವು ಜನರನ್ನೂ ಸರ್ಕಾರದವರು ಸೆರೆಹಿಡಿದಿರುತ್ತಾರೆ

ತಾಲ್ಲೋಕು ವರ್ತಮಾನಗಳು.

ಹೊಸದುರ್ಗ —ಕೆಲವು ಕಾಲ ಚಿತ್ತದ ಕಟಾವು ನಡೆಯುತ್ತಲಿದೆ ಬಿಸಿಲು ತೀಕ್ಷ್ಣವಾಗಿದೆ ಸಾಯಂಕಾಲದಲ್ಲಿ ಮೋಡವಾಗುತ್ತೆ ಆದರೆ ಇನ್ನೂ ಮಳೆ ಇಲ್ಲ —ಪೊ॥ ಇನ್ಸ್ಪೆಕ್ಟರ್ ಬಾಲ್ ಸಾಹೇಬರು ಇಲ್ಲಿಂದ ವರ್ಗವಾದರು ತಾ ೧೧ ಕ್ಕೆ ಇವರ ಬದಲು ಚಿಕ್ಕಬಳ್ಳಾಪುರದ ಪೊ॥ ಇನ್ಸ್ಪೆಕ್ಟರ್ ರುದ್ರಪ್ಪನವರು ಬಂದು ಛಾರ್ಜು ತೆಗೆದುಕೊಂಡರು ತಾ ೧೦ ನೇ ರಾತ್ರಿ ಸುಮಾರು ೧ ಘಂಟೆ ಸಮಯದಲ್ಲಿ ಪೇಟೆ ಮಧ್ಯೆ ಇರುವ ಶೆಟ್ ಮುರುಗಪ್ಪ ಗುಂಡಪ್ಪನವರ ಮನೆಗೆ ಕಳ್ಳರು ಬಿದ್ದರೆಂದು ಮನೆಯವರು ಕೂಗಿಕೊಂಡರು ಆ ಕೂಡಲೇ ಅಕ್ಕಪಕ್ಕದ ಜನರು ಬಂದದ್ದಲ್ಲದೆ ಬೇರೆ ಬೇರೆ ಬೀದಿಗಳಿಂದಲೂ ಸುಮಾರು ೫೦ ಜನರ ವರೆಗೂ ಸೇರಿದರು ಕಳ್ಳರು ಸಿಕ್ಕಲಿಲ್ಲ ಮಾಲೇನೂ ಹೋಗಿರಲಿಲ್ಲ ಒಳಗೆ ಮಲಗಿದ್ದ ಒಬ್ಬ ಹುಡುಗನ ಕೈ ತುಳಿದದ್ದರಿಂದ ಮನೆಯವರಿಗೆ ಎಚ್ಚರವಾಯಿತು ಕೆಲವರು ಕಾನಿಸ್ಟೇಬಲ್ ಗಸ್ತು ತಿರುಗುವುದಕ್ಕೆ ೭ ದಲಾ ಮಾತ್ರ ಸೇರುತ್ತಾರೆಂದು ಕಾಣುತ್ತೆ —ಬೋವಿಹಾಲ್ ಗ್ರಾಮಕ್ಕೆ ಸಧ್ಯದಲ್ಲಿಯೇ ಕ್ರೀ ಜಗದ್ಗುರುಗಳು ದಯಮಾಡಿಸುತ್ತಾರೆಂದು ವಾಹಿನಿ ಇರುತ್ತೆ ಈ ಊರಿನಲ್ಲಿ ಜನರು ಎರಡು ಪಾರ್ಟಿಯಾಗಿ ಪ್ಯಾಕ್ಷನ್ ದೊಂಬಿ ನಡೆಸುತ್ತಿದ್ದಾರಷ್ಟೆ ಇವರ ಪೈಕಿ ಒಂದು ಪಾರ್ಟಿಯವರಿಗೆ ನೇಕಚಾಲ್ ಜಾಮೀನ್ ತೆಗೆದುಕೊಳ್ಳುವಂತೆ ಮೇಲಿನಿಂದ ಆರ್ಡರ್ ಬಂದಿರುತ್ತೆಂದು ವಾಹಿನಿ ಇದೆ —ಬೆಲಗೂರು ಪ್ರಾಂತ್ಯದ ಕಡೆ ಒಂದು ಹದ ಮಳೆಯು ಬಂದಿತ್ತು ಭತ್ತ ಕೊಯಿಲಿಗೆ ಬಂತು ಇಲ್ಲಿನ ದಫೇದಾರರು ವರ್ಗಪಟ್ಟು

ಬೇರೆ ದಖೇದಾರರು ಬಂದಿರುತ್ತಾರೆ ಇಲ್ಲಿನ ಕಾನಿಸ್ಟೇಬಲ್ ರಾಮಣ್ಣನು ಮೊ. ಇ ಬಾಲ್‌ರವರು ತನ್ನನ್ನು ಹೊಡೆದರೆಂದು ಪಿರ್ಯಾದು ಮಾಡಿದ್ದರಷ್ಟೆ ಈ ವಿಷಯವಾಗಿ ಹೊಳಲ್ಕೆರೆ ಮೊಕ್ಕಾಂನಲ್ಲಿ ಸಾಕ್ಷಿ ಮೊದಲಾದ ವಿಚಾರಣೆ ನಡೆಯಿತು ಇಲ್ಲಿಂದ ಬೆಲ್ಗಾನ್‌ನೇರ್ ಬೈರಪ್ಪನವರ ನಾಟಕದ ಕಂಪನಿಯವರು ಯಳನಡುವಿಗೆ ಹೋದರು

ಪಾರ್ಕಬೀಡು.—ಈ ಪ್ರಾಂತ್ಯ ಎರಡು ವಾರದಿಂದಲೂ ಎರಡು ಮೂರು ಹದ ಮಳೆಯಾಗಿ ಕಾಫಿ ಯೇಲಕ್ಕಿ ತೋಟಗಳಿಗೆ ತುಂಬಾ ಅನುಕೂಲವಾಯಿತು ಕಾಫಿ ತೋಟಗಳಾದರೋ ಎಲ್ಲಿ ನೋಡಿದರೂ ಹುವ್ವಿನ ಮೊಗ್ಗುಗಳಿಂದ ತುಂಬಿ ಗಿಡಗಳು ತೋಟಗಾರರಿಗೆ ಆನಂದವನ್ನು ಉಂಟುಮಾಡುತ್ತಲಿವೆ ಯಾಲಕ್ಕಿ ಗಿಡಗಳಿಗಾದರೋ ಮುಂದೆ ಕಾಯಿ ಬಿಡುವ ಗೆರೆಗಳು ಅನುಕೂಲವಾಗಿ ಬಿಡುವದಕ್ಕೆ ಮಾರ್ಗವಾಯಿತು.—ಕೆಲವು ಪ್ಲಾಂಟರುಗಳು ರಬ್ಬರ್ ತೋಟಗಳನ್ನು ಅಭಿವೃದ್ಧಿ ಮಾಡುವದರಲ್ಲಿ ಆಸಕ್ತರಾಗಿದಾರೆ. ಇನ್ನೂ ಕೆಲವರು ಹತ್ತಿ ಗಿಡಗಳನ್ನು ಹಾಕಿಸಿ ಕಾಫಿಗೆ ಬದಲಾಗಿ ಅದನ್ನೇ ವ್ಯವಸಾಯ ಮಾಡುತ್ತಿದಾರೆ.—ಇಲ್ಲಿನ ಆಸ್ಪತ್ರೆಯಲ್ಲಿ ಸುಮಾರು ೭ ವರ್ಷಗಳಿಂದಲೂ ಇದ್ದ ಮೆ॥ ದಾಮೋದರಪಿಳ್ಳೆಯವರಿಗೆ ಚಿಕ್ಕಮಗಳೂರಿಗೆ ವರ್ಗವಾದ ಕಾರಣ ಅವರ ಬದಲಿಗೆ ಮೆ॥ ಸದಾಶಿವಮೊದಲಿಯಾರರು ಬಂದಿದಾರೆ

ತಲಕಾಡು.—ಟಿ ನರಸೀಪುರದ ತಾಲ್ಲೂಕು ತಲಕಾಡಿನಲ್ಲಿ ರೀಡಿಂಗ್ ರೂಂ (ಮನೋಲ್ಲಾಸಮಂದಿರ) ಏರ್ಪಡಿಸಿ ೫ ತಿಂಗಳಾಯಿತು. ಮೈಸೂರು ದೇಶದಲ್ಲಿ ಪ್ರಿಂಟಾಗತಕ್ಕ ಕನ್ನಡ ಪತ್ರಿಕೆಗಳೆಲ್ಲಾ ಮತ್ತು ಗೆಜೆಟ್ ಸಹಾ ತರಿಸಲ್ಪಡುತ್ತಾ ಇದೆ ಇದನ್ನು ಏರ್ಪಡಿಸಿರುವ ಮಹನೀಯರು ಅಭಿವೃದ್ಧಿಗೆ ತರಬೇಕೆಂದು ಉದ್ದೇಶಪಟ್ಟಿರುವದಲ್ಲದೆ ಸದರಿ ಮಂದಿರದಲ್ಲಿ ಪ್ರತಿ ಶನಿವಾರ ಸಾಯಂಕಾಲವು ವಾದ್ಯಗಾನದೊಡನೆ ಭಜನೆ ನಡಿಸಲು ಏರ್ಪಡಿಸಿ ಸರ್ವರ ಮನಸ್ಸನ್ನು ಸಂತೋಷಗೊಳಿಸುತ್ತಾ ಇದಾರೆ.—ಅಲ್ಲದೆ ಊರಕಳ್ಳರು ಈಗ್ಗೆ ಒಂದು ತಿಂಗಳಿಂದಲೂ ಕಳ್ಳತನಕ್ಕೆ ಶುರು ಮಾಡಿ ಈಗ್ಗೆ ೫—೬ ದಿವಸದಿಂದ ಬಹಳ ಉನ್ನತಸ್ಥಿತಿಗೆ ಬಂದು ಪ್ರತಿ ರಾತ್ರಿಯೂ ೩—೪ ಮನೆಗಳವರಿಗೂ ಕನ್ನ ಹಾಕಿ ಶೋಧನೆ ಮಾಡುತ್ತಾ ಇದಾರೆ ಇದನ್ನು ನಿಗಾ ಇಡತಕ್ಕ ಸ್ಥಳಾಧಿಕಾರಿಗಳು ಕನ್ನಗಳನ್ನು ಪತ್ತೆ ಮಾಡುತ್ತಾ ಇದಾರೆ. ಗ್ರಾಮದಲ್ಲಿ ಜನಗಳು ಹಗಲು ರಾತ್ರಿ ಕಳ್ಳರ ಸ್ಮರಣೆಯಲ್ಲಿಯೇ ಕಾಲ ಕಳೆಯುತ್ತಾ, ಕಳ್ಳರನ್ನು ಕಾಯುವದರಲ್ಲಿ ರಾತ್ರಿ ಜಾಗರಣೆ ಮಾಡುತ್ತಾ ಕಷ್ಟಪಡುತ್ತಿದಾರೆ ಅಧಿಕಾರಿಗಳು ಈ ಕಳ್ಳರ ಕಾಟವನ್ನು ತಪ್ಪಿಸಿ ಪ್ರಜಾನೆಮ್ಮದಿಯನ್ನು ಕಾಪಾಡಲು ಪ್ರಯತ್ನಪಡಬೇಕು

ತಿಪ್ಪೂರು.—ಕೆರೆಗೋಡಿ ಗ್ರಾಮದಲ್ಲಿ ನಾಡಿಗನೊಬ್ಬನು ತನ್ನ ಹೆಂಡತಿಯನ್ನು ಕಿಟ್ಟಿನಿಂದ ಕುಟ್ಟಲು ಪ್ರಾಣವೇ ಬಿಟ್ಟಳೆಂದೂ ಈಗ ಆಸಾಮಿಯು ಲಾಕಪ್ ಮನೆಯಲ್ಲಿ ವಿಚಾರಣೆಯಲ್ಲಿರುತ್ತಾನೆಂದೂ ತಿಳಿಯಿತು.—ನಾಲ್ಕು ದಿನಗಳ ವರಿಗೂ ಬಹು ಜನ ಶಿಷ್ಯರು ಬಂದು ಶೃಂಗೇರಿ ಗುರುಗಳ ದರ್ಶನ ಪಾದಪೂಜೆಗಳನ್ನು ಮಾಡಿ ಬಹಳ ಕಾಣಿಕೆಗಳನ್ನು ಒಪ್ಪಿಸಿದರೆಂದು ತಿಳಿಯಿತು ಬಡವರಾದ ಕೆಲವರು ನೆಟ್ಟಗೆ ಸ್ವಾಮಿಗಳ ಮುಂದೆ ಕಾಣಿಸಿಕೊಂಡು ತಮ್ಮ ಕೊರತೆ ಅನಾನುಕೂಲಗಳನ್ನು ಹೇಳಿಕೊಂಡು ಅರ್ಪಿಸಿದ ಕೊಂಚ ಕಾಣಿಕೆಯನ್ನೇ ಗುರುಗಳು ಸ್ವೀಕರಿಸಿದರು ಆದರೆ ಈ ಮಧ್ಯೆ ಇಲ್ಲಿಯ ಕೆಲವರು ಮಾತಾಡಿಕೊಂಡು ತಮ್ಮ ಏರ್ಪಾಡಿಗೆ ಒಳಬೀಳದೆ ಇದ್ದ ಕೆಲವರಿಗೆ ರಮ್ಮಲ್ಲಿ ಬೆಂಕಿ ಬಿಸಿನೀರು ಮುಂತಾದುವುಗಳನ್ನು ಕೊಡಕೂಡದೆಂದು ರುಜು ಹಾಕಿಕೊಂಡಿರುತ್ತಾರೆ ಕಾಲರಾರೋಗ ತಗಲಿ ಬಿಡಲ್ಪಟ್ಟ ಜೋಗಿಗಳು ಹೊಟ್ಟೆಗೆ ಅನ್ನವಿಲ್ಲಪ್ಪ ಎಂದು ಗುಣಗುಟ್ಟುತ್ತಾ ಹೋಗುವಾಗ ದಾರಿಯಲ್ಲಿ ಮತ್ತೆ ಮೂವರು ಸತ್ತರು ಶ್ರೀಯವರ ಸವಾರಿಯು ಕೊನ್ನವಳ್ಳಿ ಮುಂತಾದ ಕಡೆ ದಯಮಾಡಿಸಿರು ಶಿವನ್ನಲ್ಲಿ ಒಂದು ಮಗುವೂ ಒಬ್ಬ ಹೆಂಗಸೂ ಸತ್ತರೆಂದು ತಿಳಿಯಿತು ಆದರೆ ಗಲಾಟೆ ಏನೂ ಇಲ್ಲ ಮಳೆಯು ಮೋಡಗಳಿಂತಲೂ ತುಂಬಿತುಳುಕುತ್ತವೆ.

ಅರಸೀಕೆರೆ.—೧೧ ನೇ ತಾ ಹರಿಹರದಿಂದ ಹುಬ್ಬಳ್ಳಿ ಕಡೆಗೆ ಗೂಡ್ಸ್ ಟ್ರೈನು ಕುಂದಗೋಳ ಸ್ಟೇಷನ್ ಕಡೆ ಕಡೆ ಇಳಿಜಾರಿನಲ್ಲಿ ಹೋಗುತ್ತಿರುವಾಗ ಒಂದು ವಾಗೀನು ಚಕ್ರ ಮುರಿದು ಲೈನು ತಪ್ಪಿ ಹೋದದ್ದರಿಂದ ೧೨ ವಾಗೀನುಗಳು ಕೀಟಿ ತಪ್ಪಿ ಹೋದವು ಆ ಗಾಡಿಯಲ್ಲಿ ಅಂಡರ್ ಗಾರ್ಡಿಗೆ ಸ್ವಲ್ಪ ಜಖಂ ಆಯಿತು ಈ ಕಾರಣದಿಂದ ಪೋಸ್ಟ್ ಮೆಯಿಲ್ ಗಾಡಿ ೧೨ ಘಂಟೆ ಸಾವಕಾಶವಾಯಿತು ಈಗ ಎಲ್ಲಾ ಟ್ರೈನುಗಳೂ ಸರಿಯಾಗಿ ಬರುತ್ತಾ ಇವೆ.—ಸಂತೆಯಲ್ಲಿ ಬೇರೆ ಬೇರೆ ಕಡೆ ದಿನಸಿನ ವ್ಯಾಪಾರಕ್ಕೆ ಪ್ರತ್ಯೇಕ ಸ್ಥಳಗಳನ್ನು ನೇಮಿಸಿರುತ್ತಾರೆ ಇದರಿಂದ ಜನಗಳಿಗೆ ಬಹಳ ಪ್ರಯೋಜನಕರವಾಗಿರುತ್ತೆ ಮಾತು ಈ ಸಂತೆಗೆ ಬರುವ ಪ್ರತಿಗಾಡಿಗೂ ಒಂದಾಣೆಯಂತೆ ಟೋಲ್ ಗೇಟಿನ ಸುಂಕವನ್ನು ವಸೂಲ್ ಮಾಡುತ್ತಾರೆ ಗಾಡಿಯವರು ಕೊಟ್ಟ ಹಣಕ್ಕೆ ದಾಖಲೆಗಾಗಿ ಒಂದು ಕೈ ಬರಹದ ಸಾದಾ ಚೀಟಿ ಕೊಡುತ್ತಾರೆ ಅದನ್ನು ಜಾಡಮಾಲಿ, ದಂಡಿ, ಜವಾನರೂ ಕೊಡುತ್ತಾರೆ ಈ ರೀತಿ ವಸೂಲ್ ಮಾಡುವದು ಸರ್ಕಾರಕ್ಕೆ ಸರಿಯಾಗಿ ಪಾವತಿ ಆಗಲಾರದೆಂದು ತೋರುತ್ತೆ ಆದ್ದರಿಂದ ಮುಂಗಡಕ್ಕೆ ನಮ್ಮ ಅಧಿಕಾರಿಗಳು ಇತರ ಕಡೆಗಳಲ್ಲಿ ನಡಿಸುವಂತೆ ಪ್ರಿಂಟ್ ಆದ ನಂಬರ್ ವಗೈರೆ ಉಳ್ಳ ಚೀಟಿಗಳನ್ನು ಜಾರಿಗೆ ತರುವರೆಂದು ನಿರೀಕ್ಷಿಸುತ್ತೇನೆ.—ಇಲ್ಲಿ ಎರಡು ಹದ ಮಳೆ ಆಯಿತು ರೈತರು ಹೊಲಗಳನ್ನು ಉಳುತ್ತಿದ್ದಾರೆ ದಿನಸು ಧಾರಣೆ ಹೋದ ವಾರಕ್ಕಿಂತ ಇಳಿತರವಾಗಿದೆ

ತುಂಕೂರು.—ಮೋಡವಾಡುತ್ತಲಿದೆ ಸುತ್ತಣ ಪ್ರಾಂತ್ಯ ಕೊಂಚ ಮಳೆಯಾಯ್ತು ಬತ್ತದ ಪೈರು ಎಲ್ಲವೂ ಹೊಡೆಯಾಗಿದೆ ಇನ್ನು ತಿಂಗಳೊಳಗಾಗಿ ಕಟಾವಾಗುತ್ತೆ ಧಾರಣೆವಾಸಿ ಕೊಂಚ ಇಳಿಯುತ್ತಲಿದೆ.—ನಮ್ಮ ಟವ್ನಿಗೆ ಎಂಟು ಮೈಲಿಯಲ್ಲಿರುವ ಬೆಳ್ಳಾವೆ ಎಂಬುವ ದೊಡ್ಡ ಸಂತೆ ಸ್ಥಳದಿಂದ ಸರಕುಗಳನ್ನು ರೈಲಿಗೆ ಸಾಗಿಸುವದಕ್ಕೆ ತುಂಕೂರಿಗೆ ಇಲ್ಲವೆ ಗುಬ್ಬಿಗೆ ಹೋಗಬೇಕಾಗಿತ್ತು. ಈ ತೊಂದರೆಯ ನಿವಾರಣೆಗಾಗಿ ಇಲ್ಲಿಗೆ ಎರಡು ಮೂರು ಮೈಲಿ ಫಾಸಲೆ ಇರುವ ಭೀಮಸಂದ್ರದ ಬಳಿ ಹೊಸದಾಗಿ ರೈಲ್ವೆ ಕಂಪನಿಯವರು ಸ್ಟೇಷನ್ ತಯಾರುಮಾಡುವಂತೆ ಯೋಚಿಸುತ್ತಿರುವದಾಗಿ ವರ್ತಮಾನ ಕೇಳುತ್ತೇನೆ ಇದು ಬಹಳ ಅನುಕೂಲವಾದ ಏರ್ಪಾಡೇ ಸರಿ.—ನಮ್ಮ ಹೈಸ್ಕೂಲಿಗೆ ಹೊಸದಾಗಿ ಬಾವಪ್ರವಚನಗಳನ್ನು ಬೋಧಿಸಲು ಶಿವಮೊಗ್ಗದಿಂದ ಮೆ॥ ವಾಸುದೇವರಾಯರು ಬಂದಿರುವದು ಸ್ಕೂಲಿನ ಅಭಿವೃದ್ಧಿಗೆ ಇನ್ನೂ ಹೆಚ್ಚು ಸಹಾಯವೆಂದು ತಿಳಿಯುತ್ತೇನೆ ಇತ್ತಲಾಗಿ ನಮ್ಮ ಮಾಸ್ಟರ್ ಮೆ॥ ನರಸಿಂಹಾಚಾರ್ಯರನ್ನು ಚಿತ್ರದುರ್ಗಕ್ಕೆ ವರ್ಗಾಯಿಸಿರುವ ಸಂಗತಿ ವ್ಯಸನಕರವಾಗಿದೆ.—ಈ ಟವ್ನಿನಲ್ಲಿ ಮ್ಯುನಿಸಿಪಾಲಿಟಿಯವರು ಜನರ ಅನುಕೂಲಕ್ಕೆ ಅವಶ್ಯಕವಾದ ಶಕ್ಕಸುಗಳನ್ನು ಕೋಟೆ ಮತ್ತು ಪೇಟೆಯಲ್ಲಿ ಕಟ್ಟಿಸಬೇಕಾಗಿದೆ. ಯಾಕೆಂದರೆ ಅವು ಇಲ್ಲದಿರುವದರಿಂದ ಸ್ಥಳದವರು ಮತ್ತು ಪರಸ್ಥಳದವರು ತುಂಬಾ ತೊಂದರೆಪಡುತ್ತಾರೆ.—ಕಳೆದ ವಾರ ಗೂಳೂರು ಕಲ್ಲನುರದಿಂದ ಒಬ್ಬ ಹೆಂಗಸು ಶಿವಗಂಗೆ ಜಾತ್ರೆಗೆ ಹೋಗುತ್ತಿರುವಾಗ ಗಾಡಿಯಿಂದ ಬಿದ್ದು ತಲೆ ಕೇಳಿಹೋಗಿ ಇಲ್ಲಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿದಾಳೆ.—ಶೃಂಗೇರಿ ಸ್ವಾಮಿಗಳ ಆಗಮನವನ್ನು ಇಲ್ಲಿನ ಜನರು ಕುತೂಹಲದಿಂದ ನಿರೀಕ್ಷಿಸುತ್ತಿರುವರು

ಹೊಳಲ್ಕೆರೆ.—ಪರಾಭವ ಸಂವತ್ಸರದಲ್ಲಿ ಬೆಳೆವ ಫಸಲೆಲ್ಲಾ ರೇಖೆ ಮಾಡಿಕೊಳ್ಳುವ ಕೆಲಸವನ್ನು ಪೂರೈಸಿಕೊಂಡರು. ಜನಗಳಲ್ಲಿ ಜ್ವರ ಮುಂತಾದ ಕಾಹಿಲೆ ಹರಡಿಕೊಂಡು ಬಾಧೆಪಡಿಸುತ್ತಾ ಇದೆ ದನಗಳು ಸುಖವಾಗಿರುತ್ತವೆ ರಾಗಿ ರೂಪಾಯಿಗೆ ೨೪ ಸೇರು, ಜೋಳ ೨೦ ಸೇರು, ಅಕ್ಕಿ ೮ ಸೇರು ಆಗಿರುತ್ತೆ ಹುಣಸೇಹಣ್ಣಿನ ಧಾರಣೆ ಧಡಾವಾಗಿ ಮಣಕ್ಕೆ ೨ ರೂಪಾಯಿ ಮಗೂ ಆಗಿದೆ ತೆಂಗಿನಕಾಯಿ ಆಸೆಗೆ ಒಂದು, ವಿಳ್ಳೇದೆಲ ೧೦೦ ಕ್ಕೆ ೪ ದುಡ್ಡು ಈ ಮೇರೆ ಇರುತ್ತೆ ಉತ್ತರಾಭಾದ್ರ ಮಳೆ ಹದವಾಯಿತು ರೇವತಿ ಮಳೆ ಶುರುವಾಗಿರುತ್ತೆ ಕೆರೆಗಳಿಗೆ ನೀರು ಬರಬಹುದೆಂತ ಕಾಣುತ್ತೆ.—ಈ ಪ್ರಾಂತ್ಯ ಕಬ್ಬು ಹಾಕುವ ರೂಢಿ ಇರಲಿಲ್ಲ ರಸದಾಳಿಕಬ್ಬು ಒಂದು ವರ್ಷದೊಳಗೆ ಆಲೆಗೆ ಬಂದು ಬೆಲ್ಲ ಸಲೀಸಾಗಿ ಬಂದದ್ದರಿಂದ ಎಲ್ಲಾ ಜನರೂ ಕಬ್ಬಿನ ಫಸಲಿನಿಂದ ಫಾಯಿದೆ ಪಡೆಯಬೇಕೆಂಬ ಕುತೂಹಲವುಳ್ಳವರಾಗಿದಾರೆ ಯಾರೇ ಭೂಮಿ ಇರತಕ್ಕವರು ಮತ್ತು ಇತರ ಜಮೀನ್ದಾರರೂ ಸಹ ಹತ್ತಿ ಬೆಳೆಯನ್ನು ಅಭಿವೃದ್ಧಿಪಡಿಸಿಕೊಳ್ಳಬೇಕೆಂಬ ಇಚ್ಛೆಯುಳ್ಳದಾರೆ.—ದಯಾಳುಗಳಾದ ಸರ್ಕಾರದವರು ಈ ವಿಧವಾದ ವ್ಯವಸಾಯ ಮಾಡತಕ್ಕವರಿಗೆ ಪ್ರೋತ್ಸಾಹಪಡಿಸತಕ್ಕ ಏನಾದರೂ ಒಂದು ಹೊಸ ಏರ್ಪಾಡು ಮಾಡಿಸಿದಲ್ಲಿ ಹತ್ತಿ ಬೆಳೆ ಬಹಳವಾಗಿ ಹೆಚ್ಚುತ್ತದೆ ಸರ್ಕಾರಿ ಬಂಜರು ಇರತಕ್ಕ ಜಮೀನುಗಳನ್ನು ಹತ್ತಿ ಬೆಳೆ ಮಾಡುವದಾಗಿ ದರ್ಖಾಸ್ತು ಮಾಡಿದವರಿಗೆ ಸುಲಭ ಕಂದಾಯಕ್ಕೆ ಕೊಡುವದಾಗಿ ಸರ್ಕಾರದವರು ಅಪ್ಪಣೆ ಕೊಡಿಸಿದರೆ ಪ್ರಜೆಗಳಿಗೆ ತುಂಬಾ ಪ್ರೋತ್ಸಾಹಕೊಟ್ಟಂತೆ ಆಗುತ್ತೆ.—ಆಗ್ಗೆ ಹೊಸ ಕ್ಷಾಮ ಉಂಟಾಗತಕ್ಕ ಈ ಸ್ಥಳದಲ್ಲಿ ಸುಲಭವಾದ ರೀತಿಯಲ್ಲಿ ಜಲಯಂತ್ರಗಳನ್ನು ರೈತರಿಗೆ ಸರಬರಾಜು ಮಾಡಿಸಿದಲ್ಲಿ ವ್ಯವಸಾಯಗಾರರಿಗೆ ಬಹಳ ಉತ್ತೇಜನ ಉಂಟಾಗುತ್ತೆ.—ಸರ್ಕಾರದ ಸರ್ವೀಸು ಸೇರಿದ ಅನೇಕ ನೌಕರರಿಗೆ ಈ ಊರಿನಲ್ಲಿ ವಾಸಕ್ಕೆ ಮನೆಗಳು ಸಿಕ್ಕದೆ ಕಷ್ಟಪಡುತ್ತಾರೆ ಆದ್ದರಿಂದ ಕೃಪಾಸಂಪೂರ್ಣರಾದ ಗವರ್ನ್‌ಮೆಂಟಿನವರು ಸರ್ಕಾರದಿಂದ ಮನೆಗಳನ್ನು ಕಟ್ಟಿಸಿಕೊಟ್ಟು ಅರವರ ಸಂಬಳದಲ್ಲಿ ಮನೆ ಬಾಡಿಗೆ ಸರ್ಕಾರಕ್ಕೆ ಸಲ್ಲಿಸುವಂತೆ ಹುಕುಂ ಮಾಡಿಸಿದರೆ ಇವರಿಯುವರ ಕಷ್ಟ ನಿವಾರಣೆ ಆಗಬಹುದು.—ಹೊಳಲ್ಕೆರೆ ಹಿರಿಯೂರಿಗೆ ಒಂದು ಪಾಳ್ಯ ರಸ್ತೆ ಮಾಡಿಸಬೇಕೆಂಬ ಚರ್ಚೆಯು ಅನೇಕ ದಿವಸಗಳಿಂದ ನಡೆಯುತ್ತಾ ಇದ್ದದ್ದು ಈಗ ೩೪ ಸಾವಿರ ರೂಪಾಯಿಗಳಿಗೆ ಅಂದಾಜು ತಯಾರಾಗಿ ಮಂಜೂರಿಗೆ ಹೋಗಿರುವಂತೆ ವರ್ತಮಾನವಿರುತ್ತೆ ಇದು ಮುಂದುವರೆ ಹೊಳಲ್ಕೆರೆ ಟವ್ನು ಬಹಳ ಅಭಿವೃದ್ಧಿಗೆ ಬರುತ್ತೆ ಬಹಳ ಜಮಾನುಗಳು ಸಾಗುವಳಿ ಆಗುವವು

ವೇಶ್ಯಾಂಗನೆಯರು

ಬೊಂಬಾಯಿ ಪಟ್ಟಣದಲ್ಲಿ ಪ್ರಕಟಿಸಲ್ಪಡುವ ದಿ ಟೈಂಸ್ ಆಫ್ ಇಂಡಿಯಾ ಎಂಬ ವರ್ತಮಾನ ಪತ್ರಿಕೆಯಲ್ಲಿ ಒಬ್ಬ ಹಿಂದೂ ದೊಡ್ಡ ಮನುಷ್ಯರು ವೇಶ್ಯಾಂಗನೆಯರನ್ನು ಕುರಿತಾದ ಒಂದು ಬಾಬ್ತಿಯನ್ನು ಬರೆದಿರುವರು ವಿವಾಹಮಹೋತ್ಸವಗಳಲ್ಲಿ ನಾಯಕಸಾನಿಯರು ಒಂದು ತಾಫೆ ಮೊದಲಾದವುಗಳನ್ನು ಕಟ್ಟಿ ಹಾಡುತ್ತಾ ಸಭಿಕರನ್ನು ಸಂತೋಷಪಡಿಸುವದು ವಾಡಿಕೆಯಾಗಿದೆಯಷ್ಟೆ ಇಂಥಾ ದುಷ್ಟಪದ್ಧತಿಗಳಿಂದ ಹಿಂದೂ ಜನರ ಏಳಿಗೆಗೆ ಕುಂದಕಬರುವದೆಂದು ಈ ಲೇಖಕರು ಅಭಿಪ್ರಾಯಪಡುತ್ತಾರೆ ಇವರ ಅಭಿಪ್ರಾಯವನ್ನು ಯಾವ ಆಕ್ಷೇಪಣೆ ಇಲ್ಲದೆ ನಾವು ಅನುಮೋದಿಸುತ್ತೇವೆ ಇವರು ಈ ವಿಷಯ ಹೇಳುವ ಮತ್ತೊಂದು ಸಂಗತಿ ಯಾವದೆಂದರೆ, ಹಿಂದೂ ದೊಡ್ಡಮನುಷ್ಯರು ಆಗಾಗ್ಗೆ ಯೂರೋಪಿಯನ್ ಸರದಾರರನ್ನು ಸತ್ಕರಿಸುವದಕ್ಕೋಸ್ಕರ ತಮ್ಮ ತಮ್ಮ ಮನೆಗಳಿಗೆ ಬರಮಾಡಿಕೊಂಡು, ವೇಶ್ಯರ ನರ್ತನ ಬಡೆಕೋಲಾಟ ಇವೇ ಮೊದಲಾದವುಗಳಿಂದ ತಮ್ಮ ಅತಿಥಿಗಳನ್ನು ಸಂತೋಷಪಡಿಸುವದುಂಟು ಯೂರೋಪಿಯನ್ನರು ಅಂಥಾ ಸಂದರ್ಭಗಳಲ್ಲಿ ತಮ್ಮನ್ನು ಸನ್ಮಾನಿಸುವದಕ್ಕೆ ಬರಮಾಡಿಕೊಂಡ ಹಿಂದೂ ದೊಡ್ಡಮನುಷ್ಯರಿಗೆ ಮರ್ಯಾದೆ ತೋರಿಸುವದಕ್ಕೋಸ್ಕರ ಅವರ ಮನೆಗಳಿಗೆ ಹೋಗುವದುಂಟು ಈ ಲೇಖಕರು ಅಂಥಾ ಸಂದರ್ಭಗಳಲ್ಲಿ ಯೂರೋಪಿಯನ್ನರು ಖಂಡಿತವಾಗಿಯೂ ಹೋಗಕೂಡದೆಂತಲೂ, ಅಲ್ಲಿ ವೇಶ್ಯರು ಹಾಡತಕ್ಕ ಪದಗಳು ಕೇವಲ ಅಪಸ್ವಪ್ನದವಾದವುಗಳೆಂತಲೂ, ಇಂಗ್ಲಿಷ್ ಪಾದ್ರಿಗಳು ತಮ್ಮ ಕಡೆಯ ಜನಗಳಿಗೆ ನಾಯಕಸಾನಿಯರ ಪದಗಳು ಅವರ ಅಭಿನಯಗಳು ಅವರಿಂದ ದೇಶಕ್ಕಾಗುತ್ತಿರುವ ಅಪಾರವಾದ ನಷ್ಟಗಳು ಇವುಗಳನ್ನು ವಿವರಿಸಬೇಕೆಂತಲೂ, ಇಂಥಾ ಹೆಂಗಸರು ಯಾವ ಕೂಟಗಳಿಗಾದರೂ ಬರುವದಾದರೆ ಅಂಥಾ ಕೂಟಗಳಿಗೆ ಯೂರೋಪಿಯನ್ನರು ಹೋಗದಂತೆ ಎಚ್ಚರಪಡಿಸುವಂತೆಯೂ ಅಭಿಪ್ರಾಯಪಡುತ್ತಾರೆ. ಇನೂ ಅಲ್ಲದೆ ಕೆಲವು ಹಿಂದೂಗಳು ಯೂರೋಪಿಯನ್ನರ ಮಾದರಿಯನ್ನನುಸರಿಸಿ "ಅವರು ವೇಶ್ಯರ ನರ್ತನವನ್ನು ನೋಡದು, ಹಾಡರೆ ವ್ಯಾಖ್ಯಾನಕ್ಕೆ ನೋಡಬಾರದು?" ಎಂಬದಾಗಿ ಹೇಳುತ್ತಾರೆಂದ ಈ ಲೇಖಕರು ತಿಳಿಸುವರು ಇವರ ಆಕ್ಷೇಪಣೆಗಳಿಗೆ ಬೊಂಬಾಯಿ ಪಿಪಲ್‌ರವರು ಪ್ರತ್ಯುತ್ತರವನ್ನು ಬರೆದು, ವಿದ್ಯಾವಂತರಾದ ಹಿಂದೂಗಳು ವೇಶ್ಯರ ನರ್ತನ ಮೊದಲಾದವುಗಳನ್ನು ಆಕ್ಷೇಪಿಸಿ ಬರೆದಿರುವದು ಸರಿಯೆಂತಲೂ ಅವರು ಈ ದೇಶದ ದುಷ್ಟಪದ್ಧತಿಗಳನ್ನು ತಿದ್ದಿ ದೇಶಿಯರನ್ನು ಉನ್ನತಸ್ಥಿತಿಗೆ ತರುವದಕ್ಕೆ ಪ್ರಯತ್ನಪಡುವಾಗ್ಗೆ ಯೂರೋಪಿಯನ್ನರು ತಮ್ಮ ನಡತೆಯಿಂದ ಅಂಥಾ ಪ್ರಯತ್ನಗಳಿಗೆ ಯಾವ ಕುಂದಕವನ್ನುಂಟುಮಾಡದಂತೆ ಎಚ್ಚರಿಕೆಯಾಗಿರಬೇಕೆಂತಲೂ ತಿಳಿಸಿರುವರು ಒಬ್ಬ ಪಾರ್ಸಿ ದೊಡ್ಡಮನುಷ್ಯರು ಸಹ ಇದೇ ರೀತಿಯಲ್ಲಿ ಅಭಿಪ್ರಾಯಪಡುವವರು ಪಾರ್ಸಿ ಜನಗಳು ಒಂದು ಕಾಲದಲ್ಲಿ ಹಿಂದೂಗಳ ಹಾಗೆಯೇ ವಿವಾಹ ಮಹೋತ್ಸವಕಾಲಗಳಲ್ಲಿ ನಾಯಕಸಾನಿಯರನ್ನು ಕರೆಯಿಸಿಕೊಂಡು ಅವರಿಂದ ನರ್ತನ, ಕೋಲಾಟ ಮೊದಲಾದವುಗಳನ್ನಾಡಿಸಿ ಸಂತೋಷಪಡುತ್ತಿದ್ದರು ಆದರೆ ಈಗ ಪಾರ್ಸಿಯರು ಇಂಥಾ ಪದ್ಧತಿಗಳನ್ನು ಸಂಪೂರ್ಣವಾಗಿ ಬಿಟ್ಟಿರುವರಂತೆ ಯೂರೋಪಿಯನ್ ದೊಡ್ಡಮನುಷ್ಯರನ್ನು ನಾಯಕಸಾನಿಯರ ತಾಫೆ ಮೊದಲಾದವುಗಳನ್ನು ನೋಡುವದಕ್ಕೆ ಬರಮಾಡಿಕೊಳ್ಳುವದು ಅವರಿಗೆ ಕೇವಲ ಅಗೌರವವೆಂತಲೂ ಅವರನ್ನು ಸತ್ಕರಿಸುವದಕ್ಕೆ ಅಂಥಾ ಕೂಟಗಳನ್ನೇರ್ಪಡಿಸುವದನುಚಿತವೆಂತಲೂ ಇದರ ವಿಷಯ ಆ ಹಿಂದೂ ಲೇಖಕರು ಪಡುವ ಅಭಿಪ್ರಾಯಗಳನ್ನು ಸಂಪೂರ್ಣವಾಗಿ ಅನುಮೋದಿಸುತ್ತೇನೆಂತಲೂ ಈ ಪಾರ್ಸಿ ದೊಡ್ಡಮನುಷ್ಯರು ತಿಳಿಸುತ್ತಾರೆ ನಾವು ಯಾವ ದೇಶದವರೇ ಆಗಲಿ ಯಾವ ಕುಲದವರೇ ಆಗಲಿ ಎಲ್ಲಾ ಜನರು ಗಂಡಸರೂ ಹೆಂಗಸರೂ ತಮ್ಮ ನಡೆನುಡಿಗಳಲ್ಲಿ ಶುದ್ಧತೆಯನ್ನಭ್ಯಾಸಿಸಿ ಸಚ್ಚರಿತರಾಗುವಂತೆ ಸಹಾಯಮಾಡಬೇಕು

ನಾಯಕಸಾನಿಯರ ಉದ್ಯೋಗವು ಕೇವಲ ಹಾನಿಕರವಾದುದೆಂದು ನಾವು ತಿಳಿದಿರುತ್ತೇವೆ ಅವರನ್ನು ದೇವಸ್ಥಾನಗಳಿಂದಲೂ, ಅರಮನೆಗಳಿಂದಲೂ ಮತ್ತು ಸಂಸಾರಿಗಳ ಮನೆಗಳಿಂದಲೂ ಸಂಪೂರ್ಣವಾಗಿ ತೆಗೆದುಬಿಡಬಹುದು ಎಂದು ನಾವು ಅಭಿಪ್ರಾಯಪಡುತ್ತೇವೆ ಈ ಸಂದರ್ಭದಲ್ಲಿ ಈ ಬಡಪಾಯಿಗಳನ್ನು ತರಪೇತು ಮಾಡಿ ಅವರಿಂದ ಜೀವನವನ್ನು ಸಂಪಾದಿಸಿಕೊಳ್ಳುವ ಗಂಡಸರು ಈ ದೋಷಕ್ಕೆ ಗುರಿಯಾಗಿರುತ್ತಾರೆ ಇಂಥಾ ದುಷ್ಟ ಜನಗಳ ವಶದಿಂದ ಏನೂ ಅರಿಯದ ಮಕ್ಕಳನ್ನು ಬಿಡಿಸಿಕೊಳ್ಳುವದಕ್ಕೂ ಸೂಳೆಯರು ತಮ್ಮ ದುಷ್ಟವ್ಯಾಪಾರವನ್ನು ಬಿಟ್ಟು ಸಂಸಾರಿಗಳಾಗಿ ಜೀವಿಸುವದಕ್ಕೂ ಸಾಧ್ಯವಾಗಲಾರದೇ! ಜಗದ್ಗುರುವಾದ ಯೇಸುಸ್ವಾಮಿಯವರು ಇದ್ದ ಊರಿನಲ್ಲಿ ಒಬ್ಬ ವ್ಯಭಿಚಾರಿಣಿಯನ್ನು ಕೆಲವು ಜನರು ಕರೆತಂದು ಅವರ ಮುಂದಿಟ್ಟು ಅವಳನ್ನು ನಿಲ್ಲಿಸಿ ಅವರು ಅವಳ ವಿಷಯದಲ್ಲಿ ಕೊಡುವ ಆಜ್ಞೆಯನ್ನು ಕೇಳುತ್ತಾರೆಂದು ಕಾದಿರುವಲ್ಲಿ (ಮೋಶೆಯ ಧರ್ಮದ ವ್ಯಭಿಚಾರಮಾಡಿದವರನ್ನು ಕಲ್ಲುಗಳಿಂದ ಹೊಡೆದು ಕೊಲ್ಲುತ್ತಿದ್ದರು) ಸ್ವಾಮಿಯವರು ಆ ಜನಗಳನ್ನು ನೋಡಿ—ನಿಮ್ಮಲ್ಲಿ ಯಾವನು ಪಾಪವಿಲ್ಲದವನಾಗಿರುತ್ತಾನೆ? ಅಂಥವನಿದ್ದರೆ ಇವಳ ಮೇಲೆ ಮೊದಲನೇ ಕಲ್ಲನ್ನು ಹಾಕಲಿ ಎಂಬದಾಗಿ ಹೇಳಿದರು ಇವರ ಮಾತನ್ನು ಆ ಜನರು ಕೇಳಿದ ಕೂಡಲೆ ನಾಚಿಕೆಯುಳ್ಳವರಾಗಿ ಆ ಹೆಂಗಸನ್ನು ಬಿಟ್ಟು ಹೊರಟು ಹೋದರು ಸ್ವಾಮಿಯವರು ತಮ್ಮೆದುರಿನಲ್ಲಿ ನಿಂತಿದ್ದ ಆ ಹೆಂಗಸನ್ನು ನೋಡಿ "ಮಗಳೇ ಸಮಾಧಾನದಿಂದ ಹೋಗು, ಆದರೆ ಎಚ್ಚರಿಕೆ, ಇನ್ನುಮೇಲೆ ನೀನು ಪಾಪಮಾಡಕೂಡದು" ಎಂಬದಾಗಿ ಆಜ್ಞಾಪಿಸಿ ಅವಳನ್ನು ಕಳುಹಿಸಿಬಿಟ್ಟರು ಆ ದಿನದಿಂದ ಮುಂದಕ್ಕೆ ಅವಳು ತನ್ನ ದುರಭ್ಯಾಸಗಳನ್ನು ಸಂಪೂರ್ಣವಾಗಿ ತ್ಯಜಿಸಿ ಸಚ್ಚರಿತ್ರಳಾಗಿ ನಡೆದುಕೊಂಡಳು ಜಗತ್ತಿಗೆಲ್ಲಾ ನ್ಯಾಯಾಧಿಪತಿಯಾದ ಭಗವಂತನು ವ್ಯಭಿಚಾರದಲ್ಲಿ ಮುಳುಗಿ ಅದರಿಂದ ಜೀವನವನ್ನು ಸಂಪಾದಿಸುತ್ತಿರುವ ಈ ಬಡಹೆಂಗಸರನ್ನು ಬಹು ಕನಿಕರದಿಂದ ನೋಡುತ್ತಿರುವನೆಂಬುವದರಲ್ಲಿ ಯಾವ ಸಂದೇಹವೂ ಇಲ್ಲ

ಇವರಿಗಿಂತಲೂ ಇವರನ್ನು ದುಷ್ಟ ಪದ್ಧತಿಗಳಲ್ಲಿ ತರಪೇತುಮಾಡಿದವರೂ ಇವರಿಗೆ ಆಶ್ರಯ ಮಾಡಿ ಮನೆಗಳಿಗೆ ಕರೆಯಿಸಿಕೊಂಡು ಇವರಿಂದ ನರ್ತನಗಳನ್ನಾಡಿಸುವವರೂ ಇವರು ಕಟ್ಟುವ ತಾಫೆಗಳನ್ನು ನೋಡಿ ಸಂತೋಷಪಡುವವರೂ ಹೆಚ್ಚಾದ ದೋಷಾಪವಾದಕ್ಕೆ ಗುರಿಯಾಗಿರುತ್ತಾರೆಂದು ನಾವು ಖಂಡಿತವಾಗಿಯೂ ತಿಳಿಸುವೆವು ಜನರೆಲ್ಲರೂ ತಮ್ಮ ಹೃದಯಾತ್ಮಗಳಲ್ಲಿ ನಿರ್ಮಲತ್ವವನ್ನಭ್ಯಾಸಿಸಿದರೆ ಈ ದುಷ್ಟಪದ್ಧತಿಯು ಕ್ಷಿಪ್ರದಲ್ಲಿ ಈ ದೇಶವನ್ನು ಬಿಟ್ಟು ತೊಲಗುವದು

ಬಹು ವಿಷಾದಕ್ಕಾಗಿ ಬಂದ ಬಾತ್ಮಿಯು

ಹುಲಿಯು ಹುಡುಗಿಯನ್ನು ಎತ್ತಿಕೊಂಡು ಹೋಯಿತು

ಮುಳಬಾಗಿಲು ತಾಲ್ಲೂಕು ಹಲಗೂರು ಹೋಬಳಿ ಪೈಕಿ ಭೂಹಳ್ಳಿ ಗ್ರಾಮದಲ್ಲಿರುವ ಶಿವಾಚಾರದ ಜಾತಿ ಚನ್ನಪ್ಪನ ಮಗಳು ೧೦ ವರುಷ ಮಾದಮ್ಮನೆಂಬ ಹುಡುಗಿಯನ್ನು ಹೋಬಳಿ ಮಜಕೂರು ಕಾಡಹಳ್ಳಿ ಗ್ರಾಮದ ಪೂಜಾರಿ ಲಿಂಗಪ್ಪನವರ ಮನೆಗೆ ಕೊಟ್ಟು ಲಗ್ನ ಮಾಡುವುದಕ್ಕಾಗಿ ಲಗ್ನಕ್ಕೆ ಬೇಕಾದ ಸಾಮಾನುಗಳನ್ನು ಒದಗಿಸುತ್ತಾ ಇದ್ದರು ಹೀಗಿರುವಲ್ಲಿ ಮಾರ್ಚಿ ತಾ ೩೦ ರಲ್ಲಿ ಬೆಳಗಿನ ೭ ಗಂಟೆ ಸಮಯದಲ್ಲಿ ಮಲ್ಲಯ್ಯ ಮೊದಲಾದ ನಾಲ್ಕು ಜನರು ಜೊತೆಯಾಗಿ ಭೂಹಳ್ಳಿಯಿಂದ ಹೊರಟು ಸಮೀಪದಲ್ಲಿರುವ ಕಂಟಕರೆ ಎಂಬ ಸಂಗರಿಗೆ ಸೌದೆ ತರುವ ನಿಮಿತ್ತ ಹೋಗಿದ್ದರು ಅಲ್ಲಿ ತಲಾ ನಾಲ್ಕು ಆರು ಸೌದೆ ಕಡಿಯುವದರೊಳಗಾಗಿ ಮೇಲ್ಕಂಡ ಮಾದಮ್ಮನೆಂಬ ಹುಡುಗಿಯನ್ನು ಒಂದು ಹುಲಿಯು ಅಕಸ್ಮಾತ್ತಾಗಿ ಕಚ್ಚಿ ಹೊತ್ತುಕೊಂಡು ಹೋಗುತ್ತಾ ಇದ್ದದ್ದನ್ನು ಪುಟ್ಟೀರಿ ಎಂಬ ಹುಡುಗಿಯು ಕಂಡು ಸಮೀಪದಲ್ಲಿದ್ದ ಮಲ್ಲಮ್ಮನೆಂಬ ಮುದುಕಿಯನ್ನು ನೋಡಿ—ಅಮ್ಮಾ ಅಮ್ಮಾ, ಅಲ್ಲಿ ನೋಡು! ಕೆಂದಹುಲಿ ಮಾದಮ್ಮನನ್ನು ಕಚ್ಚಿಕೊಂ

...ಹೋಗುತ್ತದೆ ಎಂದು ಕಿರಿಚಿಕೊಂಡಿತು ಆ ಮುದುಕಿಯು—ಕೆಂಪಿಸು ಇಲ್ಲಿಲ್ಲಿ ಬಂತು? ದನಗಳು ಯಾರವೂ ಬರಲಿಲ್ಲ ಕಣೇ, ...ಎಂದು ಹೇಳಿಬಿಟ್ಟಳು ತಕ್ಷಣವೇ ಸಮೀಪದಲ್ಲಿದ್ದ ಮಲ್ಲಯ್ಯನು ಬಂದು ಮುದುಕಮ್ಮನೆಲ್ಲಿ ಎಂದು ಕೇಳಿ ಸಂಗತಿಯನ್ನು ತಿಳಿದು ...ನಾಗಿ ನೋಡುವುದಕ್ಕೆ ಹೊರಟನು. ಅಷ್ಟರಲ್ಲಿ ಆ ಹುಲಿಯು ಇವಳನ್ನು ಕಚ್ಚಿಕೊಂಡು ಕೆಲವು ದೂರ ಎಳೆದುಕೊಂಡು ಹೋಗಿ ...ರಕ್ತವನ್ನು ಕುಡಿದು ಬಲಭಾಗದ ತೊಡೆಯನ್ನು ಕಿತ್ತುಕೊಂಡು ಶವವನ್ನು ಬಿಸುಟು ಹೊರಟು ಹೋಗಿತ್ತು. ಇದನ್ನು ...ವ ದಾರಿಯಲ್ಲಿ ರಕ್ತದ ಬೊಟ್ಟುಗಳೂ ಹುಲಿಯ ಹೆಜ್ಜೆಗಳೂ ...ಯನ್ನು ಎಳೆದುಕೊಂಡು ಹೋಗಿದ್ದ ಗುರ್ತುಗಳನ್ನೂ ...ನೋಡುತ್ತಾ ಬರಲಾಗಿ ಒಂದು ತೊಡೆ ಇಲ್ಲದ ಹೆಣವು ಬಿದ್ದಿ..., ...ಭಾಗದ ಪಕ್ಕತ್ತಿನಲ್ಲಿ ಕಚ್ಚಿದ್ದ ಗುರುತು ಇತ್ತು. ಇದ... ನೋಡಿ ಭಯವನ್ನೂ ವ್ಯಸನವನ್ನೂ ಹೊಂದಿ ಜೊತೆಯಲ್ಲಿ ...ವನ್ನು ಕರೆದುಕೊಂಡು ಊರಿಗೆ ಓಡಿಬಂದು ವರ್ತಮಾನವನ್ನು ...ಗೆ ತಿಳಿಸಿದನು ಸದರಿ ಭೂಹಳ್ಳಿ ಪಟೇಲ್ ಲಿಂಗೇಗೌಡರು ...ಮಸ್ಥರನ್ನು ಕುನ್ನಿಕು ಕರೆದುಕೊಂಡು ತಕ್ಷಣ ಆ ಸ್ಥಳಕ್ಕೆ ಹೋಗಿ ಪಂಚಾಯಿತಿ ಮಾಡಿ ಶವವನ್ನು ಊರಹತ್ತಿರ ಇದ್ದ ತಮ್ಮ ...ಕ್ಕೆ ತೆಗೆಸಿಕೊಂಡು ಬಂದು ತೋಟ ಮೊದಲಾದ ಸಿಬ್ಬಂದಿಯನ್ನು ಇಟ್ಟು ಹಲಗೂರು ಪೋಲೀಸಿಗೆ ರಿಪೋರ್ಟು ಮಾಡಿದರು ಯಾ... ...ದಿಂದಲೇ ಸರ್ಕಾರದವರು ಈ ತಿಂಗಳು ೧ ನೇ ತಾ. ದಿಯು ...ಸಂಗತಿ ಪರಾಂಬರಿಸಿ ೧... ಘಂಟೆ ಮಧ್ಯಾಹ್ನದಲ್ಲಿ ದಫನ್ ಮಾಡಿಸಿದರು ಆದರೆ ಇಷ್ಟಾಗುವದರೊಳಗೆ ಆ ದಾಡುಗಿಯ ಶಾಯಿ ...ಗಳ್, ಮತ್ತು ಲಗ್ನ ಮಾಡಿಕೊಳ್ಳಬೇಕೆಂದು ಇದ್ದ ಅತ್ತೆ ಮಾವಂ... ...ಈ ದುರ್ಮರಣವನ್ನು ಕೇಳಿ ನೋಡುವದಕ್ಕೆ ಬಂದ ...ರ ಬಂಧುಗಳ ದುಃಖ ನನ್ನಿಂದ ವರ್ಣನೆ ಮಾಡಲು ತೀರದು ಅಲ್ಲದೆ ...ದಲ್ಲಿದ್ದ ...ರು ಗ್ರಾಮದ ಜನಗಳು ಹೋಗಿ ...ವನ್ನು ಈ ...ಶೋಕವನ್ನೂ ಕಂಡು ಸರ್ವರೂ ದುಃಖಿಸು...ದಲ್ಲಿ ...ಗಿ ತಮ್ಮ ತಮ್ಮ ಸ್ಥಳಗಳಿಗೆ ತಲುಪಿದರು

ಬಾತ್ಮಿದಾರರಿಗೆ ನೋಟೀಸು

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ...ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ವಿಳಾಸಕ್ಕೆ ...ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ನಿಗಾ ಕೊಡಲಾರೆವು

ಬಾತ್ಮಿದಾರರು ಪತ್ರದ ಟೀಕಾಯಿಗಳಿಗೆ ನಾವು ಹೊಣೆಗಾರರಲ್ಲವೆಂಬ ...ವನ್ನು ಸಕಲರೂ ತಿಳಿಯತಕ್ಕದ್ದು —ಎಡಿ

ಕರೆಸ್ಪಾಂಡೆನ್ಸ್.

ಸಾಂಬಾರ ಪದಾರ್ಥ

ಅಯ್ಯಾ,

ಈ ಪಾ ...ದಲ್ಲಿ ದೇಶೀಯ ಬಟ್ಟೆಗಳೂ, ಬರಿಯ ... ...ಗಳ ಇತ್ಯಾದಿ ವಸ್ತುಗಳ ಉತ್ಪತ್ತಿಯಾದವೋ ...ಸಿಕ್ಕದು ... ದುರ್ಲಭವಾಗಿರುವದರಿಂದ ನಮಗೆ ಸಾಂಬಾರ ... ಪದಾರ್ಥ ಚಲ್ಲವಾಗಿ ತರಿಸಲಿಕ್ಕೆ ಬೇಕಾಗಿರುವ ... ತರಗತಿಯ ... ಗಳ ... ಸಿಕ್ಕುವ ... ಚಟೋ ... ಬೇಕಾಗಿ ಮಾಡಿ ... ಆಯಾಯ ... ತಿರುಪನಹಳ್ಳಿ ... ಈ ... ಪತ್ರಿಕೆಯ ... ಈ ... ಉಪಕಾರವನ್ನು ...

ರಾಮಚಂದ್ರ ಸುಬ್ರಾಯ ಪ್ರಭು, ಉಪ್ಪಿನಂಗಡಿ

ಒಂದು ಒಡ್ಡಿನ ಕಾವ ಗಾಥೆ

ಅಯ್ಯಾ,

ಕಾಸಿಗೆ ... ಅರಸೀಕೆರೆ ತಾಲ್ಲೋಕು ... ಗ್ರಾಮಕ್ಕೆ ಒಂದು ಮೈಲಿ ಫಾಸಲೆಯಲ್ಲಿ ...ಕಟ್ಟೆ ಎಂಬ ಹೆಸರಿನ ... ಒಂದು ಒಡ್ಡು ಇರುವದು ... ಇದು ಕಾಲಾಂತರದಿಂದ ಒಡೆದು ಹೋಗಿ ... ಈ ಒಡ್ಡು ಇದ್ದದ್ದರಿಂದ ಎಂಟು ಹತ್ತು ಗ್ರಾಮದ ...ಗಳಿಗೆ ... ನೀರಿನ ಬಹಳ ಸಮೃದ್ಧಿಯಾಗಿ ಇತ್ತು. ಈ ಒಡ್ಡಿನ ನೀರು ... ಮೈಲಿ ಫಾಸ್ಲೆ ... ಜೀವನಕ್ಕೆ ... ಅನುಕೂಲವಾಗಿ ಇತ್ತು ಈಗ ಇದು ಒಡೆದು ಹೋಗಿರುವ ...ದ ... ಇತರ ಹಳ್ಳಿ ಗ್ರಾಮಸ್ಥರುಗಳಿಗೆ ... ಕಷ್ಟನಷ್ಟಗಳಿಗೆ ಗುರಿಯಾಗಿ ಜೀವನೋಪಾಯದ ... ದನಕರುಗಳ ನೀ...ಕಷ್ಟವನ್ನು ಸಹಿಸಲಾರದೆ ಗವರ್ನಮೆಂಟಿಗೆ ಅನೇಕ ದಫಾ ಈ ...ವನ್ನು ಕಟ್ಟಿಸಿ ನಮ್ಮಗಳ ಜೀವನಕ್ಕೆ ಅನುಕೂಲ ಮಾಡಿ ... ಬೇಸಿಗೆಯಲ್ಲಿ ಉಂಟಾಗುವ ನೀರಿನ ಕಷ್ಟವನ್ನು ಪರಿಹರಿ...ಯನ್ನು ಪಡೆಯುತ್ತೇವೆಂಬ ಆಸೆಯನ್ನು ಇಟ್ಟುಕೊಂ...ಡು ಅನೇಕ ದಫಾ ಪ್ರಾರ್ಥಿಸಿ ಅರ್ಜಿಗಳನ್ನು ಬರಕೊಂಡದ್ದಕ್ಕೆ— ...ಕೆರೆಗೆ ಹೋಗುವ ನೀರಿಗೆ ಅಡ್ಡಿಯಾಗುತ್ತೆ ಕಟ್ಟುವದಕ್ಕೆ ...ವದಿಲ್ಲವೆಂದು ಇಂಜಿನಿಯರು ಹೇಳುತ್ತಿರುತ್ತಾರೆ ಈ ಒಡ್ಡಿಗೆ ಬರುವ ... ಒಂದು ಘಂಟೆ ಹೊತ್ತು ಬಂದರೆ ಒಡ್ಡು ತುಂಬುತ್ತೆ. ಜಾಸ್ತಿಯಾದ ನೀರು ಮಾರಿಕಣಿವೆಗೆ ಹೋಗುವ ಹಳ್ಳದ ಮಾರ್ಗದಲ್ಲಿಯೇ ಹೋಗುವದು ಗವರ್ನಮೆಂಟಿನವರು ಈ ಒಡ್ಡನ್ನು ಪರಾಂಬರಿಸಿ ...ನ್ನು ಕಟ್ಟಿಸಿ ಜಹಗೀರುದಾರರುಗಳಿಗೂ ರೈತರಿಗೂ ಅನುಕೂಲಪಡಿಸಿ ...ಯನ್ನು ಪಡೆಯುತ್ತಾರೆಂದು ಪ್ರಾರ್ಥಿಸುತ್ತೇನೆ.

ಎಸ್. ಕೆ ಎಸ್.

ಹೊಸೂರಿನಲ್ಲಿ ನೀರಿನ ಕಷ್ಟ.

ಅಯ್ಯಾ,

ಹೊಸೂರಿನಲ್ಲಿ ಹೋದ ವರುಷ ಚನ್ನಾಗಿ ಮಳೆ ಇಲ್ಲದೆ ಕೆರೆ ಭಾವಿಗಳು ತುಂಬಲಿಲ್ಲ. ಆದಕಾರಣ ಈ ವರುಷ ಈ ಸಮಯದಲ್ಲಿ ಜನರು ನೀರಿಲ್ಲದೆ ಬಹಳ ಕಷ್ಟಪಡುತ್ತಾರೆ. ಕೆಲವು ಸಾಹುಕಾರರು ಬಂಡಿಗಳಲ್ಲಿ ದೂರದಿಂದ ತರುತ್ತಾರೆ. ಬಡವರು ಹಾಗೆ ತರುವದಕ್ಕೆ ಆಗುವದಿಲ್ಲ. ಇದುವರೆಗೂ ಕಾಲಿನ್ಯ ...ಕುಂಟೆಯಿಂದ ನೀರು ತರುತ್ತಿದ್ದರು. ಆ ಕುಂಟೆ ನೀರು ಸಹಾ ಮುಗಿದುಹೋಗುತ್ತಾ ಬಂದು ಅದರಲ್ಲಿ ಸ್ವಲ್ಪ ಬುರುಡೆ ನೀರು ಉಂಟು. ಅದು ಬಹಳ ದುರ್ವಾಸನೆ ಅದರಿಂದ ಕೆಲವರು ಆ ನೀರು ತರುವದು ಬಿಟ್ಟುಬಿಟ್ಟರು. ಕೆಲವರು ಅದು ಬಿಟ್ಟರೆ ಗತಿಯಿಲ್ಲವೆಂದು ಉಪಯೋಗಿಸಿಕೊಳ್ಳುತ್ತಾರೆ. ಆ ನೀರನ್ನು ಕುಡಿಯುವದರಿಂದ ಧಾರಾಳವಾಗಿ ಕಾಯಿಲೆ ತಂದುಕೊಳ್ಳ ಬಹುದು. ಕೆಲವರು ಸುಮಾರು ಒಂದು ಮೈಲು ದೂರದಲ್ಲಿರುವ ಪಚ್ಚೆ ಕೊಳಕ್ಕೆ ಹೋಗಿ ತರುತ್ತಾರೆ. ಆ ನೀರು ಸಹಾ ಕುಡಿಯಲಿಕ್ಕೆ ಯೋಗ್ಯವಾಗಿಲ್ಲ. ಆದರೆ ಆ ನೀರನ್ನೇ ಕುಡಿಯುತ್ತಾರೆ. ಅದರಲ್ಲಿ ಮಡಿವಾಳರು ಬಟ್ಟೆಗಳು ಒಗೆದು ನೀರು ಕೆಡಿಸುತ್ತಾರಂತೆ ಈ ಗ್ರಾಮದಲ್ಲಿ ಅನೇಕ ಮನೆಗಳಲ್ಲಿ ಭಾವಿಗಳು ಉಂಟು. ಆದರೂ ಈ ಕಾಲಕ್ಕೆ ಏನೂ ಪ್ರಯೋಜನವಿಲ್ಲ ಕೆಲವರ ಮನೆ ಭಾವಿಗಳಲ್ಲಿ ಸ್ವಲ್ಪ ನೀರು ಸಿಕ್ಕುತ್ತದೆ. ಆದರೆ ಬೇರೆ ಜನರಿಗೆ ಕೊಡುವದಿಲ್ಲವೆಂದು ಅಡ್ಡಿ ಮಾಡುತ್ತಾರೆ ಸರ್ಕಾರಿ ಸ್ಕೂಲಿನ ಹತ್ತಿರ ಸರ್ಕಾರಿ ಭಾವಿ ಒಂದು ಉಂಟು ಅದರಲ್ಲಿ ಅಲ್ಪ ಸ್ವಲ್ಪ ನೀರು ಸಿಕ್ಕುತ್ತದೆ. ಹೊತ್ತಾರೆ ಹೋದರೆ ೮—೯ ಗಂಟೆಯೊಳಗಾಗಿ ಒಂದು ಸಾರಿ ತರಬಹುದು ಇದರಲ್ಲಿ ಪೋಲೀಸು ಇನ್ಸ್‌ಪೆಕ್ಟರ ಮನೆಗೋಸ್ಕರ ಕಾನ್‌ಸ್ಟೆಬಲ್‌ಗಳು ಭಾವಿಯಲ್ಲಿ ಜಗ್ಗ ಕಟ್ಟಿಬಿಟ್ಟಿರುತ್ತಾರೆ ಅದರಿಂದ ಹೋದವರೆಲ್ಲಾ ಭಾವಿ ನೋಡಿಕೊಂಡು ಹಿಂದಕ್ಕೆ ಬರುತ್ತಾರೆ ಇಂಥಾ ಕಷ್ಟಕಾಲದಲ್ಲಿ ಈ ಪ್ರಕಾರ ಮಾಡುವದು ಬಹಳ ಅನ್ಯಾಯವೆಂದು ತೋರುತ್ತದೆ ಅಧಿಕಾರಿಗಳು ಬಡವರ ಮೇಲೆ ದಯವಿಟ್ಟು ಈ ಪದ್ಧತಿಯನ್ನು ಇನ್ನು ಮೇಲೆ ತಪ್ಪಿಸ್ತಾರೆಂದು ಪ್ರಾರ್ಥಿಸುತ್ತೇನೆ

ಪ್ರಜಾ ಹಿತಚಿಂತಕ

ಧರ್ಮವು ಕಾಲವನ್ನು ಅನುಸರಿಸಬೇಕು

ಅಯ್ಯಾ,

ಅನಾದಿಯಾದ ಧರ್ಮ ಒಂದೇ ಕಾಲಗಳು ನಾಲ್ಕು—ಕೃತ, ತ್ರೇತ, ದ್ವಾಪರ, ಕಲಿ, ಈ ಕಾಲಗಳನ್ನು ತಕ್ಕ ಧರ್ಮಗಳು ಅನುಸರಿಸಬೇಕು

ಈ ಕಾಲದಲ್ಲಿ (ಕಲಿಯುಗದಲ್ಲಿ) "ಸಂಘೇ ಶಕ್ತಿಃ ಕಲೌಯುಗೇ" ಎಂಬಂತೆ ಸಂಘದಿಂದಲೇ ಶಕ್ತಿಯುಂಟಾಗಿ ಆ ಮೂಲಕ ದೇಶಾಭಿವೃದ್ಧಿಯಾಗಬೇಕು ನಮ್ಮ ಹಿರಿಯರಿಗಂತೂ ಆ ಯೋಚನೆಯು ಸ್ವಲ್ಪವೂ ಇರಲಿಲ್ಲ ಮಠಾಧಿಕಾರಿಗಳಿಗಾದರೋ, ಈ ದಿವಸ ಇವನಿಗೆ ಬಹಿಷ್ಕಾರ, ಅವನಿಗೆ ಬಹಿಷ್ಕಾರವೆಂದು ಮುರಿದ ಕಾಣಿಕೆಗೆ ದಾರಿಮಾಡಿಕೊಳ್ಳುವದರಲ್ಲಿ ... ಸಮ್ಮತಗಳ ಮತಸಿದ್ಧಾಂತಗಳನ್ನು ಉಂಟು ಮಾಡಿರತಕ್ಕ ಶಂಕರಾಚಾರ್ಯ, ರಾಮಾನುಜಾಚಾರ್ಯ, ಮಧ್ವಾಚಾರ್ಯ, ಇವರುಗಳ ಉದ್ದೇಶಗಳು ನಾವು ಈಗ ನಡೆಯುತ್ತಾ ಇರುವಂತೆ ಬೇರೆ ಅಲ್ಲ ... ಎಂಬುದೇ ಇದರ ಭಾವಾರ್ಥವಾಗುತ್ತದೆ. ದ್ವೈತ, ಅದ್ವೈತ, ವಿಶಿಷ್ಟಾದ್ವೈತ ಮತಗಳೆಂದರೆ ಪರಾಟ್ಪರಪುರುಷನನ್ನು ಕಂಡು ಹಿಡಿಯತಕ್ಕ ಮೂರು ಮುಖ್ಯ ದಾರಿಗಳೆಂದು ಅರ್ಥವಾಗುತ್ತದೆ.

ಶೈವ, ವೈಷ್ಣವ, ...ಧ, ... ಮುಂತಾದ ... ಪರಸ್ಪರ ... ಬಿಟ್ಟು ಯಾವ ಮತದಿಂದ ಆದರೂ ಪರಾತ್ಪರನಾದ ಆ ಪರಾಟ್ಪರಪುರುಷನನ್ನು ನೋಡಬಹುದು ಡಾಂಭಿಕನಾಗಿ ಯಾವ ಮತವನ್ನು ಅನುಸರಿಸುತ್ತಿದ್ದರೂ ಏನೂ ಪ್ರಯೋಜನವಿಲ್ಲ ಈ ವಿಷಯದಲ್ಲಿ ಭಗವಾನ್ ಶಂಕರಾಚಾರ್ಯರವರು ಅಪ್ಪಣೆ ಕೊಡಿಸಿರುವುದೇನೆಂದರೆ—

> ಕುರುತೇ ಗಂಗಾಸಾಗರ ಗಮನಂ ವ್ರತ ಪರಿಪಾಲನ
> ಮಥವಾ ದಾನಂ। ಜ್ಞಾನವಿಹೀನಸ್ಸರ್ವಮತೇನ ಮುಕ್ತಿಂ
> ನಭವತಿ ಜನ್ಮಶತೇನ॥

ಎಂಬಂತೆ ಜ್ಞಾನವಿಹೀನನಾಗಿ ಯಾವ ಮತದಲ್ಲಿ ಎಷ್ಟು ಕಾಲವಿದ್ದಾಗ್ಯೂ ಎಂದಿಗೂ ಮುಕ್ತಿ ದೊರೆಯುವುದಿಲ್ಲ

ದ್ವೈತಾದ್ವೈತ ವಿಶಿಷ್ಟಾದ್ವೈತ ಮತಗಳನ್ನು ಉಂಟುಮಾಡಿರತಕ್ಕ ಜಗತ್ಪ್ರಸಿದ್ಧರಾದ ಆಚಾರ್ಯಪುರುಷರುಗಳು ಮತ್ತೆ ಬಂದು ನೋಡಿದರೆ ಈಗಿನ ನಮ್ಮ ಮಠಾಧಿಕಾರಿಗಳು ನಡೆಯುವುದನ್ನು ಎಂದಿಗೂ ಸಹಿಸಲಾರರು ಇವರುಗಳು ತ್ರಿಮತೀಯರೆಲ್ಲಾ ಏಕಮತ್ಯವನ್ನುಂಟುಮಾಡುವುದಕ್ಕೆ ಪ್ರಯತ್ನಪಡಬೇಕು, ತ್ರಿಮತೀಯರೂ ಅನ್ಯೋನ್ಯಸಂಬಂಧವನ್ನು ಬೆಳೆಸಿ ಏಕೀಭವಿಸಿ ಈ ಯುಗದಲ್ಲಿ ಧರ್ಮಕ್ಕೆ ... ಸಂಘಶಕ್ತಿಯನ್ನು ಉಂಟುಮಾಡಿ ಆ ಮೂಲಕ ಪರಲೋಕ ಜ್ಞಾನವನ್ನು ಜನಗಳು ಅನುಷ್ಠಾನಕ್ಕೆ ತರುವಂತೆ ಮಾಡಬೇಕು. ಇದ್ಯಾವುದೂ ಇಲ್ಲದೆ ಸುವರ್ಣಖಚಿತವಾದ ಆಸನಗಳಲ್ಲಿ ರತ್ನ ಮುಂತಾದ್ದರಿಂದ ಅಲಂಕರಿಸಲ್ಪಟ್ಟ ಪ್ರತಿಮೆಗಳಿಟ್ಟು ನೋಟಕರಿಗೆ ವೇಷವನ್ನುಂಟುಮಾಡಿ ಪಾದಕಾಣಿಕೆ ತೀರ್ಥಕಾಣಿಕೆ ಅಪರಾಧಕಾಣಿಕೆ ಮುಂತಾದ ವ್ಯಾಜಗಳ ಯಾತ್ರೆಗಳನ್ನು ಮಾಡುತ್ತಾ ಕಾಲಕ್ಷೇಪ ಮಾಡಿದರೆ ಎಲ್ಲರೂ ಪರಲೋಕಜ್ಞಾನಿಗಳಾದಾರೋ? ದೇಶಾಭಿವೃದ್ಧಿಯಾದೀತೋ? ಹಾಗೆ ಏನುಮಾಡಿದರೂ ಪ್ರಪಂಚಕ್ಕೆ ಹಿತವೇನೆ ಉಂಟಾಗುವುದಿಲ್ಲ ಆದಕಾರಣ ಆಯಾ ಕಾಲಗಳಿಗೆ ತಕ್ಕಂತೆ ಧರ್ಮಗಳನ್ನು ಆಚರಿಸಬೇಕು

ಬಂಗಾಳಿಗಳು ಇದನ್ನು ಅನುಷ್ಠಾನಕ್ಕೆ ತಂದುಕೊಂಡು ಸ್ವದೇಶೀ ಪದಾರ್ಥಗಳನ್ನು ಮಾಡಿಕೊಂಡಿದ್ದಾರೆ ಅದರಂತೆ ಇಲ್ಲಿಯೂ ಅಂದರೆ ಮೈಸೂರು ದೇಶದಲ್ಲೂ ಸ್ವದೇಶೀ ಪದಾರ್ಥಗಳನ್ನು ಮಾಡಿಕೊಂಡು ಇತರರ ಸೌಖ್ಯಗಳನ್ನು ಪಡೆಯುವುದಕ್ಕೆ ಪ್ರಯತ್ನಪಡಬೇಕು ಈ ಭರತಖಂಡವನ್ನು ಸ್ವದೇಶವೆಂತಲೂ ಅದರಲ್ಲಿ ನಾವು ಇರತಕ್ಕ ಭಾಗವಾದ ಮೈಸೂರು ದೇಶವನ್ನು ಸ್ವಗ್ರಾಮವೆಂತಲೂ ತಿಳಿದುಕೊಂಡು ಸ್ವದೇಶಾಭಿವೃದ್ಧಿಗೆ ತಕ್ಕ ಪ್ರಯತ್ನಪಡಬೇಕು ನಾವು ಇರತಕ್ಕ ಊರನ್ನು ಸ್ವಗೃಹವೆಂದು ಭಾವಿಸಬೇಕು; ಅಂದರೆ, ತಮ್ಮ ಮನೆಯವರ ವಿಷಯದಲ್ಲಿ ಅವರ ಪುರೋವೃದ್ಧಿಗೆ ಹ್ಯಾಗೆ ಚಿಂತಿಸುವರೋ ಹಾಗೆಯೇ ತಮ್ಮ ಊರವರ ಅಭಿವೃದ್ಧಿಯ ವಿಷಯದಲ್ಲೂ ಅಹೋರಾತ್ರಿಗಳೂ ಯಾರು ನಿರ್ಮಲವಾದ ಮನಸ್ಸಿನಿಂದ ಯೋಚಿಸುವರೋ ಅವರೇ ನಿರ್ಲಿಪ್ತರು, ಮಹಾ ಯೋಗಿಗಳು, ಮೋಕ್ಷಾರ್ಹರು, ಅವರೇ ಪರಾತ್ಪರನಾದ ಪರಾಟ್ಪರುಷನ ಅಂಶೀಭೂತರು. ಪರಮೋತ್ತಮವಾದ ಪದವಿಯನ್ನು ಹೊಂದತಕ್ಕವರೂ ಅವರೇ.

ರಾ. ಶಾ., ಬೀರೂರು.

ಕೈಗಾರಿಕೆಗಳಿಗೆ ಪ್ರೋತ್ಸಾಹವಾಗಬೇಕು.

ಅಯ್ಯಾ,

ನಮ್ಮ ಇಂಗ್ಲಿಷ್ ಪ್ರಭುಗಳು ರಾಜ್ಯಭಾರ ಮಾಡಿದ ಲಾಗಾಯ್ತು ಈ ನಮ್ಮ ಇಂಡ್ಯಾ ದೇಶದಲ್ಲಿ ಅನೇಕ ದುರ್ಗುಣಗಳೆಲ್ಲಾ ಅಣಗಿ ಒಳ್ಳೇ ನಡತೆಯೂ ದಯಾಳುತ್ವವೂ ಧೈರ್ಯವೂ ಹೆಚ್ಚಿ ಪೌರುಷ್ಯ ಗುಣಗಳೆಲ್ಲಾ ಹೋಗಿ ಸರ್ವರೂ ಬುದ್ಧಿಚಾತುರ್ಯವುಳ್ಳವರಾಗಿ ಯಾವದೊಂದು ಹಿಂಸೆಯೂ ಇಲ್ಲದಂತೆ ಮಹಾಪ್ರಭುಗಳವರ ಸತ್ಯವು ಕೀರ್ತಿಯೂ ಅಂಧಕಾರವನ್ನು ಹೋಗಲಾಡಿಸಿದ ಸೂರ್ಯಪ್ರಕಾಶದಂತೆ ಪ್ರಜ್ವಲಿಸಿ ಬೆಳಗುತ್ತದೆ ಮತ್ತು ಪೂರ್ವದಲ್ಲಿ ಅನೇಕ ಮಹಾರಾಜರು ಅಂದರೆ ನಳ, ಹರಿಶ್ಚಂದ್ರ, ರಾಮ ಭರತ ಇವರು ಸತ್ಯವಾಗಿ ರಾಜ್ಯಭಾರ ಮಾಡಿರುವದು ಪುರಾಣೋಕ್ತವಾಗಿ ಸರ್ವರಿಗೂ ತಿಳಿದಿರಬಹುದು ಈಗ ನಮ್ಮ ಇಂಗ್ಲಿಷ್ ಚಕ್ರವರ್ತಿ ಸಾರ್ವಭೌಮರವರು ಮತ್ತು ಶ್ರೀಮನ್ಮಹಾರಾಜಾ ಪದೆಯರ್ ಬಹದ್ದೂರರವರು ಪ್ರಜೆಗಳಿಗೆ ಯಾವ ಕೊರತೆ ಇಲ್ಲದಂತೆ ಕಾಮಧೇನುವಿನೋಪಾದಿಯಲ್ಲಿ ಶಿಷ್ಟರನ್ನು ರಕ್ಷಿಸಿ ದುಷ್ಟನಿಗ್ರಹ ಮಾಡಿ ಪ್ರಜೆಗಳ ಇಷ್ಟದಂತೆ ನಡಿಸಿಕೊಡುವದು ಸರ್ವರಿಗೂ ವೇದ್ಯವೇ ಇದೆ. ಪೂರ್ವದ ರಾಜಾಧಿರಾಜರುಗಳಂತೆ ಕಾಣುವದಕ್ಕೆ ಯಾವ ಸಂದೇಹವು ಇಲ್ಲ ಈ ನಮ್ಮ ದೇಶದಲ್ಲಿ ಅನೇಕ ಬಡಜನಗಳು ಜೀವನೋಪಾಯವಿಲ್ಲದೆ ತಿರುಪೆ, ಯಾಚಕ, ಜೀತ, ಬಡಬ್ರಾಹ್ಮಣ, ನಾನು ದಾಸಯ್ಯ, ನಾನು ಜಂಗಮಯ್ಯ, ನಾನು ಜೋಗಿ, ನಾನು ಸುಡುಗಾಡಸಿದ್ಧ, ಬೈರಾಗಿ, ಬುಡುಬುಡಕೆ ಈ ರೀತಿ ನಾನಾ ವಿಧ ವೇಷಗಳನ್ನು ಹಾಕಿಕೊಂಡು ದೇಶದೇಶಕ್ಕೆ ಸುತ್ತುವರು ಅಂದರೆ ಜೀವನೋಪಾಯಕ್ಕೋಸ್ಕರ ಇಷ್ಟು ಕಷ್ಟಪಡುತ್ತಾ ಇದಾರೆ. ಅಂದರೆ ಬಹು ಭಾಗದ ಜನಗಳು ಇದೇ ವೃತ್ತಿಯಲ್ಲಿ ತಿರುಗುತ್ತಾರೆ ಮತ್ತು ಈ ದಾರಿದ್ರ್ಯಕ್ಕೋಸ್ಕರ ಯಾವ ಉಪಾಯವು ತೋಚದೆ ಪಿರುವತಿ, ಮೈಲಾರ, ಮೂಡಲಗಿರಿ ಇಂಥಾ ಸ್ಥಳಕ್ಕೆ ಹೋಗಿ ಹುಟ್ಟಿದ ಮಕ್ಕಳಿಗೆಲ್ಲಾ ಮುದ್ರೆ ಹಾಕುತ್ತಾರೆ. ಇವರಿಗೆ ಇದೇ ಒಂದು ಕಸಬು ಆಗಿದೆ. ಮೇಲ್ಕಂಡ ಮಹಾಪ್ರಭುಗಳವರು ಎಲ್ಲಾ ವಿದ್ಯೆಗಳಲ್ಲೂ ಮತ್ತು ಅನೇಕ ಕೈಗಾರಿಕೆಯಲ್ಲೂ ಪಾಂಡಿತ್ಯವನ್ನು ಪಡಿಸಿರುತ್ತಾರೆ ಇಂಥಾ ಸಂದರ್ಭದಲ್ಲಿ ಈ ಬಡಪ್ರಜೆಗಳ ಮೇಲೆ ಕರುಣವಿಟ್ಟು ಈ ಬಡಜನಗಳಿಗೆಲ್ಲಾ ಯಾವದಾದರೊಂದು ವೃತ್ತಿಯನ್ನು ಕಲ್ಪಿಸಿಕೊಟ್ಟು ಜೀವನೋಪಾಯವನ್ನು ತೋರಿಸುವದು ಮುಖ್ಯ ಪ್ರಭುಗಳವರ ಧರ್ಮವಾಗಿದೆ ಮತ್ತು ಪರದೇಶಗಳಿಂದ ಅನೇಕವಾದ ಸಾಮಾನುಗಳು ಬಂದು ಇಲ್ಲಿ ವಿಕ್ರಯವಾಗುವದನ್ನು ನೋಡಿದರೆ ಆಶ್ಚರ್ಯವಾಗಿರುವದು. ಈ ವಿಷಯವಾಗಿ ಸರ್ಕಾರದವರು ಈ ನಮ್ಮ ದೇಶದಲ್ಲಿ ಯಂತ್ರಮೂಲಕವಾಗಿಯೂ ಇನ್ನೂ ಬೇರೆ ವಿಧವಾಗಿಯೂ ನಡಿಸತಕ್ಕ ಸ್ಕೂಲುಗಳನ್ನು ಏರ್ಪಡಿಸಿಕೊಟ್ಟು ಪರದೇಶಗಳಿಂದ ಬರತಕ್ಕ ಸಾಮಾನು ಮತ್ತು ಬೇರೆ ಸಾಮಾನುಗಳು ಸ್ವದೇಶದಲ್ಲೇ ತಯಾರು ಆಗುವಂತೆ ಮಾಡಿದರೆ ಬಡಜನಗಳಿಗೆ ವೃತ್ತಿ ಕಲ್ಪಿಸಿದಂತೆಯೂ ದೊಡ್ಡವರಿಗೆ ಅನುಕೂಲವೂ ಆಗುವದು. ಮತ್ತು ಬಡಜನಗಳು ಈ ದೇಶದಿಂದ ಪರದೇಶಕ್ಕೆ ಹೋಗಿ ಯಂತ್ರಮೂಲಕವಾದ ವಿದ್ಯೆಯನ್ನೂ ಕೈಗಾರಿಕೆಗಳನ್ನೂ ಕಲಿಯಲು ಕಷ್ಟಕರವಾದ್ದರಿಂದ ನಮ್ಮ ಸ್ವದೇಶದಲ್ಲಿಯೇ ಎಲ್ಲಾ ಕೈಗಾರಿಕೆಗಳನ್ನೂ ಏರ್ಪಡಿಸಿ ಕಲಿಸಿಕೊಟ್ಟು ಬಡಜನರ ಜೀವನೋದ್ಧಾರ ಮಾಡ್ಯಾರೆಂದು ಜಾಪಿಸುತ್ತೇನೆ

ವಾಚಕ

ಪ್ರಕಟನೆಗಳು.

ಒಕ್ಕಲಿಗರ ಪತ್ರಿಕೆ.

30—1

ಒಕ್ಕಲಿಗರ ಪತ್ರಿಕೆಯು ಬೆಂಗಳೂರಿನಲ್ಲಿ ಪ್ರತಿ ಬುಧವಾರ ಒಕ್ಕಲಿಗರ ಸಂಘದಿಂದ ಪ್ರಕಟಿಸಲ್ಪಡುತ್ತಿರುವುದು ಇದು ಬಿ ಎ ಮತ್ತು ಬಿ ಎಲ್ ಪರೀಕ್ಷೆಗಳನ್ನು ಪಾಸುಮಾಡಿದ ವಿದ್ಯಾವಂತರಾದ ಒಕ್ಕಲಿಗರಿಂದ ಸುಲಭವಾದ ಒಳ್ಳೇ ಭಾಷೆಯಲ್ಲಿ ಬರೆಯಲ್ಪಟ್ಟು ಅಂದವಾಗಿ ಮುದ್ರಿಸಲ್ಪಡುತ್ತಿದೆ

ಈ ಪತ್ರಿಕೆಯಲ್ಲಿ ಸಂಸ್ಥಾನದ ಆಡಳಿತಗಳು, ಲೋಕವಾರ್ತೆ, ಕೈಗಾರಿಕೆ, ವ್ಯಾಪಾರ ಕಸುಬು, ವ್ಯವಸಾಯ ಮುಂತಾದ ವಿಷಯಗಳನ್ನು ಕುರಿತು ದೀರ್ಘಾಲೋಚನೆ ಮಾಡಿ ಉಪನ್ಯಾಸಗಳು ಬರೆಯಲ್ಪಡುವವು

ಚಂದಾ ಬೆಂಗಳೂರು ಮತ್ತು ಮೈಸೂರು ಪಟ್ಟಣಗಳಲ್ಲಿಯೂ ಮತ್ತು ನಮ್ಮ ಏಜಂಟರುಗಳಿರುವ ಎಲ್ಲಾ ಪರಸ್ಥಳಗಳಲ್ಲಿಯೂ ವರ್ಷ ೧ಕ್ಕೆ ೧ ರೂಪಾಯಿ. ತಮ್ಮ ಹೆಸರಿಗೆ ನೇರಾ ತರಿಸಿಕೊಳ್ಳುವವರಿಗೆ ಅಂಚೆ ಹಾಸಲು ಸೇರಿ ೧ ರೂ ೪ ಆಣೆ ಬೀಳುತ್ತದೆ.

ಈ ಪತ್ರಿಕೆಯು ಪಟ್ಟಣ, ಊರು ಗ್ರಾಮಾಂತರಗಳಲ್ಲಿ ಬಹಳ ಪ್ರಚಾರಕ್ಕೆ ಬರುತ್ತಾದ್ದರಿಂದ ಇದರಲ್ಲಿ ಇಸ್ತಿಹಾರುಗಳು ಪ್ರಕಟಿಸಿದರೆ ವ್ಯಾಪಾರಸ್ಥರಿಗೆ ಬಹಳ ಲಾಭ ಉಂಟು ದರಗಳನ್ನು ಈ ಕೆಳಗೆ ಕಂಡ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು

ಮ್ಯಾನೇಜರು, ಒಕ್ಕಲಿಗರ ಪತ್ರಿಕೆ,
(ಒಕ್ಕಲಿಗರ ಸಂಘದ ಕಛೇರಿ ಅರಳೇಪೇಟೆ
ಬೆಂಗಳೂರು ಸಿಟಿ,

ಪೆರೂನಾ ವಿಷಯದಲ್ಲಿ ಅತಿ ವಿಶೇಷವಾಗಿ ಹೇಳಲಾರೆವು.

38-2

ಈ ಸ್ತ್ರೀಯರು ಪ್ರಾಮುಖ್ಯವಾಗಿ ಪೆರೂನಾವನ್ನು ಸೇವಿಸುವುದಕ್ಕೆ ಮುಂಚೆ ಬಹಳ ಕಷ್ಟದೆಸೆಯಲ್ಲಿದ್ದೆವೆಂದು ಹೇಳಿರುತ್ತಾರೆ.

ಅವರು ವಿಶೇಷ ದುರ್ಬಲರಾಗಿದ್ದರು; ಅವರ ಬಾಳು ಬಾಳಾಗಿರಲಿಲ್ಲ.

ಅವರ ಸ್ಥಿತಿಯೆಲ್ಲಾ ಈ ಒಂದೇ ಮಾತಿನಲ್ಲಿ ಮುಗಿದಿದೆ.

ಪೆರೂನಾ ಈ ಸ್ತ್ರೀಯರಿಗೆ ಇಂಥಾ ಅದ್ಭುತವನ್ನು ಮಾಡುವುದಾದರೆ ಅದು ನಿಮ್ಮ ದೇಹಕ್ಕೂ ಹಾಗೇ ಪರಿಣಮಿಸೀತು.

ಗೃಹಕೃತ್ಯದಲ್ಲಿ ಬೇಕಾಗುವ ಔಷಧಗಳ ಯೋಗ್ಯತಾಪಕ್ಷವನ್ನು ಯಜಮಾನಗಿತ್ತಿಯೊಬ್ಬಳೇ ತಿಳಿಯಬಲ್ಲಳು. ಸಂಸಾರದಲ್ಲಿ ಪೆರೂನಾ ಎಷ್ಟು ಪ್ರಯೋಜನವಾದದ್ದೋ ಆಕೆಗೇನೇ ಗೊತ್ತು. ಪೆರೂನಾವನ್ನು ಜನರು ಗ್ರಹಿಸುವುದು ಮನೆ ಯಜಮಾನಗಿತ್ತಿ ಕೊಟ್ಟಿರುವ ಶಿಫಾರಸಿನಿಂದಲೇ.


MRS. E. T. GADDIS

MRS. A. E. STOUFFER

MRS. CAROLINE SUNDHEIMER

ಮೊದಲಿಗಿಂತ ಹೆಚ್ಚು ಕಾಯಪುಷ್ಟಿ.

ಮಿಸೆಸ್ ಕ್ಯಾರೊಲೀನ್ ಸಂಧೀಮರ್, ಕ್ಲಾರ್ಕ್ಸ್, ಲಾ: ಎಂಬಾಕೆ ಬರೆಯುವುದು:—

"ನಾನು ಈಗ ಚೆನ್ನಾಗಿದ್ದೇನೆ, ಮತ್ತೆ ಕೆಲಸ ಮಾಡಬಲ್ಲೆನು. ಮೊದಲಿಗಿಂತ ಈಗ ಬಲವಾಗಿದ್ದೇನೆ.

"ನೀವು ಹೇಳಿದ ಬುದ್ಧಿಮಾತಿಗೆ ನಿಮ್ಮನ್ನು ಬಹಳ ವಂದಿಸುತ್ತೇನೆ. ನನ್ನ ಕೈಲಾದವರಿಗೆಲ್ಲಾ ನಿಮ್ಮ ಔಷಧವನ್ನೇ ಸೇವಿಸುವಂತೆ ಪ್ರೇರೇಪಿಸುತ್ತೇನೆ."

ಪೆರೂನಾ ಆರೋಗ್ಯಕೊಟ್ಟಿತು.

ಮಿಸೆಸ್ ಎ. ಇ. ಸ್ಟೌಫರ್, ಕ್ಯಾಪಿಯೋನ, ಕ್ಯಾನ್ಸಸ್, ಎಂಬಾಕೆ ಬರೆಯುವುದು:—

"ಪೆರೂನಾ ನನಗೆ ಆರೋಗ್ಯವನ್ನೂ ಶಕ್ತಿಯನ್ನೂ ಕೊಟ್ಟಿತು. ಹೆಂಗಸರಿಗಾಗಿ ಮಾಡಿದ ಔಷಧಗಳಲ್ಲೆಲ್ಲಾ ಇದೇ ಉತ್ತಮವಾದದ್ದು. ಹೆಂಗಸಿನಲ್ಲಿ ಅಂಥಾ ಬದಲಾವಣೆಯಾದದ್ದನ್ನು ಎಂದಿಗೂ ನೋಡಲಿಲ್ಲನೆಂದು ನನ್ನ ಸ್ನೇಹಿತರು ಹೇಳುತ್ತಾರೆ. ನಾನು ಪ್ರತಿ ಒಬ್ಬರ ಸಂಗಡಲೂ ಪೆರೂನಾವನ್ನು ಕುರಿತು ಮಾತನಾಡುತ್ತೇನೆ. ಅದರ ವಿಷಯವಾಗಿ ತುಂಬಾ ಹೊಗಳಬಲ್ಲೆನು."

ಮಿಸೆಸ್ ಸ್ಟೌಫರ್ ಒಂದು ಕಾಗದದಲ್ಲಿ ಹೀಗೆ ಬರೆದಿದ್ದಾಳೆ: "ನನಗೆ ವಿಷಮಶೀತಜ್ವರವಿತ್ತು, ಶಕ್ತಿ ಬರುವುದಕ್ಕೆ ಪೆರೂನಾವನ್ನು ತೆಗೆದುಕೊಂಡೆ. ನಾನು ನಿಜವಾದ ಒಳ್ಳೆ ಆರೋಗ್ಯವನ್ನು ಪಡೆದಿದ್ದೇನೆ."

ಹೆಂಗಸರಿಗೆ ಪರಿಹಾರ.

ಡಾಕ್ಟರ್ ಹಾರ್ಟ್‌ಮ್ಯಾನರವರಿಗೆ ಹೆಂಗಸರು ಬರೆದ ಇದೇ ಅಭಿಪ್ರಾಯವುಳ್ಳ ಸಾವಿರಾರು ಕಾಗದಗಳು ನಮ್ಮ ಬಳಿ ಇರುತ್ತವೆಂಬ ಧಾರಾಳವಾಗಿ ಹೇಳಬಲ್ಲೆವು:—"ಹೆಂಗಸಿನಲ್ಲಿ ಅಂಥಾ ಬದಲಾವಣೆಯಾದದ್ದನ್ನು ಎಂದಿಗೂ ನೋಡಲಿಲ್ಲವೆಂದು ನನ್ನ ಸ್ನೇಹಿತರು ಹೇಳುತ್ತಾರೆ." ನಾವು ಇತರ ಹೆಂಗಸರಿಗೆ ಈ ಸಂಗತಿಯನ್ನು ತಿಳಿಸಿ ಅವರಿಗೆ ಪರಿಹಾರವನ್ನು ತೋರಿಸಲೆಂದು ತುಂಬಾ ಅಭಿಲಾಷೆಪಡುತ್ತೇವೆ. ಅನೇಕ ಸ್ತ್ರೀಯರು ನಮಗೆ ಆಗಿಂದಾಗ್ಗೆ ಆನೇಕಾವರ್ತಿ ಬರೆಯುತ್ತಿದ್ದಾರೆ.

ಪೆರೂನಾ ಸ್ತ್ರೀಯರಿಗೆ ಬಹಳ ದೊಡ್ಡ ಔಷಧವಾಗಿದೆ. ಶರೀರದ ಹೊರಭಾಗವನ್ನು ನೀರು ಹ್ಯಾಗೆ ಶುದ್ಧಿಮಾಡುವುದೋ ಅದೇ ಪ್ರಕಾರ ಇದು ಒಳಭಾಗವನ್ನು ತೊಳೆದು ನಿರ್ಮಲವಾಗಿ ಮಾಡುತ್ತದೆ

ಮಿಸೆಸ್ ಇ. ಟಿ. ಗಡ್ಡಿಸ್, ಮೇರಿಯನ್, ಎನ್. ಸಿ ಎಂಬಾಕೆ ಬರೆಯುವುದು:—

"ಪೆರೂನಾ ಸೇವನೆಯನ್ನು ಪ್ರಾರಂಭಿಸುವುದಕ್ಕೆ ಮೊದಲು ನಾನು ಕಷ್ಟಕೆಲಸವ್ಯಾವುದನ್ನು ಮಾಡಿದರೂ ನನಗೆ ಬಹಳ ಬಾಧೆಯುಂಟಾಗುತ್ತಿತ್ತು. ನಾನು ಪೆರೂನಾ ಮತ್ತು ಮನಾಲಿನ್‌ಗಳನ್ನು ಸೇವಿಸಿದೆನು. ಇತರ ಎಲ್ಲಾ ಔಷಧಗಳಿಗಿಂತಲೂ ಅವು ನನಗೆ ತುಂಬಾ ಗುಣಕೊಟ್ಟವೆಂದು ಸಂತೋಷದಿಂದ ಹೇಳಬಲ್ಲೆನು. ಈಗ ನಾನು ಎಂದಿನಂತೆ ಬಹಳ ಚನ್ನಾಗಿರುತ್ತೇನೆ; ನನ್ನ ಕೆಲಸಗಳನ್ನೆಲ್ಲಾ ನಾನೇ ಮಾಡಿಕೊಳ್ಳುತ್ತೇನೆ; ನನಗೆ ಸ್ವಲ್ಪವೂ ಬಾಧೆ ಇಲ್ಲ. ಪೆರೂನಾ ಸ್ತ್ರೀಜಾತಿಗೆಲ್ಲಾ ದೊಡ್ಡ ಔಷಧವಾಗಿದೆ ಎಂದು ನೆನಸುತ್ತೇನೆ.

ಕೃತಜ್ಞತಾ ಸ್ತ್ರೀಯರುಗಳಿಂದ.

"ನನಗೆ ಮುಟ್ಟಾಗುವಾಗ್ಗೆ ಬಹಳ ಬಾಧೆಯಾಗುತ್ತಿತ್ತು. ನಿಮ್ಮ ಹೇಳಿಕೆಯ ಪ್ರಕಾರ ಪೆರೂನಾ ತೆಗೆದುಕೊಂಡೆನು. ಈಗ ನಾನು ಸೌಖ್ಯವಾಗಿದ್ದೇನೆ" ಎಂದು ಮಿಸೆಸ್ ಜೇಂಸ್ ಐವಿನ್, ಗ್ರೇಪ್, ಮಿಚ್, ಈಕೆ ಬರೆದಿದ್ದಾಳೆ.

"ನಾವು ಕೆಲವು ಕಾಲದಿಂದ ಪೆರೂನಾ ಉಪಯೋಗಿಸುತ್ತಿದ್ದೇವೆ. ಮನುಷ್ಯವರ್ಗಕ್ಕೆ ಪ್ರಾಪ್ತವಾಗುವ 'ಒಂದು ಸಾವಿರದ ಒಂದು' ಆಲಸ್ಯಗಳಿಗೆ ಅದನ್ನು ಉಪಯೋಗಿಸಬಹುದೆಂದು ಹೇಳುವುದರಲ್ಲಿ ನಾವು ಸಂದೇಹಪಡುವುದಿಲ್ಲ. ಅದನ್ನು ಪ್ರತಿ ಒಂದು ಮನೆಯಲ್ಲೂ ಇಟ್ಟೇ ಇರಬೇಕು. ಅದರಿಂದ ನಾನಾತರದ ಶೀತರೋಗಗಳು ಖಂಡಿತವಾಗಿ ವಾಸಿಯಾಗುವವು. ಗಸರೋಗವನ್ನು ತಡೆದು ವಾಸಿಮಾಡುವದಕ್ಕೆ ಇದು ಮಹಾ ಉತ್ಕೃಷ್ಟವಾದ ಔಷಧ. ಅನುಭವದಿಂದ ಹೇಳುವುದಾದರೆ ಪೆರೂನಾ ಎಂಬುವದು ಸ್ತ್ರೀಯರ ದುರ್ಬಲವನ್ನು ಹೋಗಲಾಡಿಸುವುದಕ್ಕೆ ಸರಿಯಾದ ಪರಿಹಾರವು.

"ಸ್ವಂತ ಅನುಭವದಿಂದಲೂ ಇತರ ಅನೇಕರ ಅನುಭವದ ಹೇಳಿಕೆಯಿಂದಲೂ ಈ ಔಷಧವನ್ನು ವಿಶೇಷವಾಗಿ ಕಷ್ಟಪಡುವ ಹೆಂಗಸರಿಗೆ ಉಪಯೋಗಿಸಬೇಕೆಂದು ಸಂಶಯವಿಲ್ಲದೆ ಹೇಳುತ್ತೇನೆ" ಎಂದು ಮಿಸೆಸ್ ಎಂ. ಎಫ್. ಜೋನ್ಸ್, ಬರ್ನಿಂಗ್ ಸ್ಪ್ರಿಂಗ್ಸ್, ಕೈ, ಎಂಬಾಕೆ ಬರೆದಿದಾಳೆ.

ಸ್ವಪ್ಪದ ರೋಗಗಳಿಗೆ ಪೆರೂನಾ.

"ಶೀತನೆಗಡಿಯಿಂದ ನಾನು ಅನೇಕ ವರುಷಗಳು ನರಳಿದೆನು. ಆದರೆ ಪೆರೂನಾ ತೆಗೆದುಕೊಂಡಾರಭ್ಯ ನನಗೆ ಶಕ್ತಿ ಬಂತು; ಆರೋಗ್ಯವಾದೆನು. ನನ್ನ ಜೀವಮಾನವು ಬದಲಾಗುವ ಸಂದರ್ಭದಲ್ಲಿ ಪೆರೂನಾ ಮತ್ತು ಮನಾಲಿನ್‌ಗಳನ್ನು ಸೇವಿಸಿದ್ದರಿಂದ ನನ್ನ ಎಲ್ಲಾ ತರದ ಆಲಸ್ಯಗಳನ್ನೂ ಬಹಳ ಚನ್ನಾಗಿ ನಿವಾರಣೆ ಮಾಡಿದ್ದಕ್ಕಾಗಿ ನಿಮ್ಮ ಪ್ರಯೋಜನಕರವಾದ ಔಷಧವನ್ನು ಕೊಂಡಾಡುತ್ತೇನೆ" ಎಂದು ಮಿಸೆಸ್ ಮೇಟಲ್ಡಾ ರಿಕ್ಟರ್, ಡಾನಿಫನ್, ನೆಬ್, ಎಂಬಾಕೆ ಬರೆಯುತ್ತಾಳೆ.

"ನಾನು ಕಿಬ್ಬೊಟ್ಟೆಯ ಶೀತನೆಗಡಿಯಿಂದ ಕಷ್ಟಪಡುತ್ತಿದ್ದು ಡಾಕ್ಟರ್ ಹಾರ್ಟ್‌ಮ್ಯಾನರಿಗೆ ಬರೆದೆನು. ಅವರು ಹೇಳಿದಂತೆ ಔಷಧಸೇವನೆ ಮಾಡಿದ ಮೇಲೆ ಈ ಬಹು ಕಷ್ಟಕರವಾದ ರೋಗವು ನನಗೆ ವಾಸಿಯಾಯಿತು. ಅದಕ್ಕಾಗಿ ನಿಮ್ಮನ್ನು ವಂದಿಸುತ್ತೇನೆ. ನನಗೆ ಶರೀರದಲ್ಲಿ ಈಗಿರುವಷ್ಟು ಲವಲವಿಕೆ ಹಿಂದೆ ಯಾವಾಗಲೂ ಇರಲಿಲ್ಲ" ಎಂದು ಮಿಸೆಸ್ ಎಟ್ಟಾ ಬೂಕರ್, ಡುಡೂರನ್, ಸಾಸ್ಕಿ, ಎನ್. ಡಬ್ಲ್ಯು. ಟಿ, ಕ್ಯಾನ್, ಎಂಬಾಕೆ ಬರೆದಿರುತ್ತಾಳೆ.

ಸೇವನೆ ಮೊಂತಾದ್ದಕ್ಕೆ ಪ್ರತಿ ಬಾಟ್ಲಿ ಸಂಗಡ ಕಳಿಸುವ ನೋಟೀಸನ್ನು ಓದಿಕೊಳ್ಳಿ.

ಎಲ್ಲಾ ಔಷಧ ಮಾರಾಟಗಾರರಲ್ಲೂ ಪೆರೂನಾ ಬಿಕರಿಯಾಗುತ್ತಿದೆ. ಒಂದು ಬಾಟ್ಲಿಗೆ ರೂ. ೩||; ಆರು ಬಾಟ್ಲಿಗೆ ರೂ. ೧೮||.

ಈ ಔಷಧ ಸಿಕ್ಕುವ ಸ್ಥಳಗಳು:—

(೧) ಹಿಚ್‌ಕಾಕ್ ಅಂಡ್ ಸನ್ಸ್, ಬೆಂಗಳೂರು.

(೨) ಇಂಗ್ಲಿಷ್ ಡಗ್ರ್ ಕಂಪನಿ, ೩೯೪ ಮಿಂಟ್ ಬೀದಿ, ಮದರಾಸ್.

ಮೈಸೂರು ಸೀಮೆಯಲ್ಲಿ ಪ್ಲೇಗಿನಸ್ಥಿತಿ.

29—3—1907 ರಿಂದ 5—4—1907 ರ ವರೆಗೆ

ಸ್ಥಳ.	ಪ್ಲೇಗ್ ತಗಲಿದ್ದು.	ಪ್ಲೇಗ್ ಸತ್ತದ್ದು.	ಹೋದ ವಾರ... ಈ ವಾರ ಸಂಖ್ಯೆ.	[illegible]
ಬೆಂಗಳೂರು ಪಟ್ಟಣ	91	17	18	[illegible]
ಮೈಸೂರು ,,	6	5	0	[illegible]
ಬೆಂಗಳೂರು ಡಿಸ್ಟ್ರಿಕ್ಟು	12	12	1	[illegible]
ಮೈಸೂರು ,,	5	5	0	1
ಕೋಲಾರ್ ,,	0	0	1	1
ಕೋಲಾರ್ ಚಿನ್ನದ ಗಣಿಗಳು	1	1	6	8
ತುಂಕೂರು ಡಿಸ್ಟ್ರಿಕ್ಟು	0	0	1	1
ಹಾಸನ ,,	14	10	0	0
ಚಿತ್ರದುರ್ಗ ,,	0	0	1	1
ಕಡೂರ್ ,,	0	0	0	0
ಶಿವಮೊಗ್ಗಾ ,,	0	0	4	1
ಜುಮ್ಲಾ	66	50	26	17

ಶಾಲಿವಾಹನ ಶಕ ವರುಷಂಗಳು ೧೮೩೦ ನೇ ಪ್ಲವಂಗನಾಮ ಸಂವತ್ಸರದ ನಿಜ ಚೈತ್ರ ಶುದ್ಧ ಷಷ್ಟಿ ಗುರುವಾರದಿಂದ ನಿಜ ಚೈತ್ರ ಶುದ್ಧ ಏಕಾದಶಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ.

೧೯೦೭ ನೇ ಇಸವಿ ಏಪ್ರಿಲ್.

ತಾ.	ವಾರ.		ತಿಥಿ.	ಘಳಿಗೆ.	ನಕ್ಷತ್ರ.	ಘಳಿಗೆ.	ಶ್ರವಿ ಮೇಷ ಮಾಸ
18	ಗುರು	‡	ಷಷ್ಟಿ	60-0	ಮೃ	9 50	6
19	ಶುಕ್ರ		ಷಷ್ಟಿ	3-56	ಆ	16-26	7
20	ಶನಿವಾ	::	ಸಪ್ತಮಿ	8-58	ಪು	22-32	8
21	ರವಿವಾ	¶	ಅಷ್ಟಮಿ	13-23	ಪು	28-28	9
22	ಚಂದ್ರ	*	ನವಮಿ	17-6	ಶ್ಲೇ	33-13	10
23	ಕುಜ	†	ದಶಮಿ	19-40	ಮ	37-2	11
24	ಬುಧ	;;	ಏಕಾದಶಿ	20-58	ಪು	39 42	12

‡ ದಗ್ಧಯೋಗ. :: ಸಂತಾನಸಪ್ತಮಿ. ¶ ಅಶೋಕಾಷ್ಟಮಿ. * ದಶಮೀತಿಥಿ, ಶ್ರೀರಾಮನವಮಿ. † ಏಕಾದಶಿತಿಥಿ, ಧರ್ಮರಾಜದಶಮಿ, ನಂಜನಗೂಡಿನಲ್ಲಿ ಬೆಳ್ಳಿ ಕುದುರೆವಾಹನ. ;; ದ್ವಾದಶೀತಿಥಿ, ಸರ್ವತ್ರೈಕಾದಶಿ, ಮಂಡ್ಯದಲ್ಲಿ ಜನಾರ್ದನಸ್ವಾಮಿ ರಥ.

ಪೇಟೇ ಧಾರಣೆ.

ದಿನಸಿ.	ಮೈಸೂರು.	ಬೆಂಗಳೂರು.
ಕಪ್ಪೇ ಅಕ್ಕಿ ಪಲ್ಲಾ ೧ಕ್ಕೆ	ರೂ. ೧೨-೮-೦	೧೩-೪-
ಕೆಂಬೂತಿ ಅಕ್ಕಿ ಅವಲ್	೧೨-೮-೦	೧೪-೦-
,, ಮಧ್ಯಮ	೧೨-೦-೦	೧೩-೦-
ಜೂಸ್ರ್ಯಾಳೆ ಅಕ್ಕಿ	೧೨-೮-೦	೧೪-೮-
ಸಣ್ಣಕ್ಕಿ ಅವಲ್	೧೫-೦-೦	೧೪-೪-
,, ಮಧ್ಯಮ	೧೪-೮-೦	೧೩-೪-
ತೊಗರೀ ಬೇಳೆ ಪಲ್ಲಾ ೧ಕ್ಕೆ	೧೩-೮-೦	೧೨-೮-
,, ಮಧ್ಯಮ	೧೨-೧೨-೦	೧೨-೦-
ಕಡ್ಲೆ ದಾಗಿ ಪಲ್ಲಾ ೧ಕ್ಕೆ	೬-೪-೦	೬-೦-
ಕಾರ್ರಾಗಿ	೫-೮-೦	೫-೧೪-
ಜೋಳ	೭-೮-೦	೮-೧೨-
ಪಲಸಂದೆ ಪಲ್ಲಾ ೧ಕ್ಕೆ	೧೧-೧೨-೦	೧೧-೪-
ಬಿಳೀ ಅವರೆ	೮-೪-೦	೭-೮-
ಹೆಸರು	೧೩-೮-೦	೯-೧೨-
ಉದ್ದು	೧೧-೮-೦	೧೧-೮-
ಕಡಲೆ	೧೧-೮-೦	೯-೧೨-
ಎಳ್ಳು ಸೆ. ೧೨೩ ಕ್ಕೆ	೨೨-೮-೦	೨೨-೮-
ಹುರುಳಿ	೬-೮-೦	೭-೪-
ಹರಳು ೧೨೩ ಸೇರಿಗೆ	೧೩-೦-೦	೧೬-೮-
ಸೀಗೇಕಾಯಿ ಮಣ ೧ಕ್ಕೆ	೨-೨-೦	೧-೧೨-
ಮೆಣಸಿನಕಾಯಿ	೨-೧೨-೦	೨-೧೨-
,, ಮಧ್ಯಮ	೨-೮-೦	೨-೪-
ಬೆಲ್ಲ ದೊಡ್ಡ ಅಚ್ಚು	೩-೮-೦	ಮ ೧-೬-
ಒಳ್ಳೆಣ್ಣೆ ಮಣ ೧ಕ್ಕೆ	೫-೮-೦	೫-೬-
ಹರಳೆಣ್ಣೆ ,,	೬-೦-೦	೫-೨-
ಕೊತ್ತುಂಬರಿ ಪಲ್ಲಾ ೧ಕ್ಕೆ	೬-೮-೦	೭-೨-
ಉಪ್ಪು ,,	೫-೬-೦	೬-೧೧-
ಹುಣಸೇ ಹಣ್ಣು	೧-೪-೦	೧-೨-
,, ಹಳೇದು	೦-೧೪-೦	೦-೧೫-
ತುಪ್ಪ ಮಣ ೧ಕ್ಕೆ	೧೫-೦-೦	೧೬-೮-
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ	೫-೦-೦	೪-೦-
ತೆಂಗಿನಕಾಯಿ ೧೦೦ ಕ್ಕೆ	೬-೮-೦	೬-೮-
ಆಳಲೇಕಾಯಿ ಮಣ ೧ಕ್ಕೆ	೧-೦-೦	೧-೦-
ಅಂಟುವಾಳದ ಕಾಯಿ ಮಣ ೧ಕ್ಕೆ	೦-೧೨-೦	೦-೧೧-
ಚಿನ್ನ (ಪವನ್) ಕೆಂಪು	೧೫-೪-೦	೧೫-೭-
,, ,, ಪಸಿಮೆ	೧೫-೧೧-೦	೧೫-೧೧-
,, ,, ಗಟ್ಟಿ ತೊಲ ೧ಕ್ಕೆ	೨೩-೧೨-೦	೨೪-೩-
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	೮೫-೦-೦	೮೪-೨-

Printed and Published by the Rev. E. W. Thompson, M. A., Proprietor and Manager, Wesleyan Mission Press, Mysore. 18/4/1907.

REGISTERED
M. 20.

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೦ ಮೈಸೂರು—ಸರ್ ೧೯೦೭ ನೇ ಇಸವಿ ಏಪ್ರಿಲ್ ತಾರೀಖು ೨೫ ನೇ ಗುರುವಾರ. ಸಂಚಿಕೆ ೪೭

WILLIAM & CO., BOMBAY.

ವಿಲಿಯಂ ಮತ್ತು ಕಂಪೆನಿ, ಪ್ರೋಪ್ರೈಟರ್ಸ್, ಮುಂಬಯಿ.

ಅಮೃತಾಂಜನ್

27-9

ಬಾಟ್ಲಿ ಒಂದಕ್ಕೆ ಕಿಮ್ಮತು ೮ ಆಣೆ. ವಿ. ಪಿ. ೧೨ ಆಣೆ.

ಅಮೃತಾಂಜನ—ಸುಖಾಂಜನ.
ಅಮೃತಾಂಜನ—ಸಂಜೀವನ
ಅಮೃತಾಂಜನ—ಪರಮಾಂಜನ
ಅಮೃತಾಂಜನ—ದಿವ್ಯಾಂಜನ.
ಅಮೃತಾಂಜನ—ಶೀತಭಂಜನ
ಅಮೃತಾಂಜನ—ಶಾ ಭಂಜನವಿನಾಶಿನಿ

ಅಮೃತಾಂಜನ—ಅಪೂರ್ವದರ್ಶಿನಿ.
ಅಮೃತಾಂಜನ—ಅಕ್ಷಣ ಪರಿಹಾರಿನಿ.
ಅಮೃತಾಂಜನ—ಸಂಧಿವಾತಕ್ಕೆ.
ಅಮೃತಾಂಜನ—ತಲೆನೋವಿಗೆ.
ಅಮೃತಾಂಜನ—ಜಖಮ್ ಮತ್ತು ಘಾಯಕ್ಕೆ
ಅಮೃತಾಂಜನ—ಗಂಟಲುನೋವಿಗೆ.

ಶಿರೋವೇಧನ ವಾತ, ಎದೆನೋವು, ಗಂಟಲುನೋವು, ಸಂಧಿವಾತ, ತಲೆನೋವು, ಶಿರೋಭಾರ, ಈ ಎಲ್ಲಾ ತರದ ರೋಗಕ್ಕೆ ಅಮೃತಾಂಜನ ದಿವ್ಯವಾದ ಔಷಧವಾಗಿದೆ ಇದನ್ನು ತರಿಸಿ ಮನೆಯಲ್ಲಿ ಸದಾಕಾಲ ಇಟ್ಟರೆ, ಮೇಲೆ ಹೇಳಿದ ಯಾವತರದ ರೋಗಕ್ಕೂ ಎಡೆ ಸಿಕ್ಕುವದಿಲ್ಲ. ಅಮೃತಾಂಜನದಿಂದ ಗುಣವು ಕಾಣದಿರುವಿದ್ದರೆ ಹಣ ಹಿಂತಿರುಗಿ ಕೊಡಲ್ಪಡುವದು

ಗಜಕರ್ಣದ ಮುಲಾಮು ಡಬ್ಬಿ ಒಂದಕ್ಕೆ ೬ ಆಣೆ, ವಿ. ಪಿ. ೧೦ ಆಣೆ.—ಇದನ್ನು ಹಾಗಿಸುವದರಿಂದ ಎಲ್ಲಾ ತರದ ಕಜ್ಜಿ ವಾಸಿಯಾಗುವದು. ಮೂರು ಸಾರಿ ಹಾಗಿಸುವದರೊಳಗೆ ಗಜಕರ್ಣವು ಹೋಗುವದು ಒಂದು ಸಾರಿ ಪರೀಕ್ಷಿಸಿ ನೋಡಿರಿ ಕ್ರಯ ಕಮ್ಮಿ, ಗುಣ ಹೆಚ್ಚು. ಇದನ್ನು ಹಚ್ಚಿದಲ್ಲಿ ಉರಿ ಬರುವದಿಲ್ಲ, ಚರ್ಮ ಕಪ್ಪಾಗುವದಿಲ್ಲ ಇದರಿಂದ ಗುಣವು ಕಾಣಬರದಿದ್ದರೆ ಹಣ ಮರತು ಕೊಡಲ್ಪಡುವದು

ಕೇಶವರ್ಧಿನೀ ತೈಲ—ಇದು ತಲೆಯ ಮೆದುಳನ್ನು ತಂಪುಮಾಡಿ ಕೂದಲನ್ನು ತೆಗೆದು ಕೂದಲು ಬೆಳಿಸುತ್ತದೆ. ಇದಕ್ಕೆ ಚಲೋ ವಾಸನೆಯು ಬರುತ್ತದೆ. ಮೂರು ಔನ್ಸು ಬಾಟ್ಲಿಗೆ ೧–೦–೦

ಕಜ್ಜಿ ಮುಲಾಮು—ಇದು ಅತಿಶಯ ಅಗ್ಗವೂ ಗುಣದಾಯಕವೂ ಆಗಿರುತ್ತದೆ ೦–೩–೦

ಕಫಹಾರಿ—ಕೆಮ್ಮು, ದಮ್ಮು, ಕ್ಷಯ, ಕೊರಳಿನಲ್ಲಿ ಕಫ ಮುಂತಾದ್ದಕ್ಕೆ ಇದು ಉತ್ತಮವಾದದ್ದು, ಬಾಟ್ಲಿ ೧ಕ್ಕೆ. ೦–೪–೦

ಜೀರ್ಣರಸಾಯನ—ಹೊಟ್ಟೆಯಲ್ಲಿ ಹಸಿವೆ ಆಗಲಿಕ್ಕೂ ನಾಲಿಗೆಗೆ ರುಚಿ ಬರಲಿಕ್ಕೂ ಉತ್ತಮವಾದದ್ದು .. ೦–೪–೦

ಜ್ವರಹಾರಿ—ಎಲ್ಲಾ ತರದ ಜ್ವರಗಳ ಮೇಲೆ ಈ ಔಷಧವು ಚಲೋದಾದದ್ದು ೦–೧–೬–೦

ಸುಂದರೀ ತೈಲ—ಈ ತೈಲವನ್ನು ನಿರಂತರವಾಗಿ ಮೋರೆಯ ಮೇಲೆ ಹಾಗಿಸುವದರಿಂದ ಮೋರೆಯ ಮೇಲೆ ಇರುವ ಕಪ್ಪು ಕಲೆಗಳನ್ನೂ ಕಪ್ಪಾದ ಕಲಂಕಗಳನ್ನೂ ತೆಗೆದು ಚರ್ಮವನ್ನು ನುಣುಪುಮಾಡಿ ಚಲುವಿಕೆಯನ್ನು ಕೊಡುತ್ತದೆ. ಹೆಂಗಸರಿಗೂ ಗಂಡಸರಿಗೂ ಉತ್ತಮವಾದದ್ದು ೦–೮–೦

ದಂತಮಂಜನ—ಹಲ್ಲು ಸ್ವಚ್ಛವಾಗುತ್ತೆ, ಘಟ್ಟಿಯಾಗುತ್ತೆ, ವಾಸನೆಯನ್ನೂ ರಕ್ತವನ್ನೂ ನಿಲ್ಲಿಸುತ್ತದೆ. ಕ್ರಯ ಬಹಳ ಕಮ್ಮಿ ೦–೨–೦

ನೇತ್ರಾಂಜನ ೪ ಆಣೆ ವಜ್ರಗುಟಿಕ ೧ ರೂಪಾಯಿ. ಕಾಮಮಾರಿ ಗುಟಿಕ ೧ ರೂಪಾಯಿ. ಜಂತುವಾತಹಾರಿ ೮ ಆಣೆ. ಕಫನಾಶಕ ಚೂರ್ಣ ೮ ಆಣೆ ಚೇಳು ಕಡಿತದ ಮದ್ದು ೮ ಆಣೆ. ರೋಮಹಾರಿ ೮ ಆಣೆ. ಕಸ್ತೂರಿಮಾತ್ರೆ ೧೦ ಆಣೆ ತಾಂಬೂಲಗುಟಿಕ ೮ ಆಣೆ

ಎಲ್ಲಾ ತರದ ಔಷಧಗಳು ಇರುವದರಿಂದ ಕೆಟಲಾಗು ಬೇಕಾದವರು ಬರೆದು ತರಿಸಿಕೊಳ್ಳಬಹುದು.

ವಿಲಿಯಂ ಮತ್ತು ಕಂಪೆನಿ, ೧೬ ಓಕ್ ಲೇನ್, ಪ್ರೋಪ್ರೈಟರ್ಸ್, ಮುಂಬಯಿ.

ಮುಂಬಯಿ ವ್ಯಾಪಾರಮಾಡಲಿಚ್ಛೈಸುವವರು.

85-47

ಮುಂಬಯಿಯಲ್ಲಿ ಪ್ರತಿಯೊಂದು ಮಾಲಿನ ತೂಕ ಅಳತೆ ಮತ್ತು ಅದರ ಧಾರಣೆ ಹಾಗೂ ಅನೇಕ ಉಪಯುಕ್ತ ಮಾಹಿತಿಯುಳ್ಳ ಕನ್ನಡ ಪುಸ್ತಕ —ಕ್ರಯ ೧೦ ಆಣೆ ವಿ. ಪಿ ಯಿಂದ ಕಳುಹಿಸುವ ಟಪಾಲು ಖರ್ಚು ಬೇರೆ ಬೊಕ್ಕಸ ಸೇಲರರಿಗೆ ಯೋಗ್ಯ ಕಮಿಶನ್ ಕೊಡೆಯುವದು ಮತ್ತು ಲಿಂಗಾಯತ ಧರ್ಮಸಂಬಂಧ ವಿರಕ್ತಶ್ರೀ ಕ್ರಿಯಾಲಕ್ಷಣವೆಂಬುವ ಕನ್ನಡ ಪುಸ್ತಕ—ನಾಲ್ಕು ಆಣೆ ಅಕ್ಷರದಿಂದ ಬರಿಯಿರಿ ಪತ್ತಾ ಚನ್ನಬಸಪ್ಪ ಮಲ್ಲಪ್ಪ ವಾರದ ಕಟ್ಟ ವಣಾಂಟ್ರು, ಮುಂಬಯಿ.

ನೋಡಿರಿ.

ಯೆಲ್ಲೋ ಕೆಂಪು ಮತ್ತು ತಾಜಾ ಕಪ್ಪು

ಹಾಸರ್ ಫೂಲರ್ ದಾರ.

125-17

೩,೦೦೦ ಹಾಸನದ ಟೋಪಿ ಹೊಲೆಯುವ

ಸುಪೀರಿಯರ್ ಫೂಲರ್ ದಾರ ಮಾತ್ರ

	ರೂ.	ಆ	ಪೈ
೧ ಟೋಪಿ ಆಗುವ ಫೂಲರ್ ದಾರದ ಕ್ರಯ	೦	೮	೦
೪ ತೊಲೆಯ ಒಂದು ಬಂಡಲ್ ದಾರದ ಕ್ರಯ	೨	೪	೦
೩೫ ಟೋಪಿ ಹೊಲೆಯುವ ಕೊಕ್ಕೆ ಸೂಜಿ ೧ಕ್ಕೆ	೦	೧	೯
೧ ದಾರದಲ್ಲಿ ಆದ ಟೋಪಿ ದರ್ಜಾ ೧ಕ್ಕೆ	೧೩	೩	೦

ವಿ. ಪಿ. ಯಿಂದಲೂ ರವಾನಿಸುತ್ತೇವೆ.

ವಿಳಾಸ—ಸಿ. ರಘುನಾಥ ಕಾಮತ್,

ಫೂಲರ್ ಮರ್ಚಂಟ್, ಬೋಳಾರ, ಮಂಗಳೂರು.

ಬೆಲೆಗೆ ಬೆಳ್ಳಿ—ಗುಣಕ್ಕೆ ಭಂಗಾರ.

86 48

ಇಂಥಾ ಕಾಗದಗಳು ನಮಗೆ ಅನೇಕ ಬಂದಿವೆ.

ಮೆ॥ ವಾಣಾನಿಕಿವಿ, ಜವಳಿ ವರ್ತಕ, ಮಂಜೇಶ್ವರ, ಇವರು ಬರೆಯುವುದು—"ಕ್ಲೆಮೆಂಟ್‌ಯವರ ಮ್ಯಾಜಿಕ್ ಬಾಂ ಬಹಳ ತೃಪ್ತಿಕರವಾದದ್ದೆಂದು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ಅದು ತುಂಬಾ ಗುಣಕೊಡುವಂಥಾದ್ದು ದಯವಿಟ್ಟು ಇನ್ನೂ ಮೂರು ಶೀಸೆಯನ್ನು ವಿ. ಪಿ ಮೇಲೆ ಕಳುಹಿಸಿಕೊಡಿ" ಮೆ॥ ಜೆ ಡಬ್ಲಿಯು. ಸಾಮ್ಯುಯಲ್, ಪೋಸ್ಟ್ ಮಾಸ್ಟರ್, ಟ್ರಾವನ್ಕೋರಂ, ಇವರು ಬರೆಯುವುದು "ನಿಜವಾಗಿಯೂ ಇದು ಎಲ್ಲಾ ತರದ ನೋವುಗಳಿಗೂ ಅದ್ಭುತವಾದ ಔಷಧವೆನ್ನುವುದಕ್ಕೆ ಸಂಶಯವಿಲ್ಲ." ಮಿಸೆಸ್ ಇ ಕ್ಯಾಲ್ಸಿಂಗ್, ಬೈಕಲ್ಲಾ, ಮುಂಬಯಿ, ಇವರು ಬರೆಯುವುದು—"ನಿಮ್ಮ ಮ್ಯಾಜಿಕ್ ಬಾಂ ಔಷಧವು ನನ್ನ ಕಾಲಿನ ಕೆಟ್ಟ ನೋವನ್ನು ಸಂಪೂರ್ಣವಾಗಿ ವಾಸಿಮಾಡಿದೆ" ಮಿಸೆಸ್ ಇ. ಮೇಸರ್, ರಂಗೂನ್, ಇವರು ಬರೆಯುವುದು—"ನಾನು ಯಾವಾಗಲೂ ನಿಮ್ಮ ಕ್ಲೇಮೆಂಟ್ಸ್ ಮ್ಯಾಜಿಕ್ ಬಾಮನ್ನು ಗಂಟು, ಎದೆಯ ನೋವುಗಳಿಗೆ ಉಪಯೋಗಿಸುತ್ತೇನೆ ಅದರಿಂದ ನನಗೆ ಪ್ರತಿ ಸಲವೂ ಚನ್ನಾಗಿ ವಾಸಿಯಾಗಿದೆ ಈ ಔಷಧದಿಂದ ಪಾರ್ಶ್ವನೋವು, ಕೀಲುಗಳ ಬಾಧೆ, ಕಿಬ್ಬೊಟ್ಟೆನೋವು, ಬೆನ್ನು ಳೆಯುವುದು, ತಲೆನೋವು ಕೆಮ್ಮು, ಕಿಲುಬುಗಳು, ಕೀಲುಗಳು ಕತ್ತರಿಸುವುದು, ಕೊರಳು ಊತ, ಕೈ ಕಾಲು ಒಡೆತ ಇವೆಲ್ಲಾ ಗುಣವಾಗುತ್ತವೆ ಇದನ್ನು ಹಾಕಿ ಚನ್ನಾಗಿ ತಿಕ್ಕಿದರೆ ಬಾಧೆ ಪರಿಹಾರವಾಗುವುದು. ಕ್ರಯ—೧ ಬಾಟ್ಲಿಗೆ ೧೨ ಆಣೆ, ಪೋಸ್ಟೇಜ್ ೪ ಆಣೆ. ೩ ಬಾಟ್ಲಿಗೆ ಅಂಚೆವೆಚ್ಚ ಸೇರಿ ರೂ. ೨—೪ ಆಣೆ.

ನಮ್ಮ ವಿಳಾಸ.—ಎಫ್. ಡಬ್ಲಿಯು. ಅರ್ರ್,

ಸಿಮೆಟ್ರಿ ರೋಡ್, ವೇಪೇರಿ, ಮದರಾಸ್

ಕೊಡಗು ದೇಶದ ಶ್ರೇಷ್ಠವಾದ ಉತ್ಕೃಷ್ಟ ಕಾಫಿಯು

ಹುರಿಯದೆ ಇರುವದು ಅಥವಾ ಆಗತಾನೆ ಹುರಿದದ್ದು. ತಯಾರುಮಾಡಿದ ಸ್ಥಳದಿಂದಲೆ ನೆಟ್ಟಗೆ ರವಾನಿಸಲ್ಪಡುವದು.

18-12

ವ್ಯಾಪಾರದ C C R ಹೆಗ್ಗುರ್ತು

ಕಾಡುಕೋಣದ ತಲೆಯ ಮುದ್ರೆ ಇದೆ.

ಸಂಪೂರ್ಣವಾಗಿ ಯಂತ್ರದಿಂದಲೆ ಸಿದ್ಧಪಡಿಸಿದ್ದು ಹೆಗ್ಗುರ್ತುಳ್ಳ ವಿಲಾಸದ ಚೀಟಿ ಸುತ್ತಿಲ್ಲದಿರುವವು ಸ್ವಚ್ಛವಾದವುಗಳಲ್ಲ ಅವು ನಮ್ಮದಲ್ಲ ಏಜಂಟರುಗಳು ಬೇಕು. ಇಂಥವರಿಗೆ ಅನುಯಿದ ದರ ಬರೆಯುವವರು ದಯವಿಟ್ಟು ಈ ಪತ್ರಿಕೆಯ ಹೆಸರನ್ನು ಸೂಚಿಸಿ.

ವಿಳಾಸ.—ಮ್ಯಾನೇಜರ್, ಮ್ಯಾಥಿಸನ್ಸ್

ಕಾಫಿ ವರ್ಕ್ಸ್, ಹುಣಸೂರು.

ಜ್ವರಹರಿ

15-12

ಇದು ಸಾಧಾರಣ ಜ್ವರ, ಚಳೀಜ್ವರ, ಮೈರೇಜ್ವರ, ಪಿತ್ತಜ್ವರ ಶೀತಜ್ವರ, ವಾತಜ್ವರ ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್. ಟಿ. ವೆಂಕಟಪತಿ ಅಯ್ಯನವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨ ಔನ್ಸಿನ ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚನ್ನಾಗಿ ಗುಣ ಹೊಂದಿರುವರು ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨೦ ಔನ್ಸಿನ ಸೀಸೆಯನ್ನು ವಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ—ಸೀಸೆ ೧ ಕ್ಕೆ ೮ ಆಣೆ, ೧ ರೂ., ೧—೮ ರೂ., ೩ ೨—೧೨ ಆ., ೧೧ ರೂ., ಪನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

****

ಬಿಮಂಕಪೂರ.

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಕಳೆತುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ. ಒಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯವು ದರವು ಜ್ವರಹರಿ ಎಂಬ ಔಷಧದಂತೆಯೇ. ಸೀಸೆಗಳಲ್ಲಿ ಸಿಕ್ಕುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ನಿಮ್ಮಿಯ ಓಮಂ ಕರ್ಪೂರವನ್ನು ನಾನೂ ನನ್ನ ಹಾಜೀದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಷ್ಠರಿಗೆ ಕೊಡುತ್ತೇವೆ ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧವೆಂತ ಬರೆದಿದ್ದಾರೆ.

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾತ್ರಲ್ಲಿ ವಿಶೇಷ—

ಹೆಸ್ರಿಯುಪಡ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,

ಸೆಕೆಂಡ್ ಬೀಚ್ ಲೈನ್, ಮದ್ರಾಸ್

ಬಾಲಶಿಕ್ಷೆ ೧ನೇ ಭಾಗ!

43-1

ಕ್ರಯ ಒಂದಾಣೆ. ಒಂದಾಣೆ. ಒಂದೇ ಆಣೆ. ‖

ಅಕ್ಷರಗಳನ್ನೂ ಪಾಠದ ವಿಷಯಗಳನ್ನೂ ಮಕ್ಕಳ ಜ್ಞಾಪಕದಲ್ಲಿ ಖಚಿತವಾಗಿ ನಿಲ್ಲಿಸುವದಕ್ಕೆ ನವೀನವಾದ ಚಿತ್ರಗಳು ಇದರಲ್ಲಿ ಇವೆ. ಆಯಾ ಪಾಠಗಳ ಅಡಿಯಲ್ಲಿ ಲೇಖ್ಯಪಾಠವೂ ಗಣಿತಪಾಠವೂ ಇವೆ. ಮಕ್ಕಳಿಗೆ ಈ ಪಾಠಗಳು ಕಾಟವಾಗದೆ ಆಟವಾಗಿ ಪರಿಣಮಿಸುವವು. ನೂರು ಪ್ರತಿಗಳಿಗೆ ಹನ್ನೆರಡು ಪ್ರತಿಗಳು ಕಮಿಷನ್.

ವಿಳಾಸ:—ಮ್ಯಾನೇಜರ್, ಸಿ. ಎಲ್. ಎಸ್.

ಬುಕ್ ಡಿಪೋ, ಮೈಸೂರು.

ಪಾಳ್ಯದ ವೆಂಕಟಾಚಲ ಪಂಡಿತ, ಶ್ರೀಸೀತಾರಾಘವ ವೈದ್ಯ ಶಾಲಾ, ಕೊಳ್ಳೇಗಾಲ, ಇವರ ಸಿದ್ಧೌಷಧಗಳು.

26-10

೧. ಲೋಕಾಮಾಯಹರ ಕಸ್ತೂರಿ ಮಾತ್ರೆ.—ಈ ಮಾತ್ರೆಗಳನ್ನು ಹವಳದ ಭಸ್ಮ ಚಿನ್ನದ ರೇಖುಗಳ ಮಿಶ್ರದಿಂದ ತಯಾರಿಸಿ ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಪ್ಲೇಗು ಜ್ವರ, ಛಳೀಜ್ವರ, ಜ್ವರ, ಅಗ್ನಿನಷ್ಟ, ನಿಶ್ಶಕ್ತಿ, ಕೆಮ್ಮು, ಹೊಟ್ಟೆ ಕಿಬ್ಬೊಟ್ಟೆ, ಎದೆಗಳ ನೋವು ಇವಕ್ಕೆ ದಾರಿಗೊಡದು; ಮಕ್ಕಳ ಎಲ್ಲಾ ರೋಗಕ್ಕೂ ಗುಣಕಾರಿ. ನೀರು ಮತ್ತು ಹವಾ ಬದಲಾವಣೆಗೆ ಒಳ್ಳೆಯದು ೨೦೦ ಮಾತ್ರೆಯುಳ್ಳ ಕಪ್ಪಿಗೆ ೪ ಆಣೆ ಪೋಸ್ಟು ಮೂಲಕ ೫ ಸೀಶೆಗೆ ಒಂದು ಸೀಶೆ ಹೆಚ್ಚು ೧ ರಿಂದ ೬ ರ ವರೆಗೆ ಟ. ಖರ್ಚು ೪ ಆಣೆ

೨. ಎಸ್. ಸಿ. ಇ. ಸರ್ವಾಂಗಬಲಕಾರಿ.—ಕಾಫಿ, ಟೀ, ಕೋಕೋಗಳಿಗೆ ಬದಲಾಗಿ ಉಪಯೋಗಿಸುವ ಪುಡಿ ಕಾಫಿ ಟೀಗಳಲ್ಲಿರುವ ದುರ್ಗುಣಗಳು ಇದರಲ್ಲಿಲ್ಲ. ಹೊಟ್ಟೆ, ಎದೆ, ಆಸ್ಥಾಶಯ, ನರಗಳು, ಸಂದುಗಳು, ಮೆದುಳು, ಕಿಡ್ನಿ, ಮೂತ್ರಪಿಂಡ, ಇವುಗಳ ಸಂಬಂಧವಾದ ಎಲ್ಲಾ ರೋಗಗಳನ್ನೂ ಚನ್ನಾಗಿ ಹೋಗಲಾಡಿಸಿ ಧಾತುಪುಷ್ಟಿಯನ್ನು ಕ್ರಮವಾಗಿ ವೃದ್ಧಿಗೊಳಿಸುವುದು ೨೦ ಟೀ ಕಾಫಿಯಾಗುವ ಡಬ್ಬಿ ೪ ಆಣೆ, ೬೦ ಟೀ ೭ ಆಣೆ

೩. ಪ್ಲೇಗಿಗೆ ಸಿದ್ಧೌಷಧ.—ಪ್ಲೇಗಿಗೆ ಔಷಧಿಯೇ ಇಲ್ಲವೆಂದು ಹೇಳದೆ ಈ ನಮ್ಮ ಔಷಧವನ್ನು ಉಪಯೋಗಿಸಿ ಖಚಿತ ಗುಣವಾಗುತ್ತದೆ. ಯೋಗ್ಯತಾಪತ್ರಗಳನ್ನು ವಿವರಿಸಲು ಸ್ಥಳ ಸಾಲದು ಗಡ್ಡೆ ಮೊದಲಾದ ಬಾಧೆ ಇಲ್ಲದಂತೆ ಉಪಶಮನ ಔಷಧಿ ಸೇರು ಕ್ರಯ ೧ ರೂಪಾಯಿ.

೪. ಬಾಧಾಃ ಹಾರಿಣಿ.—ಪಟ್ಟು ತಗಲಿದ ನೋವು, ವಾಯು ತಲೆನೋವು, ಮಂಡಶಾರ್ದ್ಧಕ್ಕೆ ಸಂಜೀವನ. ಡಬ್ಬಿ ೫ ಆಣೆ

ವಿಳಾಸ:—ಎಸ್ ಎಸ್ ಆರ್. ವೈದ್ಯಶಾಲಾ,

ಲಕ್ಷ್ಮೀವಿಲಾಸ ರೋಡ್, ಮೈಸೂರು

ತರಿಸಿಕೊಳ್ಳಿ! ಬೇಗ ತರಿಸಿಕೊಳ್ಳಿ!! ಇದೇ ಒಳ್ಳೇ ಸಮಯ!!!

11 2

ತಡಮಾಡಿದರೆ ಪ್ರತಿಗಳು ಮುಗಿದುಹೋದಾವು.

ನೇತ್ರಾನಂದಕರಗಳಾದ ಚಿತ್ರಗಳಿಂದಲೂ, ನೀತಿರಸಪ್ರದವಾದ ವಿಷಯಗಳಿಂದಲೂ ರಂಜಿಸುವದಲ್ಲದೆ, ಸಕಲ ಜನಗಳೂ ಪಡೆಯತಕ್ಕಷ್ಟು ಸುಲಭವಾದ ಕ್ರಯಕ್ಕೆ ಸಿಕ್ಕುವುಗಳಾಗಿಯೂ ಇವೆ. ಇವುಗಳು ಯಾವವೆಂದರೆ:—

	ಕ್ರಯ.
ಎಡ್ವರ್ಡ್ ಚಕ್ರವರ್ತಿಯವರ ಮತ್ತು ಅಲೆಕ್ಸಾಂಡ್ರಾ ಚಕ್ರವರ್ತಿನಿಯವರ ಚರಿತ್ರೆ .. .	೦—೪—೦
ಎಡ್ವರ್ಡ್ ಸಾರ್ವಭೌಮರ ಕಿರೀಟಧಾರಣ ..	೦—೨—೬
ಘನತೆಯುಳ್ಳ ಸ್ತ್ರೀಯರ ಚರಿತ್ರೆ ..	೦—೨—೬
ದಕ್ಷಿಣ ಆಫ್ರಿಕವೂ ಅದರ ನಿವಾಸಿಗಳೂ ..	೦—೨—೬
ಚೀನಾ ಚಕ್ರಾಧಿಪತ್ಯವೂ ಅದರ ನಿವಾಸಿಗಳೂ ..	೦—೨—೬
ಟರ್ಕಿ ದೇಶವೂ ಬಲ್ಗೇರಿಯರೂ .	೦—೨—೬
ಪುರಾತನ ಗ್ರೀಕರ ಕಥೆಗಳು . .	೦—೨—೦
ಪುರಾತನ ರೋಮನರ ಕಥೆಗಳು . . .	೦—೨—೦
ಪಕ್ಷಿಗಳ ಚಿತ್ರಗಳೂ ಕಥೆಗಳೂ	೦—೧—೦
ಕ್ರಿಮಿವರ್ಗ ವರ್ಣನೆ	೦—೧—೦
ದೇಶವೆಂಬ ವಿಚಿತ್ರವಾದ ಸಸ್ಯ ವಾನೆ ..	೦—೧—೦
ಚಿಕ್ಕವರಿಗೆ ಹೇಳಿದ ಕಥೆಗಳು .	೦—೧—೦
ಪ್ರಾಚೀನಕಾಲದ ಮಹಾ ಜಂತುಗಳ ವರ್ಣನೆ	೦—೧—೦
ಹೊಗೆ ಗಾಡಿಗಳನ್ನು ಕಲ್ಪಿಸಿದ ಜಾರ್ಜ್ ಸ್ಟೀವನ್ಸನ್ ಎಂಬಾತನ ಚರಿತ್ರೆ	೦—೧—೦

“ಹಿಂದೂದೇಶ ಪ್ರದಕ್ಷಿಣ.”—ಹಿಂದೂ ದೇಶವನ್ನೆಲ್ಲಾ ಸಂಚಾರ ಮಾಡುವದರಿಂದ ಉಂಟಾಗುವ ಸಂತೋಷವನ್ನು ಒಂದು ಸಾರಿ ಈ ಗ್ರಂಥವನ್ನು ಓದುವದರಿಂದ ಹೊಂದಬಹುದು. ಇದು ಮೊದಲನೇ ಸಾರಿ ಪ್ರಿಂಟ್ ಆಗಿದ್ದ ಬಹು ಶೀಘ್ರವಾಗಿ ಎಲ್ಲಾ ಮುಗಿದುಹೋದವು. ಈಗ ಬಹಳ ವಿಚಿತ್ರವಾಗಿಯೂ ಉಲ್ಲಾಸಕರವಾಗಿಯೂ ಇರುವ ಪ್ರಸಿದ್ಧವಾದ ಚಿತ್ರಗಳೊಡನೆ ಮುದ್ರಿಸಿರುತ್ತೇವೆ. ಕ್ರಯ ೦—೪—೦, ವಿ. ಪಿ. ಮೂಲಕ ೦—೧೦—೦

ವಿಳಾಸ:—ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

CHAMBERLAIN'S COUGH REMEDY.

ಚೇಂಬರ್ಲೆನ್‌ಯವರು ಕಂಡು ಹಿಡಿದ ಕೆಮ್ಮಿನ ಔಷಧವು.



4-17

ಶೀತದ ಕೆಮ್ಮು, ಗಂಟಲು ಗೂರಿಸುವುದು, ಹುಡಿಗೆಮ್ಮು, ನಾಯಿಗೆಮ್ಮು, ಎಲ್ಲಾ ತರದ ಶೀತ, ಗಂಟಲಿನಲ್ಲೂ ಎದೆಯಲ್ಲೂ ಹುಟ್ಟುವ ಸಮಸ್ತ ವ್ಯಾಧಿಗಳು—ಇವಕ್ಕೆಲ್ಲಾ ಈ ಔಷಧವು ಬಾಣಪ್ರಾಯವಾಗಿದೆ

ಆ ಕೆಮ್ಮನ್ನು ಅಲಕ್ಷ್ಯಮಾಡಬೇಡಿ. ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ ಅದರ ಮೇಲೆ ನ್ಯೂಮೋನಿಯಾ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವುದು. ತರುವಾಯ ಉಗುಳಿನಲ್ಲಿ ರಕ್ತ ಬೀಳುವುದು, ಹಾಗೆಯೇ ಕ್ಷಯರೋಗಕ್ಕೆ ಆಸ್ಪದವಾಗುವುದು.

ಚೇಂಬರ್ಲೆನ್ ರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟಲಿನಲ್ಲಿ ಶ್ಲೇಷ್ಮ ಕಟ್ಟುವದನ್ನೂ ಶ್ಲೇಷ್ಮ ಬೀಳುವುದನ್ನೂ ಖಚಿತವಾಗಿ ನಿವಾರಣೆಮಾಡುತ್ತದೆ. ಉಸಿರು ಹೊಯ್ಯುವುದು ಕಷ್ಟವಾಗಿದ್ದರೆ ಅದನ್ನು ಕೂಡಲೇ ಸರಿಪಡಿಸುತ್ತದೆ ಅಪಾಯಕರವಾದ ಕೆಮ್ಮಿನ ಶಬ್ದವನ್ನು ನಿಲ್ಲಿಸಿಬಿಡುತ್ತದೆ ಎದೆ ಒಣಗುವಂಥಾ ಕೆಟ್ಟ ಸ್ಥಿತಿಯನ್ನು ಸಂಪೂರ್ಣವಾಗಿ ವಾಸಿಮಾಡಬಲ್ಲದು ಕೆಮ್ಮನ್ನು ಶಮನಮಾಡಿ, ನೀವು ಸುಖವಾಗಿ ನಿದ್ದೆಮಾಡುವಂತೆ ಮನಸ್ಸಿಗೆ ಉಲ್ಲಾಸಕೊಡುತ್ತದೆ.

ಚೇಂಬರ್ಲೆನ್ ರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇರಿಸಿರುವುದಿಲ್ಲ.

ಈ ಔಷಧವು ವನಸ್ಪತಿಗಳ ತಯಾರಿ.

ಕೈಯಿಂದ ಮುಟ್ಟದೆ ತಯಾರಾಗಿದೆ

ಎಲ್ಲೆಲ್ಲೂ ಬಿಕರಿಯಾಗುವುದು ಸಣ್ಣ ಸೀಸೆಗೆ ೧ ರೂಪಾಯಿ. ದೊಡ್ಡ ಸೀಸೆಗೆ ೨ ರೂಪಾಯಿ

ಇಲ್ಲಿನೋಡಿ!

22 10

ತುಮಕೂರು ಡಿಸ್ಟ್ರಿಕ್ಟ್ ಇಲಾಖೆಯಲ್ಲಿ, ಯೂರೋಪಿಯನ್ ಮೇಲ್ವಿಚಾರಣೆಯಿಂದ, ಉತ್ತಮ ತರಹದ ಹಾಸನದ ಟೋಪಿಗಳು ಅತಿ ಶ್ರೇಷ್ಠವಾದ ಊಲ್‌ದಾರದಿಂದ ತಯಾರಾಗುತ್ತವೆ ಕ್ರಯ ೧೦ ಆಣೆಯಿಂದ ೧ರೂ ೨ ಆಣೆವರೆಗೂ ದೊರಕುವವು ಅಪೇಕ್ಷಿಸುವವರು ಕ್ರಯದ ಪಟ್ಟಿಯನ್ನು ಕಳುಹಿಸುವೆವು ವಿಳಾಸ:— ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಡಿಸ್ಟ್ರಿಕ್ಟ್ ಇಲಾಖೆ, ತುಮಕೂರು

ರೇಷ್ಮೆ ಮತ್ತು ಕಲಾಪತ್ತು ಸೀರೆಗಳು ಮತ್ತು ಪೀತಾಂಬರಗಳು.

10 2

ಖಾತರಿಯಾದ ಒಡವೆಗಳನ್ನು ಹಾಕಿ ನಮ್ಮ ಸ್ವಂತ ಮಗ್ಗಗಳಲ್ಲಿ ಯೇ ತಯಾರಾಗುವ ಉತ್ತಮವಾದ ಕೆಂಪು, ಊದಾ, ಹಸುರು, ನೀಲಿ ಕಪ್ಪು, ನಾನಾವರ್ಣದ ಸೀರೆಗಳು ಪೀತಾಂಬರಗಳು ನಮ್ಮ ಅಂಗಡಿಯಲ್ಲಿ ನಿಖರವಾದ ಕ್ರಯಕ್ಕೆ ಮಾರುತ್ತೇವೆ ಇದಲ್ಲದೆ ಕಂಚಿ, ಕುಂಭಕೋಣ, ಕೊಳ್ಳೇಗಾಲ, ಮಧುರೆ, ಕಾಂತಾಮಲ, ತಾಳೈಸ್ವಂಗಾ ಪೇಟೆ, ಸೇಲಂ, ಕೊಯಮುತ್ತೂರು, ಮುಂತಾದ ಸ್ಥಳಗಳಲ್ಲಿ ತಯಾರಾಗುವ ಜಮಖಾನ ಜವಳಿಯೂ ನಮ್ಮಲ್ಲಿಯೂ ಸದಾ ಸುಲಭ ಖರೀದಿಗೆ ದೊರೆಯುತ್ತದೆ ಇದರ ನಗಗಳ ಕ್ರಯ ತಪಶೀಲ್ ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು ವಿ ಪಿ ದ್ವಾರ ಸಹಾ ತರಿಸಿಕೊಳ್ಳಬಹುದು ನಮ್ಮ ಸರಕುಗಳು ಶ್ರೇಷ್ಠವಾಗಿ ಸ್ವಂತಮಗ್ಗಗಳಲ್ಲಿ ತಯಾರಾಗುತ್ತವೆ ಎಂದು ಮೈಸೂರು ಶ್ರೀಮನ್ಮಹಾರಾಜರ ಸರ್ಕಾರದ ವಸ್ತುಪ್ರದರ್ಶನದಲ್ಲಿ ಬೆಳ್ಳಿ ಬಿರುದಿನ ಬಿಲ್ಲೆ ಬಹುಮಾನಕೊಟ್ಟಿರುತ್ತಾರೆ

ನಮ್ಮ ವಿಳಾಸ—ಹೆಚ್. ಸಂಕಪ್ಪ ಬಸಪ್ಪ,

ಚಿಕ್ಕಪೇಟೆ ಬೆಂಗಳೂರು.

THE PLACE FOR HASSAN CAPS IS HASSAN.

ನಿಮ್ಮ ತಲೆಯು ಮೋಳಿಯಾಗಿದೆಯೋ?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

11 21

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು? ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನ ದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೀಳುವುದರಿಂದ ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರ ಇಲ್ಲಿ ನೋಡಿ—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇ ದಾರ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಸೀದಾ ಬರೆದು ತರಿಸಿಕೊಳ್ಳಿ ಅಗ್ಗವಾದ ಮತ್ತು ಚನ್ನಾಗಿಲ್ಲದ್ದು ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ ಸಾದ ಕೆಂಪು ಕಪ್ಪು ಪಿಂಕ್, ಕಾಫಿ ಟೋಪಿಗಳು ೧ ರೂ ೮ ಆ. ೧ ರೂ ೬ ಆ; ೧ ರೂ ೪ ಆ

ರೇಷ್ಮೆ ಚುಕ್ಕೆಯುಳ್ಳ ಟೋಪಿಗಳು ೧ ರೂ ೮ ಆ, ೨ ರೂ

ದಾರದ ಟೋಪಿಗಳು ೧ ರೂ. ೧೨ ಆ; ೧ ರೂ. ೮ ಆ, ೧ ರೂ. ೬ ಆ

ಉಣ್ಣೆಯ ಟೋಪಿಗಳು ೧ ರೂ. ೮ ಆ., ೧ ರೂ. ೬ ಆ.

ಕೊಡಗಿನ ಟೋಪಿ, ಸೂರ್ಯ ಮೇಜೋಡು, ಅರ್ಧ ಮೇಜೋಡು. ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು.

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ.

ಪರ್ಮಾನೆಂಟ್ ಕ್ಯಾಷ್ ಬಜಾರ್.

15—1

ಎಚ್ ಬರ್ನ್‌ಮಾಲ್ ಕಂಪನಿ ವರ್ತಕರು ಕಮಿಷನ್ ಏಜಂಟರು.—ಇವರಲ್ಲಿ ಮನೆಯ ಪಾತ್ರೆಗಳು, ಗಾಜಿನ ಸಾಮಾನು, ಎನಾಮಲ್ ಪಾತ್ರೆ ಪದಾರ್ಥಗಳು, ಕೈಕಾಲು ಮೇಲೆ ಹಾಕುವಂಥಾ ಕೆಳಕೆಗಳು, ಆಟದ ಸಾಮಾನು ದಿನಸಾನಸಿ ಚಿಕ್ಕ ದೊಡ್ಡ ಗಡಿಯಾರಗಳು, ಸುವಾಸನಾ ದ್ರವ್ಯಗಳು ಕಬ್ಬಿಣದ ಪೆಟ್ಟಿಗೆಗಳು, ಸೌಕೆದಾರ, ತಿಂಡಿ ಪದಾರ್ಥ, ಚಹ, ಇನ್ನೂ ಬಹಳ ಅನೇಕ ಸಾಮಾನುಗಳು ಬಲ್ಲಕೆ ದಾಗಿಯೂ ಬಿಡಿಯಾಗಿಯೂ ಬಿಕರಿಯಾಗುತ್ತವೆ ಧಾರಣೆಗಳೆಲ್ಲಾ ಬಹು ಅಗ್ಗವಾಗಿವೆ ಬಂದು ನೋಡಿ

ವಿಳಾಸ—ಪರ್ಮಾನೆಂಟ್ ಕ್ಯಾಷ್ ಬಜಾರ್,

೨೩೦, ಚಿಕ್ಕಪೇಟೆ ಬೆಂಗಳೂರು ಸಿಟಿ.

ಔಷಧ ತೆಗೆದುಕೊಂಡು ಗುಣವಾಗುವದಕ್ಕಿಂತಲೂ ರೋಗ ಬರದಂತೆ ಮಾಡುವುದು ಉತ್ತಮ

SCOTT'S EMULSION. 31-6

(ಸ್ಕಾಟ್ಸ್ ಇಮಲ್ಷನ್)

ಘಟ್ಟ ಪ್ರದೇಶವಳ್ಳವರಿಗೆ ಪ್ಲೇಗ್, ಮಹಾಮಾರಿರೋಗ, ವಾಂತಿಭೇದಿ ಮುಂತಾದ ಅಂಟುರೋಗಗಳ ಭಯಕ್ಕೆ ಒಳಪಡುವ ಅಗತ್ಯವಿಲ್ಲ

ರೋಗಿಗಳನ್ನೂ ಬಲಹೀನರನ್ನೂ ದುರ್ಬಲರನ್ನೂ ಬೇಗನೆ ತಗಲಿ ಹಿಡಿಯುತ್ತವೆ

ಅಸ್ವಸ್ಥತೆಯನ್ನು ದೂರ ಹೋಗಲಾಡಿಸಿ, ಶರೀರದಲ್ಲಿರುವ ಬಲಹೀನ ಭಾಗಗಳನ್ನು ಬಲಪ್ರಾಣಗೊಳಿಸಿ, ಸಂಪೂರ್ಣ ಸೌಖ್ಯವನ್ನು ಉಂಟುಮಾಡುತ್ತದೆ

ಕೈಸೋಕದೆ ತಯಾರಾದದ್ದು.

ಎಲ್ಲಾ ಔಷಧ ವ್ಯಾಪಾರಗಾರರಲ್ಲೂ ಮಾರಾಟವಾಗುತ್ತದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್

ಈ ವಿಜಾತಿಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ

ಒಕ್ಕಲಿಗರ ಪತ್ರಿಕೆ.

39—2

ಒಕ್ಕಲಿಗರ ಪತ್ರಿಕೆಯು ಬೆಂಗಳೂರಿನಲ್ಲಿ ಪ್ರತಿ ಬುಧವಾರ ಒಕ್ಕಲಿಗರ ಸಂಘದಿಂದ ಪ್ರಕಟಿಸಲ್ಪಡುತ್ತಿರುವುದು ಇದು ಬಿ ಎ ಮತ್ತು ಬಿ ಎಲ್ ಪರೀಕ್ಷೆಗಳನ್ನು ಮಾಡಿರುವ ವಿದ್ಯಾವಂತರಾದ ಒಕ್ಕಲಿಗರಿಂದ ಸುಲಭವಾದ ಒಳ್ಳೇ ಭಾಷೆಯಲ್ಲಿ ಬರೆಯಲ್ಪಟ್ಟು ಅಂದವಾಗಿ ಮುದ್ರಿಸಲ್ಪಡುತ್ತಿದೆ

ಈ ಪತ್ರಿಕೆಯಲ್ಲಿ ಸಂಸ್ಥಾನದ ಆವಳಿಗಳು, ದೇಶ ಸಮಾಚಾರ, ಜ್ಯೋತಿಷ್ಯ, ವ್ಯಾಪಾರ, ಕಸುಬು, ವ್ಯವಸಾಯ ಮುಂತಾದ ವಿಷಯಗಳನ್ನು ಕುರಿತು ಸರ್ಕಾರ ಉಪಯೋಗಕರವಾದ ಉಪನ್ಯಾಸಗಳು ಬರೆಯಲ್ಪಡುವವು.

ಚಂದಾ ಬೆಂಗಳೂರು ಮತ್ತು ಮೈಸೂರು ಪಟ್ಟಣಗಳಲ್ಲಿಯೂ ಮತ್ತು ನಮ್ಮ ಏಜಂಟರುಗಳಿರುವ ಎಲ್ಲಾ ಸ್ಥಳಗಳಲ್ಲಿಯೂ ವರ್ಷ ೧ ಕ್ಕೆ ೧ ರೂಪಾಯಿ ತಮ್ಮ ಹೆಸರಿಗೆ ಸೀದಾ ತರಿಸಿಕೊಳ್ಳುವವರಿಗೆ ಅಂಚೆ ಹಾಸಲು ಸೇರಿ ೧ ರೂ. ೧೪ ಆಣೆ ಬೀಳುತ್ತದೆ.

ಈ ಪತ್ರಿಕೆಯು ಪಟ್ಟಣ, ಊರು ಗ್ರಾಮಾಂತರಗಳಲ್ಲಿ ಬಹಳ ಪ್ರಚಾರಕ್ಕೆ ಬರುತ್ತಾ ಇದ್ದರಿಂದ ಇದರಲ್ಲಿ ಇಸ್ತಿಹಾರಗಳು ಪ್ರಕಟಿಸಿದರೆ ವ್ಯಾಪಾರಸ್ಥರಿಗೆ ಬಹಳ ಲಾಭ ಉಂಟು ದರಗಳನ್ನು ಈ ಕೆಳಗೆ ಕಂಡ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರು, ಒಕ್ಕಲಿಗರ ಪತ್ರಿಕೆ,

(ಒಕ್ಕಲಿಗರ ಸಂಘ) ೫೩ ಅರಳೇಪೇಟೆ,

ಬೆಂಗಳೂರು ಸಿಟಿ.

ವೃತ್ತಾಂತ ಪತ್ರಿಕೆ.

ಸನ್ ೧೯೦೭ ನೇ ಇಸವಿ ಏಪ್ರಿಲ್ ತಾ॥ ೨೫ [illegible] ಗುರುವಾರ

ನವರಾತ್ರಿಯಲ್ಲಿ ಪ್ರದರ್ಶನಗಳು.

ನವರಾತ್ರಿ ಉತ್ಸವಕಾಲದಲ್ಲಿ ರಾಜಧಾನಿಯೊಳಗೆ ಕೈಗಾರಿಕೆಗಳನ್ನೂ ವ್ಯವಸಾಯ ಸಾಧನಗಳನ್ನೂ ಯಂತ್ರಸಾಮಗ್ರಿಗಳನ್ನೂ ಗೋಕಾಯಿಗಳನ್ನೂ ಇಟ್ಟು ಪ್ರದರ್ಶನ ಮಾಡಬೇಕೆಂದು ಗವರ್ನ್‌ಮೆಂಟಿನವರು ತೀರ್ಮಾನಿಸಿ, ಅದರ ಏರ್ಪಾಟಿಗಾಗಿ ಒಂದು ಕಮಿಟಿಯನ್ನು ನೇಮಕಮಾಡಿರುವುದು ನಮಗೆ ಸಂತೋಷವನ್ನುಂಟುಮಾಡಿದೆ. ಇಂಥಾ ಪ್ರದರ್ಶನವನ್ನು ಸರಿಯಾದ ರೀತಿಯಲ್ಲಿ ನಡಸುವುದರಿಂದ ಈ ಸಂಸ್ಥಾನಕ್ಕೆ ತುಂಬಾ ಪ್ರಯೋಜನವಾದೀತೆಂದು ನಂಬುತ್ತೇವೆ.

ಈಗ ನೇಮಕವಾಗಿರುವ ಕಮಿಟಿ ಮೆಂಬರುಗಳೆಲ್ಲಾ ಸರ್ಕಾರಿ ಅಧಿಕಾರಿಗಳು. ರೆವಿನ್ಯೂ ಕಮಿಷನರವರು ಅದಕ್ಕೆ ಪ್ರೆಸಿಡೆಂಟರು. ಮೆಂಬರುಗಳ ಪೈಕಿ ಮ॥ ಕ್ಯಾಮಿರಾನ್‌ಬವರೊಬ್ಬರಿಗೆ ಮಾತ್ರ ಪ್ರದರ್ಶನಗಳನ್ನು ನಡಸುವ ಅನುಭವವಿದೆ. ಉಳಿದವರೆಲ್ಲಾ ಸರ್ಕಾರಿ[illegible]ದ ನಾನಾ ಇತರ ಕೆಲಸಗಳಲ್ಲಿ ಮಗ್ನರಾಗಿರತಕ್ಕವರು. ಪ್ರದರ್ಶನಗಳನ್ನು ನಡೆಸುವ ವಿಚಾರದಲ್ಲಿ ಈ ಕಮಿಟಿಯವರು ಒಂದು ಏರ್ಪಾಟನ್ನು ಗೊತ್ತುಮಾಡಿ ಗವರ್ನ್‌ಮೆಂಟಿಗೆ ತಿಳಿಸುವವರಾಗಿದ್ದಾರೆ. ಪ್ರದರ್ಶನದ ಮೇಲ್ವಿಚಾರಣಾ ಕಮಿಟಿಯನ್ನು ನೇಮಕಮಾಡುವ ಭಾಗದಲ್ಲಿ ಅವರು ಸರಿಯಾದ ಸಲಹೆಯನ್ನು ಕೊಟ್ಟಾರೆಂದು ನಿರೀಕ್ಷಿಸುವೆವು. ಯಾಕೆಂದರೆ ಈ ಪ್ರದರ್ಶನದಿಂದ ಫಲವುಂಟಾಗಬೇಕಾದಲ್ಲಿ ಸರ್ಕಾರಿ ನೌಕರರಲ್ಲದ ದೊಡ್ಡ ಮನುಷ್ಯರನ್ನು ವಿಶೇಷವಾಗಿ ಚುನಾಯಿಸಿ ನೇಮಕಮಾಡಬೇಕಾಗಿದೆ. ಇಂಥವರ ಸಂಖ್ಯೆಯೇ ಕಮಿಟಿಯಲ್ಲಿ ಹೆಚ್ಚಾಗಿರಬೇಕು. ಬೆಂಗಳೂರು, ಕೋಲಾರ, ಮೈಸೂರು ಮೊದಲಾದ ಕಡೆಗಳಲ್ಲಿ ಕಸಬುಗಳನ್ನು ನಡೆಸತಕ್ಕಂಥಾವರಲ್ಲಿ ಮುಖಂಡರನ್ನೂ, ಜಮೀನ್ದಾರರಲ್ಲಿ ಮುಖ್ಯರಾದವರನ್ನೂ ವ್ಯವಸಾಯದಲ್ಲಿ ಕುಶಲಬುದ್ಧಿಯುಳ್ಳವರನ್ನೂ ಮೆಂಬರುಗಳಾಗಿ ಚುನಾಯಿಸಬೇಕಾಗಿರುತ್ತದೆ.

ಇಂಥಾ ಪ್ರದರ್ಶನವು ಈ ಸಲ ನವರಾತ್ರಿ ಉತ್ಸವಕಾಲದಲ್ಲೇ ನಡಯಬೇಕಾಗಿರೋಣದರಿಂದ ಸಾವಕಾಶಮಾಡದೆ ಈಗಿನಿಂದ ಏರ್ಪಾಡನ್ನು ಪ್ರಾರಂಭಿಸುವುದು ಅವಶ್ಯ. ಈ ಪ್ರದರ್ಶನದ ಕ್ರಮಗಳು ತೃಪ್ತಿಕರವಾಗಿ ನಡೆಯಬೇಕೆಂದು ನಿರೀಕ್ಷಿಸುತ್ತೇವೆ. ಹೋದ ವರುಷ ಪ್ರದರ್ಶನಾಲಯವನ್ನು ಕಟ್ಟಿದ್ದೂ ಒಳವಿಭಾಗಗಳೂ ಅಷ್ಟೇನೂ ಅನುಕೂಲವಾಗಿಲ್ಲ. ಈಗ ಪ್ರತಿ ವರುಷವೂ ಪ್ರದರ್ಶನ ನಡಯಬೇಕೆಂದು ತೀರ್ಮಾನವಾಗಿರೋಣದರಿಂದ ಶಾಶ್ವತವಾಗಿಯೂ ತೃಪ್ತಿಕರವಾಗಿಯೂ ಇರುವಂಥಾ ಪ್ರದರ್ಶನಾಲಯವನ್ನು ಪ್ರತ್ಯೇಕವಾಗಿ ಕಟ್ಟಿಸಲು ಏರ್ಪಾಡುಮಾಡುವುದು ಒಳ್ಳೇದು.

ಒಳದೇಶದ ವೃತ್ತಾಂತಗಳು.

ಬರೋಡಾ ಸಂಸ್ಥಾನದ ಮಹಾರಾಜರವರು ಈ ದಿನ ಬೆಂಗಳೂರಿಗೆ [illegible] ಕೋಲಾರ ಚಿನ್ನದಗಣಿಗಳನ್ನು [illegible]

***

ರಾಜಧಾನಿಯಲ್ಲಿ ಯಾರಮನೆಯಲ್ಲಾದರೂ [illegible] ಸರ್ಕಾರದವರ [illegible] ದಾರಿಗೆ ತಂದಿರ [illegible]

***

ಚೇಳೂರು ತಾಲ್ಲೋಕು [illegible] ಮ॥ ವೆಂಕಟ[illegible]

***

ಮೈಸೂರು ವೈದ್ಯಶಾಲೆಯಲ್ಲಿ ಆಸ್ಪತ್ರೆ ಅಸಿಸ್ಟೆಂಟಾಗಿದ್ದ [illegible] ವೆಂಕಟ[illegible], ಸುಬ್ಬರಾಯ ಮೊದಲಿಯಾರ್ [illegible] ಪಿಳ್ಳೆ ಎಂಬ ಮೂರು ಜನ [illegible] ಸರ್ಕಾರಿ ರೂಲ ಪ್ರಕಾರ ತಮಗೆ ಕೆಲವು ಕಾಲ ರಜಾ ಕೊಡಬೇಕೆಂದು ಕೇಳಿದರೆ [illegible] ಸರ್ಜನರವರ ಅಸಿಸ್ಟೆಂಟರು ಕೊಡದೆ ಹೋದ್ದರಿಂದ ಅವರು ತಮ್ಮ ಕೆಲಸಕ್ಕೆ ರಾಜೀನಾಮೆ ಕೊಟ್ಟರೆಂದು ತಿಳಿದುಬಂದಿದೆ.

****

ಸೋಮವಾರಪೇಟೆ ತಾಲ್ಲೋಕು ಚಾಮರಾಯ ಕೋಟೆಗೂ ಕಾ[illegible] ಗ್ರಾಮಕ್ಕೂ ನಡುವೆ ಹರಿಯುವ ಕಾವೇರಿ ನದಿಯಲ್ಲಿ ಕಳೆದ ತಾ ೧೫ನೇ ಸೋಮವಾರ ಬೆಳಗ್ಗೆ ನೂರಾರು ಜನರು ಸ್ನಾನಮಾಡುವಾಗ್ಗೆ ಸುಮಾರು ೧೩—೧೪ ವರುಷಿನ ಬ್ರಾಹ್ಮಣಸ್ತ್ರೀಯರು ನೀರಿನಲ್ಲಿ [illegible] ತೇಲಿಹೋದರೆಂತಲೂ, ಮಾರನೇದಿನ ಪೋಲೀಸಿನವರು ಹೋಗಿ [illegible] ಶವಗಳನ್ನು ದಫನ ಮಾಡಿದರೆಂತಲೂ ಒಬ್ಬ ಓದುಗರು ತಿಳಿಸುತ್ತಾರೆ.

***

ಕೋಲಾರ ಚಿನ್ನದ ಗಣಿಗಳಿಂದ ದೊಡ್ಡ ಬೆಳಗೆ ೪೦ ಮೈಲಿದೂರ ರೈಲ್ ರಸ್ತೆ ಹಾಕುವುದಕ್ಕೆ ಸರ್ವೆ ಮುಂತಾದ್ದು ಮಾಡಬೇಕೆಂದು ಗವರ್ನ್‌ಮೆಂಟಿನವರು ಸ್ಯಾಂಕ್ಷನ್ ಮಾಡಿದಾರೆ. ಚಿನ್ನದ ಗಣಿಗಳಿಂದ ಮಾರ್ಗೋವೆಗೆ ರೈಲ್ ಹಾಕಬೇಕೆಂಬುವುದೇ ಸರ್ಕಾರದವರ ಉದ್ದೇಶವೆಂದು ಕಾಣುತ್ತದೆ.

***

ಸುಮಾರು ೩೦ ದಿನಗಳ ಕೆಳಗೆ ಬರ್ಮಾದಿಂದ ರಾಜಧಾನಿಗೆ ವರ್ಗವಾಗಿ ಸಂಸಾರ ಸಹಿತ ಬಂದಿರುವ ಟೆಲಿಗ್ರಾಫ್ ಮಾಸ್ಟರ್ ಮ॥ ಪಾಲ್ ಜೆ ಟಮ್ಲಿನ್ಸನ್‌ರವರ ಪತ್ನಿಯು ಜ್ವರ ಪೀಡಿತರಾಗಿ ೮ ನೇ ತಿಂಗಳಲ್ಲಿ ಹೆತ್ತು ಆರನೇ ದಿನ ಅಂದರೆ ಮಂಗಳವಾರ ಮಧ್ಯಾಹ್ನ ಕಾಲವಾದರು. ಹೆತ್ತ ದಿನವೇ ಶಿಶುವು ತೀರಿಹೋಯಿತು. ಮರಣ ಕಾಲದಲ್ಲಿ ಆಕೆಗೆ ೩೦ ವರುಷವಾಗಿತ್ತು. ಪತಿಗೂ ಆಕೆಯ ಮೂರು ಮಂದಿ ಮಕ್ಕಳಿಗೂ ಈ ವಿಯೋಗದುಃಖವು ಪ್ರಾಪ್ತವಾದದ್ದಕ್ಕಾಗಿ ವಿಷಾದಪಡುವೆವು. ನೆನ್ನೆ ಬೆಳಗ್ಗೆ ಪದ್ಧತಿಯ ಪ್ರಕಾರ ಶವವನ್ನು ಸಾಗಿಸಿ ದಫನ ಮಾಡಿದರು.

***

ದಿವಾನ್ ಮ॥ ವಿ ಪಿ ಮಾಧವರಾಯರು ಕಳೆದ ಗುರುವಾರ ಬೆಳಿಗ್ಗೆ ನೀಲಗಿರಿಯಿಂದ ಬೆಂಗಳೂರಿಗೆ ವಾಪಸು ಬಂದರು. ಶ್ರೀಮನ್ಮಹಾರಾಜರವರ ಪ್ರೈವೆಟ್ ಸೆಕ್ರಟರಿ ಮ॥ [illegible]ಯವರು ಶಿವಮೊಗ್ಗೆಯಿಂದ ವಾಪಸು ಬಂದು ನೀಲಗಿರಿ ಬೆಟ್ಟಕ್ಕೆ ಹೋಗಿರುತ್ತಾರೆ. ಮೊನ್ನೆ ಮಂಗಳವಾರ ಹೊಸ ಛಾರ್ಜನ್ನು ವಹಿಸಿಕೊಳ್ಳುವವರಾಗಿದ್ದರು. ಎರಡನೆ ಕೌನ್ಸಿಲರ್ ಮ॥ ಕೆ ಪಿ ಪುಟ್ಟಣ್ಣ ಚೆಟ್ಟಿಯವರು ಈ ದಿನ ನೀಲಗಿರಿಯಿಂದ ಬೆಂಗಳೂರಿಗೆ ವಾಪಸು ಬರುವವರಾಗಿದಾರೆ. ಛೀಫ್ ಸೆಕ್ರಿಟರಿ ಮ॥ ಚಂದ್ರಶೇಖರಯ್ಯನವರು ನೆನ್ನೆ ಬೆಳಗ್ಗೆ ನೀಲಗಿರಿಯಿಂದ ಬೆಂಗಳೂರಿಗೆ ಬರುವವರಾಗಿದ್ದರು.

***

ಲಕ್ಷ್ಮಿ ಎಂಬೊಬ್ಬ ಲಂಬಾಣಿಗರವಳು [illegible] ರೂಪಾಯಿಗೆ ಒಬ್ಬ ಹುಡುಗನನ್ನು ಕೊಂಡುತಂದು [illegible] ಬಳಿ ಇರುವ ನಕ್ಕರ ಗೌಡನೆಂಬ ಲಂಬಾಣಿಗರವನಿಗೆ ೩೦ ರೂಪಾಯಿಗೆ ವಿಕರ ಮಾಡಿದ್ದಳು. ಕೊಯಮುತ್ತೂರು ಸೆಷನ್ಸ್ ಜಡ್ಜರು ವಿಚಾರಣೆ ಮಾಡಿದಾಗ ಲಕ್ಷ್ಮಿಯೂ ನಕ್ಕರ ಗೌಡನೂ ಹುಡುಗನನ್ನು ಕೊಂಡು ಮಾರುವುದು ತಮ್ಮ ಜನಗಳಲ್ಲಿ ಹಳೆಯ ರೂಢಿ ಎಂದು ಹೇಳಿದರು. ಆ ಹುಡುಗನನ್ನು ಕೇಳಿದಾಗ ತನ್ನನ್ನು ಅವರು ಚೆನ್ನಾಗಿ ನೋಡುತ್ತಿದ್ದಾರೆಂತಲೂ ತನಗೆ ಅವರು ಯಾವ ಹಿಂಸೆಯನ್ನೂ ಮಾಡುವುದಿಲ್ಲವೆಂತಲೂ ಹೇಳಿದನು. ಸೆಷನ್ಸ್ ಜಡ್ಜರು ಅವರಿಬ್ಬರಿಗೂ ತಲಾ ಒಂದು ತಿಂಗಳ ಸಾದಾ ಸಜೆಯನ್ನು ವಿಧಿಸಿರುತ್ತಾರೆ.

***

ಬರೋಡಾ ಮಹಾರಾಜರ [illegible] ರಾಜಧಾನಿಯಲ್ಲಿ ೩—೪ ದಿನ ಇದ್ದು, ಷಿಕಾರಿಗೋಸ್ಕರ ಕಾಕನಕೋಟೆಗೆ ಹೋಗಿ ಅಲ್ಲಿ [illegible] ಇದ್ದ ಮೂರು ಆನೆಗಳನ್ನು ಕೊಂಡು ಕಳೆದ ಬುಧವಾರ ವಾಪಸು ಬಂದರು. ಮಂಗಳವಾರ ಬೆಳಗ್ಗೆ ಇಲ್ಲಿನ ಜವಳಿ ವರ್ತಕರಾದ ಮ॥ [illegible] ವ್ಯಾಪಾರ ಮಾಡುವ ಮ॥ ಸಿದ್ದೋಜಿರಾಯರೂ ಅವರನ್ನು ಭೇಟಿಮಾಡಿ [illegible] ಬಂಗಲೆಗೆ ಬರಮಾಡಿಕೊಂಡು [illegible] ಭೋಜನ ಮಾಡಿಸಿದರು. ಸಾಯಂಕಾಲ ಎಲ್ಲರ [illegible] ತೆಗೆಸಿಕೊಂಡರು. [illegible] ಟೌನ್ ಹಾಲಿಗೆ ಒಂದು [illegible] ಉಪನ್ಯಾಸ [illegible] ಆ ರಾತ್ರಿಯೇ ರೈಲು ಹತ್ತಿ ಬೆಂಗಳೂರಿಗೆ ಪ್ರಯಾಣ ಬೆಳೆಸಿದರು. ಸ್ಟೇಷನ್ನಲ್ಲಿ [illegible] ವಿದ್ಯಾರ್ಥಿಗಳೂ ಅರಮನೆ ಆಫೀಸರುಗಳೂ [illegible] ಸಾಗಕಳುಹಿಸಿದರು. [illegible] ವರ್ತಕರೂ [illegible] ಒಪ್ಪಿಸಿ ಸಂತೋಷಪಡಿಸಿದರು.

ಬಹುಮಾನಪಡೆದ ವರ್ತಮಾನವು.

[ಈ ಪತ್ರಿಕೆ ಓದುವವರಿಗೆ ಬಹುಮಾನ ಕಳುಹಿಸುತ್ತೇವೆ]

[illegible] ಫಕೀರ ಸಾಹೇಬರು ಅದೃಶ್ಯರಾದದ್ದು

ಈಗ್ಗೆ ೧೫ ದಿವಸಗಳ ಕೆಳಗೆ [illegible] ಒಬ್ಬ ಫಕೀರನು ಒಂದು ಕುಣಿಗಲ್ ಚಿಕ್ಕಕೆರೆಯ ಸಮೀಪದಲ್ಲಿರುವ ಗೋರಿಯ ಬಳಿ [illegible] ಇರುವ ಸ್ಥಳೀಕನಾದ ಫಕೀರ ಸಾಬಿಯ ಜೊತೆಯಲ್ಲಿ ಸೇರಿದನು. ಇವನು ತನ್ನ ಸ್ಥಳವು ಸಂಗಲ್ ದೀಪವೆಂದೂ, ತಾನು [illegible] ಹೊರಟಿದ್ದೇನೆಂತಲೂ, ಇನ್ನು ಮುಂದೆ [illegible] ದಿನಗಳಿಗೆ ಒಳಗಾಗಿ [illegible] ದಿವಸ ತಾನು [illegible] ಪ್ರಾಣ ಬಿಡುತ್ತೇನೆ; ದೇವರ ಅಪ್ಪಣೆಯಾಗಿರುವುದರಿಂದ ಮೈಸೂರು [illegible] ಬೆಂಗಳೂರು ಪಟ್ಟಣಗಳಲ್ಲಿ ತನ್ನ ಮಹಾತ್ಮ್ಯವನ್ನು ತಿಳಿದ ಅನೇಕ ಮುಸಲ್ಮಾನ [illegible] ಬಲಾತ್ಕಾರ ಮಾಡಿದಾಗ್ಯೂ ದೇವರ ಅಪ್ಪಣೆ [illegible] ಇರುವುದನ್ನು ಅವರಿಗೆ ತಿಳಿಸಿ ಇಲ್ಲಿಗೆ ಬಂದಿರುತ್ತೇನೆಂತಲೂ ಹೇಳಿದನು. ಈ ಫಕೀರ್ ಸಾಹೇಬ ಆಗಮನವನ್ನು ಕೇಳಿ ಕುಣಿಗಲ್ ಮುಸಲ್ಮಾನರೆಲ್ಲರೂ— ಯಾವನೋ ಒಬ್ಬ ಫಕೀರ್ ಸಾಹೇಬ ಬಂದಿರುವನಂತೆ ಅವರು ಏಕ ಮಹಾತ್ಮರಂತೆ ನೋಡಬೇಕು ಬನ್ನಿ ಎಂಬುದಾಗಿ ಗುಂಪು ಗುಂಪಾಗಿ ಅವನಿದ್ದ ಸ್ಥಳಕ್ಕೆ ಹೋದರು. ಆಗ ಆ ಫಕೀರ ಸಾಹೇಬರು— "ಎಲೈ ಶಿಷ್ಯರೇ, ಈ ಗ್ರಾಮದಲ್ಲಿ ಅನೇಕವೇಳೆ ಪ್ಲೇಗ್ ಮತ್ತು ಕಾಲರಾ ಉಪದ್ರವ ಪ್ರಾಪ್ತವಾಗಿ ಅನೇಕ ಜನ ಮುಸಲ್ಮಾನರು ನಾಶವಾದರು. ಇನ್ನು ಮುಂದೆ ಈ ಗ್ರಾಮಕ್ಕೆ ರೋಗಾದಿ ಉಪದ್ರವಗಳು ಬಾರದಂತೆ ನಾನು ದೇವರ ಧ್ಯಾನ ಮಾಡಬೇಕಾಗಿರುವದರಿಂದ ನನಗೆ ಊರ ಹೊರಗೆ ಯಾವದಾದರೂ ಒಂದು ಮಕ್ಕಾವಿನಲ್ಲಿ ಒಂದು ಮನೆಯನ್ನು ಕಟ್ಟಿಕೊಟ್ಟು ಅದನ್ನು ನಾನು ಕುಳಿತುಕೊಂಡ ನಂತರ ಬಾಗಲಿಗೆ ಮಣ್ಣಿನಿಂದ ಗೋಡೆಯನ್ನು ಹಾಕಿ ಮುಚ್ಚಿಬಿಡಬೇಕು. ಆ ಸ್ಥಳದಲ್ಲಿ ಯಾರಾದರೂ ಗಲಾಟೆ ಮಾಡಿ ನನ್ನ ಧ್ಯಾನಕ್ಕೆ ಭಂಗವನ್ನುಂಟುಮಾಡಿದರೆ ಆ ಕ್ಷಣವಲ್ಲೇ ಅವರು ಸುಟ್ಟುಹೋಗುತ್ತಾರೆ. ೪೦ ದಿವಸಗಳಾದ ನಂತರ ನಾನು ಆಚೆಗೆ ಬರುತ್ತೇನೆ. ಮನೆಯ ಸಮೀಪಕ್ಕೆ ಯಾರೂ ಬರಕೂಡದು" ಎಂದು ಹೇಳಿದ್ದಲ್ಲದೆ ಸ್ಥಳೀಕನಾದ ಫಕೀರ ಸಾಬಿಗೆ ಹೇಳಿದ್ದೇನೆಂದರೆ—ಇನ್ನು ೧೧ ದಿವಸಗಳ ಒಳಗಾಗಿ ಅಂದರೆ ಇದೇ ತಿಂಗಳು ೧೯ ನೇ ತಾ ಶುಕ್ರವಾರದ ದಿವಸ ನೀನು ಸಾಯುತ್ತೀ. ಆಗ್ಗೆ ನಿನಗೆ ಯಾರೂ ನೀರು ಹೊಯ್ಯುವುದಿಲ್ಲವಾದ್ದರಿಂದ ನಾನೇ ಹೊಯ್ಯುತ್ತೇನೆ ಎಂದು ಹೇಳಿ ಅವರ ಶಾಸ್ತ್ರದ ಪ್ರಕಾರ ಸ್ನಾನ ಮಾಡಿಸಿದನು. ನಂತರ ಸ್ಥಳದ ಫಕೀರ ಸಾಬಿಯು ತನಗೋಸ್ಕರ ಒಂದು ಗೋರಿಯನ್ನು ಮಾಡಿಸಿಕೊಂಡು ಸಾಯುತ್ತೇನೆಂಬ ಭಯದಿಂದ ಅದರ ಸಮೀಪದಲ್ಲಿಯೇ ದೇವರ ಧ್ಯಾನ ಮಾಡಿಕೊಂಡು ಅವಧಿಯನ್ನು ನಿರೀಕ್ಷಿಸುತ್ತಾ ಇದ್ದನು. ಇತ್ತಲಾಗಿ ಈ ಫಕೀರ ಸಾಬಿಯನ್ನು ಮುಸಲ್ಮಾನ ಜನಗಳೆಲ್ಲರೂ ಸೇರಿ ಕುದುರೆ ಮೇಲೆ ಕೂರಿಸಿ ವಾದ್ಯದೊಡನೆ ಊರಲ್ಲೆಲ್ಲಾ ಮೆರವಣಿಗೆ ಮಾಡಿಸಿ ಮೊದಲೇ ತಯಾರು ಮಾಡಿದ್ದ ಮನೆಯೊಳಕ್ಕೆ ಎರಡು ಗಡಿಗೆ ನೀರನ್ನು ಅದರಲ್ಲಿಟ್ಟು ಅವನನ್ನು ಒಳಗೆ ಬಿಟ್ಟು ಬಾಗಲಿಗೆ ಮಣ್ಣಿನಿಂದ ಗೋಡೆ ಹಾಕಿ ಮುಚ್ಚಿಬಿಟ್ಟರು. ಆ ಮನೆಯ ಮೇಲ್ಛಾವಣಿ ತೆಂಗಿನ ಗರಿಗಳಿಂದ ಮಾಡಿತ್ತು. ಇದನ್ನೆಲ್ಲಾ ನೋಡಿ ಮುಸಲ್ಮಾನ ಜನಗಳು ತಮ್ಮ ಮಹಾ ಗುರುವಿನ ಸತ್ಯವನ್ನು ಊರಲ್ಲೆಲ್ಲಾ ಉಪನ್ಯಾಸ ಮಾಡುತ್ತಿದ್ದರು. ಇವರ ಮಾತಿನ ವೈಖರಿಗೆ ಮಿತಿಯಿಲ್ಲದೆ ಇತ್ತು. ಈ ಮಧ್ಯೆ ಹಾಲಿ ಫಕೀರ ಸಾಬರು ಗುಬ್ಬಿಯಲ್ಲಿದ್ದರೆಂದು ಕೆಲವರೂ ಮೈಸೂರಿನಲ್ಲಿದ್ದರೆಂದು ಕೆಲವರೂ ಮಾತನಾಡ ತೊಡಗಿದರು. ಅಷ್ಟರೊಳಗೆ ಸ್ಥಳದ ಫಕೀರ ಸಾಬಿಗೆ ಕೊಟ್ಟಿದ್ದ ಅವಧಿಯು ಅಂದರೆ ಶುಕ್ರವಾರವು ಒದಗಿತು. ಸ್ಥಳದ ಫಕೀರ ಸಾಬಿಯು ಈ ದಿವಸ ಸಾಯುವನೆಂದು ಎಲ್ಲಾ ಜನಗಳೂ ಹೋಗಿ ನೋಡಲು ಪ್ರಾರಂಭಿಸಿದರು. ಆದರೆ ಪಾಪ! ಏನು ಮಾಡುವದು! ಫಕೀರ ಸಾಬರ ಆಯುಸ್ಸು ಇನ್ನೂ ಪೂರೈಸಿ ಇರಲಿಲ್ಲ. ಆದ್ದರಿಂದ ಜನಗಳಿಗೆ ಅನುಮಾನ ಉಂಟಾಗಿ ಮಹಾತ್ಮರಿದ್ದ [illegible] ಒಳಗೆ ಹೋಗಿ ಅಜಮಾಯಿಷಿ ಮಾಡುವಲ್ಲಿ ಗರಿಯು ಒಪ್ಪಾರು ಎತ್ತಿದ್ದ ಹಾಗೆ ಕಾಣಿಸಿತು. ಅನುಮಾನದಿಂದ ಒಳಗೆ ನೋಡುವಲ್ಲಿ ಆ ಮಹಾತ್ಮರು [illegible] ಕಣ್ಣಿಗೆ ಕಾಣಿಸಬಾರದೆಂಬ ಉದ್ದೇಶದಿಂದಲೇ ಏನೋ ಅದೃಶ್ಯರಾಗಿದ್ದರು! ಇವರು ಯಾವ ದಿವಸ ಪರಾರಿಯಾದರೋ ಗೊತ್ತಾಗಲಿಲ್ಲ. ಒಳಗೆ ನೋಡುವಲ್ಲಿ ೨ ಸೋಡಾ [illegible] ಅವರ [illegible] ಎರಡು ಖಾಲಿಯಾಗಿದ್ದವು. ಇದನ್ನೆಲ್ಲಾ ನೋಡಿ [illegible] ಮುಸಲ್ಮಾನ ಜನಗಳ ಮಾತಿನ ವಿಜೃಂಭಣೆಯು ಫಕೀರ ಸಾಬರ ಹಿಂದೆಯೇ ಹೊರಟುಹೋಯಿತು. ಆದ್ದರಿಂದ ತಮ್ಮ ಅವಿವೇಕವನ್ನು ತಾವೇ ನಿಂದಿಸಿಕೊಳ್ಳುತ್ತಾ ಮನೆಗೆ ಹಿಂತಿರುಗಿದರು. ಆದ್ದರಿಂದ ಯಾರೂ ಇಂಥ ಮೋಸಗಾರರ ಮಾತನ್ನು ನಂಬಿ ಮೋಸಹೋಗದೆ ಇರುವರೆಂದು ನಂಬುತ್ತೇನೆ.

[ಭೂಲೋಕದ ಜನವು ಅದ್ಭುತಕಾರ್ಯಗಳನ್ನು ನೋಡುವದರಲ್ಲಿಯೂ ಕೇಳುವದರಲ್ಲಿಯೂ ಇಷ್ಟಪಡುತ್ತಾರೆ. ಮನುಷ್ಯನ ಬುದ್ಧಿಮಾತ್ರದಿಂದ ಆದ ಬದಲಾವಣೆಯು ಕಣ್ಣಿಗೆ ಕಾಣಬಂದಲ್ಲಿ ಅಂಥಾ ಬದಲಾವಣೆಯು ಅದ್ಭುತವೆನಿಸುವದೋ? [illegible] ಅದಕ್ಕೆ [illegible] ಅದರಿಂದ [illegible] ಸದ್ಭಕ್ತರಾಗುವದು ಅದ್ಭುತವಲ್ಲವೆಂದು ಹೇಳುವಿರಾ? ಸತ್ಯತೆ, ಚಿತ್ತಶುದ್ಧಿ, ಪರೋಪಕಾರ, ಈ ಮೊದಲಾದ ಶ್ರೇಷ್ಠಗುಣಗಳನ್ನು ಪಡೆದಿರುವ ಮನುಷ್ಯನು ಅದ್ಭುತಗಳನ್ನು ಮಾಡುವವನಿಗಿಂತ ಎಷ್ಟೋ ಉನ್ನತನಾಗಿರುತ್ತಾನಲ್ಲವೆ? ಯೇಸುಕ್ರಿಸ್ತನ ಶಿಷ್ಯರು ತಮ್ಮ ಪ್ರಸಂಗ[illegible]ವನ್ನು ಮುಗಿಸಿ ತಮ್ಮ ಗುರುವಿನ ಬಳಿಗೆ ಬಂದು—ಸ್ವಾಮಿ, ದೆವ್ವಗಳು [illegible] ನಿನ್ನ ಹೆಸರನ್ನು ಕೇಳಿ ನಮಗೆ [illegible]ನವಾಗುತ್ತವೆ ಅಂದರು. [illegible]—ದೆವ್ವಗಳು ನಿಮಗೆ ಅಧೀನವಾಗಿವೆ ಎಂದು ಸಂತೋಷಪಡದೆ ನಿಮ್ಮ ಹೆಸರುಗಳು ಪರಲೋಕದಲ್ಲಿ ಬರೆದಿರುತ್ತವೆ ಎಂದು ಸಂತೋಷಪಡಿರಿ ಎಂಬದಾಗಿ ತಿಳಿಸಿದನು. ಅದ್ಭುತಕಾರ್ಯಗಳನ್ನು ಮಾಡುವದಕ್ಕಿಂತ ಮೋಕ್ಷಪದವಿಗೆ ನಮ್ಮನ್ನು ಸೇರಿಸತಕ್ಕ ದಿವ್ಯಗುಣಗಳನ್ನು ನಾವು ಪಡೆದುಕೊಳ್ಳಬೇಕೆಂಬುದೇ ಯೇಸುಕ್ರಿಸ್ತನ ತಾತ್ಪರ್ಯವಾಗಿರುವದು. ಹಿಂದೂಗಳೇ ಆಗಲಿ, ಕ್ರೈಸ್ತರೇ ಆಗಲಿ ಆಚಾರವಿಚಾರಗಳಲ್ಲಿ ಪ್ರಸನ್ನರಾಗಿದ್ದು ದೇವರ ಪವಿತ್ರವಾದ ಕಟ್ಟಳೆಗಳನ್ನು [illegible] ಪ್ರತಿಪಾದಿಸದ ನಡಾವಳಿಯಲ್ಲಿ ಅಭ್ಯಾಸಿಸದೆ ಹೋದರೆ ಆತನ ರಾಜ್ಯದ ಪ್ರಜೆಗಳೆನ್ನಿಸಿಕೊಳ್ಳಲಾರರು. ಜನರ ಮೆಚ್ಚಿಕೆಗೋಸ್ಕರ ಮಾಡಲ್ಪಡುವ ಅದ್ಭುತಗಳು ನಿಷ್ಪ್ರಯೋಜನವಾದವುಗಳು. ಕೆಲವರು ಮಾಟ, ಕಣ್ಕಟ್ಟುವಿದ್ಯೆ ಇವುಗಳ ಮೂಲಕ ಜನರನ್ನು ಮೋಸಗೊಳಿಸುವದುಂಟು. ಆದರೆ ಯೇಸುಕ್ರಿಸ್ತನು ನಡಿಸಿದ ಅದ್ಭುತಕಾರ್ಯಗಳು [illegible] ಗಳನ್ನು ನಡಿಸುವಾಗ್ಗೆ ಆತನು ಪರೋಪಕಾರಭಾವಿತನಾಗಿಯೂ, ದೇವರ ಉನ್ನತಸ್ವಭಾವಗಳನ್ನು ತೋರಿಸುವದಕ್ಕೆ ಇಚ್ಛೆಯುಳ್ಳವನಾಗಿಯೂ ಇದ್ದನು. ಒಂದಾನೊಂದು ಸಮಯದಲ್ಲಿ ಆತನ ಬಳಿಗೆ ಜನರು ಗುಂಪಾಗಿ ಬಂದು ಆಕಾಶದಲ್ಲಿ ಒಂದು ಸೂಚಕಕಾರ್ಯವನ್ನು ತೋರಿಸಿಕೊಡಬೇಕೆಂದು ಆತನನ್ನು ಕೇಳಿದರು. ಅದಕ್ಕವನು ಅವರನ್ನು ಗದರಿಸಿ "ವ್ಯಭಿಚಾರಿಣಿಯಾಗಿರುವ ಈ ದೇಶದ [illegible] ಸಂತತಿಯು ಅದ್ಭುತಕಾರ್ಯಗಳನ್ನು ನೋಡಬೇಕೆಂದು ಅಪೇಕ್ಷಿಸುತ್ತದೆ. ಆದರೆ ಇದಕ್ಕೆ ಯಾವ ಸೂಚಕಕಾರ್ಯಗಳೂ ದೊರಕುವದಿಲ್ಲ" ಎಂದು ಹೇಳಿ ಅವರನ್ನು ಬಿಟ್ಟು ಹೋದನು. ಅದ್ಭುತಕಾರ್ಯಗಳ ವಿಷಯ ಯೇಸುಕ್ರಿಸ್ತನು [illegible] ಅಭಿಪ್ರಾಯಗಳನ್ನು ಈ ದೇಶೀಯರು ಗ್ರಹಿಸಿಕೊಂಡರೆ ಕಪಟಿಗಳ ಮೋಸಕ್ಕೆ ಒಳಗಾಗಲಾರರು.

—ಎಡಿಟರ್]

ಮೈಸೂರು ಪರಸ್ಪರ ಸಹಾಯಕ ಸಂಘವು.

ಒಂಭತ್ತು ತಿಂಗಳ ರಿಪೋರ್ಟಿನ ಮುಖ್ಯ ಭಾಗಗಳು

ಈ ಸಂಘದ ಸೆಕ್ರೆಟರಿಯವರು ಹಿಂದಿನ ವಾರ ನಡೆದ ಜನರಲ್ ಮೀಟಿಂಗಿನಲ್ಲಿ ಓದಿದ ರಿಪೋರ್ಟಿನ ಕೆಲವು ಭಾಗಗಳನ್ನು ವಾಚಕರ ತಿಳಿವಳಿಕೆಗಾಗಿ ಇಲ್ಲಿ ಪ್ರಕಟಿಸುತ್ತೇವೆ

ಹಿಂದೂಸ್ಥಾನದ ಅಸಂಖ್ಯಾತರಾದ ರೈತಾಪಿ ಜನರ ಮತ್ತು ಇತರ ಕಷ್ಟಜೀವಿಗಳ ಏಳಿಗೆಯನ್ನು ಧ್ಯೇಯಿಸಿ, ಬ್ರಿಟಿಷ್ ಸರ್ಕಾರದವರು ಮಾಡಿದ ಕಾನೂನನ್ನು ಅನುಸರಿಸಿ, ನಮ್ಮ ಶ್ರೀಮನ್ಮಹಾರಾಜಾ ಸರ್ಕಾರದವರು ಕೋ ಆಪರೇಟಿವ್ ಸೊಸೈಟೀಸ್ ರೆಗ್ಯುಲೇಷನ್ ಆಕ್ಟ್ ಎಂಬ ಕಾನೂನನ್ನು ಈ ದೇಶೀಯರ ಪುರೋಭಿವೃದ್ಧಿಯನ್ನು ಬಯಸಿ ೧೯೦೫ನೇ ಇಸವಿಯಲ್ಲಿ ಜಾರಿಗೆ ತಂದರು. ಈ ಕಾನೂನಿನಲ್ಲಿ ದಯಪಾಲಿಸಿರುವ ಸೌಲಭ್ಯಗಳು ಹೊಸತೆರನಾದ ಸಂಘಗಳ ಏಳಿಗೆಗೆ ಕೇವಲ ಸಹಕಾರಿಯಾಗಿರುವುದರಿಂದಲೂ ಶ್ರೀಮನ್ಮಹಾರಾಜರವರು ತಮ್ಮ ದೇಶೋನ್ನತಿಯಲ್ಲಿ ಕೇವಲ ಕುತೂಹಲಾವಿಶಿಷ್ಟರಾಗಿರುವುದರಿಂದಲೂ ಮೈಸೂರು ಸೀಮೆಯಲ್ಲಿ ಅಲ್ಲಲ್ಲಿಯೇ ಪರಸ್ಪರ ಸಹಾಯಕ ಸಂಘಗಳು ಈಚೆಗೆ ಏರ್ಪಡುತ್ತಿವೆ. ಇಂಥಾ ಸಂಘಗಳಲ್ಲಿ ಮೈಸೂರು ಕೋ ಆಪರೇಟಿವ್ ಸೊಸೈಟಿಯು ಎರಡನೆಯದಾಗಿದೆ

ಕೋ ಆಪರೇಟಿವ್ ಸೊಸೈಟಿಗಳಿಗೆ ರಿಜಿಸ್ಟ್ರಾರ್ ಮೆ॥ ಎಂ. ಕಾಮರಾಯರು ಬೆಂಗಳೂರಿನಲ್ಲಿ ಒಂದು ಕೋ ಆಪರೇಟಿವ್ ಸೊಸೈಟಿಯನ್ನು ಏರ್ಪಡಿಸಿ ಅದು ಅಲ್ಲಿಯ ಜನರಿಗೆ ಉಪಯುಕ್ತವಾಗಿರುವುದೆಂದು ತಿಳಿದು ಅದರಂತೆ ಈ ಪಟ್ಟಣದಲ್ಲಿ ಒಂದು ಸಂಘವನ್ನು ಸ್ಥಾಪಿಸಬಹುದೆಂದೂ, ಅದರಿಂದ ಉತ್ತರೋತ್ತರ ವಿಶೇಷ ಪ್ರಯೋಜನ ಉಂಟೆಂದೂ ಇಲ್ಲಿಯ ಪುರಜನರಿಗೆ ತಿಳಿಸಿದರು

ಈ ಸೊಸೈಟಿಯು, ರಿಜಿಸ್ಟರ್ ಆಗಬೇಕೆಂದು ಬರೆದುಕೊಂಡವರು ೨೪ ಮಂದಿಯು ಈ ಸೊಸೈಟಿ ಶ್ರೀಮನ್ಮಹಾರಾಜರವರ ಹಿಂದಿನ ವರ್ಧಂತಿಯ ದಿವಸ ಸ್ಥಾಪಿತವಾಯಿತು. ಸ್ಥಾಪಿತವಾದ ೧೯೦೬ ನೇಯ ಜೂನ್ ೩ ರನೇ ದಿವಸವೇ ೧೩ ಮಂದಿಯು ೪೭೩ ಷೇರುಗಳನ್ನು ಪಡೆದರು ಆ ದಿನ ಮೊದಲು ೧೯೦೭ ನೇಯ ಏಪ್ರಿಲ್ ೧ ರವರೆಗೆ ೨೦೪ ಮಂದಿ ಸೇರಿ ೩,೩೧೮ ಷೇರುಗಳನ್ನು ಪಡೆದಿರುತ್ತಾರೆ ಈ ಸಂಘವು ಐನ್ಯಕಪಕ್ಷಪಾತವುಳ್ಳದಾದುದರಿಂದ ಅವರಿಗೆ ಅನುಕೂಲವಾಗಿರುವಂತೆ ೪೦ ತಿಂಗಳಲ್ಲಿ, ದೊರೆತ ಹಾಗೆಲ್ಲಾ ಕ್ರಮವನ್ನರಿತು ಮಿಸ್ತ್ತು ಕೊಟ್ಟು ಪಡೆಯಬಹುದಾದ ಹತ್ತು ರೂಪಾಯಿನ ೫,೦೦೦ ಷೇರುಗಳುಳ್ಳದ್ದು

ಈ ಸಂಘದ ನಿಬಂಧನೆಯ ಪ್ರಕಾರ ಆರು ತಿಂಗಳ ಆಯವ್ಯಯವನ್ನು ತಿಳಿಸಲು ತಮ್ಮನ್ನೆಲ್ಲಾ ಜನವರಿ ಆದಿಭಾಗದಲ್ಲಿಯೇ ಕರೆಯಬೇಕಾಗಿತ್ತು. ಕಾರಣಾಂತರದಿಂದ ಇಷ್ಟು ಸಾವಕಾಶವಾದುದನ್ನು ಮನ್ನಿಸಿ, ೧೯೦೬ ನೆ ಜೂನ್ ೩ ನೆಯ ತಾ॥ ಮೊದಲು ೧೯೦೭ ನೆಯ ನೆಯ ಮಾರ್ಚಿ ೩೧ ರ ವರಿವಿಗೆ ಸೊಸೈಟಿಯಲ್ಲಿ ನಡೆದ ಆಡಳಿತವನ್ನು ಸಂಗ್ರಹಿಸಿ ಹೇಳುವದನ್ನು ಲಾಲಿಸಬೇಕು.

ಸಂಘವನ್ನು ಆರಂಭಿಸಿದ ದಿವಸ ೧೩ ಮಂದಿಯು ಸೇರಿ ೪೭೩ ಷೇರು ಪಡೆದರೆಂದು ತಿಳಿಸಿದೆನಷ್ಟೆ ಅವರಿಂದ ಆ ದಿನ ರೂ ೧೯೮—೪—೦ ಕೊಡಲ್ಪಟ್ಟಿತು ಅದು ಮೊದಲು ಮಾರ್ಚಿ ೩೧ ರವರಿಗೆ ಷೇರ್ ಬಾಬತು ರೂ. ೬,೭೪೭—೪—೦ ಬಂದಿರುವುದು. ಜೂನ್ ತಿಂಗಳಲ್ಲಿ ಯಾವದಾದರೊಂದು ಕೆಲಸವನ್ನು ಆರಂಭಿಸುವುದು ಉತ್ತಮವೆಂದು ಆಲೋಚಿಸಿ ಅವಿವಾರ್ಯ ಮೇಲೆ ಕೆಲವು ಜಿನಸಿಗಳನ್ನು ಮೊದಲು ತರಿಸಿಟ್ಟು, ಕ್ರಮವಾಗಿ ಸೊಸೈಟಿಯಿಂದಲೇ ಕೆಲವು ಸಾಮಾನುಗಳನ್ನು ತರಿಸಿ ವಿಕರಿ ಮಾಡಿದೆವು

ಸೊಸೈಟಿಯ ಕಾರ್ಯಗಳನ್ನು ನಿರ್ವಹಿಸಲು ಗೊತ್ತು ಮಾಡಲ್ಪಟ್ಟ ಕಮಿಟಿಯವರು ಈ ೯ ತಿಂಗಳಲ್ಲಿ ೮ ಆವೃತ್ತಿ ಸೇರಿ ಆಯಾ ಮಾಹೆ ಲೆಕ್ಕಗಳನ್ನು ಪರೀಕ್ಷಿಸಲು ಮೆಂಬರುಗಳನ್ನು ನಿಯಮಿಸುವುದು, ಆಯವ್ಯಯಗಳನ್ನು ನೋಡುವುದು, ಸೊಸೈಟಿಯ ನಿರ್ವಾಹಕ್ಕೆ ಬೇಕಾದ ಸಿಬ್ಬಂದಿಗಳನ್ನು ಏರ್ಪಡಿಸುವುದು, ಯಾವ ವ್ಯಾಪಾರ ಮಾಡಬೇಕೆಂಬುವುದನ್ನು ನಿಷ್ಕರ್ಷಿಸುವುದು, ಸೊಸೈಟಿಯ ನಿಬಂಧನೆಗಳಂತೆ ಕೆಲಸ ಮಾಡುವುದರಲ್ಲಿ ತೋರಿಬರುವ ನ್ಯೂನಾತಿರಿಕ್ತಗಳನ್ನು ತಮ್ಮಗಳ ಮುಂದಣ್ಟಿಗೆ ತರಲು ಗುರುತು ಇಡುವುದೇ ಮುಂತಾದ ಕಾರ್ಯಗಳನ್ನು ಜರುಗಿಸಿದರು

ಆಡಿಟರುಗಳ ರಿಪೋರ್ಟಿನಿಂದ ಒಟ್ಟು ರೂ ೧೦,೧೦೩—೧೫—೯ ವ್ಯಾಪಾರವಾಗಿದೆ ಎಂದೂ ಖರ್ಚಿಗೆ ಸೊಸೈಟಿಯಲ್ಲಿ ಏಪ್ರಿಲ್ ಮೊದಲನೆಯ ತಾ. ದಿವಸ ರೂ. ೫,೧೯೦—೧೧—೬ ಬಾಳುವ ಜಿನಸಿ ಒಟ್ಟು ವಗೈರೆ ಸಾಮಾನುಗಳು ಇವೆ ಎಂದೂ, ರೂ ೨,೦೬೮—೧೩—೧೧ ನಗದು ಹಣವಿದೆಯೆಂದೂ, ೬೬೮ ರೂಪಾಯಿ ನಫೆ ಕೈಲಿದೆ ಎಂದೂ, ಇದರಲ್ಲಿ ರಿಜರ್ವ್ ಫಂಡಿಗೆ ೧೬೭ ರೂಪಾಯಿ ತೆಗೆದಿಟ್ಟು ಉಳಿದ ೫೦೧ ರೂಪಾಯಿಯಲ್ಲಿ ಷೇರ್ ಬೆಲೆಯ ಮೇಲೆ ಸೇಕಡಾ ವರುಷಕ್ಕೆ ರೂ ೬—೪—೦ ಯಂತೆ ಬಡ್ಡಿಯೂ ಸೊಸೈಟಿಯಲ್ಲಿ ಪದಾರ್ಥಗಳನ್ನು ಕೊಂಡುಕೊಂಡ ಮೆಂಬರುಗಳಿಗೆ ರೂಪಾಯಿ ೧ಕ್ಕೆ ೬ ಪೈಯಂತೆ ನಫೆಯನ್ನು ಹಂಚಲು ಸಾಧ್ಯವೆಂದೂ ಗೊತ್ತಾಗುವುದು.

ಪದಾರ್ಥಗಳು ಅನುಕೂಲವಾಗಿ ದೊರೆಯತಕ್ಕ ಸ್ಥಳವನ್ನೂ ಮೆಂಬರುಗಳಿಗೆ ಅವಶ್ಯ ಬೇಕಾದ ಪದಾರ್ಥಗಳನ್ನೂ ತಿಳಿಸುವುದೂ, ಸೊಸೈಟಿಯು ತಮಗೆ ಸೇರಿರುವುದೆಂಬ ಅಭಿಮಾನದಿಂದ ಪ್ರತಿ ಒಬ್ಬ ಮೆಂಬರೂ ಭಾವಿಸುವುದೂ ಈ ಸಂಘದ ಉದ್ದಿಷ್ಟ ಕಾರ್ಯಗೌರವವನ್ನು ತಿಳಿದು ಅನ್ಯೋನ್ಯ ಸ್ನೇಹಭಾವದಿಂದ ಕೆಲಸ ಮಾಡುವುದೂ ಈ ಸಂಘದವರ ಕರ್ತವ್ಯವೆಂದು ಭಾವಿಸುವೆನು. ನಮ್ಮಲ್ಲಿ ಒಟ್ಟು ಕೂಡಿ ಕೆಲಸಮಾಡುವುದನ್ನು ಕಲಿಯುವುದೇ ಒಂದು ವಿದ್ಯೆಯು. ಇದು ಅತ್ಯವಶ್ಯವಾದುದು

ಬಡಜನರಿಗೆ ಈ ಸಂಘದಿಂದ ಏನು ಉಪಯೋಗ? ಈ ಸಂಘದ ಉದ್ದೇಶಗಳೇನು? ಅವೆಲ್ಲಾ ನೆರವೇರುತ್ತವೆಯೋ? ಎಂಬೀ ಪ್ರಶ್ನೆಗಳಿಗೆ ಉತ್ತರವಾಗಿ ರೈತಾಪಿ ಜನರಿಗೆ ಸಹಾಯ, ಕುಶಲವಿದ್ಯೆಗೆ ಪ್ರೋತ್ಸಾಹ, ಲೇವಾದೇವಿ, ಜನಸಿ ಬಟ್ಟೆಗಳ ವ್ಯಾಪಾರವೇ ಮುಂತಾದವುಗಳೊಡನೆ ಅಲ್ಪಸ್ವಲ್ಪವಾಗಿ ಕೂಡಿಹಾಕಿ ಉತ್ಪತ್ತಿಯನ್ನು ಕಲ್ಪಿಸಿಕೊಡುವುದೇ ಈ ಸಂಘದ ಮುಖ್ಯ ಉದ್ದೇಶಗಳು ಈಗ ಪ್ರತಿ ಒಬ್ಬನ ಷೇರ್ ಮೊಬಲಗೂ ಸ್ವಲ್ಪಮಟ್ಟಿಗೆ ಕೇವಲವಾಗಿರುವುದರಿಂದ ಪದಾರ್ಥಗಳನ್ನು ಸೊಸೈಟಿಯಲ್ಲಿ ನಗದು ಖರೀದಿಗೆ ತೆಗೆದುಕೊಳ್ಳಲು ಅನುಕೂಲವಾಗಿ ೧೦ ದಿವಸಕ್ಕೆ ಒಂದು ರೂಪಾಯಿಗೆ ಅರ್ಧ ಕಾಸಿನಂತೆ ಬಡ್ಡಿಯಿಂದ ಮೊಬಲಗು ಸಾಲಾ ದೊರೆಯುವದು ವ್ಯಾಪಾರಕ್ಕೆ ಬೇಕಾದಷ್ಟು ವರ್ತಕನ ಜಾಸ್ತಿ ಈ ತೆರನಾದ ಜಾಸ್ತಿಯಿಂದ ವಿಶೇಷ ಲಾಭ ಬರಬಹುದೆಂಬ ಭವಿಷ್ಯತ್ತನ್ನು ನಂಬಿ ಅನ್ಯಜನರ ದ್ರವ್ಯವನ್ನು ಸ್ವೇಚ್ಛೆಯಾಗಿ ಉಪಯೋಗಿಸಲು ಸಂಘದ ವಾಹಾ ಜನರು ಒಪ್ಪಲಾರರು. ಸರ್ಕಾರದವರೂ ಅದಕ್ಕೆ ಸಮ್ಮತಿಸಲಾರರು

ಈ ಸಂಘದಲ್ಲಿ ಪದಾರ್ಥಗಳು ಸಾಲವಾಗಿ ದೊರೆಯುವುದಿಲ್ಲವೆಂತಲೂ ಪದಾರ್ಥಗಳನ್ನು ಒಂದು ತಿಂಗಳ ಮಟ್ಟಿಗೆ ಸಾಲವಾಗಿ ಕೊಟ್ಟರೆ ಬೇಕಾದಷ್ಟು ವ್ಯಾಪಾರ ನಡೆಯಬಹುದೆಂತಲೂ, ಇದೇ ಈ ಸಂಘದ ಉಪಕಾರವೆಂದು ಭಾವಿಸಬೇಕೆಂತಲೂ ಈ ಸಂಘದವರಲ್ಲಿ ಕೆಲವರ ಅಭಿಪ್ರಾಯವಾಗಿತ್ತು ಈ ೯ ತಿಂಗಳ ಅನುಭವದಿಂದ, ದ್ರವ್ಯಾನುಕೂಲ ಉಂಟಾಗುವ ತನಕ ಆ ಪದಾರ್ಥ ಇಲ್ಲದೆಯೇ ಕೆಲವು ಕಾಲ ತಳ್ಳುವುದೂ ಆಶೆಯನ್ನು ನಿಗ್ರಹಿಸುವುದೂ ಮೆಂಬರುಗಳಿಗೆ ಅಭ್ಯಾಸವಾಗುತ್ತಿದೆ "ಕಡಹುಟ್ಟ ಬಡಕೆಟ್ಟ" ಎಂಬ ಹಿತೋಕ್ತಿಯಲ್ಲಿ ನಿಶ್ಚಯವನ್ನರಿತು ಪದಾರ್ಥಗಳನ್ನು ಸಾಲಕೊಡದೆ ಇರುವುದೂ ಅಲ್ಪಸ್ವಲ್ಪವಾಗಿ ಕೊಟ್ಟ ಮೊಬಲಗನ್ನು ಒಟ್ಟುಗೂಡಿಸಿ ಸಮಯಕ್ಕೆ ಬೇಕಾದಾಗ ಒದಗಿಸಿಟ್ಟಿರುವುದೂ ಈ ಸಂಘದ ಜನರನೇಕರಿಗೆ ಹೀಗೆ ಕೂಡಿ ಹಾಕಿದ ಷೇರ್ ಮೊಬಲಗಿಗೆ ಪರಸ್ಪರ ಪರಿಚಯದಿಂದ ವಿಶ್ವಾಸವೂ ನಂಬಿಕೆಯೂ ಹೆಚ್ಚಿದ ಹಾಗೆಲ್ಲಾ ಉತ್ತರೋತ್ತರ ಇಮ್ಮಡಿಯಾಗಿ ಕೊಡಲು ಅವಕಾಶವಿರುತ್ತೆ

ವ್ಯವಸಾಯದ ಬ್ರಾಂಚ್.—ಈ ಸೊಸೈಟಿಯವರು ಇನ್ನು ಮುಂದೆ ಯಾವ ರೀತಿಯಲ್ಲಿ ಸಹಾಯ ಮಾಡಬಹುದೆಂಬುದನ್ನು ಸಂಕ್ಷೇಪವಾಗಿ ಸೂಚಿಸುವೆನು. ಮೈಸೂರು ತಾಲ್ಲೂಕಿನ ಗ್ರಾಮಸ್ಥರು ಈ ಸೊಸೈಟಿಗೆ ಮೆಂಬರಾಗಬಹುದಾದ ಅವಕಾಶವಿದೆ ಅವರ ಸೇರೋಣದಿಂದ ಅವರಿಗೆ ಬೇಕಾದ ಕಬ್ಬಿಣ ಸಾಮಾನುಗಳನ್ನೂ, ಇತರ ದೇಶದಿಂದ ಗೊಬ್ಬರ ಗೋಡುಗಳನ್ನೂ, ಬೆಳೆಗೆ ಬೇಕಾದ ಬೀಜಗಳನ್ನೂ ಈ ಸಂಘದವರು ತರಿಸಿಕೊಡಬಹುದಾಗಿದೆ. ಈ ವಿಷಯವನ್ನರಿತು ರೈತರು ಈ ಸಂಘಕ್ಕೆ ಮೆಂಬರಾಗಿ ಸೇರುವುದಾದರೆ ವ್ಯವಸಾಯ ಕಾಲದಲ್ಲಿ ಅವರಿಗೆ ಬೇಕಾಗುವ ದ್ರವ್ಯವನ್ನು ಸಾಧಾರಣ ಬಡ್ಡಿಗೆ (ಈಗ ರೈತರು ಸೇಕಡ ೨೫ ಕ್ಕೆ ಹೆಚ್ಚಾಗಿ ಕೊಡುತ್ತಾರೆ) ಕೊಟ್ಟು ಆ ಮೊಬಲಗಿಗೆ ಪಸಲನ್ನಾಗಲಿ ಹಣವನ್ನಾಗಲಿ ಸಂಘದವರು ರೈತರಿಂದ ಭರಮಾಡಿಕೊಳ್ಳುವ ಮಾರ್ಗವನ್ನು ನಿರುಪಾಧಿಕವಾಗಿ ಮಾಡಲು ಸರ್ಕಾರದವರು ಅವಶ್ಯವೆಂದಲ್ಲಿ ಸಹಾಯ ಮಾಡುವವರಾಗಿರುತ್ತಾರೆ ಕಾಲಕ್ರಮೇಣ ನಮ್ಮ ಸೊಸೈಟಿಯಲ್ಲಿಯೇ ಅಗ್ರಿಕಲ್ಚರಲ್ ಬ್ರಾಂಚ್ ಎಂದು (ರೈತಾಪಿ ಜನರಿಗೆ ಬೇಕಾದ ಸಹಾಯವನ್ನು ಒದಗಿಸಿಕೊಡುವುದಕ್ಕೆ) ಒಂದು ಕಮಿಟಿಯನ್ನು ಕಲ್ಪಿಸಿ ಅವರಿಗೆ ಈ ಕಾರ್ಯವನ್ನು ವಹಿಸಬಹುದಾಗಿದೆ

ವಿಲೇಜು ಬ್ಯಾಂಕ್ ಬ್ರಾಂಚು.—ಈಗಾಗಲೇ ನಮ್ಮಲ್ಲಿ ಷೇರ್ ಬಾಬತು ಸುಮಾರು ಏಳುಸಾವಿರ ರೂಪಾಯಿ ವರೆಗೆ ಜಮಾಯಿಸಿರುತ್ತೆ ಇದನ್ನೆಲ್ಲಾ ವ್ಯಾಪಾರದಲ್ಲಿ ಸಧ್ಯ ಉಪಯೋಗಿಸತಕ್ಕ ಸಂಭವವಿಲ್ಲ. ನಾವು ಮೆಲ್ಲ ಮೆಲ್ಲನೆ ಹೆಜ್ಜೆ ಇಡುತ್ತಿರುವಲ್ಲಿ ಹಣವು ಪ್ರತಿ ತಿಂಗಳಲ್ಲೂ ಹೆಚ್ಚಾಗಿ, ಅದನ್ನು ಗವರ್ನಮೆಂಟ್ ಸೇವಿಂಗ್ಸ್ ಬ್ಯಾಂಕಿನಲ್ಲಿಡುವುದು ಅವಶ್ಯವಾಗಿದ್ದರೂ ಲಾಭಕಾರಿಯಲ್ಲವೆಂದು ಎಲ್ಲರೂ ಒಪ್ಪುವರು ಹಣವಿದೆ ನಮಗೆ ಅದನ್ನು ಉಪಯೋಗಿಸುವುದಕ್ಕೆ ತಿಳಿಯದು ಎಂದರೆ ಇಲ್ಲಿ ಸೇರಿರುವ ದೊಡ್ಡ ದೊಡ್ಡ ಸಾಹುಕಾರರು ನಮ್ಮನ್ನು ನೋಡಿ ಆಶ್ಚರ್ಯ ಪಡದೇ ಇರರು ಆದುದರಿಂದ ಪ್ರತಿತಿಂಗಳಲ್ಲೂ ಹೆಚ್ಚುತ್ತಿರುವ ನಮ್ಮ ಹಣವನ್ನು ಹೇಗೆ ಉಪಯೋಗಿಸುವುದೆಂಬುದು ನೀವುಗಳು ಸಾವಧಾನದಿಂದ ಯೋಚಿಸತಕ್ಕ ಭಾಗವಾಗಿದೆ

ಈ ವಿಚಾರವಾಗಿ ಯೋಚಿಸಿರುವ ಕೆಲವರು ಈ ಹಣವನ್ನು ರೈತರ ಕಷ್ಟ ನೀಗಿಸಲು ಪ್ರತಿಫಲಾಪೇಕ್ಷೆಯಿಂದ ಉಪಯೋಗಿಸಬಹುದೆನ್ನುವರು ಹೇಗೆಂದರೆ ಋಣಪೀಡಿತರಾದ ರೈತರುಳ್ಳ ಒಂದು ಗ್ರಾಮವನ್ನು ತೆಗೆದುಕೊಂಡು ಆ ಗ್ರಾಮದಲ್ಲಿ ಒಡವಿಳಿದಾರರಾದ ರೈತರ ಸಾಲವನ್ನೂ ಅವರ ಆಸ್ತಿಯನ್ನೂ ಅದರ ಮೇಲಣ ಸಾಲ, ಕೈಸಾಲವೇ ಮುಂತಾದನ್ನೂ ನಿಷ್ಕರ್ಷಿಸಿ ಆ ಗ್ರಾಮಸ್ಥರ ಒಂದು ಸಂಘವನ್ನು ಏರ್ಪಡಿಸಿ ಸಂಘಕ್ಕೆ ಸೇರಿದ ಆಸ್ತಿಯನ್ನು ಮೈಸೂರು ಪರಸ್ಪರ ಸಹಾಯಕ ಸಂಘದವರು ಈಡು ಮಾಡಿಕೊಂಡು, ಸರಕಾರದ ರಿಜಿಸ್ಟ್ರಾರ್ ಒಪ್ಪಿಕೆಯಿಂದ ಸುಲಭ ಬಡ್ಡಿಯಲ್ಲಿ ಆ ಗ್ರಾಮ ಸಂಘಕ್ಕೆ ಸಾಲ ಕೊಟ್ಟು ಸಂಘದವರು ಅದರ ಮೇಲೆ ಸ್ವಲ್ಪ ನಫೆಯನ್ನು ಇಟ್ಟು ಅಲ್ಲಿಯ ರೈತರಿಗೆ ಸಾಲ ಕೊಡಬೇಕೆಂದು ಕಟ್ಟು ಮಾಡಿಕೊಡಬಹುದೆನ್ನುವರು. ಇದೂ ತಾವುಗಳು ಯೋಚಿಸತಕ್ಕ ವಿಷಯವಾಗಿದೆ

ಕೈಗಾರಿಕೆಗಳಿಗೆ ಪ್ರೋತ್ಸಾಹ.—ಮತ್ತೆ ಕೆಲವರ ಅಭಿಪ್ರಾಯವು ತಮ್ಮಗಳ ಆಲೋಚನೆಗೆ ತಕ್ಕ ವಿಷಯವಾಗಿದೆ ಇಷ್ಟುಮಂದಿ ಯೋಚನಾ ಪರರು ಸೇರಿ ಐವತ್ತುಸಾವಿರ ರೂಪಾಯಿನ ವರೆಗೆ ಮೂಲಧನವನ್ನು ಶೇಖರಿಸಿ ಸಾಮಾನ್ಯ ವ್ಯಾಪಾರದಲ್ಲೂ ಲೇವಾದೇವಿಯಲ್ಲೂ ತೃಪ್ತರಾಗದೆ ದೇಶದ ಏಳಿಗೆಗೆ ಸಹಕಾರಿಯಾಗಿಯೂ ಬಡಜನರಿಗೆ ಜೀವನಮಾರ್ಗವಾಗಿಯೂ ಈ ದೇಶದ ಬೆಳೆಯನ್ನು ಇಲ್ಲಿಯೇ ಉಪಯೋಗಿಸತಕ್ಕಂತೆ ಕಾರಖಾನೆಗಳನ್ನು ಏರ್ಪಡಿಸೋಣದರಲ್ಲೂ ಈಗ ಕಷ್ಟಪಡುತ್ತಿರುವ ನೇಯಿಗೆಯವರಿಗೆ ಬೇಕಾದ ಅನುಕೂಲತೆಗಳನ್ನು ಕಲ್ಪಿಸಿಕೊಡೋಣದರಲ್ಲೂ ಸಾಧ್ಯವಾದ ಉಪಕಾರವನ್ನು ಮಾಡಿದಂತಾಗುವುದೆಂದು ಅಭಿಪ್ರಾಯಪಡುವರು

ಸರಕು ಮತ್ತು ಸಾಲ.—ಸಣ್ಣ ಸಣ್ಣ ವ್ಯಾಪಾರಿಗಳಿಗೆ ಈ ಸಂಘವು ಲಾಭಕಾರಿಯಾದ ಮಳಿಗೆಯಂತೆ ಉಪಯೋಗವಾಗಬಹುದು. ಜಿನಸಿ ಮಂಡಿ ವ್ಯಾಪಾರದವರಿಗೆ ವರ್ತಕರಲ್ಲಿ ಕೆಲವು ರಿಯಾಯಿತಿಗಳುಂಟೆಂದು ವರ್ತಕರಿಗೆಲ್ಲಾ ತಿಳಿದೇ ಇದೆ. ಹಾಗೆಯೇ ಸಾವಿರಾರು ರೂಪಾಯಿಗಳಿಗೆ ಥಾನು ಗಟ್ಟಲೇ ಬಟ್ಟೆ ತಯಾರಾಗುವ ಕಾರಖಾನೆಗಳಲ್ಲಿ ತೆಗೆದುಕೊಳ್ಳುವವರಿಗೆ ಕೆಲವು ರಿಯಾಯಿತಿಗಳನ್ನು ಸಾಮಾನ್ಯವಾಗಿ ತೋರಿಸುವರು. ಪ್ರತಿಯೊಬ್ಬ ವರ್ತಕನೂ ಸಾವಿರ ರೂಪಾಯಿನ ಸರಕುಗಳನ್ನು ತರಿಸುವುದಿಲ್ಲ. ತರಿಸಬೇಕಾದ ಅವಶ್ಯವೂ ಇಲ್ಲ. ಕಡಿಮೆ ಬೆಲೆಗೆ ತರಿಸಿದ ಹಾಗೆಲ್ಲಾ ಕಡಿಮೆ ರಿಯಾಯಿತಿಯನ್ನು ತೋರಿಸುವರು ಹಾಗಿರುವಲ್ಲಿ ಯಾವುದಾದರೂ ಒಂದು ಊರಿನಿಂದ ತರಿಸಬೇಕಾದ ಪದಾರ್ಥಗಳಿಗೆ ಈ ಸೊಸೈಟಿಗೆ ಸೇರಿದ ವರ್ತಕರು ತಮಗೆ ಬೇಕಾದಷ್ಟು ಸರಕನ್ನು ಒಟ್ಟುಗೂಡಿಸಿ ಸೊಸೈಟಿಯ ಮೂಲಕ ತರಿಸುವುದರಿಂದ ಹೆಚ್ಚಾದ ರಿಯಾಯಿತಿಯೂ, ಖರ್ಚು ಕಡಿಮೆಯೂ, ಹೆಚ್ಚು ಲಾಭವೂ ದೊರೆಯುವುದರಲ್ಲಿ ಸಂದೇಹವಿಲ್ಲ. ಆದುದರಿಂದ ಅಲ್ಪಸ್ವಲ್ಪ ವ್ಯಾಪಾರ ಮಾಡಿಕೊಂಡಿರುವ ವರ್ತಕರು ಈ ಸಂಘಕ್ಕೆ ಸೇರಿದಲ್ಲಿ ಪದಾರ್ಥವನ್ನು ಒಟ್ಟಾಗಿ ತರಿಸುವುದರಿಂದ ಸಂಘಕ್ಕೂ ತಮಗೂ ತಮ್ಮಲ್ಲಿ ಪದಾರ್ಥ ತೆಗೆದುಕೊಂಡು ಹೋಗುವವರಿಗೂ ಖಂಡಿತವಾಗಿ ಸಹಾಯವಾಗುವುದು.

ಈ ಸಂಘಕ್ಕೆ ಸೇರಿದ ವರ್ತಕನ ಹೆಸರಿಗೆ ಪ್ರಸಿದ್ಧವಾದ ಕಂಪನಿಯಿಂದ ಬಂದ ಸಾಮಾನಿನ ಮೂಟೆಗಳನ್ನು ಈಡುಮಾಡಿ ಕೆಲವು ದಿವಸಗಳ ಮಟ್ಟಿಗೆ ಹಣವನ್ನು ಪಡೆದು ಅನುಕೂಲವಾದ ಖರೀದಿ ಬಂದಾಗ ಸೊಸೈಟಿಯಲ್ಲಿರುವ ಅವನು ಆ ಸರಕನ್ನು ಮಾರಿ ಹಣವನ್ನು ಸೊಸೈಟಿಗೆ ಕೊಟ್ಟು ವರ್ತಕನು ಲಾಭವನ್ನು ಪಡೆಯಲು ಸೊಸೈಟಿಯು ಸಹಕಾರಿಯಾಗಬಹುದು

ಧಾರಣೆಯ ನಿಬಂಧ.—ವಿಶೇಷ ಲಾಭವನ್ನಿಟ್ಟು ಇದುವರೆಗೂ ಮಾರುತ್ತಿದ್ದ ಕೆಲವು ಪದಾರ್ಥಗಳ ಧಾರಣೆಯನ್ನು ಕ್ರಮವಾಗಿ ಇಳಿಸುತ್ತಾ ಬಂದರೆ ಆ ಪದಾರ್ಥಗಳು ಹೆಚ್ಚಾಗಿಯೂ ಖರ್ಚಾಗುವವು. ಜನರಿಗೆ ಅನುಕೂಲವೂ ಆಗುತ್ತದೆ. ಈ ಸಂಘವು ದೈವಾನುಗ್ರಹದಿಂದಲೂ ತಮ್ಮಗಳ ಸಹಜವಾದ ಸಹಾಯದಿಂದಲೂ ಕೆಲಕಾಲ ಸಂಕಲ್ಪಿಸಿದ ರೀತಿಯಲ್ಲಿ ನಡೆದರೆ ಪದಾರ್ಥಗಳ ಧಾರಣೆವಾಸಿಯನ್ನು ನಿಷ್ಕರ್ಷೆ ಮಾಡುವುದರಲ್ಲಿ ಇದೇ ಮೇಲ್ಪಂಕ್ತಿ ಹಾಕಿಕೊಡುತ್ತದೆ ಈ ತೆರನಾದ ಪರಸ್ಪರ ಸಹಾಯಕಸಂಘಗಳಲ್ಲಿ ನಿಶ್ಚಿತವಾದ ಧಾರಣೆಯೇ ಯೂರೋಪ್ ಖಂಡದ ಅನೇಕ ದೇಶಗಳಲ್ಲಿನ ಮುಖ್ಯ ಪಟ್ಟಣಗಳಲ್ಲಿ ಪದಾರ್ಥಗಳ ವಿಕ್ರಯಕ್ಕೆ ಪರಿಮಾಣವಾಗುವುದು ಮಂಡಿಯ ಚೌಕದಲ್ಲಿ ಈ ದಿನ ಇಂಥ ಜಿನಸಿಯ ಧಾರಣೆ ಇಷ್ಟೆಂದು ಕೇಳಿದರೆ ವ್ಯಾಪಾರದಾರರು ಒಪ್ಪಿ ಹೇಗೆ ಜಿನಸಿಯನ್ನು ವಿಕ್ರಯಿಸಿ ಹೋಗುತ್ತಿರುವರೋ ಹಾಗೆಯೇ ಇತರ ಪದಾರ್ಥಗಳ ಬೆಲೆಯನ್ನು ನಿಷ್ಕರ್ಷಿಸುವುದಕ್ಕೆ ಈ ಸಂಘವು ಮುಖ್ಯ ಚೌಕವಾಗುವ ಸಂಭವವಿದೆ ಇದಕ್ಕೆ ಇನ್ನೂ ಕೆಲವು ಕಾಲ ಬೇಕು.

ಇಂಡಿಯಾ ದೇಶದ ವೃತ್ತಾಂತಗಳು.

ಬೊಂಬಾಯಿ ಪಟ್ಟಣದಲ್ಲಿ ಸರ್ ಡೇವಿಡ್ ಸಸ್ಸೂನರವರ ಹತ್ತಿ ಕಾರ್ಖಾನೆಗೆ ಬೆಂಕಿ ಬಿದ್ದು ಸುಮಾರು ಆರೂವರೆ ಲಕ್ಷ ರೂಪಾಯಿನ ಹತ್ತಿಯು ಸುಟ್ಟು ಹೋಯಿತು

***

ಆಲಿಕಲ್ಲಿನಿಂದ ಬೊಂಬಾಯಿಗೆ ಧನಕಾಳಿ ಎಂಬೊಂದು ಹಡಗಿನಲ್ಲಿ ೮೦,೦೦೦ ತೆಂಗಿನಕಾಯಿಗಳನ್ನು ಸಾಗಿಸಿಕೊಂಡು ಹೋಗುತ್ತಿದ್ದರು. ಆ ಹಡಗು ಬಲಿಪಟ್ಟಣದ ಬಳಿ ಮುಳುಗಿ ಎಲ್ಲಾ ನಷ್ಟವಾಗಿ ಹೋಯಿತು

***

ಬಂಗಾಳದ ಅಧಿಪತ್ಯಕ್ಕೆ ಸೇರಿದ ದರ್ಭಾಂಗ ಡಿಸ್ಟ್ರಿಕ್ಟಿನಲ್ಲಿ ಇನ್ನೂ ಕ್ಷಾಮವು ಅಲ್ಪಸ್ವಲ್ಪ ಇದ್ದೇ ಇದೆ ಈಗಲೂ ಸುಮಾರು ೩೯,೦೦೦ ಪ್ರಜೆಗಳು ಸರ್ಕಾರದ ರಿಲೀಫ್ ಕಾಮಗಾರಿಯನ್ನು ಮಾಡುತ್ತಿದ್ದಾರೆ.

***

ಪೂರ್ವ ಬಂಗಾಳಕ್ಕೆ ಸೇರಿದ ಕೊಮಿಲಾ ಎಂಬ ಸ್ಥಳದಲ್ಲಿ ಮಳೆಯೂ ಸಿಡಿಲೂ ಬಹಳವಾಗಿ ಪ್ರಾಪ್ತವಾಯಿತು ಒಂಬತ್ತು ಮಂದಿ ಮಹಮದೀಯರು ಮಳೆಗೆ ಸಿಕ್ಕಿ ಮೃತಪಟ್ಟರು. ಹತ್ತು ಮಂದಿಗೆ ಗಾಯಗಳಾಗಿವೆ

***

ಹಿಂದುಸ್ಥಾನದ ಸರ್ವಸೇನಾಪತಿಯಾದ ಲಾರ್ಡ್ ಕಿಚ್ನರ್ ಯವರು ಇನ್ನೂ ಎರಡು ವರುಷಕಾಲ ಅದೇ ಕೆಲಸವನ್ನು ನೋಡುವುದಾಗಿ ಒಪ್ಪಿಕೊಂಡದ್ದರಿಂದ ವಿಲಾಯತಿ ಗವರ್ನಮೆಂಟಿನವರು ಪ್ರೀತಿ ಸ್ಪಷ್ಟ ಮಾಡಿದಾರೆ.

***

ಅನಂತಶಯನದಲ್ಲಿ ಎರಡನೇ ರಾಣಿಯವರನ್ನು ಮೆ॥ ಕೆ ರಾಮವರ್ಮರವರಿಗೆ ಕೊಟ್ಟು ಬರುವ ವಾರ ವಿವಾಹ ನಡೆಯುವುದೆಂದು ಪ್ರಕಟವಾಗಿದೆ ಸರ್ಕಾರದವರು ಈ ವಿವಾಹದ ಉತ್ಸವಗಳನ್ನು ನಡೆಸುವುದಕ್ಕೆ ಏರ್ಪಾಡು ಮಾಡುತ್ತಿದ್ದಾರೆ.

***

ಸಿಲೋನ್ (ಲಂಕಾ) ದ್ವೀಪದಲ್ಲಿ ಅಫೀಮಿನ ಸೇವನೆಯೂ ಅದರ ಈಚೆಗೆ ವರುಷೇ ವರುಷ ಹೆಚ್ಚಾಗುತ್ತಿರುವುದನ್ನು ಗವರ್ನಮೆಂಟಿನವರು ನೋಡಿ, ಈ ವ್ಯಾಪಾರವನ್ನೂ ಅಭ್ಯಾಸವನ್ನೂ ಜನರಲ್ಲಿ ಕಡಿಮೆ ಮಾಡುವ ವಿಷಯದಲ್ಲಿ ಮುತುವರ್ಜಿವಹಿಸಿ ಆಲೋಚನೆ ಮಾಡುತ್ತಿದ್ದಾರೆ.

***

ಮದರಾಸ್ ಪಟ್ಟಣದ ಪ್ರಜೆಗಳಿಗೆ ಸರಬರಾಜಾಗುತ್ತಿರುವ ಕುಡಿಯುವ ನೀರಿನ ವಿಷಯದಲ್ಲಿ ಜನರು ತುಂಬಾ ಅತೃಪ್ತಿ ಪಡುತ್ತಿದ್ದಾರೆ. ಸರ್ಕಾರದವರು ಅದನ್ನು ತಿಳಿದು ಈ ನೀರಿನ ಕಾಮಗಾರಿಗಳನ್ನು ಮಾಡಿಸುವುದಕ್ಕೆ ಈಗ ಸುಮಾರು ೨೩ ಲಕ್ಷವೂ ೬೦ ಸಾವಿರ ರೂಪಾಯಿ ಸ್ಯಾಂಕ್ಷನ್ ಮಾಡಿದಾರೆ

...ಗೂನ್ ಪಟ್ಟಣದಲ್ಲಿ ಮ್ಯುನಿಸಿಪಾಲಿಟಿಯವರು ತಮ್ಮ ಗುತ್ತ...ನ್ನು ಹೆಚ್ಚಿಸಬೇಕೆಂದು ಗೊತ್ತುಮಾಡಿ, ನಾಯಿ ಸಾಕುವವರು ...ಂದು ನಾಯಿಗೂ ಪ್ರತಿ ತಿಂಗಳಿಗೂ ೩ ರೂಪಾಯಿ ತೆರಿಗೆ ಕೊ...ಕೆಂದು ನಿಗದಿಸುವರು. ಮೋಟಾರ್ ಗಾಡಿಗಳಿಗೆ ಪ್ರತಿ ವರುಷವೂ ...ರೂಪಾಯಿ ಕೊಡುವಂತೆ ತೆರಿಗೆ ಗೊತ್ತುಮಾಡಿದಾರೆ.

***

ಕಲ್ಕತ್ತಾ ಪಟ್ಟಣದಲ್ಲಿ ಶವಗಳನ್ನು ಹೂಳತಕ್ಕವರು ಗುಂಡಿಗ...ಳನ್ನು ಆಳವಾಗಿ ತೋಡದೆ ಇರೋಣದರಿಂದ ಹೂತ ಹೆಣಗಳ ದುರ್ವಾಸನೆ ...ಹೆಚ್ಚಿ ಪ್ರಜೆಗಳ ಅನಾರೋಗ್ಯಕ್ಕೆ ಕಾರಣವಾಗುತ್ತದೆಂದು ಅಲ್ಲಿನ ...ಆಫಿಸರು ಸೂಚಿಸಿದ್ದರಿಂದ ಮ್ಯುನಿಸಿಪಾಲಿಟಿಯವರೇ ಶಿಬ್ಬಂದಿ...ಯನ್ನಿಟ್ಟು ಸ್ವಲ್ಪ ಖರ್ಚಿನಿಂದ ಶವಗಳನ್ನು ಸಮಾಧಿ ಮಾಡಿಸುವಂತೆ ...ಏರ್ಪಾಡು ಮಾಡಿಕೊಳ್ಳುತ್ತಿದ್ದಾರೆ.

***

...ಸೈಲೋನ್ ಪಟ್ಟಣದಲ್ಲಿ ಕಳೆದ ವಾರ ಅಪಾರ ಮಳೆಯೂ ಸಿಡಿಲೂ ...ಹುವಾಗಿ ಪೋಲೀಸ್ ಸ್ಟೇಷನ್ ಹತ್ತಿರ ಅನಾಹುತವಾಯಿತು. ಹದಿ...ಮೂರು ಜನರಿಗೆ ಸಿಡಿಲು ಬಡಿದಿದೆ. ಕೂಡಲೇ ಮೂರು ಮಂದಿ ಮೃತ...ಪಟ್ಟರು. ಉಳಿದವರನ್ನು ಕುಟುಕು ಜೀವದಲ್ಲಿ ಆಸ್ಪತ್ರೆಗೆ ಸಾಗಿಸಿದ...ರು. ಈ ಪೈಕಿ ಇಬ್ಬರು ಈಚೆಗೆ ಸತ್ತುಹೋದರು. ಉಳಿದವರೂ ...ಬದುಕುವಂತಿಲ್ಲವೆಂದು ಹೇಳುತ್ತಾರೆ.

***

ಬೊಂಬಾಯಿನಲ್ಲೂ ಬೇರಾರ್ಕ್ಕೆ ಸೇರಿದ ಷಾಂಘಾಯಿ ಪಟ್ಟಣದ ...ವ್ಯಾಪಾರಿಗಳನ್ನು ನಡಿಸುತ್ತಾ ತುಂಬಾ ಪ್ರಸಿದ್ಧಿಗೆ ಬಂದಿದ್ದ ...ಡೆ ಸೋರಾಬ್ಜಿ, ನಸರ್ವಾಂಜಿ ಸೊರಾಬ್ಜಿ ಎಂಬಿಬ್ಬರು ವರ್ತಕರ್...ಪಾರ ದಿವಾಳಿಯಾದರು. ಅವರು ಆಸ್ತಿಯೆಲ್ಲಾ ಮೂರುಲಕ್ಷ ...ಪಾಯಿಯೆಂತಲೂ ಅವರು ಇತರರಿಗೆ ಕೊಡಬೇಕಾಗಿರುವುದು ...ಹತ್ತೆರಡು ಲಕ್ಷ ರೂಪಾಯಿಯೆಂತಲೂ ತಿಳಿದು ಬಂದಿದೆ.

***

ಪ್ಲೇಗ್ ಉಪದ್ರವು ಹಿಂದುಸ್ಥಾನದಲ್ಲಿ ಹಿಂದಿನ ವಾರಕ್ಕಿಂತಲೂ ...ದ ವಾರ ಹೆಚ್ಚಾಯಿತು. ಒಟ್ಟು ೭೩,೦೦೦ ಜನರಿಗೆ ಪ್ಲೇಗ್ ತಗಲಿ ...೬೦,೦೦೦ ಜನರು ಕಾಲವಾದರು. ಪಂಜಾಬ್ ಆಧಿಪತ್ಯದಲ್ಲೇ ...೦೦೦ ಮರಣಗಳಾಗಿವೆ. ಸಂಯುಕ್ತ ಆಧಿಪತ್ಯಗಳಲ್ಲಿ ೧೫,೦೦೦ ...ಈ ಉಪದ್ರದಲ್ಲಿ ಮೃತಪಟ್ಟರು. ಬೊಂಬಾಯಿನಲ್ಲಿ ೩,೦೦೦, ...ಗಾಳಾ ೬,೦೦೦, ಮಧ್ಯಪ್ರಾಂತ್ಯಗಳು ೧,೫೦೦, ಈ ರೀತಿ ಮರಣಗ...ವೆ.

***

ಹಿಂದುಸ್ಥಾನದಲ್ಲಿ ಇಂಗ್ಲಿಷ್ ಪ್ರಭುತ್ವವು ಪ್ರಾರಂಭವಾಗುವಾಗ್ಗೆ ...ಕ್ಕಾಗಿ ಆದಿಯಲ್ಲಿ ತುಂಬಾ ಪ್ರಯಾಸಪಟ್ಟು ಅನೇಕ ಯುದ್ಧಗಳಲ್ಲಿ ...ಜಯ ಹೊಂದಿ ಪ್ರಖ್ಯಾತ ಪಡೆದಿರುವ ಲಾರ್ಡ್ ಕ್ಲೈವ್ ಎಂಬ ...ತನ ಪ್ರತಿಮೆಯೊಂದನ್ನು ಕಲ್ಕತ್ತಾ ಪಟ್ಟಣದಲ್ಲಿ ಮಾಡಿಸಿ ...ಡಬೇಕೆಂದು ಲಾರ್ಡ್ ಕರ್ಜನ್‌ರವರು ಕಳೆದ ವಾರ ವಿಲಾಯತಿಯ ...ಸೂಚಿಸಿದರು. ಪ್ರಸಿದ್ಧವಾದ ಪ್ಲಾಸಿ ಕದನವು ನಡೆದು ನಾಳೆ ಜೂನ್ ...ಕ್ಕೆ ೧೫೦ ವರುಷ ತುಂಬುತ್ತದೆ. ಆಗ್ಗೆ ಆತನ ಹೆಸರನ್ನು ಶಾಶ್ವ...ತಗೊಳಿಸುವುದು ಅವಶ್ಯವೆಂದೂ ಹೇಳಿದಾರೆ.

***

ರಂಗೂನ್ ಪಟ್ಟಣದಲ್ಲಿ ನದಿಯ ದಡದ ಮೇಲಿರುವ ಕಮಾಕಸಿತ ...ಗ್ರಾಮದಲ್ಲಿ ಬೆಂಕಿ ಬಿದ್ದು ೪೦ ಮನೆಗಳ ಪೈಕಿ ಆರು ಮನೆಗ...ಳು ಮಾತ್ರ ಉಳಿಕೊಂಡವು. ಉಳಿದವೆಲ್ಲಾ ಸುಟ್ಟು ಬೂದಿಯಾಗಿರು...ವು. ಆ ಗ್ರಾಮದ ೭೦೦ ಪ್ರಜೆಗಳ ಪೈಕಿ ೫೦೦ ಕ್ಕಿಂತಲೂ ಹೆಚ್ಚು ...ಜನ ಸುಮಾರು ೬೦,೦೦೦ ರೂಪಾಯಿನ ಮನೆ ಮಠ ಆಸ್ತಿಪಾಸ್ತಿಗ...ಳೆಲ್ಲಾ ಕಳೆದುಕೊಂಡು, ಅಲೆಯುತ್ತಿದ್ದಾರೆ. ಬೆಂಕಿಯ ಕಿಡಿಗಳು ...ದಡದಲ್ಲಿದ್ದ ಒಂದು ದೋಣಿಯೊಳಕ್ಕೆ ಬಿದ್ದು, ಅದರಲ್ಲಿ ಬರ್ತಿ ...ಮಾಡಿದ್ದ ಸುಮಾರು ೧,೫೦೦ ರೂಪಾಯಿನ ಸರಕುಗಳು ಸುಟ್ಟು ...ಹೋಯಿತು.

***

ಸಿಂಧ್ ರಾಜರ ಮೇಲೆ ಅವರು ತಮ್ಮ ಕಾರ್ಭಾರಿಯನ್ನು ಕೊಲ್ಲ...ಬೇಕೆಂದು ಪ್ರಯತ್ನಪಟ್ಟಂತೆ ಮೊಕದ್ದಮೆ ಬಂದು ಸಾತಾರೆಯಲ್ಲಿ ...ವಿಚಾರಣೆಯಾಗುತ್ತಿದ್ದಿರುವಷ್ಟು ಕಳೆದ ವಾರ ಫಿರ್ಯಾದಿಗಳ ತರಫು ...ವಿಚಾರಣೆ ಮುಗಿಯಿತು. ರಾಜರು ಬಂದು ವಾಜ್ಮೂಲವನ್ನು ...ಕೋರ್ಟಿಗೆ ಸಾದರಪಡಿಸಿದರು. ಅವರು ತನಗೂ ತಮ್ಮ ...ಕಾರಿಗೂ ಬಹುಕಾಲದಿಂದ ಮನಸ್ತಾಪ ಇರುವುದೆಂತಲೂ, ಅದ...ರಿಂದ ಕಾರ್ಭಾರಿಯು ಈ ಮೊಕದ್ದಮೆ ತಂದಿರುತ್ತಾರೆಂತಲೂ, ...ಮೊಕದ್ದಮೆಯೆಲ್ಲಾ ಕಟ್ಟುಕಥೆಯಿಂದ ಬನಾವಣೆ ಮಾಡಿ ತರ...ಲ್ಪಟ್ಟಿದೆ. ಹೇಗೂ ತಾವು ಆತನ ಪ್ರಾಣವನ್ನು ತೆಗೆಯಬೇಕೆಂದು ...ಯೂ ಪ್ರಯತ್ನಪಡಲಿಲ್ಲವೆಂತಲೂ ಹೇಳಿದಾರೆ. ಈಗ ರಾಜರ ಕಡೆ ...ಸಾಕ್ಷಿಗಳ ಪರೀಕ್ಷಿಸುತ್ತಾ ನಡೆಯುತ್ತಿದೆ.

***

ಬಂಗಾಳಾ ಆಧಿಪತ್ಯದಲ್ಲಿ ಕೆಲವು ದಿನಗಳ ಕೆಳಗೆ ಒಂದು ವಿಚಿತ್ರ ...ಸಂಗತಿ ನಡೆಯಿತು. ಅನೇಕ ಜನರು ಸಮರಾತ್ರಿಯಲ್ಲಿ ದೊಡ್ಡ ...ದೊಣ್ಣೆಗಳನ್ನು ಮುಡಿಕೊಂಡು ಗಂಡು ಹೆಣ್ಣನ್ನು ಬೀದಿಗಳಲ್ಲಿ ಕರೆದು ...ಕೊಂಡು ಉತ್ಸವಮಾಡಿ, ಒಬ್ಬ ಐಶ್ವರ್ಯವಂತನಾದ ಮಹಮದಿಯ...ನ ಮನೆಯ ಮುಂದಕ್ಕೆ ಹೋದರು. ಆ ಮನೆಯವರು ಉತ್ಸವವನ್ನು ...ನೋಡುವುದಕ್ಕೆ ಬಾಗಿಲು ತೆರೆದು ಹೊರಕ್ಕೆ ಬಂದು ನಿಂತುಕೊಂಡ...ರು. ಮೆರವಣಿಗೆಯವರು (ಇವರೇ ದರೋಡೆ ಕೋರರು) ಸುಮಾರು ...ಮಂದಿ ಆಯುಧಧಾರಿಗಳಾಗಿದ್ದು ಆ ಐಶ್ವರ್ಯವಂತನ ಮನೆ...ಯೊಳಕ್ಕೆ ನುಗ್ಗಿ ಲೂಟಿಮಾಡಿ ಸಿಕ್ಕಿದ ಸಮಸ್ತ ನಗನಾಣ್ಯಗಳನ್ನೂ ...ತೆಗೆದುಕೊಂಡು ಹೋದರು. ಸಾಲದ್ದಕ್ಕೆ ಮನೆಯ ಜನರನ್ನೂ ಆ ...ಸಮಯದಲ್ಲಿ ಎಂದೋದಗಿದವರನ್ನೂ ಚನ್ನಾಗಿ ಹೊಡೆದಿರುತ್ತಾರೆ.

ಬೊಂಬಾಯಿ ಪಟ್ಟಣದಲ್ಲಿ ೧೦ ವರುಷದ ಒಬ್ಬ ಹುಡುಗನೂ ಅವನ ತಂಗಿಯೂ ಒಂದು ಕೆರೆಗೆ ಸ್ನಾನಮಾಡುವುದಕ್ಕೆ ಹೋದರು. ಹುಡುಗನು ತಿಳಿಯದೆ ಆಳಕ್ಕೆ ಇಳಿದು ಮುಳಿಗಿ ತೇಲಲಾರಂಭಿಸಿದನು. ಅವನ ತಂಗಿ ಮನೆಗೆ ಓಡಿಹೋಗಿ ಆ ಸಂಗತಿಯನ್ನು ತಂದೆತಾಯಿಗಳಿಗೆ ತಿಳಿಸಿದಳು. ಮೊದಲು ತಾಯಿ ಓಡಿಬಂದು ಕೆರೆಯೊಳಕ್ಕೆ ಇಳಿದು ಮಗನನ್ನು ಎತ್ತಿ ತರುತ್ತೇನೆಂದು ಹೋದಳು. ಅವಳೂ ಆಳಕ್ಕೆ ಇಳಿದು ಮುಳುಗಿಕೊಂಡಳು. ಆಗ ತಂದೆಯು ಹೆಂಡತಿಯನ್ನೂ ಮಗನನ್ನೂ ಬದುಕಿಸಬೇಕೆಂದು ನೀರಿನಲ್ಲಿ ಇಳಿದನು. ಇವನೂ ವಾಪಸು ಬರಲಾಗಲಿಲ್ಲ. ಅಷ್ಟರಲ್ಲಿ ಹತ್ತಿರಿದ್ದವರು ಹೋಗಿ ಮೂರು ಮಂದಿಯನ್ನೂ ಎಳೆದು ಹೊರಕ್ಕೆ ತಂದು ಉಪಚರಿಸಿದರು. ಗಂಡಹೆಂಡರಿಬ್ಬರೂ ಸತ್ತೇ ಹೋದರು. ಆದರೆ ಆ ಹತ್ತುವರುಷದ ಹುಡುಗನಿಗೆ ಮಾತ್ರ ಜೀವ ಕೂಡಿಕೊಂಡು, ಈಗ ಸ್ವಸ್ಥವಾಗುತ್ತಿದಾನೆ.

***

ಪೂರ್ವ ಬಂಗಾಳಾಕ್ಕೆ ಸೇರಿದ ಕೋಮಿಲಾ ಪಟ್ಟಣದಲ್ಲಿ ನವಾಬ್ ಲಿಯಾಖತ್ ಎಂಬ ಮಹಮದಿಯ ದೊಡ್ಡಮನುಷ್ಯನಿಗೆ ಬಂಗಾಳಾ ಗವರ್ನಮೆಂಟ್ ಛೀಫ್ ಸೆಕ್ರೆಟೆರಿಯಾದ ಮಿ॥ ಕಾರ್ಲೈಲ್ ಎಂಬವರಿಂದ ಒಂದು ತಂತೀ ವರ್ತಮಾನ ತಲಪಿತು. ಅದನ್ನು ಮಹಮದೀಯ ದೊಡ್ಡಮನುಷ್ಯನು ಒಡೆದು ನೋಡಿದಾಗ ಅದರಲ್ಲಿ "ನಿಮಗೆ ನವಾಬ್ ಎಂಬ ಬಿರುದನ್ನು ಸರ್ಕಾರದವರು ಕೊಟ್ಟಿರುತ್ತಾರೆ" ಎಂಬದಾಗಿ ಬರೆದಿತ್ತು. ಆತನಿಗೆ ಈ ಸುದ್ದಿಯು ಪರಮಾನಂದವನ್ನುಂಟುಮಾಡಿದ್ದರಿಂದ ಆತನು ಆ ತಂತೀ ವರ್ತಮಾನವನ್ನು ತಂದುಕೊಟ್ಟ ಜವಾನನಿಗೆ ೫ ರೂಪಾಯಿ ಬಹುಮಾನವನ್ನು ಕೊಟ್ಟದ್ದಲ್ಲದೆ, ಸ್ವಲ್ಪ ಹೊತ್ತಿನ ಮೇಲೆ ಸೆಕ್ರೆಟೆರಿಯವರನ್ನು ವಂದಿಸಿ ಒಂದು ತಂತೀ ವರ್ತಮಾನವನ್ನು ಕಳುಹಿಸಿದನು. ಇದು ಸೆಕ್ರೆಟೆರಿಯವರಿಗೆ ತಲಪಿದಾಗ ಮೇಲ್ಕಂಡ ವಿಷಯವೆಲ್ಲಾ ಬರೀ ಸುಳ್ಳೆಂದು ಗೊತ್ತಾಗಿ ಊರಿನಲ್ಲಿ ತುಂಬಾ ಅಪಹಾಸ್ಯವನ್ನುಂಟುಮಾಡಿತು.

***

ಕಟ್ಟಾಕಿನಲ್ಲಿರುವ ಡಿಪ್ಟಿ ಮ್ಯಾಜಿಸ್ಟ್ರೇಟ್ ಮತ್ತು ಡಿಪ್ಟಿ ಕಲೆಕ್ಟರ್ ಬಾಬು ಬಾಲಮುಕುಂದ ಕಣಗೋ ಎಂಬಾತನು ಪ್ರಜೆಗಳಿಂದ ಲಂಚ ತೆಗೆದುಕೊಂಡನೆಂಬದಾಗಿ ಗೋವಿಂದರಥನೆಂಬವನು ಕಳೆದ ನೊವೆಂಬರ್ ಆಖೈರಿನಲ್ಲಿ ಅರ್ಜಿ ಬರೆದು ಒರಿಸ್ಸಾ ಡಿವಿಜನ್ ಕಮಿಷನರ ಮೂಲಕ ಬಂಗಾಳಾ ಲೆಪ್ಟಿನೆಂಟ್ ಗವರ್ನರವರಿಗೆ ಕಳುಹಿಸಿದನು. ಆ ಕಮಿಷನರು ಗವರ್ನರಿಗೆ ಕಳುಹಿಸದೆ ಅರ್ಜಿಯನ್ನು ತನಿಖೆ ಮಾಡಬೇಕೆಂದು ಕಟ್ಟಾಕಿನ ಕಲೆಕ್ಟರ ಬಳಿಗೆ ಕೊಟ್ಟು ಕಳುಹಿಸಿದರು. ಕಲೆಕ್ಟರು ಗೋವಿಂದರಥನನ್ನು ಕರೆಯಿಸಿಕೊಂಡು ತನಿಖೆ ಮಾಡಿದರು. ಆಖೈರಿಗೆ ಗೋವಿಂದರಥನನ್ನು ದಸ್ತಗಿರಿಮಾಡಿ, ೫೦೦ ರೂಪಾಯಿ ಜಾಮೀನು ಕಟ್ಟಿಸಿಕೊಂಡು ಬಿಟ್ಟರು. ಆ ತರುವಾಯ ಅವನು ಬಾಬು ಬಾಲಮುಕುಂದರ ಮೇಲೆ ಲಂಚ ತಿಂದರೆಂದು ಹೇಳಿದ್ದಕ್ಕಾಗಿ ಮೊಕದ್ದಮೆಯಾಯಿತು. ಕಲ್ಕತ್ತಾ ಹೈ ಕೋರ್ಟ್ ಜಡ್ಜಿಗಳು ಈ ಮೊಕದ್ದಮೆಯನ್ನು ಯಾಕೆ ವಜಾ ಮಾಡಬಾರದೆಂತಲೂ ಇನ್ನೊಂದು ಕೋರ್ಟಿಗೆ ಯಾಕೆ ವರ್ಗಮಾಡಬಾರದೆಂತಲೂ ಕೇಳಿರುತ್ತಾರೆ.

ವಿದೇಶ ವರ್ತಮಾನಗಳು.

ಮಾಂಟ್ರಿಯಲ್ ಪಟ್ಟಣದ ದೊಡ್ಡ ವಿದ್ಯಾಶಾಲೆಗೆ ಬೆಂಕಿಬಿದ್ದು ಉರಿದುಹೋಗಿ ಸುಮಾರು ೬೫ ಲಕ್ಷ ದ್ರವ್ಯದ ಆಸ್ತಿ ನಷ್ಟವಾಗಿರುತ್ತದೆ.

***

ಪ್ಯಾರಿಸ್ ಪಟ್ಟಣದಲ್ಲಿ ರೊಟ್ಟಿ ಬಿಕರಿ ಮಾಡುವ ೫,೦೦೦ ಅಂಗಡಿಗಳ ಪೈಕಿ ೭೫೦ ಅಂಗಡಿಗಳು ಮುಚ್ಚಲ್ಪಟ್ಟವು. ಸರ್ಕಾರದವರು ತನಿಖೆ ಮಾಡುತ್ತಿದಾರೆ.

***

ಲಂಡನ್ ಪಟ್ಟಣದಲ್ಲಿ ಸೌಂಡರ್ಸ್ ಎಂಬಾತನ ಜವಾಹಿರಿ ಸಾಮಾನುಗಳನ್ನು ಹರಾಜು ಹಾಕಿದರು. ಸುಮಾರು ೧೫ ಲಕ್ಷ ರೂಪಾಯಿ ಹುಟ್ಟುವಳಿ ಆಯಿತು. ಆ ಪೈಕಿ ಒಂದು ಕಂಠೀಸರವೇ ಎರಡುವರೆ ಲಕ್ಷ ರೂಪಾಯಿಗೆ ಬಿಕರಿ ಆಗಿರುತ್ತದೆ.

***

ತುರ್ಕಿ ರಾಜ್ಯದಲ್ಲೆಲ್ಲಾ ಪ್ರಜೆಗಳ ಮೇಲೆ ತಲೆ ತೆರಿಗೆಯನ್ನು ವಿಧಿಸಿ, ಸಾಲದ್ದಕ್ಕೆ ಜನರು ಮನೆಗಳಲ್ಲಿ ಸಾಕುವ ಹಸು ಮೇಕೆ ಕೋಳಿಗಳೇ ಮೊದಲಾದ ಪ್ರಾಣಿಗಳಿಗೂ ತೆರಿಗೆ ಹಾಕಿ ವಸೂಲ್ಮಾಡುತ್ತಿದ್ದರು. ಈಗ ಸುಲ್ತಾನರು ಈ ತೆರಿಗೆಗಳನ್ನು ವಜಾ ಮಾಡಿರುವಂತೆ ಹುಕುಂ ಕೊಟ್ಟಿರುವದಾಗಿ ತಿಳಿಯುವುದು.

***

ಕೆನಡಾ ಎಂಬ ಇಂಗ್ಲಿಷ್ ಸ್ವಾಸ್ಥ್ಯದಲ್ಲಿ ಚಾಪ್ಲಿನ್ ಎಂಬ ಸ್ಟೇಷನಲ್ಲಿ ರೈಲ್ ಗಾಡಿಗಳು ಬಹು ವೇಗವಾಗಿ ಓಡುತ್ತಾ ಬಂದು ಕಂಬಿ ತಪ್ಪಿ ಉರುಳಿಕೊಂಡಷ್ಟಲ್ಲದೆ ಬೆಂಕಿ ಬಿದ್ದು ಉರಿದು ಹೋದವು. ೧೫ ಮಂದಿ ಮೃತಪಟ್ಟು ಹಾಗೂ ೬೦ ಜನರಿಗೆ ಗಾಯಗಳಾಗಿರುವಂತೆಯೂ ತಂತೀ ವರ್ತಮಾನ ಬಂದಿದೆ.

***

ಜರಿಕೋ ಎಂಬ ಪುರಾತನಕಾಲದ ಪ್ರಸಿದ್ಧನಗರದಲ್ಲಿ ಪ್ರಾಚೀನ ವಿಷಯಗಳನ್ನು ಶೋಧನೆಮಾಡಿ ಗೊತ್ತುಮಾಡುವುದಕ್ಕೆ ಆಸ್ಟ್ರಿಯಾ ರಾಜ್ಯದವರು ಕೆಲವು ಪಂಡಿತರನ್ನು ಪಾಲಸ್ಟೀನ್ ದೇಶಕ್ಕೆ ಕಳುಹಿಸಿದಾರೆ. ಒಳಗೆ ಭೂಮಿಯನ್ನು ಅಗೆದು ಶೋಧನೆಮಾಡುವ ಭಾಗದಲ್ಲಿ ತುರ್ಕಿ ಸುಲ್ತಾನರು ಅಧಿಕಾರ ಕೊಟ್ಟಿದಾರೆ. ಆಗಲೇ ಆ ಸ್ಥಳದಲ್ಲಿ ೬೦೦ ಅರಬ್ಬಿ ಜನರು ಅಗೆದು ಶೋಧಿಸಲಾರಂಭಿಸಿರುವರು.

***

ವಿಲಾಯತಿಗೆ ಸೇರಿದ ನ್ಯೂಕ್ಯಾಸಲ್ ಮತ್ತು ಸಂಡರ್ಲೆಂಡ್ ಎಂಬೀ ಸ್ಥಳಗಳಲ್ಲಿ ಪೋಲೀಸಿನವರು ಸುಮಾರು ಎರಡು ಲಕ್ಷ ಬಂದೂಕು,

ಪಿಸ್ತೂಲು ಮತ್ತು ತೋಟಾಗಳನ್ನು ಪತ್ತೆ ಮಾಡಿ ಸ್ವಾಧೀನ ಪಡಿಸಿಕೊಂಡಿದಾರೆ. ಆದರೆ ಅವುಗಳ ಮಾಲೀಕರು ಮಾತ್ರ ಸಿಕ್ಕಿ ಇಲ್ಲವು. ಬಹುಶಾ ರಷ್ಯಾ ರಾಜ್ಯದಲ್ಲಿ ದಂಗೆಯೆಬ್ಬಿಸಬೇಕೆಂದು ಪ್ರಯತ್ನಪಡುವವರ್ಯಾರೋ ಇದನ್ನು ಕೊಂಡು ಕೂಡಿಸಿಟ್ಟದ್ದರೆಂದು ಊಹಿಸಲ್ಪಟ್ಟಿದೆ.

***

ಕೆನಡಾ ಎಂಬ ಇಂಗ್ಲಿಷ್ ಸ್ವಾಸ್ಥ್ಯಕ್ಕೆ ಸೇರಿದ ಟೊರಾಂಟೋ ಪಟ್ಟಣದಲ್ಲಿ ಒಂದು ದೊಡ್ಡ ಲೇವಾದೇವಿ ಬ್ಯಾಂಕಿನ ಮ್ಯಾನೆಜರು ಜೋಸೆಫ್ ಫಿಲಿಪ್ಸ್ ಎಂಬಾತನು ವಾರ್ಷಿಕ ರಿಪೋರ್ಟಿನಲ್ಲಿ ಆ ಬ್ಯಾಂಕಿನ ಆದಾಯವು ಬಹಳವಾಗಿ ಹೆಚ್ಚುತ್ತಿದೆ ಎಂದು ಹೇಳಿ ನಿಜವಲ್ಲದ ಲೆಖ್ಖಗಳನ್ನು ಪ್ರಕಟಿಸಿ ಪ್ರಜೆಗಳ ಧನವನ್ನು ಬಹಳವಾಗಿ ಸೆಳೆದುಕೊಳ್ಳುತ್ತಾ ಇದ್ದನು. ಕಡೆಗೆ ಆ ಪ್ರಜೆಗಳಿಗೆಲ್ಲಾ ತಮ್ಮ ಹಣ ಹೋಗಿ ನಾನಾ ಕಷ್ಟಗಳು ಪ್ರಾಪ್ತವಾದವು. ಸರ್ಕಾರದವರು ಆ ಮ್ಯಾನೆಜರನ್ನು ಹಿಡಿದು ತನಿಖೆ ಮಾಡಿಸಿ, ಅವನಿಗೆ ಐದು ವರುಷಗಳ ಸಜಾ ವಿಧಿಸಿದರು.

***

ರಷ್ಯಾ ರಾಜ್ಯದ ದಕ್ಷಿಣ ದಿಗ್ಭಾಗದಲ್ಲಿರುವ ಇಕ್ಯಾಟರಿನಾ ಸ್ಲೇವ್ ಎಂಬ ಪಟ್ಟಣದಲ್ಲಿ ಬಹು ಭಾರಿಯೂ ವಿಸ್ತಾರವೂ ಆದ ಕಬ್ಬಿಣದ ಕಾರ್ಖಾನೆಯೊಂದಿರುತ್ತದೆ. ಈ ಕಾರ್ಖಾನೆಯು ಲೋಕಕ್ಕೆಲ್ಲಾ ಪ್ರಸಿದ್ಧವಾಗಿರುವುದು. ಇಂಥಾ ಕಾರ್ಖಾನೆಯೊಳಗೆ ಕೆಲಸ ಮಾಡುವ ಕೂಲಿಕಾರರು ಒಟ್ಟು ಕೂಡಿ ದಂಗೆ ಮಾಡಿ ತಮ್ಮ ಮುಖ್ಯ ಅಧಿಕಾರಿಯನ್ನು ಹೊಡೆದು ಕೊಂದು ಬಿಟ್ಟರು. ಕಾರ್ಖಾನೆಯ ಬಾಗಿಲು ಮುಚ್ಚಿ ಹೋಗಿದೆ. ಐದು ಸಹಸ್ರ ಜನರು ಕೂಲಿ ಸಿಕ್ಕದೆ ಅಲೆಯುತ್ತಿದಾರೆ. ಸುಮಾರು ೬೦,೦೦೦ ಜನರು ಹೊಟ್ಟೆಗಿಲ್ಲದೆ ಸಾಯುವ ಗತಿಯಾಯಿತು.

***

ಕಳೆದ ವಾರ ಪ್ರಪಂಚದ ಅನೇಕ ಕಡೆಗಳಲ್ಲಿ ಭೂಕಂಪಗಳಾಗಿರುತ್ತವೆ. ಕೆಲವು ಕಡೆ ಆದ ಭೂಕಂಪವು ಜನರನ್ನು ಗಾಬರಿ ಪಡಿಸಿದ್ದಲ್ಲದೆ ನಷ್ಟವೇನೂ ಸಂಭವಿಸಲಿಲ್ಲ. ಇನ್ನು ಕೆಲವು ಕಡೆ ಪ್ರಾಣಹಾನಿಯೂ ಆಸ್ತಿ ನಷ್ಟವೂ ಆಗಿರುವುದು. ಅಮೇರಿಕಕ್ಕೆ ಸೇರಿದ ಮೆಕ್ಸಿಕೋದಲ್ಲಿ ಎರಡು ಪಟ್ಟಣಗಳು ನಾಶವಾದವು. ೩೮ ಜನರು ಮೃತಪಟ್ಟರು; ೯೩ ಮಂತಿಗೆ ಗಾಯಗಳಾಗಿವೆ. ರಷ್ಯಾರಾಜ್ಯಕ್ಕೆ ಸೇರಿದ ಆಸ್ಟಬಾದ್ ಎಂಬ ಪಟ್ಟಣದಲ್ಲಿ ಭೂಕಂಪದಿಂದ ತುಂಬಾ ನಷ್ಟವಾಯಿತು. ಇತ್ತಲಾಗಿ ಸ್ಪೇನ್ ರಾಜ್ಯಕ್ಕೆ ಸೇರಿದ ಕೆಲವು ದಕ್ಷಿಣದಿಗ್ಭಾಗದ ಪಟ್ಟಣಗಳು ಭೂಕಂಪದಿಂದ ಬಹಳ ನಷ್ಟಪಟ್ಟಿರುತ್ತವೆ.

***

ವಿಲಾಯತಿಗೆ ಸೇರಿದ ಎಡಿಂಬರ್ಗ್ ಪಟ್ಟಣದಲ್ಲಿ ಲೇಡಿ ಸ್ಟೀಲ್ ಎಂಬಾಕೆಯ ಮನೆಗೆ ಸರ್ಕಾರದವರು ಹೋಗಿ ಮನೆ ಮತ್ತು ಆಸ್ತಿಗಳ ತೆರಿಗೆಯನ್ನು ಕೊಡೆಂದು ಕೇಳಿದರು. ಆಕೆ ದೊಡ್ಡ ಮನುಷ್ಯಳಾಗಿಯೂ ಐಶ್ವರ್ಯವತಿಯಾಗಿಯೂ ಇದ್ದಾಗ್ಯೂ ತಾನು ಕೊಡಬೇಕಾಗಿದ್ದ ಸುಮಾರು ೧೫ ರೂಪಾಯಿ ತೆರಿಗೆಯನ್ನು ಕೊಡುವುದಿಲ್ಲವೆಂತಲೂ, ಸ್ತ್ರೀಯರಿಗೆ ಸರ್ಕಾರದವರು ಮೆಂಬರುಗಳನ್ನು ಚುನಾಯಿಸುವ ಅಧಿಕಾರವನ್ನು ಕೊಡುವ ತನಕ ಸ್ತ್ರೀಯರು ಕಂದಾಯಗಳನ್ನು ಕೊಡಲು ನ್ಯಾಯವಿಲ್ಲ ಎಂದು ಹೇಳಿ ತಿರಸ್ಕರಿಸಿದಳು. ಆಗ ಸರ್ಕಾರದವರು ಆಕೆಯ ಮನೆಯೊಳಕ್ಕೆ ನುಗ್ಗಿ ಒಂದು ಮರದ ಸಾಮಾನನ್ನು ಹೊರಕ್ಕೆ ತಂದು ಹರಾಜು ಹಾಕಿ, ತಮ್ಮ ಬಾಕಿಯನ್ನು ತೆಗೆದುಕೊಂಡು ಹೋದರು.

***

ಈಜಿಪ್ಟ್ ರಾಜ್ಯವನ್ನು ಬಹುಕಾಲದಿಂದ ವಿಶೇಷ ಪ್ರಜಾರಂಜಕವಾಗಿ ಆಳುತ್ತಾ ಆ ರಾಜ್ಯವನ್ನು ನಾನಾ ಭಾಗಗಳಲ್ಲಿ ಅಭಿವೃದ್ಧಿಗೆ ತಂದಿರುವ ಲಾರ್ಡ್ ಕ್ರೋಮರ್‌ಯವರು ಕಳೆದ ವಾರ ತಮ್ಮ ಕೆಲಸಕ್ಕೆ ರಾಜೀನಾಮೆ ಕೊಟ್ಟುಬಿಟ್ಟರು. ಅವರಿಗೆ ೬೭ ವರುಷ ವಯಸ್ಸಾಗಿ ತುಂಬಾ ವೃದ್ಧರಾಗಿರುವುದರಿಂದಲೇ ಕೆಲಸಬಿಡಬೇಕಾಯಿತೆಂದು ಪ್ರಕಟವಾಗಿದೆ. ಇದುವರೆಗೆ ಅವರ ಕೈಕೆಳಗೆ ಉದ್ಯೋಗದಲ್ಲಿದ್ದ ಸರ್ ಎಲ್ಡನ್ ಗಾರ್ಸ್ಟ್ ಎಂಬುವರನ್ನು ಅವರ ಸ್ಥಾನಕ್ಕೆ ನೇಮಕಮಾಡಿರುವರು. ಇವರಿಗೆ ಇನ್ನೂ ೪೬ ವರುಷ ವಯಸ್ಸಾಗಿದ್ದರೂ ಆ ರಾಜ್ಯದ ಸಕಲ ಬಾಬುಗಳೂ ಮನದಟ್ಟಾಗಿರುವ ಇರೋಣದರಿಂದ ಇವರು ಲಾರ್ಡ್ ಕ್ರೋಮರವರ ಮೇಲ್ಪಂಕ್ತಿಯನ್ನೇ ಅನುಸರಿಸಿ ಆ ರಾಜ್ಯವನ್ನು ಇನ್ನೂ ಅಭಿವೃದ್ಧಿಗೆ ತರುವೆನ್ನುವುದಕ್ಕೆ ಸಂಶಯವಿಲ್ಲ.

***

ಕೋರಿಯಾ ರಾಜ್ಯದಲ್ಲಿ ಪ್ರಜೆಗಳಿಗೆ ಈಗೀಗ ಸ್ವದೇಶಾಭಿಮಾನವು ತುಂಬಾ ಹೆಚ್ಚುತ್ತಾ ಬರುತ್ತಿದೆ ಎಂದು ತೋರುವುದು. ಇದಕ್ಕೆ ದೃಷ್ಟಾಂತರೂಪವಾಗಿ ಒಂದು ವಿಷಯ ಪ್ರಕಟವಾಗಿದೆ. ಒಬ್ಬ ತಂದೆಯು ತನ್ನ ಮಗನಿಗೆ ಮಧ್ಯಾಹ್ನದ ತಿಂಡಿ ಖರ್ಚಿಗಾಗಿ ಪ್ರತಿತಿಂಗಳಲ್ಲೂ ದಿನಕ್ಕೆ ೫ ಆಣೆಯಂತೆ ಹೋಟೇಲಿಗೆ ಕಳುಹಿಸಿಕೊಡುತ್ತಿದ್ದನು. ಆ ಹುಡುಗನು ತನ್ನ ತಂದೆಗೆ ಕಾಗದ ಬರೆದು ಮೂರು ತಿಂಗಳ ಹಣವನ್ನು ಒಟ್ಟಾಗಿ ತರಿಸಿಕೊಂಡು ಒಂದು ವರ್ತಮಾನ ಪತ್ರಿಕೆಯ ಆಫೀಸಿಗೆ ದಾನಮಾಡಿ, ಕೋರಿಯಾದವರು ಜಪಾನಿಗೆ ದಾನಮಾಡಬೇಕಾಗಿರುವ ಸಾಲದ ಹಣಕ್ಕೆ ಇದನ್ನು ಸೇರಿಸಿಕೊಂಡು ಒಂದು ಫಂಡು ಮಾಡಿ ಇತರ ಪ್ರಜೆಗಳಿಂದಲೂ ಚಂದಾ ಎತ್ತುವಂತೆ ತಿಳಿಸಿದನು. ಆಲ್ಲಿನ ಸರ್ಕಾರಿ ಇಂಗ್ಲಿಷ್ ಸ್ಕೂಲ್ ವಿದ್ಯಾರ್ಥಿಗಳು ಒಂದು ಕಡೆ ಸೇರಿ ಇನ್ನು ಮೇಲೆ ತಮ್ಮಲ್ಲಿ ಯಾರೊಬ್ಬರೂ ಚುಟ್ಟಾ ಮುಂತಾದ್ದನ್ನು ಉಪಯೋಗಿಸಲೇ ಕೂಡದೆಂದು ಶಪಥಮಾಡಿಕೊಂಡಿದಾರೆ.

***

ಸಯ್ಯಾಂ ರಾಜ್ಯದಲ್ಲಿ ಫ್ರೆಂಚರು ಕಾಲು ಹಾಕಿಕೊಂಡಿರೋಣದರಿಂದ ಅನೇಕ ರಾಜಕೀಯ ವಿಷಯಗಳಲ್ಲಿ ಫ್ರೆಂಚರಿಗೂ ಸಯಾಂ ದೊರೆಯವರಿಗೂ ಕಳೆದ ಹದಿನೈದು ವರುಷಗಳಿಂದಲೂ ಮನಸ್ತಾಪಗಳುಂಟಾಗಿದ್ದವು. ಈಗ ಸುಮಾರು ಒಂದು ತಿಂಗಳ ಕೆಳಗೆ ಅವರವರಿಗೆ

ಒಂದು ಕರಾರು ನಡೆದು ಮನಸ್ತಾಪಗಳೆಲ್ಲಾ ನಿವಾರಣೆಯಾಗಿರುತ್ತವೆ. ಈ ಕರಾರಿನ ದೆಸೆಯಿಂದ ಸಯ್ಯಾಂ ರಾಜ್ಯದಲ್ಲಿ ಬಹಳ ಫಲವತ್ತಾದ ಸುಮಾರು ೨೫,೦೦೦ ಚದರ ಮೈಲಿಯಷ್ಟು ವಿಸ್ತಾರವಾದ ಪ್ರದೇಶವು ಫ್ರೆಂಚರಿಗೆ ಸೇರಿತು. ಆ ಪ್ರದೇಶದಲ್ಲಿ ಬಹಳ ಕಷ್ಟಪಟ್ಟು ವ್ಯವಸಾಯ ಮಾಡುತ್ತಿರುವ ಎರಡು ಲಕ್ಷ ರೈತರು ಫ್ರೆಂಚರ ಪ್ರಜೆಗಳಾದರು. ಅದಕ್ಕೆ ಪ್ರತಿಯಾಗಿ ಸಯಾಂ ದೊರೆಯವರಿಗೆ ಸಯ್ಯಾಂ ಪ್ರಜೆಗಳೇ ವಾಸಿಸುವಂಥಾ ಒಂದು ಸಮುದ್ರ ತೀರಪಟ್ಟಣವೂ ಮಿಕಾಂಗ್ ನದಿಯ ದಡದಲ್ಲಿರುವ ನಾಲ್ಕು ಪಟ್ಟಣಗಳೂ ಕೊಡಲ್ಪಟ್ಟವು. ಫ್ರೆಂಚ್ ಜನರು ಸಯ್ಯಾಂನಲ್ಲಿ ಭೂಸ್ಥಿತಿ ಮಾಡಿಕೊಳ್ಳುವಂತೆ ಅವಕಾಶವಾಗಿದೆ.

***

ಚೀಣಾ ರಾಜ್ಯದಲ್ಲಿ ಕ್ಷಾಮಬಾಧೆಯು ಇನ್ನೂ ಬಹಳ ಕಠಿಣವಾಗಿರುತ್ತದೆ. ರಿಲೀಫ್ ಕಾರ್ಯಗಳು ಸಾಲವು. ಒಂದು ಕೋಟಿ ಪ್ರಜೆಗಳು ಹೊಲ ಜಮೀನುಗಳಿಗೆ ನುಗ್ಗಿ ಬೆಳೆಯನ್ನೆಲ್ಲಾ ಕಿತ್ತು ತಿನ್ನಲಾರಂಭಿಸಿರುವರು. ಬಹುಶಃ ದಿನ ಒಂದಕ್ಕೆ ಐದು ಸಾವಿರ ಪ್ರಜೆಗಳಂತೆ ಹೊಟ್ಟೆಗಿಲ್ಲದೆ ಮೃತಪಡುತ್ತಿದ್ದಾರೆ. ಬಹು ಭಯಂಕರವಾದ ರೋಗಾದಿಗಳು ಕಾಲಿಡಾಕಿಕೊಂಡಿವೆ. ಕೆಲವು ಸಂದರ್ಭಗಳಲ್ಲಿ ಜನರು ಮಕ್ಕಳು ಮರಿಗಳನ್ನೇ ಕೊಂದು ತಿಂದು ಹಾಕಿದ್ದೂ ಉಂಟು. ಸರ್ಕಾರದವರು ಪರರಾಜ್ಯಗಳಿಂದ ಧರ್ಮದ ಫಂಡುಗಳನ್ನು ಕೂಡಿಸಿ ತರಿಸುತ್ತಲೂ, [illegible] ಮ್ಯಾಂಚೂರಿಯಾ, ಅಮೇರಿಕ, ಆಸ್ಟ್ರೇಲಿಯಾ ಎಂಬೀ ದೇಶಗಳಿಂದ ಧಾನ್ಯಗಳನ್ನು ಅಪಾರವಾಗಿ ತರಿಸುವುದಕ್ಕೆ ಏರ್ಪಾಡು ಮಾಡಿದ್ದಾರೆ. ಚೀಣಾದಿಂದ ಇಬ್ಬರು ಸ್ತ್ರೀಯರು ಕಳೆದ ವಾರ ಕಲ್ಕತ್ತೆಗೆ ಬಂದು ಧರ್ಮದ ಫಂಡು ಕೂಡಿಸಲಾರಂಭಿಸಿರುವರು. ಕಲ್ಕತ್ತೆಯ ಮಹಾ ಜನರು ಹಿಂದೂ ದೊಡ್ಡ ಸಭೆಯನ್ನು ನಡಿಸಿ ಹಣ ಕೂಡಿಸಿ ಚೀಣಾಕ್ಕೆ ಕಳುಹಿಸುವವರಾಗಿದ್ದಾರೆ.

***

ಟ್ರಾನ್ಸ್ವಾಲ್ ಪಾರ್ಲಿಮೆಂಟ್ ಸಭೆಯಲ್ಲಿ ಮಂತ್ರಿಯಾದ ಜನರಲ್ ಬೋಥಾಯವರು ಮೆಂಬರುಗಳನ್ನು ಕುರಿತು ಹೇಳಿದ್ದೇನೆಂದರೆ — ಈ ಟ್ರಾನ್ಸ್ವಾಲ್ ಆಧಿಪತ್ಯವು ಇಂಗ್ಲಿಷ್ ರಾಜ್ಯಾಂಗವಾಗಿರುತ್ತದೆ. ನಾವುಗಳೆಲ್ಲಾ ಏಕಮನಸ್ಸಿನಿಂದ ಕಾರ್ಯಭಾಗಗಳನ್ನು ನಡಿಸಿ ಪ್ರಜಾಸೌಕರ್ಯಗಳನ್ನೂ ದೇಶಾಭಿವೃದ್ಧಿಯನ್ನೂ ಮಾಡಬೇಕಾಗಿರುತ್ತದೆ. ನಾವೆಲ್ಲಾ ಈಗ ಒಂದೇ ಬಾವುಟವಿಗೂ ಒಂದೇ ರಾಜ್ಯಕ್ಕೂ ಸೇರಿದವರಾಗಿರುವೆವು. ನಮ್ಮ ನಮ್ಮ ಅಲ್ಪಮಾತ್ರವಾದ ದುರಭಿಮಾನಗಳನ್ನೆಲ್ಲಾ ಮರೆತು ಬಿಟ್ಟು ಐಕಮತ್ಯದಿಂದ ಕಲೆತು ಕಾರ್ಯಗಳನ್ನು ನಡಸೋಣ. ನಾನು ವಿಲಾಯತಿಗೆ ಹೋದಾಗ್ಗೆ ಅಲ್ಲಿನ ಮಹಾಸಭೆಯಲ್ಲಿ ಇಂಗ್ಲೀಷರೂ ಬೋಯರರೂ ಎಲ್ಲರೂ ಒಂದೇ ರಾಜ್ಯಭಾರದಲ್ಲಿ ಒಂದೇ ರೀತಿಯಾದ ರಾಜಭಕ್ತಿಯುಳ್ಳವರಾಗಿರುತ್ತಾರೆಂದು ತಿಳಿಸಿರುವುದರಿಂದ ನೀವೆಲ್ಲಾ ಈ ಅರ್ಥಕ್ಕೆ ನನಗೆ ಸಹಾಯಕರಾಗಬೇಕು. ನಾವು ಬ್ರಿಟಿಷರ ಮೇಲೆ ಭರವಸವನ್ನು ಹಾಕಿದ್ದೇವೆ, ಅವರು ನಮ್ಮನ್ನು ಭರವಸದಿಂದ ಕಾಣಬೇಕಾಗಿದೆ. ನಾವು ನ್ಯಾಯವಾದ ಯೋಗ್ಯವಾದ ಕಾರ್ಯಗಳನ್ನು ಸ್ವತಂತ್ರಿಸಿ ಮಾಡಿಕೊಳ್ಳುವುದಕ್ಕೆ ಅವರು ನಮಗೆ ಅವಕಾಶವನ್ನು ಕೊಟ್ಟರೆ ಸಾಕಾಗಿದೆ ಎಂಬದೇ.

***

ಸಯ್ಯಾಂ ರಾಜ್ಯದ ದೊರೆಗಳಾದ ಚೂಲಾ ಲೋಂಕೋರ್ನ್‌ಯವರು ಫ್ರಾನ್ಸ್ ದೇಶಕ್ಕೆ ಹೋಗಬೇಕೆಂದು ಪ್ರಯಾಣಮಾಡಿರುತ್ತಾರಷ್ಟೆ. ಇವರು ಸ್ಯಾನ್‌ರೇಮಿಯೋ ನಗರದಲ್ಲಿ ಕೆಲವು ವಾರಗಳ ವರೆಗೆ ಇದ್ದುಕೊಂಡು, ಅಲ್ಲಿಂದ ಪ್ಯಾರಿಸ್ ಪಟ್ಟಣವನ್ನು ತಲುಪಿ, ಫ್ರಾನ್ಸ್ ದೇಶವನ್ನೆಲ್ಲಾ ಮೋಟಾರ್ ಗಾಡಿಯಲ್ಲಿ ಕುಳಿತು ಸುತ್ತಿನೋಡಿಕೊಂಡು ಬಂದು, ಅಲ್ಲಿಂದ ವಿಲಾಯತಿಗೆ ಹೋಗಿ ಹತ್ತು ಹನ್ನೆರಡು ದಿನಗಳ ತನಕ ಇದ್ದು ವಾಪಸ್ ಬರುತ್ತಾ ಬರ್ಲಿನ್, ಕೋಪನ್‌ಹೇಗನ್, ಸ್ಟಾಕ್‌ಹಂ, ಸೇಂಟ್ ಪೀಟರ್ಸ್‌ಬರ್ಗ್ ಎಂಬೀ ಯೂರೋಪ್ಪಿಯನ್ ರಾಜ್ಯಗಳ ರಾಜಧಾನಿಗಳನ್ನು ನೋಡಿಕೊಂಡು ಬರ ಬೇಕಾಗಿ ನಿಶ್ಚಯವಾಗಿರುತ್ತದೆ. ದೊರೆಯವರ ಸಂಗಡ ಮೂವರು ರಾಜಕುಮಾರರೂ ಒಂಬತ್ತು ಮಂದಿ ಅಧಿಕಾರಿಗಳೂ ಪ್ರಯಾಣ ಹೊರಟಿದ್ದಾರೆ. ಈ ದೊರೆಗಳು ಕಳೆದ ವಾರ ಸಿಲೋನ್ (ಲಂಕಾ) ದ್ವೀಪದಲ್ಲಿ ತಂಗಿದ್ದರು. ಅಲ್ಲಿನ ಗವರ್ನರಾದ ಲಾರ್ಡ್ ಬ್ಲೇಕ್‌ಯವರು ಅವರನ್ನು ಎದುರುಗೊಂಡು, ತಮ್ಮ ಸಂಗಡ ಕರೆಸಿಕೊಂಡು ಕೋಲಂಬೋ ಪಟ್ಟಣದಲ್ಲಿ ಸಂಚಾರ ಹೊರಟರು. ಆಕಸ್ಮಾತ್ತಾಗಿ ದೊಡ್ಡ ಮಳೆ ಸುರಿಯಿತು. ಎಲ್ಲಾ ಮಳೆಗೆ ಸಿಕ್ಕಿ ನೆನೆದು ಬಂದರು. ಸಿಂಹಳಿಗರ ಬ ಸ್ವದೇಶಗಳಲ್ಲಿ ಸುಮಾರು ೪೦ ವರುಷದ ಮುದುಕನು ದೊರೆಗಳನ್ನು ಕಂಡು ಸುಮಾರು ೫೦೦ ವರ್ಷಗಳ ಹಿಂದೆ [illegible] ಕೇಚಿನ ಬೌದ್ಧ ವಿಗ್ರಹವನ್ನು ಅವರಿಗೆ ಒಪ್ಪಿಸಿದನು. ಸಯ್ಯಾಂ ದೊರೆಗಳು ಈ ಸಲ ಯೂರೋಪ್ಪಿಯನ್ ರಾಜ್ಯಗಳಲ್ಲಿ ಸಂಚಾರ ಮಾಡಿಕೊಂಡು ಬರುವುದಕ್ಕೆ ಖಜಾನೆಯ ಖರ್ಚಿಗೆ ಒಂಬತ್ತು ಲಕ್ಷ ರೂಪಾಯಿಯಾಗುವುದು. ಇದಲ್ಲದೆ ನಿಯಮಕ್ಕಿಂತ ಕೆಲವು ದಿನಗಳಾದರೂ ದೊರೆಯವರು ಯೂರೋಪ್ಪಿನಲ್ಲಿ ನಿಲ್ಲುವ ಪಕ್ಷಕ್ಕೆ ಹೆಚ್ಚಾಗುವ ಪ್ರತಿ ದಿನಕ್ಕೂ ೨,೫೦೦ ರೂಪಾಯಿ ಸಂತೆ ಖಜಾನೆಯ ಎಜಮಾನನಿಗೆ ಜಾಸ್ತಿ ಕೊಡುವುದಾಗಿ ಕರಾರು ನಡೆದಿರುವುದು.

ಮೈಸೂರು ಗೆಜೆಟ್ ಸಂಗ್ರಹ

ರೆವಿನ್ಯೂ ಕಮೀಷನರವರ ಅಸಿಸ್ಟೆಂಟ್ ಮೆ॥ ವಿ ಆರ್ ತ್ಯಾಗರಾಜ ಐಯ್ಯರವರಿಗೆ ಕೊಟ್ಟಿರುವ ಒಂದೂವರೆ ತಿಂಗಳ ಪ್ರಿವಿಲೆಜ್ ರಜವನ್ನು ಇನ್ನೊಂದು ತಿಂಗಳು ಜಾಸ್ತಿ ಮಾಡಿದೆ.

ಅ॥ ಕಮೀಷನರ್ ಮೆ॥ ಟಿ ಚೊಕ್ಕಣ್ಣನವರಿಗೆ ಕೊಟ್ಟಿರುವ ಎರಡು ತಿಂಗಳು ಇಪ್ಪತ್ತುಮೂರು ದಿನಗಳ ಪ್ರಿವಿಲೆಜ್ ರಜವನ್ನೂ ಅದರ ಜೊತೆಗೆ ನಾಲ್ಕು ತಿಂಗಳು ಇಪ್ಪತ್ತುನಾಲ್ಕು ದಿನಗಳ ಕಾಯಿಲೆ ರಜವನ್ನೂ ಕೊಟ್ಟಿದೆ.

ಹಾಸನ ಡಿಸ್ಟ್ರಿಕ್ಟ್ ಡೆಪ್ಟಿ ಕಮೀಷನರ್ ಮೆ॥ ಪಿ ಆರ್ ಒಟ್ಟಿಯ ಮೆಡರಲ್‌ಯವರಿಗೆ ಮೂರು ತಿಂಗಳ ಪ್ರಿವಿಲೆಜ್ ರಜವನ್ನೂ ಮೂರು ತಿಂಗಳ ಬೇರೆ ರಜವನ್ನೂ ಕೊಟ್ಟಿದೆ.

ಬೆಂಗಳೂರು ಡಿಸ್ಟ್ರಿಕ್ಟ್ ಸೀನಿಯರ್ ಅ॥ ಕಮೀಷನರ್ ಮೆ॥ ಕೆ. ಆರ್ ಶ್ರೀನಿವಾಸೈಯಂಗಾರ್ರು ಹಾಸನದ ಡಿಸ್ಟ್ರಿಕ್ಟ್ ಡೆಪ್ಟಿ ಕಮೀಷನರಾಗಿಯೂ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಾಗಿಯೂ ಬದಲೀ ನೋಡುವಂತೆ ನೇಮಿಸಲ್ಪಟ್ಟಿದ್ದಾರೆ.

ಶಿವಮೊಗ್ಗ ಡಿಸ್ಟ್ರಿಕ್ಟ್ ಎಕ್ಸ್ಟ್ರಾ ಅ॥ ಕಮೀಷನರ್ ಮೆ॥ ಎ ವೇದಾಂತದೇಶಿಗಂ ಐಯ್ಯಂಗಾರ್ರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಎರಡು ತಿಂಗಳು ಹತ್ತೊಂಬತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಆಕ್ಟಿಂಗ್ ಎಕ್ಸ್ಟ್ರಾ ಅ॥ ಕಮೀಷನರ್ ಮೆ॥ ಎ ಕೃಷ್ಣಸ್ವಾಮಿ ಐಯ್ಯಂಗಾರ್ರು ಶಿವಮೊಗ್ಗ ಡಿಸ್ಟ್ರಿಕ್ಟ್ ಖಜಾನೆಯ ಛಾರ್ಜನ್ನು ವಹಿಸತಕ್ಕದ್ದು.

ಸಬ್ ಅ॥ ಸರ್ಜನ್ ಮೆ॥ ಕೆ ಅನಂತರಾಮೈಯ್ಯಂಗಾರ್ರನ್ನು ಸಕಲೇಶಪುರದಿಂದ ದಾವಣಗೆರೆ ಆಸ್ಪತ್ರೆಗೆ ವರ್ಗಮಾಡಿದೆ.

[illegible] ಡಿವಿಜನ್ ಅ॥ ಇಂಜಿನಿಯರ್ ಮೆ॥ ಟಿ ಎಸ್ ಶೇಷೈಯ್ಯಂಗಾರ್ರಿಗೆ ಕಳೆದ ಜನವರಿ ೩ ರ ಲಾಗಾಯತು ಆರು ತಿಂಗಳ ಕಾಯಿಲೆ ರಜಾ ಕೊಟ್ಟಿದೆ.

ಕುಣಿಗಲ್ ತಾಲ್ಲೂಕ್ ಅಮಲ್ದಾರ್ ಮೆ॥ ಎಂ ರಂಗನಾಥರಾಯರಿಗೆ ಮಾರ್ಚಿ ೧೯ ರಿಂದ ಎರಡು ತಿಂಗಳ ಕಾಯಿಲೆ ರಜಾ ಕೊಟ್ಟಿದೆ.

ಶೃಂಗೇರಿ ಜಾಗೀರು ಆಫೀಸ್ ಶಿರಸ್ತೇದಾರ್ ಶ್ರೀಕಂಠೈಯ್ಯನವರು ಸಬ್ ಡಿಸ್ಟ್ರಿಕ್ಟಿನ ಸಬ್ ರೆಜಿಸ್ಟ್ರಾರಾಗಿಯೂ ೩ ನೆ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿಯೂ ನೇಮಿಸಲ್ಪಟ್ಟಿದ್ದಾರೆ. ಇದಲ್ಲದೆ ಡೆಪ್ಟಿ ಅಮಲ್ದಾರರು ಚಲಾಯಿಸಬಹುದಾದ ರೆವಿನ್ಯೂ ಅಧಿಕಾರಗಳನ್ನೂ ಅವರಿಗೆ ವಹಿಸಲಾಗಿದೆ.

ಮೇ ೧ ರಿಂದ ಮುಂದೆ ಹೇಳುವ ವರ್ಗಾವರ್ಗಿ ಜಾರಿಯಲ್ಲಿ ಬರತಕ್ಕದ್ದು — ಸಿವಿಲ್ ಸರ್ಜನ್ ಮೆ॥ ಇ ಎಸ್ ಕೃಷ್ಣಸ್ವಾಮಿ ಐಯ್ಯರವರು ಬೆಂಗಳೂರಿನಿಂದ ಮೈಸೂರಿಗೆ, ಸಿವಿಲ್ ಸರ್ಜನ್ ಮೆ॥ ಟಿ ಎನ್ ನಂಜಪ್ಪನವರು ಮೈಸೂರಿನಿಂದ ಬೆಂಗಳೂರಿಗೆ.

ಪಾವಗಡದ ತಾಲ್ಲೂಕ್ ಅಮಲ್ದಾರ್ ಮೆ॥ ಬಿ ಕೇಸರಸಿಂಗ್‌ಯವರನ್ನು ಕುಣಿಗಲ್ ತಾಲ್ಲೂಕಿಗೆ ವರ್ಗಮಾಡಿದೆ.

ತಾಲ್ಲೂಕು ವರ್ತಮಾನಗಳು

ಚಿತ್ರದುರ್ಗ.—ಕಳೆದ ವರುಷವೆಲ್ಲಾ ಮೋಡಗಳು ಮಿಂಚುಗಳ ಆರ್ಭಟವಾಗಿದ್ದ ಜನವರಿ ೧೯ ರಲ್ಲಿ ಸ್ವಲ್ಪ ಮಾತ್ರವೇ ಮಳೆ ಆಯಿತು. ಆದರೂ ಬಿಸಲಿನ ತಾಪವು ಇನ್ನೂ ಹೆಚ್ಚಾಗಿರುವುದೇ ಇದೆ. ಕಳೆದ ೨೦ ನೆ ತಾ ನಿಂದ ಸ್ಕೂಲುಗಳಿಗೂ ಪಬ್ಲಿಕ್ ಆಫೀಸುಗಳಿಗೂ ಬೇಸಿಗೆ ರಜಾ ಪ್ರಾರಂಭವಾಗಿದೆ — ಜಾಲಿಯಿಂದ ಈಗ ಸುಮಾರು ೨೦ ದಿನಗಳಿಗೆ ಮುಂಚೆ ಗಾಯಪಟ್ಟು ಆಸ್ಪತ್ರೆಯಲ್ಲಿ ಬಿದ್ದಿರುವ ಸಣ್ಣಪ್ಪನಿಗೆ ಸ್ವಲ್ಪವಟ್ಟಿಗೆ ಆರೋಗ್ಯವಾಗುತ್ತ ಇದೆ. ವಿಚಾರಮಾಡಿದ್ದರಲ್ಲಿ ಹುಲಿಯನ್ನು ಮೊದಲು [illegible] ನಾಯ್ಕನೆಂಬವನು ಎರಡು ಏಟುಗಳನ್ನು ತುಪಾಕಿಯಿಂದ ಹೊಡೆದು ಗಾಯ ಮಾಡಿದ್ದನೆಂತಲೂ ಆ ಮೇಲೆ ಈ ಸಣ್ಣಪ್ಪನೆಂಬವನು ಹೇಳದೂ ಕೇಳದೆ ಗಾಯದಿಂದ ರೋಷೋದ್ರೇಕವಾಗಿದ್ದ ಹುಲಿಯ ಹತ್ತಿರ ಹೋಗಿ ತುಪಾಕಿಯನ್ನು ಹಾರಿಸಿದ್ದರಿಂದ ಅದು ಇವನ ಮೇಲೆ ಬಿದ್ದಿತೆಂತಲೂ ತಿಳಿದುಬಂದಿದೆ. ಈಗಲೂ ಮೃತಪಟ್ಟ ಹುಲಿಯ ಜೊತೆಯಲ್ಲಿದ್ದ ಹೆಣ್ಣು ಹುಲಿಯೂ ಅದರ ಮರಿಯೂ ಗುಡ್ಡಗಳಲ್ಲಿಯೂ ರಾತ್ರಿ ವೇಳೆ ಸಮೀಪದ ಹೊಲಗಳಲ್ಲಿಯೂ ತಿರುಗುತ್ತವೆ ಎಂದೂ ಈಗ ೩—೪ ದಿನಗಳಿಗೆ ಮುಂಚೆ ಎರಡು ಎಮ್ಮೆಗಳನ್ನು ಕೊಂದವೆಂದೂ ಭೀತಿಯುಂಟಾಗಿದೆ. ಮುಖ್ಯವಾಗಿ ಕಾಡು ಬೇಟೆ ಶಿಕಾರಿ ಮಾಡುವ ಧೈರ್ಯಶಾಲಿಗಳು ಕಾಮೆಯಾದ ಹಾಗೆಲ್ಲಾ ಈ ದುಷ್ಟ ಮೃಗಗಳ ಉಪಟಂತ್ರ ಹೆಚ್ಚುತ್ತಿದೆ.

ದೊಡ್ಡಬಳ್ಳಾಪುರ —ಇಲ್ಲಿ ಒಂದೆರಡು ತಿಂಗಳಿನಿಂದಲೂ ಪ್ರತಿ ಮನೆಯಲ್ಲಿಯೂ ಚೇಚಕ್ಕ ಕಾಡಿವೆ. ಒಬ್ಬೊಬ್ಬರು ಛಳಿಜ್ವರದಿಂದ ಕಷ್ಟಪಡುತ್ತಾರೆ. ಇಲ್ಲಿನ ಡಾಕ್ಟರು ಒಳ್ಳೇ ಔಷಧವನ್ನು ಕೊಡುತ್ತಾರೆ. ಒಳ್ಳೆ ಔಷಧವನ್ನು ಕೊಟ್ಟರೂ ಕೆಲವರು ಆಸ್ಪತ್ರೆಯ ಮದ್ದನ್ನು ತೆಗೆದುಕೊಳ್ಳುವುದಕ್ಕೆ ಭಯಪಟ್ಟು ಯಂತ್ರ ಮಂತ್ರಾದಿಗಳನ್ನು ಮಾಡಿಕೊಂಡು ಕಷ್ಟಪಡುತ್ತಾರೆ. ಇಂಥವರಿಗೆ ಎಷ್ಟು ಹೇಳಿದರೂ ತಮ್ಮ ಮೂಢ ನಂಬಿಕೆಯನ್ನು ಬಿಡುವದಿಲ್ಲ. ಇಲ್ಲಿದ್ದ ಡಾಕ್ಟರ್ ಮೆ॥ ರಂಗರಾಮಾನುಜಲುನಾಯ್ಡುರವರು ೫—೬ ತಿಂಗಳ ಹಿಂದೆ ಮೇಲೆ ಹೋದರು. ಇವರಿಗೆ ಬದಲಾಗಿ ಮೈಸೂರಿನಿಂದ ಮೆ॥ ಶಿವಪ್ರಕಾಶಪಿಳ್ಳೆಯವರು ಬಂದು ಜನರಲ್ಲಿ ವಿಶ್ವಾಸವುಳ್ಳವರಾಗಿದ್ದಾರೆ. ಕಂಪೌಂಡರ್ ವೆಂಕಟಪ್ಪನನ್ನು ಬೇರೆ ಕಡೆಗೆ ವರ್ಗಮಾಡಿದರು. ಆದರೆ ಇಲ್ಲಿನವರ ಕೋರಿಕೆಯ ಮೇರೆಗೆ ಪುನಃ ವೆಂಕಟಪ್ಪನನ್ನು ಇಲ್ಲಿಯೇ ಇಟ್ಟರು. ಇಲ್ಲಿನ ಜನರಿಗೆ ಬಹಳ ಸಂತೋಷವಾಯಿತು. ಇಲ್ಲಿ ಅ॥ ಸ್ಕೂಲ್ ಮಾಸ್ಟರಾಗಿದ್ದ ಮೆ॥ ಚಕ್ರಪಾಣಿ ಐಯ್ಯರನ್ನು ಬೀರೂರು ಕಡೆಗೆ ವರ್ಗಮಾಡಿದರು. ಇವರು ಸುಮಾರು ೩—೪ ವರ್ಷದಿಂದಲೂ ಇಲ್ಲಿದ್ದು ಜನರಲ್ಲಿ ಬಹು ಪ್ರೀತಿಯುಳ್ಳವರಾಗಿ ಇದ್ದರು. ಇಲ್ಲಿ ಸಬ್ ಓವರ್ಸಿಯರಾಗಿದ್ದ ಮೆ॥ ದಾಮೋದರ ಮೊದಲಿಯಾರ್ರನ್ನು ಫ್ರೆಂಚ್‌ರಾಕ್ಸಿಗೆ ವರ್ಗಮಾಡಿರುತ್ತಾರೆ. ಇವರು ಸಹ ಒಳ್ಳೆಯವರಾಗಿದ್ದರು. ೧೧, ೧೪, ೧೯ ನೇ ತಾ ೨೦ ಜದ ಮಳೆಯಾಯಿತು. ೧೧ ನೇ ತಾ [illegible] ಹತ್ತಿರ ನೂಡಿಗರವನಿಗೆ ಸಿಡಿಲು ಬಡಿದು ಸತ್ತುಹೋದನು. ನಕ್ಕರಗೊಲ್ಲಹಳ್ಳಿಯಲ್ಲಿ ಮುತ್ತಾಲಮ್ಮನ ಜಾತ್ರೆಗೆ ಬಾಣಗಳನ್ನು ಮಾಡುತ್ತ ಇದ್ದ ಓಬರ ಸಿದ್ಧನಂಜಪ್ಪನು ಮದ್ದು ಹತ್ತಿಕೊಂಡು ಸತ್ತುಹೋದನು. ಚಿಕ್ಕಪೇಟೆಯಲ್ಲಿ ಇಲ್ಲಿನ ನಾಟಕದವರು ೫—೬ ಆಟಗಳನ್ನು ಆಡಿದ್ದರು. ಮಳೆ ಬಂದಕಾರಣ ಆಟಗಳಿಗೆ ತೊಂದರೆಯಾಗಿದೆ. ವೇಲೂರು ಜಾತ್ರೆಯಲ್ಲಿ ಬಹು ವಿಶೇಷವಾಗಿ ಅನ್ನದಾನ ಮಾಡಿದರು.

ಮೂರೆಲೆ ಇಸ್ಪೀಟ್ ಜೂಜಾಟವು ನಡಿಯುವ ಹಾಗೆ ಪೋಲೀಸ್ ಅಧಿಕಾರಿಗಳು ನಿಗಾದಿಂದ ನೋಡಿಕೊಂಡಿದ್ದರು. ಡೆಪ್ಯುಟಿ ಇನ್ಸ್ಪೆಕ್ಟರ್ ಮೆ॥ ವೀರಭದ್ರೈಯ್ಯನವರು ಇಲ್ಲಿನ ಸ್ಕೂಲುಗಳನ್ನು ಪರೀಕ್ಷೆ ಮಾಡುತ್ತಾ ಇದ್ದಾರೆ. ಇಲ್ಲಿನ ಹಿಂದುಸ್ಥಾನಿ ಸ್ಕೂಲ್ ಹೆಡ್ ಮೇಸ್ತ್ರರ ಅಳಿಯನು ಕಾರ್ಕಾನಹಳ್ಳಿಯಿಂದ ಬಂದು ೨—೩ ದಿವಸ ವಾಂತಿಭೇದಿಯಾಗಿ ೨೦ ನೇ ತಾ ಸತ್ತು ಹೋದರು.

ಅರಕಲಗೂಡು —ಈ ಮಾರ್ಚ್ ೯ ನೇ ತಾ ರಾತ್ರಿ ಕೆಲ ಗ್ರಾಮಗಳಿಗೆ ಒಂದು ಹದ ಸಂಪೂರ್ಣ ಮಳೆ ಆಯಿತು. ಈ ಮಳೆ ಇಲ್ಲದೆ ಇರೋಣದರಿಂದ ಬಿಸಲಿನ ತಾಪವು ಹೆಚ್ಚಾಗಿ ಪ್ರಜೆಗೆ ಅನಾರೋಗ್ಯವಾಗಿದೆ. ಬೀಜ ಮೇರಾವು ಮಾಡುವುದಕ್ಕೋಸ್ಕರ ಜನಗಳು ಮಳೆಯ ಆಗಮನವನ್ನೇ ನಿರೀಕ್ಷಿಸುತ್ತಿದ್ದಾರೆ. ಬಸವಾಪಟ್ಟಣ ಗ್ರಾಮದ ಪೋಲೀಸ್ ಸ್ಟೇಷನ್ನಿನಲ್ಲಿದ್ದ ಎರಡು ಜನ ಕಾನ್ಸ್ಟೇಬಲ್‌ಗಳು ಕಾಲರಾ ರೋಗದಿಂದ ಮೃತಪಟ್ಟರೆಂದು ತಿಳಿಯುತ್ತೆ. ಇನ್ನೂ ಈ ಅಂಟು ಜಾಡ್ಯ ಪ್ರಸ್ತಾಪವಾಗಿಲ್ಲವೆಂತಲೂ ತಿಳಿಯುತ್ತೆ. ಇನ್ನು ಕೆಲವು ಗ್ರಾಮಗಳಲ್ಲಿ ಒಂದೆರಡು ಮೃತವಾದ ಜನಗಳನ್ನು ಅಂಟುಜಾಡ್ಯವೇ ಎಂದು ಜನಗಳು ಮಾತನಾಡಿಕೊಂಡು ಘಾಬರಿಪಡುತ್ತಿದ್ದಾರೆ. ಪ್ರಾಬಲ್ಯಸ್ಥಿತಿ ಇಲ್ಲದೆ ಇದ್ದರೂ ಗ್ರಾಮ ಪಾಕೀಜಾ ವಿಷಯಗಳಲ್ಲಿ ಸರ್ಕಾರದವರು ನಿಗಾ ಕೊಡದೆ ಇರುವದರಿಂದ ಈ ಜಾಡ್ಯವು ಹೇರಳವಾಗುವದಕ್ಕೆ ಆಕರವಾಗುತ್ತೆ. ಅಮಲ್ದಾರ್ ಮೆ॥ ನಾರಾಯಣರಾಯರು ಗ್ರಾಮಾಂತರಗಳ ಮಸಲತು ವಿಷಯದಲ್ಲಿ ಗ್ರಾಮ[illegible] ಸಂಚರಿಸುತ್ತಾ ಇರುತ್ತಾರೆ. ಶಿರಸ್ತೇದಾರರು ಟ್ರೆಜರಿ ಆಫೀಸರಾಗಿರುತ್ತಾರೆ. ಗ್ರಾಮದ ಪಟೇಲರುಗಳು ಕಂದಾಯದ ಮೊಬಲಗಿನ ಇರಸಾಲುಗಳನ್ನು ತೆಗೆದುಕೊಂಡುಹೋದ್ದನ್ನು ಆಯಾ ತಾರೀಖಿನಲ್ಲಿ ತೆಗೆದುಕೊಳ್ಳದೆ ೨—೩ ದಿವಸ ಸಾವಕಾಶ ಮಾಡೋಣದರಿಂದ ಪಟೇಲರಿಗೆ ಬಹಳ ತೊಂದರೆಯಾಗಿರುತ್ತದೆ. ಬಹು ದೂರದಿಂದ ಬರತಕ್ಕ ಪಟೇಲರ ಕಷ್ಟವನ್ನು ಹೇಳಲು ಅಸಾಧ್ಯವಾಗಿರುತ್ತದೆ. ಈ ಕಷ್ಟವನ್ನು ಅಮಲ್ದಾರರು ಶಿರಸ್ತೇದಾರರು ಪರಿಹಾರ ಮಾಡುವರೆಂದು ನಿರೀಕ್ಷಿಸುತ್ತೇವೆ — ಶೃಂಗೇರಿ ಜಗದ್ಗುರುಗಳವರು ಕಳೆದ ಮಾರ್ಚ್ ೨೩ ರಲ್ಲಿ ಇಲ್ಲಿಗೆ ಬಿಜಯಮಾಡಿ ೩ ದಿವಸಗಳವರೆಗೆ ಶಿಷ್ಯವರ್ಗದವರ ಮನಸ್ಸಂತೋಷಪಡಿಸಿ ಇಲ್ಲಿಂದ ಹೊಳೆನರಸೀಪುರಕ್ಕೆ ದಯಮಾಡಿದರು. ಅಲ್ಲಿನವರು ಶ್ರೀಯವರ ಸವಾರಿಯನ್ನು ಚನ್ನರಾಯಪಟ್ಟಣಕ್ಕೆ ಕಳುಹಿಸಿಕೊಟ್ಟರು ಎಂತಲೂ, ಮುಂದಲ ಯಾವದೋ ಮೊಕ್ಕಾಂಗೆ ನರಸೀಪುರದ ಗ್ರಾಮಸ್ಥರು ಹೋಗಿ ಕಾಣಿಕೆ ಕೊಡತಕ್ಕೆಂದು ಇರುತ್ತಾರೆಂತಲೂ ವರ್ತಮಾನ ಕೇಳುತ್ತೇವೆ —ಈ ತಾಲ್ಲೂಕು ಪಶ್ಚಿಮ ಪ್ರಾಂತ್ಯವು ಮತ್ತು ಮಂಜರಾಬಾದು ತಾಲ್ಲೂಕಿನಲ್ಲಿ ಕಾಫಿ ಪಸಲು ಬಹಳ ಚನ್ನಾಗಿರುತ್ತಾಗಿಯೂ ಹಿಂದಲ ಸಾಲಿಗಿಂತ ಮುಂದೆ ಪ್ರಾಣವೃದ್ಧಿ ಫಲವಾಗುತ್ತೆಂತಲೂ ನಂಬಿರುತ್ತೇವೆ. ಮುಂದೆ ಕೆಲ ರೋಗ ನಾಶ) ಬಾರದೆ ಇರತಕ್ಕ ಸಂದರ್ಭದಲ್ಲಿ ಪೂರಾ ಫಸಲಾಗುತ್ತೆಂತ ಕಾಣುತ್ತೆ. ದಾರಿಹೋಕರುಗಳು ಛಪಾವಿ ಆಗುತ್ತಾ ಇದೆ — ಗೇಣಿದಾರರುಗಳನ್ನು ಜೀವ ಸಹಿತ ಕೊಲ್ಲತಕ್ಕದ್ದು ಅನೇಕ ಕಡೆ ಪ್ರಬಲಸ್ಥಿತಿಯಲ್ಲಿರುತ್ತೆ. ಇದಕ್ಕೆ ಸರ್ಕಾರದವರು ನಿಗಾ ಕೊಡುತ್ತಾರೆಂತ ನಂಬಿರುತ್ತೇವೆ.

ಯಸಳೂರು ಪೇಟೆ.—ಇಲ್ಲಿಗೆ ಎರಡು ಮೈಲಿಯಲ್ಲಿರುವ ಕೆರೋಡಿ ಎಂಬ ಗ್ರಾಮದಲ್ಲಿ ತಾ ೬ ನೇ ಭಾನುವಾರ ರಾತ್ರಿ ಹುಂಡೆ ಪಟೇಲ್ ಕೃಷ್ಣಗೌಡರ ಮನೆಯಲ್ಲಿ ಅವರ ಚಿಕ್ಕತಾಯಿ ನಂಜಮ್ಮನೆಂಬುವಳು ಸದರಿ ಕೃಷ್ಣಗೌಡರ ಮಗ ಮೂರು ವರುಷದ ಮಗುವು ಇಟ್ಟರೂ ಇವರ ಮನೆ ಜಗಲಿ ಮುಂಭಾಗದಲ್ಲಿರತಕ್ಕ ಕೊಟಡಿಗೆ ಹೋಗಿ [illegible] ಎಣ್ಣೆ ಬುಡ್ಡಿಗೆ ಎಣ್ಣೆ ಬಿಡತಕ್ಕ ಕಾಲದಲ್ಲಿ ಆ ಮಗುವು ದೀಪವನ್ನು ಅಲ್ಲಾಡಿಸಿದ್ದರಿಂದ ದೀಪವು ಮೇಲಿದ್ದ ಕಿಟಿಕಿಯ ಎಣ್ಣೆ [illegible] ಬಿದ್ದು ಹತ್ತಿಕೊಂಡಿತು. ಆಗ ಆಕೆ ಗಾಬರಿಯಿಂದ ದೀಪವನ್ನು ಕೈಬಿಟ್ಟು [illegible] ಒಳಗೆ ಉರಿಯುತ್ತಾ ಇದ್ದದ್ದನ್ನು ಆರಿಸುವುದಕ್ಕೆ ಹೋಗಲು ತಲೆ ಕೂದಲು ಹತ್ತಿಕೊಂಡು ನಂತರ ಸೀರೆ ವಗೈರೆ ಸಾಮಾನುಗಳಲ್ಲೇ ಉರಿಯಲಾರಂಭಿಸಿತು. ಅಷ್ಟರಲ್ಲೇ ಹಿಂದೆ ಇದ್ದ ಮಗು ಕೊಟಡಿಯ ಬಾಗಲು ಹಾಕಿಕೊಂಡಿತು. ಒಳಗೆ ಇದ್ದ ಎಳ್ಳು ಎಂಟು ಡಬ್ಬಗಳು ಹತ್ತಿಕೊಂಡು ಉರಿಯಲಾರಂಭಿಸಿ ಫಿರಂಗಿ ಹಾರಿಸಿದ ಹಾಗೆ ಶಬ್ದದಿಂದ ಡಬ್ಬಗಳು ಒಡೆದು ಕೊಟಡಿಯೆಲ್ಲಾ ಹತ್ತಿಕೊಂಡಿತು. ಅಷ್ಟರಲ್ಲೇ ಮಗುವು ಸುಟ್ಟುಕೊಂಡು ಸತ್ತುಹೋಯಿತು. ಕೊಟಡಿಯೆಲ್ಲಾ ಹತ್ತಿಕೊಂಡು ಆಕೆ ಕೂಗಿಕೊಂಡದ್ದರಿಂದ ಹೊರಗೆ ಮನೆಯ ಒಳಗಿದ್ದ ಜನಗಳೂ ಗ್ರಾಮಸ್ಥರೂ ಎಲ್ಲಾ ಸೇರಿದರು. ಅಷ್ಟರಲ್ಲೇ ಸದರಿ ಕೃಷ್ಣಗೌಡರ ಮನೆಯಲ್ಲಿದ್ದ [illegible] ಗಟ್ಟದ ಸುಬ್ಬಣ್ಣನೆಂಬುವನು ಜೀವನ ಮೇಲೆ ಆಶೆಯನ್ನು ತೊರೆದು ಕೊಟಡಿಯ ಕಿಟಕಿ ನುಗ್ಗಿ ಉರಿಯುತ್ತಿದ್ದ ನಂಜಮ್ಮನೆಂಬ ಹೆಂಗಸನ್ನು ಹೊರಗೆ ಎಳೆದುಕೊಂಡನು. ಈಗ ಆಕೆಯು ಯಸಳೂರು ಡಾಕ್ಟರಲ್ಲಿ ಉಪಚಾರವನ್ನು ಮಾಡಿಸಿಕೊಳ್ಳುತ್ತಾ ಇರುತ್ತಾಳೆ. ಆದರೂ ಆಕೆಯ ಜೀವವು ಬಹಳ ಕಷ್ಟವಾಗಿದೆ. ಆಕೆಯನ್ನು ಉರಿಯುತ್ತಾ ಇದ್ದಾಗ ಎಳೆದ ಕಾರಣ ಸುಬ್ಬಣ್ಣನ ಮೈ ಮತ್ತು ಕೈಗಳು ಸುಟ್ಟು ಗಾಯಗಳಾಗಿವೆ — ಅಲ್ಲದೆ ಇದೇ ತಿಂಗಳು ೧ ನೇ ತಾ ಹೊಸಕಳ್ಳಿಯಲ್ಲಿ ಮಂಗಳಪಟೇಲ್ ಸುಬ್ಬೆಗೌಡನೆಂಬುವನು ಎರಡು ವರುಷದಿಂದ ಜನಗಳಿಗೂ ದನಗಳಿಗೂ ಪ್ರಾಣಕಂಟಕವಾಗಿದ್ದ ಒಂದು ಭಾರಿ ಹುಲಿಯನ್ನು ಬಂದೂಕಿನಿಂದ ಹೊಡೆದು ಇರುತ್ತಾನೆ. ಈ ಪ್ರಾಂತ್ಯದಲ್ಲಿ ೩೦ ನೆ ತಾ ಶನಿವಾರ ಇದೇ ಗ್ರಾಮದ ಮಲ್ಲೆಗೌಡನೆಂಬ ಹಿಟ್ಟೆ ಬಡವನ ಸುಮಾರು ಇಪ್ಪತ್ತು ರೂ ಬಾಳತಕ್ಕ ಒಂದು ಎತ್ತನ್ನು ಕೊಂದು ಕೆಡವಿತು. ಅವನು ರಾತ್ರಿ ಬರಲಿಲ್ಲವೆಂದು ಹುಡುಕಿಕೊಂಡು ಹೋಗಿ ನೋಡುವಲ್ಲಿ ಊರಿನ ಎರಡು ಮೈಲಿ ದೂರದಲ್ಲಿ ಕಾಡಿನಲ್ಲಿ ಶವ ಬಿದ್ದಿತ್ತು. ಮಾರನೆ ದಿನ ರಾತ್ರಿ ಆ ಗ್ರಾಮಸ್ಥರೆಲ್ಲಾ ಸೇರಿ ಬಂದೂಕುಗಳನ್ನು ತೆಗೆದುಕೊಂಡು ಹೋಗಿ ಎತ್ತು ಬಿದ್ದಿದ್ದ ಅರ್ಧ ಫರ್ಲಾಂಗದಲ್ಲಿ ದೊಡ್ಡ ಮರದ ಮೇಲೆ ಕೂತುಕೊಂಡು ಈ ವ್ಯಾಘ್ರನು ಬರುವ

...ಯನ್ನು ಕಾಯುತ್ತಾ ಇದ್ದರು. ಅಷ್ಟರಲ್ಲಿ ರಾತ್ರಿ ಸುಮಾರು ೩ ...ಹೊತ್ತಿಗೆ ಸ್ಯಾಫ್ರನು ಎತ್ತು ಕಟ್ಟಿದ್ದ ಸ್ಥಳಕ್ಕೆ ಬಂದು ತಿನ್ನಲಾ...ಸಿತು ಅಷ್ಟರಲ್ಲೇ ಮರದ ಮೇಲಿದ್ದ ಜನಗಳು ಏಳು ಎಂಟು ...ತೋಟಾಗಳನ್ನು ಏಕದಂ ಹಾರಿಸಿದರು. ಆ ಪೈಕಿ ಸುಬ್ಬೇಗೌಡನ ...ತೋಟದ ಏಟಿನಿಂದ ಒಂದೇ ದಫೆಕ್ಕೆ ಬಿದ್ದು ಸತ್ತುಹೋಯಿತು ...ನ್ನು ತಾ ೨ ರಲ್ಲಿ ಸಕಲೇಶಪುರಕ್ಕೆ ಸಾಗಿಸಿ ಅಮಲ್ದಾರ್ರು ರೂಬ...ಉ ಹಾಜರ್ಮಾಡಿದರು. ಅವರು ಪರಾಂಬರಿಸಿ ನೋಡುವಲ್ಲಿ ಅದು ...ಎಂಟು ಮಟ್ಟು ಹೆಚ್ಚೆಯಿತ್ತು. ಇದನ್ನು ಹಾಸನಕ್ಕೆ ಡೆಪ್ಯುಟಿ ...ರ್ಸಾ ಸಾಹೇಬರ ಪರಾಂಬರಿಕೆ ಬಗ್ಗೆ ಕಳುಹಿಸಿರುತ್ತಾರೆ.

ಹುಣಸೂರು.—ಕೊಡಗು ನಾರ್ತ್ ಕಲ್ ಪತ್ತ ಕಟ್ಟಿ ರೇಂಜ್ ...ಳಿಂಗೇರ ಬ್ಲಾಕಿನಲ್ಲಿ ಎರಡು ಒಂಟಿ ಆನೆಗಳು ಸೇರಿಕೊಂಡು ಅತ್ತ ಕ...ಸಂಚಾರ ಮಾಡುವಂಥ ಜನರಿಗೆ ಬಹಳ ತೊಂದರೆಯನ್ನು ಕೊಡು...ಇವೆ ಕಳೆದ ತಿಂಗಳು ೭ನೇ ತಾ ಸರ್ಕಾರಿ ಬೀಡೆ ತೊಲೆಗಳ ... ಭರ್ತಿ ಮಾಡುವದಕ್ಕೆ ಹೋಗಿದ್ದ ಗಾಡಿಯವರಿಗೆ ಸುಮಾರು ...೨೦ ದಿನಗಳ ತನಕ ತೊಲೆಗಳನ್ನು ತುಂಬುವದಕ್ಕೆ ಬಿಡದೆ ತುಂ...ಬುವದಕ್ಕೆ ಹೋದರೆ ಆರ್ಭಟದಿಂದ ಬರುತ್ತಿದ್ದವು ಈ ಸಂಗತಿಯ...ನ್ನು ಮೇಲ್ಕಂಡ ರೇಂಜ್ ಆಫೀಸರವರಿಗೆ ತಿಳಿಸಲು ಮಾರನೇ ದಿನ ...ಸರೂ ಫಾರೇಸ್ಟರುಗಳೂ ಗಾರ್ಡುಗಳೂ ಇನ್ನೂ ಬೇರೆ ಜನರೂ ...ದು ನೋಡುವಲ್ಲಿ ಹಿಂದಿನ ಗಿನ ತೊಂದರೆ ಕೊಟ್ಟಂತೆ ಆ ದಿನವೂ ...ಆನೆಗಳು ತೊಂದರೆ ಕೊಟ್ಟದ್ದನ್ನು ಹೋಗಿದ್ದ ಆಫೀಸರು ಖುದ್ದು ...ಡಿ, ಆಳುಗಳನ್ನು ಬಿಟ್ಟು ಓಡಿಸಿದರು. ಪುನಃ ಮರುದಿನ ಗಾಡಿ...ಯವರು ತೊಲೆಗಳನ್ನು ತುಂಬಿಸಿಕೊಂಡು ಬರುತ್ತಾ ಇರುವಾಗ್ಗೆ ...ಗಳು ಅಕಸ್ಮಾತ್ ಒಂದು ಅನಾಮತ್ತು ಎತ್ತುಸಮೇತ ಒಂದು ...ಗಾಡಿಯನ್ನು ಮೇಲಕ್ಕೆ ಎತ್ತಿ ಬಿಟ್ಟಿತು. ಗಾಡಿಯವನೂ ಮತ್ತು ...ಗಾಡಿಯವರೂ ಓಡಿಹೋಗಿ ಜೀವ ಉಳಿಸಿಕೊಂಡರು ಎತ್ತುಗಳು ಅಂ...ತ್ವದಲ್ಲೇ ಸೇತಾಡುತ್ತಾ ಇದ್ದದ್ದನ್ನು ಗಾಡಿಯವರು ನೋಡಿ ಧೈ...ರ್ಯ ಮಾಡಿಕೊಂಡು ಒಂದು ಹಗ್ಗವನ್ನು ಕತ್ತರಿಸಿದ ಮೇಲೆ ಬಿಟ್ಟು ...ಹೊತ್ತು ನಂತರ ಎತ್ತುಗಳಿಗೆ ಜೀವ ಬಂತು ಅಷ್ಟರಲ್ಲೇ ಆನೆಗ...ಳು ಹೋಗಿ ಬಿಟ್ಟಿದ್ದವು ಈ ಸಂಗತಿಯನ್ನು ರೇಂಜ್ ಆಫೀಸರು ...ಫಾರೆಸ್ಟರುಗಳನ್ನು ಕಳುಹಿಸಿಕೊಟ್ಟರು ಇವರು ಬಂದ ದಿವ...ಸ ಆನೆಗಳ ಭೇಟಿ ಆಗಿ ತಮ್ಮ ತಲೆಗಳನ್ನು ಆ ದಿನ ತಪ್ಪಿಸಿ...ಕೊಂಡದ್ದು ದೈವಯೋಗ್ಯ ಮಾರ್ಚ ೧೧ನೇ ತಾ ಇಬ್ಬರು ಫಾರೆಸ್ಟ...ರುಗಳು ಬಕ್ಕನ್ನು ಕ್ಯಾಷ್ ಮಾಡುವದಕ್ಕಾಗಿ ಮಾಕಲ್ಲಿನಿಂ...ದ ಹುಣಸೂರಿಗೆ ಅದೇ ಮಾರ್ಗವಾಗಿ ಹೋಗುತ್ತಿರುವಾಗ್ಗೆ ಮೇ...ಲ ಒಂಟಿಗಾಗಳು ಇವರಿಗೂ ತುಂಬಾ ತೊಂದರೆ ಕೊಟ್ಟವು ಇವ...ರು ತಪ್ಪಿಸಿಕೊಂಡದ್ದು ದೈವಯೋಗ್ಯ. ಈ ವಿಷಯದಲ್ಲಿ ರೇಂಜ್ ...ರು ಮೇಲ್ಪಟ್ಟ ಅಧಿಕಾರಿಗೆ ರಿಪೋರ್ಟು ಮಾಡಿದ್ದರ ಮೇಲೆ ಈ ...ಕಾರಿಗಳು ಒಬ್ಬ ಸಾಹೇಬರಿಗೆ ಮೂರು ತಿಂಗಳು ಮಾಯದ ಮತ್ತು ...ಲೈಸೆನ್ಸು ಕೊಟ್ಟು ಕಳುಹಿಸಿದರು. ಇವರು ಎರಡು ದಫೆ ಬಂ...ದು ಏನೂ ಕಾಣಲಿಲ್ಲ ಆದರೆ ೩ ನೇ ಸಾರಿ ಬಂದು ಆನೆಗಳನ್ನು ...ರ ನೋಡದಿದ್ದಾಗ್ಯೂ ಸಡೆದಾಡಿದ ಸ್ಥಳವನ್ನೂ, ಅವುಗಳ ಲದ್ದಿ...ಯನ್ನೂ ನೋಡಿದ ಮಾತ್ರದಿಂದಲೇ ಭಯಸ್ಥರಾಗಿ ಕಾಲಿಗೆ ಬುದ್ಧಿ ...ಸಿದರು. ಬಹಾದ್ದೂರ್ ಆದೇ ತಿಂಗಳು ೧೭ ನೇ ತಾ. ಸೊಳ್ಳೆ...ಪುದ ಕ...ವಗಗೆ ಅದೇ ಮಾರ್ಗವಾಗಿ ಹೇರಿನ ದನಗಳ ಮೇಲೆ ಲಂ...ಬಾಣಿಗಳು ಧಾನ್ಯ ತುಂಬಿಸಿಕೊಂಡು ಹೋಗುತ್ತಿರಲು ಈ ಆನೆಗಳು ...ಹಾಕಿ ಎರಡು ಹೇರಿನ ದನಗಳನ್ನು ಹಿಡಿದು ತುಳಿದು ಬಿಸಾಟು...ಟ್ಟದಾಗಿಯನ್ನು ತಿನ್ನುತ್ತಿದ್ದನ್ನು ಈ ಜನರು ನೋಡಿ ಮುಂದ...ಹೋಗದೆ ಮಾಕಲ್ಲಿಗೆ ಬಂದು ರೇಂಜ್ ಆಫೀಸರಿಗೆ ...ಸಿದರು ಇವರು ಹೋಗಿ ಆ ಸ್ಥಳವನ್ನೂ ಎತ್ತುಗಳನ್ನೂ ನೋಡಿ...ಇದು ಒಂದು ರಿಪೋರ್ಟು ಮಾಡಿದ್ದರ ಮೇಲೆ ಇವುಗಳನ್ನು ಸಂ...ಹಾರ ಮಾಡುವದಕ್ಕಾಗಿ ಬೇರೊಬ್ಬ ಸಾಹೇಬರನ್ನು ನೇಮಕ ಮಾಡು...ತಲೂ ಕೊಡೆದಂಥವರಿಗೆ ೧೦೦ ರೂ ಬಹುಮಾನ ಕೊಡುತ್ತಾ...ಲೂ ಸರ್ಕಾರ ಘೋಷಿಸಿ...—ಇತ್ತೀಚೆಗೆ ಹೊಸದಾಗಿ ವರ್ಗವಾ...ಗಿಬಂದಿರುವ ಫಾರೇಸ್ಟ್ ಇನ್ಸ್ಪೆಕ್ಟರ್ ಮೆ॥ ರಘೋತ್ತಮರಾಯರು ...ವಿಧಾಯಕರಾಗಿಯೂ ಕೆಲಸದಲ್ಲಿ ಚುರುಕಾದವರಾಗಿಯೂ ಇ...ದ್ದು ಕೇಳಲು ಸಂತೋಷವಾಗುತ್ತದೆ ಇವರು ಬಂದ ಮೇಲೆ ...ಕಾಲದಲ್ಲಿ ಬೀಟ್ ಸರಿಯಾಗಿ ನಡೆಯುತ್ತಾ ಇರುವದು ಮಾತ್ರ ...ಸೋಮಾರಿಗಳಾಗಿಯೂ ಬೀಟ್ ಕೊಡುವದಕ್ಕೆ ಕಳ್ಳರೂ ...ಂಥ ಪೋಲೀಸ್ ಜವಾನರಿಗೆ ಸಂಕಟವಾಯಿತು —ಕಳೆದ ವಾರ ...ಎರಡು ಶವ ಮಾ...ಬಂದದ್ದರಿಂದ ಎಲ್ಲರಿಗೂ ಎಷ್ಟೋ ಆನಂದ ...ತು ದೈವಾಧೀನ ಜನರು ಹೆಣಗಳನ್ನು ದಹನ ಮಾಡುವದಕ್ಕೆ ...ದಾರೆ ಮಳೆ ಬಂದದ್ದರಿಂದ ಕೊಳಕು ನೀರು ಸಲೀಸಾಗಿ ಒ...ಂದೇ ಸ್ಥಳದಲ್ಲಿ ನಿಂತು ದುರ್ವಾಸನೆ ಬಡಿಯುತ್ತಿದ್ದ ಮಾಧ್ಯ...ವ ಚರಂಡಿಗಳು ಶುಚಿಯಾದವು —ಊರಿನ ಮಧ್ಯದಲ್ಲೇ ದನಗ...ಳ ಕೊಚ್ಚುವ ಅವರ ಮಾಂಸವನ್ನು ಮಾರುವದು ತುಂಬಾ ಹೇಸಿ...ಕೆಯಾಗಿದೆ. ಊರಿನೊಳಗೆ ಇಂಥಾ ಕೆಲಸ ನಡೆಸುವದು ಮುಖ್ಯವಾಗಿ ...ಕಾಲದಲ್ಲಿ ತುಂಬಾ ದುರ್ವಾಸನೆ ಬಡಿಯುತ್ತದೆ ಈ ವಿಷಯದ ...ಕಳೆದ ವರ್ಷ ಮ್ಯುನಿಸಿಪಾಲಿಟಿ ಮೆಂಬರುಗಳಾದ ಮೆ॥ ರಾಮ...ಸ್ವಾಮಿ ಐಯ್ಯಂಗಾರ್ ಮತ್ತು ವಾಜ್ರಾಣವರು ಖುದ್ದು ಹೋಗಿ ನೋಡಿ ...ದು ಅಸಹ್ಯಪಟ್ಟುಕೊಂಡು "ಊರಿನೊಳಗೆ ಇಂಥಾ ಕೆಲಸ ಎಂ...ದೂ ನಡೆಯಬಾರದು, ಊರಿನ ಹೊರಗೆ ಹಾಕುವದು ಒಳ್ಳೇದು" ...ತೀರ್ಮಾನ ಮಾಡಿ ಮ್ಯುನಿಸಿಪಲ್ ಮೀಟಿಂಗಿನಲ್ಲೂ ಕೂಡ ...ದ್ದಾಗ್ಯೂ ಈ ವರೆಗೂ ಅಮಲ್ದಾರ್ರವರು ಯಾವ ಏರ್ಪಾಡ...ನ್ನೂ ಮಾಡದೆ ಇರುವದು ತುಂಬಾ ಆಶ್ಚರ್ಯವಾಗಿರುತ್ತದೆ ಈಗಲಾ...ದರೂ ಈ ವಿಷಯಕ್ಕೆ ಗಮನಕೊಟ್ಟಾರೆಂದು ನಿರೀಕ್ಷಿಸುತ್ತೇನೆ

ಬಾತ್ಮಿದಾರರಿಗೆ ನೋಟೀಸು.

...ರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸಿಗಾ ...ರವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು ; ಇಂಥವುಗಳಿಗೆ ನಾವು ಸಿಗಾ ಕೊಡಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು—ಎಡಿ.

ಎಗ. ಎಣ. ಐ. ; ಬಾಳೂರು; ಡಿ. ವಿ., ದೊಡ್ಡಮಾವಳ್ಳಿ; ಶೇಷಗಿರಿರಾವ್, ಚನ್ನಪಟ್ಟಣ; ಡಿ. ಸಿ. ಎಸ್., ದೊಡ್ಡಬಳ್ಳಾಪುರ:—ಈ ಬಾತ್ಮಿಗಳನ್ನು ಪ್ರಕಟಿಸಲಾರೆವು.

ಮುಂಡೊಳ್ಳ ನಾಗಪ್ಪಗೌಡರು, ಕುಳೂರು ಗ್ರಾಮ:—ನೀವು ಬರೆಯುವ ವಿಷಯವನ್ನು ನಾವು ಪ್ರಕಟಿಸೆವು. ಆದರೆ ಅದರಲ್ಲಿ ನೀವು ವಿವರಿಸುವ ಸಂಗತಿಗಳನ್ನೆಲ್ಲಾ ನೀವು ಚನ್ನಾಗಿ ರುಜುವಾತು ಮಾಡಿ ಕೊಡಬಲ್ಲಿರಾ ? ಅಲ್ಲಲ್ಲಿ ನೀವು ಹೇಳುವಂಥಾ ಪ್ರಜಾ ಕಂಟಕರು ಇದ್ದಾರೆನ್ನುವುದಕ್ಕೆ ಸಂಶಯವಿಲ್ಲ. ಇಂಥವರನ್ನೂ ಅವರು ನಡಸುವ ಕೃತ್ಯಗಳನ್ನೂ ರುಜುವಾತು ಮೂಲಕ ಬೈಲಿಗೆ ತಂದು ಬಿಡುವುದಕ್ಕೆ ಪ್ರಯತ್ನಪಡಬೇಕು. ಆದ್ದರಿಂದ ನೀವು ತಕ್ಕ ರುಜುವಾತನ್ನು ಮೊದಲೇ ಒದಗಿಸಿಕೊಂಡು ಕಾರ್ಯಾರಂಭ ಮಾಡಬೇಕಾಗಿದೆ.

—ಎಡಿ.]

ಕರೆಸ್ಪಾಂಡೆನ್ಸ್.

ತುಂಕೂರಲ್ಲಿ ಒಂದು ಮೊಕದ್ದಮೆ.

ಅಯ್ಯಾ,

ಆ ಏಳು ತಿಂಗಳ ಕಾಲ ಮುಂದಕ್ಕೆ ಹೊರಡಲು ಯತ್ನಸಾಗದೆ ತುಮಕೂರಲ್ಲೇ ಸರಳಿತ್ತಲಿದ್ದ ಎಳಂದೂರು ನಾಟಕದ ಕಂಪನಿಯ ವೇರಕ್ಕೆ ಕಳೆದ ಡಿಸೆಂಬರ್ ೨೪ ರಲ್ಲಿ ಉಗ್ರೆಯ್ಯನೆಂಬಾತನು ಬೆಂಕಿ ಇಟ್ಟನೆಂಬ ಅಪಾದನೆಗೆ ಗುರಿಮಾಡಲ್ಪಟ್ಟು ಕೇಸು ಸೆಷನ್ಸಿಗೆ ಕಮಿಟ್ ಆಗಿದ್ದ ಸಂಗತಿಯು ತಮ್ಮ ಪತ್ರಿಕೆಯಲ್ಲಿ ಹಿಂದೆ ಪ್ರಕಟನಾಗಿತ್ತಷ್ಟೆ. ಈಗ್ಗೆ ಒಂದು ತಿಂಗಳ ಕೆಳಗೆ ಇಲ್ಲಿಗೆ ಬಂದಿದ್ದ ಸೆಷನ್ಸ್ ಕೋರ್ಟಿನಲ್ಲಿ ಪಂಚಾಯಿತರ ಸಮಕ್ಷಮ ಈ ಮೊಕದ್ದಮೆಗೆ ಸಬಂಧಪಟ್ಟ ಫಿರ್ಯಾದಿ (ಸರ್ಕಾರ) ಪರ ಸಾಕ್ಷಿಗಳ ವಿಚಾರಣೆ ಮಾಡಿದ್ದರಲ್ಲೇ ಜೆಡ್ಜಿನಿಂದ ಬನಾವಣೆ ಮಾಡಿದ್ದೆಂದು ಸ್ಪಷ್ಟಪಟ್ಟದ್ದರಿಂದ ಉಗ್ರೈಯ್ಯನವರ ಸಾಕ್ಷಿಗಳ ವಿಚಾರಣೆ ಇಲ್ಲದೇನೆ ಕೇಸು ಡಿಸ್‌ಮಿಸ್ ಮಾಡಿದರೆಂದು ತಿಳಿಸಲು ಸಂತೋಷಿಸುತ್ತೇನೆ.

ಸತ್ಯವಾದಿ.

ಗಂಧದ ಮರಕ್ಕೆ ರೋಗ ಹಿಡಿಯುವದು.

ಅಯ್ಯಾ,

ಮೈಸೂರು ಫಾರೆಸ್ಟು ಇಲಾಖೆಗೆ ಅತಿ ವಿಶೇಷವಾಗಿ ಉತ್ಪತ್ತಿಯಾಗುತ್ತಾ ಇರುವ ಗಂಧದ ಮರಗಳಿಗೆ ಈಚೆಗೆ ಒಂದು ವಿಧವಾಗಿ ರೋಗ ಪ್ರಾಪ್ತವಾಗಿ ಅನೇಕ ಕಡೆ ಅನೇಕ ಸಸಿಗಳು ನಾಶವಾಗಿದೆ. ಈ ರೋಗಕ್ಕೆ ಸರ್ಕಾರದವರು ಸ್ಪೈಕು ರೋಗವೆಂಬದಾಗಿ ಹೆಸರು ಇಟ್ಟಿರುತ್ತಾರೆ. ಇದನ್ನು ಗುಣವಾಗಿ ಇದುವರೆಗೂ ಯಾರೂ ಕಂಡು ಹಿಡಿದು ರೋಗ ನಿವಾರಣೆ ಮಾಡಿಲ್ಲ. ಈಗ್ಯೂ ಸ್ಪೈಕ್ ಹಿಡಿದ ಮರವು ಕಂಡುಬಂದಲ್ಲಿ ಕೀಳಿಸುತ್ತಾ ಇರುತ್ತಾರೆ. ಈ ರೋಗ ೨ ವರುಷದ ಸೊಸಿ ಲಾಗಾಯಿತು ದೊಡ್ಡ ಮರಕ್ಕೂ ಬರುತ್ತಾ ಇದೆ. ನನಗೆ ಕಂಡುಬರುವ ಅನುಭವದಿಂದ ಈ ರೋಗ ಭೂಮಿಯಿಂದ ಹುಟ್ಟುತ್ತೆಂಬದಾಗಿಯೂ ಮತ್ತು ಸೊಸಿ ಬುಡದಿಂದ ಸೊಪ್ಪುಗಳ ಹಾಗೆ ಒಂದು ತರಹಾ ರೆಕ್ಕೆ ಇಲ್ಲದ ದುಳುವು ಬುಡದಿಂದ ಮೇಲಿನ ತಿಗಡು ತಿಂದು, ಮರವು ಒಂದು ತರಹಾ ಕೆಂಪಗೆ ಆಗಿ ನಂತರ ಮೇಲಕ್ಕೂ ವ್ಯಾಪಿಸಿ ಎಲೆಗಳನ್ನು ಚಿನ್ನನ ಹಾಗೆ ಕಾಣುತ್ತೆ ಒಂದು ದಫಾ ಎಲೆ ತಂದಾಗ್ಗೆ ಇನ್ನೊಂದು ದಫಾಕ್ಕೆ ಗಿಡವೂ ಈ ಗಾಳಿದ ವಿನಾಯಿಂದ ಎಲೆ ಮೊದಲಿನ ಹಾಗೆ ಹುಟ್ಟುವದಿಲ್ಲ. ಹೀಗೆ ನಾಲ್ಕಾರು ಸಲ ಎಲೆ ಹುಟ್ಟುವಾಗ್ಗೆ ಇನ್ನೂ ಎಲೆ ಸಣ್ಣವಾಗಿ ಗಿಡ ಒಣಗಲು ಪ್ರಾರಂಭವಾಗುತ್ತೆ ಈ ಸಣ್ಣ ತರಹಾ ಹುಳವನ್ನು ಯಾರೂ ಇನ್ನೂ ಅಜಮಾಯಿಷಿ ಮಾಡಿದ ಹಾಗೆ ಕಾಣುವದಿಲ್ಲ. ಇದೇ ವಿಷಯವಾಗಿ ನನಗೆ ಅನುಭವ ಬಂದು ಒಂದು ಗಿಡವನ್ನು ನಾನೇ ಅಜಮಾಯಿಷಿ ಮಾಡಿ ಇರುತ್ತೇನೆ ಮೇಲ್ಕಂಡ ರೀತಿ ಕಾಣಬರುತ್ತೆ. ಇನ್ನೂ ಸರ್ಕಾರದಿಂದ ಈ ವಿಷಯಕ್ಕೆ ತಕ್ಕ ತರದೂದು ಮಾಡಿ ಕೊಟ್ಟಲ್ಲಿ ಇದನ್ನು ಇನ್ನೂ ಜಾಸ್ತಿಯಾಗಿ ಅಜಮಾಯಿಷಿ ಮಾಡಬಹುದು

ಮರಿಣಾವೈಯ್ಯ.

ಕನ್ನಡ ಗ್ರಂಥಕರ್ತರ ಸಮ್ಮೇಲನ

ಅಯ್ಯಾ,

ಈ ವರ್ಷ "ಕರ್ನಾಟಕ ವಿದ್ಯಾವರ್ಧಕಸಂಘ" ದ ವಾರ್ಷಿಕ ಪರೀಕ್ಷೆಯು ಸಂಗಪ ತಾ. ೨—೩ ನೇ ಜೂನ ೧೯೦೭ ನೇ ಇಸವಿ ದಿವಸ "ಕನ್ನಡಗ್ರಂಥಕರ್ತರ ಸಮ್ಮೇಲನವನ್ನು" ಕೂಡಿಸುವದು ಗೊತ್ತಾಗಿರುತ್ತದೆ ಕನ್ನಡದ ಈಗಿನ ಹೀನಸ್ಥಿತಿಯನ್ನು ತಮಗೆ ಒಡೆದು ಹೇಳಬೇಕಂತಿಲ್ಲ ಈ ಸಮ್ಮೇಲನವನ್ನು ವಿಜೃಂಭಣೆಯಿಂದ ನೆರವೇರಿಸುವ ಭಾರವು ತಮ್ಮಂಥ ಕನ್ನಡ ಭಾಷೆಯ ಆಧಾರಸ್ತಂಭರಾದವರನ್ನು ಕೂಡಿರುತ್ತದೆ ಕನ್ನಡ ಗ್ರಂಥಕರ್ತರ ಸಮ್ಮೇಲನದ ಮುಂದೆ ಬರುವ ವಿಷಯಗಳು ಯಾವವೆಂದರೆ:—

(೧) ಕನ್ನಡ ನಾಡಿನ ಬೇರೆ ಬೇರೆ ಭಾಗಗಳಲ್ಲಿ ಕಂಡುಬರುವ ಭಾಷಾ ಭೇದವು ನಷ್ಟವಾಗುವದು ಸಂಭವನೀಯವೋ ? (೨) ಹಾಗಾದ ಪಕ್ಷದಲ್ಲಿ, ಬೇರೆ ಬೇರೆ ಜನರು ಪ್ರಯೋಗಿಸುವ ಶಬ್ದರಚನೆಯನ್ನೂ ಶಬ್ದಗಳ ರೂಪಸಿದ್ಧತೆಯನ್ನೂ ಕುರಿತು ಆಲೋಚಿಸಿ, ಒಂದೇ ಬಗೆಯ ರಚನೆಯನ್ನೂ ಸಿದ್ಧತೆಯನ್ನೂ ನೆಲೆಗೊಳಿಸುವದು. (೩) ಪ್ರಾಚೀನ ಮತ್ತು ಅರ್ವಾಚೀನ ಗ್ರಂಥಕರ್ತರ ಗ್ರಂಥಸಂಶೋಧನವೂ ಚರಿತ್ರೆಯೂ. (೪) ಸದ್ಯಸ್ಥಿತಿಗೆ ಅನುಗುಣವಾದ ಗ್ರಂಥಗಳನ್ನು ಅಂದರೆ ಶಾಸ್ತ್ರೀಯ ಮುಂತಾದ ಗ್ರಂಥಗಳನ್ನು ಬರಿಸುವ ಅವಶ್ಯಕತೆ. (೫) ಮೇಲಿನ ೧,೨ ನೇ ಕಲಮುಗಳಿಗೆ ಅನುಸರಿಸಿ ಒಂದು ಕನ್ನಡ ಕೋಶವನ್ನು ಸಿದ್ಧಪಡಿಸುವದು. (೬) ಕನ್ನಡಿಗರಲ್ಲಿ ಕಂಡುಬರುವ ಸ್ವಭಾಷೆಯ ಔದಾಸೀನ್ಯವನ್ನು ಹೋಗಲಾಡಿಸಿ, ಜನರ ಅಭಿರುಚಿಯನ್ನು ಜಾಗೃತಗೊಳಿಸುವ ಉಪಾಯಗಳು. (೭) ಪ್ರಾಚೀನ ಕಾವ್ಯಗ್ರಂಥಗಳಲ್ಲಿ ಯಾವ ಗ್ರಂಥಗಳ ಭಾಷಾ ಶೈಲಿಯನ್ನು ಅನುಸರಿಸುವದು ಸದ್ಯಃಸ್ಥಿತಿಗೆ ಶ್ರೇಯಸ್ಕರವು ? (೮) ಶಾಸ್ತ್ರೀಯ ವಿಷಯಗಳಲ್ಲಿ ಉಪಯೋಗಿಸುವದಕ್ಕೆ ಬೇಕಾಗುವ ಪಾರಿಭಾಷಿಕ ಶಬ್ದಗಳ ವಿಮರ್ಶನೆಯು.

ಕ. ವಿ ವ. ಸಂಘ, ನಾರಾಯಣ ಗುರುನಾಥ ಕರಗುದು, ಬಿ. ಎ.,
ಧಾರವಾಡ ಎಲ್ ಎಲ್ ಬಿ.,
ಗದಿಗೆಯ್ಯ ಹುಚ್ಚಯ್ಯ ವಿಭೂತಿ ವಕೀಲ,
ಕಾರ್ಯದರ್ಶಿಗಳು.

ಗುರುಗಳಿಗೆ ಕಾಣಿಕೆ ಎತ್ತುವುದು.

ಅಯ್ಯಾ,

೧೧—೪—೧೯೦೭ ವೃತ್ತಾಂತ ಪತ್ರಿಕೆಯಲ್ಲಿ ಮದ್ದಗಿರಿ ತಾ॥ ಅಮಲ್ದಾರರು ಅವರ ತಾ॥ಗೆ ಸೇರಿದ ಪ್ರತಿ ಗ್ರಾಮದ ಪಟೇಲ್ ಶಾನುಭೋಗರ ಮೂಲಕ ಆಯಾ ಗ್ರಾಮದ ಮುಖ್ಯಸ್ಥರನ್ನು ಕರೆಸಿಕೊಂಡು ಅಲ್ಲಿಗೆ ಮುಂದೆ ಬರತಕ್ಕ ಶ್ರಿಂಗೇರಿ ಸ್ವಾಮಿಗಳಿಗಾಗಿ ಗ್ರಾಮವಾರು ಸಹ ೪೦, ೫೦, ೬೦ ರೂಪಾಯಿಗಳ ಪ್ರಕಾರ ಕೊಡಬೇಕೆಂತ ನಿಷ್ಕರ್ಷೆ ಮಾಡಿ ಕೂಡಲೆ ಕಳುಹಿಸಬೇಕೆಂತ ತಾಕೀತ್ ಮಾಡಿ ಕಳುಹಿಸಿದರೆಂದು ನಮೂದಿದೆ.

ಈ ಸಂಗತಿ ನಿಜವಾಗಿದ್ದರೆ ಈ ನಡವಳಿಕೆ ಈಗ ನಮ್ಮ ದೇಶದಲ್ಲಿ ಜಾರೀಲಿರತಕ್ಕ ಲಾಕ್ಕೆ ವಿರೋಧವಾದ್ದೆಂತಲೂ ಪ್ರಜೆಗಳಿಗೆ ಹಿಂಸೆಕರವಾದ್ದೆಂತಲೂ ಕಾರಣಸಹಿತವಾಗಿ ಈ ಕೆಳಗೆ ಅರಿಕೆ ಮಾಡುತ್ತೇನೆ.

ಒಂದು ತಾಲ್ಲೋಕಿನಲ್ಲಿ ಒಟ್ಟು ಪ್ರಜಾ ಸಾಧಾರಣವಾಗಿ ೬೦, ೭೦ ಸಹಸ್ರಕ್ಕಿಂತಲೂ ಕಮ್ಮಿಯಾಗಿರುವದಿಲ್ಲ. ಆ ಒಟ್ಟು ಪ್ರಜೆಯಲ್ಲಿ ಅನೇಕ ಭೇದ ಪರಸ್ಪರ ವೈಷಮ್ಯವಿರತಕ್ಕವರಿರುತ್ತಾರೆ. ಅವರಲ್ಲಿ ಪ್ರತಿ ಪಂಗಡದವರಿಗೂ ಬೇರೆ ಬೇರೆ ಗುರುಗಳಿರುತ್ತಾರೆ. ಅದರಂತೆ ಶ್ರಿಂಗೇರಿ ಸ್ವಾಮಿಗಳೂ ಒಂದು ಪಂಗಡದವರಿಗೆ ಗುರುಗಳಾಗಿ ಅವರ ಶಿಷ್ಯರ ಪ್ರಾರ್ಥನೆಯೋ ಅಥವಾ ಶಿಷ್ಯಾನುಗ್ರಹಕ್ಕಾಗಿ ತಾವಾಗಿಯೋ ಸ್ವಾಮಿಗಳು ಆ ಸ್ಥಳಕ್ಕೆ ದಯಮಾಡಿಸುವವರಾಗಿದ್ದಾರೆ. ಅವರ ಸವಾರಿ ಆ ಸ್ಥಳಕ್ಕೆ ದಯಮಾಡಿಸಿದ ಕಾಲದಲ್ಲಿ ಅವರಲ್ಲಿ ಭಕ್ತಿ ಇರತಕ್ಕ ಅವರ ಶಿಷ್ಯರು ತಾವಾಗೇ ಸ್ವಾಮಿಗಳನ್ನು ಪೂಜಿಸುತ್ತಾರೆ. ಈ ನಡವಳಿಕೆ ಲೋಕಸಮ್ಮತವಾದದ್ದು. ಮತ್ತು ಮೊದಲಿನಿಂದ ನಡೆದು ಬಂದಿರತಕ್ಕ ಪದ್ಧತಿ. ಅಮಲ್ದಾರರು ಅವರ ತಾಲ್ಲೋಕು ಸರಹದ್ದಿನಲ್ಲಿರತಕ್ಕ ಎಲ್ಲಾ ಪ್ರಜೆಗಳಿಗೂ ತಾರತಮ್ಯವಿಲ್ಲದೆ ಸಮನಾದ ನ್ಯಾಯವನ್ನು ಕಲ್ಪಿಸಿಕೊಟ್ಟು ಅವರಿಂದ ಗವರ್ನಮೆಂಟಿನಿಂದ ನಿಷ್ಕರ್ಷಿಸಿರತಕ್ಕ ಕಂದಾಯ ವಸೂಲ್ಮಾಡಲಿಕ್ಕೆ ಬದ್ಧರಾಗಿರುತ್ತಾ ಆ ಪ್ರಜೆಗಳ ಮಾನ ಪ್ರಾಣ ಧನ ಇವುಗಳಿಗೆ ಅಪಾಯ ಬಾರದಂತೆ ನೋಡಿಕೊಳ್ಳತಕ್ಕ ಬಗ್ಗೆ ಏರ್ಪಟ್ಟ ಅಧಿಕಾರಿಯಾಗಿದ್ದಾರೆಯೇ ಹೊರತು ಬೇರೆ ವಿಷಯಕ್ಕೆ ತಮ್ಮ ಅಧಿಕಾರಕ್ಕೆ ಒಳಪಟ್ಟ ಪ್ರಜೆಯಿಂದ ಯಾವ ಹಣವನ್ನೂ ವಸೂಲ್ಮಾಡಲಿಕ್ಕೆ ಸ್ವತಂತ್ರರಾಗಿಲ್ಲ ಒಂದು ವೇಳೆ ಈ ಅಮಲ್ದಾರೀಲಿರತಕ್ಕವರು ಆ ಮಠಕ್ಕೆ ಶಿಷ್ಯರಾಗಿದ್ದರೆ ಅವರ ಭಕ್ತಿ ಕೇವಲ ಮುಂತಾದ್ದು ಅವರ ಮಠಕ್ಕೆ ಸಂಬಂಧಪಟ್ಟದ್ದಾಗಿರುತ್ತೆಯೇ ಹೊರತು ಅಮಲ್ದಾರಿ ಪದವಿಗೂ ಸ್ವಾಮಿಗಳಿಗೂ ಸಂಬಂಧಪಡುವದಿಲ್ಲ.

ಈಗ್ಗೆ ಕೆಲವು ದಿವಸಕ್ಕೆ ಹಿಂದೆ ಮೈಸೂರು ಗವರ್ನಮೆಂಟಿನಿಂದ ಎಲ್ಲಾ ಅಧಿಕಾರಿಗಳಿಗೂ—ಶ್ರಿಂಗೇರಿ ಸ್ವಾಮಿಗಳು ಸಂಚಾರ ಹೊರಟಿದ್ದಾರೆ. ಅವರನ್ನು ಮರ್ಯಾದೆಯಿಂದ ಬರಮಾಡಿಕೊಂಡು ಅವಶ್ಯವಾದ ಅನುಕೂಲಗಳು ಕಲ್ಪಿಸಿಕೊಡಬೇಕೆಂತ ಸರ್ಕಿಲರ್ ಕೊಟ್ಟದ್ದದ್ದು ನಾನು ಕೇಳಿಯೂ ಅದನ್ನು ನ್ಯೂಸ್ ಪೇಪರುಗಳಲ್ಲಿ ಓದಿಯೂ ಇದ್ದೇನೆ. ಆ ಆರ್ಡರಿನ ನಿಜವಾದ ಅರ್ಥ:—ಈ ಸ್ವಾಮಿಗಳು ಯಾವ ಅಧಿಕಾರಿಯ ಸರಹದ್ದಿಗೆ ಬಂದಾಗ್ಯೂ ಆ ಆಫಿಸರ್ ಇವರನ್ನು ಮರ್ಯಾದೆಯಿಂದ ಬರಮಾಡಿಕೊಳ್ಳತಕ್ಕದ್ದು. ಅವರ ಸರ್ಕಲಿನಲ್ಲಿ ಮೊಕ್ಕಾಂ ಮಾಡಿರುವವರೆಗೂ ಅವರ ಪರಿವಾರದ ನೆಮ್ಮದಿಗೂ ಭಂಗಬಾರದಂತೆ ನೋಡಿಕೊಳ್ಳತಕ್ಕದ್ದು. ಅವರು ಮೊಕ್ಕಾಂ ಮಾಡಿರತಕ್ಕ ಸ್ಥಳದಲ್ಲಿ ಅವಶ್ಯಕವಾದ ಪದಾರ್ಥಗಳು ಸಿಕ್ಕದೆ ಇದ್ದರೆ ಅವರಿಗೆ ಬೇಕಾದ ಪದಾರ್ಥಗಳನ್ನು ನಗದು ಖರೀದಿಗೆ ಕೊಡಲು ಒಬ್ಬ ವರ್ತಕನನ್ನು ನೇಮಿಸಿ ಆತನು ಸರಿಯಾಗಿ ಪದಾರ್ಥಗಳನ್ನು ಕೊಡುತ್ತಾನೆಯೋ ಕೊಟ್ಟಂಥಾ ಪದಾರ್ಥಕ್ಕೆ ಮಠದವರು ಸರಿಯಾದ ಹಣ ಕೊಡುತ್ತಾರೆಯೋ ಎಂಬ ವಿಷಯಗಳು ನೋಡುತ್ತಾ ಬರುವದು. ಸ್ವಾಮಿಗಳನ್ನು ತಮ್ಮ ಸರ್ಕಲ್ ಪಾರಾಗುವ ವರೆಗೂ ತಕ್ಕ ಬಂದೋಬಸ್ತಿನಿಂದಲೂ ಮರ್ಯಾದೆಯಿಂದಲೂ ಕಳುಹಿಸಿಕೊಡತಕ್ಕದ್ದು—ಇಷ್ಟೇ ಕಾಣುತ್ತೆ. ಅಂತೂ ಮೇಲಿನ ನಡವಳಿಕೆ ಪ್ರಜೆಗಳಿಗೆ ಹಿಂಸೆ. ಗವರ್ನಮೆಂಟು ಲಾಕ್ಕೆ ವಿರೋಧವಾದ್ದೆಂತಲೂ ಅರಿಕೆಮಾಡುತ್ತೇನೆ.

ಒಬ್ಬ ಪೆನ್ಷನ್ ಆಫಿಸರ್

ಪ್ರಕಟನೆ.

READY! NOW READY!!

44-1

Full notes on the Matriculation Kanarese text for 1907 by N. R. Venkatasubbacharya. Only a few copies are available. Order at once. Don't lose this opportunity.

Price:—Re. 1 0 0. By V. P. P. Re. 1 2 0

MANAGER, C. L. S. BOOK DEPOT, MYSORE.

ಪೆರೂನಾ ವಿಷಯದಲ್ಲಿ ಅತಿ ವಿಶೇಷವಾಗಿ ಹೇಳಲಾರೆವು.

38 3

ಈ ಸ್ತ್ರೀಯರು ಪ್ರಾಮುಖ್ಯವಾಗಿ ಪೆರೂನಾವನ್ನು ಸೇವಿಸುವುದಕ್ಕೆ ಮುಂಚೆ ಬಹಳ ಕಷ್ಟದೆಸೆಯಲ್ಲಿದ್ದೆವೆಂದು ಹೇಳುತ್ತಾರೆ

ಅವರು ವಿಶೇಷ ದುರ್ಬಲರಾಗಿದ್ದರು; ಅವರ ಬಾಳು ಬಾಳಾಗಿರಲಿಲ್ಲ.

ಅವರ ಸ್ಥಿತಿಯೆಲ್ಲಾ ಈ ಒಂದೇ ಮಾತಿನಲ್ಲಿ ಮುಗಿದಿದೆ

ಪೆರೂನಾ ಈ ಸ್ತ್ರೀಯರಿಗೆ ಇಂಥಾ ಅದ್ಭುತವನ್ನು ಮಾಡುವುದಾದರೆ ಅದು ನಿಮ್ಮ ದೇಹಕ್ಕೂ ಹಾಗೇ ಪರಿಣಮಿಸೀತು

ಗೃಹಕೃತ್ಯದಲ್ಲಿ ಬೇಕಾಗುವ ಔಷಧಗಳ ಯೋಗ್ಯತಾಪಕ್ಷವನ್ನು ಯಜಮಾನಗಿತ್ತಿಯೊಬ್ಬಳೇ ತಿಳಿಯ ಬಲ್ಲಳು. ಸಂಸಾರದಲ್ಲಿ ಪೆರೂನಾ ಎಷ್ಟು ಪ್ರಯೋಜನವಾದದ್ದೆಂದು ಆಕೆಗೇನೇ ಗೊತ್ತು ಪೆರೂನಾವನ್ನು ಜನರು ಪ್ರೀತಿಸುವುದು ಮನೆ ಯಜಮಾನಗಿತ್ತಿ ಕೊಟ್ಟಿರುವ ಶಿಫಾರಸಿನಿಂದಲೇ

MRS E T GADDIS

MRS A E STOUFFER

MRS. CAROLINE SUNDHEIMER

ಮೊದಲಿಗಿಂತ ಹೆಚ್ಚು ಕಾಯಪುಷ್ಟಿ

ಮಿಸೆಸ್ ಕ್ಯಾರೊಲೀನ್ ಸಂಡೀಮರ್, ಕ್ಲಾರ್ಕ್ಸನ್, ಲಾ ಎಂಬಾಕೆ ಬರೆಯುವುದು —

"ನಾನು ಈಗ ಚನ್ನಾಗಿದ್ದೇನೆ, ಮತ್ತೆ ಕೆಲಸಮಾಡಬಲ್ಲೆನು, ಮೊದಲಿಗಿಂತ ಈಗ ಬಲವಾಗಿದ್ದೇನೆ

"ನೀವು ಹೇಳಿದ ಬುದ್ಧಿಮಾತಿಗೆ ನಿಮ್ಮನ್ನು ಬಹಳ ವಂದಿಸುತ್ತೇನೆ ನನ್ನ ಕೈಲಾದವರಿಗೆಲ್ಲಾ ನಿಮ್ಮ ಔಷಧವನ್ನೇ ಸೇವಿಸುವಂತೆ ಪ್ರೇರೇಪಿಸುತ್ತೇನೆ"

ಪೆರೂನಾ ಆರೋಗ್ಯಕೊಟ್ಟಿತು

ಮಿಸೆಸ್ ಎ ಇ ಸ್ಟೌಫರ್ ಕ್ಯಾಪಿಯೋಮ, ಕ್ಯಾನ್ಸಾಸ್, ಎಂಬಾಕೆ ಬರೆಯುವುದು —

"ಪೆರೂನಾ ನನಗೆ ಆರೋಗ್ಯವನ್ನೂ ಶಕ್ತಿಯನ್ನೂ ಕೊಟ್ಟಿದೆ ಹೆಂಗಸರಿಗಾಗಿ ಮಾಡಿದ ಔಷಧಗಳಲ್ಲೆಲ್ಲಾ ಇದೇ ಉತ್ತಮವಾದದ್ದು ಹೆಂಗಸಿನಲ್ಲಿ ಅಂಥಾ ಬದಲಾವಣೆಯಾದದ್ದನ್ನು ಎಂದಿಗೂ ನೋಡಲಿಲ್ಲವೆಂದು ನನ್ನ ಸ್ನೇಹಿತರು ಹೇಳುತ್ತಾರೆ ನಾನು ಪ್ರತಿ ಒಬ್ಬರ ಸಂಗಡಲೂ ಪೆರೂನಾವನ್ನು ಕುರಿತು ಮಾತನಾಡುತ್ತೇನೆ ಅದರ ವಿಷಯವಾಗಿ ತುಂಬಾ ಹೊಗಳಬಲ್ಲೆನು"

ಮಿಸೆಸ್ ಸ್ಟೌಫರ್ ಒಂದ ಕಾಗದದಲ್ಲಿ ಹೀಗೆ ಬರೆದಿದ್ದಾಳೆ "ನನಗೆ ವಿಷಮಶೀತಜ್ವರವಿತ್ತು ಶಕ್ತಿ ಬರುವುದಕ್ಕೆ ಪೆರೂನಾವನ್ನು ತೆಗೆದುಕೊಂಡೆ ನಾನು ನಿಜವಾದ ಒಳ್ಳೆಯ ಆರೋಗ್ಯವನ್ನು ಪಡೆದಿದ್ದೇನೆ"

ಹೆಂಗಸರಿಗೆ ಪರಿಹಾರ

ಡಾಕ್ಟರ್ ಹಾರ್ಟ್‌ಮನ್‌ರವರಿಗೆ ಹೆಂಗಸರು ಬರೆದ ಇದೇ ಅಭಿಪ್ರಾಯವುಳ್ಳ ಸಾವಿರಾರು ಕಾಗದಗಳು ನಮ್ಮ ಬಳಿ ಇರುತ್ತವೆಂದು ಧಾರಾಳವಾಗಿ ಹೇಳಬಲ್ಲೆವು — "ಹೆಂಗಸಿನಲ್ಲಿ ಅಂಥಾ ಬದಲಾವಣೆಯಾದದ್ದನ್ನು ಎಂದಿಗೂ ನೋಡಲಿಲ್ಲವೆಂದು ನನ್ನ ಸ್ನೇಹಿತರು ಹೇಳುತ್ತಾರೆ" ನಾವು ಇತರ ಹೆಂಗಸರಿಗೆ ಈ ಸಂಗತಿಯನ್ನು ತಿಳಿಸಿ ಅವರಿಗೆ ಪರಿಹಾರವನ್ನು ತೋರಿಸಲೆಂದು ತುಂಬಾ ಅಭಿಲಾಷೆಪಟ್ಟು ಅನೇಕ ಸ್ತ್ರೀಯರು ನನಗೆ ಆಗಿಂದಾಗ್ಗೆ ಅನೇಕಾವರ್ತಿ ಬರೆಯುತ್ತಿದ್ದಾರೆ

ಪೆರೂನಾ ಸ್ತ್ರೀಯರಿಗೆ ಬಹಳ ದೊಡ್ಡ ಔಷಧವಾಗಿದೆ ಶರೀರದ ಹೊರಭಾಗವನ್ನು ನೀರು ಹ್ಯಾಗೆ ಶುದ್ಧಿಮಾಡುವುದೋ ಅದೇ ಪ್ರಕಾರ ಇದು ಒಳಭಾಗವನ್ನು ತೊಳೆದು ನಿರ್ಮಲವಾಗಿ ಮಾಡುತ್ತದೆ

ಮಿಸೆಸ್ ಇ ಟಿ ಗಡ್ಡಿಸ್, ವೆರಿಯರ್ನ್, ಎನ್ ಸಿ ಎಂಬಾಕೆ ಬರೆಯುವದ —

"ಪೆರೂನಾ ಸೇವನೆಯನ್ನು ಪ್ರಾರಂಭಿಸುವುದಕ್ಕೆ ಮೊದಲು ನಾನು ಕಷ್ಟ ಕೆಲಸವ್ಯಾವುದನ್ನು ಮಾಡಿದರೂ ನನಗೆ ಬಹಳ ಬಾಧೆಯುಂಟಾಗುತ್ತಿತ್ತು ನಾನು ಪೆರೂನಾ ಮತ್ತು ಮನಲಿನ್‌ಗಳನ್ನು ಸೇವಿಸಿದೆನು ಇತರ ಎಲ್ಲಾ ಔಷಧಗಳಿಗಿಂತಲೂ ಅವು ನನಗೆ ತುಂಬಾ ಗುಣಕೊಟ್ಟವೆಂದು ಸಂತೋಷದಿಂದ ಹೇಳಬಲ್ಲೆನು ಈಗ ನಾನು ಎಂದಿನಂತೆ ಬಹಳ ಚನ್ನಾಗಿರುತ್ತೇನೆ, ನನ್ನ ಕೆಲಸಗಳನ್ನೆಲ್ಲಾ ನಾನೇ ಮಾಡಿಕೊಳ್ಳುತ್ತೇನೆ, ನನಗೆ ಸ್ವಲ್ಪವೂ ಬಾಧೆ ಇಲ್ಲ ಪೆರೂನಾ ಸ್ತ್ರೀಯರಿಗೆಲ್ಲಾ ದೊಡ್ಡ ಔಷಧವಾಗಿದೆ ಎಂದು ನೆನಸುತ್ತೇನೆ

ಕೃತಜ್ಞತಾ ಸ್ತ್ರೀಯರುಗಳಿಂದ

"ನನಗೆ ಮುಟ್ಟಾಗುವಾಗ್ಗೆ ಬಹಳ ಬಾಧೆಯಾಗುತ್ತಿತ್ತು ನಿಮ್ಮ ಹೇಳಿಕೆಯ ಪ್ರಕಾರ ಪೆರೂನಾ ತೆಗೆದುಕೊಂಡೆನು ಈಗ ನಾನು ಸೌಖ್ಯವಾಗಿದ್ದೇನೆ" ಎಂದು ಮಿಸೆಸ್ ಜೇಂಸ್ ಏಮಿಾ ಗ್ರೇಬ್, ಮಿಚ್, ಈಕೆ ಬರೆದಿದ್ದಾಳೆ

"ನಾವು ಕೆಲವು ಕಾಲದಿಂದ ಪೆರೂನಾ ಉಪಯೋಗಿಸುತ್ತಿದ್ದೇವೆ ಮನುಷ್ಯವರ್ಗಕ್ಕೆ ಪ್ರಾಪ್ತವಾಗುವ 'ಒಂದು ಸಾವಿರದ ಒಂದು' ಅಸ್ವಸ್ಥತೆಗಳಿಗೆ ಅದನ್ನು ಉಪಯೋಗಿಸಬಹುದೆಂದು ಹೇಳುವುದರಲ್ಲಿ ನಾವು ಸಂದೇಹಪಡುವುದಿಲ್ಲ ಅದನ್ನು ಪ್ರತಿ ಒಂದು ಮನೆಯಲ್ಲೂ ಇಟ್ಟಿರಬೇಕು ಅದರಿಂದ ನಾನಾತರದ ಶೀತರೋಗಗಳು ಖಂಡಿತವಾಗಿ ವಾಸಿಯಾಗುವುವು ಗನೆರೋಗವನ್ನು ತಡೆದು ವಾಸಿಮಾಡುವದಕ್ಕೆ ಇದು ಮಹಾ ಉತ್ಕೃಷ್ಟವಾದ ಔಷಧ ಅನುಭವದಿಂದ ಹೇಳುವುದಾದರೆ ಪೆರೂನಾ ಎಂಬುವದು ಸ್ತ್ರೀಯರ ದುರ್ಬಲವನ್ನು ಹೋಗಲಾಡಿಸುವುದಕ್ಕೆ ಸರಿಯಾದ ಪರಿಹಾರವು

ಈ ಔಷಧ ಸಿಕ್ಕುವ ಸ್ಥಳಗಳು. —

(೧) ಹಿಚ್‌ಕಾಕ್ ಅಂಡ್ ಸನ್ಸ್, ಬೆಂಗಳೂರು.

(೨) ಇಂಗ್ಲಿಷ್ ಡ್ರಗ್ ಕಂಪನಿ, ೩೯೪ ಮಿಂಟ್ ಬೀದಿ, ಮದರಾಸ್.

"ಸ್ವಂತ ಅನುಭವದಿಂದಲೂ ಇತರ ಅನೇಕರ ಅನುಭವದ ಹೇಳಿಕೆಯಿಂದಲೂ ಈ ಔಷಧವನ್ನು ವಿಶೇಷವಾಗಿ ಕಷ್ಟಪಡುವ ಹೆಂಗಸರಿಗೆ ಉಪಯೋಗಿಸಬೇಕೆಂದು ಸಂಶಯವಿಲ್ಲದೆ ಹೇಳುತ್ತೇನೆ" ಎಂದು ಮಿಸೆಸ್ ಎಂ ಎಫ್ ಜೋನ್ಸ್, ಬರ್ನಿಂಗ್ ಸ್ಪ್ರಿಂಗ್ಸ್, ಕೈ, ಎಂಬಾಕೆ ಬರೆದಿದ್ದಾಳೆ

ವೃಷ್ಟದ ರೋಗಗಳಿಗೆ ಪೆರೂನಾ

"ಶೀತನೆಗಡಿಯಿಂದ ನಾನು ಅನೇಕ ವರುಷಗಳು ನರಳಿದೆನು ಅವರೆ ಪೆರೂನಾ ತೆಗೆದುಕೊಂಡರೂ ನನಗೆ ಶಕ್ತಿ ಬಂತು, ಆರೋಗ್ಯವಾದೆನು ನನ್ನ ಜೀವಮಾನವು ಬದಲಾಗುವ ಸಂದರ್ಭದಲ್ಲಿ ಪೆರೂನಾ ಮತ್ತು ಮನಾಲಿನ್‌ಗಳನ್ನು ಸೇವಿಸಿದ್ದರಿಂದ ನನ್ನ ಎಲ್ಲಾ ತರದ ಅಸ್ವಸ್ಥಗಳನ್ನೂ ಬಹಳ ಚನ್ನಾಗಿ ನಿವಾರಣೆ ಮಾಡಿದ್ದಾಗಿ ನಿಮ್ಮ ಪ್ರಯೋಜನಕರವಾದ ಔಷಧವನ್ನು ಕೊಂಡಾಡುತ್ತೇನೆ ಎಂದ ಮಿಸೆಸ್ ನೆಟಿ ಲ್ಯಾಂಡ್ರಿಕ್ಟರ್, ಡಾನಿಫನ್, ನೆಬ್, ಎಂಬಾಕೆ ಬರೆಯುತ್ತಾಳೆ

"ನಾನು ಕಿಬ್ಬೊಟ್ಟೆಯ ಶೀತನೆಗಡಿಯಿಂದ ಕಷ್ಟಪಡುತ್ತಿದ್ದು ಡಾಕ್ಟರ್ ಹಾರ್ಟ್‌ಮನ್‌ರಿಗೆ ಬರೆದೆನು ಅವರು ಹೇಳಿದಂತೆ ಔಷಧಸೇವನೆ ಮಾಡಿದ ಮೇಲೆ ಈ ಬಹು ಕಷ್ಟಕರವಾದ ರೋಗವು ನನಗೆ ವಾಸಿಯಾಯಿತು ಅದಕ್ಕಾಗಿ ನಿಮ್ಮನ್ನು ವಂದಿಸುತ್ತೇನೆ ನನಗೆ ಶರೀರದಲ್ಲಿ ಈಗಿರ ನಷ್ಟು ಲವಲವಿಕೆ ಹಿಂಗೆ ಯಾವಾಗಲೂ ಇರಲಿಲ್ಲ" ಎಂದು ಮಿಸೆಸ್ ಎಟ್ಟಾ ಬೂಕರ್, ಡಂಡೂರ್ನ, ಸಾಸ್ಕ್, ಎನ್ ಡಬ್ಲಿಯು ಟಿ, ಕ್ಯಾನ್, ಎಂಬಾಕೆ ಬರೆದಿರುತ್ತಾಳೆ

ಸೇವನೆ ಮುಂತಾದ್ದಕ್ಕೆ ಪ್ರತಿ ಬಾಟ್ಲಿ ಸಂಗಡ ಕಳಿಸುವ ನೋಟೀಸನ್ನು ಓದಿಕೊಳ್ಳಿ ಎಲ್ಲಾ ಔಷಧ ಮಾರಾಟಗಾರರಲ್ಲೂ ಪೆರೂನಾ ಬಿಕರಿಯಾಗುತ್ತಿದೆ ಒಂದು ಬಾಟ್ಲಿಗೆ ರೂ ೩|||, ಆರು ಬಾಟ್ಲಿಗೆ ರೂ ೧೮|||

ಮೈಸೂರು ಸೀಮೆಯಲ್ಲಿ ಪ್ಲೇಗಿನಸ್ಥಿತಿ.

5—4—1907 ರಿಂದ 12—4—1907 ರ ವರೆಗೆ

ಸ್ಥಳ		ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಹೋದ … ಸಂಖ್ಯೆ
ಬೆಂಗಳೂರು ಪಟ್ಟಣ		22	19	7
ಮೈಸೂರು	,,	6	3	0
ಬೆಂಗಳೂರು ಡಿಸ್ಟ್ರಿಕ್ಟು		26	19	0
ಮೈಸೂರು	,,	8	5	0
ಕೋಲಾರ್	,,	2	2	5
ಕೋಲಾರ್ ಚಿನ್ನದ ಗಣಿಗಳು		1	1	1
ತುಂಕೂರು ಡಿಸ್ಟ್ರಿಕ್ಟು		0	0	0
ಹಾಸನ	,,	4	2	0
ಚಿತ್ರದುರ್ಗ	,,	0	0	0
ಕಡೂರ್	,,	3	1	0
ಶಿವಮೊಗ್ಗ	,,	5	1	0
ಜುಮ್ಲಾ		74	46	3

ಶಾಲಿವಾಹನ ಶಕ ವರುಷಂಗಳು ೧೮೨೯ ನೇ ಪ್ಲವಂಗನಾಮ ಸಂವತ್ಸರದ ನಿಜ ಚೈತ್ರ ಶುದ್ಧ ದ್ವಾದಶಿ ಗುರುವಾರದಿಂದ ನಿಜ ಚೈತ್ರ ಬಹುಳ ಬಿದಿಗೆ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೭ ನೇ ಇಸವಿ ಏಪ್ರಿಲ್, ಮತ್ತು ಮೇ

ತಾ	ವಾರ		ತಿಥಿ	ಘಳಿಗೆ	ನಕ್ಷತ್ರ	ಘಳಿಗೆ
25	ಗುರು	‡	ದ್ವಾದಶಿ	21 2	ಪು	41 0
26	ಶುಕ್ರ	†	ತ್ರಯೋದಶಿ	19 45	ಹ	40 52
27	ಶನಿ	¶	ಚತುರ್ದಶಿ	17 58	ಚಿ	40 32
28	ರವಿ	*	ಪೌರ್ಣಮಿ	15 2	ಸ್ವಾ	34 2
29	ಚಂದ್ರ		ಪಾಡ್ಯಮಿ	9 28	ವಿ	35 20
30	ಕುಜ		ಬಿದಿಗೆ	4 50	ಅನು	31 32
1	ಬುಧ		ಚೌತಿ	52 56	ಜ್ಯೇ	27 57

‡ ವಾಮನದ್ವಾದಶಿ † ತ್ರಯೋದಶೀ ತಿಥಿ, ಪ್ರದೋಷ, ಶ್ರೀರಂಗನಾಥ ರಥ ¶ ಚತುರ್ದಶೀ ತಿಥಿ, ಮೇಲೂರು ಅಪ್ಪನ (ಯಸ… ರಥ ¶ ಪೂರ್ಣಿಮಾ ತಿಥಿ ಬಿಳಿಗಿರಿರಂಗಸ್ವಾಮಿ ರಥ * ಚೈತ್ರ ಪೂರ್ಣಿಮಾ ಹಂಪೆ ವಿರೂಪಾಕ್ಷ ರಥ

ಪೇಟೇ ಧಾರಣೆ.

ದಿನಸಿ		ಮೈಸೂರು	ಬೆಂಗಳೂರು
ಕನ್ನೀ ಅಕ್ಕಿ ಪಲ್ಲಾ ೧ಕ್ಕೆ	ರೂ	೧-೨ ೮ ೦	೧೩…
ಕಂಬೂತಿ ಅಕ್ಕಿ ಅವಲ್		೧೩-೪ ೦	೧೪…
,, ೯ ಯಂ		೧-೨ ೮ ೦	೧೩…
ಜೀರಿಗೆ ಸಾಂಬ ಅಕ್ಕಿ		೧-೨ ೮-೦	೧೪ ೦…
ಶಕ್ಕರೆ ಅವಲ್		೧೫ ೦ ೦	೧೩…
,, ದುಯಂ		೧೪ ೮ ೦	೧೩…
ತೊಗರೀ ಬೇಳೆ ಪಲ್ಲಾ ೧ಕ್ಕೆ		೧೩ ೮ ೦	೧೨…
,, ದುಯಂ		೧-೨ ೧-೨ ೦	೧೨…
ಹೈಬ್ರಿಡ್ ರಾಗಿ ಪಲ್ಲಾ ೧ಕ್ಕೆ		೬ ೨ ೦	೬…
ಕಾರುರಾಗಿ		೫-೮ ೦	೫ ೦…
ಜೋಳ		೭ ೮ ೦	೮ ೦…
ಹಲಸಂದೆ ಪಲ್ಲಾ ೧ಕ್ಕೆ		೧೦ ೦ ೦	೧೧ ೦…
ಬಿಳೀ ಅವರೆ		೮ ೪-೦	೭…
ಹೆಸರು		೧-೨ ೮-೦	೯ ೦…
ಉದ್ದು		೧-೨-೮ ೦	೧೧ ೦…
ಕಡಲೆ		೧೦ ೮-೦	೯ ೦…
ಎಳ್ಳು ಸೇ ೧-೨ಕ್ಕೆ		೨-೨ ೮ ೦	೨…
ಹುರುಳಿ		೬-೬ ೦	೭…
ಹರಳು ೧-೨ ಸೇರಿಗೆ		೧೬-೦ ೦	೧೬…
ಸೀಗೇಕಾಯಿ ಮಣ ೧ಕ್ಕೆ		೨-೨ ೦	೧ ೦…
ಮೆಣಸಿನಕಾಯಿ		೨ ೧-೨ ೦	೨ ೦…
,, ದುಯಂ		೨ ೮ ೦	೨…
ಬೆಲ್ಲ ದೊಡ್ಡ ಅಚ್ಚು		೩-೯ ೦	ಮ ೨…
ಒಳ್ಳೆಣ್ಣೆ ಮಣ ೧ಕ್ಕೆ		೫-೮-೦	೫…
ಹರಳೆಣ್ಣೆ ,,		೫-೮ ೦	೫…
ಕೊತ್ತುಂಬರಿ ಪಲ್ಲಾ ೧ಕ್ಕೆ		೬ ೮ ೦	೭…
ಉಪ್ಪು ,,		೫ ೬-೦	೬ ೦…
ಹುಣಸೇ ಹಣ್ಣು		೧-೪-೦	೧…
,, ಹಳೇದು		೦ ೧೪ ೦	೦…
ತುಪ್ಪ ಮಣ ೧ಕ್ಕೆ		೧೫-೦ ೦	೧೩…
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ		೫ ೦ ೦	೪…
ತೆಂಗಿನಕಾಯಿ ೧೦೦ಕ್ಕೆ		೮-೮-೦	೬…
ಅಳಲೇಕಾಯಿ ಮಣ ೧ಕ್ಕೆ		೧ ೦ ೦	೧…
ಅಂಟ್ವಾಳದ ಕಾಯಿ ಮಣ ೧ಕ್ಕೆ		೦ ೧-೨ ೦	೦-೧…
ಚಿನ್ನ (ಪವನ್) ಕೆಂಪು		೧೫-೪ ೦	೧೫…
,, ,, ಪಸಿಮೆ		೧೫-೧೦ ೦	೧೫ ೦…
,, ,, ಗಟ್ಟಿ ತೊಲ ೧ಕ್ಕೆ		೨೩ ೧-೨ ೦	೨೩…
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ		೮೫-೦ ೦	೮-೨…

Printed and Published by the Rev E THOMPSON, M A Proprietor and Manager, Wesley Mission Press, Mysore 25/4/1907

REGISTERED
M. 20.

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೦ | ಮೈಸೂರು—ಸನ್ ೧೯೦೪ ನೇ ಇಸವಿ ಮೇ ತಾರೀಖು ೨ ನೇ ಗುರುವಾರ. | ಸಂಚಿಕೆ ೪೮

WILLIAM & CO., BOMBAY.

ವಿಲಿಯಂ ಮತ್ತು ಕಂಪೆನಿ, ಪೋರ್ಟು, ಮುಂಬಯಿ.

ಅಮೃತಾಂಜನ

27-10

ಬಾಟ್ಲಿ ಒಂದಕ್ಕೆ ಕಿಮ್ಮತ್ತು ೮ ಆಣೆ. ವಿ. ಪಿ. ೧೨ ಆಣೆ.

ಅಮೃತಾಂಜನ—ಸುಖಾಂಜನ.
ಅಮೃತಾಂಜನ—ಸಂಜೀವನ.
ಅಮೃತಾಂಜನ—ಪರಮಾಂಜನ.
ಅಮೃತಾಂಜನ—ದಿವ್ಯಾಂಜನ.
ಅಮೃತಾಂಜನ—ಶೀಘ್ರಭಂಜನಿ.
ಅಮೃತಾಂಜನ—ಪ್ರಾಘಂಜನವಿನಾಶಿನಿ.

ಅಮೃತಾಂಜನ—ಅಪೂರ್ವದರ್ಶಿನಿ.
ಅಮೃತಾಂಜನ—ತಕ್ಷಣ ಪರಿಹಾರಿಣಿ.
ಅಮೃತಾಂಜನ—ಸಂಧಿವಾತಕ್ಕೆ.
ಅಮೃತಾಂಜನ—ತಲೆನೋವಿಗೆ.
ಅಮೃತಾಂಜನ—ದಮವು ಮತ್ತು ಘಾಯಕ್ಕೆ.
ಅಮೃತಾಂಜನ—ಗಂಟ್ಲುನೋವಿಗೆ.

ಶಿರೋವೇಧನ ವಾತ, ಎದೆನೋವು, ಗಂಟ್ಲುನೋವು, ಸಂಧಿವಾತ, ತಲೆನೋವು, ಶಿರೋಭಾರ, ಈ ಎಲ್ಲಾ ತರದ ರೋಗಕ್ಕೆ ಅಮೃತಾಂಜನ ದಿವ್ಯವಾದ ಔಷಧವಾಗಿದೆ. ಇದನ್ನು ತರಿಸಿ ಮನೆಯಲ್ಲಿ ಸದಾಕಾಲ ಇಟ್ಟರೆ, ಮೇಲೆ ಹೇಳಿದ ಯಾವತರದ ರೋಗಕ್ಕೂ ಎಡೆ ಸಿಕ್ಕುವದಿಲ್ಲ. ಅಮೃತಾಂಜನದಿಂದ ಗುಣವು ಕಂಡುಬರದಿದ್ದರೆ ಹಣ ಹಿಂತಿರುಗಿ ಕೊಡಲ್ಪಡುವದು.

ಗಜಕರ್ಣದ ಮುಲಾಮು ಡಬ್ಬಿ ಒಂದಕ್ಕೆ ೬ ಆಣೆ, ವಿ. ಪಿ. ೧೦ ಆಣೆ.—ಇದನ್ನು ಹಾಗಿಸುವದರಿಂದ ಎಲ್ಲಾ ತರದ ಕಜ್ಜಿ ಹೋಗುವದು. ಮೂರು ಸಾರಿ ಹಾಗಿಸುವದರೊಳಗೆ ಗಜಕರ್ಣವು ಹೋಗುವದು. ಒಂದು ಸಾರಿ ಪರೀಕ್ಷಿಸಿ ನೋಡಿರಿ. ಕ್ರಯ ಕಮ್ಮಿ, ಗುಣ ಹೆಚ್ಚು. ಇದನ್ನು ಹಚ್ಚಿದಲ್ಲಿ ಉರಿ ಬರುವದಿಲ್ಲ, ಚರ್ಮ ಕಪ್ಪಾಗುವದಿಲ್ಲ. ಇದರಿಂದ ಗುಣವು ಕಂಡುಬರದಿದ್ದರೆ ಹಣ ಪರತು ಕೊಡಲ್ಪಡುವದು.

ಕೇಶವರ್ಧಿನೀ ತೈಲ—ಇದು ತಲೆಯ ಮೆದುಳನ್ನು ತಂಪುಮಾಡಿ ಆಡಸನ್ನು ತೆಗದು ಕೂದಲು ಬೆಳಿಸುತ್ತದೆ. ಇದಕ್ಕೆ ಚಲೋ ಸುವಾಸನೆ ಬರುತ್ತದೆ. ಮೂರು ಶೀಸು ಬಾಟ್ಲಿಗೆ ೦-೦-೦

ಕಜ್ಜಿ ಮುಲಾಮು—ಇದು ಅತಿಶಯ ಅಗ್ಗವೂ ಗುಣದಾಯಕವೂ ಆಗಿರುತ್ತದೆ ೦-೩-೦

ಕಫಹಾರಿ—ಕೆಮ್ಮು, ದಮ್ಮು. ಕ್ಷಯ, ಕೊರಳಿನಲ್ಲಿ ಕಫ ಮುಂತಾದ್ದಕ್ಕೆ ಇದು ಉತ್ತಮವಾದದ್ದು, ಬಾಟ್ಲಿ ೧ ಕ್ಕೆ . ೦-೬-೦

ಜೀರ್ಣರಸಾಯನ—ಹೊಟ್ಟೆಯಲ್ಲಿ ಹಸಿವೆ ಆಗಲಿಕ್ಕೂ ನಾಲಿಗೆಗೆ ರುಚಿ ಬರಲಿಕ್ಕೂ ಉತ್ತಮವಾದದ್ದು. .. ೦-೪-೦

ಜ್ವರಹಾರಿ—ಎಲ್ಲಾ ತರದ ಜ್ವರಗಳ ಮೇಲೆ ಈ ಔಷಧವು ಚಲೋದಾದದ್ದು ೦-೧೨-೦

ಸುಂದರೀ ತೈಲ—ಈ ತೈಲವನ್ನು ನಿರಂತರವಾಗಿ ಮೋರೆಯ ಮೇಲೆ ಹಾಗಿಸುವದರಿಂದ ಮೋರೆಯ ಮೇಲೆ ಇರುವ ಕುದ ಕಲೆಗಳನ್ನೂ ಕಪ್ಪಾದ ಕಲಂಕಗಳನ್ನೂ ತೆಗದು ಚರ್ಮವನ್ನು ಮೃದುಮಾಡಿ ಚಲುವಿಕೆಯನ್ನು ಕೊಡುತ್ತದೆ. ಹೆಂಗಸರಿಗೂ ಗಂಡಸರಿಗೂ ಉತ್ತಮವಾದದ್ದು ೦-೮-೦

ದಂತಮಂಜನ—ಹಲ್ಲು ಸ್ವಚ್ಛವಾಗುತ್ತೆ, ಘಟ್ಟಿಯಾಗುತ್ತೆ, ವಾಸನೆಯನ್ನೂ ರಕ್ತವನ್ನೂ ನಿಲ್ಲಿಸುತ್ತದೆ. ಕ್ರಯ ಬಹಳ ಕಮ್ಮಿ ೦-೨-೦

ನೇತ್ರಾಂಜನ ೪ ಆಣೆ. ವಜ್ರಗುಟಿಕ ೧ ರೂಪಾಯಿ. ಕುಸುಮಾರಿ ಗುಟಿಕ ೧ ರೂಪಾಯಿ. ದಂತವಾತಹಾರಿ ೮ ಆಣೆ. ಕಫನಾಶಕ ಚೂರ್ಣ ೮ ಆಣೆ. ಚೇಳು ಕಡಿತದ ಮದ್ದು ೮ ಆಣೆ. ರೋಮಹಾರಿ ೮ ಆಣೆ. ಕಸ್ತೂರಿಮಾತ್ರೆ ೧೦ ಆಣೆ. ತಾಂಬೂಲಗುಟಿಕೆ ೮ ಆಣೆ.

ಎಲ್ಲಾ ತರದ ಔಷಧಗಳು ಇರುವದರಿಂದ ಕೆಟಲಾಗು ಬೇಕಾದವರು ಬರದು ತರಿಸಿಕೊಳ್ಳಬಹುದು.

ವಿಲಿಯಂ ಮತ್ತು ಕಂಪೆನಿ, ೧೩೭ ಓಕ್ ಲೇನ್, ಪೋರ್ಟು, ಮುಂಬಯಿ.

ರೇಷ್ಮೆ ಮತ್ತು ಕಲಾಪತ್ತು ಶೀರೆಗಳು ಮತ್ತು ಪೀತಾಂಬರಗಳು.

40 3

ಪಾತರಿಯಂದ ಬಣ್ಣಗಳನ್ನು ಹಾಕಿ ನಮ್ಮ ಸ್ವಂತ ಮಗ್ಗಗಳಲ್ಲಿಯೇ ತಯಾರಾಗುವ ಉತ್ತಮವಾದ ಕೆಂಪು, ಊದಾ, ಹಸರು, ಹಳದಿ, ಕಪ್ಪು, ಮೇಘವರ್ಣದ ಶೀರೆಗಳು ಪೀತಾಂಬರಗಳು ನಮ್ಮ ಅಂಗಡಿಯಲ್ಲಿ ಪಿಬರವಾದ ಕ್ರಯಕ್ಕೆ ಮಾರುತ್ತೇವೆ. ಇದಲ್ಲದೆ ಕಂಚಿ, ಕುಂಭಕೋಣ, ಕೊರನಾಡು, ಮಧುರೆ, ಕಾಂತ್ವಾಲ, ಆರ್ಕಾಟ್ಯ, ರಾಪೇಟೆ, ಸೇಲಂ, ಕೊಯಮುತ್ತೂರು, ಮುಂತಾದ ಸ್ಥಳಗಳಲ್ಲಿ ತಯಾರಾಗುವ ರಖಂವಾರು ಜವಳಿಯು ನಮ್ಮಲ್ಲಿಯೂ ಸದಾ ಸುಲಭ ಖರೀದಿಗೆ ದೊರೆಯುತ್ತದೆ. ಸದರಿ ನಗಗಳ ಕ್ರಯ ತಪಶೀಲ್ ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು. ವಿ. ಪಿ. ದ್ವಾರ ಸಹಾ ತರಿಸಿಕೊಳ್ಳಬಹುದು. ನಮ್ಮ ಸಸುಗಳು ಶ್ರೇಷ್ಠವಾಗಿ ಸ್ವಂತಮಗ್ಗಗಳಲ್ಲಿ ತಯಾರಾಗುತ್ತವೆ ಎಂದು ಮೈಸೂರು ಶ್ರೀಮನ್ಮಹಾರಾಜಾ ಸರ್ಕಾರದ ವಸ್ತುಪ್ರದರ್ಶನದಲ್ಲಿ ಬೆಳ್ಳಿ ಬಿರುದಿನ ಬಿಲ್ಲೆ ಬಹುಮಾನಕೊಟ್ಟಿರುತ್ತಾರೆ.

ನಮ್ಮ ವಿಳಾಸ.—ಹೆಚ್. ಸಂಕಪ್ಪಾ ಬಸಪ್ಪಾ,
ಚಿಕ್ಕಪೇಟೆ ಬೆಂಗಳೂರು.

ಜ್ವರಹರಿ

47-1



ಇದು ಸಾಧಾರಣ ಜ್ವರ, ಚಳಿಜ್ವರ, ಮೊರೇಜ್ವರ, ಪಿತ್ಥಜ್ವರ ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್. ಟಿ. ವೆಂಕಟಪತಿ ಅಯ್ಯನವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨ ಡ್ರಾಮಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨೦ ಡ್ರಾಮಿನ ಸೀಸೆಯನ್ನು ವಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ—ಸೀಸೆ ೧ ಕ್ಕೆ ೮ ಆಣೆ, ೧ ರೂ., ೧—೮ ರೂ., ೩.೨—೧೦ ಆ., ೧೧ ರೂ.; ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

****

ಬಿ ಮಂ ಕ ಪೂ ರ.

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳಸುವದು. ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೊಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯವೂ ದರವು ಜ್ವರಹರಿ ಎಂಬ ಔಷಧದಂತೆಯೇ. ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಜೆಪ್ರಿಯ ಬಿಮಂಕಪೂರವನ್ನು ನಾನೂ ನನ್ನ ಹಾಜೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಷ್ಠರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂತ ಬರೆದಿದ್ದಾರೆ.

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ:—
ಹೆಪ್ರಿಯವ— ಇಂಡಿಯನ್ ಔಷಧಗಳ ಕಂಪೆನಿ,
ಸೆಕೆಂಡ್ ಬೀಚ್ ಲೈನ್, ಮದ್ರಾಸ್.

ಮುಂಬಯಿ ವ್ಯಾಪಾರಮಾಡಲಿಚ್ಛಿಸುವವರು.

85-48

ಮುಂಬಯಿಯಲ್ಲಿ ಪ್ರತಿಯೊಂದು ಮಾಲಿನ ತೂಕ ಅಳತೆ ಮತ್ತು ದರ, ಮಾಲಿನ ವರ್ಣನೆ ಹಾಗೂ ಅನೇಕ ಉಪಯುಕ್ತ ಸಾಹಿತ್ಯವುಳ್ಳ ಕನ್ನಡ ಪುಸ್ತಕ:—ಕ್ರಯ ೧೦ ಆಣೆ. ವಿ. ಪಿ. ಯಿಂದ ಕಳುಹಿಸುವ ಟಪಾಲು ಖರ್ಚು ಬೇರೆ. ಬಾಕಿನ್ನು ಸೇಲರರಿಗೆ ಯೋಗ್ಯ ಕಮಿಷನ್ ದೊರೆಯುವದು. ಮತ್ತು ಲಿಂಗಾಯತ ಧರ್ಮಸಂಬಂಧ ವಿರಕ್ತ ಪ್ರವೃತ್ತಿ ಕ್ರಿಯಾಲಕ್ಷಣವೆಂಬುವ ಕನ್ನಡ ಪುಸ್ತಕ—ನಾಲ್ಕು ಆಣೆ. ಈ ಅಕ್ಷರದಿಂದ ಬರಿಯಿರಿ. ಪತ್ತಾ ಚನ್ನಬಸಪ್ಪ ಮಲ್ಲಪ್ಪ ವಾರದ, ಕಂಪ್ನು ಮಾಂಡ್ವಿ, ಮುಂಬಯಿ.

ನೋಡಿರಿ.

ಯೆಷ್ಟು ಕೆಂಪು ಮತ್ತು ತಾಜಾ ಕಪ್ಪು.

ಹಾಸೆ ಊಲ್ ದಾರ.

125-18

೩,೦೦೦ ಹಾಸನದ ಟೋಪಿ ಹೊಲೆಯುವ
ಸುಪೀರಿಯರ್ ವೂಲ್ ದಾರ ಮಾತ್ರ

	ರೂ.	ಆ.	ಪೈ
೧ ಟೋಪಿ ಆಗುವ ವೂಲ್ ದಾರದ ಕ್ರಯ	೦	೮	೦
೧೨ ಟೋಪಿ ಆಗುವ ಒಂದು ಬಂಡಲ್ ದಾರದ ಕ್ರಯವು	೧	೨	೦
೧೫ ಟೋಪಿ ಹೊಲೆಯುವ ಕೊಕ್ಕೆ ಸೂಜಿ ೧ಕ್ಕೆ	೦	೧	೯
೧ ಥರದಲ್ಲಿ ಆದ ಟೋಪಿ ಡಜನ್ ೧ಕ್ಕೆ	೧೩	೩	೦

ವಿ. ಪಿ. ಯಿಂದಲೂ ರವಾನಿಸುತ್ತೇವೆ.

ವಿಳಾಸ—ಸಿ. ರಘುನಾಥ ಕಾಮತ್,
ವೂಲ್ ಮರ್ಚಂಟ್, ಬೋಳಾರ, ಮಂಗಳೂರು.

ಬೆಲೆಗೆ ಬೆಳ್ಳಿ—ಗುಣಕ್ಕೆ ಭಂಗಾರ.

86 49

ಇಂಥಾ ಕಾಗದಗಳು ಸಮ್ಮಲ್ಲಿಗೆ ಅನೇಕ ಬಂದಿವೆ.

ಮೆ॥ ವಾಸುನಿಕಿನಿ, ಜವಳಿ ವರ್ತಕ, ಮಹೇಶ್ವರ, ಇವರು ಬರೆಯುವುದು—"ಕ್ಲೆಮೆಂಟ್‌ಯವರ ಮ್ಯಾಜಿಕ್ ಬಾಂ ಬಹಳ ತೃಪ್ತಿಕರವಾದದ್ದೆಂದು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ಅದು ತುಂಬಾ ಗುಣಕೊಡುವಂಥಾದ್ದು. ದಯವಿಟ್ಟು ಇನ್ನೂ ಮೂರು ಸೀಸೆಯನ್ನು ವಿ. ಪಿ. ಮೇಲೆ ಕಳುಹಿಸಿಕೊಡಿ." ಮೆ॥ ಜೆ. ಡಬ್ಲಿಯು ಸಾಮ್ಯುಯಲ್, ಪೋಸ್ಟ್ ಮಾಸ್ಟರ್, ಟ್ರಾವನ್ಕೋರ್, ಇವರು ಬರೆಯುವುದು "ನಿಜವಾಗಿಯೂ ಇದು ಎಲ್ಲಾ ತರದ ನೋವುಗಳಿಗೂ ಅದ್ಭುತವಾದ ಔಷಧವೆನ್ನುವುದಕ್ಕೆ ಸಂಶಯವಿಲ್ಲ." ಮಿಸೆಸ್ ಇ. ಕ್ಯಾಂಪ್‌ಸಿಂಗ್, ಬೈಕಲ್ಲಾ, ಬೊಂಬಾಯಿ, ಇವರು ಬರೆಯುವುದು—"ನಿಮ್ಮ ಮ್ಯಾಜಿಕ್ ಬಾಂ ಔಷಧವು ನನ್ನ ಕಾಲಿನ ಕೆಟ್ಟ ನೋವನ್ನು ಸಂಪೂರ್ಣವಾಗಿ ವಾಸಿಮಾಡಿದೆ." ಮಿಸೆಸ್ ಇ. ಮೋಸೆಸ್, ರಂಗೂನ್, ಇವರು ಬರೆಯುವುದು—"ನಾನು ಯಾವಾಗಲೂ ನಿಮ್ಮ ಕ್ಲೇಮೆಂಟ್ಸ್ ಮ್ಯಾಜಿಕ್ ಬಾಮನ್ನು ಗಂಟ್ಲು, ಎದೆಯ ನೋವುಗಳಿಗೆ ಉಪಯೋಗಿಸುತ್ತೇನೆ. ಆದರಿಂದ ನನಗೆ ಪ್ರತಿ ಸಲವೂ ಚನ್ನಾಗಿ ವಾಸಿಯಾಗಿದೆ. ಈ ಔಷಧದಿಂದ ಪಾರ್ಶ್ವನೋವು, ಕೀಲುಗಳ ಬಾಧೆ, ಕಿಬ್ಬೊಟ್ಟೆನೋವು, ಬೆನ್ನೆಳೆಯುವುದು, ತಲೆನೋವು, ಕೆಮ್ಮು, ಕಿಲುಬುಗಳು, ಕೀಲುಗಳು ಕಡಿಸುವುದು, ಕೊರಳು ಊತ, ಕೈ ಕಾಲು ಒಡೆತ ಇವೆಲ್ಲಾ ಗುಣವಾಗುತ್ತವೆ. ಇದನ್ನು ಹಾಕಿ ಚನ್ನಾಗಿ ತಿಕ್ಕಿದರೆ ಬೇಗ ಪರಿಹಾರವಾಗುವುದು.

ಕ್ರಯ:—೧ ಬಾಟ್ಲಿಗೆ ೧೨ ಆಣೆ, ಪೋಸ್ಟೇಜ್ ೪ ಆಣೆ. ೩ ಬಾಟ್ಲಿಗೆ ಅಂಚೆವೆಚ್ಚ ಸೇರಿ ರೂ. ೨—೪ ಆಣೆ.

ನಮ್ಮ ವಿಳಾಸ:—ಎಫ್. ಡಬ್ಲಿಯು. ಆರನ್,
ಸಿಮೆಟ್ರಿ ರೋಡ್, ವೇಪೇರಿ, ಮದರಾಸ್.

ಬಾಲಶಿಕ್ಷೆ ೧ನೇ ಭಾಗ!

43-2

ಕ್ರಯ ಒಂದಾಣೆ. ಒಂದಾಣೆ. ಒಂದೇ ಆಣೆ. !!

ಅಕ್ಷರಗಳನ್ನೂ ಪಾಠದ ವಿಷಯಗಳನ್ನೂ ಮಕ್ಕಳ ಜ್ಞಾಪಕದಲ್ಲಿ ಉಚಿತವಾಗಿ ನಿಲ್ಲಿಸುವದಕ್ಕೆ ನವೀನವಾದ ಚಿತ್ರಗಳು ಇದರಲ್ಲಿ ಇವೆ. ಆಯಾ ಪಾಠಗಳ ಅಡಿಯಲ್ಲಿ ಲೇಖ್ಯಪಾಠವೂ ಗಣಿತಪಾಠವೂ ಇವೆ. ಮಕ್ಕಳಿಗೆ ಈ ಪಾಠಗಳು ಕಾಟವಾಗದೆ ಆಟವಾಗಿ ಪರಿಣಮಿಸುವವು. ನೂರು ಪ್ರತಿಗಳಿಗೆ ಹನ್ನೆರಡು ಪ್ರತಿಗಳು ಕಮಿಷನ್.

ವಿಳಾಸ:—ಮ್ಯಾನೇಜರ್, ಸಿ. ಎಲ್. ಎಸ್.
ಬುಕ್ ಡಿಪೋ, ಮೈಸೂರು.

ವೈದ್ಯ ವೆಂಕಟಾಚಲ ಪಂಡಿತ, ಶ್ರೀಸೀತಾರಾಘವ ವೈದ್ಯಶಾಲಾ, ಕೊಳ್ಳೇಗಾಲ, ಇವರ ಸಿದ್ಧೌಷಧಗಳು.

26-11



೧ ಲೋಕಾಮಯಹರ ಕಸ್ತೂರೀ ಮಾತ್ರೆ.—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ.

ಚಳಿಜ್ವರ, ಜ್ವರ, ಹೊಟ್ಟೆಶೂಲೆ, ಸಂದುಗಳ ನೋವು, ಮೈ ಕೈಕಾಲು ಕೊಡತ (ಭಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿಮಾಂದ್ಯ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ.

ತಾಂಬೂಲಸೇವನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತೆ. ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಖಾಯಿಲೆಗೂ ದಾರಿಕೊಡದೆ, ನೀರು ಜಲಗಳ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ.

ಸ್ತ್ರೀಯರ ಋತುಶೂಲೆ, ಮಕ್ಕಳ ಎಳೆವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ.

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.

೨೦ ಮಾತ್ರೆಯುಳ್ಳ ಡಬ್ಬಿಗೆ ೮ ಆಣೆ; ೫ ಡಬ್ಬಿಗೆ ೧ ಡಬ್ಬಿ ಹೆಚ್ಚು. ೧ ರಿಂದ ೧೨ ಡಬ್ಬಿ ವರೆಗೆ ಪೋಸ್ಟೇಜು ೪ ಆಣೆ.

ವಿಳಾಸ:—ಎಸ್. ಎಸ್. ಆರ್. ವೈದ್ಯಶಾಲಾ,
ಲಕ್ಷ್ಮೀವಿಲಾಸ ರೋಡ್, ಮೈಸೂರು

ತರಿಸಿಕೊಳ್ಳಿ! ಬೇಗತರಿಸಿಕೊಳ್ಳಿ!! ಇದೇ ಒಳ್ಳೇ ಸಮಯ!!!

41-3

ತಡಮಾಡಿದರೆ ಪ್ರತಿಗಳು ಮುಗಿದುಹೋದಾವು.

ನೇತ್ರಾನಂದಕರಗಳಾದ ಚಿತ್ರಗಳಿಂದಲೂ, ನೀತಿರಸಪ್ರದವಾದ ವಿಷಯಗಳಿಂದಲೂ ರಂಜಿಸುವದಲ್ಲದೆ, ಸಕಲ ಜನಗಳೂ ಕೊಡುತಕ್ಕಷ್ಟು ಸುಲಭವಾದ ಕ್ರಯಕ್ಕೆ ಸಿಕ್ಕುವವುಗಳಾಗಿಯೂ ಇವೆ. ಇವುಗಳು ಯಾವವೆಂದರೆ:—

	ಕ್ರಯ.
ಎಡ್ವರ್ಡ್ ಚಕ್ರವರ್ತಿಯವರ ಮತ್ತು ಅಲೆಕ್ಸಾಂಡ್ರಾ ಚಕ್ರವರ್ತಿನಿಯವರ ಚರಿತ್ರೆ	೦—೪—೦
ಎಡ್ವರ್ಡ್ ಸಾರ್ವಭೌಮರ ಕಿರೀಟಧಾರಣೆ ..	೦—೨—೬
ಘನತೆಯುಳ್ಳ ಸ್ತ್ರೀಯರ ಚರಿತ್ರೆ	೦—೨—೬
ದಕ್ಷಿಣ ಆಫ್ರಿಕವೂ ಅದರ ನಿವಾಸಿಗಳೂ ..	೦—೨—೬
ಚೀನಾ ಚಕ್ರಾಧಿಪತ್ಯವೂ ಅದರ ನಿವಾಸಿಗಳೂ ..	೦—೨—೬
ಬರ್ಮಾ ದೇಶವೂ ಬರ್ಮೀಯರೂ	೦—೨—೬
ಪುರಾತನ ಗ್ರೀಕರ ಕಥೆಗಳು	೦—೨—೦
ಪುರಾತನ ರೋಮನರ ಕಥೆಗಳು	೦—೨—೦
ಪಕ್ಷಿಗಳ ಚಿತ್ರಗಳೂ ಕಥೆಗಳೂ	೦—೧—೦
ಕ್ರಿಮಿವರ್ಗ ವರ್ಣನೆ	೦—೧—೦
ದೇಹವೆಂಬ ವಿಚಿತ್ರವಾದ ನನ್ನ ಮನೆ	೦—೧—೦
ಚಿಕ್ಕವರಿಗೆ ಹೇಳಿದ ಕಥೆಗಳು	೦—೧—೦
ಪ್ರಾಚೀನಕಾಲದ ವಿಲಕ್ಷಣ ಜೀವರಾಶಿಗಳ ವರ್ಣನೆ	೦—೧—೦
ಹೊಗೆ ಗಾಡಿಗಳನ್ನು ಕಲ್ಪಿಸಿದ ಜಾರ್ಜ್ ಸ್ಟೀವನ್ಸನ್ ಎಂಬಾತನ ಚರಿತ್ರೆ	೦—೧—೦

"ಹಿಂದೂದೇಶ ಪ್ರದಕ್ಷಿಣ."—ಹಿಂದೂ ದೇಶವನ್ನೆಲ್ಲಾ ಸಂಚಾರ ಮಾಡುವದರಿಂದ ಉಂಟಾಗುವ ಪರಮಾನಂದವನ್ನು ಒಂದು ಸಾರಿ ಈ ಗ್ರಂಥವನ್ನು ಓದುವದರಿಂದ ಹೊಂದಬಹುದು. ಇದು ಮೊದಲನೇ ಸಾರಿ ಪ್ರಿಂಟ್ ಆಗಿದ್ದು ಬಹು ಶೀಘ್ರವಾಗಿ ಎಲ್ಲಾ ಮುಗಿದುಹೋದವು. ಈಗ ತಿರಿಗಿ ವಿಚಿತ್ರವಾಗಿಯೂ ಉಲ್ಲಾಸಕರವಾಗಿಯೂ ಇರುವ ಪ್ರಸಿದ್ಧವಾದ ಚಿತ್ರಗಳೊಡನೆ ಮಾಡಿಸಿರುತ್ತೇವೆ. ಕ್ರಯ ೦—೮—೦; ವಿ. ಪಿ. ಮೂಲಕ ೦—೧೧—೦.

ವಿಳಾಸ:—ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪೋ,
ಮೈಸೂರು.

CHAMBERLAIN'S PAIN BALM

ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವು.

4-18



ಬೆನ್ನೆಲುಬಿನಲ್ಲಿನ ನೋವು, ಪಕ್ಕೆಗಳಲ್ಲಿ ಆಗುವ ನೋವು, ಕಂಡಗಳಲ್ಲಿ ಹುಟ್ಟುವ ನೋವು, ತಲೆನೋವು, ಬಜ್ಜಾದ ಕಡೆಗಳ ನೋವು, ವಾಯುನೋವು—ಇವುಗಳನ್ನೆಲ್ಲಾ ಸಂಪೂರ್ಣವಾಗಿ ವಾಸಿಮಾಡುವಂಥಾ ಔಷಧ

ವಾಯುನೋವೆಂದರೇನು?

ಕೀಲುಗಳಲ್ಲೂ ಮಣಿಕಟ್ಟುಗಳಲ್ಲೂ ಗಾಯವಾಗುವುದು, ಊದಿಕೊಳ್ಳುವುದು, ಕಠಿಣವಾಗಿ ಸೆಳೆಯುವ ಬಾಧೆ ಖಂಡಗಳಲ್ಲಿ ಇರಿಯುವುದು, ವಿಶ್ರಾಂತಿಕೊಡದೆ ಇರುವುದು, ನಿದ್ರೆಹತ್ತದೆ ಇರುವುದು—ಇದೇ ಇದೆಲ್ಲಾ ನಿಮಗೆ ಯಾವಾಗ ಉಂಟಾಗುವುದೋ ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು

ಆಗ ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹ ಕಾವು ಮೂಳೆಯೊಳಕ್ಕೆ ವ್ಯಾಪಿಸುತ್ತದೆ. ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ. ಮನಸ್ಸಿಗೆ ಉಲ್ಲಾಸವಾಗುತ್ತದೆ ಅದನ್ನೇ ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯುವಿನ ಹುಟ್ಟನ್ನೇ ಕಿತ್ತು ಹಾಕಿಬಿಡುವುದು

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ.

ಕೈಯಿಂದ ಮುಟ್ಟಿದ್ದೇನೂ ಇಲ್ಲ

ಇದು ಎಲ್ಲೆಲ್ಲೂ ವಿಕರಿಯಾಗುವುದು. ಸಣ್ಣ ಶೀಸೆಗೆ ೧ ರೂಪಾಯಿ. ದೊಡ್ಡ ಶೀಸೆಗೆ ೨ ರೂಪಾಯಿ

ಶ್ರೀರಂಗಪಟ್ಟಣ ಪೂರ್ಣಯ್ಯನ ಬೀದಿಯಲ್ಲಿ

46-1

೫ ನೆ ನಂಬರು ಮನೆ ಹೆಚ್ಚಾದ ತ್ಯಾಗದ ಸಾಮಾನುಗಳಿಂದ ಕೂಡಿದೆ ಇಷ್ಟವುಳ್ಳವರು ೧ ತಿಂಗಳೊಳಗೆ ಕ್ರಯಕ್ಕೆ ಪಡೆಯಬಹುದು

ಶ್ರೀರಂಗನಾಥಸ್ವಾಮಿ ಅರ್ಚಕ ರಂಗಸ್ವಾಮಿಭಟ್ಟ.

ಒಕ್ಕಲಿಗರ ಪತ್ರಿಕೆ.

39—3

ಒಕ್ಕಲಿಗರ ಪತ್ರಿಕೆಯು ಬೆಂಗಳೂರಿನಲ್ಲಿ ಪ್ರತಿ ಬುಧವಾರ ಒಕ್ಕಲಿಗರ ಸಂಘದಿಂದ ಪ್ರಕಟಿಸಲ್ಪಡುತ್ತಿರುವುದು. ಇದು ಬಿ ಎ ಮತ್ತು ಬಿ. ಎಲ್ ಪರೀಕ್ಷೆಗಳನ್ನು ಮಾಡಿರುವ ವಿದ್ಯಾವಂತರಾದ ಒಕ್ಕಲಿಗರಿಂದ ಸುಲಭವಾದ ಒಳ್ಳೇ ಭಾಷೆಯಲ್ಲಿ ಬರೆಯಲ್ಪಟ್ಟು ಅಂದವಾಗಿ ಮುದ್ರಿಸಲ್ಪಡುತ್ತಿದೆ

ಈ ಪತ್ರಿಕೆಯಲ್ಲಿ ಸಂಸ್ಥಾನದ ಆಡಳಿತಗಳು, ಲೋಕವಾರ್ತೆ ಕೃಷಿಗಾರಿಕೆ, ವ್ಯಾಪಾರ, ಕಸಬು, ವ್ಯವಸಾಯ ಮುಂತಾದ ವಿಷಯಗಳನ್ನು ಕುರಿತು ದೀರ್ಘಾಲೋಚನೆ ಮಾಡಿ ಉಪನ್ಯಾಸಗಳು ಬರೆಯಲ್ಪಡುವವು.

ಚಂದಾ ಬೆಂಗಳೂರು ಮತ್ತು ಮೈಸೂರು ಪಟ್ಟಣಗಳಲ್ಲಿಯೂ ಮತ್ತು ನಮ್ಮ ಏಜಂಟರುಗಳಿರುವ ಎಲ್ಲಾ ಪರಸ್ಥಳಗಳಲ್ಲಿಯೂ ವರ್ಷ ೧ ಕ್ಕೆ ೧ ರೂಪಾಯಿ. ತಮ್ಮ ಹೆಸರಿಗೆ ನೇರಾ ತರಿಸಿಕೊಳ್ಳುವವರಿಗೆ ಅಂಚೆ ಕಾಸಲು ಸೇರಿ ೧ ರೂ. ೧೪ ಆಣೆ ಬೀಳುತ್ತದೆ.

ಈ ಪತ್ರಿಕೆಯು ಪಟ್ಟಣ, ಊರು ಗ್ರಾಮಾಂತರಗಳಲ್ಲಿ ಬಹಳ ಪ್ರಚಾರಕ್ಕೆ ಬರುತ್ತಾ ಇದ್ದರಿಂದ ಇದರಲ್ಲಿ ಇಸ್ತಿಹಾರುಗಳು ಪ್ರಕಟಿಸಿದರೆ ವ್ಯಾಪಾರಸ್ಥರಿಗೆ ಬಹಳ ಲಾಭ ಉಂಟು ದರಗಳನ್ನು ಈ ಕೆಳಗೆ ಕಂಡ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರು, ಒಕ್ಕಲಿಗರ ಪತ್ರಿಕೆ,
(ಒಕ್ಕಲಿಗರ ಸಂಘ ೫೩. ಅರಳೇಪೇಟೆ,
ಬೆಂಗಳೂರು ಸಿಟಿ.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

11 14

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ವಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೀಳಾದದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ:—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ನೇರಾ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದು ಚನ್ನಾಗಿಲ್ಲದ್ದು ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ.

ಸಾದ, ಕೆಂಪು, ಕಪ್ಪು, ಬಿಳಿ, ಕಾಫಿ ಟೋಪಿಗಳು ೧ ರೂ. ೮ ಆ.; ೧ ರೂ. ೬ ಆ.; ೧ ರೂ. ೪ ಆ.

ರೇಷ್ಮೆ ಚುಕ್ಕೆಯುಳ್ಳ ಟೋಪಿಗಳು ೧ ರೂ. ೮ ಆ.; ೨ ರೂ.

ಜಾರದ ಟೋಪಿಗಳು ೧ ರೂ. ೧೨ ಆ.; ೧ ರೂ. ೮ ಆ.; ೧ ರೂ. ೬ ಆ.

ಉಸುಕಿನ ಟೋಪಿಗಳು ೧ ರೂ. ೮ ಆ.; ೧ ರೂ. ೬ ಆ.

ಕೂಸುಗಳ ಟೋಪಿ, ಸೂರ್ಯ ಮೇಜೋಡು, ಅರ್ಧ ಮೇಜೋಡು. ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು.

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ.

READY! NOW READY!!

44-2

Full notes on the Matriculation Kanarese text for 1907 by N. R. Venkatasubbacharya. Only a few copies are available. Order at once. Don't lose this opportunity.

Price:—Re. 1 0 0. By V. P. P. Re. 1 2 0

MANAGER, C. L. S. BOOK DEPOT, MYSORE.

ಇಲ್ಲಿನೋಡಿ!

22-11

ತುಮಕೂರು ವಿಕ್ಟರ್ ಇಲಾಖೆಯಲ್ಲಿ, ಯೂರೋಪಿಯನ್ ಮೇಲ್ವಿಚಾರಣೆಯಿಂದ, ಉತ್ತಮ ತರಹದ ಹಾಸನದ ಟೋಪಿಗಳು ಅತಿ ಶ್ರೇಷ್ಠವಾದ ಊಲ್‌ದಾರದಿಂದ ತಯಾರಾಗುತ್ತವೆ ಕ್ರಯ ೧೦ ಆಣೆಯಿಂದ ೧ ರೂ ೧೨ ಆಣೆವರಿಗೂ ದೊರಕುವವು. ಅಪೇಕ್ಷಿಸುವವರಿಗೆ ಕ್ರಯದ ಪಟ್ಟಿಯನ್ನು ರವಾನಿಸುವೆವು ವಿಳಾಸ:—ಮೇನೇಜರ್, ಹಾಸನದ ಟೋಪಿ ಕಾರ್ಖಾನೆ, ವಿಕ್ಟರ್ ಇಲಾಖೆ, ತುಮಕೂರು

ಮಕ್ಕಳ ಆರೋಗ್ಯವನ್ನು

ಯಾವಾಗಲೂ ಕಾಪಾಡುವದು ಹೆತ್ತವರ ಮೇಲೆ ಬಿದ್ದ ಭಾರವಾಗಿದೆ.

ಸಣ್ಣ ಮಕ್ಕಳು ಹೇಳಿದಂತೆ ಕೇಳದೆ ಸಿಟ್ಟಿಗೆ ಒಳಪಡುವಂಥವರಾಗಿದ್ದು ಆಹಾರರುಚಿ ಕಡಿಮೆಯುಳ್ಳವರಾಗಿದ್ದಾರೆಂದು ಕಂಡ ಕೂಡಲೇ

SCOTT'S EMULSION. 31-7

(ಸ್ಕಾಟ್ಸ್ ಇಮಲ್ಷನ್)

ಎಂಬೀ ಸೇವನಾ ಔಷಧವನ್ನು ಕೊಡಬೇಕು.

ಹಾಲಿನಲ್ಲಿ ಕೆಲವು ತೊಟ್ಟು ಬೆರಸಿಕೊಟ್ಟ ಕೂಡಲೇ ದೊಡ್ಡ ವ್ಯತ್ಯಾಸ ತೋರುವದು.

ಅದು ಸಂತೋಷವೂ ಆನಂದವೂ ಕೊಡುವದಾಗಿ ಆಹಾರದ ರುಚಿ ಹೊಂದಿ ಸುಖ ಚೆನ್ನಾಗಿ ತೋರಿಸುವದು

ಕೈಯಿಂದ ಮುಟ್ಟಿ ತಯಾರಿಸಿದ್ದಲ್ಲ

ಎಲ್ಲಾ ಔಷಧಮಾರಾಟಗಾರರಲ್ಲೂ ಸಿಕ್ಕುತ್ತದೆ.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,
ಔಷಧಗಳ ಕಾರ್ಖಾನೆ,
ಲಂಡನ್, ಇಂಗ್ಲೆಂಡ್.

ಈ ಮೀನು ಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ

ವೃತ್ತಾಂತ ಪತ್ರಿಕೆ.

—:0:—

ಸನ್ ೧೯೦೭ ನೇ ಇಸವಿ ಮೇ ತಾ|| ೨ ನೇ ಗುರುವಾರ.

ನಮ್ಮ ಬಹುಮಾನದ ಬಾತ್ಮಿಯು.

ಮೈಸೂರು ನ್ಯಾಯವಿಧಾಯಕ ಸಭೆಯ ವಿಷಯದಲ್ಲಿ ಉತ್ತಮವಾದ ಬಾತ್ಮಿ ಬರೆದವರಿಗೆ ಬಹುಮಾನ ಕೊಡುತ್ತೇವೆಂದು ಪ್ರಕಟಿಸಿದ್ದ ಪ್ರಕಾರ ನಮ್ಮಲ್ಲಿಗೆ ಬರೆದು ಬಂದ ಬಾತ್ಮಿಗಳಲ್ಲಿ ಒಳ್ಳೆಯದೆಂದು ನಮಗೆ ಕಂಡು ಬಂದದ್ದನ್ನು ಈ ಪತ್ರಿಕೆಯ ೩ ನೇ ಪುಟದಲ್ಲಿ ಪ್ರಕಟಿಸಿದ್ದೇವೆ. ಮೆ|| ಬಹೆಸಾಬರು ಬರೆದಿರುವುದು ಬಹಳ ಸ್ವಾರಸ್ಯವಾಗಿದ್ದರೂ ಅದರಲ್ಲಿ ಕೆಲವು ವಿಷಯಗಳು ಈ ಸಭೆಗೆ ಸಂಬಂಧಪಟ್ಟಿಲ್ಲವು. ಇನ್ನೊಬ್ಬ ಬಾತ್ಮಿದಾರರು ಅನೇಕ ಸಂಸ್ಕೃತ ಪದಗಳನ್ನು ಪ್ರಯೋಗಿಸಿ, ಬಹಳಹೆಚ್ಚು ಬರವಣಿಗೆಯನ್ನು ಬರೆದಿರುತ್ತಾರೆ; ಇದರಲ್ಲಿ ಮೇಲ್ಕಂಡ

ವಿಷಯಕ್ಕೆ ಸಂಬಂಧಪಟ್ಟಿರುವ ವಿಚಾರವೇನೂ ಕಾಣು ವುದಿಲ್ಲ. ಮತ್ತೂ ಬ್ಬರು ಈ ಸಭೆಯಲ್ಲಿ ಮೆಂಬರುಗಳ ಯೋಗ್ಯತಾಪಕ್ಷವನ್ನು ಮಾತ್ರ ಕುರಿತು ಬಹಳವಾಗಿ ಆ ಕ್ಷೇಪಣೆ ಮಾಡಿ ಬರೆದಿದ್ದಾರೆ. ಇಂಥಾ ಬಾತ್ಮಿಯನ್ನು ನಾವು ಅಂಗೀಕರಿಸಲಾರೆವು

ಈ ನ್ಯಾಯವಿಧಾಯಕ ಸಭೆಯನ್ನು ಕುರಿತ ಮುಖ್ಯ ವಿಚಾರಗಳನ್ನು ಯಾರೂ ಚರ್ಚಿಸಿರುವುದಿಲ್ಲ. ಆ ವಿಚಾರ ಗಳ್ಯಾವವೆಂದರೆ—

(೧) ಬ್ರಿಟಿಷ್ ಇಂಡಿಯಾದಲ್ಲಿ ಇರತಕ್ಕ ಸಭೆಗೂ ಮೈಸೂರಿನ ಸಭೆಗೂ ಇರುವ ತಾರತಮ್ಯವೇನು?—ಮೈ ಸೂರಿನ ಸಭೆಯಲ್ಲಿ ಕಾನೂನುಗಳನ್ನು ಮಾತ್ರ ಕುರಿತು ಚರ್ಚೆ ನಡೆಯುತ್ತದೆ. ಸಂಸ್ಥಾನದ ಜಮಾ ಖರ್ಚಿನ ವಿಷ ಯದಲ್ಲಿ ಮೆಂಬರುಗಳು ಏನೂ ಹೇಳಕೂಡದು. ಆದರೆ ಪ್ರಜಾಪ್ರತಿನಿಧಿ ಸಭೆಯಲ್ಲಿ ಈ ಭಾಗವು ವಿವರಿಸಲ್ಪಡೋ ದರಿಂದ ಅದನ್ನೇ ಮತ್ತೆ ಈ ಸಭೆಯಲ್ಲೂ ಚರ್ಚಿಸಬೇ ಕಾದ ಅಗತ್ಯವಿಲ್ಲವೆಂದು ಯೋಚಿಸಿರಬಹುದು. ಹ್ಯಾಗ ಈ ಭಾಗವನ್ನು ಬಾತ್ಮಿದಾರರು ಚರ್ಚಿಸಿ ಬರೆಯಬೇಕಾ ಗಿತ್ತು.

(೨) ಸಭೆಯ ಮೆಂಬರುಗಳ ವಿಚಾರವು—ಈ ಸಭೆ ಯಲ್ಲಿ ಎಷ್ಟು ಮಂದಿ ಎಂಥೆಂಥಾ ಸರ್ಕಾರಿ ಅಧಿಕಾರಿಗಳು ಮೆಂಬರಾಗಿರಬೇಕು; ಪ್ರಜಾಪಕ್ಷದ ಮೆಂಬರುಗಳು ಎಷ್ಟು ಮಂದಿ ಯಾವ ಯಾವ ಯೋಗ್ಯತಾಪಕ್ಷವನ್ನುಳ್ಳವ ರು ಮೆಂಬರಾಗಿರಬೇಕು ಎಂಬೀ ವಿಚಾರವನ್ನು ಕುರಿತು ಬಾತ್ಮಿದಾರರು ಚರ್ಚಿಸಿಲ್ಲ.

(೩) ಸಭೆಗೆ ಮೆಂಬರುಗಳನ್ನು ನೇಮಿಸುವ ವಿಧಾನ ವ್ಯಾಗೆ?—ಮೆಂಬರುಗಳ ಪೈಕಿ ಒಬ್ಬಿಬ್ಬರನ್ನಾದರೂ ಪ್ರಜೆ ಗಳು ಚುನಾಯಿಸುವಂತೆ ಸರ್ಕಾರದವರು ಯಾಕೆ ಏರ್ಪಾ ಡು ಮಾಡಬಾರದಾಗಿತ್ತು? ಹಾಗೆ ಏರ್ಪಾಡು ಮಾಡಿದಲ್ಲಿ ಎಂಥಾ ಪ್ರಜೆಗಳು ವೋಟ್ (ಸಮ್ಮತಿ) ಹಾಕುವುದಕ್ಕೆ ಅರ್ಹ ರಾಗುವರು? ಎಂಬೀ ವಿಚಾರದಲ್ಲೂ ಬಾತ್ಮಿದಾರರೇನೂ ಚರ್ಚೆ ಮಾಡಿಲ್ಲ

(೪) ಮೆಂಬರುಗಳ ಅಧಿಕಾರ—ಇಂಡಿಯಾ ಗವರ್ನ ಮೆಂಟಿನಲ್ಲಿರುವಂತೆ ಈ ಸಭೆಯ ಮೆಂಬರುಗಳಿಗೂ ಗವ ರ್ನಮೆಂಟ್ ನಡವಳಿಕೆ ವಿಷಯದಲ್ಲಿ ಪ್ರಶ್ನೆಗಳನ್ನು ಕೇಳು ವ ಅಧಿಕಾರವನ್ನು ಕೊಡಬಾರದೇ? ಅದ್ಯಾಕೆ? ಎಂಬೀ ಸಂಗತಿಯನ್ನು ಕುರಿತು ಬರೆಯಬೇಕಾಗಿತ್ತು

(೫) ಮೊದಲಿನಂತೆಯೇ ಸರ್ಕಾರದವರೇ ಕಾನೂ ನು ಜಾರಿಗೆ ತರುವುದಕ್ಕೂ ಈಗ ಈ ಸಭೆಯವರು ಚರ್ಚೆ ಮಾಡಿ ಜಾರಿಗೆ ತರುವುದಕ್ಕೂ ವ್ಯತ್ಯಾಸವೇನು? ಮತ್ತು ಈ ಸಭೆಯಿಂದಾಗುವ ಪ್ರಯೋಜನವೇನು?

ಈ ಮೊದಲಾದ ಸಂಗತಿಗಳನ್ನು ಚರ್ಚಿಸಬೇಕಾಗಿತ್ತು. ಬಾತ್ಮಿದಾರರೂ ಈ ಪೈಕಿ ಒಂದನ್ನೂ ಚರ್ಚಿಸಿಲ್ಲ. ಈಗ ಬಹುಮಾನ ಪಡೆಯುವುದಕ್ಕಾಗಿ ವಾಚಕರು ವಿಷಯವನ್ನು ಕುರಿತು ಬರೆಯಲಿ—"ಮೈಸೂರು ಗವ ರ್ನಮೆಂಟಿನವರು ರಾಜಧಾನಿಯಲ್ಲಿ ನವರಾತ್ರಿ ಉತ್ಸವಕಾ ಲದಲ್ಲಿ ನಡೆಸಬೇಕೆಂದು ಗೊತ್ತುಮಾಡಿರುವ ಕೈಗಾರಿಕೆಗಳ ಮತ್ತು ವ್ಯವಸಾಯ ಸಂಬಂಧವಾದ ಪ್ರದರ್ಶನವು." ಈ ವಿಷಯದಲ್ಲಿ ವಾಚಕರು ಬಾತ್ಮಿಯನ್ನು ಬರೆದು ಮೇ ತಿಂ ಗಳು ೧೯ನೇ ತಾರೀಖಿನೊಳಗಾಗಿ ನಮ್ಮಲ್ಲಿಗೆ ಕಳುಹಿಸ ಬೇಕು. ಉತ್ತಮವಾದ ಬಾತ್ಮಿಗೆ ೪ ರೂಪಾಯಿ ಬಹುಮಾ ನ ಕೊಡುವೆವು. ಹೀಗೆ ಬಹುಮಾನ ಕೊಡುವದರಲ್ಲಿ ನ ಮ್ಮ ಉದ್ದೇಶವೇನೆಂದರೆ—ನಮ್ಮ ವಾಚಕರಲ್ಲಿ ವಿವೇಚನಾ ಶಕ್ತಿಯೂ ಬುದ್ಧಿಕುಶಲತೆಯೂ ಹೆಚ್ಚಬೇಕು. ಅವರು ಸಂಗತಿಗಳನ್ನು ಕುರಿತು ಕಾರಣಸಹಿತವಾಗಿ ಚರ್ಚಿಸುವಂ ತಾಗಬೇಕು. ಹೀಗೆ ಚರ್ಚೆ ಮಾಡುವಲ್ಲಿ ಅವರು ಸರ್ವ ಜನಗಳಿಗೂ ಉಪಕಾರವಾಗುವಂಥಾ ಭಾಗಗಳನ್ನು ಕಂ ಡುಹಿಡಿದು ಸಾಧಿಸಬೇಕಲ್ಲದೆ ಅಧಿಕಾರಿಗಳ ಮೇಲಾಗಲಿ ಇತರರ ಮೇಲಾಗಲಿ ತಮಗಿರುವ ಹೊಟ್ಟೆಕಿಚ್ಚು ಅಸಮಾ ಧಾನ ದ್ವೇಷಾಸೂಯೆಗಳನ್ನು ಮುಖ್ಯವೆಂದು ಇಟ್ಟುಕೊಂ ಡು ಚರ್ಚಿಸಬಾರದು

ಈಜಿಪ್ಟ್ ರಾಜ್ಯದ ಗವರ್ನರಾಗಿದ್ದ ಲಾರ್ಡ್ ಕ್ರೋಮರ್ ಎಂಬ ಮಹನೀಯನು—ಈಜಿಪ್ಟ್ ಜನರೇ ಬರೆದು ಪ್ರಕಟಿಸುವ ಪತ್ರಿಕೆಗಳನ್ನು ಬಿಡದೆ ಓದುತ್ತಿದ್ದನೆಂತಲೂ, ಅವುಗಳಲ್ಲಿ ಪ್ರಕಟವಾದ ಯಾವ ಬಾತ್ಮಿಯಾಗಲಿ ಗವರ್ನ ಮೆಂಟಿನವರ ಪರ್ಯಾಲೋಚನೆಗೆ ಯೋಗ್ಯವಾಗಿರಲಿಲ್ಲವೆಂ ತಲೂ ಸಹಜವಾದ ಮತ್ತು ಕಾರಣಸಹಿತವಾದ ರೀತಿಯಲ್ಲಿ ವಿಷಯಗಳನ್ನು ಕುರಿತು ಚರ್ಚಿಸುತ್ತಾ ಇಲ್ಲವೆಂತಲೂ ಹೇ ಳಿರುತ್ತಾನೆ. ಈ ಮಾತು ಈ ಸಂಸ್ಥಾನದಲ್ಲಿ ಪ್ರಕಟವಾ ಗುವಂಥಾ ಪತ್ರಿಕೆಗಳ ವಿಷಯದಲ್ಲೂ ಹೇಳಬಹುದಾಗಿದೆ ಎಂದು ಕಾಣುವುದು. ಬಾತ್ಮಿ ಬರೆಯತಕ್ಕವರು ಮುಖ್ಯವಾ ಗಿ ಗವರ್ನಮೆಂಟ್ ನೌಕರರನ್ನು ಅಲ್ಲಗಳೆಯುವುದು, ಇ ಲ್ಲವೇ ಅವರನ್ನು ಹೊಗಳುವುದು, ಇಷ್ಟೇ ಉದ್ದೇಶವುಳ್ಳ ವರಾಗಿದ್ದಾರೆಂದು ತೋರುತ್ತಿದೆ. ಇದಕ್ಕೆ ಪ್ರತಿಯಾಗಿ ಯಾ ವುದು ನ್ಯಾಯವಾದದ್ದು, ಯಾವುದು ಒಳ್ಳೆಯದು, ಯಾವುದ ರಿಂದ ಪ್ರಜೆಗಳಿಗೆ ಉಪಕಾರವಾಗುವುದು ಎಂಬೀ ವಿಚಾರ ವನ್ನು ಯೋಚಿಸಿ ಅದಕ್ಕಾಗಿ ಸಾಹಸಪಡುವುದೇ ನಮ್ಮ ಮುಖ್ಯೋದ್ದೇಶವಾಗಿದ್ದಲ್ಲಿ ಸರ್ಕಾರಕ್ಕೂ ಸಂಸ್ಥಾನಕ್ಕೂ ತುಂಬಾ ಸಹಾಯವಾದೀತು

ವಿವಾಹ ಕಾರ್ಯಗಳಲ್ಲಿ ಹಿಂದೂ ದೇಶಸ್ಥರಿಗೂ ಪಶ್ಚಿಮಾತ್ಯರಿಗೂ ಇರುವ ತಾರತಮ್ಯ

ಮೈಸೂರಿನಲ್ಲಿ ಪ್ರಕಟಿಸಲ್ಪಡುವ ಇಂಗ್ಲೀಷು ವರ್ತಮಾನ ಪತ್ರಿಕೆ ಗಳಲ್ಲಿ ಮ॥ ರಾ॥ ಶ್ರೀನಿವಾಸರಾಯರೂ, ಶ್ರೀಮತ್ ಸಂಪತ್ರಾವ್ ಗಾ ಯಕವಾಡ್‌ರವರೂ ಮಾಡಿರುವ ವಿವಾಹಗಳನ್ನು ಕುರಿತಾದ ಉಪನ್ಯಾ ಸಗಳು ಪ್ರಕಟಿಸಲ್ಪಟ್ಟಿರುವವು ಮ॥ ರಾ॥ ಶ್ರೀನಿವಾಸರಾಯರು ಥಿಯೊ ಸಾಫಿಕಲ್ ಸಂಘಕ್ಕೆ ಸೇರಿರುವರು ಶ್ರೀಮತ್ ಸಂಪತ್ರಾವ್ ಗಾಯಕ ವಾಡ್‌ರವರು ಬರೋಡೆ ಮಹಾರಾಜರವರ ಸಹೋದರರು ಇವರು ಇಂ ಗ್ಲಿಷ್ ಮತ್ತು ಸ್ವದೇಶ ಭಾಷೆಗಳಲ್ಲಿ ಪಾಂಡಿತ್ಯವನ್ನು ಸಂಪಾದಿಸಿ ಭೂ ಮಂಡಲದ ಅನೇಕ ಭಾಗಗಳಲ್ಲಿ ವಿಶೇಷವಾಗಿ ಸಂಚಾರಮಾಡಿರುವರು. ಮ॥ ರಾ॥ ರಾ॥ ಶ್ರೀನಿವಾಸರಾಯರು ವಿವಾಹದ ವಿಷಯ ಕೋಲಾರದಲ್ಲಿ ಉಪನ್ಯಾಸ ಮಾಡುವಾಗ್ಗೆ ಪಾಶ್ಚಾತ್ಯರಲ್ಲಿ ವಿವಾಹವೆಂಬುದು ಒಂದು ಗು ತ್ತಿಗೆಯ ಒಪ್ಪಂದವೆಂತಲೂ ಕಾಮಾಭಿಲಾಷೆಗಳನ್ನು ತೃಪ್ತಿಪಡಿಸಿಕೊ ಳ್ಳುವುದೇ ಅದರ ಮುಖ್ಯೋದ್ದೇಶವೆಂತಲೂ ಅದರ ಸಂಪ್ರದಾಯಗಳನ್ನ ನುಸರಿಸುವವರಿಗೆ ಆಗತಕ್ಕ ನಷ್ಟಗಳು ಅಷ್ಟಿಷ್ಟಲ್ಲವೆಂತಲೂ ಅಭಿಪ್ರಾಯ ಕೊಡಿಸಿದರು ಶ್ರೀಮತ್ ಸಂಪತ್ರಾಯರಾದರೋ ಪಶ್ಚಿಮಾತ್ಯರಲ್ಲಿ ವಿವಾಹವು ಬಹು ಗಾಂಭೀರ್ಯಕಾರ್ಯವೆಂತಲೂ, ಅದು ನಿಜವಾಗಿಯೂ ಆ ದಿನಗಳಲ್ಲಿ ಬಹು ಪವಿತ್ರವಾದದ್ದೆಂದೆಣಿಸಲ್ಪಡುತ್ತದೆಂತಲೂ ಅದ ರಿಂದ ಸ್ತ್ರೀಸಮುದಾಯಕ್ಕೆ ಹೆಚ್ಚಾದ ಮಾನ ಉಂಟೆಂತಲೂ ಅಂಥಾ ವಿವಾಹದಿಂದ ಹುಟ್ಟತಕ್ಕ ಮಕ್ಕಳು ಕಾಯಪುಷ್ಟಿಯಲ್ಲಿಯೂ ವಿದ್ಯೆ ಯಲ್ಲಿಯೂ ಶ್ರೇಷ್ಠರಾಗುತ್ತಾರೆಂತಲೂ ತಿಳಿಸಿದರು

ಮ॥ ರಾ॥ ಶ್ರೀನಿವಾಸರಾಯರು ತಮ್ಮ ಉಪನ್ಯಾಸದಲ್ಲಿ ಸೂಚಿಸಿ ದ ಅಂಶಗಳಿಗೂ ಶ್ರೀಮತ್ ಸಂಪತ್ರಾಯರು ಸೂಚಿಸಿದ ಅಂಶಗಳಿಗೂ ಯಾವ ವಿಧವಾದ ಸಂಬಂಧವೂ ಕಾಣಬರದೆ ಒಂದಕ್ಕೊಂದು ವಿರುದ್ಧ ವಾಗಿರುತ್ತವೆ ಗಾಯಕವಾಡ ಮಹಾರಾಜರವರ ಸಹೋದರರು ದೇಶ ಸಂಚಾರ ಮಾಡಿ ಎಲ್ಲವನ್ನು ತಮ್ಮ ಕಣ್ಣುಗಳಿಂದ ನೋಡಿ, ನೋಡದೆ ಇದ್ದವುಗಳನ್ನು ಪುಸ್ತಕಗಳಲ್ಲಿ ಓದಿ ತಿಳಿದಿರುವರು ಶ್ರೀನಿವಾಸರಾಯ ರು ಯಾರೋ ಒಬ್ಬ ಇಂಗ್ಲೀಷು ದುರಾತ್ಮನಾದ ಕವಿಯ ಉದಾಹರಣೆ ಯಿಂದ ಆಂಗ್ಲೇಯರೆಲ್ಲರೂ ಇದೇ ರೀತಿಯಲ್ಲಿರುವರೆಂದು ಸಾಧಿಸುವ ದು ಕೇವಲ ತಪ್ಪೆಂದು ಹೇಳುವದು ನ್ಯಾಯವಲ್ಲವೇ? ವೈರ್ಗ ಕವಿಯು ದುಷ್ಟನಾಗಿರುವ ಪಕ್ಷಕ್ಕೆ, ಟೆನಿಸನ್ ಮತ್ತು ಬ್ರೌನಿಂಗ್ ಎಂಬ ಮಹಾಕವೀಶ್ವರರನ್ನು ದುಷ್ಟರೆಂದು ಸಾಧಿಸಬಹುದೋ? ಶ್ರೀನಿವಾಸರಾಯರು ನ್ಯಾಯವಾದ ವಿವಾಹವು ಯಾವ ರೀತಿಯಲ್ಲಿರಬೇ ಕೆಂಬುದನ್ನು ತೋರಿಸುವದಕ್ಕೆ ಕೊಟ್ಟ ಸಲಹೆಗಳು ಅನುಪಯೋಗ ವಾದವುಗಳೆಂದು ಬುದ್ಧಿವಂತರಾದವರು ತಿಳಿದಿರುವರು ಶ್ರೀನಿವಾಸರಾ ಯರು ಕೊಟ್ಟ ವಿಷಪ್ರಾಯವಾದ ಉಪನ್ಯಾಸಕ್ಕೆ ಸಂಪತ್ರಾಯರದು ಪರಮೌಷಧವಾಗಿ ಪರಿಣಮಿಸಿರುವದು ಈ ದೇಶಸ್ಥರಿಗೂ ಪಶ್ಚಿಮಾ ತ್ಯರಿಗೂ ವಿವಾಹದ ವಿಷಯ ಒಂದು ದೊಡ್ಡ ವ್ಯತ್ಯಾಸವಿರುವದು. ಆಂ ಗ್ಲೇಯರಲ್ಲಿ ಯೌವನಸ್ಥರೂ ಯುವತಿಯರೂ ಪ್ರೇಮದಿಂದ ಕೂಡಿದ ವರಾಗಿ ತಮತಮಗೆ ಎಲ್ಲಾ ವಿಷಯಗಳಲ ಅನುಕೂಲವಾಗಿರುವ ಸತಿಪ ತಿಗಳನ್ನು ಸಂಪಾದಿಸಿಕೊಳ್ಳುವರು ಇಂಥಾದ್ದಕ್ಕೆ ಸ್ವಯಂವರವೆಂ ದು ಹೇಳಬಹುದಲ್ಲವೇ? ಹಿಂದೂ ದೇಶದಲ್ಲಾದರೋ ತಂದೆತಾಯಿಗಳು ಬಂಧುಬಾಂಧವರೇ ಮೊದಲಾದವರು ತಮ್ಮ ಮನೆಯಲ್ಲಿರುವ ಮಗನಿ ಗೋ ಅಥವಾ ಮಗಳಿಗೋ ವಿವಾಹ ಮಾಡಲೋಸುಗ ಕನ್ಯೆಯನ್ನೋ ವರನನ್ನೋ ಹುಡುಕುವ ಭಾರವನ್ನು ತಾವೇ ವಹಿಸಿಕೊಳ್ಳುವರು ಮಗ ನಿಗೆ ತಕ್ಕ ಕನ್ಯೆಯನ್ನೂ ಮಗಳಿಗೆ ತಕ್ಕ ವರನನ್ನೂ ಹುಡುಕುವಾಗ್ಗೆ ಜೋತಿಷವನ್ನು ಕೇಳಿ ಅದರ ಪ್ರಕಾರ ನಿರ್ಮಾನಿಸಬೇಕೆಂದು ಶ್ರೀನಿವಾ ಸರಾಯರು ಅಭಿಪ್ರಾಯ ಪಡುತ್ತಾರೆ ಜೋತಿಷಶಾಸ್ತ್ರವು ಸತ್ಯವಾದ ವಿಜ್ಞಾನಶಾಸ್ತ್ರವೆಂತಲೂ ಅದು ಪಾಶ್ಚಾತ್ಯರಲ್ಲಿರುವ ಕಾಮಿಸ್ಟ್ರಿ ಮತ್ತು ಫ್ರೆನಾಲಜಿ ಎಂಬೀ ಶಾಸ್ತ್ರಗಳಿಗೆ ಸಮಾನವಾಗಿದೆಯೆಂತಲೂ ಉಪನ್ಯಾಸಕರು ಅಭಿಪ್ರಾಯಪಟ್ಟರು ಆದರೆ ಕಾಮಿಸ್ಟ್ರಿ ಮೊದಲಾ ದ ವಿದ್ಯೆಗಳು ಮೋಸದಿಂದ ಕೂಡಿದವುಗಳೆಂದು ಪಾಶ್ಚಾತ್ಯರು ತಿಳಿದಿ ರುವರು ಇದನ್ನು ಶ್ರೀನಿವಾಸರಾಯರು ಮರೆತಿರುವಂತೆ ತೋರುತ್ತ ದೆ ಕಾಮಿಸ್ಟ್ರಿಯಿಂದ ಜನರನ್ನು ಮೋಸಗೊಳಿಸಿ ಜೀವನ ಮಾ ಡುತ್ತಿರುವ ಜನರನ್ನು ಕಾರಾಗೃಹಪ್ರವೇಶ ಮಾಡಿಸುವದು ಇಂಗ್ಲೆಂಡ್ ದೇಶದಲ್ಲಿ ರಾಜಕಟ್ಟಳೆಯಾಗಿರುವದು ಜೋತಿಷಶಾಸ್ತ್ರವು ಸುಳ್ಳೆಂಬು ದು ಸ್ಥಾಪಿಸುವದು ಕಷ್ಟವಲ್ಲ ಜಾತಕಗಳನ್ನು ನೋಡಿ ಕನ್ಯೆಯನ್ನು ನಿಶ್ಚಯಿಸುವದು ಕೇವಲ ಹಾಸ್ಯಾಸ್ಪದವಾದುದು

ಹಿಂದೂ ದೇಶದಲ್ಲಿ ಸಂಘಪರಿಷ್ಕರಣವಾಗಬೇಕಾದರೆ ಜೋತಿಷ್ಯರ ನ್ನೂ ಅವರ ಅಬದ್ಧ ಶಾಸ್ತ್ರವನ್ನೂ ದೂರಮಾಡುವುದೇ ಪ್ರಥಮ ಕ ರ್ತವ್ಯವಾಗಿರಬೇಕು ತಂದೆತಾಯಿಗಳು ತಮ್ಮ ಮಕ್ಕಳಿಗೆ ಮದುವೆ ಮಾಡುವದಕ್ಕಿರುವಾಗ ಅವರ ವಯಸ್ಸಿನ ತಾರತಮ್ಯ, ಅವರು ಕಲಿತಿರು ವ ವಿದ್ಯೆ, ಅವರವರ ಬಂಧುಬಾಂಧವರ ಸ್ಥಿತಿಗತಿ, ಅವರ ಮನೋಭಿಲಾ ಷೆಗಳು ಇವುಗಳೇ ಮೊದಲಾದವುಗಳನ್ನು ವಿಚಾರಿಸಿ ತಿಳಿಯಬೇಕಾಗಿ ರುತ್ತದೆ. ವಿವಾಹಕಾರ್ಯಗಳಲ್ಲಿ ಪಾಶ್ಚಾತ್ಯರ ನಡವಳಿಕೆಗಳನ್ನು ಯಾವ ಬದಲಾವಣೆ ಇಲ್ಲದೆ ಇಲ್ಲಿನ ಜನರು ಅನುಸರಿಸಬೇಕೆಂಬುದು ನಮ್ಮ ಭಿಪ್ರಾಯವಲ್ಲ. ಆದರೆ ವಿವಾಹವಾಗುವದಕ್ಕಿರುವ ದಂಪತಿಗಳು ಪೂರ್ಣ ವಯಸ್ಕರಾಗಿರಬೇಕೆಂತಲೂ ಉಭಯರ ಅನುಮತಿಯನ್ನು ಪಡೆದೇ ತಂದೆತಾಯಿಗಳು ವಿವಾಹವನ್ನು ಜರುಗಿಸಬೇಕೆಂತಲೂ ನಾವು ಅಭಿಪ್ರಾಯ ಪಡುತ್ತೇವೆ.

ಒಳದೇಶದ ವೃತ್ತಾಂತಗಳು.

ಕಳೆದ ಶನಿವಾರ ಬೆಂಗಳೂರಿನಲ್ಲಿ ಸುಮಾರು ನಾಲ್ಕು ಅಂಗುಲ ಪ್ರಮಾಣದಷ್ಟು ಮಳೆ ಸುರಿದು ಕೆರೆ ಕಟ್ಟೆಗಳೆಲ್ಲಾ ತುಂಬಿವೆ ಎಂದು ತಿಳಿದು ಬಂದಿದೆ

❖❖❖

ಬೆಂಗಳೂರಿನಲ್ಲಿ ಬಹುಕಾಲದಿಂದಲೂ ಬ್ಯಾರಿಸ್ಟರಾಗಿದ್ದ ಮೆ॥ ಜೆಂಸ್ ವಿಲ್ಯಂ ಹೇಸ್ ಯವರು ಹಿಂದಿನ ಸೋಮವಾರ ಬೆಳಿಗ್ಗೆ ಬೌರಿಂಗ್ ಆಸ್ಪತ್ರೆಯಲ್ಲಿ ಕಾಲವಾದರು ಇವರಿಗೆ ಮರಣಕಾಲದಲ್ಲಿ ೬೨ ವರುಷವಾಗಿತ್ತು.

❖❖❖

ರಾಜಧಾನಿಯ ಜನರಲ್ ಆಸ್ಪತ್ರೆ ಎದುರಿಗೆ ಸರ್ಕಾರದವರು ಕಟ್ಟ ಬೇಕೆಂದು ಗೊತ್ತುಮಾಡಿರುವ ಕೈಗಾರಿಕೆಗಳ ಪಾಠಶಾಲೆಗಾಗಿ ಆ ಭಾಗ ದಲ್ಲಿ ಕೆಲವು ಮನೆಗಳನ್ನೂ ನಿವೇಶನಗಳನ್ನೂ ತೆಗೆದುಕೊಳ್ಳುವುದಕ್ಕೆ ಮ್ಯುನಿಸಿಪಾಲಿಟಿಯವರು ಪ್ರಯತ್ನ ಪಡುತ್ತಿದ್ದಾರೆ.

❖❖❖

ಬರೋಡಾ ಸಂಸ್ಥಾನದ ಮಹಾರಾಜರು ಮುಂದಿನ ವಾರ ಮಾರೀ ಕಣಿವೆಗೆ ದಯಮಾಡಿ, ಅಲ್ಲಿಂದ ಬೆಂಗಳೂರಿಗೂ ಕೋಲಾರ್ ಚಿನ್ನದ ಗಣಿ, ಶಿವಸಮುದ್ರದ ಕಾರ್ಖಾನೆಗಳಿಗೂ ಬಂದು ಅಲ್ಲಲ್ಲಿನ ವಿಶೇಷಗ ಳನ್ನು ಪರಾಂಬರಿಸಿ, ಹಾಗೇ ನೀಲಗಿರಿಬೆಟ್ಟದ ಮೇಲಕ್ಕೆ ದಯಮಾಡು ವವರಾಗಿದ್ದಾರೆ

❖❖❖

ಬರೋಡಾ ಮಹಾರಾಜರವರ ಸಹೋದರರು ಕಳೆದ ವಾರ ರಾಜ ಧಾನಿಯಲ್ಲಿದ್ದಾಗ್ಗೆ ಇಲ್ಲಿನ ಕಿವುಡು ಮೂಗರ ಮತ್ತು ಕುರುಡರ ಪಾಠಶಾಲೆಗೆ ದಯಮಾಡಿ ಅಲ್ಲಿ ನಡೆಯುವ ಕಾರ್ಯಗಳನ್ನು ನೋಡಿ ತುಂಬಾ ಸಂತೋಷಪಟ್ಟು ಆ ಪಾಠಶಾಲೆಯ ಮೂಲಧನಕ್ಕೆ ೧೦೦ ರೂ. ಬಹುಮಾನ ಕೊಟ್ಟು ಹೋದರು

❖❖❖

ಒಂದು ವಾರದ ಕೆಳಗೆ ಹಾಸನದ ಬಳಿ ಒಂದು ಸಂತೆಯಿಂದ ಹೋಗುತ್ತಿದ್ದ ಐದು ಗಾಡಿಗಳಿಗೆ ಕಳ್ಳರು ಬಿದ್ದು ಎರಡು ಸಾವಿರ ರೂಪಾಯಿನ ಸರಕನ್ನೂ ಹಣವನ್ನೂ ದೋಚಿಕೊಂಡು ಹೋದರು ಪೋಲೀಸ್ ಸೂಪರಿಂಟೆಂಡೆಂಟರು ಆ ಪ್ರಾಂತ್ಯಕ್ಕೋಗಿದ್ದು ತನಿಖೆ ಮಾಡಿಕೊಂಡು ಬಂದಿರುತ್ತಾರೆ

❖❖❖

ಯೂರೋಪಿಯನ್ ರಾಜವಂಶಕ್ಕೆ ಸೇರಿದ ಪ್ರಿನ್ಸ್ ಡೆವಿಡಾ ಫ್ ಎಂಬುವರು ಕಳೆದ ತಿಂಗಳು ಷಿಕಾರಿ ಮಾಡುವುದಕ್ಕಾಗಿ ಕಾಕನ ಕೋಟೆ ಜಂಗಲಿಗೆ ಹೋಗಿದ್ದು ಎರಡು ವಾರಗಳ ತನಕ ಷಿಕಾರಿಮಾಡಿ ಒಂದು ಆನೆ, ಮೂರು ಕಾಡುಕೋಣ, ಕೆಲವು ಜಿಂಕೆಗಳನ್ನು ಕೊಂದು, ಕಳೆದ ೧೬ನೆ ತಾ॥ ವಾಪಸು ಬಂದು ಶಿವೊಗ ಹೋಗುವುದಕ್ಕಾಗಿ ಮರುದಿನವೇ ಬೊಂಬಾಯಿಗೆ ಪ್ರಯಾಣಮಾಡಿದರು

❖❖❖

ಹಾಸನದ ಮಿಷನ್ ಗರ್ಲ್ಸ್ ಸ್ಕೂಲಿನ ಮತ್ತು ಅರ್ಫನೇಜಿನ ಸೂಪರಿಂಟೆಂಡೆಂಟಾಗಿದ್ದ ಮಿಸ್ ಇ ವಿಕರ್ಸ್‌ಯವರು ಸೀಮೆಗೆ ಹೋಗುವುದಕ್ಕಾಗಿ ಕಳೆದ ಬುಧವಾರ ಬೊಂಬಾಯಿಗೆ ಪ್ರಯಾಣ ಮಾಡಿದರು ಅವರಿಗೆ ಹಾಸನದಲ್ಲಿ ಅಡ್ರೆಸ್ಸುಗಳನ್ನು ಕೊಟ್ಟು ಸಂ ತೋಷಪೂರ್ವಕವಾದ ಉತ್ಸವಗಳನ್ನು ನಡಿಸಿ ಸುಖ ಪ್ರಯಾಣವನ್ನು ಬಯಸಿದರು ಆಕೆ ಒಂದು ವರುಷ ವಿಲಾಯಿತಿಯಲ್ಲಿದ್ದು ವಾಪಸು ಬರುವರೆಂದು ಕೇಳುತ್ತೇವೆ.

❖❖❖

ಮುಂದೆ ಹೇಳುವ ಅಮಲ್ದಾರುಗಳ ವರ್ಗಾವರ್ಗಿ ಹುಕುಂ ಆಗಿರು ವಂತೆ ಕೇಳುತ್ತೇವೆ—ಮೆ॥ ಅಬ್ದುಲ್ ಕರೀಂಯವರು ಬಾಗೇಪಲ್ಲಿಯಿಂ ದ ಪಾವಗಡಕ್ಕೆ, ಮೆ॥ ವಿ. ಗೋಪಾಲರಾಯರು ಚಿಕ್ಕನಾಯಕನಹ ಳ್ಳಿಯಿಂದ ಬಾಗೇಪಲ್ಲಿಗೆ, ಮೆ॥ ಎಂ ರಂಗನಾಥರಾಯರು ಕುಣಿಗಲಿ ನಿಂದ ಚಿಕ್ಕನಾಯಕನಹಳ್ಳಿಗೆ, ಮೆ॥ ಆರ್ ಶಾಮರಾಯರು ಗೋರೀ ಬಿದನೂರಿನಿಂದ ಚಿಕ್ಕಬಳ್ಳಾಪುರಕ್ಕೆ, ಮೆ॥ ಜೆ. ನಾರಾಯಣರಾಯರು ಚಿಕ್ಕಬಳ್ಳಾಪುರದಿಂದ ಶಿಡ್ಲಘಟ್ಟಕ್ಕೆ, ಮೆ॥ ಕೆ. ಹನುಮಂತರಾಯರು ಶಿಡ್ಲಘಟ್ಟದಿಂದಗೋರೀಬಿದನೂರಿಗೆ.

❖❖❖

ಬೆಂಗಳೂರು ಸೂರ್ಯೋದಯ ಪತ್ರಿಕೆಯ ಎಡಿಟರವರು ಶ್ರೀಮನ್ ಮಹಾರಾಜರವರ ಕಲ್ಕತ್ತಾ ಪ್ರಯಾಣದ ವಿಷಯದಲ್ಲಿ ನಿಜವಲ್ಲದ ಸಂಗತಿಗಳನ್ನು ಪ್ರಕಟಿಸಿದ್ದಕ್ಕಾಗಿ ಸರ್ಕಾರದವರು ಅವರಿಂದ ಮಾ ಫೀ ಕಾಗದವನ್ನು ತರಿಸಿಕೊಂಡು ಅದರ ಮೇಲೆ ಅವರಿಗೆ ತಿಳಿಸಿರುವುದೇನೆಂ ದರೆ—ನೀವು ಈ ರೀತಿ ಇನ್ನೊಂದು ವೇಳೆ ನಡದಲ್ಲಿ ಶ್ರೀಮನ್ಮಹಾ ರಾಜಾ ಗವರ್ನಮೆಂಟಿನವರು ತಮ್ಮ ಸಂಸ್ಥಾನದೊಳಗೆ ಅಂಥಾದ್ದೇನೂ ಪ್ರಕಟವಾಗದಂತೆ ನೋಡಿಕೊಳ್ಳಬೇಕಾಗುವದೆಂದು ಸ್ನೇಹಭಾವದಿಂದ ನಿಮ್ಮನ್ನು ಎಚ್ಚರಿಸುತ್ತೇವೆ ಎಂಬುದೇ.

ಮೈಸೂರು ಸರ್ಕಾರಿ ಹುಕುಮುಗಳು.

ಪಟೇಲರಿಗೆ ಬಹುಮಾನ ಕೊಡುವುದು.

ಬೆಂಗಳೂರ್ ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರು ಪ್ರತಿ ಒಂದು ತಾಲ್ಲೂಕಿನಲ್ಲೂ ಗ್ರಾಮಗಳನ್ನು ಪಾಕಾಗಿಯೂ ಆರೋಗ್ಯದ ರೂಲ್ಸಿಗೆ ಅನುಸಾರವಾಗಿಯೂ ಇಟ್ಟುಕೊಂಡಿರುವಂಥಾ ಪಟೇಲರಿಗೆ ಬಹುಮಾನ ಕೊಟ್ಟಲ್ಲಿ ತುಂಬಾ ಪ್ರಯೋಜನವಾಗುವುದೆಂದು ಗವರ್ನಮೆಂಟಿಗೆ ಶಿಫಾರಸು ಮಾಡಿದರು. ಗವರ್ನಮೆಂಟಿನವರು ಅದರ ಮೇಲೆ ಇತರ ಡೆಪ್ಯುಟಿ ಕಮಿಷನರುಗಳಿಂದಲೂ, ರೆವಿನ್ಯೂ ಮತ್ತು ಸ್ಯಾನಿಟರಿ ಕಮಿಷನರುಗಳಿಂದಲೂ ಅವರ ಅಭಿಪ್ರಾಯಗಳನ್ನು ತರಿಸಿಕೊಂಡು ಹುಕುಂ ಕೊಟ್ಟಿರುವುದೇನೆಂದರೆ—ಪ್ರತಿ ಒಬ್ಬ ಪಟೇಲನಿಗೂ ಒಂದು ನೋಟ್ ಬುಕ್ ಎಂಬ ಪುಸ್ತಕವನ್ನು ಕೊಟ್ಟು, ರೆವಿನ್ಯೂ ಆಫೀಸರುಗಳು ಗ್ರಾಮಾಂತರಗಳಲ್ಲಿ ಸಂಚಾರಮಾಡುವಾಗ್ಗೆ ಗ್ರಾಮಪಾಕೀಜಾ ವಿಷಯದಲ್ಲಿ ನಡೆಯಬೇಕಾಗಿರುವ ಕಾರ್ಯಗಳನ್ನು ಆಯಾ ಗ್ರಾಮದ ಪಟೇಲನ ನೋಟ್ ಪುಸ್ತಕದಲ್ಲಿ ಬರೆದುಕೊಟ್ಟು, ಅದರಂತೆ ನಡೆದುಕೊಳ್ಳಬೇಕೆಂದು ತಿಳಿಸುತ್ತಾ ಬರಬೇಕು. ಗ್ರಾಮಪಾಕೀಜಾ ವಿಷಯದಲ್ಲಿ ಮುತುವರ್ಜಿವಹಿಸುವ ಪಟೇಲರಿಗೆ ಪ್ರತಿ ತಾಲ್ಲೂಕಿನಲ್ಲೂ ಮೂರು ದರ್ಜೆಯ ಬಹುಮಾನಗಳನ್ನು ಕೊಡುವುದರಿಂದ ತುಂಬಾ ಪ್ರಯೋಜನವಾಗುತ್ತೆಂದೂ ಪಟೇಲರಿಗೆ ಇನ್ನೂ ಮುತುವರ್ಜಿವಹಿಸಿ ಆರೋಗ್ಯಾಭಿವೃದ್ಧಿ ಕಾರ್ಯಗಳನ್ನು ನಡಸಲು ಪ್ರೋತ್ಸಾಹವೂ ಅವರಲ್ಲಿ ಪೋಟಾಪೋಟಿಯೂ ಉಂಟಾದೀತೆಂದೂ ತೋರುವುದು. ಆದಕಾರಣ ಪ್ರತಿ ತಾಲ್ಲೂಕಿನಲ್ಲೂ ೭-೫-೩ ರೂಪಾಯಿನಂತೆ ಮೂರು ದರ್ಜೆಯ ಬಹುಮಾನಗಳನ್ನು ಪಟೇಲರಿಗೆ ಆಜಮಾಯಿಷಿ ತರೀಖು ಒಂದು ವರುಷ ಕೊಟ್ಟು, ಅದರಿಂದ ಆಗುವ ಪ್ರಯೋಜನದ ವಿಷಯದಲ್ಲಿ ಗವರ್ನಮೆಂಟಿಗೆ ರಿಪೋರ್ಟು ಕಳುಹಿಸಿದರೆ ಮುಂದೆಯೂ ಬಹುಮಾನ ಕೊಡುವುದಕ್ಕೆ ಏರ್ಪಾಡು ಮಾಡಬಹುದು. ಈ ಬಹುಮಾನವನ್ನು ೧೯೦೭ನೇ ಜುಲೈ ೧ ರಿಂದ ೧೯೦೮ ನೇ ಜೂನ್ ಆಖೈರಿಗೆ ಮುಗಿಯುವ ಒಂದು ವರುಷದಲ್ಲಿ ಕೊಡತಕ್ಕದ್ದು. ಇದಕ್ಕಾಗಿ ೧,೧೫೫ ರೂಪಾಯಿ ಸ್ಯಾಂಕ್ಷನ್ ಮಾಡಿದೆ. ಈ ಪೈಕಿ ಬೇರೆ ಬೇರೆ ಡಿಸ್ಟ್ರಿಕ್ಟುಗಳಿಗೆ ಹಂಚಿರುವ ಹಣವೆಷ್ಟೆಂದರೆ—ಬೆಂಗಳೂರು ೧೫೦, ಕೋಲಾರ ೧೩೫, ತುಮಕೂರು ೧೫೦, ಮೈಸೂರು ೨೧೦, ಹಾಸನ ೧೨೦, ಶಿವಮೊಗ್ಗ ೧೩೫, ಕಡೂರು ೯೦, ಚಿತ್ರದುರ್ಗ ೧೩೫.

ದೇವಸ್ಥಾನವೂ ಧರ್ಮ ಸತ್ರವೂ.

ಶಿವಮೊಗ್ಗ ಡಿಸ್ಟ್ರಿಕ್ಟ್ ಸಾಗರದಲ್ಲಿ ಭಾರೀ ಜಮೀನ್ದಾರರೂ ಪುಣ್ಯವಂತರೂ ಆದ ಮಿ॥ ಕಾಳೆ ತಿಮ್ಮಪ್ಪನವರು ಒಂದು ದೇವಸ್ಥಾನವನ್ನೂ ಅದಕ್ಕೆ ಸೇರಿದ ಹಾಗೆ ಎಲ್ಲಾ ಜಾತಿಯ ಪ್ರಯಾಣಿಕರಿಗೂ ತಂಗುವುದಕ್ಕೆ ಅನುಕೂಲವಾದಂಥಾ ಒಂದು ಸತ್ರವನ್ನೂ ೨೨,೦೦೦ ರೂಪಾಯಿ ವೆಚ್ಚಿಸಿ ಕಟ್ಟಿಸಿದ್ದಲ್ಲದೆ, ಅವೆರಡೂ ಶಾಶ್ವತವಾಗಿ ನಡೆಯುವಂತೆ ೧೦,೦೦೦ ರೂಪಾಯಿ ಪ್ರದುವಟ್ಟು ಹಾಕಿರುತ್ತಾರೆ. ಮತ್ತು ಸ್ವಂತವಾದ ಕೆಲವು ಜಮೀನುಗಳನ್ನೂ ಅವುಗಳಿಗೆ ಬಿಟ್ಟುಕೊಟ್ಟಿರುವರು. ಈ ಪ್ರದುವಟ್ಟಿನಿಂದಲೂ ಜಮೀನುಗಳಿಂದಲೂ ವರ್ಷಕ್ಕೆ ೬೦೦ ರೂಪಾಯಿ ವರಮಾನ ಬರುವುದು. ಇದರಲ್ಲಿ ೪೩೦ ರೂಪಾಯಿಯನ್ನು ಸತ್ರ ದೇವಸ್ಥಾನಗಳ ಖರ್ಚಿಗೆ ವಿನಿಯೋಗಿಸುವಂತೆ ತೀರ್ಮಾನವಾಗಿದೆ. ಸರ್ಕಾರದವರು ಅವೆರಡನ್ನೂ ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡು, ಮುಜರಾಯಿ ಇಲಾಖೆಯ ಮೂಲಕ ನಡಿಸಬೇಕೆಂತಲೂ ಮಿ॥ ಕಾಳೆ ತಿಮ್ಮಪ್ಪನವರು ಜೀವಂತರಾಗಿರುವ ತನಕ ಅವರೇ ಮ್ಯಾನೇಜರಾಗಿರಬೇಕೆಂತಲೂ, ಜಮಾಖರ್ಚಿನ ಲೆಕ್ಕಗಳನ್ನು ಅವರು ಕ್ರಮವಾಗಿ ಇಟ್ಟು ಸರ್ಕಾರಕ್ಕೆ ಕೊಡುತ್ತಾ ಬರಬೇಕೆಂತಲೂ ಗವರ್ನಮೆಂಟಿನವರು ಹುಕುಂ ಕೊಟ್ಟಿದಾರೆ.

ಕೈಗಾರಿಕೆ ಪಾಠಶಾಲೆಗಳೂ ಸರ್ಕಾರಿ ಮರಮುಟ್ಟೂ.

ಮೈಸೂರು ಸಂಸ್ಥಾನದಲ್ಲಿ ಕೈಗಾರಿಕೆ ಪಾಠಶಾಲೆಗಳು ಇನ್ನೂ ಬಾಲ್ಯಾವಸ್ಥೆಯಲ್ಲಿರುತ್ತವೆ. ಮರಕೆಲಸವನ್ನು ಕಲಿಯತಕ್ಕ ಪಾಠಶಾಲಾ ವಿದ್ಯಾರ್ಥಿಗಳು ಬಹಳ ಮರವನ್ನು ಕೆಡಿಸಿ ಹಾಳುಮಾಡುವರು. ಈ ಭಾಗದಲ್ಲೂ ಒಳ್ಳೇ ಮರಗಳನ್ನು ಅವರು ಉಪಯೋಗಿಸದಂತೆಯೂ ಪಾಠಶಾಲಾ ಮೇಸ್ಟ್ರುಗಳು ನೋಡಿಕೊಳ್ಳಬೇಕಾಗಿದೆ. ಈ ಪಾಠಶಾಲೆಗಳಲ್ಲಿ ಉಪಯೋಗಿಸುವುದಕ್ಕೆ ಸರ್ಕಾರಿ ಮರಮುಟ್ಟನ್ನು ಪೇಟೆ ಧಾರಣೆಗಿಂತಲೂ ಸ್ವಲ್ಪ ಅಗ್ಗವಾಗಿ ಕೊಡುವುದರಿಂದ ಕೈಗಾರಿಕೆ ಕೆಲಸಕ್ಕೆ ಸಹಾಯವಾಗಬಹುದೆಂದು ತೋರುತ್ತದೆ. ಆದಕಾರಣ ಫಾರೆಸ್ಟ್ ಕನ್ಸರ್ವೇಟರು ಕೈಗಾರಿಕೆ ಪಾಠಶಾಲೆಗಳಿಗೆ ಬೇಕಾಗುವ ಮರಮುಟ್ಟನ್ನು ಇತರರಿಗೆ ಮಾರುವುದಕ್ಕಿಂತಲೂ ಕಾಲುಪಾಲು ಕಡಿಮೆ ಕ್ರಯಕ್ಕೆ ಕೊಡಬೇಕು. ಈ ರೀತಿ ಎರಡು ವರುಷಗಳ ತನಕ ಕೊಡುತ್ತಾ ಬಂದು, ಅದರ ಮೇಲೆ ಗವರ್ನಮೆಂಟಿಗೆ ರಿಪೋರ್ಟು ಕಳುಹಿಸಬೇಕಾಗಿದೆ.

ಹುರಳಿ ಬೆಳೆಯುವುದಕ್ಕೆ ಜಮೀನು.

ಹುರುಳಿ ವ್ಯವಸಾಯಕ್ಕೆ ಪೂರ್ವದಲ್ಲಿ ಒಂದು ವರುಷದ ಮುಟ್ಟಿಗೆ ರೈತರಿಗೆ ಅಪೇಕ್ಷಿಸಿದ ಕಾಲದಲ್ಲಿ ಜಮೀನು ಕೊಡುತ್ತಾ ಇದ್ದರಂತಲೂ ಈಗಲೂ ಅದರಂತೆ ಕೊಡಿಸಬೇಕೆಂತಲೂ ಪ್ರತಿನಿಧಿಗಳು ಸರ್ಕಾರದವರನ್ನು ಕೇಳಿದ್ದರು. ರೆವಿನ್ಯೂ ಕಮಿಷನರವರ ಅಭಿಪ್ರಾಯವನ್ನು ತೆಗೆದುಕೊಂಡು ಗವರ್ನಮೆಂಟಿನವರು ಅಪ್ಪಣೆ ಕೊಟ್ಟಿರುವುದೇನಂದರೆ—ಈಗಿರುವ ರೂಲಿನಂತೆ ರೈತನು ಪಟ್ಟೆ ಮುಂತಾದದ್ದು ಮಾಡಿಕೊಳ್ಳದೆ ಒಂದು ವರುಷದ ವರೆಗೆ ಜಮೀನು ಸಾಗುವಳಿಗೆ ಪಡೆದು, ವರುಷಾಂತ್ಯದಲ್ಲಿ ಬಿಟ್ಟುಬಿಡಬಹುದಾಗಿದೆ. ಆದರೆ ಕಂದಾಯ ರಹಿತವಾಗಿರುವ ಜಮೀನು, ಸಾಗುವಳಿಗೆ ಸಿಕ್ಕುವುದು ಸ್ವಲ್ಪ ಅವಕಾಶವಾದೀತು. ಬಂಜರಾದ ಜಮೀನನ್ನಾಗಲಿ ಗೋಮಾಳವನ್ನಾಗಲಿ ಇಂಥಾ ಹಂಗಾಮಿ ಸಾಗುವಳಿಗೆ ಕೊಡುವುದು ಸುಲಭವು. ಅಂಥಾ ಜಮೀನಿನಲ್ಲಿ ಕೆಲವು ಭಾಗವನ್ನು ರೈತನು (ತ್ತು ಬೆಳೆ ಮಾಡುವುದರಿಂದ ಹುಲ್ಲು ಚೆನ್ನಾಗಿ ಬೆಳೆಯುವುದಕ್ಕೂ ಸಾಗುವಳಿ ಆಗುತ್ತದಕ್ಕೂ ಸಹಾಯವಾಗುವುದು. ಆದರೆ ಆ ಜಮೀನುಗಳಲ್ಲಿರುವ ಕುರುಚಲುಗಿಡ ಮರಗಳಿಗೆ ಕಂಟಕವಾಗದಂತೆ ನೋಡಿಕೊಳ್ಳಬೇಕಾಗಿದೆ. ಇಂಥಾ ಜಮೀನುಗಳನ್ನು ಯಾವ ರೂಲಿನ ಪ್ರಕಾರ ರೈತರಿಗೆ ವ್ಯವಸಾಯಕ್ಕೆ ಕೊಡಬಹುದೆಂಬ ವಿಷಯದಲ್ಲಿ ರೆವಿನ್ಯೂ ಕಮಿಷನರು ಗೊತ್ತುಮಾಡಿ, ಸರ್ಕಾರದವರ ಸ್ಯಾಂಕ್ಷನ್ ಬಗ್ಗೆ ಕಳುಹಿಸಬೇಕಾಗಿದೆ.

ಸರ್ಕಾರಿ ಗೆಜೆಟ್ಟಿನಲ್ಲಿ ಪ್ರಕಟನೆಗಳು.

ಮೈಸೂರು ಸರ್ಕಾರಿ ಗೆಜೆಟ್ಟನ್ನು ಪಬ್ಲಿಷ್ ಮಾಡುವ ಛಾಪಖಾನೆಯ ಅಧಿಕಾರಿಯು ಸರ್ಕಾರಿ ಇಸ್ತಿಹಾರು ಮುಂತಾದವುಗಳನ್ನು ಮೂರಾವರ್ತಿ ಪ್ರಕಟಿಸಬೇಕೆಂಬುದಕ್ಕೆ ಹಿಂದಿನ ಆಧಾರವೇನೂ ಕಂಡುಬರುವುದಿಲ್ಲವೆಂತಲೂ ಕನ್ನಡ ಮತ್ತು ಇಂಗ್ಲಿಷಿನಲ್ಲಿ ಒಂದೇ ಸಲ ಪ್ರಕಟಿಸುವಂತಾದರೆ ಅನುಕೂಲವೆಂತಲೂ ತಿಳಿಸಿದಕ್ಕೆ ಗವರ್ನಮೆಂಟಿನವರು—ಇನ್ನು ಮುಂದೆ ಮೂರಾವರ್ತಿ ಪ್ರಕಟವಾಗಬೇಕೆಂದು ಹುಕುಂ ಕೊಟ್ಟ ಹೊರತು ಯಾವ ರೆಗ್ಯುಲೇಷನಾಗಲಿ, ರೂಲಾಗಲಿ, ಮುಸೂದೆಯಾಗಲಿ, ಇಸ್ತಿಹಾರಾಗಲಿ, ನೋಟಿಸ್ ಅಥವಾ ಪ್ರಕಟನೆಯಾಗಲಿ ಒಂದೇ ಸಲ ಇಂಗ್ಲಿಷಿನಲ್ಲೂ ಕನ್ನಡದಲ್ಲೂ ಪ್ರಕಟವಾದರೆ ಸಾಕು ಎಂಬುದಾಗಿ ಹುಕುಂ ಕೊಟ್ಟಿದಾರೆ.

ಹಂಗಾಮಿ ವ್ಯಾಪಾರವೂ ತೆರಿಗೆಯೂ.

ಯೂನಿಯನ್ಗಳಲ್ಲಿ ಹಂಗಾಮಿ ವ್ಯಾಪಾರ ಮಾಡತಕ್ಕವರಿಂದ ಕೆಲವು ಕಡೆ ಮನೆತೆರಿಗೆಯನ್ನೂ ವ್ಯಾಪಾರದ ತೆರಿಗೆಯನ್ನೂ ವಸೂಲ್ಮಾಡುತ್ತಿದ್ದರು. ಈ ವಿಷಯದಲ್ಲಿ ಸರ್ಕಾರದವರು ಎಲ್ಲಾ ಡಿಸ್ಟ್ರಿಕ್ಟ್ ಬೋರ್ಡುಗಳ ಪ್ರೆಸಿಡೆಂಟರುಗಳಿಂದಲೂ ಅಭಿಪ್ರಾಯ ತರಿಸಿಕೊಂಡು, ಹುಕುಂ ಕೊಟ್ಟಿರುವುದೇನೆಂದರೆ—ಯಾವ ಗ್ರಾಮಗಳಲ್ಲಿ ಯೂನಿಯನ್ ಏರ್ಪಾಡಾಗಿ ಮನೆತೆರಿಗೆ ಅಂಗಡಿತೆರಿಗೆಗಳು ವಸೂಲಾಗುವವೋ ಅಂಥಾ ಕಡೆ ಹಂಗಾಮಿ ವ್ಯಾಪಾರದ ತೆರಿಗೆಯನ್ನು ಹಾಕಿ ತೆಗೆದುಕೊಳ್ಳುವುದು ರೂಲಿಗೆ ವಿರೋಧವಾಗಿರುತ್ತದೆ. ಆದ್ದರಿಂದ ಅಂಥಾ ಕಡೆ ಹಂಗಾಮಿ ವ್ಯಾಪಾರಗಾರರಿಗೆ ಯಾವ ತೆರಿಗೆಯನ್ನೂ ವಿಧಿಸಲೂ ವಸೂಲ್ಮಾಡಲೂ ಕೂಡದು. ಈ ಪದ್ಧತಿಯನ್ನು ಕೂಡಲೇ ವಜಾ ಮಾಡಬೇಕು.

ಸಿವಿಲ್ ವ್ಯಾಜ್ಯಗಳೂ ಅಸಿಸ್ಟೆಂಟ್ ಕಮಿಷನರೂ.

ಸರ್ಕಾರಿ ಕೆಲಸಕ್ಕೋಸ್ಕರ ರೈತರ ಜಮೀನನ್ನು ಲ್ಯಾಂಡ್ ಅಕ್ವಿಜಿಷನ್ ಆಕ್ಟಿನ ಪ್ರಕಾರ ತೆಗೆದುಕೊಳ್ಳುವ ಸಂದರ್ಭದಲ್ಲಿ ಸಿವಿಲ್ ವ್ಯಾಜ್ಯಗಳು ಹುಟ್ಟುವವು. ಅಂಥಾ ಮೊಕದ್ದಮೆಗಳನ್ನು ಸರ್ಕಾರಿ ತರಫು ಪಬ್ಲಿಕ್ ಪ್ರಾಸಿಕ್ಯೂಟರೋ, ಗವರ್ನಮೆಂಟ್ ಅಡ್ವೊಕೇಟರೋ ನಿಂತು ನಡಿಸುತ್ತಾರೆ. ಈ ಸಂದರ್ಭಗಳಲ್ಲಿ ಆಯಾ ಡಿವಿಜನ್ ಅ॥ ಕಮಿಷನರುಗಳು ಸರ್ಕಾರಿ ತರಫು ವಾದಿಸುವಂಥಾವರಿಗೆ ಸಹಾಯ ಮಾಡುತ್ತಾ, ಬೇಕಾದರೆ ರುಜುವಾತು ಮುಂತಾದದ್ದನ್ನು ಒದಗಿಸಿ ಕೊಡುತ್ತಾ ಬರುವುದು ಅವಶ್ಯವೆಂದು ಕಾಣುತ್ತದೆ. ಇದರಿಂದ ಅ॥ ಕಮಿಷನರಿಗೆ ಒಳ್ಳೇ ಅನುಭವವುಂಟಾಗುವುದಲ್ಲದೆ ಸರ್ಕಾರದ ಪಕ್ಷವನ್ನು ಅವರು ಚನ್ನಾಗಿ ಕಾಪಾಡಬಹುದಾಗಿದೆ.

ಡಿಸ್ಟ್ರಿಕ್ಟ್ ಬೋರ್ಡ್ ಮೀಟಿಂಗೂ ಅಮಲ್ದಾರರೂ.

ಡಿಸ್ಟ್ರಿಕ್ಟ್ ಬೋರ್ಡುಗಳಿಗೆ ಅಮಲ್ದಾರರು ಮೆಂಬರಾಗಿ ನೇಮಕವಾಗಬೇಕಾದ ಅಗತ್ಯವಿಲ್ಲವೆಂದು ಪ್ರೊಸೀಡಿಂಗ್ಸ್ ಮಾಡಿರುತ್ತಾರೆ. ಕಳೆದ ಪ್ರಜಾಪ್ರತಿನಿಧಿ ಸಭೆಯಲ್ಲಿ ಮೆಂಬರುಗಳು ಈ ವಿಷಯವನ್ನು ಗವರ್ನಮೆಂಟಿನವರ ಗಮನಕ್ಕೆ ತಂದು, ಅಮಲ್ದಾರರನ್ನೂ ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರಾಗಿ ನೇಮಿಸಬೇಕೆಂದು ಸೂಚಿಸಿದರು. ಗವರ್ನಮೆಂಟಿನವರು ಈಗ ಹುಕುಂ ಕೊಟ್ಟಿರುವುದೇನೆಂದರೆ—ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರು ತಮ್ಮ ಬೋರ್ಡ್ ಮೀಟಿಂಗ್ ನಡೆಯುವ ಕಾಲದಲ್ಲಿ ಡೆಪ್ಯುಟಿ ಅಮಲ್ದಾರರನ್ನೂ ಅಮಲ್ದಾರರನ್ನೂ ಕರೆಸಿಕೊಳ್ಳಬಹುದು. ಆದರೆ ಇವರು ಇತರ ಮೆಂಬರುಗಳ ಸಂಗಡ ಕಲೆತು ವಿಷಯಗಳನ್ನು ಚರ್ಚೆಮಾಡಲೂ ಕೂಡದು. ಚರ್ಚಿಸಲ್ಪಟ್ಟ ವಿಷಯಗಳಿಗೆ ತಮ್ಮ (ಓಟ್) ಸಮ್ಮತಿ ಕೊಡಲೂ ಕೂಡದು. ಆಯಾ ತಾಲ್ಲೂಕ್ ಅಥವಾ ಸಬ್ ತಾಲ್ಲೂಕಿಗೆ ಸಂಬಂಧಪಟ್ಟ ವಿಷಯಗಳು ಚರ್ಚೆಯಾಗುವಾಗ್ಗೆ ಅವರು ತಮ್ಮ ಅನುಭವವನ್ನು ಬೋರ್ಡಿನವರ ತಿಳುವಳಿಕೆಗೆ ತರಬೇಕಾಗಿದೆ.

ಮುಜರಾಯಿ

ತೀರ್ಥಹಳ್ಳಿ ತಾಲ್ಲೂಕು ಹುಂಚದಕಟ್ಟೆಯಲ್ಲಿರುವ ಮೂರು ದೇವಸ್ಥಾನಗಳ ಮತ್ತು ನಗರದಲ್ಲಿರುವ ಒಂದು ದೇವಸ್ಥಾನದ ಕಾರುಬಾರುಗಳು ತೃಪ್ತಿಕರವಾಗಿಲ್ಲವೆಂತಲೂ ಅವುಗಳಿಗೆ ಬಿಟ್ಟಿರುವ ಸುಮಾರು ೨೨೫ ಎಕರೆ ಇನಾಂತಿ ಜಮೀನುಗಳನ್ನು ಸರ್ಕಾರದವರೇ ವಹಿಸಿಕೊಂಡು, ದೇವಸ್ಥಾನಗಳಲ್ಲಿ ಪಡಿತರ ಪೂಜೆ ಮುಂತಾದದ್ದನ್ನು ನಡಿಸಬೇಕೆಂತಲೂ ಶಿವಮೊಗ್ಗ ಡೆಪ್ಯುಟಿ ಕಮಿಷನರು ತಿಳಿಸಿದ್ದರ ಮೇಲೆ ಸರ್ಕಾರದವರು ಹುಕುಂ ಕೊಟ್ಟಿರುವುದೇನಂದರೆ— ಈ ಜಮೀನುಗಳನ್ನೆಲ್ಲಾ " ವಹಿವಾಟುದಾರ ಅಪ್ಪಣ್ಣಯ್ಯನವರು ನೋಡಿಕೊಳ್ಳುತ್ತಾ ದೇವಸ್ಥಾನಗಳ ಕೆಲಸಗಳನ್ನು ನಡಸಬೇಕಾಗಿತ್ತು. ಪೂಜಾರಿಗಳಿಗೆ ನಾಲ್ಕು ವರುಷದಿಂದ ಅವರು ಸಂಬಳ ಕೊಟ್ಟಿಲ್ಲ. ಪಡಿತರ ಮುಂತಾದದ್ದನ್ನು ಕೊಡಲಿಲ್ಲ. ಉತ್ಸವಾದಿಗಳನ್ನು ನಡಿಸಲಿಲ್ಲ. ದೇವಸ್ಥಾನಗಳನ್ನು ದುರಸ್ತು ಮಾಡಿಸಲಿಲ್ಲ. ಜಮೀನುಗಳನ್ನು ಸರಿಯಾಗಿ ನೋಡಿಕೊಂಡು ವ್ಯವಸಾಯ ಮಾಡಿಸಿದ್ದಲ್ಲಿ ಅವುಗಳಿಂದ ವರುಷಕ್ಕೆ ೧,೦೦೦ ರೂಪಾಯಿಗಿಂತಲೂ ಹೆಚ್ಚು ಉತ್ಪತ್ತಿಯಾಗುತ್ತಿತ್ತು. ಇಂಥಾ ಅಕ್ರಮ ನಡಿಸಿರುವುದರಿಂದ ಅಪ್ಪಣ್ಣಯ್ಯನವರಿಗೆ ವಹಿವಾಟು ಕೆಲಸವನ್ನು ತೆಗೆದುಹಾಕಿ, ಆ ಜಮೀನುಗಳನ್ನು ಮುಜರಾಯಿ ಇಲಾಖೆಯವರೇ ಮೇಲುಸ್ತುವಾರಿ ನೋಡುವಂತೆಯೂ ದೇವಸ್ಥಾನಗಳಲ್ಲಿ ಪಡಿತರ ದೀಪಾರಾಧನೆಗಳು ಕ್ರಮವಾಗಿ ನಡೆಯುವುದಕ್ಕೆ ಏರ್ಪಾಡು ಮಾಡುವಂತೆಯೂ ಹುಕುಂ ಮಾಡಿದೆ. ಇದಲ್ಲದೆ ಮಲೆನಾಡಿಗೆ ಸೇರಿದ ಅನೇಕ ಸ್ಥಳಗಳಲ್ಲಿ ಇತರ ವಹಿವಾಟುದಾರರು ಇದೇ ರೀತಿ ಜಮೀನುಗಳನ್ನು ದುರುಪಯೋಗಪಡಿಸಿ ದೇವಸ್ಥಾನಗಳಲ್ಲಿ ಪೂಜೆ ಮುಂತಾದದ್ದು ನಡೆಯದಂತೆ ಮಾಡಿರುತ್ತಾರೆಂದು ತಿಳಿದುಬರುತ್ತಾದ್ದರಿಂದ ಡೆಪ್ಯುಟಿ ಕಮಿಷನರು ಈ ವಿಷಯವನ್ನೆಲ್ಲಾ ಕ್ರಮವಾಗಿ ಆಜಮಾಯಿಷಿಮಾಡಿ ರಿಪೋರ್ಟು ಕಳುಹಿಸಬೇಕಾಗಿದೆ.

ಇಂಡಿಯಾ ದೇಶದ ವೃತ್ತಾಂತಗಳು.

ಬರುವ ಜೂಲೈ ತಿಂಗಳೊಳಗಾಗಿ ಒಂದಾಣೆಯ ನಿಕ್ಕಲ್ ಷಡ ಹೊಸನಾಣ್ಯಗಳು ಛಾಪಾ ಆಗಿ ಚಲಾವಣೆಗೆ ಬರುವಂತೆ ಆಗಿದೆ

***

ಕಾರ್ಪುರದ ರಾಜರು ವಯೋವೃದ್ಧರಾಗಿ ಸಂಸ್ಥಾನದ ಕಾರ್ಯಗಳನ್ನು ನೋಡಿಕೊಳ್ಳಲು ಚೈತನ್ಯಸಾಲದೆಂತಲೂ [illegible] ಕೂಡ ಯಾರೂ ಇಲ್ಲವೆಂತಲೂ ಪಂಜಾಬ್ ಗವರ್ನಮೆಂಟಿಗೆ ತಿಳಿಸಿ, ಸಂಸ್ಥಾನವನ್ನು ಅವರ ವಶಕ್ಕೆ ಒಪ್ಪಿಸುವುದಾಗಿ ಹೇಳಿದಂತೆ ಪ್ರಕಟವಾಗಿದೆ.

***

ಮದರಾಸ್ ಆಧಿಪತ್ಯದಲ್ಲಿ ಕಳೆದ ೧೯೦೬ ನೆ ವರುಷದಲ್ಲಿ ಮೃಗಗಳಿಂದಲೂ ಸರ್ಪಗಳಿಂದಲೂ ೧,೮೫೭ ಜನರು ಪ್ರಾಣ[illegible]ದುಕೊಂಡರು, ಮತ್ತು ೧೪೮ ಗೋಕಾಯಿಗಳು ಸತ್ತವು. ಷಿ[illegible]ದಾರರು ಕೊಂದ ೮೯೦ ಮೃಗಗಳಿಗೆ ಸರ್ಕಾರದಿಂದ ೧೩,[illegible] ರೂಪಾಯಿ ಬಹುಮಾನ ಕೊಡಲಾಯಿತು

***

ಇ ಐ ತಿಮೋಲ್ ಎಂಬವನು ನಂಬಿಕೆ ದ್ರೋಹ ಮಾಡಿದ್ದ[illegible] ಸುಮಾರು ೯ ತಿಂಗಳ ಕೆಳಗೆ ಮೊಕದ್ದಮೆ ಆಗಿ ಅವನಿಗೆ ೪ ವ[illegible] ಸಜಾ ವಿಧಿಸಲ್ಪಟ್ಟಿತು. ಈಚೆಗೆ ಅವನನ್ನು ಮನ್ನಿಸಿ ಬಿಟ್ಟುಬಿ[illegible]ಕೆಂದು ಅನೇಕ ಜನರು ಗವರ್ನರವರಿಗೆ ಅರ್ಜಿ ಬರೆದುಕೊಂಡ[illegible]ದ ಗವರ್ನರವರು ಶಿಕ್ಷೆಯನ್ನು ೪ ವರುಷದಿಂದ ೧೮ ತಿಂಗಳಿಗೆ ಇ[illegible]ರುತ್ತಾರೆ.

***

ನಾಯಿ ನರಿ ಮುಂತಾದ ಪ್ರಾಣಿಗಳಿಂದ ಕಡಿಸಿಕೊಂಡ[illegible] ಚಿಕಿತ್ಸೆಮಾಡುವುದಕ್ಕೆ ಕೂನೂರಿನಲ್ಲಿ ಒಂದು ಆಸ್ಪತ್ರೆ ಆಗಿರುತ್ತ[illegible] ಅದರ ಖರ್ಚಿಗೆ ಹೈದರಾಬಾದ್ ನೈಜಾಮರವರು ೧,೦೦೦ ರೂಪಾ[illegible]ನಂತೆ ಪ್ರತಿವರ್ಷವೂ ಕೊಡುತ್ತೇನೆಂದು ಒಪ್ಪಿಕೊಂಡು, ತಮ್ಮ [illegible]ಸ್ಥಾನದಲ್ಲಿ ಸರ್ಕಾರಿ ನವುಕರರೆಲ್ಲಾ ಆ ಆಸ್ಪತ್ರೆಗೆ ಹೋಗಿ ಚಿ[illegible] ಮಾಡಿಸಿಕೊಂಡು ಬರಬೇಕೆಂದು ಫರ್ಮಾಯಿಷ್ ಮಾಡಿಸಿರುತ್ತಾರೆ.

***

ಎಜೆಕೀಲ್ ಸಾಲೇ ಏಬ್ರಹಾಂ ಕೋರ್ಷ ಎಂಬವನು ಕೆಲವು [illegible]ಗಳ ಹಿಂದೆ ಬೊಂಬಾಯಿನಲ್ಲೂ ಮದರಾಸಿನಲ್ಲೂ ಅನೇಕ ಜನ[illegible] ಮೋಸಮಾಡಿ ಹಣ ವಸೂಲ್ಮಾಡಿಕೊಂಡು ವಿಲಾಯಿತಿಗೆ ಹೊರ[illegible] ಹೋಗಿದ್ದನು. ಪೋಲೀಸಿನವರು ಅವನನ್ನು ತಲಾಷಿನಿಂದ ಪತ್ತೆ ಮಾ[illegible] ಲಂಡನ್ ಪಟ್ಟಣದಲ್ಲಿ ಹಿಡಿದು ಕಲ್ಕತ್ತೆಗೆ ಹಿಡಿದು ತಂದರು. ಮ್ಯಾ[illegible]ಸ್ಟ್ರೇಟರು ೫೦,೦೦೦ ರೂಪಾಯಿ ಜಾಮೀನ್ ತೆಗೆದುಕೊಂಡು ಅ[illegible]ನ್ನು ಬಿಡಿಸಿರುತ್ತಾರೆ.

***

ವಿಲಾಯಿತಿ ರಾಜ್ಯದ ಯುವರಾಜರಾದ ಪ್ರಿನ್ಸ್ ಆಫ್ ವೇಲ್ಸ್[illegible]ರು ದರ್ಭಾಂಗ ಸಂಸ್ಥಾನಕ್ಕೆ ದಯಮಾಡಿದ್ದರ ಜ್ಞಾಪಕಾರ್ಥವಾಗಿ ದರ್ಭಾಂಗದ ಮಹಾರಾಜರವರು ಅವರ ಹೆಸರಿನಲ್ಲಿ ಧರ್ಮಖರ್ಚಿಗೆ ಒಂದು ಲಕ್ಷ ರೂಪಾಯಿ ವಿನಿಯೋಗಿಸುವುದಾಗಿ ಪ್ರಕಟಿಸಿದ್ದರಷ್ಟೆ. ಈ [illegible] ಕೆಲವು ಹಣವನ್ನು ಖರ್ಚುಮಾಡಿ ಕಲ್ಕತ್ತಾ ಪಟ್ಟಣದ ಆಸ್ಪತ್ರೆಯಲ್ಲಿ ರೋಗಿಗಳಿಗೆ ವಿದ್ಯುಚ್ಛಕ್ತಿಯ ಮೂಲಕ ಬೀಸಣಿಗೆಗಳು ಬೀಸುವಂಥಾ ಯಂತ್ರಗಳನ್ನು ಇಡಿಸಿರುತ್ತಾರೆ.

***

ರಂಗೂನ್ ಪಟ್ಟಣದ ಚೀಫ್ ಕೋರ್ಟಿನಲ್ಲಿ ಮಿ॥ ಆರ್ಮಂಡ ಎಂಬ ಜಡ್ಜಿಯವರು ಕೂತುಕೊಂಡು ಒಂದು ಮೊಕದ್ದಮೆಯನ್ನು ದರ್ಯಾಫ್ತು ಮಾಡುತ್ತಿದ್ದಾಗ ಅವರ ತಲೆಯ ಮೇಲ್ಭಾಗದಲ್ಲಿ ತೂಗಿದ್ದ ಪಂಖಾ (ಬೀಸಣಿಗೆ) ಕಿತ್ತುಬಿದ್ದು, ಅವರ ಮುಖವು ಬಾತುಕೊಂಡಿತು. ಆದರೂ ಜಡ್ಜಿಯವರು ಸ್ವಲ್ಪ ಹೊತ್ತಿನ ತನಕ ಮೊಕದ್ದಮೆ ದರ್ಯಾಫ್ತು ಮಾಡುವುದನ್ನು ಬಿಟ್ಟು ಏಳದೆ ಹೋದರು. ಕಾಲುಗಂಟೆಯಾದ ಮೇಲೆ ಆ ಮೊಕದ್ದಮೆಯನ್ನು ನಿಲ್ಲಿಸಿ ಹೊರಟು ಹೋದರು.

***

ಅಫ್ಘಾನಿಸ್ಥಾನದ ಅಮೀರರು ಕಳೆದ ಮಂಗಳವಾರ ಕಾಬೂಲ್ ರಾಜಧಾನಿಯಿಂದ ಸರಕೀಟು ಹೊರಟರು. ಹೀರತ್ ಮುಂತಾದ ಕಡೆಗಳಲ್ಲಿ ಸುಮಾರು ೬—೭ ತಿಂಗಳ ವರೆಗೆ ಸಂಚಾರ ಮಾಡಿಕೊಂಡು ವಾಪಸು ಬರುವರೆಂತಲೂ ಅವರು ಬರುವ ತನಕ ಸರದಾರ್ ಇನಾಯತ್ ಉಲ್ಲಾಖಾನರವರು ಕಾಬೂಲ್ ಪಟ್ಟಣದಲ್ಲಿದ್ದುಕೊಂಡು ರಾಜಕಾರ್ಯಗಳನ್ನು ಚಲಾಯಿಸುವರೆಂತಲೂ ತಿಳಿದು ಬಂದಿದೆ. ಅಮೀರರ ಸಂಗಡ ೫೦೦೦ ದಿನ ಸೈನಿಕರು ೨೦೦೦ ಕುದುರೆ ಸೈನಿಕರೂ ಬಗೆಮಂದಿ ಹಿಂಬಾಲಿಕರೂ ಹೋಗಿರುತ್ತಾರೆ.

***

ಹೈದರಾಬಾದ್ ಸಂಸ್ಥಾನದಲ್ಲಿ ಖೈದಿಗಳಿಗೆ ನೈಜಾಮರವರು ಒಂದು ರಿಯಾಯತಿಯನ್ನು ತೋರಿಸುತ್ತಿದಾರೆ. ಏನೆಂದರೆ, ಪ್ರತಿ ಶನಿವಾರವೂ ಜೈಲ್ ಅಧಿಕಾರಿಗಳು ಒಬ್ಬ ಖೈದಿಯನ್ನು ಆರಿಸಿ ಅವನಿಗೆ ೫ ರೂಪಾಯಿ, ಒಂದು ಕಂಬಳಿ, ೫ ಸೇರು ಮಿಠಾಯಿ, ಒಂದು ತುಂಡೆ ಖಾದಿ, ಇವುಗಳನ್ನೆಲ್ಲಾ ಕೊಟ್ಟು, ಅವನನ್ನು ನೈಜಾಮರವರ ರೂಬರೂ ಹಾಜರ್ಮಾಡಬೇಕು. ನೈಜಾಮರವರು ಆ ಖೈದಿಯ ಬೆನ್ನು ತಟ್ಟಿ ಕಳುಹಿಸಿ ಬಿಡುತ್ತಾರೆ. ಅಲ್ಲಿಗೆ ಅವನಿಗೆ ಬಂದೀಖಾನೆಯ ವಾಸ ತಪ್ಪಿಹೋಯಿತು. ಈ ರೀತಿ ಕೆಲವು ಕಾಲದಿಂದ ನಡೆಯುತ್ತಾ ಇದೆ. ಇದು ಎಷ್ಟು ವರುಷ ನಡೆಯುವುದೋ ನೋಡಬೇಕು.

ಹಿಂದುಸ್ಥಾನದಲ್ಲಿ ಪ್ಲೇಗ್ ಉಪದ್ರವು ಮತ್ತೆ ವಾರವಾರಕ್ಕೆ ಹೆಚ್ಚುತ್ತಾ ಬಂದಿದೆ. ಕಳೆದ ವಾರ ೮೩,೫೬೦ ಜನರಿಗೆ ಆ ಉಪದ್ರ ತಗಲಿತು, ೭೫,೩೭೨ ಜನರು ತೀರಿ ಹೋದರು. ಈ ಪೈಕಿ ಪಂಜಾಬಿನಲ್ಲೇ ೪೧,೨೯೬ ಜನರಿಗೆ ತಗಲಿತು; ೩೯,೦೮೪ ಮರಣಗಳಾದವು. ಸಂಯುಕ್ತ ಆಧಿಪತ್ಯಗಳಲ್ಲಿ ಈ ಉಪದ್ರವು ೨೩,೨೩೬ ಜನರಿಗೆ ತಗಲಿ ೨೩,೯೪೮ ಮರಣಗಳಾದವು. ಬಂಗಾಳದಲ್ಲಿ ಪ್ಲೇಗ್ ತಗಲಿದವರು ೩,೯೧೫ ಮಂದಿ, ಮೃತಪಟ್ಟವರು ೩,೦೯೨ ಮಂದಿ. ಬೊಂಬಾಯಿ ಆಧಿಪತ್ಯದೊಳಗೆ ೪,೦೯೨ ಜನರಿಗೆ ತಗಲಿ, ೨೯೮೦ ಜನರು ಕಾಲವಾದರು. ಮಧ್ಯಪ್ರಾಂತ್ಯಗಳಲ್ಲಿ ೧,೫೧೯—೧೨,೧೮; ರಾಜಪುಟಾನಾ ೩೩೮—೩೪೮.

* * *

ಕಳೆದ ಶುಕ್ರವಾರ ಬೆಳಿಗ್ಗೆ ಕಲ್ಕತ್ತಾ ಪಟ್ಟಣದ ಹೈ ಕೋರ್ಟಿನಲ್ಲಿ ಮಿ॥ ಜಸ್ಟಿಸ್ ರಾಂಪೀನಿಯವರು ನಿಂತಿದ್ದಾಗ್ಗೆ ಅವರ ಎದುರಿಗೆ ಒಬ್ಬ ಸನ್ಯಾಸಿಯು (ಗರೀಬದಾಸ್ ಬಾವಾಜಿ ಎಂಬುವನು) ನಿರ್ವಾಣನಾಗಿ ನಿಂತಿದ್ದದ್ದನ್ನು ಕಂಡು, ಹೈ ಕೋರ್ಟಿನಲ್ಲಿ ಪಹರೆ ಕೊಡುತ್ತಿದ್ದ ಪೈಟ್ ಎಂಬ ಶಿಪಾಯನ್ನು ಕರೆದು ಹೇಳಿ ಆ ಸನ್ಯಾಸಿಯನ್ನು ಹಿಡಿಸಿ ಪೊಲೀಸಿಗೆ ಒಪ್ಪಿಸಿದರು. ಆ ಸನ್ಯಾಸಿಯನ್ನು ದರ್ಯಾಫ್ತು ಮಾಡಿದಾಗ—ತಾನು ನಾಗಾ ಜಾತಿಯವನೆಂತಲೂ ತನ್ನ ಗುರುವಿನ ಆಜ್ಞೆಯಾಗಿ—ಎಂತೆ ಕಳೆದ ಹನ್ನೊಂದು ವರುಷಗಳಿಂದ ತಾನು ಬೆತ್ತಲೆಯಾಗಿಯೇ ಸಂಚರಿಸುತ್ತಾ ಬರೀ ಹಾಲಿನಲ್ಲಿಯೇ ಪ್ರಾಣ ಉಳಿಸಿಕೊಂಡಿರುವಂತೆಯೂ ವಾಙ್ಮೂಲ ಬರೆಸಿದನು. ಮ್ಯಾಜಿಸ್ಟ್ರೇಟರು ಅವನಿಗೆ ಒಂದು ವಾರ ಸಜಾ ವಿಧಿಸಿರುತ್ತಾರೆ.

* * *

ಬೊಂಬಾಯಿ ಪಟ್ಟಣದಲ್ಲಿ "ಹಿಂದ್ ಸ್ವರಾಜ್ಯ" ಎಂಬೊಂದು ಗುಜರಾತಿ ಪತ್ರಿಕೆಯನ್ನು ಚಂಗಲ್ ಲಾಲೂಬಾಯಿ ಥಾಣಾವಾಲಾ ಎಂಬಾತನು ಪ್ರಕಟಿಸುತ್ತಾನೆ. ಕಳೆದ ಅಕ್ಟೋಬರ್ ತಿಂಗಳಲ್ಲಿ ಆತನು ಪ್ರಜೆಗಳನ್ನು ಸರ್ಕಾರದವರ ಮೇಲೆ ಎತ್ತಿಕಟ್ಟುವಂಥಾ ಒಂದು ಬಾತ್ಮಿಯನ್ನು ಆ ಪತ್ರಿಕೆಯಲ್ಲಿ ಪ್ರಕಟಿಸಿದಕಾರಣ ಸರ್ಕಾರದವರು ಆತನ ಮೇಲೆ ಫಿರ್ಯಾದು ತಂದರು ಮ್ಯಾಜಿಸ್ಟ್ರೇಟರು ದರ್ಯಾಫ್ತು ಮಾಡಿ ಆತನಿಂದತ ಆರು ತಿಂಗಳ ವರೆಗೆ ನೇಕಚಾಲಿಗೆ ಜಾಮೀನು ತೆಗೆದುಕೊಂಡು ಎಚ್ಚರಿಕೆ ಹೇಳಿ ಬಿಟ್ಟಿದ್ದರು ಈಗ ಕಳೆದ ಫೆಬ್ರವರಿ ತಿಂಗಳ ೩೦ ನೆ ಮತ್ತು ೭ ನೇ ತಾರೀಖಿನ ಅದೇ ಪತ್ರಿಕೆಯ ಸಂಚಿಕೆಗಳಲ್ಲಿ "ಸ್ವರಾಜ್ಯ ವಿಚಾರವು; ಮಾಡಬೇಕಾದದ್ದನ್ನು ಮಾಡು" ಎಂಬೀ ವಿಷಯಗಳನ್ನು ಕುರಿತು ರಾಜದ್ರೋಹಕರವಾದ ಬಾತ್ಮಿಗಳನ್ನು ಅದೇ ಎಡಿಟರು ಪ್ರಕಟಿಸಿದರು ಪೊಲೀಸ್ ಇಲಾಖೆಯವರು ಆತನನ್ನು ದಸ್ತಗಿರಿ ಮಾಡಿ ಆತನ ಮೇಲೆ ಫಿರ್ಯಾದು ತಂದರು. ಈ ಮೊಕದ್ದಮೆಯನ್ನು ಬೊಂಬಾಯಿನ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು ದರ್ಯಾಫ್ತು ಮಾಡಲಾರಂಭಿಸಿದಾಗ. ಅಪರಾಧಿಯನ್ನು ಜಾಮೀನಿನ ಮೇಲೆ ಖುಲಾಸೆ ಮಾಡದೆ ಇರುವರು.

* * *

ಕಲ್ಕತ್ತಾ ಪಟ್ಟಣದಲ್ಲಿ ಪಂಜಾಬಿ ಪ್ರಜೆಗಳು ಸೇರಿಕೊಂಡು ತಮ್ಮಲ್ಲೇ ಒಂದು ಸಂಘವನ್ನು ಮಾಡಿಕೊಂಡಿದಾರೆ. ಆ ಜನರಲ್ಲಿ ಹುಟ್ಟುವ ಸಮಸ್ತ ವ್ಯಾಜ್ಯಗಳನ್ನೂ ಹಿಡಿದು ವಿಚಾರಣೆ ಮಾಡಿ ಫೈಸಲ್ ತೀರಿಸುವುದು ಕೂಡ ಈ ಸಂಘದವರ ಕರ್ತವ್ಯವಾಗಿರುತ್ತದೆ ಈ ಸಂಘವು ಮೂರು ಅಂಗಗಳಾಗಿರುವವು. ಈ ಮೂರೂ ಮೂರು ಕೋರ್ಟುಗಳೆನಿಸಿರುವವು. ಮೊದಲನೆ ಕೋರ್ಟಿನಲ್ಲಿ ಹಿಡಿದು ಇತ್ಯರ್ಥ ಮಾಡಲ್ಪಟ್ಟ ಮೊಕದ್ದಮೆಗಳ ವಿಷಯದಲ್ಲಿ ಎರಡನೇ ಕೋರ್ಟಿನಲ್ಲಿ ಅಪೀಲ್ ಹಿಡಿದು ದರ್ಯಾಫ್ತು ಮಾಡುವರು ಮೂರನೇ ಕೋರ್ಟಿನವರೇ ಅಖೈರ್ ಕೋರ್ಟು. ಅಲ್ಲಿ ವಿಚಾರಣೆಯಾಗಿ ತೀರ್ಮಾನವಾಗಿಬಿಟ್ಟರೆ ಅದೇ ಕಡೇ ಫೈಸಲು ಕಕ್ಷಿಗಾರರು ಅದರಂತೆ ನಡೆದುಕೊಳ್ಳಬೇಕು. ಸರ್ಕಾರಿ ಕೋರ್ಟುಗಳಲ್ಲಿ ರೂಲಸು ಇರುವಂತೆಯೇ ಈ ಕೋರ್ಟುಗಳಲ್ಲೂ ವಾದಿ ಪ್ರತಿವಾದಿಗಳ ಕೈಫಿಯತ್ತು, ಅವರ ಕಡೆಗಳ ಸಾಕ್ಷಿಗಳ ವಿಚಾರಣೆ, ಲಾಯರುಗಳ ಆರ್ಗ್ಯುಮೆಂಟು, ಈ ಮೊದಲಾದ ಕ್ರಮಗಳನ್ನೆಲ್ಲಾ ಆಚರಣೆಯಲ್ಲಿಟ್ಟುಕೊಂಡಿದಾರೆ. ಆದರೆ ವಾದಿ ಪ್ರತಿವಾದಿಗಳು ಸರ್ಕಾರಿ ಕೋರ್ಟಿಗೂ ಸಾಕ್ಷಿಗಳಿಗೂ ಲಾಯರುಗಳಿಗೂ ಕೊಡಬೇಕಾದಂಥಾ ಫೀಜೇನೂ ಈ ಕೋರ್ಟುಗಳಿಗೆ ಕೊಡಬೇಕಾದದ್ದಿಲ್ಲ. ಇದುವರೆಗೆ ಈ ಕೋರ್ಟುಗಳಲ್ಲಿ ಐವತ್ತು ಮೊಕದ್ದಮೆಗಳು ಫೈಸಲಾಗಿರುವವು.

* * *

ಪಂಜಾಬ್ ಆಧಿಪತ್ಯಕ್ಕೆ ಸೇರಿದ ಜೇಲಂ ಪಟ್ಟಣದಲ್ಲಿ ಗವರ್ನ್ಮೆಂಟಿನವರು ಪಠಾಣ್ ಸೈನಿಕರ ಒಂದು ಕಂಪನಿಯನ್ನು ಇಟ್ಟಿದಾರೆ ಆ ಕಂಪನಿಯಲ್ಲಿ ಸುಬೇದಾರ್ ಮೇಜರೆಂಬ ಕೆಲಸವು ಖಾಲಿ ಬಿತ್ತು. ಸೈನ್ಯಾಧಿಪತಿಯು ಅದೇ ಸೈನ್ಯದಲ್ಲಿ ಜಮಾದಾರನಾಗಿದ್ದವನಿಗೆ ಆ ಕೆಲಸವನ್ನು ಕೊಟ್ಟು ಬಡ್ತಿ ಮಾಡದೆ, ಹೊರಗಿನಿಂದ ಇನ್ನೊಬ್ಬನನ್ನು ಕರೆದುತಂದು ನೇಮಕಮಾಡಿದನು. ಹೀಗೆ ಮಾಡಿದ್ದು ತುಂಬಾ ಅನ್ಯಾಯವೆಂದು ಪಠಾಣ್ ಸೈನಿಕರಿಗೆಲ್ಲಾ ಅಸಮಾಧಾನ ಉಂಟಾಗಿ ಎಲ್ಲರೂ ತಮ್ಮ ಕೆಲಸಕ್ಕೆ ರಾಜೀನಾಮೆ ಕೊಟ್ಟುಬಿಟ್ಟರು ಆಗ ಸೈನ್ಯಾಧಿಪತಿಯು ಅವರನ್ನೆಲ್ಲಾ ಕರೆಸಿ—ನಿಮಗೆಲ್ಲಾ ಶಿಕ್ಷೆ ಮಾಡಿಬಿಡುತ್ತೇನೆ ಎಂದು ಹೇಳಿದನು. ಐದು ಮಂದಿ ವಿನಾ ಉಳಿದವರೆಲ್ಲಾ ಹೆದರಿ ಪುನಃ ಕೆಲಸಕ್ಕೆ ಸೇರಿಕೊಂಡರು ಆ ಐದು ಮಂದಿಯನ್ನು ಅಧಿಪತಿಯು ದರ್ಯಾಫ್ತು ಮಾಡಿ ಸಜಾ ವಿಧಿಸಿದನು. ಈ ಸುದ್ದಿಯನ್ನು ಕೇಳಿದ ಜನರೇ ಪಠಾಣರೆಲ್ಲಾ ಮತ್ತೆ ಕೆಲಸಕ್ಕೆ ಬರುವುದಿಲ್ಲವೆಂದು ಹಟ ಹಿಡಿದರು ಆಗ ಅಧಿಪತಿಯು ಅವರನ್ನು ಕಂಡು—ನಿಮ್ಮಲ್ಲಿ ಎಷ್ಟು ಜನ ಕೆಲಸದ ಮೇಲೆ ಹಾಜರಾಗುತ್ತೀರಿ ಎಂದು ಕೇಳಿದನು ಹನ್ನೊಂದು ಮಂದಿ ಒಪ್ಪಿಕೊಂಡರು. ಜುದ್ದೇದಾರನು ಆ ಹನ್ನೊಂದು ಜನರ ಕೈಲು ಜಪ್ತಿ ಸಿ ಅವರವರ ಮನೆಗಳಿಗೆ ರವಾನೆಮಾಡಿ, ಉಳಿದವರನ್ನೆಲ್ಲಾ ಹಿಡಿಸಿ ಬಂಧನದಲ್ಲಿ ಹಾಕಿಕೊಂಡಿದಾರೆ. ಇವರಲ್ಲಿ ಮೇಲ್ಕಂಡ ಜಮಾದಾರನೂ ಸೇರಿಕೊಂಡಿರುವನು.

ವಿದೇಶ ವರ್ತಮಾನಗಳು.

ಲಾರ್ಡ್ ಕರ್ಸಾರವರಿಗೆ ವ್ಯಾಧಿಗಳು ಪ್ರಾಪ್ತವಾಗಿ ಎರಡು ವಾರಗಳಿಂದ ಹಾಸಿಗೆ ಬಿಟ್ಟು ಏಳುವುದಕ್ಕೆ ಆಗದೆ ತುಂಬಾ ಗಾಬರಿಯನ್ನುಂಟುಮಾಡಿತ್ತು. ದೇವರ ದಯದಿಂದ ಈಚೆಗೆ ಜ್ವರವು ಇಳಿಯುತ್ತಿದೆ ಎಂತಲೂ ಹಾಸಿಗೆಯಿಂದೇಳುವಂತಾಗಿದೆ ಎಂತಲೂ ತಂತೀ ವರ್ತಮಾನ ಬಂದಿದೆ.

* * *

ಕೆನಡಾ ಎಂಬ ಇಂಗ್ಲಿಷ್ ಸ್ವಾಸ್ಥ್ಯದಲ್ಲಿ ಸಮಸ್ತ ಪಾಠಶಾಲೆಗಳೊಳಗೂ ಓದುವಂಥಾ ೧೨ ವರುಷಕ್ಕೆ ಮೇಲ್ಪಟ್ಟ ಹುಡುಗರಿಗೆಲ್ಲಾ ಒಂದೇ ವಿಧವಾದ ಅಂಗಸಾಧನೆಯನ್ನು ಮಾಡಿಸಬೇಕೆಂತಲೂ ಮಿಲ್ಟೇರಿ ಡ್ರಿಲ್ ಎಂಬ ಸೈನಿಕರಿಗೆ ಅವಶ್ಯವಾದ ಸಾಧನೆಯನ್ನೂ ಬಲಾತ್ಕಾರವಾಗಿ ಕಲಿಸಬೇಕೆಂತಲೂ ಮಂತ್ರಿಗಳು ಪಾರ್ಲಿಮೆಂಟ್ ಸಭೆಮನೆಯಲ್ಲಿ ತಿಳಿಸಿರುತ್ತಾರೆ.

* * *

ದಕ್ಷಿಣ ಅಮೇರಿಕಕ್ಕೆ ಸೇರಿದ ಚಿಲ್ಲಿ ರಾಜ್ಯದಲ್ಲಿ ಕಸುವೇಲ್ಯಾಪಿ ಎಂಬ ಅಗ್ನಿ ಪರ್ವತದ ಕೆರೆಯಲ್ಲಿ ಬೆಂಕಿಯು ಹುಟ್ಟಿ ಮೇಲಕ್ಕೆ ಚಿಗಿಯುತ್ತಲೂ ಬೊಬ್ಬೆಗಳಾಗುತ್ತಲೂ ಚಿಗಿದ ಬೆಂಕಿ ಕಿಡಿಗಳೂ ಮಣ್ಣು ಕಲ್ಲುಗಳೂ ಬೂದಿಯೂ ಅಲ್ಲಿಂದ ೧೫೦ ಮೈಲಿ ದೂರದ ತನಕ ಹೋಗಿ ಬೀಳುತ್ತಲೂ ತುಂಬಾ ಭಯವನ್ನುಂಟುಮಾಡಿದೆ. ಪ್ರಜೆಗಳು ಮನೆಮಠಗಳನ್ನು ಬಿಟ್ಟು ಓಡುತ್ತಿದಾರೆ. ಗೋಕಾಯಿಗಳು ಅನೇಕವಾಗಿ ಮೃತಪಟ್ಟವು.

* * *

ವಿಲಾಯತಿಯಲ್ಲಿ ಆಮಾಯದ ಮೇಲಣ ತೆರಿಗೆಯನ್ನು ಗವರ್ನ್ಮೆಂಟಿನವರು ದಕ್ಷಿಣ ಆಫ್ರಿಕಾ ಯುದ್ಧಕಾಲದಲ್ಲಿ ೧೫ ರೂಪಾಯಿಗೆ ೧೨ ಆಣೆಯಂತೆ ಹೆಚ್ಚಿಸಿ ಅಲಾಗಾಯಿತು ವಸೂಲ್ಮಾಡುತ್ತಿದಾರೆ. ಇದು ಯುದ್ಧಕಾಲದಲ್ಲಿ ಅವಶ್ಯವಾಗಿದ್ದರೂ ಈಗಲೂ ಅದರಂತೆ ವಸೂಲ್ಮಾಡುವುದರಿಂದ ಬಡಬಗ್ಗರಿಗೆ ತುಂಬಾ ಕಷ್ಟವೂ ನಷ್ಟವೂ ಆಗುತ್ತಿದೆ ಎಂತಲೂ ಅದನ್ನು ಕಡಿಮೆಮಾಡಿಕೊಡಬೇಕೆಂತಲೂ ಬಹು ಜನರು ಸರ್ಕಾರದವರನ್ನು ಕೇಳಿಕೊಂಡಿದಾರೆ.

* * *

ಕ್ಯಾಪ್ಟನ್ ಕ್ಲಾರ್ಕ್ ಎಂಬಾತನು ಪತ್ನಿಸಹಿತ ಪ್ರಪಂಚವನ್ನೆಲ್ಲಾ ಕಾಲ್ನಡಿಗೆಯಲ್ಲೇ ಸುತ್ತಿಕೊಂಡು ಬರುವುದಾಗಿ ಹೊರಟಿದಾನೆ. ಅವರು ಸುತ್ತಿಕೊಂಡು ಬಂದರೆ ಅವರಿಗೆ ಒಂದೂವರೆ ಲಕ್ಷ ರೂಪಾಯಿ ಬಹುಮಾನ ಸಿಕ್ಕುವುದು ಅವರು ಭೂಮಿಯ ಮೇಲೆ ೫೨,೦೦೦ ಮೈಲಿ ದೂರವೂ ಸಮುದ್ರದ ಮೇಲೆ ೨೮,೦೦೦ ಮೈಲಿಯೂ ಸಂಚರಿಸಬೇಕಾಗಿದೆ ಈಗಾಗಲೇ ಅವರು ಭೂಸಂಚಾರದಲ್ಲಿ ೧೪,೦೦೦ ಮೈಲಿ ತೀರಿಸಿಕೊಂಡು ಅಮೇರಿಕಕ್ಕೆ ಹೋಗಿರುತ್ತಾರೆ.

* * *

ಪರ್ಷಿಯಾ ರಾಜ್ಯದಲ್ಲಿ ಈಗಿನ ದೊರೆಯವರ ತಂದೆಯ ಕಾಲದಲ್ಲಿ ಅಂದರೆ ೧೯೦೩ ನೆ ಇಸವಿಯಲ್ಲಿ ಮಂತ್ರಿಶ್ರೇಷ್ಠರಾಗಿದ್ದು ಗಡೀಪಾರಾಗಿದ್ದ ಅತಾಬೇಗ್ ಮಿರ್ಜಾಖಾನ್ಯವರನ್ನು ಈಗಿನ ದೊರೆಯವರು ಕರೆಸಿಕೊಂಡು, ಅವರಿಗೆ ಅದೇ ಮಂತ್ರಿಪದವಿಯನ್ನು ಕೊಟ್ಟು ನೇಮಿಸಿಕೊಳ್ಳಬೇಕೆಂದು ಹುಕುಂ ಕೊಟ್ಟಿದಾರೆ. ಆ ಮಂತ್ರಿಯು ಗಡೀಪಾರಾಗಿದ್ದಾಗ ಅಂದರೆ ಕಳೆದ ನಾಲ್ಕು ವರುಷಗಳಿಂದಲೂ ಯೂರೋಪ್, ಅಮೇರಿಕ, ಚೀನಾ, ಜಪಾನ್ ಮೊದಲಾದ ರಾಜ್ಯಗಳಲ್ಲಿ ಸಂಚಾರಮಾಡಿ ತುಂಬಾ ಅನುಭವವನ್ನು ಸಂಪಾದಿಸಿಕೊಂಡಿರುತ್ತಾರೆ.

* * *

ಅಮೇರಿಕದ ಸೈನ್ಯದಲ್ಲಿರುವ ಜೇಂಸ್ ಕ್ಯಾರೋಲ್ ಎಂಬ ವೈದ್ಯನಿಗೆ ಅಲ್ಲಿನ ಪಾರ್ಲಿಮೆಂಟಿನವರ ಅನುಮತಿಯನ್ನು ಪಡೆದು ಪ್ರೆಸಿಡೆಂಟ್ ರೂಸ್‌ವೆಲ್ಟ್‌ಯವರು ಮೇಜರ್ ಎಂಬ ರ್ಯಾಂಕಿ ಹುದ್ದೆಯನ್ನು ಕೊಟ್ಟರು ಕಾರಣವೇನೆಂದರೆ—ಆ ವೈದ್ಯನು ಒಂದು ತರಹಾ ಮಾರಕವಾದ ಜ್ವರದ ಪೂರ್ವೋತ್ತರವನ್ನು ಪರೀಕ್ಷೆ ಮಾಡುವುದಕ್ಕಾಗಿ ತಾನೇ ಬಂದು ಸೊಳ್ಳೆಯಿಂದ ೧೯೦೦ ನೆ ಆಗೇಷ್ಟಿನಲ್ಲಿ ಕಡಿಸಿಕೊಂಡು, ಆ ಜ್ವರವನ್ನು ತಂದುಕೊಂಡು ಬಹಳ ಕಷ್ಟಪಟ್ಟನು. ದಿನಕ್ರಮೇಣ ಅದು ವಾಸಿಯಾಗುತ್ತಾ ಬಂತು ಆದರ ಮೇಲೆ ಅವನು ಪರೀಕ್ಷೆಗಳನ್ನು ಮಾಡಿ ಪರಿಹಾರವನ್ನು ಕಂಡುಹಿಡಿದು ಪ್ರಸಿದ್ಧಿ ಹೊಂದಿದನು. ಇಂಥಾ ವೈದ್ಯನಿಗೆ ಬಡ್ತಿ ಕೊಟ್ಟ ವಿಷಯವು ಎಲ್ಲರಿಗೂ ಸಂತೋಷವನ್ನುಂಟುಮಾಡಿದೆ. ಈತನು ೧೮೫೪ ರಲ್ಲಿ ವಿಲಾಯತಿಯಲ್ಲಿ ಹುಟ್ಟಿ ಕೆನಡಾ ಸ್ವಾಸ್ಥ್ಯಕ್ಕೆ ಹೋಗಿ ಕೆಲವು ಕಾಲ ಇದ್ದು ಈಚೆಗೆ ಅಮೇರಿಕದ ಸೈನ್ಯದಲ್ಲಿ ಸೇರಿಕೊಂಡು, ಅಂಟುಜಾಡ್ಯಗಳ ಲಕ್ಷಣ ಪರಿಹಾರಾದಿಗಳನ್ನು ಪರಿಶೋಧನೆ ಮಾಡುತ್ತಿದಾನೆ.

* * *

ಆಸ್ಟ್ರಿಯಾ ರಾಜ್ಯದ ಚಕ್ರವರ್ತಿಯವರ ಅರಮನೆಯಲ್ಲಿ ಪ್ರತಿ ವರುಷವೂ ಒಂದು ಆಶ್ಚರ್ಯಕರವಾದ ಆಚರಣೆ ನಡೆಯುತ್ತದೆ ವರುಷಕ್ಕೊಂದು ಸಲ ಪವಿತ್ರ ಗುರುವಾರವೆಂಬ ಹಬ್ಬ ಬರುವುದು ಆ ಹಬ್ಬದ ದಿನ ಚಕ್ರವರ್ತಿಯವರು ಹನ್ನೆರಡು ಮಂದಿ ಬಡ ಮುದುಕರನ್ನು ಅರಮನೆಗೆ ಕರೆಸಿಕೊಂಡು ಅವರ ಕಾಲು ತೊಳೆದು ಅವರಿಗೆ ಭೋಜನ ಮಾಡಿಸಿ ಬಹುಮಾನ ಕೊಟ್ಟು ಕಳುಹಿಸುತ್ತಾರೆ ಕಳೆದ ಮಾರ್ಚಿ ೨೮ ನೆ ತಾ ಗುರುವಾರದ ದಿನ ಚಕ್ರವರ್ತಿಯವರು ಹನ್ನೆರಡು ಜನ ಬಡ ಮುದುಕರನ್ನು ಕರೆಸಿಕೊಂಡು, ತಾವೇ ಅವರ ಕಾಲು ತೊಳೆದು ಅವರಿಗೆಲ್ಲಾ ಬಡಿಸಿದ್ದಲ್ಲದೆ ಮಿಕ್ಕ ಪದಾರ್ಥವನ್ನು ಬಹುಮಾನ ಸಹಿತವಾಗಿ ಅವರಿಗೇ ಕೊಟ್ಟು ಕಳುಹಿಸಿದರು ಪ್ರತಿ ಮುದುಕನ ಕುತ್ತಿಗೆಗೂ ೩೦ ಕ್ರೌನ್ ಎಂಬ ಬೆಳ್ಳಿಯ ನಾಣ್ಯಗಳನ್ನು ಗಂಟುಕಟ್ಟಿ ತಗಲಿಹಾಕಿದರು. ಆ ಮುದುಕರ ವಯಸ್ಸನ್ನೆಲ್ಲಾ ಕೂಡಿಸಿದರೆ ೧,೦೬೮ ವರುಷಗಳಾಗುವವು ಆ ಪೈಕಿ ಇಬ್ಬರು ೯೨ ವರುಷದವರು, ಇಬ್ಬರಿಗೆ ೯೦ ವರುಷ, ಉಳಿದವರೆಲ್ಲಾ ೯೦ ವರುಷದವರು

ತಾಲ್ಲೋಕು ವರ್ತಮಾನಗಳು.

ಚಿಕ್ಕಮಗಳೂರು.—ಇಲ್ಲಿ ಒಂದು ವಾರದಿಂದಲೂ ಮೋಡವಾಡುತ್ತಾ ಅಲ್ಪ ಸ್ವಲ್ಪ ಸೋನೆ ಮಳೆಯೂ ಸಹ ಬೀಳುತ್ತಾ ಇದೆ. ಕಳೆದವಾರ ಎರಡು ಹದ ಒಳ್ಳೇ ಮಳೆಯಾಯಿತು. ರೈತರಲ್ಲಿ ಕೆಲವರು ರಾಗಿ ಭತ್ತ ಮೊದಲಾದ ದಿನಸಿಗಳನ್ನು ಪೇರಾವು ಮಾಡಲು ಹೊಲಗದ್ದೆಗಳನ್ನು ಸಿದ್ಧ ಮಾಡಿಕೊಳ್ಳುತ್ತಲೂ ಕೆಲವರು ಬೀಜಗಳನ್ನು ಈಗಾಗಲೇ ಬಿತ್ತುತ್ತಲೂ ಇದಾರೆ.—ಚಿಕ್ಕಮಗಳೂರು ತಾಲ್ಲೂಕು ಬೆಳವಾಡಿ ಎಂಬ ಗ್ರಾಮದ ವಾಸಿ ರಾಮಯ್ಯನೆಂಬುವರ ಮನೆಗೆ ಕಳೆದ ೧೬ ನೇ ತಾ. ರಾತ್ರಿ ಕಳ್ಳರು ನುಗ್ಗಿ ಸುಮಾರು ಹದಿನೈದು ರೂಪಾಯಿ ಬಾಳುವ ಒಡವೆಗಳನ್ನು ಕಳವು ಮಾಡಿದಲ್ಲದೆ, ರಾಮಯ್ಯನವರನ್ನೂ ಅವರ ಇಬ್ಬರು ಮಕ್ಕಳನ್ನೂ ಚೆನ್ನಾಗಿ ಹೊಡೆದು ಪರಾರಿಯಾದರೆಂದೂ ಆದರೆ ರಾಮಯ್ಯನವರಿಗೆ ಮಾತ್ರ ತಲೆಯಮೇಲಿನ ಪೆಟ್ಟು ಬಲವಾದ್ದರಿಂದ ಆ ಪೆಟ್ಟು ತಿಂದ ಮೂರನೇ ದಿವಸವೇ ಮೃತಪಟ್ಟರೆಂದೂ ವರ್ತಮಾನವಿದೆ ಕಳ್ಳರು ಮಾತ್ರ ಇನ್ನೂ ಸಿಕ್ಕಲಿಲ್ಲ. ಕಳೆದವಾರ ಊರಿಗೆ ಸಮೀಪದಲ್ಲಿರುವ ತೇಗೂರು ಗ್ರಾಮದಲ್ಲಿ ಗ್ರಾಮಸ್ಥರು ಯಾವದೋ ಒಂದು ದೇವತೆಯನ್ನು ಮೆರವಣಿಗೆ ಮಾಡುತ್ತಿರುವಾಗ ಅದೇ ಗ್ರಾಮದ ಒಬ್ಬ ಹೆಂಗಸಿಗೆ ದೇವರ ಆವೇಶ ಬಂದು ಜನರ ಗುಂಪಿನಲ್ಲಿ ತಿರುಗುತ್ತಿದ್ದಂತೆಯೂ ಎಲ್ಲರೂ ಅವಳಲ್ಲಿ ತಮ್ಮ ಕಷ್ಟ ದುಃಖಗಳನ್ನು ಹೇಳಿಕೊಳ್ಳುವಾಗ ಅದೇ ಗ್ರಾಮದ ತಮ್ಮಯ್ಯ ಗೌಡರೆಂಬುವರು ಆಕೆಯ ಹತ್ತಿರ ಬಂದು—ನಿನ್ನ ಮೇಲೆ ದೇವರು ಆವೇಶವಾಗಿ ಬಂದಿದ್ದರೆ ನನ್ನ ಮನಸ್ಸಿನಲ್ಲಿರುವದನ್ನು ಹೇಳಬೇಕೆಂದು ಕೇಳಿದಂತೆಯೂ ಅದಕ್ಕೆ ಆಕೆಯು—ಇಲ್ಲಿ ಹೇಳುವದಿಲ್ಲ; ದೇವರ ಗುಡಿಗೆ ಬಂದಾಗ ಹೇಳುತ್ತೇನೆಂದು ಹೇಳಿದಹಾಗೂ, ಹೀಗೆ ಚರ್ಚೆ ನಡೆಯುವಾಗ ಕೆಲವರು ತಮ್ಮಯ್ಯ ಗೌಡರನ್ನು ಸುಮ್ಮನೆ ಇರುವಂತೆ ಹೇಳಿದಹಾಗೂ, ಅವರು ಬಿಡದೆ ಕೇಳುತ್ತಿರುವಾಗ ಆಕೆಯು ಹೇಳದೆ ಹೋದ್ದರಿಂದ ಆಕೆಯ ಮನೆಯವರು ಬಂದು ಅವಳನ್ನು ಬೈದು ಮನೆಗೆ ಕರೆದುಕೊಂಡುಹೋದಹಾಗೂ, ಅದೇ ರಾತ್ರಿ ತಮ್ಮಯ್ಯ ಗೌಡರ ಹುಲ್ಲು ಮೆದೆಗೆ ಬೆಂಕಿ ಬಿದ್ದು ಉರಿಯುತ್ತಿರುವಾಗ ಎಲ್ಲರೂ ಸೇರಿ ಆರಿಸಿದಾಗ್ಯೂ ಸುಮಾರು ಇಪ್ಪತ್ತು ರೂಪಾಯಿನಷ್ಟು ಹುಲ್ಲು ನಷ್ಟವಾದಂತೆಯೂ, ಆ ಕೆಲಸವನ್ನು ಯಾರು ಮಾಡಿರಬೇಕೆಂದು ಯೋಚಿಸುವಾಗ ಪ್ರಾಯಶಃ ಆ ದೇವರ ಆವೇಶ ಬಂದ ಸ್ತ್ರೀಯು ತನ್ನನ್ನು ಹಾಸ್ಯ ಮಾಡಿದ ಕಾರಣ ಆಕೆಯೇ ಹಾಕಿರಬೇಕೆಂದು ಗುಮಾನಿ ಮೇಲೆ ಹೇಳುತ್ತಾರೆಂದೂ ಹೇಳುತ್ತೇನೆ.—ಮೊಹರಂ ಕಡೇ ದಿನ ಮೆಯಿಲ್ ಟಾಂಗಾಕ್ಕೆ ಪಬ್ಲಿಕ್ ರಸ್ತೆಯಲ್ಲಿ ಹೋಗಲು ದಾರಿ ಕೊಡದೆ ಹೋದರೆಂದು ಮೂವತ್ತೆರಡು ಮಂದಿ ಮಹಮ್ಮದೀಯರನ್ನು ಹಿಡಿದು ವಿಚಾರಣೆ ಮಾಡುತ್ತಿರುವುದಾಗಿ ಬರೆದಿತಷ್ಟೆ; ಮೊಕದ್ದಮೆ ಇಲ್ಲಿನ ಜನರಲ್ ಅಸಿಸ್ಟೆಂಟ್ ಕಮಿಷನರ್ ಮಿ॥ ವೈಲಾರಿರಾಯರವರ ಕೋರ್ಟಿನಲ್ಲಿ ನಡೆದು ಅಪರಾಧಿಗಳಾಗಿ ಕಂಡುಬಂದ ಹನ್ನೊಂದು ಜನರ ಪೈಕಿ ಒಂಬತ್ತು ಮಂದಿಗೆ ತಲಾ ಇಪ್ಪತ್ತು ರೂಪಾಯಿನಂತೆಯೂ ಇಬ್ಬರಿಗೆ ತಲಾ ಹತ್ತು ರೂಪಾಯಿನಂತೆಯೂ ಜುಲ್ಮಾನೆಯಾಯಿತೆಂದು ವರ್ತಮಾನ.—ಕಳೆದ ವರ್ಷ ಮೆ॥ ಮಹಮ್ಮದ್‌ಯಾಕೋಬ್ ಸಾಬರೇ ಮೊದಲಾದ ಮುಖ್ಯರಾದ ವರ್ತಕರೆಲ್ಲಾ ಸೇರಿ ಮಹಮ್ಮದೀಯರಿಗೆಲ್ಲಾ ಭಾರಿ ಔತನ ಮಾಡಿದಂತೆಯೇ ಇದೇ ೨೬ ನೇ ತಾ ಬೆಳಿಗ್ಗೆ ಅದೇ ವರ್ತಕ ಮಂಡಲಿಯವರು ಸೇರಿ ಈ ಊರಿನ ಮತ್ತು ಇದಕ್ಕೆ ಸೇರಿದ ಸಮೀಪಗ್ರಾಮದ ಮುಸಲ್ಮಾನರಿಗೆಲ್ಲಾ ಇಲ್ಲಿನ ಲಷ್ಕರಿಯವರ ಮಸೀದಿಯಲ್ಲಿ ಸುಭೋಜನ ಮಾಡಿಸಿದ್ದಲ್ಲದೆ, ಅದೇ ಸಾಯಂಕಾಲ ಒಂದು ಮೀಟಿಂಗ್ ಮಾಡಿ, ಅದಕ್ಕೆ ಇಲ್ಲಿನ ಅನೇಕ ಜನ ದೊಡ್ಡಮನುಷ್ಯರನ್ನು ಕರೆಸಿಕೊಂಡು, ಅಂಜುಮನ್ ಎಂಬ ಸಭೆಯನ್ನೂ ಫಂಡನ್ನೂ ಊರ್ಜಿತಪಡಿಸಲು ಅದರಿಂದ ಅನೇಕ ಬಡಬಗ್ಗರಿಗೆ ಸಹಾಯವಾಗುವಂತೆ ಏರ್ಪಾಡು ಮಾಡಿದರೆಂದೂ ವರ್ತಮಾನ.

ತೀರ್ಥಹಳ್ಳಿ.—ಇಲ್ಲಿ ೩—೪ ಹದ ಒಳ್ಳೇ ಮಳೆಯಾಯಿತು. ತಾ. ೨೩ ಮಂಗಳವಾರ ರಾತ್ರಿ ಈ ಪ್ರಾಂತ್ಯ ಸುರಿದ ಜಲಪ್ರಳಯದಂತಿದ್ದ ಮಳೆಯು ಹಿಂದೆ ಮುಂಗಾರಿನಲ್ಲಿ ಸುರಿದದ್ದು ಅಪೂರ್ವವೆಂದು ಜನರು ಹೇಳುತ್ತಾರೆ.—ಸಿಡುಬಿನ ಹಾವಳಿಯು ಪೇಟೆಯಲ್ಲಿ ಬಹಳ ಮಟ್ಟಿಗೆ ಶಾಂತವಾಗಿದೆ. ಹಳ್ಳಿಹಳ್ಳಿಗಳಲ್ಲಿ ಇನ್ನೂ ಕಠಿಣವಾಗಿಯೇ ಇದೆ. ಈಗಿರುವ ವ್ಯಾಕ್ಸಿನೇಟರು ತುಂಬಾ ಮುತುವರ್ಜಿಯಿಂದ ಹಳ್ಳಿಗಳ ಮೇಲೆ ಸಂಚಾರಮಾಡಿ ಅನೇಕ ಜನಗಳಿಗೆ ಮೈಲೀ ಹಾಕುತ್ತಾ ಬಂದಿದಾರೆ ಈ ವಿಸ್ತಾರವಾದ ತಾಲ್ಲೂಕಿನಲ್ಲಿ ಅದರೊಳಗೂ ಸಾಂಕ್ರಾಮಿಕ ರೋಗಗಳಿಗೆ ತೌರು ಮನೆಯಾಗಿರುವ ಈ ಮಲೆನಾಡು ಪ್ರದೇಶದಲ್ಲಿ ಸಿಡುಬು ಹಾಕುವುದು ಒಬ್ಬ ದೇವಿ ಹಕೀಮನಿಂದ ಸಾಧ್ಯವಲ್ಲವು ಆದುದರಿಂದ ಇವರ ಸಹಾಯಕ್ಕೆ ಸರ್ಕಾರದವರು ಮತ್ತೊಬ್ಬರನ್ನು ನೇಮಿಸುವುದು ಯುಕ್ತವಾಗಿ ಕಾಣುತ್ತದೆ ಈ ತಾಲ್ಲೂಕಿಗೆ ಸೇರಿದ ಮಂಡಗದ್ದೆ ಮಾಗಣೆಯಲ್ಲಿ ಜಂಗಾಮಿಯಾಗಿ ಒಬ್ಬ ವ್ಯಾಕ್ಸಿನೇಟರನ್ನು ನೇಮಿಸಿದ್ದು ಕೊಂಚ ಕಾಲದಲ್ಲೇ ವಾಪಸು ಕರೆಸಿಕೊಂಡರು ಶಿವಮೊಗ್ಗೆಯಿಂದ ಡಿಸ್ಟ್ರಿಕ್ಟ್ ಸರ್ಜನ್ ಸಾಹೇಬರು ಬಂದು ಟೌನಿನಲ್ಲಿಯೂ, ಬೇರೆ ಗ್ರಾಮಗಳಲ್ಲಿಯೂ ಜನಗಳನ್ನು ತುಂಬಾ ಪ್ರೇರೇಪಿಸಿ ಅನೇಕಾನೇಕರಿಗೆ ತಾವೇ ಖುದ್ದಾಗಿ ಸಿಡುಬುಹಾಕಿಹೋದರು ಇಲ್ಲಿನ ಆಸ್ಪತ್ರೆ ಅಸಿಸ್ಟೆಂಟರಿಗಂತೂ ಪುರಸತ್ತೇ ಇಲ್ಲ. ಹಳ್ಳಿಗಳಿಂದ ಜನರು ತಂಡತಂಡವಾಗಿ ಬಂದು ಅವರಿಂದ ಸಿಡುಬು ಹಾಕಿಸಿಕೊಳ್ಳುತ್ತಿದಾರೆ.—ಪೇಟೆಯಲ್ಲಿ ಪೋಲಿ ನಾಯಿಗಳ ದಾಂಧಲೆ ವಿಪರೀತವಾಗಿದೆ. ಈ ಕಾಲದಲ್ಲಿ ನಾಯಿಗಳಿಗೆ ಹುಚ್ಚು ಹಿಡಿಯುವದುಂಟು ಆದ್ದರಿಂದ ಇಲ್ಲಿ ನಾಯಿಗಳಿಗೆ ಹುಚ್ಚುಹಿಡಿದಿದ್ದರ ಮೇಲೆ ಪೋಲಿ ನಾಯಿಗಳನ್ನು ಕೊಲ್ಲಬೇಕೆಂಬುದಾಗಿ ಅಮಲ್ದಾರರ ಅಪ್ಪಣೆಯೂ ಆಗಿತ್ತು. ಆದರೆ ನಾಯಿ ಹೊಡೆದವರು ಅವುಗಳನ್ನು ಹೂಳದೆ ಬೈಲಿನಲ್ಲಿ ಬಿಸಾಟುಬಿಡುವುದರಿಂದ ಆ ಮೃತಪಟ್ಟ ನಾಯಿಗಳ ಮಾಂಸವನ್ನು ಬೇರೆ ನಾಯಿಗಳು ತಿಂದು ಹುಚ್ಚು ಹಿಡಿಯುವುದಕ್ಕೆ ಮಾರ್ಗವಾ

ಗಿದೆ. ಹೀಗಾಗಿ ಮೊನ್ನೆ ಒಂದು ಹುಚ್ಚು ನಾಯಿ ಒಂದು ಕುರಿಯನ್ನು ಕಚ್ಚಿತೆಂತಲೂ, ಅದೇ ಕುರಿಯನ್ನು ಕಟುಕರವನು ಕಡಿದು ಮಾಂಸ ಮಾರಾಟ ಮಾಡಿದನೆಂತಲೂ ಊರೆಲ್ಲಾ ಘೋಷವಾಗಿ ಅನೇಕ ಜನಗಳಿಗೆ ತುಂಬಾ ಭೀತಿಯುಂಟಾಗಿದೆ.—ತಾ. ೨೩—೨೪ ರಲ್ಲಿ ಈ ಊರಿನಲ್ಲಿ ಮಾರೀ ಉತ್ಸವವು ಬಹು ಉಗ್ರವಾಗಿ ನಡೆಯಿತು. ಪೇಟೆಯ ಮಧ್ಯರಾಷ್ಟ್ರದಲ್ಲಿರುವ ಮಾರೀ ಗುಡಿಯ ಮುಂದುಗಡೆ ಕೋಣಗಳನ್ನೂ ಕೋಳಿಗಳನ್ನೂ ಕಡಿದು ರಕ್ತವು ಪ್ರವಾಹವಾಗಿ ಹರಿಯುವಂತೆ ಮಾಡಿದರು. ಇಂಥಾ ಹೇಯವಾದ ನೋಟವನ್ನು ಆ ಮಾರ್ಗವಾಗಿ ಹೋದವರು ನೋಡಿ ಜುಗುಪ್ಸೆ ಹೊಂದಿರುತ್ತಾರೆನ್ನುವುದಕ್ಕೆ ಯಾವ ಸಂಶಯವೂ ಇಲ್ಲ. ಆ ಕಡಿದ ಕೋಣಗಳನ್ನು ಮೂರನೆಯ ದಿನದವರೆಗೂ ತೆಗೆಯದೆ ಇದ್ದುದರಿಂದ ಅವುಗಳನ್ನು ನಾಯಿಗಳು ಕೀಳುವುದಕ್ಕೂ, ರಣಹದ್ದುಗಳ ಸಮೂಹವು ಸೇರುವುದಕ್ಕೂ ಅವಕಾಶವಾಯಿತು. ಒಂದು ಕಡೆ ಜನಗಳ ಮೌಢ್ಯವನ್ನೂ ಮತ್ತೊಂದು ಕಡೆ ಈ ಮೌಢ್ಯದಿಂದುಂಟಾದ ಪ್ರಜೆಗಳ ನೆಮ್ಮದಿಭಂಗವನ್ನೂ ನೋಡಿ ತುಂಬಾ ವಿಷಾದಿಸಬೇಕಾಗಿದೆ. ನಮ್ಮ ಅಮಲ್ದಾರರು ಇಂಥಾ ವಿಷಯಗಳನ್ನು ತಮ್ಮ ಅವಗಾಹನೆಗೆ ತಂದುಕೊಂಡು ಪ್ರಜೆಗಳ ಕ್ಷೇಮಕ್ಕೆ ಅನುಕೂಲವಾಗಿರುವ ಏರ್ಪಾಡುಗಳನ್ನು ಮಾಡುವರೆಂಬ ನಿರೀಕ್ಷೆ ಇದೆ.

ಅರಸೀಕೆರೆ.—ಇಲ್ಲಿ ನೆನ್ನೆ ಒಂದು ಹದ ಮಳೆ ಬಹಳ ಚೆನ್ನಾಗಿ ಆಯಿತು. ಜುರಳಿ ಭಾವಿಯ ಅಶುಚಿಕರವಾದ ಕಾರ್ಯವನ್ನು ತಪ್ಪಿಸಲು ಒಬ್ಬ ಪೋಲೀಸ್ ಕಾನ್ಸ್ಟೇಬಲನ್ನು ಆ ಬಳಿ ಇಟ್ಟರೆ ತುಂಬಾ ಅನುಕೂಲ.—ಸಂತೆಯಲ್ಲಿ ಪೋಲೀಸಿನವರು ಪಸಿಳೆ ಎತ್ತುವದನ್ನು ಈಗ ಬಂದಿರುವ ಇನ್ಸ್ಪೆಕ್ಟರು ಸ್ವಲ್ಪ ಮಟ್ಟಿಗೆ ತಪ್ಪಿಸಿದ್ದಕ್ಕೆ ತುಂಬಾ ಸಂತೋಷಪಡುತ್ತೇವೆ. ಇನ್ನೂ ಇಬ್ಬರು ಪ್ರತಿ ಸಂತೆಯಲ್ಲೂ ಬಾಚುತ್ತಾರೆ. ಇದನ್ನು ಸಂಪೂರ್ಣವಾಗಿ ತಪ್ಪಿಸಬೇಕಲ್ಲದೆ ತಮ್ಮ ಇಲಾಖೆಗೆ ಒಳ್ಳೇ ಹೆಸರು ಸಂಪಾದಿಸಿಕೊಳ್ಳುತ್ತಾರೆಂದು ನಿರೀಕ್ಷಿಸುತ್ತಲಿದೆ.—ಸಂತೆಯಲ್ಲಿ ಕೆಲವು ಜನರು ಸೇರಿ ತುಂಬಾ ಜೂಜಾಡುತ್ತಾರೆ. ಪ್ರತಿ ಸಂತೆಯಲ್ಲಿ ದರಿದ್ರಪಕ್ಷ ೫೦—೬೦ ರೂಪಾಯಿಗೆ ಕಮ್ಮಿ ಇಲ್ಲದಂತೆ ಸುಲಿದುಕೊಂಡು ಹೋಗುತ್ತಾರೆ. ಇದನ್ನು ಪೋಲೀಸಿನವರು ನಿಲ್ಲಿಸಬೇಕಾಗಿದೆ.—ಹೊಸ ಡೆಪ್ಟಿ ಕಮೀಷನರ್ ಸಾಹೇಬರು ಬೆಂಗಳೂರಿನಿಂದ ನೆನ್ನೆ ೧೨ ಗಂಟೆ ಟ್ರೇನಿನಲ್ಲಿ ಇಲ್ಲಿಗೆ ಬಂದರು ಆಗ್ಗೆ ಅಮಲ್ದಾರರು ಪೋಲೀಸಿನವರು ಕಂಟ್ರಾಕ್ಟರು ಸಾಹುಕಾರರು ಇನ್ನೂ ಅನೇಕ ದೊಡ್ಡ ಮನುಷ್ಯರು ಸೇರಿ ತುಂಬಾ ಮರ್ಯಾದೆಯೊಡನೆ ಅವರನ್ನು ಎದುರುಗೊಂಡರು. ಅವರು ಮುಸಾಫರಿ ಬಂಗ್ಲೆಗೆ ಪೋಲೀಸ್ ಸೂಪ್ರೆಂಟರ ಸಮೇತ ಹೋಗಿ ರಾತ್ರಿ ಮೊಕ್ಕಾಂ ಮಾಡಿ ಬೆಳಿಗ್ಗೆ ಹಾಸನಕ್ಕೆ ತೆರಳಿದರು

ದೊಡ್ಡಬಳ್ಳಾಪುರ.—ಇಲ್ಲಿ ೨೭—೨೮ ನೇ ತಾ. ಒಂದು ಹದ ಮಳೆಯಾಯಿತು. ಹೋದ ವಾರದ ಪತ್ರಿಕೆಯಲ್ಲಿ ಹಿಂದುಸ್ಥಾನಿ ಸ್ಕೂಲ್ ಹೆಡ್ ಮಾಸ್ಟರ ಅಳಿಯಂದಿರು ವಾಂತಿಭೇದಿಯಾಗಿ ಸತ್ತರೆಂದು ಬರೆದು ಇತ್ತು. ಈಚೆಗೆ ಅವರ ಕಡೆಯಿಂದ ತಿಳಿದು ಬಂದದ್ದೇನೆಂದರೆ, ಅವರಿಗೆ ಬೇಧಿ ಮಾತ್ರ ಆಯಿತು ವಾಂತಿಯಾಗಲಿಲ್ಲವೆಂದು ಹೇಳುತ್ತಾರೆ. ವಾಂತಿ ಎಂಬ ಮಾತು ಇದ್ದ ಕಾರಣ ಅವರ ಕಡೆಯವರಿಗೆ ವ್ಯಸನವಾಯಿತೆಂದು ತೋರುತ್ತೆ ಈ ಮೂಲಕ ವ್ಯಸನಪಡದ ಹಾಗೆ ತಿಳಿಸುತ್ತೇನೆ.—ಕಲ್ಲು ಕೆಲಸ ಮಾಡುತ್ತಿದ್ದ ಒಬ್ಬ ಮುಸಲ್ಮಾನ್ ಯೌವನಸ್ಥನು ೨೮ ನೇ ತಾ. ಭೇದಿಯಿಂದ ಸತ್ತು ಹೋದನು. ಕಣ್ಣಾಸ್ಪತ್ರೆಯ ಡಾಕ್ಟರ್ ರಾಮಸ್ವಾಮಯ್ಯಂಗಾರರು ಕುಟುಂಬಸಮೇತ ಆರೋಗ್ಯಕ್ಕೋಸ್ಕರ ೨೭ ನೇ ತಾ. ನಂದಿ ದುರ್ಗಕ್ಕೆ ಈ ಬಳ್ಳಾಪುರದ ಮಾರ್ಗವಾಗಿ ಹೋದರು.—ವೆಸ್ಲಿಯನ್ ಮಿಷನ್ ಘಸಚೇರ್ಮನ್ ದೊರೆಯವರು ೨೭ ನೇ ತಾ ಇಲ್ಲಿನ ಮುಕ್ತಿ ಮನೆಗೆ ದಯಮಾಡಿಸಿ, ಈ ಊರಿನ ಕ್ರೈಸ್ತರಿಗೆ ದೇವಾರಾಧನೆ ಮುಂತಾದ ಆಚರಣೆಗಳನ್ನು ನಡಿಸಿ, ಅದೇ ದಿನ ಬೆಂಗಳೂರಿಗೆ ದಯಮಾಡಿಸಿದರು.—ಇಲ್ಲಿಗೆ ಕೆಲವು ಕಂಥಾರಿಗಳ್ ಬಂದಿದಾರೆ ಇವರ ಹತ್ತಿರ ಪಾಂಚಾಳದ ಬಿ. ಅಣ್ಣಾಪ್ಪ ಎಂಬುವರು ಅವರ ದೇಶದ ಬೆಳ್ಳಿ ನಾಣ್ಯಗಳೆಂದು ಭ್ರಮಿಸಿ, ಸುಮಾರು ನೂರು ನಾಣ್ಯಗಳನ್ನು ತೆಗೆದುಕೊಂಡು ಕೆಲವು ವರ್ತಕರಿಗೆ ಸಹ ಕೊಡಿಸಿದರಂತೆ ತರುವಾಯ ಒಬ್ಬ ವರ್ತಕನು ಅದನ್ನು ಬೆಂಕಿಯಲ್ಲಿ ಹಾಕಿಸಿ ಕರಗಿಸಿದಾಗ, ಜರ್ಮನ್ ಸಿಲ್ವರ್ ಎಂದು ಗೊತ್ತಾಯಿತು ಈ ವಿಷಯದಲ್ಲಿ ನಮ್ಮ ದೇಶದವರು ಎಚ್ಚರಿಕೆಯಾಗಿರಬೇಕೆಂದು ತಿಳಿಸುತ್ತೇವೆ ಈ ಕಂಥಾರಿಗಳು ತಮ್ಮ ಕಡೆಯ ಬೆಳ್ಳಿ ನಾಣ್ಯಗಳು ಬಹು ಸುಲಭ ಬೆಲೆಗೆ ಕೊಡುತ್ತೇವೆಂದು ಜನರಿಗೆ ಹೇಳಿ ವಂಚಿಸಬಹುದು ಈಗ ನಡೆದ ಕಾರ್ಯದಲ್ಲಿ ಕಸಬುದಾರನೇ ಮೋಸ ಹೋಗುವದರಲ್ಲಿ ಆಶ್ಚರ್ಯವೇನು?—ಊರನ್ನು ಶುಚಿಯಾಗಿ ಇಡುವ ವಿಚಾರದಲ್ಲಿ ಈಗಿನ ಮುನ್ಸಿಪಲ್ ಮುತ್ಸದ್ದಿಯು ಬಹು ಪ್ರಯಾಸಪಡುತ್ತಾರೆ. ಇಲ್ಲಿ ಹಾಳು ಗೋಡೆ ಇರುವ ಹಾಳು ನಿವೇಶನಗಳು ಹೆಚ್ಚಾಗಿವೆ ಇಂಥಾ ಕಡೆ ಜನರು ಹೇಸಿಕೆ ಮಾಡುವದರಿಂದ ಅನಾರೋಗ್ಯ ಉಂಟಾಗುತ್ತೆ. ಈ ವಿಚಾರದಲ್ಲಿ ಮುನಿಸಿಪಾಲಿಟಿಯವರು ಗಮನಕ್ಕೆ ತಂದುಕೊಳ್ಳಬೇಕು

ಹೆಗ್ಗಡದೇವನಕೋಟೆ:—ಈ ತಾಲ್ಲೂಕಿಗೆ ಸೇರಿದ ಸರಗೂರು ಹೋಬಳಿ ಹುಣಸನಹಳ್ಳಿ ಗ್ರಾಮಕ್ಕೆ ವಾಯುವ್ಯ ಮುಕ್ಕಾಲು ಫರ್ಲಾಂಗಿನಲ್ಲಿ ಉತ್ತಮ ವರ್ಣದವರು ನೀರು ಸೇದಲು ಒಂದು ಭಾವಿಯನ್ನೂ ಈ ಭಾವಿಗೆ ಉತ್ತರ ಸುಮಾರು ಕಾಲು ಫರ್ಲಾಂಗಿನಲ್ಲಿ ಪಂಚಮರು ನೀರು ಸೇದಲು ಒಂದು ಭಾವಿಯನ್ನೂ ೫೦—೬೦ ವರ್ಷದ ಕೆಳಗೆ ಪತ್ತೇಗೌಡರು ತೆಗಿಸಿದ್ದರು. ಇದಕ್ಕೆ ಕೈಪಿಡಿ ಗೋಡೆ ರಾಟೆ ಏನೂ ಇಲ್ಲ. ಈ ಭಾವಿಯ ಮೇಲೆ ಅಡ್ಡಲಾಗಿ ಕಲ್ಲು ಚಪ್ಪಡಿಗಳು ಹಾಕಿರುತ್ತಾರೆ. ಅದರ ಮೇಲೆ ಜನರು ನಿಂತು ನೀರು ಸೇದುವದು ಪದ್ಧತಿ. ತಾ. ೨೧ ನೇ ಭಾನುವಾರ ಬೆಳಗಿನ ೯ ಗಂಟೆ ಸಮಯದಲ್ಲಿ ಶಿಪಾಯಿರದ ಬೆಣ್ಣೆಗೆರೆ ಲಿಂಗೇಗೌಡನ ೧೨ ವರುಷದ ಪುಟ್ಟಮಲ್ಲಮ್ಮನೆಂಬ ಹುಡುಗಿಯೂ ಗೆಜ್ಜೆಗಾರರ ಜಾತಿ ಚನ್ನಿ ಎಂಬ ಹುಡುಗಿಯೂ ಜೊತೆಯಾಗಿ ನೀರು ತರಲು ಹೋದರು ಅವರಲ್ಲಿ ಚನ್ನಿಯು ನೀರು ಸೇದಿಸಿ ತನ್ನ ಪಾತ್ರೆಯಲ್ಲಿ ಹಾಕಿಸಲು ದಡದ ಹೊರಗಡೆ ನಿಂತಳು. ಪುಟ್ಟಮಲ್ಲಮ್ಮನು ಭಾವಿಯ ಅಡ್ಡಗಲ್ಲಿನ ಮೇಲೆ ನಿಂತು ಬಿಂದಿಗೆ ಹಗ್ಗ ಕಟ್ಟಿ ಒಳಕ್ಕೆ ಬಿಟ್ಟಳು. ಭಾವಿಯೊಳಗಿನ ಕಲ್ಲುಸಂದುಗಳಲ್ಲಿ ೪ ಕಡೆ ಗೋಚರವಾಗದಂತೆ ಕಡಜಗಳು ಗೂಡು ಕಟ್ಟಿಕೊಂಡಿದ್ದವು. ಅವು ಬೆದರಿ ಪುಟ್ಟಮಲ್ಲಮ್ಮನಿಗೆ ಮುತ್ತಿಕೊಳ್ಳಲಾಗಿ ಬಟ್ಟೆಗಳನ್ನು ಒದರುತ್ತಾ ಗಾಬರಿಯಾಗಿ ವಾಸರತಪ್ಪಿ ಭಾವಿಯೊಳಕ್ಕೆ ಬಿದ್ದುಕೊಂಡಳು. ದಡದ ಮೇಲಿದ್ದ ಚನ್ನಿಯು ಕೂಗಿಕೊಳ್ಳಲಾಗಿ, ಪಂಚಮರ ಭಾವಿ ಹತ್ತಿರದಲ್ಲಿದ್ದ ಇಬ್ಬರು ಹೆಂಗಸರೂ ಹತ್ತಿರ ಹೊಲ ಉಳುತ್ತಿದ್ದ ಗಂಡಸರೂ ಓಡಿಬಂದು ನೋಡಿದರು. ಆ ದುಷ್ಟ ಕಡಜಗಳು ಬಹಳವಾಗಿ ಮುತ್ತಿಕೊಂಡು, ಭಾವಿಗೆ ಇಳಿಯಲು ಅವಕಾಶವಿಲ್ಲದಂತೆ ಮಾಡಿದವು ತಕ್ಷಣವೇ ಚನ್ನಿಯು ಅವಳ ತಂದೆಗೆ ತಿಳಿಸಲು, ಓಡಿಬಂದು ನೋಡಿದರು. ಕಡಜಗಳು ಜಾಸ್ತಿಯಾಗಿ ಹಾರುತ್ತಾ ಮುತ್ತಿಕೊಂಡಿದ್ದವು ಆದ್ದರಿಂದ ತಂದೆಗೂ ಹತ್ತಿರದಲ್ಲಿದ್ದವರೆಲ್ಲರಿಗೂ ಭಯವಾಗಿ ದಡದ ಮೇಲೆ ಅಳುತ್ತಾ ಸ್ವಲ್ಪ ಹೊತ್ತು ಕೂತಿದ್ದು ಹೊರಟುಹೋದರು. ಈ ವರ್ತಮಾನ ಸರಗೂರು ಪೋಲೀಸಿಗೆ ತಿಳಿದು ಮ ಹವಾಲ್ದಾರ್ ಮಸ್ತಾನರು ಮೂರನೇ ದಿನ ಹೋಗಿನೋಡಿದಾಗಲೂ ಆ ಕಡಜಗಳು ಝೇಂಕರಿಯುತ್ತಾ ಇದ್ದವು. ಹೊಡೆಗಳನ್ನು ಹತ್ತಿಸಿ ಅವುಗಳ ಗೂಡುಗಳನ್ನು ಸುಟ್ಟು ಅನಂತರ ಭಾವಿಯಿಂದ ಶವ ತೆಗಿಸಿ ಅಜಮಾಯಿಷಿಯಿಂದ ದಫನ್ ಮಾಡಿಸಿದರು. ಈ ಭಾವಿಗೆ ಕೈಪಿಡಿ ಗೋಡೆ ರಾಟೆ ಹಾಕಿದ್ದರೆ ಇಂಥಾ ವ್ಯಸನಕರವಾದ ಮರಣವು ನಡೆಯುತ್ತಿರಲಿಲ್ಲ. ಆದ್ದರಿಂದ ದಫೇದಾರರು ಕೈಪಿಡಿ ಗೋಡೆ ಹಾಕುವಂತೆ ಊರು ಮುಖ್ಯಸ್ಥರಿಗೆ ತಿಳಿಸಿದ್ದಲ್ಲದೆ ಡಂಗೂರ ಮೂಲಕ ಸಾರಿಸಿದಾರೆ.—ಈ ಪ್ರಾಂತ್ಯ ೨ ಹದ ಮಳೆಯಾಗಿ ರೈತರೆಲ್ಲಾ ಜಮೀನನ್ನು ಸಿದ್ಧಪಡಿಸಿಕೊಳ್ಳುತ್ತಿದಾರೆ. ಇದೇ ಸರಗೂರಿನಲ್ಲಿ ೧೦ ದಿವಸದ ಕೆಳಗೆ ವರ್ತಕರು ತೆರಕಣಾಂಬಿ ಸಂತೆಗೆ ಹೋಗಿದ್ದು ಬಂದರು. ಆ ಪೈಕಿ ೩ ಜನಕ್ಕೆ ಕಾಲರಾ ತಗಲಿತು. ತಕ್ಷಣವೇ ಡಾಕ್ಟರೂ ಪೋಲೀಸಿನವರೂ ಹೋಗಿ ನೋಡಿ ತಕ್ಕ ಚಿಕಿತ್ಸೆ ಮಾಡಲು ಒಬ್ಬನಿಗೆ ಗುಣವಾಗಿದೆ. ಇಬ್ಬರು ಸತ್ತರು ಅಲ್ಲದೆ ೧ ಮೈಲಿಯಲ್ಲಿರುವ ತುಮ್ಮಸೋಗೆ ಗ್ರಾಮದಲ್ಲಿ ಇಬ್ಬರಿಗೆ ಕಾಲರಾ ಕಾಯಿಲೆಯಾಯಿತು ಸರ್ಕಾರದವರು ಇಲಾಜು ಮಾಡಿದರು. ಗುಣಮುಖವಾಗಿದೆ.

ಸ್ವಾ: ಮಧುಗಿರಿ.—ಶ್ರೀ ಶೃಂಗೇರಿ ಸ್ವಾಮಿಯವರಿಗಾಗಿ ಪ್ರತಿಯೊಂದು ಗ್ರಾಮದ ರೈತರಿಂದಲೂ ಇಷ್ಟಿಷ್ಟು ಹಣ ಬರಬೇಕೆಂಬದಾಗಿ ಅಮಲ್ದಾರರು ವಿಧಾಯಕಮಾಡಿದ್ದರೆಂದು ಒಂದುಸಾರಿ ಪತ್ರಿಕೆಯಲ್ಲಿ ಬರೆದು ಇತ್ತಷ್ಟೆ. ಈಗ ಅದರ ವಸೂಲಿ ಕ್ರಮ ಹೇಗೆಂದರೆ, ಕೆಲವು ಗ್ರಾಮಗಳಲ್ಲಿ ಜನರ ಸ್ಥಿತಿಗತಿಗೆ ತಕ್ಕಂತೆಯೂ ಇನ್ನು ಕೆಲವು ಗ್ರಾಮಗಳಲ್ಲಿ ಒಂದು ಮಡಿಕೆಗೆ ಪತ್ತಾಪೆಯಂತೆಯೂ ನುಡಿಕೆ ಇಲ್ಲದವರಲ್ಲಿ ೪ ಆಣೆಯಿಂದ ೨ ಆಣೆಯಂತೆಯೂ ಬೇರೆ ಕೆಲವು ಗ್ರಾಮಗಳಲ್ಲಿ ಲೋಕಲ್ ಫಂಡಿನ ವಸೂಲಿನಂತೆ ರೂಪಾಯಿಗೆ ೩ ಕಾಸಿನಂತೆಯೂ ವಸೂಲ್ ಮಾಡಿರುವರು. ಮಡಿಕೆಗಳ ಸಂಖ್ಯೆಯನ್ನೂ ಇತರ ರೈತರ ಸಂಖ್ಯೆಯನ್ನೂ ಆಯಾ ಗ್ರಾಮದ ಒಟ್ಟು ಬೇರೀಜನ್ನೂ ಅಧಿಕಾರಿಗಳು ವಿಚಾರಿಸಿದಲ್ಲಿ ಉತ್ಪತ್ತಿಯಾದ ಮೊಬಲಗು ಪೂರ್ತಿಯಾಗಿ ಬಂದಿದೆಯೋ ಇಲ್ಲವೋ ಗೊತ್ತಾಗುವದರಲ್ಲಿ ಅನುಮಾನವಿಲ್ಲ. ಅದು ಮಾತ್ರವಲ್ಲದೆ ಪ್ರತಿಯೊಂದು ಗ್ರಾಮದಿಂದಲೂ ಬಿಟ್ಟಿ ಹುಲ್ಲು ಮುಂತಾದ್ದನ್ನೂ ಸ್ವಾಮಿಗಳ ಸರಫರಾಜಿಗೆ ಎತ್ತಲ್ಪಟ್ಟದ್ದನ್ನು ನೋಡಿ ರೈತರಲ್ಲನೇಕರು—ಕೈಯಿಂದ ದುಡ್ಡು ಕೊಟ್ಟದ್ದಲ್ಲದೆ, ಕೊಸರಿಗೆ ಹುಲ್ಲನ್ನು ಸಹ ಕೊಡಬೇಕೋ? ಇದು ಒಳ್ಳೇ ನಿರ್ಬಂಧವೆಂದು ಗುಣಗುಟ್ಟುತ್ತಿರುವರು. ಇದಕ್ಕೆ ಸರಿಯಾಗಿ ಸಿದ್ದನಹಳ್ಳಿ ಎಂಬ ಗ್ರಾಮದ ಪಟೇಲ್ ರಾಮೇಗೌಡರು ರೈತರಿಂದ ಹುಲ್ಲನ್ನು ವಸೂಲ್ ಮಾಡುತ್ತಾ ಅದೇ ಗ್ರಾಮದ ಲಿಂಗಾಯತ ಮಠದ ಮಠದ ಅಯ್ಯಗಳಾದ ಸಿದ್ದಸಂಜಪ್ಪನ ಹತ್ತಲಿಗೆ ತೋಟಿ ತಳವಾರರೊಂದಿಗೆ ಹೋಗಿ ಹುಲ್ಲಿನ ಹೊರೆಗಳನ್ನು ಕಟ್ಟಿಸುತ್ತಿರುವಾಗ ಮೇಲ್ಕಂಡವನು ಬಂದು—ನನಗೆ ಹುಲ್ಲು ಇಲ್ಲ. ತಿರುಪೆ ಎತ್ತಿ ಕೊಂಚ ಮಡಗಿಕೊಂಡಿದ್ದೇನೆ. ಒಂದೇ ಹೊರೆ ಸಾಕೆಂದು ತಡೆದ ಕಾರಣ ಪಟೇಲರಿಗೆ ಕೋಪ ಬಂದು, ಅವನ ಜುಟ್ಟನ್ನು ಹಿಡಿದು ತಿರುಗಿಸಿ ಝಾಡಿಸಿ ತಳ್ಳಿ ಒಂದೇಟು ಹೊಡೆದಂತೆಯೂ, ಕೆಲವು ಘಂಟೆಗಳ ಕಾಲದಲ್ಲಿಯೇ ಅವನು ಮೃತಪಟ್ಟಂತೆಯೂ ಆ ಸಂಗತಿಯನ್ನು ಮೇಲಕ್ಕೆ ತಿಳಿಸಲು, ಅಮಲ್ದಾರರೂ ಪೋಲೀಸ್ ಇನ್ಸ್ಪೆಕ್ಟರೂ ಆಸ್ಪತ್ರೆ ಆಸಿಸ್ಟೆಂಟರೂ ಬಂದು ನಡೆದ ವಿದ್ಯಮಾನವನ್ನೆಲ್ಲಾ ಕೈಫಿಯತ್ತು ಮಾಡಿಕೊಂಡು ಹೋದರೆಂತಲೂ, ಮಧುಗಿರಿಯಲ್ಲಿ ಶವವನ್ನು ಅಜಮಾಯಿಷಿ ಮಾಡಿ ದಫನ್ ಮಾಡುವದಕ್ಕೆ ಅಪ್ಪಣೆ ಕೊಟ್ಟ ಪ್ರಕಾರ ಮಾಡಿದರೆಂತಲೂ, ಪಟೇಲರನ್ನು ಲಾಕಪ್ಪಿನಲ್ಲಿಟ್ಟರೆಂತಲೂ ಗೊತ್ತಾಗುತ್ತದೆ. ಸತ್ತವನ ತಾಯಿಯ ಮತ್ತು ಅಣ್ಣನ ಬಂಧುಬಾಂಧವರ ದುಃಖವನ್ನು ಹೇಳತೀರದು. ಸುಮಾರು ೭೫ ಪ್ರಾಯದವನು ಹೋದನಲ್ಲಾ ಎಂದು ಅನೇಕರು ಮರುಗುತ್ತಿರುವರು. (ಇನ್ನೊಬ್ಬ ಖಾಸ್ತ್ರಿದಾರರಿಂದ) ಸರಬರಾಯಿ ಬಗ್ಗೆ ಬಂದಿದ್ದ ಹುಲ್ಲು, ಸೌದೆ ಸಹ ಖರ್ಚು ಜಾತ ಉಳಿದದ್ದು ಹರಾಜು ಮಾಡಿ ಮೊಬಲಗು ಕೊಡುವದಾಗಿ ಅಮಲ್ದಾರರವರು ಸ್ವಾಮಿಗಳನ್ನು ಕೇಳಿದಂತೆಯೂ, ಅದಕ್ಕೆ ಸ್ವಾಮಿಗಳು ಆ ಮೊಬಲಗನ್ನು ಶ್ರೀ ಶಂಕರಾಚಾರ್ಯರವರ ಆರಾಧನೆ ದಿವಸ ಸಂತರ್ಪಣೆ ಬಗ್ಗೆ ಉಪಯೋಗಿಸಬೇಕೆಂದು ಅಪ್ಪಣೆ ಕೊಡಿಸಿದಂತೆಯೂ ತಿಳಿಯಬರುತ್ತೆ. ೨೮ ನೇ ತಾ. ಹುಲ್ಲು ಸೌದೆ ಹರಾಜು ಮಾಡಿಸಿದಂತೆಯೂ, ಅದರಲ್ಲಿ ಸುಮಾರು ೧೧೦ ರೂಪಾಯಿಗೆ ನಿಂತದ್ದರಿಂದ ೫೦ ನಮವೆಂದು ನಿಲ್ಲಿಸಿರುವಂತೆಯೂ ತಿಳಿದು ಬಂದಿರುತ್ತೆ. ಮುಖ್ಯವಾಗಿ ಸ್ವಮತಸ್ಥರಲ್ಲದೆ ಇದ್ದಾಗ್ಯೂ ಮುತುವರ್ಜಿ ವಹಿಸಿ ಇವರು ಮಾಡಿದ ಏರ್ಪಾಡುಗಳೆಲ್ಲಾ ಸ್ತೋತ್ರಾರ್ಹವಾಗಿರುತ್ತವೆ

ಚಿತ್ರದುರ್ಗ.—ಇಲ್ಲಿ ಆಗಾಗ್ಗೆ ಮೋಡಗಳು ತುಂಬಿ ತುಳುಕಾಡುತ್ತಾ ಇದ್ದು ತಾ. ೨೪, ೨೬, ೨೭ ರಲ್ಲಿ ತಕ್ಕಮಟ್ಟಿಗೆ ಮಳೆಯಾಯಿತು. ಧಾರಣೆವಾಸಿಗಳು ಇಳಿತರಕ್ಕೆ ಬಂದಿರುವದಿಲ್ಲ. ಹಿರಿಯೂರಿಗೆ ಶ್ರೀ ಶೃಂಗೇರಿ ಸ್ವಾಮಿಗಳು ದಯಮಾಡಿಸಿದ್ದರು ಇಲ್ಲಿನ ಅನೇಕ ಜನಗಳು ಡೆಪ್ಟಿ ಕಮೀಷನರೇ ಮೊದಲಾಗಿ ಹೋಗಿ ಕಾಣಿಕೆಗಳನ್ನು ಸಮರ್ಪಿಸಿ ಹೊರಟುಬಂದರು.—ಇಲ್ಲಿಗೆ ಬೆಂಗಳೂರು ಮೆ॥ ನಂದಾಚಾರಿ ನಾಟಕ ಕಂಪನಿಯವರು ಬಂದು, ಸಂತೆ ಬಾಗಿಲು ಬಳಿ ಹಾಕಿರತಕ್ಕ ಚಪ್ಪರದಲ್ಲಿ ಸುಮಾರು ಒಂದೂವರೆ ತಿಂಗಳ ಬಾಗಾಯಿತು ನಾಟಕವನ್ನು ಆಡುತ್ತಾ ಇರುತ್ತಾರೆ ಸಂಗೀತ, ಸೀನರಿಗಳು ತುಂಬಾ ಉತ್ಕೃಷ್ಟವಾಗಿರುತ್ತೆ. ಈ ನಾಟಕ ಕಂಪನಿಯವರಿಗೆ ಚಪ್ಪರ ವಗೈರೆ ಹಾಕಲಿಕ್ಕೆ ಸಹಾಯ ಮಾಡಿದ ಮಹನೀಯರಿಗೆ ಮೇಲ್ಕಂಡವರು ತುಂಬಾ ಕೃತಜ್ಞತೆಯುಳ್ಳವರಾಗಿದಾರೆ ಮೆ॥ ವರದಾಚಾರ್ಯರ ತಂದೆಯವರು ಇಲ್ಲಿ ರೆವಿನ್ಯೂ ಶಿರಸ್ತೇದಾರರಾಗಿದ್ದುದರಿಂದ ಇವರು ಚಿಕ್ಕಂದಿನಲ್ಲಿ ತಮ್ಮ ಸ್ನೇಹಿತರಾಗಿದ್ದವರಿಗೆಲ್ಲಾ ನಾಟಕಕ್ಕೆ ಫ್ರೀಯಾಗಿ ಬಿಡುವಹಾಗೆ ಏರ್ಪಾಟು ಮಾಡಿದ್ದರು ಮತ್ತು ತಾ. ೨೪ ರಲ್ಲಿ ನಾಟಕವಾಡಿ ಬಂದ ಮೊಬಲಗೆಲ್ಲಾ ಹೈಸ್ಕೂಲ್ ರೀಡಿಂಗ್ ರೂಮಿಗೆ ಉಚಿತವಾಗಿ ಕೊಟ್ಟಿದಾರೆ. ಇವೆಲ್ಲಾ ತುಂಬಾ ಔದಾರ್ಯ ಗುಣವನ್ನು ತೋರ್ಪಡಿಸುತ್ತಲ್ಲವೆ. ತಾ. ೨೭ ರಲ್ಲಿ ನಾಟಕವಾಡಿ ವಾಪಸು ಹೊರಟು ಹೋಗುವದಾಗಿ ವರ್ತಮಾನವಿದೆ—ಇಲ್ಲಿ ಸ್ವಲ್ಪ ಸಂಬಳದವರಿಗೆ ಮನೆಗಳು ಬಾಡಿಗೆಗೆ ಸಿಕ್ಕದೆ ತುಂಬಾ ಕಷ್ಟವಾದ್ದರಿಂದ ಬಾರ್ಲೈನ್ಸಲ್ಲಿ ಸಿಪಾಯಿಗಳಿಗೆ ಹೆಚ್ಚಾಗಿ ಖಾಲಿ ಇರತಕ್ಕ ಮನೆಗಳನ್ನು ಕೇಳಿದ ೩ ರಂತೆ ಬಾಡಿಗೆ ಅಂದರೆ ನೂರು ಸಂಬಳ ಬರುವವರಿಗೆ ೩ ರೂಪಾಯಿನಂತೆ ಬಾಡಿಗೆ ಪಡೆದುಕೊಂಡು ಕೊಟ್ಟಿರುತ್ತಾರೆ ಇದರಂತೆ ೫, ೬ ವರ್ಷಗಳಿಂದ ಬಾಡಿಗೆ ಕೊಟ್ಟುಕೊಂಡು ವಾಸವಾಗಿರುತ್ತಾರೆ. ಇಲ್ಲಿಗೆ ಬರತಕ್ಕ ಆಫೀಸರುಗಳು ಟಾರ್ ಸುಬೇದಾರರುಗಳು ಯಾರಾದರೂ ಅವರಿಗೆ ಬೇಕಾದವರಿಗೆ ಮನೆ ಕೊಡಬೇಕೆಂಬ ಉದ್ದೇಶದಿಂದ ಖಾಲೀ ಇರತಕ್ಕವರಿಗೆ ಮನೆ ಬಿಡಿ ಎಂತ ಹೇಳುವದು, ಅವರು ಬಿಡದೇ ಹೋಗಲು ಅವುಬಾಬು ಮನೆಗಳಲ್ಲಿ ಇತರ ಜಾತಿಯವರನ್ನು ತಂದು ಇಡುವದು, ಈ ರೀತಿ ಮಾಡುತ್ತಾರೆ.—ತಾ. ೨೩ ನೆ ಮಧ್ಯಾಹ್ನ ೨ ಘಂಟೆ ಸಮಯದಲ್ಲಿ ಡಿಸ್ಟ್ರಿಕ್ಟ್ ಟ್ರಿಜರಿಯಲ್ಲಿ ಪಹರೆ ಕೊಡುತ್ತಿದ್ದ ಸಿಪಾಯಿಯು ಮತ್ತೊಬ್ಬ ಸಿಪಾಯಿಯನ್ನು ತಡವಾಗಿ ಪಹರೆಗೆ ಬಂದನೆಂದು ದೊಣ್ಣೆಯಿಂದ ಹೊಡೆದನು. ಹೊಡೆಸಿಕೊಂಡವನು ಆಸ್ಪತ್ರೆಯಲ್ಲಿ ಇಲಾಜು ಹೊಂದುತ್ತಾ ಇದಾನೆ—ಸೂಪರ್ಇಂಟೆಂಡಿಂಗ್ ಇಂಜನಿಯರ್ ಮೆ॥ ವೈ ಶ್ರೀನಿವಾಸರಾಯರು ವಿಧವಾ ವಿವಾಹದ ವಿಚಾರದಲ್ಲಿ ಉಪನ್ಯಾಸಮಾಡಿದರು ಅನೇಕ ಜನ ದೊಡ್ಡ ಮನುಷ್ಯರು ಸೇರಿದ್ದರು.—ತಾ. ೨೩ ನೆ ಮಂಗಳವಾರ ಒಬ್ಬ ಮಹನೀಯರ ಮನೆಯಲ್ಲಿ ಹಿಂದೂ ಜನಗಳ ಪದ್ಧತಿ ಪ್ರಕಾರ ಗೌರೀ ಕೂಡಿಸುವದಾಗಿ ಬೆಳ್ಳಿಯ ಮೂರು ಗೊಂಬೆಗಳಿಗೆ ಅಲಂಕಾರ ಮಾಡಿ (ಪ್ರಭಾವತಿ ದರ್ಬಾರ್ ಸೀನ್) ತೋರಿಸುವಂತೆ ಮಾಡಿದ್ದರು. ಇದನ್ನು ಹೋಗಿ ಊರಲ್ಲಿರತಕ್ಕ ಆಬಾಲವೃದ್ಧರೂ ನೋಡಿ ಬಂದರು. ಹಿಂದೂ ಜನಗಳು ಇಂಥಾ ಕೆಲಸಕ್ಕೆ ಬಾರದ ದುಬಾರಿ ಖರ್ಚು ಮಾಡಿಕೊಂಡು ಮುಂದೆ ನರಳುವರು—ಸಾಹುಕಾರ್ ನರಸಿಂಹಪ್ಪನ ಮನೆ ಹೆಂಗಸರು ಬಾಣ್ಲೆಯಲ್ಲಿ ತುಪ್ಪ ಕಾಯಿಸಲಿಕ್ಕೆ ಇಟ್ಟ ಕಾಲದಲ್ಲಿ ಮಳೆ ಬಂದದ್ದರಿಂದ ಅಂಗಳದಲ್ಲಿದ್ದ ಬಾಣ್ಲೆಯನ್ನು ಒಳಕ್ಕೆ ತೆಗೆದುಕೊಂಡು ಹೋಗಲು ಇಳಿಸಲು ಕೈತಪ್ಪಿ ಬಾಣ್ಲೆಯಲ್ಲಿ ಕುದಿಯುತ್ತಿದ್ದ ತುಪ್ಪವೆಲ್ಲಾ ಮೈಗೆ ಸಿಡಿದು, ತುಂಬಾ ಬೆಸಬ್ಬೆಗಳಾಗಿರುವದಾಗಿಯೂ, ಆಸ್ಪತ್ರೆಯವರು ಇಲಾಜು ಮಾಡುವದಾಗಿಯೂ ವರ್ತಮಾನ ಕೇಳುತ್ತೇನೆ.

ಸೀರಾ ತಾ. ಬುಕ್ಕಾಪಟ್ಟಣ.—ಕಳೆದ ೧೬ ನೇ ತಾ. ಹುಳಿಯಾರು ಮಾರ್ಗವಾಗಿ ಶ್ರೀ ಶೃಂಗೇರಿ ಸ್ವಾಮಿಗಳು ಇಲ್ಲಿಗೆ ದಯಮಾಡಿ ಶಿಷ್ಯಮಂಡಲಿಯಿಂದ ಪಾದಪೂಜೆ ವಗೈರೆ ಮರ್ಯಾದೆಗಳು ಕೈಕೊಂಡು ಸೀರಾಕ್ಕೆ ದಯಮಾಡಿಸಿದರು ಆಗ್ಗೆ ನಮ್ಮ ಅಮಲ್ದಾರರು, ಅಸಿಸ್ಟೆಂಟ್ ಕಮೀಷನರು, ಪೋಲೀಸ್ ಇಲಾಖೆಯವರು, ಸ್ಯಾನಿಟರಿ ಇನ್ಸ್ಪೆಕ್ಟರು ಇನ್ನೂ ಅನೇಕ ಜನ ಅಧಿಕಾರಿಗಳು ಬಂದಿದ್ದರು ಗ್ರಾಮ ಪಾಕೀಜು ವಗೈರೆ ಚೆನ್ನಾಗಿ ನಡಿಸಿದ್ದರು. ಸ್ವಾಮಿಗಳ ದರ್ಶನಕ್ಕಾಗಿ ಗ್ರಾಮಾಂತರಗಳಿಂದ ಅನೇಕ ಜನಗಳು ಬಂದಿದ್ದರು. ಶ್ರೀಯವರ ಸವಾರಿಯು ಹುಳಿಯೂರಿಂದ ನಮ್ಮ ಗ್ರಾಮಕ್ಕೆ ಪಲ್ಲಕ್ಕಿ ಮೇಲೆ ಚಿತ್ತೈಸಿ ಉತ್ಸವನೊಡನೆ ಪುರಬೀದಿಯಲ್ಲಿ ಹೊರಟು ಬಿಡಾರಮಾಡಿದ್ದ ಶಾನುಭೋಗರ ಗೃಹದ ಬಳಿಗೆ ಬಿಜಯಂಗೈದರು. ನಂತರ ಶಿಷ್ಯಮಂಡಲಿಯಿಂದ ಪಾದಪೂಜೆಗಳನ್ನು ಹೊಂದಿ ತೀರ್ಥಪ್ರಸಾದ ದರ್ಶನಾಶೀರ್ವಾದಗಳನ್ನು ಸ್ವಾಮಿಯವರು ದಯಪಾಲಿಸಿದರು. ಆ ಕಾಲದಲ್ಲಿ ವೈಶ್ಯಮಂಡಲಿಯವರು ಮಹಾಸ್ವಾಮಿಯವರ ಸನ್ನಿಧಾನದಲ್ಲಿ ವಿಜ್ಞಾಪನ ಪತ್ರಿಕೆಯನ್ನು ಒಪ್ಪಿಸಿದರು ಅದರ ಮುಖ್ಯಾಭಿಪ್ರಾಯವೇನಂದರೆ— ನಾವುಗಳು ಸುಮಾರು ೩೦-೩೫ ವರ್ಷಗಳಿಂದ ನಮ್ಮ ಕುಲಗುರುಗಳಾದ ಬ್ರ ವೇ. ನರಸಿಂಹಯ್ಯ ಅಯ್ಯನವರಿಗೂ ಮತ್ತು ಪುಟ್ಟಣ್ಣಯ್ಯ ಅಯ್ಯನವರಿಗೂ ಕಾಣಿಕೆ ವಗೈರೆ ಮರ್ಯಾದೆಗಳನ್ನು ಕೊಟ್ಟು ನಡೆದುಕೊಳ್ಳುತ್ತಾ ಇದ್ದವೆಂತಲೂ ಈಗ ೧—೨ ವರ್ಷಗಳಿಂದ ಸುಬ್ರಹ್ಮಣ್ಯ ಅಯ್ಯನವರು ಎಲ್ಲಾ ಮರ್ಯಾದೆಗಳೂ ತಮಗೆ ಸಲ್ಲಿಸಬೇಕೆಂತಲೂ, ಪುಟ್ಟಣ್ಣಯ್ಯ ಅಯ್ಯನವರು ತಮಗೆ ಸಲ್ಲಿಸಬೇಕೆಂತಲೂ ಚರ್ಚಿಸುತ್ತಾರೆ. ಇವರಲ್ಲಿ ಯಾರಿಗೆ ನಾವು ಸಲ್ಲಿಸಬೇಕು? ಎಂದು ಸ್ವಾಮಿಗಳನ್ನು ಕೇಳಿಕೊಂಡರು. ಅದಕ್ಕೆ ಸ್ವಾಮಿಗಳ ಬಳಿ ಇರುವ ಸರ್ವಾಧಿಕಾರಿಗಳು-ಈ ವಿಷಯವಾಗಿ ಉಭಯತ್ರರೂ ನಮ್ಮಲ್ಲಿ ಫಿರ್ಯಾದು ತಂದಿರುತ್ತಾರೆ. ಇದು ವಿಮರ್ಶೆಯಾಗುವವರೆಗೂ ಕಾಣಿಕೆ ವಗೈರೆ ಕೊಡಬೇಡಿ ಎಂಬದಾಗಿ ಹೇಳಿರುತ್ತಾರೆ ಆ ರಾತ್ರಿ ೨ ಘಂಟೆಗೆ ಹೊರಟು ಸೀರಾಕ್ಕೆ ದಯಮಾಡಿದರು.—ಈ ಗ್ರಾಮದಲ್ಲಿ ೪—೫ ವರ್ಷಗಳಿಂದಲೂ ಮಳೆಯಾಗದೆ ಬೆಳೆಯಿಲ್ಲದೆ ತುಂಬಾ ಪ್ರಯಾಸವಾಗಿತ್ತು. ಈ ವರುಷ ಮಳೆಯಾಗಿ ಕೆರೆಗೆ ನೀರು ಬಂದಿದ್ದರೂ ಹಾಗೇ ಇತ್ತು. ಆದರೆ ಸ್ವಾಮಿ ಕೃಪೆಯಿಂದ ಒಂದು ಹದ ಮಳೆಯಾದ್ದರಿಂದ ಗದ್ದೆಗಳೆಲ್ಲಾ ಚನ್ನಾಗಿ ಫಲಭರಿತವಾಗಿರುತ್ತವೆ. ಒಂದು ತಿಂಗಳೊಳಗೆ ಕಟಾವಾಗುತ್ತೆ. ಮಳೆಗಾಲದ ಗದ್ದೆಗಳೆಲ್ಲಾ ಕೆಟ್ಟುಹೋದವು ಧಾರಣೆವಾಸಿ ಯಥಾಪ್ರಕಾರವಾಗಿದೆ—ಈ ಊರಲ್ಲಿ ಒಬ್ಬ ಅಕ್ಕಸಾಲೆ ಹೆಂಗಸು ಒಂದೇ ಗರ್ಭದಲ್ಲಿ ಒಂದು ಗಂಡು, ಒಂದು ಹೆಣ್ಣುಮಗು ಸಹ ಹೆತ್ತು ಮಕ್ಕಳು ಸಮೇತ ಸುಖವಾಗಿರುತ್ತಾಳೆ—ಈ ಗ್ರಾಮಕ್ಕೆ ಮುನಿಸಿಪಲ್ ಆಗುತ್ತೆಂದು ವರ್ತಮಾನವಿದೆ. ಈ ಗ್ರಾಮದ ಶಾನುಭೋಗರ ಮನೆಗೆ ಸುಮಾರು ೨—೩

ಹೀಗೆ ಕೆಳಗೆ ಕಳ್ಳರು ಪ್ರವೇಶಿಸಿ ಒಳಗಿದ್ದವರನ್ನು ಹಿಂಸಿಸಿ ಸುಮಾರು ಒಂದು ಒಂಭೂವತ್ತು ಸಾವಿರ ರೂಪಾಯಿ ಬೆಲೆ ಬಾಳುವ ನಗಗಳನ್ನು ತೆಗೆದುಕೊಂಡು ಪರಾರಿಯಾಗಿರುತ್ತಾರೆ. ಇನ್ನೂ ಪತ್ತೆ ಆಗಿಲ್ಲ. ಹಿಂದೂಪುರದಿಂದ ಅಮಲ್ದಾರರು—ಇಲ್ಲಿ ಕೆಲವು ಚೋರಿ ಮಾಲುಗಳು ಇರುತ್ತವೆ. ನಿಮ್ಮದಾಗಿದ್ದರೆ ಬಂದು ತೆಗೆದುಕೊಂಡು ಹೋಗಬಹುದು ಎಂಬದಾಗಿ ಈ ತಾಲ್ಲೂಕಿಗೆ ಯಾದಿಕೊಟ್ಟು ಶಾನುಭೋಗರನ್ನು ಬರಮಾಡಿಕೊಂಡು ಮಾಲುಗಳನ್ನು ಸದರಿಯವರಿಗೆ ತೋರಿಸಿದರು. ಶಾನುಭೋಗರು ತಮ್ಮದಲ್ಲವೆಂದು ಹೇಳಿ ನಿರಾಶೆಯಾಗಿ ಬಂದರು. ಹಾಲಕ್ ಎಂಬ ಅಡಿಕೆ ಸುಂಕವನ್ನು ವಜಾ ಮಾಡಿದರೆಂದು ಪತ್ರಿಕಾ ಮುಖೇನ ಪ್ರಕಟಿಸಿರುತ್ತೀರಿ ಆದರೆ ಯಾವ ಸಾಲಿನಿಂದ ವಜಾ ಆಗು [ವುದು]? ವಜಾ ಆದರೆ ಹಾಲಿ ಇರುವ ಅಡಿಕೆ ದಾಸ್ತಾನಿಗೆ ಸುಂಕ ವಜಾ ಮಾಡುತ್ತಾರೆಯೋ ಹ್ಯಾಗೆ? ವಿವರವಾಗಿ ಪತ್ರಿಕಾದ್ವಾರಾ ತಿಳಿಸಬೇಕಾಗಿ ಕೋರುತ್ತೇನೆ. [ಹಾಲಕ್ ಸುಂಕವನ್ನು ಸರ್ಕಾರದವರು ೧೯೦೭ ನೇ ಜುಲೈ ೧ ರ ಲಾಗಾಯಿತು ವಜಾ ಮಾಡಿರುತ್ತಾರೆ. ಅದು ವರೆಗೆ ರೈತರು ಈ ಸುಂಕವನ್ನು ಬಾಬತಿ ಮಾಡಬೇಕಾಗಿದೆ.—ಎಡಿ.]

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸ್ಥಳ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಹಾಗು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ಸ್ಥಳ ಕೊಡಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು—ಎಡಿ

ಕೆ. ವಿ. ಸಿ., ಬೆಲಗೂರು, ಡಿ ಕೆ. ಎಂ ಆರ್., ದೊಡ್ಡಬಸ್ಸಾಪುರ; ಬಿ. ಜೆ; ವಡಿಗೇನಹಳ್ಳಿ; ಎಚ್ ಎಂ ಬಿ., ಮಧುವನಹ[ಳ್ಳಿ];—ಈ ಬಾತ್ಮಿಗಳನ್ನು ಪ್ರಕಟಿಸಲಾರೆವು

ರಿಟೈರ್ಡ್ ಆಫೀಸರ್, ಚಿತ್ರದುರ್ಗ:—ಯಾವ ಪತ್ರಿಕೆಯಲ್ಲಿ ಆ [ವಿಷ]ಯ ಇತ್ತೋ ಆ ಪತ್ರಿಕೆಗೆ ನೀವು ಮೊದಲು ಬರೆಯತಕ್ಕದ್ದು. —ಎಡಿ]

ಕರೆಸ್ಪಾಂಡೆನ್ಸ್.

ಸ್ಕೂಲ್ ಕಟ್ಟಡ ವಿಸ್ತರಿಸಬೇಕು.

ಅಯ್ಯಾ,

ಹಾಸನ ತಾಲ್ಲೂಕು ಹೆರಗುಗ್ರಾಮವು ೨೦ ಒಕ್ಕಲು ಬ್ರಾಹ್ಮಣರುಳ್ಳದ್ದಾಗಿಯೂ ೧೫೦ ಒಕ್ಕಲು ರೈತಾಪಿ ಉಳ್ಳದ್ದಾಗಿಯೂ ಇದೆ. ಈ ಗ್ರಾಮದಲ್ಲಿ ಲೋಯರ್ ಸೆಕೆಂಡರಿ ಸ್ಕೂಲ್ ಸ್ಥಾಪಿತವಾಗಿ ಸುಮಾರು ೩೫ ವರುಷಗಳಿಂದಲೂ ಅವಿಚ್ಛಿನ್ನವಾಗಿ ವಿದ್ಯಾಭಿವೃದ್ಧಿಯು ನಡೆಯುತ್ತಿದೆ ಜನಗಳೆಲ್ಲರೂ ತಕ್ಕ ಮಟ್ಟಿಗೆ ವಿದ್ಯಾವಂತರಾಗಿದ್ದಾರೆ ಹೀಗಿದ್ದಾಗ್ಯೂ ಈ ಸ್ಕೂಲಿಗಾಗಿ ನೇಮಕವಾಗಿರುವ ಮೆಂಬರುಗಳು ಜನಗಳಿಗೆ ಸರಿಯಾದ ಪ್ರೋತ್ಸಾಹವನ್ನು ಕೊಡದೆ ಸ್ಕೂಲ್ ಕಟ್ಟಡವನ್ನು ದುಸ್ಥಿತಿಗೆ ತಂದಿದ್ದರು ಮೆಂಬರುಗಳ ಪೈಕಿ ದೊಡ್ಡ ಪಟೇಲ್ ರಾಮಸ್ವಾಮಯ್ಯಂಗಾರರು ಬಹಳ ಮುತುವರ್ಜಿ ವಹಿಸಿ ಈಗ್ಗೆ ವರುಷದ ಕೆಳಗೆ ಕೆಲವು ಭಾಗವನ್ನು ರಿಪೇರಿ ಮಾಡಿಸಿದರು ಅಗ್ಗೆ ರಿಪೇರಿ ಮಾಡಿದ ಪ್ರದೇಶವು ಸ್ಕೂಲ್ ಬಾಲಕರಿಗೆ ಸಾಕಾಗಿತ್ತು ಈಗ ಬಾಲಕರ ಸಂಖ್ಯೆ ಜಾಸ್ತಿಯಾದ್ದರಿಂದ ಸ್ಥಳ ಸಾಲದೆ ತೊಂದರೆಯಾಗಿ, ಜಾಸ್ತಿ ಬಾಲಗಾಗಲ ಹುಡುಗರನ್ನು ವಾಪಸು ಬಿಡಬೇಕಾದ ಸಂದರ್ಭ ಬಂದಿರುತ್ತೆ ಕಳೆದ ಸಾಲಿನಲ್ಲಿ ಡೆಪ್ಟಿ ಇನ್ಸ್ಪೆಕ್ಟರು ಬಂದಿದ್ದಾಗ್ಗೆ ಬಾಲಕರ ಜಮಾವಣೆಯನ್ನು ನೋಡಿ, ಸ್ಕೂಲ್ ಕಟ್ಟಡ ಪೂರ್ತಿ ರಿಪೇರಿ ಮಾಡಿದರೆ ಇನ್ನೊಬ್ಬ ಮಾಸ್ಟರನ್ನು ಕೊಡಿಸುವದಾಗಿ ವಾಗ್ದಾನ ಮಾಡಿದರು. ಈಗ ಇನ್ಸ್ಪೆಕ್ಷನ್ ಕಾಲ ಸಮೀಪಿಸಿತು ಸ್ಕೂಲ್ ರಿಪೇರಿ ಪೂರೈಸಲಿಲ್ಲ ಆದಾಗ್ಯೂ ಮೇಲ್ಕಂಡ ರಾಮಸ್ವಾಮಯ್ಯಂಗಾರರು ಶ್ರಮ ಪಡುತ್ತಾರೆ ಉಳಿದ ಮೆಂಬರುಗಳೂ ಇದಕ್ಕೆ ಗಮನ ಕೊಟ್ಟು ವಿದ್ಯಾಭಿವೃದ್ಧಿಗೆ ಅನುಕೂಲಪಡಿಸಲಿ ಎಂದು ಹಾರೈಸುತ್ತೇನೆ

ವಿದ್ಯಾಭಿಮಾನಿ.

ಮೂಢಭಕ್ತಿಯೂ ಕ್ರೂರಕೃತ್ಯಗಳೂ.

ಅಯ್ಯಾ,

ಈಗ ಪ್ಲೇಗು ೧೫ಪಟ್ಟು ಕೊಂಚ ಕಮ್ಮಿ ಇದೆ. ಹಳ್ಳಿಯ ಜನಗಳು ತಂಡತಂಡವಾಗಿ ಟಿವರ್‌ಗೆ ಬಂದು, ಮಕ್ಕಳು ಹೆಂಗಸರು ಗಂಡಸರು ಮುಂತಾಗಿ ಸರ್ವರೂ ಏಕಕಾಲದಲ್ಲೇ ವ್ಯಾಕ್ಸಿನೇಷನ್ ಮಾಡಿಸಿಕೊಂಡು ಹೋಗುವದು ನೋಡಿದರೆ ಬಹಳ ಆನಂದವಾಗಿರುತ್ತೆ. ಈ ಜನಗಳಲ್ಲಿ ಪೂರ್ವದಲ್ಲಿದ್ದ ಮೌಢ್ಯವು ಹೋಗಿ ತಾವಾಗಿಯೇ ಕುತೂಹಲವುಳ್ಳವರಾಗಿ ಬಂದು ಡಾಕ್ ಹಾಕಿಸಿಕೊಂಡು ಹೋಗುವದು ನೋಡಿದರೆ ಈಚೀಚೆಗೆ ಅಂದರೆ ೨—೩ ವರ್ಷಗಳಿಂದ ವಿಚಾರ ಸಂಘದವರು ಹಳ್ಳಿಗಳ ವೇಳ ಸ್ಕೂಲುಗಳನ್ನು ಸ್ಥಾಪಿಸಿ ಜನಗಳಿಗೆ ಸದ್ಬೋಧನೆ ಕೊಡುತ್ತಿರುವದೇ ಕಾರಣವೆಂತ ತಳೆಯುತ್ತೇವೆ. ಅದರೇನು ? ಇಲ್ಲಿ ನೋಡಿ.

ನೆನ್ನೆ ತಾನೇ ಇಲ್ಲಿ ಮಾರಿಯ ಹಬ್ಬ ಮಾಡಿದರು. ಏಕಾದಶಿ ತಿಥಿ ಪ್ರತಿದಿವಸ. ಇಂಥಾ ದಿವಸದಲ್ಲಿ ಪ್ರಾಣಹಿಂಸೆ ಸುತರಾಂ ಕೂಡದು ಆದರೂ ನೂರಾರು ಕುರಿಗಳನ್ನೂ, ಲೆಕ್ಕವಿಲ್ಲದಷ್ಟು ಕೋಳಿಗಳನ್ನೂ, ೯—೧೦ ಕೋಣಗಳನ್ನೂ ಕಡಿದರು ಕಡಿದ ಕೋಣಗಳು ಎರಡು ದಿವಸಯಂತರವೂ ಅಲ್ಲೇ ಬಿದ್ದಿದ್ದವು. ನಂತರ ಪೋಲೀಸಿನವರ ಮೆಹನತ್ತಿನಿಂದ ಕೂಡಲೆ ಸಾಗಿಸಲ್ಪಟ್ಟು ರಕ್ತಮಯವಾದ ಸ್ಥಳವನ್ನು ತೊಳೆಸಿ ಮುಚ್ಚಿಸಿದರು. ಪೂರ್ವಕ್ಕೆ ೩ ವರ್ಷಕ್ಕೊಮ್ಮೆ ಜಾತ್ರೆಯಾಗುತ್ತಿತ್ತು. ಇಲ್ಲಿನ ಒಬ್ಬರ ಮೆಹನತ್ತಿನಿಂದ ವರುಷಕ್ಕೊಮ್ಮೆ ನಡೆಯುತ್ತಿವೆ. ಪ್ರತಿ ವಾರಕ್ಕೂ ಕೆಲಕೆಲವು ಕುರಿಗಳನ್ನೂ ಕೋಳಿಗಳನ್ನೂ ಕೊಂದೇ ಕೊಲ್ಲುತ್ತಾರೆ. ಹೀಗೆ ಏಕಪ್ರಕಾರ ನಡೆಯುತ್ತಿದ್ದಾಗ್ಯೂ ವರುಷಕ್ಕೊಂದಾವರ್ತಿ ವರಿಷ ಕೂಡುವಂತೆ ಮಾಡಿದರು. ಇದಲ್ಲವೇ ಸಾಹಸದ ಕೆಲಸ. ಉತ್ತರದೇಶದಲ್ಲನೇಕರು ದೇಶಹಿತಕ್ಕಾಗಿ ತಮ್ಮ ಕಾಲವನ್ನು ಕಳೆಯುತ್ತಾರೆ. ನಮ್ಮಲ್ಲಿಯ ಮುಖಂಡರು—ಜನಗಳು ದುರ್ಮಾರ್ಗಿಗಳಾಗುವದಕ್ಕೆ ಸಲಹೆಗಳನ್ನು ಕಲ್ಪಿಸುತ್ತಾರೆ. ಆರಂಭದಲ್ಲಿ ಬರೇ ಮಣ್ಣಿನ ದಿಂಟೆ ಇದ್ದಿತು. ರಾಘವಾಚಾರ್ಯರು ಕಲ್ಲಿನ ಗದ್ದಿಗೆ, ಕಂಬಿನ ಟುರುಡೆ ದಯಪಾಲಿಸಿದರು. ವಾರವಾರಕ್ಕೂ ಮರಾಟಿ ಪೂಜಾರಿಯ ಮೇಲೆ ಗಣ ಬರಹತ್ತಿತು. ೬—೭ ರೂಪಾಯಿ ಕಾಣಿಕೆ ಬರಲಾರಂಭಿಸಿತು. ಇತ್ತಲಾಗಿ ಕೆಲವು ವಾರಗಳಿಂದ ಇದ್ದಕ್ಕಿದ್ದ ಹಾಗೆ ಒಬ್ಬ ಹೆಂಗಸಿನ ಮೇಲೆ ದರ್ಶನ ಬರಹತ್ತಿದೆ ಇದು ಯಾರ ಮಹಾತ್ಮೆಯೋ ತಿಳಿಯದು ಒಂದು ವಾರವಮ್ಮ ಇದ್ದುದ್ದು ಎರಡಾಯಿತು. ಅಯ್ಯಾ, ಹೆಚ್ಚಿನ ಮಾತೇನು? ಪಟ್ಟೇ ಪೀತಾಂಬರದ, ರಟ್ಟೇಲಿ ನಂಕಿ ಮುಂತಾದ ಅಲಂಕಾರಗಳಿಂದ ನಾಟ್ಯವಾಡಿದರೆ ಪೇಟೆ ಮಧ್ಯದಲ್ಲಿ ಜನಗಳ ಗಲಾಟೆಗೆ ಕಮ್ಮಿಯೇ? ಕಿಕ್ಕಿರಿಯುವಂತೆ ಸೇರುತ್ತಾರೆ. ಕಾಣಿಕೆ ಎಣಿಸುವವರೇ ಇಲ್ಲ.

ಒಬ್ಬ ಹಿಂದುವು.

ನ್ಯಾಯವಿಧಾಯಕ ಕೌನ್ಸಿಲ್.

[ಈ ಬಾತ್ಮಿ ಬರೆದ ಮೆ॥ ಬಿಡೇಸಾಬರು, ಬಗಲೂರು, ಇವರಿಗೆ ಬಹುಮಾನ ಕಳುಹಿಸಿದೇವೆ.]

"ಮಳೆ ಬಂದರೂ ಕೇಡಲ್ಲ. ಮಕ್ಕಳು ತಿಂದರೂ ಕೇಡಲ್ಲ" ಎಂಬ ನಾಣ್ಣುಡಿಯಂತೆ ಎಷ್ಟು ಮಳೆ ಸುರಿದಾಗ್ಯೂ ಭೂಮಿಯ ಮೇಲಿನ ಸಸ್ಯಾದಿಗಳು ಸ್ಥಿರಜಟ್ಟಗಳು ವೃಕ್ಷಾದಿಗಳು ವಿಶೇಷ ಫಲಫಲಿಸಿ ರೈತರಿಗೆ ಉತ್ಕೃಷ್ಟವಾದ ಆದಾಯವನ್ನು ಕೊಡುತ್ತದೆ. ತಂದೆತಾಯಿಗಳು ತಾವು ಸಂಪಾದಿಸಿದ ದ್ರವ್ಯವನ್ನು ತಮ್ಮ ಮಕ್ಕಳ ಪೋಷಣೆಗೆ ಎಷ್ಟು ಖರ್ಚು ಮಾಡಿದಾಗ್ಯೂ ಮಕ್ಕಳು ಪುಷ್ಟರಾಗಿ ಬೆಳೆದು, ಪ್ರಾಜ್ಞರಾಗಿ ದೇಹದಂಡನೆಯನ್ನು ಮಾಡಿ, ವೃದ್ಧ ಮಾತಾಪಿತೃಗಳನ್ನು ಪೂರ್ಣ ಭಕ್ತಿವಿಶ್ವಾಸದಿಂದ ಪೋಷಿಸುತ್ತಾರೆ. ಇದೇ ಪ್ರಕಾರ ಸರ್ಕಾರದವರು ತಮ್ಮ ಮಕ್ಕಳಾದ ಪ್ರಜೆಗಳನ್ನು ಆದರಪೂರ್ವಕವಾಗಿ ಕಾಪಾಡಿ ಸದ್ಗುಣತೆಯನ್ನೂ ಸದ್ವಿದ್ಯೆಯನ್ನೂ ಕಲಿಸಿಕೊಟ್ಟಲ್ಲಿ ಪುಷ್ಟರಾಗಿ ಬೆಳೆದು ಸರ್ಕಾರಕ್ಕೆ ವಿಶೇಷ ಸಹಕಾರಿಗಳಾಗಿಯೂ ಗುಪ್ತಧನದಂತೆ ಕಾಲಾನುಕಾಲದಲ್ಲಿ ಫಲದಾಯಕರಾಗಿಯೂ ಇರುತ್ತಾರೆ ಬುದ್ಧಿಸಾಗರನೆಂಬ ಮಂತ್ರಿಯು ಶತ್ರುರಾಜನ ಆಸ್ಥಾನದಲ್ಲಿದ್ದಾಗ—"ನಿಮ್ಮ ರಾಜನ ಬೊಕ್ಕಸವೆಷ್ಟಿದೆ?" ಎಂಬ ಶತ್ರುರಾಜನ ಪ್ರಶ್ನೆಗೆ—"ನಮ್ಮ ರಾಜನ ರಾಜ್ಯದ ಪ್ರಜೆಗಳು ತುಂಬಾ ಐಶ್ವರ್ಯವಂತರಾಗಿದ್ದಾರೆ" ಎಂಬ ಉತ್ತರವನ್ನು ಕೊಟ್ಟಿದ್ದಾನೆ. ಆದ್ದರಿಂದ ಪ್ರಜೆಗಳು ಪುಷ್ಟರಾಗಿಯೂ ಐಶ್ವರ್ಯವಂತರಾಗಿಯೂ ವಿದ್ಯಾವಂತರಾಗಿಯೂ ಸನ್ಮಾರ್ಗಿಗಳಾಗಿಯೂ ಇದ್ದಲ್ಲಿ ಅಂಥಾ ರಾಜ್ಯವನ್ನಾಳುವ ಅರಸನಿಗೆ ತುಂಬಾ ಧೈರ್ಯವೂ ಶೌರ್ಯವೂ ಗಾಂಭೀರ್ಯವೂ ಇರುತ್ತವೆ. ವಿಚಾರಶೀಲರಾದ ಬ್ರಿಟಿಷ್ ಸರ್ಕಾರದವರು ಪ್ರಜಾಭಿವೃದ್ಧಿಯನ್ನು ಕುರಿತು ಅನೇಕಾನೇಕ ಪ್ರಯತ್ನಗಳನ್ನು ಮಾಡುತ್ತಲಿದ್ದಾರೆ. ಇದರೊಳಗೂ ನಮ್ಮ ಶ್ರೀಮನ್ಮಹಾರಾಜರವರೂ ಇವರ ಸರ್ಕಾರದವರೂ ಸ್ವದೇಶಾಭಿವೃದ್ಧಿಯನ್ನು ಕುರಿತು ವಿಶೇಷ ಪ್ರಯತ್ನಗಳನ್ನು ಮಾಡಿರುತ್ತಾರೆ. ಈ ಪ್ರಯತ್ನಗಳೆಲ್ಲಾ ದೊಡ್ಡ ಹೊಳೆ ಬಂದೂ ಸಣ್ಣ ಕೆರೆ ತುಂಬಲಿಲ್ಲ ಎಂಬುವ ಹಾಗೆ ವಿಶೇಷ ಫಲವನ್ನು ಕೊಡದೆ ಇರುತ್ತವೆ. ಇದಕ್ಕೆ ಒಂದೆರಡು ದೃಷ್ಟಾಂತಗಳನ್ನು ಕೊಡುತ್ತೇನೆ. ಸರ್ಕಾರದವರು ಗತಸಾಲಿನ ಕ್ಷಾಮದ ದೆಸೆಯಿಂದ ಲಯವಾಗುತ್ತಿದ್ದ ದನಕರುಗಳನ್ನು ಕಾಪಾಡಿ ರೈತರನ್ನು ಉದ್ಧಾರ ಮಾಡಬೇಕೆಂಬ ದನಗಳ ಮೇವಿಗೋಸ್ಕರ ಸಾಲಾ ಕೊಡುವದಾಗಿ ಊರು ಹಳ್ಳಿ ಹಳ್ಳಿಗಳಲ್ಲೆಲ್ಲಾ ಟಾಂ ಟಾಂ ಡಂಗೂರಾ ಹಾಕಿಸಿದರು. ಈ ವಾರ್ತೆಯನ್ನು ಕೇಳಿದ ಪ್ರಜೆಗಳು ಆಶ್ಯಾಕೆಯಿಂದ ಕಚೇರಿಗೂ ತಮ್ಮ ಊರುಗಳಿಗೂ ತಿಂಗಳುಗಟ್ಲೆ ಓಡ್ಯಾಡಿ ಬೇಸತ್ತು ಕಡೆಗೆ ವರ್ತಕರ ಮೈಮೇಲೆ ಬಿದ್ದರು.

ಪ್ರಜೆಗಳ ಆರೋಗ್ಯಾಭಿವೃದ್ಧಿಯನ್ನು ಕಾಪಾಡುವದಕ್ಕೆ ಮುನಿಸಿಪಾಲಿಟಿಗಳನ್ನೂ ಯೂನಿಯನ್ನುಗಳನ್ನೂ ಸ್ಥಾಪಿಸಿದ್ದಾರೆ. ಪ್ರತಿ ಮುನಿಸಿಪಾಲಿಟಿಯಲ್ಲೂ ಅಮಲ್ದಾರರೇ ಪ್ರಾಸಿಡೆಂಟ್ ಆಗಿದ್ದು ಮುನಿಸಿಪಲ್ ಕಮೀಷನರುಗಳ ಮೂಲಕ ಮುನಿಸಿಪಾಲಿಟಿ ಕಾರುಬಾರುಗಳನ್ನು ನಡೆಸುತ್ತಾರೆ ಇಂಥಾ ಮುನಿಸಿಪಾಲಿಟಿ ಕೆಲಸಗಳು ಸರಿಯಾಗಿ ನಡೆಯದಿರುವ ವಿಷಯಗಳನ್ನು ಕುರಿತು ಪ್ರತಿವಾರದ ಪತ್ರಿಕೆಯಲ್ಲಿಯೂ ಬಾತ್ಮಿದಾರರು ಗೋಳಾಡುತ್ತಾ ಇರುವದು ಸರ್ವರಿಗೂ ವೇದ್ಯವೇ ಇದೆ. ಮುನಿಸಿಪಲ್ ಕಮೀಷನರುಗಳು ಏನುಮಾಡ್ತಾರು? ತಮ್ಮ ಮರ್ಯಾದೆಯನ್ನೂ ಘನತೆಯನ್ನೂ ಕಾಪಾಡಿಕೊಳ್ಳುವದೇ ಮುಖ್ಯವೆಂದೆಣಿಸಿ ಜನರ ತಿರಸ್ಕಾರವನ್ನೂ ಹೊತ್ತುಕೊಳ್ಳುವದಿಲ್ಲ. ಸರ್ಕಾರಿ ಆಸ್ಪತ್ರೆಗಳಿರುವ ಸ್ಥಳಗಳಲ್ಲೇ ರೈತರು ಆಸ್ಪತ್ರೆಯ ಹಿಂದುಮುಂದಿನ ಬ್ರಿಂಡಬಂಡೆ ತುಳಿಸಿ ಗಿಡಗಳನ್ನು ಕಿತ್ತು ತಂದು ಕಷಾಯ ತೆಗೆದುಕೊಳ್ಳುವದಕ್ಕೆ ಹೊಟ್ಟೆಬೇಲದ ಪಂಡಿತರನ್ನು ಹುಡುಕುತ್ತಾರೆ. ಒಟ್ಟೇನು? ರೈತನಿಗೆ ಸರ್ಕಾರದ ಸಂಬಂಧ ಪ್ರಾಪ್ತವಾಯ್ತೆಂದರೆ ಜನ್ಮಕ್ಕೆ ಶನಿ ಬಂತೆಂತಲೇ ತಿಳಿಯುತ್ತಾನೆ. ಅತ್ಯಲ್ಪಕೆಲಸವಾದ ಒಂದು ವರ್ಗತಬ್ದಿಲ್ ಮಾಡಿಸಿಕೊಳ್ಳಬೇಕಾಗಿದ್ದರೂ ಕನಿಷ್ಠ ಪಕ್ಷ ನಾಲ್ಕು ರೂಪಾಯಿಗಳನ್ನು ಕಳೆದುಕೊಳ್ಳಬೇಕು ಒಬ್ಬಾನೊಬ್ಬ ಸ್ಕೂಲ್ ಮಾಸ್ಟರು ತಮ್ಮ ಪತ್ರಿಕೆಯಲ್ಲಿ—"ಎಲ್ಲಾ ಇಲಾಖೆಯ ನೌಕರರಿಗೂ ತಮ್ಮ ಸಂಬಳವಲ್ಲದೆ ಮೇಲೆ ಫಾಯಿದೇ ಉಂಟು; ಈ ವಿದ್ಯಾ ಇಲಾಖೆಯಲ್ಲಿ ೭ ರೂಪಾಯಿ ತಲಬಿನಲ್ಲಿಯೇ ಜೀವಿಸಬೇಕಾಗಿದೆ" ಎಂದು ಬರೆದಿದ್ದಾರೆ. ಹೀಗಿರುವ ಪ್ರಯುಕ್ತ ಸರ್ಕಾರದವರ ಕರುಣಾವೃತದ ಹೊಳೆಯು ಅಲ್ಲಲ್ಲಿ ಮರಳು ಭೂಮಿಯಲ್ಲಿ ಹಾದು ಬಂದು, ಕಡೆಗೆ ರೈತನಿಗೆ ದೊರೆಯತಕ್ಕ ಅತ್ಯಲ್ಪ ಅಮೃತದಿಂದ ಗಂಟಲು ಕೂಡಾ ನೆನೆಯುವದಿಲ್ಲ. ಪೂರ್ವಕಾಲದ ರಾಜರು ರಾಜದ್ರೋಹ ಪ್ರಜಾದ್ರೋಹ ನಡೆಯದ ಹಾಗೆ ನೌಕರರಿಗೆ ಪ್ರತಿ ವರ್ಷದಲ್ಲಿಯೂ ಖಡ್ಗ ತಲೆಯ ಮೇಲೆ ಇಡಿಸಿ, ಪ್ರಮಾಣ ತೆಗೆದುಕೊಳ್ಳುತ್ತಿದ್ದರು. ವರ್ಷದ ಆಖೈರಿಗೆ ನೌಕರರ ಮನೆ ಆಡಳಿತದ ಜಮಾಖರ್ಚಿನ ಲೆಕ್ಕವನ್ನು ತನಿಖೆ ಮಾಡುತ್ತಿದ್ದರು. ಇದಲ್ಲದೆ ಗೂಢಚಾರದಿಂದಲೂ ಬಾತ್ಮಿದಾರರಿಂದಲೂ ವರ್ತಮಾನವನ್ನು ತೆಗೆದುಕೊಂಡು ತಮ್ಮ ಸರ್ವಶಕ್ತಿಯನ್ನೂ ಉಪಯೋಗಿಸುತ್ತಿದ್ದರು. ಆದಾಗ್ಯೂ ಆ ಕಾಲದಲ್ಲಿ ಈಗಿನಂತೆ ರೈಲಾಗಲಿ, ಟೆಲಿಗ್ರಾಫಾಗಲಿ, ಕಾಗದ ಪ್ರಿಂಟ್ ಆಗಲಿ, ಮತ್ಯಾವ ಸಲಕರಣೆಯಾಗಲಿ ಇಲ್ಲದ್ದರಿಂದ ಆಗಿನ ದವಲತ್ತು ಅಂಥ ದವಲತ್ತು ಎಂದು ಹೇಳತಕ್ಕದ್ದು ಅತಿಶಯವಲ್ಲ. ಈಗಿನ ಕಾಲದಲ್ಲಿಯಾದರೋ ಬ್ರಿಟಿಷ್ ಚಕ್ರಾಧಿಪತ್ಯವೆಂಬ ಮೇಲ್ಛಾವಣಿಯೊಳಗೆ ರಾಜ್ಯವೆಲ್ಲಾ ಇರುತ್ತದೆ. ಯಾವ ಶತ್ರುವಿನ ಭಯವೂ ಇಲ್ಲ. ದೇವತೆಗಳು ಕೂಡ ಕಾಣದಂಥ ರೈಲ್, ಟೆಲಿಗ್ರಾಫ್, ಟೆಲಿಫೋನು, ಫೋನೋಗ್ರಾಫ್ ವಿದ್ಯುತ್‌ಶಕ್ತಿ, ಆಕಾಶಬುಟ್ಟಿ, ಎಲ್ಲೆಲ್ಲಿಯೂ ಪ್ರಿಂಟ್‌ಖಾನೆಗಳು; ಮುಂತಾದ ಅತಿಶಯವಾದ ಸಲಕರಣೆಗಳುಂಟು. ಈ ರಾಜ್ಯಭಾರವು ಈ ಕಲಿಯುಗವನ್ನೇ ಕೃತಯುಗಕ್ಕೆ ತಿರುಗಿಸಬಹುದು. ಇಂಥಾ ರಾಜ್ಯಭಾರದಲ್ಲಿ ರೈತರು ಸುಖವಾಗಿ ಬಾಳುತ್ತಾ ಇದ್ದಾಗ್ಯೂ ತಮ್ಮೊಳಗೆ ವಿಶ್ವಾಸವೂ ನಂಬಿಕೆಯೂ ಐಕ್ಯಮತ್ಯವೂ ಪ್ರಾಮಾಣಿಕತೆಯೂ ನಿಜತ್ವವೂ ಏನಾದರೂ ಉಂಟೇ? ಹಿಂದಿನ ಮಹಮ್ಮದೀಯ ರಾಜರ ಕಾಲದಲ್ಲಿ ಅವರ ದಾಂಧಲೆಯನ್ನೂ ಹಿಂಸೆಯನ್ನೂ ಸಹಿಸಲಾರದೆ ರೈತರು ಸುಳ್ಳು ಹೇಳುವದನ್ನು ಅಭ್ಯಾಸಿಸಿದರು ಎಂದು ಚರಿತ್ರೆಗಳಲ್ಲಿ ಬರೆದಿದೆ. ಧನ, ಮಾನ, ಪ್ರಾಣಗಳನ್ನು ಕಾಪಾಡಿಕೊಳ್ಳುವದಕ್ಕೆ ಸುಳ್ಳು ಹೇಳಬೇಕಾದದ್ದು ಸ್ವಾಭಾವಿಕವಾದದ್ದೇ ಸರಿ. ಈ ಕಾಲದಲ್ಲಿ ಯಾವ ಬಾಧೆಯೂ ಯಾವ ತೊಂದರೆಯೂ ಇಲ್ಲದೆ ಕಾನೂನುಗಳು ರೈತರನ್ನು ರಕ್ಷಿಸುತ್ತಿವೆಯಲ್ಲಾ? ಆದಾಗ್ಯೂ ಸುಳ್ಳು ಹೇಳುವದೂ, ಕಪಟ ಮುಂತಾದ ದುಷ್ಟಚಾಲುಗಳೂ ರೈತರಲ್ಲಿ ಇದ್ದದ್ದಕ್ಕಿಂತಲೂ ಹೆಚ್ಚುತ್ತವೆ. ಈ ಮಾತಿಗೆ ४०,೯೦ ವರುಷದ ಮುದುಕರನ್ನು—"ನಿಮ್ಮ ಕಾಲಕ್ಕೂ ಈ ಕಾಲಕ್ಕೂ ಹ್ಯಾಗೆ?" ಎಂತ ಕೇಳಿ. ಅವರೇ ಸಮಾಧಾನ ಹೇಳುತ್ತಾರೆ. ಈ ರೀತಿಯಲ್ಲಿ ದುಷ್ಟಚಾಲುಗಳು ಹೆಚ್ಚುವದಕ್ಕೆ ಏನೋ ಒಂದು ಕಾರಣ ಇದ್ದೇ ಇದೆ. ಈ ಕಾರಣವೇ ರೈತರನ್ನು ಎಂದೆಂದಿಗೂ ಊರ್ಜಿತಪಡಿಸದ ಗುಪ್ತ ಕ್ಷಯರೋಗವಾಗಿರುತ್ತದೆ. ಪ್ರಜಾಭಿವೃದ್ಧಿಯನ್ನು ಕುರಿತು ಅನೇಕ ದೊಡ್ಡಮನುಷ್ಯರು ಅನೇಕ ಕಾರಣಗಳನ್ನೂ ಅನೇಕ ಉಪಾಯಗಳನ್ನೂ ತೋರಿಸುತ್ತಿದ್ದಾರೆ. ಇವೆಲ್ಲಾ ಸಹಜವಾದವುಗಳಾದಾಗ್ಯೂ ರೋಗಿಗೆ ಮೈ ಮೇಲೆ ಸವಿಯುವ ಚಿಕಿತ್ಸೆಯಂತಿವೆ. ಆದ್ದರಿಂದ ಆ ಜಾಡ್ಯವ್ಯಾವುದು? ಅದಕ್ಕೆ ಔಷಧವೇನು? ಎಂಬುವದನ್ನು ಕಂಡುಹಿಡಿಯುವದು ಆವಶ್ಯಕವಾಗಿರುತ್ತದೆ.

ಒಬ್ಬ ಯಜಮಾನನು ಒಂದು ತೋಟವನ್ನು ಮಾಡಿ ಅದರಲ್ಲಿ ಸಸ್ಯಾದಿಗಳನ್ನೂ ಫಲವೃಕ್ಷಗಳನ್ನೂ ಬೆಳಸಿ ತೋಟದ ಸುತ್ತಲೂ ಬೇಲಿಯನ್ನು ಹಾಕಿಕೊಂಡು ಬಹು ಎಚ್ಚರಿಕೆಯಿಂದ ಕಾದುಕೊಂಡಿದ್ದಾನೆ. ಆದರೆ ಯಜಮಾನನ ಕಣ್ಣು ಮರೆಯಾದ ಕೂಡ್ಲೆ ಬೇಲಿ ಎದ್ದು ಬಂದು ಸಸ್ಯಾದಿಗಳನ್ನೂ ಹಣ್ಣು ಹಂಪಲನ್ನೂ ತಿಂದು ತೋಟದಲ್ಲೆಲ್ಲಾ ಕಲ್ಲು ಮುಳ್ಳನ್ನು ಹರಡಿ ಯಥಾ ಸ್ಥಾನದಲ್ಲಿದ್ದುಬಿಡುತ್ತದೆ. ಈ ಅನಾಹುತವನ್ನು ನೋಡಿದ ಕೂಡ್ಲೆ ಯಜಮಾನನಿಗೆ ಎಷ್ಟು ಸಂಕಟವಾಗಬಹುದು? ಇದೇ ರೀತಿಯಲ್ಲಿ ರೈತರೆಂಬ ತೋಟದಲ್ಲಿ ಕಲ್ಲು ಮುಳ್ಳು ಹರಡತಕ್ಕವರಿದ್ದಾರೆ. ಅವರ್ಯಾರೆಂದರೆ—ರೈತರಿಗೆ ಉಪಾಧ್ಯಾಯರೋಪಾದಿಯಲ್ಲಿರುವ ಸರ್ಕಾರಿ ನೌಕರರು. ಈ ನೌಕರರೆಲ್ಲಾ ಪ್ರಾಮಾಣಿಕರಾಗಿ ನ್ಯಾಯಯುಕ್ತವಾದ ಕಾನೂನುಗಳಂತೆ ನಡೆದುಕೊಳ್ಳುತ್ತಾರೆ ಎಂದು ಯಾರಾದರೂ ಹೇಳಬಲ್ಲರೇ? ಒಬ್ಬಾನೊಬ್ಬ ಮೋಜಣಿದಾರನಲ್ಲಿ ಅವರು ನಡೆದುಕೊಳ್ಳತಕ್ಕ ರೂಲುಗಳನ್ನು ಬರೆದಿರುವ ಪುಸ್ತಕವನ್ನು ನೋಡಿದೆನು. ಆ ರೂಲುಗಳೆಲ್ಲಾ ಆ ಪುಸ್ತಕದಲ್ಲಿದ್ದವೇ ಹೊರ್ತು ಅವರಲ್ಲಿ ಇರಲಿಲ್ಲ ಅದಕ್ಕೆ ವಿರೋಧವಾದ ನಡತೆಯೇ ಅವರಲ್ಲಿ ಇದ್ದಿತು. ಈ ರೀತಿ ಸರ್ಕಾರಿ ನೌಕರರು ಪ್ರಾಮಾಣಿಕತೆ ಇಲ್ಲದೆ ರೂಲಿಗೆ ವಿರೋಧವಾದ ನಡತೆಯುಳ್ಳವರಾಗಿ ಲಂಚ ಎತ್ತತಕ್ಕದ್ದೇ ರೈತರಿಗೆ ಹಿಡಿದಿರತಕ್ಕ ಗುಪ್ತಕ್ಷಯರೋಗ. ಈ ಮೂಲಕವಾಗಿಯೇ ರೈತರಲ್ಲಿ ಈರ್ಷ್ಯಾಸೂಯೆಗಳು, ಅಪ್ರಾಮಾಣಿಕತೆಯೇ ಮುಂತಾದ ದುಷ್ಟ ಚಾಲುಗಳು ಹೆಚ್ಚಿರತಕ್ಕದ್ದು. "ಗುರುವಿನಂತೆ ಶಿಷ್ಯರು" ಎಂಬ ಗಾದೆಯ ಹಾಗೆ ಉಪಾಧ್ಯಾಯರೋಪಾದಿಯಲ್ಲಿರುವ ಸರ್ಕಾರಿ ನೌಕರರ ನಡೆ ನುಡಿಗಳನ್ನೇ ಪದ್ಧತಿಗಳನ್ನೇ ಎಲ್ಲಾ ವಿಷಯಗಳಲ್ಲೂ ರೈತರು ಕಲಿತುಕೊಳ್ಳುತ್ತಿದ್ದಾರೆ. ಆದ್ದರಿಂದಲೇ ನಮ್ಮ ಶ್ರೀಮನ್ಮಹಾರಾಜಾಸಾಹೇಬ್ ಬಹದ್ದೂರವರು ತಮ್ಮ ರೈತರ ಹೀನದೆಶೆಯನ್ನು ಕಂಡು, ಅವರಿಗೆ ಸಂಘಟಿಸಿರುವ ಕ್ಷಯರೋಗವನ್ನು ಪರಿಹರಿಸಿ, ರೈತರನ್ನು ಸದ್ಗುಣವಂತರನ್ನಾಗಿ ಮಾಡಿ, ಉದ್ಧಾರಮಾಡಬೇಕೆಂಬ ಉದ್ದೇಶವಾಗಿಯೇ ಲೆಜಿಸ್ಲೆಟಿವ್ ಕೌನ್ಸಿಲ್ಲು ನಿರ್ಮಾಣ ಮಾಡಿರಬಹುದಾಗಿ ತೋರುತ್ತದೆ ಈ ಲೆಜಿಸ್ಲೆಟಿವ್ ಸಭೆಯವರು ರೈತರಿಗೆ ಉಪಾಧ್ಯಾಯರೋಪಾದಿಯಲ್ಲಿರುವ ಸರ್ಕಾರಿ ನೌಕರರಲ್ಲಿರುವ ದುರ್ಗುಣಗಳನ್ನು ತೆಗೆದುಹಾಕುವಂಥಾ ಮತ್ತು ಸದ್ಗುಣತೆಯನ್ನೂ ಪ್ರಾಮಾಣಿಕತೆಯನ್ನೂ ಸ್ಥಿರಪಡಿಸುವಂಥಾ ಕಾನೂನುಗಳನ್ನು ಮಾಡಿ, ಈ ಮೂಲಕ ರೈತರನ್ನು ಉನ್ನತಸ್ಥಿತಿಗೆ ತರುವರೆಂದು ಹಾರೈಸಬೇಕಾಗಿರುತ್ತದೆ.

ಲೆಜಿಸ್ಲೆಟಿವ್ ಸಭೆಯು ಸತ್ಯವನ್ನೂ ಪ್ರಾಮಾಣಿಕತೆಯನ್ನೂ ಸದ್ಗುಣತೆಯನ್ನೂ ಸ್ಥಿರಪಡಿಸುವಂಥಾ ಕಾನೂನುಗಳನ್ನು ಪ್ರಚುರಪಡಿಸಿ, ತನ್ನ ದರ್ಪವನ್ನು ತೋರಿಸುವದಕ್ಕೆ ಯಾವಾಗ ತೊಡಗುವದೋ ಅಂದಿಗೆ ಕಲಿಯುಗಕ್ಕೆ ಅಂತ್ಯವು, ಆಗಲೇ ರೈತರು ಸಭ್ಯರು, ಸಾಹುಕಾರರು, ಅದೇನೇ ಕೃತಯುಗಕ್ಕೆ ಆದಿಯು. ಆಗ್ಗೆ "ಯಥಾರಾಜಾ ತಥಾ ಪ್ರಜಾ" ಎಂಬ ವಚನವು ನಿಜವಾಯ್ತು.

ಪೆರೂನಾವನ್ನು ಕುರಿತು ಹೆಂಗಸರೇ ಹೆಂಗಸರ ಕೂಡ ಮಾತಾಡುತ್ತಾರೆ.

ಮಿಸೆಸ್ ಮೆಗ್ರಾಫ್.

ದುರ್ಬಲದ ಅನುಭವ

ಮಿಸೆಸ್ ಎಂ ಮೆಗ್ರಾಫ್, ೨೧೯ ಡಬ್ಲಿಯು ೧೬೩ನೆ ಬೀದಿ, ನ್ಯೂಯಾರ್ಕ್, ಎನ್ ವೈ, ಈಕೆ ಬರೆಯುವುದೇನೆಂದರೆ —

"ಪೆರೂನಾ ನನಗೆ ಮಾಡಿರುವ ಉಪಕಾರಕ್ಕಾಗಿ ನನ್ನ ಯೋಗ್ಯತಾನುಸಾರ ನಾನು ಅದನ್ನು ಸಂತೋಷದಿಂದ ಹೊಗಳುತ್ತೇನೆ ಎರಡು ವರುಷಗಳ ಕೆಳಗೆ ನನಗೆ ಒಂದು ವಿಧವಾದ ದುರ್ಬಲ ಸ್ವಾಸ್ಥ್ಯವಾಯಿತು ನನ್ನ ಬೆನ್ನು ಪಕ್ಕಗಳೂ ಯಾವಾಗಲೂ ನೋಯುತ್ತಿದ್ದವು ನನ್ನ ಅನ್ನಕೋಶದಲ್ಲಿ ಆಕ್ರಮಗಳುಂಟಾದವು ಇದರಿಂದ ಒಂದು ಬಟ್ಟಲು ನೀರು ಕೂಡ ನನ್ನ ಹೊಟ್ಟೆಯಲ್ಲಿ ನಿಲ್ಲುತ್ತಿರಲಿಲ್ಲ ನನಗೆ ಶಾಂತಿ ಎಲ್ಲಿ ಪ್ರಾರಂಭವಾದೀತೋ ಎಂಬ ಹೆದರಿಕೆಯಿಂದ ನಾನು ಊಟವನ್ನೇ ಅಪೇಕ್ಷಿಸುತ್ತಿರಲಿಲ್ಲ ಕಳೆದ ಮೂರು ತಿಂಗಳಿಂದಲೂ ನಾನು ಪೆರೂನಾವನ್ನು ಸೇವಿಸುತ್ತಿದೇನೆ ಈಗ ನನಗೆ ಎಂದಿನಂತೆ ಆರೋಗ್ಯವಾಗಿರುತ್ತದೆ ನನ್ನ ಅನ್ನಕೋಶವು ಎಂದಿನಂತೆ ಬಲವಾಗಿದೆ ನನ್ನ ನರಗಳ ಹಿಂಸೆಯು ನಿವಾರಣೆಯಾಯಿತು ನನ್ನ ಹಾಗೇ ಕಷ್ಟಪಡುವ ಹೆಂಗಸರಿಗೆಲ್ಲಾ ಪೆರೂನಾ ತೆಗದುಕೊಳ್ಳಿ ಎಂದು ಶಿಫಾರಸು ಮಾಡುತ್ತಿದೇನೆ ಆ ರೀತಿ ಅದನ್ನು ತೆಗೆದುಕೊಂಡವರು ನನ್ನನ್ನು ವಂದಿಸುತ್ತಾರೆ"

ಮಿಸೆಸ್ ಮೂರ್ಸ್

ಮಿಸೆಸ್ ಮೂರ್ಸ್, ಆರ್ ಎಫ್ ಡಿ ೨, ಲೆಂಟ್ಸ್, ಓರೆ, ಮೆಂಬರ್ ಆರ್ಡರ್ ಆಫ್ ವಾಷಿಂಗ್‌ಟನ್, ಈಕೆ ಬರೆಯುವುದನ್ನು ಕೇಳಿ -

"ಹೆಂಗಸಿನ ಧರ್ಮಕ್ಕೆ ಉಂಟಾಗುವ ಹಿಂಸೆಯು ನನಗೆ ನಾಲ್ಕು ವರುಷಗಳಿಂದ ಪ್ರಾಪ್ತವಾಗಿ ಬಹಳ ಕಷ್ಟಪಟ್ಟೆನು ನನ್ನ ಬೆನ್ನಿನಲ್ಲಿ ಉದ್ದಕ್ಕೂ ಕೆಟ್ಟ ನೋವಿತ್ತು ನನಗೆ ಅದರಿಂದ ವಿಶೇಷ ದುರ್ಬಲವಾಗಿತ್ತು, ತುಂಬಾ ದಣುವಾದಂತೆ ನಿಶ್ಶಕ್ತಿಯಾಗಿತ್ತು ನನ್ನ ಮನೆಯ ಕೆಲಸಗಳನ್ನು ಬಹಳ ಕಷ್ಟದಿಂದ ಮಾಡಿಕೊಳ್ಳುತ್ತಿದ್ದೆನು ಇದರ ಪರಿಹಾರಕ್ಕೆ ನಾನು ಏನೇನೋ ಔಷಧಗಳನ್ನು ಮಾಡಿದೆನು ಪೆರೂನಾ ಸೇವಿಸಿದ ತನಕ ನನಗೆ ಸ್ವಲ್ಪವೂ ವಾಸಿಯಾಗಿರಲಿಲ್ಲ ಎರಡು ವಾರಗಳಲ್ಲೇ ನನ್ನ ಶರೀರ ಸ್ಥಿತಿಯು ತುಂಬಾ ಬದಲಾವಣೆ ಹೊಂದಿತು ಮತ್ತು ಮೂರು ತಿಂಗಳಲ್ಲಿ ನನಗೆ ಎಂದಿನಂತೆ ಶಕ್ತಿಯೂ ಸಂತೋಷವೂ ಆರೋಗ್ಯವೂ ಉಂಟಾದವು ಇದಕ್ಕೆಲ್ಲಾ ಪೆರೂನಾವಿನ ಮಹತ್ತೇ ಅಲ್ಲದೆ ಬೇರೇನೂ ಅಲ್ಲವೆಂದು ಹೇಳುತ್ತೇನೆ"

ಮಿಸೆಸ್ ನೆಲ್‌ಸನ್

ತಲೆ ನೋವೂ ಬೆನ್ನು ನೋವೂ

ಮಿಸೆಸ್ ಕ್ರಿಸ್ಸೀ ನೆಲ್‌ಸನ್, ೬೧೯ ಎನ್ ೫ನೆ ಅವೆ, ನ್ಯಾಷ್‌ವಿಲ್ಲೆ, ಟೆನ್, ಈಕೆ ಬರೆಯುವುದನ್ನು ಓದಿ —

"ಪೆರೂನಾ ಔಷಧವು ನನಗೆ ಅಪಾರವಾದ ಗುಣವನ್ನು ಉಂಟುಮಾಡಿದೆಯಾದದ್ದರಿಂದ ಅದನ್ನು ವಿವರಿಸುವುದು ನನ್ನ ಕರ್ತವ್ಯವಾಗಿರುತ್ತದೆ ಇದರಿಂದ ನನ್ನ ಹಾಗೆ ಕಷ್ಟಪಡುತ್ತಿರುವ ಯಾವ ಹೆಂಗಸಾದರೂ ಇದ್ದಲ್ಲಿ ಅಂತವಳು ಇದನ್ನು ತಿಳಿದು ಉಪಕಾರ ಹೊಂದುವಂತಾಗುವುದು ಐದು ವರುಷಗಳ ಕಾಲ ನನಗೆ ಸುಖವಾಗಿದ್ದ ದಿನ ಒಂದಾದರೂ ಕಾಣದೆ ಇದ್ದೆನು ತಲೆ ನೋಯುವುದು, ತಪ್ಪಿದರೆ ಬೆನ್ನು ನೋಯುವುದು, ಇವೆರಡೂ ಇಲ್ಲದಿದ್ದರೆ ಇನ್ಯಾವ ಭಾಗದಲ್ಲಾದರೂ ನೋಯುವುದು ಇದ್ದೇ ಇತ್ತು ಅಷ್ಟು ಕಷ್ಟಪಟ್ಟು ಜೀವ ಉಳಿಸಿಕೊಳ್ಳಬೇಕೇ ಎಂಬುದಾಗಿ ನನಗೆ (ಗ್ಲಾನಿ) ಯುಂಟಾಗಿತ್ತು ಒಬ್ಬಾನೊಬ್ಬ ಸ್ನೇಹಿತಗಾತಿಯು ಪೆರೂನಾವನ್ನು ಸೇವಿಸೆಂದು ನನಗೆ ಹೇಳಿದಳು ಏನಾದರೂ ಮಾತೇನಲ್ಲಾ ಎಂದು ನಾನು ಕುತೂಹಲ ಪಡುತ್ತಿದ್ದೆನು ಸಂತೋಷಪೂರ್ವಕವಾಗಿ—ಆರು ಬಾಟ್ಲೆಗಳನ್ನು ಸೇವಿಸುವಷ್ಟರಲ್ಲೇ ನಾನು ಯಥಾಪ್ರಕಾರ ಹೆಂಗಸಾದೆನು ಈಗ ನನಗೆ ಯಾವ ನೋವೂ ಇಲ್ಲ ತುಂಬ ಸುಖಸಂತೋಷಗಳುಳ್ಳವಳಾಗಿದೇನೆ"

ಮೇಲ್ಕಂಡ ಸಾಕ್ಷಿಗಳು ಪ್ರತಿ ದಿನದ ಅನುಭವಗಳನ್ನು ವಿವರಿಸತಕ್ಕವುಗಳಾಗಿವೆ ಕಾಯಿಲೆ ಇದ್ದು ಪೆರೂನಾದಿಂದ ಯಥಾರ್ಥವಾದ ಗುಣವನ್ನು ಹೊಂದಿ, ಈ ಮಾತುಗಳನ್ನು ನಿಜವಾಗಿ ಹೇಳಿಯಿತ್ತಾರೆ

ಹೆಂಗಸರಿಗೆ ಇದು ತುಂಬಾ ಸಹಾಯವಾದದ್ದು ಹತ್ತಿರ ಇಟ್ಟುಕೊಂಡಿದ್ದರೆ ಈ ಔಷಧದಿಂದ ಸಹಜವಾದ ಗುಣವನ್ನು ಪಡೆಯಬಹುದಾಗಿದೆ ನರಗಳ ನಿಶ್ಶಕ್ತಿ, ಬೆನ್ನು ನೋವು, ಅಜೀರ್ಣ, ತಲೆನೋವು ಸೋಮಾರಿತನ, ಸ್ಥಳದಿಂದ ಸ್ಥಳಕ್ಕೆ ಬದಲಾಯಿಸಿ ನೋವು, ಇವೂ ಇನ್ನೂ ಅನೇಕ ರೋಗಗಳೂ ಪೆರೂನಾದಿಂದ ನಿವಾರಣೆಯಾಗುತ್ತವೆ ಮುಖ್ಯವಾಗಿ ಈ ಮಾತು ಹೆಂಗಸರಾದರೂ ಹೇಳತಕ್ಕದ್ದಾಗಿದೆ ತಮ್ಮ ಸಹೋದರಿಯರಿಗೂ ಉಪಕಾರವಾಗಲಿ ಎನ್ನುವುದು ವಿನಾ ಅವರು ಹೀಗೆ ಹೇಳಲು ಏನೂ ಕಾರಣವೇ ಇಲ್ಲ

ಈ ಮೇಲ್ಕಂಡ ಸಾಕ್ಷಿಗಳ ಮಾತನ್ನು ಓದುವಂಥವರಿಗೆ—ಅವರು ಅನೇಕ ಇತರವಾದ ಔಷಧಗಳನ್ನು ತೆಗೆದುಕೊಂಡು, ಡಾಕ್ಟರುಗಳ ಅಭಿಪ್ರಾಯ ತೆಗೆದುಕೊಂಡು ಸಾಕಾದರು ಆಮೇಲೆ ಪೆರೂನಾ ಅವರ ಸೇವನೆಗೆ ಸಿಕ್ಕಿ ಅವರ ಕಷ್ಟವೆಲ್ಲಾ ನಿವಾರಣೆಯಾಗಿ ಅವರನ್ನು ಸುಖವಾಗಿ ಮಾಡಿರುತ್ತದೆ

ಪೆರೂನಾದಿಂದ ಪ್ರತಿದಿನವೂ ರೋಗಿಗಳು ಗುಣ ಹೊಂದುತ್ತಿದಾರೆ ಪೆರೂನಾವಿಗೆ ಬಂದಿರುವ ಈ ಕೀರ್ತಿಯು ಅದನ್ನು ಉಪಯೋಗಿಸಿರುವಂಥಾ ಜನರ ಹೊಗಳಿಕೆಯಿಂದಲೇ ಬಂದಿದ್ದಾಗಿರುತ್ತದೆ

ಹದಿಮೂರು ವರುಷ ಕಷ್ಟಪಟ್ಟೆನು

ಮಿಸೆಸ್ ಅನ್ನಾ ಮಂಡೇಲ್, ಹೋಲಿಗ್ರೂವ್, ಆರ್ಕ್, ಈಕೆ ಬರೆಯುವುದನ್ನು ನೋಡಿ —

"ನಾನು ಹದಿಮೂರು ವರುಷಗಳ ತನಕ ಹೆಂಗಸಿನ ರೋಗವನ್ನು ಅನುಭವಿಸಿದೆನು ನಿಮ್ಮ ಪೆರೂನಾ ಪ್ರಕಟನೆಯನ್ನು ಒಂದು ಕಡೆ ಓದಿ ನೋಡಿ ಒಂದು ಶೀಸೆಯಷ್ಟು ಕೊಂಡು ಪೂರಾ ಸೇವಿಸುವಷ್ಟರೊಳಗಾಗಿ ನಾನು ಹಾಸಿಗೆ ಬಿಟ್ಟೆದ್ದು ತಿರುಗಾಡುವಂತಾದೆನು ಮೂರು ಬಾಟ್ಲಿ ಔಷಧ ತೆಗೆದುಕೊಂಡಾಗ ನನಗೆ ಆರೋಗ್ಯವಾಯಿತು, ಶರೀರ ಸುಖವೂ ಮಾಂಸಖಂಡಗಳ ಪುಷ್ಟಿಯೂ ಉಂಟಾದವು ಅದನ್ನು ನಾನು ಬಿಟ್ಟಿರಲಾರೆನು"

ತಲೆ ನೋವೂ ಕಿವುಡೂ

ಮಿಸೆಸ್ ಮೇರಿ ಇ ಷ್ಯಾಂಪ್‌ಸನ್, ಲಂಡಂಡೆರಿ, ಎನ್ ಎಚ್, ಎಂಬೀಕೆ ಬರೆಯುವುದೇನೆಂದರೆ

"ನನಗೆ ಬಹು ಕಠಿಣವಾದ ತಲೆ ನೋವಿತ್ತು ಎರಡು ಕಿವಿಗಳೂ ಮುಚ್ಚಿ ಹೋಗಿದ್ದವು ನರಗಳ ಶಕ್ತಿ ಕುಂದಿ ಹೋಗಿತ್ತು ಮೂವತ್ತು ವರುಷಗಳ ತನಕ ಒಂದು ಕಿವಿ ಕೇಳುತ್ತಿರಲಿಲ್ಲ ನಾನು ಆರು ಬಾಟ್ಲಿ ಪೆರೂನಾ ಮತ್ತು ಒಂದು ಬಾಟ್ಲಿ ಮನಾಲಿನ್ ಕೊಂಡು ಸೇವಿಸಿದೆನು ಇಂಥಾ ಉತ್ಕೃಷ್ಟವಾದ ಔಷಧವು ಬೇರೊಂದಿಲ್ಲವೆಂದು ಈಗ ಸಂತೋಷದಿಂದ ಹೇಳುತ್ತೇನೆ ನನ್ನ ನರಗಳು ಶಕ್ತಿ ಕೂಡಿಕೊಂಡವು ಅರುಚಿ ಪರಿಹಾರವಾಗಿದೆ ಊಟ ಮಾಡಿದ್ದೆಲ್ಲಾ ದೇಹಕ್ಕೆ ಒಂಟುವುದು ಎಲ್ಲಾ ಭಾಗಗಳಲ್ಲೂ ನಾನು ತುಂಬಾ ಸುಖವಾಗಿದೇನೆ"

ಕಠಿಣವಾದ ಶೀತ ನೆಗಡಿ

ಮಿಸ್ ಮೇರಿ ಕ್ಯಾಲ್ವಿನ್, ೯೨೭ ಮೆಯಿನ್ ಬೀದಿ ಸಿನ್‌ಸಿನಾಟಿ, ಓಹಿಯೋ, ಈ ಹೆಂಗಸು ಬರೆಯುವುದೇನೆಂದರೆ ...

"ಸಾಯಂಕಾಲ ಒಂದುಕಡೆ ಸಂತೋಷೋತ್ಸವಕ್ಕೆ ಹೋಗಿದ್ದು ವಾಪಸು ಮನೆಗೆ ಬರುವಾಗ್ಗೆ ನನಗೆ ನೆಗಡಿ ಹಿಡಿಯಿತು ನಾನು ಆಗ ಅದನ್ನು ಅಲಕ್ಷ್ಯಮಾಡಿಬಿಟ್ಟೆನು ಅದರಿಂದ ನನಗೆ ತುಂಬಾ ಕೆಡಕಾಯಿತು ನನ್ನ ಪಾಡು ಬಹಳ ದುಃಖಕರವಾಯಿತು ನಾನು ಪೆರೂನಾ ತೆಗೆದುಕೊಂಡೆನು ಆ ಕೂಡಲೇ ನನಗೆ ಗುಣಕೊಟ್ಟಿತು ಒಂದು ವಾರದೊಳಗಾಗಿ ನಾನು ಆರೋಗ್ಯ ಹೊಂದಿದೆನು ಈಗಲೂ ನನಗೆ ಮೈಗೆ ಆಲಸ್ಯವಾದಂತೆ ತೋರಿದ ಒಡನೆಯೇ ಅದನ್ನು ತೆಗೆದುಕೊಂಡಲ್ಲಿ ಎಲ್ಲಾ ನಿವಾರಣೆಯಾಗುತ್ತದೆ"

ಸೇವನೆ ಮುಂತಾದ್ದಕ್ಕೆ ಪ್ರತಿ ಬಾಟ್ಲಿ ಸಂಗಡ ಕಳಿಸುವ ನೋಟೀಸನ್ನು ಓದಿಕೊಳ್ಳಿ ಎಲ್ಲಾ ಔಷಧ ಮಾರಾಟಗಾರರಲ್ಲೂ ಪೆರೂನಾ ವಿಕ್ರಯವಾಗುತ್ತಿದೆ ಒಂದು ಬಾಟ್ಲಿಗೆ ರೂ ೩॥, ಆರು ಬಾಟ್ಲಿಗೆ ರೂ ೧೯॥

ಈ ಔಷಧ ಸಿಕ್ಕುವ ಸ್ಥಳಗಳು :—

(೧) ಹಿಚ್‌ಕಾಕ್ ಅಂಡ್ ಸನ್ಸ್, ಬೆಂಗಳೂರು

(೨) ಇಂಗ್ಲಿಷ್ ಡಗ್ರ್ ಕಂಪನಿ, ೩೯೮ ಮಿಂಟ್ ಬೀದಿ, ಮದರಾಸ್

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

೧೩—೪—೧೯೦೭ ರಿಂದ ೧೯—೪—೧೯೦೭ ರ ವರೆಗೆ

ಸ್ಥಳ	ಪ್ಲೇಗ್ ಆಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ಆಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	16	17	0	0
ಮೈಸೂರು ,,	1	3	0	0
ಬೆಂಗಳೂರು ಡಿಸ್ಟ್ರಿಕ್ಟು	31	30	40	32
ಮೈಸೂರು ,,	8	6	70	33
ಕೋಲಾರ್ ,,	0	0	0	0
ಕೋಲಾರ್ ಚಿನ್ನದ ಗಣಿಗಳು	1	1	0	0
ತುಂಕೂರು ಡಿಸ್ಟ್ರಿಕ್ಟು	0	0	31	11
ಹಾಸನ ,,	5	3	130	72
ಚಿತ್ರದುರ್ಗ ,,	0	0	0	0
ಕಡೂರ್ ,,	[illegible]	3	0	0
ಶಿವಮೊಗ್ಗ ,,	5	4	0	0
ಜುಮ್ಲಾ	68	55	261	148

ಶಾಲಿವಾಹನ ಶಕ ವರುಷಂಗಳು ೧೮೨೯ ನೇ ಪ್ಲವಂಗನಾಮ ಸಂವತ್ಸರದ ನಿಜ ಚೈತ್ರ ಬಹುಳ ಪಂಚಮಿ ಗುರುವಾರದಿಂದ ನಿಜ ಚೈತ್ರ ಬಹುಳ ಏಕಾದಶಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೭ ನೇ ಇಸವಿ ಮೇ.

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಚೈತ್ರ ಮೇಷ ಮಾಸ
2	ಗುರು ‡	ಪಂಚಮಿ	46 12	ಮೂ	23 56	20
3	ಶುಕ್ರ †	ಷಷ್ಟಿ	10-42	ಪೂಷಾ	20 38	21
4	ಶನಿವಾ ¶	ಸಪ್ತಮಿ	34 58	ಉಷಾ	15 45	22
5	ರವಿವಾ	ಅಷ್ಟಮಿ	29 50	ಶ್ರ	12 4	23
6	ಚಂದ್ರ *	ನವಮಿ	21 48	ಧ	9 2	24
7	ಕುಜ ,	ದಶಮಿ	20 48	ಶ	6 46	25
8	ಬುಧ	ಏಕಾದಶಿ	17 55	ಪೂಭಾ	5 24	26

‡ ಮತ್ಸ್ಯಜಯಂತಿ † ಮದ್ದೂರು ನರಸಿಂಹಸ್ವಾಮಿ ರಥ ¶ ಅಗ್ನಿನಕ್ಷತ್ರಪ್ರವೇಶ * ಮಹಾವ್ಯತೀಪಾತ , ತಿಥಿ ದ್ವಯಂ, ನೃತ್ಯಂತೋಗ, ಶ್ರೀಶ್ವೇತವರಾಹಸ್ವಾಮಿ ರಥ ದ್ವಾದಶಿ ತಿಥಿ, ಸರ್ವತ್ರೈಕಾದಶಿ

ಪೇಟೇ ಧಾರಣೆ.

ದಿನಸಿ	ಮೈಸೂರು	ಬೆಂಗಳೂರು
ಕಟ್ಟೀ ಅಕ್ಕಿ ಪಲ್ಲಾ ೧ಕ್ಕೆ ರೂ	೧೨-೮-೦	೧೩ ೪
ಸಂಬೂತಿ ಅಕ್ಕಿ ಅವಲ್	೧೬ ೪ ೦	೧೪ ೦
,, ಮಧ್ಯಮ	೧೨-೮-೦	೧೩-೦-
ಜಾಪ್ರಾ ಅಕ್ಕಿ	೧೨ ೮ ೦	೧೫ ೦
ಸಣ್ಣಕ್ಕಿ ಅವಲ್	೧೫-೦ ೦	೧೪ ೮
,, ಮಧ್ಯಮ	೧೪-೮ ೦	೧೩-೪
ತೊಗರೀ ಬೇಳೆ ಪಲ್ಲಾ ೧ಕ್ಕೆ	೧೩ ೮ ೦	೧೩-೦
,, ಮಧ್ಯಮ	೧೨ ೧೨ ೦	೧೨ ೦
ಹ್ಯಾರಾಗಿ ಪಲ್ಲಾ ೧ಕ್ಕೆ	೬ ೨ ೦	೬ ೦
ಕಾರಾಗಿ	೫-೮-೦	೫ ೧೪
ಜೋಳ	೭ ೮-೦	೮ ೧೨-
ಹಲಸಂದೆ ಪಲ್ಲಾ ೧ಕ್ಕೆ	೧೧ ೦ ೦	೧೧ ೮-
ಬಿಳೀ ಅವರೆ	೮-೪-೦	೭ ೪-
ಹೆಸರು	೧೨-೮-೦	೧೧ ೪-
ಉದ್ದು	೧೨ ೮ ೦	೧೦-೮-
ಕಡಲೆ	೧೦ ೮ ೦	೧೦ ೦-
ಎಳ್ಳು ಸೆ ೧೨೭ ಕ್ಕೆ	೨೨ ೮-೦	೨೨ ೮
ಹುರುಳಿ	೬-೬-೦	೭ ೪-
ಹರಳು ೧೨೭ ಸೇರಿಗೆ	೧೩ ೦ ೦	೧೩ ೦
ಸೀಗೇಕಾಯಿ ಮಣ ೧ಕ್ಕೆ	೨ ೨ ೦	೧ ೧೨-
ಮೆಣಸಿನಕಾಯಿ	೨ ೧೨ ೦	೩ ೦-
,, ಮಧ್ಯಮ	೨-೮-೦	೨ ೧೨-
ಬೆಲ್ಲ ದೊಡ್ಡ ಅಚ್ಚು	೩-೮-೦	ಮು ೧ ೫-
ಒಳ್ಳೆಣ್ಣೆ ಮಣ ೧ಕ್ಕೆ	೫ ೮ ೦	೫ ೬-
ಹರಳೆಣ್ಣೆ ,,	೫-೮-೦	೫ ೦-
ಕೊತ್ತುಂಬರಿ ಪಲ್ಲಾ ೧ಕ್ಕೆ	೬-೮-೦	೭ ೨-
ಉಪ್ಪು ,,	೪ ೬-೦	೬ ೦-
ಹುಣಸೇ ಹಣ್ಣು	೧-೪-೦	೧-೩-
,, ಹಳೇದು	೦ ೧೪-೦	೦ ೧೪-
ತುಪ್ಪ ಮಣ ೧ಕ್ಕೆ	೧೫-೦-೦	೧೩ ೦-
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ	೫-೦-೦	೪ ೦-
ತೆಂಗಿನಕಾಯಿ ೧೦೦ ಕ್ಕೆ	೮-೮ ೦	೬ ೮-
ಆಲೇಕಾಯಿ ಮಣ ೧ಕ್ಕೆ	೧-೦-೦	೧ ೦-
ಅಂಟ್ವಾಳದ ಕಾಯಿ ಮಣ ೧ಕ್ಕೆ	೦ ೧೨ ೦	೦ ೧೨
ಚಿನ್ನ (ಪವನ್) ಶೆಂಬು	೧೫-೪-೦	೧೫-೩
,, ,, ಪವನು	೧೫-೧೦ ೦	೧೫ ೧೧-
,, ,, ಗಟ್ಟಿ ತೊಲ ೧ಕ್ಕೆ	೨೩-೧೨-೦	೨೪ ೩-
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	೮೫ ೦-೦	೮೨ ೦-

Printed and Published by the Rev E W Thompson M A Proprietor and Manager, Wesleyan Mission Press, Mysore 2/5/1907

REGISTERED
M 20.

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೦ ಮೈಸೂರು—ಸನ್ ೧೯೦೭ ನೇ ಇಸವಿ ಮೇ ತಾರೀಖು ೯ ನೇ ಗುರುವಾರ. ಸಂಚಿಕೆ ೪೯

WILLIAM & CO., BOMBAY.

ವಿಲಿಯಂ ಮತ್ತು ಕಂಪೆನಿ, ಫೋರ್ಟು, ಮುಂಬಯಿ.

ಅಮೃತಾಂಜನ

27 11

ಬಾಟ್ಲಿ ಒಂದಕ್ಕೆ ಕಿಮ್ಮತ್ತು ೬ ಆಣೆ ವಿ. ಪಿ. ೧೨ ಆಣೆ.

ಅಮೃತಾಂಜನ—ಸುಖಾಂಜನ
ಅಮೃತಾಂಜನ—ಸಂಜೀವನ
ಅಮೃತಾಂಜನ—ಪರಮಾಂಜನ
ಅಮೃತಾಂಜನ—ದಿವ್ಯಾಂಜನ
ಅಮೃತಾಂಜನ—ಶೀತಭಂಜನಿ
ಅಮೃತಾಂಜನ—ಪ್ರಾಭಂಜನವಿಮರ್ದಿನಿ
ಅಮೃತಾಂಜನ—ಅಪೂರ್ವದರ್ಶಿನಿ
ಅಮೃತಾಂಜನ—ತತ್ಕ್ಷಣ ಪರಿಹಾರಿಣಿ
ಅಮೃತಾಂಜನ—ಸಂಧಿವಾತಕ್ಕೆ
ಅಮೃತಾಂಜನ—ತಲೆನೋವಿಗೆ.
ಅಮೃತಾಂಜನ—ದಮುವು ಮತ್ತು ಘಾಯಕ್ಕೆ
ಅಮೃತಾಂಜನ—ಗಂಟ್ಲುನೋವಿಗೆ.

ಶಿರೋವೇಧನ ವಾತ, ಎದೆನೋವು, ಗಂಟ್ಲುನೋವು, ಸಂಧಿವಾತ, ತಲೆನೋವು, ಶೀತೋದ್ಭವ, ಈ ಎಲ್ಲಾ ತರದ ರೋಗಕ್ಕೆ ಅಮೃತಾಂಜನ ದಿವ್ಯವಾದ ಔಷಧವಾಗಿದೆ ಇದನ್ನು ತರಿಸಿ ಮನೆಯಲ್ಲಿ ಸದಾಕಾಲ ಇಟ್ಟರೆ, ಮೇಲೆ ಹೇಳಿದ ಯಾವತರದ ರೋಗಕ್ಕೂ ಎಡೆ ಸಿಕ್ಕುವದಿಲ್ಲ. ಅಮೃತಾಂಜನದಿಂದ ಗುಣವು ಕಂಡುಬರದಿದ್ದರೆ ಹಣ ಹಿಂತಿರುಗಿ ಕೊಡಲ್ಪಡುವದು.

ಗಜಕರ್ಣದ ಮುಲಾಮು ಡಬ್ಬಿ ಒಂದಕ್ಕೆ ೬ ಆಣೆ, ವಿ. ಪಿ ೧೦ ಆಣೆ—ಇದನ್ನು ಹಾಗಿಸುವದರಿಂದ ಎಲ್ಲಾ ತರದ ಕಜ್ಜಿ ವಾಸಿಯಾಗುವದು ಮೂರು ಸಾರಿ ಹಾಗಿಸುವದರೊಳಗೆ ಗಜಕರ್ಣವು ಹೋಗುವದು ಒಂದು ಸಾರಿ ಪರೀಕ್ಷಿಸಿ ನೋಡಿರಿ ಕ್ರಯ ಕಮ್ಮಿ, ಗುಣ ಹೆಚ್ಚು ಇದನ್ನು ಹಚ್ಚಿದಲ್ಲಿ ಉರಿ ಬರುವದಿಲ್ಲ, ಚರ್ಮ ಕಪ್ಪಾಗುವದಿಲ್ಲ ಇದರಿಂದ ಗುಣವು ಕಂಡುಬರದಿದ್ದರೆ ಹಣ ಪರತು ಕೊಡಲ್ಪಡುವದು

ಕೇಶವರ್ಧಿನೀ ತೈಲ—ಇದು ತಲೆಯ ಕೂದಲನ್ನು ತಂಪುಮಾಡಿ ಅವನನ್ನು ತೆಗದು ಕೂದಲು ಬೆಳಿಸುತ್ತದೆ ಇದಕ್ಕೆ ಚಲೋ ವಾಸನೆಯು ಬರುತ್ತದೆ ಮೂರು ಔನ್ಸು ಬಾಟ್ಲಿಗೆ ೧-೦-೦

ಕಜ್ಜಿ ಮುಲಾಮು—ಇದು ಅತಿಶಯ ಅಗ್ಗವೂ ಗುಣದಾಯಕವೂ ಆಗಿರುತ್ತದೆ . . ೦-೩-೦

ಕಫಹಾರಿ—ಕೆಮ್ಮು, ದಮ್ಮು ಕ್ಷಯ, ಕೊರಳಿನಲ್ಲಿ ಕಫ ಮುಂತಾದ್ದಕ್ಕೆ ಇದು ಉತ್ತಮವಾದದ್ದು, ಬಾಟ್ಲಿ ೧ಕ್ಕೆ . ೧-೪-೬

ಜೀರ್ಣರಸಾಯನ—ಹೊಟ್ಟೆಯಲ್ಲಿ ಹಸಿವೆ ಆಗಲಿಕ್ಕೂ ನಾಲಿಗೆಗೆ ರುಚಿ ಬರಲಿಕ್ಕೂ ಉತ್ತಮವಾದದ್ದು .. ೧-೪-೦

ಜ್ವರಹಾರಿ—ಎಲ್ಲಾ ತರದ ಜ್ವರಗಳ ಮೇಲೆ ಈ ಔಷಧವು ಚಲೋದಾದದ್ದು ೦-೧೨-೦

ಸುಂದರೀ ತೈಲ—ಈ ತೈಲವನ್ನು ನಿರಂತರವಾಗಿ ಮೋರೆಯ ಮೇಲೆ ಹಾಗಿಸುವದರಿಂದ ಮೋರೆಯ ಮೇಲೆ ಇರುವ ಮೊಡವೆ ಕಲೆಗಳನ್ನೂ ಕಪ್ಪಾದ ಕಳಂಕಗಳನ್ನೂ ತೆಗದು ಚರ್ಮವನ್ನು ಮೃದುಮಾಡಿ ಚಲುವಿಕೆಯನ್ನು ಕೊಡುತ್ತದೆ. ಹೆಂಗಸರಿಗೂ ಗಂಡಸರಿಗೂ ಉತ್ತಮವಾದದ್ದು ೦-೮-೦

ದಂತಮಂಜನ—ಹಲ್ಲು ಸ್ವಚ್ಛವಾಗುತ್ತೆ, ಘಟ್ಟಿಯಾಗುತ್ತೆ, ವಾಸನೆಯನ್ನೂ ರಕ್ತವನ್ನೂ ನಿಲ್ಲಿಸುತ್ತದೆ ಕ್ರಯ ಬಹಳ ಕಮ್ಮಿ ೦-೨-೦

ನೇತ್ರಾಂಜನ ೩ ಆಣೆ ಪಿಪ್ಪರುಗುಟಿಕೆ ೧ ರೂಪಾಯಿ. ಕುಮಾರಿ ಗುಟಿಕೆ ೧ ರೂಪಾಯಿ. ಬಂತುವಾತಹಾರಿ ೮ ಆಣೆ ಕಫನಾಶಕ ೮ ಆಣೆ ಚೇಳು ಕಡಿತದ ಮದ್ದು ೮ ಆಣೆ ರೋಮಹಾರಿ ೮ ಆಣೆ ಕಸ್ತೂರಿಮಾತ್ರೆ ೧೦ ಆಣೆ ತಾಂಬೂಲಗುಟಿಕೆ ೮ ಆಣೆ

ಎಲ್ಲಾ ತರದ ಔಷಧಗಳೂ ಇರುವದರಿಂದ ಕೆಟಲಾಗು ಬೇಕಾದವರು ಬರದು ತರಿಸಿಕೊಳ್ಳಬಹುದು.

ವಿಲಿಯಂ ಮತ್ತು ಕಂಪೆನಿ, ೧೯ ಓಕ್ ಲೇನ್, ಫೋರ್ಟು, ಮುಂಬಯಿ.

ಮುಂಬಯಿ ವ್ಯಾಪಾರಮಾಡಲಿಚ್ಛಿಸುವವರು.

85 49

ಮುಂಬಯಿಯಲ್ಲಿ ಪ್ರತಿಯೊಂದು ಮಾಲಿನ ತೂಕ ಅಳತೆ ಮತ್ತು ಅದರ ವರ್ಣನೆ ಹಾಗೂ ಅನೇಕ ಉಪಯುಕ್ತ ಮಾಹಿತಿಯಾದುವ ಪುಸ್ತಕ —ಕ್ರಯ ೧೦ ಆಣೆ ವಿ ಪಿ ಯಿಂದ ಕಳುಹಿಸುವಾಗ ಖರ್ಚು ಬೇರೆ ಬಿಂಕ್ಲು ಸೇಲರರಿಗೆ ಯೋಗ್ಯ ಆಗಿ ದೊರೆಯುವದು ಮತ್ತು ಲಿಂಗಾಯತ ಧರ್ಮಸಂಬಂಧ ವಿವೃತ್ತಿ ಕ್ರಿಯಾಲಕ್ಷಣವೆಂಬುವ ಕನ್ನಡ ಪುಸ್ತಕ—ನಾಲ್ಕು ಆಣೆ ಅಕ್ಷರದಿಂದ ಬರೆಯುರಿ ಪತ್ತಾ ಚನ್ನಬಸಪ್ಪ ಮಲ್ಲಪ್ಪ ವಾರದ ಕ್ಲೈ ಮಾಂಟ್ರು, ಮುಂಬಯಿ.

ನೋಡಿರಿ.

ಯೆಸ್ಟ್ಕೆ ಕೆಂಪು ಮತ್ತು ತಾಜಾ ಕಪ್ಪು

ಹಾಸಿಗೆ ಫೂಲದಾರ.

125-19

೩,೦೦೦ ಹಾಸನದ ಟೋಪಿ ಹೊರೆಯುವ
ಟಿರಿಯರ್ ಪೂಲದಾರ ಮಾತ್ರ

	ರೂ	ಆ	ಪೈ
ಟೋಪಿ ಆಗುವ ಪೂಲ ದಾರದ ಕ್ರಯ	೦	೮	೦
ಟೋಪಿ ಆಗುವ ಒಂದು ಬಂಡಲ್ ದಾರದ ಕ್ರಯ	೧೨	೦	
ಟೋಪಿ ಹೊರೆಯುವ ಕೊಕ್ಕೆ ಸೂಜಿ ಒಕ್ಕೆ	೦	೧	೯
ಇದರಲ್ಲಿ ಆದ ಟೋಪಿ ಡಜನ್ ಒಕ್ಕೆ	೧೨	೩	೦

ವಿ ಪಿ ಯಿಂದಲೂ ರವಾನಿಸುತ್ತೇವೆ.

ವಿಳಾಸ—ಸಿ. ರಘುನಾಥ ಕಾಮತ್,

ಜನರಲ್ ಮರ್ಚಂಟ್, ಬೋಳಾರ, ಮಂಗಳೂರು.

ಬೆಲೆಗೆ ಬೆಳ್ಳಿ—ಗುಣಕ್ಕೆ ಭಂಗಾರ.

86 50

ಇಂಥಾ ಕಾಗದಗಳು ನಮ್ಮಲ್ಲಿಗೆ ಅನೇಕ ಬಂದಿವೆ.

ಮೆ॥ ವಾಮನಿಕಿನಿ, ಜವಳಿ ವರ್ತಕ, ಮಚಲೀಪಟ್ಣ, ಇವರು ಬರೆಯುವುದು—"ಕ್ಲೆಮೆಂಟ್‌ಯವರ ಮ್ಯಾಜಿಕ್ ಬಾಂ ಬಹಳ ತೃಪ್ತಿಕರವಾದದ್ದರಿಂದ ನಾನು ಸಂಪೂರ್ಣವಾಗಿ ಒಪ್ಪುತ್ತೇನೆ ಅದು ತುಂಬಾ ಗುಣಕೊಡುವಂಥಾದ್ದು ದಯವಿಟ್ಟು ಇನ್ನೂ ಮೂರು ಸೀಸೆಯನ್ನು ವಿ ಪಿ ಮೇಲೆ ಕಳುಹಿಸಿಕೊಡಿ" ಮೆ॥ ಜೆ ದಬ್ಲಿಯು ಸಾಮ್ಯುಯಲ್, ಪೋಸ್ಟ್ ಮಾಸ್ಟರ್, ಟ್ರಾವನ್ಕೋರಂ, ಇವರು ಬರೆಯುವುದು "ನಿಜವಾಗಿಯೂ ಇದು ಎಲ್ಲಾ ತರದ ನೋವುಗಳಿಗೂ ಅದ್ಭುತವಾದ ಔಷಧವೆನ್ನುವದಕ್ಕೆ ಸಂಶಯವಿಲ್ಲ" ಮಿಸೆಸ್ ಇ ಕ್ಯಾರ್ನಿಸಂಗ್, ಜೈಕಲ್ಸಾ, ಬೆಂಗಾಲ್, ಇವರು ಬರೆಯುವುದು—"ನಿಮ್ಮ ಮ್ಯಾಜಿಕ್ ಬಾಂ ಔಷಧವು ನನ್ನ ಕಾಲಿನ ಕೆಟ್ಟ ನೋವನ್ನು ಸಂಪೂರ್ಣವಾಗಿ ವಾಸಿಮಾಡಿದೆ" ಮಿಸೆಸ್ ಇ. ವೇಸ್ಟ, ರಂಗೂನ್, ಇವರು ಬರೆಯುವುದು—"ನಾನು ಯಾವಾಗಲೂ ನಿಮ್ಮ ಕ್ಲೇಮೆಂಟ್ಸ್ ಮ್ಯಾಜಿಕ್ ಬಾಮನ್ನು ಗಂಟ್ಲು, ಎದೆಯ ನೋವುಗಳಿಗೆ ಉಪಯೋಗಿಸುತ್ತೇನೆ ಅದರಿಂದ ನನಗೆ ಪ್ರತಿ ಸಲವೂ ಚನ್ನಾಗಿ ವಾಸಿಯಾಗಿದೆ. ಈ ಔಷಧದಿಂದ ಪಾರ್ಶ್ವನೋವು, ಕೀಲುಗಳ ಬಾಧೆ, ಕಿಬ್ಬೊಟ್ಟೆನೋವು, ಬೆನ್ನೆಲುಬಿನ ನೋವು, ತಲೆನೋವು ಕೆಮ್ಮು, ಕಿಲುಬುಗಳು, ಕೀಲುಗಳು ಕತ್ತರಿಸುವುದು, ಕೊಡಲು ಊತ, ಕೈ ಕಾಲು ಒಡೆತ ಇವೆಲ್ಲಾ ಗುಣವಾಗುತ್ತವೆ. ಇದನ್ನು ಹಾಕಿ ಚನ್ನಾಗಿ ತಿಕ್ಕಿದರೆ ಬಾಧೆ ಪರಿಹಾರವಾಗುವುದು. ಕ್ರಯ—೧ ಬಾಟ್ಲಿಗೆ ೧೨ ಆಣೆ, ಪೋಸ್ಟೇಜ್ ೩ ಆಣೆ ೩ ಬಾಟ್ಲಿಗೆ ಅಂಚೆವೆಚ್ಚ ಸೇರಿ ರೂ. ೨—೩ ಆಣೆ.

ನಮ್ಮ ವಿಳಾಸ—ಎಫ್. ಡಬ್ಲಿಯು. ಅರ್ಟ್,

ಸಿಪೆಟ್ರ ರೋಡ್, ವೇಪೇರಿ, ಮದರಾಸ್.

ರೇಷ್ಮೆ ಮತ್ತು ಕಲಾಬತ್ತು ಶೀರೆಗಳು ಮತ್ತು ಪೀತಾಂಬರಗಳು.

104

ಖಾತರಿಯಾದ ಬಣ್ಣಗಳನ್ನು ಹಾಕಿ ನಮ್ಮ ಸ್ವಂತ ಮಗ್ಗಗಳಲ್ಲಿಯೇ ತಯಾರಾಗುವ ಉತ್ತಮವಾದ ಕೆಂಪು, ಊದಾ, ಹಸರು, ಹಳದಿ, ಕಪ್ಪು, ಮೇಘವರ್ಣದ ಶೀರೆಗಳು ಪೀತಾಂಬರಗಳು ನಮ್ಮ ಅಂಗಡಿಯಲ್ಲಿ ನಿಬರವಾದ ಕ್ರಯಕ್ಕೆ ಮಾರುತ್ತೇವೆ ಇದಲ್ಲದೆ ಕಂಚಿ, ಕುಂಭಕೋಣ, ಕೊರನಾಡು, ಮಧುರೆ, ಕಲ್ಲತ್ತಾ, ತಾತ್ಯೆಯಂಗಾರ್ ಪೇಟೆ, ಸೇಲಂ, ಕೊಯಮುತ್ತೂರು, ಮುಂತಾದ ಸ್ಥಳಗಳಲ್ಲಿ ತಯಾರಾಗುವ ರವುಂವಾರು ಜವಳಿಯು ನಮ್ಮಲ್ಲಿಯೂ ಸದಾ ಸುಲಭ ಖರೀದಿಗೆ ದೊರೆಯುತ್ತದೆ ಸದರಿ ನಗಗಳ ಕ್ರಯ ತಪಶೀಲ್ ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು. ವಿ ಪಿ ದ್ವಾರ ಸಹಾ ತರಿಸಿಕೊಳ್ಳಬಹುದು ನಮ್ಮ ಸನಗುಗಳು ಶ್ರೇಷ್ಠವಾಗಿ ಸ್ವಂತಮಗ್ಗಗಳಲ್ಲಿ ತಯಾರಾಗುತ್ತವೆ ಎಂದು ಮೈಸೂರು ಶ್ರೀಮನ್ಮಹಾರಾಜಾ ಸರ್ಕಾರದ ವಸ್ತುಪ್ರದರ್ಶನದಲ್ಲಿ ಬೆಳ್ಳಿ ಬಿರುದಿನ ಬಿಲ್ಲೆ ಬಹುಮಾನಕೊಟ್ಟಿರುತ್ತಾರೆ.

ನಮ್ಮ ವಿಳಾಸ—ಜೆಚ್. ಸಂಕಪ್ಪ ಬಸಪ್ಪ,

ಚಿಕ್ಕಪೇಟೆ ಬೆಂಗಳೂರು.

ಜ್ವರಹರಿ

47 2

ಇದು ಸಾಧಾರಣ ಜ್ವರ, ಚಳೀಜ್ವರ, ಮೋರೇಜ್ವರ, ಪಿತ್ಥಜ್ವರ ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನು ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್ ಟಿ ವೆಂಕಟಪತಿ ಅಯ್ಯಂಗಾರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೧ ಔನ್ಸಿನ ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚನ್ನಾಗಿ ಗುಣ ಹೊಂದಿರುವರು ಇನ್ನೂ ಜನಗಳು ಶಾಹಿಲೇ ಬೇಳುತ್ತಿರುವ ದರಿಂದ ದಯವಿಟ್ಟು ಇನ್ನೊಂದು ೨೦ ಔನ್ಸಿನ ಸೀಸೆಯನ್ನು ವಿ. ಪಿ ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ

ಕ್ರಯ.—ಸೀಸೆ ೧ ಕ್ಕೆ ೮ ಆಣೆ, ೧ ರೂ , ೧—೮ ರೂ., ರೂ ೨—೧೨ ಆ., ೧೧ ರೂ., ಡಜನ್‌ರಷ್ ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

****

ಅಮೃತಕರ್ಪೂರ.

Amrut Carpoor

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ. ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ತಮ್ಮಿಂದ ಒದಗಿದ ಕರ್ಪೂರವನ್ನು ನಾನೂ ನನ್ನ ಕಾರ್ಯದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಆವ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೆ ಔಷಧ ವೆಂದು ಬರೆದಿದ್ದಾರೆ.

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯರುಗಳ ಕೈಲೂ, ದೊಡ್ಡ ವ್ಯಾಪಾರಿಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಲ್ಲಿ ವಿಚಾರಿಸಿ:—

ಹೆಡ್ರಿಯ ಕ್ ನ್ಯೂ ಇಂಡಿಯಾ ಔಷಧಗಳ ಕಂಪೆನಿ,

ಸೆಕೆಂಡ್ ಬೀಚ್ ರೋಡ್, ಮದ್ರಾಸ್.

ಅಪಾಯದ ಕುರುಹುಗಳು.

ಸ್ವಾಭಾವಿಕವಾಗಿ ಅಪಾಯ ಬರಬಹುದಾದ ಕುರುಹುಗಳನ್ನು ಕಂಡುಹಿಡಿಯಬಹುದು.

ಕೆಮ್ಮು ಅಪಾಯದ ಕುರುಹು !

ಶ್ವಾಸಕೋಶಗಳು ಬಲಹೀನವಾಗಿರುವುಗಳೆಂದು ಇದರಿಂದ ತೋರಿಬರುತ್ತದೆ ಅವನ್ನು ಬೇಗನೇ ಬಲಪಡಿಸತಕ್ಕದ್ದು ಬಹು ಅವಶ್ಯಕ

SCOTT'S EMULSION. 31-8

(ಸ್ಕಾಟ್ಸ್ ಇಮಲ್ಷನ್.

ಎಂಬೀ ಔಷಧವು ಈ ಕುರುಹುಗಳನ್ನು ಹೋಗಲಾಡಿಸುವದು.

ಬಲಹೀನವಾದ ಶ್ವಾಸಕೋಶಗಳನ್ನು ಬಲಪಡಿಸಿ, ಕೆಮ್ಮನ್ನು ನಿಲ್ಲಿಸುತ್ತದೆ.

ಕೈಯಿಂದ ಮುಟ್ಟಿ ತಯಾರಿಸಿದ್ದಲ್ಲ.

ಎಲ್ಲಾ ಔಷಧ ಮಾರಾಟಗಾರರಲ್ಲೂ ದೊರಕುತ್ತವೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್
ಔಷದಗಳ ಕಾರ್ಖಾನೆ,
ಲಂಡನ್, ಇಂಗ್ಲೆಂಡ್.

ಈ ಮೀನು ಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ.

ಇದಕ್ಕೆ ಸಮಾನವಾದ ಪುಸ್ತಕ ಉಂಟೋ ?

ಕನ್ನಡ ಭಾಷೆಯಲ್ಲಿ ಇದುವರಿವಿಗೂ ಇಂಥಾ ಸೊಗಸಾದ ಪುಸ್ತಕವು ಪ್ರಚುರವಾಗಲಿಲ್ಲ. ಸ್ವಲ್ಪ ನೋಡಿ.

"ಹಿಂದೂದೇಶ ಪ್ರದಕ್ಷಿಣ"

ಎಂದು ಕರೆಯಲ್ಪಡುವ ಈ ನೂತನ ಪುಸ್ತಕದಲ್ಲಿ ಸುಮಾರು ತೊಂಬತ್ತು ಉತ್ಕೃಷ್ಟವಾದ ಚಿತ್ರಗಳು ಅಡಗಿವೆ ಹಿಂದೂ ದೇಶವನ್ನೆಲ್ಲಾ ಸಂಚಾರ ಮಾಡುವದರಿಂದ ಉಂಟಾಗುವ ಪರಮಾನಂದವನ್ನು ಒಂದು ಸಾರಿ ಈ ಗ್ರಂಥವನ್ನು ಓದುವದರಿಂದ ಹೊಂದಬಹುದು. ಇದು ಮೊದಲನೇ ಸಾರಿ ಪ್ರಿಂಟ್ ಆಗಿದ್ದು ಬಹು ಶೀಘ್ರವಾಗಿ ಎಲ್ಲಾ ಮುಗಿದು ಹೋಯಿತು. ಈಗ ತಿರಿಗಿ ವಿಚಿತ್ರವಾಗಿಯೂ ಉಲ್ಲಾಸಕರವಾಗಿಯೂ ಇರುವ ಪ್ರಸಿದ್ಧವಾದ ಚಿತ್ರಗಳೊಡನೆ ಮುದ್ರಿಸಿರುತ್ತೇವೆ. ಇದರಲ್ಲಿರುವ ಚಿತ್ರಗಳನ್ನು ಸ್ವಲ್ಪ ನೋಡಿ—ಶ್ರೀರಂಗಪಟ್ಟಣದಲ್ಲಿರುವ ಹೈದರಲ್ಲಿ ಟಿಪ್ಪುಸುಲ್ತಾನರ ಗೋರಿ, ಹುಮಾಯೂನನ ಗೋರಿ, ಹುಗ್ಲಿ ನದಿ, ಕಲ್ಕತ್ತಾ ನಗರ, ಕಲ್ಕತ್ತಾ ಹೈ ಕೋರ್ಟು, ಕಾಳಿಕಾದೇವತೆ, ಚಂದ್ರನಗರ, ಬಂಗಾಳಿಯರ ಮನೆಗಳು, ಜಗನ್ನಾಥಸ್ವಾಮಿ ಭುವನೇಶ್ವರವೆಂಬ ದೇವಸ್ಥಾನ. ಜಗನ್ನಾಥದ ರಥೋತ್ಸವ, ಕನರಾಕ್ ದೇವಸ್ಥಾನ, ಎವರೆಸ್ಟ್ ಶಿಖರ, ಖಟ್ಮಂಡು ನಗರದ ಒಂದು ಬೀದಿ, ಖಟ್ಮಂಡು ನಗರದ ದೇವಸ್ಥಾನಗಳು, ಛಪಸತ್ರಗಳು, ಹಿಂದಿಗರು ದೋಣಿಯನ್ನು ಎಳೆದುಕೊಂಡು ಹೋಗುವದು, ಗಯಾದಲ್ಲಿರುವ ಬುದ್ಧನ ದೇವಸ್ಥಾನ, ಔರಂಗಜೇಬನು ಕಟ್ಟಿಸಿದ ಮಸೀತಿ, ಕಾಶೀ ಪುಣ್ಯಕ್ಷೇತ್ರದಲ್ಲಿರುವ ದಾಶಾಶ್ವಮೇಧಘಟ್ಟ, ಕಪಿಗಳಿಗೆ ತಿಂಡಿ ಹಾಕುವದು, ಕಾಶೀ ಕ್ಷೇತ್ರದ ದೇವಸ್ಥಾನಗಳು, ಅಲಹಾಬಾದ್ ನಗರ ಮತ್ತು ಅದರ ಕೋಟೆ, ಅಲಹಾಬಾದ್‌ನಲ್ಲಿರುವ ಖುಸ್ರು ಬಾಗ್ ಅರಮನೆ, ಯಮುನಾ ನದಿಯಲ್ಲಿ ಯಾತ್ರಿಕರು ಮುಳುಗುವದು, ಕಾನ್ಪುರದಲ್ಲಿರುವ ಶಿಲಾ ಶಾಸನ, ಕಾನ್ಪುರದ ಹತ್ತಿರ ಗಂಗಾ ನದಿಯ ಮೇಲೆ ಕಟ್ಟಿರುವ ಸೇತುವೆ, ಲಕ್ನೋ ನಗರದ ರೆಸಿಡೆನ್ಸಿ ಬಂಗಲೆ, ಲಕ್ನೋ ಪಟ್ಟಣದ ಬಾಗಿಲು, ಸರ್ ಹೆನ್ರಿ ಹ್ಯಾವಲಾಕನು, ಗೋಮತಿ ನದಿಯ ಮೇಲಿರುವ ಅರಮನೆ, ಝಾಮದಲ್ಲಿ ಜನರ ಸ್ಥಿತಿ, ಹರಿದ್ವಾರಘಟ್ಟ, ಗಂಗೋತ್ರಿ ದೇವಸ್ಥಾನ, ಹಿಮವತ್ಪರ್ವತಗಳ ಮೇಲಿರುವ ಪಟ್ಟಣ, ಹಿಮಪ್ರವಾಹಗಳು, ಆಗ್ರಾ ಪಟ್ಟಣದ ಕೋಟೆ, ಯಮುನಾ ನದಿಯೂ ದೂರದಲ್ಲಿ ತೋರುತ್ತಿರುವ ತಾಜ್‌ಮಹಲ್ ಗೋರಿಯೂ, ತಾಜ್ ಮಹಲಿನ ಕಲ್ಲಿನಲ್ಲಿ ಕೆತ್ತಿರುವ ಧರಡೆ, ಅಕ್ಬರನ ಅರಮನೆ, ಆಗ್ರಾ ಪಟ್ಟಣದ ಮುತ್ತಿನ ಮಸೀತಿ, ಫತ್ತೆಪುರ್ ಸಿಕ್ರಿಯಲ್ಲಿರುವ ಪಾಂಚ್ ಮಹಲ್ ಅರಮನೆ, ರಜಪೂತರು, ಭರತಪುರದ ಕೋಟೆ, ಅಲ್ವಾರಿನಲ್ಲಿ ಮಹಾರಾಜ ಭಕ್ತಾವಾರ್ ಸಿಂಗರ ಗೋರಿ, ದೆಹಲಿ ನಗರದ ದೊಡ್ಡ ಮಸೀತಿ, ಪುರಾತನ ದೆಹಲಿಯ ಬಾಗಿಲು, ರಾಜ ಧವನು ಸ್ಥಾಪಿಸಿದ ಕಬ್ಬಿಣದ ಸ್ತಂಭ, ನಾದರ್ ಷಹಾನು ದೆಹಲಿ ನಗರದಲ್ಲಿ ಪ್ರಜಾ ಸಂಹಾರವನ್ನು ನೋಡುತ್ತಿರುವದು, ದೆಹಲಿಯ ಬಳಿಯಲ್ಲಿರುವ ಕುಟುಬ್ ಮಿನಾರ್, ಚಾಂದ್ನಿ ಚೌಕವೆಂಬ ಬೀದಿ, ಸಿಂಲಾಕ್ಕೆ ಹೋಗುವ ದಾರಿ, ಸಿಮ್ಲಾ, ಅಮೃತಸರದ ಸುವರ್ಣಾಲಯವು, ಲಾಹೋರಿನಲ್ಲಿರುವ ರಣಜಿತಸಿಂಗನ ಗೋರಿ, ಲಾಹೋರ್ ಪಟ್ಟಣ, ಈ ಮುಂತಾದ ಅನೇಕ ರಮಣೀಯವಾದ ಸ್ಥಳಗಳ ಚಿತ್ರಗಳು ಈ ಪುಸ್ತಕದಲ್ಲಿ ಅಡಗಿವೆ ಇವುಗಳನ್ನೆಲ್ಲಾ ವಿವರಿಸಲು ಸ್ಥಳವಿಲ್ಲ.

ಪ್ರತಿಯೊಂದು ಅಂಶದ ವಿವರಣೆಯೂ ಬಹು ಪರಿಷ್ಕಾರವಾಗಿದೆ. ದಕ್ಷಿಣ ದೇಶದಲ್ಲಿರುವ ಅನೇಕ ಪ್ರಸಿದ್ಧ ಸ್ಥಳಗಳ ಚಿತ್ರಗಳೂ, ಅವುಗಳ ವಿವರಣೆಗಳೂ ಇದರಲ್ಲಿವೆ. ಪುಸ್ತಕವು ದಾರಿಯಾಗಿದೆ ಪುಸ್ತಕದ ಅಚ್ಚು ಮತ್ತು ಬೈಂಡು ಬಹು ಸುಂದರವಾಗಿವೆ ಇದರ ಕ್ರಯ ಎಂಟೇ ಆಣೆ, ವಿ ಪಿ .ಪಿ. ಮೂಲಕ ಒನ್ನೊಂದು ಆಣೆಯಾಗುವದು. ಪುಸ್ತಕವು ಜಾಗ್ರತೆಯಲ್ಲಿ ಮಾರಾಟವಾಗುತ್ತಿದೆಯಾದ್ದರಿಂದ ಕಾಪ್ಪಿಗಳಿಲ್ಲ ಕೆಳಗೆ ಕಂಡ ವಿಳಾಸಕ್ಕೆ ಬೇಗನೆ ಬರೆದು ತರಿಸಿಕೊಳ್ಳಬೇಕು.

ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪ್ಪೋ,
ಮೈಸೂರು. 48-1

CHAMBERLAIN'S COLIC, CHOLERA AND DIARRHOEA REMEDY.

ಚೇಂಬರ್ಲೈನ್ ಯವರು ಹೊಟ್ಟೆಶೂಲೆ, ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು.



4-1

ಕೆಳ ಹೊಟ್ಟೆಯ ನೋವು, ಬರೀ ಭೇದಿಯಾಗುವುದು, ಆಮಶಂಕೆ, ವಾಂತಿಭೇದಿ ಉಪದ್ರ, ಸೆಳುವು ನೋವು, ಹೊಟ್ಟೆಯ ನಾನಾ ತರದ ಶೂಲೆಗಳು—ಈ ರೋಗಗಳನ್ನೆಲ್ಲಾ ವಾಸಿಮಾಡುತ್ತದೆ ಈ ಪರಮಾಶ್ಚರ್ಯಯುಕ್ತವಾದ ಔಷಧವು ಜನರನ್ನು ಬದುಕಿಸಿರುವಷ್ಟು ಮತ್ತು ನೋವನ್ನೂ ಬಾಧೆಯನ್ನೂ ನಿವಾರಣೆ ಮಾಡಿರುವಷ್ಟು ಪ್ರಪಂಚದಲ್ಲೇ ಇನ್ಯಾವ ಔಷಧವೂ ಮಾಡಿರುವುದಿಲ್ಲ.

ಜ್ಞಾಪಕದಲ್ಲಿಟ್ಟುಕೊಳ್ಳಿ—ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯೊಳಗಿರುವ ಎಲ್ಲಾ ತರದ ನೋವನ್ನೂ ನಿಲ್ಲಿಸಿಬಿಡುತ್ತದೆ. ಬಹಳ ಕಠಿಣವಾದ ಭೇದಿಯೂ ಕೂಡ ಮೂರೇ ಹೊತ್ತಿನ ಈ ಔಷಧದಿಂದ ನಿರ್ಮೂಲವಾಗಿ ನಿಲ್ಲಿಸುತ್ತದೆ ಖಂಡಿತವಾಗಿ ವಾಸಿಮಾಡುವುದೇ ಇದರ ಗುಣ

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ.

ಕೈಯಿಂದ ಸ್ವಲ್ಪವೂ ಮುಟ್ಟಿದ್ದಲ್ಲ

ಇದು ಎಲ್ಲೆಲ್ಲೂ ಬಿಕರಿಯಾಗುವುದು ಸಣ್ಣ ಸೀಸೆಗೆ ೧ ರೂಪಾಯಿ. ದೊಡ್ಡ ಸೀಸೆಗೆ ೨ ರೂಪಾಯಿ.

ಪಾಳ್ಯದ ವೆಂಕಟಾಚಲ ಪಂಡಿತ, ಶ್ರೀಸೀತಾರಾಘವ ವೈದ್ಯಶಾಲಾ, ಕೊಳ್ಳೇಗಾಲ, ಇವರ ಸಿದ್ಧೌಷಧಗಳು.

20 12

೧. ಲೋಕಾಮಯಹರ ಕಸ್ತೂರೀ ಮಾತ್ರೆ.—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ.

ಚಳಿಜ್ವರ, ಜ್ವರ, ಹೊಟ್ಟೆಶೂಲೆ, ಸಂದುಗಳ ನೋವು, ಮೈ ಕೈಕಾಲು ಕೊಗತ (ಧಾರ , ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲು ನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ.

ತಾಂಬೂಲದ ಕವಚ ಅಥವಾ ಕಾಫೀ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಬಾಯಿರೋಗೂ ಬಾರದೆ, ನೀರು ಮಲಗಳ ಬಿಡಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ

ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ಸೂತ್ಕಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ ಒಳ್ಳೇ ಶಕ್ತಿವರ್ಧಕವಾಗಿದೆ

೨೦೦ ಮಾತ್ರೆಯುಳ್ಳ ಕುಪ್ಪಿಗೆ ೪ ಆಣೆ; ೬ ಕುಪ್ಪಿಗೆ ೧ ಕುಪ್ಪಿ ಹೆಚ್ಚು. ೧ ರಿಂದ ೧೨ ಕುಪ್ಪಿ ವರೆಗೆ ಪೋಸ್ಟೇಜು ೬ ಆಣೆ

ವಿಳಾಸ:—ಎಸ್. ಎಸ್. ಆರ್. ವೈದ್ಯಶಾಲಾ,
ಲಕ್ಷ್ಮೀವಿಲಾಸ ರೋಡ್, ಮೈಸೂರು

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

11 15

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇಳಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ:—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ, ಚನ್ನಾಗಿ ಹೆಣೆದ, ಬಹು ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಸೀದಾ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದು ಚನ್ನಾಗಿಲ್ಲದ್ದು ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ.

ಕಾದ, ಕೆಂಪು, ಕಪ್ಪು, ಬಿಳಿ, ಕಾಫಿ ಟೋಪಿಗಳು ೧ ರೂ. ೮ ಆ.; ೧ ರೂ. ೬ ಆ, ೧ ರೂ. ೪ ಆ.

ರೇಶ್ಮೆ ಚುಕ್ಕಿಯುಳ್ಳ ಟೋಪಿಗಳು ೧ ರೂ. ೮ ಆ., ೨ ರೂ.

ದಾರದ ಟೋಪಿಗಳು ೧ ರೂ. ೧೨ ಆ ; ೧ ರೂ. ೮ ಆ , ೧ ರೂ. ೬ ಆ.

ಉಸುಕಿನ ಟೋಪಿಗಳು ೧ ರೂ. ೮ ಆ.; ೧ ರೂ. ೬ ಆ.

ಕೂಸುಗಳ ಟೋಪಿ, ಸೂಥ್ಥಿ ಮೇಜೋಡು, ಅರ್ಧ ಮೇಜೋಡು ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು.

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ.

ಬಾಲಶಿಕ್ಷೆ ೧ನೇ ಭಾಗ!

ಕ್ರಯ ಒಂದಾಣೆ. ಒಂದಾಣೆ. ಒಂದೇ ಆಣೆ.

ಅಕ್ಷರಗಳನ್ನೂ ಪಾಠದ ವಿಷಯಗಳನ್ನೂ ಮಕ್ಕಳ ಜ್ಞಾಪಕದಲ್ಲಿ ಶಾಶ್ವತವಾಗಿ ನಿಲ್ಲಿಸುವದಕ್ಕೆ ನವೀನವಾದ ಚಿತ್ರಗಳು ಇದರಲ್ಲಿ ಇವೆ. ಆಯಾ ಪಾಠಗಳ ಅಡಿಯಲ್ಲಿ ಲೇಖ್ಯಪಾಠವೂ ಗಣಿತಪಾಠವೂ ಇವೆ. ಮಕ್ಕಳಿಗೆ ಈ ಪಾಠಗಳು ಕಾಟವಾಗದೆ ಆಟವಾಗಿ ಪರಿಣಮಿಸುವವು ನೂರು ಪ್ರತಿಗಳಿಗೆ ಹನ್ನೆರಡು ಪ್ರತಿಗಳು ಕಮಿಷನ್

ವಿಳಾಸ:—ಮ್ಯಾನೇಜರ್, ಸಿ. ಎಲ್. ಎಸ್.
ಬುಕ್ ಡಿಪ್ಪೋ, ಮೈಸೂರು.

ವಿಶೇಷ ನೋಟೀಸು.

1-1

ಈ ಮೂಲಕ ಮೈಸೂರು ಸೀಮೆಯಲ್ಲಿರುವವರೆಲ್ಲರಿಗೆ, ದಕ್ಷಿಣ ಕನ್ನಡ ಜಿಲ್ಲಾ ಮಂಗಳೂರಲ್ಲಿರುವ ಬಾಸೆಲ್ ಮಿಶ್ಯನ್ ಟೈಲ್ ಎಸ್ಟಾಬ್ಲಿಷ್‌ಮೆಂಟಿನ ಮೇನೇಜರರು ತಿಳಿಸುವದು —

ಕೆಲವು ಸಮಯಗಳಿಂದ ಸದ್ಯಾ ತುಂಕೂರಲ್ಲಿರುವ ಬಿ ... ತರ್ ಮೊದಲಿಯಾರು) ನಮ್ಮ ಕಡೆ (Canvassing Agency) ಕ್ಯಾನ್‌ವಾಸ್ಸಿಂಗ್ ಏಜನ್ಸಿ ಕೆಲಸವನ್ನು ವಹಿಸಿ, ಸಾಹುಕಾರರಿಂದಲೂ ... ದಾರರಿಂದಲೂ ನಮಗಾಗಿ ಅಪ್ಪಣೆಯನ್ನು ಪಡಕೊಳ್ಳುತ್ತಿದ್ದರು. ಆದರೆ ಇನ್ನು ಮುಂದೆ ಸದರಿ ರಾಜಬಹದ್ದೂರರು ನಮ್ಮ ಕ್ಯಾನ್‌ವಾಸ್ಸಿಂಗ್ ಏಜಂಟರಾಗಿರುವದಿಲ್ಲ ಮತ್ತು ಅವರಿಗಿರುವ ನಮಗೋಸ್ಕರ ಅಪ್ಪಣೆಗಳನ್ನು ಸ್ವೀಕರಿಸುವ ಸ್ವತಂತ್ರವನ್ನು ಈ ನೋಟೀಸ್ ಮೂಲಕ ತೆಗೆದು ಹಾಕಿರುತ್ತೇವೆಂಬದನ್ನು ಸರ್ವಜನರ ತಿಳುವಳಿಕೆ ಬಗ್ಗೆ ಪ್ರಕಟಿಸುತ್ತೇವೆ.

ಯಾರಿಗಾದರೂ ನಮ್ಮ ಜವಳಿಗಳನ್ನು ತರಿಸಿಕೊಳ್ಳಬೇಕಾದರೆ ಅವರು ಕಾಲುಪಾಲು ಮೌಲ್ಯವನ್ನು ಮುಂಗಡವಾಗಿ ನಮಗೆ ರವಾನಿಸಿ ಬರೆದುಕೊಂಡಲ್ಲಿ ಸದರಿ ಮಾಲುಗಳನ್ನು ನಾವಾಗಿಯೇ ರವಾನಿಸುಡುವೆವು.

Mangalore,
4th May 1907.

ಟೈಲ್ ...
ಮಂಗಳೂರು

ನಮ್ಮ ಹೊಸ ಬಹುಮಾನದ ಬಾತ್ಮಿಯು.

"ಮೈಸೂರು ಕೈಗಾರಿಕೆಗಳ ಮತ್ತು ವ್ಯವಸಾಯೋಪಕರಣಗಳ ಪ್ರದರ್ಶನ" ಎಂಬೀ ವಿಷಯವಾಗಿ ಈ ತಿಂಗಳ ೧೮ನೇ ತಾರೀಖಿನೊಳಗೆ ಬರೆದು ನಮ್ಮಲ್ಲಿಗೆ ಬರುವ ಬಾತ್ಮಿಗಳಲ್ಲಿ ಉತ್ತಮವಾದದಕ್ಕೆ ನಾಲ್ಕು ರೂಪಾಯಿ ಬಹುಮಾನ ಕೊಡುವೆವು. ಬಾತ್ಮಿದಾರರು ಯೋಚಿಸಿ ಬರೆಯಬೇಕಾಗಿರುವ ಭಾಗಗಳೇನೆಂದರೆ—(೧) ಪ್ರದರ್ಶನದ ಉದ್ದೇಶಗಳು—ಕೈಗಾರಿಕೆಗಳಿಗೆ ಪ್ರೋತ್ಸಾಹ, ಗೋಶಾಲೆಗಳ ಬೆಳುವಳಿಗೆ, ಧಾನ್ಯಗಳನ್ನು ಹುಲುಸಾಗಿ ಬೆಳೆಯುವುದು, (೨) ಪ್ರದರ್ಶನವನ್ನು ಸಾಂಗವಾಗಿ ನಡಿಸುವಂಥಾ ಮೇಲ್ವಿಚಾರಣಾ ಕಮಿಟಿಯಲ್ಲಿ ಎಂಥವರು ಮೆಂಬರುಗಳಾಗಿರಬೇಕು; (೩) ಯಾವ ಯಾವ ತರಹಾ ವಸ್ತುಗಳನ್ನು ಪ್ರದರ್ಶಮಾಡಬೇಕು, ಬಹುಮಾನ ಕೊಡತಕ್ಕ ಕ್ರಮಗಳೇನು; (೪) ಈ ಪ್ರದರ್ಶನವನ್ನು ಪ್ರಜಾರಂಜಕವಾಗಿ ನಡಿಸುವ ಬಗೆ ಹೇಗೆ ಮತ್ತು ನಾನಾ ತರದ ವಸ್ತುಗಳು ಯಾವ ... ಯಲ್ಲಿ ಪ್ರದರ್ಶನಕ್ಕೆ ಬರುವಂತೆ ಮಾಡಬಹುದು.

ವೃತ್ತಾಂತ ಪತ್ರಿಕೆ.

೧೯೦೭ ನೇ ಇಸವಿ ಮೇ ತಾ॥ ೯ ನೇ ಗುರುವಾರ

ಬೆಂಗಳೂರು "ಸೂರ್ಯೋದಯ ಪ್ರಕಾಶಿಕಾ."

ಬೆಂಗಳೂರಿನಲ್ಲಿ ಪ್ರಕಟವಾಗುತ್ತಿರುವ "ಸೂರ್ಯೋದಯ ಪ್ರಕಾಶಿಕಾ" ಎಂಬ ವಾರ ಪತ್ರಿಕೆಯ ಎಡಿಟರಿಗೆ ಮೈಸೂರು ಗವರ್ನಮೆಂಟಿನವರಿಗೂ ಈಚೆಗೆ ನಡೆದಿರುವ ಕಾಗದಪತ್ರಗಳ ವಿಚಾರವನ್ನು ಕುರಿತು ಸ್ವಲ್ಪಮಟ್ಟ

ಪ್ರಸ್ತಾಪ ಮಾಡುವುದು ಅವಶ್ಯವೆಂದು ಕಂಡುಬಂದಿದೆ. ಮೈಸೂರು ಸಂಸ್ಥಾನಕ್ಕೆ ಸೇರಿರುವ ಎರಡು ಡಿಸ್ಟ್ರಿಕ್ಟುಗಳನ್ನು ಇಂಡಿಯಾ ಗವರ್ನ್‌ಮೆಂಟಿಗೆ ಕೊಡುತ್ತಾರೆಂಬ ವಿಷಯವಾಗಿ ಕಲ್ಕತ್ತಾ ಪಟ್ಟಣದಲ್ಲಿ ವೈಸ್‌ರಾಯರವರಿಗೂ ಶ್ರೀ ಮನ್ಮಹಾರಾಜರವರಿಗೂ ಯುವರಾಜರವರಿಗೂ ಬ್ರಿಟಿಷ್ ರೆಸಿಡೆಂಟರಿಗೂ ದಿವಾನರವರಿಗೂ ಸಂಭಾಷಣೆಯೇನೋ ನಡೆಯಿತೆಂದು ಮೊದಲಿನಿಂದ ಕಡೆಯ ವರೆಗೂ ಸುಳ್ಳಾದಂಥಾ ವರ್ತಮಾನವನ್ನು ಸೂರ್ಯೋದಯವು ಪ್ರಕಟಮಾಡಿತು.

ಮೈಸೂರು ಗವರ್ನ್‌ಮೆಂಟಿನವರು ಅದು ಬೇಕೆಂದು ಕಟ್ಟಿಸಿಕೊಂಡ ಕಥೆಯಾಗಿದೆ ಎಂದು ಆಕ್ಷೇಪಣೆ ಮಾಡಿದ್ದು ಅದಕ್ಕೆ ಜವಾಬಾಗಿ ಸೂರ್ಯೋದಯದ ಎಡಿಟರು—ಈ ರೀತಿಯಾದ ವರ್ತಮಾನ ಬಹಳ ಬಲವಾಗಿ ಹರಡಿಕೊಂಡಿರುವಾಗ್ಯೂ ಗವರ್ನ್‌ಮೆಂಟಿನವರು ಅದರ ವಿಷಯವಾಗಿ ಏನು ಹೇಳುತ್ತಾರೋ ತಿಳಿದುಕೊಳ್ಳಬೇಕೆಂದು ಆ ವಿಷಯವನ್ನು ಪ್ರಕಟಿಸಿದೆವೆಂತಲೂ ಸಮಾಧಾನ ಹೇಳಿದರು.

ಇದು ಒಪ್ಪತಕ್ಕ, ಕಾರಣ ಸಹಿತವಾದ ಸಮಾಧಾನವೆಂದು ಯಾರೂ ಒಪ್ಪಲಾರರು. ಆಕ್ಕ ಆಧಾರಗಳೂ ಸಮರ್ಪಕವಾದ ರುಜುವಾತುಗಳೂ ಇಲ್ಲದಿರುವಂಥಾ ಬರೀ ವದಂತಿಗಳನ್ನು ಪ್ರಕಟಪಡಿಸುವ ಸ್ವಾತಂತ್ರ್ಯವು ಎಂಥಾ ವರ್ತಮಾನ ಪತ್ರಿಕೆಯ ಎಡಿಟರಿಗೂ ಇರುವುದಿಲ್ಲ. ಹೀಗಿರುವಲ್ಲಿ ಸೂರ್ಯೋದಯವು ನಿರಾಧಾರವಾದ ಆ ವದಂತಿಯನ್ನು ಪ್ರಕಟಪಡಿಸಿರುತ್ತದೆ. ಒಬ್ಬನು, "ಇಂಥವನು ವ್ಯಭಿಚಾರ, ಕಳ್ಳ, ಮೋಸಗಾರ" ಮುಂತಾದ ರೀತಿಯಲ್ಲಿ ಬರೆದು ಯಾವರೂ ವರ್ತಮಾನ ಪತ್ರಿಕೆಯಲ್ಲಿ ಪ್ರಕಟಿಸಿದವನು ಮಾನನಷ್ಟಕ್ಕೆ ದಾವಾ ಮಾಡಿದಾಗ 'ನೀವು ಅಂಥವರಲ್ಲವೆಂದು ನಿಮ್ಮ ಬಾಯಿಯಿಂದ ಹೇಳಿಸುವುದಕ್ಕಾಗಿ ಜನರಾಡಿಕೊಳ್ಳುತ್ತಿದ್ದ ಮಾತನ್ನು ಪ್ರಕಟಿಸಿರುತ್ತೇನೆ' ಎಂಬೀ ರೀತಿಯಾಗಿ ಎಡಿಟರು ಸಮಾಧಾನ ಹೇಳುವಷ್ಟು ಸ್ವತಂತ್ರವನ್ನು ಪಡೆದಿರುತ್ತಾರೆಯೇ? ವರ್ತಮಾನ ಪತ್ರಿಕೆಗಳಲ್ಲಿ ಪ್ರಕಟವಾಗುವ ಸುಳ್ಳು ಸುದ್ದಿಯನ್ನು ಎಡಿಟರುಗಳಿಗೆ ತೋರಿಸಿಕೊಡುವುದಾಗಲಿ ಅವನ್ನು ತಿದ್ದುವುದಾಗಲಿ ಗವರ್ನ್‌ಮೆಂಟಿನವರ ಕೆಲಸವಲ್ಲ, ಸರ್ಕಾರದ ಕಾರ್ಯವಲ್ಲ. ಜನರಾಡಿಕೊಳ್ಳುವ ವರ್ತಮಾನಗಳನ್ನು ವರ್ತಮಾನ ಪತ್ರಿಕೆಯಲ್ಲಿ ಪ್ರಕಟಿಸುವುದಕ್ಕೆ ಮೊದಲು ಅವುಗಳ ನಿಜಸ್ಥಿತಿಯನ್ನು ಚೆನ್ನಾಗಿ ವಿಚಾರಿಸಿ ತಿಳಿದುಕೊಳ್ಳುವುದು ಎಡಿಟರ ಮುಖ್ಯ ಕರ್ತವ್ಯವಾಗಿರುತ್ತದೆ.

ಇದನ್ನೆಲ್ಲಾ ಕುರಿತು ಯೋಚನೆ ಮಾಡಿದಲ್ಲಿ ಎರಡು ಸಂಗತಿಗಳು ಕಂಡುಬರುವವು. ಮೊದಲನೆಯದಾಗಿ, ವರ್ತಮಾನ ಪತ್ರಿಕೆಯಲ್ಲಿ ಪ್ರಕಟಿಸಿದ ವಿಷಯವು ಸುಳ್ಳೆಂದು ಎಡಿಟರಿಗೆ ತಿಳಿಯದೆ ಇರಬೇಕು. ಹಾಗಾದ ಪಕ್ಷಕ್ಕೆ ವರ್ತಮಾನ ಪತ್ರಿಕೆಯನ್ನು ನಡೆಸುವುದರಲ್ಲಿ ಎಡಿಟರಿಗೆ ಇರಬೇಕಾದ ವಿವೇಕವೂ ಬುದ್ಧಿಶಕ್ತಿಯೂ ಅವರಿಗೆ ಸಾಲದೆಂದು ಹೇಳಬೇಕಾಗುತ್ತದೆ. ಯಾಕಂದರೆ ವಿವೇಕಿಯೂ ಬುದ್ಧಿವಂತನೂ ಆದ ಪ್ರತಿ ಒಬ್ಬ ಮನುಷ್ಯನಿಗೂ ಅಂಥಾ ಸಂಭಾಷಣೆಯು ಎಂದಿಗೂ ನಡೆದಿರಲಾರದೆಂತಲೂ ಅದನ್ನು ಕೇಳಿದ ಕೂಡಲೇ ಎಲ್ಲಾ ಅಪದ್ಧದ ಕಂತೆಯೆಂತಲೂ ಬಹು ಬೇಗ ಗೊತ್ತಾಗುವುದು. ಅಥವಾ, ಎರಡನೆಯದಾಗಿ, ವದಂತಿಯು ಸುಳ್ಳೆಂದು ತಿಳಿದೇ ಎಡಿಟರು ಅದನ್ನು ಪ್ರಕಟಿಸಿರಬೇಕು. ಹೀಗಿದ್ದ ಪಕ್ಷದಲ್ಲಿ ಈಗಿನ ದಿವಾನರ ಕಾರುಬಾರುಗಳನ್ನೂ ಅವರ ಅಧಿಕಾರವನ್ನೂ ಅಲ್ಲಗಳೆದು ಅವರಿಗೆ ಅಪಯಶಸ್ಸು ತರಬೇಕೆಂಬ ಉದ್ದೇಶದಿಂದ ಆ ದಿವಾನರು ಇಂಡಿಯಾ ಗವರ್ನ್‌ಮೆಂಟಿನವರೊಳಗೆ ಸೇರಿಕೊಂಡು ಶ್ರೀಮನ್ಮಹಾರಾಜರವರಿಗೆ ತಿಳಿಸದೇನೂ ಅವರ ಅಪ್ಪಣೆಯನ್ನು ಪಡೆಯದೇನೂ ಮೈಸೂರು ಸಂಸ್ಥಾನದ ಎರಡು ಡಿಸ್ಟ್ರಿಕ್ಟುಗಳನ್ನು ಇಂಡಿಯಾ ಗವರ್ನ್‌ಮೆಂಟಿಗೆ ಕೊಟ್ಟುಬಿಡಬೇಕೆಂದು ಏರ್ಪಾಡು ಮಾಡಿರುತ್ತಾರೆಂಬದಾಗಿ ಪ್ರಜೆಗಳಲ್ಲಿ ದುರಭಿಪ್ರಾಯವನ್ನು ಹುಟ್ಟಿಸಿದರು.

ಮತವಿಷಯಗಳಲ್ಲಿ ಬಲಾತ್ಕಾರಮಾಡುವುದು ನಿಷ್ಪ್ರಯೋಜನವಾದುದು.

ಪ್ರತಿಯೊಬ್ಬ ಮನುಷ್ಯನು ತಾನು ಅವಲಂಬಿಸಿರುವ ಮತವೇ [illegible] ಎಂಬದಾಗಿ ತಿಳಿದಿರುತ್ತಾನೆ. ತನ್ನ ಸ್ವಂತ ಮತದಲ್ಲಿ [illegible] ವೈರಾಗ್ಯದಿಂದ ಅದನ್ನು ಎಲ್ಲರೂ [illegible] ಅವಲಂಬಿಸುವಂತೆಯೇ ಪ್ರಯತ್ನಪಡುತ್ತಾನೆ. [illegible] ಮತ ವೈರಾಗಿಗಳು ತಮ್ಮ ಮತವನ್ನು ವಿಸ್ತರಿಸುವದಕ್ಕೂ ಅನ್ಯರದನ್ನು ಅವಲಂಭಿಸುವುದಕ್ಕೂ ಹಿಂಸೆಗಳಿಂದ ಕೂಡಿದ ನಾನಾ ಪ್ರಯತ್ನಗಳನ್ನು ಮಾಡುವುದುಂಟು. ಮಹಮ್ಮದೀಯರು ಹಿಂದೂಜನರ ಮತವನ್ನು ನಾಶಪಡಿಸಿ ತಮ್ಮ ಮತವನ್ನು ಪ್ರಬಲಿಸುವದಕ್ಕೆ ಅನೇಕಾವರ್ತಿ ಅವರನ್ನು ಕ್ರೂರವಾಗಿ ಹಿಂಸಿಸಿದರೆಂತಲೂ, ಅವರ ದೇವಸ್ಥಾನಗಳನ್ನು ಕೆಡವಿ ಅವುಗಳಲ್ಲಿದ್ದ ವಿಗ್ರಹಗಳನ್ನು ನಾಶಪಡಿಸಿದರೆಂತಲೂ ಹಿಂದೂ ದೇಶದ ಚರಿತ್ರೆಯಿಂದ ಕಂಡುಬರುತ್ತದೆ. ಪಾಂಡ್ಯ ದೇಶದ ಹಿಂದೂ ರಾಜರು ಜೈನ ಮತವನ್ನು ನಾಶಪಡಿಸುವುದಕ್ಕೋಸ್ಕರ ಜೈನರಲ್ಲಿ ಅನೇಕರನ್ನು ಕೊಂದುಹಾಕಿದರು. ಯೂರೋಪ್ ದೇಶದಲ್ಲಿಯೂ ಕೂಡ ಒಂದು ಪಂಗಡದ ಕ್ರೈಸ್ತರಿಗೂ ಮತ್ತೊಂದು ಪಂಗಡದ ಕ್ರೈಸ್ತರಿಗೂ ಮತ ಕಲಹಗಳುಂಟಾಗಿ ಒಬ್ಬರನ್ನೊಬ್ಬರು ಕ್ರೂರವಾಗಿ ಹಿಂಸಿಸುತ್ತಿದ್ದರೆಂದು ಗೊತ್ತಾಗುತ್ತದೆ. ಹೀಗೆಯೇ ಭೂಲೋಕದ ಎಲ್ಲಾ ಕಡೆಗಳಲ್ಲಿಯೂ ಮತ ವೈರಾಗ್ಯದಿಂದ ನಷ್ಟಗಳುಂಟಾಗುವವು. ಯೇಸುಕ್ರಿಸ್ತನು ಎಂದಿಗಾದರೂ ಮತ ವಿಷಯಗಳಲ್ಲಿ ಬಲಾತ್ಕಾರವನ್ನು ಪ್ರಯೋಗಿಸಬಾರದೆಂದು ಅಪ್ಪಣೆ ಕೊಟ್ಟಿರುತ್ತಾನೆ. ಇದರ ವಿಷಯ ಅವನು ಒಂದು ಸಾಮ್ಯ ಹೇಳಿರುವನು—ಪರಲೋಕ ರಾಜ್ಯವು ಒಳ್ಳೇ ಬೀಜವನ್ನು ತನ್ನ ಹೊಲದಲ್ಲಿ ಬಿತ್ತಿದ್ದ ಒಬ್ಬ ಮನುಷ್ಯನಿಗೆ ಹೋಲಿಕೆಯಾಗಿದೆ. ಆದರೆ ಜನರು ನಿದ್ರೆ ಮಾಡುವ ಕಾಲದಲ್ಲಿ ಅವನ ವೈರಿಯು ಬಂದು ಗೋಧಿಯ ನಡುವೆ ಹಣಜೀ ಬಿತ್ತಿ ಹೋದನು. ಗೋಧಿಯು ಬೆಳೆದು ಫಲಕ್ಕೆ ಬಂದಾಗ ಹಣಜಿ ಸಹ ಕಾಣಬಂತು. ಆಗ ಯಜಮಾನನ ಆಳುಗಳು ಅವನ ಬಳಿಗೆ ಬಂದು—ಅಯ್ಯಾ, ನೀನು ಹೊಲದಲ್ಲಿ ಒಳ್ಳೇ ಬೀಜ ಬಿತ್ತಿದೆಯಲ್ಲಾ, ಹಣಜಿ ಎಲ್ಲಿಂದ ಬಂತು ಎಂದು ಕೇಳಲು, ಅವನು—ಇದು ಒಬ್ಬ ವೈರಿ ಮಾಡಿದ ಕೆಲಸ ಅನ್ನಲಾಗಿ ಆಳುಗಳು ಅವನನ್ನು—ಹಾಗಾದರೆ ನಾವು ಅದನ್ನು ಆರಿಸಿ ತೆಗೆಯೋಣೋ ಎಂದು ಕೇಳಲು ಅವನು—ಬೇಡ, ಹಣಜಿಯನ್ನು ಆರಿಸಿ ತೆಗೆಯುವಾಗ ಅದರ ಸಂಗಡ ಗೋಧಿಯನ್ನೂ ಕಿತ್ತೀರಿ. ಸುಗ್ಗೀ ಕಾಲದ ತನಕ ಎರಡೂ ಬೆಳೆಯಲಿ, ಸುಗ್ಗಿ ಕಾಲದಲ್ಲಿ ನಾನು ಕೊಯ್ಯುವವರಿಗೆ—ಮೊದಲು ಹಣಜಿಯನ್ನು ಆರಿಸಿ ತೆಗೆದು ಅದನ್ನು ಸುಡುವದಕ್ಕೆ ಹೊರೆ ಕಟ್ಟಿಹಾಕಿ, ಗೋಧಿಯನ್ನು ನನ್ನ ಕಣಜಕ್ಕೆ ತುಂಬಿರಿ ಎಂದು ಹೇಳುವೆನು ಅಂದನು. ಯೇಸು ಕ್ರಿಸ್ತನು ಹೇಳಿದ ಸಾಮ್ಯದ ತಾತ್ಪರ್ಯವೇನಂದರೆ ಮತವಿಷಯಗಳಲ್ಲಿ ಬಲಾತ್ಕಾರ ಮಾಡುವುದು ಒಳ್ಳೆಯದನ್ನು ಮಾಡುವುದಕ್ಕೆ ಬದಲಾಗಿ ಕೆಟ್ಟದ ಕೇಡನ್ನೇ ಮಾಡುವುದೆಂಬುವುದು. ಜನರೆಲ್ಲರೂ ಸ್ವರಕ್ಷೆಯನ್ನು ತಾಳಿ ಯೋಗ್ಯರಾಗಿ ನಡೆಯುವುದಕ್ಕೆ ಪ್ರಯತ್ನಿಸಬೇಕು. ಜಗದೀಶನೊಬ್ಬನೇ ನಮ್ಮ ಗುಣ ನಡತೆಗಳ ಪ್ರಕಾರ ನಮಗೆ ಲೋಕಾಂತ್ಯದಲ್ಲಿ ತೀರ್ಪುಕೊಡುವನು. ಮನುಷ್ಯರು ಇದನ್ನು ಬಹು ನಿಧಾನವಾಗಿ ಗ್ರಹಿಸಿಕೊಳ್ಳುತಲಿರುವರು. ಇನ್ನೂ ಕೆಲವರಿಗೆ ಇಂಥಾ ಯೋಚನೆಯೇ ಹತ್ತಿಲ್ಲ. ಭೂಮಂಡಲದ ನಾಲ್ಕು ಕಡೆಗಳಲ್ಲಿ ಕ್ರೈಸ್ತಮತವನ್ನು ಸಾರುತ್ತಿರುವ ಮಿಷನ್ ಸಂಘದವರು ಮತವಿಷಯಗಳಲ್ಲಿ ತಮ್ಮ ಗುರುವಿನ ಕಟ್ಟಳೆಗಳನ್ನನುಸರಿಸಿ ಶಾಂತರಾಗಿಯೇ ಇರುವರು.

ಸತ್ಯಮತಾವಲಂಬಿಯು ಯಾವಾಗಲೂ ಸತ್ಪ್ರವರ್ತನನಾಗಿಯೇ ಇರುವನು. ಅವನಲ್ಲಿ ಶಾಂತತ್ವ, ಪ್ರೀತಿ, ಸತ್ಯತೆ ಎಂಬೀ ಗುಣಗಳು ಪ್ರಕಾಶಿಸುತ್ತಲಿರುವವು. ನನ್ನ ಹತೇರ ಮೂಲಕವೇ ಮನುಷ್ಯನು ತನ್ನ ಮತವನ್ನು ಅನ್ಯರಿಗೆ ತೋರಿಸಬೇಕು. ಯಾರಾದರೂ ಸರಿ ದೀರ್ಘಾಲೋಚನೆ ಇಲ್ಲದೆ ಯಾರ ಮತವನ್ನಾದರೂ ಅವಲಂಭಿಸಬಾರದು. ಎಲ್ಲವನ್ನೂ ಪರಿಶೋಧಿಸಿ ಒಳ್ಳೆಯದನ್ನೇ ಬಿಗಿಯಾಗಿ ಹಿಡಿದುಕೊಳ್ಳಿರಿ ಎಂಬದಾಗಿ ಸತ್ಯವೇದವು ತಿಳಿಸುತ್ತದೆ. ಪವಿತ್ರಾತ್ಮನ ಪ್ರೇರಣೆಯಿಂದಲೇ ಕ್ರಿಸ್ತನ ಮಾರ್ಗವನ್ನನುಸರಿಸುವದಕ್ಕೆ ಆಗುವದು. ಕ್ರಿಸ್ತನ ಕಟ್ಟಳೆಗಳನ್ನು ಕೈಕೊಂಡರೆ ಮತವಿಷಯಗಳಲ್ಲಿ ಯಾವ ವಿಧವಾದ ಬಲಾತ್ಕಾರಗಳನ್ನು ಉಪಯೋಗಿಸತಕ್ಕ ಕಾರಣಗಳಿಲ್ಲ. ದೇವರಾತ್ಮನ ಪ್ರೇರಣೆಯಿಂದ ಮಾತಾಡುವ ಯಾವ ಮನುಷ್ಯನಾದರೂ ಯೇಸುವನ್ನು ಶಾಪಗ್ರಸ್ತನೆಂದು ಹೇಳುವದಿಲ್ಲ. ಮತ್ತು ಪವಿತ್ರಾತ್ಮನ ಪ್ರೇರಣೆಯಿಂದಲೇ ಹೊರತು ಯಾವ ಮನುಷ್ಯನಾದರೂ ಯೇಸುವನ್ನು ಕರ್ತನೆಂದು ಹೇಳಲಾರನು ಎಂಬದಾಗಿ ಸತ್ಯವೇದ ಗ್ರಂಥವು ತಿಳಿಸುತ್ತದೆ.

ಒಳದೇಶದ ವೃತ್ತಾಂತಗಳು.

ಮ॥ ಉಪೇಂದ್ರಲಾಲ್ ಮಜುಂದಾರ್ ಯವರು ಕಲ್ಕತ್ತೆಯಿಂದ ಮೊನ್ನೆ ಶನಿವಾರ ಬೆಂಗಳೂರಿಗೆ ಬಂದು, ಸೋಮವಾರ ಮೈಸೂರು ಸಂಸ್ಥಾನದ ಕಂಟ್ರೋಲರ್ ಕೆಲಸದ ಛಾರ್ಜನ್ನು ವಹಿಸಿಕೊಂಡಿರುತ್ತಾರೆ.

***

ಈಗ ಎರಡು ವಾರಗಳಿಂದಲೂ ರಾಜಧಾನಿಯಲ್ಲಿ ಮಳೆಯಾಗದೆ ಬಿಸಿಲಿನ ತಾಪವು ಸಹಿಸಕೂಡದಂತಾಗಿದೆ. ರೋಗಾದಿಗಳ ಯೋಚನೆ ಯೇನೂ ಇಲ್ಲ. ಧಾರಣೆವಾಸಿಗಳು ಇನ್ನೂ ಬಹಳ ಹೆಚ್ಚಾಗಿಯೇ ಇರುವವು.

***

ಮೈಸೂರು ಸಂಸ್ಥಾನದಲ್ಲಿ ಬಹುಕಾಲ ಸ್ಯಾನಿಟರಿ ಇಂಜನಿಯರಾಗಿದ್ದು ಪೆನ್ಷನ್ ಪಡೆದುಕೊಂಡಿರುವ ಮಿ॥ ಸ್ಟಾಂಡಿಷ್ ಲೀ ಯವರು ಬೆಂಗಳೂರಿನ ಮಿಸ್ ಮಲ್ಲಿನ್‌ಸ್ ಎಂಬಾಕೆಯನ್ನು ಜೂನ್‌ನಲ್ಲಿ ಮದುವೆಮಾಡಿಕೊಳ್ಳುವವರಾಗಿದ್ದಾರೆಂದು ಕೂನೂರಿನ ಬಾತ್ಮಿದಾರರು ಬರೆಯುತ್ತಾರೆ.

***

ಸಕಲೇಶಪುರದ ಬಳಿ ಕಾರ್ಖಾನೆ ತೋಟದ ಮಿ॥ ಎ. ಮಿಡ್ಲ್‌ಟನ್ ಯವರಿಗೆ [illegible] ಬಿದ್ದು ಅವರ [illegible] ಡಾಕ್ಟರ್ [illegible] ಬೆಂಗಳೂರಿಂದ [illegible], ಅವರನ್ನು ವಿಕ್ಟೋರಿಯಾ ಆಸ್ಪತ್ರೆಗೆ ಕರೆದುತಂದು, [illegible]

ಶ್ರೀ ಶೃಂಗೇರಿ ಸ್ವಾಮಿಗಳು ತುಂಕೂರಿಗೆ ಹೋಗಿದ್ದಾಗ್ಗೆ ಅವರ ದರ್ಶನಕ್ಕಾಗಿ ಸುತ್ತುಮುತ್ತಿನಿಂದ ಅಲ್ಲಿಗೆ ಹೋಗಿದ್ದ ೩—೪ ಸಾವಿರ ವೈಶ್ಯ ಜನರಿಗೆ ಅಲ್ಲಿನ ಮ॥ ಕೋದಂಡರಾಮ ಸೆಟ್ರು ಇವರ ತಮ್ಮಂದಿರೂ ಸೇರಿ ಸ್ಥಳ ಮುಂತಾದ್ದು ಬಿಡಗಿಸಿಕೊಟ್ಟು ಉಪಚಾರಮಾಡಿದರೆಂದು ಒಬ್ಬ ಬಾತ್ಮಿದಾರರು ಬರೆಯುತ್ತಾರೆ.

***

ಬೆಂಗಳೂರು ಪಟ್ಟಣದಲ್ಲಿ ದೊಡ್ಡ ಸಾಹುಕಾರರೆನಿಸಿಕೊಂಡ ರಾಜಾ ವೆಂಕಟ ಸುಬ್ಬೈಯ್ಯ ಶೆಟ್ಟರು ಕಳುವಿನ ಮಾಲನ್ನು ತೆಗೆದುಕೊಂಡರೆಂದು ಅವರ ಮೇಲೆ ಮೊಕದ್ದಮೆ ಆಗಿದೆ. ಸಿಟಿ ಮ್ಯಾಜಿಸ್ಟ್ರೇಟರು ಅವರನ್ನು ಜಾಮೀನಿನ ಮೇಲೆ ಬಿಡದೆ ಸೆಂಟ್ರಲ್ ಜೈಲಿನಲ್ಲಿ ಇಡಿಸಿ ದರ್ಯಾಫ್ತು ಮಾಡುತ್ತಿದ್ದಾರೆಂದು ಪ್ರಕಟವಾಗಿದೆ.

***

ಒಬ್ಬ ಬಾತ್ಮಿದಾರರಿಂದ —ಕಡೂರು ತಾಲ್ಲೋಕಿಗೆ ಸೇರಿದ ಬಕ್ಕಂಗಳ ಗ್ರಾಮದಲ್ಲಿ ತಾ ೨೭ನೇ ಶನಿವಾರ ದನಗಳನ್ನು ಮೇಯಿಸುವುದಕ್ಕಾಗಿ ಅಟ್ಟಿಕೊಂಡು ಹೋಗಿದ್ದ ಚನ್ನಬೊಮ್ಮಣ್ಣನ ಮಗ ನಂಜಪ್ಪನೆಂಬ ಹುಡುಗನನ್ನು ಯಾರೋ ಕೊಂದು ಎಮ್ಮೆದೊಡ್ಡಿ ಜಂಗಲಿಗೆ ಸೇರಿದ ಜರಗಿನ ಗುಡ್ಡದ ಒಂದು ತಡಕಲ ಮಧ್ಯೆ ನೇಣು ಹಾಕಿ ಇದ್ದರು.

***

ಚಿತ್ರದುರ್ಗದಲ್ಲಿ ಕಳೆದ ವಾರ ರತ್ನಾವಳಿ ಕಂಪನಿಯವರು ಕಡೇ ನಾಟಕವನ್ನು ಆಡಿದಾಗ್ಗೆ ಆ ಕಂಪನಿಯ ಮುಖಂಡರಾದ ಮ॥ ವರದಾಚಾರ್‍ರಿಗೆ ಪಬ್ಲಿಕ್ ಪರವಾಗಿ ಡೆಪ್ಟಿ ಕಮಿಷನರ್ ಮ॥ ಚೆಂಗೈಯ್ಯಾಚೆಟ್ಟಿಯವರು ಒಂದು ಬಂಗಾರದ ಮೆಡಲನ್ನೂ ಮ॥ ಸೋಂ ವೀರಭದ್ರಾಚಾರ್‍ರು ಒಂದು ಬಂಗಾರದ ಮೆಡಲನ್ನೂ, ಕಳಲಿ ಮಾಡಿದವರಿಗೆ ಒಂದು ಮೆಡಲನ್ನೂ ಕೊಟ್ಟರೆಂದು ಒಬ್ಬ ಬಾತ್ಮಿದಾರರು ತಿಳಿಸಿದಾರೆ.

***

ಮದರಾಸ್ ಪಟ್ಟಣದಲ್ಲಿ ಒಂದು ಬ್ಯಾಂಕಿನ ಗುಮಾಸ್ತೆಯಾದ ಗೋಪಾಲಾಚಾರ್‍ರ ಮನೆಯಲ್ಲಿ ಮೈಸೂರಿಂದ ಹೋಗಿದ್ದ ಶೇಷಗಿರಿರಾಯನೆಂಬ ಸಂಗೀತಗಾರನು ಹೋಗಿ ಅವರ ಹೆಂಡತಿಗೆ ವೀಣೆ ಹೇಳಿಕೊಡುತ್ತಿದ್ದು, ಆ ಹುಡುಗಿಯನ್ನು ಬೆಂಗಳೂರಿಗೆ ಕರೆದು ತಂದು ತನ್ನ ಅಕ್ಕ ಸುಬ್ಬಮ್ಮನ ಮನೆಯಲ್ಲಿಟ್ಟುಕೊಂಡಿದ್ದನು. ಮದರಾಸ್ ಪೋಲೀಸಿನವರು ಪತ್ತೆಮಾಡಿ ಅವರಿಬ್ಬರನ್ನೂ ಮದರಾಸಿಗೆ ಹಿಡಿದುಕೊಂಡು ಹೋಗಿದಾರೆ.

***

ಹಿಂದಿನ ಮಂಗಳವಾರ ಮಧ್ಯಾಹ್ನ ೨॥ ಗಂಟೆ ಹೊತ್ತಿನಲ್ಲಿ ಬೆಂಗಳೂರು ಲಾಲ್ ಬಾಗ್ ರಸ್ತೆಯಲ್ಲಿ ಒಂದು ತೋಪಿನಲ್ಲಿ ಸಿಡಿಲು ಬಿದ್ದು ಕೊರಚರ ಒಬ್ಬ ಹೆಂಗಸೂ ಒಬ್ಬ ಹುಡುಗಿಯೂ ಜ್ಞಾನತಪ್ಪಿ ಬಿದ್ದರು. ನೋಡಿದಾಗ ಹುಡುಗಿಯು ಮೈಯೆಲ್ಲಾ ಸುಟ್ಟು ಸತ್ತಿದ್ದಳು. ಆ ಹೆಂಗಸಿಗೆ ಜ್ಞಾನವಿರಲಿಲ್ಲ. ಅವಳನ್ನು ವಿಕ್ಟೋರಿಯಾ ಆಸ್ಪತ್ರೆಗೆ ಸಾಗಿಸಿ ಚಿಕಿತ್ಸೆ ಮಾಡುತ್ತಿದಾರೆ. ದಾರಿಯಲ್ಲಿ ಒಂದು ದೇವಾಲಯದ ಮೇಲಿದ್ದ ಮರದ ಕಿಲುಬೆಯು ಮುರಿದು ಬಿದ್ದುಹೋಯಿತು.

***

ಕಳೆದ ಭಾನುವಾರ ಬೆಳಿಗ್ಗೆ ರೆವಿನ್ಯೂ ಕಮಿಷನರೂ ಚೀಫ್ ಇಂಜನಿಯರೂ ಡಾಕ್ಟರ್ ಲೆವೆನ್ ಯವರೇ ಮುಂತಾದವರೂ ರಾಜಧಾನಿಗೆ ಬಂದರು. ನವರಾತ್ರಿಯಲ್ಲಿ ಇಲ್ಲಿ ನಡೆಯಬೇಕಾಗಿರುವ ಪ್ರದರ್ಶನದ ಏರ್ಪಾಡನ್ನು ಯೋಚಿಸುತ್ತಿದಾರೆ. ಈ ಪ್ರದರ್ಶನಕ್ಕೆ ಪ್ರತ್ಯೇಕವಾದ ಹೊಸ ಕಟ್ಟಡವನ್ನು ಕಟ್ಟುವವರಾಗಿಲ್ಲ. ಕುಕ್ಕರಹಳ್ಳಿ ಕೆರೆಯ ಕೆಳಗೆ ಕಟ್ಟಿರುವ ರಿಜರ್ವ್ ಪೋಲೀಸ್ ಲೈನ್ ಎಂಬ ಕಟ್ಟಡದಲ್ಲೇ ಪ್ರದರ್ಶನವನ್ನು ನಡಿಸಬೇಕೆಂದು ಯೋಚಿಸಿರುತ್ತಾರೆ.

***

ದಕ್ಷಿಣ ಕನಡಾ ಜಿಲ್ಲಾ ಉಪ್ಪಿನಂಗಡಿ ತಾಲ್ಲೋಕು ವಳಾಲು ಗ್ರಾಮಕ್ಕೆ ಸೇರಿದ ಬೆದ್ರೊಡಿ ಗ್ರಾಮದಲ್ಲಿ ಹಜಾಮರ ಅಪ್ಪಣ್ಣನೆಂಬವನು ತನ್ನ ಹೆಂಡತಿಯನ್ನು ಹೊಡೆದು ಕೊಂದು ತಾನೂ, ತನ್ನ ಜೀತದಾಳೂ ಸೇರಿ ಹೆಣವನ್ನು ಒಂದು ಹಳ್ಳಕ್ಕೆ ಹಾಕಿ ಬಂದು, ಮರುದಿನ ಏನೂ ಕಾಣದವನಂತೆ ತನ್ನ ಹೆಂಡತಿಯನ್ನು ಊರೆಲ್ಲಾ ಹುಡುಕಿದನೆಂತಲೂ, ಹೆಣ ಪತ್ತೆ ಆಗಿ ಡಾಕ್ಟರ ಪರೀಕ್ಷೆಯಲ್ಲೂ ಆ ಜೀತಗಾರನ ಕೈಫಿಯತ್ತಿನಿಂದಲೂ ಅವನು ಅವಳನ್ನು ಕೊಂದದ್ದು ಪತ್ತೆ ಆಯಿತೆಂತಲೂ, ಈಗ ಸರ್ಕಾರದವರು ಅವನನ್ನು ಹಿಡಿದು ತನಿಖೆಮಾಡುತ್ತಿದಾರೆಂತಲೂ ಒಬ್ಬ ಬಾತ್ಮಿದಾರರು ಬರೆಯುತ್ತಾರೆ.

***

ಕಳೆದ ಶನಿವಾರ ಬೆಳಿಗ್ಗೆ ಬರೋಡಾ ಸಂಸ್ಥಾನದ ಮಹಾರಾಜರವರೂ ಮಹಾರಾಣಿಯವರೂ ಬೆಂಗಳೂರಿಗೆ ದಯಮಾಡಿದರು. ದಿವಾನರೇ ಮೊದಲಾದವರು ಸ್ಟೇಷನ್ನಲ್ಲಿ ಕಾದಿದ್ದು ಮರ್ಯಾದೆಗಳೊಡನೆ ಎದುರುಗೊಂಡು, ಅರಮನೆಯಲ್ಲಿ ಇಳಿಸಿದರು. ಗೌರವಾರ್ಥವಾದ ೨೧ ತೋಪುಗಳು ಹಾರಿಸಲ್ಪಟ್ಟವು. ಆ ದಿನ ಮಧ್ಯಾಹ್ನ ರಾಜದಂಪತಿಗಳು ವಿಕ್ಟೋರಿಯಾ ಆಸ್ಪತ್ರೆಯನ್ನು ನೋಡಿ ಬಂದರು. ಮಹಾರಾಣಿಯವರು ಹೆಂಗಸರ ಆಸ್ಪತ್ರೆಯನ್ನು ಹೋಗಿ ನೋಡಿಕೊಂಡು ಬಂದರು. ಸ್ಯಾಂಕಿ ಕೆರೆಯ ಕೆಳಗೆ ಮಿ॥ ಬಾಲ್ ಯವರು ಮಾಡಿರುವ ಫಲಗಳ ತೋಟವನ್ನು ಮಹಾರಾಣಿಯವರು ಮಾತ್ರ ಹೋಗಿ ನೋಡಿಕೊಂಡು ಬಂದರು. ಮಹಾರಾಜರವರಿಗೆ ಅಸ್ವಸ್ಥವಾಗಿದ್ದದರಿಂದ ಅರಮನೆಯಲ್ಲೇ ಇದ್ದು, ಭಾನುವಾರ ಮಹಾರಾಣಿಯವರ ಸಹಿತವಾಗಿ ಹೊರಟು ಬೆಂಗಳೂರು ಪಟ್ಟಣವನ್ನೂ ಬಡಾವಣೆಗಳನ್ನೂ ನೋಡಿ ಬಂದು, ಆ ರಾತ್ರಿ ರೈಲು ಹತ್ತಿ ಮದ್ರಾಸಿಗೆ ಬಂದು, ಶಿವಸಮುದ್ರದಲ್ಲಿ ವಿದ್ಯುಚ್ಛಕ್ತಿಯ ಕಾರ್ಖಾನೆಯನ್ನು ನೋಡಿಕೊಂಡು, ಸೋಮವಾರ ಸಾಯಂಕಾಲ ಬೆಂಗಳೂರು ಬಿಟ್ಟರು. ಮಂಗಳವಾರ ಕೋಲಾರ್ ಚಿನ್ನದ ಗಣಿಗಳನ್ನೂ ಬೇತಮಂಗಲದ ಕೆರೆಯನ್ನೂ ನೋಡಿಕೊಂಡು ವಾಪಸು ಬಂದು, ಆ ದಿನ ರಾತ್ರಿ ರೈಲುಹತ್ತಿ ನೀಲಗಿರಿಗೆ ಪ್ರಯಾಣ ಮಾಡಿ ಹೊರಟಿದಾರೆ.

ಹಣ್ಣು ಹಂಪಲ ವ್ಯವಸಾಯವು.

ಮೆ॥ ಪಾಲ್ ಎಂಬ ಒಬ್ಬ ಆಸ್ಟ್ರೇಲಿಯಾ ಖಂಡದ ದೊಡ್ಡ ಮನುಷ್ಯರು ಈಗ ಸ್ವಲ್ಪಕಾಲದಿಂದ ಬೆಂಗಳೂರಿನಲ್ಲಿದ್ದುಕೊಂಡು ಹಣ್ಣುಹಂಪಲುಗಳ ವ್ಯವಸಾಯದಲ್ಲಿ ಉಪಯುಕ್ತರಾಗಿದ್ದಾರೆ ಇವರು ಸ್ಯಾಂಕಿ ರಿಜರ್ವಾಯರ್ ಎಂಬ ಕೆರೆಯ ಎದುರಿಗೆ ೧೪ ಎಕರೆ ಜಮೀನನ್ನು ಪಡೆದು, ಅದರಲ್ಲಿ ೧೪ ಸಾವಿರ ದ್ರಾಕ್ಷಿ ಹಂಬುಗಳನ್ನೂ ಸುಮಾರು ೪೦೦ ತರಹಾ ಹಣ್ಣು ಗಿಡಗಳನ್ನೂ ಕಟ್ಟಿಸಿದ್ದಾರೆ ಈ ಪೈಕಿ ಸೇಬು, ಪೇರಹಣ್ಣು, ಪಿಚ್ಛೇಸು, ಆಲೂಹಣ್ಣು, ಬಿಲ್ವರು ಹಣ್ಣು, ಇವುಗಳು ವಿಶೇಷವಾಗಿವೆ ಇಲ್ಲಿ ಬೆಳೆಯುವ ಕಿತ್ತಳೆ ಹಣ್ಣು ಬಹಳ ಗಾತ್ರವಾಗಿಯೂ ಬೀಜ ಇಲ್ಲದೆಯೂ ಆಗುವ ಜಾತಿಯದೆಂದು ತಿಳಿಯಬರುತ್ತದೆ ಒಂದೊಂದು ಜಾತಿಯ ಹಣ್ಣಿನಲ್ಲಿಯೂ ಅನೇಕ ರಬಂ ಗಿಡಗಳನ್ನು ಹಾಕಿರುತ್ತಾರೆ ಇವರು ದೇಶಾಂತರದಿಂದ ಬೀಜಗಳನ್ನೂ ಸಸಿಗಳನ್ನೂ ತರಿಸಿರುತ್ತಾರೆ. ಪ್ರತಿ ವರುಷವೂ ಇಂಡಿಯಾ ದೇಶಕ್ಕೆ ಅನ್ಯದೇಶಗಳಿಂದ ಸಾವಿರಾರು ಟನ್ನುಗಳು ದ್ವೀಪದ್ರಾಕ್ಷಿಯು ಬರುತ್ತದೆ. ಇಲ್ಲಿಯೇ ಹೇರಳವಾಗಿ ದ್ರಾಕ್ಷಿಯನ್ನು ಬೆಳದು, ಹಣ್ಣನ್ನೆಲ್ಲಾ ದ್ವೀಪದ್ರಾಕ್ಷಿಯಾಗಿ ತಯಾರುಮಾಡಿದ್ದೇ ಆದರೆ ಪ್ರಕೃತ ಈ ಪದಾರ್ಥವು ದೇಶಾಂತರಗಳಿಂದ ವಿಶೇಷವಾಗಿ ಬರುತ್ತಿರುವುದು ಕೊಂಚ ಕಡಿಮೆಯಾಗುವುದೆಂದು ಮೆ॥ ಪಾಲ್ ಯವರು ಅಭಿಪ್ರಾಯಪಡುತ್ತಾರೆ ಮತ್ತು ಇದೇ ರೀತಿಯಲ್ಲಿ ಇತರ ಜಾತಿಯ ಹಣ್ಣುಗಳನ್ನು ಒಣಗಿಸಿ ಅಥವಾ ಶೇಖರಿಸಿ ಇಟ್ಟದ್ದು ಅನ್ಯದೇಶಗಳಿಗೆ ಇಲ್ಲಿಂದ ರಫ್ತು ಮಾಡಿ ಭಾರೀ ವ್ಯಾಪಾರವನ್ನು ನಡಿಸಬೇಕೆಂದು ಇದ್ದಾರೆ ಆಸ್ಟ್ರೇಲಿಯಾದಲ್ಲಿ ಒಬ್ಬ ಕೆಲಸಗಾರನಿಗೆ ದಿನ ೧ ಕ್ಕೆ ೫ ರೂಪಾಯಿ ಕೂಲಿ ಕೊಡಬೇಕು ನಮ್ಮ ಸಂಸ್ಥಾನದಲ್ಲಾದರೋ ೫ ಆಣೆ ವರೆಗೆ ಒಬ್ಬ ಕೆಲಸದವನು ದೊರೆಯುತ್ತಾನೆ ಮತ್ತು ಈ ಸೀಮೆಯಲ್ಲಿ ಜಮೀನು ಕೊಡಬೇಕಾದ ಕಂದಾಯವೂ ಅಲ್ಲಿಗಿಂತಲೂ ಬಹಳ ಸುಲಭವಾಗಿದೆ ಇಲ್ಲಿನ ಹವಾ ಹಿತಕರವಾದದ್ದು, ಭೂಮಿಯೂ ಒಳ್ಳೆಯದು ಇಷ್ಟೆಲ್ಲಾ ಅನುಕೂಲ್ಯಗಳಿದ್ದಾಗ್ಯೂ ಇಲ್ಲಿನವರು ಹಣ್ಣುಹಂಪಲುಗಳನ್ನು ಬೆಳೆದು, ಅನ್ಯದೇಶೀಯರಿಗೆ ಲಾಭಕ್ಕೆ ಮಾರಿ ವ್ಯಾಪಾರನಡಿಸುವುದರಲ್ಲಿ ಆಸಕ್ತರಾಗದೆ ಇರುವುದು ಆಶ್ಚರ್ಯಕರವಾಗಿದೆಯೆಂದು ಮೆ॥ ಪಾಲ್ ಯವರು ಅಭಿಪ್ರಾಯಪಡುತ್ತಾರೆ.

ಇವರು ತೋಟದ ಸುತ್ತಲೂ ಬಹಳ ಉದ್ದವಾದ ಮುಳ್ಳಿನ ಕಂಬಗಳನ್ನು ನಾಟಿ ಅವುಗಳಿಗೆ ತಂತಿಯ ಜಾಲಿಯನ್ನು ಬಿಗಿದು, ಬೇಲಿಯನ್ನು ಕಟ್ಟಿಸಿರುತ್ತಾರೆ ಈ ತೋಟಕ್ಕೆ ಸ್ಯಾಂಕಿ ರಿಜರ್ವಾಯರಿನಿಂದ ಬರುವ ಜೋಪು ನೀರನ್ನು ಕಬ್ಬಿಣದ ಕೊಳಾಯಿಗಳ ಮೂಲಕ ಸಾಗಿಸಿಕೊಂಡು ಹೋಗಿ ಉಪಯೋಗಿಸುತ್ತಾರೆ ಸಸಿಗಳಿಗೆಲ್ಲ ೨—೩ ವಾರಗಳಿಗೊಂದಾವರ್ತಿ ಮಾತ್ರ ನೀರು ಕಟ್ಟುತ್ತಾರೆ. ಹಣ್ಣುಗಿಡಗಳಿಗೆ ಜಾಸ್ತಿಯಾಗಿ ನೀರು ಕಟ್ಟುವುದರಿಂದ ಹಣ್ಣಿನಲ್ಲಿ ಹುಳಿಯು ಉತ್ಪತ್ತಿಯಾಗುವುದೆಂತಲೂ ಆದ್ದರಿಂದಲೇ ಸಾಧಾರಣವಾಗಿ ಇತರ ಕಡೆ ಬೆಳೆಯುವ ದ್ರಾಕ್ಷಿ ಹಣ್ಣುಗಳು ಹುಳಿಯಾಗಿರುವವೆಂತಲೂ ತಿಳಿಸುತ್ತಾರೆ. ತೋಟವು ಬಹಳ ವಿಸ್ತಾರವಾಗಿದ್ದರೂ ಅದನ್ನು ತುಂಬಾ ಪಾಕಾಗಿ ಇಟ್ಟಿರುತ್ತಾರೆ ಇದು ಒಂದು ಮಾದರಿ ತೋಟವಾಗಿರುವುದು ಇದರಿಂದ ಇತರ ತೋಟಗಾರರಿಗೂ ಸ್ಪರ್ಧೆಯುಂಟಾಗಿ ಇದರಂತೆಯೇ ತಮ್ಮ ತಮ್ಮ ತೋಟಗಳನ್ನು ವೃದ್ಧಿಪಡಿಸಿಕೊಳ್ಳುವರೆಂದು ನಂಬಿದೆ. ಇವರು ಆಸ್ಟ್ರೇಲಿಯಾ ಸೀಮೆಯಿಂದ ಕೆಲವು ವ್ಯವಸಾಯಕ ಸಾಮಗ್ರಿಗಳನ್ನು ತರಿಸಿ ತಮ್ಮ ತೋಟದಲ್ಲಿ ಉಪಯೋಗಿಸುತ್ತಲಿದ್ದಾರೆ ಇವರ ಪ್ರಯತ್ನಗಳೆಲ್ಲ ಕೈಗೂಡಬೇಕು ಮತ್ತು ಇವರ ಪ್ರಯತ್ನಗಳನ್ನು ನಮ್ಮ ದೇಶದ ರೈತರೂ ಹಣ್ಣಿನ ವ್ಯವಸಾಯದಲ್ಲಿ ಇಷ್ಟವುಳ್ಳ ಅನುಕೂಲಸ್ಥರಾದ ವಿದ್ಯಾವಂತರೂ ಅನುವರ್ತಿಸಿ ಸಿದ್ಧಿಯನ್ನು ಪಡೆಯುವರೆಂದು ನಂಬುತ್ತೇವೆ ಸ ಗ

ರಾಜಧಾನಿಯ ಮ್ಯುನಿಸಿಪಲ್ ಮೀಟಿಂಗು.

ಹಿಂದಿನ ಶನಿವಾರ ಬೆಳಿಗ್ಗೆ ಮೈಸೂರು ಮ್ಯುನಿಸಿಪಲ್ ಕೌನ್ಸಲರುಗಳು ಟೌನ್ ಹಾಲ್ ಬಂಗಲೆಯಲ್ಲಿ ಸಭೆ ಸೇರಿ ತಿಂಗಳು ಕಟ್ಲೆ ಮೀಟಿಂಗ್ ನಡಿಸಿದರು ಮಾರ್ಚಿ ತಿಂಗಳ ಮ್ಯುನಿಸಿಪಲ್ ಜಮಾ ಖರ್ಚು ಮುಂತಾದ ಲೆಕ್ಕಗಳು ಓದಲ್ಪಟ್ಟವು. ಆ ತಿಂಗಳಲ್ಲಿ ಮ್ಯುನಿಸಿಪಾಲಿಟಿಗೆ ರೂ ೧೧,೪೦೧—೬—೯ ಪೈ ಜಮಾ ಆಯಿತು, ರೂ. ೮,೧೬೩—೧೧—೧೧ ಪೈ ಖರ್ಚಾಯಿತು. ಜನನ ೧೦೨, ಮರಣ—ಪ್ಲೇಗ್ ೫೨, ವಾಂತಿಭೇದಿ ೨೯, ಜ್ವರ ೧೭, ಇತರ ಕಾರಣಗಳು ೨೦೪, ಜುಮ್ಲಾ ೩೦೨ ತರುವಾಯ ಮೆಂಬರುಗಳು ಚರ್ಚಿಸಿ ತೀರ್ಮಾನಿಸಿದ ವಿಷಯಗಳಲ್ಲಿ ಮುಖ್ಯವಾದವುಗಳ್ಯಾವವೆಂದರೆ—

ಡೆಪ್ಯುಟಿ ಕಮೀಷನರ್ ರಾಮಸ್ವಾಮಯ್ಯನವರು ಪ್ರಿನ್ಸ್ ಆಫ್ ವೇಲ್ಸ್ ರವರ ಭೇಟಿ ಕಾಲದಲ್ಲಿ ಮ್ಯುನಿಸಿಪಲ್ ಚಪ್ಪರವನ್ನು ಕಟ್ಟಿದ್ದಕ್ಕೆ ತಮಗೆ ೨,೦೦೦ ಚಿಲ್ಲರೆ ರೂಪಾಯಿ ಬರಬೇಕೆಂದು ಕೇಳಿದ್ದರು. ಕೌನ್ಸಿಲ್ ಮೆಂಬರುಗಳು— ಈ ಚಪ್ಪರಕ್ಕೆ ೧,೨೦೦ ರೂಪಾಯಿ ಕೊಡತಕ್ಕದ್ದೆಂದು ಮೊದಲೇ ತೀರ್ಮಾನಿಸಿರುತ್ತೇವಾದ್ದರಿಂದ ಈ ವಿಚಾರವನ್ನು ಮತ್ತೆ ಚರ್ಚಿಸಬೇಕಾದದ್ದಿಲ್ಲವೆಂದು ಹೇಳಿದರು.

ರಾಜಧಾನಿಯಲ್ಲಿ ಮನೆಗಳನ್ನು ಶುದ್ಧಿ (ಡಿಸ್‌ಇನ್‌ಫೆಕ್ಟ್) ಮಾಡುವುದಕ್ಕೆ ಮೂರು ತಿಂಗಳ ತನಕ ತಿಂಗಳಿಗೆ ೧೬೬ ಚಿಲ್ಲರೆ ರೂಪಾಯಿ ಶಿಬ್ಬಂದಿಯನ್ನು ಸರ್ಕಾರದವರು ನೇಮಿಸಿ, ಅದರಲ್ಲಿ ಅರ್ಧ ಭಾಗದ ಖರ್ಚನ್ನು ಮ್ಯುನಿಸಿಪಾಲಿಟಿಯಿಂದ ಕೊಡಬೇಕೆಂದು ಕೇಳಿದ್ದರು. ಕೌನ್ಸಲರುಗಳು ಆ ರೀತಿ ಕೊಡಲು ಒಪ್ಪಿಕೊಂಡಿದ್ದಾರೆ

ಇನ್ನು ಮುಂದೆ ಮ್ಯುನಿಸಿಪಲ್ ಪ್ರೆಸಿಡೆಂಟರು ಪ್ರಜೆಗಳಿಗೆ ಮನೆ ಕಟ್ಟಿಕೊಳ್ಳುವುದಕ್ಕೆ ಲೇಸ್ ಆಗಲಿ, ಖಾಲಿ ನಿವೇಶನವಾಗಲಿ ಕೊಡುವುದಕ್ಕಿಂತ ಮುಂಚೆ ಟ್ರಸ್ಟ್ ಬೋರ್ಡಿನ ಛೇರ್ಮನ್‌ರವರಲ್ಲಿ ಕಲೆತು ಆ ವಿಷಯವಾಗಿ ಆಲೋಚನೆ ಮಾಡಬೇಕಾಗಿದೆ ಎಂದು ಗವರ್ನಮೆಂಟಿನವರು ತಿಳಿಸಿದ್ದದ್ದನ್ನು ಕೌನ್ಸಲರುಗಳು ಓದಿ ರಿಕಾರ್ಡು ಮಾಡಿಕೊಂಡರು.

ಮ್ಯುನಿಸಿಪಲ್ ಕೌನ್ಸಲರುಗಳು ಹಿಂದೆಯೇ ಚಾಮರಾಜಪೇಟೆಯಲ್ಲಿ ಕೆಲವು ಜನಗಳಿಗೆ ಅವರ ಮನೆಗಳ ಪಕ್ಕದಲ್ಲಿರುವ ಖಾಲೀ ನಿವೇಶನಗಳನ್ನು ಅವರವರಿಗೇ ಬಿಕರಿ ಮಾಡಿದ್ದರು ಟ್ರಸ್ಟ್ ಬೋರ್ಡಿನವರು ಆ ಸ್ಥಳಗಳನ್ನು ಗೊತ್ತುಮಾಡಿ ಹಾಗೆ ಕೊಡೋಣದರಿಂದ ಉಂಟಾಗುವ ಅನುಕೂಲಗಳನ್ನು ಸೂಚಿಸಿ ತಿಳಿಸಿದರು ಮ್ಯುನಿಸಿಪಲ್ ಕೌನ್ಸಲರುಗಳು ಅದರಂತೆ ಒಪ್ಪಿ ಆ ನಿವೇಶನಗಳನ್ನು ವಾಪಸ್ ಪಡೆಯಬೇಕೆಂದು ತೀರ್ಮಾನಿಸಿರುತ್ತಾರೆ

ಟ್ರಸ್ಟ್ ಬೋರ್ಡಿನವರ ಸ್ವಾಧೀನದಲ್ಲಿ ಇಲ್ಲದೇ ಇರುವಂಥಾ ಇತರ ಮೊಹಲ್ಲೆಗಳಲ್ಲೆಲ್ಲಾ ಅನಾರೋಗ್ಯಕರವಾಗಿಯೂ ಕೊಳಕಾಗಿಯೂ ಜನಸಂದಣಿಯಾಗಿಯೂ ಇರುವಂಥಾ ಭಾಗಗಳನ್ನು ಕೂಡಲೇ ಗೊತ್ತುಮಾಡಿ ಅಂಥಾ ಭಾಗಗಳಲ್ಲಿರುವ ಮನೆ ಮಠಗಳನ್ನು ಕೆಡವಿ ಹಾಳು ಬಿಡುವುದಕ್ಕೆ ಅಂದಾಜು ಪಟ್ಟಿಗಳನ್ನು ತಯಾರ್ಮಾಡಿಸಿ ಕಳುಹಿಸಬೇಕೆಂದು ಗವರ್ನಮೆಂಟಿನವರು ಹುಕುಂ ಕೊಟ್ಟಿರುತ್ತಾರೆ. ಕೌನ್ಸಲರುಗಳು ಇದನ್ನು ಓದಿ ರಿಕಾರ್ಡು ಮಾಡಿಕೊಂಡರು

ರಾಜಧಾನಿಗೆ ಸರಬರಾಯಿ ಆಗುತ್ತಿರುವ ವಾಣೀವಿಲಾಸದ ಕಟ್ಟೆಯ ನೀರಿಗಾಗಿ ಮುಂದಿನ ಜೂಲೈ ಲಾಗಾಯಿತು ಪ್ರಜೆಗಳಿಗೆಲ್ಲಾ ನೀರಿನ ತೆರಿಗೆ ಹಾಕುವುದಾಗಿ ಗವರ್ನಮೆಂಟಿನವರು ಹುಕುಂಕೊಟ್ಟು ಅದಕ್ಕಾಗಿ ಕೆಲವು ರೂಲನ್ನು ಪ್ರಕಟಿಸಿರುತ್ತಾರೆ ಮ್ಯುನಿಸಿಪಲ್ ಕೌನ್ಸಲರುಗಳು ಒಂದು ಸಬ್ ಕಮಿಟಿ ಮಾಡಿಕೊಂಡು, ಈ ವಿಚಾರವನ್ನು ಚರ್ಚೆ ಮಾಡಿ, ತಮ್ಮ ಅಭಿಪ್ರಾಯಗಳನ್ನು ತಿಳಿಸಿದರು ಅದರಂತೆ ಎಲ್ಲಾ ಕೌನ್ಸಲರುಗಳೂ ಒಪ್ಪಿ ಸಮ್ಮತಿ ಹಾಕಿರುತ್ತಾರೆ ಅದರಲ್ಲಿ ಕಂಡ ಮುಖ್ಯಭಾಗವೇನೆಂದರೆ—ಮನೆಗಳಿಗೆ ನಲ್ಲಿ ಇಡಿಸಿಕೊಂಡಿರುವವರು ವರುಷಕ್ಕೆ ಈಗ ೧೫—೨೫ ರೂಪಾಯಿನಂತೆ ನೀರಿನ ಕಂದಾಯ ಕೊಡುತ್ತಾರೆ ಇದರಿಂದ ೬,೦೦೦ ರೂಪಾಯಿನಷ್ಟು ಹುಟ್ಟುವಳಿ ಆಗುವುದು ಈಗ ನೀರಿನ ಇಲಾಖೆಯು ಮೇಲ್ವಿಚಾರಣೆಯನ್ನು ಇಂಜನಿಯರ್ ಇಲಾಖೆಗೆ ವಹಿಸಿ, ಅದರ ಖರ್ಚಿಗೆ ಮ್ಯುನಿಸಿಪಾಲಿಟಿಯಿಂದ ಸಾಲಿಯಾನ ೧೨,೦೦೦ ರೂಪಾಯಿ ಕೊಡಲು ಒಪ್ಪಿರುತ್ತಾರೆ ರಾಜಧಾನಿಯ ಪ್ರಜೆಗಳು ತುಂಬಾ ರಿಕ್ತದೆಸೆಯಲ್ಲಿದ್ದಾರೆ ನೀರಿನ ತೆರಿಗೆ ಕೊಡಲಾರರು ಇದಲ್ಲದೆ ಮಹಾ ಮಾತೃಶ್ರೀಯವರ ಹೆಸರಿನಲ್ಲಿ ಈ ನೀರಿನ ಕಾವಗಾರಿ ಮಾಡಿಸಿ, ರಾಜಧಾನಿಯ ಪ್ರಜೆಗಳಿಗೆ ಧರ್ಮ ಮಾಡಿರುತ್ತಾರೆ ಇಂಥಾ ಧರ್ಮಕ್ಕೆ ಮಾಡಿಸಿರುವ ನೀರಿಗೆ ಈಗ ತೆರಿಗೆ ಹಾಕುವುದು ನ್ಯಾಯವಾಗಿಲ್ಲ ಆದಕಾರಣ ನೀರಿನ ತೆರಿಗೆಯನ್ನು ಪ್ರಜೆಗಳ ಮೇಲೆ ಹೊರಿಸಕೂಡದು ಎಂಬುದೇ

ದಿವಾಳಿಯಾದ ಅರ್ಬತ್ನಾಟ್ ಕಂಪನಿಯು

ಇದುವರೆಗೆ ನಡೆದಿರುವ ವಿಚಾರಗಳು

ಇನ್‌ಸಾಲ್ವೆನ್ಸಿ ಕೋರ್ಟು

ಕಳೆದ ವರುಷದ ಅಕ್ಟೋಬರ್ ತಿಂಗಳಲ್ಲಿ ಮೊಟ್ಟಮೊದಲು ಮದರಾಸ್ ಅರ್ಬತ್ನಾಟ್ ಕಂಪನಿಯು ದಿವಾಳಿಯಾಯಿತಷ್ಟೆ ಆ ಲಾಗಾಯಿತು ಸರ್ಕಾರದವರು ಒಬ್ಬ ಅಧಿಕಾರಿಯನ್ನೂ ಕೆಲವು ಲೆಕ್ಕಾಚಾರಸ್ಥರನ್ನೂ ನೇಮಿಸಿ, ಈ ದಿವಾಳಿಯಾದ ಕಂಪನಿಯ ಲೆಕ್ಕಪತ್ರಗಳನ್ನೂ ಜಮಾಖರ್ಚುಗಳನ್ನೂ ತನಿಖೆಮಾಡಿಸಿ, ಅದರ ಸ್ಥಿತಿಗತಿಯನ್ನು ಗೊತ್ತು ಮಾಡಿಸಿದರು ಈ ಕಂಪನಿಯ ಮುಖಂಡರಾಗಿದ್ದ ಸರ್ ಜಾರ್ಜ್ ಅರ್ಬತ್ನಾಟ್‌ಯವರು ಇನ್‌ಸಾಲ್ವೆಂಟ್ ಆಗಬೇಕೆಂದು ಮದರಾಸ್ ಹೈಕೋರ್ಟಿಗೆ ಅರ್ಜಿ ಕೊಟ್ಟರು ಹೈ ಕೋರ್ಟ್ ಜಡ್ಜರಾದ ಸರ್ ಸುಬ್ರಹ್ಮಣ್ಯ ಐಯ್ಯರವರು ಆ ಲಾಗಾಯಿತು ಈ ಮೊಕದ್ದಮೆಯನ್ನು ದರ್ಯಾಪ್ತು ಮಾಡುತ್ತಾ ಬಂದು, ಕಳೆದ ವಾರ ಸರ್ ಜಾರ್ಜ್ ಅರ್ಬತ್ನಾಟ್‌ಯವರಿಂದ ೧೫,೦೦೦ ರೂಪಾಯಿನ ಜಾಮೀನು ತೆಗೆದುಕೊಂಡು, ಆಗಿನಿಂದ ತಿಂಗಳಲ್ಲಿ ಅವರು ತಮ್ಮ ಡಿಫೆನ್ಸನ್ನು ಹೇಳಬೇಕೆಂದು ಹೀರಿಂಗು ಇಟ್ಟಿರುತ್ತಾರೆ. ಈ ಕಂಪನಿಯ ಜಮಾ ಖರ್ಚು ನೋಡಿದ್ದರಲ್ಲಿ ಹೈ ಕೋರ್ಟ್ ವಕೀಲ್ ಮೆ॥ ಸಿ ಆರ್ ತಿರುವೇಂಕಟಾಚಾರ್ಯರು ಕೋರ್ಟಿನಲ್ಲಿ ತಿಳಿದ ಪ್ರಕಾರ ಕಂಪನಿಯು ಆಸ್ತಿಗಿಂತಲೂ ಸಾಲವು ೧೮೯೮ ನೆ ಇಸವಿಯಲ್ಲಿ ೧ ಕೋಟಿಗಿಂತಲೂ, ೧೯೦೩ ರಲ್ಲಿ ೧॥ ಕೋಟಿ, ೧೯೦೪ ರಲ್ಲಿ ೧೬೩ ಲಕ್ಷಕ್ಕಿಂತಲೂ, ೧೯೦೫ ರಲ್ಲಿ ೧೭೫ ಲಕ್ಷ ರೂಪಾಯಿಗಿಂತಲೂ ಹೆಚ್ಚಾಗಿತ್ತೆಂದು ತಿಳಿದುಬರುತ್ತದೆ ಈಗ ಸರ್ ಜಾರ್ಜ್ ಅರ್ಬತ್ನಾಟ್‌ಯವರು ಮೇಲೆ ಇನ್‌ಸಾಲ್ವೆನ್ಸಿ ಕೋರ್ಟಿನಲ್ಲಿ ಹೊರಿಸಲ್ಪಟ್ಟಿರುವ ಅಪರಾಧಗಳ್ಯಾವವೆಂದರೆ—ಸರ್ ಜಾರ್ಜ್ ಅರ್ಬತ್ನಾಟ್‌ಯವರು ಆ ಕಂಪನಿಯ ಷೇರುದಾರರಿಗೆ ಮೋಸಮಾಡಬೇಕೆಂಬ ಉದ್ದೇಶದಿಂದ ಕಂಪನಿ ಲೆಕ್ಕಗಳನ್ನು ಕೆಡಿಸಿ ನಿಜವಲ್ಲದ ಲೆಕ್ಕಗಳನ್ನು ಬರೆದು, ಕಂಪನಿಯ ಹಣಗಳನ್ನು ದುರುಪಯೋಗಪಡಿಸಿರುತ್ತಾರೆ ಮೆ॥ ಹಾಜಿ ಮಹಮದ್ ಇಸಾಕ್ ಯವರಿಂದ ಕಂಪನಿಗೆ ೨,೦೩,೧೦೩ ರೂಪಾಯಿಯೂ ಮೆ॥ ಎ ಮೆರ್ಕಿಚಿಯವರಿಂದ ೧,೬೩,೬೬೬ ರೂಪಾಯಿಯೂ ಬಾಕಿ ಬರಬೇಕಾಗಿದೆ ಎಂದು ಲೆಕ್ಕದ ಪುಸ್ತಕಗಳಲ್ಲಿ ಸುಳ್ಳಾಗಿ ಬರೆದಿದ್ದಾರೆ. ಇನ್ನೊಂದು ಲೆಕ್ಕದ ಪಟ್ಟಿಯಲ್ಲಿ ೫ ಲಕ್ಷ ರೂಪಾಯಿನ ಸುಳ್ಳು ಲೆಕ್ಕವನ್ನು ಕಾಣಿಸಿದೆ ಇನ್ನೆರಡು ಲೆಕ್ಕಗಳಲ್ಲಿ ೧೧,೦೦೦ ರೂಪಾಯಿನ ಮತ್ತು ೭೫,೦೦೦ ರೂಪಾಯಿನ ಬಾರ್ಡು ಖರ್ಚು ನಡೆದಿದೆ ಮತ್ತೆ ನಾಲ್ಕು ಲೆಕ್ಕಗಳಲ್ಲಿ ೫೦,೦೦೦, ೫೦,೦೦೦ ಈ ರೀತಿ ನಿಜವಲ್ಲದ ದಾಖಲೆ ಕಂಡುಬರುತ್ತವೆ ೧೯೦೩ ನೆ ಇಸವಿ ಅಂತ್ಯ ಭಾಗದಲ್ಲಿ ೧,೫೦,೦೦೦ ರೂಪಾಯಿನ ೧,೫೦೦ ಷೇರುಗಳನ್ನು ಸರ್ ಜಾರ್ಜ್ ಅರ್ಬತ್ನಾಟ್ ಯವರು ತಮ್ಮ ಭಾವನ ಹೆಸರಿಗೆ ವರ್ಗ ಮಾಡಿದ್ದಾರೆ. ಅವರು ೧೯೦೨ ರಿಂದ ೧೯೦೬ ನೆ ಇಸವಿ ಮಧ್ಯೆ ೮,೬೮೨ ಪೌಂಡುಗಳನ್ನು ತಮ್ಮ ಹೆಂಡತಿಗೆ ಕಳುಹಿಸಿರುತ್ತಾರೆ; ಮತ್ತು ಆಕೆಯ ಹೆಸರಿಗೆ ಕಂಪನಿಯ ಬಾಬತು ೩೦,೬೦೦ ರೂಪಾಯಿನ ಷೇರುಗಳನ್ನು ವರ್ಗಮಾಡಿ ಕೊಟ್ಟಿದ್ದಾರೆ ಈ ಮುಂತಾದ ವಿಚಾರಗಳಿಗೆ ಸರ್ ಜಾರ್ಜ್ ಅರ್ಬತ್ನಾಟ್ ಯವರು ಹೀರಿಂಗಿನ ದಿನ ಸರಿಯಾದ ಸಮಾಧಾನಗಳನ್ನು ಹೇಳಬೇಕಾಗಿದೆ ಎಂಬುದೇ.

ಕ್ರಿಮಿನಲ್ ಕೋರ್ಟು.

ತಾ ೨೯ ನೆಯ ಸೋಮವಾರ ಪಬ್ಲಿಕ್ ಪ್ರಾಸಿಕ್ಯೂಟರ್ ಪಿ ಬಿ ಪೊವೆಲ್ ಯವರ್ ಮದರಾಸ್ ಪಟ್ಟಣದ ಮುಖ್ಯ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟ್ ಮೆ॥ ಡಬ್ಲ್ಯು ಎಂ ಕ್ಲಾರ್ಕ್ ಯವರ ಕೋರ್ಟಿನಲ್ಲಿ ಗವರ್ನಮೆಂಟಿನ ಪರವಾಗಿ ಸರ್ ಜಾರ್ಜ್ ಅರ್ಬತ್ನಾಟ್‌ಯವರ ಮೇಲೆ ಮೂರು ಕ್ರಿಮಿನಲ್ ಮೊಕದ್ದಮೆಗಳನ್ನು ದಾಖಲ್ ಮಾಡಿ, ಮ್ಯಾಜಿಸ್ಟ್ರೇಟರನ್ನು ಕುರಿತು—ಸರ್ ಜಾರ್ಜ್ ಅರ್ಬತ್ನಾಟ್ ಯವರು ಗುರುವಾರದ ದಿನ ಜಹಜು ಹತ್ತಿ ವಿಲಾಯತಿಗೆ ಪ್ರಯಾಣ ಮಾಡುವವರಾಗಿದ್ದಾರೆಂತಲೂ ಅವರನ್ನು ವಾರಂಟು ಕೊಟ್ಟು ಕೂಡ್ಲೆ ಹಿಡಿಯಬೇಕೆಂದೂ ಕೇಳಿಕೊಂಡರು ಈ ಮೂರು ಕ್ರಿಮಿನಲ್ ಮೊಕದ್ದಮೆಗಳ ವಿವರವೇನೆಂದರೆ—(೧) ರಾಜಾ ವಿ ಕೃಷ್ಣ ಬಹದೂರ್ ಯವರು ಅರ್ಬತ್ನಾಟ್ ಕಂಪನಿಯಲ್ಲಿ ೩,೫೦,೦೦೦ ಡಿಪಾಜಿಟ್ಟು ಇಟ್ಟಿದ್ದರು ಇದರ ಬಡ್ಡಿಯು ೧೯೦೬ ನೆ ಅಕ್ಟೋಬರ್ ೯ ಕ್ಕೆ ೧೭,೫೦೦ ರೂಪಾಯಿ ಸಲ್ಲಬೇಕಾಗಿತ್ತು ಸರ್ ಜಾರ್ಜ್ ಅರ್ಬತ್ನಾಟ್ ಯವರು ಡಿಪಾಜಿಟ್ ಹಣವನ್ನು ವಾಪತಿ ಮಾಡದೆ, ಅದರ ಬಡ್ಡಿ ಹಣಕ್ಕೆ ಅಕ್ಟೋಬರ್ ೧೯ ರಲ್ಲಿ ಮದರಾಸ್ ಬ್ಯಾಂಕಿಗೆ ಚಕ್ಕು ಬರೆದು ಕೊಟ್ಟರು ತಾ ೨೨ ರಲ್ಲಿ ಆ ಕಂಪನಿ ದಿವಾಳಿ ಆಯಿತು ಆ ಬಡ್ಡಿ ಹಣ ಸಿಕ್ಕಲಿಲ್ಲ ಆದ್ದರಿಂದ ಡಿಪಾಜಿಟ್ಟಿನ ೩॥ ಲಕ್ಷ ರೂಪಾಯಿಗು ಬಡ್ಡಿ ೧೭॥ ಸಾವಿರ ರೂಪಾಯಿಗೂ ಸರ್ ಜಾರ್ಜ್ ಅರ್ಬತ್ನಾಟ್ ಯವರು ಆ ರಾಜರಿಗೆ ಮೋಸ ಮಾಡಿರುತ್ತಾರೆ (೨) ಮದರಾಸ್ ಛಾರಿಟೆಬಲ್ ಸೊಸೈಟಿ ಎಂಬ ಸಂಘದ ಹಣವೆಲ್ಲಾ ಅರ್ಬತ್ನಾಟ್ ಕಂಪನಿಯಲ್ಲಿತ್ತು ಆ ಸಂಘದಲ್ಲಿ ಮೀಟಿಂಗ್ ನಡೆದು, ತಮ್ಮಲ್ಲಿ ಉಳಿದಿದ್ದ ೭೪,೦೦೦ ರೂಪಾಯಿಗೆ ಸರ್ಕಾರಿ ಪತ್ರಗಳನ್ನು ಕೊಂಡಿಡಬೇಕೆಂದು ಸರ್ ಜಾರ್ಜ್ ಅರ್ಬತ್ನಾಟ್ ಯವರಿಗೆ ತಿಳಿಸಿದರು ಸರ್ ಜಾರ್ಜ್ ಅರ್ಬತ್ನಾಟ್ ಯವರು ಹಾಗೆ ಕೊಂಡುಕೊಳ್ಳದೆ ಆ ಹಣವನ್ನು ದುರುಪಯೋಗಪಡಿಸಿಕೊಂಡು, ಕಡೆ ಕಡೆಗೆ ೫೪ ಸಾವಿರ ಚಿಲ್ಲರೆಗೆ ಪತ್ರಗಳನ್ನು ಕೊಂಡಿಟ್ಟಿದ್ದಾರೆ ಉಳಿದ ಹಣಕ್ಕೆ ಪತ್ರಗಳನ್ನು ಕೊಂಡಿಡದೆ ದಿವಾಳಿಯಾಗಿ ಆ ಸೊಸೈಟಿಗೆ ಮೋಸ ಮಾಡಿರುತ್ತಾರೆ (೩) ಅರ್ಬತ್ನಾಟ್ ಕಸಬುಗಳ ಕಂಪನಿ ಎಂಬ ಪ್ರತ್ಯೇಕವಾದ ಒಂದು ಕಂಪನಿಯ ಬಾಬತು ೯೦,೬೭೦ ಚಿಲ್ಲರೆ ರೂಪಾಯಿಯನ್ನು ಸರ್ ಜಾರ್ಜ್ ಅರ್ಬತ್ನಾಟ್ ಯವರು ತಮ್ಮ ಸ್ವಂತಕ್ಕೆ ಉಪಯೋಗಿಸಿಕೊಂಡು ಮೋಸಪಡಿಸಿರುತ್ತಾರೆ ಈ ಕಾರಣದ ದೆಸೆಯಿಂದ ಸರ್ ಜಾರ್ಜ್ ಅರ್ಬತ್ನಾಟ್ ಯವರನ್ನು ವಿಲಾಯತಿಗೆ ಬಿಡದಂತೆ ತಡದು, ವಾರಂಟಿನಿಂದ ಅವರನ್ನು ಹಿಡಿಯಬೇಕೆಂದು ಪಬ್ಲಿಕ್ ಪ್ರಾಸಿಕ್ಯೂಟರು ಮ್ಯಾಜಿಸ್ಟ್ರೇಟರಿಗೆ ತಿಳಿಸಿದರು ಸರ್ ಜಾರ್ಜ್ ಅರ್ಬತ್ನಾಟ್ ಯವರ ಕಡೆ ವಕೀಲರಾದ ಸರ್ ಲೇರಿ ಕಿಂಗ್ ಯವರು ಅಪರಾಧಿಯನ್ನು ಕೋರ್ಟಿನಲ್ಲಿ ಹಾಜರ್ಮಾಡಿ, ಇನ್‌ಸಾಲ್ವೆನ್ಸಿ ಕೋರ್ಟಿನಲ್ಲಿ ಜಡ್ಜಿಯವರು ಅಪರಾಧಿಗೆ ಶೀಘ್ರಗ ಹೋಗಿ ಬರುವುದಕ್ಕೆ ಅನುಕೂಲವಾಗಲೆಂದು ಅವರನ್ನು ೧೫,೦೦೦ ರೂಪಾಯಿನ ಜಾಮೀನು ತೆಗೆದುಕೊಂಡು ಬಿಟ್ಟಿದ್ದಾರೆಂತಲೂ, ಈಗ ನೋಟೀಸ್ ಕ್ರಿಮಿನಲ್ ಮೊಕದ್ದಮೆಗಳನ್ನು ವಿಚಾರಣೆ ಮಾಡುವಾಗ್ಗೆ ಅಪರಾಧಿಯು ಹಾಜರಾಗುವುದರಲ್ಲಿ ಅಡ್ಡಿಯಿಲ್ಲವೆಂತಲೂ, ಅಪರಾಧಿಯನ್ನು ೪೦,೦೦೦ ರೂಪಾಯಿನ ಜಾಮೀನಿನ ಮೇಲೆ ಬಿಟ್ಟುಕೊಡಬೇಕೆಂತಲೂ ಮ್ಯಾಜಿಸ್ಟ್ರೇಟರಿಗೆ ತಿಳಿಸಿ ಕೇಳಿಕೊಂಡರು ಮ್ಯಾಜಿಸ್ಟ್ರೇಟರು ಅಪರಾಧಿಯನ್ನು ಕೋರ್ಟಿನಲ್ಲಿರುವಾಗಲೇ ದಸ್ತಗಿರಿ ಮಾಡಿಸಿಟ್ಟುಕೊಂಡು, ಸರ್ ಜಾರ್ಜ್ ಅರ್ಬತ್ನಾಟರ ಮೇಲೆ ಬಂದಿರುವ ಈ ಕ್ರಿಮಿನಲ್ ಮೊಕದ್ದಮೆಗಳು ಬಹಳ ವಿಶೇಷವಾದವುಗಳಾದ್ದರಿಂದ ಅವರನ್ನು ಜಾಮೀನಿನ ಮೇಲೆ ಬಿಡುವುದಕ್ಕಾಗುವುದಿಲ್ಲವೆಂದು ಹುಕುಂ ಮಾಡಿದರು ಈ ಹುಕುಮನ್ನು ಆ ವಕೀಲರು ಆ ದಿನವೇ ಹೈಕೋರ್ಟಿಗೆ ತೆಗೆದುಕೊಂಡು ಹೋಗಿ ಅಲ್ಲಿನ ಜಡ್ಜಿಯವರಿಗೆ ತಿಳಿಸಿ ಅಪರಾಧಿಯನ್ನು ಜಾಮೀನಿನ ಮೇಲೆ ಬಿಡಿಸಿಕೊಡಬೇಕೆಂದು ಕೇಳಿಕೊಂಡರು ಹೈ ಕೋರ್ಟ್ ಜಡ್ಜಿಗಳಾದ ಸರ್ ಎಸ್ ಸುಬ್ರಹ್ಮಣ್ಯಯ್ಯರವರು—ಕೆಳ ಕೋರ್ಟಿನವರು ಕೊಟ್ಟಿರುವ ಹುಕುಮನ್ನು ನಾವು ಬದಲಾಯಿಸುವುದಿಲ್ಲವೆಂತಲೂ ಅಪರಾಧಿಯನ್ನು ಜಾಮೀನು ಮೇಲೆ ಬಿಡುವುದಿಲ್ಲವೆಂತಲೂ ಹೇಳಿಬಿಟ್ಟರು

ಜೈಲಿಗೆ ಕಳುಹಿಸಿದ್ದು.

ಸರ್ ಜಾರ್ಜ್ ಅರ್ಬತ್ನಾಟರನ್ನು ಜಾಮೀನಿನ ಮೇಲೆ ಬಿಡುವ ಯೋಚನೆಯೂ ಅವರು ಶೀಘ್ರಗ ಹೋಗುವ ಯೋಚನೆಯೂ ನಿಂತುಹೋದವು. ಇಬ್ಬರು ಇನ್‌ಸ್ಪೆಕ್ಟರುಗಳು ಸರ್ ಜಾರ್ಜರನ್ನು ರಾಜಾ ಸರ್ ಸಾವಳೆ ರಾಮಸ್ವಾಮಿ ಮೊದಲಿಯಾರರು ಕಳುಹಿಸಿಕೊಟ್ಟ ಜೋಡಿ ಕುದುರೆ ಗಾಡಿಯಲ್ಲಿ ಕೂರಿಸಿಕೊಂಡು, ಸುಮಾರು ೩೩ ಗಂಟೆಗೆ ಎಗ್ಮೋರ್ ಮ್ಯಾಜಿಸ್ಟ್ರೇಟ್ ಕೋರ್ಟಿನಿಂದ ಪೆನಿಟೆನ್ಷಿಯರಿ ಎಂಬ ಬಂದೀಖಾನೆಗೆ ಸಾಗಿಸಿಕೊಂಡು ಹೋಗಿರುತ್ತಾರೆ.

ಈ ಕ್ರಿಮಿನಲ್ ಮೊಕದ್ದಮೆಗಳು ಈ ತಿಂಗಳ ೧೪ ನೆ ತಾರೀಖು ಮಂಗಳವಾರದಿಂದ ವಿಚಾರಣೆಯಾಗುವವು.

ಇಂಡಿಯಾ ದೇಶದ ವೃತ್ತಾಂತಗಳು.

ದರ್ಭಾಂಗ ಸಂಸ್ಥಾನದಲ್ಲಿ ಇನ್ನೂ ಕ್ಷಾಮನಿವಾರಣೆಯಾಗಲಿಲ್ಲ. ಈಗಲೂ ೪೦,೦೦೦ ಪ್ರಜೆಗಳು ಕ್ಷಾಮಪೀಡಿತರಾಗಿ ಸರ್ಕಾರದವರ ಪೋಷಣೆಯಲ್ಲಿದ್ದುಕೊಂಡು, ರಿಲೀಫ್ ಕಾಮಗಾರಿ ಮಾಡುತ್ತಿದ್ದಾರೆ

* * *

ಅಯೋಧ್ಯೆಯಲ್ಲಿ ಹರ್ಷಪುರದ ಸ್ಟೇಷನ್ ಮಾಸ್ತರು ರೈಲ್ವೆ ಕಂಪನಿಯ ಹಣವನ್ನು ತಿಂದುಹಾಕಿದ್ದರಿಂದ ರಾಯಬಾರಿಲಿ ಮ್ಯಾಜಿಸ್ಟ್ರೇಟರು ಅವನಿಗೆ ಮೂರು ವರುಷಗಳ ಕಠಿಣ ಸಜಾ ವಿಧಿಸಿರುತ್ತಾರೆ

* * *

ಪಾಟಿಯಾಲಾ ಸಂಸ್ಥಾನದ ರೀಜೆನ್ಸಿ ಕೌನ್ಸಿಲ್ ಮೆಂಬರಾದ ಲಾಲಾ ಭಗವಾನ್‌ದಾಸ್‌ಯವರ ಇಬ್ಬರು ಗಂಡು ಮಕ್ಕಳೂ ವಿಲಾಯ

…ನಲ್ಲಿ ವ್ಯವಸಾಯ ಶಾಸ್ತ್ರವನ್ನು ಕಲಿತು ಬರುವುದಕ್ಕೆ ಕಳಿಸುವ ಪ್ರಯೋಗ ಮಾಡಿದರು

***

ಸಿಲೋನ್ (ಲಂಕಾ) ದ್ವೀಪದ ಗವರ್ನರ್ ಕೆಲಸಕ್ಕೆ ಸರ್ ಹೇರಿ ಮೆಕ್ಕಲಂಯವರು ನೇಮಕವಾದರು ಇವರು ಬರುವ ತಿಂಗಳಲ್ಲಿ ಈಗಿನ ಗವರ್ನರಾಗಿರುವ ಸರ್ ಹೇರಿ ಬ್ಲೇಕ್‌ಯವರಿಂದ ಕೆಲಸದ ಛಾರ್ಜನ್ನು ವಹಿಸಿಕೊಳ್ಳುವವರಾಗಿದ್ದಾರೆ.

***

ಮೈಮನಸಿಂಗಿನಲ್ಲಿರುವ ಶ್ರೀಮತಿ ದೀನಮಣಿ ಚೌಧುರಾಣಿ ಎಂಬುವಳು ತನ್ನ ಹೆಸರಿನಲ್ಲಿ ಒಂದು ಆಸ್ಪತ್ರೆಯನ್ನು ಕಟ್ಟಿಸಬೇಕೆಂದು ಸರ್ಕಾರದವರ ವಶಕ್ಕೆ ೧೫,೦೦೦ ರೂಪಾಯಿ ಕೊಟ್ಟಿರುತ್ತಾಳೆ. ಆ ಆಸ್ಪತ್ರೆಯ ಕಾಮಗಾರಿ ನಡೆಯುತ್ತಿದೆ.

***

ಕಳೆದ ವಾರ ಹಿಂದುಸ್ಥಾನದಲ್ಲಿ ೮೬,೦೦೦ ಜನರಿಗೆ ಪ್ಲೇಗ್ ತಗಲಿತು, ೭೬,೦೦ ಜನರು ಆ ರೋಗದಲ್ಲಿ ಕಾಲವಾಗಿದ್ದಾರೆ ಪಂಜಾಬಿನಲ್ಲಿ ೪೩,೦೦೦ ಮರಣಗಳಾದವು ಸಂಯುಕ್ತ ಆಧಿಪತ್ಯಗಳು ೧೮,೦೦೦, ಬಂಗಾಳಾ ೬,೦೦೦, ಬೊಂಬಾಯಿ ಆಧಿಪತ್ಯ ೨,೦೦೦.

***

ಲಾಹೋರ್ ಪಟ್ಟಣದಲ್ಲಿ ಪ್ಲೇಗ್ ಉಪದ್ರವು ಹೆಚ್ಚಿ ಪ್ರಜೆಗಳು ಬಹಳ ಕಷ್ಟಪಡುವುದನ್ನು ನೋಡಿ, ಅವರಿಗೆಲ್ಲಾ ಬೈಲು ಪ್ರದೇಶಗಳಲ್ಲಿ ಮನೆ ಕಟ್ಟಿಕೊಂಡು ವಾಸ ಮಾಡುವುದಕ್ಕೆ ಅನುಕೂಲಿಸುವಂತೆ ಬೇಕಾದ ಸೌಕರ್ಯಗಳನ್ನು ಒದಗಿಸಿಕೊಡಬೇಕೆಂದು ಲೆಫ್ಟಿನೆಂಟ್ ಗವರ್ನರ್‌ಯವರು ಮ್ಯುನಿಸಿಪಾಲಿಟಿಗೆ ೨೦,೦೦೦ ರೂಪಾಯಿ ಕೊಟ್ಟರು.

***

ಆಫಘಾನಿಸ್ಥಾನದ ಅಮೀರರವರು ಹಿಂದುಸ್ಥಾನಕ್ಕೆ ಬಂದು ಎಲ್ಲಾ ಕಡೆಗಳಲ್ಲಿ ಸಂಚಾರ ಮಾಡಿಕೊಂಡು ಇಂಡಿಯಾ ಗವರ್ನಮೆಂಟಿನವರ ಅತಿಥಿಗಳಾಗಿದ್ದು ವಾಪಸು ಹೋದರಷ್ಟೆ ಅವರನ್ನು ಸತ್ಕರಿಸುವುದಕ್ಕಾಗಿ ಗವರ್ನಮೆಂಟಿನವರಿಗೆ ೩೦,೮೮,೯೦೦ ರೂಪಾಯಿ ಖರ್ಚಾಯಿತೆಂದು ಇಂಡಿಯಾ ಸ್ಟೇಟ್ ಸೆಕ್ರೆಟರಿ ಮಿ|| ಜಾನ್ ಮಾರ್ಲೆಯವರು ತಿಳಿಸಿದ್ದಾರೆ

***

ಪೂನಾ ಪಟ್ಟಣದಲ್ಲಿ ಒಬ್ಬ ಹೆಂಗಸು ಸುಮಾರು ೧೧೦ ರೂಪಾಯಿ ಬಾಳುವ ನಗಗಳನ್ನು ಹಾಕಿಕೊಂಡಿದ್ದ ಒಂದು ಹೆಣ್ಣು ಮಗುವನ್ನು ಆ ನಗಗಳ ಆಸೆಗೆ ಎತ್ತಿಕೊಂಡು ರೈಲ್ ಹತ್ತಿ ಹೋಗುತ್ತಿರಲು ಅವಳನ್ನು ಪೋಲೀಸಿನವರು ಸ್ಟೇಷನ್ನಲ್ಲಿ ಹಿಡಿದು ಮೊಕದ್ದಮೆ ಮಾಡಿದರು ಮ್ಯಾಜಿಸ್ಟ್ರೇಟರು ಅವಳಿಗೆ ನಾಲ್ಕು ತಿಂಗಳ ಕಠಿಣ ಶಿಕ್ಷೆ ವಿಧಿಸಿರುತ್ತಾರೆ

***

ಲಖ್ನೋ ಪಟ್ಟಣದಲ್ಲಿ ಮಹಮ್ಮದೀಯರೊಳಗೆ ಸುನ್ನಿ ಶಿಯಾ ಪಂಗಡದವರು ಪರಸ್ಪರ ವೈಮನಸ್ಯಗಳುಳ್ಳವರಾಗಿದ್ದಾರೆ. ಈ ದ್ವೇಷ ಹುಟ್ಟಿ ಇಲ್ಲಿಗೆ ೩—೪ ವಾರಗಳಾದವು. ಎರಡು ಪಂಗಡಗಳ ಮುಖಂಡರೂ ಕಲೆತು, ಈ ಅಸಮಾಧಾನವನ್ನು ಹೋಗಲಾಡಿಸಬೇಕೆಂದು ಇದುವರೆಗೆ ಎಷ್ಟು ಪ್ರಯತ್ನ ಮಾಡಿದರೂ ಸಾಧ್ಯವಾಗಲಿಲ್ಲ. ಎರಡು ಕಡೆಯ ಮುಸಲ್ಮಾನರೂ ಇನ್ನೂ ದ್ವೇಷವನ್ನು ಬಿಟ್ಟಿಲ್ಲ.

***

ಅನಂತಶಯನ ಸಂಸ್ಥಾನದಲ್ಲಿ ಕಳೆದ ವಾರ ಎರಡನೆಯ ರಾಣಿಯವರ ವಿವಾಹಮಹೋತ್ಸವವು ಬಹು ಆಟ್ಟಹಾಸದಿಂದ ಜರುಗಿತು ರಾಣಿಯವರಿಗೆ ಇನ್ನೂ ಹನ್ನೊಂದು ವರುಷ ವರನು ರಾಮವರ್ಮ ಎಂಬ ಶ್ರೀಮಂತನು ಈತನು ಬಿ ಎ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಎಂ ಎ ಪರೀಕ್ಷೆಗೆ ಓದುತ್ತಿದ್ದಾನೆ ಈ ವಿವಾಹಕ್ಕೆ ಸಂಸ್ಥಾನದಲ್ಲಿ ಮಹಾರಾಜರವರು ೩೦-೪೫ ಸಾವಿರ ರೂಪಾಯಿ ಖರ್ಚು ಮಾಡಿದರು.

***

ಜೇಲಂ ರಾಜ್ಯದಲ್ಲಿದ್ದ ಪಠಾಣ್ ಸೈನಿಕರು ತಮ್ಮ ಕಂಪನಿಯಲ್ಲಿ ಖಾಲಿ ಬಿದ್ದ ಒಂದು ಹುದ್ದೆಯನ್ನು ತಮ್ಮಲ್ಲೇ ಸರ್ವೀಸುದಾರನಾಗಿದ್ದವನಿಗೆ ಕೊಡದೆ ಬೇರೊಬ್ಬ ಹೊಸಬನಿಗೆ ಕೊಟ್ಟರೆಂದು ಗಲಭೆ ಮಾಡಿದ್ದರಷ್ಟೆ ಸೈನ್ಯಾಧಿಪತಿಯು ತನಿಖೆ ಮಾಡಿ ೨೦ ಮಂದಿ ಸಿಪಾಯಿಗಳನ್ನು ಸೈನ್ಯದಿಂದ ವಜಾ ಮಾಡಿ, ೪ ಜನಕ್ಕೆ ಸಜಾ ವಿಧಿಸಿ, ಕೆಲವರಿಗೆ ಕ್ಷಮಾಪಣೆಯನ್ನು ಕೊಟ್ಟು ಮನ್ನಿಸಿ, ಆ ಗಲಭೆಯನ್ನು ಮುಕ್ತಾಯಮಾಡಿದರು

***

ಕಲ್ಕತ್ತಾ ಪಟ್ಟಣದಲ್ಲಿ ತಾರಾಚಂದ್ ಗಣೇಶದಾಸ್ ಎಂಬೊಬ್ಬ ಸಾಲೀ ವರ್ತಕನು ತನ್ನ ಬಳಿ ಬಹು ಕಾಲದಿಂದ ನಂಬಿಗಸ್ತನಾಗಿದ್ದ ಒಬ್ಬ ಜವಾನನ ವಶಕ್ಕೆ ೮೦,೦೦೦ ರೂಪಾಯಿನ ಬಾಬತು ಕರೆನ್ಸಿ ನೋಟುಗಳನ್ನು ಗಂಟುಕಟ್ಟಿ ಕೊಟ್ಟು ಬ್ಯಾಂಕಿಗೆ ಡಿಪಾಜಿಟ್ಟು ಕಟ್ಟಿ ಬಾ ಎಂದು ಹೇಳಿ ಕಳುಹಿಸಿದರು ಆ ಜವಾನನು ಮರಳಿ ಬಾರಲೇ ಇಲ್ಲ ಪೋಲೀಸಿನವರು ೩—೪ ದಿವಸಗಳ ವರೆಗೆ ಅವನನ್ನು ತಲಾಷ್ ಮಾಡಿ, ಕಡೆಗೆ ಮೊಗಲ್ ಸಿರಾಯಿ ಸ್ಟೇಷನ್ನಲ್ಲಿ ಹಿಡಿದಿರುತ್ತಾರೆ

***

ಬೊಂಬಾಯಿ ಪಟ್ಟಣದ ಮ್ಯುನಿಸಿಪಲ್ ಕೌನ್ಸಿಲ್ ಸಭೆಗೆ ಘನವೆತ್ತಿದ ಮಿ|| ವಿಟ್ಠಲದಾಸ್ ಡಿ ಥಾಕರ್ಸೇಯವರನ್ನು ಪ್ರೆಸಿಡೆಂಟಾಗಿ ಆರಿಸಿದಾರೆ. ಇದುವರೆಗೆ ಪ್ರೆಸಿಡೆಂಟಾಗಿದ್ದ ಸರ್ ಫೆರೋಸ್ ಷಾ ಮೆಹತಾಯವರು ಮ್ಯುನಿಸಿಪಲ್ ಚುನಾವಣೆಯಲ್ಲಿ ಸರ್ಕಾರದ ಕೆಲವು ಅಧಿಕಾರಿಗಳೇ ಸೇರಿ ಕೆಲವು ಅನ್ಯಾಯಗಳನ್ನು ಮಾಡಿರುತ್ತಾರೆಂದು [illegible]ದಾಗಿ ಮೊಕದ್ದಮೆ ತಂದಿರುವನು. ಮ್ಯಾಜಿಸ್ಟ್ರೇಟರು ಈ ವಿಷಯವನ್ನು ತನಿಖೆ ಮಾಡುತ್ತಿದ್ದಾರೆ.

***

ಬರ್ಮಾ ಪೋಲೀಸಿನವರು ಒಬ್ಬ ಖೈದಿಯನ್ನು ಮಿಕ್ತಿಲಾದಿಂದ [illegible] ಎಂಬ ಊರಿಗೆ ರೈಲಿನಲ್ಲಿ ಕರೆದುಕೊಂಡು ಬರುತ್ತಿದ್ದಾಗ ಅವನು ಹ್ಯಾಗೋ ಅವರ ದೃಷ್ಟಿಯನ್ನು ಮರೆಸಿಬಿಟ್ಟು, ಗಾಡಿ ವೇಗವಾಗಿ ಹೋಗುತ್ತಿದ್ದಾಗ ಬಾಗಿಲು ತೆರೆದು ಕಗ್ಗತ್ತಲಲ್ಲಿ ಹೊರಕ್ಕೆ ದುಮಿಕಿ ತಲೆ ತಪ್ಪಿಸಿಕೊಂಡು ಹೋದನು. ಅವನನ್ನು ತಲಾಷ್ ಮಾಡುವುದಕ್ಕೆ ಅನೇಕ ಮಂದಿ ಪೋಲೀಸಿನವರು ಹೋಗಿದ್ದಾರೆ. ಅವನ ಬೆಂಗಾವಲಾಗಿದ್ದ ಇಬ್ಬರು ಪೋಲೀಸಿನವರನ್ನೂ ಹಿಡಿದು ಲಾಕಪ್ಪಿಗೆ ಕಳುಹಿಸಿದರು.

***

ಪೂರ್ವ ಬಂಗಾಳಾ ಸ್ಟೇಟ್ ರೈಲ್ವೆಯಲ್ಲಿ ಒಬ್ಬ ಚಟ್ಟೀಗಾರ ನೌಕರನು ಗಾಡಿಯಲ್ಲಿ ಒಬ್ಬಂಟಿಗಳಾಗಿ ಪ್ರಯಾಣ ಮಾಡುತ್ತಿದ್ದ ಒಬ್ಬ ಹಿಂದೂ ಸ್ತ್ರೀಯನ್ನು ಹಿಡಿದು ಅವಮಾನಪಡಿಸಿದ್ದರಿಂದ ಆ ಚಟ್ಟೀಗಾರನಿಗೆ ಆರು ತಿಂಗಳ ಕಠಿಣ ಸಜಾ ಆಯಿತು. ಇದನ್ನು ನೋಡಿ ಕಲ್ಕತ್ತಾ ಪಟ್ಟಣದ ಕೆಲವು ಪ್ರಜೆಗಳು ಸೇರಿ, ಇನ್ನು ಮೇಲೆ ಸ್ತ್ರೀಯರು ಪ್ರಯಾಣ ಮಾಡುವಂಥಾ ರೈಲ್ ಗಾಡಿಗಳಲ್ಲಿ ಹೆಂಗಸರನ್ನು ಗಾರ್ಡಾಗಿ ನೇಮಿಸಬೇಕೆಂದು ರೈಲ್ವೆ ಕಂಪನಿಯವರಿಗೆ ಬರೆದು ಕೇಳಿಕೊಂಡಿದ್ದಾರೆ.

***

ರಂಗೂನ್ ಪಟ್ಟಣದ ಬಳಿ ವೇರ್ನ್ ಎಂಬ ಗ್ರಾಮದಲ್ಲಿ ಇಪ್ಪತ್ತು ಮಂದಿ ಬರ್ಮಾದವರು ಬೆಳಗಿನ ಝಾಮು ಎರಡು ಘಂಟೆ ವೇಳೆಯಲ್ಲಿ ಮಾಂಗ್‌ಸಯಾ ಎಂಬ ಐಶ್ವರ್ಯವಂತನ ಮನೆಗೆ ಆಯುಧಪಾಣಿಗಳಾಗಿ ನುಗ್ಗಿ ಯಜಮಾನನನ್ನು ಗುಂಡಿನಿಂದ ಹೊಡೆದು ಪೂರಾ ಗಾಯ ಮಾಡಿ ಕೆಡವಿ, ಪೆಟ್ಟಿಗೆಗಳನ್ನೆಲ್ಲಾ ಒಡೆದು ಸುಮಾರು ೧೩,೦೦೦ ರೂಪಾಯಿನ ನಗ ನಾಣ್ಯಗಳನ್ನು ಅಪಹರಿಸಿಕೊಂಡು ಹೋದರು. ಇಂಥಾ ಭಯಂಕರವಾದ ಡಕಾಯಿತಿ ನಡಸಿದವರನ್ನು ಹಿಡಿಯುವದಕ್ಕೆ ಪೋಲೀಸಿನವರು ಸಾಹಸಪಡುತ್ತಿದ್ದಾರೆ

***

ಕಳೆದ ತಿಂಗಳ ಅಂತ್ಯಭಾಗದಲ್ಲಿ ಬೊಂಬಾಯಿ ಪಟ್ಟಣದ ಸರ್ ಕರೀಂಭಾಯಿ ಇಬ್ರಾಹಿಂಯವರ ಎರಡನೇ ಕುಮಾರನು ಯೂರೋಪ್ ಅಮೇರಿಕ ರಾಜ್ಯಗಳಲ್ಲೆಲ್ಲಾ ಸಂಚಾರ ಮಾಡಿಕೊಂಡು ಬಂದು, ಒಂದು ದೊಡ್ಡ ಬಟ್ಟೆಯ ಕಾರ್ಖಾನೆಯನ್ನು ಸ್ಥಾಪಿಸಿರುತ್ತಾನೆ ಈ ಕಟ್ಟಡ ತಯಾರಾಗಲು ಹದಿನೈದು ತಿಂಗಳು ಹಿಡಿಯಿತು. ಅದರಲ್ಲಿ ೬೦,೦೦೦ ನೂಲುವ ರಾಟೆಗಳೂ ೧,೬೦೦ ನೆಯ್ಯುವ ಮಗ್ಗಗಳೂ ಅನೇಕ ಯಂತ್ರಗಳೂ ಇಡಲ್ಪಟ್ಟಿವೆ. ಸುಮಾರು ಎರಡು ಸಾವಿರ ಜನರು ಅದರಲ್ಲಿ ಕೆಲಸ ಮಾಡುವರು ರಾತ್ರಿ ಹೊತ್ತು ವಿದ್ಯುಚ್ಛಕ್ತಿಯ ದೀಪಗಳನ್ನು ಉರಿಸುತ್ತಾ ಕೆಲಸ ಮಾಡುತ್ತಾರೆ

***

ಬರ್ಮಾ ಆಧಿಪತ್ಯಕ್ಕೆ ಸೇರಿದ ಯಾಮೆಥೀನ್ ಎಂಬ ಪಟ್ಟಣದಲ್ಲಿ ಕಳೆದ ವಾರ ಮಧ್ಯಾಹ್ನದ ಹೊತ್ತಿನಲ್ಲೇ ಬೆಂಕಿಹುಟ್ಟಿ ಸುಮಾರು ಅರ್ಧ ಊರು ಸುಟ್ಟು ಹೋಯಿತು. ೧,೪೦೦ ಮನೆಗಳಿಗೆ ಕಡಿಮೆ ಇಲ್ಲದೆ ನಾಶವಾದವು ಎಲ್ಲಾ ಬಡಬಗ್ಗರಾದ್ದರಿಂದ ಅವರಿಗೆ ತಿನ್ನುವುದಕ್ಕಾಗಲಿ ನಿಲ್ಲುವುದಕ್ಕಾಗಲಿ ಮಾರ್ಗವಿಲ್ಲದೆ ಬಹಳ ಕಷ್ಟಪಡುತ್ತಿದ್ದಾರೆ ಒಂದೇ ಒಂದು ಮಗು ಸತ್ತು ಹೋಯಿತೆಂತಲೂ ಇಬ್ಬರು ಹೆಂಗಸರಿಗೆ ಮೈ ಸುಟ್ಟು ಈಗ ವಾಸಿಯಾಗುತ್ತಿದೆ ಎಂತಲೂ ತಿಳಿದು ಬಂದಿದೆ. ಬಡಜನರ ಕಷ್ಟವನ್ನು ಪರಿಹರಿಸುವುದಕ್ಕೆ ಡೆಪ್ಯುಟಿ ಕಮಿಷನರು ಏರ್ಪಾಡು ಮಾಡಿ, ಫಂಡು ಕೂಡಿಸುತ್ತಿದ್ದಾರೆ.

***

ಮಾತಾಜೀ ಮಹಾರಾಣಿ ತಪಸ್ವಿನಿ ಎಂಬ ಪ್ರಖ್ಯಾತಳಾದ ಹೆಂಗಸು ಕಳೆದ ವಾರ ಕಾಶಿ ಪಟ್ಟಣದಲ್ಲಿ ಕಾಲವಾದಳು ಸ್ತ್ರೀ ವಿದ್ಯಾಭಿವೃದ್ಧಿಯಲ್ಲಿ ಈಕೆ ತುಂಬಾ ನಿರತಳಾಗಿದ್ದಳು. ಕಲ್ಕತ್ತಾ ಪಟ್ಟಣದಲ್ಲಿರುವ ಮಹಾಕಾಳಿ ಬಾಲಿಕಾ ಪಾಠಶಾಲೆಯನ್ನು ತಾನೇ ತನ್ನ ಸ್ವಂತ ಹಣ ಹಾಕಿ ಬಹು ಉತ್ಸಾಹದಿಂದ ನಡಸುತ್ತಾ, ತುಂಬಾ ಪ್ರಖ್ಯಾತಿ ಪಡೆದಿದ್ದಳು. ಇದಲ್ಲದೆ ಪರಸ್ಥಳಗಳಿಂದ ಯಾರು ಹೋದರೂ ಆಕೆ ಅವರಿಗೆಲ್ಲಾ ತನ್ನ ಮನೆಯನ್ನು ಬಿಟ್ಟುಕೊಟ್ಟು ಅವರನ್ನು ಸತ್ಕರಿಸುತ್ತಾ, ತುಂಬಾ ಭಕ್ತಿವಂತಳಾಗಿದ್ದಳು. ಎಲ್ಲರೂ ಈಕೆಯನ್ನು ಮಹಾ ತಪಸ್ವಿನಿ ಎಂದು ಕರೆಯುತ್ತಾ ಬಹು ಗೌರವದಿಂದ ಕಾಣುತ್ತಿದ್ದರು.

***

ಬೆಂಡೇಕಾಯಿ ಗಿಡದಿಂದ ಸಿಕ್ಕುವ ಗೋಂದನ್ನು ಔಷಧಿಗಾಗಿ ಉಪಯೋಗಿಸುವದುಂಟು. ಗಿಡದ ದಂಟಿನಿಂದ ನಾರನ್ನು ತೆಗೆಯಬಹುದು ನಾರನ್ನು ಕಾಗದ ತಯಾರ್ಮಾಡುವುದಕ್ಕೆ ಉಪಯೋಗಿಸುವಂತೆ ತಿಳಿಯುತ್ತೆ. ಚನ್ನಾಗಿ ಬಲಿತ ದಂಟನ್ನು ಬುಡಮಟ್ಟ ಕೊಯಿದು ನೀರಿನಲ್ಲಿ ಚನ್ನಾಗಿ ಕೊಳೆಯಿಸಬೇಕು ತರುವಾಯ ಮೇಲಿನ ತೊಗಟೆಯನ್ನು ಬಿಡಿಸಿ ಬಲವಾಗಿ ಸೆಣೆದು ನೀರಿನಲ್ಲಿ ತೊಳೆದರೆ ಉತ್ತಮವಾದ ನಾರು ಹೊರಡುವದು. ನಾರಿನಿಂದ ಹಗ್ಗವನ್ನು ಮಾಡಬಹುದು. ಉಳಿದ ದಂಟನ್ನು ಸೌದೆಯಾಗಿ ಉಪಯೋಗಿಸುತ್ತಾರೆ. ಬೆಂಡೇಗಿಡ ಬೆಳೆಯುವದರಿಂದ ಖರ್ಚು ಜಾತಾ ಎಕರೆ ಒಂದಕ್ಕೆ ಸುಮಾರು ೪೦ ರೂಪಾಯಿ ಲಾಭ ಬರುತ್ತೆಂದು ಹೇಳಬಹುದು.

***

ರಾಜಮಂಧ್ರಿ ವಿದ್ಯಾಶಾಲೆಯಲ್ಲಿ ೨೩೦ ಮಂದಿ ವಿದ್ಯಾರ್ಥಿಗಳು ಕಳೆದ ವಾರ ಒಂದು ದಿನ ವಂದೇಮಾತರಂ ಎಂಬ ಹೆಸರು ಕೆತ್ತಿರುವ ಬಿಲ್ಲೆಗಳನ್ನು ಕತ್ತಿಗೆ ಕಟ್ಟಿಕೊಂಡು ಪಾಠಶಾಲೆಗೆ ಹೋದರು. ಪಾಠಶಾಲಾ ಅಧ್ಯಕ್ಷರಾದ ಮಿ|| ಮಾರ್ಕ್ ಹಂಟರ್‌ಯವರು ಅವರನ್ನು ಕರೆದು ಆ ಬಿಲ್ಲೆಗಳನ್ನು ಕಿತ್ತು ಹಾಕಿಬಿಟ್ಟು ಬನ್ನಿ ಎಂದೂ ಇಲ್ಲವಾದರೆ ವಿದ್ಯಾಶಾಲೆಗೇ ಸೇರಿಸುವುದಿಲ್ಲವೆಂದೂ ಆಜ್ಞೆ ಮಾಡಿದರು. ಸುಮಾರು ೨೦೦ ಹುಡುಗರು ಒಂದೇ ಮಾತರಂ ಎಂದು ಕೂಗುತ್ತಾ ವಿದ್ಯಾಶಾಲೆಯನ್ನು ಬಿಟ್ಟು ಹೊರಟುಹೋದರು. ಮತ್ತು ಅಧ್ಯಕ್ಷರು ಹುಡುಗರ ಕ್ಷಮಾಪಣೆಯನ್ನು ಕೇಳಿಕೊಂಡಲ್ಲದೆ ಅವರ್ಯಾರೂ ಮತ್ತೆ ವಿದ್ಯಾಶಾಲೆಗೆ ಬರುವದಿಲ್ಲವೆಂದು ಹಟ ಹಟ್ಟಿಕೊಂಡಿದ್ದಾರೆಂದು ತಿಳಿದು ಬಂದಿದೆ.

***

ಕಲ್ಕತ್ತಾ ಪಟ್ಟಣಕ್ಕೆ ಬಂದಿರುವ ಕೆಲವು ಚೀನಾ ಸ್ತ್ರೀಯರು ಹಲ್ಲುನೋವು ವಾಸಿಮಾಡುತ್ತೇವೆಂದು ಹೇಳಿ ಜನರನ್ನು ಮೋಸಪಡಿಸಿ ಅವರಿಂದ ದುಡ್ಡು ಮುಂತಾದ್ದನ್ನು ಕಸುಕೊಳ್ಳುತ್ತಿದ್ದಾರೆ. ಕಳೆದ ವಾರ ಕಲ್ಕತ್ತೆಯ ಒಬ್ಬ ಡಾಕ್ಟರು ಆ ಚೀನಾ ಸ್ತ್ರೀಯರ ಮೋಸವನ್ನು ಕಂಡು ಹಿಡಿಯಬೇಕೆಂದು, ನಾಲ್ಕು ಮಂದಿ ಚೀನಾ ಸ್ತ್ರೀಯರನ್ನು ಕರಸಿ ಹಲ್ಲು ನೋಯುತ್ತೆಂದು ಹೇಳಿದರು ಆಗ ಆ ಹೆಂಗಸರು ಹಲ್ಲು ಪರೀಕ್ಷೆ ಮಾಡಿ ಅದರ ಒಳಭಾಗದಲ್ಲಿ ಹುಳು ಬಿದ್ದಿದೆ ಎಂದು ಡಾಕ್ಟರಿಗೆ ಹೇಳಿ, ಅವರಿಗೆ ಮೋಸಮಾಡಿ ಕೆಲವು ಹುಳಗಳನ್ನು ಕೈಯಿಂದ ಅವರ ಬಾಯಿನೊಳಕ್ಕೆ ಹಾಕಲು ಪ್ರಯತ್ನ ಪಟ್ಟರು. ಆಗ ಡಾಕ್ಟರು ಅವರನ್ನು ಹಿಡಿದು ಮೋಸಗಾರರೆಂದು ಹೇಳಿ ಪೋಲೀಸಿಗೆ ಒಪ್ಪಿಸಿದರು. ಮ್ಯಾಜಿಸ್ಟ್ರೇಟರು ತನಿಖೆ ಮಾಡುತ್ತಿದ್ದಾರೆ.

***

ಬರ್ಮಾ ಆಧಿಪತ್ಯದಲ್ಲಿ ರಾಜಕುಮಾರ ನಿರ್ಲಾಂಗ್ ಎಂಬುವನು ಕೆಲವು ಹಿಂಬಾಲಕರ ಸಮೇತ ದಂಗೆ ಮಾಡಿ ಸೀಡಾ ಎಂಬ ಊರನ್ನು ಸ್ವಾಧೀನಮಾಡಿಸಿಕೊಂಡು, ತಾನೇ ರಾಜನೆಂದು ನಟಿಸುತ್ತಾ, ಹೆಚ್ಚು ಹೆಚ್ಚಾಗಿ ಜನರನ್ನು ತನ್ನ ಕಡೆಗೆ ಸೇರಿಸಿಕೊಳ್ಳುತ್ತಾ ಇಂಗ್ಲಿಷರನ್ನು ಓಡಿಸಬೇಕೆಂದು ಮಸಲತ್ತು ಮಾಡುತ್ತಾ ಬಂದನು ಇದರ ದೆಸೆಯಿಂದ ಆ ಪ್ರಾಂತ್ಯದಲ್ಲಿ ಪ್ರಜಾ ನೆಮ್ಮದಿಗೆ ಭಂಗ ಉಂಟಾಗಿದೆ ಎಂದು ಗವರ್ನಮೆಂಟಿಗೆ ತಿಳಿದುಬಂದು ಅವರು ಮಾಂಡಲೆ, ಸಾಗೈಂಗ್, ಶಿಂಬಾತ್ ಎಂಬೀ ಠಾಣ್ಯಗಳಿಂದ ಸೈನ್ಯಗಳನ್ನು ಆ ಪ್ರಾಂತ್ಯಕ್ಕೆ ಕಳುಹಿಸಿದರು. ಈಚೆಗೆ ಈ ಸೈನಿಕರು ಆ ದಂಗೇಕೋರರಲ್ಲಿ ಕೆಲವರನ್ನು ಹಿಡಿದಿರುತ್ತಾರೆಂತಲೂ ಆದರೆ ಆ ರಾಜಕುಮಾರನು ಐದು ಮಂದಿ ಹಿಂಬಾಲಕರ ಸಮೇತ ಸಿಕ್ಕದೆ ತಲೆ ತಪ್ಪಿಸಿಕೊಂಡಿದ್ದಾನೆಂತಲೂ ತಿಳಿದು ಬಂದಿದೆ

***

ಹಿಂದುಸ್ಥಾನದಲ್ಲಿ ಕಳೆದ ಹತ್ತು ವರುಷಗಳಿಂದ ಪ್ಲೇಗ್ ಉಪದ್ರದಿಂದ ಉಂಟಾಗಿರುವ ಮರಣ ಸಂಖ್ಯೆಯನ್ನು ನೋಡಲಾಗಿ ವರುಷ ವರುಷಕ್ಕೂ ಹೆಚ್ಚುತ್ತಲೇ ಬಂದಿರುವುದು. ೧೯೦೦ ರಲ್ಲಿ ೨ ಲಕ್ಷವೂ ೩೪ ಸಾವಿರ ಜನರೂ, ೧೯೦೨ ರಲ್ಲಿ ೫ ಲಕ್ಷವೂ ೭೭ ಸಾವಿರ ಜನರೂ, ೧೯೦೩ ರಲ್ಲಿ ೫ ಲಕ್ಷವೂ ೫೭ ಸಾವಿರ ಜನರೂ, ೧೯೦೪ ರಲ್ಲಿ ೧೧ ಲಕ್ಷವೂ ೨೨ ಸಾವಿರ ಜನರೂ ಮೃತಪಟ್ಟಿದ್ದಾರೆ. ೧೯೦೫ ರಲ್ಲಿ ೮ ಲಕ್ಷವೂ ೫೧ ಸಾವಿರ ಪ್ರಜೆಗಳೂ, ೧೯೦೬ ರಲ್ಲಿ ೩,೩೨,೦೦೦ ಜನರೂ ಕಾಲವಾದರು. ಅಂತು ೧೮೯೬ ನೇ ಅಕ್ಟೋಬರಿನಿಂದ ೧೯೦೬ನೆ ಡಿಸೆಂಬರ್ ಆಖೈರುವರೆಗೆ ಹತ್ತು ವರುಷಗಳಲ್ಲಿ ೪೪ ಲಕ್ಷವೂ ೧೨ ಸಾವಿರ ಪ್ರಜೆಗಳು ಈ ಉಪದ್ರದಲ್ಲಿ ಲಯವಾಗಿರುತ್ತಾರೆ. ಈಚೆಗೆ ೧೯೦೭ನೆ ವರುಷದ ಜನವರಿ ಆರಂಭಿಸಿ ಕಳೆದ ಮೂರುವರೆ ತಿಂಗಳಲ್ಲಿ ಆಗಲೇ ೪,೮೫,೦೦೦ ಜನರು ಈ ಉಪದ್ರದಲ್ಲಿ ಮೃತಪಟ್ಟಿರುವರು.

***

ಬರ್ಡವಾನ್ ಮಹಾರಾಜರವರು ತಮ್ಮ ಸಂಸ್ಥಾನದ ವಿದ್ಯಾಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಬಹುಮಾನಗಳನ್ನು ಕೊಟ್ಟು, ಸ್ವದೇಶೀ ಪಾರ್ಟಿಯ ವಿಚಾರದಲ್ಲಿ ಕೆಲವು ವಿವೇಕವಾಕ್ಯಗಳನ್ನು ಹೇಳಿದರು. ಈ ವಾಕ್ಯಗಳನ್ನು ವಾಚಕರೆಲ್ಲಾ ನೆನಪಿನಲ್ಲಿಟ್ಟುಕೊಳ್ಳಬೇಕೆಂದು ಇಲ್ಲಿ ಸೂಚಿಸಿರುತ್ತೇವೆ ಅವರು ಹೇಳಿದ ಮುಖ್ಯಾಭಿಪ್ರಾಯವೇನೆಂದರೆ — ವಿದ್ಯಾರ್ಥಿಗಳು ರಾಜಕೀಯವಿಷಯಗಳಲ್ಲಿ ತಲೆ ಹಾಕುವುದು ಎಷ್ಟು ಮಾತ್ರವೂ ಯೋಗ್ಯವಲ್ಲ ಹೀಗೆ ಹೇಳಿದ್ದರಿಂದ ನಾನು ಸ್ವದೇಶಾಭಿಮಾನಿಯಲ್ಲವೆಂಬದಾಗಿ ಯಾರೂ ಊಹಿಸಿಕೊಳ್ಳಕೂಡದು ಬಾಲಕರು ಈ ವಿಷಯದಲ್ಲಿ ಪ್ರವೇಶಿಸುವುದರಿಂದ ಬರೀ ವ್ಯರ್ಥವಾದ ಗಲಭೆಗೆ ಕಾರಣರಾಗುತ್ತಾರೆ. ನಮ್ಮ ದೇಶದ ಸರಕುಗಳು ಸುಲಭಕ್ರಯಕ್ಕೆ ಸಿಕ್ಕುವ ತನಕ ನಾವೆಲ್ಲಾ ಅನ್ಯದೇಶದ ಸರಕುಗಳನ್ನೇ ಕೊಂಡುಕೊಳ್ಳಬೇಕಾಗಿದೆ ಸುಲಭವಾಗಿ ಸಿಕ್ಕುವ ಪಕ್ಷಕ್ಕೆ ಅವನ್ನು ವರ್ಜಿತ ಮಾಡಬಹುದು.

***

ರಾವಲ್ಪಿಂಡಿಯಲ್ಲಿ ಕಳೆದ ವಾರ ಲಾಲಾ ಗುರುದಾಸರಾಂ, ಲಾಲಾ ಹಂಸರಾಜ, ಲಾಲಾ ಅಮಲಕರಾಂ ಎಂಬೀ ಮೂರು ಮಂದಿ ವಕೀಲರು ಒಂದು ಸಭೆಯಲ್ಲಿ ನಿಂತು ಇಂಗ್ಲಿಷ್ ಅಧಿಕಾರಿಗಳ ಮೇಲೆ ಕೋಪಯುಕ್ತವಾದ ಉಪನ್ಯಾಸಗಳನ್ನು ಮಾಡಿ ಪ್ರಜೆಗಳ ಮನಸ್ಸನ್ನು ಕೆಡಿಸಿದರೆಂದು ಡೆಪ್ಯುಟಿ ಕಮಿಷನರವರು ಆ ಮೂರು ಮಂದಿಗೂ ನೋಟಿಸ್ ಕೊಟ್ಟರು ಇದನ್ನು ಕೇಳಿದ ಆ ಡಿಸ್ಟ್ರಿಕ್ಟಿನ ಪ್ರಜೆಗಳು ಸುಮಾರು ಹತ್ತು ಸಾವಿರಮಂದಿ ಸಭೆಸೇರಿ ಡೆಪ್ಯುಟಿ ಕಮಿಷನರು ನೋಟಿಸ್ ಕೊಟ್ಟ ವಿಷಯವನ್ನು ಚರ್ಚೆಮಾಡಿ, ಆ ಮೂರು ಮಂದಿಯೂ ಅಂಥಾ ಅಪಮಾನಕರವಾದ ದುರ್ಭಾಷೆಗಳನ್ನು ಆಡಲಿಲ್ಲವೆಂದು ತೀರ್ಮಾನ ಮಾಡಿದರು. ತರುವಾಯ ಪ್ರಜೆಗಳು ಬೀದಿಗಳ ಮೇಲೆ ಹೊರಟು ಯೂರೋಪಿಯನ್ ಅಧಿಕಾರಿಗಳ ಮನೆ ಮಠಗಳಿಗೆ ಕಲ್ಲು ಹೊಡೆದು ದಾಂಧಲೆ ನಡಿಸಿದರು. ಪೋಸ್ಟಾಫೀಸಿಗೆ ನುಗ್ಗಿ ಹಣಕಾಸನ್ನು ಲೂಟಮಾಡಿದರು. ಅಂಗಡಿ ಮುಂಗಟ್ಟುಗಳೂ ಸರ್ಕಾರಿ ಮತ್ತು ರೈಲ್ವೆ ಕಾರ್ಖಾನೆಗಳೂ ಮುಚ್ಚಲ್ಪಟ್ಟವು. ಹೀಗೆಲ್ಲಾ ಅಲ್ಲಿ ತುಂಬಾ ಗಲಭೆಯುಂಟಾಗಿದೆ ಎಂತಲೂ ಪೋಲೀಸಿನವರು ಕೆಲವು ಮುಖಂಡರನ್ನು ದಸ್ತಗಿರಿ ಮಾಡಿರುತ್ತಾರೆಂತಲೂ ತಂತೀವರ್ತಮಾನ ಬಂದಿದೆ.

***

ಬಂಗಾಳಾ ಆಧಿಪತ್ಯಕ್ಕೆ ಸೇರಿದ ಫರೀದ್‌ಪುರದಲ್ಲಿ ನಾಲ್ಕು ಜನರು ಸೇರಿಕೊಂಡು ಒಬ್ಬ ಹಣಗಾರನನ್ನು ಪುಸಲಾಯಿಸಿ ಎಲ್ಲಿಗೋ ಕರೆದುಕೊಂಡುಹೋಗಿ ಕೊಂದುಬಿಟ್ಟರು. ಆದರೆ ಪೋಲೀಸಿನವರು ತಲಾಷ್ ಮಾಡಿ ಆ ನಾಲ್ವರನ್ನೂ ಹಿಡಿದು ಸೆಷನ್ಸ್ ಜಡ್ಜರಲ್ಲಿ ದರ್ಯಾಫ್ತು ಮಾಡಿಸಿದಾಗ, ಅವರು ಆ ನಾಲ್ವರಿಗೂ ಮರಣದಂಡನೆಯನ್ನು ವಿಧಿಸಿದರು. ಅದರ ಮೇಲೆ ಅವರು ಕಲ್ಕತ್ತಾ ಹೈಕೋರ್ಟಿನಲ್ಲಿ ಅಪೀಲ್ ಮಾಡಿಕೊಂಡರು. ಹೈಕೋರ್ಟ್ ಜಡ್ಜಿಗಳು ಒಬ್ಬನನ್ನು ಖುಲಾಸ್ ಮಾಡಿ, ಬಾಕಿ ಮೂವರಿಗೂ ಮರಣದಂಡನೆಯನ್ನು ಖಾಯಂ ಮಾಡಿದರು ಅವರು ಈ ತೀರ್ಮಾನ ಹೇಳಿದ ಒಡನೆಯೇ ಅಪರಾಧಿಯ ಕಡೆ ವಕೀಲನು ಎದ್ದು ಜಡ್ಜಿಯವರನ್ನು ಕುರಿತು—ಫಿರ್ಯಾದಿ ಪಕ್ಷದ

ರಾದರು ಆರ್ಗ್ಯುಮೆಂಟ್ ಮಾಡಿದ ನಂತರ ಅಪರಾಧಿಗಳ ಕಡೆ ವಕೀಲ ನಾಗಿರುವ ನಾನು ಆರ್ಗ್ಯುಮೆಂಟ್ ಮಾಡಬೇಕೆಂದಿದ್ದೆನು ಆದರೆ ಜಡ್ಜಿಗಳು ಅವಕ್ಕೆ ನನಗೆ ಅವಕಾಶ ಕೊಡದೆ ಹೋದರು ಎಂದು ತಿಳಿಸಿದನು ಈ ಮಾತನ್ನು ಕೇಳಿದ ಕೂಡಲೇ ಜಡ್ಜಿಗಳು ತಾವು ಹೇಳಿದ್ದ ತೀರ್ಮಾನವನ್ನು ರದ್ದುಮಾಡಿ, ಆ ವಕೀಲನ ಹೇಳಿಕೆಯನ್ನು ಕೇಳುವ ಉದ್ದಿಶ್ಯ ಇನ್ನೊಂದಿನಕ್ಕೆ ಹೀರಿಂಗು ಇಟ್ಟರು ಹೀಗೆ ಜಡ್ಜಿಯವರು ಶಿಕ್ಷೆ ವಿಧಿಸಿದ ಮೇಲೆ ಅದನ್ನು ವಜಾಮಾಡಿದ್ದು ಇದುವರೆಗೆ ಎಲ್ಲಿಯೂ ಕೇಳಿದ್ದಿಲ್ಲ

***

ಬರ್ಮಾ ಅಧಿಪತ್ಯಕ್ಕೆ ಸೇರಿದ ರಂಗೂನ್ ಪಟ್ಟಣದಲ್ಲಿ ತಂದೆ ತಾಯಿಗಳು ಮಕ್ಕಳನ್ನು ಚನ್ನಾಗಿ ಸಾಕಿ ಬೆಳಸುವದಕ್ಕೆ ಪ್ರೋತ್ಸಾಹ ಮಾಡಬೇಕೆಂದು ಕೆಲವು ಅಧಿಕಾರಿಗಳೂ ಯೂರೋಪ್ಯರಾದ ದೊಡ್ಡ ಮನುಷ್ಯರೂ ಒಂದು ಪ್ರದರ್ಶನವನ್ನು ನಡಿಸಿದರು ಅಲ್ಲಿನ ಜೂಬಿಲಿ ಹಾಲ್ ಎಂಬ ಕಟ್ಟಡದಲ್ಲಿ ಕಳೆದ ವಾರ ಈ ಪ್ರದರ್ಶನ್ನು ಮಾಡಿದರು ಈ ಪ್ರದರ್ಶನಶಾಲೆಗೆ ತಾಯಿ ತಂದೆಗಳು ೪೦೦ ಮಕ್ಕಳನ್ನು ತಂದು ಸಾಲು ಸಾಲಾಗಿ ಕೂಡಿಸಿದ್ದರು ಪರೀಕ್ಷಕರು ಮಕ್ಕಳೆಲ್ಲಾ ನೋಡಿ ಬಹಳ ಉತ್ಕೃಷ್ಟವಾಗಿ ಸಾಕಿ ಬೆಳಸಿದ್ದ ಮಕ್ಕಳನ್ನು ಆರಿಸಿ ೫೦, ೧೫, ೧೦ ರೂಪಾಯಿಗಳ ಮೂರು ಬಹುಮಾನಗಳನ್ನು ಕೊಟ್ಟರು ಮಕ್ಕಳೆಲ್ಲಾ ವಯಸ್ಸಿನ ಪ್ರಕಾರ ಆರು ತರಗತಿಗಳಾಗಿ ವಿಂಗಡಿಸಿದ್ದರು ೩ ತಿಂಗಳೊಳಗಿನ, ೬ ತಿಂಗಳೊಳಗಿನ, ೧೨ ತಿಂಗಳೊಳಗಿನ, ಹೀಗೇ ೩ ವರುಷಗಳೊಳಗಿನ ಮಕ್ಕಳನ್ನು ಪ್ರತ್ಯೇಕಿಸಿ ಕೂಡಿಸಿದರು ಆ ನಾನೂರು ಮಂದಿ ಮಕ್ಕಳಲ್ಲಿ ಬಹಳ ಚನ್ನಾಗಿ ಬೆಳೆದಿದ್ದ ೩ ತಿಂಗಳ ಮಗುವಿಗೆ ಕಿಂಗ್ ಎಂಬ ದೊರೆಸಾನಿಯು ೫೦ ರೂಪಾಯಿ ಬಹುಮಾನ ಕೊಟ್ಟಳು ಡಫರಿನ್ ಆಸ್ಪತ್ರೆಯಲ್ಲಿ ಹುಟ್ಟಿದ ಮಕ್ಕಳ ಪೈಕಿ ಬಹಳ ಆರೋಗ್ಯವಾಗಿ ಬೆಳೆದಿದ್ದ ಒಂದು ಮಗುವಿಗೆ ಮಿಸೆಸ್ ಸೆಕ್ಸ್‌ಟನ್ ಎಂಬಾಕೆ ೨೫ ರೂಪಾಯಿ ಬಹುಮಾನ ಮಾಡಿದಳು ಆರೋಗ್ಯಕರವಾದ ಅನೇಕ ಮಕ್ಕಳನ್ನು ಪಡೆದಿದ್ದ ಒಬ್ಬ ಬರ್ಮಾಯರ ಸಂಸಾರಕ್ಕೆ ಇಬ್ಬರು ಗೃಹಸ್ಥ ಜನರು ೪೦ ರೂಪಾಯಿ ಬಹುಮಾನ ಕೊಟ್ಟರು, ಈ ಸಂಸಾರದಲ್ಲಿ ೧ ವರುಷ ಮೊದಲುಗೊಂಡು ೨೦ ವರುಷದವರೆಗೆ ವಯಸ್ಸಿದ್ದ ಹನ್ನೊಂದು ಮಕ್ಕಳಿದ್ದರು ನಾಲ್ವರು ತಾಯಿ ತಂದೆಗಳು ತನಗೆ ಹುಟ್ಟಿದ ನಾಲ್ಕು ಜೊತೆ ಅವಳಿ ಮಕ್ಕಳನ್ನು ಪ್ರದರ್ಶನ ಮಾಡಿದ್ದನ್ನು ಪರೀಕ್ಷಕರು ನೋಡಿ ಅದರ ಪೈಕಿ ಚನ್ನಾಗಿ ಬೆಳದಿದ್ದ ಎರಡು ಜೊತೆ ಅವಳಿ ಮಕ್ಕಳಿಗೆ ೫೦, ೧೫ ರೂಪಾಯಿನಂತೆ ಎರಡು ಬಹುಮಾನಗಳನ್ನು ಕೊಟ್ಟರು ಬಹುಮಾನ ದೊರೆಯದೆಹೋದ ಉಳಿದ ಎಲ್ಲಾ ಮಕ್ಕಳಿಗೂ ಬೊಂಬೆ ಮುಂತಾದ ಆಟದ ಸಾಮಾನುಗಳನ್ನು ಎಲ್ಲರಿಗೂ ತಿಂಡಿಯನ್ನೂ ಹಂಚಿದರು

ವಿದೇಶ ವರ್ತಮಾನಗಳು

ರಷ್ಯಾದವರಿಗೂ ಜರ್ಮನವರಿಗೂ ಯಾವ ವೈಮನಸ್ಯದಲ್ಲಿ ನಡೆದ ಕರಾರುಗಳಿಗೆ ಈ ತಿಂಗಳ ಅಂತ್ಯಭಾಗದಲ್ಲಿ ಎರಡು ರಾಜ್ಯದ ರಾಯಬಾರಿಗಳು ವಿಧಿವತ್ತಾಗಿ ಸಮ್ಮತಿ ರುಜುಪತ್ರಗಳನ್ನು ಹಾಕುವವರಾಗಿದ್ದಾರೆಂದು ತಂತೀವರ್ತಮಾನ ಬಂದಿದೆ.

***

ಜರ್ಮನ್ ಪ್ರಜೆಗಳನ್ನಾಗಲಿ ಹಿಂದುಸ್ಥಾನದವರನ್ನಾಗಲಿ ಕೋಲಂಬಿಯಾ ಎಂಬ ಇಂಗ್ಲಿಷ್ ಸ್ವಾಸ್ಥ್ಯದೊಳಕ್ಕೆ ಬರಗೊಡಿಸ ಕೂಡದೆಂದು ಆ ಸ್ವಾಸ್ಥ್ಯದ ಅಧಿಕಾರಿಗಳು ಕಟ್ಟು ಮಾಡಿಕೊಂಡಿದ್ದಾರೆ ಈ ಭಾಗವನ್ನು ಗವರ್ನರವರು ಇನ್ನೂ ಒಪ್ಪಿಕೊಂಡಿಲ್ಲ

***

ರಷ್ಯಾ ರಾಜ್ಯದಲ್ಲಿ ಒಂದು ಹಡಗು ನೀವಾ ಎಂಬ ನದಿಯನ್ನು ದಾಟುತ್ತಿದ್ದಾಗ ಹಿಮಗಡ್ಡೆಗಳ ಪ್ರವಾಹಕ್ಕೆ ಬಿದ್ದು ಒಡೆದು ಹೋಯಿತು ಅದರಲ್ಲಿದ್ದ ಅರವತ್ತು ಮಂದಿ ಪ್ರಯಾಣಿಕರು ಹಿಮಗಡ್ಡೆಯ ಪ್ರವಾಹದ ಅಡಿಗೆ ಸಿಕ್ಕಿ ಕೊಚ್ಚಲ್ಪಟ್ಟರು ಆ ಪೈಕಿ ಇಪ್ಪತ್ತೈದು ಮಂದಿ ಮಾತ್ರ ಬಹಳ ಕಷ್ಟಪಟ್ಟು ಬದುಕಿ ಬಂದಿದ್ದಾರೆ

***

ಅಮೇರಿಕಾದಲ್ಲಿ ಕೋಟ್ಯಾಧೀಶ್ವರನಾದ ಮಿ॥ ರಾಕ್‌ಫೆಲರ್ ಎಂಬಾತನು ಕ್ಲೀವ್‌ಲೆಂಡ್ ಪಟ್ಟಣದಲ್ಲಿ ತನ್ನ ಬಂಗಲೆಯನ್ನೂ ಅದಕ್ಕೆ ಸೇರಿದ ಉದ್ಯಾನವನವನ್ನೂ ಪ್ರಜೆಗಳ ಉಪಯೋಗಾರ್ಥವಾಗಿ ಬಿಟ್ಟುಕೊಟ್ಟು, ಅದರ ದುರಸ್ತು ಮುಂತಾದ್ದಕ್ಕೆ ಐವತ್ತು ಲಕ್ಷ ರೂಪಾಯನ್ನು ಫಂಡು ಹಾಕಿರುತ್ತಾನೆ ಈ ಉದ್ಯಾನವನದಲ್ಲಿ ಯಾರೂ ಕುಡಿಯಕೂಡದು, ಬೀಡಿ ಚುಟ್ಟಾ ಮದ್ಯಗಳನ್ನು ಉಪಯೋಗಿಸಲೂ ಬೇಕರಿ ಮಾಡಲೂ ಕೂಡದು ಎಂದು ಆಜ್ಞೆ ಮಾಡಿರುವನು

***

ಪರ್ಷಿಯಾ ರಾಜ್ಯದ ಮಂತ್ರಿಯಾಗಿದ್ದ ಗಟ್ಟಿಗಾರನಾದ ಅಮೀನೆ ಸುಲ್ತಾನ್ ಎಂಬಾತನನ್ನು ಈಗಿನ ಸುಲ್ತಾನರು ವಾಪಸು ಕರೆಸಿಕೊಂಡು, ಆತನನ್ನು ಅದೇ ಮಂತ್ರಿಸ್ಥಾನಕ್ಕೆ ನೇಮಕ ಮಾಡಿಕೊಂಡಿದ್ದಾರೆ ಆದರೆ ಆತನು ಕೆಲಸದ ಮೇಲೆ ಹಾಜರಾಗುವುದಕ್ಕೆ ಮುಂಚೆ ಸುಲ್ತಾನರನ್ನು ಕಂಡು, ಇನ್ನು ಮುಂದೆ ಸುಲ್ತಾನರು ಹೊಸ ಪಾರ್ಲಿಮೆಂಟ್ ಮೆಂಬರುಗಳ ತೀರ್ಮಾನದಂತೆಯೂ ಅವರ ಸಹಪಾಟಿಗಳಾಗಿಯೂ ರಾಜ್ಯಭಾರ ಮಾಡುತ್ತಾ ಬರಬೇಕೆಂತೆ ಒಪ್ಪಂದ ಮಾಡಿಕೊಂಡಿರುವನು

***

ಲಿಪರಿ ಎಂಬ ದ್ವೀಪ ಸಮುದಾಯದಲ್ಲಿ ಸ್ಟ್ರಾಂಬೊಲಿ ಎಂಬೊಂದು ಅಗ್ನಿಪರ್ವತವಿರುತ್ತದೆ ಕಳೆದವಾರ ಈ ಅಗ್ನಿ ಪರ್ವತದ ಮುಖದಿಂದ ಐದು ನಿಮಿಷಗಳ ತನಕ ಕೆಂಪಗೆ ಕಾದ ಕಲ್ಲುಗಳು ಹಾರಿ ಸುತ್ತಲೂ ಮಳೆಗರೆದವು ತರುವಾಯ ಕಾದ ಕಲ್ಲುಗಳು ಲೋಹಾದಿಗಳು ಸುರಿಯುತ್ತಾ ಸುತ್ತಲೂ ಇದ್ದ ದ್ರಾಕ್ಷೆ ತೋಟಗಳಲ್ಲಿ ಬಿದ್ದು ತೋಟಗಳೆಲ್ಲಾ ಉರಿದು ಹೋದವು ಅಪಾರವಾದ ಧನ ನಷ್ಟವಾಯಿತು ಸುತ್ತು ಮುತ್ತು ಸೇರಿಯೂ ಸುಂಟರ ಎದ್ದಾಗಿದೆ ಎಂದ ತಂತೀ ವರ್ತಮಾನ ಬಂದಿದೆ

ಅಗ್ನಿಪರ್ವತದ ಬಾಯಿಯಿಂದ ಸುರಿಯುವಂಥಾ ಬೂದಿಯನ್ನು ಕೂಡಿಸಿ ಜರ್ಮನವರು ಸಿಮೆಂಟ್ ಎಂಬ ತಿಳಿಗಾರೆ ಪುಡಿಯನ್ನು ತಯಾರು ಮಾಡುತ್ತಿದ್ದಾರೆ ಸಾಮಾನ್ಯವಾದ ಸಿಮೆಂಟ್ ಎಂಬ ಗಾರೆಪುಡಿಗಿಂತಲೂ ಈ ಹೊಸತರಹ ಪುಡಿಯು ಬಹಳ ಬಲವಾದದ್ದೆಂತಲೂ ಬಹು ಕಾಲಕೆಡದೆ ಕಟ್ಟಡಗಳನ್ನು ಕಾಯುವುದೆಂತಲೂ ಹೇಳುವರು ಈ ಬಗೆ ಜರ್ಮನಲ್ಲಿನ ಈ ಬೂದಿಯನ್ನು ಕೂಡಿಸಿ ಕಾರ್ಖಾನೆಗಳಿಗೆ ಸಾಗಿಸುವುದೇ ಒಂದು ದೊಡ್ಡ ವ್ಯಾಪಾರವಾಗಿದೆ ಅದರಿಂದ ತಯಾರಾದ ಗಾರೇಪುಡಿಯನ್ನೇ ಹೊಸ ಕಟ್ಟಡಗಳಿಗೆ ಉಪಯೋಗಿಸಲಾರಂಭಿಸಿದಾರೆ.

***

ತುರ್ಕಿರಾಜ್ಯಕ್ಕೆ ಸೇರಿದ ಸಾಲೋನಿಕಾದಲ್ಲಿ ವ್ಯಾಪಾರಾದಿಗಳನ್ನು ಮಾಡಿಕೊಂಡಿದ್ದ ಮಿ॥ ರಾಬರ್ಟ್ ಅಬ್ಬಾಟ್ ಎಂಬೊಬ್ಬ ಐಶ್ವರ್ಯವಂತನಾದ ಇಂಗ್ಲಿಷ್ ವರ್ತಕನನ್ನು ಕೆಲವು ತುಂಟರು ಕಳೆದ ಮಾರ್ಚಿ ೩೧ನೆ ತಾ॥ ರಾತ್ರಿ ಆತನ ಮನೆಯ ಬಾಗಿಲಲ್ಲಿ ಹಿಡಿದು ಎತ್ತಿಕೊಂಡು ಹೋಗಿ ಕೆಲವುಕಾಲ ಬಚ್ಚಿಟ್ಟುಕೊಂಡಿದ್ದು, ೨,೨೫,೦೦೦ ರೂಪಾಯಿ ಕೊಟ್ಟರೆ ಬಿಡುತ್ತೇವೆಂದು ತಿಳಿಸಿದರು ತುರ್ಕಿ ಸುಲ್ತಾನರು ಈ ವಿಷಯಕ್ಕೆ ಗಮನ ಕೊಡದೇಹೋಗಿ ಆ ಪ್ರತಿ ಫಲವನ್ನು ಕೊಟ್ಟು ಅವನನ್ನು ಬಿಡಿಸದೇನೂ ಹೋದರು ಈಗ ಅಲ್ಲಿರುವ ಇಂಗ್ಲಿಷ್ ರಾಯಭಾರಿಯು ಅಷ್ಟು ಹಣವನ್ನೂ ಆ ಜನರಿಗೆ ಪಾವತಿ ಮಾಡಿ, ಆತನನ್ನು ಬಿಡಿಸಿಕೊಂಡರೆಂದು ತಿಳಿಯುವದು.

ಮೈಸೂರು ಗೆಜೆಟ್ ಸಂಗ್ರಹ

ಕೋಲಾರ್ ಡಿಸ್ಟ್ರಿಕ್ಟ್ ಫಾರೆಸ್ಟ್ ಎಕ್ಸ್ಟ್ರಾ ಕನ್ಸರ್ವೇಟರ್ ಮಿ॥ ಎಸ್ ವಿ ಬಾಪೂರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಸ್ಪೆಷಲ್ ಡ್ಯೂಟಿ ಮೇಲಿರುವ ಫಾರೆಸ್ಟ್ ಅ॥ ಕನ್ಸರ್ವೇಟರ್ ಮಿ॥ ವೈ ಸೀತಾರಾಮಯ್ಯನವರು ಕೋಲಾರ್ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸ್ ಛಾರ್ಜನ್ನು ವಹಿಸಿರತಕ್ಕದ್ದು

ಮೈಸೂರು ಡಿವಿಜನ್ ಎಕ್ಸಿಕ್ಯೂಟಿವ್ ಇಂಜನಿಯರ್ ಮಿ॥ ಬಿ ಸುಬ್ಬರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದುವರೆ ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಮತ್ತೊಂದು ಹುಕುಂ ಕೊಡಲ್ಪಡುವ ತನಕ ಬೆಂಗಳೂರು ಸಿಟಿ ಪೊಲೀಸ್ ಇನ್ಸ್ಪೆಕ್ಟರ್ ಮಿ॥ ಸ್ಟೀವರ್ಟ್ ರವರು ಹಾವಗಡದ ತಾಲ್ಲೂಕ್ ಅಮಲ್ದಾರ್ ಮತ್ತು ೩ ನೆ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಕೆಲಸ ನೋಡತಕ್ಕದ್ದು.

ಮಿ॥ ಟಿ ವೈದ್ಯನಾಥಯ್ಯರವರಿಗೆ ಕೊಟ್ಟಿರುವ ಮೂರು ತಿಂಗಳ ರಜವನ್ನು ಇನ್ನೂ ಎರಡು ತಿಂಗಳಿಗೆ ಜಾಸ್ತಿ ಮಾಡಿದೆ

ಬೆಂಗಳೂರು ಡಿಸ್ಟ್ರಿಕ್ಟ್ ಅ॥ ಕಮಿಷನರ್ ಮಿ॥ ಟಿ ತಂಬೂಚೆಟ್ಟಿಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಎರಡು ತಿಂಗಳು ಇಪ್ಪತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಕೊಳ್ಳೇಗಾಲ ಸಬ್ ತಾಲ್ಲೂಕು ಡೆ॥ ಅಮಲ್ದಾರ್ ಮಿ॥ ಸರ್ದೀಷರೀಫ್‌ಯವರು ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಅಮಲ್ದಾರ್ ಮತ್ತು ಮೂರನೆಯ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೋಡತಕ್ಕದ್ದು

ಸಬ್ ರಿಜಿಸ್ಟ್ರಾರ್ ಟಿ ಸ್ವಾಮಿ ನಾಥಶಾಸ್ತ್ರಿಯವರು ಕೊಳ್ಳೇಗಾಲ ಸಬ್ ತಾಲ್ಲೂಕಿನ ಡೆ॥ ಅಮಲ್ದಾರ್ ಮತ್ತು ೩ ನೆಯ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೇಮಿಸಲ್ಪಟ್ಟಿದಾರೆ

ಮಳವಳ್ಳಿ ತಾಲ್ಲೂಕ್ ಅಮಲ್ದಾರ್ ಮಿ॥ ಎಚ್ ಗುರುರಾಯರಿಗೆ ಕೊಟ್ಟಿದ್ದ ಎರಡು ತಿಂಗಳ ಪ್ರಿವಿಲೆಜ್ ರಜವನ್ನು ಅವರು ಉಪಯೋಗಿಸಿಕೊಳ್ಳಲಿಲ್ಲವಾದ್ದರಿಂದ ರದ್ದುಮಾಡಿದೆ

ಎಕ್ಸೈಸ್ ಇಲಾಖಾ ಅ॥ ಕಮಿಷನರ್ ಮಿ॥ ಆರ್ ಶಾಮಣ್ಣನವರಿಗೆ ಒಂದು ತಿಂಗಳ ಸಂಬಳವಿಲ್ಲದ ರಜಾ ಕೊಟ್ಟಿತ್ತು

ಅಮಲ್ದಾರ್ ಅಬ್ದುಲ್ ಕರೀಂರವರಿಗೆ ಕೊಟ್ಟಿದ್ದ ಒಂದು ತಿಂಗಳ ಪ್ರಿವಿಲೆಜ್ ರಜವನ್ನು ಇನ್ನು ಎಂಟು ದಿನಗಳಿಗೆ ಜಾಸ್ತಿ ಮಾಡಿದೆ ಅದರ ಜೊತೆಗೆ ನಾಲ್ಕು ತಿಂಗಳೂ ಇಪ್ಪತ್ತೆರಡು ದಿನಗಳ ಕಾಯಿಲೆ ರಜಾ ಕೊಟ್ಟಿದೆ

ಮುಂದೆ ಹೇಳುವ ಅಮಲ್ದಾರುಗಳ ವರ್ಗಾವರ್ಗಿ ಹುಕುಂ ಮಾಡಿದೆ —ಮಿ॥ ಅಬ್ದುಲ್ ಕರೀಂ—ಪಾವಗಡಕ್ಕೆ ಮಿ॥ ವಿ ಗೋಪಾಲರಾವ್—ಬಾಗೇಪಲ್ಲಿಗೆ, ಮಿ॥ ಎಂ ರಂಗನಾಥರಾವ್—ಚಿಕ್ಕನಾಯಕನಹಳ್ಳಿಗೆ, ಮಿ॥ ಆರ್ ಶಾಮರಾವ್—ಚಿಕ್ಕಬಳ್ಳಾಪುರಕ್ಕೆ, ಮಿ॥ ಜಿ ನಾರಾಯಣರಾವ್—ದೊಡ್ಡಬಳ್ಳಾಪುರಕ್ಕೆ ಮಿ॥ ಕೆ ಹನುಮಂತರಾವ್—ಗೋರಿಬಿದನೂರಿಗೆ

ತಾಲ್ಲೋಕು ವರ್ತಮಾನಗಳು

ತಿಪ್ಟೂರು.—ಬಿಸಿಲಿನ ಝಳ ಬಹಳ ಜೋರಾಗಿದೆ ಮಳೆಯೇ ನೋ ೧—೨ ಹದವಾಯಿತು ರೈತರು ಉಳುಮೆ ವಗೈರೆ ಮಾಡಿಕೊಳ್ಳುತ್ತಿದಾರೆ ಇಲ್ಲಿನ ಕೆರೆಯ ನೀರು ಕೆಟ್ಟಿರುವದೆಂದು ತಿಳಿದುಬಂದದ್ದರಿಂದ ಇಲ್ಲಿಗೆ ತುಂಕೂರಿಂದ ಅ॥ ಸರ್ಜನ್ ಮಿ॥ ಮುತ್ತುಸಾಮಿದಾಸ್‌ಯವರು ಬಂದು ಇದರ ನಿಜಸ್ಥಿತಿಯನ್ನು ತಿಳಿದು ಇನ್ನು ಮುಂದೆ ಕೆರೆಯ ನೀರು ಯಾರೂ ಕುಡಿಯಕೂಡದೆಂತಲೂ ಭಾವಿಯ ನೀರನ್ನು ಕಾಯಿಸಿ ಕುಡಿಯಬೇಕೆಂತಲೂ ತೀರ್ಮಾನಿಸಿ ಹೊರಟು ಹೋದರು ಕೆರೆಯ ನೀರಿನ ಬಂದೋಬಸ್ತಿಗಾಗಿ ೩ ಜನ ಪೊಲೀಸ್ ಕಾನ್ಸ್ಟೆಬಲ್‌ಗಳನ್ನು ನೇಮಿಸಿರುತ್ತಾರೆ ಆದ್ದರಿಂದ ಬಡ ಜನಗಳಿಗೆ ಕುಡಿಯುವ ನೀರಿಗೆ ತೊಂದರೆಯುಂಟಾಗಿದೆ — ಶ್ರೀ ಶೃಂಗೇರಿ ಜಗದ್ಗುರುಗಳ ಸ್ವಾರಿ ದಯಮಾಡಿಸಿದ್ದಾಗ್ಗೆ ಈ ತಾಲ್ಲೂಕಿನಿಂದ ಅನೇಕ ಶಿಷ್ಯರು ಇಲ್ಲಿಗೆ ಬಂದು ಸ್ವಾಮಿಗಳ ದರ್ಶನ ತೆಗೆದು ಕೆಂಪು ಸುಮಾರು ೨೦೦೦ ರೂಪಾಯಿ ಮೇಲೆಯೇ ಕಾಣಿಕೆಯನ್ನು ಅರ್ಪಿಸಿದರು ಶ್ರೀ ... ವರದ ಬೋಯಿಗಳ ಪೈಕಿ ಇಬ್ಬರಿಗೆ ಎಂಫ್ಲೇಗ್ ಉಪದ್ರವ ಕಾಣಿಸಿಕೊಂಡು ಮೃತಪಟ್ಟದ್ದರಿಂದ ಬೇರೆ ಹೊಸ ಬೋಯಿಗಳು ಕೂಲಿಗೆ ಬಂದರು —ಇಲ್ಲಿನ ಸಾಹುಕಾರ್ ಶಂಕರಶೆಟ್ಟರ ಅಂಗಡಿಯಲ್ಲಿ ೩ ಉಪ್ಪಿನ ಮೂಟೆಗಳು ಕದ್ದ ಸಿದ್ದಾಮನೆಂಬುವನಿಗೆ ಆರು ತಿಂಗಳ ಕಠಿಣ ಸಜಾ ಆಯಿತು —ಜೂಜಾಟ ಆಡುವಂಥವರಿಗೆ ನಿಂತಹಾಗೆ ಕಾಣುತ್ತೆ ರೀಡಿಂಗ್ ರೂಂ ಉತ್ತಮಸ್ಥಿತಿಯಲ್ಲಿದೆ ಇನ್ನೂ ತುಂಬಾ ಅಭಿವೃದ್ಧಿಗೆ ಬರಬೇಕೆಂದು ಪ್ರಾರ್ಥಿಸುತ್ತೇನೆ

ಚಿಕ್ಕಬಳ್ಳಾಪುರ.—ಇಲ್ಲಿ ೧೫ ದಿವಸದಿಂದ ೩ ಹದ ಮಳೆ ಆಯಿತು ವ್ಯವಸಾಯಸ್ಥರು ಚಿತ್ತನಗಾಗಿ ಭೂಮಿ ಸಿದ್ಧಪಡಿಸಿಕೊಳ್ಳುತ್ತಿದಾರೆ ಈ ಸಾರಿ ಉಲ್ಲಾಗಡ್ಡೆ ಬೆಳೆ ಹೆಚ್ಚಾದ್ದರಿಂದ ಕೊಂಚ ಹಣಕ್ಕಾಗಿ ಖರ್ಚು ಹಚ್ಚಿ ಸಾಲಾ ತೆಗೆಯುವವರಿಗೆ ಅನುಕೂಲವಾಗಿ ೫೦೦೦ ಗಾಡಿ ತುಂಬಿದ ಹಣಾ ಬರುವದು ಹ್ಯಾಗೋ ಈ ಕಡೆ ನಂಬಿದವರನ್ನು ಕೆಡಿಸುವ ವರ್ತಕತನವು ಕೆಲವರಲ್ಲಿ ಆಚರಣೆ ಇದೆ ಇದು ದೈವಭಕ್ತಿಗೂ ಸತ್ಯಕ್ಕೂ ಲೋಪವೆಂದು ಯೋಗ್ಯರು ಅವರನ್ನು ಕ್ಷಮಿಸದೇ ಗುಣಗುಟ್ಟುತ್ತಿದಾರೆ — ಈ ಊರಿಗೆ ಚೀಫ್ ಕೋರ್ಟ್ ಜಡ್ಜಿಯವರಾದ ಮಿ॥ ಹೆಚ್ ವಿ ನಂಜುಂಡಯ್ಯನವರು ಕೋರ್ಟುಗಳ ತನಿಖೆ ಬಗ್ಗೆ ದಯಮಾಡಿಸಿ, ೩—೪ ದಿವಸ ಮೊಕ್ಕಾಂ ಮಾಡಿ ಇದ್ದರು ಇವರು ದಯಮಾಡುವಾಗಲೂ, ವಾಪಸು ಹೊರಡುವಾಗಲೂ ಯಾರೂ ಅವರೊಂದಿಗೆ ಕಲೆಯಲಿಲ್ಲ ಇವರು ಇಲ್ಲಿಂದ ನಂದಿಬೆಟ್ಟಕ್ಕೆ ದಯಮಾಡಿಸುವಾಗ್ಗೆ ಟಾಂಗ ಸಿಕ್ಕದೆ ಕಡೇ ಸಂಜೆ ಬಳಿ ಹಳ್ಳದಲ್ಲಿ ಗಾಡಿ ಕುದುರೆ ಅವರು ಅವರ ಜೊತೆಯಲ್ಲಿ ಕರೆತಿದ್ದವರು ಸಹಾ ಪಟ್ಟು ತಪ್ಪಿಸಿಕೊಂಡು ಧುಮುಕಿ ಕುದುರೆಗಳನ್ನು ಬಿಚ್ಚಿಸಿ ಆವೇ ಗಾಡಿಯನ್ನು ಸರಿಯಾದ ದಾರಿಗೆ ಎಳೆದು ಮುಂದಕ್ಕೆ ಪ್ರಯಾಣ ಮಾಡಿದರು — ಈ ಊರಲ್ಲಿ ೨ ರಾತ್ರಿಗೆ ೭ ಬೋರಿಗಳ ಆಗಿ ಬಂದಾದರು ಪತ್ತೆ ಆಗದೆ ಕಳೆಕೊಂಡ ಜನರು ಬಳಲುವಾಗಿ ಸಂಕಟಪಡುತ್ತಾರೆ ಈ ಪ್ರಾಂತ್ಯ ಪ್ರಜೆಗಳಿಗೆ ಆಸ್ಪತ್ರೆಯಾಗಿ ಪ್ರತಿ ಮನೆಗೂ ಕಾಯಿಲೆ ಇದ್ದೇ ಇದೆ ಹೊಸದಾಗಿ ಬಂದಿರುವ ಡಾಕ್ಟರು ಪ್ರೀತಿ ಇಟ್ಟು ಇಲಾಜ ಮಾಡುತ್ತಾರೆ

ಮೊಳಕಾಲ್ಮೂರು.—ಈ ಊರು ಬೆಟ್ಟದ ಮೇಲೆ ಇರುವದರಿಂದ ಆರೋಗ್ಯವೆ ಚನ್ನಾಗಿರುತ್ತೆ ಉತ್ಸವಕಾಲಗಳಲ್ಲಿ ಅನೇಕ ಜನಗಳು ಸೇರುವದರಿಂದ ಕಚಡಾ ಕಶ್ಮಲ ಜಾಸ್ತಿಯಾಗಿ ಸೇರಿ ಆರೋಗ್ಯವನ್ನು ಕಳಿಸುವದುಂಟು ಬಡ ಬೀದಿಗಳಲ್ಲಿ ಚರಂಡಿಗಳೇ ಇಲ್ಲ ಕೆಲವು ಬೀದಿಗಳಲ್ಲಿ ಇದ್ದಾಗ್ಯೂ ಅದನ್ನು ಕಟ್ಟಿರಕ್ಕದ್ದು ನೋಡುವುದೇ ಇಲ್ಲ ರಂಡೆಯರೇ ಭಾವಿಸನೇಕ ಅನೇಕ ಮನೆಗಳಿಗೆ ಹಿತ್ತಲುಗಳು ಇಲ್ಲ ಮಲಮೂತ್ರವಿಸರ್ಜನೆಗಳಿಗೆ ಬಹು ದೂರ ಹೋಗಬೇಕಾಗುತ್ತೆ ಆ ರೀತಿ ಹೋಗಲು ಅನುಕೂಲವಿಲ್ಲದವರು ಸಮೀಪ ಸ್ಥಳಗಳನ್ನು ನೋಡುತ್ತಾರೆ ಬೀದಿಗಳಲ್ಲಿ ತಿರುಗಾಡುವಾಗ್ಗೆ ಬರತಕ್ಕ ದುರ್ಗಂಧವನ್ನು ಸಹಿಸುವದು ಅಸಾಧ್ಯ ಇದು ಚಿಕ್ಕ ಮ್ಯುನಿಸಿಪಾಲಿಟಿಯಾಗಿ ಸಾಕಾದಷ್ಟು ಸಿಬ್ಬಂದಿ ಮತ್ತು ದ್ರವ್ಯ ಇಲ್ಲದೆ ಇರುವದರಿಂದ ಊರನ್ನು ಒಳ್ಳೇ ಸ್ಥಿತಿಯಲ್ಲಿ ಇಟ್ಟುಕೊಳ್ಳುವದು ಅಸಾಧ್ಯ ಬಹು ಜನಗಳು ಸೇರತಕ್ಕ ಇಂಥಾ ಪುಣ್ಯಕ್ಷೇತ್ರದಲ್ಲಿ ಜನಗಳ ಆರೋಗ್ಯಕ್ಕೆ ಆಗಬೇಕಾದ ಸೌಕರ್ಯವನ್ನು ಗವರ್ನಮೆಂಟಿನವರು ಸ್ಪೆಷಲ್ಲಾಗಿ ಕಲ್ಪಿಸುವದು ಅವಶ್ಯಕವಾಗಿರುತ್ತದೆ — ಕಳೆದ ವೈಶಾಖ ಮತ್ತು ಶ್ರೀರಾಮಾನುಜಾಚಾರ್ಯ ತಿರುನಕ್ಷತ್ರಗಳಿಗೆ ಅಲ್ಲಿಗೆ ಹೋಗಿದ್ದೆನು ಎರಡು ಉತ್ಸವಗಳೂ ಬಹು ವಿಜೃಂಭಣೆಯಿಂದಲೂ ಕಾಲಕ್ಲುಪ್ತವಾಗಿಯೂ ಜನರ ವ್ಯವಾಗಿಯೂ ನಡೆದವು ಇದಲ್ಲದೆ ದೇವಸ್ಥಾನಗಳಲ್ಲಿ ನಿತ್ಯಗಟ್ಲೆ ಹೆಚ್ಚುಕಟ್ಲೆ ಉತ್ಸವಗಳು ಸ್ವಲ್ಪವೂ ನ್ಯೂನತೆಯಿಲ್ಲದೆ ಬಹು ವಿಜೃಂಭಣೆಯಿಂದ ನಡೆಯುತ್ತವೆ ಇದಕ್ಕೆ ಇರತಕ್ಕ ದೇವಸ್ಥಾನದ ಪಟ್ಟಾರರು ಸರ್ಕಾರದವರ ಮತ್ತು ಭಕ್ತಾದಿಗಳ ಗೌರವಕ್ಕೆ ಪಾತ್ರರಾಗಿ ನಿಸ್ಪೃಹರಾಗಿ ಆಸ್ತಿಕರಿಗೆ ಅವಕಾಶ ಕೊಡದೆ ಕೆಲಸಗಳನ್ನು ಬಹು ವಿಜೃಂಭಣೆಯಿಂದ ನಡಿಸುತ್ತಿದಾರೆ —ಶ್ರೀನಾರಾಯಣಸ್ವಾಮಿಯವರ ದೇವಸ್ಥಾನದಲ್ಲಿ ಮುಖ್ಯವಾದ ನಾಲ್ಕು ಸನ್ನಿಧಿಗಳ ಪೈಕಿ ಮೂರಕ್ಕೆ ಒಬ್ಬ ಅರ್ಚಕರು ಇರುತ್ತಾರೆ ಅವು ಒಂದೇ ಆವರಣದಲ್ಲಿ ಇರುವವು ಒಬ್ಬ ಅರ್ಚಕರಿಂದ ಪ್ರತಿನಿತ್ಯವು ಎಲ್ಲಾ ಕಡೆಯಲ್ಲೂ ಕೆಲಸಗಳ ನಡಿಯತಕ್ಕದ್ದು ಅಸಾಧ್ಯ ಇದರಿಂದ ಜನಗಳು ಸ್ವಲ್ಪ ಹೊತ್ತು ಅನಾವಶ್ಯಕವಾಗಿ ಕಾದಿರಬೇಕಾಗುತ್ತೆ ಅನೇಕ ಜನ ಭಕ್ತಾದಿಗಳು ಬರತಕ್ಕ ಸ್ಥಳವಾದ್ದರಿಂದ ಅಮ್ಮನವರ ಸನ್ನಿಧಿಗಾದರೂ ಪ್ರತ್ಯೇಕ ಅರ್ಚಕರನ್ನು ಸರ್ಕಾರದವರು ನೇಮಿಸುವುದು ಅವಶ್ಯಕವಾಗಿರುತ್ತದೆ

ಮಂಡ್ಯ.—ಎರಡು ವಾರಗಳಿಂದ ಇಲ್ಲಿ ಮಳೆ ಇಲ್ಲ ಬಿಸಲಿನ ತಾಪ ಅಧಿಕವಾಗಿದೆ ರೋಗಾದಿ ಉಪದ್ರಗಳು ಇಲ್ಲದೆ ಇರುವದು ಸಂತೋಷಕರವಾಗಿದೆ —ಎರಡು ವಾರಗಳಿಂದ ರಾತ್ರಿ ಕಾಲದಲ್ಲಿ ದೊಂಬರಾಟದ ನಾಟಕವು ನಾಲ್ಕು ಮೂಲೆ ಕೂಡಿರುವ ಬೀದಿಗಳಲ್ಲಿ ೩—೪ ದಿನಕ್ಕೆ ಒಂದಾವರ್ತಿ ಆಡುತ್ತಲೇ ಇದಾರೆ ಇದರಿಂದ ಜನರು ನಿದ್ದೆಗೆಡುವದು ಮಾತ್ರವಲ್ಲ ಬೀದಿಗಳೆಲ್ಲಾ ರೋಚ್ಯಾಗುವವು ಮ್ಯುನಿಸಿಪಲ್ ಸಿಬ್ಬಂದಿಯವರು ಚರಂಡಿ ಮುಂತಾದ್ದು ತೊಳೆಯುವದೇ ಇಲ್ಲ ಹೈಲೋಡು ಸಂದುಗೊಂದುಗಳಲ್ಲಿಯೂ ವಾಸನೆ ಬಹಳವಾಗಿದೆ ನಮ್ಮ ಅಮಲ್ದಾರರು ಟರ್ನ ಗಸ್ತು ಮಾಡಿ ಇದನ್ನೆಲ್ಲಾ ಕ್ರಮಪಡಿಸುವದು ಅವಶ್ಯಕವಾಗಿದೆ —ಈ ಕಾಲದಲ್ಲಿ ವಿವಾಹ ಮುಂತಾದ ಶುಭಕಾರ್ಯಗಳು ಊರಿನಲ್ಲಿಯೂ ಗ್ರಾಮಗಳಲ್ಲಿಯೂ ಸಂಭ್ರಮವಾಗಿ ನಡಿಯುತ್ತಾ ಇವೆ ಕಳೆದ ತ್ರಯೋದಶಿ ಲಗ್ನದಲ್ಲಿ ಇಲ್ಲಿನ ನೂಲಿನ ಅಂಗಡಿ ಸಾಹುಕಾರ್ ಮಿ॥ ಅಮೃತಣ್ಣಪ್ಪನವರ ಮನೆಯಲ್ಲಿ ಅವರ ತಂಗಿಯ ಕುಮಾರರಾದ ಅನಂತರಾಮಯ್ಯನವರಿಗೆ ವಿವಾಹವು ಬಹು ಪ್ರಶಸ್ತವಾಗಿ ೫ ದಿನಗಳವರೆಗೂ ನಡಿಸಲ್ಪಟ್ಟಿತು ಬ್ಯಾಂಡ್ ಮುಂತಾದ ವಾದ್ಯಗಳನ್ನು ಮೈಸೂರಿಂದ ತರಿಸಿದ್ದರು ನಾಗವಲ್ಲಿ ಮತ್ತು ವಧೂವರರ ಮೆರವಣಿಗೆ ಬಹಳ ವಿಜೃಂಭಣೆಯಿಂದ ನಡಿಸಿದರು ಈಗ್ಗೆ ನಾಲ್ಕಾರು ವರುಷಗಳಿಂದ ಅಮಲ್ದಾರ್ ಮಿ॥ ಶಿರ ... ಶ್ರೀನಿವಾಸರಾಯರ ಪ್ರಯತ್ನದಿಂದ ಸ್ಥಾನಿಕರು ಜನರ ಸಹಾಯದಿಂದ ದೇವತಾರ್ಚನೆ ಕಾರ್ಯ ನಡಿಸುವದಕ್ಕೂ ಬಹಳ ಅನುಕೂಲವಾಗಿತ್ತು ಈಚೆಗೆ ಇಲ್ಲಿ ಇದ್ದ ಹಿಂದಿನ

ಅಮಲ್ದಾರ್ ಮೆ॥ ಕೃಷ್ಣಸ್ವಾಮಿಯವರು ದೇವಸ್ಥಾನದ ಪೂಜಾ ಮುಂತಾದ ಕಾರ್ಯಗಳನ್ನು ಮೆ॥ ಮಾಧವಸ್ವಾಮಿರಾಯರಿಗೆ ಒಪ್ಪಿಸಿ ಕಾರ್ಯಗಳನ್ನು ಸರಿಯಾಗಿ ನಡಿಸುವಂತೆ ಏರ್ಪಾಡು ಮಾಡಿದರು ಮೆ॥ ಮಾಧವಸ್ವಾಮಿರಾಯರು ಛತ್ರ ದೇವಸ್ಥಾನಗಳನ್ನು ಜನರ ವಾಸಕ್ಕೂ ದೇವತಾರ್ಚನೆ ನಡಿಸುವದಕ್ಕೂ ಬಹಳ ಹಣ ವ್ಯಯಮಾಡಿ ಯೋಗ್ಯವಾಗಿ ಮಾಡಿಟ್ಟುಕೊಂಡಿದಾರೆ ದೇವಸ್ಥಾನದ ತೋಟದ ಗೋಡೆ ಬಿದ್ದುಹೋಗಿತ್ತು ಕೊಳದ ನೀರು ಕೆಟ್ಟುಹೋಗಿ ದುರ್ವಾಸನೆಯಾಗಿತ್ತು ಮೆ॥ ಶ್ರೀನಿವಾಸಾಚಾರ‍್ರು ಅವರ ಮಕ್ಕಳೂ ಪ್ರಯಾಸದಿಂದ ಕೊಳವನ್ನು ಶೋಧಿಸಿ ಬಹು ಜನರು ಬಂದು ನೀರು ತೆಗೆದುಕೊಂಡು ಹೋಗಲೂ, ದೇವಸ್ಥಾನದಲ್ಲಿ ಪರಸ್ಥಳದವರು ಬಂದು ಮದುವೆ, ಮುಂಜಿ ಮುಂತಾದ ಶುಭ ಕಾರ್ಯಗಳನ್ನು ನಡಿಸಲೂ ಅನುಕೂಲ ಮಾಡಿರುತ್ತಾರೆ ಮೆ॥ ಶ್ರೀನಿವಾಸಾಚಾರ‍್ರು ದೇವಸ್ಥಾನಕ್ಕೆ ಬಂದಲ್ಲಾಗಾಯಿತು ಜನರ ಸಹಾಯದಿಂದ ದೇವರ ಹೆಸರಿನ ಮೇಲೆ ಸಂತರ್ಪಣೆ ಮುಂತಾದ್ದು ನಡಿಸಿರುತ್ತಾರೆ

ಹುಣಸೂರು—ಇಲ್ಲಿಂದ ೧೦ ಮೈಲು ದೂರದಲ್ಲಿರುವ ಕಂಪ್ಲಾಪುರದ ಸಂತೆಗೆ ಕಳೆದ ತಿಂಗಳು ೨೩ ನೇ ತಾ ಹುಣಸೂರಿಂದಲೂ ಕಟ್ಟೆಮಳಲವಾಡಿಯಿಂದಲೂ ವ್ಯಾಪಾರಸ್ಥರು ಗಾಡಿಗಳಲ್ಲಿ ಸಾಮಾನುಗಳನ್ನು ತುಂಬಿಸಿಕೊಂಡು ಹೋಗಿ ವ್ಯಾಪಾರ ಮಾಡಿಕೊಂಡು ಅದೇ ದಿನ ಸಾಯಂಕಾಲ ವಾಪಸು ಬರುತ್ತಿರುವಾಗ್ಗೆ ಹುಣಸೂರಿಂದ ೫ ಮೈಲು ದೂರದಲ್ಲಿರುವ ಕಳ್ಳಿಪೆಟ್ಟದ ಸಮೀಪದಲ್ಲಿ ರಾತ್ರಿ ಸುಮಾರು ೯ ಘಂಟೆ ಹೊತ್ತಿನಲ್ಲಿ ಮೊದಲು ಬರುತ್ತಿದ್ದ ಕೆಮೆಂಟೆ ಸ್ವಾಮಿ ಗಾಡಿಗೆ ಕಳ್ಳರು ಕಲ್ಲುಗಳನ್ನು ಹೊಡೆದರು ಈ ಗಾಡಿಯಲ್ಲಿ ನಾಲ್ಕು ಜನರು ಇದ್ದರು ಇವರಲ್ಲಿ ತುಪಾಕಿ ಇಲ್ಲದಿದ್ದರೂ ಒಬ್ಬನು ತುಪಾಕಿ ತೆಗೆದುಕೋ ಎಂದು ಹೇಳಿದ ಕೂಡಲೆ ಕಳ್ಳರು ಕಲ್ಲು ಹೊಡೆಯುವದನ್ನು ನಿಲ್ಲಿಸಿದರು ಸ್ವಲ್ಪ ಹೊತ್ತು ಬಿಟ್ಟು ಪುನ ಗಾಡಿಗೆ ಕಲ್ಲು ಹೊಡೆದರು ತುಪಾಕಿ ಶಬ್ದವಾಗದೆ ಹೋದ್ದರಿಂದ ಕಳ್ಳರು ನುಗ್ಗಿ ಗಾಡಿ ಎತ್ತುಗಳನ್ನು ಬಿಚ್ಚಿ ಜನರನ್ನು ಕೆಳಕ್ಕೆ ಇಳಿಸಿ ಶೋಧನೆಮಾಡುವಲ್ಲಿ ೨೩ ರೂ ಸಿಕ್ಕಿತು ಇದನ್ನು ತೆಗೆದುಕೊಂಡು ಗಾಡಿಯಲ್ಲಿದ್ದ ಜನರನ್ನು ಚನ್ನಾಗಿ ಹೊಡೆದರು ಸ್ವಲ್ಪ ಹೊತ್ತಾದನಂತರ ಬೇರೆ ಗಾಡಿಗಳು ಅದೇ ಸ್ಥಳಕ್ಕೆ ಬಂದವು ಈ ಗಾಡಿಗಳ ಮೇಲೆಯೂ ಕಳ್ಳರು ಕಲ್ಲುಗಳನ್ನು ಹೊಡೆದು ಗಾಡಿಗಳ ಮೇಲೆ ಬಿದ್ದು ದವಸ ಮೂಟೆಗಳನ್ನು ಕತ್ತರಿಸಿ ಚೆಲ್ಲಿ ಸೀರೆಗಳನ್ನು ವಸ್ತ್ರಗಳನ್ನು ಪಂಚೆಗಳನ್ನು ತೆಗೆದುಕೊಂಡು ವ್ಯಾಪಾರಮಾಡಿದ ಹಣವನ್ನು ಅವರಿಂದ ಕಿತ್ತುಕೊಂಡು ಬೇಕಿಲ್ಲದ ಸಾಮಾನುಗಳಲ್ಲಿ ಕೆಲವನ್ನು ಅಲ್ಲೇ ಬಿಸಾಟು, ಜನರನ್ನು ಚನ್ನಾಗಿ ಹೊಡೆದು ಪರಾರಿಯಾದರು ಈ ದವಳಿಯವರು ೪೦೦ ಚಿಲ್ಲರೆ ರೂಪಾಯಿಗಳು ಹೋಯಿತೆಂದು ಬಾಯಿ ಬಡುಕೊಳ್ಳುತ್ತಾ ತಮ್ಮ ಮನೆಗಳನ್ನು ಸೇರಿದರು ಈ ಸಂಗತಿಯು ಅಮಲ್ದಾರಿಗೆ ತಿಳಿಯಲು, ಪೋ॥ ಇನ್ಸ್‌ಪೆಕ್ಟರು ಟವುನಲ್ಲಿ ಹಾಜರಿಲ್ಲದ್ದರಿಂದ ಜಮಾದಾರನ್ನೂ ಪೊಲೀಸ್ ಜವಾನರನ್ನೂ ಕರೆದುಕೊಂಡು ಸುಮಾರು ರಾತ್ರಿ ೧೨ ಘಂಟೆಗೆ ಕಳವು ನಡೆದ ಸ್ಥಳಕ್ಕೆ ಹೋಗಿ ಎತ್ತಿಯಿದ್ದ ಅಲ್ಲೇ ಇದ್ದು ಮಾರನೇ ದಿನ ಇನ್ಸ್‌ಪೆಕ್ಟರು ಅಲ್ಲಿಗೆ ಬಂದನಂತರ ಅಲ್ಲಲ್ಲೇ ಸಿಕ್ಕಿದ ಸ್ವಲ್ಪ ಮಾಲನ್ನು ತೆಗೆದು ಮಹಜರ್ ಮಾಡಿಕೊಂಡು ಹುಣಸೂರನ್ನು ಸೇರಿದರು ಇದಾದ ಒಂದೆರಡು ದಿವಸಗಳ ಮೇಲೆ ಪೊಲೀಸಿನವರು ಒಬ್ಬ ಪನ್ನರಗನನ್ನು ಹಿಡಿದುಕೊಂಡು ಬಂದು ಶೋಧನೆ ಮಾಡುವಲ್ಲಿ ಒಂದು ಕೊಪರೆ [illegible] ಸಹಿತ ಸಿಕ್ಕಿದೆ ಈ ಗ ಮನಿಯ ಮೇಲೆ ೧೧ ಜನ ಪದ್ದರನ್ನು ದರ್ಗಿರಿ ಪಳಿ, ವ್ಯಾಂಗಿಗಾಗಿ ಲಡತೊರೆ ಅಮಲ್ದಾರರಲ್ಲಿ ಕಳುಹಿಸಿಕೊಟ್ಟರು ಅವರ ೬ ದಿನ ರಿಮ್ಯಾಂಡು ಕೊಟ್ಟು ಕಳುಹಿಸಿರುತ್ತಾರೆ ೨೩ ನೇ ತಾ ಪೊ॥ ಸೂಪರಿಂಟೆಂಡೆಂಟರು ಇಲ್ಲಿಗೆ ಬಂದು ಇನ್ಸ್‌ಪೆಕ್ಷನ್ ಮಾಡಿಕೊಂಡು ೨೯ ನೇ ತಾ ಬೆಳಿಗ್ಗೆ ಮೈಸೂರಿಗೆ ದಯಮಾಡಿದರು ಇದರಿಂದ ಓಟ್ ಪೋಸ್ಟಿನಲ್ಲಿ ಪೊಲೀಸ್ ಬೀಟು ಚನ್ನಾಗಿ ನಡೆಯುವದಿಲ್ಲವೆಂದು ತೋರುತ್ತೆ ಯಾಕಂದರೆ ಕಳ್ಳಿಪೆಟ್ಟದಲ್ಲೇ ಒಂದು ಪೊಲೀಸ್ ಸ್ಟೇಷನ್ ಇದ್ದಾಗ್ಯೂ ಈ ಪೊಲೀಸ್ ಸ್ಟೇಷನ್ ಸಮೀಪದಲ್ಲೇ ಇಂಥಾ ದರೋಡೆ ನಡೆದದ್ದು ತುಂಬಾ ಆಶ್ಚರ್ಯವಾಗುತ್ತದೆ

ಹೊಳಲ್ಕೆರೆ—ಅಶ್ವಿನಿ ಭರಣಿ ಮಳೆ ಈ ಚನ್ನಾಗಿ ಬಂದವು ರೈತರೆಲ್ಲ ಭೂಮಿಯನ್ನು ಹದ ಮಾಡಿಕೊಳ್ಳುತ್ತಾ ಇದಾರೆ ಕೆಲವು ಕಡೆ ಜೋಳ, ಎಳ್ಳು ಬಿತ್ತನೆ ಮಾಡಿದರು ಮರಳಬ್ಬು ಆರೆ ಈ ಗಡೆ ಆಡಸ ತ್ತಾ ಕೆಲವರು ನಷ್ಟ ಹೊಂದಿದರು ೧೪ ತಿಂಗಳ ಪ್ರಾರಂಭವಾದನಂತರ ಅಲ್ಲೇ ಆಡಿಸ ನಡು ಸಹಜವಾಗಿತ್ತು ಒಂದು ವರುಷ್ಟೇನು ಆಟ ಆಡಿದ್ದರಿಂದ ಹಿಲ್ಲವು ಸುಂದರಾಗಿ ಇಳಿಯದೆ ಹೋಯಿತು ೧೦೦ ಎಕರೆ ಜಮೀನುಗಳಲ್ಲಿ ಒಂದೇ ಆಡೆ ಕಬ್ಬು ಹಾಕಿದ ಪ್ರದೇಶಗಳಿಗೆ ಕಬ್ಬು ಆಲೇ ಆಡುವ ಮಿಷನ್ ಕಳುಹಿಸಿಕೊಡುವವನಾಗಿ ಯಾವ ಕಂಪನಿಯ ವರು ಸರ್ಕಾರದವರನ್ನು ಕೇಳಿಕೊಂಡಿರುವ ಸಂಗತಿ ಇಲ್ಲಿಗೆ ಹುಕುಂ ಬಂದಿರುತ್ತೆ ಅಬ್ಬನಾಯ್ಕನ ಹಳ್ಳಿ ಕೆರೆ ಹಿಂದೆ ೧೦೦ ಕೆರೆಗೆ ಮೇಲ್ಪಟ್ಟ ಕಬ್ಬು ಬೆಳೆಯಾಗಿರುವುದು ದನ ಧ್ವಿಪದೆ ಹೊಸದುರ್ಗ ಚಿತ್ರದುರ್ಗ [illegible] ಒಂದು ಮಿಷನ್ ಇಡಿಸಿದರೆ ಅನುಕೂಲವೆಂದು ತೋರುತ್ತೆ ಮೈಸೂರು ಸೀಮೆಯಲ್ಲಿ [illegible] ಕಸುಬುಗಿರುವ ವ್ಯವಸಾಯ ಮತ್ತು ಕೈಗಾರಿಕೆ ಕೆಲಸಗಳ ಅಭಿವೃದ್ಧಿ [illegible] ಏನು ಉಪಯೋಗವಸ್ತುಗಳಿರುತ್ತವೆ [illegible] ಯಾವ ವಿಧ [illegible] ಕಸುಬು [illegible] ಬಂದರೆ ಅನುಕೂಲವೆಂಬ [illegible] ಬಹಳ ತಿಳುವಳಿಕೆಗೆ ಬರುವುದಕ್ಕೆ ಬಗ್ಗೆ ಪತ್ರಿಕಾ [illegible] ಅಮೂಲ್ಯವಾದ ಈ ಪತ್ರಿಕೆಯಲ್ಲಿ ಪ್ರಕಟಿಸಬೇಕೆಂದು ಕೋರಿ ಇದೆ — ಈ ಹೋಬಳಿಯಲ್ಲಿ [illegible] ಒಂದು ಎತ್ತನ್ನು ಹುಲಿ ಕೊಂದಿತು ಮಾಲೀಕನಾದ [illegible] ವ್ಯವಸಾಯದ ಕೆಲಸಕ್ಕೆ ತುಂಬಾ ತೊಂದರೆ ಆಯಿತು ಈ ರೀತಿ ಈಗ್ಗೆ ೫—೬ ತಿಂಗಳಿಂದ ಈ [illegible] ಅನೇಕ ದನಗಳನ್ನೂ ಕತ್ತೆ ಕುದುರೆಗಳನ್ನೂ ಕೊಂದು ಹಾಕಿ ಇರುತ್ತೆ ಶಿಕಾರಿದಾರರು ಯಾರೂ ಇದನ್ನು ಹೊಡಿಯಲಿಲ್ಲ ಸರ್ಕಾರದವರು ಸ್ವಪಲ್ಪಾಗಿ ಈ ಹುಲಿ ಹೊಡೆದ ಶಿಕಾರಿದಾರರಿಗೆ ಇನಾಂ ಕೊಡಿಸುವದಾಗಿ ಇಸ್ತಿಹಾರ್ ಕೊಡಿಸಿದರೆ ಆಗ್ಗಾದರೂ ಶಿಕಾರಿದಾರರು ಸದರಿ ಹುಲಿಯನ್ನು ನಾಶ ಮಾಡ್ಯಾರೆಂದು ಯೋಚಿಸಬೇಕಾಗಿದೆ—ಮಕ್ಕಳಿಗೆ ಒಳ್ಳೇ ಹಾಲಿನಿಂದ ಮೈಲಿ ಹಾಕಿಸುವದು ಬಹಳ ಒಳ್ಳೇ ಕೆಲಸವಾಗಿರುತ್ತೆಂಬುವದು ಈಗೀಗ ಜನಗಳ ತಿಳುವಳಿಕೆಗೆ ಬಂದು ಮೈಲಿ ಹಾಕಿಸುತ್ತಾ ಇದಾರೆ ಮೊದಲು ಬಲವಂತ ಪಡಿಸಿ ಹಾಕಿಸಬೇಕಾಗಿತ್ತು ಈ ವಿಷಯದಲ್ಲಿ ಜನಗಳಿಗೆ ಉಂಟಾಗಿದ್ದ ಮೌಢ್ಯವು ನಿವಾರಣೆಯಾಗುತ್ತಾ ಬಂದಂತೆ ಕಾಣುತ್ತದೆ—ಈ ಊರು ತಗಡಲೆ ವಿಶ್ವೇಶ್ವರದೇವಸ್ಥಾನದ ಬಳಿ ಇರುವ ಹುವ್ವಿನ ಕೋಡಿ ಹೀನಸ್ಥಿತಿಗೆ ಬಂತು ಇದನ್ನು ಮುನಿಸಿಪಾಲಿಟಿಯವರು ಹರಾಜಾದರೂ [illegible] ಕಿಸಿದರೆ ಒಳ್ಳೇದೆಂದು ಕಾಣುತ್ತೆ—ಈ ಊರು ಸಂತೆಯಲ್ಲಿ ಬೂಜಾಡುವವರು ಬಹಳ ಮಂದಿ ಬಂದಿರುತ್ತಾರೆ ಕೆಲವು ಜನ ಪರಸ್ಥಳೀಕರು ಇಸ್ಪೀಟಿನ ಆಟಕ್ಕೋಸ್ಕರವೇ ಈ ಊರಲ್ಲಿ ವಾಸ ಮಾಡಿಕೊಂಡು ಜನಗಳಿಗೆ ಮೋಸ ಮಾಡುತ್ತಾರೆ ಪೊಲೀಸಿನವರು ಇಂಥಾ ಬಹಿರಂಗವಾದ ಜೀವನೋಪಾಯವಿಲ್ಲದವರನ್ನು ನೇಕಚಾಲ್ ಜಾಮೀನಿಗೆ ಗುರಿ ಪಡಿಸಿದರೆ ಇವರ ಹಾವಳಿ ಕಡಿಮೆಯಾಗಿ ಜನಗಳಿಗೆ ಸೌಖ್ಯವಾಗುತ್ತೆ ಮುನಸಿಪಲ್ ಬೋರ್ಡಿನ ಮೆಂಬರುಗಳು ಟವುನಲ್ಲಿ ಕೆಟ್ಟ ಕೆಲಸ ಮಾಡತಕ್ಕ ಜನಗಳ ಬಂದೋಬಸ್ತಿನ ವಿಷಯದಲ್ಲಿ ಸರ್ಕಾರಿ ಆಫೀಸರವರಲ್ಲಿ ಕೃತಪಡಿಸುತ್ತಾ ಬಂದರೆ ಜನಗಳ ನೆಮ್ಮದಿಯನ್ನು ಕಾಪಾಡಿದಂತೆ ಆಗುತ್ತೆ ಟವುನ್ ಗೂಡೆಜಾ ವಿಷಯದಲ್ಲಿಯೂ ಕಾವಲುಗಾರರ ವಿಷಯದಲ್ಲಿಯೂ ತಕ್ಕ ಸಲಹೆಗಳನ್ನು ಬೋರ್ಡಿನಲ್ಲಿ ಕೃತಪಡಿಸುತ್ತಾ ಬಂದರೆ ಟವುನ್ ಬಹಳ ಸಲಕ್ಷಕ್ಕೆ ಬರುತ್ತೆ—ಪ್ರತಿ ಒಬ್ಬ ಮೆಂಬರೂ ಹೊಸ ಮುನಸಿಪಲ್ ರೆಗ್ಯುಲೇಷನ್ ಚನ್ನಾಗಿ ಅವಗಾಹನೆಗೆ ತಂದುಕೊಂಡು ತಮ್ಮ ವಿಜ್ಞಾಪನೆಗಳಿಗೆ ಗೌರವ ಬರ ಪಂಥಾ ಸಲಹೆಗಳನ್ನು ಚುನಾಯಿಸಿಕೊಂಡು ಕೃತಪಡಿಸುತ್ತಾ ಬರ ತ್ತಾರೆಂಬದ್ದಾಗಿ ನಂಬಿ ಇದೆ

ಹೊಸಕೋಟೆ—ಈ ಊರಿನಲ್ಲಿ ಕಳೆದ ಏಪ್ರೆಲ್ ೨೯ ನೆ ತಾ ಸೋಮವಾರ ಈ ತಾಲ್ಲೂಕು ಪ್ರಜೆಗಳು ಶ್ರೀಮನ್ಮಹಾರಾಜಾ ಸಾಹೆಬ್ ಬಹದ್ದೂರ್ ಶ್ರೀಕೃಷ್ಣರಾಜೇಂದ್ರ ಒಡೆಯರವರಿಗೆ ಘನವನ್ನು ಹೊಂದಿದ ಶ್ರೀಮದಿಂಡಿಯಾ ಚಕ್ರವರ್ತಿ ಸಾರ್ವಭೌಮರವರಿಂದ ದಯಪಾಲಿಸಲ್ಪಟ್ಟ ಜಿ ಸಿ ಎಸ್. ಐ ಎಂಬ ಮಹಾ ಘನವಾದ ಬಿರುದಿನ ಜ್ಞಾಪಕಾರ್ಥವಾಗಿ ನೂತನವಾಗಿ ಶ್ರೀಕೃಷ್ಣರಾಜೇಂದ್ರ ಹಾಲ್ ಎಂಬ ಸುಂದರವಾದ ಕಟ್ಟಡವನ್ನು ಕಟ್ಟಿ ಅದರಲ್ಲಿ ಶ್ರೀಮನ್ಮಹಾರಾಜರವರ ಫೋಟೋಗ್ರಾಫ್ಸು, ಪುಷ್ಪ ತೋರಣಾದಿಗಳಿಂದ ನಾನಾ ಬಗೆಯಾದ ಶೃಂಗಾರಗಳನ್ನು ಮಾಡಿ, ರಮಣೀಯವಾಗಿದ್ದ ಕಟ್ಟಡವನ್ನು ನಮ್ಮ ಡೆಪ್ಯುಟಿ ಕಮಿಷನರ್ ಮೆ॥ ಸ್ಪಾರ್ಕ್ಸ್‌ಯವರು ದಯಮಾಡಿ ಪ್ರಾರಂಭಿಸಬೇಕೆಂದು ಅರಿಕೆ ಮಾಡಿಕೊಂಡ ಪ್ರಕಾರ ಅವರು ದಯಮಾಡಿ ಸ್ಕೂಲ್ ಬಾಲಕ, ಬಾಲಕಿಯರ ಮಂಗಳಕರವಾದ ಗಾಯನವೂ, ಬ್ಯಾಂಡ್ ವಗೈರೆ ವಾದ್ಯ ಘೋಷಗಳು ವಗೈರೆ ನಾನಾ ಸಂತೋಷಕರವಾದ ಏರ್ಪಾಡುಗಳು ನಡಿಸಲ್ಪಟ್ಟದ್ದವು ಈ ಊರಿನ ಅನೇಕ ದೊಡ್ಡ ಮನುಷ್ಯರು, ಮೆಂಬರುಗಳು, ಮತ್ತು ಎಗ್ಜಿಕ್ಯುಟಿವ್ ಇಂಜನಿಯರ್ ಮೆ॥ ವೆಂಕಟಾಚಲಯ್ಯನವರು, ಪಿವಿಜನ್ ಆಫೀಸರ್ ಮೆ॥ ಬರ್ ಸಾಹೇಬರು, ಪೊಲಿಸ್ ಸೂಪರಿಂಟೆಂಡೆಂಟ್ ಮೆ॥ ಎಲ್ ಕೃಷ್ಣರಾಯರು, ಡಿವಿಜನ್ ಆಫೀಸರ್ ಮೆ॥ [illegible] ರಾಯರು ಬೆಂಗಳೂರಿಂದ ಅಡ್ವೊಕೇಟ್ ಮೆ॥ ಬಾಲೇಪುರದ ಸುಬ್ಬಣ್ಣನವರು, ಅಡ್ವೋಕೇಟ್ ಮೆ॥ ವೆಂಕಟಾಚಲೈಯ್ಯಂಗಾರ‍್ರು, ವೈಟ್‌ಫೀಲ್ಡ್‌ನಿಂದ ಅನೇಕ ಸರದಾರರು, ದೊರಸಾನಿಗಳು ಇನ್ನೂ ಅನೇಕ ದೊಡ್ಡ ಮನುಷ್ಯರು ದಯಮಾಡಿದ್ದರು ದೇವರ ಪ್ರಾರ್ಥನೆ ಮಾಡಿದ ಮೇಲೆ ಮೆ॥ ಕಲ್ಲಂ ಅಯ್ಯಂಗಾರ‍್ರು ಇಂಗ್ಲಿಷಿನಲ್ಲಿ ಒಂದು ಉಪನ್ಯಾಸವೂ, ಮೆ॥ ವಾಸುದೇವರಾಯರು ಕನ್ನಡದಲ್ಲಿ ಒಂದು ಉಪನ್ಯಾಸವೂ ಮಾಡಿದನಂತರ ಮೆ॥ ಸ್ಪಾರ್ಕ್ಸ್‌ಸಾಹೇಬರು ಶ್ರೀಕೃಷ್ಣರಾಜೇಂದ್ರಹಾಲ್ ಎಂಬ ಕಟ್ಟಡದ ಬಾಗಿಲನ್ನು ಬೆಳ್ಳಿಯ ಬೀಗದ ಕೈಯಿಂದ ತೆಗೆದು ಬಂಗಲೆಯೊಳಗೆ ದಯಮಾಡಿ ಬಹಳ ಸಂತೋಷದೊಡನೆ ಶ್ರೀಮನ್ಮಹಾರಾಜರವರ ಶ್ರೇಯಃ ಪ್ರಾರ್ಥನೆ ನೆರವೇರಿಸಿದ ಮೇಲೆ ಮಂಗಳಕರವಾಗಿಯೂ, ಪ್ರಜೆಗಳ ಮನಸ್ಸು ಸಂತೋಷವಾಗುವಂತೆಯೂ ಉಪನ್ಯಾಸ ಮಾಡಿದರು ಆ ದಿನ ಸಂತರ್ಪಣೆಯೂ, ಮಧ್ಯಾಹ್ನ ಸಭಿಕರಿಗೆಲ್ಲ ಫಲಾಹಾರಗಳೂ ನಡೆದವು ಈ ದಿನ ವ್ಯವಸಾಯಾಭಿವೃದ್ಧಿಗೋಸ್ಕರ ಒಂದು ಪ್ರದರ್ಶನವನ್ನು ಪ್ರಾರಂಭ ಮಾಡಬೇಕೆಂದೂ ಅದಕ್ಕೆ ಒಂದು ಕಮಿಟಿ ಗೊತ್ತುಮಾಡಿ ಪ್ರದರ್ಶನ ವಸ್ತುಗಳಿಗೆ ಇನಾಂ ವಗೈರೆ ಕೊಡುವದರ ಮೂಲಕ ರೈತರಿಗೆ ಪ್ರೋತ್ಸಾಹಪಡಿಸಬೇಕೆಂದೂ ಅರಿಕೆ ಮಾಡಿಕೊಂಡದ್ದನ್ನು ನಡಿಸಬಹುದೆಂದು ಮೆ॥ ಸ್ಪಾರ್ಕ್ಸ್‌ಯವರು ಹೇಳಿದರು ಆ ದಿನ ಪ್ರದರ್ಶನ ಮಾಡಿದ್ದ ಕೆಲವು ಶ್ರೇಷ್ಠವಾದ ಪದಾರ್ಥಗಳಿಗೆ ಇನಾಂ ಕೊಡುವಂತೆ ಗೊತ್ತಾಗಿ ಪ್ರದರ್ಶನವೂ ನೆರವೇರಿತು ಆ ದಿನ ರಾತ್ರಿ ದೀಪ ಚನ್ನಪಟ್ಟಣದ ಮೆ॥ ಸ್ವಾಮಿ ರಾಮಶಾಸ್ತ್ರಿಯವರ ದೀಪೋತ್ಸವ, ಹಾವಿನ ಆಟವೂ ಮೆ॥ ವೆಂಕಟರಾವ ಶಾಸ್ತ್ರಿಗಳವರ ಉಪನ್ಯಾಸವೂ, ಬಾಣಸಂಪ್ರದಾಯವೂ, ಬ್ಯಾಂಡ್ ವಗೈರೆ ವಾದ್ಯ ಘೋಷಗಳೂ ಬಹು ರಮಣೀಯವಾಗಿ ಸಭಿಕರೆಲ್ಲರಿಗೂ ಅಪಾರವಾದ ಸಂತೋಷದೊಡನೆ ನೇತ್ರಾನಂದಕರವಾಗಿ ನೆರವೇರಿದವು ಈ ಊರಿನ ಪ್ರಜೆಗಳು ನಮ್ಮ ಶ್ರೀಮನ್ಮಹಾರಾಜರವರಿಗೆ ಬಂದ ಘನವಾದ ಬಿರುದಿನ ಸಂತೋಷಕ್ಕಾಗಿ ನಡಿಸಿದ ಏರ್ಪಾಡುಗಳನ್ನು ಮೆ॥ ಸ್ಪಾರ್ಕ್ಸ್ ಸಾಹೇಬರೂ ತಾಲ್ಲೂಕು ಅಮಲ್ದಾರ್ ಮೆ॥ ಬಸವರಾಜೇಅರಸಿನವರೂ ಸಹಾಯಕರಾಗಿ ನಿಂತು ನೆರವೇರಿಸಿದ್ದಕ್ಕಾಗಿ ಅನೇಕ ವಂದನೆಗಳನ್ನು ಸಮರ್ಪಿಸುತ್ತೇವೆಂದು ಅಂಕಿತ ಮಾಡಿ ಸಭಿಕರೆಲ್ಲರಿಗೂ ಗಂಧ ಪುಷ್ಪ ತಾಂಬೂಲಗಳು ಕೊಡಲ್ಪಟ್ಟವು ಇನ್ನೊಂದು ಚಾಕ್ಷುಷ [illegible] —ಇದೇ ತಾಲ್ಲೂಕು [illegible] ಹೋಬಳಿ ಮಾಕನಹಳ್ಳಿ ಗ್ರಾಮ ಬಳಿ ನಗರದ ತೋಪಿನಲ್ಲಿ ಎಂ [illegible] ಮನೆ ಪಕ್ಕದಲ್ಲಿದ್ದರಿಂದ [illegible] ಸಂಗಣ್ಣ ಎಂಬ [illegible] ನನ್ನು ಮತ್ತು [illegible] ನಾಶ ವಿದ್ಯಾಭ್ಯಾಸ ಮಾಡಿಸುತ್ತಿದ್ದರು ಹುಡುಗನ ವಯಸ್ಸು ೧೪ ವರುಷ ತಾ ೨೩ ನೆ ಶುಕ್ರವಾರ ರಾತ್ರಿ ಮಳೆ ತುಂತುರು ಬೀಳುತ್ತಾ ಗಗನದಲ್ಲಿನ ಗುಡುಗುಡು ಶಬ್ದವಾಗಿ ಸಿಡ್ಲು ಬಡಿಯಿತು ಆತನ ಮನೆ ಮೇಲೆ ಗ್ರಾಮದ ಮಧ್ಯೆ ಕಟ್ಟಿರುವ ತಾರಸಿ ಮನೆ ಮೇಲೆ ಗಾರೆ ಕಳಸಕ್ಕೆ ಸಿಡ್ಲು ಬಿದ್ದು ಅದು ಒಡೆದು ಅಡಿಗೆ ಮನೆಯೊಳಕ್ಕೆ ಪ್ರವೇಶ ಮಾಡಿತು ಆಗ್ಗೆ ಆ ಹುಡುಗನ ತಂದೆ ಊಟ ಮಾಡಿ ಕೈತೊಳೆಯಲು ಅಂಗಳಕ್ಕೆ ಬಂದು ಅವರ ದಿವಸಕ್ಕೆ ಆತನು ಅಲ್ಲಿಯೇ ಕೂತುಕೊಂಡನು ಅಡಿಗೆ ಮನೇಲಿ ಈ ಹುಡುಗ ಊಟ ಮಾಡಿ ಇನ್ನು ಕೊಂಚ ಇದು ಎಂದು ತಾಯಿ ರುದ್ರಮ್ಮನಿಗೆ ಹೇಳಿದ ಆಕೆ ಅನ್ನ ಇಕ್ಕಲು ಇವನು ಊಟ ಮಾಡುವ ಸ್ಥಳಕ್ಕೂ ಅನ್ನ ತರಲು ಹೋದ ಜಾಗಕ್ಕೂ ಸುಮಾರು ೩—೪ ಗಜ ಇತ್ತು. ಆಕೆ ಈ ಅರ್ಭಟಕ್ಕೆ ಅನ್ನ ಕೈಲಿ ಹಿಡಿದು ಹಾಗೇ ಪಾತ್ರೆಗಳ ಮೇಲೆ ಮೂರ್ಛೆ ಹೋದಳು ಆಗ ಸಿಡಿಲು ಆ ಬಾಲಕನಿಗೆ ಬಡಿದದ್ದರಿಂದ ಆ ಹುಡುಗನು ಕೈಲಿ ಅನ್ನವಿದ್ದ ಹಾಗೇ ಬಿದ್ದು ಮೃತಪಟ್ಟನು ಆ ಹುಡುಗನ ಮೈ ಯಾವತ್ತೂ ಆ ಅಗ್ನಿಜ್ವಾಲೆಯಿಂದ ಬೆಂದ ಹಾಗೆ ಕಪ್ಪಾಯಿತು—ಈಗ ೩—೪ ದಿನಗಳಿಂದ ಬಿಸಲಿನ ತಾಪ ಹೆಚ್ಚುತ್ತಾ ಇದ್ದು ತಕ್ಕ ಹಾಗೆ ೨—೩ ಹದ ಮಳೆ ಆಗಿ ರೈತಾಪಿ ಜನರೆಲ್ಲಾ ಉಳಲು ಪ್ರಯತ್ನ ಮಾಡುತ್ತಿದಾರೆ—ಈ ತಾಲ್ಲೂಕು ಕೆಲವು ಗ್ರಾಮಗಳಲ್ಲಿ ಕಾಲರಾ ಜಾಡ್ಯ ಅಲ್ಲಲ್ಲಿ ವ್ಯಾಪಿಸಿ ೧—೨ ಜನ ಮೃತಪಟ್ಟರು ಪ್ಲೇಗ್ ಬಹಳ ಮಟ್ಟಿಗೆ ಕಡಿಮೆಯಾಗಿದೆ—ನಮ್ಮ ತಾಲ್ಲೂಕಿಗೆ ಬಂದಿರುವ ಅಮಲ್ದಾರ್ ಮೆ॥ ಬಸವರಾಜೇಅರಸಿನವರು ಬಹಳ ದಯಾಳುಗಳಾಗಿ ಬಡವರಾಧಾರಿಯಾಗಿ ನಿಷ್ಪಕ್ಷಪಾತತ್ವದಿಂದ ಬಹಳ ಚಟುವಟಿಕೆಯಾಗಿ ಕೆಲಸ ನಡಿಸುತ್ತಾ ಇದಾರೆ—ಇವರು ತಾಲ್ಲೂಕ್ ಕಛೇರಿ ಮುಂದೆ ಬಹಳ ನೇತ್ರಾನಂದಕರವಾದ ಉದ್ಯಾನವನವನ್ನು ಮಾಡಿಸಿದಾರೆ

ಪ್ರಕಟನೆಗಳು.

ಇಲ್ಲಿನೋಡಿ !

23 12

ತುಮಕೂರು ಮಿಷನ್ ಇಲಾಖೆಯಲ್ಲಿ, ಯೂರೋಪಿಯನ್ ಮೇಲ್ವಿಚಾರಣೆಯಿಂದ, ಉತ್ತಮ ತರಹದ ಹಾಸನದ ಟೋಪಿಗಳು ಅತಿ ಶ್ರೇಷ್ಠವಾದ ಉಲ್‌ದಾರದಿಂದ ತಯಾರಾಗುತ್ತವೆ ಕ್ರಯ ೧೦ ಆಣೆ ಯಿಂದ ೧ರೂ ೧೨ ಆಣೆವರಿಗೂ ದೊರಕುವವು ಅಪೇಕ್ಷಿಸುವವರಿಗೆ ಕ್ರಯದ ಪಟ್ಟಿಯನ್ನು ರವಾನಿಸುವೆವು ವಿಳಾಸ—ಮೇನೇಜರ್,

ಹಾಸನದ ಟೋಪಿ ಕಾರ್ಖಾನೆ, ಮಿಷನ್ ಇಲಾಖೆ, ತುಮಕೂರು.

ಪುಸ್ತಕಗಳೂ, ಗಡಿಯಾರಗಳೂ.

0 1

ಮೆ॥ ಭಾರತಿ ಕಂಪಂಗಿರಾಮಯ್ಯನವರಿಂದ ತಯಾರಾಗಿ ಬಿಕರಿಗೆ ಸಿದ್ಧವಾಗಿರುವ ಪುಸ್ತಕಗಳು—೧ ಪ್ರಶ್ನೋತ್ತರ ಲೆಕ್ಕಬೋಧಿನಿ—೩ ನೇ ಭಾಗ ಸಿದ್ಧವಾಗಿದೆ ದಪ್ಪವಾದ ಕಾಗದ, ಭದ್ರವಾದ ಬೈಂಡು ಳ್ಳದ್ದು ಪುಸ್ತಕದಲ್ಲಿರುವ ಸಂಗತಿಯನ್ನು ದಯವಿಟ್ಟು ಓದಿನೋಡಿ. ಕ್ರಯ ೧—೪—೦ ಅನೇಕ ವಿಷಯಗಳನ್ನು ಸ್ವಲ್ಪಮಟ್ಟಿಗೆ ಓದುಬರಹ ಬಂದವರೂ ಕೂಡ ಸುಲಭವಾಗಿ ತಿಳಿಯುವಂತೆ ಪ್ರಶ್ನೋತ್ತರರೂಪವಾಗಿ ಈ ಪುಸ್ತಕದಲ್ಲಿ ಬರೆದಿದೆ ಈ ೩ ನೇ ಮುದ್ರಣದಲ್ಲಿ ಮುಖ್ಯವಾಗಿ ಹಿಂದೂ ಲಾ ಮೊದಲಾದ ನ್ಯಾಯಶಾಸ್ತ್ರಕ್ಕೆ ಹೆಚ್ಚಾಗಿ ಸ್ಥಳ ಕೊಟ್ಟಿದೆ ೨ ಮೇಜಿನ ಪುಸ್ತಕ—ಕ್ರಯ ೧೪ ಆಣೆ

ಗಡಿಯಾರಗಳು—ಮೆಟಲ್, ಒಪನ್‌ಫೇಸ್, ಕೀಲೆಸ್, ಲಿವರ್, ವಾಚು ೧ ಕ್ಕೆ ರೂ ೨—೮—೦ ಅಮೇರಿಕದ ನ್ಯೂಯಾರ್ಕ್ ಅಸ್ಸೋಸಿಯಾ ಕಂಪನಿ ಲಿವರ್ ವಾಚು ೧ ಕ್ಕೆ ರೂ ೩—೮—೦. ಸಾದಾ ಟೈಂಪೀಸು ೧ ಕ್ಕೆ ರೂ ೧—೪—೦ ಅಲಾರಂ ಇರತಕ್ಕ ಟೈಂಪೀಸು ೧ ಕ್ಕೆ ರೂ ೨—೪—೦ ೧ ತಿಂಗಳನಂತರ ಈ ಕ್ರಯಕ್ಕೆ ಖಂಡಿತ ದೊರೆಯುವದಿಲ್ಲ

ವಿಳಾಸ ಬಿ ಜೆ ಮೂರ್ತಿ ಕಂಪನಿ, ಬೆಂಗಳೂರು ಪ್ರೆಸ್.

ಒಕ್ಕಲಿಗರ ಪತ್ರಿಕೆ.

39—4

ಒಕ್ಕಲಿಗರ ಪತ್ರಿಕೆಯು ಬೆಂಗಳೂರಿನಲ್ಲಿ ಪ್ರತಿ ಬುಧವಾರ ಒಕ್ಕಲಿಗರ ಸಂಘದಿಂದ ಪ್ರಕಟಿಸಲ್ಪಡುತ್ತಿರುವುದು ಇದು ಬಿ ಎ ಮತ್ತು ಬಿ ಎಲ್ ಪರೀಕ್ಷೆಗಳನ್ನು ಪಾಸುಮಾಡಿರುವ ವಿದ್ಯಾವಂತರಾದ ಒಕ್ಕಲಿಗರಿಂದ ಸುಲಭವಾದ ಒಳ್ಳೇ ಭಾಷೆಯಲ್ಲಿ ಬರೆಯಲ್ಪಟ್ಟು ಅಂದವಾಗಿ ಮುದ್ರಿಸಲ್ಪಡುತ್ತಿದೆ

ಈ ಪತ್ರಿಕೆಯಲ್ಲಿ ಸಂಸ್ಥಾನದ ಆಡಳಿತಗಳು, ಲೋಕವಾರ್ತೆ, ಕೈಗಾರಿಕೆ, ವ್ಯಾಪಾರ, ಕಸುಬು ವ್ಯವಸಾಯ ಮುಂತಾದ ವಿಷಯಗಳನ್ನು ಕುರಿತು ದೀರ್ಘಾಲೋಚನೆ ಮಾಡಿ ಉಪನ್ಯಾಸಗಳು ಬರೆಯಲ್ಪಡುವವು

ಚಂದಾ ಬೆಂಗಳೂರು ಮತ್ತು ಮೈಸೂರು ಪಟ್ಟಣಗಳಲ್ಲಿಯೂ ಮತ್ತು ನಮ್ಮ ಏಜಂಟರುಗಳಿರುವ ಎಲ್ಲಾ ಪರಸ್ಥಳಗಳಲ್ಲಿಯೂ ವರ್ಷ ೧ ಕ್ಕೆ ೧ ರೂಪಾಯಿ. ತಮ್ಮ ಹೆಸರಿಗೆ ನೇರಾ ತರಿಸಿಕೊಳ್ಳುವವರಿಗೆ ಅಂಚೆ ಹಾಸಲು ಸೇರಿ ೧ ರೂ ೧೪ ಆಣೆ ಬೀಳುತ್ತದೆ

ಈ ಪತ್ರಿಕೆಯು ಪಟ್ಟಣ, ಊರು ಗ್ರಾಮಾಂತರಗಳಲ್ಲಿ ಬಹಳ ಪ್ರಚಾರಕ್ಕೆ ಬರುತ್ತಾದ್ದರಿಂದ ಇದರಲ್ಲಿ ಇಸ್ತಿಹಾರುಗಳು ಪ್ರಕಟಿಸಿದರೆ ವ್ಯಾಪಾರಸ್ಥರಿಗೆ ಬಹಳ ಲಾಭ ಉಂಟು ದರಗಳನ್ನು ಈ ಕೆಳಗೆ ಕಂಡ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು

ಮ್ಯಾನೇಜರು, ಒಕ್ಕಲಿಗರ ಪತ್ರಿಕೆ,

(ಒಕ್ಕಲಿಗರ ಸಂಘ ಕಛೇರಿ, ಅರಳೇಪೇಟೆ,

ಬೆಂಗಳೂರು ಸಿಟಿ.

ಪೆರೂನಾವನ್ನು ಕುರಿತು ಹೆಂಗಸರೇ ಹೆಂಗಸರ ಕೂಡ ಮಾತಾಡುತ್ತಾರೆ.

ಎ೬ 5

ಮಿಸೆಸ್ ಮೆಗ್ರಾಥ್

ದುರ್ಬಲದ ಅನುಭವ

ಮಿಸೆಸ್ ಎಂ ಮೆಗ್ರಾಥ್ ೨೧೯ ವೆಸ್ಟ್ಲಿಯು ೩೩ನೆ ಟೀಟ್, ನ್ಯೂಯಾರ್ಕ್ ಸಿಟಿ, ಈಕೆ ಬರೆಯುವುದೇನೆಂದರೆ —

‘ಪೆರೂನಾ ನನಗೆ ಮಾಡಿದ ಉಪಕಾರಕ್ಕಾಗಿ ನನ್ನ ಯೋಗ್ಯತಾನುಸಾರ ನಾನು ಅದನ್ನು ಸಂತೋಷದಿಂದ ಹೊಗಳುತ್ತೇನೆ ಎರಡು ವರುಷಗಳ ಕೆಳಗೆ ನನಗೆ ಒಂದು ವಿಧವಾದ ದುರ್ಬಲ ಪ್ರಾಪ್ತವಾಯಿತು ನನ್ನ ಬೆನ್ನೂ ಪಕ್ಕಗಳೂ ಯಾವಾಗಲೂ ನೋಯುತ್ತಿದ್ದವು ನನ್ನ ಅನ್ನಕೋಶದಲ್ಲಿ ಅಕ್ರಮಗಳುಂಟಾದವು ಇದರಿಂದ ಒಂದು ಬಟ್ಟಲು ನೀರು ಕೂಡ ನನ್ನ ಹೊಟ್ಟೆಯಲ್ಲಿ ನಿಲ್ಲುತ್ತಿರಲಿಲ್ಲ ನನಗೆ ವಾಂತಿ ಎಲ್ಲಿ ಪ್ರಾರಂಭವಾದೀತೋ ಎಂಬ ಹೆದರಿಕೆಯಿಂದ ನಾನು ಊಟವನ್ನೇ ಅಪೇಕ್ಷಿಸುತ್ತಿರಲಿಲ್ಲ ಕಳೆದ ಮೂರು ತಿಂಗಳಿಂದಲೂ ನಾನು ಪೆರೂನಾವನ್ನು ಸೇವಿಸುತ್ತಿದ್ದೇನೆ ಈಗ ನನಗೆ ಎಂದಿನಂತೆ ಆರೋಗ್ಯವಾಗಿರುತ್ತದೆ ನನ್ನ ಅನ್ನಕೋಶವು ಎಂದಿನಂತೆ ಬಲವಾಗಿದೆ ನನ್ನ ನರಗಳ ಹಿಂಸೆಯು ನಿವಾರಣೆಯಾಯಿತು ನನ್ನ ಹಾಗೇ ಕಷ್ಟಪಡುವ ಹೆಂಗಸರಿಗೆಲ್ಲಾ ಪೆರೂನಾ ತೆಗೆದುಕೊಳ್ಳಿ ಎಂದು ಶಿಫಾರಸು ಮಾಡುತ್ತಿದ್ದೇನೆ ಆ ರೀತಿ ಅದನ್ನು ತೆಗೆದುಕೊಂಡವರು ನನ್ನನ್ನು ವಂದಿಸುತ್ತಾರೆ ’’

ಮಿಸೆಸ್ ಮೂರ್ಸ್

ಮಿಸೆಸ್ ಮೂರ್ಸ್, ಆರ್ ಎಫ್ ಡಿ ೩, ರೆಂಟ್ಸ್, ಓರ ಮೆಂಬರ್ ಆರ್ಡರ್ ಆಫ್ ವಾಷಿಂಗ್ಟನ್ ಈಕೆ ಬರೆಯುವುದನ್ನು ಕೇಳಿ —

‘ಹೆಂಗಸಿನ ಧರ್ಮಕ್ಕೆ ಉಂಟಾಗುವ ಹಿಂಸೆಯು ನನಗೆ ನಾಲ್ಕು ವರುಷಗಳಿಂದ ಪ್ರಾಪ್ತವಾಗಿ ಬಹಳ ಕಷ್ಟಪಟ್ಟೆನು ನನ್ನ ಬೆನ್ನಿನಲ್ಲಿ ಉದ್ದಕ್ಕೂ ಕೆಟ್ಟ ನೋವಿತ್ತು ನನಗೆ ಅದರಿಂದ ವಿಶೇಷ ದುರ್ಬಲವಾಗಿತ್ತು, ತುಂಬಾ ದಣುವಾದಂತೆ ನಿಶ್ಶಕ್ತಿಯಾಗಿತ್ತು ನನ್ನ ಮನೆಯ ಕೆಲಸಗಳನ್ನು ಬಹಳ ಕಷ್ಟದಿಂದ ಮಾಡಿಕೊಳ್ಳುತ್ತಿದ್ದೆನು ಇದರ ಪರಿಹಾರಕ್ಕೆ ನಾನಾ ವಿಧವಾದ ಔಷಧಗಳನ್ನು ಮಾಡಿದೆನು ಪೆರೂನಾ ಸೇವಿಸಿದ ತನಕ ನನಗೆ ಸ್ವಲ್ಪವೂ ವಾಸಿಯಾಗಿರಲಿಲ್ಲ ಎರಡು ವಾರಗಳಲ್ಲೇ ನನ್ನ ಶರೀರ ಸ್ಥಿತಿಯು ತುಂಬಾ ಬದಲಾವಣೆ ಹೊಂದಿತು ಮತ್ತು ಮೂರು ತಿಂಗಳಲ್ಲಿ ನನಗೆ ಎಂದಿನಂತೆ ಶಕ್ತಿಯೂ ಸಂತೋಷವೂ ಆರೋಗ್ಯವೂ ಉಂಟಾದವು ಇದಕ್ಕೆಲ್ಲಾ ಪೆರೂನಾವಿನ ಮಹತ್ತೇ ಅಲ್ಲದೆ ಬೇರೇನೂ ಅಲ್ಲವೆಂದು ಹೇಳುತ್ತೇನೆ ’’

ಮಿಸೆಸ್ ನೆಲ್ಸನ್

ತಲೆ ನೋವೂ ಬೆನ್ನು ನೋವೂ

ಮಿಸೆಸ್ ಟೆಸ್ಸೀ ನೆಲ್ಸನ್, ೬೦೯ ೫ನೆ ಅವೆ, ನ್ಯಾಷ್ವಿಲ್ಲೆ, ಟೆನ್, ಈಕೆ ಬರೆಯುವುದನ್ನು ಓದಿ —

‘ಪೆರೂನಾ ಔಷಧವು ನನಗೆ ಅಪಾರವಾದ ಗುಣವನ್ನು ಉಂಟುಮಾಡಿದೆಯಾದ್ದರಿಂದ ಅದನ್ನು ವಿವರಿಸುವುದು ನನ್ನ ಕರ್ತವ್ಯವಾಗಿರುತ್ತದೆ ಇದರಿಂದ ನನ್ನ ಹಾಗೆ ಕಷ್ಟಪಡುತ್ತಿರುವ ಯಾವ ಹೆಂಗಸಾದರೂ ಇದ್ದಲ್ಲಿ ಅಂಥವಳು ಇದನ್ನು ತಿಳಿದು ಉಪಕಾರ ಹೊಂದುವಂತಾಗಬಹುದು ಐದು ವರುಷಗಳ ಕಾಲ ನನಗೆ ಸುಖವಾಗಿದ್ದ ದಿನ ಒಂದಾದರೂ ಕಾಣದೆ ಇದ್ದೆನು ತಲೆ ನೋಯುವುದು, ತಪ್ಪಿದರೆ ಬೆನ್ನು ನೋಯುವುದು ಇವೆರಡು ಇಲ್ಲದಿದ್ದರೆ ಇನ್ಯಾವ ಭಾಗದಲ್ಲಾದರೂ ನೋಯುವುದು ಇದ್ದೇ ಇತ್ತು ಎಷ್ಟು ಕಷ್ಟಪಟ್ಟು ಜೀವ ಉಳಿಸಿಕೊಂಡಿದ್ದೆನೋ ... ನನ್ನ ಸ್ನೇಹಿತೆ ಪೆರೂನಾವನ್ನು ಸೇವಿಸೆಂದು ನನಗೆ ಹೇಳಿದಳು ಏನಾದರೂ ಮಾಡೇನಲ್ಲಾ ಎಂದು ನಾನು ... ಸಂತೋಷಪೂರ್ವಕವಾಗಿ — ಆರು ಬಾಟ್ಲಿಗಳನ್ನು ಸೇವಿಸುವಷ್ಟರಲ್ಲೇ ನಾನು ಯಥಾಪ್ರಕಾರ ಹೆಂಗಸಾದೆನು ಈಗ ನನಗೆ ಯಾವ ನೋವೂ ಇಲ್ಲ ತುಂಬಾ ಸುಖಸಂತೋಷಗಳುಳ್ಳವಳಾಗಿದ್ದೇನೆ ’’

ಮೇಲ್ಕಂಡ ಸಾಕ್ಷಿಗಳು ಪ್ರತಿ ದಿನದ ಅನುಭವಗಳನ್ನು ವಿವರಿಸತಕ್ಕವುಗಳಾಗಿವೆ ಕಾಯಿಲೆ ಇದ್ದು ಪೆರೂನಾದಿಂದ ಯಥಾರ್ಥವಾದ ಗುಣವನ್ನು ಹೊಂದಿ, ಈ ಮಾತುಗಳನ್ನು ನಿಜವಾಗಿ ಹೇಳಿರುತ್ತಾರೆ

ಹೆಂಗಸರಿಗೆ ಇದು ತುಂಬಾ ಸಹಾಯ ಮಾಡದ್ದು ಹತ್ತಿರ ಇಟ್ಟುಕೊಂಡಿದ್ದರೆ ಈ ಔಷಧದಿಂದ ಸಮಾನವಾದ ಗುಣವನ್ನು ಪಡೆಯಬಹುದಾಗಿದೆ ನರಗಳ ನಿಶ್ಶಕ್ತಿ, ಬೆನ್ನುನೋವು, ಅಜೀರ್ಣ, ತಲೆನೋವು, ಸೊಂಟ ಮೊದಲಾದ ಸ್ಥಳದಿಂದ ಸ್ಥಳಕ್ಕೆ ಓಡಾಡುವ ನೋವು, ಇವೂ ಇನ್ನೂ ಅನೇಕ ರೋಗಗಳೂ ಪೆರೂನಾದಿಂದ ನಿವಾರಣೆಯಾಗುತ್ತವೆ ಮುಖ್ಯವಾಗಿ ಈ ಮಾತು ಹೆಂಗಸರಿಗೆ ಹೇಳತಕ್ಕದ್ದಾಗಿದೆ ತಪ್ಪಿ ಹೋದರಿಯರಿಗೂ ಉಪಕಾರವಾಗಲಿ ಎನ್ನುವುದು ವಿನಾ ಅವರು ಹೀಗೆಲ್ಲಾ ಹೇಳಲು ಮತ್ತೇನ ಕಾರಣವೇ ಇಲ್ಲ

ಈ ಮೇಲ್ಕಂಡ ಸಾಕ್ಷಿಗಳ ಮಾತನ್ನು ಓದುವಂಥವರಿಗೆ — ಅವರು ಅನೇಕ ಇತರವಾದ ಔಷಧಗಳನ್ನು ತೆಗೆದುಕೊಂಡು, ಡಾಕ್ಟರುಗಳ ಅಭಿಪ್ರಾಯ ತೆಗೆದುಕೊಂಡು ಸಾಕಾದರು ಕಡೆಗೆ ಪೆರೂನಾ ಅವರ ಸೇವನೆಗೆ ಸಿಕ್ಕಿ ಅವರ ಕಷ್ಟವೆಲ್ಲಾ ನಿವಾರಣೆಯಾಗಿ ಅವರನ್ನು ಸುಖವಾಗಿ ಮಾಡಿರುತ್ತದೆ

ಪೆರೂನಾದಿಂದ ಪ್ರತಿದಿನವೂ ರೋಗಿಗಳು ಗುಣ ಹೊಂದುತ್ತಿದ್ದಾರೆ ಪೆರೂನಾವಿಗೆ ಬಂದಿರುವ ಈ ಕೀರ್ತಿಯು ಅದನ್ನು ಉಪಯೋಗಿಸಿರುವಂಥಾ ಜನರ ಹೊಗಳಿಕೆಯಿಂದಲೇ ಬಂದಿದ್ದಾಗಿರುತ್ತದೆ

ಹದಿಮೂರು ವರುಷ ಕಷ್ಟಪಟ್ಟೆನು

ಮಿಸೆಸ್ ಅನ್ನಾ ಮಾಂಟೀ, ಹೋಲಿಗ್ರೂವ್, ಆರ್ಕ್, ಈಕೆ ಬರೆಯುವುದನ್ನು ನೋಡಿ —

“ನಾನು ಹದಿಮೂರು ವರುಷಗಳ ತನಕ ಹೆಂಗಸಿನ ರೋಗವನ್ನು ಅನುಭವಿಸಿದೆನು ನಿಮ್ಮ ಪೆರೂನಾ ಪ್ರಕಟನೆಯನ್ನು ಒಂದು ಕಡೆ ಓದಿ ನೋಡಿ ಒಂದು ಸೀಸೆಯನ್ನು ಕೊಂಡು ಪೂರಾ ಸೇವಿಸುವಷ್ಟರೊಳಗಾಗಿ ನಾನು ಹಾಸಿಗೆ ಬಿಟ್ಟೆದ್ದು ತಿರುಗಾಡುವಂತಾದೆನು ಮೂರು ಬಾಟ್ಲು ಔಷಧ ತೆಗೆದುಕೊಂಡಾಗ ನನಗೆ ಆರೋಗ್ಯವಾಯಿತು, ಶರೀರ ಸುಖವೂ ಮಾಂಸಖಂಡಗಳ ಪುಷ್ಟಿಯೂ ಉಂಟಾದವು ಅದನ್ನು ನಾನು ಬಿಟ್ಟಿಲ್ಲಾರೆನು ’’

ತಲೆ ನೋವೂ ಕಿವುಡೂ

ಮಿಸೆಸ್ ಮೇರಿ ಇ ಸ್ಯಾಂಡರ್ಸ್, ಲಂಡೆರಿ, ಎನ್ ಎಚ್, ಎಂಬೀಕೆ ಬರೆಯುವುದೇನೆಂದರೆ —

“ನನಗೆ ಬಹು ಕಠಿಣವಾದ ತಲೆ ನೋವಿತ್ತು ಎರಡು ಕಿವಿಗಳೂ ಮುಚ್ಚಿ ಹೋಗಿದ್ದವು ನರಗಳ ಶಕ್ತಿ ಕುಂದಿ ಹೋಗಿತ್ತು ಮೂವತ್ತು ವರುಷಗಳ ತನಕ ಒಂದು ಕಿವಿ ಕೇಳುತ್ತಿರಲಿಲ್ಲ ನಾನು ಆರು ಬಾಟ್ಲು ಪೆರೂನಾ ಮತ್ತು ಒಂದು ಬಾಟ್ಲು ಮನಲಿನ್ ಕೊಂಡು ಸೇವಿಸಿದೆನು ಇಂಥಾ ಉತ್ಕೃಷ್ಟವಾದ ಔಷಧವು ಬೇರೊಂದಿಲ್ಲವೆಂದು ಈಗ ಸಂತೋಷದಿಂದ ಹೇಳುತ್ತೇನೆ ನನ್ನ ನರಗಳು ಶಕ್ತಿ ಕೂಡಿಕೊಂಡವು ಅರುಚಿ ಪರಿಹಾರವಾಗಿದೆ ಊಟ ಮಾಡಿದ್ದೆಲ್ಲಾ ದೇಹಕ್ಕೆ ಒಂಟುವುದು ಎಲ್ಲಾ ಭಾಗಗಳಲ್ಲೂ ನಾನು ತುಂಬಾ ಸುಖವಾಗಿದ್ದೇನೆ ’’

ಗವಿತವಾದ ಶೀತ ನೆಗಡಿ

ಮಿಸ್ ಮೇರಿ ಕ್ವಾಲ್ಟೀ, ೯೦೩ ಮೆಯಿನ್ ಬೀದಿ ಸಿನ್ಸಿನಾಟಿ, ಓಹಿಯೋ, ಈ ಹೆಂಗಸು ಬರೆಯುವುದೇನೆಂದರೆ —

“ಸಾಯಂಕಾಲ ಒಂದು ಕಡೆ ಸಂತೋಷೋತ್ಸವಕ್ಕೆ ಹೋಗಿದ್ದು ವಾಪಸು ಮನೆಗೆ ಬರುವಾಗ್ಗೆ ನನಗೆ ನೆಗಡಿ ಹಿಡಿಯಿತು. ನಾನು ಆಗ ಅದನ್ನು ಅಲಕ್ಷ್ಯ ಮಾಡಿಬಿಟ್ಟೆ ಅದರಿಂದ ನನಗೆ ತುಂಬಾ ಕೆಡಕಾಯಿತು ನನ್ನ ಪಾಡು ಬಹಳ ದುಃಖಕರವಾಯಿತು ನಾನು ಪೆರೂನಾ ತೆಗೆದುಕೊಂಡೆನು ಆ ಕೂಡಲೇ ನನಗೆ ಗುಣಕೊಟ್ಟಿತು ಒಂದು ವಾರದೊಳಗಾಗಿ ನಾನು ಆರೋಗ್ಯ ಹೊಂದಿದೆನು ಈಗಲೂ ನನಗೆ ಮೈಗೆ ಆಲಸ್ಯವಾದಂತೆ ತೋರಿದ ಒಡನೆಯೇ ಅದನ್ನು ತೆಗೆದುಕೊಂಡಲ್ಲಿ ಎಲ್ಲಾ ನಿವಾರಣೆಯಾಗುತ್ತದೆ ’’

ಸೇವನೆ ಮಾಡತಕ್ಕದ್ದಕ್ಕೆ ಪ್ರತಿ ಬಾಟ್ಲು ಸಂಗಡ ಕಳುಹಿಸುವ ನೋಟೀಸನ್ನು ಓದಿಕೊಳ್ಳಿ ಎಲ್ಲಾ ಔಷಧ ಮಾರಾಟಗಾರರಲ್ಲೂ ಪೆರೂನಾ ವಿಕ್ರಯವಾಗುತ್ತಿದೆ ಒಂದು ಬಾಟ್ಲಿಗೆ ರೂ ೩।।।, ಆರು ಬಾಟ್ಲಿಗೆ ರೂ ೧೮।।।

ಈ ಔಷಧ ಸಿಕ್ಕುವ ಸ್ಥಳಗಳು —

(೧) ಹಿಚ್‌ಕಾಕ್ ಅಂಡ್ ಸನ್ಸ್, ಬೆಂಗಳೂರು

(೨) ಇಂಗ್ಲಿಷ್ ಡ್ರಗ್ ಕಂಪನಿ, ೩೫೮ ಮಿಂಟ್ ಬೀದಿ, ಮದರಾಸ್.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ

19—4—1907 ರಿಂದ 25—4—1907 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರ ಪಟ್ಟಣ	16	13	6	
ಮೈಸೂರು ,,	1	0	1	
ಬೆಂಗಳೂರು ಡಿಸ್ಟ್ರಿಕ್ಟ್	34	18	46	3
ಮೈಸೂರು ,,	0	0	4	2
ಕೋಲಾರ್ ,,	0	0	5	
ಕೋಲಾರ್ ಚಿನ್ನದ ಗಣಿಗಳು	0	0	0	[illegible]
ತುಮಕೂರು ಡಿಸ್ಟ್ರಿಕ್ಟ್	0	0	3	
ಹಾಸನ ,,	5	1	10	1[illegible]
ಚಿತ್ರದುರ್ಗ ,,	0	0	0	[illegible]
ಕಡೂರ್ ,,	[illegible]	1	0	[illegible]
ಶಿವಮೊಗ್ಗ ,,	4	2	0	[illegible]
ಜಮ್ಲಾ	61	38	17	8[illegible]

ಶಾಲಿವಾಹನ ಶಕ ವರುಷಂಗಳು ೧೮೨೯ ನೇ ಪ್ಲವಂಗನಾಮ ಸಂವತ್ಸರದ ನಿಜ ಚೈತ್ರ ಬಹುಳ ದ್ವಾದಶಿ ಗುರುವಾರದಿಂದ ವೈಶಾಖ ಬಹುಳ ತದಿಗೆ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೭ ನೇ ಇಸವಿ ಮೇ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಶೇಷ ಮಾಸ
9	ಗುರು ‡	ದ್ವಾದಶಿ	16 12	ಪೂ ಭಾ	5 12	27
10	ಶುಕ್ರ †	ತ್ರಯೋ	15 46	ರೇ	6 18	28
11	ಶನಿವಾರ ¶	ಚತುರ್ದಶಿ	16 22	ಅಶ್ವಿ	8 18	29
12	ರವಿವಾರ *	ಅಮಾವಾಸ್ಯೆ	16 10	ಭ	11 18	30
13	ಚಂದ್ರ ,	ಪಾಡ್ಯ ವಿ	22 20	ಕೃ	16 22	31
14	ಕುಜ	ಬಿದಿಗೆ	25 30	ರೋ	22 [illegible]	1
15	ಬುಧ ,,	ತದಿಗೆ	30 5	ಮೃ	[illegible] 10	2

‡ ತ್ರಯೋದಶಿ ಅಥವಾ ಪ್ರದೋಷ ಶ್ರೀರಂಗದ ರಂಗಸ್ವಾಮಿ ರಥ † ಮಾಸಶಿವರಾತ್ರಿ ¶ ಸರ್ವತ್ರ ಅಮಾವಾಸ್ಯೆ * ಕರಗದ ಸಂಮೇ... ಷಡ್ಗ್ರಹಯೋಗ ಶೂನ್ಯತಿಥಿ, ಚಂದ್ರೋದಯ ರಬ್ಬಿಸಾ... ಚಾದು , ಅಕ್ಷತೃತೀಯ, ದಗ್ಧಯೋಗ

ಪೇಟೇ ಧಾರಣೆ

ದಿನಸಿ	ಮೈಸೂರು	ಬೆಂಗಳೂರು
ಕತ್ತೀ ಅಕ್ಕಿ ಪಲ್ಲಾ ೧ಕ್ಕೆ	ರೂ ೧೨ ೮ ೦	೧೪ ೦
ಕಂಬೂತಿ ಅಕ್ಕಿ ಅವಲ್	೧೩ ೪ ೦	೧೩ ೮
,, ದುಯಂ	೧೨ ೮ ೦	೧೩ ೦
ಜೂಪ್ರಾಣ ಅಕ್ಕಿ	೧೨ ೮ ೦	೧೫ ೦
ಸಣ್ಣಕ್ಕಿ ಅವಲ್	೧೯ ೦ ೦	೧೪ ೮
,, ದುಯಂ	೧೪ ೮ ೦	೧೪ ೩
ತೊಗರೀ ಬೇಳೆ ಪಲ್ಲಾ ೧ಕ್ಕೆ	೧೩ ೮ ೦	೧೩ ೪
,, ದುಯಂ	೧೨ ೧೨ ೦	೧೨ ೮
ಹೈರ್ ರಾಗಿ ಪಲ್ಲಾ ೧ಕ್ಕೆ	೬ ೦ ೦	೬ ೦
ಕಾಡ್ರಿ	೫ ೮ ೦	೫ ೧೨
ಜೋಳ	೪ ೮ ೦	೭ ೪
ಹಲಸಂದೆ ಪಲ್ಲಾ ೧ಕ್ಕೆ	೧೧ ೦ ೦	೧೧ ೦
ಬಿಳೀ ಅವರೆ	೮ ೪ ೦	೭ ೪
ಹೆಸರು	೧೨ ೮ ೦	೧೦ ೩
ಉದ್ದು	೧೨ ೮ ೦	೧೨ ೦
ಕಡಲೆ	೧೦ ೮ ೦	೧೦ ೦
ಎಳ್ಳು ಸೆ ೧೦೨ಕ್ಕೆ	೨೨ ೮ ೦	೨೨ ೮
ಹುರಳಿ	೬ ೬ ೦	೭ ೪
ಹರಳು ೧೨ ಸೇರಿಗೆ	೧೬ ೦ ೦	೧೩ ೦
ಸೀಗೇಕಾಯಿ ಮಣ ೧ಕ್ಕೆ	೨ ೬ ೦	೧ ೧೨
ಮೆಣಸಿನಕಾಯಿ	೨ ೮ ೦	೩ ೦
,, ದುಯಂ	೨ ೮ ೦	೨ ೧೨
ಬೆಲ್ಲ ದೊಡ್ಡ ಅಚ್ಚು	೩ ೮ ೦	ಮ ೧ ೫
ಒಳ್ಳೆಣ್ಣೆ ಮಣ ೧ಕ್ಕೆ	೫ ೬ ೦	೫ ೮
ಹರಳೆಣ್ಣೆ ,,	೫ ೦ ೦	೫ ೧
ಕೊತ್ತಂಬರಿ ಪಲ್ಲಾ ೧ಕ್ಕೆ	೬ ೨ ೦	೭ ೨
ಉಪ್ಪು ,,	೫ ೩ ೧	೬ ೦
ಹುಣಸೇ ಹಣ್ಣು	೧ ೬ ೦	೧ ೩
,, ಹಳೇದು	೦ ೧೪ ೦	೦ ೧೪
ತುಪ್ಪ ಮಣ ೧ಕ್ಕೆ	೧೫ ೦ ೦	೧೩ ೦
ಸೀಮೆಯೆಣ್ಣೆ ಪೆಟ್ಟಿಗೆ ೧ಕ್ಕೆ	೫ ೦ ೦	೪ ೦
ತೆಂಗಿನಕಾಯಿ ೧೦೦ಕ್ಕೆ	೮ ೮ ೦	೬ ೮
ಅಡಕೇಕಾಯಿ ಮಣ ೧ಕ್ಕೆ	೧ ೦ ೦	೧ ೧
ಅಂಟ್ವಾಳದ ಕಾಯಿ ಮಣ ೧ಕ್ಕೆ	೦ ೧೨ ೦	೦ ೧೪
ಚಿನ್ನ (ಪೌನ್) ಕೆಂಪು	೧೫ ೪ ೦	೧೫ ೭
,, ಪಸುಮೆ	೧೫ ೧೧ ೦	೧೫ ೧೧
,, ,, ಗಟ್ಟಿ ತೊಲ ೧ಕ್ಕೆ	೨೩ ೧೨ ೦	೨೪ ೩
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ	೮೫ ೦ ೦	೮೨ ೦

Printed nd Published by the Rev E W Thompson, M A, Proprietor and Manager, Wesleyan Mission Press, Mysore 9/5/1907

REGISTERED
M. 20.

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೦ ಮೈಸೂರು—ಸನ್ ೧೯೦೭ ನೇ ಇಸವಿ ಮೇ ತಾರೀಖು ೧೬ ನೇ ಗುರುವಾರ. ಸಂಚಿಕೆ ೫೦

WILLIAM & CO., BOMBAY.

ವಿಲಿಯಂ ಮತ್ತು ಕಂಪೆನಿ. ಫೋರ್ಟು, ಮುಂಬಯಿ.

ಅಮೃತಾಂಜನ

ಬಾಟ್ಲಿ ಒಂದಕ್ಕೆ ಕ್ರಯ ೮ ಆಣೆ. ವಿ. ಪಿ ೧೨ ಆಣೆ. 27 12

ಅಮೃತಾಂಜನ—ಸರ್ವಾಂಜನ
ಅಮೃತಾಂಜನ—ಸಂಜೀವನ
ಅಮೃತಾಂಜನ—ಪರಮಾಂಜನ
ಅಮೃತಾಂಜನ—ದಿವ್ಯಾಂಜನ
ಅಮೃತಾಂಜನ—ರೋಗಭಂಜನ
ಅಮೃತಾಂಜನ—ಬಾಧಾಭಂಜನವಿಸರ್ಜನಿ
ಅಮೃತಾಂಜನ—ಅಪೂರ್ವದರ್ಶಿನಿ
ಅಮೃತಾಂಜನ—ತಕ್ಷಣ ಪರಿಹಾರಿನಿ.
ಅಮೃತಾಂಜನ—ಸಂಧಿವಾತಕ್ಕೆ
ಅಮೃತಾಂಜನ—ತಲೆನೋವಿಗೆ.
ಅಮೃತಾಂಜನ—ಜಖಮ್ ಮತ್ತು ಘಾಯಕ್ಕೆ
ಅಮೃತಾಂಜನ—ಗಂಟ್ಲುನೋವಿಗೆ.

ಶಿರೋವೇಧನ ಪಿತ್ತ, ಎದೆನೋವು, ಗಂಟ್ಲುನೋವು, ಸಂಧಿವಾತ, ತಲೆನೋವು, ... ಈ ಎಲ್ಲಾ ತರದ ರೋಗಕ್ಕೆ ಅಮೃತಾಂಜನ ದಿವ್ಯವಾದ ಔಷಧವಾಗಿದೆ. ಇದನ್ನು ತರಿಸಿ ಮನೆಯಲ್ಲಿ ಸದಾಕಾಲ ಇಟ್ಟರೆ ಮೇಲೆ ಹೇಳಿದ ಯಾವತರದ ರೋಗಕ್ಕೂ ಎಡೆ ಸಿಕ್ಕುವದಿಲ್ಲ. ಅಮೃತಾಂಜನದಿಂದ ಗುಣವು ಕಂಡುಬರದಿದ್ದರೆ ಹಣ ಹಿಂತಿರುಗಿ ಕೊಡಲ್ಪಡುವದು.

ಗಜಕರ್ಣದ ಮುಲಾಮು ಡಬ್ಬಿ ಒಂದಕ್ಕೆ ೬ ಆಣೆ, ವಿ. ಪಿ ೧೦ ಆಣೆ.—ಇದನ್ನು ಹಾಗಿಸುವದರಿಂದ ಎಲ್ಲಾ ತರದ ಕಜ್ಜಿ ವಾಗುವದು. ಮೂರು ಸಾರಿ ಹಾಗಿಸುವದರೊಳಗೆ ಗಜಕರ್ಣವು ಹೋಗುವದು. ಒಂದು ಸಾರಿ ಪರೀಕ್ಷಿಸಿ ನೋಡಿರಿ. ಕ್ರಯ ಕಮ್ಮಿ, ಗುಣ ... ಇದನ್ನು ಹಚ್ಚಿದಲ್ಲಿ ಉರಿ ಬರುವದಿಲ್ಲ, ಬಟ್ಟೆ ಕಪ್ಪಾಗುವದಿಲ್ಲ. ಇದರಿಂದ ಗುಣವು ಕಂಡುಬರದಿದ್ದರೆ ಹಣ ಪರತು ಕೊಡಲ್ಪಡುವದು.

ಕೇಶವರ್ಧಿನೀ ತೈಲ—ಇದು ತಲೆಯ ಮೆದುಳನ್ನು ತಂಪುಮಾಡಿ ಕೂದಲನ್ನು ತೆಗದು ಕೂದಲು ಬೆಳಸುತ್ತದೆ. ಇದಕ್ಕೆ ಚಲೋ ವಾಸನೆ ಬರುತ್ತದೆ. ಮೂರು ಔನ್ಸು ಬಾಟ್ಲಿನ ... ೧-೦-೦

ಕಜ್ಜಿ ಮುಲಾಮು—ಇದು ಅತಿಶಯ ಅಗ್ಗವೂ ಗುಣದಾಯಕವೂ ಆಗಿರುತ್ತದೆ ... ೦-೩-೦

ಕಫಹಾರಿ—ಕೆಮ್ಮು, ದಮ್ಮು, ಕ್ಷಯ, ಕಾಲರಾದಲ್ಲಿ ಕಫ ಮುಂತಾದ್ದಕ್ಕೆ ಇದು ಉತ್ತಮವಾದದ್ದು, ಬಾಟ್ಲಿ ೧ಕ್ಕೆ ... ೦-೩-೦

ಜೀರ್ಣರಸಾಯನ—ಹೊಟ್ಟೆಯಲ್ಲಿ ಹಸಿವೆ ಆಗಲಿಕ್ಕೆ ನಾಲಿಗೆಗೆ ರುಚಿ ಬರಲಿಕ್ಕೆ ಉತ್ತಮವಾದದ್ದು ... ೧-೩-೦

ಜ್ವರಹಾರಿ—ಎಲ್ಲಾ ತರದ ಜ್ವರಗಳ ಮೇಲೆ ಈ ಔಷಧವು ಚಲೋದಾದದು ... ೦-೧೨-೦

ಸುಂದರೀ ತೈಲ—ಈ ತೈಲವನ್ನು ನಿರಂತರವಾಗಿ ಮೋರೆಯ ಮೇಲೆ ಹಾಗಿಸುವದರಿಂದ ಮೋರೆಯ ಮೇಲೆ ಇರುವ ಕಪ್ಪು ಕಲೆಗಳನ್ನೂ ಕಪ್ಪಾದ ಕಲಂಕಗಳನ್ನೂ ತೆಗದು ಚರ್ಮವನ್ನು ಮೃದುವಾದ ಚಲುವಿಕೆಯನ್ನು ಕೊಡುತ್ತದೆ. ಹೆಂಗಸರಿಗೂ ಗಂಡಸರಿಗೂ ಉತ್ತಮವಾದದ್ದು ... ೦-೮-೦

ದಂತಮಂಜನ—ಹಲ್ಲು ಸ್ವಚ್ಛವಾಗುತ್ತೆ, ಗಟ್ಟಿಯಾಗುತ್ತೆ, ವಾಸನೆಯನ್ನು ರಕ್ತವನ್ನು ನಿಲಿಸುತ್ತದೆ. ಕ್ರಯ ಬಹಳ ಕಮ್ಮಿ ... ೦-೨-೦

ನೇತ್ರಾಂಜನ ೪ ಆಣೆ. ವಿಷ್ಣುಗುಟಿಕ ೧ ರೂಪಾಯಿ. ಕುಸುಮಾರಿ ಗುಟಿಕ ... ದಂತವಾತಹಾರಿ ೮ ಆಣೆ. ಕಫನಾಶಕ ... ೮ ಆಣೆ. ಗೋಳು ... ಕಷಾಯದ ಮದ್ದು ೮ ಆಣೆ. ರೋಮಹಾರಿ ೮ ಆಣೆ. ಕಸ್ತೂರಿಮಾತ್ರೆ ೧೦ ಆಣೆ. ತಾಂಬೂಲಗುಟಿಕ ೮ ಆಣೆ.

ಎಲ್ಲಾ ತರದ ಔಷಧಗಳು ಇರುವದರಿಂದ ಬೇಕಾದವರು ಬರದು ತರಿಸಿಕೊಳ್ಳಬಹುದು.

ವಿಲಿಯಂ ಮತ್ತು ಕಂಪೆನಿ, ೧೬ ಓಕ್ ಲೇನ್, ಫೋರ್ಟು, ಮುಂಬಯಿ.

ಮುಂಬಯಿ ವ್ಯಾಪಾರವಾಚಲಿಕೆ ...

35-50

ಮುಂಬಯಿಯಲ್ಲಿ ಪ್ರತಿಯೊಂದು ಮಾಲಿನ ... ಅಳತೆ ಮತ್ತು ... ವರ್ಣನೆ ಹಾಗೂ ಅನೇಕ ಉಪಯುಕ್ತ ... ಪುಸ್ತಕ—ಕ್ರಯ ೧೦ ಆಣೆ ವಿ. ಪಿ ... ಖರ್ಚು ಬೇರೆ ಬುಕ್ಕು ಸೇಲರ್ ... ಯೋಗ್ಯ ... ದೊರೆಯುವದು ಮತ್ತು ಲಿಂಗಾಯತ ... ಸಂಬಂಧ ... ಕ್ರಿಯಾಲಕ್ಷಣವೆಂಬುವ ಕನ್ನಡ ಪುಸ್ತಕ—... ಆಣೆ ... ಅಕ್ಷರದಿಂದ ಬರಿಯುವ ... ಮಾಂಡ್ವಿ, ಮುಂಬಯಿ.

ನೋಡಿರಿ. ನೋಡಿರಿ. ನೋಡಿರಿ.

ಜನ್ಮದ ಅಂತ್ಯದವರೆಗೆ
ಯೆಣ್ಣೆ ಹಚ್ಚು ಮತ್ತು ತಾಜಾ ಕಲ್ಪ
ಹಾಸ್ಕ ಗೋಲ್ಡ ಧಾರ.

125 20

ಸಹಾಯಕನ ಟೋಪಿ ...
ಸುಪೀರಿಯರ್ ಗೋಲ್ಡ ದಾರ ವಸ್ತ್ರ

	ರೂ	ಆ	ಪೈ
... ಟೋಪಿ ಆಗುವ ಗೋಲ್ಡ ದಾರದ ಕ್ರಯ	೦	೮	೦
... ಟೋಪಿ ಆಗುವ ಒಂದು ಬೀದಲ್ ದಾರದ ಕ್ರಯ	೧೦	೦	
... ಟೋಪಿ ಹೊಲೆಯುವ ಹೊಕ್ಕೆ ಸೂಜಿ ...	...	...	...
... ದಾರವಲ್ಲಿ ಆದ ಟೋಪಿ ಡಜನ್ ೧ಕ್ಕೆ	...	೩	೦

ವಿ. ಪಿ. ಯಿಂದಲೂ ರವಾನಿಸುತ್ತೇವೆ
ವಿಳಾಸ—ಸಿ. ರಘುನಾಥ ಕಾಮತ್,
ಜನರಲ್ ಮರ್ಚಂಟ್, ಬೋಳಾರ ಮಂಗಳೂರು.

ಬೆಲಗೆ ಬೆಳ್ಳಿ—ಗುಣಕ್ಕೆ ಭಂಗಾರ.

86 51

ಇಂಥಾ ಕಾಗದಗಳು ನಮ್ಮಲ್ಲಿಗೆ ಅನೇಕ ಬಂದಿವೆ.

ಮೆ। ವಾಮನಕಿಣಿ, ಜವಳಿ ವರ್ತಕ, ಸುಬ್ರಹ್ಮಣ್ಯ, ಇವರು ಬರೆಯುವುದು—"ಕ್ಲೆಮೆಂಟ್ ಯವರ ಮ್ಯಾಜಿಕ್ ಬಾಂ ಬಹಳ ತೃಪ್ತಿಕರವಾದದ್ದೆಂದು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ಅದು ತುಂಬಾ ಗುಣಕೊಡುವಂಥಾದ್ದು. ದಯವಿಟ್ಟು ಇನ್ನೂ ಮೂರು ಶೀಸೆಯನ್ನು ವಿ. ಪಿ. ಮೇಲೆ ಕಳುಹಿಸಿಕೊಡಿ" ಮೆ। ಜೆ. ಡಬ್ಲ್ಯು. ಕಾಮ್ಯುಯಲ್, ಪೋಸ್ಟ್ ಮಾಸ್ಟರ್, ಟ್ರಾವನ್ಕೋರ್, ಇವರು ಬರೆಯುವುದು "ನಿಜವಾಗಿಯೂ ಇದು ಎಲ್ಲಾ ತರದ ನೋವುಗಳಿಗೂ ಅದ್ಭುತವಾದ ಔಷಧವೆನ್ನುವುದಕ್ಕೆ ಸಂಶಯವಿಲ್ಲ" ಮಿಸೆಸ್ ಇ. ಕ್ಯಾಂಕ್ಸಿಂಗ್, ಮೈಸೂರು, ಬೆಂಗಳೂರು, ಇವರು ಬರೆಯುವುದು—"ನಿಮ್ಮ ಮ್ಯಾಜಿಕ್ ಬಾಂ ಔಷಧವು ನನ್ನ ಕಾಲಿನ ಕೆಟ್ಟ ನೋವನ್ನು ಸಂಪೂರ್ಣವಾಗಿ ವಾಸಿಮಾಡಿದೆ" ಮಿಸೆಸ್ ಇ. ವೇರ್ಸ, ರಂಗೂನ, ಇವರು ಬರೆಯುವುದು—"ನಾನು ಯಾವಾಗಲೂ ನಿಮ್ಮ ಕ್ಲೆಮೆಂಟ್ಸ್ ಮ್ಯಾಜಿಕ್ ಬಾಮನ್ನು ಗಂಟ್ಲು, ಎದೆಯ ನೋವುಗಳಿಗೆ ಉಪಯೋಗಿಸುತ್ತೇನೆ. ಅದರಿಂದ ನನಗೆ ಪ್ರತಿ ಸಲವೂ ಚನ್ನಾಗಿ ವಾಸಿಯಾಗಿದೆ" ಈ ಔಷಧದಿಂದ ಪಾರ್ಶ್ವಶೂಲೆ, ಕೀಲುಗಳ ಬಾಧೆ, ಕಿಬ್ಬೊಟ್ಟೆನೋವು, ಬೆನ್ನೆಳೆಯುವುದು, ತಲೆನೋವು, ಕೆಮ್ಮು, ಕೆಲುಬುಗಳು, ಕೀಲುಗಳು ಕಡಿಸುವುದು, ಕೋರಳು ಊತ, ಕೈ ಕಾಲು ಬಿಗಿತ ಇವೆಲ್ಲಾ ಗುಣವಾಗುತ್ತವೆ. ಇದನ್ನು ಹಾಕಿ ಚನ್ನಾಗಿ ತಿಕ್ಕಿದರೆ ಬಾಧೆ ಪರಿಹಾರವಾಗುವುದು.

ಕ್ರಯ—ಬಾಟ್ಲಿಗೆ ೧೨ ಆಣೆ, ಪೋಸ್ಟೇಜ್ ೪ ಆಣೆ. ೩ ಬಾಟ್ಲಿಗೆ ಅಂಚೆವೆಚ್ಚ ಸೇರಿ ರೂ ೨—೪ ಆಣೆ

ನಮ್ಮ ವಿಳಾಸ:—ಎಫ್ ಡಬ್ಲ್ಯು. ಆರ್ಗ,
ಸಿಮೆಟ್ರಿ ರೋಡ್, ವೇಪೇರಿ, ಮದರಾಸ್.

ವಿಶೇಷ ನೋಟೀಸು.

49-2

ಈ ಮೂಲಕ ಮೈಸೂರು ಸೀಮೆಯಲ್ಲಿರುವವರೆಲ್ಲರಿಗೆ, ದಕ್ಷಿಣ ಕನ್ನಡ ಜಿಲ್ಲಾ ಮಂಗಳೂರಲ್ಲಿರುವ ಬಾಸೆಲ್ ಮಿಶ್ಯನ್ ವೀವಿಂಗ್ ಎಸ್ಟಾಬ್ಲಿಶ್‌ಮೆಂಟಿನ ಮೇನೇಜರರು ತಿಳಿಸುವದು—

ಕೆಲವು ಸಮಯಗಳಿಂದ ಸದ್ಯ ತುಂಕೂರಲ್ಲಿರುವ ಬಿ. ರಾಜಬಾಪರ್ ಮೊದಲಿಯಾರು ನಮ್ಮ ಕಡೆ (Canvassing Agency) ಕೇನ್ವಾಸ್ಸಿಂಗ್ ಯೇಜನ್ಸಿ ಕೆಲಸವನ್ನು ವಹಿಸಿ, ಸಾಮಾಕಾರರಿಂದಲೂ ಇತರರಿಂದಲೂ ನಮಗಾಗಿ ಆರ್ಡರುಗಳನ್ನು ಪಡಕೊಳ್ಳುತ್ತಿದ್ದರು. ಆದರೆ ಇನ್ನು ಮುಂದೆ ಸದರಿ ರಾಜಬಾಪರರು ನಮ್ಮ ಕೇನ್ವಾಸ್ಸಿಂಗ್ ಏಜಂಟರಾಗಿರುವದಿಲ್ಲ ಮತ್ತು ಅವನಿಗಿರುವ ನಮಗೋಸ್ಕರ ಆರ್ಡರುಗಳನ್ನು ಸ್ವೀಕರಿಸುವ ಸ್ವತಂತ್ರವನ್ನು ಈ ನೋಟೀಸ್ ಮೂಲಕ ತೆಗದು ಹಾಕಿರತ್ತೇವೆಂಬದನ್ನು ಸರ್ವಜನರ ತಿಳುವಳಿಕೆ ಬಗ್ಗೆ ಪ್ರಕಟಿಸಿರುತ್ತೇವೆ.

ಯಾರಿಗಾದರೂ ನಮ್ಮ ಜವಳಿಗಳನ್ನು ತರಿಸಿಕೊಳ್ಳಬೇಕಾದಲ್ಲಿ ಅವರು ಕಾಲಕಾಲ ... ಮುಂಗಡವಾಗಿ ನಮಗೆ ರವಾನಿಸಿ ಬರೆದುಕೊಂಡಲ್ಲಿ ಸದರಿ ಮಾಲುಗಳನ್ನು ನಾವೇಗಿಂದೇ ರವಾನಿಸಿಕೊಡುವೆವು.

Mangalore,
4th May 1907

೪-೫-೦೭,
ಮಂಗಳೂರು

ಜ್ವರಹರಿ

47-3

ಇದು ಸಾಧಾರಣ ಜ್ವರ, ಶ್ಲೇಷ್ಮಜ್ವರ, ಘೋರಜ್ವರ, ಪಿತ್ಥಜ್ವರ ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನು ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫಿಸರ್ ಎಸ್. ಟಿ. ವೆಂಕಟಪತಿ ಅಯ್ಯನವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ... ಔನ್ಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ... ಔನ್ಸಿನ ಸೀಸೆಯನ್ನು ವಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದ್ದು—ಎಂದು ಬರೆದಿದ್ದಾರೆ.

ಕ್ರಯ.—ಸೀಸೆ ೧ ಕ್ಕೆ ೮ ಆಣೆ, ೧ ರೂ., ೧—೮ ರೂ., ೨ ರೂ. ೨—೧೨ ಆ., ೧೧ ರೂ., ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

****

ಅಮೃತಕರ್ಪೂರ

ಈ ಔಷಧವು ಅಜೀರ್ಣ, ಶೀತಭೇದಿ, ಸಂಗ್ರಹಣಿ, ಹೊಟ್ಟೆ ಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯವು ನಮ್ಮ ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರ—ನನ್ನಿಂದ ... ಕರ್ಪೂರವನ್ನು ನಾನೂ ನನ್ನ ಹಾಜೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂದು ಬರೆದಿದ್ದಾರೆ.

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಸಾಹುಕಾರರಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ—
ಹೆನ್ರಿಸ್ ... ಇಂಡಿಯನ್ ಔಷಧಗಳ ಕಂಪೆನಿ,
ಕೆಳಂಡ್ ಬೀಚ್ ರೈನ್, ಮದ್ರಾಸ್.

ಹಿಂದುಸ್ಥಾನದಲ್ಲಿ ಮಕ್ಕಳು

ಬಹಳ ಉಷ್ಣದೇಶವಾದದ್ದರಿಂದ ನಾನಾ ದೇಹಬಾಧೆಗಳನ್ನು ಸಹಿಸಿಕೊಂಡು ಬೆಳೆಯಬೇಕಾಗಿದೆ.

ಅವರ ಸಣ್ಣ ಸಣ್ಣ ಮೂಳೆಗಳೂ ಮಾಂಸಖಂಡಗಳೂ ಸರಿಯಾಗಿ ಬಲಹೊಂದಿ ಬೆಳೆಯುವುದಕ್ಕೆ ಅವರಿಗೆ ಚಿಕ್ಕಂದಿನಿಂದಲೇ ಬಲಕಾರಿಯಾದ ಸೇವನಾ ಔಷಧವನ್ನು ಕೊಡುವುದು ಆವಶ್ಯಕ

SCOTT'S EMULSION 31-9

(ಸ್ಕಾಟ್ಸ್ ಇಮಲ್‌ಷನ್)

ಎಂಬೀ ಸೇವನಾ ಔಷಧದಲ್ಲಿ ಮಕ್ಕಳ ಸಮಸ್ತ ಅಂಗಗಳನ್ನೂ ಬಲಪಡಿಸಿ ಬೆಳೆಸುವಂಥಾ ಬಹು ಉತ್ಕೃಷ್ಟವಾದ ಗುಣಗಳಿರುತ್ತವೆ

ಇದಕ್ಕೆ ಸಮಾನವಾದದ್ದು, ಮತ್ತಾವುದೂ ಇಲ್ಲ.

ಈ ಔಷಧವನ್ನು ಸೇವನೆ ಮಾಡುತ್ತಾ ಬಂದ ಒಡನೆಯೇ ಅದರ ಗುಣಗಳು ಕಂಡು ಬರುವವು

ಕೈಯಿಂದ ಮುಟ್ಟದೇನೇ ತಯಾರಾದದ್ದು.

ಎಲ್ಲಾ ಔಷಧ ವ್ಯಾಪಾರಸ್ಥರಲ್ಲೂ ವಿಕರಿಯಾಗುತ್ತಿದೆ.

ಮೀನನ್ನು ಹೊತ್ತಿರುವ ಈ ಮನುಷ್ಯನ ಚಿತ್ರವು ಈ ಔಷಧದ ಗುರುತು.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್, ಔಷಧಗಳ ಕಾರ್ಖಾನೆ, ಲಂಡನ್, ಇಂಗ್ಲೆಂಡ್,

ಇದಕ್ಕೆ ಸಮಾನವಾದ ಪುಸ್ತಕ ಉಂಟೋ ?

ಕನ್ನಡ ಭಾಷೆಯಲ್ಲಿ ಇದುವರಿವಿಗೂ ಇಂಥಾ ಸೊಗಸಾದ ಪುಸ್ತಕವು ಪ್ರಚುರವಾಗಲಿಲ್ಲ. ಸ್ವಲ್ಪ ನೋಡಿ.

"ಹಿಂದೂದೇಶ ಪ್ರದಕ್ಷಿಣೆ"

ಎಂದು ಕರೆಯಲ್ಪಡುವ ಈ ನೂತನ ಪುಸ್ತಕದಲ್ಲಿ ಸುಮಾರು ತೊಂಬತ್ತು ಉತ್ಕೃಷ್ಟವಾದ ಚಿತ್ರಗಳು ಅದಗಿವೆ ಹಿಂದೂ ದೇಶವನ್ನೆಲ್ಲಾ ಸಂಚಾರ ಮಾಡುವದರಿಂದ ಉಂಟಾಗುವ ಪರಮಾನಂದವನ್ನು ಒಂದು ಸಾರಿ ಈ ಗ್ರಂಥವನ್ನು ಓದುವದರಿಂದ ಹೊಂದಬಹುದು ಇದು ಮೊದಲನೇ ಸಾರಿ ಪ್ರಿಂಟ್ ಆಗಿದ್ದು ಬಹು ಶೀಘ್ರವಾಗಿ ಎಲ್ಲಾ ಮಾರಿಹೋಯಿತು ಈಗ ತಿರಿಗಿ ವಿಚಿತ್ರವಾಗಿಯೂ ಉಲ್ಲಾಸಕರವಾಗಿಯೂ ಇದನ್ನು ಪ್ರಸಿದ್ಧವಾದ ಚಿತ್ರಗಳೊಡನೆ ಮುದ್ರಿಸಿರುತ್ತೇವೆ, ಇದರಲ್ಲಿರುವ ಚಿತ್ರಗಳನ್ನು ಸ್ವಲ್ಪ ನೋಡಿ—ಶ್ರೀರಂಗಪಟ್ಟಣದಲ್ಲಿರುವ ಹೈದರಲ್ಲಿ ಟಿಪ್ಪುಸುಲ್ತಾನರ ಗೋರಿ, ಕೃಷ್ಣರಾಯನ ಗೋರಿ, ಹುಗ್ಲಿ ನದಿ, ಕಲ್ಕತ್ತಾ ನಗರ, ಕಲ್ಕತ್ತಾ ಹೈಕೋರ್ಟು, ಕಾಳಿಕಾದೇವತೆ ಚಂದ್ರನಗರ, ಬಂಗಾಳಿಯರ ಮನೆಗಳು, ಜಗನ್ನಾಥಸ್ವಾಮಿ ಭುವನೇಶ್ವರವೆಂಬ ದೇವಸ್ಥಾನ, ಜಗನ್ನಾಥದ ರಥೋತ್ಸವ, ಕನರಾಕ್ ದೇವಸ್ಥಾನ, ಎವರೆಸ್ಟ್ ಶಿಖರ, ಖಟ್ಮಂಡು ನಗರದ ಒಂದು ಬೀದಿ, ಖಟ್ಮಂಡ್ರು ನಗರದ ದೇವಸ್ಥಾನಗಳು, ಬಹುಸತ್ರಗಳು, ಅಂಬಿಗರ ದೋಣಿಯನ್ನು ಎಳಕೊಂಡು ಹೋಗುವದು, ಗಯಾದಲ್ಲಿರುವ ಬುದ್ಧನ ದೇವಸ್ಥಾನ, ಔರಂಗಜೇಬನು ಕಟ್ಟಿಸಿದ ಮಸೀತಿ, ಕಾಶೀ ಪುಣ್ಯಕ್ಷೇತ್ರದಲ್ಲಿರುವ ದಾಶಾಶ್ವಮೇಧಘಟ್ಟ, ಕಪಿಗಳಿಗೆ ತಿಂಡಿ ಹಾಕುವದು, ಕಾಶೀ ಕ್ಷೇತ್ರದ ದೇವಸ್ಥಾನಗಳು, ಅಲಹಾಬಾದ್ ನಗರ ಮತ್ತು ಅದರ ಕೋಟೆ. ಅಲಹಾಬಾದ್‌ನಲ್ಲಿರುವ ಖುಸ್ರು ಬಾಗ್ ಅರಮನೆ, ಯಮುನಾ ನದಿಯಲ್ಲಿ ಯಾತ್ರಿಕರು ಮುಳುಗುವದು, ಕಾನ್‌ಪುರದಲ್ಲಿರುವ ಶಿಲಾ ಶಾಸನ, ಕಾನ್‌ಪುರದ ಹತ್ತರ ಗಂಗಾ ನದಿಯ ಮೇಲೆ ಕಟ್ಟಿರುವ ಸೇತುವೆ, ಲಕ್ನೋ ನಗರದ ರೆಸಿಡೆನ್ಸಿ ಬಂಗಲೆ, ಲಕ್ನೋ ಪಟ್ಟಣದ ಬಾಗಿಲು, ಸರ್ ಹೆನ್ರಿ ಹ್ಯಾವಲಾಕರನು, ಗೋಮತಿ ನದಿಯ ಮೇಲಿರುವ ಅರಮನೆ, ಕ್ಷಾಮದಲ್ಲಿ ಜನರ ಸ್ಥಿತಿ, ಹರಿದ್ವಾರಘಟ್ಟ, ಗಂಗೋತ್ರಿ ದೇವಸ್ಥಾನ, ಹಿಮವತ್ಪರ್ವತಗಳ ಮೇಲಿರುವ ಪಟ್ಟಣ, ಹಿಮಪ್ರವಾಹಗಳು, ಆಗ್ರಾ ಪಟ್ಟಣದ ಕೋಟೆ, ಯಮುನಾ ನದಿಯೂ ದೂರದಲ್ಲಿ ತೋರುತಿರುವ ತಾಜ್‌ಮಹಲ್ ಗೋರಿಯೂ, ತಾಜ್ ಮಹಲಿನ ಕಲ್ಲಿನಲ್ಲಿ ಕೆತ್ತಿರುವ ಥರದೆ, ಅಕ್ಬರನ ಅರಮನೆ, ಆಗ್ರಾ ಪಟ್ಟಣದ ಮುತ್ತಿನ ಮಸೀತಿ, ಫತ್ತೆಪುರ್ ಸಿಕ್ರಿಯಲ್ಲಿರುವ ಪಾಂಚ್ ಮಹಾಲ್ ಅರಮನೆ, ರಜಪೂತರು, ಭರತಪುರದ ಕೋಟೆ, ಅಲ್ವಾರಿನಲ್ಲಿ ಮಹಾರಾಜ ಭಕ್ತಾವಾರ್ ಸಿಂಗರ ಗೋರಿ, ದೆಹಲಿ ನಗರದ ದೊಡ್ಡ ಮಸೀತಿ, ಪುರಾತನ ದೆಹಲಿಯ ಬಾಗಿಲು, ರಾಜ ದೇವನು ಸ್ಥಾಪಿಸಿದ ಕಬ್ಬಿಣದ ಸ್ತಂಭ, ನಾದರ್ ಷಹಾನು ದೆಹಲಿ ನಗರದಲ್ಲಿ ಪ್ರಜಾ ಸಂಹಾರವನ್ನು ನೋಡುತ್ತಿರುವದು, ದೆಹಲಿಯ ಬಳಿಯಲ್ಲಿರುವ ಕುಟುಬ್ ಮಿನಾರ್, ಚಾಂದ್ನಿ ಚೌಕವೆಂಬ ಬೀದಿ, ಸಿಂಲಾಕ್ಕೆ ಹೋಗುವ ದಾರಿ, ಸಿಮ್ಲಾ, ಅಮೃತಸರದ ಸುವರ್ಣಾಲಯವು, ಲಾಹೋರಿನಲ್ಲಿರುವ ರಣಜಿತಸಿಂಗನ ಗೋರಿ, ಲಾಹೋರ್ ಪಟ್ಟಣ, ಈ ಮುಂತಾದ ಅನೇಕ ರಮಣೀಯವಾದ ಸ್ಥಳಗಳ ಚಿತ್ರಗಳು ಈ ಪುಸ್ತಕದಲ್ಲಿ ಅಡಗಿವೆ. ಅವುಗಳನ್ನೆಲ್ಲಾ ವಿವರಿಸಲು ಸ್ಥಳವಿಲ್ಲ.

ಪ್ರತಿಯೊಂದು ಅಂಶದ ವಿವರಣೆಯೂ ಬಹು ಪರಿಷ್ಕಾರವಾಗಿದೆ, ದಕ್ಷಿಣ ದೇಶದಲ್ಲಿರುವ ಅನೇಕ ಪ್ರಸಿದ್ಧ ಸ್ಥಳಗಳ ಚಿತ್ರಗಳೂ, ಅವುಗಳ ವಿವರಣೆಗಳೂ ಇದರಲ್ಲಿವೆ. ಪುಸ್ತಕವು ಭಾರಿಯಾಗಿದೆ. ಪುಸ್ತಕದ ಅಚ್ಚು ಮತ್ತು ಬೈಂಡು ಬಹು ಸುಂದರವಾಗಿವೆ. ಇದರ ಕ್ರಯ ಎಂಟೇ ಆಣೆ, ವಿ. ಪಿ. ಪಿ. ಮೂಲಕ ಹನ್ನೊಂದು ಆಣೆಯಾಗುವದು ಪುಸ್ತಕವು ಜಾಗ್ರತೆಯಲ್ಲಿ ಮಾರಾಟವಾಗುತ್ತಿದೆಯಾದ್ದರಿಂದ ತಾವುಗಳೆಲ್ಲ ಕೆಳಗೆ ಕಂಡ ವಿಳಾಸಕ್ಕೆ ಬೇಗನೆ ಬರದು ತರಿಸಿಕೊಳ್ಳಬೇಕು

ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು. 48-2

CHAMBERLAIN'S COUGH REMEDY.

ಚೇಂಬರ್ಲೇನ್‌ರವರ ಕಂಡು ಹಿಡಿದ ಕೆಮ್ಮಿನ ಔಷಧವು.

1-20

ಶೀತದ ಕೆಮ್ಮು, ಗಂಟಲು ಗೂರಲು, ನಾಯಿಕೆಮ್ಮು, ಎಲ್ಲಾ ತರದ ಶೀತ, ಗಂಟಲು ಎದೆಯಲ್ಲಿ ಹುಟ್ಟುವ ಸಮಸ್ತ ವ್ಯಾಧಿಗಳು—ಇವಕ್ಕೆಲ್ಲಾ ಈ ಔಷಧವು ಬಹು ಉಪಯುಕ್ತವಾಗಿದೆ

ಆ ಕೆಮ್ಮನ್ನು ಅಲಕ್ಷ್ಯಮಾಡಬೇಡಿ. ಅದು ಬಹಳ ಅಪಾಯವನ್ನುಂಟುಮಾಡತಕ್ಕದ್ದಾಗಿದೆ. ಅದರ ಮೇಲೆ ನ್ಯೂಮೋನಿಯಾ ಎಂಬ ಅತಿ ಕಠಿಣವಾದ ಜ್ವರವು ಬರುವುದು. ತರುವಾಯ ಉಗುಳಿನಲ್ಲಿ ರಕ್ತ ಬೀಳುವುದು, ಹಾಗೆಯೇ ಕ್ಷಯರೋಗಕ್ಕೆ ಆಸ್ಪದವಾಗುವುದು.

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟಲಿನಲ್ಲಿ ಶ್ಲೇಷ್ಮ ಕಟ್ಟುವುದನ್ನೂ ಶ್ಲೇಷ್ಮ ಬೀಳುವುದನ್ನೂ ಖಂಡಿತವಾಗಿ ನಿವಾರಣೆಮಾಡುತ್ತದೆ. ಉಸಿರಾಡುವುದು ಕಷ್ಟವಾಗಿದ್ದರೆ ಅದನ್ನು ಕೂಡಲೇ ಪರಿಹರಿಸುತ್ತದೆ ಅಪಾಯಕರವಾದ ಕೆಮ್ಮಿನ ಚಿಹ್ನೆಗಳನ್ನು ಇಲ್ಲದೆಮಾಡುತ್ತದೆ. ಎದೆ ಒಣಗುವಂಥಾ ಕೆಟ್ಟ ಸ್ಥಿತಿಯನ್ನು ಸಂಪೂರ್ಣವಾಗಿ ವಾಸಿಮಾಡಬಲ್ಲದು. ಕೆಮ್ಮನ್ನು ನಿಲ್ಲಿಸುವುದು, ನೀವು ಸುಲಭವಾಗಿ ನಿದ್ರೆಮಾಡುವಂತೆ ಮನಸ್ಸು ಉಲ್ಲಾಸಕೊಡುತ್ತದೆ.

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪ ಮಾತ್ರವಾದರೂ ಅಫೀಮನ್ನು ಸೇರಿಸಿರುವುದಿಲ್ಲ.

ಈ ಔಷಧವು ವಿಲಾಯಿತಿಯಲ್ಲಿ ತಯಾರಾಗಿ

ಕೈಯಿಂದ ಮುಟ್ಟದೆ ತಯಾರಾಗಿದೆ

ಎಲ್ಲೆಲ್ಲೂ ವಿಕರಿಯಾಗುವುದು. ಸಣ್ಣ ಸೀಸೆಗೆ ೧ ರೂಪಾಯಿ. ದೊಡ್ಡ ಸೀಸೆಗೆ ೨ ರೂಪಾಯಿ.

ಪಾಳ್ಯದ ವೆಂಕಟಾಚಲ ಪಂಡಿತ, ಶ್ರೀಸೀತಾರಾಘವ ವೈದ್ಯಶಾಲಾ, ಕೊಳ್ಳೇಗಾಲ, ಇವರ ಸಿದ್ಧೌಷಧಗಳು.

೧. ಬಲಕಾಮಾಯುಹರ ಕಸ್ತೂರೀ ಮಾತ್ರೆ.—ಈ ಮಾತ್ರೆಗಳನ್ನು ಸವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಶ್ರೇಷ್ಠವಾಗಿಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ



ಚಳಿಜ್ವರ, ಜ್ವರ, ಹೊಟ್ಟೆ ಶೂಲೆ, ಸಂದುಗಳ ನೋವು, ಮೈ ಸೆಳೆತ, ಕೆಮ್ಮು (ಧಾತು ನಷ್ಟ), ವಾತರೋಗಗಳ ಬಾಧೆ, ಅಜೀರ್ಣ, ಅಗ್ನಿ ಮಾಂದ್ಯ, ಅತಿಸಾರ, ಕೆಮ್ಮಲು, ನೆಗಡಿ, ಸನ್ನಿ, ಅತಿಸಾರಗಳು ಇನ್ನು ಅನೇಕರೋಗಗಳಿಗೆ ಕೊಟ್ಟರೆ ಬಹು ಬೇಗ ಗುಣವಾಗುತ್ತದೆ.

ತಾಂಬೂಲವೇಳದವೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿದ್ದು ಎಂತಹ ಆಹಾರವನ್ನಾದರೂ ಜೀರ್ಣಿಸಿ ಯಾವ ವ್ಯಾಧಿಗೂ ಅವಕಾಶವಿಲ್ಲದೆ, ಶರೀರದ ಬಡವಾದರೆಯನ್ನು ನಿವಾರಿಸಿ, ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ

ಸ್ತ್ರೀಯರ ಋತುಶೂಲೆ, ಮಕ್ಕಳ ಸೆಳವು, ಜ್ವರ, ಸಜ್ಜೆಜ್ವರ ಕೃಶತ್ವಗಳನ್ನು ಗುಣಪಡಿಸುತ್ತದೆ

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಯಾವ ರೋಗಕ್ಕೆ ಗುರಿಯಾಗುವುದಿಲ್ಲ ಒಳ್ಳೇ ಶಕ್ತಿವರ್ಧಕವಾಗಿದೆ.

೨೦ ಮಾತ್ರೆಯುಳ್ಳ ಡಪ್ಪಿಗೆ ೪ ಆಣೆ; ೫ ಡಪ್ಪಿಗೆ ೧ ರೂಪಾಯಿ. ಹೆಚ್ಚು ೧ ರಿಂದ ೧೨ ಡಪ್ಪಿ ವರೆಗೆ ಪೋಸ್ಟೇಜು ೪ ಆಣೆ

ವಿಳಾಸ:—ಎಸ್. ಎಸ್. ಆರ್. ವೈದ್ಯಶಾಲಾ, ಲಕ್ಷ್ಮೀವಿಲಾಸ ರೋಡ್, ಮೈಸೂರು.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

11 (i)

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು? ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು! ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ವಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇಳಾದದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ.—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು. (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಸೀದಾ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದು ಚನ್ನಾಗಿಲ್ಲದ್ದು ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ.

ಬಿಳಿ, ಕೆಂಪು, ಕಪ್ಪು, ಚಿರಿಕೆ, ಕಾಫಿ ಟೋಪಿಗಳು ೧ ರೂ ೮ ಆ; ೧ ರೂ ೬ ಆ; ೧ ರೂ ೪ ಆ

ರೇಷ್ಮೆ ಚುಕ್ಕೆಯುಳ್ಳ ಟೋಪಿಗಳು ೧ ರೂ ೮ ಆ; ೨ ರೂ

ದಾರದ ಟೋಪಿಗಳು ೧ ರೂ, ೧೨ ಆ; ೧ ರೂ ೮ ಆ; ೧ ರೂ ೬ ಆ

ಉಣ್ಣೆಯ ಟೋಪಿಗಳು ೧ ರೂ ೮ ಆ; ೧ ರೂ ೬ ಆ

ಕೂಸುಗಳ ಟೋಪಿ, ಸೂಟಿನ ಮೇಜೋಡು, ಅರ್ಧ ಮೇಜೋಡು ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು.

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ.

ಬಾಲಶಿಕ್ಷೆ ೧ನೇ ಭಾಗ!

ಕ್ರಯ ಒಂದಾಣೆ. ಬಂದಾಣೆ ಬಂದೇ ಆಣೆ!

ಅಕ್ಷರಗಳನ್ನೂ ಪಾಠದ ವಿಷಯಗಳನ್ನೂ ಮಕ್ಕಳ ಜ್ಞಾಪಕದಲ್ಲಿ ಉಚಿತವಾಗಿ ನಿಲ್ಲಿಸುವದಕ್ಕೆ ನವೀನವಾದ ಚಿತ್ರಗಳು ಇದರಲ್ಲಿ ಇವೆ. ಆಯಾ ಪಾಠಗಳ ಅಡಿಯಲ್ಲಿ ಜೋಡ್ಯಪಾಠವೂ ಗಣಿತಪಾಠವೂ ಇವೆ. ಮಕ್ಕಳಿಗೆ ಆ ಪಾಠಗಳು ಕಠಿಣವಾಗದೆ ಸುಲಭವಾಗಿ, ಪರಿಣಮಿಸುವವು ನೂರು ಪ್ರತಿಗಳಿಗೆ ಹನ್ನೆರಡು ಪ್ರತಿಗಳು ಕಮೀಷನ್.

ವಿಳಾಸ.—ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

ಮೈಸೂರು ಡಿಸ್ಟ್ರಿಕ್ಟ್ ಜಡ್ಜ್ ರವರ ಕೋರ್ಟಿನಲ್ಲಿ

೧೯೦೨ ೦೩ ನೆ ಇಸವಿ ಸಿವಿಲ್ ಸೂಟ್ ನಂಬರ್ ೩

೧೯೦೨ ೦೩ ನೆ ಇಸವಿ ಮಿಸಲೇನಿಯಸ್ ನಂಬರ್ ೩೬೬

ವಾದಿಗಳು

ಮೈಸೂರು ದೇವರಾಜ ಮೊಹಲ್ಲಾದಲ್ಲಿರುವವರು.—

೧ ಉಪ್ಪಿನ ಮಂಡಿ ಸಾಹುಕಾರ್ ಇಬ್ರಾಹಿಂ ಸೇಟ್,

೨ ಡಿಟೋ ವ್ಯಾಪಾರದ ಅಬ್ದುಲ್ ಗನಿ ಸೇಟ್,

೩ ಜಿನಸಿ ವ್ಯಾಪಾರದ ಸಾಹುಕಾರ್ ಅಬ್ದುಲ್ ರಹಿಮಾನ್ ಸೇಟ್,

೪ ಮ್ಯುನಿಸಿಪಲ್ ಕಮಿಷನರ್ ಸಾಹುಕಾರ್ ರಹಮತುಲ್ಲಾ ಸೇಟ್,

೫ ಪಾತ್ರೆ ಅಂಗಡಿ ಕಂಟ್ರ್ಯಾಕ್ಟರ್ ದಾವೂದ್ ಖಾನ್ ಸಾಬ್.

೬ ದಳ್ಳಾಳಿ ಮೀರ್ ಮಹಮ್ಮದ್ ಸಾಬ್,

೭ ಜಿನಸಿ ಸೈರುದಾರ್ ಮಹಮ್ಮದ್ ಖಾಸಿಂ ಸಾಬ್.

೮. ಖಾಸಿಂ ಸಾಬರ ಮಗ ಕಂಟ್ರ್ಯಾಕ್ಟರ್ ಮಹಮ್ಮದ್ ಬೀರ್ ಸಾಬ್.

ಪ್ರತಿವಾದಿ :

ಸದರಿ ದೇವರಾಜ ಮೊಹಲ್ಲಾ ಸಂತೆಪೇಟೆಯಲ್ಲಿರುವ ಅಬ್ದುಲ್ ರಜಾಕ್ ಅಲ್ಲಿ ಖಾನ್ ಮೋಕ್ರಿ ಮಗ ಮಹಮ್ಮದ್ ಅಲ್ಲಿ ಖಾನ್ ಮೋಕ್ರಿ

ಮೈಸೂರಲ್ಲಿರುವ ಎಲ್ಲಾ ಮಹಮ್ಮದೀಯ ಜನಗಳಿಗೂ ತಿಳಿಯಪಡಿಸುವದೇನಂದರೆ —

ಮೈಸೂರು ಶ್ರೀರಾಂಪ್ಯಾಟೆಯಲ್ಲಿರುವ ಮಹಮ್ಮದಿಯರ ಮಸೀತಿಗೆ ತಾನು ಮುತ್ತವಲ್ಲಿಯೆಂದು ಹೇಳಿಕೊಂಡು, ಹಾಲಿ ಮುತ್ತವಲ್ಲಿ ಕೆಲಸ ನೋಡುತ್ತಿರುವ ಪ್ರತಿವಾದಿ ಮಹಮ್ಮದಲ್ಲಿ ಖಾನ್ ಮೋಕ್ರಿಯವರು ಮುತ್ತವಲ್ಲಿ ಕೆಲಸಕ್ಕೆ ಅರ್ಹರಲ್ಲವೆಂದೂ, ಆತ ಮುಂದೆ ಮುತ್ತವಲ್ಲಿ ಕೆಲಸ ನೋಡಕೂಡದೆಂದೂ ಡಿಕ್ಲೇರ್ ಮಾಡಿ, ಕಂಟ್ರ್ಯಾಕ್ಟರ್ ಮಹಮ್ಮದ್ ಇಬ್ರಾಹಿಂ ಸಾಹೇಬರನ್ನಾಗಲಿ, ಅಥವಾ ಲಾಯಕ್ಕಾದ ಬ್ಯಾರೆ ಇನ್ಯಾರಾದರೂ ಒಬ್ಬರನ್ನು ಮುತ್ತವಲ್ಲಿ ಕೆಲಸಕ್ಕೆ ನೇಮಕ ಮಾಡಿ, ಸದರಿ ಮಸೀತಿ ಕೆಲಸಗಳು ಮುಂದೆ ನಡಿಯುವದಕ್ಕೆ ಒಂದು ಕ್ರಮವಾದ ಯೋಜನೆಯನ್ನು ಕೋರ್ಟಿನವರು ಮಾಡಿಕೊಡಬೇಕೆಂಬದಾಗಿ ಮೈರೆ ಮೇಲ್ಕಂಡ ವಾದಿಗಳು ತಮಗೋಸ್ಕರವಾಗಿಯೂ ಮತ್ತು ಇತರ ಮಹಮ್ಮದಿಯ ಜನಗಳಿಗೋಸ್ಕರವಾಗಿಯೂ ಎಂದು ಸಿವಿಲ್ ಪ್ರೊಸಿಡ್ಯೂರ್ ಕೋಡು ೩೦ ನೆ ಸೆಕ್ಷನ್ ಪ್ರಕಾರ ಅಪ್ಪಣೆ ಪಡೆದು ದಾಖಲ್ ಮಾಡಿದ ದಾವಾ ೧೯೦೩ ನೆ ಇಸವಿ ಜೂನ್ ಮಾಹೆ ೧ ನೇ ತಾರೀಖಿಗೆ ಹೀರಿಂಗು ಇರುತ್ತೆ.

ಸದರಿ ಮಸೀತಿಗೆ ಅಭಿಮಾನಶಾಲಿಗಳಾದ ಮಹಮ್ಮದಿಯರ ಸಮೂಹಕ್ಕಾಗಿ ಮೇಲ್ಕಂಡ ವಾದಿಗಳು ದಾವಾ ಮಾಂದಿನ ಕ್ರಮ ನಡೆಸುವ ಭಾಗದಲ್ಲಿ ಅಭ್ಯಂತರವೇನಾದರೂ ಇದ್ದಲ್ಲಿ ಅಂಥಾವರು ಮೇಲ್ಕಂಡ ಹೀರಿಂಗು ತಾರೀಖಿನ ದಿವಿ ೧೧ ಘಂಟೆಗೆ ಖುದ್ದಾಗಿ ಆಗಲಿ, ಅಥವಾ ಅಧಿಕಾರ ಹೊಂದಿದ ಲಾಯರ ಮೂಲಕವಾಗ್ಯ ಆಗಲಿ ಈ ಕೋರ್ಟಿನ ಸಮಕ್ಷಮ ಹಾಜರಾಗಿ, ಲಿಖಿತ ಮೂಲಕ ಕೋರ್ಟಿಗೆ ತಿಳಿಯಪಡಿಸಿಕೊಳ್ಳತಕ್ಕದ್ದು.

ಈ ತಾರೀಖು ೬ ನೇ ಮೇ, ೧೯೦೩ ನೆ ಇಸವಿ

(Sd) S. Venkatavaradan Iyengar,
District Judge.

ವೃತ್ತಾಂತ ಪತ್ರಿಕೆ

೧೯೦೨ ನೇ ಇಸವಿ ಮೇ ತಾ॥ ೧೬ ನೇ ಗುರುವಾರ.

ರಾಜಧಾನಿಯ ಮಿಷನ್ ಆಸ್ಪತ್ರೆಯೂ ಮಹಮದಿಯರೂ

ಮೈಸೂರ ಪಟ್ಟಣದಲ್ಲಿರುವ ಮಿಷನ್ ಆಸ್ಪತ್ರೆಯ ವಿಷಯವಾಗಿ ಈಚಿಗೆ ನಾನಾತರದ ಸುಳ್ಳು ವರ್ತಮಾನಗಳು ಹುಟ್ಟಿ ಹರಡುತ್ತವದರಿಂದ ಯಥಾರ್ಥ ಏನಾಗಿ ನಡೆದಿರುವಂಥ ಸಂಗತಿಯನ್ನು ತಿಳಿಯಪಡಿಸುವುದು ಅವಶ್ಯಕವೆಂದು ಕಂಡುಬಂದಿದೆ. ಈ ಆಸ್ಪತ್ರೆಯು ಪ್ರಾರಂಭವಾದ ಕಾಲದಿಂದ ಇದುವರೆಗೆ ರೋಗಿಯಾಗಿ ಬಂದು ಅಲ್ಲಿ ಚಿಕಿತ್ಸೆ ಹೊಂದಿರತಕ್ಕ ಯಾವ ಮತದವರನ್ನಾಗಲಿ ಕ್ರೈಸ್ತ ಮತಕ್ಕೆ ಸೇರಿಸಿಕೊಂಡಿದ್ದಾರೆಂದು ಕೇಳಿಲ್ಲ ... ಮೈಸೂರ್ ಸ್ಟಾರ್ ಪತ್ರಿಕೆ ... ಇಂಗ್ಲೀಷ್ ಪತ್ರಿಕೆಯಲ್ಲಿ ಒಂದು ಚರ್ಚೆಯು ...

[illegible]

ಯಥಾರ್ಥವಾಗಿ ನಡೆದಿರುವ ಸಂಗತಿ ಏನೆಂದರೆ:— ... ಒಬ್ಬ ಹೆಂಗಸು ... ಆಸ್ಪತ್ರೆಗೆ ಬಂದು ಚಿಕಿತ್ಸೆಮಾಡಿಕೊಂಡಳು ... ಆಸ್ಪತ್ರೆಯಿಂದ ಕಳುಹಿಸಿಬಿಟ್ಟರು. ಅವಳು ಆಸ್ಪತ್ರೆಗೆ ಬಂದಳೆ ಈ ಸಂಗತಿಯನ್ನು ಅವಳ ಗಂಡನು ... ಮನೆಯಲ್ಲಿರಲಿಲ್ಲ ... ಆಸ್ಪತ್ರೆಗೆ ಬಂದನು. ಗಂಡನಿಗೂ ಹೆಂಡತಿಗೂ ... ಅವಳು ಆಸ್ಪತ್ರೆಯಲ್ಲಿ ... ಕೆಲಸವಾದಾಗ್ಯೂ ... ಅಸಾಧ್ಯವೆಂದು ಅವಳಿಗೆ ತಿಳಿಸಿ, ಅವಳನ್ನು ಅವಳ ಗಂಡನ ಮನೆಗೆ ಕಳುಹಿಸಿದ್ದಾರೆ ... ಅವಳು ಇದ್ದಕ್ಕಿದ್ದಹಾಗೆ ... ಆಸ್ಪತ್ರೆಗೆ ಬಂದಳು ... ಗಂಡನ ಮನೆಗೆ ಹೋಗುವುದಿಲ್ಲವೆಂದು ಹೇಳಿದಳು ... ಅವಳಿಗೆ ಆಸ್ಪತ್ರೆಯಲ್ಲಿ ಖಂಡಿತವಾಗಿ ಇರುವುದಕ್ಕಾಗುವುದಿಲ್ಲ. ನಿನ್ನ ... ಅನಾಥರಾದ ಹೆಂಗಸರು ... ಮಿಷನರವರ ನಿಲಯವಿದೆ ... ನಿನ್ನ ಇಷ್ಟವೇನೆಂದು ಕೇಳಿದರು. ಅವಳು ಬೆಂಗಳೂರಿಗೆ ಹೋಗುವುದಾಗಿ ಒಪ್ಪಿಕೊಂಡಳು ... ಈ ಮೇಲೆ ಇಲ್ಲಿ ಸುಳ್ಳು ವರ್ತಮಾನಗಳು ಹುಟ್ಟಿದ್ದನ್ನು ನೋಡಿ, ... ರಾಜಧಾನಿಯಲ್ಲಿರುವ ... ಸಂಗತಿಯನ್ನು ತಿಳಿಸಿದರು. ಅವರು ಇನ್ನು ... ಈ ಹೆಂಗಸನ್ನು ಇಲ್ಲಿ ಕಳುಹಿಸಿದ ... ಅವಳ ಇಷ್ಟವೇನೆಂಬುದನ್ನು ತನ್ನ ಕಾಲಿನಲ್ಲಿ ... ಯೋಗ್ಯವಾದ ಮಾತೆಂದು ಒಪ್ಪಿ, ಆ ಹೆಂಗಸನ್ನು ... ಕಮಿಷನರ್ ... ಬಂಧುವು ಅವಳ ... ಹೋಗಿ ಮಾತನಾಡಿದನು. ಅವಳು ಅವನ ಸಂಗಡ ಹೋಗಿ ಇರುವುದಿಲ್ಲವೆಂದು ಹೇಳಿಬಿಟ್ಟಳು ... ಅವಳನ್ನು ಮಾತನಾಡಿಸಿ ... ಮೊದಲು ... ಒಪ್ಪಿ ಹೋದಳು.

ಗಂಡಹೆಂಡಿರ ವಿವಾಹ ಸಂಬಂಧವನ್ನು ಬಿಡಿಸುವುದಕ್ಕೆ ... ಯಾವ ಮಾತ್ರಕ್ಕೂ ... ಗಂಡನು ತನ್ನ ಹೆಂಡತಿಯನ್ನು ತನ್ನ ಮನೆಗೆ ... ಹೋಗುವುದಕ್ಕೆ ಇಷ್ಟಪಟ್ಟಿದ್ದರೆ ಅವಳನ್ನು ಅವನ ... ಕಳುಹಿಸಬೇಕಾಗಿತ್ತು ... ದೃಷ್ಟಾಂತವಾಗಿರುತ್ತದೆ.

ಅವಳನ್ನು ಅವಳ ಮನೆ ಬಿಟ್ಟು ಕರೆಸಿಕೊಳ್ಳಬೇಕೆಂದು ಯಾರೂ ... ಯಾರಿಗೂ ಲಂಚ ಕೊಟ್ಟಿಲ್ಲ, ಯಾರೇ ಆಗಲಿ ಯಾವನನ್ನೂ ... ಯಾರಿಗೂ ಆಕ್ಷೇಪ ... ಅವಳನ್ನು ಅವಳ ಇಷ್ಟ ... ಅವಳ ತೌರುಮನೆಗೆ ಕಳುಹಿಸಿಕೊಟ್ಟರು ... ತೌರುಮನೆಗೆ ಹೋಗುತ್ತೇನೆಂದು ಹೇಳಿದ್ದಾಯಿತು ... ತನ್ನನ್ನು ಬೆಂಗಳೂರಿಗೆ ಕಳುಹಿಸಬೇಕೆಂದು ಕೇಳಿಕೊಂಡಳು.

ಕ್ರೈಸ್ತಳಾಗೆಂದು ಅವಳಿಗೆ ಯಾವ ಅಯೋಗ್ಯವಾದ ಪ್ರೋತ್ಸಾಹ ... ಮಾಡಿರುವುದಿಲ್ಲ. ಮತವಿಷಯವಾದ ಮಾತುಗಳು ನಡೆದವು, ಈ ಹೆಂಗಸಿನ ವಿಷಯವೂ ಚರ್ಚೆಯಾಯಿತು. ಮಿಷನವರು ಅವಳ ಕೂಡ ಮಾತನಾಡಿದ್ದರಲ್ಲಿ ಅವಳು ಅಭ್ಯಾಸಾರ್ಥವಾಗಿ ಬಂದವಳು ... ತನ್ನನ್ನೂ ತನ್ನ ಮಕ್ಕಳನ್ನೂ ಸಂರಕ್ಷಿಸಬೇಕೆಂದು ಅಪೇಕ್ಷಿಸಿದಂತೆಯೂ ತಿಳಿದುಬಂತು. ಆದ್ದರಿಂದ ಅವಳನ್ನೂ ಅವಳ ಮಕ್ಕಳನ್ನೂ ದಿಕ್ಕಿಲ್ಲದ ಅನಾಥರಂತೆ ಬೆಂಗಳೂರು ಮಿಷನ್ ನಿಲಯದವರು ಸೇರಿಸಿಕೊಂಡರಲ್ಲದೆ ಮತ್ತೆ ಬೇರೆ ಅಲ್ಲ. ಅವಳನ್ನು ಕ್ರೈಸ್ತಮತಕ್ಕೆ ಸೇರಿಸಿಕೊಳ್ಳಲಿಲ್ಲ, ಅಷ್ಟು ಬೇಗನೆ ಸೇರಿಸಿಕೊಳ್ಳಬೇಕೆಂಬ ಅಭಿಪ್ರಾಯವೂ ಇಲ್ಲ. ಅವಳು ಮೊದಲು ಭಕ್ತಿಮಾರ್ಗವನ್ನು ಚನ್ನಾಗಿ ಕಲಿತುಕೊಳ್ಳಬೇಕು, ತನ್ನಲ್ಲಿ ತಾನೇ ಮತಭಕ್ತಿಯನ್ನು ಪಡೆಯಬೇಕು. ಅವಳಿಗೆ ಭಕ್ತಿಯುಂಟಾಗದಿದ್ದರೆ ಅಂಥಾ ಕಾರ್ಯವೆಂದಿಗೂ ನಡೆಯಲಾಗದು. ಅಂಥಾ ಅನಾಥಶಾಲೆಗಳಲ್ಲಿ ಯಾರನ್ನೂ ಬಲಾತ್ಕಾರಕ್ಕೆ ಗುರಿಮಾಡುವುದಿಲ್ಲ. ಅವಳಿಗೆ ಅಲ್ಲಿರಲು ಇಷ್ಟವಾಗದಿದ್ದರೆ ಯಾವಾಗ ಅಪೇಕ್ಷಿಸಿದರೂ ಆ ನಿಲಯದಿಂದ ಹೊರಟುಹೋಗಬಹುದು ... ಇದರಲ್ಲಿ ಯಾವ ಅಡ್ಡಿಯೂ ಇಲ್ಲ.

ಬೇರೆ ಕಡೆಯ ವೃತ್ತಾಂತಗಳು.

ಮೈಸೂರ ರೆಸಿಡೆಂಟ್ ಕರ್ನಲ್ ... ಅವರು ... ದಿವಸಗಳ ರಜಾ ಪಡೆದು ನೀಲಗಿರಿಗೆ ಹೋಗಿ ಬರುವವರಾಗಿದ್ದಾರೆ.

***

ಮಹಾರಾಜಾ ಶ್ರೀಯವರೂ ಜನನಿಯವರೂ ತಾ ... ನೇ ಸೋಮವಾರ ಸಾಯಂಕಾಲ ನೀಲಗಿರಿಯಿಂದ ರಾಜಧಾನಿಗೆ ದಯಮಾಡಿಸುವರೆಂದು ಕೇಳುತ್ತೇವೆ.

***

ರೆವಿನ್ಯೂ ಕಮಿಷನರ್ ಮಿ॥ ರಂಗನಾಥ್ಯಯ್ಯಂಗಾರ್ಯರು ಕಳೆದ ವಾರ ಗುಂಡ್ಲುಪೇಟೆ ತಾಲ್ಲೂಕು ಸರ್ಕೀಟ್ ಮಾಡಿಕೊಂಡು ಬಂದು, ಭಾನುವಾರ ರಾತ್ರಿ ಬೆಂಗಳೂರಿಗೆ ಪ್ರಯಾಣಮಾಡಿದರು.

***

ಕಳೆದ ಸೋಮವಾರ ಬೆಳಿಗ್ಗೆ ಶುಭಲಗ್ನದಲ್ಲಿ ರಾಜಧಾನಿಯ ಹೊಸ ಅರಮನೆ ಕಟ್ಟಡದ ... ಗಳಿಗೆ ... ಬಂಗಾರದ ಕಳಶಗಳನ್ನು ಹಾಕಿದರು.

***

ಜನವರಿ ... ತಾ ... ದಲ್ಲಿ ನಡೆಯುವ ಕನ್ನಡ ಗ್ರಂಥಕರ್ತರ ಕರ್ನಾಟಕ್ಕೆ ಹೋಗುವಂಥಾ ಗೃಹಸ್ಥರು ಸೆಕ್ರಿಟೆರಿಯವರಿಗೆ ಈ ತಿಂಗಳೊಳಗೆ ಬರೆದು ತಿಳಿಸಿದಲ್ಲಿ ಅವರು ಇಳುಕೊಳ್ಳುವ ಸ್ಥಳವನ್ನು ... ಏರ್ಪಾಡುಮಾಡುವರೆಂದು ತಿಳಿದುಬಂದಿದೆ.

***

ಶಿವಮೊಗ್ಗಾ ಡಿಸ್ಟ್ರಿಕ್ಟ್ ... ಸರ್ಕಾರಿ ... ಬೆಟ್ಟ ... ಆಗಬೇಕೆಂದು ಬರೆದದ್ದಕ್ಕೆ ಡಿಸ್ಟ್ರಿಕ್ಟ್ ಬೋರ್ಡಿನಲ್ಲಿ ಈ ವಿಷಯವು ಚರ್ಚೆಯಾಗಿ ... ತೀರ್ಮಾನವಾಗಿರುತ್ತದೆ.

***

ಶೃಂಗೇರಿ ಸ್ವಾಮಿಗಳು ಕಳೆದ ವಾರ ಬೆಂಗಳೂರಿಗೆ ದಯಮಾಡಿದರು. ಸಮಸ್ತ ಅಧಿಕಾರಿಗಳೂ ಪ್ರಜೆಗಳೂ ಅವರನ್ನು ಎದುರುಗೊಂಡು ಸನ್ಮಾನಪೂರ್ವಕವಾಗಿ ಕರೆದುಕೊಂಡು ಹೋಗಿ ಮಿಷ್ಟರ್ ... ಎಂಬ ಬಂಗಲೆಯಲ್ಲಿ ಇಳಿಸಿರುವರು.

***

ಮೈಸೂರು ಸಂಸ್ಥಾನದಲ್ಲಿ ಪರಸ್ಪರ ಸಹಾಯಕ ಸಂಘಗಳ ವಿಷಯವಾಗಿ ಪ್ರಜೆಗಳಿಗೆ ತಿಳಿಯಪಡಿಸಿ ಅಂಥಾ ಸಂಘಗಳನ್ನು ಸ್ಥಾಪಿಸಿಕೊಳ್ಳುವಂತೆ ಪ್ರೋತ್ಸಾಹ ಪಡಿಸುವುದಕ್ಕಾಗಿ ಸರ್ಕಾರದವರು ... ಡೆಪ್ಯುಟಿ ಕಮಿಷನರ್ ಮಿ॥ ಎಂ. ಎಸ್. ನಾರಾಯಣರಾಯರನ್ನು ನೇಮಕಮಾಡಿರುತ್ತಾರೆ. ಪ್ರಜೆಗಳನ್ನು ಮುಂದಕ್ಕೆ ತರಬೇಕೆಂಬ ಉದ್ದೇಶದಿಂದ ಮಿ॥ ನಾರಾಯಣರಾಯರು ಈ ಕೆಲಸವನ್ನು ಒಪ್ಪಿಕೊಂಡರು ವಿದು ಸಂತೋಷಕರವಾಗಿರುತ್ತದೆ.

***

ಮೋಟಾರ್ ಕಾರ್ ಎಂಬ ಗಾಡಿಗಳ ತಿರುಗಾಟದಿಂದ ರಸ್ತೆಗಳಲ್ಲಿ ಜನರಿಗೂ ಗಾಡಿಗಳಿಗೂ ಅಪಾಯ ಸಂಭವಿಸುವುದು ಹೆಚ್ಚಾಗಿ ಬಂದಿದೆ. ಒಬ್ಬ ಬ್ರಾಹ್ಮಣರು ಹೆಂಗಸಿಯ ಬಳಿ ಒಂದು ಗಾಡಿಗೆ ಸಂಭವಿಸಿದ ನಷ್ಟವನ್ನು ವಿವರಿಸಿರುವುದನ್ನು ಈ ವಾರ ಇನ್ನೊಂದು ಕಡೆ ಪ್ರಕಟಿಸಿದೇವೆ. ಹೀಗೆ ನಷ್ಟಪಟ್ಟವರ ಸಂಖ್ಯೆ ನಿರುವುದನ್ನು ಬಿಟ್ಟು ಅಂಥಾ ಮೋಟಾರ್ ಗಾಡಿಯವರ ಮೇಲೆ ಫಿರ್ಯಾದು ... ಬಂದಲ್ಲಿ ಮೋಟಾರ್ ಗಾಡಿಗಳಿಂದಾಗುವ ನಷ್ಟಗಳು ಪರಿಹಾರವಾಗುವವೆಂದು ಸೂಚಿಸುತ್ತೇವೆ.

***

ಮೈಸೂರು ತಾಲ್ಲೂಕು ಸಿದ್ಧರಾಮಯ್ಯನ ಹುಂಡಿಯಲ್ಲಿ ಕೆಲವು ದಿನಗಳ ಕೆಳಗೆ ಆರು ಜನರು ಒಬ್ಬನನ್ನು ಹಗಲು ಹೊತ್ತಿನಲ್ಲೇ ಕೊಂದು ಹಾಕಿದರೆಂದು ಮೊಕದ್ದಮೆ ಆಗಿ ಸೆಷನ್ಸ್ ಜಡ್ಜರು ವಿಚಾರಣೆ ಮಾಡಿ, ಮೂರು ಜನರನ್ನು ಖುಲಾಸ್ ಮಾಡಿ ಉಳಿದ ಮೂರು ಜನರಲ್ಲಿ ಒಬ್ಬನಿಗೆ ಫಾಸಿ ಸಜವನ್ನೂ ಇಬ್ಬರಿಗೆ ಜೀವ ಸಜವನ್ನೂ ವಿಧಿಸಿದರು. ಅದರ ಮೇಲೆ ಅಪರಾಧಿಗಳು ಚೀಫ್ ಕೋರ್ಟಿನಲ್ಲಿ ಅಪೀಲ್ ಮಾಡಿಕೊಂಡಿದ್ದರು. ಚೀಫ್ ಕೋರ್ಟಿನಲ್ಲಿ ಆ ಮೂರು ಜನರಿಗೂ ಜೀವ ಸಜವನ್ನು ವಿಧಿಸಿರುತ್ತಾರೆ.

***

ಕಡೂರು ಡಿಸ್ಟ್ರಿಕ್ಟ್ ಶಿಕಾರಿಪುರದಿಂದ ಬಾಣಾವರಕ್ಕೆ ಹೋಗುವ ರಸ್ತೆಯು ... ಗ್ರಾಮಕ್ಕೆ ಒಂದು ರಸ್ತೆ ಮಾಡಿಸಿಕೊಡಬೇಕೆಂತಲೂ ಅದಕ್ಕೆ ... ರೂಪಾಯಿಗಳು ... ಪ್ರಜೆಗಳೂ ಖರ್ಚು ಕೊಡುವೆವೆಂತಲೂ, ಈ ರಸ್ತೆ ಕಾಮಗಾರಿಗಾಗಿ ಅಲ್ಲಿನ ರೈತರು ತಮ್ಮ ಕಂದಾಯದ ಮೇಲೆ ರೂಪಾಯಿಗೆ ... ಕೊಡಿಸಿ ... ರೂಪಾಯಿ ಸರ್ಕಾರಕ್ಕೆ ಕೊಡಲು ಸಿದ್ಧರಾಗಿದ್ದೇವೆಂತಲೂ ತಿಳಿಸಿದ್ದಕ್ಕೆ ಕಡೂರ್ ಡಿಸ್ಟ್ರಿಕ್ಟ್ ಬೋರ್ಡಿನ ಮೆಂಬರುಗಳು ಈ ವಿಷಯವನ್ನು ಚರ್ಚಿಸಿ, ಡಿಸ್ಟ್ರಿಕ್ಟ್ ಫಂಡಿನಿಂದ ಈ ರಸ್ತೆಯನ್ನು ಮಾಡಿಸಲಾಗುವುದಿಲ್ಲವೆಂದು ತೀರ್ಮಾನ ಮಾಡಿದಾರೆ. ಹೀಗೆ ಗೊತ್ತು ಮಾಡಲು ಕಾರಣವೇನೋ ತಿಳಿಯದು. ರೈತರು ಸಹಾಯ ಮಾಡುತ್ತೇವೆಂದು ಹೇಳಿದರೂ ಅವರಿಗೆ ಸರ್ಕಾರದವರು ರಸ್ತೆ ಹಾಕಿಸಿಕೊಡದೆ ತಿರಸ್ಕರಿಸಿರುತ್ತಾರೆ.

***

ಕೆಲವು ದಿನ ಸ್ಕೂಲ್ ಮಾಸ್ಟರುಗಳು ರೇಷ್ಮೆ ಹುಳಗಳನ್ನು ತಯಾರು ಮಾಡುವ ವಿಧಾನವನ್ನು ಕಲಿತುಕೊಂಡು ಅದನ್ನು ಪ್ರಚಾರಮಾಡುವದರಲ್ಲಿದ್ದರಷ್ಟೆ. ಈಗ ಅವರನ್ನು ಅವರವರ ಸ್ಕೂಲುಗಳ ಕೆಲಸಗಳಿಗೆ ಕಳುಹಿಸಿ, ಸದರೀ ಸ್ಕೂಲುಗಳ ಬಳಿಯಲ್ಲಿ ಇರತಕ್ಕ ಜನಗಳಿಗೆ ಆ ವಿಧಾನವನ್ನು ಬೋಧಿಸಬೇಕೆಂದು ... ಇದಕ್ಕಾಗಿ ಮಾಸ್ಟರುಗಳಿಗೆ ... ರೂಪಾಯಿ ಅಲೋಯನ್ಸ್ ಕೊಡತಕ್ಕದ್ದೆಂದು ಸರ್ಕಾರದವರು ಏರ್ಪಾಡು ಮಾಡಿದಾರೆ. ಇದಲ್ಲದೆ ವ್ಯವಸಾಯದ ಇಲಾಖಾ ... ಅಸಿಸ್ಟೆಂಟ್ ... ಬೆಂಗಳೂರು ರೇಷ್ಮೆ ಫಾರಂಗೆ ಕಳುಹಿಸಿ, ಅಲ್ಲಿನ ವಿಷಯಗಳನ್ನು ಅವರು ಕಲಿತ ಮೇಲೆ ಅವರನ್ನು ಕೋಲಾರ, ಮೈಸೂರು, ಬೆಂಗಳೂರು, ತುಮಕೂರು ಮೊದಲಾದ ಕಡೆಗಳಲ್ಲಿ ಸಂಚಾರಮಾಡಿ, ರೇಷ್ಮೆ ಹುಳಗಳನ್ನು ಸಾಕಿ ಬೆಳೆಸತಕ್ಕವರಿಗೆ ವಿಷಯಗಳನ್ನು ತಿಳಿಸುವಂತೆ ಮಾಡಬೇಕೆಂದು ಗವರ್ನಮೆಂಟಿನವರು ತೀರ್ಮಾನಿಸಿರುತ್ತಾರೆ.

ಮೈಸೂರು ಗೆಜೆಟ್ ಸಂಗ್ರಹ.

ಬೆಂಗಳೂರು ಸೆಂಟ್ರಲ್ ಅಬ್ಸರ್ವೇಟರಿ ಅಸಿಸ್ಟೆಂಟ್ ಅಬ್ಸರ್ವರ್ ಮಿ॥ ಎನ್. ವೆಂಕಟಕೃಷ್ಣಯ್ಯಂಗಾರ್ಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಎರಡು ತಿಂಗಳೂ ಇಪ್ಪತ್ತಾರು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಅಸಿ ಕಮಿಷನರ್ ಮಿ॥ ಪಿ. ಆರ್. ತ್ಯಾಗರಾಜ ಅಯ್ಯರವರಿಗೆ ಕೊಟ್ಟಿರುವ ಎರಡೂವರೆ ತಿಂಗಳ ಪ್ರಿವಿಲೆಜ್ ರಜವನ್ನು ಇನ್ನು ಅರ್ಧ ತಿಂಗಳಿಗೆ ಜಾಸ್ತಿ ಮಾಡಿದೆ.

ಅಮಲ್ದಾರ್ ಮಿ॥ ಪಿ. ಸುಬ್ಬರಾಯಲುನಾಯ್ಡುಯವರು ರಜದಿಂದ ವಾಪಸ್ ಬಂದದರಿಂದ ರೆವಿನ್ಯೂ ಕಮಿಷನರ್ ಆಫೀಸ್ ಮ್ಯಾನೇಜರ್ ಕೆಲಸ ನೋಡುವ ಅಮಲ್ದಾರ್ ಮಿ॥ ಎಂ. ಸದಾಶಿವರಾಯರನ್ನು ನಾಗಮಂಗಲ ತಾಲ್ಲೂಕಿಗೆ ವರ್ಗಮಾಡಿದೆ.

ಅಸಿ ಕಮಿಷನರ್ ಮಿ॥ ಆನಂದರಾವ್ ಸಿಸ್ಟರ್ ಯವರನ್ನು ೧೯೦೨ ನೆ ಜುಲೈ ೧ ರಿಂದ ರಿಕಾರ್ಡುಗಳ ವಿಚಾರಕ್ಕೆ ಸ್ಪೆಷಲ್ ಆಫೀಸರಾಗಿ ನೇಮಿಸಿದೆ.

ವೈದ್ಯ ಇಲಾಖೆಯಲ್ಲಿ ... ವರ್ಗ ... ಮಾಡಿದೆ —ಸಿವಿಲ್ ಸರ್ಜನ್ ಮಿ॥ ಇ. ಎಸ್. ಕೃಷ್ಣಸ್ವಾಮಿ ಅಯ್ಯರನ್ನು ಬೆಂಗಳೂರಿಂದ ಮೈಸೂರು ಆಸ್ಪತ್ರೆಗೆ; ಸಿವಿಲ್ ಸರ್ಜನ್ ಮಿ॥ ಟಿ. ಎಸ್. ನಂಜಪ್ಪನವರನ್ನು ಮೈಸೂರು ಆಸ್ಪತ್ರೆಯಿಂದ ಅರಮನೆ ಆಸ್ಪತ್ರೆಗೆ.

ಸಬ್ ಅಸಿ ಸರ್ಜನ್ ಮಿ॥ ಕೆ. ಅನಂತರಾಮಯ್ಯಂಗಾರ್ಯರನ್ನು ದಾವಣಗೆರೆ ಆಸ್ಪತ್ರೆಗೆ ವರ್ಗ ಮಾಡಿರೋದರಿಂದ ಹಂಗಾಮಿ ಸಬ್ ಅಸಿ ಸರ್ಜನ್ ಮಿ॥ ಎಫ್. ಫರ್ನಾಂಡಿಸ್ ಯವರನ್ನು ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯಿಂದ ಸಕಲೇಶಪುರದ ಆಸ್ಪತ್ರೆ ಚಾರ್ಜಿಗೆ ವರ್ಗಮಾಡಿದೆ.

ಸಂಯುಕ್ತಾ ಅಧಿಪತ್ಯಗಳ ಡಿಪ್ಟಿ ಅಕೌಂಟೆಂಟ್ ಜನರಲ್ ಮಿ॥ ಯು. ಎಲ್. ಮುಜುಂದಾರ್, ಎಂ. ಎ. ಯವರನ್ನು ಮೈಸೂರು ಗವರ್ನಮೆಂಟಿನ ಕಂಟ್ರೋಲರ್ ಕೆಲಸಕ್ಕೆ ನೇಮಿಸಿಕೊಳ್ಳಲಾಗಿದೆ.

ಅಸಿ ಕಮಿಷನರ್ ಮಿ॥ ಟಿ. ಚೊಕ್ಕಣ್ಣನವರನ್ನು ರಜದಿಂದ ವಾಪಸು ಬರಲು ... ದೊಡ್ಡಬಳ್ಳಾಪುರದ ಸಬ್ ಡಿವಿಜನ್ ಛಾರ್ಜಿಗೆ ನೇಮಕಮಾಡಿದೆ.

ಮೇ ತಾ ೧೮ರಲ್ಲು ಮಿ॥ ಯು. ಎಲ್. ಮುಜುಂದಾರ್ ಯವರು ಮಿ॥ ಎಂ. ಎನ್. ಕೃಷ್ಣರಾಯರಿಂದ ಕಂಟ್ರೋಲರ್ ಆಫೀಸಿನ ಛಾರ್ಜನ್ನು ವಹಿಸಿಕೊಂಡಿತ್ತಾರೆ.

ಕೋಲಾರ ಡಿವಿಜನ್ ಅಸಿ ಇಂಜನಿಯರ್ ಮಿ॥ ಸಿ. ಕೃಷ್ಣಯ್ಯಂಗಾರ್ಯರಿಗೆ ತಾ ೧೧ ರಿಂದ ಹತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮೈಸೂರು ಇಂಜನಿಯರ್ ಇಲಾಖಾ ಪ್ರೋಬೇಷನರ್ ಸೂಪರಿಂಟೆಂಡಿಂಗ್ ಇಂಜನಿಯರ್ ಮಿ॥ ಜೆ. ಜೆ. ವೈಟ್ಲಿಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳು ಒಂಬತ್ತು ದಿನಗಳ ಪ್ರಿವಿಲೆಜ್ ರಜವನ್ನೂ ಆ ತರುವಾಯ ಏಳು ತಿಂಗಳ ಫರ್ಲೊ ರಜವನ್ನೂ ಬ್ರಿಟಿಷ್ ರೆಸಿಡೆಂಟವರ ಇಷ್ಟ ಕಾರಣ ... ಕೊಡೋಣಾಗಿದೆ.

ಮೈಸೂರು ಮೈನಿಂಗ್ ಸರ್ವೆಯರ್ ಮತ್ತು ಇನ್ಸ್ಪೆಕ್ಟರ್ ಮಿ॥ ಎ. ಟಿ. ಸೆಟ್ಲರ್ ಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಚಳ್ಳಕೆರೆ ತಾಲ್ಲೂಕ್ ಅಮಲ್ದಾರ್ ಮಿ॥ ಮಹಮದ್ ಪೀರ್ ಯವರಿಗೆ ಕೊಟ್ಟಿರುವ ಇಪ್ಪತ್ತೈದು ದಿನಗಳ ಪ್ರಿವಿಲೆಜ್ ರಜವನ್ನು ಇನ್ನೂ ಇಪ್ಪತ್ತೈದು ದಿನಗಳಿಗೆ ಜಾಸ್ತಿ ಮಾಡಿದೆ.

ಹೊಳೆನರಸೀಪುರದ ತಾಲ್ಲೂಕು ಅಮಲ್ದಾರ್ ಮಿ॥ ಎಸ್. ಕೃಷ್ಣಯ್ಯರವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಇಪ್ಪತ್ತೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಶಿರಸ್ತೆದಾರ್ ಎಂ. ಎ. ತಿರುಮಲಾಚಾರ್ ಹೊಳೆನರಸೀಪುರದ ತಾಲ್ಲೂಕ್ ಛಾರ್ಜನ್ನು ವಹಿಸಿರತಕ್ಕದ್ದು.

ಕನ್ನಾನೂರಿನ ಔದ್ಯೋಗಿಕ ಪ್ರದರ್ಶನ.

ಕಳೆದ ಮಾರ್ಚಿ ತಿಂಗಳ ಅಂತ್ಯಭಾಗದಲ್ಲಿ ಮಲಬಾರು ಜಿಲ್ಲೆಯ ಕನ್ನಾನೂರೆಂಬಲ್ಲಿ "ವ್ಯವಸಾಯ ಕೈಗಾರಿಕೆಗಳ ವಸ್ತು ಪ್ರದರ್ಶನ"ವೆಂಬ ದೊಡ್ಡದೊಂದು ಸಂಸ್ಥೆ ಏರ್ಪಟ್ಟಿತು. ಪ್ರದೇಶಾಂತರಗಳಿಂದ ಬಂದ ನಾನಾತರದ ಸ್ವದೇಶೀಯ ಸಾಮಗ್ರಿಗಳೆಲ್ಲ ವ್ಯವಸ್ಥಾಪಕರಿಂದ ಸಿದ್ಧಮಾಡಲ್ಪಟ್ಟ ದೊಡ್ಡ ಚಪ್ಪರದೊಳಗೆ ಯಥೋಚಿತಸ್ಥಾನಾಂತರಗಳಲ್ಲಿ ವಿವರವಾಗಿ ಇರಿಸಲ್ಪಟ್ಟಿವೆ. ವ್ಯವಸಾಯಸಂಸ್ಥೆಯಲ್ಲಿ ವಿಧವಿಧವಾದ ನೇಗಿಲುಗಳೂ, ತರತರದ ಧಾನ್ಯಗಳೂ, ಪಲ್ಯಗಳೂ, ಹಣ್ಣುಗಳೂ, ಹುಲ್ಲುಗಳೂ ಬೆಳಗುತ್ತಿದ್ದವು. ಅಲ್ಲದೆ ಮದ್ರಾಸಿನ ಮೋಸೀ ಕಂಪೆನಿಯವರಿಂದ ತಯಾರಿಸಲ್ಪಟ್ಟದೊಂದು ನೀರನ್ನು ಎತ್ತುವ ಯಂತ್ರವೂ ತನ್ನ ಕಾರ್ಯವನ್ನು ಕಾಲೆಲ್ಲಾ ತೋರ್ಪಡಿಸುತ್ತಿದ್ದಿತು ಕೈಗಾರಿಕೆಗಳ ಸೇರಿಕೆಯಲ್ಲಿ ಕಲಾಕೌಶಲ್ಯವು ನಿಬಿಡವಾಗಿದ್ದಿತು ಇತರ ಖಾತೆಗಳಿಗಿಂತ ಸೂಕ್ಷ್ಮ ಕಲೆಯ ಖಾತೆಯೂ, ಸ್ತ್ರೀರಚನಾಖಾತೆಯೂ ಪ್ರಾಮುಖ್ಯವಾಗಿದ್ದುವು ಮೊದಲನೆಯ ಖಾತೆಯಲ್ಲಿ ಹಸ್ತಲಿಖಿತವಾದ ತೈಲಚಿತ್ರಗಳೂ ದಂತಾದಿಗಳ ಕೊಚ್ಚು ಕೆಲಸಗಳೂ ಇದಿತರ ವಸ್ತು ರಚನಾ ವಿಶೇಷಗಳೂ ನೋಡತಕ್ಕದಾಗಿದ್ದಿತು ಸ್ತ್ರೀವಸ್ತು ಖಾತೆಯಲ್ಲಿ ಕೈಯಿಂದ ಹೆಣೆಯಲ್ಪಟ್ಟ ಮೇಜುವಸ್ತ್ರಗಳೂ, ರೇಶ್ಮೆನೂಲಿನ ಸೂಕ್ಷ್ಮಕಾರ್ಯಗಳೂ ಮುಖ್ಯವಾಗಿ ಅದೇ ಸಮಾಜದಿಂದ ಮಾಡಲ್ಪಟ್ಟ "ಲೀಯರ್ ದೊರೆ ಮತ್ತು ಕೋರ್ಡೆಲಿಯಾ" ಎಂಬ ವಿಚಿತ್ರ ಪ್ರತಿಮೆಯೂ ಕಣ್ಣನ್ನು ಕೋರೈಸುತ್ತಿದ್ದವು ವಿಧವಿಧದ ವಾದ್ಯಗಳೂ ಕೇಳಗ ಮಾಡುತ್ತಿದ್ದವು ವಿದೇಶೀಯವಾದ ಅಮೇರಿಕದ ಸ್ಪೆನ್ಸರ್ ಕಂಪನಿಯ ಮೋಹದ ಗೊಂಬೆಯ ಆಟವು ಹರ್ಷೋತ್ತೇಜಕವಾಗಿದ್ದಿತು ಹೀಗೆ ರಮಣೀಯವಾದ ಸಂಸ್ಥೆಯನ್ನು ಎರಡನೆಯ ವೇದಿಯಲ್ಲಿ ಮ॥ ಕಸಲ್ ಸ್ಟ್ಯುಅರ್ಟ್‌ರವರು ತೆರೆದರು ತದನಂತರ ಪ್ರತಿದಿನವೂ ಯೋಗ್ಯವಾಗ್ಮಿಗಳ ಸಹಾಯದಿಂದ ಔದ್ಯೋಗಿಕಪ್ರಸಕ್ತಿಯ ಉಪನ್ಯಾಸಗಳು ಜರಗುತ್ತಲಿದ್ದುವು ಇವುಗಳು ಬಹಳ ಸದುಪದೇಶಗಳಾಗಿದ್ದುವು

ವಿವಂಚ ನಮ್ಮ ವಿಷಯವೇನೆಂದರೆ — ಈ ವಿಧದ ಉತ್ತೇಜನದಿಂದ ಉತ್ಸಾಹಿತರಾಗಿ ನಮ್ಮ ಶಿಲ್ಪಜ್ಞಾದಿಯಾಗಿ ಸಕಲರೂ ಇದುವರೆಗಿನ ಅಜಾಗರೂಕತೆಯಿಂದ ನಾಶನವಾದ ನಮ್ಮ ಕೈಗಾರಿಕೆಗಳನ್ನು ಪುನಃ ಪ್ರಾರಂಭಿಸಿ, ವೃದ್ಧಿಗೆ ತಂದು ಇತರರಿಗೆ ಉಪಯೋಗವನ್ನು ಹೊಂದಿಸಿಕೊಟ್ಟು, ನಮ್ಮ ಅವಶ್ಯಕತೆಗೋಸುಗ ಪರದೇಶಕ್ಕೆ ಸಾಗಿಸಲ್ಪಡುವ ದ್ರವ್ಯಮೂಲವನ್ನುಳಿಸಿ, ನಮ್ಮ ಮಾತೃಭೂಮಿಯ ಕೀರ್ತಿಸ್ತಂಭವನ್ನು ಪುನ ಉಜ್ಜೀವನಗೊಳಿಸಿ, ಸ್ವದೇಶೋದ್ಧರಣೆಯಲ್ಲಿ ಬದ್ಧಕಂಕಣರಾಗಿ, ಹಿಂದೆಗೆಯದೆ ಮುಂಬರಿಸಿ, ತಮ್ಮ ಕರ್ತವ್ಯವನ್ನು ಕಾಪಾಡಿಕೊಳುವರೆಂದು ನಾವು ನಂಬುವೆವು.

ಶ್ರೀ

ಮೈಸೂರು ಸಂಸ್ಥಾನವೂ ವಿದ್ಯಾಭಿವೃದ್ಧಿಯೂ.

೧೯೦೫—೦೬ ಸಾಲಿನ ಸರ್ಕಾರಿ ರಿಪೋರ್ಟು

ಕಳೆದ ೧೯೦೫—೦೬ನೆ ಸಾಲಿನ ಮೈಸೂರು ಸಂಸ್ಥಾನದ ವಿದ್ಯಾಭ್ಯಾಸದ ಇಲಾಖೆಯ ರಿಪೋರ್ಟನ್ನು ಆಫೀಸಿಯೇಟಿಂಗ್ ಇನ್ಸ್ಪೆಕ್ಟರ್ ಜನರಲ್‌ರವರು ೧೯೦೬ ನೆ ಆಗಸ್ಟ್ ೩೦ ರಲ್ಲಿ ತಯಾರು ಮಾಡಿ ಗವರ್ನಮೆಂಟಿಗೆ ಕಳುಹಿಸಿಕೊಟ್ಟರು ಅದನ್ನೆಲ್ಲಾ ಗವರ್ನಮೆಂಟಿನವರು ಪರಾಂಬರಿಸಿ ೧೯೦೭ ನೆ ಮಾರ್ಚಿ ೨೮ ರಲ್ಲಿ ಹುಕುಂ ಕೊಟ್ಟಿರುತ್ತಾರೆ. ಈ ಹುಕುಮಿನ ಮುಖ್ಯಭಾಗಗಳನ್ನು ಇಲ್ಲಿ ತಿಳಿಯಪಡಿಸುತ್ತೇವೆ

ಪಾಠಶಾಲೆಗಳೂ ವಿದ್ಯಾರ್ಥಿಗಳೂ.

ಸರ್ಕಾರಿ ಮತ್ತು ಪ್ರೈವೇಟ್ ಪಾಠಶಾಲೆಗಳು ಹಿಂದಿನ ಸಾಲಿನಲ್ಲಿ ೩,೮೨೮ ಇದ್ದದ್ದು ಈ ಸಾಲಿನಲ್ಲಿ ೪,೧೯೩ ಕ್ಕೆ ಹೆಚ್ಚಿರುತ್ತವೆ ವಿದ್ಯಾರ್ಥಿಗಳ ಸಂಖ್ಯೆಯೂ ಕೂಡ ೧,೧೧,೦೪೫ ರಿಂದ ೧,೨೩,೦೫೬ಕ್ಕೆ ಹೆಚ್ಚಿರುವುದು ಈ ಪೈಕಿ ೧,೦೩,೩೯೭ ಮಂದಿ ಗಂಡು ಹುಡುಗರು, ೧೯,೬೬೫ ಮಂದಿ ಹೆಣ್ಣು ಹುಡುಗಿಯರು ಸಂಸ್ಥಾನದಲ್ಲೆಲ್ಲಾ ಪಾಠಶಾಲೆಗಳಿಗೆ ಹೋಗುವಷ್ಟು ವಯಸ್ಸಾಗಿರುವವರನ್ನೂ ವಿದ್ಯಾಭ್ಯಾಸಂಗ ಮಾಡುತ್ತಿರುವವರನ್ನೂ ಹೋಲಿಸಿದರೆ ಗಂಡು ಹುಡುಗರಲ್ಲಿ ನೂರಕ್ಕೆ ೨೫.೦೪ ರಷ್ಟು ಮಂದಿಯೂ ಹೆಣ್ಣು ಹುಡುಗಿಯರಲ್ಲಿ ನೂರಕ್ಕೆ ೪.೮೬ ರಷ್ಟು ಮಂದಿಯೂ ವಿದ್ಯೆಕಲಿಯುತ್ತಿದಾರೆಂದು ಗೊತ್ತಾಗುವುದು (ಗಂಡು ಹುಡುಗರಲ್ಲಿ ಇನ್ನೂ ನೂರಕ್ಕೆ ೬೫ ಮಂದಿಯೂ ಹೆಣ್ಣು ಹುಡುಗಿಯರಲ್ಲಿ ೧೦೦ಕ್ಕೆ ೯೫ ಮಂದಿಯೂ ಪಾಠಶಾಲೆಗಳಿಗೂ ಕೂಡ ಹೋಗುವುದಿಲ್ಲ) ಈಗ ಸ್ಕೂಲುಗಳಲ್ಲೂ ಮಠಗಳಲ್ಲೂ ಓದುತ್ತಿರುವ ಹುಡುಗರನ್ನು ಜಾತಿವಾರು ವಿಂಗಡಿಸಿದರೆ—

ಜಾತಿ, ಮತ	ವಿದ್ಯಾರ್ಥಿಗಳು ೧೯೦೪-೦೫	ವಿದ್ಯಾರ್ಥಿಗಳು ೧೯೦೫-೦೬
ಹಿಂದುಗಳು . . .	೯೭,೧೦೯	೧,೦೭ ೪೧೯
ಮಹಮದಿಯರು	೧೩,೯೩೩	೧೫,೭೩೭
ದೇ. ಕ್ರೈಸ್ತರು .	೨,೧೯೫	೨,೩೨೫
ಇತರರು	೭,೪೨೯	೨,೪೮೯
ಯೂರೋಪ್ಯರ್ ಮುಂ.	೩೩೫	೫೫೭

ಮೇಲ್ಕಂಡ ತಖ್ತೆಯಿಂದ ಈ ಸಾಲಿನಲ್ಲಿ ಹಿಂದಿನ ಸಾಲಿಗಿಂತ ಪ್ಲೇಗ್ ಮುಂತಾದ ಜಾಡ್ಯಗಳ ಅವಾಂತ್ರ ಕಡಿಮೆಯಾಗಿ ವಿದ್ಯಾಭ್ಯಾಸವು ತೃಪ್ತಿಕರವಾಗಿ ಅಭಿವೃದ್ಧಿಹೊಂದಿರುತ್ತದೆಂದು ಗೊತ್ತಾಗುವುದು

ವಿದ್ಯಾಭ್ಯಾಸಕ್ಕಾಗಿ ಖರ್ಚಾದ ಹಣ.

ಕಳೆದ ೧೯೦೪—೦೫ ನೆ ಸಾಲಿನಲ್ಲಿ ವಿದ್ಯಾಭ್ಯಾಸದ ಇಲಾಖೆಗಾಗಿ ಸರ್ಕಾರದವರು ೧೭,೮೩,೪೮೪ ರೂಪಾಯಿ ಖರ್ಚು ಮಾಡಿದರು, ಆದರೆ ೧೯೦೫—೦೬ ನೆ ಸಾಲಿನಲ್ಲಿ ಒಟ್ಟು ೧೩,೬೪,೯೩೧ ರೂಪಾಯಿ ಖರ್ಚಾಗಿರುವುದು. ಈ ಹಣವನ್ನು ಯಾವಯಾವ ಬಾಬಿನಿಂದ ಸರ್ಕಾರದವರು ಒದಗಿಸಿದರೆಂದರೆ.—

ಬಾಬು.	ರೂಪಾಯಿಗಳು
ರಾಜಾದಾಯ .	೩,೪೪,೮೦೭
ಲೋಕಲ್ ಫಂಡು .	೨,೬೬,೯೬೯
ಮ್ಯುನಿಸಿಪಲ್ ಫಂಡು .	೩೬ ೬೯೭
ಫೀಜಿನ ವಸೂಲಿ	೧,೪೩,೯೭೯
ಇತರ ಎಲ್ಲಾ ಬಾಬುಗಳು	೧,೮೭,೫೦೦

ಒಟ್ಟು ರಾಜಾದಾಯವನ್ನು ೧೬೫ ಲಕ್ಷ ರೂಪಾಯಿಯೆಂದು ಇಟ್ಟುಕೊಂಡರೆ ಅದರಲ್ಲಿ ವಿದ್ಯಾಭ್ಯಾಸಕ್ಕಾಗಿ ಖರ್ಚು ಮಾಡಿದ ಸುಮಾರು ೬॥ ಲಕ್ಷ ರೂಪಾಯಿ ಶೇಕಡಾ ೩ ೮ ಆಗುವುದು

ಅಧಿಕಾರಿಗಳು

ವರುಷಾಂತ್ಯದಲ್ಲಿ ಮಿ॥ ಭಾಭಾಯವರು ಎಳ್ಳು ತಿಂಗಳ ರಜಾ ಪಡೆದುಕೊಂಡದ್ದರಿಂದ ಮಿ॥ ಜೆ ವೀರ್‌ರವರು ಇನ್ಸ್ಪೆಕ್ಟರ್ ಜನರಲ್‌ರಾಗಿ ಬದಲಿ ನೇಮಕವಾದರು

೧೯೦೫ ನೆ ಜೂಲೈನಲ್ಲಿ ನಡೆದ ಇನ್ಸ್ಪೆಕ್ಟರುಗಳ ಬದಲಾವಣೆಯ ಪ್ರಕಾರ ಇಬ್ಬರು ಸರ್ಕಲ್ ಇನ್ಸ್ಪೆಕ್ಟರುಗಳೂ ಎಂಟು ಮಂದಿ ಅ॥ ಡೆಪ್ಟಿ ಇನ್ಸ್ಪೆಕ್ಟರುಗಳೂ ನೇಮಿಸಲ್ಪಟ್ಟರು ಈಗ ಇನ್ಸ್ಪೆಕ್ಟರುಗಳ ದರ್ಜೆಯಲ್ಲಿ ಇಬ್ಬರು ಸರ್ಕಲ್ ಇನ್ಸ್ಪೆಕ್ಟರುಗಳು, ಒಂಬತ್ತು ಮಂದಿ ಡೆಪ್ಟಿ ಇನ್ಸ್ಪೆಕ್ಟರುಗಳು, ಹದಿನಾರು ಮಂದಿ ಅ॥ ಡೆಪ್ಟಿ ಇನ್ಸ್ಪೆಕ್ಟರುಗಳು ಇರುತ್ತಾರೆ

ಇನ್ಸ್ಪೆಕ್ಟರುಗಳು ವಿಶೇಷ ಕಾಲ ತಮ್ಮ ಹೆಡ್ ಕ್ವಾರ್ಟರುಗಳಲ್ಲೇ ಇದ್ದಾಗ್ಯೂ ಈ ಸಾಲಿನಲ್ಲಿ ಪರೀಕ್ಷಿಸಲ್ಪಡದೆ ಉಳಿದ ಸ್ಕೂಲುಗಳ ಸಂಖ್ಯೆಯು ಕಡಿಮೆಯಾಗಿಯೇ ಇದೆ ಎಂದು ತಿಳಿದುಬಂದಿದೆ ಇದರಿಂದ ಇನ್ಸ್ಪೆಕ್ಟರುಗಳು ತಮ್ಮ ಸರಹದ್ದಿನೊಳಗಿರುವ ಸ್ಕೂಲುಗಳನ್ನು ತಕ್ಕಷ್ಟು ಸಲ ಆಖೈರಾಯಿಷಿ ಮಾಡಲಿಲ್ಲವೋ ಅಥವಾ ಮುತುವರ್ಜಿ ವಹಿಸದೆ ಬೇಗಬೇಗ ಆತುರವಾಗಿ ಪರೀಕ್ಷೆ ಮಾಡಿಕೊಂಡು ಬಂದುಬಿಟ್ಟರೋ ಎಂಬ ಅನುಮಾನ ಉಂಟಾಗುವುದು ಇವೆರಡೂ ಆಗದಂತೆ ನಡೆಯಬೇಕು. ಸರ್ಕಲ್ ಇನ್ಸ್ಪೆಕ್ಟರುಗಳಾದ ಮೆ॥ ಸಿ ಕೃಷ್ಣರಾಯರೂ ಮಿ॥ ಎಂ ಶ್ರೀನಿವಾಸರಾಯರೂ ೩೦—೩೮ ದಿನಗಳಲಿ ೮೭—೭೪ ಸ್ಕೂಲುಗಳನ್ನು ಇನ್ಸ್ಪೆಕ್ಟ್ ಮಾಡಿಕೊಂಡು ಬಂದಿರುವಂತೆ ಗೊತ್ತಾಗುತ್ತದೆ ಅವರು ಅಷ್ಟು ಆತುರಪಟ್ಟು ೩೬ ದಿನಗಳಲ್ಲಿ ೮೭ ಪಾಠಶಾಲೆಗಳನ್ನೂ, ೩೮ ದಿನಗಳಲ್ಲಿ ೭೪ ಪಾಠಶಾಲೆಗಳನ್ನೂ ಇನ್ಸ್ಪೆಕ್ಟ್ ಮಾಡಿ ಮುಗಿಸಿರುವದರಿಂದ ಸರ್ಕಾರಕ್ಕೆ ಅವರ ಪ್ರಯಾಣದ ಖರ್ಚು ಬತ್ತ್ಯಾದಿಗಳು ಹೆಚ್ಚಾಗಿ ವ್ಯಯವಾಗುವುದೊಂದಲ್ಲದೆ ಅವರ ಪ್ರಯಾಣದಿಂದ ಆ ಸ್ಕೂಲುಗಳಿಗೆ ಅಷ್ಟೇನೂ ವಿಶೇಷ ಪ್ರಯೋಜನವಾಗಿರಲಾರದು ಇನ್ನು ಮುಂದೆ ಕ್ರಮವಾದ ಮತ್ತು ಫಲದಾಯಕವಾದ ರೀತಿಯಲ್ಲಿ ಇನ್ಸ್ಪೆಕ್ಷನ್ ನಡೆಯುವ ಹಾಗೂ, ಅವರ ಪರೀಕ್ಷೆಗೆ ಬಂದ ಎಷ್ಟು ಸ್ಕೂಲುಗಳು ಕೆಟ್ಟ ಸ್ಥಿತಿಯಲ್ಲಿದ್ದವೋ ಅಂಥಾ ಕೆಟ್ಟಸ್ಥಿತಿಯನ್ನು ಸರಿಪಡಿಸಿ ಉತ್ತಮ ಸ್ಥಿತಿಗೆ ತರುವುದಕ್ಕೆ ಅವರು ಯಾವಯಾವ ಕಾರ್ಯಗಳನ್ನು ನಡಿಸಿದರೋ ಇದನ್ನೆಲ್ಲಾ ಇನ್ಸ್ಪೆಕ್ಟರ್ ಜನರಲ್‌ರವರು ಅವರಿಂದ ಬರಹ ಮೂಲಕ ತರಿಸಿಕೊಂಡು ಗವರ್ನಮೆಂಟಿಗೆ ಕಳುಹಿಸುವ ರಿಪೋರ್ಟುಗಳಲ್ಲಿ ನಮೂದಿಸಬೇಕು

ವಿದ್ಯಾಭ್ಯಾಸದ ಇಲಾಖೆಯಲ್ಲಿ ಇನ್ಸ್ಪೆಕ್ಟರುಗಳು ಮಾಡಬೇಕಾಗಿರುವ ಕಾರ್ಯಗಳು ಬಹು ವಿಶೇಷವೆನಿಸಿರುತ್ತವೆ ರಿಜಿಸ್ಟರುಗಳನ್ನು ಅವರು ಚನ್ನಾಗಿ ಹೋಲಿಸಿ ನೋಡಬೇಕು ವರುಷದಿಂದ ವರುಷಕ್ಕೆ ಜನರು ಸ್ಕೂಲುಗಳಿಗೆ ಎಷ್ಟು ಮಟ್ಟಿಗೆ ಹೆಚ್ಚಾಗಿ ಸಹಾಯ ಸಂಪತ್ತುಗಳನ್ನು ಒದಗಿಸಿ ಕೊಡುತ್ತಾರೆಂಬ ಭಾಗವನ್ನು ಇನ್ಸ್ಪೆಕ್ಟರುಗಳು ಹೋಲಿಸಿ ನೋಡಬೇಕು. ಅವರು ತಮ್ಮ ಕೈಕೆಳಗಿರುವ ಪಾಠಶಾಲೆಗಳನ್ನು ದಿನದಿನಕ್ಕೆ ಹೋಗಿ ಆಖೈರಾಯಿಷಿ ಮಾಡುತ್ತಾ, ಅವುಗಳ ಯೋಗ್ಯತಾಪಕ್ಷಗಳನ್ನು ಜಾಗರೂಕತೆಯಿಂದ ನೋಡಿ ಗ್ರಹಿಸಿಕೊಳ್ಳುತ್ತಾ, ಉಪಾಧ್ಯಾಯರ ಮೇಲೆ ಪ್ರೀತಿ ವಿಶ್ವಾಸಗಳನ್ನಿಟ್ಟು ಅವರ ಸಂಗಡ ಕಲೆತು ಅವರ ಕಷ್ಟಗಳನ್ನು ತಿಳಿದುಕೊಳ್ಳುತ್ತಾ, ಇಂಥಿಂಥಾ ಸ್ಕೂಲಿನಲ್ಲಿ ಇಂಥಿಂಥಾ ಕಷ್ಟಭಾಗಗಳನ್ನು ಈ ಈ ರೀತಿಯಾಗಿ ಪರಿಹರಿಸಿಕೊಳ್ಳುತ್ತಿದಾರೆಂದು ಅವರಿಗೆ ಪಾಠಪ್ರವಚನಗಳನ್ನು ನಡಸುವುದರಲ್ಲಿ ವಿವೇಕ ಹೇಳಿಕೊಡುತ್ತಾ, ತನ್ನ ಗೈರ್‌ಹಾಜರಿಯಲ್ಲಿ ಉಪಾಧ್ಯಾಯರು ಉತ್ಸಾಹದಿಂದ ಕೆಲಸ ಮಾಡುವಂತೆಯೂ, ಮ್ಯಾನೇಜರುಗಳು ಮೇಲ್ವಿಚಾರಣೆ ತೆಗೆದುಕೊಳ್ಳುವಂತೆಯೂ, ಹುಡುಗರು ಕಷ್ಟಪಟ್ಟು ವಿದ್ಯಾಭ್ಯಾಸಮಾಡುವಂತೆಯೂ ಪ್ರೋತ್ಸಾಹಪಡಿಸುತ್ತಾ ಬರಬೇಕಾಗಿದೆ. ಸರ್ಕಾರಿ ನೌಕರರ ಪೈಕಿ ಸ್ಕೂಲುಗಳ ಇನ್ಸ್ಪೆಕ್ಟರಿಗೆ ಇರುವಷ್ಟು ಜವಾಬ್ದಾರಿಯೂ ಅವರು ಮಾಡಬಹುದಾದಷ್ಟು ಒಳ್ಳೆಯ ಕೆಲಸವೂ ಪರೋಪಕಾರವೂ ಇತರ ಅಧಿಕಾರಿಗಳಿಗೆ ಇರಲಾರದೆಂದು ಹೇಳಬಹುದಾಗಿದೆ ಅಭಾಕ್ತ ಕೊಂಪೆಗಳಲ್ಲೂ ಮೂಲೆ ತಾಕುಗಳಲ್ಲೂ ಇರುವಂಥಾ ಪಾಠಶಾಲೆಗಳನ್ನು ಇನ್ಸ್ಪೆಕ್ಟರು ಆಗಾಗ್ಗೆ ಹೋಗಿ ನೋಡುತ್ತಾ, ದೊಡ್ಡ ಪಟ್ಟಣಗಳಲ್ಲಿರುವಂಥಾ ವಿದ್ಯಾಸೌಕರ್ಯಗಳನ್ನೂ ಕ್ರಮಗಳನ್ನೂ ಉಪಾಧ್ಯಾಯರಿಗೆ ತಿಳಿಸಿ, ಏಕರೀತಿಯಾದ ಅಭಿವೃದ್ಧಿಯು ಆ ಪಾಠಶಾಲೆಗಳಲ್ಲೂ ಕಂಡುಬರುವಂತೆ ತಮ್ಮ ಅನುಭವಾದಿಗಳನ್ನು ದೃಷ್ಟಾಂತಪಡಿಸಿ ಹೇಳಿಕೊಡಬೇಕು. ಇನ್ಸ್ಪೆಕ್ಟರುಗಳು ತಮ್ಮ ವಿದ್ಯಾ ಪ್ರೌಢಿಮೆಯನ್ನು ಪ್ರಕಾಶಪಡಿಸುತ್ತಾ ಸ್ಕೂಲುಗಳನ್ನು ಪರೀಕ್ಷೆ ಮಾಡುವುದರಲ್ಲೇ ಆಸಕ್ತರಾಗಿ ಡಿಟೆಕ್ಟಿವ್‌ಗಳಂತೆ ತಪ್ಪು ಕಂಡು ಹಿಡಿಯುವವರಾಗಿರಬೇಕೆನ್ನುವುದು ಗವರ್ನಮೆಂಟಿನವರ ಉದ್ದೇಶವಲ್ಲ ಅವರು ಉಪ್ಪಶೀಲರಾಗಿಯೂ, ಪ್ರೀತಿವಂತರಾಗಿಯೂ, ಪಾಠಶಾಲೆಯಲ್ಲಿ ನಡೆಯುವ ಕೆಲಸದ ವಿಷಯದಲ್ಲೂ ಅದರ ಉದ್ದೇಶದ ವಿಷಯದಲ್ಲೂ ನಿಷ್ಪಕ್ಷಪಾತವಾಗಿ ಅಭಿಪ್ರಾಯ ಪಡುವವರಾಗಿಯೂ, ಪಾಠಶಾಲೆಗೆ ಸಂಬಂಧಪಟ್ಟ ನಾನಾ ವಿಷಯಗಳನ್ನು ಮುಂದಿಟ್ಟು ಮಾಡಿಕೊಂಡು, ಉಪಾಧ್ಯಾಯರಿಗೂ ಇತರರಿಗೂ ತಕ್ಕ ಸಲಹೆಗಳನ್ನು ಕೊಡತಕ್ಕವರಾಗಿಯೂ ಇರಬೇಕಾಗಿದೆ.

ಸ್ತ್ರೀ ವಿದ್ಯಾಭ್ಯಾಸವು

ಸ್ತ್ರೀ ವಿದ್ಯಾಭ್ಯಾಸದಲ್ಲಿ ಜನರು ಅಭಿಲಾಷೆಯನ್ನು ತೋರಿಸುತ್ತಿದಾರೆ ಬಾಲಿಕಾ ಪಾಠಶಾಲೆಗಳು ೨೪೬ ರಿಂದ ೨೫೧ ಕ್ಕೂ ಸ್ಕೂಲುಗಳಿಗೆ ಹೋಗಿ ಓದತಕ್ಕ ಬಾಲಿಕೆಯರ ಸಂಖ್ಯೆಯು ೧೭,೪೪೬ ರಿಂದ ೧೯,೬೬೫ ಕ್ಕೂ ಹೆಚ್ಚಿರುತ್ತದೆ ಮೈಸೂರು ಪಟ್ಟಣದಲ್ಲಿರುವ ಮಹಾರಾಣಿ ಕಾಲೇಜು ಈ ಸಂಸ್ಥಾನದ ಬಾಲಿಕಾ ಪಾಠಶಾಲೆಗಳಿಗೆಲ್ಲಾ ಪ್ರಧಾನವಾದದ್ದಾಗಿದ್ದುಕೊಂಡು ಒಳ್ಳೆ ಅಭಿವೃದ್ಧಿಸ್ಥಿತಿಗೆ ಬಂದಿರುವುದು ಲೇಡಿ ಸೂಪರಿಂಟೆಂಡೆಂಟರೂ ಮ್ಯಾನೇಜಿಂಗ್ ಕಮಿಟಿಯವರೂ ಅದನ್ನು ಚನ್ನಾಗಿ ನಡೆಸುತ್ತಿದಾರೆ ಇಬ್ಬರು ಬ್ರಾಹ್ಮಣ ಸ್ತ್ರೀಯರು ಬಿ ಎ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ್ದು ಮಾತ್ರವಲ್ಲದೆ, ೧೦ ಮಂದಿ ಇಂಗ್ಲಿಷ್ ಲೋವರ್ ಸೆಕೆಂಡರಿ ಪರೀಕ್ಷೆಯಲ್ಲೂ, ೩೭ ಬಾಲಕಿಯರು ಕನ್ನಡ ಲೋವರ್ ಸೆಕೆಂಡರಿ ಪರೀಕ್ಷೆಯಲ್ಲೂ, ೧೭ ಮಂದಿ ಉಪಾಧ್ಯಾಯ ಪರೀಕ್ಷೆಯಲ್ಲೂ ತೇರ್ಗಡೆ ಹೊಂದಿದರು ಇದೆಲ್ಲಾ ತೃಪ್ತಿಕರವಾದದಾಗಿದೆ ಸ್ತ್ರೀ ವಿದ್ಯಾಭ್ಯಾಸಾಭಿವೃದ್ಧಿಗೆ ತಕ್ಕ ಉಪಾಧ್ಯಾಯಿನಿಯರು ದೊರಕದಿರುವುದೇ ಮುಖ್ಯ ಕೊರತೆಯಾಗಿದೆ. ಈ ಕೊರತೆಯು ಕ್ರಮೇಣ ನಿವಾರಣೆಯಾದೀತೆಂದು ನಿರೀಕ್ಷಿಸಬಹುದು ಸ್ತ್ರೀ ವಿದ್ಯಾಭ್ಯಾಸಕ್ಕಾಗಿ ಹೋದ ಸಾಲಿನಲ್ಲಿ ೧,೮೧,೦೪೭ ರೂಪಾಯಿ ಖರ್ಚಾಯ್ತು, ಈ ಸಾಲಿನಲ್ಲಿ ೧,೯೪,೦೧೧ ರೂಪಾಯಿ ಖರ್ಚು ಮಾಡಲಾಗಿದೆ

ನಾರ್ಮಲ್ ಸ್ಕೂಲುಗಳು

ಮೈಸೂರು, ಕೋಲಾರ ಶಿವಮೊಗ್ಗೆಗಳಲ್ಲಿರುವ ಮೂರು ನಾರ್ಮಲ್ ಸ್ಕೂಲುಗಳೂ ತೃಪ್ತಿಕರವಾಗಿ ಕೆಲಸ ಮಾಡಿರುತ್ತವೆ. ಅವುಗಳಲ್ಲಿ ಓದಿದ ೫೭ ಮಂದಿ ಉಪಾಧ್ಯಾಯ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿರುವರು ಹೀಗೆ ತರಪೇತಾಗಿರುವ ಉಪಾಧ್ಯಾಯರುಗಳ ಸಂಖ್ಯೆಯು ೭೯೬

ಕಸಬುದಾರಿ ಪಾಠಶಾಲೆಗಳು

ಕೈಗಾರಿಕೆ ಮತ್ತು ಕಸಬುಗಳನ್ನು ಕಲಿಸುವದಕ್ಕೆ ಹೋದ ವರುಷ ೧೯ ಪಾಠಶಾಲೆಗಳಿದ್ದುವು ತಲಕಾಡಿನ ಪ್ರೈವೇಟ್ ಕಸಬಿನ ಸ್ಕೂಲು ಮುಚ್ಚಲ್ಪಟ್ಟದ್ದರಿಂದ ಈಗ ೧೭ ಪಾಠಶಾಲೆಗಳಿರುತ್ತವೆ ಆ ಪಾಠಶಾಲೆಯನ್ನು ಯಾಕೆ ಮುಚ್ಚಬೇಕಾಯಿತೋ ಇನ್ಸ್ಪೆಕ್ಟರ್ ಜನರಲ್‌ರವರ ತಿಳಿಸಿಲ್ಲ ಕೈಗಾರಿಕೆ ಪಾಠಶಾಲೆಗಳಲ್ಲಿ ಕಸಬುಗಳನ್ನು ಕಲಿಯತಕ್ಕ ಬಾಲಕರ ಸಂಖ್ಯೆಯು ೬೪೧ ರಿಂದ ೮೫೭ಕ್ಕೆ ಹೆಚ್ಚಿರುತ್ತದೆ ಮೈಸೂರಿನ ಕೈಗಾರಿಕೆ ಪಾಠಶಾಲೆಯು ಎಲ್ಲಾ ಭಾಗಗಳಲ್ಲಿಯೂ ಅಭಿವೃದ್ಧಿಗೆ ಬಂದಿರುವುದು

ಇತರ ಪಾಠಶಾಲೆಗಳು

(೧ ಮೈಸೂರು ಇಂಜನಿಯರ್ (ಮರಾಮತ್) ಇಲಾಖೆಯ ಕೀಳು ದರ್ಜೆ ನೌಕರಿಗಳಿಗೆ ಬಾಲಕರನ್ನು ತರಪೇತು ಮಾಡುವದಕ್ಕೆ ಮೈಸೂರಿನಲ್ಲಿ ಒಂದು ಇಂಜನಿಯರಿಂಗ್ ಸ್ಕೂಲಿದೆ (೨) ಕಿವುಡು ಮೂಗರು ಮತ್ತು ಕುರುಡರಿಗಾಗಿ ಮೈಸೂರಿನಲ್ಲಿ ಒಂದು ಪಾಠಶಾಲೆ ಇರುವುದು (೩) ವ್ಯಾಪಾರ ವಿಷಯಗಳನ್ನು ಬಾಲಕರಿಗೆ ಹೇಳಿಕೊಡುವುದಕ್ಕೆ ಮೈಸೂರಿನಲ್ಲೂ ಬೆಂಗಳೂರಿನಲ್ಲೂ ಒಂದೊಂದು ಸ್ಕೂಲು ಇರುತ್ತದೆ ಕಿವುಡು ಮೂಗರ ಮತ್ತು ಕುರುಡರ ಪಾಠಶಾಲೆಗೆ ಪ್ರತಿ ತಿಂಗಳೂ ಕೊಡುತ್ತಿದ್ದ ಸರ್ಕಾರಿ ಗ್ರಾಂಟನ್ನು ಈಗ ೭೫ ರೂ. ನಿಂದ ೧೨೫ ರೂ ಗೆ ಹೆಚ್ಚು ಮಾಡಿದೆ.

ಸಂಸ್ಕೃತ ವಿದ್ಯೆ.

ಓರಿಯಂಟಲ್ ಕಾಲೇಜುಗಳು ನಾಲ್ಕಿರುವವು ಈ ಪೈಕಿ ಮೂರರಲ್ಲಿ ಸಂಸ್ಕೃತವನ್ನೂ ಒಂದರಲ್ಲಿ ಕನ್ನಡವನ್ನೂ ಕಲಿಸುವರು. ಸಂಸ್ಕೃತ ಪಾಠಶಾಲೆಗಳು ಹೋದ ವರುಷ ೩೮ ಇದ್ದದ್ದು ಈ ಸಾಲಿನಲ್ಲಿ ೪೦ ಆಗಿ, ವಿದ್ಯಾರ್ಥಿಗಳ ಸಂಖ್ಯೆಯು ೩,೪೮೬ ಕ್ಕೆ ಹೆಚ್ಚಿರುತ್ತದೆ

ಮಹಮದಿಯರ ವಿದ್ಯಾಭ್ಯಾಸವು.

ಮಹಮದಿಯರಲ್ಲಿ ವಿದ್ಯಾಭ್ಯಾಸವು ದಿನೇ ದಿನೇ ಅಭಿವೃದ್ಧಿಯಾಗುತ್ತಿದೆ ಮಹಮದಿಯ ಬಾಲಕರಲ್ಲಿ ವಿದ್ಯೆ ಕಲಿಯುತ್ತಿರುವವರ ಸಂಖ್ಯೆಯು ಹೋದ ವರುಷ ೧೩,೯೩೩ ಇದ್ದದ್ದು ಈ ಸಾಲಿನಲ್ಲಿ ೧೫,೭೩೭ ಕ್ಕೆ ಹೆಚ್ಚಿರುವುದು ಪರೀಕ್ಷೆಗಳಲ್ಲಿ ಅವರು ತೇರ್ಗಡೆಯಾಗಿರುವುದು ತೃಪ್ತಿಕರವಾಗಿದೆ ಹಿಂದುಸ್ಥಾನಿ ಪಾಠಶಾಲೆಗಳನ್ನು ತನಿಖೆ ಮಾಡುವುದಕ್ಕೆ ಇಬ್ಬರು ಡೆಪ್ಟಿ ಇನ್ಸ್ಪೆಕ್ಟರುಗಳೂ ಒಬ್ಬ ಅಸಿಸ್ಟೆಂಟ್ ಇನ್ಸ್ಪೆಕ್ಟರೂ ನೇಮಕವಾಗಿದ್ದರು ಈ ಸಾಲಿನಲ್ಲಿ ಇನ್ನೊಬ್ಬ ಡೆಪ್ಟಿ ಇನ್ಸ್ಪೆಕ್ಟರನ್ನು ನೇಮಕ ಮಾಡಿರುತ್ತದೆ. ಹಿಂದುಸ್ಥಾನಿ ಸ್ಕೂಲ್ ಮುನ್ಷಿಗಳಲ್ಲಿ ಬಹುಮಂದಿಯನ್ನು ನಾರ್ಮಲ್ ಸ್ಕೂಲುಗಳಿಗೆ ಕಳುಹಿಸಿ ತರಪೇತು ಮಾಡುತ್ತಲೂ, ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದದೆ ಇರುವ ಉಪಾಧ್ಯಾಯರನ್ನು ಓದಿ ಪ್ಯಾಸ್ ಮಾಡಬೇಕೆಂದು ಬಲಾತ್ಕಾರ ಮಾಡುತ್ತಲೂ ಇರುವಂತೆ ತಿಳಿದು ಸಂತೋಷಪಡಬೇಕಾಗಿದೆ

ಕೀಳು ಜಾತಿಯವರ ವಿದ್ಯಾಭ್ಯಾಸವು

ಕೀಳು ಜಾತಿಯವರ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಬೇಕೆಂದು ಕೆಲವು ಪಾಠಶಾಲೆಗಳನ್ನು ಇಟ್ಟಿದೆ. ಅವುಗಳಲ್ಲಿ ಒಟ್ಟು ೨,೬೭೯ ಮಂದಿ (೨,೩೯೫ ಮಂದಿ ಹುಡುಗರು, ೭೩೪ ಮಂದಿ ಹುಡುಗಿಯರು) ಅಂದರೆ ಹಿಂದಿನ ಸಾಲಿಗಿಂತ ೨೩೭ ಮಂದಿ ಹೆಚ್ಚಾಗಿ ವಿದ್ಯೆ ಕಲಿಯುತ್ತಿದಾರೆ ಹಿಂದೆ ಬಿದ್ದಿರುವ ಈ ಜನರು ವಿದ್ಯಾವಂತರಾಗಿ ಅಭಿವೃದ್ಧಿಗೆ ಬರಲೆಂಬ ಉದ್ದೇಶದಿಂದ ಆ ಜಾತಿಯ ಜನರು ತಾಲ್ಲೂಕ್ ಸ್ಕೂಲಿನಲ್ಲಿ ಸೇರಿ ಓದಿದಾಗ್ಯೂ ಗ್ರಾಮಾಂತರದ ಸ್ಕೂಲಿನಲ್ಲಿ ಸೇರಿ ಓದಿದಾಗ್ಯೂ ಅವರಿಂದ ಯಾವಾಗ್ಗೂ ಸ್ಕೂಲ್ ಫೀಜನ್ನು ವಸೂಲ್ಮಾಡಬೇಕಾದದ್ದಿಲ್ಲವೆಂದು ಅವರಿಗೆ ರಿಯಾಯತಿಯನ್ನು ತೋರಿಸಲಾಗಿದೆ.

ಉತ್ತರ ದೇಶದಲ್ಲಿ ಗಲಭೆಯು.

ಗವರ್ನಮೆಂಟಿನವರು ಮಾಡಿದ ಪ್ರತೀಕಾರಗಳು.

ಪೂರ್ವಬಂಗಾಳಾ, ಲಾಹೋರ್, ರಾವಲ್‌ಪಿಂಡಿ ಎಂಬೀ ಪ್ರಾಂತ್ಯಗಳಲ್ಲಿ ಕೆಲವು ಕಾಲದಿಂದೀಚೆಗೆ ಕೆಲವು ದೇಶವತ್ಸಲರು ಅನೇಕ ಗಲಭೆಗಳುಂಟಾಗುವಂಥಾ ಕಾರ್ಯಗಳನ್ನು ಮಾಡುತ್ತಲೂ, ಉಪನ್ಯಾಸಗಳನ್ನು ಮಾಡಿ ಪಡೆಗಳನ್ನು ರೇಗಿಸುತ್ತಲೂ, ಹಿಂದುಗಳೂ ಮಹಮ

ಯರೂ ಪರಸ್ಪರ ಜಗಳಾಡಿ ದುಷ್ಕೃತ್ಯಗಳನ್ನು ನಡಸುವುದಕ್ಕೆ ಪ್ರಚೋದನೆಯನ್ನು ಕಲ್ಪಿಸುತ್ತಲೂ ಬಂದಿರುತ್ತಾರೆ.

ಬಂಗಾಳಾ ಆಧಿಪತ್ಯವನ್ನು ವೈಸ್‌ರಾಯಿ ಲಾರ್ಡ್ ಕರ್ಜನರವರ ಕಾಲದಲ್ಲಿ ಗವರ್ನಮೆಂಟಿನವರು ಎರಡಾಗಿ ವಿಭಾಗ ಮಾಡಿದ ಲಾಗಾಯ್ತು ಅಲ್ಲಿನ ಜನರು [redacted] ದಾಂಧಲೆ ನಡಸುತ್ತಾ ಸರ್ಕಾರದವರ ನಿರ್ಧಾರವನ್ನು ಅದಕ್ಕೆ ಪ್ರತಿಯಾಗಿ ಮಾಡಿಕೊಂಡು, ನಾನಾ ರೀತಿಯಲ್ಲಿ ತಮ್ಮ ಅಸಮಾಧಾನವನ್ನು ಪ್ರಕಾಶಪಡಿಸುತ್ತಾ ಬಂದಿರುವುದು ನಮ್ಮ ವಾಚಕರಿಗೆ ತಿಳಿದೇ ಇದೆ. ಈಚೆಗೆ ಕೋಮಿಲ್ಲಾ, ಜಮಾಲಪುರ [redacted] ಪಟ್ಟಣಗಳಲ್ಲಿ ಪ್ರಜಾ ನಮ್ಮ ಬಾಳೆ ವಸ್ತುಗೆ ಕೆಟ್ಟು ಹೋಗಿದೆ. ಹಿಂದುಗಳೂ ಮಹಮ್ಮದೀಯರೂ ಒಬ್ಬರ ಮೇಲೊಬ್ಬರು ಬಿದ್ದು ಅಕೃತ್ಯಗಳನ್ನು ನಡಸಿರುತ್ತಾರೆ. ಹೆಂಗಸರ ಮಾನ ಭಂಗಕ್ಕೆ ಒಳಪಡದೆ ಹೋದ ಮಹಮ್ಮದೀಯರನ್ನು ಹಿಂದುಗಳು ಕಲ್ಲುಗಳಿಂದ ಹೊಡೆಯುತ್ತಾ ಜಯಿಸುತ್ತಾ ಬಂದರು. ಮಹಮ್ಮದೀಯರಾದರೋ ಹಿಂದುಗಳ ಪವಿತ್ರ ದೇವಾಲಯಗಳನ್ನು ಲೂಟಿಮಾಡಿ ದೇವಸ್ಥಾನಗಳನ್ನು ನುಗ್ಗಿ ದೇವರುಗಳನ್ನು ಕಿತ್ತು ಹಾಳುಮಾಡಿ ಮಾನಿಷ್ಠರನ್ನು ಹಿಂಸೆಪಡಿಸುತ್ತಾ ಬಂದರು.

ಸರ್ಕಾರದವರು ಸ್ಕೂಲ್ ವಿದ್ಯಾರ್ಥಿಗಳಿಂದಲೂ ಉಪಾಧ್ಯಾಯರುಗಳಿಂದಲೂ ಈ ಗಲಭೆಯು ಹೆಚ್ಚುತ್ತಿದೆ ಎಂದು ತಿಳಿದವರಾಗಿ ಕಳೆದ ವಾರ ಒಂದು ಸರ್ಕ್ಯುಲರ್ ಹೊರಡಿಸಿರುತ್ತಾರೆ. ಅದರ ಮುಖ್ಯಾಭಿಪ್ರಾಯವೇನೆಂದರೆ ಸ್ಕೂಲ್ ಹುಡುಗರು ರಾಜಕೀಯ ವಿಷಯಗಳಿಗೆ ತಲೆ ಹಾಕುವುದು ಯೋಗ್ಯವಲ್ಲ. ಇದರಿಂದ ಅವರ ವಿದ್ಯಾಭಿವೃದ್ಧಿಗೆ ಕುಂದಕವಾಗುವದು. ಆದ್ದರಿಂದ ಅಂಥಾ ಹುಡುಗರ್‍ಯಾರೂ ಯಾವ ಸಭೆಗಳಿಗೂ ವಿಜಾಟಗಳಿಗೂ ಯಾವ ರಾಜಕೀಯ ಚಳವಳಿಗಳಿಗೂ ಹೋಗಿ ಸೇರಕೂಡದು. ಹೀಗೆ ಸೇರಿದವರನ್ನು ಸರ್ಕಾರಿ ಪರೀಕ್ಷೆಗಳಿಗೆ ಸೇರಿಸಿಕೊಳ್ಳುವುದಿಲ್ಲ. ಮತ್ತು ಉಪಾಧ್ಯಾಯರು ಕೂಡ ವಿದ್ಯಾಬೋಧನೆಯಲ್ಲೇ ತಮ್ಮ ಕಾಲವನ್ನು ಕಳೆಯಬೇಕು. ರಾಜಕೀಯ ವಿಷಯಗಳಲ್ಲಿ ಅವರು ತಮ್ಮ ಹುಡುಗರನ್ನು ತರಪೀತು ಮಾಡಬಾರದು. ಅವಶ್ಯಕವಾಗಿ ವಿಜಾಟಂಗಳಿಗೆ ಆಗಿರನ್ನು ಕರೆದುಕೊಂಡು ಹೋದರೆ ಅವರ ಸ್ಕೂಲಿಗೆ ಕೊಡುವ ಗ್ರಾಂಟನ್ನು ನಿಲ್ಲಿಸಬೇಕಾಗುವದು. ಯುನಿವರ್ಸಿಟಿಯು ಅಂಥಾ ಸ್ಕೂಲನ್ನು ತಮ್ಮ ಅಂಗವಾಗಿ ಎಣಿಸುವದಿಲ್ಲ. ಈ ಸರ್ಕ್ಯುಲರ್ ಗವರ್ನಮೆಂಟುಗಳವರೂ ತಂತಮ್ಮ ವಿದ್ಯಾ ಇಲಾಖೆಯ ಡೈರೆಕ್ಟರ್ ಕಳುಹಿಸಿಕೊಟ್ಟಿರುತ್ತಾರೆ. ಇದಲ್ಲದೆ ಈ ವಿಷಯದ ಸರ್ಕ್ಯುಲರನ್ನು ಇಂಡಿಯಾ ಗವರ್ನಮೆಂಟಿನವರು ಸ್ವದೇಶೀಯ ರಾಜರುಗಳಿಂದ ಆಳಲ್ಪಡುವ ಸಂಸ್ಥಾನಗಳಲ್ಲಿ ಇದ್ದಂತೆ ಜಾರಿಗೆ ತರುವಂತೆ ತಿಳಿಪಡಿಸುವವರಾಗಿದಾರೆ.

ಅತ್ತಲಾಗಿ, ರಾವಲ್‌ಪಿಂಡಿಯಲ್ಲಿ ನಡೆದಿರುವ ಗಲಭೆಯೇನೆಂದರೆ— ಸುಮಾರು ಇಪ್ಪತ್ತು ದಿನಗಳಿಂದಲೂ ಅಲ್ಲಿನ ಪ್ರಜೆಗಳಿಗೆ ಸರ್ಕಾರದವರ ಮೇಲೆ ಅಸಮಾಧಾನ ಉಂಟಾಗಿರುತ್ತದೆ. ಕಳೆದ ತಿಂಗಳು ೨೧ ನೇ ತಾ. ರಾವಲ್‌ಪಿಂಡಿ ಮಾರ್ಕೆಟ್ ಮೈದಾನದಲ್ಲಿ ಸಾವಿರಾರು ಪ್ರಜೆಗಳು ಸಭೆ ಸೇರಿ, ಗವರ್ನಮೆಂಟಿನವರ ಈಚೆಗೆ ದಾಖಲ್ ಮಾಡಿರುವ ಕಂದಾಯದ ದರಗಳ ವಿಷಯವಾಗಿ ಚರ್ಚೆಮಾಡಿ, ಉಪನ್ಯಾಸಗಳನ್ನು ನಡಸಿದರು. ಆಗ್ಗೆ ಹಂಸರಾಜ್, ಅಮೊಲಕ್‌ರಾಂ, ಗುರುದಾಸರಾಂ, ಅಜಿತ್‌ಸಿಂಗ್ ಎಂಬೀ ವಿದ್ಯಾವಂತರು ಸಭಿಕರನ್ನು ಕುರಿತು ಉಪನ್ಯಾಸಮಾಡುವಾಗ್ಗೆ ಸರ್ಕಾರದ ಅಧಿಕಾರಿಗಳನ್ನು ತುಂಬಾ ಬೈಗಳು ರಾಜದ್ರೋಹಕೃತ್ಯಗಳು ನಡೆಯುವ ಭೀತಿಯಲ್ಲಿ ಜನವನ್ನು ಕೆರಳಿಸಿದರು. ಪೋಲೀಸ್ ಅಧಿಕಾರಿಯು ಆ ಮುಖಂಡರಿಗೆ ನೋಟಿಸ್ ಕೊಟ್ಟು ದಸ್ತಗಿರಿಮಾಡಿ, ತಮ್ಮ ಕೋರ್ಟಿಗೆ ಬರಮಾಡಿಕೊಂಡು ದರ್ಯಾಫ್ತು ಮಾಡುವುದರಲ್ಲಿದ್ದರು. ಅದರ ಮೇಲೆ ಕೆಲವರು ಎರಡನೆ ಸಭೆಯನ್ನು ನಡಿಸಿ ಆ ಮುಖಂಡರಾದ ವಿದ್ಯಾವಂತರುಗಳನ್ನು ಸರ್ಕಾರದವರ ವಶದಿಂದ ಬಿಡಿಸಿಕೊಂಡು ಬರುವಂತೆ ಜನರಿಗೆ ಚಿತಾವಣೆ ಮಾಡಿದ್ದರು. ಅದರಂತೆ ದರ್ಯಾಫ್ತಿನ ದಿನ ಸಾವಿರಾರು ಜನರು ಕಚೇರಿಯ ಮುಂದೆ ನಿಂತು ಗಲಭೆಮಾಡಿದರು. ದರ್ಯಾಫ್ತಿಯನ್ನು ಸರ್ಕಾರದವರು ಆ ದಿನ ಮಾಡದೆ ಮುಂದಕ್ಕೆ ಹಾಕಿದರು. ಕೂಡಲೇ ಆ ಗುಂಪಿನ ಜನರು ಅಲ್ಲಿಂದ ಪೋಲೀಸ್ ಅಧಿಕಾರಿಗಳ ಮನೆಗಳಿಗೂ ಮ್ಯಾಜಿಸ್ಟ್ರೇಟರ ಮನೆಗಳಿಗೂ ನುಗ್ಗಿ ನಾನಾ ದಾಂಧಲೆಗಳನ್ನು ನಡಸಿ, ಸಾಮಾನುಗಳನ್ನು ನಾಶಮಾಡಿ, ಮಿಷನ್ ಪಾದ್ರಿಗಳ ಮನೆಗಳಲ್ಲೂ ತುಂಬಾ ನಷ್ಟಪಡಿಸಿದ್ದಲ್ಲದೆ ಕ್ರೈಸ್ತ ದೇವಾಲಯದೊಳಗಿದ್ದ ಸಾಮಾನನ್ನು ಸುಟ್ಟು ಹಾಳುಮಾಡಿ, ದಂಗೆನಡಸಿದರು. ಸರ್ಕಾರದವರು ಕೂಡಲೆ ಇಂಗ್ಲಿಷ್ ಸೈನ್ಯವನ್ನು ಪಟ್ಟಣದ ಬೀದಿಗಳಿಗೆ ಕರೆಸಿ ಗಲಭೆಯೇನೂ ಆಗದಂತೆ ನೋಡಿಕೊಳ್ಳಬೇಕೆಂದು ನೇಮಿಸಿರುತ್ತಾರೆ. ಆ ಐದು ಮಂದಿ ಲಾಯರುಗಳನ್ನು ಜಾಮೀನಿನ ಮೇಲೆ ಬಿಡಬೇಕೆಂದು ಚೀಫ್ ಕೋರ್ಟಿಗೆ ಅರ್ಜಿ ಬರೆದುಕೊಂಡಾಗ ಪೋಲೀಸ್ ಡೆಪ್ಯುಟಿ ಕಮಿಷನರು ಕೋರ್ಟಿಗೆ ಬಂದು ನಾಮುಕ್ಕೂಲವನ್ನು ಬರೆದು ಒಪ್ಪಿಸಿ, ಅವರನ್ನು ಜಾಮೀನಿನ ಮೇಲೆ ಬಿಡಲೇಕೂಡದೆಂತಲೂ, ಬಿಟ್ಟಪಕ್ಷದಲ್ಲಿ ಪ್ರಜಾಸ್ವಾಮ್ಯಕ್ಕೆ ತುಂಬಾ ಕುಂದಕವಾಗುವುದೆಂತಲೂ ಹೇಳಿಕೊಂಡರು. ಆದಕಾರಣ ಚೀಫ್ ಕೋರ್ಟಿನವರು ಆ ಐದು ಮಂದಿ ಮುಖಂಡರನ್ನು ಜಾಮೀನಿನ ಮೇಲೆ ಬಿಡುವುದಿಲ್ಲವೆಂದು ತೀರ್ಮಾನ ಹೇಳಿದರು. ಈ ವಿಚಾರವು ಅಲ್ಲಿನ ಪ್ರಜೆಗಳಲ್ಲಿ ತುಂಬಾ ಮನಸ್ತಾಪವನ್ನು ಉಂಟುಮಾಡಿರುತ್ತದೆ. ಈಚೆಗೆ ರಾವಲ್‌ಪಿಂಡಿಯಲ್ಲಿ ಕಿಷನ್ ಚಂದ್ ಎಂಬ ವಕೀಲರ ಇಬ್ಬರು ಮಗಂದಿರುಗಳನ್ನು ಮ್ಯುನಿಸಿಪಲ್ ಕಮಿಷನರ್ ನೌ ಲಭ್‌ನರಾಂ ಎಂಬವರನ್ನು ಇನ್ನೆರಡು ಮಂದಿ ಐಶ್ವರ್ಯವಂತರಾದ ಹಿಂದುಗಳನ್ನು ದಸ್ತಗಿರಿಮಾಡಿಟ್ಟುಕೊಂಡಿದ್ದಾರೆ. ಪೋಲೀಸಿನವರು ಈ ಜನರ ಮೇಲೆ ನಾಲ್ಕು ಮೊಕದ್ದಮೆಗಳನ್ನು ಮಾಡುವುದಕ್ಕೆ ರಾಜವಾತು ಮುಂತಾದ ಸಾಕ್ಷಿಗಳನ್ನು ಒದಗಿಸಿಕೊಳ್ಳುತ್ತಿ ದ್ದಾರಾದಕಾರಣ ಅವರ್‍ಯಾರನ್ನೂ ಜಾಮೀನಿನ ಮೇಲೆ ಬಿಡದೆ ಇರುತ್ತಾರೆ.

ಈ ಕಡೆ ಲಾಹೋರಿನಲ್ಲಿ ಕೆಲವು ವಿದ್ಯಾವಂತರು ರಾಜದ್ರೋಹಕರವಾದ ಕಾರ್ಯಗಳನ್ನು ಅಂತರಂಗದಲ್ಲೇ ನಡಸುತ್ತಿದ್ದಾರೆಂದೂ ಇದರಿಂದ ಪ್ರಜಾಸಮೃದ್ಧಿಗೂ ದೇಶಾಭಿವೃದ್ಧಿಗೂ ಬಹಳಮಟ್ಟಿಗೆ ಕುಂದಕವಾಗುತ್ತಿದೆ ಎಂದೂ ಸರ್ಕಾರಿ ಅಧಿಕಾರಿಗಳಿಗೆ ಅನುಮಾನ ಉಂಟಾಯಿತು. ಪಂಜಾಬ್ ಲೆಫ್ಟಿನೆಂಟ್ ಗವರ್ನರ್ ಸರ್ ಡೇಜಿಲ್ ಇಬೆಟ್ಸನ್ನವರು ಕೆಲವು ಮುಖಂಡರನ್ನು ಹಿಡಿದು ಗಡೀಪಾರು ಮಾಡುವದು ಅವಶ್ಯವೆಂಬದಾಗಿ ಇಂಡಿಯಾ ಗವರ್ನಮೆಂಟಿಗೆ ಬರೆದು ತಿಳಿಸಿದರು. ವೈಸ್‌ರಾಯಿ ಲಾರ್ಡ್ ಮಿಂಟೋ ಪ್ರಭುಗಳೂ ಅವರ ಮಂತ್ರಾಲೋಚನಾ ಸಭೆಯ ಮೆಂಬರುಗಳೂ ಈ ವಿಚಾರವನ್ನು ಕುರಿತು ಚರ್ಚೆ ಮಾಡಿ, ಲೆಫ್ಟಿನೆಂಟ್ ಗವರ್ನರವರ ಬರವಣಿಗೆಯ ಅಭಿಪ್ರಾಯದಂತೆ ಒಪ್ಪಿ, ಹಾಗೆ ಮಾಡುವುದು ಅಗತ್ಯವಾಗಿ ಕಂಡುಬಂದಿದೆ ಎಂಬದಾಗಿ ವಿಲಾಯತಿಯಲ್ಲಿರುವ ಸ್ಟೇಟ್ ಸೆಕ್ರೆಟರಿ ಮಿ॥ ಜಾನ್ ಮಾರ್ಲಿಯವರಿಗೆ ತಂತಿವರ್ತಮಾನ ಕೊಟ್ಟು, ಅವರ ಸ್ವೀಕಾರ ಅಪೇಕ್ಷಿಸಿದರು. ಅದರ ಮೇಲೆ ಸ್ಟೇಟ್ ಸೆಕ್ರೆಟರಿಯವರು ಲೆಫ್ಟಿನೆಂಟ್ ಗವರ್ನರವರ ಬರವಣಿಗೆಯನ್ನೂ ಇಂಡಿಯಾ ಗವರ್ನಮೆಂಟಿನವರ ಶಿಫಾರಸನ್ನೂ ಪರಾಂಬರಿಸಿ, ಅದೇ ಪ್ರಕಾರ ಮುಖಂಡರಿಬ್ಬರನ್ನೂ ಹಿಡಿದು ಗಡೀಪಾರು ಮಾಡಬಹುದೆಂದು ಸ್ವೀಕಾರಮಾಡಿದರು.

ಕಳೆದ ಗುರುವಾರ ಲಾಹೋರ್ ಪಟ್ಟಣದ ಬೀದಿಗಳಲ್ಲಿ ಇಂಗ್ಲಿಷ್ ಸೈನಿಕರು ಬಂದು ನಿಂತು ಪ್ರಜಾಸಮುದಿಗೆ ಭಂಗಬಾರದಂತೆ ಎಲ್ಲಾ ಭಾಗಗಳನ್ನೂ ಕಾಪಾಡುತ್ತಾ ಬಂದರು. ಕೆಲವು ಫಿರಂಗಿಗಳನ್ನು ಸಹ ತಂದು ಅಲ್ಲಲ್ಲಿಟ್ಟು ಸಿದ್ಧಪಡಿಸಿಕೊಂಡರು. ಈ ವಿಚಾರವಾಗಿ ಪ್ರಜೆಗಳು ತುಂಬಾ ಗಾಬರಿಪಡುತ್ತಾ ತಮ್ಮ ಅಂಗಡಿ ಮಳಿಗೆಗಳನ್ನು ಊರಹೊರಗೆ ಸಾಗಿಸಲಾರಂಭಿಸಿದರು. ಮಧ್ಯಾಹ್ನ ೨॥ ಗಂಟೆಗೆ ರಾಯಿ ಗಂಗಾರಾಂ, ರಹಮತುಲ್ಲಾ ಎಂಬಿಬ್ಬರು ಪೋಲೀಸ್ ಇನ್ಸ್‌ಪೆಕ್ಟರುಗಳು ಲಾಲಾ ಲಾಜಪತ್ ರಾಯಿ ಎಂಬ ದೊಡ್ಡ ವಕೀಲರ ಮನೆಗೆ ಹೋಗಿ ಅವರನ್ನು ಕಂಡು, ಪೋಲೀಸ್ ಡೆಪ್ಯುಟಿ ಕಮಿಷನರು ನಿಮ್ಮನ್ನು ಬರ ಹೇಳುತ್ತಾರೆ ಎಂದು ತಿಳಿಸಿದರು. ಲಾಲಾ ಲಾಜಪತ್‌ರಾಯಿಯವರು ತಮ್ಮ ಗಾಡಿ ಕಟ್ಟಿಸಿ ಅದರಲ್ಲಿ ಕುಳಿತುಕೊಂಡು ಮನೆಯಿಂದ ಹೊರಟರು. ಯುರೋಪಿಯನ್ ಸವಾರರು ಪೋಲೀಸಿನವರೂ ಅವರ ಗಾಡಿಯ ಸುತ್ತಲೂ ಸೇರಿಕೊಂಡು, ಅವರನ್ನು ಡೆಪ್ಯುಟಿ ಕಮಿಷನರ ಆಫೀಸಿಗೆ ಕರೆದುಕೊಂಡುಹೋದರು. ಡೆಪ್ಯುಟಿ ಕಮಿಷನರು ವೈಸ್‌ರಾಯಿಯವರಿಂದ ಬಂದಿದ್ದ ಹುಕುಮಿನ ನಕಲನ್ನು ಲಾಲಾ ಲಾಜಪತ್ ರಾಯಿಯವರ ಕೈಗೆ ಕೊಟ್ಟು, ಹೊರಗಡೆ ಸಿದ್ಧಪಡಿಸಿದ್ದ ಒಂದು ಮೋಟಾರ್ ಗಾಡಿಯಲ್ಲಿ ಅವರನ್ನು ಕೂರಿಸಿ, ತಾವೂ ಕಮಿಷನರೊಡನೆ ಕುಳಿತು, ಮಿಯಾನ್‌ಮಿರ್ ಎಂಬ ಮಿಲ್ಟೇರಿ ರೈಲ್ವೇ ಸ್ಟೇಷನಿಗೆ ಕರೆದು ಕೊಂಡುಹೋದರು. ಅಲ್ಲಿ ಒಂದು ಸ್ಪೆಷಲ್ ರೈಲು ಸಿದ್ಧವಾಗಿತ್ತು. ಅಲ್ಲಿ ಲಾಲಾ ಲಾಜಪತ್ ರಾಯಿಯವರು ಕಾಗದವನ್ನು ಕೇಳಿ ತೆಗೆದುಕೊಂಡು, ತಮ್ಮ ಕುಮಾರನಿಗೆ ಒಂದನ್ನೂ ಚೀಫ್ ಕೋರ್ಟ್ ಪ್ಲೀಡರ್ ಮಿ॥ ದ್ವಾರಕ ದಾಸ್ ಯವರಿಗೆ ಒಂದನ್ನೂ ಬರೆದು, ತಮ್ಮನ್ನು ಸರ್ಕಾರದವರು ಗಡೀಪಾರು ಮಾಡಿದಾರೆಂದೂ ತಮ್ಮನ್ನು ಎಲ್ಲಿಗೆ ಕರೆದುಕೊಂಡು ಹೋಗುವರೋ ತಿಳಿಯಲಿಲ್ಲವೆಂದೂ ಸಮಾಚಾರ ಮಾಡಿ ಕಳುಹಿಸಿದರು. ತರುವಾಯ ಸರ್ಕಾರದವರು ಅವರನ್ನು ಸ್ಪೆಷಲ್ ರೈಲ್ ಹತ್ತಿಸಿ ಎಲ್ಲಿಗೋ ಕಳುಹಿಸಿಬಿಟ್ಟರು. ಇಂಥಾ ಸ್ಥಳವೆಂಬ ವೃತ್ತಾಂತ ಯಾರಿಗೂ ಗೊತ್ತಿಲ್ಲ. ಲಾಲಾ ಲಾಜಪತ್ ರಾಯಿಯವರು ಬಹಳ ಐಶ್ವರ್ಯವಂತರು, ತುಂಬಾ ವಿದ್ಯಾವಂತರು, ಆ ಪ್ರಾಂತದಲ್ಲೆಲ್ಲಾ ತುಂಬಾ ಪರೋಪಕಾರಿಯೆನ್ನಿಸಿ ದೇಶಭಕ್ತರೆಂದು ಕರೆಸಿಕೊಳ್ಳುತ್ತಿದ್ದರು. ಅವರು ಮೊನ್ನೆ ತಾನೇ ಮಿ॥ ಗೋಖಲೆಯವರ ಕೂಡ ವಿಲಾಯತಿಗೆ ಹೋಗಿ ಹಿಂದುಸ್ಥಾನದ ಪ್ರಜೆಗಳ ಪಕ್ಷವನ್ನು ಹಿಡಿದು ಅಲ್ಲಿನ ಜನರಿಗೂ ಅಧಿಕಾರಿಗಳಿಗೂ ಅನೇಕ ಸಂಗತಿಗಳನ್ನು ತಿಳಿಸಿ ಬಂದರು.

ಮಾರುದಿನ ಅಂದರೆ ತಾ ೧೦ ನೆ ಶುಕ್ರವಾರ ಪೆರೋಸ್‌ಪುರದಲ್ಲಿ ಲಾಲಾ ಅಜಿತ್ ಸಿಂ ಎಂಬ ದೊಡ್ಡ ವಕೀಲರನ್ನು ಸರ್ಕಾರದವರು ದಸ್ತಗಿರಿ ಮಾಡಿ, ಗಡೀಪಾರು ಮಾಡಿಬಿಟ್ಟರು. ಲಾಹೋರ್ ಪಟ್ಟಣದಲ್ಲಿ ಈ ವಿಚಾರವಾಗಿ ಮೂರುನಾಲ್ಕು ದಿನಗಳ ತನಕ ಸಭೆಯಲ್ಲಾಗಲಿ ಇತರ ವಿಧದಲ್ಲಾಗಲಿ ಚರ್ಚೆಮಾಡಲೇ ಕೂಡದೆಂದು ಗವರ್ನಮೆಂಟಿನವರು ಇಸ್ತಿಹಾರು ಹಾಕಿಸಿರುತ್ತಾರೆ. ಈ ಸಮಾಚಾರಗಳು ಹಿಂದುಸ್ಥಾನದ ಎಲ್ಲಾ ಭಾಗಗಳಲ್ಲೂ ಹರಡಿಕೊಂಡು ನಾನಾ ರೀತಿಯಾದ ಚರ್ಚೆಗಳನ್ನು ಉಂಟುಮಾಡಿರುತ್ತವೆ.

ಹೊಸ ಕಾನೂನು.

ಕಳೆದ ಶನಿವಾರ ಇಂಡಿಯಾ ಗವರ್ನಮೆಂಟಿನವರು ಸಭೆಗಳನ್ನೂ ಕೂಟಗಳನ್ನೂ ನಡಿಸುವ ವಿಷಯದಲ್ಲಿ ಒಂದು ಕಾನೂನ್ ಮಾಡಿ ಪ್ರಕಟಿಸಿರುತ್ತಾರೆ. ಈ ಕಾನೂನಿನ ಮುಖ್ಯೋದ್ದೇಶವೇನೆಂದರೆ—ಪೂರ್ವ ಬಂಗಾಳಾ ಮತ್ತು ಆಸಾಂ ಎಂಬ ವಿಭಾಗದಲ್ಲೂ ಪಂಜಾಬ್ ಆಧಿಪತ್ಯದಲ್ಲೂ ಯಾರೇ ಆಗಲಿ ಯಾವ ವಿಷಯಕ್ಕಾಗಲಿ ವಿಜಾಟಂಗಳನ್ನು ನಡಸಬೇಕಾದರೆ ಹಾಗೆ ನಡಸತಕ್ಕವರು ಕಾಲವನ್ನೂ ಸ್ಥಳವನ್ನೂ ಗೊತ್ತುಮಾಡಿ ಏಳು ದಿನಗಳಿಗೆ ಮುಂಚೆಯೇ ಪೋಲೀಸ್ ಡಿಸ್ಟ್ರಿಕ್ಟ್ ಸೂಪರಿಂಟೆಂಡೆಂಟರಿಗೆ ತಿಳಿಸಬೇಕು. ಪೋಲೀಸ್ ಅಧಿಕಾರಿಗಳು ಅಂಥಾ ವಿಜಾಟಂಗಳಿಗೆ ತಮ್ಮ ಪ್ರತಿನಿಧಿಯನ್ನು ಕಳುಹಿಸಿ, ವಿಜಾಟಂಗಳಲ್ಲಿ ನಡೆದ ಸಮಸ್ತ ವೃತ್ತಾಂತವನ್ನೂ ದಾಖಲೆ ಬಗ್ಗೆ ಬರೆಸಿ ತರಿಸುವುದಕ್ಕೆ ಏರ್ಪಾಡು ಮಾಡುವರು. ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಗೆ ಇಷ್ಟವಿಲ್ಲದಿದ್ದ ಪಕ್ಷಕ್ಕೆ ಕೂಡಲೇ ಬರಹ ಮೂಲಕ ತಿಳಿಸಿ ಅಂಥಾ ಸಭೆ ನಡಿಯದಂತೆ ಅಪ್ಪಣೆಮಾಡಬಹುದು. ಹೀಗೆ ನೋಟಿಸ್ ಸರ್ಕಾರಕ್ಕೆ ತಿಳಿಸದೇನೇ ಸಭೆಯನ್ನು ನಡಿಸಿದ ಪಕ್ಷದಲ್ಲಿ ಅಂಥವರಿಗೆ ಆರು ತಿಂಗಳವರೆಗೆ ಸಜೆಯನ್ನೂ ಜುಲ್ಮಾನೆಯನ್ನೂ ವಿಧಿಸಲಾದೀತು. ಪ್ರಜಾ ನೆಮ್ಮದಿಗೆ ಭಂಗ ಬರುವ, ರಾಜದ್ರೋಹಕರವಾದ ವಿಜಾಟಂಗ್ ನಡೆಸಿದಂತೆ ಭಾವಿಸಿ, ಅವರಿಗೆ ಪೀನಲ್ ಕೋಡಿನ ಪ್ರಕಾರದಂತೆ ಶಿಕ್ಷೆ ಮಾಡಲ್ಪಡುವುದು.

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸ್ಥಳ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ಸ್ಥಳ ಕೊಡಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಾಗುವುದಿಲ್ಲವೆಂಬುವನ್ನು ಸಕಲರೂ ತಿಳಿಯತಕ್ಕದ್ದು—ಎಡಿ

ಕರೆಸ್‌ಪಾಂಡೆನ್ಸ್.

ಆಶ್ಚರ್ಯಕರವಾದ ಒಂದು ಪ್ರಾಣಿಯು.

ಅಯ್ಯಾ,

ಕೊಳ್ಳೆಗಾಲ ತಾಲ್ಲೋಕು ದೊಡ್ಡ ಇಂದುವಾಡಿ ಗ್ರಾಮದಲ್ಲಿ ಕಳೆದ ತಿಂಗಳ ೨೬ನೇ ರೇವಿ ವಿರಕ್ತಗೌಡರ ಮನೆ ಹತ್ತಲಿನಲ್ಲಿ ಒಂದು ಮರದ ಮೇಲೆ ಅಪೂರ್ವವಾದ ಒಂದು ಮೃಗವನ್ನು ಕಂಡು, ಆ ಮನೆಯ ಸೇವಕನೊಬ್ಬನು ಹಿಡಿತಂದು, ಒಂದು ಸಿಕ್ಕೆಯ ಮೇಲೆ ಇಟ್ಟನು. ಅದನ್ನು ನೋಡುವುದಕ್ಕೆ ಬಹಳ ಜನಗಳು ಬಂದು ಸೇರಿದರು. ಅಷ್ಟರಲ್ಲೇ ಈ ಊರಿನ ಶ್ಯಾನುಭೋಗರಿಗೂ ಸಾಲ್ಟ್ ಇನ್ಸ್‌ಪೆಕ್ಟರಿಗೂ ಈ ಸಮಾಚಾರದ ಮುಟ್ಟಲು ಅವರುಗಳು ಬಂದು ಆ ಪ್ರಾಣಿಯನ್ನು ಅತ್ತಿತ್ತ ಎಳೆಯ ದಿರುವಂತೆ ಹೇಳಲಾಗಿ ಹಾಗೆಯೇ ಮಾಡಲು ಅದು ಯಾವ ಕಡೆಯೂ ಚಲಿಸದೆ ಜನರನ್ನೇ ನೋಡುತ್ತಾ ನೋಡುತ್ತಾ ಕೂತುಕೊಳ್ಳುತ್ತಿತ್ತು. ಆ ಪ್ರಾಣಿಯನ್ನು ನೋಡಿದರೆ ಕಪಿಯು ಮರಿಯ ಹಾಗೆ ಇದ್ದರೂ ಬಾಲವಿರಲಿಲ್ಲ. ಮುಖವು ಮನುಷ್ಯನ ಮುಖದಂತಿತ್ತು. ಮುಂದಿನ ಕಾಲಿಗಿಂತಲೂ ಹಿಂದಿನ ಕಾಲುಗಳು ಉದ್ದವಾಗಿದ್ದುವು. ಶರೀರವು ಬಹಳ ದಿವಸದಿಂದ ಆಹಾರವಿಲ್ಲದೆ ಕೃಶವಾಗಿರುವಂತೆ ಕಾಣುತ್ತಿತ್ತು. ನೋಡುವುದಕ್ಕೆ ಬಂದಿದ್ದವರಲ್ಲಿ ಒಬ್ಬರಾದರೂ ಈ ಪ್ರಾಣಿಯ ಹೆಸರನ್ನು ಹೇಳಲಿಲ್ಲ. ಕೆಲವರು ಈ ಜಾತಿಯ ಮೃಗವನ್ನು ಎಲ್ಲೂ ನೋಡಿದ್ದಿಲ್ಲವೆಂದೂ ಆಶ್ಚರ್ಯವಾದ ನೋಟ ಸಿಕ್ಕಿತೆಂದೂ ಅನ್ನುತ್ತಿದ್ದರು. ಸಾಲ್ಟ್ ಇನ್ಸ್‌ಪೆಕ್ಟರು ಇದು ಅಪೂರ್ವವಾದ ಮೃಗವೆಂದು ಒಂದು ಪಂಜರದಲ್ಲಿಟ್ಟು ಬಾಳೇ ಹಣ್ಣುಗಳನ್ನು ತರಿಸಿ ಕೊಡಲಾಗಿ ೩ ಬಾಳೇಹಣ್ಣುಗಳನ್ನು ತಿಂದಿತು. ನಂತರ ಅದನ್ನು ಅವರು ತಮ್ಮ ಮನೆಗೆ ತೆಗೆಸಿಕೊಂಡುಹೋಗಿ ಇಟ್ಟಿದ್ದರು. ಮಾರನೇ ದಿವಸ ಎದ್ದು ನೋಡುವಲ್ಲಿ ಪಂಜರದ ಎರಡು ಕಡ್ಡಿಗಳು ಸಡಿಲವಾಗಿದ್ದವೇ ಹೊರತು ತೆಗೆಯುವುದಕ್ಕೆ ಬರುತ್ತಿರಲಿಲ್ಲ. ಆ ಪ್ರಾಣಿಯು ಒಳಗೆ ಇರಲಿಲ್ಲ. ಈ ಪವಂತಿಯು ಸುತ್ತಲೂ ವ್ಯಾಪಿಸಿದ್ದಲ್ಲದೆ ಆ ಊರಿಗೆ ಆ ದಿವಸ ನೋಟವು ನೇತ್ರಾನಂದವಾಗಿತ್ತು.

ಎಚ್ ಎಂ ಬಿ

ಮೋಟಾರ್ ಗಾಡಿಯಿಂದುಂಟಾದ ನಷ್ಟ

ಅಯ್ಯಾ,

ಬೆಂಗಳೂರು ತಾಲ್ಲೋಕು ಕೆಂಗೇರಿಯಲ್ಲಿರುವ ಚನ್ನಪ್ಪನೆಂಬುವನು ೬೦೦ ರೂಪಾಯಿನ ಒಂದು ಜೊತೆ ಹೋರಿಗಳನ್ನು ಇಟ್ಟಿದ್ದನು. ಈ ತಿಂಗಳು ೬ನೆ ತಾ. ಸೋಮವಾರ ಸಾಯಂಕಾಲ ೫ ಗಂಟೆಯಲ್ಲಿ ಅವನು ಗಾಡಿ ಕಟ್ಟಿಕೊಂಡು, ಕೆಂಗೇರಿಯಿಂದ ಮೈಸೂರು ಕಡೆಗೆ ಹೋಗುವ ಮಾರ್ಗದಲ್ಲಿ ಅಂದರೆ ೧೦ನೆ ಮೈಲಿಕಲ್ಲಿನ ಹತ್ತಿರ ಒಂದು ದೊಡ್ಡ ಸೇತುವೆ ಇದೆ ಆ ಸೇತುವೆ ದಕ್ಕಾ ಭರ್ತಿಗಾಡಿ ಹೊಡೆದುಕೊಂಡು ಹೋಗುವಾಗ್ಗೆ ಮೈಸೂರು ಕಡೆಯಿಂದ ಮೋಟಾರ್ ಕಾರ್ ಗಾಡಿಯಲ್ಲಿ ನಾಲ್ಕು ಜನ ನೇಟಿವ್ ಜನರು ಕೂತುಕೊಂಡು ಬಂದರು. ದಾರಿ ಕೊಡದೆ ಕೊಂಡು ಹೋಗುವದಕ್ಕೆ ಉಭಯಪಾರ್ಶ್ವದಲ್ಲಿಯೂ ೩—೪ ಆಳೆಂದ್ದ ಹಳ್ಳ. ಆಗ ಎದುರಿಗೆ ಬಂದು ಸುಮ್ಮನೆ ನಿಲ್ಲಿಸಿಕೊಳ್ಳದೆ 'ಬರ್ ಬರ್' ಎಂಬುವ ಪೀಪಿ ಶಬ್ದವನ್ನು ಜೋರಾಗಿ ಮಾಡಿದರು. ಮೊದಲೇ ಗಾಬರಿಯಾಗಿರುವ ಹೋರಿಗಳ ಮುಂದೆ ಗಾಬರಿಯಾಗುವ ಶಬ್ದಗಳನ್ನು ಮಾಡಿದರೆ ಗಾಬರಿಯಾಗದೆ ಇರುವವೋ? ಗಾಬರಿಯಾಗಿ ಗಾಡಿ ಮೇಲೆ ಕುಳಿತಿದ್ದ ರಿಟೋ ಚನ್ನಪ್ಪನೆಂಬುವನ ಮಗ ಕುಂಟಪ್ಪನೆಂಬುವನು ಎಷ್ಟು ಪ್ರಯತ್ನ ಮಾಡಿದರೂ ಹತೋಟಿಗೆ ಬಾರದೆ ಪ್ರಯತ್ನ ಯುಕ್ತಿ ಶಕ್ತಿಗಳ್ಯಾವದೂ ಕೆಲಸಕ್ಕೆ ಬಾರದೆ ಎಲ್ಲಾ ನಿಷ್ಪ್ರಯೋಜನವಾದವು. ಆಗ ಯಗರಾಡುತ್ತಿದ್ದ ಹೋರಿಗಳ ಮುಂದೆ ಇದ್ದ ಮೋಟಾರ್ ಕಾರ್ ಗಾಡಿಯವರು ಮೋಟಾರ್ ಕಾರ್ ಗಾಡಿಯನ್ನು ಸ್ಟಾಪುಮಾಡಿ ಈ ಗಾಡಿಗೆ ಎಡಪಾರ್ಶ್ವದಲ್ಲಿ ಹಾಸಿ ಗುಂಡಿಗೆ ತಗಲುವ ಹಾಗೆ ಬಿಟ್ಟುಕೊಂಡು ಹೊರಟರು. ಆಗ ಎತ್ತುಗಳು ಬಲಪಾರ್ಶ್ವದಲ್ಲಿದ್ದ ೩—೪ ಆಳೆಂದ್ದ ಹಳ್ಳವೂ ಸಾಲು ನೆರಳಿಗೋಸ್ಕರ ಇರುವ ಮರಗಳೂ ಇದ್ದ ಆ ಕಳ್ಳಕ್ಕೆ ಎಗರಿಬಿಟ್ಟವು. ಆಗ ಗಾಡಿಯಲ್ಲಿದ್ದ ಕುಂಟಪ್ಪನೆಂಬುವನು ಭಗವಂತನ ಸಹಾಯದಿಂದ ಸುಮಾರು ಮೂರು ನಾಲ್ಕು ಮಾರು ದೂರಕ್ಕೆ ಹಾರಿಬಿದ್ದಿದ್ದನು. ಹಳ್ಳಕ್ಕೆ ಎಗರಿದ ಹೋರಿಗಳು ಎಗರಿಹೋದ ಜೋರಿಗೆ ಸಾಲುಮರವಾಗಿದ್ದ ನೇರಳೆ ಮರಕ್ಕೆ ತಾಕಿಕೊಂಡು ೭ ಅಡಿ ಉದ್ದದ ಹೋರಿ ೫ ಅಡಿ ಉದ್ದಕ್ಕೆ ಕುಗ್ಗಿದ್ದಲ್ಲದೆ ೨ ನಿಮಿಷದ ಒಳಗೆ ಇರದೆ ಪ್ರಾಣಬಿಟ್ಟಿತು. ಮತ್ತೊಂದು ಹೋರಿ ಕಾಲು ಗಟ್ಟಿಯಾಗಿಲ್ಲದ್ದರಿಂದ ಕಣಿ ಕಿತ್ತುಹೋಗಿ ಅದಕ್ಕೆ ಯಾವ ಅಪಾಯವೂ ಇಲ್ಲದಂತೆ ಸೌಖ್ಯವಾಗಿದೆ. ೧೩೦ ರೂಪಾಯಿನ ಹೋರಿ ಹೋದವರ ಮನಸ್ಸು ಹ್ಯಾಗಿರಬೇಕು? ಭೂತದಯಾ ಪಶ್ಚಾತ್ತಾಪ ಇಲ್ಲದೆ ಇರುವವರಿಂದ ಬಡವರಿಗೆ ಹೀಗೆ ಪರಿಣಮಿಸುತ್ತೆ. ಮೋಟಾರ್ ಕಾರ್ ಗಾಡಿಗಳನ್ನು ನಡೆಸುವವರು ಹುಷಾರಾಗಿಲ್ಲದ ಪಕ್ಷಕ್ಕೆ ಇಂಥಾ ಕಷ್ಟನಷ್ಟಗಳೆಲ್ಲಾ ಉಂಟಾಗುತ್ತವೆ.

ಕೆ ಎಲ್.

ರಾಜಧಾನಿಯ ಮಹಮದೀಯರು

ಕಳೆದ ಶನಿವಾರ ಸಾಯಂಕಾಲ ವೆಸ್ಟ್ [illegible]ರು ಪಟ್ಟಣದ ಮಹಮದೀಯ ಪ್ರಜೆಗಳೆಲ್ಲಾ ಇಲ್ಲಿನ ಟೌನ್ ಹಾಲ್ ಬಂಗಲೆಯಲ್ಲಿ ಸಭೆ ಸೇರಿ ವಿಶೇಷವಾದ ಮೀಟಿಂಗ್ ನಡಿಸಿದರು. [illegible] ಮಹಮದೀಯ ಮೌಲ್ವಿಗಳು ಖಾಜಿಗಳು, ಸರ್ಕಾರಿ ಅಧಿಕಾರಿಗಳು, ಪೋಲೀಸ್ ಆಫೀಸರುಗಳು, ಸಾಹುಕಾರರು, ವರ್ತಕರೇ ಮೊದಲಾದವರೆಲ್ಲಾ ಹಾಜರಾಗಿದ್ದರೂ ಟೌನ್ ಹಾಲ್ ಬಂಗಲೆಯೆಲ್ಲಾ ಸ್ವಲ್ಪ ಹೆಚ್ಚು ಕಡಿಮೆಯಾಗಿ ಸಭಿಕರಿಂದ ಭರ್ತಿಯಾಗಿತ್ತೆಂದು ಹೇಳಬಹುದು. ವಿದ್ಯಾವಂತರಾದ ಕೆಲವು ಹಿಂದುಗಳೂ ರವ್. ಥಾಂಸನ್‌ರವರೂ ಹಾಜರಾಗಿದ್ದರು.

ಪೆನ್ಷನ್ ಪೋಲೀಸ್ ಸೂಪರಿಂಟೆಂಡೆಂಟ್ ಮೆ॥ ಮಹಮದ್ ಜಾಫರ್‌ರವರು ಸಭೆಯನ್ನಾರಂಭಿಸಿ, ಮೈಸೂರು ಸಬ್ ಜಡ್ಜ್ ಮೆ॥ ಗಂಜಾ ಹುಸ್ಸೇನ್‌ರವರು ಅಗ್ರಾಸನವನ್ನು ವಹಿಸಿ ಆ ದಿನದ ಸಭೆಯ ಕಾರ್ಯಗಳನ್ನು ನಡಸಬೇಕೆಂದು ಸೂಚಿಸಿದರು. ಸಭಿಕರೆಲ್ಲಾ ಏಕವಾಕ್ಯತೆಯಿಂದ ಆ ಮಾತನ್ನು ಒಪ್ಪಿಕೊಂಡದ್ದರಿಂದ ಮೇಲೆ ಗಂಜಾ ಹುಸ್ಸೇನ್‌ರವರು ಅಗ್ರಾಸನವನ್ನು ವಹಿಸಿ ಸಭಿಕರನ್ನು ಕುರಿತು ಮೊದಲು ಹಿಂದುಸ್ಥಾನಿಯಲ್ಲೂ ತರುವಾಯ ಇಂಗ್ಲಿಷಿನಲ್ಲೂ ಕೆಲವು ಮಾತುಗಳನ್ನು ತಿಳಿಸಿದರು. ಅವರು ತಿಳಿಸಿದ ಮುಖ್ಯ ವಿಷಯಗಳೇನೆಂದರೆ —

ಕೆಲವು ದಿನಗಳ ಕೆಳಗೆ ಒಬ್ಬ ಮಹಮದೀಯ ಹೆಂಗಸು ಚಿಕಿತ್ಸೆ ಮಾಡಿಸಿಕೊಳ್ಳುವುದಕ್ಕೋ ಜೀವನಕ್ಕೆ ಮಾರ್ಗವಿಲ್ಲದೇನೋ ಇಲ್ಲಿರುವ ಮಿಷನ್ ಆಸ್ಪತ್ರೆಗೆ ಹೋದಳು. ಅದರ ಮೇಲೆ ಮಿಷನಿನವರು ಅವಳನ್ನೂ ಅವಳ ಮೂರು ಮಂದಿ ಮಕ್ಕಳನ್ನೂ ತಮ್ಮ ಪೋಷಣೆಯಲ್ಲಿಟ್ಟುಕೊಂಡು, ಆಸ್ಪತ್ರೆಯೊಳಗೇ ಅವಳ [illegible]ವನ್ನು ತ್ಯಾಗಮಾಡಿಸಿ, ಅವರನ್ನು [illegible]ಗಳವರಿಗೆ ಕಳುಹಿಸಿದರು. ಈ ವಿಚಾರವು ಮಹಮದೀಯರಲ್ಲಿ ಹರಡಿಕೊಂಡಿತು. ಅವರು [illegible]ವಾಗುವುದಿಲ್ಲವೆಂದು ತಿಳಿದು ರೆವ್ ಥಾಂಸನ್ ಸಾಹೇಬರು ಆ ಹೆಂಗಸನ್ನೂ ಅವಳ ಮಕ್ಕಳನ್ನೂ ಬೆಂಗಳೂರಿನ [illegible] ಮಿಷನ್‌ಗೆ ಕಳುಹಿಸಿಬಿಟ್ಟರು. ಈ ಸಾಹಸ ಮುಂದಿಯೂ [illegible] ಕೇಳುವುದಕ್ಕಾಗದೆ ಹೋದರೂ ಅವರು ಮಹಮದೀಯ [illegible]ರಾದರೆಂದು ಮಾರ್ಮಿಕವಾಗಿ ಹೇಳಬಹುದು. [illegible] ರಾಜ್ಯಭಾರವನ್ನು ನಡಸಿದಂಥಾ ಶೂರರಾಗಿದ್ದರು. ಈಗಲೂ, ಅವರಲ್ಲಿ ಆ ಶೌರ್ಯಲಕ್ಷಣಗಳು ಇದ್ದೇ ಇರುತ್ತವೆ. [illegible] ಸಮಾಚಾರವು ಹರಡಿಕೊಂಡಾಗ ಮಹಮದೀಯರು ಮಿಷನರಿಗಳ ಮೇಲೆ ಎಷ್ಟುಮಟ್ಟಿನ ರೋಷಾವೇಶವುಳ್ಳವರಾದರೋ ಹೇಳಲಾಗದು. ಅಂದು ದುಷ್ಟ ಅನೇಕ ಕ್ರೂರಕೃತ್ಯಗಳನ್ನು ಮಾಡುವುದಕ್ಕೆ [illegible]ವಾಗಿದ್ದರು. ಆದರೆ ಈ ಸಂದರ್ಭವನ್ನು ಮಹಮದೀಯರು [illegible], ತಮ್ಮ ಜನನನ್ನು ಸ್ವೇಚ್ಛೆಯಾಗಿ ಬಿಡುವುದು [illegible]ವೆಂದು ಭಾವಿಸಿ, ಈ ವೇಳೆ ಅವರನ್ನೆಲ್ಲಾ ತಮ್ಮ ದೇವಸ್ಥಾನದ [illegible] ಕರೆಸಿಕೊಂಡು, ಚನ್ನಾಗಿ ವಿವೇಕಹೇಳಿ, ಯಾರು [illegible] ವಿರೋಧವಾದ ಯಾವ ಕೃತ್ಯವನ್ನೂ ದುಡುಕಿ ಮಾಡಕೂಡದೆಂದು [illegible] ಎಚ್ಚರಿಸಿದರು. ಹೀಗೆ ಅವರನ್ನೆಲ್ಲಾ ಶಾಂತಿಯಿಂದ [illegible]ದ್ದಕ್ಕಾಗಿ ಆ ಮಹಮದೀಯ ಮುಖಂಡರನ್ನು ವಂದಿಸ[illegible] ತ್ತದೆ.

ಮಹಮದೀಯರಲ್ಲಿ ಅನೇಕಾನೇಕರ ಜ[illegible] ಮಾರ್ಗವಿಲ್ಲದೆ ಬಹಳ ಕಷ್ಟಪಡುತ್ತಿದ್ದಾರೆಂಬುವುದು [illegible] ಇದೆ. ಅವರಲ್ಲಿ ವಿದ್ಯೆ ಕಲಿತವರು ಬಹಳ ಕಡಿಮೆ [illegible] ಸರ್ಕಾರಿ ನೌಕರಿಗೆ ಹತ್ತಿರತಕ್ಕವರು ಸಿಕ್ಕುವುದು ಅಪರೂಪ. ಖಾದಾದಿಗಳಲ್ಲಿ ಅವರನ್ನು ಇತರರು ಬಂದು ಓಡಿಸುತ್ತಿದ್ದಾರೆ. [illegible], ವಾಂತಿಭೇದಿ ಮೊದಲಾದ ರೋಗಗಳು ಅನೇಕಾನೇಕರನ್ನು [illegible] ಬಿಟ್ಟವೆ. ಈ ಮೊದಲಾದ ಅನೇಕ ಕಾರಣಗಳಿಂದ [illegible] ದಿಕ್ಕಿಲ್ಲದ ಹೊಟ್ಟೆಗಿಲ್ಲದ ಹೆಂಗಸರು ಮಕ್ಕಳು ಅನಾಥರು [illegible] ತನದ ಕಷ್ಟನಿಷ್ಠುರಗಳನ್ನು ಅನೇಕಾನೇಕರು [illegible] ಎಲ್ಲಾ ವಿಧ ಜೀವನಕ್ಕೆ ಮಾರ್ಗ[illegible] ಎಂದು [illegible]ಸುತ್ತಿದ್ದಾರೆ. ಈ ಹೆಂಗಸರಿಗೆ [illegible] ತತ್ವಗಳು ಗೊತ್ತೇ ಇಲ್ಲ. ಮಹಮದೀಯರು ತಮ್ಮ [illegible]ಗಳನ್ನು ತಮ್ಮ ಸ್ತ್ರೀಯರಿಗೂ ಹೆಣ್ಣು ಮಕ್ಕಳಿಗೂ ಕಲಿ[illegible]ವುದಕ್ಕೆ ಯಾವ ಏರ್ಪಾಡನ್ನೂ ಮಾಡಿಲ್ಲ. ಹೀಗಿರುವಲ್ಲಿ [illegible]ಯರು ಜೀವನವನ್ನು ಹುಡುಕಿಕೊಂಡು ಪರಮತವನ್ನು [illegible]ಕೊಳ್ಳುವುದೇನು ಆಶ್ಚರ್ಯವೇ. ಆದರೂ ಮಹಮದೀಯರು ಈ ದಿನ ಸಭೆ ಸೇರುವುದು ಅನ್ಯಮತವನ್ನು ದೂಷಿಸುವುದಕ್ಕಾಗಲಿ ಮಿಷನರಿಗಳ ಮೇಲೆ ತಮ್ಮ ದುಂಭಿಪ್ರಾಯವನ್ನು ಪ್ರಕಾಶಪಡಿಸುವುದಕ್ಕಾಗಲಿ ಎಷ್ಟುಮಾತ್ರಕ್ಕೂ ಅಲ್ಲ. ಸ್ವಮತ, ಸ್ವಜನಗಳನ್ನು [illegible] ಮಾಡಿಕೊಳ್ಳತಕ್ಕ ಭಾಗದಲ್ಲಿ ಏರ್ಪಾಡು ಮಾಡಬೇಕೆಂಬುವುದೇ ಈ ಸಭೆಯ ಉದ್ದೇಶವಾಗಿದೆ. [illegible] ತಮ್ಮ ಹೆಣ್ಣು ಮಕ್ಕಳಿಗೆ ವಿದ್ಯೆ ಕಲಿಸಿ ತಮ್ಮ ಮತವನ್ನು ಚನ್ನಾಗಿ ಹೇಳಿಕೊಡಬೇಕು. ಅನಾಥರುಗಳು ದಿಕ್ಕಿಲ್ಲದವರಿಗೂ ಒಂದು ಮನೆಯನ್ನು ಮಾಡಿ ಅವರನ್ನು [illegible] ಮಾಡಬೇಕು. ಅವರಿಂದ ಅಲ್ಪಸ್ವಲ್ಪ ಕಸಬುಗಳನ್ನೂ ಮಾಡಿಸಬೇಕು. ಇಷ್ಟು ಮಾತ್ರ ಮಾಡಿದ ಪಕ್ಷದಲ್ಲಿ ತಮ್ಮ ಜನರು [illegible] ಪರಮತಗಳಿಗೆ ಹೋಗಲು ಎಷ್ಟುಮಾತ್ರಕ್ಕೂ ಮಾರ್ಗವಿರುವುದಿಲ್ಲವೆಂದು ಮಹಮದೀಯರು ಖಂಡಿತವಾಗಿ ತಿಳಿದುಕೊಳ್ಳಬಹುದು. ಇವೆರಡು ಕಾರ್ಯಗಳನ್ನು ಮಹಮದೀಯರೆಲ್ಲಾ ಒಗ್ಗಟ್ಟಾಗಿ ಜಾಗರೂಕತೆಯಿಂದ ಪ್ರಾರಂಭ ಮಾಡಿ ಉತ್ಸಾಹದೊಡನೆ ನಡಸುತ್ತಾ ಬರಬೇಕಾಗಿದೆ.

ತರುವಾಯ ಕೆಲವು ಮೌಲ್ವಿಗಳೂ ಮಹಮದೀಯ ದೊಡ್ಡಮನುಷ್ಯರೂ ಹಿಂದುಸ್ಥಾನಿಯಲ್ಲಿ ಮೇಲ್ಕಂಡ ವಿಷಯಗಳನ್ನು ಕುರಿತು ಕೆಲವು ದೃಷ್ಟಾಂತಗಳ ಸಹಿತ ಉಪನ್ಯಾಸಮಾಡಿ, ಖುರಾನ್ ಶರೀಫ್ ಗ್ರಂಥಗಳಿಂದ ವಾಕ್ಯಗಳನ್ನು ಓದಿ ವಿವರಿಸಿ ಮಹಮದೀಯರೆಲ್ಲಾ ಒಂದಾಗಿ ಈ ಕೆಲಸಕ್ಕೆ ಸಹಾಯ ಮಾಡಬೇಕೆಂತಲೂ, ಮಿಷನರಿಗಳವರು ಈಗ ಮಾಡಿದ ಕೆಲಸವು ಮಹಮದೀಯರನ್ನು ನಿದ್ರೆಯಿಂದ ಎಚ್ಚರಿಸಿರುತ್ತಾದ ಕಾರಣ ಅದಕ್ಕಾಗಿ ಅವರನ್ನು ವಂದಿಸಬೇಕೆಂತಲೂ ಹೇಳಿದರು.

ಅಡ್ವೊಕೇಟ್ ಮೆ॥ ಎಂ ಸಿ ರಂಗೈಯ್ಯಂಗಾರ್ಯರು ಸಭಿಕರನ್ನು ಕುರಿತು ತಿಳಿಸಿದ ಅಭಿಪ್ರಾಯವೇನೆಂದರೆ—ಹಿಂದುಗಳೂ ಮಹಮದೀಯರೂ ಬಹುಕಾಲದಿಂದಲೂ ಅನ್ಯೋನ್ಯವಾಗಿರುತ್ತಾರೆ. ಸಕಲರಿಗೂ ತಮ್ಮ ದೇಹಗಳನ್ನು ಚನ್ನಾಗಿ ಕಾಪಾಡಿಕೊಳ್ಳುವುದಕ್ಕೂ, [illegible] ಸಂಪಾದಿಸುವುದಕ್ಕೂ, ಸರ್ವೋತ್ತಮವಾದ ಭಕ್ತಿಮಾರ್ಗಗಳನ್ನು ತಿಳಿದು ಅಭ್ಯಾಸಮಾಡುವುದಕ್ಕೂ ವಿದ್ಯೆಯು ಅವಶ್ಯವಾಗಿರುತ್ತದೆ. ರೋಗಾದಿಗಳು ಪ್ರಾಪ್ತವಾಗುತ್ತಿರೋಣದರಿಂದ ಬುದ್ಧಿಯನ್ನು ಉಪಯೋಗಿಸಿ ನಾವು ಎಚ್ಚರಿಕೆಯ ಕೆಲಸಗಳನ್ನು ಮಾಡಬೇಕು. ಜೀವನವು ಕಷ್ಟವಾಗಿರೋಣದರಿಂದ ನಾವುಗಳು ವಿದ್ಯೆಯನ್ನು ಚನ್ನಾಗಿ ಕಲಿತು ಸಂಪಾದನೆಮಾಡಬೇಕು. ನಾವು ಭಕ್ತಿಮಾರ್ಗವನ್ನು ಹಿಡಿದು ಅವಲಂಬಿಸುವುದಕ್ಕೆ ನಮ್ಮ ಹಿರಿಯರು ಬರೆದಿಟ್ಟಿರುವ ಮತತತ್ವಗಳನ್ನು ತಿಳಿದುಕೊಳ್ಳಲು ನಮಗೆ ವಿದ್ಯೆಯು ಅವಶ್ಯವಾಗಿರುತ್ತದೆ. ಹಿಂದುಗಳಲ್ಲಿ ಆಗಲೇ ಸ್ತ್ರೀವಿದ್ಯಾಭ್ಯಾಸದ ಆವಶ್ಯಕತೆಯು ಸ್ಥಿರಪಟ್ಟು ಅನೇಕ ಬಾಲಿಕಾ ಪಾಠಶಾಲೆಗಳು ಏರ್ಪಾಡಾಗಿರುತ್ತವೆ. ಮಹಮದೀಯರಲ್ಲಿ ಘೋಷಾ ಪದ್ಧತಿ ಇರೋಣದರಿಂದ ಇದು ಸ್ವಲ್ಪ ಕಷ್ಟಕರವಾಗಿದೆ. ಆದರೂ ಸ್ತ್ರೀವಿದ್ಯಾಭ್ಯಾಸವು ಅವಶ್ಯವೆಂದೂ ಅದನ್ನು ರೂಢಿಗೆ ತರಬೇಕೆಂದೂ ಈ ದಿನ ಮಹಮದೀಯರು ಸಭೆಸೇರಿರುವುದೇ ಅವರ ಜಾಗರೂಕತೆಗೆ ದೃಷ್ಟಾಂತವಾಗಿದೆ. ಅವರು ತಮ್ಮ ಮಧ್ಯೆ ಇರುವ ಅಲ್ಪತರವಾದ ದುರಭಿಮಾನಗಳನ್ನೂ ಮನಸ್ತಾಪಗಳನ್ನೂ ಬಿಟ್ಟು, ಈ ಸರ್ವೋತ್ಕೃಷ್ಟವಾದ ಉದ್ದೇಶವನ್ನು ನೆರವೇರಿಸುವುದಕ್ಕೆ ಒಗ್ಗಟ್ಟಾಗಬೇಕು. ಇಂಗ್ಲೀಷ್ ಜನರಲ್ಲಿರುವ ಸದ್ಗುಣಗಳನ್ನು ನೋಡಿ ನಾವು ಕಲಿಯೋಣ. ಅವರಲ್ಲಿರುವ [illegible]ಗಳ ದೃಷ್ಟಿ ನಮಗೆ ನಮ್ಮ ದೇಶಕ್ಕೂ ಅನುಕೂಲವಾಗಿರುವಂಥವುಗಳನ್ನು ಮಾತ್ರ ಆಚರಿಸಿಯಲ್ಪಟ್ಟಕ್ಕೆ [illegible]. ಅವರಲ್ಲಿ ಒಗ್ಗಟ್ಟು, ಕಾರ್ಯಸಾಧನೆಯೂ ಜಿತಮಾನಸವೂ ಅತ್ಯಂತ ಸ್ತೋತ್ರಾರ್ಹವಾದ ಗುಣಗಳಾಗಿರುತ್ತವೆ. ಅವನ್ನು ನಾವೆಲ್ಲಾ ಅಗತ್ಯವಾಗಿ ಅಭ್ಯಾಸ ಮಾಡುತ್ತಾ ಬಂದಲ್ಲಿ ನಾವೂ ನಮ್ಮ ದೇಶವೂ ಅಭಿವೃದ್ಧಿಗೆ ಬಂದೇವು.

ತರುವಾಯ ರೆವ್ ಮೆ॥ ಥಾಂಸನ್ ಸಾಹೇಬರು ಸಭಿಕರನ್ನು ಕುರಿತು ಇಂಗ್ಲೀಷಿನಲ್ಲಿ ಕೆಲವು ಮಾತುಗಳನ್ನು ಹೇಳಿದರು. ಅವರು ತಿಳಿಸಿದ ಮುಖ್ಯಾಭಿಪ್ರಾಯವೇನೆಂದರೆ—ಈ ದಿನ ಮಹಮದೀಯರು ಸಭೆ ಸೇರಿ ಮಾಡಬೇಕೆಂದು ಉದ್ದೇಶಪಟ್ಟಿರುವ ಕಾರ್ಯಗಳು ಬಹಳ ಶ್ರೇಷ್ಠವೂ ತುಂಬಾ ಅವಶ್ಯವೂ ಆಗಿರುತ್ತವೆ. ನಾನು ಕ್ರೈಸ್ತನಾಗಿದ್ದರೂ ಈ ಭಾಗದಲ್ಲಿ ಬಹಳ ಸಂತೋಷಪಡುತ್ತೇನೆ. ಪ್ರಾಯಶಃ ಮತದಲ್ಲೂ ಇಂಥಾ ಏರ್ಪಾಡು ಇರ[illegible]. ಗಂಡಸು ಮಾತ್ರ ವಿದ್ಯೆ ಕಲಿಯಬೇಕೆಂತಲೂ [illegible] ವಿಷಯಗಳನ್ನು ತಿಳಿದಿರಬೇಕೆಂತಲೂ ಹೆಣ್ಣುಮಕ್ಕಳನ್ನು ಹೆಂಗಸರನ್ನು ಮೌಢ್ಯದಲ್ಲಿ ಬಿಡಬೇಕೆಂತಲೂ ಹೇಳುವುದು [illegible]. ಯಾವ ಜನರಲ್ಲಾಗಲಿ ಹೆಣ್ಣುಮಕ್ಕಳೂ ಹೆಂಗಸರೂ ಭಕ್ತಿ ಮತವಿಚಾರಗಳನ್ನು ಅರಿಯದೆ ಇದ್ದಲ್ಲಿ ಆ ಜನರು ದಿನೇ ದಿನೇ ಅಭಿವೃದ್ಧಿಗೆ ಬರುವುದಕ್ಕೆ ಬದಲಾಗಿ ಕ್ಷೀಣಗತಿಗೆ ಬಂದಾರು. ಇದು [illegible] ವಾದ ವಿಷಯ. ಈ ಅರ್ಥವನ್ನು ಮಹಮದೀಯರು ಈಗ ತಿಳಿದು ಅದರ ಪರಿಹಾರಕ್ಕಾಗಿ ಏರ್ಪಾಡುಗಳನ್ನು ಮಾಡಬೇಕೆಂದು ಉದ್ದೇಶಪಟ್ಟಿರುವುದನ್ನು ನೋಡಿ ನಾನು ತುಂಬಾ ಸಂತೋಷಪಡುತ್ತೇನೆ. ಅವರ ಈ ದಿನದ ಉದ್ದೇಶವೂ ಕಾರ್ಯಸಾಧನಾಪೇಕ್ಷೆಯೂ ಸಾರ್ಥಕವಾಗಿ, ಫಲದಾಯಕವಾಗಲೆಂದು ಹಾರೈಸುವೆನು.

ಅನಂತರ ಮೆ॥ ಎ ವೆಂಕಟಕೃಷ್ಣಯ್ಯನವರೂ ಕೆಲವು ಮೌಲ್ವಿಗಳೂ ಕನ್ನಡ ಹಿಂದುಸ್ಥಾನಿ ಭಾಷೆಗಳಲ್ಲಿ ಉಪನ್ಯಾಸಮಾಡಿ ಮೇಲ್ಕಂಡ ವಿಷಯಗಳನ್ನೇ ಒತ್ತಿ ಹೇಳಿದರು.

ಈ ಸಭೆಯಲ್ಲಿ ಆ ದಿನ ನಿರ್ಧಾರವಾದ ವಿಷಯಗಳೇನೆಂದರೆ — (೧) ಮಹಮದೀಯರು ತಮ್ಮ ಹೆಣ್ಣು ಮಕ್ಕಳಿಗೆ ಭಕ್ತಿಮಾರ್ಗಗಳನ್ನು ತಮ್ಮ ಮತರೀತಿಯಾಗಿ ಕಲಿಸುವುದಕ್ಕೆ ಅಗತ್ಯವಾಗಿ ಏರ್ಪಾಡು ಮಾಡಬೇಕು, (೨) ಮಹಮದೀಯರಲ್ಲಿ ದಿಕ್ಕಿಲ್ಲದ ಮತ್ತು ಅನಾಥರಾದ ಹಾಪರದೇಶಿಗಳನ್ನು ಒಂದು ಸ್ಥಳದಲ್ಲಿಟ್ಟು, ಕೆಲವು ಕೈಗಾರಿಕೆಗಳನ್ನು ಅವರಿಂದ ಮಾಡಿಸುತ್ತಾ ಅವರನ್ನು ಪೋಷಣೆ ಮಾಡಬೇಕು. ಈ ಎರಡು ಕಾರ್ಯಗಳನ್ನು ಸರಿಯಾಗಿ ನಡಸುವುದಕ್ಕೂ, ಅವಶ್ಯವಾದ ಚಂದಾಹಣವನ್ನು ಕೂಡಿಸುವುದಕ್ಕೂ ಒಂದು ಕಮಿಟಿಯೂ ಒಂದು ಫಂಡೂ ಏರ್ಪಾಡಾಗಿರುತ್ತವೆ.

ಆ ದಿನದ ಸಭೆಯಲ್ಲಿ ಮೆ॥ ಅಬ್ದುಲ್ ರಹಮಾನ್ ಖಾನ್ ಎಂಬೊಬ್ಬ ಮುತ್ತಸಲ್ಲಿ ಯವರು ಮೇಲ್ಕಂಡ ನಿಲಯಕ್ಕಾಗಿ ತಮ್ಮ ಸ್ವಂತ ಮನೆಯನ್ನು ಧರ್ಮಾರ್ಥವಾಗಿ ಬಿಟ್ಟು ಕೊಡುವಂತೆಯೂ [illegible] ಮಂದಿ ಸಾಹುಕಾರರು ತಲಾ ನೂರು ರೂಪಾಯಿಗಳಂತೆ ಚಂದಾ ಕೊಡುವುದಾಗಿಯೂ [illegible]. ಆ ರಾತ್ರಿ ಸಭೆಯು ಮುಕ್ತಾಯವಾಗುವುದರೊಳಗೆ ಸಭಿಕರಾದ ಮಹಮದೀಯರು ಮೇಲ್ಕಂಡ ಫಂಡಿಗೆ ೨,೦೦೦ ಚಿಲ್ಲರೆ ರೂಪಾಯಿ ತನಕ ಚಂದಾ ಕೊಡುವಂತೆ ವಾಗ್ದಾನಮಾಡಿರುತ್ತಾರೆ.

ತಾಲ್ಲೋಕು ವರ್ತಮಾನಗಳು

ಕೊಳ್ಳೇಗಾಲ.—ಶ್ರೀಮತ್ಕನ್ಯಕಾಪರಮೇಶ್ವರೀ ದೇವಸ್ಥಾನದಲ್ಲಿ ಶ್ರೀಮದ್ವೈಶ್ಯಮಂಡಲಿಯವರು ಶ್ರೀಮದ್ಗರ್ಭನವಮಿ ರಾಮೋತ್ಸವವನ್ನು ಏಪ್ರಿಲ್ ತಾ ೧೩ ರಿಂದ ೨೯ ನೇ ತಾ ವರಿವಿಗೂ ದಿನವಹಿ ಹಗಲು ವೇ. ಬ್ರಾಹ್ಮಣರಿಂದ ಶ್ರೀಮದ್ರಾಮಾಯಣ ಪಾರಾಯಣವು ರಾತ್ರಿಯಲ್ಲಿ ವೇದಘೋಷಗಳಿಂದಲೂ ಸಂಗೀತಗಳಿಂದಲೂ ಮತ್ತು ಹರಿಕಥೆಗಳಿಂದಲೂ ಅತ್ಯಂತ ಭಕ್ತಿ ಶ್ರದ್ಧೆಗಳಿಂದ ಆಚರಿಸಿ, ಸಂತರ್ಪಣೆಗಳು ವಸಂತೋತ್ಸವದ ರಾತ್ರಿಯಲ್ಲಿ ನೃತ್ಯ ಗೀತ ವಾದ್ಯಂಗಳು ಮತ್ತು ವಿನೋದವಾದ ಬಾಣ ಬಿರುಸುಗಳಿಂದೊಡಗೂಡಿದ ಪುಷ್ಪ ಪಾಲಕೀ ಉತ್ಸವವೂ ತುಂಬಾ ವಿಜೃಂಭಣೆಯಿಂದ ನಡೆಯಿಸಿದರು. ಅಲಂಕರಿಸಿದ ಎಲೆಕ್ಟ್ರಿಕ್ ದೀಪಗಳು ಗುಳ್ಳೋಪುಗಳು ತಸ್ವೀರುಗಳ ಅಲಂಕಾರದಿಂದ ಮನೋಹರವಾಗಿ ರಥೋತ್ಸವವು [illegible] ನೋಡುವುದಕ್ಕೆ ಮಹಾ ನೇತ್ರಾನಂದಕರವಾಗಿತ್ತು. ವೈಶ್ಯ [illegible] ಡೆಪ್ಯುಟೀ ಕಲೆಕ್ಟರೇ ಮೊದಲಾದವರೆಲ್ಲ ಬಂದು ತುಂಬ ಸಂತೋಷಪಟ್ಟರು.

ಚಿಕ್ಕಮಗಳೂರು.—ಈಗ್ಗೆ ಎರಡು ವಾರದಿಂದಲೂ ಮಳೆ ಸ್ವಲ್ಪ ಬಿದ್ದಿಲ್ಲ. ಬಿಸಲು ಬಲವಾಗಿದೆ. ಮುಂದೆ ಮಳೆಯು ಬಿದ್ದರೆ ಆದರೆ ಬಿಸಲಿನ ಧಗೆಯು ತಪ್ಪುವುದು.—ಇಲ್ಲಿನ ಬೇಪಿನ [illegible] ದಿಯಲ್ಲಿ ಒಬ್ಬನಿಗೆ ಪ್ಲೇಗ್ ಕಾಣಿಸಿಕೊಂಡು ಕಳೆದ [illegible] ಸ್ಲೇಗ್ ತೀರಿಹೋದನಂತೆ. ಇಲ್ಲಿ ಫಾರೆಸ್ಟ್ ಅ ಕನ್ಸರ್‌ವೇಟರ್ ಹೀರಾಸಿಂಗ್‌ರವರ ಮನೆಯಲ್ಲಿಯೂ ಡಿಸ್ಟ್ರಿಕ್ಟ್ ಕಚೇರಿ ಸ್ಟೋರಿನಲ್ಲಿಯೂ ಇಲಿಗಳು ಸತ್ತವೆಂದು ವರ್ತಮಾನ ಕೇಳಿದೆ. ಇಲ್ಲಿನ ತಾಲ್ಲೋಕ್ ಕಚೇರಿಯಲ್ಲಿ ಅಮಲ್ದಾರರೂ ವೈಸ್ ಪ್ರೆಸಿಡೆಂಟರೂ ಮ್ಯುನಿಸಿಪಲ್ ಮೆಂಬರುಗಳೂ ಸೇರಿ ಈ ಊರಿಗೆ ಪಿರಿಗಿ ಪ್ಲೇಗ್ ಏನಾದರೂ ಬರುವ ಪಕ್ಷದಲ್ಲಿ ಜನರು ತಕ್ಷಣವೇ ಊರನ್ನು ಬಿಟ್ಟು ಹಟ್ಟಿಗಳಿಗೆ ಹೋಗಿ ಸೇರಿಕೊಳ್ಳಲು ಅನುಕೂಲಿಸುವಂತೆ ಮುಂಜಾಗ್ರತೆಯುಳ್ಳವರಾಗಿರಬೇಕೆಂತಲೂ ಷೆಡ್ಡು ಕಟ್ಟಿಕೊಳ್ಳಲು ಅನಾನುಕೂಲವಾದ ಬಡವರಿಗೆ ಮುನಿಸಿಪಾಲಿಟಿಯವರು ಸಹಾಯ ಮಾಡುವರೆಂತಲೂ ಮೀಟಿಂಗಿನಲ್ಲಿ ತೀರ್ಮಾನ ಮಾಡಿದರೆಂದು ಕೇಳಿದ್ದೇನೆ. ಸಂತೆಪೇಟೆಯಲ್ಲಿರುವ ಕಾಫಿ ಪ್ಲಾಂಟರ್ ಮೆ॥ ಡಿ ರಾಮೇಗೌಡರು ತಮ್ಮ ತೋಟದಲ್ಲಿಯೇ ೩ ನೆ ತಾ ಸುಮಾರು ಎಂಟುವರೆ ಅಡಿ ಉದ್ದವುಳ್ಳ ಒಂದು ಹೆಣ್ಣು ಹುಲಿಯನ್ನು ಕೊಂದದರಿಂದ ಸರ್ಕಾರದ ರಿವಾರ್ಡ್ ದೊರೆಯುವುದು. ತರೀಕೆರೆ ತಾಲ್ಲೋಕು ಕಲ್ಲತ್ತಿಗಿರಿ ಪ್ರಾಂತದಲ್ಲಿರುವ ಕಾಫಿ ತೋಟಗಳ ಕಡೆ ಎರಡು ವಾರದಿಂದಲೂ ಸೀರ್‌ಟಾ ಮಾಡಕೊಂಡು ೯ ನೆ ತಾ ಬೆಟ್‌ಕ್ವಾರ್ಟರಿಗೆ ವಾಪಸ್ ಬರುವವರಾಗಿದ್ದಾರೆ.

ನೆಲಮಂಗಲ.—ಈ ತಾಲ್ಲೋಕ್ ಅಮಲ್ದಾರ್ ಮೆ॥ ಸುಬ್ಬರಾಯಲುನಾಯ್ಡು [illegible] ಧರ್ಮಪತ್ನಿಯವರು ಎರಡನೇ ದ್ವಾದಶಾರ್ಥಕ್ಕಾಗಿ ಆಶೆಯಿಂದ ಕನಸಿನಲ್ಲಿ ಆಜ್ಞಾಪ್ತರಾಗಿರುವಂತೆ ಅವಳ್ಳಿ[illegible] ವೃಷಭಪುರೀಕ್ಷೇತ್ರ ಬಸವಾ[illegible] ಕಾಯಕ್ಕೆ ಆಗಮಿಸಿ ಸ್ವಂತ ಲಾಗೋಪನಿಂದ ಸೋಮೇಶ್ವರ [illegible]ವನ್ನೂ, ಕಳಸವಿಮಾನದ ಬೃಂದಾವನವನ್ನೂ, ದೇವಸ್ಥಾನದ ಸುತ್ತಲೂ ಶೃಂಗಾರವಾದ ತೋಟವನ್ನೂ, ಸರ್ವೋತ್ಕೃಷ್ಟವಾದ ಎರಡು ಸೀಯರನ ಭಾವಿಗಳನ್ನೂ ಮಾಡಿಸಿರುತ್ತಾರೆ. ಇದು ಮಂಗಳ ಸ್ಥಾನದಲ್ಲಿ ಬಾಹು ಬರ್ಹಾಗಿರುತ್ತದೆ. ಈ ದೇವಸ್ಥಾನದಲ್ಲಿ ಪೂಜೆಗೋಸ್ಕರ ಒಬ್ಬ ಬ್ರಾಹ್ಮಣನನ್ನು ನೇಮಿಸಿ, ಆತನಿಗೆ ಮಾಸಮಾಡುವುದಲ್ಲದೆ— ಈ ದೇವಸ್ಥಾನಕ್ಕೆ ಶ್ರೀ ಶೃಂಗೇರಿ ಜಾಗದ್ಗುರುಗಳು ಕಳೆದ ಬುಧವಾರ ರಾತ್ರಿ ೯ ಘಂಟೆಗೆ ದಯಮಾಡಿ, ಮೆ॥ ಸುಬ್ಬರಾಯಲುನಾಯ್ಡು ಅವರಿಂದ ಪಾದಪೂಜೆಯನ್ನು ಸ್ವೀಕರಿಸಿ, ಅವರನ್ನು ಆಶೀರ್ವದಿಸಿದ ನಂತರ, ಶ್ರೀಮದ್ರಾಮಸಿಂಹ ಪಾಲಕಿಯಲ್ಲಿ ಕುಳಿತು ಗ್ರಾಮದ ಮೆರವಣಿಗೆ, [illegible] ಮನೆ ಮೇಲೆ [illegible] ಇಳಿದುಕೊಳ್ಳುವುದಕ್ಕೆ ಬಿಡಾರಮಾಡಿದ್ದ ಅಮಲ್ದಾರರ ಸ್ವಗೃಹಕ್ಕೆ ಬಂದರು ಅಲ್ಲಿ, ಸ್ಥಳದ ಸಭೆಯವರು ಸ್ವಾಮಿಗಳಿಗೆ ಪಾದಪೂಜೆ ಮಾಡಿದರು. ಮಾರನೇ ದಿವಸ ಆರ್ಯರಿಗೆಲ್ಲಾ ಪುರದಲ್ಲಿ ತೀರ್ಥಪ್ರಸಾದವಾಯಿತು. ಭಕ್ತಾದಿಗಳು ನೂರಾರು ರೂಪಾಯಿ ಕಾಣಿಕೆ ಅರ್ಪಿಸಿದರು. ನಮ್ಮ ಪಲಮಂತ್ರಾಕ್ಷತೆಗಳನ್ನು ಸ್ವಾಮಿಗಳವರಿಂದ ಹೊಂದಿದ ನಂತರ ವೇ॥ ಸುಬ್ಬಶಾಸ್ತ್ರಿಗಳೂ, ವೇ॥ ಗುಂಡಮೂರ್ತಿ ಪಂಡಿತರೂ, ವೇ॥ ಛಂದೂಭಟ್ಟರೂ ಸ್ವಾಮಿಗಳನ್ನು ತಮ್ಮ ಸ್ವಂತ ಮನೆಗಳಿಗೆ ಕರೆದುಕೊಂಡುಹೋಗಿ ಪಾದಪೂಜೆಮಾಡಿದರು. ತರುವಾಯ ಸ್ವಾಮಿಗಳು ಪರಿವಾರ ಸಹಿತ ಬೆಂಗಳೂರಿಗೆ ದಯಮಾಡಿಸಿದರು.

ಚಿತ್ರದುರ್ಗ.—ಬಿಸಲಿನ ಝಳ ತಕ್ಕಮಟ್ಟಿಗೆ ಕಮ್ಮಿಯಾಗಿದೆ. ಊರನ್ನು ನಾರುಹುಣ್ಣಿನ ಉಪದ್ರದಿಂದ ಅನೇಕ ಸ್ತ್ರೀಪುರುಷರೂ ಹುಡುಗರೂ ಕಷ್ಟಪಡುತ್ತಿದ್ದಾರೆ. ಇದಕ್ಕೆ ತಕ್ಕ ಚಿಕಿತ್ಸೆಯನ್ನು ಪಾಠಕ ಮಹಾಶಯರಲ್ಲಿ ಯಾರಾದರೂ ಪ್ರಕಟಿಸಿದರೆ ಬಹು ಜನಗಳಿಗೆ ಉಪಕಾರ ಸಾಧ್ಯ.—ಆಚೆ ವಾರ ಮುರಿಗಿ ಸ್ವಾಮಿಗಳ ಮಠಕ್ಕೆ ಸೇರಿದ ಆನೆಯು ಮಾವಟಿಗನಿಂದ ತಪ್ಪಿಸಿಕೊಂಡು ಹೋಗಿ ಒಬ್ಬ ದಾರಿಹೋಕನನ್ನು ಹಿಡಿದುಕೊಂಡುಹಾಕಿತು. ಈಗ ಅವನ ವಾರಸುದಾರರು ಅವನನ್ನು ಹುಡುಕಿಕೊಂಡುಬಂದಿದ್ದಾರೆ.—ಹೈಸ್ಕೂಲ್ ಸೈನ್ಸ್ ಮಾಸ್ಟರಾಗಿದ್ದ ಮೆ॥ ವೆಂಕಟರಂಗಾಚಾರ್ಯರಿಗೆ ಶಿವಮೊಗ್ಗ ಹೈಸ್ಕೂಲಿಗೆ ವರ್ಗವಾಯಿತು. ಇವರು ಸದ್ಗುಣತೆಯಿಂದಲೂ ಶ್ರದ್ಧೆಯಿಂದಲೂ ಕೆಲಸವನ್ನು ಮಾಡುತ್ತಿದ್ದದ್ದರಿಂದ ವಿದ್ಯಾರ್ಥಿಗಳಿಂದ ಗೌರವಿಸಲ್ಪಟ್ಟಿದ್ದರು. ಇವರ ಬದಲಿಗೆ ಬಂದಿರುವವರು ಸಹ ಇವರ ಹಾಗೆಯೇ ವಿದ್ಯಾರ್ಥಿಗಳಿಂದಲೂ ಇತರರಿಂದಲೂ ಗೌರವವನ್ನು ಹೊಂದುವಂತೆ ನಡೆಯುವರೆಂಬ ನಿರೀಕ್ಷೆ ಇದೆ.— ಕೆಲವು ದಿನಗಳ ಹಿಂದೆ ಇಲ್ಲಿನ ಏಕನಾಥೇಶ್ವರ ಉತ್ಸವವು ನಡೆಯಿತು. ದೇವತೆಗೆ ಹರಕೆ ಸಲ್ಲಿಸುವದರಲ್ಲಿ ಒಂದು ವಿಚಿತ್ರವಾದ ಪದ್ಧತಿಯುಂಟು. ಹರಕೆ ಮಾಡಿರುವ ಸಣ್ಣ ಹುಡುಗರು ಮಕ್ಕಳ ಕಾಲುಗಳು ಸಹ ಸನಾಸ್ತ್ರ ಉಡಿಗೆ ತೊಡಿಗೆಗಳನ್ನು ಕಳೆದ ಮೈ[illegible] ಉದ್ದಕ್ಕೂ ಬೇವಿನ ಸೊಪ್ಪನ್ನು ಕಟ್ಟಿಕೊಂಡು ದೇವತೆಯ ಗುಡಿಗೆ ಮೆರವಣಿಗೆಹೋಗುವರು. ಇಂಥಾ ನವನಾಗರಿಕದ ಕಾಲದಲ್ಲೂ ಇಂಥ ಪದ್ಧತಿಗಳು ಕೆಲವು ಜಾತಿಗಳಲ್ಲಿ ನಡೆಯುತ್ತಿರುವುದು ವ್ಯಸನಕರವಾಗಿದೆ.—ಚಿತ್ರದುರ್ಗದಿಂದ ಚಳ್ಳಕೆರೆ ಪೋಸ್ಟ್ ಕಂಟ್ರಾಕ್ಟರ್ ಮಹಮದ್ ಯೂಸೂಫ್ ಸಾಬರು ಪ್ರಯಾಣಿಕರಿಗೆ ಸೌಲಭ್ಯ[illegible]ವಾಗುವ ಏರ್ಪಾಡುಮಾಡಿದ್ದಾರೆ. ಹೆಂಗಸರು ಮಕ್ಕಳು ಪ್ರಯಾಣ ಹೋಗುವ ಸಂದರ್ಭದಲ್ಲಿ ತಾವೇ ನಿಗಾದಿಂದ ಅವರನ್ನು ಕರೆದುಕೊಂಡು ಹೋಗಿ ತಲಪಿಸುತ್ತಾರೆ. ಗಂಟೆಗೆ ೧೨ ಮೈಲಿ ಹೋಗುವ ಒಳ್ಳೇ ಕುದುರೆ ಇಟ್ಟಿರುತ್ತಾರೆ. ಬಾಕಿ ಕುದುರೆಗಳು ಸಾಧಾರಣವಾಗಿ ಗಂಟೆಗೆ ೬ ಮೈಲಿ ಹೋಗುತ್ತವೆ.

ಹುಣಸೂರು.—ಈ ಊರಿಗೆ ಕಳೆದ ಮೂರು ತಿಂಗಳ ಹಿಂದೆ ಮೈಸೂರು ನಾಟಕದ ಸಂಘದವರು ಬಂದು, ಒಂದು ತಿಂಗಳ ವರೆಗೂ ಕೆಲವು ನಾಟಕಗಳನ್ನು ಆಡಿದರು. ಈ ಮಧ್ಯೆ ಯಾವ ಕಾರಣದಿಂದಲೋ ಕೆಲವರು ಕಂಪನಿಯನ್ನು ಬಿಟ್ಟದ್ದರಿಂದ ಕಂಪನಿಯು ಹೀನಸ್ಥಿತಿಗೆ ಬಂದಿತ್ತು. ಮತ್ತೆ ಕೆಲವರು ಸೇರಿ ಕಂಪನಿಯನ್ನು ಪುನಃ ಸ್ಥಾಪಿತಮಾಡಿ ಈಗ ಸುಮಾರು ೨೦ ದಿನಗಳಿಂದಲೂ ಈ ಟವರ್ನ ಮುಖ್ಯ ಹಾಕಿರುವ ಡೇರಾದಲ್ಲಿ ಆಡುತ್ತಾ ಇರುವದನ್ನು ಪುರಜನರು ನೋಡಿ ತುಂಬಾ ಸಂತೋಷಪಡುತ್ತಾ ಇರುತ್ತಾರೆ. ಈ ಕಂಪನಿಯವರು ಹೀಗೆ ಕೆಲವು ದೊಡ್ಡಮನುಷ್ಯರಿಂದ ಭಂಗಾರದ ಬಿಲ್ಲೆಗಳನ್ನು ಪಡೆದಿರುತ್ತಾರೆಂದು ಕೇಳುತ್ತೇನೆ — ಈ ಟವರ್‌ಗೆ ನೀರಿನ ಸರಬರಾಯಿಯಾಗುವ ಚಿಕ್ಕಹುಣಸೂರಿನ ಕೆರೆಯಲ್ಲಿ ಕಪ್ಪೆಗಳು ಸತ್ತು ನಾತಬಡಿಯುತ್ತಿತ್ತು. ಇವನ್ನೆಲ್ಲಾ ರಾಶಿ ರಾಶಿಯಾಗಿ ಹಾಕಿ, ಕೊನೆಯಲ್ಲಿ ಹೊರ ಬಿಸಾಟಬಿಟ್ಟರು. ಕಳೆದ ವರ್ಷವೂ ಇದೇ ತೊಂದರೆ ಇತ್ತು. ನಮ್ಮ ಅಮಲ್ದಾರರವರು ಈ ವಿಷಯ ತುಂಬಾ ನಿಗಾಕೊಟ್ಟು, ಕೆರೆಯನ್ನು ಒಳ್ಳೇ ಸ್ಥಿತಿಯಲ್ಲಿಡುವರೆಂದು ನಂಬುತ್ತೇನೆ — ಕಳೆದ ತಿಂಗಳು ೨೬ ನೇ ತಾ ಕಳ್ಳ ಸಿಟ್ಟಿದ ಗತ್ತರೆ ಒಡೆದು ದರೋಡೆ ನಡೆಯಿತೆಂದೂ, ಗುಮಾನಿಯ ಮೇಲೆ ೧೧ ಜನ ನಪ್ಪರನ್ನು ದಸ್ತಗಿರಿಮಾಡಿ ೪ ದಿನ ರಿಮ್ಯಾಂಡ್ ಪಡೆದರೆಂದು ತಿಳಿಸಿರುತ್ತೇನಷ್ಟೆ. ನಾಲ್ಕು ದಿನಾನಂತರ ಪುನಃ ಪೋಲೀಸಿನವರು ೫ ದಿನ ರಿಮ್ಯಾಂಡ್ ಪಡೆದುಕೊಂಡು ಆ ಜನರನ್ನು ತಮ್ಮ ಸ್ವಾಧೀನದಲ್ಲೇ ಇಟ್ಟುಕೊಂಡಿರುವರೆಂದು ಕೇಳುತ್ತೇನೆ ಹೀಗಿದ್ದರೂ ಇನ್ನೂ ಮಾಲ್ ಪತ್ತೆ ಆಗಿಲ್ಲ ಇವರ ಹಿಂದಿನ ಮೊಕ್ಕಳ ಗಲಾಟೆಯನ್ನು ನೋಡುವದಕ್ಕಾಗುವದಿಲ್ಲ — ಈ ಮುನಿಸಿಪಾಲಿಟಿಯ ತರಕಾರಿಪೇಟೆಗೂ ಒಳ್ಳೇ ಸ್ಥಿತಿಯಲ್ಲಿದೆ. ಟವರ್ ಚಾಕೀದಾರ ವಿಷಯದಲ್ಲಿ ಮಾರ್ಕೆಟಿನವರು ಬಹಳ ಶ್ರಮಪಡುತ್ತಾರೆ — ಈ ತಿಂಗಳು ೧೨ ನೇ ತಾ ಒಳ್ಳೇ ಮಳೆಯಾಯಿತು ಅನೇಕ ಕಡೆಗಳಲ್ಲಿ ಸಿಡಿಲು ಬಿದ್ದವು

ಫ್ರೇಜರ್‌ಪೇಟ್.—೧೦ ನೇ ತಾ ಈ ಕಡೆ ಸ್ವಲ್ಪ ಮಳೆ ಆಗಿ ಪೈರು ಪಚ್ಚೆಗಳಿಗೆ ಬಹಳ ಅನುಕೂಲವಾಯಿತು. ಊರು ಕೊಟೆಯಾಗಿ ದ್ದು ಅಲ್ಲಲ್ಲಿ ಮನೆಗಳಿಗೆ ಸ್ವಲ್ಪ ಭಾರಿ ದ್ವಾರಗಳುಂಟು. ಆಸ್ಪತ್ರೆ ಆಸಿಸ್ಟೆಂಟ್ ಡಾಕ್ಟರ ಚಿಕಿತ್ಸೆಯಾಗುತ್ತೆ ಈ ಊರಿನ ಕೆರೆಯಲ್ಲಿ ಜನ ನೀರು ಮೊಗೆಯುವ ಜಾಗದಲ್ಲಿ ಬಲ್ಲ ಸೆತ್ತೆ ಬಹಳವಾಗಿದೆ ಇದರಿಂದ ನೀರು ಕೆಟ್ಟು ಹೋಗುತ್ತೆ ಅದೇ ನೀರನ್ನು ಜನರು ಉಪಯೋಗ ಮಾಡುವದರಿಂದ ಕಾಯಿಲೆಗಳಿಗೆ ಆಸ್ಪದ ಉಂಟು. ಆದಕಾರಣ ನಮ್ಮ ಅಮಲ್ದಾರರು ಅಲ್ಲಿನ ಸೆತ್ತೆಯನ್ನೆಲ್ಲಾ ತೆಗೆಸಿಬಿಟ್ಟರೆ ನೀರು ಶುದ್ಧಿಯಾಗುತ್ತೆ. ಮತ್ತು ನೀರಿನ ಸಮೀಪದಲ್ಲೇ ಜನರ ಮಲ ಮೂತ್ರಗಳನ್ನು ಮಾಡಿ ಕೆರೆಗೆ ಹೋಗುತ್ತಾರೆ ಕೊಳಕು ಸ್ಥಳದ ಲ್ಲಿ ಸೇದುವ ನೀರನ್ನು ಕೆಡಿಸುತ್ತಾರೆ ಆದಕಾರಣ ಅಮಲ್ದಾರರು ಎರಡು ಬೋರ್ಡುಗಳನ್ನು ಹಾಕಿಸಿ ಅಲ್ಲಿ ನೀರನ್ನು ಕೆಡಿಸತಕ್ಕವರು ಶಿಕ್ಷೆಗೆ ಒಳಗಾಗುತ್ತಾರೆಂದು ಪ್ರಕಟಿಸಬೇಕಾಗಿದೆ ಕೆರೆಯ ಒಳ ಭಾಗದಲ್ಲಿ ಬೇಲಿ ಮರೆಯಾಗಿರುವದರಿಂದ ಹೇಸಿಗೆ ಮಾಡತಕ್ಕವರಿಗೆಲ್ಲ ಅನುಕೂಲ ಉಂಟು ಅದನ್ನು ತೆಗೆಸಬೇಕು ಮತ್ತು ಇಲ್ಲಿ ಸರಕಾರದ ಕಕ್ಕಸುಗಳಿಲ್ಲವಾದಕಾರಣ ಜನರು ಕೆರೆಗೆ ಹೋಗುತ್ತಾರೆ ಮುನಿಸಿಪಾಲಿಟಿಯವರು ಗ್ರಾಮಸ್ಥರಿಗಾಗಿ ಕಕ್ಕಸು ಕಟ್ಟಿಸಿಕೊಟ್ಟರೆ ಊರಿನ ಆರೋಗ್ಯಕ್ಕೂ ಜನರಿಗೂ ಪ್ರಯೋಜನ ಉಂಟು. ಇಲ್ಲಿ ವಾರ ಕ್ಕೊಂದಾವರ್ತಿ ೧ ಗಂಟೆಯಿಂದ ೬ ಗಂಟೆವರಿಗೆ ಒಂದು ಸಂತೆ ಕಟ್ಟುವದು ಉಂಟು ಈ ಸಂತೆಗೆ ಬಹಳ ದೂರದಿಂದ ಜನರು ವ್ಯಾಪಾರಕ್ಕಾಗಿ ಬರುತ್ತಾರೆ ಇವರು ಮಳೆ ಬಂದಾಗ ಮರೆ ಮಾಡಿಕೊಳ್ಳಲು ಸ್ಥಳವಿಲ್ಲ. ಆದಕಾರಣ ಸರಕಾರದವರು ಸಂತೆಮಾಳದಲ್ಲಿ ಕೆಲವು ಮಳಿಗೆಗಳನ್ನು ಕಟ್ಟಿಸಿ ಅವುಗಳನ್ನು ವರ್ತಕರಿಗೆ ಕೊಟ್ಟು ಮಾರ್ಕೆಟ್ಟಂತೆ ಅವರಿಂದ ಬಾಡಿಗೆ ವಸೂಲ್ ಮಾಡಬಹುದು ಇದರಿಂದ ಸರಕಾರಕ್ಕೂ ಪ್ರಜೆಗಳಿಗೂ ಪ್ರಯೋಜನ ಉಂಟು — ಕೆಲವು ದಿನಗಳಿಂದ ಟವರ್‌ನಲ್ಲಿ ಪೋಲೀಸು ಬೀಟು ಚನ್ನಾಗಿ ನಡೆಯುತ್ತೆಂದು ಅವರ ಕೇಟ ಶಬ್ದದಿಂದ ತಿಳಿಯುತ್ತೆ ಇವರು ಮಾಡುವ ಶಬ್ದವು ಅಧಿಕಾರಿಗಳ ತಿಳಿವಳಿಕೆಗೇ ಇಲ್ಲವೆ ಕಳ್ಳರು ಓಡಿಹೋಗುವದಕ್ಕೋ ಗೊತ್ತಿಲ್ಲ ಇವರು ಇಷ್ಟು ಎಚ್ಚರಿಕೆಯಾಗಿರುವಾಗ ಪೋಲೀಸ್ ಸೂಪರಿಂಟೆಂಡೆಂಟರ ಮನೆಯಲ್ಲಿ ಎತ್ತು ಕಳುವಾಗಿ ಹೋಗಿ ೩-೪ ದಿನಗಳಿಂದಲೂ ಇನ್ನೂ ಪತ್ತೆಯಾಗದಿರುವದು ಆಶ್ಚರ್ಯವಾಗಿದೆ — ಇದುವರಿಗೂ ಈ ಸ್ಥಳದಲ್ಲಿ ಇಂಗ್ಲಿಷ್ ದೊಡ್ಡ ಮನುಷ್ಯರಿಗೆ ಮುಸಾಫರಿ ಬಂಗ್ಲೆ ಇಲ್ಲದೆ ಇದ್ದದ್ದು ಬಹಳ ಅನಾನುಕೂಲವಾಗಿತ್ತು ಆದರೆ ಈಗ ಸರಕಾರದವರು ೪ ಸಾವಿರ ರೂಪಾಯಿಗೆ ಒಂದು ಬಂಗ್ಲೆಯನ್ನು ಕಟ್ಟಿಸಬೇಕೆಂದು ಸ್ಯಾಂಕ್ಷನ್ ಮಾಡಿದ್ದಾರೆಂದು ವರ್ತಮಾನ ಉಂಟು — ಗಂಜಾಮದಲ್ಲಿ ಕಳ್ಳತನಗಳು ಆಗಾಗ್ಗೆ ನಡೆಯುತ್ತಲೇ ಇರುತ್ತವೆ. ಪೂರ್ವ ಈ ಗ್ರಾಮಕ್ಕೆ ನಾಲ್ಕು ಪೋಲೀಸ್ ಸ್ಟೇಷನ್ನುಗಳಿದ್ದವು ಆಗ ಕಳ್ಳತನಗಳಿಗೆ ಅವಕಾಶವಿರಲಿಲ್ಲ. ಈಚೆಗೆ ಒಂದೇ ಸ್ಟೇಷನ್ ನೇಮಕವಾಯಿತು ಪೋಲೀಸಿನವರು ಕೆಲವು ಜನರು ಮಾತ್ರ ಇರುತ್ತಾರೆ ಇವರಿಂದ ಗ್ರಾಮ ವೆಲ್ಲಾ ಗಸ್ತು ಮಾಡುವದು ಅಸಾಧ್ಯವಾಗಿರುತ್ತದೆ — ಈ ತಿಂಗಳು ೩ ನೆ ತಾ. ರಾತ್ರಿ ಕರೀಘಟ್ಟದ ರಂಗಸ್ವಾಮಿ ದೇವಸ್ಥಾನದ ಬಳಿ ಕಂದಪ್ಪಯ್ಯನ ಈಶ್ವರ ದೇವಸ್ಥಾನದಲ್ಲಿ ಕಳ್ಳರು ನುಗ್ಗಿ ಬೀಗಗಳನ್ನು ಮುರಿದು ದೇವರ ಸಾಮಾನುಗಳನ್ನು, ಅರ್ಚಕನ ಮನೆ ಹಿಂದಿನ ಬಾಗಿಲು ತೆರೆದು ಒಂದು ಹಂಡೆಯನ್ನೂ ಒಂದು ಕೊಳಗ ಪಾತ್ರೆಯನ್ನೂ ತೆಗೆದುಕೊಂಡು ಹೋದರು — ಏಪ್ರಿಲ್ ೩೦ ನೆ ತಾ. ಅಂಗಡಿ ಬೀದಿಯಲ್ಲಿ ತಿಮ್ಮಯ್ಯನ ಮಗ್ಗದಯ್ಯನ ಅಂಗಡಿ ಬಾಗಿಲುಗಳನ್ನು ಕೊಯಿದು ಒಳಗೆ ಹೋಗಿ ಕೆಲವು ಸಾಮಾನುಗಳನ್ನು ತೆಗೆದುಕೊಂಡು ಹೋದರು ಈ ವಿಷಯಕ್ಕೆ ಪೋಲೀಸಿನವರು ಗಮನ ಕೊಡಬೇಕೆಂದು ಜನರು ಕೇಳಿಕೊಳ್ಳುತ್ತಾರೆ — ಗ್ರಾಮಸ್ಥರಿಗೆ ನೀರಿನ ಕಷ್ಟ ಹೆಚ್ಚಾಗಿದೆ ಕೆಲವು ತಿಂಗಳ ಕೆಳಗೆ ಘನವೊಂದಿದ ದಿವಾನ್ ಸಾಹೇಬರು ಇಲ್ಲಿಗೆ ದಯಮಾಡಿಸಿದ್ದಾಗ್ಗೆ ಗ್ರಾಮಸ್ಥರೆಲ್ಲಾ ಅರಿಕೆ ಮಾಡಿಕೊಂಡದ್ದಕ್ಕೆ ಈ ವಿಷಯವನ್ನು ಯೋಚಿಸುತ್ತೇವೆಂದು ಅಪ್ಪಣೆ ಕೊಡಿಸಿದ್ದರು ಈ ಭಾಗದಲ್ಲಿ ದಯವುಳ್ಳ ಸರಕಾರದವರು ಗಮನ ಕೈ ತಂದುಕೊಂಡರೆ ಜನರಿಗೆ ಬಹಳ ಪ್ರಯೋಜನವಾಗುತ್ತೆ.

ಇಂಡಿಯಾ ದೇಶದ ವೃತ್ತಾಂತಗಳು.

ಜಯಪುರದ ಮಹಾರಾಜರವರು ವೈಸ್‌ರಾಯಿಯವರನ್ನು ಕಾಣುವ ಉದ್ದಿಷ್ಯ ಈ ವಾರ ಪರಿವಾರ ಸಮೇತ ಸಿಂಲಾ ಪಟ್ಟಣಕ್ಕೆ ಹೋಗುವವರಾಗಿದಾರೆ.

❦❦❦

ಆಫ್ಘಾನಿಸ್ಥಾನದ ಅಮೀರರವರು ಸರ್ದಾರ್ ಅಹಮದಲ್ಲಿ ಖಾನ್ ಎಂಬ ಅಧಿಕಾರಿಯ ಕೂಡ ವೈಸ್‌ರಾಯಿಯವರಿಗೆ ಒಪ್ಪಿಸುವುದಕ್ಕಾಗಿ ಕೆಲವು ಒಳ್ಳೇ ಜಾತಿಯ ಕುದುರೆಗಳನ್ನು ಕಳುಹಿಸಿದರು ಅವುಗಳೆಲ್ಲಾ ವೈಸ್‌ರಾಯಿಯವರ ಖಾಸಾ ಠಬೇಲೆಯ ಸೂಪರಿಂಟೆಂಡೆಂಟರವರ ವಶಕ್ಕೊಪ್ಪಿಸಿ, ಆ ಸರ್ದಾರರು ವಾಪಸು ಪ್ರಯಾಣ ಮಾಡಿದರು.

❦❦❦

ವೈಸ್‌ರಾಯಿ ಲಾರ್ಡ್ ಮಿಂಟೋ ಪ್ರಭುಗಳ ಪತ್ನಿಯವರೂ ಪುತ್ರಿಯರೂ ವಿಲಾಯತಿಗೆ ಪ್ರಯಾಣ ಮಾಡಿದ್ದಾರೆಂದು ತಿಳಿಸಿದ್ದೆವಷ್ಟೆ ಆಕೆಯವರು ಮಾತ್ರ ಮುಂದಿನ ತಿಂಗಳ ೫ಕ್ಕೆ ವಿಲಾಯತಿಯಲ್ಲಿ ಬಿಟ್ಟು ಪುನಃ ಹಿಂದುಸ್ಥಾನಕ್ಕೆ ಬರುವರು ಅವರ ಪುತ್ರಿಯರಿಬ್ಬರೂ ಡಿಸೆಂಬರ್ ತಿಂಗಳ ವರೆಗೆ ವಿಲಾಯತಿಯಲ್ಲೇ ಇದ್ದು ಬರುವರೆಂದಾಗಿ ತಿಳಿದು ಬಂದಿದೆ.

❦❦❦

ರಂಗೂನ್ ಪಟ್ಟಣದ ಬಳಿ ಕೆಮೆಂಡೈನ್ ಎಂಬ ಸ್ಥಳದಲ್ಲಿ ಒಂದು ಭಾರೀ ಸಾಹುಕಾರಿ ಉಗ್ರಾಣದ ಮನೆಗೆ ಕಳೆದ ವಾರ ಬೆಂಕಿ ಬಿದ್ದು ಸುಮಾರು ಎರಡು ಲಕ್ಷ ರೂಪಾಯಿನ ವ್ಯಾಪಾರ ದಿನಸುಗಳು ಸುಟ್ಟು ಹೋದವು ಆ ಉಗ್ರಾಣದಲ್ಲಿ ವಿಶೇಷವಾಗಿ ನೆಲಗಡಲೇಕಾಯಿ ಭರ್ತಿಯಾಗಿತ್ತು ಬೆಂಕಿಯು ಒಂದು ದಿನವೆಲ್ಲಾ ಉರಿದ ಮೇಲೆ ಮರು ದಿನ ಮಳೆ ಬಂದು ತಣ್ಣಗಾಯಿತು.

❦❦❦

ದಕ್ಷಿಣ ಮಹಾರಾಷ್ಟ್ರ ರೈಲ್ವೆಗೆ ಸೇರಿದ, ದಾಂಬಿವಲಿಯಿಂದ ೩೬ ಮೈಲಿ ದೂರದಲ್ಲಿರುವ ರಾಮದುರ್ಗವೆಂಬ ಸಣ್ಣ ಸಂಸ್ಥಾನದ ಅರಸರಾದ ಸುಮಾರು ೩೮ ವರುಷ ವಯಸ್ಸಿನ ವೆಂಕಟರಾವ್ ಯೋಗಿರಾವ್ ಬಿನ್ ಬಾಲಾಸಾಹೆಬ್‌ಯವರು ಕಾಲವಾದರೆಂದು ಪ್ರಕಟವಾಗಿದೆ ಇವರಿಗೆ ಪಟ್ಟವಾಗಿ ೩—೪ ವರುಷಗಳಾಗಿತ್ತು ಆ ಸಂಸ್ಥಾನವು ೧೬೯ ಚದರ ಮೈಲಿ ವಿಸ್ತಾರವಾಗಿ ೩೨,೯೯೭ ಪ್ರಜಾ ಸಂಖ್ಯೆಯನ್ನುಳ್ಳದ್ದಾಗಿದೆ ಎಂತಲೂ, ವರುಷಕ್ಕೆ ೧,೩೯,೦೦೦ ರೂಪಾಯಿ ರಾಜಾದಾಯವಿದೆ ಎಂತಲೂ ತಿಳಿಯುವುದು

❦❦❦

ಮದರಾಸ್ ಪಟ್ಟಣದಲ್ಲಿ ಸರ್ ಫ್ರೆಡರಿಕ್ ನಿಕಾಲ್ಸನ್ ಎಂಬ ಅಧಿಕಾರಿಯ ಕೈಕೆಳಗೆ ಕೆಲಸ ಮಾಡುವ ಮಿ॥ ಪಿ ವಿ ರಾಮನ್, ಎಂ ಎ ಎಂಬಾತನು ಸರ್ಕಾರಿ ಭತ್ಯಕ್ಕಾಗಿ ಸುಳ್ಳಾದ ಲೆಕ್ಕಗಳನ್ನು ಬರೆದು ಸರ್ಕಾರಕ್ಕೆ ಮೋಸಪಡಿಸಿದನೆಂದು ಅನುಮಾನ ಬಂದದ್ದರಿಂದ ಸರ್ಕಾರದವರು ಆತನನ್ನು ಸಸ್ಪೆಂಡ್ ಮಾಡಿದ್ದರು ಈಗ ಆತನನ್ನು ವಾರಂಟಿನಲ್ಲಿ ಹಿಡಿದು, ಮದರಾಸ್ ಪಟ್ಟಣದ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಆತನ ಮೇಲೆ ಫಿರ್ಯಾದು ತಂದಿದಾರೆ ಈ ಮೊಕದ್ದಮೆಯು ಈ ದಿನ ವಿಚಾರಣೆಯಾಗುವುದು.

❦❦❦

ಮಧ್ಯಪ್ರಾಂತ್ಯಗಳಿಗೆ ಸೇರಿದ ಸಿಯಾಲ್‌ಕೋಟ್ ಪಟ್ಟಣದಲ್ಲಿ ಕೆಲವು ಹುಡುಗರು ಬಾವಿ ಕಟ್ಟೆಯ ಮೇಲಿಂದ ಈಜು ಬಿದ್ದರು. ಆ ಪೈಕಿ ಒಬ್ಬನು ಸೆಳೆತಕ್ಕೆ ಹೋಗಿ ಮುಳುಗಲಾರಂಭಿಸಿದನು ಅವನನ್ನು ಬದುಕಿಸಿಕೊಂಡು ಬರಲಿಕ್ಕೆಂದು ಇನ್ನಿಬ್ಬರು ಹುಡುಗರು ಹಾರಿಬಿದ್ದು ಹೋದರು ಇವರಿಗೂ ತುಂಬಾ ಕಷ್ಟವಾಗಿ ನೀರಿನಲ್ಲಿ ಕಣ್ಣುಬಿಡಲಾರಂಭಿಸಿದರು ಆಗ ದಡದಲ್ಲಿ ನಿಂತು ನೋಡುತ್ತಿದ್ದ ಡೆಪ್ಯುಟಿ ಕಮಿಷನರ್ ಮಿ॥ ಘಾಸ್ಪರ್ಡ್‌ಯವರು ಮೈಮೇಲಿದ್ದ ಬಟ್ಟೆಗಳನ್ನು ಕೂಡ ತೆಗೆದಿಡದೆ ಹಾಗೇ ನೀರಿನಲ್ಲಿ ದುಮುಕಿ ಹೋಗಿ ಪ್ರಾಣಾಪಾಯದಲ್ಲಿದ್ದ ಆ ಮೂರು ಮಂದಿಯನ್ನೂ ಬದುಕಿಸಿ ಕರೆದುಕೊಂಡು ಬಂದರು

❦❦❦

ಲಕ್ನೋ ಪಟ್ಟಣದ ಮಹಮದಿಯರಲ್ಲಿ ಸುನ್ನಿಗಳಿಗೂ ಷಿಯಾಗಳಿಗೂ ಪರಸ್ಪರ ದ್ವೇಷಾಸೂಯೆಗಳುಂಟಾಗಿ ಇನ್ನೂ ಶಮನವಾಗಲಿಲ್ಲವೆಂದು ತಿಳಿಸಿದ್ದೆವಷ್ಟೆ. ಅವರವರಿಗೆ ಹುಟ್ಟಿದ ಒಂದು ಮೊಕದ್ದಮೆಯಲ್ಲಿ ೧೩ ಮಹಮದಿಯರು ದಸ್ತಗಿರಿ ಮಾಡಲ್ಪಟ್ಟರು. ಅವರೆಲ್ಲಾ ಒಂದು ಮಸೀತಿಯಲ್ಲಿ ಪ್ರಾರ್ಥನೆ ನಡೆಯುತ್ತಿರುವಾಗ ಮೂರು ಮಂದಿ ಮೌಲ್ವಿಗಳನ್ನು ಹೊಡೆದರೆಂದು ಮೊಕದ್ದಮೆ ಆಯಿತು. ಸಿಟಿ ಮ್ಯಾಜಿಸ್ಟ್ರೇಟರು ಆ ಪೈಕಿ ಆರು ಮಂದಿಗೆ ತಲಾ ಐದು ತಿಂಗಳ ಸಜವನ್ನೂ ೫೦ ರೂಪಾಯಿ ಜುಲ್ಮಾನೆಯನ್ನೂ ವಿಧಿಸಿ, ಉಳಿದವರನ್ನು ಖುಲಾಸ್ ಮಾಡಿಬಿಟ್ಟರು, ಈಚೆಗೆ ಅವರು ಅಪೀಲ್ ಮಾಡಿಕೊಂಡಿದಾರೆ, ಅವರನ್ನು ಸೆಷನ್ ಕೋರ್ಟಿನವರು ಜಾಮೀನ್ ತೆಗೆದುಕೊಂಡು ಬಿಟ್ಟಿರುವರು.

ವಿದೇಶ ವರ್ತಮಾನಗಳು.

ರಷ್ಯಾ ರಾಜ್ಯದ ರೈತಪ್ರಜೆಗಳು ಕೆಲವು ಪ್ರತಿನಿಧಿಗಳನ್ನು ಚುನಾಯಿಸಿ, ಅವರನ್ನು ತಮ್ಮ ಪಕ್ಷವಾಗಿ ಚಕ್ರವರ್ತಿ ಜಾರ್‌ಯವರನ್ನು ಕಂಡು ಬರುವಂತೆ ಕಳುಹಿಸಿಕೊಟ್ಟರು. ಚಕ್ರವರ್ತಿಯವರು ಆ ಪ್ರತಿನಿಧಿಗಳಿಗೆ ಭೇಟಿ ಕೊಟ್ಟಾಗ ರೈತಪ್ರತಿನಿಧಿಗಳು ಅವರನ್ನು ಕುರಿತು ರೈತಪ್ರಜೆಗಳು ಬಹಳ ಬಡತನವನ್ನನುಭವಿಸುತ್ತಿದಾರೆ ಅವರ ಸ್ಥಿತಿಗತಿಗಳು ತುಂಬಾ ಪರಿತಾಪಕರವಾಗಿವೆ ಅವರ ಪಕ್ಷವಾಗಿ ಚಕ್ರವರ್ತಿಯವರು ಒಂದು ಮಾತು ಮಾತ್ರ ಆಡುವ ಪಕ್ಷಕ್ಕೆ ಅವರ ಕಷ್ಟಗಳೆಲ್ಲಾ ನಿವಾರಣೆಯಾಗುವವು ರೈತಪ್ರಜೆಗಳು ಚಕ್ರವರ್ತಿಯವರ ಸ್ವತಂತ್ರಾಧಿಕಾರಗಳನ್ನು ಕಾಪಾಡುವುದಕ್ಕೆ ತಮ್ಮ ಪ್ರಾಣಗಳನ್ನೇ ಒಪ್ಪಿಸುವುದಕ್ಕೆ ಸಿದ್ಧರಾಗಿರುವರು ಎಂಬೀ ರೀತಿಯಾಗಿ ಅರಿಕೆ ಮಾಡಿಕೊಂಡರು ಅವರಿಗೆ ಚಕ್ರವರ್ತಿಯವರು—ರೈತರ ದುರ್ದೆಸೆಯನ್ನು ನಿವಾರಣೆ

ಮಾಡುವುದಕ್ಕೆ ನಮ್ಮ ಕೈಲಾದ ಸಾಹಸವನ್ನೆಲ್ಲಾ ಮಾಡುವೆವು. ಈಗ ಡ್ಯೂಮಾ ಪಾರ್ಲಿಮೆಂಟಿನ ಅಧಿಪತಿಗಳು ಈ ಬಾಗದಲ್ಲಿ ನಮಗೆ ಸಹಾಯ ಮಾಡುತ್ತಾರೆ ಈ ಭಾಗದಲ್ಲಿ ನೀವೇನೂ ಯೋಚಿಸಬೇಕಾದದ್ದಿಲ್ಲ ಎಂದು ಅಪ್ಪಣೆಕೊಟ್ಟು ಕಳುಹಿಸಿದರು

❦❦❦

ಚೀನಾ ರಾಜ್ಯಕ್ಕೆ ಸೇರಿದ ಕ್ಯಾಂಟನ್ ಪಟ್ಟಣದಲ್ಲಿ ಒಂದು ಮದ್ದಿನ ದುನೆಗೆ ಬೆಂಕಿ ಬಿದ್ದು ಹತ್ತಿಕೊಂಡು ಮಹಾ ಸಿಡ್ಡೊಡನೆ ಹಾರಿತು. ಈ ಅನಾಹುತದಲ್ಲಿ ಸಿಕ್ಕಿ ಸತ್ತುಹೋದ ೨೧ ಜನರ ಶವಗಳನ್ನು ಹೊರಕ್ಕೆ ತೆಗೆದರು. ನೂರಾರು ಜನರಿಗೆ ಗಾಯಗಳಾಗಿವೆ. ಆ ಮದ್ದಿನ ಮನೆಯ ಸುತ್ತಮುತ್ತ ಇದ್ದ ಇದಿನೈದು ಭಾರೀ ಕಟ್ಟಡಗಳು ಆ ಶಬ್ದಕ್ಕೆ ಹಾರಿ ಮುರಿದು ಬಿದ್ದು ನೂರು ಮಂದಿಗಿಂತಲೂ ಹೆಚ್ಚಾಗಿಯೇ ಗಾಯಪಟ್ಟರು ಪಟ್ಟಣದ ಸುತ್ತಲೂ ಇರುವ ಕೋಟೆ ಗೋಡೆಯಲ್ಲಿ ಸುಮಾರು ೨೦೦ ಅಡಿಯಷ್ಟು ಗೋಡೆ ಹಾರಿ ಬಿದ್ದುಹೋಯಿತು.

ಪ್ರಕಟನೆಗಳು.

ಇಲ್ಲಿನೋಡಿ!

22 13

ತುಮಕೂರು ಡಿಸ್ಟ್ರಿಕ್ಟ್ ಇಲಾಖೆಯಲ್ಲಿ, ಯೂರೋಪಿಯನ್ ಮೇಲ್ವಿಚಾರಣೆಯಿಂದ, ಉತ್ತಮ ತರಹದ ಹಾಸನದ ಟೋಪಿಗಳು ಅತಿ ಶ್ರೇಷ್ಠವಾದ ಉಲ್ಲನ್ ದಾರದಿಂದ ತಯಾರಾಗುತ್ತವೆ ಕ್ರಯ ೧೦ ಆಣೆಯಿಂದ ಎರಡು ೧೨ ಆಣೆವರಿಗೂ ದೊರಕುವವು. ಅಪೇಕ್ಷಿಸುವವರಿಗೆ ಕ್ರಯದ ಪಟ್ಟಿಯನ್ನು ರವಾನಿಸುವೆವು ವಿಳಾಸ —ಮೇನೇಜರ್,
ಹಾಸನದ ಟೋಪಿ ಕಾರ್ಖಾನೆ, ಡಿಸ್ಟ್ರಿಕ್ಟ್ ಇಲಾಖೆ, ತುಮಕೂರು.

ನೋಟೀಸ್.

51—1

ಮಂಗಳೂರು ಹೆಂಚು, ಇಟ್ಟಿಗೆ, ಚಪಡಿಕಲ್ಲು ಮುಂತಾದವುಗಳು ತಯಾರಾಗುವ ಯಂತ್ರಗಳು ಮತ್ತು ಸೋಡಾ ತಯಾರಾಗುವ ಮಿಷನ್ ಒಂದು, ಇವುಗಳ ಸಾಮಾನುಗಳು, ಒಂದು ಸರ್ಕ್ಯುಲರ್ ಸಾ ಬೆಂಚ್ ಮತ್ತು ಗರಗಸಗಳು ಸಹ, ಬಹು ಸುಲಭಕ್ರಯಕ್ಕೆ ಮಾರಾಟಕ್ಕೆ ಒಂದಿವೆ ಇಷ್ಟವುಳ್ಳವರು ಇದರ ವಿಚಾರವನ್ನು ಕುರಿತು ಮೆ॥ ಪೀಟ್ರಿಹೇ ಅಂಡ್ ಸನ್ ಯವರಿಂದ ತಿಳಿದುಕೊಳ್ಳಬಹುದು.
ಹುಣಸೂರು
೧೨—೫—೦೭ PETRIE HAY & SON.

ವ್ಯವಹಾರ ನಿರ್ಣಯ

ಎಂಬ ಕನ್ನಡ **ಲಾ** ಪುಸ್ತಕವು

33

ಲಾ ತಿಳಿದವರಿಂದಲೂ, ತಿಳಿಯದವರಿಂದಲೂ ಇದುವರೆಗೆ ಬರೆಯಲ್ಪಟ್ಟಿರುವ ಈ ತೆರದ ಪುಸ್ತಕಗಳನ್ನೆಲ್ಲ ನೋಡಿ ಅವೆಲ್ಲಕ್ಕಿಂತಲೂ ಹೆಚ್ಚು ಪ್ರಯೋಗವನ್ನು ಇದೊಂದು ಪುಸ್ತಕದಿಂದುಂಟುಮಾಡಬೇಕೆಂದು ಈ ದೊಡ್ಡ ಗ್ರಂಥವು ಹೊಸದಾಗಿ ಬರೆಯಲ್ಪಟ್ಟಿದೆ. ಇದರಲ್ಲಿ ೧೬ ಆಕ್ಟುಗಳು, ೬ ಕೋಡುಗಳು, ಹಿಂದೂ, ಮಹಮದೀಯ ಲಾಗಳು, ಚೀಫ್ ಕೋರ್ಟು ಹೈ ಕೋರ್ಟುಗಳ ಫೈಸಲುಗಳು, ಗ॥ ಸರ್ಕ್ಯುಲರ್‌ಗಳು ಪ್ರೊಸೀಡಿಂಗ್ಸ್‌ಗಳು, ಸಕಲ ವಿಧ ವ್ಯವಹಾರಗಳು, ಕ್ರಯ ಆಧಾರ ದಾನ ವಿಲ್ಲು ಮೊದಲಾದ) ೩೯ ತೆರದ ದಸ್ತಾವೇಜುಗಳ ನಮೂನೆಗಳು, ಈ ಸಂಬಂಧದ ಲಾ ವಿಧಿಗಳು, ಸಿವಲ್ ಕ್ರಿಮಿನಲ್, ಪೋಲೀಸ್, ರೆವಿನ್ಯೂ ಸಂಬಂಧದ ವ್ಯಾಜ್ಯಗಳು, ೫೯ ತರದ ಅರ್ಜಿಗಳು, ಈ ಸಂಬಂಧದ ಲಾ ವಿಧಿಗಳು. ಇವೆಲ್ಲವೂ ಅಡಕವಾಗಿವೆ.

ಪುಸ್ತಕ ದೊಡ್ಡದು. ಪುಟಗಳು ೬೩೩.	ಬೆಲೆ ಕಡಮೆ ಅಂಚೆ ಹಾಸಲ ಸೇರಿ ರೂ. ೧—೪—೦

ಗ್ರಂಥಕರ್ತರು	ಎಂ ಮಲ್ಲಾರಾಧ್ಯರು, ೧ ನೆ ಗ್ರೇಡ್ ಪ್ಲೀಡರ್, ಶಿವರಾಮಪೇಟೆ, ಮೈಸೂರು	ಇದೇ ವಿಳಾಸ

ಒಕ್ಕಲಿಗರ ಪತ್ರಿಕೆ.

39—5

ಒಕ್ಕಲಿಗರ ಪತ್ರಿಕೆಯು ಬೆಂಗಳೂರಿನಲ್ಲಿ ಪ್ರತಿ ಬುಧವಾರ ಒಕ್ಕಲಿಗರ ಸಂಘದಿಂದ ಪ್ರಕಟಿಸಲ್ಪಡುತ್ತಿರುವುದು ಇದು ಬಿ. ಎ ಮತ್ತು ಬಿ ಎಲ್ ಪರೀಕ್ಷೆಗಳನ್ನು ಮಾಡಿರುವ ವಿದ್ಯಾವಂತರಾದ ಒಕ್ಕಲಿಗರಿಂದ ಸುಲಭವಾದ ಒಳ್ಳೇ ಭಾಷೆಯಲ್ಲಿ ಬರೆಯಲ್ಪಟ್ಟು ಅಂದವಾಗಿ ಮುದ್ರಿಸಲ್ಪಡುತ್ತಿದೆ

ಈ ಪತ್ರಿಕೆಯಲ್ಲಿ ಸಂಸ್ಥಾನದ ಆಡಳಿತಗಳು, ದೇಶವಾರ್ತೆ, ವ್ಯವಸಾಯ, ವ್ಯಾಪಾರ, ಕಸುಬು, ವ್ಯವಸಾಯ ಮುಂತಾದ ವಿಷಯಗಳನ್ನು ಕುರಿತು ದೀರ್ಘಾಲೋಚನೆ ಮಾಡಿ ಉಪನ್ಯಾಸಗಳು ಬರೆಯಲ್ಪಡುವವು.

ಚಂದಾ ಬೆಂಗಳೂರು ಮತ್ತು ಮೈಸೂರು ಪಟ್ಟಣಗಳಲ್ಲಿಯೂ ಮತ್ತು ನಮ್ಮ ಏಜಂಟರುಗಳಿರುವ ಎಲ್ಲಾ ಸ್ಥಳಗಳಲ್ಲಿಯೂ ವರ್ಷ ೧ ಕ್ಕೆ ೧ ರೂಪಾಯಿ. ತಮ್ಮ ಹೆಸರಿಗೆ ನೇರಾ ತರಿಸಿಕೊಳ್ಳುವವರಿಗೆ ಅಂಚೆ ಹಾಸಲು ಸೇರಿ ೧ ರೂ. ೧೬ ಆಣೆ ಬೀಳುತ್ತದೆ.

ಈ ಪತ್ರಿಕೆಯು ಪಟ್ಟಣ, ಊರು ಗ್ರಾಮಾಂತರಗಳಲ್ಲಿ ಬಹಳ ಪ್ರಚಾರಕ್ಕೆ ಬರುತ್ತಾ ಇದ್ದರಿಂದ ಇದರಲ್ಲಿ ಇಸ್ತಿಹಾರುಗಳು ಪ್ರಕಟಿಸಿದರೆ ವ್ಯಾಪಾರಸ್ಥರಿಗೆ ಬಹಳ ಲಾಭ ಉಂಟು ದರಗಳನ್ನು ಈ ಕೆಳಗೆ ಕಂಡ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರು, ಒಕ್ಕಲಿಗರ ಪತ್ರಿಕೆ,

(ಒಕ್ಕಲಿಗರ ಸಂಘ ಆಫೀಸು, ಅರಳೇಪೇಟೆ,

ಬೆಂಗಳೂರು ಸಿಟಿ.

ಪೆರೂನಾವನ್ನು ಕುರಿತು ಹೆಂಗಸರೇ ಹೆಂಗಸರ ಕೂಡ ಮಾತಾಡುತ್ತಾರೆ.

ಮಿಸೆಸ್ ವೆಗಾಫ್

ದುಃಖದ ಅನುಭವ

ಮಿಸೆಸ್ ಎಂ ವೆಗಾಫ್, ೧೫೯ ಪಟ್ಟಿ ಯು ೧೪ನೆ ಬೀದಿ ನ್ಯೂಯಾರ್ಕ್ ಪಟ್ಟಣ, ಈಕೆ ಬರೆಯುತ್ತಿರುವುದೇನೆಂದರೆ —

ಪೆರೂನಾ ನನಗೆ ಮಾಡಿದ ಉಪಕಾರಕ್ಕಾಗಿ ನನ್ನ ಯೋಗ್ಯತಾನುಸಾರ ನಾನು ಅದನ್ನು ಸಂತೋಷದಿಂದ ಹೊಗಳುತ್ತೇನೆ ಎರಡು ವರುಷಗಳ ಕೆಳಗೆ ನನಗೆ ಒಂದು ವಿಧವಾದ ದುರ್ಬಲ ಪ್ರಾಪ್ತವಾಯಿತು ನನ್ನ ಬೆನ್ನೂ ಪಕ್ಕಗಳೂ ಯಾವಾಗಲೂ ನೋಯುತ್ತಿದ್ದವು ನನ್ನ ಅನ್ನಕೋಶದಲ್ಲಿ ಆಕ್ರಾನ ಗಳು ಉಂಟಾದವು ಇದರಿಂದ ಒಂದು ಬಟ್ಟಲು ನೀರು ಕೂಡ ನನ್ನ ಹೊಟ್ಟೆಯಲ್ಲಿ ನಿಲ್ಲುತ್ತಿರಲಿಲ್ಲ ನನಗೆ ವಾಂತಿ ಎಲ್ಲಿ ಪ್ರಾರಂಭವಾದೀತೋ ಎಂಬ ಹೆದರಿಕೆಯಿಂದ ನಾನು ಊಟವನ್ನೇ ಅಪೇಕ್ಷಿಸುತ್ತಿರಲಿಲ್ಲ ಕಳೆದ ಮೂರು ತಿಂಗಳಿಂದಲೂ ನಾನು ಪೆರೂನಾವನ್ನು ಸೇವಿಸುತ್ತಿದ್ದೇನೆ ಈಗ ನನಗೆ ಎಂದಿನಂತೆ ಆರೋಗ್ಯವಾಗಿರುತ್ತದೆ ನನ್ನ ಅನ್ನಕೋಶವು ಎಂದಿನಂತೆ ಬಲವಾಗಿದೆ ನನ್ನ ನರಗಳ ಹಿಂಸೆಯು ನಿವಾರಣೆಯಾಯಿತು ನನ್ನ ಹಾಗೇ ಕಷ್ಟಪಡುವ ಹೆಂಗಸರಿಗೆಲ್ಲಾ ಪೆರೂನಾ ತೆಗೆದುಕೊಳ್ಳಿ ಎಂದು ಶಿಫಾರಸು ಮಾಡುತ್ತಿದ್ದೇನೆ ಆ ರೀತಿ ಅದನ್ನು ತೆಗೆದುಕೊಂಡವರು ನನ್ನನ್ನು ವಂದಿಸುತ್ತಾರೆ"

ಮಿಸೆಸ್ ಮೂರ್ಸ್

ಮಿಸೆಸ್ ಮೂರ್ಸ್, ಆರ್ ಎಫ್ ಡಿ ೫ ರೆಂಟ್ಸ್, ಓರಿ ನೆ ಂಬರ್ ಆರ್ಡರ್ ಆಫ್ ಫಾರೆಸ್ಟರ್, ಈಕೆ ಬರೆಯುವುದನ್ನು ಕೇಳಿ

ಹೆಂಗಸಿನ ಧರ್ಮಕ್ಕೆ ಉಂಟಾಗುವ

ಹಿಂಸೆ — ನನಗೆ ನಾಲ್ಕು ವರುಷಗಳಿಂದ ಪ್ರಾಪ್ತವಾದ [illegible] ಕಷ್ಟಪಟ್ಟೆನು ನನ್ನ ಬೆನ್ನಿನಲ್ಲಿ ಉದ್ಭವಿಸಿದ ಕೆಟ್ಟ ನೋವಿತ್ತು ನನಗೆ ಅದರಿಂದ ವಿಶೇಷ ಮರ್ಛೆ ಉಂಟಾಗಿತ್ತು, ತುಂಬಾ ದಣುವಾದಂತೆ ನಿಶ್ಶಕ್ತಿಯಾಗಿತ್ತು ನನ್ನ ಮನೆಯ ಕೆಲಸಗಳನ್ನು ಬಹಳ ಕಷ್ಟದಿಂದ ಮಾಡುತ್ತಿದ್ದೆನು ಇತರ ಪರಿಹಾರಕ್ಕೆ ನಾನಾ ಬಗೆಯ ಔಷಧಗಳನ್ನು ಮಾಡಿದೆನು ಪೆರೂನಾ ಸೇವಿಸುವ ತನಕ ನನಗೆ ಸ್ವಲ್ಪವೂ ವಾಸಿಯಾಗಿರಲಿಲ್ಲ ಎಂಟು ವಾರಗಳಲ್ಲೇ ನನ್ನ ಶರೀರ ಸ್ಥಿತಿಯು ತುಂಬಾ ಬದಲಾವಣೆ ಹೊಂದಿತು ಈಗ ಮೂರು ತಿಂಗಳಿಂದ ನನಗೆ ಎಂದಿನಂತೆ ಶಕ್ತಿಯೂ ಸಂತೋಷವೂ ಆರೋಗ್ಯವೂ ಉಂಟಾಗಿವೆ ಇದಕ್ಕೆಲ್ಲಾ ಪೆರೂನಾವಿನ ಮಹತ್ತ್ವೇ ಹೊರತು ಬೇರೇನೂ ಅಲ್ಲವೆಂದು ಹೇಳುತ್ತೇನೆ

ಮಿಸೆಸ್ ನೆಲ್‌ಸನ್

ತಲೆ ನೋವೂ ಬೆನ್ನು ನೋವೂ

ಮಿಸೆಸ್ ಟ್ರಿಸ್ಸೀ ನೆಲ್‌ಸನ್, ೩೧೯ ೫೪ನೆ ಅವೆ ನ್ಯೂ ವಿಲ್ಲಾರ್ಡ್ ಈಕೆ ಬರೆಯುವುದನ್ನು ಓದಿ —

"ಪೆರೂನಾ ಔಷಧವು ನನಗೆ ಅಪಾರವಾದ ಗುಣವನ್ನು ಉಂಟುಮಾಡಿದೆಯಾದ್ದರಿಂದ ಅದನ್ನು ವಿವರಿಸಬೇಕಾದ್ದು ನನ್ನ ಕರ್ತವ್ಯವಾಗಿರುತ್ತದೆ ಇದರಿಂದ ನನ್ನ ಹಾಗೆ ಕಷ್ಟಪಡುತ್ತಿರುವ ಯಾವ ಹೆಂಗಸರಾದರೂ ಇದ್ದಲ್ಲಿ ಅಂಥವರು ಇದನ್ನು ಓದಿ ಉಪಕಾರ ಹೊಂದಲಿ ನಂತರ [illegible] ನನಗೆ ಸುಖವಾಗಿದ್ದ ದಿನ ಒಂದಾದರೂ ಕಾಣದೆ ಇದ್ದೆನು ತಲೆ ನೋಯುವುದು, ತಪ್ಪಿದರೆ ಬೆನ್ನು ನೋಯುವುದು ಇವೆರಡೂ ಇಲ್ಲದಿದ್ದರೆ ಇನ್ನಾವ ಭಾಗದಲ್ಲಾದರೂ ನೋಯುವುದು ಇದ್ದೇ ಇತ್ತು ಅಷ್ಟು ಕಷ್ಟಪಟ್ಟು ಜೀವಿಸುವುದಕ್ಕಿಂತ ಸತ್ತರೆ ಒಳ್ಳೇದೆಂದು ನನಗೆ ತೋರುತ್ತಿತ್ತು ಒಬ್ಬ ಸ್ನೇಹಿತಳು ಪೆರೂನಾವನ್ನು ಸೇವಿಸೆಂದು ನನಗೆ ಹೇಳಿದಳು ಹಾಗಾದರೂ ಮಾಡೋಣ ಎಂದು ನಾನು ಕುತೂಹಲಪಡುತ್ತಿದ್ದೆನು ಸಂತೋಷಪೂರ್ವಕವಾಗಿ—ಆರು ಬಾಟ್ಲುಗಳನ್ನು ಸೇವಿಸುವಷ್ಟರಲ್ಲೇ ನಾನು ಯಥಾಪ್ರಕಾರ ಹೆಂಗಸಾದೆನು ಈಗ ನನಗೆ ಯಾವ ನೋವೂ ಇಲ್ಲ [illegible] ಸುಖಸಂತೋಷಗಳುಳ್ಳವಳಾಗಿದ್ದೇನೆ"

ಮೇಲ್ಕಂಡ ಸಾಕ್ಷಿಗಳು ಪ್ರತಿ ದಿನದ ಅನುಭವಗಳನ್ನು ವಿವರಿಸತಕ್ಕವುಗಳಾಗಿವೆ ಕಾಯಿಲೆ ಇದ್ದ ಪೆರೂನಾದಿಂದ ಯಥಾರ್ಥವಾದ ಗುಣವನ್ನು ಹೊಂದಿ, ಈ ಮಾತುಗಳನ್ನು ನಿಜವಾಗಿ ಹೇಳಿರುತ್ತಾರೆ

ಹೆಂಗಸರಿಗೆ ಇದು ತುಂಬಾ ಸಹಾಯವಾದದ್ದು ಹತ್ತಿರ ಇಟ್ಟುಕೊಂಡಿದ್ದರೆ ಈ ಔಷಧದಿಂದ ಸಾಧಾರಣ ಗುಣವನ್ನು ಪಡೆಯಬಹುದಾಗಿದೆ ನರಗಳ ನಿಶ್ಶಕ್ತಿ, ಬೆನ್ನುನೋವು ಅಜೀರ್ಣ, ತಲೆನೋವು, ಸ್ನಾಯು ಸ್ಥಳದಿಂದ ಸ್ಥಳಕ್ಕೆ ಬದಲಾಯಿಸುವ ನೋವು ಇವೂ ಇನ್ನೂ ಅನೇಕ ರೋಗಗಳೂ ಪೆರೂನಾದಿಂದ ನಿವಾರಣೆಯಾಗುತ್ತವೆ ಮುಖ್ಯವಾಗಿ ಈ ಮಾತು ಹೆಂಗಸರು ಕೇಳತಕ್ಕದ್ದಾಗಿದೆ ತಮ್ಮ ಸಹೋದರಿಯರಿಗೂ ಉಪಕಾರವಾಗಲಿ ಎನ್ನುವುದು [illegible]

ಈ ಮೇಲ್ಕಂಡ ಸಾಕ್ಷಿಗಳ ಮಾತನ್ನು ಓದುವವರಿಗೆ—ಅವರು ಅನೇಕ ಇತರವಾದ ಔಷಧಗಳನ್ನು ತೆಗೆದ ಕೊಂಡ, ಡಾಕ್ಟರ ಗಳ ಅಭಿಪ್ರಾಯ ತೆಗೆದುಕೊಂಡು ಸಾಕಾದರು ಕಡೆಗೆ ಪೆರೂನಾ ಅವರ ಸೇವನೆಗೆ ಸಿಕ್ಕಿ ಅವರ ಕಷ್ಟವೆಲ್ಲಾ ನಿವಾರಣೆಯಾಗಿ ಅವರನ್ನು ಸುಖವಾಗಿ ಮಾಡಿರುತ್ತದೆ

ಪೆರೂನಾದಿಂದ ಪ್ರತಿದಿನವೂ ರೋಗಿಗಳ ಗುಣ ಹೊಂದುತ್ತಿದ್ದಾರೆ ಪೆರೂನಾವಿಗೆ ಬಂದಿರುವ ಈ ಕೀರ್ತಿಯು ಅದನ್ನು ಉಪಯೋಗಿಸಿರುವಂಥಾ ಜನರ ಹೊಗಳಿಕೆಯಿಂದಲೇ ಬಂದಿದ್ದಾಗಿರುತ್ತದೆ

ಹದಿಮೂರು ವರುಷ ಕಷ್ಟಪಟ್ಟೆನು

ಮಿಸೆಸ್ ಅನ್ನಿ ವಹ್ವೇರ್, ಹೋಲಿಗ್ರೂವ್, ಆರ್ಕ್, ಈಕೆ ಬರೆಯುವುದನ್ನು ನೋಡಿ —

"ನಾನು ಹದಿಮೂರು ವರುಷಗಳ ತನಕ ಹೆಂಗಸಿನ ರೋಗವನ್ನು ಅನುಭವಿಸಿದೆನು ನಿಮ್ಮ ಪೆರೂನಾ ಪ್ರಕಟನೆಯನ್ನು ಒಂದು ಕಡೆ ಓದಿ ನೋಡಿ ಒಂದು ಕೈಸೆಯಷ್ಟು ಕೊಂಡು ಪೂರಾ ಸೇವಿಸುವಷ್ಟರೊಳಗಾಗಿ ನಾನು ಹಾಸಿಗೆ ಬಿಟ್ಟದ್ದು ಆರೋಗ್ಯವಂತಳಾದೆನು ಮೂರು ಬಾಟ್ಲು ಔಷಧ ತೆಗೆದುಕೊಂಡಾಗ ನನಗೆ ಆರೋಗ್ಯವಾಯಿತು ಶರೀರ ಸುಖವೂ ಮಾಂಸಖಂಡಗಳ ಪುಷ್ಟಿಯೂ ಉಂಟಾದವು ಅದನ್ನು ನಾನು ಬಿಟ್ಟಿರಲಾರೆನು"

ತಲೆ ನೋವೂ ಕಿವುಡೂ

ಮಿಸೆಸ್ ಮೇರಿ ಇ ಸ್ಯಾಂಪ್‌ಸನ್, ಬಂಡಂಬೆರಿ, ಎನ್ ಎಚ್, ಎಂಬೀಕೆ ಬರೆಯುವುದೇನೆಂದರೆ —

ನನಗೆ ಬಹು ಕಠಿಣವಾದ ತಲೆ ನೋವಿತ್ತು ಎರಡು ಕಿವಿಗಳೂ ಮುಚ್ಚಿ ಹೋಗಿದ್ದವು ನರಗಳ ಶಕ್ತಿ ಕುಂದಿ ಹೋಗಿತ್ತು ಮೂವತ್ತು ವರುಷಗಳ ತನಕ ಒಂದು ಕಿವಿ ಕೇಳುತ್ತಿರಲಿಲ್ಲ ನಾನು ಆರು ಬಾಟ್ಲು ಪೆರೂನಾ ಮತ್ತು ಒಂದು ಬಾಟ್ಲು ಮನಾಲಿನ್ ಕೊಂಡು ಸೇವಿಸಿದೆನು ಇಂಥಾ ಉತ್ಕೃಷ್ಟವಾದ ಔಷಧವು ಬೇರೊಂದಿಲ್ಲವೆಂದು ಈಗ ಸಂತೋಷದಿಂದ ಹೇಳುತ್ತೇನೆ ನನ್ನ ನರಗಳು ಶಕ್ತಿ ಕೂಡಿಕೊಂಡವು ಅರುಚಿ ಪರಿಹಾರವಾಗಿದೆ ಊಟ ಮಾಡಿದ್ದೆಲ್ಲಾ ದೇಹಕ್ಕೆ ಒಂಟುವುದು ಎಲ್ಲ ಭಾಗಗಳಲ್ಲೂ ನಾನು ತುಂಬಾ ಸುಖವಾಗಿದ್ದೇನೆ"

ಕಠಿಣವಾದ ಶೀತ ನೆಗಡಿ

ಮಿಸ್ ಮೇರಿ ಕ್ಯಾಲ್ವಿನ್, ೯೧೩ ನೌರ್ತ್ ಬೀಟ ಸಿ ಸಿನಾಟಿ, ಓಹಿಯೋ ಈ ಹೆಂಗಸು ಬರೆಯುವುದೇನೆಂದರೆ —

"ಸಾಯಂಕಾಲ ಒಂದು ಕಡೆ ಸಂತೋಷೋತ್ಸವಕ್ಕೆ ಹೋಗಿದ್ದು ನಾನು ಮನೆಗೆ ಬರುವಾಗ್ಗೆ ನನಗೆ ನೆಗಡಿ ಹಿಡಿಯಿತು ನಾನು ಆಗ ಅದನ್ನು ಅಲಕ್ಷ್ಯಮಾಡಿಬಿಟ್ಟೆನು ಅದರಿಂದ ನನಗೆ ತುಂಬಾ ಕೆಡುಕಾಯಿತು ನನ್ನ ಮೂಡು ಬಹಳ ದುಃಖಕರವಾಯಿತು ನಾನು ಪೆರೂನಾ ತೆಗೆದುಕೊಂಡೆನು ಆ ಕೂಡಲೇ ನನಗೆ ಗುಣ ಕೊಟ್ಟಿತು ಒಂದು ವಾರದೊಳಗಾಗಿ ನಾನು ಆರೋಗ್ಯ ಹೊಂದಿದೆನು ಈಗಲೂ ನನಗೆ ಮೈಗೆ ಆಲಸ್ಯವಾದಂತೆ ತೋರಿದ ಒಡನೆಯೇ ಅದನ್ನು ತೆಗೆದುಕೊಂಡಲ್ಲಿ ಎಲ್ಲಾ ನಿವಾರಣೆಯಾಗುತ್ತದೆ"

ಸೇವನೆ ಮುಂತಾದ್ದಕ್ಕೆ ಪ್ರತಿ ಬಾಟ್ಲು ಸಂಗಡ ಕಳಿಸುವ ನೋಟೀಸನ್ನು ಓದಿಕೊಳ್ಳಿ ಎಲ್ಲಾ ಔಷಧಿ ಮಾರಾಟಗಾರರಲ್ಲೂ ಪೆರೂನಾ ಬಿಕರಿಯಾಗುತ್ತಿವೆ ಒಂದು ಬಾಟ್ಲಿಗೆ ರೂ ೩॥, ಆರು ಬಾಟ್ಲಿಗೆ ರೂ ೧೮॥

ಈ ಔಷಧ ಸಿಕ್ಕುವ ಸ್ಥಳಗಳು —

(೧) ಹಿಚ್‌ಕಾಕ್ ಅಂಡ್ ಸನ್ಸ್, ಬೆಂಗಳೂರು

(೨) ಇಂಗ್ಲಿಷ್ ಡಗ್ಗ್ ಕಂಪನಿ, ೩೯೫ ಮಿಂಟ್ ಬೀದಿ, ಮದರಾಸ್.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ

೨೬—೪—೧೯೦೭ ರಿಂದ ೩—೫—೧೯೦೭ ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಸತ್ತದ್ದು	ಕಾಲರಾ ತಗಲಿದ್ದು
ಬೆಂಗಳೂರು ಪಟ್ಟಣ	11	8	0
ಮೈಸೂರು „	1	1	0
ಬೆಂಗಳೂರು ಡಿಸ್ಟ್ರಿಕ್ಟ್	20	12	38
ಮೈಸೂರು „	22	16	5
ಕೋಲಾರ್ „	3	1	8
ಕೋಲಾರ್ ಚಿನ್ನದ ಗಣಿಗಳು	4	2	0
ತುಮಕೂರು ಡಿಸ್ಟ್ರಿಕ್ಟ್	0	0	[illegible]
ಹಾಸನ „	7	5	46
ಚಿತ್ರದುರ್ಗ „	1	0	0
ಕಡೂರ್ „		0	[illegible]
ಶಿವಮೊಗ್ಗ	1	2	0
ಜುಮ್ಲಾ	70	44	43

ಬುಧವಾರ ಕಳೆದ ವರುಷಂಗಳು ೧೮೩೦ ನೇ ಪ್ಲವಂಗನಾಮ ಸಂವತ್ಸರದ ವೈಶಾಖ ಶುದ್ಧ ಚೌತಿ ಗುರುವಾರದಿಂದ ವೈಶಾಖ ಶುದ್ಧದ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೭ ನೇ ಇಸವಿ ಮೇ

ತಾ	ವಾರ		ತಿಥಿ	ಘಳಿಗೆ	ನಕ್ಷತ್ರ	ಘಳಿಗೆ
16	ಗುರು	‡	ಚೌತಿ	33 16	ಮೃ	31 46
17	ಶುಕ್ರ	T	ಪಂಚಮಿ	40 12	ಆರ್ದ್ರ	11 20
18	ಶನಿ	¶	ಷಷ್ಠಿ	44 10	ಪುನ	17 3
19	ರವಿ	*	ಸಪ್ತಮಿ	48 18	ಪುಷ್ಯ	51 1
20	ಚಂದ್ರ		ಅಷ್ಟಮಿ	50 45	ಆಶ್ಲೇ	56 16
21	ಕುಜ		ನವಮಿ	52 2	ಮಘ	59 39
22	ಬುಧ	,	ದಶಮಿ	52 0	ಪುಬ್ಬ	60 0

‡ ಕರಣಯೋಗ

T ಶ್ರೀ ಶಂಕರ ಭಗವತ್ಪಾದಾಚಾರ್ಯರ ಆರಾಧನೋತ್ಸವ ಲಾವಣಿ ಗೌರೀವ್ರತ ¶ ಷಷ್ಠಿವ್ರತ * ವ ಹಾವ್ಯಾಪ್ತಿ, ಗಂಗೋತ್ಪತ್ತಿ ಕನ್ಯಕಾವಾಸೋತ್ಸವ

ಪೇಟೇ ಧಾರಣೆ

ದಿನಸಿ	ಮೈಸೂರ	ಬೆಂಗಳೂರ
ಕಸ್ತೂರಿ ಅಕ್ಕಿ ಪಲ್ಲಾ ೧ಕ್ಕೆ	ರೂ ೧೨ ೪-೦	೧೮ [illegible]
ಕಂಬೂತಿ ಅಕ್ಕಿ ಅವಲ್	೧೩ ೬ ೦	೧೩ ೪
„ ದಯಂ	೧೨ ೪ ೦	೧೩ [illegible]
ಬಾಸ್ಮತಿ ಅಕ್ಕಿ	೧೨ ೪ ೦	೧೮ ೪
ಸಣ್ಣಕ್ಕಿ ಅವಲ್	೯೫ ೦ ೦	೭೫ [illegible]
„ ದುಯಂ	೧೭ ೪-೦	೧೮ [illegible]
ತೊಗರೀ ಬೇಳೆ ಪಲ್ಲಾ ೧ಕ್ಕೆ	೧೩ ೪ ೦	೯೩ [illegible]
„ ದುಯಂ	೯೨ ೧೨ ೦	೧೨ ೪
ಮೈಸೂರು ರಾಗಿ ಪಲ್ಲಾ ೧ಕ್ಕೆ	೩ ೦ ೦	೩ [illegible]
ಕಾರಾಗಿ	೫ ೪ ೯	೫ ೧೨
ಜೋಳ	೭ ೪ ೦	೩ ೮
ಹಲಸಂದೆ ಪಲ್ಲಾ ೧ಕ್ಕೆ	೧೧ ೧ ೬	೧೧ [illegible]
ಬಿಳೀ ಅವರೆ	೪ ೮-೦	೭ ೮
ಹೆಸರು	೯೨ ೪ ೦	೧೦ ೪
ಉದ್ದು	೧೨ ೪ ೦	೧೨ [illegible]
ಕಡಲೆ	೯೦ ೪ ೦	೧೦ [illegible]
ಎಳ್ಳು ಸೇರು ೧೨೭ ಕ್ಕೆ	೨೨ ೪-೦	೨೨ ೪
ಹುರುಳಿ	೩ ೩-೦	೭ [illegible]
ಹರಳು ೧೨೭ ಸೇರಿಗೆ	೧೩-೦ ೦	೧೩-೮
ಸೀಗೇಕಾಯಿ ಮಣ ೧ಕ್ಕೆ	೨ ೩ ೦	೨ ೦
ಮೆಣಸಿನಕಾಯಿ	೨-೪-೦	೭ ೮
„ ದುಯಂ	೬-೪ ೦	೨ ೧೮
ಬೆಲ್ಲ ದೊಡ್ಡ ಅಚ್ಚು	೭-೪ ೦	ಮ ೧ ೫
ಒಳ್ಳೆಣ್ಣೆ ಮಣ ೧ಕ್ಕೆ	೫ ೬ ೦	೫ [illegible]
ಹರಳೆಣ್ಣೆ „	೫ ೦ ೦	೫ [illegible]
ಕೊತ್ತುಂಬರಿ ಪಲ್ಲಾ ೧ಕ್ಕೆ	೩-೨ ೦	೩ ೨
ಉಪ್ಪು „	೫-೩-೦	೫ ೧೨
ಮೆಣಸೇ ಹಣ್ಣು	೭ ೬ ೦	೧ [illegible]
„ ಹಳೇದು	೦ ೧೮-೦	೦ ೧೫
ಹುಣಸೆ ಮಣ ೧ಕ್ಕೆ	೧೫-೦ ೦	೧೩ ೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ	೫-೦-೦	೮ ೦
ತೆಂಗಿನಕಾಯಿ ೧೦೦ ಕ್ಕೆ	೪ ೪-೦	೩ ೪
ಅಳಲೇಕಾಯಿ ಮಣ ೧ಕ್ಕೆ	೧ ೦ ೦	೧ ೦
ಅಂಟುವಾಳದ ಕಾಯಿ ಮಣ ೧ಕ್ಕೆ	೦ ೭-೨ ೧	೦ ೧೮
ಚಿನ್ನ (ಪೌನ್) ಕೆಂಪು	೧೫ ೮ ೦	೧೫ ೫
„ „ ಪಸಿಮೆ	೧೫-೧೦-೦	೧೩ [illegible]
„ „ ಗಟ್ಟಿ ತೊಲ ೧ಕ್ಕೆ	೨೩ ೧-೨-೦	೨೮ ೮
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	೪೫-೦ ೦	೪೩ [illegible]

Printed and Published by the Rev E W Thompson M A, Proprietor and Manager, Wesleyan Mission Press Mysore 16/5/1907

REGISTERED
M. 20.

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೦ | ಮೈಸೂರು—ಸನ್ ೧೯೦೭ ನೇ ಇಸವಿ ಮೇ ತಾರೀಖು ೨೩ ನೇ ಗುರುವಾರ. | ಸಂಚಿಕೆ ೫೧

WILLIAM & CO., BOMBAY.

ವಿಲಿಯಂ ಮತ್ತು ಕಂಪೆನಿ, ಫೋರ್ಟು, ಮುಂಬಯಿ.

ಅಮೃತಾಂಜನ

27 13

ಬಾಟ್ಲಿ ಒಂದಕ್ಕೆ ಕಿಮ್ಮತ್ತು ೮ ಆಣೆ. ವಿ. ಪಿ. ೧೨ ಆಣೆ.

ಅಮೃತಾಂಜನ—ಸುಖಾಂಜನ.
ಅಮೃತಾಂಜನ—ಸಂಜೀವನ
ಅಮೃತಾಂಜನ—ಪರಮಾಂಜನ
ಅಮೃತಾಂಜನ—ದಿವ್ಯಾಂಜನ
ಅಮೃತಾಂಜನ—ಶೀತಭಂಜನಿ
ಅಮೃತಾಂಜನ—ಪ್ರಾಭಂಜನವಿಮರ್ದಿನಿ

ಅಮೃತಾಂಜನ—ಅಪೂರ್ವದರ್ಶನಿ.
ಅಮೃತಾಂಜನ—ತಕ್ಷಣ ಪರಿಹಾರಿಣಿ
ಅಮೃತಾಂಜನ—ಸಂಧಿವಾತಕ್ಕೆ.
ಅಮೃತಾಂಜನ—ತಲೆನೋವಿಗೆ.
ಅಮೃತಾಂಜನ—ಜುಖಾಮ್ ಮತ್ತು ಘಾಯಕ್ಕೆ.
ಅಮೃತಾಂಜನ—ಗಂಟ್ಲುನೋವಿಗೆ.

ಶೋಥೀಧನ ವಾತ, ಎದೆನೋವು, ಗಂಟ್ಲುನೋವು, ಸಂಧಿವಾತ, ತಲೆನೋವು, ಶರೋತ್ಪಾರ, ಈ ಎಲ್ಲಾ ತರದ ರೋಗಕ್ಕೆ ಅಮೃತಾಂಜನ ದಿವ್ಯವಾದ ಔಷಧವಾಗಿದೆ ಇದನ್ನು ತರಿಸಿ ಮನೆಯಲ್ಲಿ ಸದಾಕಾಲ ಇಟ್ಟರೆ, ಮೇಲೆ ಹೇಳಿದ ಯಾವತರದ ರೋಗಕ್ಕೂ ಎಡೆ ಸಿಕ್ಕುವದಿಲ್ಲ. ಅಮೃತಾಂಜನದಿಂದ ಗುಣವು ಕಂಡುಬರದಿದ್ದರೆ ಹಣ ಹಿಂತಿರುಗಿ ಕೊಡಲ್ಪಡುವದು

ಗಜಕರ್ಣದ ಮುಲಾಮು ಡಬ್ಬಿ ಒಂದಕ್ಕೆ ೬ ಆಣೆ, ವಿ. ಪಿ. ೧೦ ಆಣೆ.—ಇದನ್ನು ಹಾಗಿಸುವದರಿಂದ ಎಲ್ಲಾ ತರದ ಕಜ್ಜಿ ಶಮನವಾಗುವದು. ಮೂರು ಸಾರಿ ಹಾಗಿಸುವದರೊಳಗೆ ಗಜಕರ್ಣವು ಹೋಗುವದು ಒಂದು ಸಾರಿ ಪರೀಕ್ಷಿಸಿ ನೋಡಿರಿ. ಕ್ರಯ ಕಮ್ಮಿ, ಗುಣ ಹೆಚ್ಚು. ಇದನ್ನು ಹಚ್ಚಿದಲ್ಲಿ ಉರಿ ಬರುವದಿಲ್ಲ, ಚರ್ಮ ಕಪ್ಪಾಗುವದಿಲ್ಲ. ಇದರಿಂದ ಗುಣವು ಕಂಡುಬರದಿದ್ದರೆ ಹಣ ಪರತು ಕೊಡಲ್ಪಡುವದು.

ಕೇಶವರ್ಧಿನೀ ತೈಲ—ಇದು ತಲೆಯ ಕೂದಲನ್ನು ತಂಪುಮಾಡಿ ಅದನ್ನು ತೆಗೆದು ಕೂದಲು ಬೆಳೆಸುತ್ತದೆ. ಇದಕ್ಕೆ ಪರಿಮಳವು ಬರುತ್ತದೆ ಮೂರು ದೊಡ್ಡ ಬಾಟ್ಲಿಗೆ .. ೧-೦-೦

ಕಜ್ಜಿ ಮುಲಾಮು—ಇದು ಅತಿಶಯ ಅಗ್ಗವೂ ಗುಣದಾಯಕವೂ ಆಗಿರುತ್ತದೆ .. ೦-೩-೦

ಕಫಹಾರಿ—ಕೆಮ್ಮು, ದಮ್ಮು, ಕ್ಷಯ, ಕೊರಳಿನಲ್ಲಿ ಕಫ ಮುಂತಾದ್ದಕ್ಕೆ ಇದು ಉತ್ತಮವಾದದ್ದು, ಬಾಟ್ಲಿ ೧ಕ್ಕೆ . ೧-೪-೦

ಜೀರ್ಣರಸಾಯನ—ಹೊಟ್ಟೆಯಲ್ಲಿ ಹಸಿವೆ ಆಗಲಿಕ್ಕೂ ನಾಲಿಗೆಗೆ ರುಚಿ ಬರಲಿಕ್ಕೂ ಉತ್ತಮವಾದದ್ದು. .. ೧-೪-೦

ಜ್ವರಹಾರಿ—ಎಲ್ಲಾ ತರದ ಜ್ವರಗಳ ಮೇಲೆ ಈ ಔಷಧವು ಪರೀಕ್ಷಿತವಾದದ್ದು ೦-೧೨-೦

ಸುಂದರೀ ತೈಲ—ಈ ತೈಲವನ್ನು ನಿರಂತರವಾಗಿ ಮೋರೆಯ ಮೇಲೆ ಹಾಗಿಸುವದರಿಂದ ಮೋರೆಯ ಮೇಲೆ ಇರುವ ಕಪ್ಪು ಕಲೆಗಳನ್ನೂ ಕಪ್ಪಾದ ಕಲಂಕಗಳನ್ನೂ ತೆಗೆದು ಚರ್ಮವನ್ನು ಮೃದುಮಾಡಿ ಚಲುವಿಕೆಯನ್ನು ಕೊಡುತ್ತದೆ ಹೆಂಗಸರಿಗೂ ಗಂಡಸರಿಗೂ ಉತ್ತಮವಾದದ್ದು ೨-೮-೦

ದಂತಮಂಜನ—ಹಲ್ಲು ಸ್ವಚ್ಛವಾಗುತ್ತೆ, ಘಟ್ಟಿಯಾಗುತ್ತೆ, ವಾಸನೆಯನ್ನೂ ರಕ್ತವನ್ನೂ ನಿಲ್ಲಿಸುತ್ತದೆ ಕ್ರಯ ಬಹಳ ಕಮ್ಮಿ ೦-೨-೦

ನೇತ್ರಾಂಜನ ೪ ಆಣೆ ಜ್ವರಗುಟಿಕ ೧ ರೂಪಾಯಿ. ಕಾಮರೂಪಿ ಗುಟಿಕ ೧ ರೂಪಾಯಿ. ದಂತವಾತಹಾರಿ ೮ ಆಣೆ. ಕಫನಾಶಕ ಚೂರ್ಣ ೮ ಆಣೆ ಹೇಳು ಕಡಿತದ ಮದ್ದು ೮ ಆಣೆ. ಧೋಬಿಹಾರಿ ೮ ಆಣೆ. ಕಸ್ತೂರಿಮಾತ್ರೆ ೧೦ ಆಣೆ ತಾಂಬೂಲಗುಟಿಕೆ ೮ ಆಣೆ

ಎಲ್ಲಾ ತರದ ಔಷಧಗಳು ಇರುವಪಟ್ಟಿಕ ಕೆಟಲಾಗು ಬೇಕಾದವರು ಬರದು ತರಿಸಿಕೊಳ್ಳಬಹುದು.

ವಿಲಿಯಂ ಮತ್ತು ಕಂಪೆನಿ, ೧೬ ಓಕ್ ಲೇನ್, ಫೋರ್ಟು, ಮುಂಬಯಿ.

ವಿಶೇಷ ನೋಟೀಸು.

49-3

ಈ ಮೂಲಕ ಮೈಸೂರು ಸೀಮೆಯಲ್ಲಿರುವವರೆಲ್ಲರಿಗೆ, ದಕ್ಷಿಣ ಕನ್ನಡ ಜಿಲ್ಲಾ ಮಂಗಳೂರಲ್ಲಿರುವ ಬಾಸೆಲ್ ಮಿಶ್ಶನ್ ವೀವಿಂಗ್ ಎಸ್ಟಾಬ್ಲಿಷ್‌ಮೆಂಟಿನ ಮೇನೇಜರರು ತಿಳಿಸುವದು.—

ಕೆಲವು ಸಮಯಗಳಿಂದ ನಮ್ಮ ತುಂಕೂರಲ್ಲಿರುವ ಬಿ ರಾಜಬಹದರ್ ಮೊದಲಿಯಾರ್) ನಮ್ಮ ಕಡೆ (Canvassing Agency) ಕೇನ್ವಾಸ್ಸಿಂಗ್ ಏಜಂಟ್ಸ್ ಕೆಲಸವನ್ನು ವಹಿಸಿ, ಸಾಹುಕಾರರಿಂದಲೂ ಇತರರಿಂದಲೂ ನಮಗಾಗಿ ಅಪ್ಪಣೆಯನ್ನು ಪಡಕೊಳ್ಳುತ್ತಿದ್ದರು. ಆದರೆ ಇನ್ನು ಮುಂದೆ ಸದರಿ ರಾಜಬಹದರರು ನಮ್ಮ ಕೇನ್ವಾಸ್ಸಿಂಗ್ ಏಜಂಟರಾಗಿರುವದಿಲ್ಲ ಮತ್ತು ಅವರಿಗಿರುವ ನಮಗೋಸ್ಕರ ಅಪ್ಪಣೆಗಳನ್ನು ಸ್ವೀಕರಿಸುವ ಸ್ವತಂತ್ರವನ್ನು ಈ ನೋಟೀಸ್ ಮೂಲಕ ತೆಗೆದು ಹಾಕಿರುತ್ತೇವೆಂಬುದನ್ನು ಸರ್ವೇಜನರ ತಿಳುವಳಿಕೆ ಬಗ್ಗೆ ಪ್ರಕಟಿಸುತ್ತೇವೆ.

ಯಾರಿಗಾದರೂ ನಮ್ಮ ಜವಳಿಗಳನ್ನು ತರಿಸಿಕೊಳ್ಳಬೇಕಾದಲ್ಲಿ ಅವರು ಕಾಲುಪಾಲು ಮೌಲ್ಯವನ್ನು ಮುಂಗಡವಾಗಿ ನಮಗೆ ರವಾನಿಸಿ ಬರೆದುಕೊಂಡಲ್ಲಿ ಸದರಿ ಮಾಲುಗಳನ್ನು ನಾವಾಗಿಯೇ ರವಾನಿಸಿಕೊಡುವೆವು

Mangalore,
4th May, 1907.

೪-೫-೦೭,
ಮಂಗಳೂರು.

ಜ್ವರಹರಿ.

47-4

ಇದು ಸಾಧಾರಣ ಜ್ವರ, ಚಳೀಜ್ವರ, ಮೊರೇಜ್ವರ, ಪಿತ್ಥಜ್ವರ ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್ ಟಿ ವೆಂಕಟಪತಿ ಅಯ್ಯಂಗಾರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಡೋಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚನ್ನಾಗಿ ಗುಣ ಹೊಂದಿರುವರು. ಇನ್ನೂ ದಿನಗಳು ಕಾಹಿಲೆ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨೦ ಡೋಸಿನ ಸೀಸೆಯನ್ನು ವಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ.—ಸೀಸೆ ೧ಕ್ಕೆ ೮ ಆಣೆ, ೧ ರೂ, ೧—೮ ರೂ., ೭೫ ೨—೧೨ ೮, ೧೧ ರೂ.; ಹನ್ನೆರಡು ಸೀಸೆ ತರಿಸಿಕೊಂಡರೆ ಡೋಸ್ಟೇಜು ಮಾಫಿ ಬಿಡಲಾಗುವದು

ಧೂಮಂಕಪೂರ್ರ.

Dhum-Carpoor

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳ ಒಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ಸಿಕ್ಕುವದು

ಕಡಪದ ಅಸಿಸ್ಟೆಂಟ್ ಸರ್ಜನ ಗಣಪತಿಯವರು—ಧೂಮಂಕಪೂರ್ರವನ್ನು ನಾನೂ ನನ್ನ ಕಾರ್ಯದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ಮನುಷ್ಯರಿಗೆ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇನೆ ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೆ ಔಷಧ ಎಂತ ಬರೆದಿದಾರೆ

ಈ ಎರಡು ಔಷಧಗಳು ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲಿಯೂ, ದೊಡ್ಡ ಪುಸ್ತಕಗಳಲ್ಲಿಯೂ, ಔಷಧ ವ್ಯಾಪಾರಿಗಳಲ್ಲಿಯೂ ಕ್ರಯಕ್ಕೆ ಸಿಕ್ಕುತ್ತವೆ ಇವಲ್ಲದೆ ಕೆಳಗಿನ ವಿಳಾಸದಲ್ಲಿಯೂ ವಿಶೇಷ —

ಪೆನಿನ್ಸುಲರ್ ಕೆಮಿಕಲ್ ಔಷಧಗಳ ಕಂಪೆನಿ
ಕೇಂಪ್ ಚಿಟ್ ಸ್ಟ್ರೀಟ್, ಮದ್ರಾಸ್

ಮುಂಬಯಿ ವ್ಯಾಪಾರಮಾಡಲಿಚ್ಛಿಸುವವರು.

35-51

ಮುಂಬಯಿಯಲ್ಲಿ ಪ್ರತಿಯೊಂದು ಮಾಲಿನ ತೂಕ ಅಳತೆ ಮತ್ತು ಇವುಗಳ ವರ್ಣನೆ ಹಾಗೂ ಅನೇಕ ಉಪಯುಕ್ತ ಮಾಹಿತಿಯಿರುವ ಪುಸ್ತಕ.—ಕ್ರಯ ೧೦ ಆಣೆ ವಿ. ಪಿ ಯಿಂದ ಕಳುಹಿಸುವ ಟಪಾಲು ಖರ್ಚು ಬೇರೆ. ಬುಕ್ಕು ಸೇಲರರಿಗೆ ಯೋಗ್ಯ ಕಮಿಷನ್ ದೊರೆಯುವದು ಮತ್ತು ಲಿಂಗಾಯತ ಧರ್ಮಸಂಬಂಧ ವಿರಕ್ತ ಕ್ರಿಯಾಲಕ್ಷಣವೆಂಬುವ ಕನ್ನಡ ಪುಸ್ತಕ—ನಾಲ್ಕು ಆಣೆ. ಅಕ್ಷರದಿಂದ ಬರೆಯಿರಿ ಪತ್ತಾ ಚನ್ನಬಸಪ್ಪ ಮಲಕಪ್ಪ ವ್ಯಾಪಾರದ ಪೇಟೆ ಮಾಂಡ್ವಿ, ಮುಂಬಯಿ.

ಹುಬ್ಬಳ್ಳಿ ನೋಡಿರಿ. ಓದಿ ನೋಡಿರಿ

ಬೇಸಿಗೆ ಅಂತ್ಯದವರೆಗೆ.

ಯೆಲ್ಲೋ ಕೆಂಪು ಮತ್ತು ತಾಜಾ ಕಪ್ಪು

ಹಾಸನ್ ಆಲ್ ಕ್ವಾರ್.

1 21

೩,೦೦೦ ಹಾಸನದ ಬೇಹಿ ಹೋಲಿಯನ

ಪಿಪೀರಿಯಾರ್ ವ್ಯೂಲ್ ದಾರ ಮಾತ್ರ

ಕೋಹಿ ಆಗುವ ವೂಲ್ ದಾರದ ಕ್ರಯ
ಬೋಹಿ ಆಗುವ ಒಂದು ವಲ್ ದಾರದ ಕ್ರಯ
ಪೋಹಿ ಸೋಲಿಯುವ ಕೋಕ್ಕೆ ನೂಜಿಕ್ಕೆ
ದಾರದಲ್ಲಿ ಆದ ಟೋಪಿ ಒರ್ಡ ೧ಕ್ಕೆ

ವಿ ಪಿ. ಮೂಲಕ ರವಾನಿಸುತ್ತೇವೆ.

ವಿಳಾಸ—ಸಿ. ರಘುನಾಥ ಕಾಮತ್,

ಜನರಲ್ ಮರ್ಚಂಟ್ ಬೋಳಾರ, ಮಂಗಳೂರು.

ಬೆಲೆಗೆ ಬೆಳ್ಳಿ—ಗುಣಕ್ಕೆ ಭಂಗಾರ.

86 52

ಇಂಥಾ ಕಾಗದಗಳು ನಮ್ಮಲ್ಲಿಗೆ ಅನೇಕ ಬಂದಿವೆ.

ಮಿ॥ ವಾಮನಶಿವಿ, ಜವಳಿ ವರ್ತಕ, ಮಂಜೇಶ್ವರ, ಇವರು ಬರೆಯುವುದು—"ಕ್ಲೆಮೆಂಟ್‌ಯವರ ಸ್ಯಾಚಿಕ್ ಬಾಂ ಬಹಳ ತೃಪ್ತಿಕರವಾದದ್ದೆಂದು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ಅದು ತುಂಬಾ ಗುಣಕೊಡುವಂಥಾದ್ದು ದಯವಿಟ್ಟು ಇನ್ನೂ ಮೂರು ಶೀಸೆಯನ್ನು ವಿ ಪಿ ಮೇಲೆ ಕಳುಹಿಸಿಕೊಡಿ" ಮಿ॥ ಜೆ ಡಬ್ಲ್ಯು ಸಾಮ್ಯುಯಲ್, ಪೋಸ್ಟ್ ಮಾಸ್ಟರ್, ತ್ರಿವೇಂದ್ರಂ, ಇವರು ಬರೆಯುವುದು "ನಿಜವಾಗಿಯೂ ಇದು ಎಲ್ಲಾ ತರದ ನೋವುಗಳಿಗೂ ಅದ್ಭುತವಾದ ಔಷಧವೆನ್ನುವುದಕ್ಕೆ ಸಂಶಯವಿಲ್ಲ" ಮಿಸೆಸ್ ಇ ಕ್ಯಾಂಡಸಿಂಗ್, ವೈಕಲ್ಲಾ, ಬೊಂಬಾಯಿ ಇವರು ಬರೆಯುವುದು—"ನಿಮ್ಮ ಸ್ಯಾಚಿಕ್ ಬಾಂ ಔಷಧವು ನನ್ನ ಕಾಲಿನ ಕೆಟ್ಟ ನೋವನ್ನು ಸಂಪೂರ್ಣವಾಗಿ ವಾಸಿಮಾಡಿದೆ" ಮಿಸೆಸ್ ಇ, ನೇಸನ್, ರಂಗೂನ್, ಇವರು ಬರೆಯುವುದು—"ನಾನು ಯಾವಾಗಲೂ ನಿಮ್ಮ ಕ್ಲೇಮೆಂಟ್ಸ್ ಸ್ಯಾಚಿಕ್ ಬಾಮನ್ನು ಗಂಟ್ಲು ಎದೆಯ ನೋವುಗಳಿಗೆ ಉಪಯೋಗಿಸುತ್ತೇನೆ ಅದರಿಂದ ನನಗೆ ಪ್ರತಿ ಸಲವೂ ಚನ್ನಾಗಿ ವಾಸಿಯಾಗಿದೆ" ಈ ಔಷಧದಿಂದ ಪಾರ್ಶ್ವನೋವು, ಕೀಲುಗಳ ಬಾಧೆ, ಹೊಟ್ಟೆನೋವು, ಬೆನ್ನೆನೋವು, ತಲೆನೋವು ಕೆಮ್ಮು, ಚೇಳುಗಳು, ಕೀಲುಗಳು ಕಚ್ಚಿದ ಗಾಯ, ಕೊರಳು ಊತ, ಕೈ ಕಾಲು ಒಡೆತ ಇವೆಲ್ಲಾ ಗುಣವಾಗುತ್ತವೆ ಇದನ್ನು ಹಾಕಿ ಚನ್ನಾಗಿ ತಿಕ್ಕಿದರೆ ಬಾಧೆ ಪರಿಹಾರವಾಗುವುದು ಕ್ರಯ ೧ ಬಾಟ್ಲಿಗೆ ೧೨ ಆಣೆ. ಪೋಸ್ಟೇಜ್ ೪ ಆಣೆ ೩ ಬಾಟ್ಲಿಗೆ ಅಂಚೆವೆಚ್ಚ ಸೇರಿ ರೂ ೨—೪ ಆಣೆ

ನಮ್ಮ ವಿಳಾಸ—ಎಫ್ ದಬ್ಲ್ಯೂ ಆರ್,
ಪಿ ಮೆಕಿ ರೋಡ್, ವೇಪೇರಿ, ಮದರಾಸ್

೧೮೭೦ ರಿಂದ ೧೯೦೭ ವರೆಗೆ.

ಕಾಲದ ಪರೀಕ್ಷೆ!

ಮೂವತ್ತೇಳು ವರ್ಷಗಳಿಗಿಂತಲೂ ಹೆಚ್ಚಾಗಿ

SCOTT'S EMULSION 31-10
(ಸ್ಕಾಟ್ಸ್ ಇಮಲ್‌ಷನ್)

ಎಂಬೀ ಸೇವನಾ ಔಷಧಿಯನ್ನು ವೈದ್ಯ ಪಂಡಿತರೆಲ್ಲಾ ಅನೇಕ ವೇಳೆ ಪರಿಶೋಧನೆಮಾಡಿ, ಸರ್ವೋತ್ತಮವಾದದ್ದೆಂದು ಹೇಳಿರುತ್ತಾರೆ ಆದದರಿಂದ ಮುಂದಿನ ರೋಗಗಳಿಗೆ ಪ್ರಪಂಚದಲ್ಲೆಲ್ಲಾ ಈಗ ಈ ಔಷಧವು ಸರ್ವ ಶ್ರೇಷ್ಠವಾದದ್ದಾಗಿ ಪರಿಣಮಿಸಿದೆ:—

ಶ್ವಾಸಕೋಶದ ಅಕ್ರಮಗಳು; ನಾನಾ ತರದ ಕೆಮ್ಮಲು; ಸಕಲವಿಧ ಕೃತ್ಯಗಳು; ಮಾಂಸಖಂಡಗಳ ಕ್ಷೀಣತೆ; ಆಹಾರದಲ್ಲಿ ಅರುಚಿ

ಇದಲ್ಲದೆ ತಂದೆಗೂ ಮಗನಿಗೂ ಬಲಕಾರಿಯಾದ ಮತ್ತು ಅಂಗ ಬೆಳೆಸುವ ಸೇವನಾ ಔಷಧವೂ ಇದೇ.

ಕೈ ಸೋಕದೆ ತಯಾರಾದದ್ದು.

ಔಷಧಗಳ ಅಂಗಡಿಗಳಲ್ಲೆಲ್ಲಾ ಬಿಕರಿಯಾಗುವದು

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,
ಔಷಧಗಳ ಕಾರ್ಖಾನೆ,
ಲಂಡನ್, ಇಂಗ್ಲೆಂಡ್.

ಈ ಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ.

CHAMBERLAIN'S PAIN BALM
ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವು

4-21

ಬೆನ್ನೆಲುಬಿನಲ್ಲಿನ ನೋವು, ಪಕ್ಕಗಳಲ್ಲಿ ಆಗುವ ನೋವು, ಖಂಡಗಳಲ್ಲಿ ಹುಟ್ಟುವ ನೋವು, ತಲೆನೋವು, ಪಚ್ಚಿಪದ ಕಡೆಗಳ ನೋವು, ವಾಯುನೋವು—ಇವುಗಳನ್ನೆಲ್ಲಾ ಸಂಪೂರ್ಣವಾಗಿ ವಾಸಿಮಾಡುವಂಥಾ ಔಷಧ.

ವಾಯುನೋವೆಂದರೇನು?

ಕೀಲುಗಳಲ್ಲೂ ಮಾಂಸಖಂಡಗಳಲ್ಲೂ ಗಾಯವಾಗುವುದು, ಊದಿಕೊಳ್ಳುವುದು, ಕಠಿಣವಾಗಿ ಸೆಳೆಯುವ ಬಾಧೆ ಖಂಡಗಳಲ್ಲಿ ಇರಿಯುವುದು. ವಿಶ್ರಾಂತಿಕೊಡದೆ ಇರುವುದು, ನಿದ್ದೆಹತ್ತದೆ ಇರುವುದು—ಇದೇ ಇದೆಲ್ಲಾ ನಿನಗೆ ಯಾವಾಗ ಉಂಟಾಗುವುದೋ ಆಗ್ಗೆ ನಿನಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು

ಆಗ ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹಾ ಶಾಖವು ಮೂಳೆಯೊಳಗೆ ವ್ಯಾಪಿಸುತ್ತದೆ ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ ಮನಸ್ಸಿಗೆ ಉಲ್ಲಾಸವಾಗುತ್ತದೆ ಆದನ್ನೇ ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯುವಿನ ಹುಟ್ಟನ್ನೇ ಕಿತ್ತುಹಾಕಿಬಿಡುವುದು

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ.

ಇದು ಎಲ್ಲೆಲ್ಲೂ ಬಿಕರಿಯಾಗುವುದು. ಸಣ್ಣ ಸೀಸೆಗೆ ೧ ರೂಪಾಯಿ. ಕ್ಷೇಯಿಂದ ಮುಟ್ಟಿದ್ದೇನೂ ಅಲ್ಲ. ದೊಡ್ಡ ಸೀಸೆಗೆ ೨ ರೂಪಾಯಿ

ಇದಕ್ಕೆ ಸಮಾನವಾದ ಪುಸ್ತಕ ಉಂಟೋ?

ಕನ್ನಡ ಭಾಷೆಯಲ್ಲಿ ಇದುವರಿವಿಗೂ ಇಂಥಾ ಸೊಗಸಾದ ಪುಸ್ತಕವು ಪ್ರಚುರವಾಗಲಿಲ್ಲ, ಸ್ವಲ್ಪ ನೋಡಿ.

"ಹಿಂದೂದೇಶ ಪ್ರದಕ್ಷಿಣ"

ಎಂದು ಕರೆಯಲ್ಪಡುವ ಈ ನೂತನ ಪುಸ್ತಕದಲ್ಲಿ ಸುಮಾರು ತೊಂಬತ್ತು ಉತ್ಕೃಷ್ಟವಾದ ಚಿತ್ರಗಳು ಅಡಗಿವೆ ಹಿಂದೂ ದೇಶವನ್ನೆಲ್ಲಾ ಸಂಚಾರ ಮಾಡುವುದರಿಂದ ಉಂಟಾಗುವ ಪರಮಾನಂದವನ್ನು ಒಂದು ಸಾರಿ ಈ ಗ್ರಂಥವನ್ನು ಓದುವದರಿಂದ ಹೊಂದಬಹುದು ಇದು ಮೊದಲನೇ ಸಾರಿ ಪ್ರಿಂಟ್ ಆಗಿದ್ದು ಬಹು ಶೀಘ್ರವಾಗಿ ಎಲ್ಲಾ ಮುಗಿದು ಹೋದಪ್ರಕಾರ ಈಗ ತಿರಿಗಿ ವಿಚಿತ್ರವಾಗಿಯೂ ಉಲ್ಲಾಸಕರವಾಗಿಯೂ ಇರುವ ಪ್ರಸಿದ್ಧವಾದ ಚಿತ್ರಗಳೊಡನೆ ಮಾಡಿಸಿರುತ್ತೇವೆ. ಇದರಲ್ಲಿರುವ ಚಿತ್ರಗಳನ್ನು ಸ್ವಲ್ಪ ನೋಡಿ—ಶ್ರೀರಂಗಪಟ್ಟಣದಲ್ಲಿರುವ ಹೈದರಲ್ಲಿ ಟಿಪ್ಪುಸುಲ್ತಾನರ ಗೋರಿ, ಹುಮಾಯೂನನ ಗೋರಿ, ಹುಗ್ಲಿ ನದಿ, ಕಲ್ಕತ್ತಾ ನಗರ, ಕಲ್ಕತ್ತಾ ಹೈ ಕೋರ್ಟು, ಕಾಳಿಕಾದೇವತೆ, ಚಂದ್ರನಗರ, ಬಂಗಾಳಿಯರ ಮನೆಗಳು, ಜಗನ್ನಾಥಸ್ವಾಮಿ ಭುವನೇಶ್ವರವೆಂಬ ದೇವಸ್ಥಾನ, ಜಗನ್ನಾಥದ ರಥೋತ್ಸವ, ಕನವಾಥ್ ದೇವಸ್ಥಾನ, ಎವರೆಸ್ಟ್ ಶಿಖರ, ಕಟ್ಮಂಡು ನಗರದ ಒಂದು ಬೀದಿ, ಖಟ್ಮಂಡು ನಗರದ ದೇವಸ್ಥಾನಗಳು, ಜಪಚಕ್ರಗಳು, ಲಂಟಿಗರು ದೋಣಿಯನ್ನು ಎಳಕೊಂಡು ಹೋಗುವದು, ಗಯಾದಲ್ಲಿರುವ ಬುದ್ಧನ ದೇವಸ್ಥಾನ, ಔರಂಗಜೇಬನು ಕಟ್ಟಿಸಿದ ಮಸೀತಿ, ಕಾಶೀ ಪುಣ್ಯಕ್ಷೇತ್ರದಲ್ಲಿರುವ ದಶಾಶ್ವಮೇಧಘಟ್ಟ, ಕಪಿಗಳಿಗೆ ತಿಂಡಿ ಹಾಕುವದು, ಕಾಶೀ ಕ್ಷೇತ್ರದ ದೇವಸ್ಥಾನಗಳು, ಅಲಹಾಬಾದ್ ನಗರ ಮತ್ತು ಅದರ ಕೋಟೆ, ಅಲಹಾಬಾದ್‌ನಲ್ಲಿರುವ ಖುಸ್ರು ಬಾಗ್ ಅರಮನೆ, ಯಮುನಾ ನದಿಯಲ್ಲಿ ಯಾತ್ರಿಕರು ಮುಳುಗುವದು, ಕಾನ್‌ಪುರದಲ್ಲಿರುವ ಶಿಲಾ ಶಾಸನ, ಕಾನ್‌ಪುರದ ಹತ್ತಿರ ಗಂಗಾ ನದಿಯ ಮೇಲೆ ಕಟ್ಟಿರುವ ಸೇತುವೆ, ಲಕ್ನೋ ನಗರದ ರೆಸಿಡೆನ್ಸಿ ಬಂಗಲೆ, ಲಕ್ನೋ ಪಟ್ಟಣದ ಬಾಗಿಲು, ಸರ್ ಹೆನ್ರಿ ಹ್ಯಾವಲಾಕನು, ಗೋಮತಿ ನದಿಯ ಮೇಲಿರುವ ಅರಮನೆ, ಹ್ಲಾಮಪಲ್ಲಿ ಜನರ ಸ್ಥಿತಿ, ಹರಿದ್ವಾರಘಟ್ಟ, ಗಂಗೋತ್ರಿ ದೇವಸ್ಥಾನ, ಹಿಮಪರ್ವತಗಳ ಮೇಲಿರುವ ಪಟ್ಟಣ, ಹಿಮಪ್ರವಾಹಗಳು, ಆಗ್ರಾ ಪಟ್ಟಣದ ಕೋಟೆ, ಯಮುನಾ ನದಿಯೂ ದೂರದಲ್ಲಿ ತೋರುತ್ತಿರುವ ತಾಜ್‌ಮಹಲ್ ಗೋರಿಯೂ, ತಾಜ್ ಮಹಲಿನ ಕಲ್ಲಿನಲ್ಲಿ ಕೆತ್ತಿರುವ ಥರದೆ, ಅಕ್ಬರನ ಅರಮನೆ, ಆಗ್ರಾ ಪಟ್ಟಣದ ಮುತ್ತಿನ ಮಸೀತಿ, ಫತ್ತೆಪುರ್ ಸಿಕ್ರಿಯಲ್ಲಿರುವ ಪಾಂಚ್ ಮಹಾಲ್ ಅರಮನೆ, ರಜಪೂತರು, ಭರತಪುರದ ಕೋಟೆ, ಅಲ್ವಾರಿನಲ್ಲಿ ಮಹಾರಾಜ ಭಕ್ತವಾರ್ ಸಿಂಗರ ಗೋರಿ, ದೆಹಲಿ ನಗರದ ದೊಡ್ಡ ಮಸೀತಿ, ಪುರಾತನ ದೆಹಲಿಯ ಬಾಗಿಲು, ರಾಜ ದೇವನು ಸ್ಥಾಪಿಸಿದ ಕಬ್ಬಿಣದ ಸ್ತಂಭ, ನಾದರ್ ಷಹಾನು ದೆಹಲಿ ನಗರದಲ್ಲಿ ಪ್ರಜಾ ಸಂಹಾರವನ್ನು ನೋಡುತ್ತಿರುವದು, ದೆಹಲಿಯ ಬಳಿಯಲ್ಲಿರುವ ಕುಟುಬ್ ಮಿನಾರ್, ಚಾಂದ್ನಿ ಚೌಕವೆಂಬ ಬೀದಿ, ಸಿಂಲಾಕ್ಕೆ ಹೋಗುವ ದಾರಿ, ಸಿಮ್ಲಾ, ಅಮೃತಸರದ ಸುವರ್ಣಾಲಯವು, ಲಾಹೋರಿನಲ್ಲಿರುವ ರಣಜಿತಸಿಂಗನ ಗೋರಿ, ಲಾಹೋರ್ ಪಟ್ಟಣ, ಈ ಮುಂತಾದ ಅನೇಕ ರಮಣೀಯವಾದ ಸ್ಥಳಗಳ ಚಿತ್ರಗಳು ಈ ಪುಸ್ತಕದಲ್ಲಿ ಅಡಗಿವೆ ಅವುಗಳನ್ನೆಲ್ಲಾ ವಿವರಿಸಲು ಸ್ಥಳವಿಲ್ಲ.

ಪ್ರತಿಯೊಂದು ಅಂಶದ ವಿವರಣೆಯೂ ಬಹು ಪರಿಷ್ಕಾರವಾಗಿದೆ. ದಕ್ಷಿಣ ದೇಶದಲ್ಲಿರುವ ಅನೇಕ ಪ್ರಸಿದ್ಧ ಸ್ಥಳಗಳ ಚಿತ್ರಗಳೂ, ಅವುಗಳ ವಿವರಣೆಗಳೂ ಇದರಲ್ಲಿವೆ. ಪುಸ್ತಕವು ಭಾರಿಯಾಗಿದೆ. ಪುಸ್ತಕದ ಅಚ್ಚು ಮತ್ತು ಬೈಂಡು ಬಹು ಸುಂದರವಾಗಿವೆ ಇದರ ಕ್ರಯ ಎಂಟೇ ಆಣೆ, ವಿ ಪಿ.ಪಿ. ಮೂಲಕ ಹನ್ನೊಂದು ಆಣೆಯಾಗುವದು. ಪುಸ್ತಕವು ಜಾಗ್ರತೆಯಲ್ಲಿ ಮಾರಾಟವಾಗುತ್ತಿದೆಯಾದ್ದರಿಂದ ತಾವುಗಳೆಲ್ಲ ಕೆಳಗೆ ಕಂಡ ವಿಳಾಸಕ್ಕೆ ಬೇಗನೆ ಬರೆದು ತರಿಸಿಕೊಳ್ಳಬೇಕು

ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪ್ಪೋ,
ಮೈಸೂರು. 48-3

ಪಾಳ್ಯದ ವೆಂಕಟಾಚಲ ಪಂಡಿತ, ಶ್ರೀಸೀತಾರಾಘವ ವೈದ್ಯಶಾಲಾ, ಕೊಳ್ಳೇಗಾಲ, ಇವರ ಸಿದ್ಧೌಷಧಗಳು.

21-14

೧. ಲೋಕಾಮಯಹರ ಕಸ್ತೂರೀ ಮಾತ್ರೆ.—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಸೇರ್ವೆಯಿಂದ ತಯಾರಿಸಿದೆ

ಚಳಿಜ್ವರ, ಜ್ವರ, ಹೊಟ್ಟೆಶೂಲೆ, ಸಂದುಗಳ ನೋವು, ಮೈ ಕೈಕಾಲು ಸೆಳೆತ (ಭಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಕಲ್ಲು ನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ.

ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ ಯಾವ ವಾಯುಲೆಗೂ ದಾರಿಕೊಡದೆ, ನೀರು ಹವಾಗಳ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ.

ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ಸಚ್ಚಿಜ್ವರ, ಕೃಕೃತ್ಯಗಳನ್ನು ಗುಣಪಡಿಸುತ್ತದೆ

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ ಒಳ್ಳೇ ಶಕ್ತಿವರ್ಧಕವಾಗಿದೆ

೨೦ ಮಾತ್ರೆಯುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು. ೧ ರಿಂದ ೧೨ ಕುಪ್ಪಿ ವರೆಗೆ ಪೋಸ್ಟೇಜು ೪ ಆಣೆ

ವಿಳಾಸ:—ಎಸ್. ಎಸ್. ಆರ್ ವೈದ್ಯಶಾಲಾ,
ಲಕ್ಷ್ಮೀವಿಲಾಸ ರೋಡ್, ಮೈಸೂರು

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

11 17

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೀಳಾದದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ.—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯಿತಿಯಿಂದಲೇ ಬರುವದು. (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಸೀದಾ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದು ಚನ್ನಾಗಿಲ್ಲದ್ದು ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ.

ಸಾದ, ಕೆಂಪು, ಕಪ್ಪು, ಬಿಳಿಕೆ, ಕಾಫಿ ಟೋಪಿಗಳು ೧ ರೂ ೮ ಆ; ೧ ರೂ ೬ ಆ; ೧ ರೂ ೪ ಆ

ರೇಶ್ಮೆ ಚುಕ್ಕೆಯುಳ್ಳ ಟೋಪಿಗಳು ೧ ರೂ. ೮ ಆ, ೨ ರೂ

ದಾರದ ಟೋಪಿಗಳು ೧ ರೂ. ೧೨ ಆ; ೧ ರೂ ೮ ಆ.; ೧ ರೂ. ೬ ಆ.

ಉಸುಕಿನ ಟೋಪಿಗಳು ೧ ರೂ ೮ ಆ, ೧ ರೂ. ೬ ಆ.

ಕೂಸುಗಳ ಟೋಪಿ, ಸೂಥಿಗ ಮೇಜೋಡು, ಅರ್ಧ ಮೇಜೋಡು, ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು.

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ.

ಶಾಲಾ ಪುಸ್ತಕಗಳು! ಶಾಲಾ ಪುಸ್ತಕಗಳು

51-1

ಗೌರ್ನಮೆಂಟ್, ಕನ್ನಡ ಬಾಲಬೋಧೆ ೧ನೆಯ ಭಾಗ			೦ ೧
,,	,,	೨ನೆಯ ಭಾಗ	೦ ೨
ಮಾರ್ಸ್‌ಡೆನ್‌ರವರ ಕನ್ನಡ ಮೊದಲನೆಯ ಪುಸ್ತಕ			೦ ೩
,,	,,	ಎರಡನೆಯ ಪುಸ್ತಕ	೦ ೩
,,	,,	ಮೂರನೆಯ ,,	೦ ೪
,,	,,	ನಾಲ್ಕನೆಯ ,,	೦ ೪
,,	,,	ಐದನೆಯ ,,	೦ ೫

ವಿಳಾಸ, ಮ್ಯಾನೇಜರ್,
ಸಿ. ಎಲ್. ಎಸ್. ಬುಕ್ ಡಿಪ್ಪೋ,
ಮೈಸೂರು.

ಮೈಸೂರು ಡಿಸ್ಟ್ರಿಕ್ಟ್ ಜಡ್ಜರವರ ಕೋರ್ಟಿನಲ್ಲಿ.

೨೨

೧೯೦೬-೦೭ ನೆ ಇಸವಿ ಸಿವಿಲ್ ಸೂಟ್ ನಂಬರ್ ೬

೧೯೦೬-೦೭ ನೆ ಇಸವಿ ಮಿಸಲೇನಿಯಸ್ ನಂಬರ್ ೩೬೩.

ವಾದಿಗಳು

ಮೈಸೂರು ದೇವರಾಜ ಮೊಹಲ್ಲಾದಲ್ಲಿರುವವರು —

೧. ಉಪ್ಪಿನ ಮಂಡಿ ಸಾಹುಕಾರ್ ಇಬ್ರಾಹಿಂ ಸೇಟ್,
೨. ಡಿಟ್ಟೋ ವ್ಯಾಪಾರದ ಅಬ್ದುಲ್ ಗನಿ ಸೇಟ್,
೩. ಜೀನಸಿ ವ್ಯಾಪಾರದ ಸಾಹುಕಾರ್ ಅಬ್ದುಲ್ ರಹಿಮಾನ್ ಸೇಟ್,
೪. ಮ್ಯುನಿಸಿಪಲ್ ಕಮಿಷನರ್ ಸಾಹುಕಾರ್ ರಹಮತುಲ್ಲಾ ಸೇಟ್,
೫. ಪಾತ್ರೆ ಅಂಗಡಿ ಕಂಟ್ರಾಕ್ಟರ್ ದಾವೂದ್ ಖಾನ್ ಸಾಬ್.
೬. ದಲ್ಲಾಳಿ ಮಿರಾನ್ ಮಹಮ್ಮದ್ ಸಾಬ್,
೭. ಜೀನಸಿ ಸ್ಟೇರುದಾರ್ ಮಹಮ್ಮದ್ ಖಾಸಿಂ ಸಾಬ್,
೮. ಖಾಸಿಂ ಸಾಬರ ಮಗ ಕಂಟ್ರಾಕ್ಟರ್ ಮಹಮ್ಮದ್ ಪೀರ್ ಸಾಬ್.

ಪ್ರತಿವಾದಿ:

ಸದರಿ ದೇವರಾಜ ಮೊಹಲ್ಲಾ ಸಂತೆಪೇಟೆಯಲ್ಲಿರುವ ಅಬ್ದುಲ್ ರಜಾಕ್ ಅಲ್ಲಿ ಖಾನ್ ಮೇಸ್ತ್ರಿ ಮಗ ಮಹಮ್ಮದ್ ಅಲ್ಲಿ ಖಾನ್ ಮೇಸ್ತ್ರಿ.

ಮೈಸೂರಲ್ಲಿರುವ ಎಲ್ಲಾ ಮಹಮ್ಮದೀಯ ಜನಗಳಿಗೂ ತಿಳಿಯಪಡಿಸುವದೇನಂದರೆ —

ಮೈಸೂರು ಶ್ರೀರಾಂಪೇಟೆಯಲ್ಲಿರುವ ಮಹಮ್ಮದೀಯರ ಮಸೀತಿಗೆ ತಾನು ಮುತ್ತವಲ್ಲಿಯೆಂದು ಹೇಳಿಕೊಂಡು, ಹಾಲಿ ಮುತ್ತವಲ್ಲಿ ಕೆಲಸ ನೋಡುತ್ತಿರುವ ಪ್ರತಿವಾದಿ ಮಹಮ್ಮದಲ್ಲಿ ಖಾನ್ ಮೇಸ್ತ್ರಿಯವರು ಮುತ್ತವಲ್ಲಿ ಕೆಲಸಕ್ಕೆ ಅರ್ಹರಲ್ಲವೆಂದೂನೂ, ಈತ ಮುಂದೆ ಮುತ್ತವಲ್ಲಿ ಕೆಲಸ ನೋಡಕೂಡದೆಂದೂನೂ ಡಿಕ್ಲೇರ್ ಮಾಡಿ, ಕಂಟ್ರಾಕ್ಟರ್ ಮಹಮ್ಮದ್ ಇಬ್ರಾಹಿಂ ಸಾಹೇಬರನ್ನಾಗಲಿ, ಅಥವಾ ನ್ಯಾಯವಾದ ಬೇರೆ ಇನ್ಯಾರಾದರೂ ಒಬ್ಬರನ್ನು ಮುತ್ತವಲ್ಲಿ ಕೆಲಸಕ್ಕೆ ನೇಮಕ ಮಾಡಿ, ಸದರಿ ಮಸೀತಿ ಕೆಲಸಗಳು ಮುಂದೆ ನಡೆಯುವದಕ್ಕೆ ಒಂದು ಕ್ರಮವಾದ ಯೋಜನೆಯನ್ನು ಕೋರ್ಟಿನವರು ಮಾಡಿಕೊಡಬೇಕೆಂಬದಾಗಿ ಪಕ್ಕರ ಮೇಲ್ಕಂಡ ವಾದಿಗಳು ತಮಗೋಸ್ಕರವಾಗಿಯೂ ಮತ್ತು ಇತರ ಮಹಮ್ಮದಿಯ ಜನಗಳಿಗೋಸ್ಕರವಾಗಿಯೂ ಎಂದು ಸಿವಿಲ್ ಪ್ರೊಸಿಡ್ಯೂರ್ ಕೋಡು ೩೦ ನೆ ಸೆಕ್ಷನ್ ಪ್ರಕಾರ ಅಪ್ಪಣೆ ಪಡೆದು ದಾಖಲ್ ಮಾಡಿದ ದಾವಾ ೧೯೦೭ ನೆ ಇಸವಿ ಜೂನ್ ಮಾಹೆ ೧ ನೇ ತಾರೀಖಿಗೆ ಹೀರಿಂಗು ಇರುತ್ತೆ.

ಸದರಿ ಮಸೀತಿಗೆ ಅಭಿಮಾನಶಾಲಿಗಳಾದ ಮಹಮ್ಮದಿಯರ ಸಮೂಹಕ್ಕಾಗಿ ಮೇಲ್ಕಂಡ ವಾದಿಗಳು ದಾವಾ ಮುಂದಿನ ಕ್ರಮ ನಡೆಸುವ ಭಾಗದಲ್ಲಿ ಅಭ್ಯಂತರವೇನಾದರೂ ಇದ್ದಲ್ಲಿ ಅಂಥಾವರು ಮೇಲೆ ಕಂಡ ಹೀರಿಂಗು ತಾರೀಖಿನ ದಿವಿ ೧೧ ಘಂಟೆಗೆ ಖುದ್ದಾಗಿ ಆಗಲಿ, ಅಥವಾ ಅಧಿಕಾರ ಹೊಂದಿದ ಲಾಯರ ಮೂಲಕವಾಗಿ ಆಗಲಿ ಈ ಕೋರ್ಟಿನ ರೂಬರೂಬು ಹಾಜರಾಗಿ, ಲಿಖಿತ ಮೂಲಕ ಕೋರ್ಟಿಗೆ ತಿಳಿಯಪಡಿಸಿಕೊಳ್ಳತಕ್ಕದ್ದಿರೆ

ಈ ತಾರೀಖು ೬ ನೇ ಮೇ, ೧೯೦೭ ನೆ ಇಸವಿ

(Sd) S VENKATAVARADAN IYENGAR,
District Judge

ವೃತ್ತಾಂತ ಪತ್ರಿಕೆ.

—:o:—

ಸ೯ ೧೯೦೭ ನೇ ಇಸವಿ ಮೇ ತಾ॥ ೨೩ ನೇ ಗುರುವಾರ.

ಬಹುಮಾನದ ವಿನಿಯೋಗವು.

ಮೈಸೂರು ಕೈಗಾರಿಕೆ ಮತ್ತು ವ್ಯವಸಾಯೋಪಕರಣಗಳ ಪ್ರದರ್ಶನವನ್ನು ಕುರಿತು ಬಹುಮಾನ ಪಡೆಯಲೋಸುಗ ಅನೇಕ ಬಾತ್ಮಿಗಳು ಬಂದವು. ಅವುಗಳನ್ನೆಲ್ಲಾ ಓದಿ ಇವರಲ್ಲಿ ಉತ್ತಮವಾದದ್ದು ಇಂಥಾದ್ದೆಂದು ಗೊತ್ತುಮಾಡುವುದು ನಮಗೆ ಸ್ವಲ್ಪ ಕಷ್ಟವಾಯಿತು. ಸುಮಾರಾಗಿ ಎಲ್ಲಾ ಬಾತ್ಮಿಗಳೂ ಒಳ್ಳೊಳ್ಳೇ ಅಭಿಪ್ರಾಯಗಳನ್ನೇ ಸೂಚಿಸಿರುತ್ತವೆ. ಮ॥ ಬಿ. ರಾಮಯ್ಯನವರು ಬರೆದಿರುವುದೂ ಚೆನ್ನಾಗಿರುವುದು. ಕುಲೀಸ್ ಪೇಟೆಯ ಆರ್. ಶ್ರೀನಿವಾಸರಾಯರು ಬರೆದಿರುವುದಕ್ಕೆ ಬಹುಮಾನ ಕೊಡುವುದಾಗಿ ತೀರ್ಮಾನಿಸಿ ಅವರ ಬಾತ್ಮಿಯನ್ನು ಇನ್ನೊಂದು ಭಾಗದಲ್ಲಿ ಪ್ರಕಟಿಸಿರುವೆವು. ಇತರ ಬಾತ್ಮಿಗಳಂತೆಯೇ ಇದೂ ಬಹಳ ಸೊಗಾಗಿ ಬರೆದು ಸ್ಥಳವಿಲ್ಲದ್ದರಿಂದ ಕೆಲವು ಭಾಗಗಳನ್ನು ಪ್ರಕಟಿಸಲು ಸಾಧ್ಯವಾಗಲಿಲ್ಲ.

ಈ ಸಂದರ್ಭದಲ್ಲಿ ನಾವು ಒಂದಂಶವನ್ನು ಸೂಚಿಸುತ್ತೇವೆ. ಸರ್ಕಾರದವರು ಇಂಥಾ ಪ್ರದರ್ಶನಗಳ ವಿಷಯದಲ್ಲಿ ಪ್ರಜೆಗಳೇ ವಿಶೇಷವಾದ ಉತ್ಸಾಹವನ್ನು ತೋರಿಸುವಂತೆ ನೋಡಬೇಕು. ಜಮೀನ್ದಾರರು ರೈತಾಬಿಜನರು ಕಸಬುದಾರರು ಮುಂತಾದವರಲ್ಲಿ ಮುಖಂಡರಾದವರನ್ನೇ ತುಂಬಾ ಪ್ರೋತ್ಸಾಹಪಡಿಸಿ, ಅವರುಗಳೇ ಸೇರಿ ಈ ಪ್ರದರ್ಶನಗಳನ್ನು ನಡಸುವಂತಾಗಬೇಕು. ಹಾಗಿಲ್ಲದೆ ಸರ್ಕಾರಿ ಅಧಿಕಾರಿಗಳೇ ಮುಂದಾಳುಗಳಾಗಿ ನಿಂತರೆ ಪ್ರದರ್ಶನಗಳ ಉದ್ದೇಶವು ನೆರವೇರುವುದಿಲ್ಲ. ಆದಕಾರಣ ನಮ್ಮ ಸಂಸ್ಥಾನದ ವ್ಯವಸಾಯವೂ ಕಸಬುಗಳೂ ಅಭಿವೃದ್ಧಿ ಹೊಂದುವುದಕ್ಕೆ ಸರ್ಕಾರದವರು ನಡಸಬೇಕೆಂದು ಉದ್ದೇಶಿಸಿಟ್ಟಿರುವ ಈ ಪ್ರದರ್ಶನಗಳಲ್ಲಿ ಪ್ರಜೆಗಳೇ ಹೆಚ್ಚು ಮುಂದೆ ಮುಂದೆ ನಿಂತು ನಡಸಬೇಕಾಗಿದೆ. ವಿಲಾಯತಿಯಲ್ಲಿ ಇಂಥಾ ಪ್ರದರ್ಶನಗಳನ್ನು ನಡಸತಕ್ಕವರು ಪ್ರಜೆಗಳೇ ಹೊರತು ಸರ್ಕಾರದವರಲ್ಲ. ಅವರು ಸರ್ಕಾರದವರ ಸಹಾಯವನ್ನು ನಿರೀಕ್ಷಿಸದೇನೇ ತಾವು ತಾವೇ ಸೇರಿಕೊಂಡು ತಮ್ಮ ಕಸಬುಗಳನ್ನು ಅಭಿವೃದ್ಧಿಪಡಿಸಿಕೊಳ್ಳುವ ಭಾಗವಾಗಿ ಇಂಥಾ ಕಾರ್ಯಗಳನ್ನು ನಡಸುತ್ತಿದಾರೆ. ಸದ್ಯದಲ್ಲಿ ಹೀಗಿದ್ದರೂ ಕ್ರಮೇಣ ಈ ಪ್ರದರ್ಶನಗಳನ್ನು ರೈತಪ್ರಜೆಗಳು ನಡಸುವಂತೆ ಅವರಲ್ಲಿ ನಮ್ಮ ಸರ್ಕಾರದವರು ಉತ್ಸಾಹವನ್ನುಂಟುಮಾಡುವರೆಂದು ನಿರೀಕ್ಷಿಸುತ್ತೇವೆ.

ನಮಗೆ ಗುರುವು ಬೇಕೋ?

ಹೋದ ವಾರ ಶೃಂಗೇರಿ ಜಗದ್ಗುರುಗಳು ರಾಜ ಮರ್ಯಾದೆಗಳೊಡನೆ ಬೆಂಗಳೂರಿಗೆ ಬಂದದ್ದನ್ನು ಅಲ್ಲಿನ ಅನೇಕ ಸಹಸ್ರ ಜನರು ನೋಡಿರಬಹುದು. ಇಂಥಾ ಸಂದರ್ಭದಲ್ಲಿ ಜನರು ಗುರುವೆನ್ನಿಸಿಕೊಂಡಿರುವವರು ಮಾಡತಕ್ಕ ಕಾರ್ಯಗಳೇನೆಂದು ವಿಚಾರಿಸುವದು ಅವಶ್ಯಕವಾಗಿದೆಯಷ್ಟೆ. ಯಾತಕ್ಕೆ ನಮಗೆ ಒಬ್ಬ ಗುರುವು ಬೇಕಾಗಿದ್ದಾನೆಂಬುದು. ಒಂದು ಪ್ರಶ್ನೆ. ಅಜ್ಞಾನವನ್ನು ಪರಿಹರಿಸಿ, ಸಂಶಯವನ್ನು ಹೋಗಲಾಡಿಸಿ ಸತ್ಯವನ್ನೂ ಮತ್ತು ನಮ್ಮ ಕರ್ತವ್ಯವನ್ನೂ ಬೋಧಿಸುವದಕ್ಕೆ ಒಬ್ಬ ಗುರುವು ಅಗತ್ಯವಾಗಿ ಬೇಕಾಗಿರುತ್ತಾನೆಂದು ಧೈರ್ಯವಾಗಿ ಉತ್ತರ ಕೊಡಬಹುದಲ್ಲವೆ? ಈಗಿನ ಕಾಲದಲ್ಲಿ ಅನೇಕ ಸಂಶಯಗಳಿಂದ ಪೀಡಿತರಾಗಿ ಕಳವಳದಿಂದ ತುಂಬಿದವರಾಗಿ ತತ್ವವನ್ನರಿತುಕೊಳ್ಳುವದಕ್ಕೋಸ್ಕರ ಒಬ್ಬ ಗುರುವನ್ನು ಹುಡುಕುತ್ತಿರುವರು. ಯಾವ ಯಾವ ಸಂಶಯಗಳು ಮನುಷ್ಯನನ್ನು ಬಾಧಿಸುತ್ತಿರುವದನ್ನು ಇಲ್ಲಿ ವಿಚಾರಿಸೋಣ.

ಮೊದಲನೇದಾಗಿ ಈಗಿನ ಕಾಲದಲ್ಲಿ ಜನರು ನವೀನ ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ಶಾಸ್ತ್ರಗಳನ್ನೋದಿ ದೇವರು ಒಬ್ಬನೇ ಎಂದು ತಿಳಿದುಕೊಂಡಿರುತ್ತಾರೆ. ಆತನೊಬ್ಬನೇ ಲೋಕವನ್ನು ಸೃಷ್ಟಿಸಿದನು ಆತನೇ ಕರ್ತೃವೆಂತಲೂ ಆತನು ತನ್ನ ಸಹಾಯಕ್ಕಾಗಿ ಯಾವ ಉಪದೇವರುಗಳನ್ನಾಗಲಿ ದೇವತೆಗಳನ್ನಾಗಲಿ ನೇಮಿಸಿಲ್ಲವೆಂತಲೂ ಆತನೊಬ್ಬನೇ ಎಲ್ಲರ ಪೂಜೆಗೂ ಯೋಗ್ಯನಾಗಿರುತ್ತಾನೆಂತಲೂ ತಿಳಿದುಕೊಂಡಿರುತ್ತಾರೆ. ದೇಶದ ಸಾಧಾರಣ ಜನರು ಲೆಕ್ಕವಿಲ್ಲದ ದೇವತೆಗಳನ್ನೂ ಕೆಲವು ಸಮಯಗಳಲ್ಲಿ ಭೂತಗಳನ್ನೂ ಕೂಡ ಪೂಜಿಸುತ್ತಿರುವರು. ವಿದ್ಯಾವಂತನಾದ ಮನುಷ್ಯನಾದರೋ ಇವುಗಳು ಮನುಷ್ಯನಿಂದಲೇ ಸೃಷ್ಟಿಸಲ್ಪಟ್ಟವೆಂತಲೂ ಇವುಗಳಿಂದ ಯಾವ ಪ್ರಯೋಜನವೂ ಆಗುವದಿಲ್ಲವೆಂತಲೂ ತಿಳಿದಿರುತ್ತಾನೆ. ಹಾಗಾದರೆ ವಿದ್ಯಾವಂತನ ಕರ್ತವ್ಯವೇನು? ತಾನು ಯಾವದನ್ನು ಅಬದ್ಧವೆಂದು ತಿಳಿದುಕೊಂಡಿದ್ದಾನೋ ಅಂಥಾದ್ದನ್ನು ಪೂಜಿಸಬೇಕೋ? ದೇವರನ್ನು ತೋರಿಸುವದಕ್ಕೆ ಬದಲಾಗಿ ಆತನನ್ನು ಹಾಸ್ಯಮಾಡುವ ವಿಗ್ರಹಗಳಿಗೆ ಮನೆಯಲ್ಲಾಗಲಿ ಅಥವಾ ದೇವಸ್ಥಾನಗಳಲ್ಲಾಗಲಿ ಅಡ್ಡಬೀಳಬೇಕೋ? ತಾನು ತಾನು ತಿಳಿದುಕೊಂಡಿರುವದನ್ನು ಜನರಿಗೆ ತಿಳಿಸಿ ಅವರಿಗೆ ಸತ್ಯವನ್ನು ಬೋಧಿಸಿ ಅವರನ್ನು ವಿದ್ಯಾವಂತರನ್ನಾಗಿ ಮಾಡಿ ಉತ್ತಮಸ್ಥಿತಿಗೆ ತರುವದು ಅವನ ಕರ್ತವ್ಯವಾಗಿರುತ್ತದೆ.

ಸಕ್ತಾಃ ಕರ್ಮಣ್ಯವಿದ್ವಾಂಸೋ ಯಥಾಕುರ್ವನ್ತಿ ಭಾರತ
ಕುರ್ಯಾದ್ವಿದ್ವಾಂಸ್ತಥಾಸಕ್ತಶ್ಚಿಕೀರ್ಷುರ್ಲೋಕಸಂಗ್ರಹಂ

ಓ ಭಾರತನೇ, ಮೂಢರು ಫಲಾಸಕ್ತಿಯಿಂದ ಕರ್ಮಗಳನ್ನು ಆಚರಿಸುತ್ತಾರೆ. ಜ್ಞಾನಿಯೂ ಕೂಡ ಮೂಢರನ್ನು ಪ್ರೇರಿಸುವದಕ್ಕೆ ಕರ್ಮಗಳನ್ನು ನಡಿಸಲಿ ಎಂಬದಾಗಿ ಭಗವದ್ಗೀತೆಯಲ್ಲಿ ಬರೆದಿದೆಯಲ್ಲವೇ? ಇಂಥಾ ಆಜ್ಞೆಯನ್ನು ಸಕಲ ವಿಷಯಗಳಲ್ಲಿ ಕೈಕೊಂಡರೆ ಲೋಕವನ್ನು ವಿವೇಕಿಗಳು ಆಳುವದಕ್ಕೆ ಬದಲಾಗಿ ಅವರೆಲ್ಲರೂ ಮೂಢರ ವಶವಾಗುವದಕ್ಕೆ ಸಂಶಯವೇನಿದೆ? ವಿದ್ಯಾವಂತರಾದವರು ವಿದ್ಯವಿಲ್ಲದವರಿಗೆ ಜ್ಞಾನವನ್ನು ಕೊಡುವದು ಅವರ ಕರ್ತವ್ಯವಾಗಿರುವದು.

ಮಾರಮ್ಮನ ಜಾತ್ರೆಯಲ್ಲಿ ನಡೆಯತಕ್ಕ ಸಂಗತಿಗಳನ್ನು ಸ್ವಲ್ಪವಾಗಿ ವಿಚಾರಿಸೋಣ. ಈ ಜಾತ್ರೆಗೆ ಅನೇಕ ಸಹಸ್ರ ಜನರು ಕೂಡಿಬರುತ್ತಾರೆ. ಭಯಂಕರವಾಗಿ ತೋರುತ್ತಿರುವ ಈ ಮಾರಿ ದೇವತೆಯ ಎದುರಿನಲ್ಲಿ ಅನೇಕ ಕುರಿ ಕೋಣಗಳನ್ನು ಬಲಿಕೊಡುತ್ತಾರೆ. ಮತ್ತೆ ಕೆಲವರು ಹೆಂಡ ಸಾರಾಯಿ ಮೊದಲಾದ ಅಮಲೇರುವ ಮದ್ಯಗಳನ್ನು ಕುಡಿದು ಮಾನಹೀನವಾಗಿ ಬಿದ್ದಿರುವರು. ಇನ್ನು ಕೆಲವರು ವ್ಯಭಿಚಾರವೇ ಮೊದಲಾದ ಹೀನ ಕೃತ್ಯಗಳಲ್ಲಿ ಆನಂದಪಡುತ್ತಿರುವರು.

ಗುರುಗಳೆಲ್ಲರೂ ವಿದ್ಯಾವಂತರಿಗೆ "ನೀವು ಸುಮ್ಮನಿರದೆ ಕಾರ್ಯಸಾಧಕರಾಗಿ ನಾನಾ ಪೂರ್ವಕಾಲದಿಂದ ಆಚರಣೆಯಲ್ಲಿ ಬಂದಿರುವ ಅನೇಕ ದುಷ್ಟ ಪದ್ಧತಿಗಳನ್ನು ಆಚರಿಸದಂತೆ ನೋಡಿಕೊಳ್ಳುವದೂ ನಿಮ್ಮ ಕರ್ತವ್ಯವಾಗಿದೆ" ಯೆಂದು ಬೋಧಿಸುವ ಸಮಯವು ಬಂದಿರುತ್ತದೆ. "ಏಳಿರಿ, ಧೈರ್ಯವಾಗಿರಿರಿ, ನಿಮ್ಮ ಜೊತೆ ಸೃಷ್ಟಿಗಳೂ ಸಹೋದರರೂ ಆದ ಸಾಧಾರಣ ಜನರನ್ನು ವಿದ್ಯಾವಂತರನ್ನಾಗಿ ಮಾಡಿ ಅವರಿಗೆ ಸತ್ಯವನ್ನು ಬೋಧಿಸಿರಿ" ಎಂಬದಾಗಿ ತಿಳಿಸುವದು ಗುರುಗಳ ಕೆಲಸವಾಗಿರುತ್ತದೆ.

ಎರಡನೇದಾಗಿ ಜಾತಿ ಪದ್ಧತಿಯು ಈ ದೇಶದ ವಿದ್ಯಾವಂತರನೇಕರನ್ನು ಕಳವಳಪಡಿಸುತ್ತಿರುವದು. ಜಾತಿ ಕಟ್ಟಳೆಗಳು ಪೂರ್ವಕಾಲದಲ್ಲಿ ಏರ್ಪಡಿಸಲ್ಪಟ್ಟವು. ಆದರೆ ಅವುಗಳಲ್ಲಿ ಕೆಲವು ನ್ಯಾಯವಾದವುಗಳಲ್ಲ. ಜನಸಮುದಾಯದಭಿವೃದ್ಧಿಗೆ ಜಾತಿಯು ಕೇಡನ್ನುಂಟುಮಾಡುತ್ತದೆ. ವೇಶ್ಯಾಂಗನೆಯರನ್ನು ವಿವಾಹ ಕಾಲಗಳಲ್ಲಿ ಕರೆಯಿಸಿ ಅವರಿಂದ ನರ್ತನವನ್ನಾಡಿಸುವದೂ ದೇವಸ್ಥಾನಗಳಲ್ಲಿ ಅವರನ್ನು ಸೇರಿಸುವದೂ ನ್ಯಾಯವಾಗಿ ತೋರುವದೋ? ಎಂದಿಗೂ ಇಲ್ಲ. ದೇವರು ಮಹಾ ಪರಿಶುದ್ಧನು ಮತ್ತು ಅವನ ಆಲಯವು ಆತನ ಪವಿತ್ರತ್ವವನ್ನು ನಮಗೆ ತೋರಿಸತಕ್ಕದ್ದಾಗಿರಬೇಕು. ವಿವಾಹವು ಮಹಾ ಪರಿಶುದ್ಧವಾದ ಕಾರ್ಯವು. ಅದನ್ನು ನೆರವೇರಿಸುವಾಗ್ಗೆ ಎಲ್ಲಾ ದುಷ್ಟ ಪದ್ಧತಿಗಳನ್ನು ತ್ಯಜಿಸಬೇಕಾಗಿರುತ್ತದೆ. ವಿದ್ಯಾವಂತರನ್ನು ಸಂಘಪರಿಷ ರಣಕಾರ್ಯಗಳಲ್ಲಿ ಗುರುಗಳು ಮುಂದಾಗಿ ನಿಂತು ನಡಿಸುವದು ನ್ಯಾಯವಾಗಿದೆ. ಜನಸಮುದಾಯದ ಏಳಿಗೆಗೆ ಕುಂದಕವಾಗಿರುವ ದುಷ್ಟಪದ್ಧತಿಗಳನ್ನು ವಿವೇಕದಿಂದಲೂ ಸತ್ಯದಿಂದಲೂ ಧೈರ್ಯವಾಗಿಯೂ ಖಂಡಿಸುವದು ಗುರುಗಳ ಕೆಲಸವಾಗಿರಬೇಕು. ಶೃಂಗೇರಿ ಜಗದ್ಗುರುಗಳು ವಿದ್ಯೆಯಿಂದಲೂ ಭಕ್ತಿಯಿಂದಲೂ ಪರಿಶುದ್ಧತೆಯಿಂದಲೂ ಕೂಡಿದವರಾಗಿರುತ್ತಾರೆಂದು ಜನರೆಲ್ಲರು ಮಾತನಾಡಿಕೊಳ್ಳುತ್ತಾರೆ. ಇಂಥಾ ದೊಡ್ಡ ಪದವಿಯನ್ನು ಹೊಂದಿರತಕ್ಕ ಈ ಗುರುಗಳು ತಮ್ಮ ಒಂದು ಮಾತಿನಿಂದ ಜನರಲ್ಲಿ ಎಷ್ಟೋ ಉತ್ಕೃಷ್ಟವಾದ ಬದಲಾವಣೆಗಳನ್ನು ತರಬಹುದಲ್ಲವೇ? ಅವರು ತಮ್ಮ ಮೆರವಣಿಗೆಯಲ್ಲಿ ವೇಶ್ಯಾಸ್ತ್ರೀಯರು ಬರಕೂಡದೆಂದು ಆಜ್ಞೆ ಮಾಡಿದರೆ ದೇಶಕ್ಕೆಷ್ಟೋ ಉಪಕಾರವಾಗುವದು. ಸತ್ಯದಕಡೆಗೆ ಜನರನ್ನು ನಡಿಸುವದೇ ಗುರುವಿನ ಮುಖ್ಯೋದ್ದೇಶವಾಗಿರಬೇಕು.

ಒಳದೇಶದ ವೃತ್ತಾಂತಗಳು.

ಶ್ರೀಮನ್ಮಹಾರಾಜರವರು ಜೂನ್ ತಿಂಗಳ ೧ ನೆ ತಾ॥ ನೀಲಗಿರಿಯಿಂದ ರಾಜಧಾನಿಗೆ ದಯಮಾಡುವರೆಂದು ಕೇಳುತ್ತೇವೆ.

***

ಹೈದರಾಬಾದ್ ಸಂಸ್ಥಾನದ ಮಹಮದಿಯ ಛೀಫ್ ಜಡ್ಜರವರು ಈಗ ರಾಜಧಾನಿಗೆ ದಯಮಾಡಿ, ಇಲ್ಲಿನ ಮುಖ್ಯಭಾಗಗಳನ್ನು ನೋಡುತ್ತಿದಾರೆ

***

ಮಹಾಮಾತೃಶ್ರೀಯವರು ಪರಿವಾರ ಸಹಿತ ನೆನ್ನೆ ನೀಲಗಿರಿಯಿಂದ ಹೊರಟು ಈ ದಿನ ಸಾಯಂಕಾಲ ೫॥ ಗಂಟೆಗೆ ರಾಜಧಾನಿಯನ್ನು ತಲಪುವವರಾಗಿದಾರೆ

***

ಮಡಕೇರಿ ಮ್ಯುನಿಸಿಪಾಲಿಟಿಯವರು ೧೦,೦೦೦ ರೂಪಾಯಿ ಖರ್ಚುಮಾಡಿ, ಒಂದು ದೊಡ್ಡ ಮಾರ್ಕೆಟ್ಟನ್ನು ಕಟ್ಟಿಸಿಕೊಳ್ಳಬೇಕೆಂದು ಗೊತ್ತುಮಾಡಿದಾರೆ

***

ವಿಧವಾ ಪುನರ್ವಿವಾಹಗಳನ್ನು ನಡೆಸಿ ತುಂಬಾ ಪ್ರಖ್ಯಾತಿಗೆ ಬಂದಿರುವ ಮೆ॥ ರಾವ್ ಬಹದ್ದೂರ್ ವೀರೇಶಲಿಂಗಂಪಂತುಲುಯವರು ನೆನ್ನೆ ಬೆಂಗಳೂರಿಂದ ರಾಜಧಾನಿಗೆ ದಯಮಾಡುವವರಾಗಿದ್ದರು.

***

ಮೆ॥ ರಾಬರ್ಟ್‌ಸನ್‌ರು ಬೆಂಗಳೂರು ಸಿಟಿ ಪೋಲೀಸ್ ಇನ್ಸ್ಪೆಕ್ಟರ್ ಕೆಲಸದ ಚಾರ್ಜನ್ನು ಕಳೆದ ವಾರ ಮೆ॥ ಮಹಮದ್ ಜಾಫರ್ ಮೇಸ್ತ್ರಿಯವರಿಗೆ ವಹಿಸಿ, ಪಾವಗಡದ ತಾಲ್ಲೂಕ್ ಅಮಲ್ದಾರಿ ಕೆಲಸಕ್ಕೆ ಹೋದರು. ಮೆ॥ ಎಚ್ ಸುಬ್ಬರಾಜೇ ಅರಸಿನವರಿಗೆ ದೇವನಹಳ್ಳಿ ತಾಲ್ಲೂಕ್ ಇನ್ಸ್ಪೆಕ್ಟರ ಕೆಲಸ ನೇಮಕವಾಗಿದೆ.

***

ಅರಸೀಕೆರೆ ತಾಲ್ಲೂಕು ಜಾವಗಲ್ಲಿನಲ್ಲಿ ಸುಮಾರು ೭೦ ವರುಷಗಳಿಂದ ನಿಂತುಹೋಗಿದ್ದ ರಥೋತ್ಸವವನ್ನು ಈ ಸಲ ನಾಳೆ ಪೌರ್ಣಿಮೆಯಿಂದ ನಡೆಯುವಂತೆ ಏರ್ಪಡಿಸಿದಾರೆಂತಲೂ, ಅದಕ್ಕಾಗಿ ಮೆ॥ ರಾಮಕೃಷ್ಣಯ್ಯನವರು ಒಂದು ಹೊಸ ರಥವನ್ನು ಮಾಡಿಸಿಕೊಟ್ಟದಾರೆಂತಲೂ ಒಬ್ಬ ಬಾತ್ಮಿದಾರರು ಬರೆಯುತ್ತಾರೆ

***

ಬೆಂಗಳೂರಿನಲ್ಲಿ ದೊಡ್ಡ ಸಾಹುಕಾರನಾಗಿದ್ದ ರಾಜಾ ವೆಂಕಟಸುಬ್ಬಶೆಟ್ಟಿ ಎಂಬಾತನು ಕಳುವಿನಮಾಲನ್ನು ತೆಗೆದುಕೊಂಡದ್ದು ರುಜುವಾತಾಯಿತೆಂದು ಹೇಳಿ, ಡೆಪ್ಯುಟಿ ಕಮಿಷನರ್ ಮೆ॥ ಸ್ಪಾರ್ಕ್ಸ್ ಯವರು ಆತನಿಗೆ ಕಳೆದ ಶನಿವಾರ ಒಂದು ವರುಷ ಕಠಿಣಶಿಕ್ಷೆಯನ್ನೂ ೫೦೦ ರೂಪಾಯಿ ಜುಲ್ಮಾನೆಯನ್ನೂ ವಿಧಿಸಿದಾರೆ.

***

ಎರಡನೆಯ ಕೌನ್ಸಿಲರಾದ ಮೆ॥ ಕೆ. ಪಿ. ಪುಟ್ಟಣ್ಣಚೆಟ್ಟಿಯವರ ಪತ್ನಿಯವರು ಕೆಲವು ಕಾಲದಿಂದ ಕಾಯಿಲೆಯಾಗಿದ್ದು ಹಿಂದಿನ ಮಂಗಳವಾರ ಬೆಳಿಗ್ಗೆ ಬೆಂಗಳೂರಿನಲ್ಲಿ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ. ಆ ದಿನ ಅವರ ಬಂಧುಗಳೂ ಸ್ನೇಹಿತರೂ ಅಧಿಕಾರಿಗಳೂ ಅವರ ಬಂಗಲೆಗೆ ಹೋಗಿ ತಮ್ಮ ಸಂತಾಪವನ್ನು ಸೂಚಿಸಿಬಂದರು.

***

ಇದೇ ಮೇ ತಾ. ೧೮ ನೆ ಶನಿವಾರ ಬೆಳಿಗ್ಗೆ ೧೦॥ ಗಂಟೆ ಸಮಯದಲ್ಲಿ ಬೆಂಗಳೂರು ಹಳೆ ತರಗಿನ ಪೇಟೆಯಲ್ಲಿ ಅಬೂಬಕರ್ ಸೇಟ್ ಯವರ ಕಿರೋಸಿನ್ ಅಂಗಡಿಗೆ ಅಕಸ್ಮಾತ್ ಬೆಂಕಿ ಕೆಲಸದವರ ಅಜಾಗ್ರತೆಯಿಂದ ಬೆಂಕಿ ಕಿಡಿಗಳು ಹಾರಿ ಎಣ್ಣೆ ಡಬ್ಬಾಗಳು ಹತ್ತಿಕೊಂಡು, ೬ ಡಬ್ಬಾಗಳಷ್ಟು ಹಾರಿದು ಹೋಯಿತು. ಅಷ್ಟರಲ್ಲಿ ಬಹಳ ಗದ್ದಲವಾಗಿ ಅನೇಕರು ಸೇರಿ ಉರಿಯನ್ನು ಆರಿಸಿದರು.

***

ಬೆಂಗಳೂರು ಛೀಫ್ ಕೋರ್ಟಿನ ಛೀಫ್ ಜಡ್ಜರಾಗಿದ್ದ ಮೆ॥ ಲಾಯಿ ಮೂರ್ ಯವರು ಈ ಸಲ ಬೇಸಿಗೆ ರಜಾ ಪ್ರಾರಂಭದಲ್ಲಿ ಸೀಮೆಗೆ ಹೋಗಿ ಬರಬೇಕೆಂದು ಪ್ರಯಾಣ ಮಾಡಿದರು. ಇವರು ಹಿಂದಿನ ಮಂಗಳವಾರ ವಿಲಾಯತಿಯಲ್ಲಿ ಕಾಲವಾದರೆಂದು ತಂತೀ ವರ್ತಮಾನ ಬಂದಿದೆ. ಅವರಿಗೆ ೬೧ ವರುಷ ವಯಸ್ಸಾಗಿತ್ತು. ಇವರ ಮೂರು ಮಂದಿ ಗಂಡು ಮಕ್ಕಳೂ ಹಿಂದುಸ್ಥಾನದಲ್ಲಿ ದೊಡ್ಡ ಕೆಲಸಗಳ ಮೇಲಿರುತ್ತಾರೆ.

***

ಬೆಂಗಳೂರು ಪಟ್ಟಣದ ರೈಲ್ವೆ ಸ್ಟೇಷನ್ ಬಳಿ ಇರುವ ಮ್ಯುನಿಸಿಪಲ್ ತೋಟದಲ್ಲಿ ಡೆಪ್ಯುಟಿ ಕಮಿಷನರವರು ಕೊಳವೆಯ ಭಾವಿಯೊಂದನ್ನು ತೆಗಿಸಿರುತ್ತಾರೆ. ಇದಕ್ಕೆ ೬೦ ರೂ. ಖರ್ಚಾಯಿತು. ಕೊಳವೆಯ ಬಾಯಿ ಒಂದೂವರೆ ಅಂಗುಲ ಅಗಲವಾಗಿದೆ. ಪ್ರತಿನಿಮಿಷಕ್ಕೂ ೧೦ ಬಿಂದಿಗೆಯಷ್ಟು ನೀರು ಉಕ್ಕಿಬರುತ್ತಿದೆ. ಈ ನೂತನವಾದ ಭಾವಿಯನ್ನು ಕಳೆದ ವಾರ ದಿವಾನರೇ ಮೊದಲಾದವರು ನೋಡಿಬಂದರು. ಇಂಥಾ ಭಾವಿಗಳು ವ್ಯವಸಾಯಕ್ಕೆ ತುಂಬಾ ಸಹಾಯವಾಗುವವು

***

ಕಳೆದ ಹತ್ತು ವರುಷಗಳಿಂದಲೂ ಮೈಸೂರು ಮಹಾರಾಜಾ ಕಾಲೇಜಿನಲ್ಲಿ ಸಹಾಯೋಪಾಧ್ಯಾಯರಾಗಿದ್ದ ಮೆ॥ ಜಿ ಕಸ್ತೂರಯ್ಯಂಗಾರ್, ಎಂ ಎ ಯವರು ಸುಮಾರು ಎರಡು ವಾರಗಳಿಂದ ಕಾಯಿಲೆಯಾಗಿದ್ದು ಕಳೆದ ಗುರುವಾರದ ಬೆಳಿಗ್ಗೆ ರಾಜಧಾನಿಯ ಆಸ್ಪತ್ರೆಯಲ್ಲಿ ಕಾಲವಾದರೆಂದು ವಿಷಾದಿಸುವೆವು. ಇವರಿಗೆ ಇನ್ನೂ ೩೮ ವರುಷ ಮಾತ್ರವೇ ಆಗಿದ್ದರೂ ಇಂಗ್ಲಿಷ್, ಸಂಸ್ಕೃತ, ತಮಿಳು ಭಾಷೆಗಳಲ್ಲಿ ಪಾಂಡಿತ್ಯವನ್ನು ಸಂಪಾದಿಸಿಕೊಂಡು, ಸದ್ಗುಣಗಳಾಗಿ ಸಕಲರಲ್ಲೂ ಪ್ರೀತಿಗೌರವಗಳನ್ನು ಸಂಪಾದಿಸಿಕೊಂಡಿದ್ದರು.

***

ಯಡತೊರೆಯಿಂದ ಸುಮಾರು ೮—೧೦ ದಿನಗಳ ಹಿಂದೆ ಮೂರು ಮಂದಿ ನಡೆದು ಬರುತ್ತಿರುವಾಗ ಸಾತಿಗ್ರಾಮದ ಹತ್ತಿರ ಅವರ ಮೇಲೆ ಕಳ್ಳಗಳು ಬಿದ್ದವು. ಮೂರು ಮಂದಿಗೂ ಗಾಯಗಳಾದವು. ಒಬ್ಬನ ಬಳಿ ಇದ್ದ ಕೆಲವು ಮಾಲನ್ನು ಕಿತ್ತುಕೊಂಡು ಹೋದರೆಂದು ಕೇಳುತ್ತೇವೆ. ಇಂಥಾ ಬೇಸಿಗೆಯಲ್ಲಿ ಕಳ್ಳರು ದಾರಿಕಾಯುವುದೂ ಜನರನ್ನು ಹಿಂಸೆಪಡಿಸುವುದೂ ವಿಶೇಷವಾದ್ದರಿಂದ ಪೋಲೀಸ್ ಸೂಪರಿಂಟೆಂಡೆಂಟರು ರಸ್ತೆಯಲ್ಲಿ ಯಾವ ಅಪಾಯವು ಉಂಟಾಗದಂತೆ ನೋಡಿಕೊಳ್ಳಲು ತಮ್ಮ ಇಲಾಖೆಯವರನ್ನು ಎಚ್ಚರಿಸುವರೆಂದು ನಿರೀಕ್ಷಿಸುತ್ತೇವೆ

***

ರಾಜಧಾನಿಯ ಸಿವಿಲ್ ಸರ್ಜನ್ ಮೆ॥ ಟಿ ಎಸ್. ನಂಜಪ್ಪನವರು ತಮ್ಮ ಕುಮಾರನಿಗೆ ವಿವಾಹಮಾಡಿ ಕಳೆದ ವಾರ ಇಲ್ಲಿನ ಎಲ್ಲಾ ಕೋಮುಗಳ ದೊಡ್ಡಮನುಷ್ಯರಿಗೂ ಅರಸು ಮಕ್ಕಳಿಗೂ ಔತನವನ್ನು ಮಾಡಿಸಿದರು. ಮೆ॥ ಕಾಂತರಾಜೇ ಅರಸಿನವರೂ ಮೆ॥ ಲಕ್ಷ್ಮೀಕಾಂತರಾಜೇ ಅರಸಿನವರೂ ದಯಮಾಡಿ ಔತನವನ್ನು ಸ್ವೀಕರಿಸಿದರು. ಮೆ॥ ಎಂ. ವೆಂಕಟಕೃಷ್ಣಯ್ಯನವರು ತಮ್ಮ ಮನೆಯಲ್ಲಿ ಬಾಲಕರಿಷ್ಟರಿಗೆ ಮುಂಜಿ ಮಾಡಿ, ದೊಡ್ಡಮನುಷ್ಯರಿಗೆಲ್ಲಾ ಔತನ ಮಾಡಿದರು. ಮೆ॥ ಎಚ್ ಆರ್. ಕೃಷ್ಣಮೂರ್ತಿಯವರು ತಮ್ಮ ಕುಮಾರನಿಗೆ ವಿವಾಹ ಮಾಡಿದರು. ಈ ಸಲ ರಾಜಧಾನಿಯಲ್ಲಿ ಅನೇಕ ಉತ್ಸವಗಳೂ ಔತನಗಳೂ ನಡೆಯುತ್ತಿವೆ.

ಮೈಸೂರು ಗೆಜೆಟ್ ಸಂಗ್ರಹ.

ಆ॥ ಸರ್ಜನ್ ಮೆ॥ ವಿ ಮುತ್ತುಸ್ವಾಮಿದಾಸ್ ಯವರಿಗೆ ಮೇ ೧೫ ನೆ ತಾರೀಖು ಲಾಗಾಯತು ಆರು ವಾರಗಳ ಪ್ರಿವಿಲೆಜ್ ರಜಾ ಕೊಟ್ಟದೆ.

ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಕೆಲಸ ಮಾಡುವ ಆ॥ ಸರ್ಜನ್ ಮೆ॥ ಸಿ ಅಪ್ಪಾದುರೈ ಮೊದಲಿಯಾರ್ರನ್ನು ತುಮಕೂರು ಡಿಸ್ಟ್ರಿಕ್ಟಿಗೆ ವರ್ಗಮಾಡಿದೆ,

ಮೈಸೂರು ರೆವಿನ್ಯೂ ಸರ್ವೆ ಆ॥ ಕಮಿಷನರ್ ಮೆ॥ ಸಿ ರಾಜಗೋಪಾಲಾಚಾರ್ರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟದೆ

ಮೆ॥ ಕೆ. ಆರ್. ಶ್ರೀನಿವಾಸಯ್ಯಂಗಾರ್ರು ಏಪ್ರಿಲ್ ತಾರೀಖು ೨೭ ರಲ್ಲಿ ಮೆ॥ ಪಿ. ಆರ್. ಡಬ್ಲ್ಯು ಮೊದರಲ್‌ಯವರಿಂದ ಹಾಸನದ ಡಿಸ್ಟ್ರಿಕ್ಟ್ ಮತ್ತು ಖಜಾನೆಯ ಛಾರ್ಜನ್ನು ವಹಿಸಿಕೊಂಡಿದಾರೆ

ಮೊಳಕಾಲ್ಮುರು ತಾಲ್ಲೂಕ್ ಅಮಲ್ದಾರ್ ಮೆ॥ ಬಿ. ಸಿ ಕೇಶವಯ್ಯನವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿನಾಲ್ಕು ದಿನಗಳ ಪ್ರಿವಿಲೆಜ್ ರಜಾ ಕೊಟ್ಟದೆ

ತಾಲ್ಲೂಕ್ ಶಿರಸ್ತೆದಾರರು ಮೊಳಕಾಲ್ಮುರು ತಾಲ್ಲೂಕಿನ ಛಾರ್ಜಿನಲ್ಲಿ ರತಕ್ಕದ್ದು.

ಮೈಸೂರು ಮಹಾರಾಜಾ ಕಾಲೇಜ್ ಪಂಡಿತರಾದ ಮೆ॥ ಟಿ. ಆರ್. ವೆಂಕಟಸ್ವಾಮಿ ನಾಯ್ಡು ಯವರಿಗೆ ಕೊಟ್ಟಿರುವ ಮೂರು ತಿಂಗಳ ಪ್ರಿವಿಲೆಜ್ ರಜಾ ಜೊತೆಗೆ ಜೂನ್ ೨೭ರ ಲಾಗಾಯತು ಡಿಸೆಂಬರ್ ೩ರ ವರೆಗೆ ಕಾಯಿಲೆ ರಜಾ ಕೊಟ್ಟದೆ

ಮೈಸೂರು ಸರ್ಕಾರಿ ಹುಕುಮುಗಳು.

ರೇಷ್ಮೆ ಕಸಬು

ಅಗ್ರಿಕಲ್ಚರಲ್ ಕೆಮಿಸ್ಟ್ ಯವರ ಅಸಿಸ್ಟೆಂಟರುಗಳ ಪೈಕಿ ಒಬ್ಬರು ಬೆಂಗಳೂರಿನಲ್ಲಿನ ರೇಷ್ಮೆ ಫಾರಂನಲ್ಲಿ ರೇಷ್ಮೆ ಕಸಬಿನ ನಾನಾ ಪದ್ಧತಿಗಳಲ್ಲಿ ಅಮೋಘವಾಗಿ ಪರಿಶ್ರಮಹೊಂದಿ ಕೋಲಾರ, ಮೈಸೂರು, ಬೆಂಗಳೂರು ಮತ್ತು ತುಮಕೂರು ಡಿಸ್ಟ್ರಿಕ್ಟುಗಳಲ್ಲಿನ ರೇಷ್ಮೆ ಕಸಬು ನಡೆಯುವ ಮುಖ್ಯಪ್ರದೇಶಗಳಲ್ಲಿ ತಮ್ಮ ಅನುಭವವನ್ನು ಪ್ರಚಾರಪಡಿಸಬೇಕು.

ಮಿ॥ ತಾತಾಯವರು ರೇಷ್ಮೆ ಫಾರವನ್ನು ನಡೆಸುತ್ತಲಿರುವ, ಜಪಾನ್ ದೇಶದಿಂದ ಬಂದಿರುವ, ಮ್ಯಾನೇಜರವರ ನ್ಯಾಷನಲ್ ಸಂಸ್ಥಾನದಲ್ಲಿ ನಾಲಿ ರೇಷ್ಮೆ ಕಸಬಿನವರಲ್ಲಿ ವಿದ್ಯಾರ್ಥಿಗಳಿಗೆ ಕ್ರಮವಾಗಿ ಈ ಕೈಗಾರಿಕೆಯಲ್ಲಿ ಪರಿಶ್ರಮ ಕೊಟ್ಟದ್ದೇ ಆದರೆ ಸದರಿ ಫಾರಂ ವಿಶೇಷ ಪ್ರಯೋಜನಕಾರಿಯಾಗಿ ಪರಿಣಮಿಸುವುದೆಂದು ಸರ್ಕಾರದವರು ನಂಬಿರುತ್ತಾರೆ. ಫಾರಂನಲ್ಲಿ ತಯಾರಾದವರು ತಮ್ಮ ತಮ್ಮ ಗ್ರಾಮಗಳಿಗೆ ವಾಪಸು ಹೋಗಿ ಆ ಪ್ರಾಂತದಲ್ಲಿ ತಿದ್ದುಪಾಟಾದ ಪದ್ಧತಿಗಳನ್ನು ಜಾರಿಯಲ್ಲಿ ತರಲು ಅವಕಾಶ ಉಂಟಾಗುತ್ತೆ. ಹೀಗೆ ಪರಿಶ್ರಮಕೊಡುವದಕ್ಕೆ ಮೂರು ತಿಂಗಳು ವಿನಾರದೆ ಇರುವ ಒಂದು ಅವಧಿಯನ್ನು ವಿಧಿಸಿ, ಅವಧಿಯೊಳಗಾಗಿ ಅವಶ್ಯಕವಾದ ವಿಷಯಗಳಲ್ಲಿ ಪರಿಚಯವನ್ನು ಹೊಂದಿದಂಥಾವರನ್ನು ತೇರ್ಗಡೆಯಾದವರೆಂದು ತಿಳಿದು ವಾಪಸು ಕಳುಹಿಸಬಹುದಾಗಿದೆ. ಅಭ್ಯಾಸ ಮಾಡಲು ಬರತಕ್ಕವರು ಫಾರಂ ಬಳಿ ವಾಸಮಾಡಲು ಅನುಕೂಲವಾಗುವಂತೆ ಅವಶ್ಯಕವಾದ ಕಟ್ಟಡಗಳು ತಯಾರು ಮಾಡಲ್ಪಡುವವು. ಬರತಕ್ಕವರ ಪೈಕಿ ನೆಮ್ಮದಸ್ಥರಾದವರಿಂದ ಅಲ್ಪ ಸ್ವಲ್ಪ ಬಾಡಿಗೆಯನ್ನು ವಸೂಲ್ಮಾಡುತ್ತಾರೆ. ಇತರರು ಸರ್ಕಾರದ ಸಹಾಯದಿಂದ ಮುಫತ್ತಾಗಿ ಅಭ್ಯಾಸ ಮಾಡಬಹುದು. ಕೇವಲ ಬಡವರಾಗಿದ್ದವರಿಗೆ ಸರ್ಕಾರದಿಂದ ವೇತನವು ಕೊಡಲ್ಪಡುವುದು.

ಕೊಟ್ಟ ಗ್ರಾಮದಲ್ಲಿನ ಧಾನ್ಯದ ಬ್ಯಾಂಕು

೧೯೦೩ನೇ ಇಸವಿ ಜುಲೈ ತಿಂಗಳಲ್ಲಿ ಕೋ ಆಪರೇಟೀವ್ ಸೊಸೈಟಿಗಳ ರಿಜಿಸ್ಟ್ರಾರವರು ಸಿರಾಕ್ಕೆ ಹೋಗಿದ್ದ ವೇಳೆ ಅಲ್ಲಿ ಕಸಬಾಕ್ಕೆ ಸಮೀಪದಲ್ಲಿರುವ ಕೊಟ್ಟ ಎಂಬ ಗ್ರಾಮದಲ್ಲಿ ಒಂದು ಧಾನ್ಯದ ಬ್ಯಾಂಕು ಏರ್ಪಾಡಾಯಿತು. ಅಲ್ಲಿನ ಅಮಲ್ದಾರರು ಮಿ॥ ವೆಂಕಟರಮಣ ಶಾಸ್ತ್ರಿ ಯವರು ಈ ವಿಷಯದಲ್ಲಿ ಬಹಳವಾಗಿ ಮುತುವರ್ಜಿ ವಹಿಸಿ, ರೈತರಿಗೆ ಪ್ರೋತ್ಸಾಹಪಡಿಸಿದರು. ಆ ವರುಷ ಆ ಪ್ರಾಂತ್ಯ ಮಳೆ ಇಲ್ಲದೆ ಇದ್ದದರಿಂದ ಶ್ರೀಮನ್ಮಹಾರಾಜಾ ಸಾಹೇಬರವರು ದಯಪಾಲಿಸಿದ್ದ ಹಣದ ಪೈಕಿ ೧೫೦ ರೂಪಾಯಿ ಸಾಲವಾಗಿ ಈ ಬ್ಯಾಂಕಿಗೆ ಕೊಡಲ್ಪಟ್ಟಿತು. ಆ ಹಣದಿಂದ ಬಂದ ೨೩ ಪಲ್ಲ ರಾಗಿಯನ್ನು ಮತ್ತು ಮೇರಿಗೋಸ್ಕರ ಜಮಾಯಿಸಲ್ಪಟ್ಟ ರಾಗಿಯನ್ನು ಒಟ್ಟು ಸೇರಿಸಲಾಗಿ ೫೧ ಪಲ್ಲ ಆಯಿತು. ಇದೆಲ್ಲಾ ಮೆಂಬರುಗಳು ತಮ್ಮ ತಮ್ಮಲ್ಲಿ ಸಾಲವಾಗಿ ಹಂಚಿಕೊಂಡರು. ಈ ವರುಷ ಯುಗಾದಿಗೆ ಸಾಲವಾಗಿ ತೆಗೆದುಕೊಂಡಿದ್ದ ೫೧ ಪಲ್ಲ ರಾಗಿಯು ಬಡ್ಡಿ ಸಹಿತ ತೀರಿಸಲ್ಪಟ್ಟಿರುತ್ತೆ.

ಈಗ ೯೧ ಜನ ಮೆಂಬರುಗಳಿರುತ್ತಾರೆ. ಬಾಳಿ ಸಂವತ್ಸರದ ಮೇರು ಬಗ್ಗೆ ರಾಗಿಯನ್ನು ಮೆಂಬರುಗಳು ಈಗ ಬೆಳೆದಿರುವ ಬೆಳಸಿನಲ್ಲಿ ಕೊಡುತ್ತಲಿದ್ದಾರೆ. ಸರ್ಕಾರದಿಂದ ಸಾಲವಾಗಿ ಕೊಟ್ಟಿರುವ ಮೊಬಲಗನ್ನು ಒಂದೇ ಸಲ ಕೂಡಲೇ ತೀರಿಸಲು ಸಂಘದವರು ಸಿದ್ಧವಾಗಿದ್ದಾರೆ. ಧಾನ್ಯವು ಪ್ರಕೃತದಲ್ಲಿ ಪಟೇಲ್ ನಾರಾಯಣ ಗೌಡನ ಕಣದಲ್ಲಿ ಕೇಖದಿಸುತ್ತಿದ್ದಾರೆ. ಒಂದು ಕಣಜವನ್ನು ಕಟ್ಟುವದಕ್ಕೆ ಏರ್ಪಾಡು ಮಾಡುತ್ತಲಿದ್ದಾರೆ. ಈ ಬ್ಯಾಂಕಿಗೆ ಶ್ಯಾನುಭೋಗ ಪುಟ್ಟರಂಗಪ್ಪ, ಪಟೇಲ್ ನಾರಾಯಣಗೌಡ, ಕೇಬಯ್ಯ, ಲಿಂಗಪ್ಪ ಇವರುಗಳು ಪಂಚಾಯಿತರಾಗಿರುತ್ತಾರೆ.

ಪ್ರಥಮ ಜೈನಮಹಿಳೆಯರ ಸಭಾ.

[ಒಬ್ಬ ಬಾತ್ಮೀದಾರರಿಂದ.]

ಈಗ ಸರ್ವ ಏಳಿಗೆಗೂ ಮೂಲಸ್ಥಾನವಾಗಿ ಪರಿಣಮಿಸಿರುವ ಈ ಬ್ರಿಟಿಷ್ ಪ್ರಭುತ್ವದ ನೆರಳಿನಲ್ಲಿ ನವನಾಗರಿಕತೆ ಎಂಬ ವೃಕ್ಷವು ಎಲ್ಲೆಲ್ಲೂ ಬೆಳೆದು ಎಲ್ಲರಿಗೂ ತನ್ನ ಸುಖ ಸಂಪತ್ತುಗಳೆಂಬ ಫಲವನ್ನೀಯುತ್ತಿರುವದು ಸರಿಯಷ್ಟೆ. ಇಂಥಾ ಫಲಗಳನ್ನು ನಮ್ಮ ಮೈಸೂರು ಸೀಮೆಯ ಜೈನರು ಬಹುಕಾಲದಿಂದ ಕಾಣದಿದ್ದು ಈಗೀಗ ಕಂಡು ಅನುಭವಿಸಲು ಯತ್ನಿಸುತ್ತಿರುವಂತೆ ತೋರುತ್ತಿರುವದು. ಸೆನ್ನೆ ಉತ್ತರದೇಶದಿಂದ ಈ ಶ್ರವಣಬೆಳುಗುಳ ಕ್ಷೇತ್ರಕ್ಕೆ ಯಾತ್ರಾರ್ಥಿಯಾಗಿ ಬಂದಿದ್ದ ಶ್ರೀಯುತ ಬಾಬು ದೇವಕುಮಾರ್ಜಿ, ಬಿ ಎ (ಆನರರಿ ಮ್ಯಾಜಿಸ್ಟ್ರೇಟ್ ಆಫ್ ಆರಾ) ಎಂಬ ಆಗರ್ಭ ಶ್ರೀಮಂತರಾದ ಜೈನ ಧರ್ಮ ಪ್ರವೀಣರ ಜೊತೆಯಲ್ಲಿ ಇವರ ಸುಗುಣ ಪತ್ನಿಯೂ ಇನ್ನೊಬ್ಬ ವಿದ್ಯಾವತಿಯಾದ ಯುವತಿಯೂ ಮತ್ತೊಬ್ಬ ಲಲಿತಾಬಾಯಿ ಕುಮಾರಿ ಎಂಬ ಪಂಡಿತೆಯೂ ಬಂದಿದ್ದರು. ಇವರು ಈ ದೇಶದ ಜೈನ ಸ್ತ್ರೀಯರಲ್ಲಿ ಸರಸ್ವತಿ ವಾಸನೆಯು ಇಲ್ಲದಿರುವದನ್ನು ಕಂಡು ವ್ಯಾಕುಲಭರಿತರಾಗಿ ಈ ದೇಶದ ಜೈನ ಮಾನ್ಯರು ತಮ್ಮ ಜೈನ ಮಹಿಳೆಯರ ಶಿಕ್ಷಣದ ವಿಷಯದಲ್ಲಿ ಪ್ರವರ್ತಿಸದೇ ಇರುವದನ್ನು ಕಂಡು ಅನುತಾಪಪಟ್ಟು ಈ ಕೊರತೆಯನ್ನು ಹೋಗಲಾಡಿಸುವದು ಯುಕ್ತವಾದದ್ದೆಂದು ಆ ಉತ್ತರದೇಶದ ಮಹಿಳೆಯರಿಗೆ ತಿಳಿಸಲು ಉದ್ಯುಕ್ತರಾದರು. ಇಲ್ಲಿಯ ಶ್ರೀ ದಿಗಂಬರ ಜೈನ ಸಭೆಯ ೩ ನೇ ಪರಿಷತ್ತು ಮುಗಿದ ಕೂಡಲೇ ಒಂದು ಜೈನ ಸ್ತ್ರೀಯರ ಸಮ್ಮೇಳನವು ನೆರೆಯಿತು. ಇದರಲ್ಲಿ ಸುಮಾರು ೧೫೦ ರ ವರೆಗೆ ಜೈನ ಸ್ತ್ರೀಯರೇ ಸೇರಿದ್ದರು. ಇವರೆಲ್ಲರೂ ಈ ಕ ಸ್ತ್ರೀಯರೇ ಆಗಿದ್ದರು. ಇವರಲ್ಲನೇಕರು ಧನಿಕ ಕುಟುಂಬಕ್ಕೆ ಸೇರಿದವರಾಗಿಯೂ ಕೆಲವರು ಸ್ವತಂತ್ರ ಧನಿಕ ಸ್ತ್ರೀಯರಾಗಿಯೂ ಇದ್ದರು. ಇವರೆಲ್ಲರೂ ಆ ಉತ್ತರದೇಶದ ಮಾನ್ಯಸ್ತ್ರೀಯರ ಬಿಡಾರಕ್ಕೆ ಮರ್ಯಾದೆ ಪೂರ್ವಕವಾಗಿ ಹೋಗಿ ಅವರನ್ನು ಬ್ಯಾಂಡ್ ಮೊದಲಾದ ಮಂಗಳ ವಾದ್ಯಗಳೊಡನೆ ಮೆರವಣಿಗೆಯಾಗಿ ಇಲ್ಲಿಯ ಭಂಡಾರ ಬಸದಿಯ ದೊಡ್ಡ ಹಾಲಿನಲ್ಲಿ ಏರ್ಪಡಿಸಲ್ಪಟ್ಟಿದ್ದ ಸಭಾ ಸ್ಥಾನಕ್ಕೆ ಕರೆದುಕೊಂಡು ಬಂದರು. ಕೂಡಲೆ ಮಂಗಳ ಗಾನವು ಹಾಡಲ್ಪಟ್ಟಿತು. ಅನಂತರ ಒಬ್ಬ ಸಭಾ ಮಹಿಳೆಯು ಎದ್ದು ನಿಂತು— ಸೌಭಾಗ್ಯವತಿ ಅನುರೂಪ ಸುಂದರಬಾಯಮ್ಮನವರು ಅಧ್ಯಕ್ಷಸ್ಥಾನವನ್ನು ವಹಿಸಬೇಕೆಂದು ಹಿಂದೀ ಭಾಷೆಯಲ್ಲಿ ಪ್ರಾರ್ಥಿಸಿದರು. ಅದನ್ನು ಶ್ರೀಮತಿ ಬಾಯಮ್ಮನವರು (ಬಾಬು ದೇವಕುಮಾರ್ಜಿಯವರ ಪತ್ನಿ) ಅಂಗೀಕರಿಸಿದರು. ಅನಂತರ ಪಂಡಿತ ಲಲಿತಾಬಾಯಿಯವರು ಸ್ತ್ರೀಶಿಕ್ಷಣದ ವಿಷಯದಲ್ಲಿ ಒಂದು ಘನತರವಾದ ಉಪನ್ಯಾಸವನ್ನು ಒಂದು ಘಂಟೆ ಪರಿಯಂತರವೂ ಮಾಡಿ, ತಮ್ಮ ವಾಗ್ಮಿಯನ್ನು ತೋರಿಸಿ, ಸಭಾ ಸ್ತ್ರೀಯರನ್ನು ವಿಸ್ಮಯಭೂತರನ್ನಾಗಿ ಮಾಡಿದರು. ಈ ಸಭೆಯಲ್ಲಿ ದ್ವಿಭಾಷಿಗಳಾದ ಸುಗುಣ ಸನ್ಯಾಸಿಗಳೊಬ್ಬರು ಇದ್ದುಕೊಂಡು, ಹಿಂದೀ ಭಾಷೆಯಲ್ಲಿ ನಡೆದ ಉಪನ್ಯಾಸಗಳನ್ನು ಕನ್ನಡದಲ್ಲಿಯೂ ಕನ್ನಡ ಉಪನ್ಯಾಸಗಳನ್ನು ಹಿಂದೀ ಭಾಷೆಯಲ್ಲಿಯೂ ಒಬ್ಬರಿಗೊಬ್ಬರಿಗೆ ಹೇಳುತ್ತಿದ್ದರು. ವೆ ದಲು ಯಶಸ್ವತಿಬಾಯಿ ಇಂದ್ರಕುಮಾರರವರು ಧರ್ಮ ವಿಚಾರವಾಗಿ ಒಂದು ಮನೋಹರ ಉಪನ್ಯಾಸವನ್ನು ಮಾಡಿದರು. ಪ್ರಥಮ ಬಹುಮಾನವು ಇವರಿಗೆ ದೊರೆಯಿತು. ಅನಂತರ ಇನ್ನೊಬ್ಬರು ಶ್ರೀಮತಿ ಸ್ತ್ರೀಯರು ಉಪನ್ಯಾಸ ಮಾಡಿದರು. ದ್ವಿತೀಯ ಬಹುಮಾನವು ಇವರಿಗೆ ಕೊಡಲ್ಪಟ್ಟಿತು. ಕೊನೆಗೆ ಬಾಲಕಿಯರ ಸಣ್ಣ ಸಣ್ಣ ಉಪನ್ಯಾಸಗಳು ನಡೆದವು. ಇವರಿಗೂ ತಾರಾಳವಾದ ಬಹುಮಾನಗಳು ಕೊಡಲ್ಪಟ್ಟವು.

ಹೀಗೆ ಪುರಮಹಿಳೆಯರ ಉಪನ್ಯಾಸಗಳೆಲ್ಲಾ ಮುಗಿದ ನಂತರ ಆ ವಿದ್ಯಾವತಿಯಾದ ಉತ್ತರ ದೇಶದ ಇನ್ನೊಬ್ಬ ಕುಮಾರಿಯು ಸ್ತ್ರೀ ವಿದ್ಯಾಭ್ಯಾಸ ಮತ್ತು ಈ ಸ್ಥಳದಲ್ಲಿ ಒಂದು ಜೈನ ಬಾಲಿಕಾ ಪಾಠಶಾಲೆಯು ಸ್ಥಾಪಿಸಲ್ಪಡಬೇಕಾದ ಅವಶ್ಯಕತೆ ಎಂಬೀ ವಿಷಯಗಳಲ್ಲಿ ಒಂದು ಇಂಪಾದ ಉಪನ್ಯಾಸವನ್ನು ಮಾಡಿದರು. ವಾಗ್ವೈಖರಿಯು ಅಸಾಧಾರಣವಾಗಿತ್ತು. ಅನಂತರ ಜೈನ ಬಾಲಿಕಾ ಪಾಠಶಾಲೆಯನ್ನು ಸ್ಥಾಪಿಸುವದಕ್ಕೆ ದ್ರವ್ಯಸಹಾಯವು ಕೇಳಲ್ಪಟ್ಟಿತು. ಅದಕ್ಕೆ ಸಭೆಯವರೆಲ್ಲಾ ಏಕೀಭವಿಸಿ ಸಹಾಯ ಮಾಡುವದಾಗಿ ಒಪ್ಪಿದರು. ಅದರಲ್ಲಿ ಕೆಳಗೆ ಕಂಡ ಪುರಮಹಿಳೆಯರು ತಮ್ಮ ಉದಾರ ಧರ್ಮವನ್ನು ಪ್ರಕಟಿಸಿದರು. ಇವರು ವರ್ಷ ಒಂದಕ್ಕೆ ಕೊಡುವದಾಗಿ ವಾಗ್ದಾನ ಮಾಡಿರುವ ಚಂದಾ ವಿವರ — ಹನಮ್ಮ ಶೆಟ್ಟಿಸ್ವಾರ್ ೩೬ ರೂ ಜಾವಂತ್ರಮ್ಮ ಪದುಮಸ್ವಾರ್ ೨೪ ರೂ ನಾಗರಾಜಮ್ಮ ಧರಣ್ಶೆಟ್ಯಾರ್ ೨೪ ರೂ ಬ್ರಹ್ಮಲಾನರಮ್ಮ ಪೆರಿಮ್ಮಯರ್ ೧೦ ರೂ. ಶ್ರೀಮತಿಯರಾದ ಸುಧರಾಬಮ್ಮ ಪದ್ಮಶೆಟಿ ೧೦ ರೂ ಮಿ॥ ಪಂಮ್ಮೆಯ್ಯಾರ್ ಭಾರ್ಯೆಯರು ೧೦ ರೂ ಇನ್ನು ಇದೇ ಮೇರೆ ೩ ರೂಪಾಯಿ ಮೊದಲುಗೊಂಡು ೩ ರೂಪಾಯಿ ವರೆಗೆ ಧರ್ಮ ಚಂದಾ ಕೊಡತಕ್ಕ ಮಹಿಳೆಯರು ಅನೇಕರಿರುವರು. ಹೀಗೆ ಇವರುಗಳಿಂದೆಲ್ಲಾ ವರ್ಷ ೧ಕ್ಕೆ ಕೊಡಲ್ಪಡುವ ಚಂದಾ ಸುಮಾರು ೨೦೦ ರೂಪಾಯಿ ವರೆಗೆ ಆಗಬಹುದು. ಇದಲ್ಲದೆ ಆ ಉತ್ತರ ದೇಶದ ಅಧ್ಯಾಪಿನಿಯರು ತಾವು ವರ್ಷಕ್ಕೆ ೨೪ ರೂ ಚಂದಾ ಕೊಡುವದಾಗಿ ಹೇಳಿದರು. ಇದೆಲ್ಲಾ ಆದನಂತರ ಪೋಷ್ಕಂಡ ಬಹುಮಾನಗಳು ಶ್ರೀಯುತರಾದ ಬಾಬು ದೇವಕುಮಾರ್ಜಿಯವರಿಂದಲೂ ಮೈಸೂರು ವರ್ಧಮಾನಯ್ಯನವರ ಕಡೆಯಿಂದಲೂ ಕೊಡಲ್ಪಟ್ಟವು. ಅನಂತರ ನಮ್ಮ ಪುರಸ್ತ್ರೀಯರಿಗೂ ಆ ಉತ್ತರ ದೇಶದ ಮಾನನೀಯರಿಗೂ ವಂದನಾಪೂರ್ವಕವಾದ ಮಾತುಕಥೆಗಳು ನಡೆದವು. ಈ ನವೀನ ಸ್ತ್ರೀ ಸಭಾ ಸೊಬಗನ್ನೆಲ್ಲಾ ಧರನೆಯ ಅಚೆ ಪಕ್ಕದಲ್ಲಿ ಕೂತಿದ್ದ ಮಾನನೀಯ ಪುರುಷರು ಕೇಳಿ ಸಂತೋಷಚಿತ್ತರಾದರು. ಮುಕ್ತಾಯ ಮಂಗಳವು ಮಹಿಳೆಯರಿಂದ ಮನೋಹರವಾಗಿ ಹಾಡಲ್ಪಡುತ್ತಿರಲು, ಗಂಧ ಪುಷ್ಪ ತಾಂಬೂಲಾದಿಗಳು ಸರ್ವರಿಗೂ ಕೊಡಲ್ಪಡುತ್ತಿದ್ದವು. ಸಭೆಯು ಮುಕ್ತಾಯವಾಯಿತು. ಮೊದಲಿನಂತೆ ಆ ಉತ್ತರ ದೇಶದ ನಾರೀ ಶಿರೋಮಣಿಗಳನ್ನು ನಮ್ಮ ಪುರಮಹಿಳೆಯರು ಬ್ಯಾಂಡ್ ಮೊದಲಾದ ಮರ್ಯಾದೆಗಳೊಡನೆ ಮೆರವಣಿಗೆಯಾಗಿಯೇ ಅವರ ಬಿಡಾರಕ್ಕೆ ಕರೆದುಕೊಂಡು ಹೋಗಿ ಬಿಟ್ಟು ಸಂತೋಷದಿಂದ ಸ್ವಗೃಹಗಳಿಗೆ ತೆರಳಿದರು. ಇದೇ ನಮ್ಮ ಮೈಸೂರ ಸೀಮೆಯಲ್ಲಿ ಮೊಟ್ಟಮೊದಲು ನಡೆದ ಜೈನ ಸ್ತ್ರೀಯರ ಸಭೆಯಾಗಿರಬಹುದು.

ಇಂಡಿಯಾ ದೇಶದ ವೃತ್ತಾಂತಗಳು.

ರಾವಲ್‌ಪಿಂಡಿ ಪಟ್ಟಣದಲ್ಲಿ ಗಲಭೆ ಮಾಡಿದ ಇನ್ನೂ ತೊಂಬತ್ತು ಮಂದಿ ಮುಖಂಡರನ್ನು ಹಿಡಿದು ಬಂದಿಖಾನೆದಲ್ಲಿಟ್ಟಿರುವರೆಂದು ತಿಳಿಯಬರುವುದು.

***

ಮಿ॥ ಎಂ. ಆರ್ ಬಾನರ್ಜಿಯವರು ರಜಾ ಪಡೆದು ಸೀಮೆಗೆ ಹೋಗಿದ್ದು ಕಳೆದವಾರ ವಾಪಸು ಬಂದು, ಕೊಚ್ಚಿ ಸಂಸ್ಥಾನದ ದಿವಾನಗಿರಿಯ ಛಾರ್ಜನ್ನು ವಹಿಸಿಕೊಂಡರು.

***

ರಂಗೂನ್ ಪಟ್ಟಣದ ಮ್ಯುನಿಸಿಪಾಲಿಟಿಯವರು ಇತರ ಕಡೆಗಳಿಂದ ಅಲ್ಲಿಗೆ ಕೂಲಿ ಮಾಡುವುದಕ್ಕೆ ಹೋಗುವಂಥಾ ಪ್ರತಿ ಒಬ್ಬನೂ ಸರ್ಕಾರಕ್ಕೆ ಎರಡು ರೂಪಾಯಿನಂತೆ ತೆರಿಗೆ ಕೊಡಬೇಕೆಂದು ಈಗತಾನೇ ವಿಧಿಸಿ ಜಾರಿಗೆ ತಂದಿರುತ್ತಾರೆ.

***

ಬಂಗಾಳಾ ಅಧಿಪತ್ಯಕ್ಕೆ ಸೇರಿದ ಸೈದ್‌ಪೂರ್ ಎಂಬಲ್ಲಿ ಅಪಾರವಾದ ಮಳೆಯೂ ಬಿರುಸಾದ ಆನೆಕಲ್ಲುಗಳೂ ಸುರಿದು, ಅನೇಕ ಮನೆಗಳು ಕೊಚ್ಚಿ ಹೋದವು. ದೊಡ್ಡ ಮರಗಳು ಕೂಡ ಉರುಳಿ ಹೋದವು. ಬಡಬಗ್ಗರು ಬಹಳ ಕಷ್ಟಪಡುತ್ತಾರೆ. ಮಾವಿನ ಫಸಲೆಲ್ಲಾ ಕೆಟ್ಟು ಹೋಯಿತು. ಪ್ರಾಣನಷ್ಟವೇನೂ ಆಗಿಲ್ಲವೆಂದು ತಂತೀ ವರ್ತಮಾನ ಬಂದಿದೆ.

ಕಳೆದವಾರ ಬರೋಡಾ ಸಂಸ್ಥಾನದ ಗಾಯಕವಾಡ್ ಮಹಾರಾಜರವರಿಗೂ ಮದರಾಸ್ ಗವರ್ನರವರಿಗೂ ನೀಲಗಿರಿ ಬೆಟ್ಟದ ಮೇಲೆ ಭೇಟಿ ಮರುಭೇಟಿಗಳು ನಡೆದವು. ಪದ್ಧತಿಯ ಪ್ರಕಾರ ತೋಪುಗಳು, ಮರ್ಯಾದೆಗಳೂ ಉಭಯತಾಪಿ ನಡೆಸಲ್ಪಟ್ಟವು.

***

ಕಲ್ಕತ್ತಾ ಪಟ್ಟಣದಲ್ಲಿ ಹೆಚ್ಚು ಬೆಲೆ ಬರುತ್ತೆಂಬ ಆಸೆಯಿಂದ ಜೀವ ಸಹಿತ ಕುರಿಗಳನ್ನು ಹಿಡಿದು ಅವುಗಳ ಚರ್ಮವನ್ನು ಸುಲಿಯುತ್ತಾರೆ. ಸರ್ಕಾರದವರು ಈ ದುಷ್ಟ ಪದ್ಧತಿಯನ್ನು ನಿಲ್ಲಿಸಬೇಕೆಂದೂ ಹಾಗೆ ಸುಲಿದವರನ್ನು ಸಜಾ ಶಿಕ್ಷೆಗೆ ಗುರಿಮಾಡುವದಾಗಿಯೂ ಇಸ್ತಿಹಾರು ಹಾಕಿಸಿರುವರು.

***

ಸಿಲೋನ್ (ಲಂಕಾ) ದ್ವೀಪದಲ್ಲಿ ಕಳೆದ ಡಿಸೆಂಬರ್ ಆಖೈರಿನಲ್ಲಿ ೩೯,೫೫,೭೫೬ ಪ್ರಜೆಗಳಿದ್ದರೆಂದು ಆ ದಿನದ ಖಾನೇಷುಮಾರಿ ಲೆಕ್ಕದಿಂದ ತಿಳಿಯುವುದು. ಕಳೆದ ಆರು ವರುಷಗಳಲ್ಲಿ ಅಂದರೆ ೧೯೦೧ ನೆ ಇಸವಿಯ ಸೆನ್ಸಸ್ ಈಚೆಗೆ ಆ ದ್ವೀಪದ ಪ್ರಜಾಸಂಖ್ಯೆಯು ೬ ಲಕ್ಷ ಜಾಸ್ತಿಯಾಗಿರುತ್ತದೆ.

***

ಹಿಂದುಸ್ಥಾನದಲ್ಲಿ ಪ್ಲೇಗಿನ ಮರಣಗಳು ಈಚೆಗೆ ಹೆಚ್ಚುತ್ತಾ ಬಂದಿದೆ. ಕಳೆದ ವಾರ ೭೩,೭೭೬ ಜನರು ಆ ಉಪದ್ರದಲ್ಲಿ ಮೃತಪಟ್ಟರು, ಅಂದರೆ ಹಿಂದಿನ ವಾರದ ಸಂಖ್ಯೆಗಿಂತ ೧,೦೩೫ ಜನರು ಹೆಚ್ಚು. ಈ ಪೈಕಿ ಪಂಜಾಬ್ ಅಧಿಪತ್ಯದಲ್ಲಿ ೫೧ ೩೦೪ ಜನರೂ, ಸಂಯುಕ್ತ ಅಧಿಪತ್ಯಗಳಲ್ಲಿ ೧೯,೯೭೬ ಜನರೂ ಕಾಲವಾದರು.

***

ಬಂಗಾಳಾ ಅಧಿಪತ್ಯಕ್ಕೆ ಸೇರಿದ ದರ್ಭಾಂಗ ಡಿಸ್ಟ್ರಿಕ್ಟಿನಲ್ಲಿ ಇನ್ನೂ ಕ್ಷಾಮಬಾಧೆ ನಿವಾರಣೆಯಾಗಲಿಲ್ಲ. ಕಳೆದ ವಾರ ೬೦,೧೭೬ ಮಂದಿ ಸರ್ಕಾರದವರ ಪೋಷಣೆಯಲ್ಲಿದ್ದರು, ಅಂದರೆ ಹಿಂದಿನ ವಾರಕ್ಕಿಂತ ೩೯೦ ಮಂದಿ ಕಡಿಮೆ. ಆ ಒಟ್ಟು ಜನರಲ್ಲಿ ೨೮,೨೩೯ ಮಂದಿ ರಲೀಫ್ ಕಾಮಗಾರಿ ಮಾಡುತ್ತಿದ್ದಾರೆ. ಉಳಿದವರೆಲ್ಲಾ ಸರ್ಕಾರಿ ಅನ್ನಸತ್ರಗಳಲ್ಲಿ ಸಂರಕ್ಷಣೆ ಮಾಡಲ್ಪಡುತ್ತಿರುವರು.

***

ಪೂರ್ವ ಬಂಗಾಳಾ ಅಧಿಪತ್ಯಕ್ಕೆ ಸೇರಿದ ಕೋಮಿಲಾ ಡಿಸ್ಟ್ರಿಕ್ಟಿನಲ್ಲಿ ಪ್ರಜಾ ನೆಮ್ಮದಿಗೆ ಭಂಗವಾಗುತ್ತಿದೆ ಎಂದು ಸರ್ಕಾರದವರು ತಿಳಿದು, ಪುಕಾರುದಿಯರಿರುವ ಐದು ಗ್ರಾಮಗಳಿಗೆ ತಿಂಗಳೊಂದಕ್ಕೆ ೯೦೦ ರೂಪಾಯಿ ಖರ್ಚಾಗುವ ಸಿಬ್ಬಂದಿಯುಳ್ಳ ಪೋಲೀಸಿನವರನ್ನು ನೇಮಕ ಮಾಡಿ, ಈ ೯೦೦ ರೂಗಳನ್ನು ಆಯಾ ಗ್ರಾಮಗಳವರೇ ಕೊಡುತ್ತಾ ಬರಬೇಕೆಂದು ಹುಕುಂ ಕೊಟ್ಟಿದ್ದಾರೆ.

***

ಪಂಜಾಬ್ ಅಧಿಪತ್ಯಕ್ಕೆ ಸೇರಿದ ಲಾಹೋರ್, ಸಿಯಾಲ್ಕೋಟ್, ಲೈಯಲ್‌ಪೂರ್, ರಾವಲ್‌ಪಿಂಡಿ, ಅಟ್ಟೋಕ್ ಎಂಬೀ ಡಿಸ್ಟ್ರಿಕ್ಟುಗಳಲ್ಲಿ ಪ್ರಜಾ ನೆಮ್ಮದಿಗೆ ಭಂಗ ಉಂಟಾಗುತ್ತಿದೆ ಎಂದು ಗವರ್ನಮೆಂಟಿನವರು ತಿಳಿದು ಆ ಡಿಸ್ಟ್ರಿಕ್ಟುಗಳಲ್ಲಿ ಪಬ್ಲಿಕ್ ಮೀಟಿಂಗುಗಳನ್ನು ಯಾರೂ ನಡಸಕೂಡದೆಂತಲೂ, ಪೋಲೀಸಿನವರಿಗೆ ಮೊದಲೇ ತಿಳಿಸಿ ಅವರು ಒಪ್ಪಿಸಿದರೆ ಸಭೆಗಳನ್ನು ನಡಿಸಬೇಕೆಂತಲೂ ಹುಕುಂ ಕೊಟ್ಟಿದ್ದಾರೆ.

***

ಪಠ್ಮಾಪೇಲ್ ಎಂಬ ಒಂದು ಪಂಗಡದ ಮುಸಲ್ಮಾನರು ಹಿಂದುಸ್ಥಾನದ ವಾಯುವ್ಯ ಸರಹದ್ದಿನ ಆಚೆ ಇದ್ದುಕೊಂಡು ಆಗಾಗ್ಗೆ ಅನೇಕ ದಾಂಧಳಗಳನ್ನು ನಡಸುತ್ತಾರೆ. ಇವರಲ್ಲಿ ಕೆಲವರು ೧೯೦೪ನೆ ಇಸವಿಯಲ್ಲಿ ಅಫ್ಘಾನಿಸ್ಥಾನದ ಸೈನ್ಯಕ್ಕೆ ಸೇರಿಕೊಂಡಿದ್ದರು. ಈಚೆಗೆ ಅಮೀರರು ಹಿಂದುಸ್ಥಾನಕ್ಕೆ ಬಂದಿದ್ದಾಗ್ಗೆ ಆ ಜನರ ಕ್ರೂರಕೃತ್ಯಗಳನ್ನು ಕೇಳಿ ವಾಪಸು ಹೋಗಿ ಆ ಜನರ್ಯಾರೂ ತಮ್ಮ ಸೈನ್ಯದಲ್ಲಿ ಇರಕೂಡದೆಂದು ಹುಕುಂ ಕೊಟ್ಟು, ಅವರನ್ನೆಲ್ಲಾ ಓಡಿಸಿಬಿಟ್ಟಿರುತ್ತಾರೆ.

***

ಕಲ್ಕತ್ತಾ ಪಟ್ಟಣದ ಸಕ್ಯುಲರ್ ಬೀದಿಯಲ್ಲಿ ಒಬ್ಬ ಹುಚ್ಚನು ಒಂದು ಅಂಗಡಿಯೊಳಕ್ಕೆ ನುಗ್ಗಿ ಒಂದು ಗಾತ್ರವಾದ ನಿಂಬೆ ಹಣ್ಣನ್ನು ಎತ್ತಿಕೊಂಡು ಓಡಿ ಹೋಗುತ್ತಾ, ಅಂಗಡಿಯವನು ತನ್ನನ್ನು ಅಟ್ಟಿಸಿಕೊಂಡು ಬರುತ್ತಿದ್ದಾನೆಂದು ಊಹಿಸಿ, ಆ ನಿಂಬೆ ಹಣ್ಣನ್ನು ಅನಾಮತ್ತಾಗಿ ಬಾಯಿಗೆ ಹಾಕಿಕೊಂಡು ನುಂಗಿ ಬಿಟ್ಟನು. ಅದು ಗಂಟಲಲ್ಲಿ ಇಳಿಯದೆ ಅಲ್ಲೇ ಸಿಕ್ಕಿಕೊಂಡಿತು. ಜನರು ಹೋಗಿ ಡಾಕ್ಟರನ್ನು ಕರೆತಂದು ಅದನ್ನು ತೆಗಿಸಿದರು. ಆದರೆ ಅಷ್ಟರೊಳಗಾಗಿ ಅವನು ಸತ್ತು ಹೋಗಿದ್ದನು.

***

ಕೆಲವು ದಿನಗಳ ಕೆಳಗೆ ಕಾಶೀ ಪಟ್ಟಣದ ಬಳಿ ಕೆಲವು ಜನರು ಮದುವೆಮಾಡಿಕೊಂಡು ಗಂಡು ಹೆಣ್ಣನ್ನು ಮೆರವಣಿಗೆಯಾಗಿ ಒಂದೂರಿನಿಂದ ವಾಪಸು ಬರುತ್ತಿದ್ದರು. ಅಪಕಾರಿ ಮತ್ತು ನಾರಾಯಣಪೂರ್ಗಳ ಮಧ್ಯೆ ಬರುತ್ತಿರುವಾಗ ಕಳ್ಳರು ಆ ಜನರ ಮೇಲೆ ಬಿದ್ದು ಅವರನ್ನೆಲ್ಲಾ ಚನ್ನಾಗಿ ಹೊಡೆದು ಅವರ ಬಳಿ ಇದ್ದ ಸಮಸ್ತವಾದ ನಗನಾಣ್ಯಗಳನ್ನೂ ಇತರ ಬೆಲೆಯುಳ್ಳ ಪದಾರ್ಥಗಳನ್ನೂ ಕಿತ್ತುಕೊಂಡು ಹೋದರು. ಈ ಕಳ್ಳರನ್ನು ಹಿಡಿಯಬೇಕೆಂಬು ಪೋಲೀಸಿನವರು ಬಹಳ ಪ್ರಯತ್ನಪಡುತ್ತಿದ್ದಾರೆ.

***

ಕಳೆದ ವಾರ ಕಲ್ಕತ್ತೆಯ ಬಳಿ ಭಿಷ್ಣುಪುರದಿಂದ ಕೆಲವು ಜನರು ಮದುವೆ ಗಂಡು ಹೆಣ್ಣನ್ನು ಮೆರವಣಿಗೆ ಮಾಡಿಕೊಂಡು ಬರುತ್ತಿದ್ದಾಗ ಇಪ್ಪತ್ತು ಮಂದಿ ಕಳ್ಳರು ಬಿದ್ದು ಗಲಭೆಯುಂಟಾಯಿತು. ಮೆರವಣಿಗೆಯಲ್ಲಿದ್ದವರು ಗಾಬರಿಪಟ್ಟು ದಿಕ್ಕಾಪಾಲಾಗಿ ಓಡಿಹೋದರು. ಎಂಟು ಜನರಿಗೆ ಪೂರಾ ಏಟುಗಳು ಬಿದ್ದವು. ಒಬ್ಬ ಗಾಡಿಯವನೂ ಕೆಲವು ಬ್ಯಾಂಡಿನವರೂ ಏಟುತಿಂದರು. ಸುತ್ತುಮುತ್ತಿನ ಗ್ರಾಮಸ್ಥರೂ ಪೋಲೀಸಿನವರೂ ಹೋಗಿ ಗಾಯಪಟ್ಟವರನ್ನೆಲ್ಲಾ ಆಸ್ಪತ್ರೆಗೆ ಸಾಗಿಸಿದರು. ಗಾಡಿಯವನು ದಾರಿಯಲ್ಲೇ ಸತ್ತುಹೋದನು. ಕಳ್ಳರು ಇದುವರೆ ಸಿಕ್ಕಿ ಇಲ್ಲ.

ಮಿಸೆಸ್ ಪ್ಯಾಗನಿಂಜರ್ ಎಂಬ ಡಾಕ್ಟರು ಅಫ್ಘಾನಿಸ್ಥಾನದ ಅಮೀರರ ರಾಜಧಾನಿಗೆ ಹೋಗಿ ಮಿ॥ ವಿಂಟರ್ ಎಂಬಾತನನ್ನು ಮದುವೆಮಾಡಿಕೊಂಡು, ಅಲ್ಲೇ ಡಾಕ್ಟರ್ ಕೆಲಸ ಮಾಡುತ್ತಿದ್ದಾಳೆ. ಈಚೆಗೆ ಈಕೆ ಅಮೀರರವರ ಪ್ರೀತಿಪಾತ್ರಳಾದ ಪತ್ನಿಯ ರೋಗವನ್ನು ವಾಸಿಮಾಡಿ ಬದುಕಿಸಿಕೊಟ್ಟ ಕಾಲದಲ್ಲಿ ಅಮೀರರಿಗೆ ತುಂಬಾ ಸಂತೋಷ ಉಂಟಾಗಿ, ಈಕೆಗೆ ೬,೦೦೦ ಬಹುಮಾನ ಕೊಟ್ಟರು. ಇದಲ್ಲದೆ ಆಕೆಯು ಮಗಳಿಗೆ ವಿಲಾಯತಿಯಲ್ಲಿ ವೈದ್ಯ ಕಲಿತು ಬರುವುದಕ್ಕೂ ಅಲ್ಲಿಂದ ಬೇಕಾದ ಔಷಧಾದಿ ಸಾಮಾನುಗಳನ್ನು ಕೊಂಡು ತರುವುದಕ್ಕೂ ಆಕೆಯ ವಶಕ್ಕೆ ೩೦,೦೦೦ ರೂಪಾಯಿ ಕೊಟ್ಟಿದ್ದಾರೆ.

***

ಪೂನೆಯ ಹತ್ತರ ಬಿಂಧ್ ಸಂಸ್ಥಾನದ ರಾಜರು ಶಿಕಾರಿ ಮಾಡಿದನ್ನು ಮುಖ್ಯ ಕಾರ್ಭಾರಿಯನ್ನು ಕೊಲ್ಲಿಸಬೇಕೆಂದು ಪ್ರಯತ್ನಪಟ್ಟಿರುವದಾಗಿ ಮೊಕದ್ದಮೆ ಬಂದು ಸಾತಾರೆಯಲ್ಲಿ ವಿಚಾರಣೆ ನಡೆಯುತ್ತಿತ್ತಷ್ಟೆ. ಕಮೀಷನ್ ಜಡ್ಜಿಗಳು ಈ ಮೊಕದ್ದಮೆಯನ್ನು ಸಂಪೂರ್ಣವಾಗಿ ದರ್ಯಾಫ್ತು ಮಾಡಿ, ಸಾಕ್ಷಿಗಳ ಕೈಫಿಯತ್ತನ್ನು ಬರೆದುಕೊಂಡು ಕಡೆಯಲ್ಲಿ ಎರಡು ಪಕ್ಷಗಳ ಲಾಯರುಗಳೂ ಹೇಳಿದ ಮುಖ್ಯ ವಿಚಾರಗಳನ್ನು ಗುರುತು ಹಾಕಿಕೊಂಡು, ಕೋರ್ಟನ್ನು ಬರಖಾಸ್ತು ಮಾಡಿದರು. ಅವರು ಕಟ್ಟನ್ನೆಲ್ಲಾ ತಮ್ಮ ಅಭಿಪ್ರಾಯ ಸಹಿತವಾಗಿ ಬೊಂಬಾಯಿ ಗವರ್ನರವರಿಗೆ ಕೃತಪಡಿಸುವರು. ಅದರ ಮೇಲೆ ಗವರ್ನರವರು ಕ್ಯಾಗೆ ತೀರ್ಮಾನ ಮಾಡುವರೋ ನೋಡಬೇಕಾಗಿದೆ.

***

ಮಾರ್ಷಾಲ್ ಎಂಬೊಬ್ಬ ಅಮೇರಿಕದ ಸ್ತ್ರೀಯು ಬೆಂಗಳೂರಿನಿಂದ ಅನೇಕ ವ್ಯಾಪಾರ ಪದಾರ್ಥಗಳನ್ನು ತೆಗೆದುಕೊಂಡು ಬರ್ಮಾಕ್ಕೆ ಹೋಗಿ ಒಂದು ಹೋಟೇಲಿನಲ್ಲಿ ಇಳಿದುಕೊಂಡಳು. ಬೊಂಬಾಯಿ ಪೋಲೀಸಿನವರು ಕೊಟ್ಟ ತಂತೀ ವರ್ತಮಾನದ ಪ್ರಕಾರ ರಂಗೂನ್ ಪಟ್ಟಣದ ಪೋಲೀಸಿನವರು ಅವಳ ಮನೆಯನ್ನು ಶೋಧನೆ ಮಾಡಿದರು. ಅವಳ ಗಂಡನು ಸಿಕ್ಕದೆ ತಲೆತಪ್ಪಿಸಿಕೊಂಡುಬಿಟ್ಟನು. ಅವಳು ಮಾತ್ರ ಸಿಕ್ಕಿಬಿದ್ದಳು. ಪೋಲೀಸಿನವರು ಅವಳಿಂದ ಹೇಳಿಕೊಂಡ ಪೆಟ್ಟಿಗೆಗಳ ಬೀಗ ಒಡೆದು ೬೦ ಸಾವಿರ ರೂಪಾಯಿನ ಕಳುವು ಮಾಲುಗಳನ್ನು ಸ್ವಾಧೀನಪಡಿಸಿಕೊಂಡು ಅವಳನ್ನು ಅಲ್ಲಿಂದ ಹಡಗಿನ ಮೂಲಕ ಕಲ್ಕತ್ತೆಯ ಮಾರ್ಗವಾಗಿ ಬೊಂಬಾಯಿಗೆ ಕಳುಹಿಸಿರುತ್ತಾರೆ. ಬೊಂಬಾಯಿನಲ್ಲಿ ಅವಳ ದರ್ಯಾಫ್ತಿಯಾಗುವುದು.

***

ಕಲ್ಕತ್ತಾ ಪಟ್ಟಣದ ಬೆಂಟಿಂಕ್ ಬೀದಿಯಲ್ಲಿ ಒಬ್ಬ ಕುದುರೆಗೆ ಇಟ್ಟಿದ್ದ ೧೨ ಆಣೆಯನ್ನು ಯಾರೋ ಅಪಹರಿಸಿದರು. ಅವನು ಇನ್ನಿಬ್ಬರು ಕುದುರೆ ಆಳುಗಳೂ ಸೇರಿ ೧೪, ೧೫ ವಯಸ್ಸುಳ್ಳ ಇಬ್ಬರು ಕುದುರೆ ಆಳುಗಳ ಮೇಲೆ ಅನುಮಾನಪಟ್ಟು, ಅವರಿಬ್ಬರನ್ನೂ ಹಿಡಿದು ಬಹಳವಾಗಿ ಹೊಡೆದರು. ಅವರು ತಾವು ೧೨ ಆಣೆಯನ್ನು ಕಂಡವರಲ್ಲವೆಂದು ಎಷ್ಟು ಹೇಳಿದರೂ ಕೇಳಲಿಲ್ಲ. ತರುವಾಯ ಅವರಿಬ್ಬರನ್ನೂ ಹಗ್ಗದಿಂದ ಕಾಲುಕಟ್ಟಿ ಮರಕ್ಕೆ ನೇತುಹಾಕಿ ಪ್ರಾಣ ಹೋಗುವಂತೆ ಹೊಡೆದು ಪ್ರಾಣ ಹೋಯಿತೆಂಬ ಅನುಮಾನದಿಂದ ಕಳೆಗಳಿಂದ ಅವರನ್ನು ಬಿಚ್ಚಿ ಕೆಳಕ್ಕೆ ಇಳಿಸಿದರು. ದೊಡ್ಡವನು ಸತ್ತುಹೋಗಿದ್ದನು. ಚಿಕ್ಕವನಿಗೆ ಸ್ವಲ್ಪ ಜೀವವಿದ್ದರೂ ಜ್ಞಾನವಿಲ್ಲ. ಇವನನ್ನು ಆಸ್ಪತ್ರೆಯಲ್ಲಿ ಹಾಕಿದ್ದಾರೆ. ಈ ಮಧ್ಯೆ ಹಿಂಸೆಪಡಿಸಿದ ಆ ಮೂರು ಮಂದಿ ಕಾಸ್ತಾರರೂ ತಲೆತಪ್ಪಿಸಿಕೊಂಡಿರುವರು.

***

ಪಂಜಾಬ್ ಅಧಿಪತ್ಯಕ್ಕೆ ಸೇರಿದ ಝಾಂಗ್ ಡಿಸ್ಟ್ರಿಕ್ಟಿನಲ್ಲಿ ಹೆಣ್ಣು ಮಕ್ಕಳನ್ನೂ ಸ್ತ್ರೀಯರನ್ನೂ ಕೊಂಡುಮಾರುವುದು ರೂಢಿಯಲ್ಲಿದೆಯೆಂದು ಅಲ್ಲಿನ ಪತ್ರಿಕೆಯೊಂದು ತಿಳಿಸುತ್ತದೆ. ಅಲ್ಲಿನ ಜನರಲ್ಲಿ ಹೆಣ್ಣು ಮಕ್ಕಳೆಂದರೆ ಬಹಳ ಕಷ್ಟ. ಒಂದು ಹೆಣ್ಣು ಮಗು ಹುಟ್ಟಿದರೆ ಮನೆಯವರು ಕಡೇ ಪಕ್ಷ ಸಾವಿರ ರೂಪಾಯಿ ಬಂತೆಂದು ಎಣಿಸುವರು. ಹೆಣ್ಣುಗಳನ್ನು ಗೊತ್ತುಮಾಡಿಕೊಡುವುದರಲ್ಲಿ ಅಲ್ಲಿನ ಬ್ರಾಹ್ಮಣರು ಮಧ್ಯಸ್ಥಿಕೆ ಮಾಡುವುದೂ ಲಾಭಸಂಪಾದನೆ ಮಾಡಿಕೊಳ್ಳುವುದೂ ಅಪರೂಪವಲ್ಲ. ಹುಡುಗಿಯು ಸುಂದರವಾಗಿಯೂ ಸಲಕ್ಷಣವಾಗಿಯೂ ಇದ್ದ ಪಕ್ಷಕ್ಕೆ ಕೆಲವು ಸಾವಿರ ರೂಪಾಯಿ ಸಿಕ್ಕುವುದಕ್ಕೆ ಸಂದೇಹವಿಲ್ಲ. ಕೆಲವು ಜನರು ಕಾಂಗ್ರಾ ಮುಂತಾದ ಪ್ರಾಂತ್ಯಗಳಿಂದ ಹೆಣ್ಣುಗಳನ್ನು ಕರೆಸಿಕೊಂಡು ವ್ಯಾಪಾರ ಮಾಡುವುದೂ ಉಂಟು. ಝಾಂಗ್ ಎಂಬಲ್ಲಿ ಕೆಲವು ದಿನಗಳ ಹಿಂದೆ ಒಬ್ಬ ಚಮ್ಮಾರ ಜಾತಿಯ ಹೆಣ್ಣನ್ನು ೩೫೦ ರೂಪಾಯಿಗೆ ಒಬ್ಬ ಉತ್ತಮ ಜಾತಿಯವನಿಗೆ ಮಾರಿಮಾಡಿದ್ದದ್ದು ಪ್ರಕಾಶಕ್ಕೆ ಬಂದಿರುತ್ತದೆ.

***

ದರ್ಭಾಂಗ ಸಂಸ್ಥಾನದ ರಾಜಧಾನಿಯ ಆನಂದಬಾಗ್ ಎಂಬ ಅರಮನೆಯಲ್ಲಿ ಕಳೆದ ವಾರ ಸಂಸ್ಕೃತ ವಿದ್ಯಾ ಪ್ರೋತ್ಸಾಹಕ್ಕಾಗಿ ಒಂದು ದೊಡ್ಡ ಸಭೆ ನಡೆಯಿತು. ಬಹುಜನ ದೊಡ್ಡ ಪಂಡಿತರೂ ವಿದ್ವಾಂಸರೂ ಹಾಜರಾಗಿದ್ದರು. ಮಹಾರಾಜಾ ಶ್ರೀ ರಾಮೇಶ್ವರ ಸಿಂಗ್ ಬಹದ್ದೂರ್, ಕೆ ಸಿ ಐ ಇ ಯವರು ಅಗ್ರಾಸನವನ್ನು ವಹಿಸಿ, ಸಂಸ್ಕೃತವನ್ನು ಕಲಿಸುವುದಕ್ಕೆ ಉತ್ತಮತರದ ಮತ್ತು ಪ್ರೋತ್ಸಾಹಯುಕ್ತವಾದ ಒಂದು ದೊಡ್ಡ ವಿದ್ಯಾಶಾಲೆಯನ್ನು ಸ್ಥಾಪಿಸುವ ವಿಷಯವಾಗಿ ಉಪನ್ಯಾಸ ಮಾಡಿದರು. ಮಹಾ ಮಹೋಪಾಧ್ಯಾಯ ಪಂಡಿತ ಚಿತ್ರಧರ ಮಿಶ್ರರವರು ಪಾಠಶಾಲೆಯನ್ನು ನಡಸತಕ್ಕ ಕ್ರಮ ಮುಂತಾದವುಗಳ ಕುರಿತು ವಿವರಿಸಿದರು. ಕಡೆಗೆ ಒಂದು ವಿದ್ಯಾಶಾಲೆಯು ಸ್ಥಾಪಿಸಲ್ಪಡಬೇಕೆಂದು ತೀರ್ಮಾನವಾಯಿತು. ಅದರಲ್ಲಿ ಹಿಂದೂ ಶಾಸ್ತ್ರ, ಜ್ಯೋತಿಷ, ತರ್ಕ ವೇದ ಮೊದಲಾದವುಗಳನ್ನು ವಿದ್ಯಾರ್ಥಿಗಳಿಗೆ ಕಲಿಸಬೇಕೆಂತಲೂ ವಿದ್ಯಾರ್ಥಿಗಳಿಗೆ ತಲಾ ೩ ರೂಪಾಯಿನಂತೆ ವೇತನವನ್ನು ಕೊಡಬೇಕೆಂತಲೂ ಗೊತ್ತುಮಾಡಿದರು. ಮಹಾರಾಜರು ಈ ಪಾಠಶಾಲೆಯ ಖರ್ಚಿಗೆ ತಿಂಗಳಿಗೆ ಮೂರು ಸಾವಿರ ರೂಪಾಯಿನಂತೆ ದ್ರವ್ಯಸಹಾಯ ಮಾಡುವುದಾಗಿ ವಾಗ್ದಾನ ಮಾಡಿದ್ದಾರೆ.

ಒಬ್ಬ ಬಾತ್ಮಿದಾರರು ಬರೆಯುವುದೇನಂದರೆ:—ಉತ್ತರ ಹಿಂದುಸ್ಥಾನಕ್ಕೆ ಸೇರಿದ ಗ್ವಾಲಿಯರ್ ಸಂಸ್ಥಾನದ ಪೈಕಿ ಮೋರೇನಾ ಎಂಬ ಊರಿಗೆ ಇದೇ ಮೇ ತಿಂಗಳು ೧೪ ನೆ ತಾ॥ ರಾತ್ರಿ ೧೨ ಗಂಟೆ ವೇಳೆಯಲ್ಲಿ ಸುಮಾರು ೧೫೦ ಜನ ಪಿಂಡೆನಕಳ್ಳರು ಮದ್ದು ಗುಂಡು ಕತ್ತಿ ಕಠಾರಿ ದೊಣ್ಣೆಗಳು ವಗೈರೆ ಭಾರಿ ಆಯುಧಗಳ ಸಮೇತ ಇಳಿದುಬಿದ್ದು, ಸಾಹುಕಾರರುಗಳಿದ್ದ ೧೦ ಮನೆಗಳಿಗೆ ನುಗ್ಗಿ, ೩೦ ಜನಗಳ ಪರಿವಿಗೆ ಕೈಗಳನ್ನೂ ಕಾಲುಗಳನ್ನೂ ನಡುವುಗಳನ್ನೂ ಕುತ್ತಿಗೆಗಳನ್ನೂ ಕತ್ತರಿಸಿ, ಬಹಳ ಕ್ರೂರವಾದ ಹಿಂಸೆಗಳನ್ನು ಮಾಡಿ, ೬—೮ ಕಬ್ಬಿಣದ ಪೆಟ್ಟಿಗೆಗಳನ್ನು ಒಡೆದು ಚೂರುಚೂರು ಮಾಡಿ, ೩೦ ಸಾವಿರ ರೂಪಾಯಿಗಳ ಒಡವೆಗಳ ನಗದು ಮತ್ತು ನಗನಾಣ್ಯಗಳನ್ನೂ ರಾತ್ರಿ ೩ ಗಂಟೆಯ ತನಕ ಬಹಳ ಆರ್ಭಟದಿಂದ ದೋಚಿಕೊಂಡು ಪಲಾಯನವಾದರು. ಕಬ್ಬಿಣದ ಪೆಟ್ಟಿಗೆಗಳ ಚೂರುಗಳನ್ನು ಬೀದಿಯಲ್ಲಿ ಬಿಸಾಟು ಇರುತ್ತಾರೆ. ಈ ಪೈಕಿ ೭ ಜನರು ತಕ್ಷಣವೇ ಮೃತಪಟ್ಟು ಇರುತ್ತಾರೆ. ೩ ಜನ ಶಿಪಾಯಿಗಳನ್ನೂ ಇಬ್ಬರು ಪೋಲೀಸಿನವರನ್ನೂ ಗುಂಡಿನಿಂದ ಸುಟ್ಟು ಕೊಂದು ಹಾಕಿ ಇರುತ್ತಾರೆ. ಊರಿನ ಜನಗಳೆಲ್ಲರೂ ಆ ರಾತ್ರಿಯನ್ನೆಲ್ಲಾ ಬಹಳ ಘೋರವಾಗಿಯೂ ಭಯಂಕರವಾಗಿಯೂ ಕಳೆಯಬೇಕಾಯಿತು. ಬಾಕಿ ಪೆಟ್ಟುಗಳು ತಿಂದವರೆಲ್ಲಾ ಪ್ರಜ್ಞೆಯಿಲ್ಲದೆ ಬಿದ್ದು ಇದ್ದವರನ್ನು ಆಸ್ಪತ್ರೆಯಲ್ಲಿ ಇಟ್ಟು ಚಿಕಿತ್ಸೆ ಮಾಡುತ್ತಾ ಇದ್ದಾರೆ. ಇವರಲ್ಲಿಯೂ ಮುಕ್ಕಾಲು ಭಾಗ ಜನರು ಉಳಿಯುವದಿಲ್ಲವೆಂದು ಡಾಕ್ಟರವರು ಹೇಳುತ್ತಾ ಇದ್ದಾರೆ. ಕೂಡಲೆ ತಂತೀ ವರ್ತಮಾನಗಳನ್ನು ಕೊಡಲು ಗ್ವಾಲಿಯರಿನಿಂದಲೂ ಝಾನ್ಸಿಯಿಂದಲೂ ಸರ್ಕಾರಿ ಸೈನ್ಯಗಳು ಬಂದು ಇರುತ್ತವೆ.

***

ಬೊಂಬಾಯಿ ಪಟ್ಟಣದಲ್ಲಿ ಪ್ರಕಟವಾಗುವ "ಹಿಂದೂ ಸ್ವರಾಜ್ಯ" ಎಂಬ ಗುಜರಾತೀ ವಾರ ಪತ್ರಿಕೆಯ ಎಡಿಟರಾದ ಚಗನ್‌ಲಾಲ್ ಲಾಲೂಭಾಯಿ ಥಾಕೂಲಾಲ್ ಎಂಬಾತನು ಕಳೆದ ಅಕ್ಟೋಬರ್ ತಿಂಗಳಲ್ಲಿ ಎರಡು ವಿಷಯಗಳನ್ನು ಕುರಿತು ಆ ಪತ್ರಿಕೆಯಲ್ಲಿ ಬರೆದು ಪ್ರಕಟಿಸಿದನು. ಮೊದಲನೆಯದು—"ಮಾಡಬೇಕಾದದ್ದನ್ನು ಮಾಡು" ಎಂಬುವದು. ಎರಡನೆಯದು—"ಓ, ನಿಮ್ಮ ಕರ್ತವ್ಯವನ್ನು ನೀವು ಮಾಡಿ ನಿಮ್ಮ ಹೆಸರನ್ನು ನಾಲ್ಕು ಕಡೆಗಳಲ್ಲೂ ಹಬ್ಬಿಸಿ" ಎಂಬುವದು. ಮೊದಲನೆಯ ಶಿರನಾಮೆ ಕೆಳಗೆ ಇಂಗ್ಲಿಷರು ಈ ರಾಷ್ಟ್ರವನ್ನು ಆಕ್ರಮಿಸಿಕೊಂಡು ಲೂಟಿ ಮಾಡಿ ರಾಕ್ಷಸರಂತೆ ಜನರನ್ನು ಕಷ್ಟನಷ್ಟಗಳಿಗೆ ಗುರಿ ಮಾಡುತ್ತಾರೆಂತಲೂ, ಜನರು ಅಭಿವೃದ್ಧಿಗೆ ಬಂದು ತಮ್ಮ ಮಾತೃಭೂಮಿಯನ್ನು ಕಾಪಾಡಿಕೊಳ್ಳುವುದಕ್ಕಾಗಿ ಪ್ರಾಣ ಕೊಡಬೇಕೆಂತಲೂ ಬರೆದಿತ್ತು. ಎರಡನೆಯ ಬಾತ್ಮಿಯಲ್ಲಿ ಹಿಂದುಸ್ಥಾನದವರು ಇಂಗ್ಲಿಷರ ಗುಲಾಮರಾಗಿದ್ದುಕೊಂಡು ಮಾತೃಭೂಮಿಗೆ ಅವಮಾನವನ್ನು ತರಬಾರದೆಂತಲೂ ಯುದ್ಧ, ರಕ್ತ ಚೆಲ್ಲುವಿಕೆ, ಸುಟ್ಟು ಹಾಕುವುದು, ಈ ಕಾರ್ಯಗಳನ್ನು ನಡಿಸಬೇಕೆಂತಲೂ ಬರೆದಿತ್ತು. ಇದಕ್ಕಾಗಿ ಸರ್ಕಾರದವರು ಆಗ ಆ ಎಡಿಟರನ್ನು ಹಿಡಿದು ನೇಕಚಲನೆಗೆ ಎರಡು ಜಾಮೀನು ತೆಗೆದುಕೊಂಡು ಬಿಟ್ಟಿದ್ದರು. ಈಚೆಗೆ ೧೯೦೩ ನೆ ಫೆಬ್ರವರಿ ತಿಂಗಳಲ್ಲಿ ಅದೇ ಎಡಿಟರು ಪುನಃ ತನ್ನ ಪತ್ರಿಕೆಯಲ್ಲಿ ಮೇಲ್ಕಂಡ ವಿಷಯಗಳನ್ನು ಪ್ರಕಟಿಸಿದ್ದಲ್ಲದೆ ಇನ್ನು ಕೆಲವು ವಿಷಯಗಳನ್ನು ಸೇರಿಸಿ ಬರೆದಿದ್ದನು. ಇದು ರಾಜದ್ರೋಹದ್ದೆಂದು ಸರ್ಕಾರದವರು ಹಿಡಿದು ತನಿಖೆ ಮಾಡಿದರು. ಬೊಂಬಾಯಿನ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು ಆ ಎಡಿಟರನ್ನು ದರ್ಯಾಫ್ತು ಮಾಡಿ, ಆತನಿಗೆ ಎರಡು ವರುಷಗಳ ಕಠಿಣ ಸಜಾ ವಿಧಿಸಿರುತ್ತಾರೆ.

ವಿದೇಶ ವರ್ತಮಾನಗಳು.

ಅಮೇರಿಕಕ್ಕೆ ಸೇರಿದ ಅಯೋವಾ ಪಟ್ಟಣದಲ್ಲಿ ಐರ್ಯ ಮೆಕ್ಲಾರೆನ್ ಎಂಬಾತನು ಸಭೆಯಲ್ಲಿ ನಿಂತು ಬಹು ರಭಸವಾಗಿ ಉಪನ್ಯಾಸ ಮಾಡುತ್ತಿದ್ದಾಗ ಕಾಲವಾದನೆಂದು ತಿಳಿದು ಬಂದಿದೆ.

***

ರಷ್ಯಾ ಜಪಾನ್ ಯುದ್ಧದಲ್ಲಿ ಜಪಾನವರು ರಷ್ಯಾ ಸೈನಿಕರನ್ನು ಹಿಡಿದು ಸೆರೆಯಲ್ಲಿಟ್ಟುಕೊಂಡು ಸಾಕಿದ್ದಕ್ಕಾಗಿ ಆ ಖರ್ಚನ್ನೆಲ್ಲಾ ಹಿಂದರೆ ಸುಮಾರು ೧೪ ಕೋಟಿ ರೂಪಾಯನ್ನು ಈಗ ರಷ್ಯಾ ರಾಜ್ಯದವರು ಸಾಲಮಾಡಿಕೊಟ್ಟು ತೀರಿಸುವುದಕ್ಕೆ ಏರ್ಪಾಡುಮಾಡುತ್ತಿದ್ದಾರೆ.

***

ವಿಲಾಯತಿಗೆ ಸೇರಿದ ಯಾರ್ಮತ್ ಪಟ್ಟಣದಲ್ಲಿ ಮಿ॥ ಎಡ್ಮಂಡ್ ಕ್ರಿಸ್ಪ್ ಎಂಬಾತನು ೧೦೮ ವರುಷ ತುಂಬಿದ ಹಬ್ಬ ಮಾಡಿಕೊಂಡನು. ಅವನಿಗೆ ಈಗಲೂ ಕಾಯಪುಷ್ಟಿ ಚೆನ್ನಾಗಿದೆ. ದಿನವಹಿ ಹವಾ ಪಡೆಯುವ ಉದ್ದಿಶ್ಯ ಅವನು ಸಾರಿಗೆಯಾಗಿ ಸುತ್ತಿಕೊಂಡು ಬರುತ್ತಿದ್ದಾನೆ.

***

ಅಮೇರಿಕದವರ ಸ್ವಾಧೀನದಲ್ಲಿರುವ ಫಿಲಿಪೈನ್ ದ್ವೀಪಗಳಿಗೆ ಅಮೇರಿಕದ ಸರ್ಕಾರದವರು ಸ್ವತಂತ್ರಾಧಿಕಾರವನ್ನೂ ಪಾರ್ಲಿಮೆಂಟನ್ನೂ ವಹಿಸಿರುತ್ತಾರೆ. ಮುಂದೆ ಜೂಲೈ ತಿಂಗಳಿನ ಅಂತ್ಯಭಾಗದಲ್ಲಿ ಫಿಲಿಪೈನ್ ಪ್ರಜೆಗಳು ತಮ್ಮ ಪಾರ್ಲಿಮೆಂಟಿಗೆ ಮೆಂಬರುಗಳನ್ನು ಚುನಾಯಿಸುತ್ತಾರೆ.

***

ಇಂಗ್ಲೆಂಡಿನಲ್ಲಿ ಕಾಲವಾದ ಮಿಸೆಸ್ ಅನ್ನಿ ಜೂಲಿಯಾ ಲೈಯಲ್ ಎಂಬಾಕೆಯು ತನ್ನ ಆಸ್ತಿಯಲ್ಲಿ ೪॥ ಲಕ್ಷ ರೂಪಾಯನ್ನೂ ಮಿಸೆಸ್ ಲೂಸಿಯಾ ಬ್ಯಾಕ್‌ಹೌಸ್ ಎಂಬಾಕೆಯು ತನ್ನ ಆಸ್ತಿಯಲ್ಲಿ ಒಂದು ಲಕ್ಷ ರೂಪಾಯನ್ನೂ ಧರ್ಮ ಕಾರ್ಯಗಳಿಗೆ ವಿನಿಯೋಗಿಸಬೇಕೆಂದು ಉಯಿಲು ಬರೆದಿರುತ್ತಾರೆ.

***

ಚೀನಾ ಗವರ್ನ್‌ಮೆಂಟಿನವರು ತಮ್ಮ ಸಮಸ್ತ ಸೈನಿಕರಿಗೂ ಈಗಿನ ಕಾಲದ ಒಂದೇ ಜಾತಿಯ ಬಂದೂಕುಗಳನ್ನು ತರಿಸಿಕೊಡಬೇಕೆಂದು ತೀರ್ಮಾನ ಮಾಡಿ, ಜರ್ಮನಿ ರಾಜ್ಯದಲ್ಲಿರುವ ಒಂದು ದೊಡ್ಡ ಕಾರ್ಖಾನೆಗೆ ಬರೆದು ಇಪ್ಪತ್ತು ಲಕ್ಷ ಬಂದೂಕುಗಳನ್ನು ತಯಾರುಮಾಡಿ ಕಳುಹಿಸಬೇಕೆಂದು ಹಣ ಸ್ಯಾಂಕ್ಷನ್ ಮಾಡಿ ತಿಳಿಸಿರುತ್ತಾರೆ.

***

ಫಿಲಿಪೈನ್ ದ್ವೀಪಗಳಿಗೆ ಸೇರಿದ ಹೋಯಿಲೋ ಎಂಬ ದೊಡ್ಡ ಪಟ್ಟಣಕ್ಕೆ ಬೆಂಕಿ ಬಿದ್ದು ಆ ಪಟ್ಟಣಕ್ಕೆ ಪಟ್ಟಣವೇ ಸುಟ್ಟುಹೋಯಿತು. ಇಪ್ಪತ್ತು ಸಹಸ್ರ ಪ್ರಜೆಗಳು ಮನೆ ಮಠಗಳನ್ನೂ ಆಸ್ತಿಪಾಸ್ತಿಗಳನ್ನೂ ಕಳೆದುಕೊಂಡು ಅಳುತ್ತಿದ್ದಾರೆ. ಅಪಾರವಾದ ಗಾಳಿಯು ಪ್ರಾಪ್ತವಾಗಿ ಬೆಂಕಿಯನ್ನಾರಿಸುವುದಕ್ಕೆ ಸಾವಿರಾರು ಪ್ರಜೆಗಳು ಪಟ್ಟ ಪ್ರಯಾಸವೆಲ್ಲಾ ವ್ಯರ್ಥವಾಯಿತು.

***

ಇಂಗ್ಲಿಷ್ ಸ್ವಾಸ್ಥ್ಯವಾದ ನ್ಯೂಜೀಲೆಂಡಿನಲ್ಲಿ ಬಹಳ ದೊಡ್ಡ ಪ್ರದರ್ಶನೋತ್ಸವವನ್ನು ನಡಿಸಿದರು. ಸಮಸ್ತ ಇಂಗ್ಲಿಷ್ ರಾಜಾಂಗಗಳಿಂದಲೂ ಆ ಪ್ರದರ್ಶನಕ್ಕೆ ಅನೇಕಾನೇಕ ವಿಚಿತ್ರ ವಸ್ತುಗಳನ್ನೂ ಕೈಗಾರಿಕೆ ಸಾಮಾನುಗಳನ್ನೂ ಕಳುಹಿಸಿದ್ದರು. ಸುಮಾರು ೨೦ ಲಕ್ಷ ಜನರು ಹೋಗಿ ಈ ಪ್ರದರ್ಶನವನ್ನು ನೋಡಿಕೊಂಡು ಬಂದರೆಂಬದಾಗಿ ಅಲ್ಲಿನ ಗವರ್ನರವರು ತಿಳಿಸಿರುತ್ತಾರೆ.

***

ಪೋರ್ಚುಗಲ್ ರಾಜ್ಯದಲ್ಲಿ ಒಂದು ಊರಿನ ಒಬ್ಬ ಬಾಲಕನನ್ನು ಕೆಲವು ಪಂಡಿತರು ವಿದ್ಯಾ ಪರೀಕ್ಷೆ ಮಾಡಿ, ಯೋಗ್ಯನಾಗಿ ಕಂಡುಬಂದರೂ ಅವನನ್ನು ತೇರ್ಗಡೆ ಹೊಂದಿಸಲಿಲ್ಲವೆಂದು ಅನೇಕ ವಿದ್ಯಾರ್ಥಿಗಳಿಗೆ ಮನಸ್ತಾಪ ಉಂಟಾಗಿದೆ ಎಂತಲೂ, ಕೊಯಂಬ್ರಾ, ಲಿಸ್ಬನ್, ಓಪೋರ್ಟೋ ಎಂಬೀ ದೊಡ್ಡ ಪಟ್ಟಣಗಳಲ್ಲಿ ಓದುವ ಬಾಲಕರು ಸ್ಕೂಲುಗಳಿಗೆ ಹೋಗದೆ ನಿಲ್ಲಿಸಿಬಿಟ್ಟಿದ್ದಾರೆಂತಲೂ ತಿಳಿಯುವುದು.

***

ಜಪಾನ್ ರಾಜ್ಯದ ರಾಜಧಾನಿಯಾದ ಟೋಕಿಯೋ ಪಟ್ಟಣದಲ್ಲಿ ಜಪಾನ್ ಚಕ್ರವರ್ತಿಯವರು ಪಟ್ಟಕ್ಕೆ ಬಂದು ೫೦ ವರ ಷಗಳಾದ ಸಂಭ್ರಮವನ್ನು ಪ್ರಕಾಶಪಡಿಸುವುದಕ್ಕಾಗಿ ಒಂದು ಪ್ರದರ್ಶನೋತ್ಸವವನ್ನು ನಡಿಸಬೇಕೆಂದು ಅಲ್ಲಿನ ಪ್ರಜೆಗಳೂ ಸರ್ಕಾರದವರೂ ಸನ್ನಾಹ ಮಾಡುತ್ತಿದ್ದಾರೆ. ರಾಜಧಾನಿಯ ಮಧ್ಯರಾಷ್ಟ್ರದಲ್ಲಿರುವ ದೊಡ್ಡ ಮೈದಾನದಲ್ಲಿ ಪ್ರದರ್ಶನಾಲಯವನ್ನು ಕಟ್ಟಲಾರಂಭವಾಗಿದೆ.

***

ಅಮೇರಿಕಕ್ಕೆ ಸೇರಿದ ಮೆಕ್ಸಿಕೋ ರಾಜ್ಯದಲ್ಲಿ ಮೆಲಾಡ್‌ಗಾ ಎಂಬ ಸ್ಥಳದಲ್ಲಿ ತಾಂಬ್ರದ ಗಣಿ ಇರುತ್ತದೆ. ಆ ಗಣಿಯಲ್ಲಿ ಕೂಲಿಕಾರರು ಕೆಲಸ ಮಾಡುತ್ತಿದ್ದಾಗ ಕಳೆದವಾರ ಭಯಂಕರವಾದ ಅಪಾಯ ಉಂಟಾಗಿ ಕೂಲಿಕಾರರ ಪೈಕಿ ೧೦೩ ಜನರು ಏಕಕಾಲದಲ್ಲಿ ಪ್ರಾಣ ಕಳೆದುಕೊಂಡರೆಂತಲೂ, ೧೬ ಮಂದಿ ಬದುಕಿ ಬಂದರೆಂತಲೂ, ಉಳಿದವರು ಕೂಡ ಬದುಕುವಹಾಗಿಲ್ಲವೆಂತಲೂ ತಂತೀ ವರ್ತಮಾನಬಂದಿದೆ.

***

ರಷ್ಯಾ ರಾಜ್ಯದಲ್ಲಿ ಈಗಿನ ರಾಜ್ಯಭಾರವನ್ನೇ ತಲೆಕೆಳಗು ಮಾಡಿ ಪ್ರಜಾ ಅಧಿಪತ್ಯವನ್ನು ಸ್ಥಾಪನೆ ಮಾಡಬೇಕೆಂಬ ಮನಸ್ಸುಳ್ಳ ರಷ್ಯಾ ದೊಡ್ಡಮನುಷ್ಯರೂ, ಡ್ಯೂಮಾ ಪಾರ್ಲಿಮೆಂಟಿನ ಅರು ಮಂದಿ ಮೆಂಬರುಗಳೂ, ಇಟಲಿಯಿಂದ ಮಾಗಿದಂ ಗೋರ್ಕಿ ಎಂಬಾತನೂ ಗುಟ್ಟಾಗಿ ಏರ್ಪಾಟುಗಳನ್ನು ನಡಿಸಿ ತಮ್ಮ ಉದ್ದೇಶವನ್ನು ನೆರವೇರಿಸಿಕೊಳ್ಳುವುದಕ್ಕೆ ರಷ್ಯಾ ರಾಜ್ಯವನ್ನು ಬಿಟ್ಟು, ಲಂಡನ್ ಪಟ್ಟಣಕ್ಕೆ ಹೋಗಿದ್ದಾರೆಂದು ತಂತೀ ವರ್ತಮಾನ ಬಂದಿದೆ.

***

ಮ್ಯಾಸಿಡೋನಿಯಾದಲ್ಲಿ ಕೆಲವು ಬಲ್ಗೇರಿಯಾ ಪ್ರಜೆಗಳ ಮುಖಂಡರು ತುಂಬಾ ಗಲಭೆಯೆಬ್ಬಿಸಿದರೆಂದು ತುರ್ಕೀ ಸುಲ್ತಾನರು ನೂರಾರು ಮಂದಿಯನ್ನು ಹಿಡಿಸಿ ಸೆರೆಯಲ್ಲಿ ಹಾಕಿಸಿದ್ದರು. ಈಚೆಗೆ ಬಲ್ಗೇರಿಯಾ ರಾಜಪ್ರತಿನಿಧಿಯು ಅಂಥಾ ಕೆಲವು ದೊಡ್ಡ ಮನುಷ್ಯರನ್ನು ಸೆರೆಯಿಂದ ಬಿಡುವುದು ಒಳ್ಳೇದೆಂದು ಸುಲ್ತಾನರವರಿಗೆ ಶಿಫಾರಸು ಬರೆದರು. ಅದರಂತೆ ಸುಲ್ತಾನರು ೧೭೩ ಮಂದಿ ದೊಡ್ಡ ಮನುಷ್ಯರನ್ನು ಕ್ಷಮಾಪಣೆ ಮಾಡಿ ಬಿಡುಗಡೆ ಮಾಡಿರುವರು. ಈ ವರ್ತಮಾನವನ್ನು ಕೇಳಿ ಆ ಪ್ರಾಂತ್ಯದ ಸಕಲ ಪ್ರಜೆಗಳೂ ಸುಲ್ತಾನರನ್ನು ಕೊಂಡಾಡುತ್ತಿದ್ದಾರೆ.

***

ಜರ್ಮನ್ ರಾಜ ಚಕ್ರವರ್ತಿಯವರ ಮನೆತನಕ್ಕೆ ಸೇರಿದ ಪ್ರಿನ್ಸ್ ಹೆನ್ರಿ ಎಂಬ ರಾಜಕುಮಾರರು ಕಳೆದವಾರ ಲಂಡನ್ ಪಟ್ಟಣವನ್ನು ತಲುಪಿದರು. ಇವರನ್ನು ವಿಲಾಯತಿ ರಾಜ್ಯದ ಮುಖ್ಯಾಧಿಕಾರಿಗಳೂ ದೊಡ್ಡಮನುಷ್ಯರೂ ಮರ್ಯಾದೆಗಳೊಡನೆ ಎದುರುಗೊಂಡು ಮೆರವಣಿಗೆಯಾಗಿ ಕರೆದುಕೊಂಡು ಹೋದರು. ಅನೇಕ ಕಡೆಗಳಲ್ಲಿ ಅವರಿಗೆ ಭಾರೀ ಔತಣಗಳನ್ನು ಮಾಡಿಸಿದರು. ಚಕ್ರವರ್ತಿಯವರೂ ಯುವರಾಜರವರೂ ಆ ಜರ್ಮನ್ ರಾಜಕುಮಾರರಿಗೆ ಭೇಟಿಕೊಟ್ಟು, ಅವರನ್ನು ನಾನಾಪ್ರಕಾರವಾಗಿ ಸತ್ಕಾರ ಮಾಡಿದರು. ಜರ್ಮನರಿಗೂ ವಿಲಾಯತಿಯವರಿಗೂ ನಿಷ್ಕಳಂಕವಾದ ಪ್ರೀತಿ ವಿಶ್ವಾಸಗಳುಂಟಾಗಿವೆ ಎಂಬುದಕ್ಕೆ ಇದು ದೊಡ್ಡ ದೃಷ್ಟಾಂತವಾಗಿದೆ.

***

ರಷ್ಯಾ ರಾಜ್ಯಕ್ಕೆ ಸೇರಿದ ಮಾಸ್ಕೋ ಎಂಬ ದೊಡ್ಡ ಶಹರಿನಲ್ಲಿ ಎಂ ಐಯೋಲಾಸ್ ಎಂಬ ಯೋಗ್ಯ ಪಂಡಿತನು ಬಹುಕಾಲದಿಂದಲೂ ರಷ್ಯಾಯಾ ವಿಯಡೋಮಾಸ್ತಿ ಎಂಬ ವರ್ತಮಾನ ಪತ್ರಿಕೆಯನ್ನು ನಡಿಸುತ್ತಾ ತುಂಬಾ ಗೌರವವನ್ನು ಪಡೆದಿದ್ದನು. ಇಂಥಾ ದೊಡ್ಡ ಮನುಷ್ಯನನ್ನು ಯಾವನೋ ಹೊಡೆದು ಕೊಂದುಹಾಕಿದನು. ಸುಮಾರು ೩೦,೦೦೦ ಪ್ರಜೆಗಳು ಆತನ ಶವದ ಕೂಡ ಸ್ಮಶಾನಕ್ಕೆ ಹೋಗಿ ದಫನ್ ಮಾಡಿಸಿ ಬಂದರು. ಆ ದಿನ ಮಳೆಯು ಅಪಾರವಾಗಿ ಸುರಿಯುತ್ತಿದ್ದರೂ ಬೀದಿಗಳಲ್ಲಿ ಕೆಸರು ತುಂಬಿದ್ದರೂ ಅಷ್ಟು ಪ್ರಜೆಗಳು ರುದ್ರಭೂಮಿಗೆ ಹೋಗಿ ಬಂದದ್ದು ಅಪೂರ್ವವಾಗಿರುತ್ತದೆ. ಎಡಿಟರನ್ನು ಈ ರೀತಿ ಕೊಲೆ ಮಾಡಿರುವುದು ಆ ಪ್ರಾಂತದಲ್ಲಿ ತುಂಬಾ ವಿಷಾದವನ್ನುಂಟುಮಾಡಿದೆ.

ಜೇಪಾ ರಾಜ್ಯದಲ್ಲಿ ಗವರ್ನವೆಂಟಿನವರು ಈಗೀಗ ಅಲ್ಲಲ್ಲಿ ಸರ್ವ ವಿದ್ಯಾಶಾಲೆಗಳನ್ನು ಸ್ಥಾಪಿಸಿಕೊಳ್ಳುತ್ತಿದ್ದಾರೆ ಅವುಗಳಲ್ಲಿ ಜರ್ಮನಿ, ವಿಲಾಯತಿಯೇ ಮೊದಲಾದ ಪರದೇಶಗಳಿಂದ ಉಪಾಧ್ಯಾಯರುಗಳನ್ನು ಕರೆಸಿ ನೇಮಿಸುತ್ತಿರುವರು ಜೇಪಾ ಬಾಲಕರಿಗೆ ಅನ್ಯಭಾಷೆಗಳು, ಮಾತೃಭಾಷೆ, ರಾಜಕೀಯ ವಿದ್ಯೆ, ಕಸರತ್ತು, ಡ್ರಿಲ್ ಕವಾಯತು, ಮತತತ್ವ, ಈ ಮೊದಲಾದವುಗಳನ್ನು ಕಲಿಸಬೇಕೆಂದು ಏರ್ಪಾಡಾಗಿದೆ ಇದಲ್ಲದೆ ಹೆಣ್ಣು ಮಕ್ಕಳ ಪಾದಗಳನ್ನು ನಡೆಯುವುದಕ್ಕಾಗದಂತೆ ಕಟ್ಟಿಬಿಡುವ ಕೆಟ್ಟ ಪದ್ಧತಿಯನ್ನು ಸಕಲ ಪ್ರಜೆಗಳೂ ಬಿಟ್ಟುಬಿಡಬೇಕೆಂದು ಸರ್ಕಾರದವರು ಅಪ್ಪಣೆ ಕೊಟ್ಟು, ಸಕಲ ಪಟ್ಟಣಗಳಲ್ಲೂ ಸ್ತ್ರೀ ವಿದ್ಯಾಭ್ಯಾಸ ನಡೆಯುವಂತೆ ಬಾಲಿಕಾ ಪಾಠಶಾಲೆಗಳನ್ನು ಇಡಿಸಿ, ಜರ್ಮನಿ ರಾಜ್ಯದಿಂದ ವಿದ್ಯಾವತಿಯರಾದ ಸ್ತ್ರೀಯರನ್ನು ಕರೆಸಿ, ವಿದ್ಯೆ ಕಲಿಸುವಂತೆ ನೇಮಕಮಾಡಿದ್ದಾರೆ ಜೇಪಾ ಬಾಲಿಕೆಯರಿಗೂ ಕಸರತ್ತು ಮಾಡಿಸುವರು, ಆರೋಗ್ಯ ವಿಚಾರವನ್ನೂ ಸಾಮಾನ್ಯ ವಿದ್ಯೆಯನ್ನೂ ಕಲಿಸುವರು

***

ವಿಲಾಯತಿಯ ಚಕ್ರವರ್ತಿಯವರೂ ಮಹಾರಾಜ್ಞೀಯವರೂ ಇಟಲಿ ರಾಜ್ಯದಲ್ಲಿ ದೇಶಾಟನ ಮಾಡಿಕೊಂಡು ಬಂದಿರುತ್ತಾರೆ ಅಲ್ಲಿದ್ದಾಗ್ಗೆ ಒಂದು ವಿಶೇಷ ಸಂಗತಿ ನಡೆಯಿತು ರಾಜದಂಪತಿಗಳು ಅಲ್ಲಿರುವ ಪ್ರಸಿದ್ಧವಾದ ಸೆಂಟೂ ಚ್ಯರಾ ಎಂಬ ದೇವಾಲಯವನ್ನು ನೋಡಿ ಬರಬೇಕೆಂದು ಅಲ್ಲಿಗೆ ದಯಮಾಡಿದರು ದೇವಾಲಯದೊಳಗಿದ್ದ ಸನ್ಯಾಸಿಗಳೆಲ್ಲಾ ಬಾಗಿಲು ಹಾಕಿಕೊಂಡು ಆಗತಾನೇ ಭೋಜನ ಮಾಡುತ್ತಿದ್ದರು ರಾಜದಂಪತಿಗಳು ಅದನ್ನು ಕಾಣದೆ ಬಾಗಿಲು ತೆರೆಯುವಂತೆ ತಟ್ಟಿ ಶಬ್ದ ಮಾಡಿದರು ಒಳಗೆ ಊಟ ಮಾಡುತ್ತಿದ್ದವರು ಯಾರೋ ಭಿಕ್ಷುಕರು ಬಂದಿದ್ದಾರೆಂದು ಊಹಿಸಿ, “ಸುಮ್ಮನೆ ಹೋಗಿ, ಇಲ್ಲಿ ನಿಮಗೇನೂ ಸಿಕ್ಕಲಾರದು” ಎಂದು ಒಳಗಿನಿಂದಲೇ ಉತ್ತರಕೊಟ್ಟರು ಚಕ್ರವರ್ತಿಯವರು ಅದನ್ನು ಕೇಳಿ ತುಂಬಾ ನಕ್ಕುಬಿಟ್ಟರು ಸ್ವಲ್ಪ ಹೊತ್ತಾದ ಮೇಲೆ ಅವರ ಸೇವಕನು ಮತ್ತೆ ಕದ ತಟ್ಟಿ “ನಾವು ಪರದೇಶಿಗಳು, ನಿಮ್ಮ ದೇವಾಲಯವನ್ನು ನೋಡಿಕೊಂಡು ಹೋಗಬೇಕೆಂದು ಬಂದಿದ್ದೇವೆ” ಎಂದು ಕೂಗಿ ಹೇಳಿದನು ಆಗ ಒಳಗಿದ್ದವರೊಳಗೊಬ್ಬನು “ನಮ್ಮನ್ನು ತೊಂದರೆಪಡಿಸಬೇಡಿ, ತಮಾಷೆ ನೋಡುವುದಕ್ಕೆ ಇದು ಸಮಯವಲ್ಲ” ಎಂದು ಜೋರಾಗಿ ಉತ್ತರ ಕೊಟ್ಟನು ಸ್ವಲ್ಪ ಹೊತ್ತಿನ ಮೇಲೆ ಒಬ್ಬ ಅಧಿಕಾರಿಯು ಆ ಮಾರ್ಗವಾಗಿ ಹೋಗುತ್ತಾ, ರಾಜದಂಪತಿಗಳು ಬಾಗಿಲಲ್ಲಿ ಕಾದಿರುವುದನ್ನು ಕಂಡು, ತುಂಬಾ ಆಶ್ಚರ್ಯಪಟ್ಟು ಓಡಿಹೋಗಿ ಒಳಗಿದ್ದವರಿಗೆ ಆಜ್ಞೆ ಮಾಡಿ, ಬಾಗಿಲು ತೆರೆಸಿದನು ಒಳಗಿದ್ದ ಅಧಿಕಾರಿಗಳೂ ಸನ್ಯಾಸಿಗಳೂ ಚಕ್ರವರ್ತಿಯವರನ್ನು ಕಂಡು ತುಂಬಾ ನಾಚಿಕೆಪಟ್ಟು, ಅವರನ್ನು ಹೊರಗಡೆ ಕಾಯಿಸಿದ್ದಕ್ಕಾಗಿ ವ್ಯಸನಪಟ್ಟು ಕ್ಷಮಿಸುವಂತೆ ಅವರನ್ನು ಬಹಳವಾಗಿ ಕೇಳಿಕೊಂಡರು ರಾಜದಂಪತಿಗಳು ತರುವಾಯ ಒಳಗೆ ಹೋಗಿ ಎಲ್ಲಾ ಭಾಗಗಳನ್ನೂ ಪರಾಂಬರಿಸಿ, ತುಂಬಾ ಸಂತೋಷದಿಂದ ಅವರೊಡನೆ ಮಾತನಾಡಿಕೊಂಡು ವಾಪಸು ಬಂದರು

ಬಹುಮಾನ ಪಡೆದ ಬಾತ್ಮಿಯು

ಕೈಗಾರಿಕೆ ಮತ್ತು ವ್ಯವಸಾಯೋಪಕರಣಗಳ ಪ್ರದರ್ಶನವು

ಪ್ರದರ್ಶನದ ಉದ್ದೇಶ

ಪ್ರತಿಯೊಂದು ಕೆಲಸದಲ್ಲಿಯೂ ಉದ್ದೇಶವಿರಬೇಕು ಉದ್ದೇಶವಿಲ್ಲದ ಪ್ರಯತ್ನವೂ ಇಲ್ಲ, ಫಲವೂ ಇಲ್ಲ ಇದರ ಸಾಧನೆ ಕಿವಿಯಿಂದ ಕೇಳುವುದು ಮಾತ್ರವೇ ಸಾಲದು ಕಣ್ಣಿನಿಂದಲೂ ನೋಡಬೇಕು ಬಾಯಿಂದ ಬೋಧಿಸುವುದಕ್ಕಿಂತಲೂ ವಸ್ತುನಿರ್ದೇಶಪೂರ್ವಕವಾಗಿ ಬೋಧಿಸಿದ ವಿಷಯವು ಮನಸ್ಸಿನಲ್ಲಿ ಚೆನ್ನಾಗಿ ನಾಟುವುದು ಆದುದರಿಂದ ಅಲ್ಪಜ್ಞರಾದ ರೈತರ ಮತ್ತು ಕೈಗಾರಿಕೆಯವರ ಅಭಿವೃದ್ಧಿಗೋಸ್ಕರವೇ ಈ ಪ್ರದರ್ಶನವು ಪ್ರಾರಂಭಿಸಲ್ಪಟ್ಟಿದೆ ಇದರಿಂದ ಜನರಲ್ಲಿ ಸ್ವಾತಂತ್ರ್ಯವೂ ಐಶ್ವರ್ಯವೂ ಶಕ್ತಿಯೂ ವೃದ್ಧಿಯಾಗುವವು ಇಂತಹ ಸಂದರ್ಭದಲ್ಲಿಯೇ ರಾಜ್ಯವು ಸಂಪದ್ವಿಶಿಷ್ಟವಾಗಿ ನಾಗರಿಕತೆಯ ರಾಜ್ಯವೆಂದು ಹೊಗಳಲ್ಪಡುವುದು ರಾಜ್ಯವೆಂಬ ದೇಹಕ್ಕೆ ಕೈಗಾರಿಕೆಯೂ ವ್ಯವಸಾಯವೂ ಎರಡು ಪಾದಗಳಾಗಿವೆ ಇವೆರಡರ ಆಧಾರದ ಮೇಲೆಯೇ ರಾಜ್ಯವು ನಿಂತಿರುವುದು ಹೇಗೆಂದರೆ, ಪ್ರತಿನಿತ್ಯವೂ ನಾವು ತಿನ್ನುವ ಆಹಾರವು ವ್ಯವಸಾಯದಿಂದಲೇ ದೊರೆಯಬೇಕು ನಾವು ಅತ್ಯಗತ್ಯವಾಗಿ ಉಪಯೋಗಿಸುವ ಬಟ್ಟೆ ಮುಂತಾದುವುಗಳೆಲ್ಲ ಕೈಗಾರಿಕೆಯಿಂದಲೇ ಸಾಧ್ಯವಾಗಬೇಕಾಗಿದೆ ಈ ಕಾಲದಲ್ಲಿ ಕೈಗಾರಿಕೆಯವರೂ ರೈತರೂ ಬಲು ಹಿಂದಾಗಿರುವರು ನಾಗರಿಕ ಕಾಲಕ್ಕೆ ತಕ್ಕಂತೆ ಬಟ್ಟೆಗಳನ್ನೂ ಇತರ ವಸ್ತುಗಳನ್ನೂ ಮಾಡಲು ಅಸಮರ್ಥರಾಗಿರುವರು ನಮ್ಮ ದೇಶೀಯರಿಗೆ ಯಂತ್ರಗಳ ಸಹಾಯವಿಲ್ಲ ಒದಗಿಸಿಕೊಳ್ಳುವ ಉತ್ಸಾಹವು ಮೊದಲೇ ಇಲ್ಲ ಪೂರ್ವಪದ್ಧತಿಯನ್ನು ಬದಲಾಯಿಸಲಾರರು ಹೀಗಿರುವಾಗ ಸಂಪತ್ತು ಎಲ್ಲಿಂದ ಬರುವುದು? ಹೀಗೆಯೇ ಕಾಲವು ಕಳೆದುಹೋದರೆ ರಾಜ್ಯವು ಕ್ಷೀಣದೆಶೆಯನ್ನು ಹೊಂದುವುದೆಂದು ಸರ್ಕಾರದವರು ಯೋಚಿಸಿ ಕೈಗಾರಿಕೆಯ ಪ್ರದರ್ಶನವನ್ನೇರ್ಪಡಿಸಿರುವರು ವ್ಯವಸಾಯದ ಪ್ರದರ್ಶನವನ್ನು ನಡೆಯಿಸುವುದಕ್ಕೂ ಇಂತಹ ಉದ್ದೇಶವುಂಟು ಹೇಗೆಂದರೆ, ಭೂಮಿಯು ಹುಲುಸಾಗಿ ಒಳ್ಳೆಯ ಧಾನ್ಯಗಳನ್ನು ಬೆಳೆಯುವ ಕ್ರಮವನ್ನೂ ಅದಕ್ಕೆ ಸಾಧನಗಳಾದ ಗೊಬ್ಬರ ಬೀಜ ಮುಂತಾದವುಗಳ ವಿಷಯವನ್ನೂ ಉತ್ತಮರೀತಿಯಿಂದ ರೈತರಿಗೆ ತಿಳಿಯಪಡಿಸಲು ಈ ಪ್ರದರ್ಶನವು ಬಹಳ ಸಹಕಾರಿಯಾಗಿದೆ ಅಲ್ಲದೆ, ಆಳವಾಗಿ ಉಳುವುದಕ್ಕೂ ಇತರ ಕೆಲಸಗಳಿಗೂ ಗೊಬ್ಬರಗಳ ಸಂಪಾದನೆಗೂ ಹೈನಿನ ವ್ಯವಸಾಯಕ್ಕೂ ಗೋಕಾಯಿಗಳು ಬೇಕು ವ್ಯವಸಾಯ ಪ್ರದರ್ಶನದಲ್ಲಿ ಗೋಕಾಯಿಗಳ ಪ್ರದರ್ಶನವು ಖಂಡಿತವಾಗಿರಲೇಬೇಕು ಯಾನಗಳಿಲ್ಲದೆ ವ್ಯವಸಾಯವನ್ನು ನಿರ್ವಹಿಸಲು ಸಾಧ್ಯವಿಲ್ಲ ಆದುದರಿಂದ ಉತ್ತಮವಾದ ನೇಗಿಲು ಮುಂತಾದವುಗಳನ್ನೂ ಇನ್ನೂ ಬೇಕಾದ ಸುಲಭೋಪಾಯದ ಯಂತ್ರಗಳನ್ನೂ ಪ್ರದರ್ಶಿಸಲೇಬೇಕು.

ಮೆಂಬರುಗಳು

ಪ್ರದರ್ಶನಗಳು ಲೋಕೋಪಕಾರವಾಗಿರುವಂತೆ ತೃಪ್ತಿಕರವಾಗಿ ನೆರವೇರಿಸುವುದು ಸಾಮಾನ್ಯರಿಗೆ ಸಾಧ್ಯವಲ್ಲ ಬಹಳ ಬುದ್ಧಿವಂತರೇ ಬೇಕು ಯಾವ ಕೆಲಸದಲ್ಲಿ ಯಾರಿಗೆ ಹೆಚ್ಚಾದ ಅನುಭವವೂ ಪರಿಶ್ರಮವೂ ಇರುವುದೋ ಅಂತಹ ಕೆಲಸಕ್ಕೆ ಅಂತಹ ವಿದ್ವತ್ತನ್ನು ಸಂಪಾದಿಸಿದ ಸಮರ್ಥರೇ ಆವಶ್ಯಕರು. ಇದರಿಂದ ಆಯಾಯ ಕೆಲಸಗಳ ವಿಜ್ಞಾನುಭವವು ಜನರ ತಿಳುವಳಿಕೆಗೆ ಹೆಚ್ಚಾಗಿ ಬರಲು ಅವಕಾಶವಾಗುವುದು ಈ ಮೆಂಬರುಗಳು ಶಾಂತರೂ ಲೋಕ ಹಿತೈಷಿಗಳೂ ಆಗಿರುವುದಲ್ಲದೆ ಉತ್ಸಾಹದಿಂದ ಬೇಸರವಿಲ್ಲದೆ ಈ ಕೆಲಸವನ್ನು ನೆರವೇರಿಸುವವರಾಗಿಬೇಕು ಅಲ್ಲದೆ ವಿದ್ಯಾವಂತರಾಗಿ ಸ್ವಂತ ವ್ಯವಸಾಯದಲ್ಲಿ ಅನುಭವವನ್ನು ಪಡೆದಿರುವ ಇತರ ಜನರನ್ನು ಮೆಂಬರುಗಳನ್ನಾಗಿ ಆರಿಸಬೇಕು

ಪ್ರದರ್ಶನದ ವಸ್ತುಗಳು

ಪ್ರದರ್ಶನಗಳಲ್ಲಿಡುವ ವಸ್ತುಗಳು ಬಳಕೆಗೆ ಯೋಗ್ಯಗಳಾಗಿಯೂ ತಕ್ಕಮಟ್ಟಿಗೆ ಸುಲಭ ಬೆಲೆಗೆ ದೊರೆಯುವವುಗಳಾಗಿಯೂ ಇರಬೇಕು ಕೈಗಾರಿಕೆಯ ಪ್ರದರ್ಶನಗಳಲ್ಲಿ ಸುಲಭವಾಗಿ ನೇಯುವ ಯಂತ್ರ, ನೂಲುವ ಯಂತ್ರ, ನಾರು ಮತ್ತು ಎಣ್ಣೆಯನ್ನು ತೆಗೆಯುವ ಯಂತ್ರ, ಕಬ್ಬಿನ ಯಂತ್ರ, ಮೊದಲಾದವು, ವ್ಯವಸಾಯ ಪ್ರದರ್ಶನದಲ್ಲಿ ಆಳವಾಗಿ ಉಳುವ ಸುಲಭ ಬೆಲೆಯ ನೇಗಿಲು, ಬಿತ್ತನೆಗೂ ಕಣಕ್ಕೂ ಕಳೆಗಳ ನಾಶಕ್ಕೂ ಉಪಯೋಗಿಸುವ ಯಂತ್ರೋಪಕರಣಗಳು, ಸುಲಭವಾಗಿ ನೀರನ್ನು ಮೇಲಕ್ಕೆ ತರುವ ಮತ್ತು ಬಾವಿಯನ್ನು ತೆಗೆಯುವ ಯಂತ್ರಗಳು, ಒಳ್ಳೆಯ ಬೀಜ, ವಿಧ ವಿಧ ಧಾನ್ಯ, ಗೊಬ್ಬರ, ನಾನಾತರದ ರೇಷ್ಮೆ, ನಾರು, ಹುಲ್ಲು, ಬಣ್ಣದ ಪುರು ಮುಂತಾದವು ಆಕೃತಿಯಲ್ಲಿಯೂ ಶಕ್ತಿಯಲ್ಲಿಯೂ ಉತ್ಕೃಷ್ಟವಾಗಿರತಕ್ಕ ಗೋಕಾಯಿಗಳು, ಹೆಚ್ಚಾಗಿ ಹಾಲು ಕರೆಯುವ ಹಸುಗಳು ಇವನ್ನೆಲ್ಲಾ ಪ್ರದರ್ಶಿಸಬೇಕು

ಬಹುಮಾನದ ಕ್ರಮ

ಪ್ರದರ್ಶನ ವಸ್ತುಗಳ ಮತ್ತು ಅವುಗಳ ಕರ್ತರ ಪ್ರೋತ್ಸಾಹಕ್ಕೋಸ್ಕರ ಬಹುಮಾನಿಸುವುದು ಯುಕ್ತವು ಇದರಿಂದ ಮುಂದೆ ಇನ್ನೂ ಉತ್ಕೃಷ್ಟ ವಸ್ತುಗಳು ಪ್ರದರ್ಶನಕ್ಕೆ ಬರಲು ಕಾರಣವಾಗುವುದು ಆದರೆ ಸರ್ವರಿಗೂ ಬಿರುದಿನ ಬಿಲ್ಲೆಗಳನ್ನಾಗಲೀ ರೂಪಾಯಿಗಳನ್ನಾಗಲೀ ಅಥವಾ ಇವೆರಡನ್ನೂ ಆಗಲೀ ಬಹುಮಾನಿಸುವುದು ಉದ್ದೇಶಕ್ಕೆ ತಕ್ಕಷ್ಟು ಫಲಕಾರಿಯಲ್ಲ ಮೂಢರಾದ ಹಳ್ಳಿಯ ಗೌಡನು ಬಿರುದಿನ ಬಿಲ್ಲೆಗೆ ಹಿಗ್ಗುವುದು ಕಡಮೆ ಇದರಿಂದ ಅವನು ಮುಂದೆ ಉತ್ಸಾಹಿಯಾಗಿ ಪ್ರವರ್ತಿಸುವುದೂ ಕಡಮೆ ಹಣವು ನಾಲ್ಕಾರು ದಿನದಲ್ಲಿ ವ್ಯಯವಾಗುವುದು ವಿದ್ಯಾವಂತರಾದ ಯಂತ್ರ ನಿರ್ಮಾಣಕರಿಗೂ ಸುಲಭ ಬೆಲೆಯ ಯಂತ್ರವನ್ನು ಒದಗಿಸಿದವರಿಗೂ ಆಶ್ಚರ್ಯವಸ್ತುಗಳಿಗೂ ಇವೆರಡನ್ನೂ ಕೊಡಬಹುದು ಉಳಿದವರಿಗೆ ಹಣಕ್ಕಿಂತಲೂ ಉಪಕರಣಗಳನ್ನೇ ಬಹುಮಾನಿಸುವುದು ಪ್ರಯೋಜನ ಅವರವರ ಕಸಬಿಗೆ ತಕ್ಕಂತೆ ಸುಲಭ ಬೆಲೆ ಯಂತ್ರವನ್ನೇ ಬಹುಮಾನಿಸಬಹುದು ಕೆಲವರಿಗೆ ಬೀಜದ ಕಾಳನ್ನೂ ಹಲವರಿಗೆ ತಳಿಯಾನ ಅಥವಾ ಆಯುಧಗಳನ್ನೂ ಪಾರಿತೋಷಕವಾಗಿ ಕೊಡಬಹುದು ಗೊಬ್ಬರವನ್ನು ಕೊಂಡು ಬಹುಮಾನಿಸಬಹುದು ಇದರಿಂದ ರೈತರಿಗೂ ಕೈಕಸಬಿನವರಿಗೂ ಅದರ ಪ್ರಯೋಜನವು ತಾನಾಗಿ ಗೊತ್ತಾಗುವುದು ಮುಂದೆ ತಾವು ತಾವೇ ಅಂತಹವುಗಳನ್ನು ತರಿಸಿ ತಮ್ಮ ಕೆಲಸವನ್ನು ವೃದ್ಧಿಗೆ ತರಲು ಅವಕಾಶವಾಗುವುದು ಬಹುಮಾನಪಡೆದ ವಸ್ತುಗಳ ಅನುಭವವನ್ನು ಮುಂದಣ ಪ್ರದರ್ಶನದಲ್ಲಿ ಕಾಣುವಂತೆ ಏರ್ಪಾಡನ್ನು ಮಾಡಿ ಅವನ ಉತ್ಸಾಹ ಪ್ರಯತ್ನಗಳನ್ನು ಸರ್ಕಾರದವರು ಜ್ಞಾಪಿಸಬೇಕು

ಪ್ರಜಾರಂಜನೆ

ಈ ಪ್ರದರ್ಶನಗಳು ಪ್ರಜಾರಂಜನೆಯಾಗಬೇಕಾದರೆ ವ್ಯವಸಾಯದ ಮತ್ತು ಕೈಗಾರಿಕೆಗಳ ಪ್ರದರ್ಶನವು ಬೇರೆ ಬೇರೆಯಾಗಿದ್ದರೆ ಒಳ್ಳೆಯದು ಇದರಿಂದ ಆಯಾಯ ವಿಷಯಗಳಲ್ಲಿ ಅಭಿರುಚಿಯುಳ್ಳವರು ಅಲ್ಲಿ ಸೇರಲು ಅವಕಾಶವಾಗುವುದು “ಮ್ಯೂಜಿಯಂ”ನಂತೆ ಸರ್ವವಸ್ತುಗಳನ್ನೂ ನೋಟಕ್ಕೆ ಅಂದವಾಗಿಟ್ಟರೆ ಫಲವಿಲ್ಲ ಪ್ರತಿಯೊಂದರ ಪ್ರಯೋಜನವೂ ಸುಲಭವಾಗಿ ಬೋಧಿಸಲ್ಪಡುವಂತೆ ಏರ್ಪಡಿಸಿರಬೇಕು ದರ್ಶನೀಯವಸ್ತುಗಳ ವಿಚಾರವಾಗಿ ಪ್ರತಿಯೊಂದರ ಟಿಪ್ಪಣಿಯೂ ಮುದ್ರಿಸಲ್ಪಟ್ಟು ಓದುಬರಹ ಬಲ್ಲ ನೋಟಕರಿಗೆ ಕೊಟ್ಟು ಆ ವಿಷಯವಾಗಿ ವಸ್ತುನಿರ್ದೇಶಪೂರ್ವಕವಾಗಿ ಬೋಧಿಸಬೇಕು ಇಂತಹ ಪ್ರದರ್ಶನಗಳಿಗೆ ಫೀಜನ್ನು ವಸೂಲ್ಮಾಡಬಾರದು ವ್ಯವಸಾಯದ ಪ್ರದರ್ಶನವು “ವ್ಯವಸಾಯದ ಫಾರಂ” ಗಳಿರುವ ಕಡೆಯೂ, ಕೈಗಾರಿಕೆಯ ಪ್ರದರ್ಶನವು “ಕೈಗಾರಿಕೆ ಸ್ಕೂಲು”ಗಳಿರುವ ಸ್ಥಳದಲ್ಲಿಯೂ ಏರ್ಪಡಿಸಲ್ಪಟ್ಟರೆ ನಿಜಾನುಭವವು ಕಣ್ಣಿಗೆ ಕಟ್ಟಿದಂತೆ ಸ್ಥಿರವಾಗುವದು ಪ್ರತಿಯೊಂದರ ವಿವರಣೆಯನ್ನೂ ಉಪನ್ಯಾಸ ಮೂಲಕವಾಗಿ ಹೃದಯರಂಜನೆಯಾಗುವ ಉತ್ತೇಜನವಾಕ್ಯಗಳಿಂದಲೂ ಸುಲಭಶೈಲಿಯಿಂದಲೂ ಜನರಿಗೆ ತಿಳಿವಳಿಕೆಯನ್ನು ಕೊಡಬೇಕು ಆಕ್ಷೇಪಣೆಗಳಿಗೆಲ್ಲಾ ಒಂದು ಕಾಲವನ್ನು ಗೊತ್ತುಮಾಡಿ ತಕ್ಕ ಸಮಾಧಾನವನ್ನು ಮಾರನೆಯ ದಿನ ತಿಳಿಸಬೇಕು ರೈತರೂ ಕೈಗಾರಿಕೆಯವರೂ ತಿಳಿಯುವುದಕ್ಕೆ ಯೋಗ್ಯವೂ ಸಾಧ್ಯವೂ ಆದುದನ್ನೇ ಪ್ರದರ್ಶನದಲ್ಲಿಡಬೇಕು ಬೊಂಬೆಗಳನ್ನು ಕೂಡಿಸಿದಂತೆ ವಿದೇಶದ ಚಿತ್ರವಿಚಿತ್ರವಸ್ತುಗಳನ್ನೂ ಯಂತ್ರಗಳನ್ನೂ ಇಟ್ಟಿದ್ದರೆ ಫಲವಿಲ್ಲ ಅಲ್ಲಿಟ್ಟಿರುವ ಯಂತ್ರಗಳಿಂದ ಸಾಧ್ಯವಾದಷ್ಟು ಕೆಲಸವನ್ನು ಅವರ ಇದಿರಿನಲ್ಲಿಯೇ ತೋರಿಸಬೇಕು ಇಂತಹ ಪ್ರದರ್ಶನಕ್ಕೆ ಸರ್ವರೂ ಹೋಗುವಂತೆ ಪ್ರಸಿದ್ಧಪತ್ರಿಕೆಗಳನ್ನು ಗ್ರಾಮಗ್ರಾಮದಲ್ಲಿಯೂ ಹಂಚಿ ಡಂಗೋರೆಯ ಮೂಲಕ ಪ್ರಕಟಿಸಬೇಕು

ವಸ್ತುಗಳ ಸಂಗ್ರಹ

ನಾನಾ ವಸ್ತುಗಳನ್ನು ಪ್ರದರ್ಶನಕ್ಕೆ ತರಿಸಲು ಆಯಾಯ ಕಸಬಿನಲ್ಲಿ ಹೆಸರಾದವರನ್ನು ಬರಮಾಡಿ ಇಲ್ಲವೇ ಕಾಗದಗಳ ಮೂಲಕ ವಸ್ತುಗಳನ್ನು ಪ್ರದರ್ಶಿಸುವಂತೆ ಪ್ರೋತ್ಸಾಹಿಸಬೇಕು ವಸ್ತುಗಳನ್ನು ಕಳುಹಿಸಿದವರಿಗೂ ಅವರ ವಸ್ತು ಭದ್ರತೆಗೂ ತಕ್ಕಂತೆ ಸ್ಥಳವಸತಿಯನ್ನೇರ್ಪಡಿಸಬೇಕು ಅತ್ಯಾವಶ್ಯಕವಾದವುಗಳಿಗೆ ಮುಂಗಡವಾಗಿ ಹಣವನ್ನು ಕೊಟ್ಟು ತಯಾರುಮಾಡಿಸಬೇಕು ಇಂತಹ ವಸ್ತುಗಳ ಮಾಲೀಕರ ಪ್ರಯಾಣದ ವೆಚ್ಚವನ್ನು ಸರ್ಕಾರದವರೇ ಕೊಡಬಹುದು ಮೆಂಬರುಗಳೆಲ್ಲರೂ ಸೇರಿ ಪ್ರದರ್ಶನಾರ್ಹವಲ್ಲದ ವಸ್ತುಗಳನ್ನು ಗೊತ್ತುಮಾಡಬೇಕೇ ಹೊರತು ಯಾವ ಸಂದರ್ಭದಲ್ಲಿಯೂ ಬಂದ ವಸ್ತುವನ್ನು ನಿರಾಕರಿಸಬಾರದು ಈ ಪ್ರದರ್ಶನಗಳಿಗೆ ತಕ್ಕ ಯಂತ್ರಗಳು ದೊಡ್ಡ ದೊಡ್ಡ ಸಾಹುಕಾರರ ಅಂಗಡಿಗಳಲ್ಲಿದ್ದರೆ ಅವುಗಳನ್ನು ಪ್ರೋತ್ಸಾಹದಿಂದಾಗಲೀ ಬಾಡಿಗೆಯಿಂದಾಗಲೀ ತಂದಿಟ್ಟು ಜನರಿಗೆ ಅವುಗಳ ಪ್ರಯೋಜನವನ್ನು ವ್ಯಕ್ತಪಡಿಸಬಹುದು ಪ್ರದರ್ಶನಗಳ ಪ್ರಯೋಜನವು ತಕ್ಷಣದಲ್ಲೇ ವಿಶದವಾಗಿ ಕಾಣುವುದಿಲ್ಲ ಕ್ರಮಕ್ರಮವಾಗಿ ಅವುಗಳ ಫಲವು ಹೆಚ್ಚುತ್ತಲೇ ಇರುವುದು ಗಡಿಯಾರದ ಮುಳ್ಳು ತಿರುಗುವುದು ನಮಗೆ ಗೊತ್ತಾಗುವುದಿಲ್ಲ ಆದರೂ ಅದು ಸರಿಯಾದ ಗಂಟೆಯನ್ನು ತೋರಿಸದೇ ಇರುವುದೇ? ಆದುದರಿಂದ ಈ ಪ್ರದರ್ಶನವು ಸಾಂಗವಾಗಿ ನಡೆದು ನಮ್ಮ ಜನರಿಗೆ ಫಲಕಾರಿಯಾಗಲೆಂದು ಸರ್ವೇಶನನ್ನು ಪ್ರಾರ್ಥಿಸುವರು

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸ್ಥಳ ಕೊಡಲಾರೆವು ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಅಂಥವುಗಳಿಗೆ ನಾವು ನಿಗಾ ಕೊಡಲಾರೆವು

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು—ಎಡಿ

ಕರೆಸ್ಪಾಂಡೆನ್ಸ್

ಪೋಲೀಸ್ ನೌಕರರಿಗೆ ಪ್ರೋತ್ಸಾಹ

ಅಯ್ಯಾ,

ಈಗ ೩ ತಿಂಗಳಲ್ಲಿ ಅರಸೀಕೆರೆ ತಾಲ್ಲೂಕು ಮಾಲೆಕಲ್ಲು ತಿರುಪತಿಯಲ್ಲಿ ಇರುವ ಅರ್ಚಕರ ಮನೆಯಲ್ಲಿ ನಡೆದ ಕಳವು ಕೇಸಿನಲ್ಲಿ ಜಮಾದಾರ್ ಮತ್ತು ಒಬ್ಬ ಕಾನಸ್ಟೆಬಲ್ ಸಹ ಬಹಳ ಮೆಹನತ್ತು ಮಾಡಿ, ಸದರಿ ಕಳವು ಮಾಲು ಮತ್ತು ಅಪರಾಧಿಗಳನ್ನು ಸಹ ಹಿಡಿದು ಅವರಿಗೆ ಶಿಕ್ಷೆ ಮಾಡಿಸಿದ್ದಕ್ಕೆ ಮೇಲ್ಪಟ್ಟ ಆಫೀಸರವರು ಸದ್ರಿ ಜಮಾದಾರ್ ವಿಷಯದಲ್ಲಿ ಶಿಫಾರಸು ಮಾಡಿಸಿ ಅವರಿಗೆ ಪ್ರಮೋಷನ್ ಕೊಡಿಸಿದರು ಈ ಕಾಲದಲ್ಲಿ ಬಡ ನೌಕರರನ್ನು ಯಾರೂ ಅಭಿವೃದ್ಧಿಗೆ ತರಲು ನಿಗಾ ಕೊಡುವಂತೆ ಕಾಣುವದಿಲ್ಲ ಇಂಥಾ ಮೋಕದ್ದಮೆಗಳು ಸಣ್ಣ ನೌಕರರಿಂದಲೇ ತಲಾಷ್ ಆಗಬೇಕು ಇವರು ತಲಾಷ್ ಮಾಡಲು ಎಷ್ಟೋ ಶ್ರಮಪಟ್ಟು ಪೋಲೀಸು ಮಾಡಿಗರ ಜೊತೆಯಲ್ಲಿ ಕೇಡಿ ದುಕಾನುಗಳಲ್ಲಿ ಇದ್ದ ಸಾಮಾನು ಹಿಡಿದು ತಂದು ಆಫೀಸರ ಕೈಗೆ ಕೊಟ್ಟನಂತರ ಮುಂದಿನ ಕೆಲಸ ನಡಿಸಿ ಶಿಕ್ಷೆ ಮಾಡಿಸುತ್ತಾರೆ ಮೊದಲು ಕಷ್ಟಪಟ್ಟ ನೌಕರನಿಗೆ ಯಾವ ಫಲವೂ ಇಲ್ಲ ಇದರಿಂದ ಮುಂದೆ ಬರತಕ್ಕಂಥಾ ಕೇಸುಗಳಿಗೆ ಇವರು ನಿಗಾಕೊಟ್ಟು ಪತ್ತೆ ಹಚ್ಚುವದು ಮುತುವರ್ಜಿಯಿಂದ ಮಾಡಲು ದಿಲಾಷ್ ಆಗುವದಿಲ್ಲ ನೌಕರರ ಮೆಹನತ್ತಿಗೆ ಅವರಿಗೆ ಏನಾದರೂ ಸ್ವಲ್ಪ ಪ್ರೋತ್ಸಾಹ ದೊರೆತರೆ ಬಹಳ ಒಳ್ಳೆಯದು

ಪ್ರಜಾ ಹಿತಚಿಂತಕ

ಚನ್ನಪಟ್ಟಣದ ವಿಷಯಗಳು

ಅಯ್ಯಾ,

ಈ ತಾಲ್ಲೂಕೇ ತುಂಬಾ ಜೇಬಂದಾಗಿದ್ದದ್ದರಿಂದ ಗೌರ್ನಮೆಂಟಿನವರು ಸಮರ್ಥರಾದ ಅಮಲ್ದಾರ್ ಮತ್ತು ಇನಸ್ಪೆಕ್ಟರುಗಳನ್ನು ಕಳುಹಿಸಿಕೊಟ್ಟಿದ್ದರು ಇದರಿಂದ ಬಹುಮಟ್ಟಿಗೆ ತಹಬಂದಿಗೆ ಬಂದ ಪ್ರಜೆಗಳೆಲ್ಲ ಸಂತೋಷದಿಂದಿರುವಲ್ಲಿ ೪—೫ ತಿಂಗಳಲ್ಲಿಯೇ ಇನಸ್ಪೆಕ್ಟರ್ ಮೆ॥ ನಟರಾಜೈಯನ್ನು ಬೇರೆ ಕೆಲಸಕ್ಕೆ ಹಾಕಿ, ಇನ್ನೊಬ್ಬರನ್ನು ಇಲ್ಲಿಗೆ ಕಳುಹಿಸಿದರು ಇವರು ಬಂದು ೨ ತಿಂಗಳಾದಾಗ್ಯೂ ಟವರ್ ಗಸ್ತು ಮಾಡಿದ್ದಾರೋ ಇಲ್ಲವೋ ತಿಳಿಯದು ಈಚೆಗೆ ಒಬ್ಬ ಕಾನಸ್ಟೆಬಲು ಗಸ್ತು ಮಾಡುತ್ತಾ ಬಾಯಿ ಮನೆಗೆ ಪ್ರವೇಶಿಸಿ ಅವರು ಇಟ್ಟಿದ್ದ ಚಿನ್ನದ ಉಂಗುರವನ್ನು ಕದ್ದಿದ್ದಾಗಿಯೂ, ಮತ್ತೊಬ್ಬ ಕಾನಸ್ಟೆಬಲ್ ಅಂಗಡಿಯಲ್ಲಿ ಸಾಮಾನು ಕದ್ದದ್ದಾಗಿಯೂ ಅಲ್ಲಲ್ಲೇ ಶಮನಮಾಡಿದಂತೆಯೂ ತಿಳಿಯಬರುತ್ತೆ ಹೀಗಿರುವಲ್ಲಿ ಪ್ರಜೆಗಳಿಗೆ ಎಷ್ಟು ಸೌಲಭ್ಯವಾಗಿರಬಹುದೋ ಯೋಚಿಸತಕ್ಕದ್ದಾಗಿದೆ ಇಂಥಾ ಯಾವ ತೊಂದರೆಯೂ ಉಂಟಾಗದಂತೆ ನೋಡಿಕೊಳ್ಳುತ್ತಿದ್ದ ಮೆ॥ ನಟರಾಜೈಯರನ್ನು ಕಳೆದುಕೊಂಡ ವ್ಯಸನವೇ ಪ್ರಜೆಗಳಲ್ಲಿ ಹರಡಿಕೊಂಡಿರುವಲ್ಲಿ, ಅಮಲ್ದಾರ್ ಮೆ॥ ಪಾರ್ಥಸಾರಥೈಯ್ಯಂಗಾರ್ರವರನ್ನು ರಿಟೈರ್ ಮಾಡುತ್ತಾರೆಂಬ ಅಂಶ ಕೇಳಿ ಪ್ರಜೆಗಳಿಗೆ ಮತ್ತಷ್ಟು ವ್ಯಸನ ಉಂಟಾಗಿದೆ ಇವರು ಬಂದ ಲಾಗಾಯಿತು ಟವರ್ ತುಂಬಾ ಪಾಕಾಗಿರುವದಲ್ಲದೆ, ಗ್ರಾಮಾಂತ್ರದ ರೈತರ ತಕರಾರೂ ಅಹವಾಲುಗಳೂ ಬಂದ ಕೂಡ್ಲೆ ವ್ಯವಸ್ಥೆ ಮಾಡುತ್ತಾ ಇದ್ದಾರೆ ಇವರ ದೇಹಧಾರ್ಢ್ಯ ಜ್ಞಾಪಕಶಕ್ತಿ, ಸಾಮರ್ಥ್ಯ, ಚಟುವಟಿಕೆ, ಧೈರ್ಯಾದಿಗಳು ಯಾವ ಯೌವನಸ್ಥರಿಗೂ ಇರಲಾರದು ನಿಷ್ಪಕ್ಷಪಾತಿಗಳಾದ ಸರ್ಕಾರದವರು ಮೆ॥ ಪಾರ್ಥಸಾರಥೈಯ್ಯಂಗಾರ್ರನ್ನು ಇನ್ನೂ ಎರಡು ವರುಷಗಳ ಕಾಲವಾದರೂ ಇದೇ ತಾಲ್ಲೂಕಿನಲ್ಲಿರಿಸಿ, ಪ್ರಜೆಗಳ ಇಷ್ಟವನ್ನು ಕಾಪಾಡುವರೆಂದು ನಂಬುವ

ನಿಷ್ಪಕ್ಷಪಾತಿ

ಅಧಿಕಾರಿಗಳೂ ಪ್ರಜೆಗಳೂ

ಅಯ್ಯಾ,

ಪ್ರಜೆಗಳಿಗೂ ಸರ್ಕಾರಕ್ಕೂ ಅನ್ಯೋನ್ಯ ಭಕ್ತಿ, ಕರುಣೆ ಇರಬೇಕು ಈ ರೀತಿ ಯಾವ ರಾಜ್ಯದಲ್ಲಿ ಇರುತ್ತದೆಯೋ ಅಂಥಾ ರಾಜ್ಯವು ಯಾವ ವಿಧವಾದ ಈತಿಬಾಧೆಗಳಿಗೂ ಒಳಪಡದೆ ಕ್ಷೇಮವಾಗಿರುತ್ತೆ ಹಾಲಿ ಇಂಡಿಯಾ ದೇಶವು ಬ್ರಿಟಿಷ್ ಚಕ್ರವರ್ತಿಗಳ ಪಾಲನೆಗೆ ಒಳ

...ಸ್ತು, ನ್ಯಾಯವಾದ ಕಾನೂನುಗಳ ನಿರ್ಬಂಧದಿಂದ ಪ್ರಜೆಗಳ ಪ್ರಾಣ, ಮಾನ, ಧನಗಳು ಸಂರಕ್ಷಣೆಯಾಗುತ್ತ ಸುಖವಾಗಿದ್ದಾರೆಂಬುವದಕ್ಕೆ ಯಾವ ಸಂಶಯವೂ ಇಲ್ಲ. ಆದರೆ ಈ ಮೈಸೂರು ಸಂಸ್ಥಾನದಲ್ಲಿ ಕೆಲವು ಅಧಿಕಾರಿಗಳು ಧರ್ಮವನ್ನು ಅವಲಂಬಿಸಿ ನ್ಯಾಯಮಾರ್ಗದಲ್ಲಿ ನಡೆಯದೆ, ದುರ್ಮಾರ್ಗಿಗಳನ್ನು ಸೇರಿಸಿಕೊಂಡು, ಕೆಲವು ಸಂದರ್ಭಗಳಲ್ಲಿ ತೊಂದರೆಪಡಿಸುತ್ತಾ ಇದ್ದರೆ ಇಂಥಾ ಮೊಕದ್ದಮೆಗಳು ದೊರೆಗಳವರು ಇರತಕ್ಕದ್ದು ತಮ್ಮ ನೋಟಿಸಿಗೂ ಬಂದಿರಬಹುದು.

ಪ್ರಜೆಗಳು ಕಾನೂನಿಗೆ ವಿರೋಧವಾಗಿ ನಡದು ಇದ್ದಾರೆಂದು ಸೂಚನೆಯಾಗುವ ಸಂದರ್ಭಗಳಲ್ಲಿ ವಿಚಾರಣೆಯಿಂದ ತಕ್ಕ ಶಿಕ್ಷೆ ಕೊಡುತ್ತಿದ್ದಾರೆ. ಅಧಿಕಾರಸ್ಥರು ಕಾರಣಾಂತರಗಳಿಂದ ಜಿದ್ದು ಹಿಡಿದು ನ್ಯಾಯವನ್ನು ಬಿಟ್ಟು ಅನ್ಯಾಯವಾಗಿ ತೊಂದರೆ ಪಡಿಸುತ್ತಿದ್ದಾರೆ. ಇಂಥಾ ತೊಂದರೆಪಟ್ಟ ಜನಗಳು ಮೇಲ್ಪಟ್ಟ ಆಫೀಸರವರಲ್ಲಿ ಅರ್ಜಿ ಕೊಟ್ಟು ತಮ್ಮ ಅವಮಾನವನ್ನು ಹೇಳಿಕೊಂಡರೆ ರಿಕಾರ್ಡು ಸರಿಯಾಗಿ ನೋಡದೆಯೂ ಅರ್ಜಿದಾರರನ್ನು ಸಮ್ಮುಖ ಕರಿಸಿಕೊಳ್ಳದೆಯೂ ಯಾರಿಂದ (ಯಾವ ಅಧಿಕಾರಸ್ಥರಿಂದ) ಅನ್ಯಾಯವಾಗಿದೆಯೆಂದು ದೂರಾಗುತ್ತೋ ಅವರಿಗೇನೇ ಬರೆದು ಅವರು ಮಾಡಿದ ರಿಪೋರ್ಟನ್ನೇ ಅಂಗೀಕರಿಸಿ ಪ್ರೊಸೀಡಿಂಗ್ಸುಗಳನ್ನು ಮಾಡುತ್ತಿದ್ದಾರೆ. ಇಂಥಾ ಮೊಕದ್ದಮೆಗಳು ದೃಷ್ಟಾಂತವಾಗಿರತಕ್ಕದ್ದನ್ನು ದಾಖಲೆಗಳ ಸಹಿತ ಹಾಜರುಪಡಿಸಿಕೊಳ್ಳುತ್ತೇನೆ.

ಪ್ರಕೃತದಲ್ಲಿ ಅಧಿಕಾರಗಳನ್ನು ಹೊಸದಾಗಿ ಪುರಸ್ಕಾರಗಳನ್ನು ಮಾಡುವದಕ್ಕೆ ನನಗೆ ಸ್ವಲ್ಪಮಾತ್ರವೂ ಇಚ್ಛೆ ಇಲ್ಲ. ಕೆಳಗಿನ ಅಧಿಕಾರಸ್ಥರು ತಮ್ಮ ಉದ್ಯೋಗವನ್ನು ಸರಿಯಾಗಿ ನಡಿಸುತ್ತಾರೆಯೋ ಇಲ್ಲವೇ ಎಂಬುದು ಮೇಲ್ಪಟ್ಟ ಆಫೀಸರವರು ನಿರ್ಣಯದಿಂದ ಆಯಾ ಕಾಲಗಳಲ್ಲಿ ತನಿಖೆಮಾಡಿಕೊಳ್ಳುತ್ತಾ ಬಂದರೆ ಪ್ರಜೆಗಳಿಗೆ ಸೌಖ್ಯ ಉಂಟಾಗಿ ಸರ್ಕಾರಕ್ಕೆ ನಷ್ಟವಿಲ್ಲದೆ ರಾಜ್ಯವು ಸರಿಯಾದ ಸ್ಥಿತಿಯಲ್ಲಿ ಇರತಕ್ಕದ್ದು. ಹೀಗೆ ನಡಸದೇ ಇರುವದರಿಂದ ಬಡಪ್ರಜೆಗಳಿಗೆ ಜೀವ, ಮಾನ, ಧನಗಳಿಗೆ ಹಾನಿಯುಂಟಾಗಿ ಬಹಳ ತೊಂದರೆಪಡುತ್ತಿದ್ದಾರೆ. ಆದ್ದರಿಂದ ಸರ್ಕಾರದವರು ಪ್ರಜೆಗಳ ಅವಮಾನವನ್ನು ಕೇಳಿದುಕೊಂಡು ಅವರಿಗೆ ಯಾವ ವಿಧದ ತೊಂದರೆಯೂ ಇಲ್ಲದಂತೆ ನಡಿಸಿಕೊಂಡು ಬರುವುದು ಅವರ ಮುಖ್ಯ ಕರ್ತವ್ಯವಾಗಿದೆ.

ಹಾಲಿ ಏರ್ಪಾಡಾಗಿರುವ ಎ ಶಾಸನ ನಿರ್ಮಾಣ ಸಭೆಯವರ ಅಧಿಕಾರಸ್ಥರಿಂದ ಉಂಟಾಗುವ ತೊಂದರೆಗಳನ್ನು ಕುರಿತು ಬರುವ ಅರ್ಜಿಗಳನ್ನು ಅಂಗೀಕರಿಸಿ ಸಂದರ್ಭಾನುಸಾರ ಕೇಳದ ಆಪಾದನೆಗಳನ್ನು ಮಹಾರಾಜರವರ ಹಾಜರಾತಿಗೆ ತಂದು ರಾಜ್ಯವನ್ನು ಸರಿಯಾದ ಸ್ಥಿತಿಯಲ್ಲಿ ಇಟ್ಟುಕೊಂಡಿರಬೇಕೆಂದು ಪ್ರಾರ್ಥನೆ.

ರಾಜ್ಯದ ದಿವಾನಗಿರಿ ವಿಷಯದಲ್ಲಿ ಅನೇಕ ಲೋಪಗಳು ನಡೆಯುತ್ತಾ ಇದೆ. ಪೂರ್ವದಲ್ಲಿ ಈ ಸಂಸ್ಥಾನವು ಬ್ರಿಟಿಷರವರ ಸ್ವಂತ ಆಳಿಕೆಗೆ ಒಳಪಟ್ಟು ಚೀಫ್ ಕಮಿಷನರವರ ಕಾರುಬಾರು ನಡೆಯುತ್ತಿರುವ ಕಾಲದಲ್ಲಿ ದೊಡ್ಡ ದೊಡ್ಡ ಅಧಿಕಾರಸ್ಥರಿಗೆ ಸಲ್ಲುತ್ತಿದ್ದ ಸಂಬಳಗಳಿಗೂ ಹಾಲಿ ಸೇವಕರಾಗಿರುವ ಸಂಬಳಗಳಿಗೂ ಅಪಾರ ಅಂತರ ವ್ಯತ್ಯಾಸವಾಗಿದೆ. ಆಗಿನ ಕಾಲದಲ್ಲಿ ದೊಡ್ಡ ಅಧಿಕಾರಸ್ಥರ ಸಂಖ್ಯೆಯು ಸ್ವಲ್ಪವಾಗಿದ್ದಾಗ್ಯೂ ಕಾಲಕಾಲಕ್ಕೆ ಜನಗಳಿಗೆ ಸರಿಯಾದ ನ್ಯಾಯವು ದೊರಕಿ ಸೌಖ್ಯವಾಗಿದ್ದರು. ಈ ವಿಷಯವನ್ನು ಮಹಾರಾಜರವರು ಘನವಾದ ಚಿತ್ತಕ್ಕೆ ತೆಗೆದುಕೊಂಡು ಪ್ರಜೆಗಳಿಂದ ಬರುವ ಆದಾಯವನ್ನು ಯುಕ್ತಾನುಸಾರ ಖರ್ಚು ಮಾಡಿಸಿ ಪ್ರಜೆಗಳನ್ನು ಸಂರಕ್ಷಣೆ ಮಾಡುತ್ತಾ ಬಂದರೆ ಪೂರ್ವದ ಚಕ್ರವರ್ತಿಗಳು ಪಡೆದ ಯಶಸ್ಸನ್ನು ಹೊಂದಿ ಆಚಂದ್ರಾರ್ಕವಾಗಿ ಕೀರ್ತಿಯನ್ನು ಪಡೆಯುವರೆನ್ನುವದಕ್ಕೆ ಸಂಶಯವಿಲ್ಲ. ಸದಾಶಿವಯ್ಯ

ಹಾಲಿ ಸ್ಥಳೀಕ ವರ್ತಮಾನಗಳು.

ಮಂಡ್ಯ—ಕಳೆದ ವಾರ ಇಲ್ಲಿ ಎರಡು ಸಾರಿ ಒಳ್ಳೆ ಮಳೆ ಬಂದು ಬಿಸಲು ಸ್ವಲ್ಪ ಕಮ್ಮಿಯಾಗಿದೆ. ಧಾರಣೆವಾಸಿಗಳು ಇನ್ನೂ ಹೆಚ್ಚಾಗಿಲ್ಲ —ಈಚೆಗೆ ಎರಡು ವಾರಗಳ ಕೆಳಗೆ ಇಲ್ಲಿಗೆ ಒಂದು ಸರ್ಕಸ್ ಕಂಪೆನಿಯವರು ಬಂದು ಮೂರು ದಿನಗಳ ವರಿಗೂ ರಾತ್ರಿ ಮೂರು ಗಂಟೆ ಹೊತ್ತು ತಮ್ಮ ಅಂಗಸಾಧನೆಗಳನ್ನೂ ಆನೆ, ಹುಲಿ, ಕುದುರೆ ಈ ಮುಂತಾದ ಪ್ರಾಣಿಗಳಿಗೆ ಕಲಿಸಿಕೊಟ್ಟಿರುವ ಚಮತ್ಕಾರವಾದ ವಿದ್ಯೆಗಳನ್ನೂ ಜನರಿಗೆ ತೋರಿಸಿ ಬಹಳ ಸಂತೋಷಪಡಿಸಿದರು. ಮೊದಲನೆ ದಿನ ಆಟದ ತಮಾಷೆಯಲ್ಲಿ ಒಬ್ಬನು ಕುದುರೆ ಮೇಲೆ ತನ್ನ ವಿದ್ಯವನ್ನು ತೋರಿಸುವಾಗ್ಗೆ ಲಗಾಮು ಕಾಲಿಗೆ ಸಿಕ್ಕಿ ಕೆಳಗೆ ಬಿದ್ದು ಮೂರು ಗಂಟೆ ವರಿಗೂ ಮೂರ್ಛೆ ಹೋಗಿದ್ದನು. ಮಾರನೆ ದಿನ ಅವನಿಗೆ ಸೌಖ್ಯವಾಯಿತು.

ಕುಣಿಗಲ್ ಪೇಟೆ—ಈ ವರ್ಷದ ಆದಿಯಿಂದಲೂ ೬ ಬಾರಿ ಒಳ್ಳೇ ಮಳೆಯಾಗಿ ರೈತರೆಲ್ಲರೂ ತಮ್ಮ ಹೊಲಗಳನ್ನು ಎರಡು ಮೂರು ಸಾರಿ ಉತ್ತು ಸಿದ್ಧಪಡಿಸಿಕೊಂಡಿದ್ದಾರೆ. ಒಂದೇ ದಿನ ೩½ ಇಂಚ್ ಮಳೆ ಸುರಿಯಿತು. ಕೆರೆಯಲ್ಲಿ ಬೇಕಾದಷ್ಟು ನೀರು ಬಂದಿಯದೆ —ಕೆಲವು ದಿನಗಳ ಕೆಳಗೆ ಒಬ್ಬ ಕ್ಷೌರದಮಾಲಿಯು ಬೆಂಗಳೂರಿನಲ್ಲಿ ಕಲರಾ ರೋಗ ತಗಲಿ ಬಂದು ರೈಲ್ ಸ್ಟೇಷನ್ನಿನ ಛತ್ರದಲ್ಲೇ ಸತ್ತುಹೋಗಲು, ಹೆಣವನ್ನು ದಫನ ಮಾಡಿಸಿ, ಅವನ ನೆಂಟನನ್ನು ಕ್ವಾರಂಟೈನ್‌ನಲ್ಲಿ ಇಟ್ಟು ರೋಗಶಮನ ಮಾಡಿದರು —ಕೆಲವು ದಿನಗಳ ಕೆಳಗೆ ಪೇಟೆಯಲ್ಲಿರುವ ಕೃಷ್ಣಸ್ವಾಮಿ ಮೊದಲಿಯಾರ್ರವರ ಮನೆಗೆ ಕಳ್ಳರು ಕನ್ನ ಹಾಕಿ ಮುನ್ನೂರು ರೂಪಾಯಿ ಮಾಲನ್ನು ಅಪಹರಿಸಿದರು. ಪೋಲೀಸಿನವರು ಇನ್ನೂ ಪತ್ತೆ ಮಾಡುವದರಲ್ಲಿದ್ದಾರೆ —ಕೆಲವು ವರ್ಷಗಳಿಂದಲೂ ಪ್ರಜಾ ರಂಜಕರಾಗಿದ್ದ ಮೆ॥ ಮೊಹಿದ್ದೀನ್ ಷರೀಫರವರು ಈ ತಿಂಗಳು ಚಿಕ್ಕನಾಯಕನಹಳ್ಳಿಗೆ ಹೋಗಲು ಅವರ ಸ್ಥಾನಕ್ಕೆ ಮಿ॥ ಸ್ವಾಮಿನಾಥಶಾಸ್ತ್ರಿಗಳು ಬಂದಿದ್ದಾರೆ. ಅವರಂತೆಯೇ ಇವರು ಮುನಿಸಿಪಾಲಿಟಿಯ ವಿಷಯದಲ್ಲಿ ಹೆಚ್ಚು ಲಕ್ಷ್ಯ ತೆಗೆದುಕೊಂಡು, ಪ್ರಜೆಗಳಿಗೆ ಕ್ಷೇಮವನ್ನುಂಟುಮಾಡಿ ಕೀರ್ತಿಪಡೆಯಬಹುದೆಂದು ನಂಬುತ್ತೇನೆ —ಬಳ್ಳಾರಿ ಕಡೆಯಿಂದ ಬಂದಿದ್ದ ಮೌಲ್ವಿಯವರಿಂದ ಕೆಲವು ದಿನ ರಾತ್ರಿ ತಮ್ಮ ಮತದ ಖುರಾನನ್ನು ಓದಿಸಿ, ನಂತರ ತಮ್ಮ ಗುರುವಿನ ಜನ್ಮ ದಿನದಲ್ಲಿ ನಾನೂರು ರೂಪಾಯಿ ಖರ್ಚುಮಾಡಿ ಸ್ಥಳದ ಮತ್ತು ಪರಸ್ಥಳದ ಎಲ್ಲಾ ಮುಸಲ್ಮಾನರಿಗೂ ಸುಖ ಭೋಜನ ಮಾಡಿಸಿದರು —ಬೇಸಿಗೆಯ ರಜಕ್ಕಾಗಿ ಏಪ್ರಿಲ್ ೨೦ ಕ್ಕೆ ಮುಚ್ಚಿದ್ದ ಎಲ್ಲಾ ಸ್ಕೂಲುಗಳನ್ನೂ ಈ ತಿಂಗಳ ೨೦ ನೆ ತಾ ಪ್ರಾರಂಭಿಸುತ್ತಾರೆ.

ಕೊಪ್ಪ—ಕಳೆದ ಏಪ್ರಿಲ್ ತಿಂಗಳಲ್ಲಿ ನಾಲ್ಕಾರು ಹದ ಮಳೆಯಾಗಿ ಥಟ್ಟನೆ ನಿಂತು ಬಿಟ್ಟದ್ದರಿಂದ ಅಲ್ಲಲ್ಲಿ ಜನರಿಗೆ ಜ್ವರಾದಿಗಳು ಉತ್ಪತ್ತಿಯಾಗಿ ದಿನಕ್ಕೆ ೫೦—೬೦ ರಂತೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಾರೆ. ಇಲ್ಲಿನ ಆಸ್ಪತ್ರೆ ಅ॥ ಮೆ॥ ಪಿ ಸಿದ್ದಣ್ಣನವರನ್ನು ಮೈಸೂರು ಮಹಾಮಾತೋಶ್ರೀ ಮಹಾರಾಣಿಯವರ ಆಸ್ಪತ್ರೆಗೆ ವರ್ಗಾಯಿಸಿ ಮೆ॥ ಎ ನಾರಾಯಣರಾಯರನ್ನು ಇಲ್ಲಿನ ಡಿಸ್ಪೆನ್ಸರಿ ಚಾರ್ಜಿಗೆ ಕಳುಹಿಸಿರುತ್ತಾರೆ. ಮೆ॥ ಸಿದ್ದಣ್ಣನವರು ಇಲ್ಲಿಗೆ ಬಂದು ೩ ವರುಷಗಳಾಯಿತು. ಆ ಲಾಗಾಯ್ತು ಆಸ್ಪತ್ರೆಗೆ ಬರುವ ಬಲ್ಲಿದರೂ ಬಡವರೂ ಅಧಿಕಾರಿಗಳೂ ಕನಿಷ್ಟ ನೌಕರರೂ ಎಂಬ ತಾರತಮ್ಯವಿಡದೆ ಎಲ್ಲರನ್ನೂ ಏಕರೀತಿಯಾಗಿ ಕಾಣುತ್ತಾ ಉತ್ತಮವಾದ ಚಿಕಿತ್ಸೆ ಮಾಡಿ ಜನರ ವಿಶ್ವಾಸಗೌರವಗಳನ್ನು ಸಂಪಾದಿಸಿಕೊಂಡಿದ್ದರು. ಈಗ ಬಂದಿರುವ ಮೆ॥ ನಾರಾಯಣರಾಯರೂ ಮೇಲ್ಕಂಡವರಂತೆಯೇ ಯಶಸ್ಸನ್ನು ಹೊಂದುವರೆಂದು ನಿರೀಕ್ಷಿಸುತ್ತೇನೆ. ಈಗ ಹರಿಹರಪುರದ ಆಸ್ಪತ್ರೆ ಚಾರ್ಜಿನಲ್ಲಿರುವ ಮೆ॥ ಟಿನೆಂಟ್‌ರವರು ಬಂದ ಲಾಗಾಯ್ತು ಆ ಆಸ್ಪತ್ರೆಗೆ ಬರುವ ಜನರ ಸಂಖ್ಯೆಯು ಬಹಳ ಹೆಚ್ಚಿರುವ ದಾಗಿಯೂ ಮೆ॥ ಟಿನೆಂಟ್‌ರವರು ತಾವು ಬಂದಿರುವ ಉದ್ದೇಶವನ್ನು ತೃಪ್ತಿಕರವಾಗಿ ನೆರವೇರಿಸಿ ಅಲ್ಲಿನ ಮತ್ತು ಸುತ್ತುಗ್ರಾಮಗಳ ಜನರ ಮನಸ್ಸನ್ನು ತಮ್ಮ ಆಸ್ಪತ್ರೆಯ ಕಡೆಗೆ ಎಳೆದುಕೊಳ್ಳುವ ಸಂಗತಿಯನ್ನು ಹರಿಹರಪುರದ ಮಾನ್ಯರಾದ ಜನರಿಂದ ಕೇಳಿ ತುಂಬಾ ಸಂತೋಷ ಪಡುವದಲ್ಲದೆ ಇವರಿಂದಲಾದರೂ ಆ ಆಸ್ಪತ್ರೆಯು ಅಲ್ಲಿಯೇ ಖಾಯಮ್ಮಾಗಿರಲೆಂದು ಅನೇಕರ ಅಭೀಷ್ಟವಾಗಿರುತ್ತೆ —ಇಲ್ಲಿನ ಎಕ್ಸೈಸ್ ಇನ್ಸ್‌ಪೆಕ್ಟರ್ ಅರುಳಸಾಮಿ ಪಿಳ್ಳೆಯವರು ಇಲ್ಲಿಗೆ ಬಂದು ಸುಮಾರು ಒಂದೂವರೆ ವರುಷವಾಯಿತು. ಇವರು ಕೇಂದಿ ಷರಾಬ್ ಅಂಗಡಿಗಳಲ್ಲಿ ನಡೆಯುತ್ತಿದ್ದ ಅನೇಕ ಅಕ್ರಮಗಳನ್ನು ಕಂಡು ಹಿಡಿದು ತಪ್ಪಿಸಿದ್ದಲ್ಲದೆ ಕಳ್ಳತನವಾಗಿ ಮರಗಳನ್ನು ಕಟ್ಟಿ ಕೇಂದಿ ತೆಗೆಯುತ್ತಿದ್ದವರನ್ನು ಹಿಡಿದು ಸಾಮಾನ್ಯವಾದ ಶಿಕ್ಷೆಗೆ ಗುರಿ ಮಾಡಿಸಿದ್ದಾರೆ —ಕಳೆದ ೧೦ ನೆ ತಾ ಶುಕ್ರವಾರದ ರಾತ್ರೆ ಇಲ್ಲಿನ ಕೆಳಗಿನ ಪೇಟೆ ಗಣೇಶಮಲ್‌ರವರ ಅಂಗಡಿ ಎದುರಿಗೆ ದೊಂಬಿದಾಸರ ಆಟವಾಯಿತು. ಗೌಳಿಗರ ಮಾದಣ್ಣನೆಂಬ ಮುದುಕನು ತನ್ನ ಮನೇ ಬಾಗಲಿಗೆ ಬೀಗ ಹಾಕಿ ತಮಾಷೆ ನೋಡುವದಕ್ಕೆ ಹೋದನು. ಕಳ್ಳರ‍್ಯಾರೋ ಅವನ ಮನೆ ಬೀಗವನ್ನು ಮುರಿದು ಕಲಂಬೆಯಲ್ಲಿಟ್ಟಿದ್ದ ನೂರಾರು ರೂಪಾಯಿನ ನಗನಾಣ್ಯಗಳನ್ನು ದೋಚಿಕೊಂಡು ಪರಾರಿಯಾಗಿರುತ್ತಾರೆ. ಮುದುಕನು ರಾತ್ರಿಯೆಲ್ಲಾ ತಮಾಷೆಯ ಸಂಭ್ರಮದಲ್ಲಿದ್ದು ಬೆಳಗ್ಗೆ ಮನೆಗೆ ಬಂದು ನಡೆದ ಕೃತ್ಯವನ್ನು ನೋಡಿ ಗೋಳಾಡುತ್ತಾ ಪೋಲೀಸ್ ಸ್ಟೇಷನ್ ಆಫೀಸರಿಗೆ ಅರಿಕೆ ಮಾಡಿದನು. ಇನ್ಸ್‌ಪೆಕ್ಟರು ಪಂಚಾಯತರ ಮೊಖ್ತಾ ಮಹಜರ್ ಬರೆದುಕೊಂಡದಲ್ಲದೆ ಫಿರ್ಯಾದಿಯ ಕೋರಿಕೆಯಂತೆ ಪಂಚಾಯತರ ರೂಬರೂ ಪಟೇಲ ವೆಂಕಟರಮಣನೆಂಬ ವಿಲೇಜ್ ಪೋಸ್ಟ್‌ಮೆನ ಮನೆಯನ್ನು ಜಪ್ತಿ ಮಾಡಿಸಿ ನೋಡುವಲ್ಲಿ ಏನೊಂದೂ ಸಿಕ್ಕಲಿಲ್ಲ.

ಪ್ರಕಟನೆಗಳು.

ಇಲ್ಲಿನೋಡಿ!

22 11

ತುಮಕೂರು ಡಿಸ್ಟ್ರಿಕ್ಟ್ ಇಲಾಖೆಯಲ್ಲಿ, ಯೂರೋಪಿಯನ್ ಮೇಲ್ವಿಚಾರಣೆಯಿಂದ, ಉತ್ತಮ ತರದ ಹಾಸನದ ಟೋಪಿಗಳು ಅತಿ ಶ್ರೇಷ್ಠವಾದ ಉಲ್‌ಸಾರದಿಂದ ತಯಾರಾಗುತ್ತವೆ. ಕ್ರಯ ೧೦ ಆಣೆಯಿಂದ ೧ರೂ ೧೨ ಆಣೆವರಿಗೂ ದೊರಕುವವು. ಅಪೇಕ್ಷಿಸುವವರಿಗೆ ಕ್ರಯದ ಪಟ್ಟಿಯನ್ನು ರವಾನಿಸುವೆವು. ವಿಳಾಸ —ಮೇನೇಜರ್, ಹಾಸನದ ಟೋಪಿ ಕಾರ್ಖಾನೆ, ಮಿಷನ್ ಇಲಾಖೆ, ತುಮಕೂರು.

ನೋಟೀಸ್

51—2

ಮಂಗಳೂರು ಹೆಂಚು, ಇಟ್ಟಿಗೆ ಚದರಬಿಲ್ಲೆ ಮುಂತಾದವುಗಳು ತಯಾರಾಗುವ ಯಂತ್ರಗಳು ಮತ್ತು ಸೋಡಾ ತಯಾರಾಗುವ ಮಿಷನ್ ಒಂದು, ಇವುಗಳ ಸಾಮಾನುಗಳು, ಒಂದು ಸರ್ಕ್ಯೂಲರ್ ಸಾ ಬೆಂಚ್ ಮತ್ತು ಗರಗಸಗಳು ಸಹ, ಬಹು ಸುಲಭಕ್ರಯಕ್ಕೆ ಮಾರಾಟಕ್ಕೆ ಬಂದಿವೆ. ಇಷ್ಟವುಳ್ಳವರು ಇದರ ವಿಚಾರವನ್ನು ಕುರಿತು ಮೆ॥ ಪಿಟ್ರೋ ಅಂಡ್ ಸನ್ ಯವರಿಂದ ತಿಳಿದುಕೊಳ್ಳಬಹುದ.

ಹುಣಸೂರು

೧೨—೫—೦೭ Pietro Hay & Son

ಬಾಲಶಿಕ್ಷೆ ೧ನೇ ಭಾಗ!

135

“ಆಯ ಬಂದಾ” “ಬಂದಾಗ” “ಬಂದೇ ಬಂದ”!!

ಅಕ್ಷರಗಳನ್ನೂ ಪಾಠದ ವಿಷಯಗಳನ್ನೂ ಮಕ್ಕಳ ಜ್ಞಾಪಕದಲ್ಲಿ ಖಚಿತವಾಗಿ ನಿಲ್ಲಿಸುವದಕ್ಕೆ ನವೀನವಾದ ಚಿತ್ರಗಳು ಇದರಲ್ಲಿ ಇವೆ. ಆಯಾ ಪಾಠಗಳ ಅಡಿಯಲ್ಲಿ ಲೇಖ್ಯಪಾಠವೂ ಗಣಿತಪಾಠವೂ ಇವೆ. ಮಕ್ಕಳಿಗೆ ಈ ಪಾಠಗಳು ಕಾಟವಾಗದೆ ಆಟವಾಗಿ ಪರಿಣಮಿಸುವವು. ನೂರು ಪ್ರತಿಗಳಿಗೆ ಹನ್ನೆರಡು ಪ್ರತಿಗಳು ಕಮಿಷನ್.

ವಿಳಾಸ—ಮ್ಯಾನೇಜರ್, ಸಿ. ಎಲ್. ಎಸ್.

ಬುಕ್ ಡಿಪೋ, ಮೈಸೂರು.

ವ್ಯವಹಾರ ನಿರ್ಣಯ

ವೆಂಬ ಕನ್ನಡ **ಲಾ** ಪುಸ್ತಕವು

53 2

ಲಾ ತಿಳಿದವರಿಂದಲೂ, ತಿಳಿಯದವರಿಂದಲೂ ಇದುವರೆಗೆ ಬರೆಯಲ್ಪಟ್ಟಿರುವ ಈ ತೆರದ ಪುಸ್ತಕಗಳನ್ನೆಲ್ಲ ನೋಡಿ ಅವೆಲ್ಲಕ್ಕಿಂತಲೂ ಹೆಚ್ಚು ಪಯೋಗವನ್ನು ಇದೊಂದು ಪುಸ್ತಕದಿಂದುಂಟುಮಾಡಬೇಕೆಂದು ಈ ದೊಡ್ಡ ಗ್ರಂಥವು ಹೊಸದಾಗಿ ಬರೆಯಲ್ಪಟ್ಟಿದೆ. ಇದರಲ್ಲಿ ೧೬ ಆಕ್ಟುಗಳು, ೬ ಕೋಡುಗಳು, ಹಿಂದೂ, ಮಹಮದೀಯ ಲಾಗಳು, ಛೀಫ್ ಕೋರ್ಟು ಹೈ ಕೋರ್ಟುಗಳ ಫೈಸಲುಗಳು, ಗೌ॥ ಸರ್ಕ್ಯುಲರ್‌ಗಳು ಪ್ರೊಸೀಡಿಂಗ್ಸುಗಳ, ಸಕಲ ವಿಧ ವ್ಯವಹಾರಗಳು,(ಕ್ರಯ ಆಧಾರ ದಾನ ವಿಲ್ಲು ಮೊದಲಾದ) ೬೯ ತೆರದ ದಸ್ತಾವೇಜುಗಳ ನಮೂನೆಗಳು, ಈ ಸಂಬಂಧದ ಲಾ ವಿಧಿಗಳು, ಸಿವಲ್ ಕ್ರಿಮಿನಲ್, ಪೊಲೀಸ್, ರವಿನ್ಯೂ ಸಂಬಂಧದ ವ್ಯಾಖ್ಯೆಗಳು, ೫೯ ತೆರದ ಅರ್ಜಿಗಳು, ಈ ಸಂಬಂಧದ ಲಾ ವಿಧಿಗಳು ಇವೆಲ್ಲವೂ ಅಡಕವಾಗಿವೆ.

ಪುಸ್ತಕ ದೊಡ್ಡದು ಪುಟಗಳು ಒಟ್ಟು ೬೭೬	ಎಲೆ ಕಡಮೆ ಅಂಚೆ ಹಾಸಲು ಸೇರಿ ರೂ ೧—೮—೦

ಗ್ರಂಥಕರ್ತರು { ಎಂ ವಾಲ್ಮೀರಾಧ್ಯರು, ೧ನೆ ಗ್ರೇಡ್ ಪ್ಲೀಡರ್, ಶ್ರೀರಾಮಪೇಟೆ, ಮೈಸೂರು } ಇದೇ ವಿಳಾಸ

ಒಕ್ಕಲಿಗರ ಪತ್ರಿಕೆ.

39—6

ಒಕ್ಕಲಿಗರ ಪತ್ರಿಕೆಯು ಬೆಂಗಳೂರಿನಲ್ಲಿ ಪ್ರತಿ ಬುಧವಾರ ಒಕ್ಕಲಿಗರ ಸಂಘದಿಂದ ಪ್ರಕಟಿಸಲ್ಪಡುತ್ತಿರುವುದು. ಇದು ಬಿ ಎ ಮತ್ತು ಬಿ ಎಲ್ ಪರೀಕ್ಷೆಗಳನ್ನು ಮಾಡಿರುವ ವಿದ್ಯಾವಂತರಾದ ಒಕ್ಕಲಿಗರಿಂದ ಸುಲಭವಾದ ಒಳ್ಳೇ ಭಾಷೆಯಲ್ಲಿ ಬರೆಯಲ್ಪಟ್ಟು ಅಂದವಾಗಿ ಮುದ್ರಿಸಲ್ಪಡುತ್ತಿದೆ.

ಈ ಪತ್ರಿಕೆಯಲ್ಲಿ ಸಂಸ್ಥಾನದ ಆಡಳಿತಗಳು, ಲೋಕವಾರ್ತೆ ಕೈಗಾರಿಕೆ, ವ್ಯಾಪಾರ, ಕಸುಬು, ವ್ಯವಸಾಯ ಮುಂತಾದ ವಿಷಯಗಳನ್ನು ಕುರಿತು ದೀರ್ಘಾಲೋಚನೆ ಮಾಡಿ ಉಪನ್ಯಾಸಗಳು ಬರೆಯಲ್ಪಡುವವು.

ಚಂದಾ ಬೆಂಗಳೂರು ಮತ್ತು ಮೈಸೂರು ಪಟ್ಟಣಗಳಲ್ಲಿಯೂ ಮತ್ತು ನಮ್ಮ ಏಜಂಟರುಗಳಿರುವ ಎಲ್ಲಾ ಸ್ಥಳಗಳಲ್ಲಿಯೂ ವರ್ಷ ೧ ಕ್ಕೆ ೧ ರೂಪಾಯಿ. ತಮ್ಮ ಹೆಸರಿಗೆ ನೇರಾ ತರಿಸಿಕೊಳ್ಳುವವರಿಗೆ ಅಂಚೆ ಹಾಸಲು ಸೇರಿ ೧ ರೂ ೧೬ ಆಣೆ ಬೀಳುತ್ತದೆ.

ಈ ಪತ್ರಿಕೆಯು ಪಟ್ಟಣ, ಊರು ಗ್ರಾಮಾಂತರಗಳಲ್ಲಿ ಬಹಳ ಪ್ರಚುರಕ್ಕೆ ಬರುತ್ತಾ ಇದ್ದರಿಂದ ಇದರಲ್ಲಿ ಇಸ್ತಿಹಾರುಗಳು ಪ್ರಕಟಿಸಿದರೆ ವ್ಯಾಪಾರಸ್ಥರಿಗೆ ಬಹಳ ಲಾಭ ಉಂಟು. ದರಗಳನ್ನು ಈ ಕೆಳಗೆ ಕಂಡ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರು, ಒಕ್ಕಲಿಗರ ಪತ್ರಿಕೆ,
(ಒಕ್ಕಲಿಗರ ಸಂಘ ೫೩, ಅರಳೇಪೇಟೆ,
ಬೆಂಗಳೂರು ಸಿಟಿ

ಪ್ರಶ್ನೋತ್ತರ ಲೇಖ್ಯಬೋಧಿನಿ

55 1

೩ನೇ ಛಾಪ ಸಿದ್ಧವಾಗಿದೆ. ದಪ್ಪವಾದ ಕಾಗದ, ಭದ್ರವಾದ ಬೈಂಡುಳ್ಳದ್ದು. ಪುಸ್ತಕದಲ್ಲಿರುವ ಸಂಗತಿಯನ್ನು ದಯವಿಟ್ಟು ಓದಿ ನೋಡಿ. ಕ್ರಯ ೧—೪—೦

ಕ್ಷೇಮಸಮಾಚಾರದ ಕಾಗದಗಳು ಅರ್ಜಿಗಳು ಸಿವಿಲ್ ಕ್ರಿಮಿನಲ್ ಇಂಜನಿಯರ್ ಎಕ್ಸೈಜು ವಿದ್ಯಾಭ್ಯಾಸ ವ್ಯವಸಾಯ ಮ್ಯುನಿಸಿಪಲ್ ಫಾರೆಸ್ಟು ಮತ್ತು ಇತರ ಎಲ್ಲಾ ಇಲಾಖೆಗಳ ಬಗೆಬಗೆ ಸಂಗತಿಗಳು ಸಿವಿಲ್ ಪ್ರೊಸೀಜರ್ ಕೋಡು ಕ್ರಿಮಿನಲ್ ಕೋಡು ಹಿಂದೂ ಲಾ ಮಹಮದೀಯ ಲಾ ಕಂಟ್ರಾಕ್ಟು ಟ್ರಾನ್ಸ್‌ಫರು ಪಾರಸು ಮೈನರು ಲಿಮಿಟೇಷನ್ ಸ್ಟ್ಯಾಂಪು ಕೋರ್ಟು ಫೀಜು ಪೋಲೀಸು ಮ್ಯುನಿಸಿಪಲ್ ರೆವಿನ್ಯೂ ಕೋಡು ರೂಲ್ಸು ಲ್ಯಾಂಡ್ ಇಂಪ್ರೂವ್ ಮೆಂಟು ಎಕ್ಸೈಜು ದೊಡ್ಡ ಆರಂಭ ಮೊದಲಾದ ಎಲ್ಲಾ ಆಕ್ಟುಗಳ ಸಾರಾಂಶಗಳು ಕೋರ್ಟುಗಳು ಮೇಜಿಸ್ಟ್ರೇಟುಗಳು ಪೋಲೀಸಿನವರು ಇವರಿಗಿರುವ ಅಧಿಕಾರದ ಪರಿಮಿತಿ ಇತ್ಯಾದಿ ಸಂಗತಿಗಳು ರೆವಿನ್ಯೂ ರೂಲ್ಸು ಪ್ರಕಾರ ಗ್ರಾಮದ ಲೆಕ್ಕಗಳನ್ನು ಬರೆಯುವದು. ಮುಂತಾದ ವ್ಯಾಸಭಾಷಿಕ ಲೆಕ್ಕಗಳು ಬಗೆಬಗೆ ಸಂಗತಿಗಳು ಲೇವಾದೇವಿ ಮಾಡಲು ಅನುಕೂಲವಾದ ಕಾನೂನುಗಳು ರೋಜು ವರ್ಗ ಮೊದಲಾದ ಪತ್ರಕರ ಲೆಕ್ಕಗಳನ್ನು ಬರೆಯುವ ರೀತಿ ಅಂದು ಬುಕ್ಕು ರಫ್ಟು ಬುಕ್ಕು ಹುಂಡಿಬುಕ್ಕು ನಗದಿ ಲೆಕ್ಕ ಬುಕ್ಕು ತಂಡಲ್ ಬುಕ್ಕು ಇವುಗಳಿಡುವ ರೀತಿ ಅವುಗಳ ಪ್ರಯೋಜನ ಸಿಂಗಲ್ ಯೆಂಟ್ರಿ ಡಬ್ಬಲ್ ಯೆಂಟ್ರಿ ಪದ್ಧತಿಯನುಸರಿಸಿ ಬರೆಯುವ ರೀತಿ ಮೊದಲಾದವುಗಳನ್ನು ಸ್ವಲ್ಪ ಸುಟ್ಟಿಗೆ ಓದು ಬಲ್ಲವರಿಗೂ ಕೂಡ ಸುಲಭವಾಗಿ ತಿಳಿಯುವಂತೆ ಪ್ರಶ್ನೋತ್ತರರೂಪವಾಗಿ ಬರೆದಿದೆ. ಪುಸ್ತಕದಲ್ಲಿರುವ ಎಲ್ಲಾ ಸಂಗತಿಗಳನ್ನು ವಿವರಿಸುವದು ಸಾಧ್ಯವಿಲ್ಲವಾಗಿ ಸೂಕ್ಷ್ಮದಿಂದ ತಿಳಿಸಿರುತ್ತೆ. ಈ ಪುಸ್ತಕವನ್ನು ನಾವೇ ಹೊಗಳಬೇಕಾದಿಲ್ಲ. ಅತ್ಯಲ್ಪಕಾಲದಲ್ಲಿ ೨ ಮುದ್ರಣದ ಪುಸ್ತಕಗಳು ಮುಗಿದು ಹೋಗಿ ೩ ನೆ ಸಲ ಅಚ್ಚಾದ ಸಂಭಾವವೇ ಈ ಪುಸ್ತಕವು ಸರ್ವಜನೋಪಯೋಗಿಯೆಂದ ಲೋಕಪ್ರಸಿದ್ಧವಾಗುವದಕ್ಕೆ ಸಾಕ್ಷಿಯಾಗಿದೆ. ಈ ೩ ನೆ ಮುದ್ರಣದಲ್ಲಿ ಮುಖ್ಯವಾಗಿ ಹಿಂದೂ ಲಾ ಮೊದಲಾದ ನ್ಯಾಯಶಾಸ್ತ್ರಕ್ಕೆ ಹೆಚ್ಚಾಗಿ ಸ್ಥಳಕೊಟ್ಟಿದೆ. ಒಂದೆರಡನೆ ಮುದ್ರಣದಲ್ಲಿದ್ದಂತೆ ತಪ್ಪುಗಳು ಖಂಡಿತವಾಗಿಯೂ ಇಲ್ಲ. ಕ್ರಯ ಒಂದು ರೂಪಾಯಿ ನಾಲ್ಕಾಣೆ.

೨ ಮೋಹಿನಿ ಪುಸ್ತಕ—ಕ್ರಯ ೧೪ ಆಣೆ.

ಗಡಿಯಾರಗಳು —ಪೆಟಲ್, ಓಪನ್ ಫೇಸ್, ಕೀಲೆಸ್, ಲಿವರ್, ವಾಚು ೧ಕ್ಕೆ ರೂ ೨—೮—೦ ಅಮೇರಿಕದ ನ್ಯೂಯಾರ್ಕ್ ಆರ್ಸೋನಿಯಾ ಕಂಪನಿ ಲಿವರ್ ವಾಚು ೧ಕ್ಕೆ ರೂ ೩—೮—೦ ಸಾದಾ ಟೈಂಪೀಸು ೧ಕ್ಕೆ ರೂ ೧—೪—೦ ಅಲಾರಂ ಇರತಕ್ಕ ಟೈಂಪೀಸು ೧ಕ್ಕೆ ರೂ ೨—೪—೦ ಸರಪಣಿ ೧ಕ್ಕೆ ೨॥ ಆ ೧ ತಿಂಗಳ ನಂತರ ಈ ಕ್ರಯಕ್ಕೆ ಖಂಡಿತ ದೊರೆಯುವದಿಲ್ಲ.

ವಿಳಾಸ—ಬಿ ಕೆ ಮೂರ್ತಿ ಕಂಪನಿ, ಬಿಕ್ಕೋಡು ಪೋಸ್ಟ್.

ಪೆರೂನಾವನ್ನು ಕುರಿತು ಹೆಂಗಸರಿಗೇ ಹೆಂಗಸರ ಕೂಡ ಮಾತಾಡುತ್ತಾರೆ.

38-7

ಮಿಸೆಸ್. ಮೆಗ್ರಾಥ್.

ದುರ್ಬಲದ ಅನುಭವ.

ಮಿಸೆಸ್ ಎಂ ಮೆಗ್ರಾಥ್, ೩೧೯ ವೆಸ್ಟ್ ಯು. ೧೪೩ ನೆ ಬೀದಿ, ನ್ಯೂಯಾರ್ಕ್, ಎನ್ ವೈ, ಈಕೆ ಬರೆಯುತ್ತದೇನೆಂದರೆ —

"ಪೆರೂನಾ ನನಗೆ ಮಾಡಿರುವ ಉಪಕಾರಕ್ಕಾಗಿ ನನ್ನ ಯೋಗ್ಯತಾನುಸಾರ ನಾನು ಅದನ್ನು ಸಂತೋಷದಿಂದ ಹೊಗಳುತ್ತೇನೆ ಎರಡು ವರುಷಗಳ ಕೆಳಗೆ ನನಗೆ ಒಂದು ವಿಧವಾದ ದುರ್ಬಲ ಪ್ರಾಪ್ತವಾಯಿತು ನನ್ನ ಬೆನ್ನೂ ಪಕ್ಕೆಗಳೂ ಯಾವಾಗಲೂ ನೋಯುತ್ತಿದ್ದವು. ನನ್ನ ಅನ್ನಕೋಶದಲ್ಲಿ ಅಕ್ರಮಗಳುಂಟಾದವು. ಇದರಿಂದ ಒಂದು ಬಟ್ಟಲು ನೀರು ಕೂಡ ನನ್ನ ಹೊಟ್ಟೆಯಲ್ಲಿ ನಿಲ್ಲುತ್ತಿರಲಿಲ್ಲ ನನಗೆ ಶಾಂತಿ ಎಲ್ಲಿ ಪ್ರಾರಂಭವಾದೀತೋ ಎಂಬ ಆದರಿಕೆಯಿಂದ ನಾನು ಉಪವಾಸವನ್ನೇ ಅಪೇಕ್ಷಿಸುತ್ತಿರಲಿಲ್ಲ. ಕಳೆದ ಮೂರು ತಿಂಗಳಿಂದಲೂ ನಾನು ಪೆರೂನಾವನ್ನು ಸೇವಿಸುತ್ತಿದೇನೆ. ಈಗ ನನಗೆ ಎಂದಿನಂತೆ ಆರೋಗ್ಯವಾಗಿರುತ್ತದೆ ನನ್ನ ಅನ್ನಕೋಶವು ಎಂದಿನಂತೆ ಬಲಪಡಿಸಿಗಿದೆ. ನನ್ನ ನರಗಳ ಹಿಂಸೆಯು ನಿವಾರಣೆಯಾಯಿತು. ನನ್ನ ಹಾಗೇ ಕಷ್ಟಪಡುವ ಹೆಂಗಸರಿಗೆಲ್ಲಾ ಪೆರೂನಾ ತೆಗದುಕೊಳ್ಳಿ ಎಂದು ಶಿಫಾರಸು ಮಾಡುತ್ತಿದ್ದೇನೆ ಆ ರೀತಿ ಅದನ್ನು ತೆಗೆದುಕೊಂಡವರು ನನ್ನನ್ನು ವಂದಿಸುತ್ತಾರೆ"

ಮಿಸೆಸ್. ಮೂರ್ಸ್.

ಮಿಸೆಸ್. ಮೂರ್ಸ್, ಆರ್. ಎಫ್. ಡಿ ಐ. ಲೆಂಟ್ಸ್, ಓರೆ., ಪೋಂಟರ್ ಆರ್ಡರ್ ಆಫ್ ವಾಷಿಂಗ್‌ಟನ್, ಈಕೆ ಬರೆಯುವುದನ್ನು ಕೇಳಿ.—

"ಹೆಂಗಸಿನ ಧರ್ಮಕ್ಕೆ ಉಂಟಾಗುವ ಹಿಂಸೆಯು ನನಗೆ ನಾಲ್ಕು ವರುಷಗಳಿಂದ ಪ್ರಾಪ್ತವಾಗಿ ಬಹಳ ಕಷ್ಟಪಟ್ಟೆನು. ನನ್ನ ಬೆನ್ನಿನಲ್ಲಿ ಉದ್ರೇಕವೂ ಕೆಟ್ಟ ನೋವಿತ್ತು ನನಗೆ ಅದರಿಂದ ವಿಶೇಷ ದುರ್ಬಲವಾಗಿತ್ತು; ತುಂಬಾ ದಣುವಾದಂತೆ ನಿಶ್ಶಕ್ತಿಯಾಗಿತ್ತು ನನ್ನ ಮನೆಯ ಕೆಲಸಗಳನ್ನು ಬಹಳ ಕಷ್ಟದಿಂದ ಮಾಡಿಕೊಳ್ಳುತ್ತಿದ್ದೆನು. ಇದರ ಪರಿಹಾರಕ್ಕೆ ನಾನು ಏನೇನೋ ಔಷಧಗಳನ್ನು ಮಾಡಿದೆನು ಪೆರೂನಾ ಸೇವಿಸಿದ ತನಕ ನನಗೆ ಸ್ವಲ್ಪವೂ ವಾಸಿಯಾಗಿರಲಿಲ್ಲ ಎರಡು ವಾರಗಳಲ್ಲೇ ನನ್ನ ಶರೀರ ಸ್ಥಿತಿಯು ತುಂಬಾ ಬದಲಾವಣೆ ಹೊಂದಿತು. ಮತ್ತು ಮೂರು ತಿಂಗಳಲ್ಲಿ ನನಗೆ ಎಂದಿನಂತೆ ಶಕ್ತಿಯೂ ಸಂತೋಷವೂ ಆರೋಗ್ಯವೂ ಉಂಟಾದವು ಇದಕ್ಕೆಲ್ಲಾ ಪೆರೂನಾವಿನ ಮಹತ್ತ್ವೇ ಅಲ್ಲದೆ ಬೇರೇನೂ ಅಲ್ಲವೆಂದು ಹೇಳುತ್ತೇನೆ"

ಮಿಸೆಸ್. ನೆಲ್‌ಸನ್.

ತಲೆ ನೋವೂ ಬೆನ್ನುನೋವೂ

ಮಿಸೆಸ್. ಟ್ರಿಸ್ಸೀ ನೆಲ್‌ಸನ್, ೬೦೯ ಎನ್ ೫ ನೆ ಅವೆ, ನ್ಯಾಷ್‌ವಿಲ್ಲೆ, ಟೆನ್, ಈಕೆ ಬರೆಯುವುದನ್ನು ಓದಿ.—

"ಪೆರೂನಾ ಔಷಧವು ನನಗೆ ಅಪಾರವಾದ ಗುಣವನ್ನು ಉಂಟುಮಾಡಿದೆಯಾದ್ದರಿಂದ ಅದನ್ನು ವಿವರಿಸುವುದು ನನ್ನ ಕರ್ತವ್ಯವಾಗಿರುತ್ತದೆ ಆದರಿಂದ ನನ್ನ ಹಾಗೆ ಕಷ್ಟಪಡುತ್ತಿರುವ ಯಾವ ಹೆಂಗಸಾದರೂ ಇದ್ದಲ್ಲಿ ಅಂಥವಳು ಇದನ್ನು ತಿಳಿದು ಉಪಕಾರ ಹೊಂದುವಂಥವಾಗುವುದು ಐದು ವರುಷಗಳ ಕಾಲ ನನಗೆ ಸುಖವಾಗಿದ್ದ ದಿನ ಒಂದಾದರೂ ಕಾಣದೆ ಇದ್ದೆನು. ತಲೆ ನೋಯುವುದು, ತಪ್ಪಿದರೆ ಬೆನ್ನು ನೋಯುವುದು, ಇವೆರಡೂ ಇಲ್ಲದಿದ್ದರೆ ಇನ್ನಾವ ಭಾಗದಲ್ಲಾದರೂ ನೋಯುವುದು ಇದ್ದೇ ಇತ್ತು. ಅಷ್ಟು ಕಷ್ಟಪಟ್ಟು ಜೀವ ಉಳಿಸಿಕೊಳ್ಳಬೇಕೇ ಎಂಬುದಾಗಿ ನನಗೆ ಬೇಸರಿಕೆಯುಂಟಾಗಿತ್ತು ಒಬ್ಬಾನೊಬ್ಬ ಸ್ನೇಹಿತಳಾದವಳು ಪೆರೂನಾವನ್ನು ಸೇವಿಸೆಂದು ನನಗೆ ಹೇಳಿದಳು. ಏನಾದರೂ ಮಹಾದೇನಲ್ಲಾ ಎಂದು ನಾನು ಕುತೂಹಲ ಪಡುತ್ತಿದ್ದೆನು ಸಂತೋಷಪೂರ್ವಕವಾಗಿ—ಆರು ಬಾಟ್ಲಿಗಳನ್ನು ಸೇವಿಸುವಷ್ಟರಲ್ಲೇ ನಾನು ಯಥಾಪ್ರಕಾರ ಹೆಂಗಸಾದೆನು. ಈಗ ನನಗೆ ಯಾವ ನೋವೂ ಇಲ್ಲ, ತುಂಬಾ ಸುಖಸಂತೋಷಗಳುಳ್ಳವಳಾಗಿದ್ದೇನೆ"

ಮೇಲ್ಕಂಡ ಸಾಕ್ಷಿಗಳು ಪ್ರತಿ ದಿನದ ಅನುಭವಗಳನ್ನು ವಿವರಿಸತಕ್ಕವುಗಳಾಗಿವೆ ಕಾಯಿಲೆ ಇದ್ದು ಪೆರೂನಾದಿಂದ ಯಥಾರ್ಥವಾದ ಗುಣವನ್ನು ಹೊಂದಿ, ಈ ಮಾತುಗಳನ್ನು ನಿಜವಾಗಿ ಹೇಳಿರುತ್ತಾರೆ

ಹೆಂಗಸರಿಗೆ ಇದು ತುಂಬಾ ಸಹಾಯಮಾಡದ್ದು ಹತ್ತಿರ ಇಟ್ಟುಕೊಂಡಿದ್ದರೆ ಈ ಔಷಧದಿಂದ ಸಹಜವಾದ ಗುಣವನ್ನು ಪಡೆಯಬಹುದಾಗಿದೆ ನರಗಳ ನಿಶ್ಶಕ್ತಿ, ಬೆನ್ನುನೋವು, ಅಜೀರ್ಣ, ತಲೆನೋವು, ಸೋಂಬೇರಿತನ, ಸ್ಥಳದಿಂದ ಸ್ಥಳಕ್ಕೆ ಬದಲಾಯಿಸುವ ನೋವು, ಇವೂ ಇನ್ನೂ ಅನೇಕ ರೋಗಗಳೂ ಪೆರೂನಾದಿಂದ ನಿವಾರಣೆಯಾಗುತ್ತವೆ ಮುಖ್ಯವಾಗಿ ಈ ಮಾತು ಹೆಂಗಸರಾದರೂ ಹೇಳಿರತಕ್ಕದ್ದಾಗಿದೆ ತಮ್ಮ ಸಹೋದರಿಯರಿಗೂ ಉಪಕಾರವಾಗಲಿ ಎನ್ನುವುದು ವಿನಾ ಅವರು ಹೀಗಲ್ಲಾ ಹೇಳಲು ಮತ್ತೇನೂ ಕಾರಣವೇ ಇಲ್ಲ

ಈ ಮೇಲ್ಕಂಡ ಸಾಕ್ಷಿಗಳ ಮಾತನ್ನು ಓದುವಂಥವರಿಗೆ—ಅವರು ಅನೇಕ ಇತರವಾದ ಔಷಧಗಳನ್ನು ತೆಗೆದುಕೊಂಡು, ಡಾಕ್ಟರುಗಳ ಅಭಿಪ್ರಾಯ ತೆಗೆದುಕೊಂಡು ಸಾಕಾದರು. ಕಡೆಗೆ ಪೆರೂನಾ ಅವರ ಸೇವನೆಗೆ ಸಿಕ್ಕಿ ಅವರ ಕಷ್ಟವೆಲ್ಲಾ ನಿವಾರಣೆಯಾಗಿ ಅವರನ್ನು ಸುಖವಾಗಿ ಮಾಡಿರುತ್ತದೆ

ಪೆರೂನಾದಿಂದ ಪ್ರತಿದಿನವೂ ರೋಗಿಗಳು ಗುಣ ಹೊಂದುತ್ತಿದಾರೆ ಪೆರೂನಾವಿಗೆ ಬಂದಿರುವ ಈ ಕೀರ್ತಿಯು ಅದನ್ನು ಉಪಯೋಗಿಸಿರುವಂಥಾ ಜನರ ಹೇಳಿಕೆಯಿಂದಲೇ ಬಂದಿದ್ದಾಗಿರುತ್ತದೆ

ಹದಿನೈದು ವರುಷ ಕಷ್ಟಪಟ್ಟೆನು

ಮಿಸೆಸ್. ಅನ್ನಾ ಪಂಟ್ಜೇಲ್, ಹೋಲಿಗ್ರೂವ್, ಆರ್ಕ್, ಈಕೆ ಬರೆಯುವುದನ್ನು ನೋಡಿ —

"ನಾನು ಹದಿನೈದು ವರುಷಗಳ ತನಕ ಹೆಂಗಸಿನ ರೋಗವನ್ನು ಅನುಭವಿಸಿದೆನು ನಿಮ್ಮ ಪೆರೂನಾ ಪ್ರಕಟನೆಯನ್ನು ಒಂದು ಕಡೆ ಓದಿ ನೋಡಿ ಒಂದು ಕೈಸೆಯಷ್ಟು ಕೇಂದ್ರ ಪೂರ್ಣ ಸೇವಿಸುವಷ್ಟರೊಳಗಾಗಿ ನಾನು ಹಾಸಿಗೆ ಬಿಟ್ಟಿದ್ದೆ ತಿರುಗಾಡ ಮಾಡಿದೆನು ಮೂರನೆ ಬಾಟ್ಲಿ ದಿವಸದ ತೀರಿ ಹೋದಾಗ ನನಗೆ ಆರೋಗ್ಯವಾಯಿತು. ಬೇರೆ ಸುಖವೂ ನಾನಾ ಖಂಡಗಳ ತೃಪ್ತಿಯೂ ಉಂಟಾದವು ಅದನ್ನು ನಾನು ಬಿಟ್ಟಿರಲಾರೆನು"

ತಲೆ ನೋವೂ ಕಿವುಡೂ.

ಮಿಸೆಸ್ ಮೇರಿ ಇ ಸ್ಟ್ಯಾಂಪರ್, ಲಂಡಂಡರ್, ಎನ್. ಎಚ್, ಎಂಬೀಕೆ ಬರೆಯುವುದೇನೆಂದರೆ —

"ನನಗೆ ಬಹು ಕಠಿಣವಾದ ತಲೆ ನೋವಿತ್ತು ಎರಡು ಕಿವಿಗಳೂ ಮುಚ್ಚಿ ಹೋಗಿದ್ದವು ನರಗಳ ಶಕ್ತಿ ಕುಂದಿ ಹೋಗಿತ್ತು ಮೂವತ್ತು ವರುಷಗಳ ತನಕ ಒಂದು ಕಿವಿ ಕೇಳುತ್ತಿರಲಿಲ್ಲ ನಾನು ಆರು ಬಾಟ್ಲಿ ಪೆರೂನಾ ಮತ್ತು ಒಂದು ಬಾಟ್ಲಿ ಮಾನಲಿನ್ ಕೊಂಡು ಸೇವಿಸಿದೆನು ಇಂಥಾ ಉತ್ಕೃಷ್ಟವಾದ ಔಷಧವು ಬೇರೆ ಇಲ್ಲವೆಂದು ಈಗ ಸಂತೋಷದಿಂದ ಹೇಳುತ್ತೇನೆ ನನ್ನ ನರಗಳು ಶಕ್ತಿ ಹೊಂದಿದುವು ಆರೋಗ್ಯವಾಗಿದೆ ಊಟ ಮಾಡಿದ್ದೆಲ್ಲಾ ದೇಹಕ್ಕೆ ಹತ್ತುತ್ತದೆ ಎಲ್ಲಾ ಭಾಗಗಳಲ್ಲಿ ನಾನು ಬಹು ಸುಖವಾಗಿದೇನೆ"

ಕಠಿಣವಾದ ಶೀತ ನೆಗಡಿ

ಮಿಸ್ ಮೇರಿ ಕ್ಯಾಲ್ವಿನ್, ೯೨೭ ಮೆಯರ್ ಬೀದಿ, ಸಿನ್‌ಸಿನಾಟಿ, ಓಹಿಯೋ, ಈ ಹೆಂಗಸು ಬರೆಯುವದೇನೆಂದರೆ —

"ಸ್ವಲ್ಪ ಕಾಲ ಒಂದು ಕಡೆ ಸಂತೆ ಮೇಳಕ್ಕೆ ಹೋಗಿದ್ದು ವಾಪಸು ಮನೆಗೆ ಬರುವಾಗ್ಗೆ ನನಗೆ ನೆಗಡಿ ಹಿಡಿಯಿತು. ನಾನು ಆಗ ಅದನ್ನು ಅಲಕ್ಷ್ಯಮಾಡಿಬಿಟ್ಟೆನು ಅದರಿಂದ ನನಗೆ ತುಂಬಾ ಕೆಡಕಾಯಿತು ನನ್ನ ಪಾದ ಬಳಿಗೆ ದುಃಖ ಕರವಾಯಿತು ನಾನು ಪೆರೂನಾ ತೆಗೆದುಕೊಂಡೆನು ಆ ಕ್ಷಣವೇ ನನಗೆ ಗುಣ ಕಾಣಬಂತು. ಒಂದು ವಾರದ ಒಳಗಾಗಿ ನಾನು ಆರೋಗ್ಯ ಹೊಂದಿದೆನು ಈಗಲೂ ನನಗೆ ಮೈಗೆ ಅಲಕ್ಷ್ಯ ಮಾಡಿ ಶೀತ ಹಿಡಿದರೆ ಅದನ್ನು ಈಗ ಪೆರೂನಾದಲ್ಲಿ ಎಲ್ಲಾ ನಿವಾರಣೆಯಾಗುತ್ತದೆ"

ಸೋದರನೆ ಮುಂತಾದ್ದಕ್ಕೆ ಪ್ರತಿ ಬಾಟ್ಲಿ ಸಂಗಡ ಕೊಡಲ್ಪಡುವ ಚೀಟಿಯನ್ನು ಓದಿಕೊಳ್ಳಿ ಎಲ್ಲಾ ಔಷಧ ಮಾರುವವರಲ್ಲಿ ಪೆರೂನಾ ವಿಕರಿ ಯಾಗುತ್ತದೆ ಒಂದು ಬಾಟ್ಲಿಗೆ ರೂ. ೨ ||| ಆರು ಬಾಟ್ಲಿಗೆ ರೂ. ೧೪ ||

ಈ ಔಷಧ ಸಿಕ್ಕುವ ಸ್ಥಳಗಳು.—

(೧) ಹಿಚ್‌ಕಾಕ್ ಅಂಡ್ ಸನ್ಸ್, ಬೆಂಗಳೂರು.

(೨) ಇಂಗ್ಲಿಷ್ ಡ್ರಗ್ ಕಂಪನಿ, ಫ್ರಾಂಕ್ ಮಿಂಟ್ ಬೀದಿ, ಮದರಾಸ್.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ

೩—೫—1907 ರಿಂದ 10—5—1907 ರ ವರೆಗೆ

ಸ್ಥಳ		ಪ್ಲೇಗ್ ಆಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ಆಗಲಿದ್ದು	
ಬೆಂಗಳೂರು ಪಟ್ಟಣ		10	11	0	
ಮೈಸೂರು	,,	8	6	0	
ಬೆಂಗಳೂರು ಡಿಸ್ಟ್ರಿಕ್ಟು		48	28	11	
ಮೈಸೂರು	,,	15	11	172	[illegible]
ಕೋಲಾರ್	,,	0	0	25	1
ಕೋಲಾರ್ ಚಿನ್ನದ ಗಣಿಗಳು		4	4	0	
ತುಮಕೂರು ಡಿಸ್ಟ್ರಿಕ್ಟು		0	0	14	
ಹಾಸನ	,,	4	4	61	3
ಚಿತ್ರದುರ್ಗ	,,	0	0	16	1
ಕಡೂರ್	,,	0	[illegible]	0	
ಶಿವಮೊಗ್ಗ	,,	8	8	0	
	ಜುಮ್ಲಾ	93	85	299	1

ಶಾಲಿವಾಹನ ಶಕ ವರುಷಂಗಳು ೧೮೨೯ ನೇ ಪ್ಲವಂಗನಾಮ ಸಂವತ್ಸರದ ವೈಶಾಖ ಶುದ್ಧ ಏಕಾದಶಿ ಗುರುವಾರದಿಂದ ವೈಶಾಖ ಬಹುಳ ಬಿದಿಗೆ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೭ ನೇ ಇಸವಿ ಮೇ.

ತಾ	ವಾರ		ತಿಥಿ.	ಘಳಿಗೆ.	ನಕ್ಷತ್ರ	ಘಳಿಗೆ.	ವೃಷ...
23	ಗುರು	‡	ಏಕಾದಶಿ	51 8	ಉ	0 56	10
24	ಶುಕ್ರ	†	ದ್ವಾದಶಿ	48 28	ಹ	1-26	11
25	ಶನಿವಾ	¶	ತ್ರಯೋದಶಿ	44 58	ಚಿ	0 36	12
26	ರವಿವಾ	*	ಚತುರ್ದಶಿ	40 15	ಸ್ವಾ	56-2	13
27	ಚಂದ್ರ	,,	ಪೌರ್ಣಮಿ	35-38	ವಿ	52 42	14
28	ಕುಜ		ಪಾಡ್ಯ	30-2	ಅನೂ	46 46	15
29	ಬುಧ	,,	ಬಿದಿಗೆ	23 50	ಜ್ಯೇ	44-16	16

‡ ಸರ್ವತ್ರ ಏಕಾದಶಿ † ಪರಶುರಾಮ ದ್ವಾದಶಿ, ಶ್ರೀಮಚ್ಛಂಕರ ಭಗವತ್ಪಾದರ ಅವತಾರಜಯಂತಿ ¶ ಶನಿಪ್ರದೋಷ * ಸೌರಮಾನ ನರಸಿಂಹಜಯಂತಿ, ಕಂಚಿ ಗರುಡೋತ್ಸವ, ವ್ಯಾಸಪೂರ್ಣಿಮಾ, ದಧ್ಯನ್ನದಾನ, ಅರ್ಧನಾರೀಶ್ವರ ವ್ರತ, ಶ್ರೀರಂಗಪಟ್ಟಣದಲ್ಲಿ ಗರುಡೋತ್ಸವ. ಶ್ರೀ ಲಕ್ಷ್ಮೀರಮಣಸ್ವಾಮಿ ರಥ ,, ತಿಥಿದ್ವಯಂ

ಪೇಟೇ ಧಾರಣೆ

ದಿನಸಿ	ಮೈಸೂರು	ಬೆಂಗಳೂರು
ಕನ್ನೇ ಅಕ್ಕಿ ಪಲ್ಲ ೧ಕ್ಕೆ ರೂ	೧೨-೮-೦	೧೪-೦-೦
ಕಂಬಸಾಲಿ ಅಕ್ಕಿ ಅವಲ್	೧೩-೪-೦	೧೩-೮-೦
,, ಮಧ್ಯಂ	೧೨-೮-೦	೧೩-೦-೦
ಜಾಪಾನ್ ಅಕ್ಕಿ	೧೧-೮-೦	೧೪-೮-೦
ಸಣ್ಣಕ್ಕಿ ಅವಲ್	೧೫-೦-೦	೧೫-೦-೦
,, ಮಧ್ಯಂ	೧೪-೮-೦	೧೪-೪-೦
ತೊಗರೀ ಬೇಳೆ ಪಲ್ಲ ೧ಕ್ಕೆ	೧೩-೮-೦	೧೩-೪-೦
,, ಮಧ್ಯಂ	೧೨-೧೨-೦	೧೨-೮-೦
ಹೈನು ರಾಗಿ ಪಲ್ಲ ೧ಕ್ಕೆ	೬-೦-೦	೬-೦-೦
ಕಾರ್ರಾಗಿ	೫-೮-೦	೫-೧೨-೦
ಜೋಳ	೭-೮-೦	೭-೪-೦
ಹುರುಳಿ ಪಲ್ಲ ೧ಕ್ಕೆ	೧೧-೦-೦	೧೧-೦-೦
ಬಿಳೀ ಅವರೆ	೮-೪-೦	೭-೪-೦
ಹೆಸರು	೧೨-೮-೦	೧೨-೮-೦
ಉದ್ದು	೧೨-೮-೦	೧೨-೦-೦
ಕಡಲೆ	೧೦-೮-೦	೧೦-೦-೦
ಎಳ್ಳು ಸ. ೧೨೭ ಕ್ಕೆ	೨೨-೮-೦	೨೨-೮-೦
ಹುರುಳಿ	೬-೬-೦	೭-೨-೦
ಹರಳು ೧೨೦ ಸೇರಿಗೆ	೧೩-೦-೦	೧೩-೪-೦
ಸೀಗೇಕಾಯಿ ಮಣ ೧ಕ್ಕೆ	೨-೬-೦	೨-೦-೦
ಮೆಣಸಿನಕಾಯಿ	೨-೮-೦	೩-೪-೦
,, ಮಧ್ಯಂ	೨-೮-೦	೨-೧೪-೦
ಬೆಲ್ಲ ದೊಡ್ಡ ಅಚ್ಚು	೩-೮-೦	ಮ ೧-೫-೦
ಬಳ್ಳೊಳ್ಳಿ ಮಣ ೧ಕ್ಕೆ	೫-೬-೦	೬೫-೦-೦
ಹರಳೆಣ್ಣೆ ,,	೫-೦-೦	೫-೨-೦
ಕೊತ್ತಂಬರಿ ಪಲ್ಲ ೧ಕ್ಕೆ	೬-೨-೦	೭-೨-೦
ಉಪ್ಪು ,,	೫-೩-೦	೫-೧೨-೦
ಹುಣಸೇ ಹಣ್ಣು	೧-೬-೦	೧-೩-೦
,, ಕಳೇದು	೦-೧೪-೦	೦-೧೫-೦
ತುಪ್ಪ ಮಣ ೧ಕ್ಕೆ	೧೫-೦-೦	೧೩-೦-೦
ಸೀಮೆಯೆಂಣೆ ಪಟ ೧ಕ್ಕೆ	೪-೦-೦	೪-೦-೦
ತೆಂಗಿನಕಾಯಿ ೧೦೦ಕ್ಕೆ	೮-೮-೦	೬-೮-೦
ಬಾಳೇಕಾಯಿ ಮಣ ೧ಕ್ಕೆ	೧-೦-೦	೧-೦-೦
ಜಂಬೂಳದ ಕಾಯಿ ಮಣ ೧ಕ್ಕೆ	೦-೧೨-೦	೦-೧೪-೦
ಚಿನ್ನ (ಪವನ್) ಕಿಂಪು	೧೫-೪-೦	೧೫-೫-೦
,, ಪಸಿಮೆ	೧೫-೧೦-೦	೧೬-೦-೦
,, ,, ಗಟ್ಟಿ ತೊಲ ೧ಕ್ಕೆ	೨೩-೧೨-೦	೨೩-೦-೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	೮೫-೦-೦	೮೩-೦-೦

Printed and Published by the Rev. E. W. Thomson, M. A., Proprietor and Manager, Wesleyan Mission Press, Mysore 23/5/1907

REGISTERED
M. 20.

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೦ ಮೈಸೂರು—ಸೆ೯ ೧೯೦೭ ನೇ ಇಸವಿ ಮೇ ತಾರೀಖು ೩೦ ನೇ ಗುರುವಾರ. ಸಂಚಿಕೆ ೫೨

WILLIAM & CO., BOMBAY.

ವಿಲಿಯಂ ಮತ್ತು ಕಂಪೆನಿ, ಫೋರ್ಟು, ಮುಂಬಯಿ.

ಗಜಕರ್ಣದ ಮುಲಾಮು.

27 14

ಇವನ್ನು ಹಚ್ಚುವದರಿಂದ ಎಲ್ಲಾ ತರದ ಕಜ್ಜಿಯೂ ನಾಶವಾಗುವದು. ಮೂರು ಸಾರಿ ಹಚ್ಚುವದರೊಳಗೆ ಗಜಕರ್ಣವು ಹೋಗುವದು. ಇವನ್ನು ಹಚ್ಚಿದಲ್ಲಿ ಉರಿಯು ಬರುವದಿಲ್ಲ ಚರ್ಮ ಕಪ್ಪಾಗುವದಿಲ್ಲ.

ಇದರಿಂದ ಗುಣ ಕಂಡುಬರುವದಿಲ್ಲವಾದರೆ ಹಣ ಹಿಂತಿರುಗಿ ಕೊಡಲ್ಪಡುವದು ತ್ವರೆಮಾಡಿರಿ! ಕೊಂಡುಕೊಳ್ಳಿರಿ!! ಕ್ರಯ ಕಮ್ಮಿ. ಒಂದು ಸಾರಿ ಪರೀಕ್ಷಿಸಿ ನೋಡಿರಿ!!!
ಡಬ್ಬಿ ೧ಕ್ಕೆ ಕಿಮ್ಮತ್ತು ೦-೬-೦
ವಿ. ಪಿ. ೦-೧೦-೦.

ಅಮೃತಾಂಜನ

ಬಾಟ್ಲಿ ಒಂದಕ್ಕೆ ಕಿಮ್ಮತು ೮ ಆಣೆ. ವಿ. ಪಿ. ೧೨ ಆಣೆ.

ಜಬ್ಬು ಮತ್ತು ಪಾಂಡು, ವಾತ, ಎದೆನೋವು, ಗಂಟ್ಲುನೋವು, ಶಿರೋಭಾರ, ಸಂಧಿವಾತ, ತಲೆನೋವು, ಮೂಲವ್ಯಾಧಿ, ಶೀತ ಕೆಮ್ಮು, ಈ ಎಲ್ಲಾ ತರದ ರೋಗಗಳಿಗೆ **ಅಮೃತಾಂಜನವು** ಒಂದು ದಿವ್ಯವಾದ ಔಷಧವಾಗಿರುತ್ತದೆ. ಇದರಿಂದ ಗುಣ ಕಂಡುಬಾರದಿದ್ದಪಕ್ಷದಲ್ಲಿ ಹಣ ಹಿಂತಿರುಗಿ ಕೊಡಲ್ಪಡುವದು. ತ್ವರೆ ಮಾಡಿರಿ! ಮೂವತ್ತು ವರ್ಷದಿಂದ ಅನುಭವಿಸುವ ವಾತದ ನೋವು ನಿಮ್ಮ ಒಂದೇ ಬಾಟ್ಲಿ ಅಮೃತಾಂಜನದಿಂದ ಪೂರ್ಣವಾಗಿ ಗುಣ ಸಿಕ್ಕಿತು. ದಯಮಾಡಿ ೧೨ ಬಾಟ್ಲಿ ವಿ. ಪಿ. ಮೂಲಕ ರವಾನಿಸಿರಿ ವೆ. ರಾಮಭಟ್ಟ, ವಿಟ್ಲ, ದ. ಕನ್ನಡ ನಾನು ನನ್ನ ಸ್ನೇಹಿತರೂ **ಅಮೃತಾಂಜನವನ್ನು** ಬಹಳವಾಗಿ ಪ್ರೀತಿಸುತ್ತೇವೆ. ಸುಪ್ರಸಿದ್ಧವಾದ ಪಂಜಾಬು **ಅಮೃತಾಂಜನ**ಕ್ಕಿಂತಲೂ ಹೆಚ್ಚು ಉಪಯೋಗ ಉಳ್ಳ ಮುಲಾಮು ಬೇರೆ ಯಾವದೂ ಇಲ್ಲ. ಗಂಗಾಸೇವಕ, ಕಲ್ಕತ್ತಾ, ಆರು ವರ್ಷದಿಂದ ವಾತಪೀಡಿತವಾದ ನನ್ನ ಗೆಳೆಯನಿಗೆ **ಅಮೃತಾಂಜನವು** ಜೀವದಾನ ಕೊಟ್ಟಿತು. ರಾಮಚಂದ್ರರಾವ್ **ಅಮೃತಾಂಜನವು** ಸಾವಿರಾರು ಜನರಿಗೆ ಉಪಕಾರಕೊಟ್ಟಿರುತ್ತದೆ. ವೀರಭದ್ರಪ್ಪ, ಟುಮುಕೂರು

ಸಂಜೀವನದ ಹಾಗಿರುವ **ಅಮೃತಾಂಜನವನ್ನು** ನನ್ನ ಮನೆಯಲ್ಲಿ ಸದಾಕಾಲ ಇಟ್ಟಿದ್ದೇನೆ. ಹನುಮಯ್ಯ, ಬೆಂಗಳೂರು. ನಿಮ್ಮ **ಅಮೃತಾಂಜನವು** ಎಂಥಾ ಕಠಿಣವಾದ ತಲೆನೋವನ್ನಾದರೂ ನಿಲ್ಲಿಸುತ್ತದೆ. ಗಂಗಣ್ಣರಾವ್, ಕೊಡಗು

ಸು. ದರೀ ತೈಲ ೪ ಆಣೆ. ವಜ್ರಗುಟಿಕ, ರೂಪಾಯಿ ೧ ದಂತಮಂಜನ ೩ ಆಣೆ ನೇತ್ರಾಂಜನ ೪ ಆಣೆ ಕಫಹಾರಿ ೧ ರೂ ೪ ಆ. ಕಸ್ತೂರಿ ಮಾತ್ರೆ ೧೦ ಆ ಕೇಶವರ್ಧಿನೀ ತೈಲ ೯ ರೂ ಕಜ್ಜಿಮುಲಾಮು ೩ ಆಣೆ ಕುಸುಮಾರಿ ಗುಟಿಕ ೧ ರೂ. ತಾಂಬೂಲ ಗುಟಿಕ ಆಣೆ.

ವಿಲಿಯಂ ಮತ್ತು ಕಂಪೆನಿ, ೧೭ ಓಕ್ ಲೇನ್, ಫೋರ್ಟು, ಮುಂಬಯಿ.

ಟೆಲಿಗ್ರಾಫು ಅಡ್ರಸು ; "ಅಮೃತಾಂಜನ" ಮುಂಬಯಿ.

ಇಲ್ಲಿನೋಡಿ :

22 15

ತುಮಕೂರು ವಿಶ್ವಕರ್ಮ ಇಲಾಖೆಯಲ್ಲಿ, ಯೂರೋಪಿಯನ್ ಮೇಲ್ವಿಚಾರಣೆಯಿಂದ, ಉತ್ತಮ ತರದ ಹಾಸನದ ಟೋಪಿಗಳು ಅತಿ ಶ್ರೇಷ್ಠವಾದ ಊಲ್‌ದಾರದಿಂದ ತಯಾರಾಗುತ್ತವೆ. ಕ್ರಯ ೧೦ ಆಣೆಯಿಂದ ೧ರೂ ೧೨ ಆಣೆವರೆಗೂ ದೊರಕುವವು. ಅಪೇಕ್ಷಿಸುವವರಿಗೆ ಕ್ರಯದ ಪಟ್ಟಿಯನ್ನು ರವಾನಿಸುವೆವು. ವಿಳಾಸ.— ಮೇನೇಜರ್, ಹಾಸನದ ಟೋಪಿ ಕಾರ್ಖಾನೆ, ವಿಂಡರ್ ಇಲಾಖೆ, ತುಮಕೂರು.

ನೋಟೀಸ್.

51—3

ಮಂಗಳೂರು ಹೆಂಚು, ಇಟ್ಟಿಗೆ, ಚಾವಣಿಹಲ್ಲೆ ಮುಂತಾದವುಗಳು ತಯಾರಾಗುವ ಯಂತ್ರಗಳು ಮತ್ತು ಸೋಡಾ ತಯಾರಾಗುವ ವಿಂಡರ್ ಒಂದು, ಇವುಗಳ ಸಾಮಾನುಗಳು, ಒಂದು ಸರ್ಕ್ಯುಲರ್ ಸಾ ಬೆಂಚ್ ಮತ್ತು ಗರಗಸಗಳು ಸಹ, ಬಹು ಸುಲಭಕ್ರಯಕ್ಕೆ ಮಾರಾಟಕ್ಕೆ ಬಂದಿವೆ. ಇಷ್ಟವುಳ್ಳವರು ಇದರ ವಿಚಾರವನ್ನು ಕಾರಿತು ಮೆ॥ ಪೇಟ್ರಿಹೇ ಅಂಡ್‌ಸನ್ ಯವರಿಂದ ತಿಳಿದುಕೊಳ್ಳಬಹುದು.

ಹುಣಸೂರು.

೨೨—೫—೦೭ Petrie Hay & Son.

ಜ್ವರಹರಿ.

47-5

ಇದು ಸಾಧಾರಣ ಜ್ವರ, ಚಳೀಜ್ವರ, ಚೋರೇಜ್ವರ, ಪಿತ್ಥಜ್ವರ ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ನಾನಾವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್. ಟಿ. ವೆಂಕಟಪತಿ ಅಯ್ಯಂಗಾರರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಔನ್ಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨೦ ಔನ್ಸಿನ ಸೀಸೆಯನ್ನು ವಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ —ಸೀಸೆ ೧ ಕ್ಕೆ ೮ ಆಣೆ, ೧ ರೂ, ೧—೮ ರೂ, ರೂ ೨—೧೨ ಆ., ೧೧ ರೂ.; ಜನ್ನೊರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

****

ಓಮಂ ಕರ್ಪೂರ

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಉಳುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳ ಒಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ಪರವು ಜ್ವರಹರಿ ಎಂಬ ಔಷಧದಂತೆಯೇ. ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ತೆವ್ರಿಯ ಓಮಂ ಕರ್ಪೂರವನ್ನು ನಾನೂ ನನ್ನ ಹಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಷ್ಠರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂತ ಬರೆದಿದ್ದಾರೆ

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ:—

ತೆವ್ರಿಯುಸ್ ಸೌತ್ ಇಂಡಿಯನ್ ಔಷಧಗಳ ಕಂಪೆನಿ,

ಸೆಕೆಂಡ್ ಬೀಚ್ ಲೈನ್, ಮದ್ರಾಸ್

ಕೊಳ್ಳೇದ ವೆಂಕಟಾಚಲ ಪಂಡಿತ, ಶ್ರೀಸೀತಾರಾಘವ ವೈದ್ಯಶಾಲಾ, ಕೊಳ್ಳೇಗಾಲ, ಇವರ ಸಿದ್ಧೌಷಧಗಳು.

26-15

೧. ಲೋಕಾಮಾಯಹರ ಕಸ್ತೂರೀ ಮಾತ್ರೆ.—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ.



ಚಳಿಜ್ವರ, ಜ್ವರ, ಹೊಟ್ಟೆಶೂಲೆ, ಸಂದುಗಳ ನೋವು, ಮೈ ಕೈಕಾಲು ಕೊಡತ (ಭಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿಮಾಂದ್ಯ, ಹಲ್ಲುನೋವು, ಕೆಮ್ಮು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ.

ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತೆ. ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಖಾಯಿಲೆಗೂ ದಾರಿಕೊಡದೆ, ನೀರು ಕಪಾಗಳ ವಿಷಮವನ್ನೆಯನ್ನು ಸರಿಪಡಿಸಿ, ರಕ್ತದಲ್ಲಿ ದೋಷವನ್ನು ತೆಗೆದು ಪುಷ್ಟಿವೀರ್ಯಾದಿ ವೃದ್ಧಿಪಡಿಸುತ್ತದೆ

ಸ್ತ್ರೀಯರ ಬಿಸುಹೊಲೆ, ಮಕ್ಕಳ ಎಳೆವು, ಜ್ವರ, ಸಚ್ಚುಜ್ವರ, ಕೈಕಸ್ಸಗಳನ್ನು ಗುಣಪಡಿಸುತ್ತದೆ

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.

೨೦ ಮಾತ್ರೆಯುಳ್ಳ ಡಪ್ಪಿಗೆ ೪ ಆಣೆ, ೪ ಡಪ್ಪಿಗೆ ೧ ಡಪ್ಪಿ ಸೇಟ್ಟು. ೧ ರಿಂದ ೧೨ ಡಪ್ಪಿ ವರೆಗೆ ಪೋಸ್ಟೇಜು ೪ ಆಣೆ

ವಿಳಾಸ:—ಎಸ್. ಎಸ್. ಆರ್. ವೈದ್ಯಶಾಲಾ,

ಲಕ್ಷ್ಮೀವಿಲಾಸ ರೋಡ್, ಮೈಸೂರು

ಶಾಲಾ ಪುಸ್ತಕಗಳು! ಶಾಲಾ ಪುಸ್ತಕಗಳು!!

54-2

ಗೌರ್ನಮೆಂಟ್, ಕನ್ನಡ ಬಾಲಬೋಧೆ ೧ನೆಯ ಭಾಗ	೦	೧	೬
" " ೨ನೆಯ ಭಾಗ	೦	೨	೬
ಮಾರ್ಸ್‌ಡೆನ್‌ರವರ ಕನ್ನಡ ಮೊದಲನೆಯ ಪುಸ್ತಕ	೦	೨	೦
" " ಎರಡನೆಯ ಪುಸ್ತಕ	೦	೨	೬
" " ಮೂರನೆಯ "	೦	೩	೦
" " ನಾಲ್ಕನೆಯ "	೦	೪	೦
" " ಐದನೆಯ "	೦	೫	೦

ವಿಳಾಸ, ಮ್ಯಾನೇಜರ್,
ಸಿ. ಎಲ್. ಎಸ್. ಬುಕ್ ಡಿಪೋ,
ಮೈಸೂರು.

ಬಿಡಬೇಡಿರಿ. ನೋಡಿರಿ. ಬಿಡಬೇಡಿರಿ.

ಜೂನ್ ಅಂತ್ಯದವರೆಗೆ
ಯೆಣ್ಣೆ ಕೆಂಪು ಮತ್ತು ಹಾಜಾ ಕಪ್ಪು.

ಹಾಸನ ಊಲ್ ದಾರ.

125 22

೩,೦೦೦ ಹಾಸನದ ಟೋಪಿ ಹೊಲೆಯುವ
ಸುಪೀರಿಯರ್ ವೂಲ್ ದಾರ ಮಾತ್ರ.

	ರೂ	ಆ	ಪೈ.
೧ ಟೋಪಿ ಆಗುವ ವೂಲ್ ದಾರದ ಕ್ರಯ	೦	೮	೦
೧೦ ಟೋಪಿ ಆಗುವ ಒಂದು ಬಂಡಲ್ ದಾರದ ಕ್ರಯ	೩	೧೧	೦
ಹಾಸನ ಟೋಪಿ ಹೊಲೆಯುವ ಕೊಕ್ಕೆ ಸೂಜಿ ೧ಕ್ಕೆ	೦	೯	೯
ಈ ದಾರದಲ್ಲಿ ಆದ ಟೋಪಿ ಡಜನ್ ೧ಕ್ಕೆ	೧೩	೩	೦

ವಿ. ಪಿ. ಯಿಂದಲೂ ರವಾನಿಸುತ್ತೇವೆ.

ವಿಳಾಸ—ಸಿ. ರಘುನಾಥ ಕಾಮತ್,
ವೂಲ್ ಮರ್ಚೆಂಟ್, ಬೋಳಾರ, ಮಂಗಳೂರು.

ಮಕ್ಕಳ ಹಿತಕಾರಿ

ಎಂದು

SCOTT'S EMULSION 31-11

(ಸ್ಕಾಟ್ಸ್ ಇಮಲ್ಷನ್)

ಎಂಬೀ ಸೇವನಾ ಔಷಧಕ್ಕೆ ಕೋಟ್ಯಾಂತರ ತಂದೆತಾಯಿಗಳು ಹೆಸರಿಟ್ಟಿದ್ದಾರೆ. ಯಾಕೆಂದರೆ ಇದು ಮಕ್ಕಳ ಆರೋಗ್ಯವನ್ನು ವೃದ್ಧಿಪಡಿಸಿ ದೇಹವನ್ನು ಪುಷ್ಟಿಯಾಗಿ ಬೆಳೆಸಿರುತ್ತದೆ.

ಇದು ರುಚಿಯಾಗಿರುವುದರಿಂದ ಮಕ್ಕಳು ಬಹು ಸಂತೋಷವಾಗಿ ಸೇವನೆಮಾಡುತ್ತಾರೆ.

ಇದು ಕಾಹಿಲೆ ಮಕ್ಕಳನ್ನು ಆರೋಗ್ಯವಾಗಿಸುವುದು; ಅಶಕ್ತರಾದ ಮಕ್ಕಳನ್ನು ಬಲಿಷ್ಠರನ್ನಾಗಿ ಮಾಡುವುದು.

ಕೈಸೋಕದೆ ತಯಾರಾದದ್ದು.

ಎಲ್ಲಾ ಔಷಧ ವ್ಯಾಪಾರಸ್ಥರಲ್ಲಿ ಬಿಕರಿಯಾಗುತ್ತೆ.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,
ಔಷಧಗಳ ಕಾರ್ಖಾನೆ,
ಲಂಡನ್, ಇಂಗ್ಲೆಂಡ್

ಈ ಮನುಷ್ಯ ಇರುವ ಔಷಧವನ್ನೇ ಕೇಳಿಕೊಳ್ಳಿ

ಇದಕ್ಕೆ ಸಮಾನವಾದ ಪುಸ್ತಕ ಉಂಟೋ?

ಕನ್ನಡ ಭಾಷೆಯಲ್ಲಿ ಇದುವರಿವಿಗೂ ಇಂಥಾ ಸೊಗಸಾದ ಪುಸ್ತಕವು ಪ್ರಚುರವಾಗಲಿಲ್ಲ. ಸ್ವಲ್ಪ ನೋಡಿ.

"ಹಿಂದೂದೇಶ ಪ್ರದಕ್ಷಿಣ"

ಎಂದು ಕರೆಯಲ್ಪಡುವ ಈ ನೂತನ ಪುಸ್ತಕದಲ್ಲಿ ಸುಮಾರು ತೊಂಬತ್ತು ಉತ್ಕೃಷ್ಟವಾದ ಚಿತ್ರಗಳು ಅಡಗಿವೆ. ಹಿಂದೂ ದೇಶವನ್ನೆಲ್ಲಾ ಸಂಚಾರ ಮಾಡುವದರಿಂದ ಉಂಟಾಗುವ ಪರಮಾನಂದವನ್ನು ಒಂದು ಸಾರಿ ಈ ಗ್ರಂಥವನ್ನು ಓದುವದರಿಂದ ಹೊಂದಬಹುದು. ಇದು ಮೊದಲನೇ ಸಾರಿ ಪ್ರಿಂಟ್ ಆಗಿದ್ದು ಬಹು ಶೀಘ್ರವಾಗಿ ಎಲ್ಲಾ ಮುಗಿದುಹೋದವು. ಈಗ ತಿರಿಗಿ ವಿಚಿತ್ರವಾಗಿಯೂ ಉಲ್ಲಾಸಕರವಾಗಿಯೂ ಇರುವ ಪ್ರಸಿದ್ಧವಾದ ಚಿತ್ರಗಳೊಡನೆ ಮಾಡಿಸಿರುತ್ತೇವೆ. ಇದರಲ್ಲಿರುವ ಚಿತ್ರಗಳನ್ನು ಸ್ವಲ್ಪ ನೋಡಿ—ಶ್ರೀರಂಗಪಟ್ಟಣದಲ್ಲಿರುವ ಹೈದರಲ್ಲಿ ಟಿಪ್ಪುಸುಲ್ತಾನನ ಗೋರಿ, ಸಮಾಯೋನನ ಗೋರಿ, ಹುಗ್ಲಿ ನದಿ, ಕಲ್ಕತ್ತಾ ನಗರ, ಕಲ್ಕತ್ತಾ ಹೈಕೋರ್ಟು, ಕಾಳಿಕಾದೇವತೆ, ಚಂಪ್ರನಗರ, ಬಂಗಾಳಿಯರ ಮನೆಗಳು, ಜಗನ್ನಾಥಸ್ವಾಮಿ ದೇವಸ್ಥಾನ, ಜಗನ್ನಾಥದ ರಥೋತ್ಸವ, ಕನರಾಕ್ ದೇವಸ್ಥಾನ, ಎವರೆಸ್ಟ್ ಶಿಖರ, ಖಟ್ಮಂಡು ನಗರದ ಒಂದು ಬೀದಿ, ಖಟ್ಮಂಡು ನಗರದ ದೇವಸ್ಥಾನಗಳು, ಜಪಚಕ್ರಗಳು, ಟಿಬೆಟಿಗರು ದೋಣಿಯನ್ನು ಎಳೆಕೊಂಡು ಹೋಗುವದು, ಗಯಾದಲ್ಲಿರುವ ಬುದ್ಧನ ದೇವಸ್ಥಾನ, ಔರಂಗಜೇಬನು ಕಟ್ಟಿಸಿದ ಮಸೀದಿ, ಕಾಶೀ ಪುಣ್ಯಕ್ಷೇತ್ರದಲ್ಲಿರುವ ದಾಶಾಶ್ವಮೇಧಘಟ್ಟ, ಕಪಿಗಳಿಗೆ ತಿಂಡಿ ಹಾಕುವದು, ಕಾಶೀ ಕ್ಷೇತ್ರದ ದೇವಸ್ಥಾನಗಳು, ಅಲಹಾಬಾದ್ ನಗರ ಮತ್ತು ಅದರ ಕೋಟೆ, ಅಲಹಾಬಾದ್‌ನಲ್ಲಿರುವ ಖುಸ್ರು ಬಾಗ್ ಅರಮನೆ, ಯಮುನಾ ನದಿಯಲ್ಲಿ ಯಾತ್ರಿಕರು ಮುಳುಗುವದು, ಕಾನ್‌ಪುರದಲ್ಲಿರುವ ಶಿಲಾ ಶಾಸನ, ಕಾನ್‌ಪುರದ ಹತ್ತಿರ ಗಂಗಾ ನದಿಯ ಮೇಲೆ ಕಟ್ಟಿರುವ ಸೇತುವೆ, ಲಕ್ನೋ ನಗರದ ರೆಸಿಡೆನ್ಸಿ ಬಂಗಲೆ, ಲಕ್ನೋ ಪಟ್ಟಣದ ಬಾಗಿಲು, ಸರ್ ಹೆನ್ರಿ ಹ್ಯಾವಲಾಕನು, ಗೋಮತಿ ನದಿಯ ಮೇಲಿರುವ ಅರಮನೆ, ಹಿಮವದಲ್ಲಿ ಜನರ ಸ್ಥಿತಿ, ಹರಿದ್ವಾರಘಟ್ಟ, ಗಂಗೋತ್ರಿ ದೇವಸ್ಥಾನ, ಹಿಮವತ್ಪರ್ವತಗಳ ಮೇಲಿರುವ ಪಟ್ಟಣ, ಹಿಮಪ್ರವಾಹಗಳು, ಆಗ್ರಾ ಪಟ್ಟಣದ ಕೋಟೆ, ಯಮುನಾ ನದಿಯ ದೂರದಲ್ಲಿ ತೋರುತ್ತಿರುವ ತಾಜ್‌ಮಹಲ್ ಗೋರಿಯೂ, ತಾಜ್ ಮಹಲಿನ ಕಲ್ಲಿನಲ್ಲಿ ಕೆತ್ತಿರುವ ಪರದೆ, ಅಕ್ಬರನ ಅರಮನೆ, ಆಗ್ರಾ ಪಟ್ಟಣದ ಮುತ್ತಿನ ಮಸೀದಿ, ಫತೇಪುರ್ ಸಿಕ್ರಿಯಲ್ಲಿರುವ ಪಾಂಚ್ ಮಹಾಲ್ ಅರಮನೆ, ರಜಪೂತರು, ಭರತಪುರದ ಕೋಟೆ, ಅಲ್ವಾರಿನಲ್ಲಿ ಮಹಾರಾಜ ಭಕ್ತಾವಾರ್ ಸಿಂಗರ ಗೋರಿ, ದೆಹಲಿ ನಗರದ ದೊಡ್ಡ ಮಸೀದಿ, ಪುರಾತನ ದೆಹಲಿಯ ಬಾಗಿಲು, ರಾಜ ಧವನು ಸ್ಥಾಪಿಸಿದ ಕಬ್ಬಿಣದ ಸ್ತಂಭ, ನಾದರ್ ಷಹಾನು ದೆಹಲಿ ನಗರದಲ್ಲಿ ಪ್ರಜಾ ಸಂಹಾರವನ್ನು ನೋಡುತ್ತಿರುವದು, ದೆಹಲಿಯ ಬಳಿಯಲ್ಲಿರುವ ಕುಟುಬ್ ಮಿನಾರ್, ಚಾಂದ್ನಿ ಚೌಕವೆಂಬ ಬೀದಿ, ಸಿಂಲಾಕ್ಕೆ ಹೋಗುವ ದಾರಿ, ಸಿಮ್ಲಾ, ಅಮೃತಸರದ ಸುವರ್ಣಾಲಯವು, ಲಾಹೋರಿನಲ್ಲಿರುವ ರಣಜಿತಸಿಂಗನ ಗೋರಿ, ಲಾಹೋರ್ ಪಟ್ಟಣ, ಈ ಮುಂತಾದ ಅನೇಕ ರಮಣೀಯವಾದ ಸ್ಥಳಗಳ ಚಿತ್ರಗಳು ಈ ಪುಸ್ತಕದಲ್ಲಿ ಅಡಗಿವೆ. ಅವುಗಳನ್ನೆಲ್ಲಾ ವಿವರಿಸಲು ಸ್ಥಳವಿಲ್ಲ.

ಪ್ರಾಯೆಂದು ಅಂಕದ ವಿವರಣೆಯೂ ಬಹು ಪರಿಷ್ಕಾರವಾಗಿದೆ. ದಕ್ಷಿಣ ದೇಶದಲ್ಲಿರುವ ಅನೇಕ ಪ್ರಸಿದ್ಧ ಸ್ಥಳಗಳ ಚಿತ್ರಗಳೂ, ಅವುಗಳ ವಿವರಣೆಗಳೂ ಇದರಲ್ಲಿವೆ. ಪುಸ್ತಕವು ಬಾರಿಯಾಗಿದೆ. ಪುಸ್ತಕದ ಅಚ್ಚು ಮುಸ್ತೈಂತು ಬಹು ಸುಂದರವಾಗಿವೆ. ಇದರ ಕ್ರಯ ಎಂಟೇ ಆಣೆ, ವಿ. ಪಿ. ಸಿ. ಮಾಸೂಲ್ ಇನ್ನೊಂದು ಆಣೆಯಾಗುವದು. ಪುಸ್ತಕಗಳು ಬಹಳ ಶೀಘ್ರದಲ್ಲಿ ಮಾರಾಟವಾಗುತ್ತಿದೆಯಾದ್ದರಿಂದ ತಾವುಗಳೆಲ್ಲ ಕೆಳಗೆ ಕಂಡ ವಿಳಾಸಕ್ಕೆ ಬೇಗನೆ ಬರೆದು ತರಿಸಿಕೊಳ್ಳಬೇಕು.

ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪೋ,
ಮೈಸೂರು. 18 1

CHAMBERLAIN'S COLIC, CHOLERA AND DIARRHOEA REMEDY.

ಚೇಂಬರ್ಲೇನ್ ಯವರು ಹೊಟ್ಟೆಶೂಲೆ, ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು

1-22



ಹೊಟ್ಟೆಯ ನೋವು, ಬರೀ ಭೇದಿಯಾಗುವುದು, ಆಮಶಂಕೆ, ವಾಂತಿಭೇದಿ ಉಪದ್ರ, ಕಾಲರಾ, ಹೊಟ್ಟೆಶೂಲೆ, ಹೊಟ್ಟೆಯ ನೋವು ತರದ ರೋಗಗಳು — ಈ ರೋಗಗಳನ್ನೆಲ್ಲಾ ವಾಸಿಮಾಡುತ್ತದೆ. ಈ ಪರಮಾಷಧವು ... ಜನರನ್ನು ... ಉಳಿಸಿರುವಷ್ಟು ... ಬಾಧೆಯನ್ನು ನಿವಾರಿಸೋ ... ಔಷಧವೂ ಮಾಡಲಾರದು.

... ಹೊಟ್ಟೆಶೂಲೆ — ಒಂದು ... ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯ ... ಎಲ್ಲಾ ತಂದಿ ... ಸಲ್ಲಿಸಿ ... ಈ ಔಷಧದಿಂದ ... ಇದರ ಗುಣ

ಇದು ... ತಯಾರಾದ ಔಷಧ

ಕೈಯಿಂದ ಸ್ವಲ್ಪವೂ ಮುಟ್ಟದೆ

ಇದು ಎಲ್ಲೆಲ್ಲಿಯೂ ಬಿಕರಿಯಾಗುವುದು. ... ದ ಪಾಯಿ ... ಬೇಡಿ

ಇಂದಿನಿಂದ ಜುಲೈ ತಿಂಗಳ್ ಅಂತ್ಯದ ವರೆಗೆ.

ಹಾಸನದ ಟೋಪಿಗಳು.

51

ಒಳ್ಳೇ ಸಮಯ, ಬಿಡಬೇಡಿರಿ

ಈ ಟೋಪಿಗಳಿಗೆ ಮೇಲಿದ್ದ ಕ್ರಯ ಇರ್ಜ ... ರೂಪಾಯಿ.

ಈಗ ... ಕ್ರಯ ... ರೂಪಾಯಿ ...

ವಿ. ಪಿ. ... ಕಳುಹಿಸುತ್ತೇವೆ.

ವಿಳಾಸ:—ಸಿ. ರಘುನಾಥಕಾಮತ್

ಉಲ್ಲನ್ ಮರ್ಚಂಟ್, ಬೋಳಾರ, ಮಂಗಳೂರು.

SCHOOL BOOKS! SCHOOL BOOKS!!

56 1

	Rs	A	P
New English Readers Primer I	0	2	0
Primer II	0	2	[illegible]
New English First Reader	0	1	0
Second	0	[illegible]	0
Third	0	[illegible]	0
Fourth	0	10	0
Fifth	0	12	0
Sixth	0	12	0
Primer of English Grammar	0	[illegible]	
Manual of English Grammar	0	8	0
The Way to Health	0	2	0
Arithmetical Primer	0	2	[illegible]
Primer of Geography	0	5	0
Manual of Geography	0	11	0
Chemistry Notes by Romilly H. Ingram	1	0	0

Apply to

THE MANAGER,
C. L. S. Book Depot
Mysore City

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಒರೆಯ ತರಿಸಿಕೊಳ್ಳಿ.

11 18

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೀಳಾದಗ್ಗು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ.—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು. (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೆದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಸೀದಾ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದು ಚನ್ನಾಗಿಲ್ಲದ್ದು ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ.

ಸಾದ, ಕೆಂಪು, ಕಪ್ಪು, ಬಿಳಿ, ಕಾಫಿ ಟೋಪಿಗಳು ೧ ರೂ. ೪ ಆ., ೧ ರೂ. ೬ ಆ.

ರೇಷ್ಮೆ ಚುಕ್ಕೆಯುಳ್ಳ ಟೋಪಿಗಳು ೧ ರೂ. ೪ ಆ., ೨ ರೂ.

ಜರದ ಟೋಪಿಗಳು ೨ ರೂ. ... ಆ., ೧ ರೂ. ೪ ಆ., ೧ ರೂ. ೬ ಆ.

ಉಸುಕಿನ ಟೋಪಿಗಳು ೧ ರೂ. ೪ ಆ., ೧ ರೂ. ೬ ಆ.

ಕೂಸುಗಳ ಟೋಪಿ, ಸೂಟಿನ ಮೇಜೋಡು, ಅರ್ಧ ಮೇಜೋಡು ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳಿಕೊಂಡವರಿಗೆ ಕೊಟ್ಟು ಕಳುಹಿಸುವೆವು.

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ.

ನಿಮಗೆ ನೋವು ಇವೆಯೋ?

ಸಾಗಾದರೆ "ಜ್ವಲೆಟ್ ಯವರ ಮ್ಯಾಜಿಕ್ ಬಾಂ" ಸ್ವಲ್ಪ ಉಪಯೋಗಿಸಬಾರದು? ಅತಿ ಶ್ರೇಯಸ್ಕರವಾದ ... ಈಗಿನ ಕಾಲದಲ್ಲಿ ಕಂಡು ಹಿಡಿದ ದೊಡ್ಡ ನಕ್ಷತ್ರವು!

ಈ ರೀತಿ ಔಷಧವನ್ನು ... ಮಾಂಸ ಸಂಬಂಧವಾದ ... ನೋವು, ಕೀಲುಗಳ ... ನೋವು, ... ತಲೆನೋವು, ... ಕೀಲುಗಳು ... ಈ ರೀತಿಯ ... ಗುಣಪಡಿಸುವದು.

ಕ್ರಯ ... ಆಣೆ, ... ಎಲ್ಲಾ ... ವಾಪುಗಳಲ್ಲಿ ದೊರೆಯುವದು.

ನಮ್ಮ ವಿಳಾಸ:—ಎಫ್. ಡಬ್ಲಿಯು. ಆರ್ಟ್,
ಸಿಮೆಟ್ರಿ ರೋಡ್, ವೇಪೇರಿ, ಮದರಾಸ್.

ವ್ಯವಹಾರ ನಿರ್ಣಯ

ನೇ ... ಕನ್ನಡ ಲಾ ಪುಸ್ತಕವು

ಲಾ ತಿಳಿದವರಿಂದಲೂ, ತಿಳಿಯದವರಿಂದಲೂ ಇದುವರೆಗೆ ಬರೆಯಲ್ಪಟ್ಟಿರುವ ಈ ತೆರದ ಪುಸ್ತಕಗಳನ್ನೆಲ್ಲ ನೋಡಿ ಅವೆಲ್ಲಕ್ಕಿಂತಲೂ ಹೆಚ್ಚು ಉಪಯೋಗವನ್ನು ಇದೊಂದು ಪುಸ್ತಕದಿಂದುಂಟುಮಾಡಬೇಕೆಂದು ಈ ದೊಡ್ಡ ಗ್ರಂಥವು ಹೊಸದಾಗಿ ಬರೆಯಲ್ಪಟ್ಟಿದೆ. ಇದರಲ್ಲಿ ... ಆಕ್ಟ್‌ಗಳು, ... ಹಿಂದೂ, ಮಹಮ್ಮದೀಯ ಲಾಗಳು, ... ಕೋರ್ಟು ಹೈಕೋರ್ಟುಗಳ ತೀರ್ಮಾನಗಳು, ... ಪ್ರೊಸೀಡಿಂಗ್ಸ್‌ಗಳು, ಸಕಲ ವಿಧ ವ್ಯವಹಾರಗಳು, ಕ್ರಯ ಆಧಾರ ದಾನ ವಿಲ್ಲು ಮೊದಲಾದ ... ತೆರದ ದಸ್ತಾವೇಜುಗಳ ನಮೂನೆಗಳು, ... ಸಂಬಂಧದ ಲಾ ವಿಧಿಗಳು, ಸಿವಿಲ್ ಕ್ರಿಮಿನಲ್ ... ರೆವಿನ್ಯೂ ಸಂಬಂಧದ ವ್ಯಾಜ್ಯಗಳು, ... ತೆರದ ಅರ್ಜಿಗಳು, ... ಸಂಬಂಧದ ಲಾ ವಿಧಿಗಳು, ಇವೆಲ್ಲವೂ ಅಡಕವಾಗಿವೆ.

ಪುಸ್ತಕ ದೊಡ್ಡದು ಪುಟಗಳು ಒಟ್ಟು ೬೬೬	ಬೆಲೆ ಕಡಮೆ ಅಂಚೆ ಹಾಸಲು ಸೇರಿ ರೂ. ೧—೪—೦

ಗ್ರಂಥಕರ್ತರು	ಎಂ. ಮಲ್ಲಾರಾಧ್ಯರು, ... ನೆ ಗ್ರೇಡ್ ಪ್ಲೀಡರ್, ಶ್ರೀರಾಮಪೇಟೆ ಮೈಸೂರು	ಇದೇ ವಿಳಾಸ

ಒಕ್ಕಲಿಗರ ಪತ್ರಿಕೆ.

39—7

ಒಕ್ಕಲಿಗರ ಪತ್ರಿಕೆಯು ಬೆಂಗಳೂರಿನಲ್ಲಿ ಪ್ರತಿ ಬುಧವಾರ ಒಕ್ಕಲಿಗರ ಸಂಘದಿಂದ ಪ್ರಕಟಿಸಲ್ಪಡುತ್ತಿರುವುದು. ಇದು ಬಿ. ಎ. ಮತ್ತು ಬಿ. ಎಲ್. ಪರೀಕ್ಷೆಗಳನ್ನು ಮಾಡಿರುವ ವಿದ್ಯಾವಂತರಾದ ಒಕ್ಕಲಿಗರಿಂದ ಸುಲಭವಾದ ಒಳ್ಳೇ ಭಾಷೆಯಲ್ಲಿ ಬರೆಯಲ್ಪಟ್ಟು, ಅಂದವಾಗಿ ಮುದ್ರಿಸಲ್ಪಡುತ್ತಿದೆ.

ಈ ಪತ್ರಿಕೆಯಲ್ಲಿ ಸಂಸ್ಥಾನದ ಆಡಳಿತಗಳು, ಲೋಕವಾರ್ತೆಗಳು, ವ್ಯಾಪಾರ, ಕಸುಬು, ವ್ಯವಸಾಯ ಮುಂತಾದ ವಿಷಯಗಳನ್ನು ಕುರಿತು ದೀರ್ಘಾಲೋಚನೆ ಮಾಡಿ ಉಪನ್ಯಾಸಗಳು ಬರೆಯಲ್ಪಡುವವು.

ಚಂದಾ ಬೆಂಗಳೂರು ಮತ್ತು ಮೈಸೂರು ಪಟ್ಟಣಗಳಲ್ಲಿಯೂ ಮತ್ತು ನಮ್ಮ ಏಜಂಟರುಗಳಿರುವ ಎಲ್ಲಾ ಸ್ಥಳಗಳಲ್ಲಿಯೂ ವರ್ಷ ... ರೂಪಾಯಿ. ತಮ್ಮ ಹೆಸರಿಗೆ ಸೀದಾ ತರಿಸಿಕೊಳ್ಳುವವರಿಗೆ ಅಂಚೆ ಹಾಸಲು ಸೇರಿ ೧ ರೂ. ... ಆಣೆ ಬೀಳುತ್ತದೆ.

ಈ ಪತ್ರಿಕೆಯು ಪಟ್ಟಣ, ಊರು ಗ್ರಾಮಾಂತರಗಳಲ್ಲಿ ಬಹಳ ಪ್ರಚಾರಕ್ಕೆ ಬರುತ್ತಾ ಇದ್ದುದರಿಂದ ಇದರಲ್ಲಿ ಇಸ್ತಿಹಾರುಗಳು ಪ್ರಕಟಿಸಿದರೆ ವ್ಯಾಪಾರಸ್ಥರಿಗೆ ಬಹಳ ಲಾಭ ಉಂಟು. ದರಗಳನ್ನು ಈ ಕೆಳಗೆ ಕಂಡ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರು, ಒಕ್ಕಲಿಗರ ಪತ್ರಿಕೆ,
(ಒಕ್ಕಲಿಗರ ಸಂಘ) ೩೩. ಅರಳೇಪೇಟೆ,
ಬೆಂಗಳೂರು ಸಿಟಿ

ವೃತ್ತಾಂತ ಪತ್ರಿಕೆ.

[illegible]

ಹಿಂದುಸ್ಥಾನದ ರಾಜ್ಯಭಾರವು

ಈಚೆಗೆ ಕೆಲವು ವಿದ್ಯಾವಂತರು ಸಭಿಕ ಸಭೆಗಳಲ್ಲಿ ಉಪನ್ಯಾಸ ಮಾಡುವಾಗಲೂ ವರ್ತಮಾನ ಪತ್ರಿಕೆಗಳಲ್ಲಿ ಇಂಗ್ಲೀಷರಿಗೆ ಹಿಂದುಸ್ಥಾನದ ರಾಜ್ಯಭಾರವನ್ನು ಸಂಪೂರ್ಣವಾಗಿ ತಪ್ಪಿಸಿಬಿಡಬೇಕೆಂತಲೂ ಆ ಭಾರವನ್ನು ಹಿಂದುಸ್ಥಾನದವರೇ ವಹಿಸಿಕೊಳ್ಳಬೇಕೆಂತಲೂ ಹೇಳಿ ಬರೆಯಲಾರಂಭಿಸಿರುತ್ತಾರೆ. ಇಂಥಾ ಸ್ವರಾಜ್ಯಾಧಿಕಾರಕ್ಕೆ ಈಗ ಹಿಂದುಸ್ಥಾನದವರು ಯೋಗ್ಯತಾಸಿದ್ಧಿಯನ್ನು ಪಡೆದಿರುತ್ತಾರೆಯೇ ಎಂಬ ಪ್ರಶ್ನೆಯು ಸಹಜವಾಗಿ ಹುಟ್ಟುವುದಾದ್ದರಿಂದ ಅದನ್ನು ಕುರಿತು ಸ್ವಲ್ಪ ಯೋಚಿಸಿ ನೋಡತಕ್ಕದ್ದಾಗಿದೆ. ಈಗ ಈ ಪ್ರಶ್ನೆಯನ್ನು ಕೇಳುವವರೆಲ್ಲಾ ಸ್ವತಂತ್ರಾಧಿಕಾರವನ್ನು ಚಲಾಯಿಸಲು ಸ್ವದೇಶಿಗಳಲ್ಲಿ ಅಂಥಾ ಶಕ್ತಿ ಸಾಮರ್ಥ್ಯಗಳು ಇನ್ನೂ ಉಂಟಾಗಿಲ್ಲವೆಂದು ಧಾರಾಳವಾಗಿ ಹೇಳುತ್ತಾರೆನ್ನುವುದಕ್ಕೆ ಸಂಶಯವಿಲ್ಲ. ಏಕೆಂದರೆ ಈಗ ಇಂಗ್ಲೀಷರು ಈ ರಾಷ್ಟ್ರವನ್ನು ಬಿಟ್ಟು ಹೋಗುವ ಪಕ್ಷದಲ್ಲಿ ಹಿಂದುಸ್ಥಾನದೊಳಗೆ ಗಲಭೆಯುಂಟಾದೀತು. ನಾನಾ ಪಂಗಡಗಳು ಹುಟ್ಟಿ ನೆಮ್ಮದಿಗೆ ಭಂಗವುಂಟಾಗಿ ಹಿಂದೂಗಳಿಗೂ ಮಹಮ್ಮದೀಯರಿಗೂ, ರಾಜರಿಗೂ ರಾಜರಿಗೂ ಜಾತಿ ಜಾತಿಗೂ ವೈಮನಸ್ಯಗಳೂ ಕಲಿದಾಟಗಳೂ ಹುಟ್ಟುವವು. ಈಗ ಆದರೋ ಇಂಗ್ಲೀಷ್ ಗವರ್ನಮೆಂಟಿನವರು ತಮ್ಮ ವರ್ಣಿಸಿದ ನಿಷ್ಪಕ್ಷಪಾತತೆಯಿಂದಲೂ ಧರ್ಮಪ್ರವರ್ತನೆಯಿಂದಲೂ ಈ ರಾಷ್ಟ್ರದಲ್ಲಿ ಪ್ರಜಾ ನೆಮ್ಮದಿಯನ್ನು ಕಾಪಾಡಿಕೊಂಡು ಅದರ ಐಶ್ವರ್ಯವನ್ನು ಅಭಿವೃದ್ಧಿಪಡಿಸುತ್ತಿದ್ದಾರೆ.

ಇದಲ್ಲದೆ ಇಂಗ್ಲೀಷ್ ಪ್ರಭುತ್ವವು ಈ ರಾಷ್ಟ್ರವನ್ನು ಬಿಟ್ಟು ಹೋದರೆ ಪ್ರಜೆಗಳು ಈಗ ದಿನ ದಿನ ಅಭಿವೃದ್ಧಿಗೆ ಬರುತ್ತಿರುವುದಕ್ಕೆ ಅಡ್ಡಿ ಬಂದೀತು. ಜನರ ತಿಳುವಳಿಕೆಯೂ ಬುದ್ಧಿ ಕುಶಲತೆಯೂ ಅವರ ನಾಗರಿಕತ್ವವೂ ಕ್ಷೀಣಿಸಿ ಹೋಗುತ್ತವೆ. ಇಂಗ್ಲೀಷ್ ಗವರ್ನಮೆಂಟಿನವರಾದರೋ ಸಕಲ ಕೋಮುಗಳವರನ್ನೂ ವಿದ್ಯಾವಂತರನ್ನಾಗಿ ಮಾಡುವುದು ತಮ್ಮ ಕರ್ತವ್ಯವೆಂದು ತಿಳಿದವರಾಗಿ ವಿದ್ಯೆ ಕಲಿಸುವುದಕ್ಕೆ ಮಾತ್ರವೇ ಅಲ್ಲದೆ ಸಕಲರಿಗೂ ಕೈಗಾರಿಕೆಯನ್ನು ಕಲಿಸಿಕೊಟ್ಟು ಕಸಬುಗಳನ್ನು ಅಭಿವೃದ್ಧಿಪಡಿಸಬೇಕೆಂತಲೂ ಪ್ರಯಾಸಪಡುತ್ತಿದ್ದಾರೆ. ಹಿಂದುಸ್ಥಾನದ ಶ್ರೇಯೋಭಿವೃದ್ಧಿಯೇ ಗವರ್ನಮೆಂಟಿನವರ ಮುಖ್ಯ ಗುರಿಯಾಗಿರುವುದು. ಹೀಗಿರುವಲ್ಲಿ ಈಗ ಇಂಗ್ಲೀಷ್ ಗವರ್ನಮೆಂಟಿನವರು ಈ ರಾಷ್ಟ್ರವನ್ನು ಬಿಟ್ಟು ಹೋದಪಕ್ಷಕ್ಕೆ ಅದರ ಅಭಿವೃದ್ಧಿಗೆ ತಡೆಯುಂಟಾಗುವುದೆಂದು ನಾವು ನಂಬುತ್ತೇವೆ. ಈಗೀಗ ವಿದ್ಯಾವಂತರಾಗಿ ಮುಂದಕ್ಕೆ ಬರುತ್ತಿರುವ ಕೀಳು ಜಾತಿಯವರು ಯಥಾಪ್ರಕಾರ ಪೂರ್ವದಂತೆಯೇ ಕಷ್ಟನಷ್ಟಗಳಿಗೆ ಗುರಿಯಾಗಿ ತಲೆಯೆತ್ತದಂತೆ ಆಗಿಹೋಗುವುದು.

ಹಾಗಾದರೆ ಇನ್ನೆಂದಿಗೆ ಈ ರಾಷ್ಟ್ರದವರಿಗೆ ಸ್ವತಂತ್ರಾಧಿಕಾರ ದೊರಕುವುದು ಎಂದು ಕೇಳಬಹುದು. ಈ ಭಾಗದಲ್ಲಿ ನಮ್ಮ ಅಭಿಪ್ರಾಯವೇನೆಂದರೆ ಹಿಂದುಸ್ಥಾನದ ಪ್ರಜೆಗಳು ವಿದ್ಯಾವಂತರಾಗಿ ತಮ್ಮ ಸಮಸ್ತ ಉದ್ದೇಶಗಳಲ್ಲಿ ಐಕಮತ್ಯವನ್ನುಳ್ಳವರಾಗಬೇಕು. ಜನರು ಜಾತಿಮತ ಕುಲಗೋತ್ರಗಳ ತಾರತಮ್ಯ ನೋಡದೆ ಸಕಲರನ್ನೂ ನಿಷ್ಪಕ್ಷಪಾತತೆಯಿಂದಲೂ ಧರ್ಮದಿಂದಲೂ ಕಾಣುವಂತಾಗಬೇಕು. ಅವರಲ್ಲಿ ದಿನ ಕ್ರಮೇಣ ತಾವೂ ತಮ್ಮ ರಾಷ್ಟ್ರವೂ ಅಭಿವೃದ್ಧಿಗೆ ಬರಬೇಕೆಂಬ ನಿರ್ದುಷ್ಟವಾದ ಮತ್ತು ಕುತೂಹಲಯುಕ್ತವಾದ ಅಭಿಲಾಷೆಯು ಸ್ಥಿರವಾಗಿ ನೆಲೆಗೊಳ್ಳಬೇಕಾಗಿರುತ್ತದೆ. ಆಗ್ಗೆ ಅವರು ಸ್ವತಂತ್ರಾಧಿಕಾರವನ್ನು ಪಡೆದು ಅನುಭೋಗಿಸಲು ಸಮರ್ಥರೆನಿಸಿಕೊಳ್ಳುವರು. ಇಂಥಾ ಸ್ಥಿತಿಯನ್ನು ಹಿಂದುಸ್ಥಾನವು ಹೊಂದಬೇಕಾದಲ್ಲಿ ಇನ್ನೂ ಬಹಳ ಕಾಲವಾಗಬೇಕೆನ್ನುವುದಕ್ಕೆ ಸಂಶಯ ತೋರುವುದಿಲ್ಲ.

ಇಂಗ್ಲೀಷ್ ಗವರ್ನಮೆಂಟಿನವರು ಈ ರಾಷ್ಟ್ರದಲ್ಲಿ ನೆಮ್ಮದಿಯನ್ನು ಕಾಪಾಡಿ ಪ್ರಜೆಗಳ ಬುದ್ಧಿಶಕ್ತಿಯನ್ನು ವಿಕಸಿಸಿ ಐಶ್ವರ್ಯಾಭಿವೃದ್ಧಿಯನ್ನು ಮಾಡುವುದರಲ್ಲಿ ಮಾತ್ರವೇ ಮಗ್ನರಾಗಿದ್ದಾರೆಂದು ಹೇಳಲಾಗದು. ಇಲ್ಲಿನ ಪ್ರಜೆಗಳನ್ನು ತಮ್ಮ ದೇಶದ ಕಾರುಬಾರಿಗಳನ್ನು ತಾವೇ ಮಾಡಿಕೊಳ್ಳುವುದಕ್ಕೂ ಸಮರ್ಥರಾಗುವಂತೆ ತರಬೇತು ಮಾಡುತ್ತಿರುವರು. ಮ್ಯುನಿಸಿಪಾಲಿಟಿಗಳಲ್ಲೂ ಲೋಕಲ್ ಬೋರ್ಡುಗಳಲ್ಲೂ ಲೆಜಿಸ್ಲೆಟಿವ್ (ಮಂತ್ರಾಲೋಚನಾ) ಸಭೆಗಳಲ್ಲೂ ದೇಶೀಯ ವಿದ್ಯಾವಂತರನ್ನು ಮೆಂಬರುಗಳಾಗಿ ನೇಮಕಮಾಡಿ, ಪ್ರಜಾಪಾಲನಾಕಾರ್ಯದಲ್ಲಿ ಜನರಿಗೆ ಆಸಕ್ತಿಯೂ ಕುತೂಹಲವೂ ಹೆಚ್ಚಿ ಅವರ ಅಭಿವೃದ್ಧಿಗೆ ಬರುವಂತೆ ಮಾಡುತ್ತಿದ್ದಾರೆ. ಈ ಸಂದರ್ಭದಲ್ಲಿ ಇನ್ನೊಂದು ಸಂತೋಷಕರವಾದ ವರ್ತಮಾನವನ್ನು ಸೂಚಿಸುವೆವು. ಪ್ರಸಿದ್ಧರಾಜತಂತ್ರಜ್ಞರಾದ ಇಂಡಿಯಾ ಸ್ಟೇಟ್ ಸೆಕ್ರೆಟರಿ ಮಿ। ಜಾನ್ ಮಾರ್ಲಿಯವರು ಹಿಂದುಸ್ಥಾನದ ಪ್ರಜೆಗಳಿಗೆ ಈಗ್ಗಿಂತಲೂ ಸ್ವಲ್ಪ ಹೆಚ್ಚಾದ ಸ್ವತಂತ್ರಾಧಿಕಾರವನ್ನು ವಹಿಸಿಕೊಡುವ ಭಾಗದಲ್ಲಿ ಯೋಚನೆಮಾಡಿರುವುದಾಗಿಯೂ ಅದನ್ನು ಈ ವಾರ ವಿಲಾಯತಿಯ ಪಾರ್ಲಿಮೆಂಟ್ ಸಭೆ ಮನೆಯಲ್ಲಿ ತಿಳಿಸಿ ಚರ್ಚೆಗೆ ತರುವುದಾಗಿಯೂ ಹೇಳಿರುತ್ತಾರೆ.

ಮಠಾಧಿಕಾರಿಗಳೂ ನವೀನ ನಾಗರೀಕತೆಯೂ.

ಗುರುಭಕ್ತಿಯೂ ರಾಜಭಕ್ತಿಯೂ ಭೂಲೋಕದ ನಾಗರಿಕ ಜನಗಳಲ್ಲಿ ಇರುವುದು ಸಾಧಾರಣವಾಗಿದೆಯಷ್ಟೆ. ಲೌಕಿಕ ಸಂಬಂಧವಾದ ರಾಜ್ಯಾಡಳಿತ ಕಾರ್ಯಗಳಲ್ಲಿ ರಾಜನಿಗೆ ಸಲ್ಲತಕ್ಕ ಮರ್ಯಾದೆಗಳನ್ನು ರಾಜನಿಗೆ ಸಲ್ಲಿಸುವುದೂ ಆತ್ಮಿಕ ಸಂಬಂಧವಾದ ಕಾರ್ಯಗಳಲ್ಲಿ ಗುರುವಿಗೆ ಸಲ್ಲತಕ್ಕ ಗುರುಭಕ್ತಿಯನ್ನು ತೋರಿಸುವುದೂ ಜನರ ಕರ್ತವ್ಯವಾಗಿರುತ್ತದೆ. ಬ್ರಿಟಿಷ್ ಪ್ರಭುತ್ವದ ಜೊತೆಯಲ್ಲಿ ಆಂಗ್ಲೇಯ ವಿದ್ಯಾಭ್ಯಾಸವೂ ಹಾಸು ಹೊಕ್ಕಿಟ್ಟು ನವೀನನಾಗರೀಕತೆಯೂ ಇವೆಲ್ಲವುಗಳಿಗಿಂತ ಶ್ರೇಷ್ಠವಾದ ಕ್ರೈಸ್ತಮತವೂ ಗರಿಕೆಗಳಿದ್ದಂತಾ ಬರುವದನ್ನು ಜನರು ನೋಡಿ ತಾವು ಅನೇಕ ಶತಮಾನಗಳಿಂದ ಆಚರಿಸುತ್ತಾ ಬಂದಿರುವ ಪದ್ಧತಿಗಳನ್ನು ಚರ್ಚಿಸಿ ಯೋಗ್ಯವಾದವುಗಳನ್ನು ಅನುಸರಿಸುವದಕ್ಕೂ ದೇಶದೇಳಿಗೆಗೆ ಕುಂದಕವಾದವುಗಳನ್ನು ತ್ಯಜಿಸುವದಕ್ಕೂ ಪ್ರಯತ್ನಿಸುತ್ತಲಿರುವರು.

ಹಿಂದೂ ದೇಶದಲ್ಲಿ ಬಹು ಮಟ್ಟಿಗೆ ಲೌಕಿಕ ಪದ್ಧತಿಗಳು ಮತಸಂಪ್ರದಾಯಗಳೊಳಗೆ ಸೇರಿಕೊಂಡಿವೆ. ಒಂದನ್ನು ನವೀನನಾಗರೀಕತೆಗನುಸಾರವಾಗಿ ಕ್ರಮಪಡಿಸಬೇಕಾದರೆ ಮತ್ತೊಂದನ್ನು ಸಹ ಕ್ರಮಪಡಿಸಿಯೇ ತೀರಬೇಕು. ಹೀಗಿಲ್ಲದಿದ್ದರೆ ಸಂಘಪರಿಷ್ಕರಣವಾಗಲಿ ಮತಪರಿಷ್ಕರಣವಾಗಲಿ ಆಗದು. [illegible] ಮಠಾಧಿಕಾರಿಗಳು ಈ ವಿಷಯದಲ್ಲಿ ಬಹು ಎಚ್ಚರಿಕೆಯ [illegible] ನವೀನನಾಗರೀಕತೆಯ [illegible] ಆಚರಣೆಯ [illegible] ಕೆಲವು ಪದ್ಧತಿಗಳನ್ನು [illegible] ಆಕ್ಷೇಪಿಸುತ್ತದೆ. ಗುರುಗಳ ಮಠಗಳಲ್ಲಿ [illegible] ಸಂಬಂಧಪಟ್ಟ ದ್ರವ್ಯವನ್ನು [illegible] ವಿನಿಯೋಗಿಸುವುದೂ, [illegible] ಜನಸಮುದಾಯಕ್ಕೆ ಪ್ರಯೋಜನವಿಲ್ಲದಂತೆ ತಪ್ಪಿಸಿ ಸಲ್ಲಿ [illegible] ಇವೇ ಮೊದಲಾದವುಗಳನ್ನು [illegible] ದೀರ್ಘವಾಗಿ ಯೋಚಿಸಿ ಆಕ್ಷೇಪಿಸುತ್ತಾರೆ.

ಮಠಾಧಿಪತಿಗಳು [illegible] ಸೇರಿಕೊಂಡು ಅವರ ಯೋಗ್ಯವಾದ ಪ್ರಯತ್ನಗಳಿಗೆಲ್ಲಾ ಸಹಾಯ ಮಾಡುವುದು ಅವರ ಕರ್ತವ್ಯವಾಗಿರುತ್ತದೆ. ಜನರು ವಿದ್ಯೆಯಲ್ಲಿಯೂ ಕೈಗಾರಿಕೆಯಲ್ಲಿಯೂ ಅಭಿವೃದ್ಧಿಯನ್ನು ಹೊಂದುವದಕ್ಕೆ ವಿಶೇಷವಾದ ಪ್ರಯತ್ನಗಳನ್ನು ಮಾಡುತ್ತಿರುವಲ್ಲಿ ಗುರುಗಳು ಕೂಡ ತಮ್ಮ ಬೋಧನೆಯಿಂದಲೂ ಧನದಿಂದಲೂ ಅವರಿಗೆ ಸಹಾಯ ಮಾಡಬೇಕಾಗಿರುತ್ತದೆ. [illegible] ಯೇಸುಕ್ರಿಸ್ತನ ಚರಿತ್ರೆಯನ್ನು ಓದಿದರೆ ಗುರು ಕರ್ತವ್ಯಗಳೇನೆಂಬುದು ಬಹು ಸ್ಪಷ್ಟವಾಗಿ ಗೊತ್ತಾಗುವದು.

ಒಳದೇಶದ ವೃತ್ತಾಂತಗಳು.

ದಿವಾನ್ ಮಿ॥ ವಿ ಪಿ ಮಾಧವರಾಯರು ಕಳೆದ ಗುರುವಾರ ರಾತ್ರಿ ಬೆಂಗಳೂರಿಂದ ನೀಲಗಿರಿಗೆ ಪ್ರಯಾಣಮಾಡಿರುತ್ತಾರೆ.

***

ಬೆಂಗಳೂರು ಪಟ್ಟಣದ ಮ್ಯುನಿಸಿಪಾಲಿಟಿಯವರು ವಸೂಲ್ಮಾಡುತ್ತಿರುವ ನಾಯಿಗಳ ತೆರಿಗೆಯನ್ನು ವಜಾಮಾಡಬಹುದೇ ಎಂಬ ಸಂಗತಿಯು ಈ ದಿನ ನಡೆಯುವ ಮೀಟಿಂಗಿನಲ್ಲಿ ಇತ್ಯರ್ಥವಾಗುವುದಾಗಿದೆ.

***

[illegible] ಅರಮನೆಯ ಗೃಹಪ್ರವೇಶದ ಸಂಭ್ರಮವನ್ನು ಈ ವಾರದ ಅಂತ್ಯಭಾಗದಲ್ಲಿ ನಡಿಸುವುದಕ್ಕೆ ಏರ್ಪಾಡಾಗುತ್ತಿರುವಂತೆ ವರ್ತಮಾನವಿದೆ. ಶ್ರೀಮನ್ ಮಹಾರಾಜರವರು ರಾಜಧಾನಿಗೆ ದಯಮಾಡಿದ ವೇಳೆ ಇದು ಇತ್ಯರ್ಥವಾಗುವುದು.

***

ಕಳೆದ ಭಾನುವಾರ ರಾತ್ರಿ ರಾಜಧಾನಿಯಲ್ಲಿ ಸ್ವಲ್ಪ ಮಳೆ ಸುರಿಯಿತು. ಅದಕ್ಕೆ [illegible] ಇಲ್ಲಿನ ರೈಲ್ ಸ್ಟೇಷನ್ ಬಳಿ ಒಂದು ಮರಕ್ಕೆ ಬಡಿಯಿತು. ಸೋಮವಾರ ಸಂಜೆ ಕತ್ತಲಲ್ಲಿ ಪೂರಾ ಮಳೆ ಹಿಡಿದು ರಾತ್ರಿಯೆಲ್ಲಾ ಸುರಿಯಿತು. ಬೆಂಗಳೂರಿನ ಮೂರು [illegible] ತನಕ ಮೋಡ ಮುಚ್ಚಿಕೊಂಡಿತ್ತು. ಈಗ [illegible]

***

ಜೂನ್ ತಾ ೧ನೇ ಶನಿವಾರ ಸಾಯಂಕಾಲ ಶ್ರೀಮನ್ ಮಹಾರಾಜರವರು ನೀಲಗಿರಿಯಿಂದ ೫ ಗಂಟೆಗೆ ರಾಜಧಾನಿಯನ್ನು ತಲುಪುವರು. [illegible] ಅಂಸುಗಳೂ ಅಧಿಕಾರಿಗಳೂ ಮುಂತಾದವರು ೫॥ ಗಂಟೆಗೆ ಕಂಟೋನ್ಮೆಂಟ್ ರೈಲ್ವೆ ಸ್ಟೇಷನ್‌ನಲ್ಲಿ ಹಾಜರಾಗಿದ್ದು ಶ್ರೀಮನ್ ಮಹಾರಾಜರವರನ್ನು ಎದುರುಗೊಂಡು ಅವರಿಗೆ ಸುಸ್ವಾಗತವನ್ನು ಬಯಸುವರು.

ರಾಜಧಾನಿಯಲ್ಲಿರುವ ಸುಮಾರು ೩೦ ಮಂದಿ ಯುರೋಪ್ಯರೂ ಸರ್ದಾರರೂ ದೊರೆಸಾನಿಗಳೂ ಸೇರಿ ಇಲ್ಲಿನ ಬೊಪ್ಪನಹಳ್ಳಿ ಕೆರೆ ಕೆಳಗಿರುವ ಕೋಲ್ ಸಾಹೇಬರ ಬಂಗಲೆಯಲ್ಲಿ ಕಳೆದ ಶುಕ್ರವಾರ ಸಾಯಂಕಾಲ ಎಂಪೈರ್ ಡೇ ಎಂಬ ಸಂತೋಷೋತ್ಸವವನ್ನು ನಡಿಸಿದರು. ಅಲ್ಲಿ ಅವರ ಸುಖಭೋಜನ ಆಟಪಾಟ ವಿನೋದಾದಿಗಳನ್ನು ಆ ದಿನ ಆಚರಿಸಿದರೆಂದು ಕೇಳುತ್ತೇವೆ.

***

ಬೆಂಗಳೂರು ಬಸವನ ಗುಡಿ ಪ್ರಜೆಗಳು ಶ್ರೀ ಶೃಂಗೇರಿ ಸ್ವಾಮಿಗಳನ್ನು ಕರೆಸಿಕೊಂಡು, ಕಳೆದ ಶನಿವಾರ ಭಾನುವಾರ ಬಹು ವಿಶೇಷವಾಗಿ ಸತ್ಕಾರಮಾಡಿ, ಯೋಗ್ಯವಾದ ಕಾಣಿಕೆ ಮುಂತಾದದ್ದನ್ನು ಅವರಿಗೆ ಒಪ್ಪಿಸಿ, ತಮ್ಮ ಕೃತಜ್ಞತೆಯನ್ನು ಪ್ರಕಾಶಪಡಿಸಿದರು. ವೈಸ್ ಪ್ರೆಸಿಡೆಂಟ್ ಮಿ॥ ಎಂ ಜಿ ಕೃಷ್ಣಸ್ವಾಮಿಯವರು ಗುರುಗಳನ್ನು ತಮ್ಮ ಮನೆಗೆ ಕರೆಸಿಕೊಂಡು ಪಾದಪೂಜಾದಿಗಳನ್ನು ನಡಿಸಿದರು.

***

ರಾಜಧಾನಿಯ ಸೀತಾವಿಲಾಸ ಅಗ್ರಹಾರದ ರಸ್ತೆಯ ಮೇಲ್ಗಡೆ ಪೋಲೀಸ್ ಸ್ಟೇಷನ್ ಬಳಿ ನಾಲ್ಕು ರಸ್ತೆಗಳು ಕೂಡುವವು. ಆ ಚೌಕವು ಬಹಳ ಇಕ್ಕಟ್ಟಾಗಿದೆ. ಗಾಡಿಗಳೂ ಬೈಸಿಕಲ್ ಸವಾರರೂ ಆ ಬಳಿ ಎರಡು ಮೂರು ವೇಳೆ ಡಿಕ್ಕಿ ಹೊಡೆದು ಅಪಾಯ ಸಂಭವಿಸಿರುವಕಾರಣ ಆ ಚೌಕವನ್ನು ಮ್ಯುನಿಸಿಪಾಲಿಟಿಯವರು ವಿಸ್ತರಿಸಬೇಕೆಂತಲೂ ಪೋಲೀಸಿನವರು ಆ ಬಳಿ ಆವಾಗ ರಸ್ತೆಯನ್ನು ತಮ್ಮ ರೂಲಿಸಿಗೆ ತಪ್ಪದಂತೆ ನಡಿಸುವುದಕ್ಕೆ ತಂಬ ನಿಗಾ ಕೊಡಬೇಕಾಗಿದೆ ಎಂತಲೂ ಸೂಚಿಸುತ್ತೇವೆ.

***

ಬೆಂಗಳೂರು ಪಟ್ಟಣದ ರೈಲ್ ಸ್ಟೇಷನ್ ಬಳಿ ಇರುವ ಧರ್ಮಾಂಬುಧಿ ಕೆರೆಯನ್ನು ದೊಡ್ಡ ಉದ್ಯಾನವನವಾಗಿ ಮಾಡಿ, ಅದರೊಳಗೆ ಸ್ನಾನಕ್ಕೂ ಬಟ್ಟೆಬರೆ ಒಗೆಯುವುದಕ್ಕೂ ಅನುಕೂಲವಾಗುವಂಥಾ ಎರಡು ಕೊಳಗಳನ್ನು ಕಟ್ಟಬೇಕೆಂದು ಗವರ್ನಮೆಂಟಿನವರು ಸ್ಯಾಂಕ್ಷನ್ ಮಾಡಿದ್ದಾರೆ. ಈ ವಿಷಯವನ್ನು ಬೆಂಗಳೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲರುಗಳು ಚರ್ಚೆಮಾಡಿ, ಈ ಕಾಮಗಾರಿಯನ್ನು ಇಂಜನಿಯರ್ ಇಲಾಖೆಯವರು ಜಾಗ್ರತೆಯಾಗಿ ಒಪ್ಪಿದರೂ ಪೂರೈಸುವ ಹಾಗೆ ತಿಳಿಸಬೇಕೆಂದು ತೀರ್ಮಾನ ಮಾಡಿದರು.

***

ಕಳೆದ ಶುಕ್ರವಾರ ದಿವಸ ಬೆಂಗಳೂರು ಕಲಾಸಿಪಾಳ್ಯದಲ್ಲಿ ೨೮ ವರ್ಷ ವಯಸ್ಸಿನ ಒಬ್ಬ ಹೆಂಗಸನ್ನು ಅವಳ ಗಂಡನಾದವನು ಒಂದು ದೊಡ್ಡ ಕಲ್ಲನ್ನು ತಲೆಯ ಮೇಲೆ ಎತ್ತಿಹಾಕಿ ಕೊಂದುಬಿಟ್ಟನು. ತಲೆ ಬುರುಡೆ ಒಡೆದುಹೋಗಿ ಶವವು ರಕ್ತಮಯವಾಗಿ ಬಿದ್ದಿತ್ತು. ಪಕ್ಕದಲ್ಲಿ [illegible] ಕಲ್ಲು ಕತ್ತು [illegible] ಬೆರಳಿನ ತುಂಡೂ ಬಿದ್ದಿದ್ದವು. ಬೆರಳಿನ ತುಂಡು [illegible] ಘಾತಕನು ಅವಳನ್ನು ಕೊಲ್ಲುತ್ತಿದ್ದಾಗ ಅವಳು [illegible] ಬೆರಳನ್ನು ಕಚ್ಚಿದುದಾಗಿದೆ. [illegible] ಅಪರಾಧಿಯು ಇಟ್ಟುಕೊಂಡಿದ್ದಂತೆಯೂ ಈಗ ನಾಲ್ಕು ತಿಂಗಳ ಹಿಂದೆ ಇವನು ತಿರುಚನಾಪಳ್ಳಿಗೆ ಹೋಗಿ ವಾಪಸು ಬಂದು [illegible] ಮತ್ತೊಬ್ಬನನ್ನು ರಹಸ್ಯವಾಗಿ [illegible] ಇದರಿಂದ ಇವನಿಗೆ ಕೋಪ ಉಂಟಾಗಿ ಅವಳೊಡನೆ ಜಗಳವಾಡಿ ಅವಳ ತಲೆ ಒಡೆದು ಕೊಂದನೆಂತಲೂ ತಿಳಿಯಬರುತ್ತದೆ. ಅಪರಾಧಿಯು ಈಗ ಪೋಲೀಸಿನವರಿಂದ ಹಿಡಿಯಲ್ಪಟ್ಟು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ತನ್ನ ಕೈಗೆ ಔಷಧಿ ಹಾಕಿಸಿಕೊಳ್ಳುತ್ತಿದ್ದಾನೆ.

ಮೈಸೂರು ಗೆಜೆಟ್ ಸಂಗ್ರಹ.

ಮೈಸೂರ್ ಚೀಫ್ ಕೋರ್ಟಿನ ಚೀಫ್ ಜಡ್ಜ್ ಮಿ॥ ಜಸ್ಟಿಸ್ ಎಲ್ ಮಾಧವ್, ಬಿ ಸಿ ಎಸ್. ಯವರು ೧೯೦೭ನೇ ಮೇ ೧೪ ರಲ್ಲೂ ಕಾಲವಾದರೆಂಬ ವಾರ್ತೆಯನ್ನು ಕೇಳಿ ಶ್ರೀಮನ್ ಮಹಾರಾಜರವರು ತುಂಬಾ ವಿಷಾದಪಟ್ಟು, ಅವರ ಮರಣದಿಂದ ಮೈಸೂರು ಜುಡಿಷಲ್ ಸರ್ವಿಸ್ಸಿಗೆ ಉಂಟಾಗಿರುವ ನಷ್ಟವನ್ನು ರಿಕಾರ್ಡ್ ಮಾಡಿರುತ್ತಾರೆ.

ಮೈಸೂರು ಮಹಾರಾಜರವರ ಕಾಲೇಜ್ ಸಹಾಯೋಪಾಧ್ಯಾಯರಾದ ಮಿ॥ ಟಿ ಆರ್ ವೆಂಕಟಸ್ವಾಮಿನಾಯ್ಡು ಯವರಿಗೆ ಕೊಟ್ಟಿರುವ ಮೂರು ತಿಂಗಳ ಪ್ರಿವಿಲೆಜ್ ರಜಾ ಜೊತೆಗೆ ಡಿಸೆಂಬರ್ ೩೧ರ ತನಕ ಕಾಯಿಲೆ ರಜಾ ಕೊಟ್ಟಿದೆ.

ಎಕ್ಸೈಸ್ ಇಲಾಖಾ ಅ॥ ಕಮಿಷನರ್ ಮಿ॥ ಜಿ ಡಿನ್ನಿಂಗ್ ಯವರಿಗೆ ಮೂರು ತಿಂಗಳ ಪ್ರಿವಿಲೆಜ್ ರಜವನ್ನೂ ಇನ್ನೆರಡು ತಿಂಗಳ ಕಾಯಿಲೆ ರಜವನ್ನೂ ಕೊಟ್ಟಿತ್ತಷ್ಟೆ. ಅದರ ಜೊತೆಗೆ ಈಗ ಒಂಬತ್ತು ತಿಂಗಳ ಫರ್ಲೋ ರಜಾ ಕೊಡಲಾಗಿದೆ.

ತರೀಕೆರೆ ಸಬ್ ಡಿವಿಜನ್ ಅ॥ ಕಮಿಷನರ್ ಮಿ॥ ಕೆ ಮೈಲಾರಿರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಇಪ್ಪತ್ತೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮತ್ತೊಂದು ಹುಕುಂ ಕೊಡಲ್ಪಡುವ ತನಕ ಆಫೀಸಿಯೇಟಿಂಗ್ ಡೆಪ್ಯುಟಿ ಅ॥ ಕಮಿಷನರ್ ಮಿ॥ ಎಂ ಲಕ್ಷ್ಮಣ ಶಾಸ್ತ್ರಿಯವರು ತರೀಕೆರೆ ಸಬ್ ಡಿವಿಜನ್ ಛಾರ್ಜನ್ನೂ ವಹಿಸಿರತಕ್ಕದ್ದು.

ಮಧುಗಿರಿ ತಾಲ್ಲೂಕ್ ಅಮಲ್ದಾರ್ ಮಿ॥ ಮಹಮದ್ ಅಬ್ದುಲ್ ಷರೀಫ್ ಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಕೊರಟಗೆರೆ ಸಬ್ ತಾಲ್ಲೂಕ್ ಡಿಪ್ಯುಟಿ ಅಮಲ್ದಾರ್ ಮಿ॥ ಕೆ ಎ. ರಂಗಣ್ಣನವರು ಮತ್ತೊಂದು ಹುಕುಂ ಆಗುವ ತನಕ ಮಧುಗಿರಿ ತಾಲ್ಲೂಕ್ ಛಾರ್ಜನ್ನು ವಹಿಸಿರತಕ್ಕದ್ದು.

ಆನೇಕಲ್ ತಾಲ್ಲೂಕ್ ಅಮಲ್ದಾರ್ ಮಿ॥ ಸಿ ಎಸ್. ಕೃಷ್ಣಸ್ವಾಮಿ ಐಯ್ಯಂಗಾರರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಆನೇಕಲ್ ತಾಲ್ಲೂಕ್ ಶಿರಸ್ತೇದಾರರು ಮತ್ತೊಂದು ಹುಕುಂ ಆಗುವ ತನಕ ತಾಲ್ಲೂಕಿನ ಛಾರ್ಜನ್ನು ವಹಿಸಿರತಕ್ಕದ್ದು.

ಕಪಿಯ ಕೊಲೆ ಮತ್ತು ಉತ್ತರಕ್ರಿಯೆ.

ಕೋಣೆಯಾಲ್ ತಾಲ್ಲೂಕು ಯಲಿಯೂರೆಂಬ ಈ ಗ್ರಾಮಕ್ಕೆ ಈಗ್ಗೆ ೨-೩ ತಿಂಗಳಿನಿಂದ ಎಲ್ಲಿಂದಲೋ ಒಂದು ಕಪಿಯು ಬಂದು ಅಲ್ಲಲ್ಲೇ ಊರಲ್ಲಿ ಎಲ್ಲರ ಮನೆಯಲ್ಲಿಯೂ ತಿಂಡಿಯನ್ನು ತಿಂದುಕೊಂಡು ಸುಖವಾಗಿ ವಾಸಮಾಡಿಕೊಂಡಿತ್ತು. ಇದೇ ಮಾಹೇ ೨೦ನೆ ತಾ. ಭಾನುವಾರ ಇದು ಅಕಸ್ಮಾತ್ತಾಗಿ ಒಂದು ನಾಯನ್ನು ಹಿಡಿದುಕೊಂಡದ್ದರಿಂದಲೂ ಹುಡುಗರನ್ನು ಹೆದರಿಸುತ್ತಿದ್ದುದರಿಂದಲೂ ಇದೇ ಗ್ರಾಮದ ನಿವಾಸಿಯಾದ ಕೃಷ್ಣಗೌಡನೆಂಬುವನು ಮನೆಯ ಮಾಳಿಗೆಯ ಮೇಲೆ ಕುಳಿತಿದ್ದ ಈ ಕಪಿಯನ್ನು ಹೊಂಚಿಸಿ ಸದ್ದಿಲ್ಲದಂತೆ ಅದರ ಹಿಂಭಾಗದಿಂದ ಮೆತ್ತಗೆ ಬಂದು ತನ್ನ ಕೈಯಲ್ಲಿದ್ದ ಒಂದು ದಪ್ಪನಾದ ದೊಣ್ಣೆಯಿಂದ ಈ ಕಾಡುಪ್ರಾಣಿಯ ತಲೆಯ ಮೇಲೆ ಬಲವಾಗಿ ಒಂದು ಏಟನ್ನು ಬಿಟ್ಟನು. ಈ ಪೆಟ್ಟಿಗೆ ಅದು ಮಾಳಿಗೆಯ ಮೇಲಿನಿಂದ ನೆಲದ ಮೇಲಕ್ಕೆ ಬಿದ್ದಿತು. ಈ ವರ್ತಮಾನವನ್ನು ತಿಳಿದು ಈ ಗ್ರಾಮದ ಶ್ಯಾನುಭೋಗ ಸುಬ್ಬಣ್ಣನವರೇ ಮೊದಲಾಗಿ ಈ ಕೋತಿಯನ್ನು ತಮ್ಮ ಮನೆಯ ಬಳಿಗೆ ತೆಗೆದುಕೊಂಡುಬಂದು ಅದಕ್ಕೆ ನೀರನ್ನು ಸುರಿಯುವದರಿಂದಲೂ ಬೀಸಣಿಗೆಯಿಂದ ಗಾಳಿ ಬೀಸುವುದರಿಂದಲೂ ಶೈತ್ಯೋಪಚಾರ ಮಾಡಿದಾಗ್ಯೂ ಅದು ಜ್ಞಾನವಿಲ್ಲದೆ ಬಿದ್ದಿತ್ತು. ೨೧ನೆ ತಾ. ಸೋಮವಾರ ಬೆಳಗಿನ ಜಾವ ೯ ಗಂಟೆಯ ವರೆವಿಗೂ ದೊಡ್ಡಯ್ಯನವರೇ ಮೊದಲಾದವರು ಬಹಳ ಬಲಾತ್ಕಾರದಿಂದ ಬಾಯನ್ನು ಬಿಡಿಸಿ ಹಾಲನ್ನು ಸುಮಾರು ಚಟಾಕಿನಷ್ಟು ಹೊಟ್ಟೆಗೆ ಸೇರಿಸಿದರು. ಆದಾಗ್ಯೂ ಅದು ಬಹಳ ಸಂಕಟಪಟ್ಟು ಅದೇ ರಾತ್ರಿ ಸುಮಾರು ೩ ಘಂಟೆಗೆ ಬಹಳ ಪ್ರಯಾಸದಿಂದ ದೈವಾಧೀನವಾಯಿತು. ಬೆಳಗಾದ ಕೂಡಲೆ ಶ್ಯಾನುಭೋಗರೇ ಮೊದಲಾಗಿ ದಾಸಯ್ಯಗಳ ಕೈಯಿಂದ ವಾಹನವನ್ನು ಕಟ್ಟಿಸಿ ವಾದ್ಯಮೇಳಗಳೊಡನೆ ಬಹಳ ವಿಜೃಂಭಣೆಯಿಂದ ಊರನ್ನೆಲ್ಲಾ ಉತ್ಸವವನ್ನು ಮಾಡಿಸಿ ಪ್ರತಿ ಮನೆಗೂ ಅರ್ಧ ಆಣೆ ಮತ್ತು ಅರ್ಧ ಸೇರು ರಾಗಿ ಅಥವಾ ಅರ್ಧ ಸೇರು ಅಕ್ಕಿ ಇದರಂತೆ ಪ್ರತಿಮನೆಯಲ್ಲಿಯೂ ವಸೂಲ್ಮಾಡಿ ಈ ವಾಹನದಲ್ಲಿದ್ದ ಕಪಿಯನ್ನು ವಾದ್ಯಮೇಳಗಳೊಡನೆ ಹೋಗಿ ಸಮಾಧಿ ಮಾಡಿಬಿಟ್ಟರು. ವಸೂಲ್ಮಾಡಿದ ದಿನಸಿ ಸುಮಾರು ೧೦ ಕೊಳಗದಷ್ಟನ್ನೂ ಮೇಲೆ ಸುಮಾರು ೭—೮ ರೂಪಾಯಿನಷ್ಟನ್ನೂ ಜಮಾಯಿಸಿ, ದಾಸಯ್ಯಗಳವರ ಜಾತಿಯವರು ಬಹಳ ವಿಜೃಂಭಣೆಯಿಂದ ಈ ರಾಮನ ಭಂಟನ ತಿಥಿಯನ್ನು ನೆರವೇರಿಸಿದರು. ಈ ಗ್ರಾಮಸ್ಥರ ಉತ್ಸಾಹವನ್ನು ಏನೆಂದು ಹೇಳೋಣ!

ವೈ. ಎಚ್.

ಯಂಪೈರ್ ಡೇ ಉತ್ಸವವು.

ಬೆಂಗಳೂರು

ಬೆಂಗಳೂರು ಪಟ್ಟಣದಲ್ಲಿ ಬಹು ದಿವಸದಿಂದಲೂ ಪ್ರಖ್ಯಾತಿಯನ್ನು ಹೊಂದಿರುವ ಗೌರ್ನಮೆಂಟ್ ಇಂಗ್ಲಿಷ್ ಸ್ಕೂಲಿನಲ್ಲಿ (ಮೊದಲಿನಿಂದಲೂ ಸಿಟಿ ಮುನಿಸಿಪಲ್ ಸ್ಕೂಲ್ ಎಂದು ಹೆಸರುವಾಸಿಯಾಗಿದ್ದು ಈಗ್ಗೆ ಸುಮಾರು ೧೦ ತಿಂಗಳ ಹಿಂದೆ ಗೌರ್ನಮೆಂಟಿಗೆ ಸೇರಿ ಗೌರ್ನಮೆಂಟ್ ಸ್ಕೂಲೆಂದು ಹೆಸರಾಯಿತು) ಇದೇ ತಿಂಗಳು ೨೪ನೇ ತಾ ಯಂಪೈರ್ ಡೇ ಮಹೋತ್ಸವವು ಬಹಳ ವಿಜೃಂಭಣೆಯಿಂದ ನಡೆಯಿತು. ಈ ಸ್ಕೂಲು ಮೊದಲಿನಿಂದಲೂ ಟಿಪ್ಪು ಸುಲ್ತಾನರ ಅರಮನೆಯಲ್ಲಿ ಇದ್ದು ಈಗ್ಗೆ ೩-೪ ದಿವಸಗಳ ಕೆಳಗೆ ಈ ಸ್ಕೂಲಿಗೋಸ್ಕರವೇ ಕಟ್ಟಿದ್ದ ಮತ್ತು ಆ ಅರಮನೆಯ ಹಿಂಭಾಗದಲ್ಲಿ ಇರುವ ಹೊಸ ಕಟ್ಟಡಕ್ಕೆ ವರ್ಗಾಯಿಸಲ್ಪಟ್ಟಿದೆ. ಮೇಲ್ಕಂಡ ಮಹೋತ್ಸವದ ವಿವರವೇನಂದರೆ.—

೨೪ನೇ ತಾ. ಪ್ರಾತಃಕಾಲ ೮ ಘಂಟೆಗೆ ಸದರಿ ಹೊಸ ಸ್ಕೂಲಿನಲ್ಲಿ ಎಲ್ಲಾ ವಿದ್ಯಾರ್ಥಿಗಳೂ ಉಪಾಧ್ಯಾಯರೂ ಹಾಜರಾಗಿದ್ದರು. ಈ ಕಟ್ಟಡದ ಮುಂಭಾಗದ ಮೈದಾನವು ಸರಿಯಾಗಿಲ್ಲದೆ ಇರುವುದರಿಂದ ಅರಮನೆಯ ಅಂದರೆ ಹಳೇ ಸ್ಕೂಲಿನ ಮುಂದಿರುವ ಮೈದಾನದಲ್ಲಿ ಬಾವುಟವನ್ನು ಹುಗಿದ್ದರು. ಆ ಸ್ಕೂಲಿನ ಡ್ರಿಲ್ ಉಪಾಧ್ಯಾಯರು ವಿದ್ಯಾರ್ಥಿಗಳಿಗೆ ಆ ಬಾವುಟದ ಮುಂದುಗಡೆ ಕವಾತನ್ನು ಮಾಡಿಸಿ ಅದಕ್ಕೆ ಸಲ್ಯೂಟನ್ನು ಮಾಡಿಸಿದರು. ಇದಾದ ನಂತರ ಅರಮನೆಯ ಹಿಂಭಾಗದಲ್ಲಿ ಬಾಲಕ ಮಂಡಲಿಯೆಲ್ಲಾ ಸೇರಿತು. ಆಗ ಈ ಸ್ಕೂಲು ಹೆಡ್ ಮಾಸ್ತರು ಮೆ॥ ಕೆ. ಕೃಷ್ಣಸ್ವಾಮಯ್ಯನವರು ಬಾಲಕರ ಮಧ್ಯದಲ್ಲಿ ನಿಂತು ಭೂಮಿಯ ಗೋಳವನ್ನು ಕೈಯಲ್ಲಿ ಹಿಡಿದು ತೋರಿಸುತ್ತಾ—ಭೂಮಿಯು ಹೀಗೆ ಗುಂಡಾಗಿದೆ. ಇದನ್ನು ೩೬೦ ಡಿಗ್ರಿಯಾಗಿ ಭಾಗಿಸಿದಾರೆ. ಇದು ಯಾವಾಗಲೂ ಹೀಗೆ ತಿರುಗುತ್ತದೆ. ಇದು ಗುಂಡಾಗಿರುವದರಿಂದ ಸೂರ್ಯನ ಪ್ರಕಾಶವು ಇದರ ಅರ್ಧ ಭಾಗದಲ್ಲೇ ಬೀಳುತ್ತದೆ. ಇದು ತಿರುಗುವದರಿಂದ ಕತ್ತಲೆಯಲ್ಲಿ ಇದ್ದ ಭಾಗವು ಬೆಳಕಿಗೂ ಬೆಳಕಿನಲ್ಲಿ ಇದ್ದ ಭಾಗವು ಕತ್ತಲೆಗೂ ಬರುತ್ತಾ ಇರುತ್ತದೆ. ಹೀಗೆ ಯಾವುದಾದರೊಂದು ಅರ್ಧ ಭಾಗವು ಬೆಳಕಿನಲ್ಲೂ ಯಾವುದಾದರೊಂದು ಅರ್ಧ ಭಾಗವು ಕತ್ತಲೆಯಲ್ಲೂ ಸದಾ ಇರುತ್ತದೆ. ಬ್ರಿಟಿಷ್‌ನವರ ಚಕ್ರಾಧಿಪತ್ಯವು ಪ್ರಪಂಚದ ಎಲ್ಲಾ ಕಡೆಯಲ್ಲೂ ಅಂದರೆ ಇಂಡಿಯಾ, ಆಸ್ಟ್ರೇಲಿಯಾ, ನ್ಯೂಜೀಲೆಂಡ್, ಕಾನಡ, ಬ್ರಿಟಿಷ್ ಆಫ್ರಿಕ, ಇಂಗ್ಲೆಂಡು ಮುಂತಾದ ದೇಶಗಳಲ್ಲಿ ಇರುವದರಿಂದ ಅವರ ರಾಜ್ಯದಲ್ಲೆಲ್ಲಾ ಏಕಕಾಲದಲ್ಲಿ ಸೂರ್ಯನು ಮುಳುಗುವದಿಲ್ಲ ಎಂದು ಇನ್ನೂ ಬಹಳ ವಿಶದವಾಗಿ ಬಾಲಕರಿಗೆ ಹೇಳಿದರು. ನಂತರ ಸಹಾಯೋಪಾಧ್ಯಾಯರಾದ ಮೆ॥ ಬಿ. ಸಿ. ನಂಜುಂಡಯ್ಯನವರು ಇದೇ ಸಂಗತಿಯನ್ನು ಬರೆದಿದ್ದ ಒಂದು ಕಾಗದವನ್ನು ಬಾಲಕರಿಗೆ ಓದಿ ಹೇಳಿದರು. ಇದಾದಮೇಲೆ ಬಾಲಕರೆಲ್ಲರೂ ಹೊಸ ಸ್ಕೂಲಿಗೆ ಹೋದರು. ಅಲ್ಲಿ ಬಾಲಕರಿಗೆ ಲಡ್ಡುಗಳು ಹಂಚಲ್ಪಟ್ಟವು. ಎಲ್ಲರೂ ತಮ್ಮ ತಮ್ಮ ಮನೆಗಳಿಗೆ ಹರ್ಷದಿಂದ ತೆರಳಿದರು.

ಕಿಸ್ತಪಟ್ಟ.

ಇದೇ ತಿಂಗಳು ೨೪ನೇ ತಾ. ಶುಕ್ರವಾರದ ದಿನ ಮಹಾರಾಜ್ಞಿಯವರ ಜನ್ಮದಿನವಾದಕಾರಣ ಈ ದಿನದ ಸಂತೋಷಸೂಚನಾರ್ಥವಾದ ವಿಶೇಷೋತ್ಸವವು ಇಲ್ಲಿನ ಗೌರ್ನಮೆಂಟ್ ಸ್ಕೂಲಿನಲ್ಲಿ ಬಹು ವಿಜೃಂಭಣೆಯಿಂದ ನಡೆಯಿತು. ಸ್ಕೂಲು ಕಟ್ಟಡವು ರಮಣೀಯವಾಗಿ ಅಲಂಕರಿಸಲ್ಪಟ್ಟದ್ದು ಮುಂಭಾಗದಲ್ಲಿ ಎತ್ತರವಾದ ಧ್ವಜಪಟವು ರಾಜಬಿರುದಾಂಕಿತವಾದ ಗಂಡಭೇರುಂಡ ಪಕ್ಷಿಗಳೊಂದಿಗೆ ಅಲಂಕರಿಸಲ್ಪಟ್ಟು ಅದರ ಮುಂದುಗಡೆ ಹೊಳೆಯುತ್ತಿದ್ದ ಈಗಿನ ಇಂಡಿಯಾ ಚಕ್ರವರ್ತಿ ಸಾರ್ವಭೌಮರಾದ ಏಳನೇ ಎಡ್ವರ್ಡ್ ಮಹಾರಾಜರವರ ಮತ್ತು ಚಕ್ರವರ್ತಿನಿಯವರ ಭಾವಚಿತ್ರಗಳೂ ನಮ್ಮ ಶ್ರೀಮನ್ಮಹಾರಾಜರವರ ಭಾವಚಿತ್ರವೂ ನೋಡುವವರಿಗೆ ಆನಂದವನ್ನುಂಟು ಮಾಡುತ್ತಿದ್ದುವು. ಬೆಳಿಗ್ಗೆ ಸ್ಕೂಲುಮಾಸ್ತರುಗಳೂ ಬಾಲಕಬಾಲಕಿಯರುಗಳೂ ಅಲಂಕೃತರಾಗಿ ಸ್ಕೂಲುಮುಂದೆ ಸೇರಿದರು. ಅನಂತರ ಅಧಿಕಾರಿಗಳು ವರ್ತಕರು ಮುಂತಾಗಿ ಅನೇಕರು ದಯಮಾಡಿಸಿದರು. ಬ್ಯಾಂಡಿನವರು ವಾದ್ಯಘೋಷವನ್ನು ಮಾಡುತ್ತಿರಲು, ಸರ್ವರೂ ನಿಂತು ಮಹಾರಾಜರವರ ಗುಣಕಥನವನ್ನು ಮಾಡಿ ನಮ್ಮ ಸಾರ್ವಭೌಮರವರ ಪ್ರಭುತ್ವವು ಸ್ಥಿರವಾಗಿರಲೆಂದು ರಾಜಭಕ್ತಿ ವಿಶ್ವಾಸಗಳೊಂದಿಗೆ ವಂದಿಸಿದರು. ಅನಂತರ ಬಾಳೇಹಣ್ಣು ಸಕ್ಕರೆ ಹಂಚಲ್ಪಟ್ಟಿತು. ಅದೇ ದಿನ ಸಾಯಂಕಾಲ ಅಮಲ್ದಾರರು ಮುಂತಾಗಿ ಸಮಸ್ತ ಅಧಿಕಾರಿಗಳೂ ಸ್ಕೂಲ್ ಮಾಸ್ತರುಗಳೂ ಮ್ಯುನಿಸಿಪಲ್ ಮೆಂಬರುಗಳೂ ಬ್ಯಾಂಕ್ ಏಜೆಂಟರುಗಳೂ ಸಮಸ್ತ ವರ್ತಕರುಗಳೂ ನೂರಾರು ಮಂದಿ ಸ್ಕೂಲಿನಲ್ಲಿ ಸಭೆ ಸೇರಿದರು. ಸಂಗೀತಮಂಡಲಿಯವರೂ ಹಾಜರಾಗಿದ್ದರು. ಸ್ಕೂಲ್ ರಮ್ಯವಾಗಿ ಅಲಂಕರಿಸಲ್ಪಟ್ಟಿತ್ತಲ್ಲದೆ ಸಭೆಯ ಎದುರಾಗಿ ಇಂಡಿಯಾ ಸಾರ್ವಭೌಮ ಮತ್ತು ಶ್ರೀಮನ್ಮಹಾರಾಜರವರ ಚಿತ್ರಪಟಗಳು ಎತ್ತರವಾದ ಸ್ಥಾನದಲ್ಲಿ ಪುಷ್ಪ ಮತ್ತು ಮುತ್ತಿನ ಹಾರಗಳಿಂದ ಅಲಂಕರಿಸಲ್ಪಟ್ಟು ರಾಜಬಿರುದಾಂಕಗಳಿಂದ ಧ್ವಜಪತಾಕೆಗಳೂ ಗಂಡಭೇರುಂಡಗಳೂ ಶೋಭಿಸುತ್ತಿದ್ದುವು. ಎಲ್ಲರೂ ಸೇರಿದನಂತರ ಸ್ವಲ್ಪ ಹೊತ್ತು ಶ್ರವಣವಾಯಿತು. ಸ್ಕೂಲು ಮಾಸ್ತರುಗಳು ಇಂಗ್ಲಿಷ್, ಕನ್ನಡ, ಹಿಂದುಸ್ಥಾನಿ, ಸಂಸ್ಕೃತ ಭಾಷೆಗಳಲ್ಲಿ ರಚಿಸಿ ಬರೆದು ತಂದಿದ್ದ ಚಕ್ರವರ್ತಿಯವರ ಮತ್ತು ಅವರ ಪ್ರಭುತ್ವ ವಿಷಯವಾಗಿ ಮಂಗಳಶ್ಲೋಕಗಳು ಓದಲ್ಪಟ್ಟವು. ವರ್ತಕ ಮಂಡಲಿಯವರ ಪರವಾಗಿ ರೀಡಿಂಗ್ ರೂಂ ಮ್ಯಾನೇಜರು ವಿಶೇಷೋತ್ಸವದ ವಿಷಯವಾಗಿ ಒಂದು ಉಪನ್ಯಾಸ ಮಾಡಿದರು. ಸಮಸ್ತರೂ ಸಾರ್ವಭೌಮ ಸರ್ಕಾರದವರ ಮತ್ತು ಮಹಾರಾಜರವರ ಶ್ರೇಯಃ ಪ್ರಾರ್ಥನೆ ಮಾಡಿದರು. ಸ್ಕೂಲು ಮಾಸ್ತರು ವೆಂಕಟರಾಮಯ್ಯಂಗಾರ್ರು ಮತ್ತು ಅವರ ಶಿಷ್ಯರಾದ ೩ ಹುಡುಗರು ಇಂಗ್ಲಿಷ್ ಭಾಷೆಯಲ್ಲಿಯೂ ಮತ್ತು ಕನ್ನಡದಲ್ಲಿಯೂ ಸಂಗೀತ ಧಾಟಿಯಲ್ಲಿ ರಚಿಸಿ ತಂದಿದ್ದ ವಂದನಾಪೂರ್ವಕವಾದ ಮಂಗಳ ಗೀತೆಗಳು ಸಭಿಕರ ಮನಸನ್ನಾನಂದಪಡಿಸಿದವು. ಸರ್ವರೂ ಎದ್ದು ನಿಂತು ನಮ್ಮ ಇಂಡಿಯಾ ಸಾರ್ವಭೌಮ ಸರ್ಕಾರವು ಆಚಂದ್ರಾರ್ಕವಾಗಿ ಸ್ಥಿರವಾಗಿ ಬಾಳಲೆಂದು ಹೊಗಳಿ ಭಕ್ತಿಯಿಂದ ವಂದಿಸಿದರು. ಬ್ಯಾಂಡಿನವರು ಸಲಾಂ ಬಾಜಾವನ್ನು ನುಡಿಸಿದರು. ಸರ್ವರಿಗೂ ಹಾರ ತಾಂಬೂಲಗಳು ಹಂಚಲ್ಪಟ್ಟು ಸಭೆಯು ಮುಕ್ತಾಯವಾಯಿತು.

ಅಜ್ಜಂಪುರ

ಇದೇ ಮೇ ತಾ ೨೪ನೇ ಶುಕ್ರವಾರ ಯಂಪೈರ್ ಡೇ ಮಹೋತ್ಸವದ ಬಗ್ಗೆ ಸ್ಕೂಲ್ ಕಟ್ಟಡವು ವಿವಿಧವಾಗಿ ರಚಿಸಿದ ತೋರಣಗಳಿಂದಲೂ, ಮೇಲ್ಭಾಗದಲ್ಲೆತ್ತಿ ಕಟ್ಟಲ್ಪಟ್ಟಿದ್ದ ನಾನಾ ವರ್ಣಗಳಿಂದಲಂಕೃತವಾದ ಬಾವುಟಗಳಿಂದಲೂ, ಮುಂಭಾಗದಲ್ಲೆತ್ತರವಾಗಿ ನೆಡಲ್ಪಟ್ಟು ಸರ್ವರಿಗೂ ಅತ್ಯಾನಂದಪ್ರದವಾದ ನೋಟವೆನಿಸಿದ ಯೂನಿಯನ್ ಜಾಕ್ ನಿಂದಲೂ ಶೋಭಾಯಮಾನವಾಗಿ ಪ್ರಜೆಗಳ ದೃಷ್ಟಿಗಳನ್ನೆಳೆಯುತ್ತಿತ್ತು. ಈ ಕಟ್ಟಡದ ಒಳಭಾಗವು ಚಿತ್ರವಿಚಿತ್ರವಾದ ಪತ್ರಗಳಿಂದಲಂಕೃತವಾಗಿದ್ದುದಲ್ಲದೆ, ಸುತ್ತಮುತ್ತಲೂ ಗೋಡೆಗಳಲ್ಲಿ ತೂಗುಹಾಕಿದ್ದ ಮೃಗಗಳೂ ಮೃಗಪಕ್ಷಿಗಳ ಆಕೃತಿಗಳೂ ದೊಡ್ಡದೊಡ್ಡ ಮನುಷ್ಯರುಗಳ ಫೋಟೋಗಳೂ ಉಲ್ಲಾಸಕರಗಳಾಗಿದ್ದವು. ಇಂತಹ ರಮಣೀಯವಾದ ಪ್ರದೇಶದ ಮೇಲ್ಭಾಗದಲ್ಲಿ ಶ್ರೀಮದಿಂಡಿಯಾ ಚಕ್ರವರ್ತಿಗಳಾದ ಶ್ರೀಮದೆಡ್ವರ್ಡ್ ದಿ ಸೆವೆಂತರವರ ಭಾವಚಿತ್ರವೂ ಶ್ರೀಮನ್ಮೈಸೂರು ಮಹಾರಾಜರವರ ರಮಣೀಯವಾದ ಭಾವಚಿತ್ರವೂ ಸಕಲರ ಮನಸ್ಸಿಗೂ ಭಕ್ತ್ಯತಿಶಯವನ್ನೂ ಆನಂದಾಧಿಕ್ಯವನ್ನೂ ನೆಲೆಗೊಳಿಸುತ್ತಿದ್ದುವು.

ಇಂತಹ ಸ್ಕೂಲ್ ಕಟ್ಟಡಕ್ಕೆ ಬರಬೇಕೆಂದು ಪ್ರಾರ್ಥಿತರಾದ ಯೂನಿಯನ್ ಮೆಂಬರುಗಳು ಸ್ಕೂಲ್ ಕಮಿಟಿ ಮೆಂಬರುಗಳು ವೈದಿಕ ಲೌಕಿಕಾಗ್ರಣಿಗಳು ವರ್ತಕರೇ ಮೊದಲಾದ ಸರ್ವರೂ ಮಧ್ಯಾಹ್ನಾತ್ಪರ ದಯಮಾಡಿಸಿ, ಉಚಿತಾಸನಾಸೀನರಾದರು. ಕೂಡಲೆ ಸ್ಕೂಲ್ ವಿದ್ಯಾರ್ಥಿಗಳಿಂದ ಡ್ರಿಲ್ ಮಾಡಲ್ಪಟ್ಟಿತು. ಸಕಲರೂ ರಾಜಭಕ್ತಿಪೂರ್ವಕ ಯೂನಿಯನ್ ಜಾಕಿನ ಮುಂಗಡೆ ಸೆಲ್ಯೂಟ್ ಮಾಡಿದರು. ನಂತರ ಸಭಾಸದರ ಅನುಮತಿಯಂತೆ ಆಸ್ಪತ್ರೆ ಅ॥ ಮೆ॥ ಪರದೈಯ್ಯನವರು ಸಭಾಧ್ಯಕ್ಷತೆಯನ್ನು ವಹಿಸಿದರು. ಈ ಸಭೆ ಸೇರಿದ ಕಾರಣವನ್ನೂ ಈ ಮಹೋತ್ಸವವನ್ನು ನಡೆಸಬೇಕೆಂಬ ಬಗ್ಗೆ ನಮ್ಮಗಳ ಉತ್ಸಾಹ ಕಾರಣವನ್ನೂ ಪೂರ್ವದ ಆಳಿಕೆಗೂ ಈಗಿನ ಆಳಿಕೆಗೂ ಇರುವ ಪರಸ್ಪರ ವೈಲಕ್ಷಣ್ಯವನ್ನೂ ಪೂರ್ವಕಾಲದ ಪ್ರಜಾಕಷ್ಟವನ್ನೂ ಆಧುನಿಕಕಾಲದ ಸೌಕರ್ಯವನ್ನೂ ಗುಣಮಣಿಗಳಾದ ಬ್ರಿಟಿಷ್ ಚಕ್ರವರ್ತಿಗಳ ರಾಜ್ಯವು ಪ್ರಪಂಚದ ಎಲ್ಲಾ ಭಾಗದಲ್ಲಿಯೂ ಹರಡಿರುವದಕ್ಕೆ ಮುಖ್ಯವೆನಿಸಿದ ಪ್ರಭುಗಳಲ್ಲಿ ನೆಲೆಗೊಂಡಿರುವ ದಯೆ, ಔದಾರ್ಯ, ಸತ್ಯಸಂಧತೆ, ಕಾರ್ಯಕಾರಣದಕ್ಷತೆ, ಮೊದಲಾದ ಸದ್ಗುಣಾವಳಿಗಳ ಸ್ಥೈರ್ಯ ಫಲವನ್ನೂ ಕುರಿತು ಉಪನ್ಯಾಸ ಮಾಡಿ, ಬ್ರಿಟಿಷ್ ಚಕ್ರವರ್ತಿಗಳವರಿಗೂ ನಮ್ಮ ಶ್ರೀಮನ್ಮಹಾರಾಜರವರಿಗೂ ಅವರ ಕುಟುಂಬದವರಿಗೂ ಇಲಾಖಾಧ್ಯಕ್ಷರಿಗೂ ಡಿಸ್ಟ್ರಿಕ್ಟ್ ಮತ್ತು ತಾಲ್ಲೋಕು ಅಧಿಕಾರಿಗಳಿಗೂ ಸಭಾಧ್ಯಕ್ಷರಿಗೂ ಸಭಾಸದರಿಗೂ ಜಗದೀಶನು ನಿರಂತರ ಮಂಗಳಪರಂಪರೆಗಳನ್ನೀಯಲೆಂದು ಮೂರು ಮೂರು ಮೇಳೆ ಉಚ್ಚಸ್ವರದ ಘೋಷದಿಂದ ಕರತಾಡನ ಮೂಲಕ ಶ್ರೇಯಃಪ್ರಾರ್ಥನೆಯು ಮಾಡಲ್ಪಟ್ಟಿತು. ಈ ರೀತಿ ಸಭೆಯನ್ನು ಸೇರಿಸಿ ಈ ರೀತಿ ರಾಜಭಕ್ತಿ ಪ್ರದರ್ಶನಕ್ಕವಕಾಶಕೊಟ್ಟದ್ದು [illegible] ಸ್ತೋತ್ರಾರ್ಪಣವಾದ್ದೆಂದು ಸಭಾಧ್ಯಕ್ಷರು ಅಪ್ಪಣೆ ಕೊಡಿಸಿದರು. ನಂತರ ಯೂನಿಯನ್ ಮತ್ತು ಸ್ಕೂಲ್ ಕಮಿಟಿ ಮೆಂಬರು ಮೆ॥ ಬಂಕನಕಟ್ಟಿ ಪುಟ್ಟಪ್ಪನವರು ಈಗ್ಗೆ ಒಂದು ವರುಷಕ್ಕೆ ಹಿಂದೆ ಈ ಸ್ಕೂಲ್ ಅತ್ಯಂತ ಹೀನಸ್ಥಿತಿಯಲ್ಲಿದ್ದು ಗ್ರಾಮಸ್ಥರಿಗೆಲ್ಲಾ ಕೇವಲ ವ್ಯಸನಕ್ಕಾಕರವಾಗಿತ್ತು. ಈಚೆಗೆ ಉತ್ತಮಸ್ಥಿತಿಗೆ ಬಂದಿರುವದರಿಂದ ಪ್ರಕೃತಕ್ಕೆ ಒಬ್ಬರನ್ನು ಸಹಾಯೋಪಾಧ್ಯಾಯರನ್ನು ದಯಪಾಲಿಸಿ ಸಧ್ಯ ಮತ್ತಿಬ್ಬರನ್ನು ದಯಪಾಲಿಸುವಂತೆ ಕಡೂರು ಡೆಪ್ಟಿ ಇನ್ಸ್‌ಪೆಕ್ಟರು ಬುಕ್ಕಿನಲ್ಲಿ ಬರೆದಿರುವ ಅಂಶವು ತುಂಬಾ ಆನಂದದಾಯಕವಾಗಿಯೂ ಕೃತಜ್ಞತೆಗೆ ಕಾರಣವಾದುದಾಗಿಯೂ ಇದೆ. ಈ ಸ್ಕೂಲಿನಲ್ಲಿ ಸರ್ವರೂ ಸೇರಿ ಈ ರೀತಿ ರಾಜಭಕ್ತಿ ಪ್ರದರ್ಶನ ಮಾಡಲು ಕೇವಲ ಶ್ರದ್ಧೆ ವಹಿಸಿ ಕೆಲಸ ನಡೆಸಿದ್ದು ಸ್ಕೂಲ್ ಅಭಿವೃದ್ಧಿಗೂ ಸಕಲರ ಸಂತೋಷಕ್ಕೂ ಕಾರಣವಾದದ್ದೆಂದು ಹೇಳಿದರು. ಸರ್ವರೂ ಸಂತೋಷಪಟ್ಟರು. ಉತ್ತಮವಾದ ಮಂಗಳಸೂಚಕವಾದ ಆಗಲೇ ರಚಿತವಾದ ಕಂದಪದ್ಯಗಳು ಬಾಲಕರಿಂದ ಗಾನ ಮಾಡಲ್ಪಟ್ಟವು. ಜನಮನೋರಂಜಕವಾದ ಕೀರ್ತನೆಗಳನ್ನು ಅ॥ ಮಾ॥ ರಾಮಸ್ವಾಮಯ್ಯನವರು ಹಾಡಿದರು. ಸಿದ್ಧಪಡಿಸಿದ್ದ ಗಂಧ ತಾಂಬೂಲ ಶರ್ಕರಾದಿಗಳನ್ನು ಕ್ರಮವಾಗಿ ಸಭಾಸದರಿಗೆ ಅ॥ ಮಾ॥ ಕೃಷ್ಣರಾಯರು ವಿನಿಯೋಗ ಮಾಡಿದರು. ಜಯ ಜಯ ಶಬ್ದಪೂರ್ವಕವಾಗಿ ಆಗಿನ ಸಭೆಯು ಪೂರ್ತಿ ಮಾಡಲ್ಪಟ್ಟಿತು. ಇದೇ ರಾತ್ರಿ ೯ನ ಸಭೆಯು ಸೇರಿತು, ಸ್ಕೂಲ್ ವಿದ್ಯಾರ್ಥಿಗಳಿಂದ ಈ ಮಹೋತ್ಸವಕಾಲದಲ್ಲಿ ನಡೆಸತಕ್ಕ ಬಗ್ಗೆ ಅಭ್ಯಾಸ ಮಾಡಿಸಲ್ಪಟ್ಟಿದ್ದ [illegible] ಎಂಬ ನಾಟಕವು ಜನಮನಾನಂದಕರವಾಗಿ ನಡೆಸಲ್ಪಟ್ಟು ತನ್ಮೂಲಕ ಚಕ್ರವರ್ತಿಗಳವರ ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನಾ ಮಾಡಲಾಯಿತು.

ಇಂಡಿಯಾ ದೇಶದ ವೃತ್ತಾಂತಗಳು.

ಕ್ವೆಟ್ಟಾ ನಗರ ಪ್ರಾಂತ್ಯದಲ್ಲಿ ಬ್ರಾಹೂಯಿ ಎಂಬೊಬ್ಬನು ಇದ್ದ ಹೆಂಗಸರನ್ನು ನಾಲ್ವರು ಮಕ್ಕಳನ್ನು ಕಡಿದು ತಾನೂ ಆತ್ಮಹತ್ಯ ಮಾಡಿಕೊಂಡನು.

***

ಜಗತ್ಸುರಿಯಲ್ಲಿ ಭೂಸ್ವಾಮಿಗಳಲ್ಲಿ ಸರ್ಕಾರದವರು ಇಂಗ್ಲಿಷ್ ಸೈನಿಕರನ್ನಿಟ್ಟು ವ್ಯವಸಾಯ ಕೆಲಸ ಕಾರ್ಯಗಳನ್ನು ಕಲಿಸಿಕೊಡುತ್ತಿದಾರೆ. ಅವರ ವಾಸಕ್ಕೆ ೩೦ ಸಾವಿರ ರೂಪಾಯಿ ಖರ್ಚುಮಾಡಿ ಮನೆಗಳನ್ನು ಕಟ್ಟಿಸಿಕೊಟ್ಟಿರುವರು.

***

ಪಂಜಾಬ್ ಆಧಿಪತ್ಯದ ಲೆಫ್ಟಿನೆಂಟ್ ಗವರ್ನರ್ ಸರ್ ಡೆನ್ಸಿಲ್ ಇಬೆಟ್ಸನ್‌ರವರು ವೈದ್ಯ ಚಿಕಿತ್ಸೆ ಮಾಡಿಸಿಕೊಳ್ಳಬೇಕೆಂದು ಸೀಮೆಗೆ ಪ್ರಯಾಣ ಮಾಡಿದರು. ಮೆ॥ ಗೂರ್ಡನ್ ವಾಕರ್‌ರವರು ಲೆಫ್ಟಿನೆಂಟ್ ಗವರ್ನರ್ ಕೆಲಸದ ಭಾರವನ್ನು ವಹಿಸಿಕೊಂಡಿದಾರೆ.

***

ಕಲ್ಕತ್ತಾ ಪಟ್ಟಣದ ಬೌಬಜಾರ್ ಎಂಬ ಬೀದಿಯಲ್ಲಿ [illegible]ಟ್ಟು ಐವತ್ತು ಗುಡಿಸಲುಗಳು ಸುಟ್ಟುಹೋದವು. ವಾಸಮಾಡುತ್ತಿದ್ದ ೨೦೦ ಮಂದಿಯೂ [illegible] ಮನೆ ಇಲ್ಲದೆ ಅಲೆಯುತ್ತಿದಾರೆಂತಲೂ ತಂತೀವರ್ತಮಾನ ಬಂದಿದೆ.

***

ಗತಿಸಿದ ಮಹಾರಾಜ್ಞಿ ವಿಕ್ಟೋರಿಯಾ ರಾಣಿಯವರ ಜನ್ಮದಿನವನ್ನು ಹಿಂದುಸ್ಥಾನದಲ್ಲಿ ಶುಭದಿನವಾಗಿ ಎಣಿಸಿ ಆ ದಿನ ಎಂದೆಂದಿಗೂ ರಜಾ ಇರುವಂತೆ ದಯಪಾಲಿಸಬೇಕೆಂದು ಬಹುಜನರು ಸೇರಿ ವೈಸ್‌ರಾಯ್ ಲಾರ್ಡ್ ಮಿಂಟೋ ಪ್ರಭುಗಳಿಗೆ ವಿಜ್ಞಾಪನಾ ಪತ್ರಿಕೆಯನ್ನು ಬರೆದುಕೊಂಡಿದಾರೆ.

***

ಜಮೇಕಾ ದ್ವೀಪದಲ್ಲಿ ಭೂಕಂಪದ ಅನಾಹುತಕ್ಕೆ ಸಿಕ್ಕಿದ ಪ್ರಜೆಗಳಿಗೆ ಸಹಾಯ ಮಾಡುವುದಕ್ಕಾಗಿ ನಮ್ಮ ವೈಸ್‌ರಾಯ್ ಲಾರ್ಡ್ ಮಿಂಟೋ ಪ್ರಭುಗಳು ಒಂದು ಫಂಡನ್ನು ಪ್ರಾರಂಭಮಾಡಿದ್ದರಷ್ಟೆ. ಇದುವರೆಗೆ ಈ ಫಂಡಿನಲ್ಲಿ ಕೂಡಿದ ರೂ. ೮,೮೯೫—೧೪—೦ ಯನ್ನು ಅಲ್ಲಿಗೆ ಕಳುಹಿಸಿಬಿಟ್ಟರೆಂದು ತಿಳಿದು ಬಂದಿದೆ.

***

ಬಂಗಾಳಾ ಆಧಿಪತ್ಯದಲ್ಲಿ ಹೋದವಾರ ೩೬,೭೪೫ ಮಂದಿ ಕ್ಷಾಮಪೀಡಿತರಾಗಿದ್ದರು. ಅಂದರೆ, ಹಿಂದಿನ ವಾರದ ಸಂಖ್ಯೆಗಿಂತ ೬,೦೦೦ ಕಡಮೆ. ಆ ಪೈಕಿ ೨೫,೨೧೦ ಜನರು ರಿಲೀಫ್ ಕಾಮಗಾರಿ ಮಾಡುತ್ತಿರುವುದಾಗಿಯೂ, ಉಳಿದವರನ್ನು ಸರ್ಕಾರದವರು ಅನ್ನಸತ್ರಗಳಲ್ಲಿಟ್ಟು ಪೋಷಣೆಮಾಡುತ್ತಿರುವುದಾಗಿಯೂ ತಿಳಿದುಬಂದಿದೆ.

***

ಬರಾರ್ ಆಧಿಪತ್ಯಕ್ಕೆ ಸೇರಿದ ಓರ್ಚ್ ಸ್ಟೇಟ್ಸ್ ಎಂಬ ಭಾಗದಲ್ಲಿ ಕೆಲವು ಕಡೆ ಪೂರ್ವಕಾಲದ ಬೆಳ್ಳಿಯ ಸೀಸದ ಗಣಿಗಳಿರುತ್ತವೆ. ಅವನ್ನು ಶೋಧನೆ ಮಾಡಿದ್ದರಲ್ಲಿ ಇನ್ನೂ ಕೆಲವು ಲೋಹಗಳು ಸಿಕ್ಕುತ್ತವೆಂದು ಗೊತ್ತಾಯಿತು. ಆ ಲೋಹಗಳಲ್ಲಿ ಕಲ್ಲು ಮಣ್ಣು ಮುಂತಾದ್ದನ್ನು ನೀಗಿಸಿಕೊಂಡು ಬರುವುದಕ್ಕೆ ಹೊಸದಾಗಿ ರೈಲುಹಾಕುತ್ತಿದಾರೆ. ಇದು ಸುಮಾರು ೪೦ ಮೈಲಿ ದೂರವಾಗುವುದು.

***

ಕಲ್ಕತ್ತಾ ಪಟ್ಟಣದ ಸುತ್ತಮುತ್ತಿನಲ್ಲಿ ಈಚೆಗೆ ಗೋಕಾವುಗಳು ಸಾಯುವುದು ಹೆಚ್ಚುತ್ತಾ ಬಂದದ್ದನ್ನು ನೋಡಿ ಜನರು ಯಾರೋ ವಿಷಹಾಕುವರೆಂದು ಅನುಮಾನ ಪಟ್ಟರು. ಚಕ್ಕಳದ ವ್ಯಾಪಾರದಲ್ಲಿ ಪ್ರಸಿದ್ಧನಾದ ಚರಿಮೋಳನ ದಾಸನೆಂಬವನ ಮೇಲೆ ಪೋಲೀಸಿನವರಿಗೆ ಸಂಶಯ ಉಂಟಾಗಿ ಅವನ ನಡವಳಿಕೆಯನ್ನು ಉಸ್ತುವಾರಿ ಮಾಡುತ್ತಾ ಬರುವಲ್ಲಿ ಅವನೇ ಒಂದು ಹಸುವಿಗೆ ವಿಷಹಾಕುತ್ತಿದ್ದದ್ದು ದೃಷ್ಟಾಂತವಾಯಿತು. ಕೂಡಲೇ ಅವನನ್ನು ಹಿಡಿದು ನಾಲ್ಕು ತಿಂಗಳ ಕಠಿಣ ಸಜಾ ವಿಧಿಸಿದರು.

ಬೊಂಬಾಯಿ ಪಟ್ಟಣದಲ್ಲಿ ಸುಲ್ತಾನ್ ಚಂದ್ ಬಲದೇವ ದಾಸ್ ಎಂಬ ಭಾರೀ ಸಾಹುಕಾರನು ೭,೦೦೦ ರೂಪಾಯಿನ ಕರೆನ್ಸಿ ನೋಟುಗಳನ್ನು ಕಳೆದುಕೊಂಡನು. ಗಣಪತಿರಾವ್ ಬಾಲಕೃಷ್ಣನೆಂಬವನು ಅದನ್ನು ಎತ್ತಿ ತೆಗೆದುಕೊಂಡು ಹೋಗಿ ಪೊಲೀಸಿಗೆ ಒಪ್ಪಿಸಿದನು. ಆ ಸಾಹುಕಾರನು ತುಂಬಾ ಸಂತೋಷಪಟ್ಟು ಅವನ ಸತ್ಯವಂತಿಕೆಗಾಗಿ ಅವನಿಗೆ ೫೦೦ ರೂಪಾಯಿ ಬಹುಮಾನ ಕೊಟ್ಟಿರುತ್ತಾನೆ.

❖❖❖

ಕೆಲವು ದಿನಗಳ ಹಿಂದೆ ಮಧುರೆಯ ಹತ್ತಿರ ರೈಲ್ ಗಾಡಿ ಹೋಗುತ್ತಿರುವಲ್ಲಿ ಒಂದು ಬಾರೀ ಎಮ್ಮೆಯು ಎದುರಿಗೆ ಬಂದು ರೋಷದಿಂದ ನಾಲ್ಕಾರು ಸಲ ಡಿಕ್ಕಿ ಹೊಡೆದ ಕಾರಣ ಅದರಿಂದ ರೈಲ್ ಗಾಡಿಗಳ ಪೈಕಿ ನಾಲ್ಕು ಖಾಲಿ ಗಾಡಿಗಳೂ ಇನ್ನೊಂದು ಭರ್ತಿ ಗಾಡಿಗಳೂ ಕಂಬಿ ತಪ್ಪಿ ಬಿದ್ದುಕೊಂಡವು. ಕೆಲವು ಗಾಡಿಗಳು ಮುರಿದು ಹೋದವು. ಪ್ರಯಾಣಸ್ಥರಿಗೆ ಯಾವ ಅಪಾಯವೂ ಆಗಲಿಲ್ಲ.

❖❖❖

ಹಿಂದುಸ್ಥಾನದಲ್ಲಿ ಹಿಂದಿನ ವಾರ ೩೩,೨೮೬ ಜನರು ಪ್ಲೇಗ್ ಉಪದ್ರದಲ್ಲಿ ಮೃತಪಟ್ಟರು. ಹೋದವಾರ ೪೭,೦೦೦ ಜನರು ಸತ್ತುಹೋಗಿದ್ದಾರೆ. ಈ ಪೈಕಿ ಪಂಜಾಬ್ ಅಧಿಪತ್ಯದಲ್ಲೇ ೩೦,೦೦೦ ಕ್ಕಿಂತ ಹೆಚ್ಚು ಮರಣಗಳಾಗಿರುತ್ತವೆ. ಇತರ ಭಾಗಗಳಲ್ಲೂ ಪ್ಲೇಗ್ ಉಪದ್ರವಿದ್ದಾಗ್ಯೂ ಹಿಂದಿನ ವಾರಕ್ಕಿಂತ ಸ್ವಲ್ಪ ಕಡಿಮೆಯಾಗಿರುವುದು. ಪಂಜಾಬಿನಲ್ಲಿ ಈ ಉಪದ್ರವು ತುಂಬಾ ಕಷ್ಟನಷ್ಟಗಳನ್ನುಂಟು ಮಾಡುತ್ತಿದೆ.

❖❖❖

ಬಂಗಾಳ ಅಧಿಪತ್ಯಕ್ಕೆ ಸೇರಿದ ಢಾಕಾ ಗ್ರಾಮದಲ್ಲಿ ಮಹಾಂಗಲಾಲ್ ಎಂಬ ಸಾಹುಕಾರನ ಮನೆಗೆ ಕಳ್ಳರು ಬಿದ್ದು ೧,೨೯,೯೦೦ ರೂಪಾಯಿನ ನಗನಾಣ್ಯಗಳನ್ನು ಕಳವು ಮಾಡಿದರು. ಪೊಲೀಸಿನವರು ನಾಲ್ಕು ಜನ ಕಳ್ಳರನ್ನೂ ೮೧,೦೦೦ ರೂಪಾಯಿ ಮಾಲನ್ನೂ ಹಿಡಿದರು. ಆ ನಾಲ್ಕು ಜನರಿಗೂ ತಲಾ ಏಳು ವರುಷದ ಠಾಪ್ ಸಜಾ ಆಯಿತು. ಕಳವು ಮಾಲನ್ನು ಕೊಂಡುಕೊಂಡಿದ್ದ ಒಬ್ಬ ವರ್ತಕನಿಗೆ ಐದು ವರುಷ ಕಠಿಣ ಸಜಾ ಆಗಿದೆ.

❖❖❖

ಪಂಜಾಬಿನಲ್ಲಿ ಗವರ್ನ್‌ಮೆಂಟಿನವರು ಲಾಲಾ ಲಜಪತ್ ರಾಯ್ ಎಂಬಾತನನ್ನು ರಾಜದ್ರೋಹಿ ಎಂತಲೂ ಫಿತೂರಿ ಮಾಡುವವನೆಂತಲೂ ಹೇಳಿ ಹಿಡಿದು ಬರ್ಮಾ ಅಧಿಪತ್ಯಕ್ಕೆ ಗಡೀಪಾರು ಮಾಡಿರುತ್ತಾರಷ್ಟೆ. ಲಾಲಾ ಅಜಿತಸಿಂಗ್ ಎಂಬಾತನನ್ನೂ ಹಿಡಿದು ಗಡೀಪಾರು ಮಾಡಬೇಕೆಂದು ಪ್ರಯತ್ನಪಡುತ್ತಿದ್ದಾರೆ. ಈತನು ಇನ್ನೂ ಸರ್ಕಾರದವರ ಕೈಗೆ ಸಿಕ್ಕಿ ಇಲ್ಲ. ಹಿಡಿದುಕೊಡುವವರಿಗೆ ೫೦೦ ರೂಪಾಯಿ ಬಹುಮಾನ ಸಿಕ್ಕುವುದೆಂದು ಪ್ರಕಟಿಸಿದ್ದಾರೆ.

❖❖❖

ಹೈದರಾಬಾದಿನ ನೂರ್‌ಖಾನ್‌ಬಜಾರ್ ಎಂಬ ಬೀದಿಯಲ್ಲಿ ಒಬ್ಬ ಮುದಿಯನು ತನ್ನ ಮಗಳನ್ನು ಬಹು ಕಾಲದಿಂದಲೂ ತನ್ನ ಮನೆ ಹತ್ತಿರ ಇದ್ದ ಒಬ್ಬ ದಾವೂದಿಗೆ ಕೊಟ್ಟು ಮದುವೆ ಮಾಡಿಕೊಡುತ್ತೇನೆಂದು ಹೇಳುತ್ತಿದ್ದು ಕಡೆಗೆ ಅವಳನ್ನು ಅವನಿಗೆ ಕೊಡದೆ ಇನ್ನೊಬ್ಬನಿಗೆ ಕೊಟ್ಟು ಮದುವೆ ಮಾಡಿಬಿಟ್ಟನು. ಆ ದಾವೂದಿಯು ಮದುವೆಯ ದಿನ ಆ ಹೆಣ್ಣನ್ನು ಚಪ್ಪರದಿಂದ ಎಳೆದು ಒಯ್ದು ಕೊಂದುಹಾಕಿ, ತಾನೂ ಅಲ್ಲೇ ಇರಿದುಕೊಂಡು ಆತ್ಮಹತ್ಯ ಮಾಡಿಕೊಂಡನು.

❖❖❖

ಬಾಕೇರ್ ಪಟ್ಟಣದ ಬಳಿ ಕಸ್ ಅಬ್ದುಲ್ ಎಂಬ ಸ್ಥಳದಲ್ಲಿ ಇಬ್ಬರು ಸೇರಿಕೊಂಡು ಪ್ರಜೆಗಳಿಗೆಲ್ಲಾ ಗಾಬರಿ ಹುಟ್ಟಿಸಿ, ಸರ್ಕಾರದವರು ಹಿಂದೂ ಪ್ರಜೆಗಳನ್ನು ಕೊಲ್ಲಿಸಿ ಬಿಡುವುದಕ್ಕಾಗಿ ಪ್ಲೇಗ್ ಉಪದ್ರವನ್ನು ಬೇಕೆಂದು ಹರಡುತ್ತಾರೆಂದು ಸಾರುತ್ತಾ ಬಂದರು. ಸರ್ಕಾರದವರು ಅವರಿಬ್ಬರನ್ನೂ ಹಿಡಿದು ಸ್ವಾಮಿ ದಯಾಳ್ ಎಂಬವನಿಗೆ ಏಳು ವರುಷ ಕಠಿಣ ಸಜವನ್ನೂ ೨೦೦ ರೂಪಾಯಿ ಜುಲ್ಮಾನೆಯನ್ನೂ ಎರಡನೇ ಆಸಾಮಿ ಆನೋಖಾ ಎಂಬವನಿಗೆ ೧೮ ತಿಂಗಳ ಕಠಿಣ ಸಜವನ್ನೂ ವಿಧಿಸಿರುತ್ತಾರೆ.

❖❖❖

ಬೊಂಬಾಯಿ ಅಧಿಪತ್ಯಕ್ಕೆ ಸೇರಿದ ಸಾವಂತವಾಡಿಯಲ್ಲಿ ವರ್ತಕರು ಪದ್ಧತಿಯ ಪ್ರಕಾರ ಈ ಸಲವೂ ಬೇಸಿಗೆಯಲ್ಲಿ ಅಂಗಡೀ ಬೀದಿಯಲ್ಲಿ ಚಪ್ಪರಗಳನ್ನು ಹಾಕಿಕೊಂಡರು. ಪೊಲಿಟಿಕಲ್ ಏಜಂಟ್ ಎಂಬ ಇಂಗ್ಲಿಷ್ ಅಧಿಕಾರಿಯು ಆ ಚಪ್ಪರವನ್ನು ಕೀಳಿಸಿ ಬಿಡಬೇಕೆಂದು ಹುಕುಂ ಕೊಟ್ಟರು. ಅದನ್ನು ಕೇಳಿ ಅಲ್ಲಿನ ಕ್ರೈಸ್ತರೂ, ಮುಸಲ್ಮಾನರೂ, ಹಿಂದುಗಳೂ ಏಕವಾಗಿ ಆ ಹುಕುಮನ್ನು ರದ್ದು ಮಾಡಿದ ಹೊರತು ಯಾರೂ ಅಂಗಡಿಗಳನ್ನು ತೆಗೆಯುವದಿಲ್ಲವೆಂದು ಹಟ ಹಿಡಿದರು. ಈ ಸಂಗತಿಯು ಆ ಪಟ್ಟಣದಲ್ಲೂ ಸುತ್ತುಮುತ್ತು ಪ್ರದೇಶಗಳಲ್ಲೂ ತುಂಬಾ ಗಲಭೆಯನ್ನುಂಟು ಮಾಡಿದೆ.

❖❖❖

ಹಜಾರಿಬಾಗ್ ಡಿಸ್ಟ್ರಿಕ್ಟಿನಲ್ಲಿರುವ ಶ್ರೀಶಿಖರವೆಂಬ ಬೆಟ್ಟದ ಮೇಲೆ ಜೈನ ದೇವಾಲಯಗಳಿರುತ್ತವೆ. ಅಲ್ಲಿ ಯಾರಾದರೂ ವಾಸ ಮಾಡುವುದಿಲ್ಲ. ಈ ಬೆಟ್ಟದ ಮೇಲೆ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಸ್ಥಳ ನಿವೇಶನಗಳನ್ನು ಕೊಡಬೇಕೆಂದು ಡೆಪ್ಯುಟಿ ಕಮಿಷನರು ತೀರ್ಮಾನಿಸಿ, ಈ ಭಾಗದಲ್ಲಿ ಅಡ್ಡಿ ಏನಾದರೂ ಉಂಟೇ ಎಂದು ಜೈನ ಯಾಜಕರನ್ನು ಕೇಳಿದರು. ಅದಕ್ಕೆ ಅವರು ಜವಾಬು ಕೊಟ್ಟರು. ಏನೆಂದರೆ—ಬೆಟ್ಟದ ಮೇಲೆ ಮನೆ ಕಟ್ಟಿಕೊಂಡು ವಾಸ ಮಾಡುವುದಕ್ಕೆ ಅವಕಾಶಕೊಟ್ಟಲ್ಲಿ ಜನರು ಅಲ್ಲೂ ಪ್ರಾಣಿಗಳನ್ನು ಕೊಂದು ತಿನ್ನುವುದು ಪ್ರಾರಂಭವಾಗುತ್ತದೆ. ಪ್ರಾಣಿಹಿಂಸೆಯೇ ಯಾವ ರೀತಿಯಲ್ಲೂ ಮಾಡಕೂಡದೆಂಬುವದು ಜೈನ ಮತತತ್ವವಾಗಿರುವುದರಿಂದ ಈ ಬೆಟ್ಟದ ಮೇಲೆ ಇದುವರೆಗೆ ಅಂಥಾ ಕೃತ್ಯವ್ಯಾವದೂ ನಡೆಯದೆ ಶುದ್ಧವಾಗಿರುವುದರಿಂದಲೂ ಇನ್ನು ಮುಂದೆಯೂ ಅದೇ ರೀತಿ ನಡೆಯುತ್ತಾ ಬರಬೇಕೆಂದು ಬೇಡಿಕೊಂಡಿದ್ದಾರೆ.

ಹಿಮಾಚಲಪರ್ವತದ ತಪ್ಪಲಲ್ಲಿರುವ ಭೂತಾನ್ ರಾಜ್ಯದ ರಾಜಧಾನಿಯಾದ ಪುನಾಖಾ ನಗರದಲ್ಲಿ ಸಂಸ್ಥಾನದ ಮುಖ್ಯ ಗದ್ದೀದಾರರೆಲ್ಲಾ ಸಭೆಸೇರಿ ಟಾಂಗ್ಸಾ ಪೆನ್ಲಾಪ್‌ಯವರನ್ನು ಭೂತಾನದ ರಾಜರನ್ನಾಗಿ ನೇಮಕಮಾಡಿರುತ್ತಾರೆಂದು ಸಮಾಚಾರ ಬಂದಿದೆ. ಈ ಟಾಂಗ್ಸಾ ಪೆನ್ಲಾಪ ಯವರು ಕೆಲವು ಕಾಲಕ್ಕೆ ಮುಂಚೆ ಟಿಬೆಟ್ ರಾಜ್ಯದ ಪ್ರತಿನಿಧಿಯಾಗಿ ಕಲ್ಕತ್ತೆಗೆ ಬಂದು ಟಿಬೆಟ್ ರಾಜ್ಯಕ್ಕೂ ಇಂಗ್ಲಿಷ್ ಗವರ್ನ್‌ಮೆಂಟಿಗೂ ನಡೆದಿದ್ದ ಕರಾರನ್ನು ಒಪ್ಪಿ ಅವರವರಿಗೆ ಮಧ್ಯಸ್ಥಿಕೆ ನಡಿಸಿ, ಕರಾರಿಗೆ ರುಜುಮಾಡಿಸಿದರು. ಇವರಿಗೆ ಇಂಡಿಯಾ ಗವರ್ನ್‌ಮೆಂಟಿನವರು ಕೆ. ಸಿ. ಐ. ಇ. ಎಂಬ ಘನತರವಾದ ಬಿರುದನ್ನು ಆಗ ಕೊಟ್ಟರು. ಇಂಥವರಿಗೆ ಭೂತಾನಿನ ರಾಜ್ಯಾಧಿಪತ್ಯ ದೊರಕಿದ್ದು ತುಂಬಾ ಸಂತೋಷವಾಗಿದೆ.

❖❖❖

ಸಿಲೋನ್ (ಲಂಕಾ) ದ್ವೀಪಕ್ಕೆ ಸೇರಿದ ಗಾಲಿ ಎಂಬ ಪಟ್ಟಣದಲ್ಲಿ ಅಲೆಕ್ಸಾಂಡರ್ ಎಂಬವನು ಒಬ್ಬ ಪೊಲೀಸಿನವನನ್ನು ಕೊಂದುಹಾಕಿದನು. ಅವನನ್ನು ವಿಚಾರಣೆ ಮಾಡಿ, ಕಳೆದ ವಾರ ಜಡ್ಜಿಯವರು ಅವನಿಗೆ ಮರಣದಂಡನೆಯನ್ನು ವಿಧಿಸಿದೆ ಎಂದು ಕೋರ್ಟಿನಲ್ಲಿ ಹೇಳಿದರು. ಈ ಶಿಕ್ಷೆಯನ್ನು ಕೇಳಿದ ಒಡನೆಯೇ ಅಪರಾಧಿಯಾದ ಅಲೆಕ್ಸಾಂಡರನು ಕಟಕಟೆಯ ತುಂಡನ್ನು ಮುರಿದುಕೊಂಡು ಅದರಿಂದ ಒಬ್ಬನನ್ನು ಹೊಡೆದನು. ಕೂಡಲೇ ಒಬ್ಬ ಪೊಲೀಸಿನವನು ಅವನನ್ನು ಹಿಡಿದುಕೊಂಡನು. ಆಗ ಅಪರಾಧಿಯು ಅವನನ್ನು ಒದ್ದು ಕೆಡವಿ ಕಟಕಟೆಯನ್ನೆಲ್ಲಾ ಮುರಿದು ಧ್ವಂಸ ಮಾಡಿ ಓಡಿಹೋಗಲಾರಂಭಿಸಿದನು. ಅಷ್ಟರಲ್ಲೇ ಕೆಲವು ಪೊಲೀಸಿನವರು ಹೋಗಿ ಅವನನ್ನು ಹಿಡಿದು ಕಟ್ಟಿಹಾಕಿದರು. ಅಂತು ಆ ದಿನ ಕೋರ್ಟಿನಲ್ಲಿ ತುಂಬಾ ಗಲಭೆಯಾಯಿತು.

❖❖❖

ಅರ್ಧಾಣೆ ಬಾಬತು ಅಂಚೆ ಲಕೋಟೆಗಳ ಮೇಲೂ ಕಾಲಾಣೆ ಬಾಬತು ಕಾರ್ಡುಗಳ ಮೇಲೂ ಮುದ್ರಿಸಿರುವಂಥಾ ತಲೆಚೀಟಿಗಳನ್ನು ಕತ್ತರಿಸಿ ತೆಗೆದು ಬೇರೆ ಲಕೋಟೆಗಳಿಗೂ ಸ್ವಂತ ಕಾರ್ಡುಗಳಿಗೂ ಅಂಟಿಸಿ ಹಾಕಿದರೆ ಅಂಚೆ ಇಲಾಖೆಯವರು ಒಪ್ಪಿಕೊಳ್ಳುತ್ತಿದ್ದಾರೆ. ಆದರೆ ಇಂಥಾ ಲಕೋಟೆಗಳ ಮತ್ತು ಕಾರ್ಡುಗಳ ತಲೆಚೀಟಿಗಳನ್ನು ಕೆಲವರು ಕಳವುಮಾಡುತ್ತಾರೆಂದು ಅನೇಕರು ಆಕ್ಷೇಪಣೆ ಮಾಡಿದರು. ಇದನ್ನು ನೋಡಿ ಗವರ್ನ್‌ಮೆಂಟಿನವರು ಅಂಥಾ ಪದ್ಧತಿಯನ್ನೇ ನಿಲ್ಲಿಸಬೇಕೆಂದು ತೀರ್ಮಾನಿಸಿರುತ್ತಾರೆ. ಮುಂದಿನ ಜೂಲೈ ೧ ರಿಂದ ಆಚೆಗೆ ಮೇಲ್ಕಂಡಂತಾ ತಲೆಚೀಟಿಗಳನ್ನು ಹರಿದು ಬೇರೆ ಕಾರ್ಡು ಕವರುಗಳಿಗೆ ಅಂಟಿಸಿದಲ್ಲಿ ಅಂಥಾದ್ದಕ್ಕೆ ದುಗುಣಿ ಛಾರ್ಜನ್ನು ವಸೂಲ್ಮಾಡುತ್ತಾರೆ. ಈಗಿನಿಂದಲೇ ಜನರು ಈ ಭಾಗದಲ್ಲಿ ಎಚ್ಚರಿಕೆಯಾಗಿರುವುದು ಒಳ್ಳೆಯದು.

❖❖❖

ಉತ್ತರ ದೇಶಕ್ಕೆ ಸೇರಿದ ದೇವನಗುಂಡಿ ಎಂಬ ಪುಣ್ಯಸ್ಥಳದಲ್ಲಿ ಒಂದು ವಿಚಿತ್ರ ನಡೆದಿದೆ. ಒಂದು ಮನೆಯಲ್ಲಿ ಯಜಮಾನನು ಹೊರಕ್ಕೆ ಹೋಗಿದ್ದಾಗ ಸಂಜೆ ಹೊತ್ತಿನಲ್ಲಿ ೮—೧೦ ಮಂದಿ ಬಾಲಕರೂ ಇತರರೂ ಸೇರಿ ಆಟವಾಡುತ್ತಾ ಇದ್ದರು. ಮಳೆ ಆರಂಭವಾಗಿ ಬಹಳವಾಗಿ ಸುರಿಯುತ್ತಿರುವಲ್ಲಿ ಭಯಂಕರವಾದ ಸಿಡಿಲು ಬಿತ್ತು. ಅದು ಆ ಮನೆಯ ಒಂದು ಗೋಡೆಗೆ ಬಡಿದು ಹುಡುಗರಾಡುತ್ತಿದ್ದ ಅಂಗಳದ ನೆಲದೊಳಗೆಲ್ಲಾ ಹರಡಿಕೊಂಡಿತು. ಹುಡುಗರು ಹ್ಯಾಗಿದ್ದರೋ ಹಾಗೇ ಸ್ಮರಣೆತಪ್ಪಿ ಬಿದ್ದುಕೊಂಡರು. ಮಳೆ ನಿಂತ ಮೇಲೆ ರಾತ್ರಿ ೧೦ ಗಂಟೆಗೆ ಯಜಮಾನನು ಮನೆಗೆ ಬಂದು ದೀಪವಿಲ್ಲದ ಕತ್ತಲು ಮನೆಯೊಳಗೆ ತನ್ನ ಹೆಂಡತಿಯೂ ತನ್ನ ಮಗನೂ ಇತರ ಮಕ್ಕಳೂ ಜ್ಞಾನ ತಪ್ಪಿ ಬಿದ್ದಿರುವುದನ್ನು ನೋಡಿ ಗಾಬರಿ ಬಿದ್ದು ಕೂಗಿಕೊಂಡನು. ನೆರೆಹೊರೆಯವರು ಬಂದು ಅವರನ್ನೆಲ್ಲಾ ಎತ್ತಿಕೊಂಡು ನಾನಾ ಪ್ರಕಾರವಾಗಿ ಶೈತ್ಯೋಪಚಾರ ಮಾಡಿದಾಗ ಎಲ್ಲರಿಗೂ ಪ್ರಜ್ಞೆಯುಂಟಾಯಿತು. ಆದರೆ ಆತನ ಮಗನೊಬ್ಬ ಮಾತ್ರ ಸತ್ತೇ ಹೋಗಿದ್ದನು.

❖❖❖

ಗಾಜೀಪುರ ಡಿಸ್ಟ್ರಿಕ್ಟಿಗೆ ಸೇರಿದ ದುಲ್ಲಾಪುರವೆಂಬ ರೈಲ್ವೆ ಸ್ಟೇಷನ್ ಬಳಿ ಒಂದು ಅಪೂರ್ವವಾದ ಸಂಗತಿ ನಡೆದಿದೆ. ಒಂದು ದಿನ ಮಧ್ಯಾಹ್ನ ೨ ಗಂಟೆಯ ಮೇಲೆ ಆಕಾಶವು ನಿರ್ಮಲವಾಗಿತ್ತು. ಪಶ್ಚಿಮ ಗಾಳಿಯು ಬೀಸುತ್ತಿರುವಲ್ಲಿ ಒಂದು ಭಯಂಕರವಾದ ದೊಡ್ಡ ಶಬ್ದ ಕೇಳಿಬಂತು. ಒಡನೆಯೇ ಎರಡನೇ ಸಲ ಅದೇ ಶಬ್ದವಾಯಿತು. ಮೂರನೇ ಸಲವೂ ಅದೇ ಶಬ್ದವಾಯಿತು. ಈ ಶಬ್ದವು ಬಹಳ ಗಟ್ಟಿಯಾಗಿದ್ದುದರಿಂದ ಅದು ಅಲ್ಲಿಂದ ೨೬ ಮೈಲಿ ದೂರದಲ್ಲಿದ್ದ ಆಜಾಂಘಡಕ್ಕೆ ಕೇಳಿಸಿತು. ಆ ಸುತ್ತುಮುತ್ತಿನ ಎಲ್ಲಾ ಗ್ರಾಮಗಳ ಪ್ರಜೆಗಳೂ ತುಂಬಾ ಗಾಬರಿ ಬಿದ್ದು ಮನೆಗಳನ್ನು ಬಿಟ್ಟು ಮೈದಾನುಗಳಿಗೆ ಓಡಿಹೋಗಿ ನಿಂತರು. ರೈಲ್ ಸ್ಟೇಷನ್ ಬಳಿ ಏಳೆಂಟು ಭಾರೀ ಕಲ್ಲುಗಳು ಹಾರಿಬಂದು ಬಿದ್ದಿದ್ದವು. ಅವು ಕಪ್ಪಾಗಿಯೂ ಮುರಿದರೆ ಒಡೆಯುವಂತೆಯೂ ಬೆಚ್ಚಗೆ ಕಾಯುತ್ತಲೂ ಇದ್ದವು. ಜನರೆಲ್ಲಾ ಈ ಆಶ್ಚರ್ಯಯುಕ್ತವಾದ ಪದಾರ್ಥವನ್ನು ಮುರಿದು ಸ್ವಲ್ಪ ಸ್ವಲ್ಪ ಮನೆಗೆ ತೆಗೆದುಕೊಂಡು ಹೋಗಿ ಇಟ್ಟುಕೊಂಡಿದ್ದಾರೆ. ಆ ಪದಾರ್ಥವು ಮೊದಲು ೨೦—೩೦ ಅಡಿ ಉದ್ದವಾಗಿತ್ತೆಂತಲೂ ನೆಲದ ಮೇಲೆ ಬಿದ್ದ ಒಡನೆಯೇ ಒಡೆದು ಅನೇಕ ಚೂರುಗಳಾದವೆಂತಲೂ ತಿಳಿದುಬಂದಿದೆ.

❖❖❖

ಮಣಿಪುರ ಸಂಸ್ಥಾನವು ಕಳೆದ ೧೬ ವರುಷಗಳಿಂದಲೂ ಇಂಗ್ಲಿಷ್ ಗವರ್ನ್‌ಮೆಂಟಿನವರ ಸ್ವಾಧೀನದಲ್ಲಿತ್ತು. ಹೀಗಾಗಲು ಕಾರಣವೇನೆಂದರೆ—ಕಳೆದ ೧೮೯೧ನೆ ಇಸವಿಯಲ್ಲಿ ಮಣಿಪುರ ಸಂಸ್ಥಾನದ ಸೇನಾಪತಿಯಾದ ಟಿಕೇಂದ್ರಜಿತಸಿಂಗನು ಆಗಿದ್ದ ರಾಜನನ್ನು ಸಿಂಹಾಸನದಿಂದ ಓಡಿಸಿ, ಯುವರಾಜನನ್ನು ರಾಜನಾಗಿ ನೇಮಿಸಿದನು. ಈ ಸಂಗತಿಯು ಅಸ್ಸಾಂ ಛೀಫ್ ಕಮಿಷನರ್ ಮೆ॥ ಕ್ವಿಂಟನ್‌ಯವರಿಗೆ ೧೮೯೧ನೆ ಫೆಬ್ರವರಿಯಲ್ಲಿ ತಿಳಿದು, ಆ ಸೇನಾಪತಿಯನ್ನು ದಂಡಿಸುವುದಕ್ಕಾಗಿ ೪೦೦ ಘೂರ್ಕಾಸೈನ್ಯಸಹಿತ ಮಣಿಪುರಕ್ಕೆ ಹೋದರು. ಅಲ್ಲಿ ಅವರಿಗೂ ಸೇನಾಪತಿಗೂ ಕಾಗದಪತ್ರಗಳು ನಡೆದವು. ಕಡೆಗೆ ಮೆ॥ ಕ್ವಿಂಟನ್‌ರವರು ರೆಸಿಡೆಂಟ್ ಮೆ॥ ಗ್ರಿಮ್‌ವುಡ್‌ಯವರ ಮೂಲಕ ಸೇನಾಪತಿಗೆ ಕಡೆಯ ಮಾತನ್ನು ಹೇಳಿಕಳುಹಿಸಿದರು. ಸೇನಾಪತಿಯು ಆ ಮಾತನ್ನು ಲಕ್ಷ್ಯಮಾಡಲಿಲ್ಲ. ಆತನನ್ನು ಹಿಡಿಯಬೇಕೆಂದು ಪ್ರಯತ್ನಪಡುವಲ್ಲಿ ಯುದ್ಧನಡೆದು ಬ್ರಾಕನ್‌ಬರಿ ಎಂಬ ಸೈನ್ಯಾಧಿಪತಿಯು ಕಾಲವಾದನು. ಮಣಿಪುರದ ಸೈನಿಕರು ಅಧಿಕ ಸಂಖ್ಯೆಯಾಗಿ ಬಂದು ಇಂಗ್ಲಿಷರಿದ್ದ ರಾಜ್ಯಕ್ಕೆ ಮುತ್ತಿಗೆ ಹಾಕಿದರು. ಆಗ ಮೆ॥ ಕ್ವಿಂಟನ್‌ರವರು ಸ್ವಲ್ಪ ಪುರಸತ್ತು ತೆಗೆದುಕೊಂಡು, ತಾವೂ ಇನ್ನು ನಾಲ್ಕುಮಂದಿ ಸರ್ದಾರರೂ ಸೇರಿ ಆಯುಧಗಳನ್ನೆಲ್ಲಾ ಬಿಟ್ಟು ಸಾಮಾನ್ಯವಾಗಿ ಮಣಿಪುರ ಕೋಟೆಯೊಳಕ್ಕೆ ಹೋದರು. ಮಣಿಪುರದವರು ದ್ರೋಹಮಾಡಿ ಆ ಐದುಮಂದಿ ಸರ್ದಾರರನ್ನೂ ಕೊಂದುಹಾಕಿದರು. ಘೂರ್ಕಾ ಸೈನ್ಯವು ವಾಪಸು ಹಿಂದುಸ್ಥಾನಕ್ಕೆ ಬಂದುಬಿಟ್ಟಿತು. ಕೆಲವು ಕಾಲದ ಮೇಲೆ ಇಂಗ್ಲಿಷ್ ಗವರ್ನ್‌ಮೆಂಟಿನವರು ಮಣಿಪುರದವರಿಗೆ ತಕ್ಕಹಾಗೆ ಶಿಕ್ಷೆವಿಧಿಸಿ, ಸೇನಾಪತಿಯನ್ನೂ ಆತನ ದಳಪತಿಯನ್ನೂ ಹಿಡಿದು ಗಲ್ಲಿಗೆಹಾಕಿ ರೀಜಂಟಾಗಿದ್ದ ರಾಜಕುಮಾರನನ್ನು ಹಿಡಿದು ಅಂಡಮಾನ್ ದ್ವೀಪಕ್ಕೆ ಕಳುಹಿಸಿ, ಸಿಂಹಾಸನಕ್ಕೆ ಹಕ್ಕುದಾರನಾಗಿದ್ದ ೫ ವರುಷದ ಚೂರಚಂದ್ ಎಂಬ ಮಗುವಿಗೆ ಪಟ್ಟಕಟ್ಟಿ, ಆ ಲಾಗಾಯತು ಕಳೆದ ೧೬ ವರುಷಗಳಿಂದಲೂ ರಾಜ್ಯಭಾರವನ್ನು ನಡಿಸುತ್ತಾ ಬಂದಿದ್ದಾರೆ. ಚೂರಚಂದ್ ಎಂಬೀ ರಾಜಕುಮಾರನು ಅಜ್ಮೀರದ ಮೇಯೋ ಕಾಲೇಜ್ ಎಂಬ ರಾಜಕುಮಾರರ ವಿದ್ಯಾಶಾಲೆಯನ್ನು ಸೇರಿ, ಯೋಗ್ಯತಾಸಿದ್ಧಿಯನ್ನು ಪಡೆದಿರುತ್ತಾರೆ. ಇವರಿಗೆ ೨೧ ವರುಷ ತುಂಬಿದ್ದರಿಂದ ಈಗ ಗವರ್ನ್‌ಮೆಂಟಿನವರು ಆ ಸಂಸ್ಥಾನದ ಸ್ವತಂತ್ರಾಧಿಕಾರವನ್ನು ವಹಿಸಿದರು. ಅವರ ಸಹಾಯಕ್ಕೆ ಒಂದು ಕೌನ್ಸಿಲ್ ಏರ್ಪಡಿಸಿ ಆರುಮಂದಿ ದೇಶೀಯ ದೊಡ್ಡ ಮನುಷ್ಯರನ್ನೂ ಮೆ॥ ಕಾಸ್‌ಗ್ರೇವ್ ಎಂಬ ಸರ್ದಾರರನ್ನೂ ಮೆಂಬರುಗಳಾಗಿ ಗೊತ್ತುಮಾಡಿದ್ದಾರೆ. ಮಣಿಪುರ ಸಂಸ್ಥಾನವು ೮,೦೦೦ ಚದರಮೈಲಿ ವಿಸ್ತಾರವುಳ್ಳದ್ದು. ವರುಷಕ್ಕೆ ಮೂರುವರೆ ಲಕ್ಷ ರೂಪಾಯಿ ಉತ್ಪತ್ತಿಯಾಗುತ್ತದೆ.

ವಿದೇಶ ವರ್ತಮಾನಗಳು.

ಕ್ಯಾಲಿಫೋರ್ನಿಯಾ ಡಿಸ್ಟ್ರಿಕ್ಟಿಗೆ ಸೇರಿದ ಲೋಡಾ ಎಂಬ ಸ್ಥಳದಲ್ಲಿ ರೈಲ್ ಗಾಡಿಗಳ ಅಪಘಾತ ನಡೆದು ೨೫ ಜನರು ಮೃತಪಟ್ಟರು, ೧೫ ಮಂದಿಗೆ ಗಾಯಗಳಾದವು.

❖❖❖

ಸಿಯಾಮಿನ ದೊರೆಯವರು ಲಾರ್ಡ್ ಕರ್ಜನ್‌ರವರ ಹೊಸ ಮನೆಯಾದ ರೀಗೇಟ್ ಪ್ರೈಯೊರಿ ಎಂಬ ಭವನಕ್ಕೆ ದಯಮಾಡಿ ಕೆಲವು ದಿನ ಇದ್ದು ಬರುತ್ತಾರೆಂದು ತಂತೀ ವರ್ತಮಾನ ಬಂದಿದೆ.

❖❖❖

ಮ್ಯಾಂಚೂರಿಯಾ ಸೀಮೆಯಲ್ಲಿ ರೈಲ್ ರಸ್ತೆಗಳನ್ನು ಬದಲಾವಣೆ ಮಾಡುವುದಕ್ಕೋಸ್ಕರ ಜಪಾನಿನವರು ಅಮೇರಿಕದ ಕಾರ್ಖಾನೆಯವರಿಗೆ ೩೬೦ ಲಕ್ಷ ರೂಪಾಯಿನ ಕಬ್ಬಿಣದ ಕಂಬಿಗಳನ್ನು ತಯಾರುಮಾಡಿ ಕಳುಹಿಸುವಂತೆ ಕಂಟ್ರಾಕ್ಟು ವಹಿಸಿದ್ದಾರೆ.

❖❖❖

ಲಂಡನ್ ಪಟ್ಟಣದಲ್ಲಿರುವ ಪ್ರಸಿದ್ಧ ವಕೀಲರು ಸೇರಿ ಒಂದು ಸಂಘವನ್ನು ಮಾಡಿಕೊಂಡಿದ್ದರು. ಆ ಪೈಕಿ ಒಬ್ಬ ಮೆಂಬರು ಸಂಘದ ಹಣದಲ್ಲಿ ಹದಿನೈದು ಲಕ್ಷ ರೂಪಾಯಿ ತನಕ ದುರುಪಯೋಗ ಪಡಿಸಿಬಿಟ್ಟು ತಲೆತಪ್ಪಿಸಿಕೊಂಡು ಹೋಗಿರುತ್ತಾನೆಂದು ತಂತೀ ವರ್ತಮಾನ ಬಂದಿದೆ.

❖❖❖

ಚೀನಾ ಅಧಿಪತ್ಯದಲ್ಲಿ ಅಫೀಮಿನ ಸೇವನೆಯು ಬಹಳ ಮಟ್ಟಿಗೆ ಕಡಿಮೆಯಾಗುತ್ತಿದೆ. ರಾಜಧಾನಿಯಾದ ಪೀಕಿಂಗ್ ನಗರದಲ್ಲಿ ಅಫೀಂ ಸೇವನೆಯು ಸಂಪೂರ್ಣವಾಗಿ ನಿಂತುಹೋಯಿತು. ಇನ್ನೂ ಅನೇಕ ಪಟ್ಟಣಗಳಲ್ಲಿ ಅಫೀಂ ಸೇವನೆ ಮಾಡುವುದು ತುಂಬಾ ಅವಮಾನಕರವೆಂದು ಜನರು ಭಾವಿಸುತ್ತಿದ್ದಾರೆ.

❖❖❖

ಚೀನಾ ರಾಜ್ಯಕ್ಕೆ ಸೇರಿದ ಕ್ಯಾಂಟನ್ ಪಟ್ಟಣದಲ್ಲಿ ಒಬ್ಬ ಯುರೋಪಿಯನ್ ವರ್ತಕನ ಅಂಗಡಿಗೆ ಸೀಮೆಯಿಂದ ಗುಟ್ಟಾಗಿ ೮,೦೦೦ ಬಂದೂಕುಗಳೂ ೫,೦೦೦ ಸನೀನುಗಳೂ ಬಿಕರಿಗೆ ಬಂದವು. ಸರ್ಕಾರಿ ಸುಂಕದ ಕಟ್ಟೆಯವರು ಅವರನ್ನೆಲ್ಲಾ ಕಿತ್ತು ಇಟ್ಟುಕೊಂಡಿದ್ದಾರೆ. ದಂಗೆಕೋರರಿಗೋಸ್ಕರ ಈ ಆಯುಧಗಳು ತರಿಸಲ್ಪಟ್ಟವೆಂದು ಹೇಳುತ್ತಾರೆ.

❖❖❖

ಯೂರೋಪ್ ಖಂಡದಲ್ಲಿರುವ ಎಟ್ನ, ಸ್ಟ್ರಾಂಬೋಲಿ ಎಂಬೀ ಎರಡು ಅಗ್ನಿ ಪರ್ವತಗಳು ಇದುವರೆಗೆ ಶಾಂತವಾಗಿದ್ದು ಈಗೀಗ ಅವುಗಳಲ್ಲಿ ಹೊಸ ಬಾಯಿಗಳುಂಟಾಗಿ ಬೆಂಕಿಯನ್ನು ಕಾರಲಾರಂಭವಾಗಿದೆ. ಈ ಬೆಂಕಿಯು ದಿನೇ ದಿನೇ ಹೆಚ್ಚಾಗುತ್ತಿರುವುದನ್ನು ನೋಡಿ ಆ ಬೆಟ್ಟಗಳ ಸುತ್ತುಮುತ್ತಿನಲ್ಲಿರುವ ಗ್ರಾಮಗಳವರು ಗಾಬರಿಬಿದ್ದು ಓಡಿಹೋಗುತ್ತಿದ್ದಾರೆ.

❖❖❖

ಚೀನಾರಾಜ್ಯದ ಕೆಲವು ಭಾಗಗಳಲ್ಲಿ ಘೋರಕ್ಷಾಮ ಪ್ರಾಪ್ತವಾಗಿದೆ. ಎಂದೂ ಕ್ಷಾಮಪೀಡಿತರಾದ ಪ್ರಜೆಗಳು ಹೊಟ್ಟೆಗಿಲ್ಲದೆ ತಮ್ಮ ಮಕ್ಕಳು ಮರಿಗಳನ್ನೇ ಕೊಂದು ತಿನ್ನುತ್ತಿದ್ದಾರೆಂದು ಮೊದಲು ವರ್ತಮಾನ ಹುಟ್ಟಿತ್ತು. ಅಲ್ಲಿನ ವೈಸ್‌ರಾಯಿಯವರು ಗೂಢಚಾರರನ್ನು ಕ್ಷಾಮಪೀಡಿತವಾದ ಪ್ರದೇಶಗಳಿಗೆ ಕಳುಹಿಸಿ, ಅದರ ನಿಜಸ್ಥಿತಿಯನ್ನು ವಿಚಾರಣೆ ಮಾಡಿಸಿದರು. ಕ್ಷಾಮಪಿಶಾಚವು ಜನರನ್ನು ಇನ್ನೂ ಬಿಟ್ಟಿಲ್ಲವಾದರೂ ಇದುವರೆಗೆ ಆ ಪ್ರಾಂತ್ಯದಲ್ಲಿ ಅಂಥಾ ಕ್ರೂರಕೃತ್ಯವೇನೂ ನಡೆದಿಲ್ಲವೆಂದು ಆ ಗೂಢಚಾರರು ಬಂದು ಅರಿಕೆ ಮಾಡಿರುತ್ತಾರೆ.

ರಷ್ಯಾ ರಾಜ್ಯದಲ್ಲಿ ಈಗಿನ ರಾಜ್ಯಭಾರವನ್ನು ಅಲೆಕೆಳಗು ಮಾಡಬೇಕೆಂದು ಸಂಕಲ್ಪ ಮಾಡಿಕೊಂಡಿರುವ ಜನರ ಪೈಕಿ ಹದಿನೆಂಟು ಮಂದಿ ರಾಜಭವನಕ್ಕೆ ನುಗ್ಗಿ ಚಕ್ರವರ್ತಿಯವರನ್ನೂ ಗ್ರ್ಯಾಂಡ್ ಡ್ಯೂಕ್ ನಿಕೋಲಸ್ ಯವರನ್ನೂ ಮಂತ್ರಿಶ್ರೇಷ್ಠರನ್ನೂ ಕೊಂದುಹಾಕಬೇಕೆಂದು ಪ್ರಯತ್ನ ಪಟ್ಟರು. ಆದರೆ ಮಂತ್ರಿಯವರು ಉಪಾಯಾಂತರದಿಂದ ಅವರನ್ನೆಲ್ಲಾ ಹಿಡಿಸಿ ಸೆರೆಮನೆಯಲ್ಲಿ ಹಾಕಿಸಿರುತ್ತಾರೆ. ಡ್ಯೂಮಾ ಪಾರ್ಲಿಮೆಂಟಿನವರು ಈ ಸುದ್ದಿಯನ್ನು ಕೇಳಿ ತುಂಬಾ ಆಗ್ರಹವನ್ನೂ ವ್ಯಸನವನ್ನೂ ಪಟ್ಟು, ಧೊರೆ ಮೊದಲಾದವರೆಲ್ಲಾ ಆ ಗಂಡಾಂತ್ರದಿಂದ ಬಿಡುಗಡೆ ಹೊಂದಿದ್ದಕ್ಕಾಗಿ ತುಂಬಾ ಆನಂದಪಟ್ಟರು.

***

ವಿಲಾಯತಿಗೆ ಸೇರಿದ ಪ್ರೆಸ್ಟನ್ ಪಟ್ಟಣದಲ್ಲಿ ೧೧೦ ವರುಷ ತುಂಬಿದ ಮಿಸ್ ರೋಸ್ ಮೊಗ್ಗ್ಸ್ ಎಂಬಾಕೆಯು ಅಮೇರಿಕದ ಟೆನ್ನಿಸಿ ಡಿಸ್ಟ್ರಿಕ್ಟಿನಲ್ಲಿರುವ ಮೆ॥ ಜಾರ್ಜ್ ಬಿ. ಬಿಂಡ್ಲೆ ಎಂಬ ೧೧೦ ವರುಷ ತುಂಬಿದಾತನನ್ನು ವರಿಸಿ ಮದುವೆ ಮಾಡಿಕೊಳ್ಳುವವಳಾಗಿದ್ದಾಳೆ. ಈ ವಿವಾಹವು ಮುಂದಿನ ಆಗೀಸ್ಟು ೨೬ ರಲ್ಲಿ ನಡೆಯುವುದು. ಇವರಿಬ್ಬರಿಗೂ ಚಿಕ್ಕಂದಿನಲ್ಲಿ ಒಬ್ಬರನ್ನೊಬ್ಬರು ಮೆಚ್ಚಿ ಮದುವೆಯಾಗಬೇಕೆಂದು ಪ್ರಯತ್ನಪಟ್ಟರು. ಆದ ಆಕೆಯ ತಂದೆತಾಯಿಗಳಿಗೆ ಇಷ್ಟವಿಲ್ಲದೆ ಅವರಿಬ್ಬರನ್ನೂ ದೂರ ಮಾಡಿದ್ದರು. ಈಚೆಗೆ ಅವರವರೇ ತಮ್ಮ ಪೂರ್ವಸ್ಥಿತಿಯನ್ನೂ ತಮ್ಮ ಈಗಿರುವ ಸ್ಥಳ ಮುಂತಾದ್ದನ್ನೂ ಪರಸ್ಪರ ತಿಳಿದುಕೊಂಡು, ಕಾಗದ ಪತ್ರಗಳನ್ನು ಬೆಳಸಿ ತಮ್ಮ ಸಂಕಲ್ಪವನ್ನು ನೆರವೇರಿಸಿಕೊಳ್ಳಬೇಕೆಂದು ಗೊತ್ತು ಮಾಡಿಕೊಂಡರು. ಪ್ರಪಂಚದಲ್ಲಿ ಇಂಥಾ ವೃದ್ಧರ ವಿವಾಹವು ಇದುವರೆಗೆ ನಡೆದಿರುವುದಿಲ್ಲವೆಂದು ಹೇಳಬಹುದು.

***

ರಷ್ಯಾ ರಾಜ್ಯದಲ್ಲಿ ಕೆಲವು ಕಡೆ ದುಷ್ಟ ಜನರ ಹಾವಳಿಯು ಇನ್ನೂ ಶಮನವಾದಂತೆ ಕಾಣುವುದಿಲ್ಲ. ಲೋಡ್ಜ್ ಪಟ್ಟಣದಲ್ಲಿ ಒಂದು ಗುಂಪಿನ ಜನರು ಅಂಚೆ ಗಾಡಿಯನ್ನು ತಡೆದು ಲೂಟಿ ಮಾಡಿ, ನಾಲ್ಕು ಜನ ಕಾಸಕ್ ಎಂಬ ಸಿಪಾಯಿಗಳನ್ನೂ ಪೋಲೀಸಿನವರನ್ನೂ ಹೊಡೆದು ಕೆಡವಿ, ಎಂಟು ಸಾವಿರ ದ್ರವ್ಯವನ್ನು ಎತ್ತಿಕೊಂಡು ಹೋದರು. ಸ್ವಲ್ಪ ಹೊತ್ತಿನ ಮೇಲೆ ಕಾಸಕ್ ಸಿಪಾಯಿಗಳು ಆ ಸ್ಥಳಕ್ಕೆ ಬಂದು ಸಮೀಪದಲ್ಲಿರುವ ಒಂದು ಹತ್ತಿಯ ಕಾರ್ಖಾನೆಯೊಳಕ್ಕೆ ನುಗ್ಗಿ ತಾರತಮ್ಯ ನೋಡದೆ ಕೂಲಿಕಾರರ ಮೇಲೆ ಗುಂಡು ಹೊಡೆದರು. ಹದಿನೈದು ಮಂದಿ ಸತ್ತರು, ಮೂವತ್ತು ಜನರಿಗಿಂತಲೂ ಹೆಚ್ಚಾಗಿ ಗಾಯಪಟ್ಟರು. ಇನ್ನೊಂದು ದಿನ ವಾರ್ಸಾ ಪಟ್ಟಣದಲ್ಲಿ ದುಷ್ಟ ಜನರ ಒಂದು ಗುಂಪು ರೈಲ್ವೆ ಆಫೀಸಿಗೆ ನುಗ್ಗಿ ಕಾವಲು ಕಾಯುತ್ತಿದ್ದ ಆರು ಜನ ಸಿಪಾಯಿಗಳನ್ನು ಹೊಡೆದು ಗಾಯಮಾಡಿ ಕೊಂದುಬಿಟ್ಟು, ಒಳಗಿದ್ದ ಹತ್ತು ಸಾವಿರ ದ್ರವ್ಯವನ್ನು ಅಪಹರಿಸಿಕೊಂಡು ಹೋದರು. ಸಿಪಾಯಿಗಳು ಆ ಕಳ್ಳ ಗುಂಪಿನವರನ್ನು ಹಿಂಡಟ್ಟಿಕೊಂಡು ಹೋಗಿ ೧೩ ಮಂದಿಯನ್ನು ಕೊಂದರು; ಕೆಲವರನ್ನು ಗಾಯ ಮಾಡಿದರು. ಮೇಲ್ಕಂಡ ಎರಡು ಕೃತ್ಯಗಳೂ ಪಟ್ಟಣದ ಮಧ್ಯೆ ಹಗಲಿನಲ್ಲಿ ನಡೆದಿರುತ್ತವೆ. ಈಚೆಗೆ ಲಾಡ್ಜ್ ಪಟ್ಟಣದ ಕಾರ್ಖಾನೆಯೊಳಗೆ ನಡೆದ ದೊಂಬಿಯಲ್ಲಿ ೨೨ ಮಂದಿ ಕೊಲ್ಲಲ್ಪಟ್ಟರೆಂತಲೂ, ೬೮ ಜನರಿಗೆ ಗಾಯಗಳಾದವೆಂತಲೂ ತಂತೀ ವರ್ತಮಾನ ಬಂದಿದೆ

***

ಇಂಗ್ಲೇಂಡಿನಲ್ಲಿ ರೈಲ್ವೆ ಕಂಪನಿಗಳ ನೌಕರಮಾನೆಯವರು ಸುಮಾರು ೬೫,೦೦೦ ಮಂದಿಸೇರಿ ಒಂದು ಸಂಘವನ್ನು ಮಾಡಿಕೊಂಡಿದ್ದಾರೆ. ಇವರು ಕೆಲವು ದಿನಗಳಿಂದ ಸುಮಾರು ೧೪೦ ಕಡೆಗಳಲ್ಲಿ ಸಭೆಗಳನ್ನು ನಡಿಸಿ, ತಮ್ಮ ಯಜಮಾನರಾದ ರೈಲ್ ಕಂಪನಿಗಳ ಮ್ಯಾನೇಜರುಗಳಿಂದ ಕೆಲವು ರಿಯಾಯತಿಗಳನ್ನು ಸಂಪಾದಿಸಿ ಕೊಳ್ಳಬೇಕೆಂದು ಪ್ರಯತ್ನಪಟ್ಟರು. ಅವರು ಕೇಳುವದೇನಂದರೆ—ರೈಲ್ ಕಂಪನಿಯವರು ತಮ್ಮ ಸೇವಕರಿಂದ ದಿನಕ್ಕೆ ಎಂಟು ಗಂಟೆಗಳಿಗಿಂತಲೂ ಹೆಚ್ಚಾಗಿ ಕೆಲಸ ತೆಗೆದು ಕೊಳ್ಳಕೂಡದು. ಹಾಗೇನಾದರೂ ಹೆಚ್ಚು ಕೆಲಸ ತೆಗೆದು ಕೊಳ್ಳಬೇಕಾದರೆ ಹೆಚ್ಚಾದ ಪ್ರತಿ ಒಂದು ಗಂಟೆಗೂ ಹೆಚ್ಚು ರುಸುಮನ್ನು ಗೊತ್ತುಮಾಡಿ ಕೊಡಬೇಕು. ಪ್ರತಿ ಒಬ್ಬ ನೌಕರನಿಗೂ ಈಗಿರುವ ಸಂಬಳವನ್ನು ವಾರಕ್ಕೆ ಒಂದೂವರೆ ರೂಪಾಯಿಯಂತೆ ಜಾಸ್ತಿ ಮಾಡಿ ಕೊಡಬೇಕು. ಇದಲ್ಲದೆ ತಮ್ಮ ಸಂಘದ ಪರವಾಗಿ ಚುನಾಯಿಸಲ್ಪಟ್ಟಿರುವ ಪ್ರತಿನಿಧಿಗಳು ಸಂಘದ ಮೆಂಬರುಗಳ ಕ್ಷೇಮವನ್ನು ಬಯಸಿ ಯಾವ ಯಾವ ಏರ್ಪಾಡು ಸೂಚಿಸಿದಾಗ್ಯೂ ಕಂಪನಿಯವರು ಅದರಂತೆ ಒಪ್ಪಿಕೊಂಡು ಅವರ ಮಾತಿಗೆ ಗೌರವತೆಯನ್ನು ಕೊಡಬೇಕು. ರೈಲ್ ನಡಿಸುವಂಥಾ ನೌಕರರನ್ನು ಪ್ರತಿದಿನವೂ ಬಹಳ ದೀರ್ಘಕಾಲ ಕೆಲಸ ಮಾಡಬೇಕೆಂದು ವಿಧಿಸಿರುವದರಿಂದ ಅವರಿಗೆ ಜುಗುಪ್ಸೆಯುಂಟಾಗಿ ಅಲಕ್ಷ್ಯದಿಂದ ಗಾಡಿನಡಿಸುವುದಕ್ಕೂ ಅನಾಹುತಗಳು ನಡಿಯುವದಕ್ಕೂ ಕಾರಣವಾಗಿದೆ. ಇದನ್ನು ಕೂಡಲೇ ನಿಲ್ಲಿಸಬೇಕು. ಇಂಥಾ ಏರ್ಪಾಡುಗಳನ್ನು ಈಗಾಗಲೇ ಮಾಡಿ ಜಾರಿಗೆ ತರುವುದಕ್ಕಾಗಲಾರದೆಂದೂ, ಅದಕ್ಕೆಲ್ಲಾ ಸುಮಾರು ಹತ್ತೂವರೆ ಕೋಟಿ ರೂಪಾಯಿ ಬೇಕಾಗುವುದೆಂತಲೂ ರೈಲ್ ಕಂಪನಿಯವರು ಹೇಳುತ್ತಿದ್ದಾರೆ.

ರಾಜಧಾನಿಯ ಮ್ಯುನಿಸಿಪಲ್ ಮೀಟಿಂಗು.

ಕಳೆದ ಶನಿವಾರ ಬೆಳಗ್ಗೆ ಮೈಸೂರು ಪಟ್ಟಣದ ಮ್ಯುನಿಸಿಪಲ್ ಕೌನ್ಸಿಲರುಗಳು ಟೌನ್ ಹಾಲ್ ಬಂಗಲೆಯಲ್ಲಿ ಸಭೆ ಸೇರಿ ತಿಂಗಳು ಕಟ್ಟಲೆಯ ಮೀಟಿಂಗನ್ನು ನಡಿಸಿದರು. ಕಳೆದ ಏಪ್ರಿಲ್ ತಿಂಗಳಲ್ಲಿ ಮ್ಯುನಿಸಿಪಾಲಿಟಿಗೆ ೧೧,೮೩೦ ಚಿಲ್ಲರೆ ರೂಪಾಯಿ ಉತ್ಪತ್ತಿಯಾಯಿತು, ೩,೯೪೪ ಚಿಲ್ಲರೆ ರೂಪಾಯಿ ಖರ್ಚಾಗಿದೆ. ಜನನ ೭೩; ಮರಣ—ಪ್ಲೇಗ್ ೧೨, ವಾಂತಿಭೇದಿ ೫, ಜ್ವರ ೨೧, ಇತರ ಕಾರಣಗಳು ೧೪೫, ಒಟ್ಟು ೧೮೩ ಎಂದು ತಿಳಿದುಬಂತು.

ಅಗ್ರಹಾರದ ಕಡೇ ಭಾಗದಲ್ಲಿ ಯಜ್ಞಮಾಡುವುದಕ್ಕೆ ಹರಳು ಬೇಯಿಸುವವರ ಮನೆಗಳನ್ನೆಲ್ಲಾ ಅಲ್ಲಿಂದ ತೆಗೆದು ಪಟ್ಟಣದ ಉತ್ತರ ಭಾಗದಲ್ಲಿ ಮಾರಗೊಂಡನ ಹಳ್ಳಿಯಲ್ಲಿ ಕಟ್ಟಿಕೊಳ್ಳುವಂತೆ ಮಾಡಬೇಕೆಂದು ಅಲ್ಲಿ ಒಂದು ಜಮೀನನ್ನು ಮ್ಯುನಿಸಿಪಾಲಿಟಿಯವರು ಕೊಂಡುಕೊಳ್ಳುವುದಾಗಿ ತೀರ್ಮಾನಿಸಿದ್ದರು. ಗವರ್ನ್‌ಮೆಂಟಿನವರು ಅದರಂತೆ ಮಂಜೂರಾದೆಂದು ಹುಕುಂ ಕೊಟ್ಟಿದ್ದಾರೆ

ಕೃಷ್ಣಮೂರ್ತಿಪುರದಲ್ಲಿ ವೆಂಕಟಕೃಷ್ಣಾಚಾರ್ರು ದೇವಸ್ಥಾನ ಕಟ್ಟಿಕೊಳ್ಳುವುದಕ್ಕೆ ಸ್ಥಳವನ್ನು ಪಡೆದು, ಕಟ್ಟಡದ ಪ್ಲಾನನ್ನು ಕಳುಹಿಸಿಕೊಟ್ಟರು. ಕೌನ್ಸಿಲರುಗಳು ಆ ಪ್ಲಾನನ್ನು ಒಪ್ಪಿರುತ್ತಾರೆ.

ಪರಕಾಳ ಮಠದ ಬೀದಿಯಲ್ಲಿರುವ ಪ್ರಸನ್ನ ವೆಂಕಟರಮಣಸ್ವಾಮಿ ದೇವಸ್ಥಾನಕ್ಕೆ ಅದರ ಎದುರು ಪಾರ್ಶ್ವದ ಖಾಲಿ ನಿವೇಶನವನ್ನು ಬಿಟ್ಟುಕೊಡಬೇಕೆಂತಲೂ ರಾಮಾನುಜಯ್ಯಂಗಾರ್ರಿಗೆ ಸೇರಿಕೊಡ ಕೂಡದೆಂತಲೂ ಆ ಬೀದಿಯ ಪ್ರಜೆಗಳು ಮಹಜರುಮಾಡಿ ಅರ್ಜಿ ಬರೆದುಕೊಂಡಿದ್ದರು. ಈ ದೇವಸ್ಥಾನಕ್ಕೆ ಮೊದಲೇ ಸ್ಥಳ ಬಿಟ್ಟುಕೊಟ್ಟಿರೋಣದರಿಂದ ಇನ್ನೂ ಹೆಚ್ಚಾಗಿ ಕೊಡಬೇಕಾದ ಅಗತ್ಯ ಕಂಡು ಬರುವುದಿಲ್ಲವೆಂದು ಮ್ಯುನಿಸಿಪಲ್ ಕೌನ್ಸಿಲರುಗಳು ತೀರ್ಮಾನ ಮಾಡಿದರು

ಜಲಪುರಿ ಬಡಾವಣೆಯಲ್ಲಿ ಕಸಾಬ್ ಖಾನೆಯನ್ನು ಚೊಕ್ಕಟವಾಗಿ ತೊಳೆಯುವುದಕ್ಕೆ ಅನುಕೂಲಿಸುವಂತೆ ಅಲ್ಲಿಗೆ ನಲ್ಲಿಯ ಮೂಲಕ ನೀರು ಸರಬರಾಜು ಮಾಡಬೇಕೆಂದೂ ಅದಕ್ಕೆ ೭೨೫ ಚಿಲ್ಲರೆ ರೂಪಾಯಿ ಬೇಕಾಗುವುದೆಂದೂ ಅಂದಾಜು ಪಟ್ಟಿ ತಯಾರಾಗಿತ್ತು. ಇದನ್ನು ಮಾಡಿಸಬಹುದೆಂದು ಕೌನ್ಸಿಲರುಗಳು ಒಪ್ಪಿಕೊಂಡಿದ್ದಾರೆ.

ರಮಾವಿಲಾಸ ಅಗ್ರಹಾರದ ಒಂದು ಬಾಡಿಗೆ ಮನೆಯಲ್ಲಿ ನೀರಿನ ಇಲಾಖೆಯವರು ತಮ್ಮ ಕಛೇರಿ ಮಾಡಿಕೊಂಡಿದ್ದಾರೆ. ಆ ಮನೆಯಲ್ಲಿರುವ ನಲ್ಲಿ ನೀರಿಗೆ ಮ್ಯುನಿಸಿಪಾಲಿಟಿಯವರು ನೀರಿನ ತೆರಿಗೆ ಮಾಫ್ ಮಾಡಬೇಕೆಂದು ಬರೆದು ಕೊಂಡಿದ್ದರು. ಕೌನ್ಸಿಲರುಗಳು ಅದು ಆಗಲಾರದೆಂದು ತೀರ್ಮಾನ ಮಾಡಿರುತ್ತಾರೆ

ರಾಜಧಾನಿಯ ಮೂಲಕ ಬಾರಾ ಮಾರ್ಗವಾಗಿ ಹೋಗುವ ದಿನಸಿ ಗಾಡಿಗಳಿಗೆ ಲೈಸೆನ್ಸ್ ಟಿಂಡಕ್ಕೆ ಒಂದಾಣೆಯಂತೆ ಸುಂಕ ವಸೂಲಾಗುತ್ತಿತ್ತು. ಇದರಿಂದ ಒಬ್ಬ ವ್ಯಾಪಾರನು ಒಂದೇ ಆಳ ಕೊಟ್ಟು ಅನೇಕ ಗಾಡಿಗಳ ಸರಕನ್ನು ತನ್ನದೆಂದು ಹೇಳಿ ಸಾಗಿಸಿಕೊಂಡು ಹೋಗಲು ಅವಕಾಶವಾಗಿ ಮ್ಯುನಿಸಿಪಾಲಿಟಿಗೆ ನಷ್ಟವಾಗುತ್ತಿತ್ತು. ಇದನ್ನು ತಪ್ಪಿಸಿ ಆ ಕ್ರಮವನ್ನೇ ಬದಲಾಯಿಸಬೇಕೆಂದು ಕೌನ್ಸಿಲರುಗಳು ತೀರ್ಮಾನ ಮಾಡಿರುವರು. ಈಗ ಅವರು ತೀರ್ಮಾನ ಮಾಡಿರುವ ಪ್ರಕಾರ ನಾಳೆ ಜೂಲೈ ೧ರ ಲಾಗಾಯಿತು ಅಂಥಾ ಬಾರಾ ಮಾರ್ಗದ ಪ್ರತಿ ಒಂದು ಗಾಡಿಗೂ ಒಂದಾಣೆಯಂತೆ ಸುಂಕ ವಸೂಲ್ಮಾಡುತ್ತಾರೆ

ಮ್ಯುನಿಸಿಪಲ್ ಆಫೀಸ್ ಕೆಲಸಕ್ಕೆ ವೈಸ್ ಪ್ರೆಸಿಡೆಂಟರು [illegible] ಬಾಬಿನ ನೌಕರರನ್ನು ಜವಾನರನ್ನಾಗಿ ನೇಮಿಸಿಕೊಂಡಿದ್ದಾರೆಂಬ ಮಾತು ಬಂದು, ವೈಸ್ ಪ್ರೆಸಿಡೆಂಟ್ರಿಗೆ ಎಷ್ಟು ಮಂದಿ ಜವಾನರು ಬೇಕಾಗಿವೆ ಎಂಬ ವಿಚಾರವು ಸ್ವಲ್ಪ ಹೊತ್ತು ಚರ್ಚೆಯಾಯಿತು. ಕಡೆಗೆ ವೈಸ್ ಪ್ರೆಸಿಡೆಂಟರು ಹಾಜರು ಮಾಡಿದ ಸಿಬ್ಬಂದಿ ಪಟ್ಟಿಯನ್ನು ಪ್ರೆಸಿಡೆಂಟರು ಸಾವಕಾಶವಾಗಿ ಪರಿಶೀಲಿಸಿ ಕಮ್ಮಿಜಾಸ್ತಿ ಮಾಡಲು ಹುಕುಂ ಕೊಡಬೇಕೆಂದು ಕೌನ್ಸಿಲರುಗಳು ತೀರ್ಮಾನ ಮಾಡಿದ್ದಾರೆ

ರಾಜಧಾನಿಯಲ್ಲಿರುವ ಬಳೆಪೇಟೆ ಎ ವಿ ಸ್ಕೂಲಿಗೆ ಪ್ರತ್ಯೇಕವಾದ ಸ್ವಂತ ಕಟ್ಟಡವಿಲ್ಲದಿರೋಣದರಿಂದ ಅದರ ಅಭಿವೃದ್ಧಿಗೆ ತುಂಬಾ ಕುಂದಕವಾಗಿದೆ ಎಂತಲೂ, ವಿಕ್ಟೋರಿಯಾ ರಸ್ತೆಯ ಎದುರಿನಲ್ಲಿ ಗಾಬಿಯಟ್ ಪ್ರಿನ್ಸ್‌ಗೂ ಬಸ್ತಿಗಳಿಗೂ ನಡುವೆ ಇರುವ ಖಾಲೀ ನಿವೇಶನವನ್ನು ಕೊಡಿಸಿದರೆ ಅಲ್ಲಿ ಸ್ಕೂಲನ್ನು ಕಟ್ಟಬಹುದೆಂತಲೂ ಆ ಕಟ್ಟಡಕ್ಕೆ ಕೆಲವು ದೇಶಸ್ಥಮನುಷ್ಯರು ಸಹಾಯಮಾಡಲು ಒಪ್ಪಿಕೊಂಡಿದ್ದಾರೆಂತಲೂ ಮೆ॥ ವೆಂಕಟಕೃಷ್ಣಯ್ಯನವರು ಸೂಚಿಸಿದರು. ಈ ವಿಷಯವು ಸ್ವಲ್ಪಹೊತ್ತು ಚರ್ಚೆಯಾಯಿತು. ಕಡೆಗೆ ಇನ್ನೊಂದು ಮೀಟಿಂಗಿನಲ್ಲಿ ಇತ್ಯರ್ಥವಾಗಬೇಕೆಂದು ಕೌನ್ಸಿಲರುಗಳು ಗೊತ್ತು ಮಾಡಿದರು.

ಅರಮನೆ ಅಂಚೆಪಿಳ್ಳಾಸದ ಶಿರಸ್ತೆದಾರ್ ಮೆ॥ ವೆಂಕಟರಮಣಯ್ಯನವರು ಸೀತಾವಿಲಾಸ ಅಗ್ರಹಾರದಲ್ಲಿ ತಮ್ಮ ಮನೆಯ ಬಲಪಾರ್ಶ್ವದಲ್ಲಿರುವ ಖಾಲಿ ನಿವೇಶನವನ್ನು ತನಗೆ ಹಚ್ಚಿಕೊಟ್ಟರೆ ತುಳಸಿ ತೋಟಮಾಡಿ ಕೊಳ್ಳುವುದಾಗಿ ತಿಳಿಸಿ ಕೇಳಿದ್ದರು. ಆ ನಿವೇಶನದಲ್ಲಿ ಮರಿಮಲ್ಲಪ್ಪನವರ ಹೈಸ್ಕೂಲಿಗೆ ಸಂಬಂಧಪಟ್ಟ ವಿದ್ಯಾರ್ಥಿನಿಲಯವನ್ನು ಕಟ್ಟಬೇಕೆಂಬ ಆಲೋಚನೆ ಇರುವುದಾಗಿ ತಿಳಿದು ಬಂದದ್ದರಿಂದ ಅದರ ಚರ್ಚೆಯನ್ನು ಇನ್ನೊಂದು ತಿಂಗಳ ತನಕ ನಿಲ್ಲಿಸಬೇಕೆಂದು ತೀರ್ಮಾನವಾಯಿತು.

ಬಾತ್ಮೀದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸ್ಥಳ ಕೊಡಲಾರೆವು. ಆದಕಾರಣ ಬಾತ್ಮೀದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ಸ್ಥಳ ಕೊಡಲಾರೆವು

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು—ಎಡಿ

ಕರೆಸ್ಪಾಂಡೆನ್ಸ್.

ಬೆಂಕಿಯಿಂದಾದ ಕಷ್ಟನಷ್ಟಗಳು.

ಅಯ್ಯಾ,

ಮಂಡಕೆರೆ ತಾಲ್ಲೋಕು ಅಗಳಿಯಲ್ಲಿ ಇದೇ ತಿಂಗಳು ೧೯ನೆ ತಾ. ಹಗಲು ೨ ಘಂಟೆಯಲ್ಲಿ ಬೇಗಾರ ಜಾತಿಯವನಾದ ಕಂಟರಂಗನ ಮಗಳು ಮಾಳ ಎಂಬುವಳು ಅಡಿಗೆಮಾಡುತ್ತಾ ಇರುವಲ್ಲಿ ಉರಿ ಹೆಚ್ಚಾಗಿ ಅವರ ಗುಡಿಸಲು ಹತ್ತಿಕೊಂಡಿತು. ಆಗ ಮಧ್ಯಾಹ್ನ ಸಮಯವಾದ್ದರಿಂದ ಜನಗಳು ಇಲ್ಲದಿದ್ದದ್ದರಿಂದಲೂ ಅವಳು ಯಾರಿಗೂ ತಿಳಿಸದೆ ಇದ್ದದ್ದರಿಂದಲೂ ಇತರ ಮನೆಗಳಿಗೂ ಉರಿ ತಗಲಿಕೊಂಡು ಸುತ್ತುಮುತ್ತು ಇದ್ದ ಸುಮಾರು ೧೮—೨೦ ಮನೆಗಳನ್ನು ದಹಿಸಿ ಬಿಟ್ಟಿತು ಅಷ್ಟರಲ್ಲಿ ಅಗಳಿ ಗ್ರಾಮದ ಜನಗಳೂ ಈ ಹಟ್ಟಿಯವರೂ ಸೇರಿ ಉರಿಯನ್ನು ಶಾಂತ ಮಾಡಿದರು. ಈ ಜನಗಳು ಸ್ವಲ್ಪ ಹಿಂದಾಗಿದ್ದರೆ ೬೦ ೭೦ ಮನೆಗಳುಳ್ಳ ಈ ಹಟ್ಟಿಯೆಲ್ಲಾ ಧ್ವಂಸವಾಗಿಹೋಗುತ್ತಿತ್ತು. ಹಗಲು ಹೊತ್ತಾದ್ದರಿಂದ ದನಕರುಗಳೇ ಆಗಲಿ ಮನುಷ್ಯರೇ ಆಗಲಿ ಯಾರೂ ಅಗ್ನಿಗೆ ಸಿಕ್ಕದೆ ಇದ್ದದ್ದಕ್ಕಾಗಿ ಸಂತೋಷಿಸಬೇಕಾಗಿದೆ. ಇಲ್ಲಿ ಈಗ ಸುಗ್ಗಿ ಕಾಲದ ಆಖೈರು ಆದದ್ದರಿಂದ ಆ ಬಡಬಗ್ಗರು ಕೂಡಿಸಿಟ್ಟುಕೊಂಡಿದ್ದ ದವಸವೆಲ್ಲಾ ಅಗ್ನಿಯ ಪಾಲಾಯಿತು. ಇದೂ ಅಲ್ಲದೆ ಇವರಲ್ಲಿ ಕೆಲವರು ಲಗ್ನದ ಉದ್ದೇಶ್ಯವಾಗಿ ಅಕ್ಕಿ ಬೇಳೆ ದುಡ್ಡು ಮುಂತಾದ್ದನ್ನೆಲ್ಲಾ ಶೇಖರಮಾಡಿಕೊಂಡಿದ್ದರು. ಇದೆಲ್ಲಾ ನಷ್ಟವಾಯಿತು. ಸುಮಾರು ೫೦೦—೬೦೦ ರೂಪಾಯಿ ಮಾಲು ನಷ್ಟವಾಯಿತು. ೬೦ ೭೦ ಜನರು ನಿಲ್ಲುವದಕ್ಕೆ ಮನೆ ಇಲ್ಲದೆ ಅಲೆಯುತ್ತಿದ್ದಾರೆ. ಆದ್ದರಿಂದ ತಾಲ್ಲೋಕು ಅಮಲ್ದಾರರು ಇವರ ವಿಷಯವಾಗಿ ಸ್ವಲ್ಪ ನಿಗಾ ಇಟ್ಟು ಇವರಿಗೆ ಯಾವದಾದರೂ ರಿಯಾಯತಿ ತೋರಿಸಬೇಕಾದದ್ದು ಅವಶ್ಯವಾಗಿದೆ.

ಜಿ ಎಸ್. ಎಂ.

ಎರಡು ಕೆರೆಗಳ ಉಪಯೋಗವು.

ಅಯ್ಯಾ,

ತರೀಕೆರೆ ತಾಲ್ಲೋಕು ಬುಕ್ಕಾಂಬುಧಿ ಎಂಬ ಊರು ೨೫೦ ಮನೆಗಳಿಂದ ಕೂಡಿದ್ದಾಗಿ ೨ ಕೆರೆಗಳಿಂದ ಆಶ್ರಯಕ್ಕೆ ಒಳಪಟ್ಟದ್ದಾಗಿದೆ ಮೇಲ್ಕಂಡ ಕೆರೆಯಲ್ಲಿ ದೊಡ್ಡಕೆರೆ ಎಂಬುವದಾಗಿಯೂ ಚಿಕ್ಕಕೆರೆ ಎಂಬುವದಾಗಿಯೂ ಇದೆ. ಸದರಿ ದೊಡ್ಡ ಕೆರೆಯಲ್ಲಿ ೬೦ ಅಡಿ ನೀರೂ ಚಿಕ್ಕ ಕೆರೆಯಲ್ಲಿ ೧೨ ಅಡಿ ನೀರೂ ನಿಲ್ಲುತ್ತದೆ. ಇವೆರಡು ಕೆರೆಗಳ ನೀರಿನಿಂದ ಈ ಊರು ದಣಾಯಕಪುರ ಎಂಬೆರಡು ಗ್ರಾಮಗಳ ತರಿ ಬಾಗಾಯಿತು ಜಮೀನಿಗೆ ನೀರು ಸಪ್ಲೈ ಆಗಬೇಕು. ಸಾಧಾರಣವಾಗಿ ಮೇಲ್ಕಂಡ ಎರಡು ಗ್ರಾಮಗಳಿಂದಲೂ ತರೀ ಬಾಗಾಯಿತು ಸೇರಿ ೨,೦೦೦ ಎಕರೆ ಮೇಲೆ ಇರಬಹುದು. ಇದರಲ್ಲಿ ಮುಕ್ಕಾಲುಪಾಲು ಜಮೀನು ಎಲ್ಲಾ ಬುಕ್ಕಾಂಬುಧಿ ಗ್ರಾಮಕ್ಕೆ ಸೇರಿದ್ದಾಗಿದೆ. ಕಾಲುಪಾಲು ಜಮೀನು ದಣಾಯಕಪುರಕ್ಕೆ ಸೇರಿದ್ದಾಗಿದೆ. ಹೀಗಿರುವಲ್ಲಿ ಹಾಲಿ ೬೦ ಮನೆ ಗ್ರಾಮವಾದ ದಣಾಯಕಪುರದ ನಿವಾಸಿಗಳಿಗೆ ಎರಡು ಕೆರೆಗಳ ನೀರೂ ಖರ್ಚಾಗುತ್ತಿದೆ. ಅದಲ್ಲದೆ ಮೇಲ್ಕಂಡ ಚಿಕ್ಕ ಕೆರೆಯಿಂದ ಇದರ ಜೋಡು ಗ್ರಾಮ ಕೊಪ್ಪದಳ್ಳಿ, ಮಾಕನಹಳ್ಳಿ ಗ್ರಾಮದ ಪ್ರಜೆಗಳ ಜಾನುವಾರುಗಳ ಇನ್ನೂ ಸಮೀಪ ಇರುವ ೮—೧೦ ಗ್ರಾಮದ ಜಾನುವಾರುಗಳ ಪಾನಕ್ಕೆ ಇದರ ಆಶ್ರಯ ಹೊರ್ತು ಇನ್ನಾವ ಜಲಾಧಾರವೂ ಇಲ್ಲ. ಈ ಕೆಂದರೆಯಲ್ಲಿ ದಣಾಯಕಪುರದ ಜನಗಳಿಗೆ ಚಿಕ್ಕ ಕೆರೆ ನೀರು ಕಾರ್ತೀಕ ಮಾರ್ಗಶಿರ ಮಾಸದಲ್ಲೇ ಪೂರ್ತಿಯಾಗುತ್ತೆ. ನಂತರ ದೊಡ್ಡಕೆರೆ ನೀರನ್ನು ಉಪಯೋಗಿಸಿಕೊಳ್ಳಲು ಈ ಜನರು ಜಾಗರೂಕರಾಗಿರುತ್ತಾರೆ. ಕೆರೆಯ ತೂಬಿನಿಂದ ಸದಾ ೭ ಅಡಿ ಗಾತ್ರಕ್ಕೆ ನೀರು ಹೋಗುತ್ತೆ. ಈ ನೀರು [illegible] ದೆ ಸ್ನ ಕೆರೆ ನೀರು ಉಪಯೋಗಿಸಿಕೊಂಡು ಚಿಕ್ಕ ಕೆರೆಯ ನೀರನ್ನು ಬಿಟ್ಟರೆ ಇದಕ್ಕೆ ಆಶ್ರಯವಾಗಿರುವ ೮—೧೦ ಗ್ರಾಮಗಳ ಕುಟುಂಬ ಜೀವನೋಪಾಯ ನಡಸಿದಂತೆ ಆಗುತ್ತೆ. ಇದನ್ನು ಸರ್ಕಾರದಲ್ಲಿ ನಮ್ಮ ಗೌರ್ನಮೆಂಟಿನವರು ತಮ್ಮ ನೋಟೀಸಿಗೆ ತೆಗೆದುಕೊಂಡು ಸದರಿ ಗ್ರಾಮಸ್ಥರಿಗೆ ದೊಡ್ಡ ಕೆರೆ ನೀರೇ ಸದಾ ಉಪಯೋಗಿಸಿ ಈ ಚಿಕ್ಕ ಕೆರೆಯ ನೀರನ್ನು ಜಡ ರೈತರ ಉಪಯೋಗಕ್ಕೋಸ್ಕರ ಬಿಡುವಂತೆ ನೇಮಕ ಮಾಡಿಸಬೇಕೆಂದು ನಂಬಿ ಪ್ರಾರ್ಥಿಸುವ

ಪ್ರಜಾಭಿಮಾನಿ

ಹಾಸಲು ತೀರ್ವೆಯ ಮೊಕದ್ದಮೆ.

ಅಯ್ಯಾ,

ಕೊರಟಗೆರೆ ಟವುನಿನಲ್ಲಿರುವ ಬಡಾ ಹುಸೇನ್ ಸಾಹೇಬರೆಂಬುವರು ೮—೧೦ ಸಾವಿರ ರೂಪಾಯಿನ ಜವಳಿ ವ್ಯಾಪಾರಸ್ಥರಾಗಿಯೂ ಮುನಿಸಿಪಲ್ ಮೆಂಬರಾಗಿಯೂ ಮಿತವಾದಿಗಳಾಗಿಯೂ ಇದ್ದಾರೆ. ಈ ಮಾಹೆ ತಾ. ೧೫ ನೇ ಬುಧವಾರ ಮಧ್ಯಾಹ್ನ ಸುಮಾರು ೩॥ ಘಂಟೆ ಸಮಯದಲ್ಲಿ ಈ ಸಬ್ ತಾಲ್ಲೂಕಿನ ಡಿಪ್ಯುಟಿ ಅಮಲ್ದಾರರೂ ಪೋಲೀಸ್ ಜಮಾದಾರರೂ ಒಬ್ಬ ಜವಾನನ ಸಹಿತ ಸದರಿಯವರ ಅಂಗಡಿ ಬಳಿಗೆ ಬಂದು ಕೃಷ್ಣರಾಜಪುರದ ತಾಲ್ಲೂಕಿನಿಂದ ಜವಳಿ ತರಿಸಿದ್ದೀರಾ? ಹಾಸಲು ತೀರ್ವೆ ಆಗಿದೆಯೇ? ಎಂದು ಬಡಾ ಹುಸೇನ್ ಸಾಹೇಬರನ್ನು ಕೇಳಿದರು. ಅದಕ್ಕೆ ಸದರಿ ಸಾಹೇಬರು—ಜವಳಿ ತರಿಸಿರುವದು ನಿಜ, ಹಾಸಲು ತೀರ್ವೆ ಆಗಿ ಸನಗಿನ ಮೇಲೆ ಮುದ್ರೆಯೂ ಆಗಿದೆ ಎಂದು ಸದರಿ ಜವಳಿಯನ್ನೂ ಲೆಕ್ಕವನ್ನೂ ತೋರಿಸಿದರು. ಅಮಲ್ದಾರರು ಈ ಜವಳಿ ಯಾವಾಗ ಬಂತು? ಡಿಸೆಂಬರು ತಿಂಗಳಲ್ಲಿ ಬಂದ ಜವಳಿಗೆ ಏಪ್ರಿಲ್ ತಿಂಗಳಲ್ಲಿ ಹಾಸಲು ತೀರ್ವೆ ಮಾಡಲು ಕಾರಣವೇನು? ಅದುವರೆಗೆ ಜವಳಿ ಎಲ್ಲಿ ಇತ್ತು? ಎಂದು ಕೇಳಿದರು. ಅದಕ್ಕೆ ಆ ಬಡಾ ಹುಸೇನ್ ಸಾಹೇಬರು—ಜವಳಿ ಕಳುಹಿಸಿದವರಿಗೂ ನನಗೂ ತಕರಾರು ಕಾಗದ ನಡೆಯುತ್ತಾ ಇತ್ತು. ಆದ್ದರಿಂದ ಅಂಗಡಿಯಲ್ಲಿ ಮೂಟೆಯನ್ನೇ ಅಮಾನತ್ತು ಇಟ್ಟಿದ್ದೆ ಎಂದು ಹೇಳಿದ್ದಕ್ಕೆ,—ಅಂಗಡೀಲಿ ಇಡಲು ಕಾರಣವೇನು? ಎಂದು ಅಮಲ್ದಾರರು ಕೇಳಿದರು. ಅದಕ್ಕೆ ಸಾಹೇಬರು ಇನ್ನೆಲ್ಲಿ ಇಡಬೇಕು? ಸರಕಾರದವರು ಕೋಠಿ ಎಲ್ಲಿ ಇಟ್ಟಿದ್ದೀರಿ? ಎಂದು ಹೇಳಿದರು. ಅಮಲ್ದಾರರು—ಅರೆಸ್ಟ್ ಮಾಡಿದ್ದೇನೆ ತಗೊಂಡು ನಡೀರಿ ಎಂದು ಜಮಾದಾರರಿಗೆ ಹೇಳಿ ಮನೆಕಡೆ ಹೊರಟರು. ಹತ್ತಿರ ಇದ್ದ ಪೋಲೀಸು ಜವಾನ—ನಡೀರಿ ಸಾಹೇಬರೆ ಎಂದು ಕರೆದ. ಅಂಗಡಿಯಲ್ಲಿ ಯಾರೂ ಇಲ್ಲ. ಯಾರಿಗಾದರೂ ಬಿಟ್ಟು ಬರುತ್ತೇನೆ ಎಂದು ಉತ್ತರ ಕೊಟ್ಟದ್ದಕ್ಕೆ ಮನೆಕಡೆ ಹೋಗುತ್ತಾ ಇದ್ದ ಅಮಲ್ದಾರರು ಜವಾನಾ—ಕರಕೊಂಡು ಹೋಗು ಎಂದು ಗದರಿಸಿದ್ದರಿಂದ ಜಮಾದಾರರೂ ಜವಾನ ಸಹಾ ಹುಸೇನು ಸಾಹೇಬರನ್ನು ಕರಕೊಂಡು ಹೋಗಿ ಕಛೇರಿಯಲ್ಲಿ ಅರ್ಧ ಘಂಟೆ ಹೊತ್ತು ಕೂಡಿಸಿಕೊಂಡು ಇದ್ದು ನಂತರ ಇನ್ನೂ ಇಬ್ಬರು ಜವಾನರೂ ದಫೇದಾರರೂ ಜಮಾದಾ

ಪ್ರಸಂಗ ಭವನದ ಅವರನ್ನು ಅಂಗಡಿ ಬಳಿಗೆ ಕರತಂದನಂತರ ಜಿಡ್ಡುಗಟ್ಟಿದ್ದರು ಬಂದು ಪಂಚರು ನಗ್ಗರೆ ಬರಸಿ ಹಾಸಲು ತೀರ್ಮಾನ ಆಗಿದ್ದ ಸದಾ ಬವಳಿ ಯಾವತ್ತೂ ಮೂಟೆ ಕಟ್ಟಿಸಿ ವೇಷ ಸದರಿ ಜವಳಿಯನ್ನು ಅದರ ಪಟ್ಟಿಯನ್ನು ಕಛೇರಿಗೆ ತೆಗೆದುಕೊಂಡ ಹೋಗಿದಾರೆ.

ಬಿ ಆರ್.

ಹುಲಿಯ ಕಾಟವೂ ರೈತರ ಕಷ್ಟನಷ್ಟಗಳೂ.

ಸ್ವಾಮಿ,

ತೀರ್ಥಹಳ್ಳಿ ತಾಲ್ಲೂಕು ಹುಲ್ಲು ಕೋಡಿಗೆ ಸಾಗಣೆ ಕವ್ವಲೇ ಪ್ರಾಂತ ಗ್ರಾಮದಲ್ಲಿ ಈಗ ಸುಮಾರು ೭-೮ ತಿಂಗಳಿಂದೀಚಿಗೆ ಈ ಪ್ರಾಂತ್ಯದಲ್ಲಿ ಹುಲಿಯ ಬಾಧೆಯು ಹೆಚ್ಚಾಗಿ ೧೦-೧೫ ಕಾಲ್ನಡೆಗಳ ಪೆಟ್ಟಿಗೆ ಜನಾಂಗಗಳು ನಷ್ಟವಾಗಿರುತ್ತವೆ. ಹುಲಿಗಳು ನಿರ್ಭಯದಿಂದ ಸಂಚರಿಸುತ್ತವೆ. ಅಲ್ಲದೆ ಈ ಗ್ರಾಮದ ಪಟೇಲರು ದೇವಪ್ಪ ಹೆಗ್ಗಡೆಯವರ ಮನೆಯ ದನಗಳ ಕೊಟ್ಟಿಗೆ ಒಳಗೆ ಈಗ ಸುಮಾರು ೩-೪ ದಿವಸಗಳಲ್ಲಿ ರಾತ್ರಿ ಸುಮಾರು ೧೦ ಗಂಟೆಗೆ ಕಾಲದಲ್ಲಿ ಪ್ರವೇಶಿಸಿ ಸುಮಾರು ೧೦ ರೂಪಾಯಿ ಬೆಲೆ ಬಾಳುವ ಆಕಳನ್ನು ಕಚ್ಚಿ ಕೊಲ್ಲುತ್ತಿರುವ ಸಮಯದಲ್ಲಿ ಆ ಆಕಳು ಅಧಿಕವಾಗಿ ಕೂಗಿಕೊಂಡುದರಿಂದ ಮನೆಯವರು ನಿದ್ರೆಯಿಂದ ಎಚ್ಚರಗೊಂಡು ಬಂದು ನೋಡುವಷ್ಟರಲ್ಲಿ ಅವರ ಎದುರಿಗೆ ಓಡಿಹೋಯಿತು. ಅಷ್ಟರಲ್ಲಿ ಸದರಿ ಆಕಳು ಪ್ರಾಣಬಿಟ್ಟಿತು. ಈ ರೀತಿ ನಮ್ಮ ಸ್ವಂತ ಜನ ವಾರು ನಷ್ಟವಾಗುತ್ತ ಹುಲಿಯು ಈ ಪ್ರಕಾರ ನಿರ್ಭಯದಿಂದ ಸಂಚರಿಸುವಷ್ಟು ಬಂದು ಆಕಳನ್ನು ಕೊಲ್ಲುವದನ್ನು ನೋಡುವಲ್ಲಿ ಯಾವ ಕಾಲದಲ್ಲಿ ಮನುಷ್ಯರ ಮೇಲೆ ಬಿದ್ದು ಮನುಷ್ಯರಿಗೂ ಅಪಾಯ ಬರುವದೋ ಎಂಬುವ ಭೀತಿ ಅಧಿಕವಾಗಿರುತ್ತೆ.

ಈ ದುಷ್ಟ ಮೃಗಗಳನ್ನು ನಿರ್ಮೂಲಮಾಡಿಸಿಕೊಳ್ಳುವ ಎಂದರೆ ರೈತರು ಬಳ್ಳಿಸರು ತಮ್ಮ ಗ್ರಾಮದ ಸರಹದ್ದು ವಿನಾ ಇತರ ಕಡೆಗಳಿಂದ ಕಳ್ಳ ಬೇಟೆಗಾರರು ಬಂದು ಬೇಟೆಗಾರಿಕೆ ಮಾಡುವದಕ್ಕೆ ಈ ಸರ್ಕಾರದ ಆರ್ಡರ್ ಇರುವ ಪ್ರಯುಕ್ತ ಹುಲಿ ಮುಂತಾದ ಜಂತುಗಳಿಗೆ ಕೊಲ್ಲಲು ಶಿಕಾರಿ ಮಾಡುವದಕ್ಕೆ ಅನುಕೂಲವಿಲ್ಲದ ಕಾರಣದಿಂದ ರೈತಾಪಿ ವರ್ಗ್ಗಕ್ಕೆ ಜನಗಳಿಗೆ ಈ ನಿರ್ಬಂಧ ತುಂಬಾ ತಾಪ ಆದರೂ ಈ ಮಲೆನಾಡಿನ ಸರಹದ್ದಿಗೆ ಸರ್ಕಾರದಿಂದ ಶಿಕಾರಿದಾರರನ್ನು ಕಳುಹಿಸಿಕೊಟ್ಟು ಶಿಕಾರಿ ಮಾಡಿಸಿ ಈ ದುಷ್ಟ ಮೃಗಗಳನ್ನು ನಾಶಪಡಿಸಿ ಪ್ರಜೆಗಳ ತೊಂದರೆಗಳನ್ನು ನಿವಾರಣೆ ಮಾಡಿಸುತ್ತಿದ್ದರೂ ಚಿಂತೆ ಇರಲಿಲ್ಲ. ಆ ಪ್ರಕಾರ ಸರ್ಕಾರದವರು ಇದನ್ನು ಮಾಡುವದಿಲ್ಲ; ತಾವೇ ಶಿಕಾರಿ ಮಾಡಿಕೊಳ್ಳುವಂತೆ ರೈತ ರಿಗೆ ಸರ್ಕಾರದವರು ಸ್ವಾತಂತ್ರವನ್ನೂ ಕೊಡುವದಿಲ್ಲ. ಈ ಕಾರಣದಿಂದ ದುಷ್ಟ ಮೃಗಗಳು ಹೆಚ್ಚಿ ಅನ್ಯಾಯವಾಗಿ ಅನೇಕ ಬಡ ರೈತರಿಗೆ ಇತರರಿಗೂ ಆಗುವ ನಷ್ಟವನ್ನು ಅಷ್ಟಿಷ್ಟೆಂದು ಹೇಳಲಸಾಧ್ಯವಾಗಿದೆ.

ಆಕಾರಣ ಇನ್ನು ಮುಂದೆ ಲೈಸನ್ಸ್ ಉಳ್ಳವರು ತಮ್ಮ ತಮ್ಮ ಬಂದೂಕುಗಳನ್ನು ತೆಗೆದುಕೊಂಡು ಈ ದುಷ್ಟ ಮೃಗಗಳ ಹಾವಳಿ ಅಧಿಕವಾಗಿರುವ ಕಡೆಗೆ ಹೋಗಿ ಶಿಕಾರಿ ಮಾಡಿ ತಮ್ಮ ತಮ್ಮ ಕಷ್ಟಗಳನ್ನು ಹೋಗಲಾಡಿಸಿಕೊಳ್ಳುವಂತೆ ರೈತಾಪಿ ವರ್ಗ್ಗದ ಜನಗಳಿಗೆ ಸರ್ಕಾರದ ಆರ್ಡರ್ ಕೊಡಿಸುವಂತೆಯೇ ಆಗಲಿ, ಅಥವಾ ಸರ್ಕಾರದಿಂದ ವರುಷಕ್ಕೆ ೩-೪ ತಿಂಗಳ ವರೆಗೆ ಈ ಮಲೆನಾಡು ವಗ್ಗೆರೆ ದುಷ್ಟ ಮೃಗಗಳಿರುವ ಕಡೆಗೆ ಶಿಕಾರಿಗಾರರನ್ನು ಕಳುಹಿಸಿ ಶಿಕಾರಿ ಮಾಡಿಸಿ ತೊಂದರೆಗಳನ್ನು ನಿವಾರಣೆ ಮಾಡಿಸಿಕೊಡುವಂತೆ ಏರ್ಪಾಡು ಮಾಡುವಂತೆಯೇ ಆಗಲಿ ಘನವನ್ನು ಹೊಂದಿದ ಮೈಸೂರು ಸರ್ಕಾರು ಈ ದುಃಖಕರವಾದ ಸಂಗತಿಯನ್ನು ತಮ್ಮ ದಿವ್ಯ ಚಿತ್ತಕ್ಕೆ ತಂದು ಶೀಘ್ರವಾಗಿ ಜಾರಿಗೆ ತಂದು ನಮ್ಮಂಥ ಬಡ ರೈತರುಗಳನ್ನು ಸಂರಕ್ಷಣೆ ಮಾಡಿ ಕೀರ್ತಿ ಪಡೆಯಬೇಕೆಂದು ಪ್ರಾರ್ಥಿಸಿಕೊಂಡಿದೇನೆ.

ಹಿತಚಿಂತಕ.

ತಾಲ್ಲೋಕು ವರ್ತಮಾನಗಳು.

ನಂಜನಗೂಡು.—ಈ ಪ್ರಾಂತ್ಯ ಮಳೆ ಚನ್ನಾಗಿ ಆಗಿದೆ. ಜೋಳ ಪೈರು ಚನ್ನಾಗಿ ಬೆಳೆದಿವೆ. ದನ ಕರುಗಳಿಗೆ ನೀರಿಗೂ ಹುಲ್ಲಿಗೂ ಕೊರತೆ ಇಲ್ಲ. ಎಲ್ಲಲ್ಲಿಯೂ ಹಸುರಾಗಿ ನೋಡೋಕ್ಕೆ ಮನೋಹರವಾಗಿದೆ. ೪-೫ ತಿಂಗಳಿಂದಿದ್ದ ಕಾಲರಾ ರೋಗವು ಶಾಂತಿಯಾದ ಹಾಗೆ ತೋರುತ್ತೆ.—ಹಿಂದಿನ ವಾರ ವೀರನಗೆರೆ ಆಸ್ಪತ್ರೆ ಅಸಿಸ್ಟೆಂಟರ ಬದಲಿ ಈ ಪ್ರಾಂತ್ಯ ಒಬ್ಬ ಸ್ತ್ರೀ ವೈದ್ಯರಿಂದ ತಲೆನೋವಿಗೆ ಔಷಧ ತೆಗೆದುಕೊಳ್ಳಲು ನಂಜನಗೂಡಿಗೆ ಬಂದು ಇಲ್ಲಿ ಒಂದು ದಿನ ಇದ್ದರು. ಸ್ವಲ್ಪದರಲ್ಲಿ ಕಾಲವಾಗಿರೋಗ ತಗಲಿತು. ಇದನ್ನು ಗುಣಮಾಡಲು ಇಲ್ಲಿ ಡಾಕ್ಟರು ಬಹಳ ಸಾಹಸಪಟ್ಟರು. ಮತ್ತು ವೀರನಗರೆ ಡಾಕ್ಟರ ಕೈ ಸಹ ಇಲ್ಲಿಗೆ ಕರೆಸಿಕೊಂಡು ಅವರ ಚಿಕಿತ್ಸೆ ಮಾಡಿದರೂ ಆಕೆ ಬದುಕಲಿಲ್ಲ. ಮಂಗಳವಾರ ತೀರಿಹೋದರು. ಅವರಿಗೆ ಏದಾರು ಮಕ್ಕಳು. ಡಾಕ್ಟರ್ ಅವರ ದುಃಖ ಹೇಳತೀರದು.—ಇಲ್ಲಿ ನೋಟಿಫ್ ಕಾಂಪನಿಯು ಇದೆ. ಎರಡು ಕಾಂಪನಿಗ್ಗೂ ಮನಸ್ತಾಪ ಉಂಟಾಗಿ ಗಿರಾಕಿಗಳಿಗೆ ಪೋಟಾಪೋಟಿಯಿಂದ ಅಲ್ಪ ಕ್ರಯಕ್ಕೆ ಕೊಟ್ಟು ನಷ್ಟ ಹೊಂದಿದಾರೆ. ಇದು ಅನೇಕರಲ್ಲಿ ಹಾಸ್ಯವನ್ನುಂಟುಮಾಡಿದೆ.

ಹೊಳಲ್ಕೆರೆ.—ಈಗ ೧೦ ದಿವಸಗಳಿಂದ ಮಳೆ ಬಾರದೆ ಹೋದ್ದರಿಂದ ರೈತರು ತಮ್ಮ ಜಮೀನುಗಳ ರೇಕೆ ಕೆಲಸವೆಲ್ಲಾ ಪೂರೈಸಿಕೊಂಡು ಮುಖ್ಯವಾಗಿ ಮಳೆಯನ್ನು ನಿರೀಕ್ಷಿಸುವದು ಕಂಡು ಬರುತ್ತದೆ. ಈ ಬಂದ ಕೂಡಲೆ ಜಮೀನುಗಳಿಗೆ ಬೀಜ ಪೆರಾಣಿ ಮಾಡಬೇಕೆಂಬುದಾಗಿದೆ.—ಅಡಿಕೆ ತೋಟದವರು ಕೆರೆಯಲ್ಲಿ ನೀರು ಹೋದ್ದರಿಂದ ಕಪಿಲೆ ಹೊಡೆಯುವ ಕ್ರಮಕ್ಕೆ ಗುರಿಯಾಗಿದಾರೆ. ಅಡಿಕೆ ತೋಟಗಳ ಹಿಡುವಳಿದಾರರಿಗೆ ಗೌರ್ನಮೆಂಟಿನವರು ಟಾಗಾಯಿತು ಕಂದಾಯವನ್ನು ಕಮ್ಮಿಮಾಡಿಸಿ ಅಡಿಕೆ ಮೇಲಿನ ಸುಂಕ ತೆಗೆದು ಹಾಕಿಸಿದ್ದರಿಂದ ಸದರಿ ತೋಟಗಳ ಅಭಿವೃದ್ಧಿಗೆ ಬಹಳ ಅನುಕೂಲವಾಯಿತು.—ಜನಗಳು ತಾವು ಸಂಪಾದಿಸಿದ ವಸ್ತುಗಳನ್ನು ಕಾಪಾಡಿಕೊಳ್ಳುವದು ಕಳ್ಳರ ಕಾಟದಿಂದ ಅಸಾಧ್ಯವಾಗಿದೆ. ಕೆಲವು ಕಡೆ ಮನೆಗಳನ್ನು ನುಗ್ಗುವದು, ಕನ್ನ ಹಾಕುವದು, ದಾರೀ ಕಟ್ಟಿ ಸುಲಿಗೆ ಮಾಡುವದು, ಇದೆಲ್ಲಾ ಪ್ರಬಲವಾಗಿದೆ. ಸಾಹಸವಂತರಾದ ಪೋಲೀಸಿನವರು ಈ ಕಾಲದಲ್ಲಿ ಬಹಳ ಹುಷಾರಿಯಿಂದ ಕೆಟ್ಟ ಚಾಲ್ ಜನಗಳನ್ನು ಕಂಡುಹಿಡಿದು ಶಿಕ್ಷೆಗೆ ಗುರಿಪಡಿಸಿ ಸಜ್ಜನರ ಧನ ಪ್ರಾಣ ಮಾನಗಳನ್ನು ಕಾಪಾಡಬೇಕು.

ಚಿಕ್ಕಮಗಳೂರು.—ಇಲ್ಲಿ ಬಿತ್ತುವದಕ್ಕೆ ಬಿತ್ತಿ ಪಕ್ಕಿಗಳಿಗೂ ಹದವಾಗಿ ಮಳೆ ಆಯಿತು. ಈ ಊರಿಗೆ ಪ್ಲೇಗ್ ರೋಗವು ತಿರುಗಿ ತಗಲುತ್ತದೋ ಏನೋ ಎಂಬುವ ಭೀತಿ ಜನರಲ್ಲಿ ಉಂಟಾಗಿದೆ. ಅದಕ್ಕೆ ತಕ್ಕಹಾಗೆ ಇಲಿಗಳು ಅಲ್ಲಲ್ಲಿ ಬೀಳುವದಕ್ಕೆ ಪ್ರಾರಂಭವಾಗಿದೆ. ಇಲಿ ಬಿದ್ದ ಮನೆಯವರು ತಕ್ಷಣವೇ ಗುಡಿಸಲಿಗೆ ಹೋಗಬೇಕೆಂಬುವದು ಹುಲ್ಲು ಅಧಿಕಾರಿಗಳ ಅಪೇಕ್ಷೆಯಾಗಿದೆ. ಈಗಾಗಲೇ ಮುನಿಸಿಪಾಲಿಟಿಯವರು ಬಡಬಗ್ಗರಿಗೆ ಕೆಲವು ಷೆಡ್ಡುಗಳನ್ನು ಕಟ್ಟ ಸಿದ್ಧಪಡಿಸಬೇಕೆಂದು ಯೋಚಿಸುವಂತೆ ತೋರುತ್ತಿದೆ. ಮುನಿಸಿಪಾಲಿಟಿಯವರು ಈಗಿನ ವರೆಗೂ ಜನರು ಬಿಟ್ಟುಹೋಗಿದ್ದ ಮನೆಗಳನ್ನು ಬೆರಣಿ ಹೊಗೆ ಹಾಕಿ ಡಿಸಿಸ್‌ಫೆಕ್ಟ್ ಮಾಡಿಸಿ ಜನಗಳ ವಾಸಕ್ಕೆ ಅನುಕೂಲಪಡಿಸುತ್ತಾ ಇರುವಾಗಲೇ ಮತ್ತೆ ಡಿಸಿಸ್‌ಫೆಕ್ಟ್ ಮಾಡಿದ ಮನೆಗಳನ್ನೇ ತಿರುಗಿ ಬಿಡಬೇಕಾದ್ದಲ್ಲದೆ ಹಾಗೇನಾದರೂ ರೋಗದ ಹಾವಳಿ ಹೆಚ್ಚಾದಾರೆ ಬರುವ ಮಳೆಗಾಲದಲ್ಲಿ ಷೆಡ್ಡುಗಳಲ್ಲಿ ವಾಸಿಸುವದು ಹ್ಯಾಗೋ, ಕಟ್ಟಿದ ಷೆಡ್ಡುಗಳನ್ನು ಕಿತ್ತು ಹಾಕಿ, ಇನ್ನೂ ಒಂದು ಎರಡು ತಿಂಗಳೂ ಕೂಡಾ ತುಂಬಲಿಲ್ಲ. ತಿರುಗಿ ಕಟ್ಟಿಕೊಳ್ಳುವದಕ್ಕೆ ಏನು ಮಾಡಬೇಕು ಎಂಬುವ ಚಿಂತೆಯು ಜನರಲ್ಲಿ ಬಹಳವಾಗಿದೆ.—ಈ ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿ ರೋಗವು ಕಾಣಿಸಿಕೊಂಡಿರುವದಾಗಿ ವರ್ತಮಾನ. ಇಲ್ಲಿನ ಸ್ಕೂಲುಗಳನ್ನು ನೆನ್ನೆಯಿಂದಲೂ ಎರಡು ಕೊಠಡಿ ತೆರೆಯಲು ವಿದ್ಯಾಭ್ಯಾಸದ ಇಲಾಖೆಯವರು ಅಪ್ಪಣೆಕೊಟ್ಟಿರುವಂತೆ ಸ್ಕೂಲ್ ಮಾಸ್ತರುಗಳು ಹುಡುಗರನ್ನು ಸೇರಿಸಿ ಮುತುವರ್ಜಿಯಿಂದ ಪಾಠ ಹೇಳುವದಕ್ಕೆ ಅಶಕ್ತರಾದಂತೆ ತೋರುತ್ತಾರೆ. ಹುಡುಗರು ಕಮ್ಮಿಯಾಗುವ ಕಾಲ ಬರುವಂತಿದೆ ಎಂದು ವ್ಯಸನಪಡಲಾರಂಭಿಸಿದಾರೆ. ಮುನಿಸಿಪಲ್ ಅಧಿಕಾರಿಗಳು ಮಾತ್ರ ಈಗಿನ ಗ್ರಾಮ ಚಾಕರಿ ವಿಷಯದಲ್ಲಿ ಮುತುವರ್ಜಿ ವಹಿಸಿ ಎಲ್ಲಾ ಕಡೆಗಳಲ್ಲಿಯೂ ಸಂಚಾರ ಮಾಡುತ್ತಿದಾರೆ.

ದೊಡ್ಡಬಳ್ಳಾಪುರ.—ಇಲ್ಲಿ ಬಿಸಿಲಿನ ತಾಪವು ಸಹಿಸಲಶಕ್ಯವಾಗಿ ಇದೆ. ಇಲ್ಲಿ ಪ್ರತಿ ಮನೆಯಲ್ಲಿಯೂ ಕಾಯಿಲೆ ಇದ್ದೇ ಇದೆ. ಇದಲ್ಲದೆ ವಾಂತಿಭೇದಿಯೂ ಸ್ವಲ್ಪ ಮಟ್ಟಿಗೆ ಕಾಣುತ್ತೆ. ೩-೪ ಜನರು ಸತ್ತರು. ನೀರು ಕಾಯಿಸಿ ಕುಡಿಯುವ ಹಾಗೆ ಡಂಗೋರ ಹೊಡಿಸಿದಾರೆ. ದೇವನಹಳ್ಳಿ ತಿಮ್ಮಪ್ಪನವರು ಸಾಧಾರಣ ಕಾಯಿಲೆಯಿಂದ ಸತ್ತುಹೋದರು. ಇವರು ಬಹಳ ಒಳ್ಳೆಯವರು. ೩೦ ವಯಸ್ಸು ಮಾತ್ರ. ಇವರ ಮರಣಕ್ಕಾಗಿ ಬಹು ಜನರು ವ್ಯಸನಪಟ್ಟರು.—ಕಳೆದ ವಾರ ಡೆ॥ ಕ॥ ವೆ॥ ಸ್ಪೆಷಲ್ ಸಾಹೇಬರು ಇಲ್ಲಿಗೆ ದಯಮಾಡಿ ಪೋಲೀಸ್ ಸ್ಟೇಷನ್ ಮುಂದಿನ ಗಲ್ಲಿಗೆ ಚರಂಡಿ ಕಟ್ಟಿಸಿ ಕೊಡುವದಾಗಿ ಹೇಳಿದಾರಂತೆ. ಇಷ್ಟು ಮಾಡಿಸಿದರೆ ತುಂಬಾ ಪ್ರಯೋಜನ. ಮತ್ತು ಈ ತಾಲ್ಲೂಕಿನ ಕೆಂದಿ ಸರಾಬು ಬಾಬಿನಲ್ಲಿ ಈ ಸಾರಿ ಒಂದು ಸಾವಿರ ರೂಪಾಯಿ ತನಕ ಜಾಸ್ತಿಯಾಯಿತೆಂದು ತಿಳಿಯಿತು. ಈ ಕೇಸಿಗೆ ಉದ್ದಿಶ್ಯ ಸಂದೀಪಿಟ್ಟುಕ್ಕೆ ಮೆ॥ ಛಾಬಾ ಸಾಹೇಬರೂ ನಮ್ಮ ರೆಸಿಡೆಂಟ್ ಸಾಹೇಬರೂ ಬಂದಿದ್ದರು. ಮತ್ತು ಬೋಟಿಯವನ ಚೀಫ್ ಐಡ್ಡಿಯವರು ಸಹ ಬಂದಿದ್ದರಂತೆ.—೨ ವಾರಗಳ ಹಿಂದೆ ವೈಶ್ಯರ ೨ ಮನೆಗಳಿಗೆ ಕನ್ನಾ ಹಾಕಿದ್ದರು. ಪೋಲೀಸಿನವರು ಗಮನಿಸಬೇಕಾಗಿದೆ.—ಇಲ್ಲಿ ಪೋಲೀಸಿನಲ್ಲಿರುವ ಅಪ್ಪಾಜಪ್ಪ ಎಂಬಾತನು ಇಲ್ಲಿನ ಒಬ್ಬ ಸಾಬರ ಹತ್ತಿರ ಹೋಗಿ, ಹೊಟ್ಟೆ ಹಸಿವೆಗೆ ಮದ್ದು ಕೊಡಿರಿ ಎಂದು ಕೇಳಿದ್ದಕ್ಕೆ ಧೇದಿಗೆ ಒಂದು ಗುಳಿಗೆಯನ್ನು ಅಲ್ಲೇ ನುಂಗಿಸಿದನು. ಹೊತ್ತಾರೆಯಿಂದ ರಾತ್ರಿ ೯-೧೦ ಗಂಟೆಗೆ ೩೬ ಸಾರಿ ಭೇದಿ ೧೦ ಸಾರಿ ವಾಂತಿ ಆಗಿ, ಕೇವಲ ಸುಸ್ತಾಗಿ ಹೋದನು. ಅನಂತರ ವೈದ್ಯರು ಮಾಡಿದ ಯತ್ನದಿಂದಲೂ ದೇವರ ದಯದಿಂದಲೂ ವಾಸಿಯಾಗಿ ಗುಣವಾಗುತ್ತಾ ಬಂತು.

ಹೊಳೇನರಸೀಪುರ.—ಹವಾ ಅಷ್ಟು ಆರೋಗ್ಯಕರವಾಗಿಲ್ಲ. ಊರಲ್ಲಿ ಜ್ವರ, ಕೆಮ್ಮಲು, ಕಣ್ಣುನೋವು ಅಧಿಕವಾಗಿದೆ. ರೈತರು ಹೊಲಗಳನ್ನು ಹಸನು ಮಾಡಿ ಬಹಳ ಬಿತ್ತಿರುವರು. ಆದರೆ ಈಗ್ಗೆ ಒಂದು ವಾರದಿಂದ ಮಳೆ ಬಾರದ್ದರಿಂದ ಹುಟ್ಟಿದ ಪೈರೆಲ್ಲಾ ಒಣಗುತ್ತಾ ಇರುವದನ್ನು ರೈತರು ನೋಡಿ, ದೇವೇಂದ್ರನನ್ನು ಎದುರುನೋಡುತ್ತಾ ಇದ್ದಾರೆ.—ಇಂಗ್ಲಿಷ್ ಜನಗಳು ಸೇರಿದರು. ಚನ್ನರಾಯಪಟ್ಟಣದ ವಾಟರ್ ಕಂಪನಿಯವರು ಈ ಊರಲ್ಲಿ ನಾಟಕಗಳನ್ನು ಆಡಿದರು.—ಹೋದವಾರ ಸೋಮವಾರಸಂತೆ ನರಸಮ್ಮಯ್ಯನವರ ಕೊಸಮನೆಯ ಪುಟ್ಟಮ್ಮ ಆಯಿತು. ಬ್ರಾಹ್ಮಣರಿಗೂ ಬಡಬಗ್ಗರಿಗೂ ಸಮಾರಾಧನೆ ದಾನವರ್ಮ ವಗ್ಗೆರೆಗಳು ಬಹು ಧಾರಾಳವಾಗಿ ನಡೆಸಲ್ಪಟ್ಟವು. ಬಿದರಕ್ಕದಲ್ಲಿ ಕೋದ ವಾರ ನಡೆದ ಖೂನಿಯ ಪತ್ತೆಗೆ ಪೋಲೀಸ್ ಇನ್‌ಸ್ಪೆಕ್ಟರು, ಡಾಕ್ಟರು, ಅಮಲ್ದಾರರು ಮೊದಲಾಗಿ ಹೋಗಿದ್ದಾರೆ. ವಿಷಯವು ಮುಂದೆ ಗೊತ್ತಾಗುವದು.—ಈಚೆಗೆ ಕಾಲರಾ ಉಪದ್ರವು ಬಹು ಜೋರಾಗಿ, ಒಂದೇ—ದಿನ ಸುಮಾರು ೪-೧೦ ಜನಗಳು ಸತ್ತರು. ಊರಿಗೆ ಬಂದ ಜನಗಳನ್ನು ಇಷ್ಟು ಬೇಗನೆ ಗಾಬರಿಭಯದಿಂದ ತಲ್ಲಣಗೊಳ್ಳುತ್ತಿರುತ್ತಾರೆ.—ಈ ಊರಲ್ಲಿ ಮುನಿಸಿಪಾಲಿಟಿಯವರು ಮಾಡಬೇಕಾಗಿರುವ ಕೆಲಸಗಳು ಬಹಳವಾಗಿದ್ದರೂ ಯಾರೂ ಅವುಗಳಿಗೆ ಗಮನ ಕೊಡದಿರುವುದು ಒಂಬು ವಿಷಾದಕರವಾಗಿರುತ್ತೆ. ವಿನಾ ಮೂಂಕು ವಗ್ಗೆರೆ ಮಾರುವದಕ್ಕೆ ಸ್ಥಳವಿಲ್ಲವೆ, ಉತ್ತಮರು ತಿರುಗುವ ಸ್ಥಳದಲ್ಲಿ ಅಂಗಡಿಗಳನ್ನಿಟ್ಟಿರುವದರಿಂದ ನೋಡುವವರಿಗೆ ಬಹು ಹೇಸಿಕೆಯನ್ನು ಉಂಟುಮಾಡುತ್ತೆ. ಊರಿಗೆ ಬರುವ ಅಮಲ್ದಾರರುಗಳಲ್ಲಿ ಯಾರೂ ಈ ವಿಷಯಕ್ಕೆ ಗಮನಕೊಡದೆ ಇರುವದು ಬಹು ವಿಷಾದಕರವು. ನಮ್ಮ ಅಮಲ್ದಾರರು ತಮ್ಮ ಕಾಲದಲ್ಲಿ ಒಂದು ಮಾರ್ಕೆಟ್ಟನ್ನು ಕಟ್ಟಿಸಿಕೊಟ್ಟರೆ ತಮ್ಮ ಹೆಸರು ಚಿರಕಾಲ ಶಾಶ್ವತವಾಗಿರುವದರಲ್ಲಿ ಸಂದೇಹವಿಲ್ಲ. ಊರಲ್ಲಿ ಒಂದು ಕಸ್ಸಾಬುದಾರರೂ ಇಲ್ಲದಿರುವದರಿಂದ ಹೊಳೆ, ಕಾಲುವೆಗಳ ಹತ್ತಿರ ಬಹು ಹೇಸಿಕೆಯಾಗಿದೆ. ಊರಲ್ಲಿ ಕಳರು ಗುಡಿಸುವವರು ಕಸಕಡ್ಡಿಗಳನ್ನು ಗುಡಿಸಿ, ಮುಲಗಸ್ತೆಗಳರುಂದಾ ರಸ್ತೆಗಳಲ್ಲಿ ಹಾಗೇಬಿಟ್ಟು ಬಿಡುತ್ತಾರೆ. ಇದರ ಪ್ರಯುಕ್ತ ಕಸವನ್ನು ಗುಡಿಸುವದರಿಂದ ಯಾವ ಪ್ರಯೋಜನವೂ ಕಾಣಬರಲಿಲ್ಲ.

ಹೊಸದುರ್ಗ.—ಈಚೆಗೆ ಒಂದೆರಡು ಹದ ಮಳೆ ಆಯಿತು. ಈಗ ಬಿಸಿಲು ತೀಕ್ಷ್ಣವಾಗಿರುತ್ತೆ. ಡೆ॥ ೧೦ ರಲ್ಲಿ ಕೆಂದಿ ಗಾಂಜಾ ವಗ್ಗೆರೆ ಹರಾಜು ಮಾಡುವ ಉದ್ದೇಶ್ಯ ಡೆಪ್ಯೂಟಿ ಕಮಿಷನರ್ ನಂಜುಂಡಯ್ಯನವರು ಬಂದಿದ್ದರು. ಕಛೇರಿಯ ಬಳಿ ಬಹು ಜನ ಮುಂದಾಳ್ಯನರೂ, ಅಡಿಕರೂ ಸುಮಾರು ೧೦೦ ಜನರ ವರೆಗೂ ಸೇರಿದ್ದರು. ಕೆಲವು ಸ್ಟೇಲ್‌ಗಳು ಹೋದ ವರುಷಕ್ಕಿಂತಲೂ ಕಡಮೆ ಮೊಬಲಿಗೆ ಹರಾಜು ನಿಂತಿತು. ಬುಡಿಕಾಪ್ ಪ್ರಾಂತ್ಯದ ಸ್ಟೇಲ್ ಮಾತ್ರ ಪೋಟಾಪೋಟಿ ನಡೆದು ಹೋದ ವರ್ಷಕ್ಕಿಂತ ಜಾಸ್ತಿ ಆಯಿತು. ಹಿಂದಿನ ವರ್ಷ ಮಾಡಿ ಕೊಂಡಿದ್ದವರಲ್ಲಿ ಎಷ್ಟೋ ಜನರು ತಮಗೆ ನಷ್ಟವಾಯಿತೆಂದು ಹೇಳಿಕೊಂಡದ್ದರಿಂದ ಡೆಪ್ಯೂಟಿ ಕಮಿಷನರು ಕೊಂಚ ವಿಚಿತನಾದ ಇರುದೆಯನ್ನು ದಯಪಾಲಿಸಿದ್ದಕ್ಕಾಗಿ ಕಂಟ್ರಾಕ್ಟರುಗಳು ಹೊಂದಿದ್ದಾರೆ.—ಇಲ್ಲಿನ ಸಂತೆಯು ಸಾಧಾರಣವಾಗಿ ನಡೆಯುತ್ತೆ. ಕೆರೆಯಲ್ಲಿ ನೀರೆಲ್ಲಾ ಬತ್ತಿ ಬಾವಿಯ ನೀರನ್ನು ಬಳಸುತ್ತಾರೆ.—ಬೆಲಗೂರು ಪ್ರಾಂತ್ಯ ಹದ ಮಳೆಯಾಗಿದೆ. ಬೆಲಗೂರು ಕೆರೆಯಲ್ಲಿ ಕೊಂಚ ನೀರು ಇರುತ್ತೆ. ಮೊನ್ನೆ ಇಲ್ಲಿನ ಶ್ರೀ ರಾಮೇಶ್ವರ ಸ್ವಾಮಿಯ ಜಾತ್ರೆಯು ವಿಘ್ನವಿಲ್ಲದೆ ನಡೆಯಿತು. ತೇರನ್ನು ಕಳಶವಿಟ್ಟ ಮಾರನೇ ದಿವಸ ನದ ಬಳಿ ಎಳೆಯದೆ ನಿಲ್ಲಿಸಿದ್ದರು. ಜಾತ್ರೆ ಮುಗಿದ ಮಾರನೇ ದಿನ ಸದರಿ ತೇರಿಗೆ ಕಟ್ಟಿದ್ದ ಬಾವುಟ ಅರಿವೆ ಬಟ್ಟೆ ವಗ್ಗೆರೆ ಯಾವುದನ್ನೂ ಬಿಚ್ಚಿರಲಿಲ್ಲ. ಸಾಯಂಕಾಲದಲ್ಲಿ ಒಂದು ಭಾರಿ ಗಾಳಿಯು ಬೀಸಿ ಗಾಳಿಯ ಪೆಟ್ಟಿಗೆ ತೇರು ತನ್ನಷ್ಟಕ್ಕೆ ತಾನೇ ಒಡೆದುಹೋಗಿ ಮಾದಿಗರ ಜಟ್ಟಿ ಮುಂಭಾಗದ ಬೈಲಿನಲ್ಲಿ ನಿಂತಿತು. ಆ ವಿಷಯ ಹಾಳಿಗೆ ಅನೇಕ ಮರಗಳ ಕೊಂಬೆಗಳೆಲ್ಲಾ ಮುರಿದು ಬಿದ್ದವು. ಇದು ಒಂದು ಆಶ್ಚರ್ಯವಾದ ನೋಟವಾಗಿತ್ತು. ಈ ಹೊಂಗೂರು ಗ್ರಾಮ ಕೃಷ್ಣಪ್ಪನವರು ಒಂದು ದೇವಸ್ಥಾನವನ್ನು ಕಟ್ಟಿಸುತ್ತಾರೆಗಿಯೂ ಕಟ್ಟಡವು ಮುಗಿಯುತ್ತಾ ಬಂತೆಂದಾಗಿಯೂ ತಿಳಿಸುತ್ತಾ ತಾ॥ ೧೮ರ ಆಗುತ್ತಿದೆ. ಈ ವರೆವಿಗೂ ಈ ದೇವಸ್ಥಾನದಲ್ಲಿ ಶಿವಪ್ರತಿಷ್ಠೆಗಾಗಿ ಎಷ್ಟೋ ಜನರು ಸೇರಿ ಹೋಮ ಮೊದಲಾದ ಕಾರ್ಯಗಳನ್ನು ಪ್ರತಿ ದಿವಸ ನಡೆಸುತ್ತಿದಾರೆ. ಪ್ರತಿನಿತ್ಯವು ಮಧ್ಯಾಹ್ನ ಜನರ ಪರಿವಿಗೂ ಭೋಜನ ನಡೆಯುತ್ತಿದೆ. ತಾ॥ ೨೦ ಕೊನೆ ದಿನ ಇನ್ನೂ ಹೆಚ್ಚಾಗಿ ಜನರು ಸೇರಿದ್ದರು. ವೈಶ್ಯ ಜನರಿಗೂ ಬಾಕಿ ಕೆಲವು ಮತಸ್ಥರಿಗೂ ಸಂತರ್ಪಣೆ ನಡೆಯಿತು. ಈ ರೀತಿ ನಡೆದ ಕಾರ್ಯಕ್ಕೆ ಮೆ॥ ಕೃಷ್ಣಪ್ಪನವರು ವೆಚ್ಚ ಮಾಡಿದರು.

ದಾವಣಗೆರೆ.—ಸುಮಾರು ಇಪ್ಪತ್ತು ವರುಷಗಳ ಕೆಳಗೆ ಡೆಪ್ಯೂಟಿ ಕಮಿಷನರಾಗಿದ್ದ ಮೆ॥ ಶ್ರೀನಿವಾಸಯ್ಯಂಗಾರ್ ಈ ದಾವಣಗೆರೆ ಟರ್ನ್ ದೊಡ್ಡದು ಮಾಡಬೇಕೆಂಬ ಉದ್ದೇಶದಿಂದ ಕೆಲವು ರೈತರ ಜಮೀನುಗಳನ್ನು ಪಾಪಟಿ ಕಂಪ್ರಸೇಷನ್ ಬೆಲೆಗೆ ಕೊಟ್ಟು ಗೌರ್ನಮೆಂಟಿಗೆ ತೆಗೆದುಕೊಂಡರು. ಆ ಭಾಗದಲ್ಲಿ ವಿಸ್ತಾರವಾದ ರಸ್ತೆಗಳನ್ನೂ ೧೦ರು ಏಳು ಭಾವಿಗಳನ್ನೂ ೧೦—೫ ಸಾವಿರ ರೂಪಾಯಿ ಖರ್ಚಿನಿಂದ ತಯಾರುಮಾಡಿಸಿ, ಚಾಮರಾಜಪೇಟೆ, ಕೃಷ್ಣರಾಜಪೇಟೆ ನರಸರಾಜಪೇಟೆ, ಮೊದಲಾದ ಪೇಟೆಗಳನ್ನು ಏರ್ಪಡಿಸಿದರು. ತದನಂತರ ಆ ಭಾಗದಲ್ಲಿಯೇ ಬಂಗ್ಲೆಗಳನ್ನೂ ಮನೆಗಳನ್ನೂ ಕಟ್ಟಬೇಕೆಂದು ಜನಗಳಿಂದ ಮುಚ್ಚಳಿಕೆಯನ್ನು ತೆಗೆದುಕೊಂಡರು. ಈ ಕಾಲದ ವರೆಗೂ ನಿರೀಕ್ಷಿಸಿದಾಗ್ಯೂ ಆ ಭಾಗವು ಖಾಲಿಯಾಗಿ ದನ ಕರುಗಳು ಮೇಯುವದಕ್ಕೆ ತಕ್ಕುದಾಗಿರುವಂತೆ ಹೊರತು ಜನಗಳ ವಾಸಕ್ಕೆ ಯೋಗ್ಯವಾಗಿಲ್ಲ. ಆ ಜಮೀನುಗಳನ್ನು ತೆಗೆದುಕೊಂಡು ಖಾಲಿ ಬಿಟ್ಟುಕೊಂಡಿರುವದನ್ನು ನೋಡಿದರೆ ತುಂಬಾ ಆಶ್ಚರ್ಯವಾಗುತ್ತೆ. ಈ ಮಧ್ಯೆ ವರ್ಗವಾಗಿ ಹೋದ ಅಮಲ್ದಾರ್ ಮೆ॥ ಒಬೇದುಲ್ಲಾ ಸಾಹೇಬರು ರೈಲ್ ರಸ್ತೆಯ ಆಚೆ ಭಾಗದಲ್ಲಿರತಕ್ಕ ಕೆಲವು ಬಡ ರೈತರ ಜಮೀನುಗಳನ್ನು ಟರ್ನ್ ಬಡಾವಣೆ ಸಲುವಾಗಿ ತೆಗೆದುಕೊಳ್ಳಬೇಕೆಂತಲೂ, ಆ ಭಾಗದಲ್ಲಿಯೇ ಬಂಗ್ಲೆ ಮೊದಲಾದವುಗಳನ್ನು ಕಟ್ಟಿಸಬೇಕೆಂತಲೂ ರಿಕಾರ್ಡು ನಡಿಸಿ ವರ್ಗವಾಗಿ ಹೋದರು. ಅದೇ ರಿಕಾರ್ಡನ್ನು ಅನುಸರಿಸಿ ಇಲ್ಲಿನ ಕೆಲವು ಮುಂದಾಳುಗಳು ಆ ಭಾಗದಲ್ಲಿಯೇ ಕೆಲವು ಬಂಗ್ಲೆಗಳನ್ನು ಕಟ್ಟಬೇಕೆಂತ ಈಗ ಇರತಕ್ಕ ಅಮಲ್ದಾರರಿಗೆ ಪ್ರೋತ್ಸಾಹ ಪಡಿಸಿದಾರೆ. ಈ ಮಾನನೀಯರು ನ್ಯಾಯಸ್ಥರಾಗಿರುವದರಿಂದ ಪೂರ್ವದಲ್ಲಿ ಗೌರ್ನಮೆಂಟಿನವರು ೧೦—೫ ಸಾವಿರ ರೂಪಾಯಿ ಖರ್ಚು ಮಾಡಿರುವಂಥ ಟರ್ನಲ್ಲಿಯೇ ಮನೆಗಳನ್ನೂ ಬಂಗ್ಲೆಗಳನ್ನೂ ಕಟ್ಟಿಸಿ ಪಟ್ಟಣವನ್ನು ಅಲಂಕಾರ ಮಾಡಿಸಿ ರೈಲ್ ಆಚೆ ಇರತಕ್ಕ ಬಡ ರೈತರಿಗೆ ಯಾವ ತೊಂದರೆಯನ್ನೂ ಕೊಡದಿರುವರೆಂದು ನಂಬುತ್ತೇವೆ.—ಎರಡು ತಿಂಗಳ ಹಿಂದೆ ಇದೇ ದಾವಣಗೆರೆ ರೈಲ್ವೆ ಸ್ಟೇಷನ್ ಮಾಸ್ತರಿಗೆ ಮೈಸೂರಿಂದ ಒಬ್ಬ ಕೋಮಟಿಯು ಒಂದು ಜೊತೆ ಪತ್ರಕತಕವನ್ನು ತಂದುಕೊಟ್ಟು ೩೦೦ ರೂಪಾಯಿ ತೆಗೆದುಕೊಂಡಿದ್ದನೆಂಬುವದನ್ನು ಅನೇಕರು ಕೇಳಿರಬಹುದು. ಈಗ ಎರಡು ತಿಂಗಳಿಂದಲೂ ಇದೇ ದಾವಣಗೆರೆ ಸಬ್ ಡಿವಿಷನ್ ಆಫೀಸರಲ್ಲಿ ಮೊಕದ್ದಮೆ ನಡೆದು ಕಳೆದ ವಾರ ಅಪರಾಧಿಗೆ ಒಂದು ವರುಷ ಕಠಿಣ ಸಜವೂ ೩೦೦ ರೂಪಾಯಿ ಜುಲ್ಮಾನೆಯೂ ಆಗಿದೆ.

ಪೆರೂನಾವನ್ನು ಕುರಿತು ಹೆಂಗಸರೇ ಹೆಂಗಸರ ಕೂಡ ಮಾತಾಡುತ್ತಾರೆ.

38-8

ಮಿಸೆಸ್. ಮೆಗ್ರಾಫ್.

ದುರ್ಬಲದ ಅನುಭವ

ಮಿಸೆಸ್. ಎಂ ಮೆಗ್ರಾಫ್, ೧೯೯ ಡಬ್ಲ್ಯು. ೫೩ ನೆ ಬೀದಿ, ನ್ಯೂಯಾರ್ಕ್, ಎನ್ ವೈ., ಈಕೆ ಬರೆಯುವುದೇನೆಂದರೆ :—

"ಪೆರೂನಾ ನನಗೆ ಮಾಡಿರುವ ಉಪಕಾರಕ್ಕಾಗಿ ನನ್ನ ಯೋಗ್ಯತಾನುಸಾರ ನಾನು ಅದನ್ನು ಸಂತೋಷದಿಂದ ಹೊಗಳುತ್ತೇನೆ. ಎರಡು ವರುಷಗಳ ಕೆಳಗೆ ನನಗೆ ಒಂದು ವಿಧವಾದ ದುರ್ಬಲ ಪ್ರಾಪ್ತವಾಯಿತು. ನನ್ನ ಬೆನ್ನೂ ಪಕ್ಕಗಳೂ ಯಾವಾಗಲೂ ನೋಯುತ್ತಿದ್ದವು. ನನ್ನ ಅನ್ನಕೋಶದಲ್ಲಿ ಆಕ್ರಮಗಳುಂಟಾದವು. ಇದರಿಂದ ಒಂದು ಬಟ್ಟಲು ನೀರು ಕೂಡ ನನ್ನ ಹೊಟ್ಟೆಯಲ್ಲಿ ನಿಲ್ಲುತ್ತಿರಲಿಲ್ಲ. ನನಗೆ ವಾಂತಿ ಎಲ್ಲಿ ಪ್ರಾರಂಭವಾದೀತೋ ಎಂಬ ಭೀತಿಯಿಂದ ನಾನು ಊಟವನ್ನೇ ಅಪೇಕ್ಷಿಸುತ್ತಿರಲಿಲ್ಲ. ಕಳೆದ ಮೂರು ತಿಂಗಳಿಂದಲೂ ನಾನು ಪೆರೂನಾವನ್ನು ಸೇವಿಸುತ್ತಿದ್ದೇನೆ. ಈಗ ನನಗೆ ಎಂದಿನಂತೆ ಆರೋಗ್ಯವಾಗಿರುತ್ತದೆ ನನ್ನ ಅನ್ನಕೋಶವು ಎಂದಿನಂತೆ ಬಲವಾಗಿದೆ. ನನ್ನ ನರಗಳ ಹಿಂಸೆಯೂ ನಿವಾರಣೆಯಾಯಿತು. ನನ್ನ ಹಾಗೇ ಕಷ್ಟಪಡುವ ಹೆಂಗಸರಿಗೆಲ್ಲಾ ಪೆರೂನಾ ತೆಗೆದುಕೊಳ್ಳಿ ಎಂದು ಶಿಫಾರಸು ಮಾಡುತ್ತಿದ್ದೇನೆ ಆ ರೀತಿ ಅದನ್ನು ತೆಗೆದುಕೊಂಡವರು ನನ್ನನ್ನು ವಂದಿಸುತ್ತಾರೆ"

ಮಿಸೆಸ್. ಮೂರ್ಸ್.

ಮಿಸೆಸ್ ಮೂರ್ಸ್, ಆರ್. ಎಫ್. ಡಿ. ಬ ಔಂಟ್ಸ್, ಓಹಿ, ಮೆಂಬರ್ ಆರ್ಡರ್ ಆಫ್ ವಾಷಿಂಗ್‌ಟನ್, ಈಕೆ ಬರೆಯುವುದನ್ನು ಕೇಳಿ:—

"ಹೆಂಗಸಿನ ಧರ್ಮಕ್ಕೆ ಉಂಟಾಗುವ ಹಿಂಸೆಯು ನನಗೆ ನಾಲ್ಕು ವರುಷಗಳಿಂದ ಪ್ರಾಪ್ತವಾಗಿ ಬಹಳ ಕಷ್ಟಪಟ್ಟೆನು. ನನ್ನ ಬೆನ್ನಿನಲ್ಲಿ ಯುದ್ಧಕ್ಕೆ ಕೆಟ್ಟ ನೋವಿತ್ತು. ನನಗೆ ಅದರಿಂದ ವಿಶೇಷ ದುರ್ಬಲವಾಗಿತ್ತು; ತುಂಬಾ ದಣಿವಾದಂತೆ ನಿಶ್ಶಕ್ತಿಯಾಗಿತ್ತು. ನನ್ನ ಮನೆಯ ಕೆಲಸಗಳನ್ನು ಬಹಳ ಕಷ್ಟದಿಂದ ಮಾಡುತ್ತಿದ್ದೆನು. ಇದರ ಪರಿಹಾರಕ್ಕೆ ನಾನು ಏನೇನೋ ಔಷಧಗಳನ್ನು ಮಾಡಿದೆನು ಪೆರೂನಾ ಸೇವಿಸುವ ತನಕ ನನಗೆ ಸ್ವಲ್ಪವೂ ವಾಸಿಯಾಗಿರಲಿಲ್ಲ. ಎರಡು ವಾರಗಳಲ್ಲೇ ನನ್ನ ಶರೀರ ಸ್ಥಿತಿಯು ತುಂಬಾ ಬದಲಾವಣೆ ಹೊಂದಿತು. ಮತ್ತು ಮೂರು ತಿಂಗಳಲ್ಲಿ ನನಗೆ ಎಂದಿನಂತೆ ಶಕ್ತಿಯು ಸಂತೋಷವೂ ಆರೋಗ್ಯವೂ ಉಂಟಾದವು ಇದಕ್ಕೆಲ್ಲಾ ಪೆರೂನಾವಿನ ಮಹತ್ವೇ ಅಲ್ಲದೆ ಬೇರೇನೂ ಅಲ್ಲವೆಂದು ಹೇಳುತ್ತೇನೆ"

ಮಿಸೆಸ್. ನೆಲ್ಸನ್.

ತಲೆ ನೋವೂ ಬೆನ್ನುನೋವೂ

ಮಿಸೆಸ್ ಕ್ರಿಸ್ಟೀ ನೆಲ್ಸನ್, ೧೯೯ ಎನ್ ೫ನ ಅವೆ, ನ್ಯಾಷ್‌ವಿಲ್ಲ, ಟೆನ್, ಈಕೆ ಬರೆಯುವುದನ್ನು ಓದಿ :—

"ಪೆರೂನಾ ಔಷಧವು ನನಗೆ ಅಪಾರವಾದ ಗುಣವನ್ನು ಉಂಟುಮಾಡಿದೆಯಾದ್ದರಿಂದ ಅದನ್ನು ವಿವರಿಸುವುದು ನನ್ನ ಕರ್ತವ್ಯವಾಗಿರುತ್ತದೆ ಇದರಿಂದ ನನ್ನ ಹಾಗೆ ಕಷ್ಟಪಡುತ್ತಿರುವ ಯಾವ ಹೆಂಗಸಾದರೂ ಇದ್ದಲ್ಲಿ ಅಂಥವಳು ಇದನ್ನು ತಿಳಿದು ಉಪಕಾರ ಹೊಂದುವಂತಾಗುವುದು. ಐದು ವರುಷಗಳ ಕಾಲ ನನಗೆ ಸುಖವಾಗಿದ್ದ ದಿನ ಒಂದಾದರೂ ಕಾಣದೆ ಇದ್ದೆನು. ತಲೆ ನೋಯುವುದು, ತಪ್ಪಿದರೆ ಬೆನ್ನು ನೋಯುವುದು, ಇವೆರಡೂ ಇಲ್ಲದಿದ್ದರೆ ಇನ್ನ್ಯಾವ ಭಾಗವಲ್ಲದರೂ ನೋಯುವುದು ಇದ್ದೇ ಇತ್ತು. ಇಷ್ಟು ಕಷ್ಟಪಟ್ಟು ಜೀವ ಉಳಿಸಿಕೊಳ್ಳಬೇಕೇ ಎಂಬದಾಗಿ ನನಗೆ ಬೇಸರವುಂಟಾಗಿತ್ತು. ಒಬ್ಬನೊಬ್ಬ ಸ್ನೇಹಿತಗಾತಿಯು ಪೆರೂನಾವನ್ನು ಸೇವಿಸೆಂದು ನನಗೆ ಹೇಳಿದಳು. ಏನಾದರೂ ಮಾಡೇನಲ್ಲಾ ಎಂದು ನಾನು ಕುತೂಹಲ ಪಡುತ್ತಿದ್ದೆನು ಸಂತೋಷಪೂರ್ವಕವಾಗಿ—ಆರು ಬಾಟ್ಲಿಗಳನ್ನು ಸೇವಿಸುವಷ್ಟರಲ್ಲೇ ನಾನು ಯಥಾಪ್ರಕಾರ ಹೆಂಗಸಾದೆನು. ಈಗ ನನಗೆ ಯಾವ ನೋವೂ ಇಲ್ಲ, ತುಂಬಾ ಸುಖಸಂತೋಷಗಳುಳ್ಳವಳಾಗಿದ್ದೇನೆ."

> ಮೇಲ್ಕಂಡ ಸಾಕ್ಷಿಗಳು ಪ್ರತಿ ದಿನದ ಅನುಭವಗಳನ್ನು ವಿವರಿಸತಕ್ಕವುಗಳಾಗಿವೆ. ಕೆಳಗಿನ ಇದ್ದು ಪೆರೂನಾದಿಂದ ಯಥಾರ್ಥವಾದ ಗುಣವನ್ನು ಹೊಂದಿ, ಈ ಮಾತುಗಳನ್ನು ನಿಜವಾಗಿ ಹೇಳಿರುತ್ತಾರೆ
>
> ಹೆಂಗಸರಿಗೆ ಇದು ತುಂಬಾ ಸಹಾಯಮಾಡತಕ್ಕದ್ದು ಹತ್ತಿರ ಇಟ್ಟುಕೊಂಡಿದ್ದರೆ ಈ ಔಷಧದಿಂದ ಸಾಕಷ್ಟಾದ ಗುಣವನ್ನು ಪಡೆಯಬಹುದಾಗಿದೆ. ನರಗಳ ನಿಶ್ಶಕ್ತಿ, ಬೆನ್ನುನೋವು, ಅಜೀರ್ಣ, ತಲೆನೋವು, ಸೊಂಟನೋವು, ಸ್ಥಳದಿಂದ ಸ್ಥಳಕ್ಕೆ ಬದಲಾಯಿಸುವ ನೋವು, ಇವೂ ಇನ್ನೂ ಅನೇಕ ರೋಗಗಳೂ ಪೆರೂನಾದಿಂದ ನಿವಾರಣೆಯಾಗುತ್ತವೆ ಮುಖ್ಯವಾಗಿ ಈ ಮಾತು ಹೆಂಗಸರಾದರೂ ಹೇಳಿರತಕ್ಕದ್ದಾಗಿದೆ ತಮ್ಮ ಸಹೋದರಿಯರಿಗೂ ಉಪಕಾರವಾಗಲಿ ಎನ್ನುವುದು ವಿನಾ ಇವರು ಹೀಗೆಲ್ಲಾ ಹೇಳಲು ಮತ್ತೇನೂ ಕಾರಣವೇ ಇಲ್ಲ
>
> ಈ ಮೇಲ್ಕಂಡ ಸಾಕ್ಷಿಗಳ ಮಾತನ್ನು ಓದುವಂಥವರಿಗೆ—ಅವರು ಅನೇಕ ಇತರವಾದ ಔಷಧಗಳನ್ನು ತೆಗೆದುಕೊಂಡು, ಡಾಕ್ಟರುಗಳ ಅಭಿಪ್ರಾಯ ತೆಗೆದುಕೊಂಡು ಸಾಕಾದರು. ಕಡೆಗೆ ಪೆರೂನಾ ಇವರ ಸೇವನೆಗೆ ಸಿಕ್ಕಿ ಅವರ ಕಷ್ಟವೆಲ್ಲಾ ನಿವಾರಣೆಯಾಗಿ ಅವರನ್ನು ಸುಖವಾಗಿ ಮಾಡಿರುತ್ತದೆ.
>
> ಪೆರೂನಾದಿಂದ ಪ್ರತಿದಿನವೂ ರೋಗಿಗಳು ಗುಣ ಹೊಂದುತ್ತಿದ್ದಾರೆ ಪೆರೂನಾವಿಗೆ ಬಂದಿರುವ ಈ ಕೀರ್ತಿಯು ಅದನ್ನು ಉಪಯೋಗಿಸಿರುವಂಥಾ ಜನರ ಹೊಗಳಿಕೆಯಿಂದಲೇ ಬಂದಿದ್ದಾಗಿರುತ್ತದೆ

ಹದಿಮೂರು ವರುಷ ಕಷ್ಟಪಟ್ಟೆನು.

ಮಿಸೆಸ್. ಅನ್ನಾ ಮಂಟೇರ್, ಮೋಲಿಗ್ರೂವ್ ಆರ್ಕ್, ಈಕೆ ಬರೆಯುವುದನ್ನು ನೋಡಿ :—

"ನಾನು ಹದಿಮೂರು ವರುಷಗಳ ತನಕ ಹೆಂಗಸಿನ ರೋಗವನ್ನು ಅನುಭವಿಸಿದೆನು ನಿಮ್ಮ ಪೆರೂನಾ ಪ್ರಕಟನೆಯನ್ನು ಒಂದು ಕಡೆ ಓದಿ ನೋಡಿ ಒಂದು ಶೀಸೆಯನ್ನು ಕೊಂಡು ಪೂರಾ ಸೇವಿಸುವಷ್ಟರೊಳಗಾಗಿ ನಾನು ಹಾಸಿಗೆ ಬಿಟ್ಟೆದ್ದು ತಿರುಗಾಡುವಂತಾದೆನು ಮೂರು ಬಾಟ್ಲು ಔಷಧ ತೆಗೆದುಕೊಂಡಾಗ ನನಗೆ ಆರೋಗ್ಯವಾಯಿತು, ಶರೀರ ಸುಖವೂ ಮಾಂಸಖಂಡಗಳ ಪುಷ್ಟಿಯೂ ಉಂಟಾದವು ಅದನ್ನು ನಾನು ಬಿಟ್ಟಿರಲಾರೆನು."

ತಲೆ ನೋವೂ ಕಿವುಡೂ.

ಮಿಸೆಸ್ ಮೇರಿ ಇ ಸ್ಟ್ಯಾಂಪರ್, ಹಂಟಿಂಗ್ಟನ್, ಎನ್ ಎಚ್, ಎಂಬೀಕೆ ಬರೆಯುವುದೇನೆಂದರೆ —

"ನನಗೆ ಬಹು ಕಠಿಣವಾದ ತಲೆ ನೋವಿತ್ತು—ಎರಡು ಕಿವಿಗಳೂ ಮುಚ್ಚಿ ಹೋಗಿದ್ದವು. ನರಗಳ ಶಕ್ತಿ ಕುಂದಿ ಹೋಗಿತ್ತು ಮೂವತ್ತು ವರುಷಗಳ ತನಕ ಒಂದು ಕಿವಿ ಕೇಳುತ್ತಿರಲಿಲ್ಲ. ನಾನು ಆರು ಬಾಟ್ಲು ಪೆರೂನಾ ಮತ್ತು ಒಂದು ಬಾಟ್ಲು ಮನಾಲಿನ್ ಕೊಂಡು ಸೇವಿಸಿದೆನು ಇಂಥಾ ಉತ್ಕೃಷ್ಟವಾದ ಔಷಧವು ಬೇರೊಂದಿಲ್ಲವೆಂದು ಈಗ ಸಂತೋಷದಿಂದ ಹೇಳುತ್ತೇನೆ ನನ್ನ ನರಗಳು ಶಕ್ತಿ ಹೊಂದಿಕೊಂಡವು ಅಜೀರ್ಣವಿಲ್ಲದೆ ಊಟ ಮಾಡಿದ್ದೆಲ್ಲಾ ದೇಹಕ್ಕೆ ಹತ್ತುವುದು. ಎಲ್ಲಾ ಭಾಗಗಳಲ್ಲೂ ನಾನು ತುಂಬಾ ಸುಖವಾಗಿದ್ದೇನೆ."

ಕಠಿಣವಾದ ಶೀತ ನೆಗಡಿ.

ಮಿಸ್ ಮೇರಿ ಕ್ಯಾಲ್ವಿನ್, ೯೨೭ ಮೆಯಿನ್ ಬೀದಿ, ಸಿನ್‌ಸಿನಾಟಿ, ಓಹಿಯೋ, ಈ ಹೆಂಗಸು ಬರೆಯುವುದೇನೆಂದರೆ —

"ಸಾಯಂಕಾಲ ಒಂದು ಕಡೆ ಸಂತೋಷೋತ್ಸವಕ್ಕೆ ಹೋಗಿದ್ದು ವಾಪಸು ಮನೆಗೆ ಬರುವಾಗ್ಗೆ ನನಗೆ ನೆಗಡಿ ಹಿಡಿಯಿತು. ನಾನು ಆಗ ಅದನ್ನು ಅಲಕ್ಷ್ಯಮಾಡಿಬಿಟ್ಟೆನು. ಅದರಿಂದ ನನಗೆ ತುಂಬಾ ಕೆಡಕಾಯಿತು ನನ್ನ ಗಂಟಲು ಬಹಳ ದುಃಖಕರವಾಯಿತು ನಾನು ಪೆರೂನಾ ತೆಗೆದುಕೊಂಡೆನು ಆ ಕೂಡಲೇ ನನಗೆ ಗುಣಕೊಟ್ಟಿತು. ಒಂದು ವಾರದೊಳಗಾಗಿ ನಾನು ಆರೋಗ್ಯ ಹೊಂದಿದೆನು ಈಗಲೂ ನನಗೆ ಮೈಗೆ ಆಲಸ್ಯವಾದಂತೆ ತೋರಿದ ಒಡನೆಯೇ ಅದನ್ನು ತೆಗೆದುಕೊಂಡಲ್ಲಿ ಎಲ್ಲಾ ನಿವಾರಣೆಯಾಗುತ್ತದೆ"

ಸೇವನೆ ಮಾಡತಕ್ಕದ್ದಕ್ಕೆ ಪ್ರತಿ ಬಾಟ್ಲು ಸಂಗಡ ಕಳಿಸುವ ನೋಟೀಸನ್ನು ಓದಿಕೊಳ್ಳಿ ಎಲ್ಲಾ ಔಷಧ ಮಾರಾಟಗಾರರಲ್ಲಿ ಪೆರೂನಾ ವಿಕ್ರಯವಾಗುತ್ತಿದೆ ಒಂದು ಬಾಟ್ಲಿಗೆ ರೂ. ೩।।।, ಆರು ಬಾಟ್ಲಿಗೆ ರೂ ೧೯।।।.

ಈ ಔಷಧ ಸಿಕ್ಕುವ ಸ್ಥಳಗಳು :—

(೧) ಹಿಚ್‌ಕಾಕ್ ಅಂಡ್ ಸನ್ಸ್, ಬೆಂಗಳೂರು.

(೨) ಇಂಗ್ಲಿಷ್ ಡಗ್ಸ್ ಕಂಪನಿ, ೩೯ ಮಿಂಟ್ ಬೀದಿ, ಮದರಾಸ್.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

10—5—1907 ರಿಂದ 17—5—1907 ರ ವರೆಗೆ

ಸ್ಥಳ.	ಪ್ಲೇಗ್ ತಗಲಿದ್ದು	ಸತ್ತದ್ದು	ಉಳಿದದ್ದು	ಕಾಲರಾ
ಬೆಂಗಳೂರು ಪಟ್ಟಣ	12	10	0	
ಮೈಸೂರು ,,	8	5	0	
ಬೆಂಗಳೂರು ಡಿಸ್ಟ್ರಿಕ್ಟು	63	40	11	
ಮೈಸೂರು ,,	24	18	67	1[illegible]
ಕೋಲಾರ್ ,,	1	1	34	3[illegible]
ಕೋಲಾರ್ ಚಿನ್ನದ ಗಣಿಗಳು	8	4	0	
ತುಮಕೂರು ಡಿಸ್ಟ್ರಿಕ್ಟು	0	0	5	
ಹಾಸನ ,,	0	0	50	
ಚಿತ್ರದುರ್ಗ ,,	0	0	9	
ಕಡೂರ್ ,,	2	2	0	
ಶಿವಮೊಗ್ಗ ,,	2	0	0	
ಜುಮ್ಲಾ	·23	80	169	

ಶಾಲಿವಾಹನ ಶಕ ವರುಷಂಗಳು ೧೮೨೯ ನೇ ಪ್ಲವಂಗನಾಮ ಸಂವತ್ಸರದ ವೈಶಾಖ ಬಹುಳ ತದಿಗೆ ಗುರುವಾರದಿಂದ ವೈಶಾಖ ಬಹುಳ ದಶಮಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ.

೧೯೦೭ ನೇ ಇಸವಿ ಮೇ, ಮತ್ತು ಜೂನ್.

ತಾ	ವಾರ.		ತಿಥಿ.	ಘಳಿಗೆ	ನಕ್ಷತ್ರ.	ಘಳಿಗೆ.
30	ಗುರು	‡	ತದಿಗೆ	18-5	ಪೂಭಾ	40 48
31	ಶುಕ್ರ	†	ಚೌತಿ	11-48	ಉತ್ತಾ	36-48
1	ಶನಿವಾ	¶	ಪಂಚಮಿ	5 30	ರೇ	33-2
2	ರವಿವಾ		ಷಷ್ಠಿ	0-36	ಉಜರಿ	55-32
3	ಚಂದ್ರ		ಅಷ್ಟಮಿ	51-58	ಕೃ	27-17
4	ಕುಜ	*	ನವಮಿ	48 52	ಪೂಭಾ	26-54
5	ಬುಧ		ದಶಮಿ	46 12	ಉ.ಭಾ	25-25

‡ ಚತುರ್ಥಿ ತಿಥಿ, ಕಂಚಿವರದರಾಜ ಸ್ವಾಮಿ ರಥ, ಮಾರಹಳ್ಳಿ ನರಸಿಂಹಸ್ವಾಮಿ ರಥ, ಸಂಕಷ್ಟಚತುರ್ಥಿ † ಅಗ್ನಿ ನಕ್ಷತ್ರನಿವೃತ್ತಿ ¶ ಗೌರಿಬಿದನೂರು ರಥ * ದತ್ತಾತ್ರೇಯ ಜಯಂತಿ

ಪೇಟೇ ಧಾರಣೆ.

ದಿನಸಿ.		ಮೈಸೂರು	ಬೆಂಗಳೂರು
ಕಿಚ್ಚೀ ಅಕ್ಕಿ ಪಲ್ಲ ೧ಕ್ಕೆ	ರೂ	೧೨-೮-೦	೧೪.
ಕಂಬೂತಿ ಅಕ್ಕಿ ಅವಲ್		೧೩-೪-೦	೧೩-
,, [illegible]		೧೨-೮-೦	೧೩-
ಜುರ್ರಾ ಅಕ್ಕಿ		೧೦-೮-೦	೧೪.
ಸಣ್ಣಕ್ಕಿ ಅವಲ್		೧೫-೦-೦	೧೫.೮
,, ದುಯಂ		೧೪-೮-೦	೧೪.೮
ತೊಗರೀ ಬೇಳೆ ಪಲ್ಲ ೧ಕ್ಕೆ		೧೩-೮-೦	೧೩-
,, ದುಯಂ		೧೨-೧೨-೦	೧೨-೮
ಕ್ಯಾರ ರಾಗಿ ಪಲ್ಲ ೧ಕ್ಕೆ		೬-೮-೦	೬
ಕಾರಾಗಿ		೫-೮-೦	೫-೧೨
ಜೋಳ		೬-೮-೦	೬-
ಹಲಸಂದೆ ಪಲ್ಲ ೧ಕ್ಕೆ		೧೧-೮-೦	೧೧-
ಬಿಳೀ ಅವರೆ		೮-೪-೦	೬-
ಹೆಸರು		೧೨-೮-೦	೧೧-೧೨
ಉದ್ದು		೧೨-೮-೦	೧೨-
ಕಡಲೆ		೧೧-೮-೦	೧೧
ಎಳ್ಳು ಸೆ. ೧೨೭ ಕ್ಕೆ		೨೨-೮-೦	೨೨-೮
ಹುರುಳಿ		೬-೬-೦	೬-
ಹರಳು ೧೨೭ ಸೇರಿಗೆ		೧೫-೦-೦	೧೩-
ಸೀಗೇಕಾಯಿ ಮಣ ೧ಕ್ಕೆ		೨-೬-೦	೨
ಮೆಣಸಿನಕಾಯಿ		೨-೪-೦	೩-
,, ದುಯಂ		೨-೮-೦	೨-೧
ಬೆಲ್ಲ ದೊಡ್ಡ ಅಚ್ಚು		೩-೮-೦	ಮ ೧-೫
ಒಳ್ಳೆಣ್ಣೆ ಮಣ ೧ಕ್ಕೆ		೫-೬-೦	೫-
ಹರಳೆಣ್ಣೆ ,,		೫-೮-೦	೫-೨
ಕೊತ್ತುಂಬರಿ ಪಲ್ಲ ೧ಕ್ಕೆ		೬-೦-೦	೬-
ಉಪ್ಪು ,,		೫-೩-೦	೫-೧೦
ಹುಣಸೇ ಹಣ್ಣು		೧-೬-೦	೧-
,, ಹಳೇದು		೦-೧೪-೦	೦-೧೫
ತುಪ್ಪ ಮಣ ೧ಕ್ಕೆ		೧೫-೦-೦	೧೩-
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ		೫-೦-೦	೪
ತೆಂಗಿನಕಾಯಿ ೧೦೦ ಕ್ಕೆ		೮-೮-೦	೬ ೮
ಅಳಲೇಕಾಯಿ ಮಣ ೧ಕ್ಕೆ		೧-೦-೦	೧-
ಅಂಟ್ವಾಳದ ಕಾಯಿ ಮಣ ೧ಕ್ಕೆ		೦-೧೨-೦	೦-೧
ಚಿನ್ನ (ಪವನ್) ಕೆಂಪು		೧೫-೪-೦	೧೫-
,, ,, ಪಸಿಮೆ		೧೫-೧೦-೦	೧೬-
,, ,, ಗಟ್ಟಿ ತೊಲ ೧ಕ್ಕೆ		೨೩-೧೨-೦	೨೪-
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ		೮೫-೦-೦	೮೪-

Printed and Published by the Rev. E. Thompson, M. A., Proprietor and Manager, Wesley Mission Press, Mysore 30/5/1907.







FLASHNO·1







Vol. 7

6th June 1907

to 25 May 1908

ಔಷಧಿ ತಕ್ಕೊಂಡು ಗುಣವಾಗುವದಕ್ಕಿಂತಲೂ

ತಕ್ಕ ಕ್ರಮದಲ್ಲಿರುವದು ಉತ್ತಮ.

SCOTT'S EMULSION. 31 12

(ಸ್ಕಾಟ್ಸ್ ಇಮಲ್ಷನ್)

ಕೃಶ ಶರೀರವುಳ್ಳವರಿಗೆ ಪ್ಲೇಗ್, ಮಹಾಮಾರಿರೋಗ, ವಾಂತಿ ಭೇದಿ ಅಥವಾ ಕ್ಷಯರೋಗದ ರೋಗಗಳ ಭಯಕ್ಕೆ ಒಳಪಡುವ ಅಗ ತ್ಯವಿಲ್ಲ

ರೋಗವು ಬಲಹೀನರನ್ನೂ ದುರ್ಬಲರನ್ನೂ ಬೇಗನೆ ತಗಲಿ ಹಿಡಿಯುತ್ತದೆ

ಅಸ್ವಸ್ಥವನ್ನು ದೂರ ಹೋಗಲಾಡಿಸಿ, ಶರೀರದಲ್ಲಿರುವ ಬಲಹೀನ ಭಾಗಗಳನ್ನು ಬಲಪಡಿಸಿ, ಸಂಪೂರ್ಣ ಸೌಖ್ಯವನ್ನು ಉಂಟುಮಾಡುತ್ತದೆ

ಕೈಸೋಕದೆ ತಯಾರಾದದ್ದು

ಎಲ್ಲಾ ಔಷಧ ವ್ಯಾಪಾರಗಾರರಲ್ಲೂ ಮಾರಾಟವಾಗುತ್ತದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್

ಈ ಮೀನುಮನುಷ್ಯ ಇರುವ ಔಷಧ ವನ್ನೇ ಕೇಳಿಕೊಳ್ಳಿ

CHAMBERLAIN'S COUGH REMEDY.

ಚೇಂಬರ್ಲೇನ್ ಯವರು ಕಂಡು ಹಿಡಿದ ಕೆಮ್ಮಿನ ಔಷಧವು

4 23

ಶೀತದ ಕೆಮ್ಮು, ಗಂಟಲು ಗೊರಗುಟ್ಟುವದು, ನಾಯಿಕೆಮ್ಮು, ನೆಗಡಿಕೆಮ್ಮು, ಎಲ್ಲಾ ತರದ ಶೀತ, ಗಂಟಲನಲ್ಲೂ ಎದೆಯಲ್ಲೂ ಹುಟ್ಟುವ ಸಮಸ್ತ ವ್ಯಾಧಿಗಳು—ಇವಕ್ಕೆಲ್ಲಾ ಈ ಔಷಧವು ಖಾತ್ರಿಯಾಗಿದೆ

ಆ ಕೆಮ್ಮನ್ನು ಅಲಕ್ಷ್ಯಮಾಡಬೇಡಿ ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ ಅದರ ಮೇಲೆ ನ್ಯೂಮೋನಿಯಾ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವುದು ತರುವಾಯ ಉಗುಳಿನಲ್ಲಿ ರಕ್ತ ಬೀಳುವುದು, ಹಾಗೆಯೇ ಕ್ಷಯರೋಗಕ್ಕೆ ಆಸ್ಪದವಾಗುವುದು

ಚೇಂಬರ್ಲೇನರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟಲನಲ್ಲಿ ಶ್ಲೇಷ್ಮ ಕಟ್ಟುವುದನ್ನೂ ಶ್ಲೇಷ್ಮ ಬೀಳುವುದನ್ನೂ ಖಂಡಿತವಾಗಿ ನಿವಾರಣೆಮಾಡುತ್ತದೆ. ಉಸುರು ಕೊಳ್ಳುವುದು ಕಷ್ಟವಾಗಿದ್ದರೆ ಅದನ್ನು ಕೂಡಲೇ ಪರಿಹರಿಸುತ್ತದೆ ಅಪಾಯಕರವಾದ ಕೆಮ್ಮಿನ ಶಬ್ದವನ್ನು ನಿಲ್ಲಿಸಿಬಿಡುತ್ತದೆ ಎದೆ ಬಿಗಿಯುವಂಥಾ ಕೆಟ್ಟಸ್ಥಿತಿಯನ್ನು ಸಂಪೂರ್ಣವಾಗಿ ವಾಸಿಮಾಡಬಲ್ಲದು ಕೆಮ್ಮನ್ನು ಶಮನಮಾಡಿ, ನೀವು ಸುಖವಾಗಿ ನಿದ್ರೆಮಾಡುವಂತೆ ಮನಸ್ಸಿಗೆ ಉಲ್ಲಾಸಕೊಡುತ್ತದೆ

ಚೇಂಬರ್ಲೇನರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇರಿಸಿರುವುದಿಲ್ಲ.

ಈ ಔಷಧವು ವನಸ್ಪತಿಗಳ ತಯಾರಿ

ಕೈಯಿಂದಮುಟ್ಟದೆ ತಯಾರಾಗಿದೆ

ಎಲ್ಲೆಲ್ಲೂ ಬಿಕರಿಯಾಗುವುದು | ಸಣ್ಣ ಶೀಸೆಗೆ ೧ ರೂಪಾಯಿ | ದೊಡ್ಡ ಶೀಸೆಗೆ ೨ ರೂಪಾಯಿ

ನಿಮಗೆ ನೋವು ಇದೆಯೋ?

08 2

ಹಾಗಾದರೆ "ಕ್ಲವಂಟ್ ಯವರ ಮ್ಯಾಜಿಕ್ ಓಂ" ನ್ನು ಏಕೆ ಉಪಯೋಗಿಸಬಾರದು? ಆಶ್ಚರ್ಯಕರವಾದ ಬುಧಾಪಕಾರಿಣಿಯು! ಈಗಿನ ಶತಮಾನದಲ್ಲಿ ಕಂಡು ಹಿಡಿದ ದೊಡ್ಡ ನೂತನವು!

ಈ ಗಾಢ ಔಷಧವನ್ನು ಮೊಟ್ಟಮೊದಲು ತೋರಿಯುತ್ತಲೆ ಕೆಲವು ನಿಮಿಷಗಳೊಳಗಾಗಿ ನರ ಮತ್ತು ಮಾಂಸ ಸಂಬಂಧವಾದ ಪಾರ್ಶ್ವ ನೋವು, ಕೀಲುಗಳ ಬಾವು, ಹೊಟ್ಟೆ ನೋವು, ಬೆನ್ನು ಳುಕುವದು, ತಲೆನೋವು, ಕೆಮ್ಮು, ಕೀಲುಗಳು ಕತ್ತರಿಸುವದು, ಕೊರಳು ಊತ, ಕೈಕಾಲು ಒಡೆತ ಇವುಗಳನ್ನೆಲ್ಲಾ ವಿದ್ಯುಚ್ಛಕ್ತಿಯಂತೆ ಗುಣಪಡಿಸುವದು ಈ ಔಷಧವು ಆಶ್ಚರ್ಯಕರವಾಗಿ ಗುಣಪಡಿಸುವದರಿಂದ ಎಲ್ಲರಲ್ಲಿಯೂ ಪ್ರಸರಿಸುತ್ತಾ ಬರುವದು ಇತರ ಔಷಧಿಗಳು ಗುಣಪಡಿಸದೆ ಹೋದಾಗ ಡಾಕ್ಟರ್ ಫೀಜನ್ನು ಕಡಿಮೆಮಾಡಿ ಇದು ನಿಸ್ಸಂದೇಹವಾಗಿಯೂ ಗುಣಪಡಿಸುವದು.

ಕ್ರಯ—೧ ಬಾಟ್ಲಿಗೆ ೧೨ ಆಣೆ, ಪೋಸ್ಟೇಜ್ ೪ ಆಣೆ ೩ ಬಾಟ್ಲಿಗೆ ಅಂಚೆವೆಚ್ಚ ಸೇರಿ ರೂ ೨—೪ ಆಣೆ ಎಲ್ಲಾ ಕೆಮಿಸ್ಟ್ ಷಾಪುಗಳಲ್ಲಿ ದೊರೆಯುವದು

ಸಮ್ಮ ವಿಳಾಸ—ಎಫ್ ಡಬ್ಲಿಯು ಆರ್ಕ,

ಸಿವೆಟ್ರಿ ರೋಡ್, ವೇಪೇರಿ, ಮದರಾಸ್

ಒಕ್ಕಲಿಗರ ಪತ್ರಿಕೆ.

39—8

ಒಕ್ಕಲಿಗರ ಪತ್ರಿಕೆಯು ಬೆಂಗಳೂರಿನಲ್ಲಿ ಪ್ರತಿ ಬುಧವಾರ ಒಕ್ಕಲಿಗರ ಸಂಘದಿಂದ ಪ್ರಕಟಿಸಲ್ಪಡುತ್ತಿರುವುದು ಇದು ಬಿ ಎ ಮತ್ತು ಬಿ ಎಲ್ ಪರೀಕ್ಷೆಗಳನ್ನು ಮಾಡಿರುವ ವಿದ್ಯಾವಂತರಾದ ಒಕ್ಕಲಿಗರಿಂದ ಸುಲಭವಾದ ಒಳ್ಳೇ ಭಾಷೆಯಲ್ಲಿ ಬರೆಯಲ್ಪಟ್ಟು ಅಂದವಾಗಿ ಮುದ್ರಿಸಲ್ಪಡುತ್ತಿದೆ

ಈ ಪತ್ರಿಕೆಯಲ್ಲಿ ಸಂಸ್ಥಾನದ ಅಡಳಿತಗಳು, ಲೋಕವಾರ್ತೆ, ಕೈಗಾರಿಕೆ, ವ್ಯಾಪಾರ, ಕಸುಬು, ವ್ಯವಸಾಯ ಮುಂತಾದ ವಿಷಯಗಳನ್ನು ಕುರಿತು ದೀರ್ಘಾಲೋಚನೆ ಮಾಡಿ ಉಪನ್ಯಾಸಗಳು ಬರೆಯಲ್ಪಡುವವು

ಚಂದಾ ಬೆಂಗಳೂರು ಮತ್ತು ಮೈಸೂರು ಪಟ್ಟಣಗಳಲ್ಲಿಯೂ ಮತ್ತು ನಮ್ಮ ಏಜಂಟರುಗಳಿರುವ ಎಲ್ಲಾ ಪಟ್ಟಣಗಳಲ್ಲಿಯೂ ವರ್ಷ ೧ಕ್ಕೆ ೧ ರೂಪಾಯಿ. ತಮ್ಮ ಹೆಸರಿಗೆ ನೇರಾ ತರಿಸಿಕೊಳ್ಳುವವರಿಗೆ ಅಂಚೆ ಹಾಸಲು ಸೇರಿ ೧ ರೂ ೬ಆ ಆಣೆ ಬೀಳುತ್ತದೆ

ಈ ಪತ್ರಿಕೆಯು ಪಟ್ಟಣ, ಊರು ಗ್ರಾಮಾಂತರಗಳಲ್ಲಿ ಬಹಳ ಪ್ರಚುರಕ್ಕೆ ಬರುತ್ತಾ ಇದ್ದರಿಂದ ಇದರಲ್ಲಿ ಇಸ್ತಿಹಾರುಗಳು ಪ್ರಕಟಿಸಿದರೆ ವ್ಯಾಪಾರಸ್ಥರಿಗೆ ಬಹಳ ಲಾಭ ಉಂಟು ದರಗಳನ್ನು ಈ ಕೆಳಗೆ ಕಂಡ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು

ಮ್ಯಾನೇಜರು, ಒಕ್ಕಲಿಗರ ಪತ್ರಿಕೆ,

(ಒಕ್ಕಲಿಗರ ಸಂಘ ಆಫೀಸು, ಅರಳೇಪೇಟೆ,

ಬೆಂಗಳೂರು ಸಿಟಿ.

ಇದಕ್ಕೆ ಸಮಾನವಾದ ಪುಸ್ತಕ ಉಂಟೋ?

ಕನ್ನಡ ಭಾಷೆಯಲ್ಲಿ ಇದುವರಿವಿಗೂ ಇಂಥಾ ಸೊಗಸಾದ ಪುಸ್ತಕವು ಪ್ರಚುರವಾಗಲಿಲ್ಲ. ಸ್ವಲ್ಪ ನೋಡಿ

"ಹಿಂದೂದೇಶ ಪ್ರದಕ್ಷಿಣ"

ಎಂದು ಕರೆಯಲ್ಪಡುವ ಈ ನೂತನ ಪುಸ್ತಕದಲ್ಲಿ ಸುಮಾರು ನೂರುಹತ್ತು ಉತ್ಕೃಷ್ಟವಾದ ಚಿತ್ರಗಳು ಅಡಗಿವೆ ಹಿಂದೂ ದೇಶವೆಲ್ಲಾ ಸಂಚಾರ ಮಾಡುವದರಿಂದ ಉಂಟಾಗುವ ಪರಮಾನಂದವನ್ನು ಒಂದು ಸಾರಿ ಈ ಗ್ರಂಥವನ್ನು ಓದುವದರಿಂದ ಹೊಂದಬಹುದು ಇದು ಮೊದಲನೇ ಸಾರಿ ಪ್ರಿಂಟ್ ಆಗಿದ್ದು ಬಹು ಶೀಘ್ರವಾಗಿ ಎಲ್ಲಾ ಮುಗಿದು ಹೋದವು. ಈಗ ತಿರಿಗಿ ವಿಚಿತ್ರವಾಗಿಯೂ ಉಲ್ಲಾಸಕರವಾಗಿಯೂ ಇರುವ ಪ್ರಸಿದ್ಧವಾದ ಚಿತ್ರಗಳೊಡನೆ ಮಾಡಿಸಿರುತ್ತೇವೆ ಇದರಲ್ಲಿರುವ ಚಿತ್ರಗಳನ್ನು ಸ್ವಲ್ಪ ನೋಡಿ—ಶ್ರೀರಂಗಪಟ್ಟಣದಲ್ಲಿರುವ ಹೈದರಲ್ಲಿ ಟಿಪ್ಪುಸುಲ್ತಾನರ ಗೋರಿ, ಹುಮಾಯೂನನ ಗೋರಿ ಹುಗ್ಲಿ ನದಿ, ಕಲ್ಕತ್ತಾ ನಗರ, ಕಲ್ಕತ್ತಾ ಹೈ ಕೋರ್ಟು, ಕಾಳಿಕಾದೇವತೆ, ಚಂದ್ರನಗರ, ಬಂಗಾಳಿಯರ ಮನೆಗಳು, ಜಗನ್ನಾಥಸ್ವಾಮಿ ಭುವನೇಶ್ವರವೆಂಬ ದೇವಸ್ಥಾನ, ಜಗನ್ನಾಥದ ರಥೋತ್ಸವ, ಕನರಾಕ್ ದೇವಸ್ಥಾನ, ಎವರೆಸ್ಟ್ ಶಿಖರ, ಖಟ್ಮಂಡು ನಗರದ ಒಂದು ಬೀದಿ, ಖಟ್ಮಂಡು ನಗರದ ದೇವಸ್ಥಾನಗಳು, ಜಪಚಕ್ರಗಳು, ಅಂಬಿಗರು ದೋಣಿಯನ್ನು ಎಳೆಕೊಂಡು ಹೋಗುವದು, ಗಯಾದಲ್ಲಿರುವ ಬುದ್ಧನ ದೇವಸ್ಥಾನ, ಔರಂಗಜೇಬನು ಕಟ್ಟಿಸಿದ ಮಸೀತಿ, ಕಾಶೀ ಪುಣ್ಯಕ್ಷೇತ್ರದಲ್ಲಿರುವ ಪಾಶಾಶ್ವಮೇಧಘಟ್ಟ, ಕಪಿಗಳಿಗೆ ತಿಂಡಿ ಹಾಕುವದು, ಕಾಶೀ ಕ್ಷೇತ್ರದ ದೇವಸ್ಥಾನಗಳು, ಅಲಹಾಬಾದ್ ನಗರ ಮತ್ತು ಅದರ ಕೋಟೆ, ಅಲಹಾಬಾದ್‍ನಲ್ಲಿರುವ ಖುಸ್ರು ಬಾಗ್ ಅರಮನೆ, ಯಮುನಾ ನದಿಯಲ್ಲಿ ಯಾತ್ರಿಕರು ಮುಳುಗುವದು, ಕಾನ್ಪುರದಲ್ಲಿರುವ ಶಿಲಾ ಶಾಸನ, ಕಾನ್ಪುರದ ಹತ್ತಿರ ಗಂಗಾ ನದಿಯ ಮೇಲೆ ಕಟ್ಟಿರುವ ಸೇತುವೆ, ಲಕ್ನೋ ನಗರದ ರೆಸಿಡೆನ್ಸಿ ಬಂಗಲೆ, ಲಕ್ನೋ ಪಟ್ಟಣದ ಬಾಗಿಲು, ಸರ್ ಹೆನ್ರಿ ಲ್ಯಾವಲಾಕನು, ಗೋಮತಿ ನದಿಯ ಮೇಲಿರುವ ಅರಮನೆ, ಶ್ಯಾಮದಲ್ಲಿ ಜನರ ಸ್ಥಿತಿ, ಹರಿದ್ವಾರಘಟ್ಟ, ಗಂಗೋತ್ರಿ ದೇವಸ್ಥಾನ, ಹಿಮವತ್ಪರ್ವತಗಳ ಮೇಲಿರುವ ಪಟ್ಟಣ, ಹಿಮಪ್ರವಾಹಗಳು, ಆಗ್ರಾ ಪಟ್ಟಣದ ಕೋಟೆ, ಯಮುನಾ ನದಿಯೂ ದೂರದಲ್ಲಿ ತೋರುತಿರುವ ತಾಜ್‍ಮಹಲ್ ಗೋರಿಯೂ, ತಾಜ್ ಮಹಲಿನ ಕಲ್ಲಿನಲ್ಲಿ ಕೆತ್ತಿರುವ ತೆರೆ, ಅಕ್ಬರನ ಅರಮನೆ, ಆಗ್ರಾ ಪಟ್ಟಣದ ಮುತ್ತಿನ ಮಸೀತಿ, ಫತ್ತೆಪುರ್ ಸಿಕ್ರಿಯಲ್ಲಿರುವ ಪಾಂಚ್ ಮಹಾಲ್ ಅರಮನೆ, ರಜಪೂತರು, ಭರತಪುರದ ಕೋಟೆ, ಆಳ್ವಾರಿನಲ್ಲಿ ಮಹಾರಾಜ ಭಕ್ತಾವರ್ ಸಿಂಗರ ಗೋರಿ, ದೆಹಲಿ ನಗರದ ದೊಡ್ಡ ಮಸೀತಿ, ಪುರಾತನ ದೆಹಲಿಯ ಬಾಗಿಲು, ರಾಜ ದೇವನು ಸ್ಥಾಪಿಸಿದ ಕಬ್ಬಿಣದ ಸ್ತಂಭ, ನಾದರ್ ಷಹನು ದೆಹಲಿ ನಗರದಲ್ಲಿ ಪ್ರಜಾ ಸಂಹಾರವನ್ನು ನೋಡುತ್ತಿರುವದು, ದೆಹಲಿಯ ಬಳಿಯಲ್ಲಿರುವ ಕುತುಬ್ ಮಿನಾರ್, ಚಾಂದ್ನಿ ಚೌಕವೆಂಬ ಬೀದಿ, ಸಿಂಲಾಕ್ಕೆ ಹೋಗುವ ದಾರಿ, ಸಿಮ್ಲಾ, ಅಮೃತಸಾರದ ಸುವರ್ಣಾಲಯವು, ಲಾಹೋರಿನಲ್ಲಿರುವ ರಣಜಿತಸಿಂಗನ ಗೋರಿ, ಲಾಹೋರ್ ಪಟ್ಟಣ, ಈ ಮುಂತಾದ ಅನೇಕ ರಮಣೀಯವಾದ ಸ್ಥಳಗಳ ಚಿತ್ರಗಳು ಈ ಪುಸ್ತಕದಲ್ಲಿ ಅಡಗಿವೆ ಅವುಗಳನ್ನೆಲ್ಲಾ ವಿವರಿಸಲು ಸ್ಥಳವಿಲ್ಲ

ಪ್ರತಿಯೊಂದು ಅಂಶದ ವಿವರಣೆಯೂ ಬಹು ಪರಿಷ್ಕಾರವಾಗಿದೆ ದಕ್ಷಿಣ ದೇಶದಲ್ಲಿರುವ ಅನೇಕ ಪ್ರಸಿದ್ಧ ಸ್ಥಳಗಳ ಚಿತ್ರಗಳೂ, ಅವುಗಳ ವಿವರಣೆಗಳೂ ಇದರಲ್ಲಿವೆ ಪುಸ್ತಕವು ಭಾರಿಯಾಗಿದೆ. ಪುಸ್ತಕದ ಅಚ್ಚು ಮತ್ತು ಬೈಂಡು ಬಹು ಸುಂದರವಾಗಿವೆ ಇದರ ಕ್ರಯ ಎಂಟೇ ಆಣೆ, ವಿ ಪಿ ಪಿ ಮೂಲಕ ಒನ್ನೊಂದು ಆಣೆಯಾಗುವದು. ಪುಸ್ತಕ ಪ್ರತಿಗಳು ಮಾರಾಟವಾಗುತ್ತಿದೆಯಾದ್ದರಿಂದ ತಾವುಗಳು ಕೆಳಗೆ ಕಂಡ ವಿಳಾಸಕ್ಕೆ ಬೇಗನೆ ಬರೆದು ತರಿಸಿಕೊಳ್ಳಬೇಕು.

ಮ್ಯಾನೇಜರ್, ಸಿ ಎಲ್ ಎಸ್ ಬುಕ್ ಡಿಪೋ,

ಮೈಸೂರು. 48-5

ವ್ಯವಹಾರ ನಿರ್ಣಯ

ಎಂಬ ಕನ್ನಡ **ಲಾ** ಪುಸ್ತಕವು

73 1

ಲಾ ತಿಳಿದವರಿಂದಲೂ, ತಿಳಿಯದವರಿಂದಲೂ ಇದುವರೆಗೆ ಬರೆಯಲ್ಪಟ್ಟಿರುವ ಈ ತೆರದ ಪುಸ್ತಕಗಳನ್ನೆಲ್ಲ ನೋಡಿ ಅವೆಲ್ಲಕ್ಕಿಂತಲೂ ಹೆಚ್ಚು ಪ್ರಯೋಗವನ್ನು ಇದೊಂದು ಪುಸ್ತಕದಿಂದುಂಟುಮಾಡಬೇಕೆಂದು ಈ ದೊಡ್ಡ ಗ್ರಂಥವು ಹೊಸದಾಗಿ ಬರೆಯಲ್ಪಟ್ಟಿದೆ ಇದರಲ್ಲಿ ೧೫ ಆಕ್ಟುಗಳು, ೪ ಕೋಡುಗಳು, ಹಿಂದೂ, ಮಹಮ್ಮದೀಯ ಲಾಗಳು, ಪ್ರಿವಿ ಕೌನ್ಸಿಲ್ ಹೈ ಕೋರ್ಟುಗಳ ಫೈಸಲುಗಳು, ಗಣನೆಯ ಸಂಖ್ಯೆಯುಳ್ಳಗಳು ಪ್ರೊಸೀಡಿಂಗ್ಸ್‌ಗಳು, ಸಕಲ ವಿಧ ವ್ಯವಹಾರಗಳು (ಕ್ರಯ ಆಧಾರ ದಾನ ವಿಲ್ಲು ಮೊದಲಾದ) ೭೯ ತೆರದ ದಸ್ತಾವೇಜುಗಳ ನಮೂನೆಗಳು, ಈ ಸಂಬಂಧದ ಲಾ ವಿಧಿಗಳು, ಸಿವಿಲ್ ಕ್ರಿಮಿನಲ್, ಪೋಲೀಸ್, ರೆವಿನ್ಯೂ ಸಂಬಂಧದ ವ್ಯಾಜ್ಯಗಳು, ೫೯ ತೆರದ ಅರ್ಜಿಗಳು, ಈ ಸಂಬಂಧದ ಲಾ ವಿಧಿಗಳು, ಇವೆಲ್ಲವೂ ಅಡಕವಾಗಿವೆ

ಪುಸ್ತಕ ದೊಡ್ಡದು ಪುಟಗಳು ಒಟ್ಟು ೬೬೪	ಬೆಲೆ ಕಡಮೆ ಅಂಚೆ ಹಾಸಲು ಸೇರಿ ರೂ ೧—೮—೦	
ಗ್ರಂಥಕರ್ತರು	ಎಂ ಮಲ್ಲರಾಧ್ಯರು, ೧ನೆ ಗ್ರೇಡ್ ಪ್ಲೀಡರ್, ಶ್ರೀರಾಮಪೇಟೆ, ಮೈಸೂರು	ಇವರ ವಿಳಾಸ

SCHOOL BOOKS! SCHOOL BOOKS!!

56 2

	Rs	A	P
New English Readers Primer I	0	2	6
" Primer II	0	2	6
New English First Reader	0	4	0
" Second	0	6	0
" Third	0	8	0
" Fourth	0	10	0
" Fifth	0	12	0
" Sixth	0	12	0
Primer of English Grammar	0	3	0
Manual of English Grammar	0	3	0
The Way to Health	0	2	0
Arithmetical Primer	0	2	6
Primer of Geography	0	3	0
Manual of Geography	0	11	0
Chemistry Notes by Romilly H Ingram	1	0	0

Apply to—

The Manager,

C L S Book Depot

Mysore City

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

11 19

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬಿಳಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಅದರ ಇಲ್ಲಿ ನೋಡಿ—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ನೇರಾ ಬರೆದು ತರಿಸಿಕೊಳ್ಳಿ ಅಗ್ಗವಾದದ್ದು ಚನ್ನಾಗಿಲ್ಲದ್ದೂ ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ.

ಸಾದ, ಕೆಂಪು, ಕಪ್ಪು, ಬೆರಿಕೆ, ಕಾಫಿ ಟೋಪಿಗಳು ೧ ರೂ ೮ ಆ, ೧ ರೂ ೬ ಆ, ೧ ರೂ ೪ ಆ.

ರೇಷ್ಮೆ ಹುಕ್ಕಿಯುಳ್ಳ ಟೋಪಿಗಳು ೧ ರೂ ೮ ಆ, ೨ ರೂ

ಜರಿದ ಟೋಪಿಗಳು ೧ ರೂ ೧೨ ಆ, ೧ ರೂ ೮ ಆ, ೧ ರೂ ೪ ಆ

ಉಣ್ಣೆಯ ಟೋಪಿಗಳು ೧ ರೂ ೮ ಆ, ೧ ರೂ ೪ ಆ

ಕೂಸುಗಳ ಟೋಪಿ, ಸೂಳೆ ಮೇಜೋಡು, ಅರ್ಧ ಮೇಜೋಡು ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ

ನಮ್ಮ ಏಜಂಟರಿಗೂ ಚಂದಾದಾರರಿಗೂ.

"ವೃತ್ತಾಂತ ಪತ್ರಿಕೆಯ" ಹೊಸ ವರುಷವು ಈ ಸಂಚಿಕೆಯಿಂದ ಪ್ರಾರಂಭವಾಗುವುದು. ನಮ್ಮ ಏಜಂಟರ ಮೂಲಕ ಪತ್ರಿಕೆಯನ್ನು ಪಡೆಯತಕ್ಕ ಚಂದಾದಾರರೆಲ್ಲಾ ಆವರಿ ಚಾಲ್ತಿ ವರುಷದ ಚಂದಾವನ್ನು ಮುಂಗಡವಾಗಿ ಪಾವತಿ ಮಾಡಿ ಅವರಿಂದ ರಶೀತಿಗಳನ್ನು ಹೊಂದಬೇಕೆಂತಲೂ ಹಾಗಿಲ್ಲವಾದರೆ ಏಜಂಟರು ಪತ್ರಿಕೆಗಳು ಯಾರಿಗೂ ಕೊಡಬಾರದೆಂತಲೂ ಈ ಮೂಲಕ ಶ್ರುತಪಡಿಸುತ್ತೇವೆ ಈ ತಿಂಗಳ ಆಖೈರಿನೊಳಗಾಗಿ ಏಜಂಟರುಗಳು ಚಂದಾ ಹಣವನ್ನೆಲ್ಲಾ ಅವಶ್ಯ ಕೂಡಿಸತಕ್ಕದ್ದಾಗಿದೆ—ಮ್ಯಾನೇಜರ್

ಪ್ರ. ಪ. ಸಪ್ಲಿಮೆಂಟ್.

ಮೈಸೂರು ಹೊಸ ಅರಮನೆಯು.

ಕಾಮಗಾರಿಯ ಪ್ರಾರಂಭ :
28 ನೇ ಅಕ್ಟೋಬರ್, 1897.

ಗೃಹಪ್ರವೇಶದ ಉತ್ಸವ.
5 ನೇ ಜೂನ್, 1907.

ವೃತ್ತಾಂತ ಪತ್ರಿಕೆ.

ಸನ್ ೧೯೦೭ ನೇ ಇಸವಿ ಜೂನ್ ತಾ|| ೬ ನೇ ಗುರುವಾರ

ಗಡೀಪಾರುಮಾಡತಕ್ಕ ಅಧಿಕಾರವು.

ಯಾವ ಪ್ರಜೆಯನ್ನೂ ಕೋರ್ಟಿನಲ್ಲಿ ದರ್ಯಾಫ್ತು ಮಾಡದೆ ಸೆರೆಹಿಡಿದು ಹಾಕಕೂಡದೆಂಬುವುದು ಇಂಗ್ಲಿಷ್ ಗವರ್ನಮೆಂಟಿನ ಮುಖ್ಯೋದ್ದೇಶಗಳಲ್ಲಿ ಒಂದಾಗಿರುತ್ತದೆ. ಈ ಕಾನೂನು ಸೀಮೆಯಲ್ಲಿ ಜಾರಿಗೆ ತಂದು ಕೆಲವು ಶತಮಾನಗಳೇ ಆಗಿರುತ್ತವೆ. ಈ ಕಾನೂನಿಗೆ ವಿರೋಧವಾದ ಕೃತ್ಯಗಳು ಎಷ್ಟುಮಾತ್ರಕ್ಕೂ ನಡೆಯದಂತೆ ಇಂಗ್ಲಿಷರು ಬಹು ಜಾಗರೂಕತೆಯಿಂದ ನೋಡಿಕೊಳ್ಳುತ್ತಲಿದ್ದಾರೆ. ಈ ಕಾನೂನು ಚಲಾವಣೆಯಲ್ಲಿರುವುದರಿಂದ ಯಾವ ದೊರೆಯೇ ಆಗಲಿ ಎಂಥಾ ಅಧಿಕಾರಿಗಳೇ ಆಗಲಿ ಎಷ್ಟು ಹೀನಸ್ಥಿತಿಯಲ್ಲಿರುವಂಥಾ ಪ್ರಜೆಗೂ ಅನ್ಯಾಯ ಮಾಡುವುದು ಸಾಧ್ಯವಲ್ಲವು. ಇಂಥಾ ಅಭಿಪ್ರಾಯವುಳ್ಳ ಇಂಗ್ಲಿಷ ಪ್ರಭುಗಳು ಹಿಂದುಸ್ಥಾನಕ್ಕೆ ಬಂದಾರಭ್ಯ ಆ ಕಾನೂನನ್ನೇ ಇಲ್ಲಿಗೂ ಜಾರಿಗೆ ತಂದರು.

ಆದರೆ ವಿಲಾಯತಿಯಲ್ಲೂ ಕೂಡ ಒಂದು ಸಂದರ್ಭದಲ್ಲಿ ಮಾತ್ರ ಈ ಕಾನೂನನ್ನು ರದ್ದುಮಾಡತಕ್ಕದ್ದು ಈಗಲೂ ರೂಢಿಯಲ್ಲಿದೆ. ಪ್ರಜಾನೆಮ್ಮದಿಗೆ ಭಂಗಬರುವುದೆಂಬ ಅನುಮಾನವು ಕಂಡುಬರುವ ಸಂದರ್ಭಗಳಲ್ಲಿ ಆ ಕಾನೂನನ್ನು ರದ್ದುಮಾಡುವುದಕ್ಕೆ ಪಾರ್ಲಿಮೆಂಟಿನವರಿಗೆ ಅಧಿಕಾರವುಂಟು. ರಾಜ್ಯಭಾರಕ್ಕೆ ಕುಂದಕವಾಗುವಂಥಾ ದಂಗೆಯೇ ಮೊದಲಾದ ಕೃತ್ಯಗಳು ನಡೆಯುವಾಗ್ಗೆ ಪಾರ್ಲಿಮೆಂಟಿನವರು ವಿಶೇಷವಾದ ಕಾನೂನು ಜಾರಿಗೆ ತಂದು ಅವರಿಗೆ ಮುಖ್ಯರೆಂದು ಕಂಡುಬರುವಂಥಾ ಪ್ರಜೆಗಳನ್ನು ಹಿಡಿದು ದರ್ಯಾಫ್ತು ಮುಂತಾದದ್ದನ್ನು ಮಾಡದೇನೇ ಸೆರೆಮನೆಯಲ್ಲಿ ಹಾಕುವುದು ಅಪರೂಪವಲ್ಲವು. ಇತ್ತಲಾಗಿ, ಇಂಡಿಯಾ ಗವರ್ನಮೆಂಟಿನವರು ಜಾರಿಯಲ್ಲಿಟ್ಟುಕೊಂಡಿರುವ ೧೮೧೮ ನೆ ಇಸವಿಯ ಕಾನೂನು ವೈಸ್‌ರಾಯಿಯವರಿಗೆ ಅಂಥಾ ಅಧಿಕಾರವನ್ನು ಕೊಡುತ್ತದೆ. ಹಿಂದುಸ್ಥಾನದಲ್ಲಿ ಪ್ರಜೆಗಳ ನೆಮ್ಮದಿಗೂ ಗವರ್ನಮೆಂಟಿನವರ ಕಾನೂನುಗಳ ಚಲಾವಣೆಗೂ ಭಂಗಬರುವುದೆಂಬ ಅನುಮಾನವೇನಾದರೂ ಕಂಡುಬಂದರೆ ಅಂಥಾ ಅವಸರದ ಸಂದರ್ಭಗಳಲ್ಲಿ ರಾಜದ್ರೋಹಿಗಳೆಂದು ತಿಳಿದುಬರುವಂಥಾ ಜನರನ್ನು ವೈಸ್‌ರಾಯಿಯವರು ಹಿಡಿಸಿ ದರ್ಯಾಫ್ತಿಯಿಲ್ಲದೇನೇ ನಿರ್ಬಂಧಪಡಿಸಲು ಅಧಿಕಾರವುಳ್ಳವರಾಗಿದ್ದಾರೆ.

ಇಂಥಾ ವಿಶೇಷತರವಾದ ಅಧಿಕಾರವನ್ನು ಬಹು ಅಪರೂಪವಾಗಿ ಮತ್ತು ಬಹು ವಿಶೇಷವಾದ ಸಂದರ್ಭಗಳಲ್ಲಿ ಮಾತ್ರವೇ ಚಲಾವಣೆಗೆ ತರಬೇಕು. ಅದೇ ರೀತಿ ಇಂಡಿಯಾ ಗವರ್ನಮೆಂಟಿನವರು ಬಹಳ ಅಪರೂಪವಾಗಿಯೇ ಚಲಾಯಿಸಿರುತ್ತಾರೆ. ಸುಮಾರು ಹತ್ತು ವರುಷಗಳ ಹಿಂದೆ ನಾಥೂಸಹೋದರರನ್ನು ಸೆರೆಹಿಡಿದು ಹಾಕುವುದನ್ನು ಇಂಡಿಯಾ ಗವರ್ನಮೆಂಟಿನವರು ಒಪ್ಪಿಕೊಂಡದ್ದು ಬಹಳ ಕಷ್ಟವಾಯಿತು. ಅದಕ್ಕೆ ಅವರ ಮನಸ್ಸೊಪ್ಪದಿದ್ದರೂ ಪ್ರಜಾನೆಮ್ಮದಿಯನ್ನು ಕಾಪಾಡುವುದಕ್ಕಾಗಿ ಆ ಕಾನೂನು ಜಾರಿಗೆ ತಂದರಲ್ಲದೆ ಮತ್ತೆ ಬೇರೆ ಅಲ್ಲವು. ಪ್ರಜೆಗಳಿಗಿರತಕ್ಕ ಈ ಸ್ವಾತಂತ್ರ್ಯವನ್ನು ಕಾಪಾಡುವುದರಲ್ಲಿ ಗವರ್ನಮೆಂಟಿನವರೇ ಬದ್ಧಕಂಕಣರಾಗಿದ್ದಾಗ್ಯೂ ಗವರ್ನಮೆಂಟಿನ ಅಧಿಕಾರಕ್ಕೇ ಕುಂದಕ ಬರುವ ಸಂದರ್ಭದಲ್ಲೂ ತುಂಬಾ ಗಲಭೆಯುಂಟಾದಾಗಲೂ ಆ ಕಾನೂನನ್ನು ಜಾರಿಗೆ ತರಬೇಕಾದದ್ದು ಅತ್ಯವಶ್ಯವೇ ಸರಿ ಎಂದು ವಿವೇಕಿಗಳಾದ ಸಕಲ ಪ್ರಜೆಗಳೂ ಒಪ್ಪುತ್ತಾರೆನ್ನುವುದಕ್ಕೆ ಸಂಶಯವಿಲ್ಲ. ಇಂಡಿಯಾ ಗವರ್ನಮೆಂಟಿನವರು ಈ ವಿಷಯವನ್ನು ವಿಲಾಯತಿಯ ಕ್ಯಾಬಿನೆಟ್ ಎಂಬ ಮಂತ್ರಿ ಸಭೆಯವರಿಗೂ ಇಂಡಿಯಾ ಸ್ಟೇಟ್ ಸೆಕ್ರೆಟರಿಯವರಾದ ಮ|| ಜಾನ್ ಮಾರ್ಲಿಯವರಿಗೂ ತಿಳಿಯಪಡಿಸಬೇಕಾಯಿತು. ಅದರ ಮೇಲೆ ಆ ಮಂತ್ರಿಸಭೆಯವರೂ ಪಾರ್ಲಿಮೆಂಟಿನವರೂ ಇಂಡಿಯಾ ಗವರ್ನಮೆಂಟಿನವರ ಕಾರ್ಯವನ್ನು ಏಕವಾಕ್ಯತೆಯಿಂದ ಒಪ್ಪಿಕೊಂಡಿರುತ್ತಾರೆ. ಪ್ರಜೆಗಳಿಗೆ ಸ್ವಾತಂತ್ರ್ಯಾದಿಗಳನ್ನು ಕೊಟ್ಟು ಅವರನ್ನು ಅಭಿವೃದ್ಧಿಗೆ ತರಬೇಕೆಂಬುವುದರಲ್ಲಿ ವಿಶೇಷ ಉತ್ಸಾಹಶೀಲರೆಂದು ಕೀರ್ತಿಪಡೆದಿರುವಂಥಾ ಮೆ|| ಜಾನ್ ಮಾರ್ಲಿಯವರು ಸ್ಪಷ್ಟವಾಗಿ ಮಾಡಿದ್ದು ಸಮಂಜಸವಾದದ್ದೆಂದು ಅದೇ ಮಂತ್ರಿ ಸಭೆಯವರೂ ಪಾರ್ಲಿಮೆಂಟಿನವರೂ ಸಮ್ಮತಿಪಟ್ಟಿರುವರು. ಇದಲ್ಲದೆ ಮೆ|| ಮಾರ್ಲಿಯವರಂಥಾ ಪ್ರಜಾಪಕ್ಷಪಾತಿಗಳೇ ಆ ೧೮೧೮ ಇಸವಿಯ ಕಾನೂನನ್ನು ರದ್ದುಮಾಡಕೂಡದೆಂದು ಹೇಳಿಬಿಟ್ಟರು.

ಆದಕಾರಣ ಜಲ್ಲೋ ಜನಾಪರರು ಅವಶ್ಯಬಿದ್ದಾಗ ಅವೆ ಸರದಲ್ಲಿ ಚಲಾಯಿಸುವುದಕ್ಕೆ ಇಂಡಿಯಾ ಗವರ್ನಮೆಂಟಿಗೆ ಈ ಅಧಿಕಾರವಿದ್ದೇ ಇರಬೇಕೆಂದು ಒಪ್ಪದಿರಲಾರರು. ಆದರೆ ಮೆ|| ಲಾಲಾ ಲಾಜಪತ್‌ರಾಯಿ, ಮೆ|| ಲಾಲಾ ಅಜಿತ್‌ಸಿಂಗ್ ಎಂಬುವರು ದುಷ್ಟರಲ್ಲವೆಂದೂ ಇಂಥ ನಿರಪರಾಧಿಗಳನ್ನು ಗವರ್ನಮೆಂಟಿನವರು ಗಡೀಪಾರು ಮಾಡಿದರೆಂದೂ ಹೇಳಬಹುದು. ಈ ಭಾಗದಲ್ಲಿ ದಕ್ಷಿಣದೇಶದಲ್ಲಿರುವ ನಮಗಿಂತಲೂ ಪಂಜಾಬ್ ಗವರ್ನಮೆಂಟಿಗೆ ನಿಜಸ್ಥಿತಿಯು ಚೆನ್ನಾಗಿ ತಿಳಿದಿರುತ್ತದೆ. ಅವರು ರಾಜದ್ರೋಹವನ್ನು ಹುಟ್ಟಿಸುವುದರಲ್ಲಿ ಕಾರಣಭೂತರಾಗಿ ಬಹು ದುಷ್ಟವಾದ ವಾಚಾಳತ್ವವನ್ನು ಪ್ರಕಟಪಡಿಸುತ್ತಾ ಬಂದಿರಬೇಕು. ಅವರು ಮಾಡಿದಂಥಾ ಉಪನ್ಯಾಸಗಳನ್ನು ಯೂರೋಪಿನಲ್ಲಿ ಯಾವ ಗವರ್ನಮೆಂಟಿನವರೂ ಮಾಡಗೊಡಿಸುತ್ತಿರಲಿಲ್ಲ. ಆದಕಾರಣ ಇಂಡಿಯಾ ಗವರ್ನಮೆಂಟಿನವರು ತಮ್ಮ ದರ್ಪವನ್ನು ತೋರಿಸಿ ಪ್ರಜೆಗಳ ನೆಮ್ಮದಿಯನ್ನು ಕಾಪಾಡುವುದರಲ್ಲಿ ಬದ್ಧಕಂಕಣರಾಗಿರುತ್ತಾರೆಂಬುವುದನ್ನು ದೃಷ್ಟಾಂತಪಡಿಸಿದಾರೆ.

ಒಳದೇಶದ ವರ್ತಮಾನಗಳು.

ಅರಮನೆಯ ಗೃಹಪ್ರವೇಶದ ಮಹೋತ್ಸವಕ್ಕಾಗಿ ದಿವಾನ್ ಮೆ|| ವಿ. ಪಿ. ಮಾಧವರಾಯರು ಪರಿವಾರ ಸಮೇತ ರಾಜಧಾನಿಗೆ ದಯಮಾಡಿಸಿರುತ್ತಾರೆ.

***

ರಾಜಧಾನಿಯಲ್ಲಿ ಹೊಸದಾಗಿ ಕಟ್ಟಿ ತಯಾರಾಗಿರುವ ಅರಮನೆಯ ಫೋಟೋವನ್ನು ಈ ಪತ್ರಿಕೆಯ ಜೊತೆ ನಮ್ಮ ಚಂದಾದಾರರಿಗೆಲ್ಲಾ ಕಳುಹಿಸಿಕೊಟ್ಟಿರುತ್ತೇವೆ.

***

ಮೈಸೂರು ಪಟ್ಟಣವನ್ನು ನೋಡಿಕೊಂಡು ಹೋಗುವುದಕ್ಕಾಗಿ ಬೊಬ್ಬಿಲಿ ಸಂಸ್ಥಾನದ ಮಹಾರಾಜರು ಪರಿವಾರ ಸಮೇತ ರಾಜಧಾನಿಗೆ ಬಂದು ಇಲ್ಲಿನ ಜಗನ್ಮೋಹನ ಬಂಗಲೆಯಲ್ಲಿ ಇಳಿದುಕೊಂಡು, ನಮ್ಮ ಮಹಾರಾಜರವರ ಆತಿಥ್ಯವನ್ನು ಸ್ವೀಕರಿಸುತ್ತಿದ್ದಾರೆ.

***

ಸಿವಿಲ್ ಸರ್ಜನ್ ಮೆ|| ಆ ಎಸ್ ಕೃಷ್ಣಸ್ವಾಮಿ ಅಯ್ಯರವರು ಮೊನ್ನೆ ವಾಂಗಳೂರಿನ ಬಳಿಗೆ ರಾಜಧಾನಿಗೆ ಬಂದು ಮೆ|| ಟಿ ಎನ್ ನಂಜಪ್ಪನವರಿಂದ ಇಲ್ಲಿನ ಆಸ್ಪತ್ರೆಯ ಮತ್ತು ಜೈಲಿನ ಛಾರ್ಜುಗಳನ್ನು ವಹಿಸಿಕೊಂಡರು. ಮೆ|| ನಂಜಪ್ಪನವರು ಅರಮನೆ ಡಾಕ್ಟರ್ ಕೆಲಸದ ಮೇಲೆ ಹಾಜರಾಗಿರುತ್ತಾರೆ.

***

ರೆವಿನ್ಯೂ ಕಮಿಷನರ್ ಮೆ|| ಎ ರಂಗಸ್ವಾಮಿಯಂಗಾರ್ರು ಕಳೆದ ವಾರ ಬೆಂಗಳೂರಿನಲ್ಲಿ ಕುದುರೆ ಸವಾರಿ ಮಾಡುತ್ತಾ ಬಿದ್ದು ಬಿಟ್ಟರೆಂದಲೂ, ಅವರ ಕತ್ತಿನ ಮೂಳೆಗೆ ಸ್ವಲ್ಪ ಪೆಟ್ಟು ತಗಲಿದೆ ಎಂದಲೂ, ಇದರಿಂದ ಅವರು ಇನ್ನೂ ೪—೫ ದಿನ ಹೊರಕ್ಕೆ ಹೊರಡಲಾರರೆಂದಲೂ ತಿಳಿದುಬಂದಿದೆ.

***

ಕಳೆದ ವಾರ ರಾಜಧಾನಿಯಲ್ಲಿ ಸಾಹುಕಾರ್ ನರಸಿಂಹಸ್ವಾಮಿಯವರ ಮನೆಯಲ್ಲೂ ಅರಮನೆ ಖಜಾನಾ ಸರಾಫರಾದ ಮೆ|| ಮನ್ನಾರ್ ಕೃಷ್ಣಚಟ್ಟರ ಮನೆಯಲ್ಲೂ ವಿವಾಹಗಳು ನಡೆದವು. ಅವರುಗಳು ಈ ವಿವಾಹಗಳನ್ನು ಬಹು ಧಾರಾಳವಾಗಿ ಖರ್ಚಿಟ್ಟು ತುಂಬಾ ವಿಭವವಾಗಿಯೂ ದಾನಧರ್ಮಗಳೊಡನೆಯೂ ನಡಸಿರುತ್ತಾರೆ.

***

ಹಿಂದೆ ಮೈಸೂರು ಯುದ್ಧ ನಡೆದಾಗ್ಗೆ ಶ್ರೀರಂಗಪಟ್ಟಣದಲ್ಲಿ ಮಡಿದುಹೋದ ಇಂಗ್ಲಿಷ್ ಸೈನಿಕರ ಜ್ಞಾಪಕಾರ್ಥವಾಗಿ ಅಲ್ಲಿ ಒಂದು ಶಾಸನವನ್ನು ಕಟ್ಟಿಸಬೇಕೆಂದು ಪ್ರಿನ್ಸ್ ಆಫ್ ವೇಲ್ಸರು ಮೊನ್ನೆ ದಯಮಾಡಿದ್ದಾಗ್ಗೆ ಸೂಚಿಸಿದ್ದರಿಂದ ನಮ್ಮ ಸರ್ಕಾರದವರು ಆ ಕೆಲಸಕ್ಕೆ ೩,೦೦೦ ರೂಪಾಯಿ ಸ್ಯಾಂಕ್ಷನ್ ಮಾಡಿರುತ್ತಾರೆ.

***

ರಾಜಧಾನಿಯ ಕಾರಂಜಿ ಮೈದಾನದ ಉತ್ತರಪಾರ್ಶ್ವದಲ್ಲಿ ಎರಡನೆಯ ಮಹಾರಾಜಕುಮಾರಿಯವರಿಗಾಗಿ ಕಟ್ಟುತ್ತಿದ್ದ ಭವನವು ಸಿದ್ಧವಾಯಿತು. ನೆನ್ನೆಯ ದಿವಸ ಆ ಭವನದ ಗೃಹಪ್ರವೇಶಕ್ಕಾಗಿ ಪೂರ್ವೋಕ್ತವಾದ ಕಾರ್ಯಗಳೆಲ್ಲಾ ನಡಸಲ್ಪಟ್ಟವು. ಗೃಹಪ್ರವೇಶದ ಸಮಾರಾಧನೆಯನ್ನು ನಾಳೆ ಶನಿವಾರದ ದಿನ ನಡಸುತ್ತಾರೆಂದು ತಿಳಿದುಬಂದಿದೆ.

***

ಸಂಸ್ಥಾನದಲ್ಲೆಲ್ಲಾ ಸರ್ಕಾರದವರು ಸುಪಾರಿ ತೋಟಗಳನ್ನು ಸಂಪೂರ್ಣವಾಗಿ ಪರಾಮರ್ಶಿಸಿದ್ದರಿಂದ ಶೃಂಗೇರಿ ಜಹಗೀರಿಗೆ ಈ ಬಾಬಿನಲ್ಲಿ ಆಗುತ್ತಿದ್ದ ಉತ್ಪತ್ತಿಯು ನಷ್ಟವಾಗುವುದೆಂದು ತಿಳಿದು, ಸರ್ಕಾರದಿಂದ ಆದರ ಪರಿಹಾರಕ್ಕಾಗಿ ಪ್ರತಿವರುಷವೂ ಶೃಂಗೇರಿ ಜಹಗೀರಿಗೆ ೧೫ ಸಾವಿರ ರೂಪಾಯಿ ಸಂಖ್ಯೆ ಕೊಡುವುದಾಗಿ ತಿಳಿಸಿ ಬಂತೆಂತೆ ಕೇಳುತ್ತೇವೆ.

***

ಶ್ರೀ ಶೃಂಗೇರಿ ಸ್ವಾಮಿಗಳು ಕಳೆದ ವಾರ ಬೆಂಗಳೂರಿನಲ್ಲಿ ಚಾಮರಾಜಪೇಟೆಗೆ ದಯಮಾಡಿ ಮೆ|| ಕೆ ಎಸ್ ಚಂದ್ರಶೇಖರಯ್ಯರವರ ಮನೆಯಲ್ಲೂ ಮೆ|| ಟಿ ರಾಮಯ್ಯನವರ ಮನೆಯಲ್ಲೂ ಪಾದಪೂಜಾದಿ ಆತಿಥ್ಯಗಳನ್ನು ಸ್ವೀಕರಿಸಿದರು. ಬೆಂಗಳೂರು ಬಸವನಗುಡಿಯ ಬಳಿ ಮಠದಿಂದ ಸುಮಾರು ೩೦,೦೦೦ ರೂಪಾಯಿ ವೆಚ್ಚದಲ್ಲಿ ಒಂದು ಮಠವನ್ನು ಸ್ವಾಮಿಗಳು ಕಟ್ಟಿಸುವವರಾಗಿದ್ದಾರೆ. ಇದಕ್ಕಾಗಿ ಸರ್ಕಾರದವರು ಸ್ಥಳವನ್ನು ಕೊಟ್ಟಿದ್ದಾರೆ.

ಬೊಂಬಾಯಿ ಕಡೆಯಿಂದ ಇಬ್ಬರು ಸಾಹೇಬರು ಬೆಂಗಳೂರಿಗೆ ಬಂದು ಅಲ್ಲಿನ ಒಬ್ಬಿಬ್ಬರು ಸೈನಿಕರ ಸ್ನೇಹಮಾಡಿಕೊಂಡು ದಂಡಿನ ಖಜಾನೆಯನ್ನು ರೆಸಿಡೆಂಟರ ಖಜಾನೆಯನ್ನೂ ನುಗ್ಗಿ ಕಳುವುಮಾಡಬೇಕೆಂದೂ ಹಡೆಯಾದ ಪಕ್ಷದಲ್ಲಿ ಕೊಲೆಮಾಡಬೇಕೆಂದೂ ಸನ್ನಾಹ ಮಾಡಿದ್ದರು. ಆದು ಪ್ಯಾಗೋ ಬಯಲಿಗೆ ಬಂದು ಈಗ ಅವರಿಬ್ಬರೂ ಲಾಕಪ್ಪಿನಲ್ಲಿ ಇರುತ್ತಾರೆ.

***

ಈ ದಿನ ಶ್ರೀಮನ್ ಯುವರಾಜ ನರಸರಾಜವೊಡೆಯರವರ ಇಪ್ಪತ್ತನೆಯ ವರ್ಷವರ್ಧಂತಿ ಮಹೋತ್ಸವವು ರಾಜಧಾನಿಯಲ್ಲಿ ನಡೆಯುವುದು. ಬೆಳಿಗ್ಗೆ ಅರಮನೆಯೊಳಗೆ ಹೊಸ ಅಂಬಾವಿಲಾಸದ ತೊಟ್ಟಿಯಲ್ಲಿ ಪೂಜಾದಿಗಳೂ ದಾನಧರ್ಮಗಳೂ ಯುವರಾಜರವರಿಗೆ ಆರತಿಯೂ ಜರುಗುವವು. ಶ್ರೀಮನ್ಮಹಾರಾಜರವರು ಬಿದಮಾಡಿ ದರ್ಬಾರ್ ನಡಸುವರು. ದೇವಸ್ಥಾನಗಳಲ್ಲಿ ಯುವರಾಜರ ಶ್ರೇಯಃಪ್ರಾರ್ಥನೆಗಾಗಿ ಅಭಿಷೇಕ ಅರ್ಚನೆ ಉತ್ಸವಾದಿಗಳು ನಡೆಯುತ್ತವೆ. ರಾತ್ರಿ ಅರಮನೆಯಲ್ಲಿ ಪಟಾಕಿ ಹಾರುವುದು.

***

ಶ್ರೀಮನ್ಮಹಾರಾಜರವರು ಕಳೆದ ೧ ನೆ ತಾ|| ಶನಿವಾರ ಸಾಯಂಕಾಲ ನೀಲಗಿರಿಯಿಂದ ಯುವರಾಜರ ಸಮೇತ ರಾಜಧಾನಿಗೆ ದಯಮಾಡಿದರು. ಅವರು ದಯಮಾಡಿದ ಮೋಟಾರ್ ಗಾಡಿಯನ್ನು ಸರ್ದಾರ್ ಗೋಪಾಲರಾಜೇ ಅರಸಿನವರು ನಡಿಸಿಕೊಂಡು ಬಂದರು. ಮಹಾರಾಜರವರ ಪ್ರೈವೆಟ್ ಸೆಕ್ರೆಟರಿ ಮೆ|| ಇ ಮೆಕಾನಕಿಯವರು ಅದೇ ಗಾಡಿಯಲ್ಲಿ ಬಂದಿದ್ದರು. ಗೌರವಾರ್ಥವಾದ ತೋಪುಗಳು ಹಾರಿಸಲ್ಪಟ್ಟವು. ಅರಸುಗಳೂ ಅಧಿಕಾರಿಗಳೂ ಕರೀಕಲ್ಲುತೊಟ್ಟಿಯಲ್ಲಿ ಕಾದಿದ್ದು ಶ್ರೀಮನ್ಮಹಾರಾಜರವರಿಗೆ ಮುಜುರೆ ಮಾಡಿದರು.

***

ಮೈಸೂರು ಗವರ್ನಮೆಂಟಿನವರು ಮಾಂಗನೀಸ್ ಲೋಹವನ್ನು ತೆಗೆದುಕೊಳ್ಳುವುದಕ್ಕೆ ಕೆಲವರಿಗೆ ಆಗಲೇ ಕಂಟ್ರಾಕ್ಟು ಕೊಟ್ಟಿರುತ್ತಾರಷ್ಟೆ. ಈ ವಿಷಯದಲ್ಲಿ ಮೈಸೂರು ಸರ್ಕಾರದವರು ಮೊದಲು ಮಾಡಿದ್ದ ರೂಲಸನ್ನು ಇಂಡಿಯಾ ಗವರ್ನಮೆಂಟಿನವರು ಒಪ್ಪಿ ಸ್ಯಾಂಕ್ಷನ್ ಮಾಡಿದರು. ಈಚೆಗೆ ಮೈಸೂರು ಸರ್ಕಾರದವರು ಇಂಡಿಯಾ ಗವರ್ನಮೆಂಟಿನವರಿಗೆ ತಿಳಿಸಿ ಅವರ ಅನುಮತಿ ಪಡೆಯದೇನೇ ಆ ರೂಲಸನ್ನು ಬದಲಾವಣೆ ಮಾಡಿ, ಆ ಲೋಹದ ರೈಸನ್ಸ್‌ದಾರರಿಗೆ ಹತ್ತು ಮೈಲಿಗಿಂತಲೂ ಹೆಚ್ಚು ಜಮೀನನ್ನು ಕೊಟ್ಟಿರುವುದಾಗಿಯೂ ಹೀಗೆ ಜಾಸ್ತಿ ಕೊಡಲು ಕಾರಣವೇನೆಂದು ಇಂಡಿಯಾ ಗವರ್ನಮೆಂಟಿನವರು ನಮ್ಮ ಸರ್ಕಾರದವರನ್ನು ಕೇಳಿರುವುದಾಗಿಯೂ ಬೌರಿಂಗ್‌ಪೇಟೆಯ ಬಾತ್ಮಿದಾರರು ಬರೆಯುತ್ತಾರೆ. ಮೈಸೂರು ಸಂಸ್ಥಾನದಲ್ಲಿ ಆಗಲೇ ಈ ಲೋಹ ತೆಗೆದುಕೊಳ್ಳುವುದಕ್ಕೆ ಹಲವು ಕಂಪನಿಗಳು ಹುಟ್ಟಿ ನೂರಾರು ಮೈಲಿ ಜಮೀನುಗಳನ್ನು ಅನುಭವಿಸುತ್ತಲಿವೆ. ಹೀಗೆ ಒಂದೊಂದೇ ಕಂಪನಿಯವರು ಹೆಚ್ಚು ಪ್ರದೇಶಗಳನ್ನು ಪಡೆದು ಅನುಭವಿಸುವುದು ನ್ಯಾಯವಾದದ್ದಲ್ಲವೆಂಬುದೇ ಇಂಡಿಯಾ ಗವರ್ನಮೆಂಟಿನವರ ಅಭಿಪ್ರಾಯವಾಗಿರುತ್ತದೆ.

ಮೈಸೂರು ಗೆಜೆಟ್ ಸಂಗ್ರಹ.

೧ನೆ ಕ್ಲಾಸ್ ಅಸ್ಪತ್ರೆ ಅಸಿಸ್ಟೆಂಟ್ ಜೆ ಪಾಪಯ್ಯನವರು ತಮ್ಮ ಹೆಸರನ್ನು ಪಿ ಪಾಪಯ್ಯನಾಯ್ಡು ಎಂಬದಾಗಿ ಬದಲಾಯಿಸಿಕೊಂಡಿರುತ್ತಾರೆ.

ಮೆ|| ವಿಷಕಂಟಪ್ಪ, ಮೆ|| ಗುರಿಕಾರ್ ಸಂಜಪ್ಪ ಎಂಬುವರನ್ನು ಗುಂಡ್ಲುಪೇಟೆಯ ಮ್ಯುನಿಸಿಪಲ್ ಬೋರ್ಡ್ ಮೆಂಬರಾಗಿ ನೇಮಕ ಮಾಡಿದೆ.

ರೆವಿನ್ಯೂ ಕಮಿಷನರ ಆಫೀಸ್ ಮ್ಯಾನೇಜರಾಗಿದ್ದು ಈಚೆಗೆ ನೆಲಮಂಗಲ ತಾಲ್ಲೂಕಿಗೆ ವರ್ಗಮಾಡಲ್ಪಟ್ಟ ಅಮಲ್ದಾರ್ ಮೆ|| ಸಹಾಣಿ ದಾಯರಿಗೆ ಒಂದು ತಿಂಗಳು ನಾಲ್ಕು ದಿನಗಳ ಪ್ರಿವಿಲೇಜ್ ರಜವನ್ನೂ ಅನಂತರ ಏಳುತಿಂಗಳು ಇಪ್ಪತ್ತೇಳು ದಿನಗಳ ಸಂಬಳವಿಲ್ಲದ ರಜವನ್ನೂ ಅವರು ಉಪಯೋಗಿಸಿಕೊಂಡ ತಾರೀಖಿನಿಂದ ಕೊಡಲ್ಪಟ್ಟಿದೆ.

ನೆಲಮಂಗಲದ ತಾಲ್ಲೂಕ್ ಶಿರಸ್ತೇದಾರ್ ಸಿ ಕಾಶೀನಾಥರಾಯರು ಆ ತಾಲ್ಲೂಕಿನ ಅಮಲ್ದಾರ್ ಮತ್ತು ಫಿನೆ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಕೆಲಸ ನೋಡುವಂತೆ ಬದಲಿ ನೇಮಿಸಲ್ಪಟ್ಟಿದ್ದಾರೆ.

ಕೊಪ್ಪದ ತಾಲ್ಲೂಕ್ ಅಮಲ್ದಾರ್ ಮೆ|| ಬಿ ಎಸ್ ವೆಂಕಟೇಶಯ್ಯನವರಿಗೆ ಏಪ್ರಿಲ್ ೧೦ ರ ಲಾಗಾಯತು ಒಂದು ತಿಂಗಳ ಹದಿನೈದು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ಮತ್ತೊಂದು ಹುಕುಂ ಕೊಡಲ್ಪಡುವ ತನಕ ಯ ಡೆಪ್ಯುಟಿ ಸಬ್ ತಾಲ್ಲೂಕ್ ಡೆಪ್ಯುಟಿ ಅಮಲ್ದಾರ್ ಬಿ ಬಗಣ್ಣಾಚಾರಯರು ಕೊಪ್ಪ ತಾಲ್ಲೂಕ್ ಅಮಲ್ದಾರರಾಗಿ ಕೆಲಸನೋಡುವಂತೆ ನೇಮಿಸಲ್ಪಟ್ಟಿದ್ದಾರೆ.

ಕಡೂರ್ ಡೆಪ್ಯುಟಿ ಕಮಿಷನರ ಆಫೀಸ್ ರೆವಿನ್ಯೂ ಹೆಡ್ ಗುಮಾಸ್ತಿ ಬಿ ಭೀಮರಾಯರು ಯಡೇಹಳ್ಳಿ ಸಬ್ ತಾಲ್ಲೂಕಿನ ಡೆಪ್ಯುಟಿ ಅಮಲ್ದಾರರಾಗಿ ಬದಲಿ ನೇಮಿಸಲ್ಪಟ್ಟಿದ್ದಾರೆ.

ಶಿ. ಮೊಗ್ಗಾ ಡಿಸ್ಟ್ರಿಕ್ಟ್ ಖಜಾನೆ ಛಾರ್ಜನ್ನು ವಹಿಸಿರ ವ ಅಕೌಂಟೆಂಟ್ ಆ|| ಕಮಿಷನರ್ ಮೆ|| ಎ ಕೃಷ್ಣಸ್ವಾಮಿ ಐಯ್ಯಂಗಾರ್ರಿಗೆ ಒಂದನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ಕೊಡಲ್ಪಟ್ಟಿದೆ.

ಹೊನ್ನಾಳಿ ತಾಲ್ಲೂಕಿನ ಅಮಲ್ದಾರ್ ಮೆ|| ಕೃಷ್ಣಾಜಿ ನಾರಾಯಣರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿನೈದು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ತಾಲ್ಲೂಕ್ ಶಿರಸ್ತೇದಾರ್ ಸಿ ರಾಮರಾಯರು ಮತ್ತೊಂದು ಹುಕುಂ ಕೊಡಲ್ಪಡುವ ತನಕ ತಾಲ್ಲೂಕಿನ ಛಾರ್ಜನ್ನು ವಹಿಸಿಕೊಳ್ಳತಕ್ಕದ್ದು.

ಅರಮನೆ ಡಿವಿಜನ್ ಸಬ್ ಆ|| ಇಂಜನಿಯರ್ ಮೆ|| ಎಸ್ ಶ್ರೀನಿವಾಸ ಐಯ್ಯರವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಇಪ್ಪತ್ತು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ಬರೋಡಾ ಸಂಸ್ಥಾನವು.

ಬರೋಡಾ ಸಂಸ್ಥಾನದ ರೆವಿನ್ಯೂ ಮಂತ್ರಿಗಳಾದ ಮೆ॥ ಆರ್. ಸಿ. ದತ್ತರವರು ಕಳೆದ ಜೂಲೈಗೆ ಅಖೈರಾದ ಒಂದು ವರುಷದ ರಿಪೋರ್ಟನ್ನು ಪ್ರಕಟಿಸಿರುತ್ತಾರೆ ಅದನ್ನು ನೋಡಲಾಗಿ ಆ ಸಂಸ್ಥಾನವು ದಿನೇ ದಿನೇ ನಾನಾ ಭಾಗಗಳಲ್ಲಿ ಅಭಿವೃದ್ಧಿಹೊಂದುತ್ತಿದೆ ಎಂದು ತಿಳಿದು ಬರುತ್ತದೆ ಅಮ್ರೇಲಿ ಡಿಸ್ಟ್ರಿಕ್ಟಿನಲ್ಲಿ ಸರ್ಕಾರದವರು ಮಾಡಿದ ಕ್ಷಾಮನಿವಾರಣೆಯ ಏರ್ಪಾಡು ತುಂಬಾ ಫಲಕಾರಿಯಾಗಿದ್ದಿತು. ಕಳೆದ ಎರಡು ವರುಷಗಳಲ್ಲಿ ಕ್ಷಾಮನಿವಾರಣೆಗಾಗಿ ಸರ್ಕಾರದವರು ಏಳು ಲಕ್ಷ ರೂಪಾಯಿ ಖರ್ಚು ಮಾಡಿದರು ಆದರೆ ಅವರು ನಡಸಿದ ಕಾರ್ಯಗಳು ತುಂಬಾ ತೃಪ್ತಿಕರವಾಗಿದ್ದವು ಕ್ಷಾಮಪ್ರಾಪ್ತವಾದ ದೆಸೆಯಿಂದ ಮರಣಸಂಖ್ಯೆಯು ಹೆಚ್ಚಲಿಲ್ಲವೆಂತಲೂ ಕ್ಷಾಮಪೀಡಿತರಾಗಿ ಯಾರೂ ಪ್ರಾಣಕೊಡಲಿಲ್ಲವೆಂತಲೂ ತಿಳಿದು ಬಂದಿದೆ ಚಾಲ್ತಿ ಸಾಲಿನ ಪ್ರಾರಂಭದಿಂದ ಆದಾಯದ ಮೇಲಣ ತೆರಿಗೆಯಲ್ಲಿ ಕೆಲವು ಬದಲಾವಣೆಗಳನ್ನು ಮಾಡಿ ಜಾರಿಗೆ ತಂದಿರುತ್ತಾರೆ ಮೊದಲು ವರುಷಕ್ಕೆ ೩೦೦ ರೂಪಾಯಿಗಿಂತಲೂ ಹೆಚ್ಚು ವರಮಾನವುಳ್ಳ ಪ್ರಜೆಗಳೆಲ್ಲಾ ಸರ್ಕಾರಕ್ಕೆ ಆ ತೆರಿಗೆಯನ್ನು ಕೊಡಬೇಕಾಗಿತ್ತು ಈ ವರುಷದಲ್ಲಿ ಅದನ್ನು ೫೦೦ ರೂಪಾಯಿಗೆ ಹೆಚ್ಚಿಸಿದರು ಮುಂದಿನ ಜೂಲೈನಲ್ಲಿ ಪ್ರಾರಂಭವಾಗುವ ಸಾಲಿನಿಂದ ಇದನ್ನು ತಪ್ಪಿಸಿ ೭೫೦ ರೂಪಾಯಿ ಅಥವಾ ಅದಕ್ಕಿಂತ ಹೆಚ್ಚಿನ ಆದಾಯದ ಮೇಲಣ ತೆರಿಗೆಯನ್ನು ಹಾಕಿ ವಸೂಲ್ಮಾಡಬೇಕೆಂದು ಗೊತ್ತು ಮಾಡಿದಾರೆ ಆದಾಗ್ಯೂ ಕಂಪಣೀ ಶೀಮೆಯಲ್ಲಿರುವುದಕ್ಕಿಂತಲೂ ಅದು ಇನ್ನೂ ಸ್ವಲ್ಪ ಹೆಚ್ಚೇ ಸರಿ. ಕಂಪಣೀ ಶೀಮೆಯಲ್ಲಿ ೧,೦೦೦ ರೂಪಾಯಿನೊಳಗೆ ವರಮಾನವಿರತಕ್ಕವರು ಆದಾಯದ ಮೇಲಣ ತೆರಿಗೆಯನ್ನು ಕೊಡಬೇಕಾದದ್ದಿಲ್ಲ ಇದಲ್ಲದೆ ಕಂಪಣೀ ಶೀಮೆಯಲ್ಲಿರುವ ಕಂದಾಯದ ದರಗಳಿಗಿಂತಲೂ ಬರೋಡಾ ಸಂಸ್ಥಾನದ ಕಂದಾಯದ ದರಗಳು ಕಡಿಮೆಯಾಗಿರುತ್ತವೆ ಬರೋಡಾ ಸಂಸ್ಥಾನದಲ್ಲಿ ಸಕಲಪ್ರಜೆಗಳೂ ಯಾವ ಕಸಬನ್ನೇ ಮಾಡತಕ್ಕವರಾಗಲಿ ರೂಪಾಯಿಗೆ ಮೂರು ಕಾಸಿನಂತೆ ಮಾತ್ರ ಸರ್ಕಾರಕ್ಕೆ ಕಂದಾಯ ಕೊಡುವರು

ಕಳೆದ ವರುಷ ಆ ಸಂಸ್ಥಾನದಲ್ಲಿ ಒಂದು ವಿಶೇಷವಾದ ಶಾಸನವನ್ನು ಜಾರಿಗೆ ತಂದಿರುತ್ತಾರೆ ಇದುವರೆಗೆ ಆ ಸಂಸ್ಥಾನದ ಪ್ರತಿ ಒಂದೇ ಒಂದು ತಾಲೂಕಿನಲ್ಲಿ ಸಕಲ ಬಾಲಕಬಾಲಿಕೆಯರೂ ಒಂದು ಕಾಸೂ ಖರ್ಚು ಮಾಡದೆ ಓದುಬರಹವನ್ನು ಕಲಿಯುವುದಕ್ಕೆ ಏರ್ಪಾಡು ಮಾಡಿದ್ದರು. ಈಗ ಈ ಬಲಾತ್ಕಾರದ ಮತ್ತು ಫೀಜಿಲ್ಲದ ವಿದ್ಯಾಬೋಧನೆಯನ್ನು ಆ ಸಂಸ್ಥಾನದ ಎಲ್ಲಾ ಕಡೆಗಳಿಗೂ ಜಾರಿಗೆ ತಂದಿರುತ್ತಾರೆ. ಇದರಿಂದ ಸರ್ಕಾರದವರು ಐದು ಲಕ್ಷ ರೂಪಾಯಿ ಅನಕ ಈ ವಿದ್ಯಾಭ್ಯಾಸಕ್ಕೆ ವಿನಿಯೋಗಿಸಬೇಕಾಯಿತು ಈ ವಿದ್ಯಾಭ್ಯಾಸದ ಕ್ರಮಗಳೇನೆಂದರೆ—೭ ವರುಷದ ಮೇಲೆ ೧೨ ವರುಷದೊಳಗಿರುವ ಸಮಸ್ತ ಹುಡುಗರೂ, ೭ ವರುಷದ ಮೇಲೆ ೧೦ ವರುಷಗಳೊಳಗಿರುವ ಸಮಸ್ತ ಹುಡುಗಿಯರೂ ಸರ್ಕಾರದವರು ಆಯಾ ಊರುಗಳಲ್ಲಿ ಏರ್ಪಡಿಸಿರುವ ಪಾಠಶಾಲೆಗಳೊಳಗೆ ಫೀಜೇನೂ ಕೊಡದೇನೇ ಸಾಮಾನ್ಯವಾದಷ್ಟು ಓದು ಬರಹ ಲೆಕ್ಕಾಚಾರಗಳನ್ನು ಕಲಿತುಕೊಳ್ಳಬೇಕು. ಇದಕ್ಕಾಗಿ ಆಗಲೇ ೧,೩೦೦ ಪಾಠಶಾಲೆಗಳನ್ನು ಸ್ಥಾಪಿಸಿರುತ್ತಾರೆ. ಇನ್ನೂ ಹೊಸ ಪಾಠಶಾಲೆಗಳನ್ನು ಇಡಿಸುವುದಕ್ಕೆ ಸನ್ನಾಹ ಮಾಡುತ್ತಿರುವರು

ಸಂಸ್ಥಾನದ ಪ್ರಜೆಗಳಿಗೆ ತಮ್ಮ ಕರ್ತವ್ಯಗಳನ್ನು ತಿಳಿದುಕೊಂಡು ಸತ್ಪ್ರಜೆಗಳಾಗುವುದಕ್ಕೆ ಅನುಕೂಲಿಸುವಂತೆ ಸರ್ಕಾರದವರು ಇದುವರೆಗೆ ಎರಡು ಸಾವಿರ ಗ್ರಾಮಸಂಘಗಳನ್ನು ಏರ್ಪಡಿಸಿದಾರೆ, ಪ್ರತಿ ಒಂದು ಬೋರ್ಡಿಗೂ ಸಂಬಂಧಪಟ್ಟಂತೆ ಒಂದೊಂದು ಪಾಠಶಾಲೆಯನ್ನು ಸ್ಥಾಪಿಸುವುದರಲ್ಲಿದಾರೆ. ಪೂರ್ವಕಾಲದಲ್ಲಿ ಈ ಗ್ರಾಮಸಂಘಗಳು ಇದ್ದಂತೆಯೇ ಈಗಲೂ ಆ ಸಂಘಗಳಿಗೆ ಸಿವಿಲ್ ಮತ್ತು ಕ್ರಿಮಿನಲ್ ಮೊಕದ್ದಮೆಗಳನ್ನು ಇತ್ಯರ್ಥ ಮಾಡತಕ್ಕ ಅಧಿಕಾರವನ್ನು ಕೊಟ್ಟಿರುತ್ತಾರೆ ಇದರಿಂದ ಜನರಿಗೆ ತಮ್ಮ ಕರ್ತವ್ಯಗಳನ್ನು ಕಲಿಸಿಕೊಟ್ಟಂತಾಗುವುದು ಅವರು ತಮ್ಮ ಗ್ರಾಮಗಳಿಗೆ ಸಂಬಂಧಪಟ್ಟ ಸಮಸ್ತವಾದ ಚಿಲ್ಲರೆ ಬಾಬುಗಳನ್ನೂ ತಾವೇ ನಡಿಸಿಕೊಳ್ಳುತ್ತಾ ಸ್ವತಂತ್ರಾಧಿಕಾರದಲ್ಲಿ ತರಪೇತಾಗುವರು ಇತ್ತಲಾಗಿ ಇದುವರೆಗೆ ಬರೋಡೆಯಿಂದ ಹೊರಕ್ಕೆ ಸಾಗಿ ಹೋಗುತ್ತಿದ್ದ ಸರಕುಗಳಿಗೆ ಸುಂಕ ತೆಗೆದುಕೊಳ್ಳುತ್ತಲೂ, ಅದೇ ಸರಕು ಹೊರಗಿನಿಂದ ಬಂದರೆ ಸುಂಕ ವಸೂಲ್ಮಾಡುತ್ತಲೂ ದಾಗೀಣಿ ತೆರಿಗೆ ಹಾಕಿದ್ದರು. ಈಗ ಈ ದಾಗೀಣಿ ತೆರಿಗೆಯನ್ನು ವಜಾ ಮಾಡಿದ್ದಲ್ಲದೆ ಅನೇಕ ಜಿನಸುಗಳಿಗೆ ತೆರಿಗೆಯನ್ನೇ ಹಾಕಕೂಡದೆಂದು ವಿಧಿಸಿರುತ್ತಾರೆ ಇದರಿಂದ ವ್ಯಾಪಾರಾಭಿವೃದ್ಧಿಗೆ ತುಂಬಾ ಪ್ರೋತ್ಸಾಹವಾಯಿತೆಂದು ಹೇಳಬೇಕಾದದ್ದಿಲ್ಲ. ಇದಲ್ಲದೆ ಸಂಸ್ಥಾನದ ಎಲ್ಲಾ ಕಡೆಗಳಲ್ಲೂ ರೆವಿನ್ಯೂ ಅಧಿಕಾರಿಗಳಿಗೆ ಮೊಕದ್ದಮೆಗಳನ್ನು ಹಿಡಿದು ದರ್ಯಾಫ್ತಿ ಮಾಡತಕ್ಕ ಅಧಿಕಾರವನ್ನು ಸಂಪೂರ್ಣವಾಗಿ ತಪ್ಪಿಸಿ ಬಿಟ್ಟರು

ಹೊಸ ಅರಮನೆಯು.

ಗೃಹಪ್ರವೇಶದ ಉತ್ಸವವು.

ಮೈಸೂರು ಪಟ್ಟಣದ ಕೋಟೆಯಲ್ಲಿ ಗವರ್ನಮೆಂಟಿನವರು ಕಟ್ಟಿಸುತ್ತಾ ಇರುವ ಹೊಸ ಅರಮನೆಯು ಮುಕ್ತಾಯಕ್ಕೆ ಬರುವುದರಲ್ಲಿದೆ. ಕಳೆದ ತಿಂಗಳ ೧೩ನೇ ತಾ. ಸೋಮವಾರ ಬೆಳಗ್ಗೆ ಶುಭಲಗ್ನದಲ್ಲಿ ಹೊಸ ಅರಮನೆಯ ಆರು ಗೋಪುರಗಳಿಗೆ ಶಾಸ್ತ್ರೋಕ್ತವಾದ ಪೂಜಾಪುನಸ್ಕಾರಗಳೊಡನೆ ಆರು ಚಿನ್ನದ ಕಳಸಗಳನ್ನು ಹಾಕಿದರೆಂದು ತಿಳಿಸಿರುತ್ತೇವಷ್ಟೆ. ಈ ಕಾಮಗಾರಿಯಲ್ಲಿ ಸೇರಿದ್ದ ಕೆಲಸದವರಿಗೆಲ್ಲಾ ಕಳೆದ ಶುಕ್ರವಾರದ ದಿನ ಜಾತಿವಾರಾಗಿ ಅರಮನೆಯಲ್ಲೇ ಅಡಿಗೆ ಮಾಡಿಸಿ ಭೋಜನ ಮಾಡಿಸಿದರು ಮಹಾಮಾತೃಶ್ರೀ ಯವರು ತಮ್ಮ ಸಂತೋಷಾತಿಶಯವನ್ನು ತೋರಿಸುವುದಕ್ಕಾಗಿ ಆ ದಿನ ಊಟ ಮಾಡುತ್ತಿದ್ದ ಕೂಲಿ ಆಳುಗಳಿಗೆಲ್ಲಾ ತಿಂಡಿಗಳನ್ನೂ ಹಣ್ಣು ಹಂಪಲನ್ನೂ ಹಂಚುವಂತೆ ದಯಪಾಲಿಸಿದರು ನೆನ್ನೆಯ ದಿನ ಅರಮನೆಯ ಗೃಹಪ್ರವೇಶ ಮಹೋತ್ಸವವನ್ನು ನೆರವೇರಿಸಿರುತ್ತಾರೆಂದು ತಿಳಿಸಲು ಸಂತೋಷಪಡುತ್ತೇವೆ ಮೊನ್ನೆ ಮಂಗಳವಾರ ರಾತ್ರಿ ಅರಮನೆಯಲ್ಲಿ ಯಥಾವಿಧಿಯಾಗಿ ಕಳಶಸ್ಥಾಪನೆ ಮುಂತಾದ್ದು ನಡೆಯಿತು ನೆನ್ನೆ ಮಧ್ಯಾಹ್ನ ಮೈಸೂರು ರಾಜವಂಶೀಯರ ಕುಲದೇವತೆಯಾದ ಶ್ರೀ ಚಾಮುಂಡಾಂಬೆಯನ್ನು ಕರೀಕಲ್ಲು ತೊಟ್ಟಿಯ ಬಾಗಿಲಿನಿಂದ ಸಕಲವಾದ ಮರ್ಯಾದೆಗಳೊಡನೆ ಮೆರವಣಿಗೆ ಮಾಡಿಕೊಂಡು ಅಂಗಡೀ ಬೀದಿಯ ಮೇಲ ಬಂದು ಅರಮನೆಯನ್ನು ಆನೇಬಾಗಿಲ ಮೂಲಕವಾಗಿ ಪ್ರವೇಶಿಸಿ, ನೂತನವಾದ ಮದುವೆ ಮಂಟಪದಲ್ಲಿ ಬಿಜಮಾಡಿಸಿ, ಪೂಜಾಪುನಸ್ಕಾರಗಳನ್ನು ನಡಿಸಿದರು. ಅಷ್ಟರಲ್ಲಿ ಗೃಹಪ್ರವೇಶಕ್ಕೆ ಅಂಗಗಳಾದ ವಾಸ್ತು ಶಾಂತಿ, ಗೃಹಪ್ರವೇಶ ಹೋಮ, ರಾಕ್ಷೋಘ್ನಶಾಂತಿ ಈ ಮೊದಲಾದುವನ್ನು ನಡಿಸಿದ್ದರು ತರುವಾಯ ಕುಲದೇವತೆಯನ್ನು ಕೋಟೆಯ ನಾಲ್ಕು ಬೀದಿಗಳಲ್ಲೂ ಮೆರವಣಿಗೆ ಮಾಡಿಕೊಂಡು ಹೋಗಿ ಅರಮನೆಯ ಸಜ್ಜೆಯ ಮೇಲೆ ಭದ್ರಾಸನದಲ್ಲಿ ಬಿಜಮಾಡಿಸಿದರು ಕೆಳಗಡೆ ರಂಗಸ್ಥಳದಲ್ಲಿ ಸಕಲ ಸೈನಿಕರೂ ನಿಂತು ಕವಾಯತು ಮಾಡಿದ್ದನ್ನು ನೋಡಿ ಮುಜುರೆ ಆದ ತರುವಾಯ, ದೇವತೆಯನ್ನು ಯಥಾಸ್ಥಾನದಲ್ಲಿ ಅಂದರೆ ಚಾಮುಂಡಿ ತೊಟ್ಟಿಯಲ್ಲಿ ಬಿಜಮಾಡಿಸಿದರು ಬೆಳಗ್ಗೆ ನಡೆದ ಮೆರವಣಿಗೆಯ ಕಾಲದಲ್ಲಿ ಶ್ರೀಮನ್ಮಹಾರಾಜರವರೂ ಮಹಾರಾಣಿಯವರೂ ಸಕಲ ವೈದಿಕ ಲೌಕಿಕ ಅಧಿಕಾರಿಗಳೂ ದೊಡ್ಡ ಮನುಷ್ಯರೂ ಅರಸುಮಕ್ಕಳೂ ದಯಮಾಡಿದರು. ಅರಮನೆಯಲ್ಲಿ ಪೂಜಾದಿಗಳು ನಡೆದ ಮೇಲೆ ಎರಡು ವೇಳೆ ದರ್ಬಾರ್ ನಡೆದು ಶ್ರೀಮನ್ಮಹಾರಾಜರವರಿಗೂ ಮಹಾರಾಣಿಯವರಿಗೂ ಆರತಕ್ಷತೆಯೇ ಮೊದಲಾದ ವಿಧಿಗಳು ನಡಸಲ್ಪಟ್ಟವು ದೇವಾಲಯಗಳಲ್ಲಿ ಅಭಿಷೇಕ ಅರ್ಚನೆ ಉತ್ಸವಾದಿಗಳು ನಡೆದವು ತ್ರಿಮತಸ್ಥ ಬ್ರಾಹ್ಮಣರಿಗೆ ಭೂರಿದಕ್ಷಿಣೆ ಕೊಡಲಾಯಿತು ಈ ಗೃಹಪ್ರವೇಶದ ಸಮಾರಾಧನೆಯು ಬ್ರಾಹ್ಮಣರಿಗೆ ಅರಮನೆಯಲ್ಲಿಯೂ, ಇತರ ಪ್ರಜೆಗಳ ಬಡಬಗ್ಗರಿಗೆ ಬೇರೆ ಕಡೆಗಳಲ್ಲಿಯೂ ನಾಳೆ ದಿನ ನಡೆಯುವಂತೆ ಏರ್ಪಾಡಾಗಿರುತ್ತದೆ. ಸಕಲ ಪ್ರಜೆಗಳೂ ತಂಡತಂಡವಾಗಿ ಬಂದು ಹೊಸ ಅರಮನೆಯನ್ನು ನೋಡಿ, ಅದರ ವಿಧವಿಚಕ್ಷಣಾದಿಗಳನ್ನು ಕುರಿತು ನಾನಾಪ್ರಕಾರವಾಗಿ ಹೊಗಳುತ್ತಾ ಆನಂದಪಡುತ್ತಾ ಇದಾರೆ

ಮೊದಲಿದ್ದ ಅರಮನೆಯ ವಿಚಾರವು.

ಮೊದಲಿದ್ದ ಚರಿತ್ರಾರ್ಹವಾದ ಅರಮನೆಯು ಸುಮಾರು ೯೭ ವರುಷಗಳ ಕಾಲ ಸುರಕ್ಷಿತವಾಗಿತ್ತು ಅದರಲ್ಲಿ ಚಿರಸ್ಮರಣೀಯಗಳಾದ ನಾನಾ ಬಗೆಯ ಉತ್ಸವಾದಿಗಳೂ ದರ್ಬಾರುಗಳೂ ನಡೆದಿದ್ದವು ಅಂಥಾ ಕಟ್ಟಡದಲ್ಲಿ ಮೊದಲನೆಯ ಮಹಾರಾಜಕುಮಾರಿಯವರ ವಿವಾಹ ಮಹೋತ್ಸವವು ನಡೆದ ಅಂತ್ಯಭಾಗದಲ್ಲಿ ಒಳಗಿದ್ದ ಮದುವೆ ಚಪ್ಪರಕ್ಕೆ ಬೆಂಕಿಬಿದ್ದು ಅರಮನೆಯೆಲ್ಲಾ ಸುಟ್ಟುಹೋದದ್ದನ್ನು ಜ್ಞಾಪಿಸಿಕೊಂಡರೆ ಈಗಲೂ ವ್ಯಸನವಾಗುವುದು. ಕಳೆದ ೧೮೯೭ ನೆ ಇಸವಿ ಫೆಬ್ರವರಿ ೨೮ ನೆ ತಾ. ಭಾನುವಾರ ಬೆಳಗ್ಗೆ ೭ ಗಂಟೆ ಹೊತ್ತಿಗೆ ಮಾಜಿ ದಿವಾನ್ ಸರ್ ಶೇಷಾದ್ರಿ ಅಯ್ಯರವರು ಅರಮನೆಗೆ ದಯಮಾಡಿ ರೀಜಂಟರಾಗಿದ್ದ ಮಹಾಮಾತೃಶ್ರೀಯವರ ಸನ್ನಿಧಾನದಲ್ಲಿ ಆಗತಾನೇ ವಿವಾಹಿತರಾಗಿದ್ದ ಜ್ಯೇಷ್ಠ ಮಹಾರಾಜಕುಮಾರಿಯವರನ್ನು ಅವರ ಅತ್ತೆಮ್ಮನವರ ಮನೆಗೆ ಕಳುಹಿಸಿ ಮನೆತುಂಬಿಸುವ ಶಾಸ್ತ್ರವನ್ನು ಆ ದಿನ ಸಾಯಂಕಾಲವೇ ನಡಸುವ ಭಾಗದಲ್ಲಿ ಆಲೋಚನೆ ಮಾಡುತ್ತಿದ್ದರು ಕೂಡಲೇ ಕಮಾನ ತೊಟ್ಟಿಯಲ್ಲಿ ಅಂದರೆ ವಿವಾಹ ಮಂಟಪದ ಚಪ್ಪರಕ್ಕೆ ಬೆಂಕಿ ಬಿದ್ದಿದೆ ಎಂಬ ವರ್ತಮಾನವು ಅವರಿಗೆ ತಿಳಿಯಿತು ಆಗ ರಾಜವಂಶೀಯರನ್ನೂ ಅರಮನೆಯ ಜಿಂದಗಿ ಮುಂತಾದದ್ದನ್ನೂ ಸುರಕ್ಷಿತವಾಗಿ ಕಾಪಾಡುವುದಕ್ಕೂ, ಚರಿತ್ರಾರ್ಹವಾದ ಸಜ್ಜೆ ಎಂಬ ದರ್ಬಾರ್ ಮಂದಿರವನ್ನಾದರೂ ಉಳಿಸಿಕೊಳ್ಳುವುದಕ್ಕೂ ವಿಶೇಷವಾದ ಪ್ರಯತ್ನಗಳು ನಡೆಸಲ್ಪಟ್ಟವು. ಆದರೆ ಮೊದಲನೆಯದು ಸಾರ್ಥಕವಾದರೂ ಎರಡನೆಯ ಭಾಗ ಸಾರ್ಥಕವಾಗದೆ ಹೋಯಿತು ಕೆಲವರು ಒಳಗೆ ಸಿಕ್ಕಿ ಪ್ರಾಣವನ್ನೇ ಕಳೆದುಕೊಂಡರು. ಕಡೆಗೆ ಬೆಂಕಿಯ ಜ್ವಾಲೆಗಳು ಎಲ್ಲಾ ಕಡೆಗಳಿಗೂ ವ್ಯಾಪಿಸಿ ಸಜ್ಜೆ, ಸಂಗೀತದ ಕೊಠಡಿ, ಸರಸ್ವತೀಭಂಡಾರ, ಅವಸರದಹೋಬಳಿ, ಅಂಬಾವಿಳಾಸ ಎಂಬೀ ಭಾಗಗಳೆಲ್ಲಾ ಉರಿದುಹೋದವು.

ಹೀಗೆ ಉರಿದು ಬಿದ್ದ ಅರಮನೆಯ ಸುಣ್ಣ ಕಲ್ಲು ಬೂದಿ ಮರ ಮುಂತಾದವುಗಳ ರಾಶಿಗಳನ್ನು ಹೊರಕ್ಕೆ ಸಾಗಿಸಿ ಆ ಸ್ಥಳವನ್ನು ಚೊಕ್ಕಟಮಾಡುವುದಕ್ಕೆ ಸುಮಾರು ಎಂಟು ದಿನಗಳು ಹಿಡಿಯಿತು ಅಷ್ಟರಲ್ಲೇ ಮಹಾಮಾತೃಶ್ರೀಯವರೂ ಗವರ್ನಮೆಂಟಿನವರೂ ಆಲೋಚನೆ ಮಾಡಿ ಅದೇ ಸ್ಥಳದಲ್ಲಿ ಪೂರ್ವದಲ್ಲಿದ್ದಂಥಾ ಅರಮನೆಯನ್ನೇ ಹೊಸದಾಗಿ ಕಟ್ಟಿಸಬೇಕೆಂದು ಗೊತ್ತು ಮಾಡಿದರು. ಅನೇಕ ಇಂಜನಿಯರುಗಳು ನಕ್ಷೆ (ಪ್ಲಾನ್) ಕಳುಹಿಸಿ ಕೊಟ್ಟರು ಆ ಪೈಕಿ ಮದರಾಸ್ ಗವರ್ನಮೆಂಟ್ ಆರ್ಕಿಟೆಕ್ಟ್ ಎಂಬ ಪ್ರಸಿದ್ಧ ಇಂಜನಿಯರ್ ಮೆ॥ ಎಚ್. ಇರ್ವಿನ್, ಸಿ. ಐ. ಇ. ಯವರು ಕಳುಹಿಸಿದ್ದ ಪ್ಲಾನ್ ಮಂಜೂರಾಯಿತು.

ಹೊಸ ಅರಮನೆಯ ಕಾಮಗಾರಿಯು.

ಮೇಲ್ಕಂಡ ಪ್ಲಾನ್ ಪ್ರಕಾರ ಗವರ್ನಮೆಂಟಿನವರು ಹೊಸ ಅರಮನೆಯನ್ನು ಕಟ್ಟಿಸುವುದಕ್ಕೆ ಕಳೆದ ೧೮೯೭ ನೆ ಇಸವಿ ಅಕ್ಟೋಬರ್ ೨೮ನೆ ತಾ ಗುರುವಾರ ಬೆಳಗ್ಗೆ ಶಾಸ್ತ್ರವಿಧಿಗನುಸಾರವಾಗಿ ಪೂಜೆ ಮುಂತಾದ್ದನ್ನು ನಡಿಸಿ, ಅಸ್ತಿಭಾರವನ್ನು ಹಾಕಿಸಿದರು ಆ ಲಾಗಾಯತು ಇದುವರೆಗೆ ಹತ್ತು ವರುಷಗಳಿಂದಲೂ ಕಾಮಗಾರಿ ಕೆಲಸವು ವಿರಾಮವಿಲ್ಲದೆ ನಡೆಯುತ್ತಾ ಬಂದಿರುವುದು. ಈಗ ನಾವು ನೋಡುವಲ್ಲಿ ಸಂತೋಷವೂ ಸಂಭ್ರಮವೂ ಉಕ್ಕಿಬರುತ್ತವೆ. ಅರಮನೆಯು ಯಥಾಪ್ರಕಾರ ನಿರ್ಮಾಣವಾಗಿರುವುದು. ಆದರೆ ಮೊದಲಿದ್ದ ಅರಮನೆಗೂ ಈಗ ನಾವು ನೋಡುವ ಹೊಸ ಅರಮನೆಗೂ ಬಹು ವ್ಯತ್ಯಾಸವಿರುತ್ತದೆ. ಮೊದಲು ಅಶಾಶ್ವತವಾದ ಮರ ಬೊಂಬು ಮೊದಲಾದವುಗಳಿಂದ ಅರಮನೆಯನ್ನು ಕಟ್ಟಿದ್ದರು. ಈಗಲಾದರೋ ಶಾಶ್ವತವಾದ ಕಲ್ಲು ಕಬ್ಬಿಣಾದಿಗಳಿಂದಲೇ ಕಟ್ಟಿಸಿರುತ್ತಾರೆ ಹಿಂದೂಸ್ಥಾನದಲ್ಲೂ ವಿಲಾಯತಿಯೇ ಮೊದಲಾದ ಪರರಾಜ್ಯಗಳಲ್ಲೂ ತಯಾರಾಗಿ ಬಂದಿರುವ ಕಬ್ಬಿಣ ಸಾಮಾನುಗಳನ್ನೇ ಎಲ್ಲಾ ಭಾಗಗಳಿಗೂ ಉಪಯೋಗಿಸಿರುವರು ಚಾಮುಂಡಿ ಬೆಟ್ಟ, ಶ್ರೀರಂಗಪಟ್ಟಣ ಅದರ ಸುತ್ತುಮುತ್ತು ಪ್ರದೇಶ, ಮಾರನ ಹಳ್ಳಿ, ಅದರ ಅಡುಬಾಜು, ಈ ಮೊದಲಾದ ರಾಜಧಾನಿಗೆ ಸಮೀಪದಲ್ಲಿರುವಂಥಾ ಸ್ಥಳಗಳಿಂದ ದಿನಸಾವಿರ ಕಲ್ಲುಗಳನ್ನು ಅಪಾರವಾಗಿ ತರಿಸಿ ಕೆತ್ತಿ ಸಾಣೆಹಿಡಿದು ಹೊಳಪುಕೊಟ್ಟು ಎಲ್ಲಾ ಗೋಡೆಗಳಿಗೂ ಕಂಭಗಳಿಗೂ ಭುವನೇಶ್ವರಿಗಳಿಗೂ ಹಾಕಿ ಕಟ್ಟಿರುತ್ತಾರೆ. ನಾನಾ ಬಗೆಯ ಕೂಲಿಕಾರರು ಸೇರಿ ಈ ಮಹಾ ಶ್ರೇಷ್ಠವೂ ನೇತ್ರಾನಂದಕರವೂ ಆದ ಅರಮನೆಯನ್ನು ಕಟ್ಟಿ ಪೂರೈಸಿರುವರು ಒಂದಾನೊಂದು ವೇಳೆ ಎರಡು ಸಹಸ್ರ ಮಂದಿಯ ತನಕ ಸೇರಿ ಕೆಲಸ ಮಾಡುತ್ತಿದ್ದದ್ದೂ ಉಂಟು ಈ ಕಾರೇಗಾರರು ಬೆಳ್ಗಾಂವ, ಕೊಲ್ಹಾಪುರ, ತಿನ್ನವೆಲ್ಲಿ, ಮಧುರೆ, ದಕ್ಷಿಣ ಆರ್ಕಾಡು, ದೆಹಲಿ, ಲಾಹೋರ್, ಈ ಮೊದಲಾದ ಕಡೆಗಳಿಂದ ಬಂದು ಕೆಲಸ ಮಾಡಿದರು ಮರಕೆಲಸಗಳನ್ನೂ ಇತರ ಚಿಲ್ಲರೆ ಅಲಂಕಾರ ಕೆತ್ತನೆಗಳನ್ನೂ ಮದರಾಸಿನವರೇ ವಿಶೇಷವಾಗಿ ಮಾಡಿರುತ್ತಾರೆ ಗಂಧದ ಮರದಲ್ಲಿ ವಿಚಿತ್ರತರವಾದ ಸಣ್ಣ ಕೆಲಸಗಳನ್ನೆಲ್ಲಾ ಮೈಸೂರಿನ ಕಾರೇಗಾರರು ತಯಾರ್ಮಾಡಿ ಕೊಟ್ಟಿರುತ್ತಾರೆ

ಹೊಸ ಅರಮನೆಯ ವಿಭಾಗಗಳು

ಈ ರೀತಿ ಹೊಸದಾಗಿ ಕಟ್ಟಿ ತಯಾರಾಗಿರುವ ಅರಮನೆಯು ೨೩೦ ಅಡಿ ಅಗಲವಾಗಿಯೂ ೧೯೦ ಅಡಿ ಉದ್ದವಾಗಿಯೂ ಇದೆ. ಮುಂಭಾಗದಲ್ಲಿ ಮೊದಲಿನಂತೆಯೇ ಕಟ್ಟಿರುವ ಆನೇ ಬಾಗಿಲನ್ನು ಪ್ರವೇಶಿಸಿದರೆ ಒಳಗಡೆ ಚೌಕವಾದ ಕಮಾನುತೊಟ್ಟಿ ಎಂಬ ಅಂಗಳವು ಕಾಣುವದು. ಈ ಅಂಗಳಕ್ಕೆಲ್ಲಾ ಕಲ್ಲುಗಳನ್ನು ಹಾಸಿ ಜಾರದಂತೆ ಸಣ್ಣ ಮನೆಗಳನ್ನು ಬಿಡಿಸಿದಾರೆ ಬಲಗಡೆಗೆ ತಿರುಗಿದರೆ ಕಾಣುವ ಮೆಟ್ಟಲುಗಳು ಸಜ್ಜೆ ಎಂಬ ವಿಸ್ತಾರವಾದ ದರ್ಬಾರ್ ಮಂದಿರಕ್ಕೆ ಕರೆದುಕೊಂಡು ಹೋಗುವುದು ಈ ದರ್ಬಾರ್ ಮಂದಿರವನ್ನು ಮೊದಲಿನಂತೆ ನೆಲದ ಮೇಲಿನಿಂದ ಉದ್ದಕ್ಕೂ ಎದ್ದಿರುವ ನಾಲ್ಕು ಭಾರೀ ಕಲ್ಲಿನ ಕಂಬಗಳು ಹೊತ್ತಿರುವವು ಒಳಗಡೆ ಉತ್ತರ ಪಾರ್ಶ್ವದಲ್ಲಿ ಸರಸ್ವತೀಭಂಡಾರಕ್ಕೂ ಆಯುಧಶಾಲೆಗೂ ಹೋಗುವ ಮೆಟ್ಟಿಲುಗಳೂ ಇವುಗಳ ಮೇಲ್ಗಡೆಯಲ್ಲಿ ಅಂದರೆ ೨ನೆ, ೩ನೆ ಅಂತಸ್ತುಗಳಲ್ಲಿ ಸಂಗೀತದ ಕೊಠಡಿ, ಡ್ರಾಯಿಂಗ್ ರೂಂ ಎಂಬ ಏಕಾಂತ ಕೊಠಡಿಗಳು, ಮೀ[illegible]ಗಾಗಿ ಮಲಗುವ ಮನೆಗಳು ಇರುತ್ತವೆ ಅರಮನೆಯ ಒಳಗಡೆ ದಕ್ಷಿಣಭಾಗದಲ್ಲಿ ಎತ್ತರವಾದ ಜಗಲಿಯ ಮೇಲೆ ಮೊದಲು ಇದ್ದಂತೆಯೇ ಆದರೆ ಕಬ್ಬಿಣ ಸಾಮಾನುಗಳಿಂದ ಕಟ್ಟಿದಂಥಾ ವಿವಾಹಮಂಟಪವೂ ಇದರ ಎಡಭಾಗದಲ್ಲಿ ಮೆಟ್ಟಲುಗಳನ್ನು ಹತ್ತಿ ಹೋದರೆ ಎರಡನೆಯ ಅಂತಸ್ತಿನಲ್ಲಿರುವ ಮನೋಜ್ಞವೂ ನೇತ್ರಾನಂದಕರವೂ ಆದ ಅಂಬಾವಿಳಾಸವೆಂಬ ಭವನವೂ ಇರುತ್ತವೆ ಮೇಲ್ಕಂಡ ಸಜ್ಜೆಯ ಎಡಬಲ ಭಾಗಗಳು ನೆಲಕ್ಕೆ ಎದ್ದು ಭುವನೇಶ್ವರಿಯನ್ನೂ ಅದರ ಮೇಲೆ ಚಿನ್ನದ ಕಳಸಗಳನ್ನು ಹೊತ್ತು ಕಳಕಳಿಸುತ್ತಿರುವವು. ಸಜ್ಜೆಯ ನಡುವೆ ಶ್ರೀಮನ್ಮಹಾರಾಜರವರು ಚಿತ್ತೈಸುವ ಸಿಂಹಾಸನದ ಮೇಲ್ಗಡೆ ನಾಲ್ಕು ಮೂಲೆಗಳಲ್ಲೂ ನಾಲ್ಕು ಕಳಸಗಳನ್ನೂ ಹೊತ್ತಿರುವ ನಾಲ್ಕು ಭುವನೇಶ್ವರಿಗಳು ಕಾಣುವವು ಈ ನಾಲ್ಕು ಕಳಸಗಳ ಮಧ್ಯೆ ಕಟ್ಟಡವು ಇನ್ನೂ ಎರಡು ಮೂರು ಅಂತಸ್ತುಗಳು ಎತ್ತರಕ್ಕೆ ಏಳುವುದರಲ್ಲಿದೆ. ಇದನ್ನು ಕೂಡ ಕಬ್ಬಿಣಕಂಭಗಳು ಮೊದಲಾದವುಗಳಿಂದ ಕಟ್ಟಿ ಕಾಂಕ್ರೀಟ ತಗಡುಗಳನ್ನು ಹೊದಿಕೆಮಾಡಿ ಅದರ ಮೇಲೆ ಚಿನ್ನದ ಪಂಚಕಲಶಗಳನ್ನು ಇಡಿಸುವರು ಈ ಭಾಗ ಮಾತ್ರ ಇನ್ನೂ ಕಾಮಗಾರಿಯಲ್ಲಿದ್ದರೂ ಒಂದೆರಡು ತಿಂಗಳಲ್ಲೇ ಪೂರೈಸುತ್ತೇವೆಂದು ಹೇಳುತ್ತಾರೆ ಅರಮನೆಯೊಳಗೆಲ್ಲಾ ಗೋಡೆಗಳಿಗೆ ಸುಮಾರು ಮೂರಡಿಯ ವರೆಗೆ ಚಿತ್ರ ಬಣ್ಣಗಳಿಂದ ಹೊಳೆಯುವಂಥಾ ಚದರ ಟೈಲ್ಗಳನ್ನು ಮೆಟ್ಟಿ ಅಲಂಕಾರ ಮಾಡಿರುವರು ಎಲ್ಲಾ ಭಾಗಗಳಿಗೂ ದೀಪಗಳನ್ನು ಹಾಕಿ, ಅಲಂಕಾರಗಳನ್ನು ಮಾಡಿ ಸಾಮಾನುಗಳನ್ನಿಟ್ಟು ತಯಾರ್ ಮಾಡುವುದು ಬಾಕಿಯಾಗಿದೆ ಈ ಕೆಲಸಗಳನ್ನು ಒಂದು ಕಂಪನಿಯವರು ವಹಿಸಿಕೊಂಡು ಮಾಡಿಸುತ್ತಿದಾರೆ ದರ್ಬಾರ್ ಮಂದಿರದಲ್ಲೂ ಇತರ ಕಡೆಗಳಲ್ಲೂ ಲೇಟ್ ರಾಜಾ ರವಿವರ್ಮರವರಿಂದ ಬರೆಯಲ್ಪಟ್ಟ ರಾಮಾಯಣ, ಮಹಾಭಾರತ, ಭಾಗವತಾದಿ ಪುರಾಣಪ್ರಸಿದ್ಧವಾದ ಕಥೆಗಳನ್ನು ವಿವರಿಸುವಂಥಾ ನೇತ್ರಾನಂದಕರಗಳಾದ ತಸ್ವೀರುಗಳನ್ನು ಕಟ್ಟುವುದಕ್ಕೆ ಸಿದ್ಧಪಡಿಸಿಕೊಂಡಿದಾರೆ ಇದಲ್ಲದೆ ಕಲ್ಲುಕೆಲಸದವರೂ ಚಿತ್ರಗಾರರೂ ಕೂಡಿ ಕೆತ್ತಿ ಬಿಡಿಸಿ ನಿರ್ಮಾಣ ಮಾಡಿದಂಥಾ ಅನೇಕಾನೇಕ ಸುಂದರ ವಿಗ್ರಹಗಳು ಗೋಡೆಗಳಲ್ಲೂ ಕಮಾನುಗಳ ಮೇಲೆಯೂ, ಚೌಕಟ್ಟುಗಳಲ್ಲೂ, ಕಲ್ಲುಕಂಬಗಳಲ್ಲೂ ಬೋದಿಗೆಗಳ ಬಳಿಯೂ ನಿಲ್ಲಿಸಲ್ಪಟ್ಟಿರುತ್ತವೆ ಅರಮನೆಯ ಹಿಂಭಾಗ ಎದುರು ಪಾರ್ಶ್ವದಲ್ಲಿರುವ ನಗಾರಖಾನೆಯ ಮುಂಗಡದಲ್ಲಿ ಹೊಸದಾಗಿ ಒಂದು ದೊಡ್ಡ ಕೊಳವನ್ನು ಕಟ್ಟುತ್ತಿದಾರೆ ಮತ್ತೆ ಬೆಂಕಿ ಮುಂತಾದ್ದರ ಭಯವೇನಾದರೂ ಬರುವ ಪಕ್ಷಕ್ಕೆ ಈ ಕೊಳದ ನೀರು ಒದಗುವಂತಾಗಬೇಕೆಂಬುವುದೇ ಅದರ ಉದ್ದೇಶವೆಂದು ಹೇಳುವರು

ಇತರ ವಿಚಾರಗಳು

ಇಂಥಾ ಅಪೂರ್ವವಾದ ಕಟ್ಟಡಕ್ಕೆ ಆಗಿರುವ ಖರ್ಚು ಸುಮಾರು ೩೩ ಲಕ್ಷ ರೂಪಾಯಿ ತನಕ ಆದೀತೆಂದು ತಿಳಿದುಬರುತ್ತದೆ ಮೆ॥ ಗಳಾದ ಬಿ. ಪಿ ರಾಘವಾಚಾರ್ಯರು, ಐಯ್ಯಾಸ್ವಾಮಿ ಮುದಲಿಯಾರು, ರಂಗಾಚಾರ್ಯರು, ಶೇಷಯ್ಯಂಗಾರ್ರು, ಕೃಷ್ಣಯ್ಯಂಗಾರ್ರು, ಮಾಧವರಾಯರು, ಶ್ರೀನಿವಾಸ ಅಯ್ಯರು— ಈ ಮೊದಲಾದ ಅನೇಕ ಇಂಜನಿಯರುಗಳು ಅರಮನೆಯ ಕಾಮಗಾರಿಯನ್ನು ನಡಸುವುದರಲ್ಲಿ ಕೆಲವು ಕಾಲ ಶ್ರಮಪಟ್ಟಿರುತ್ತಾರೆ ಈ ಸುಂದರವಾದ ಮತ್ತು ಶಾಶ್ವತವಾದ ಅರಮನೆಯು ನಮ್ಮ ಶ್ರೀಮನ್ಮಹಾರಾಜರವರಿಗೂ ಅವರ ರಕ್ತಸಂಬಂಧಿಗಳಿಗೂ ಎಲ್ಲಾ ಭಾಗಗಳಲ್ಲೂ ಅನುಕೂಲವಾಗಿ ಪರಿಣಮಿಸುವಂತಾಗಲೆಂದು ಸಕಲ ಪ್ರಜೆಗಳ ಕೂಡ ನಾವೂ ಹಾರೈಸುವೆವು

ಇಂಡಿಯಾ ದೇಶದ ವೃತ್ತಾಂತಗಳು.

...ರಿಸಾ ಡಿಸ್ಟ್ರಿಕ್ಟಿನ ಪ್ರಜೆಗಳ ಕಷ್ಟನಷ್ಟಗಳನ್ನು ಇಂಗ್ಲಿಷ್ ...ಳಿಗೆ ತಿಳಿಸುವುದಕ್ಕೋಸ್ಕರ ಮಿ॥ ಎಂ. ಎಸ್. ದಾಸ್, ಸಿ. ಐ. ...ರವರು ನಾಳೆ ಶನಿವಾರ ವಿಲಾಯತಿಗೆ ಪ್ರಯಾಣಮಾಡುತ್ತಾರೆ.

❦❦❦

ಕಲ್ಕತ್ತಾ ಪಟ್ಟಣದ ಯೂನಿವರ್ಸಿಟಿ ಎಂಬ ವಿದ್ಯಾಪರಿಷತ್ತಿನ ...ಯಲ್ಲಿ ಈಸಲ ಮೂರು ಮಂದಿ ಬಂಗಾಳಿ ಯುವತಿಯರು ಬಿ. ...ಪ್ಯಾಸ್ ಮಾಡಿರುತ್ತಾರೆ. ಅಪ್ಪರ ಮಿಸ್ ಮುಖರ್ಜೀ ಎಂಬ ಹುಡು... ಇಂಗ್ಲಿಷ್ ಭಾಷೆಯಲ್ಲಿ ಘನತರವಾಗಿ ತೇರ್ಗಡೆ ಹೊಂದಿರುವಳು.

❦❦❦

ಕಾಶ್ಮೀರ ಸಂಸ್ಥಾನದಲ್ಲಿ ಯಾರೂ ಅಂತರಂಗ ಬಹಿರಂಗಗಳಲ್ಲಿ ...ಗಳನ್ನು ನಡಿಸಿ ರಾಜಕೀಯ ವಿಷಯಗಳನ್ನು ಚರ್ಚಿಸಕೂಡದೆಂದು ...ರಾಜರವರು ಇಷ್ತಿಹಾರು ಹಾಕಿಸಿರುತ್ತಾರಲ್ಲದೆ, ಪ್ರಜಾನೆಮ್ಮದಿಗೆ ...ವನ್ನುಂಟುಮಾಡುತ್ತಿದ್ದ ಕೆಲವು ಮುಖಂಡರಾದ ದೊಡ್ಡ ಮನುಷ್ಯ... ...ಗಡೀಪಾರು ಮಾಡಿರುತ್ತಾರೆ.

❦❦❦

ಬಂಗಾಳಾ ಆಧಿಪತ್ಯದಲ್ಲಿ ಕ್ಷಾಮಪೀಡಿತರ ಸಂಖ್ಯೆಯು ಈ ವಾರ ...೮೦೯ಕ್ಕೆ ಹೆಚ್ಚಿತು ಹದಿಮೂರು ಡಿಸ್ಟ್ರಿಕ್ಟುಗಳಲ್ಲಿ ಈಚೆಗೆ ...ಮಾಸ ಜಾಸ್ತಿಯಾಯಿತು. ಬೊಂಬಾಯಿ ಆಧಿಪತ್ಯಕ್ಕೆ ಸೇರಿದ ...ನ ಜಿಲ್ಲೆಯಲ್ಲಿ ಸದ್ಯ ೬೫ ಮಂದಿ ಸರ್ಕಾರದವರ ಅನ್ನಸತ್ರಗ... ಪೋಷಣೆ ಹೊಂದುತ್ತಿದ್ದಾರೆ.

❦❦❦

ಕಲ್ಕತ್ತಾ ಪಟ್ಟಣದಲ್ಲಿ ಆರಥೂನ್ ಎಂಬ ಸಾಬಿನ ಕಾರ್ಖಾನೆಯ ...ಲೆಯೊಳಕ್ಕೆ ಮಳೆಗಾಗಿ ಕೆಲವು ಜನರು ಹೋಗಿ ನಿಂತಿದ್ದರು ...ಟ್ಟಡವು ಆಕಸ್ಮಾತ್ತಾಗಿ ಕಳಚಿ ಬಿದ್ದುಹೋಯಿತು. ಹನ್ನೆರಡು ...ದಿಗೆ ಗಾಯಗಳಾದವು. ಏಳು ಮಂದಿಗೆ ಪ್ರಾಣ ಉಳಿಯುವ ಹಾಗಿ... ...ದು ತಂತೀ ವರ್ತಮಾನ ಬಂದಿದೆ.

❦❦❦

ಮದರಾಸ್ ಪಟ್ಟಣದಲ್ಲಿ ದಿವಾಳಿಯಾದ ಆರ್ಬತ್ನಾಟ್ ಕಂಪನಿ ಮುಖ್ಯಸ್ಥರಾದ ಸರ್ ಜಾರ್ಜ್ ಆರ್ಬತ್ನಾಟ್‌ಯವರಮೇಲೆ ...ಕ್ರಿಮಿನಲ್ ಮೊಕದ್ದಮೆಗಳು ಹುಟ್ಟಿ ದರ್ಯಾಪ್ತಿ ಆಗುತ್ತಿದೆ ...ರ ಪರವಾಗಿ ಈಗ ಮಿ॥ ಇ. ನಾರ್ಟನ್ ಎಂಬ ವಕೀಲರು ಮೊಕದ್ದ... ನಡಸುವುದಕ್ಕೆ ನಿಂತಿದ್ದಾರೆಂದು ತಿಳಿಯುವುದು.

❦❦❦

ಪಂಜಾಬ್ ಆಧಿಪತ್ಯಕ್ಕೆ ಸೇರಿದ ಗುಜ್ರಾನವಾಲಾ ಪಟ್ಟಣದಲ್ಲಿ ...ಇಂಡಿಯಾ" ಎಂಬ ಒಂದು ವಾರಪತ್ರಿಕೆಯಲ್ಲಿ ರಾಜದ್ರೋಹಕರವಾ... ...ಗಳನ್ನು ಪ್ರಕಟಿಸಿದರೆಂದು ಆ ಪತ್ರಿಕೆಯ ಎಡಿಟರಾದ ಪಿಂಡಿ... ...ಸ್ ಎಂಬಾತನನ್ನು ಹಿಡಿದು ಆತನ ಮೇಲೆ ಫಿರ್ಯಾದು ತಂದಿದ್ದಾರೆ ಎಡಿಟರಿಗೆ ೬೦ ವರುಷ ವಯಸ್ಸಾಗಿರುವುದು ಆತನನ್ನು ಜಾಮೀ... ...ಮೇಲೆ ಬಿಟ್ಟಿಲ್ಲ.

❦❦❦

ಪಂಜಾಬಿನಲ್ಲಿ ೧,೦೫೦ ಜನರು ಸರ್ಪಕಚ್ಚಿದು ಪ್ರಾಣಬಿಟ್ಟರೆಂದು ...ಯುವುದು. ಈಚೆಗೆ ಲಾನ್ಸೆಂಟ್ ಎಂಬ ಚಿಕಿತ್ಸೆಯನ್ನು ಹಾವು ಕ... ...ವರಿಗೆ ಮಾಡಿದಂತೆಯೂ ಚಿಕಿತ್ಸೆ ಮಾಡಿಸಿಕೊಂಡವರೆಲ್ಲಾ ಬದುಕಿ... ...ಂದರೆಂತಲೂ ಷಹಪುರದ ಡೆಪ್ಯುಟಿ ಕಮಿಷನರು ಪ್ರಕಟಿಸಿದ್ದಾರೆ. ...ಔಷಧವನ್ನು ಆ ಪ್ರಾಂತ್ಯದ ಪೋಲೀಸ್ ಠಾಣಾಗಳಲ್ಲೆಲ್ಲಾ ಇಡಿಸು... ...ತೆ ಏರ್ಪಾಡು ಮಾಡುವರು.

❦❦❦

ವೈಸ್‌ರಾಯಿ ಲಾರ್ಡ್ ಮಿಂಟೋ ಪ್ರಭುಗಳು ಮುಂದಿನ ನವಂ... ...ರ್ ತಿಂಗಳ ಪ್ರಾರಂಭದಲ್ಲೇ ಹೈದರಾಬಾದ್ ಸಂಸ್ಥಾನಕ್ಕೆ ದಯಮಾಡಿ ...ಜಾಮರವರ ಆತಿಥ್ಯವನ್ನು ಸ್ವೀಕರಿಸಿ ಅಲ್ಲಿ ನೋಡತಕ್ಕದ್ದನ್ನೆಲ್ಲಾ ...ನೋಡಿಕೊಂಡು, ಸುಮಾರು ಆ ತಿಂಗಳ ೨೦ಕ್ಕೆ ಜಾಗಾಪಲ್ಲಟ್ಟಗೆ ...ರ್ನ ಆಧಿಪತ್ಯಕ್ಕೆ ಹೋಗಿ ಅಲ್ಲಿ ಒಂದು ತಿಂಗಳಿದ್ದು ಡಿಸೆಂಬರ್ ...ಕ್ಕೆ ಕಲ್ಕತ್ತಾ ಪಟ್ಟಣವನ್ನು ತಲಪುವವರಾಗಿದ್ದಾರೆಂದು ತಿಳಿದು ...ದಿದೆ.

❦❦❦

ಪೂನಾ ಪಟ್ಟಣದ ಬಳಿ ಮ್ಯಾಥೆರನ್ ಎಂಬ ಸ್ಥಳದಲ್ಲಿ ಇಬ್ಬರು ...ಮಾಯಿ ಸಾದ್ರಿಗಳು ಬೇಸಿಗೆ ಕಳೆಯುವುದಕ್ಕೆ ಒಂದು ಬೆಟ್ಟದ ...ಲೆ ಇರುತ್ತಾ, ಕಳೆದ ವಾರ ಒಂದು ದಿನ ಸಾಯಂಕಾಲ ಒಂದು ...ಜೇನಿನ ಗೂಡನ್ನು ನೋಡಿ ಅದನ್ನು ಕಿತ್ತರು. ಕೂಡಲೇ ಜೇನು ...ಗಳು ಅವರನ್ನು ಕಚ್ಚಲಾರಂಭಿಸಿದವು. ಅವರು ಗಾಬರಿಯಿಂದ ...ಗ್ಗೆ ಒಂದು ಕಮರಿಯಲ್ಲಿ ಬಿದ್ದು ಗಾಯವಾಯಿತು. ಈಗ ...ರಿಗೆ ವಾಸಿಯಾಗುತ್ತಿದೆ ಎಂದು ಕೇಳುತ್ತೇವೆ.

❦❦❦

ಮದರಾಸ್ ಅಧಿಪತ್ಯದಲ್ಲಿ ವ್ಯವಸಾಯ ಮತ್ತು ಕಸಬುದಾರಿ ವಿದ್ಯೆ... ...ನ್ನು ಪ್ರೋತ್ಸಾಹಪಡಿಸುವ ಇಲಾಖೆಯ ಡೈರೆಕ್ಟರಾಗಿ ತುಂಬಾ ಹೊಸ... ...ವಾಸಿಗೆ ಬಂದಿರುವ ಮಿ॥ ಎ. ಛಾಟರ್ಟನ್‌ರವರನ್ನು ಸಂಯುಕ್ತ ...ಧಿಪತ್ಯಗಳ ಗವರ್ನಮೆಂಟಿನವರು ಕೆಲವು ಕಾಲ ಅಲ್ಲಿ ನೇಮಿಸಿಕೊಂ... ...ಆ ಪ್ರಾಂತ್ಯದ ಕಸಬುಗಳನ್ನು ಅಭಿವೃದ್ಧಿಗೆ ತರುವಂತೆ ಮಾಡಬೇ... ...ದು ತೀರ್ಮಾನ ಮಾಡಿದ್ದಾರೆ. ಮಿ॥ ಛಾಟರ್ಟನ್‌ರವರು ಮುಂದಿನ ...ಷ್ಟು ತಿಂಗಳಲ್ಲಿ ಆ ಪ್ರಾಂತ್ಯ ಹೋಗುವವರಾಗಿದ್ದಾರೆ.

❦❦❦

ಈ ದಿನ ವಿಲಾಯತಿಯ ಪಾರ್ಲಿಮೆಂಟಿನಲ್ಲಿ ಹಿಂದುಸ್ಥಾನದ ...ಮಾಬರ್ಚಿನ ಲೆಕ್ಕಗಳನ್ನು ಸ್ಟೇಟ್ ಸೆಕ್ರೆಟರಿ ಮಿ॥ ಜಾನ್ ಮಾರ್ಲಿ ...ವರು ಓದಿಹೇಳಿ, ಹಿಂದುಸ್ಥಾನದ ರಾಜಕೀಯ ವಿಷಯಗಳನ್ನು ವಿವ... ...ಚರ್ಚೆಗೆ ತರುವರು. ಆಗ ಅವರು ಏನು ಹೇಳುವರೋ ಅದನ್ನು ನೋಡಿಕೊಂಡು ಹಿಂದುಸ್ಥಾನದಲ್ಲಿರುವ ನ್ಯಾಷನಲ್ ಕಾಂಗ್ರೆಸ್ ಎಂಬ ಸಾರ್ವಜನಿಕ ಸಮಾಜದ ಮೆಂಬರುಗಳು ಬೊಂಬಾಯಿನಲ್ಲಿ ಒಂದು ಮೀಟಿಂಗ್ ನಡಿಸಬೇಕೆಂದು ಆಲೋಚನೆ ಮಾಡಿಕೊಂಡಿದ್ದಾರೆ.

❦❦❦

ಹಿಂದಿನ ವರುಷ ವಿಲಾಯತಿಯ ಪ್ರಿನ್ಸ್ ಆಫ್ ವೇಲ್ಸ್‌ರವರೂ ಅವರ ಪತ್ನೀರವರೂ ಹಿಂದುಸ್ಥಾನಕ್ಕೆ ದಯಮಾಡಿದ್ದ ಸಂದರ್ಭದಲ್ಲಿ ಲಕ್ನೋ ಪಟ್ಟಣದಲ್ಲಿ ಅವರನ್ನು ಸತ್ಕರಿಸುವುದಕ್ಕೋಸ್ಕರ ಔಡ್ ಮತ್ತು ರೋಹಿಲ್‌ಕಂಡ್ ರೈಲ್‌ಕಂಪನಿಯವರು ಮೂರ್ ಕಂಪನಿಯವರಿಂದ ಒಂದು ದರ್ಬಾರ್ ಡೇರೆಯನ್ನು ತರಿಸಿ ಹಾಕಿಸಿದ್ದರು. ಈಗ ಮೂರ್ ಕಂಪನಿಯವರು ಆ ಡೇರೆಯನ್ನು ಕೊಟ್ಟದ್ದುದಕ್ಕೆ ತಮಗೆ ಬಾಡಿಗೆಯೂ ಭಾವರ್ಣ ಸಲ್ಲಬೇಕಾಗಿದೆ ಎಂದು ರೈಲ್ವೆ ಕಂಪನಿಯವರಮೇಲೆ ದಾವಾ ತಂದಿದ್ದಾರೆ.

❦❦❦

ಹಿಂದುಸ್ಥಾನದಲ್ಲಿ ಪ್ಲೇಗ್ ಉಪದ್ರದಿಂದ ಮರಣಸಂಖ್ಯೆಯು ಹಿಂದಿನವಾರಕ್ಕಿಂತ ಹೋದವಾರ ೧೬,೨೧೯ ಕಡಿಮೆಯಾದದ್ದು ಸಂತೋಷಪ್ರದವಾಗಿರುತ್ತದೆ. ಒಟ್ಟಾಗಿ ೬೯,೬೮೧ ಜನರು ಹೋದವಾರ ಆ ಉಪದ್ರದಲ್ಲಿ ಕಾಲವಾದರು. ಈ ಪೈಕಿ ಬೇರೆ ಬೇರೆ ಸ್ಥಳಗಳ ಸಂಖ್ಯೆಗಳೆಷ್ಟೆಂದರೆ—ಬೊಂಬಾಯಿ ೪,೬೮೦, ಬಂಗಾಳಾ ೧,೭೩೦; ಸಂಯುಕ್ತ ಆಧಿಪತ್ಯಗಳು ೦೦,೩೪೧; ಪಂಜಾಬ್ ಆಧಿಪತ್ಯ ೫೭,೪೭೮; ಮಧ್ಯಪ್ರಾಂತ್ಯಗಳು ೩೩೪, ಕಾಶ್ಮೀರ ಸಂಸ್ಥಾನ ೧೯೯ ಈರೀತಿ ಪ್ರಜೆಗಳು ಮೃತಪಟ್ಟಿದ್ದಾರೆ.

❦❦❦

ಭಾಗಲ್ಪುರದಲ್ಲಿ ಬ್ಯಾರಿಸ್ಟರಾಗಿ ಮೊಕದ್ದಮೆಗಳನ್ನು ಹಿಡಿದು ನಡಿಸುತ್ತಿದ್ದ ಸೈಯ್ಯದ್ ಖಿಲ್ಲಾ ಫತ್ ಹುಸೇನ್ ಎಂಬಾತನು ಒಂದು ಮೊಕದ್ದಮೆಯಲ್ಲಿ ವಾದಿತರಪು ವಕಾಲತ್ತು ಪಡೆದು ಫೀಜು ವಸೂಲ್ಮಾಡಿಕೊಂಡು, ಅದೇ ಮೊಕದ್ದಮೆಯಲ್ಲಿ ಪ್ರತಿವಾದಿಗೆ ಹೇಳಿಕಳುಹಿಸಿ ಹತ್ತು ಚಿನ್ನದ ಮೊಹರುಗಳನ್ನು ಕೊಡದಿದ್ದರೆ ಮೊಕದ್ದಮೆ ದಾಖಲ್ಮಾಡುವುದಾಗಿ ತಿಳಿಸಿದನು. ಇದು ಪ್ರಕಟವಾಗಿ ಆತನಮೇಲೆ ಕ್ರಿಮಿನಲ್ ಮೊಕದ್ದಮೆ ಬಂದಾಗ ಕಲ್ಕತ್ತಾ ಹೈಕೋರ್ಟ್ ಜಡ್ಜಿಗಳು ಆ ಬ್ಯಾರಿಸ್ಟರನ್ನು ಮೂರು ತಿಂಗಳ ಕಾಲ ವಕಾಲತ್ತು ನಡಸಕೂಡದೆಂದು ಕಡೆ ಹುಕುಮನ್ನು ಕೊಟ್ಟಿದ್ದಾರೆ.

❦❦❦

ಢಕ್ಕಾ ಡಿಸ್ಟ್ರಿಕ್ಟಿಗೆ ಸೇರಿದ ಜಮಾಲ್‌ಪುರ ಪಟ್ಟಣದಲ್ಲಿ ಸ್ವದೇಶೀ ಪರ್ಯಟನ ವಿಷಯವಾಗಿ ಕಲಹಗಳು ನಡೆದು ಪೋಲೀಸಿನವರು ೪೩ ಜನರನ್ನು ದಸ್ತಗಿರಿಮಾಡಿ ಅವರಮೇಲೆ ಫಿರ್ಯಾದು ದಾಖಲ್‌ಮಾಡಿದರು ಆ ಪೈಕಿ ೩೦ ಮಂದಿಯನ್ನು ದರ್ಯಾಫ್ತಿಗೆ ಗುರಿಪಡಿಸಿದರು ಇವರ ಪೈಕಿ ಹದಿನಾರು ಜನಕ್ಕೆ ೩ ತಿಂಗಳಿಂದ ೮ ತಿಂಗಳ ವರೆಗೆ ಸಜಾ ಮತ್ತು ಜುಲ್ಮಾನೆ ಆಯಿತು ನಾಲ್ಕು ಮಂದಿಯನ್ನು ಬಿಟ್ಟುಬಿಟ್ಟರು ೩೦ ಜನರನ್ನು ಸೆಷನ್ಸ್ ವಿಚಾರಣೆಗೆ ಗುರಿಪಡಿಸಿರುತ್ತಾರೆ ರಾಜಷಾಹಿ ಡಿಸ್ಟ್ರಿಕ್ಟಿನಲ್ಲಿ ಕೆಲವು ದೊಂಬಿ ಕಲಹಗಳು ನಡೆದಕಾರಣ ಸರ್ಕಾರದವರು ಪ್ರಜಾನೆಮ್ಮದಿಯನ್ನು ಕಾಪಾಡುವುದಕ್ಕೆ ೫೦ ಜನ ಪೋಲೀಸಿನವರನ್ನು ಅಲ್ಲಿಗೆ ಕಳುಹಿಸಿರುವರು.

❦❦❦

ರಾವ್ ಬಹದೂರ್ ಕೆ. ವೀರೇಶಲಿಂಗಂಪಂತಲುಯವರು ಹಿಂದೂ ವಿಧವಾ ವಿವಾಹಗಳನ್ನು ನಡಿಸುವುದರಲ್ಲಿ ಬದ್ಧಕಂಕಣರಾಗಿ ಹೆಸರುವಾಸಿಗೆ ಬಂದಿರುತ್ತಾರೆ. ಇದಲ್ಲದೆ ಅವರು ವಿಧವಾಸದನವನ್ನೂ ನಡಿಸುತ್ತಾ ಕೆಲವು ವಿಧವೆಯರನ್ನು ವಿದ್ಯಾರ್ಥಿಗಳಲ್ಲಿ ತರಬೇತು ಮಾಡುತ್ತಿರುವರು ಈಚೆಗೆ ಧರ್ಮಾವರಂ ಸೋಮರಾವ್ ಗಾರು ಎಂಬಾತನು ಮಿ॥ ವೀರೇಶಲಿಂಗಂಪಂತಲುಯವರನ್ನು ಅವರು ಇಟ್ಟಿರುವ ವಿಧವಾಸದನವನ್ನೂ ಕುರಿತು ಅವಮಾನಕರವಾದ ಸಂಗತಿಗಳನ್ನು ಪ್ರಕಟಿಸಿದನು ಇದಕ್ಕಾಗಿ ಆತನಮೇಲೆ ಮಿ॥ ಪಂತಲುಯವರು ಫಿರ್ಯಾದು ಮಾಡಿದರು. ರಾಜಮಂಡ್ರಿಯ ಮ್ಯಾಜಿಸ್ಟ್ರೇಟರು ಅಪರಾಧಿಗೆ ಒಂದು ವರುಷ ಕಠಿಣಸಜವನ್ನೂ ೪೦೦ ರೂಪಾಯಿ ಜುಲ್ಮಾನೆಯನ್ನೂ ವಿಧಿಸಿರುತ್ತಾರೆ.

❦❦❦

ಕಠ್ಯವಾಡಕ್ಕೆ ಸೇರಿದ ರಾಜಕೋಟೆಯಿಂದ ನಾಲ್ಕು ಮೈಲಿ ದೂರದಲ್ಲಿ ಒಂದು ಸಣ್ಣ ಹೊಳೆ ಹರಿಯುತ್ತದೆ ಇಬ್ಬರು ಬ್ರಾಹ್ಮಣರು ಅಲ್ಲಿಗೆ ಹೋಗಿ ಆ ಪ್ರಾಂತ್ಯದ ಜನರಿಗೆಲ್ಲಾ ಆ ಹೊಳೆಯಲ್ಲಿ ಗಂಗಾಭವಾನಿ ಬಂದಿದೆ ಎಂತಲೂ ಮೂರು ದಿನಗಳ ತನಕ ಮಾತ್ರ ಅಲ್ಲಿರುವಳೆಂತಲೂ ಪ್ರಕಟಿಸಿದರು ಇವರ ಮಾತನ್ನು ನಂಬಿ ಸಾವಿರಾರು ಪ್ರಜೆಗಳು ಆ ಹೊಳೆಗೆ ಹೋಗಿ ಸ್ನಾನಾದಿಗಳನ್ನು ಮಾಡುತ್ತಾ ಆ ಬ್ರಾಹ್ಮಣರಿಗೆ ದಕ್ಷಿಣೆ ದಾನಾದಿಗಳನ್ನು ಕೊಡುತ್ತಾ ಬಂದರು. ಕಡೆಗೆ ರಾಜಕೋಟೆಯ ರಾಣಿಯೂ ಕೂಡ ಹೋಗಿ ಸ್ನಾನಮಾಡಿ ಅವರಿಗೆ ಒಂದು ಸವರನ್ ನಾಣ್ಯವನ್ನು ದಕ್ಷಿಣೆ ಕೊಟ್ಟರು. ಆ ಸವರನ್ ವಿಷಯದಲ್ಲಿ ಆ ಬ್ರಾಹ್ಮಣರಿಬ್ಬರಿಗೂ ಕಲಹವಾಗಿ ಮೊಕದ್ದಮೆಯಾಯಿತು ದರ್ಯಾಪ್ತಿಯಲ್ಲಿ ಅವರಿಬ್ಬರ ಮೋಸ ಕೃತ್ಯಗಳೂ ಹೊರಬಿದ್ದವು ಈಗ ಅವರು ಜೈಲಿನಲ್ಲಿ ಬುದ್ಧಿ ಕಲಿಯುತ್ತಿದ್ದಾರೆ.

❦❦❦

ರಂಗೂನ್ ಪಟ್ಟಣದಲ್ಲಿ ಪೋಲೀ ನಾಯಿಗಳ ಕಾಟವನ್ನು ತಪ್ಪಿಸುವುದಕ್ಕೆ ಅಲ್ಲಿನ ಸೈನ್ಯಾಧಿಪತಿಯು ಅಪ್ಪಣೆಕೊಟ್ಟ ಪ್ರಕಾರ ಬ್ರೂರ್ಡ್ ಎಂಬೊಬ್ಬ ಇಂಗ್ಲಿಷ್ ಸೈನಿಕನು ಬೀದಿಗಳಮೇಲೆ ಹೊರಟು ಸಿಕ್ಕಿದ ನಾಯಿಗಳನ್ನೆಲ್ಲಾ ಗುಂಡಿನಿಂದ ಹೊಡೆದು ಕೊಲ್ಲುತ್ತಾ ಬಂದನು ಈರೀತಿ ಅವನ ಗುಂಡಿಗೆ ೩೦೦ ನಾಯಿಗಳು ಸಿಕ್ಕಿ ಸತ್ತುಹೋದವು ಆದರೆ ಅವನು ನಾಯಿಗಳನ್ನು ಹೊಡೆಯುವ ಸಂಭ್ರಮದಲ್ಲಿ ನಾಯಿಗೆ ತಗಲಿದ ಒಂದು ಗುಂಡು ಹೋಗಿ ಒಬ್ಬ ಬರ್ಮಾಯನ ಎದೆಗೆ ತಾಕಿತು. ಇನ್ನೊಂದು ಗುಂಡು ಒಂದು ಮೇಗಾವಿಗೆ ಬಡಿಯಿತು ಕೂಡಲೇ ಅವರನ್ನು ಆಸ್ಪತ್ರೆಗೆ ಸಾಗಿಸಿದರು. ಈಗ ಅವರಿಗೆ ವಾಸಿಯಾಗುತ್ತಿದೆ. ಪೋಲೀಸಿನವರು ಆ ಬ್ರೂರ್ಡ್ ಎಂಬ ಸಿಪಾಯಿಯನ್ನು ಹಿಡಿದು ಮೊಕದ್ದಮೆ ತಂದರು. ಮ್ಯಾಜಿಸ್ಟ್ರೇಟರು ಅವನನ್ನು ದರ್ಯಾಫ್ತಿ ಮಾಡಿ, ಕಡೆಗೆ ಸೈನ್ಯಾಧಿಪತಿಯು ನಾಯಿ ಕೊಲ್ಲುವಂತೆ ಕೊಟ್ಟಿರುವ ಹುಕುಮನ್ನು ರದ್ದುಮಾಡಬೇಕೆಂತಲೂ, ಸೈನ್ಯದ ಇಲಾಖೆಯವರು ಗುಂಡೇಟು ಬಿದ್ದ ಬರ್ಮಾಯನಿಗೂ ಅವನ ಮೇಗಾವಿಗೂ ಪ್ರತಿಫಲವನ್ನು ಕೊಡಬೇಕೆಂತಲೂ ತೀರ್ಮಾನ ಮಾಡಿದರು.

❦❦❦

ರಾವಲ್‌ಪಿಂಡಿ ನಗರದಲ್ಲಿ ಪ್ರಜಾ ನೆಮ್ಮದಿಗೆ ಭಂಗಪಡಿಸಿದರೆಂದು ಪೋಲೀಸಿನವರು ೫೫ ಮಂದಿ ಮುಖಂಡರನ್ನು ಹಿಡಿದು ಸೆರೆ ಮನೆಯಲ್ಲಿ ಹಾಕಿದ್ದಾರೆ ಕಳೆದ ವಾರ ೪೦ ಮಂದಿ ಸಾಕ್ಷಿಗಳನ್ನು ಸೆರೆ ಮನೆಗೆ ಕರೆದುಕೊಂಡುಹೋಗಿ ಆ ೫೫ ಮಂದಿಯನ್ನೂ ಅವರೆದುರಿಗೆ ನಿಲ್ಲಿಸಿ, ಆ ಪೈಕಿ ಯಾರು ಯಾರು ಯಾವ ಯಾವ ಅಕೃತ್ಯ ಮಾಡಿದರು ಎಂಬುದನ್ನು ಗೊತ್ತುಮಾಡಿದರು. ಈ ಮೊಕದ್ದಮೆಯನ್ನು ದರ್ಯಾಫ್ತಿ ಮಾಡುವುದಕ್ಕೆ ಡೆಹಲಿಯಲ್ಲಿ ಡಿವಿಜನ್ ಜಡ್ಜಿಯಾಗಿರುವ ಮಿ॥ ಮಾರ್ಟಿನೋ ಎಂಬ ಮ್ಯಾಜಿಸ್ಟ್ರೇಟರನ್ನು ಕರೆಸಿಕೊಂಡಿದ್ದಾರೆ. ಮೊಕದ್ದಮೆಯ ದರ್ಯಾಫ್ತಿಯನ್ನು ಕೋರ್ಟಿನಲ್ಲಿ ಮಾಡಿದರೆ ಜನರ ಗಲಭೆ ಹೆಚ್ಚಾದೀತೆಂದು ನೆನಸಿ, ಸರ್ಕಾರಿ ಬಂದೀಖಾನೆಯಲ್ಲೇ ಒಂದು ಕೊಠಡಿಯನ್ನು ಕೋರ್ಟುಮಾಡಿದರು. ಅದರೊಳಕ್ಕೆ ಯಾರೂ ಪ್ರವೇಶಿಸಕೂಡದೆಂತಲೂ ದರ್ಯಾಫ್ತು ಕಾಲದಲ್ಲಿ ಹೊರಗಡೆಯೂ ಜನರು ಗುಂಪು ಸೇರಕೂಡದೆಂತಲೂ ಡಂಗೂರ ಹಾಕಿಸಿ, ಮುಖ್ಯರಾದ ಕೆಲವರಿಗೆ ಮಾತ್ರ ಟಿಕೆಟ್ ಕೊಟ್ಟು ಕೋರ್ಟಿನೊಳಗೆ ಬಿಡುವಂತೆ ಏರ್ಪಾಡು ಮಾಡಿದ್ದಾರೆ. ಗಲಭೆಯಾಗದಂತೆ ಉಸ್ತುವಾರಿ ಮಾಡಲು ಮಿಲ್ಟೇರಿ ಸೈನಿಕರನ್ನು ಕರಿಸಿ ನೇಮಿಸಿಕೊಂಡಿರುವರು.

❦❦❦

ಉತ್ತರ ದೇಶದಲ್ಲಿ ಕೆಲವರಿಗೆ ಸ್ವರಾಜ್ಯದ ಅಭಿಲಾಷೆ ಎಷ್ಟಿದೆ ಎಂಬುವುದನ್ನು ಮುಂದಿನ ಸಂಗತಿಯಿಂದ ತಿಳಿದುಕೊಳ್ಳಬಹುದು ಕೆಲವು ದಿನಗಳ ಕೆಳಗೆ ಬಾಬು ಅಘೋರಕುಮಾರನೆಂಬಾತನು ಬ್ಯಾರಿಸಲ್ ಪಟ್ಟಣದಲ್ಲಿ ವೇಶ್ಯಾಸ್ತ್ರೀಯರನ್ನು ಸೇರಿಸಿ ಒಂದು ಸಭೆಮಾಡಿ. ಅವರಿಗೆ ಹೇಳಿದ್ದೇನೆಂದರೆ—ನನ್ನ ದೇಶಾಭ್ಯುದಯವನ್ನು ಕುರಿತು ನಿಮಗೆ ಕೆಲವು ಸಂಗತಿಗಳನ್ನು ತಿಳಿಸುವುದಕ್ಕಾಗಿ ಈದಿನ ನಿಮ್ಮ ಮಧ್ಯೆ ಬಂದಿರುತ್ತೇನೆ. ಕಳೆದ ವರುಷ ನಿಮ್ಮನ್ನು ಸಭೆಸೇರಿಸಿ ಸ್ವದೇಶೀ ವಸ್ತುಗಳನ್ನೇ ನೀವು ಕೊಂಡು ಉಪಯೋಗಿಸಬೇಕೆಂದು ನಿಮಗೆ ತಿಳಿಸಿ ನಿಮ್ಮಿಂದ ವಾಗ್ದಾನಮಾಡಿಸಿಕೊಂಡೆನು ನೀವು ಅದೇ ಪ್ರಕಾರ ವಿಲಾಯತಿಯ ಮತ್ತು ಪರದೇಶದ ಸರಕನ್ನಾಗಲಿ ಒಡವೆಗಳನ್ನಾಗಲಿ, ಕೊಂಡು ಉಪಯೋಗಿಸದೆ ಇರುತ್ತೀರಿ ಇದು ಸರಿ ಜರ್ಮನ್ ರಾಜ್ಯದ ಸ್ತ್ರೀಯರು ರಷ್ಯಾ ಜರ್ಮನ್ ಯುದ್ಧಕಾಲದಲ್ಲಿ ತಮ್ಮಲ್ಲಿದ್ದ ಆಸ್ತಿಯನ್ನೆಲ್ಲಾ ಕೂಡಿಸಿ ಯುದ್ಧದ ಫಂಡಿಗೆ ಒಪ್ಪಿಸಿಕೊಟ್ಟು ಯುದ್ಧಭಟರಿಗೆ ಜಯಪ್ರದ ಹೊಂದುವಂತೆ ಉತ್ತೇಜನ ಕೊಟ್ಟರು ಸ್ತ್ರೀಯರೇ ನೀವು ಸಹ ಅವರ ಮೇಲ್ಪಂಕ್ತಿಯನ್ನೇ ಅನುಸರಿಸಬೇಕಾಗಿದೆ ಕ್ರಮಕ್ರಮವಾಗಿ ನೀವು ಪರದೇಶದಿಂದ ಬರುವಂಥಾ ಬ್ರಾಂದಿ ಮೊದಲಾದ ಮದ್ಯಗಳ ಸೇವನೆಯನ್ನು ಬಿಟ್ಟುಬಿಡಿ ನೀವು ಅವನ್ನು ಮುಟ್ಟಲೂ ಕೂಡದು. ಎಂಬುದೇ.

❦❦❦

ಪಾಂಡಿಚೆರಿ (ಪುದುಚೇರಿ)ಯಲ್ಲಿ ಪ್ರೆಂಚ್ ಸರ್ಕಾರದವರು ಯೂರೇಷಿಯನ್ ಎಂಬ ಚಟ್ಟೀಗಾರರನ್ನು ಸೇರಿಸಿ ಒಂದು ಸೈನ್ಯಕ್ಕೆ ತರಪೇತು ಮಾಡಿದ್ದರು ಈಚೆಗೆ ಈ ಸೈನಿಕರನ್ನು ಪ್ರತ್ಯೇಕವಾಗಿಡಬೇಕಾದದ್ದಿಲ್ಲವೆಂತಲೂ ಅವರನ್ನು ದೇಶೀಯ ಜನರ ಸೈನ್ಯಕ್ಕೆ ಸೇರಿಸಿಬಿಡಬೇಕೆಂತಲೂ ಫ್ರೆಂಚ್ ಗವರ್ನಮೆಂಟಿನವರು ಹುಕುಂ ಕಳುಹಿಸಿದರು. ಅದೇ ಪ್ರಕಾರ ಪುದುಚೇರಿಯಲ್ಲಿ ಸೈನ್ಯಾಧಿಪತಿಯು ಆ ಯೂರೇಷಿಯನ್ ಸೈನಿಕರನ್ನು ಕರೆಸಿಕೊಂಡು, ಅವರನ್ನೆಲ್ಲಾ ಸೈನ್ಯದಿಂದ ಬಿಟ್ಟು ಹೋಗಿ ಬೇರೆ ಸೈನ್ಯಕ್ಕೆ ಸೇರಿಕೊಳ್ಳುವಂತೆ ಆಜ್ಞೆಯನ್ನು ಓದಿ ಹೇಳಿ ಕಳುಹಿಸಿದರು ಅವರಿಗೆ ತುಂಬಾ ಕೋಪಬಂದು ಕೆಲವು ಅಕೃತ್ಯಗಳನ್ನು ನಡಿಸಿದರು. ಜೈಲ್‌ಖಾನೆಯನ್ನು ಕಾಯುವುದಕ್ಕೆ ಈ ಸೈನಿಕರು ನೇಮಕವಾಗಿದ್ದರು. ಇವರನ್ನು ಕಳುಹಿಸಿಬಿಟ್ಟದ್ದನ್ನೂ ಪೋಲೀಸ್ ಪಹರೆಯು ಬಹಳ ಸ್ವಲ್ಪವೇ ಇದ್ದದ್ದನ್ನೂ ಬಂದೀಖಾನೆಯೊಳಗಿದ್ದ ಖೈದಿಗಳು ತಿಳಿದು ಕಳೆದ ವಾರ ಸುಮಾರು ೩೦ ಮಂದಿ ಜೈಲಿನಿಂದ ಹೊರಕ್ಕೆ ಬಂದು ಪಹರೆ ಪೋಲೀಸಿನವರನ್ನು ಹೊಡೆದು ತಪ್ಪಿಸಿಕೊಂಡು ಓಡಿಹೋದರು. ಆ ಪೈಕಿ ೩-೪ ಮಂದಿ ಖೈದಿಗಳು ಈಚೆಗೆ ಸಿಕ್ಕಿರುತ್ತಾರೆ ಉಳಿದವರೆಲ್ಲಾ ಸಮೀಪವಾಗಿರುವ ಕಂಪೆನಿ ಸೀಮೆಯೊಳಕ್ಕೆ ಬಂದಿರುವರು ಆದರೆ ಫ್ರೆಂಚ್ ಸರ್ಕಾರದವರು ಅವರನ್ನು ಹಿಡಿಯುವದಕ್ಕೆ ಅವರ ಚಹರೆ ಪಟ್ಟಿ ಮುಂತಾದ್ದನ್ನು ಇಂಗ್ಲಿಷ್ ಅಧಿಕಾರಿಗಳಿಗೆ ಕಳುಹಿಸಿ ಹುಡುಕಿಸುತ್ತಿದ್ದಾರೆ.

❦❦❦

ಬಂಗಾಳಾ ಆಧಿಪತ್ಯಕ್ಕೆ ಸೇರಿದ ಖುಲ್ನಾ ಪಟ್ಟಣದಲ್ಲಿ ಹಿಂದುಗಳೂ ಮಹಮ್ಮದಿಯರೂ ಸೇರಿ ಒಂದು ವಾರ್ಷಿಕ ಸಭೆಯನ್ನು ಕಳೆದ ತಾ. ೨೫, ೨೬ ರಲ್ಲಿ ನಡಸಬೇಕೆಂದು ಪ್ರಯತ್ನಪಟ್ಟರು. ಸರ್ಕಾರದವರಿಗೆ ಈ ವಿಷಯ ತಿಳಿದ ಕೂಡಲೆ ಪೋಲೀಸಿನವರು ತನಿಖೆ ಮಾಡಿ, ಈ ಸಭೆಯನ್ನು ನಡಿಸಿದ ಪಕ್ಷದಲ್ಲಿ ಪ್ರಜಾ ನೆಮ್ಮದಿಗೆ ಭಂಗವುಂಟಾಗುವುದರಲ್ಲಿ ಸಂಶಯವಿಲ್ಲವೆಂದು ಮ್ಯಾಜಿಸ್ಟ್ರೇಟರಿಗೆ ರಿಪೋರ್ಟ್ ಕೊಟ್ಟರು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಾದ ಮಿ॥ ಅಹಮದ್ ಯವರು ಆ ಸಭೆಯ ಮೂಲಪುರುಷರಿಗೆ ಸಭೆಯನ್ನು ನಡೆಸಕೂಡದೆಂತಲೂ ನಡಿಸಿದರೆ ಪ್ರಜಾ ನೆಮ್ಮದಿಗೆ ಭಂಗಬರುವುದೆಂತಲೂ ಹುಕುಂ ಕೊಟ್ಟು ಸಭೆಯನ್ನು ನಡೆಯದಂತೆ ತಡೆಮಾಡಿದರು ಆಗ ಆ ಸಭೆಯ ಮುಖಂಡರು ಆರೇಳು ಮಂದಿ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ ಹುಕುಮಿನ ಮೇಲೆ ಕಲ್ಕತ್ತಾ ಹೈಕೋರ್ಟಿನಲ್ಲಿ ಅಪೀಲ್ ಮಾಡಿದರು ಹೈಕೋರ್ಟ್ ಜಡ್ಜಿಗಳು ಈ ವಿಷಯವನ್ನು ದರ್ಯಾಫ್ತಿ ಮಾಡಿ, ಹಾಗೆ ಸಭೆಯನ್ನು ತಡೆಯುವುದಕ್ಕೆ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಕಾರಣಗಳನ್ನು ತೋರಿಸಿಲ್ಲವೆಂದು ಹೇಳಿ ಅವರ ಹುಕುಮನ್ನು ರದ್ದುಮಾಡಿದರು. ಅದೇ ಪ್ರಕಾರ ಆ ಮುಖಂಡರು ಖುಲ್ನಾನಗರದಲ್ಲಿ

ತಮ್ಮ ಸಭೆಯನ್ನು ನಡಿಸಿದರು. ಈ ಸಭೆಯಲ್ಲಿ ತೀರ್ಮಾನ ಮಾಡಿರುವ ವಿಷಯಗಳೇನೆಂದರೆ—ಹಿಂದುಗಳೂ ಮಹಮದಿಯರೂ ಪರಸ್ಪರ ವೈಷಮ್ಯಗಳನ್ನು ಬಿಟ್ಟು ಏಕೀಭವಿಸಿ ಕಾರ್ಯನಡಸಬೇಕು. ಗವರ್ನಮೆಂಟಿನವರು ಬಂಗಾಳದ ಆಧಿಪತ್ಯವನ್ನು ವಿಭಾಗಮಾಡಿದ್ದೂ, ಪಬ್ಲಿಕ್ ಮೀಟಿಂಗ್ ನಡಸಕೂಡದೆಂದು ಕಾನೂನು ಮಾಡಿರುವುದೂ, ವಿದ್ಯಾರ್ಥಿಗಳ ವಿಷಯದಲ್ಲಿ ಕೊಟ್ಟಿರುವ ಸರ್ಕ್ಯುಲರೂ, ಇವೆಲ್ಲಾ ಸರಿಯಾದವುಗಳಲ್ಲ ಎಂಬೀ ರೀತಿ ಗೊತ್ತು ಮಾಡಿಕೊಂಡರು.

***

ದಂಗೆಯನ್ನೆಬ್ಬಿಸುವುದಕ್ಕೆ ಪ್ರಜೆಗಳನ್ನೂ ಸರ್ಕಾರಿ ಸೈನಿಕರನ್ನೂ ಚಿತಾವಣೆ ಮಾಡುತ್ತಿದ್ದರೆಂದು ಇಂಡಿಯಾ ಗವರ್ನಮೆಂಟಿನವರು ಪಂಜಾಬಿನಲ್ಲಿ ಲಾಲಾ ಲಜಪತ್‌ರಾಯ ಎಂಬ ದೊಡ್ಡ ವಕೀಲರನ್ನೂ, ಲಾಲಾ ಅಜಿತ್‌ಸಿಂಗ್ ಎಂಬವರನ್ನೂ ಹಿಡಿದು ಗಡೀಪಾರು ಮಾಡಬೇಕೆಂದು ಸ್ಯಾಂಕ್ಷನ್ ಮಾಡಿದ್ದದ್ದೂ ಅದೇ ಪ್ರಕಾರ ಮೊದಲನೆಯವರನ್ನು ಹಿಡಿದು ಬರ್ಮಾ ಆಧಿಪತ್ಯಕ್ಕೆ ಕಳುಹಿಸಿರುವುದೂ ನಮ್ಮ ವಾಚಕರಿಗೆ ತಿಳಿದಿದೆಯಷ್ಟೆ. ಲಾಲಾ ಅಜಿತ್‌ಸಿಂಗರು ಇದುವರೆಗೆ ಸಿಕ್ಕಿರಲಿಲ್ಲ. ಅವರನ್ನು ಹಿಡಿದುಕೊಟ್ಟವರಿಗೆ ೫೦೦ ರೂಪಾಯಿ ಬಹುಮಾನ ಸಿಕ್ಕುತ್ತೆಂದು ಸರ್ಕಾರದವರು ಘೋಷಣೆ ಮಾಡಿಸಿದ್ದರು. ಅಜಿತ್‌ಸಿಂಗರು ತಲೆಗಾಯುತ್ತ ಗಡ್ಡವನ್ನೂ ಮೀಸೆಯನ್ನೂ ಬೋಳಿಸಿಕೊಂಡು, ಅಮೃತಸಾರ ಪಟ್ಟಣದಲ್ಲಿ ಬಹಳ ಬಡಸ್ಥಿತಿಯಲ್ಲಿ ಒಂದು ಲುಂಗಿ ಸುತ್ತಿಕೊಂಡು ವೇಸ್ಟ್‌ಕೋಟ್ ಎಂಬ ತೋಳಿಲ್ಲದ ಕಬಚಾ ತೊಟ್ಟುಕೊಂಡು ಅಲೆಯುತ್ತಿದ್ದರು. ಆದರೆ ಅವರ ಕಣ್ಣಿನ ಮೇಲಿದ್ದ ಮಚ್ಚೆಯಿಂದ ಪೊಲೀಸ್ ಸೂಪರಿಂಟೆಂಡೆಂಟ್ ಮಿ॥ ಫಾಕ್ಸ್‌ಯವರು ಅವರನ್ನು ಕಳೆದ ಭಾನುವಾರ ಸಮರಾತ್ರಿಯಲ್ಲಿ ಹಿಡಿದರು. ಅವರನ್ನು ಅಲ್ಲಿಂದ ರೈಲಿನಲ್ಲಿ ಕೂರಿಸಿ ಮಿಯಾನ್‌ಮೀರ್ ಸ್ಟೇಷನ್‌ಗೂ ಆಬಳಿಕ ಬರ್ಮಾಕ್ಕೂ ಗಡೀಪಾರು ಮಾಡಿರುತ್ತಾರೆ.

ವಿದೇಶ ವರ್ತಮಾನಗಳು.

ಅಮೇರಿಕ ಸಂಸ್ಥಾನಗಳ ಮಾಜಿ ಪ್ರೆಸಿಡೆಂಟ್ ಮೆಕ್‌ಕಿನ್ಲಿಯವರ ಪತ್ನಿಯವರು ಕಾಲವಾದರೆಂದು ತಂತೀ ವರ್ತಮಾನ ಬಂದಿದೆ.

***

ಕಳೆದ ವಾರ ಫಿನ್‌ಲೆಂಡ್ ರಾಜ್ಯದ ಪಾರ್ಲಿಮೆಂಟ್ ಸಭೆಯು ಕೂಡಿತು. ಪ್ರಜಾ ಪ್ರತಿನಿಧಿಗಳಲ್ಲಿ ಹತ್ತೊಂಬತ್ತು ಮಂದಿ ಮೆಂಬರುಗಳು ಸ್ತ್ರೀಯರಾಗಿರುತ್ತಾರೆ.

***

ಮಧ್ಯ ಆಫ್ರಿಕಾದಲ್ಲಿ ದೇಶೀಯ ಪ್ರಜೆಗಳಿಗೆ ವಿದ್ಯೆ ಕಲಿಸುವ ಏರ್ಪಾಟಿಗೆ ಇಂಗ್ಲಿಷ್ ಗವರ್ನಮೆಂಟಿನವರು ೧೫ ಸಾವಿರ ರೂಪಾಯಿ ಗ್ರಾಂಟು ಕೊಡುವುದಾಗಿ ವಾಗ್ದಾನ ಮಾಡಿರುವರು.

***

ಅಮೇರಿಕದ ಸಂಯುಕ್ತ ಸಂಸ್ಥಾನಗಳಿಗೆ ಸೇರಿದ ಟೆಕ್ಸಾಸ್ ಎಂಬಲ್ಲಿ ಭಯಂಕರವಾದ ಸುಂಟರಗಾಳಿ ಮಳೆ ಗುಡುಗು ಮಿಂಚು ಪ್ರಾಪ್ತವಾಗಿ ಬಹಳ ಸ್ವಲ್ಪ ಹೊತ್ತಿನಲ್ಲೇ ತುಂಬಾ ಅನಾಹುತವಾಯಿತು. ೬೦ ಜನರು ಮೃತಪಟ್ಟರು. ಇಲ್ಲವೇ ನಾನಾ ಗಾಯಪಟ್ಟರು. ಆಸ್ತಿ ಪಾಸ್ತಿಗಳು ಬಹಳ ನಷ್ಟವಾದವೆಂದು ತಂತೀ ವರ್ತಮಾನ ಬಂದಿದೆ.

***

ಜರ್ಮನಿಯವರಿಗೆ ಸೇರಿದ ಆಫ್ರಿಕಾ ವಿಭಾಗದಿಂದ ೧೫,೦೦೦ ಹೆರೀರೋ ಎಂಬ ಸ್ವದೇಶೀ ಜನಗಳು ಹೊರಟು ನಗಾಮಿ ಎಂಬ ಕೆರೆಯ ಬಳಿಯಲ್ಲಿ ಹೊಸ ಊರನ್ನು ಕಟ್ಟಿಕೊಂಡು ವಾಸಮಾಡಬೇಕೆಂದು ಹೋಗುತ್ತಿದ್ದರು. ಅಲ್ಲಿಗೆ ಹೋಗಿ ತಲಪುವುದರೊಳಗಾಗಿ ಅವರಲ್ಲಿ ೧೧,೦೦೦ ಜನರು ಹೊಟ್ಟೆಗಿಲ್ಲದೆ ದಾರಿಯಲ್ಲೇ ಮೃತರಾದರೆಂದು ತಿಳಿದುಬಂದಿದೆ.

***

ಅಮೇರಿಕಕ್ಕೆ ಸೇರಿದ ಸ್ಯಾನ್‌ಫ್ರಾನ್‌ಸಿಸ್ಕೋ ಪಟ್ಟಣದಲ್ಲಿ ಜಪಾನ್ಯರು ಕೆಲವು ಹೋಟೇಲುಗಳನ್ನು ಇಟ್ಟುಕೊಂಡಿದ್ದಾರೆ. ಇವರನ್ನು ಅಲ್ಲಿನವರು ಕಷ್ಟನಷ್ಟಗಳಿಗೆ ಗುರಿಪಡಿಸಿದಾರೆಂದು ಜಪಾನ್ ಸರ್ಕಾರದವರು ಅಮೇರಿಕದ ಗವರ್ನಮೆಂಟಿಗೆ ಬರೆದಿರುವುದಾಗಿಯೂ ಸೆಕ್ರೆಟರಿ ಮಿ॥ ರೂಟ್‌ಯವರು ಕೂಡಲೆ ಅದರ ನಿಜಸ್ಥಿತಿಯನ್ನೆಲ್ಲಾ ತನಿಖೆ ಮಾಡುವಂತೆ ಹುಕುಂ ಕೊಟ್ಟಿರುವುದಾಗಿಯೂ ತಂತೀ ವರ್ತಮಾನ ಬಂದಿದೆ.

***

ತುರ್ಕಿ ರಾಜ್ಯಕ್ಕೆ ಸೇರಿದ ಸಾಲೋನಿಕಾದಲ್ಲಿ ಕೆಲವು ಮಂದಿ ತುರ್ಕಿ ಪ್ರಜೆಗಳು ಮಿ॥ ಅಬ್ಬಟ್ ಎಂಬ ಇಂಗ್ಲಿಷ್ ವರ್ತಕನನ್ನು ಹಿಡಿದು ಎತ್ತಿಕೊಂಡು ಹೋದ್ದರಿಂದ ಅಲ್ಲಿರುವ ಇಂಗ್ಲಿಷ್ ರಾಯಭಾರಿಯು ಅವರಿಗೆ ಹದಿನೈದು ಸಾವಿರ ದ್ರವ್ಯವನ್ನು ಪರಿಹಾರ ಕೊಟ್ಟು ಆ ವರ್ತಕನನ್ನು ಬಿಡಿಸಿಕೊಂಡು ಬಂದರೆಂದು ತಿಳಿಸಿದ್ದೆವಷ್ಟೆ. ಈಗ ಇಂಗ್ಲಿಷ್ ರಾಯಭಾರಿಗಳು ಆ ಹಣವನ್ನು ತುರ್ಕಿ ಸರ್ಕಾರದಿಂದ ಕೊಟ್ಟುಬಿಡಬೇಕೆಂದು ಸುಲ್ತಾನರವರಿಗೆ ಬರೆದಿರುತ್ತಾರೆ.

***

ಪೋರ್ಚುಗಲ್ ರಾಜ್ಯದಲ್ಲಿ ಸ್ವಲ್ಪ ಗಲಭೆಯುಂಟಾಗಿದೆ. ರಾಜಧಾನಿಯಾದ ಲಿಸ್ಬನ್ ಪಟ್ಟಣದಲ್ಲಿ ಅಧಿಕಾರಿಗಳೂ ಪ್ರಜೆಗಳ ಮುಖಂಡರೂ ದೊಡ್ಡ ಮನುಷ್ಯರೂ ಸಭೆಸೇರಿ ಈಗಿನ ಗವರ್ನಮೆಂಟು ರಾಜವಂಶೀಯರಿಗೂ ಪ್ರಜೆಗಳಿಗೂ ಅಪಾಯಕರವಾಗಿದ್ದಾಗಿದೆ ಎಂದು ತೀರ್ಮಾನ ಮಾಡಿದರು. ಆ ರಾಜ್ಯದ ಏಳು ಮಂದಿ ಕೌನ್ಸಲರುಗಳು ಸೇರಿ ಗವರ್ನಮೆಂಟಿನವರ ಸ್ವತಂತ್ರವಾದ ಸ್ವೇಚ್ಛಾ ಕಾರ್ಯಗಳನ್ನು ನಿಂತನೆಮಾಡಿ ದೊರೆಯವರಿಗೆ ಬರಹ ಮೂಲಕ ತಿಳಿಸಿರುತ್ತಾರೆ.

***

ರಷ್ಯ ರಾಜ್ಯದ ಚಕ್ರವರ್ತಿಗಳಾದ ಜಾರ್ ಯವರನ್ನು ಕೊಂದುಹಾಕಬೇಕೆಂದು ಕೆಲವು ಜನರು ಅರಮನೆಗೆ ನುಗ್ಗಿದಾಗ ಅವರನ್ನು ಅಲ್ಲೇ ಹಿಡಿದು ಬಂಧನದಲ್ಲಿ ಹಾಕಿದ್ದು ವಾಚಕರಿಗೆ ಗೊತ್ತಿದೆಯಷ್ಟೆ. ಚಕ್ರವರ್ತಿಯವರು ಈ ವಿಷಯದಲ್ಲಿ ಹೇಳಿದ್ದೇನೆಂದರೆ—ನನ್ನ ಪ್ರಾಣದ ಮೇಲೆ ನಾನು ಅಷ್ಟೇನೂ ವಿಶೇಷ ಅಭಿಲಾಷೆಯನ್ನಿಟ್ಟು ಕೊಂಡಿಲ್ಲ. ರಷ್ಯಾ ರಾಜ್ಯವು ನೆಮ್ಮದಿಯಾಗಿದ್ದು ಅಭಿವೃದ್ಧಿ ಹೊಂದುತ್ತ ಕೀರ್ತಿಯುತವಾದರೆ ಸಾಕಾಗಿದೆ. ಇದೇ ನನ್ನ ಪರಮಾಪೇಕ್ಷೆ ಎಂದು ತಿಳಿಯಿರಿ ಎಂಬುದೇ.

***

ಅಮೇರಿಕಕ್ಕೆ ಸೇರಿದ ಬಾಲ್ಟಿಮೋರ್ ಪಟ್ಟಣದಲ್ಲಿ ಸರ್ ವಿಲ್ಯಂ ರಾಂಸೆ ಎಂಬ ಇಂಗ್ಲಿಷ್ ರಸಾಯನ ಶಾಸ್ತ್ರಜ್ಞನು ಕೆಲವು ಪರೀಕ್ಷೆಗಳನ್ನು ಮಾಡುತ್ತಿರುವಲ್ಲಿ ಕೆಲವು ವಸ್ತುಗಳನ್ನು ಕೂಡಿಸಿದರೆ ತಾಂಬ್ರವನ್ನು ತಯಾರುಮಾಡ ಬಹುದೆಂಬುದನ್ನು ಕಂಡುಹಿಡಿದಿರುತ್ತಾನೆ. ಅದರ ಗುಟ್ಟನ್ನು ಅತನು ಇನ್ನೂ ಯಾರಿಗೂ ತಿಳಿಸಲಿಲ್ಲ. ಇದು ಪ್ರಚಾರಕ್ಕೆ ಬಂದಲ್ಲಿ ಭೂಮಿಯೊಳಗಣ ಗಣಿಗಳಿಂದ ಬಹಳ ಕಷ್ಟಪಟ್ಟು ತೆಗೆಯುವ ಲೋಹ ತಾಂಬ್ರದ ಬೆಲೆಯು ಕಡಿಮೆಯಾದೀತೆನ್ನುವುದಕ್ಕೆ ಸಂಶಯವಿಲ್ಲ.

***

ಪರ್ಷಿಯಾ ರಾಜ್ಯದಲ್ಲಿ ರಹೀಂ ಖಾನ್ ಎಂಬೊಬ್ಬ ಮುಖಂಡನು ಸೈನ್ಯವನ್ನು ಕೂಡಿಸಿಕೊಂಡು ಕೆಲವು ಸ್ಥಳಗಳನ್ನೂ ಒಬ್ಬ ಗವರ್ನರ ಬಂಗಲೆಯನ್ನೂ ಲೂಟಿಮಾಡಿ, ಸುಮಾರು ೧೫೦ ಪ್ರಜೆಗಳನ್ನು ಕೊಲ್ಲಿಸಿದನು. ಸರ್ಕಾರದವರು ಸೈನ್ಯವನ್ನು ಕಳುಹಿಸಿ ಅವನನ್ನು ಹಿಡಿಸಿ ದಸ್ತಗಿರಿ ಮಾಡಿದರು. ಆದರೆ ಪಾರ್ಲಿಮೆಂಟಿನವರೂ ಪ್ರಜೆಗಳೂ ಷಾ ಸುಲ್ತಾನರ ಮೇಲೆ ಗುಣಗುಟ್ಟುತ್ತಾ ಆ ರಹೀಂಖಾನನನ್ನು ಜೈಲಿಗೆ ಕಳುಹಿಸಬೇಕೆಂದೂ ಇಲ್ಲವಾದರೆ ತುಂಬಾ ಗಲಭೆಯಾದೀತೆಂದೂ ಹೇಳಲಾರಂಭಿಸಿದರು. ಆಗ ಸುಲ್ತಾನರು ಅವನನ್ನು ಸೆರೆಮನೆಯಲ್ಲಿ ಹಾಕಿ ಜನರ ಅನುಮಾನವನ್ನು ಹೋಗಲಾಡಿಸಿದರು. ಅದರ ಮೇಲೆ ಗಲಭೆಯೆಲ್ಲಾ ಶಾಂತವಾಯಿತೆಂದು ತಂತೀ ವರ್ತಮಾನ ಬಂದಿದೆ.

***

ಚೀನಾ ರಾಜ್ಯದ ಪಾಚೋಯಿ ಎಂಬ ಪ್ರಾಂತ್ಯದಲ್ಲಿ ದುಷ್ಟ ಪ್ರಜೆಗಳು ನಂಗೆಯೆದ್ದು ಜರ್ಮನ್ ಮಿಷನರಿಗಳ ಬಂಗಲೆಗಳನ್ನು ನಾಶಮಾಡಿದರು. ಜರ್ಮನಿಯ ಮತ್ತು ಇಂಗ್ಲಿಷರ ಹಡಗುಗಳು ಆ ಪ್ರಾಂತ್ಯ ಹೋಗಿರುತ್ತವೆ. ಅತ್ತಲಾಗಿ ಸ್ವಾಟೋ ಪ್ರಾಂತ್ಯದಲ್ಲಿ ದಂಗೇಕೋರರು ಗುಂಪುಕಟ್ಟಿ ಹೊರಟು ಚನ್‌ಮೇರ್ ಎಂಬಲ್ಲಿದ್ದ ಸಿವಿಲ್ ಮತ್ತು ಮಿಲ್ಟೇರಿ ಅಧಿಕಾರಿಗಳನ್ನೆಲ್ಲಾ ಕೊಂದು ಹಾಕಿದರು. ಅವರ ಮನೆ ಮಠಗಳನ್ನು ಸುಟ್ಟುಬಿಟ್ಟರು. ದಂಗೆ ಅಣಗಿಸುವುದಕ್ಕೆ ಸೈನ್ಯ ಹೋಗಿರುತ್ತದೆ. ಈ ದಂಗೇಕೋರರು ೩೦,೦೦೦ ಮಂದಿ ಕೂಡಿರುತ್ತಾರೆ. ಅಂತರಂಗದಲ್ಲೇ ಫಿತೂರಿ ಮಾಡುತ್ತಿರುವ ಒಂದು ಸಂಘದ ಮುಖಂಡರಿಂದ ಈ ದಂಗೆ ಹುಟ್ಟಿರುವುದಾಗಿ ತಿಳಿಯುವುದು. ಈಗ ಅವರು ಚಿಮೋಯಿ ಡಿಸ್ಟ್ರಿಕ್ಟಿನಲ್ಲಿ ತುಂಬಾ ಐಶ್ವರ್ಯವುಳ್ಳ ಎರಡು ಸ್ಥಳಗಳಿಗೆ ಮುತ್ತಿಗೆ ಹಾಕಿರುತ್ತಾರೆ. ಪ್ರಜೆಗಳೆಲ್ಲಾ ಗಾಬರಿಬಿದ್ದು ಸ್ವಾಟೋ ಪಟ್ಟಣಕ್ಕೆ ಬರುತ್ತಿರುವರು. ಆಬಳಿಕ ಸರ್ಕಾರದವರು ವಸೂಲ್ಮಾಡುತ್ತಿರುವ ಒಂದು ತೆರಿಗೆಯ ವಿಷಯವಾಗಿ ಈಗಿನ ದಂಗೆಯುಂಟಾಗಿದೆ ಎಂದು ಹೇಳುತ್ತಾರೆ. ಸರ್ಕಾರಿ ಸೈನ್ಯಗಳು ಸುಮಾರು ೧,೩೦೦ ರಷ್ಟು ಕ್ಯಾಂಟನ್ ಪಟ್ಟಣದಿಂದ ಸ್ವಾಟೋವಿಗೂ ಇನ್ನಷ್ಟು ಫಿರಂಗಿಗೂ ರವಾನೆಯಾದವು. ದಂಗೇಕೋರರು ಚೀನಾ ಸೈನ್ಯಾಧಿಪತಿಯನ್ನೂ ಅವನ ಸಂಸಾರಕ್ಕೆ ಸೇರಿದವರನ್ನೂ ಹಿಡಿದು ಅವರಾಗಿ ನೀರಿನಲ್ಲಿ ಬಿದ್ದು ಆತ್ಮಹತ್ಯ ಮಾಡಿಕೊಳ್ಳುವಂತೆ ಹಿಂಸೆಪಡಿಸಿ ಕೊಂದಿರುತ್ತಾರೆ. ಸ್ವತ್ಸ್ಯನ್ ಎಂಬ ದಂಗೇಕೋರರು ಪರರಾಜ್ಯಗಳವರನ್ನೂ ಮಿಷನರಿಗಳನ್ನೂ ಹಿಂಸೆಪಡಿಸುವುದಿಲ್ಲವೆಂತಲೂ ಮಂಚೂ ಸಂತತಿಗೆ ಸೇರಿದವರನ್ನೆಲ್ಲಾ ನಿರ್ಮೂಲ ಮಾಡುವುದೇ ತಮ್ಮ ಉದ್ದೇಶವೆಂತಲೂ, ಈಗಿನ ಅಧಿಕಾರಿಗಳನ್ನು ಕೊಂದು ರಾಜ್ಯಭಾರವನ್ನು ತಲೆಕೆಳಗು ಮಾಡಬೇಕೆಂದಿರುವುದಾಗಿಯೂ ತಿಳಿಸುತ್ತಿದ್ದಾರೆ. ಮಿಷನರಿಗಳನ್ನು ಇದುವರೆಗೆ ಹಿಂಸೆಮಾಡಲಿಲ್ಲ. ಆದಾಗ್ಯೂ ಮಿಷನರಿಗಳು ಆ ಪ್ರಾಂತ್ಯದಿಂದ ಹೊರಟು ಸ್ವಾಟೋ ಪಟ್ಟಣದಲ್ಲಿ ಬಂದು ನೆಲಸುತ್ತಿದ್ದಾರೆ.

ತಾಲ್ಲೋಕು ವರ್ತಮಾನಗಳು.

ಕುಣಿಗಲು.—ಮಳೆ ಕೆಲವು ದಿವಸಗಳಿಂದ ಬಿಡದೆ ಸಾಗುವುದರಿಂದ ಸಿದ್ಧವಾಗುತ್ತಿದೆ. ರೋಗಾದಿ ಉಪದ್ರಗಳು ಕಮ್ಮಿ ಆಗಿದೆ. ಆದರೆ ಈ ಕುಣಿಗಲ ಪೇಟೆ ಅಂಗಡಿಬೀದಿ ಕೊಳಕಾದ ಬಚ್ಚಲು ರೊಚ್ಚಿನಿಂದಲೂ ಸಣ್ಣ ಮನೆಗಳ ಇಕ್ಕಟ್ಟಿನಿಂದಲೂ ಕ್ರಮವಿಲ್ಲದ ಗಲ್ಲಿಗಳಿಂದಲೂ ತುಂಬಿ ರೋಗಕ್ಕೆ ತುಂಬಾ ಆಸ್ಪದವಾಗಿದೆ. ಈಗ ಹೊಸದಾಗಿ ದಯಮಾಡಿರುವ ಅಮಲ್ದಾರರು ಈ ವಿಷಯಗಳಲ್ಲಿ ತುಂಬಾ ಮುತುವರ್ಜಿ ವಹಿಸಿ ಗ್ರಾಮದ ಕ್ಷೇಮಕ್ಕೋಸ್ಕರ ಅವಶ್ಯವಾದ ಏರ್ಪಾಡುಗಳನ್ನು ಸೆಕ್ರೆಟರಿ ಕಮಿಷನರರಿಗೆ ಆಗಾಗ್ಗೆ ರಿಪೋರ್ಟ್ ಮಾಡುವುದಲ್ಲದೆ ತಮ್ಮಿಂದಾಗುವಷ್ಟು ಮೆಹನತ್ತು ಮಾಡುವರೆಂದು ನಿರೀಕ್ಷಿಸಬಹುದಾಗಿದೆ.—ಎಲ್ಲಾ ಪಾಠಶಾಲೆಗಳೂ ತೆರೆಯಲ್ಪಟ್ಟು ಕೆಲಸಮಾಡುತ್ತಿವೆ. ಈ ಊರು ಚಿಕ್ಕಕೆರೆಗೆ ಊರೊಳಗಿನ ಕಶ್ಮಲವೆಲ್ಲಾ ಹೋಗಿ ಬಿದ್ದು ನೀರು ತುಂಬಾ ಕೆಟ್ಟುಹೋಗುತ್ತಿದ್ದರೂ ಅರ್ಧಭಾಗದ ಜನರು ಅದನ್ನೇ ಕುಡಿಯುತ್ತಿದ್ದಾರೆ. ವ್ಯಾಪಾರ ಸಾಧಾರಣವಾಗಿ ಅನೇಕಾನೇಕ ಅಂಗಡಿಗಳಿಂದಲೂ ಅತಿ ಇಕ್ಕಟ್ಟಾದ ರಸ್ತೆಯಿಂದಲೂ ತುಂಬಿ ಕಳ್ಳತನಕ್ಕೆ ಕಮ್ಮಿ ಸೇರಬೊಟ್ಟುಗಳಿಂದ ವರ್ತಕರಲ್ಲಿ ಅನೇಕರು ಮೋಸಮಾಡುವದನ್ನು ಕೇಳುವವರೇ ಇಲ್ಲವು. ಸಂತೆಯಲ್ಲಿ ಈ ಕಮ್ಮಿ ಬೊಟ್ಟುಗಳ ಕಮ್ಮಿ ಸೇರುಗಳ ಅವಾಂತ್ರ ಅತಿ ಜಾಸ್ತಿಯಾಗಿದೆ. ಅಮಲ್ದಾರ್ ಮಿ॥ ಕೇಸರ್ ಸಿಂಗ್‌ಯವರು ಇದನ್ನು ದಯವಿಟ್ಟು ಗಮನಕ್ಕೆ ತರಬೇಕಾಗಿದೆ.—ಕೆಲವು ಮುಸಾಫರ ಬಂಗ್ಲೆಗಳಲ್ಲಿ ಕಮ್ಮಿ ದರ್ಜೆಯುಳ್ಳ ಸರ್ಕಾರಿ ನೌಕರರವರುಗಳು ನೇಮಕವಾದ ಫೀಸು ಕೊಡದೆ ಇಳಿಕೊಂಡು ದಮ್ಮ ಕೆಲಸ ತೀರಿಸಿಕೊಂಡು ಹೋಗುತ್ತಾರೆ. ಮುಖ್ಯವಾಗಿ ಎಸಯಾರು ಸಬ್ಬಿಯರು ಮೂರನೇ ತರಗತಿ ಬಂಗ್ಲೆಗಳಲ್ಲಿ ಈ ರೀತಿ ನಡೆಯುವದು ಅಪರೂಪವಲ್ಲ.

ಹೊಸದುರ್ಗ.—ಈ ಪ್ರಾಂತ್ಯ ಕೆಲವು ಕಡೆ ಎಳ್ಳು, ಜೋಳ ಬಿತ್ತನೆ ಆಯಿತು. ಸಂತೆಯಲ್ಲಿ ರಾಗಿ ೧೪, ಅಕ್ಕಿ ೯ ಸೇರು ಮಾ[ರುತ್ತಿ]ತ್ತೆ.—ಮೊನ್ನೆ ವೇದಾವತೀ ನದಿಯು ಜನರು ತಿರುಗಾಡದಂತೆ ಹರಿ[ಯಿ]ತು. ಈ ತಾಲ್ಲೋಕಿನ ಕೆಲವು ನೌಕರರನ್ನು ಜೂನ್ ಆಖೈರ್ ಒಳ[ಗೆ] ಬದಲಾಯಿಸುವರೆಂದು ವರ್ತಮಾನ. ಪೋಲೀಸ್ ಇನ್ಸ್‌ಪೆಕ್ಟರ್ ರು[ದ್ರ]ಪ್ಪನವರು ಒಂದು ವರ್ಷ ರಜಾ ಹೋಗುತ್ತಾರೆ.—ಇಲ್ಲಿನ ಜನ[ರು] ಕೆರೇ ಮಧ್ಯೆ ಇರುವ ಬಾವಿಯಲ್ಲಿ ಕೆನೀರನ್ನು ಬಳಸುತ್ತಾರೆ. ಈ [ನೀ]ರಿನಲ್ಲಿ ಸಣ್ಣ ಕ್ರಿಮಿಗಳು ಇರುತ್ತವೆ. ಈ ನೀರನ್ನು ಕುಡಿಯಬಹು[ದೆ] ಎಂಬುದಕ್ಕೆ ನಮ್ಮ ಡಾಕ್ಟರು ಪರೀಕ್ಷಿಸಿ ತಿಳುಹಿಸ್ಯಾರೆಂದು ನಂ[ಬು]ತ್ತೇನೆ.—ಇಲ್ಲಿಗೆ ಇತರ ಗ್ರಾಮಗಳಿಂದ ಇರಸಾಲು ಕಟ್ಟುವದಕ್ಕಾ[ಗ]ಲೀ, ಯಾವ ಕಚೇರಿ ಕೆಲಸಕ್ಕಾಗಲೀ ಬರುವವರಿಗೆ ಊಟಕ್ಕೆ ಬ[ಹಳ] ತೊಂದರೆಯಾಗುತ್ತಿತ್ತು. ಈಗ ತಂಜಾವೂರು ಕಡೆಯಿಂದ ಐಯ್ಯ[ರ್] ಹೋಟಲ್ ಬಂದಿರುವದರಿಂದ ತೊಂದರೆ ತಪ್ಪಿದೆ.—ಬೆಲಗೂರಿಗೆ ರಸ್ತೆ ಸರಿಪಡಿಸಲು ಹಣ ಸ್ಯಾಂಕ್ಷನ್ ಆಗಿ ಬಂದಿದೆಯಂತೆ. ಜೂಲೈ [ಆಖೈರಿ]ಯಲ್ಲಿ ಯೂನಿಯನ್ ಆಗುತ್ತೆಂದು ಹಾಸು. ಈ ಗ್ರಾಮದಲ್ಲಿ ಈ [ವ]ರ್ಷ ಸುಮಾರು ೩೦ ಮದುವೆಗಳು ನಡೆದವು. ಜನರೆಲ್ಲಾ ಆರೋ[ಗ್ಯ]ವಾಗಿರುತ್ತಾರೆ. ರಾತ್ರಿ ವೇಳೆ ಗಸ್ತಿನವರು ತಿರುಗುವದಿಲ್ಲ. ಅಲ್ಲ[ಲ್ಲಿ] ಗಲೀಜು ಇದ್ದೇ ಇದೆ. ಕಾರೇಹಳ್ಳಿಕಟ್ಟೆಯ ಗಲೀಜು ದಿನದಿನಕ್ಕೆ [ಹೆ]ಚ್ಚುತ್ತಿದೆ. ನಾಳೆ ನಾಳಿದ್ದು ಬೂದಿಹಾಲ್ ನಾಟಕದ ಕಂಪೆನಿಯ[ು] ಇಲ್ಲಿಗೆ ಬರುತ್ತದೆ.

ಚಿತ್ರದುರ್ಗ.—ಇಲ್ಲಿ ಬಿಸಲಿನ ಧಗೆಯು ಹೆಚ್ಚುತ್ತಾ ಇ[ದೆ]. ಮಳೆಯಿಲ್ಲದೆ ಎಳ್ಳಿನ ಪೈರು ನಾಶವಾಗುತ್ತಾ ಇದೆ. ಧಾರಣೆಮಾ[ತ್ರ] ಯಥಾಸ್ಥಿತಿಯಲ್ಲಿದೆ.—ಇಲ್ಲಿ ಮೈಸೂರು ವರದಾಚಾರ್ಯ[ರ] ನಾಟಕದ ಕಂಪನಿಯವರು ನೋಟಕರ ಮನಸ್ಸನ್ನು ಆಕರ್ಷಿಸುವಂ[ತೆ] ೪—೧೦ ನಾಟಕಗಳನ್ನು ಆಡಿ ಹೊರಟುಹೋದರು.—ದಾಲಿ ನ[ಲ್ಲಿ]ಯಗಳು ಅದುರು ರೋಗದಿಂದ ಸಾಯುತ್ತಾ ಇವೆ. ಇವುಗಳು ಸತ್ತು [ನಾ]ನಾತವುಂಟಾದಾಗ್ಯೂ ಮಾಡಿಗರು ಅವುಗಳನ್ನು ಊರಾಚೆ ಸಾಗಿಸುವು[ದಿ]ಲ್ಲ. ಮತ್ತು ನಲ್ಲಿಗಳ್ಯಾವತ್ತೂ ಹಾವಸೆಯಿಂದ ತುಂಬಿ ಕಾಲು ಜಾರು[ವ]ವಂತೆಯೂ, ಕೆಲವು ನಲ್ಲಿಗಳು ನಾದುರಸ್ತಾಗಿ ನೀರು ಬಹಳವಾಗಿ [ಪೋ]ಲಾಗುತ್ತಲೂ ಇದೆ. ಇವನ್ನು ಸರಿಯಾದ ಸ್ಥಿತಿಯಲ್ಲಿಟ್ಟುಕೊ[ಂ]ಡಿರಬೇಕೆಂದು ನೇಮಕವಾಗಿರುವ ಫಿಟ್ಟರು ವ್ಯಾಪಾರಾದಿಗಳಲ್ಲಿ ಕಾ[ಲ]ಕಳೆಯತಕ್ಕವರಾಗಿರುವರೆಯೇ ಹೊರತು ಪ್ರತಿಯೊಂದು ನಲ್ಲಿಯನ್ನೂ ತಿಂಗಳಿಗೊಂದುಸಲವಾದರೂ ನೋಡಿಕೊಂಡು ಬರುವಂತೆ ತೋರು[ವು]ದಿಲ್ಲ. ಈ ವಿಷಯದಲ್ಲಿ ಈಗ ಬಂದಿರುವ ಮ್ಯುನಿಸಿಪಲ್ ಒವರ್ಸಿ[ಯ]ರೂ ನಮ್ಮ ವೈಸ್ ಪ್ರೆಸಿಡೆಂಟ್ ಸಾಹೇಬರೂ ನಿಗಾ ಕೊಟ್ಟರೆ ಉ[ತ್ತ]ಮ.—ಈಗ್ಗೆ ಎರಡು ವಾರಗಳ ಹಿಂದೆ ತಾಲ್ಲೋಕು ಶಿರಸ್ತೆ[ದಾರರ] ಮನೆಗೆ ೪—೧೦ ಜನ ಪಂಜುಕಳ್ಳರು ಬಂದು ಒಳಹೋಗುವ ಪ್ರಯತ್ನ ಪಡುತ್ತಾ ಇರುವಲ್ಲಿ ಈ ಶಿರಸ್ತೇದಾರ್ರು ತಾವು ಎಚ್ಚೆತ್ತು ಹೊರಗೆ ಬೆಳಕಾಗಿರುವುದನ್ನು ನೋಡಿ ಮನೆಯವರನ್ನೆಲ್ಲಾ ಎಬ್ಬಿಸಲು ಗಲಾ[ಟೆ] ಕೇಳಿಸಿದ್ದರಿಂದ ಕಳ್ಳರು ಓಡಿ ಹೋದರು. ಇದು ನಡೆದ ೬—೪ ದಿ[ವ]ಸಗಳ ನಂತರ ಪೋಲೀಸ್ ಗ್ಯಾಂಗ್ ಇನ್ಸ್‌ಪೆಕ್ಟರ್ ಕೊಡತಕ್ಕ [ಮಾ]ಹಿತಿ ಪ್ರಕಾರ ಪೋಲೀಸು ಕಾನ್ಸ್ಟೇಬಲ್ ಶನಿವಾರ ಎಂಬವನನ್ನು ಯಾ[ರೋ] ಗ್ಯಾಂಗಿನವರು ಇಲ್ಲಿಂದ ಹೋಗತಕ್ಕ ಹೊಳಲ್ಕೆರೆ ಕಣಿವೆಯಲ್ಲಿ ಸೀಳಿ ಬಿಸಾಟಿರುವುದಾಗಿ ವರ್ತಮಾನ ಬಂದಿದೆ. ಈ ಕ್ರೂರಕೃತ್ಯ ನಡಿಸಿದ ಆಸಾಮಿಗಳು ಇನ್ನೂ ಪತ್ತೆಯಾಗಿಲ್ಲ.

ಮಂಡ್ಯ.—ಕಳೆದ ಮೇ ೨೪ ನೇ ತಾ ಎಂಪೈರ್ ಡೆ ಎಂಬ ಉತ್ಸವವನ್ನು ಇಲ್ಲಿನ ಮಿ॥ ಎಲಿಸ್ ಸಾಹೇಬರೂ ಮಿ॥ ಲೋವರಿ ಸಾಹೇಬರೂ ಕ್ರೈಸ್ತ ಉಪಾಧ್ಯಾಯರನ್ನೂ, ಪಾಠಶಾಲೆಯ ಮಕ್ಕಳನ್ನೂ ಸಾಯಂಕಾಲ ತಮ್ಮ ಬಂಗ್ಲೆಗೆ ಕರಸಿಕೊಂಡು ಮಕ್ಕಳ ಹಾಡುಗಾರಿಕೆಯಿಂದಲೂ ವಾದ್ಯಗಳಿಂದಲೂ ಬಹಳ ಸಂಭ್ರಮಪಟ್ಟರು. ಸಂಗೀತವನ್ನು ನಮ್ಮ ಚಕ್ರವರ್ತಿಯವರ ಹೆಸರಿನಲ್ಲಿ ಹಾಡಿದ ಮೇಲೆ ಮಕ್ಕಳಿಗೆ ಲಡ್ಡು ಬಾಳೆಹಣ್ಣು ಮುಂತಾದ್ದು ಹಂಚಲ್ಪಟ್ಟಿತು. ಇಂಗ್ಲಿಷ್ ರಾಜ್ಯಭಾರದ ವಿಷಯದಲ್ಲಿ ಉಪನ್ಯಾಸ ನಡೆಯಿತು. ಮಾರನೆ ದಿನ ಆಬಳಿಕ ಹೊಸದಾಗಿ ಬಂದಿರುವ ಹಿಂದುಸ್ತಾನಿ ಹೆಡ್ ಮಾಸ್ಟರು ಇಲ್ಲಿನ ಆಸ್ಪತ್ರೆ[ಯ] ಟಲ್ ಅಸಿಸ್ಟೆಂಟರನ್ನು, ಮಿ॥ ಸಂಗಪ್ಪನವರನ್ನು, ಕರೀಂ ಸಾಹೇಬರನ್ನು ತಮ್ಮ ಪಾಠಶಾಲೆಗೆ ಬರಮಾಡಿಕೊಂಡು ಎಂಪೈರ್ ಡೆ ಎಂಬ ಉತ್ಸವವನ್ನು ನಡಿಸಿದರು. ಕಡೆಯಲ್ಲಿ ಬಾಲಕರಿಗೂ ಬಾಲಕಿಯರಿಗೂ ಚೆಂದಾ ಹಣದ ಮೂಲಕ ತಿಂಡಿಗಳನ್ನು ಕೊಟ್ಟು ಸಂತೋಷಪಡಿಸಿದರು.—ಕಳೆದ ಮೇ ೨೬ ನೇ ತಾ ರಾತ್ರಿ ೯ ಘಂಟೆಗೆ ವಿಶೇಷವಾಗಿ ಗಾಳಿ ಮಳೆ ಬಂದು ಅನೇಕ ದೊಡ್ಡ ಮನೆಗಳು ಸೋರಿದವು. ಗಾಳಿಯಿಂದ ಬಹಳ ಕೆಂಚು ಒಡೆದುಹೋಯಿತು. ಮದ್ದೂರಿನ ಹತ್ತಿರ[ವಿ]ರುವ ಶಿವಾಪುರ ಎಂಬ ಗ್ರಾಮದಲ್ಲಿ ಒಂದು ದೊಡ್ಡ ಮರವು ಮನೆಯ ಮೇಲೆ ಬಿದ್ದು ಮನೆಯಲ್ಲಿದ್ದವರಿಗೆ ಬಹಳ ಅನಾಹುತವಾಯಿತೆಂದು ಅಮಲ್ದಾರ್ರಿಗೆ ತಂತಿವರ್ತಮಾನ ಬಂತು. ಕೂಡ್ಲೆ ಅವರು ಮದ್ದೂರಿಗೆ ಪ್ರಯಾಣ ಬೆಳಸಿದರು.—ಕಳೆದ ಮಂಗಳವಾರ ಇಲ್ಲಿ[ನ] ಮಿ॥ ಎಲಿಸ್ ಸಾಹೇಬರು ಪಂಚಮ ಜಾತಿಯವರಿಗೆ ಒಂದು ಅಬಿಸೀನಿ[ಯ]ನ್ ಕೊಳವೆ ಎಂಬ ಯಂತ್ರದಿಂದ ನೀರು ತೆಗೆದುಕೊಳ್ಳುವ ಹಾ[ಗೆ] ಅವರಿಗೆ ಒಂದು ಯಂತ್ರವನ್ನು ಇಡಿಸಿಕೊಟ್ಟಿರುತ್ತಾರೆ. ಆ ಜನರಿಗೆ ನೀರಿಗೆ ಬಹಳ ಕಷ್ಟವಾಗಿತ್ತು. ನಮ್ಮ ಎಲಿಸ್ ಸಾಹೇಬರ ದಯೆಯಿಂದ ಈ ಕಷ್ಟವು ತಪ್ಪಿರುತ್ತದೆ. ಮತ್ತು ಪಂಚಮರ ಬೀದಿಯಲ್ಲಿ ಒಂದು ಲಾಂದ್ರ ಕಂಭವಾದರೂ ಇಟ್ಟಿಲ್ಲ. ರಾತ್ರಿ ಕಾಲದಲ್ಲಿ ಸಂಚಾರ ಮಾಡುವದು ಕಷ್ಟ. ರಸ್ತೆಗಳೆಲ್ಲಾ ಹಳ್ಳಬಿದ್ದು ಹೋಗಿದೆ. ಈ ವಿಷಯದಲ್ಲಿ ಮ್ಯುನಿಸಿಪಾಲಿಟಿಯವರು ನಿಗಾ ಕೊಡುವರೆಂದು ಬಹಳವಾಗಿ ನಂಬುತ್ತೇನೆ.

ತುಮಕೂರು.—ತುಮಕೂರು ಹೊರಪೇಟೆ ಮಿಷನ್ ಬಾಲಿಕಾ ಪಾಠಶಾಲೆಯ ಕಟ್ಟಡವು ಪುರಾತನವಾಗಿಯೂ ಸಿಥಿಲವಾಗಿಯೂ ಇದ್ದ[ದ್ದ]ರಿಂದ ಹಾಲೀ ತುಮಕೂರು ಮಿಷನ್ ಸರ್ಕೀಟಿನ ಅಧಿಕಾರಿಗಳಾಗಿರುವ ರೆವ್ ಟಾಂಲಿನ್‌ಸನ್ ದೊರೆಯವರು ಅದನ್ನು ಕೆಡವಿಸಿ, ಹೊಸದ

...ನಾಲ್ಕು ಸಾವಿರ ರೂಪಾಯಿ ತನಕ ಖರ್ಚು ಮಾಡಿ ಅಂದ ವೂ ಅನುಕೂಲವಾಗಿಯೂ ಕಟ್ಟಿಸಿರುತ್ತಾರೆ. ಈ ಕಟ್ಟಡವು ೨೮ ನೇ ತಾ ಮಂಗಳವಾರದ ವರೆಗೆ ಕಟ್ಟಿ ಪೂರೈಸಿ ಪ್ರತಿಷ್ಠೆಗೆ ವಾಯಿತು ಆ ದಿನ ಸಾಯಂಕಾಲ ೪॥ ಗಂಟೆಯಲ್ಲಿ ಕದಳೀಸ್ತಂ ಗಳಿಂದಲೂ ಪತಾಕೆ ಬಗೆಯ ತೋರಣಗಳಿಂದಲೂ ಶೃಂಗರಿಸುತ್ತಿ ಈ ಪಾಠಶಾಲೆಯನ್ನು ಹಿಂದೆ ಬಹಳ ಕಾಲ ಇಲ್ಲಿನ ಗರಲ್ಸ್ ಸ್ಕೂಲ್ ಲೇಡೀ ಸೂಪರಿಂಟೆಂಡೆಂಟರಾಗಿದ್ದ ಮಿಸ್ ಪಾರ್ಸನ್ಸ್‌ರವ ರಾಜಧಾನಿಯಿಂದ ಇಲ್ಲಿಗೆ ದಯಮಾಡಿಸಿ, ಮೊದಲೇ ಏರ್ಪಡಿಸಿ ತೆ ಆಹ್ವಾನ ಪತ್ರಿಕೆಗಳಿಂದ ಬರಮಾಡಿಕೊಂಡಿದ್ದ ಯೂರೋಪಿ ನ ದೊಡ್ಡ ಮನುಷ್ಯರಿಂದಲೂ ಸರ್ಕಾರಿ ಹುದ್ದೇದಾರರಿಂದಲೂ ರಕ ಮಹಾಜನರಿಂದಲೂ ಉಪಾಧ್ಯಾಯರ ಮತ್ತು ವಿದ್ಯಾರ್ಥಿನಿ ರಿಂದಲೂ ಕೂಡಿ ಸ್ಕೂಲ್ ಮುಂಭಾಗದಲ್ಲಿ ನಿಂತು, ಬಾಲಿಕೆಯರು ಮನೋಹರವಾಗಿ ಹಾಡನ್ನು ಹಾಡಿದ ಕೂಡಲೇ ಮಿಸ್ ಪಾರ್ಸನ್ಸ್ ರವರು ಬಹಳ ಉತ್ಸಾಹದಿಂದ ಪಾಠಶಾಲೆಯ ದ್ವಾರವನ್ನು ತೆರೆದರು ನಂತರ ಎಲ್ಲರು ಒಳಕ್ಕೆ ಪ್ರವೇಶಿಸಿ ಉಚಿತಾಸನಂಗಳಲ್ಲಿ ಮಂಡಿಸಿದ ಮೇಲೆ ರೆವ್. ಟಾಂಲಿನ್ಸನ್ ದೊರೆಯವರು ಅಗ್ರಾಸನವನ್ನು ಅಲಂ ಕರಿಸಿದರು. ದೇವತಾಪ್ರಾರ್ಥನೆ ಆದ ಮೇಲೆ ಒಬ್ಬ ಬಾಲಕಿಯು ಇಂ ಗ್ಲೀಷಿನಲ್ಲಿ ಸಭೆಯವರಿಗೆ ಸುಸ್ವಾಗತವನ್ನು ಬಯಸಿದಳು. ಅನಂ ತರ ಆ ಸ್ಕೂಲಿನ ಹೆಡ್ ಮಾಸ್ಟರ್ ಮ॥ ಟಿ. ಗುರುಚನ್ನಬಸವಯ್ಯನ ವರು ಸ್ಕೂಲ್ ರಿಪೋರ್ಟನ್ನು ಓದಿದರು. ರಿಪೋರ್ಟಿನ ಸಾರಾಂಶ ಈ ಪಾಠಶಾಲೆಯು ೧೮೭೯ ರಲ್ಲಿ ಸ್ಥಾಪಿಸಲ್ಪಟ್ಟು ೧೮೭೯ ರಿಂದ ಸ ರ್ಕಾರಿ ದ್ರವ್ಯಸಹಾಯ ಹೊಂದುತ್ತಾ ೧೮೯೭ ರ ವರೆಗೆ ಸಾಧಾರಣ ಸ್ಥಿತಿಯಲ್ಲಿದ್ದು ಎಲ್ಲಾ ಉಪಾಧ್ಯಾಯರು ಮತ್ತು ವಿದ್ಯಾರ್ಥಿನಿಯರು ಆ ಕಾಲದಲ್ಲಿ ಈ ಸ್ಕೂಲನ್ನು ತ್ಯಜಿಸಿ ಹೊಸದಾಗಿ ಸ್ಥಾಪಿತವಾದ ಮತ್ತೊಂದು ಪಾಠಶಾಲೆಗೆ ಹೋಗಿ ಸೇರಿದ್ದರಿಂದ ಇದರ ಹೆಸರೇ ಅಣಗಿ ಹೋಗುವ ಪಟ್ಟಿಗೆ ಇದ್ದದ್ದರಿಂದ ಅಧಿಕಾರಿಗಳು ಸಮರ್ಥರಾದ ಈಗಿ ನ ಮುಖ್ಯೋಪಾಧ್ಯಾಯರನ್ನು ನೇಮಿಸಿ ಅವರ ಸಲಹೆಗಳನ್ನು ಅಂಗೀ ಕರಿಸಿದಂದಿನಿಂದ ಪಾಠಶಾಲೆಯು ಅಭಿವೃದ್ಧಿಗೆ ಬಂದು ವರ್ಷೇವರ್ಷ ಬಾಲಿಕೆಯರು ಪ್ರೈ. ಲೋ. ಸೆ. ಪರೀಕ್ಷೆಯಲ್ಲಿ ಉತ್ತೀರ್ಣರಾಗು ತ್ತ ಬಂದಿರುವರು ಇದಲ್ಲದೆ ಬ್ರಿಟಿಷ್ ರೆಸಿಡೆಂಟರೂ, ಶ್ರೀಮನ್ಮಹಾ ರಾಜರವರೂ, ವಿದ್ಯಾಭ್ಯಾಸದ ಇಲಾಖಾ ಇನ್ಸ್ಪೆಕ್ಟರ್ ಜನರಲ್ ಸಾ ಹೇಬರೂ ಈ ಸ್ಕೂಲಿನ ವಿಚಾರದಲ್ಲಿ ಒಳ್ಳೇ ಅಭಿಪ್ರಾಯಪಟ್ಟಿದ್ದಾರೆ. ಹಾಲೀ ವರುಷದಲ್ಲಿ ಈ ಸ್ಕೂಲಿನಲ್ಲಿ ೧೬೦ ಮಂದಿ ವಿದ್ಯಾರ್ಥಿನಿಯ ರು ೭೦ ಮಂದಿ ಉಪಾಧ್ಯಾಯರು ೩ ಮಂದಿ ಉಪಾಧ್ಯಾಯನಿಯರು ಒಬ್ಬ ಸಂಗೀತದ ಮಾಸ್ಟರು ಇದ್ದಾರೆ ಈ ರೀತಿ ರಿಪೋರ್ಟು ಓದಿ ನಂತರ ಇಬ್ಬರು ಬಾಲಿಕೆಯರಿಂದ ಬ್ರಿಟಿಷ್ ರಾಜ್ಯಭಾರ ಮತ್ತು ಸ್ತ್ರೀ ವಿದ್ಯಾಭ್ಯಾಸ ಇವುಗಳನ್ನು ಕುರಿತ ಉಪನ್ಯಾಸವು ನಡೆಯಿತು. ನಂತರ ಇಬ್ಬರು ವಿದ್ಯಾರ್ಥಿನಿಯರು ಇಂಗ್ಲೀಷ್ ಮತ್ತು ಕನ್ನಡ ದಲ್ಲಿ ಚಮತ್ಕಾರವಾದ ಸರಸ ಸಂಭಾಷಣೆಗಳನ್ನು ನಡೆಸಿದರು ಇದಾದ ಮೇಲೆ ಏಳುಮಂದಿ ಸಣ್ಣ ವಯಸ್ಸಿನ ಬಾಲಿಕೆಯರು ಅನುಕರಣ ಗೀತವನ್ನು ಹಾಡಿದ್ದು ಸಭಿಕರಿಗೆ ಮಹದಾನಂದವಾಯಿತು. ಅನಂತರ ಬಾಲಿಕೆಯರಿಂದ ಇಂಪಾದ ಹಾಡುಗಳು ಹೇಳಲ್ಪಟ್ಟವು ತರುವಾಯ ಅಗ್ರಾಸನಾಧಿಪತಿಗಳು ಸ್ಕೂಲಿನ ಪೂರ್ವಾಪರ ಸ್ಥಿತಿಗಳನ್ನೂ ಕಟ್ಟಡ ಕ್ಕೆ ಸಹಾಯ ಮಾಡಿದವರನ್ನೂ ಅಲ್ಲದೆ ಮಿಸ್ ಪಾರ್ಸನ್ಸ್‌ರವರು ದಯಮಾಡಿಸಿ ಪ್ರತಿಷ್ಠೆ ಮಾಡಿದ್ದಕ್ಕಾಗಿ ವಂದನಾಪೂರ್ವಕವಾದ ಉಪ ನ್ಯಾಸವನ್ನು ಮಾಡಿ, ಮಿಸ್ ಪಾರ್ಸನ್ಸ್‌ರವರು ದಯಪಾಲಿಟ್ಟು ಸ್ಕೂಲಿಗಾಗಿ ಕೊಟ್ಟ ಒಂದು ದೊಡ್ಡ ಗಡಿಯಾರವನ್ನು ಆತ್ಯಾದರದಿಂದ ಸ್ವೀಕರಿಸಿ ದರು ಅನಂತರ ಮೆ॥ ಸಿ. ಶೇಷಾದ್ರಿ ಅಯ್ಯಂಗಾರ್ರು ಇಂಗ್ಲೀಷಿನಲ್ಲಿ ಮಿಷನರಿಗಳು ಈ ದೇಶಕ್ಕೆ ಮಾಡುತ್ತಿರುವ ಉಪಕಾರಗಳನ್ನೂ ಸ್ತ್ರೀ ವಿದ್ಯಾವಿಚಾರವನ್ನೂ ಕುರಿತು ಉಪನ್ಯಾಸ ಮಾಡಿದರು. ಇವರಂತೆಯೇ ಮ॥ ಸಿ. ಬಿ ರಾಮಸ್ವಾಮಯ್ಯನವರು ಕನ್ನಡದಲ್ಲಿ ಸರಸಭಾಷಣೆ ಮಾಡಿದರು ಇವುಗಳಾದಮೇಲೆ ಮೂರು ಮಂದಿ ಬಾಲಿಕೆಯರು ಸಂಗೀ ತವನ್ನು ಹಾಡಿದರು. ಅಗ್ರಾಸನಾಧಿಪತಿಗಳ ಕೋರಿಕೆಯಂತೆ ಮಿಸ್ ಪಾರ್ಸನ್ಸ್ ರವರು ತಮ್ಮ ಹಸ್ತದಿಂದ ೧೯೦೬ ನೇ ವರುಷದ ಲೋ. ಸೆ. ಪರೀಕ್ಷೆಯಲ್ಲಿ ತೇರ್ಗಡೆಯಾದ ಇಬ್ಬರು ವಿದ್ಯಾರ್ಥಿನಿಯರಿಗೆ ಬಹುಮಾನ ಪಾತಿಯೊಡನೆ ಯೋಗ್ಯತಾ ಪತ್ರಿಕೆಗಳನ್ನು ದಯಪಾಲಿಸಿದರು. ತರುವಾಯ ಬಾಲಿಕೆಯರಿಂದ ಸಭಾವರ್ಣನೆಯು ಅಗ್ರಾಸನಾಧಿಪತಿ ಗಳ ವಂದನಾ ರೂಪವಾದ ಗಾನವೂ ಮುಗಿದನಂತರ ಬಾಲಿಕೆಯರು ಶ್ರೀಮನ್ ಮಹಾರಾಜರವರ ಮತ್ತು ಶ್ರೀಮನ್ ಸಾರ್ವಭೌಮರ ಶ್ರೇಯಃ ಪ್ರಾರ್ಥನೆಯನ್ನು ಹಾಡುವಾಗ ಸಭಿಕರು ಎದ್ದು ನಿಂತು ಹಾಡು ಮುಗಿದ ನಂತರ ಕರತಾಡನಗಳಿಂದ ಹರ್ಷಿತರಾಗಿ ಕುಳಿತುಕೊಳ್ಳಲು, ಮಂಗಳ ಕರವಾದ ಗಾನದಿಂ ಸಭಾ ಮುಕ್ತಾಯವಾಯಿತು. ಕಡೆಯಲ್ಲಿ ಸ ಭಾಸದರಿಗೆಲ್ಲಾ ಹೂವು ಗಂಧ ತಾಂಬೂಲಗಳನ್ನೂ ಬಾಲಿಕೆಯರಿಗೆ ಬಿಡಾಯಿ ಮುಂತಾದ ತಿಂಡಿಯನ್ನೂ ಕೊಟ್ಟರು. ಎಲ್ಲರೂ ಕೂಡಿ ಸಂತೋಷಪೂರ್ವಕವಾಗಿ ಸ್ವಸ್ಥಾನಗಳಿಗೆ ತೆರಳಿದರು. ಆ ದಿನದ ಸಭೆಯ ಅನಂತರವಾದ ಕಾರ್ಯಗಳನ್ನು ತಕ್ಕ ರೀತಿಯಲ್ಲಿ ಸಿದ್ಧಮಾಡಿದ್ದ ಮು ಖ್ಯೋಪಾಧ್ಯಾಯರ, ಅವರ ಸಹಾಯೋಪಾಧ್ಯಾಯರ, ಅಲ್ಲದೆ ಬಾಲಿಕೆಯ ರನ್ನು ಇಂಪಾದ ಹಾಡುಗಳಿಂದ ತಯಾರು ಮಾಡಿದ್ದ ವೀರಭದ್ರಪ್ಪನವರ ಶ್ರಮವು ಸಾರ್ಥಕವಾಯಿತೆಂದು ಸಂತೋಷಪಟ್ಟು ಹೇಳುತ್ತೇವೆ.

ಯಡೇಹಳ್ಳಿ.—ತಾ ೧೫ ನೇ ಮೇ ಬುಧವಾರ ರಾತ್ರಿ ಎಡೇಹಳ್ಳಿ ಸಬ್ ತಾಲ್ಲೂಕು ಹೊನ್ನೆತೊಟ್ಟೀಲಿ ಮನೇಲಿ ಮಲಗಿದ್ದ ಅಣ್ಣಪ್ಪ ಗೌಡ ಇವನ ಹೆಂಡತಿ ಮಂಜಮ್ಮ ಇವರಿಬ್ಬರಿಗೂ ಹೊಡೆದು ಖೂನಿ ಮಾಡಿದ್ದಾರಾಗಿ ತಾ. ೧೬ ನೆ ಬೆಳಿಗ್ಗೆ ಎಡೇಹಳ್ಳಿ ಪೋಲೀಸಿಗೆ ವರ್ತ ಮಾನ ತಿಳಿದು, ಜಮೇದಾರ್ ಅಪ್ಪೂರಾಯರು, ದಫೇದಾರ್ ನಾಗಪ್ಪ ಇವ ರು ಆ ಸ್ಥಳಕ್ಕೆ ಹೋಗಿ ನೋಡಿದಾಗ ಜಗಲಿಯ ಮೇಲೆ ಗಂಡಸಿನ ಶವವು ಅಲೆಬಿದ್ದಿರುವುದು ಬಿದ್ದಿತ್ತು. ಮೃತಪಟ್ಟದ್ದನು. ಒಳಗೆ ಹೆಂಗಸಿನ ಶವವು ಕತ್ತಿಯಿಂದ ತಲೆ ಕಡಿದು ರಕ್ತಪ್ರವಾಹ ಹೊರಟಿತ್ತು. ಎರಡು ಬಾಗಲೂ ತೆರೆದಿತ್ತು. ಬೀರು ಬಾಗಲು ಒಡೆದು ಒಳಗಿದ್ದ ನಗದು ಒ ಡವೆಗಳು ಕಳುವಾಗಿತ್ತು ಮನೆಯೊಳಗೆ ಹೋಗಲಿಕ್ಕೆ ಕನ್ನಾ ಬಿದ್ದಿ ತ್ತು ಹಿತ್ತಲು ಕಡೆ ಒಂದು ಕಬ್ಬಿಣದ ಸುತ್ತಿಗೆ ಬಿದ್ದಿತ್ತು. ಈ ಸು ತ್ತಿಗೆಯಿಂದ ಗಂಡಸಿಗೆ ತಲೆಯ ಮೇಲೆ ಏಟು ಬಿದ್ದಿತ್ತು. ಒಳಗೆ ರಕ್ತ ಹತ್ತಿದ ಒಂದು ಕತ್ತಿ ಇತ್ತು. ಇದರಿಂದ ಮೃತಳಿಗೆ ಹೊಡೆದಿದ್ದರು. ಈ ಖೂನಿ ಮಾಡಿದವರೆಂದು ಖಾಸಾ ಮಗ ನರಸಿಂಹ, ಇವನ ಸ್ನೇಹಿ ತ ವೆಂಕಟ ಇವರನ್ನು ತಾ. ೧೮ ರಲ್ಲಿ ಹಿಡಿದರು. ತಾ. ೧೮ ರ ಲಾ ಗಾಯಿತು ೨೫ ರ ವರಿಗೆ ಕಳುವು ಮಾಡಿ ಕಾಡಿನಲ್ಲಿಟ್ಟಿದ್ದ ಮಾಲಂಗ ಳೆಲ್ಲಾ ತೋರಿಸಿದ್ದಲ್ಲದೆ ಮಗನಿಗೆ ಮದುವೆ ಮಾಡದೇನೂ ಸರಿಯಾದ ಸ್ಥಿತೀಲಿ ನೋಡದೇನೂ ಮೃತನ ಮೊದಲನೇ ಹೆಂಡತಿ ಮಗನಾದ್ದರಿಂದ ಈ ಮೃತಳು ಮಲತಾಯಾದ್ದರಿಂದ ಮಾಲಿನ ಆಸೆಗೆ ಖೂನಿ ನಡೆಸಿ ದ್ದಾಗಿ ಒಪ್ಪುತ್ತಾರೆ ಅಪರಾಧಿಗಳು ಒಡನೆ ಪರಾರಿ ಆಗಿದ್ದರು. ಎಡೇ ಹಳ್ಳಿ ಕಸಬಾ ಪಟೇಲ್ ವೆಂಕಟರಮಣಯ್ಯ ಗೌಡರು ಪೋಲೀಸಿಗೆ ತುಂಬಾ ಸಹಾಯವಾದ ಬಾತ್ಮಿ ಕೊಟ್ಟಿದ್ದರಿಂದ ಪೋಲೀಸಿನವರು ಮಾ ಡಿದ ಮೆಹನತ್ತು ಸಾರ್ಥಕಕ್ಕೆ ಬಂದು, ಈ ಕೇಸು ಒಡನೆ ಪತ್ತೆಗೆ ಬಂದು ಜೂನ್ ತಾ. ೪ ಕ್ಕೆ ಕಡೂರು ಡಿಸ್ಟ್ರಿಕ್ಟ್ ಟ್ರೇಜರಿ ಅಸಿ ಸ್ಟೆಂಟ್ ಕಮಿಷನರ್ ಮೇಜಿಸ್ಟ್ರೇಟ್ ಕೋರ್ಟಿನಲ್ಲಿ ವಿಚಾರಣೆಗೆ ನಿಂತಿದೆ.—(ಇನ್ನೊಬ್ಬ ಬಾತ್ಮಿದಾರರಿಂದ) ಹವಾ ಬಹುಮಟ್ಟಿಗೆ ಕೆ ಟ್ಟು ಹೋಗಿದೆ. ಊರಲ್ಲೆಲ್ಲಾ ಅನುಕಂಪ ಉಪದ್ರವವು ಹರಡಿಕೊಂಡಿ ದೆ. ಈಚೆಗೆ ಒಂದೆರಡು ಹದ ಮಳೆಯಾಗಿದೆ. ಅನೇಕ ಭಾವಿಗಳಲ್ಲಿ ನೀರಿಗೆ ಅಭಾವ. ಈ ವರುಷ ಬೈಲ್ ಹೊಲಗಳಲ್ಲಿ ಎಲ್ಲಾ ಬೆಳೆಯೂ ಉತ್ತಮವಾಗಿತ್ತೆಂತ ಪ್ರಸಂಗಿಸುವರೇ ಹೊರತು ಧಾರಣೆ ಬೇರೆ ಇನ್ನೂ ಇಳಿಯಲಿಲ್ಲ ಸಂತೆಗಳಲ್ಲಿ ಕವಿಷ್ಠ ಸೇರುಗಳೂ ಬೊಟ್ಟು ಗಳೂ ಓಡ್ಯಾಡುತ್ತವೆ ವಿಚಾರಿಸುವರೇ ಇಲ್ಲ. ಪೋಲೀಸಿನವರು ಇ ನ್ನಾದರೂ ಇಂಥಾ ಮೋಸ ನಡೆಯದಂತೆ ನಿಗಾ ಕೊಟ್ಟಾರೆಂತ ಹಾರೈ ಸುತ್ತೇನೆ —ಇಲ್ಲಿನ ಪರ್ಸಿಷಲ್ ಕೋರ್ಟನ್ನು ವಜಾ ಮಾಡಿರು ತ್ತಾರೆ. ಈ ತಿಂಗಳು ೧೫ ನೇ ತಾ. ಬುಧವಾರ ರಾತ್ರಿ ಈ ಸಬ್ ತಾ ಲ್ಲೂಕಿಗೆ ಸೇರಿದ ಹೊನ್ನೆಕೊಡಿಗೆ ಎಂಬ ಗ್ರಾಮದಲ್ಲಿ ಪಟೇಲ ಅಣ್ಣಪ್ಪಗೌಡ, ಇವನ ಹೆಂಡತಿ, ಈ ಇಬ್ಬರನ್ನೂ ಇವನ ಹಿರೀ ಹೆಂಡತಿ ಮಗನು ಚಮ್ಮಟಿಕೆಯಿಂದ ಹೊಡೆದು ಕೊಂದುಹಾಕಿರುತ್ತಾನಂತೆ ಪೋಲೀಸ್ ಸೂಪರಿಂಟೆಂಡೆಂಟರೂ ಇನ್ಸ್ಪೆಕ್ಟರೂ ಪತ್ತೆ ತರದೂದಿಗಾಗಿ ಇಲ್ಲಿಗೆ ದಯಮಾಡಿಸಿದ್ದರು ಅಪರಾಧಿಯು ಸಿಕ್ಕಿದ್ದಾನಂತೆ. ಅಲ್ಲಲ್ಲಿ ಪುಂಡುತನವೂ ಕೊಲೆಯೂ ಜೆಬ್ಬಾಗುತ್ತಾ ಇವೆ ಕೋರ್ಟನ್ನು ವಜಾ ಮಾಡಿರುತ್ತೇವೆಂತ ಸುಳುಹು ಬಂದ ಒಡನೆಯೇ ಇಂಥಾ ಕ್ರೂರಕೃ ತ್ಯಗಳು ನಡೆಯುವುದಕ್ಕೆ ಪ್ರಾರಂಭವಾಗಿರುವಾಗ ಕೋರ್ಟು ಹೋದ ಮೇಲೆ ಮಾನಸ್ಥರಿಗೂ ಬಡಬಗ್ಗರಿಗೂ ಉಳಿಗಾಲವೇ ಇಲ್ಲದಂತೆ ಕಾಣು ವುದು —ವಿದ್ಯಾಭ್ಯಾಸದ ಇಲಾಖೆಯ ಸರ್ಕಲ್ ಇನ್ಸ್ಪೆಕ್ಟರು ಇಲ್ಲಿಗೆ ಬಂದು ಮಂಡಗದ್ದೆ ಮಾರ್ಗವಾಗಿ ತೀರ್ಥಹಳ್ಳಿ ಪ್ರಾಂತ್ಯ ಪ್ರಯಾಣ ಮಾಡಿದರು ಇಲ್ಲಿನ ಎ ವಿ ಸ್ಕೂಲಿನಲ್ಲಿ ಮೇ ೨೪ ನೇ ಶುಕ್ರವಾರ ಎಂಪೈರ್ ಡೇ ಉತ್ಸವವನ್ನು ಚನ್ನಾಗಿ ನಡಿಸಿದರು. ಸ್ಕೂಲ್ ಕಟ್ಟಡದ ಮುಂಭಾಗವು ನಾನಾ ಪ್ರಕಾರ ಬಹಳ ಚನ್ನಾಗಿ ಅಲಂಕರಿಸಲ್ಪಟ್ಟಿತ್ತು. ಪ್ರಾತಃಕಾಲ ೮॥ ಗಂಟೆಗೆ ಡೆಪ್ಯುಟಿ ಅಮಲ್ದಾರರೂ, ಪ್ಲೀಡರುಗಳೂ, ಸಾಹುಕಾರರೂ, ವರ್ತಕರೂ, ಸ್ಕೂಲ್ ಮಾಸ್ಟರುಗಳೂ, ಇನ್ನೂ ಊರಿನ ಇತರೇ ದೊಡ್ಡ ಮನುಷ್ಯರೂ ಬಾಲಕ ಬಾಲಕಿಯರೂ ಬಾಜಾ ಬಜಂತ್ರಿಯೊಡನೆ ಸ್ಕೂಲ್ ಮುಂಭಾಗದಲ್ಲಿ ಸೇರಿ, ಶ್ರೀಮದಿಂಡಿಯಾ ಚಕ್ರವರ್ತಿಯವರ ಇಂಗ್ಲೆಂಡ್, ಸ್ಕಾಟ್ಲೆಂಡ್, ಐರ್ಲೆಂಡ್ ರಾಜ್ಯ ಚಿ ಹ್ನೆಯಾದ ಕೆಂಪು, ನೀಲ, ಬಿಳೀ ಬಟ್ಟೆಗಳಿಂದ ತಯಾರ್ಮಾಡಿಸಿದ್ದ ಧ್ವಜಪಟವನ್ನು ಬಲ ಭಾಗದಲ್ಲಿ ಸ್ಥಾಪನೆ ಮಾಡಿದರು. ಮರ್ಯಾದಾ ರ್ಥವಾಗಿ ತೋಪುಗಳು ಹಾರಿಸಲ್ಪಟ್ಟವು. ಸ್ಕೂಲ್ ವಿದ್ಯಾರ್ಥಿಗಳು ಇಂಗ್ಲಿಷಿನಲ್ಲಿ ಬ್ರಿಟಿಷ್ ಪ್ರಭುಗಳವರ ಶ್ರೇಯಃ ಪ್ರಾರ್ಥನೆ ಮಾಡಿ ದರು ಸರ್ವರೂ ರಾಜಭಕ್ತಿ ಪೂರ್ವಕವಾದ ವಂದನೆಗಳನ್ನು ಸಮರ್ಪ ಸಿದರು ನಂತರ ಎಡಭಾಗದಲ್ಲಿ ಗಂಡಭೇರುಂಡ ಪಕ್ಷಿಯ ಲಾಂಛನವು ಳ್ಳ ಮೈಸೂರು ಶ್ರೀಮನ್ಮಹಾರಾಜರವರ ಧ್ವಜಸ್ಥಾಪನೆ ಮಾಡಿ ಶ್ರೇಯಃ ಪ್ರಾರ್ಥನಾಪೂರ್ವಕ ವಂದನೆಗಳನ್ನು ಸಮರ್ಪಿಸಿದರು. ಮ ರ್ಯಾದಾರ್ಥವಾಗಿ ತೋಪುಗಳು ಹಾರಿಸಲ್ಪಟ್ಟವು. ಆ ಮೇಲೆ ಸರ್ವ ರೂ ಸ್ಕೂಲ್ ಗೃಹಪ್ರವೇಶ ಮಾಡಿದರು. ಒಳಭಾಗವು ಶ್ರೀಮನ್ಮಹಾ ರಾಜರವರ ಮತ್ತು ಶ್ರೀಮದಿಂಡಿಯಾ ಚಕ್ರವರ್ತಿಯವರ ಫೋಟೋಗ ಳಿಂದ ಅಲಂಕರಿಸಲ್ಪಟ್ಟಿತ್ತು ಬಾಲಕಿಯರು ಸ್ವಾರಸ್ಯವಾಗಿ ರಸಯು ಕ್ತವಾದ ಗಾಯನವನ್ನು ಹಾಡಿದರು. ನಂತರ ಆಗ ಮಾಸ್ಟರ್ ಮಲ್ಲ ಪ್ಪಯ್ಯನವರು ಪ್ರಪಂಚದಲ್ಲಿ ಮೂರನೇ ಒಂದು ಭಾಗವು ಬ್ರಿಟಿಷ್ ಚ ಕ್ರವರ್ತಿಯವರ ಆಳ್ವಿಕೆಯಲ್ಲಿದೆ ಎಂದು ಉಪನ್ಯಾಸ ಮಾಡಿ, ಪಟದಲ್ಲಿ ಚಕ್ರವರ್ತಿಯವರ ರಾಜ್ಯಭಾರದ ದೇಶ ವಿಸ್ತಾರವನ್ನು ತೋರಿಸಿ ವಿವರಿ ಸಿದರು. ಅ॥ ಮಾ॥ ರಾಮಶೇಷಯ್ಯನವರು ಬ್ರಿಟಿಷ್ ರಾಜ್ಯಭಾರ ವಿಷ ಯಕವಾದ ಉಪನ್ಯಾಸವನ್ನು ಮಾಡಿದರು ಪುನಹ ಬಾಲಕಿಯರು ಮಂಗಳವನ್ನು ಹಾಡಿದರು ಸರ್ವರ ಜಯಘೋಷದೊಡನೆ ಕರ ಸ್ಫಾಲನ ಮಾಡಿದರು ಪ್ರಾತಃಕಾಲದ ಸಭೆಯು ಬರಖಾಸ್ತಾಯಿತು. ಪುನಹ ಮಧ್ಯಾಹ್ನತ್ತರ ೪ ಘಂಟೆಗೆ ಎಲ್ಲರೂ ವಾದ್ಯಘೋಷದೊಡನೆ ಸ್ಕೂಲ್ ಹಿಂಭಾಗದಲ್ಲಿ ಸಭೆ ಸೇರಿದರು ಆಗ ನಡೆದ ಬಾಲಕರ ವಿಧ ವಿಧವಾದ ಆಟಗಳು ಬಹಳ ವಿನೋದವಾಗಿದ್ದವು. ಬಟ್ಟೆಗಳ ಕಾಳಗವು ತಮಾಷೆಯಾಗಿತ್ತು ನಂತರ ಆಟದಲ್ಲಿ ಜಯವನ್ನು ಹೊಂದಿದವರಿಗೆ ಬಹುಮಾನಪ್ರದಾನವು ನಡೆಯಿತು. ಪುನಹ ಬಾಲಕರು ಶ್ರೀ ಚಕ್ರವ ರ್ತಿಯವರ ಮತ್ತು ಶ್ರೀಮನ್ಮಹಾರಾಜರವರ ಶ್ರೇಯಃ ಪ್ರಾರ್ಥನೆ ಮಾಡಿದರು, ಬಾಲಕಿಯರು ಮಂಗಳವನ್ನು ಹಾಡಿದ ಮೇಲೆ ಸರ್ವರಿ ಗೂ ಗಂಧ ತಾಂಬೂಲವೂ ಬಾಲಕ ಬಾಲಿಕೆಯರಿಗೆ ಮಿಠಾಯಿಯೂ ಹಂಚಲ್ಪಟ್ಟವು. ಸರ್ವರೂ ಜಯಘೋಷದೊಡನೆ ಚಪ್ಪಾಳೆ ತಟ್ಟಿ ವಿನೋದವಾಗಿ ಹಚ್ಚಲ್ಪಟ್ಟ ಬಾಣಬಿರುಸುಗಳನ್ನು ನೋಡಿ ಪರಮಾನಂ ದಭರಿತರಾಗಿ ಶ್ರೀ ಮಹಾ ಪ್ರಭುಗಳವರ ಶ್ರೇಯಃ ಪ್ರಾರ್ಥನೆಗಳನ್ನು ಮಾಡಿ ಮನೆಗಳಿಗೆ ತೆರಳಿದರು.

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋ ಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂ ಡದು; ಇಂಥವುಗಳಿಗೆ ನಾವು ನಿಗಾ ಕೊಡಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾ ಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿ.

ಕರೆಸ್ಪಾಂಡೆನ್ಸ್.

ತಲಕಾಡು ಪ್ರೈವೇಟ್ ಇಂಡಸ್ಟ್ರಿಯಲ್ ಸ್ಕೂಲು.

ಅಯ್ಯಾ,

ಈ ತಲಕಾಡು ದಳವಣಪುರವೆಂಬ ಹೆಸರಿನಿಂದ ಹೊಯಿಸಲ ಬಳ್ಳಾಳರ ಕಾಲದಲ್ಲಿ ರಾಜಧಾನಿಯಾಗಿದ್ದು ಈಚೆಗೆ ತಾಲ್ಲೂಕು ಹೆಡ್ ಕ್ವಾರ್ಟರಾಗಿದ್ದು ಈಗ ಒಂದು ಹೋಬಳಿಯಾಗಿರುತ್ತೆ. ಇಲ್ಲಿ ಬಹು ಕಾಲದಿಂದಲೂ ಬಹಳ ಪ್ರಸಿದ್ಧರಾದ ಶಿಲ್ಪ ಶಾಸ್ತ್ರಜ್ಞರು ವಾಸವಾಗಿ ರುತ್ತಾರೆ. ಇವರಲ್ಲಿ ಮೆ॥ ಶಂಕರಯ್ಯನೆಂಬವರು ಮರದಿಂದ ವಿಗ್ರ ಹಗಳನ್ನು ತಯಾರ್ಮಾಡುವದು, ತಗಡಿನ ಕೆಲಸ ಮರಗೆಲಸ ತೋರಿ ಸಿದ ನಕ್ಷೆಯಂತೆ ಸಾಮಾನುಗಳನ್ನು ತಯಾರ್ಮಾಡುವದು, ಮತ್ತು ಉತ್ತಮವಾದ ಕಂಚನ್ನು ತಯಾರ್ಮಾಡುವದು, ಈ ಕೆಲಸಗಳಲ್ಲಿ ತಿಳುವಳಿಕೆಯುಳ್ಳವರಾಗಿ ವಸ್ತು ಪ್ರದರ್ಶನಶಾಲೆಗಳಿಗೆ ತಮ್ಮ ಸಾಮಾ ನುಗಳನ್ನು ಕಳುಹಿಸಿ ಬಹುಮಾನವನ್ನು ಪಡೆದಿರುತ್ತಾರೆ.

ಕಾರಣಾಂತರಗಳಿಂದ ಈ ಕೆಲಸಗಳು ಹೀನಸ್ಥಿತಿಗೆ ಬರುತ್ತಾ ಇರಲು ಮೇಲ್ಪಟ್ಟ ಅಧಿಕಾರಿಗಳ ಪ್ರೋತ್ಸಾಹದಿಂದ ಈ ಸ್ಥಳವಾಸಕ ರಾಗಿ ಈ ಸ್ಕೂಲ್ ಹೆಡ್ ಮಾಸ್ಟರಾಗಿದ್ದ ಜಿ. ರಾಮಯ್ಯನೆಂಬವರು ಮೇಲ್ಕಂಡ ಶಂಕರಯ್ಯನವರಿಗೆ ಪ್ರೋತ್ಸಾಹ ಮಾಡಿ ಸರ್ಕಾರದವರ ಅಪ್ಪಣೆ ಪಡೆದು, ಹಳೆ ಸ್ಕೂಲ್ ಕಟ್ಟಡದಲ್ಲಿ ಕೈಗಾರಿಕೆ ಪಾಠಶಾಲೆ ಯನ್ನು ಸ್ಥಾಪಿಸಿ, ತಮ್ಮ ಸ್ಕೂಲ್ ವಿದ್ಯಾರ್ಥಿಗಳಲ್ಲಿ ೪ನೇ ತರಗತಿ ಯವರು ದಿನಕ್ಕೆ ೩ ಗಂಟೆ ಕಾಲ ಈ ಸ್ಕೂಲಿನಲ್ಲಿ ಕೆಲಸ ಮಾಡೇ ತೀರಬೇಕೆಂದು ವಿಧಾಯಕ ಮಾಡಿ, ಲೋ. ಸೆ ಪ್ಯಾಸ್ ಮಾಡಿ ಉಮೇ ದುವಾರರಾಗಿದ್ದವರನ್ನು ಈ ಸ್ಕೂಲಿಗೆ ಸೇರಿಸಿ ಕ್ರಮೇಣ ಅವರಿಗೆ ವೇ ತನಗಳು ಬರುವದಾಗಿ ಭರವಸೆ ಹೇಳಿ ಬ್ರಾಹ್ಮಣರನ್ನೂ ಬ್ರಾಹ್ಮಣೇ ತರರನ್ನೂ ಸೇರಿಸಿ ಸುಮಾರು ೩೦ ಜನ ವಿದ್ಯಾರ್ಥಿಗಳಿಂದ ಕೆಲಸ ಮಾಡಿಸುತ್ತಾ, ತಾವೂ ದಿನಕ್ಕೆ ೨—೩ ಗಂಟೆಗಳ ಕಾಲ ಅವರೊಡನೆ ಕೆಲಸ ಮಾಡುತ್ತಾ ಅನೇಕ ಮರ, ಯಂತ್ರ, ತಗಡು, ಇವುಗಳಿಂದ ಸಾಮಾನುಗಳನ್ನು ವಿದ್ಯಾರ್ಥಿಗಳ ಕೈಯಿಂದಲೇ ಮಾಡಿಸುತ್ತಾ ಬಂದರು

ಈ ಕಾರ್ಯಕ್ಕೆ ಬೇಕಾಗಿ ಮೂಲಧನವು ಬೇಕಾಗಿ ಬಂದುದರಿಂ ದ ಷೇರ್ ೧ಕ್ಕೆ ೧೦ ರೂಪಾಯಿನ ಮೇರೆ ೫೦ ಷೇರುಗಳನ್ನು ಏರ್ಪ ಡಿಸಿ, ಷೇರುದಾರರುಗಳಿಂದ ಈ ಮೊಬಲಗನ್ನು ತೆಗೆದುಕೊಂಡು, ಕಾಗದಮರ, ಹಿತ್ತಾಳೆ ತಗಡು, ಕಂಚು ವಗೈರೆ ಸಾಮಾನುಗಳನ್ನು ತರಿಸಿಕೊಂಡು, ಅದರಿಂದ ನಮೂನೆಯಾದ ಮತ್ತು ಉಪಯೋಗಕರವಾದ ಪದಾರ್ಥಗಳನ್ನು ಮಾಡಿಸಿ ಬಿಕರಿಮಾಡಿ, ಬಂದ ಲಾಭದಲ್ಲಿ ಅರ್ಧ ಭಾಗವನ್ನು ಸ್ಕೂಲ್ ಖರ್ಚಿಗೆ ಇಟ್ಟುಕೊಂಡು ಉಳಿದ ಅರ್ಧ ಭಾಗ ವನ್ನು ಮೂರು ತಿಂಗಳಿಗೊಂದುಸಾರಿ ದಾಮಾಷಾಯ ಪ್ರಕಾರ ಷೇರು ದಾರರಿಗೆ ಹಂಚಿಕೊಡತಕ್ಕದ್ದೆಂತಲೂ ಷೇರುದಾರರ ಮೊಬಲಗಿನಿಂದ ತಂದ ಸಾಮಾನುಗಳು ದುರುಪಯೋಗವಾಗದಂತೆ ಷೇರುದಾರರಿಂದ ಚುನಾಯಿಸಲ್ಪಟ್ಟ ಮತ್ತು ಸ್ವಂತ ಷೇರುಳ್ಳ ೧೨ ಜನಗಳುಳ್ಳ ಒಂದು ಕಮಿಟಿಯವರು ನೋಡಿಕೊಳ್ಳತಕ್ಕದ್ದೆಂತಲೂ ಏರ್ಪಾಡಾಗಿ ಅದ ರಂತೆ ಷೇರುದಾರರಾಗಿ ಸೇರಲು ಅನೇಕರು ಒಪ್ಪಿಕೊಂಡಿದ್ದರು. ಅಷ್ಟರಲ್ಲಿ ಈ ಹೆಡ್ ಮಾಸ್ಟರು ಬೇರೆ ಕಡೆಗೆ ಹೊರಟುಹೋದುದರಿಂ ದಲೂ ಶಂಕರಯ್ಯನವರಿಗೆ ಪ್ರಾಪ್ತವಾದ ಶರೀರಾಲಸ್ಯದಿಂದಲೂ ಪ್ರೋತ್ಸಾಹಕರಿಲ್ಲದೆ ಈ ಸ್ಕೂಲು ಮುಚ್ಚಲ್ಪಟ್ಟಿರಬಹುದೆಂದು ತೋ ರುತ್ತದೆ.

ಜರ್ಮನಿ ಇಂಗ್ಲೆಂಡ್ ಮೊದಲಾದ ದೇಶದವರು ಯಶೋವಂತರಾ ಗಿಯೂ ಭಾಗ್ಯಶಾಲಿಗಳಾಗಿಯೂ ಧೃಢಕಾಯರಾಗಿಯೂ ಇರುವದಕ್ಕೆ ಅವರ ದೇಶದಲ್ಲಿರುವ ಕಾರ್ಖಾನೆಗಳೂ ಒಂದು ಕಾರಣವೆಂದು ಸರ್ವ ರೂ ಅನುಮತಿಸುತ್ತಾರೆ. ಈ ದೇಶದಲ್ಲೂ ಕೈಗಾರಿಕೆ ಕೆಲಸಗಳನ್ನು ಅಭಿವೃದ್ಧಿಗೆ ತರಲು ಅನೇಕ ಪ್ರಯತ್ನಗಳು ನಡೆಯುತ್ತಾ ಇರುತ್ತವೆ. ಇಂಥಾ ಕಾಲದಲ್ಲಿ ಈ ಸ್ಕೂಲು ಮುಚ್ಚಲ್ಪಟ್ಟಿರುವದು ಪ್ರಾಜ್ಞರಿಗೆ ವಿಷಾದವನ್ನುಂಟು ಮಾಡದಿರಲಾರದು ದಯಾಳುಗಳಾದ ಸರ್ಕಾರದ ವರು ಇದನ್ನು ದಿವ್ಯಚಿತ್ತಕ್ಕೆ ತಂದುಕೊಂಡು ಈ ಸ್ಕೂಲನ್ನು ಜೀ ರ್ಣೋದ್ಧಾರ ಮಾಡಿಸಬೇಕಾಗಿ ಕೋರುತ್ತೇನೆ.

ಎಲ್ಲಾ ಸ್ಕೂಲ್ ಹೆಡ್ ಮಾಸ್ಟರುಗಳೂ ತಮ್ಮ ತಮ್ಮ ಸ್ಕೂಲಿಗೆ ಸೇರಿದ ಹಾಗೆ ಒಂದೊಂದು ಕೈಗಾರಿಕೆ ಸ್ಕೂಲನ್ನು ಮೇಲ್ಕಂಡ ರೀತಿ ಷೇರ್ ಮೂಲಕ ಏರ್ಪಡಿಸಿಕೊಂಡು, ತಮ್ಮ ಸ್ಕೂಲ್ ಇಲ್ಲದ ಕಾಲ ದಲ್ಲಿ ಅಂದರೆ ಪ್ರಾತಃಕಾಲ ೬ ರಿಂದ ೩, ಸಾಯಂಕಾಲ ೫ ರಿಂದ ೬, ಈ ಎರಡು ಗಂಟೆಗಳ ಕಾಲವಾದರೂ ಕೆಲಸ ಮಾಡುವಂತೆ ತಮ್ಮ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಮಾಡುತ್ತಾ ಬಂದರೆ ಮುಂದಿನ ಪ್ರಜೆಗಳಾ ದ ಈಗಿನ ವಿದ್ಯಾರ್ಥಿಗಳು ಯಶೋವಂತರಾಗಿಯೂ ಶ್ರೀಮಂತರಾಗಿ ಯೂ ಧೃಢಕಾಯರಾಗಿಯೂ ಆಗುವಂತೆ ದೇವರು ದಯಪಾಲಿಸುವ ನೆಂದು ನಂಬಿರುತ್ತೇನೆ.

ವಿದ್ಯಾರ್ಥಿಗಳ ಹಿತಚಿಂತಕ.

ಪೆರೂನಾ ಎಲ್ಲಾ ಶೀತರೋಗಗಳನ್ನೂ ನಿವಾರಣೆ ಮಾಡುವುದರಲ್ಲಿ ಅಮೂಲ್ಯವಾಗಿದೆ ಎಂದು ಪ್ರಮುಖ ಆಸ್ಪತ್ರೆಗಳು ಹೇಳುತ್ತವೆ.

38-9



ಸಿಸ್ಟರ್ಸ್ ಆಫ್ ದಿ ಗುಡ್ ಷಫ್‌ಹರ್ಡ್, ಮಾಂಟ್ರೀಲ್.

ಭೂಮಿಯ ಮೇಲಿರುವ ಆಸ್ಪತ್ರೆಗಳೆಲ್ಲಾ ಶೀತರೋಗಗಳನ್ನು ಚಿಕಿತ್ಸೆಮಾಡುವಲ್ಲಿ ಪೆರೂನಾ ಔಷಧವು ಬಹು ಬೆಲೆಯುಳ್ಳದ್ದೆಂದು ಕಂಡುಕೊಂಡಿವೆ

ಶೀತ ನೆಗಡಿ ಮುಂತಾದ್ದು ಶ್ವಾಸಕೋಶಕ್ಕೆ ಬರುವ ರೋಗವೆಂತಹದೂ ಅದು ಕಡೇಪಕ್ಷ ವರುಷಕ್ಕೆ ಎಂಟುತಿಂಗಳ ಕಾಲ ಬರುವುದೆಂತಲೂ ಸಾಮಾನ್ಯವಾಗಿ ಎಲ್ಲರಿಗೂ ತಿಳಿದಿದೆ.

ಈ ದೇಶದಲ್ಲಿ ಶೀತಕಾಲವು ದೀರ್ಘವಾದ ಮತ್ತು ಕಠಿಣವಾದ ನಮೂ ಉಳ್ಳದ್ದಾಗಿ ಬಹಳ ಕಾಲ ಇರುವುದರಿಂದ ಆಗಲೇ ಶೀತ ವ್ಯಾಧ್ಯಗಳು ಪ್ರಸಿದ್ಧವಾಗುವವೆಂದು ಖಂಡಿತವಾಗಿ ಹೇಳಬಹುದು.

ಆದಕಾರಣ ಕೆನಡಾ ಜನರು ಶೀತರೋಗಕ್ಕೆಲ್ಲಾ ಪೆರೂನಾ ನಂಬಿಕೆಯಾದ ಒಳ್ಳೇ ಔಷಧವೆಂದು ತಿಳಿದುಕೊಂಡಲೇ ಅದನ್ನು ಎಲ್ಲಾ ಜನರು ಪ್ರೀತಿಮಾಡಿ ಉಪಯೋಗಿಸುತ್ತಾ ಬಂದರು. ಸಂಸಾರಗಳಲ್ಲಿ ಮಾತ್ರವೇ ಅಲ್ಲ, ದೊಡ್ಡ ಆಸ್ಪತ್ರೆಗಳಲ್ಲಿ ಕೂಡ ಆ ರೋಗಗಳನ್ನು ತಡೆಯುವ ಪಕ್ಷ ನಡೆದಾಗ ರೋಗಿಗಳಿಗೆ ಸೌಖ್ಯವನ್ನುಂಟುಮಾಡುವುದಕ್ಕೂ ಪೆರೂನಾವನ್ನು ಉಪಯೋಗಿಸುತ್ತಾ ಬಂದರು.

ಬಡಬಗ್ಗರಾಗಿಯೂ ರೋಗಿಗಳಾಗಿಯೂ ಇರುವಂಥಾವರಿಗೆ ಅದು ತುಂಬಾ ಪ್ರಯೋಜನವನ್ನುಂಟುಮಾಡಿದ ವಿಷಯದಲ್ಲಿ ದೊಡ್ಡ ಆಸ್ಪತ್ರೆಯವರು ಒಪ್ಪಿ ಸಮ್ಮತಿಯನ್ನು ಕೊಡಲು ಹಿಂಜರಿಗೆವಿಲ್ಲವು.

ಈ ದೊಡ್ಡ ಆಸ್ಪತ್ರೆಗಳ ಪೈಕಿ ಸಿಸ್ಟರ್ಸ್ ಆಫ್ ಗುಡ್ ಷಫ್‌ಹರ್ಡ್ ಎಂಬುದು ಒಂದು. ಅವರ ನೌಕರಮಾನೆಯವರು ಹೇಳುವುದನ್ನು ಕೇಳಿ —

ಓಹಿಯೋ ಡಿಸ್ಟ್ರಿಕ್ಟ್ ಕೊಲಂಬಸ್ ಪಟ್ಟಣದಲ್ಲಿರುವ ಪೆರೂನಾ ಕಂಪನಿಗೆ—

ಕಳೆದ ಕೆಲವು ತಿಂಗಳಿಂದಲೂ ನಮ್ಮ ಕಾಯಿಲೆಯವರಿಗೂ ಬಡವರಿಗೂ ಪೆರೂನಾವನ್ನು ಪ್ರಯೋಗಮಾಡಿರುತ್ತೇವೆ. ಅದು ನಮಗೆ ತುಂಬಾ ತೃಪ್ತಿಯನ್ನುಂಟುಮಾಡಿರುತ್ತದೆಂದು ಸಂತೋಷವಾಗಿ ಹೇಳುವೆವು.

ಗುಡ್ ಷೆಪ್‌ಹರ್ಡ್ ಸಹೋದರಿಯರು, ಆಗೇಸ್ಟು ೨೦, ೧೯೦೩.

ಮಾಂಟ್ರೀಲ್.

ಈ ಆಸ್ಪತ್ರೆಯು ಬಹು ದೀರ್ಘಕಾಲ ಈ ಔಷಧವನ್ನು ಉಪಯೋಗಿಸುತ್ತಾ ಬಂದು ಅದರ ಗುಣದ ವಿಷಯದಲ್ಲಿ ತಮ್ಮ ಅಭಿಪ್ರಾಯವನ್ನು ಒಪ್ಪಲಾಯಿಸುವುದಕ್ಕೆ ಕಾರಣವನ್ನು ಕಾಣದೆ, ತಮ್ಮ ಸಂತೋಷದ ತೃಪ್ತಿಯನ್ನು ಕೆಳಗೆ ಮಾಂದೆ ಹೇಳುವ ಪ್ರಕಾರ ಬರೆದಿರುತ್ತಾರೆ —

ಮಾಂಟ್ರೀಲ್, ನೊವೆಂ. ೭, ೧೯೦೩.

ಪೆರೂನಾ ಅನೇಕ ರೋಗಿಗಳಿಗೆ ಸೌಖ್ಯಕೊಟ್ಟಿರುವುದನ್ನು ಕಂಡಿರುತ್ತೇವೆ. ಅದು ಒಳ್ಳೇ ಬಲಕಾರಿಯಾದ ಸೇವನೆಯ ಔಷಧವೆಂದು ಹೇಳಬಲ್ಲೆವು, ಮತ್ತು ಅದಕ್ಕಾಗಿ ನಾವು ನಿಮ್ಮನ್ನು ವಂದಿಸುತ್ತೇವೆ

ಗುಡ್ ಷೆಪ್‌ಹರ್ಡ್ ಆಸ್ಪತ್ರೆ ಸಹೋದರಿಯರು.

ಶೀತವು ಶರೀರದಲ್ಲಿ ಬೇರೂರಿತೆಂದರೆ ಅದನ್ನು ಗುಣಪಡಿಸುವುದು ತುಂಬಾ ಕಷ್ಟವಾದ್ದರಿಂದ

ಇದು ಶರೀರವನ್ನು ಹಿಡಿಯುವಂಥಾ, ದೇಹದ ಅಂಗಾಂಗಗಳಿಗೂ ವ್ಯಾಪಿಸುವಂಥಾ ಔಷಧವಿರುವುದರಿಂದ ಅದನ್ನು ಬಹಳ ಅಗತ್ಯವಾಗಿ ಉಪಯೋಗ ಮಾಡಬೇಕಾಗಿರುತ್ತದೆ.

ಪೆರೂನಾ ಅಂಥಾ ಒಳ್ಳೆಯ ಔಷಧವಾಗಿರುತ್ತದೆ. ಅದು ದೇಹದೊಳಗಿರುವ ಕಾಯಿಲೆಯ ಪ್ರದೇಶವನ್ನು ಹುಡುಕಿ ಹಿಡಿಯುವುದು ಒಳಚರ್ಮವನ್ನು ಗುಣಪಡಿಸಿ ಗಟ್ಟಿಮಾಡುವುದು. ಅದರಿಂದ ಶರೀರಸೌಖ್ಯವು ತಾನಾಗಿ ಹಿಂತಿರುಗಿ ಬರುತ್ತದೆ

ಶೀತದಿಂದ ಬಹಳ ಕಠಿಣವಾದ ಹಳೇರೋಗಗಳನ್ನು ಇಟ್ಟು ಇಲಾಜು ಮಾಡಿ ವಾಸಿಮಾಡಿದ ಅನೇಕ ಆಸ್ಪತ್ರೆಗಳ ಪೈಕಿ ಸೇಂಟ್ ಜಾನ್ ಎಂಬುದೂ ಒಂದಾಗಿರುತ್ತದೆ. ಈ ಆಸ್ಪತ್ರೆಯವರು ಬರೆಯುವುದನ್ನು ನೋಡಿ.—

'ನಿಮ್ಮ ಪೆರೂನಾವು ನನಗೆ ತುಂಬಾ ತೃಪ್ತಿಕರವಾಗಿದೆ ಎಂದು ತಿಳಿಸಲು ಸಂತೋಷವುಳ್ಳವಳಾಗಿದ್ದೇನೆ. ಮೂವರು ರೋಗಿಗಳು ಈ ಔಷಧವನ್ನು ಉಪಯೋಗಿಸಿದರು. ೬೮ ವರುಷ ವಯಸ್ಸಿನ ರೆನೋಯ ಡೂಪ್ರೋಯಿಸ್ ಎಂಬಾತನು ಶೀತಜ್ವರದಿಂದ ಬಹಳ ಕಷ್ಟಪಡುತ್ತಿದ್ದನು. ಈಗ ಅವನು ತುಂಬಾ ಸೌಖ್ಯವಾಗಿದ್ದಾನೆ. ಇಷ್ಟು ಒಟ್ಟಿಗೆ ಅವನು ಅನೇಕ ವರುಷಗಳಿಂದ ಆರೋಗ್ಯವಾಗಿರಲಿಲ್ಲ

"ಹದಿನೈದು ವರುಷದ ಒಬ್ಬ ಹುಡುಗಿಗೆ ಬಹು ಕಠಿಣವಾದ ಕೆಮ್ಮಲು ಹಿಡಿದಿತ್ತು. ಅವಳಿಗೆ ಪೆರೂನಾವನ್ನು ಅರ್ಧ ಶೀಸೆ ಕೊಡುವುದರಲ್ಲೇ ಆ ಕೆಮ್ಮಲು ಅದೃಶ್ಯವಾಯಿತು.

'ನನ್ನ ವಿಷಯವನ್ನು ಹೇಳುತ್ತೇನೆ. ಎರಡು ಬಾಟ್ಲಿ ಔಷಧವನ್ನು ತೆಗೆದುಕೊಳ್ಳುವಷ್ಟರಲ್ಲೇ ಪೆರೂನಾ ಬಹು ಅದ್ಭುತವಾದ ಬಲವನ್ನು ಕೊಡುವ ಔಷಧವೆಂದು ನನಗೆ ಪರಿಷ್ಕಾರವಾಗಿ ತಿಳಿದುಬಂದಿದೆ

"ಇದನ್ನು ಸೇವಿಸುವುದಕ್ಕೆ ಮುಂಚೆ ನಾನು ಕಾಲುಗಂಟೆ ಹೊತ್ತು ನಡೆಯುವುದಕ್ಕೂ ಆಗದೆ ಉಬ್ಬಸಬರುತ್ತಿತ್ತು. ಈಗ ನಾನು ಒಂದು ಮೈಲಿ ದೂರವಾದರೂ ಸುಲಭವಾಗಿ ನಡೆಯಬಲ್ಲೆನು.

"ಈ ಮೂರು ರೋಗಿಗಳ ಮೂಲಕ ನಿಮ್ಮ ಔಷಧವು ಬಹು ಫಲಕಾರಿಯಾದದ್ದೆಂದು ಸಕಲರಿಗೂ ತಿಳಿಯಪಡಿಸುತ್ತೇವೆ"

ಸೇಂಟ್ ಜಾನ್ ಆಸ್ಪತ್ರೆ, ಕ್ವೀಬೆಕ್

ವೇಲ್ಲಾಂಡ ಆಸ್ಪತ್ರೆಯಿಂದ ಈಚೆಗೆ ಬಂದಿರುವ ಕಾಗದವು ಈ ರೀತಿಯಾಗಿ ಹೇಳುತ್ತದೆ.—

"ಪೆರೂನಾವು ನಮಗೆ ಎಷ್ಟು ತೃಪ್ತಿಯನ್ನು ಕೊಟ್ಟಿತೋ ಮೂರು ವಾರಗಳ ಕೆಳಗೆ ನಿಮಗೆ ಬರೆದು ತಿಳಿಸಿರುತ್ತೇನೆ. ಅದನ್ನು ಶೀತ, ವಾತ, ಕೆಮ್ಮು, ಅರತಲೆ ನೋವು ಈ ಮೊದಲಾದ ರೋಗಗಳಿಗೆ ಪ್ರಯೋಗಮಾಡಬಹುದೆಂದು ಶಿಫಾರಸು ಮಾಡುತ್ತೇವೆ.

"ನಾನು ಅದನ್ನು ಶಕ್ತಿಪುಷ್ಟಿಗಾಗಿ ಸೇವಿಸಿರುತ್ತೇನೆ. ಅದರಲ್ಲಿ ಹೇಳಿರುವ ಪ್ರಕಾರ ಪ್ರತಿ ಅರ್ಧಗಂಟೆಗೂ ಅರ್ಧ ಚಮಚದಷ್ಟು ತೆಗೆದುಕೊಂಡೆನು"

ಮಿಸೆಸ್ ಎಟ್ಟಾ ಬೂಕರ್, ಡಂಡರ್ಕ್, ಸಾಸ್ಕ್, ಎನ್. ಡಬ್ಲ್ಯು ಟಿ, ಕೆನಡಾ ಈಕೆ ಬರೆಯುವುದೇನೆಂದರೆ.—

"ನಾನು ಕಿಬ್ಬೊಟ್ಟೆಯಲ್ಲಿ ಶೀತವಾಯುವಿನಿಂದ ಬಾಧೆಪಡುತ್ತಿದ್ದು, ಕಡೆಗೆ ಡಾಕ್ಟರ್ ಹಾರ್ಟ್‌ಮನ್‌ರವರಿಗೆ ಬರೆದು ಕೇಳಿದೆನು. ಅವರು ಹೇಳಿದ ಪ್ರಕಾರ ಔಷಧವನ್ನು ತೆಗೆದುಕೊಳ್ಳುತ್ತಾ ಬಂದೆನು. ಈಗ ಆ ಕಷ್ಟಕರವಾಗಿದ್ದ ಬಾಧೆಯು ನನಗೆ ನಿವಾರಣೆಯಾಗಿ ಸೌಖ್ಯವಾಗಿದ್ದೇನೆ. ಮತ್ತು ನಾನು ಅದಕ್ಕಾಗಿ ತುಂಬಾ ಕೃತಜ್ಞಳಾಗಿರುವೆನು. ಪೆರೂನಾವು ಶೀತವಾಯುವಿಗೆ ಸರ್ವೋತ್ತಮವಾದ ಔಷಧವೆಂದು ನಾನು ತಿಳಿದಿದ್ದೇನೆ. ಈಗ ನನಗಿರುವಷ್ಟು ದೇಹಸೌಖ್ಯವು ಹಿಂದೆ ಯಾವಾಗಲೂ ಇರಲಿಲ್ಲ"

ಪೆರೂನಾವು ಕೆಮ್ಮನ್ನು ಶೀತವಾತಗಳನ್ನೂ ಪ್ರಾರಂಭದಲ್ಲೇ ಬೇಗನೆ ಗುಣಮಾಡುವುದಲ್ಲದೆ ಬಹಳ ದೀರ್ಘಕಾಲದ ಶೀತವಾತ ರೋಗಗಳನ್ನೆಲ್ಲಾ ಚನ್ನಾಗಿ ವಾಸಿಮಾಡಬಲ್ಲದು

ಆದರೂ ರೋಗ ಹುಟ್ಟಿದ ಪ್ರಾರಂಭದಲ್ಲಿ ಬಹಳ ಸ್ವಲ್ಪ ಔಷಧವನ್ನು ಸೇವಿಸಿದ ಮಾತ್ರಕ್ಕೇ ಅದು ನಿವಾರಣೆಯಾಗುತ್ತದೆಂತಲೂ ರೋಗವು ಹಳದಾದ ಮೇಲೆ ಬಹಳ ಔಷಧವನ್ನು ಸೇವನೆ ಮಾಡಬೇಕಾಗುತ್ತದೆಂತಲೂ ನಾವು ಹೇಳಬೇಕಾದ ಅಗತ್ಯವಿಲ್ಲ

ಈ ಔಷಧ ಸಿಕ್ಕುವ ಸ್ಥಳಗಳು:—

(೧) ಹಿಚ್‌ಕಾಕ್ ಅಂಡ್ ಸನ್ಸ್, ಬೆಂಗಳೂರು.

(೨) ಇಂಗ್ಲಿಷ್ ಡಗ್ರ್ ಕಂಪನಿ, ೩೯೪ ಮಿಂಟ್ ಬೀದಿ, ಮದರಾಸ್.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ

17—5—1907 ರಿಂದ 24—5—1907 ರ ವ

ಸ್ಥಳ.	ಪ್ಲೇಗ್ ಹಗಲಿ ದ್ದು.	ಪ್ಲೇಗ್ ಸತ್ತದ್ದು	ಹಗ ದ್ದು
ಬೆಂಗಳೂರು ಪಟ್ಟಣ	0	0	18
ಮೈಸೂರು ,,	0	0	1
ಬೆಂಗಳೂರು ಡಿಸ್ಟ್ರಿಕ್ಟು	8	4	31
ಮೈಸೂರು ,,	161	128	22
ಕೋಲಾರ್ ,,	9	6	0
ಕೋಲಾರ್ ಚಿನ್ನದ ಗಣಿಗಳು	0	0	5
ತುಂಕೂರು ಡಿಸ್ಟ್ರಿಕ್ಟು	44	25	0
ಹಾಸನ ,,	68	56	0
ಚಿತ್ರದುರ್ಗ ,,	0	0	0
ಕಡೂರ್ ,,	0	0	14
ಶಿವಮೊಗ್ಗ ,,	0	0	2
ಜುಮ್ಲಾ	290	219	99

ಶಾಲಿವಾಹನ ಶಕ ವರುಷಂಗಳು ೧೮೨೯ ನೇ ಪ್ಲವಂಗನಾಮ ಸಂವತ್ಸರದ ವೈಶಾಖ ಬಹುಳ ಏಕಾದಶಿ ಗುರುವಾರದಿಂದ ಜ್ಯೇಷ್ಠ ಪಾಡ್ಯಮಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೭ ನೇ ಇಸವಿ ಜೂನ್.

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ
6	ಗುರು	‡ ಏಕಾದಶಿ	46-20	ರೇ	26 6
7	ಶುಕ್ರ	ದ್ವಾದಶಿ	46 36	ಶ್ವಿ	27-56
8	ಶನಿವಾ ¶	ತ್ರಯೋದಶಿ	48-14	ಭ	30-58
9	ರವಿವಾ †	ಚತುರ್ದಶಿ	51-16	ಕೃ	35 2
10	ಚಂದ್ರ .	ಅಮಾವಾ	55-18	ರೋ	40-10
11	ಕುಜ	ಪಾಡ್ಯ	60 0	ಮೃ	46-36
12	ಬುಧ *	ಪಾಡ್ಯ	5-18	ಆ	52-58

‡ ಸರ್ವತ್ರ ಏಕಾದಶಿ, ಯುವರಾಜರವರ ವರ್ಧಂತಿ.
¶ ಶನಿಪ್ರದೋಷ. † ಮಾಸಶಿವರಾತ್ರಿ.
ಪದ್ಮಕಯೋಗ, ಅನಾಸೋಮವ್ರತ
* ಚಂದ್ರಕಲ್ಪಿಜಯಂತಿ, ಚಂದ್ರೋದಯ.

ಪೇಟೆ ಧಾರಣೆ.

ದಿನಸಿ	ಮೈಸೂರು.	ಬೆಂಗಳೂರು
ಕಡ್ಡೀ ಅಕ್ಕಿ ಪಲ್ಲ ೧ಕ್ಕೆ	೧೨-೮-೦	೧
ಕಂಬೂತಿ ಅಕ್ಕಿ ಅವಲ್	೧೩-೪-೦	೧
,, ದುಯ್ಯಂ	೧೨-೮-೦	೧೨
ಜೂಬ್ರಾಣ ಅಕ್ಕಿ	೧೨-೮-೦	೧
ಸಣ್ಣಕ್ಕಿ ಅವಲ್	೧೫-೦-೦	೧
,, ದುಯ್ಯಂ	೧೪-೮-೦	೧
ತೊಗರೀ ಬೇಳೆ ಪಲ್ಲ ೧ಕ್ಕೆ	೧೩-೮-೦	೧
,, ದುಯ್ಯಂ	೧೨-೧೨-೦	೧
ಹೈ ರಾಗಿ ಪಲ್ಲ ೧ಕ್ಕೆ	೬-೮-೦	
ಕಾರ್ರಾಗಿ	೫-೮-೦	೫-
ಜೋಳ	೭-೮-೦	
ಹಲಸಂದೆ ಪಲ್ಲ ೧ಕ್ಕೆ	೧೧-೦-೦	೧
ಬಿಳೀ ಅವರೆ	೮-೪-೦	
ಹೆಸರು	೧೧-೮-೦	೧೧-
ಉದ್ದು	೧೨-೮-೦	೧
ಕಡಲೆ	೧೧-೮-೦	೧
ಎಳ್ಳು ಸೆ. ೧೨೩ ಕ್ಕೆ	೨೩-೮-೦	೨
ಹುರುಳಿ	೬-೬-೦	
ಹರಳು ೧೨೩ ಸೇರಿಗೆ	೧೫-೦-೦	೧೩
ಸೀಗೇಕಾಯಿ ಮಣ ೧ಕ್ಕೆ	೨-೯-೦	
ಮೆಣಸಿನಕಾಯಿ	೨-೪-೦	
,, ದುಯ್ಯಂ	೨-೮-೦	೨
ಬೆಲ್ಲ ದೊಡ್ಡ ಅಚ್ಚು	೩-೮-೦	ಮ
ಒಳ್ಳೆಣ್ಣೆ ಮಣ ೧ಕ್ಕೆ	೫-೬-೦	
ಹರಳೆಣ್ಣೆ ,,	೫-೮-೦	೫
ಕೊತ್ತುಂಬರಿ ಪಲ್ಲ ೧ಕ್ಕೆ	೬-೨-೦	
ಉಪ್ಪು ,,	೫-೩-೦	೫-
ಹುಣಸೇ ಹಣ್ಣು	೧-೬-೦	
,, ಹಳೇದು	೦-೧೯-೦	೦-
ತುಪ್ಪ ಮಣ ೧ಕ್ಕೆ	೧೫-೦-೦	೧
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ	೫-೦-೦	
ತೆಂಗಿನಕಾಯಿ ೧೦೦ ಕ್ಕೆ	೮-೮-೦	
ಅಳಲೇಕಾಯಿ ಮಣ ೧ಕ್ಕೆ	೧-೦-೦	
ಅಂಟುವಾಳದ ಕಾಯಿ ಮಣ ೧ಕ್ಕೆ	೦-೧೨-೦	೦-
ಚಿನ್ನ (ಪೌನ್) ಕೆಂಪು	೧೫-೪-೦	೧೫
,, ,, ಪಸಿಮೆ	೧೫-೧೧-೦	೧
,, ,, ಗಟ್ಟಿ ತೊಲ ೧ಕ್ಕೆ	೨೩-೧೬-೦	೨
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	೮೫-೦-೦	೮

Printed and Published by the Rev. E THOMPSON, M. A., Proprietor and Manager, Wesl Mission Press, Mysore 6/6/1907.

REGISTERED
M. 20.

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೧ ಮೈಸೂರು—ಸನ್ ೧೯೦೭ ನೇ ಇಸವಿ ಜೂನ್ ತಾರೀಖು ೧೩ ನೇ ಗುರುವಾರ. ಸಂಚಿಕೆ ೨

WILLIAM & CO., BOMBAY.

ವಿಲಿಯಂ ಮತ್ತು ಕಂಪನಿ, ಫೋರ್ಟು, ಮುಂಬಯಿ.

ಗಜಕರ್ಣದ ಮುಲಾಮು.

27-16

ಇದನ್ನು ಹಾಗಿಸುವದರಿಂದ ಎಲ್ಲಾ ತರದ ಕಜ್ಜಿಯು ನಾಶವಾಗುವದು. ಮೂರು ಸಾರಿ ಹಾಗಿಸುವದರೊಳಗೆ ಗಜಕರ್ಣವು ಹೋಗುವದು. ಇದನ್ನು ಹಚ್ಚಿದಲ್ಲಿ ಉರಿಯು ಬರುವದಿಲ್ಲ ಚರ್ಮ ಕಪ್ಪಾಗುವದಿಲ್ಲ.

ಇದರಿಂದ ಗುಣ ಕಂಡುಬರುವದಿಲ್ಲವಾದರೆ ಹಣ ಹಿಂತಿರುಗಿ ಕೊಡಲ್ಪಡುವದು. ತ್ವರೆಮಾಡಿರಿ! ಕೊಂಡುಕೊಳ್ಳಿರಿ!! ಕ್ರಯ ಕಮ್ಮಿ. ಒಂದು ಸಾರಿ ಪರೀಕ್ಷಿಸಿ ನೋಡಿರಿ!!! ಡಬ್ಬಿ ೧ಕ್ಕೆ ಕಿಮ್ಮತ್ತು ೦-೩-೦. ವಿ. ಪಿ. ೦-೧೦-೦.

ಅಮೃತಾಂಜನ

ಬಾಟ್ಲಿ ಒಂದಕ್ಕೆ ಕಿಮ್ಮತ್ತು ೮ ಆಣೆ. ವಿ. ಪಿ. ೧೨ ಆಣೆ.

ಜಲ ಮತ್ತು ಘಾಯ, ವಾತ, ಎದೆನೋವು, ಗಂಟ್ಲುನೋವು, ಶಿರೋಭಾರ, ಸಂಧಿವಾತ, ತಲೆನೋವು, ಮೂಲವ್ಯಾಧಿ, ಶೀತ, ಕೆಮ್ಮು, ಈ ಎಲ್ಲಾ ತರದ ರೋಗಕ್ಕೆ ಅಮೃತಾಂಜನವು ಒಂದು ದಿವ್ಯವಾದ ಔಷಧವಾಗಿರುತ್ತದೆ ಇದರಿಂದ ಗುಣ ಕಂಡುಬರುವದಿಲ್ಲವಾದರೆ ಹಣ ಹಿಂತಿರುಗಿ ಕೊಡಲ್ಪಡುವದು. ತ್ವರೆ ಮಾಡಿರಿ! ಮೂವತ್ತು ವರ್ಷದಿಂದ ಅನುಭವಿಸುವ ವಾತದ ನೋವು ನಿಮ್ಮ ಒಂದೇ ಬಾಟ್ಲಿ ಅಮೃತಾಂಜನದಿಂದ ಪೂರ್ಣವಾಗಿ ಗುಣ ಸಿಕ್ಕಿತು. ದಯಮಾಡಿ ೧೨ ಬಾಟ್ಲಿ ವಿ. ಪಿ. ಮೂಲಕ ರವಾನಿಸಿರಿ. ವೆ. ರಾಮಭಟ್ಟ, ವಿಟ್ಲ, ದ. ಕನ್ನಡ. ನಾನು ನನ್ನ ಸ್ನೇಹಿತರೂ ಅಮೃತಾಂಜನವನ್ನು ಬಹಳವಾಗಿ ಪ್ರೀತಿಸುತ್ತೇವೆ. ಸುರಾಜಪ್ರಸಾದ, ಪಂಜಾಬು ಅಮೃತಾಂಜನ ಕ್ಕಿಂತಲೂ ಹೆಚ್ಚು ಉಪಯೋಗವುಳ್ಳ ಮುಲಾಮು ಬೇರೆ ಯಾವದೂ ಇಲ್ಲ. ಗಂಗಾಸೇವಕ, ಕಲ್ಕತ್ತಾ. ಆರು ವರ್ಷದಿಂದ ವಾತಪೀಡಿತನಾದ ನನ್ನ ಗೆಳೆಯನಿಗೆ ಅಮೃತಾಂಜನವು ಜೀವದಾನ ಕೊಟ್ಟಿತು. ರಾಮಚಂದ್ರರಾವ್. ಅಮೃತಾಂಜನವು ಸಾವಿರಾರು ಜನರಿಗೆ ಗುಣಕೊಟ್ಟಿರುತ್ತದೆ. ವೀರಭದ್ರಪ್ಪ, ತುಮಕೂರು

ಸಂಜೀವನವ ಹಾಗಿರುವ ಅಮೃತಾಂಜನವನ್ನು ನನ್ನ ಮನೆಯಲ್ಲಿ ಸದಾಕಾಲ ಇಟ್ಟಿದ್ದೇನೆ ಹನುಮಯ್ಯ, ಬೆಂಗಳೂರು. ನಿಮ್ಮ ಅಮೃತಾಂಜನವು ಎಂಥಾ ಕಠಿಣವಾದ ತಲೆನೋವನ್ನಾದರೂ ನಿಲ್ಲಿಸುತ್ತದೆ ಗಂಗಣ್ಣರಾವ್, ಕೊಡಗು.

ಸುವರ್ಣ ತೈಲ ೪ ಆಣೆ. ವಜ್ರಗುಟಿಕ, ರೂಪಾಯಿ ೧ ದಂತಮಂಜನ ೩ ಆಣೆ. ನೇತ್ರಾಂಜನ ೪ ಆಣೆ. ಕಫಹಾರಿ ೧ ರೂ ೪ ಆ. ಕಸ್ತೂರಿ ಮಾತ್ರೆ ೧೦ ಆ. ಕೇಶವರ್ಧಿನೀ ತೈಲ ೧ ರೂ. ಅಜ್ಜೀರ್ಣಮುಲಾಮು ೩ ಆಣೆ ಕುಸುಮಾರಿ ಗುಟಿಕ ೧ ರೂ. ತಾಂಬೂಲ ಗುಟಿಕ ೪ ಆಣೆ.

ವಿಲಿಯಂ ಮತ್ತು ಕಂಪನಿ, ೧೯ ಓಕ್ ಲೇನ್, ಫೋರ್ಟು, ಮುಂಬಯಿ.

ಟೆಲಿಗ್ರಾಫು ಅಡ್ರೆಸು; "ಅಮೃತಾಂಜನ" ಮುಂಬಯಿ.

ವೈದ್ಯ ವೆಂಕಟಾಚಲ ಪಂಡಿತ, ಶ್ರೀಸೀತಾರಾಘವ ವೈದ್ಯಶಾಲಾ, ಕೊಳ್ಳೇಗಾಲ, ಇವರ ಸಿದ್ಧೌಷಧಗಳು.

23-17

೧. ಲೋಕಾಮಯಹರ ಕಸ್ತೂರೀ ಮಾತ್ರೆ.—ಈ ಮಾತ್ರೆಗಳನ್ನು ಪವಳಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ



ಚಳಿಜ್ವರ, ಜ್ವರ, ಹೊಟ್ಟೆ ಶೂಲೆ, ಸಂದುಗಳ ನೋವು, ಮೈ ಕೈಕಾಲು ಕೊಡತ (ಭಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿಮಾಂದ್ಯ, ತಲೆನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ.

ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತದೆ. ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಬಾಯಿಗೂ ರುಚಿಕೊಡುವದೆ, ನೀರು ಹವಾಗಳ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ.

ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ರೋಗಕ್ಕೆ ಗುರಿಯಾಗುವುದಿಲ್ಲ. ಒಳ್ಳೇ ರಕ್ತವರ್ಧಕವಾಗಿದೆ.

೨೦ ಮಾತ್ರೆಯುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು. ೧ ರಿಂದ ೧೨ ಕುಪ್ಪಿ ವರೆಗೆ ಪೋಸ್ಟೇಜು ೪ ಆಣೆ.

ವಿಳಾಸ:—ಎಸ್. ಎಸ್. ಆರ್. ವೈದ್ಯಶಾಲಾ, ಲಕ್ಷ್ಮೀವಿಲಾಸ ರೋಡ್, ಮೈಸೂರು.

ಶಾಲಾ ಪುಸ್ತಕಗಳು! ಶಾಲಾ ಪುಸ್ತಕಗಳು!!

54-4

		ರೂ.	ಆ.	ಪೈ.
ಗೌರ್ನ್ಮೆಂಟ್, ಕನ್ನಡ ಬಾಲಬೋಧೆ ೧ನೆಯ ಭಾಗ		೦	೧	೩
,,	,, ೨ನೆಯ ಭಾಗ	೦	೨	೩
ಮಾರ್ಸ್ಡೆನರವರ ಕನ್ನಡ ಮೊದಲನೆಯ ಪುಸ್ತಕ		೦	೨	೦
,,	,, ಎರಡನೆಯ ಪುಸ್ತಕ	೦	೨	೩
,,	,, ಮೂರನೆಯ ,,	೦	೩	೦
,,	,, ನಾಲ್ಕನೆಯ ,,	೦	೪	೦
,,	,, ಐದನೆಯ ,,	೦	೫	೦

ವಿಳಾಸ, ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

ಬಿಡಬೇಡಿರಿ. ನೋಡಿರಿ. ಬಿಡಬೇಡಿರಿ.

ಜೂಲೈ ಅಂತ್ಯದವರೆಗೆ.

ಯಜ್ಞೋಪವೀತ ಕೆಂಪು ಮತ್ತು ಹಾಜು ಕಲ್ಲು.

ಹಾಸನ ಊಲನ್ ದಾರ.

125-24

೩,೦೦೦ ಹಾಸನದ ಟೋಪಿ ಹೊಲೆಯುವ ಸುಪೀರಿಯರ್ ವೂಲನ್ ದಾರ ಮಾತ್ರ.

	ರೂ.	ಆ.	ಪೈ.
೧ ಟೋಪಿ ಆಗುವ ವೂಲನ್ ದಾರದ ಕ್ರಯ	೦	೪	೦
೧೦ ಟೋಪಿ ಆಗುವ ಒಂದು ಬಂಡಲ್ ದಾರದ ಕ್ರಯಕ್ಕೆ	೧೦	೦	೦
ಹಾಸನ ಟೋಪಿ ಹೊಲೆಯುವ ಕೊಕ್ಕೆ ಸೂಜಿ ೧ಕ್ಕೆ	೦	೧	೯
ಈ ದಾರದಲ್ಲಿ ಆದ ಟೋಪಿ ಡಜನ್ ೧ಕ್ಕೆ	೧೩	೩	೦

ವಿ. ಪಿ. ಯಿಂದಲೂ ರವಾನಿಸುತ್ತೇವೆ.

ವಿಳಾಸ—ಸಿ. ರಘುನಾಥ ಕಾಮತ್, ವೂಲನ್ ಮರ್ಚಂಟ್, ಬೋಳಾರ, ಮಂಗಳೂರು.

ಇಲ್ಲಿನೋಡಿ!

22-17

ತುಮಕೂರು ಡಿಸ್ಟ್ರಿಕ್ಟ ಇಲಾಖೆಯಲ್ಲಿ, ಯೂರೋಪಿಯನ್ ಮೇಲ್ವಿಚಾರಣೆಯಿಂದ, ಉತ್ತಮ ತರಹದ ಹಾಸನದ ಟೋಪಿಗಳು ಅತಿ ಶ್ರೇಷ್ಠವಾದ ಊಲ್‌ದಾರದಿಂದ ತಯಾರಾಗುತ್ತವೆ ಕ್ರಯ ೧೦ ಆಣೆ ಯಿಂದ ೧೮೦ ೧೨ ಆಣೆವರೆಗೂ ದೊರಕುವವು ಅಪೇಕ್ಷಿಸುವವರಿಗೆ ಕ್ರಯದ ಪಟ್ಟಿಯನ್ನು ರವಾನಿಸುವೆವು ವಿಳಾಸ:—ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಮಿಷನ್ ಇಲಾಖೆ, ತುಮಕೂರು.

೧೯೦೭ನೇ ಜುಲೈ ತಿಂಗಳ ಅಂತ್ಯದ ವರೆಗೆ.

ಹಾಸನದ ಟೋಪಿಗಳು.

57-3

ಒಳ್ಳೇ ಸಮಯ, ಬಿಡಬೇಡಿರಿ.

ಈ ಟೋಪಿಗಳಿಗೆ ಮೊದಲಿದ್ದ ಕ್ರಯ ಡಜನ್ ೧ಕ್ಕೆ ೧೧ ರೂಪಾಯಿ. ಈಗ ಮಾರುವ ಕ್ರಯ ಡಜನ್ ೧ಕ್ಕೆ ರೂಪಾಯಿ ೪—೮—೦. ವಿ. ಪಿ. ಯಿಂದಲೂ ಕಳುಹಿಸುತ್ತೇವೆ.

ವಿಳಾಸ:—ಸಿ. ರಘುನಾಥಕಾಮತ್, ಉಲನ್ ಮರ್ಚಂಟ್, ಬೋಳಾರ, ಮಂಗಳೂರು.

ಜ್ವರಹರಿ.

47-7



ಇದು ಸಾಧಾರಣ ಜ್ವರ, ಚಳಿಜ್ವರ, ಪೊರೇಜ್ವರ, ಪಿತ್ತಜ್ವರ ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್ ಟಿ ವೆಂಕಟಪತಿ ಅಯ್ಯರವರು:—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಬೀಸಿನ ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಅನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವ ಕಾರಣ ದಯವಿಟ್ಟು ಇನ್ನೊಂದು ೨೦ ಬೀಸಿನ ಸೀಸೆಯನ್ನು ವಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿವಾರೆ.

ಕ್ರಯ:—ಸೀಸೆ ೧ಕ್ಕೆ ೪ ಆಣೆ, ೧ ರೂ, ೧—೪ ರೂ., ರೂ ೨—೧೨ ಆ., ೧೧ ರೂ.; ಇನ್ನೂರದು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು

ಓಮಂಕರ್ಪೂರ

Omum Carpoor

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಶೂಲೆ ಹುಳಿತೇಗು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಜೊತೆಗೆ ಆಗುವಾಗ್ಯೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆವ್ಲಿಯ ಓಮ ಕರ್ಪೂರವನ್ನು ನಾನೂ ನನ್ನ ಹಾಬೇರಾರೂ ವ್ಯಾಸಿಸನಲ್ ಆಸ್ಪತ್ರೆಯಲ್ಲಿ ಅನೇಕ ಸಂಗಗಳಿಂದಲೂ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಸ್ಥರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧ ವೆಂಶ ಬರೆದಿದಾರೆ.

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಅಂಗಡಿಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಚಾರಿಸಿ:—

ಹೆವ್ಲಿಯುವ ಗ್ರೇಟ್ ಇಂಡಿಯಾ ಔಷಧಗಳ ಕಂಪೆನಿ, ಸೆಕೆಂಡ್ ಬೀಚ್ ಸ್ಟ್ರೀಟ್, ಮದ್ರಾಸ್

ಮಕ್ಕಳ ಆರೋಗ್ಯವನ್ನು

ಯಾವಾಗಲೂ ಕಾಪಾಡುವದು ಚಿತ್ತವರ ಮೇಲೆ ಬಿದ್ದ ಭಾರವಾಗಿದೆ

ಸಣ್ಣ ಮಕ್ಕಳು ಹೇಳಿದಂತೆ ಕೇಳದೆ ಸಿಟ್ಟಿಗೆ ಒಳಪಡುವಂಥವರಾಗಿದ್ದು ಆಹಾರರುಚಿ ಕಡಿಮೆಯುಳ್ಳವರಾಗಿದ್ದಾರೆಂದು ಕಂಡ ಕೂಡಲೇ

SCOTT'S EMULSION. 31-13

(ಸ್ಕಾಟ್ಸ್ ಇಮಲ್ಷನ್)

ಎಂಬೀ ಸೇವನಾ ಔಷಧವನ್ನು ಕೊಡಬೇಕು.

ಹಾಲಿನಲ್ಲಿ ಕೆಲವು ತೊಟ್ಟು ಬೆರಸಿ ಕೊಟ್ಟ ಕೂಡಲೇ ದೊಡ್ಡ ವ್ಯತ್ಯಾಸ ತೋರುವದು.

ಅದು ಸಂತೋಷವೂ ಆನಂದವೂ ಪಡುವದಾಗಿ ಆಹಾರದ ರುಚಿ ಹೊಂದಿ ಸುಖ) ಚೆನ್ನ ತೋರಿಸುವದು

ಕೈಯಿಂದ ಮುಟ್ಟ ತಯಾರಿಸಿದ್ದಲ್ಲ

ಎಲ್ಲಾ ಔಷಧವ್ಯಾಪಾರಿಗಳಲ್ಲಿ ಸಿಕ್ಕುತ್ತದೆ.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್

ಈ ಮೀನು ಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ

CHAMBERLAIN'S PAIN BALM

ಚೇಂಬರ್ಲಿನ್ ಯವರು ಮಾಡಿದ ನೋವುಹರ ಔಷಧವು

4 34



ಬೆನ್ನಲುಬಿನಲ್ಲಿನ ನೋವು, ಪಕ್ಕೆಗಳಲ್ಲಿ ಆಗುವ ನೋವು, ಖಂಡಗಳಲ್ಲಿ ಉಟ್ಟಿನ ನೋವು, ತಲೆನೋವು, ದಜ್ಜಿದ ಕಡೆಗಳ ನೋವು, ವಾಯುನೋವು ಇವುಗಳನ್ನೆಲ್ಲಾ ಸಂಪೂರ್ಣವಾಗಿ ವಾಸಿಮಾಡುವಂಥಾ ಔಷಧ ಯಾವುದೆಂದರೇನು?

ಕೀಲುಗಳಲ್ಲೂ ನರಕಟ್ಟುಗಳಲ್ಲೂ ಗಾಯವಾಗುವುದು, ಊದಿಕೊಳ್ಳುವುದು, ಕಾರಣವಾಗಿ ಕಳೆಯ ಖಂಡಗಳಲ್ಲಿ ಇರಿಯುವುದು, ವಿಶ್ರಾಂತಿಕೊಡದೆ ಇರುವುದು ನಿದ್ರೆ ಕೆಡುವ ಇರುವುದು—ಇವೇ ಇವೆಲ್ಲಾ ಚಿಹ್ನೆ ಯಾವಾಗ ಉಂಟಾಗುವುದೋ ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು

ಆಗ ಚೇಂಬರ್ಲಿನ್ ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹಾ ಕಾವು ಮೈಯೆಲ್ಲ ವ್ಯಾಪಿಸುತ್ತದೆ ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ ಮನಸ್ಸಿಗೆ ಉಲ್ಲಾಸ ... ಅದನ್ನೇ ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯು ಮನ ಕಟ್ಟನ್ನೇ ಕಿತ್ತು ಹಾಕಿಬಿಡುವುದು.

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ.

ಕೈಯಿಂದ ಮುಟ್ಟಿದ್ದೇನೂ ಅಲ್ಲ

ಇದು ಎಲ್ಲೆಲ್ಲೂ ಬಿಕರಿಯಾಗುತ್ತದೆ ಸಣ್ಣ ಸೀಸೆಗೆ ೧ ರೂಪಾಯಿ ದೊಡ್ಡ ಸೀಸೆಗೆ ೨ ರೂಪಾಯಿ

SCHOOL BOOKS! SCHOOL BOOKS!!

56-3

	Rs	A	P
New English Readers Primer I	0	2	6
Primer II	0	2	6
New English First Reader	0	4	0
Second	0	6	0
Third	0	8	0
Fourth	0	10	0
Fifth	0	12	0
Sixth	0	12	0
Primer of English Grammar	0	1	0
Manual of English Grammar	0	6	0
The Way to Health	0	2	0
Arithmetical Primer	0	2	6
Primer of Geography	0	5	0
Manual of Geography	0	14	0
Chemistry Notes by Romills H. Ingram	1	0	0

Apply to—

THE MANAGER

C. L. S. Book Depot

Mysore City

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿ ಕೊಳ್ಳಿ.

11-20

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾತ್ರ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೀಳಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು. (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸತಕ್ಕವು ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ನೇರಾ ಬರೆದು ತರಿಸಿಕೊಳ್ಳಿ. ಅನ್ಯರಿಂದ ... ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ

ಸಾದಾ, ಕೆಂಪು, ಕಪ್ಪು, ಬಿಳಿ, ಕಾಫಿ ಟೋಪಿಗಳು ೧ ರೂ ... ೧ ರೂ ೬ ಆ, ೧ ರೂ ೪ ಆ

ರೇಷ್ಮೆ ಪಟ್ಟಿಯುಳ್ಳ ಟೋಪಿಗಳು ೧ ರೂ ೮ ಆ, ...

ದಾರದ ಟೋಪಿಗಳು ೧ ರೂ ೧೦ ಆ, ೧ ರೂ ೮ ಆ, ...

ಉಸುಕಿನ ಟೋಪಿಗಳು ೧ ರೂ ೮ ಆ, ೧ ರೂ ೬ ಆ

ಹುಡುಗರ ಟೋಪಿ, ಸೂಜಿ ಮೇಜೋಡು, ಅರ್ಧ ಮೇಜೋಡು ಕಸ್ತೀನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ

ಇದಕ್ಕೆ ಸಮಾನವಾದ ಪುಸ್ತಕ ಉಂಟೋ?

ಕನ್ನಡ ಭಾಷೆಯಲ್ಲಿ ಇದುವರಿವಿಗೂ ಇಂಥಾ ಸೊಗಸಾದ ಪುಸ್ತಕವು ಪ್ರಚುರವಾಗಲಿಲ್ಲ, ಸ್ವಲ್ಪ ನೋಡಿ.

"ಹಿಂದೂದೇಶ ಪ್ರದಕ್ಷಿಣ"

ಎಂದು ಕರೆಯಲ್ಪಡುವ ಈ ನೂತನ ಪುಸ್ತಕದಲ್ಲಿ ಸುಮಾರು ತೊಂಬತ್ತು ಉತ್ಕೃಷ್ಟವಾದ ಚಿತ್ರಗಳು ಅಡಗಿವೆ ಹಿಂದೂ ದೇಶವನ್ನೆಲ್ಲಾ ಸಂಚಾರ ಮಾಡುವದರಿಂದ ಉಂಟಾಗುವ ಪರಮಾನಂದವನ್ನು ಒಂದು ಸಾರಿ ಈ ಗ್ರಂಥವನ್ನು ಓದುವದರಿಂದ ಹೊಂದಬಹುದು. ಇದು ಮೊದಲನೇ ಸಾರಿ ಪ್ರಿಂಟ್ ಆಗಿದ್ದು ಬಹು ಶೀಘ್ರವಾಗಿ ಎಲ್ಲಾ ಮುಗಿದು ಹೋದವು ಈಗ ತಿರಿಗಿ ವಿಚಿತ್ರವಾಗಿಯೂ ಉಲ್ಲಾಸಕರವಾಗಿಯೂ ಇರುವ ಪ್ರಸಿದ್ಧವಾದ ಚಿತ್ರಗಳೊಡನೆ ಮಾಡಿಸಿರುತ್ತೇವೆ ಇದರಲ್ಲಿರುವ ಚಿತ್ರಗಳನ್ನು ಸ್ವಲ್ಪ ನೋಡಿ—ಶ್ರೀರಂಗಪಟ್ಟಣದಲ್ಲಿರುವ ಹೈದರಲ್ಲಿ ಟಿಪ್ಪುಸುಲ್ತಾನರ ಗೋರಿ, ಹುಮಾಯೂನನ ಗೋರಿ ಹುಗ್ಲಿ ನದಿ, ಕಲ್ಕತ್ತ ನಗರ, ಕಲ್ಕತ್ತಾ ಹೈಕೋರ್ಟು, ಕಾಳಿಕಾದೇವತೆ ಚಂದ್ರನಗರ, ಬಂಗಾಳಿಯರ ಮನೆಗಳು, ಜಗನ್ನಾಥಸ್ವಾಮಿ ಭುವನೇಶ್ವರವೆಂಬ ದೇವಸ್ಥಾನ, ಜಗನ್ನಾಥದ ರಥೋತ್ಸವ, ಕನಡಾಕ್ ದೇವಸ್ಥಾನ, ಎವರೆಸ್ಟ್ ಶಿಖರ, ಖಟ್ಮಂಡು ನಗರದ ಒಂದು ಬೀದಿ, ಖಟ್ಮಂಡು ನಗರದ ದೇವಸ್ಥಾನಗಳು, ದಿವಚಕ್ರಗಳು, ಅಂಬಿಗರು ದೋಣಿಯನ್ನು ಎಳಕೊಂಡು ಹೋಗುವದು, ಗಯಾದಲ್ಲಿರುವ ಬುದ್ಧನ ದೇವಸ್ಥಾನ, ಔರಂಗಜೇಬನು ಕಟ್ಟಿಸಿದ ಮಸೀತಿ, ಕಾಶೀ ಕ್ಷೇತ್ರದಲ್ಲಿರುವ ದಶಾಶ್ವಮೇಧಘಟ್ಟ, ಕಪಿಗಳಿಗೆ ತಿಂಡಿ ಹಾಕುವದು, ಕಾಶೀ ಕ್ಷೇತ್ರದ ದೇವಸ್ಥಾನಗಳು, ಅಲಹಾಬಾದ್ ನಗರ ಮತ್ತು ಅದರ ಕೋಟೆ, ಅಲಹಾಬಾದ್‍ನಲ್ಲಿರುವ ಖುಸ್ರು ಬಾಗ್ ಅರಮನೆ, ಯಮುನಾ ನದಿಯಲ್ಲಿ ಯಾತ್ರಿಕರು ಮುಳುಗುವದು, ಕಾನ್ಪುರದಲ್ಲಿರುವ ಶಿಲಾ ಶಾಸನ, ಕಾನ್ಪುರದ ಹತ್ತಿರ ಗಂಗಾ ನದಿಯ ಮೇಲೆ ಕಟ್ಟಿರುವ ಸೇತುವೆ, ಲಕ್ನೋ ನಗರದ ರೆಸಿಡೆನ್ಸಿ ಬಂಗಲೆ, ಲಕ್ನೋ ಪಟ್ಟಣದ ಬಾಗಿಲು, ಸರ್ ಹೆನ್ರಿ ಲ್ಯಾವಲ್ಲೀಕನು, ಗೋಮತಿ ನದಿಯ ಮೇಲಿರುವ ಅರಮನೆ, ಕ್ಷಾಮದಲ್ಲಿ ಜನರ ಸ್ಥಿತಿ, ಹರಿದ್ವಾರಘಟ್ಟ, ಗಂಗೋತ್ರಿ ದೇವಸ್ಥಾನ, ಹಿಮಪರ್ವತಗಳ ಮೇಲಿರುವ ಪಟ್ಟಣ, ಹಿಮಪ್ರವಾಹಗಳು, ಆಗ್ರಾ ಪಟ್ಟಣದ ಕೋಟೆ, ಯಮುನಾ ನದಿಯೂ ದೂರದಲ್ಲಿ ತೋರುತಿರುವ ತಾಜ್‍ಮಹಲ್ ಗೋರಿಯೂ, ತಾಜ್ ಮಹಲಿನ ಕಲ್ಲಿನಲ್ಲಿ ಕೆತ್ತಿರುವ ಧರದೆ, ಅಕ್ಬರನ ಅರಮನೆ, ಆಗ್ರಾ ಪಟ್ಟಣದ ಮುತ್ತಿನ ಮಸೀತಿ, ಫತ್ತೆಪುರ್ ಸಿಕ್ರಿಯಲ್ಲಿರುವ ಪಾಂಚ್ ಮಹಾಲ್ ಅರಮನೆ, ರಜಪೂತರು, ಭರತಪುರದ ಕೋಟೆ, ಅಲ್ವಾರಿನಲ್ಲಿ ಮಹಾರಾಜ ಭಕ್ತಾವರ್ ಸಿಂಗರ ಗೋರಿ, ದೆಹಲಿ ನಗರದ ದೊಡ್ಡ ಮಸೀತಿ, ಪುರಾತನ ದೆಹಲಿಯ ಬಾಗಿಲು, ರಾಜ ದೇವನು ಸ್ಥಾಪಿಸಿದ ಕಬ್ಬಿಣದ ಸ್ತಂಭ, ನಾದರ್ ಷಹಾನು ದೆಹಲಿ ನಗರದಲ್ಲಿ ಜನ ಸಂಹಾರವನ್ನು ನೋಡುತ್ತಿರುವದು, ದೆಹಲಿಯ ಬಳಿಯಲ್ಲಿರುವ ಕುತುಬ್ ಮಿನಾರ್, ಚಾಂದ್ನಿ ಚೌಕವೆಂಬ ಬೀದಿ, ಸಿಂಲಾಕ್ಕೆ ಹೋಗುವ ದಾರಿ, ಸಿಮ್ಲಾ, ಅಮೃತಸರದ ಸುವರ್ಣಾಲಯವು, ಲಾಹೋರಿನಲ್ಲಿರುವ ರಣಜಿತಸಿಂಗನ ಗೋರಿ, ಲಾಹೋರ್ ಪಟ್ಟಣ ಈ ಮುಂತಾದ ಅನೇಕ ರಮಣೀಯವಾದ ಸ್ಥಳಗಳ ಚಿತ್ರಗಳು ಈ ಪುಸ್ತಕದಲ್ಲಿ ಅಡಗಿವೆ ಅವುಗಳನ್ನೆಲ್ಲಾ ವಿವರಿಸಲು ಸ್ಥಳವಿಲ್ಲ

ಪ್ರತಿಯೊಂದು ಅಂಶದ ವಿವರಣೆಯೂ ಬಹು ಪರಿಷ್ಕಾರವಾಗಿದೆ. ದಕ್ಷಿಣ ದೇಶದಲ್ಲಿರುವ ಅನೇಕ ಪ್ರಸಿದ್ಧ ಸ್ಥಳಗಳ ಚಿತ್ರಗಳೂ, ಅವುಗಳ ವಿವರಣೆಗಳೂ ಇದರಲ್ಲಿವೆ. ಪುಸ್ತಕದ ಛಾಪೆಯಾಗಿದೆ ಪುಸ್ತಕದ ಅಚ್ಚು ಮತ್ತು ಬೈಂಡು ಬಹು ಸುಂದರವಾಗಿವೆ ಇದರ ಕ್ರಯ ಎಂಟೇ ಆಣೆ, ವಿ ಪಿ ಪಿ ಮೂಲಕ ಕನ್ನೊಂದು ಆಣೆಯಾಗುವದು ಪುಸ್ತಕ ಜಾಗ್ರತೆಯಲ್ಲಿ ಮಾರಾಟವಾಗುತ್ತಿದೆಯಾದ್ದರಿಂದ ತಾವುಗಳಲ್ಲಾ ಈಗಲೇ ವಿಳಾಸಕ್ಕೆ ಬೇಗನೆ ಬರೆದು ತರಿಸಿಕೊಳ್ಳಬೇಕು.

ಮ್ಯಾನೇಜರ್, ಸಿ ಎಲ್. ಎಸ್. ಬುಕ್ ಡಿಪ್ಪೋ, ಮೈಸೂರು 18-6

ನಿಮಗೆ ನೋವು ಇದೆಯೋ?

53

ಹಾಗಾದರೆ "ಕ್ಲೆನೆಂಟ್ ಯವರ ಪ್ಯಾಟೆಕ್ ಬಾಂ" ನ್ನು ಏಕೆ ಉಪಯೋಗಿಸಬಾರದು? ಆಶ್ಚರ್ಯಕರವಾದ ಬಾಧಾಪಹಾರಿಣಿಯು! ಈಗಿನ ಶತಮಾನದಲ್ಲಿ ಕಂಡು ಹಿಡಿದ ದೊಡ್ಡ ನೂತನವು!

ಈ ರಾಜ ಔಷಧವನ್ನು ಮೊಟ್ಟಮೊದಲು ತೊಡೆಯುತ್ತಲೆ ಕೆಲವು ನಿಮಿಷಗಳೊಳಗಾಗಿ ನರ ಮತ್ತು ಮಾಂಸ ಸಂಬಂಧವಾದ ಪ್ರಾಚೀನ ನೋವು, ಕೀಲುಗಳ ಬಾಧೆ ಕಿತ್ತುಬಿಟ್ಟ ನೋವು, ಬೆನ್ನೆಲುಬಿನ ಉಳುಕು, ತಲೆನೋವು, ಕೆಮ್ಮು, ಕೀಲುಗಳು ಕತ್ತರಿಸುವದು, ಕೊರಳು ಊತ, ಕೈಕಾಲು ಒಡೆತ ಇವುಗಳನ್ನೆಲ್ಲಾ ವಿದ್ಯುಚ್ಛಕ್ತಿಯಂತೆ ಗುಣಪಡಿಸುವದು ಈ ಔಷಧವು ಆಶ್ಚರ್ಯಕರವಾಗಿ ಗುಣಪಡಿಸುವದರಿಂದ ಎಲ್ಲರಲ್ಲಿಯೂ ಪ್ರಸರಿಸುತ್ತ ಬರುವದು ಇತರ ಔಷಧಿಗಳು ಗುಣಪಡಿಸದೆ ಹೋದಾಗ ಪಾಕ್ಟರ್ ಫೀಜನ್ನು ಕಡಿಮೆಮಾಡಿ ಇದು ನಿಸ್ಸಂದೇಹವಾಗಿಯೂ ಗುಣಪಡಿಸುವದು

ಕ್ರಯ —೧ ಬಾಟ್ಲಿಗೆ ೧೨ ಆಣೆ, ಪೋಸ್ಟೇಜ್ ೪ ಆಣೆ ೩ ಬಾಟ್ಲಿಗೆ ಅಂಚೆವೆಚ್ಚ ಸೇರಿ ೨ ರೂ —೪ ಆಣೆ. ಎಲ್ಲಾ ಕೆಮಿಸ್ಟ್ ಷಾಪುಗಳಲ್ಲಿ ದೊರೆಯುವದು

ನಮ್ಮ ವಿಳಾಸ —ಎಫ್ ಡಬ್ಲಿಯು. ಆರ್ಕ್, ಸಿಮೆಟ್ರಿ ರೋಡ್, ವೇಪೇರಿ, ಮದರಾಸ್.

ವ್ಯವಹಾರ ನಿರ್ಣಯ

ಹೊಸ ಕನ್ನಡ **ಲಾ** ಪುಸ್ತಕವು

1 715

ಲಾ ತಿಳಿದವರಿಂದಲೂ, ತಿಳಿಯದವರಿಂದಲೂ ಇದುವರೆಗೆ ಬರೆಯಲ್ಪಟ್ಟಿರುವ ಈ ತೆರದ ಪುಸ್ತಕಗಳನ್ನೆಲ್ಲಾ ನೋಡಿ ಅವೆಲ್ಲಕ್ಕಿಂತಲೂ ಹೆಚ್ಚು ಪ್ರಯೋಗವನ್ನು ಇದೊಂದು ಪುಸ್ತಕದಿಂದುಂಟುಮಾಡಬೇಕೆಂದು ಈ ದೊಡ್ಡ ಗ್ರಂಥವು ಹೊಸದಾಗಿ ಬರೆಯಲ್ಪಟ್ಟಿದೆ ಇದರಲ್ಲಿ ೧೩ ಆಕ್ಟುಗಳು, ೪ ಶೆಡ್ಯೂಲುಗಳು, ಹಿಂದೂ, ಮಹಮ್ಮದೀಯ ಲಾಗಳು, ಚೀಫ್ ಕೋರ್ಟ ಹೈ ಕೋರ್ಟುಗಳ ತೀರ್ಮಾನಗಳು, ಗವರ್ನ್ಮೆಂಟ್ ಸರ್ಕ್ಯುಲರ್‍ಗಳು ಪ್ರೊಸೀಡಿಂಗ್ಸ್‍ಗಳು, ಸಕಲ ವಿಧ ವ್ಯವಹಾರಗಳು, (ಕ್ರಯ ಆಧಾರ ದಾನ ಪಿಲ್ಲು ಮೊದಲಾದ) ೭೯ ತೆರದ ದಸ್ತಾವೇಜುಗಳ ನಮೂನೆಗಳು, ಈ ಸಂಬಂಧದ ಲಾ ವಿಧಿಗಳು, ಸಿವಲ್ ಕ್ರಿಮಿನಲ್, ಪೋಲೀಸ್, ರೆವಿನ್ಯೂ ಸಂಬಂಧದ ವ್ಯಾಜ್ಯಗಳು, ೭೯ ತೆರದ ಅರ್ಜಿಗಳು, ಈ ಸಂಬಂಧದ ಲಾ ವಿಧಿಗಳು, ಇವೆಲ್ಲವೂ ಅಡಕವಾಗಿವೆ.

ಪುಸ್ತಕ ದೊಡ್ಡದು. ಪುಟಗಳು ಒಟ್ಟು ೪೭೪	ಬೆಲೆ ಕಡಿಮೆ ಅಂಚೆ ಹಾಸಲು ಸೇರಿ ರೂ ೧—೮—೦

ಗ್ರಂಥಕರ್ತರು | ಎಂ ಮಲ್ಲಾರಾಧ್ಯರು, ಸೆಕೆಂಡ್ ಪ್ಲೀಡರ್, ಶೇಷಾದ್ರಿಪುರಂ, ಮೈಸೂರು } ಇವರ ವಿಳಾಸ

ವೃತ್ತಾಂತ ಪತ್ರಿಕೆ.

ಸನ್ ೧೯೦೭ ನೇ ಇಸವಿ ಜೂನ್ ತಾ॥ ೧೩ ನೇ ಗುರುವಾರ

ಹಿಂದುಸ್ಥಾನದ ರಾಜ್ಯಭಾರವೂ, ಮೆ। ಜಾನ್ ಮಾರ್ಲಿಯವರ ಭಾಷಣವೂ.

ಹಿಂದುಸ್ಥಾನದ ಜಮಾಖರ್ಚಿನ ಅಂದಾಜಾ ಪಟ್ಟಿ (ಬಜೆಟ್) ಯನ್ನು ವರುಷಕ್ಕೊಂದುಸಲ ವಿಲಾಯತಿಯ ಪಾರ್ಲಿಮೆಂಟಿನಲ್ಲಿ ವಿವರಿಸಿ ಹೇಳುವುದೂ, ಅದೇ ಸಮಯದಲ್ಲಿ ಈ ರಾಷ್ಟ್ರಕ್ಕೆ ಸಂಬಂಧಪಟ್ಟ ವಿಶೇಷವಾದ ರಾಜಕೀಯ ವಿಷಯಗಳೇನಾದರೂ ಇದ್ದಲ್ಲಿ ಅವನ್ನು ಸೂಚಿಸಿ ಚರ್ಚೆಗೆ ತರುವುದೂ ವಾಡಿಕೆಯಾಗಿದೆ. ಅದರಂತೆ ಇಂಡಿಯಾ ಸ್ಟೇಟ್ ಸೆಕ್ರೆಟರಿಯವರಾದ ಮೆ। ಜಾನ್ ಮಾರ್ಲಿಯವರು ಕಳೆದ ಗುರುವಾರದ ದಿನ ಪಾರ್ಲಿಮೆಂಟಿನಲ್ಲಿ ಹಿಂದುಸ್ಥಾನದ ಆದಾಯವ್ಯಯಗಳನ್ನು ತಿಳಿಸಿರುತ್ತಾರೆ ಅವರು ಏನು ಹೇಳುವರೋ ನೋಡಬೇಕೆಂದು ಎಲ್ಲರೂ ಬಹು ಆತುರದಿಂದ ನಿರೀಕ್ಷಿಸಿಕೊಂಡಿದ್ದರು. ಯಾಕೆಂದರೆ ಈಚೆಗೆ ಹಿಂದುಸ್ಥಾನದಲ್ಲಿ ಕೆಲವು ಗಲಭೆಗಳೂ ಅಕ್ರಮ ಕಾರ್ಯಗಳೂ ನಡೆದಿರುತ್ತವೆ. ಮತ್ತು ಇಲ್ಲಿನ ರಾಜಕೀಯ ವಿಚಾರದಲ್ಲಿ ಕೆಲವು ಬದಲಾವಣೆಗಳನ್ನು ಮಾಡುತ್ತಾರೆಂಬ ನಿರೀಕ್ಷೆಯೂ ಇದ್ದಿತು. ಅದಕಾರಣ ಈಗ ವಿಲಾಯತಿಗೆ ಹೋಗಿರುವ ಕೆಲವು ಹಿಂದುಸ್ಥಾನದ ದೊಡ್ಡ ಮನುಷ್ಯರು

...ಹಜರೇ ಮುಂತಾದವರೂ ಆ ದಿನ ಪಾರ್ಲಿಮೆಂಟಿಗೆ ಹೋಗಿ ಅಲ್ಲಿ ನಡೆಯತಕ್ಕ ಸಂಗತಿಗಳನ್ನು ಬಹು ಆತುರದಿಂದಲೂ ಉತ್ಸಾಹದಿಂದಲೂ ನೋಡುತ್ತಿದ್ದರು.

ಪಂಜಾಬಿನಲ್ಲಿ ಗಲಭೆಯನ್ನುಂಟುಮಾಡಿದ್ದ ಇಬ್ಬರನ್ನು ಇಂಡಿಯಾ ಗವರ್ನಮೆಂಟಿನವರು ಹಿಡಿದು ಗಡೀಪಾರು ಮಾಡಿದರಷ್ಟೆ. ಈ ವಿಷಯದಲ್ಲಿ ಮ|| ಮಾರ್ಲೀಯವರು ಕೂಡಲೇ ಹೇಳಿರುವುದನ್ನೇ ಅಂದರೆ ಗವರ್ನಮೆಂಟಿನವರು ಅವರನ್ನು ನ್ಯಾಯಸ್ಥಾನದಲ್ಲಿ ನಿಲ್ಲಿಸಿ ದರ್ಯಾಫ್ತಿ ಮಾಡಿಸುವುದಕ್ಕಾಗುವುದಿಲ್ಲವೆಂದು ಹೇಳಿಬಿಟ್ಟರು ಮತ್ತು ಇಂಗ್ಲಿಷ್ ಕಲಿತು ಗಲಭೆಯನ್ನುಂಟುಮಾಡುತ್ತಿರುವವರಿಗೆ ಹಿಂದುಸ್ಥಾನದ ಅಪಾರವಾದ ರಾಜ್ಯಭಾರಕಾರ್ಯವನ್ನು ನಿರ್ವಹಿಸುವ ಶಕ್ತಿಸಾಮರ್ಥ್ಯಾದಿಗಳು ಸಾಲವೆಂತಲೂ ಇಂಗ್ಲಿಷ್ ಪ್ರಭುಗಳು ಇಲ್ಲಿನ ರಾಜ್ಯಭಾರವನ್ನು ಬಿಟ್ಟುಹೋಗುವುದಾದರೆ ಈ ರಾಷ್ಟ್ರದಲ್ಲಿ ಗಲಭೆಗಳೂ ಕದನಗಳೂ ರಕ್ತಪ್ರವಾಹಗಳೂ ಸಂಭವಿಸುವುದಕ್ಕೆ ಮಾರ್ಗವಾಗುತದೆಂತಲೂ ಗವರ್ನಮೆಂಟಿನವರು ತಿಳಿದುಕೊಂಡಿರುತ್ತಾರೆಂದೂ ಹೇಳಿದರು.

ಹಿಂದುಸ್ಥಾನದ ರಾಜ್ಯಭಾರದ ವಿಷಯದಲ್ಲಿ ನಡೆಯತಕ್ಕ ಬದಲಾವಣೆಗಳನ್ನು ಕುರಿತು ಮಿ|| ಮಾರ್ಲೀಯವರು ಹೇಳಿರುವುದೇನೆಂದರೆ—(೧) ಹಿಂದುಸ್ಥಾನದಲ್ಲಿ ಕೆಲವು ರಾಜರುಗಳನ್ನೂ ಭಾರೀ ಜಮೀನ್ದಾರರುಗಳನ್ನೂ ಸೇರಿಸಿ ಒಂದು ದೊಡ್ಡ ಸಭೆಯನ್ನು ಕಲ್ಪಿಸುವರು. ಈ ಸಭೆಯವರು ಗವರ್ನಮೆಂಟಿನವರಿಗೂ ಪ್ರಜೆಗಳಿಗೂ ಮಧ್ಯವರ್ತಿಗಳಾಗಿದ್ದುಕೊಂಡು, ಗವರ್ನಮೆಂಟಿನವರ ಕಾರುಬಾರುಗಳನ್ನು ಪ್ರಜೆಗಳಿಗೂ ಪ್ರಜೆಗಳ ಕಷ್ಟಸುಖ ಇಂಗಿತಾದಿಗಳನ್ನು ಗವರ್ನಮೆಂಟಿನವರಿಗೂ ತಿಳಿಯಪಡಿಸುವರು. (೨) ವೈಸ್‌ರಾಯಿಯವರ ಮಂತ್ರಾಲೋಚನಾ ಸಭೆಯಲ್ಲೂ, ಅವರ ಅಧೀನಕ್ಕೊಳಪಟ್ಟ ಬೇರೆ ಬೇರೆ ಆಧಿಪತ್ಯಗಳ ಗವರ್ನರ್ ಮತ್ತು ಲೆಫ್ಟಿನೆಂಟ್ ಗವರ್ನರುಗಳ ಮಂತ್ರಾಲೋಚನಾ ಸಭೆಗಳಲ್ಲೂ ಪ್ರಜೆಗಳ ಪಕ್ಷವನ್ನು ವಹಿಸಿರತಕ್ಕ ಕಾಲೇಯ ಮೆಂಬರುಗಳ ಸಂಖ್ಯೆಯನ್ನು ಈಗಿರುವುದಕ್ಕಿಂತಲೂ ತಕ್ಕಮಟ್ಟಿಗೆ ಹೆಚ್ಚು ಮಾಡಿ, ಇನ್ನೂ ಕೆಲವು ಪ್ರಜಾಪ್ರತಿನಿಧಿಗಳನ್ನು ಹೊಸದಾಗಿ ನೇಮಿಸುತ್ತಾರೆ. ಆದರೂ ಆ ಸಭೆಗಳಲ್ಲಿ ಸರ್ಕಾರಿ ಮೆಂಬರುಗಳ ಸಂಖ್ಯೆಯನ್ನು ಹೆಚ್ಚಾಗಿಯೇ ಇಟ್ಟುಕೊಳ್ಳುವರು. (೩) ವಿಲಾಯತಿಯಲ್ಲಿ ಸ್ಟೇಟ್ ಸೆಕ್ರೆಟರಿಯವರ ಸಹಾಯಾರ್ಥವಾಗಿ ಇಂಡಿಯಾ ಕೌನ್ಸಿಲ್ ಎಂಬ ಒಂದು ಸಭೆ ಇರುತ್ತದೆ. ಈ ಸಭೆಯಲ್ಲೂ ಹಿಂದುಸ್ಥಾನದ ಇಬ್ಬರು ದೊಡ್ಡ ಮನುಷ್ಯರನ್ನು ಚುನಾಯಿಸಿ ಮೆಂಬರುಗಳಾಗಿರುವಂತೆ ನೇಮಕಮಾಡುತ್ತಾರೆ. ಇಷ್ಟೇ ಅಲ್ಲ, ಹಿಂದುಸ್ಥಾನದ ಸೈನ್ಯಕ್ಕೆ ಇಂಡಿಯಾ ಗವರ್ನಮೆಂಟಿನವರು ವರುಷೇ ವರುಷ ಖರ್ಚುಮಾಡುತ್ತಿರುವ ಹಣವನ್ನು ವಿಲಾಯತಿ ಗವರ್ನಮೆಂಟಿನವರು ಎಷ್ಟುಮಟ್ಟಿಗೆ ವಹಿಸಿಕೊಂಡು ಕೊಡಬಹುದು ಎಂಬೀ ವಿಚಾರವನ್ನು ನಿರ್ಧರಿಸುವುದಕ್ಕಾಗಿ ಗವರ್ನಮೆಂಟಿನವರು ಮೂರು ಮಂದಿ ಕಮಿಷನರ್ ಜಡ್ಜಿಗಳನ್ನು ನೇಮಿಸುವವರಾಗಿದ್ದಾರೆ.

ಮೇಲ್ಕಂಡ ವಿಚಾರಗಳು ಪಾರ್ಲಿಮೆಂಟಿನಲ್ಲಿ ಚರ್ಚಿಸಲ್ಪಡುವಾಗ ಗವರ್ನಮೆಂಟ್ ಪಕ್ಷದವರೂ ಅವರ ಪ್ರತಿಪಕ್ಷದವರೂ ಏಕವಾಕ್ಯತೆಯಿಂದ ಹಿಂದುಸ್ಥಾನದಲ್ಲಿ ಪ್ರಜಾಸೌಖ್ಯವನ್ನು ಕಾಪಾಡಿ ಅಭಿವೃದ್ಧಿಗೆ ತರುವುದಕ್ಕೆ ಸರ್ಕಾರದವರು ಮಾಡಿರುವ ಕಾರ್ಯಗಳು ಸರ್ವಸಮ್ಮತವಾಗಿವೆಯೆಂದು ಒಪ್ಪಿಕೊಂಡಿದ್ದಾರೆ. ಇದಲ್ಲದೆ ಹಿಂದುಸ್ಥಾನದಲ್ಲಿ ಪಾರ್ಲಿಮೆಂಟನ್ನು ಏರ್ಪಡಿಸಿ ರಾಜ್ಯಭಾರವನ್ನು ನಡಿಸುವುದು ಸಾಧ್ಯವಲ್ಲವೆಂತಲೂ, ಆದರೆ ಕಾಲಕ್ರಮದಲ್ಲಿ ದೇಶೀಯ ಪ್ರಜೆಗಳಿಗೆ ಹೆಚ್ಚು ಹೆಚ್ಚಾಗಿ ಸ್ವತಂತ್ರಾಧಿಕಾರವನ್ನು ಕೊಡಿಸುತ್ತಾ ಬರಲಾಗುವುದೆಂತಲೂ ಉಭಯ ಪಕ್ಷದ ಮೆಂಬರುಗಳೂ ಅಭಿಪ್ರಾಯಪಟ್ಟರು.

ಬೊಂಬಾಯಿ ಛೀಫ್ ಕೋರ್ಟ್ ಜಡ್ಜಿಗಳಾದ ಜಸ್ಟಿಸ್ ಚಂದಾವರ್ಕರ್‌ರವರೂ ಬೈಬಲ್ ಗ್ರಂಥವೂ.

ಬೊಂಬಾಯಿ ಛೀಫ್ ಕೋರ್ಟ್ ಜಡ್ಜಿಗಳಾದ ಜಸ್ಟಿಸ್ ಚಂದಾವರ್ಕರ್‌ರವರು ಕೆಲವು ದಿನಗಳ ಹಿಂದೆ ಸಾಹುಕಾರ್ ದೊಡ್ಡಣ್ಣನವರು ಕಟ್ಟಿಸಿರುವ ಉಪನ್ಯಾಸಶಾಲೆಯಲ್ಲಿ ನಡೆದು ಬಂದ ಒಂದು ದೊಡ್ಡ ಸಭೆಗೆ ಸ್ವದೇಶಾಂಗವಾಗುವಂತೆ ಕ್ರಿಶ್ಚಿಯನ್ನಲ್ಲಿ ಭಾಷಣಮಾಡಿದರು. ಸಭೆಯಲ್ಲಿ ವಿದ್ಯಾರ್ಥಿಗಳೂ, ಉಪಾಧ್ಯಾಯರುಗಳೂ ಅನೇಕರಿದ್ದರು. ಜಗತ್ತಿನ ಉಪನ್ಯಾಸಗಳಿಗೆ ಅನೇಕರು ಸಾಧ್ಯವಾಗಿ ಕಾರ್ಯಸಾಧನೆಗಳಿಗನುಕೂಲವಾದ ಪ್ರಯತ್ನಗಳನ್ನು ಮಾಡದೆ ಮರೆತುಬಿಡುವರೆಂತಲೂ ವಾಗ್ಜಾಲಕ್ಕಿಂತ ಕಾರ್ಯಸಾಧನೆಯೇ ಆವಶ್ಯಕವೆಂತಲೂ ಉಪನ್ಯಾಸಕರು ತಿಳಿಸಿದರು. ವಿದ್ಯಾರ್ಥಿಗಳಾದವರು ರಾಜ್ಯವ್ಯವಹಾರ ಸಂಬಂಧವಾದ ತರ್ಕಗಳಲ್ಲಿ ಮಗ್ನರಾಗಿರುವುದನ್ನು ಬಿಟ್ಟು ವಿದ್ಯಾಭ್ಯಾಸಂಗದಲ್ಲಿಯೇ ತಮ್ಮ ಕಾಲವನ್ನು ಸಂಪೂರ್ಣವಾಗಿ ಕಳೆಯುವಂತೆಯೂ ಜ್ಞಾನವನ್ನು ವಿಸ್ತರಿಸುವುದಕ್ಕೆ ಬದಲಾಗಿ ಅದರ ಅಭಿವೃದ್ಧಿಗೆ ಕುಂದಕವಾಗಿರುವ ಕೆಲವು ಕಾದಂಬರಿಗಳನ್ನು (ನಾವಲ್ಸ್) ಓದುವದನುಚಿತವೆಂತಲೂ ಜಡ್ಜಿಗಳು ಅಭಿಪ್ರಾಯಪಟ್ಟರು. ವರ್ತಮಾನ ಪತ್ರಿಕೆಗಳನ್ನೋದುವಲ್ಲಿ ಬಹು ಎಚ್ಚರಿಕೆಯಾಗಿರಬೇಕೆಂತಲೂ, ವರ್ತಮಾನ ಪತ್ರಿಕೆಗಳಲ್ಲಿ ಕಂಡುಬರುವ ಅಭಿಪ್ರಾಯಗಳು ಆಯಾ ಪತ್ರಿಕಾಕರ್ತರ ಸ್ವಂತ ಅಭಿಪ್ರಾಯಗಳೆಂತಲೂ ಅಂಥಾ ಅಭಿಪ್ರಾಯಗಳನ್ನು ದೀರ್ಘಾಲೋಚನೆಯಿಲ್ಲದೆ ಅನುಮೋದಿಸುವುದು ಅಪಾಯಕರವೆಂತಲೂ ತಿಳಿಸಿದರು.

ಇಂಗ್ಲಿಷ್ ಭಾಷೆಯು ಬಹು ಕಷ್ಟವಾದುದೆಂದು ವಾಚಕರು ತಿಳಿದಿರುವರು. ಇದನ್ನು ಅಭಿವೃದ್ಧಿ ಮಾಡಿಕೊಳ್ಳುವದಕ್ಕೆ ಈ ದೇಶದಲ್ಲಿ ಅನೇಕರು ಕೈಗೆ ಸಿಕ್ಕಿದ ಇಂಗ್ಲಿಷ್ ಪುಸ್ತಕಗಳನ್ನು ಓದುವರು. ಈ ರೀತಿ ಓದೋಣದರಿಂದ ಕೆಲವು ಸಂದರ್ಭಗಳಲ್ಲಿ ಜ್ಞಾನಕ್ಕೆ ಅಪಾಯ ಸಂಭವಿಸುವುದು. ಚಂದಾವರ್ಕರವರು ವಿದ್ಯಾರ್ಥಿಗಳೆಲ್ಲರೂ ಕ್ರೈಸ್ತರ ವೇದಗ್ರಂಥವಾದ ಬೈಬಲನ್ನು ಆದರದಿಂದ ಓದಿ ಅದರಲ್ಲಿರುವ ವೇದಜ್ಞಾನವನ್ನು ತಿಳಿದುಕೊಳ್ಳುವಂತೆ ತಿಳಿಸಿದರು. ಕಳೆದ ಶತಮಾನದಲ್ಲಿ ಬದುಕಿದ್ದ ಟೆನಿಸನ್ ಎಂಬ ಆಸ್ಥಾನಕವಿಯು ತನ್ನನ್ನು ನೋಡಲು ಬಂದಿದ್ದ ಒಬ್ಬ ಯೌವನಸ್ಥನಿಗೆ—ಅಯ್ಯಾ ನೀನು ದೇವರ ಸಂಗಡ ಮಾತನಾಡಲಪೇಕ್ಷಿಸಿದರೆ ಪ್ರತಿ ಪ್ರಾತಃಕಾಲದಲ್ಲಿ ಬೈಬಲ್ ಗ್ರಂಥದಲ್ಲಿ ಒಂದು ಪುಟವನ್ನೂ ಮನುಷ್ಯನ ಸಂಗಡ ಯೋಗ್ಯತಾ ರೀತಿಯಲ್ಲಿ ಸಂಭಾಷಿಸಬೇಕಾದರೆ ಜಗದ್ವಿಖ್ಯಾತನಾದ ಷೇಕ್ಸ್‌ಪಿಯರ್ ಕವಿಯ ಗ್ರಂಥದಲ್ಲಿ ಪ್ರತಿ ಸಾಯಂಕಾಲದಲ್ಲಿ ಒಂದು ಪುಟವನ್ನೂ ಗಮನವಿಟ್ಟು ಓದಬೇಕೆಂದು ತಿಳಿಸಿದನು. ಉಪಯೋಗವಿಲ್ಲದ ಸಂಗತಿಗಳ ವಿಷಯ ಓದುವುದಾಗಲಿ ಚರ್ಚಿಸುವುದಾಗಲಿ ಮನುಷ್ಯನಿಗೆ ಯಾವ ಪ್ರಯೋಜನವನ್ನುಂಟು ಮಾಡಲಾರದು. ಕ್ರೈಸ್ತಮತಕ್ಕೆ ಅನೇಕ ಕೋಟಿ ಜನರು ಸೇರಿರುವರೆಂತಲೂ ಅದು ಯಾವ ಕಡೆಗೆ ಹೋಗುತ್ತದೋ ಆಯಾ ಕಡೆಗಳಲ್ಲಿ ಜನರು ನಾಗರೀಕವಂತರಾಗುತ್ತಾರೆಂತಲೂ ವಾಚಕರು ತಿಳಿದಿರುವರು.

ಹಿಂದೂ ದೇಶಕ್ಕೆ ಕ್ರೈಸ್ತಮತವು ಇಂಗ್ಲಿಷ್ ವಿದ್ಯಾಭ್ಯಾಸವನ್ನೂ ಅದರ ಸಂಗಡ ಸಂಘಪರಿಷ್ಕರಣಕ್ಕನುಕೂಲವಾದ ಸಾಹಿತ್ಯಗಳನ್ನೂ ತಂದಿರುವುದು. ಎರಡು ಮೂರು ಶತಮಾನಗಳ ಹಿಂದೆ ನಮ್ಮ ದೇಶದಲ್ಲಿ ನರಬಲಿ, ಶಿಶುಹತ್ಯ, ಸಹಗಮನ, ಸಿಡಿಯಾಟ ಇವೇ ಮೊದಲಾದ ದುಷ್ಟ ಪದ್ಧತಿಗಳು ಅನುಸರಣೆಯಲ್ಲಿದ್ದವು. ಈಗಲಾದರೋ ಅವುಗಳ ಜ್ಞಾಪಕವೇ ಇಲ್ಲದಂತಾಗಿರುವದು ಬ್ರಿಟಿಷ್ ಸರ್ಕಾರದ ಬಲದಿಂದ ಈ ಮೇಲ್ಕಂಡ ಬದಲಾವಣೆಗಳಾದವೆಂದು ಕೆಲವರು ಅಭಿಪ್ರಾಯಪಡುತ್ತಾರೆ. ಬ್ರಿಟಿಷ್ ಜನಗಳಾದರೋ ತಮ್ಮ ರಾಜ್ಯವು ಕತ್ತಿಯ ಬಲದಿಂದ ಆಳಲ್ಪಡದೆ ಸತ್ಯವೇದದ ಮೂಲಕವೇ ಆಳಲ್ಪಡುತ್ತಿದೆಯೆಂದು ಅಭಿಪ್ರಾಯಪಡುವರು. ಚೀಣಾ, ಜಪಾನ್, ಆಫ್ರಿಕ ದೇಶದ ಕೆಲವು ಭಾಗಗಳು, ಇವುಗಳಲ್ಲಿ ಬ್ರಿಟಿಷ್ ಸರ್ಕಾರದವರ ಅಧಿಕಾರವಿಲ್ಲದಿದ್ದರೂ ಕ್ರೈಸ್ತಮತವು ಹರಡಿಕೊಳ್ಳುತ್ತಿರುವದು. ಫೀಜಿ ದ್ವೀಪವು ಇಂಗ್ಲಿಷರ ವಶವಾಗುವದಕ್ಕೆ ಮೊದಲು ಅದರಲ್ಲಿದ್ದ ಜನರು ಕಿರಾತಕರಾಗಿದ್ದರು. ಅಗ್ಯೆ ಕ್ರೈಸ್ತ ಪಾದ್ರಿಗಳು ಆ ದೇಶಕ್ಕೆ ಹೋಗಿ ಕ್ರೈಸ್ತಮತದ ಮೂಲಕ ಜನರಲ್ಲಿ ಆಶ್ಚರ್ಯಕರವಾದ ಬದಲಾವಣೆಗಳನ್ನು ಮಾಡಿದರು.

ಬೈಬಲ್ ಗ್ರಂಥವು ದೈವಪ್ರೇರಿತವಾದುದೆಂತಲೂ ಅದರ ಶಕ್ತಿಯು ಬಹಳವಾದುದೆಂತಲೂ ಅದರ ಕ್ರಿಯೆಗಳಿಂದಲೇ ತಿಳಿದುಕೊಳ್ಳಬಹುದು. ಈ ಗ್ರಂಥವು ಸುಲಭವಾದ ಶೈಲಿಯಿಂದಲೇ ಬರೆಯಲ್ಪಟ್ಟಿರುವುದು. ಆದರೆ ಇದನ್ನು ಅಮೂಲಾಗ್ರವಾಗಿ ಓದಿ ಗ್ರಹಿಸುವುದಕ್ಕೆ ನವೀನ ವಿದ್ಯೆಯು ಅನೇಕ ಸಂದರ್ಭಗಳಲ್ಲಿ ಬೇಕಾಗಿರುತ್ತದೆ. ಅಲ್ಲಿ ಸೂಚಿಸಿರುವ ಕೆಲವು ಸಂಗತಿಗಳನ್ನು ಪದಶಃ ಅರ್ಥದಂತೆ ಯೋಚಿಸಿದರೆ ನವೀನ ವಿದ್ಯೆಕ್ಕನುಸಾರವಾಗಿರುವುದಿಲ್ಲ. ಆದ್ದರಿಂದ ವಿದ್ಯಾವಂತರಾದ ಹಿಂದೂಗಳು ಬೈಬಲ್ ಗ್ರಂಥವನ್ನು ಚೆನ್ನಾಗಿ ಓದಿ ತಿಳಿದುಕೊಳ್ಳಬೇಕಾದರೆ ಪ್ರಸಿದ್ಧರಾದ ವ್ಯಾಖ್ಯಾನಿಗಳಿಂದ ಬರೆಯಲ್ಪಟ್ಟ ಭಾಷ್ಯಗಳನ್ನು ನೋಡತಕ್ಕದ್ದಾಗಿರುತ್ತದೆ. ಈ ಗ್ರಂಥವು ಇಂಗ್ಲಿಷ್ ಭಾಷೆಯಲ್ಲಿ ಬಹು ಉತ್ಕೃಷ್ಟವಾದ ಶೈಲಿಯಿಂದ ಬರೆಯಲ್ಪಟ್ಟಿರುತ್ತದೆ. ಲಾರ್ಡ್ ಮೆಕಾಲೆ ಎಂಬ ಪ್ರಸಿದ್ಧ ಲೇಖಕರು ತಮ್ಮ ಭಾಷೆಯನ್ನಭಿವೃದ್ಧಿ ಪಡಿಸಿಕೊಳ್ಳುವುದಕ್ಕೋಸ್ಕರ ಯೋಚನಾಯುತ ಪ್ರವಾದಗಳನ್ನೆಲ್ಲಾ ಬಾಯಿಪಾಠ ಮಾಡಿದ್ದರಂತೆ. ಇಂಥಾ ಪ್ರಸಿದ್ಧವಾದ ಗ್ರಂಥವನ್ನು ಓದಿ ತಿಳಿದುಕೊಳ್ಳುವುದು ಎಲ್ಲರ ಕರ್ತವ್ಯವಾಗಿರುತ್ತದೆ. ಇದರಲ್ಲಿ ಯೇಸುಕ್ರಿಸ್ತನ ಅವತಾರದ ಚರಿತ್ರೆಯು ಪೂರ್ತಿಯಾಗಿರುವುದು. ಈ ಗ್ರಂಥವನ್ನು ಕಾಪಾಡುವುದಕ್ಕೆ ಅನೇಕರು ತಮ್ಮ ಪ್ರಾಣಗಳನ್ನೇ ಕಳೆದುಕೊಂಡಿರುತ್ತಾರೆ. ಇದನ್ನು ಜನರೆಲ್ಲರೂ ಓದುವಂತೆ ಭೂಲೋಕದ ಎಲ್ಲಾ ಭಾಷೆಗಳಲ್ಲಿ ತರ್ಜುಮೆ ಮಾಡಿರುತ್ತಾರೆ. ಎಲ್ಲವನ್ನು ಪರೀಕ್ಷಿಸು, ಒಳ್ಳೆಯದನ್ನೇ ಹಿಡಿದುಕೋ ಎಂಬ ಸತ್ಯವೇದೋಕ್ತಿಯನ್ನು ವಾಚಕರು ಮನಸ್ಸಿನಲ್ಲಿಡಬೇಕೆಂದು ಕೇಳಿಕೊಳ್ಳುತ್ತೇವೆ.

ಸ್ವದೇಶದ ವೃತ್ತಾಂತಗಳು.

ಅಮಲ್ದಾರ್ ಮೆ|| ಎಂ ರಂಗನಾಥರಾಯರಿಗೆ ಸರ್ಕಾರದವರು ಆರು ತಿಂಗಳ ರಜವನ್ನು ಸ್ಯಾಂಕ್ಷನ್ ಮಾಡಿರುತ್ತಾರೆ

***

ಮೈಸೂರು ಪ್ರಜಾಪ್ರತಿನಿಧಿ ಸಭೆಯು ಈ ವರುಷ ಅಕ್ಟೋಬರ್ ತಾ ೧೯ನೇ ಶನಿವಾರ ಪ್ರಾರಂಭವಾಗುವುದೆಂದು ಸರ್ಕಾರದವರು ಗೊತ್ತುಮಾಡಿದ್ದಾರೆ.

***

ಕಳೆದ ಭಾನುವಾರ ಬೆಳಿಗ್ಗೆ ಸುಮಾರು ೧೬ ವಯಸ್ಸಿನ ಒಬ್ಬ ಬ್ರಾಹ್ಮಣ ಹುಡುಗನು ಇಲ್ಲಿನ ಕಾರಂಜಿ ಕೆರೆಯಲ್ಲಿ ಆಕಸ್ಮಾತ್ತಾಗಿ ಬಿದ್ದು ಪ್ರಾಣ ಕಳೆಕೊಂಡನು.

ರಾಜಧಾನಿಯಲ್ಲಿ ಒಂದು ವಾರದಿಂದ ಸೂರ್ಯರಶ್ಮಿಯು ಕಾಣದೆ ಮೋಡ ಮುಸುಕಿಕೊಂಡು ಶೀತದ ಬಿರುಗಾಳಿ ಬೀಸಲಾರಂಭವಾಗಿದೆ. ಮಳೆ ಬರಲಿಲ್ಲ, ಆಗಾಗ್ಗೆ ತುಂತುರು ಬೀಳುವುದು. ಹವಾ ಆರೋಗ್ಯಕರವಾಗಿದೆ

***

ಕಳೆದ ಶುಕ್ರವಾರ ಗೃಹಪ್ರವೇಶಕ್ಕಾಗಿ ಹೊಸ ಅರಮನೆಯಲ್ಲಿಯೂ, ಭಾನುವಾರ ಎರಡನೆಯ ಮಹಾರಾಜ ಕುಮಾರಿಯವರ ಭವನದಲ್ಲಿಯೂ ಬಡಬಗ್ಗರಿಗೆ ಸಮಾರಾಧನೆಗಳು ನಡೆದವು. ಸಾವಿರಾರು ಜನರು ಊಟಮಾಡಿ ಸಂತೋಷಪಟ್ಟರು.

***

ಬೆಂಗಳೂರು ದಂಡಿನಲ್ಲಿ ಲೆಸ್ಟರ್, ಟೆಯಿಲರ್, ಪಾಡ್ಜ್ ಎಂಬೀ ಮೂರು ಮಂದಿ ಯೂರೋಪಿಯನ್ನರು ಸೇರಿ ಕಳವು ಕೊಲೆ ಮುಂತಾದದ್ದನ್ನು ನಡಿಸಬೇಕೆಂದು ಪ್ರಯತ್ನಪಟ್ಟರು. ಕಳೆದ ವಾರ ಇವರನ್ನು ಮ್ಯಾಜಿಸ್ಟ್ರೇಟರು ದರ್ಯಾಫ್ತು ಮಾಡಿ, ಮದರಾಸ್ ಹೈಕೋರ್ಟ್ ಸೆಷನ್ಸ್ ವಿಚಾರಣೆಗೆ ಗುರಿಮಾಡಿದರು. ಈ ಮೊಕದ್ದಮೆಯು ಮುಂದಿನ ಆಗೀಷ್ಟು ತಿಂಗಳಲ್ಲಿ ವಿಚಾರಣೆಯಾಗಬಹುದು.

***

ರಾಜಧಾನಿಯ ಕಾರಂಜಿ ಮೈದಾನಿನ ಬಳಿ ಕಟ್ಟಿರುವ ಎರಡನೆ ಮಹಾರಾಜ ಕುಮಾರಿಯವರ ರಾಜಭವನದಲ್ಲಿ ನೆನ್ನೆಯ ದಿನ ಲೆಫ್ಟಿನೆಂಟ್ ಕರ್ನಲ್ ಜೆ. ದೇಶರಾಜೇ ಅರಸಿನವರು ಶ್ರೀಮನ್ ಮಹಾರಾಜರವರನ್ನೂ ಮಹಾಮಾತೃಶ್ರೀಯವರನ್ನೂ ಯುವರಾಜರವರನ್ನೂ ರಾಜವರ್ಗದವರನ್ನೂ ಅರಸುಗಳನ್ನೂ ಕರೆಸಿಕೊಂಡು ಬಹು ವಿಶೇಷವಾದ ಔತಣ ಉಪಚಾರಗಳನ್ನು ಮಾಡಿಸಿದರು. ಶ್ರೀಮನ್ ಮಹಾರಾಜರವರಿಗೂ ಮಹಾಮಾತೃಶ್ರೀಯವರಿಗೂ ಪಾದಪೂಜಾದಿಗಳು ನಡೆದವು

***

ಶೃಂಗೇರಿ ಸ್ವಾಮಿಗಳು ಕಳೆದ ಗುರುವಾರದ ದಿನ ಬೆಂಗಳೂರು ಬಸವನ ಗುಡಿಯಲ್ಲಿ ಶ್ರೀಶಂಕರಾಚಾರ್ಯರ ಮಠದ ಶಾಖೆಯನ್ನು ಸ್ಥಾಪಿಸಿ ಆಗಮೋಕ್ತವಾಗಿ ಶಿವಪ್ರತಿಷ್ಠೆಯನ್ನು ಮಾಡಿದರು. ಭಾನುವಾರದ ದಿನ ಮಾಜಿ ದಿವಾನ್ ಸರ್ ಕೃಷ್ಣಮೂರ್ತಿಯವರು ಶ್ರೀಸ್ವಾಮಿಗಳನ್ನು ತಮ್ಮ ಭವನಕ್ಕೆ ಬಿಜಮಾಡಿಸಿಕೊಂಡು, ಬಹಳ ಉತ್ಸಾಹದಿಂದ ಪಾದಪೂಜೆ ಭಿಕ್ಷೆ ಸಮಾರಾಧನೆಗಳನ್ನು ಮಾಡಿಸಿದರು. ದಿವಾನ್ ಮೆ|| ಮಾಧವರಾಯರು ನಾಳೆ ತಮ್ಮ ಭವನದಲ್ಲಿ ಶ್ರೀಸ್ವಾಮಿಗಳಿಗೆ ಪಾದಪೂಜಾದಿಗಳನ್ನು ಮಾಡಿಸುವವರಾಗಿದ್ದಾರೆಂದು ತಿಳಿಯುವುದು. ಶ್ರೀಸ್ವಾಮಿಗಳು ಪರಿವಾರಸಹಿತ ಮುಂದಿನ ಭಾನುವಾರ ಬೆಂಗಳೂರಿಂದ ಹೊರಟು, ಉದ್ದಕ್ಕೂ ದಾರಿಯಲ್ಲಿ ಮುಕ್ಕಾಂಗಳನ್ನು ಮಾಡಿಕೊಂಡು, ಈ ತಿಂಗಳ ಆಖೈರಿಗೆ ರಾಜಧಾನಿಯನ್ನು ತಲಪುವವರಾಗಿದ್ದಾರೆಂದು ಕೇಳುತ್ತೇವೆ.

***

ರಾಜಧಾನಿಯ ಬಳಿ ಸುಮಾರು ೪ ಮೈಲಿ ದೂರದಲ್ಲಿರುವ ಹಂಚ್ಯ ಗ್ರಾಮದಿಂದ ಕಳೆದ ಗುರುವಾರದ ದಿನ ತವೇರಿಗೆ ೧೦ ಮಂದಿ ಹೆಂಗಸರು ಹುಲ್ಲು ಹೊರೆಗಳನ್ನು ಮಾರಿ ವಾಪಸು ಸಾಯಂಕಾಲ ತಮ್ಮ ಗ್ರಾಮಕ್ಕೆ ಹೋಗುತ್ತಿರುವಾಗ್ಗೆ ದಾರಿಯಲ್ಲಿ ಮಳೆ ಬಂದಿತು. ಅವರ ಗ್ರಾಮದ ಬಳಿ ಅಡ್ಡಲಾಗಿ ಒಂದು ಹಳ್ಳದಲ್ಲಿ ತುಂಬಾ ನೀರು ಹರಿಯುತ್ತಿತ್ತು. ಅವರೆಲ್ಲಾ ಅದನ್ನು ದಾಟಿಕೊಂಡು ಹೋಗುತ್ತಿರುವಲ್ಲಿ ನಾಲ್ಕು ಮಂದಿ ಆಚೆ ದಡವನ್ನು ಸೇರಿದರು. ಉಳಿದ ಆರು ಮಂದಿ ಅದೇ ಹಳ್ಳದ ಪ್ರವಾಹ ನೀರಿನಲ್ಲಿ ಕೊಚ್ಚಿಕೊಂಡು ಹೋಗಿ, ಎಲ್ಲರೂ ಸತ್ತುಹೋದರು. ಮಾರನೇ ದಿನ ಮಧ್ಯಾಹ್ನ ಈ ಅನಾಹುತವು ಸರ್ಕಾರಕ್ಕೆ ರಿಪೋರ್ಟಾಯಿತು. ಅಮಲ್ದಾರರೂ ಪೊಲೀಸ್ ಇನ್ಸ್ಪೆಕ್ಟರೇ ಮೊದಲಾದವರೂ ಅಲ್ಲಿಗೆ ಹೋಗಿ ಆರು ಶವಗಳನ್ನೂ ಹುಡುಕಿಸಿ ಆವ ಮಾಯಿಷ್ಟಿಯಿಂದ ದಫ್ನ ಮಾಡುವಂತೆ ಅಪ್ಪಣೆ ಕೊಟ್ಟು ಬಂದರು. ಈ ರೀತಿ ಆರು ಮಂದಿ ಹೆಂಗಸರು ಏಕಕಾಲದಲ್ಲಿ ಆಕಸ್ಮಾತ್ತಾಗಿ ಕಾಲವಾದದ್ದು ತುಂಬಾ ಪರಿತಾಪಕರವಾಗಿದೆ

ಮೈಸೂರು ಗೆಜೆಟ್ ಸಂಗ್ರಹ

ಹೊನ್ನಾಳಿ ತಾಲ್ಲೂಕ್ ಛಾರ್ಜನ್ನು ವಹಿಸಿರುವ ತಾಲ್ಲೂಕ್ ಶಿರಸ್ತೇದಾರ್ ಸಿ ರಾಮರಾಯರಿಗೆ ೩ ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ಕೊಟ್ಟಿದೆ

ಶಿವಮೊಗ್ಗಾ ಡಿಸ್ಟ್ರಿಕ್ಟ್ ಫಾರೆಸ್ಟ್ ಸಬ್ ಅ|| ಕನ್ಸರ್ವೇಟರ್ ಮೆ|| ಪಿ ಎಸ್ ಗೋವಿಂದರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿಮೂರು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಅ|| ಕನ್ಸರ್ವೇಟರ್ ಮೆ|| ಎಚ್. ರಾಮಯ್ಯನವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಫಾರೆಸ್ಟ್ ಅ|| ಕನ್ಸರ್ವೇಟರ್ ಮೆ|| ಕೆ ಮುತ್ತೈಯ್ಯನವರಿಗೆ ಕೊಟ್ಟಿದ್ದ ಮೂರು ತಿಂಗಳ ಪ್ರಿವಿಲೆಜ್ ರಜವನ್ನು ಅವರ ಇಷ್ಟಪ್ರಕಾರ ರದ್ದು ಮಾಡಿದೆ.

ಅ|| ಕಮಿಷನರ್ ಮೆ|| ವಿ ಆರ್ ತ್ಯಾಗರಾಜ ಅಯ್ಯರವರಿಗೆ ಕೊಟ್ಟಿರುವ ಮೂರು ತಿಂಗಳ ಪ್ರಿವಿಲೆಜ್ ರಜಾ ಜೊತೆಗೆ ಮೂರು ತಿಂಗಳ ಕಾಯಿಲೆ ರಜಾ ಕೊಟ್ಟಿದೆ.

ಮೈಸೂರು ಡಿವಿಜನ್ ಅ|| ಇಂಜನಿಯರ್ ಮೆ|| ಕೆ ಪೊನ್ನಪ್ಪನವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಕ್ಯೂರೇಟರ್ ಮೆ|| ವಿ ಎಸ್ ಸಾಂಬಶಿವ ಅಯ್ಯರಿಗೆ ಕೊಟ್ಟಿರುವ ಫರ್ಲೊ ರಜವನ್ನು ಇನ್ನು ಎಂಟು ತಿಂಗಳಿಗೆ ಜಾಸ್ತಿ ಮಾಡಿದೆ.

ಅವರ ಗೈರುಹಾಜರಿಯಲ್ಲಿ ಅ|| ಜಿಯಾಲಜಿಸ್ಟ್ ಮೆ|| ಪಿ. ಸಂಪತ್ತೈಯ್ಯಂಗಾರ್ರು ಅವರ ಕೆಲಸದ ಛಾರ್ಜನ್ನು ವಹಿಸಿರತಕ್ಕದ್ದು.

ಮೈಸೂರು ಅರಮನೆ ಅ|| ಸರ್ಜನ್ ಮೆ|| ಎಸ್. ರಂಗಣ್ಣನವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಮೈಸೂರು ಸರ್ಕಾರಿ ಹುಕುಮುಗಳು.

ಬೆಂಗಳೂರು ಶಹರಿನಲ್ಲಿ "ಬೆಂಗಳೂರ್ ಸಿಟಿ ಕೋಆಪರೇಟಿವ್ ಬ್ಯಾಂಕ್ ಲಿಮಿಟೆಡ್" ಎಂಬ ಒಂದು ಸೊಸೈಟಿಯು ಏಪ್ರೇಲ್ ತಾರೀಖು ೩ ರಲ್ಲಿ ಕೋಆಪರೇಟಿವ್ ರೆಗ್ಯುಲೇಷನ್ ಮೇರೆ ರಿಜಿಸ್ಟರ್ ಮಾಡಲ್ಪಟ್ಟಿದೆ. ಇದಕ್ಕೆ ಸೇರುವ ಮೆಂಬರುಗಳಲ್ಲಿ ಮುಂಜಾಗ್ರತೆಯೂ, ಮಿತವ್ಯಯವೂ ಹೆಚ್ಚುವಂತೆ ಮಾಡುವದೂ, ಹಣಗಳನ್ನು ಬಚ್ಚ ಮಾಡಿಕೊಂಡು ಮೆಂಬರುಗಳಿಗೆ ಸಾಲಗಳನ್ನು ಕೊಡುವದೂ ಇದರ ಉದ್ದೇಶಗಳಾಗಿರುತ್ತವೆ. ಬೆಂಗಳೂರ್ ಸಿಟಿ ಮತ್ತು ಬೆಂಗಳೂರ್ ತಾಲ್ಲೂಕಿನಲ್ಲಿ ವಾಸಮಾಡುವವರು ಅಥವ ಉದ್ಯೋಗ ಮಾಡತಕ್ಕವರು ಅಥವ ಸ್ಥಿರಆಸ್ತಿಯನ್ನುಳ್ಳವರು ಈ ಸಂಘಕ್ಕೆ ಸೇರಬಹುದಾಗಿರುತ್ತೆ. ರೈತಾಪಿ ಜನರು ಕೂಡ ಇದಕ್ಕೆ ಮೆಂಬರುಗಳಾಗಿ ಸೇರಬಹುದಾಗಿ ತಿಳಿಯಬರುತ್ತೆ.

ಹುಚ್ಚು ಹಿಡಿದ ಪ್ರಾಣಿಗಳಿಂದ ಕಚ್ಚಲ್ಪಟ್ಟವರು ಕಸೌಲಿಯಲ್ಲಿ ಸ್ಥಾಪಿತವಾಗಿರುವ ಪ್ಯಾಸ್ಟ್ಯೂರ್ ವೈದ್ಯಶಾಲೆಯಲ್ಲಿ ಚಿಕಿತ್ಸೆಯನ್ನು ಮಾಡಿಸಿಕೊಳ್ಳುವದಕ್ಕಾಗಿ ಸರ್ಕಾರದವರು ದ್ರವ್ಯಸಹಾಯವನ್ನು ಮಾಡುತ್ತಿದ್ದರು. ಈಗ ನೀಲಗಿರಿ ಬಳಿ ಕೂನೂರ್‌ನಲ್ಲಿ ಇಂಥಾ ವೈದ್ಯಶಾಲೆಯು ಸ್ಥಾಪಿಸಲ್ಪಟ್ಟಿರುವದರಿಂದ ಮೈಸೂರು ಸೀಮೆಯಲ್ಲಿ ಈ ಚಿಕಿತ್ಸೆಯು ಅವಶ್ಯಕತೆ ಇರುವವರು ಕಸೌಲಿಗೆ ಬದಲಾಗಿ ಕೂನೂರಿಗೆ ಹೋಗಿ ಪದಾರ್ಥ ಲಾಭವಾಗಿರುತ್ತೆ. ಕೂನೂರಲ್ಲಿ ಚಿಕಿತ್ಸೆಯನ್ನು ಪಡೆಯಲು ಬರುವರಿಗೆ ಮತ್ತೆ ದ್ರವ್ಯಸಹಾಯವನ್ನು ಅಪೇಕ್ಷೆಯನ್ನುಳ್ಳ ಸರ್ಕಾರದ ನೌಕರರು ತಾತ್ಕಾಲದಲ್ಲಿ ಸಾಕಾದಷ್ಟು ಸ್ವಾಸ್ಥ್ಯ ನುಕೂಲವಿಲ್ಲದವರುಗಳಲ್ಲಿ ಇವರಿಗೆ ಕೊಡಲ್ಪಡುತ್ತಿದ್ದ ದ್ರವ್ಯಸಹಾಯವನ್ನು ಮಾಡುವದಕ್ಕಾಗಿ ಸರ್ಕಾರದವರ ಅಪ್ಪಣೆ ಕೊಟ್ಟಿರುತ್ತಾರಲ್ಲದೆ ಈ ವಿಷಯದಲ್ಲಿ ಕಸೌಲಿ ಚಿಕಿತ್ಸೆಗಾಗಿ ಏರ್ಪಡಿಸಲ್ಪಟ್ಟಿದ್ದ ರೂಲಸನ್ನು ಬದಲಾಯಿಸಿ ಹೊಸ ರೂಲಸನ್ನು ಈಗ ಕೊಟ್ಟಿರುತ್ತಾರೆ.

ಗೋಣೀನಾರು ಆಗ ಪ್ರತಿ ಜ್ಯೂಟ್ ಎಂಬ ಗಿಡದ ಸಾಗುವಳಿಯನ್ನು ಕುರಿತು ಮಿ॥ ಫಿರಲೀ ಅವರು ಬರೆದಿರುವ ಗ್ರಂಥದಲ್ಲಿ ಅಡಗಿರುವ ಸಂಗತಿಗಳನ್ನು ಆಲೋಚಿಸಿ ಮೈಸೂರು ಸೀಮೆಯಲ್ಲಿ ಆದರಿ ಗಿಡವನ್ನು ವಿಸ್ತಾರವಾಗಿ ಬೆಳಸಬಹುದೇ ಎಂಬ ವಿಷಯದಲ್ಲಿ ಡಾಕ್ಟರ್ ಲೆಮನ್ ಯವರು ಏಜಿಕ್ಯುಕಮಿಷನರವರ ಮಾರ್ಗದ ರಿಪೋರ್ಟನ್ನು ಪರಾಂಬರಿಸಿ ಸರ್ಕಾರದವರ ಕೊಟ್ಟಿರುವ ಹುಕುಮಿನಿಂದ ತಿಳಿಯಬರುವದೇನಂದರೆ— ಈ ಸೀಮೆಯಲ್ಲಿ ಜ್ಯೂಟ್ ಗಿಡವನ್ನು ಬೆಳಸುವದಕ್ಕೆ ಹವಾಸ್ಥಿತಿಗಳು ಅನುಕೂಲವಾಗಿಲ್ಲ. ಅದಕ್ಕೆ ಬದಲಾಗಿ ಪುಂಡಿ ನಾರಿನ ಗಿಡವನ್ನೂ ಸೆಣಬಿನ ಗಿಡವನ್ನೂ ಬೆಳಸುವದು ಅನುಕೂಲವಾಗಿಯೂ ಪ್ರಯೋಜನಕರವಾಗಿಯೂ ಇರುತ್ತೆ. ಸೆಣಬಿನ ನಾರು ಜ್ಯೂಟ್ ಗಿಡದ ನಾರಿಗಿಂತಲೂ ಬಲವಾದದ್ದೆಂತಲೂ ಹೆಚ್ಚು ಬಾಳಿಕೆ ಬರತಕ್ಕದ್ದೆಂತಲೂ ತಿಳಿಯಬರುತ್ತೆ. ಮಿ॥ ಫಿರಲೀ ಯವರ ಗ್ರಂಥದ ಗೋಷ್ವಾರೆಯು ರೆವಿನ್ಯೂ ಕಮಿಷನರವರ ಅಭಿಪ್ರಾಯದ ಸಂಗಡ ಮೈಸೂರ್ ಗೆಜೆಟ್‌ನಲ್ಲಿ ಕನ್ನಡದಲ್ಲಿ ಪ್ರಚುರ ಮಾಡಲ್ಪಡುತ್ತೆ. ಅದರಿಂದ ಪುಂಡಿ ಮತ್ತು ಸೆಣಬಿನ ಗಿಡಗಳ ಸಾಗುವಳಿ ವಿಷಯದಲ್ಲಿಯೂ ಇವುಗಳಿಂದ ನಾರನ್ನು ತೆಗೆಯುವ ವಿಷಯದಲ್ಲಿಯೂ ಅನೇಕ ಮುಖ್ಯ ಸಂಗತಿಗಳನ್ನು ತಿಳಿದುಕೊಳ್ಳಬಹುದು. ರೆವಿನ್ಯೂ ಅಧಿಕಾರಿಗಳು ರೈತಾಪಿ ಜನರಿಗೆ ಸದರಿ ಗೋಷ್ವಾರೆಯ ನಕಲುಗಳನ್ನು ಕೊಡುವರಲ್ಲದೆ ಆ ಗಿಡಗಳ ಸಾಗುವಳಿ ಪ್ರಯತ್ನಗಳನ್ನು ನಡಿಸತಕ್ಕವರಿಗೆ ಬೀಜಗಳನ್ನು ಕೊಡುವರು.

ಹೊಗೇಸೊಪ್ಪು ಬೆಳೆಯುವ ಭೂಮಿಗಳಲ್ಲಿ ಮೆಣಸಿನಕಾಯಿ ಚನ್ನಾಗಿ ಬೆಳೆಯುವದು ಪಸಲುಗಳ ಗೇಣಿ ಇದಕ್ಕೂ ಗೇಣಿ ಬ್ಬರವಾಗಿರುವದು. ಕೋಯಮುತ್ತೂರು ಡಿಸ್ಟ್ರಿಕ್ಟಿನಲ್ಲಿ ಇರುವ ರೈತರು ೭ ೫ ಎಕರೆವುಳ್ಳ ಇಂಥಾ ಭೂಮಿಯನ್ನು ತೋಟವನ್ನಾಗಿ ಮಾಡಿಕೊಂಡು ಸರಿಯಾದ ಒಂದು ಭೂಮಿಯನ್ನು ತೋಡಿ ಕಪಿಲೆಯಿಂದ ನೀರು ಹಾಯಿಸುತ್ತಾರೆ. ಮೊದಲು ಮೊದಲು ಒಟ್ಲು ಹಾಯಿದು ಒಂದು ತಿಂಗಳಾದ ತರುವಾಯ ಮೆಣಸಿನ ಸಸಿಯನ್ನು ನಾಟಿ ಹಾಕಿಸಿ ೪ ದಿನಕ್ಕೆ ಒಂದಾವರ್ತಿ ಕರತೆ ಹೊಡಿಯುತ್ತಾರೆ. ಈ ಪೈರಿಗೆ ೧೦ ಅಥವಾ ೧೫ ದಿನಕ್ಕೆ ಒಂದಾವರ್ತಿ ನೀರು ಬಿಡುತ್ತಿರಬೇಕು. ೨೦ ಅಥವಾ ೨೫ ದಿವಸಕ್ಕೆ ಒಂದಾವರ್ತಿ ಗೊಬ್ಬರವನ್ನು ಬಿಡಿಸುವರು. ನಾಟಿ ಹಾಕಿದ ಒಂದು ತಿಂಗಳಿಗೆ ಹೂವು ಬಿಡುವುದು. ಕಾಯಿಬಿಟ್ಟು ಹಣ್ಣಾಗಬೇಕಾದರೆ ೪೫ ದಿವಸವಾಗುತ್ತೆ. ಅನಂತರ ೩ ತಿಂಗಳ ವರೆಗೂ ಹಣ್ಣು ಕೊಯ್ಯಬಹುದು. ಈ ಮೆಣಸಿನ ಪೈರನ್ನೂ ಹೊಗೇಸೊಪ್ಪಿನ ಪೈರನ್ನೂ ಒಂದಾದಮೇಲೆ ಒಂದರಂತೆ ವ್ಯವಸಾಯ ಮಾಡಬಹುದು. ಚನ್ನಾಗಿ ಕಾಯಿಬಿಟ್ಟರೆ ತೋಟದವನಿಗೆ ಸಾವಿರಾರು ರೂಪಾಯಿ ಸಂಪಾದನೆಯಾಗುವದು.

ಕನ್ನಡ ಭಾಷಾಭಿವೃದ್ಧಿಯ ಪರಿಷತ್ತು.

ಧಾರವಾಡದಲ್ಲಿ ನಡೆದ ಸಭೆಯು.

[ಒಬ್ಬ ಬಾತ್ಮಿದಾರರಿಂದ]

ಈ ತಿಂಗಳ ಪ್ರಾರಂಭದಲ್ಲಿ ಧಾರವಾಡದಲ್ಲಿ ಕನ್ನಡ ಭಾಷಾಭಿಮಾನಿಗಳು ಸೇರಿ ನಡೆಸಿದ ಕಾರ್ಯಗಳನ್ನು ಸಂಕ್ಷೇಪವಾಗಿ ಬರೆಯುವೆನು. ಇಲ್ಲಿ ಕನ್ನಡ ವಿದ್ಯಾವರ್ಧಕ ಸಂಘವೆಂದು ಒಂದು ಸಂಸ್ಥೆಯು ಸ್ಥಾಪಿಸಲ್ಪಟ್ಟು, ಹದಿನೈದು ವರ್ಷಗಳಿಂದ ಪ್ರಾಬಲ್ಯಸ್ಥಿತಿಯಲ್ಲಿರುವದು. ಈ ಸಂಘದವರು ಪ್ರತಿ ವರುಷದಲ್ಲಿಯೂ ಗ್ರಂಥಕರ್ತರಿಗೂ ವಿದ್ಯಾರ್ಥಿಗಳಿಗೂ ಉಪನ್ಯಾಸಿಗಳಿಗೂ ಬಹುಮಾನಗಳನ್ನು ಕೊಟ್ಟು ಪ್ರೋತ್ಸಾಹಗೊಳಿಸುತ್ತಿರುವದಲ್ಲದೆ, ಒಂದು ಮಾಸಪತ್ರಿಕೆಯನ್ನು ಪ್ರಕಟಿಸುತ್ತಿರುವರು. ಈ ಸಂವತ್ಸರ ಈ ಸಭಾ ದಿನ ಪರೀಕ್ಷೆಯ ಜತೆಯಲ್ಲಿಯೇ ಗ್ರಂಥಕರ್ತರ ಸಮ್ಮೇಲನವೆಂಬ ಒಂದು ಸಭೆಯನ್ನು ಕೂಡಿಸಬೇಕೆಂದು ಪ್ರಯತ್ನಿಸಿ, ಕನ್ನಡ ಭಾಷಾಭಿಮಾನಿಗಳಿಗೂ ಪತ್ರಕರ್ತರಿಗೂ ಮೊದಲೇ ಆಮಂತ್ರಣವನ್ನು ಕೊಟ್ಟಿದ್ದು ಎಲ್ಲರಿಗೂ ವಿದಿತವಾಗಿದೆ. ಸಂಘದವರು ಬಹಳ ಉತ್ಸಾಹದಿಂದಲೂ, ಅಲ್ಲಿಗೆ ಬರುವ ಸಭಿಕರ ಅನುಕೂಲಕ್ಕಾಗಿ ಅಗತ್ಯವಾದ ಸಿದ್ಧತೆಗಳನ್ನು ಏರ್ಪಡಿಸಿ, ಬಹು ಜನರು ದಯಮಾಡುವರೆಂದು ನಿರೀಕ್ಷಿಸುತ್ತಿದ್ದರು. ದೇಶಾಭಿಮಾನವುಳ್ಳ ಅಲ್ಲಿಯ ಜನರು ಎಷ್ಟು ಮಟ್ಟಿಗೆ ದಯಮಾಡಿಸಿದ್ದರು. ಇಷ್ಟು ಲಕ್ಷಾಂತರ ಪ್ರಜೆಗಳುಳ್ಳದ್ದಾಗಿಯೂ ಕನ್ನಡ ಭಾಷೆಗೆ ತವರುಮನೆಯಾಗಿಯೂ ಇರುವ ಈ ಮೈಸೂರು ದೇಶದಿಂದ ನಾಲ್ವರು ಪ್ರತಿನಿಧಿಗಳು ಸಹಾ ಸಭೆಗೆ ದಯಮಾಡಿಸಲಿಲ್ಲವೆಂಬ ಅಂಶವನ್ನು ಪ್ರಕಟಿಸಲು ವಿಷಾದವಾಗುವುದು. ಮುಂದೆಯಾದರೂ ನಮ್ಮವರು ಭಾಷಾಭಿಮಾನವಿಟ್ಟು, ಇಂಥ ಕಾರ್ಯಗಳಿಗೆ ಮುಂದುವರಿಯುವರೆಂದು ನಂಬುತ್ತೇನೆ.

ಜನವರಿ ನೇ ತಾ ಸಂಘದ ಪರೀಕ್ಷೆಗಳು ವಿದ್ಯಾರ್ಥಿಗಳ ಉಪನ್ಯಾಸಗಳೂ ನಡೆದವು. ಆ ರಾತ್ರಿ ವಿಕ್ಟೋರಿಯಾ ನಾಟಕ ಶಾಲೆಯಲ್ಲಿ ಸಭಿಕರಿಗಾಗಿ ರಾಮರಾಜ್ಯವಿಯೋಗವೆಂಬ ನಾಟಕವು ಆಡಿ ತೋರಿಸಲ್ಪಟ್ಟಿತು. ೩ನೇ ತಾ ಪ್ರಾತಃಕಾಲ ಸಂಘದ ವಾರ್ಷಿಕ ಮಹಾಸಭೆ ನಡೆದು, ಹಿಂದಿನ ವರುಷದ ವರದಿಯು ಓದಲ್ಪಟ್ಟ ಮೇಲೆ ವ್ಯವಸ್ಥಾಪಕ ಸಭಾಸದರ ಹೆಸರುಗಳು ಗೊತ್ತುಮಾಡಲ್ಪಟ್ಟವು. ಆ ಮೇಲೆ ಗ್ರಂಥಕರ್ತರ ಸಮ್ಮೇಲನವು ಆರಂಭವಾಯಿತು. ಸ್ವಾಗತಕಾರ್ಯದರ್ಶಿಗಳಾದ ಮ॥ ರಾ॥ ಕರಗುದರಿ, ಬಿ. ಎ., ಎಲ್. ಎಲ್. ಬಿ. ಯವರು ಸಭಿಕರ ಸ್ವಾಗತಭಾಷಣವನ್ನೂ, ನಡೆಯಬೇಕಾದ ಸಭಾಕಾರ್ಯಗಳನ್ನು ಕುರಿತು ಪ್ರಸ್ತಾಪಿಸಿದರು. ಸಭಿಕರ ಪ್ರಾರ್ಥನೆಯ ಮೇರೆಗೆ ಮೈಸೂರು ಸರ್ಕಾರದ ಕನ್ನಡ ಟ್ರಾನ್ಸ್‌ಲೇಟರ್ ಆದ ಆರ್. ನರಸಿಂಹಾಚಾರ್ಯರವರ ಅಗ್ರಾಸನವನ್ನು ವಹಿಸಿ, ಕನ್ನಡ ಭಾಷೆಯ ಪೂರ್ವಕಾಲದ ಮತ್ತು ಈಗಿನ ಸ್ಥಿತಿಯನ್ನು ವಿವರಿಸಿ, ಬಹು ಸರಸವಾಗಿ ಉಪನ್ಯಾಸ ಮಾಡಿದರು.

ಮಧ್ಯಾಹ್ನ ೨ ಘಂಟೆಗೆ ಸಭೆ ಸೇರಿತು. ಕೆಲವರು ಸಭಿಕರು ಭಾಷಣ ಮಾಡಿದರು. ಆ ಸಮಯದಲ್ಲಿ ಓದುವುದಕ್ಕೋಸ್ಕರ ನಿಬಂಧನೆಗಳು ಒದಗಿಸಲ್ಪಟ್ಟವು. ಸಾಯಂಕಾಲ ಉಳಿದಿದ್ದ ಕೆಲವು ವಿದ್ಯಾರ್ಥಿಗಳ ಉಪನ್ಯಾಸಗಳು ನಡೆದು ಆ ದಿನದ ಕೆಲಸ ಪೂರೈಸಿತು. ಮಾರನೇ ದಿನ ಬೆಳಗ್ಗೆ ಪುನಃ ಸಭೆ ಸೇರಿತು. ಮೊದಲು ಸಭೆಯಲ್ಲಿ ಪ್ರಕಟಿಸಲ್ಪಟ್ಟಿದ್ದ ಪ್ರತಿ ಒಂದು ವಿಷಯದ ಮೇಲೂ ಚರ್ಚೆಗಳು ನಡೆದು ನಿರ್ಧಾರಗಳು ಗೊತ್ತುಮಾಡಲ್ಪಟ್ಟವು. ಮಧ್ಯಾಹ್ನಕ್ಕೆ ಉಳಿದಿದ್ದ ಕೆಲವು ಅಂಶಗಳು ಚರ್ಚಿಸಲ್ಪಟ್ಟು, ಕೆಲವು ನಿರ್ಣಯಗಳು ತೀರ್ಮಾನಿಸಲ್ಪಟ್ಟವು. ಅವುಗಳ ಸಾರಾಂಶ —

ಬೇರೆ ಬೇರೆ ದೇಶಗಳಲ್ಲಿ ಉಪಯೋಗದಲ್ಲಿರುವ ಕನ್ನಡ ಭಾಷೆಯನ್ನು ಒಂದೇ ರೂಪಕ್ಕೆ ತರಲಿಕ್ಕೆ ಪ್ರಯತ್ನಿಸುವದು ಅಗತ್ಯ. ಗ್ರಂಥಗಳಲ್ಲಿ ಅಕ್ಷರ ಸಂಯೋಜನವೂ ಶಬ್ದ ಮತ್ತು ವಾಕ್ಯ ರಚನೆಯೂ ವ್ಯಾಕರಣ ಶುದ್ಧವಾಗಿರುವಂತೆ ಬರೆಯತಕ್ಕದ್ದು. ಇದಕ್ಕಾಗಿ ಒಂದು ಉಪಸಭೆ ನೇಮಿಸಲ್ಪಟ್ಟು, ಆ ಸಭಿಕರ ಒಪ್ಪಿಗೆಯಿಂದ ಈ ಸಭೆಯಲ್ಲಿ ಕೆಲವು ಪುಸ್ತಕಗಳು ಬರೆಯಲ್ಪಟ್ಟು, ತರುವಾಯ ಪರಿಶೋಧಿಸಲ್ಪಟ್ಟ ಮೇಲೆ ಸಂಘದಿಂದ ಮುದ್ರಿಸತಕ್ಕದ್ದು. ಶಾಸ್ತ್ರಗಳಲ್ಲಿ ಉಪಯೋಗಿಸಲ್ಪಡತಕ್ಕ ಪಾರಿಭಾಷಿಕ ಶಬ್ದಗಳನ್ನು ಬರೆಯುವದು ಸಾಧ್ಯವಲ್ಲ. ಬಂಗಾಳಿ ಮತ್ತು ನಾಗರಿ ಸಭೆಯವರು ಈ ಕೆಲಸಕ್ಕೆ ಮೊದಲೇ ಪ್ರಯತ್ನಿಸಿ ಕೆಲಸ ನಡಿಸುತ್ತಿರುವದರಿಂದಲೂ ಭರತಖಂಡದಲ್ಲೆಲ್ಲಾ ಒಂದೇ ವಿಧವಾದ ಪರಿಭಾಷಾ ಪದಗಳು ಇರುವುದು ಉತ್ತಮವಾದುದರಿಂದಲೂ ಅವರ ಕಾರ್ಯ ಪೂರೈಸಿದ ಮೇಲೆ ಅವರ ಅನುಸರಿಸಬೇಕು, ದೇಶಭಾಷೆಗೆ ಅಂತಹ ಪದಗಳನ್ನು ಸೇರಿಸಿಕೊಳ್ಳಬಹುದೆಂದು ಗೊತ್ತಾಯಿತು. ಬೊಂಬಾಯಿ, ಮದ್ರಾಸ್, ಮೈಸೂರು ಸರ್ಕಾರದ ಪಾಠಶಾಲೆಗಳಲ್ಲಿ ಉಪಯೋಗಿಸುವ ಪಠ್ಯಪುಸ್ತಕಗಳಲ್ಲಿ ಏಕರೂಪವಾದ ಪದಸರಣಿ ಇರತಕ್ಕದ್ದು ಆವಶ್ಯಕವೆಂದು ಗೊತ್ತಾಯಿತು.

ತರುವಾಯ ಬೊಂಬೈ ಮತ್ತು ಮೈಸೂರು ಸರ್ಕಾರದವರು ಸಂಘಕ್ಕೆ ಮಾಡುತ್ತಿರುವ ಸಹಾಯಕ್ಕಾಗಿ ಕೃತಜ್ಞತಾಪೂರ್ವಕ ವಂದನೆಗಳು ಸಮರ್ಪಿಸಲ್ಪಟ್ಟವು. ಆ ಮೇಲೆ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೂ ಗ್ರಂಥಕರ್ತರಿಗೂ ಬಹುಮಾನಗಳು ಕೊಡಲ್ಪಟ್ಟು, ಸಭೆ ವಿಸರ್ಜನೆಯಾಯಿತು. ಆ ರಾತ್ರಿ ಸಂಘದಲ್ಲಿ ನೆರೆದಿದ್ದ ಸಭಿಕರಿಗೆಲ್ಲಾ ಔತಣವಾಯಿತು. ತರುವಾಯ ಭಾರತ ನಾಟಕಶಾಲೆಯಲ್ಲಿ ಸುಭದ್ರಾಪರಿಣಯನಾಟಕದ ಒಂದು ಅಂಶವು ಆಡಲ್ಪಟ್ಟಿತು. ಮಾರನೇ ದಿನ ಸಭಿಕರು ತಮ್ಮ ತಮ್ಮ ಸ್ಥಳಗಳಿಗೆ ಪ್ರಯಾಣ ಮಾಡಿದರು. ಎತಾವರೆಗೂ, ನಮ್ಮ ದೇಶದಲ್ಲಿ ಇಂತಹ ಕಾರ್ಯಗಳು ಇದುವರೆಗೆ ಎಂದೂ ನಡೆದಿಲ್ಲ. ನಮ್ಮಲ್ಲಿ ದೇಶಾಭಿಮಾನವೂ ಐಕಮತ್ಯವೂ ಅತಿ ಸ್ವಲ್ಪವಾಗಲಿ ಇಲ್ಲದಿರುವದು ಆಶ್ಚರ್ಯವಾದುದು. ಮುಂದೆಯಾದರೂ ಈ ದೇಶದಲ್ಲಿ ಇಂಥ ಸಂಘವನ್ನು ಏರ್ಪಡಿಸಿ ಆಗಾಗ್ಗೆ ಸಭಾಕಾರ್ಯಗಳನ್ನು ಜರುಗಿಸುತ್ತ ಅಲ್ಲಿಯ ವಾರ್ಷಿಕಸಭೆಗೆ ಈ ಸಂಘದಿಂದ ಒಬ್ಬರಿಬ್ಬರು ಪ್ರತಿನಿಧಿಗಳನ್ನು ಕಳುಹಿಸಲಿಕ್ಕೆ ಪ್ರಯತ್ನಿಸುವುದು ಸೂಕ್ತವೆಂದು ಹೇಳಬೇಕಾಗುವುದು. ಇದಕ್ಕಾಗಿ ನಮ್ಮಲ್ಲಿಯ ಭಾಷಾಭಿಮಾನಿಗಳು ಏಕ್ಯ ಸಾಧನಗಳನ್ನು ಪತ್ರಿಕಾಮುಖದಿಂದ ತಿಳಿಯಪಡಿಸುವರೆಂದು ನಂಬುತ್ತೇನೆ.

ಇಂಡಿಯಾ ದೇಶದ ವೃತ್ತಾಂತಗಳು.

ಹೈದರಾಬಾದ್ ಸಂಸ್ಥಾನದ ನೈಜಾಮರವರ ೪೨ ನೇ ವರುಷ ವರ್ಧಂತಿ ಮಹೋತ್ಸವವು ಕಳೆದ ವಾರ ಬಹು ಉತ್ಸಾಹದಿಂದ ನಡೆಯಿತು. ನೈಜಾಮರವರು ಸಕಲ ಪ್ರಜೆಗಳಿಗೂ ಅಧಿಕಾರಿಗಳಿಗೂ ಯೂರೋಪಿಯನ್ ಸರ್ದಾರರಿಗೆ ದೊಡ್ಡ ಔತಣಗಳನ್ನು ಮಾಡಿಸಿದರು.

ಪಂಜಾಬ್ ಆಧಿಪತ್ಯಕ್ಕೆ ಸೇರಿದ ಆರು ಡಿಸ್ಟ್ರಿಕ್ಟುಗಳಲ್ಲಿ ಪ್ರಜೆಗಳು ಒಂದು ವಾರಕ್ಕೆ ಮೊದಲೇ ಸರ್ಕಾರದವರಿಗೆ ತಿಳಿಸದೆ ಯಾವ ಸಭೆ ವಿಜಾಪುರಗಳನ್ನು ನಡಸಕೂಡದೆಂದು ವಿಧಿಸಿರುತ್ತಾರೆ.

❦❦❦

ಉಡುಪಿಯ ಊರಿನ ಆಗಖಾಲ್‌ಬಿನ್ಸದರ್ ಎಂಬಾತನು ಆಲಿಗಾರ್ ವಿದ್ಯಾಶಾಲೆಯಲ್ಲಿ ಇನ್ನು ಹೊಸದಿನ ಮೇಲೆ ಒಂದು ಕೊಠಡಿಯನ್ನು ಕಟ್ಟಿಸಲಿಕ್ಕೆ ೧೫,೦೦೦ ರೂಪಾಯಿ ಕಳುಹಿಸಿರುತ್ತಾನೆ.

❦❦❦

ಇಂಡಿಯಾ ಗವರ್ನಮೆಂಟಿನವರು ದಸ್ತಗಿರಿ ಮಾಡಿದ ಲಾಲಾ ಅಜಿತ್ ಸಿಂಗ್ ಅವರನ್ನು ಬರ್ಮಾ ಆಧಿಪತ್ಯಕ್ಕೆ ಸೇರಿದ ಮಾಂಡಲೆ ಪಟ್ಟಣಕ್ಕೆ ಕರೆದುಕೊಂಡು ಹೋಗಿ ಬಂದಿಖಾನೆಯಲ್ಲಿ ಹಾಕಿದಾರೆ.

❦❦❦

ಲಕ್ನೋ ಪಟ್ಟಣದ ಅಂಗಡೀ ಬೀದಿಯಲ್ಲಿ ಕಳೆದ ವಾರ ಬೆಂಕಿ ಬಿದ್ದು ಸುಮಾರು ೮—೧೦ ಮನೆಗಳು ಸುಟ್ಟು ಹೋದಿತು. ಮನೆಗಳ ಮಾಲೀಕರು ತಮ್ಮ ಸರ್ವಸ್ವವನ್ನೂ ಕಳೆದುಕೊಂಡು ನಿರ್ಗತಿಕರಾಗಿ ಬೀದಿಪಾಲಾಗಿದ್ದಾರೆ.

❦❦❦

ಈಸ್ಟ್ ಇಂಡಿಯಾಕ್ಕೆ ಸೇರಿದ ಬಿಜಾಪುರ ಸಂಸ್ಥಾನದಲ್ಲಿ ಪ್ಲೇಗ್ ಪ್ರಾರಂಭವಾಗಿ ನಾಲ್ಕು ತಿಂಗಳಾಗಿತ್ತು. ಈ ವಾರವು ಕಳೆದ ವಾರದಿಂದ ಆ ಸಂಸ್ಥಾನದ ಅರಮನೆಯಲ್ಲೂ ಸಹ ಪ್ರಜೆಗಳಲ್ಲೂ ವ್ಯಸನವನ್ನುಂಟುಮಾಡಿರುತ್ತದೆ.

❦❦❦

ಪಂಜಾಬ್ ಆಧಿಪತ್ಯಕ್ಕೆ ಸೇರಿದ ಅಟೋಕ್ ಡಿಸ್ಟ್ರಿಕ್ಟಿನಲ್ಲಿ ಒಬ್ಬ ಸಾಹುಕಾರ ನ್ಯಾಯ ಮಾಡುತ್ತಿದ್ದ ಎರಡು ಭಾವಿಗಳನ್ನು ಕಳೆದ ವಾರ ಕೆಡಿಸಿ ಹಾಕಿದರು. ಇವು ಇದುವರೆಗೆ ಸ್ಪಷ್ಟವಾಗಿ ತಿಳಿಯಲಿಲ್ಲ.

❦❦❦

ಬುದ್ಧ ಗುರುವು ಜನ್ಮವೆತ್ತಿ ೨,೫೫೦ ಸಂವತ್ಸರಗಳಾದವು. ಆತನು ಬುದ್ಧನಾಗಿ ೨,೪೯೫ ವರುಷಗಳಾಗಿದೆ. ಕಳೆದ ವೈಶಾಖ ಪೂರ್ಣಿಮೆಯ ದಿನ ಕಲ್ಕತ್ತೆಯಲ್ಲಿ ಬೌದ್ಧ ಮತಸ್ಥರು ಮೇಳೈಸಿ ತಮ್ಮ ಗುರುವಿನ ಜನನೋತ್ಸವವನ್ನು ಬಹು ಅದ್ಭುತ ವೈಭವಕರವಾಗಿ ನೆರವೇರಿಸಿದರು.

❦❦❦

ಕಾಶ್ಮೀರ ಸಂಸ್ಥಾನದಲ್ಲಿ ಒಂದು ಸೇತುವೆಯನ್ನು ಕಟ್ಟಿಸಲು ಮಾಡುತ್ತಿದ್ದಾರೆ. ಅದಕ್ಕೆ ಹಾಕಿದ್ದ ಒಂದು ಕಟ್ಟಿನ ಕಂಬಿಯು ಕೆಲಸ ನಡೆಯುವಾಗ್ಗೆ ಅಕಸ್ಮಾತ್ತಾಗಿ ಕಳಚಿ ಬಿದ್ದುಕೊಂಡದ್ದರಿಂದ ನಾಲ್ಕಾರು ಮಂದಿ ಕೂಲಿಯವರು ಪ್ರಾಣ ಕಳೆದುಕೊಂಡರು. ಇನ್ನು ಕೆಲವರಿಗೆ ಗಾಯಗಳಾದವು.

❦❦❦

ಬಂಗಾಳಾ ಆಧಿಪತ್ಯಕ್ಕೆ ಸೇರಿದ ಢಕ್ಕಾ ನವಾಬರ್ ತುಂಬಾ ರಾಜಭಕ್ತರಾಗಿ ಶಿಷ್ಟ ಮನೋವ್ಯಾಪೆಗಳುಳ್ಳವರಾಗಿರುವುದನ್ನು ಇಂಡಿಯಾ ಗವರ್ನಮೆಂಟಿನವರು ನೋಡಿ, ಗವರ್ನಮೆಂಟಿನಿಂದ ಅವರಿಗೆ ಹನ್ನೊಂದು ಲಕ್ಷ ರೂಪಾಯಿ ಸಾಲ ಕೊಟ್ಟು, ಅವರ ಬಾಕಿನ ಆಸ್ತಿಯನ್ನು ಉದ್ಧಾರ ಬರೆಸಿಕೊಂಡಿದಾರೆ.

❦❦❦

ಬೊಂಬಾಯಿ ಪಟ್ಟಣದ ಅಬ್ದುಲ್ ರಹಮಾನ್ ಎಂಬ ಬೀದಿಯಲ್ಲಿ ಕಳೆದ ವಾರ ಬೆಂಕಿ ಬಿದ್ದು ಹಲವು ಅಂಗಡಿಗಳು ಸಾಮಾನು ಸಮೇತ ಸುಟ್ಟು ಹೋದವು. ಮಾಲೀಕರಿಗೆ ಸುಮಾರು ೪೦,೦೦೦ ರೂಪಾಯಿ ನಷ್ಟವಾಗಿದೆ. ಆ ಪೈಕಿ ಮೂರು ಅಂಗಡಿಗಳಲ್ಲಿ ಬಾಣ ಬಿರುಸುಗಳನ್ನು ದೀಪದಕಡ್ಡಿ ಪೆಟ್ಟಿಗೆಗಳನ್ನೂ ತುಂಬಿದ್ದರು.

❦❦❦

ಕಠ್ಯವಾಡಕ್ಕೆ ಸೇರಿದ ರಾಜಪುರವೆಂಬೊಂದು ಸಣ್ಣ ಸಂಸ್ಥಾನದಲ್ಲಿ ನವಾಬರು ತಮ್ಮ ಸಕಲ ಪ್ರಜೆಗಳಿಗೂ ಧರ್ಮಾರ್ಥವಾಗಿ ಓದು ಬರಹವನ್ನು ಕಲಿಸಬೇಕೆಂದು ಏರ್ಪಾಡು ಮಾಡಿದಾರೆ. ಇದಲ್ಲದೆ ಅವರು ತಮ್ಮ ಸಂಸ್ಥಾನದೊಳಗೆ ಯಾರೂ ಗೋವಧೆಯನ್ನು ಮಾಡಲೇಕೂಡದೆಂದು ಇಸ್ತಿಹಾರು ಹಾಕಿಸಿರುತ್ತಾರೆಂದು ಆ ಪ್ರಾಂತ್ಯದ ಪತ್ರಿಕೆಯು ತಿಳಿಸುತ್ತದೆ.

❦❦❦

ರಂಗೂನ್ ಪಟ್ಟಣದ ಬಂದೀಖಾನೆಯಲ್ಲಿ ಫಾಸ್ಟರ್ ಎಂಬ ಕೈದಿ ನು ಹತ್ತು ವರುಷದ ಸಜಾ ಅನುಭವಿಸಬೇಕಾಗಿತ್ತು. ಅವನು ಜೈಲು ಅಧಿಕಾರಿ ವಿಚಾರಣೆಗೆ ಬಂದಾಗ್ಗೆ ಆ ಅಧಿಕಾರಿಯನ್ನು ಒಂದು ಕಬ್ಬಿಣದ ತುಂಡಿನಿಂದ ಮುಖದ ಮೇಲೆ ಹೊಡೆದು ಪೂರಾ ಗಾಯಮಾಡಿದನು. ಕೂಡಲೇ ಅವನನ್ನು ಹಿಡಿದು ಕೈಕೋಳ ಹಾಕಿ ಬೇರೆ ಕೋಣೆಯಲ್ಲಿ ಹಾಕಿ ಪಹರೆ ಇಟ್ಟಿದಾರೆ.

❦❦❦

ಕಳೆದ ವಾರ ಮದರಾಸ್ ಪಟ್ಟಣದಲ್ಲಿ ಮಹಾಜನ ಸಭೆ ಸೇರಿ ನಡೆದು, ಈಗ ಹಿಂದುಸ್ಥಾನದಲ್ಲಿ ಉಂಟಾಗಿರುವ ಮನೋವ್ಯಥೆಯನ್ನು ಇಲ್ಲಿನ ಪ್ರಜೆಗಳ ಇಂಗಿತಗಳನ್ನೂ ಸ್ಪಷ್ಟವಾಗಿ ಇಂಗ್ಲಿಷ್ ಪ್ರಜೆಗಳಿಗೆ ತಿಳಿಯಪಡಿಸುವದಕ್ಕೋಸ್ಕರ ಹಿಂದುಸ್ಥಾನದ ಎಲ್ಲಾ ಕಡೆಗಳಿಂದಲೂ ವಿದ್ಯಾವಂತರಾದ ಪ್ರತಿನಿಧಿಗಳನ್ನು ಆರಿಸಿ ಇಂಗ್ಲೆಂಡಿಗೆ ಕಳುಹಿಸಿಕೊಡಬೇಕೆಂದು ತೀರ್ಮಾನ ಮಾಡಿದರು.

❦❦❦

ರಿಯಾಲ್ ಡಾಸ್ ನೆರಂಪ್ ಮಲ್ ಎಂಬ ಕಂಪನಿಯವರು ಕರಾಚಿ, ಬೊಂಬಾಯಿ, ಸಕ್ಕರ್, ಪೂನಾ, ಅಲಹಾಬಾದ್, ಈ ಮೊದಲಾದ ಅನೇಕ ಪಟ್ಟಣಗಳಲ್ಲಿ ಅಂಗಡಿಗಳನ್ನಿಟ್ಟು, ದಾಸ್ಯಗಳನ್ನು ಕೊಂಡ ಸಾಗಿಸುತ್ತಾ ತುಂಬಾ ಹೆಸರುವಾಸಿಗೆ ಬಂದಿದ್ದರು. ಈ ಕಂಪನಿಯು ದಿವಾಳಿಯಾಯಿತೆಂತಲೂ, ಅವರ ದೇಣೆಯು ಸು

ನಾಲ್ಕೈದು ಲಕ್ಷ ರೂಪಾಯಿ ನಷ್ಟ ಆಗುವುದೆಂತಲೂ ತಂತೀ ವರ್ತಮಾನ ಬಂದಿದೆ.

❖❖❖

ಬಂಗಾಳಾ ಕೊಲ್ಲಿಯಲ್ಲಿ ಒಂದು ನದಿಯನ್ನು ದಾಟುತ್ತಿದ್ದ ಒಂದು ದೋಣಿಗೆ ಸುಂಟರಗಾಳಿ ಬಡಿದು ಮಗುಚಿಕೊಂಡಿತು. ಅದರಲ್ಲಿ ೯೦ ಮಂದಿ ಪ್ರಯಾಣಿಕರಿದ್ದರೆಂತಲೂ ಈ ಪೈಕಿ ಕೆಲವರು ಮಾತ್ರ ಈಜಿ ದಡವನ್ನು ಸೇರಿದರೆಂತಲೂ ತಿಳಿಯುವುದು.

❖❖❖

ಸಿಂಧು ದೇಶಕ್ಕೆ ಸೇರಿದ ಸಿಯಾಲ್ಕೋಟ್ ಪಟ್ಟಣದಲ್ಲಿ ಪ್ರಜೆಗಳಿಂದ ಅವರ ಆದಾಯದ ಮೇಲಿನ ತೆರಿಗೆಯನ್ನು ವಸೂಲ್ಮಾಡತಕ್ಕ ಅಧಿಕಾರಿಗಳು ಹೆಚ್ಚು ವರಮಾನ ಉಳ್ಳ ಪ್ರಜೆಗಳಿಗೆ ಕಮ್ಮಿಯಾದ ದರವನ್ನೂ ಸ್ವಲ್ಪ ವರಮಾನವಿರತಕ್ಕವರಿಗೆ ಹೆಚ್ಚು ಮೊಬಲಗನ್ನೂ ವಿಧಿಸಿ ವಸೂಲ್ಮಾಡಲಾರಂಭಿಸಿದಾರೆಂತಲೂ ಈ ವಿಷಯವು ಪ್ರಜೆಗಳಲ್ಲಿ ಅಸಮಾಧಾನವನ್ನೂ ಗೊಣಗಾಟವನ್ನೂ ಉಂಟುಮಾಡಿದೆ ಎಂತಲೂ ತಿಳಿದು ಬಂದಿದೆ

❖❖❖

ಇಂಡಿಯಾ ಗವರ್ನಮೆಂಟಿನವರು ಮಿ॥ ಲಾಲಾ ಲಾಜಪತ್ ರಾಯಿಯವರನ್ನು ಹಿಡಿದು ಬರ್ಮಾ ಆಧಿಪತ್ಯಕ್ಕೆ ಸೇರಿದ ಮಾಂಡಲೇ ಪಟ್ಟಣದಲ್ಲಿ ಬೈದು ಮಾಡಿರುತ್ತಾರಷ್ಟೆ. ಅವರ ಪೋಷಣೆ ಮುಂತಾದ ವಿಷಯದಲ್ಲಿ ಬರ್ಮಾ ಗವರ್ನಮೆಂಟಿನವರು ಯಾವ ರೀತಿ ಏರ್ಪಾಡು ಮಾಡಿರುತ್ತಾರೆಂಬುದನ್ನು ಅಲ್ಲಿನ ಅಧಿಕಾರಿಗಳನ್ನು ಕಂಡು ವಿಚಾರಿಸಿಕೊಂಡು ಬರುವುದಕ್ಕೋಸ್ಕರ ಮಿ॥ ಗೋಖಲೆಯವರು ಬರ್ಮಾಕ್ಕೆ ಇಷ್ಟರಲ್ಲೇ ಪ್ರಯಾಣ ಮಾಡುವರೆಂದು ಪ್ರಕಟವಾಗಿದೆ

❖❖❖

ಕಲ್ಕತ್ತಾ ಪಟ್ಟಣದ ಬಳಿ ಮಹಾರಾಜಾ ಜೋತೀಂದ್ರ ಮೋಹನ ಠಾಗೋರ್‌ಯವರ ಅರಮನೆಗೆ ಕಳ್ಳರು ಬಿದ್ದು ಲೂಟಿಮಾಡುತ್ತಾರೆಂದು ಪುಕಾರು ಹುಟ್ಟಿ ತುಂಬಾ ಗಲಭೆಯಾಯಿತು. ಮಹಾರಾಜರು ಕೂಡಲೇ ಪೋಲೀಸಿನವರಿಗೆ ಹೇಳಿಕಳುಹಿಸಿ ಕಲ್ಕತ್ತೆಯಿಂದ ಕರೆಸಿಕೊಂಡರು. ಎಲ್ಲಾ ಜನರೂ ಬಹಳ ಎಚ್ಚರಿಕೆಯಾಗಿ ನೋಡಿಕೊಳ್ಳುತ್ತಿದ್ದರು. ಕಳ್ಳತನವೇನೂ ನಡೆಯಲಿಲ್ಲ. ಕಡೆಯಲ್ಲಿ ಯಾರೋ ಬೇಕೆಂತಲೇ ಮಹಾರಾಜರ ಅರಮನೆಯಲ್ಲಿ ಪುಕಾರು ಹುಟ್ಟಿಸಿ ಗಲಭೆಯೆಬ್ಬಿಸಿದರೆಂದು ಗೊತ್ತಾಯಿತು.

❖❖❖

ದಕ್ಷಿಣ ಕನಡಾ ಜಿಲ್ಲೆಯಲ್ಲೂ ಸುತ್ತುಮುತ್ತಲಲ್ಲೂ ಸಂಘ ಪರಿಷ್ಕರಣ ಕಾರ್ಯದಲ್ಲಿ ತುಂಬಾ ಆಸಕ್ತಿಯನ್ನು ತೋರಿಸುತ್ತಾ ಏಳೆಂಟು ವರುಷದ ಕೆಳಗೆ ... ಬಂದಿರುವ ನಾ॥ ಐ ರಾಮಚೇಂದ್ರರಾಯರು ಕಳೆದ ವಾರ ಮಂಗಳೂರಿನಲ್ಲಿ ಒಂದು ಅನಾಥಾಲಯವನ್ನು ಸ್ಥಾಪನೆ ಮಾಡಿದರು. ಕಲೆಕ್ಟರ್ ಮಿ॥ ಅಜಿಬುದ್ದೀನ್ ಸಾಹೇಬರು ಆ ಕಟ್ಟಡವನ್ನು ಪ್ರತಿಷ್ಠೆ ಮಾಡಿ, ಅದರಲ್ಲಿ ಸಕಲ ಜಾತಿಯ ಅನಾಥ ಮಕ್ಕಳನ್ನೂ ನಿರ್ಗತಿಕರಾದ ವಿಧವೆಯರನ್ನೂ ಇಟ್ಟು ಪೋಷಣೆ ಮಾಡುವುದೆಂತಲೂ ಇಂಥಾ ಪರೋಪಕಾರಕವಾದ ಏರ್ಪಾಟಿಗೆ ಪ್ರಜಾವತ್ಸಲರೆಲ್ಲರೂ ದ್ರವ್ಯಸಹಾಯ ಮಾಡಬೇಕೆಂತಲೂ ತಿಳಿಸಿದರು.

❖❖❖

ನಾಸಿಕ್ ಪಟ್ಟಣದಲ್ಲಿ ಸನಾತನ ಭಾರತ ಧರ್ಮ ಮಹಾ ಪರಿಷತ್ತೆಂಬ ಸಮಾಜವು ಕಳೆದ ತಿಂಗಳ ಅಂತ್ಯಭಾಗದಲ್ಲಿ ನಾಲ್ಕು ದಿನಗಳ ವರೆಗೆ ನಡೆಸಲ್ಪಟ್ಟಿತು. ಉತ್ತರ ದೇಶದಿಂದಲೂ ಪಶ್ಚಿಮ ತೀರ ಪ್ರದೇಶಗಳಿಂದಲೂ ಅನೇಕ ಪ್ರತಿನಿಧಿಗಳು ಬಂದಿದ್ದರು. ರಾಯ ಬಹದೂರ್ ಪಂಡಿತ ಮಹಾರಾಜ ನಾರಾಯಣ ಶಿವಪುರಿಯಾವರು ಸಭೆಯ ಅಗ್ರಾಸನವನ್ನು ವಹಿಸಿದ್ದರು. ತರುವಾಯ ಬೊಂಬಾಯಿ ಶೆಟ್ಟಿ ಖೇಮರಾಜ ಕೃಷ್ಣದಾಸಯವರು ಬಹು ಸ್ವಾರಸ್ಯವಾದ ಉಪನ್ಯಾಸ ಮಾಡಿ ಸಭಿಕರಿಗೆ ಸುಖಾಗಮನವನ್ನು ಬಯಸಿದರು. ಹಿಂದೂಸಂಘಪರಿಷ್ಕರಣ ಕಾರ್ಯದ ವಿಚಾರವಾಗಿ ಅನೇಕರು ಉಪನ್ಯಾಸಗಳನ್ನು ಮಾಡಿದರು.

❖❖❖

ಭೂಪಾಲದ ಬೋರಾ ಜಾತಿಯ ಕುಮಾರ ಅಲಿ ಖಾದರಲಿ ಎಂಬುವನು ಪೂನಾ ಪಟ್ಟಣಕ್ಕೆ ಬಂದನು. ಅವನ ಬಳಿಯಲ್ಲಿ ಬಹು ಬೆಲೆಯುಳ್ಳ ಒಂದು ಅಂಗವಸ್ತ್ರವಿತ್ತು. ಪೋಲೀಸಿನವರು ಅವನನ್ನು ಇದು ಎಲ್ಲಿತ್ತೆಂದು ಕೇಳಿದಾಗ ಅವನು ಸರಿಯಾದ ಉತ್ತರ ಕೊಡಲಿಲ್ಲ. ಈ ಅಂಗವಸ್ತ್ರದಲ್ಲಿ ಮುತ್ತುಗಳೂ, ಕೆಂಪು ವಜ್ರಗಳೂ ಕಟ್ಟಿದ್ದವು. ಅದರ ಬೆಲೆ ಸುಮಾರು ೬೦,೦೦೦ ರೂಪಾಯಿ ಆದೀತೆಂದು ಹೇಳುತ್ತಾರೆ. ಈಚೆಗೆ ತನಿಖೆ ಮಾಡಿದ್ದರಲ್ಲಿ ಆ ಅಂಗವಸ್ತ್ರವು ಇಂದೋರ್ ಸಂಸ್ಥಾನದ ಮಹಾರಾಜಾ ಅಲಂಘೇರ್ ಷಹಾ ಯವರೆಂದು ತಿಳಿದು ಬಂತು. ಈಗ ಪೋಲೀಸಿನವರು ಅವನನ್ನು ಹಿಡಿದು ಸೆರೆಮನೆಯಲ್ಲಿ ಹಾಕಿಕೊಂಡಿದಾರೆ.

❖❖❖

ಪಂಜಾಬ್ ಆಧಿಪತ್ಯಕ್ಕೆ ಸೇರಿದ ಕಾಟಿಗಂಗ್ ಎಂಬ ರೈಲ್ವೆ ಸ್ಟೇಷನ್ನಿನಲ್ಲಿ ರೈಲ್ವೆ ನೌಕರರಿಬ್ಬರು ಒಬ್ಬ ಹಿಂದು ಪ್ರಯಾಣಿಕಸ್ತ್ರೀಯನ್ನು ಹಿಡಿದು ಅವಮಾನ ಪಡಿಸಿದರೆಂದು ಮೊಕದ್ದಮೆ ಹುಟ್ಟಿ, ಎಟ್ಟಾಪ ಮ್ಯಾಜಿಸ್ಟ್ರೇಟರು ಈ ಮೊಕದ್ದಮೆಯನ್ನು ದರ್ಯಾಪ್ತು ಮಾಡಿದರು. ಒಬ್ಬ ಅಪರಾಧಿಯನ್ನು ಬಿಟ್ಟುಬಿಟ್ಟು, ಇನ್ನೊಬ್ಬನಿಗ ೧೦೦ ರೂಪಾಯಿ ಜುಲ್ಮಾನೆ ವಿಧಿಸಿದರು. ಈಚೆಗೆ ಹೈ ಕೋರ್ಟಿನವರು ಈ ಶಿಕ್ಷೆ ಸಾಲದೆಂದು ಹೇಳಿ ಅವನಿಗೆ ಒಂದು ವರುಷ ಕಠಿಣ ಸಜಾ ವಿಧಿಸಿದರು. ಈಗ ಪಂಜಾಬ್ ಗವರ್ನಮೆಂಟಿನವರು ಈ ಮೊಕದ್ದಮೆಯ ಕಾಗದ ಪತ್ರಗಳನ್ನು ತರಿಸಿ ನೋಡಿ, ಮೊದಲು ಖುಲಾಸೆ ಆಗಿದ್ದ ಎರಡನೆ ಅಪರಾಧಿಯನ್ನು ಮತ್ತೆ ಹಿಡಿದು ದರ್ಯಾಪ್ತು ಮಾಡಬೇಕೆಂದು ಹುಕುಂ ಕೊಟ್ಟರು. ಅದರಂತೆ ಮೊಕದ್ದಮೆ ನಡೆಯುತ್ತಿದೆ

❖❖❖

ಹಿಂದುಸ್ಥಾನದಲ್ಲಿ ಇತ್ತೀಚಿನ ಪ್ಲೇಗ್ ಮರಣ ಸಂಖ್ಯೆಗೂ ಹಿಂದಿನವಾರದ್ದಕ್ಕೂ ಬಹಳ ವ್ಯತ್ಯಾಸವಾಯಿತು. ವಾರ ವಾರಕ್ಕೆ ಮರಣ ಸಂಖ್ಯೆ ಕಡಿಮೆಯಾಗುತ್ತಿರುವುದು. ಆಚೇ ವಾರ ೬೭,೬೮೧ ಜನರು ಪ್ಲೇಗಿನಲ್ಲಿ ಕಾಲವಾದರು. ಹೋದವಾರ ಪ್ಲೇಗ್ ಮರಣ ಸಂಖ್ಯೆಯು ೪೭,೨೯೮ ಕ್ಕೆ ಇಳಿಯಿತು. ಈ ಪೈಕಿ ಬೇರೆ ಬೇರೆ ಕಡೆಗಳಲ್ಲಿ ವ್ಯತ್ಯಾಸವಾಗಿರುವ ಸಂಖ್ಯೆ ಎಷ್ಟೆಂದರೆ—ಬೊಂಬಾಯಿನಲ್ಲಿ ಪ್ಲೇಗ್ ಮರಣವು ೮೨೧ ರಿಂದ ೫೩೩ ಕ್ಕೆ, ಬಂಗಾಳಾದಲ್ಲಿ ೧,೩೩೦ ರಿಂದ ೯೨೫ ಕ್ಕೆ, ಸಂಯುಕ್ತ ಆಧಿಪತ್ಯಗಳಲ್ಲಿ ೧೦,೩೮೧ ರಿಂದ ೬,೪೫೪ ಕ್ಕೆ, ಪಂಜಾಬಿನಲ್ಲಿ ೪೪,೩೪೭ ರಿಂದ ೪೩,೧೨೬ ಕ್ಕೆ, ಮಧ್ಯಪ್ರಾಂತ್ಯಗಳಲ್ಲಿ ೩೩೮ ರಿಂದ ೨೦೮ ಕ್ಕೆ ಕಡಿಮೆಯಾಗಿರುತ್ತದೆ. ಆದರೆ ರಾಜಪುಟಾಣಾದಲ್ಲಿ ಮಾತ್ರ ೪೧೦ ಜನರು. ಅದರ ಹಿಂದಿನ ವಾರದ ಸಂಖ್ಯೆಗಿಂತ ೧೬೩ ಮಂದಿ ಹೆಚ್ಚಾಗಿ ಮೃತಪಟ್ಟರು. ಬರ್ಮಾದಲ್ಲಿ ೧೨೮ ಮರಣಗಳಾಗಿರುವವು.

❖❖❖

ಪೂನಾ ಪಟ್ಟಣದ ಹಾಕ್ಲೆಂಡ್ ರಸ್ತೆಯ ದೊಡ್ಡ ಚರಂಡಿಯಲ್ಲಿ ಕೆಲಸ ಮಾಡುತ್ತಿದ್ದ ಕೂಲಿಯಾಳುಗಳು ಸಾಯಂಕಾಲ ಕೆಲಸ ತೀರಿಸಿಕೊಂಡು ಮನೆಗೆ ಹೋಗುವಾಗ್ಗೆ ಅವರ ಪೈಕಿ ಒಬ್ಬನು ಇರಲಿಲ್ಲ. ಹುಡುಕಿದಾಗ ಭಕ್ತ ಮಹದೂ ಎಂಬುವನು ಚರಂಡಿಯೊಳಗೆ ಬಿದ್ದುಕೊಂಡಿದ್ದದ್ದು ಗೊತ್ತಾಯಿತು. ಮಹದೂಪುರಿ ಎಂಬುವನು ಅವನನ್ನು ಮೇಲಕ್ಕೆ ಎಬ್ಬಿಸಿಕೊಂಡು ಬರುತ್ತೇನೆಂದು ಚರಂಡಿಯೊಳಕ್ಕೆ ಇಳಿದು ಹೋದನು. ಇವನೂ ಅವನ ಜೊತೆಗೇ ಬಿದ್ದುಕೊಂಡನು. ಅರುಣಾಯ್ ಸುಬಾರಾಂ ಬಾಜಾಜಿರಾವ್, ಇವನ ಹಿಂದೆ ಶಂಕರಬಾಬಾಜಿರಾವ್, ಇವನ ಹಿಂದೆ ಕರಡೇವನ ದಾಮೋದರನೂ ಒಬ್ಬರಾದಮೇಲೊಬ್ಬರು ಚರಂಡಿಯೊಳಕ್ಕೆ ಹೋಗಿ ಅಲ್ಲಿನ ವಿಷಗಾಳಿಯನ್ನು ಕುಡಿದು ಜ್ಞಾನ ತಪ್ಪಿ ಬಿದ್ದುಕೊಂಡರು. ಎಂ, ರರ್ಯನ್ ಎಂಬಿಬ್ಬರು ಸಬ್ ಇನ್ಸ್ಪೆಕ್ಟರುಗಳು ಇದನ್ನು ಕೇಳಿ ಅಲ್ಲಿಗೆ ಹೋಗಿ, ಸೋನೂಪರಿ, ರಾಮಚಂದ್ರ ಗಣು ಎಂಬಿಬ್ಬರನ್ನು ಹಗ್ಗಕಟ್ಟಿ ಆ ಚರಂಡಿಯೊಳಕ್ಕೆ ಇಳಿಸಿ, ಬಿದ್ದಿದ್ದ ಐದು ಮಂದಿಯನ್ನೂ ಮೇಲಕ್ಕೆ ಎತ್ತಿಸಿದರು. ಪರೀಕ್ಷೆ ಮಾಡುವಲ್ಲಿ ಆ ಪೈಕಿ ಮೂರು ಮಂದಿಗೆ ಪ್ರಾಣ ಹೋಗಿತ್ತು. ಇನ್ನಿಬ್ಬರಿಗೆ ಚಿಕಿತ್ಸೆ ಮಾಡಿಸಿ ಬದುಕಿಸಿದರು

❖❖❖

ರಾಜಮಹೇಂದ್ರಿ ಜಿಲ್ಲೆಗೆ ಸೇರಿದ ಕಾಕಿನಾಡಾದಲ್ಲಿ ಕಳೆದ ವಾರ ಒಂದು ದಿನ ಸಾಯಂಕಾಲ ಒಬ್ಬ ವಿದ್ಯಾರ್ಥಿಯು ಬೀದಿಯಲ್ಲಿ ಹೋಗುತ್ತಿರುವಾಗ "ವಂದೇ ಮಾತರಂ" ಎಂಬದಾಗಿ ಕೂಗಿಕೊಂಡನು. ಮೇಜರ್ ಕೆಂಪ್ ಎಂಬ ಅಲ್ಲಿನ ಸಿವಿಲ್ ಸರ್ಜನರವರು ಅದನ್ನು ಕೇಳಿ ಆ ಹುಡುಗನನ್ನು ಹಿಡಿದು ಚನ್ನಾಗಿ ಹೊಡೆದು ಕೆಡವಿ ರಕ್ತ ಒರುತ್ತಿರುವಾಗ ಎಳೆದುಕೊಂಡುಹೋಗಿ ಪೋಲೀಸು ಠಾಣಾಕ್ಕೆ ಒಪ್ಪಿಸಿದರು. ಹುಡುಗನ ತಂದೆಯು ಎಷ್ಟು ಪ್ರಯತ್ನಪಟ್ಟರೂ ಆಸ್ಪತ್ರೆಯವರ್ಯಾರೂ ಬಂದು ಚಿಕಿತ್ಸೆ ಮಾಡದೆ ಹೋದರು. ಈ ಸಂಗತಿಯು ಹಿಂದು ಜನರಲ್ಲಿ ತುಂಬಾ ಅಸಮಾಧಾನವನ್ನುಂಟುಮಾಡಿತು. ಆ ರಾತ್ರಿ ಅನೇಕ ಜನರು ಯೂರೋಪಿಯನ್ನರ ಕ್ಲಬ್ ಎಂಬ ಮನೆಗೆ ನುಗ್ಗಿ ಸಾಮಾನು ಮುಂತಾದ್ದನ್ನು ಒಡೆದುಹಾಕಿ ದಾಂಧಳೆ ನಡಸಿದರು. ಡೆಪ್ಯುಟಿ ಕಲೆಕ್ಟರನರು ಪೋಲೀಸ್ ಸಿಬ್ಬಂದಿಯ ಸಮೇತ ಹೋದಾಗ ಅವರನ್ನೂ ಕಲ್ಲುಗಳಿಂದ ಹೊಡೆದು ಡೆಪ್ಯುಟಿ ಕಲೆಕ್ಟರಿಗೆ ಗಾಯಮಾಡಿದರು. ತರುವಾಯ ರಾಜಮಹೇಂದ್ರಿಯಿಂದ ೫೦ ಜನ ಪೋಲೀಸಿನವರೂ ಸೂಪರಿಂಟೆಂಡೆಂಟರೂ ಹೋಗಿ ಆ ಊರಿನಲ್ಲಿ ಗಲಭೆಯೇನೂ ನಡೆಯದಂತೆ ನೋಡಿಕೊಳ್ಳುತ್ತಿದಾರೆ. ಈ ಮಧ್ಯೆ ಆ ಹುಡುಗನನ್ನು ಹೊಡೆದ ಸಿವಿಲ್ ಸರ್ಜನರು ಆ ಸ್ಥಳದಿಂದ ಎಲ್ಲಿಗೋ ಹೋಗಿರುತ್ತಾರೆಂದು ತಿಳಿಯುವದು

❖❖❖

ಕಳೆದ ವಾರ ಇಂಡಿಯಾ ಗವರ್ನಮೆಂಟಿನವರು ಪಂಜಾಬಿನಲ್ಲೂ ಪೂರ್ವಬಂಗಾಳಾ ಅಧಿಪತ್ಯದಲ್ಲೂ ಪ್ರಜಾ ನೆಮ್ಮದಿಗೆ ಭಂಗವುಂಟಾಗಿರುವುದನ್ನು ನೋಡಿ ಇನ್ನೊಂದು ಹೊಸ ಹುಕುಮನ್ನು ಕೊಟ್ಟಿರುತ್ತಾರೆ. ಅದರ ಮುಖ್ಯಾಭಿಪ್ರಾಯವೇನೆಂದರೆ—ಈಚೆಗೆ ಕೆಲವು ಇಂಗ್ಲಿಷಿನ ಮತ್ತು ದೇಶಭಾಷೆಯ ವರ್ತಮಾನಪತ್ರಿಕೆಗಳು ಪ್ರಜೆಗಳ ಮನಸ್ಸನ್ನು ಕೆಡಿಸಿ ಅವರನ್ನು ಸರ್ಕಾರದವರ ಮೇಲೆ ಎತ್ತಿ ಕಟ್ಟುವಂಥಾ, ಒಂದು ಗುಂಪಿನವರಿಗೆ ಇನ್ನೊಂದು ಗುಂಪಿನವರಮೇಲೆ ಹೊಟ್ಟೆಕಿಚ್ಚು ಅಸಮಾಧಾನಗಳು ಹುಟ್ಟುವಂಥಾ, ಗವರ್ನಮೆಂಟಿನವರಲ್ಲಿ ಪ್ರಜೆಗಳಿಗೆ ಅತೃಪ್ತಿಯನ್ನುಂಟುಮಾಡುವಂಥಾ, ಮತ್ತು ಪ್ರಜಾ ನೆಮ್ಮದಿಗೆ ಭಂಗಕರವಾದ ಸಂಗತಿಗಳನ್ನು ನಾನಾ ರೀತಿಯಲ್ಲಿ ಪ್ರಕಟಿಸುತ್ತಾ ಬಂದಿರುತ್ತಾರೆ. ಆದರೆ ವರ್ತಮಾನ ಪತ್ರಿಕೆಗಳಿಗಿರುವಂಥಾ ಸಹಜವಾದ ಸ್ವಾತಂತ್ರ್ಯವನ್ನು ಕಡಮೆಮಾಡಬೇಕೆಂಬುವುದು ಗವರ್ನಮೆಂಟಿನವರಿಗೆ ಸಂತೋಷಕರವಾಗಿಲ್ಲ. ಈ ರಾಷ್ಟ್ರದ ಪ್ರಜೆಗಳು ಅಪಾರವಾಗಿಯೂ ನಾನಾ ಪಂಗಡಗಳಾಗಿಯೂ ಇರುವರು. ಇಂಥವರ ನೆಮ್ಮದಿ ಸುಖಸಂತೋಷಗಳನ್ನು ಕಾಪಾಡಿಕೊಂಡು ಬರುವುದು ಗವರ್ನಮೆಂಟಿನವರ ಕರ್ತವ್ಯವಾಗಿರುತ್ತದೆ. ವರ್ತಮಾನ ಪತ್ರಿಕೆಗಳು ಪ್ರಜೆಗಳಲ್ಲಿ ರಾಜದ್ರೋಹಕರವಾದಂಥಾ ಮತ್ತು ಪರಸ್ಪರವಾದ ದ್ವೇಷಾಸೂಯೆಗಳನ್ನು ಹೆಚ್ಚು ಮಾಡುವಂಥಾ ವಿಚಾರಗಳನ್ನು ಕುರಿತು ಬರೆದು ಪ್ರಕಟಿಸುವುದನ್ನು ಪಿನಲ್ ಕೋಡಿನ ನಿಬಂಧನೆಗಳಲ್ಲಿ ಕಂಡಂತೆ ದರ್ಯಾಪ್ತಿಯ ಮೂಲಕ ತಡೆದು ನಿಲ್ಲಿಸುವುದು ಪರಮಾವಶ್ಯವಾಗಿದೆ. ಆಯಾ ಅಧಿಪತ್ಯಗಳ ಗವರ್ನಮೆಂಟಿನವರು ಅಂಥಾ ವಿಷಯಗಳನ್ನು ಬರೆದು ಪ್ರಕಟಿಸುವ ವರ್ತಮಾನ ಪತ್ರಿಕೆಗಳ ಸಂಪಾದಕರನ್ನು ಹಿಡಿದು ದರ್ಯಾಪ್ತಿ ಮಾಡುವುದಕ್ಕೆ ಅವರಿಗೆ ಅಧಿಕಾರ ವಹಿಸಲಾಗಿರುತ್ತದೆ. ವರ್ತಮಾನ ಪತ್ರಿಕೆಗಳ ಸಂಪಾದಕರು ಈ ಸಂಗತಿಯನ್ನು ತಿಳಿದುಕೊಂಡು ಎಚ್ಚರಿಕೆಯಿಂದ ತಮ್ಮ ಕರ್ತವ್ಯವನ್ನು ನಡಸಿಯಾರೆಂದು ನಿರೀಕ್ಷಿಸಲ್ಪಟ್ಟಿದೆ ಎಂಬುದೇ

❖❖❖

ಮಂಗಳೂರಿನಿಂದ ೧೬ ಮೈಲಿ ದೂರದಲ್ಲಿರುವ ಬಂಟ್ವಾಳವೆಂಬ ಊರಿನಲ್ಲಿ ಒಬ್ಬ ಮಹಾ ಬಲಿಷ್ಠನ ವಿಷಯವಾಗಿ ಒಂದು ವಿಶೇಷವಾದ ಸಂಗತಿಯು ಪ್ರಕಟವಾಗಿದೆ. ಆ ಊರಿನಲ್ಲಿರುವ ಒಬ್ಬ ಬಲಿಷ್ಠನು ಕಾಫಿ ಬೀಜ ತುಂಬಿದ ಮೂರು ಭಾರೀ ಗೋಣಿ ಚೀಲಗಳನ್ನು ಒಂದೇ ಸಲ ಕಾರ್ಖಾನೆಯಿಂದ ಹೆಗಲ ಮೇಲೊಂದು, ಎರಡು ಕಂಕುಳಲ್ಲೂ ಎರಡು, ಈ ರೀತಿ ಹೊತ್ತುಕೊಂಡು ಹೋಗಿ ಸಮುದ್ರದ ಬಳಿ ದೋಣಿಗಳಿಗೆ ಹಾಕುತ್ತಿದ್ದನು. ಈಚೆಗೆ ಕಾರಣಾಂತರದಿಂದ ಅಲ್ಲಿನ ವರ್ತಕರು ಅವನ ಮೇಲೆ ಕ್ರಿಮಿನಲ್ ಮೊಕದ್ದಮೆ ತಂದರು. ಮ್ಯಾಜಿಸ್ಟ್ರೇಟರು ವಾರಂಟು ಕೊಟ್ಟು ಅವನನ್ನು ಹಿಡಿದು ತರುವಂತೆ ಹೇಳಿದರು. ಒಬ್ಬ ಪೋಲೀಸ್ ಹೆಡ್ ಕಾನ್ಸ್ಟೇಬಲೂ ಇಬ್ಬರು ಪೋಲೀಸಿನವರೂ ವಾರಂಟುಸಹಿತ ಅವನ ಮನೆಗೆ ಹೋಗಿ ಅವನನ್ನು ನೋಡಿದ ಕೂಡಲೇ ಹೆದರಿದವರಾಗಿ ಅವನ ಸಂಗಡ ಮಾತನಾಡುತ್ತಾ ಇದ್ದು ಅವನನ್ನು ಊರಾಚೆ ಒಬ್ಬ ವರ್ತಕನ ಅಂಗಡಿ ಬಳಿಗೆ ಕರೆದುಕೊಂಡು ಹೋದರು. ಅಲ್ಲಿ ಹೆಡ್ ಕಾನ್ಸ್ಟೇಬಲು ಅವನಿಗೆ ವಾರಂಟನ್ನು ತೋರಿಸಿ, ನೀನು ಕೈದಿಯಾಗಿದ್ದೀಯೆ ಎಂದು ತಿಳಿಸಿದರು. ಆ ಬಲಿಷ್ಠನಾದ ಮಾಪಿಳ್ಳೆಯು ಕೂಡಲೇ ಕುಪಿತನಾಗಿ ಹೆಡ್ ಕಾನ್ಸ್ಟೇಬಲನ್ನು ಮುಖದ ಮೇಲೆ ಒಂದೇಟು ಕೊಟ್ಟು ಕೆಡವಿದನು. ಆಗ ಒಬ್ಬ ಪೋಲೀಸಿನವನು ಬಂದು ದೊಣ್ಣೆಯಿಂದ ಆ ಮಾಪಿಳ್ಳೆಯನ್ನು ಚನ್ನಾಗಿ ಹೊಡೆದನು. ರಕ್ತಪ್ರವಾಹ ಹೊರಡುತ್ತಿದ್ದರೂ ಅವನು ಆ ಇಬ್ಬರು ಪೋಲೀಸಿನವರನ್ನೂ ಹೊಡೆದು ಕೆಡವಿದನು. ಅಷ್ಟರೊಳಗೇ ಇನ್ನು ಆರು ಮಂದಿ ಪೋಲೀಸಿನವರು ಹೋಗಿ, ಬಿದ್ದುಕೊಂಡಿದ್ದ ಪೋಲೀಸಿನವರ ಸಹಾಯಕ್ಕೆ ನಿಂತರು. ಮಾಪಿಳ್ಳೆಯು ಆ ಆರು ಮಂದಿಯನ್ನೂ ಎತ್ತಿ ಕಿತ್ತಿದ್ದು ಒಂದು ಕಳ್ಳಿಕ್ಕೆ ಹಾಕಿಬಿಟ್ಟು, ಬಿದ್ದಿದ್ದ ಹೆಡ್ ಕಾನ್ಸ್ಟೇಬಲನ್ನು ಕಲ್ಲುಗಳಿಂದ ಹೊಡೆಯುತ್ತಾ ಇದ್ದನು. ಆಗ ಸುಮಾರು ಹನ್ನೆರಡು ಜನ ಪೋಲೀಸಿನವರು ಬಂದು ಅವನ ಮೇಲೆ ನುಗ್ಗಿ ಬಹಳ ಹೊತ್ತು ಹೆಣಗಾಡಿ ಕಡೆಗೆ ಹಿಡಿದು ಅವನ ಕೈ ಕಾಲುಗಳಿಗೆ ಕೋಳಾ ಹಾಕಿ ಪೋಲೀಸ್ ಠಾಣಾಕ್ಕೆ ಕರೆದುಕೊಂಡು ಹೋದರು. ಈಗ ಮೊಕದ್ದಮೆ ವಿಚಾರಣೆಯಾಗುತ್ತಿದೆ

ವಿದೇಶ ವರ್ತಮಾನಗಳು.

ರಷ್ಯಾ ಚಕ್ರವರ್ತಿಯವರ ಒಬ್ಬ ಕುಮಾರ್ತೆಗೆ ತುಂಬಾ ಕಾಯಿಲೆಯಾಗಿದೆ ಎಂತಲೂ ಚಕ್ರವರ್ತಿನಿಯವರೇ ರೋಗಿಗೆ ಶೈತ್ಯೋಪಚಾರಾದಿಗಳನ್ನು ಮಾಡುತ್ತಿದಾರೆಂತಲೂ ತಂತೀವರ್ತಮಾನ ಬಂದಿದೆ

❖❖❖

ಸ್ವೀಡನ್ ರಾಜ್ಯದಲ್ಲಿ ಅಪರಾಧಿಯಾದವನು ತಾನಾಗಿಯೇ ಕೊಲೆ ಮಾಡಿದ್ದುಂಟೆಂದು ಒಪ್ಪಿಕೊಂಡಪಕ್ಷದಲ್ಲಿ ಅಂಥಾವನನ್ನು ಗಲ್ಲಿಗೆತ್ತಬೇಕೆಂತಲೂ ಇಲ್ಲವಾದ ಪಕ್ಷದಲ್ಲಿ ಗಲ್ಲಿಗೆ ಹಾಕಕೂಡದೆಂತಲೂ ಕಾನೂನ್ ಮಾಡಿದಾರೆ

❖❖❖

ರಷ್ಯಾ ರಾಜ್ಯಕ್ಕೆ ಸೇರಿದ ರೈಗಾ ಪಟ್ಟಣದ ಬಂದೀಖಾನೆಯಲ್ಲಿ ಫಿತೂರಿ ನಡಸಿ ದಂಗೆ ಕೃತ್ಯದಲ್ಲಿ ಸೇರಿದ್ದ ಎಂಟು ಜನ ರಾಜದ್ರೋಹಿಗಳನ್ನು ಸರ್ಕಾರದವರು ದರ್ಯಾಪ್ತು ಮಾಡಿ ಅವರಿಗೆಲ್ಲಾ ಮರಣದಂಡನೆಯನ್ನು ವಿಧಿಸಿರುತ್ತಾರೆ

❖❖❖

ಚೀನಾ ರಾಜ್ಯಕ್ಕೆ ಸೇರಿದ ಅಮಾಯ ಸ್ವಾಟೋ ಎಂಬೀ ಪಟ್ಟಣಗಳ ನಡುವೆ ಸರ್ಕಾರಿ ಸೈನಿಕರಿಗೂ ದಂಗೆಕೋರರಿಗೂ ಸಂಧಿಯುಂಟಾಗಿ ಘೋರ ಯುದ್ಧ ನಡೆಯಿತು. ೨೦೦ ಜನರು ಕೊಲ್ಲಲ್ಪಟ್ಟರು. ದಂಗೆಯವರು ಹಿಮ್ಮೆಟ್ಟಿ ಹೋದರು. ಇವರ ಬಳಿ ಸರಿಯಾದ ಯುದ್ಧ ಸಾಮಗ್ರಿಗಳಿಲ್ಲವೆಂದು ತಿಳಿದು ಬಂದಿದೆ

❖❖❖

ಪೋರ್ಚುಗೀಸಿಯ ಮುಖದಲ್ಲಿರುವ ಟಿಹ್ರೀನ್ ಎಂಬ ತೀರಪಟ್ಟಣದಲ್ಲಿ ಪ್ರಚಂಡಗಾಳಿಯೂ ಮಳೆಯೂ ಪ್ರಾಪ್ತವಾಗಿ ದೇಶೀಯ ಜನರು ವಾಸಮಾಡುವ ಮನೆಗಳಲ್ಲಿ ಅರ್ಧಭಾಗವೆಲ್ಲಾ ನಾಶಹೊಂದಿತು. ಭಾರೀ ಮನೆಗಳೂ ಕೆಲವು ಅಪಾಯಕ್ಕೆ ಗುರಿಯಾದವು. ಬಹಳ ಜನರು ಪ್ರಾಣ ಕಳೆದುಕೊಂಡಿರಬಹುದೆಂದು ಊಹಿಸಲ್ಪಟ್ಟಿದೆ.

❖❖❖

ಈಜಿಪ್ಟ್ ರಾಜ್ಯದಲ್ಲಿ ಮನೆ ಮಠಗಳನ್ನು ಕಟ್ಟಿಕೊಂಡು ಆಸ್ತಿಪಾಸ್ತಿಗಳನ್ನು ಮಾಡಿಕೊಂಡಿರುವ ಪ್ರಜೆಗಳು ೧,೧೨೮,೦೬,೩೫೯ ಮಂದಿ ಎಂತಲೂ, ಈ ಪೈಕಿ ೫೬,೧೮,೬೮೪ ಮಂದಿ ಗಂಡಸರೆಂತಲೂ ಉಳಿದವರು ಹೆಂಗಸರೆಂತಲೂ ತಿಳಿದು ಬರುತ್ತದೆ. ಕಳೆದ ೧೮೯೭ರಲ್ಲಿ ಗೊತ್ತುಮಾಡಿದ ಪ್ರಜಾ ಸಂಖ್ಯೆಗಿಂತ ಈಗಿನ ಪ್ರಜಾ ಸಂಖ್ಯೆಯು ೧೫ ಲಕ್ಷ ಜಾಸ್ತಿಯಾಗಿರುತ್ತದೆ

❖❖❖

ಜರ್ಮನಿ ರಾಜ್ಯದ ಚಕ್ರವರ್ತಿಗಳ ಬಳಿಯಲ್ಲೇ ಇದ್ದು ಅಧಿಕಾರ ನಡಸುತ್ತಿರುವ ಮೂರು ಮಂದಿ ದೊಡ್ಡ ಮನುಷ್ಯರು ಪಕ್ಷವಾಗಿ ತಮ್ಮ ಕಡೆಯ ಜನರಿಗೇನೇ ನೌಕರಿಗಳನ್ನು ಕೊಡಿಸುತ್ತಿದಾರೆಂದು ಅಲ್ಲಿನ ವರ್ತಮಾನ ಪತ್ರಿಕೆಗಳು ಆಕ್ಷೇಪಣೆಮಾಡಲಾರಂಭಿಸಿವೆವು. ಇದನ್ನು ನೋಡಿ ಆ ಮೂರು ಮಂದಿಯೂ ತಮ್ಮ ಕೆಲಸಗಳಿಗೆ ರಾಜೀನಾಮೆ ಕೊಟ್ಟುಬಿಟ್ಟರೆಂದು ತಂತೀವರ್ತಮಾನ ಬಂದಿದೆ

❖❖❖

ಆಫ್ರಿಕದ ಉತ್ತರಭಾಗದಲ್ಲಿರುವ ಮೊರೊಕ್ಕೊ ಸಂಸ್ಥಾನದಲ್ಲಿ ಈಚೆಗೆ ಒಬ್ಬ ಮುಖಂಡನೆದ್ದು ದೇಶದೊರೆತನಕ್ಕೆ ತಾನು ಹಕ್ಕುದಾರನೆಂದು ಜನರನ್ನು ಕಟ್ಟಿಕೊಂಡು ದಾಂಧಳೆ ನಡಸುತ್ತಿದಾನೆ. ಕಳೆದ ತಿಂಗಳಲ್ಲಿ ಅಲ್ಲಿನ ಸುಲ್ತಾನರ ಸೈನಿಕರಿಗೂ ಈ ದೊಡ್ಡಮನುಷ್ಯನ ಕಡೆಯವರಿಗೂ ಭಯಂಕರವಾದ ಯುದ್ಧಗಳು ನಡೆದವು. ರಣರಂಗವೆಲ್ಲಾ ಹೆಣಗಳಿಂದಲೂ ರಕ್ತಪ್ರವಾಹದಿಂದಲೂ ತುಂಬಿ ಬಹು ದುಃಖಕರವಾಗಿತ್ತು. ಸುಲ್ತಾನರ ಸೈನ್ಯವು ಸೋತುಹೋಗಿ ಹಿಮ್ಮೆಟ್ಟುವುದಕ್ಕೂ ಅವಕಾಶವಿಲ್ಲದಂತಾಗಿರುವುದು

❖❖❖

ಚೀನಾ ರಾಜ್ಯಕ್ಕೆ ಸೇರಿದ ಕಿರಿಜಾ ಎಂಬ ಪಟ್ಟಣದಲ್ಲಿ ವರುಷಕ್ಕೊಂದು ಸಲ ಕೊಬ್ಬು ಬಹಳವಾಗಿ ಬೆಳೆದು ತುಂಬಾ ಗಾತ್ರವಾಗಿರು

ಪವರೆಲ್ಲಾ ಗುಂಪಾಗಿ ಹೊರಟು ಒಂದು ಉತ್ಸವವನ್ನು ನಡಿಸುವ ಪದ್ಧತಿಯುಂಟು ಲಕ್ಷಾಂತರ ಜನರು ಆ ದೊಳ್ಳುಹೊಟ್ಟೆಯು ಗುಜ್ಜಾರಿಗಳನ್ನು ನೋಡುವುದಕ್ಕೆ ಎಂದಿನಂತೆ ಈ ವರುಷವೂ ಆ ಸ್ಥಳದಲ್ಲಿ ಸೇರಿ, ಒಬ್ಬರಮೇಲೊಬ್ಬರು ಬಿದ್ದು ನೂಕಿ ನುಗ್ಗಾಡಿ ಒಂದು ಸೇತುವೆಯ ಮೇಲೆ ಹೋಗುತ್ತಿರುವಲ್ಲಿ ಸುಮಾರು ೩೦—೪೦ ಮಂದಿ ಸೇತುವೆ ಒಡಿಯುದೆ ನದಿಯೊಳಕ್ಕೆ ಉರುಳಿಬಿದ್ದು ಮೃತಪಟ್ಟರೆಂದು ತಂತೀವರ್ತಮಾನ ಬಂದಿದೆ

***

ಸ್ಪೇಯಿನ್ ದೊರೆಯವರು ರಾಜಧಾನಿಯಾದ ಮ್ಯಾಡ್ರಿಡ್ ಪಟ್ಟಣದಲ್ಲಿ ವಿವಾಹಮಾಡಿಕೊಂಡು ರಾಣಿಯವರ ಕೂಡ ಸಾರೋಟಿನಲ್ಲಿ ಕುಳಿತು ಮೆರವಣಿಗೆ ಮಾಡಿಕೊಂಡು ದೇವಸ್ಥಾನದಿಂದ ಅರಮನೆಗೆ ಬರುತ್ತಿರುವಾಗ್ಗೆ ಪ್ರಪಂಚದ ರಾಜರುಗಳನ್ನೆಲ್ಲಾ ನಿರ್ಮೂಲನಮಾಡಿಬಿಡಬೇಕೆಂಬ ದುಷ್ಟಜನರ ಗುಂಪಿಗೆ ಸೇರಿದವರು ಆ ರಾಜದಂಪತಿಗಳ ಗಾಡಿಗೆ ಒಂದಾನೊಂದು ಉಪ್ಪರಿಗೆ ಮೇಲಿನಿಂದ ಮದ್ದಿನ ಗುಂಡನ್ನು ಎಸೆದು ಅನಾಹುತ ಮಾಡಿದರೂ, ದೇವರ ದಯದಿಂದ ರಾಜದಂಪತಿಗಳು ಸುರಕ್ಷಿತರಾಗಿ ಅರಮನೆ ಸೇರಿದರು, ಆದರೆ ಅನೇಕ ಪ್ರಜೆಗಳು ಗಾಯಪಟ್ಟು ಬಹುಮಂದಿ ಮೃತಪಟ್ಟದ್ದು ನಮ್ಮ ವಾಚಕರಿಗೆ ತಿಳಿದಿರುವುದಷ್ಟೆ ಈಚೆಗೆ ಪೋಲೀಸಿನವರು ತಲಾಷ್‌ಮಾಡಿ ಆ ದುಷ್ಟರ ಪೈಕಿ ಏಳುಮಂದಿಯನ್ನು ಹಿಡಿದು ದಸ್ತಗಿರಿಮಾಡಲಾರಂಭಿಸಿದಾರೆ ಅವರ ಗುಂಪಿನವರು ಸರ್ಕಾರದವರೇನಾದರೂ ಆ ಏಳುಮಂದಿಗೂ ಶಿಕ್ಷೆವಿಧಿಸಿದ ಪಕ್ಷದಲ್ಲಿ ತುಂಬಾ ಗಲಭೆಯುಬ್ಬಿಸುವೆವೆಂದು ಹೆದರಿಸುತ್ತಿರುವರು

ಹುಲಿಯನ್ನು ಕೊಂದದ್ದು.

ಮಳವಳ್ಳಿ

ಮಳವಳ್ಳಿ ತಾಲ್ಲೂಕು ಹಲಗೂರು ಹೋಬಳಿಗೆ ಸೇರಿದ ಹಳ್ಳಿಗಳಿಗೆಲ್ಲಾ ಮೃತ್ಯುಸ್ವರೂಪವಾಗಿ ಒಬ್ಬನ ಸ್ಥಳದ ಪಗಲ್‌ನಲ್ಲಿ ಮನುಷ್ಯರನ್ನು ತಿನ್ನುವ ಒಂದು ಭಾರಿ ಹುಲಿ ಬಂದು ಸೇರಿಕೊಂಡು ಸುಮಾರು ಮೂರು ತಿಂಗಳಾಗುತ್ತಾ ಬಂತು ಅಲ್ಲದೆ ಭಕ್ಕಹಳ್ಳಿ ಗ್ರಾಮದಲ್ಲಿ ಒಂದು ಹೆಣ್ಣು ಹುಡುಗಿಯನ್ನೂ ನಂದೀಶ್ವರದಲ್ಲಿ ಒಂದು ಹುಡುಗಿಯನ್ನೂ ಕೊಂದು ತಿಂದುಬಿಟ್ಟಿತು ಮತ್ತು ಗುಂಡಾಪುರದಲ್ಲಿಯೂ ಕೋಡಿ ಹಳ್ಳಿಯಲ್ಲಿಯೂ ಸಹ ಇಬ್ಬರು ಗಂಡಸರಿಗೆ ಗಾಯ ಮಾಡಿತು ಇದರ ಅವಾಂತರಕ್ಕೆ ಈ ಪ್ರಾಂತ್ಯದ ಜನಗಳೆಲ್ಲಾ ಬಹಳ ಭಯಭ್ರಾಂತರಾಗಿ ಸ್ವಪ್ನಾವಸ್ಥೆಯಲ್ಲಿಯೂ ಈ ಹುಲಿಯ ಭಯದಲ್ಲಿಯೇ ಕೊರಗುತ್ತಿದ್ದರು ಇಂಥಾ ಕ್ರೂರಜಂತುವನ್ನು ಕೊಲ್ಲುವದಕ್ಕೆ ಬಹಳ ಗಟ್ಟಿಗರಾದವರೆಲ್ಲಾ ಪ್ರಯತ್ನಪಟ್ಟು ಭಗ್ನಮನೋರಥರಾದರು ಇಂಥಾ ದುಷ್ಟ ಹುಲಿಯನ್ನು ನಮ್ಮ ಭೂಹಳ್ಳಿ ಪಟೇಲ್ ಮ|| ರಾ|| ಲಿಂಗೇಗೌಡರು ಪರೋಪಕಾರದ ಮೇಲೆ ದೃಷ್ಟಿಯಿಟ್ಟು ತಮ್ಮ ಪ್ರಾಣದ ಮೇಲೆ ಆಸೆಯನ್ನು ತೊರೆದು ಈ ಹುಲಿಯನ್ನು ಸಂಹಾರ ಮಾಡಿದರು ಈ ಪ್ರಾಂತ್ಯದ ಜನಗಳಿಗೆ ಬಂದಿದ್ದ ಅಪಮೃತ್ಯು ತೊಲಗಿ ಮಹೋಪಕಾರವಾಗಿ ಈ ಪುಣ್ಯಾತ್ಮರನ್ನು ಕೊಂಡಾಡುತ್ತಾ ಇರುತ್ತಾರೆ ದಯಾಳುಗಳಾದ ನಮ್ಮ ಸರ್ಕಾರದವರು ಈ ಪುಣ್ಯಾತ್ಮರಿಗೆ ತಕ್ಕ ಪ್ರೋತ್ಸಾಹ ಮಾಡುವರೆಂದು ಸರ್ವಜನಗಳೂ ಹಾರೈಸುತ್ತಾರೆ

ಮಂಗಳೂರು

ದಕ್ಷಿಣ ಕನ್ನಡಜಿಲ್ಲಾ ಮಂಗಳೂರ, ತಾಲ್ಲೂಕಿನ ಉಳ್ಳಾಲ ಪೇಟೆಯಲ್ಲಿ ಇದೇ ಜೂನು ತಾ ೩ರಲ್ಲು ಸಾಯಂಕಾಲ ಸುಮಾರು ೬ ಗಂಟೆ ಸಮಯದಲ್ಲಿ ಚೆಂಬು ಗುಡ್ಡೆಯೆಂಬ ಪೇಟೆ ಬದಿಯಲ್ಲಿ ಕಾಡಿನಲ್ಲಿ ತಿರುಗಾಡುತ್ತಿದ್ದ ಒಂದು ಹುಲಿಯು, ದನಗಳು ಗುಡ್ಡೆಯಿಂದ ಮೇಯ್ದುಕೊಂಡು ಬರುವ ಸಮಯದಲ್ಲಿ ಅವನ್ನು ಕಾಯುವ ಮನುಷ್ಯನನ್ನು ಅಟ್ಟಿಬಂತು ಆಗ್ಗೆ ಅವನು ಕೂಗಿಕೊಂಡು ಓಡಿಹೋಗುತ್ತಾ ತಪ್ಪಿಸಿಕೊಂಡನು ಆಗ್ಗೆ ಆ ಹುಲಿಯು ಅಲ್ಲಿದ್ದ ಒಂದು ಆಡನ್ನು ಕೊಂದು ನಂತರ ಒಂದು ದನವನ್ನು ಹಿಡಿಯಿತು ಈ ಸಮಯದಲ್ಲಿ ಮೇಲ್ಕಂಡ ಜನರು ಆ ಬೊಬ್ಬೆಯನ್ನು ಕೇಳಿ ಪೇಟೆಯಲ್ಲಿಯೂ ಮತ್ತು ಗುಡ್ಡೆ ಬಳಿಯಲ್ಲಿಯೂ ತಿರುಗಾಡುವ ಜನಗಳು ಕೂಡಿ ಆ ಹುಲಿಯನ್ನು ಹೊಡಿಸಲಿಕ್ಕೆ ಪ್ರಯತ್ನಪಡುವಾಗ್ಗೆ ಆ ಗುಂಪಿನಲ್ಲಿದ್ದ ಒಬ್ಬನು ಧೈರ್ಯದಿಂದ ಮುಂದರಿದು ಹೋಗಿ ತನ್ನ ಕೈಯಲ್ಲಿದ್ದ ಒಂದು ದೊಡ್ಡ ಕೋಲಿನಿಂದ, ಹಿಡಿದಿರುವ ದನವನ್ನು ತೆಗೆದುಕೊಂಡು ಹೋಗಲಿಕ್ಕೆ ತಯಾರಾಗಿದ್ದ ಹುಲಿಯ ತಲೆಯಲ್ಲಿ ಬಡಿದನು ಆ ಪೆಟ್ಟು ತಾಗಿದ ಕೂಡಲೆ ದನವನ್ನು ಬಿಟ್ಟು ಆ ಹೊಡೆದ ಮನುಷ್ಯನ ಕೈಯನ್ನು ಹಿಡಿದುಕೊಂಡಿತು ಆಗ್ಗೆ ಹತ್ತಿರ ಇದ್ದ ಜನರು ತಮ್ಮ ಕೈಯಲ್ಲಿದ್ದ ಕೋಲುಗಳಿಂದಲೂ ಕೆಲವರು ಕತ್ತಿಗಳಿಂದ ಹೊಡೆದು ಹುಲಿಯನ್ನು ಕೊಂದರು ಕೂಡಲೆ ಸದರಿ ಹುಲಿಯನ್ನು ಮತ್ತು ಆ ಸಹಾ ಮನುಷ್ಯನನ್ನು ಸಹಾ ಮಂಗಳೂರು ಡಿಪ್ಯುಟಿ ಕಲೆಕ್ಟರವರ ಮುಂದೆ ಹಾಜರುಪಡಿಸಿದರು ಅವರು ಆ ಮನುಷ್ಯನನ್ನು ಕೂಡಲೆ ಆಸ್ಪತ್ರೆಗೆ ಕಳುಹಿಸಿದರು.

ತಾಲ್ಲೋಕು ವರ್ತಮಾನಗಳು

ದೊಡ್ಡಬಳ್ಳಾಪುರ—ಇಲ್ಲಿ ೭ ೫ ನೇ ತಾ ಒಂದು ಹದ ಮಳೆಯಾಯಿತು ಇದರಿಂದ ಸಾಂತಿಭೇದಿಯ ಗಲಾಟೆಯು ಕಮನಕ್ಕೆ ಬಂದಿದೆ ೮-೬ ತಾ ವರೆಗೆ ಇಲ್ಲಿ ಎರಡು ಕಡೆಯಲ್ಲಿ ಗ್ರಾಮದೇವತೆಯ ಉತ್ಸವಾದಿಗಳನ್ನು ಬಹು ಸಂಭ್ರಮದಿಂದ ಮಾಡಿದರು ಕಡಿಯುವದಕ್ಕೆ ಬಿಟ್ಟ ಕೋಣವನ್ನು ಬೀದಿಬೀದಿಯಲ್ಲಿ ಮೆರವಣಿಗೆ ಮಾಡಿದರು ಸರ್ವ ೬ನೇ ತಾ ದೇವಾಂಗದ ಚೇಗಟಗೆರೆ ಚೌಡಪ್ಪನವರು ಬಡಜನರಿಂದ ಎಲ್ಲಾ ಜನರಿಗೆ ಅನ್ನ ಹಾಕಿಸಿದರು. ಸುಮಾರು ೩ ಸಾವಿರ ಜನರು ಊಟಮಾಡಿ ತೃಪ್ತಿಪಟ್ಟುಕೊಂಡು ಹೋದರು ಈ ಕಾರ್ಯ ಇಲ್ಲಿನ ಜನರಿಗೆ ತುಂಬಾ ಸಂತೋಷವಾಗಿದೆ.—ಚಿಕ್ಕಪೇಟೆಯಲ್ಲಿ ಕೇಶವಪ್ಪನವರ ಮಗ ಸುಮಾರು ೩೫ ವಯಸ್ಸಿನ ಕೃಷ್ಣಮೂರ್ತಿ ಎಂಬವನು ಏನೋ ಮನಸ್ತಾಪದಿಂದ ಜೂನ್ ೬ನೇ ತಾ ತೋಟದಲ್ಲಿ ಗಲ್ಲಿಗೆ ಹಾಕಿಕೊಂಡು ಸತ್ತನು ನಮ್ಮ ಜಮಾದಾರರು ವಿಚಾರಣೆ ಬಿ...

ಹೋಗಿದ್ದರು—ಜೂನ್ ೪ನೇ ತಾ ಮೆ|| ಭಾಭಾ ಸಾಹೇಬರು ನಂದೀ ಮಾರ್ಗದಿಂದ ಈ ಊರಿನ ಮಾರ್ಗವಾಗಿ ಬೆಂಗಳೂರಿಗೆ ಹೋದರು— ಇಲ್ಲಿದ್ದ ಮುನ್ಸಿಫ್ ಕೋರ್ಟ್ ಈ ತಿಂಗಳ ಕಡೆಗೆ ಚಿಕ್ಕಬಳ್ಳಾಪುರಕ್ಕೆ ವರ್ಗವಾಗಿ ಹೋಗುತ್ತದೆ ಇದರಿಂದ ಇಲ್ಲಿರುವ ಜನರಿಗೆ ತುಂಬಾ ಅನಾನುಕೂಲವೆಂದು ವ್ಯಸನಪಡುತ್ತಾರೆ ಈ ಕೋರ್ಟಿನ ವಿಷಯ ಮಾತನಾಡುವದಕ್ಕಾಗಿ ಇಲ್ಲಿನ ಮುನಿಸಿಪಲ್ ಮೆಂಬರುಗಳು ಒಂದುವ ಬುಧವಾರ ಮೈಸೂರಿಗೆ ಹೋಗುತ್ತಾರೆಂಬ ವದಂತಿಯು ಇದೆ — ಈಗ ಇಲ್ಲಿರುವ ಡಾಕ್ಟರ್ ಮೆ|| ಸದಾಶಿವಪಿಳ್ಳೆಯವರು ಕಾಯಿಲೆ ಜನರ ಮನೆಗಳಿಗೆ ಹೋಗಿ ಬಹು ಎಚ್ಚರಿಕೆಯಿಂದ ರೋಗಿಗಳನ್ನು ನೋಡುತ್ತಾರೆ. ಬೇರೆ ಕಡೆಗಳಲ್ಲಿ ಸರ್ಕಾರದವರು ನೇಟಿವ್ ವೈದ್ಯರನ್ನು ನೇಮಿಸಿದ್ದಾರಲ್ಲ ? ಇಲ್ಲಿ ಯಾಕೆ ನೇಮಿಸಬಾರದು ಎಂದು ಮಾತನಾಡುತ್ತಾರೆ

ಹಾಸನ—ಇಲ್ಲಿಗೆ ನಾಲ್ಕೈದು ಹದ ಮಳೆಯಾಯಿತು ರೈತರೆಲ್ಲಾ ತಮ್ಮ ಹೊಲ ಗದ್ದೆಗಳನ್ನು ಬಿತ್ತಿಕೊಂಡು ಸಸಿಗಳನ್ನು ನೆಡುತ್ತಲಿದಾರೆ ತಾ ೬ ನೇ ಗುರುವಾರ ಒಂದು ಹದ ಒಳ್ಳೇ ಮಳೆಯಾಯಿತು ಆ ದಿವಸ ಸುಮಾರು ೪ ಗಂಟೆ ಸಮಯದಲ್ಲಿ ಈ ಊರಿಗೆ ೩ ಮೈಲಿ ದೂರದಲ್ಲಿರುವ ಬೂವನಹಳ್ಳಿಯ ಹತ್ತಿರ ಅದೇ ಊರ ಚನ್ನೇಗೌಡನ ಸುಮಾರು ಹತ್ತು ವರ್ಷದ ಮಗನು ದನಾ ಕಾಯುವುದಕ್ಕೆ ಹೋಗಿದ್ದವನು ಮಳೆ ಗಾಬರಿಯಿಂದ ದನಗಳನ್ನು ವಾಪಸು ಅಟ್ಟಿಕೊಂಡು ಬರುತ್ತಿರುವಾಗ ದಾರಿಯಲ್ಲಿ ಸಿಡಿಲುಬಡಿದು ಆ ಹುಡುಗನೂ ಅವನ ಒಂದು ದೊಡ್ಡ ಹಸು ಮತ್ತು ಎರಡು ಎತ್ತುಗಳು ಸಹ ಮೃತಪಟ್ಟವು ನಂತರ ಚನ್ನೇಗೌಡನು ದನಗಳು ಮನೆಗೆ ಬಂದದ್ದನ್ನು ನೋಡಿ ಹುಡುಗನು ಯಾತಕ್ಕೆ ಬರಲಿಲ್ಲವೆಂದು ಯೋಚನೆಮಾಡುತ್ತಾ ಅದೇ ಮಾರ್ಗವಾಗಿ ಹೋಗುತ್ತಿರುವಾಗ ದಾರಿಯಲ್ಲಿ ತನ್ನ ಮಗನೂ ಮತ್ತು ಮೂರು ಪಶುಗಳೂ ಸತ್ತು ಬಿದ್ದಿದ್ದದ್ದನ್ನು ನೋಡಿ ರೋದನ ಮಾಡುತ್ತಾ ಮೂರ್ಛೆ ಹೊಂದಿದನು ಅನಂತರ ಈತನ ರೋದನವನ್ನು ಕೇಳಿ ಓಡಿಬಂದು ಸತ್ತು ಬಿದ್ದಿದ್ದದ್ದನ್ನು ನೋಡಿದ ಆ ಗ್ರಾಮದ ಜನಗಳು ಬಹಳವಾಗಿ ವ್ಯಸನದಿಂದ ಮುಂದಿನ ಕಾರ್ಯವನ್ನು ಜರಿಗಿಸಿದರು - ಊರಿನ ಹವಾ ಕೆಟ್ಟುಹೋಗಿದೆ ಅನೇಕ ಮನೆಗಳಲ್ಲಿ ಜನಗಳು ಕೆಮ್ಮು, ಚಳಿ, ಜ್ವರ, ಮುಂತಾದ ಖಾಯಿಲೆಗಳಿಂದ ನರಳುತ್ತಿಲಿದಾರೆ ಈಗ ಬಂದಿರುವ ನಮ್ಮ ಹೊಸ ಡೆಪ್ಟಿ ಕಮಿಷನರ್ ಸಾಹೇಬರು ಊರು ಶುಚಿ ವಿಷಯದಲ್ಲಿ ಬಹಳ ಮುತುವರ್ಜಿ ವಹಿಸಿರುವದನ್ನು ನೋಡಿ ಜನಗಳಿಗೆಲ್ಲಾ ಬಹಳ ಸಂತೋಷವಾಗಿದೆ — ಈಗ್ಗೆ ಸುಮಾರು ೧೪ ತಿಂಗಳಿಂದ ದುದ್ದದ ಹತ್ತಿರ ಗೌರ್ನಮೆಂಟಿನವರು ಹೊಸದಾಗಿ ಏರ್ಪಡಿಸಿದ್ದ ಟೋಲ್ ಗೇಟನ್ನು ಗೌರ್ನಮೆಂಟಿನವರೇ ನಡಿಸುತ್ತಿದ್ದರು ಇದು ಮೊನ್ನೆ ೯ ನೇ ತಾ ಶನಿವಾರ ಹರಾಜು ಆಯಿತು ಕಂಟ್ರಾಕ್ಟರ್ ಮುನಿಸಾಮಿಯವರು ದರಖಾಸ್ತಿನಿಂದ ೫,೦೩೯ ರೂಪಾಯಿಗೆ ಗುತ್ತಿಗೆ ತೆಗೆದುಕೊಂಡರು

ಕಾರೇಕಾನಹಳ್ಳಿ—ನಾನು ಸ್ವಲ್ಪ ಗೃಹಕೃತ್ಯದ ಬಗ್ಗೆ ಕಾರೇಕಾನಹಳ್ಳಿಗೆ ಹೋಗಿದ್ದನು. ಅಲ್ಲಿಂದ ೩ ಮೈಲು ದೂರದಲ್ಲಿರುವ ಶ್ರೀ ವೆಂಕಟರಮಣ ಸ್ವಾಮಿಯ ಪುರಾತನ ದೇವಾಲಯವನ್ನೊಳಗೊಂಡಿರುವ ಕಲ್ಲಹಳ್ಳಿಗೆ ಹೋಗಬೇಕೆಂದು ಹೊರಟೆನು ಬೆಂಗಳೂರಿಂದ ಕಾರೇಕಾನಹಳ್ಳಿಗೆ ಹೋಗುವ ರಸ್ತೆಯಲ್ಲಿ ಸ್ವಲ್ಪ ದೂರ ಗಾಡಿಯಲ್ಲಿ ಹೋಗಬೇಕಾಯಿತು ದಾರಿಯಲ್ಲಿ ಸಿಕ್ಕಿದ ಅರ್ಕಾವತಿ ಹೊಳೆಯನ್ನು ದಾಟುವಾಗ ಪಟ್ಟ ಶ್ರಮೆಯು ಹೇಳತೀರದು ಈ ಬಿಸಿಲುಕಾಲದಲ್ಲಿಯೇ ಈ ಅವಸ್ಥೆಯಾದರೆ ನದಿಗಳಿಗೆ ಯೌವನ ಕಾಲವಾದ ಮಳೆಗಾಲದಲ್ಲಿ ಕೇಳಬೇಕಾದ್ದೇನು ! ಇದಲ್ಲದೆ ಹೊಳೆ ತುಂಬಿದಾಗ ಎರಡು ಕಡೆಯ ಗಾಡಿಗಳು ಅಲ್ಲಲ್ಲೇ ನಿಂತು ಇಳಿದು ಬಳಿಕ ಹಾದುಹೋಗಬೇಕಂತೆ ಇವರಿಂದ ತೊಂದರೆಯಲ್ಲವೇ ? ನೆಲ ಕಲ್ಲುಗಳು ಹಾಸಿ ಗಟ್ಟಿಮಾಡಿದ ರಸ್ತೆಗಳಿಗೂ ದಾರಿಯಲ್ಲಿ ಒತ್ತಾಗಿ ಬೆಳದಿರುವ ಸಾಲು ಮರಗಳಿಗೂ ನದಿಗಳ ಮೇಲಿನ ಸೇತುವೆಗಳಿಗೂ ಮೈಸೂರು ದೇಶವು ಹೆಸರುಗೊಂಡಿದ್ದಾಗ್ಯೂ ಈ ಚಿಕ್ಕ ನದಿಯ ಮೇಲೆ ಸೇತುವೆಗೆ ಯಾಕೆ ಯತ್ನಮಾಡಲಿಲ್ಲವೋ ತಿಳಿಯದು ಈ ಅಗವಾಲನ್ನು ಪ್ರತಿನಿಧಿಗಳು ದಸರಾ ಮೀಟಿಂಗಿನಲ್ಲಿ ಎತ್ತಿ ಮಾತನಾಡದ ಕಾರಣ, ಸರಕಾರದವರು ಕೈಹಾಕಿ ಪುನಹಾ ಹಿಂತೆಗೆದ ಹಾಗೂ ತಿಳಿಯಬಂತು ದೊಡ್ಡ ಮನಸ್ಸು ಮಾಡಿ ಉದ್ಯುಕ್ತರಾದರೆ ಪ್ರಜೆಗಳಿಗೂ ಜಾನುವಾರುಗಳಿಗೂ ಉಂಟಾಗುವ ಸುಖವು ಅಷ್ಟಿಷ್ಟೆಂದು ಹೇಳಲಾಗದು — ಈ ತಾಲ್ಲೂಕಿನ ಸುತ್ತಮುತ್ತ ಕಾಲರಾ ಉಪದ್ರವ ಹಾವಳಿ ತಕ್ಕಮಟ್ಟಿಗೆ ಇರುವಂತೆ ತಿಳಿಯಬಂತು ನದಿಯ ನೀರನ್ನು ಕಾಯಿಸಿ, ಉಪಯೋಗಿಸಬೇಕೆಂದು ಡಂಗೂರವನ್ನೂ ಹಾಕಿಸಿದರು ಪದ್ಧತಿಯ ಪ್ರಕಾರ ದೇವತಾ ಪ್ರೀತ್ಯರ್ಥವಾಗಿ ಕೊಂಡವೆಂಬ ಉತ್ಸವ ನಡಿಸಿದರು ಗಜ ಅಗಲದ ೬—೩ ಗಜ ಉದ್ದದ ಹಳ್ಳವನ್ನು ತೋಡಿ ಅಲಂಕೃತವಾಗಿ ಮೆರವಣಿಗೆಯಲ್ಲಿ ವಾದ್ಯ ವೈಭವದೊಡನೆ ಬಂದ ೫—೬ ಖಂಡಿ ಕಟ್ಟಿಗೆಯನ್ನು ಅದರೊಳಕ್ಕೆ ತುಂಬಿ ಉರಿಸುತ್ತಿಸಿ ಸುಟ್ಟು ಜ್ವಲಿಸುವ ಕೆಂಡಗಳಾದ ಬಳಿಕ ಅರ್ಚಕನು ಕೆಂಡದ ಮೇಲೆ ಈ ಕಡೆಯಿಂದ ಆ ಕಡೆಗೆ ನಡೆದುಹೋಗುವನು ಇದಕ್ಕೆ ರಾತ್ರಿಯೆಲ್ಲಾ ಜಾಗರಣೆ ರಾತ್ರಿ ನಿದ್ದೆಗೆಟ್ಟು ಅಜೀರ್ಣಕ್ಕೆ ಮತ್ತಷ್ಟು ಅವಕಾಶಕೊಡದೆ ಊರನ್ನು ನಿರ್ಮಲವಾಗಿಟ್ಟರೆ ಕಾಯಿಲೆ ಎಂದಿಗೂ ತಲೆದೋರದಿಲ್ಲ — ಕ್ಲೋಸ್‌ಪೇಟೆಯಿಂದ ಕಾರೇಕಾನಹಳ್ಳಿಗೆ ಹೋಗುವ ರಸ್ತೆಯು ಬಹು ಕಿರಿದಾಗಿದೆ ಒಂದೆ ಸಂದುಸಲ ಎದುರುಬದುರಾಗಿ ಗಾಡಿಗಳು ಬಂದರೆ ಒಂದು ಗಾಡಿ ಹಾದುಹೋಗುವ ವರೆಗೂ ಮತ್ತೊಂದು ಗಾಡಿ ನಿಂತಿರಬೇಕು ರಾತ್ರಿಕಾಲದಲ್ಲಿ ಸಂಚಾರ ಮಾಡುವದಂತೂ ಕೇವಲ ಅಪಾಯಕರವಾಗಿದೆ ಇದನ್ನು ಬಿಡಾಯಿಸುವದಕ್ಕೆ ನಿಗಾ ಕೊಟ್ಟರೆ ಆದೀತು

ಚಿಕ್ಕಮಗಳೂರು—ಇಲ್ಲಿ ಪ್ಲೇಗು ಜೋರುತ್ತಲೆ ಇದೆ ರಾಗಿ, ಬತ್ತದ ಪೈರುಗಳೆಲ್ಲಾ ಚನ್ನಾಗಿವೆ ಇಲ್ಲಿ ನೆನ್ನೆ ಇಕ್ಕಾರ ಬೀದಿಯಲ್ಲಿ ಪ್ಲೇಗ್ ತಗಲಿದ ಸುಮಾರು ಏಳು ಮಂದಿಯೂ ತೀರಿಹೋದರು ಮುನಿಸಿಪಾಲಿಟಿಯವರು ಆ ಬೀದಿಯನ್ನು ಖಾಲಿ ಮಾಡಿಸಿ ಎಲ್ಲರನ್ನೂ ಪಡ್ಡುಗಳಿಗೆ ಕಳುಹಿಸಿದರು ಈಗ್ಗೆ ಸುಮಾರು ಹತ್ತು ದಿನ

ಗಳಿಂದಲೂ ಏನ ಗಲಾಟೆ ಕಾಣಲಿಲ್ಲ. ಮುನಿಸಿಪಾಲಿಟಿಯ... ಗಳುಗಳನ್ನೂ ಕಾವೆಗಳನ್ನೂ ತಗಡಿನ ಜಲಿಗಗಳನ್ನೂ ತರಿಸಿ... ಯಿಸುತ್ತಲಿದ್ದಾರೆ ಆದರೆ ಜನರಾದರೋ ಪಡ್ಡುಗಳಿಗೆ ಹೋಗ... ಈ ರೋಗದ ವ್ಯಾಪಕವನ್ನು ತಡೆಮಾಡಬೇಕೆಂದು ಭಗವಂ... ಪ್ರೇರಿಯಿಡುವರಾಗಿದ್ದಾರೆ — ಕಳೆದ ೨೪ ನೆ ತಾ ಇಲ್ಲಿನ ಗೌ... ಸ್ಕೂಲಿನ ಹೆಡ್ ಮಾಸ್ಟರ್ ಮೆ|| ಸಂಪತ್ತಯ್ಯಂಗಾರರು ಸರ್ಕಾರಿ... ಮಿಷನ್ ಸ್ಕೂಲುಗಳ ಬಾಲಕ ಬಾಲಕಿಯರನ್ನು ಕನ್ನಡ ಸ್ಕೂಲಿನ ಕಟ್ಟಡದಲ್ಲಿ ಸೇರಿಸಿ ಇಲ್ಲಿನ ದೊಡ್ಡ ಮನುಷ್ಯರನ್ನು ಆಹ್ವಾನ... ಗಳ ಮೂಲಕ ಬರಮಾಡಿಕೊಂಡು ಎಂಪೈರ್ ಡೇ ಉತ್ಸವವನ್ನು ಕ್ರಮವಾಗಿ ಆಚರಿಸಿದರು — ನಮ್ಮ ಡೆಪ್ಯುಟಿ ಕಮಿಷನರ್ ಮೆ|| ರಾಜ್ ಅರಸಿನವರಿಗೆ ತುಮಕೂರಿಗೆ ವರ್ಗವಾದಂತೆ ವರ್ತಮಾನ... ನ ಅಮಲ್ದಾರ್ ಮೆ|| ನಾರಾಯಣಸ್ವಾಮಿ ಅಯ್ಯಂಗಾರರನ್ನು ರ... ಕಮಿಷನರ ಆಫೀಸ್ ಮಾನೇಜರಾಗಿ ಬೆಂಗಳೂರಿಗೆ ವರ್ಗಾಯಿ... ರಿಂದ ಅವರ ಆಫೀಸಿನ ನೌಕರರೆಲ್ಲರೂ ಸೇರಿ, ತಮ್ಮ ಸಂಗಡ ... ಗ್ರೂಫ್ ಫೋಟೋ ತೆಗಿಸಿಕೊಂಡದ್ದಲ್ಲದೆ, ಇಲ್ಲಿನ ನೇಟಿವ್ ... ನಲ್ಲಿ ೬ನೇ ತಾ ಸಾಯಂಕಾಲ ಅಧಿಕಾರಿಗಳೇ ಮೊದಲಾದ ... ಎಲ್ಲಾ ದೊಡ್ಡ ಮನುಷ್ಯರನ್ನು ಬರಮಾಡಿಕೊಂಡು, ಎಲ್ಲರನ್ನೂ ... ಟೀ ಹಣ್ಣು ಹಂಪಲು ಮೊದಲಾದ ತಿಂಡಿ ಪದಾರ್ಥಗಳಿಂದಲೂ ಸ... ತದಿಂದಲೂ ಸಂತೋಷಪಡಿಸಿದರು ಮದ್ದಿನ ತಮಾಷೆ ಆದ ಮೇ... ಅಮಲ್ದಾರರನ್ನು ನೇಟಿವ್ ಕ್ಲಬ್ಬಿನಿಂದ ಮಾರ್ಕೆಟ್ ಮಾರ್ಗವಾಗಿ ... ಲೋಯರ್ ಕಛೇರಿಯ ಹಿಂಭಾಗದ ರಸ್ತೆಯಿಂದ ಕೋಟೆ ರಸ್ತೆಗೆ ... ಬಾಜಾ ಮೂಲಕ ಅವರ ಮನೆಗೆ ಮೆರವಣಿಗೆ ಮಾಡಿಸಿಕೊಂಡು ಕ... ದರು ಇವರು ಒಳ್ಳೆಯವರು, ಸಜ್ಜನರು, ಬಹು ಜನರ ಪ್ರೀತಿ ಗೌರವಗಳಿಗೆ ಯೋಗ್ಯರಾಗಿದ್ದರು ಇವರು ತಾಲ್ಲೋಕು ಶಿರಸ್ತೇದಾರರಿಗೆ ಚಾರ್ಜ್ ಕೊಟ್ಟು, ತಾ ೯ಕ್ಕೆ ಇಲ್ಲಿಂದ ಹೊರಡುವವ... ರಾರೆ — ಇಲ್ಲಿನ ಲಾಂದ್ರದ ಕಂಭಗಳಾದರೋ ಇದ್ದರೂ ಇಲ್ಲದೆಯೇ ಇರುತ್ತವೆ ಸಹ್ಯವದೇನೋ ತಪ್ಪಲಿಲ್ಲ. ಆದರೆ ಪ್ರಕಾಶವು ಮೇಣವೇ ಇಲ್ಲ ಹಚ್ಚಿದ ಒಂದು ಘಂಟೆಯ ವರಕ ಪ್ರಕಾಶಿಸು... ದ್ದ ಲಾಂದ್ರವು ಕೂಡಿಯ ಬೇಗ ನಂದ ಕಪ್ಪಾಗಿ ಹೋಗುತ್ತದೆ ಅಗ್ಗ ಎಣ್ಣೆಯನ್ನು ಉಪಯೋಗಿಸುವುದೇ ಕಾರಣ ಇದು ಮೈಸ್ ಪ್ರೆಸಿಡೆಂಟರಿಗಾದರೂ ತಿಳಿಯದ ಸಂಗತಿಯಲ್ಲ ಆದಕಾರಣ ಕಂಟ್ರಾಕ್ಟ್ ಮುನಿಸಿಪಾಲಿಟಿಯ ಅಧಿಕಾರಿಗಳು ಎಚ್ಚರಿಸುವದಲ್ಲದೆ ಮುಂದಿನ ವರ್ಷಕ್ಕೆ ಕಂಟ್ರಾಕ್ಟ್ ಮಾಡಿಕೊಳ್ಳುವವರಿಗೆ ದರವನ್ನು ಈಗ ಇರುವುದಕ್ಕಿಂತಲೂ ಸ್ವಲ್ಪ ಹೆಚ್ಚು ಕೊಟ್ಟು ಒಳ್ಳೇ ಎಣ್ಣೆಯನ್ನು ಉಪಯೋಗಿಸುವಂತೆ ಮಾಡಿದರೆ ಕತ್ತಲೆಕಾಲದಲ್ಲಿ ನಡೆಯುವವರಿಗೆ ಪ್ರಯೋಜನವಾದೀತು —ಇನ್ನು ಮೇಲೆ ಹೆಚ್ಚಾದ ಜಡಿ ಮಳೆಯು ಪ್ರಾರಂಭವಾಗಿದೆ, ಆದಕಾರಣ ಸಂತೆಯನ್ನು ಮೊದಲಿದ್ದ ಸ್ಥಳಕ್ಕೆ ಬದಲಾಯಿಸುವದು ಒಳ್ಳೇದು ಮೊದಲಿನ ಸ್ಥಳದಲ್ಲಿ ಅಂಗಡಿ ಮಳಿಗೆ ಸಾಮಾನುಗಳನ್ನು ಮಳೆ ಬಂದ ಕಾಲದಲ್ಲಿ ಇಟ್ಟುಕೊಳ್ಳುವುದಕ್ಕೂ ಜನರು ನಿಂತುಕೊಳ್ಳುವದಕ್ಕೂ ಸ್ಥಳ ಉಂಟು. ಊರಿನ ಜನರಿಗೆ ಸಮೀಪವಾಗಿದೆ ಆದ್ದರಿಂದ ನಮ್ಮ ಡೆಪ್ಯುಟಿ ಕಮಿಷನರವರು ಸಂತೆಯನ್ನು ಈಗಿನ ಸ್ಥಳದಿಂದ ಮೊದಲಿನ ಸ್ಥಳಕ್ಕೆ ಬದಲಾಯಿಸುವಂತೆ ಅಪ್ಪಣೆ ಕೊಡುವದು ಒಳ್ಳೇದು

ಬೌರಿಂಗ್‌ಪೇಟೆ—ಈ ಊರಿನಲ್ಲಿ ಕೋದಂಡ ರಾಮಸ್ವಾಮಿ ಜಾತ್ರೆಯು ಬಹಳ ವಿಜೃಂಭಣೆಯಿಂದ ನಡಿಯುತ್ತಿದೆ ಈಗ ಇಲ್ಲಿ ಬಂದಿರುವ ಅಮಲ್ದಾರರು ದೇವಸ್ಥಾನದ ತೇರು ಮುಂತಾದ ಖರ್ಚುಗಳ ಬಗ್ಗೆ ಮುಜರಾಯಿ ಇಲಾಖೆಯಿಂದ ಯಾವ ಹಣವೂ ವ್ಯಯಪಡದೆ ಆಯಾ ಭಕ್ತಾದಿಗಳ ಕಡೆಯಿಂದಲೇ ಚಂದಾ ವಸೂಲು ಮಾಡಿ ಕಾರ್ಯಗಳನ್ನು ನೆರವೇರಿಸುತ್ತಿದಾರೆಂಬದು ಸಂತೋಷಕರವಾಗಿದೆ ಇದಲ್ಲದೆ ಜಾತ್ರೆ ಸಮಯದಲ್ಲಿ ಸಾಧಾರಣವಾಗಿ ದೂರ ಪ್ರದೇಶಗಳ ಕಂಚು ತಾಂಬ್ರ ಮುಂತಾದ ಪಾತ್ರೆ, ಸಾಮಾನುಗಳ ಅಂಗಡಿಗಳು ಊರೊಳಗೇನೇ ಇಟ್ಟುಕೊಂಡು ಬಹಳ ಜನ ಸಂದಣಿಯಾಗುತ್ತಿತ್ತು ಆದರೆ ಈ ಸಾರಿ ನಮ್ಮ ದಯಾವುಳ್ಳ ಅಮಲ್ದಾರರು ಜನಗಳ ಕ್ಷೇಮದ ಬಗ್ಗೆ ಪಾತ್ರೆಗಳ ಮತ್ತು ಇತರ ಚಿಲ್ಲರೆ ಅಂಗಡಿಗಳನ್ನು ಜನಗಳ ಪರಿಸರ ಸಮೀಪದಲ್ಲಿಯೂ ಒಳ್ಳೇ ಹವಾ ಇರುವ ಮೈದಾನಿನಲ್ಲಿಯೂ ಏರ್ಪಡಿಸಿರತಕ್ಕದ್ದು ಸ್ತೋತ್ರಾರ್ಹವಾಗಿದೆ ಊರಿನ ಜಾತ್ರೆಯಲ್ಲಿ ಸ್ವದೇಶ ಕ್ರೈಸ್ತ ಬೋಧಕರೂ ಉಪದೇಶಕರೂ ಕ್ರೈಸ್ತ ಮತದ ಸತ್ಯಗಳನ್ನು ಹಗಲು ವೇಳೆಯಲ್ಲೂ, ಮ್ಯಾಜಿಕ್ ಲಾಂಟ್ರನ್ ಎಂಬ ಭೂತ ಕನ್ನಡಿಯ ಮುಖಾಂತ್ರ ರಾತ್ರಿವೇಳೆಯಲ್ಲೂ ಸಾರುತ್ತಲಿದಾರೆ — ಈ ಊರಿನಲ್ಲಿರುವ ಲೋಕಲ್ ಫಂಡ್ ಆಸ್ಪತ್ರೆಯು ಜನಗಳಿಗೆ ಬಹಳ ಪ್ರಯೋಜನಕರವಾದದ್ದಾಗಿದೆ ಊರು ಒಂದು ತಾಲ್ಲೂಕಾಗಿದ್ದರೂ ಭಂಗಾರದ ಗಣಿಗಳ ದೆಸೆಯಿಂದ ಮಾತ್ರವಲ್ಲದೆ ಇದು ರೈಲ್ವೆ ಸ್ಟೇಷನ್ನೂ ಜಂಕ್ಷನ್ನೂ ಆಗಿರುವದರಿಂದ ಇಲ್ಲಿ ವಿಶೇಷ ಜನಗಳು ವಾಸಿಸುತ್ತಾ ಈ ಆಸ್ಪತ್ರೆಯಲ್ಲಿ ಬಡಜನರು ಔಷಧಗಳನ್ನು ತೆಗೆದುಕೊಳ್ಳುತ್ತಾ ಪ್ರಯೋಜನ ಹೊಂದುವರು ಕಳೆದ ವರ್ಷ ಈ ಆಸ್ಪತ್ರೆಯಲ್ಲಿ ಹೊರಗಿನಿಂದ ಬಂದು ಔಷಧ ಪಡೆದವರು ೧೨,೭೯೯ ಮಂದಿ ಆಸ್ಪತ್ರೆಯಲ್ಲಿಯೇ ಇದ್ದು ಔಷಧ ತೆಗೆದುಕೊಂಡವರು ೩೭ ಮಂದಿ, ಅಲ್ಲದೆ ೨೨ ಮೇಜರ್ ಆಪರೇಷನ್‌ಗಳೂ, ೧೦೩ ಮೈನರ್ ಆಪರೇಷನ್‌ಗಳೂ ಜರಗಿತ್ತವೆ ಇಲ್ಲಿನ ಆಸ್ಪತ್ರೆ ಅಸಿಸ್ಟೆಂಟ್ ಮೆ|| ಕಿಟ್ಟೋ ಸಾಹೇಬರು ದಯಾಳುಗಳೂ ಗುಣಶಾಲಿಗಳೂ ವೈದ್ಯದಲ್ಲಿ ಚಮತ್ಕಾರಿಗಳೂ ಆಗಿ ರೋಗಿಗಳನ್ನು ಪ್ರೀತಿಯಿಂದ ಪರಾಂಬರಿಸಿ ಔಷಧಗಳನ್ನು ಕೊಡುತ್ತಿರುವದೇ ಇಷ್ಟು ಹೆಚ್ಚಿನ ಸಂಖ್ಯೆಗೆ ಕಾರಣವಾಗಿರುತ್ತದೆ ಇಲ್ಲಿ ಆಸ್ಪತ್ರೆ ಬೌಳಿ ಗೋಡೆ ಇಲ್ಲದೆ ಯದ್ವಾತದ್ವಾ ಕಾಣುತ್ತಿದೆ ಆಸ್ಪತ್ರೆ ಮೇನ್ ರೋಡ್ ಪಕ್ಕದಲ್ಲಿರುವದರಿಂದಲೂ ಈ ಮಾರ್ಗವಾಗಿ ಅನೇಕ ಆಫೀಸರುಗಳು ತಿರುಗುತ್ತಿರುವದರಿಂದಲೂ ಸರ್ಕಾರದವರು ಇದರ ಸುತ್ತಲೂ ಗೋಡೆ ಹಾಕಿಸಿ, ನಾಜೋಕಾಗಿಡುವದು ಆವಶ್ಯವಾಗಿದೆ — ಕಳೆದ ತಾ ೩೦ನೇ ಗುರುವಾರ ಸಾಯಂಕಾಲ ಇ...

...ರವಾದ ಪ್ರಚಂಡ ಗಾಳಿಯೊಂದಿಗೆ ಸುಮಾರು ಎರಡು ಅಂಗುಲ ...ಸುರಿಯಿತು. ತಾ. ೩೧ನೇ ಶುಕ್ರವಾರ ಸಾಯಂಕಾಲವೂ ಸು...ಗಿ ಮಳೆ ಬಿತ್ತು. ಮಳೆ ಬಿದ್ದಿದ್ದು ಸಂತೋಷವೇ. ಆದರೆ ಈ ...ಯು ಈ ಊರಿನಲ್ಲಿ ಸದ್ಯ ನಡೆಯುತ್ತಿರುವ ಜಾತ್ರೆಯ ಜನಗ... ಮಹಾ ಕಷ್ಟಕ್ಕೆ ಕಾರಣವಾಯಿತು. ಬಡ ರೈತಾಪಿಗಳಾದ ಜನ ಅವರ ಗೋಕರುಗಳೂ ಮಳೆ ಗಾಳಿಗೆ ಸಿಕ್ಕಿ ವಿಪರೀತ ಕಷ್ಟ ಗುರಿಯಾದರು. ಈ ವರ್ಷ ಅಧಿಕಮಾಸವೆಂದೂ ಕೆಲವು ಜಾತ್ರೆಗಳು ...ದು ತಿಂಗಳು ಹಿಂದೆಯಾದ್ದರಿಂದಲೂ ದೇವರ ದಯದಿಂದ ಈ ವರ್ಷ ...ಂಗಾರು ಮಳೆಗಳು ಅಧಿಕವಾದ್ದರಿಂದಲೂ ಮೂರು ನಾಲ್ಕು ಜಾತ್ರೆ... ಮಳೆಗಳಿಗೆ ಸಿಕ್ಕಿ ವಿಪರೀತ ಕಷ್ಟಕ್ಕೆ ಗುರಿಯಾದರು. ಆದರೆ ...ಟ್ರಿಯಲ್ಲಿ ರಾಸು ೧ಕ್ಕೆ ಅರ್ಧಾಣೆಯಂತೆ ವಸೂಲು ಮಾಡಿದ ಸುಂ... ಸುಮಾರು ೨೦೦—೩೦೦ ರೂಪಾಯಿ ಸರ್ಕಾರದ ಖಜಾನೆ ಸೇರಿ... —ಈ ಊರಿನ ಜಾತ್ರೆಯಲ್ಲಿ ಪ್ರತಿ ವರ್ಷವೂ ಜೋಡಿಗ್ರಾಮ ಕನ...ಲ್ಲಿಯವರು ಅನ್ನದಾನ ಮಾಡುತ್ತಿದ್ದರು. ಈ ವರ್ಷ ಈ ಊರಿನ ...ಬಲ್ದಾರರ ಸಲಿಗೆಯ ಮೇರೆ ಕಪ್ಪನಳ್ಳಿ, ಸಿದ್ದನಳ್ಳಿ, ಕನಗಂಪಳ್ಳಿ, ...ಬತ್ತುಗಳ್ಳಿ ಮುಂತಾದ ಗ್ರಾಮಗಳವರು ಮೂರು ದಿನಗಳಿಂದ ...ಕ್ಕೆ ೮, ೯, ೧೦ ಖಂಡಿಗಳಷ್ಟು ಅಡಿಗೆಯನ್ನು ತಂದು ಆಪಟಿ ಮೇಳ... ...ಕಾದವರಿಗೆಲ್ಲಾ ಬಹು ಕೌಶಲವಾಗಿ ಹಾಕುತ್ತಿದ್ದಾರೆ. ಆದರೆ ...ದಾಸು ಕಡೆಯಿಂದ ಬಂದು ಈ ಊರಿನಲ್ಲಿ ಕೂಲಿನಾಲಿ ಮಾಡು ಜನಗಳಿಗೆ ಇದರಿಂದ ಬಹಳ ಅನುಕೂಲವಾಯಿತು

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸ್ಥಳ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ...ನ್ನು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ಸ್ಥಳ ಕೊಡಲಾರೆವು

ಬಾತ್ಮಿದಾರರು ಇವರ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬುದನ್ನು ಸಕಲರೂ ತಿಳಿಯತಕ್ಕದ್ದು —ಎಡಿ

ಕರೆಸ್‍ಪಾಂಡೆನ್ಸ್

ಹೋಬಳಿ ಸ್ಕೂಲ್ ಮಾಸ್ಟರ ಗೋಳಾಟವು

ಅಯ್ಯಾ,

ಹೋಬಳಿ ಸ್ಕೂಲ್ ಮಾಸ್ಟರುಗಳಿಗೆ ಬಡ್ತಿ ಆಗುತ್ತೆಂದು ಅನೇಕ ಪತ್ರಿಕಾಕರ್ತರು ಛಾಪಿಸಿದ್ದರ ಮೇಲೆ ಚಕೋರಪಕ್ಷಿಯು ವರ್ಷವನ್ನು ಎದುರು ನೋಡುವಂತೆ ಮೇ! ಭಾಭಾ ಸಾಹೇಬರನ್ನೇ ಎದುರು ನೋಡುತ್ತಿದ್ದರು. ಅವರು ಬಂದು ಮೂರು ತಿಂಗಳಾಗುತ್ತಾ ಬಂ...ಗ್ಯೂ ಮಾಸ್ಟರುಗಳ ಗೋಳಾಟ ಬೇರೆ ತೀರಲಿಲ್ಲ. ರೂ. ೧ಕ್ಕೆ ...ಸೇರು ಅಕ್ಕಿ ಕೊಂಡು ಹ್ಯಾಗೆ ಜೀವನ ಮಾಡುವರೋ ಸರ್ಕಾರದವರೇ ಯೋಚಿಸಬೇಕು. ಮಾಸ್ಟರುಗಳು ಪಡುವ ಸಂಕಟವನ್ನು ಪತ್ರಿಕೆಯ ಮೂಲಕ ಅರಿಕೆಮಾಡಲು ಸಾಧ್ಯವಿಲ್ಲ. ಇತರ ಇಲಾಖೆಗಳ ...ನವರೂ ಕೂಡ ಸುಖವಾಗಿ ಜೀವನಮಾಡುತ್ತಾರೆ. ಈ ಮಾಸ್ಟರು...ಗೆ ಹೊಟ್ಟೆ ತುಂಬಾ ಅನ್ನವಿಲ್ಲದಿದ್ದರೂ ಅವರ ಮೇಲಣ ವಿಚಾರಕರ್ತರು ಮಾತ್ರ ಹೆಚ್ಚಿಗೆಯಾಗಿರುತ್ತಾರೆ

ಚಂದಾದಾರ.

ಆಭಾಸವಾದ ತಸ್ವೀರುಗಳು.

ಅಯ್ಯಾ,

ಕಲ್ಕತ್ತಾ ನಗರದಲ್ಲಿ ಕೆಲವು ದಿನಗಳ ಹಿಂದೆ ಇಬ್ಬರು ಆಭಾಸಕರವಾದ ಚಿತ್ರಪಟಗಳನ್ನು ಮಾರುತ್ತಿರುವಾತವರನ್ನು ಮ್ಯಾಜಿಸ್ಟ್ರೇಟರು ಹಿಡಿದು ತಕ್ಕ ದಂಡನೆಯನ್ನು ವಿಧಿಸಿದರೆಂಬುವದು ಸಕಲರಿಗೆ ತಿಳಿದಬಹುದು. ಇಂತಹ ಪಟಗಳು ರಾಜಾ ರವಿವರ್ಮರಿಂದಲಾಗಲೀ ಇಂ...ಷಿನವರಿಂದಲಾಗಲೀ ಬರೆಯಲ್ಪಟ್ಟದ್ದಾಗ್ಯೂ ಕೇವಲ ನಿಂದನೀಯಕರವಾದವುಗಳೇ ವಿನಹಾ ಸನ್ನೀತಿ, ಸದಾಚಾರ, ಸದ್ಭಕ್ತಿಗಳಿಗೆ ಸಹಕಾರಿಗಳಾಗಿರುವದಿಲ್ಲವಾದಕಾರಣ ನಾವು ಇದನ್ನು ಖಂಡಿಸುವದು ನಮ್ಮ ಕರ್ತವ್ಯವೆಂದು ತಿಳಿಯಬೇಕು.

ಅತ್ಯಂತೋಪಯುಕ್ತವಾದ ವಸ್ತುಗಳ ಸಂದರ್ಶನದಿಂದಲೂ ...ಕೃತಿಯಲ್ಲಿ ತೋರುವ ವಸ್ತುಜಾಲಗಳಂ ಸದಾ ನೋಡುತ್ತಲೂ, ...ದನ್ನೇ ಮನನ ಮಾಡುವದರಿಂದಲೂ ಲಭಿಸುವ ಮನಸ್ಸಿನ ಔನ್ನತ್ಯವು, ದೇಹಪಾರಾಧ್ಯವೂ, ಆತ್ಮದ ಪರಿಶುದ್ಧತ್ವವೂ, ಇಂದ್ರಿಯಂಗಳ ವಶಾಗಮವೂ, ಕೇವಲ ಹೇಯವಾದ ದುರಾಲೋಚನೆಗಳಿಗೀಡಾಗುವ ...ಲೆಯ ಪಟಗಳನ್ನಾಗಲೀ ಲಜ್ಜೆಯನ್ನು ಬಿಟ್ಟಿರುವ ಚಿತ್ರಪಟಗಳನ್ನಾಗಲೀ ನೋಡುವದಕ್ಕಿಂತ ಎಷ್ಟೋ ಸಹಸ್ರಪಾಲು ಮೇಲೆನ್ನಬಹುದು. ಆದುದರಿಂದ ಶಾರೀರಕ ಧರ್ಮಗಳನ್ನೂ, ಮನೋವ್ಯಾಪಾರಗಳನ್ನೂ ಕಾಪಾಡಿಕೊಳ್ಳಲು ನಿರಂತರವಾದ ಸತ್ಯಸಂಧರಾದ ಮಹಾತಪಸ್ವಿಗಳೂ, ಜಿತೇಂದ್ರಿಯತ್ವವನ್ನೇ ಪಟುವಾಗಿ ಸಾಧಿಸಿರುವ ಮಹರ್ಷಿಯರ ಸಹವಾಸವೂ, ವೀರ್ಯ ಸ್ಥೈರ್ಯಗಳಲ್ಲಿ ನಿಕ್ಷೇಪವೆನಿಸಿರುವ ವೀರರ ಪಟಗಳನ್ನೂ ನಾವು ನೋಡುತ್ತಲಿದ್ದರೆ ಕಣ್ಣಿಟ್ಟಿಯಲ್ಲಿ ಪ್ರತಿಬಿಂಬಿಸುವಂತೆ ಮನಸ್ಸು ಆಕರ್ಷಿಸಿ ಅವರ ಸದ್ಗುಣಗಳನ್ನು ಭದ್ರವಾಗಿ ಇಟ್ಟುಕೊಳ್ಳುವದು.

ಇಂತಹ ಬಹು ನೀಚತರವಾದ ಚಿತ್ರಪಟಗಳು ಸಾವಿರಾರು ನವೀನ ನವೀನವಾಗಿ ಬರೆಯಲ್ಪಟ್ಟು ಪ್ರತಿಯೊಂದು ಅಂಗಡಿ ಬೀದಿಯಲ್ಲಿ ಮಾರಾಟಕ್ಕೆ ತಗಲು ಹಾಕಿರುವರು. ಇವು ವಯಸ್ಕರಾದವರ ಮನಸ್ಸಿಗೆ ಚಾಂಚಲ್ಯವಂ ಗೊಳಿಸುವವು; ಆತ್ಮವನ್ನು ಅಪವಿತ್ರ ಮಾಡುವವು, ಚಿತ್ತ ಬುದ್ಧಿಗಳು ಮನೋ ವಿಕಾರಂಗಳ ಸೆರೆಯಲ್ಲಿ ಸಿಕ್ಕಿ ವ್ಯಥೆಪಡುವಂತೆ ಮಾಡುವವು. ಕ್ಷಿಪ್ರದಲ್ಲಿಯೇ ನಮ್ಮ ರಾಜ್ಯವು ದುರ್ನೀತಿಗಳಿಗೆ ಕಾರುವಳಿಯಾಗಿ ನಮ್ಮನ್ನೂ ನಿರ್ಮೂಲವಂ ಮಾಡುವದಕ್ಕೆ ಯಾವ ಅಟಂಕವೂ ಇರುವದಿಲ್ಲವು. ಸಂಧ್ಯಾ ಕಾಲದಲ್ಲಿ ಸಿಟಿ ಮಾರ್ಕೆಟ್ಟಿನಲ್ಲಿ ...ಂಡುಬರುವ ಚಿತ್ರಪಟಗಳೇ ಹೇಳಲು ಬರೆಯಲು ನನಗೆ ಲಜ್ಜಾಸ್ಪದನಾಗಿರುವದು. ಇವುಗಳನ್ನು ಒಬ್ಬನೊಬ್ಬ ಮದರಾಸ್ ದೇಶಸ್ಥನು ಹೇರಳವಾಗಿ ತಂದು ಮಾರುವನು. ಸರ್ಕಾರದವರು ಇವನನ್ನೂ ಮತ್ತು ಇವನಂತೆಯೇ ಮಾರುತ್ತಿರುವವ ಇತರರನ್ನೂ ಹಿಡಿದು ತಕ್ಕ ದಂಡನೆಯನ್ನು ವಿಧಿಸಿದ್ದೇ ಆದರೆ ದೇಶಕ್ಕೆ ಬಹು ಉಪಕಾರ ಮಾಡಿದಂತಾಗುವದು. ಈ ವರೆವಿಗೂ ಇವುಗಳನ್ನು ದೇಹಕ್ಕೆ ಸ್ವೇಚ್ಛೆಯಾಗಿ ತೋರ್ಪಡಿಸದಂತೆ ನಿರ್ಬಂಧಿಸದಿರುವದು ನೋಡಿದರೆ ಅತಿ ವಿಸ್ಮಯವನ್ನುಂಟುಮಾಡುವದು. ವಿದ್ಯಾಭಿವೃದ್ಧಿಯನ್ನು ಕೋರುವವರು ನಮ್ಮ ಬಾಲಕ ಬಾಲಕಿಯರಿಗೆ ಮುಂದಕ್ಕೆ ಕೇಡನ್ನುಂಟುಮಾಡುವ ಇಂತಹ ದುಷ್ಟಪಟಗಳನ್ನು ಏಕೆ ನಿಲ್ಲಿಸಲು ಪ್ರಯತ್ನಪಡಲಿಲ್ಲವೋ ನನಗೆ ತಿಳಿಯದು. ಈಗಲಾದರೂ ಸರ್ಕಾರದವರು ತಮ್ಮ ಮೇಲೆ ಬಿದ್ದ ದೊಡ್ಡ ಧರ್ಮವಂ ಪರಿಪಾಲಿಸಲಿ. ಮಹನೀಯರು ತಮ್ಮ ವಾಕ್ಕಿನ ಸಾಮರ್ಥ್ಯದಿಂದ ಪ್ರತಿಯೊಂದು ಪತ್ರಿಕೆಯಲ್ಲಿ ತಮ್ಮ ಅಭಿಪ್ರಾಯವನ್ನು ಪ್ರಚುರಪಡಿಸಿ ಸರ್ಕಾರಕ್ಕೆ ಇದರಿಂದುಂಟಾಗುವ ಅನರ್ಥಗಳನ್ನು ಸಮೂಲವಾಗಿ ಕಿತ್ತು ಬಿಸಾಡುವಂತೆ ಸೂಚನೆಯಂ ಮಾಡಿಕೊಳ್ಳಲಿ. ಇದೇ ನನ್ನ ಪ್ರಾರ್ಥನೆಯು.

ಬೆಂಗಳೂರು ಸಿಟಿ. ಯಂ. ನಾರಾಣ ಸಿಂಗ್.

[ಈ ವಿಷಯಕ್ಕೆ ಬೆಂಗಳೂರು ಸಿಟಿ ಪೋಲೀಸಿನವರು ಗಮನ ಕೊಟ್ಟಾರೆಂದು ನಿರೀಕ್ಷಿಸುತ್ತೇವೆ.—ಎಡಿ.]

ನವರಾತ್ರಿ ಪ್ರದರ್ಶನವು.

ನೌಕರಿ ಅಧಮ, ಬೇಪಾರ್ ಮಧ್ಯಮ, ಖೇತಿ ಉತ್ತಮ. ಈ ಮಧ್ಯೆ ಜಪಾನಿನವರು ರಷ್ಯಾದವರನ್ನು ಜಯಿಸಿದ್ದರಿಂದ ಜಪಾನಿನವರು ಕೈಗಾರಿಕೆ ಮತ್ತು ವ್ಯವಸಾಯ ಕೆಲಸಗಳಲ್ಲಿ ನಿಪುಣರಾಗಿದ್ದದರಿಂದಲೇ ಜಯಕ್ಕೆ ಕಾರಣವಾಯಿತೆಂತಲೂ ಬಂಗಾಳಾದೇಶದ ವಿಭಜನೆಯ ಕಾಲದಿಂದ ಸ್ವದೇಶಿ ಎಂಬುದು ಉದಯಿಸಿರುವದರಿಂದಲೂ ಅಲ್ಲದೆ ಪಾಶ್ಚಿಮಾತ್ಯರ ರಾಜ್ಯಗಳು ಐಶ್ವರ್ಯದಿಂದ ಹೊಳೆಯುತ್ತಿರುವದಕ್ಕೆ ಕೈಗಾರಿಕೆ ಮತ್ತು ವ್ಯವಸಾಯ ಕೆಲಸಗಳೇ ಪ್ರಾಮುಖ್ಯ ಕಾರಣಗಳೆಂತಲೂ ಅನೇಕ ರಾಜರುಗಳೂ ಪ್ರಜೆಗಳೂ ತಿಳಿದುಕೊಂಡವರಾಗಿ ತಮ್ಮ ತಮ್ಮ ರಾಷ್ಟ್ರಗಳಲ್ಲಿ ಕೈಗಾರಿಕೆ ಮತ್ತು ವ್ಯವಸಾಯ ಕೆಲಸಗಳನ್ನು ಉತ್ಕೃಷ್ಟ ಸ್ಥಿತಿಗೆ ತರಬೇಕೆಂದು ಬಹಳ ಕುತೂಹಲವುಳ್ಳವರಾಗಿರುತ್ತಾರೆ. ಬೇಸಾಯ ಮಾಡುವವ ಕೇಗ ಸಾಯ ಎಂಬುದನ್ನು ಅನೇಕರು ಅರಿಯದೆ, ಸರ್ಕಾರಿ ಉದ್ಯೋಗಿಗಳಿಗಾಗಿಯೂ ಲಾಯರು ಮುಂತಾದ ಕೆಲಸಗಳಿಗಾಗಿಯೂ ಹೆಚ್ಚಾದ ಸ್ಥಳ ಕೊಟ್ಟು ಐಶ್ವರ್ಯಕ್ಕೆ ತೌರುಮನೆಯಂತಿರುವ ಕೈಗಾರಿಕೆ ಮತ್ತು ವ್ಯವಸಾಯ ಕೆಲಸಗಳನ್ನು ಶ್ರದ್ಧೆಗೆ ತೆಗೆದುಕೊಳ್ಳದೆ ಇರುತ್ತಾರೆ.

ಕೆಲವು ವರ್ಷಗಳ ಕೆಳಗೆ ಲಾರ್ಡ್ ಕರ್ಜನ್ ಪ್ರಭುಗಳವರು ಮಲಬಾರು ಪ್ರಾಂತ್ಯ ದಯಮಾಡಿಸಿರುವಾಗ್ಗೆ ಅಲ್ಲಿನ ಜನರು ಅವರಿಗೆ ಸುಸ್ವಾಗತವನ್ನು ಕೋರಲು ಸಭೆ ನೆರೆದಿರಲು ಲಾರ್ಡ್ ಕರ್ಜನ್‌ರವರು ಸದರಿ ಸಭೆಯಲ್ಲಿ—ನಿಮ್ಮ ಮಲಬಾರು ಶ್ರೇಷ್ಠ ಭೂಗುಣವುಳ್ಳದ್ದಾಗಿಯೂ ವಿಶೇಷ ನೀರಾವರಿ ಸ್ಥಳವಾಗಿಯೂ ಇರುವಾಗ್ಯೂ ನಿಮ್ಮಲ್ಲಿ ಅನೇಕರು ಸರ್ಕಾರಿ, ಪ್ಲೀಡರ್ ಮುಂತಾದ ಉದ್ಯೋಗಗಳನ್ನು ಹುಡುಕುತ್ತಾ, ಬೇಸಾಯವನ್ನು ಹೀನಸ್ಥಿತಿಗೆ ತಂದಿರುವದು ಬಹಳ ವ್ಯಸನಕರವಾದದ್ದೆಂಬು ಹೇಳಿದರೆಂಬುದಾಗಿ ಪತ್ರಿಕೆಗಳಲ್ಲಿ ಓದಿಯೋ ಅಥವ ಇತರರಿಂದ ಕೇಳಿಯೋ ಬಲ್ಲೆ. ಉದ್ಯೋಗಂ ಪುರುಷಲಕ್ಷಣಂ. ಸರ್ಕಾರಿ, ಲಾಯರಿ ಮುಂತಾದ ಉದ್ಯೋಗಗಳನ್ನು ಮಾಡುವದೇ ಪುರುಷಲಕ್ಷಣವೆಂದು ಅನೇಕರು ಭಾವಿಸುತ್ತಾರೆಯೇ ಹೊರತು ಕೃಷಿ ಕೈಗಾರಿಕೆ ಕೆಲಸಗಳನ್ನು ಮಾಡುವದು ಹೀನ ಉದ್ಯೋಗಗಳೆಂದು ನೆನಸುತ್ತಾರೆ.

ಈ ಮಧ್ಯೆ ನಮ್ಮ ಮೈಸೂರು ಗೌರ್ನಮೆಂಟಿನವರೂ ಪ್ರಜೆಗಳೂ ಐಶ್ವರ್ಯಕ್ಕೂ ದೇಶದ ಏಳಿಗೆಗೂ ಮುಖ್ಯ ಕಾರಣಗಳಾದ ಕೈಗಾರಿಕೆ ಮತ್ತು ವ್ಯವಸಾಯ ಕೆಲಸಗಳ ವಿಷಯ ಹೆಚ್ಚು ಸ್ಥಳ ಕೊಟ್ಟು ಕೈಗಾರಿಕೆ ಪಾಠಶಾಲೆಗಳೆಂತಲೂ ವ್ಯವಸಾಯ ಬ್ಯಾಂಕುಗಳೆಂತಲೂ ಒಕ್ಕಲಿಗರ ಸಂಘಗಳೆಂತಲೂ ಕೈಗಾರಿಕೆ ಮತ್ತು ವ್ಯವಸಾಯ ಕೆಲಸಗಳ ಪ್ರದರ್ಶನಗಳೆಂತಲೂ ಸ್ಥಾಪಿಸಿರುವದೂ, ಕೈಗಾರಿಕೆ ಮತ್ತು ವ್ಯವಸಾಯಗಳ ವಿಷಯದಲ್ಲಿ ತಿಳಿದವರು ಅಲ್ಲಲ್ಲಿ ಹೋಗಿ ಭಾಷಣಗಳನ್ನು ಮಾಡುತ್ತಿರುವದೂ, ಬೇಸಾಯ ಮುಂತಾದವುಗಳ ವಿಷಯದಲ್ಲಿ ವರ್ತಮಾನ ಪತ್ರಿಕೆಗಳನ್ನು ಪ್ರಕಟ ಮಾಡುತ್ತಿರುವದೂ ಅತಿ ಸ್ತೋತ್ರಾರ್ಹವಾದದ್ದೇ. ಹೀಗೆ ಕೈಗಾರಿಕೆ ಮತ್ತು ವ್ಯವಸಾಯ ಕೆಲಸಗಳನ್ನು ಶ್ರೇಷ್ಠಸ್ಥಿತಿಗೆ ತರಬೇಕೆಂದು ನಮ್ಮ ಮೈಸೂರು ಸರ್ಕಾರದವರು ನವರಾತ್ರಿ ಕಾಲದಲ್ಲಿ ನಡಿಸಬೇಕೆಂದಿರುವ ಕೈಗಾರಿಕೆ ಮತ್ತು ವ್ಯವಸಾಯ ಕೆಲಸಗಳ ಪ್ರದರ್ಶನವೆಂಬ 'ಗಂಡು ಕೂಸು ಹುಟ್ಟಿತು' ಎಂಬ ಸಂತೋಷದಲ್ಲಿಯೇ ಮಗ್ನರಾಗಿರುವೆ, ಈ ಕೂಸು ಬೆಳೆದು ಕಾಯಪುಷ್ಟಿಯುಳ್ಳದ್ದಾಗಿಯೂ ಸರ್ಕಾರಕ್ಕೂ ಪ್ರಜೆಗಳಿಗೂ ಪ್ರಯೋಜನವುಳ್ಳದ್ದಾಗಿಯೂ ದೀರ್ಘಾಯುಷ್ಯವುಳ್ಳದ್ದಾಗಿಯೂ ಪರಿಣಮಿಸಬೇಕಾದರೆ ಈ ಮುಂದಿನ ಕ್ರಮಗಳನ್ನು ಅನುಸರಿಸುವದುತ್ತಮವಾಗಿ ಕಾಣುತ್ತೆ. ಯಾವವೆಂದರೆ—

೧. ಈ ಕೈಗಾರಿಕೆ ಮತ್ತು ವ್ಯವಸಾಯ ಕೆಲಸಗಳ ಪ್ರದರ್ಶನವನ್ನು ಕುರಿತು—ನಮ್ಮ ಮೈಸೂರು ಸೀಮೆಯ ಎಲ್ಲಾ ಪ್ರಜೆಗಳಿಗೂ ಆಯಾ ಸರ್ಕಾರಿ ನೌಕರರ ಮುಖಾಂತರ ಸ್ಪಷ್ಟವಾಗಿ ತಿಳಿಸಲ್ಪಡಬೇಕು. ಹೇಳೋನು ಇಲ್ಲದೆ ಮಾಡೋದು ಹ್ಯಾಗೆ? ಎಂಬ ಗಾದೆಯುಂಟಲ್ಲವೇ. ಆದ್ದರಿಂದ ಆಯಾ ಸರ್ಕಾರಿ ನೌಕರರೇ ಸಂದರ್ಭಾನುಸಾರ ಜನರು ಅಂಥಾ ಶ್ರೇಷ್ಠ ಕಸಬುಗಳನ್ನು ಪ್ರದರ್ಶನಕ್ಕಾಗಿ ಸಿದ್ಧಪಡಿಸುವಂತೆ ಪ್ರೋತ್ಸಾಹಿಸಬೇಕು.

೨. ಕೈಗಾರಿಕೆ ಮುಂತಾದ ಕೆಲಸಗಳಿಗಾಗಿಯೂ ಬೇಸಾಯ ಮುಂತಾದ ಕೆಲಸಗಳ ವಿಷಯದಲ್ಲಿಯೂ ಕೆಲವು ರೀತಿಗಳನ್ನು ಮಾಡಬೇಕು. ಯಾವುವೆಂದರೆ—ಆಯಾ ಡಿಸ್ಟ್ರಿಕ್ಟಿನ ಹೆಡ್ ಕ್ವಾರ್ಟರುಗಳಲ್ಲಿ ಕೈಗಾರಿಕೆ ಮತ್ತು ಬೇಸಾಯ ಕೆಲಸಗಳನ್ನು ಕಲಿಸುವ ಪಾಠಶಾಲೆಯನ್ನಿಡಬೇಕು. ಅದು ಪ್ರಯೋಜನವಾಗಿ ಕಂಡುಬಂದರೆ ಆಯಾ ತಾಲ್ಲೂಕ್ ಹೆಡ್ ಕ್ವಾರ್ಟರಿನಲ್ಲಿಯೂ ಅಂಥಾ ಪಾಠಶಾಲೆಗಳನ್ನು ಸ್ಥಾಪಿಸಬೇಕು. ಅಂಥಾ ಪಾಠಶಾಲೆಗಳಲ್ಲಿ ಕಲಿಯುವ ವಿದ್ಯಾರ್ಥಿಗಳಿಗೆ ಅಲ್ಪ ಸ್ವಲ್ಪ ವೇತನಗಳನ್ನು ಕೊಡುವಂತೆ ಏರ್ಪಾಡು ಮಾಡಬೇಕು. ರೈತನು ಏಳಿಗೆಯಾಗಬೇಕಾದರೆ ಗೋಕರುಗಳು ಹೆಚ್ಚು ಸಹಕಾರಿಯಾದ್ದರಿಂದ ಒಂದೊಂದು ಡಿಸ್ಟ್ರಿಕ್ಟಿಗೆ ಒಬ್ಬೊಬ್ಬ ಗೋಚಿಕಿತ್ಸೆ ವೈದ್ಯನನ್ನು ನೇಮಿಸಬೇಕು. ಉತ್ತಮ ತರಗತಿಯ ಗೋಕರುಗಳು ದೇಶದಲ್ಲಿ ವೃದ್ಧಿಯಾಗುವಂತೆ ಸರ್ಕಾರದವರು ಆಯಾ ತಾಲ್ಲೂಕಿನಲ್ಲಿ ಉತ್ತಮ ಗೂಳಿ ಟಗರುಗಳನ್ನು ಇಡಬೇಕು. ರೈತರು ವಿಶೇಷ ದನ ಕುರಿ ಇತ್ಯಾದಿ ಜಾನವಾರುಗಳನ್ನು ಇಟ್ಟು ಗೊಬ್ಬರವನ್ನು ಬಹಳವಾಗಿ ಉಂಟಾಗಿ ಧಾನ್ಯಗಳನ್ನು ಹುಲುಸಾಗಿ ಬೆಳೆಯುವಂತೆ ಪ್ರತಿ ಗ್ರಾಮಕ್ಕೂ ಬೇಕಾದಷ್ಟು ಗೋಮಾಳ ಮತ್ತು ಕಾವಲುಗಳನ್ನು ಬಿಟ್ಟುಕೊಡಬೇಕು.

೩. ಕೈಗಾರಿಕೆ ಮತ್ತು ವ್ಯವಸಾಯದ ಕೆಲಸಗಳ ಪ್ರದರ್ಶನ ನಡಿಯಬೇಕಾದ ಸ್ಥಳವನ್ನು ಕುರಿತು:—ರಾಜಧಾನಿಯಾದ ಮೈಸೂರು ಪಟ್ಟಣವು ಮೈಸೂರು ಸೀಮೆಯ ಅತಿ ದಕ್ಷಿಣದಲ್ಲಿದ್ದುಕೊಂಡು, ಅನೇಕ ಇತರ ಡಿಸ್ಟ್ರಿಕ್ಟುಗಳಿಗೆ ದೂರವಾಗಿಯೂ ಅನೇಕ ರೈಲುಗಳಿಗೆ ಮಧ್ಯ ಸ್ಥಳವಲ್ಲವಾಗಿಯೂ ಇರುವದರಿಂದ ಮೈಸೂರು ತಕ್ಕ ಸ್ಥಳವಾಗಿ ಕಾಣಿಸುವದಿಲ್ಲ. ಆದರೆ ಬೆಂಗಳೂರು ತಕ್ಕ ಸ್ಥಳವಾಗಿ ಕಾಣುತ್ತೆ.

೪. ಪ್ರದರ್ಶನದ ಕಾಲ. ನವರಾತ್ರಿ ಕಾಲದಲ್ಲಿ ಜಡಿ ಮಳೆಗಳೂ ಅಲ್ಲದೆ ರೈತಾಪಿ ಜನಗಳು ಬಹಳವಾಗಿ ಕೂಡಿಬಂದು ಪ್ರದರ್ಶನಗಳನ್ನು ನೋಡಿ ಪ್ರಯೋಜನವನ್ನು ಹೊಂದಲು ಅದೇ ಸಮಯದಲ್ಲಿ ಅವರವರ ಗ್ರಾಮಾಂತ್ರಗಳಲ್ಲಿ ವಿಶೇಷ ಬೇಸಾಯ ಕೆಲಸಗಳು ಇರುವದರಿಂದ ಅಡ್ಡಿಯಾಗುತ್ತೆ. ಆದಕಾರಣ ಮಾರ್ಚಿ ಅಥವ ಏಪ್ರಿಲ್ ತಿಂಗಳುಗಳಲ್ಲಿ ನಡಿಸುವದು ಉತ್ತಮ.

೫. ಪ್ರದರ್ಶನಕ್ಕೆ ಸಾಮಾನುಗಳನ್ನು ತರತಕ್ಕ ಜನರಿಗೂ ಅವರ ಸಾಮಾನುಗಳಿಗೂ ಎಲ್ಲಿಯಾದರೂ ಮೈದಾನಿನಲ್ಲಿ ಪ್ರತಿ ವರ್ಗಕ್ಕಾಗಿ ಪ್ರಾಯಂ ವಸತಿಗಳನ್ನು ಏರ್ಪಾಡು ಮಾಡಬೇಕು. ಅವರಿಗೆ ಬಾಡಿಗೆ ಮುಂತಾದ ಅನುಕೂಲತೆಗಳನ್ನು ಸರ್ಕಾರದವರು ಒದಗಿಸಿಕೊಡಬೇಕು. ಸೋಂಕು ಜಾಡ್ಯದ ಪ್ರಾಂತ್ಯದ ಜನಗಳು ಅಲ್ಲಿಗೆ ಬಾರದಂತೆ ನೋಡಿಕೊಳ್ಳಬೇಕು. ಅಲ್ಲದೆ ಆ ದರ್ಶನಕ್ಕೆ ಬರುವಂಥ ಎಲ್ಲಾ ಜನರಿಗೂ ಎಲ್ಲಾ ರೈಲ್ವೆ ಕಂಪನಿಯವರೂ ರಿಯಾಯಿತಿಗಳನ್ನು ಮಾಡುವಂತೆ ಸರ್ಕಾರದವರು ಏರ್ಪಾಡುಗಳನ್ನು ಮಾಡಬೇಕು.

೬. ಮೈಸೂರು ಸೀಮೆಯ ಕೈಗಾರಿಕೆ ಮತ್ತು ವ್ಯವಸಾಯ ಕೆಲಸಗಳನ್ನು ಪ್ರದರ್ಶನಕ್ಕಾಗಿ ಜಮಾಯಿಸುವ ರೀತಿ—ಆಯಾ ಗ್ರಾಮದ ಪಟೇಲ್ ಯಾ ಶ್ಯಾನುಭೋಗನು ತನ್ನ ತನ್ನ ಗ್ರಾಮದಲ್ಲಿ ಪ್ರದರ್ಶನಕ್ಕೆ ಯೋಗ್ಯವಾದ ಸಾಮಾನುಗಳನ್ನು ಕುರಿತು ತನ್ನ ಹೋಬಳಿ ಶೇಕದಾರರಿಗೆ ತಿಳಿಸುವದು; ಹೋಬಳಿ ಶೇಕದಾರರು ಜಮಾಯಿಷಿ ಮಾಡಿ ಲಾಯಖಾದ ಸಾಮಾನುಗಳ ಪಟ್ಟಿಯನ್ನು ತನ್ನ ತಾಲ್ಲೂಕ್ ಅಮಲ್ದಾರರಿಗೆ ಕಳುಹಿಸುವದು; ಆಯಾ ಅಮಲ್ದಾರರು ಜಮಾಯಿಸಿಯಿಂದ ಆಯಾ ಡೆಪ್ಯುಟಿ ಕಮಿಷನರುಗಳಿಗೆ ಪಟ್ಟಿ ಕಳುಹಿಸುವದು, ಡೆಪ್ಯುಟಿ ಕಮಿಷನರುಗಳು ಸದರೀ ಸಾಮಾನುಗಳನ್ನು ಪ್ರದರ್ಶನಕ್ಕೆ ಎರಡು ಮೂರು ದಿನಗಳಿಗೆ ಪೂರ್ವವೇ ಹೆಡ್ ಕ್ವಾರ್ಟರಿಗೆ ತರಿಸಿಕೊಂಡು ಇಬ್ಬರು ಯಾ ಮೂವರು ಅಸಿಸ್ಟೆಂಟ್ ಕಮಿಷನರುಗಳನ್ನೂ ಅನುಭವಶಾಲಿಗಳಾದ ಬೇರೆ ಕೆಲವು ಮಂದಿಯನ್ನೂ ಇಟ್ಟುಕೊಂಡು ಪ್ರದರ್ಶನಕ್ಕೆ ಯೋಗ್ಯವಾದ ಸಾಮಾನುಗಳನ್ನು ಚುನಾಯಿಸಿ, ಅಂಥಾ ಸಾಮಾನುಗಳಿಗೆ ಮಾತ್ರವೇ ಚಾರ್ಜ್ ಕೊಟ್ಟು ಪ್ರದರ್ಶನಕ್ಕೆ ಕಳುಹಿಸತಕ್ಕದ್ದು.

೭. ಪ್ರದರ್ಶನಕ್ಕೆ ಮೈಸೂರು ಸೀಮೆಯ ಕೈಗಾರಿಕೆ ಮತ್ತು ವ್ಯವಸಾಯ ಕೆಲಸಗಳನ್ನು ಮಾತ್ರವಲ್ಲದೆ ಬೇರೆ ರಾಜ್ಯಗಳಿಂದ ಬರತಕ್ಕ ಸಾಮಾನುಗಳನ್ನು ಸಹ ಸ್ವೀಕರಿಸತಕ್ಕದ್ದು. ಹೀಗೆ ಮಾಡೋಣದರಿಂದ ಒಂದು ದೇಶದವರಿಂದ ಮತ್ತೊಂದು ದೇಶದವರು ತಿಳುವಳಿಕೆಯನ್ನು ಹೊಂದುವರು. ಪರದೇಶಗಳಿಂದ ಬರತಕ್ಕ ಸಾಮಾನುಗಳಿಗೆ ರೈಲು ಚಾರ್ಜ್ ಕೊಡಕೂಡದು. ಆದರೆ ಶ್ರೇಷ್ಠವಾದ ಸಾಮಾನುಗಳಿಗೆ ಬಹುಮಾನವನ್ನು ಕೊಡಬಹುದು.

೮. ಪ್ರದರ್ಶನದ ಸಾಮಾನುಗಳನ್ನು ಪರೀಕ್ಷಿಸಲು ೧೨ ಮಂದಿ ಸರ್ಕಾರಿ ನೌಕರರನ್ನೂ ೧೨ ಮಂದಿಯನ್ನು ಪ್ರಜೆಗಳೊಳಗಿಂದಲೂ ಚುನಾಯಿಸಬೇಕು. ಅಲ್ಲದೆ ಒಬ್ಬರನ್ನು ಪ್ರದರ್ಶನದ ಪ್ರೆಸಿಡೆಂಟರನ್ನಾಗಿಯೂ ಚುನಾಯಿಸಬೇಕು. ಇವರೆಲ್ಲರೂ ಯೋಗ್ಯರೂ ಅನುಭವಶಾಲಿಗಳೂ ನಿಷ್ಪಕ್ಷಪಾತಿಗಳೂ ಆಗಿರಬೇಕು. ಅಲ್ಲದೆ ೩ ತರಗತಿ ಬಹುಮಾನಗಳನ್ನು ಏರ್ಪಾಡು ಮಾಡಬೇಕು. ೧,೨ ನೇ ತರಗತಿಗಳಿಗೆ ಬಹುಮಾನಗಳನ್ನೂ ೩ ನೆಯದಕ್ಕೆ ಒಳ್ಳೆಯದು ಎಂಬ ಸರ್ಟಿಫಿಕೇಟನ್ನೂ ಕೊಡಬಹುದು.

೯. ಕರ ಕೊಟ್ಟರೆ ಕುರುಬನಿಗೆ ಲಾಭ ಎಂಬ ಗಾದೆಯನುಸಾರ ಪ್ರಜೆಗಳು ಈ ಪ್ರಕಾರ ಕೈಗಾರಿಕೆ ಮತ್ತು ವ್ಯವಸಾಯ ಕೆಲಸಗಳಲ್ಲಿ ಶ್ರೇಷ್ಠ ಸ್ಥಿತಿಗೆ ಬರುವದು ಸರ್ಕಾರಕ್ಕೆ ಸ್ವತೇವ ಲಾಭವೇ ಆಗುವದರಿಂದ ಪ್ರದರ್ಶನಕ್ಕೆ ಬರುವ ಸಾಮಾನುಗಳಿಗಾದರೂ ನೋಡಲಿಕ್ಕೆ ಬರುವ ಜನಗಳಿಂದಲಾದರೂ ಯಾವತರವಾದ ಸುಂಕ ಯಾ ತೆರಿಗೆಗಳನ್ನೂ ವಸೂಲು ಮಾಡಕೂಡದು ಮತ್ತು ಪ್ರದರ್ಶನಕ್ಕೆ ಬಂದ ಸಾಮಾನುಗಳನ್ನು ಜನರು ನೋಡುವದಕ್ಕೆ ತಕ್ಕ ಏರ್ಪಾಡುಗಳನ್ನು ಮಾಡಬೇಕು.

೧೦. ಪ್ರದರ್ಶನವು ಸಕಲ ವಿಷಯಗಳಲ್ಲಿ ಪ್ರಯೋಜನವು ತೃಪ್ತಿಕರವಾಗಿಯೂ ಪರಿಣಮಿಸುವಂತೆ ಕನಿಷ್ಟ ಪಕ್ಷ ೧೫ ದಿವಸಗಳಾದರೂ ತೆರೆದಿರಬೇಕು.

೧೧. ಪ್ರದರ್ಶನಕ್ಕೆ ಬಂದ ಸಾಮಾನುಗಳಲ್ಲಿ ಶ್ರೇಷ್ಠವಾದವುಗಳಿಗೆ ಬಹುಮಾನಗಳನ್ನು ಕೊಟ್ಟು ಸರ್ಕಾರಿ ಗಜೆಟ್ಟಿನಲ್ಲಿ ಫಾಯಿಷ್ ಮಾಡಬೇಕು.

ಎಸ್. ಎ.

ಪೆರೂನಾ ಎಲ್ಲಾ ಶೀತರೋಗಗಳನ್ನೂ ನಿವಾರಣೆ ಮಾಡುವುದರಲ್ಲಿ ಅಮೂಲ್ಯವಾಗಿದೆ ಎಂದು ಪ್ರಮುಖ ಆಸ್ಪತ್ರೆಗಳು ಹೇಳುತ್ತವೆ.

34 10

ಸಿಸ್ಟರ್ಸ್ ಆಫ್ ಧಿ ಗುಡ್ ಷೆಪರ್ಡ್, ಮಾಂಟ್ರಿಯಲ್

ಭೂಮಿಯ ಮೇಲಿರುವ ಆಸ್ಪತ್ರೆಗಳೆಲ್ಲಾ ಶೀತರೋಗಗಳನ್ನು ಚಿಕಿತ್ಸೆಮಾಡುವುದರಲ್ಲಿ ಪೆರೂನಾ ಔಷಧವು ಬಹು ಬೆಲೆಯುಳ್ಳದ್ದೆಂದು ಕಂಡುಕೊಂಡಿವೆ

ಶೀತ ನೆಗಡಿ ಮುಂತಾದ್ದು ಕ್ವಾಸಕೋಶಕ್ಕೆ ಬರುವ ರೋಗವೆಂತಲೂ ಅದು ಕಡೇಪಕ್ಷ ವರುಷಕ್ಕೆ ಎಂಟುತಿಂಗಳ ಕಾಲ ಬರುವುದೆಂತಲೂ ಸಾಮಾನ್ಯವಾಗಿ ಎಲ್ಲರಿಗೂ ತಿಳಿದಿದೆ

ಈ ದೇಶದಲ್ಲಿ ಶೀತಕಾಲವು ದೀರ್ಘವಾದ ಮತ್ತು ಕಠಿಣವಾದ ಹವಾ ಉಳ್ಳದ್ದಾಗಿ ಬಹಳ ಕಾಲ ಇರುವುದರಿಂದ ಆಗಲೇ ಶೀತ ವ್ಯಾಧ್ಯಗಳ ವೃದ್ಧಿಯಾಗುವವೆಂದು ಖಂಡಿತವಾಗಿ ಹೇಳಬಹುದು

ಆದಕಾರಣ ಕೆನಡಾ ಜನರು ಶೀತರೋಗಕ್ಕೆಲ್ಲಾ ಪೆರೂನಾ ನಂಬಿಕೆಯಾದ ಒಳ್ಳೇ ಔಷದವೆಂದು ತಿಳಿದಕೂಡಲೇ ಅದನ್ನು ಎಲ್ಲಾ ಜನರು ಪ್ರೀತಿಮಾಡಿ ಉಪಯೋಗಿಸುತ್ತಾ ಬಂದರು ಸಂಸಾರಗಳಲ್ಲಿ ಮಾತ್ರವೇ ಅಲ್ಲ ದೊಡ್ಡ ಆಸ್ಪತ್ರೆಗಳಲ್ಲೂ ಕೂಡ ಆ ರೋಗಗಳನ್ನು ತಗ್ಗಿಸುವುದಕ್ಕೂ ನರಳುವ ರೋಗಿಗಳಿಗೆ ಸೌಖ್ಯವನ್ನುಂಟುಮಾಡುವುದಕ್ಕೂ ಪೆರೂನಾವನ್ನು ಉಪಯೋಗಿಸುತ್ತಾ ಬಂದರು

ಬಡಬಗ್ಗರಾಗಿಯೂ ರೋಗಿಗಳಾಗಿಯೂ ಇರುವಂಥವರಿಗೆ ಅದು ತುಂಬಾ ಪ್ರಯೋಜನವನ್ನುಂಟುಮಾಡಿದ ವಿಷಯದಲ್ಲಿ ದೊಡ್ಡ ಆಸ್ಪತ್ರೆಯವರು ಒಪ್ಪಿ ಸಮ್ಮತಿಯನ್ನು ಕೊಡಲು ಹಿಂತೆಗೆದಿಲ್ಲವು

ಈ ದೊಡ್ಡ ಆಸ್ಪತ್ರೆಗಳ ಪೈಕಿ ಸಿಸ್ಟರ್ಸ್ ಆಫ್ ಗುಡ್ ಷೆಪರ್ಡ್ ಎಂಬುದು ಒಂದು ಅದರ ಮೇಲ್ವಿಚಾರಣೆಯವರು ಹೇಳುವುದನ್ನು ಕೇಳಿ —

ಓಹಿಯೋ ಡಿಸ್ಟ್ರಿಕ್ಟ್ ಕೊಲಂಬಸ್ ಪಟ್ಟಣದಲ್ಲಿರುವ ಪೆರೂನಾ ಕಂಪನಿಗೆ—

ಕಳೆದ ಕೆಲವು ತಿಂಗಳಿಂದಲೂ ನಮ್ಮ ಕಾಯಿಲೆಯವರಿಗೂ ಬಡವರಿಗೂ ಪೆರೂನಾವನ್ನು ಪ್ರಯೋಗಮಾಡಿರುತ್ತೇವೆ ಅದು ನಮಗೆ ತುಂಬಾ ತೃಪ್ತಿಯನ್ನುಂಟುಮಾಡಿರುತ್ತದೆಂದು ಸಂತೋಷವಾಗಿ ಹೇಳುವೆವು

ಗುಡ್ ಷೆಪರ್ಡ್ ಸಹೋದರಿಯರು, ಅಗೋಷ್ಟು ೨೦, ೧೯೦೫.

ಮಾಂಟ್ರೀಲ್.

ಈ ಆಸ್ಪತ್ರೆಯು ಬಹು ದೀರ್ಘಕಾಲ ಈ ಔಷಧವನ್ನು ಉಪಯೋಗಿಸುತ್ತಾ ಬಂದು ಅದರ ಗುಣದ ವಿಷಯದಲ್ಲಿ ತಮ್ಮ ಅಭಿಪ್ರಾಯವನ್ನು ಬದಲಾಯಿಸುವುದಕ್ಕೆ ಕಾರಣವನ್ನು ಕಾಣದೆ, ತಮ್ಮ ಸಂತೋಷದ ತೃಪ್ತಿಯನ್ನು ಕುರಿತು ಮುಂದೆ ಹೇಳುವ ಪ್ರಕಾರ ಬರೆದಿರುತ್ತಾರೆ —

ಮಾಂಟ್ರೇಲ್, ನೊವೆಂ ೭, ೧೯೦೬

ಪೆರೂನಾ ಅನೇಕ ರೋಗಿಗಳಿಗೆ ಸೌಖ್ಯಕೊಟ್ಟಿರುವುದನ್ನು ಕಂಡಿರುತ್ತೇವೆ ಅದು ಒಳ್ಳೇ ಬಲಕಾರಿಯಾದ ಸೇವನೆಯ ಔಷದವೆಂದು ಹೇಳಬಲ್ಲೆವು, ಮತ್ತು ಅದಕ್ಕಾಗಿ ನಾವು ನಿಮ್ಮನ್ನು ವಂದಿಸುತ್ತೇವೆ

ಗುಡ್ ಷೆಪರ್ಡ್ ಆಸ್ಪತ್ರೆ ಸಹೋದರಿಯರು

ಶೀತ ರೋಗದಲ್ಲಿ ಬೇರೂರಿರುವಂಥ ಆದನ್ನು ಗುಣಪಡಿಸುವುದು ತುಂಬಾ ಕಷ್ಟವಾದೀತು

ಶೀತ ರೋಗವನ್ನು ಹಿಡಿದಿರುವಂಥಾ, ದೇಹದ ಅಂಗಾಂಗಗಳ ವ್ಯಾಪನೆಯಾಗುವಂಥಾ ಔಷದವಾದ್ದರಿಂದ ದನ್ನು ಬಹಳ ಅಗತ್ಯವಾಗಿ ಉಪಯೋಗ ಮಾಡಬೇಕಾಗಿರುತ್ತದೆ

ಪೆರೂನಾ ಅಂಥಾ ಒಳ್ಳೆಯ ಔಷದವಾಗಿರುತ್ತದೆ ಅದು ಸೇರಿದೊಳಗಿರುವ ಕಾಯಿಲೆಯ ಪ್ರದೇಶವನ್ನು ಹುಡುಕಿ ಹಿಡಿಯುವುದು ಒಳಚರ್ಮವನ್ನು [illegible] ಗಟ್ಟಿ ಮಾಡುವದು ಅದರ ಮೇಲೆ [illegible] ತಾನಾಗಿ ಹಿಂತಿರುಗಿ ಬರುತ್ತದೆ

[illegible] ಬಹಳ ಕಠಿಣವಾದ ಶೀತರೋಗಿಗಳನ್ನು ಇಟ್ಟು ಇಲಾಜು ಮಾಡಿ ವಾಸಿಮಾಡಿದ ಅನೇಕ ಆಸ್ಪತ್ರೆಗಳ ಪೈಕಿ ಸೆಂಟ್ ಜಾರ್ಜ ಎಂಬುದು ಒಂದಾಗಿರುತ್ತದೆ ಈ ಆಸ್ಪತ್ರೆಯವರು ಬರೆಯುವುದನ್ನು ನೋಡಿ —

"ಸಿಸ್ಟರ್ಸ್ ಪೆರೂನಾವು ನಮಗೆ ತುಂಬಾ ತೃಪ್ತಿಕರವಾಗಿದೆ ಎಂದು ತಿಳಿಸಲು ಸಂತೋಷಪಡುತ್ತೇವೆ ಮೂವರು ರೋಗಿಗಳು ಈ ಔಷದವನ್ನು ಉಪಯೋಗಿಸಿದರು ಒಬ್ಬ ವರುಷದ ಮಗು [illegible] ಎಂಬ [illegible] ಬಹಳ ಕಷ್ಟಪಡುತ್ತಿದ್ದನು ಈಗ ಅವನು ತುಂಬಾ ಸೌಖ್ಯವಾಗಿದ್ದಾನೆ ಇನ್ನು ಮಿಕ್ಕ [illegible] ವರುಷಗಳಿಂದ ಆರೋಗ್ಯವಿಲ್ಲ

"ಹದಿನೈದು ವರುಷದ ಒಬ್ಬ ಹುಡುಗಿಗೆ ಬಹು ಕಠಿಣವಾದ ಕೆಮ್ಮಲು ಹಿಡಿದಿತ್ತು ಅವಳಿಗೆ ಪೆರೂನಾವನ್ನು ಅರ್ಧ ಶೀಸೆ ಕೊಡುವುದರಲ್ಲೇ ಆ ಕೆಮ್ಮಲು ಅದೃಶ್ಯವಾಯಿತು.

"ನನ್ನ ವಿಷಯವನ್ನು ಹೇಳುತ್ತೇನೆ ಎರಡು ಬುಡ್ಡಿ ಔಷದವನ್ನು ತೆಗೆದುಕೊಳ್ಳುವಷ್ಟರಲ್ಲೇ [illegible] ಬಹು ಆದ್ಭುತವಾದ ಬಲವನ್ನು [illegible] ಔಷದವೆಂದು ನನಗೆ ಪರಿಷ್ಕಾರವಾಗಿ ತಿಳಿದು ಬಂದಿತು

"ಇದನ್ನು ಸೇವಿಸುವುದಕ್ಕೆ ಮುಂಚೆ ನಾನು ಕಾಲುಗಂಟೆ ಹೊತ್ತು ನಡೆಯುವುದಕ್ಕೂ ಆಗದೆ ಉಬ್ಬಸಬರುತ್ತಿತ್ತು ಈಗ ನಾನು ಒಂದು ಮೈಲಿ ದೂರವಾದರೂ ಸುಲಭವಾಗಿ ನಡೆಯಬಲ್ಲೆನು

"ಈ ಮೂರು ರೋಗಿಗಳ ಮೂಲಕ ನಿಮ್ಮ ಔಷದವು ಬಹು ಬಲಕಾರಿಯಾದದ್ದೆಂದು ನಿಮಗೆ ತಿಳಿಯಪಡಿಸುತ್ತೇವೆ"

ಸೆಂಟ್ ಜಾರ್ಜ ಆಸ್ಪತ್ರೆ, ಕ್ವಿಬೆಕ್

ಪೋಕ್ಸಂಡ ಆಸ್ಪತ್ರೆಯಿಂದ ಈಚೆಗೆ ಬಂದಿರುವ ಕಾಗದವು ಈ ರೀತಿಯಾಗಿ ಹೇಳುತ್ತದೆ —

ಪೆರೂನಾವು ನಮಗೆ ಎಷ್ಟು ತೃಪ್ತಿಯನ್ನು ಕೊಟ್ಟಿತೋ ಮೂರು ವಾರಗಳ ಕೆಳಗೆ ನಿಮಗೆ ಬರೆದು ತಿಳಿಸಿರುತ್ತೇನೆ. ಅದನ್ನು ಶೀತ ವಾತ, ಕೆಮ್ಮು, ಅರತಲೆ ನೋವು ಈ ಮೊದಲಾದ ರೋಗಗಳಿಗೆ ಪ್ರಯೋಗಮಾಡಬಹುದೆಂದು ಶಿಫಾರಸು ಮಾಡುತ್ತೇನೆ.

"ನಾನು ಅದನ್ನು ಶಕ್ತಿಪುಷ್ಟಿಗಾಗಿ ಸೇವಿಸುತ್ತೇನೆ ಅದರಲ್ಲಿ ಹೇಳಿರುವ ಪ್ರಕಾರ ಪ್ರತಿ ಅರ್ಧಗಂಟೆಗೂ ಅರ್ಧ ಚಮಚದಷ್ಟು ತೆಗೆದುಕೊಂಡೆನು"

ಮಿಸೆಸ್ ಎಟ್ಟಾ ಬೂಕರ್, ಡುಂಡರ್, ಸಾಸ್ಕ, ಎನ್ ಡಬ್ಲಿಯು ಟಿ, ಇವರು ಈಚೆ ಬರೆದಿರುವುದೇನೆಂದರೆ —

"ನಾನು ಕಿಬ್ಬೊಟ್ಟೆಯಲ್ಲಿ ಶೀತವಾಯು ಹಿಡಿದು ಬಾಧೆಪಡುತ್ತಿದ್ದು, ಹಸೆಗೆ ಡಾಕ್ಟರ್ ಹಾರ್ಟ್‌ಮನ್‌ರವರಿಗೆ ಬರೆದು ಕೇಳಿದೆನು ಅವರು ಹೇಳಿದ ಪ್ರಕಾರ ಔಷದವನ್ನು ತೆಗೆದುಕೊಳ್ಳುತಾ ಬಂದೆನು ಈಗ ಆ ಕಷ್ಟಕರವಾಗಿದ್ದ ಬಾಧೆಯು ನನಗೆ ನಿವಾರಣೆಯಾಗಿ ಸೌಖ್ಯವಾಗಿದ್ದೇನೆ ಮತ್ತು ನಾನು ಅದಕ್ಕಾಗಿ ತುಂಬಾ ಕೃತಜ್ಞಳಾಗಿರುವೆನು ಪೆರೂನಾವು ಶೀತವಾಯುವಿಗೆ ಸರ್ವೋತ್ತಮವಾದ ಔಷಧವೆಂದು ನಾನು ತಿಳಿದಿದ್ದೇನೆ ಈಗ ನನಗಿರುವಷ್ಟು ದೇಹಸೌಖ್ಯವು ಹಿಂದೆ ಯಾವಾಗಲೂ ಇರಲಿಲ್ಲ"

ಪೆರೂನಾವು ಕೆಮ್ಮಿನ, ಶೀತಮಂತಗಳನ್ನೂ ಪ್ರಾರಂಭದಲ್ಲೇ ಬೇಗನೆ ಗುಣಮಾಡುವುದಲ್ಲದೆ ಬಹಳ ದೀರ್ಘಕಾಲದ ಶೀತವಾತ ರೋಗಗಳನ್ನು ಕೂಡ ಚನ್ನಾಗಿ ವಾಸಿಮಾಡಬಲ್ಲದು

ಆದರೂ ರೋಗ ಹುಟ್ಟಿದ ಪ್ರಾರಂಭದಲ್ಲಿ ಬಹಳ ಸ್ವಲ್ಪ ಔಷಧವನ್ನು ಸೇವಿಸಿದ ಮಾತ್ರಕ್ಕೇ ಅದು ನಿವಾರಣೆಯಾಗುತ್ತದೆಂತಲೂ ರೋಗವು ಹಳೆಯದಾದ ಮೇಲೆ ಬಹಳ ಔಷದವನ್ನು ಸೇವನೆ ಮಾಡಬೇಕಾಗುತ್ತದೆಂತಲೂ ನಾನು ಹೇಳಬೇಕಾದ ಅಗತ್ಯವಿಲ್ಲ

ಈ ಔಷದ್ಯ ಸಿಕ್ಕುವ ಸ್ಥಳಗಳು —

(೧) ಹಿಚ್‌ಕಾಕ್ ಅಂಡ್ ಸನ್ಸ್, ಬೆಂಗಳೂರು

(೨) ಇಂಗ್ಲಿಷ್ ಡಗ್ರ್ ಕಂಪನಿ, ಫ್ರಿಕ್ ಮಿಂಟ್ ಬೀದಿ, ಮದರಾಸ್.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ

24—5—1907 ರಿಂದ 31—5—1907 ರವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ತಗಲಿದ್ದು
ಬೆಂಗಳೂರ ಪಟ್ಟಣ	0	0	10
ಮೈಸೂರು "	0	0	2
ಬೆಂಗಳೂರು ಡಿಸ್ಟ್ರಿಕ್ಟ	33	17	41
ಮೈಸೂರು "	165	147	28
ಕೋಲಾರ್ "	3	2	0
ಕೋಲಾರ್ ಚಿನ್ನದ ಗಣಿಗಳು	0	0	3
ತುಂಕೂರು ಡಿಸ್ಟ್ರಿಕ್ಟ	8	4	0
ಹಾಸನ "	128	82	5
ಚಿತ್ರದುರ್ಗ "	15	8	0
ಕಡೂರ್ "	0	0	20
ಶಿವಮೊಗ್ಗ "	0	0	3
ಜುಮ್ಲಾ	352	260	125

ಶಾಲಿವಾಹನ ಶಕ ವರುಷಂಗಳು ೧೮೩೦ ನೇ ಪ್ಲವಂಗನಾಮ ಸಂವತ್ಸರದ ಜ್ಯೇಷ್ಟ ಶುದ್ಧ ಬಿದಿಗೆ ಗುರುವಾರದಿಂದ ಜ್ಯೇಷ್ಟ ಶುದ್ಧ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೭ ನೇ ಇಸವಿ ಜೂನ್

ತಾ	ವಾರ		ತಿಥಿ	ಘಳಿಗೆ	ನಕ್ಷತ್ರ	ಘಳಿಗೆ
13	ಗುರು	‡	ಬಿದಿಗೆ	6 20	ಪು	59 28
14	ಶುಕ್ರ	¶	ತದಿಗೆ	9 19	ಪ್ಯ	60 0
15	ಶನಿವಾ	†	ಚೌತಿ	11 19	ಪ್ಯ	5 44
16	ರವಿವಾ	,,	ಪಂಚಮಿ	17 52	ಕ್ಲ	10 58
17	ಚಂದ್ರ	*	ಷಷ್ಟಿ	20 10	ಮ	15 16
18	ಕುಜ		ಸಪ್ತಮಿ	21 30	ಪು	18-10
19	ಬುಧ	,,	ಅಷ್ಟಮಿ	21 33	ಪ್ರ	20 14

‡ ಅಮೃತಯೋಗ ¶ ಕದಳೀಗೌರೀವ್ರತ † ವಿನಾಯಕ ... ಕಾಲ ,, ಷಷ್ಠೀತಿಥಿ, ಅರಣ್ಯಗೌರೀವ್ರತ ದೇವಾಂಬ ಥೀಕ್ಷ... * ಸಪ್ತಮೀತಿಥಿ, ಷಷ್ಠೀವ್ರತ ಅಷ್ಟಮೀತಿಥಿ ,, ನವಮೀ...

ಪೇಟೇ ಧಾರಣೆ.

ದಿನಸು	ಮೈಸೂರು	ಬೆಂಗಳೂರು
ಕಚ್ಚೀ ಅಕ್ಕಿ ಪಲ್ಲ ೧ಕ್ಕೆ	೧೨-೮-೦	
ಕಂಬೂತಿ ಅಕ್ಕಿ ಅಸಲ್	೧೩-೬-೦	
" ದುಯ್ಯಂ	೧೨-೮-೦	
ಜಾಬ್ರಾಳ ಅಕ್ಕಿ	೧೨-೮-೦	
ಸಣ್ಣಕ್ಕಿ ಅವಲ್	೧೫-೦-೦	
" ದುಯ್ಯಂ	೧೪-೮-೦	
ತೊಗರೀ ಬೇಳೆ ಪಲ್ಲ ೧ಕ್ಕೆ	೧೩-೮-೦	
" ದುಯ್ಯಂ	೧೨-೧೨-೦	
ಹುರ್ಗ ರಾಗಿ ಪಲ್ಲ ೧ಕ್ಕೆ	೪-೮-೦	
ಕಾರಾಗಿ	೫-೮-೦	
ಜೋಳ	೭-೮-೦	
ಹಲಸಂದೆ ಪಲ್ಲ ೧ಕ್ಕೆ	೧೧-೦-೦	
ಬಿಳೀ ಅವರೆ	೮-೬-೦	
ಹೆಸರು	೧೧-೮-೦	
ಉದ್ದು	೧೨-೮-೦	
ಕಡಲೆ	೧೧-೮-೦	
ಎಳ್ಳು ಸೆ ೧೨೭ ಕ್ಕೆ	೨೨-೮-೦	
ಹುರುಳಿ	೪-೪-೦	
ಹರಳು ೧೨೭ ಸೇರಿಗೆ	೧೫-೦-೦	
ಸೀಗೇಕಾಯಿ ಮಣ ೧ಕ್ಕೆ	೨-೬-೦	
ಮೆಣಸಿನಕಾಯಿ	೩-೬-೦	
" ದುಯ್ಯಂ	೩-೮-೦	
ಬೆಲ್ಲ ದೊಡ್ಡ ಅಚ್ಚು	೩-೮-೦	
ಒಳ್ಳೆಣ್ಣೆ ಮಣ ೧ಕ್ಕೆ	೫-೪-೦	
ಹರಳೆಣ್ಣೆ "	೫-೮-೦	
ಕೊತ್ತಂಬರಿ ಪಲ್ಲ ೧ಕ್ಕೆ	೪-೨-೦	
ಉಪ್ಪು "	೫-೩-೦	
ಹುಣಸೇ ಹಣ್ಣು	೧-೪-೦	
" ಹಳೇದು	೦-೧೪-೦	
ತುಪ್ಪ ಮಣ ೧ಕ್ಕೆ	೧೪-೮-೦	
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ	೫-೦-೦	
ತೆಂಗಿನಕಾಯಿ ೧೦೦ ಕ್ಕೆ	೮-೮-೦	
ಅಳಲೇಕಾಯಿ ಮಣ ೧ಕ್ಕೆ	೧-೦-೦	
ಅಂಟುವಾಳದ ಕಾಯಿ ಮಣ ೧ಕ್ಕೆ	೦-೧೨-೦	
ಚಿನ್ನ (ಪವನ್) ಕಂಠಿ	೧೫-೬-೦	
" " ಪವನು	೧೫-೧೦-೦	
" " ಗಟ್ಟಿ ತೊಲ ೧ಕ್ಕೆ	೨೩-೧೨-೦	
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	೮೫-೦-೦	

Printed and Published by the Rev E THOMPSON, M A Proprietor and Manager, Wesleyan Mission Press, Mysore 13/6/1907.

REGISTERED
M. 20.

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೧ ಮೈಸೂರು—ಸನ್ ೧೯೦೭ ನೇ ಇಸವಿ ಜೂನ್ ತಾರೀಖು ೨೦ ನೇ ಗುರುವಾರ. ಸಂಚಿಕೆ ೩

BASEL MISSION WEAVING ESTABLISHMENT,

59-1

MANGALORE, SOUTH CANARA.

ದಕ್ಷಿಣ ಕನ್ನಡ ಜಿಲ್ಲಾ ಮಂಗಳೂರು ಬಾಸೆಲ್ ಮಿಶ್ಯನ್ (ಬಲ್ಲಿದ) ನೆಯ್ಯುವ ಕಾರಖಾನೆಯಲ್ಲಿ

ನಾನಾ ವಿಧದ (ವಿಸ್ಕರ್, ಟ್ವೀಡ್ ನಮೂನೆಯ) ಕೋಟು ಇಜಾರುಗಳ ಚೊಕ್ಕ ಬಟ್ಟೆಗಳೂ, ಷರ್ಟಿಂಗ್ ಎಂದು ಹೇಳುವ ಅಂಗಿ ಬಟ್ಟೆಗಳೂ, ಕರ್ಟನ್ ಯಾನೆ ತೆರೆಯ ಬಟ್ಟೆಗಳೂ, ಬೇರೆ ಇತರ ಬಟ್ಟೆಗಳೂ, ಟೇಬಲ್ ಕ್ಲಾತ್ ಯಾನೆ ಮೇಜುವಸ್ತ್ರಗಳೂ, ಟುವಾಲು ವಸ್ತ್ರಗಳೂ ಸಹಾ ಕಾಗಿ ತಯಾರಿಸಲ್ಪಟ್ಟು ಯಾವಾಗಲೂ ಬೆಲೆ ವಿಚಾರಿಯಾಗಲೀ ರವಾನೆ ಆಗಿಯಾಗಲೀ ಮಾರಾಟಕ್ಕೆ ತಯಾರಿರುತ್ತವೆ

ವಿಶೇಷ ಲಕ್ಷಿಸತಕ್ಕದ್ದು —ಈ ನಮ್ಮ ಮಾಲುಗಳಿಗೆ ಇಲ್ಲಿ ಕಾಣಿಸಿರುವ "ಟ್ರೇಡ್ ಮಾರ್ಕ್" ಎಂಬ ವ್ಯಾಪಾರಗುರ್ತಿನ ಲೇಬಿಲ್ ಯಾನೆ ಚೀಟು ಹಚ್ಚಿರುತ್ತದೆ ಈ ಗುರ್ತಿನ ಚೀಟಿಗಳಿರುವ ಬಟ್ಟೆಗಳೆಲ್ಲಾ ತಾಜಾ ವಿಸ್ಕರ್ ಮಾಲುಗಳೆಲ್ಲವೆಂದು ತಿಳಿಯತಕ್ಕದ್ದು

ಒಳ್ಳೇ ಕಮಿಷನ್ —ರೂಪಾಯಿ ೧೦೦ ರ ಮೇಲೆ ಮಾಲುಗಳನ್ನು ತೆಗದುಕೊಳ್ಳುವ ಗಿರಾಕಿಗಳಿಗೆ ಯಾ ಸಾಹುಕಾರರಿಗೆ ಕೊಡಲಾದೀತು ಹೆಚ್ಚಿನ ವಿವರ ಖುದ್ದಾಗಿ ಯಾ ಕಾಗದ ಮೂಲಕ ತಿಳುಕೊಳ್ಳಬಹುದು

ನಮೂನೆ ಯಾ ಮಾದರಿಗಳು —ಪರ ಊರಿನ ಸಾಹುಕಾರರು ಈ ಕೆಳಗಿನ ವಿಳಾಸಕ್ಕೆ ಬರಕೊಂಡಲ್ಲಿ ಕಳುಹಿಸಲ್ಪಡುವವು

ಶರ್ತ —ನಗದಾಗಿ ಇಲ್ಲವೆ ಮಾಲುಗಳು ವಿ ಪಿ ಟಪ್ಪಾಲ ಮೂಲಕ ಕಳುಹಿಸಲ್ಪಡಬೇಕಾದ್ದಲ್ಲಿ ಕಾಲುಪಾಲು ಮೌಲ್ಯವನ್ನು ಮುಂಗಡವಾಗಿ ರವಾನಿಸತಕ್ಕದ್ದು

ಪತ್ರಗಳನ್ನು ಇಂಗ್ಲೀಷಿನಲ್ಲಿ ಯಾ ಕನ್ನಡದಲ್ಲಿ ಸ್ಪಷ್ಟವಾಗಿ ಬರಿಯತಕ್ಕದ್ದು —

☞ ಈ "ಟ್ರೇಡ್ ಮಾರ್ಕ"ನ್ನಾಗಲೀ ನಮ್ಮ "ಕೋಪಿರೈಟ್" ಪಡದಿರುವ ಲೇಬಿಲುಗಳನ್ನಾಗಲೀ ಇಲ್ಲವೆ ಆ ನಮೂನೆಯ ಬೇರೆ ಲೇಬಿಲುಗಳನ್ನಾಗಲೀ ಯಾರಾದರೂ ಇತರ ಮಾಲುಗಳ ಮೇಲೆ ಪ್ರಯೋಗಿಸಲೂ ಮಾಡಲೂ ಕೂಡದು

ವಿಳಾಸ —BASEL MISSION WEAVING ESTABLISHMENT,
MANGALORE S CANARA

WILLIAM & CO., BOMBAY.

ವಿಲಿಯಂ ಮತ್ತು ಕಂಪನಿ, ಫೋರ್ಟು, ಮುಂಬಯಿ.

ಗಜಕರ್ಣದ ಮುಲಾಮು.

27 17

ಇದನ್ನು ಹಾಗಿಸುವದರಿಂದ ಎಲ್ಲಾ ತರದ ಕಜ್ಜಿಯು ನಾಶವಾಗುವದು. ಮೂರು ಸಾರಿ ಹಾಗಿಸುವದರೊಳಗೆ ಗಜಕರ್ಣವು ಹೋಗುವದು. ಇದನ್ನು ಹಚ್ಚಿದಲ್ಲಿ ಉರಿಯು ಬರುವದಿಲ್ಲ ಚರ್ಮ ಕಪ್ಪಾಗುವದಿಲ್ಲ

ಇದರಿಂದ ಗುಣ ಕಂಡುಬರುವದಿಲ್ಲವಾದರೆ ಹಣ ಹಿಂತಿರುಗಿ ಕೊಡಲ್ಪಡುವದು ತ್ವರೆಮಾಡಿರಿ! ಕೊಂಡುಕೊಳ್ಳಿರಿ!! ಕ್ರಯ ಕಮ್ಮಿ ಒಂದು ಸಾರಿ ಪರೀಕ್ಷಿಸಿ ನೋಡಿರಿ!!!
ಡಬ್ಬಿ ೧ಕ್ಕೆ ಕಿಮ್ಮತ್ತು ೦-೬-೦.
ವಿ ಪಿ. ೦-೧೦-೦.

ಅಮೃತಾಂಜನ

ಬಾಟ್ಲಿ ಒಂದಕ್ಕೆ ಕಿಮ್ಮತ್ತು ೮ ಆಣೆ ವಿ ಪಿ. ೧೨ ಆಣೆ.

ವಾಯು ಮತ್ತು ಘಾಯಿ ವಾತ, ಎದೆನೋವ ಗಂಟ್ಲುನೋವು, ಶಿರಶ್ಶೂಲ, ಸಂಧಿವಾತ, ತಲೆನೋವು, ಮೂಲವ್ಯಾಧಿ, ಶೀತ, ಕೆಮ್ಮು, ಈ ಎಲ್ಲಾ ತರದ ರೋಗಕ್ಕೆ **ಅಮೃತಾಂಜನವು** ಒಂದು ನಿಶ್ಚಯವಾದ ಔಷಧವಾಗಿರುತ್ತದೆ ಇದರಿಂದ ಗುಣ ಕಂಡುಬರುವದಿಲ್ಲವಾದರೆ ಹಣ ತಿರುಗಿ ಕೊಡಲ್ಪಡುವದು ತ್ವರೆ ಮಾಡಿರಿ! ಮಂ ಮತ್ತು ವರ್ಷದಿಂದ ಅನುಭವಿಸುವ ವಾತದ ನೋವು ನಿಮ್ಮ ಒಂದೇ ಬಾಟ್ಲಿ **ಅಮೃತಾಂಜನದಿಂದ** ಪೂರ್ಣವಾಗಿ ಗುಣ ಸಿಕ್ಕಿತು ದಯಮಾಡಿ ೧೨ ಬಾಟ್ಲಿ ವಿ ಪಿ ಮೂಲಕ ರವಾನಿಸಿರಿ ವೆ ರಾಮಭಟ್ಟ, ವಿಟ್ಲ, ದ ಕನ್ನಡ

ನಾನೂ ನನ್ನ ಸ್ನೇಹಿತರೂ **ಅಮೃತಾಂಜನವನ್ನು** ಬಹಳವಾಗಿ ಪ್ರೀತಿಸುತ್ತೇವೆ. ಗುರಾದಿಪ್ಪನಾಡ, ಪಂಜಾಬು **ಅಮೃತಾಂಜನಕ್ಕಿಂತಲೂ** ಹೆಚ್ಚು ಉಪಯೋಗ ಉಳ್ಳ ಔಷಧ ಬೇರೆ ಯಾವದೂ ಇಲ್ಲ ಗಂಗಾಸೇವಕ, ಕಲ್ಕತ್ತಾ, ಆರು ವರ್ಷದಿಂದ ವಾತಪೀಡಿತನಾದ ನನ್ನ ಗೆಳೆಯನಿಗೆ **ಅಮೃತಾಂಜನವು** ಜೀವದಾನ ಕೊಟ್ಟಿತು. ರಾಮಚಂದ್ರರಾವ್ **ಅಮೃತಾಂಜನವು** ಸಾವಿರಾರು ಜನರಿಗೆ ಗುಣಕೊಟ್ಟಿರುತ್ತದೆ ವೀರಭದ್ರಪ್ಪ, ತುಮಕೂರು

ಸಂಜೀವನದ ಹಾಗಿರುವ **ಅಮೃತಾಂಜನವನ್ನು** ನನ್ನ ಮನೆಯಲ್ಲಿ ಸದಾಕಾಲ ಇಟ್ಟಿದ್ದೇನೆ. ಹನುಮಯ್ಯ, ಬೆಂಗಳೂರು ನಿಮ್ಮ **ಅಮೃತಾಂಜನವು** ಎಂಥಾ ಕಠಿಣವಾದ ತಲೆನೋವನ್ನಾದರೂ ನಿಲ್ಲಿಸುತ್ತದೆ ಗಂಗಣ್ಣರಾವ್, ಕೊಡಗು

ಸುಂದರೀ ತೈಲ ೪ ಆಣೆ ವಜ್ರಗುಟಿಕ, ೭ ಬಿ ಲ ೧ ದಂತಮಂಜನ ೩ ಆಣೆ ನೇತ್ರಾಂಜನ ೪ ಆಣೆ ಕಫಹಾರಿ ೧ ರೂ ೪ ಆ ಕಸ್ತೂರಿ ಮಾತ್ರೆ ೧೦ ಆ ಕೇಶವರ್ಧಿನೀ ತೈಲ ೧ ರೂ ಕಜ್ಜಮುಲಾಮು ೩ ಆಣೆ ಕುಸುಮಾರಿ ಗುಟಿಕ ೧ ರೂ ತಾಂಬೂಲ ಗುಟಿಕೆ ೮ ಆಣೆ

ವಿಲಿಯಂ ಮತ್ತು ಕಂಪನಿ, ೧೬ ಓಕ್ ಲೇನ್, ಫೋರ್ಟು, ಮುಂಬಯಿ.

ತಂತಿ ಅಡ್ರೆಸು; "ಅಮೃತಾಂಜನ" ಮುಂಬಯಿ.

ಇಲ್ಲಿ ನೋಡಿ!

22 18

ತುಮಕೂರು ಡಿಸ್ಟ್ರಿಕ್ಟ್ ಇಲಾಖೆಯಲ್ಲಿ, ಯೂರೋಪಿಯನ್ ಮೇಸ್ತ್ರಿಯವರ ಕೈಯಿಂದ, ಉತ್ತಮ ತರದ ಹಾಸನದ ಟೋಪಿಗಳು ಅತಿ ಶ್ರೇಷ್ಠವಾದ ಊಲ್‌ದಾರದಿಂದ ತಯಾರಾಗುತ್ತವೆ ಕ್ರಯ ೧೦ ಆಣೆಯಿಂದ ೧ ರೂ ೧೨ ಆಣೆವರಿಗೂ ದೊರಕುವವು ಅಪೇಕ್ಷಿಸುವವರಿಗೆ ಕ್ರಯದ ಪಟ್ಟಿಯನ್ನು ರವಾನಿಸುವೆವು ವಿಳಾಸ —ಮೇನೇಜರ್, ಹಾಸನದ ಟೋಪಿ ಕಾರ್ಖಾನೆ, ಡಿಸ್ಟ್ರಿಕ್ಟ್ ಇಲಾಖೆ, ತುಮಕೂರು

೧೯೦೭ನೇ ಜುಲೈ ತಿಂಗಳ ಅಂತ್ಯದ ವರೆಗೆ

ಹಾಸನದ ಟೋಪಿಗಳು.

57 4

ಒಳ್ಳೇ ಸಮಯ, ಬಿಡಬೇಡಿರಿ.

ಈ ಟೋಪಿಗಳಿಗೆ ಮೊದಲಿದ್ದ ಕ್ರಯ ಡಜನ್ ೧ಕ್ಕೆ ೧೧ ರೂಪಾಯಿ ಈಗ ಮಾರುವ ಕ್ರಯ ಡಜನ್ ೧ಕ್ಕೆ ರೂಪಾಯಿ ೮—೪—೦
ವಿ ಪಿ ಯಿಂದಲೂ ಕಳುಹಿಸುತ್ತೇವೆ

ವಿಳಾಸ —ಸಿ ರಘುನಾಥಕಾಮತ್,
ಊಲನ್ ಮರ್ಚಂಟ್, ಬೋಳಾರ, ಮಂಗಳೂರು

ಜ್ವ ರ ಹ ರಿ.

47 8

ಇದು ಸಾಧಾರಣ ಜ್ವರ, ಸಳಜ್ವರ, ಮರೇಜ್ವರ, ಪಿತ್ಥಜ್ವರ ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನು ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮುಜರಾಯಿ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್ ಟಿ ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಡೋಸಿನ ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವ ಕಾರಿಂದ ದಯವಿಟ್ಟು ಇನ್ನೊಂದು ೨೦ ಡೋಸಿನ ಸೀಸೆಯನ್ನು ವಿ. ಪಿ ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದಾರೆ

ಕ್ರಯ —ಸೀಸೆ ೧ ಕ್ಕೆ ೮ ಆಣೆ, ೧ ರೂ , ೧—೮ ರೂ , ರೂ ೨—೧೨ ಆ , ೧೧ ರೂ , ಡಜ್ಜನ್ ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು

****

ಓ ಮ ಂ ಕ ರ್ಪೂ ರ.

Omum-Carpoor

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಶೂಲೆ ಮುಂತಾದ ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ ವ್ಯಾಧಿಗಳಿಗೆಲ್ಲಾ ಮಹೌಷಧವಾಗಿ ಪರಿಣಮಿಸಿ, ತಕ್ಷಣವೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಗೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆಸ್ರಿಯ ಓಮಂ ಕರ್ಪೂರವನ್ನು ನಾನೂ ನನ್ನ ಸಹೋದ್ಯೋಗಿಗಳೂ ಮ್ಯುನಿಸಿಪಲ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧವೆಂದು ಬರೆದಿದಾರೆ

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ —

ಹೆಸ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,
ಸೆಕೆಂಡ್ ಬೀಚ್ ಲೈನ್, ಮದ್ರಾಸ್

ಅಪಾಯದ ಕುರುಹುಗಳು.

ಸ್ವಾಭಾವಿಕವಾಗಿ ಅಪಾಯ ಬರಬಹುದಾದ ಕುರುಹುಗಳನ್ನು ಕಂಡುಹಿಡಿಯಬಹುದು.

ಕೆಮ್ಮು ಅಪಾಯದ ಕುರುಹು!

ಶ್ವಾಸಕೋಶಗಳು ಬಲಹೀನವುಳ್ಳವುಗಳೆಂದು ಇದರಿಂದ ತೋರಿಬರುತ್ತದೆ. ಅವನ್ನು ಬೇಗನೇ ಬಲಪಡಿಸತಕ್ಕದ್ದು ಬಹು ಅವಶ್ಯಕ

SCOTT'S EMULSION. 31-14

(ಸ್ಕಾಟ್ಸ್ ಇಮಲ್ಷನ್.

ಎಂಬೀ ಔಷಧವು ಈ ಕುರುಹುಗಳನ್ನು ಹೋಗಲಾಡಿಸುವದು.

ಬಲಹೀನವಾದ ಶ್ವಾಸಕೋಶಗಳನ್ನು ಬಲಪಡಿಸಿ, ಕೆಮ್ಮನ್ನು ನಿಲ್ಲಿಸುತ್ತದೆ.

ಕೈಯಿಂದ ಮುಟ್ಟಿ ತಯಾರಿಸಿದ್ದಲ್ಲ.

ಎಲ್ಲಾ ಔಷಧ ಮಾರಾಟಗಾರರಲ್ಲೂ ದೊರಕುತ್ತದೆ.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್
ಔಷಧಗಳ ಕಾರ್ಖಾನೆ,
ಲಂಡನ್, ಇಂಗ್ಲೆಂಡ್.

ಈ ಮೀನು ಮನುಷ್ಯ ಇರುವ ಔಷಧವನ್ನೇ ತೆಗೆದುಕೊಳ್ಳಿ.

ಇದಕ್ಕೆ ಸಮಾನವಾದ ಪುಸ್ತಕ ಉಂಟೋ?

ಕನ್ನಡ ಭಾಷೆಯಲ್ಲಿ ಇದುವರೆವಿಗೂ ಇಂಥಾ ಸೊಗಸಾದ ಪುಸ್ತಕವು ಪ್ರಚುರವಾಗಲಿಲ್ಲ. ಸ್ವಲ್ಪ ನೋಡಿ.

"ಹಿಂದೂದೇಶ ಪ್ರದಕ್ಷಿಣ"

ಎಂದು ಕರೆಯಲ್ಪಡುವ ಈ ನೂತನ ಪುಸ್ತಕದಲ್ಲಿ ಸುಮಾರು ತೊಂಬತ್ತು ಉತ್ಕೃಷ್ಟವಾದ ಚಿತ್ರಗಳು ಅಡಗಿವೆ ಹಿಂದೂ ದೇಶವನ್ನೆಲ್ಲಾ ಸಂಚಾರ ಮಾಡುವದರಿಂದ ಉಂಟಾಗುವ ಪರಮಾನಂದವನ್ನು ಒಂದು ಸಾರಿ ಈ ಗ್ರಂಥವನ್ನು ಓದುವದರಿಂದ ಹೊಂದಬಹುದು. ಇದು ಮೊದಲನೇ ಸಾರಿ ಪ್ರಿಂಟ್ ಆಗಿದ್ದು ಬಹು ಶೀಘ್ರವಾಗಿ ಎಲ್ಲಾ ಮುಗಿದು ಹೋದವು ಈಗ ತಿರಿಗಿ ವಿಚಿತ್ರವಾಗಿಯೂ ಉಲ್ಲಾಸಕರವಾಗಿಯೂ ಇರುವ ಪ್ರಸಿದ್ಧವಾದ ಚಿತ್ರಗಳೊಡನೆ ಮಾಡಿಸಿರುತ್ತೇವೆ, ಇದರಲ್ಲಿರುವ ಚಿತ್ರಗಳನ್ನು ಸ್ವಲ್ಪ ನೋಡಿ—ಶ್ರೀರಂಗಪಟ್ಟಣದಲ್ಲಿರುವ ಹೈದರಲ್ಲಿ ಟಿಪ್ಪುಸುಲ್ತಾನರ ಗೋರಿ, ಮಹಮ್ಮದೀಯನ ಗೋರಿ, ಹುಗ್ಲಿ ನದಿ, ಕಲ್ಕತ್ತಾ ನಗರ, ಕಲ್ಕತ್ತಾ ಹೈ ಕೋರ್ಟು, ಕಾಳಿಕಾದೇವತೆ, ಚಂದ್ರನಗರ, ಬೆಂಗಾಳೀಯರ ಮನೆಗಳು, ಜಗನ್ನಾಥಸ್ವಾಮಿ ಭುವನೇಶ್ವರವೆಂಬ ದೇವಸ್ಥಾನ, ಜಗನ್ನಾಥದ ರಥೋತ್ಸವ, ಕನರಾಕ್ ದೇವಸ್ಥಾನ, ಎವರೆಸ್ಟ್ ಶಿಖರ, ಖಟ್ಮಂಡು ನಗರದ ಒಂದು ಬೀದಿ, ಖಟ್ಮಂಡು ನಗರದ ದೇವಸ್ಥಾನಗಳು, ಜಪಚಕ್ರಗಳು, ಅಂಬಿಗರು ದೋಣಿಯನ್ನು ಎಳೆದುಕೊಂಡು ಹೋಗುವದು, ಗಯಾದಲ್ಲಿರುವ ಬುದ್ಧನ ದೇವಸ್ಥಾನ, ಔರಂಗಜೇಬನು ಕಟ್ಟಿಸಿದ ಮಸೀದಿ, ಕಾಶೀ ಪುಣ್ಯಕ್ಷೇತ್ರದಲ್ಲಿರುವ ದಾಶಾಶ್ವಮೇಧಘಟ್ಟ, ಕಪಿಗಳಿಗೆ ತಿಂಡಿ ಹಾಕುವದು, ಕಾಶೀ ಕ್ಷೇತ್ರದ ದೇವಸ್ಥಾನಗಳು, ಅಲಹಾಬಾದ್ ನಗರ ಮತ್ತು ಅದರ ಕೋಟೆ, ಅಲಹಾಬಾದ್‌ನಲ್ಲಿರುವ ಖುಸ್ರು ಬಾಗ್ ಅರಮನೆ, ಯಮುನಾ ನದಿಯಲ್ಲಿ ಯಾತ್ರಿಕರು ಮುಳುಗುವದು, ಕಾನ್‌ಪುರದಲ್ಲಿರುವ ಶಿಲಾ ಶಾಸನ, ಕಾನ್‌ಪುರದ ಹತ್ತಿರ ಗಂಗಾ ನದಿಯ ಮೇಲೆ ಕಟ್ಟಿರುವ ಸೇತುವೆ, ಲಕ್ನೋ ನಗರದ ರೆಸಿಡೆನ್ಸಿ ಬಂಗಲೆ, ಲಕ್ನೋ ಪಟ್ಟಣದ ಬಾಗಿಲು, ಸರ್ ಹೆನ್ರಿ ಲ್ಯಾರೆನ್ಸನು, ಗೋಮತಿ ನದಿಯ ಮೇಲಿರುವ ಅರಮನೆ, ಘಾಮದಲ್ಲಿ ಜನರ ಸ್ಥಿತಿ, ಹರಿದ್ವಾರಘಟ್ಟ, ಗಂಗೋತ್ರಿ ದೇವಸ್ಥಾನ, ಹಿಮಪರ್ವತಗಳ ಮೇಲಿರುವ ಪಟ್ಟಣ, ಹಿಮಪ್ರವಾಹಗಳು, ಆಗ್ರಾ ಪಟ್ಟಣದ ಕೋಟೆ, ಯಮುನಾ ನದಿಯ ದೂರದಲ್ಲಿ ತೋರುತಿರುವ ತಾಜ್‌ಮಹಲ್ ಗೋರಿಯೂ, ತಾಜ್ ಮಹಲಿನ ಕಲ್ಲಿನಲ್ಲಿ ಕೆತ್ತಿರುವ ಘರಡಿ, ಅಕ್ಬರನ ಅರಮನೆ, ಆಗ್ರಾ ಪಟ್ಟಣದ ಮುತ್ತಿನ ಮಸೀದಿ, ಫತ್ತೆಪುರ್ ಸಿಕ್ರಿಯಲ್ಲಿರುವ ಪಾಂಚ್ ಮಹಾಲ್ ಅರಮನೆ, ರಜಪೂತರು, ಭರತಪುರದ ಕೋಟೆ, ಜಲ್ವಾರಿನಲ್ಲಿ ಮಹಾರಾಜ ಭಕ್ತ್ವಾರ್ ಸಿಂಗರ ಗೋರಿ, ದೆಹಲಿ ನಗರದ ದೊಡ್ಡ ಮಸೀದಿ, ಪುರಾತನ ದೆಹಲಿಯ ಬಾಗಿಲು, ರಾಜ ಧವನು ಸ್ಥಾಪಿಸಿದ ಕಬ್ಬಿಣದ ಸ್ತಂಭ, ನಾದರ್ ಷಹಾನು ದೆಹಲಿ ನಗರದಲ್ಲಿ ಪ್ರಜಾ ಸಂಹಾರವನ್ನು ನೋಡುತ್ತಿರುವದು, ದೆಹಲಿಯ ಬಳಿಯಲ್ಲಿರುವ ಕುಟುಬ್ ಮಿನಾರ್, ಚಾಂದ್ನಿ ಚೌಕವೆಂಬ ಬೀದಿ, ಸಿಂಲಾಕ್ಕೆ ಹೋಗುವ ದಾರಿ, ಸಿಮ್ಲಾ, ಅಮೃತಸಾರದ ಸುವರ್ಣಾಲಯವು, ಲಾಹೋರಿನಲ್ಲಿರುವ ರಣಜಿತಸಿಂಗನ ಗೋರಿ, ಲಾಹೋರ್ ಪಟ್ಟಣ, ಈ ಮುಂತಾದ ಅನೇಕ ರಮಣೀಯವಾದ ಸ್ಥಳಗಳ ಚಿತ್ರಗಳು ಈ ಪುಸ್ತಕದಲ್ಲಿ ಅಡಗಿವೆ. ಅವುಗಳನ್ನೆಲ್ಲಾ ವಿವರಿಸಲು ಸ್ಥಳವಿಲ್ಲ.

ಪ್ರತಿಯೊಂದು ಅಂಶದ ವಿವರಣೆಯೂ ಬಹು ಪರಿಷ್ಕಾರವಾಗಿದೆ. ದಕ್ಷಿಣ ದೇಶದಲ್ಲಿರುವ ಅನೇಕ ಪ್ರಸಿದ್ಧ ಸ್ಥಳಗಳ ಚಿತ್ರಗಳೂ, ಅವುಗಳ ವಿವರಣೆಗಳೂ ಇದರಲ್ಲಿವೆ. ಪುಸ್ತಕವು ಭಾರಿಯಾಗಿದೆ. ಪುಸ್ತಕದ ಅಚ್ಚು ಮತ್ತು ಬೈಂಡು ಬಹು ಸುಂದರವಾಗಿವೆ. ಇದರ ಕ್ರಯ ಎಂಟೇ ಆಣೆ, ವಿ. ಪಿ. ಪಿ. ಮೂಲಕ ಹನ್ನೊಂದು ಆಣೆಯಾಗುವದು. ಪುಸ್ತಕ ಜಾಗ್ರತೆಯಲ್ಲಿ ಮಾರಾಟವಾಗುತ್ತಿದೆಯಾದ್ದರಿಂದ ತಾವುಗಳಲ್ಲ ಕೆಳಗೆ ಕಂಡ ವಿಳಾಸಕ್ಕೆ ಬೇಗನೆ ಬರೆದು ತರಿಸಿಕೊಳ್ಳಬೇಕು.

ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪ್ಪೋ,
ಮೈಸೂರು. 48-7

CHAMBERLAIN'S COLIC, CHOLERA AND DIARRHOEA REMEDY.

ಚೇಂಬರ್ಲೆನ್ ರವರು ಹೊಟ್ಟೆಶೂಲೆ, ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು.

4-25



ಕೆಳ ಹೊಟ್ಟೆಯ ನೋವು, ಬರೀ ಭೇದಿಯಾಗುವುದು, ಆಮಶಂಕೆ, ವಾಂತಿಭೇದಿ ಉಪದ್ರ, ಕೀಲುಗಳ ನೋವು, ಹೊಟ್ಟೆಯ ನಾನಾ ತರದ ಶೂಲೆಗಳು—ಈ ರೋಗಗಳನ್ನೆಲ್ಲಾ ವಾಸಿಮಾಡುತ್ತದೆ. ಈ ಪರಮಾಶ್ಚರ್ಯಯುಕ್ತವಾದ ಔಷಧವು ಜನರನ್ನು ಬದುಕಿಸಿರುವಷ್ಟು ಮತ್ತು ನೋವನ್ನೂ ಬಾಧೆಯನ್ನೂ ನಿವಾರಣೆ ಮಾಡಿರುವಷ್ಟು ಪ್ರಪಂಚದಲ್ಲೇ ಇನ್ಯಾವ ಔಷಧವೂ ಮಾಡಿರುವುದಿಲ್ಲ.

ಜ್ಞಾಪಕದಲ್ಲಿಟ್ಟುಕೊಳ್ಳಿ—ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯೊಳಗಿರುವ ಎಲ್ಲಾ ತರದ ನೋವನ್ನೂ ನಿಲ್ಲಿಸಿಬಿಡುತ್ತದೆ. ಬಹಳ ಕಠಿಣವಾದ ಭೇದಿಯೂ ಕೂಡ ಮೂರೇ ಹೊತ್ತಿನ ಈ ಔಷಧದಿಂದ ನಿರ್ಮೂಲವಾಗಿ ನಿಲ್ಲುತ್ತದೆ. ಖಂಡಿತವಾಗಿ ವಾಸಿಮಾಡುವುದೇ ಇದರ ಗುಣ.

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ.

ಕೈಯಿಂದ ಸ್ವಲ್ಪವೂ ಮುಟ್ಟಿದ್ದಲ್ಲ.

ಇದು ಎಲ್ಲೆಲ್ಲೂ ಬಿಕರಿಯಾಗುವುದು. ಸಣ್ಣ ಸೀಸೆಗೆ ೧ ರೂಪಾಯಿ. ದೊಡ್ಡ ಸೀಸೆಗೆ ೨ ರೂಪಾಯಿ.

SCHOOL BOOKS! SCHOOL BOOKS!!

56 4

		Rs.	A.	P.
New English Readers Primer I	...	0	2	6
" " Primer II	...	0	2	6
New English First Reader	..	0	4	0
" Second "	...	0	6	0
" Third "	...	0	8	0
" Fourth "	...	0	10	0
" Fifth "	...	0	12	0
" Sixth "	...	0	12	0
Primer of English Grammar	..	0	3	0
Manual of English Grammar	..	0	8	0
The Way to Health	..	0	2	0
Arithmetical Primer	..	0	2	6
Primer of Geography	...	0	6	0
Manual of Geography	...	0	14	0
Chemistry Notes by Romilly H. Ingram.		1	0	0

Apply to—

THE MANAGER,
C. L. S. Book Depot,
Mysore City

ನಿಮಗೆ ನೋವು ಇದೆಯೋ?

58 1

ಜಾಗ್ರತೆ "ಕ್ಲೆಮೆಂಟ್ ರವರ ಮ್ಯಾಜಿಕ್ ಬಾಂ" ನ್ನು ಏಕೆ ಉಪಯೋಗಿಸಬಾರದು? ಆಶ್ಚರ್ಯಕರವಾದ ಉಪಕಾರಕಾರಿಣಿಯು! ಈಗಿನ ಕಾಲದಲ್ಲಿ ಕಂಡು ಹಿಡಿದ ದೊಡ್ಡ ನೂತನವು!

ಈ ರಾಜ ಔಷಧವನ್ನು ಮೊಟ್ಟಮೊದಲು ತೊಡೆಯುತ್ತಲೇ ಕೆಲವು ನಿಮಿಷಗಳೊಳಗಾಗಿ ನರ ಮತ್ತು ಮಾಂಸ ಸಂಬಂಧವಾದ ಪಾರ್ಶ್ವ ನೋವು, ಕೀಲುಗಳ ಬಾಧೆ, ಕಿಬ್ಬೊಟ್ಟೆ ನೋವು, ಚೇಳು ಕಡಿಯುವದು, ತಲೆನೋವು, ಕೆಮ್ಮು, ಕೀಲುಗಳು ಕಿತ್ತುಬರುವದು, ಕೆಂಪು ಊತ, ಕೈಕಾಲು ಒಡೆತ ಇವುಗಳನ್ನೆಲ್ಲಾ ವಿದ್ಯುಚ್ಛಕ್ತಿಯಂತೆ ಗುಣಪಡಿಸುವದು. ಈ ಔಷಧವು ಆಶ್ಚರ್ಯಕರವಾಗಿ ಗುಣಪಡಿಸುವದರಿಂದ ಎಲ್ಲರಲ್ಲಿಯೂ ಪ್ರಸರಿಸುತ್ತಾ ಬರುವದು ಇತರ ಔಷಧಿಗಳು ಗುಣಪಡಿಸದೆ ಹೋದಾಗ ಡಾಕ್ಟರ್ ಫೀಜನ್ನು ಕಡಿಮೆಮಾಡಿ. ಇದು ನಿಸ್ಸಂದೇಹವಾಗಿಯೂ ಗುಣಪಡಿಸುವದು.

ಕ್ರಯ ೨೧ ಬಾಟ್ಲಿಗೆ ೧೦ ಆಣೆ, ಪೋಸ್ಟೇಜ್ ೪ ಆಣೆ ೩ ಬಾಟ್ಲಿಗೆ ಅಂಚೆವೆಚ್ಚ ಸೇರಿ ರೂ. ೨—೪ ಆಣೆ. ಎಲ್ಲಾ ಕೆಮಿಸ್ಟ್ ಷಾಪುಗಳಲ್ಲಿ ದೊರೆಯುವದು.

ನಮ್ಮ ವಿಳಾಸ:—ಎಫ್. ಡಬ್ಲಿಯು. ಆರ್ನ್,
ಸಿಮೆಟ್ರಿ ರೋಡ್, ವೇಪೇರಿ, ಮದರಾಸ್.

ವ್ಯವಹಾರ ನಿರ್ಣಯ

ವೆಂಬ ಕನ್ನಡ **ಲಾ** ಪುಸ್ತಕವು.

58 6

ಲಾ ತಿಳಿದವರಿಂದಲೂ, ತಿಳಿಯದವರಿಂದಲೂ ಇದುವರೆಗೆ ಬರೆಯಲ್ಪಟ್ಟಿರುವ ಈ ತೆರದ ಪುಸ್ತಕಗಳನ್ನೆಲ್ಲ ನೋಡಿ ಅವೆಲ್ಲಕ್ಕಿಂತಲೂ ಹೆಚ್ಚು ಪಯೋಗವನ್ನು ಇದೊಂದು ಪುಸ್ತಕವಿಂದುಂಟುಮಾಡಬೇಕೆಂದು ಈ ದೊಡ್ಡ ಗ್ರಂಥವು ಹೊಸದಾಗಿ ಬರೆಯಲ್ಪಟ್ಟಿದೆ. ಇದರಲ್ಲಿ ೧೪ ಅಕ್ಟುಗಳು, ೪ ಕೋಡುಗಳು, ಹಿಂದೂ, ಮಹಮ್ಮದೀಯ ಲಾಗಳು, ಚೀಫ್ ಕೋರ್ಟು ಹೈ ಕೋರ್ಟುಗಳ ತೀರ್ಮಾನಗಳು, ಗೌ ಸರ್ಕ್ಯುಲರ್‌ಗಳು ಪ್ರೊಸೀಡಿಂಗ್ಸ್‌ಗಳು, ಸಕಲ ವಿಧ ವ್ಯವಹಾರಗಳು, (ಕ್ರಯ ಆಧಾರ ದಾನ ವಿಲ್ಲು ಮೊದಲಾದ) ೭೯ ತೆರದ ದಸ್ತಾವೇಜುಗಳ ನಮೂನೆಗಳು, ಈ ಸಂಬಂಧದ ಲಾ ವಿಧಿಗಳು, ಸಿವಿಲ್ ಕ್ರಿಮಿನಲ್, ಪೊಲೀಸ್, ರೆವಿನ್ಯೂ ಸಂಬಂಧದ ವ್ಯಾಜ್ಯಗಳು, ೫೯ ತೆರದ ಅರ್ಜಿಗಳು, ಈ ಸಂಬಂಧದ ಲಾ ವಿಧಿಗಳು, ಇವೆಲ್ಲವೂ ಅಡಕವಾಗಿವೆ.

ಪುಸ್ತಕ ದೊಡ್ಡದು ಪುಟಗಳು ಒಟ್ಟು ೪೭೪ | ಬೆಲೆ ಕಡಮೆ. ಅಂಚೆ ಕೂಲಿ ಸೇರಿ ರೂ. ೧—೮—೦

ಗ್ರಂಥಕರ್ತರು. { ಎಂ. ಮಲ್ಲಾರಾಧ್ಯರು, ೧ನೆ ಗ್ರೇಡ್ ಪ್ಲೀಡರ್, ಶ್ರೀರಾಮಪೇಟೆ, ಮೈಸೂರು. } ಇದೇ ವಿಳಾಸ.

ನೋಟೀಸ್

60-1

ಮೈಸೂರು ಮಂಡಿ ಮೊಹಲ್ಲಾದಲ್ಲಿರುವ ಬಿಂದಯ್ಯನ ಮೊಮ್ಮಗ ನಿಂಗಯ್ಯನು ಇದರಿಂದ ಸರ್ವರಿಗೂ ತಿಳಿಯಪಡಿಸುವದೇನೆಂದರೆ ಸದರಿ ಮೊಹಲ್ಲಾದಲ್ಲಿರುವ ಡೋರ್ ನಂ ೨೯೯ನೆ ಮನೆಯನ್ನು ನನ್ನ ತಾಯಿಯಾದ ಬೋರಮ್ಮನು ಪರಾಧೀನಮಾಡಿರುವದಾಗಿ ಕೇಳುತ್ತೇನೆ ಸದರಿ ಮನೆಯು ನನ್ನ ಪಿತ್ರಾರ್ಜಿತವಾಗಿರುವದರಿಂದ ನನ್ನ ಅನುಮತಿ ಇಲ್ಲದೆ ಹಾಗೆ ಪಡೆದು ಕೊಂಡವರು ನನ್ನ ನಷ್ಟಕ್ಕೆ ಬಾಧ್ಯರಾಗತಕ್ಕವರೆಂದು ಕೃತಪಡಿಸಿದೇನೆ

ನಿಂಗಯ್ಯನರುಃ

ಶಾಲಾ ಪುಸ್ತಕಗಳು! ಶಾಲಾ ಪುಸ್ತಕಗಳು!

51-5

ಗೌರ್ನಮೆಂಟ್, ಕನ್ನಡ ಬಾಲಬೋಧೆ ೧ನೆಯ ಭಾಗ	೦	೧	
" " ೨ನೆಯ ಭಾಗ	೦	೨	
ಮಾರ್ಸ್ಡೆನ್ ರವರ ಕನ್ನಡ ಮೊದಲನೆಯ ಪುಸ್ತಕ	೦	೨	
" " ಎರಡನೆಯ ಪುಸ್ತಕ	೦	೨	
" " ಮೂರನೆಯ "	೦	೩	
" " ನಾಲ್ಕನೆಯ "	೦	೨	
" " ಐದನೆಯ "	೦	೪	

ವಿಳಾಸ, ಮ್ಯಾನೇಜರ್,
ಸಿ. ಎಲ್. ಎಸ್. ಬುಕ್ ಡಿಪ್ಪೋ,
ಮೈಸೂರು.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

11 21

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲೀ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೀಳಾದದ್ದು. ಅವೇ ಹಾಸನದ ಟೋಪಿಗಳೆಂದು ಜನರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ.—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು. (೨) ಟೋಪಿಗಳನ್ನು ಒಡ್ಡಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳಿಸುತ್ತೇವೆ.

ಒಳ್ಳೇದಾದ, ಚನ್ನಾಗಿ ಹಸೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಸೀದಾ ಬರೆದು ತರಿಸಿಕೊಳ್ಳಿ. ಅಗ್ಗವಾದ್ದು ಚನ್ನಾಗಿಲ್ಲದ್ದು ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ.

ಸಾದ, ಕೆಂಪು, ಕಪ್ಪು, ಬೆರಿಕೆ, ಕಾಫಿ ಟೋಪಿಗಳು ೧ ರೂ ೮ ಆ; ೧ ರೂ. ೬ ಆ; ೧ ರೂ. ೪ ಆ

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ೧ ರೂ ೮ ಆ.; ೨ ರೂ.

ಜರಿ ತಾರದ ಟೋಪಿಗಳು ೧ ರೂ. ೧೨ ಆ., ೧ ರೂ ೮ ಆ; ೧ ರೂ. ೬

ಉಸುಕಿನ ಟೋಪಿಗಳು ೧ ರೂ. ೮ ಆ; ೧ ರೂ. ೬ ಆ.

ಹೆಂಗಸರ ಟೋಪಿ, ಸೂಕ್ಷ್ಮ ಮೇಜೋಡು, ಅರ್ಧ ಮೇಜೋಡು. ಹತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವವರಿಗೆ ಕೊಟ್ಟು ಕಳುಹಿಸುವೆವು.

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ

ವೃತ್ತಾಂತ ಪತ್ರಿಕೆ

ಸನ್ ೧೯೦೪ ನೇ ಇಸವಿ ಜೂನ್ ತಾ॥ ೨೦ ನೇ ಗುರುವಾರ

ಉದ್ಯೋಗಸ್ಥರ ಸರಬರಾಯಿ.

ಸರ್ಕಾರಿ ಕೆಲಸಗಳ ಮೇಲೆ ಉದ್ಯೋಗಸ್ಥರು ಗ್ರಾಮಾಂತರಗಳಲ್ಲಿ ಸಂಚರಿಸುವರು. ಅಗ್ಗ ಅವರ ಸಾಮಾನು ಮುಂತಾದವುಗಳನ್ನು ಸಾಗಿಸುವುದಕ್ಕೆ ಚಿಲ್ಲರೆ ನೌಕರರು ಅನೇಕ ವೇಳೆ ರೈತ ಪ್ರಜೆಗಳ ಎತ್ತು ಗಾಡಿಗಳನ್ನು ಹಿಡಿಯುವುದುಂಟು. ಇದರಿಂದ ಅನೇಕ ಸಂದರ್ಭಗಳಲ್ಲಿ ರೈತರಿಗೂ ವ್ಯಾಪಾರಸ್ಥರಿಗೂ ನಷ್ಟ ತೊಂದರೆಗಳು ಸಂಭವಿಸುತ್ತವೆ ಇದನ್ನು ನಿವಾರಣೆ ಮಾಡುವುದಕ್ಕಾಗಿ ಸರ್ಕಾರದವರು ಮೊದಲಿಂದಲೂ ಜಾರಿಯಲ್ಲಿರುವ ಹುಕುಮನ್ನೇ ಈಗಲೂ ಪ್ರಕಟಿಸಿ, ಡಿಸ್ಟ್ರಿಕ್ಟುಗಳ ಅಧಿಕಾರಿಗಳು ಅದಕ್ಕೆ ಸರಿಯಾದ ಗಮನ ಕೊಡಬೇಕೆಂದು ತಿಳಿಸಿದಾರೆ. ಈ ಹುಕುಮಿನ ಸಾರಾಂಶವನ್ನು ನಮ್ಮ ವಾಚಕರೆಲ್ಲಾ ತಿಳಿದಿರಬೇಕೆಂದು ಅಪೇಕ್ಷಿಸುವೆವು. ಗವರ್ನಮೆಂಟಿನವರು ಹೇಳಿರುವುದೇನೆಂದರೆ—

ಚಿಲ್ಲರೆ ನೌಕರರು ಗಾಡಿಗಳನ್ನಿಟ್ಟಿರುವ ಜನರು ಬೆರಾಯತ್ತಿನವರೇ ವ್ಯಾಪಾರಗಾರರೇ ಎಂಬುವದನ್ನು ನೋಡದೆ ಗ್ರಾಮ ಊರುಗಳಲ್ಲಿ ಸಿಕ್ಕಿದ ಎತ್ತು ಗಾಡಿಗಳನ್ನು ಹಿಡಿಯುವುದು ಬಹಳ ಕಿರುಕುಳವಾಗಿ ಪರಿಣಮಿಸುತ್ತದೆ. ಪ್ರತಿ ಒಂದು ಊರಿನಲ್ಲೂ ಮತ್ತು ಗ್ರಾಮದಲ್ಲೂ ಬಾಡಿಗೆ ಹೊಡೆಯುವುದಕ್ಕಾಗಿಯೇ ಎತ್ತು ಗಾಡಿಗಳನ್ನು ಇಟ್ಟುಕೊಂಡಿರತಕ್ಕವರು ಇದ್ದೇ ಇರುತ್ತಾರೆ. ಅಂಥಾ ಜನರನ್ನು ಮಾತ್ರ ವಿಚಾರಿಸಿ ಸರ್ಕಾರಿ ಕೆಲಸಗಳಿಗೆ ಬಾಡಿಗೆ ಗಾಡಿಗಳನ್ನು ಗೊತ್ತುಮಾಡಿಕೊಳ್ಳಬಹುದು ಮತ್ತು ಮುಖ್ಯ ಮುಖ್ಯವಾದ ಕಡೆಗಳಲ್ಲಿ ಬೇಕಾದಾಗ ಬಾಡಿಗೆ ಗಾಡಿಗಳನ್ನು ಒದಗಿಸಿಕೊಡುವುದಕ್ಕೆ ಕಂಟ್ರಾಕ್ಟುದಾರರನ್ನು ಅಧಿಕಾರಿಗಳು ಗೊತ್ತುಮಾಡಿಟ್ಟುಕೊಂಡಿರಬೇಕು. ಹೀಗೆ ಮಾಡಿದಲ್ಲಿ ಜವಾನರು ಸಿಕ್ಕಿದಹಾಗೆ ಹೋಗಿ ಗಾಡಿಗಳನ್ನು ಹಿಡಿಯುವುದು ತಪ್ಪುತ್ತದೆ ಕಂಟ್ರಾಕ್ಟರುಗಳು ಒದಗದೆ ಇರುವಂಥಾ ಸ್ಥಳಗಳಲ್ಲಿ ತಾಲ್ಲೂಕ್ ಅಮಲ್ದಾರರು ಚಿಲ್ಲರೆ ನೌಕರರಿಂದಲೂ ಜವಾನರುಗಳಿಂದಲೂ ಪ್ರಜೆಗಳಿಗೆ ಯಾವ ವಿಧವಾದ ಕಾತಿಬಾಧೆಗಳೂ ಉಂಟಾಗದಂತೆ ತಮ್ಮ ಕೈಲಾಗುವಮಟ್ಟಿಗೂ ನೋಡಿಕೊಳ್ಳಬೇಕಾಗಿದೆ. ಅವಶ್ಯವಿದ್ದದ್ದಕ್ಕಿಂತಲೂ ಹೆಚ್ಚು ಗಾಡಿಗಳನ್ನು ಹಿಡಿದಿದ್ದೂ ಕಸಬುದಾರರಿಗೆ ಅದರಿಂದ ಕಷ್ಟನಷ್ಟಗಳುಂಟಾಗುವದೆಂದು ಗೊತ್ತಾದರೂ ಅಂಥಾ ಸಂದರ್ಭಗಳಲ್ಲಿ ಗಾಡಿ ಹಿಡಿದ ನೌಕರರಿಗೆ ಒಂದೆರಡು ಕಡೆ ಪೂರಾ ಶಿಕ್ಷಿಸುವುದು ಅವಶ್ಯಕ. ಈ ಭಾಗದಲ್ಲಿ ಡಿಸ್ಟ್ರಿಕ್ಟಿನ ಮತ್ತು ತಾಲ್ಲೂಕಿನ ಅಧಿಕಾರಿಗಳು ಸರಿಯಾದ ಗಮನವನ್ನು ಕೊಟ್ಟು, ಪ್ರಜೆಗಳಿಗೆ ಯಾವ ಅಸಾನುಕೂಲಗಳುಂಟಾಗದಂತೆ ನೋಡಿಕೊಳ್ಳಬೇಕು.

ವ್ಯವಸಾಯಕ್ಕಾಗಿಯೂ ವ್ಯಾಪಾರಕ್ಕಾಗಿಯೂ ಎತ್ತು ಗಾಡಿಗಳನ್ನಿಟ್ಟುಕೊಂಡಿರತಕ್ಕ ಪ್ರಜೆಗಳು ಈ ವಿಷಯವನ್ನು ಜ್ಞಾಪಕದಲ್ಲಿಟ್ಟುಕೊಂಡು, ಸರ್ಕಾರಿ ಜವಾನರುಗಳಿಂದ ತಮ್ಮ ಕಸಬಿಗೆ ಯಾವ ಕೊರತೆಯೂ ಉಂಟಾಗದಂತೆ ನೋಡಿಕೊಳ್ಳಬೇಕಾಗಿದೆ ತಮ್ಮ ಕಸಬಿಗೆ ಲೋಪ ಬಾರದ ಸಂದರ್ಭಗಳಲ್ಲಿ ಅವರು ಸರ್ಕಾರದ ಕೆಲಸಕ್ಕೆ ಸಹಾಯಮಾಡಲು ಹಿಂತೆಗೆಯಬಾರದು.

ಗುರುಬೋಧನೆ

ಯೇಸುಕ್ರಿಸ್ತನ ಬೋಧನೆಯನ್ನು ಕೇಳುತ್ತಿದ್ದ ಅನೇಕ ಜನಗಳು ಆತನ ಉಪದೇಶಕ್ಕೆ ಆಶ್ಚರ್ಯಪಡುತ್ತಿದ್ದರು. ಯಾಕೆಂದರೆ ಆತನು ಅವರ ಶಾಸ್ತ್ರಿಗಳಂತೆ ಉಪದೇಶ ಮಾಡದೆ ಅಧಿಕಾರವುಳ್ಳವನಂತೆ ಉಪದೇಶ ಮಾಡುತ್ತಿದ್ದನು. ಹಾಗಾದರೆ ಯೇಸು ಕ್ರಿಸ್ತನ ಬೋಧನೆಗೂ ಶಾಸ್ತ್ರಿಗಳ ಬೋಧನೆಗೂ ಇರತಕ್ಕ ವ್ಯತ್ಯಾಸಗಳೇನಾದವು? ಯೆಹೂದ್ಯ ಶಾಸ್ತ್ರಿಗಳು ತಮಗೆ ಪೂರ್ವಿಕರಿಂದ ಬಂದಿರುವ ಶಾಸ್ತ್ರಗಳಲ್ಲಿಯೂ, ಅವುಗಳ ವ್ಯಾಖ್ಯಾನಗಳಲ್ಲಿಯೂ ಮಹತ್ವವನ್ನು ಇಟ್ಟಿದ್ದರು. ಯಾರಾದರೂ ಅವರಿಗೆ ಮತಸಂಬಂಧವಾದ ಅಥವಾ ನ್ಯಾಯಸಂಬಂಧವಾದ ಪ್ರಶ್ನೆಗಳನ್ನು ಹಾಕಿದರೆ ಅವರು ತಮ್ಮ ಪುರಾತನ ಶಾಸ್ತ್ರಗಳನ್ನು ಹುಡುಕಿ ಆಯಾ ಶಾಸ್ತ್ರಕರ್ತರ ಅಭಿಪ್ರಾಯಗಳನ್ನು ತಿಳಿಸಿ ಇಲ್ಲಿ ಅಲ್ಲಿ ವಚನಗಳನ್ನು ಆರಿಸಿ ತೋರಿಸುವರೇ ಹೊರತು ಬೇರೆ ಯಾವ ಮಾರ್ಗವನ್ನೂ ಅನುಸರಿಸುತ್ತಿರಲಿಲ್ಲ. ಆದರೆ ಯೇಸು ಕ್ರಿಸ್ತನು ಶಾಸ್ತ್ರಿಗಳಂತೆ ಮಾಡದೆ ಸತ್ಯವಾದದ್ದನ್ನೇ ಪರಿಷ್ಕಾರವಾಗಿ ತಿಳಿದುಕೊಂಡು ಅದನ್ನು ಬಹಳ ಆಸಕ್ತಿಯಿಂದ ಬೋಧಿಸುತ್ತಿದ್ದನು. ಆತನ ಚರಿತ್ರೆಯನ್ನು ಓದುವಾಗ್ಗೆ—ನಾನು ನಿಮಗೆ ನಿಜನಿಜವಾಗಿಯೂ ತಿಳಿಸುತ್ತೇನೆಂಬದಾಗಿ ಪದೇ ಪದೇ ಹೇಳುತ್ತಿದ್ದನು. ಆತನು ಸತ್ಯವನ್ನು ಬೋಧಿಸುವಾಗ್ಗೆ ಶಾಸ್ತ್ರಗಳನ್ನಾಗಲಿ ವ್ಯಾಖ್ಯಾನಗಳನ್ನಾಗಲಿ ನೋಡುತ್ತಿರಲಿಲ್ಲ. ಆದ್ದರಿಂದ ಯೇಸು ಕ್ರಿಸ್ತನು ತಾನು ಬೋಧಿಸುವಾಗ್ಗೆ ಪೂರ್ವಿಕರು ಬರೆದ ಶಾಸ್ತ್ರಗಳನ್ನು ಅನುಸರಿಸದೇ ಇದ್ದದ್ದಕ್ಕೆ ಆತನ ಅಹಂಭಾವವೇ ಮುಖ್ಯ ಕಾರಣವಾಗಿತ್ತೆಂದು ಹೇಳಬಹುದೇ? ಎಂದಿಗೂ ಆತನಲ್ಲಿ ಗರ್ವ ಗುಣವು ಕಿಂಚಿತ್ತಾದರೂ ಇರಲಿಲ್ಲ. ಆತನು ದೇವರ ಸಾನಿಧ್ಯದಲ್ಲಿ ಎಡಬಿಡದೆ ವಾಸಮಾಡುತ್ತಿದ್ದನು. ದೇವರ ಸಾನಿಧ್ಯದಲ್ಲಿ ಪ್ರತಿ ನಿಮಿಷವೂ ಇದ್ದದ್ದರಿಂದಲೇ ದೇವರು ಪ್ರಕಟಿಸಿದ ಸತ್ಯವನ್ನು ಆತನು ಮನುಷ್ಯರಿಗೆ ಬೋಧಿಸುತ್ತಿದ್ದನು. ಆತನು ಒಂದಾನೊಂದು ಸಮಯದಲ್ಲಿ ಹೇಳಿದ್ದೇನಂದರೆ—ನಾನು ಹೇಳುವ ಬೋಧನೆಯು ನನ್ನದಲ್ಲ, ನನ್ನನ್ನು ಕಳುಹಿಸಿದಾತನದು ನನ್ನಷ್ಟಕ್ಕೆ ನಾನೇ ಏನೂ ಮಾಡದೆ ತಂದೆಯಾದ ದೇವರು ನನಗೆ ಬೋಧಿಸಿದ ಹಾಗೆ ಅದನ್ನೆಲ್ಲಾ ಮಾತಾಡಿದೆನೆಂದೂ ನನ್ನ ವಿಷಯವಾಗಿ ನಿಮಗೆ ತಿಳಿಯದು

ಈಗಿನ ಕಾಲದಲ್ಲಿ ಯೆಹೂದ್ಯ ಶಾಸ್ತ್ರಿಗಳಂತೆ ಅನೇಕ ಹಿಂದೂ ಬೋಧಕರಿರುತ್ತಾರೆಂಬುದು ವಾಚಕರು ತಿಳಿದಿರಬಹುದು. ಯಾರಾದರೂ ಅವರನ್ನು ಬಾಲ್ಯ ವಿವಾಹ, ವಿಧವಾ ವಿವಾಹ, ಅನ್ಯದೇಶಸಂಚಾರ, ಜಾತಿ ಖಂಡನೆ, ಇವೇ ಮೊದಲಾದ ಸಂಗತಿಗಳ ವಿಷಯ ಪ್ರಶ್ನೆ ಮಾಡಿದರೆ ಈ ವೈದಿಕ ಶಿಖಾಮಣಿಗಳು ತಮ್ಮ ಪುರಾತನ ಗ್ರಂಥಗಳನ್ನು ಹುಡುಕಿ ಪೂರ್ವಿಕರ ಅಭಿಪ್ರಾಯಗಳನ್ನೇ ಅನುಮೋದಿಸುವರು ಪೂರ್ವಿಕರ ಮಾತಿನಂತೆಯೇ ಎಲ್ಲರೂ ನಡಿಯಬೇಕೆಂಬುದೇ ಇವರ ಆಜ್ಞೆಯಾಗಿರುವದು ಮನುಷ್ಯರು ಕಲ್ಪಿಸಿದ ಶಾಸ್ತ್ರಗಳೆಂದ ಹಿಂದೂ ದೇಶದ ಏಳಿಗೆಗೆ ಹೇಳಿಕೊಡತಕ್ಕ ಕುಂದಕ ಬಂದಿರುವದು ಇವುಗಳಲ್ಲಿ ಸತ್ಯವೂ ನೀತಿಯೂ ಅನೇಕ ಸಂದರ್ಭಗಳಲ್ಲಿ ಕಾಣಬರುವದಿಲ್ಲ ಇದೂ ಅಲ್ಲದೆ ಇವುಗಳು ಈಗಿನ ಕಾಲಕ್ಕೆ ನಿಷ್ಪ್ರಯೋಜನವಾಗಿವೆ

ಯೇಸು ಕ್ರಿಸ್ತನು ಪರಲೋಕಕ್ಕೆ ಹೋಗುವದಕ್ಕೆ ಮೊದಲು ತನ್ನ ಶಿಷ್ಯರಿಗೆ—ನಾನು ತಂದೆಯಾದ ದೇವರನ್ನು ಕೇಳಿಕೊಳ್ಳುವೆನು ಆತನು ನಿಮಗೆ ಬೇರೊಬ್ಬ ಸಹಾಯಕನನ್ನು ಸದಾಕಾಲ ನಿಮ್ಮ ಸಂಗಡ ಇರುವದಕ್ಕೆ ಕೊಡುವನು, ಆ ಸಹಾಯಕನು ಯಾರಂದರೆ ಸತ್ಯದ ಆತ್ಮನೇ ಆ ಸತ್ಯದ ಆತ್ಮನು ಬಂದಾಗ ಆತನು ನಿಮ್ಮನ್ನು ನಡಿಸಿಕೊಂಡು ಹೋಗಿ ಸಕಲ ವಿಷಯದಲ್ಲಿಯೂ ಸತ್ಯಕ್ಕೆ ಸೇರಿಸುವನೆಂದು ತಿಳಿಸಿದನು ಪ್ರೇಷಿತನಾದ ಯೋಹಾನನು ತನ್ನ ದೀರ್ಘಾನುಭವದಿಂದ ಶಿಷ್ಯರಿಗೆ—ನೀವು ಪವಿತ್ರನಾದ ದೇವರಿಂದ ಅಭಿಷೇಕವನ್ನು ಹೊಂದಿದವರಾಗಿದ್ದು ಎಲ್ಲವನ್ನೂ ತಿಳಿದವರಾಗಿದ್ದೀರೆಂದು ಉಪದೇಶ ಮಾಡಿದನು.

ಈಗ್ಗೆ ಅನೇಕ ಕಡೆಗಳಲ್ಲಿ ಬದಲಾವಣೆಗಳು ಹುಟ್ಟಿ ಜನರಲ್ಲಿ ಗಲಿಬಿಲಿ ಹೆಚ್ಚುತ್ತಿರುವುದು. ಜನರು ಅನುಸರಿಸತಕ್ಕ ಸತ್ಯವಾದ ಮಾರ್ಗವು ಯಾವದು? ಅದನ್ನು ಹ್ಯಾಗೆ ಅವರು ಕಂಡುಕೊಳ್ಳಬಹುದು? ಈಗ್ಗೆ ಅವಶ್ಯವಾಗಿರುವ ಧರ್ಮವು ಯಾವದು? ಎಂಬೀ ಪ್ರಶ್ನೆಗಳು ಈಗಿನ ಜನರನ್ನು ಬಹಳವಾಗಿ ಕಳವಳ ಪಡಿಸುತ್ತದೆ ಜನರೆಲ್ಲ ತಮ್ಮ ಹೃದಯಗಳನ್ನು ದೇವರ ಕಡೆಗೆ ತಿರುಗಿಸಿ ವಿಧೇಯತ್ವದಿಂದಲೂ ದೀನ ಮನಸ್ಸಿನಿಂದಲೂ ಆತನಿಗೆ ಪ್ರಾರ್ಥಿಸಿದರೆ ಎಲ್ಲಾ ಪಾಪಗಳಿಗೆ ದೂರವಾಗಿರುವ ಪರಿಶುದ್ಧನಾದ ದೇವರು ಅವರಿಗೆ ತನ್ನ ಜ್ಞಾನದ ಬೆಳಕನ್ನು ತೋರಿಸಿ ಸತ್ಯದಲ್ಲಿ ನಡಿಸುವನು. ಆತನು ಜ್ಞಾನದಲ್ಲಿ ಎಲ್ಲಾ ಶಾಸ್ತ್ರಗಳನ್ನು ಮೀರಿದವನಾಗಿರುತ್ತಾನೆ ಸತ್ಯದ ಆತ್ಮನೇ ಅವರ ಬೋಧಕನಾಗಿರುವನು

ಒಳದೇಶದ ವೃತ್ತಾಂತಗಳು.

ಮೈಸೂರು ಗವರ್ನಮೆಂಟಿನವರು ಆರು ಮಂದಿ ದೊಡ್ಡಮನುಷ್ಯರ ಕುಮಾರರನ್ನು ರೆವಿನ್ಯೂ ಪ್ರೊಬೇಷನರಾಗಿ ನೇಮಕಮಾಡಿರುತ್ತಾರೆ ಈ ಪೈಕಿ ಮೂರು ಮಂದಿ ಹಿಂದುಗಳು, ಮೂವರು ಮುಸಲ್ಮಾನರೆಂದು ತಿಳಿಯಬರುವುದು

***

ಶ್ರೀ ಶೃಂಗೇರಿ ಸ್ವಾಮಿಗಳು ರಾಜಧಾನಿಯನ್ನು ಕುರಿತು ಕಳೆದ ಸೋಮವಾರ ಬೆಳಿಗ್ಗೆ ಬೆಂಗಳೂರಿನಿಂದ ಪರಿವಾರ ಸಹಿತ ತೆರಳಿದರು ಅವರು ತಾಲ್ಲೂಕುಗಳ ಮೇಲೆ ಸಂಚಾರಮಾಡಿಕೊಂಡು ಈ ತಿಂಗಳ ಅಂತ್ಯಕ್ಕೆ ಮೈಸೂರು ಪಟ್ಟಣವನ್ನು ತಲಪುವವರಾಗಿದಾರೆ.

***

ಬೆಂಗಳೂರಿಂದ ರಾಜಧಾನಿಗೆ ಬರತಕ್ಕ ರೈಲುಗಾಡಿಗಳು ಕಾಲಕ್ಕೆ ಸರಿಯಾಗಿ ತಲಪದೆ ಇರೋಣದರಿಂದ ಪ್ರಯಾಣಿಕರಿಗೂ ವರ್ತಕ ಮಂಡಲಿಯವರಿಗೂ ಅಸಾನುಕೂಲವಾಗುತ್ತಿದೆ ರೈಲ್ವೆ ಕಂಪನಿಯವರು ಇದನ್ನು ಬೇಗನೆ ಕ್ರಮಪಡಿಸುವರೆಂದು ನಿರೀಕ್ಷಿಸುತ್ತೇವೆ

***

ರಾಜಧಾನಿಗೆ ಸುಮಾರು ೯ ಮೈಲಿ ದೂರದಲ್ಲಿರುವ ಇಲವಾಲದ ಜಂಗಲಿನಲ್ಲಿ ಕೆಲವು ಕಾಲದಿಂದ ಸೇರಿಕೊಂಡು ಗೋಕಾಯಿಗಳನ್ನು ಕೊಲ್ಲುತ್ತಿದ್ದ ಒಂದು ಭಾರೀ ಚಿರತೆಯನ್ನು ಕಳೆದ ವಾರ ನಮ್ಮ ಮಹಾರಾಜರವರು ದಯಮಾಡಿ ಕೊಂದುಹಾಕಿ, ಆ ದುಷ್ಟಮೃಗದ ಬಾಧೆಯನ್ನು ನಿವಾರಣೆಮಾಡಿರುತ್ತಾರೆ

***

ಶಿವಸಮುದ್ರದ ಸುತ್ತುಮುತ್ತಿನಲ್ಲೂ ಮಳವಳ್ಳಿ ತಾಲ್ಲೂಕು ಹಲಗೂರು ಹೋಬಳಿಯ ಪೈಕಿ ಕೆಲವು ಗ್ರಾಮಗಳಲ್ಲೂ ಸಂಚಾರ ಮಾಡುತ್ತಿರುವ ಒಂದು ಹುಲಿಯು ಮನುಷ್ಯರನ್ನು ಹಿಡಿದು ತಿನ್ನುತ್ತಿದೆ ಎಂದು ತಿಳಿದುಬಂದದ್ದರಿಂದ ಮೈಸೂರು ಡೆಪ್ಟಿ ಕಮಿಷನರವರು ಆ ಮೃಗವನ್ನು ಕೊಂದವರಿಗೆ ನೂರು ರೂಪಾಯಿ ಬಹುಮಾನಕೊಡುವುದಾಗಿ ತಿಳಿಸಿರುತ್ತಾರೆ.

***

ಮೆ॥ ಜಸ್ಟಿಸ್ ಎಲ್ ಮೂರ್‌ಯವರು ಕಾಲವಾದ್ದರಿಂದ ಬೆಂಗಳೂರು ಚೀಫ್ ಕೋರ್ಟಿನಲ್ಲಿ ಮೆ॥ ಎಚ್ ವಿ ನಂಜುಂಡಯ್ಯನವರು ಮೇ ೧೯ ರ ಲಾಗಾಯತು ಚೀಫ್ ಜಡ್ಜಾಗಿರತಕ್ಕದೆಂತಲೂ, ಮೆ॥ ಕೆ ಎಸ್ ಚಂದ್ರಶೇಖರ ಐಯ್ಯರವರು ಛಾರ್ಜು ವಹಿಸಿಕೊಳ್ಳುವ ತಾರೀಖಿನಿಂದ ಚೀಫ್ ಕೋರ್ಟಿನ ಜಡ್ಜರಾಗಿರತಕ್ಕದ್ದೆಂತಲೂ ಶ್ರೀಮನ್ ಮಹಾರಾಜರವರು ನೇಮಕಮಾಡಿರುತ್ತಾರೆ

***

ಮಹಾರಾಣಿ ಮಾತಾಜಿ ತಪಸ್ವಿನಿ ಎಂಬುವಳೆಯು ಕಾಶೀಪಟ್ಟಣದಲ್ಲಿ ಕಾಲವಾದ ಸಂಗತಿಯನ್ನು ಮೊದಲೇ ತಿಳಿಸಿರುವೆವಷ್ಟೆ. ಆಕೆ ಕಲ್ಕತ್ತಾ ಪಟ್ಟಣದಲ್ಲಿ ಸ್ಥಾಪಿಸಿ ನಡಸುತ್ತಾ ಬಂದ ಮಹಾಕಾಳಿ ಪಾಠಶಾಲಾ ಎಂಬ ಬಾಲಿಕಾ ಪಾಠಶಾಲೆಯ ಸ್ಥಿತಿಗತಿಯನ್ನು ನಮ್ಮ ಮಹಾರಾಜರವರು ತಿಳಿದುಕೊಂಡು, ಆ ಪಾಠಶಾಲೆಗೆ ೫೦೦ ರೂಪಾಯಿಗಳನ್ನು ದಯಪಾಲಿಸಿರುತ್ತಾರೆಂದು ತಿಳಿದುಬಂದಿದೆ.

***

ನಾಳೆ ಶನಿವಾರದ ದಿನ ರಾಜಧಾನಿಯಲ್ಲಿ ಶ್ರೀಮನ್ಮಹಾರಾಜರವರ ವರ್ಷ ವರ್ಧಂತಿ ಉತ್ಸವವು ನೆರವೇರುವುದು ಈ ಸಂಸ್ಥಾನದ ದಿವಾನರೇ ಮೊದಲಾದ ಸಮಸ್ತ ಮುಖ್ಯ ಹುದ್ದೇದಾರರೂ ಯೂರೋಪಿಯನ್ ದೊಡ್ಡ ಮನುಷ್ಯರೂ ಈ ಉತ್ಸವಕ್ಕಾಗಿ ಬರುವವರಾಗಿದಾರೆ ಚಾಮುಂಡಿ ಬೆಟ್ಟದ ಬಳಿ ಮೈದಾನಿನಲ್ಲಿ ಕುದುರೆ ಜೂಜೂ ಪೋಲೋ ಪಂದ್ಯವೂ ೪—೧೦ ದಿನಗಳ ವರಕ ನಡೆಯುವವು

***

ಕೋಲಾರ್ ಚಿನ್ನದ ಗಣಿಗಳಿಗೆ ಸೇರಿದ ಛಾಂಪಿಯನ್ ರೀಫ್ ಎಂಬ ಗಣಿಯೊಳಗೆ ಒಂದು ತೊಲೆಯ ತುಂಡು ಮೇಲಿನಿಂದ ೩,೦೩೦ ಅಡಿಯ ಕೆಳಗೆ ಕೆಲಸಮಾಡುತ್ತಿದ್ದವರ ಮೇಲೆ ಕಳಚಿ ಬಿದ್ದುಕೊಂಡಿತು ಕಲ್ಲು ಮಣ್ಣೂ ಅಪಾರವಾಗಿ ಬಿದ್ದು ಐದುಮಂದಿ ಕೂಲಿಕಾರರು ಅದರ ಕೆಳಗೆ ಸಿಕ್ಕಿ ಪ್ರಾಣ ಕಳೆದುಕೊಂಡರು ಈ ಹೆಣಗಳನ್ನು ಬಿಡಿಸಿ ಮೇಲಕ್ಕೆ ಸಾಗಿಸುವದಕ್ಕೆ ಪೂರಾ ಎರಡೂವರೆ ದಿನ ಹಿಡಿಯಿತೆಂತಲೂ ತುಂಬಾ ಕಷ್ಟವಾಯಿತೆಂತಲೂ ತಿಳಿಯಬರುವುದು

***

ಮುಂದೆ ಹೇಳುವ ಅಧಿಕಾರಿಗಳು ಇನ್ನೂ ಕೆಲವು ಕಾಲ ನೌಕರಿಯಲ್ಲಿರತಕ್ಕದ್ದೆಂದು ಸರ್ಕಾರದವರು ಅವಧಿಯನ್ನು ಕೊಟ್ಟಿರುತ್ತಾರೆ—ಅಮಲ್ದಾರ್ ಮೆ॥ ಕೆ ಆರ್ ಸುಬ್ಬರಾಯರು ಮುಂದಿನ ಆಗೋಷ್ಟು ತನಕ, ಸೀನಿಯರ್ ಅ॥ ಕಮಿಷನರ್ ಮೆ॥ ಎನ್ ವೆಂಕಟರಾಯರು ೧೯೦೪ನೇ ಮೇ ೧ರ ವರೆಗೆ, ಮಿಲ್ಟ್ರೀ ಅಸಿಸ್ಟೆಂಟ್ ಮೆ॥ ಎಚ್ ಡಾನ್ ಯವರೂ, ವಿದ್ಯಾಭ್ಯಾಸದ ಇಲಾಖಾ ಇನ್‌ಸ್ಪೆಕ್ಟರ್ ಜನರಲ್ ಮೆ॥ ಎಚ್ ಜೆ ಭಾಭಾ ಯವರೂ, ಅ॥ ಕಮಿಷನರ್ ಮೆ॥ ಬಾದಾಮಿ ಕೃಷ್ಣರಾಯರೂ, ಎಕ್ಸೈಸ್ ಅ॥ ಕಮಿಷನರ್ ಮೆ॥ ಶ್ರೀಕಂಠಯ್ಯನವರೂ ೧೯೦೪ ನೆ ಜೂಲೈ ೧ ರ ವರಕ ಕೆಲಸದ ಮೇಲಿರುವರು, ಮತ್ತು ಬೆಂಗಳೂರು ಸೆಂಟ್ರಲ್ ಕಾಲೇಜ್ ಪ್ರಿನ್ಸಿಪಲ್ ಮೆ॥ ಜೆ. ಕುಕ್‌ಯವರು ೧೯೦೪ ನೆ ಏಪ್ರಲ್ ತಿಂಗಳಲ್ಲೂ ಸರ್ಕಾರಿ ಉದ್ಯಾನವನಗಳ ಸೂಪರಿಂಟೆಂಡೆಂಟ್ ಮೆ॥ ಕ್ರಾಮ್ಬಿಯವರು ೧೯೦೪ ನೆ ಜನವರಿಯಲ್ಲೂ ಕೆಲಸ ಬಿಡುವರೆಂದು ತಿಳಿಯಬರುವುದು.

***

ಅರಮನೆ ಗೃಹಪ್ರವೇಶವಾದದ್ದರ ಅಂಗವಾಗಿ ಕಳೆದ ಸೋಮವಾರ ಶ್ರೀಮನ್ಮಹಾರಾಜರವರು ರಾಜಗುರುವಾದ ಪರಕಾಳ ಮಠದ ಸ್ವಾಮಿಗಳನ್ನು ಅರಮನೆಗೆ ಬರಮಾಡಿಕೊಂಡು ಸತ್ಕಾರಮಾಡಿದರು ಭಾನುವಾರ ಸಾಯಂಕಾಲ ಶ್ರೀಮನ್ಮಹಾರಾಜರವರು ಮಠಕ್ಕೆ ದಯಮಾಡಿಸಿ ಸ್ವಾಮಿಗಳನ್ನು ಪಾದಪೂಜೆಗೂ ಭಿಕ್ಷಗೂ ಅರಮನೆಗೆ ಬರಬೇಕೆಂದು ಕೇಳಿಕೊಂಡರು ಸ್ವಾಮಿಗಳು ಅದರಂತೆ ಮರುದಿನ (ಸೋಮವಾರ ಬೆಳಿಗ್ಗೆ) ಸಮಸ್ತ ಮರ್ಯಾದೆಗಳೊಡನೆ ಅರಮನೆಗೆ ದಯಮಾಡಿದರು ಶ್ರೀಮನ್ಮಹಾರಾಜರವರು ಆನೆಬಾಗಿಲಲ್ಲಿ ಸ್ವಾಮಿಗಳನ್ನು ಎದುರುಗೊಂಡು, ಕಲ್ಯಾಣಮಂಟಪಕ್ಕೆ ಸ್ವಾಮಿಗಳನ್ನು ಕರೆದುಕೊಂಡುಹೋಗಿ ಬಿಟ್ಟರು ಸ್ವಾಮಿಗಳು ಅಲ್ಲಿ ಪೂಜೆಪುನಸ್ಕಾರಗಳನ್ನು ಮಾಡಿ ಶ್ರೀಮನ್ಮಹಾರಾಜರವರಿಗೂ ರಾಜವರ್ಗದವರಿಗೂ ತೀರ್ಥಪ್ರಸಾದಗಳನ್ನು ಕೊಟ್ಟರು. ತರುವಾಯ ಪಾದಪೂಜೆಯೂ ಭಿಕ್ಷೆಯೂ ಶ್ರೀ ವೈಷ್ಣವರಿಗೆ ಭೂರಿ ಸಂತರ್ಪಣೆಗಳೂ ನಡೆದವು ರಾತ್ರಿಯೂ ಪೂಜೆ ಉತ್ಸವಾದಿಗಳನ್ನು ಅಲ್ಲೇ ಮಾಡಿ, ಸ್ವಾಮಿಗಳು ಶ್ರೀಮನ್ಮಹಾರಾಜರವರಿಂದ ಬೀಳ್ಕೊಂಡು, ಮರ್ಯಾದೆಗಳ ಸಹಿತ ಸುಮಾರು ೧೧ ಘಂಟೆಗೆ ಮಠಕ್ಕೆ ದಯಮಾಡಿಸಿದರು

***

ಮೈಸೂರು ಗವರ್ನಮೆಂಟ್ ಸರ್ವಿಸ್ಸಿನಲ್ಲಿರುವ ವಯಸ್ಸಾದ ಅಧಿಕಾರಿಗಳನ್ನು ಪೆನ್ಷನ್ ಮೇಲೆ ತೆಗೆದುಬಿಡಬೇಕೆಂದು ಸರ್ಕಾರದವರು ತೀರ್ಮಾನಿಸಿ, ಅಂಥವರ ಹೆಸರುಗಳುಳ್ಳ ಪಟ್ಟಿಯನ್ನು ಇಲಾಖೆಗಳಿಗೆ ಕಳುಹಿಸಿರುತ್ತಾರೆ ಆದರಿಂದ ಮುಂದೆ ಹೇಳುವ ಅಧಿಕಾರಿಗಳನ್ನು ನಾಳೆ ಜೂಲೈ ೧ ರ ಲಾಗಾಯತು ಕೆಲಸಬಿಡಿಸುವರೆಂದು ಗೊತ್ತಾಯಿತು. ಆ ಪೈಕಿ ಮುಖ್ಯರಾದವರ್‍ಯಾರೆಂದರೆ—ಎಕ್ಸೈಸ್ ಕಮಿಷನರ್ ಮೆ॥ ಟಿ ಎನ್ ಸ್ವಾಮಿಯ್ಯನವರು, ರೆವಿನ್ಯೂಸರ್ವೆಸೆಟ್ಲಮೆಂಟ್ ಕಮಿಷನರ್ ಮೆ॥ ಜೆ ಪಿ. ಗ್ರಾಂಟ್‌ಯವರು, ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಜಡ್ಜ್ ಮೆ॥ ಎಸ್ ವೆಂಕಟವರದ ಐಯಂಗಾರ್ರು, ಅ॥ ಕಮಿಷನರ್ ಮೆ॥ ಸೈಯ್ಯದ್ ಅಮೀರ್ ಹಸನರವರು, ಸಬ್ ಜಡ್ಜ್ ಮೆ॥ ಸಿ ಬಿ ಶೇಷಗಿರಿರಾಯರು, ಅಮಲ್ದಾರರಾಗಿರುವ ಮೆ॥ ಗಳಾದ ಪಾರ್ಥಸಾರಥಿ ಐಯ್ಯಂಗಾರ್ರು, ಟಿ ವೆಂಕಟರಾಮಯ್ಯನವರು, ಎಸ್. ಕೃಷ್ಣಪ್ಪನವರು, ಡಿ ನರಸಿಂಗರಾಯರು, ಅ॥ ಕಂಟ್ರೋಲರ್ ಮೆ॥ ವೈಯ್ಯಾಪುರಿ ಶೆಟ್ಟರು, ಕಂಟ್ರೋಲರವರ ಆಫೀಸ್ ಎಗ್ಜಾಮಿನರ್ ಮೆ॥ ಪೋರ್ಟರ್‌ಯವರು, ಅ॥ ಸರ್ಜನರಾಗಿರುವ ಮೆ॥ ಚಂಗಲ್ರಾಯ ಮೊದಲಿಯಾರ್ರು, ಮೆ॥ ಪೊನ್ನಸಾಮಿ ಪಿಳ್ಳೆಯವರು, ಫಾರೆಸ್ಟ್ ಅ॥ ಕನ್ಸರ್ವೇಟರ್ ಮೆ॥ ಟಿ ಮಾಂಟೀರೋ ಯವರು, ಹೈ ಸ್ಕೂಲ್ ಹೆಡ್ ಮಾಸ್ಟರ್ ಮೆ॥ ಎಸ್. ಕ್ರೀಟ್ ಯವರು, ಸ್ಕೂಲ್ ಡೆಪ್ಟಿ ಇನ್‌ಸ್ಪೆಕ್ಟರ್ ಮೆ॥ ಕೆ ರಂಗಪ್ಪನವರು, ಇನ್ನು ಕೆಲವರು

ಹಿಂದೂಸ್ಥಾನದ ರೈಲ್ವೆ ಇಲಾಖೆಯು.

ಕಳೆದ ೧೯೦೬ ನೆ ದಿಸೆಂಬರಿಗೆ ಆಖೈರಾದ ಒಂದು ವರುಷದಲ್ಲಿ ಹಿಂದುಸ್ಥಾನದ ರೈಲ್ವೆ ಇಲಾಖೆಯ ಕಾರುಬಾರುಗಳು ಹ್ಯಾಗೆ ನಡೆದವೆಂಬ ವಿಷಯದಲ್ಲಿ ಗವರ್ನಮೆಂಟಿನವರು ಒಂದು ರಿಪೋರ್ಟನ್ನು ಬರೆದು ಈಗತಾನೇ ಪ್ರಕಟಿಸಿರುತ್ತಾರೆ. ಈ ರಿಪೋರ್ಟಿನಲ್ಲಿ ಕಂಡುಬರುವ ಕೆಲವು ಮುಖ್ಯವಿಷಯಗಳನ್ನು ತೆಗೆದು ಇಲ್ಲಿ ಪ್ರಕಟಿಸುವೆವು.

೧೯೦೬ ನೆ ಇಸವಿಯಲ್ಲಿ ಹೊಸದಾಗಿ ಕಾಮಗಾರಿ ಆದ ೬೬೨ ಮೈಲಿ ದೂರ ರೈಲ್ ರಸ್ತೆಯ ಮೇಲೆ ಗಾಡಿಗಳನ್ನು ಓಡಿಸಲು ಸಿದ್ಧವಾಯಿತು ಆ ವರುಷದ ಆಖೈರಿನಲ್ಲಿ ಹಿಂದುಸ್ಥಾನದಲ್ಲೆಲ್ಲಾ ಒಟ್ಟು ೨೯,೧೯೭ ಮೈಲಿಗಳ ರೈಲ್ ರಸ್ತೆ ಇತ್ತು ಈ ರಸ್ತೆಗಳಿಗಾಗಿ ಗವರ್ನಮೆಂಟಿನವರು ೩೭,೯೨೧ ಲಕ್ಷ ರೂಪಾಯಿಗಳನ್ನು ಮೂಲಧನಹಾಕಿರುತ್ತಾರೆ ೧೯೦೬ ನೆ ವರುಷ ಹೊಸದಾಗಿ ೨೩೦ ಎಂಜಿನ್ ಗಾಡಿಗಳನ್ನೂ, ೬೯೧ ಪ್ರಯಾಣದ ಗಾಡಿಗಳನ್ನೂ, ೪,೩೧೯ ಸಾಮಾನು ಬಂಡಿಗಳನ್ನೂ ತಯಾರ್ಮಾಡಿಸಿ ತರಿಸಿರುತ್ತಾರೆ ಇದಲ್ಲದೆ ದಿಸೆಂಬರ್ ೩೧ ರಿಂದ ಈಚೆಗೆ ಇನ್ನೂ ೬೫ ಎಂಜಿನ್ ಗಾಡಿಗಳನ್ನೂ, ೧೪೪ ಪ್ರಯಾಣದ ಗಾಡಿಗಳನ್ನೂ, ೨,೮೭೮ ಸಾಮಾನು ಬಂಡಿಗಳನ್ನೂ ಮಾಡಿಸಿ ತರಿಸಿಕೊಳ್ಳುವಂತೆ ರೈಲ್ವೆ ಇಲಾಖೆಯವರಿಗೆ ಅಧಿಕಾರವನ್ನು ಕೊಟ್ಟಿರುವರು

೧೯೦೫ ನೆ ಇಸವಿಯಲ್ಲಿ ರೈಲ್ವೆ ಒಟ್ಟು ಉತ್ಪತ್ತಿಯು ೬,೧೬೮ ಲಕ್ಷ ರೂಪಾಯಿ ಆಗಿತ್ತು ೧೯೦೬ ನೆ ವರುಷದಲ್ಲಿ ಅದಕ್ಕಿಂತ ಹೆಚ್ಚಾಗಿ ಅಂದರೆ ೪,೪೯೨ ಲಕ್ಷ ರೂಪಾಯಿ ಹುಟ್ಟುವಳಿ ಆಗಿರುತ್ತದೆ ಅಂದರೆ ರೈಲ್ವೆ ಇಲಾಖೆಯ ಸಮಸ್ತ ಖರ್ಚುಗಳನ್ನೂ ಕಳೆದಲ್ಲಿ ೨೪೩ ಚಿಲ್ಲರೆ ಲಕ್ಷ ರೂಪಾಯಿ ಗವರ್ನಮೆಂಟಿಗೆ ಆದಾಯವಾಗಿರುವುದು.

೧೯೦೬ನೇ ವರುಷದಲ್ಲಿ ಹಿಂದುಸ್ಥಾನದ ರೈಲ್ ಮಾರ್ಗಗಳಲ್ಲಿ ಗಾಡಿಗಳು ನಜ್ಜು ಹೊಡೆದೋ ಇಲ್ಲದೇ ಇತರ ಕಾರಣಗಳಿಂದಲೋ ಅನಾಹುತಗಳಾಗಿ ೫೯ ಜನರು ಪ್ರಾಣ ಕಳೆದುಕೊಂಡರು, ೩೬೪ ಜನರಿಗೆ ಗಾಯಗಳಾದವು ಹಿಂದಿನ ವರುಷ ೨೩ ಮಂದಿ ಮಾತ್ರ ಮೃತಪಟ್ಟರೆಂತಲೂ ೨,೩೦೦ ಮಂದಿಗೆ ಗಾಯಗಳಾದವೆಂತಲೂ ತಿಳಿಯುವುದು

ಹಿಂದುಸ್ಥಾನದ ರೈಲ್ವೆ ಇಲಾಖೆಯಲ್ಲಿ ೧೯೦೬ನೇ ವರುಷದಲ್ಲಿ ಒಟ್ಟಾಗಿ ೪,೪೯,೨೮೬ ಮಂದಿ ನೌಕರರಾಗಿದ್ದರು ಈ ಪೈಕಿ ಯೂರೋಪಿಯನ್ನರು ೭,೮೫೦ ಮಂದಿ ಯುರೇಷಿಯನ್ನರು ೯,೩೨೬ ಮಂದಿ, ಉಳಿದ ೪,೬೩,೧೦೮ ಜನರು ಹಿಂದುಸ್ಥಾನದ ಸ್ವದೇಶಿಗಳಾಗಿದ್ದರು

ಮೈಸೂರು ಸರ್ಕಾರಿ ಹುಕುಮುಗಳು

ಕೆಲವು ಸಂದರ್ಭಗಳಲ್ಲಿ ಸರ್ಕಾರ ನೌಕರರು ಕಾಯಿಲೆಯ ಸಬಬು ರಜಾ ಪಡೆಯಲು ತಾವು ಚಿಕಿತ್ಸೆ ಹೊಂದುವ ವೈದ್ಯರಿಂದ ಸರ್ಟಿಫಿಕೇಟನ್ನು ಹಾಜರ್ಮಾಡಬೇಕಾಗಿ ಕಾನೂನು ಇರುವದು ಹಕೀಮರು ಮತ್ತು ನೇಟಿವ್ ವೈದ್ಯರು ಹೀಗೆ ಸರ್ಟಿಫಿಕೇಟ್ ಕೊಡಲು ಅರ್ಹರಾದವರೇ ಅಲ್ಲವೇ ಎಂಬುವ ವಿಷಯವನ್ನು ಸ್ಪಷ್ಟಪಡಿಸಬೇಕಾಗಿ ಸೀನಿಯರ್ ಸರ್ಜನ್ ರವರು ಕೇಳಿಕೊಳ್ಳಲು ಸರ್ಕಾರದವರು ಅಂಥಾ ಸರ್ಟಿಫಿಕೇಟುಗಳು ಡಿಸ್ಟ್ರಿಕ್ಟ ಮೆಡಿಕಲ್ ಮತ್ತು ಸ್ಯಾನಿಟರಿ ಆಫೀಸರವರಿಂದ ಅಂಗೀಕರಿಸಲ್ಪಡಬೇಕಾಗಿರುವುದರಿಂದಲೂ ಮತ್ತು ಅವಶ್ಯಬಿದ್ದಲ್ಲಿ ಅರ್ಜಿದಾರರನ್ನು ಹಾಜರ್ಪಡಿಸಿಕೊಳ್ಳಲು ಇವರಿಗೆ ಅಧಿಕಾರವು ಇರುವದ್ದರಿಂದಲೂ ಕಾಯಿಲೆಯಾದ ನೌಕರನು ನೇಟಿವ್ ವೈದ್ಯನ ಅಥವ ಹಕೀಮನ ಔಷಧವನ್ನು ತೆಗೆದುಕೊಳ್ಳುತ್ತಿದ್ದರೆ ಔಷಧವನ್ನು ಕೊಡುವ ನೇಟಿವ್ ವೈದ್ಯರು ಅಥವ ಹಕೀಮರು ಸರ್ಟಿಫೈ ಮಾಡಲು ಅಭ್ಯಂತರವಿಲ್ಲವೆಂದು ಹುಕುಂ ಮಾಡಿರುತ್ತಾರೆ

ಮೈಸೂರು ಸರ್ಕಾರಿ ರೆವಿನ್ಯೂ ಮತ್ತು ವ್ಯವಸಾಯದ ಗೆಜೆಟ್ಟು ಪ್ರಕಟನ್ ಆಗುವದಕ್ಕೆ ಷುರು ಆದ ಲಾಗಾಯತು ಈವರೆಗೆ ೫೭೧ ಮಂದಿ ಪಟೇಲ್ ಶಾನುಭೋಗರು ಚಂದಾದಾರರಾಗಿ ದಾಖಲಾಗಿರುತ್ತಾರೆ ಈ ಪೈಕಿ ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲೇ ೩೭೪ ಮಂದಿ ಇರುತ್ತಾರೆ ಉಳಿದ ೧೪೭ ಮಂದಿ ಪೈಕಿ ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ ೩೫, ಕೋಲಾರ ಡಿ॥ ನಲ್ಲಿ ೨೩, ತುಮಕೂರು ಡಿ॥ ನಲ್ಲಿ ೩೮, ಮೈಸೂರು ಡಿ॥ ನಲ್ಲಿ ೩೩, ಹಾಸನ ಡಿ॥ ನಲ್ಲಿ ೫, ಶಿವಮೊಗ್ಗೆ ಡಿ॥ ನಲ್ಲಿ ೯, ಕಡೂರು ಡಿ॥ ನಲ್ಲಿ ೪, ಈ ಮೇರೆ ಇರುತ್ತಾರೆ ಈ ಚಂದಾದಾರರ ಪೈಕಿ ಸುಮಾರು ಮುಕ್ಕಾಲುಪಾಲು ಒಂದೇ ಡಿಸ್ಟ್ರಿಕ್ಟಿನವರಾಗಿದ್ದು, ಇತರ ಏಳು ಡಿಸ್ಟ್ರಿಕ್ಟಿನ ಕೆಲವು ತಾಲ್ಲೂಕುಗಳಲ್ಲಿ ಬಹಳ ಸ್ವಲ್ಪ ಮಂದಿಯೂ, ಕೆಲವು ತಾಲ್ಲೂಕುಗಳಲ್ಲಿ ಯಾರೂ ಇಲ್ಲದೆಯೂ ಇರುವದು ನೋಡಿದರೆ ಈ ಡಿಸ್ಟ್ರಿಕ್ಟುಗಳಲ್ಲಿ ಬಹಳ ಕಡೆ ಈ ಪತ್ರಿಕೆಯು ಪಟೇಲ ಶ್ಯಾನುಭೋಗರ ತಿಳುವಳಿಕೆಗೆ ಬಂದಿರುವಂತೆ ಕಾಣುವದಿಲ್ಲ ಶೇಕದಾರರು ಗ್ರಾಮಾಂತ್ರ ಸಂಚರಿಸುವಾಗ ಈ ಪತ್ರಿಕೆಯ ಉಪಯೋಗವನ್ನು ಪಟೇಲ ಶ್ಯಾನುಭೋಗರ ತಿಳುವಳಿಕೆಗೆ ತರಬೇಕೆಂದು ಕೋರಲ್ಪಟ್ಟಿದೆ

ಸರ್ಕಾರಿ ನೌಕರರ ಪೈಕಿ ಮತ್ತು ಸರ್ಕಾರಿ ನೌಕರರಿಗೆ ಸೇರದೆ ಇರುವ ಬಡಜನಗಳ ಪೈಕಿ ಯಾರಾದರೂ ಹುಚ್ಚು ಹಿಡಿದ ಮೃಗಗಳಿಂದ ಕಚ್ಚಲ್ಪಟ್ಟರೆ ಅವರು ಚಿಕಿತ್ಸೆ ಬಗ್ಗೆ ಕೂಡಲೆ ಕೂನೂರಿಗೆ ಹೋಗುವದಕ್ಕಾಗಿ ಸರ್ಕಾರದ ಸಹಾಯವು ಈ ಕೆಳಗೆ ವಿವರಿಸಿರುವ ನಿಬಂಧನೆಗಳಿಗನುಸಾರವಾಗಿ ಮಾಡಲ್ಪಡುವದು ಮಾಹೆಯಾನ ೧೦೦ ರೂಪಾಯಿಗೆ ಮೇಲ್ಪಡದ ಸಂಬಳವನ್ನುಳ್ಳ ಸರ್ಕಾರಿ ನೌಕರನು ತನ್ನ ಸ್ವಂತ ಖರ್ಚಿನಿಂದಲೇ ಕೂನೂರಿಗೆ ಹೋಗುವದಕ್ಕೆ ಅಸಮರ್ಥನಾಗಿದ್ದರೆ ಅವನಿಗೆ ಈ ಕೆಳಗೆ ನಮೂದಿಸಿರುವಂತೆ ವ್ಯಯಸಹಾಯ ವಗೈರೆ ಕೊಡಲ್ಪಡುವದು ಕೂನೂರಿಗೆ ಹೋಗಿ ಬರುವದಕ್ಕಾಗಿ ತಗಲುವ ಮಾರ್ಗದ ಖರ್ಚುಗಳು ಅಂದರೆ ಅವನು ನೌಕರಿ ನಿಮಿತ್ತವಾಗಿ ಯಾವ ಕ್ಲಾಸಿನ ರೈಲ್ಬಂಡಿಯಲ್ಲಿ ಪ್ರಯಾಣ ಮಾಡಬಹುದೋ ಆ ಕ್ಲಾಸಿಗೆ ಆಗುವ ಒಂದು ಟಿಕೆಟಿನ ಮೊಬಲಗು ಹೋಗುವದಕ್ಕೂ ಹಿಂದಕ್ಕೆ ಬರುವದಕ್ಕೂ ಸಹಾ, ದಾರಿ ಪ್ರಯಾಣಗಳಿಗಾಗಿ ರೂಲ್ ಮೇರೆಗೆ ಸಲ್ಲಬಹುದಾದ್ದಕ್ಕೆ ಮೀರದ ಹಾಗೆ ನಿಜವಾಗಿ ಉಂಟಾದ ಪಯಣದ ಖರ್ಚು ಚಿಕಿತ್ಸೆ ಪೂರೈಸಿದ ಬಳಿಕ ಆಸ್ಪತ್ರೆಯಿಂದ ಬಿಡುಗಡೆಹೊಂದಿದ ಬಗ್ಗೆ ಆಸ್ಪತ್ರೆಯ ಡೈರೆಕ್ಟರವರ ಸರ್ಟಿಫಿಕೇಟನ್ನು ಪಡೆದು ಹಾಜರು ಮಾಡಿದರೆ ಕೂನೂರಿನಿಂದ ಸ್ಥಳಕ್ಕೆ ವಾಪಸು ಬರುವದಕ್ಕೆ ಆಗುವ ಖರ್ಚು ಕೂನೂರಿನಲ್ಲಿ ಕೊಡಲ್ಪಡುವದು ಒಂದು ತಿಂಗಳಿನ ಸಂಬಳ ಅಡ್ವಾನ್ಸು ತರೀಖು, ಒಂದು ತಿಂಗಳ ಕ್ಯಾಜುಯಲ್ ರಜಾ ಇದಕ್ಕೆ ಹೆಚ್ಚಾಗಿ ಬೇಕಾಗುವ ರಜಾ ಪ್ರಿವಿಲೇಜ್ ರಜಾವೆಂತಲಾಗಲಿ ಕಾಹಿಲೆ ರಜಾವೆಂತಲಾಗಲಿ ಎಣಿಸಲ್ಪಡುವದು ಮಾಹೆಯಾನಾ ೧೦೦ ರೂಪಾಯಿಗೆ ಮೇಲ್ಪಟ್ಟು ೫೦೦ ರೂಪಾಯಿಗೆ ಮೇಲ್ಪಡದ ಸಂಬಳವನ್ನುಳ್ಳ ಸರ್ಕಾರಿ ನೌಕರರು ಕಚ್ಚಲ್ಪಟ್ಟ ಕೂಡಲೆ ಕೂನೂರಿಗೆ ಹೋಗುವದಕ್ಕಾಗಿ ತಗಲುವ ಖರ್ಚುಗಳನ್ನು ಒದಗಿಸಿಕೊಳ್ಳುವದಕ್ಕೆ ಸೌಕರ್ಯವಿಲ್ಲದಿದ್ದರೆ ಅವರಿಗೆ ಮೇಲಿನ ರೂಲ್ ಮೇರೆಗೆ ಕೊಡಬಹುದಾದ್ದಕ್ಕೆ ಮೀರದ ಹಾಗೆ ಅಡ್ವಾನ್ಸನ್ನೂ ಆ ರೂಲ್ಗಳಲ್ಲಿ ವಿವರಿಸಿರುವ ರಿಯಾಯತಿಗಳನ್ನೂ ಕೊಡಬಹುದು ಈ ಮೇರೆಗೆ ಅಡ್ವಾನ್ಸಾಗಿ ಕೊಡಲ್ಪಡುವ ಮೊಬಲಗುಗಳು ಕ್ಲುಪ್ತವಾಗಿರುವ ಕಂತುಗಳ ಮೂಲಕ ವಸೂಲ್ ಮಾಡಲ್ಪಡುವದು ಸರ್ಕಾರಿ ನೌಕರಿಗೆ ಸೇರದಿರುವ ಬಡಮನುಷ್ಯನು ತನ್ನ ಸ್ವಂತ ಖರ್ಚಿನಿಂದ ಕೂನೂರು ಆಸ್ಪತ್ರೆಗೆ ಹೋಗುವದಕ್ಕೆ ಅಸಮರ್ಥನಾಗಿರುತ್ತಾನೆಂದು ಸರ್ಕಾರದ ರಿಯಾಯತಿಗಳನ್ನು ಕೊಡುವದಕ್ಕೆ ಅಧಿಕಾರವನ್ನುಳ್ಳ ಆಫೀಸರರು ಎಣಿಸುವ ಪಕ್ಷಕ್ಕೆ ಅವನಿಗೆ ಸರ್ಕಾರದವರು ಮುಂದೆ ಹುಡಬಹುದಾದ ನಿಬಂಧನೆಗಳಿಗೆ ಒಳಪಟ್ಟು ಈ ಕೆಳಗೆ ನಮೂದಿಸಿರುವಂತೆ ಮಾರ್ಗದ ಖರ್ಚುಗಳನ್ನು ಕೊಡಬಹುದು. ಯಾವದೆಂದರೆ —ರೈಲ್ವೆ ಪ್ರಯಾಣಕ್ಕೆ ಹೋಗುವಾಗಲೂ ಬರುವಾಗಲೂ ಒಂದು ಮೂರನೇ ಕ್ಲಾಸಿನ ಟಿಕೆಟಿನ ಮೊಬಲಗು ದಾರಿ ಪ್ರಯಾಣಗಳಿಗೆ ಪ್ರಯಾಣಕ್ಕಾಗಿಯೇ ನಿಜವಾಗಿ ತಗಲುವ ಖರ್ಚು ಪೋಷಣೆಗಾಗಿ ಭತ್ಯವು—ಯೂರೋಪಿಯನ್ ಮತ್ತು ಯೂರೇಷಿಯನರಿಗೆ ರೋಜೀನಾ ಪ್ರಯಾಣದ ಕಾಲದಲ್ಲಿ ೧ ರೂಪಾಯಿಯಂತೆಯೂ ಚಿಕಿತ್ಸೆ ಕಾಲದಲ್ಲಿ ರೂ ೦—೮—೦ ಯಂತೆಯೂ, ದೇಶೀಯ ಜನರಿಗೆ ರೋಜೀನಾ ಪ್ರಯಾಣದ ಕಾಲದಲ್ಲಿ ೪ ಆಣೆಯಂತೆಯೂ, ಚಿಕಿತ್ಸೆ ಕಾಲದಲ್ಲಿ ೬ ಆಣೆಯಂತೆಯೂ, ವಾಪಸು ಬರುವದಕ್ಕಾಗಿ ಖರ್ಚುಗಳು ಮೇಲಿನ ರೂಲ್ನಲ್ಲಿ ಸರ್ಕಾರಿ ನೌಕರರ ವಿಷಯದಲ್ಲಿ ಹೇಳಿರುವ ಮೇರೆಗೂ ಕೂನೂರಿನಲ್ಲಿ ಕೊಡಲ್ಪಡುವವು.

ಇಂಡಿಯಾ ದೇಶದ ವೃತ್ತಾಂತಗಳು

ಕಾಶೀ ಪಟ್ಟಣದಲ್ಲಿ ಸುಮಾರು ಹನ್ನೆರಡು ಮೈಲಿ ದೂರ ಟ್ರಾಂ ಗಾಡಿಗಳನ್ನು ವಿದ್ಯುಚ್ಛಕ್ತಿಯ ಸಹಾಯದಿಂದ ಓಡಿಸುವುದಕ್ಕೂ ರಾತ್ರಿ ಹೊತ್ತು ಪಟ್ಟಣಕ್ಕೆ ದೀಪ ಹಚ್ಚುವುದಕ್ಕೂ ಸರ್ಕಾರದವರು ವಿಲಾಯತಿ ಕಂಪನಿಯವರಿಗೆ ಕಂಟ್ರಾಕ್ಟು ಕೊಟ್ಟಿದಾರೆ

***

ಈ ವರುಷ ಚಕ್ರವರ್ತಿ ಸಾರ್ವಭೌಮರವರ ವರ್ಷವರ್ಧಂತಿಯನ್ನು ಹಿಂದುಸ್ಥಾನದಲ್ಲೆಲ್ಲಾ ಈ ತಿಂಗಳ ೨೮ನೆ ತಾ ಶುಕ್ರವಾರದ ದಿನ ಆಚರಿಸತಕ್ಕದ್ದೆಂದೂ ಆ ದಿನದ ವಿಶೇಷ ಗೆಜೆಟ್ಟಿನಲ್ಲಿ ಬಿರುದುಗಳ ಪಟ್ಟಿಯು ಪ್ರಕಟವಾಗುವುದೆಂದೂ ಇಂಡಿಯಾ ಗವರ್ನಮೆಂಟಿನವರು ವಿಧಾಯಕಮಾಡಿರುತ್ತಾರೆ.

***

ಕಳೆದ ವಾರ ಹಿಂದುಸ್ಥಾನದಲ್ಲಿ ೩೮,೯೯೨ ಜನರು ಪ್ಲೇಗಿನಲ್ಲಿ ಮೃತಪಟ್ಟರು ಅಂದರೆ, ಹಿಂದಿನ ವಾರದ ಸಂಖ್ಯೆಗಿಂತಲೂ ೧೩,೧೦೪ ಕಡಿಮೆಯಾಯಿತು. ಆ ಪೈಕಿ ಬೊಂಬಾಯಿ ಅಧಿಪತ್ಯದೊಳಗೆ ೫೯೬, ಬಂಗಾಳದಲ್ಲಿ ೬೪೨, ಸಂಯುಕ್ತ ಅಧಿಪತ್ಯಗಳಲ್ಲಿ ೬,೩೭೭, ಪಂಜಾಬ್ ೩೧,೭೫೦ ಈ ರೀತಿ ಮರಣಗಳಾಗಿರುತ್ತವೆ

***

ಮುಲ್ತಾನ್ ಪಟ್ಟಣದಲ್ಲಿ ಹುಡುಗರು ಬಾಣಗಳನ್ನು ಆಡಿಸುತ್ತಿದ್ದಾಗ ಒಂದು ಬಾಣವು ಒಂದುಕಡೆ ರಾಶಿ ಹಾಕಿದ್ದ ಮರದ ಚಕ್ಕೆಗಳಿಗೆ ಬಿದ್ದು ಹತ್ತಿಕೊಂಡು, ಸಮೀಪದಲ್ಲಿದ್ದ ಆರೇಳು ಭಾರೀ ಮನೆಗಳು ಸಂಪೂರ್ಣವಾಗಿ ಉರಿದು ಹೋದವು, ಆ ಮನೆಗಳ ಮಾಲೀಕರಿಗೆ ಸುಮಾರು ಎರಡೂವರೆ ಲಕ್ಷ ರೂಪಾಯಿ ತನಕ ನಷ್ಟವಾಗಿದೆ.

***

ಬಂಗಾಳಾ ಅಧಿಪತ್ಯದಲ್ಲಿ ೧೯೦೫ನೆ ವರುಷದ ಅಂತ್ಯದಲ್ಲಿ ೮೦ ದೇಶೀಯ ವರ್ತಮಾನ ಪತ್ರಿಕೆಗಳಿದ್ದವು ಈ ಪೈಕಿ ೬೫ ಪತ್ರಿಕೆಗಳು ಬಂಗಾಳಿ ಭಾಷೆಯಲ್ಲಿ ಪ್ರಕಟವಾಗುತ್ತಿದ್ದವು ಎಂದು ಲೆಫ್ಟಿನೆಂಟ್ ಗವರ್ನರವರು ತಿಳಿಸಿರುತ್ತಾರೆ ಇದರಿಂದ ಅಲ್ಲಿನ ಪ್ರಜೆಗಳು ಸ್ವಭಾಷೆಯ ಪತ್ರಿಕೆಗಳನ್ನು ಓದುವುದರಲ್ಲಿ ತುಂಬಾ ಕುತೂಹಲವುಳ್ಳವರಾಗಿದ್ದಾರೆಂದು ಹೇಳಬಹುದಾಗಿದೆ

***

ಬೊಂಬಾಯಿ ಅಧಿಪತ್ಯದಲ್ಲಿರುವ ಸರ್ ಪಿ ಮೆಹತಾ ಎಂಬುವರೂ ಇನ್ನೂ ಕೆಲವು ದೇಶೀಯ ದೊಡ್ಡಮನುಷ್ಯರೂ ಸೇರಿ ಲಾಲಾ ಲಾಜಪತರಾಯಿಯವರ ವಿಷಯದಲ್ಲಿ ಒಂದು ವಿಜ್ಞಾಪನಾ ಪತ್ರಿಕೆಯನ್ನು ಬರೆದು ವೈಸ್ರಾಯಿಯವರಿಗೆ ಒಪ್ಪಿಸಬೇಕೆಂದು ಇರುತ್ತಾರೆ ಈ ವಿಜ್ಞಾಪನಾ ಪತ್ರಿಕೆಯನ್ನು ಮಿ॥ ಗೋಖಲೆಯವರೇ ಸ್ವತಹಾ ತೆಗೆದುಕೊಂಡು ಹೋಗಿ ವೈಸ್ರಾಯಿಯವರಿಗೆ ಸಿಮ್ಲಾ ಪಟ್ಟಣದಲ್ಲಿ ಒಪ್ಪಿಸುವರೆಂದು ವರ್ತಮಾನವಿದೆ.

ಬೊಂಬಾಯಿ ಪಟ್ಟಣದ ಕ್ರಾಫರ್ಡ್ ಮಾರ್ಕೆಟ್ಟಿನ ಬಳಿ[illegible]ರಾಂ ಎಂಬ ಸಾಲುಮನೆಗಳಿಗೆ ಕಳೆದ ವಾರ ಬೆಂಕಿಬಿದ್ದು ಕೆಲವು ಅಂಗಡಿಗಳೂ ಒಂದು ಹಿಂದೂ ಹೋಟೇಲೂ ಸುಟ್ಟುಹೋದವು ಸುಮಾರು ಎರಡು ಲಕ್ಷ ರೂಪಾಯಿ ನಷ್ಟವಾಗಿರುತ್ತದೆ ಉರಿಯುವುದಕ್ಕೆ ಪ್ರಾರಂಭವಾದ ಒಂದು ಗಂಟೆಯ ಮೇಲೆ ಪೊಲೀಸಿನವರೂ ಜನಗಳೂ ಕೂಡಿ ಸೇರಿ ಬೆಂಕಿಯನ್ನು ಆರಿಸಿದರು

***

ಕಳೆದ ೧೮೯೬ನೆ ಇಸವಿ ಲಾಗಾಯತು ೧೯೦೬ನೆ ಇಸವಿ ಆಖೈರು ತನಕ ಹಿಂದುಸ್ಥಾನದಲ್ಲಿ ಪ್ಲೇಗ್ ಉಪದ್ರದ ದೆಸೆಯಿಂದ ೪೪,೧೧,೨[illegible] ಪ್ರಜೆಗಳು ಮೃತಪಟ್ಟಿರುತ್ತಾರೆ. ೧೮೯೬ನೆ ವರುಷದಲ್ಲಿ ೫೬,[illegible] ಜನರು ಮೃತಪಟ್ಟರು ೧೯೦೪ನೆ ವರುಷದಲ್ಲಿ ೧೦,೨೨,೧೦೦ ಜನರು ತೀರಿಕೊಂಡರು ೧೯೦೭ನೆ ಇಸವಿ ಪ್ರಾರಂಭದಿಂದ ಹಿಡಿದು ಇದುವರೆಗೆ ೫ ಲಕ್ಷ ಪ್ರಜೆಗಳಿಗೆ ಕಡಿಮೆಯಿಲ್ಲದೆ ಕಾಲವಾಗಿರುತ್ತಾರೆ

***

ನಿಕ್ಕಲ್ ಎಂಬ ಲೋಹದ ಒಂದಾಣೆ ಬಾಬತು ಹೊಸ ನಾಣ್ಯಗಳನ್ನು ಇನ್ನೂ ಗವರ್ನಮೆಂಟಿನವರು ಛಾಪಾ ಮಾಡಿ ಇಲ್ಲ ಬೇಕಾದ ಅದಕ್ಕಾಗಿ ಬೇಕಾಗುವ ಯಂತ್ರ ಮುಂತಾದ್ದು ಬಂದಿರುತ್ತದೆ ಆದರೆ ಒಳ್ಳೆ ನಿಕ್ಕಲ್ ಲೋಹವೇ ಬಂದಿಲ್ಲ ಈ ಲೋಹವು ಈ ವಾರದಲ್ಲಿ ಬರುವುದೆಂತಲೂ ಬಂದಕೂಡಲೇ ನಾಣ್ಯಗಳನ್ನು ತಯಾರ್ಮಾಡಿ ಇಷ್ಟರಲ್ಲೇ ಚಲಾವಣೆಗೆ ತರುತ್ತಾರೆಂತಲೂ ಊಹಿಸಬಹುದಾಗಿದೆ

***

ರಂಗೂನ್ ಪಟ್ಟಣದಲ್ಲಿ ಹಾರ್ಮಸ್‌ಜಿ ಎಂಬೊಬ್ಬ ಪಾರ್ಸಿ ವರ್ತಕನು ೩,೨೦೦ ತೊಲ ಅಫೀಮನ್ನು ಗುಟ್ಟಾಗಿ ತರಿಸಿದನು. ಸುಂಕ ಕಟ್ಟೆಯವರು ಅದನ್ನು ಪತ್ತೆ ಮಾಡಿ ಕಿತ್ತುಕೊಂಡರು ಆ ವರ್ತಕನು ಈ ಸಂಗತಿ ತಿಳಿದಕೂಡಲೇ ಅವನು ತಲೆ ತಪ್ಪಿಸಿಕೊಂಡು ಓಡಿಹೋದನು ಅವನನ್ನು ಹಿಡಿದು ಕೊಟ್ಟವರಿಗೆ ೨೫೦ ರೂಪಾಯಿ ಬಹುಮಾನ ಸಿಕ್ಕುವುದೆಂದು ಸರ್ಕಾರದವರು ಇಸ್ತಿಹಾರು ಹಾಕಿದ್ದಾರೆ

***

ಬಂಗಾಳಾ ಅಧಿಪತ್ಯಕ್ಕೆ ಸೇರಿದ ದರ್ಭಾಂಗ ಡಿಸ್ಟ್ರಿಕ್ಟಿನ ಕ್ಷಾಮವು ಸ್ವಲ್ಪಸ್ವಲ್ಪಕ್ಕೆ ಕಡಿಮೆಯಾಗುತ್ತಾ ಬಂದಿದೆ ಕಳೆದ ವಾರ ಕ್ಷಾಮಪೀಡಿತರ ಸಂಖ್ಯೆಯಲ್ಲಿ ೩,೬೬೯ ಜನರು ಸರ್ಕಾರದವರ ಕೆಲಸವನ್ನು ಬಿಟ್ಟು ವ್ಯವಸಾಯವೇ ಮುಂತಾದ ಕಸಬುಗಳ ಮೇಲೆ ಹೋದರು. ಆದರೆ ಇನ್ನೂ ೩೩,೮೦೦ ಜನರು ಕ್ಷಾಮಪೀಡಿತರು ಸರ್ಕಾರದವರ ಪೋಷಣೆಯಲ್ಲಿರುತ್ತಾರೆ ಈ ಪೈಕಿ ೨೧,೯೦೦ ಜನರು ರಿಲೀಫ್ ಕಾಮಗಾರಿಗಳನ್ನು ಮಾಡಿಕೊಂಡಿದ್ದಾರೆ

***

ಬಂಗಾಳ ಅಧಿಪತ್ಯಕ್ಕೆ ಸೇರಿದ ಬ್ರಾಹ್ಮಣಬೇರಿಯಾ ಮತ್ತು ಹಬಿಗಂಜ್ ಎಂಬೀ ಡಿಸ್ಟ್ರಿಕ್ಟುಗಳಲ್ಲಿ ಮಳೆ ಬಹಳವಾಗಿ ನದಿಪ್ರವಾಹಗಳು ಬಂದಿರುತ್ತವೆ ಕೆಲವು ಗ್ರಾಮಗಳು ಈ ಪ್ರವಾಹಕ್ಕೆ ಒಳಗಾದವುಗಳಲ್ಲಿ ಬೆಳೆಯೆಲ್ಲಾ ನಾಶವಾಯಿತು. ಪ್ರಜೆಗಳು ಸ್ವವಸ್ತುವನ್ನು ಕಳೆದುಕೊಂಡು ಏನನ್ನೂ ಮಾಡುವದಕ್ಕಿಲ್ಲದೆ ಅಲೆಯುತ್ತಾರೆ ಸರ್ಕಾರದವರೂ ಕೆಲವು ದೊಡ್ಡಮನುಷ್ಯರೂ ಅವರಿಗಾಗಿ ಒಂದು ರಿಲೀಫ್ ಫಂಡನ್ನು ಏರ್ಪಡಿಸಿ ಚಂದಾ ಕೂಡಿಸುತ್ತಿರುವರು

***

ಸಿಲೋನ್ (ಲಂಕಾ) ದ್ವೀಪದಲ್ಲಿ ಒಬ್ಬ ಪ್ಲಾಂಟರು ಷಿಕಾರಿಗೆ ಜಂಗಲಿಗೆ ಹೋಗಿ ಒಂದು ಭಾರೀ ಆನೆಯನ್ನು ಗುಂಡಿನಿಂದ ಹೊಡೆದು ಕೊಂದು, ಅದರ ಕಾಲುಗಳನ್ನೂ ಬಾಲವನ್ನೂ ಕತ್ತರಿಸಿ ಬಂಗಲೆಗೆ ತಂದುಕೊಂಡು ಹೋದನು ಮಾರನೆದಿನ ಆ ಸ್ಥಳಕ್ಕೆ ಹೋಗಿ ನೋಡುವಾಗ ಆನೆಯ ಮುಂಡವು ಅಲ್ಲಿರಲಿಲ್ಲ ಹುಡುಕಿಕೊಂಡು ಹೋದರೆ ಸ್ವಲ್ಪ ದೂರದಲ್ಲಿ ಹೊಳೆಯ ದಡಿಯಲ್ಲಿ ಬಿದ್ದಿತ್ತು ಹಿಂದಿನ ರಾತ್ರಿ ಆನೆಗಳೆಲ್ಲಾ ಸೇರಿಕೊಂಡು ಆ ಆನೆಯ ಶವವನ್ನು ಎತ್ತಿಕೊಂಡು ಹೋಗಿ ಹೊಳೆಯಲ್ಲಿ ಹಾಕಿರಬೇಕೆಂದು ಗೊತ್ತಾಯಿತು

***

ಹಿಂದುಸ್ಥಾನದ ಕೆಲವು ಭಾಗಗಳಲ್ಲಿ ಪ್ರಜೆಗಳಿಗೆ ಗವರ್ನಮೆಂಟಿನವರಲ್ಲಿ ಅವಿಶ್ವಾಸವೂ ಅಸಮಾಧಾನವೂ ಉಂಟಾಗಿರುವುದರ ಕೆಲವು ಕಡೆ ಗಲಭೆ ಹುಟ್ಟಿ ಪ್ರಜಾನೆಮ್ಮದಿಗೆ ಭಂಗವಾಗಿರುವುದನ್ನು ಜರ್ಮನ್ ರಾಜ್ಯದ ವರ್ತಮಾನ ಪತ್ರಿಕೆಗಳು ಪ್ರಕಟಿಸಿ ಹಿಂದುಸ್ಥಾನಕ್ಕೆ ಇಂಗ್ಲಿಷ್ ಪ್ರಭುತ್ವವು ತಪ್ಪಿಹೋದ ಪಕ್ಷದಲ್ಲಿ ತುಂಬಾ ಕ್ಷೋಭೆ ಪ್ರಾಪ್ತವಾದೀತೆಂತಲೂ, ಈಗಿನ ಪ್ರಜಾ ನೆಮ್ಮದಿಗೂ ದೇಶಾಭಿವೃದ್ಧಿಗೂ ಹಾನಿಯುಂಟಾಗಿ ಯಥಾಪ್ರಕಾರ ಪೂರ್ವದಂತೆ ಗಲಭೆಗಳ ಕ್ರೂರಕೃತ್ಯಗಳೂ, ಕಾಟದಾಟಗಳೂ ನೆಲೆಗೊಂಡು, ರಾಷ್ಟ್ರವು ಹೀನಗತಿಗೆ ಬರುವುದರಲ್ಲಿ ಸಂಶಯವಿಲ್ಲವೆಂದು ಬರೆದಿರುತ್ತವೆ

***

ವೆಂಕಟಾದ್ರಿ ಅಗ್ರಹಾರವೆಂಬ ಗ್ರಾಮದಲ್ಲಿ ಮಿ॥ ಶ್ರೀನಿವಾಸ ರಾಘವಾಚಾರ್ಯ ಪ್ರೋತ್ಸಾಹಪಡಿಸಿ ಒಂದು ರೈತ ಸಂಘವನ್ನು ಏರ್ಪಡಿಸಿರುತ್ತಾರೆ ರೈತರು ಅಲ್ಲಿನ ನಾರಾಯಣಸ್ವಾಮಿ ದೇವಸ್ಥಾನದ ಸಭೆಸೇರಿ ತೀರ್ಮಾನಮಾಡಿಕೊಂಡಿರುವುದೇನೆಂದರೆ—ಈ ಸಂಘದ ಮೆಂಬರಾಗಿ ಸೇರತಕ್ಕ ರೈತನು ತನ್ನ ಯೋಗ್ಯತಾನುಸಾರ ೨ ಆಣೆ ಲಾಗಾಯತು ೧ ರೂಪಾಯಿ ವರೆಗೆ ಪ್ರವೇಶಧನವನ್ನು (ಅಡ್ಮಿಷನ್ ಫೀ) ಕೊಡಬೇಕು ಇದಲ್ಲದೆ ರೈತನು ಸರ್ಕಾರಕ್ಕೆ ಕಂದಾಯ ಕಟ್ಟುವ ಪ್ರತಿ ಒಂದು ರೂಪಾಯಿಗೂ ಮೂರು ಕಾಸಿನಂತೆ ಪ್ರತಿ ವರ್ಷವೂ ಈ ಸಂಘಕ್ಕೆ ಕೊಡಬೇಕು ಹೀಗೆ ಕೂಡಿಸಲ್ಪಟ್ಟ ಹಣದಿಂದ ಆ ರೈತ ಸಂಘದವರು ನಾಲೆ ಮುಂತಾದ್ದರ ಚಿಲ್ಲರೆ ರಿಪೇರಿ ಮಾಡಿಕೊಳ್ಳುವುದು, ಗ್ರಾಮದ ಆರೋಗ್ಯ ವಿಚಾರವನ್ನು ಕ್ರಮಪಡಿಸುವುದು, ರೈತರ ಮಕ್ಕಳಿಗೆ ಪ್ರೈಮರಿ ಪಾಠಶಾಲೆಗಳನ್ನು ಏರ್ಪಡಿಸಿ ವಿದ್ಯೆಕಲಿಸುವುದು, ಈ ಮೊದಲಾದ ಕೆಲಸಗಳನ್ನು ಮಾಡಿಕೊಳ್ಳಬೇಕು, ಇಂತ

ಸಂಘಗಳು ಪ್ರತಿ ಗ್ರಾಮದಲ್ಲೂ ಏರ್ಪಡಾದರೆ ದೇಶವು ಬೇಗನೆ ಅಭಿವೃದ್ಧಿಗೆ ಬರುವುದರಲ್ಲಿ ಸಂಶಯವಿಲ್ಲ.

***

ಕಳೆದ ಗುರುವಾರ ಕರಾಚಿ ಪಟ್ಟಣದ ಸಮುದ್ರ ತೀರದಲ್ಲಿ ಅಪೂರ್ವವಾದ ಸುಂಟರಗಾಳಿ ಪ್ರಾಪ್ತವಾಗಿ ಅನೇಕ ಅನಾಹುತಗಳು ನಡೆದವು. ಇಂಥಾ ಪ್ರಚಂಡಗಾಳಿಯು ಅಲ್ಲಿ ಸುಮಾರು ಆರು ವರುಷಗಳಿಂದಲೂ ಯಾರೂ ನೋಡಿ ಅನುಭವಿಸಿರಲಿಲ್ಲ. ಸಮುದ್ರದಲ್ಲಿ ನಿಂತಿದ್ದ ಜಹಜು ಸರಪಣಿಗಳು ಕಡಿದುಹೋದವು. ಸುಮಾರು ೬೦ ಭಾರೀ ದೋಣಿಗಳು ಒಡೆದು ಹಾಳಾದವು. ೩೦ ಸಹಸ್ರ ಟನ್ ಭಾರದಷ್ಟು ಕಲ್ಲಿದ್ದಲು ಇಳಿಸಲ್ಪಟ್ಟು ಸಮುದ್ರದ ಪಾಲಾಯಿತು. ಅನೇಕ ಮನೆಗಳ ಮತ್ತು ಸರ್ಕಾರಿ ಕಟ್ಟಡಗಳ ಮೇಲ್ಛಾವಣಿಗಳು ಸೂರೆಕೊಂಡು ಹೋದವು. ಬೀದಿಗಳ ಉದ್ದಕ್ಕೂ ನಿಲ್ಲಿಸಿದ್ದ ಲಾಂದ್ರ ಕಂಭಗಳೂ ಟೆಲಿಗ್ರಾಫ್ ಮತ್ತು ಟೆಲಿಫೋನ್ ತಂತೀ ಕಂಭಗಳೂ ಮುರಿದುಬಿದ್ದವು.

***

ಪೂರ್ವ ಬಂಗಾಳಾ ಮತ್ತು ಆಸ್ಸಾಂ ಎಂಬ ಹೊಸ ಆಧಿಪತ್ಯಕ್ಕೆ ಸೇರಿದ ಬ್ಯಾರಿಸಾಲ್ ಪಟ್ಟಣದಲ್ಲಿ ಹಿಂದೂಗಳ ಕೂಡ ಸೇರಿಕೊಂಡು ಸ್ವರಾಜ್ಯಕ್ಕಾಗಿ ಹೊಡೆದಾಡುತ್ತಿದ್ದ ಲೀಕತ್ ಹುಸ್ಸೇನ್ ಖಾನ್ ಎಂಬಾತನನ್ನೂ ಅಬ್ದುಲ್ ಗಫೂರ್ ಎಂಬಾತನನ್ನೂ ಸರ್ಕಾರದವರು ರಾಜದ್ರೋಹವನ್ನು ಹುಟ್ಟಿಸುವ ನೋಟೀಸುಗಳನ್ನು ಪ್ರಕಟಮಾಡಿದ ದೋಷಕ್ಕಾಗಿ ಹಿಡಿದು ವಿಚಾರಣೆಯಲ್ಲಿ ಹಾಕಿದಾರೆ. ಮೊದಲನೆ ಅಪರಾಧಿಯನ್ನು ೨,೦೦೦ ರೂಪಾಯಿನ ಜಾಮೀನು ಕೊಟ್ಟಲ್ಲದೆ ಬಿಡುವುದಿಲ್ಲವೆಂದು ಮ್ಯಾಜಿಸ್ಟ್ರೇಟರು ಹೇಳಿದರು. ಇದಲ್ಲದೆ ಅದೇ ಪಟ್ಟಣದಲ್ಲಿ ಹನ್ನೆರಡು ಮಂದಿ ಬಂಗಾಳಿ ವಿದ್ಯಾರ್ಥಿಗಳನ್ನು ಗೂರ್ಖಾ ಪೋಲೀಸಿನವರು ದಸ್ತಗಿರಿ ಮಾಡಿದರು. ಅವರೆಲ್ಲಾ ದೊಡ್ಡ ಮನುಷ್ಯರ ಮಕ್ಕಳೆಂದು ಹೇಳುತ್ತಾರೆ.

***

ಪಂಜಾಬ್ ಆಧಿಪತ್ಯದ ವಿದ್ಯಾಭ್ಯಾಸದ ಇಲಾಖಾ ಡೈರೆಕ್ಟರ್ ಮಿ|| ಬೆಲ್‌ಯವರು ಆ ಆಧಿಪತ್ಯಕ್ಕೊಳಪಟ್ಟಿರುವ ವಿದ್ಯಾಶಾಲೆಗಳಲ್ಲಿ ಎಷ್ಟು ವಾಚಕಮಂದಿರಗಳೂ ಉಪನ್ಯಾಸಸಂಘಗಳೂ (ರೀಡಿಂಗ್ ರೂಂ ಮತ್ತು ಡಿಬೇಟಿಂಗ್ ಕ್ಲಬ್) ಇರುತ್ತವೆಯೋ, ಮತ್ತು ಅವುಗಳಲ್ಲಿ ಸೇರಿರುವ ವಿದ್ಯಾರ್ಥಿಗಳು ಯಾವ ಯಾವ ವಿಷಯಗಳನ್ನು ಕುರಿತು ಮಾತನಾಡಿ ಚರ್ಚೆಮಾಡುತ್ತಾರೆಯೋ ವಿವರವಾಗಿ ತಿಳಿಸಬೇಕೆಂದು ಆಯಾ ವಿದ್ಯಾಶಾಲೆಯ ಅಧ್ಯಕ್ಷರನ್ನು ಬರೆದು ಕೇಳಿರುವರು. ಇದರ ಕಾರಣವನ್ನು ನೋಡಿದರೆ ವಿದ್ಯಾರ್ಥಿಗಳು ರಾಜಕೀಯ ವಿಷಯಗಳನ್ನು ಹಿಡಿದು ಸ್ವಲ್ಪಮಾತ್ರವಾದರೂ ಚರ್ಚೆಮಾಡದಂತೆ ಅಡ್ಡಿಮಾಡಬೇಕೆಂಬುವುದೇ ಆ ಡೈರೆಕ್ಟರವರ ಉದ್ದೇಶವೆಂದು ಕಾಣುವುದು.

***

ರಾಜಮಂಧರಿ ಜಿಲ್ಲೆಗೆ ಸೇರಿದ ಕಾಕಿನಾಡದಲ್ಲಿ ಒಬ್ಬ ದಾಕ್ಟರು ಒಬ್ಬ ಹಿಂದೂ ಹುಡುಗನನ್ನು ಹೊಡೆದದ್ದರಿಂದ ಊರಿನಲ್ಲೆಲ್ಲಾ ಗಲಭೆಯುಂಟಾಗಿ ಕೆಲವು ಕೃತ್ಯಗಳು ನಡೆದವೆಂತಲೂ, ಈಚೆಗೆ ಅಲ್ಲಿ ದೊಡ್ಡಮನುಷ್ಯರು ಸಭೆಗೆ ಸೇರಿ ಗಲಭೆಯೇನೂ ಇಲ್ಲವೆಂದೂ ಶಾಂತತೆಯನ್ನು ಕೆಡಿಸಲಿಲ್ಲವೆಂದೂ ಆ ಪಕ್ಷಗಳು ಯಾವ ದುರ್ಬುದ್ಧಿಯನ್ನೂ ಇಟ್ಟುಕೊಳ್ಳಕೂಡದೆಂದೂ ತೀರ್ಮಾನಿಸಿದರೆಂತಲೂ ತಿಳಿಸಿರುತ್ತೇವಷ್ಟೆ. ಕಳೆದ ವಾರ ಅಲ್ಲೇನು ನಡೆಯಿತೋ ಗೊತ್ತಾಗಲಿಲ್ಲ. ಡೆಪ್ಯುಟಿ ಕಲೆಕ್ಟರರು ಅಪೇಕ್ಷಿಸಿದ ಪ್ರಕಾರ ಮದರಾಸ್ ಗವರ್ನರವರು ಮದರಾಸ್ ಪಟ್ಟಣದಿಂದ ಸುಮಾರು ೭೧೦ ಸೈನಿಕರನ್ನು ಮದ್ರಾಸಿನ ಸರ್ವೀಸ್ ಸ್ಪೆಷಲ್ ರೈಲಿನಲ್ಲಿ ಕಾಕಿನಾಡ ಪಟ್ಟಣಕ್ಕೆ ಕಳುಹಿಸಿದರು. ಇದಲ್ಲದೆ ಅಲ್ಲಿ ಪ್ರಜಾನೆಮ್ಮದಿಯನ್ನು ಕಾಪಾಡುವುದಕ್ಕೆ ಈಗಿರುವ ಪೋಲೀಸ್ ಶಿಬ್ಬಂದಿಯು ಸಾಲದೆಂದು ಹೇಳಿ, ಹೆಚ್ಚು ಪೋಲೀಸ್ ಶಿಬ್ಬಂದಿಯನ್ನು ನೇಮಿಸಿ, ಶಿಕ್ಷಾರ್ಥವಾಗಿ ಅವರ ಸಂಬಳವನ್ನು ಎರಡು ವರುಷ ಕಾಲ ಅಲ್ಲಿನ ಪ್ರಜೆಗಳಿಂದ ವಸೂಲುಮಾಡಬೇಕೆಂತಲೂ ಗವರ್ನರವರು ಹುಕುಂ ಕೊಟ್ಟಿದಾರೆ.

***

ಬಂಗಾಳಾ ಆಧಿಪತ್ಯಕ್ಕೆ ಸೇರಿದ ಭಾಗಲ್ಪುರದ ಡಿಸ್ಟ್ರಿಕ್ಟಿನಲ್ಲಿ ಸೋನವರ್ಷದ ಮಹಾರಾಜರವರನ್ನು ದುಷ್ಟರ್‍ಯಾರೋ ಗುಂಡುಹೊಡೆದು ಕೊಂದುಹಾಕಿದರಷ್ಟೆ. ಪೋಲೀಸಿನವರು ಇದುವರೆಗೆ ಪತ್ತೆ ತರದೂ ಮಾಡಿ, ಸೀತಾಳ್ ಸಿಂಗ್, ಜಮಾದಾರ್, ಒರ್ವಾರಿ ಖವಾಸ್, ರಾಮ ಖವಾಸ್ ಎಂಬೀ ನಾಲ್ಕು ಮಂದಿಯನ್ನು ಆ ಕೃತ್ಯನಡಿಸಿರುತ್ತಾರೆಂದು ಹಿಡಿದು, ಆ ಪೈಕಿ ಕಡೆಯ ಅಪರಾಧಿಗೆ ಮಾಫ್‌ಮಾಡಿ ಅವನ ಮೂಲಕ ಕೃತ್ಯನಡೆದ ವೃತ್ತಾಂತವನ್ನು ಗೊತ್ತುಮಾಡಿಕೊಂಡು, ಮೊಕದ್ದಮೆಯನ್ನು ದಾಖಲ್‌ಮಾಡಿದರು. ಭಾಗಲ್ಪುರದ ಡೆಪ್ಯುಟಿ ಮ್ಯಾಜಿಸ್ಟ್ರೇಟ್ ಮಿ|| ಕುಮುದನಾಥ ಮುಖರ್ಜಿಯವರು ದರ್ಯಾಪ್ತಿ ಮಾಡುತ್ತಿದಾರೆ. [illegible] ಬಂದಿರುವುದು ಹ್ಯಾಗೆಂದರೆ—ಲೇಟ್ ಮಹಾರಾಜರವರ ಎರಡನೆಯ ಮೊಮ್ಮಗನಾದ ಚೋಟೆ ಲಾಲ್ ಸಾಹೆಬ್ ಎಂಬಾತನು ದುರ್ಮಾರ್ಗಿಯಾಗಿರುವಂತೆಯೂ, ಮಹಾರಾಜರು ಅದಕ್ಕಾಗಿ ಆ ಮೊಮ್ಮಗನನ್ನು ದಂಡಿಸಿದರೆಂತಲೂ, ಅಷ್ಟಕ್ಕೇ ಆ ಮೊಮ್ಮಗನು ಆತನ ಮೇಲೆ ಕೋಪಿಸಿಕೊಂಡು, ಮೊದಲನೇ ಅಪರಾಧಿಯಾದ ಸೀತಾಳ್ ಸಿಂಗನನ್ನು ಎತ್ತಿಕಟ್ಟಿ ಅವನಿಂದ ಮಹಾರಾಜರನ್ನು ಕೊಲ್ಲಿಸಿರುವಂತೆಯೂ ಪ್ರಕಟವಾಗಿದೆ.

***

ಪಂಜಾಬ್ ಆಧಿಪತ್ಯದಲ್ಲಿ ಗಲಭೆಗಳುಂಟಾಗಿ ಪ್ರಜೆಗಳಿಗೂ ಸರ್ಕಾರದವರಿಗೂ ಮನಸ್ತಾಪಗಳು ಹುಟ್ಟಿ, ನಾನಾ ಅಕೃತ್ಯಗಳು ನಡೆದದ್ದೂ, ಸರ್ಕಾರದವರು ಮುಖಂಡರುಗಳನ್ನು ಹಿಡಿದು ಗಡೀಪಾರು ಮಾಡಿದ್ದಲ್ಲದೆ ಸೈನ್ಯಗಳನ್ನು ಊರುಗಳಲ್ಲಿ ನಿಲ್ಲಿಸಿದ್ದೂ, ಮುಖ್ಯರಾದ ೫೦-೬೦ ಜನರನ್ನು ಹಿಡಿದು ಸ್ಪೆಷಲ್ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಅವರ ಮೇಲೆ ಫಿರ್ಯಾದು ಮಾಡಿರುವುದೂ ನಮ್ಮ ವಾಚಕರಿಗೆ ತಿಳಿದಿದೆಯಷ್ಟೆ. ಈ ವಿಚಾರವನ್ನೆಲ್ಲಾ ಅಲ್ಲಿನ ದೊಡ್ಡಮನುಷ್ಯರಾದ ವಿದ್ವಾಂಸರು ಅಂದರೆ ದೇಶೀಯ ಬ್ಯಾರಿಸ್ಟರುಗಳು, ಪ್ಲೀಡರುಗಳು, ಆರ್ಯಸಮಾಜವೇ ಮೊದಲಾದ ಸಂಘಗಳ ಪ್ರೆಸಿಡೆಂಟರುಗಳು, ದೊಡ್ಡ ದೊಡ್ಡ ಜಮೀನ್ದಾರರು ಸುಮಾರು ೩೦ ಮಂದಿ ಸೇರಿ ಲಾಹೋರಿನಲ್ಲಿ ಪ್ರಕಟವಾಗುವ ಒಂದು ಇಂಗ್ಲಿಷ್ ಪತ್ರಿಕೆಯ ಮೂಲಕ ತಮ್ಮ ಅಭಿಪ್ರಾಯವನ್ನು ಬರೆದು ಗವರ್ನಮೆಂಟಿಗೆ ತಿಳಿಸಿರುತ್ತಾರೆ. ಅವರು ತಿಳಿಸಿರುವ ಮುಖ್ಯಾಭಿಪ್ರಾಯವೇನೆಂದರೆ—ಈ ಪ್ರಾಂತ್ಯದಲ್ಲಿರುವ ಪ್ರಜೆಗಳು ರಾಜಭಕ್ತಿಪೂರಿತರಾಗಿರುತ್ತಾರೆ. ಸಾರ್ವಭೌಮರ ಗವರ್ನಮೆಂಟಿನವರಲ್ಲಿ ದ್ವೇಷಾಸೂಯೆಗಳನ್ನಿಟ್ಟವರಾಗಿಲ್ಲ. ಪಂಜಾಬ್ ರೈತರ ಜಮೀನ್ ಕಂದಾಯವನ್ನು ಜಾಸ್ತಿ ಮಾಡಿದ್ದದ್ದನ್ನು ವೈಸ್‌ರಾಯರವರು ಜಾರಿಗೆ ತರುವುದಿಲ್ಲವೆಂದು ಹೇಳಿ ರದ್ದುಮಾಡಿದ್ದು ಸಕಲ ಪ್ರಜೆಗಳಲ್ಲೂ ಅತ್ಯಂತ ಕೃತಜ್ಞತಾಪೂರ್ವಕವಾದ ಸಂತೋಷವನ್ನುಂಟುಮಾಡಿದೆ. ಸರ್ಕಾರದವರು ನಡಿಸುವ ಕಾರುಬಾರುಗಳನ್ನು ಸಹಜವಾದ ರೀತಿಯಲ್ಲಿ ಚರ್ಚಿಸುವುದಕ್ಕೆ ಪ್ರಜೆಗಳಿಗಿರುವ ವಿಶೇಷತರವಾದ ಹಕ್ಕಿಗೆ ಸರ್ಕಾರದವರು ನ್ಯೂನತೆಯನ್ನುಂಟುಮಾಡಿರುತ್ತಾರೆ. ಈ ನಿರ್ಬಂಧವನ್ನು ಕೂಡಿದಷ್ಟು ಜಾಗ್ರತೆಯಾಗಿ ವಜಾಮಾಡಿಕೊಡಬೇಕೆಂದು ಬೇಡುತ್ತೇವೆ. ನಮ್ಮ ಅಭಿಪ್ರಾಯಗಳನ್ನೆಲ್ಲಾ ಸಾವಧಾನದಿಂದ ಲಾಲಿಸುವುದಕ್ಕೆ ಲೆಫ್ಟಿನೆಂಟ್ ಗವರ್ನರವರು ಒಂದು ಕಾಲವನ್ನು ಗೊತ್ತುಮಾಡಬೇಕೆಂದು ಪ್ರಾರ್ಥಿಸುವೆವು. ನಮ್ಮಲ್ಲಿ ಮುಖಂಡರಾದ ಕೆಲವರು ಮಾತ್ರ ಅವರ ಸನ್ನಿಧಿಗೆ ಹೋಗಿ ಪ್ರಜಾಪಕ್ಷವನ್ನು ಅವರಲ್ಲಿ ಅರಿಕೆ ಮಾಡಿಕೊಳ್ಳುವೆವು ಎಂಬುದೇ.

ವಿದೇಶ ವರ್ತಮಾನಗಳು.

ಮಧ್ಯ ಅಮೇರಿಕಕ್ಕೆ ಸೇರಿದ ಗ್ವಾಟಮಾಲಾ ಎಂಬ ಪ್ರಜಾಪ್ರಭುತ್ವದಲ್ಲಿ ನಾಯಕನಾಗಿದ್ದ ಪ್ರೆಸಿಡೆಂಟ್ ಸೇನಾರ್ ಕಬ್ರೇರಾ ಎಂಬಾತನನ್ನು ಕೊಂದುಹಾಕಿದರೆಂದು ತಂತಿ ವರ್ತಮಾನ ಬಂದಿದೆ.

***

ಡೆನ್ಮಾರ್ಕ್ ರಾಜ್ಯದ ದೊರೆಯವರೂ ರಾಣಿಯವರೂ ಪರಿವಾರಸಹಿತ ವಿಹಾರಾರ್ಥವಾಗಿ ಲಂಡನ್ ಪಟ್ಟಣಕ್ಕೆ ಹೋಗಿರುತ್ತಾರೆ. ವಿಲಾಯಿತಿಯ ಯುವರಾಜರೂ ಮಂತ್ರಿಗಳೂ ಪುರಾಧ್ಯಕ್ಷರೂ ವಿಶೇಷ ಪ್ರೀತಿಯಿಂದಲೂ ಉಲ್ಲಾಸಪೂರ್ವಕವಾಗಿಯೂ ರಾಜದಂಪತಿಗಳನ್ನು ಸತ್ಕಾರಮಾಡುತ್ತಿದಾರೆ.

***

ವಿಲಾಯಿತಿಗೆ ಸೇರಿದ ವುಲ್ವರ್‌ಹಾಂಪ್ಟನ್ ಪಟ್ಟಣದಲ್ಲಿ ಮಿಸ್ ಪ್ರೈ ಎಂಬಾಕೆಯು ೧೫ ಲಕ್ಷ ರೂಪಾಯಿಯನ್ನು, ಬರ್ಮಿಂಗ್ಹಾಂ ಪಟ್ಟಣದಲ್ಲಿ ಸ್ಟೋಕ್ಸ್ ಎಂಬಾಕೆಯ ೧೯ ಲಕ್ಷ ರೂಪಾಯಿಯನ್ನೂ, ಮಿ|| ಗ್ರೀನ್ ಎಂಬಾತನು ೩೬,೦೦೦ ರೂಪಾಯಿಯನ್ನು, ಘನ ಹಾವರ್ಡ್‌ಯವರು ೬೦,೦೦೦ ರೂಪಾಯಿಯನ್ನು, ಬರಿ ಪಟ್ಟಣದ ಓರ್ಷಾ ಎಂಬಾಕೆಯು ೧,೨೦,೦೦೦ ರೂಪಾಯಿಯನ್ನೂ ಧರ್ಮಕಾರ್ಯಗಳಿಗೂ ಆಸ್ಪತ್ರೆಗಳಿಗೂ ತಮ್ಮ ಆಸ್ತಿಯಿಂದ ತೆಗೆದು ವಿನಿಯೋಗಮಾಡಬೇಕೆಂದು ಉಯಿಲು ಬರೆದಿರುತ್ತಾರೆ.

***

ಆಸ್ಟ್ರೇಲಿಯಾ ದ್ವೀಪದ ಅನೇಕಾನೇಕ ಪ್ರಜೆಗಳು ಜೀವನಾರ್ಥವಾಗಿ ದಕ್ಷಿಣ ಆಫ್ರಿಕಕ್ಕೆ ಹೋಗಿ ಸೇರಿಕೊಂಡಿದ್ದರು. ಈ ಪೈಕಿ ಕೆಲವರು ಅಲ್ಲಿನ ಹೆಂಗಸರನ್ನೇ ಕಟ್ಟಿಕೊಂಡು ಮನೆಮಾರು ಮಾಡಿಕೊಂಡಿರುತ್ತಾರೆ. ಹಾಗೆ ಸಂಸಾರಗಳಿಲ್ಲದೆ ಇರುವಂಥವರಿಗೆಲ್ಲಾ ಪ್ರಯಾಣದ ಖರ್ಚು ಕೊಟ್ಟು ಅಲ್ಲಿಂದ ಕರೆಸಿಕೊಳ್ಳುವುದಾಗಿ ಆಸ್ಟ್ರೇಲಿಯಾ ಗವರ್ನಮೆಂಟಿನವರು ಪ್ರಕಟಮಾಡಿದರು. ಇದು ಅವರಿಗೆ ತಿಳಿದುಬಂತು. ಮೊದಲನೆಯ ಜಹಜಿನಲ್ಲಿ ೬೦೦ ಮಂದಿ ಕುಳಿತು ಸ್ವದೇಶವಾದ ಆಸ್ಟ್ರೇಲಿಯವನ್ನು ಕುರಿತು ಪ್ರಯಾಣ ಮಾಡಿರುತ್ತಾರೆ.

***

ದಕ್ಷಿಣ ಆಫ್ರಿಕಕ್ಕೆ ಸೇರಿದ ಕೇಪ್ ಟೌನ್ ಎಂಬ ನಗರದಲ್ಲಿ ಜೂಸ್ಟ್ ಎಂಬೊಬ್ಬ ಅಪರಾಧಿಗೆ ಆಮರಣಾಂತವಾದ ಸಜಾ ವಿಧಿಸಲ್ಪಟ್ಟಿತು. ಅವನ ಹೆಂಡತಿಯು ಈ ಶಿಕ್ಷೆಯನ್ನು ಕೇಳಿ, ತನಗೂ ತನ್ನ ಗಂಡನಿಗೂ ಇರುವ ವಿವಾಹ ಸಂಬಂಧವನ್ನು ವಿಮೋಚನೆ ಮಾಡಿಕೊಡಬೇಕೆಂದು ಕೋರ್ಟಿನಲ್ಲಿ ಅರ್ಜಿ ಹಾಕಿದಳು. ಜಡ್ಜಿಗಳು ಈ ಅಪೂರ್ವವಾದ ಅರ್ಜಿಯನ್ನು ಹಿಡಿದು, ಕೆಲವು ದಿನಗಳ ತನಕ ಆಲೋಚನೆ ಮಾಡಿದ್ದಲ್ಲದೆ ಅಲ್ಲಿನ ಪೂರ್ವಾಚಾರಣೆಯನ್ನು ವಿಚಾರಣೆಮಾಡಿ ತಿಳಿದುಕೊಂಡು, ಕಡೆಗೆ ವಿವಾಹ ಸಂಬಂಧವನ್ನು ವಿಮೋಚನೆಮಾಡಿ ಹುಕುಂಕೊಟ್ಟರು.

***

ಪ್ಯಾರಿಸ್ ಪಟ್ಟಣದಲ್ಲಿ ಒಂದು ಭಾರೀ ಸಾಗುಮಾನಿ ಕಾರ್ಖಾನೆಗೆ ಬೆಂಕಿಬಿದ್ದು ಕೆಲವು ಲಕ್ಷ ರೂಪಾಯಿನ ಸಾಮಾನೂ ಕಟ್ಟಡವೂ ಎಲ್ಲಾ ಸುಟ್ಟು ಬೂದಿಯಾಯಿತು. ಸರ್ಕಾರದವರೂ ಸಾವಿರಾರು ಪ್ರಜೆಗಳೂ ಸೇರಿ ಕೊಳವೆಗಳ ಮೂಲಕ ನೀರು ಎರಚಿ ಬೆಂಕಿಯನ್ನು ಆರಿಸುತ್ತಿರುವಲ್ಲಿ ದುಷ್ಟರು ಕೆಲವು ಮಂದಿ ಹೋಗಿ ಆ ಕೊಳವೆಗಳನ್ನು ಚೂರಿ ಕತ್ತರಿಗಳಿಂದ ಕತ್ತರಿಸಿ ಬಿಟ್ಟರು. ಅವರನ್ನೆಲ್ಲಾ ಪೋಲೀಸಿನವರು ಓಡಿಸುತ್ತಾ ಬಂದರು. ಆ ದುಷ್ಟರಲ್ಲಿ ಕೆಲವರು ಪೋಲೀಸಿನವರ ಮೇಲೆ ಬಿದ್ದು ಅವರನ್ನು ಹೊಡೆದು ಹಲವರನ್ನು ಗಾಯಗೊಳಿಸಿದರು. ಈಗ ಆ ದುಷ್ಟರನ್ನು ಹಿಡಿದು ಸೆರೆ ಹಾಕಿಕೊಂಡಿದ್ದಾರೆ.

***

ಯೂರೋಪ್ಯರ್ ರಾಜ್ಯಗಳಲ್ಲೂ ಅಮೇರಿಕದ ಕೆಲವು ಪಟ್ಟಣಗಳಲ್ಲೂ ಈಚೀಚೆಗೆ ಮೃತಪಟ್ಟವರ ಶವಗಳನ್ನು ಭೂಮಿಯಲ್ಲಿ ಹೂಳುವುದಕ್ಕೆ ಬದಲಾಗಿ ಸುಟ್ಟುಬಿಡುವುದು ರೂಢಿಗೆ ಬರಲಾರಂಭವಾಗಿದೆ. ಪ್ರಸಿದ್ಧರಾದ ಅನೇಕ ಮಂದಿ ಡಾಕ್ಟರುಗಳು ಶವಗಳನ್ನು ದಹನಮಾಡುವುದೇ ಆರೋಗ್ಯಕರವಾದದ್ದೆಂದು ಹೇಳಿದಾರೆ. ಪ್ಯಾರಿಸ್ ಪಟ್ಟಣದಲ್ಲಿ ೧೯೦೩ನೇ ಇಸವಿ ತನಕ ೩,೧೬೭ ಹೆಣಗಳನ್ನೂ, ಅಮೇರಿಕದಲ್ಲಿ ೧೯೦೬ನೇ ವರುಷ ಒಂದರಲ್ಲೇ ೩,೧೬೦ ಹೆಣಗಳನ್ನೂ, ಜರ್ಮನಿಯಲ್ಲಿ ಅದೇ ವರುಷ ೧,೦೩೬ ಹೆಣಗಳನ್ನೂ, ಲಂಡನ್ ಪಟ್ಟಣದಲ್ಲಿ ೪,೭೬೧ ಹೆಣಗಳನ್ನೂ ಚಿತೆಗಳ ಮೇಲಿಟ್ಟು ಸುಡಿಸಿರುತ್ತಾರೆ. ಕಳೆದ ೧೮೮೫ನೇ ಇಸವಿಯಲ್ಲಿ ವಿಲಾಯತಿಯೊಳಗೆ ಈ ಪದ್ಧತಿಯು ಪ್ರಾರಂಭವಾಗಿ ಆ ವರುಷ ಮೂರು ಹೆಣಗಳನ್ನು ಸುಟ್ಟರು. ಕಳೆದ ವರುಷ ೭೩೭ ಹೆಣಗಳನ್ನು ಸುಟ್ಟದಾರೆ.

***

ಸಂಯುಕ್ತ ಸಂಸ್ಥಾನಗಳಿಗೆ ಸೇರಿದ ಸ್ಯಾನ್‌ಫ್ರಾನ್ಸಿಸ್ಕೋ ಪಟ್ಟಣದಲ್ಲಿ ಮುನಿಸಿಪಲ್ ಅಧಿಕಾರಿಯು ಲಂಚತಿಂದನೆಂದು ಮೊಕದ್ದಮೆ ಹುಟ್ಟಿ ಎರಡು ತಿಂಗಳಾಯಿತು. ಈಗತಾನೆ ವಿಚಾರಣೆಗೆ ಬಂದು ಇರುತ್ತದೆ. ಅಬ್ರಹಾಂ ರೂಫ್ ಎಂಬ ಆ ಅಧಿಕಾರಿಯು ಕೈಫಿಯತ್ತು ಕೊಡುವಾಗ್ಗೆ—ನಾನು ಅಧಿಕಾರಕ್ಕೆ ಬಂದ ಪ್ರಾರಂಭದಲ್ಲಿ ಬಹಳ ನಿಸ್ಪೃಹನಾಗಿದ್ದೆನು. ಕಾಲ ಕ್ರಮದಲ್ಲಿ ದುರಾಶೆಗೆ ಒಳಬಿದ್ದು ಲಂಚ ತೆಗೆದುಕೊಳ್ಳುತ್ತಾ ಬಂದಿರುತ್ತೇನೆ. ಒಬ್ಬ ಅಂಗಡಿಯವನು ಅಂತರಂಗದಲ್ಲೇ ಮದ್ಯಗಳನ್ನು ವಿಕರಿಮಾಡಿಕೊಳ್ಳುವಂತೆ ಅವನಿಗೆ ಅವಕಾಶಕೊಟ್ಟು ಅವನಿಂದ ೨,೫೦೦ ಚಿಲ್ಲರೆ ರೂಪಾಯಿ ಲಂಚ ತೆಗೆದುಕೊಂಡಿರುತ್ತೇನೆ ಎಂಬೀ ರೀತಿಯಾಗಿ ಹೇಳುತ್ತಾ ಇದ್ದಹಾಗೇ ಮೂರ್ಛೆಹೋಗಿ ಬಿದ್ದುಬಿಟ್ಟನು. ಆಗ ಆತನನ್ನು ಹೊರಕ್ಕೆ ಎತ್ತಿಕೊಂಡು ಹೋದರು. ಜಡ್ಜಿಯವರು ಅವನಿಗೆ ಇನ್ನೂ ಶಿಕ್ಷೆಯನ್ನು ವಿಧಿಸಲಿಲ್ಲ.

***

ರಷ್ಯಾ ರಾಜ್ಯದ ಮತ್ತು ಜರ್ಮನಿ ರಾಜ್ಯದ ಕೆಲವು ದುಷ್ಟರು ಸೇರಿಕೊಂಡು ಜರ್ಮನಿ ರಾಜಧಾನಿಯಾದ ಬರ್ಲಿನ್ ಪಟ್ಟಣದಲ್ಲಿ ಅಂತರಂಗದಲ್ಲೇ ಆಲೋಚನೆ ಮಾಡಿಕೊಳ್ಳುತ್ತಾ, ಚಕ್ರವರ್ತಿಯವರ ಸಂಚಾರವನ್ನು ಜಾಗರೂಕತೆಯಿಂದ ಕಾಯುತ್ತಾ ಇದ್ದರು. ಪೋಲೀಸಿನವರು ಅನುಮಾನದ ಮೇಲೆ ಆ ಪೈಕಿ ೩೫ ಜನರನ್ನು ದಸ್ತಗಿರಿ ಮಾಡಿದರು. ಇವರಲ್ಲಿ ಮೂವರು ಸ್ತ್ರೀಯರಾಗಿದ್ದರು. ಅವರನ್ನೆಲ್ಲಾ ಶೋಧನೆ ಮಾಡಿ ತನಿಖೆಮಾಡಿದ್ದರಲ್ಲಿ ಜರ್ಮನಿ ಚಕ್ರವರ್ತಿಯವರನ್ನು ಕೊಲ್ಲಬೇಕೆಂದು ಅವರು ಸನ್ನಾಹ ಮಾಡಿಕೊಂಡಿದ್ದದ್ದು ಪ್ರಕಟವಾಯಿತು. ಕೆಟ್ಟ ಚಾಲಿನ ಪರದೇಶಿಗಳೆಂದು ತಿಳಿದು ಬಂದ ಐದು ಮಂದಿ ಗಂಡಸರನ್ನೂ ಒಬ್ಬ ಹೆಂಗಸನ್ನೂ ಗಡೀಪಾರು ಮಾಡಿಬಿಟ್ಟರು. ನಾಲ್ಕು ಮಂದಿಯ ಮೇಲೆ ಮೊಕದ್ದಮೆ ಮಾಡಿ, ಉಳಿದ ೨೫ ಜನರನ್ನು ಸದ್ಯಕ್ಕೆ ಖುಲಾಸ್ ಮಾಡಿಸಿರುತ್ತಾರೆ. ಪ್ರಪಂಚದಲ್ಲಿರುವ ದೊರೆಗಳನ್ನು ಕೊಂದುಹಾಕಬೇಕೆಂಬ ಗುಂಪಿಗೆ ಈ ದುಷ್ಟಜನರು ಸೇರಿದವರೆಂದು ತಿಳಿದುಬಂದಿದೆ.

***

ಕಳೆದ ತಿಂಗಳ ೧೦ನೆ ತಾ|| ಹಗಲು ೧೨ ಗಂಟೆಗೆ ಸ್ಪೇನ್ ದೊರೆಯವರಿಗೆ ಯುವರಾಜರು ಹುಟ್ಟಿದರು. ದೊರೆಯವರು [illegible] ಆನಂದ ಪಟ್ಟು ೨೧ ಕುಶಾಲ್ ಫಿರಂಗಿಗಳನ್ನು ಹಾರಿಸುವಂತೆಯೂ, ಅನೇಕ ಖೈದಿಗಳನ್ನು ಬಂದೀಖಾನೆಯಿಂದ ಬಿಡುಗಡೆ ಮಾಡುವಂತೆಯೂ, ಮರಣದಂಡನೆಯನ್ನು ಎದುರು ನೋಡುತ್ತಿದ್ದ ಎಂಟು ಮಂದಿ ಅಪರಾಧಿಗಳನ್ನು ಕ್ಷಮಿಸಿ ಬಿಟ್ಟುಬಿಡುವಂತೆಯೂ ಮಂತ್ರಿಗಳಿಗೆ ಹುಕುಂ ಕೊಟ್ಟರು. ಆ ದಿನ ರಾಜಧಾನಿಯಲ್ಲಿ ಹುಟ್ಟಿದ ೨೧ ಬಡಮಕ್ಕಳ ಹೆಸರಿನ ಮೇಲೆ ಸೇವಿಂಗ್ಸ್ ಬ್ಯಾಂಕಿನಲ್ಲಿ ಹಣವನ್ನು ಹಾಕಿಸಿದ್ದಲ್ಲದೆ, ೫,೦೦೦ ಬಡಬಗ್ಗರಿಗೆ ಪುಷ್ಕಳವಾದ ಭೋಜನವನ್ನು ಮಾಡಿಸಿದರು. ಸರ್ಕಾರದವರು ಬಡವರ ಹೆಣ್ಣು ಮಕ್ಕಳಿಗೆ ವಿವಾಹವಾಗಿ ಅವರ ಗಂಡನ ಮನೆಗೆ ಹೋಗುವಾಗ್ಗೆ ಅವರಿಗೆಲ್ಲಾ ಸ್ವಲ್ಪಹಣ ಕೊಡುತ್ತೇವೆಂದು ಹೇಳಿ ಇದಕ್ಕಾಗಿ ೩೦,೦೦೦ ರೂಪಾಯಿ ತೆಗೆದಿಟ್ಟಿದಾರೆ. ಇದಲ್ಲದೆ ಎಲ್ಲರು ಬಡ ವಿದ್ಯಾರ್ಥಿಗಳಿಗೆ ವೇತನಗಳನ್ನು ಸ್ಯಾಂಕ್ಷನ್ ಮಾಡಿದರು. ದೊರೆಯವರು ಬಡವರಿಗೆ ಮಾಡಿಸಿದ ಔತಣವಲ್ಲದೆ ಪುರಾಧಿಕಾರಿಗಳೂ ಬಡ ಪ್ರಜೆಗಳಿಗೆ ಸುಖ ಭೋಜನವನ್ನೂ ಅನೇಕ ಸಂತೋಷ ಕಾರ್ಯಗಳನ್ನೂ ನಡಿಸುವುದಾಗಿ ಗೊತ್ತು ಮಾಡಿದರು. ದೊರೆಯವರು ಸೈನಿಕರನ್ನು ಮೈದಾನಿನಲ್ಲಿ ಕಾಣಿಸಿಕೊಂಡು ಅವರ ಜಯಘೋಷಗಳನ್ನು ಲಾಲಿಸಿ ಅವರಿಗೆಲ್ಲಾ ತಮ್ಮ ಸ್ವಂತ ಖರ್ಚಿನಿಂದ ಸಮಾರಾಧನೆ ನಡಿಸಿದರು. ರಾಜಧಾನಿಯಲ್ಲಿರುವ ಬಡಬಗ್ಗರಿಗೆ ದಕ್ಷಿಣೆ ಕೊಡಬೇಕೆಂದು ೭೫,೦೦೦ ರೂಪಾಯಿ ಕಳುಹಿಸಿದರು. ರಾಣಿಯವರಾದರೋ ತಾವು ಹೊತ್ತು ಹೆತ್ತ ಪುತ್ರ ರತ್ನವನ್ನು ತಾವೇ ಹಾಲುಣಿಸಿ ಸಾಕುತ್ತೇವೆಂತಲೂ, ದಾದಿಯರ ಕೈಲಿ ಹಾಲು ಕುಡಿಸುವುದಿಲ್ಲವೆಂತಲೂ ಹೇಳಿರುತ್ತಾರೆ. ಈ ವಿಷಯವನ್ನು ಪ್ರಜೆಗಳೂ ಇತರ ರಾಜ್ಯಗಳವರೂ ಕೇಳಿ ಆಳುವವರನ್ನು ಕೊಂಡಾಡುತ್ತಿದಾರೆ.

ತಾಲ್ಲೋಕು ವರ್ತಮಾನಗಳು

ಮಧುಗಿರಿ—ಈ ಊರಲ್ಲಿ ಮಾತ್ರ ಮಳೆ ಇಲ್ಲದೆ ಸುತ್ತಮುತ್ತಲೂ ವೃಷ್ಟಿಯಾಗಿ ಜಮೀನ್ ಸಾಗುವಳಿಯಾಗುತ್ತಾ ಇದೆ. ಟವನಿನಲ್ಲಿ ಮಾತ್ರ ಸೆಕೆಯು ಹೆಚ್ಚಾಗಿ ಸಾಯಂಕಾಲದ ವೇಳೆ ಮೋಡ ಕವಿದು ಘಾಳಿಯು ಆಕಾಶವನ್ನು ನಿರ್ಮಲ ಮಾಡುತ್ತಾ ಇದೆಯೇ ಹೊರತು ಮಳೆ ಸುರಿಯಲಿಲ್ಲ. [illegible] ಯಾವತ್ತೂ ಸುಸ್ಥಿತಿಯಲ್ಲಿರುತ್ತವೆ—ನಮ್ಮ ಅಮಲ್ದಾರ್ ರಜಾದ ಮೇಲೆ ದಯಮಾಡಿಸಿರುತ್ತಾರೆ. ಇವರ ಬದಲಿಗೆ ಕೋರ್ಟಿನ ಮಿ|| ಅಮಲ್ದಾರ್ ಛಾರ್ಜ್ ವಹಿಸಿ ಕೆಲಸ ನೋಡುತ್ತಾ ಇರುತ್ತಾರೆ—ಈಚೆಗೆ ಇಲ್ಲಿಗೆ ಬಂದಿರುವ ಸ್ಯಾನಿಟರಿ ಇನ್ಸ್‌ಪೆಕ್ಟರು ಬಹಳ ಮನಸ್ಸಿನಿಂದ ಟವನ್ ತನಿಖೆ ಮಾಡುತ್ತಾ ಜನರ ಆರೋಗ್ಯಭಾಗ್ಯವನ್ನು ವೃದ್ಧಿಪಡಿಸುವ ಯೋಚನೆಯಲ್ಲಿರುವುದಲ್ಲದೆ ರಾತ್ರಿ ವೇಳೆ ಟವನಿನಲ್ಲಿ ಗಸ್ತುಮಾಡಿ ಲಾಂದ್ರಗಳನ್ನು ಸರಿಯಾಗಿ ಹಚ್ಚುತ್ತಾರೆಯೋ ಇಲ್ಲವೋ ಎಂಬುದನ್ನು ಸಹಾ ತನಿಖೆ ಮಾಡುತ್ತಾ ಇದಾರೆ—ಹಾಲಿ ಪೋಲೀಸ್ ಜಮಾದಾರ್ ಬಸವರಾಜೇ ಅರಸ

ಸಿನವರು ಇಲ್ಲಿಗೆ ಬಂದು ಸುಮಾರು ೮—೧೦ ತಿಂಗಳಾಗಿರಬಹುದು ಆದರೆ ಇಷ್ಟು ಕ್ಷಿಪ್ರದಲ್ಲಿಯೇ ಇವರನ್ನು ಬೇರೆ ಸ್ಥಳಕ್ಕೆ ವರ್ಗಾಯಿಸುವದಾಗಿ ವರ್ತಮಾನವಿರುತ್ತೆ. ಇವರು ಇಲ್ಲಿಗೆ ಬಂದಲಾಗಾಯಿತು ಪ್ರಜೆಗಳಲ್ಲಿ ಅನುರಾಗವೂ ತಮ್ಮ ಕೆಲಸದಲ್ಲಿ ನಿಸ್ಪೃಹತೆಯೂ ಪ್ರಜೆಗಳ ಪ್ರೀತಿಗೆ ಪಾತ್ರರಾಗಿಯೂ ಇದ್ದಾರೆ ಆದ್ದರಿಂದ ಗೌರ್ನಮೆಂಟಿನವರು ಇವರನ್ನು ಇನ್ನೂ ಕೆಲವು ಕಾಲ ಇಲ್ಲೇ ಇಡಬೇಕೆಂದು ಈ ಗ್ರಾಮದ ಪ್ರಜೆಗಳು ಹಾರೈಸುತ್ತಾರೆ

ಹೊಳೆನರಸೀಪುರ.—ಈಚೆಗೆ ೩—೪ ಹದ ಮಳೆಯಾದ್ದರಿಂದ ರೈತರು ಹೊಲಗಳಿಗೆ ರಾಗಿ ಪೈರುಗಳನ್ನು ಇಡುವದರಲ್ಲಿದ್ದಾರೆ ಸೋನೆ ಮಳೆಯು ಪ್ರಾರಂಭವಾಯಿತು ಮುನಿಸಿಪಾಲಿಟಿಯು ಅಷ್ಟು ಶುಚಿಯಾಗಿಲ್ಲ. ಊರಿನ ಕಸವನ್ನೆಲ್ಲಾ ದೇವಾಂಗದವರ ಕೇರಿಯ ಪಕ್ಕದಲ್ಲಿ ಸುರಿದಿರುತ್ತಾರೆ ಈಗ ಗಾಳಿಕಾಲವಾದ್ದರಿಂದ ಎಂಜಲು ಹಾಳೆಗಳು ಬೀದಿಬೀದಿಗೆಲ್ಲಾ ಹರಡಿಕೊಂಡಿವೆ. ಮಳೆ ಬಂದಲ್ಲಿ ಆ ಕಸವೆಲ್ಲಾ ಕೊಳೆತು ನಾರುವದಕ್ಕೆ ಶುರುವಾಗುತ್ತೆ ಇದಕ್ಕೆ ನಮ್ಮ ಅಮಲ್ದಾರ್ರು ನಿಗಾ ಕೊಡುವುದು ಬಹು ಅವಶ್ಯವು —ಕಾಲರಾ ಉಪದ್ರವು ಇನ್ನೂ ನಿಂತಿಲ್ಲ ದಿನಕ್ಕೆ ೩—೪ ಜನಗಳು ಸಾಯುತ್ತಾರೆ ಪ್ರಾರಂಭದಿಂದ ಈಗಿನವರೆಗೂ ಇನ್ನೂರು ಜನಗಳವರೆಗೆ ಸತ್ತರೆಂದು ಹೇಳುತ್ತಾರೆ, ಇದರಲ್ಲಿ ಹೊಲೆಯರು ಮುಸಲ್ಮಾನರೇ ಹೆಚ್ಚು—ಈ ಗಲಾಟೆಯಲ್ಲಿ ಜನಗಳಿಗೆ ಸೌದೆ, ಬೆರಣಿಯು ಕಷ್ಟವು ಹೇಳತೀರದು ಹಳ್ಳಿಯವರೊಬ್ಬರೂ ಬರುವದಿಲ್ಲ ಇಂಥಾ ಘೋರವಾದ ರೋಗವು ಈ ಊರು ಹುಟ್ಟಿದಂದಿನಿಂದ ಬರಲಿಲ್ಲವೆಂದು ಕೇಳಬಹುದು ಜನಗಳ ಧೈರ್ಯವೆಲ್ಲಾ ನಾಶವಾಯಿತು. ಜನಗಳಲ್ಲಿ ಗೋಳಾಟವೂ ಸಂಕಟವೂ ಕೇಳತೀರದು

ಶಿಡ್ಲಘಟ್ಟ.—ಶಿಡ್ಲಘಟ್ಟದಲ್ಲಿರುವ ಗುಳದೇವನಹಳ್ಳಿ ಜನ ಮಂ ತಪ್ಪನವರ ಮನೆಗೆ ಇದೇ ೦ನೆಳ ೧೫ ನೇ ತಾ ವಿರಾ ಸಾಯಂಕಾಲ ೫ ಗಂಟೆ ಸಮಯದಲ್ಲಿ ಹ್ಯಾಗೋ ಬೆಂಕಿ ಬಿದ್ದು ಕೊಠಡಿಯಲ್ಲಿದ್ದ ಹುಲ್ಲು ಹೊತ್ತಿಕೊಂಡು ಬೆಂಕಿಯು ಮಾಳಿಗೆಗೂ ಹರಡಿಕೊಂಡು ಉರಿಯಲಾರಂಬಿಸಿತು ಕೂಡಲೇ ಅದರ ಪಕ್ಕದ ಮನೆಗಳವರು ನೋಡಿ ಗಲಾಟೆಮಾಡಲು ಸಾವಿರಾರು ಮಂದಿ ಸೇರಿ ಬೆಂಕಿಯನ್ನು ಆರಿಸುವದಕ್ಕೆ ಪ್ರಯತ್ನಪಟ್ಟರೂ ೨೦ ಅಂಕಣಗಳು ಸುಟ್ಟುಹೋಗಿ ೩೦೦ ರೂಪಾಯಿ ವರೆಗೂ ನಷ್ಟವನ್ನುಂಟುಮಾಡಿತು ಹನುಮಂತಪ್ಪನವರ ತಮ್ಮಂದಿರಿಗೆ ವಿವಾಹವು ೧೭ ನೇ ತಾ ನಿಂದ ನಡಿಯುತ್ತಿದ್ದಕಾರಣ ಉತ್ಸವಕ್ಕಾಗಿ ಮಾಡಿದ್ದ ಬಾಣ ಬಿರುಸುಗಳು ಇದೇ ಮನೆಯ ಬೇರೇ ಭಾಗದಲ್ಲಿ ಶೇಖರಿಸಿದ್ದರೂ ಅಗ್ನಿಯು ಅಲ್ಲಿಗೆ ಪ್ರವೇಶಿಸುವಷ್ಟರಲ್ಲಿಯೇ ಅವನನ್ನು ಹೊರಕ್ಕೆ ಸಾಗಿಸಿದರು ಇಲ್ಲವಾದರೆ ವಿಶೇಷ ಅನರ್ಥಸಂಭವಿಸುತ್ತಿದ್ದಿತಲ್ಲದೆ ಪಕ್ಕದ ಮನೆಗಳಲ್ಲಿ ರೇಷ್ಮೆ ಕಾರ್ಖಾನೆ ನಡಿಯುತ್ತಿದ್ದಕಾರಣ ಸಾವಿರಾರು ರೂಪಾಯಿನ ರೇಷ್ಮೆಯು ಅಗ್ನಿಯ ಪಾಲಾಗುತ್ತಿದ್ದಿತು ದೇವರ ದಯದಿಂದ ಬೇರೆ ಮನೆಗಳಿಗೇನೂ ತೊಂದರೆ ಸಂಭವಿಸಲಿಲ್ಲ ಅಮಲ್ದಾರರೂ, ಪೊಲೀಸು ಇನ್‌ಸ್ಪೆಕ್ಟರೂ, ಜಮಾ ದಾರರೂ ಉರಿಯು ಶಾಂತಿವಾಗುವ ವರೆಗೂ ಹಾಜರಿದ್ದು ಪ್ರಯಾಸದಿಂದನೆ ಅನೇಕ ಜನರ ಸಹಾಯ ಮಾಡಿಕೊಟ್ಟರು ಮನೆಯಲ್ಲಿ ಶುಭಕಾರ್ಯ ನಡಿಯುತ್ತಿರುವ ಕಾಲದಲ್ಲಿ ಇಂಥಾ ಅನರ್ಥ ಸಂಭವಿಸಿದ್ದಕ್ಕಾಗಿ ಇವರ ಮಾಲೀಕರೂ ಅವರ ಬಂಧುಗಳೂ ಬಹಳ ವ್ಯಸನಾಕ್ರಾಂತರಾಗಿರುತ್ತಾರೆ

ತರೀಕೆರೆ ತಾ ಮಾಕನಹಳ್ಳಿ.—ಈ ಪ್ರಾಂತ್ಯ ಸ್ವಲ್ಪ ಮಳೆಯು ಈಗ ಎಂಟು ದಿವಸದ ಹಿಂದೆ ಆಗಿಯಿತ್ತು ಜಮೀನುಗಳು ಸಾಗುವಳಿಗೆ ಸಿದ್ಧವಾಗಿ ಇರುತ್ತವೆ ಈ ಗ್ರಾಮದಲ್ಲಿ ಕೆಲಸರು ಇಷ್ಟಿಲ್ಲದ ಮನೆಗಳಿಂದ ವ್ಯಥೆಪಡುವದು ಶಿವಾಯಿ ಈ ಗ್ರಾಮಕ್ಕೆ ಪಾನಕ್ಕೆ ಉಪಯೋಗವಾದ ಭಾವಿಯು ಒಂದೇ ಇರುತ್ತದೆ ಇದರಿಂದ ಬೇಸಿಗೆ ಕಾಲದಲ್ಲಿ ನೀರಿಗೆ ಬಹಳ ತೊಂದರೆಯುಂಟಾಗುತ್ತೆ ಮತ್ತು ಈ ಗ್ರಾಮವು ರಸ್ತೆ ಬಾಜು ಆಗಿಯೂ ಪೊಲೀಸ್ ಸ್ಟೇಷನ್ ಇರತಕ್ಕದ್ದಾಗಿಯೂ ಇರುವದರಿಂದ ಹೊಸದುರ್ಗದ ಕಡೆಯಿಂದ ತರೀಕೆರೆ ಸಂತೆಗೆ ಹೋಗುವ ಗಾಡಿಗಳ ಎತ್ತುಗಳು ಮತ್ತು ಜನಗಳಿಗೆ ನೀರಿನ ತೊಂದರೆಯು ಕೇಳಲಿಕ್ಕೆ ಅಸಾಧ್ಯ ಇಂಥಾದ್ದನ್ನು ಕಂಡು ನಮ್ಮ ಅನ್ಯತಾಪುರದ ಹೆಬ್ಬಳಿ ಶೇಕದಾರ್ ಮುಂತಾದವರು ಇದೇ ಗ್ರಾಮದಲ್ಲಿರುವ ಸಿದ್ಧೇಶ್ವರನ ದೇವಾಲಯದಲ್ಲಿ ಸಭೆ ಸೇರಿ, ಈ ಗ್ರಾಮಸ್ಥರಿಗೆ ತಕ್ಕ ಬುದ್ಧಿಮಾತುಗಳನ್ನು ಹೇಳಿ, ಬೇರೆ ಒಂದು ಬಾವಿ ತೆಗಿಸಲು ಗ್ರಾಮಸ್ಥರಿಂದ ಕೆಲವು ಹಣ ವಸೂಲ್ ಮಾಡಿ ಸುಣ್ಣ ಕಾಮಗಾರಿ ಮಾಡಿಸಿ, ಕಲ್ಲು ಕಾಮಗಾರಿಗಾಗಿ ತರೀಕೆರೆ ತಾಲ್ಲೋಕು ಅಮಲ್ದಾರ್ರಲ್ಲಿ ಅರ್ಜಿ ಕೊಟ್ಟರು ಮತ್ತು ಅವರು ಇಲ್ಲಿಗೆ ಪ್ರಯಾಣಮಾಡಿದ ಕಾಲದಲ್ಲಿ ಭಾವಿ ಸಹ ನೋಡಿದರು. ಕಡೂರು ಡೆಪ್ಟಿ ಕಮೀಷನರಲ್ಲೂ ಸಹ ಅರ್ಜಿ ಕೊಟ್ಟದ್ದಾಯಿತು ಈ ವರೆಗೂ ಭಾವಿಗೆ ಕಲ್ಲು ಕಟ್ಟಿಸಿಕೊಡಲಿಲ್ಲ ಈಗ ಲಾದರೂ ದಯಾಳುಗಳಾದ ಅಮಲ್ದಾರ್ರು ಕಲ್ಲಿನ ಕಾಮಗಾರಿ ಮಾಡಿಸಿಕೊಡಲು ಬೇಡುತ್ತೇವೆ —ಈ ಗ್ರಾಮದಲ್ಲಿ ಒಂದು ಪಾಠಶಾಲೆ ಇರುತ್ತೆ ಇದರಲ್ಲಿ ಅತ್ತಿಮೊಗ್ಗೆ ಬಸಯ್ಯ ಎಂಬುವರು ಉಪಾಧ್ಯಾಯರಾಗಿರುತ್ತಾರೆ ಇವರು ಪಾಠಶಾಲೆಯನ್ನು ಇಟ್ಟು ಈಗ ೨—೩ ತಿಂಗಳಾಯಿತ್ತು ಇಷ್ಟರೊಳಗೆ ಹದಿನೈದು ದಿವಸ ಪಾಠಶಾಲೆಯು ನಡೆಯುತ್ತಿರುವದು ಹದಿನೈದು ದಿನ ಆಗುತ್ತಿರುವದು ಅಂದರೆ ಬಾಗಿಲು ಮುಚ್ಚಿರುವದು ಈ ರೀತಿ ಉಪಾಧ್ಯಾಯರು ಮಾಡಿದರೆ ಪಾಠಶಾಲೆಯು ಅಭಿವೃದ್ಧಿಗೆ ಹ್ಯಾಗೆ ಬರುತ್ತೆ ? ಪಾಠಶಾಲೆ ಇನ್‌ಸ್ಪೆಕ್ಟರ್‌ರವರು ಗಮನಕೊಟ್ಟು ಪಾಠಶಾಲೆಯನ್ನು ಅಭಿವೃದ್ಧಿಗೆ ತರಬೇಕೆಂದು ಕೋರುತ್ತೇವೆ

ಚಿತ್ರದುರ್ಗ.—ಹೋದ ವಾರವೆಲ್ಲಾ ಇಲ್ಲಿ ವಿಪರೀತ ಗಾಳಿ ಎದ್ದಿದ್ದು ಬಹಳ ಮೋಡ ಕವಿದು ಸೂರ್ಯ ರಶ್ಮಿಯೇ ಅಪರೂಪವಾಗಿದ್ದು ಕೆಲ ತುಂತುರ ಹನಿಯಲ್ಲಿ ಅಂತ್ಯವಾಯಿತೇ ಹೊರತು ದೊಡ್ಡ ಮಳೆ ಏನೂ ಬರಲಿಲ್ಲ. ಹವಾ ಬಹಳ ಶೀತವಾಗಿ ಚಳಿ ಕೊರತ ಅತಿಯಾಗಿದೆ —ರಾತ್ರಿಕಾಲದಲ್ಲಂತೂ ಕಗ್ಗತ್ತಲಾಗಿದೆ ಮುನಿಸಿಪಲ್ ಲಾಂದ್ರಗಳು ಅಲ್ಲಲ್ಲಿ ಮಿಣುಗುಟ್ಟುತ್ತಿವೆ ಆದರೂ ಅವು ದೊಡ್ಡವರ ಮತ್ತು ರಾಯರ ಮನೆಗಳ ಎದುರಿನಲ್ಲಿ ಮಾತ್ರವೆಯೇ ಹೊರತು ಬಡಬಗ್ಗರು ವಾಸಮಾಡುವ ಕೇರಿಗಳಲ್ಲೂ ಚೌಕಗಳಲ್ಲೂ ಇಲ್ಲ. ಅಕ್ಕಸಾಲಿಗರ ಬೀದಿಯಲ್ಲಿರುವ ನಡು ಚೌಕದಲ್ಲಿ ಇದ್ದ ಲಾಂದ್ರವನ್ನು ಕಿತ್ತುಹಾಕಿ ಬಹಳ ದಿನಗಳಿಂದ ಹಾಗೆಯೇ ಬಿಟ್ಟಿದ್ದಾರೆ ಅಲ್ಲಿ ದನಕರುಗಳ ಗಲಾಟೆ ಬಹಳ. ಹೆಂಗಸರೂ ಮಕ್ಕಳೂ ಸಂಚಾರ ಮಾಡುವದು ಹೆಚ್ಚು ಆದ್ದರಿಂದ ಅನಾವಶ್ಯಕವಾಗಿರುವ ಕಡೆ ತೆಗೆದಾದರೂ ಈ ದೊಡ್ಡ ಚೌಕದಲ್ಲಿ ಒಂದು ಲಾಂದ್ರ ಇಡುವದು ಅವಶ್ಯವಾಗಿದೆ ಈ ಕೇರಿಗೆಲ್ಲಾ ಈಗ ಇರುವ ಒಂದೇ ಲಾಂದ್ರವೇ ಹೊರತು ಉದ್ಧಕ್ಕೂ ಇನ್ನೊಂದಿಲ್ಲ —ಈಚೀಚೆಗೆ ಕಳ್ಳರ ಅವಾಂತರ ಬಹಳವಾಗಿದೆ ಹೊಳಲ್ಕೆರೆ ಸ್ಟೇಷನ್‌ಗೆ ಸಮೀಪದಲ್ಲಿಯೇ ಇಂತಹ ಅಪಾಯ ಕೃತ್ಯಗಳು ನಡೆದಿವೆ ರಾತ್ರಿಹೊತ್ತು ಗಾಡಿಗಳನ್ನು ಬಿಡುವದಿಲ್ಲ ಪೋಸ್ಟ್ ಟಾಂಗಾವನ್ನು ಹೊಳಲ್ಕೆರೆಯಿಂದ ಆಚೆಗೆ ಸ್ಟೇಷನ್ ವರೆಗೂ ಪೊಲೀಸ್ ಶಿಬ್ಬಂದಿ ಸಿಕಿ ಬಿಡುತ್ತಾರೆಂದು ವರ್ತಮಾನ ಹೊಳಲ್ಕೆರೆ ಅಜುಬಾಜುವಲ್ಲಿಯೇ ಒಬ್ಬ ಕೊರಮರವನನ್ನು ಖೂನಿ ಮಾಡಿ ಅವನ ಒಡವೆವಸ್ತುಗಳಲ್ಲಿ ಏನೂ ಮುಟ್ಟದೆಹೋಗಿದ್ದಾರೆಂದು ತಿಳಿದು ಬಂದಿದೆ, ಖೂನಿ ಆದವನು ಹಿಂದೆ ಚಿತ್ರದುರ್ಗದಲ್ಲಿ ನಡೆದ ಪಂಚಾಳರಲ್ಲಿ ತಿಳುವಳಿಕೆ ಕೊಡುವವನಾಗಿದ್ದ ಕಪಿಮಾರ ಎಂಬುವನಂತೆ ಆದ್ದರಿಂದ ಈ ಖೂನಿ ಜಿದ್ದಿನ ಮೇಲೆ ನಡೆದದ್ದೇ ಎಂದು ಹೇಳಬೇಕಾಗಿದೆ, ಪೊಲೀಸಿನವರು ಕೊರಮರ ಪೈಕಿ ಕೆಲವರನ್ನು ಹಿಡಿದು ತನಿಖೆಮಾಡುತ್ತಿರುವದಾಗಿ ವರ್ತಮಾನ, ಪೊಲೀಸಿನವರು ಏನಾದರೂ ತರದೂದು ಮಾಡಿ ಈ ದುಷ್ಟರ ಹಾವಳಿಯನ್ನು ನಿಲ್ಲಿಸಿ ಪ್ರಜಾ ಕ್ಷೇಮಕ್ಕೆ ಭಂಗವಾಗದಂತೆ ಮಾಡ್ಯಾರೆಂದು ನಿರೀಕ್ಷಿಸುತ್ತೇವೆ

ತುಂಕೂರು —ಬಿರುಗಾಳಿಯಿಂದ ಮೋಡ ಆವರಿಸಿಕೊಂಡು ಸೂರ್ಯ ದರುಶನವೇ ಅಪರೂಪವಾಗಿದೆ ಹಾಲೀ ಬಿತ್ತನೆ ಕಾಲವಾಗಿದ್ದರೂ ಮಳೆ ಇಲ್ಲದಿರುವದರಿಂದ ಉಕ್ಕೆಗೆ ಕೂಡಾ ಅವಕಾಶವಿಲ್ಲದಂತಾಗಿ ರೈತರು ವ್ಯಸನಪಡುತ್ತಾರೆ ಈ ವರುಷ ಮಳೆ ಬೆಳೆಗಳು ಸರಿಯಾಗಿ ನಡೆಸಿದ್ದರಿಂದ ಎಲ್ಲೆಲ್ಲೂ ಜನರು ವಿವಾಹಾದಿ ಕಾರ್ಯಗಳಲ್ಲಿ ಸಂಭ್ರಮಪಡುತ್ತಿದ್ದಾರೆ ಮಂಡಿಗೆ ದಿನಸಿ ಗಾಡಿಗಳು ವಿಶೇಷವಾಗಿ ಬರುತ್ತಲಿವೆ ದಾರಣೆಪದಾರ್ಥಗಳು ಇಳಿಮುಖವಾಗಿವೆ —ಇಲ್ಲಿನ ಟೋಲ್ ಗೇಟ್ ಕಂಟ್ರಾಕ್ಟು ಮುಗಿಯುತ್ತಾದ್ದರಿಂದ ಬರುವ ವರ್ಷದ ಕಂಟ್ರಾಕ್ಟಿಗಾಗಿ ಅನೇಕರು ಟೆಂಡರುಗಳನ್ನು ಕೊಟ್ಟಿದ್ದಾರೆ ಹೋದ ವರ್ಷದಂತೆಯೇ ಈ ಸಲವೂ ಕಮ್ಮಿ ರೇಟಿನವರಿಗೇನೆ ನಿಲ್ಲುವದೇನೋ ಎಂಬ ಕುತೂಹಲವಿದೆ.—ನಮ್ಮ ಡೆಪ್ಟಿ ಕಮಿಷನರ್ ಸಾಹೇಬರವರಿಗೆ ವರ್ಗವೆಂಬದಾಗುತ್ತಿರುವದು ಸೂಕ್ಷ್ಮ ವದಂತಿ ಎಲ್ಲೆಲ್ಲಿಯೂ ಇದೆ —ಟವುನ್‌ಗೆ ದಕ್ಷಿಣ ಭಾಗದಲ್ಲಿ ಹತ್ತು ಮೈಲಿ ದೂರದಲ್ಲಿರುವ ಹೆಬ್ಬೂರು ಎಂಬ ಗ್ರಾಮದಲ್ಲಿ ಕಾಲರಾ ಜೋರಾಗಿ ಬಹಳ ಕಠಿಣವಾಗಿರುತ್ತೆ —ಇಲ್ಲಿನ ಮಂಡಿ ವರ್ತಕರೆಲ್ಲರೂ ಸೇರಿ ತಮ್ಮ ವ್ಯಾಪಾರಾಭಿವೃದ್ಧಿಗೋಸ್ಕರ ಒಂದು ಸಂಘವನ್ನೇರ್ಪಡಿಸಿ ಅದನ್ನ ಸರ್ಕಾರದಲ್ಲಿ ರಿಜಿಸ್ಟರ್ ಮಾಡಿಸಿರುತ್ತಾರೆ, ಈ ಸಂಘದ ಮೆಂಬರುಗಳು ಅದರ ಕಾರ್ಯಗಳನ್ನು ಶ್ರದ್ಧೆಯಿಂದ ನಡಿಸದೆ ಇರುವದರಿಂದಲೂ ಆಗಾಗ್ಗೆ ಮೀಟಿಂಗು ಮಾಡದೆ ಇರುವದರಿಂದಲೂ ಕಂಪನಿ ಉದ್ದೇಶವು ಸಫಲವಾಗಲು ಅವಕಾಶವಿಲ್ಲವೆಂದು ತೋರುತ್ತದೆ —ಇಲ್ಲಿನ ಸಂತೆಯಲ್ಲಿ ಅಳತೆ ಸೇರು ತೂಕದ ಬಟ್ಟುಗಳ ಕಮ್ಮಿಯಾಗಿರುವ ಸಾಂಕ್ರಾಮಿಕರೋಗವು ಕೆಲವು ಮಂಡಿಗಳಿಗೂ ವ್ಯಾಪಿಸಿರುವದನ್ನು ತಿಳಿದು ತುಂಬಾ ವಿಷಾದಿಸುತ್ತೇನೆ ಇದಕ್ಕಾಗಿ ವರ್ತಕರೆಲ್ಲರೂ ತಕ್ಕ ಏರ್ಪಾಡು ಮಾಡಿಕೊಳ್ಳುವದು ಧರ್ಮವಾಗಿದೆ

ಕುಂಚೀಸ್‌ಪೇಟೆ.—ಈ ವರ್ಷ ರೇವಣಸಿದ್ಧೇಶ್ವರನ ಜಾತ್ರೆಯನ್ನು ಮುಜರಾಯಿ ಇಲಾಖೆಗೆ ಸೇರಿಸಿಕೊಂಡು ಸರ್ಕಾರದಿಂದ ನಡಿಸಿದರು ಅಧಿಕಾರಿಗಳು ಅಲ್ಲಿ ನಿಂತು ಮುತವಜೀಯಿಂದ ಕಾರ್ಯಗಳನ್ನು ನೆರವೇರಿಸಿದರು ಪಾರುಪತ್ತೇಗಾರ್ ರುದ್ರಪ್ಪನವರು ತುಂಬಾ ಮಮತೆಯಿಂದ ಸರ್ಕಾರದ ಕಡೆಯ ಜನರನ್ನೂ ಜಾತ್ರೆಗೆ ಬಂದಿದ್ದ ಜನರನ್ನೂ ತಮ್ಮಿಂದಲಾದಮಟ್ಟಿಗೂ ಸಂತೋಷಪಡಿಸಿದರು ಈ ಜಾತ್ರೆಯಿಂದ ಈ ವರ್ಷ ಸರ್ಕಾರಕ್ಕೆ ಎಲ್ಲಾ ಖರ್ಚುಗಳಿಂದಲೂ ಸ್ವಲ್ಪ ಉತ್ಪತ್ತಿಯೂ ಆಗಿದೆ ಮುಂದೆಯೂ ಅದನ್ನು ಸರ್ಕಾರದವರೇ ವಹಿಸಿಕೊಂಡು ಅಲ್ಲಿ ಜನರಿಗೆ ಅನುಕೂಲವಾದ ಮಂಟಪಗಳೂ ನೀರಿನ ವಸತಿಗಳೂ ಮಾಡಿಕೊಟ್ಟರೆ ಈ ಜಾತ್ರೆಗೆ ಅನೇಕ ಜನರು ಸೇರಿ ಸರ್ಕಾರದ ಖಜಾನೆಗೆ ಹಣವೂ ಸೇರುವದು —ಭಿನಹ ಆಗಿಂದಾಗ್ಗೆ ಇಲ್ಲಿ ಮಳೆ ಬೀಳುತ್ತಲೇ ಇದೆ —ಈಗ್ಗೆ ೫ ದಿನಗಳಿಂದಲೂ ಈ ಊರಿನಲ್ಲಿ ವಾಂತಿಬೇಧಿ ರೋಗ ಕಾಣಿಸಿಕೊಂಡು ಅನೇಕರು ಸಾಯುತ್ತಾ ಇದ್ದಾರೆ ಡ್ರೆಸ್ಸರವರು ದಿನವೆಲ್ಲಾ ರೋಗಿಗಳ ಮನೆಗಳನ್ನು ತಿರುಗಿ ಪ್ರೀತಿಯಿಂದ ಉಪಚರಿಸುತ್ತಾ ಇದ್ದಾರೆ ನೀರನ್ನು ಚೆನ್ನಾಗಿ ಕುದಿಸಿ ಕುಡಿಯಬೇಕೆಂದು ಸರ್ಕಾರದವರು ಟಾಂ ಟಾಂ ಹಾಕಿಸಿದ್ದಾರೆ —ಕೆಲವು ದಿನಗಳ ಹಿಂದೆ ರಾತ್ರಿಯಲ್ಲಿ ನಡುಪೇಟೆಯಲ್ಲಿ ಕಳ್ಳರು ಕನ್ನಾ ಹಾಕಿ ಕೆ ಪ್ಪಸ್ವಾಮಿ ಮೊದಲಿಯಾರ್ರ ಸುಮಾರು ೩೦೦ ರೂಪಾಯಿ ಮಾಲನ್ನು ಅಪಹರಿಸಿದರೆಂದು ಪೊಲೀಸಿನವರು ಪತ್ತೆ ತರದೂದಿನಲ್ಲಿದ್ದಾರೆಂದೂ ತಿಳಿಸುತ್ತ ಮಾಲುಗಳು ಪತ್ತೆಯಾಗಿ ಈ ತಿಂಗಳು ೨೦ ಕ್ಕೆ ಸಬ್ ಡಿವಿಜನ್ ಕೋರ್ಟಿನಲ್ಲಿ ವಿಚಾರಣೆಗೆ ನಿಂತಿದೆ —ಶ್ರೀ ಶೃಂಗೇರಿ ಸ್ವಾಮಿಗಳು ಈ ತಿಂಗಳು ೧೮—೧೯ ತಾರೀಕುಗಳಲ್ಲಿ ಇಲ್ಲಿ ಮೊಕ್ಕಾಂ ಮಾಡಿ ಮುಂದಕ್ಕೆ ಮೈಸೂರಿಗೆ ತೆರಳುವರೆಂದು ಗೊತ್ತಾಗಿದೆ —ಈಗ ಹೊಸದಾಗಿ ಬಂದಿರುವ ಅಮಲ್ದಾರರು ಈ ಊರಿನಲ್ಲಿ ಒಂದು ರೀಡಿಂಗ್ ರೂಮನ್ನು ಸ್ಥಾಪಿಸಿ ಸ್ಟೇಷನ್ ಮಾಸ್ಟರನ್ನು ಅದಕ್ಕೆ ಮುಖ್ಯಸ್ಥರನ್ನಾಗಿ ನೇಮಿಸಿದ್ದಾರೆ —ಶ್ರೀಮನ್ಮಹಾರಾಜರವರ ವರ್ಧಂತಿಯ ಕಾಲದ ಉತ್ಸವಕ್ಕಾಗಿ ಒಂದು ಕುದುರೆ ಸೈನ್ಯವೂ, ಒಂದು ಕಂಪನಿ ಕಾಲ್ಬಲವೂ ಮೈಸೂರಿಗೆ ಹೋಗಲು ಬಂದು ಒಂದು ದಿನ ಇಲ್ಲಿ ಮೊಕ್ಕಾಂ ಮಾಡಿದ್ದವು

ತೀರ್ಥಹಳ್ಳಿ ತಾ. ಹುಮುಚಕಟ್ಟೆ.—ಈ ಊರಲ್ಲಿ ಮ... ಉಪದ್ರವು ೩—೪ ತಿಂಗಳಿಂದಲೂ ಬಾಧೆ ಪಡಿಸುತ್ತಾ ಇದೆ ಈ ... ರಿಂದ ಇಲ್ಲಿ ಸ್ಕೂಲಿಗೆ ಬಾಲಕರೇ ಬರುವದಿಲ್ಲ ತಮ್ಮ ತಮ್ಮ ... ಕ್ಕಳನ್ನು ಕೆಲವರು ಊರು ಬಿಡಿಸಿ ಬೇರೆ ಊರಿಗೆ ಕಳುಹಿಸಿದ್ದಾ... ಇಲ್ಲಿ ಜನಗಳು ಡಾಕು ಹಾಕಿಸಿಕೊಂಡು ಸಂತ್ರ ಮೈಲಿಯಿದ್ದರೆ ಬ... ಕಾವದೇ ಇಲ್ಲವೆಂತಾ ಅರಿಕೊಳ್ಳುತ್ತಾ ಇದ್ದಾರೆ. ಈ ಜನಗಳ ... ಧ್ಯವು ಇನ್ನೂ ಕಗಮೋಗೆ ಬಂದಿಲ್ಲ ಈ ಊರಲ್ಲಿ ಸ್ಕೂಲು ... ಡವೇ ಇಲ್ಲ ಈ ಊರಿನಲ್ಲಿ ೧೦೦ ಮನೆಗಳವೊಳಪಟ್ಟು ಇದ್ದಾ... ಕೇವಲ ಬಡವರಾದವರೇ ಜಾಸ್ತಿಯಾಗಿದ್ದಾರೆ. ಜೀವನಕ್ಕೆ ಆಧಾರ ... ಇಲ್ಲದವರಾಗಿದ್ದಾರೆ. ಇವರು ಸ್ಕೂಲು ಕಟ್ಟಡ ಕಟ್ಟಿಸಿ ಕೊಡ... ಅನುಕೂಲವಿಲ್ಲವಾಗಿದೆ. ತುಂಬಾ ಅನುಕೂಲಸ್ಥರಾಗಿಯೂ ತಿಳ... ಳಿಕೆ ಉಳ್ಳವರಾಗಿಯೂ ಇದ್ದವರು ತಮ್ಮ ಬಾಲಕರಿಗೆ ಖಾಸಗೆ ... ವ್ವರಿಂದ ಹೇಳಿಸಿ ಕೊಳ್ಳುತ್ತೇವೆ ಎಂತಾ ಹೇಳ್ತಾರೇ ಹೊರ್ತು ... ಬಗ್ಗರ ಮಕ್ಕಳ ಸುಖ ಕಷ್ಟಗಳನ್ನು ಈ ಊರಿನಲ್ಲಿ ಕೇಳತಕ್ಕವ... ಇಲ್ಲ. ಸರ್ಕಾರದವರು ಇಲ್ಲಿ ಖಾಲಿ ಇರುವ ಸಾಯರು ಕಟ್ಟೆ... ಸ್ನು ಸ್ಕೂಲಿಗೋಸ್ಕರ ದಯಪಾಲಿಸಿ ನಮ್ಮ ಬಾಲಕರನ್ನು ಕಾ... ಡಲು ಪದೇ ಪದೇ ಸರ್ಕಾರವನ್ನು ಬೇಡುತ್ತಾರೆ —ಇಲ್ಲಿಗೆ ನಾರಕ... ಮ್ಮ ತೀರ್ಥಹಳ್ಳಿ ಆಸ್ಪತ್ರೆ ವೈದ್ಯರು ಬರಬೇಕೆಂತಾ ಪುಕಂ ಆಗಿ... ಆದರೆ ತೀರ್ಥಹಳ್ಳಿ ಇಲ್ಲಿಗೆ ೧೮ ಮೈಲಿ ಆಗುತ್ತೆ ಮಳೆಗಾಲದಲ್ಲಿ ... ಕಟ್ಟಕೊಳ್ಳುತ್ತೆ ಇದು ಮೊದಲನೇ ತೊಂದ್ರೆಯಾಗಿದೆ ಇವರು ಬ... ವ ಮಾರ್ಗದಲ್ಲಿನ ಆರಗ, ಕೋಣಂದೂರು ಇದನ್ನು ನೋಡಿ ಬ... ರುವದು ಎರಡನೇದು ಮೈಲೇಜು ಜಾಸ್ತಿ ಆಗುವದು ಮೂರನೇದು ... ಇನ್ನೂ ಅನೇಕ ತೊಂದ್ರೆ ಇದೆ ಇದಕ್ಕಿಂತಲೂ ಕೂಲಿ ಅಂದ್ರೆ ... ರೆ ಸಂಚಾರವಿಲ್ಲದೆಯೂ ಸಮೀಪವಾಗಿಯೂ ಇರುವ ಆನಂ... ರದ ಆಸ್ಪತ್ರೆ ವೈದ್ಯರನ್ನು ಇಲ್ಲಿಗೆ ಬರುವಂತೆ ಸರ್ಕಾರದವರು ... ಕಂ ಕೊಟ್ಟರೆ ಸದರಿಯವರಿಗೆ ಮೈಲೇಜು ಸಹಾ ಕಮ್ಮಿ ಬೀಳುತೆ ... ಸರ್ಕಾರದ ಚಿತ್ತ —ಇಲ್ಲಿಗೆ ಶಿವಮೊಗ್ಗಾ ಪೊಲೀಸು ಸೂಪರೇಂಟು ... ಸಾಹೇಬರು ಬಂದ ಕಾಲದಲ್ಲಿ ಈ ಊರ ತುಂಬಾ ಕಂಡಾಂಗು ಕೊಡ... ಒಬ್ಬ ದೊಡ್ಡ ಮನುಷ್ಯರು ಯಾವ ಕಾರಣದಿಂದಲೋ ಅವರ ದರ್ಶ... ತೆಗೆದುಕೊಳ್ಳಲಿಲ್ಲ ಅವರು ಈ ಊರಿನ ಗಲೀಜನ್ನು ಪರಾಂಬರಿ... ಯಾವ ರೋಗವಾನೇ ತಲೆ ಹಾಕದೆ ಇರದೆಂದು ತುಂಬಾ ಜಿಗುಪ್ಸೆ ಪಟ... ಕೊಂಡರು ಈ ಊರು ಮೂರು ಫರ್ಲಾಂಗು ಫಾಸಲೆ ರಸ್ತೆ ಎರ... ಪಾರ್ಶ್ವದಲ್ಲಿಯೂ ಮನೆ ಇದೆ ಕಚಂ ಗುಡಿಸಲಿಕ್ಕೆ ಒಬ್ಬ ಆಳನ್ನು ಸರ್ಕಾರದವರು ಇಟ್ಟರೆ ಈ ಊರಿನ ಕೆಟ್ಟ ಜಾಡ್ಯವೆಲ್ಲಾ ಹೋಗುತ್ತೆ ಅಥವಾ ಯೂನಿಯನ್ ಪಂಚಾಯತ್ ತರೂ ಉತ್ತಮ ಈ ಊರಿ... ರಸ್ತೆ ಚುಂತ ತೆಗೆಸಿದ್ದರೆ ನೀರ ರಸ್ತೆಯ ಮೇಲೆ ಹೋಗುತ್ತೆ ಇ... ಜನಿಯರ್ ಇಲಾಖೆಯವರು ಗಮನಕೊಟ್ಟರೆ ಉತ್ತಮ.

ಮೈಸೂರು ಗೆಜೆಟ್ ಸಂಗ್ರಹ.

ಮಂಗಳೂರು ಟೌನ್ ಮುನಿಸಿಪಲ ಬೋರ್ಡಿಗೆ ಮೆ॥ ಗುರುಪಾದಪ್ಪ ಕಟ್ಟನ್ನು, ಸೊರಬದ ಮ್ಯುನಿಸಿಪಲ್ ಬೋರ್ಡಿಗೆ ಮೆ॥ ನಾ ಲಕ್ಷ್ಮಣರಾಯರನ್ನು, ಕಳ್ಳೂರುಕಟ್ಟೆಯ ಮ್ಯುನಿಸಿಪಲ್ ಬೋರ್ಡಿಗೆ ಮೆ॥ ಪಿರಾನ್ ಸಾಬರನ್ನೂ ಮೆಂಬರಾಗಿ ನೇಮಕಮಾಡಿದೆ

ಅ। ಸರ್ಜನ್ ಮೆ॥ ಎಚ್ ರಂಗಣ್ಣನವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಇದಿನೈದು ದಿನಗಳ ಪ್ರಿವಿಲೆಜ್ ರ... ಕೊಟ್ಟದೆ

ಮೈಸೂರು ಸಿಟಿ ಮ್ಯಾಜಿಸ್ಟ್ರೇಟರಾಗಿರುವ ಸೀನಿಯರ್ ಅ॥ ಮಾಷನರ್ ಮೆ॥ ಎ. ವೆಂಕಟರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳೂ ನಾಲ್ಕು ದಿನಗಳ ಪ್ರಿವಿಲೆ... ರಜಾ ಕೊಟ್ಟದೆ

ಅಮಲ್ದಾರ್ ಮೆ॥ ಎಂ ರಂಗನಾಥರಾಯರಿಗೆ ಮಾರ್ಚಿ ೧೯ ರ... ಗಾಯಿತು ಒಂದು ತಿಂಗಳು ಐದು ದಿನಗಳ ಪ್ರಿವಿಲೆಜ್ ರಜವನ್ನು ... ರ ಜೊತೆಗೆ ನಾಲ್ಕು ತಿಂಗಳು ಇಪ್ಪತ್ತೈದು ದಿನಗಳ ಕಾಯಿಲೆ ರ... ನ್ನೂ ಕೊಟ್ಟದೆ

ಮಾಲೂರು ಸಬ್ ಡಿವಿಜನ್ ಅ॥ ಕಮೀಷನರ್ ಮೆ॥ ನರ... ರಾವ್ ಪೂರ್ಣಯ್ಯನವರಿಗೆ ಅವರು ಉಪಯೋಗಿಸಿಕೊಳ್ಳುವ ತಾ... ಖಿನಿಂದ ಎರಡು ತಿಂಗಳೂ ಹದಿನಾಲ್ಕು ದಿನಗಳ ಪ್ರಿವಿಲೆಜ್ ರ... ಕೊಟ್ಟದೆ

ಅವರು ರಜಾ ಉಪಯೋಗಿಸಿಕೊಳ್ಳುವ ತಾರೀಖು ... ಕೋಲಾರ್ ತಾಲ್ಲೂಕನ್ನು ಡೆಪ್ಟಿ ಕಮಿಷನರವರು ತಮ್ಮ ... ನಲ್ಲೇ ಇಟ್ಟುಕೊಂಡಿರತಕ್ಕದ್ದು

ಬೆಂಗಳೂರು ಡಿವಿಜನ್ ಸೀನಿಯರ್ ಅ॥ ಕಮಿಷನರ್ ಮೆ॥ ... ರಾವ ರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ... ದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟದೆ

ಅ॥ ಕಮಿಷನರ್ ಮೆ॥ ಸಿ ವೆಂಕಟರಾಯರು ರಜದಿಂದ ಕ... ಕೆಲಸದ ಮೇಲೆ ಹಾಜರಾಗಿ ಬೆಂಗಳೂರು ಸಬ್ ಡಿವಿಜನ್ ಚಾರ್ಜ... ವಹಿಸತಕ್ಕದ್ದು.

ಮೆ॥ ಆನಂದರಾವ್ ಸಿರ್ಸಿಯವರನ್ನು ರೆಕಾರ್ಡುಗಳ ವಿಲೇವಾರಿ ಇನ್‌ಸ್ಪೆಕ್ಟರಾಗಿ ನೇಮಿಸಿರೋದರಿಂದ ಅ॥ ಕಮಿಷನರ್ ಮೆ॥ ವೆಂಕಟರಾಯರು ಬೆಂಗಳೂರು ಸಬ್ ಡಿವಿಜನ್ ಛಾರ್ಜಿನಿಂದ ಬಿಡುಗಡೆಯಾದ ಮೇಲೆ ಮಧುಗಿರಿ ಸಬ್ ಡಿವಿಜನ್ ಛಾರ್ಜನ್ನು ವಹಿಸಿಕೊಳ್ಳತಕ್ಕದ್ದಾಗಿದೆ.

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸ್ಥಳ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ಸ್ಥಳ ಕೊಡಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿ

ಕರೆಸ್‌ಪಾಂಡೆನ್ಸ್.

ಕೊಳ್ಳೆನರಸೀಪುರದಲ್ಲಿ ಕಾಲರಾ ಉಪದ್ರವೂ, ದೊಡ್ಡಮ್ಮನ ಹಬ್ಬವೂ.

ಸ್ವಾಮಿ,

ಕಳೆದ ಮೇ ತಿಂಗಳ ಅಂತ್ಯಭಾಗದಲ್ಲಿ ಇಲ್ಲಿ ಕಾಲರಾ ಉಪದ್ರವು ಅಕಸ್ಮಾತ್ ಪ್ರಾರಂಭವಾಗಿ, ಮೊದಲನೇದಿನವೇ ೧೦-೧೨ ಜನರು ಸತ್ತರು. ಹೀಗೆಯೇ ದಿನದಿನಕ್ಕೆ ಉಪದ್ರವು ಬಹು ಜೋರಾಗಿ, ಜನಗಳಿಗೆ ದಿಕ್ಕೇ ತೋರದ ಹಾಗೆ ಆಯಿತು. ನಂತರ ಕೋಟೆಯವರಲ್ಲಿ ಕೆಲವರ ದೊಡ್ಡಮ್ಮನ ಹಬ್ಬವನ್ನು ಮಾಡಿದರೆ ರೋಗವು ಕಮ್ಮಿಯಾಗುವದೆಂದು ಕೋಟೆ, ಪೇಟೆ ಮನೆಗಳಲ್ಲೆಲ್ಲಾ ಹಣ ವಸೂಲ್ಮಾಡಿ ಬಹು ಆಸಕ್ತಿಯಿಂದ ದೇವತಾ ಕಾರ್ಯವನ್ನು ಪ್ರಾರಂಭಿಸಿದರು. ದೇವಸ್ಥಾನದಲ್ಲಿ ಶಿಥಿಲವಾಗಿದ್ದ ಅರ್ಧ ಭಾಗವನ್ನು ಕೆಡವಿ, ಅರ್ಧ ಹೊಸ ಮಾಡಿ ನಿಲ್ಲಿಸಿ ಹಬ್ಬವನ್ನು ಷುರು ಮಾಡಿ, ಕರಿಕಾಕುತ್ತೇವೆಂದು ಹಂದಿಯನ್ನು ತಂದು, ಅದರ ನಾಲ್ಕು ಕಾಲುಗಳನ್ನೂ ಕಟ್ಟಿ, ದೊಡ್ಡ ದೊಣ್ಣೆಗಳಿಂದ ಊರು ಸುತ್ತಲೂ ಹೊತ್ತುಕೊಂಡು, ದೊಣ್ಣೆಯಿಂದ ಹೊಡೆಯುತ್ತ, ಕತ್ತಿಯಿಂದ ತಿವಿಯುತ್ತಾ, ಬೆಂಕಿಯಿಂದ ಸುಡುತ್ತಾ ಮೆರೆಯಿಸಿದರು. ಹೊಲೆಯರನ್ನೂ ಮಾದಿಗರನ್ನೂ ಕರೆಸಿ, ಅವರುಗಳಿಗೆ ಹಣ ಕೊಟ್ಟು ಕುರಿಸಿ, ಊರೆಲ್ಲಾ ಮೆರವಣಿಗೆಯಾಯಿತು. ಮಾರನೇ ದಿನ ಹಬ್ಬವು ಪ್ರಾರಂಭವಾಗುವದಕ್ಕೆ ಮೊದಲು ಹೊಲೆಯರಿಗೂ ಮಾದಿಗರಿಗೂ ಜಗಳ ಪ್ರಾರಂಭವಾಗಿ ಯಾರಿಂದಲೂ ಇವರುಗಳ ಸಮ್ಮತಿ ಕೇಳಲು ಶಕ್ತಿಯಿಲ್ಲದೆ ಹೋಯಿತು. ಕೆಲವರು ಮಾದಿಗರವನ್ನು ನಹಿಸಿ, ಹೊಲೆಯರನ್ನು ಪಟೇಲ ಕಂಟೆ ಗೌಡನ ಮನೆಗೆ ಕಳುಹಿಸಿ, ಅವರ ಬರುವಷ್ಟರಲ್ಲಿ ಮಾದಿಗರ ಕೋಣವನ್ನು ಕಡಿಸಿದ್ದರು. ನಂತರ ಹೊಲೆಯರು ಬಂದು ನಡೆದ ಕಾರ್ಯವನ್ನು ನೋಡಿ, ಸರರಿ ಕಂಟೆ ಗೌಡನನ್ನು ತಲೆಗೊಂದು ಏಟು ಹೊಡೆದು ಓಡಿದರು. ಪೋಲೀಸಿನವರೂ ಅಮಲ್ದಾರರೂ ಹೊಲೆಯರಲ್ಲಿ ಐದು ಜನಗಳನ್ನು ಲಾಕಪ್ಪಿನಲ್ಲಿ ಕೂಡಿಸಿದರು. ಆ ನೋಟ ಕೆಲವರು ಅವರು ಇಲ್ಲದೇ ಹೋದಲ್ಲಿ ಹಬ್ಬ ಮುಂದರಿಯುವದಕ್ಕೆ ಮಾರ್ಗವಿಲ್ಲವೆಂದು ಅವರನ್ನು ಲಾಕಪ್ಪಿನಿಂದ ಬಿಡಿಸಿ, ಅವರಿಗೆ ಸಮ್ಮತಿ ಕೇಳಿ ರಾತ್ರಿ ಸುಮಾರು ೧೦ ಘಂಟೆಯಲ್ಲಿ ಹೊಲೆಯರ ಕೋಣವನ್ನು ಕಡಿಸಿ ಮರು ದಿವಸ ಆ ತಂಗಳನ್ನವನ್ನು ಬಲಿ ಎರಚಿದರು. ಈ ಹಬ್ಬವು ಎಷ್ಟು ಹೊಟ್ಟಗೆ ನಡೆಯಿತೋ ಅಷ್ಟರ ಹೊಟ್ಟಗೆ ರೋಗವೂ ಜೋರಾಯಿತು. ಈ ದೇಶದ ಜನಗಳ ನಾಗರಿಕತೆಯು ಇನ್ನೂ ಎಷ್ಟು ಹೊಟ್ಟಗೆ ಇದೆ ಎಂಬುವುದು ಇದರಿಂದ ವ್ಯಕ್ತವಾಗುತ್ತೆ.

ವಿ. ಆರ್ ವೈ.

ನಂಜನಗೂಡು ಬ್ರಾಂಚ್ ನಾಲೆಯು.

ಸ್ವಾಮಿ

ನಂಜನಗೂಡು ಬಳಿ ಪೂರ್ವದಲ್ಲಿ ಕತ್ತವಾಡಿಪುರದ ಬ್ರಾಂಚು ನಾಲೆಯ ವಿಚಾರವನ್ನು ತಮ್ಮ ಪತ್ರಿಕೆ ಮೂಲಕ ತಿಳಿಯಪಡಿಸಿದ್ದು ಸರಿಯಷ್ಟೆ. ಈಗ ಇಲ್ಲಿನ ನಾಲೆಗಳಿಗೆ ನೀರು ಬಿಟ್ಟರೆ ನಾಲಾ ಕಾಂಗಾರಿಯೂ ಸಮರ್ಪಕವಾಗಿ ನಡೆದಿದೆ. ನಮ್ಮ ಬ್ರಾಂಚು ಕಾಂಗಾರಿ ಮಾತ್ರ ನಡೆಯಲೇ ಇಲ್ಲ. ಇಲ್ಲಿ ನೀರಿನ ದುರ್ಭಿಕ್ಷವನ್ನು ಪರಿಹಾರ ಮಾಡುವದಕ್ಕಾಗಿ ದೊಡ್ಡ ನಾಲೆಗೆ ಒಂದು ಬಚ್ಚಲ ಎರಡು ನಲ್ಲಿ ಸಹ ಇಟ್ಟಿದ್ದರು. ಈ ಸಾರಿ ನಲ್ಲಿ ವಜಾ ಮಾಡಿರುವದಾಗಿ ಕೇಳುತ್ತೇನೆ. ಮೊದಲಿನಿಂದಲೂ ನೀರು ಬರುತ್ತಾ ಇದ್ದಾಗ್ಯೂ ಕತ್ತವಾಡಿಪುರಕ್ಕೆ ಬಹಳ ಜ್ಞಾಪಕವಿದ್ದು ಅದರ ಪೈಕಿ ಬಚ್ಚಲು ಒಂದರಿಂದಲೇ ಈ ಸಾರಿ ನೀರು ಬಿಟ್ಟರೆ ನಾವುಗಳು ಬುಷ್ಕೇ ಫಸಲು ಮಾಡಲು ಬಹಳ ಅನುಕೂಲವಾಗುತ್ತದೆ. ಅಲ್ಲಿನ ದೊಡ್ಡ ನಾಲೆಯಿಂದ ಈ ಬ್ರಾಂಚಿಗೆ ನೀರು ಬರುವ ಕಡೆ ಇರುವ ಒಂದು ಸೇತುವೆಯೂ ಅಪಾಯಕರವಾಗಿರುವುದಲ್ಲದೆಯೂ, ನಾಲೆಯಲ್ಲಿ ಇನ್ನೂ ಅಡ್ಡಲಾದ ಒಡೆಯುವ ಕಲ್ಲುಗಳು ಹೇರಳವಾಗಿರುವದಲ್ಲದೆ ನಾಲೆ ತುಂಬಾ ಹೂಳು ಭರ್ತಿಯಾಗಿರುವದರಿಂದಲೂ ನಾವು ಸರ್ವದಾ ಮಳೆಯನ್ನು ನಿರೀಕ್ಷಿಸುತ್ತಾ ದಂಡದ ಹಣವಾದ ಮತ್ತು ಕಂಟ್ರಿಬ್ಯೂಷನ್ ಸಹಾ ತೆರುವದಕ್ಕಾಗಿ ಸಾಲವನ್ನು ಮಾಡಿಕೊಳ್ಳಬೇಕಾಗಿ ಅವರ ಮನೆ ಜೀತಾ ಮಾಡುವ ಹೊತ್ತು ಬಂದಿದೆ. ದೊಡ್ಡ ನಾಲೆ ಕೆಳಗಿನ ಜಮೀನುದಾರರಂತೆ ನಾವೂ ಕಂದಾಯ ಕಂಟ್ರಿಬ್ಯೂಷನ್ ಸಹಾ ಕೊಡುತ್ತಲಿಲ್ಲವೇ? ಹೀಗಿದ್ದಾಗ್ಯೂ ನಮ್ಮ ಬ್ರಾಂಚಿಗೆ ಸರ್ಕಾರದವರು ಕ್ರಮವಾದ ಕಾಂಗಾರಿ ಮಾಡಿಸಿ ನಮಗೆ ಸಲೀಸು ಮಾಡಿಕೊಡಬಾರದು? ನಮ್ಮಿಂದ ಕಂಟ್ರಿಬ್ಯೂಷನ್ ಎಂದೂ ಕಂದಾಯವೆಂದೂ ಯಾತಕ್ಕೆ ತೆಗೆದುಕೊಳ್ಳುತ್ತಾರೆ? ನಮ್ಮಗಳ ಪ್ರಯೋಜನಕ್ಕಲ್ಲವೇ? ಹಾಗೆ ಫಸಲು ನಷ್ಟವಾದಾಗ್ಯೂ ಕಂದಾಯ ಮಾತ್ರ ಮಾಫಿಯಾಗುವದಿಲ್ಲ. ಈ ವಿಷಯವನ್ನು ಅಧಿಕಾರಿಗಳಲ್ಲಿ ಹೇಳಿದರೆ ಬ್ರಾಂಚು ನಾಲೆಯಾದ್ದರಿಂದ ರೈತರೇ ಮಾಡಿಕೊಳ್ಳಬೇಕೆಂದು ಹೇಳುತ್ತಾರೆ. ಹಾಗಾದರೆ ಬ್ರಾಂಚುನಾಲೆ ಕಂದಾಯದ ದರವನ್ನು ಕಡಿಮೆ ಮಾಡಿ, ಸರ್ಕಾರದವರು ಒಟ್ಟಿಗೆ ರಿಪೇರಿ ಮಾಡಲಿ. ನಾವೇ ಮಾಡಿಕೊಳ್ಳುತ್ತೇವೆ. ಅಲ್ಲದೆ ಈ ಬ್ರಾಂಚು ನಾಲೆ ನಾಲ್ಕು ಮೈಲಿ ಉದ್ದವುಳ್ಳದ್ದಾಗಿಯೂ ಇತರ ಬ್ರಾಂಚುಗಳಲ್ಲೆಲ್ಲಾ ಬಹಳ ಭಾರಿಯಾದದ್ದಾಗಿಯೂ ಇದೆ. ಒಂದೇ ಕಡೆಯಲ್ಲಿ ಜಮೀನು ಇದ್ದು ಒಂದು ಕಡೆ ಬೆಟ್ಟವಿರುವದರಿಂದ ಒಂದು ಸಾರಿ ಮಳೆ ಬಂದ ಒಡನೆಯೇ ಗುಡ್ಡದ ಕಲ್ಲು ಮಣ್ಣು ವಗೈರೆ ತುಂಬಿಕೊಳ್ಳುವದರಿಂದ ನೀರಿನ ಅಭಾಂತ್ರವು ಬಹಳ ಜೋರಾಗುತ್ತದೆ. ಈ ಬ್ರಾಂಚಿನಿಂದ ಸರ್ಕಾರಕ್ಕೆ ಸಾಲೀಯಾನಾ ಸುಮಾರು ೨,೦೦೦ ರೂಪಾಯಿ ವರೆಗೂ ಉತ್ಪತ್ತಿ ಇದೆ. ಆದಕಾರಣ ನಾವು ಈ ವಿಷಯವನ್ನು ಗೌರ್ನಮೆಂಟಿಗೂ ಶ್ರೀಮನ್ಮಹಾರಾಜಾ ಸಾಹೇಬ್ ಬಹದ್ದೂರವರಿಗೂ ವಿಜ್ಞಾಪಿಸಿ ಬಡ ರೈತರಾದ ನಮ್ಮಗಳಿಗೆ ಅನ್ನವನ್ನು ಕೊಡಬೇಕಾಗಿ ಪ್ರಾರ್ಥನೆ. ಇಲ್ಲಿನ ರೈತರು ಬಹಳ ಬಡಸ್ಥರು. ಸರ್ಕಾರವೆಂದರೆ ಹತ್ತು ಮೈಲಿ ಓಡುತ್ತಾರೆ. ಧೀಸಮರ್ಥ್ಯವೆಂದರೆ ಸುತರಾಂ ಇಲ್ಲ. ರೈತರಾದ ದೊಡ್ಡ ಮನುಷ್ಯರುಗಳಿಗೆ ಮಾತ್ರ ಕಲ್ಲನಳ್ಳಿಯಲ್ಲಿ ನೀರು ಸಲೀಸು ಸಿಕ್ಕಿ ಆಗುವದರಿಂದ ಹಟಸ್ಥರಾಗಿರಬಹುದು. ಇದ್ದ ಸಂಗತಿ ತಿಳಿಯಪಡಿಸಿದೇನೆ.

ಕತ್ತವಾಡಿಪುರದ ಬಡ ರೈತರ ಹಿತೈಷಿ.

ದೊಡ್ಡಬಳ್ಳಾಪುರದ ಮುನ್‌ಸಿಫ್ ಕೋರ್ಟು.

ಪ್ರಜೆಗಳು ಶ್ರೀಮನ್ಮಹಾರಾಜರವರಲ್ಲಿ ಮಾಡಿಕೊಂಡ ವಿಜ್ಞಾಪನೆಯು.

ದೊಡ್ಡಬಳ್ಳಾಪುರದ ಟೌನಿನಲ್ಲಿರುವ ಮುನ್‌ಸಿಫ್ ಕೋರ್ಟನ್ನು ಜಾಲ್ತಿ ಇಸವಿ ಜುಲೈ ನಿಂದ ವಜಾ ಮಾಡತಕ್ಕದ್ದೆಂದು ಸರ್ಕಾರದಿಂದ ಹುಕುಂ ಆಗಿದ. ಅಲ್ಲಿನ ಪ್ರಜೆಗಳು ಈ ತಿಂಗಳ ೫ ನೆ ತಾ. ನಲ್ಲಿ ಸಭೆ ಸೇರಿ ಈ ಹುಕುಮಿನಿಂದ ಉಂಟಾಗುವ ಅನಾನುಕೂಲಗಳನ್ನು ಕುರಿತು ಚರ್ಚಿಸಿ, ಈ ವಿಷಯದಲ್ಲಿ ಶ್ರೀಮನ್ಮಹಾರಾಜರವರಿಗೆ ವಿಜ್ಞಾಪನೆಮಾಡಿಕೊಳ್ಳ ಬೇಕೆಂದು ತೀರ್ಮಾನಮಾಡಿದರು. ಸಭಿಕರು ಗೊತ್ತುಮಾಡಿದ ಅರ್ಜಿಯ ನಕಲನ್ನು ಅವರಿಂದಲೇ ಚುನಾಯಿಸಿ ರಾಜಧಾನಿಗೆ ಕಳುಹಿಸಲ್ಪಟ್ಟ ಮೆ|| ಗಳಾದ ನರಸಿಂಹಯ್ಯನವರು, ವೆಂಕಟನಾರಣಪ್ಪನವರು, ರುದ್ರಪ್ಪನವರು, ಪುಟ್ಟಣ್ಣನವರು, ದಾಸಪ್ಪನವರು, ಚಂದ್ರಶೇಖರಯ್ಯನವರು ಎಂಬೀ ಆರು ಮಂದಿ ಪ್ರತಿನಿಧಿಗಳ ಮುಖಾಂತರ ರಾಜಧಾನಿಗೆ ಕಳುಹಿಸಿಕೊಟ್ಟರು. ಇವರು ಆ ಅರ್ಜಿಯನ್ನು ಮೊನ್ನೆ ಸೋಮವಾರ ಮಧ್ಯಾಹ್ನ ಶ್ರೀಮನ್ಮಹಾರಾಜರವರ ಪ್ರೈವೇಟ್ ಸೆಕ್ರಟರಿಯವರ ಆಫೀಸಿಗೆ ಒಪ್ಪಿಸಿರುತ್ತಾರೆ. ಅವರು ಒಪ್ಪಿಸಿರುವ ವಿಜ್ಞಾಪನ ಪತ್ರಿಕೆಯ ಮುಖ್ಯಾಂಶಗಳನ್ನು ಇಲ್ಲಿ ಸೂಚಿಸುವೆವು.

"ಮಹಾಸ್ವಾಮಿ. ಈಗ ಸರ್ಕಾರದ ಇಲಾಖೆಗಳಲ್ಲಿ ಖರ್ಚನ್ನು ಕಮ್ಮಿಮಾಡಬೇಕೆಂಬ ಏರ್ಪಾಡು ನಡೆಯುವುದು ನ್ಯಾಯವಾಗಿಯೇ ಇದೆ. ಆದರೆ ಪ್ರಜೆಗಳ ಅನುಕೂಲಗಳನ್ನು ಆಲೋಚನೆಮಾಡಿ ಅವರಿಗೆ ಹೆಚ್ಚು ಕಷ್ಟವನ್ನೂ ನಷ್ಟವನ್ನೂ ಉಂಟುಮಾಡದಂತೆ ಈ ಏರ್ಪಾಡು ಮಾಡಿದರೆ ಜನಕ್ಷೇಮಕ್ಕೂ ದೇಶಾಭಿವೃದ್ಧಿಗೂ ಕಾರಣವಾಗಿರುತ್ತೆ. ಈ ದೊಡ್ಡಬಳ್ಳಾಪುರವು ಒಂದು ದೊಡ್ಡ ಟೌನ್ ಆಗಿಯೂ, ವಿಶೇಷ ವ್ಯಾಪಾರನಿಯುಕ್ತವಾಗಿಯೂ ಇದ್ದದ್ದು, ೧೮೭೬ ರಲ್ಲಿ ಪ್ರಾಪ್ತವಾದ ಕ್ಷಾಮಾದಿಗಳಿಂದ ಹೀನಸ್ಥಿತಿಗೆ ಬಂದುದನ್ನು ನೋಡಿ ದಯಾಳುಗಳಾದ ಸರ್ಕಾರದವರು ಈ ಊರನ್ನು ಅಭಿವೃದ್ಧಿಗೆ ತರಬೇಕೆಂದು ಅನೇಕ ಸಹಾಯಗಳನ್ನು ಮಾಡಿಕೊಟ್ಟಿದ್ದಾರೆ ಮತ್ತು ಮಾಡುತ್ತಲೂ ಇದ್ದಾರೆ. ಇದಕ್ಕಾಗಿ ಬಹಳ ಕೃತಜ್ಞರಾಗಿರುತ್ತೇವೆ.

ಇಲ್ಲಿ ಇರುವ ಮುನ್‌ಸಿಫ್ ಕೋರ್ಟಿಗೆ ನೆಲಮಂಗಲ, ದೇವನಹಳ್ಳಿ, ಗೌರಿಬಿದನೂರು ತಾಲ್ಲೂಕುಗಳು ಸೇರಿರುತ್ತವೆ. ಈ ಟೌನು ಈ ತಾಲ್ಲೂಕುಗಳಿಗೆ ಮಧ್ಯಪ್ರದೇಶವಾಗಿಯೂ, ಒಳ್ಳೇ ರಸ್ತೆಗಳಿಂದಲೂ ರೈಲ್ವೇ ಮಾರ್ಗಗಳಿಂದಲೂ ಕೂಡಿದ್ದಾಗಿಯೂ ಇರುತ್ತೆ. ಇಲ್ಲಿಗೆ ಕೋರ್ಟು ಎರಡನೇ ದಫಾ ಖಾಯಂ ಆಗಿ ೧೯೦೦ನೇ ಇಸವಿ ಬಂದು ಗ್ರಾಮವು ಅಭಿವೃದ್ಧಿಗೆ ಬರುತ್ತಿರುವುದಲ್ಲದೆ ಜನಾನುಕೂಲಗಳೂ ಹೆಚ್ಚಿ ಕೋರ್ಟಿನ ಕೆಲಸಗಳು ಸಲೀಸಾಗಿ ನಡೆದು ಬರುತ್ತಲಿವೆ. ಈ ಕೋರ್ಟು ಖಾಯಮಾಗಿರುವ ನಂಬಿಕೆಯ ಮೇಲೆ ಇದರ ಸರಹದ್ದಿಗೆ ಸೇರಿದ ತಾಲ್ಲೂಕುಗಳಲ್ಲಿರುವ ವರ್ತಕರು ಅದರ ಸರಹದ್ದಿನಲ್ಲೆಲ್ಲಾ ಲೇವಾದೇವಿ ನಡೆಯಿಸುತ್ತಿದ್ದಾರೆ. ಇದು ವಜಾ ಆಗುವುದರಿಂದ ಜನರು ಭೀತರಾಗಿ ಲೇವಾದೇವಿಯನ್ನು ನಿಲ್ಲಿಸಲು ಯೋಚಿಸುತ್ತಾರೆ. ಇದರಿಂದ ಹಣ ಕೊಟ್ಟವರಿಗೂ ತೆಗೆದುಕೊಂಡವರಿಗೂ ಸಹ ನಾನಾ ಕಷ್ಟಗಳು ಏಕಕಾಲದಲ್ಲಿ ಪ್ರಾಪ್ತವಾಗುವವು. ಚಿಕ್ಕಬಳ್ಳಾಪುರಕ್ಕೆ ರೈಲ್ವೇ ಮಾರ್ಗದ ಅನುಕೂಲಗಳಿಲ್ಲ. ಮಧ್ಯದಲ್ಲಿ ಕಣಿವೆ ಇರುವುದರಿಂದ ಗಾಡಿಗಳು ಬರಲಿಕ್ಕೂ, ರಾತ್ರಿ ಹಗಲು ಜನ ಸಂಚಾರಕ್ಕೂ ತೊಂದರೆಯಾಗಿರುತ್ತೆ. ಗೌರಿಬಿದನೂರಿನವರು ಚಿಕ್ಕಬಳ್ಳಾಪುರಕ್ಕೆ ಹೋಗಬೇಕಾದರೆ ದೂರವೆಂತಲೂ, ಕಣಿವೆ ಇರುತ್ತೆಂತಲೂ ಅನೇಕ ವೇಳೆ ಪ್ರಾರ್ಥಿಸಿದುದರ ಮೇಲೆ ದೊಡ್ಡಬಳ್ಳಾಪುರದಲ್ಲಿ ಮುನ್‌ಸಿಫ್ ಕೋರ್ಟನ್ನು ಸ್ಥಾಪಿಸಿ ಕಾಪಾಡಿದರು. ಈಗ ಚಿಕ್ಕಬಳ್ಳಾಪುರಕ್ಕೆ ಹಾಕುವುದರಿಂದ ದೊಡ್ಡಬಳ್ಳಾಪುರದವರಿಗೂ, ಗೌರಿಬಿದನೂರಿನವರಿಗೂ ಬಹಳ ಕಷ್ಟಗಳು ಉಂಟಾಗುವವು.

ಈ ಸಂಸ್ಥಾನದ ಪ್ರತಿ ಒಂದು ಡಿಸ್ಟ್ರಿಕ್ಟಿನಲ್ಲಿಯೂ ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರಿನಲ್ಲಿಯೂ, ತಾಲ್ಲೂಕಿನಲ್ಲಿಯೂ ಕೂಡ ಮುನ್‌ಸಿಫ್ ಕೋರ್ಟುಗಳಿರುತ್ತವೆ. ಈ ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ ಬೆಂಗಳೂರಿನಲ್ಲಿ ಮಾತ್ರ ಇರುತ್ತವೆ. ೭ ತಾಲ್ಲೂಕುಗಳಿಗೆ ಒಂದು ಕೋರ್ಟು ಇದ್ದಂತಾಯಿತು. ಚಿಕ್ಕಬಳ್ಳಾಪುರದ ಮುನ್‌ಸಿಫ್ ಕೋರ್ಟಿಗೆ ದೊಡ್ಡಬಳ್ಳಾಪುರದ ತಾಲ್ಲೂಕು ಸರಹದ್ದು ೩೫ ಮೈಲಿಗಳು, ಗೌರಿಬಿದನೂರು ತಾಲ್ಲೂಕು ಸರಹದ್ದು ೬೦ ಮೈಲಿಗಳು ದೂರವಿರುತ್ತೆ. ಹಾಲಿ ದೊಡ್ಡಬಳ್ಳಾಪುರದ ಮುನ್‌ಸಿಫ್ ಕೋರ್ಟಿನಲ್ಲಿ ಸಾಲು ಒಂದಕ್ಕೆ ಅಸಲು ಮೊಕದ್ದಮೆಗಳು ೧,೦೦೦ ವರೆವಿಗೂ, ಜಾರಿ ಮೊಕದ್ದಮೆಗಳು ೧,೩೦೦ ವರೆಗೂ, ಮಿಸ್ ಮೊಕದ್ದಮೆಗಳು ೨೫೦ ರವರೆವಿಗೂ, ಚಿಕ್ಕಬಳ್ಳಾಪುರದ ಮುನ್‌ಸಿಫ್ ಕೋರ್ಟಿನಲ್ಲಿ ಅಸಲು ಮೊಕದ್ದಮೆ ೬೦೦ ವರೆವಿಗೂ, ಜಾರಿ ಮೊಕದ್ದಮೆ ೪೦೦ ವರೆವಿಗೂ, ಮಿಸ್ ಮೊಕದ್ದಮೆ ೨೦೦ ವರೆವಿಗೂ ದಾಖಲಾಗುತ್ತಾ ಇರುವದರಲ್ಲಿ ಕೇಸುಗಳು ಪೂರಾ ಫೈಸಲಾಗದೆ ಎರಡು ಕೋರ್ಟುಗಳಲ್ಲೂ ಕೇಸುಗಳು ಬಾಕಿಯಲ್ಲಿ ನಿಲ್ಲುತ್ತೆ. ಹಾಲಿ ಮಾಡಿರುವ ಏರ್ಪಾಡಿನಲ್ಲಿ ಸಾಲು ಒಂದಕ್ಕೆ ಅಸಲು ಕೇಸುಗಳು ೧,೬೦೦, ಜಾರಿ ಕೇಸುಗಳು ೧,೪೦೦, ಮಿಸ್ ಕೇಸುಗಳು ೬೦೦ ವರೆವಿಗೂ ದಾಖಲಾಗುವುದರಲ್ಲಿ ಕೇಸುಗಳು ಫೈಸಲಾಗುವುದಕ್ಕೆ ಬಹಳ ಕಾಲವಿಳಂಬವೂ ಅನೇಕ ಹಿಯರಿಂಗುಗಳೂ ಆಗುತ್ತೆ. ಒಂದು ದಫಾ ಕೋರ್ಟಿಗೆ ಹೋಗಿಬರುವುದಕ್ಕೆ ನಾಲ್ಕೈದು ದಿನಗಳು ಹಿಡಿಯುವುದರಿಂದ ಬಡ ಪ್ರಜೆಗಳಿಗೆ ಕಷ್ಟವೂ ನಷ್ಟವೂ ಮನೋಕ್ಲೇಶವೂ ಉಂಟಾಗಿ ಕೆಲಸಗಳು ನಡಿಯುವದಿಲ್ಲ. ಮೈಸೂರು ಸಂಸ್ಥಾನದಲ್ಲಿ ಒಂದೊಂದು ಮುನ್‌ಸಿಫ್ ಕೋರ್ಟಿಗೆ ೨-೩-೪-೬ ತಾಲ್ಲೂಕುಗಳು ಸೇರಿ ಇದೆ, ೫-೬ ತಾಲ್ಲೂಕುಗಳು ಸೇರಿರುವ ಕೋರ್ಟುಗಳಲ್ಲಿ ಅನೇಕ ಕೇಸುಗಳು ಬಾಕಿಯಲ್ಲಿ ನಿಲ್ಲುವದರಿಂದ ಅದಕ್ಕೆ ಕುಮಕ್ ಮುನ್‌ಸಿಫ್ ಕೋರ್ಟುಗಳನ್ನು ಇಡಲ್ಪಡುತ್ತೆ. ಈಗ ಚಿಕ್ಕಬಳ್ಳಾಪುರದ ಮುನ್‌ಸಿಫ್ ಕೋರ್ಟಿಗೆ ಮಾತ್ರ ೭ ತಾಲ್ಲೂಕುಗಳು ಸೇರಿಸಿದರೆ ಜನರ ಕಷ್ಟಕಷ್ಟಗಳಿಗೆ ಪಾರವೇ ಇಲ್ಲದೆ ಕೆಟ್ಟು ಹೋಗುವುದಲ್ಲದೆ ಪುನಹಾ ಕುಮ್ಮಕ್ ಕೋರ್ಟನ್ನು ಇಡಬೇಕಾಗುತ್ತೆ. ಈಗ ದೊಡ್ಡಬಳ್ಳಾಪುರದ ಮುನ್‌ಸಿಫ್ ಕೋರ್ಟಿನಲ್ಲಿ ಸಾಲು ಒಂದಕ್ಕೆ ೧೦—೧೧ ಸಾವಿರ ರೂಪಾಯಿ ಹುಟ್ಟುವಳಿಯೂ ೬—೭ ಸಾವಿರ ರೂಪಾಯಿ ಖರ್ಚೂ, ಜಾತಾ ಸರ್ಕಾರಕ್ಕೆ ಸಾಲೀಯಾನಾ ೩—೫ ಸಾವಿರ ರೂಪಾಯಿ ಉಳಿಯುತ್ತೆ. ಈ ಕೋರ್ಟು ಇರುವದರಿಂದ ಪ್ರಜೆಗಳಿಗೆ ಸೌಕರ್ಯವಾಗಿಯೂ ದೇಶಾಭಿವೃದ್ಧಿಗೆ ಕಾರಣವಾಗಿಯೂ ಇರುತ್ತೆ.

ಮೇಲ್ಕಂಡ ಅಂಶಗಳನ್ನೆಲ್ಲಾ ಖಾವಂದರವರು ಸಾವಧಾನ ಚಿತ್ತದಲ್ಲಿ ತಂದು ಪರ್ಯಾಲೋಚಿಸಿ, ದೊಡ್ಡಬಳ್ಳಾಪುರದಲ್ಲಿ ಮುನ್‌ಸಿಫ್ ಕೋರ್ಟನ್ನು ಖಾಯಂ ಮಾಡಿಸಿ, ಬೆಂಗಳೂರು ತಾಲ್ಲೂಕ್ ಪೈಕಿ ಸಮೀಪವಾಗಿರುವ ಯಲಹಂಕ ಮತ್ತು ಹೆಸರುಘಟ್ಟದ ಹೋಬಳಿಗಳನ್ನು ಈ ಕೋರ್ಟಿಗೆ ಸೇರಿಸಿ, ಈಗ ಕೋರ್ಟಿಗೆ ಸಂಬಂಧಪಟ್ಟಿರುವ ತಾಲ್ಲೂಕುಗಳ ವ್ಯಾಪಾರಾದಿಗಳಿಗೆ ತೊಂದರೆ ಉಂಟಾಗದಂತೆಯೂ, ದೊಡ್ಡಬಳ್ಳಾಪುರದ ಟೌನನ್ನು ಅಭಿವೃದ್ಧಿಗೆ ತಂದು ಕಾಪಾಡುವದಕ್ಕಾಗಿಯೂ, ನಮ್ಮ ಪ್ರಾರ್ಥನೆಗಳನ್ನು ನೆರವೇರಿಸಿ ಉದ್ಧಾರ ಮಾಡಬೇಕು. ಈ ಜೂನ್ ಆಖೈರಿಗೆ ಕೋರ್ಟು ವಜಾ ಮಾಡಬೇಕೆಂದು ಹುಕುಂ ಆಗಿರುತ್ತೆ. ಆ ರೀತಿ ಮಾಡದೆ ಈ ರಿಕಾರ್ಡು ಪೂರಾ ಇತ್ಯರ್ಥವಾಗುವ ವರೆಗೂ ದೊಡ್ಡಬಳ್ಳಾಪುರದಲ್ಲಿಯೇ ಕೋರ್ಟು ಇರುವಂತೆ ಹುಕುಂ ಅಪ್ಪಣೆ ಕೊಡಿಸಬೇಕು ಮಹಾಸ್ವಾಮಿ.

ಮಹಾಸ್ವಾಮಿಯವರ ಅತ್ಯಂತ ವಿಧೇಯ ಸೇವಕರಾದ ಪ್ರಜೆಗಳು."

ಪ್ರಕಟನೆಗಳು.

ನಮ್ಮ ಏಜಂಟರಿಗೂ ಚಂದಾದಾರರಿಗೂ.

"ವೃತ್ತಾಂತ ಪತ್ರಿಕೆಯ" ಹೊಸ ವರುಷವು ಪ್ರಾರಂಭವಾಗಿರುವುದು. ನಮ್ಮ ಏಜಂಟರ ಮೂಲಕ ಪತ್ರಿಕೆಯನ್ನು ಪಡೆಯುತಕ್ಕ ಚಂದಾದಾರರೆಲ್ಲಾ ಅವರಿಗೆ ಚಾಲ್ತಿ ವರುಷದ ಚಂದಾವನ್ನು ಮುಂಗಡವಾಗಿ ಪಾವತಿಮಾಡಿ ಅವರಿಂದ ರಶೀತಿಗಳನ್ನು ಹೊಂದಬೇಕೆಂತಲೂ, ಹಾಗಿಲ್ಲವಾದರೆ ಏಜಂಟರು ಪತ್ರಿಕೆಗಳು ಯಾರಿಗೂ ಕೊಡಲಾಗುವುದಿಲ್ಲವೆಂತಲೂ ಈ ಮೂಲಕ ಶೃತಪಡಿಸುತ್ತೇನೆ. ಈ ತಿಂಗಳ ಆಖೈರಿನೊಳಗಾಗಿ ಏಜಂಟರುಗಳು ಚಂದಾಹಣವನ್ನೆಲ್ಲಾ ಅವಶ್ಯ ಕೂಡಿಸತಕ್ಕದ್ದಾಗಿದೆ—ಮ್ಯಾನೇಜರ್.

ಪಾಳ್ಯದ ವೆಂಕಟಾಚಲ ಪಂಡಿತ, ಶ್ರೀಸೀತಾರಾಘವ ವೈದ್ಯಶಾಲಾ, ಕೊಳ್ಳೇಗಾಲ, ಇವರ ಸಿದ್ಧೌಷಧಗಳು.

26 18

೧. ಲೋಕಾಮಯಹರ ಕಸ್ತೂರೀ ಮಾತ್ರೆ.—ಈ ಮಾತ್ರೆಗಳನ್ನು ಜವಳದ ಬಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚುಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ.



ಚಳಿಜ್ವರ, ಜ್ವರ, ಹೊಟ್ಟೆಶೂಲೆ, ಸಂದುಗಳ ನೋವು, ಮೈ ಕೈಕಾಲ ಕೊಡತ (ಘಾತ), ಮೈ ನವೆತ, ಶೀತವಾತಗಳ ಬಾಧೆ ಅಜೀರ್ಣ, ಅಗ್ನಿಮಾಂದ್ಯ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ.

ಶಾಂಬೋಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಬಳಳ ಹೊತ್ತು ಸಮಾಧಾನವಾಗಿದ್ದು ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಖಾಯಿಲೆಗೂ ಪಾರಿಹೋದದೆ, ನೀರು ಹವಾಗಳ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ.

ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ.

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.

೨೦ ಮಾತ್ರೆಯುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿಗೆ ೧ ರೂ ಪ್ಯಾಕಿಂಗ್ ೧ ರಿಂದ ೧೨ ಕುಪ್ಪಿ ವರೆಗೆ ಪೋಸ್ಟೇಜು ೪ ಆಣೆ.

ವಿಳಾಸ:—ಎಸ್. ಎಸ್. ಆರ್. ವೈದ್ಯಶಾಲಾ,

ಲಕ್ಷ್ಮೀವಿಲಾಸ ರೋಡ್, ಮೈಸೂರು.

ಪೆರೂನಾ ಎಲ್ಲಾ ಶೀತರೋಗಗಳನ್ನೂ ನಿವಾರಣೆ ಮಾಡುವುದರಲ್ಲಿ ಅಮೂಲ್ಯವಾಗಿದೆ ಎಂದು ಪ್ರಮುಖ ಆಸ್ಪತ್ರೆಗಳು ಹೇಳುತ್ತವೆ.

38-11

ಸಿಸ್ಟರ್ಸ್ ಆಫ್ ದಿ ಗುಡ್ ಷೆಫ್‌ಹರ್ಡ್, ಮಾಂಟ್ರೀಲ್.

ಭೂಮಿಯ ಮೇಲಿರುವ ಆಸ್ಪತ್ರೆಗಳೆಲ್ಲಾ ಶೀತರೋಗಿಗಳನ್ನು ಚಿಕಿತ್ಸೆಮಾಡುವಲ್ಲಿ ಪೆರೂನಾ ಔಷಧವು ಬಹು ಬೆಲೆಯುಳ್ಳದ್ದೆಂದು ಕಂಡುಕೊಂಡಿವೆ

ಶೀತ ನೆಗಡಿ ಮುಂತಾದ್ದು ಶ್ವಾಸಕೋಶಕ್ಕೆ ಬರುವ ರೋಗವೆಂತಲೂ ಅದು ಕಡೇಪಕ್ಷ ವರುಷಕ್ಕೆ ಎಂಟುತಿಂಗಳ ಕಾಲ ಬರುವುದೆಂತಲೂ ಸಾಮಾನ್ಯವಾಗಿ ಎಲ್ಲರಿಗೂ ತಿಳಿದಿದೆ.

ಈ ದೇಶದಲ್ಲಿ ಶೀತಕಾಲವು ದೀರ್ಘವಾದ ಮತ್ತು ಕಠಿಣವಾದ ಹವಾ ಉಳ್ಳದ್ದಾಗಿ ಬಹಳ ಕಾಲ ಇರುವುದರಿಂದ ಆಗಲೇ ಶೀತ ವ್ಯಾಧಿಗಳು ಪ್ರಾಪ್ತವಾಗುವವೆಂದು ಖಂಡಿತವಾಗಿ ಹೇಳಬಹುದು.

ಆದಕಾರಣ ಕೆನಡಾ ಜನರು ಶೀತರೋಗಕ್ಕೆಲ್ಲಾ ಪೆರೂನಾ ಸಂಬಂಧಿಯಾದ ಒಳ್ಳೇ ಔಷಧವೆಂದು ತಿಳಿದಕೂಡಲೇ ಅದನ್ನು ಎಲ್ಲಾ ಜನರು ಪ್ರೀತಿಮಾಡಿ ಉಪಯೋಗಿಸುತ್ತಾ ಬಂದರು. ಸಂಸಾರಗಳಲ್ಲಿ ಮಾತ್ರವೇ ಅಲ್ಲ, ದೊಡ್ಡ ಆಸ್ಪತ್ರೆಗಳಲ್ಲಿ ಕೂಡ ಆ ರೋಗಗಳನ್ನು ತಡೆಯುವುದಕ್ಕೂ ನೂರಾರು ರೋಗಿಗಳಿಗೆ ಸೌಖ್ಯವನ್ನುಂಟುಮಾಡುವುದಕ್ಕೂ ಪೆರೂನಾವನ್ನು ಉಪಯೋಗಿಸುತ್ತಾ ಬಂದರು.

ಬಡಬಗ್ಗರಾಗಿಯೂ ರೋಗಿಗಳಾಗಿಯೂ ಇರುವಂಥಾವರಿಗೆ ಅದು ತುಂಬಾ ಪ್ರಯೋಜನವನ್ನುಂಟುಮಾಡಿದ ವಿಷಯದಲ್ಲಿ ದೊಡ್ಡ ಆಸ್ಪತ್ರೆಯವರು ಒಪ್ಪಿ ಸಮ್ಮತಿಯನ್ನು ಕೊಡಲು ಹಿಂತೆಗೆದಿಲ್ಲವು.

ಈ ದೊಡ್ಡ ಆಸ್ಪತ್ರೆಗಳ ಪೈಕಿ ಸಿಸ್ಟರ್ಸ್ ಆಫ್ 'ಗುಡ್ ಷೆಫ್‌ಹರ್ಡ್' ಎಂಬುದು ಒಂದು. ಅದರ ನೌಕರಮಾನ್ಯರು ಹೇಳುವುದನ್ನು ಕೇಳಿ —

ಒಹಿಯೋ ಡಿಸ್ಟ್ರಿಕ್ಟ್ ಕೊಲಂಬಸ್ ಪಟ್ಟಣದಲ್ಲಿರುವ ಪೆರೂನಾ ಕಂಪನಿಗೆ—

ಕಳೆದ ಕೆಲವು ತಿಂಗಳಿಂದಲೂ ನಮ್ಮ ಕಾಯಿಲೆಯವರಿಗೂ ಬಡವರಿಗೂ ಪೆರೂನಾವನ್ನು ಪ್ರಯೋಗಮಾಡಿರುತ್ತೇವೆ. ಅದು ನಮಗೆ ತುಂಬಾ ತೃಪ್ತಿಯನ್ನುಂಟುಮಾಡಿರುತ್ತದೆಂದು ಸಂತೋಷವಾಗಿ ಹೇಳುವೆವು.

ಗುಡ್ ಷೆಫ್‌ಹರ್ಡ್ ಸಹೋದರಿಯರು, ಆಗಸ್ಟು ೨೨, ೧೯೦೩.

ಮಾಂಟ್ರೀಲ್.

ಈ ಆಸ್ಪತ್ರೆಯವರು ಬಹು ದೀರ್ಘಕಾಲ ಈ ಔಷಧವನ್ನು ಉಪಯೋಗಿಸುತ್ತಾ ಬಂದು ಅದರ ಗುಣದ ವಿಷಯದಲ್ಲಿ ತಮ್ಮ ಅಭಿಪ್ರಾಯವನ್ನು ಬದಲಾಯಿಸುವುದಕ್ಕೆ ಕಾರಣವನ್ನು ಕಾಣದೆ, ತಮ್ಮ ಸಂತೋಷದ ತೃಪ್ತಿಯನ್ನು ಕುರಿತು ಮುಂದೆ ಹೇಳುವ ಪ್ರಕಾರ ಬರೆದಿರುತ್ತಾರೆ.—

ಮಾಂಟ್ರೀಲ್, ನೊವೆಂ. ೭, ೧೯೦೩.

ಪೆರೂನಾ ಅನೇಕ ರೋಗಿಗಳಿಗೆ ಸೌಖ್ಯಕೊಟ್ಟಿರುವುದನ್ನು ಕಂಡಿರುತ್ತೇವೆ ಅದು ಒಳ್ಳೇ ಬಲಕಾರಿಯಾದ ಸೇವನೆಯ ಔಷಧವೆಂದು ಹೇಳಬಲ್ಲೆವು; ಮತ್ತು ಅದಕ್ಕಾಗಿ ನಾವು ನಿಮ್ಮನ್ನು ವಂದಿಸುತ್ತೇವೆ.

ಗುಡ್ ಷೆಫ್‌ಹರ್ಡ್ ಆಸ್ಪತ್ರೆ ಸಹೋದರಿಯರು.

ಶೀತವು ಶರೀರದಲ್ಲಿ ಬೇರೂರಿತೆಂದರೆ ಅದನ್ನು ನೀಗಲಾಡಿಸುವುದು ತುಂಬಾ ಕಷ್ಟವಾದೀತು.

ಇದು ಶರೀರವನ್ನು ಹಿಡಿಯುವಂಥಾ, ದೇಹದ ಅಂಗಾಂಗಗಳಿಗೂ ವ್ಯಾಪಿಸುವಂಥಾ ಔಷಧವಾದ್ದರಿಂದ ಅದನ್ನು ಬಹಳ ಅಗತ್ಯವಾಗಿ ಉಪಯೋಗ ಮಾಡಬೇಕಾಗಿರುತ್ತದೆ

ಪೆರೂನಾ ಅಂಥಾ ಒಳ್ಳೆಯ ಔಷಧವಾಗಿರುತ್ತದೆ ಅದು ದೇಹದೊಳಗಿರುವ ಕಾಯಿಲೆಯ ಪ್ರದೇಶವನ್ನು ಹುಡುಕಿ ಹಿಡಿಯುವುದು ಒಳಚರ್ಮವನ್ನು ಗುಣಪಡಿಸಿ ಗಟ್ಟಿಮಾಡುವುದು ಅದರ ಮೇಲೆ ಶರೀರದ ಸೌಖ್ಯವು ಶೀಘ್ರವಾಗಿ ಹಿಂತಿರುಗಿ ಬರುತ್ತದೆ.

ಶೀತದಿಂದ ಬಹಳ ಕಠಿಣವಾದ ಹಳೇರೋಗಿಗಳನ್ನು ಇಟ್ಟು ಇಲಾಜು ಮಾಡಿ ವಾಸಿಮಾಡಿದ ಅನೇಕ ಆಸ್ಪತ್ರೆಗಳ ಪೈಕಿ ಸೇಂಟ್ ಜಾರ್ಜ್ ಎಂಬುವುದು ಒಂದಾಗಿರುತ್ತದೆ ಈ ಆಸ್ಪತ್ರೆಯವರು ಬರೆಯುವುದನ್ನು ನೋಡಿ —

"ನಿಮ್ಮ ಪೆರೂನಾವು ನಮಗೆ ತುಂಬಾ ತೃಪ್ತಿಕರವಾಗಿದೆ ಎಂದು ತಿಳಿಸಲು ಸಂತೋಷಪಡುವವರಾಗಿದ್ದೇವೆ ಮೂವರು ರೋಗಿಗಳು ಈ ಔಷಧವನ್ನು ಉಪಯೋಗಿಸಿದರು ೬೮ ವರುಷ ವಯಸ್ಸಾದ ರೆನೋಯಿ ದೂಪ್ರೂಯಿಸ್ ಎಂಬುವನು ಶೀತಹಿಡಿದು ಬಹಳ ಕಷ್ಟಪಡುತ್ತಿದ್ದನು ಈಗ ಅವನು ತುಂಬಾ ಸೌಖ್ಯವಾಗಿದ್ದಾನೆ ಇಷ್ಟುಪಟ್ಟಿಗೆ ಅವನು ಅನೇಕ ವರುಷಗಳಿಂದ ಆರೋಗ್ಯವಾಗಿರಲಿಲ್ಲ

"ಹದಿನೈದು ವರುಷದ ಒಬ್ಬ ಹುಡುಗಿಗೆ ಬಹು ಕಠಿಣವಾದ ಕೆಮ್ಮಲು ಹಿಡಿದಿತ್ತು ಅವಳಿಗೆ ಪೆರೂನಾವನ್ನು ಅರ್ಧ ಶೀಸೆ ಕೊಡುವುದರಲ್ಲೇ ಆ ಕೆಮ್ಮಲು ಅದೃಶ್ಯವಾಯಿತು.

"ನನ್ನ ವಿಷಯವನ್ನು ಹೇಳುತ್ತೇನೆ ಎರಡು ಬಾಟ್ಲಿ ಔಷಧವನ್ನು ತೆಗೆದುಕೊಳ್ಳುವಷ್ಟರಲ್ಲೇ ಪೆರೂನಾ ಬಹು ಅದ್ಭುತವಾದ ಬಲವನ್ನು ಕೊಡುವ ಔಷಧವೆಂದು ನನಗೆ ಪರಿಷ್ಕಾರವಾಗಿ ತಿಳಿದುಬಂದಿದೆ

"ಇದನ್ನು ಸೇವಿಸುವುದಕ್ಕೆ ಮುಂಚೆ ನಾನು ಕಾಲುಗಂಟೆ ಹೊತ್ತು ನಡೆಯುವುದಕ್ಕೂ ಆಗದೆ ಉಬ್ಬಸಬರುತ್ತಿತ್ತು. ಈಗ ನಾನು ಒಂದು ಮೈಲಿ ದೂರವಾದರೂ ಸುಲಭವಾಗಿ ನಡೆಯಬಲ್ಲೆನು.

"ಈ ಮೂರು ರೋಗಿಗಳ ಮೂಲಕ ನಿಮ್ಮ ಔಷಧವು ಬಹು ಫಲಕಾರಿಯಾದದ್ದೆಂದು ಸಕಲರಿಗೂ ತಿಳಿಯಪಡಿಸುತ್ತೇವೆ"

ಸೇಂಟ್ ಜಾರ್ಜ್ ಆಸ್ಪತ್ರೆ, ಕ್ವಿಬೆಕ್

ನ್ಯೂಫೌಂಡ್‌ಲ್ಯಾಂಡ ಆಸ್ಪತ್ರೆಯಿಂದ ಈಚೆಗೆ ಬಂದಿರುವ ಕಾಗದವು ಈ ರೀತಿಯಾಗಿ ಹೇಳುತ್ತದೆ —

"ಪೆರೂನಾವು ನಮಗೆ ಎಷ್ಟು ತೃಪ್ತಿಯನ್ನು ಕೊಟ್ಟಿತೋ ಮೂರು ವಾರಗಳ ಕೆಳಗೆ ನಿಮಗೆ ಬರೆದು ತಿಳಿಸಿರುತ್ತೇನೆ. ಅದನ್ನು ಶೀತ, ವಾತ, ಕೆಮ್ಮು, ಅರತಲೆನೋವು ಈ ಮೊದಲಾದ ರೋಗಗಳಿಗೆ ಪ್ರಯೋಗಮಾಡಬಹುದೆಂದು ಶಿಫಾರಸು ಮಾಡುತ್ತೇವೆ.

"ನಾನು ಅದನ್ನು ಶಕ್ತಿಪುಷ್ಟಿಗಾಗಿ ಸೇವಿಸಿರುತ್ತೇನೆ ಅದರಲ್ಲಿ ಹೇಳಿರುವ ಪ್ರಕಾರ ಪ್ರತಿ ಅರ್ಧಗಂಟೆಗೂ ಅರ್ಧ ಚಮಚದಷ್ಟು ತೆಗೆದುಕೊಂಡೆನು"

ಮಿಸೆಸ್ ಎಟ್ಟಾ ಬೂಕರ್, ಪಂಪರ್ಡ್, ಸೌತ್, ಎನ್ ಡಬ್ಲ್ಯು ಟಿ., ಕೆನಡಾ ಈಕೆ ಬರೆಯುವುದೇನೆಂದರೆ.—

"ನಾನು ಕಿಬ್ಬೊಟ್ಟೆಯಲ್ಲಿ ಶೀತವಾಯು ಹಿಡಿದು ಬಾಧೆಪಡುತ್ತಿದ್ದು, ಕಡೆಗೆ ಡಾಕ್ಟರ್ ಹಾರ್ಟ್‌ಮನ್‌ರವರಿಗೆ ಬರೆದು ಕೇಳಿದೆನು ಅವರು ಹೇಳಿದ ಪ್ರಕಾರ ಔಷಧವನ್ನು ತೆಗೆದುಕೊಳ್ಳುತ್ತಾ ಬಂದೆನು ಈಗ ಆ ಕಷ್ಟಕರವಾಗಿದ್ದ ಬಾಧೆಯು ನನಗೆ ನಿವಾರಣೆಯಾಗಿ ಸೌಖ್ಯವಾಗಿದ್ದೇನೆ ಮತ್ತು ನಾನು ಅದಕ್ಕಾಗಿ ತುಂಬಾ ಕೃತಜ್ಞಳಾಗಿರುವೆನು ಪೆರೂನಾವು ಶೀತವಾಯುವಿಗೆ ಸರ್ವೋತ್ತಮವಾದ ಔಷಧವೆಂದು ನಾನು ತಿಳಿದಿದ್ದೇನೆ ಈಗ ನನಗಿರುವಷ್ಟು ದೇಹಸೌಖ್ಯವು ಹಿಂದೆ ಯಾವಾಗಲೂ ಇರಲಿಲ್ಲ."

ಪೆರೂನಾವು ಕೆಮ್ಮನ್ನು ಶೀತವಾತಗಳನ್ನೂ ಪ್ರಾರಂಭದಲ್ಲೇ ಬೇಗನೆ ಗುಣಮಾಡುವುದಲ್ಲದೆ ಬಹಳ ದೀರ್ಘಕಾಲದ ಶೀತವಾತ ರೋಗಗಳನ್ನೆಲ್ಲಾ ಚನ್ನಾಗಿ ವಾಸಿಮಾಡಬಲ್ಲದು.

ಆದರೂ ರೋಗ ಹುಟ್ಟಿದ ಪ್ರಾರಂಭದಲಿ ಬಹಳ ಸ್ವಲ್ಪ ಔಷಧವನ್ನು ಸೇವಿಸಿದ ಮಾತ್ರಕ್ಕೇ ಅದು ನಿವಾರಣೆಯಾಗುತ್ತದೆಂತಲೂ ರೋಗವು ಹಳೆದಾದ ಮೇಲೆ ಬಹಳ ಔಷಧವನ್ನು ಸೇವನೆ ಮಾಡಬೇಕಾಗುತ್ತದೆಂತಲೂ ನಾವು ಹೇಳಬೇಕಾದ ಅಗತ್ಯವಿಲ್ಲ

ಈ ಔಷಧ ಸಿಕ್ಕುವ ಸ್ಥಳಗಳು:—

(೧) ಹಿಚ್‌ಕಾಕ್ ಅಂಡ್ ಸನ್ಸ್, ಬೆಂಗಳೂರು.

(೨) ಇಂಗ್ಲಿಷ್ ಡಗ್ರ್ ಕಂಪನಿ, ೩೯೪ ಮಿಂಟ್ ಬೀದಿ, ಮದರಾಸ್.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸಿ...

31—5—1907 ರಿಂದ 7—6—1907 ರ ವರೆಗೆ

ಸ್ಥಳ	ಪ್ಲೇಗ್ ಹಗಲಿ ದ್ದು.	ಪ್ಲೇಗ್ ಸತ್ತದ್ದು.	ಕಾ... ಹಗಲಿ ದ್ದು.
ಬೆಂಗಳೂರು ಪಟ್ಟಣ	5	6	0
ಮೈಸೂರು "	2	1	0
ಬೆಂಗಳೂರು ಡಿಸ್ಟ್ರಿಕ್ಟು	54	36	0
ಮೈಸೂರು "	33	13	85
ಕೋಲಾರ್ "	0	0	5
ಕೋಲಾರ್ ಚಿನ್ನದ ಗಣಿಗಳು	7	6	0
ತುಂಕೂರು ಡಿಸ್ಟ್ರಿಕ್ಟು	0	0	7
ಹಾಸನ "	0	0	128
ಚಿತ್ರದುರ್ಗ "	0	0	3
ಕಡೂರ್ "	5	4	0
ಶಿವಮೊಗ್ಗ "	4	4	0
ಜುಮ್ಲಾ	100	70	231

ಶಾಲಿವಾಹನ ಶಕ ವರುಷಂಗಳು ೧೮೩೦ ನೇ ಪ್ಲವಂಗನಾಮ... ತ್ಸರದ ಜೇಷ್ಟ ಶುದ್ಧ ನವಮಿ ಗುರುವಾರದಿಂದ ಜೇಷ್ಟ ಬಹುಳ... ಮಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೭ ನೇ ಇಸವಿ ಜೂನ್.

ತಾ.	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ
20	ಗುರು	ನವಮಿ	20 36	ಸ್ವಾ	20 18
21	ಶುಕ್ರ ‡	ದಶಮಿ	15 7	ಚಿ	20-28
22	ಶನಿವಾ ¶	ಏಕಾದಶಿ	14-48	ಸ್ವಾ	18-46
23	ರವಿವಾ †	ದ್ವಾದಶಿ	10-22	ವಿ	16 2
24	ಚಂದ್ರ ,,	ತ್ರಯೋದಶಿ	5-26	ಅನು	51 22
25	ಕುಜ *	ಪೌರ್ಣಮಿ	53-50	ಜೇಷ್ಟ	9-37
26	ಬುಧ	ಪಾಡ್ಯಮಿ	47-32	ಮೂಲ	5-28

‡ ಏಕಾದಶಿ ತಿಥಿ ದಶವಿಧ ಹಾಹುಕರ ದಶಮಿ ¶ ಸರ್ವ... ದಶಿ, ಕೂರ್ಮಜಯಂತಿ. ಶ್ರೀಮನ್ಮಹಾರಾಜರವರ ವರ್ಧಂ... ಗ್ಯಯೋಗ, ಪ್ರದೋಷ, ಉತ್ಪಾತಯೋಗ ;, ಕಟಕಾಯನ ... ರವಿ * ಭೌಜ್ಯಮಾವ್ಯಾದಿ, ಭೂಮಿಪೂರ್ಣಿಮಾ

ಪೇಟೇ ಧಾರಣೆ.

ದಿನಸಿ	ಮೈಸೂರು.	ಬೆಂಗ...
ಕಬ್ಬೀ ಅಕ್ಕಿ ಪಲ್ಲಾ ೧ಕ್ಕೆ	೧೨-೮-೦	
ಕಂಬುತಿ ಅಕ್ಕಿ ...	೧೩-೪-೦	
" ...	೧೨-೮-೦	೧...
ಜಾಪಾನೀ ಅಕ್ಕಿ	೧೨-೯-೦	
ಸಣ್ಣಕ್ಕಿ ಅವಲ್	೧೫-೦-೦	
" ದುಂಡು	೧೪-೮-೦	
ತೊಗರೀ ಬೇಳೆ ಪಲ್ಲಾ ೧ಕ್ಕೆ	೧೩-೮-೦	
" ದುಂಡು	೧೨-೧೨-೦	
ಹುರಿಗಾಗಿ ಪಲ್ಲಾ ೧ಕ್ಕೆ	೩-೮-೦	
ರಾಗಿ	೫-೮-೦	
ಜೋಳ	೭-೮-೦	
ಹಲಸಂದೆ ಪಲ್ಲಾ ೧ಕ್ಕೆ	೧೧-೦-೦	
ಬಿಳೀ ಅವರೆ	೮-೪-೦	
ಹೆಸರು	೧೧-೮-೦	
ಉದ್ದು	೧೨-೮-೦	
ಕಡಲೆ	೧೧-೮-೦	
ಎಳ್ಳು ಸೆ. ೧೨೩ ಕ್ಕೆ	೨೨-೮-೦	
ಹುರಳಿ	೩-೩-೦	
ಹರಳು ೧೨೩ ಸೇರಿಗೆ	೧೫-೦-೦	
ಸೀಗೇಕಾಯಿ ಮಣ ೧ಕ್ಕೆ	೨-೪-೦	
ಮೆಣಸಿನಕಾಯಿ	೩-೪-೦	
" ದುಂಡು	೧೦-೮-೦	
ಬೆಲ್ಲ ದೊಡ್ಡ ಅಚ್ಚು	೩-೮-೦	ಮ...
ಒಳ್ಳೆಣ್ಣೆ ಮಣ ೧ಕ್ಕೆ	೫-೩-೦	
ಹರಳೆಣ್ಣೆ "	೫-೮-೦	
ಕೊತ್ತುಂಬರಿ ಪಲ್ಲಾ ೧ಕ್ಕೆ	೩-೨-೦	
ಉಪ್ಪು "	೫-೩-೦	
ಹುಣಸೇ ಹಣ್ಣು	೧-೩-೦	
" ಹಳೇದು	೦-೧೪-೦	
ತುಪ್ಪ ಮಣ ೧ಕ್ಕೆ	೧೪-೮-೦	
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ	೫-೦-೦	
ತೆಂಗಿನಕಾಯಿ ೧೦೦ ಕ್ಕೆ	೮-೮-೦	
ಅಳಲೇಕಾಯಿ ಮಣ ೧ಕ್ಕೆ	೧-೦-೦	
ಅಂಟುವಾಳದ ಕಾಯಿ ಮಣ ೧ಕ್ಕೆ	೦-೧೨-೦	
ಚಿನ್ನ (ಪೌನ್) ಕೆಂಪು	೧೫-೪-೦	
" " ಪಸಿಮೆ	೧೫-೧೧-೦	
" " ಗಟ್ಟಿ ತೊಲ ೧ಕ್ಕೆ	೨೩-೧೨-೦	
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	೮೫-೦-೦	

Printed and Published by the Rev. ... Thomson, M. A., Proprietor and Manager, W... Mission Press, Mysore. 20/6/1907

REGISTERED
M. 20.

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಕ್ರಯ ೧ ದುಡ್ಡು. | ಕ್ರಯ ೧ ದುಡ್ಡು.

ಸಂಪುಟ ೨೧ | ಮೈಸೂರು—ಸನ್ ೧೯೦೭ ನೇ ಇಸವಿ ಜೂನ್ ತಾರೀಖು ೨೭ ನೇ ಗುರುವಾರ. | ಸಂಚಿಕೆ ೪

WILLIAM & CO., BOMBAY.

ವಿಲಿಯಂ ಮತ್ತು ಕಂಪೆನಿ, ಫೋರ್ಟು, ಮುಂಬಯಿ.

ಗಜಕರ್ಣದ ಮುಲಾಮು.

27 16

ಇದನ್ನು ಹಾಗಿಸುವದರಿಂದ ಎಲ್ಲಾ ತರ ಕಜ್ಜಿಯು ನಾಶವಾಗುವದು. ಮೂರು ಸಾರಿ ಹಾಗಿಸುವದರೊಳಗೆ ಗಜಕರ್ಣವು ಹೋಗುವದು. ಇದನ್ನು ಹಚ್ಚಿದಲ್ಲಿ ಉರಿ ಯು ಬರುವದಿಲ್ಲ ಚರ್ಮ ಕಪ್ಪಾಗುವದಿಲ್ಲ.

ಇದರಿಂದ ಗುಣ ಕಂಡುಬರುವದಿಲ್ಲವಾ ದರೆ ಹಣ ಹಿಂತಿರುಗಿ ಕೊಡಲ್ಪಡುವದು ತ್ವರೆಮಾಡಿರಿ! ಕೊಂಡುಕೊಳ್ಳಿರಿ!! ಕ್ರಯ ಕಮ್ಮಿ. ಒಂದು ಸಾರಿ ಪರೀಕ್ಷಿಸಿ ನೋಡಿರಿ!!! ಡಬ್ಬಿ ಒಂದಕ್ಕೆ ಕಿಮ್ಮತ್ತು ೦-೬-೦. ವಿ. ಪಿ. ೦-೧೦-೦.

ಅಮೃತಾಂಜನ

ಬಾಟ್ಲಿ ಒಂದಕ್ಕೆ ಕಿಮ್ಮತ್ತು ೮ ಆಣೆ. ವಿ. ಪಿ. ೧೨ ಆಣೆ.

ಜಖಂ ಮತ್ತು ಘಾಯ, ವಾತ, ಎದೆನೋವು, ಗಂಟ್ಲುನೋವು, ಶಿರೋಭಾರ, ಸಂಧಿವಾತ, ತಲೆನೋವು, ಮೂಲವ್ಯಾಧಿ, ಶೀತ, ಕೆಮ್ಮು, ಈ ಎಲ್ಲಾ ತರದ ರೋಗಕ್ಕೆ **ಅಮೃತಾಂಜನವು** ಒಂದು ದಿವ್ಯವಾದ ಔಷಧವಾಗಿರುತ್ತದೆ. ಇದರಿಂದ ಗುಣ ಕಂಡುಬರುವದಿಲ್ಲವಾದರೆ ಹಣ ತಿರುಗಿ ಕೊಡಲ್ಪಡುವದು. ತ್ವರೆ ಮಾಡಿರಿ! ಮೂವತ್ತು ವರ್ಷದಿಂದ ಅನುಭವಿಸುವ ವಾತದ ನೋವು ನಿಮ್ಮ ಒಂದೇ ಬಾಟ್ಲಿ **ಅಮೃತಾಂಜನದಿಂದ** ಪೂರ್ಣವಾಗಿ ಗುಣ ಸಿಕ್ಕಿತು. ದಯಮಾಡಿ ೧೨ ಬಾಟ್ಲಿ ವಿ. ಪಿ. ಮೂಲಕ ರವಾನಿಸಿರಿ ವೆ. ರಾಮಭಟ್ಟ, ವಿಟ್ಲ, ದ. ಕನ್ನಡ.

ನಾನು ನನ್ನ ಸ್ನೇಹಿತರೂ **ಅಮೃತಾಂಜನವನ್ನು** ಬಹಳವಾಗಿ ಪ್ರೀತಿಸುತ್ತೇವೆ. ಸುರಾಜಪ್ಪನಾಡ, ಪಂಜಾಬು **ಅಮೃತಾಂಜನ**ದಂತೆಲೂ ಹೆಚ್ಚು ಉಪಯೋಗ ಉಳ್ಳ ಮುಲಾಮು ಬೇರೆ ಯಾವದೂ ಇಲ್ಲ. ಗಂಗಾಸೇವಕ, ಕಲ್ಕತ್ತಾ; ಆರು ವರ್ಷದಿಂದ ವಾತಪೀಡಿತನಾದ ನನ್ನ ಗೆಳೆಯನಿಗೆ **ಅಮೃತಾಂಜನವು** ಜೀವದಾನ ಕೊಟ್ಟಿತು. ರಾಮಚಂದ್ರರಾವ್. **ಅಮೃತಾಂಜನವು** ಸಾವಿರಾರು ಜನರಿಗೆ ಜೀವಕೊಟ್ಟಿರುತ್ತದೆ ವೀರಭದ್ರಪ್ಪ, ತುಮಕೂರು

ಸಂಜೀವನದ ಹಾಗಿರುವ **ಅಮೃತಾಂಜನವನ್ನು** ನನ್ನ ಮನೆಯಲ್ಲಿ ಸದಾಕಾಲ ಇಟ್ಟಿದ್ದೇನೆ. ಹನುಮಯ್ಯ, ಬೆಂಗಳೂರು ನಿಮ್ಮ **ಅಮೃತಾಂಜನವು** ಎಂಥಾ ಕಠಿಣವಾದ ತಲೆನೋವನ್ನಾದರೂ ನಿಲ್ಲಿಸುತ್ತದೆ. ಗಂಗಣ್ಣರಾವ್, ಕೊಡಗು

ಸುಂದರೀ ತೈಲ ೪ ಆಣೆ. ವಜ್ರಗುಟಿಕ, ರೂಪಾಯಿ ೧ ದಂತಮಂಜನ ೩ ಆಣೆ. ನೇತ್ರಾಂಜನ ೪ ಆಣೆ ಕಫಹಾರಿ ೧ ರೂ ೪ ಆ. ಕ ಸ್ತೂರಿ ಮಾತ್ರೆ ೧೦ ಆ. ಕೇಶವರ್ಧಿನೀ ತೈಲ ೧ ರೂ. ಕಜ್ಜಿಮುಲಾಮು ೩ ಆಣೆ. ಕುಸುಮಾರಿ ಗುಟಿಕೆ ೧ ರೂ. ತಾಂಬೂಲ ಗುಟಿಕೆ ೮ ಆಣೆ

ವಿಲಿಯಂ ಮತ್ತು ಕಂಪೆನಿ, ೧೬ ಓಕ್ ಲೇನ್, ಫೋರ್ಟು, ಮುಂಬಯಿ.

ಟೆಲಿಗ್ರಾಫು ಅಡ್ರೆಸು; "ಅಮೃತಾಂಜನ" ಮುಂಬಯಿ.

ನಿಮಗೆ ನೋವು ಇದೆಯೋ?

68-5

ಹಾಗಾದರೆ "ಕ್ಲಮೆಂಟ್ ಯವರ ಮ್ಯಾಜಿಕ್ ಬಾಂ" ನ್ನು ಏಕೆ ಉಪಯೋಗಿಸಬಾರದು? ಆಶ್ಚರ್ಯಕರವಾದ ಬಾಧಾಪಹಾರಿ ಇದು! ಈಗಿನ ಶತಮಾನದಲ್ಲಿ ಕಂಡು ಹಿಡಿದ ದೊಡ್ಡ ನೂತನವು!

ಈ ರಾಜ ಔಷಧವನ್ನು ಹೊಟ್ಟೆ ನೊದಲು ತೊಡೆಯುತ್ತಲೆ ಕೆಲವು ನಿಮಿಷಗಳೊಳಗಾಗಿ ನರ ಮತ್ತು ಮಾಂಸ ಸಂಬಂಧವಾದ ಪಾರ್ಶ್ವ ನೋವು, ಕೀಲುಗಳ ಬಾಧೆ, ಕಿಬ್ಬೊಟ್ಟೆ ನೋವು, ಬೆನ್ನು ಳೆಯುವದು, ತಲೆನೋವು, ಕೆಮ್ಮು, ಕೀಲುಗಳು ಕತ್ತರಿಸುವದು, ಕೊರಳು ಊತ, ಕೈಕಾಲು ಒಡೆತ ಇವುಗಳನ್ನೆಲ್ಲಾ ವಿದ್ಯುಚ್ಛಕ್ತಿಯಂತೆ ಗುಣಪಡಿಸುವದು ಈ ಔಷಧವು ಆಶ್ಚರ್ಯಕರವಾಗಿ ಗುಣಪಡಿಸುವದರಿಂದ ಎಲ್ಲರಲ್ಲಿಯೂ ಪ್ರಸರಿಸುತ್ತಾ ಬರುವದು. ಇತರ ಔಷಧಿಗಳು ಗುಣಪಡಿಸದೆ ಹೋದಾಗ ಡಾಕ್ಟರ್ ಫೀಜನ್ನು ಕಡಿಮೆಮಾಡಿ ಇದು ನಿಸ್ಸಂದೇಹವಾಗಿಯೂ ಗುಣಪಡಿಸುವದು.

ಕ್ರಯ.—೧ ಬಾಟ್ಲಿಗೆ ೧೨ ಆಣೆ, ಪೋಸ್ಟೇಜ್ ೪ ಆಣೆ. ೬ ಬಾಟ್ಲಿಗೆ ಅಂಚೆವೆಚ್ಚ ಸೇರಿ ರೂ. ೨—೪ ಆಣೆ. ಎಲ್ಲಾ ಕೆಮಿಸ್ಟ್ ಷಾಪುಗಳಲ್ಲಿ ದೊರೆಯುವದು

ನಮ್ಮ ವಿಳಾಸ:—ಎಫ್. ಡಬ್ಲಿಯು. ಆರ್ಕ್,
ಸಿಮೆಟ್ರಿ ರೋಡ್, ವೇಪೇರಿ, ಮದರಾಸ್.

ಜ್ವರಹರಿ.

47-9



ಇದು ಸಾಧಾರಣ ಜ್ವರ, ಚಳಿಜ್ವರ, ಮೊರೇಜ್ವರ, ವಿಷಮಜ್ವರ ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮುಜಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್. ಟಿ. ವೆಂಕಟಪತಿ ಅಯ್ಯ ಅವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಡೋಸಿನ ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚನ್ನಾಗಿ ಗುಣ ಹೊಂದಿರುವರು, ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವ ಕಾರಣ ದಯವಿಟ್ಟು ಇನ್ನೊಂದು ೨೦ ಡೋಸಿನ ಸೀಸೆಯನ್ನು ವಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ:—ಸೀಸೆ ೧ ಕ್ಕೆ ೮ ಆಣೆ, ೧ ರೂ, ೧—೮ ರೂ., ರೂ. ೨—೧೨ ಆ., ೧೦ ರೂ.; ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

****

ಓಮಂ ಕರ್ಪೂರ

ಈ ಔಷಧವು ಅಜೀರ್ಣ ಶೀತಭೇದಿ, ಸಾಧಾರಣ ಹೊಟ್ಟೆಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳು ಬಂದಾವರ್ತ ಸರಿಗೆ ಆಗುವಾಗ್ಯೆ ಹೊಟ್ಟೆನೋವು ಮುಂತಾದ ಕಷ್ಟಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ಪರವು ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ಸಿಗುವದು.

ಕಾಪಾದ ಅಸಿಸ್ಟೆಂಟ್ ಸರ್ಜನ್ ಗೋಪಾಲಯ್ಯನವರು— ಹೆಪ್ಪಿನ ಓಮಂ ಕರ್ಪೂರವನ್ನು ನಾನೂ ನನ್ನ ಜತೆಯವರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರ್ಷಗಳಿಂದಲೂ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಷ್ಠರಿಗೆ ಉಪಯೋಗಿಸಿ ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧ ವೆಂದು ಬರೆದಿದ್ದಾರೆ

ಈ ಎರಡು ಔಷಧಗಳೂ ಊರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ:—
ಪೆನಿನ್ಸುಲರ್ ಸೌತ್ ಇಂಡಿಯಾ ಔಷಧಗಳ ಕಂಪೆನಿ,
ಲೇಕ್‌ಹಾ ಸ್ಟೀಟ್ ಬ್ಲ . . ಮದ್ರಾಸ್

ಇಲ್ಲಿನೋಡಿ!

22-10

ತುಮಕೂರು ಡಿಸ್ಟ್ರಿಕ್ಟ್ ಇಲಾಖೆಯಲ್ಲಿ, ಯೂರೋಪಿಯನ್ ಮೇಲ್ವಿಚಾರಣೆಯಿಂದ, ಉತ್ತಮ ತರದ ಹಾಸನದ ಟೋಪಿಗಳು ಅತಿ ಕಷ್ಟವಾದ ಕೂಲಿದಾರರಿಂದ ತಯಾರಾಗುತ್ತವೆ ಕ್ರಯ ೧೦ ಆಣೆ ಯಿಂದ ೧ ರೂ ೧೨ ಆಣೆವರಿಗೂ ದೊರಕುವವು ಅಪೇಕ್ಷಿಸುವವರಿಗೆ ಮಾದರಿ ಪಟ್ಟಿಯನ್ನು ರವಾನಿಸುವೆವು ವಿಳಾಸ.— ಮೇನೇಜರ್, ಹಾಸನದ ಟೋಪಿ ಕಾರ್ಖಾನೆ, ಡಿಸ್ಟ್ರಿಕ್ಟ್ ಇಲಾಖೆ, ತುಮಕೂರು.

ವ್ಯವಹಾರ ನಿರ್ಣಯ

ಲಾ

೦೭. ಕನ್ನಡ | ಪುಸ್ತಕವು

31 7

ಲಾ ತಿಳಿದವರಿಂದಲೂ, ತಿಳಿಯದವರಿಂದಲೂ ಇದುವರೆಗೆ ಬರೆಯಲ್ಪಟ್ಟಿರುವ ಈ ತೆರದ ಪುಸ್ತಕಗಳನ್ನೆಲ್ಲ ನೋಡಿ ಅವೆಲ್ಲಕ್ಕಿಂತಲೂ ಹೆಚ್ಚು ಉಪಯೋಗವನ್ನು ಇದೊಂದು ಪುಸ್ತಕದಿಂದುಂಟುಮಾಡಬೇಕೆಂದು ಈ ದೊಡ್ಡ ಗ್ರಂಥವು ಹೊಸದಾಗಿ ಬರೆಯಲ್ಪಟ್ಟಿದೆ ಇದರಲ್ಲಿ ೧೪ ದಸ್ತಾವೇಜುಗಳು, ೩ ಕೋರ್ಟುಗಳು, ಹಿಂದೂ, ಮಹಮ್ಮದೀಯ ಲಾಗಳು, ಚೀಫ್ ಕೋರ್ಟು ಹೈ ಕೋರ್ಟುಗಳ ಫೈಸಲುಗಳು, ಗೌರ್ನಮೆಂಟ್ ಸರ್ಕ್ಯುಲರುಗಳು ಪ್ರೊಸೀಡಿಂಗ್ಸ್‌ಗಳು, ಸಕಲ ವಿಧ ವ್ಯವಹಾರಗಳು, (ಕ್ರಯ ದಾನ ವಿಲ್ಲು ಮೊದಲಾದ) ೩೯ ತೆರದ ದಸ್ತಾವೇಜುಗಳ ನಮೂನೆಗಳು ಈ ಸಂಬಂಧದ ಲಾ ವಿಧಿಗಳು, ಸಿವಲ್ ಕ್ರಿಮಿನಲ್, ಪೊಲೀಸ್, ರೆವಿನ್ಯು ಸಂಬಂಧದ ವ್ಯಾಜ್ಯಗಳು, ೫೯ ತೆರದ ಅರ್ಜಿಗಳು, ಸಂಬಂಧದ ಲಾ ವಿಧಿಗಳು, ಇವೆಲ್ಲವೂ ಅಡಕವಾಗಿವೆ.

ಪುಸ್ತಕ ದೊಡ್ಡದು. ಪಟಗಳು ಒಟ್ಟು ೪೩೪	ಬೆಲೆ ಕಡಿಮೆ. ಅಂಚೆ ಹಾಸಲು ಸೇರಿ ರೂ. ೧—೮—೦

ಗ್ರಂಥಕರ್ತರು	ಎಂ. ವಾಲ್ಮೀಕಿ ರಾಧ್ಯರು, ೧ನೆ ಗ್ರೇಡ್ ಪ್ಲೀಡರ್, ಶ್ರೀರಾಮಪೇಟೆ, ಮೈಸೂರು.	ಇದೇ ವಿಳಾಸ.

ಪಾಳ್ಯದ ವೆಂಕಟಾಚಲ ಪಂಡಿತ, ಶ್ರೀಸೀತಾರಾಘವ ವೈದ್ಯಶಾಲಾ, ಕೊಳ್ಳೇಗಾಲ, ಇವರ ಸಿದ್ಧೌಷಧಗಳು.

26-19

೧. ಶೋಕಾಮಯಹರ ಕಸ್ತೂರೀ ಮಾತ್ರೆ.—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ



ಚಳಿಜ್ವರ, ಜ್ವರ, ಹೊಟ್ಟೆಶೂಲೆ, ಸಂದುಗಳ ನೋವು, ಮೈ ಕೈಕಾಲು ಸೆಳೆತ (ಭಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲು ನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನು ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ

ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಖಾಯಿಲೆಗೂ ದಾರಿಕೊಡದೆ, ನೀರು ಜವಾಗಳ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ

ಸ್ತ್ರೀಯರ ಋತುಶೂಲೆ, ಮಕ್ಕಳ ಹೆಕ್ಕು, ಜ್ವರ, ಸನ್ನಿಜ್ವರ, ಕೃತ್ಯಗಳನ್ನು ಗುಣಪಡಿಸುತ್ತದೆ

ಇವನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ ಒಳ್ಳೇ ಶಕ್ತಿವರ್ಧಕವಾಗಿದೆ.

೨೦ ಮಾತ್ರೆಯುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು ೧ ರಿಂದ ೧೨ ಕುಪ್ಪಿ ವರೆಗೆ ಪೋಸ್ಟೇಜು ೪ ಆಣೆ.

ವಿಳಾಸ—ಎಸ್. ಎಸ್. ಆರ್. ವೈದ್ಯಶಾಲಾ,
ಲಕ್ಷ್ಮೀವಿಲಾಸ ರೋಡ್, ಮೈಸೂರು

ತರಿಸಿಕೊಳ್ಳಿ! ಬೇಗ ತರಿಸಿಕೊಳ್ಳಿ!! ಇದೇ ಒಳ್ಳೇ ಸಮಯ!!!

11 1

ತಡಮಾಡಿದರೆ ಪ್ರತಿಗಳು ಮುಗಿದುಹೋದಾವು.

ನೇತ್ರಾನಂದಕರಗಳಾದ ಚಿತ್ರಗಳಿಂದಲೂ, ನೀತಿರಸ ಪ್ರಧಾನವಾದ ವಿಷಯಗಳಿಂದಲೂ ರಂಜಿಸುವದಲ್ಲದೆ, ಸಕಲ ಜನಗಳೂ ಪಡೆಯತಕ್ಕಷ್ಟು ಸುಲಭವಾದ ಕ್ರಯಕ್ಕೆ ಸಿಕ್ಕುವವುಗಳಾಗಿಯೂ ಇವೆ. ಇವುಗಳು ಯಾವವೆಂದರೆ.—

	ಕ್ರಯ
ಎಡ್ವರ್ಡ್ ಚಕ್ರವರ್ತಿಯವರ ಮತ್ತು ಅಲೆಕ್ಸಾಂಡ್ರ ಚಕ್ರವರ್ತಿನಿಯವರ ಚರಿತ್ರೆ .. .	೦—೬—೦
ಎಡ್ವರ್ಡ್ ಸಾರ್ವಭೌಮರ ಕಿರೀಟಧಾರಣೆ ..	೦—೨—೬
ಘನತೆಯುಳ್ಳ ಸ್ತ್ರೀಯರ ಚರಿತ್ರೆ ..	೦—೨—೬
ದಕ್ಷಿಣ ಆಫ್ರಿಕವೂ ಅದರ ನಿವಾಸಿಗಳೂ .	೦—೨—೬
ಚೀನಾ ಚಕ್ರಾಧಿಪತ್ಯವೂ ಅದರ ನಿವಾಸಿಗಳೂ .	೦—೨—೬
ಬರ್ಮಾ ದೇಶವೂ ಬರ್ಮಿಯರೂ .	೦—೨—೬
ಪುರಾತನ ಗ್ರೀಕರ ಕಥೆಗಳು	೦—೨—೦
ಪುರಾತನ ರೋಮನರ ಕಥೆಗಳು .	೦—೨—೦
ಪಕ್ಷಿಗಳ ಚಿತ್ರಗಳೂ ಕಥೆಗಳೂ .	೦—೧—೦
ಕ್ರಿಮಿವರ್ಗ ವರ್ಣನೆ . .	೦—೧—೦
ದೇಹವೆಂಬ ವಿಚಿತ್ರವಾದ ನನ್ನ ಮನೆ	೦—೧—೦
ಚಿಕ್ಕವರಿಗೆ ಹೇಳಿದ ಕಥೆಗಳು	೦—೧—೦
ಪ್ರಾಚೀನಕಾಲದ ವಿಲಕ್ಷಣ ಜೀವರಾಶಿಗಳ ವರ್ಣನೆ	೦—೧—೦
ಹೊಗೆ ಗಾಡಿಗಳನ್ನು ಕಲ್ಪಿಸಿದ ಜಾರ್ಜ್ ಸ್ಟೀವೆನ್ಸನ್ ಎಂಬಾತನ ಚರಿತ್ರೆ . . .	೦—೧—೦

ವಿಳಾಸ:—ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

ಇದಕ್ಕೆ ಸಮಾನವಾದ ಪುಸ್ತಕ ಉಂಟೋ ?

ಕನ್ನಡ ಭಾಷೆಯಲ್ಲಿ ಇದುವರೆವಿಗೂ ಇಂಥಾ ಸೊಗಸಾದ ಪುಸ್ತಕವು ಪ್ರಚುರವಾಗಲಿಲ್ಲ. ಸ್ವಲ್ಪ ನೋಡಿ

"ಹಿಂದೂದೇಶ ಪ್ರದಕ್ಷಿಣ"

ಎಂದು ಕರೆಯಲ್ಪಡುವ ಈ ನೂತನ ಪುಸ್ತಕದಲ್ಲಿ ಸುಮಾರು ತೊಂಬತ್ತು ಉತ್ಕೃಷ್ಟವಾದ ಚಿತ್ರಗಳು ಅಡಗಿವೆ. ಹಿಂದೂ ದೇಶದಲ್ಲೆಲ್ಲಾ ಸಂಚಾರ ಮಾಡುವದರಿಂದ ಉಂಟಾಗುವ ಪರಮಾನಂದವನ್ನು ಒಂದು ಸಾರಿ ಈ ಗ್ರಂಥವನ್ನು ಓದುವದರಿಂದ ಹೊಂದಬಹುದು. ಇದು ಮೊದಲನೇ ಸಾರಿ ಪ್ರಿಂಟ್ ಆಗಿದ್ದು ಬಹು ಶೀಘ್ರವಾಗಿ ಎಲ್ಲಾ ಮುಗಿದು ಹೋದವು. ಈಗ ತಿರಿಗಿ ವಿಚಿತ್ರವಾಗಿಯೂ ಉಲ್ಲಾಸಕರವಾಗಿಯೂ ಇರುವ ಪ್ರಸಿದ್ಧವಾದ ಚಿತ್ರಗಳೊಡನೆ ಮುದ್ರಿಸಿರುತ್ತೇವೆ. ಇದರಲ್ಲಿರುವ ಚಿತ್ರಗಳನ್ನು ಸ್ವಲ್ಪ ನೋಡಿ—ಶ್ರೀರಂಗಪಟ್ಟಣದಲ್ಲಿರುವ ಹೈದರಲಿ ಟಿಪ್ಪುಸುಲ್ತಾನರ ಗೋರಿ, ಹುಮಾಯೂನನ ಗೋರಿ, ಹುಗ್ಲಿ ನದಿ, ಕಲ್ಕತ್ತಾ ನಗರ, ಕಲ್ಕತ್ತಾ ಹೈಕೋರ್ಟು, ಕಾಳಿಕಾದೇವತೆ, ಚಂದ್ರನಗರ, ಬಂಗಾಳಿಯರ ಮನೆಗಳು, ಜಗನ್ನಾಥಸ್ವಾಮಿ ಭುವನೇಶ್ವರವೆಂಬ ದೇವಸ್ಥಾನ, ಜಗನ್ನಾಥದ ರಥೋತ್ಸವ, ಕನರಾಕ್ ದೇವಸ್ಥಾನ, ಎವರೆಸ್ಟ್ ಶಿಖರ, ಖಟ್ಮಂಡು ನಗರದ ಒಂದು ಬೀದಿ, ಖಟ್ಮಂಡು ನಗರದ ದೇವಸ್ಥಾನಗಳು, ಜಪಚಕ್ರಗಳು, ಅಂಬಿಗರು ದೋಣಿಯನ್ನು ಎಳೆಕೊಂಡು ಹೋಗುವದು, ಗಯಾದಲ್ಲಿರುವ ಬುದ್ಧನ ದೇವಸ್ಥಾನ, ಔರಂಗಜೇಬನು ಕಟ್ಟಿಸಿದ ಮಸೀತಿ, ಕಾಶೀ ಪುಣ್ಯಕ್ಷೇತ್ರದಲ್ಲಿರುವ ದಶಾಶ್ವಮೇಧಘಟ್ಟ, ಕಾವಿಗಳಿಗೆ ತಿಂಡಿ ಹಾಕುವದು, ಕಾಶೀ ಕ್ಷೇತ್ರದ ದೇವಸ್ಥಾನಗಳು, ಅಲಹಾಬಾದ್ ನಗರ ಮತ್ತು ಅದರ ಕೋಟೆ, ಅಲಹಾಬಾದ್‌ನಲ್ಲಿರುವ ಖುಸ್ರು ಬಾಗ್ ಅರಮನೆ, ಯಮುನಾ ನದಿಯಲ್ಲಿ ಯಾತ್ರಿಕರು ಮುಳುಗುವದು, ಕಾನ್ಪುರದಲ್ಲಿರುವ ಶಿಲಾ ಶಾಸನ, ಕಾನ್ಪುರದ ಹತ್ತರ ಗಂಗಾ ನದಿಯ ಮೇಲೆ ಕಟ್ಟಿರುವ ಸೇತುವೆ, ಲಕ್ನೋ ನಗರದ ರೆಸಿಡೆನ್ಸಿ ಬಂಗಲೆ, ಲಕ್ನೋ ಪಟ್ಟಣದ ಬಾಗಿಲು, ಸರ್ ಹೆನ್ರಿ ಲ್ಯಾವರೆನ್ಸನು, ಗೋಮತಿ ನದಿಯ ಮೇಲಿರುವ ಅರಮನೆ, ಹಿಮಾಲಯದಲ್ಲಿ ಜನರ ಸ್ಥಿತಿ, ಹರಿದ್ವಾರಘಟ್ಟ, ಗಂಗೋತ್ರಿ ದೇವಸ್ಥಾನ, ಹಿಮವತ್ಪರ್ವತಗಳ ಮೇಲಿರುವ ಪಟ್ಟಣ, ಹಿಮಪ್ರವಾಹಗಳು, ಆಗ್ರಾ ಪಟ್ಟಣದ ಕೋಟೆ, ಯಮುನಾ ನದಿಯೂ ದೂರದಲ್ಲಿ ತೋರುತ್ತಿರುವ ತಾಜ್‌ಮಹಲ್ ಗೋರಿಯೂ, ತಾಜ್ ಮಹಲಿನ ಕಲ್ಲಿನಲ್ಲಿ ಕೆತ್ತಿರುವ ಪುಂಡೆ, ಅಕ್ಬರನ ಅರಮನೆ, ಆಗ್ರಾ ಪಟ್ಟಣದ ಮುತ್ತಿನ ಮಸೀತಿ, ಫತ್ತೆಪುರ ಸಿಕ್ರಿಯಲ್ಲಿರುವ ಪಾಂಚ್ ಮಹಾಲ್ ಅರಮನೆ, ರಜಪೂತರು ಭರತಪುರದ ಕೋಟೆ, ಅಳ್ವಾರಿನಲ್ಲಿ ಮಹಾರಾಜ ಭಕ್ತಾವರ್ ಸಿಂಗರ ಗೋರಿ, ದೆಹಲಿ ನಗರದ ದೊಡ್ಡ ಮಸೀತಿ, ಪುರಾತನ ದೆಹಲಿಯ ಬಾಗಿಲು, ರಾಜ ದೇವನು ಸ್ಥಾಪಿಸಿದ ಕಬ್ಬಿಣದ ಸ್ತಂಭ, ನಾದರ್ ಷಹಾನು ದೆಹಲಿ ನಗರದಲ್ಲಿ ಪ್ರಜಾ ಸಂಹಾರವನ್ನು ನೋಡುತ್ತಿರುವದು, ದೆಹಲಿಯ ಬಳಿಯಲ್ಲಿರುವ ಕುಟುಬ್ ಮಿನಾರ್, ಚಾಂದ್ನಿ ಚೌಕವೆಂಬ ಬೀದಿ, ಸಿಂಲಾಕ್ಕೆ ಹೋಗುವ ದಾರಿ, ಸಿಮ್ಲಾ, ಅಮೃತಸರದ ಸುವರ್ಣಾಲಯವು, ಲಾಹೋರಿನಲ್ಲಿರುವ ರಣಜಿತಸಿಂಗನ ಗೋರಿ, ಲಾಹೋರ್ ಪಟ್ಟಣ, ಈ ಮುಂತಾದ ಅನೇಕ ರಮಣೀಯವಾದ ಸ್ಥಳಗಳ ಚಿತ್ರಗಳು ಈ ಪುಸ್ತಕದಲ್ಲಿ ಅಡಗಿವೆ. ಅವುಗಳನ್ನೆಲ್ಲಾ ವಿವರಿಸಲು ಸ್ಥಳವಿಲ್ಲ.

ಪ್ರತಿಯೊಂದು ಅಂಶದ ವಿವರಣೆಯೂ ಬಹು ಪರಿಷ್ಕಾರವಾಗಿದೆ. ದಕ್ಷಿಣ ದೇಶದಲ್ಲಿರುವ ಅನೇಕ ಪ್ರಸಿದ್ಧ ಸ್ಥಳಗಳ ಚಿತ್ರಗಳೂ, ಅವುಗಳ ವಿವರಣೆಗಳೂ ಇದರಲ್ಲಿವೆ. ಪುಸ್ತಕವು ಭಾರವಾಗಿದೆ. ಪುಸ್ತಕದ ಅಚ್ಚು ಮತ್ತು ಬೈಂಡು ಬಹು ಸುಂದರವಾಗಿವೆ. ಇದರ ಕ್ರಯ ಎಂಟೇ ಆಣೆ, ವಿ. ಪಿ. ಪಿ. ಮೂಲಕ ಹನ್ನೊಂದು ಆಣೆಯಾಗುವದು. ಪುಸ್ತಕ ಜಾಗ್ರತೆಯಲ್ಲಿ ಮಾರಾಟವಾಗುತ್ತಿರುವುದರಿಂದ ಕಾವ್ಯಗಳವರುಗಳಿಗೆ ಕೆಳಗೆ ಕಂಡ ವಿಳಾಸಕ್ಕೆ ಬೇಗನೆ ಬರೆದು ತರಿಸಿಕೊಳ್ಳಬೇಕು.

ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು. 48 8

CHAMBERLAIN'S COUGH REMEDY.

ಚೇಂಬರ್ಲೆನ್‌ರವರು ಕಂಡು ಹಿಡಿದ ಕೆಮ್ಮಿನ ಔಷಧವು.

1 26



ಶೀತದ ಕೆಮ್ಮು, ಗಂಟಲು ಗೂರಲು ರೋಗ, ನಾಯಿಕೆಮ್ಮು, ಎಲ್ಲಾ ತರದ ಶೀತ, ಗಂಟಲು ಎದೆಯಲ್ಲಿ ಹುಟ್ಟುವ ಸಮಸ್ತ ವ್ಯಾಧಿಗಳು—ಇವಕ್ಕೆಲ್ಲಾ ಈ ಔಷಧವು ಉಪಾಯವಾಗಿದೆ.

ಆ ಕೆಮ್ಮನ್ನು ಅಲಕ್ಷ್ಯಮಾಡಬೇಡಿ. ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ. ಅದರ ನ್ಯುಮೋನಿಯಾ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವುದು. ತರುವಾಯ ಉಗುಳಿನಲ್ಲಿ ರಕ್ತ ಬೀಳುವುದು ಹಾಗೆಯೇ ಕ್ಷಯರೋಗಕ್ಕೆ ಆಸ್ಪದವಾಗುವುದು.

ಚೇಂಬರ್ಲೆನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟಲಿನಲ್ಲಿ ಶ್ಲೇಷ್ಮ ಕಟ್ಟುವುದನ್ನೂ ಶ್ಲೇಷ್ಮ ಬೀಳುವುದನ್ನೂ ಖಚಿತವಾಗಿ ನಿವಾರಣೆಮಾಡುತ್ತದೆ. ಉಸುರು ಎಳೆಯುವುದು ಕಷ್ಟವಾಗಿದ್ದರೆ ಅದನ್ನು ಸುಲಭಗೊಳಿಸುತ್ತದೆ. ಅಪಾಯಕರವಾದ ಕೆಮ್ಮಿನ ಕಫವನ್ನು ನಿಲ್ಲಿಸಿಬಿಡುತ್ತದೆ. ಎದೆ ಬಿಗಿಯುವಂಥಾ ಕೆಟ್ಟಸ್ಥಿತಿಯು ಸಂಪೂರ್ಣವಾಗಿ ವಾಸಿಮಾಡಬಲ್ಲದು. ಕೆಮ್ಮನ್ನು ಶಮನಮಾಡಿ, ನೀವು ಸುಖವಾಗಿ ನಿದ್ರೆಮಾಡುವಂತೆ ಮನಸ್ಸಿಗೆ ಉಲ್ಲಾಸಕೊಡುತ್ತದೆ.

ಚೇಂಬರ್ಲೆನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪಮಾತ್ರವಾದರೂ ಅಫೀಮು ಸೇರಿಲ್ಲ. ಇದರಿಂದ ಯಾವ ಅಪಾಯವೂ ಇಲ್ಲ.

ಈ ಔಷಧವು ವನಸ್ಪತಿಗಳ ತಯಾರಿ

ಕೈಯಿಂದಮುಟ್ಟದೆ ತಯಾರಾಗಿದೆ

ಎಲ್ಲೆಲ್ಲೂ ಬಿಕರಿಯಾಗುವುದು. ಸಣ್ಣ ಸೀಸೆಗೆ ೧ ರೂಪಾಯಿ ದೊಡ್ಡ ಸೀಸೆಗೆ ೨ ರೂಪಾಯಿ.

ನಮ್ಮ ಏಜಂಟರಿಗೂ ಚಂದಾದಾರರಿಗೂ.

"ವೃತ್ತಾಂತ ಪತ್ರಿಕೆಯ" ಹೊಸ ವರುಷವು ಪ್ರಾರಂಭವಾಗಿರುವುದು. ನಮ್ಮ ಏಜಂಟರ ಮೂಲಕ ಪತ್ರಿಕೆಯನ್ನು ಪಡೆಯತಕ್ಕ ಚಂದಾದಾರರೆಲ್ಲಾ ಅವರಿಗೆ ಜಾಸ್ತಿ ವರುಷದ ಚಂದಾವನ್ನು ಮುಂಗಡವಾಗಿ ಪಾವತಿಮಾಡಿ ಅವರಿಂದ ರಶೀತಿಗಳನ್ನು ಹೊಂದಬೇಕೆಂತಲೂ, ಹಾಗಿಲ್ಲವಾದರೆ ಏಜಂಟರು ಪತ್ರಿಕೆಗಳು ಯಾರಿಗೂ ಕೊಡಲಾಗುವುದಿಲ್ಲವೆಂತಲೂ ಈ ಮೂಲಕ ಶೃತಪಡಿಸುತ್ತೇವೆ. ಈ ತಿಂಗಳ ಆಖೈರಿನೊಳಗಾಗಿ ಏಜಂಟರುಗಳು ಚಂದಾಹಣವನ್ನೆಲ್ಲಾ ಅವಶ್ಯ ಕೂಡಿಸತಕ್ಕದ್ದಾಗಿದೆ.—ಮ್ಯಾನೇಜರ್.

ಇಗೋ ನೋಡಿರಿ ಎಲ್ಲರೂ ಓದತಕ್ಕ ಆಶ್ಚರ್ಯಕರವಾದ ಪುಸ್ತಕ!

"ಅರೇಬಿಯನ್ ನೈಟ್ಸ್ ಅಥವಾ ಯವನ ಯಾಮಿನೀ ವಿನೋದ ಕಥೆಗಳು"

61 1

ಎಂಬ ಮಹಾ ಪ್ರಸಿದ್ಧವಾದ ಪುಸ್ತಕವು ಕನ್ನಡದಲ್ಲಿ ಪ್ರಕಟಿಸಲ್ಪಟ್ಟದೆ. ನಾನೂರು ಎಪ್ಪತ್ತು ಪುಟಗಳುಳ್ಳದ್ದಾಗಿಯೂ, ಆಬಾಲವೃದ್ಧರಿಗೆ ಪ್ರೋತ್ಸಾಹಕರವಾಗಿಯೂ, ಮಹಾ ರಸಿಕವಾಗಿಯೂ, ರಚಿತವಾಗಿರುವ ಈ ಪುಸ್ತಕದ ಅಭಿರುಚಿಯನ್ನು ವಾಚಕರು ಸ್ವಾನುಭವದಿಂದಲೆ ಗ್ರಹಿಸಿ ತಿಳಿದುಕೊಳ್ಳುವರು. ಭಾಷೆಯು ಬಹು ಸರಳವಾಗಿರುವದು. ಪುಸ್ತಕವನ್ನು ಒಂದಾವರ್ತಿ ಓದಿದ ಮೇಲೆ ಅದನ್ನು ಪುನಃ ಓದುವಂತೆ ಅದೇ ಮನಸ್ಸನ್ನು ಆಕರ್ಷಿಸುವುದು.

ಕ್ರಯ ರೂ ೨-೦-೦ ವಿ. ಪಿ. ಪಿ. ಮೂಲಕ ರೂ ೨-೩-೦

ವಿಳಾಸ—ಮ್ಯಾನೇಜರ್,

ಸಿ. ಎಲ್. ಎಸ್. ಬುಕ್ ಡಿಪೋ,

ಮೈಸೂರು.

ಹಿಂದುಸ್ಥಾನದಲ್ಲಿ ಮಕ್ಕಳು

ಬಹಳ ಉಷ್ಣ ರಾಜ್ಯವಾದದ್ದರಿಂದ ನಾನಾ ದೇಹಬಾಧೆಗಳನ್ನು ಸಹಿಸಿಕೊಂಡು ಬೆಳೆಯಬೇಕಾಗಿದೆ.

ಅವರ ಸಣ್ಣ ಸಣ್ಣ ಮೂಳೆಗಳೂ ಮಾಂಸಖಂಡಗಳೂ ಸರಿಯಾಗಿ ಬಲಹೊಂದಿ ಬೆಳೆಯುವುದಕ್ಕೆ ಅವರಿಗೆ ಚಿಕ್ಕಂದಿನಿಂದಲೇ ಬಲಕಾರಿಯಾದ ಸೇವನಾ ಔಷಧವನ್ನು ಕೊಡುವುದು ಅವಶ್ಯಕ

SCOTT'S EMULSION 31-15

(ಸ್ಕಾಟ್ಸ್ ಇಮಲ್ಷನ್)

ಎಂಬೀ ಸೇವನಾ ಔಷಧದಲ್ಲಿ ಮಕ್ಕಳ ಸಮಸ್ತ ಅಂಗಗಳನ್ನೂ ಬಲಪಡಿಸಿ ಬೆಳೆಸುವಂಥಾ ಬಹು ಉತ್ಕೃಷ್ಟವಾದ ಗುಣಗಳಿರುತ್ತವೆ.

ಮೀನುಮನುಷ್ಯ ಇರುವ ಈ ಔಷಧದ ಗುರುತು.

ಇದಕ್ಕೆ ಸಮಾನವಾದದ್ದು ಮತ್ಯಾವುದೂ ಇಲ್ಲ.

ಈ ಔಷಧವನ್ನು ಸೇವನೆ ಮಾಡುತ್ತಾ ಬಂದ ಒಡನೆಯೇ ಅದರ ಗುಣಗಳು ಕಂಡು ಬರುವವು

ಕೈಯಿಂದ ಮುಟ್ಟದೇನೇ ತಯಾರಾದದ್ದು.

ಎಲ್ಲಾ ಔಷಧ ವ್ಯಾಪಾರಸ್ಥರಲ್ಲೂ ಬಿಕರಿಯಾಗುತ್ತಿದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್, ಔಷಧಗಳ ಕಾರ್ಖಾನೆ, ಲಂಡನ್, ಇಂಗ್ಲೆಂಡ್,

SCHOOL BOOKS! SCHOOL BOOKS!

	Rs	A
New English Readers Primer I ...	0	2
" " Primer II ...	0	3
New English First Reader .	0	4
" Second " .	0	6
" Third " . .	0	8
" Fourth " .	0	10
" Fifth " .	0	12
" Sixth " ...	0	12
Primer of English Grammar . .	0	3
Manual of English Grammar ...	0	8
The Way to Health .	0	3
Arithmetical Primer .	0	2
Primer of Geography . .	0	5
Outlines of Geography ..	0	10
Manual of Geography ...	0	14
Chemistry Notes by Romilly H Ingram	1	0

Apply to—

THE MANAGER,

C L S Book Depot,

Mysore C

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

11

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇ! ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿ ಇತರ ಅಂಗಡಿಗಳಲ್ಲೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಅಂಗಡಿಗಳಲ್ಲಿ ಮಾರಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೀಳಾದದ್ದು. ಅವೆಲ್ಲಾ ಹಾಸನದ ಟೋಪಿಗಳೆಂದು ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯಿತಿಯಿಂದಲೇ ಬರುವದು. ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ನೇರಾ ಬರೆದು ತರಿಸಿಕೊಳ್ಳಿ. ಅಗ್ಗದ್ದೂ ಚನ್ನಾಗಿಲ್ಲದ್ದೂ ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ. ಸಾದಾ, ಕೆಂಪು, ಕಪ್ಪು, ಬಿಳಿ, ಕಾಫಿ ಟೋಪಿಗಳು ೧ ರೂ ೮ ಆ, ೧ ರೂ ೬ ಆ, ೧ ರೂ ೪ ಆ.

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ೧ ರೂ ೮ ಆ, ೨ ರೂ. ಜರದ ಟೋಪಿಗಳು ೧ ರೂ. ೦-೮ ಆ ೧ ರೂ. ೮ ಆ.; ೧ ರೂ. ೮ ಸುತಿನ ಟೋಪಿಗಳು ೧ ರೂ. ೮ ಆ, ೧ ರೂ. ೬ ಆ

ಕಾಸಗಿ ಟೋಪಿ, ಸೂರ್ಯ ಮಿಳೊಡು, ಅರ್ಧ ಮೇಲೆ ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು.

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ

ವೃತ್ತಾಂತ ಪತ್ರಿಕೆ

ಸನ್ ೧೯೦೭ನೇ ಇಸವಿ ಜೂನ್ ತಾ॥ ೨೭ನೇ ಗುರುವಾರ

ದೇಶಾಟನೆಯೂ ಸ್ವದೇಶಾಭ್ಯುದಯವೂ

ದೇಶದ ಐಶ್ವರ್ಯಾಭಿವೃದ್ಧಿಗೆ ಕಸಬುಗಳನ್ನು ವಿಶೇಷವಾಗಿಯೂ ವಿಸ್ತಾರವಾಗಿಯೂ ಹೆಚ್ಚಿಸಬೇಕೆಂಬುವದನ್ನು, ಯೂರಪ್ಪಿನ ರಾಜ್ಯಗಳವರು ಹಿಂದುಸ್ಥಾನಕ್ಕಿಂತಲೂ ಈ ಭಾಗದಲ್ಲಿ ಬಹಳ ಅಭಿವೃದ್ಧಿಗೆ ಬಂದಿರುತ್ತಾರೆಂಬುವದನ್ನೂ, ಈ ರಾಷ್ಟ್ರದ ಐಶ್ವರ್ಯವು ಹೆಚ್ಚಬೇಕಾದರೆ ಪಶ್ಚಿಮರಾಜ್ಯಗಳ ಕ್ರಮಗಳನ್ನೇ ಅನುಸರಿಸಿ ಕಸಬುಗಳನ್ನು ಅಭಿವೃದ್ಧಿಪಡಿಸಬೇಕೆಂಬುವದನ್ನೂ ಎಲ್ಲರೂ ಸಹಜವಾಗಿ ಒಪ್ಪಿಯೇ ಒಪ್ಪುವರು. ಹಾಗಾದರೆ ಅಂಥ ಕಸಬುದಾರಿ ವಿದ್ಯೆಗಳನ್ನು ಕಲಿಯುವ ಬಗೆ ಹೇಗೆ? ಇದಕ್ಕೆ ಜರ್ಮಾನಿಯವರು ಮಾಡಿರುವ ಕಾರ್ಯಗಳೇನೆಂದು ವಿಚಾರಮಾಡಿ ತಿಳಿದುಕೊಂಡು, ನಮ್ಮ ದೇಶದವರೂ ಅದರಂತೆ ನಡೆಯಬೇಕಾಗಿರುವುದು. ಜರ್ಮಾನಿಯವರು ಯೂರೋಪಿನ ರಾಜ್ಯಗಳಲ್ಲಿರುವ ಕಸಬುದಾರಿ ವಿದ್ಯಾಬೋಧಕರನ್ನು ಕರಸಿ ನೇಮಿಸಿಕೊಂಡು, ತಮ್ಮ ಜನರಿಗೆ ಸಕಲ ಕೈಗಾರಿಕೆಗಳನ್ನೂ ಕಲಿಸಿಕೊಟ್ಟರು ಮತ್ತು ಅವರು ತಮ್ಮ ವಿದ್ಯಾರ್ಥಿಗಳನ್ನು ಯೂರೋಪ್ಪಿಯನ್ ರಾಜ್ಯಗಳಿಗೆ ಕಳುಹಿಸಿಕೊಟ್ಟು ಕಸಬುಗಳನ್ನು ಕಲಿತು ಬರುವಂತೆ ಮಾಡಿದರು. ಹೀಗೆ ಮಾಡುತ್ತಾ ಬಂದದ್ದರಿಂದ ಅವರು ಈಗ ಕಸಬುಗಳಲ್ಲಿ ಪ್ರವೀಣರಾಗಿರುತ್ತಾರೆ. ತಮಗೆ ಬೇಕಾಗುವ ಹಡಗು ಬಹಜು ಮುಂತಾದವುಗಳನ್ನು ಕೂಡ ತಾವೇ ಮಾಡಿಕೊಳ್ಳುತ್ತಿರುವರು. ತಾವು ತಾವೇ ಅನೇಕ ಕಡೆ ಭಾರೀ ಕಾರ್ಖಾನೆಗಳನ್ನು ಇಟ್ಟು ಕಾಗದ, ಬಟ್ಟೆ, ರೇಷ್ಮೆ ಮೊದಲಾದ ಪದಾರ್ಥಗಳನ್ನೆಲ್ಲಾ ತಯಾರುಮಾಡಿಕೊಳ್ಳುತ್ತಾ ತಮ್ಮ ಸರಕುಗಳನ್ನು ಯೂರೋಪ್ಪಿನ ಕಾರ್ಖಾನೆಗಳಲ್ಲಿ ತಯಾರಾಗುವಂಥಾ ಸರಕುಗಳ ಸಂಗಡ ಇಟ್ಟು ವಿಕರಿಸುವುದಕ್ಕೆ ಪ್ರೈಪೋಟಿಮಾಡುತ್ತಾ ಬಂದಿದ್ದಾರೆ.

ಆದಕಾರಣ ಹಿಂದುಸ್ಥಾನವು ಅಷ್ಟು ಮಟ್ಟಿಗೆ ಅಭಿವೃದ್ಧಿಗೆ ಬರಬೇಕಾದರೆ ಯೂರೋಪ್ಪಿಗೂ ಈ ರಾಷ್ಟ್ರಕ್ಕೂ ಅಂತರ ಎಂದು ಹೋಗುವುದಕ್ಕೂ ಎರಡು ಕಡೆಗಳವರೂ ಸ್ವಾತಂತ್ರವಾಗಿ ಕಲೆಯುವುದಕ್ಕೂ ಯಾವ ಒಂದು ಅಟಂಕಗಳೂ ಇಲ್ಲದಿರಬೇಕು. ಆದರೆ ಸ್ವದೇಶೀ ಕಸಬುಗಳನ್ನು ಬಹಳವಾಗಿ ಅಪೇಕ್ಷಿಸುವವರಲ್ಲಿ ಹಲವರು ಸಮುದ್ರಯಾನಮಾಡುವಂಥಾವರ ವಿಷಯದಲ್ಲಿ ಕೆಲವು ನಿರ್ಬಂಧಗಳನ್ನು ಇಟ್ಟಿರಬೇಕೆಂದು ಕೋರುವರು. ಅಂದರೆ ಅನ್ಯದೇಶಗಳಲ್ಲಿ ಸಂಚಾರ ಮಾಡಿಕೊಂಡು ಬಂದವರು ಪ್ರಾಯಶ್ಚಿತ್ತಮಾಡಿಕೊಳ್ಳಬೇಕೆಂದು ಹೇಳುತ್ತಾರೆ. ಇದರಿಂದ ಈ ರಾಷ್ಟ್ರದ ಕಸಬುಗಳಾಗಲಿ ಶಾಸ್ತ್ರಗಳಾಗಲಿ ಅಭಿವೃದ್ಧಿಹೊಂದುವುದಕ್ಕೆ ಮಾರ್ಗವೇ ಆಗಲಾರದು.

ಈಗಿನ ಕಾಲಕ್ಕೆ ತಕ್ಕ ವಿವೇಕ ನಾಗರೀಕತೆ ಮೊದಲಾದವುಗಳನ್ನು ಕಂಡು ತಿಳಿಯಲಾರದ ಇರುವಂಥಾ ಗುರುಗಳು ಶಾಸ್ತ್ರಿಗಳು ಸಮುದ್ರಯಾನಮಾಡಿ ಬರತಕ್ಕವರು ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕೆಂದು ನಿರ್ಬಂಧಪಡಿಸುವುದೇನೂ ಆಶ್ಚರ್ಯವಾದದ್ದಲ್ಲ. ಆದರೆ ವಿದ್ಯಾವಂತರಾದವರು ಅಂಥಾ ಪ್ರಾಯಶ್ಚಿತ್ತ ಮಾಡಿಸಿಕೊಳ್ಳುವುದಕ್ಕೆ ಸಮ್ಮತಿಸುವುದು ನಿಂದಾರ್ಹವಾಗಿರುತ್ತದೆ. ಆ ಪ್ರಾಯಶ್ಚಿತ್ತವು ಸ್ವಲ್ಪವೂ ಅನಾವಶ್ಯವೂ ಆಗಿರುವುದೆಂದು ಅವರಿಗೆ ಚೆನ್ನಾಗಿ ತಿಳಿದಿರುತ್ತದೆ. ತಮ್ಮ ದೇಶವನ್ನು ಅಭಿವೃದ್ಧಿಗೆ ತರಬೇಕೆಂಬ ಕುತೂಹಲದಿಂದ ದೇಶಾಟನೆ ಮಾಡಿ ಕಸಬುಗಳೇ ಮೊದಲಾದ ಶಾಸ್ತ್ರವಿದ್ಯೆಗಳನ್ನು ಕಲಿತುಕೊಂಡು ಬರುವಂಥಾವರನ್ನು ದೇಶವತ್ಸಲರೆಂದು ತಿಳಿಯಬೇಕಲ್ಲದೆ ಪಾತಕಿಗಳೆಂದು ಎಣಿಸುವುದು ಯೋಗ್ಯವಲ್ಲ.

ಕ್ರೈಸ್ತಮತ ಪರೀಕ್ಷೆ.

ಮತಪರೀಕ್ಷೆ ಎಂಬುವುದು ಸಾಧಾರಣವಾದ ಸಂಗತಿಯಲ್ಲ. ಅನೇಕರು ಮತವೆಂದರೆ ಅವರವರ ವೇದಗಳಲ್ಲಿ ಅಡಕವಾಗಿರುವ ಬೋಧನೆಯೆಂದು ತಿಳಿದುಕೊಂಡಿರುವರು. ಆದರೆ ಗ್ರಂಥಗಳಲ್ಲಿ ಅಡಕವಾಗಿರುವ ಬೋಧನೆಗಳನ್ನು ಶೋಧನೆಗೆ ತರುವುದೇ ಮತವೆಂದು ಹೇಳುವುದರಲ್ಲಿ ಯಾವ ಅಭ್ಯಂತರವೂ ಇರಲಾರದು. ಮತ ತತ್ವಗಳು ಅವುಗಳನ್ನು ಸಾಧಿಸುವವರಿಗೆ ಸಹಾಯಕಾರಿಗಳಾಗಿ ಪರಿಣಮಿಸದಿದ್ದರೆ ಅವುಗಳಿಂದೇನು ಪ್ರಯೋಜನ? ನಿಜಮತ ತತ್ವಗಳು ಎಲ್ಲಾ ವಿಷಯಗಳಲ್ಲಿ ಮನುಷ್ಯಾಭಿವೃದ್ಧಿಗೆ ಕಾರಣಭೂತವಾದವುಗಳಾಗಿರಬೇಕಲ್ಲವೆ? ಅಭಿವೃದ್ಧಿ ಇಲ್ಲದೇ ಹೋದರೆ ಕ್ಷೀಣಗತಿ ಪ್ರಾಪ್ತವಾಗುವುದು ನಿಶ್ಚಯ. ಎಲ್ಲಾ ಕ್ರೈಸ್ತಮತಕ್ಕೂ ಬೇರೆ ಮತಗಳಿಗೂ ಇರುವ ತಾರತಮ್ಯವನ್ನು ಅವುಗಳ ಅಭಿವೃದ್ಧಿಯಲ್ಲಿಯೇ ಕಾಣಬಹುದು. ಕ್ರೈಸ್ತಮತವು ಮುಂದೆ ಲಭಿಸತಕ್ಕಂಥಾ ಸತ್ಫಲಗಳನ್ನೇ ಮುಂದಿಟ್ಟು ಅವುಗಳನ್ನು ಪಡೆಯುವ ಕ್ರಮವನ್ನು ಬೋಧಿಸುವದು. ಇದರಿಂದ ಜನರಲ್ಲಿ ನಿರೀಕ್ಷೆಯೂ ಕಾರ್ಯಸಾಧನೆಯೂ ನೆರವೇರುವುದಕ್ಕೆ ಸಾಧ್ಯವಾಗುತ್ತದೆ. ಕ್ರೈಸ್ತರಾದವರು ಭೂಲೋಕದ ಕಾರ್ಯಗಳು ನೀಚಸ್ಥಿತಿಯಿಂದ ದಿನೇ ದಿನೇ ಉಚ್ಚಸ್ಥಿತಿಗೆ ಬರುತ್ತವೆಂದಲೂ ತ್ರೇತಾಯುಗಕ್ಕೆ ಸಮಾನವಾದ ಯುಗವು ಮುಂದೆ ಬರುವುದೆಂದಲೂ ತಿಳಿದುಕೊಂಡಿರುವರು. ಹಿಂದೂಜನಗಳಾದರೊ ಸತ್ಯವು ಕ್ಷಯಿಸಿ ಪ್ರಜೆಗಳು ಧರ್ಮಮಾರ್ಗವನ್ನು ಬಿಟ್ಟು ದುರ್ವ್ಯಾಪಾರಗಳಲ್ಲಿ ಪ್ರವರ್ತಿಸುವುದು ಈ ಕಲಿಯುಗದಲ್ಲಿ ಸಾಧಾರಣವಾಗಿದೆಯೆಂದು ನಂಬಲಿಸುವರು. ಇದೇ ಅರ್ಥಕ್ಕೆ ಉಪನಿಷತ್ತುಗಳು ಸಹ ಬೋಧಿಸುತವೆ. ವಾಚಕರು ಕ್ರೈಸ್ತರ ವೇದವಾದ ಬೈಬಿಲ್ ಗ್ರಂಥವನ್ನು ಗಮನವಿಟ್ಟು ಓದಿದರೆ ಅಲ್ಲಿ ಜಗದುತ್ಪತ್ತಿಯಿಂದ ಮನುಷ್ಯರೊಳಗೆ ದೇವಜ್ಞಾನವು ಯಾವ ರೀತಿಯಲ್ಲಿ ಅಭಿವೃದ್ಧಿಹೊಂದುತ್ತಿದೆಯೆಂಬುದನ್ನು ನೋಡಬಹುದು. ಹಿಂದೂಮತದಲ್ಲಿ ಬಲಿಗಳನ್ನರ್ಪಿಸುತ್ತಿದ್ದಂತೆಯೇ ಯೆಹೂದ್ಯರು ಸಹ ಬಲಿಗಳನ್ನರ್ಪಿಸುತ್ತಿದ್ದರು. ಆದರೆ ದೇವಾವತಾರಿಯಾದ ಯೇಸುಕ್ರೀಸ್ತನು ಜಗತ್ತಿಗೆಲ್ಲಾ ಯಾಗಬಲಿಯಾಗಿ ಅರ್ಪಿಸಲ್ಪಟ್ಟ ಮೇಲೆ ಕ್ರೈಸ್ತರು ಬೇರೆ ಬೇರೆ ಯಜ್ಞಗಳ ಮೂಲಕ ಪಾಪಪರಿಹಾರವನ್ನು ಹೊಂದಲಪೇಕ್ಷಿಸುವುದಿಲ್ಲ. ಇದನ್ನು ಕುರಿತು ಬೈಬಿಲ್ ಗ್ರಂಥವು ಈ ರೀತಿಯಲ್ಲಿ ತಿಳಿಸುತ್ತದೆ: "ಪುರಾತನಕಾಲದಲ್ಲಿ ದೇವರು ನಾನಾಭಾಗವಾಗಿಯೂ ವಿಧವಿಧವಾಗಿಯೂ ಪಿತೃಗಳಿಗೆ ಪ್ರವಾದಿಗಳ ಮುಖದಿಂದ ನುಡಿದು ಈ ಅಂತ್ಯದಿನಗಳಲ್ಲಿ ನಮಗೆ ತನ್ನ ಮಗನ ಮುಖದಿಂದ ನುಡಿದಿದ್ದಾನೆ. ಈ ಮಗನನ್ನು ಆತನು ಎಲ್ಲಕ್ಕೂ ಬಾಧ್ಯನನ್ನಾಗಿ ನೇಮಿಸಿದನು. ಆತನ ಮೂಲಕವೇ ಜಗತ್ತನ್ನುಂಟುಮಾಡಿದನು. ಈ ಮಗನು ದೇವರ ಪ್ರಭಾವದ ಪ್ರಕಾಶನಾದವನೂ ಆತನ ತತ್ವದ ಮೂರ್ತಿಯಾದವನೂ ತನ್ನ ಶಕ್ತಿವಾಕ್ಯದಿಂದ ಸಮಸ್ತಕ್ಕೆ ಆಧಾರಕೊಡುವವನೂ ಆಗಿದ್ದು, ತಾನೇ ಪಾಪವಿಶುದ್ಧಿಮಾಡುತ್ತಾನೆ." ಮಗುವು ಸಣ್ಣದಾಗಿರುವಾಗ ಅದರ ಬುದ್ಧಿಗೆ ತಕ್ಕಹಾಗೆ ಬೋಧನೆಯನ್ನು ಹೇಳುವುದು ಉಪಾಧ್ಯಾಯನ ಕರ್ತವ್ಯವಾಗಿರುತ್ತದೆ. ಆದರೆ ಅದೇ ಮಗುವು ದೊಡ್ಡದಾಗಿ ಬೆಳೆದು ಯೌವನಸ್ಥನೆನ್ನಿಸಿಕೊಂಡಮೇಲೆ ಅಕ್ಷರಗಳನ್ನು ತಿದ್ದಿಸುವುದಕ್ಕೆ ಬದಲಾಗಿ ಘನತರವಾದ ವಿದ್ಯೆಗಳನ್ನು ಹೇಳಿಕೊಡಬೇಕಲ್ಲವೇ? ಕ್ರೈಸ್ತಮತವು ಮಾನುಷ್ಯಕುಲಕ್ಕೆ ಅದು ಬಾಲ್ಯಾವಸ್ಥೆಯಲ್ಲಿದ್ದಾಗ ಅವಶ್ಯಕವಾಗಿದ್ದ ಆತ್ಮಿಕಜ್ಞಾನವನ್ನು ಕೊಡುವುದಕ್ಕೆ ಬದಲಾಗಿ ಯೇಸುಕ್ರೀಸ್ತನ ಮುಖಾಂತರ ಪ್ರಕಟಿಸಲ್ಪಟ್ಟ ನೂತನನೇಮಜ್ಞಾನವನ್ನು ಕೊಡುತ್ತಿರುವುದು. ಅಸಂಪೂರ್ಣವಾದ ಪುರಾತನ ತತ್ವಗಳನ್ನಾಚರಿಸುವಂತೆ ಕ್ರೈಸ್ತಮತವು ತಿಳಿಸುವದೇ ಇಲ್ಲ. ಕ್ರೈಸ್ತರಲ್ಲಿ ಮಹಾಜ್ಞಾನಿಯಾದ ಪೌಲನು ಈ ರೀತಿಯಲ್ಲಿ ತಿಳಿಸುವನು—ಪೂರ್ವಕಾಲದಲ್ಲಿ ನೀವು ದೇವರ ಜ್ಞಾನವಿಲ್ಲದವರಾಗಿ ಸ್ವಭಾವದಲ್ಲಿ ದೇವರಲ್ಲದವುಗಳಿಗೆ ಅಧೀನರಾಗಿದ್ದಿರಿ. ಈಗಲಾದರೋ ನೀವು ದೇವರನ್ನು ತಿಳಕೊಂಡದ್ದು ಮಾತ್ರವಲ್ಲದೆ ದೇವರು ನಿಮ್ಮನ್ನು ತಿಳುಕೊಂಡಿರಲಾಗಿ ಕೆಲಸಕ್ಕೆ ಬಾರದ ಬಡ ಪ್ರಾಥಮಿಕೋಪದೇಶಕ್ಕೆ ನೀವು ಮತ್ತೂ ಅಧೀನರಾಗಬೇಕೆಂದು ಅಪೇಕ್ಷಿಸಿ ಅವುಗಳಿಗೆ ಪುನಃ ತಿರುಗಿಕೊಳ್ಳುವದು ಹ್ಯಾಗೆ? ಉಪನಿಷತ್ತುಗಳು ಮನುಷ್ಯನಿಗೆ ಹಳೆಯವುಗಳನ್ನು ತೋರಿಸುತ್ತಿರುವಲ್ಲಿ ಕ್ರೈಸ್ತಮತವು "ಇಗೋ ಎಲ್ಲವನ್ನು ಹೊಸದುಮಾಡುತ್ತೇನೆ" ಎಂಬದಾಗಿ ತಿಳಿಸುತ್ತಿರುವುದು.

ಒಳದೇಶದ ವೃತ್ತಾಂತಗಳು

ಮೊನ್ನೆ ಭಾನುವಾರದಿಂದ ರಾಜಧಾನಿಯಲ್ಲಿ ಚಾಮುಂಡಿಬೆಟ್ಟದ ಬಳಿ ಇರುವ ರೇಸಿನಲ್ಲಿ ಕುದುರೆ ಜೂಜುಗಳೂ ಪೋಲೋ ಎಂಬ ಕುದುರೆ ಚಂಡಾಟದ ಪಂದ್ಯಗಳೂ ನಡೆಯುತ್ತಲಿವೆ.

***

ಶ್ರೀನಿವಾಸಪುರದ ತಾಲ್ಲೂಕ್ ಅಮಲ್ದಾರ್ ಮೆ॥ ಎಸ್ ವೆಂಕಟ್ರಮಣ ಶಾಸ್ತ್ರಿಗಳಿಗೆ ಕೊಟ್ಟಿರುವ ಎರಡು ತಿಂಗಳ ರಜವನ್ನು ಸರ್ಕಾರದವರು ಇನ್ನೂ ಹದಿನೈದು ದಿನಗಳಿಗೆ ಜಾಸ್ತಿ ಮಾಡಿರುತ್ತಾರೆ.

***

ಶ್ರೀ ಶೃಂಗೇರಿ ಗುರುಗಳನ್ನು ಮದ್ದೂರಿನಲ್ಲಿ ಎದುರುಗೊಂಡು ಅವರಿಗೆ ಸುಖಾಗಮನವನ್ನು ಬಯಸಿ ಕರೆತರುವುದಕ್ಕಾಗಿ ಡೆಪ್ಯುಟಿ ಕಮಿಷನರ್ ಮೆ॥ ಎಂ ಕಾಂತರಾಜೇ ಅರಸಿನವರು ಅಲ್ಲಿಗೆ ದಯಮಾಡಿದ್ದರು.

***

ಸರ್ಕಾರದವರು ಇನ್ನು ಒಂದೆರಡು ತಿಂಗಳೊಳಗಾಗಿ ರಾಜಧಾನಿಯಲ್ಲಿ ಒಂದು ಹೊಸ ಆಸ್ಪತ್ರೆಯನ್ನು ಆರಂಭಿಸಿ, ಅದರಲ್ಲಿ ಪಶುಗಳ ಮತ್ತು ಕುದುರೆಗಳ ರೋಗಾದಿಗಳಿಗೆ ಚಿಕಿತ್ಸೆ ನಡೆಯುವಂತೆ ಏರ್ಪಾಡು ಮಾಡುವರೆಂದು ಕೇಳುತ್ತೇವೆ.

***

ಬೆಂಗಳೂರ ಬಸವನಗುಡಿಯಲ್ಲಿರುವ ಮಹಾಮಂಡಲದ ಪಾಠಶಾಲೆಯ ಫಂಡಿಗೆ ೧೦೦ ರೂಪಾಯಿಯನ್ನೂ, ಅಲ್ಲಿನ ಶ್ರೀನಿವಾಸಮಂದಿರವೆಂಬ ಅನಾಥಾಲಯದ ಫಂಡಿಗೆ ೧೫೦ ರೂಪಾಯಿಯನ್ನೂ ಶೃಂಗೇರಿ ಗುರುಗಳು ಕೊಡಿಸಿರುತ್ತಾರೆಂದು ಕೇಳುತ್ತೇವೆ.

***

ಬೆಂಗಳೂರು ಪಟ್ಟಣದಲ್ಲೂ ಕೋಲಾರ್ ಚಿನ್ನದಗಣಿಗಳಲ್ಲೂ ಮನೆಮಠ ಅಂಗಡಿಮುಂಗಟ್ಟುಗಳ ಅನುಭವದಾರರು ತಮ್ಮ ಆವರಣದೊಳಗೆ ಇಲಿ ಬಿದ್ದ ಒಡನೆಯೇ ಅಂದರೆ ೨೪ ಘಂಟೆ ಹೊತ್ತಿನೊಳಗಾಗಿ ಆ ಸಂಗತಿಯನ್ನು ಸರ್ಕಾರದವರಿಗೆ ತಪ್ಪದೆ ತಿಳಿಸಬೇಕೆಂದು ಸರ್ಕಾರದವರು ವಿಧಿಸಿರುತ್ತಾರೆ.

ಶ್ರೀಮನ್ಮಹಾ[redacted]ತ್ಸವಕ್ಕಾಗಿ ರಾಜಧಾನಿಗೆ ದಯಮಾಡಿಸಿದ್ದ ಡೆಪ್ಯುಟಿ ಕಮಿಷನರುಗಳೂ, ಸೆಕ್ರೆಟರಿಗಳೂ, ಚೀಫ್ ಕೋರ್ಟ್ ಜಡ್ಜಿಗಳೂ ನೆನ್ನೆ ಮೊನ್ನೆ ತಮ್ಮ ತಮ್ಮ ಸ್ಥಳಗಳನ್ನು ಕುರಿತು ತೆರಳಿದರು. ದಿವಾನರೇ ಮುಂತಾದವರು ಈ ವಾರವೆಲ್ಲಾ ರಾಜಧಾನಿಯಲ್ಲೇ ಇರುತ್ತಾರೆಂದು ತಿಳಿದುಬಂದಿದೆ.

***

ಮೆ॥ ಕೋದಂಡಪಾಣಿ ಮೊದಲಿಯಾರ್ರವರನ್ನು ಬೆಂಗಳೂರು ಪಟ್ಟಣಕ್ಕೂ ಮೆ॥ ಬಿ ಕೃಷ್ಣರಾಯರೆಂಬುವರನ್ನು ರಾಜಧಾನಿಗೂ ಹೆಲ್ತ್ ಆಫೀಸರ್ ಕೆಲಸಕ್ಕೆ ಸರ್ಕಾರದವರು ನೇಮಕಮಾಡಿರುತ್ತಾರೆಂದು ತಿಳಿಯುವುದು. ರಾಜಧಾನಿಯ ರೈಲ್ವೆಸ್ಟೇಷನಲ್ಲಿ ಮಾತ್ರ ಪ್ಲೇಗ್ ಚೆಕ್ ಮಾಡುವ ಮುಂತಾದ್ದನ್ನು ಜಾರಿಯಲ್ಲಿಟ್ಟು, ಇತರ ಉಕ್ಕಡಗಳಲ್ಲಿರುವ ನೌಕರರನ್ನು ವಜಾ ಮಾಡುವರೆಂದು ಕೇಳುತ್ತೇವೆ.

***

ಬೆಂಗಳೂರು ಪ್ರಜೆಗಳು ಹೋದ ವರುಷ ಚಂದಾ ಕೂಡಿಸಿ ಮೆ॥ ಮಾಧವರಾಯರಿಗೆ ಟೌನ್ ಹಾಲಿನಲ್ಲಿ ಒಂದು ಅಡ್ರೆಸ್ಸನ್ನು ಒಪ್ಪಿಸಿದ ತರುವಾಯ ಆ ಫಂಡಿನಲ್ಲಿ ಇನ್ನೂ ಸ್ವಲ್ಪ ಹಣ ಉಳಿದಿತ್ತು. ಈ ಹಣವನ್ನು ದಿವಾನರವರು ಸೂಚಿಸಿದ ಪ್ರಕಾರ ಆ ಪಟ್ಟಣದ ಸಕಲ ಕೋಮುಗಳ ಅನಾಥಶಾಲೆಗಳಿಗೂ ಬಡಬಗ್ಗರಿಗೂ ಹಂಚಿ ಕೊಟ್ಟು, ಮೊನ್ನೆ ಶನಿವಾರ ಶ್ರೀಮನ್ಮಹಾರಾಜರವರ ವರ್ಧಂತಿ ಉತ್ಸವದ ಸಂತೋಷಾರ್ಥವಾಗಿ ಅವರಿಗೆಲ್ಲಾ ಸುಭೋಜನ ಮಾಡಿಸಿದರು.

***

ಶ್ರೀಶೃಂಗೇರಿಸ್ವಾಮಿಗಳು ಪರಿವಾರ ಸಹಿತ ಸಕಲ ಮರ್ಯಾದೆಗಳೊಡನೆ ಮುಂದಿನ ಭಾನುವಾರ ಬೆಳಿಗ್ಗೆ ಶ್ರೀರಂಗಪಟ್ಟಣದ ಮಾರ್ಗವಾಗಿ ರಾಜಧಾನಿಗೆ ದಯಮಾಡುವರು. ಇವರಿಗೆ ಇಲ್ಲಿನ ಸಂಸ್ಕೃತ ಪಾಠಶಾಲೆಯಲ್ಲಿ ಇಳುಕೊಳ್ಳುವುದಕ್ಕೆ ಸ್ಥಳವಸತಿ ಏರ್ಪಾಡುಮಾಡಿದಾರೆ. ಅವರು ದಯಮಾಡುತ್ತಾರೆಂಬ ಶ್ರೀಮುಖವನ್ನು ಇಲ್ಲಿನ ಮಹಾಜನರು ಪಲ್ಲಕ್ಕಿಯಲ್ಲಿಟ್ಟು ಮೊನ್ನೆ ಸೋಮವಾರ ಸಾಯಂಕಾಲ ಕೋಟೆ ನಾಲ್ಕು ಬೀದಿಗಳಲ್ಲೂ ಮೆರವಣಿಗೆ ಮಾಡಿ, ದೇವಸ್ಥಾನದಲ್ಲಿ ಸಭೆ ಸೇರಿ ಓದಿ ಹೇಳಿದರು. ಸ್ವಾಮಿಗಳು ಆ ಶ್ರೀಮುಖದಲ್ಲಿ ರಾಜಧಾನಿಯೊಳಗೆ ಹನ್ನೆರಡು ದಿನಗಳು ಇರುವುದಾಗಿ ನಿರೂಪಿಸಿರುತ್ತಾರೆ.

***

ಬೆಂಗಳೂರಿಂದ ಮಾರಿಕುಪ್ಪಕ್ಕೂ ಇಲ್ಲಿಂದಲ್ಲಿಗೂ ಕಳೆದ ಭಾನುವಾರದ ಲಾಗಾಯತು ಮೋಟಾರ್ ಗಾಡಿಗಳನ್ನು ಬಿಡಲಾರಂಭವಾಗಿದೆ. ಅದರಲ್ಲಿ ಎರಡನೆ ತರಗತಿಯು ೧೫ ಪ್ರಯಾಣಸ್ಥರಿಗೂ ೩ನೆ ತರಗತಿಯು ೧೦೩ ಪ್ರಯಾಣಸ್ಥರಿಗೂ ಸ್ಥಳವಿರುತ್ತದೆ. ಬೆಂಗಳೂರಿಂದ ಬೆಳಿಗ್ಗೆ ೭॥ ಗಂಟೆಗೆ ಒಂದು ಗಾಡಿಯೂ, ಸಾಯಂಕಾಲ ೫॥ ಗಂಟೆಗೆ ಒಂದು ಗಾಡಿಯೂ ಹೊರಟು ಮಾರಿಕುಪ್ಪನ್ನು ೧೦ ಗಂಟೆಗೂ, ರಾತ್ರಿ ೮॥ ಗಂಟೆಗೂ ತಲಪುವವು. ಮಾರಿಕುಪ್ಪದಿಂದ ಬೆಳಿಗ್ಗೆ ೭॥ ಗಂಟೆಗೂ ಮಧ್ಯಾಹ್ನ ೧॥ ಗಂಟೆಗೂ ಹೊರಡುವ ಗಾಡಿಗಳು ಬೆಂಗಳೂರನ್ನು ಹಗಲು ೧೧ ಗಂಟೆಗೂ ಸಾಯಂಕಾಲ ೫ ಗಂಟೆಗೂ ತಲಪುತ್ತವೆ. ಇದಲ್ಲದೆ ಬೌರಿಂಗ್‌ಪೇಟೆಯಿಂದ ಬೆಳಿಗ್ಗೆ ೬ ಗಂಟೆಗೆ ಒಂದು ಗಾಡಿ ಹೊರಟು ೫೫ ನಿಮಿಷಗಳಲ್ಲಿ ಮಾರಿಕುಪ್ಪವನ್ನು ತಲಪುವಂತೆಯೂ ಏರ್ಪಾಡು ಮಾಡಿದಾರೆ.

ಮೈಸೂರು ಗೆಜೆಟ್ ಸಂಗ್ರಹ

ಅ॥ ಕಂಟ್ರೋಲರ್ ಮೆ॥ ಎಲ್ ವಿಷ್ಣುಪಂತ್ ಬಾಡಾವಿಯವರಿಗೆ ಜೂನ್ ೧೩ ರ ಲಾಗಾಯಿತು ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಅಮಲ್ದಾರ್ ಮೆ॥ ಪಿ ಸುಬ್ಬರಾಯಲು ನಾಯ್ಡು ಯವರಿಗೆ ಮೇ ೫ರ ಲಾಗಾಯಿತು ಆರು ತಿಂಗಳ ರಜಾ ಕೊಟ್ಟಿದೆ. ಈ ಪೈಕಿ ಎರಡು ತಿಂಗಳೂ ಹದಿನೇಳು ದಿನಗಳ ರಜಾವನ್ನು ಪ್ರಿವಿಲೆಜ್ ರಜಾದಂತೆ ಎಣಿಸಲ್ಪಡತಕ್ಕದ್ದು.

ಮೆ॥ ಕೆ ಎಸ್ ಚಂದ್ರಶೇಖರೈಯ್ಯನವರನ್ನು ಚೀಫ್ ಕೋರ್ಟಿನ ಕೆಲಸಕ್ಕೆ ನೇಮಿಸಿರೋಣದರಿಂದ ಅಂಡರ್ ಸೆಕ್ರೆಟರಿ ಮೆ॥ ಸಿ ಎಸ್ ಬಾಲಸುಂದರಂ ಐಯ್ಯರವರು ಗವರ್ನ್‌ಮೆಂಟ್ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಸೆಕ್ರೆಟರಿಯಾಗಿ ಖಾಯಂ ಮಾಡಲ್ಪಟ್ಟಿದಾರೆ.

ಮುಂದೆ ಹೇಳುವ ಸಬ್ ಅ॥ ಸರ್ಜನರುಗಳ ವರ್ಗಾವರ್ಗ ಹುಕುಂ ಮಾಡಲ್ಪಟ್ಟಿದೆ—ಮೆ॥ ಎ ಶೇಷಗಿರಿರಾಯರನ್ನು ಕೋಲಾರ್ ಚಿನ್ನದಗಣಿಗಳ ಪೈಕ ಉರಿಗಾಂ ಪ್ಲೇಗ್ ಕ್ಯಾಂಪಿನಿಂದ ಶಿವಸಮುದ್ರದ ಆಸ್ಪತ್ರೆಗೆ, ಮೆ॥ ಟಿ ಎಸ್ ಸಿದ್ದಪ್ಪನವರನ್ನು ಶಿವಸಮುದ್ರದ ಆಸ್ಪತ್ರೆಯಿಂದ ಉರಿಗದ ಪ್ಲೇಗ್ ಕ್ಯಾಂಪಿಗೆ.

ಮೈಸೂರು ಡಿವಿಜನ್ ಸಬ್ ಅ॥ ಇಂಜನಿಯರ್ ಮೆ॥ ವಿ ವಿ ಶರ್ಮಯವರಿಗೆ ಮೇ ೩೧ರ ಲಾಗಾಯಿತು ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮೈಸೂರು ಡಿವಿಜನ್ ಎಗ್ಸಿಕ್ಯೂಟಿವ್ ಇಂಜನಿಯರ್ ಮೆ॥ ಬಿ ಸುಬ್ಬರಾಯರು ಜೂನ್ ೪ ರಲ್ಲಿ ರಜದಿಂದ ಒಂದು ಕೆಲಸದ ಮೇಲೆ ಹಾಜರಾದ್ದರಿಂದ ಅವರು ಉಪಯೋಗಿಸಿಕೊಳ್ಳದೆ ಇರುವ ಹದಿನೈದು ದಿನಗಳ ರಜವನ್ನು ರದ್ದುಮಾಡಿದೆ.

ಕಂಟ್ರೋಲರವರ ಆಫೀಸ್ ಅ॥ ಎಗ್ಜಾಮಿನರ್ ಮೆ॥ ಎ ಅಪ್ಪಾವು ಮೊದಲಿಯಾರ್ರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿಮೂರು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಶೀರ್ಯದ ತಾಲ್ಲೂಕ್ ಅಮಲ್ದಾರ್ ಮೆ॥ ಎಂ ಎ ಶ್ರೀನಿವಾಸೈಯ್ಯಂಗಾರ್ರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಇಪ್ಪತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಶಿರಸ್ತೆದಾರರು ಮತ್ತೊಂದು ಹುಕುಂ ಕೊಡಲ್ಪಡುವ ತನಕ ಶೀರ್ಯದ ತಾಲ್ಲೂಕ್ ಛಾರ್ಜನ್ನು ವಹಿಸತಕ್ಕದ್ದು.

ಲೇಟ್ ರಾಜಧರ್ಮ ಪ್ರವೀಣ ಮೆ|| ಟಿ. ಆರ್. ಎ. ತಂಬೂಚೆಟ್ಟಿ ಸಿ. ಐ. ಇ. ಯವರು.

ಕಳೆದ ೨೦ನೆ ತಾ ಗುರುವಾರ ಬೆಳಗಿನ ೭ ಗಂಟೆಯಲ್ಲಿ ರಾಜಧರ್ಮ ಪ್ರವೀಣ ಮೆ|| ಟಿ ಆರ್ ಎ ತಂಬೂಚೆಟ್ಟಿ, ಸಿ. ಐ. ಇ. ಯವರು ಬೆಂಗಳೂರಿನಲ್ಲಿ ರಗ್ಬಿ ಹಾಲ್ ಎಂಬ ಸ್ವಗೃಹದಲ್ಲಿ ಕಾಲವಾದರೆಂದು ತಿಳಿಸಲು ತುಂಬಾ ವಿಷಾದಿಸುತ್ತೇವೆ ಇವರಿಗೆ ಕೆಲವು ವಾರಗಳಿಂದ ಎಡಗೈ ಮೇಲೆ ಒಂದು ರಾಜಹುಣ್ಣೆದ್ದು ಬಾಧೆ ಪಡಿಸುತ್ತಿದ್ದಿತು ಡಾಕ್ಟರುಗಳು ಅದನ್ನು ವಾಸಿಮಾಡಿ ಅವರನ್ನು ಬದುಕಿಸಬೇಕೆಂದು ಮಾಡಿದ ಪ್ರಯತ್ನಗಳೆಲ್ಲಾ ಸಾರ್ಥಕವಾಗದೆ ಹೋದವು ಮೆ|| ತಂಬೂಚೆಟ್ಟಿಯವರು ಕಳೆದ ೧೮೩೭ ನೆ ಇಸವಿ ಏಪ್ರಿಲ್ ತಿಂಗಳಲ್ಲಿ ಬಡವರಾದ ತಾಯಿ ತಂದೆಗಳ ಹೊಟ್ಟೆಯಲ್ಲಿ ಹುಟ್ಟಿ, ೧೮ ನೆ ವಯಸ್ಸಿನಲ್ಲಿ ಸರ್ಕಾರಿ ಕೆಲಸವನ್ನು ಮಾಡಲಾರಂಭಿಸಿದರು ಮದರಾಸ್ ಮಿಲ್ಟೇರಿ ಇಲಾಖೆಯ ಕ್ವಾರ್ಟರ್ ಮಾಸ್ಟರ್ ಜನರಲ್‌ರವರ ಆಫೀಸಿನಲ್ಲಿ ೧೮೫೫ ನೆ ಡಿಸೆಂಬರ್ ೧೦ ರಲ್ಲಿ ಗುಮಾಸ್ತರಾಗಿ ಸೇರಿ, ಚಟುವಟಿಕೆಯಾಗಿ ಕೆಲಸ ಮಾಡುತ್ತಾ ಬಂದದ್ದರಿಂದ ೧೮೬೦ ನೆ ಫೆಬ್ರವರಿಯಲ್ಲಿ ಮದರಾಸ್ ಗವರ್ನಮೆಂಟ್ ಸೆಕ್ರೆಟರಿಯಾಟ್ ಆಫೀಸಿನ ಲೆಜಿಸ್ಲೆಟಿವ್ ಇಲಾಖೆಯ ಮ್ಯಾನೇಜರ್ ಕೆಲಸಕ್ಕೆ ಹತ್ತಿದರು. ಅಲ್ಲಿ ನ್ಯಾಯಶಾಸ್ತ್ರಗಳನ್ನು ಬಹಳ ಚನ್ನಾಗಿ ಪರಿಶ್ರಮಮಾಡಿಕೊಂಡರು ಈ ಅನುಭವವು ಅವರನ್ನು ಮಹಾ ದೊಡ್ಡ ಪದವಿಗೆ ಹತ್ತಲು ಯೋಗ್ಯರನ್ನಾಗಿ ಮಾಡಿತು. ೧೮೬೬ ನೆ ಇಸವಿ ಜೂಲೈ ತಿಂಗಳಲ್ಲಿ ಅವರಿಗೆ ಫುರ್ಗಿ (ಬಳ್ಳಾರಿ)ಯ ಡಿಸ್ಟ್ರಿಕ್ಟ್ ಮುನ್ಸಿಫ್ ಕೆಲಸವಾಗಿ ಒಂದು ವರುಷದೊಳಗಾಗಿ ಮೈಸೂರು ಸಂಸ್ಥಾನದ ನೌಕರಿಯನ್ನು ಸಂಪಾದಿಸಿಕೊಂಡರು. ೧೮೬೭ ನೆ ಫೆಬ್ರವರಿ ೧೮ರ ತಾರೀಖಿನಲ್ಲಿ ಮೈಸೂರ್ ಸಂಸ್ಥಾನದ ಜುಡಿಷಲ್ ಕಮಿಷನರವರ ಕೋರ್ಟಿನಲ್ಲಿ ಹೆಡ್ ಶಿರಸ್ತೆ ಕೆಲಸವು ಅವರಿಗೆ ದೊರಕಿತು ಮಾರನೇ ವರುಷ ಅವರು ಸ್ಮಾಲ್ ಕಾಸ್ ಎರಡನೇ ಜಡ್ಜರಾಗಿಯೂ ರೆಜಿಸ್ಟ್ರಾರ್ ಜನರಲ್‌ರಾಗಿಯೂ ನೇಮಕವಾದರು. ೧೮೬೯ ನೆ ಆಕ್ಟೋಬರ್ ತಿಂಗಳಲ್ಲಿ ಅಸಿಸ್ಟೆಂಟ್ ಕಮಿಷನರ ಕೆಲಸವೂ, ಅಲ್ಲಿಂದೀಚೆಗೆ ಬಡ್ತಿಯಾಗುತ್ತಾ ಬಂದು ಕಡೆಗೆ ಚೀಫ್ ಕಮಿಷನರವರ ಕೈಕೆಳಗೆ ಅಸಿಸ್ಟೆಂಟ್ ಸೆಕ್ರೆಟರಿ ಕೆಲಸವೂ, ಅಲ್ಲಿಂದ ಒಂದು ವರುಷದ ಮೇಲೆ ನಂದೀದುರ್ಗದ ಸೆಷನ್ಸ್ ಜಡ್ಜರ ಕೆಲಸವೂ ದೊರೆತವು ೧೮೮೧ ರಲ್ಲಿ ಈ ಸಂಸ್ಥಾನದ ರಾಜ್ಯಭಾರವು ಇಂಗ್ಲೀಷರ ಕೈಬಿಟ್ಟು ಲೇಟ್ ಮಹಾರಾಜರವರಿಗೆ ವಹಿಸಲ್ಪಟ್ಟಾಗ ಮೆ|| ತಂಬೂಚೆಟ್ಟಿಯವರನ್ನು ಶ್ರೀಮನ್ಮಹಾರಾಜರವರ ಕೌನ್ಸಿಲ್ ಮೆಂಬರಾಗಿ ನೇಮಿಸಿದರು. ಈ ಉದ್ಯೋಗವನ್ನು ಅವರು ವಿಶೇಷ ಶ್ರದ್ಧೆಯಿಂದಲೂ ಚಟುವಟಿಕೆಯಾಗಿಯೂ ನಡಿಸಿ ತುಂಬಾ ಸಮರ್ಥರೆಂಬ ಕೀರ್ತಿಯನ್ನು ಸಂಪಾದಿಸಿಕೊಂಡದ್ದರಿಂದ ೧೮೮೪ ನೆ ಮಾರ್ಚಿ ತಿಂಗಳಲ್ಲಿ ಅವರನ್ನು ಮೈಸೂರು ಸಂಸ್ಥಾನದ ಚೀಫ್ ಕೋರ್ಟಿನಲ್ಲಿ ಚೀಫ್ ಜಡ್ಜರನ್ನಾಗಿ ಮೊಕರರ್ ಮಾಡಿದರು. ಆ ಪದವಿಯಲ್ಲಿ ಇವರು ತಮ್ಮ ಅಸಾಧಾರಣವಾದ ಬುದ್ಧಿ ಶಕ್ತಿ ಸಾಮರ್ಥ್ಯಾದಿಗಳನ್ನು ಪ್ರಕಾಶಪಡಿಸಿ ಇನ್ನೂ ಯಶೋವಂತರಾದರು. ೧೮೯೫ ನೆ ಫೆಬ್ರವರಿಯಿಂದೀಚೆಗೆ ಈ ಮಹನೀಯರು ನಾಲ್ಕಾರು ವೇಳೆ ಈ ಸಂಸ್ಥಾನದ ದಿವಾನ್ ಪದವಿಯನ್ನೂ ಅಲಂಕರಿಸಿ, ತಮ್ಮ ರಾಜಭಕ್ತಿ ವಿಶ್ವಾಸಗಳನ್ನೂ ಪ್ರಜಾವಾತ್ಸಲ್ಯವನ್ನೂ ಪ್ರಕಾಶಪಡಿಸಿದರು ಇವರ ಸಾಮರ್ಥ್ಯವನ್ನು ಇಂಡಿಯಾ ಗವರ್ನಮೆಂಟಿನವರು ಬಹಳವಾಗಿ ಮೆಚ್ಚಿಕೊಂಡು ಅವರಿಗೆ ೧೯೦೦ ನೆ ಇಸವಿಯಲ್ಲಿ ಮಹಾ ಶ್ರೇಷ್ಠವಾದ ಸಿ ಐ ಇ ಎಂಬ ಬಿರುದನ್ನು ದಯಪಾಲಿಸಿದರು ಮತ್ತು ಅದೇ ವರುಷ ಜನವರಿ ೨೮ ರಲ್ಲಿ ಶ್ರೀಮನ್ಮಹಾರಾಜರವರ ಮಂತ್ರಾಲೋಚನಾ ಸಭಿಕರ ಪೈಕಿ ಇವರು ಮೊದಲನೆಯ ಮೆಂಬರಾಗಿ ನೇಮಿಸಲ್ಪಟ್ಟದ್ದಲ್ಲದೆ ಅದೇ ವರುಷ ಆಗೋಷ್ಟಿನಲ್ಲಿ ಸರ್ ಶೇಷಾದ್ರಿ ಐಯ್ಯರವರು ನಿವೃತ್ತರಾದಾಗ ೧೯೦೧ನೇ ಮಾರ್ಚಿ ೧೮ ರ ತನಕ ದಿವಾನರಾಗಿ ಕೆಲಸ ಮಾಡಿರುತ್ತಾರೆ

ಇವರು ಮದರಾಸ್ ಗವರ್ನಮೆಂಟಿನಲ್ಲಿ ೧೨ ವರುಷವೂ ಮೈಸೂರು ಸಂಸ್ಥಾನದಲ್ಲಿ ೩೪ ವರುಷವೂ ಸರ್ವಿಸ್‌ಮಾಡಿ, ೧೯೦೧ ನೆ ಮಾರ್ಚಿ ೧೬ ರಲ್ಲಿ ನಿವೃತ್ತಿಸುಖವನ್ನು ಹೊಂದಿದರು ಅಲ್ಲಿಂದೀಚೆಗೆ ಇವರು ನಮ್ಮ ಮಹಾರಾಜರವರಿಗೂ ಅನೇಕ ಅಧಿಕಾರಿಗಳಿಗೂ ತಮ್ಮ ಅನುಭವಾದಿಗಳನ್ನು ತಿಳಿಸುತ್ತಾ ಈ ಸಂಸ್ಥಾನದ ಹಿತಚಿಂತನೆಯಲ್ಲಿಯೇ ಮಗ್ನರಾಗಿದ್ದರು ಅವಸಾನಕಾಲದಲ್ಲಿ ಇವರಿಗೆ ೭೦ ವರುಷ ತುಂಬಿತ್ತು. ಸಂಸಾರದಲ್ಲಿ ಅವರು ತುಂಬಾ ಪುಣ್ಯವಂತರಾಗಿದ್ದರು ಅವರ ವಿಯೋಗದುಃಖವನ್ನನುಭವಿಸುವುದಕ್ಕೆ ವೃದ್ಧರಾದ ಪತ್ನಿಯೂ, ವಯಸ್ಕರೂ ಅಧಿಕಾರಸ್ಥರೂ ಆದ ನಾಲ್ವರು ಕುಮಾರರೂ, ವಿವಾಹಿತರಾದ ನಾಲ್ಕು ಮಂದಿ ಹೆಣ್ಣು ಮಕ್ಕಳೂ ಇರುತ್ತಾರೆ ಶವವನ್ನು ರುದ್ರಭೂಮಿಗೆ ಸಾಗಿಸಿದಾಗ ಬೆಂಗಳೂರು ಪಟ್ಟಣದ ಮತ್ತು ದಂಡಿನ ಸಕಲ ಪ್ರಜೆಗಳೂ ಅಧಿಕಾರಿಗಳೂ ಬ್ರಿಟಿಷ್ ರೆಸಿಡೆಂಟರೂ ಸಂಗಡ ಹೋಗಿದ್ದರು

ಮೆ|| ತಂಬೂಚೆಟ್ಟಿಯವರು ಮೈಸೂರು ಸಂಸ್ಥಾನದಲ್ಲಿ ಉದ್ಯೋಗಮಾಡಿದವರಲ್ಲೆಲ್ಲಾ ಅತ್ಯಂತ ನಿಸ್ಪೃಹರಾಗಿಯೂ [illegible] ಮನಸ್ಸಾಕ್ಷಿಗೆ ಅನುಸಾರವಾಗಿ ಕೆಲಸ ಮಾಡಿದವರಾಗಿಯೂ ಇದ್ದರೆಂದು ಹೇಳಬಹುದಾಗಿದೆ ಅವರಲ್ಲಿದ್ದ ಅಸಾಧಾರಣಗಳಾದ ಉತ್ಸಾಹವೂ ಬುದ್ಧಿಯೂ ಧರ್ಮವೂ ಅವರಿಗೆ ಶಾಶ್ವತವಾದ ಯಶಸ್ಸನ್ನೂ, ನೌಕರರಿಗೂ ಪ್ರಜೆಗಳಿಗೂ ಒಳ್ಳೇ ಮೇಲ್ಪಂಕ್ತಿಯನ್ನೂ ಉಂಟುಮಾಡಿದವು ಇವರ ಮರಣವಾರ್ತೆಯನ್ನು ಕೇಳಿ ಈ ಸಂಸ್ಥಾನದ ಸಕಲ ಸತ್ಪ್ರಜೆಗಳೂ ಮರುಗುತ್ತಾರೆ ಎನ್ನುವುದಕ್ಕೆ ಸಂಶಯವಿಲ್ಲ ಇವರ ಮರಣದ ವರ್ತಮಾನವನ್ನು ಕೇಳಿದಕೂಡಲೆ ವ್ಯಸನಾಕ್ರಾಂತರಾಗಿ ಶ್ರೀಮನ್ಮಹಾರಾಜರವರು ಆಜ್ಞಾಪಿಸಿ ಎಲ್ಲಾ ಕೋರ್ಟು ಕಛೇರಿ ಸ್ಕೂಲುಗಳನ್ನು ಆ ದಿನ ಮುಚ್ಚಿಸಿದರು ಮೆ|| ತಂಬೂಚೆಟ್ಟಿಯವರ ಕುಟುಂಬದವರ ಶೋಕವು ಅಪರಿಮಿತವಾದದ್ದಾಗಿದೆ ಎನ್ನುವುದಕ್ಕೆ ಸಂಶಯವಿಲ್ಲ ಅವರು ಸ್ವರ್ಗಸ್ಥರಾದಾಗ್ಯೂ ಅವರ ಗುಣಾತಿಶಯಗಳು ಅನೇಕಾನೇಕ ಬಾಲಕರ, ಯೌವನಸ್ಥರ ಮತ್ತು ವೃದ್ಧರ ಸನ್ಮಾರ್ಗಪ್ರವರ್ತನೆಗೆ ಚಿರಕಾಲ ಮೇಲ್ಪಂಕ್ತಿಯೂ ದೃಷ್ಟಾಂತವೂ ಆಗಿರುತ್ತವೆಂದು ನಂಬಿದ್ದೇವೆ

ಹಿಂದುಸ್ಥಾನದ ಗಲಿಬಿಲಿಯು.

ವಿಲಾಯತಿಯ ಪಾರ್ಲಿಮೆಂಟಿನಲ್ಲಿ ನಡೆದ ಚರ್ಚೆಗಳು

ಈಗ ಉತ್ತರ ದೇಶದಲ್ಲಿ ಅಂದರೆ ಬಂಗಾಳಾ ಮತ್ತು ಪಂಜಾಬ್ ಆಧಿಪತ್ಯಗಳಲ್ಲಿ ದೇಶೀಯ ವಿದ್ಯಾವಂತರ ಉಪನ್ಯಾಸಗಳಿಂದಲೂ ದೇಶೀಯ ವರ್ತಮಾನ ಪತ್ರಿಕೆಗಳ ಬರವಣಿಗೆಗಳಿಂದಲೂ ಪ್ರಜೆಗಳಿಗೆ ಸರ್ಕಾರದವರಲ್ಲಿಟ್ಟ ಪ್ರೀತಿ ಭರವಸೆಗಳಿಗೆ ಬಹುಮಟ್ಟಿಗೆ ಲೋಪವುಂಟಾಗಿರುವುದೂ, ಅಲ್ಲಲ್ಲಿ ಅವಿವೇಕಿಗಳಾದ ಹಲವು ಪ್ರಜೆಗಳು ಗಲಭೆಯನ್ನುಂಟುಮಾಡಿ ಪ್ರಜಾನೆಮ್ಮದಿಗೂ ಸರ್ಕಾರಿ ಕೆಲಸಗಳ ಚಲಾವಣೆಗೂ ಭಂಗಪಡಿಸಿರುವುದೂ, ಅದಕ್ಕೆ ಪ್ರತೀಕಾರವಾಗಿ ಗವರ್ನಮೆಂಟಿನವರು ಪ್ರಜಾಕಂಟಕರೆಂದು ತಿಳಿದು ಬಂದವರನ್ನು ಅಲ್ಲಲ್ಲಿ ಹಿಡಿದು ಆ ಪೈಕಿ ಒಬ್ಬಿಬ್ಬರನ್ನು ಗಡೀಪಾರುಮಾಡಿ, ಉಳಿದವರ ಮೇಲೆ ಕ್ರಿಮಿನಲ್ ಮೊಕದ್ದಮೆಗಳನ್ನು ತಂದು ಪರ್ಯಾಪ್ತಿ ಮಾಡಿಸುತ್ತಿರುವುದೂ ನಮ್ಮ ವಾಚಕರಿಗೆ ತಿಳಿದಿದೆಯಷ್ಟೆ. ಇಷ್ಟೇ ಅಲ್ಲ ಪ್ರಜೆಗಳು ಸಭೆಗಳನ್ನು ನಡಿಸಬೇಕಾದರೆ ಎಂಟು ದಿನಕ್ಕೆ ಮೊದಲೇ ಮ್ಯಾಜಿಸ್ಟ್ರೇಟರಿಗೆ ತಿಳಿಸಿ ಅವರ ಅಪ್ಪಣೆ ಪಡೆಯಬೇಕೆಂತಲೂ, ಸ್ಕೂಲುಗಳಿಗೆ ಹೋಗಿ ವಿದ್ಯೆ ಕಲಿಯುವಂಥಾ ಬಾಲಕರು ರಾಜಕೀಯ ವಿಷಯಗಳನ್ನು ಚರ್ಚಿಸದಂತೆಯೂ, ಅಂಥಾ ಉಪನ್ಯಾಸ ಮಂದಿರಗಳಿಗೆ ಹೋಗದಂತೆಯೂ ಅಡ್ಡಿ ಮಾಡಬೇಕೆಂತಲೂ ಸರ್ಕಾರದವರು ಖಂಡಿತವಾದ ಹುಕುಂ ಕೊಟ್ಟು ಜಾರಿಯಲ್ಲಿ ತಂದಿರುತ್ತಾರೆ ಇನ್ನೂ ಈಚೆಗೆ ಬಂಗಾಳಾದಲ್ಲಿ ಪ್ರಕಟವಾಗುವ ಕೆಲವು ದೇಶೀಯ ವರ್ತಮಾನ ಪತ್ರಿಕೆಗಳ ಸ್ವೇಚ್ಛಾಪ್ರವರ್ತಕವಾದ ಬರವಣಿಗೆಗಳನ್ನು ನಿಷ್ಟ್ರಿಬಿಸಬೇಕೆಂದೂ ಇಲ್ಲವಾದರೆ ಆಯಾ ಪತ್ರಿಕಾಕರ್ತರು ರಾಜದ್ರೋಹಾಪರಾಧಕ್ಕೆ ಗುರಿಯಾಗುವರೆಂದೂ ಹುಕುಂ ಕಳುಹಿಸಿರುವರು. ದೇಶೀಯ ವಿದ್ಯಾವಂತರು ಸಭೆಗಳಲ್ಲಿ ನಿಂತು ಉಪನ್ಯಾಸಮಾಡುವಾಗ್ಗೆ ರಾಜದ್ರೋಹಕರವಾದ ಸಂಗತಿಗಳನ್ನೇನಾದರೂ ಕುರಿತು ಹೇಳುವರೇನೋ ಎಂದು ಅನುಮಾನಪಟ್ಟು ಪೊಲೀಸ್ ಇಲಾಖೆಯ ನೌಕರರು ಅಂಥಾ ಪ್ರತಿ ಒಂದು ಉಪನ್ಯಾಸಮಂದಿರಕ್ಕೂ ಹೋಗಬೇಕೆಂತಲೂ ಅಲ್ಲಿ ನಡಿಯುವ ಸಂಗತಿಗಳನ್ನೂ ಉಪನ್ಯಾಸಗಳನ್ನೂ ಸ್ವಲ್ಪವೂ ಬಿಡದೆ ಬರೆದುತರಬೇಕೆಂತಲೂ ಸರ್ಕಾರದವರು ವಿಧಿಸಿರುತ್ತಾರೆ. ಅತ್ತಲಾಗಿ ಇಂಗ್ಲೀಷ್ ರಾಜ್ಯಭಾರದಲ್ಲಿ ಪ್ರಕಟವಾಗುತ್ತಿರುವಂಥಾ ವರ್ತಮಾನ ಪತ್ರಿಕೆಗಳಿಗೆಲ್ಲಾ ಕಿರೀಟಪ್ರಾಯವಾಗಿರುವ " ದಿ ಲಂಡನ್ ಟೈಂಸ್ " ಎಂಬ ಪತ್ರಿಕಾ ಅಧ್ಯಕ್ಷರು ಹಿಂದುಸ್ಥಾನದಲ್ಲಿ ಉಂಟಾಗಿರುವ ಅಸಮಾಧಾನ, ಗಲಿಬಿಲಿ, ಗಲಭೆ, ನೆಮ್ಮದಿಗೆ ಭಂಗ, ಈ ಮೊದಲಾದ ಸ್ಥಿತಿಗತಿಗಳು ಎಷ್ಟುಮಟ್ಟಿಗೆ ಯಥಾರ್ಥವಾಗಿರುತ್ತವೆ, ಅವಕ್ಕೆ ಕಾರ್ಯಕಾರಣಗಳೇನು ಎಂಬೀ ಸಂಗತಿಗಳನ್ನು ಸರಿಯಾಗಿ ನೋಡಿ ಚನ್ನಾಗಿ ವಿಚಾರಮಾಡಿ ತಿಳಿದುಬರುವಂತೆ ತಮ್ಮ ಕಡೆಯ ಒಬ್ಬ ಬಾತ್ಮೀದಾರರನ್ನು ಹಿಂದುಸ್ಥಾನಕ್ಕೆ ಕಳುಹಿಸಿರುತ್ತಾರೆ. ಅವರು ಆಗಲೇ ಈ ರಾಷ್ಟ್ರಕ್ಕೆ ಬಂದಿಳಿದು, ಸಿಂಲಾ, ಕಲ್ಕತ್ತಾ, ಅಲಹಾಬಾದ್, ರಾವಲ್‌ಪಿಂಡಿ, ಪಂಜಾಬ್ ಈ ಮೊದಲಾದ ಪಟ್ಟಣಗಳಲ್ಲೂ ಪ್ರಾಂತ್ಯಗಳಲ್ಲೂ ಸಂಚಾರ ಮಾಡಲಾರಂಭಿಸಿರುವರು.

ಹಿಂದುಸ್ಥಾನದ ಶ್ರೇಯೋಭಿವೃದ್ಧಿಯನ್ನು ಬಯಸುತ್ತಿರುವ ಇಂಗ್ಲೀಷ್ ದೊಡ್ಡಮನುಷ್ಯರ ಪೈಕಿ ಕೆಲವರು ವಿಲಾಯತಿ ರಾಜ್ಯದ ಪಾರ್ಲಿಮೆಂಟಿನಲ್ಲಿ ಮೆಂಬರುಗಳಾಗಿರುತ್ತಾರೆ. ಇವರು ಹಿಂದುಸ್ಥಾನದಲ್ಲಿ ನಡಿಯುತ್ತಾ ಬರುವ ವಿದ್ಯಮಾನಗಳನ್ನು ತಿಳಿದುಕೊಂಡು ಆಗಾಗ್ಗೆ ಇಂಡಿಯಾ ಸ್ಟೇಟ್ ಸೆಕ್ರೆಟರಿಯವರನ್ನು ಕಂಡು ಅವರ ಕೂಡ ಚರ್ಚೆ ಮಾಡುವರು. ಹಿಂದುಸ್ಥಾನದ ಈಗಿನ ಗಲಭೆಯ ವಿಚಾರವನ್ನು ಕುರಿತು ಆ ಮೆಂಬರುಗಳಿಗೂ ಸ್ಟೇಟ್ ಸೆಕ್ರೆಟರಿ ಮೆ|| ಜಾನ್ ಮಾರ್ಲಿಯವರಿಗೂ ಜಿಜ್ಞಾಸಗಳು ನಡೆದಿರುತ್ತವೆ. ಅವುಗಳ ಸಾರಾಂಶವನ್ನು ನಮ್ಮ ವಾಚಕರಿಗೆ ತಿಳಿಸಬೇಕೆಂದು ಕುತೂಹಲಪಡುವೆವು.

ಮೆಂಬರ್ ಮೆ|| ಓಡಾನ್ನೆಲ್.—ಏಪ್ರಿಲ್ ೨೧ ರಲ್ಲಿ ರಾವಲ್‌ಪಿಂಡಿ ಪಟ್ಟಣದಲ್ಲಿ ಜಮೀನ್ದಾರರು ಸೇರಿ ಒಂದು ಪಬ್ಲಿಕ್ ಸಭೆಯನ್ನು ನಡಿಸಿದರು ಆ ಸಭೆಯಲ್ಲಿ ಉಪನ್ಯಾಸ ಮಾಡಿದಂಥಾ ಮೂವರು ಬ್ಯಾರಿಸ್ಟರುಗಳನ್ನು ಸರ್ಕಾರದವರು ಹಿಡಿದು ಅವರ ಮೇಲೆ ರಾಜದ್ರೋಹದ ಮೊಕದ್ದಮೆ ತಂದಿರುತ್ತಾರೆ ಆ ಸಭೆಯಲ್ಲಿ ಚರ್ಚಿಸಿ ತೀರ್ಮಾನ ಮಾಡಿದ ಸಂಗತಿಗಳೇನೆಂದರೆ—ಸರ್ಕಾರದವರು ಸೆಟ್ಲ್‌ಮೆಂಟ್ ಮಾಡಿ ಜಮೀನ್ ಕಂದಾಯದ ದರಗಳನ್ನು ಹೆಚ್ಚಿಸಿರುತ್ತಾರಾದ್ದರಿಂದ ಅದಕ್ಕಾಗಿ ಪ್ರಜೆಗಳು ಒಂದು ಅರ್ಜಿಯನ್ನು ಬರೆದು ಲೆಫ್ಟಿನೆಂಟ್ ಗವರ್ನರವರಿಗೆ ಒಪ್ಪಿಸಿ, ದರವನ್ನು ಕಮ್ಮಿ ಮಾಡಿಕೊಡುವಂತೆ ಬೇಡಿಕೊಳ್ಳಬೇಕು ಪರದೇಶಗಳವರು ಬಂದು ರೈತರಾಗಿ ನಿಂತು ತುಂಬಾ ಮೂಲಧನವನ್ನು ಇಟ್ಟುಕೊಂಡು ಕಬ್ಬು ಮತ್ತು ಹತ್ತಿಯನ್ನು ಬೆಳೆ ಮಾಡುತ್ತಾ ಇರೋಣದರಿಂದ ಸ್ವದೇಶಿಗಳಿಗೆ [illegible] ಉತ್ಪತ್ತಿ [illegible] ಬೇಯಾಬ್ ಶೋವಾಟ್ ಎಂಬ ನಾಲೆ ಕೆಳಗೆ ಕಬ್ಬು ಮತ್ತು ಹತ್ತಿ ಬೆಳೆಯುವ ಜಮೀನುಗಳ ಕಂದಾಯವನ್ನು (ಅಂದರೆ, ನೀರಿನ ವರಿಯನ್ನು) ಶೇಕಡಾ ೧೦೦ ರಷ್ಟು ಜಾಸ್ತಿ ಮಾಡಿರುತ್ತಾರೆ ಇಂಡಿಯಾ ಸ್ಟೇಟ್ ಸೆಕ್ರೆಟರಿಯವರಿಗೆ ಈ ಸಂಗತಿ ತಿಳಿದಿದೆಯೋ ? ತಿಳಿದಿದ್ದರೆ ದೇಶೀಯ ಜನರ ಕಸಬು ಕ್ಷೀಣವಾಗುತ್ತಿರುವುದರಿಂದ ಸೆಕ್ರೆಟರಿಯವರು ಆ ಪ್ಲೈನ ಜಮೀನ್ ಕಂದಾಯದ ದರಗಳನ್ನೂ ನೀರಿನ ವರಿಯನ್ನೂ ಕಮ್ಮಿ ಹಾಕಿ ಕೊಡಬಲ್ಲರೇ ?

ಮೆ|| ಜಾನ್ ಮಾರ್ಲಿ — ರಾವಲ್‌ಪಿಂಡಿ ಸಭೆಯಲ್ಲಿ ಜಮೀನ್ದಾರರು ಸಭೆ ನಡಿಸಿ ಅವರವರ ಕಂದಾಯಗಳನ್ನು ಕುರಿತು ಚರ್ಚಿಸಿ ರೆಜಲ್ಯೂಷನ್ ಮಾಡಿರುವುದು ನನಗೆ ತಿಳಿದಿದೆ ಆದರೆ ರಾವಲ್‌ಪಿಂಡಿ ಡಿಸ್ಟ್ರಿಕ್ಟಿಗೂ ಆ ನಾಲೆಯ ನೀರು ಹಾಯುವ ಡಿಸ್ಟ್ರಿಕ್ಟುಗಳಿಗೂ ೩೦೦ ಮೈಲಿ ದೂರವಿರುತ್ತದೆ ಆ ಡಿಸ್ಟ್ರಿಕ್ಟುಗಳಲ್ಲಿಯೂ ಕೂಡ ಏಕಕಾಲದಲ್ಲೇ ಅವರವರ ಕಂದಾಯಗಳನ್ನೂ ಹೆಚ್ಚಿಸಬೇಕೆಂಬ ಅಭಿಪ್ರಾಯವಿಲ್ಲ ಇತರ ನಾಲೆ ಕೆಳಗಣ ಜಮೀನುಗಳ ಕಂದಾಯದ ದರಕ್ಕಿಂತಲೂ [illegible] ದರವು ಕಡಿಮೆಯಾಗಿತ್ತು ಇದಲ್ಲದೆ ಆ ಜಮೀನುಗಳ ಅನುಭವದಾರರು ಈಗ ಕೊಡುವುದಕ್ಕಿಂತಲೂ ಹೆಚ್ಚು ದರವನ್ನು ಸುಲಭವಾಗಿ ಕೊಡಬಲ್ಲವರಾಗಿದ್ದರು. ಕಬ್ಬಿನ ಬೆಳೆ ಆಗುವ ಜಮೀನಿನ ಕಂದಾಯವನ್ನು ಶೇಕಡಾ ೫೦ ರಂತೆಯೂ, ಹತ್ತಿ ಬೆಳೆಯುವ ಜಮೀನ್ ಕಂದಾಯವನ್ನು ಶೇಕಡಾ ೨೦ ರಂತೆಯೂ ಹೆಚ್ಚಿಸಲಾಯಿತು ಈಚೆಗೆ [illegible] ಬೆಳೆಗಳನ್ನು ಹೆಚ್ಚಾಗಿ ಮಾಡುತ್ತಾರೆ; ಮತ್ತು ಅದರಲ್ಲಿ ಲಾಭವು ತುಂಬಾ ಬರುತ್ತಿದೆ ಈ ಹೆಚ್ಚು ದರದಂತೆ ಇನ್ನು ೧೨ ತಿಂಗಳ ತನಕ ವಸೂಲ್ಮಾಡಕೂಡದೆಂದು ನಿಲ್ಲಿಸಿದೆ. ವ್ಯವಸಾಯ ಮಾಡುವವರು ಕೇಳಿಕೊಳ್ಳುವ ಮನವಿಗಳನ್ನೆಲ್ಲಾ ಚನ್ನಾಗಿ ಪರ್ಯಾಲೋಚನೆ ಮಾಡುವೆವು

ಮೆಂಬರ್ ಡಾ|| ರದರ್ಫರ್ಡ್.—ಜಮೀನ್ ಸ್ವಾಧೀನಾನುಭವ ವಿಷಯವಾಗಿ ಸರ್ಕಾರದವರು ಹೊಸ ಕಾನೂನು ಮಾಡಿದರಷ್ಟೆ. ರಾವಲ್‌ಪಿಂಡಿಯಲ್ಲಿ ಮೇ ೨ ರಲ್ಲಿ ನಡೆದ ದಂಗೆ ಕಾರ್ಯಗಳಿಗೆ ಈ ಕಾನೂನೇ ಕಾರಣವೋ ? ಹಾಗಾದ ಪಕ್ಷಕ್ಕೆ ಆ ಕಾನೂನನ್ನು ಜಾರಿಗೆ ತಾರದೆ ತಡೆದು, ಸರಿಯಾಗಿ ತನಿಖೆ ಮಾಡಿಸಬಾರದೇ ?

ಮೆ|| ಜಾನ್ ಮಾರ್ಲಿ.—ವರ್ತಮಾನ ಪತ್ರಿಕೆಗಳಿಂದ ವೈಸ್‌ರಾಯವರು ಆ ಕಾನೂನನ್ನು ಜಾರಿಗೆ ತರಕೂಡದೆಂದು ತಡೆದಿರುವ ಸಂಗತಿ ತಿಳಿದುಬರುತ್ತದೆ. ಅವರು ಮಾಡಿದ್ದನ್ನು ನಾನು ಸಂಪೂರ್ಣವಾಗಿ ಒಪ್ಪಿರುತ್ತೇನೆ. ಆದರೆ ರಾವಲ್‌ಪಿಂಡಿ ಡಿಸ್ಟ್ರಿಕ್ಟಿನವರಿಗೂ ಆ ಕಾನೂನಿಗೂ ಏನೇನೂ ಸಂಬಂಧವಿಲ್ಲ.

ಡಾ|| ರದರ್ಫರ್ಡ್ —ಲಾಲಾ ಲಾಜಪತ್ ರಾಯಿಯವರನ್ನು ಹಿಡಿದು ದರ್ಯಾಪ್ತಿಯಿಲ್ಲದೆ ಗಡೀಪಾರುಮಾಡಿದ ವಿಷಯದಲ್ಲಿ ಹಿಂದುಸ್ಥಾನದ ಪ್ರಜೆಗಳಿಗೆ ಆಗ್ರಹ ಉಂಟಾಗಿರೋಣದರಿಂದ ಅತನನ್ನು ಬಿಡುಗಡೆ ಮಾಡಿಯೋ ಇಲ್ಲವೇ ದರ್ಯಾಪ್ತಿ ಮಾಡಿಯೋ ಪ್ರಜೆಗಳಲ್ಲಿ ಇಂಗ್ಲೀಷರು ನ್ಯಾಯೈಕ ಪಕ್ಷಪಾತಿಗಳೆಂಬ ಬಿರುದು ಗೌರವಗಳನ್ನು ಕಾಪಾಡಿಕೊಳ್ಳಬಾರದೇ ?

ಮೆ|| ಮಾರ್ಲಿ.—ನೀವು ಹೇಳುವ ವಿಚಾರವನ್ನು ಹಿಂದುಸ್ಥಾನದಲ್ಲಿ ಒಂದು ಪಕ್ಷದವರು ಸರಿ ಎಂದು ಒಪ್ಪಿಕೊಳ್ಳುತ್ತಾರೆ. ಎದುರು ಪಕ್ಷದವರು ಒಪ್ಪಿಕೊಳ್ಳುವುದಿಲ್ಲ. ಆದರೆ ಅತನನ್ನು ಬಿಡುಗಡೆ ಮಾಡಿದರೆ ಅಥವಾ ದರ್ಯಾಪ್ತಿಗೆ ಗುರಿಪಡಿಸಿದರೆ ಈಗಿನ ಗಲಭೆಯೆಲ್ಲಾ ನಿವಾರಣೆಯಾಗುವುದೆಂದು ನೀವು ಹೇಳುವ ಮಾತನ್ನು ಮಾತ್ರ ನಾನು ಸಂ[illegible]ಲಾರೆನು

ಡಾ|| ರದರ್ಫರ್ಡ್.—ಆ ದೊಡ್ಡ ಮನುಷ್ಯನನ್ನು ಹಿಡಿದು ದರ್ಯಾಪ್ತಿ ಇಲ್ಲದೆ ಗಡೀಪಾರುಮಾಡುವುದಕ್ಕೆ ಅತನ ಮೇಲೆ ಹೊರಿಸಲ್ಪಟ್ಟಿರುವ ಅಪರಾಧವೇನು ?

ಮೆ|| ಮಾರ್ಲಿ —೧೮೧೮ ನೆ ಇಸವಿ ಕಾನೂನಿನಂತೆ ಅತನನ್ನು ದಸ್ತಗಿರಿಮಾಡಿದೆ ಆ ಕಾನೂನು ಪ್ರಕಾರ ಅತನ ಮೇಲೆ ಇಂಥಾ ಅಪರಾಧ ಹೊತ್ತಿದೆ ಎಂದು ನಿರ್ಧರಿಸಿ ಹೇಳಬೇಕಾದ ಅಗತ್ಯವಿಲ್ಲ.

ಡಾ|| ರದರ್ಫರ್ಡ್ —ಅತನ ಮೇಲೆ ಹೊತ್ತಿರುವ ಅಪರಾಧಗಳ ವಿಷಯದಲ್ಲಿ ನಿಮಗೇನೇ ಏನಾದರೂ ದೃಷ್ಟಾಂತಗಳೂ ರುಜುವಾತುಗಳೂ ತಿಳಿದು ಬಂದಿವೆಯೋ ?

ಮೆ|| ಮಾರ್ಲಿ —ನೀವು ಇನ್ನೊಂದು ವಾರದ ತನಕ ತಡೆದ ಪಕ್ಷದಲ್ಲಿ ಎಲ್ಲಾ ಸಂಗತಿಗಳನ್ನೂ ನಿಮಗೆ ತೃಪ್ತಿಯಾಗುವಂತೆ ಅಗತ್ಯವಾಗಿ ತಿಳಿಸುತ್ತೇನೆ.

ಮೆಂಬರ್ ಮೆ|| ಒಗ್ರೇಡಿ —ಜಮೀನಿನ ಮತ್ತು ನೀರಿನ ಕಂದಾಯಗಳನ್ನು ಹೆಚ್ಚುಮಾಡಿದ ವಿಚಾರವಾಗಿ ಒಂದು ಸಭೆಯಲ್ಲಿ ಮಾತನಾಡಿದ್ದಕ್ಕಲ್ಲವೇ ಅತನನ್ನು ಹಿಡಿದು ಗಡೀಪಾರು ಮಾಡಿದ್ದು ? ಅದು ರಾಜದ್ರೋಹವೇ ? ಅದಕ್ಕಾಗಿ ಅತನನ್ನು ೧೮೧೮ನೆ ಇಸವಿಯ ಕಾನೂನಿಗೆ ಒಳಪಡಿಸಿ ಹಿಡಿಯಬೇಕೋ ?

ಮೆ|| ಮಾರ್ಲಿ.—ಇದೇನೂ ಸಣ್ಣ ಪ್ರಶ್ನೆಯಲ್ಲ. ಇದಕ್ಕೆ ಸಮಾಧಾನ ಹೇಳಬೇಕಾದರೆ ನಾನು ಕಡೇಪಕ್ಷ ಅರ್ಧಗಂಟೆಯ ಹೊತ್ತಿನ ತನಕ ಅನೇಕ ಸಂಗತಿಗಳನ್ನು ಕುರಿತು ವಿವರಿಸುತ್ತಾ ಇರಬೇಕಾಗುವುದು

ಇಂಡಿಯಾ ದೇಶದ ವೃತ್ತಾಂತಗಳು.

ಕಳೆದ ವಾರ ಹಿಂದುಸ್ಥಾನದಲ್ಲಿ ೨೬,೦೦೦ ಜನರಿಗೆ ಪ್ಲೇಗ್ ತಗಲಿತು ೨೪,೦೦೦ ಜನರು ತೀರಿಹೋದರು. ಈ ಪೈಕಿ ಪಂಜಾಬಿನಲ್ಲಿ ೨೦,೦೦೦ ಮರಣಗಳಾಗಿರುತ್ತವೆಂದು ತಿಳಿಯುವುದು.

❦❦❦

ಕಾಶ್ಮೀರದ ಮಹಾರಾಜರವರು ತಮ್ಮ ಸಂಸ್ಥಾನದಲ್ಲಿ ಪ್ರಜೆಗಳಿಗೆ ಕಸಬುದಾರಿ ವಿದ್ಯೆಗಳನ್ನು ಕಲಿಸಬೇಕೆಂದು ಕುತೂಹಲಪಟ್ಟು, ಅದಕ್ಕಾಗಿ ಅನೇಕ ಕಡೆ ಪಾಠಶಾಲೆಗಳನ್ನು ಇಟ್ಟು ನಡಸುವಂತೆ ಹುಕುಂ ಕೊಟ್ಟಿದ್ದಾರೆ

❦❦❦

ಪಂಜಾಬ್ ಆಧಿಪತ್ಯಕ್ಕೆ ಒಳಪಟ್ಟ ಬಂಪಾಕ್ ಎಂಬ ಸಣ್ಣ ಸಂಸ್ಥಾನದ ರಾಜರು ಫಲಬೀರ್‌ಸಿಂಗ್ ಎಂಬ ಕುಮಾರನನ್ನು ಪಡೆದಿದ್ದರೂ ಇನ್ನೊಬ್ಬ ರಾಜರ ಸಹೋದರನನ್ನು ದತ್ತು ಮಾಡಿಕೊಂಡರು ಈಗ ಆ ಔರಸ ಪುತ್ರನು ದತ್ತ ಸ್ವೀಕಾರವನ್ನು ರದ್ದು ಮಾಡಬೇಕೆಂದು ವ್ಯಾಜ್ಯ ಮಾಡಲಾರಂಭಿಸಿದ್ದಾನೆ

❦❦❦

ಲಾಹೋರ್ ಪಟ್ಟಣದಲ್ಲಿ ವಾರಕ್ಕೊಂದಾವರ್ತಿ ಪ್ರಕಟವಾಗುತ್ತಿದ್ದ " ಹಿಂದುಸ್ಥಾನ " ಎಂಬ ದೇಶ ಭಾಷೆಯ ವರ್ತಮಾನ ಪತ್ರಿಕೆ

ರಾಜದ್ರೋಹಕರವಾದ ಬುತ್ತಿಗಳನ್ನು ಪ್ರಕಟಿಸಿತೆಂದು ಮೊಕದ್ದಮೆ ಆಗಿದೆ. ಅದರ ಎಡಿಟರಾದ ೨೦ ವಯಸ್ಸಿನ ಲಾಲಾ ದೀನನಾಥನನ್ನು ಹಿಡಿದು ಲಾಕಪ್ಪಿನಲ್ಲಿಟ್ಟಿದ್ದಾರೆ.

❦❦❦

ಲಾಹೋರ್ ಪಟ್ಟಣದಲ್ಲಿ ಸರ್ಕಾರದವರು ೩೦ ಮಂದಿ ದೊಡ್ಡ ಮನುಷ್ಯರನ್ನು ಹಿಡಿದು, ದಂಗೇ ಮಾಡಿದರೆಂದು ಅವರ ಮೇಲೆ ಮೊಕದ್ದಮೆ ತಂದಿದ್ದಾರೆ. ಅವರನ್ನು ಮ್ಯಾಜಿಸ್ಟ್ರೇಟರು ಜಾಮೀನ್ ಮೇಲೆ ಬಿಟ್ಟಾಗ ಅವರಲ್ಲಿ ಅನೇಕರು ಹಣತಂದುಕಟ್ಟಿ ಹೊರಟುಹೋದರು. ಆದರೆ ಕೆಲವರು ಎಲ್ಲೋ ತಲೆತಪ್ಪಿಸಿಕೊಂಡು ಹೋಗಿರುತ್ತಾರೆಂದು ತಿಳಿದುಬಂದಿದೆ.

❦❦❦

ಅಲಹಾಬಾದ್ ಪಟ್ಟಣದಲ್ಲಿ ವೆಸ್ಟ್ ಉರ್ಫ್ ರಿಚರ್ಡ್ಸ್‌ರು ಎಂಬೊಬ್ಬ ಕಟ್ಟೇಗಾರನು ಕಳುವಿನ ಬೈಸಿಕಲ್ ಗಾಡಿಯನ್ನು ಬಿಚ್ಚಿ ರಿಮಾ... ಸೆಷನ್ ಕೋರ್ಟಿನಲ್ಲಿ ರುಜುವಾತಾಯಿತು. ಅವನಿಗೆ ಇದುವರೆಗೆ ಏಳು ಸಲ ಸಜಾ ಆಗಿತ್ತೆಂತಲೂ ೨೫ ವರುಷ ಜೈಲ್ ವಾಸ ಮಾಡಿರುತ್ತಾನೆಂತಲೂ ಗೊತ್ತಾದ್ದರಿಂದ ಸೆಷನ್ಸ್ ಜಡ್ಜರು ಅವನಿಗೆ ಈ ಮೊಕದ್ದಮೆಯಲ್ಲಿ ಹತ್ತು ವರುಷ ಕಠಿಣಸಜಾ ವಿಧಿಸಿದರು.

❦❦❦

ಲಾಹೋರ್ ಪಟ್ಟಣದ ೧೪ ಬಂಗಾವಾಳವೆಂಬ ಗ್ರಾಮಕ್ಕೆ ಪ್ಲೇಗ್ ರೋಗವು ತಲೆಹಾಕಿತು. ಜನರು ಸಾಯುತ್ತಾ ಬಂದರು. ಸತ್ತವರ ಹೆಣಗಳನ್ನು ಸಾಗಿಸುವುದಕ್ಕೆ ಎಲ್ಲರೂ ಹೆದರಿಕೊಂಡದ್ದನ್ನು ಅಲ್ಲಿನ ಜಹಗೀರದಾರನು ನೋಡಿ ತುಂಬಾ ಕನಿಕರಪಟ್ಟು, ತಾನೊಬ್ಬನೇ ೫೦ ಹೆಣಗಳ ತನಕ ಹೊತ್ತುಕೊಂಡು ಹೋಗಿ ಸಮಾಧಿ ಮಾಡಿದನು. ಈಗ ಈ ಪುಣ್ಯಾತ್ಮನಿಗೂ ಪ್ಲೇಗ್ ತಗಲಿ ಕಾಲವಾದನೆಂದು ತಂತೀ ವರ್ತಮಾನ ಬಂದಿದೆ.

❦❦❦

ಕಳೆದ ವಾರ ಒಂದು ದಿನ ರಾತ್ರಿ ಕಲ್ಕತ್ತಾ ಪಟ್ಟಣದ ನಸ್ಸಾರ ... ಎಂಬ ಐಶ್ವರ್ಯವಂತನ ಮನೆಗೆ ಕಳ್ಳರು ನುಗ್ಗಿ ಸಾವಿರಾರು ರೂಪಾಯಿ ನಗನಾಣ್ಯಗಳನ್ನು ಅಪಹರಿಸಿಕೊಂಡು ಹೋಗುತ್ತಿದ್ದರು. ಅವರ ಶಬ್ದವನ್ನು ಕೇಳಿ ಆ ಮನೆಯ ಯಜಮಾನಗಿತ್ತಿಯೂ ... ಬೆಟ್ಟಳೂ ಹೋಗಿ ಬಹಳ ಶಕ್ತಿ ಸಾಮರ್ಥ್ಯಾದಿಗಳನ್ನು ಪ್ರಕಾಶಿಸಿ ಆ ಕಳ್ಳರನ್ನು ಗಟ್ಟಿಯಾಗಿ ಹಿಡಿದುಕೊಂಡು, ಕೂಗಿಕೊಂಡರು. ನೆರೆಯವರು ಕೂಡಲೇ ಬಂದು ಅವರನ್ನು ಕಟ್ಟಿ ಪೋಲೀಸಿನವರಿಗೆ ಒಪ್ಪಿಸಿದರು. ಆ ಹೆಂಗಸರ ಧೈರ್ಯ ಸಾಹಸಗಳನ್ನು ನೋಡಿ ಜನರು ಸಂತೋಷಪಡುತ್ತಿದ್ದಾರೆ.

❦❦❦

ಹೈದರಬಾದ್ ಪಟ್ಟಣದಲ್ಲಿ ನೈಜಾಮರವರು ಸ್ಥಾಪಿಸಿ ನಡೆಸುತ್ತಾ ಇರುವ ಅನಾಥಾಲಯವು ೧೯೦೦-೦೧ ನೆ ಸಾಲಿನ ಕ್ಷಾಮದಲ್ಲಿ ಅನಾಥರಾದ ೬೦೦ ಗಂಡು ಹೆಣ್ಣು ಮಕ್ಕಳನ್ನು ಸಂಪಾದಿಸಿಕೊಂಡು, ಅವರುಗಳನ್ನು ಸಂರಕ್ಷಣೆ ಮಾಡಿ ವಿದ್ಯೆ ಬುದ್ಧಿಗಳನ್ನು ಕಲಿಸುತ್ತಾ ಇದೆ. ಇದುವರೆಗೆ ೩೦೦ ಹುಡುಗರೂ ಹುಡುಗಿಯರೂ ಯೋಗ್ಯರುಗಳಾಗಿ ಬೆಳೆದು ಸ್ವತಂತ್ರವಾಗಿ ಜೀವನ ಮಾಡಿಕೊಳ್ಳುತ್ತಿದ್ದಾರೆ. ಈಗಲೂ ಈ ಅನಾಥಾಲಯದಲ್ಲಿ ೩೦೦ ಮಂದಿ ಇರುತ್ತಾರೆಂತಲೂ ಇದರ ಅಭಿವೃದ್ಧಿಯ ವಿಷಯದಲ್ಲಿ ನೈಜಾಮರವರೂ ಅಲ್ಲಿನ ದೊಡ್ಡ ಮನುಷ್ಯರೂ ವಿಶೇಷವಾದ ಪ್ರೀತಿ ಉತ್ಸಾಹಗಳನ್ನು ತೋರಿಸುತ್ತಾ ಇದ್ದಾರೆಂತಲೂ ತಿಳಿದುಬಂದಿದೆ.

❦❦❦

ಕಾಕಿನಾಡದಲ್ಲಿ ಜನರು ದಂಗೆಯೇಳುತ್ತಾರೆಂದು ತೋರಿದ್ದರಿಂದ ಮದ್ರಾಸ್ ಗವರ್ನಮೆಂಟಿನವರು ಅಲ್ಲಿಗೆ ಶಿಕ್ಷಾರ್ಥವಾದ ಪೋಲೀಸ ನೇಮಕ ಮಾಡಿದ್ದಲ್ಲದೆ ಗಲಭೆಯೇನೂ ಆಗದಂತೆ ಬಂದೋಬಸ್ತು ಮಾಡುವುದಕ್ಕೋಸ್ಕರ ಸೈನ್ಯಗಳನ್ನೂ ಕಳುಹಿಸಿದರಷ್ಟೆ. ಮಚಲಿಬಂದರು (ಮಸೂಲಿಪಟ್ಟಂ) ಪ್ರಜೆಗಳು ಒಂದು ಸಭೆಯನ್ನು ನಡಿಸಿ—ಕಾಕಿನಾಡಕ್ಕೆ ಶಿಕ್ಷಾರ್ಥವಾದ ಪೋಲೀಸನ್ನು ಸರ್ಕಾರದವರು ನೇಮಿಸಿದ್ದು ಅನಾವಶ್ಯಕವಾದದ್ದು ಮತ್ತು ಅನ್ಯಾಯವಾದದ್ದು. ಆದ್ದರಿಂದ ಕಾಕಿನಾಡ ಮ್ಯುನಿಸಿಪಾಲಿಟಿಯ ಮೆಂಬರುಗಳು ತಮ್ಮ ಗೌರವ ಕಾಪಾಡಿಕೊಳ್ಳುವುದಕ್ಕೋಸ್ಕರ ಮೆಂಬರ್ ಕೆಲಸಕ್ಕೆ ಎಲ್ಲರೂ ಸೇರಿ ರಾಜೀನಾಮೆ ಕೊಟ್ಟುಬಿಡತಕ್ಕದ್ದು ಎಂಬದಾಗಿ ತೀರ್ಮಾನ ಮಾಡಿರುತ್ತಾರೆ.

❦❦❦

ಸಿಲೋನ್ (ಲಂಕಾ) ದ್ವೀಪದಲ್ಲಿ ಸರ್ಕಾರದವರು ಅಕ್ಕಿಯ ಮೇಲೆ ಸುಂಕ ಹಾಕಿ ವಸೂಲ್ಮಾಡುತ್ತಿದ್ದಾರೆ. ಅದನ್ನು ಕಡಿಮೆ ಮಾಡಬಾರದೆ? ಅಕ್ಕಿಯು ಜನರ ಮುಖ್ಯ ಆಹಾರ ದವಸವಾದ್ದರಿಂದ ಅದರ ಮೇಲೆ ಸುಂಕ ಹಾಕಿರುವುದು ತರವಲ್ಲವೆಂತಲೂ ವಿಲಾಯತಿ ಪಾರ್ಲಿಮೆಂಟಿನಲ್ಲಿ ಮಿ॥ ವಿಯರ್ ಎಂಬ ಮೆಂಬರು ಮಿ॥ ವಿನ್ಸ್ಟನ್ ಚರ್ಚಿಲ್ ರವರನ್ನು ಕೇಳಿದರು. ಅದಕ್ಕೆ ಇವರು ಪ್ರತ್ಯುತ್ತರ—ಈ ಸುಂಕವು ಜನರಿಗೆ ತುಂಬಾ ಹೊರೆಯಾಗಿದೆ ಎಂದು ಕೇಳಿದ್ದಿಲ್ಲವು. ಈ ಸುಂಕದ ಹಣದಿಂದ ಪ್ರಜೆಗಳಿಗೆ ತುಂಬಾ ಅನುಕೂಲವಾದ ರೈಲ್ ರಸ್ತೆಗಳನ್ನೂ ನೀರಾವರಿ ಕಾಮಗಾರಿಗಳನ್ನೂ ಮಾಡುತ್ತೇವೆ. ಆದ್ದರಿಂದ ಈ ಸುಂಕವನ್ನು ಕಡಿಮೆ ಮಾಡಬೇಕಾದ ಅಗತ್ಯ ಕಂಡುಬರುವುದಿಲ್ಲವೆಂದು ಹೇಳಿದರು.

❦❦❦

ರಾವಲ್ಪಿಂಡಿ ದಂಗೆ ಮೊಕದ್ದಮೆಯಲ್ಲಿ ಸರ್ಕಾರದವರು ಇದುವರೆಗೆ ೬೨ ಮಂದಿಯನ್ನು ದಸ್ತಗಿರಿ ಮಾಡಿರುತ್ತಾರೆ. ಇನ್ನು ಜನರು ಸಿಕ್ಕಿ ಇಲ್ಲ. ಇವರೆಲ್ಲಾ ವಿದ್ಯಾವಂತರು, ಪ್ರಜೆಗಳ ಮುಖಂಡರು, ಕಣಗಾರರು. ಈಗ ಒಂದು ತಿಂಗಳಿಂದಲೂ ಸ್ಪೆಷಲ್ ಮ್ಯಾಜಿಸ್ಟ್ರೇಟರು ಈ ಮೊಕದ್ದಮೆಯನ್ನು ದರ್ಯಾಫ್ತು ಮಾಡುತ್ತಿದ್ದಾರೆ. ಇದುವರೆಗೆ ೭೦ ಮಂದಿ ಸಾಕ್ಷಿಗಳ ಕೈಫಿಯತ್ತು ಮುಗಿದಿರುವುದೆಂತಲೂ, ಇನ್ನೂ ೧೪೦ ಸಾಕ್ಷಿಗಳ ಕೈಫಿಯತ್ತಾಗಬೇಕಾಗಿದೆ ಎಂತಲೂ ತಿಳಿದುಬರುತ್ತದೆ. ಅಪರಾಧಿಗಳ ಕಡೆ ವಕೀಲರಾಗಿ ನಿಂತಿದ್ದ ಐದು ಮಂದಿ ಲಾಯರುಗಳು ಈ ಮೊಕದ್ದಮೆ ಬಂದ ಲಾಗಾಯಿತು ಕಳ್ಳಕಾಕರ ಹಿಂಸೆಗೆ ಗುರಿಯಾಗಿರುವಂತೆಯೂ ತಮ್ಮ ಮನೆ ಮಠಕ್ಕೆ ಉಳಿವು ಬಾಳಿಲ್ಲವೆಂತಲೂ ಮ್ಯಾಜಿಸ್ಟ್ರೇಟರಿಗೆ ತಿಳಿಸಿ, ಈ ಮೊಕದ್ದಮೆಯಲ್ಲಿ ತಾವು ವಕಾಲತ್ತು ನಡಸುವುದಿಲ್ಲವೆಂದು ಹೇಳಿ ಬಿಟ್ಟುಹೋದರು.

❦❦❦

ಛೋಟಾನಾಗಪುರದಲ್ಲಿ ರಾಂಚಿ ಮತ್ತು ಹಜಾರಿಬಾಗುಗಳ ಬಳಿ ಇರತಕ್ಕ ಪಾರ್ಶ್ವನಾಥ ಪರ್ವತದ ಮೇಲ್ಭಾಗದಲ್ಲಿ ಯೂರೋಪ್ಯರು ಬೇಸಿಗೆಯನ್ನು ಕಳೆಯುವುದಕ್ಕೆ ಯೋಗ್ಯವಾದ ಬಂಗಲೆ ಮತ್ತು ಉದ್ಯಾನವನಗಳನ್ನು ಕಟ್ಟಿಕೊಳ್ಳಬೇಕೆಂದು ಪ್ರಯತ್ನಪಟ್ಟದ್ದಕ್ಕೆ ಬೊಂಬಾಯಿ, ಕಲ್ಕತ್ತಾ ಮೊದಲಾದ ಕಡೆಗಳಲ್ಲಿರುವ ಜೈನಪ್ರಜೆಗಳೂ ಸಾಹುಕಾರರೂ ವರ್ತಕರೂ ಅಲ್ಲಲ್ಲಿ ಸಭೆಗಳನ್ನು ನಡಿಸಿ, ಆ ಬೆಟ್ಟದ ಮೇಲೆ ಬಂಗಲೆ ಮುಂತಾದ್ದೇನೂ ಕಟ್ಟಕೂಡದೆಂದು ತೀರ್ಮಾನ ಮಾಡಿ, ಲೆಫ್ಟಿನೆಂಟ್ ಗವರ್ನರವರಿಗೆ ಅರ್ಜಿ ಬರೆದುಕೊಂಡಿದ್ದರಷ್ಟೆ. ಈಚೆಗೆ ಗವರ್ನಮೆಂಟ್ ಅಧಿಕಾರಿಗಳು ಜೈನ ಪ್ರತಿನಿಧಿಗಳನ್ನು ಕರೆಸಿಕೊಂಡು ಅವರಲ್ಲಿ ಆಲೋಚನೆ ಮಾಡಿ, ಬಂಗಲೆ ಕಟ್ಟಿಕೊಳ್ಳಬಹುದೆಂದು ಅವರಿಂದ ಒಪ್ಪಿಗೆಯನ್ನು ಪಡೆದಿರುತ್ತಾರೆಂತಲೂ ಆ ಸುಂದರವಾದ ಬೆಟ್ಟದ ಮೇಲೆ ಅನೇಕ ಬಂಗಲೆ ಆರಾಮಾದಿಗಳು ಇಷ್ಟರಲ್ಲೇ ಕಟ್ಟಲಾರಂಭವಾಗುವವೆಂತಲೂ ತಿಳಿದುಬಂದಿದೆ.

❦❦❦

ಹಿಂದುಸ್ಥಾನದ ಪ್ರಜೆಗಳು ಜೀವನಾರ್ಥವಾಗಿ ದಕ್ಷಿಣ ಆಫ್ರಿಕಕ್ಕೆ ಹೋಗಿ ಸೇರಿಕೊಂಡಿದ್ದಾರಷ್ಟೆ. ಈ ಜನರಿಗೆ ಅಲ್ಲಿನ ಸರ್ಕಾರದವರು ಮಾಡಿಟ್ಟಿರುವ ನಿರ್ಬಂಧಗಳೇನಂದರೆ.—ಏಷ್ಯಾ ಖಂಡದ ಜನರು ತಮ್ಮ ಹೆಸರಿನಲ್ಲಿ ಯಾವ ಆಸ್ತಿಯನ್ನೂ ತಮ್ಮ ಸ್ವಂತವಾದದ್ದೆಂದು ರಿಜಿಸ್ಟರ್ ಮಾಡಿಸಿಕೊಳ್ಳಕೂಡದು, ಅಂಥಾದ್ದನ್ನು ದಕ್ಷಿಣ ಆಫ್ರಿಕಾ ಸರ್ಕಾರದವರು ರಿಜಿಸ್ಟರ್ ಮಾಡಿಕೊಡುವುದೂ ಇಲ್ಲ. ರಾಜಕೀಯ ಸಭೆಯನ್ನಾಗಲಿ ಮ್ಯುನಿಸಿಪಲ್ ಬೋರ್ಡುಗಳಿಗಾಗಲಿ ಅವರನ್ನು ಮೆಂಬರಾಗಿ ಸೇರಿಸಿಕೊಳ್ಳುವುದಿಲ್ಲ; ಮತ್ತು ಇಂಥಾವರು ಮೆಂಬರಾಗಬಹುದೆಂದು ಅವರು ಓಟ್ (ಸಮ್ಮತಿ) ಸುದಾ ಹಾಕಕೂಡದು. ಅಕ್ಷರಸ್ಥರಾಗಿರಲಿ, ಇಲ್ಲದೇ ಇರಲಿ ಪ್ರತಿ ಒಬ್ಬರೂ ಅಲ್ಲಿನ ಸರ್ಕಾರಿ ಕಚೇರಿಗಳಿಗೆ ಹೋಗಿ ತಮ್ಮ ಬೆರಳಿನ ಗುರುತನ್ನು ಒತ್ತಿ ಬರಬೇಕು. ಈ ರೀತಿಯಾಗಿ ನಾನಾ ನಿರ್ಬಂಧಗಳನ್ನು ಕಲ್ಪಿಸಿರುತ್ತಾರೆ. ಇದನ್ನೆಲ್ಲಾ ನಿರ್ಮೂಲ ಮಾಡಿಕೊಡಬೇಕೆಂದು ಕೆಲವು ಮುಖಂಡರು ಒಂದು ಅರ್ಜಿ ಬರೆದು, ಟ್ರಾನ್ಸ್ವಾಲ್ ಪ್ರೆಸಿಡೆಂಟ್ ಜನರಲ್ ಬೋಥಾ ಯವರಿಗೆ ಒಪ್ಪಿಸಿರುವರು.

❦❦❦

ಹಿಂದುಸ್ಥಾನದ ಹಲವು ಪ್ರಾಂತ್ಯಗಳಿಂದ ಹಿಂದೂ ಯೌವನಸ್ಥರು ಜಪಾನ್ ರಾಜ್ಯಕ್ಕೆ ಹೋಗಿ ಅಲ್ಲಿನ ಕಸಬುಗಳ ವಿದ್ಯಾಶಾಲೆಗಳಲ್ಲಿ ಸೇರಿಕೊಂಡು ಕಸಬು ಕಲಿಯುತ್ತಿದ್ದಾರಷ್ಟೆ. ಇವರೆಲ್ಲಾ ಕೆಲವು ದಿನಗಳ ಕೆಳಗೆ ಜಪಾನ್ ರಾಜಧಾನಿಯಾದ ಟೋಕಿಯೋ ನಗರದ ಒಂದು ದೊಡ್ಡ ಸಭಾಮಂದಿರದಲ್ಲಿ ಸಭೆ ಸೇರಿ ಶಿವಾಜಿ ಮಹಾರಾಜನ ಜನ್ಮೋತ್ಸವವನ್ನು ಮಾಡಿದರು. ಈ ಸಭೆಗೆ ಕೌಂಟ್ ಒಕೂಮಾ ಎಂಬ ಜಪಾನ್ ರಾಜಮಂತ್ರಜ್ಞರು ಪ್ರೆಸಿಡೆಂಟರಾಗಿದ್ದರು. ಹಿಂದೂ ವಿದ್ಯಾರ್ಥಿಗಳು ದೇವರ ಪ್ರಾರ್ಥನೆ ಮಾಡಿ ಸಭಾಕಾರ್ಯಗಳನ್ನು ಪ್ರಾರಂಭಿಸಿದರು. ಮಿ॥ ಎನ್ ಎ ಸ್ರಭೂನ್, ಮಿ॥ ಜಿ ಎನ್ ಶ್ರೋಟ್‌ದರ್ ಎಂಬ ಹಿಂದುಸ್ಥಾನದ ವಿದ್ಯಾರ್ಥಿಗಳು ತಮ್ಮ ಮಾತೃಭಾಷೆಯಲ್ಲೂ ಜಪಾನಿ ಭಾಷೆಯಲ್ಲೂ ಶಿವಾಜಿ ಮಹಾರಾಜನ ಜೀವಚರಿತ್ರೆಯನ್ನು ದೀರ್ಘವಾಗಿ ವಿವರಿಸಿ ಹೇಳಿದರು. ಕಡೆಯಲ್ಲಿ ಕೌಂಟ್ ಒಕೂಮಾರವರು ಎದ್ದು ಸಭಿಕರಾದ ಹಿಂದೂಸ್ಥಾನದ ವಿದ್ಯಾರ್ಥಿಗಳನ್ನು ಕುರಿತು ಕೆಲವು ಬುದ್ಧಿ ಮಾತುಗಳನ್ನು ಹೇಳಿದರು. ಅದರ ಸಾರಾಂಶವೇನೆಂದರೆ—ನಿಮ್ಮ ಹಿಂದುಸ್ಥಾನದ ಈಗಿನ ಸ್ಥಿತಿಗತಿಗಳನ್ನು ನೀವು ಚೆನ್ನಾಗಿ ತಿಳಿದುಕೊಳ್ಳಿ. ನೀವು ಅಪೇಕ್ಷಿಸುವಂಥಾ ಮೇಲ್ಮೆಯಾದ ಪದವಿ ಅಧಿಕಾರ ಸ್ವಾತಂತ್ರ್ಯಾದಿಗಳನ್ನು ಪಡೆಯಲೋಸುಗ ನೀವು ತಕ್ಕ ಯೋಗ್ಯತಾಸಿದ್ಧಿಯನ್ನು ಸಂಪಾದಿಸಿಕೊಳ್ಳಬೇಕು. ನಿಮ್ಮ ಭಕ್ತಿಮಾರ್ಗವನ್ನೂ ನಿಮ್ಮ ಗುಣ ನಡೆನುಡಿಗಳನ್ನು ಕ್ರಮಪಡಿಸಿಕೊಳ್ಳಿ. ದಂಗೆ ಏಳೋಣದರಿಂದ ನಿಮಗೆ ಯಾವ ಫಲವೂ ಉಂಟಾಗಲಾರದು, ಅದರಿಂದ ನಷ್ಟವೂ ಸಂಕಟಾದಿಗಳೂ ಪ್ರಾಪ್ತವಾಗುವವಲ್ಲದೆ ಬೇರೇನೂ ಇಲ್ಲ. ಒಳದೇಶದಲ್ಲಿಯೇ ಒಳಸಭೆಗಳೂ, ಪರಸ್ಪರ ಅಸೂಯೆ ಜಗಳಾದಿಗಳೂ, ದುಷ್ಕಾರ್ಯಗಳೂ ಇರುವ ತನಕ ನೀವು ಗುಲಾಮರಾಗಿರುತ್ತೀರಿ. ಹೊರಗಿನವರು ಬಂದು ನಿಮ್ಮನ್ನು ಆಳಬೇಕೆಂಬ ಆಗತ್ಯವಿಲ್ಲ. ಇಂಗ್ಲಿಷ್ ಪ್ರಭುಗಳು ಬಹಳ ದಯಾಳುಗಳು, ಸ್ವಾತಂತ್ರ್ಯಪ್ರಿಯರು. ಕೆನಡಾ, ಆಸ್ಟ್ರೇಲಿಯಾ ಸಂಸ್ಥಾನಗಳಲ್ಲಿ ವಸರ... ಎಲ್ಲಾ ಭಾಗಗಳಲ್ಲಿ ... ಆಗಿದ್ದ ಕಾರಣ ಅವರಿಗೆ ಸ್ವತಂತ್ರಾಧಿಕಾರಗಳನ್ನು ಕೊಟ್ಟಿರುತ್ತಾರೆ. ಆದಕಾರಣ ನೀವು ಕೂಡ ಅವರಂತೆಯೇ ಮೊದಲು ಸಂಪಾದಿಸಿ ಅಂಥಾ ಯೋಗ್ಯತೆಯನ್ನು ಸಂಪಾದಿಸಿಕೊಳ್ಳಬೇಕಾಗಿದೆ ಎಂಬುದೇ.

ವಿದೇಶ ವರ್ತಮಾನಗಳು.

ಆಫ್ರಿಕಾದಲ್ಲಿರುವ ಸೊಮಾಲಿ ಪ್ರಾಂತ್ಯದಲ್ಲಿ ನಿದ್ರಾ ರೋಗವು ಹಬ್ಬುತ್ತಿದೆ. ಅದನ್ನು ಅರಿಗೂವುದಕ್ಕೆ ಕಾರಣ ವಿಚಾರಣೆ ಮಾಡಬೇಕೆಂದು ಜರ್ಮನಿ, ಫ್ರಾನ್ಸ್, ಪೋರ್ಚುಗಲ್, ಸ್ಪೇನ್, ಕಾಂಗೋ, ಮೊದಲಾದ ಕಡೆಗಳ ಪ್ರತಿನಿಧಿಗಳು ಲಂಡನ್ ಪಟ್ಟಣದಲ್ಲಿ ಸೇರಿ ಚರ್ಚೆ ನಡಸುತ್ತಿದ್ದಾರೆ.

ವಿಲಾಯತಿ ರಾಜ್ಯದಲ್ಲಿ ಮ್ಯುನಿಸಿಪಲ್ ಸಭೆಗಳಿಗೂ ಡಿಸ್ಟ್ರಿಕ್ಟ್ ಬೋರ್ಡ್ ಸಂಘಗಳಿಗೂ ಯೋಗ್ಯರಾದ ಸ್ತ್ರೀಯರು ಮೆಂಬರುಗಳಾಗಿ ಚುನಾಯಿಸಲ್ಪಡುವುದಕ್ಕೆ ಸರ್ಕಾರದವರು ಒಂದು ಕಾನೂನ್ ಮಾಡಬೇಕೆಂದಿದ್ದಾರೆ.

❦❦❦

ರಷ್ಯಾರಾಜ್ಯಕ್ಕೆ ಸೇರಿದ ಕೀವ್ ಎಂಬ ಪಟ್ಟಣದಲ್ಲಿ ೫೦೦ ಮಂದಿ ಸೈನಿಕರು ದಂಗೆಮಾಡಿದರು. ಸರ್ಕಾರದವರು ಬೇರೆ ಸೈನ್ಯವನ್ನು ಕಳುಹಿಸಿ, ದಂಗೇಕೋರರ ಮೇಲೆ ಗುಂಡು ಹೊಡೆಯುವಂತೆ ಅಪ್ಪಣೆ ಕೊಟ್ಟರು. ಈ ದಂಗೆ ಯುದ್ಧದಲ್ಲಿ ಒಬ್ಬ ಕ್ಯಾಪ್ಟನ್ ಎಂಬ ಹುದ್ದೇದಾರನೂ ೬೩ ಮಂದಿ ಸೈನಿಕರೂ ಮೃತಪಟ್ಟರು. ಅನೇಕರಿಗೆ ಗಾಯಗಳಾದವು. ಕಡೆಗೆ ದಂಗೆಯು ಅಡಗಿಸಲ್ಪಟ್ಟಿತು.

❦❦❦

ಜಮೇಕಾ, ವಾರ್ಷೇವಿಯಾ ದ್ವೀಪಗಳಲ್ಲಿ ಕಳೆದ ವಾರ ಭಯಂಕರವಾದ ಭೂಕಂಪಗಳಾದವು. ಜಮೇಕಾ ದ್ವೀಪದಲ್ಲಿ ಪೋರ್ಟ್ ರಾಯಲ್ ನಗರದೊಳಗಿದ್ದ ಸೈನಿಕರು ಗಾಬರಿಬಿದ್ದು ಆತುರದಿಂದ ಮೈದಾನಿಗೆ ಓಡಿಬಂದದ್ದರಲ್ಲಿ ೪೭ ಜನರಿಗೆ ಜಖಂ ಆಯಿತು. ೧೮ ಮಂದಿಗೆ ಪೂರಾ ಪೆಟ್ಟು ಬಿದ್ದಿದೆ. ೫ ಜನರು ಸತ್ತುಹೋದರು. ವಾರ್ಷೇವಿಯಾದಲ್ಲಿ ಅನೇಕ ಮನೆಗಳು ಕಳಚಿ ಬಿದ್ದುಹೋದವು.

❦❦❦

ಟ್ರಾನ್ಸ್ವಾಲ್ ಎಂಬ ಇಂಗ್ಲಿಷ್ ಸಂಸ್ಥಾನದ ಗವರ್ನರಾದ ಜನರಲ್ ಬೋಥಾಯವರು ಅಲ್ಲಿನ ಗಣಿಗಳಲ್ಲಿ ಕೆಲಸ ಮಾಡುವಂಥಾ ಚೀಣಾ ಕೂಲಿಯವರನ್ನೆಲ್ಲಾ ೧೯೦೯ ನೆ ಇಸವಿಯೊಳಗಾಗಿ ಅಲ್ಲಿಂದ ವಾಪಸು ಕಳುಹಿಸಿಬಿಡಬೇಕೆಂತಲೂ, ಸದ್ಯ ಈ ವರುಷವು ಅಂತ್ಯವಾಗುವಷ್ಟರಲ್ಲಿ ಆ ಪೈಕಿ ೧೬,೦೦೦ ಚೀಣೆಯವರನ್ನು ಕಳುಹಿಸಿ ಕೊಡುವುದಾಗಿಯೂ ತಿಳಿಸಿದ್ದಾರೆ. ಅಲ್ಲಿನ ದೇಶೀಯ ಜನರೇ ಕೂಲಿ ಕೆಲಸಗಳಿಗೆ ಒದಗುತ್ತಾರೆಂಬುದೇ ಅವರ ಅಭಿಪ್ರಾಯವಾಗಿದೆ.

❦❦❦

ಜರ್ಮನ್ ರಾಜ್ಯದವರು ಫಾರ್ಮೋಸಾ ದ್ವೀಪವನ್ನೆಲ್ಲಾ ತಮ್ಮ ಸ್ವಾಧೀನಕ್ಕೆ ತಂದುಕೊಂಡು ಅಲ್ಲಿನ ಸ್ವದೇಶಿಗಳನ್ನು ತಮ್ಮ ಪ್ರಜೆಯಾಗಿ ಮಾಡಿಕೊಳ್ಳಬೇಕೆಂದು ಅಲ್ಲಿಗೆ ಸೈನ್ಯಗಳನ್ನು ಕಳುಹಿಸಿದ್ದಾರೆ. ಆ ಸ್ವದೇಶಿಗಳೆಲ್ಲಾ ಒಂದು ಲಕ್ಷ ಪ್ರಜೆಯಾಗಬಹುದೆಂತಲೂ ಅವರು ಬಹಳ ಫಲವತ್ತಾದ ೬೫,೦೦೦ ಚದರಮೈಲಿಯಷ್ಟು ಭೂಪ್ರದೇಶವನ್ನು ಆಕ್ರಮಿಸಿಕೊಂಡಿದ್ದಾರೆಂತಲೂ ತಿಳಿಯುವುದು. ಜರ್ಮನ್ ಸೈನಿಕರು ಇದುವರೆಗೆ ಆ ಪೈಕಿ ೧,೭೨೪ ಚದರಮೈಲಿಯಷ್ಟು ಪ್ರದೇಶವನ್ನು ತಮ್ಮ ಸ್ವಾಧೀನಕ್ಕೆ ತಂದುಕೊಂಡಿದ್ದಾರೆ.

❦❦❦

ವಿಲಾಯತಿಯಲ್ಲಿ ಕಾಲವಾದ ಇಸ್ಮೆ ಎಂಬಾಕೆಯು ೪೬ ಸಾವಿರ ರೂಪಾಯನ್ನೂ, ಬ್ರೈಟನ್ ಪಟ್ಟಣದ ಮಿ॥ ಉಡ್‌ರೂಫ್ ಎಂಬಾತನು ಒಂದೂವರೆ ಲಕ್ಷ ರೂಪಾಯನ್ನೂ, ಡಬ್ಲಿನ್ ಪಟ್ಟಣದ ಮಿ॥ ಪ್ಯಾಟ್ರಿಕ್ ಕೇರೆನ್ಸ್ ಎಂಬಾತನು ಮೂರೂ ಮುಕ್ಕಾಲು ಲಕ್ಷ ರೂಪಾಯನ್ನು, ಸಸೆಕ್ಸ್ ಪಟ್ಟಣದ ಮಿಸ್ ಜೂಲಿಯಾನಾ ಗ್ರೆಗರಿ ಎಂಬಾಕೆಯು ೪೦ ಸಾವಿರ ರೂಪಾಯನ್ನೂ, ವುಸ್ಟರ್ ಡಿಸ್ಟ್ರಿಕ್ಟಿನ ಮಿ॥ ಎಡ್ವರ್ಡ್ ಆಗಸ್ಟಸ್ ಒಲಿವಿಯರಿ ಎಂಬಾತನು ಒಂದೂವರೆ ಲಕ್ಷ ದ್ರವ್ಯವನ್ನೂ ಧರ್ಮಕಾರ್ಯಗಳಿಗೆ ಕೊಟ್ಟಿರುತ್ತಾರೆ.

❦❦❦

ಐರ್ಲಾಂಡು ವಿಲಾಯತಿ ರಾಜ್ಯದ ಅಂಗವಾಗಿರುವುದು. ಅಲ್ಲಿನ ಪ್ರಜಾಪ್ರತಿನಿಧಿಗಳು ವಿಲಾಯತಿಯ ಪಾರ್ಲಿಮೆಂಟಿನಲ್ಲಿ ಮೆಂಬರಾಗಿಯೂ ಇರುತ್ತಾರೆ. ಈಚೆಗೆ ವಿಲಾಯತಿ ಗವರ್ನಮೆಂಟಿನವರು ಐರ್ಲಾಂಡಿನ ಪ್ರಜೆಗಳಿಗೆ ಕೆಲವು ಸ್ವತಂತ್ರಾಧಿಕಾರಗಳನ್ನು ವಹಿಸಿ ಕೊಡಬೇಕೆಂದು ಒಂದು ಮಸೂದೆ ಕಾನೂನ್ ಮಾಡಿದರು. ಐರ್ಲಾಂಡಿನ ಪ್ರತಿನಿಧಿಗಳು ಆ ರಿಯಾಯತಿಗಳು ತಮಗೆ ಅವಶ್ಯವಿಲ್ಲವೆಂದು ಹೇಳಿಬಿಟ್ಟರು. ಈಗ ಐರ್ಲಾಂಡಿನವರು ಇಂಗ್ಲಿಷ್ ಗವರ್ನಮೆಂಟಿನವರಿಗೆ ಸಹಾಯ ಮಾಡಬೇಕಾದದ್ದಿಲ್ಲವೆಂತಲೂ, ತಾವು ಸ್ವತಂತ್ರಾಧಿಕಾರಗಳನ್ನೆಲ್ಲಾ ಸಂಪಾದಿಸಿಕೊಳ್ಳುವುದಕ್ಕೆ ಸಾಹಸ ಪಡಬೇಕೆಂತಲೂ ಗೊತ್ತು ಮಾಡಿಕೊಂಡಿದ್ದಾರೆ.

❦❦❦

ಜಪಾನ್ ರಾಜ್ಯದ ಟೋಕಿಯೋ ರಾಜಧಾನಿಯಲ್ಲಿ ಗವರ್ನಮೆಂಟಿನವರೇ ಮುಂದಾಳುಗಳಾಗಿ ನಿಂತು, ೧೯೦೭ ನೆ ವರುಷದ ಏಪ್ರಿಲ್ ೧ ರ ಲಾಗಾಯಿತು ಆಕ್ಟೋಬರ್ ಆಖೈರುವರೆಗೆ ಸರ್ವವಸ್ತು ಪ್ರದರ್ಶನವನ್ನು ನಡಸಬೇಕೆಂದು ತೀರ್ಮಾನಿಸಿ, ಅದಕ್ಕಾಗಿ ಈಗಿನಿಂದಲೂ ಪ್ರಯತ್ನ ಮಾಡುತ್ತಿದ್ದಾರೆ. ಪ್ರದರ್ಶನವು ೨೫೦ ಎಕರೆ ವಿಸ್ತಾರವುಳ್ಳ ಜಮೀನಿನಲ್ಲಿ ನಡೆಯಬೇಕೆಂದೂ ಅದರ ಮಧ್ಯ ೩೦ ಎಕರೆ ಜಮೀನಿನಲ್ಲಿ ಪ್ರದರ್ಶನದ ಮಂದಿರವನ್ನು ಸಕಲಕಲಾಸುಂದರವಾಗಿಯೂ ಮಹಾ ನೇತ್ರಾನಂದಕರವಾಗಿಯೂ ಕಟ್ಟಬೇಕೆಂದೂ ಗೊತ್ತಾಗಿದೆ. ಈ ಪ್ರದರ್ಶನಕ್ಕೆ ಗವರ್ನಮೆಂಟಿನವರೂ ಇತರ ಸಂಘ ಮತ್ತು ಒಟ್ಟಿನಗಳೂ ... ಕೋಟಿ ರೂಪಾಯಿ ಖರ್ಚು ಮಾಡುವರು.

❦❦❦

ಹಾಲೆಂಡ್ ರಾಜ್ಯಕ್ಕೆ ಸೇರಿ ಬಾರೀ ತೀರಪಟ್ಟಣವಾದ ಹೇಗ್ ನಗರದಲ್ಲಿ ಒಂದು ಪಂಚಾಯಿತಿ ಕೋರ್ಟ್ ಸ್ಥಾಪನೆಯಾಗಿರುವುದೂ, ಈ ಕೋರ್ಟಿನ ಪಂಚಾಯಿತರು ಪ್ರಪಂಚದಲ್ಲಿ ದೊಡ್ಡ ರಾಜ್ಯಗಳಿಗೆ ಹುಟ್ಟುವ ವ್ಯಾಜ್ಯಗಳನ್ನು ಕುರಿತು ಚರ್ಚೆ ಮಾಡಿ ಯುದ್ಧ ಮುಂತಾದ್ದೇನೂ ಆಗದಂತೆ ಅವರವರ ವ್ಯಾಜ್ಯಗಳನ್ನು ಇತ್ಯರ್ಥಪಡಿಸುವುದೂ ನಮ್ಮ ವಾಚಕರಿಗೆ ತಿಳಿದಿರುವುದಷ್ಟೆ. ಈ ಪಂಚಾಯಿತಿ ಕೋರ್ಟಿನವರು ಕಳೆದ ೧೫ ನೆ ತಾರೀಖಿನ ದಿನ ಅಲ್ಲಿನ ಸಭಾ ಮಂದಿರದಲ್ಲಿ ಕೂಡಿದ್ದರು. ಪ್ರಪಂಚದಲ್ಲಿ ನಾಗರೀಕರೆನಿಸಿಕೊಂಡಂಥಾ ನಾಲ್ವತ್ತೇ

ಕೆ ರಾಜ್ಯಗಳ ಅಧಿಕಾರಿಗಳು ತಮ್ಮ [illegible] ರಾಜ ತಂತ್ರಜ್ಞರಾದ [illegible] ಕಳುಹಿಸಿಕೊಟ್ಟಿದ್ದರು. [illegible] ಆ ದಿನ [illegible] ನಾಡ್ಯ [illegible] ನಾಯಕನನ್ನಾಗಿ [illegible] ಸಿ,— ಇವೆರಡು ರಾಜ್ಯಗಳಿಗೆ ಹುಟ್ಟುವ ವ್ಯಾಜ್ಯಗಳನ್ನು ಹರಿದು ಇತ್ಯರ್ಥ ಮಾಡುವುದಕ್ಕೆ ಪ್ರಯತ್ನ ಪಡುವುದು. ಈ ಸಭೆಯ ಮೊದಲನೇ ಕಾರ್ಯವೆಂತಲೂ, ಒಂದುವೇಳೆ ಯುದ್ಧ ಪ್ರಸಕ್ತಿಯು ಬೀಳುವುದಾದರೆ ಕಳಿದಾಡುವವರುಗಳು ಇಂತಿಂತಾಗಲಿ ವಿಶೇಷ ಕಷ್ಟ ನಷ್ಟಗಳುಂಟಾಗದಂತೆ ನೋಡಿಕೊಳ್ಳುವುದು ಎರಡನೇ ಕಾರ್ಯವೆಂತಲೂ ಉಪನ್ಯಾಸ ಮಾಡಿದರು.

***

ರಷ್ಯಾ ರಾಜ್ಯದಲ್ಲಿ ಮಂತ್ರಿಶ್ರೇಷ್ಠರಾದ ಎಂ ಸ್ಟೋಲಿಪಿನ್‌ರವರು ಅಲ್ಲಿನ ಡ್ಯೂಮಾ ಪಾರ್ಲಿಮೆಂಟಿಗೆ ಹೋಗಿ,— ನಿಮ್ಮಲ್ಲಿ ೫೭ ಮಂದಿ ಮೆಂಬರುಗಳು ದೊರೆತನವನ್ನು ನಾಶನಮಾಡಿ ಪ್ರಜಾ ಪ್ರಭುತ್ವವನ್ನು ಏರ್ಪಡಿಸಬೇಕೆಂದು ಫಿತೂರಿ ಮಾಡಿರುತ್ತಾರಾದಕಾರಣ ಅವರನ್ನೆಲ್ಲಾ ನೀವು ಈ ಸಭೆಯಿಂದ ಓಡಿಸಿಬಿಡಬೇಕು ಮತ್ತು ಆ ವ್ಯಕ್ತಿ ಇತ್ತೊಂಬತ್ತು ಮೆಂಬರುಗಳನ್ನು ಕೈಸೆರೆ ಹಿಡಿಯುತ್ತೇವೆ ಎಂಬದಾಗಿ ತಿಳಿಸಿದರು. ಈ ಸಂಬಂಧದಲ್ಲಿ ಪ್ರಜಾ ನೆಮ್ಮದಿಗೆ ಭಂಗ ಉಂಟಾದೀತೆಂದು ಸರ್ಕಾರದವರು ಅನೇಕವಾಗಿ ಸೈನ್ಯಗಳನ್ನು ಕರೆಸಿ ರಾಜಧಾನಿಯಾದ ಸೆಂಟ್ ಪೀಟರ್ಸ್‌ಬರ್ಗಿನ ರಾಜಬೀದಿಗಳಲ್ಲಿ ಉಸ್ತುವಾರಿಗಾಗಿ ನಿಲ್ಲಿಸಿದರು. ವರ್ತಮಾನ ಪತ್ರಿಕೆಗಳಲ್ಲಿ ಆಕ್ಷೇಪಣೆಯಾದ ಟೀಕೆಗಳನ್ನು ಬರೆಯುದಂತೆ ಎಚ್ಚರಿಸಿದರು. [illegible] ಮೆಂಬರುಗಳನ್ನು [illegible] ಪಾರ್ಲಿಮೆಂಟನ್ನು ಬರಖಾಸ್ತು ಮಾಡಿಸಿದರು. ಮುಂದಿನ ಸೆಪ್ಟೆಂಬರ್ ೧ ನೆ ತಾರೀಖಿನಿಂದ ಹೊಸ ಪಾರ್ಲಿಮೆಂಟು ಸೇರುವುದಕ್ಕೆ ಪ್ರಜೆಗಳು ಬೇರೆ ಮೆಂಬರುಗಳನ್ನು ಚುನಾಯಿಸಬೇಕೆಂತಲೂ ಈ ಪಾರ್ಲಿಮೆಂಟು ನೊವೆಂಬರ್ ೧ ರಲ್ಲಿ ಸೇರತಕ್ಕದ್ದೆಂತಲೂ ಇಸ್ತಿಹಾರು ಹಾಕಿಸಿದಾರೆ. ಈಗಿನ ಪಾರ್ಲಿಮೆಂಟನ್ನು ಬರಖಾಸ್ತು ಮಾಡಿದ ವಿಷಯದಲ್ಲಿ ಪ್ರಜೆಗಳು ಗಲಭೆಯೇನೂ ನಡಿಸಿಲ್ಲ. ಈ ಪಾರ್ಲಿಮೆಂಟಿಗೆ ೫೨೪ ಮಂದಿ ಪ್ರತಿನಿಧಿಗಳು ಚುನಾಯಿಸಲ್ಪಟ್ಟು ಬಂದಿದ್ದರು. ಇವರಲ್ಲಿ ಹಲವರು ಅಕ್ಷರಸ್ಥರಾಗಿರಲಿಲ್ಲ. ಮುಂದೆ ಬರತಕ್ಕ ಪಾರ್ಲಿಮೆಂಟಿಗೆ ೪೪೨ ಮಂದಿ ಪ್ರತಿನಿಧಿಗಳು ಚುನಾವಣೆಯಾಗಬೇಕೆಂದು ವಿಧಿಸಲ್ಪಟ್ಟಿರುವುದಲ್ಲದೆ ವಿದ್ಯಾವಂತರೇ ಮೆಂಬರಾಗಿ ಬರುವಂತೆ ರೂಲನ್ನು ಮಾಡಿಟ್ಟಿದಾರೆ.

***

ಉತ್ತರ ಅಮೇರಿಕಕ್ಕೆ ಸೇರಿದ ಸ್ಯಾನ್‌ಫ್ರಾನ್ಸಿಸ್ಕೋ ಮತ್ತು ಕ್ಯಾಲಿಫೋರ್ನಿಯಾ ಪ್ರದೇಶಗಳಲ್ಲಿ ಅನೇಕಾನೇಕ ಜಪಾನ್ ಪ್ರಜೆಗಳು ನಾನಾ ಕಸಬುಗಳನ್ನು ಮಾಡುತ್ತಾ ಸಭ್ಯ ಪ್ರಜೆಗಳಾಗಿ ವರ್ತಿಸುತ್ತಿದಾರೆ. ಈಚೆಗೆ ಅಮೇರಿಕದವರು ಈ ಜಪಾನಿನವರ ಸಾಹಸವನ್ನೂ ಅವರ ಚಟುವಟಿಕೆಯನ್ನೂ ಅವರು ಅಭಿವೃದ್ಧಿಯಾಗುತ್ತಿರುವುದನ್ನೂ ನೋಡಿ ಸಹಿಸಲಾರದೆ ಅವರನ್ನೆಲ್ಲಾ ಅಲ್ಲಿಂದ ಹೊರಡಿಸಿಬಿಡಬೇಕೆಂದು ಪ್ರಯತ್ನ ಮಾಡಲಾರಂಭಿಸಿದಾರೆ. ಜಪಾನಿನವರ ವ್ಯಾಪಾರಸ್ಥಳಗಳಿಗೆ ನುಗ್ಗಿ ಅವರನ್ನು ಹಿಂಸಿಸಿ ಲೂಟಿಮಾಡುತ್ತಲೂ, ನಿಷ್ಕಾರಣವಾಗಿ ಅವರನ್ನು ಹೀಯಾಳಿಸುತ್ತಲೂ, ನಾನಾ ಪ್ರಕಾರವಾಗಿ ಅವರನ್ನು ಅವಮಾನಪಡಿಸುತ್ತಲೂ ಬಂದಿದಾರೆ. ಆದರೆ ಈ ವಿಚಾರವೆಲ್ಲಾ ಅಲ್ಲಿರುವ ಜಪಾನ್ ರಾಯಭಾರಿಯ ಮೂಲಕ ಜಪಾನ್ ರಾಜ್ಯಕ್ಕೆ ಗೊತ್ತಾಗುತ್ತಾ ಬಂದಿದ್ದಾಗ್ಯೂ ಜಪಾನ್ ರಾಜ್ಯದವರೂ ಪ್ರಜೆಗಳೂ ಅತುರಪಟ್ಟು ಪ್ರತೀಕಾರ ಕಾರ್ಯಗಳನ್ನು ನಡಿಸದೆ ತಾಳ್ಮೆಯಿಂದ ಸಹಿಸುತ್ತಲೂ, ನಡೆಸಿರುವ ವಿಧ ಮಾನಗಳನ್ನು ಅಮೇರಿಕದ ಗವರ್ನಮೆಂಟಿನವರಿಗೆ ತಿಳಿಯಪಡಿಸುತ್ತಲೂ ಬಂದಿರುವರು. ಅತ್ತಲಾಗಿ ಅಮೇರಿಕದ ಸರ್ಕಾರಿ ನೌಕರರು [illegible] ಪ್ರದೇಶಗಳಲ್ಲಿ ತಮ್ಮ ಜನರು ನಡಸುತ್ತಿರುವ [illegible] ಕಾರ್ಯಗಳನ್ನು ನಿಲ್ಲಿಸಬೇಕೆಂದು ಪ್ರಯತ್ನಪಡುತ್ತಲೂ, ಅಮೇರಿಕ ಮತ್ತು ಜಪಾನ್ ಸರ್ಕಾರಗಳಿಗೆ ಈ ವಿಷಯದಲ್ಲಿ ಅಸಮಾಧಾನಗಳೇನೂ ಉಂಟಾಗಿಲ್ಲವೆಂದು ಪ್ರಕಟಪಡಿಸುತ್ತಲೂ ಇದ್ದಾರೆ. ಆದಾಗ್ಯೂ ಅವೆರಡು ಪಟ್ಟಣದ ಪತ್ರಿಕೆಗಳಲ್ಲಿ ಅಮೇರಿಕದವರು ಸಭ್ಯರಾದ ಜಪಾನ್ ಪ್ರಜೆಗಳನ್ನು ನಿಷ್ಕಾರಣವಾಗಿ ಕಷ್ಟ ನಷ್ಟ ಅವಮಾನಗಳಿಗೆ ಗುರಿಮಾಡುವುದೇ [illegible] ಈ ಸಾರ್ವಭೌಮ ತಂತ್ರ [illegible] ಸ್ಪಷ್ಟ [illegible] ಅವೆರಡು ಪ್ರದೇಶಗಳಲ್ಲಿ ಇರುವ ಜಪಾನ್ ರಾಯಭಾರಿಯು [illegible] ಅಲ್ಲಿಂದ [illegible] ಕಳುಹಿಸಿ, ಆ ಅರ್ಥಕ್ಕೆ ಅಂತರಂಗದಲ್ಲೇ ಅವರಿಗೆ ತಂತಿವರ್ತಮಾನ ಕೊಟ್ಟಿದಾರೆಂದು ತಿಳಿಯುವುದು. ಇದು [illegible] ಕಾರ್ಯವೆಂದು ಊಹಿಸಲಾಗಿದೆ. ಅಮೇರಿಕ ಗವರ್ನಮೆಂಟಿನವರಿಗೂ ಜಪಾನ್ ಪ್ರಭುಗಳಿಗೂ ಪರಸ್ಪರ ಕೆಟ್ಟ ಯುದ್ಧ ಪ್ರಸಕ್ತಿಯು [illegible] ಈ ಕಾರ್ಯವು ಸೂಚಿಸುತ್ತದೆ. ಇದು ಕ್ಷಿಪ್ರ [illegible] ಮುಂದೆ ನೋಡತಕ್ಕದ್ದಾಗಿದೆ.

ಶ್ರೀಮನ್ಮಹಾರಾಜರವರ ವರ್ಧಂತಿಯು.

ರಾಜಧಾನಿಯಲ್ಲಿ ನಡೆದ ಉತ್ಸವಾದಿಗಳು ಅರಮನೆಯೊಳಗೆ ದರ್ಬಾರು

ಕಳೆದ ತಾ ೧೫ನೆ ಶನಿವಾರ ಶ್ರೀಮನ್ ಮಹಾರಾಜರವರ ೨೪ನೆ ವರುಷದ ವರ್ಧಂತಿ ಉತ್ಸವವು ರಾಜಧಾನಿಯಲ್ಲಿ ಬಹು ಸಂಭ್ರಮವಾಗಿ ನೆರವೇರಿತು. ಆ ದಿನ ಬೆಳಿಗ್ಗೆ ಕೋಟೆ ಕೊತ್ತಲುಗಳಿಂದ ಗೌರವಾರ್ಥವಾದ ತೋಪುಗಳು ಹಾರಿಸಲ್ಪಟ್ಟುವು. ಆಮೇಲೆ ಶ್ರೀಮನ್ಮಹಾರಾಜರವರು ನಿತ್ಯಕರ್ಮಾನುಷ್ಠಾನಾದಿಗಳನ್ನು ತೀರಿಸಿಕೊಂಡು ಕುಲದೇವತೆಯಾದ ಶ್ರೀಚಾಮುಂಡಾಂಬಿಕಾ ಪೂಜೆ ದೇವಸ್ಥಾನಗಳನ್ನು ನಾಸಿ ವಿಶೇಷವಾದ ವಸ್ತ್ರಾಭರಣಗಳನ್ನು ಅಲಂಕರಿಸಿಕೊಂಡು [illegible] ಅಂಬಾವಿಲಾಸವೆಂಬ ಕಳಕಳಿಸುವ ದರ್ಬಾರ್ ಮಂದಿರಕ್ಕೆ ಚಿತ್ತೈಸಿ [illegible] ರತ್ನ ಸಿಂಹಾಸನದ ಉತ್ತರದಲ್ಲಿ ಶ್ರೇಷ್ಠವಾದ ಪೀಠ ಸನ್ನಾಹಿಸಿ ಕುಳಿತಿದ್ದರು. ಕುಲಗುರುಗಳಾದ ಶ್ರೀ [illegible] ಸ್ವಾಮಿಗಳ ಮಂತ್ರಾಕ್ಷತೆ, ವಿಧಿಪೂರ್ವಕವಾಗಿ ಶ್ರೀಮನ್ಮಹಾರಾಜರವರು ಪಾದಪೂಜಾದಿಗಳನ್ನು ಸ್ವೀಕರಿಸಿ ಆಶೀರ್ವಾದಮಾಡಿ ತೆರಳಿದರು. ತರುವಾಯ ವೈದಿಕಮಂಡಲಿಯವರು ಶ್ರೀಮನ್ಮಹಾರಾಜರವರಿಗೆ ಫಲ [illegible] ಆಶೀರ್ವಚನಪೂರ್ವಕವಾದ ಮಂಗಳಾಕ್ಷತೆಗಳನ್ನು [illegible] ವರು ಲೌಕಿಕರು ಅಂದರೆ ರಾಜಮಾತೆಯವರು, ದಿವಾನರು, ಕೌನ್ಸಿಲರುಗಳು, ಸರ್ಕಾರಿ ಇಲಾಖೆಗಳ ಮುಖ್ಯಸ್ಥರುಗಳು ಚೀಫ್ ಕೋರ್ಟ್ ಜಡ್ಜಿಗಳು, ಸೆಕ್ರೆಟರಿಗಳು, ಡೆಪ್ಯುಟಿ ಮತ್ತು ಅಸಿಸ್ಟೆಂಟ್ ಕಮಿಷನರುಗಳು, ಪ್ರೇಷ್ಯದಾರರು, ಶೆಟ್ಟಿವರ್ತಕರೇ ಮೊದಲಾದ ಎಲ್ಲಾ ಕೋಮುಗಳ ದೊಡ್ಡಮನುಷ್ಯರು, ಮಿಲ್ಟೆರಿ ಇಲಾಖೆಯ ಮುದ್ದೇದಾರರು ಮೊದಲಾದವರೆಲ್ಲಾ ಶ್ರೀಮನ್ಮಹಾರಾಜರವರಿಗೆ ಭಯಭಕ್ತಿಪೂರ್ವಕವಾಗಿ ಮುಜರೇಮಾಡಿ ಕುಳಿತರು. ಸಂಗೀತಗಾರರ ಹಾಡುಗಾರಿಕೆಯೂ ನರ್ತಕಿಯರ ನಾಟ್ಯವೂ ಭಟರಾಜರ ಸ್ತುತಿಪಾಠಗಳೂ ಮನೋಜ್ಞವಾಗಿ ನಡೆಯುತ್ತಿರುವಲ್ಲಿ ರಾಜಪುರೋಹಿತರು ಶ್ರೀಮನ್ಮಹಾರಾಜರವರಿಂದ ಶಾಸ್ತ್ರೋಕ್ತರೀತಿಯಲ್ಲಿ ಫಲಪೂಜೆ ಫಲದಾನಾದಿಗಳನ್ನು ಮಾಡಿಸಿದರು. ಏಳುನೂರು ಸುಮಂಗಲಿಯರು ಶ್ರೀಮನ್ಮಹಾರಾಜರವರಿಗೆ ಫಲಾದಿಮಂಗಳದ್ರವ್ಯಗಳನ್ನೊಪ್ಪಿಸಿ ಮಂಗಳಾರತಿಯನ್ನು ಬೆಳಗಿದರು. ಸರ್ದಾರ್ ಕಾಂತರಾಜೇ ಅರಸಿನವರು ಶ್ರೀಮನ್ಮಹಾರಾಜರವರಿಗೆ ಹಾರ ತುರಾಯಿಗಳನ್ನೊಪ್ಪಿಸಿದ ಮೇಲೆ ವೈದಿಕ [illegible] ಲೌಕಿಕರಿಗೂ ಪುಷ್ಪ ತಾಂಬೂಲಾದಿಗಳು ವಿನಿಯೋಗವಾಗಲ್ಪಟ್ಟು ಮುಗಿದಮೇಲೆ ಸಲಾಂ [illegible] ಶ್ರೀಮನ್ಮಹಾರಾಜರು ದರ್ಬಾರನ್ನು ಮುಕ್ತಾಯಮಾಡಿ ಚಿತ್ತೈಸಿದರು. ರಾಜಧಾನಿಯ ದೇವಸ್ಥಾನಗಳಲ್ಲೂ ಈ ಸಂಸ್ಥಾನದ ಸಕಲನಾದ ಮುಜರಾಯಿ ದೇವಸ್ಥಾನಗಳಲ್ಲೂ ಶ್ರೀಮನ್ಮಹಾರಾಜರವರ ಶ್ರೇಯಃ ಪ್ರಾರ್ಥನಾ ಪೂರ್ವಕಗಳಾದ ಅಭಿಷೇಕ ಅರ್ಚನೆ ಉತ್ಸವಾದಿಗಳು ನಡೆದವು. ಮಾರನೆದಿನ ರಾಜಧಾನಿಯಲ್ಲಿ ವರ್ಧಂತಿ ಕಟ್ಟೆಯ ಸಮಾರಾಧನೆಯು ಜರುಗಿತು.

ವರ್ಧಂತಿ ಕಟ್ಟೆಯ ಮೆರವಣಿಗೆಯು

ಮಧ್ಯಾಹ್ನೋತ್ತರ ಸುಮಾರು ೫ ಗಂಟೆಗೆ ಶ್ರೀಮನ್ಮಹಾರಾಜರವರು ಸಕಲ ಸನ್ಮಾನ ಬಿರುದು [illegible] ಮೆರವಣಿಗೆ ಹೊರಟರು. ರಸ್ತೆಗಳ ಇಬ್ಬದಿಗಳಲ್ಲೂ [illegible] ತೋರಣಾದಿಗಳ [illegible] ಅಲಂಕಾರ ಮಾಡಲ್ಪಟ್ಟಿತ್ತು. ವರ್ತಕರು ತಮ್ಮ ಅಂಗಡಿಗಳಲ್ಲಿ ಮೇಲ್ಕಟ್ಟು [illegible] ಶೃಂಗಾರ ಮಾಡಿ, [illegible] ಸುಂದರವಾಗಿ ಮಾಡಿದ್ದರು. ಉತ್ಸವವು ಅರಮನೆಯ ಕರೀಕಲ್ಲು ತೊಟ್ಟಿಯಿಂದ ಹೊರಟು, ಪಶ್ಚಿಮ ಕೋಟೆ ಬಾಗಿಲು ನುಗ್ಗಿ ಬಂದು, ಕಸ್ತೂರಿ [illegible] ದಕ್ಷಿಣ ದ್ವಾರದಿಂದ ಪ್ರವೇಶಿಸಿ, [illegible] ರಸ್ತೆಯಲ್ಲಿ ಹೊರಟು, ಹೊಸ್ತ ಗಡಿಯಾರದ ಬಳಿ [illegible] ದೊಡ್ಡ ಪೇಟೆಯನ್ನು ಪ್ರವೇಶಿಸಿ ಪೇಟೆಗೆ ಉದ್ದಕ್ಕೂ ಹೋಗಿ ಬಲಗಡೆಗೆ ತಿರುಗಿಕೊಂಡು, ಕಮಾನಿ ದರ್ವಾಜಾ ಎಂಬ ದ್ವಾರವನ್ನು ಹಾಸಿ ಗವರ್ನಮೆಂಟ್ ಹೌಸ್ ಒಂಗಳೆಯನ್ನು ತಲುಪಿತು. ಉತ್ಸವವು ಚತುರಂಗ ಬಲ [illegible] ಹಿಂದಿನಿಂದ [illegible] ಸರ್ವಿಸ್ [illegible] ಸೈನ್ಯವೂ [illegible] ಸಮಸ್ತ [illegible] ಗಳೂ ಬರುತ್ತಿದ್ದರು. [illegible] ಇಂಗ್ಲೀಷ್ ಮತ್ತು ಕರ್ನಾಟಕ ಬ್ಯಾಂಡಿನವರೂ ಇದ್ದರು. ಶ್ರೀಮನ್ಮಹಾರಾಜರವರು ದಿವ್ಯವಾದ [illegible] ಅಮೂಲ್ಯವಾದ ರುಮಾಲು ಕಿರೀಟ ಮುಂತಾದ ಪಟ್ಟಾಭರಣ [illegible] ಮೊದಲಾದವುಗಳಿಂದಲಂಕೃತರಾಗಿ ಶ್ರೇಷ್ಠವಾದ ಅಶ್ವವನ್ನು [illegible] ಮಧ್ಯಭಾಗದಲ್ಲಿ ಬರುತ್ತಿದ್ದರು. ಶ್ರೀಮನ್ಮಹಾರಾಜರವರ ದಿವ್ಯದರ್ಶನ [illegible] ಸಮಾರಂಭ [illegible] ಇದ್ದರು. ಕರ್ಜನ್ ಪಾರ್ಕಿನಲ್ಲಿ ಉತ್ಸವವು [illegible] ಬಂದ ಕೂಡಲೇ ಅದರ [illegible] ನಿಂತಿದ್ದ ಬಿ ಟಿ ರೆಸಿಡೆಂಟರು ಮೊದಲಾದ ಸರ್ದಾರರೂ [illegible] ಶ್ರೀಮನ್ಮಹಾರಾಜರವರ ಮೇಲೆ ಪುಷ್ಪಗಳ ಮಳೆಗರೆದು [illegible] ಮಾಡಿ ತಮ್ಮ [illegible] ಪ್ರಕಟಪಡಿಸಿದರು. ಅಲ್ಲಿಂದ ಮುಂದಕ್ಕೂ [illegible] ಅನೇಕ ವರ್ತಕ [illegible] ಶ್ರೀಮನ್ಮಹಾರಾಜರವರಿಗೆ ಹಾರ ತುರಾಯಿಗಳನ್ನೊಪ್ಪಿಸಿ ತಮ್ಮ ರಾಜಭಕ್ತಿಯನ್ನು ಪ್ರಕಾಶ ಮಾಡಿದರು. ಗವರ್ನಮೆಂಟ್ ಹೌಸ್ ಎಂಬ ಬಂಗಲೆಯ [illegible] ರೆಸಿಡೆಂಟರೇ ಮೊದಲಾದ ಸರ್ದಾರರೂ [illegible] ಶ್ರೀಮನ್ಮಹಾರಾಜರವರನ್ನು [illegible] ಮಾಡಿಸಿದರು. [illegible] ಶ್ರೀಮನ್ಮಹಾರಾಜರವರೂ [illegible] ಯುವರಾಜರವರೂ ಅಶ್ವಾರೂಢರಾಗಿ [illegible] ಶ್ರೀಮನ್ಮಹಾರಾಜರವರಿಗೆ [illegible] ನೀರಾಜನವನ್ನು [illegible] ಅಲ್ಲಿ [illegible] ಸೈನಿಕರೆಲ್ಲಾ [illegible] ಶ್ರೀಮನ್ಮಹಾರಾಜರವರಿಗೆ [illegible] ಪ್ರಕಾರ ಮುಜರೆ ಮಾಡಿದರು. ಸಲಾಂ [illegible] ಆದ ನಂತರ ಶ್ರೀಮನ್ಮಹಾರಾಜರವರು ಹಿಂತಿರುಗಿ ಬಂಗಲೆಗೆ ದಯಮಾಡಿ [illegible] ಸ್ವಲ್ಪ ಹೊತ್ತು [illegible] ರಾತ್ರಿ ಸುಮಾರು ೧೦ ಗಂಟೆಗೆ ಅರಮನೆಗೆ ಚಿತ್ತೈಸಿ, [illegible] ಅನಂತರ ನಡೆದ ಮೇಲೆ ಆ ದಿನದ ಉತ್ಸವಾದಿಗಳನ್ನು ಮುಕ್ತಾಯ ಮಾಡಿದರು. ಈ ದಿವಸ ಈ ಉತ್ಸವವು [illegible] ನಡೆಯುತ್ತಾ [illegible] ಇಲ್ಲದೆ ಪಟ್ಟಣವೆಲ್ಲಾ ಕಳಕಳಿಸುತ್ತಿತ್ತು. ಸಾವಿರಾರು ಪ್ರಜೆಗಳು ರಾಜಭಕ್ತಿ ಪೂರಿತರಾಗಿ ರಾಜಬೀದಿಗಳಲ್ಲಿ ಕಿಕ್ಕಿರಿಯುವಂತೆ ನಿಂತು ಶ್ರೀಮನ್ಮಹಾರಾಜರವರನ್ನು [illegible] ನೋಡಿ [illegible] ಆ ದಿನ ರಾಜಧಾನಿಯಲ್ಲಿ ನಡೆದ ದೀಪೋತ್ಸವ [illegible] ಅತ್ಯಂತ [illegible] ಪೋಲೀಸ್ [illegible]

ಇತರ ವಿನೋದಗಳು

[illegible] ದಿನ ಅಂದರೆ ಬುಧವಾರ ಬೆಳಿಗ್ಗೆ ಶ್ರೀಮನ್ಮಹಾರಾಜರವರು ವರ್ಧಂತಿ ಉತ್ಸವ [illegible] ಡಿನ್ನರ್ [illegible] ಮುಖ್ಯ ಮುಖ್ಯರಾದ ದೇಶಸ್ಥರನ್ನೆಲ್ಲಾ ಕರೆಸಿಕೊಂಡು, ತಮ್ಮ ಬಂಗಲೆಯಲ್ಲಿ ಬಹು ವಿಶೇಷವಾದ ಔತಣವನ್ನು ಮಾಡಿಸಿದರು. ಆ ರಾತ್ರಿಯೂ ಸೋಮವಾರ ರಾತ್ರಿಯೂ ಅರಮನೆಯ ಕರೀಕಲ್ಲುತೊಟ್ಟಿಯಲ್ಲಿ ಶ್ರೀಮನ್ಮಹಾರಾಜರವರು ಚಿತ್ತೈಸಿ ದರ್ಬಾರ್ ನಡಿಸಿದರು. ಆಗ್ಗೆ ಪದ್ಧತಿಯಂತೆ ನವರಂಗ [illegible] ನಡೆದವು. ಸೋಮವಾರ ರಾತ್ರಿ ದರ್ಬಾರ್ ಆದ ತರುವಾಯ ಮುಖ್ಯರಾದ ಅಧಿಕಾರಸ್ಥರಿಗೆಲ್ಲಾ ಅರಮನೆಯಲ್ಲೇ ಶ್ರೀಮನ್ಮಹಾರಾಜರವರ ವರ್ಧಂತಿ ಕಟ್ಟೆಯ ದಿವ್ಯವಾದ ಔತಣ ಜರುಗಿತು.

ಅತಿಥಿ ಸತ್ಕಾರಾದಿಗಳು

ಈ ವರ್ಧಂತಿ ಉತ್ಸವದ ನಿಮಿತ್ತ ಶ್ರೀಮನ್ಮಹಾರಾಜರವರು ಅನೇಕ ಯೂರೋಪಿಯನ್ ಸರ್ದಾರರಿಗೆ ಆಹ್ವಾನಪತ್ರಿಕೆಗಳನ್ನು ಕಳುಹಿಸಿದ್ದರು. ಆ ಪ್ರಕಾರ ಸುಮಾರು ೧೫೦ ಮಂದಿ ಸಾಹೇಬರು ರಾಜಧಾನಿಗೆ ಬಂದು ಗವರ್ನಮೆಂಟ್ ಹೌಸಿನಲ್ಲಿ ಶ್ರೀಮನ್ಮಹಾರಾಜರವರ ಆತಿಥ್ಯವನ್ನು ಸ್ವೀಕರಿಸುತ್ತಿದ್ದಾರೆ. ಇವರ ಸಂತೋಷಾರ್ಥವಾಗಿ ಕುದುರೆ ಪಂದ್ಯಗಳು, ಪೋಲೋ ಎಂಬ ಚೆಂಡಾಟದ ಪಂದ್ಯ, ಗಾರ್ಡನ್ ಪಾರ್ಟಿ ಎಂಬೀ ಆಟಗಳನ್ನೂ ಪಂದ್ಯಗಳನ್ನೂ ಕಲ್ಪಿಸಿರುತ್ತಾರೆ. ಯೂರೋಪಿಯನ್ ಅತಿಥಿಗಳಿಗೆಲ್ಲಾ ಈ ರಾತ್ರಿ ಔತಣ ನಡೆಯುವುದು. ಅವರು ಮುಂದೆ [illegible] ನೆ ತಾರೀಖಿನ ದಿನ ಇಲ್ಲಿಂದ ಸ್ವಸ್ಥಳಗಳನ್ನು ಕುರಿತು ಪ್ರಯಾಣ ಮಾಡುವವರಾಗಿದಾರೆ.

ಇತರ ಕಡೆಗಳಲ್ಲಿ ನಡೆದ ಉತ್ಸವಗಳು

ಶ್ರೀನಿವಾಸಪುರ

ಕಳೆದ ೧೫ನೇ ತಾ ಶನಿವಾರ ಬೆಳಿಗ್ಗೆ ೯ ಗಂಟೆಗೆ ಶ್ರೀನಿವಾಸಪುರದ ನಿವಾಸಿಗಳಲ್ಲಿ ಪ್ರಮುಖರಾದ ಹಿಂದೂ ಮುಸಲ್ಮಾನ ಸರ್ಕಾರಿ ಉದ್ಯೋಗಸ್ಥರೂ, ಉಪಾಧ್ಯಾಯರು, ಬಾಲಕ ಬಾಲಿಕೆಯರು [illegible] ಸ್ಕೂಲ್ ಕಟ್ಟಡದಲ್ಲಿ ಸಭೆ ಸೇರಿದರು. ಪೋಲೀಸ್ ಕಾನ್‌ಸ್ಟೇಬಲ್‌ಗಳು ಮಹಾರಾಜರವರ ಚಿಹ್ನೆಯನ್ನು [illegible] ಸನ್ಮಾನಾರ್ಥವಾಗಿ ತುಪಾಕಿ ಹಾರಿಸಿದರು. [illegible] ಚಂದ ರಾಯರೂ, ರಾಮಶಾಸ್ತ್ರಿಗಳೂ, ಸುಬ್ಬಶಾಸ್ತ್ರಿಗಳೂ ಮಹಾರಾಜರವರ ಗುಣಕಥನವನ್ನು ಮಾಡಿ ಮಹಾಸ್ವಾಮಿಯವರಿಗೆ ಶ್ರೇಯೋಭಿವೃದ್ಧಿಯನ್ನೂ [illegible] ಹಿಂದುಸ್ಥಾನಿಯಲ್ಲಿಯೂ ಶ್ರೀ [illegible] ತಿಯರು ಮಂಗಳವನ್ನು ಹಾಡಿದರು. ನಂತರ ಮಹಾರಾಜರ ಪ್ರೈವೇಟ್ ಸೆಕ್ರೆಟರಿಯವರ ಮೂಲಕ [illegible] ವರ್ತಮಾನ ಕಳುಹಿಸಲ್ಪಟ್ಟಿತು. [illegible] ಅಯ್ಯಂಗಾರರು, ಸಭೆಯವರನ್ನು [illegible] ಸಭಾಧಿಕಾರಿಗಳನ್ನು ಉಪನ್ಯಾಸ ಮಾಡಿದವರನ್ನು [illegible] ವಿಸಿದನಂತರ ಸಭೆ ಮುಗಿಯಿತು. ರಾತ್ರಿ [illegible] ಮನೆಯಲ್ಲಿಯೂ ಮಹಾರಾಜರವರಿಗೆ ಮಂಗಳಾಶೀರ್ವಚನಗಳ [illegible]

ಅನೇಕಲ್ ತಾಲ್ಲೂಕು ದೊಮ್ಮಸಂದ್ರ

ನಮ್ಮ ಶ್ರೀಮನ್ಮಹಾರಾಜರವರ ವರ್ಷವರ್ಧಂತಿ ಉತ್ಸವವು ತಾ ೧೫ನೇ ಶನಿವಾರ ಇಲ್ಲಿನ [illegible] ಸ್ಕೂಲ್ ಹೆಡ್‌ಮಾಸ್ಟರು ಮತ್ತು ಅಸಿಸ್ಟೆಂಟ್ ಮಾಸ್ತರುಗಳ ಪ್ರೋತ್ಸಾಹದಿಂದ ಬಹು ವಿಜೃಂಭಣೆಯಾಗಿ ನಡೆಯಿತು. ಆ ದಿನ ಇಲ್ಲಿನ ಸಂತೆಬೀದಿಯು [illegible] ಬಾವುಟಗಳಿಂದಲೂ ಧ್ವಜಪಟಗಳಿಂದಲೂ, ಶ್ರೀಮನ್ಮಹಾರಾಜರವರ ಮತ್ತು [illegible] ರವರ ಫೋಟೋಗಳಿಂದಲೂ ಅಲಂಕರಿಸಲ್ಪಟ್ಟಿತು. ಸರ್ಕಾರದ ಸ್ಕೂಲ್ ಹೆಡ್‌ಮಾಸ್ಟರ್ [illegible] ಅಗ್ರಾಸನವನ್ನು ವಹಿಸಿದ್ದರು. ಅನೇಕ [illegible] ನಂತರ [illegible] ಗೌರ್ನಮೆಂಟ್ [illegible] ಸ್ಕೂಲು ಬಾಲಕರ ಆಟಪಾಟಗಳು ಬಹು ವಿನೋದಕರವಾಗಿ ನಡೆದವು. ಬಾಲಕರ [illegible] ಆನಂದಕರ [illegible] ಬಾಲಕರಲ್ಲೊಬ್ಬನು ವಿದ್ಯಾಭ್ಯಾಸಕ್ಕೂ [illegible] ರಕ್ಕೂ [illegible] ಉಪನ್ಯಾಸವನ್ನು ಓದಿದ್ದು [illegible] ವೆ. ಜಿ ಎಸ್ [illegible] ಉಪನ್ಯಾಸ [illegible] ಮಾಡಿದರು. ನಂತರ ಆಗ್ರಾಸನಾಧಿಪತಿಗಳು ಆ ದಿನದ ಉತ್ಸವಕ್ಕೆ ಕಾರಣವನ್ನು ತಿಳಿಸಿ, ಮಹಾರಾಜರ ಶ್ರೇಯಸ್ಸನ್ನು [illegible] ಮಾಡಿ, ಮಕ್ಕಳ ಆಟಪಾಟಗಳಲ್ಲಿ ಗೆದ್ದ [illegible] ಹಂಚಿದರು. ಈ ರೀತಿಯಾಗಿ ಆ ದಿನ ಉತ್ಸವದ ಪ್ರಜೆಗಳ ಸಂತೋಷದಿಂದಲೂ ಬಾಲಕರ ಕೋಲಾಹಲದಿಂದಲೂ ಮುಕ್ತಾಯವಾಯಿತು.

ಹೊಸಕೋಟೆ

ತಾ ೧೫ ನೆ ಶನಿವಾರ ಈ ಊರಿನ ಮಹಾ ಜನಗಳೆಲ್ಲರೂ ನಮ್ಮ ಶ್ರೀಮನ್ಮಹಾರಾಜರವರ ಸಾಹೇಬ್ ಬಹದ್ದೂರ್ ಶ್ರೀ ಕೃಷ್ಣರಾಜೇಂದ್ರ ಒಡೆಯರ್, ಜಿ. ಸಿ ಎಸ್ ಐ ಯವರ ವರ್ಷವರ್ಧಂತಿಯ ಸಂತೋಷಸೂಚಕ ಉತ್ಸವವನ್ನು ಚೆನ್ನಾಗಿ ನಡಿಸಿದರು. ಈ ಶುಭದಿನದಲ್ಲಿ ಸುಮಾರು [illegible] ಜನ ಬಡಬಗ್ಗರಿಗೆ ಅನ್ನದಾನ ನಡಿಸಲ್ಪಟ್ಟಿತು. ಹಿಂದಿನ ದಿನ [illegible] ಹರಕ್ಕಾಗಿ [illegible] ಬಡಬಗ್ಗರುಗಳು ಬಂದಿದ್ದರು. ಇದಕ್ಕಾಗಿ ನಮ್ಮ ಅಮಲ್ದಾರ್ ಮ. ಬಸವರಾಜೇ ಅರಸಿನವರೂ, ತಾಲ್ಲೂಕು ಶಿರಸ್ತೇದಾರ್ ಮ. ಚೆನ್ನಸ್ವಾಮಿನಾಯುಡುಯವರೂ, ಪೋಲೀಸ್ ಇನ್‌ಸ್ಪೆಕ್ಟ

ಕೃಷ್ಣರಾಜೆ ಆರಿಸಿನವ ಪತ್ರ ಆಸ್ಪತ್ರೆ ಆಗಿ ಸಿ ಬಂ ... ಷ್ಟರಿ ಸ ಮುಖ್ಯವಾಗಿ ನಿಂತು ಮಾಡಿದ್ದ ಏರ್ಪಾಡುಗಳು ಬಹಳ ...ರ್ಪಕವಾಗಿ ಬೆಳಿಗ್ಗೆ ೧೦ ಗಂಟೆ ಲಾಗಾಯತು ರಾತ್ರಿ ೭ ಗಂಟೆ ...ಗೂ ಬಡಬಗ್ಗರುಗಳಿಗೆ ಭೋಜನ ನಡೆಯಿತು. ನಂತರ ಸಾಯಂ... ೪ ಗಂಟೆ ಲಾಗಾಯತು ೬ ಗಂಟೆ ವರಿವಿಗೆ ಸ್ಕೂಲ್ ಹುಡುಗರ ...ೋದವಾದ ಆಟಗಳು ನಡೆದು, ಅದರಲ್ಲಿ ಗೆದ್ದವರಿಗೆ ನಮ್ಮ ಅಮು... ...ರ್ದಾರರು ಇನಾಂಗಳನ್ನು ದಯಪಾಲಿಸಿದರು. ಇದಲ್ಲದೆ ಈ ಸಂಭ...ದಲ್ಲಿ ಶ್ರೀಕೃಷ್ಣರಾಜೇಂದ್ರ ಹಾಲ್ ಎಂಬ ಕಟ್ಟಡವನ್ನು ಪ್ರಕಾರ...ರಣಾದಿಗಳಿಂದ ನಾನಾ ಬಗೆಯಾಗಿ ಶೃಂಗಾರ ಮಾಡಿದ್ದ, ಕಟ್ಟಡ... ಶ್ರೀಮದಿಂಡಿಯಾ ಚಕ್ರವರ್ತಿ ಸಾರ್ವಭೌಮರವರ ಫೋಟೋವ... ನಮ್ಮ ಶ್ರೀಮನ್ಮಹಾರಾಜರವರ ಫೋಟೋವನ್ನೂ ಪುಷ್ಪಗ...ದ ಅಲಂಕರಿಸಿದ್ದ ಕಟ್ಟಡಕ್ಕೆ ಅಮಲ್ದಾರ್ರವರೇ ಮೊದಲಾದ ಹು...ದಾರರೂ ಮ್ಯುನಿಸಿಪಲ್ ಮೆಂಬರುಗಳೂ ಇನ್ನೂ ಅನೇಕ ದೊ...ಮನುಷ್ಯರುಗಳೂ ಸ್ಕೂಲ್ ಬಾಲಕಬಾಲಕಿಯರುಗಳೂ ಸೇರಿ ...ಂಗಳಕರವಾದ ವಾದ್ಯ ಘೋಷದೊಡನೆ ಸಭೆಯನ್ನಲಂಕರಿಸಿ ...ಕಾಲದಲ್ಲಿ ದೇವರ ಪ್ರಾರ್ಥನೆ ಮಾಡಿದ ನಂತರ ಶ್ರೀಮದಿಂಡಿಯಾ ...ಕ್ರವರ್ತಿ ಸಾರ್ವಭೌಮರವರ ಶ್ರೇಯಃ ಪ್ರಾರ್ಥನೆಯೂ ನಂತರ ...ನಮ್ಮ ಶ್ರೀಮನ್ಮಹಾರಾಜಾಸಾಹೇಬ್ ಬಹದ್ದೂರವರ ಶ್ರೇಯಃ ಪ್ರಾರ್ಥ...ನೆಯೂ ಮಾಡಿ, ಸರ್ವರೂ ರಾಜಭಕ್ತಿ ಪೂರ್ವಕವಾದ ವಂದನೆಗಳನ್ನು ...ಸಮರ್ಪಿಸಿದರು. ಸ್ಕೂಲ್ ಬಾಲಕಬಾಲಕಿಯರ ಮಂಗಳಕರವಾದ ...ಯಾನದೊಡನೆ ಶ್ರೇಯಃ ಪ್ರಾರ್ಥನೆಯೂ, ಮೆ॥ ರಾಮಾನುಜೈ...ಯ್ಯಂಗಾರರು, ಮೆ॥ ವಾಸುದೇವರಾಯರು ಮತ್ತು ಮೆ॥ ಜಖರಿಯಾಸ್ ...ರು ಸಹ ಕನ್ನಡದಲ್ಲಿ ಉಪನ್ಯಾಸವೂ, ಹಿಂದೂಸ್ಥಾನಿ ಸ್ಕೂಲ್ ಮಾ...ರು ಹಿಂದೂಸ್ಥಾನಿ ಭಾಷೆಯಲ್ಲಿ ಉಪನ್ಯಾಸವೂ, ಮತ್ತು ಮೆ॥ ಕಲ್ಲಂ...ಬಯ್ಯಂಗಾರರು ಇಂಗ್ಲಿಷಿನಲ್ಲಿ ಮಂಗಳಕರವಾದ ಉಪನ್ಯಾಸವೂ ಮಾ...ಡಿದರು. ನಂತರ ಸ್ಕೂಲ್ ಬಾಲಕಬಾಲಕಿಯರಿಗೆಲ್ಲಾ ಮಿಠಾಯಿ ಹಂ...ಚಲ್ಪಟ್ಟಿತು. ಸರ್ವರೂ ಜಯಘೋಷದೊಡನೆ ಚಪ್ಪಾಳೆ ತಟ್ಟಿದರು. ...ದಿನ ರಾತ್ರಿ ಈ ಊರಿನಲ್ಲಿ ರಾಜಭಕ್ತಿ ಪೂರ್ವಕವಾಗಿ ನಡಿಸಿದ್ದ ಏ...ರ್ಪಾಡುಗಳು ನೋಡುವದಕ್ಕೆ ಬಹು ನೇತ್ರಾನಂದಕರವಾಗಿಯೂ ...ಶ್ಲಾಘ್ಯವಾಗಿಯೂ ಇದ್ದವು.

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸ್ಥಳ ...ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋ...ರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ಕಳಿಸತಕ್ಕದ್ದು ...ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂ...ಡದು, ಇಂಥವುಗಳಿಗೆ ನಾವು ಸ್ಥಳ ಕೊಡಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾ...ಗಿರುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿ

ಕರೆಸ್ಪಾಂಡೆನ್ಸ್.

ಕನ್ನಡ ಭಾಷಾಭಿವೃದ್ಧಿಯು.

...ಯ್ಯಾ,

ತಮ್ಮ ಕಳೆದ ವಾರದ ಪತ್ರಿಕೆಯಲ್ಲಿ ಪ್ರಕಟಿತವಾದ ಕನ್ನಡ ...ಭಾಷಾಭಿವೃದ್ಧಿಯ ವಿಷಯಕವಾದ ಬರವಣಿಗೆಯು ನನ್ನನ್ನು ಮಾತ್ರ ...ಸಂತೋಷಪಡಿಸಿದ್ದಲ್ಲದೆ ಕನ್ನಡನಾಡಿನ ಮತ್ತು ಅಂಗ್ಲೇಯ ರಾಜ್ಯದ ...ಸಕಲರನ್ನೂ ಸಂತೋಷಪಡಿಸಿರಬಹುದೆಂದು ನಂಬಬಹುದಾಗಿದೆ. ಇಂ...ತ ಮಹತ್ಕಾರ್ಯವನ್ನು ಆರಂಭಿಸಿ, ಉಪಹತಿಹೊಳಗು ಮಾಡದಂತೆ ...ಅಭಿವೃದ್ಧಿಪಡಿಸತಕ್ಕ ವಿಷಯದಲ್ಲಿ ಭಾಷಾಭಿಮಾನಿಗಳೆಲ್ಲರೂ ಒಂದು ...ಸ್ಥಳದಲ್ಲಿ ಸಭೆ ಸೇರಿ, ಚಾರ್ಚನೀಯಾಂಶಗಳನ್ನು ಚರ್ಚಿಸಿ, ಕಾರ್ಯಾ...ರಂಭ ಮಾಡುವುದು ಸರ್ವ ಜನಾನಂದದಾಯಕವಾದದ್ದೆಂದೂ, ಕನ್ನಡ ...ಭಾಷಾಭಿವೃದ್ಧಿಗೆ ಮುಖ್ಯವಾದದ್ದೆಂದೂ, ದೇಶೋನ್ನತ್ಯಕ್ಕೆ ಕಾರಣವಾದ...ದೆಂದೂ ಘಂಟಾಘೋಷವಾಗಿ ಹೇಳುತ್ತೇನಲ್ಲದೆ, ಆ ರೀತಿ ಸಭೆ ಸೇರಿಸಿ ...ಕಾರ್ಯಾರಂಭಕ್ಕೆ ಕಾರಣಭೂತರೆಂಬ ಅಭಿಧಾನವನ್ನು ಹೊಂದಿ, ...ಭಾಷಾಭಿವೃದ್ಧಿಯ ವಿಷಯದಲ್ಲಿ ಪೂರ್ಣ ತತ್ಪರರೆಂದು ಹೇಳಿಸಿಕೊಳ್ಳುವ ...ಯಶೋಲಾಭವು ವಿಷಯ ಸೂಚಕರಿಗೇ ದೊರೆಯಲೆಂದಾಶಿಸಿ, ತತ್ಸ...ಮಯ ಪ್ರತೀಕ್ಷೆಯಲ್ಲಿರುವೆನು.

ಕೆ. ಶಂಕರಪ್ಪ

ಹಿಂದೂ ಯೂನಾನಿ ವೈದ್ಯರು.

...ಯ್ಯಾ,

ತಮ್ಮ ಆಫೀಸಿನಿಂದ ಪ್ರಕಟವಾಗುವ ೨೦ ನೇ ತಾ ಗುರುವಾರದ ...ಪತ್ರಿಕೆಯಲ್ಲಿ ಒಂದು ವಿಶೇಷವಾದ ಸಂಗತಿಯನ್ನು ನೋಡಿ ನಾವು ...ಬಹಳ ಸಂತೋಷ ತುಂಬಾ ಕೃತಜ್ಞತೆಯುಳ್ಳವರಾಗಿ ಮೈಸೂರು ...ಸರ್ಕಾರದವರು ತುಂಬಾ ಅಭಿವೃದ್ಧಿಯಾಗಲೆಂದು ಸದಾ ಸ್ತೋತ್ರ ...ಮಾಡುತ್ತೇವೆ. ಏನಂದರೆ—ನೇಟಿವ್ ವೈದ್ಯರೂ ಮತ್ತು ಯೂನಾನಿ ...ಹಕೀಮರೂ ಸರ್ಕಾರಿ ನೌಕರರುಗಳಿಗೆ ಔಷಧ ಕೊಟ್ಟು, ಕಾಯಿಲೆ ...ಸರ್ಟಿಫಿಕೇಟ್ ಕೊಡಲು ಸರ್ಕಾರದವರು ಅಂಗೀಕರಿಸತಕ್ಕ ವಿಷಯದಲ್ಲಿ ...ಯಾವ ಅಭ್ಯಂತರವೂ ಇರುವದಿಲ್ಲವೆಂದು ಹುಕುಂ ಕೊಡಿಸಿರುತ್ತಾರೆ. ...ಬಹು ಒಳ್ಳೇದೆ. ಆದರೆ ಈಗ ಪ್ರತಿ ತಾಲ್ಲೋಕು ಕಸಬಾದಲ್ಲಿಯೂ ...ವೈದ್ಯಶಾಸ್ತ್ರವನ್ನು ಓದಿ ತಿಳುವಳಿಕೆಯಿಂದ ಚಿಕಿತ್ಸೆ ಮಾಡತಕ್ಕವರು ...ಕೆಲವರು ಇದ್ದಾರೆ. ಏನೂ ತಿಳಿಯದೆ ಇರುವ ಅಳಲೇಕಾಯಿಪಂಡಿತರು ...ಬಹಳ ಇರುತ್ತಾರೆ. ಎಲ್ಲಾ ವೈದ್ಯರು ಮತ್ತು ಹಕೀಮರು ಈ ವಿಷ...ಯದಲ್ಲಿ ಪ್ರವೇಶಮಾಡಿದರೆ ಅನೇಕ ನೌಕರರು ತಮ್ಮ ಸ್ವಂತ ಕೆಲ...ಸಗಳ ನಿಮಿತ್ತ ಮನೆಯಲ್ಲಿ ಕೂತುಕೊಂಡರೆ ಸರ್ಕಾರಕ್ಕೆ ಎಷ್ಟು ...ನಷ್ಟವಾಗುತ್ತದೆ ಎಂದು ಯೋಚಿಸಬೇಕಾಗಿದೆ. ಆದ್ದರಿಂದ ಮೈಸೂರು ...ಸರ್ಕಾರದವರು ದಯವಿಟ್ಟು ಪ್ರತಿ ತಾಲ್ಲೋಕು ಕಸಬಾ ಮ್ಯುನಿಸಿಪ...ಲ್ ಮೆಂಬರುಗಳ ಅಭಿಪ್ರಾಯದ ಮೇಲೆ ಪಂಡಿತರ ಮತ್ತು ಹಕೀ...ಮರ ನಡತೆ ವಿಷಯವನ್ನು ತಿಳಿದು ಸರ್ಕಾರದಿಂದ ಪ್ರತ್ಯೇಕ ಅವರವ...ರಿಗೆ ಹುಕುಂ ಕೊಡಿಸಿದಲ್ಲಿ ತುಂಬಾ ಒಳ್ಳೇದೆಂದು ಸೂಚಿಸುತ್ತೇನೆ.

ಚನ್ನಪಟ್ಟಣದ ಮೌಲ್ವಿ ಹಕೀಂ ಸಯ್ಯದ್
ನಾಮುಹಮೂದ್ ಖಾದ್ರಿ

ಬೂದಿಕೋಟೆಯಲ್ಲಿ ಕಳ್ಳರ ಅವಾಂತ್ರ

ಅಯ್ಯಾ,

ಇಲ್ಲಿಗೆ ೭ ಮೈಲಿ ದೂರದಲ್ಲಿ ತಾಲ್ಲೂಕ್ ಮತ್ತು ರೈಲ್ವೆ ಜಂಕ್ಷನ್ ಎನಿಸಿ ಪ್ರಕಾಶಿಸುತ್ತಲಿರುವ ಬವರಿಂಗುಪೇಟೆ ಎಂಬ ಪಟ್ಟಣದಲ್ಲಿ ಪ್ರತಿ ಶುಕ್ರವಾರವೂ ದೊಡ್ಡ ಸಂತೆ ಆಗುತ್ತದೆ. ಸದರಿ ಸಂತೆಗೋಸ್ಕರ ಬೂದಿಕೋಟೆಯಿಂದ ಇದೇ ಜೂನ್ ೧೪ ನೇ ತಾ. ಶುಕ್ರವಾರ ಸಂತೆಗೆ ಅನೇಕ ಜನ ವರ್ತಕರು ಹೋಗಿದ್ದು ಸಂತೆ ವಗೈರೆ ಕೆಲಸಗಳನ್ನು ತೀರಿಸಿಕೊಂಡು ವಾಪಸು ಬರುತ್ತಿರುವಾಗ ಸದರಿ ವರ್ತಕರನ್ನು ಅನೇಕ ಜನ ಕಳ್ಳರು ಹೊಡೆದು, ಅವರು ವ್ಯಾಪಾರದಿಂದ ತಂದ ಸರಕುಗಳು ಹಣ ವಗೈರೆ ಎಲ್ಲವನ್ನೂ ದೋಚಿಕೊಂಡು ಹೋದುದಲ್ಲದೆ, ಅವರುಗಳು ಬದುಕುವುದೇ ಕಷ್ಟವಾಗುವಂತೆ ಮೈಯೆಲ್ಲಾ ಘಾಯ ಮಾಡಿರುತ್ತಾರೆ. ಇದೂ ಅಲ್ಲದೆ ಆ ದಿವಸವೇ ಕಾಮಸಮುದ್ರದ ಬ್ರಾಂಚ್ ಪೋಸ್ಟರಾದ ರಾಮರಾಯರೆಂಬುವರು ಬವರಿಂಗುಪೇಟೆಯಿಂದ ಹಣ ತೆಗೆದುಕೊಂಡು ಬೂದಿಕೋಟೆಗೆ ಬರುತ್ತಾ ಇರುವಾಗ್ಗೆ ದಾರಿಯಲ್ಲಿ ಕಳ್ಳರು ಅಡ್ಡಗಟ್ಟಿ ಇನ್ನು ಅನೇಕ ವಿಧವಾಗಿ ಬಾಧೆಗೊಳಿಸಿ, ಅವರ ಶರೀರವನ್ನೆಲ್ಲಾ ಘಾಯ ಮಾಡಿ, ಸದರಿ ರೂಪಾಯಿಗಳನ್ನೆಲ್ಲಾ ಕಿತ್ತುಕೊಂಡುದೂ ಅಲ್ಲದೆ, ವಸ್ತ್ರಹೀನರಾಗಿಯೂ ಮಾಡಿದರು. ಇವರು ಬದುಕುವುದೇ ಕಷ್ಟವಾಗಿತ್ತು. ದೇವರ ದಯದಿಂದ ಈಗ ಸ್ವಲ್ಪ ಗುಣವಾಗುತ್ತಾ ಇದೆ. ಮತ್ತು ಈ ಗ್ರಾಮದಲ್ಲಿ ಸುಮಾರು ೫—೬ ತಿಂಗಳಿಂದ ಆಗಾಗ್ಗೆ ಕಳ್ಳರ ಅವಾಂತ್ರ ಬಹಳವಾಗಿ, ಮನೆಗಳಿಗೆ ನುಗ್ಗಿ ಅವರ ಪದಾರ್ಥಗಳನ್ನು ಕದ್ದುಕೊಂಡು ಹೋಗುವುದರಿಂದ ಕಳೆದುಕೊಂಡು ಇರುವ ಮಾಲೀಕರ ಅಪಾರವಾದ ವ್ಯಸನವನ್ನೂ ಕಷ್ಟವನ್ನೂ ವಿವರಿಸಲಶಕ್ಯವಾಗಿದೆ. ಪೋಲೀಸ್ ಸ್ಟೇಷನ್ ಇರತಕ್ಕ ಸ್ಥಳದಲ್ಲಿಯೇ ಈ ರೀತಿಯಾಗಿ ನಡೆಯುತ್ತಾ ಇದ್ದರೆ ಇತರ ಗ್ರಾಮಾಂತ್ರಗಳಲ್ಲಿ ನಡೆಯುವದೇನಾಶ್ಚರ್ಯ. ಆದ್ದರಿಂದ ಈ ಗ್ರಾಮದ ಪೋಲೀಸ್ ಅಧಿಕಾರಿಗಳು ಸರಿಯಾದ ಉಸ್ತುವಾರಿಯನ್ನು ಮಾಡಿ, ಕೀರ್ತಿಪಡೆದಾರೆಂಬದಾಗಿ ನಂಬಿರುತ್ತೇನೆ.

ವಾಚಕ

ಕೊಪ್ಪ ತಾಲ್ಲೋಕು ನೌಕರಮಾನೆಯರು.

ಅಯ್ಯಾ,

ನಮ್ಮ ತಾಲ್ಲೋಕು ಕಚೇರಿಯು ಈ ಬಾಳಗಡಿಯಲ್ಲಿರುತ್ತೆ. ಇಲ್ಲಿ ತಾಲ್ಲೋಕು ನೌಕರರ ಮಟ್ಟಿಗೆ ೨೩ ಮನೆಗಳಿರುತ್ತೆ. ಇಲ್ಲಿನ ಹವಾ ಸ್ವಾಭಾವಿಕವಾಗಿ ಅನಾರೋಗ್ಯವಾದದ್ದು. ಈಗ ಮಳೆ ಬಹಳ ಪ್ರಬಲಿಸಿರುವದರಿಂದ ಪ್ರತಿ ಮನೆಯಲ್ಲಿಯೂ ೨—೩ ಜನರಿಗೆ ಕಡಮೆಯಿಲ್ಲದೆ ಕಾಯಿಲೆಯಾಗಿ ಮಲಗಿರುತ್ತಾರೆ. ಇಲ್ಲಿ ನೌಕರರೆಲ್ಲರಿಗೂ ಮೂರು ವರ್ಷ ಸರವೀಸಿಗಿಂತಲೂ ಜಾಸ್ತಿಯಾಗಿ ಸದಾ ಕಾಲದಲ್ಲಿಯೂ ರೋಗದಿಂದ ನರಳುತ್ತಾ ತಮ್ಮ ಪ್ರಾಣವನ್ನು ಈ ಬಾಳಗಡಿಯಲ್ಲಿರುವ ಮೃತ್ಯುದೇವತೆಗೆ ಬಲಿಕೊಡುತ್ತಿದ್ದರೂ ಆಫಿಸರವರು ಇಷ್ಟು ವರುಷ ಸರವೀಸ್ ಮಾಡಿರುವ ಜನರನ್ನು ಬೇರೆ ಕಡೆಗೆ ವರ್ಗಾಯಿಸದೆ ಇರುವುದರಿಂದ ಜನಗಳು ಪಡುತ್ತಿರುವ ಕಷ್ಟವು ವರ್ಣಿಸಲಸಾಧ್ಯವಾಗಿದೆ. ನಮ್ಮ ತಾಲ್ಲೋಕು ಅಮಲ್ದಾರ್ರವರು ಬಂದು ವರ್ಷವೇ ಆದಾಗ್ಯೂ ಇವರು ಕಾಯಿಲೆಯಿಂದ ಬಹಳ ತೊಂದರೆಪಡುತ್ತಾ ವರ್ಗದ ಪ್ರಯತ್ನವೂ ನಡಿಯದೆ, ಈಚೆಗೆ ಸಂಭವಿಸಿದ ಪತ್ನಿವಿಯೋಗದಿಂದ ಅಪಾರವಾದ ಸಂಸಾರ ದುಃಖದಲ್ಲಿ ಬಿದ್ದು ಇರುತ್ತಾರೆ. ಶಿರಸ್ತೇದಾರ್ರಿಗೆ ದಿಸ್ಟ್ರಿಕ್ಟ್‌ನಿಂದ ಅಸಿಸ್ಟೆಂಟ್ ಕೋರ್ಟ್ ಹೆಡ್ ಮುನಷಿ ಕೆಲಸವಾದ್ದರಿಂದ ವ್ಯಸನದಿಂದಿರುವರು. ದಫ್ತರ ಡಿಪಾರ್ಟ್‌ಮೆಂಟ್, ಮುನಷಿ ಡಿಪಾರ್ಟ್‌ಮೆಂಟ್, ರಿಕಾರ್ಡ್, ಈ ಮೂರು ಜಾಬಿನವರು ಕಾಯಿಲೆಯಿಂದ ಮಲಗಿ ಮೂರು ತಿಂಗಳಿಂದ ಕಚೇರಿಯನ್ನು ಕಂಡಿದಾರೋ ಇಲ್ಲವೋ ಕಾಣೆ. ದೊಡ್ಡ ಆಫಿಸರವರು ಈ ಬಡ ನೌಕರರನ್ನು ಈ ಮರಣ ಭೂಮಿಯಲ್ಲಿ ತೊಂದರೆಪಡಿಸುವದಕ್ಕಿಂತಲೂ ಬೇರೆ ಕಡೆಗಳಿಗೆ ವರ್ಗಮಾಡಿದರೆ ಸೌಖ್ಯದಿಂದ ಜೀವಿಸಬಹುದು. ಆದರೆ ನಮಗೆ ಇಂಥಾ ಕಷ್ಟಕಾಲದಲ್ಲಿ ಶಕ್ತರಾದ ಡಾಕ್ಟರು ದೊರಕಿರುವದಕ್ಕಾಗಿ ಸಂತೋಷಪಡುವೆವು. ನಮ್ಮ ಡೆಪ್ಟಿ ಕಮಿಷನರವರು ದಯವರಾದ ಈ ಕೊಪ್ಪ ತಾಲ್ಲೋಕು ನೌಕರರ ಕಷ್ಟಗಳನ್ನು ಪರ್ಯಾಲೋಚಿಸಿ ಸೈಹಾನತರ್ಪ ಮಾಡಬಹುದೆಂದು ನಂಬಿರುವೆವು.

ಸಜ್ಜನವಿಧೇಯ

ತಾಲ್ಲೋಕು ವರ್ತಮಾನಗಳು

ಚಿಕ್ಕಮಗಳೂರು.—ಈಗ್ಗೆ ಇಪ್ಪತ್ತೈದು ದಿವಸಗಳಿಂದಲೂ ಪಶ್ಚಿಮದ ಸೋನೇ ಮಳೆಯು ಬಿಡದೆ ಹೊಯ್ಯುತ್ತಾ ಇದ್ದು, ನೆನ್ನೆಯಿಂದ ಸ್ವಲ್ಪ ಕಮ್ಮಿಯಾಗಿದೆ. ಕಳೆದ ವಾರ ತಿರಿಗಿ ಪ್ಲೇಗ್ ರೋಗವು ಕಾಣಿಸಿಕೊಂಡು ಮೂರೋ ನಾಲ್ಕೋ ಜನರು ಸತ್ತರೆಂದು ಕೇಳುತ್ತೇನೆ. ಈ ಕಾಲದಲ್ಲಿ ಮ್ಯುನಿಸಿಪಾಲಿಟಿಯವರು ಗ್ರಾಮ ನೈರ್ಮಲ್ಯ ವಿಷಯದಲ್ಲಿ ಹೆಚ್ಚಾಗಿ ಗಮನ ಕೊಡುವದಲ್ಲದೆ ಊರಿನ ಸುತ್ತಲೂ ಇರುವ ಬೆಟ್ಟದ ಕಡೆಗಳಲ್ಲಿ ಬೆಳದಿರುವ ಉಪ್ಪೇಕಡ್ಡಿಯ ಪೊದೆಗಳನ್ನು ತೆಗಿಸುವದು ಒಳ್ಳೇದು.—ಇದೇ ತಿಂಗಳು ೨೬ ನೇ ತಾ ನ ಹಜೂರ್ ದೊರೆಗಳವರ ವರ್ಷ ವರ್ಧಂತಿಯ ನಿಮಿತ್ತದಿಂದ ಎಲ್ಲಾ ಕೋರ್ಟುಗಳಿಗೂ ಸ್ಕೂಲುಗಳಿಗೂ ರಜಾ ಕೊಟ್ಟಿದ್ದರು. ಯಾವಾಗಲೂ ನಡೆಯುತ್ತಿದ್ದಂತೆ ಸ್ಕೂಲ್ ಹುಡುಗರಿಗಾಗಿ ಆಟಪಾಟಗಳೇನೂ ಏರ್ಪಾಡಾಗಲಿಲ್ಲವೆಂದು ತೋರುತ್ತೆ. ಪ್ರಾಯಶಃ ಪ್ಲೇಗಿನ ಕಾರಣದಿಂದಲೇನೋ ನಿಲ್ಲಿಸಿರಬಹುದಾಗಿ ಕಾಣುತ್ತೆ. ಇಲ್ಲಿನ ಮಾರ್ಕೆಟ್ಟಿನ ಹರಾಜು ಹೋದ ವರ್ಷಕ್ಕಿಂತ ನೂರು ರೂಪಾಯಿ ಕಮ್ಮಿಯಾಯಿತೆಂದು ವರ್ತಮಾನ.

ಹೊಸಕೋಟೆ.—ಇಲ್ಲಿ ... ಆಯಿತು. ಊರಲ್ಲಿ ಕೆಲವು ದಿನಗಳಿಂದ ಗಲಾಟೆ ಇಲ್ಲೆಂತೆನ್ನಿಸಿಕೊಂಡದ್ದು ತಿರಿಗಿ ತಲೆದೋರಿಯದೆ ಸ್ವಾಮಿ ತನ್ನ ಅನುಗ್ರಹದಿಂದ ಇಲ್ಲದಂತೆ ಮಾಡಲೆಂತ ಪ್ರಾರ್ಥಿಸುತ್ತೇವೆ.—ಇಲ್ಲಿ ಇದೇ ತಿಂಗಳು ೧೦ ನೇ ತಾ. ನಲ್ಲಿ ವ್ಯವಸಾಯ ಸಂಘದವರು ಹೊಸದಾಗಿ ಕಟ್ಟಿದ ಶ್ರೀ ಕೃಷ್ಣರಾಜೇಂದ್ರ ಹಾಲಿನಲ್ಲಿ ಉತ್ಕೃಷ್ಟ ಪೈರು ಬೆಳೆದವರಿಗೆ ಇನಾಮು ಸರ್ಟಿಫಿಕೇಟು ಗಳನ್ನು ದಯಪಾಲಿಸಿದರು. ಡೆಪ್ಟಿ ಕಮಿಷನರ್ ಮೆ॥ ಸ್ಪಾರ್ಕ್ಸ್ ದೊರೆಗಳ ಸವಾರಿ ಇಲ್ಲಿಗೆ ಚಿತ್ತೈಸಿ, ಅಗ್ರಾಸನರಾಗಿ ಕಾರ್ಯ ನಡಿಸಿ, ಜನರನ್ನು ಪ್ರೋತ್ಸಾಹ ಪಡಿಸಿದರು. ಈಗ ವ್ಯವಸಾಯ ಸಂಘದ ಪಂಡು ಇನ್ನೂ ಬಾಲ್ಯಾವಸ್ಥೆಯಲ್ಲಿದೆ. ಪ್ರಬುದ್ಧತೆಗೆ ಬಂದಂತೆ ಇನ್ನೂ ಹೆಚ್ಚಾದ ಕಾರ್ಯಗಳು ನಡೆಯುವವು.—ಪೈರು ಪ್ರದರ್ಶನದ ಈ ಕಾರ್ಯವು ವರ್ಷಕೊಮ್ಮೆ ನಡೆಯುವ ರಥೋತ್ಸವದಲ್ಲಿ ಆಗಬೇಕೆಂತ ನಿರ್ಣಯಿಸಿದ್ದರು. ತೇರಿನ ಹಬ್ಬವು ಈ ವರ್ಷ ಏನೋ ಕಾರಣದಿಂದ ಹಿಂದಕ್ಕೆ ಬಿತ್ತು. ಮುಂದೆ ಯಾವಾಗಲೂ ಪೈರು ಪ್ರದರ್ಶನದ ಕಾರ್ಯವು ಪ್ರತಿ ವರುಷ ರಥೋತ್ಸವದ ಕಾಲದಲ್ಲಿ ನಡೆಯುವದು. ಯಾಕಂದರೆ ಆ ಕಾಲದಲ್ಲಿ ಸೇರುವ ಹೆಚ್ಚಾದ ಜನಕ್ಕೆ ಈ ಕಾರ್ಯ ಗೊತ್ತಾಗಿ ತಿಳಿದು ಹೆಚ್ಚು ಪ್ರಯೋಜನಕ್ಕೆ ಬರುವದು.

ಚೆನ್ನಪಟ್ಣ.—ಈಗ ಒಂದು ವಾರದಿಂದ ಮಳೆ ವಿರಾಮವನ್ನು ಕೊಟ್ಟದೆ. ಮುಂಟಮಾರುತವು ಪ್ರಾರಂಭವಾಗಿದೆ. ನಮ್ಮ ಅಮಲ್ದಾರ್ರು ಮೆ॥ ಪಾರ್ಥಸಾರಥಿ ಐಯ್ಯಂಗಾರರು ರಿಟೈರಾಗುವ ವದಂತಿಯಿಂದ ಎಲ್ಲರಿಗೂ ವ್ಯಸನವಾಗಿದೆ.—ತಾ. ೨೦ ನೇ ಸಾಯಂಕಾಲ ೯ ಘಂಟೆಗೆ ಶ್ರೀ ಶೃಂಗೇರಿ ಮಠದ ಜಗದ್ಗುರುಗಳ ಸವಾರಿಯು ಇಲ್ಲಿಗೆ ಚಿತ್ತೈಸಿತು. ಇದಕ್ಕೆ ಮೊದಲೇ ನಮ್ಮ ಅಮಲ್ದಾರರು ಇಲ್ಲಿನ ಮುಸಾಫರಿ ಬಂಗಲೆಯನ್ನು ಸಿದ್ಧಮಾಡಿಸಿ ಸ್ವಾಮಿಗಳ ಬಿಡಾರಕ್ಕೆ ಅನುಕೂಲಪಡಿಸಿದ್ದರು. ಅಮಲ್ದಾರರೂ ಇತರ ಕೋವಿದ ದೊಡ್ಡ ಮನುಷ್ಯರೂ ಸ್ವಾಮಿಗಳನ್ನು ಎದುರುಗೊಂಡು ಬಾಜಾಬಜಂತ್ರಿ ಸಮೇತ ದೊಡ್ಡಪೇಟೆಯಲ್ಲಿ ಕರೆತಂದರು. ಸ್ವಾಮಿಗಳ ದರ್ಶನಕ್ಕಾಗಿ ಸುತ್ತು ಮುತ್ತಲಿನ ಸಾವಿರಾರು ಜನಗಳಿಂದ ಪೇಟೆಬೀದಿಯು ಕಿಕ್ಕಿರಿಸುತ್ತಾ ಇತ್ತು. ಶುಕ್ರವಾರ ಇಲ್ಲಿನ ವೈಶ್ಯಮಂಡಲಿಯವರು ತಮ್ಮ ದೇವಸ್ಥಾನಕ್ಕೆ ಸ್ವಾಮಿಗಳನ್ನು ಬರಮಾಡಿಕೊಂಡು ಅವರಿಂದ ಪ್ರತಿಷ್ಠೆ ಮಾಡಿಸಿದರು. ನೆನ್ನೆ ಭಾನುವಾರ ಸಾಯಂಕಾಲ ಇಲ್ಲಿನ ಸಾಹುಕಾರ್ ಮೆ॥ ಮಸ್ತಾನ್ ಮಿಯಾಸಾಬರೇ ಮೊದಲಾದ ಕೆಲವು ದೊಡ್ಡಮನುಷ್ಯರು ಸ್ವಾಮಿಗಳ ದರ್ಶನಮಾಡಿ ಶಾಲುಗಳನ್ನು ಒಪ್ಪಿಸಿದರು. ಮೆ॥ ಅಬ್ದುಲ್ ಖುದೂಸ್ ಸಾಬರು ಹಿಂದುಸ್ಥಾನಿ ಭಾಷೆಯಲ್ಲಿ ಒಂದು ಅಡ್ರಸ್ಸನ್ನು ಬರೆದು ಅಂದು ಸ್ವಾಮಿಗಳಿಗೆ ಓದಿದರು. ಸ್ವಾಮಿಗಳು ಅವರುಗಳನ್ನು ಆದರದಿಂದ ಅಂಗೀಕರಿಸಿ, ಮೆ॥ ಖುದೂಸ್ ಸಾಬರಿಗೆ ಶಾಲನ್ನು ದಯಪಾಲಿಸಿದರು. ಸೋಮವಾರ ಮುಜಮ್ಮಿಲಿಯರ ಖರ್ಚಿನಿಂದ ಸ್ವಾಮಿಗಳ ಪರಿವಾರಜನಗಳಿಗೆ ಔತಣವಾಗುವ ವದಂತಿ ಇದೆ. ಇಲ್ಲಿನ ಪಟ್ಟದಶೆಟ್ಟರೇ ಮೊದಲಾದ ವರ್ತಕಸಾಹುಕಾರರು ಸ್ವಾಮಿಗಳನ್ನು ಹೂವಿನ ಪಾಲಕಿಯಲ್ಲಿ ಪೇಟೆಯೊಳಗೆ ಮೆರವಣಿಗೆ ಮಾಡಿಸಲು ಪ್ರಯತ್ನ ಮಾಡುವರು. ಸ್ವಾಮಿಗಳು ನಾಳೆ ಮದ್ದೂರು ಮಂಡ್ಯದ ಕಡೆಗೆ ತೆರಳುವರೆಂದು ತಿಳಿಯಬರುತ್ತೆ.

ಯಡೇಹಳ್ಳಿ.—ನಾಲ್ಕು ದಿವಸಗಳಿಂದಲೂ ಮಳೆ ಸುರಿಯುತ್ತಾ ಇದೆ. ರೈತರು ತರಾತುರಿಯಿಂದ ಬಿತ್ತನೆ ಕೆಲಸ ನಡೆಸುತ್ತಾ ಇದ್ದಾರೆ. ಜನ ಮನೆಯಲ್ಲಿಯೂ ಕಾಯಿಲೆ ವಿಚಾರಿಸಿಕೊಳ್ಳುತ್ತಾ ಇದೆ. ಈ ನಡುವೆ ಭಾವಿಗಳಲ್ಲಿ ನೀರಿಲ್ಲದ ಗೋಳಾಟ.—ಈಚೀಚೆಗೆ ಗೋವಧೆ ಸ್ವಲ್ಪ ಮಟ್ಟಿಗೆ ಶಮನವಾದದಾಗಿ ಕಾಣುತ್ತೆ. ಆದರೂ ಪುಂಡರ ಅವಾಂತ ಹೆಚ್ಚುತ್ತಾ ಇದೆ. ಗ್ರಾಮಮಧ್ಯದಲ್ಲಿ ಒಬ್ಬ ಮುಸಲ್ಮಾನನನ್ನು ಯಾರೋ ಮನೆಯವರು ದೊಣ್ಣೆಯಿಂದ ತಲೆಯಮೇಲೆ ಬಲವಾಗಿ ಹೊಡೆದರಂತೆ. ಅವನು ಆಸ್ಪತ್ರೆಯಲ್ಲಿ ಚಿಕಿತ್ಸೆ ಮಾಡಿಸಿಕೊಳ್ಳುತ್ತಾ ಇದ್ದಾನೆ. ಬದುಕಿದರೆ ಹೊಸಬನಂತ ಕಾಣುತ್ತೆ.—ಕೆಲವು ದಿನಗಳ ಕೆಳಗೆ ಕೆನ್ನೆ ಕೊಡಿಗಿಯಲ್ಲಿ ಖೂನಿ ನಡೆಸಿದವರನ್ನು ಪೋಲೀಸ್‌ನವರು ಪತ್ತೆ ಮಾಡಿದ್ದಾರೆ. ಚಿಕ್ಕಮಗಳೂರಿನಲ್ಲಿ ಕೇಸು ವಿಚಾರಣೆಯಾಗುತ್ತಾ ಇದೆ.—ಇದುವರೆಗೂ ಈ ಗ್ರಾಮವು ಸುಭಿಕ್ಷವಾಸವಾಗಿದ್ದು ಇಲ್ಲಿನ ನಾಡ್ಕಸಿಫ್ ಕೋರ್ಟನ್ನು ತೆಗೆದು ಹಾಕಿದ್ದರಿಂದ ಇನ್ನು ಮುಂದೆ ಪುಂಡಗಾರರ ತೌರೂರಾಗುವದೋ ಏನೋ ಎಂಬದಾಗಿ ಸರ್ವರೂ ಭಯದಿಂದ ದೀರ್ಘಾಲೋಚನೆಯಲ್ಲಿದ್ದಾರೆ.—ಈ ಊರು ಮಧ್ಯದಲ್ಲಿರತಕ್ಕ ಶ್ರೀಸುಬ್ರಹ್ಮಣ್ಯ ದೇವಾಲಯವು ಶಿಥಿಲವಾಗಿದ್ದದ್ದರಿಂದ ಮೆ॥ ... ೭೦೦—೮೦೦ ರೂಪಾಯಿ ವರೆಗೆ ಖರ್ಚುಮಾಡಿ ಆದಷ್ಟು ಜೀರ್ಣೋದ್ಧಾರ ಕಟ್ಟಿಸಿದ್ದರು. ಒಂದು ವರುಷದ ಕೆಳಗೆ ವಿಗ್ರಹವು ಭಿನ್ನವಾಗಿದ್ದುದನ್ನು ನೋಡಿ ಈ ಊರಿನ ಮಹನೀಯರೆಲ್ಲರೂ ... ಮೂರ್ತಿಯನ್ನು ತಯಾರು ಮಾಡಿ ತರಿಸಲು ಇನ್ನೂರು ರೂಪಾಯಿ ವರೆಗೆ ಚಂದಾ ಮೂಲಕ ಕೊಟ್ಟರು. ಮಹಾಪಾಟದಾರರು ಕನ್ನಡ ಜಿಲ್ಲೆ ಕಾರ್ಕಳಕ್ಕೆ ಹೋಗಿ ಪ್ರಸಿದ್ಧ ಶಿಲ್ಪಿಗಾರರ ಮೂಲಕ ಶ್ರೀಷಣ್ಮುಖ ಮೂರ್ತಿಯನ್ನು ಕೃಷ್ಣಶಿಲೆಯಿಂದ ಬಹು ಸುಂದರವಾಗಿ ತಯಾರುಮಾಡಿಸಿ ತಂದು, ಶ್ರೀಶೃಂಗೇರಿ ಜಗದ್ಗುರುಮಹಾಸ್ವಾಮಿಗಳವರಿಗೆ ವಿಜ್ಞಾಪನೆ ಮಾಡಿ ಶ್ರೀಗಳವರ ಅಪ್ಪಣೆಪ್ರಕಾರ ಜ್ಯೇಷ್ಠ ಶುದ್ಧ ಬಿದಿಗೆ ಗುರುವಾರ ದೇವತಾಪ್ರತಿಷ್ಠಾ ಕಾರ್ಯವನ್ನು ಯಥಾ ವಿಧಿಯಾಗಿ ನೆರವೇರಿಸಿದರು. ಶೃಂಗೇರಿಯಿಂದ ವೈದಿಕ ವಿದ್ವಾಂಸರಾದ ಭಟ್ಟರು ... ಬಂದಿದ್ದರು. ಭಕ್ತಾದಿಗಳು ೫೦೦ ಜನಗಳ ಮೇಲೆ ಸೇರಿ ಅನೇಕ ದಾನಧರ್ಮಗಳೂ ಸಂತರ್ಪಣೆಯೂ ವಿಜೃಂಭಣೆಯಿಂದ ನೆರವೇರಿಸಿದರು. ದೇವಸ್ಥಾನವನ್ನು ಜೀರ್ಣೋದ್ಧಾರ ಮಾಡಿಸಿದ ಶಂಕರಪ್ಪನವರೇ ಈ ಕಾರ್ಯಕ್ಕೆ ೧೫೦ ರೂಪಾಯಿವರೆಗೆ ವಿನಿಯೋಗ ಮಾಡಿದರು. ಇವರು ಕೇವಲ ಭಕ್ತಿಭರಿತರಾಗಿ ದೇವಸ್ಥಾನಗಳು, ಭಾವಿಗಳು, ಅನಾಥ ಸಂರಕ್ಷಣೆ ಮುಂತಾಗಿ ೭—೮ ಸಾವಿರ ರೂಪಾಯಿಯನವರೆಗೆ ಧರ್ಮಕ್ಕೆ ವಿನಿಯೋಗಿಸಿ ಶಾಶ್ವತವಾದ ಕೀರ್ತಿಯನ್ನು ಪಡೆದಿರುತ್ತಾರೆ. ಈ ಉತ್ಸವಕ್ಕಾಗಿ ಇಲ್ಲಿನ ಡೆಪ್ಯುಟಿ ಅಮಲ್ದಾರ್ ಮೆ॥ ಬಿ. ಜಗನ್ನಾಥರಾಯರು ತುಂಬಾ ಸಹಾಯಮಾಡಿದರು.

ಕು ರಾಜ್ಯಗಳ ಅಧಿಪತಿಗಳು ತಮ್ಮ ಪ್ರತಿನಿಧಿಗಳಾಗಿ ೨೩೯ ಮಂದಿ ರಾಜತಂತ್ರಜ್ಞರಿಂದ ಶ್ರೇಷ್ಠ ಮನುಷ್ಯರನ್ನು ಮೇಲ್ಕಂಡ ಪಂಚಾಯತಿ ಸಭೆಗೆ ಕಳುಹಿಸಿಕೊಟ್ಟಿದ್ದರು. ಈ ಪ್ರತಿನಿಧಿಗಳು ಆ ದಿನ ಪಶ್ಚಾತ್ಯರೊಳಗಿಂದ ಮಿಸ್ಟರ್ ನೆಲಿಡಾಫ್ ಎಂಬ ರಷ್ಯನ್ ಮನುಷ್ಯನನ್ನು ಸಭಾನಾಯಕನನ್ನಾಗಿ ನೇಮಕ ಮಾಡಿದರು. ಈತನು ಸಭಿಕರನ್ನು ಕುರಿತು ನಾನಾ ರಾಜ್ಯಗಳಿಗೆ ಹುಟ್ಟುವ ವ್ಯಾಜ್ಯಗಳನ್ನು ಹಿತದ ಇತ್ಯರ್ಥ ಮಾಡುವುದಕ್ಕೆ ಪ್ರಯತ್ನ ಪಡುವುದು ಈ ಸಭೆಯ ಮೊದಲನೇ ಕಾರ್ಯವೆಂತಲೂ ಒಂದುವೇಳೆ ಯುದ್ಧ ಪ್ರಸಂಗ ಬೀಳುವುದಾದರೆ ಕಾದಾಡುವವರಿಗಾಗಲಿ ಇತರರಿಗಾಗಲಿ ವಿಶೇಷ ಕಷ್ಟ ನಷ್ಟಗಳುಂಟಾಗದಂತೆ ನೋಡಿಕೊಳ್ಳುವುದು ಎರಡನೇ ಕಾರ್ಯವೆಂತಲೂ ಉಪನ್ಯಾಸ ಮಾಡಿದರು.

***

ರಷ್ಯಾ ರಾಜ್ಯದಲ್ಲಿ ಮಂತ್ರಿಶ್ರೇಷ್ಠರಾದ ಎಂ ಸ್ಟೋಲಿಪಿನ್‌ಯವರು ಅಲ್ಲಿನ ಡ್ಯೂಮಾ ಪಾರ್ಲಿಮೆಂಟಿಗೆ ಹೋಗಿ,—ನಿಮ್ಮಲ್ಲಿ ೫೭ ಮಂದಿ ಮೆಂಬರುಗಳು ದೊರೆತನವನ್ನು ನಾಶನಮಾಡಿ ಪ್ರಜಾ ಪ್ರಭುತ್ವವನ್ನು ಏರ್ಪಡಿಸಬೇಕೆಂದು ಫಿತೂರಿ ಮಾಡಿರುತ್ತಾರಾದಕಾರಣ ಅವರನ್ನೆಲ್ಲಾ ನೀವು ಈ ಸಭೆಯಿಂದ ಓಡಿಸಿಬಿಡಬೇಕು ಮತ್ತು ಆ ಪೈಕಿ ಹತ್ತೊಂಬತ್ತು ಮೆಂಬರುಗಳನ್ನು ಕೈ ಸೆರೆ ಹಿಡಿಯುತ್ತೇವೆ ಎಂಬದಾಗಿ ತಿಳಿಸಿದರು ಈ ಸಂಬಂಧದಲ್ಲಿ ಪ್ರಜಾ ನೆಮ್ಮದಿಗೆ ಭಂಗ ಉಂಟಾದೀತೆಂದು ಸರ್ಕಾರದವರು ಅನೇಕವಾಗಿ ಸೈನ್ಯಗಳನ್ನು ಕರೆಸಿ ರಾಜಧಾನಿಯಾದ ಸೆಂಟ್ ಪೀಟರ್ಸ್‌ಬರ್ಗಿನ ರಾಜಬೀದಿಗಳಲ್ಲಿ ಉಸ್ತುವಾರಿಗಾಗಿ ನಿಲ್ಲಿಸಿದರು ವರ್ತಮಾನ ಪತ್ರಿಕೆಗಳಲ್ಲಿ ಆಕ್ಷೇಪಯುಕ್ತವಾದ ಸುದ್ದಿಗಳನ್ನು ಬರೆಯದಂತೆ ಎಚ್ಚರಿಸಿದರು ಆ ೧೯ ಮಂದಿಯ ಪೈಕಿ ೯ ಮಂದಿ ಮೆಂಬರುಗಳನ್ನು ದುಷ್ಟರಾದ ಅನೇಕ ಮುಖಂಡರನ್ನೂ ದಸ್ತಗಿರಿ ಮಾಡಿದ್ದಾರೆ ಚಕ್ರವರ್ತಿಯವರು [illegible] ಪಾರ್ಲಿಮೆಂಟನ್ನು ಬರಖಾಸ್ತು ಮಾಡಿಸಿದರು ಮುಂದಿನ ಸೆಪ್ಟೆಂಬರ್ ೧ ನೆ ತಾರೀಖಿನಿಂದ ಹೊಸ ಪಾರ್ಲಿಮೆಂಟು ಸೇರುವುದಕ್ಕೆ ಪ್ರಜೆಗಳು ಬೇರೆ ಮೆಂಬರುಗಳನ್ನು ಚುನಾಯಿಸಬೇಕೆಂತಲೂ ಈ ಪಾರ್ಲಿಮೆಂಟು ನೊವೆಂಬರ್ ೧ ರಲ್ಲಿ ಸೇರತಕ್ಕದ್ದೆಂತಲೂ ಇಸ್ತಿಹಾರು ಹಾಕಿಸಿದಾರೆ ಈಗಿನ ಪಾರ್ಲಿಮೆಂಟನ್ನು ಬರಖಾಸ್ತು ಮಾಡಿದ ವಿಷಯದಲ್ಲಿ ಪ್ರಜೆಗಳು ಗಲಭೆಯೇನೂ ನಡಿಸಲಿಲ್ಲ ಈ ಪಾರ್ಲಿಮೆಂಟಿಗೆ ೫೨೪ ಮಂದಿ ಪ್ರತಿನಿಧಿಗಳು ಚುನಾಯಿಸಲ್ಪಟ್ಟು ಬಂದಿದ್ದರು. ಇವರಲ್ಲಿ ಹಲವರು ಅಕ್ಷರಸ್ಥರಾಗಿರಲಿಲ್ಲ ಮುಂದೆ ಬರತಕ್ಕ ಪಾರ್ಲಿಮೆಂಟಿಗೆ ೪೪೦ ಮಂದಿ ಪ್ರತಿನಿಧಿಗಳು ಚುನಾವಣೆಯಾಗಬೇಕೆಂದು ವಿಧಿಸಲ್ಪಟ್ಟಿರುವುದಲ್ಲದೆ ವಿದ್ಯಾವಂತರೇ ಮೆಂಬರಾಗಿ ಬರುವಂತೆ ರೂಲುಸನ್ನು ಮಾಡಿಟ್ಟಿದ್ದಾರೆ

***

ಉತ್ತರ ಅಮೇರಿಕಕ್ಕೆ ಸೇರಿದ ಸ್ಯಾನ್‌ಫ್ರಾನ್ಸಿಸ್ಕೊ ಮತ್ತು ಕ್ಯಾಲಿಫೋರ್ನಿಯಾ ಪ್ರದೇಶಗಳಲ್ಲಿ ಅನೇಕಾನೇಕ ಜಪಾನ್ ಪ್ರಜೆಗಳು ನಾನಾ ಕಸಬುಗಳನ್ನು ಮಾಡುತ್ತಾ ಸಭ್ಯ ಪ್ರಜೆಗಳಾಗಿ ವರ್ತಿಸುತ್ತಿದಾರೆ ಈಚೆಗೆ ಅಮೇರಿಕದವರು ಈ ಜಪಾನವರ ಸಾಹಸವನ್ನೂ ಅವರ ಚಟುವಟಿಕೆಯನ್ನೂ ಅವರು ಅಭಿವೃದ್ಧಿಯಾಗುತ್ತಿರುವುದನ್ನೂ ನೋಡಿ ಸಹಿಸಲಾರದೆ, ಅವರನ್ನೆಲ್ಲಾ ಅಲ್ಲಿಂದ ಹೊರಡಿಸಿಬಿಡಬೇಕೆಂದು ಪ್ರಯತ್ನ ಮಾಡಲಾರಂಭಿಸಿದಾರೆ ಜಪಾನವರ ವ್ಯಾಪಾರಸ್ಥಳಗಳಿಗೆ ನುಗ್ಗಿ ಅವರನ್ನು ಹಿಂಸಿಸಿ ಲೂಟಿಮಾಡುತ್ತಲೂ, ನಿಷ್ಕಾರಣವಾಗಿ ಅವರನ್ನು ಹೀಯಾಳಿಸುತ್ತಲೂ, ನಾನಾ ಪ್ರಕಾರವಾಗಿ ಅವರನ್ನು ಅವಮಾನಪಡಿಸುತ್ತಲೂ ಬಂದಿದಾರೆ ಆದರೆ ಈ ವಿಚಾರವೆಲ್ಲಾ ಅಲ್ಲಿರುವ ಜಪಾನ್ ರಾಯಭಾರಿಯ ಮೂಲಕ ಜಪಾನ್ ರಾಜ್ಯಕ್ಕೆ ಗೊತ್ತಾಗುತ್ತಾ ಬಂದಿದ್ದಾಗ್ಯೂ ಜಪಾನ್ ರಾಜ್ಯದವರೂ ಪ್ರಜೆಗಳೂ ಆತುರಪಟ್ಟು ಪ್ರತೀಕಾರ ಕಾರ್ಯಗಳನ್ನು ನಡಿಸದೆ ತಾಳ್ಮೆಯಿಂದ ಸಹಿಸುತ್ತಲೂ, ನಡೆಸಿರುವ ವಿದ್ಯಮಾನಗಳನ್ನು ಅಮೇರಿಕದ ಗವರ್ನಮೆಂಟಿನವರಿಗೆ ತಿಳಿಯಪಡಿಸುತ್ತಲೂ ಬಂದಿರುವರು ಆತ್ತಲಾಗಿ ಅಮೇರಿಕದ ಸರ್ಕಾರಿ ನೌಕರರೂ ಉದ್ಯೋಗದಾರರೂ ಮೇಲ್ಕಂಡ ಪಟ್ಟಣ ಪ್ರದೇಶಗಳಲ್ಲಿ ತಮ್ಮ ಜನರು ನಡಸುತ್ತಿರುವ ಹೊಟ್ಟೆಕಿಚ್ಚಿನ ಕಾರ್ಯಗಳನ್ನು ನಿಲ್ಲಿಸಬೇಕೆಂದು ಪ್ರಯತ್ನಪಡುತ್ತಲೂ ಅಮೇರಿಕ ಮತ್ತು ಜಪಾನ್ ಸರ್ಕಾರಗಳಿಗೆ ಈ ವಿಷಯದಲ್ಲಿ ಅಸಮಾಧಾನಗಳೇನೂ ಉಂಟಾಗಿಲ್ಲವೆಂದು ಪ್ರಕಟಪಡಿಸುತ್ತಲೂ ಇದ್ದಾರೆ ಅದಾಗ್ಯೂ ಅಮೆರಿಕಾ ಪಟ್ಟಣಪ್ರಾಂತ್ಯಗಳಲ್ಲೂ ಅಮೇರಿಕದವರು ಸಭ್ಯರಾದ ಜಪಾನ್ ಪ್ರಜೆಗಳನ್ನು ನಿಷ್ಕಾರಣವಾಗಿ ಕಷ್ಟ ನಷ್ಟ ಅವಮಾನಗಳಿಗೆ ಗುರಿಮಾಡುವುದೇನೋ ತಪ್ಪಲಿಲ್ಲವು ಈ ವಾರ ಬಂದಿರುವ ತಂತೀವರ್ತಮಾನವು ಸ್ವಲ್ಪ ಅವಲಕ್ಷಣವಾಗಿರುವಂತೆ ಕಾಣುತ್ತಿದೆ ಅಮೆರಿಕಾ ಪ್ರದೇಶಗಳಲ್ಲೂ ಇರುವ ಜಪಾನ್ ರಾಯಭಾರಿಯನ್ನು ಜಪಾನ್ ರಾಜ್ಯಭಾರದವರು ಅಲ್ಲಿಂದ ವಾಪಸು ಕರೆಸಿಕೊಳ್ಳುವಂತೆ ತೀರ್ಮಾನಿಸಿ, ಆ ಅರ್ಥಕ್ಕೆ ಅಂತರಂಗದಲ್ಲೇ ಅವರಿಗೆ ತಂತೀವರ್ತಮಾನ ಕೊಟ್ಟಿದಾರೆಂದು ತಿಳಿಯುವುದು ಇದು ಸಾಮಾನ್ಯವಾದ ಕಾರ್ಯವೆಂದು ಊಹಿಸಲಾಗದು ಅಮೆರಿಕಾ ಗವರ್ನಮೆಂಟಿನವರಿಗೂ ಮನಸ್ತಾಪಗಳು ಪರಸ್ಪರ ಹೆಚ್ಚಿ ಯುದ್ಧ ಪ್ರಸಂಗ ಉಂಟಾಗುವುದೆಂದು ಈ ಕಾರ್ಯವು ಸೂಚಿಸುತ್ತದೆ ಇದು ಹ್ಯಾಗೆ ಪರಿಣಮಿಸುವುದೋ ಮುಂದೆ ನೋಡತಕ್ಕದ್ದಾಗಿದೆ

ಶ್ರೀಮನ್ಮಹಾರಾಜರವರ ವರ್ಧಂತಿಯು.

ರಾಜಧಾನಿಯಲ್ಲಿ ನಡೆದ ಉತ್ಸವಾದಿಗಳು

ಅರಮನೆಯೊಳಗೆ ದರ್ಬಾರು

ಕಳೆದ ತಾ ೧೫ನೆ ಶನಿವಾರ ಶ್ರೀಮನ್ ಮಹಾರಾಜರವರ ೨೪ನೆ ವರುಷದ ವರ್ಧಂತಿ ಉತ್ಸವವು ರಾಜಧಾನಿಯಲ್ಲಿ ಬಹು ಸಂಭ್ರಮವಾಗಿ ನೆರವೇರಿತು. ಆ ದಿನ ಬೆಳಿಗ್ಗೆ ಕೋಟೆ ಕೊತ್ತಲಗಳಿಂದ ಗೌರವಾರ್ಥವಾದ ತೋಪುಗಳು ಹಾರಿಸಲ್ಪಟ್ಟವು. ಅರಮನೆಯಲ್ಲಿ ಶ್ರೀಮನ್ಮಹಾರಾಜರವರು ನಿತ್ಯಕಟ್ಲೆಯ ಸ್ನಾನಾಹ್ನಿಕಾದಿಗಳನ್ನು ತೀರಿಸಿಕೊಂಡು ದಿವ್ಯಾಗ್ರೇಸರತೆಯಾದ ಶ್ರೀಚಾಮುಂಡಾಂಬೆಯ ಪೂಜೆಪುನಸ್ಕಾರಗಳನ್ನು ನಡಿಸಿ ದಿವ್ಯವಾದ ವಸ್ತ್ರಾಭರಣಾದ್ಯಲಂಕೃತರಾಗಿ ೧೦ ಗಂಟೆಗೆ ಅಂಬಾವಿಲಾಸವೆಂಬ ಕಳಕಳಿಸುವ ದರ್ಬಾರ್ ಮಂದಿರಕ್ಕೆ ಚಿತ್ತೈಸಿ, ಮಧ್ಯದ (ದೊಡ್ಡಿ)ರುವಲ್ಲಿ ಶ್ರೇಷ್ಠತರವಾದ ಭದ್ರಾಸನವನ್ನಲಂಕರಿಸಿದರು. ಕುಲಗುರುಗಳಾದ ಶ್ರೀಪರಕಾಲ ಮಠದ ಸ್ವಾಮಿಗಳು ದಯಮಾಡಿ, ವಿಧಿಪೂರ್ವಕವಾಗಿ ಶ್ರೀಮನ್ಮಹಾರಾಜರವರಿಂದ ಪಾದಪೂಜಾದಿಗಳನ್ನು ಸ್ವೀಕರಿಸಿ ಆಶೀರ್ವಾದಮಾಡಿ ತೆರಳಿದರು ಆರುವಾಯ ವೈದಿಕಮಂಡಲಿಯವರು ಶ್ರೀಮನ್ಮಹಾರಾಜರವರಿಗೆ ಫಲಗಳನ್ನೊಪ್ಪಿಸಿ ಆಶೀರ್ವಚನಪೂರ್ವಕವಾದ ಮಂಗಳಾಕ್ಷತೆಗಳನ್ನು ಹಾಕಿದರು ಲೌಕಿಕರು ಅಂದರೆ ರಾಜಬಂಧುಗಳು, ದಿವಾನರು, ಕೌನ್ಸಲರುಗಳು, ಸರ್ಕಾರಿ ಇಲಾಖೆಗಳ ಮುಖ್ಯಸ್ಥರುಗಳು, ಛೀಫ್ ಕೋರ್ಟ್ ಜಡ್ಜಿಗಳು, ಸೆಕ್ರೆಟರಿಗಳು, ಡೆಪ್ಯುಟಿ ಮತ್ತು ಅಸಿಸ್ಟೆಂಟ್ ಕಮಿಷನರುಗಳು, ಜಹಗೀರುದಾರರು, ಕಟ್ಟೆವರ್ತಕರೇ ಮೊದಲಾದ ಎಲ್ಲಾ ಕೋಮುಗಳ ದೊಡ್ಡ ಮನುಷ್ಯರು, ಮಿಲ್ಟೇರಿ ಇಲಾಖೆಯ ಹುದ್ದೇದಾರರು ಮೊದಲಾದವರೆಲ್ಲಾ ಶ್ರೀಮನ್ಮಹಾರಾಜರವರಿಗೆ ಭಯಭಕ್ತಿಪೂರ್ವಕವಾಗಿ ಮುಜರೇಮಾಡಿ ಕುಳಿತರು ಸಂಗೀತಗಾರರ ಹಾಡುಗಾರಿಕೆಯೂ ನರ್ತಕಿಯರ ನಾಟ್ಯವೂ ಭಟರಾಜರ ಸ್ತುತಿಪಾಠಗಳೂ ಮನೋಜ್ಞವಾಗಿ ನಡೆಯುತ್ತಿರುವಲ್ಲಿ ರಾಜಪುರೋಹಿತರು ಶ್ರೀಮನ್ ಮಹಾರಾಜರವರಿಂದ ಶಾಸ್ತ್ರೋಕ್ತರೀತಿಯಲ್ಲಿ ಫಲಪೂಜೆ ಫಲದಾನಾದಿಗಳನ್ನು ಮಾಡಿಸಿದರು ಏಳುಮಂದಿ ಸುಮಂಗಲಿಯರು ಶ್ರೀಮನ್ ಮಹಾರಾಜರವರಿಗೆ ಫಲಾದಿಮಂಗಳದ್ರವ್ಯಗಳನ್ನೊಪ್ಪಿಸಿ ಮಂಗಳಾರತಿಯನ್ನು ಬೆಳಗಿದರು ಸರ್ದಾರ್ ಕಾಂತರಾಜೇ ಅರಸಿನವರು ಶ್ರೀಮನ್ ಮಹಾರಾಜರವರಿಗೆ ಹಾರ ತುರಾಯಿಗಳನ್ನೊಪ್ಪಿಸಿದ ಮೇಲೆ ವೈದಿಕರಿಗೂ ಲೌಕಿಕರಿಗೂ ಪುಷ್ಪ ತಾಂಬೂಲಾದಿಗಳು ವಿನಿಯೋಗಮಾಡಲ್ಪಟ್ಟು ಮುಜರೆಗಳು ನಡೆದವು ಸಲಾಂಬಾಜಾ ಆಗುತ್ತಿರುವಲ್ಲಿ ಶ್ರೀಮನ್ ಮಹಾರಾಜರವರು ದರ್ಬಾರನ್ನು ಮುಕ್ತಾಯಮಾಡಿ ಚಿತ್ತೈಸಿದರು ರಾಜಧಾನಿಯ ದೇವಸ್ಥಾನಗಳಲ್ಲೂ ಈ ಸಂಸ್ಥಾನದ ಸಕಲವಾದ ಮುಜರಾಯಿ ದೇವಸ್ಥಾನಗಳಲ್ಲೂ ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನಾ ಪೂರ್ವಕಗಳಾದ ಅಭಿಷೇಕ ಅರ್ಚನೆ ಉತ್ಸವಾದಿಗಳು ನಡೆದವು ಮರುದಿನ ರಾಜಧಾನಿಯಲ್ಲಿ ವರ್ಧಂತಿ ಕಟ್ಲೆಯ ಸಮಾರಾಧನೆಯು ಜರುಗಿತು

ವರ್ಧಂತಿ ಕಟ್ಲೆಯ ಮೆರವಣಿಗೆಯು

ಮಧ್ಯಾಹ್ನಾತ್ಪರ ಸುಮಾರು ೫ ಗಂಟೆಗೆ ಶ್ರೀಮನ್ ಮಹಾರಾಜರವರು ಸಕಲ ಸನ್ನಾಹ ಬಿರುದು ಸೈನ್ಯಗಳೊಡನೆ ಮೆರವಣಿಗೆ ಹೊರಟರು ರಸ್ತೆಗಳ ಉಭಯಪಾರ್ಶ್ವಗಳಲ್ಲೂ ಚಪ್ಪರಗಳೂ ತೋರಣಾದಿಗಳೂ ಕಟ್ಟಿ ಅಲಂಕಾರ ಮಾಡಲ್ಪಟ್ಟಿತ್ತು ವರ್ತಕರು ತಮ್ಮ ಅಂಗಡಿಗಳಲ್ಲೂ ಮೇಷ್ಟಗಳಲ್ಲೂ ನಾನಾ ಪ್ರಕಾರವಾಗಿ ಶೃಂಗಾರ ಮಾಡಿ, ನೇತ್ರಾನಂದಕರವಾಗಿ ಮಾಡಿದ್ದರು ಉತ್ಸವವು ಅರಮನೆಯ ಕರೀಕಲ್ಲು ತೊಟ್ಟಿಯಿಂದ ಹೊರಟು, ಪಶ್ಚಿಮ ಕೋಟೆ ಬಾಗಿಲು ನುಗ್ಗಿ ಬಂದು, ಕರ್ಜನ್ ಪಾರ್ಕಿನೊಳಕ್ಕೆ ದಕ್ಷಿಣ ದ್ವಾರದಿಂದ ಪ್ರವೇಶಿಸಿ, ವಿಕ್ಟೋರಿಯ ರಸ್ತೆಯಲ್ಲಿ ಹೊರಟು, ದೊಡ್ಡ ಗಡಿಯಾರದ ಬಳಿ ಪಾರ್ಕಿನಿಂದ ದೊಡ್ಡ ಪೇಟೆಯನ್ನು ಪ್ರವೇಶಿಸಿ, ನೆಟ್ಟಗೆ ಉದ್ದಕ್ಕೂ ಹೋಗಿ ಬಲಗಡೆಗೆ ತಿರುಗಿಕೊಂಡು, ಕಮಾನಿ ದರ್ವಾಜಾ ಎಂಬ ದ್ವಾರವನ್ನು ಹಾಯ್ದು ಗವರ್ನಮೆಂಟ್ ಹೌಸ್ ಬಂಗಲೆಯನ್ನು ತಲಪಿತು ಉತ್ಸವವು ಚತುರಂಗ ಬಲ ಸಮೇತವಾದದ್ದಾಗಿತ್ತು ಬೆಂಗಳೂರಿಂದ ಇಂಪೀರಿಯಲ್ ಸರ್ವಿಸ್ ಕುದುರೇ ಸೈನ್ಯವೂ ಬಂದಿತ್ತು ಸಮಸ್ತ ಬಿರುದುಗಳೂ ಜಿಲ್ಲೋ ಭಲ್ಲಿದವರೂ ರಾಚಪಾಂಡವರೂ ಇಂಗ್ಲಿಷ್ ಮತ್ತು ಕರ್ನಾಟಕ ಬ್ಯಾಂಡಿನವರೂ ಇದ್ದರು ಶ್ರೀಮನ್ ಮಹಾರಾಜರವರು ದಿವ್ಯವಾದ ಕಿಂಕಾಪು ಅಂಗರೇಖು ಅಮೌಲ್ಯವಾದ ರುಮಾಲು ಶಿರಪೇಷು ಹಸ್ತಾಭರಣ ಕಂಠಾಭರಣಗಳೇ ಮೊದಲಾದವುಗಳಿಂದಲಂಕೃತರಾಗಿ ಶ್ರೇಷ್ಠವಾದ ಅಶ್ವವನ್ನು ಹತ್ತಿ ಶ್ವೇತಚ್ಛತ್ರಿಯನ್ನು ಹಿಡಿಸಿಕೊಂಡು ಮೆರವಣಿಗೆಯ ಮಧ್ಯಭಾಗದಲ್ಲಿ ಬರುತ್ತಿದ್ದರು ಶ್ರೀಮನ್ ಯುವರಾಜರವರೂ ದಿವ್ಯಾಭರಣ ಭೂಷಿತರಾಗಿ ಕುದುರೆ ಸವಾರಿ ಮಾಡುತ್ತಾ ಪಕ್ಕದಲ್ಲೇ ಇದ್ದರು ಕರ್ಜನ್ ಪಾರ್ಕಿನಲ್ಲಿ ಉತ್ಸವವು ಯೂರೋಪಿಯನ್ ಕ್ಲಬ್ಬಿನ ಬಳಿಗೆ ಬಂದ ಒಡನೆಯೇ ಅದರ ಬಿಸಿಲುಮಾಳಿಗೆಯಲ್ಲಿ ನಿಂತಿದ್ದ ಬ್ರಿಟಿಷ್ ರೆಸಿಡೆಂಟರೇ ಮೊದಲಾದ ಸರ್ದಾರರೂ ದೊರೆಸಾನಿಗಳೂ ಶ್ರೀಮನ್ ಮಹಾರಾಜರವರ ಮೇಲೆ ಪುಷ್ಪಗಳ ಮಳೆಗರೆದು ಮೂರಾವರ್ತಿ ಜಯಧ್ವನಿ ಮಾಡಿ ತಮ್ಮ ಆನಂದಾತಿಶಯವನ್ನು ಪ್ರಕಾಶಪಡಿಸಿದರು. ಅಲ್ಲಿಂದ ಮುಂದಕ್ಕೂ ಅಂಗಡೀ ಬೀದಿಯಲ್ಲಿ ಅನೇಕ ವರ್ತಕ ದೊಡ್ಡ ಮನುಷ್ಯರು ಶ್ರೀಮನ್ ಮಹಾರಾಜರವರಿಗೆ ಹಾರ ತುರಾಯಿಗಳನ್ನೊಪ್ಪಿಸಿ ತಮ್ಮ ರಾಜಭಕ್ತಿಯನ್ನು ಪ್ರಕಾಶಮಾಡಿದರು ಗವರ್ನಮೆಂಟ್ ಹೌಸ್ ಎಂಬ ಬಂಗಲೆಯ ಬಾಗಿಲಲ್ಲಿ ರೆಸಿಡೆಂಟರೇ ಮೊದಲಾದ ಸರ್ದಾರರೂ ದಿವಾನರೇ ಮುಂತಾದ ಅಧಿಕಾರಿಗಳೂ ಶ್ರೀಮನ್ ಮಹಾರಾಜರವರನ್ನು ಎದುರುಗೊಂಡು ಒಳಕ್ಕೆ ಬಿಜಮಾಡಿಸಿದರು ಸ್ವಲ್ಪಹೊತ್ತು ವಿಶ್ರಮಿಸಿಕೊಂಡ ಮೇಲೆ ಶ್ರೀಮನ್ ಮಹಾರಾಜರವರೂ ಶ್ರೀಮನ್ ಯುವರಾಜರವರೂ ಅಶ್ವಾರೂಢರಾಗಿ ಮೈದಾನಿಗೆ ದಯಮಾಡಿ, ಪೀಠಟಿಗೆಗಳ ಮತ್ತು ಜಗಟುಪತ್ತಿಗಳ ಬಳಿಯಲ್ಲಿ ಸೈನಿಕರ ಕವಾತು ಮುಂತಾದದ್ದನ್ನು ಪರಾಂಬರಿಸಿದರು ಅಲ್ಲಿ ಗೌರವಾರ್ಥವಾದ ತೋಪುಗಳೂ ಸಂತೋಷಸೂಚಕವಾದ ಸುರುಟುಗಳೂ ಆದವು ಸೈನಿಕರೆಲ್ಲಾ ಕ್ರಮವಾಗಿ ಎದುರಿಗೆ ಬಂದು ಶ್ರೀಮನ್ ಮಹಾರಾಜರವರಿಗೆ ಪದ್ಧತಿಯ ಪ್ರಕಾರ ಮುಜರೆ ಮಾಡಿದರು ಸಲಾಂಬಾಜಾ ಆದ ನಂತರ ಶ್ರೀಮನ್ ಮಹಾರಾಜರವರು ಹಿಂತಿರುಗಿ ಬಂಗಲೆಗೆ ದಯಮಾಡಿ, ಯೂರೋಪಿಯನ್ ಜನರ ಕೂಡ ಸ್ವಲ್ಪ ಹೊತ್ತು ಸಂಭಾಷಣೆ ಮಾಡುತ್ತಿದ್ದು, ಮೆರವಣಿಗೆ ಹೊರಟು, ರಾತ್ರಿ ಸುಮಾರು ೧೦ ಗಂಟೆಗೆ ಅರಮನೆಗೆ ಚಿತ್ತೈಸಿ, ಶಾಸ್ತ್ರವತ್ತಾಗಿ ಆರತಕ್ಷತೆ ನಡೆದ ಮೇಲೆ ಆ ದಿನದ ಉತ್ಸವಾದಿಗಳನ್ನು ಮುಕ್ತಾಯ ಮಾಡಿದರು ಈ ವರುಷ ಈ ಉತ್ಸವವು ತುಂಬಾ ಕೋಲಾಹಲದೊಡನೆ ನಡಿಯಿತು. ಮಳೆಯಾಗಲಿ ಮೋಡವಾಗಲಿ ಇಲ್ಲದೆ ಪಟ್ಟಣವೆಲ್ಲಾ ಕಳಕಳಿಸುತ್ತಿತ್ತು. ಸಾವಿರಾರು ಪ್ರಜೆಗಳು ರಾಜಭಕ್ತಿ ಪೂರಿತರಾಗಿ ರಾಜಬೀದಿಗಳಲ್ಲಿ ಕಿಕ್ಕಿರಿಯುವಂತೆ ನಿಂತು ಶ್ರೀಮನ್ ಮಹಾರಾಜರವರನ್ನೂ ನೇತ್ರಾನಂದಕರವಾದ ಉತ್ಸವದ ವೈಭವವನ್ನೂ ನೋಡಿ ಪರಮಾನಂದಪಟ್ಟರು ಆ ರಾತ್ರಿ ರಾಜಧಾನಿಯಲ್ಲಿ ನಡೆದ ದೀಪೋತ್ಸವವು ಬಹಳ ವಿಸ್ತಾರವಾದದ್ದಾಗಿಯೂ ಅತ್ಯಂತ ರಮಣೀಯವಾದದ್ದಾಗಿಯೂ ಇತ್ತು ಪೋಲೀಸ್ ಏರ್ಪಾಡು ತೃಪ್ತಿಕರವಾಗಿತ್ತು

ಇತರ ವಿಷಯಗಳು

ಮರುದಿನ ಅಂದರೆ ಭಾನುವಾರ ಬೆಳಿಗ್ಗೆ ಶ್ರೀಮನ್ಮಹಾರಾಜರವರ ವರ್ಧಂತಿ ಉತ್ಸವದ ಸಂಭ್ರಮಕ್ಕಾಗಿ ಸರ್ ಪಿ ಎನ್ ಕೃಷ್ಣಮೂರ್ತಿ, ಕೆ ಸಿ ಐ ಇ ಯವರ ಮುಖ್ಯ ಮುಖ್ಯರಾದ ದೊಡ್ಡಮನುಷ್ಯರನ್ನೆಲ್ಲಾ ಕರೆಸಿಕೊಂಡು, ತಮ್ಮ ಬಂಗಲೆಯಲ್ಲಿ ಬಹು ವಿಶೇಷವಾದ ಔತಣವನ್ನು ಮಾಡಿಸಿದರು ಆ ರಾತ್ರಿಯೂ ಸೋಮವಾರ ರಾತ್ರಿಯೂ ಅರಮನೆಯ ಕರೀಕಲ್ಲುತೊಟ್ಟಿಯಲ್ಲಿ ಶ್ರೀಮನ್ಮಹಾರಾಜರವರು ಚಿತ್ತೈಸಿ ದರ್ಬಾರ್ ನಡಿಸಿದರು ಅಗ್ಗಿ ಪದ್ಧತಿಯಂತೆ ನಜರುಗಳು ನಡೆದವು. ಸೋಮವಾರ ರಾತ್ರಿ ದರ್ಬಾರ್ ಆದ ತರುವಾಯ ಮುಖ್ಯರಾದ ಅಧಿಕಾರಸ್ಥರಿಗೆಲ್ಲಾ ಅರಮನೆಯಲ್ಲೇ ಶ್ರೀಮನ್ಮಹಾರಾಜರವರ ವರ್ಧಂತೀ ಕಟ್ಲೆಯ ದಿವ್ಯವಾದ ಔತಣ ಜರುಗಿತು

ಅತಿಥಿ ಸತ್ಕಾರಾದಿಗಳು

ಈ ವರ್ಧಂತಿ ಉತ್ಸವದ ನಿಮಿತ್ತ ಶ್ರೀಮನ್ಮಹಾರಾಜರವರು ಅನೇಕ ಯೂರೋಪಿಯನ್ ಸರ್ದಾರರಿಗೆ ಆಹ್ವಾನಪತ್ರಿಕೆಗಳನ್ನು ಕಳುಹಿಸಿದ್ದರು ಆ ಪೈಕಿ ಸುಮಾರು ೧೫೫ ಮಂದಿ ಸಾಹೇಬ್ ಜನ ರಾಜಧಾನಿಗೆ ಬಂದು ಗವರ್ನಮೆಂಟ್ ಹೌಸಿನಲ್ಲಿ ಶ್ರೀಮನ್ಮಹಾರಾಜರವರ ಆತಿಥ್ಯವನ್ನು ಸ್ವೀಕರಿಸುತ್ತಿದಾರೆ ಇವರ ಸಂತೋಷಾರ್ಥವಾಗಿ ಕುದುರೆ ಜೂಜುಗಳು, ಪೋಲೋ ಎಂಬ ಚಂಡಾಟದ ಪಂದ್ಯ, ಗಾಲ್ಫ್ ರ್ಯಾಕೆಟ್ಸ್ ಎಂಬೀ ಆಟಗಳನ್ನು ಪಂದ್ಯಗಳನ್ನೂ ಕಲ್ಪಿಸಿರುತ್ತದೆ ಯೂರೋಪಿಯನ್ ಅತಿಥಿಗಳಿಗೆಲ್ಲಾ ಈ ರಾತ್ರಿ ಔತಣ ನಡಿಯುವುದು ಅವರು ಜೂಲೈ ೨ ನೆ ತಾರೀಖಿನ ದಿನ ಇಲ್ಲಿಂದ ಸ್ವಸ್ಥಳಗಳನ್ನು ಕುರಿತು ಪ್ರಯಾಣ ಮಾಡುವವರಾಗಿದಾರೆ

ಇತರ ಕಡೆಗಳಲ್ಲಿ ನಡೆದ ಉತ್ಸವಗಳು

ಶ್ರೀನಿವಾಸಪುರ

ಕಳೆದ ೧೫ ನೇ ತಾ ಶನಿವಾರ ಬೆಳಿಗ್ಗೆ ೯ ಗಂಟೆಗೆ ಶ್ರೀನಿವಾಸಪುರದ ನಿವಾಸಿಗಳಲ್ಲಿ ಪ್ರಮುಖರಾದ ಹಿಂದೂ ಮುಸಲ್ಮಾನರೂ ಸರ್ಕಾರಿ ಉದ್ಯೋಗಸ್ಥರೂ, ಉಪಾಧ್ಯಾಯರೂ, ಬಾಲಕ ಬಾಲಿಕೆಯರೂ ಸ್ಕೂಲ್ ಕಟ್ಟಡದಲ್ಲಿ ಸಭೆ ಸೇರಿದರು ಪೋಲೀಸು ಕಾನ್‌ಸ್ಟೇಬಲ್‌ಗಳು ಮಹಾರಾಜರವರ ತಸ್ವೀರಿನೆದುರಿಗೆ ನಿಂತು ಕವಾಯತು ಮರ್ಯಾದಾರ್ಥವಾಗಿ ತುಪಾಕಿ ಹಾರಿಸಿದರು ಮೆ॥ ಗಳಾದ ರಾಮಚಂದ್ರರಾಯರೂ, ರಾಮಾಶಾಸ್ತ್ರಿಗಳೂ, ಸುಬ್ಬಶಾಸ್ತ್ರಿಗಳೂ ಮಹಾರಾಜರವರ ಗುಣಕಥನವನ್ನು ಮಾಡಿ ಮಹಾಸ್ವಾಮಿಯವರಿಗೆ ಶ್ರೇಯೋಭಿವೃದ್ಧಿಯನ್ನೂ, ಆಯುರಾರೋಗ್ಯಾಭಿವೃದ್ಧಿಯನ್ನೂ ಕೋರಿದರು ಹಿಂದೂಸ್ಥಾನಿಯಲ್ಲಿಯೂ ಶ್ರೇಯಃ ಪ್ರಾರ್ಥನೆ ನಡಿಯಿತು ಬಾಲಿಕೆಯರು ಮಂಗಳವನ್ನು ಹಾಡಿದರು ನಂತರ ಮಹಾರಾಜರ ಪ್ರೈವೇಟ್ ಸೆಕ್ರೆಟೆರಿಯವರ ಮೂಲಕ ಶ್ರೀಮನ್ಮಹಾರಾಜರವರಿಗೆ ತಂತೀ ವರ್ತಮಾನ ಕಳುಹಿಸಲ್ಪಟ್ಟಿತು ಮೆ॥ ಶಿಂಗ್ರೈಯ್ಯಂಗಾರರು ಸಭಿಕರನ್ನೂ ಅಗ್ರಾಸನಾಧಿಪತಿಗಳನ್ನೂ, ಉಪನ್ಯಾಸ ಮಾಡಿದವರನ್ನೂ ವಂದಿಸಿದನಂತರ ಸಭೆ ಪ್ರೊಸೈಸಿತು ರಾತ್ರಿ ದೇವಾಲಯಗಳಲ್ಲಿಯೂ ಮಸೀದಿಯಲ್ಲಿಯೂ ಮಹಾರಾಜರವರಿಗೆ ಮಂಗಳಾಶೀರ್ವಚನಗಳು ಹೇಳಿದರು

ಆನೇಕಲ್ ತಾಲ್ಲೂಕು ದೇವಮ್ಮಸಂದ್ರ

ನಮ್ಮ ಶ್ರೀಮನ್ ಮಹಾರಾಜರವರ ವರ್ಷವರ್ಧಂತಿ ಉತ್ಸವವು ತಾ ೧೫ ನೇ ಶನಿವಾರ ಇಲ್ಲಿನ ಲಂಡನ್ ಮಿಷನ್ ಸ್ಕೂಲ್ ಹೆಡ್ ಮಾಸ್ಟರು ಮತ್ತು ಅಸಿಸ್ಟೆಂಟ್ ಮಾಸ್ಟರುಗಳ ಪ್ರೋತ್ಸಾಹದಿಂದ ಬಹು ವಿಜೃಂಭಣೆಯಾಗಿ ನಡೆಯಿತು, ಆ ದಿನ ಇಲ್ಲಿನ ಸಂತೆಬೀದಿಯು ಮಣೀಯವಾದ ಚಪ್ಪರಗಳಿಂದಲೂ ಧ್ವಜಪಟಗಳಿಂದಲೂ, ಶ್ರೀಮನ್ ಮಹಾರಾಜರವರ ಮತ್ತು ಎಡ್ವರ್ಡ್ ಸಾರ್ವಭೌಮರವರ ಪ್ರತಿಮೆಗಳಿಂದಲೂ ಅಲಂಕರಿಸಲ್ಪಟ್ಟಿತು. ಸರ್ಜಾಪುರದ ಸ್ಕೂಲ್ ಹೆಡ್ ಮಾಸ್ಟರ್ ಮೆ॥ ರಾಮರಾಯರು ಅಗ್ರಾಸನವನ್ನು ವಹಿಸಿದ್ದರು ಅನೇಕ ಹಿಂದೂ, ಮುಸಲ್ಮಾನ ದೊಡ್ಡ ಮನುಷ್ಯರು ಸಭೆಯನ್ನಲಂಕರಿಸಿದ್ದರು. ಮಿಷನ್ ಮತ್ತು ಗವರ್ನಮೆಂಟ್ ಹಿಂದುಸ್ಥಾನಿ ಸ್ಕೂಲು ಬಾಲಕರ ಆಟಪಾಟಗಳು ಬಹು ವಿನೋದಕರವಾಗಿ ನಡೆದವು ಬಾಲಿಕೆಯರು ಮಾಡಿದ ಅಭಿನಯದ ಹಾಡು ನೋಟಕರಿಗೆ ಆನಂದಕರವಾಗಿತ್ತು ಬಾಲಕರಲ್ಲೊಬ್ಬನು ವಿದ್ಯಾಭ್ಯಾಸಕ್ಕೂ ಅಂಗಸಾಧನೆಗೂ ಇರತಕ್ಕ ಸಂಬಂಧವನ್ನು ಸೂಚಿಸಿ, ಒಂದು ಉಪನ್ಯಾಸವನ್ನು ಓದಿದ್ದು ಸ್ವಾರಸ್ಯವಾಗಿತ್ತು ಮೆ ಜೆ ಎಸ್ ಪುಟ್ಟರಾಜಯ್ಯನವರು ಬಾಲಕರಿಂದ ಡ್ರಿಲ್ ಮಾಡಿಸಿದರು ನಂತರ ಅಗ್ರಾಸನಾಧಿಪತಿಗಳು ಆ ದಿನದ ಉತ್ಸವಕ್ಕೆ ಕಾರಣವನ್ನು ತಿಳಿಸಿ, ಮಹಾರಾಜರ ಶ್ರೇಯಃಪ್ರಾರ್ಥನೆಯನ್ನು ಮಾಡಿ, ಮಕ್ಕಳು ಆಟಪಾಟಗಳಲ್ಲಿ ಗೆದ್ದ ಬಹುಮಾನಗಳನ್ನು ವಿತರಣೆಯನ್ನೂ ಹಂಚಿದರು ಈ ರೀತಿಯಾಗಿ ಆ ದಿನದ ಉತ್ಸವವು ಪ್ರಜೆಗಳ ಸಂತೋಷಾತಿಶಯದಿಂದಲೂ ಬಾಲಕರ ಕೋಲಾಹಲಧ್ವನಿಯಿಂದಲೂ ಮುಕ್ತಾಯವಾಯಿತು.

ಹೊಸಕೋಟೆ

ತಾ ೧೫ ನೆ ಶನಿವಾರ ಈ ಊರಿನ ಮಹಾ ಜನಗಳೆಲ್ಲರೂ ನಮ್ಮ ಶ್ರೀಮನ್ಮಹಾರಾಜಾ ಸಾಹೇಬ್ ಬಹದ್ದೂರ್ ಶ್ರೀಕೃಷ್ಣರಾಜೇಂದ್ರ ಒಡೆಯರ್, ಜಿ ಸಿ ಎಸ್ ಐ ಯವರ ವರ್ಷವರ್ಧಂತಿಯ ಸಂತೋಷೋತ್ಸವವನ್ನು ಚೆನ್ನಾಗಿ ನಡಿಸಿದರು, ಈ ಶುಭದಿನದಲ್ಲಿ ನೂರಾರು ಜನ ಬಡಬಗ್ಗರಿಗೆ ಅನ್ನದಾನ ನಡಿಸಲ್ಪಟ್ಟಿತು ಹಿಂದಿನ ದಿನ ಹೊಸಕೋಟೆ ಸಂತೆಯಾದ್ದರಿಂದ ಪರಸ್ಥಳದಿಂದ ಅನೇಕ ಜನ ಬಡಬಗ್ಗರುಗಳು ಬಂದಿದ್ದರು ಇದಕ್ಕಾಗಿ ನಮ್ಮ ಅಮಲ್ದಾರರು ಮೆ ಬಸವರಾಜೇ ಅರಸಿನವರೂ, ತಾಲ್ಲೂಕು ಸಿರಸ್ತೇದಾರರು ಮೆ॥ ಚೆನ್ನಸ್ವಾಮಿನಾಯುಡುರವರೂ, ಪೋಲೀಸ್ ಇನ್ಸ್‌ಪೆಕ್

...ಚನ್ನಪ್ಪರಿಂದ ಆರಿಸಲ್ಪಟ್ಟ ಆಸ್ಪತ್ರೆ ಅ॥ ವೆ॥ ಬಾಂಬೆಟ್ಟರೂ ನೇಮಕವಾಗಿ ನಿಂತು ಮಾಡಿದ್ದ ಏರ್ಪಾಡುಗಳು ಬಹಳ ಪೂರ್ವಕವಾಗಿ ಬೆಳಿಗ್ಗೆ ೧೦ ಗಂಟೆ ಲಾಗಾಯತು ರಾತ್ರಿ ೭ ಗಂಟೆವರೆಗೂ ಬಡಬಗ್ಗರುಗಳಿಗೆ ಭೋಜನ ನಡೆಯಿತು ನಂತರ ಸಾಯಂಕಾಲ ೪ ಗಂಟೆ ಲಾಗಾಯತು ೬ ಗಂಟೆವರೆವಿಗೆ ಸ್ಕೂಲ್ ಹುಡುಗರ ವಿನೋದವಾದ ಆಟಗಳು ನಡೆದು, ಅದರಲ್ಲಿ ಗೆದ್ದವರಿಗೆ ನಮ್ಮ ಅಮಲ್ದಾರ್ರವರು ಇನಾಂಗಳನ್ನು ದಯಪಾಲಿಸಿದರು ಇದಲ್ಲದೆ ಈ ಶುಭದಿನದಲ್ಲಿ ಶ್ರೀಕೃಷ್ಣರಾಜೇಂದ್ರ ಹಾಲ್ ಎಂಬ ಕಟ್ಟಡವನ್ನು ಪುಷ್ಪತೋರಣಾದಿಗಳಿಂದ ನಾನಾ ಬಗೆಯಾಗಿ ಶೃಂಗಾರ ಮಾಡಿದ್ದು ಕಟ್ಟಡದಲ್ಲಿ ಶ್ರೀಮದಿಂಡಿಯಾ ಚಕ್ರವರ್ತಿ ಸಾರ್ವಭೌಮರವರ ಫೋಟೋವನ್ನೂ ನಮ್ಮ ಶ್ರೀಮನ್ಮಹಾರಾಜರವರ ಫೋಟೋವನ್ನೂ ಪುಷ್ಪಗಳಿಂದ ಅಲಂಕರಿಸಿದ್ದ ಕಟ್ಟಡಕ್ಕೆ ಅಮಲ್ದಾರ್ರವರೇ ಮೊದಲಾದ ಹುದ್ದೆದಾರರೂ ಮ್ಯುನಿಸಿಪಲ್ ಮೆಂಬರುಗಳೂ ಇನ್ನೂ ಅನೇಕ ದೊಡ್ಡ ಮನುಷ್ಯರುಗಳೂ ಸ್ಕೂಲ್ ಬಾಲಕಬಾಲಿಕೆಯರುಗಳೂ ಸೇರಿ ಮಂಗಳಕರವಾದ ವಾದ್ಯ ಘೋಷದೊಡನೆ ಸಭೆಯನ್ನಲಂಕರಿಸಿ ಕಾಲದಲ್ಲಿ ದೇವರ ಪ್ರಾರ್ಥನೆ ಮಾಡಿದ ನಂತರ ಶ್ರೀಮದಿಂಡಿಯಾ ಚಕ್ರವರ್ತಿ ಸಾರ್ವಭೌಮರವರ ಶ್ರೇಯಃ ಪ್ರಾರ್ಥನೆಯೂ ನಂತರ ನಮ್ಮ ಶ್ರೀಮನ್ಮಹಾರಾಜಾಸಾಹೇಬ್ ಬಹದ್ದರವರ ಶ್ರೇಯಃ ಪ್ರಾರ್ಥನೆಯೂ ಮಾಡಿ, ಸರ್ವರೂ ರಾಜಭಕ್ತಿಪೂರ್ವಕವಾದ ವಂದನೆಗಳನ್ನು ಮರ್ಪಿಸಿದರು ಸ್ಕೂಲ್ ಬಾಲಕಬಾಲಿಕೆಯರ ಮಂಗಳಕರವಾದ ಗಾಯನದೊಡನೆ ಶ್ರೇಯಃ ಪ್ರಾರ್ಥನೆಯೂ, ಮೆ॥ ರಾಮಾನುಜಯ್ಯಂಗಾರ್ರು, ಮೆ॥ ವಾಸುದೇವರಾಯರು ಮತ್ತು ಮೆ॥ ಬಖರಿಯಾಸ್ ಪರು ಸಹ ಕನ್ನಡದಲ್ಲಿ ಉಪನ್ಯಾಸವೂ, ಹಿಂದೂಸ್ಥಾನಿ ಸ್ಕೂಲ್ ಮಾಸ್ತರು ಹಿಂದುಸ್ಥಾನಿ ಭಾಷೆಯಲ್ಲಿ ಉಪನ್ಯಾಸವೂ, ಮತ್ತು ಮೆ॥ ಕಲ್ಲಂ ಅಯ್ಯಂಗಾರ್ರು ಇಂಗ್ಲೀಷಿನಲ್ಲಿ ಮಂಗಳಕರವಾದ ಉಪನ್ಯಾಸವೂ ಮಾಡಿದರು ನಂತರ ಸ್ಕೂಲ್ ಬಾಲಕಬಾಲಿಕೆಯರಿಗೆಲ್ಲಾ ಮಿಠಾಯಿ ಹಂಚಲ್ಪಟ್ಟಿತು ಸರ್ವರೂ ಜಯಘೋಷದೊಡನೆ ಚಪ್ಪಾಳೆ ಹಟ್ಟಿದರು ದಿನ ರಾತ್ರಿ ಈ ಊರಿನಲ್ಲಿ ರಾಜಭಕ್ತಿಪೂರ್ವಕವಾಗಿ ನಡಿಸಿದ್ದ ದೀಪಾರ್ಪಣಗಳು ನೋಡುವದಕ್ಕೆ ಬಹು ನೇತ್ರಾನಂದಕರವಾಗಿಯೂ ರಮ್ಯವಾಗಿಯೂ ಇದ್ದವು

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸ್ಥಳ ಕೊಡಲಾರೆವು ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಅಂಥವುಗಳಿಗೆ ನಾವು ಸ್ಥಳ ಕೊಡಲಾರೆವು

ಬಾತ್ಮಿದಾರರು ಪಟ್ಟ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿ

ಕರೆಸ್‌ಪಾಂಡೆನ್ಸ್

ಕನ್ನಡ ಭಾಷಾಭಿವೃದ್ಧಿಯು

ಅಯ್ಯಾ,

ತಮ್ಮ ಕಳೆದ ವಾರದ ಪತ್ರಿಕೆಯಲ್ಲಿ ಪ್ರಕಟಿತವಾದ ಕನ್ನಡ ಭಾಷಾಭಿವೃದ್ಧಿಯ ವಿಷಯಕವಾದ ಬರವಣಿಗೆಯು ನನ್ನನ್ನು ಮಾತ್ರವಲ್ಲದೆ ಸಂತೋಷಪಡಿಸಿದ್ದಲ್ಲದೆ ಕನ್ನಡನಾಡಿನ ಮತ್ತು ಅಂಗ್ಲೇಯ ರಾಜ್ಯದ ಕನ್ನಡಿಗರನ್ನೂ ಸಂತೋಷಪಡಿಸಿರಬಹುದೆಂದು ನಂಬಬಹುದಾಗಿದೆ ಇಂಥ ಮಹತ್ಕಾರ್ಯವನ್ನು ಆರಂಭಿಸಿ, ಉಪಪತಿಹೋಗಗಳು ಮಾಡದಂತೆ ಅಭಿವೃದ್ಧಿ ಪಡಿಸತಕ್ಕ ವಿಷಯದಲ್ಲಿ ಭಾಷಾಭಿಮಾನಿಗಳೆಲ್ಲರೂ ಒಂದು ಕಡೆ ಸಭೆ ಸೇರಿ, ಚರ್ಚಾವಿಷಯಗಳನ್ನು ಚರ್ಚಿಸಿ, ಕಾರ್ಯಾರಂಭ ಮಾಡುವುದು ಸರ್ವ ಜನಾನಂದದಾಯಕವಾದದ್ದೆಂದೂ, ಕನ್ನಡ ಭಾಷಾಭಿವೃದ್ಧಿಗೆ ಮುಖ್ಯವಾದದ್ದೆಂದೂ, ದೇಶೌನ್ನತ್ಯಕ್ಕೆ ಕಾರಣವಾದದ್ದೆಂದೂ ಹೇಳುವುದು ಅನಾವಶ್ಯಕವಾಗಿ ಕಾಣುತ್ತೇನಲ್ಲದೆ, ಆ ರೀತಿ ಸಭೆ ಸೇರಿಸಿ ಕಾರ್ಯಾರಂಭಕ್ಕೆ ಕಾರಣಭೂತರೆಂಬ ಅಭಿದಾನವನ್ನು ಹೊಂದಿ, ಅಭಿವೃದ್ಧಿಯ ವಿಷಯದಲ್ಲಿ ಪೂರ್ಣ ತತ್ಪರರೆಂದು ಹೇಳಿಸಿಕೊಳ್ಳುವ ಸೌಭಾಗ್ಯವು ವಿಷಯ ಸೂಚಕರಿಗೇ ದೊರೆಯಲೆಂದಾಶಿಸಿ, ಅತ್ಯಾತುರದಿಂದ ಪ್ರತೀಕ್ಷೆಯಲ್ಲಿರುವೆನು

ಕೆ. ಶಂಕರಪ್ಪ

ಹಿಂದೂ ಯೂನಾನಿ ವೈದ್ಯರು

ಅಯ್ಯಾ,

ತಮ್ಮ ಆಫೀಸಿನಿಂದ ಪ್ರಕಟವಾಗುವ ೨೦ ನೇ ತಾ ಗುರುವಾರದ ಪತ್ರಿಕೆಯಲ್ಲಿ ಒಂದು ವಿಶೇಷವಾದ ಸಂಗತಿಯನ್ನು ನೋಡಿ ನಾವು ಬಹಳ ಸಂತೋಷ ಪಟ್ಟೆವು ಕೃತಜ್ಞತೆಯುಳ್ಳವರಾಗಿ ಮೈಸೂರು ಸರ್ಕಾರದವರು ನಮ್ಮ ಅಭಿವೃದ್ಧಿಯಾಗಲೆಂದು ಸದಾ ಸ್ತೋತ್ರ ಮಾಡುತ್ತೇವೆ ಏನೆಂದರೆ—ನೇಟಿವ್ ವೈದ್ಯರೂ ಮತ್ತು ಯೂನಾನಿ ಹಕೀಮರೂ ಸರ್ಕಾರಿ ನೌಕರರುಗಳಿಗೆ ಔಷಧ ಕೊಟ್ಟು ಕಾಯಿಲೆ ವಾಸಿ ಮಾಡಿದ್ದರೆ ಕೇವಲ ಸರ್ಕಾರದವರು ಅಂಗೀಕರಿಸತಕ್ಕ ವಿಷಯದಲ್ಲಿ ಯಾವ ಅಭ್ಯಂತರವೂ ಇರುವದಿಲ್ಲವೆಂದು ಹುಕುಂ ಕೊಡಿಸಿರುತ್ತಾರೆ. ಇದು ಒಳ್ಳೇದೆ ಆದರೆ ಈಗ ಪ್ರತಿ ತಾಲ್ಲೋಕು ಕಸಬಾದಲ್ಲಿಯೂ ವೈದ್ಯಶಾಸ್ತ್ರವನ್ನು ಓದಿ ತಿಳುವಳಿಕೆಯಿಂದ ಚಿಕಿತ್ಸೆ ಮಾಡತಕ್ಕವರು ಸಿಕ್ಕುವುದು ಕಷ್ಟವಾಗಿದೆ ಏನೂ ತಿಳಿಯದೆ ಇರುವ ಅಲೆಲೇಕಾಯಿಪಂಡಿತರು ಹೆಚ್ಚಾಗಿ ಇರುತ್ತಾರೆ ಎಲ್ಲಾ ವೈದ್ಯರು ಮತ್ತು ಹಕೀಮರು ಈ ವಿಷಯದಲ್ಲಿ ಪ್ರವೇಶಮಾಡಿದರೆ ಅನೇಕ ನೌಕರರು ತಮ್ಮ ಸ್ವಂತ ಕೆಲಸಕ್ಕೆ ನಿವಿಧ್ಯ ಮನೆಯಲ್ಲಿ ಕೂತುಕೊಂಡರೆ ಸರ್ಕಾರಕ್ಕೆ ನಷ್ಟ ಉಂಟಾಗುತ್ತದೆ ಎಂದು ಯೋಚಿಸಬೇಕಾಗಿದೆ ಆದ್ದರಿಂದ ಮೈಸೂರು ಸರ್ಕಾರದವರು ದಯವಿಟ್ಟು ಪ್ರತಿ ತಾಲ್ಲೋಕು ಕಸಬಾ ಮರ್ಜಿಸಿದ ಮೆಂಬರುಗಳ ಅಭಿಪ್ರಾಯದ ಮಹಜರು ಪಂಡಿತರ ಮತ್ತು ಹಕೀಮರ ನಡತೆ ವಿಷಯವನ್ನು ತಿಳಿದು ಸರ್ಕಾರದಿಂದ ಪ್ರತ್ಯೇಕ ಅವರವರಿಗೆ ಹುಕುಂ ಕೊಡಿಸಿದಲ್ಲಿ ತುಂಬಾ ಒಳ್ಳೇದೆಂದು ಸೂಚಿಸುತ್ತೇನೆ

ಚನ್ನಪಟ್ಟಣದ ಮೌಲ್ವಿ ಹಕೀಂ ಸಯ್ಯದ್

ಷಾಮಹಮ್ಮದ್ ಖಾದ್ರಿ

ಬೂದಿಕೋಟೆಯಲ್ಲಿ ಕಳ್ಳರ ಅಪಾಂತ್ರ

ಅಯ್ಯಾ,

ಇಲ್ಲಿಗೆ ೭ ಮೈಲಿ ದೂರದಲ್ಲಿ ತಾಲ್ಲೂಕ್ ಮತ್ತು ರೈಲ್ವೆ ಜಂಕ್ಷನ್ ಯಾಳಿಸಿ ಪ್ರಕಾಶಿಸುತ್ತಲಿರುವ ಬಂಗಾರಪೇಟೆ ಎಂಬ ಟವ್ನಿನಲ್ಲಿ ಪ್ರತಿ ಶುಕ್ರವಾರವೂ ದೊಡ್ಡ ಸಂತೆ ಆಗುತ್ತದೆ ಸದರಿ ಸಂತೆಗೆ ೪ ಮೈಲಿ ದೂರ ಬೂದಿಕೋಟೆಯಿಂದ ಇದೇ ಜೂನ್ ೧೪ ನೇ ತಾ ಶುಕ್ರವಾರದ ಸಂತೆಗೆ ಅನೇಕ ಜನ ವರ್ತಕರು ಹೋಗಿದ್ದು ಸಂತೆ ವಗೈರೆ ಕೆಲಸಗಳನ್ನು ತೀರಿಸಿಕೊಂಡು ವಾಪಸು ಬರುತ್ತಿರುವಾಗ ಸದರಿ ವರ್ತಕರನ್ನು ಅನೇಕ ಜನ ಕಳ್ಳರು ಹೊಡೆದು, ಅವರು ವ್ಯಾಪಾರದಿಂದ ತಂದ ಸರಕುಗಳು ಹಣ ವಗೈರೆ ಎಲ್ಲವನ್ನೂ ದೋಚಿಕೊಂಡು ಹೋದುದಲ್ಲದೆ, ಅವರುಗಳು ಬದುಕುವುದೇ ಕಷ್ಟವಾಗುವಂತೆ ಪೆಟ್ಟುಗಳಿಂದ ಘಾಯ ಮಾಡಿರುತ್ತಾರೆ ಇದೂ ಅಲ್ಲದೆ ಆ ದಿನವೇ ಕಾಮಸಮುದ್ರದ ಬ್ರಾಂಚ್ ಪೋಸ್ಟಿನ ರಾಮರಾಯರೆಂಬುವರು ಬಂಗಾರಪೇಟೆಯಿಂದ ಹಣ ತೆಗೆದುಕೊಂಡು ಬೂದಿಕೋಟೆಗೆ ಬರುತ್ತಾ ಇರುವಾಗ್ಗೆ ದಾರಿಯಲ್ಲಿ ಕಳ್ಳರು ಅಡ್ಡಗಟ್ಟಿ ಇನ್ನು ಅನೇಕ ವಿಧವಾಗಿ ಬಾಧೆಗೊಳಿಸಿ, ಅವರ ಶರೀರವನ್ನೆಲ್ಲಾ ಘಾಯ ಮಾಡಿ, ಸದರಿ ರೂಪಾಯಿಗಳನ್ನೆಲ್ಲಾ ಕಿತ್ತುಕೊಂಡುದೂ ಅಲ್ಲದೆ, ವಸ್ತ್ರಹೀನರಾಗಿಯೂ ಮಾಡಿದರು ಅವರು ಬದುಕುವುದೇ ಕಷ್ಟವಾಗಿತ್ತು ದೇವರ ದಯದಿಂದ ಈಗ ಸ್ವಲ್ಪ ಗುಣವಾಗುತ್ತಾ ಇದೆ ಮತ್ತು ಈ ಗ್ರಾಮದಲ್ಲಿ ಸುಮಾರು ೫—೬ ತಿಂಗಳಿಂದ ಆಗಾಗ್ಗೆ ಕಳ್ಳರ ಅಪಾಂತ್ರ ಬಹಳವಾಗಿ, ಮನೆಗಳಿಗೆ ನುಗ್ಗಿ ಅವರ ಪದಾರ್ಥಗಳನ್ನು ಕದ್ದುಕೊಂಡು ಹೋಗುವುದರಿಂದ ಕಳೆದುಕೊಂಡು ಇರುವ ಮಾಲೀಕರ ಅಪಾರವಾದ ವ್ಯಸನವನ್ನೂ ಕಷ್ಟವನ್ನೂ ವಿವರಿಸಲಶಕ್ಯವಾಗಿದೆ ಪೋಲೀಸ್ ಸ್ಟೇಷನ್ ಇರತಕ್ಕ ಸ್ಥಳದಲ್ಲಿಯೇ ಈ ರೀತಿಯಾಗಿ ನಡೆಯುತ್ತಾ ಇದ್ದರೆ ಇತರ ಗ್ರಾಮಾಂತ್ರಗಳಲ್ಲಿ ನಡೆಯುವುದೇನಾಶ್ಚರ್ಯ ಆದ್ದರಿಂದ ಈ ಗ್ರಾಮದ ಪೋಲೀಸ್ ಅಧಿಕಾರಿಗಳು ಸರಿಯಾದ ಬಂದೋಬಸ್ತು ಮಾಡಿ, ಕೀರ್ತಿಪಡೆವರೆಂಬುದಾಗಿ ನಂಬಿರುತ್ತೇನೆ

ವಾಚಕ

ಕೊಪ್ಪ ತಾಲ್ಲೋಕು ನೌಕರಮಾನೆಯರು.

ಅಯ್ಯಾ,

ನಮ್ಮ ತಾಲ್ಲೋಕು ಕಚೇರಿಯು ಈ ಬಾಳೆಗದ್ದೆಯಲ್ಲಿರುತ್ತೆ ಇಲ್ಲಿ ತಾಲ್ಲೋಕು ನೌಕರರ ಪಟ್ಟಿಗೆ ೧೩ ಮನೆಗಳಿರುತ್ತೆ ಇಲ್ಲಿನ ಹವಾ ಸ್ವಾಭಾವಿಕವಾಗಿ ಅನಾರೋಗ್ಯವಾದದ್ದು ಈಗ ಮಳೆ ಬಹಳ ಪ್ರಬಲಿಸಿರುವದರಿಂದ ಪ್ರತಿ ಮನೆಯಲ್ಲಿಯೂ ೨—೩ ಜನರಿಗೆ ಕಡಮೆಯಿಲ್ಲದೆ ಕಾಯಿಲೆಯಾಗಿ ಮಲಗಿರುತ್ತಾರೆ ಇಲ್ಲಿ ನೌಕರರೆಲ್ಲರಿಗೂ ನೂರಾರು ವರ್ಷ ಸರವೀಸಿಗಿಂತಲೂ ಜಾಸ್ತಿಯಾಗಿ ಸದಾ ಕಾಲದಲ್ಲಿಯೂ ರೋಗದಿಂದ ನರಳುತ್ತಾ ತಮ್ಮ ಪ್ರಾಣವನ್ನು ಈ ಬಾಳೆಗದ್ದೆಯಲ್ಲಿರುವ ಮೃತ್ಯುದೇವತೆಗೆ ಬಲಿಕೊಡುತ್ತಿದ್ದರೂ ಆಫೀಸರವರು ಇಷ್ಟು ವರುಷ ಸರವೀಸ್ ಮಾಡಿರುವ ಜನರನ್ನು ಬೇರೆ ಕಡೆಗೆ ವರ್ಗಾಯಿಸದೆ ಇರುವುದರಿಂದ ಜನಗಳು ಪಡುತ್ತಿರುವ ಕಷ್ಟವು ವರ್ಣಿಸಲು ಸಾಧ್ಯವಾಗಿದೆ ನಮ್ಮ ತಾಲ್ಲೋಕು ಅಮಲ್ದಾರ್ರವರು ಬಂದು ವರ್ಷವೇ ಆದಾಗ್ಯೂ ಇವರು ಕಾಯಿಲೆಯಿಂದ ಬಹಳ ತೊಂದರೆಪಡುತ್ತಾ ವರ್ಗದ ಪ್ರಯತ್ನವೂ ನಡಿಯದೆ, ಈಚೆಗೆ ಸಂಭವಿಸಿದ ಪತ್ನಿವಿಯೋಗದಿಂದ ಅಪಾರವಾದ ಸಂಸಾರ ಮಹಬದಲ್ಲಿ ಬಿದ್ದು ಇರುತ್ತಾರೆ ಶಿರಸ್ತೇದಾರರಿಗೆ ಡಿಗ್ರೇಡ್‌ಸಿಂದ ಅಸಿಸ್ಟೆಂಟ್ ಕೋರ್ಟ್ ಹೆಡ್ ಮುನಷಿ ಕೆಲಸವಾದ್ದರಿಂದ ವ್ಯಸನದಿಂದಿರುವರು ಡಿಫ್ತರ ಡಿಪಾರ್ಟ್‌ಮೆಂಟ್, ಮುನಷಿ ಡಿಪಾರ್ಟ್‌ಮೆಂಟ್, ರಿಕಾರ್ಡ್, ಈ ಮೂರು ಜಾಬಿನವರು ಕಾಯಿಲೆಯಿಂದ ಮಲಗಿ ಮೂರು ತಿಂಗಳಿಂದ ಕಚೇರಿಯನ್ನು ಕಂಡಿರಾರೋ ಇಲ್ಲವೋ ಕಾಣೆ ದೊಡ್ಡ ಆಫೀಸರವರು ಈ ಬಡ ನೌಕರರನ್ನು ಈ ಮರಣ ಭೂಮಿಯಲ್ಲಿ ತೊಂದರೆಪಡಿಸುವದಕ್ಕಿಂತಲೂ ಬೇರೆ ಕಡೆಗಳಿಗೆ ವರ್ಗಮಾಡಿದರೆ ಸೌಖ್ಯದಿಂದ ಜೀವಿಸಬಹುದು ಆದರೆ ನಮಗೆ ಇಂಥಾ ಕಷ್ಟಕಾಲದಲ್ಲಿ ಶಕ್ತರಾದ ಚೀಫ್ ಕಮಿಷನರ್ ದೊರೆ ರಾವದಕ್ಕಾಗಿ ಸಂತೋಷಪಡುವೆವು ನಮ್ಮ ಡೆಪ್ಯುಟಿ ಕಮಿಷನರವರು ಬಡವರಾದ ಈ ಕೊಪ್ಪ ತಾಲ್ಲೋಕು ನೌಕರರ ಕಷ್ಟಗಳನ್ನು ಪರ್ಯಾಲೋಚಿಸಿ ವೈದ್ಯಾನುಕೂಲ ಮಾಡಬಹುದೆಂದು ನಂಬಿರುವೆವು

ಸಜ್ಜನವಿಧೇಯ

ತಾಲ್ಲೋಕು ವರ್ತಮಾನಗಳು

ಚಿಕ್ಕಮಗಳೂರು —ಈಗ್ಗೆ ಹದಿನೈದು ದಿವಸಗಳಿಂದಲೂ ಪಶ್ಚಿಮದ ಸೋನೇ ಮಳೆಯು ಬಿಡದೆ ಹೊಯ್ಯುತ್ತಾ ಇದ್ದು, ನೆನ್ನೆ ಯಿಂದ ಸ್ವಲ್ಪ ಸುಮಾರಾಗಿದೆ ಕಳೆದ ವಾರ ತಿರಿಗಿ ಪ್ಲೇಗ್ ರೋಗವು ಕಾಣಿಸಿಕೊಂಡು ಮೂರೋ ನಾಲ್ಕೋ ಜನರು ಸತ್ತರೆಂದು ಕೇಳುತ್ತೇನೆ ಈ ಕಾಲದಲ್ಲಿ ಮ್ಯುನಿಸಿಪಾಲಿಟಿಯವರು ಗ್ರಾಮ ಶಾಚೀಷ ವಿಷಯದಲ್ಲಿ ಜಾಸ್ತಿಯಾಗಿ ಗಮನ ಕೊಡ ಬೇಕಲ್ಲದೆ ಊರಿನ ಸುತ್ತಲೂ ಇರುವ ಬೆಟ್ಟಿನ ಕಡೆಗಳಲ್ಲಿ ಬೆಳೆದಿರುವ ಉಪ್ಪೇಕಡ್ಡಿಯ ಪೊದೆಗಳನ್ನು ತಗಿಸುವುದು ಒಳ್ಳೇದು —ಇದೇ ತಿಂಗಳು ೨೬ ನೇ ತಾ ನ ಹುಟ್ಟಿದ ರಾಜರವರ ವರ್ಷ ವರ್ಧಂತಿಯು ಏನಾದ್ದರಿಂದ ಎಲ್ಲಾ ಕಚೇರಿಗಳಿಗೂ ಸ್ಕೂಲುಗಳಿಗೂ ರಜಾ ಕೊಟ್ಟಿದ್ದರು ಯಾವಾಗಲೂ ನಡಿಯುತ್ತಿದಂತೆ ಸ್ಕೂಲ್ ಹುಡುಗರಿಗಾಗಿ ಆಟಪಾಟಗಳೇನೂ ಏರ್ಪಾಡಾಗಲಿಲ್ಲವೆಂದು ತೋರುತ್ತೆ ಪ್ರಾಯಶಃ ಪ್ಲೇಗಿನ ಕಾರಣದಿಂದಲೇ ನಿಲ್ಲಿಸಿರಬಹುದಾಗಿ ಕಾಣುತ್ತೆ ಇಲ್ಲಿನ ಮಾರ್ಕೆಟ್ಟಿನ ಹರಾಜು ಹೋದ ವರ್ಷಕ್ಕಿಂತ ನೂರು ರೂಪಾಯಿ ಕಮ್ಮಿ ಯಾಯಿತೆಂದು ವರ್ತಮಾನ.

ಹೊಸಕೋಟೆ —ಇಲ್ಲಿ ... ಮಳೆ ಆಯಿತು ಊರಲ್ಲಿ ಕೆಲವು ದಿನಗಳಿಂದ ಗಲಾಟೆ ಇಲ್ಲೆಂಕೆನ್ನಿ ಸಿಕೊಂಡದ್ದು ತಿರಿಗಿ ಕಲೆದೋರಿಯದೆ ಸ್ವಾಮಿ ತನ್ನ ಅನುಗ್ರಹದಿಂದ ಇಲ್ಲದಂತೆ ಮಾಡಲೆಂತ ಪ್ರಾರ್ಥಿಸುತ್ತೇವೆ —ಇಲ್ಲಿ ಇದೇ ತಿಂಗಳು ೧೦ ನೇ ತಾ ನಲ್ಲಿ ವ್ಯವಸಾಯ ಸಂಘದವರು ಹೊಸಗಾಗಿ ಕಟ್ಟಿದ ಶ್ರೀ ಕೃಷ್ಣರಾಜೇಂದ್ರ ಹಾಲಿನಲ್ಲಿ ಉತ್ಕೃಷ್ಟ ಪೈರು ಬೆಳೆದವರಿಗೆ ಇನಾಮು ಸರ್ಟಿಫಿಕೇಟುಗಳನ್ನು ದಯಪಾಲಿಸಿದರು ಡೆಪ್ಯುಟಿ ಕಮಿಷನರ್ ಮೆ॥ ಸ್ಪಾರ್ಕ್ಸ್ ದೊರೆಗಳ ಸವಾರಿ ಇಲ್ಲಿಗೆ ಚಿತ್ತೈಸಿ, ಅಗ್ರಾಸನರಾಗಿ ಕಾರ್ಯ ನಡಿಸಿ, ಜನರನ್ನು ಪ್ರೋತ್ಸಾಹ ಪಡಿಸಿದರು ಈಗ ವ್ಯವಸಾಯ ಸಂಘದ ಫಂಡು ಇನ್ನೂ ಬಾಲ್ಯಾವಸ್ಥೆಯಲ್ಲಿದೆ ಪ್ರಾಬುದ್ಧತೆಗೆ ಬಂದರೆ ಇನ್ನೂ ಹೆಚ್ಚಾದ ಕಾರ್ಯಗಳು ನಡೆಯುವವು —ಪೈರು ಪ್ರದರ್ಶನದ ಈ ಕಾರ್ಯವು ವರ್ಷಕೊಮ್ಮೆ ನಡೆಯುವ ರಥೋತ್ಸವದಲ್ಲಿ ಆಗಬೇಕೆಂತ ನಿರ್ಣಯಿಸಿದ್ದರು ತೇರಿನ ಹಬ್ಬವು ಈ ವರ್ಷ ಏನೋ ಕಾರಣದಿಂದ ಹಿಂದಕ್ಕೆ ಬಿತ್ತು ಮುಂದೆ ಯಾವಾಗಲೂ ಪೈರು ಪ್ರದರ್ಶನದ ಕಾರ್ಯವು ಪ್ರತಿ ವರುಷ ರಥೋತ್ಸವದ ಕಾಲದಲ್ಲಿ ನಡೆಯುವದು ಯಾಕಂದರೆ ಆ ಕಾಲದಲ್ಲಿ ಸೇರುವ ಹೆಚ್ಚಾದ ಜನಕ್ಕೆ ಈ ಕಾರ್ಯ ಗೊತ್ತಾಗಿ ತಿಳಿದು ಹೆಚ್ಚು ಪ್ರಯೋಜನಕ್ಕೆ ಬರುವದು

ಚನ್ನಪಟ್ಣ.—ಈಗ ಒಂದು ವಾರದಿಂದ ಮಳೆ ವಿರಾಮವನ್ನು ಕೊಟ್ಟಿದೆ ಮಂದಮಾರುತವು ಪ್ರಾರಂಭವಾಗಿದೆ ನಮ್ಮ ಅಮಲ್ದಾರ್ರು ಮೆ॥ ಪಾರ್ಥಸಾರಥಿ ಅಯ್ಯಂಗಾರ್ರು ರಿಟೈರಾಗುವ ಪಡಿಂತಿಯಿಂದ ಎಲ್ಲರಿಗೂ ವ್ಯಸನವಾಗಿದೆ —ತಾ, ೨೦ ನೇ ಸಾಯಂಕಾಲ ೯ ಘಂಟೆಗೆ ಶ್ರೀ ಶೃಂಗೇರಿ ಮಠದ ಜಗದ್ಗುರುಗಳ ಸವಾರಿಯು ಇಲ್ಲಿಗೆ ಚಿತ್ತೈಸಿತು ಇದಕ್ಕೆ ಮೊದಲೇ ನಮ್ಮ ಅಮಲ್ದಾರರು ಇಲ್ಲಿನ ಮುಸಾಫರಿ ಬಂಗಲೆಯನ್ನು ಸಿದ್ಧಮಾಡಿಸಿ ಸ್ವಾಮಿಗಳ ಬಿಡಾರಕ್ಕೆ ಅನುಕೂಲಪಡಿಸಿದ್ದರು ಅಮಲ್ದಾರರೂ ಇತರ ಊರಿನ ದೊಡ್ಡ ಮನುಷ್ಯರೂ ಸ್ವಾಮಿಗಳನ್ನು ಎದುರುಗೊಂಡು ಬಾಜಾಬಜಂತ್ರಿ ಸಮೇತ ದೊಡ್ಡಪೇಟೆಯಲ್ಲಿ ಕರತಂದರು ಸ್ವಾಮಿಗಳ ದರ್ಶನಕ್ಕಾಗಿ ಸುತ್ತುಮುತ್ತಲಿನ ಸಾವಿರಾರು ಜನಗಳಿಂದ ಪೇಟೆಬೀದಿಯು ಕಿಕ್ಕಿರಿಸುತ್ತಾ ಇತ್ತು ಶುಕ್ರವಾರ ಇಲ್ಲಿನ ವೈಶ್ಯಮಂಡಲಿಯವರು ತಮ್ಮ ದೇವಸ್ಥಾನಕ್ಕೆ ಸ್ವಾಮಿಗಳನ್ನು ಬರಮಾಡಿಕೊಂಡು ಅವರಿಂದ ಪ್ರತಿಷ್ಠೆ ಮಾಡಿಸಿದರು ನೆನ್ನೆ ಭಾನುವಾರ ಸಾಯಂಕಾಲ ಇಲ್ಲಿನ ಸ್ಪೆಷಲ್ ಮೆ॥ ಮಸ್ತೀಮಿಯಾಸಾಹೇಬರೇ ಮೊದಲಾದ ಕೆಲವು ದೊಡ್ಡಮನುಷ್ಯರು ಸ್ವಾಮಿಗಳ ದರ್ಶನಮಾಡಿ ಫಲಗಳನ್ನು ಒಪ್ಪಿಸಿದರು ಮೆ॥ ಅಬ್ದುಲ್ ಖುದೂಸ್ ಸಾಹೇಬರು ಹಿಂದುಸ್ಥಾನಿ ಭಾಷೆಯಲ್ಲಿ ಒಂದು ಅಡ್ರಸ್ಸನ್ನು ಬರೆದು ತಂದು ಸ್ವಾಮಿಗಳಿಗೆ ಓದಿದರು ಸ್ವಾಮಿಗಳು ಅವರುಗಳನ್ನು ಆದರದಿಂದ ಅಂಗೀಕರಿಸಿ, ಮೆ॥ ಖುದೂಸ್ ಸಾಹೇಬರಿಗೆ ಶಾಲನ್ನು ದಯಪಾಲಿಸಿದರು ಸೋಮವಾರ ಮಹಮ್ಮದಿಯರ ಖರ್ಚಿನಿಂದ ಸ್ವಾಮಿಗಳ ಪರಿವಾರಜನಗಳಿಗೆ ಭಿತರಣೆಯಾಗುವದಂತೆ ಇದೆ ಇಲ್ಲಿನ ಪಟ್ಟದಶೆಟ್ಟರೇ ಮೊದಲಾದ ವರ್ತಕಸಾಹುಕಾರರು ಸ್ವಾಮಿಗಳನ್ನು ಹೂವಿನ ಪಾಲಕಿಯಲ್ಲಿ ಪೇಟೆಯೊಳಗೆ ಮೆರವಣಿಗೆ ಮಾಡಿಸಲು ಪ್ರಯತ್ನ ಮಾಡುವರು. ಸ್ವಾಮಿಗಳು ನಾಳೆ ನಾಡಿದ್ದರು ಮಂಡ್ಯದ ಕಡೆಗೆ ತೆರಳುವರೆಂದು ತಿಳಿಯಬರುತ್ತೆ

ಯಡಿಹಳ್ಳಿ.—ನಾಲ್ಕು ದಿವಸಗಳಿಂದಲೂ ಮಳೆ ಸುರಿಯುತ್ತಾ ಇದೆ ರೈತರು ತರಾತುರಿಯಿಂದ ಬಿತ್ತನೆ ಕೆಲಸ ನಡೆಸುತ್ತಾ ಇದ್ದಾರೆ ಮನೆ ಮನೆಯಲ್ಲಿಯೂ ಕಾಯಿಲೆ ವಿಚಾರಿಸಿಕೊಳ್ಳುತ್ತಾ ಇದೆ ಈ ನಡ್ಡ ಬೀಗಿಗಳಲ್ಲಿ ನೀರಿಲ್ಲದ ಗೋಳಾಟ.—ಈಚೆಗೆ ಗೋನಡೆ ಸ್ವಲ್ಪ ಮಟ್ಟಿಗೆ ಕಮ್ಮಿಯಾದಹಾಗೆ ಕಾಣುತ್ತೆ ಆದರೂ ಪುಂಡರ ಅಪಾಂತ್ರ ಹೆಚ್ಚುತ್ತಾ ಇದೆ ಗ್ರಾಮಮಧ್ಯದಲ್ಲಿ ಒಬ್ಬ ಮುಸಲ್ಮಾನನನ್ನು ಜಾಮೂ ಮನೆಯವರು ದೊಣ್ಣೆಯಿಂದ ತಲೆಯಮೇಲೆ ಬಲವಾಗಿ ಹೊಡೆದರಂತೆ ಅವನು ಆಸ್ಪತ್ರೆಯಲ್ಲಿ ಚಿಕಿತ್ಸೆ ಮಾಡಿಸಿಕೊಳ್ಳುತ್ತಾ ಇದ್ದಾನೆ ಬದುಕಿದರೆ ಹೊಸಬನೇತ ಕಾಣುತ್ತೆ —ಕೆಲವು ದಿನಗಳ ಕೆಳಗೆ ಕೆನ್ನೆ ಕೊಡಿಗಿಯಲ್ಲಿ ಖೂನಿ ನಡೆಸಿದವರನ್ನು ಪೋಲೀಸ್‌ನವರು ಪತ್ತೆ ಮಾಡಿದ್ದಾರೆ ಚಿಕ್ಕಮಗಳೂರಿನಲ್ಲಿ ಕೇಸು ವಿಚಾರಣೆಯಾಗುತ್ತಾ ಇದೆ —ಇದುವರೆಗೂ ಈ ಗ್ರಾಮವು ಸಬ್‌ಮಾಗನೆಸಾಗಿದ್ದ ಇಲ್ಲಿನ ಮುನಸಿಫ್ ಕೋರ್ಟನ್ನು ತೆಗೆದು ಹಾಕಿದ್ದರಿಂದ ಇನ್ನು ಮುಂದೆ ಘಂಡಗಾರರ ತೌರೂರಾಗುವದೋ ಏನೋ ಎಂಬದಾಗಿ ಸರ್ಕಾರವು ಒಯಿದಿಂದ ದೀರ್ಘಾಲೋಚನೆಯುಳ್ಳವರಾಗ್ದಾರೆ —ಈ ಊರು ಮಧ್ಯದಲ್ಲಿ ಪಕ್ಕ ಶ್ರೀಸುಬ್ರಹ್ಮಣ್ಯ ದೇವಾಲಯವು ಶಿಥಿಲವಾಗಿದ್ದದ್ದರಿಂದ ಮೆ॥ ಶಂಕರಪ್ಪನವರು ೭೦೦—೮೦೦ ರೂಪಾಯಿ ವರೆಗೆ ಖರ್ಚುಮಾಡಿ ಅದನ್ನು ಜೀರ್ಣೋದ್ಧಾರ ಕಟ್ಟಿಸಿದ್ದರು ಒಂದು ವರುಷದ ಕೆಳಗೆ ವಿಗ್ರಹವ ಭಿನ್ನವಾಗಿದ್ದದನ್ನು ನೋಡಿ ಈ ಊರಿನ ಮಹನೀಯರೆಲ್ಲರೂ ಬೇರೆ ಮೂರ್ತಿಯನ್ನು ತಯಾರು ಮಾಡಿ ತರಿಸಲು ಇನ್ನೂರು ರೂಪಾಯಿ ವರೆಗೆ ಚಂದಾ ಮೂಲಕ ಕೊಟ್ಟರು ಮಹಾಪಟದಾರ್ರು ಕನ್ನಡಾಜಿಲ್ಲಾ ಕಾರ್ಕಳಕ್ಕೆ ಹೋಗಿ ಪ್ರಸಿದ್ಧ ಶಿಲ್ಪಿಗಾರರ ಮೂಲಕ ಪ್ರತಿಮೆಯನ್ನು ತಯಾರು ಮಾಡಿಸಿಕೊಂಡು ಬಂದರು ಶ್ರೀಶೃಂಗೇರಿ ಜಗದ್ಗುರುಸ್ವಾಮಿಗಳವರಿಂದ ಪ್ರತಿಷ್ಠೆ ಮಾಡಿಸಲು ಶ್ರೀಗಳವರ ಅಪ್ಪಣೆ ಪ್ರಕಾರ ಜ್ಯೇಷ್ಠ ಶುದ್ಧ ಬಿದಿಗೆ ಗುರುವಾರ ದೇವಸ್ಥಾನ ಕಾರ್ಯವನ್ನು ಯಥಾ ವಿಧಿಯಾಗಿ ನೆರವೇರಿಸಿದರು ಶೃಂಗೇರಿಯಿಂದ ವೈದಿಕ ವಿದ್ಯಾವಿಶಾರದರಾದ ಭಟ್ಟರೂ ಜೋಯಿಸರೂ ಬಂದಿದ್ದರು ಭಕ್ತಾದಿಗಳು ೪೦೦ ಜನಗಳ ಮೇಲೆ ಸೇರಿ ಅನೇಕ ದಾನಧರ್ಮಗಳು ಸಂತರ್ಪಣೆಯೂ ವಿಜೃಂಭಣೆಯಿಂದ ನೆರವೇರಿಸಿದರು ದೇವಸ್ಥಾನವನ್ನು ಜೀರ್ಣೋದ್ಧಾರ ಮಾಡಿದ ಶಂಕರಪ್ಪನವರೇ ಈ ಕಾರ್ಯಕ್ಕೆ ೧೫೦ ರೂಪಾಯಿವರೆಗೆ ವಿನಿಯೋಗ ಮಾಡಿದರು ಇವರು ಕೇವಲ ಭಕ್ತಿಭರಿತರಾಗಿ ದೇವಸ್ಥಾನಗಳು, ಭಾವಿಗಳು, ಅನಾಥ ಸಂರಕ್ಷಣೆ ಮುಂತಾಗಿ ೭—೮ ಸಾವಿರ ರೂಪಾಯಿವರೆಗೆ ಧರ್ಮಕ್ಕೆ ವಿನಿಯೋಗಿಸಿ ಶಾಶ್ವತವಾದ ಕೀರ್ತಿಯನ್ನು ಪಡೆದಿರುತ್ತಾರೆ ಈ ಉತ್ಸವಕ್ಕಾಗಿ ಇಲ್ಲಿನ ಡೆಪ್ಯುಟಿ ಅಮಲ್ದಾರ್ ಮೆ॥ ಬಿ. ಜಗನ್ನಾಥರಾಯರು ತುಂಬಾ ಸಹಾಯಮಾಡಿದರು.

ಪೆರೂನಾ ಎಲ್ಲಾ ಶೀತರೋಗಗಳನ್ನೂ ನಿವಾರಣೆ ಮಾಡುವುದರಲ್ಲಿ ಅಮೂಲ್ಯವಾಗಿದೆ ಎಂದು ಪ್ರಮುಖ ಆಸ್ಪತ್ರೆಗಳು ಹೇಳುತ್ತವೆ.

3೦-12

ಸಿಸ್ಟರ್ಸ್ ಆಫ್ ದಿ ಗುಡ್ ಷೆಪ್‌ಹರ್ಡ್, ಮಾಂಟ್ರೀಲ್

ಭೂಮಿಯ ಮೇಲಿರುವ ಆಸ್ಪತ್ರೆಗಳೆಲ್ಲಾ ಶೀತರೋಗಗಳನ್ನು ಚಿಕಿತ್ಸೆಮಾಡುವಲ್ಲಿ ಪೆರೂನಾ ಔಷಧವು ಬಹು ಬೆಲೆಯುಳ್ಳದ್ದೆಂದು ಕಂಡುಕೊಂಡಿವೆ

ಶೀತ ನೆಗಡಿ ಮುಂತಾದ್ದು ಶ್ವಾಸಕೋಶಕ್ಕೆ ಬಗೆವ ರೋಗವೆಂತಲೂ ಅದು ಶರೀರವನ್ನ ಪರುಷಕ್ಕೆ ಎಂಟುತಿಂಗಳ ಕಾಲ ಬರುವುದೆಂತಲೂ ಸಾಮಾನ್ಯವಾಗಿ ಎಲ್ಲರಿಗೂ ತಿಳಿದಿದೆ

ಈ ದೇಶದಲ್ಲಿ ಶೀತಕಾಲವು ದೀರ್ಘವಾದ ಮತ್ತು ಕಠಿಣವಾದ ಹವೂ ಉಳ್ಳದ್ದಾಗಿ ಬಹಳ ಕಾಲ ಇರುವುದರಿಂದ ಆಗಲೇ ಶೀತ ಜಾಡ್ಯಗಳು ಪ್ರಾಪ್ತವಾಗುವವೆಂದು ಖಂಡಿತವಾಗಿ ಹೇಳಬಹುದು

ಆದಕಾರಣ ಕನಡಾ ಜನರು ಶೀತರೋಗಕ್ಕೆಲ್ಲಾ ಪೆರೂನಾ ನಂಬಿಕೆಯಾದ ಒಳ್ಳೇ ಔಷಧವೆಂದು ತಿಳಿದಕೂಡಲೇ ಅದನ್ನು ಎಲ್ಲಾ ಜನರು ಪ್ರೀತಿಪೂರ್ವಕ ಉಪಯೋಗಿಸುತ್ತಾ ಬಂದರು ಸಂಸಾರಗಳಲ್ಲಿ ಮಾತ್ರವೇ ಅಲ್ಲ, ದೊಡ್ಡ ಆಸ್ಪತ್ರೆಗಳಲ್ಲೂ ಕೂಡ ಆ ರೋಗಗಳನ್ನು ತಡೆಯುವುದಕ್ಕೂ ನೂರಾರು ರೋಗಿಗಳಿಗೆ ಸೌಖ್ಯವನ್ನುಂಟುಮಾಡುವುದಕ್ಕೂ ಪೆರೂನಾವನ್ನು ಉಪಯೋಗಿಸುತ್ತಾ ಬಂದರು

ಬಡಬಗ್ಗರಾಗಿಯೂ ರೋಗಿಗಳಾಗಿಯೂ ಇರುವಂಥಾವರಿಗೆ ಅದು ತುಂಬಾ ಪ್ರಯೋಜನವನ್ನುಂಟುಮಾಡಿದ ವಿಷಯದಲ್ಲಿ ದೊಡ್ಡ ಆಸ್ಪತ್ರೆಯವರು ಒಪ್ಪಿ ಸಮ್ಮತಿಯನ್ನು ಕೊಡಲು ಹಿಂತೆಗೆದಿಲ್ಲವು

ಈ ದೊಡ್ಡ ಆಸ್ಪತ್ರೆಗಳ ಪೈಕಿ ಸಿಸ್ಟರ್ಸ್ ಆಫ್ ಗುಡ್ ಷೆಪ್‌ಹರ್ಡ್ ಎಂಬುದು ಒಂದು ಅದರ ನೌಕರಮಾನೆಯವರು ಹೇಳುವುದನ್ನು ಕೇಳಿ —

ಓಹಿಯೋ ಡಿಸ್ಟ್ರಿಕ್ಟ್ ಕೊಲಂಬಸ್ ಪಟ್ಟಣದಲ್ಲಿರುವ ಪೆರೂನಾ ಕಂಪನಿಗೆ—

ಕಳೆದ ಕೆಲವು ತಿಂಗಳಿಂದಲೂ ನಮ್ಮ ಕಾಯಿಲೆಯವರಿಗೂ ಬಡವರಿಗೂ ಪೆರೂನಾವನ್ನು ಪ್ರಯೋಗಮಾಡಿರುತ್ತೇವೆ ಅದು ನಮಗೆ ತುಂಬಾ ತೃಪ್ತಿಯನ್ನುಂಟುಮಾಡಿರುತ್ತದೆಂದು ಸಂತೋಷವಾಗಿ ಹೇಳುವೆವು

ಗುಡ್ ಷೆಪ್‌ಹರ್ಡ್ ಸಹೋದರಿಯರು,
ಆಗೋಸ್ಟು ೨೦, ೧೯೦೩.

ಮಾಂಟ್ರೀಲ್

ಈ ಆಸ್ಪತ್ರೆಯು ಬಹು ದೀರ್ಘಕಾಲ ಈ ಔಷಧವನ್ನು ಉಪಯೋಗಿಸುತ್ತಾ ಬಂದ ಅದರ ಗುಣದ ವಿಷಯದಲ್ಲಿ ತನ್ನ ಅಭಿಪ್ರಾಯವನ್ನು ಬದಲಾಯಿಸುವುದಕ್ಕೆ ಕಾರಣವನ್ನು ಕಾಣದೆ ತಮ್ಮ ಸಂತೋಷದ ತೃಪ್ತಿಯನ್ನು ಕುರಿತು ಮುಂದೆ ಹೇಳುವ ಪ್ರಕಾರ ಬರೆದಿರುತ್ತಾರೆ —

ಮಾಂಟ್ರೀಲ್, ನೊವೆಂ ೭, ೧೯೦೩.

ಪೆರೂನಾ ಅನೇಕ ರೋಗಿಗಳಿಗೆ ಸೌಖ್ಯಕೊಟ್ಟಿರುವುದನ್ನು ಕಂಡಿರುತ್ತೇವೆ ಅದು ಒಳ್ಳೇ ಬಲಕಾರಿಯಾದ ಸೇವನೆಯ ಔಷಧವೆಂದು ಹೇಳಬಲ್ಲೆವು, ಮತ್ತು ಅದಕ್ಕಾಗಿ ನಾವು ನಿಮ್ಮನ್ನು ವಂದಿಸುತ್ತೇವೆ.

ಗುಡ್ ಷೆಪ್‌ಹರ್ಡ್ ಆಸ್ಪತ್ರೆ ಸಹೋದರಿಯರು.

ಶೀತವು ಶರೀರದಲ್ಲಿ ಬೇರೂರಿತೆಂದರೆ ಅದನ್ನು ಹೋಗಲಾಡಿಸುವುದು ತುಂಬಾ ಕಷ್ಟವಾದೀತು

ಅದು ಶರೀರವನ್ನು ಹಿಡಿಯುವಂಥಾ, ದೇಹದ ಅಂಗಾಂಗಳಿಗೂ ವ್ಯಾಪಿಸುವಂಥಾ ಔಷಧವಾದ್ದರಿಂದ ಅದನ್ನು ಬಹಳ ಅಗತ್ಯವಾಗಿ ಉಪಯೋಗ ಮಾಡಬೇಕಾಗಿರುತ್ತದೆ

ಪೆರೂನಾ ಅಂಥಾ ಒಳ್ಳೆಯ ಔಷಧವಾಗಿರುತ್ತದೆ ಅದು ದೇಹದೊಳಗಿರುವ ಕಾಯಿಲೆಯ ಪ್ರದೇಶವನ್ನು ಹುಡುಕಿ ಹಿಡಿಯುವುದು ಒಳಚರ್ಮವನ್ನು ಗುಣಪಡಿಸಿ ಗಟ್ಟಿಮಾಡುವುದು ಅದರ ಮೇಲೆ ಶರೀರಸೌಖ್ಯವು ತಾನಾಗಿ ಹಿಂತಿರುಗಿ ಬರುತ್ತದೆ

ಶೀತದಿಂದ ಬಹಳ ಕಠಿಣವಾದ ಹಳೇರೋಗಿಗಳನ್ನು ಇಟ್ಟು ಇಲಾಜುಮಾಡಿ ವಾಸಿಮಾಡಿದ ಅನೇಕ ಆಸ್ಪತ್ರೆಗಳ ಪೈಕಿ ಸೆಂಟ್ ಜಾರ್ಜ ಎಂಬುವುದು ಒಂದಾಗಿರುತ್ತದೆ ಈ ಆಸ್ಪತ್ರೆಯವರು ಬರೆಯುವುದನ್ನು ನೋಡಿ —

"ನಿಮ್ಮ ಪೆರೂನಾವು ನಮಗೆ ತುಂಬಾ ತೃಪ್ತಿಕರವಾಗಿದೆ ಎಂದು ತಿಳಿಸಲು ಸಂತೋಷವುಳ್ಳವರಾಗಿದ್ದೇವೆ ಮೂವರು ರೋಗಿಗಳು ಈ ಔಷಧವನ್ನು ಉಪಯೋಗಿಸಿದರು ೭೮ ವರುಷ ವಯಸ್ಸಾದ ರೆನೋಯ ಪೂರ್ಟಾಯಿಸ್ ಎಂಬುವನು ಶೀತದಿಂದ ಬಹಳ ಕಷ್ಟಪಡುತ್ತಿದ್ದನು ಈಗ ಅವನು ತುಂಬಾ ಸೌಖ್ಯವಾಗಿದ್ದಾನೆ ಇಷ್ಟು ಚಟ್ಟಿಗೆ ಅವನು ಅನೇಕ ವರುಷಗಳಿಂದ ಆರೋಗ್ಯವಾಗಿರಲಿಲ್ಲ

"ಹದಿನೈದು ವರುಷದ ಒಬ್ಬ ಹುಡುಗಿಗೆ ಬಹು ಕಠಿಣವಾದ ಕೆಮ್ಮಲು ಹಿಡಿದಿತ್ತು ಅವಳಿಗೆ ಪೆರೂನಾವನ್ನು ಅರ್ಧ ತೀಸಿ ಕೊಡುವುದರಲ್ಲೇ ಆ ಕೆಮ್ಮಲು ಅದೃಶ್ಯವಾಯಿತು

'ನನ್ನ ವಿಷಯವನ್ನು ಹೇಳುತ್ತೇನೆ. ಎರಡು ಬಾಟ್ಲಿ ಔಷಧವನ್ನು ತೆಗೆದುಕೊಳ್ಳುವ ಪೂರ್ವದಲ್ಲೇ ಪೆರೂನಾ ಒಂದು ಅದ್ಭುತವಾದ ಬಲವನ್ನು ಕೊಡುವ ಔಷಧವೆಂದು ನನಗೆ ಪರಿಷ್ಕಾರವಾಗಿ ತಿಳಿದುಬಂದಿದೆ

"ಇದನ್ನು ಸೇವಿಸುವುದಕ್ಕೆ ಮುಂಚೆ ನಾನು ಕಾಲುಗಂಟೆ ಹೊತ್ತು ನಡೆಯುವುದಕ್ಕೂ ಆಗದೆ ಉಬ್ಬಸಬರುತ್ತಿತ್ತು ಈಗ ನಾನು ಒಂದು ಮೈಲಿ ದೂರವಾದರೂ ಸುಲಭವಾಗಿ ನಡೆಯಬಲ್ಲೆನು.

"ಈ ಮೂರು ರೋಗಿಗಳ ಮೂಲಕ ನಿಮ್ಮ ಔಷಧವು ಬಹು ಫಲಕಾರಿಯಾದದ್ದೆಂದು ಸಕಲರಿಗೂ ತಿಳಿಯಪಡಿಸುತ್ತೇವೆ"

ಸೆಂಟ್ ಜಾರ್ಜ ಆಸ್ಪತ್ರೆ, ಕ್ವಿಬೆಕ್

ಮೇಲ್ಕಂಡ ಆಸ್ಪತ್ರೆಯಿಂದ ಈಚೆಗೆ ಬಂದಿರುವ ಕಾಗದವು ಈ ರೀತಿಯಾಗಿ ಹೇಳುತ್ತದೆ —

"ಪೆರೂನಾವು ನಮಗೆ ಎಷ್ಟು ತೃಪ್ತಿಯನ್ನು ಕೊಟ್ಟಿತೋ ಮೂರು ವಾರಗಳ ಕೆಳಗೆ ನಿಮಗೆ ಬರೆದು ತಿಳಿಸಿರುತ್ತೇನೆ. ಅದನ್ನು ಶೀತ, ವಾತ, ಕೆಮ್ಮು, ಅರತಲೆ ನೋವು ಈ ಮೊದಲಾದ ರೋಗಗಳಿಗೆ ಪ್ರಯೋಗಮಾಡಬಹುದೆಂದು ಶಿಫಾರಸು ಮಾಡುತ್ತೇವೆ.

"ನಾನು ಅದನ್ನು ಶಕ್ತಿಪುಷ್ಟಿಗಾಗಿ ಸೇವಿಸಿರುತ್ತೇನೆ ಅದರಲ್ಲಿ ಹೇಳಿರುವ ಪ್ರಕಾರ ಪ್ರತಿ ಅರ್ಧಗಂಟೆಗೂ ಅರ್ಧ ಚಮಚದಷ್ಟು ತೆಗೆದುಕೊಂಡೆನು"

ಮಿಸೆಸ್ ಎಮ್ಮಾ ಬೇಕರ್, ಡಂಡರ್ನ್, ಸೊಸ್ಕ್, ಎನ್ ಡಬ್ಲ್ಯು ಟಿ, ಕನಡಾ ಈಕೆ ಬರೆಯುವುದೇನೆಂದರೆ —

"ನಾನು ಕಿಬ್ಬೊಟ್ಟೆಯಲ್ಲಿ ಶೀತವಾಯು ಹಿಡಿದು ಬಾಧೆಪಡುತ್ತಿದ್ದು, ಕಡೆಗೆ ಡಾಕ್ಟರ್ ಹಾರ್ಟ್‌ಮನ್‌ರವರಿಗೆ ಬರೆದು ಕೇಳಿದೆನು ಅವರು ಹೇಳಿದ ಪ್ರಕಾರ ಔಷಧವನ್ನು ತೆಗೆದುಕೊಳ್ಳುತ್ತಾ ಬಂದೆನು ಈಗ ಆ ಕಷ್ಟಕರವಾಗಿದ್ದ ಬಾಧೆಯು ನನಗೆ ನಿವಾರಣೆಯಾಗಿ ಸೌಖ್ಯವಾಗಿದ್ದೇನೆ ಮತ್ತು ನಾನು ಅದಕ್ಕಾಗಿ ತುಂಬಾ ಕೃತಜ್ಞಳಾಗಿರುವೆನು ಪೆರೂನಾವು ಶೀತವಾಯುವಿಗೆ ಸರ್ವೋತ್ತಮವಾದ ಔಷಧವೆಂದು ನಾನು ತಿಳಿದಿದ್ದೇನೆ ಈಗ ನನಗಿರುವಷ್ಟು ದೇಹಸೌಖ್ಯವು ಹಿಂದೆ ಯಾವಾಗಲೂ ಇರಲಿಲ್ಲ"

ಪೆರೂನಾವು ಕೆಮ್ಮನ್ನು ಶೀತವಾತಗಳನ್ನೂ ಪ್ರಾರಂಭದಲ್ಲೇ ಬೇಗನೆ ಗುಣಮಾಡುವುದಲ್ಲದೆ ಬಹಳ ದೀರ್ಘಕಾಲದ ಶೀತವಾತ ರೋಗಗಳನ್ನೂ ಚೆನ್ನಾಗಿ ವಾಸಿಮಾಡಬಲ್ಲದು

ಆದರೆ ರೋಗ ಹುಟ್ಟಿದ ಪ್ರಾರಂಭದಲ್ಲಿ ಬಹಳ ಸ್ವಲ್ಪ ಔಷಧವನ್ನು ಸೇವಿಸಿದ ಮಾತ್ರಕ್ಕೇ ಅದು ನಿವಾರಣೆಯಾಗುತ್ತದೆಂತಲೂ ರೋಗವು ಹೆಚ್ಚಾದ ಮೇಲೆ ಬಹಳ ಔಷಧವನ್ನು ಸೇವನೆ ಮಾಡಬೇಕಾಗುತ್ತದೆಂತಲೂ ನಾವು ಹೇಳಬೇಕಾದ ಅಗತ್ಯವಿಲ್ಲ

ಈ ಔಷಧ ಸಿಕ್ಕುವ ಸ್ಥಳಗಳು —

(೧) ಹಿಚ್‌ಕಾಕ್ ಅಂಡ್ ಸನ್ಸ್, ಬೆಂಗಳೂರು.
(೨) ಇಂಗ್ಲಿಷ್ ಡಗ್ರ್ ಕಂಪನಿ, ಫ್ಲವರ್ ಮಿಂಟ್ ಬೀದಿ, ಮದರಾಸ್.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ

7-6—1907 ರಿಂದ 14—6—1907 ರ ವ

ಸ್ಥಳ	ಪ್ಲೇಗ್ ತಗಲಿದ್ದು.	ಸತ್ತದ್ದು	ತಗ(ಲಿ)ದ್ದು
ಬೆಂಗಳೂರು ಪಟ್ಟಣ	8	8	0
ಮೈಸೂರು ,,	2	2	0
ಬೆಂಗಳೂರು ಡಿಸ್ಟ್ರಿಕ್ಟ್	42	33	8
ಮೈಸೂರು ,,	18	15	10
ಕೋಲಾರ್ ,,	0	0	1
ಕೋಲಾರ್ ಚಿನ್ನದ ಗಣಿಗಳು	5	4	0
ತುಂಕೂರು ಡಿಸ್ಟ್ರಿಕ್ಟ್	0	0	4
ಹಾಸನ ,,	16	3	15
ಚಿತ್ರದುರ್ಗ ,,	0	0	0
ಕಡೂರ್ ,,	19	8	0
ಶಿವಮೊಗ್ಗ ,,	1	1	0
ಜುಮ್ಲ	115	85	179

ಶಾಲಿವಾಹನ ಶಕ ವರುಷಂಗಳು ೧೮೨೯ ನೇ ಪ್ಲವಂಗಸಂವತ್ಸರದ ಜೇಷ್ಠ ಬಹುಳ ಬಿದಿಗೆ ಗುರುವಾರದಿಂದ ಜೇಷ್ಠ ಬ(ಹುಳ ಸಪ್ತ)ಮಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೭ ನೇ ಇಸವಿ ಜೂನ್ ಮತ್ತು ಜೂಲೈ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ
27	ಗುರು	ಬಿದಿಗೆ	40 30	ಪೂಷಾ	1 2
28	ಶುಕ್ರ ‡	ತದಿಗೆ	35 35	ಉ	53-3
29	ಶನಿವಾ	ಚೌತಿ	30 2	ಧ	50 1
30	ರವಿವಾ	ಪಂಚಮಿ	25 12	ಶ	18-2
1	ಚಂದ್ರ ,	ಷಷ್ಠಿ	21 4	ಪೂಭಾ	45 5
2	ಕುಜ *	ಸಪ್ತಮಿ	13 52	ಉಭಾ	44-4
3	ಬುಧ †	ಅಷ್ಟಮಿ	13 16	ರೇ	45 2

‡ ಸಂಕಷ್ಟಚತುರ್ಥಿ , ತಿಥಿದ್ವಯಂ * ಅಷ್ಟಮಿವ್ರತಂ
† ಉತ್ಪಾತಯೋಗ, ತ್ರಿಲೋಚನಗೌರಿ ವ್ರತ, ಪಿಂಕ್ಸ್ಟರಹಬ

ಪೇಟೇ ಧಾರಣೆ.

ದಿನಸಿ		ಮೈಸೂರು ಪೇ
ಕಪ್ಪೇ ಅಕ್ಕಿ ಪಲ್ಲ ೧ಕ್ಕೆ	ರೂ	೧೨-೮-೦
ಕಂಬೂತಿ ಅಕ್ಕಿ ಅವಲ್		೧೩-೬-೦
,, ದುಯ್ಯಂ		೧೨ ೮ ೦
ಜಾದ್ರಾಳ ಅಕ್ಕಿ		೧೨-೮ ೦
ಸಣ್ಣಕ್ಕಿ ಅವಲ್		೧೪-೦-೦
,, ದುಯ್ಯಂ		೧೬ ೮ ೦
ತೊಗರೀ ಬೇಳೆ ಪಲ್ಲ ೧ಕ್ಕೆ		೧೪ ೮ ೦
,, ದುಯ್ಯಂ		೧೨ ೧೨ ೦
ಹುರಳಿ ರಾಗಿ ಪಲ್ಲ ೧ಕ್ಕೆ		೪ ೮-೦
ಕಾರ್ರಾಗಿ		೫ ೮ ೦
ಜೋಳ		೬ ೮-೦
ಕಡಲೆ ಪಲ್ಲ ೧ಕ್ಕೆ		೧೧ ೦ ೦
ಬಿಳೇ ಅವರೆ		೮ ೬ ೦
ಹೆಸರು		೧೧ ೮ ೦
ಉದ್ದು		೧೯ ೮ ೦
ಕಡಲೆ		೧೦ ೦-೦
ಎಳ್ಳು ಕೆ ೧೨೩ ಕ್ಕೆ		೨೨-೮-೦
ಹುರುಳಿ		೪ ೨-೦
ಹರಳು ೧೨೩ ಸೇರಿಗೆ		೧೬-೦-೦
ಸೀಗೇಕಾಯಿ ಮಣ ೧ಕ್ಕೆ		೨-೬-೦
ಮೆಣಸಿನಕಾಯಿ		೨ ೧೨ ೦
,, ದುಯ್ಯಂ		೦ ೮-೦
ಬೆಲ್ಲ ದೊಡ್ಡ ಅಚ್ಚು		೫ ೮ ೦
ಬೆಣ್ಣೆ ಮಣ ೧ಕ್ಕೆ		೫ ೮ ೦
ಹರಳೆಣ್ಣೆ		೫-೪-೦
ಕೊತ್ತುಂಬರಿ ಪಲ್ಲ ೧ಕ್ಕೆ		೪-೧-೦
ಉಪ್ಪು ,,		೫ ೩ ೦
ಹುಣಸೇ ಹಣ್ಣು		೧ ೪ ೦
,, ಹಳೇದು		೦ ೧೬ ೦
ತುಪ್ಪ ಮಣ ೧ಕ್ಕೆ		೧-೮ ೦
ಸೀಮೆಯೆಂಣೆ ಪೆಟ್ಟಿ ೧ಕ್ಕೆ		೫-೦ ೦
ತೆಂಗಿನಕಾಯಿ ೧೦೦ ಕ್ಕೆ		೮-೮-೦
ಅಳಲೇಕಾಯಿ ಮಣ ೧ಕ್ಕೆ		೧-೦-೦
ಅಂಟ್ವಾಳದ ಕಾಯಿ ಮಣ ೧ಕ್ಕೆ		೩ ೧೨-೦
ಚಿನ್ನ (ಪೌನ್) ಕೆಂಪು		೧೫-೩-೦
,, ,, ಪಸಿಮೆ		೧೫ ೧೦-೦
,, ,, ಗಟ್ಟಿ ತೊಲ ೧ಕ್ಕೆ		೨೩-೧೨-೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ		೮೫-೦-೦

Punted ana Published by tho Re
THOMSON, M A, Proprietor and Manager,
Mission Press, Mysoro 27/6/1907

REGISTERED
M 20

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಕ್ರಯ ೧ ದುಡ್ಡು. | ಕ್ರಯ ೧ ದುಡ್ಡು.

ಸಂಪುಟ ೫೧ | ಮೈಸೂರು—ಸನ್ ೧೮೯೨ ನೇ ಇಸವಿ ಜೂಲೈ ತಾರೀಖು ೪ ನೇ ಗುರುವಾರ. | ಸಂಚಿಕೆ ೫೨

BASEL MISSION WEAVING ESTABLISHMENT,

59-2

MANGALORE, SOUTH CANARA.

ದಕ್ಷಿಣ ಕನ್ನಡ ಜಿಲ್ಲಾ ಮಂಗಳೂರು ಬಾಸೆಲ್ ಮಿಶ್ಯನ್ (ಬಟ್ಟೆ)
ನೆಯ್ಯುವ ಕಾರಖಾನೆಯಲ್ಲಿ

... ಎಲ್ಲಾ ತರದ (ವಿಕ್ಸ್) ಟ್ವೀಡ್ ... ಬಟ್ಟೆಗಳು, ಪಂಚೆಗಳು, ಷರ್ಟಿಂಗ್ ... ಬಟ್ಟೆಗಳು, ಸೀರೆ ಇತರ ಬಟ್ಟೆಗಳು, ... ಮಾರಾಟಕ್ಕೆ ಸಿದ್ಧವಾಗಿರುತ್ತವೆ.

ಒಳ್ಳೇ ಕಮಿಶ್ಯನ್—ರೂಪಾಯಿ ೧೦೦ ರ ಮೇಲೆ ವಸ್ತುಗಳನ್ನು ತೆಗೆದುಕೊಳ್ಳುವ ಗಿರಾಕಿಗಳಿಗೆ ಯಾ ಸಾಹುಕಾರರಿಗೆ ಕೊಡಲಾದೀತು. ಹೆಚ್ಚಿನ ವಿವರ ಪತ್ರದ್ವಾರಾ ಯಾ ಕಾಗದ ಮೂಲಕ ತಿಳಿಕೊಳ್ಳಬಹುದು.

ನಮೂನೆ ಯಾ ಮಾದರಿಗಳು:—ಪರ ಊರಿನ ಸಾಹುಕಾರರು ... ಕಳುಹಿಸಲ್ಪಡುವವು.

ವಿಶೇಷ ಲಕ್ಷ್ಯ ಸತಕ್ಕದ್ದು.—ಈ ನಮ್ಮ ... " ಟ್ರೇಡ್ ಮಾರ್ಕ್ " ಎಂಬ ... ಇರುವ ಬಟ್ಟೆಗಳೆಲ್ಲಾ ... ಹೆಚ್ಚಿನವು ...

ಶರ್ತ.—ನಗದಾಗಿ ಇಲ್ಲವೆ ವಸ್ತುಗಳು ... ಮೂಲಕ ಕಳುಹಿಸಲ್ಪಡುವವು ...

ಪತ್ರಗಳನ್ನು ... ಕನ್ನಡದಲ್ಲಿ ಸ್ಪಷ್ಟವಾಗಿ ... ಬರೆಯಬೇಕು.

☞ ಈ "ಟ್ರೇಡ್ ಮಾರ್ಕ"ನ್ನಾಗಲೀ ನಾವು ' ... ' ಎಂದಿರುವ ಲೇಬಲುಗಳನ್ನಾಗಲೀ ಇಲ್ಲವೆ ಆ ನಮೂನೆಯ ಬೇರೆ ಲೇಬಿಲುಗಳನ್ನಾಗಲೀ ಯಾರಾದರೂ ಇತರ ವಸ್ತುಗಳ ಮೇಲೆ ಪ್ರಯೋಗಿಸಲೂ ಮಾಡಲೂ ಕೂಡದು.

ವಿಳಾಸ—BASEL MISSION WEAVING ESTABLISHMENT,
MANGALORE S. CANARA.

WILLIAM & CO., BOMBAY.

ವಿಲಿಯಂ ಮತ್ತು ಕಂಪನಿ, ಫೋರ್ಟು, ಮುಂಬಯಿ.

ಗಜಕರ್ಣದ ಮುಲಾಮು.

27 19

ಇದನ್ನು ಹಚ್ಚುವದರಿಂದ ಎಲ್ಲಾ ತರ ಕಜ್ಜಿಯು ನಾಶವಾಗುವದು. ಮೂರು ದಿ ಹಚ್ಚುವದರೊಳಗೆ ಗಜಕರ್ಣವು ಗುಣವಾಗುವದು. ಇದನ್ನು ಹಚ್ಚಿದಲ್ಲಿ ಉರಿ ಉರಿವದಿಲ್ಲ ಚರ್ಮ ಕಪ್ಪಾಗುವದಿಲ್ಲ.

ಇದರಿಂದ ಗುಣ ಕಂಡುಬರುವದಿಲ್ಲವಾದರೆ ಹಣ ಹಿಂತಿರುಗಿ ಕೊಡಲ್ಪಡುವದು ತ್ವರೆಮಾಡಿರಿ! ಕೊಂಡುಕೊಳ್ಳಿರಿ!! ಕ್ರಯ ಕಮ್ಮಿ. ಒಂದು ಸಾರಿ ಪರೀಕ್ಷಿಸಿ ನೋಡಿರಿ!!!

ಡಬ್ಬಿ ೧ಕ್ಕೆ ಕ್ರಯ ೦-೩-೦
ವಿ. ಪಿ. ೦-೧೦-೦.

ಅಮೃತಾಂಜನ

ಬಾಟ್ಲಿ ಒಂದಕ್ಕೆ ಕಿಮ್ಮತ್ತು ೮ ಆಣೆ. ವಿ. ಪಿ. ೧೨ ಆಣೆ.

ಮೈ ಕೈ ನೋವು, ಗಾಯ, ... ಎದೆನೋವು, ಗಂಟ್ಲುನೋವು, ಶಿರೋಭಾರ, ಸಂಧಿವಾತ, ತಲೆನೋವು, ಮೂಲವ್ಯಾಧಿ, ಶೀತ, ಕೆಮ್ಮು, ಎಲ್ಲಾ ತರದ ರೋಗಕ್ಕೆ ಅಮೃತಾಂಜನವು ಒಂದು ದಿವ್ಯವಾದ ಔಷದವಾಗಿರುತ್ತದೆ. ಇದರಿಂದ ಗುಣ ಕಂಡುಬರುವದಿಲ್ಲವಾದರೆ ಹಣ ... ಕೊಡಲ್ಪಡುವದು ತ್ವರೆ ಮಾಡಿರಿ! ಮುನತ್ತು ವರ್ಷದಿಂದ ಅನುಭವಿಸುವ ವಾತದ ನೋವು ನಿಮ್ಮ ಒಂದೇ ಬಾಟ್ಲಿ ಅಮೃತಾಂಜನದಿಂದ ಪೂರ್ಣವಾಗಿ ಗುಣ ... ದಯಮಾಡಿ ೧೦ ಬಾಟ್ಲಿ ವಿ. ಪಿ. ಮೂಲಕ ರವಾನಿಸಿರಿ ... ರಾಮಭಟ್ಟ, ವಿಟ್ಲ, ದಕ್ಷಿಣ ಕನ್ನಡ ... ನಾನು ನನ್ನ ಸ್ನೇಹಿತರೂ ಅಮೃತಾಂಜನವನ್ನು ಬಳಸಿ ... ಸುಂದರಸಪ್ಪನವರು, ಪಂಜಾಬು. ಅಮೃತಾಂಜನವು ... ಉಪಯೋಗ ಉಳ್ಳ ಮುಲಾಮು ಬೇರೆ ಯಾವದೂ ಇಲ್ಲ. ಗಂಗಾಸೇವಕ, ಕಲ್ಕತ್ತಾ. ಆರು ವರ್ಷದಿಂದ ವಾತಪೀಡಿತ ನನ್ನ ಗಳೆಯನಿಗೆ ಅಮೃತಾಂಜನವು ಜೀವದಾನ ಕೊಟ್ಟಿ ... ಅಮೃತಾಂಜನವು ... ಜನರಿಗೆ ... ವೀರಭದ್ರಪ್ಪ, ಟುಮಕೂರು.
ಸಂಜೀವನದ ಹಾಗಿರುವ ಅಮೃತಾಂಜನವನ್ನು ನನ್ನ ಮನೆಯಲ್ಲಿ ಸದಾಕಾಲ ಇಟ್ಟಿದ್ದೇನೆ ... ಬೆಂಗಳೂರು. ನಿಮ್ಮ ಅಮೃತಾಂಜನವು ಎಂಥಾ ಶಕ್ತಿಯಾದ ತಲೆನೋವನ್ನಾದರೂ ನಿಲ್ಲಿಸುತ್ತದೆ. ಗಂಗಣ್ಣರಾವ್, ಕೊಡಗು.
ಸುಂದರೀ ತೈಲ ೪ ಆಣೆ. ವಜ್ರಗುಟಿಕ, ರೂಪಾಯಿ ೧. ದಂತಮಂಜನ ೩ ಆಣೆ. ನೇತ್ರಾಂಜನ ೪ ಆಣೆ ... ವಾತ್ರೆ ೧೦೦ ಆ. ಕೇಶವರ್ಧಿನೀ ತೈಲ ೧ ರೂ. ... ಆಣೆ ... ಗುಟಿಕ ೧ ರೂ. ತಾಂಬೂಲ ಗುಟಿಕೆ ೪ ಆಣೆ.

ವಿಲಿಯಂ ಮತ್ತು ಕಂಪನಿ, ೧೩೩ ಬಿಕ್ ಲೇನ್, ಫೋರ್ಟು, ಮುಂಬಯಿ.
ಟೆಲಿಗ್ರಾಪು ಅಡ್ರೆಸು; "ಅಮೃತಾಂಜನ" ಮುಂಬಯಿ.

ನಿಮಗೆ ನೋವು ಇದೆಯೋ?

58-6

ಹಾಗಾದರೆ "ಕ್ಲೆಮೆಂಟ್ ಯವರ ನ್ಯೂರಲ್ಜಿಕ್ ಬಾಂ"ನ್ನು ಏಕೆ ಉಪಯೋಗಿಸಬಾರದು? ಆಶ್ಚರ್ಯಕರವಾದ ಬಾಧಾಪಹಾರಿಣಿಯು! ಈಗಿನ ಶತಮಾನದಲ್ಲಿ ಕಂಡುಹಿಡಿದ ದೊಡ್ಡ ನೂತನವು!
ಈ ರಾಜ ಔಷಧವನ್ನು ಮೊಟ್ಟಮೊದಲು ತೆರೆದಂದಿನಿಂದ ಕೆಲವು ನಿಮಿಷಗಳೊಳಗಾಗಿ ನರ ಮತ್ತು ... ಸಂಬಂಧವಾದ ಪಾರ್ಶ್ವನೋವು, ಕೀಲುಗಳ ಬಾಧೆ, ... ತಲೆನೋವು, ಕೆಮ್ಮು, ಕೀಲುಗಳು ... ಕೈಕಾಲು ಬಿಗಿತ ಇವುಗಳನ್ನೆಲ್ಲಾ ವಿದ್ಯುಚ್ಛಕ್ತಿಯಂತೆ ಗುಣಪಡಿಸುವದು. ಈ ಔಷಧವು ಆಶ್ಚರ್ಯಕರವಾಗಿ ಗುಣಪಡಿಸುವದರಿಂದ ಎಲ್ಲರಲ್ಲಿಯೂ ಪ್ರಸರಿಸುತ್ತಾ ಬರುವದು. ಇತರ ಔಷಧಿಗಳು ಗುಣಪಡಿಸದೆ ಹೋದಾಗ ... ಇದು ನಿಸ್ಸಂದೇಹವಾಗಿಯೂ ಗುಣಪಡಿಸುವದು.
ಕ್ರಯ—೧ ಬಾಟ್ಲಿಗೆ ೧೨ ಆಣೆ ಪೋಸ್ಟೇಜ್ ೪ ಆಣೆ ೩ ಬಾಟ್ಲಿಗೆ ಅಂಚೆವೆಚ್ಚ ಸೇರಿ ರೂ ೨—೪ ಆಣೆ ಎಲ್ಲಾ ಕೆಮಿಸ್ಟ್ ಷಾಪುಗಳಲ್ಲಿ ದೊರೆಯುವದು.

ನಮ್ಮ ವಿಳಾಸ—ಎಫ್. ಡಿಬ್ಲಿಯು. ಆರ್ಡ್,
ಸಿಮೆಟ್ರಿ ರೋಡ್, ವೇಪೇರಿ, ಮದರಾಸ್.

ಜ್ವರಹರಿ.

37 10

ಇದು ಸಾಧಾರಣ ಜ್ವರ, ಚಳೀಜ್ವರ, ಮೂರೇಜ್ವರ, ಪಿತ್ತಜ್ವರ ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ನಾನಾವಿಧವಾದ ಜ್ವರಗಳನ್ನು ಬಹು ಬೇಗನೆ ವಾಸಿಮಾಡುವದು.
ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್. ಟಿ. ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೩೦ ದೋಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವ ದರಿಂದ ದಯವಿಟ್ಟು ಇನ್ನೊಂದು ೩೦ ದೋಸಿನ ಸೀಸೆಯನ್ನು ವಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.
ಕ್ರಯ—ಸೀಸೆ ೧ ಕ್ಕೆ ೪ ಆಣೆ, ೧ ರೂ., ೧—೪ ರೂ., ರೂ ೨—೧೦ ಆ, ೧೧ ರೂ., ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

✱✱✱✱✱✱✱✱✱

ಇಮಾಂ ಕಪೂರ

Imam Cuppoor

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಯೊಳಗೆ ನುಲಿವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ಕಂಗಳು ಒಂದುವರ್ಷ ಹೊರಗೆ ಆಗುವಾಗ್ಯ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ದರವು ಪ್ರಕಾರ ಎಂಬ ಔಷಧವಂತೆಯೇ ಸೀಸೆಗಳಲ್ಲಿ ದೊರೆಕುವದು.
ಈತವದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆಚ್ಚಿಗೆಯು ... ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ ಅಜೀರ್ಣ ಭೇದಿ, ಅಜೀರ್ಣ ರೋಗಿಸ್ತರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಆ ರೋಗವು ಗುಣವಾಗುತ್ತದೆ. ಇದು ಬಹು ಒಳ್ಳೆ ಔಷಧ ಎಂತ ಬರೆದಿದಾರೆ.
ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ:—
ಹೆಡ್ಡಿ ... ಇಂಡಿಯಾ ಔಷಧಗಳ ಏಜೆನ್ಸಿ,
... ಮದ್ರಾಸ್.

ಇಗೋ ನೋಡಿರಿ ಎಲ್ಲರೂ ಓದತಕ್ಕ ಆಶ್ಚರ್ಯ

ಕರವಾದ ಪುಸ್ತಕ!

" ಅರೇಬಿಯನ್ ನೈಟ್ಸ್ ಅಥವಾ ಯವನ ಯಾಮಿನೀ

ವಿನೋದ ಕಥೆಗಳು "

61-2

ಎಂಬ ಮಹಾ ಪ್ರಸಿದ್ಧವಾದ ಪುಸ್ತಕವು ತೆಳಗನ್ನಡದಲ್ಲಿ ಪ್ರಕಟಿಸಲ್ಪಟ್ಟಿದೆ. ನಾನೂರು ಎಪ್ಪತ್ತು ಪುಟಗಳುಳ್ಳದ್ದಾಗಿಯೂ, ಆಬಾಲವೃದ್ಧರಿಗೆ ಪ್ರೋತ್ಸಾಹಕರವಾಗಿಯೂ, ಮಹಾ ರಸಿಕವಾಗಿಯೂ, ರಚಿತವಾಗಿರುವ ಈ ಪುಸ್ತಕದ ಚಬಿರುಚಿಯನ್ನು ವಾಚಕರು ಸ್ವಾನುಭವದಿಂದಲೆ ಗ್ರಹಿಸಿ ತಿಳಿದುಕೊಳ್ಳುವರು ಭಾಷೆಯು ಬಹು ಸರಳವಾಗಿರುವದು. ಪುಸ್ತಕವನ್ನು ಒಂದಾವರ್ತಿ ಓದಿದ ಮೇಲೆ ಅದನ್ನು ಪುನಃ ಓದುವಂತೆ ಅದೇ ಮನಸ್ಸನ್ನು ಆಕರ್ಷಿಸುವದು

ಕ್ರಯ ರೂ. ೨-೦-೦ ವಿ ಪಿ, ಪಿ. ಮೂಲಕ ರೂ ೨-೩-೦

ವಿಳಾಸ:—ಮ್ಯಾನೇಜರ್,

ಸಿ. ಎಲ್. ಎಸ್. ಬುಕ್ ಡಿಪೋ,

ಮೈಸೂರು.

CHAMBERLAIN'S PAIN BALM

ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವು



1 27

ಬೆನ್ನುಹುರಿನಲ್ಲಿನ ನೋವು, ಪಕ್ಕೆಗಳಲ್ಲಿ ಆಗುವ ನೋವು, ಬೆಂಡಗಳಲ್ಲಿ ಉಂಟಾಗುವ ನೋವು ಕೀಲುನೋವು ಪೆಟ್ಟಾದ ಕೀಲುಗಳ ನೋವು, ವಾಯುನೋವು ಇವುಗಳನ್ನೆಲ್ಲಾ ಸಂಪೂರ್ಣವಾಗಿ ಗುಣಮಾಡುವಂಥಾ ಔಷಧ

ವಾಯುನೋವೆಂದರೇನು?

ಕೀಲುಗಳು ಮತ್ತು ಸ್ನಾಯುಗಳೆಲ್ಲಾ ಗಾಯವಾಗುವುದು, ಊದಿಕೊಳ್ಳುವುದು, ಕಠಿಣವಾಗಿ ಕಳಲುವ ಬಾಧೆ ಜಂಟಗಳಲ್ಲಿ ಇರಿಯುವುದು, ವಿಶ್ರಾಂತಿಕೊಡದೆ ಇರುವುದು ನಿದ್ದೆ ಕತ್ತದೆ ಇರುವುದು— ಇದೇ ಇದೆಲ್ಲಾ ನಿಮಗೆ ಯಾವಾಗ ಉಂಟಾಗುವುದೋ ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು

ಆಗ ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹಾ ಕಾವು ಮೂಳೆಯ ಒಳಕ್ಕೆ ವ್ಯಾಪಿಸುತ್ತದೆ ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ. ಮನಸ್ಸಿಗೆ ಉಲ್ಲಾಸವಾಗುತ್ತದೆ ಆದನ್ನೇ ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯು ಏನ ಕಟ್ಟನ್ನೇ ಕಿತ್ತುಹಾಕಿಬಿಡುವುದು

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ.

ಕೈಯಿಂದ ಮುಟ್ಟಿದ್ದೇನೂ ಅಲ್ಲ

ಇದು ಎಲ್ಲೆಲ್ಲೂ ಬಿಕರಿಯಾಗುವುದು ಸಣ್ಣ ಸೀಸೆಗೆ ೧ ರೂಪಾಯಿ ದೊಡ್ಡ ಸೀಸೆಗೆ ೨ ರೂಪಾಯಿ

೧೮೭೬ ರಿಂದ ೧೯೦೭ ವರೆಗೆ.

ಕಾಲದ ಪರೀಕ್ಷೆ!

ಮೂವತ್ತೇಳು ವರ್ಷಗಳಿಗಿಂತಲೂ ಹೆಚ್ಚಾಗಿ

SCOTT S EMULSION 31-16

(ಸ್ಕಾಟ್ಸ್ ಇಮಲ್‌ಷನ್)

ಎಂಬೀ ಸೇವನಾ ಔಷಧಿಯನ್ನು ಘನ ಪಂಡಿತರೆಲ್ಲಾ ಅನೇಕ ವೇಳೆ ಪರಿಶೋಧನೆಮಾಡಿ, ಸರ್ವೋತ್ತಮವಾದದ್ದೆಂದು ಹೇಳಿರುತ್ತಾರೆ

ಆದದರಿಂದ ಮುಂದಿನ ರೋಗಗಳಿಗೆ ಪ್ರಪಂಚದಲ್ಲೆಲ್ಲಾ ಈಗ ಈ ಔಷಧವು ಸರ್ವ ಶ್ರೇಷ್ಠವಾದದ್ದಾಗಿ ಪರಿಣಮಿಸಿದೆ —

ಶ್ವಾಸಕೋಶದ ಆಕ್ಷೇಪಗಳು, ನಾನಾ ತರದ ಕೆಮ್ಮಲು,

ಸಕಲವಿಧ ಕ್ಷಯಗಳು, ಮಾಂಸಖಂಡಗಳ ಕ್ಷೀಣತೆ,

ಆಹಾರದಲ್ಲಿ ಅರುಚಿ

ಇದಲ್ಲದೆ ತಂದೆಗೂ ಮಗನಿಗೂ ಬಲಕಾರಿಯಾದ ಮತ್ತು ಅಂಗ ಬೆಳಸುವ ಸೇವನಾ ಔಷಧವೂ ಇದೇ

ಕೈಸೋಕದೆ ತಯಾರಾದದ್ದು.

ಔಷಧಗಳ ಅಂಗಡಿಗಳಲ್ಲೆಲ್ಲಾ

ಬಿಕರಿಯಾಗುವದು

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,

ಔಷಧಗಳ ಕಾರ್ಖಾನೆ,

ಲಂಡನ್ ಇಂಗ್ಲೆಂಡ್

ಈ ಮನುಷ್ಯ ಇರುವ

ಔಷಧವನ್ನೇ ಕೊಂಡುಕೊಳ್ಳಿ

ಕಾರ್ಕಾನಹಳ್ಳಿ ನೋಟೀಸ್

62 1

ಬೆಂಗಳೂರ್ ಡಿ॥ ಕಾನಕಾನಹಳ್ಳಿ ತಾಲ್ಲೂಕು ಕಸಬಾ ಪ್ಯಾಟೆಯಲ್ಲಿರುವ ಕೊಸವನ ಸಾಹುಕಾರ್ ಪೈಲ್‌ಬಸಪ್ಪ ಉರುಫ್ ಅಪ್ಪಣ್ಣಶೆಟ್ಟರ ಹೆಂಡತಿ ಬಸಮ್ಮನಾದ ನಾನು ಇದರಿಂದ ಕಾನಕಾನಹಳ್ಳಿ ತಾಲ್ಲೂಕು ಕಸಬಾ ಪ್ಯಾಟೆಯಲ್ಲಿರುವ ಚಿಕ್ಕ ಕರಿಬಸಣ್ಣನವರ ಮಗ ಚೆನ್ನಪ್ಪನಿಗೂ ಮತ್ತು ಇತರ ಸರ್ವಜನರಿಗೂ ತಿಳಿಯಪಡಿಸುವದೇನೆಂದರೆ—

ನನ್ನ ಗಂಡ ಪೈಲ್ ಬಸಪ್ಪ ಉರುಫ್ ಅಪ್ಪಣ್ಣಶೆಟ್ಟರು ಈಗ್ಗೆ ಸುಮಾರು ೧೦ ತಿಂಗಳ ಕೆಳಗೆ ಮೃತರಾದರು ಇವರ ಬಾಬ್ತು ಸ್ಥಿರಚರಲೇವಾದೇವಿ ಮುಂತಾದ ಭಾರಿ ಆಸ್ತಿಗೆ ನನ್ನ ಹೊರತು ಬೇರೆ ವಾರಸುದಾರರು ಯಾರೂ ಇರುವದಿಲ್ಲ. ಮೇಲ್ಕಂಡ ಭಾರಿ ಆದಾಯವನ್ನು ನನ್ನ ಪರ್ವ ಮ್ಯಾನೇಜ್ ಮಾಡುವುದಕ್ಕಾಗಿ ಚೆನ್ನಪ್ಪನೆಂಬಾತನನ್ನು ನಾನು ನೇಮಿಸಿದ ತರುವಾಯ ನನ್ನ ಕಡೆಯಿಂದ ಬಂದು ಖರಾರನ್ನು ಅನೇಕ ವಿಧ ಬೋಧನೆ ಹೇಳಿ ಬರಸಿಕೊಂಡವನು ನನ್ನ ಆಸ್ತಿಯನ್ನೆಲ್ಲಾ ಆಕ್ರಮಿಸಿಕೊಳ್ಳುವ ದುರಾಲೋಚನೆಯಿಂದ ಸ್ವೇಚ್ಛೆಯಾಗಿ ಆಡಳಿತ ನಡಿಸಿ ನಂಬಿಕೆದ್ರೋಹದ ಕೃತ್ಯಗಳನ್ನು ನನಗೆ ವಿರೋಧವಾಗಿ ನಡಿಸುತ್ತಾ ಬಂದಿರುವ ಪ್ರಯುಕ್ತ ಡಿಟೋ ಯವನ ಮೇಲೆ ಕ್ರಮಜರುಗಿಸಲು ಅವಕಾಶವುಂಟಾಗಿರುತ್ತೆ ಆದಕಾರಣ ಈ ಚೆನ್ನಪ್ಪನಿಗೆ ಇದುವರಿವಿಗೆ ನಾನು ಒಪ್ಪಿ ನನ್ನ ಆಸ್ತಿ ನೋಡಿ ಕೊಟ್ಟಿದ್ದ ಮ್ಯಾನೇಜ್‌ಮೆಂಟ್ ಅಧಿಕಾರವನ್ನು ತಾರೀಖು ೧೩ ನೆ ಜೂನ್ ೧೯೦೭ ನೇ ರಿಜಿಸ್ಟರು ಪತ್ರದ ಮೂಲಕ ರದ್ದುಗಡಿಸಿರುತ್ತೇನೆಯಾಗಿ ಇನ್ನು ಮುಂದೆ ನನ್ನ ಗಂಡನವರ ಅಪ್ಪಣ್ಣಶೆಟ್ರಿಗೆ ಕೊಡಬೇಕಾದ ಬಾಕಿದಾರ್ರುಗಳ್ಯಾರೂ ನನಗೆ ವಿನಹ ತಮ್ಮ ಕಮ್ಮ ಬಾಕಿಗಳನ್ನು ಸದರಿ ಚೆನ್ನಪ್ಪನಿಗೆ ಕೊಡಕೂಡದು ಹಾಗೆ ಕೊಟ್ಟಲ್ಲಿ ಅದು ಮುಜರಾಗತಕ್ಕದಲ್ಲ ಮತ್ತು ಇವ್ಯಾವ ವಿಧವಾಗಿ ಸಮಾಧಾನವ್ನಾಡಿಕೊಂಡಾಗ್ಯೂ ಊರ್ಜಿತವಾಗಲಾರದು ಅಲ್ಲದೆ ನನ್ನ ಆಸ್ತಿ ಯಾವ ಭಾಗವನ್ನಾಗಲಿ ಡಿಟೋಯವನಿಂದ ಖರಿದುಕೊಂಡದು. ಹಾಗೆ ಮಾಡಿದಪಕ್ಷದಲ್ಲಿ ನನ್ನ ಹಕ್ಕಿಗೆ ಯಾವ ನ್ಯೂನತೆಯೂ ಸಂಭವಿಸಲಾರದು ಎಂಬ ಸಂಗತಿ ಖಚಿತವಾಗಿ ಈ ನೋಟೀಸ್ ಮೂಲಕ ಸೂಚಿಸಿದೆ.

೦ ಈ ಬಳೆ ಗರ್ಜಿನ ರಾಜು ಬಸವಣ್ಣ ಹಾಕಿದ್ದಕ್ಕೆ ಕಾರ್ಕಾನಹಳ್ಳಿ ಮಹಂತಿನ ಮಠದ ನಂಜುಂಡಶಾಸ್ತ್ರಿ ಬರಹ

ತಾ ೧೯—೬—೦೭

ಪಾಳ್ಯದ ವೆಂಕಟಾಚಲ ಪಂಡಿತ, ಶ್ರೀಸೀತಾರಾಘವ ವೈದ್ಯಶಾಲಾ, ಕೊಳ್ಳೇಗಾಲ, ಇವರ ಸಿದ್ಧೌಷಧಗಳು.

26 20

೧. ಲೋಕಾಮಯಹರ ಕಸ್ತೂರೀ ಮಾತ್ರೆ.—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚುಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ

ಚಳಿಜ್ವರ, ಜ್ವರ ಹೊಟ್ಟೆಶೂಲೆ, ಸಂದುಗಳ ನೋವು, ಮೈ ಕೈಕಾಲು ಕಡತ (ಭಾರ), ಮೈ ನಡುಕ, ಶೀತವಾತಗಳ ಬಾಧೆ ಅಜೀರ್ಣ, ಅಗ್ನಿನಷ್ಟ, ತಲೆನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅಮೋಚಕ, ಇನ್ನು ಅನೇಕರೋಗಗಳ ಕೂಟ್ಟರೆ ಖಂಡಿತವಾಗಿ ಗುಣವಾಗುತ್ತದೆ.

ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಸಕಲ ರೋಗನಿವಾರಣೆಯಾಗಿರುತ್ತಾ ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಖಾಯಿಲೆಗೂ ದಾರಿಕೊಡದೆ, ನೀರು ಗಾಳಿಗಳ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ

ಸ್ತ್ರೀಯರ ಪಾತುಶೂಲೆ, ಮಕ್ಕಳ ಎಳವು ಜ್ವರ, ಸಚ್ಚುಜ್ವರ, ಕೃತೃತ್ಯಗಳನ್ನು ಗುಣಪಡಿಸುತ್ತದೆ

ಇದನ್ನು ಸೇವಿಸುತ್ತಿರುವವರ ಎಂತಹವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ ಒಳ್ಳೇ ಸರ್ವಫಲಕವಾಗಿದೆ.

೨೦ ಮಾತ್ರೆಯುಳ್ಳ ಕಪ್ಪಿಗೆ ೮ ಆಣೆ ೫ ಕಪ್ಪಿಗೆ ೧ ಕಪ್ಪಿ ಹೆಚ್ಚು. ೧ ರಿಂದ ೧೦ ಕಪ್ಪಿ ವರಗೆ ಪೋಸ್ಟೇಜು ೪ ಆಣೆ

ವಿಳಾಸ:—ಎಸ್. ಎಸ್. ಆರ್ ವೈದ್ಯಶಾಲಾ,

ಲಕ್ಷ್ಮೀವಿಲಾಸ ರೋಡ್, ಮೈಸೂರು

ಗೃಹಕೃತ್ಯದ ತಪ್ಪ ನೋಟೀಸ್.

1 1

ಚನ್ನರಾಯಪಟ್ಟಣದ ತಾಲ್ಲೂಕು ಹಿರಿಸಾವೆ ಹೋಬಳಿ ಹಿರಿಸಾವೆ ಗ್ರಾಮದಲ್ಲಿರುವ ಚಿಕ್ಕಬೀದಿ ಚನ್ನಬಸವೇಗೌಡನ ಮಾಳಿಗೌಡನ ಮಗ ನಂಜುಂಡನು ತಿಳಿಸುವದೇನೆಂದರೆ ನನ್ನ ತಂದೆ ಮೃತನಾಗಿ ಸುಮಾರು ೧೦ ವರುಷವಾಗಿರಬಹುದು. ನನ್ನ ತಾಯಿ ನಂಜಮ್ಮ, ನನ್ನ ಅಕ್ಕ ನಂಜಮ್ಮ, ಎರಡನೆ ಅಕ್ಕ ದೇವೀರಮ್ಮ ಸಹಾ ತಾಯಿ ನಂಜಮ್ಮನ ಪೋಷಣೆಯ ಲ್ಲಿರುತ್ತೇವೆ ನನ್ನ ಅಜ್ಜ ಚನ್ನಬಸವೇಗೌಡನು ಸುಮಾರು ೭೦ ವರುಷದ ವೃದ್ಧರು ಬುದ್ಧಿಚಾಂಚಲ್ಯದ ದೆಸೆಯಿಂದ ಓಡಿಸಿಬಿಟ್ಟರು. ಆ ಬಾಗಿಲು ನನ್ನ ತಾಯಿಯು ಕುಟುಂಬದ ಸಹಾಯವಿಲ್ಲದೆ ತನ್ನ ಕಷ್ಟದಿಂದ ಕಾಲಹಾಕುತ್ತಾ ಇರಲು ಚನ್ನಬಸವೇಗೌಡಗೆ ನನ್ನ ತಂದೆ ಒಬ್ಬನೇ ಮಗನು ಬುದ್ಧಿಚಾಪಲ್ಯದಿಂದ ಮುಂದೆ ನನ್ನ ಜೀವನಕ್ಕೆ ಮಾರ್ಗವಿಲ್ಲದಂತೆ ಮಾಡಬೇಕೆಂದೆಣಿಸಿ, ದುಷ್ಟ ಜನರ ಕೇಳಿಕೆಗೆ ಒಳಗಾಗಿ ನಾವೆ ಕುಟುಂಬದ ಸಮುದಾಯದಲ್ಲಿರುವ ಚರ ಸ್ಥಿರ ಆಸ್ತಿಗಳನ್ನು ಚೈನಗಾದ ನನ್ನ ಮತ್ತು ನನ್ನ ತಾಯಿಯ ಅನುಮತಿ ಇಲ್ಲದೇನೇ ಪರಾಧಿ ನಪಡಿಸುತ್ತಾ ಇರುವನೆ ಈ ರೀತಿ ಮಾಡುವದರಿಂದ ಕುಟುಂಬದ ಆಸ್ತಿಗಳು ಪರಾಧೀನವಾಗಿ ಹೋಗಿ ಮುಂದೆ ಜೀವನಕ್ಕಿಲ್ಲದೆ ಕಷ್ಟಪಡಬೇಕಾಗಿಬರುತ್ತೆ ಈ ವರಿವಿಗೆ ಕುಟುಂಬದ ಸಮುದಾಯದಲ್ಲಿರುವ ನನ್ನ ಪಿತರಾರ್ಜಿತವಾದ ಚರ ಸ್ಥಿರ ಮೊದಲಾದ ಯಾವದನ್ನು ಸದರಿ ಚನ್ನಬಸವೇಗೌಡನು ಯಾವ ವಿಧದಿಂದಲೂ ಪರಾಧೀನಪಡಿಸಿ ಕಾಪಾಡುತ್ತಿರಬೇಕಾ ನನ್ನ ಮತ್ತು ನನ್ನ ತಾಯಿಯ ಸ್ವೀಕಾರವಿಲ್ಲದೇನೇ ಯಾರೂ ಯಾವಸ್ವತ್ತನ್ನು ಪರೂ ಯಾಸಿಧದಿಂದಲೂ ಕೊಂಡುಕೊಡದು ಹಾಗೆ ಕೊಂಡಿದರೆ ಅಂಥವರಿಗೆ ಯಾವ ಹಕ್ಕೂ ಬರುವದಿಲ್ಲ ಮತ್ತು ಕೋರ್ಟುಗಳಲ್ಲಿ ಅಂಗೀಕಾರವಾಗತಕ್ಕದ್ದಲ್ಲ ಅಂಥಾವರಗಳ ದಾವೆಗೂ ನಾನು ಮತ್ತು ಪಿತರಾರ್ಜಿತ ಸ್ವತ್ತು ಆಧಾರವಿಲ್ಲ ಕೊಟ್ಟವರೇ ನಷ್ಟಹೊಂದುವರು ನನ್ನ ಮೈನಾರ್ಟಿ ಕಾಲದ ಲೆಕ್ಕ ನನ್ನ ಕುಟುಂಬದ ಸಮುದಾಯಕ್ಕೆ ಸೇರಿದ ಚರ ಸ್ಥಿರವೇ ದಲಾದ ಯಾವ ಸ್ವತ್ತೇ ಆಗಲಿ ಯಾರಲ್ಲಿದ್ದಾಗ್ಯೂ ಅವರುಗಳು ನನಗೆ ವಾಪಸು ಕೊಡದೆಹೋದಲ್ಲಿ ಎಲ್ಲ ವಿಧದಲ್ಲೂ ಸರ್ಕಾರಿ ದಂಡನೆಗೆ ಆರ್ಹರಾಗಿರಬೇಕಾಗಿ ಇದರಿಂದ ತಿಳಿಸಿದ್ದೇನೆ

ತಾ ೧೯—೬—೧೯೦೭ ನಂಜುಂಡನ ರುಜು.

ಇಲ್ಲಿನೋಡಿ!

22 20

ತುಮಕೂರು ಡಿಸ್ಟ್ರಿಕ್ಟ್ ಇಲಾಖೆಯಲ್ಲಿ, ಯೂರೋಪಿಯನ್ ಮೇಲ್ವಿಚಾರಣೆಯಿಂದ, ಉತ್ತಮ ಎರಡು ಹಾಸನದ ಟೋಪಿಗಳು ಶ್ರೇಷ್ಠವಾದ ಊಲ್‌ದಾರದಿಂದ ತಯಾರಾಗುತ್ತವೆ ಕ್ರಯ ೧೦ ಆಣೆಯಿಂದ ೧ ರೂ ೨ ಆಣೆವರೆಗೂ ದೇಶಾಭಿಮಾನಿಗಳು ಅಪೇಕ್ಷಿಸುವವರು ಕ್ರಯ ಪಟ್ಟಿಯನ್ನು ತರಿಸಬಹುದು ವಿಳಾಸ — ಮೇನೇಜರ್, ಹಾಸನದ ಟೋಪಿ ಕಾರ್ಖಾನೆ, ಡಿಸ್ಟ್ರಿಕ್ಟ್ ಇಲಾಖೆ, ತುಮಕೂರು

ಇದಕ್ಕೆ ಸಮಾನವಾದ ಪುಸ್ತಕ ಉಂಟೋ?

ಕನ್ನಡ ಭಾಷೆಯಲ್ಲಿ ಇದುವರಿವಿಗೂ ಇಂಥಾ ಸೊಗಸಾದ ಪುಸ್ತಕವು ಪ್ರಚುರವಾಗಲಿಲ್ಲ. ಸ್ವಲ್ಪ ನೋಡಿ

"ಹಿಂದೂದೇಶ ಪ್ರದಕ್ಷಿಣ"

ಎಂದು ಕರೆಯಲ್ಪಡುವ ಈ ನೂತನ ಪುಸ್ತಕದಲ್ಲಿ ಸುಮಾರು ಒಂಬತ್ತು ಉತ್ಕೃಷ್ಟವಾದ ಚಿತ್ರಗಳು ಅಡಗಿವೆ. ಹಿಂದೂ ದೇಶವನ್ನೆಲ್ಲಾ ಸಂಚಾರ ಮಾಡುವದರಿಂದ ಉಂಟಾಗುವ ಪರಮಾನಂದವನ್ನು ಒಂದು ಸಾರಿ ಈ ಗ್ರಂಥವನ್ನು ಓದುವದರಿಂದ ಹೊಂದಬಹುದು ಇದು ಮೇಲಾದ ಸಾದ ಪ್ರಿಂಟ್ ಆಗಿದ್ದು ಬಹು ಶಿಫಾರಸಾಗಿ ಮುಗಿದು ಹೊಂದವೆ ಅಗ ತಿರಿಗಿ ವಿಚಿತ್ರವಾಗಿಯೂ ಉಲ್ಲಾಸಕರವಾಗಿಯೂ ಇರುವ ಪ್ರಸಿದ್ಧವಾದ ಚಿತ್ರಗಳೊಡನೆ ಮಾಡಿಸಿರುತ್ತೇವೆ ಇದರಲ್ಲಿರುವ ಚಿತ್ರಗಳನ್ನು ಸ್ವಲ್ಪ ನೋಡಿ—ಶ್ರೀರಂಗಪಟ್ಟಣದಲ್ಲಿ ಹೈದರ್‌ನ ಟಿಪ್ಪುಸುಲ್ತಾನನ ಗೋರಿ ಸುನಾಯೂಸನ ಗೋರಿ, ಗಿ ರಿ, ಕಲ್ಕತ್ತಾ ನಗರ, ಕಲ್ಕತಾ ಹೈ ಕೋರ್ಟು, ಕಾಳಿಕಾದೇವಿ ಚಂದ್ರನಗರ, ಬಂಗಾಳಿಯರ ಮನೆಗಳು, ಜಗನ್ನಾಥಸ್ವಾಮಿ ಭುವನೇಶ್ವರನಾಥ ದೇವಸ್ಥಾನ, ಜಗನ್ನಾಥದ ರಥೋತ್ಸವ, ಕನರಾಕ್ ದೇವಸ್ಥಾನ, ಎವರೆಸ್ಟ್ ಶಿಖರ, ಖಟ್ಮಂಡು ನಗರದ ಒಂದು ಬೀದಿ, ಖಟ್ಮಂಡು ನಗರದ ದೇವಸ್ಥಾನಗಳು, ಜಪಚಕ್ರಗಳು, ಅಂಬಿಗರು ದೋಣಿಯನ್ನು ಎಳೆದುಕೊಂಡು ಹೋಗುವದು, ಗಯೆಯಲ್ಲಿರುವ ಬುದ್ಧನ ದೇವಸ್ಥಾನ ಔರಂಗಜೇಬನು ಕಟ್ಟಿಸಿದ ಮಸೀದಿ ಕಾಶೀ ಪುಣ್ಯಕ್ಷೇತ್ರದಲ್ಲಿರುವ ದಶಾಶ್ವಮೇಧಘಟ್ಟ, ಕಪಿಗಳಿಗೆ ತಿಂಡಿ ಹಾಕುವದು, ಕಾಶೀ ಕ್ಷೇತ್ರದ ದೇವಸ್ಥಾನಗಳು ಅಲಹಾಬಾದ್ ನಗರ ಮತ್ತು ಅದರ ಕೋಟೆ ಅಲಹಾಬಾದ್‌ನಲ್ಲಿರುವ ಖುಸ್ರು ಬಾಗ್ ಅರಮನೆ, ಯಮುನಾ ನದಿಯ ಯಾತ್ರಿಕರು ಮುಳುಗುವದು, ಕಾನ್ಪುರದಲ್ಲಿರುವ ಶಿಲಾ ಶಾಸನ, ಹರಿದ್ವಾರದ ಹತ್ತಿರ ಗಂಗಾ ನದಿಯ ಮೇಲೆ ಕಟ್ಟಿರುವ ಸೇತುವೆ, ಲಕ್ನೋ ನಗರದ ಡಿ' ಕ್ರೇ' ಬಂಗಲೆ, ಲಕ್ನೋ ಪಟ್ಟಣದ ಬಾಗಿಲು, ಸರ್ದಾರ್ ಕ್ಯಾವಲಾಹರ, ಗೋಮತಿ ನದಿಯ ಮೇಲಿರುವ ಅರಮನೆ, ಹಿಮಾಲಯದಲ್ಲಿ ಜನರ ಸ್ಥಿತಿ, ಹರಿದ್ವಾರಘಟ್ಟ, ಗಂಗೋತ್ರಿ ದೇವಸ್ಥಾನ, ಹಿಮಪರ್ವತಗಳ ಮೇಲಿರುವ ಪಟ್ಟಣ, ಹಿಮಪ್ರವಾಹಗಳು, ಆಗ್ರಾ ಪಟ್ಟಣದ ಕೋಟೆ, ಯಮುನಾ ನದಿಯ ದೂರದಲ್ಲಿ ತೋರುತಿರುವ ತಾಜ್‌ಮಹಲ್ ಗೋರಿಯು, ತಾಜ್ ಮಹಲಿನ ಕನ್ನಿನಲ್ಲಿ ಕೆತ್ತನೆ ಕೆಲಸದ ಫಲಕ, ಅಕ್ಬರನ ಅರಮನೆ, ಆಗ್ರಾ ಪಟ್ಟಣದ ಮುತ್ತಿನ ಮಸೀದಿ, ಸ್ವೀಟ್ಪರ್ ಸೀಕ್ರಿಯಲ್ಲಿರುವ ಪಂಚ್ ಮಹಲ್ ಅರಮನೆ, ರಜಪೂತಾನದ ಭರತಪುರದ ಕೋಟೆ, ಅಲ್ವಾರಿನಲ್ಲಿ ಮಹಾರಾಜ ಭಕ್ತಾವರ್ ಸಿಂಗ ಗೋರಿ, ಡೆಲ್ಲಿ ನಗರದ ದೊಡ್ಡ ಮಸೀತಿ, ಪುರಾತನ ಡೆಲ್ಲಿಯ ಬಳಿ, ರಾಜ ದೇವನು ಸ್ಥಾಪಿಸಿದ ಕಬ್ಬಿಣದ ಸ್ತಂಭ, ನಾದಿರ್ ಷಹಾ ಡೆಲ್ಲಿ ನಗರದಲ್ಲಿ ಪ್ರಜಾ ಸಂಹಾರವನ್ನು ನೋಡುತ್ತಿರುವುದು, ಡೆಲ್ಲಿಯ ಬಳಿಯಲ್ಲಿರುವ ಕುತುಬ್ ಮಿನಾರ್, ಚಾಂದ್ನಿ ಚೌಕ್ ಬೀದಿ, ಸಿಂಲಾಕ್ಕೆ ಹೋಗುವ ದಾರಿ, ಸಿಮ್ಲಾ, ಅಮೃತಸರದ ಸ್ವರ್ಣಾಲಯವು, ಲಾಹೋರಿನಲ್ಲಿರುವ ರಣಜಿತಸಿಂಗನ ಗೋರಿ, ಪೆಷಾವರ್ ಪಟ್ಟಣ, ಈ ಮುಂತಾದ ಅನೇಕ ರಮಣೀಯವಾದ ಸ್ಥಳ ಚಿತ್ರಗಳು ಈ ಪುಸ್ತಕದಲ್ಲಿ ಅಡಗಿವೆ. ಅವುಗಳನ್ನೆಲ್ಲಾ ವಿವರಿಸಲು ಸ್ಥಳವಿಲ್ಲ.

ಪ್ರತಿಯೊಂದು ಅಂಶದ ವಿವರಣೆಯೂ ಬಹು ಪರಿಷ್ಕಾರವಾಗಿ ದಕ್ಷಿಣ ದೇಶದಲ್ಲಿರುವ ಅನೇಕ ಪ್ರಸಿದ್ಧ ಸ್ಥಳಗಳ ಚಿತ್ರಗಳೂ, ಅವುಗಳ ವಿವರಣೆಗಳೂ ಇದರಲ್ಲಿವೆ. ಪುಸ್ತಕವು ಬಾರಿಯಾಗಿದೆ. ಪುಸ್ತಕದ ಅಚ್ಚು ಮತ್ತು ಬೈಂಡು ಬಹು ಸುಂದರವಾಗಿವೆ ಇದರ ಕ್ರಯ ಎಂಟು ಆಣೆ, ವಿ ಪಿ.ಪಿ ಮೂಲಕ ಹನ್ನೊಂದು ಆಣೆಯಾಗುವದು ಪುಸ್ತಕಗಳು ಜಾಗ್ರತೆಯಲ್ಲಿ ಮಾರಾಟವಾಗುತ್ತಿದೆಯಾದ್ದರಿಂದ ತಾವುಗಳು ಕೆಳಕಂಡ ವಿಳಾಸಕ್ಕೆ ಬೇಗನೆ ಬರೆದು ತರಿಸಿಕೊಳ್ಳಬೇಕು

ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪೋ,

ಮೈಸೂರು. 18-9

ವೃತ್ತಾಂತ ಪತ್ರಿಕೆ.

೧೯೦೭ ನೇ ಇಸವಿ ಜೂಲೈ ೪ನೇ ತಾರೀಖು

ಯೂರೋಪ್ಯರೂ ಪ್ಲೇಗ್ ಉಪದ್ರವೂ.

ಇಂಡಿಯಾ ಸ್ಟೇಟ್ ಸೆಕ್ರೆಟರಿಯವರಾದ ಮಿ। ಜಾನ್ ಮಾರ್ಲಿಯವರು ಹೌಸ್ ಆಫ್ ಕಾಮನ್ಸ್ ಎಂಬ ಪಾರ್ಲಿಮೆಂಟ್ ಸಭೆ ಮನೆಯಲ್ಲಿ ಹಿಂದುಸ್ಥಾನದ ವಿಚಾರವನ್ನು ಕುರಿತು ಮಾತನಾಡುವಾಗ್ಗೆ ಯೂರೋಪ್ಯರ ಜನರಿಗೆ ಪ್ಲೇಗ್ ತಗಲದೆ ಇರಲು ಕಾರಣವೇನೋ ತಿಳಿಯುವುದು ಕಷ್ಟವಾಗಿದೆ ಎಂದು ಹೇಳಿದರು. ಹಿಂದುಸ್ಥಾನದಲ್ಲಿ ನೌಕರಿ ಮಾಡಿದಂಥಾ ಒಬ್ಬ ಡಾಕ್ಟರು ಈ ಮಾತನ್ನು ಕೇಳಿ ಅದಕ್ಕೆ ಪ್ರತ್ಯುತ್ತರವಾಗಿ ತಿಳಿಸುವುದನ್ನು ನಮ್ಮ ವಾಚಕರು ಗ್ರಹಿಸಿಕೊಳ್ಳಬೇಕಾಗಿದೆ. ಅವರ ಪ್ರತ್ಯುತ್ತರವೇನೆಂದರೆ:-

ಪ್ಲೇಗ್ ಉಪದ್ರವು ಮುಖ್ಯವಾಗಿ ಇಲಿ ಹೆಗ್ಗಣಗಳಿಂದಲೂ ಚಿಗಟಗಳಿಂದಲೂ ಹರಡತಕ್ಕ ಜಾಡ್ಯವಾಗಿರುತ್ತದೆ. ಯೂರೋಪ್ಯರ ಜನರು ಸಾಮಾನ್ಯವಾಗಿ ಎತ್ತರವೂ ವಿಸ್ತಾರವೂ ನಿರ್ಮಲವೂ ಆದಂಥಾ ಬಿಸಲು ಗಾಳಿ ಬೆಳಕು ಧಾರಾಳವಾಗಿ ಬೀಳುವಂಥಾ ದೊಡ್ಡ ಮನೆಗಳಲ್ಲಿ ವಾಸ ಮಾಡುವರು. ಅವರು ಚಿಗಟಗಳು ಕಡಿಯುದಂತೆ ಮಂಚಗಳ ಅಥವಾ ಹಲಿಗೆಗಳ ಮೇಲೆ ಹಾಸಿಗೆ ಹಾಕಿಕೊಂಡು ಮಲಗುತ್ತಾರೆ. ದೇಶೀಯ ಜನರಾದರೋ ಕೊಳಕು ತುಂಬಿದ, ಬಿಸಲು ಗಾಳಿ ಬೆಳಕು ಬಾರದ ಮನೆಗಳೊಳಗೆ ನೆಲದ ಮೇಲೆ ಮಲಗಿಕೊಳ್ಳುವರು. ಈ ಉಪದ್ರವನ್ನು ಅಡಗಿಸುವುದಕ್ಕೆ ಸರ್ಕಾರದವರು ಮುತುವರ್ಜಿ ವಹಿಸಿ ಕಾರ್ಯಗಳನ್ನು ಮಾಡದೆ ಹೋದದ್ದರಿಂದ ಅದು ಪ್ರಜೆಗಳನ್ನು ಕೊಂದುಹಾಕುತ್ತಿದೆ ಎಂಬ ಆಕ್ಷೇಪಣೆಯು ಸಹಜವಾದದ್ದಲ್ಲ. ಈ ಉಪದ್ರವು ಈ ದೇಶದಲ್ಲಿ ಕಾಣಿಸಿಕೊಂಡ ಲಾಗಾಯಿತು ಇದುವರೆಗೂ ವಿಶೇಷತರವಾದ ನಾನಾ ಪ್ರಯತ್ನಗಳನ್ನು ಪ್ರಜಾ ವಾತ್ಸಲ್ಯಪೂರಿತರಾದ ಗೌರ್ನಮೆಂಟಿನವರು ಮಾಡುತ್ತಾ ಬಂದಿರುವರು. ಆದರೆ ಈ ದೇಶದ ಪ್ರಜೆಗಳಲ್ಲಿ ಉಪೇಕ್ಷಾಭಾವವೂ, ಮೂಢಭಕ್ತಿಯೂ, ಅವಿವೇಕವೂ, ಅಪನಂಬಿಕೆಯೂ, ಇನ್ನೂ ಬಹಳವಾಗಿರೋಣದರಿಂದ ಸರ್ಕಾರದವರು ಮಾಡುವ ಪ್ರತೀಕಾರ ಕಾರ್ಯಗಳು ಸಾರ್ಥಕವಾಗಲು ಅವಕಾಶವಿಲ್ಲ. ವಿವೇಕಿಗಳೂ ಬುದ್ಧಿಶಾಲಿಗಳೂ ಇರುವಂಥಾ ಪಟ್ಟಣಗಳಲ್ಲಿ ಪ್ಲೇಗ್ ಕಾಣಿಸಿಕೊಂಡ ಕೂಡಲೇ ಸರ್ಕಾರದವರು ನಡಸುವ ಕಾರ್ಯಗಳಲ್ಲಿ ಅವರು ಅಪನಂಬಿಕೆಪಡದೆ ಅವರ ನಿರ್ಬಂಧನಂತೆ ನಡೆದುಕೊಳ್ಳುತ್ತಾ ಬಂದಿರೋಣದರಿಂದ ಅಂಥಾ ಪಟ್ಟಣಗಳಲ್ಲಿ ಈ ಉಪದ್ರವು ತಲೆಯುತ್ತದೆ ಅಡಗಿಹೋಗಿರುವುದು. ಈ ಭಾಗದಲ್ಲಿ ಮದರಾಸ್ ಪಟ್ಟಣವನ್ನು ದೃಷ್ಟಾಂತವಾಗಿ ಸೂಚಿಸಬಹುದಾಗಿದೆ.

ತಂದೆತಾಯಿಗಳ ಕರ್ತವ್ಯ

ಪ್ರಸಿದ್ಧರಾದ ಆಂಗ್ಲೇಯ ಲೇಖಕರಲ್ಲಿ ರಸ್ಕಿನ್ [illegible] ಉನ್ನತ ಸ್ಥಾನವನ್ನು ಆಕ್ರಮಿಸಿರುವರು. ಇವರ ತಂದೆತಾಯಿಗಳು [illegible] ರಸ್ಕಿನರವರು ತಮ್ಮ ಬಾಲ್ಯದಲ್ಲಿಯೇ [illegible] ಅಭ್ಯಸಿಸುವುದಕ್ಕೆ ತೊಡಗಿ ಅದರಲ್ಲಿ [illegible] ಸಂಪಾದಿಸಿದರು. [illegible] ಅವರು ಬರೆದ ಪುಸ್ತಕಗಳು ಇಂಗ್ಲಿಷ್ ಭಾಷೆಯಲ್ಲಿ ಪ್ರಸಿದ್ಧವಾದ ಗ್ರಂಥಗಳಾಗಿವೆ. ಅವರು ವಿದ್ಯಾವಂತರಾಗಿದ್ದಲ್ಲದೆ ಗುಣಾಢ್ಯರಾಗಿ [illegible] ಇದ್ದರು. ಅವರು ತಮ್ಮ [illegible] ತಮ್ಮ ದೇಶಸ್ಥರಿಗೆ [illegible] ಉಪಯೋಗಿಸಿದರು [illegible] ತಮ್ಮ ಬಾಲ್ಯವನ್ನು [illegible] ತಂದೆತಾಯಿಗಳ ಗುಣಾತಿಶಯಗಳನ್ನು [illegible] ಅವರು ತೋರಿ [illegible] ಒಳ್ಳೆ ಮಾದರಿಯನ್ನು ತೋರಿಸಿದರು.

ಅವರು ತಮ್ಮ ತಂದೆತಾಯಿಗಳಿಂದ ಕಲಿತುಕೊಂಡ ಸುಗುಣಗಳಲ್ಲಿ ಮೊದಲನೇದು ಶಾಂತತ್ವ ಅಥವಾ [illegible] ಗುಣ. ರಸ್ಕಿನರವರು ತಮ್ಮ ಬಾಲ್ಯದಿಂದಲೂ [illegible] ಗಳಲ್ಲಿ [illegible] ಗುಣವನ್ನನುಸರಿಸುತ್ತಾ ಬಂದರು. [illegible] ತಂದೆತಾಯಿ [illegible] ಒಬ್ಬರಮೇಲೊಬ್ಬರು ಕೋಪಮಾಡಿಕೊಂಡು ಜಗಳವಾಡುತ್ತಿದ್ದನ್ನು ರಸ್ಕಿನರವರು ಎಂದಿಗೂ ನೋಡಲಿಲ್ಲ. ಅವರ ಗೃಹವು ಸಮಾಧಾನದಿಂದ ತುಂಬಿತ್ತೆಂದು ಹೇಳಿರುವರು.

ಅವರು ಸಂಪಾದಿಸಿದ ಎರಡನೇ ಗುಣವೆ ಯಾವದೆಂದರೆ ವಿಧೇಯತ್ವ. [illegible] ತಿರುಗಿದ ಕಾಲ ಹಡಗವು [illegible] ರಸ್ಕಿನರವರು ತಮ್ಮ ತಂದೆತಾಯಿಗಳ ಮಾತಿಗೆ ಯಾವಾಗಲೂ ವಿಧೇಯರಾಗಿ ನಡೆದುಕೊಳ್ಳುತ್ತಿದ್ದರು.

ಅವರಲ್ಲಿದ್ದ ಮೂರನೇ ಗುಣವು ಯಾವದೆಂದರೆ ನಂಬಿಕೆ. ಅವರ ತಂದೆ ತಾಯಿಗಳು ತಮ್ಮ ಮಗನಿಗೆ [illegible] ಬಿಡದೆ ನೆರವೇರಿಸುತ್ತಿದ್ದರು. ಅವರು ರಸ್ಕಿನರವರಿಗೆ ಬಹುಮಾನವನ್ನು ಕೊಡುವೆವೆಂದಾಗಲಿ ಅಥವಾ ಶಿಕ್ಷೆಯನ್ನು ವಿಧಿಸಬೇಕೆಂದಾಗಲಿ ತೀರ್ಮಾನಿಸಿಕೊಂಡರೆ ಅಂಥಾ ತೀರ್ಮಾನವನ್ನು ಎಂದಿಗೂ ಮೀರುತ್ತಿರಲಿಲ್ಲ. ತಂದೆ ತಾಯಿಗಳಲ್ಲಿದ್ದ ಈ ಗುಣವನ್ನು ರಸ್ಕಿನರವರು ಕಂಡು ಅವರಲ್ಲಿ ಸಂಪೂರ್ಣ ನಂಬಿಕೆಯನ್ನಿಟ್ಟಿದ್ದರು. ಅವರ ಮಾತುಗಳು ಯಾವಾಗಲೂ ಸತ್ಯವುಳ್ಳವುಗಳಾಗಿದ್ದವು. ಇಂಥಾ ಗುಣಾಢ್ಯರಾದ ತಂದೆ ತಾಯಿಗಳ ಮನೆಯಲ್ಲಿ ಬೆಳೆದ ಮಕ್ಕಳ ಸ್ಥಿತಿಯು ಬಹಳವಾಗಿ ಅಪೇಕ್ಷಿಸತಕ್ಕದ್ದಲ್ಲವೇ? ರಸ್ಕಿನರವರ ಮನೆಯಲ್ಲಿ ನೆಲೆಗೊಂಡಿದ್ದ ಅತಿಶಯವಾದ ಗುಣಗಳು ನಮ್ಮೆಲ್ಲರ ಮನೆಗಳನ್ನು ತುಂಬುವಂತೆ ಪ್ರಯತ್ನಪಡೋಣ.

ಒಳದೇಶದ ವೃತ್ತಾಂತಗಳು.

ಶೃಂಗೇರಿ ಸ್ವಾಮಿಗಳಿಗೆ ನೆನ್ನೆ ನೆನ್ನೆಯಿಂದ ಸ್ವಲ್ಪ ದೇಹಾಲಸ್ಯವುಂಟಾಗಿತ್ತೆಂದು ತಿಳಿದುಬಂದಿದೆ.

***

ದಿವಾನರವರು ಈ ವಾರವೂ ರಾಜಧಾನಿಯಲ್ಲೇ ಇದ್ದು ತರುವಾಯ ಬೆಂಗಳೂರಿಗೆ ದಯಮಾಡಿ ಸಬಹುದು ಕೇಳುತ್ತೇವೆ.

***

ಸಾಹುಕಾರ್ ಲಕ್ಷ್ಮೀಪತೈಯ್ಯನವರ ಕುಮಾರರಿಗೆ ವಿವಾಹವಾದದ್ದರಿಂದ ಅವರು ರಾಜಧಾನಿಯ ಸುಮಾರು ೨೦೦ ಜನ ದೊಡ್ಡ ಮನುಷ್ಯರಿಗೆ ಕಳೆದ ಭಾನುವಾರ ವಿಶೇಷವಾದ ಔತನ ಮಾಡಿ ಸಂತೋಷಪಡಿಸಿದರು.

***

ಶ್ರೀಮನ್ ಮಹಾರಾಜರವರ ವರ್ಧಂತಿ ಉತ್ಸವಕ್ಕಾಗಿ ರಾಜಧಾನಿಗೆ ಬಂದಿದ್ದ ಯೂರೋಪ್ಯರ ಅತಿಥಿಗಳ ಪೈಕಿ ರೆಸಿಡೆಂಟರೇ ಮುಂತಾದವರು ಶನಿವಾರವೂ ಉಳಿದವರು ನೆನ್ನೆಯೂ ತಮ್ಮ ತಮ್ಮ ಸ್ಥಳಗಳನ್ನು ಕುರಿತು ಪ್ರಯಾಣ ಮಾಡಿರುತ್ತಾರೆ.

***

ಮೆ॥ ಟಿ ಆರ್ ಎ ತಂಬೂಚೆಟ್ಟಿರವರು ಕಾಲವಾದದರಿಂದ ಮೈಸೂರು ಸಂಸ್ಥಾನದ ಲೆಜಿಸ್ಲೇಟಿವ್ ಕೌನ್ಸಿಲ್ ಎಂಬ ಹೊಸ ನ್ಯಾಯವಿಧಾಯಕಸಭೆಯಲ್ಲಿ ಅವರ ಸ್ಥಾನಕ್ಕೆ ಮೆ॥ ವಿ ಎಸ್. ನರಸಿಂಹೈಯ್ಯಂಗಾರ್ರನ್ನು ಸರ್ಕಾರದವರು ನೇಮಕ ಮಾಡಿದಾರೆಂದು ಕೇಳುತ್ತೇವೆ.

***

ಮೈಸೂರು ಪಟ್ಟಣವನ್ನು ಅಭಿವೃದ್ಧಿಮಾಡುವುದಕ್ಕೆ ಏರ್ಪಾಡಾಗಿರುವ ಟ್ರಸ್ಟ್ ಬೋರ್ಡ್ ಎಂಬ ಆಫೀಸಿನಲ್ಲಿ ಸಿಬ್ಬಂದಿ ಖರ್ಚು ದುಬಾರಿಯಾಗಿದೆ ಎಂದು ಅದನ್ನು ಕಡಿಮೆಮಾಡಿ, ಮೆ॥ ಡಿ ಸೀತಾರಾಮರಾಯರನ್ನು ಬೇರೆ ಕೆಲಸಕ್ಕೆ ನೇಮಿಸಿ, ಅವರ ಸ್ಥಾನಕ್ಕೆ ಮೆ॥ ಡಿಕ್ರೂಸ್‌ಯವರನ್ನು ಬದಲಿ ಮಾಡಬೇಕೆಂದು ಸರ್ಕಾರದವರು ಯೋಚಿಸುತ್ತಿರುವಂತೆ ಕೇಳುತ್ತೇವೆ.

***

ಬೆಂಗಳೂರು ದಂಡಿನಲ್ಲಿ ಮೆ॥ ಅಬ್ದುಲ್ ಕರೀಂ ಎಂಬೊಬ್ಬ ದೊಡ್ಡ ವರ್ತಕನ ಮಗಳಾದ ೧೬ ವಯಸ್ಸಿನೊಳಗಿರುವ ಸೇಫಿಯಾಬೀ ಎಂಬ ಹುಡುಗಿಯನ್ನು ಅಬ್ದುಲ್ ರಹೀಂ ಎಂಬುವನು ಎತ್ತಿಕೊಂಡು ಹೋದನು. ಪೋಲೀಸಿನವರು ಅವನನ್ನು ಕೆಂಗೇರಿಯಲ್ಲಿ ಹಿಡಿದರು. ಮ್ಯಾಜಿಸ್ಟ್ರೇಟರು ದಯಾರ್ಹ್ಲಿಯಿಂದ ಆ ಅಪರಾಧಿಗೆ ಇದಿನೆಂಟು ತಿಂಗಳ ಕಠಿಣ ಸಜಾ ವಿಧಿಸಿದರು.

***

ಈ ಸಲ ರಾಜಧಾನಿಯಲ್ಲಿ ನಡೆದ ಪೋಲೋ ಎಂಬ ಕುದುರೇ ಚೆಂಡಾಟದ ಪಂದ್ಯಕ್ಕೆ ಕರ್ತೃ ಕೃಷ್ಣನವರು ಬಂದು ಪಂದ್ಯವನ್ನು ಆಡಿದರು. ಕಡೇ ಪಂದ್ಯದಲ್ಲಿ ಕಳೆದ [illegible]ವಾರ ಸಾಯಂಕಾಲ ಶ್ರೀಮನ್ ಮಹಾರಾಜರವರೂ ಯುವರಾಜರವರೂ ಸೇರಿದ್ದ ದರ್ಬಾರ್ [illegible] ಕೃಷ್ಣನವರೇ ಜಯಪ್ರದವನ್ನು ಹೊಂದಿ, ಈ ಪಂದ್ಯಕ್ಕೆ ಇಟ್ಟಿದ್ದ ಬಹುಮಾನದ ಬೆಳ್ಳಿ ಬಟ್ಟಲನ್ನು ಪಡೆದು ಇರುತ್ತಾರೆ.

***

ಯಳಂದೂರು ಜಹಗೀರಿಗೆ ಸೇರಿದ ಬಿಳಿಗಿರಿರಂಗನ ಬೆಟ್ಟದ ಮೇಲೆ ಹುಲಿ ಚಿರತೆಗಳ ಕಾಟ ಬಹಳವಾಗಿತ್ತು. ಅಲ್ಲಿನ ಒವರ್ಸಿಯರಾದ ಮೆ॥ ಡೀ ಎಂಬ ಸಾಹೇಬರು ಒಂದು ವಾರದೊಳಗಾಗಿ ಒಂದು ಹುಲಿ, ಒಂದು ಹುಲಿನಾರಿ, ಒಂದು ಚಿರತೆ, ಈ ಮೂರನ್ನು ಕೊಂದು, ಅವುಗಳ ಬಾಧೆಯನ್ನು ನಿವಾರಣೆ ಮಾಡಿದರು. ಜಹಗೀರುದಾರರು ಅವರ ಸಾಹಸವನ್ನು ಮೆಚ್ಚಿ ಅವರಿಗೆ ಒಳ್ಳೆ ಬಹುಮಾನವನ್ನು ಕೊಡಿಸಿರುತ್ತಾರೆಂದು ತಿಳಿಯುವುದು.

***

ಒಬ್ಬ ಬಾತ್ಮೀದಾರರಿಂದ — ಅರಸೀಕೆರೆ ತಾಲ್ಲೂಕು ಜಾವಗಲ್ ಗ್ರಾಮದಲ್ಲಿ ತಾ ೨೬ ನೇ ಬುಧವಾರ ರಾತ್ರಿ ೧೦ ಗಂಟೆ ಸಮಯದಲ್ಲಿ ಮರಿಯನೆಂಬವನ ಮನೆಗೆ ಬೆಂಕಿ ಬಿತ್ತು. ಆಗ ಕೆಲವರು ಮಲಗಿದ್ದರು. ಕೆಲವರು ಕರೀಹಬ್ಬವಾದ್ದರಿಂದ ಊರು ಮುಂದೆ ಸೇರಿದ್ದರು. ಬೆಂಕಿ ಬಿದ್ದ ಕೂಡಲೆ ಸಕಲರೂ ಸೇರಿ ಒಂದು ಗಂಟೆಯಲ್ಲಿ ಆರಿಸಿದರು. ಆಗ ಬಹಳ ಧೈರ್ಯದಿಂದ ಕೆಲಸ ಮಾಡಿದ ಕೇಶವ, ತಿಪ್ಪ ಇವರ ಸಾಹಸವು ವಿಶೇಷವಾಗಿದೆ.

***

ರಾಜಧಾನಿಯಲ್ಲಿರುವ ಶಿವರಾಮಪೇಟೆ ಮತ್ತು ಕುರುಬರ ಪಾಠಶಾಲೆಯ ಉಪಾಧ್ಯಾಯರುಗಳನ್ನು ಗವರ್ನಮೆಂಟ್ ನೌಕರರಂತೆ ಎಣಿಸಿ, ಅವರ ಸರ್ವಿಸನ್ನು ಪೆನ್ಷನಿಗೆ ಯೋಗ್ಯವಾದದ್ದೆಂದು ತೀರ್ಮಾನ ಮಾಡಿದ್ದಲ್ಲದೆ ಸರ್ಕಾರದವರು ಈ ಪಾಠಶಾಲೆಯನ್ನು ಬೇರೆ ಕಡೆ ಕಟ್ಟುವುದಕ್ಕೂ ಸದ್ಯದಲ್ಲಿ ಈಗಿರುವುದನ್ನು ಬಿಡಾವಣೆ ಮಾಡುವುದಕ್ಕೂ ಕೂಡಲೇ ನಕ್ಷೆಗಳನ್ನು ಕಳುಹಿಸಬೇಕೆಂದು ಇಂಜನಿಯರ್ ಇಲಾಖೆಗೆ ಹುಕುಂ ಕೊಟ್ಟಿದಾರೆ.

***

ರಾಜಧಾನಿಗೆ ವಿದ್ಯುಚ್ಛಕ್ತಿಯ ದೀಪಗಳನ್ನು ಹಚ್ಚುವುದಕ್ಕೆ ಸರ್ಕಾರದವರು ಏರ್ಪಾಡು ಮಾಡುತ್ತಿದಾರೆ. ಇಲ್ಲಿನ ಕರ್ಜನ್ ಪಾರ್ಕಿನಲ್ಲಿ ಪೂರ್ವದ್ವಾರದ ಕೋಟೆ ಗೋಡೆಯ ಬಳಿ ವಿದ್ಯುಚ್ಛಕ್ತಿಯ ಮನೆಯನ್ನು ಕಟ್ಟಲು ಬೆಂಗಳೂರಿಂದ ಮೆ॥ ರಂಗರಾವ್ ನಾಯುಡುಯವರು ಕಂಟ್ರಾಕ್ಟು ವಹಿಸಿಬಂದು ಕಾಮಗಾರಿ ಪ್ರಾರಂಭಿಸಿರುತ್ತಾರೆ. ವಿದ್ಯುಚ್ಛಕ್ತಿಯ ಇಲಾಖಾ ಅಸಿಸ್ಟೆಂಟರಾದ ಮೆ॥ ದ್ವಾರಕಾನಾಥರವರು ಇಲ್ಲೇ ಇದ್ದುಕೊಂಡು, ಅದರ ಮೇಲ್ವಿಚಾರಣೆಯನ್ನು ನೋಡಿಕೊಳ್ಳುತ್ತಿದಾರೆ.

***

ಕಳೆದ ೧೯೦೬ನೆ ಇಸವಿ ಪಂಡರಾಪುರದಲ್ಲಾದ ವಸ್ತುಪ್ರದರ್ಶನಶಾಲೆಗೆ ಬೆಂಗಳೂರು ಸಿಟಿ ದೊಡ್ಡಪೇಟೆ ಜಿ ಎಸ್. ಶಿವರುದ್ರಪ್ಪನವರು ಧಾರೆಸ್ಟು ಸಾಮಾನುಗಳಲ್ಲಿ ಉತ್ಕೃಷ್ಟವಾದ ತರಹವಾರಿ ಔಷಧಿ ಸಾಮಾನುಗಳು ಮತ್ತು ಗಂಧದ ಬಿಲ್ಲೆ, ಗಂಧ, ರಬಂಮಾರ್ ಉತ್ತಮವಾದ ಊದಬತ್ತಿಗಳು ವಗೈರೆ ಕಳುಹಿಸಿಕೊಟ್ಟದ್ದಕ್ಕೆ ಇವರಿಗೆ ಕೃಗಾರಿಕೆ ಪ್ರೋತ್ಸಾಹಕಾರ್ಥವಾಗಿ ಒಂದು ಬೆಳ್ಳಿಯ ಮೆಡಲ್ ಮತ್ತು ಒಂದು ಸರ್ಟಿಫಿಕೇಟ್ ಸಹಾ ಬಹುಮಾನ ದಯಪಾಲಿಸಿರುತ್ತಾರೆಂದು ಒಬ್ಬ ಬಾತ್ಮೀದಾರರು ಬರೆಯುತ್ತಾರೆ.

***

ಹೈದರಾಬಾದ್ ನೈಜಾಮರವರ ಏಡಿಕಾಂಗರಾದ ಒಬ್ಬ ನವಾಬರು ನಮ್ಮ ಮಹಾರಾಜರವರ ಅತಿಥಿಗಳಾಗಿ ಕಳೆದ ವಾರ ರಾಜಧಾನಿಗೆ ಬಂದು, ಇಲ್ಲಿನ ಮಹಮದೀಯರನ್ನು ಪ್ರೋತ್ಸಾಹಪಡಿಸಿ, ಅವರಿಂದ ಒಂದು ಮಹಮದೀಯ ಬಾಲಿಕಾ ಪಾಠಶಾಲೆಯನ್ನೂ ಒಂದು ವಾಚಕ ಮಂದಿರವನ್ನೂ ಸ್ಥಾಪನಮಾಡಿಸಿದ್ದಲ್ಲದೆ ಮೊನ್ನೆ ಮಂಗಳವಾರ ಸಾಯಂಕಾಲ ಇಲ್ಲಿನ ಟೌನ್ ಹಾಲ್ ಬಂಗಲೆಯಲ್ಲಿ ಒಂದು ಸಭೆಯನ್ನು ಕೂಡಿಸಿ, ಮಹಮದೀಯ ಬಾಲಿಕಾ ವಿದ್ಯಾಭ್ಯಾಸವನ್ನೂ ಸಾಂಘಿಕ ಸ್ಮರಣೆಯನ್ನೂ, ಐಕಮತ್ಯಾದಿಗಳನ್ನೂ ಕುರಿತು ಉಪನ್ಯಾಸ ಮಾಡಿದರು. ದಿವಾನ್ ಮೆ॥ ವಿ ಪಿ ಮಾಧವರಾಯರು ಸಭಾಧ್ಯಕ್ಷತೆಯನ್ನು ವಹಿಸಿ, ಮಹಮದೀಯರ ಪ್ರಯತ್ನಗಳನ್ನು ಬಹಳವಾಗಿ ಕೊಂಡಾಡಿ, ಗೌರ್ನಮೆಂಟಿನಿಂದ ಆಗಬೇಕಾದ ಸಹಾಯ ಸಂಪತ್ತನ್ನು ಮಾಡಿಕೊಡುತ್ತಾ ಬರುವುದಾಗಿ ತಿಳಿಸಿದರು.

***

ಒಬ್ಬ ಬಾತ್ಮೀದಾರರು ಬರೆಯುವುದು.—ಕಳೆದ ೨೨ ನೇ ತಾ, ಶನಿವಾರ ನಮ್ಮ ಸಂಸ್ಥಾನದ ಮಹಾರಾಜಾ ಶ್ರೀ ಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರವರ ವರ್ಧಂತಿಯಾದ್ದರಿಂದ ಬಾಗೇಪಲ್ಲಿ ತಾಲ್ಲೂಕು ತೋಳಪಲ್ಲಿ ಗ್ರಾಮದ ಗೌರ್ನಮೆಂಟ್ ಸ್ಕೂಲ್ ಕಟ್ಟಡವು ನೇತ್ರಾನಂದಕರವಾಗಿ ಅಲಂಕರಿಸಿ ಗ್ರಾಮದ ಸಮಸ್ತ ಪ್ರಜೆಗಳೂ ಇಲ್ಲಿ ಸಭೆ ಸೇರಲು ಇಲ್ಲಿನ ಮೆ॥ ಎ ವೆಂಕಟರಾಯರು ಸ್ಕೂಲ್ ವಿದ್ಯಾರ್ಥಿಗಳ ಮೂಲಕ ಕೂಡಿಸಿದ ಚಂದಾ ಮೊಬಲಿನಿಂದ ಗಂಧ ಪುಷ್ಪಾದಿಗಳನ್ನು ಸಿದ್ಧಪಡಿಸಿ ಮಹಾರಾಜರವರ ಶ್ರೇಯಃಪ್ರಾರ್ಥನಾರೂಪವಾಗಿಯೂ, ಪ್ರಭುಗಳವರ ಗುಣಕಥನದ ವಿಷಯವಾಗಿಯೂ ಬಹು ಸ್ವಾರಸ್ಯವಾದ ಉಪನ್ಯಾಸವನ್ನು ಮಾಡಿದರು. ಸ್ಕೂಲಿನ ಬಾಲಕರಿಂದ ಮಹಾರಾಜರವರ ಶ್ರೇಯೋಭಿವೃದ್ಧಿಯ ವಿಷಯವಾದ ಗಾನವು ನಡೆದನಂತರ ಸಭಿಕರಿಗೆಲ್ಲಾ ಗಂಧ ಪುಷ್ಪ ತಾಂಬೂಲಾದಿಗಳು ಹಂಚಲ್ಪಟ್ಟವು. ವಿದ್ಯಾರ್ಥಿಗಳಿಗೆ ಸಕ್ಕರೇ ಮೊದಲಾದ ತಿಂಡಿಯು ಹಂಚಿದ ಬಳಿಕ ಸಭೆಯು ಬರಖಾಸ್ತಾಯಿತು.

***

ಕಳೆದ ಗುರುವಾರ ರಾತ್ರಿ ಯೂರೋಪಿಯನ್ ಅತಿಥಿಗಳಿಗೆಲ್ಲಾ ಅಲ್ಲಿನ ಗವರ್ನಮೆಂಟ್ ಹೌಸ್ ಬಂಗಲೆಯಲ್ಲಿ ಶ್ರೀಮನ್ ಮಹಾರಾಜರವರ ವರ್ಧಂತಿ ಕಟ್ಲೆಯ ಔತನವು ನಡೆಯಿತು. ಸುಮಾರು ೧೫೦ ಮಂದಿ ಸರ್ದಾರರೂ ದೊರೆಸಾನಿಗಳೂ ಸುಖಭೋಜನಮಾಡಿದರು. ಊಟವಾದ ಮೇಲೆ ಶ್ರೀಮನ್ಮಹಾರಾಜರವರು ದಿವಾನರೇ ಮುಂತಾದವರೊಡನೆ ಸಭಾ ಮಂದಿರಕ್ಕೆ ಚಿತ್ತೈಸಿದರು. ಬ್ರಿಟಿಷ್ ರೆಸಿಡೆಂಟರವರು ಶ್ರೀಮನ್ಮಹಾರಾಜರವರ ಅತಿಥಿಸತ್ಕಾರಾದಿಗಳನ್ನು ವಿವರಿಸಿ, ಅವರಿಗೆ ಜಿ ಸಿ. ಎಸ್ ಐ ಎಂಬ ಶ್ರೇಷ್ಠತರವಾದ ಬಿರುದು ಬಂದದ್ದನ್ನೂ, ಹೊಸ ಅರಮನೆ ಕಟ್ಟಿ ಮುಕ್ತಾಯವಾದದ್ದನ್ನೂ, ಸುಮಾರಿಕಾಲತ್ತನ್ನು ವಜಾ ಮಾಡಿದ್ದನ್ನೂ ಕುರಿತು ಪ್ರಸ್ತಾಪಮಾಡಿ, ಸರ್ವೆ ಕಮಿಷನರಾದ ಕರ್ನಲ್ ಗ್ರಾಂಟ್‌ಯವರ ಕೆಲಸದಿಂದ ನಿವೃತ್ತರಾಗುವರೆಂಬ ಸಂಗತಿಯನ್ನು ಸೂಚಿಸಿ, ಅವರು ನಡೆಸಿರುವ ಕಾರ್ಯಗಳನ್ನು ಸ್ತೋತ್ರಾರ್ಹವಾದವುಗಳೆಂದು ವಿವರಿಸಿ ಕಡೆಗೆ, ಶ್ರೀಮನ್ ಮಹಾರಾಜರವರಿಗೆ ಆಯುರಾರೋಗ್ಯಾದಿಗಳನ್ನು ಬಯಸಿದರು. ತರುವಾಯ ಶ್ರೀಮನ್ ಮಹಾರಾಜರವರು ರೆಸಿಡೆಂಟರನ್ನೂ ಸರ್ದಾರರನ್ನೂ ಗೌರವಿಸಿ, ನಿಗಳನ್ನೂ ಕುರಿತು ಈ ವಾರವೆಲ್ಲಾ ಅವರಿಗೆ ತಾವು ಮಾಡಿದ ಆತಿಥ್ಯವು ಎಲ್ಲಾ ಭಾಗಗಳಲ್ಲೂ ಅನುಕೂಲವಾಗಿಯೂ ಸಂತೋಷಪ್ರದವಾಗಿಯೂ ಇತ್ತೆಂದು ನಿರೀಕ್ಷಿಸುವುದಾಗಿಯೂ, ಈ ಸಲ ರೆಸಿಡೆಂಟರು ದಂಪತ್ಯಸ್ಥರಾಗಿ ದಯಮಾಡಿದ್ದು ತುಂಬಾ ಹರ್ಷಪ್ರದವಾಗಿದೆ ಎಂತಲೂ, ಬಹಳ ನಂಬಿಗಸ್ತರಾಗಿಯೂ ತುಂಬಾ ಸಮರ್ಥರಾಗಿಯೂ ಬಹುಕಾಲದಿಂದ ಈ ಸಂಸ್ಥಾನದಲ್ಲಿ ನೌಕರಿಮಾಡಿದ ಕರ್ನಲ್ ಗ್ರಾಂಟ್‌ಯವರೂ ಮೆ॥ ವಿನಿಕೊಂಬೆಯವರೂ ಕೆಲಸದಿಂದ ನಿವೃತ್ತರಾಗುವ ಭಾಗದಲ್ಲಿ ತುಂಬಾ ವ್ಯಸನಪಡುತ್ತೇವೆಂತಲೂ, ಅವರು ಚಿರಕಾಲ ಆಯುರಾರೋಗ್ಯಾದಿಗಳನ್ನು ಪಡೆದು ತಮ್ಮ ಮುಂದಿನ ಕಾಲವನ್ನು ಸುಖವಾಗಿ ಕಳೆಯಲೆಂದು ಕೋರುತ್ತೇವೆಂತಲೂ ಅಪ್ಪಣೆಕೊಡಿಸಿದರು.

ಮೈಸೂರು ಗೆಜೆಟ್ ಸಂಗ್ರಹ

ಶ್ರೀನಿ... ಪುರದ ತಾಲ್ಲೂಕ್ ಅಮಲ್ದಾರ್ ಮ॥ ಎಸ್ ವೆಂಕ ಟರಮಣಶಾಸ್ತ್ರಿ ಅವರಿಗೆ ಕೊಟ್ಟಿರುವ ಎರಡು ತಿಂಗಳ ಪ್ರಿವಿಲೇಜ್ ರಜಾವನ್ನು ಇನ್ನು ... ದಿನಗಳಿಗೆ ಜಾಸ್ತಿ ಮಾಡಿದೆ.

ಕೋಲಾರ್ ಚಿನ್ನದ ಗಣಿಗಳ ಚೀಫ್ ಸೂಪ್ರಿಂಟೆಂಡ್ ಮ॥ ಸಿಡ್ನಿ ಎಂ. ಪ್ರಿಚರ್ಡ್ ಯವರನ್ನು ಕೋಲಾರ್ ಚಿನ್ನದ ಗಣಿಗಳ ಪೋಲೀಸ್ ಅ॥ ಸೂಪರಿಂಟೆಂಡೆಂಟರಾಗಿ ನೇಮಿಸಿದೆ.

ಡೆಪ್ಯುಟಿ ಕಮೀಷನರ್ ಮ॥ ಎಚ್ ಎಚ್ ಸ್ಪಾರ್ಕ್ಸ್ ಯವರನ್ನು ಜೂಲೈ ೧ ರ ಲಾಗಾಯತು ಎಕ್ಸೈಸ್ ಕಮೀಷನರಾಗಿಯೂ, ರಿಜಿಸ್ಟ್ರೇಷನ್ ಇಲಾಖೆ ಇನ್ಸ್‌ಪೆಕ್ಟರ್ ಜನರಲ್‌ರಾಗಿಯೂ, ಸ್ಟಾಂಪು ಕಮೀಷನರಾಗಿಯೂ ನೇಮಕ ಮಾಡಿದೆ.

ಬೆಂಗಳೂರು ಡಿವಿಜನ್ ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಕೋರ್ಟ ನ್ನು ಜೂಲೈ ೧ ರಿಂದ ವಜಾ ಮಾಡಿರುವ ಕಾರಣ ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಜಡ್ಜರಾದ ಮ॥ ಟಿ ಪರಮಶಿವ ಐಯ್ಯರವರನ್ನು ಮೈಸೂರು ಡಿವಿಜನಿಗೆ ನೇಮಿಸಲಾಗಿದೆ

ಮ॥ ಎ ಕೋದಂಡಪಾಣಿ ಮೊದಲಿಯಾರ್ರನ್ನೂ ಮ॥ ಬಿ ಕೃಷ್ಣರಾಯರನ್ನೂ ಬೆಂಗಳೂರು ಮತ್ತು ಮೈಸೂರು ಪಟ್ಟಣಗಳ ಹೆಲ್ತ್ ಆಫೀಸರಾಗಿ ನೇಮಕ ಮಾಡಿದೆ

ಮ॥ ಮಿರ್ಜಾ ಮಹಮದ್ ಇಸ್ಮೈಲ್ ಯವರನ್ನೂ ಮ॥ ಜೆ. ಬಿ ಕಬ್ಲಿಕರ್ ಯವರನ್ನೂ ಮೈಸೂರು ಸಿವಿಲ್ ಸರ್ವಿಸ್ ಪ್ರೊಬೇಷನರಿ ಅ॥ ಕಮೀಷನರಾಗಿ ಜೂನ್ ೧ ರ ಲಾಗಾಯತು ನೇಮಿಸಿದೆ

ಪ್ರೊಬೇಷನರಿ ಅಸಿಸ್ಟೆಂಟ್ ಅ॥ ಕಮೀಷನರಾಗಿರುವ ಮ॥ ಬಿ ಭೀಮರಾಯರನ್ನೂ ಮ॥ ಎಂ ಸರ್ದಾರ್ ಅಲ್ಲಿಯವರನ್ನೂ ಜೂನ್ ೧ ರಿಂದ ಅ॥ ಕಮೀಷನರಾಗಿ ನೇಮಕ ಮಾಡಿದೆ

ಕರ್ನಲ್ ಜೆ ಪಿ ಗ್ರಾಂಟ್‌ಯವರು ಜೂಲೈ ೧ ರಿಂದ ಪೆನ್ಷನ್ ಪಡೆಯುವರಾದ್ದರಿಂದ ಆ ತನುವಾಯ ಸರ್ವೆ ಮತ್ತು ಸೆಟ್ಲಮೆಂಟ್ ಕಮಿಷನರ ನೌಕರಿಯನ್ನು ವಜಾ ಮಾಡಲಾಗುವುದು. ಸರ್ವೆ ಸೆಟ್ಲ ಮೆಂಟ್ ಸೂಪರಿಂಟೆಂಡೆಂಟರು ಇನಾಂ ಇಲಾಖೆಯ ಚಾರ್ಜನ್ನು ವಹಿಸತಕ್ಕದ್ದು

ಸೀನಿಯರ್ ಅ॥ ಕಮೀಷನರ್ ಮ॥ ಕೆ ಆರ್. ಶ್ರೀನಿವಾಸೈಯ್ಯಂಗಾರ್ರನ್ನು ಜೂಲೈ ೧ ರ ಲಾಗಾಯತು ೩ ನೆ ಕ್ಲಾಸ್ ಡೆಪ್ಯುಟಿ ಕಮೀಷನರಾಗಿ ನೇಮಿಸಿದೆ

ಚಿತ್ರದುರ್ಗದ ಡಿಸ್ಟ್ರಿಕ್ಟ್ ಸೀನಿಯರ್ ಅ॥ ಕಮೀಷನರ್ ಮ॥ ಬಿ ಜೆ ಕುಮಾರಸ್ವಾಮಿ ನಾಯಕರನ್ನು ಮ॥ ವೆಡರ್‌ಬರ್ನ್‌ಯವರು ರಜದಿಂದ ವಾಪಸು ಬರುವ ತನಕ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಕಡೂರು ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮೀಷನರ್ ಮತ್ತು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೇಮಕ ಮಾಡಿದೆ

ಮುಂದೆ ಹೇಳುವ ಅ॥ ಕಮೀಷನರುಗಳ ವರ್ಗಾವರ್ಗಿ ಹುಕುಂ ಮಾಡಲ್ಪಟ್ಟಿದೆ. — (೧) ಆಕ್ಟಿಂಗ್ ಅ॥ ಕಮೀಷನರ್ ಮ॥ ಟಿ ಧರ್ಮ ರಾಜಚೆಟ್ಟಿಯವರು ಹಾಸನದಿಂದ ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆ ಸಬ್ ಡಿವಿಜನಿಗೆ, (೨) ಆಕ್ಟಿಂಗ್ ಅ॥ ಕಮೀಷನರ್ ಮ॥ ಎ. ಕೃಷ್ಣಸ್ವಾಮೈಯ್ಯಂಗಾರ್ರು ಶಿವಮೊಗ್ಗೆಯಿಂದ ಹಾಸನದ ಡಿಸ್ಟ್ರಿಕ್ಟ್ ಖಜಾನೆಯ ಛಾರ್ಜಿಗೆ

ಮುಂದೆ ಹೇಳುವ ಮುನ್ಸಿಫರುಗಳ ವರ್ಗಾವರ್ಗಿಯು ಜೂಲೈ ೧ ರಿಂದ ಜಾರಿಯಲ್ಲಿ ಬರತಕ್ಕದ್ದು — ಮ॥ ಓ ವೆಂಕೋಬರಾಯರು ಮಧುಗಿರಿಯಿಂದ ಚಿಕ್ಕಬಳ್ಳಾಪುರಕ್ಕೆ ಮ॥ ಪಿ ಮಹದೇವೈಯ್ಯನವರು ಚಿಕ್ಕಬಳ್ಳಾಪುರದಿಂದ ಚಿಕ್ಕಮಗಳೂರಿಗೆ, ಮ॥ ಪಿ. ಎ ಶಿವಪ್ರಕಾಶಂ ಪಿಳ್ಳೆಯವರು ದೊಡ್ಡಬಳ್ಳಾಪುರದಿಂದ ಮಧುಗಿರಿಗೆ ಮ॥ ಎನ್ ನರಸಿಂಹೈಯ್ಯಂಗಾರ್ರು ಯಳಂದೂರಿಂದ ಹಾಸನಕ್ಕೆ

ಮುಂದೆ ಹೇಳುವ ಜುಡಿಷಲ್ ಅಧಿಕಾರಿಗಳ ವರ್ಗಾವರ್ಗಿಯು ಜೂಲೈ ೧ ರಿಂದ ಜಾರಿಗೆ ಬರತಕ್ಕದ್ದು — ಸಬ್ ಜಡ್ಜಿ ಮ॥ ಮಿರ್ಜಾ ಹಂಜಾ ಹುಸ್ಸೇನರವರು ಮೈಸೂರಿಂದ ಶಿವಮೊಗ್ಗೆಗೆ, ಸಬ್ ಜಡ್ಜಿ ಮ॥ ಬಿ. ಎಸ್. ಕೃಷ್ಣಸ್ವಾಮಿ ಐಯ್ಯಂಗಾರ್ರು ಶಿವಮೊಗ್ಗೆಯಿಂದ ಮೈಸೂರಿಗೆ, ಚಿಕ್ಕಮಗಳೂರು ಸಬ್ ಜಡ್ಜಿ ಮ॥ ಡಿ ಎಂ ನರಸಿಂಗರಾಯರು ರೆವಿನ್ಯೂ ಇಲಾಖೆಗೆ

ಮುಂದೆ ಹೇಳುವ ಅ॥ ಕಮೀಷನರುಗಳ ವರ್ಗಾವರ್ಗಿ ಹುಕುಂ ಮಾಡಲ್ಪಟ್ಟಿದೆ.—ಮ॥ ಬಿ ಶ್ರೀನಿವಾಸರಾಯರು ಶಿವಮೊಗ್ಗೆಯಿಂದ ಮೈಸೂರು ಸಿಟಿ ಮ್ಯಾಜಿಸ್ಟ್ರೇಟ್ ಕೋರ್ಟಿನ ಛಾರ್ಜಿಗೆ, ಮ॥ ಬಿ ಕೃಷ್ಣರಾಯರು ಕೃಷ್ಣರಾಜಪೇಟೆಯಿಂದ ಫ್ರೆಂಚ್ ರಾಕ್ಸ್ ಸಬ್ ಡಿವಿಜನಿಗೆ, ಮ॥ ಟಿ. ವೆಂಕೋಬರಾಯರು ಫ್ರೆಂಚ್ ರಾಕ್ಸಿನಿಂದ ಕೋಲಾರ್ ಡಿಸ್ಟ್ರಿಕ್ಟ್ ಖಜಾನೆ ಛಾರ್ಜಿಗೆ, ಮ॥ ಸರ್ದಾರ್ ಅಲ್ಲಿಯವರು ಕೋಲಾರದಿಂದ ಚಿತ್ರದುರ್ಗದ ಡಿಸ್ಟ್ರಿಕ್ಟ್ ಎಕ್ಸೈಸ್ ಆಫೀಸ್ ಛಾರ್ಜಿಗೆ, ಮ॥ ಕೆ ಶ್ರೀಕಂಠೈಯ್ಯನವರು ಚಿತ್ರದುರ್ಗದಿಂದ ಕಡೂರ್ ಡಿಸ್ಟ್ರಿಕ್ಟ್ ಖಜಾನೆಯ ಛಾರ್ಜಿಗೆ, ಆಕ್ಟಿಂಗ್ ಅ॥ ಕಮೀಷನರ್ ಮ॥ ಎಂ ಲಕ್ಷ್ಮೀಪತಿಶಾಸ್ತ್ರಿಯವರು ಕಡೂರಿನಿಂದ ಹಾಸನ ಡಿಸ್ಟ್ರಿಕ್ಟ್ ಚನ್ನರಾಯಪಟ್ಟಣದ ಸಬ್ ಡಿವಿಜನ್ ಛಾರ್ಜಿಗೆ, ಮ॥ ಎಂ. ಎ. ನಾರಣೈಯ್ಯಂಗಾರ್ರು ಹಾಸನದಿಂದ ಸಕಲೇಶಪುರದ ಸಬ್ ಡಿವಿಜನ್ ಛಾರ್ಜಿಗೆ; ಮ॥ ನರಸಿಂಗರಾವ್ ಪೂರ್ಣಯ್ಯನವರು ಕೋಲಾರದಿಂದ ಹಾಸನ ಡಿಸ್ಟ್ರಿಕ್ಟ್ ಖಜಾನೆಯ ಛಾರ್ಜಿಗೆ, ಮ॥ ಬಿ ಎಂ. ನರಸಿಂಗರಾಯರು ಕಡೂರು ಡಿಸ್ಟ್ರಿಕ್ಟಿನಲ್ಲಿ ರೆವಿನ್ಯೂ ಜನರಲ್ ಡ್ಯೂಟಿಗೆ, ಮ॥ ಕೆ ಮೈಲಾರರಾಯರು ಕಡೂರು ಡಿಸ್ಟ್ರಿಕ್ಟ್ ಜನರಲ್ ಡ್ಯೂಟಿಯಿಂದ ಬೆಂಗಳೂರು ರೆವಿನ್ಯೂ ಜನರಲ್ ಸೆಕ್ರೆಟರಿಯಟ್ಟಿನಲ್ಲಿ ಗವರ್ನಮೆಂಟ್ ಅ॥ ಸೆಕ್ರೆಟರಿ ಕೆಲಸಕ್ಕೆ

ಡೆಪ್ಯುಟಿ ಕಮೀಷನರ್ ಮ॥ ದಳವಾಯಿ ದೇವರಾಜೇ ಅರಸಿನವರನ್ನು ಕಡೂರಿನಿಂದ ಬೆಂಗಳೂರು ಡಿಸ್ಟ್ರಿಕ್ಟಿಗೆ ವರ್ಗಮಾಡಿದೆ.

ಅ॥ ಇಂಜನಿಯರ್ ಮ॥ ಕೆ ಅನಂತಾಚಾರ್ರನ್ನು ಮಾಲೂರಿನಿಂದ ಹಾಸನ ಡಿವಿಜನಿಗೆ ವರ್ಗಮಾಡಿದೆ.

ಅರಮನೆ ಡಿವಿಜನ್ ಎಗ್ಸಿಕ್ಯುಟಿವ್ ಇಂಜನಿಯರ್ ಮ॥ ಬಿ ಪಿ ರಾಘವಲುನಾಯ್ಡುಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದೂವರೆ ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಎಗ್ಜಿಕ್ಯುಟಿವ್ ಇಂಜನಿಯರ್ ಮ॥ ಸಿ ಮಾಧವರಾಯರು ಅವರ ರಜಾ ಪೂರೈಸುವ ತನಕ ಅರಮನೆ ಡಿವಿಜನ್ ಛಾರ್ಜನ್ನು ವಹಿಸತಕ್ಕದ್ದು

ಗಣಿಗಳ ಸರ್ವೆಯರ್ ಮತ್ತು ಇನ್ಸ್‌ಪೆಕ್ಟರ್ ಮ॥ ಎ ಟಿ ಸೇಟ್ಲರ್ ಯವರಿಗೆ ಕೊಟ್ಟಿರುವ ಪ್ರಿವಿಲೆಜ್ ರಜವನ್ನು ಇನ್ನೂ ಒಂದು ತಿಂಗಳು ಜಾಸ್ತಿ ಮಾಡಿದೆ

ಮುಂದೆ ಹೇಳುವವರನ್ನು ರೆವಿನ್ಯೂ ಪ್ರೊಬೇಷನರಾಗಿ ನೇಮಕ ಮಾಡಿದೆ.—ಲಿಂಗೇಗೌಡ ಬಾಡಾಮಿಯವರು ಬೆಂಗಳೂರಿಗೆ ಅಬ್ದುಲ್ ಖಾದರ್ ಯವರು ಚಿತ್ರದುರ್ಗಕ್ಕೆ, ಹೈದರ್ ಅಲ್ಲಿ ಖಾನ್ ಯವರು ಮೈಸೂರಿಗೆ, ಮೊಹದೀನ್ ಷರೀಫ್ ಯವರು ಹಾಸನಕ್ಕೆ, ಟಿ ಹನುಮಂತರಾಯರು ಹಂಗಾಮಿಯಾಗಿ ರೆವಿನ್ಯೂ ಕಮೀಷನರ ಆಫೀಸಿಗೆ.

ಇಂಡಿಯಾ ದೇಶದ ವೃತ್ತಾಂತಗಳು

ಹೈದರಬಾದ್ ಗವರ್ನಮೆಂಟಿನವರು ನೈಜಾಮಾಬಾದ್ ಎಂಬ ಹೊಸ ಪಟ್ಟಣದಲ್ಲಿ ಕೈಗಾರಿಕೆಗಳನ್ನು ಕಲಿಸುವಂಥಾ ಒಂದು ಭಾರಿ ಪಾಠಶಾಲೆಯನ್ನು ಸ್ಥಾಪಿಸಿದಾರೆ.

❖❖❖

ಕಾವೇರಿಪಟ್ಟಣಗರದ ರಾಜಾ ತಿರುಮಲರಾಜ ಬಹದೂರ್ ಯವರು ಪುತ್ತೂರಿನಲ್ಲಿ ಕಾಲವಾದರೆಂದು ತಿಳಿಯುತ್ತದೆ ಅವರಿಗೆ ಒಬ್ಬ ಪತ್ನಿಯೂ ಇಬ್ಬರು ಗಂಡು ಮಕ್ಕಳೂ ಇರುತ್ತಾರೆ

❖❖❖

ವೈಸ್‌ರಾಯರವರ ಪತ್ನಿಯಾದ ಲೇಡಿ ಮಿಂಟೋರವರು ಶ್ರೀಮಯಿಂದ ಪರಿವಾರ ಸಹಿತ ಈ ತಿಂಗಳು ೧೯ ಕ್ಕೆ ಬೊಂಬಾಯಿಗೆ ಬಂದಿಳಿದು, ಸೀದಾ ಸಿಂಲಾ ಪಟ್ಟಣವನ್ನು ತಲಪುವವರಾಗಿದಾರೆ.

❖❖❖

ನಾಗಪಟ್ಟಣದಲ್ಲಿರುವ ರೈಲ್ವೆ ವರ್ಕ್‌ಷಾಪ್ ಎಂಬ ಕಾರ್ಖಾನೆಯನ್ನು ತೆಗೆದುಹಾಕಿ ತಿರುಚನಾಪಳ್ಳಿಯಲ್ಲಿ ಹೊಸದಾಗಿ ಈಗಿನ ಕಾಲಕ್ಕೆ ತಕ್ಕಂತೆ ಏರ್ಪಡಿಸಿ ಕಟ್ಟುತ್ತಾರೆ ಇದಕ್ಕೆ ಸುಮಾರು ೩೫ ಲಕ್ಷ ರೂಪಾಯಿ ತಗಲುವುದು.

❖❖❖

ನೀಲಗಿರಿ ಬೆಟ್ಟದ ಹತ್ತಿರ ಇರುವ ಕೂನೂರಿನಲ್ಲಿ ಒಂದು ಆಸ್ಪತ್ರೆಯನ್ನು ಪ್ರಾರಂಭಿಸಿ, ನಾಯಿ ನರಿ ಕಚ್ಚಿದ ರೋಗಿಗಳಿಗೆ ಚಿಕಿತ್ಸೆ ಮಾಡುತ್ತಾರಷ್ಟೆ. ಈಗಾಗಲೇ ಈ ಆಸ್ಪತ್ರೆಯಲ್ಲಿ ೨೦ ಮಂದಿ ಚಿಕಿತ್ಸೆ ಮಾಡಿಸಿಕೊಂಡು ಗುಣಪಟ್ಟರೆಂದು ತಿಳಿದುಬಂದಿದೆ

❖❖❖

ನಾಗಪುರದಲ್ಲಿ ನೀರಿನಿಂದ ಮಂಜಿನ ಗಡ್ಡೆಯನ್ನು ತಯಾರುಮಾಡುವ ಕಾರ್ಖಾನೆಯಲ್ಲಿ ಕಳೆದ ವಾರ ಒಂದು ಅನಾಹುತ ನಡೆದು, ಅದರಲ್ಲಿ ಕೆಲಸಮಾಡುತ್ತಿದ್ದ ನೌಕರರ ಪೈಕಿ ಹದಿನೇಳು ಮಂದಿಗೆ ಪೂರಾ ಗಾಯಗಳಾದವು ಆ ಪೈಕಿ ೪—೦೦ ಜನರು ಈಚೆಗೆ ತೀರಿ ಹೋದರು

❖❖❖

ಮದರಾಸು ಪಟ್ಟಣದಲ್ಲಿ ದಿವಾಳಿಯಾದ ಅರ್ಬತ್ನಾಟ್ ಕಂಪನಿಯ ಮುಖಂಡರಾಗಿದ್ದ ಸರ್ ಜಾರ್ಜ್ ಅರ್ಬತ್ನಾಟ್ ಯವರ ಮೇಲೆ ಕಂಪನಿಯ ಹಣವನ್ನು ದುರ್ವಿನಿಯೋಗ ಮಾಡಿ ಮೋಸಪಡಿಸಿದರೆಂದು ಮೂರು ಕ್ರಿಮಿನಲ್ ಮೊಕದ್ದಮೆಗಳು ಬಂದು ವಿಚಾರಣೆಯಾಗಿ, ಸೆಷನ್ಸ್ ಕೋರ್ಟಿಗೆ ಕಮಿಟ್ಟು ಆಗಿರುವುದು.

❖❖❖

ಪೂರ್ವ ಬಂಗಾಳಾ ಅಧಿಪತ್ಯದಲ್ಲಿ ಚಿಟಗಾಂಗಿನ ಕಡೆ ರೈಲ್‌ಗಾಡಿಗಳಲ್ಲಿ ಈಚೆಗೆ ಕಳುವುಗಳು ನಡೆಯುತ್ತಿದ್ದದ್ದನ್ನು ಪತ್ತೆ ಮಾಡಬೇಕೆಂದು ಕ್ನಾಟ್ಟ್ ಎಂಬೊಬ್ಬ ರೈಲ್ವೆ ಇನ್ಸ್‌ಪೆಕ್ಟರು ಚಿಟಗಾಂಗಿನಿಂದ ಚಾಂದಪುರಕ್ಕೆ ರೈಲಿನಲ್ಲಿ ಪ್ರಯಾಣ ಮಾಡುತ್ತಿದ್ದಾಗ ಯಾರೋ ಆತನನ್ನು ಚೆನ್ನಾಗಿ ತಿವಿದು ಎತ್ತಿಹಿಸಿ ಕೊಂದುಹಾಕಿದರು.

❖❖❖

ಹಿಂದುಸ್ಥಾನದಲ್ಲೆಲ್ಲಾ ಅಪೂರ್ವವಾದಂಥಾ ಮಾವಿನ ಹಣ್ಣುಗಳನ್ನು ಬೊಂಬಾಯಿನಲ್ಲಿ ಒಬ್ಬ ವರ್ತಕನು ಬಿಕರಿಮಾಡಿದನು ಜನರು ಡಜನ್ ೧ ಕ್ಕೆ ೧೫ ರೂಪಾಯಿನಂತೆ ಕೊಟ್ಟು ಆ ಹಣ್ಣುಗಳನ್ನು ಕೊಂಡುಕೊಂಡರು ಅದು ಗುಜರಾಥಿನಲ್ಲೂ ರುಚಿಯಲ್ಲೂ ಬಹು ಅಪೂರ್ವವಾಗಿತ್ತೆಂದು ಅಲ್ಲಿನ ಒಂದು ಪತ್ರಿಕೆಯು ತಿಳಿಸುವುದು.

❖❖❖

ಪಂಜಾಬ್ ಗವರ್ನಮೆಂಟಿನವರು ಏಳು ಡಿಸ್ಟ್ರಿಕ್ಟುಗಳಲ್ಲಿ ಪ್ರಜೆಗಳು ರಾಜಕೀಯ ವಿಷಯಗಳನ್ನು ಚರ್ಚಿಸುವುದಕ್ಕೆ ಅಂತರಂಗದಲ್ಲಾಗಲಿ ಬಹಿರಂಗದಲ್ಲಾಗಲಿ ಸಭೆಗಳನ್ನು ನಡಿಸಕೂಡದೆಂತಲೂ, ಹಾಗೆ ನಡಿಸಬೇಕಾದರೆ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಗೆ ಎಂಟು ದಿನಗಳಿಗೆ ಮುಂಚೆ ತಿಳಿಸಿ ಅವರ ಅಪ್ಪಣೆ ಪಡೆಯಬೇಕೆಂತಲೂ ಪ್ರಕಟಿಸಿರುತ್ತಾರೆ.

❖❖❖

ಬಂಗಾಳಾ ಅಧಿಪತ್ಯಕ್ಕೆ ಸೇರಿದ ದರ್ಭಾಂಗ ಡಿಸ್ಟ್ರಿಕ್ಟಿನಲ್ಲಿ ಇನ್ನೂ ೩೪,೫೦೦ ಜನರು ಕ್ಷಾಮಪೀಡಿತರಾಗಿದಾರೆ ಅಂದರೆ ಹಿಂದಿನ ವಾರದ ಸಂಖ್ಯೆಗಿಂತ ೧,೫೩೪ ಮಂದಿ ಕಡಿಮೆ. ಆ ಪೈಕಿ ೨೭,೦೦೦ ಜನರು ರಿಲೀಫ್ ಕಾಮಗಾರಿ ಮಾಡುತ್ತಿದಾರೆ ದಕ್ಷಿಣದೇಶದ ಬೆಳ್ಗಾವದಲ್ಲೂ ಇನ್ನೂ ಕೆಲವು ಪ್ರಜೆಗಳು ಸರ್ಕಾರದವರ ಪೋಷಣೆಯನ್ನು ಬಿಟ್ಟುಹೋಗಿಲ್ಲ.

❖❖❖

ಕಳೆದ ವಾರ ಹಿಂದುಸ್ಥಾನದಲ್ಲಿ ೧೯,೯೩೭ ಜನರು ಪ್ಲೇಗ್ ತಗಲಿ ಮೃತಪಟ್ಟರು ಅಂದರೆ ಹಿಂದಿನ ವಾರದ ಸಂಖ್ಯೆಗಿಂತ ೫,೧೩೦ ಕಡಮೆ ಆ ಪೈಕಿ ಪಂಜಾಬ್ ಅಧಿಪತ್ಯದಲ್ಲಿ ೧೩,೨೩೨ ಜನರು ಸಂಯುಕ್ತ ಅಧಿಪತ್ಯಗಳಲ್ಲಿ ೧,೩೦೨ ಜನರು, ಬಂಗಾಳಾದಲ್ಲಿ ೧೯... ಬೊಂಬಾಯಿ ೭೬೪, ಬರ್ಮಾ ೧೫೪೪, ರಾಜಪುಟಾನಾ ...೬೬. ರೀತಿ ಮೃತಪಟ್ಟಿದಾರೆ

❖❖❖

ಪೂರ್ವ ಬಂಗಾಳಾಕ್ಕೆ ಸೇರಿದ ಚಾಂದಪುರದ ಬಳಿ ಬೆಳಿಗ್ಗೆ ... ಗಂಟೆ ಸಮಯದಲ್ಲಿ ರೈಲ್ ಗಾಡಿಯು ಬಹು ವೇಗವಾಗಿ ಹೋಗುತ್ತಿದ್ದಾಗ್ಗೆ ಆರು ಜನ ಕೂಲಿಕಾರರು ಗಾಡಿ ಬರುವುದರೊಳಗಾಗಿ ಕಂಬಿಗಳನ್ನು ದಾಟಿಕೊಂಡು ಹೋಗಬೇಕೆಂದು ಪ್ರಯತ್ನಪಟ್ಟರು ಆದರೆ ಗಾಡಿಯು ಅವರ ಮೇಲೆ ಹರಿದು ಇಬ್ಬರು ಗಂಡಸರು ಒಬ್ಬ ಹೆಂಗಸು ಒಂದು ಮಗು ಸತ್ತುಹೋದರು ಇನ್ನಿಬ್ಬರಿಗೆ ಪೂರಾ ಪೆಟ್ಟು ಆಗಿರುತ್ತದೆ

❖❖❖

ಕೊಲ್ಹಾಪುರದ ರಾಜರು ತಮ್ಮ ಸಂಸ್ಥಾನದಲ್ಲಿ ಯಾರೂ ಬಹಿರಂಗದಲ್ಲಾಗಲಿ ಅಂತರಂಗದಲ್ಲಾಗಲಿ ರಾಜಕೀಯ ವಿಷಯಗಳನ್ನು ಚರ್ಚಿಸುವುದಕ್ಕೆ ಸಭೆಗಳನ್ನು ನಡಿಸಕೂಡದೆಂತಲೂ, ಕೊಲ್ಹಾಪುರದ ಅಥವಾ ಹಿಂದುಸ್ಥಾನದ ರಾಜಕೀಯಗಳನ್ನು ಕುರಿತು ಚರ್ಚಿಸುವುದಕ್ಕೆ ಸಭೆ ನಡಿಸಬೇಕಾದ ಪಕ್ಷದಲ್ಲಿ ಮೊದಲೇ ಸ್ಥಳಾಧಿಕಾರಿಗಳಿಗೆ ತಿಳಿಸಿ ಅವರ ಅನುಮತಿಯನ್ನು ಪಡೆಯಬೇಕೆಂತಲೂ ಇಸ್ತಿಹಾರು ಪ್ರಕಟಿಸಿರುತ್ತಾರೆ.

❖❖❖

ದಕ್ಷಿಣ ಕನಡಾ ಜಿಲ್ಲಾ ಉಪ್ಪಿನಂಗಡಿ ತಾಲ್ಲೂಕಿಗೆ ಸೇರಿದ ಕವಟು, ಯೆನೆಕಳ್ ಎಂಬ ಗ್ರಾಮಗಳಲ್ಲಿ ಕಬ್ಬಿಣದ ಕಲ್ಲುಗಳು ಅಪರೂಪವಾಗಿ ಸಿಕ್ಕುತ್ತವೆಂದು ಆ ಜಿಲ್ಲೆಯ ಕಲೆಕ್ಟರಾದ ಖಾನ್ ಸಾಹೇಬ್ ಎಂ ಆಜಿಜುದ್ದೀನ್ ಸಾಹೆಬ್ ಬಹದೂರ್‌ಯವರು ಗವರ್ನಮೆಂಟಿಗೆ ತಿಳಿಸಿರುತ್ತಾರೆ ಅವರು ಆ ಕಲ್ಲುಗಳನ್ನು ಮದರಾಸ್ ಪಟ್ಟಣಕ್ಕೆ ಕಳುಹಿಸಿ ಪರೀಕ್ಷಿಸಿದಾಗ ಅದರಲ್ಲಿ ಶೇಕಡಾ ೫೭ ರಷ್ಟು ಕಬ್ಬಿಣ ಸಿಕ್ಕುತ್ತದೆಂದು ತಿಳಿದುಬಂದಿದೆ

❖❖❖

ಪಂಜಾಬ್ ಅಧಿಪತ್ಯದ ಮ್ಯುನಿಸಿಪಾಲಿಟಿಗಳೆಲ್ಲಾ ಪಟ್ಟಣಕ್ಕೆ ದಿನಸಿ ಭರ್ತಿಮಾಡುವುದಕ್ಕೆ ತರಿಸತಕ್ಕ ಗೋಣಿಚೀಲಗಳಿಗೆ ಮ್ಯುನಿಸಿಪಲ್ ಸುಂಕವನ್ನು ಹಾಕಿ ವಸೂಲ್ಮಾಡುತ್ತಿದಾರೆ ಇದರಿಂದ ವರ್ತಕರಿಗೆ ತುಂಬಾ ತೊಂದರೆಯೂ ಅನಾವಶ್ಯವಾದ ನಷ್ಟವೂ ಆಗುತ್ತದೆಂದು ಗವರ್ನಮೆಂಟಿಗೆ ಅರಿಕೆಮಾಡಿಕೊಂಡರು. ಈಗ ಗವರ್ನಮೆಂಟಿನವರು ಆ ಸುಂಕವನ್ನು ಸಂಪೂರ್ಣವಾಗಿ ವಜಾಮಾಡಬೇಕೆಂದು ಎಲ್ಲಾ ಮ್ಯುನಿಸಿಪಾಲಿಟಿಗಳಿಗೂ ತಿಳಿಸಿರುತ್ತಾರೆ.

❖❖❖

ಬಂಗಾಳಾ ಅಧಿಪತ್ಯಕ್ಕೆ ಸೇರಿದ ಶ್ರೀರಾಮಪುರದಲ್ಲಿ ನೇಯಿಗೆಯನ್ನು ಕಲಿಸತಕ್ಕಂಥಾ ಒಂದು ದೊಡ್ಡ ವಿದ್ಯಾಶಾಲೆಯನ್ನು ಸ್ಥಾಪಿಸಿ ಯೂರೋಪಿನ ರಾಜ್ಯಗಳಲ್ಲಿ ನೇಯಿಗೆ ಕಸಬು ನಡೆಯುವ ಕ್ರಮವನ್ನು ಈ ರಾಷ್ಟ್ರದ ಜನರಿಗೂ ಕಲಿಸಬೇಕೆಂದು ಇಂಡಿಯಾ ಸೇಕ್ರೆಟರಿಯವರು ಸ್ವೀಕಾರ ಮಾಡಿದಾಗ್ಯೂ ಇದಲ್ಲದೆ ಆ ಕಸಬಿನ ಪ್ರವೀಣರಾಗಿರತಕ್ಕ ಇಬ್ಬರು ಉಪಾಧ್ಯಾಯರನ್ನು ಯೂರೋಪ್ ಖಂಡದೇ ಕಳುಹಿಸಿಕೊಡುವುದಾಗಿಯೂ ಅಪ್ಪಣೆ ಕೊಟ್ಟಿದಾರೆ.

❖❖❖

ಕಳೆದ ವಾರ ಕಲ್ಕತ್ತಾ ಪಟ್ಟಣದಲ್ಲಿ ಸುಂಟರಗಾಳಿಯು ... ದಯೂ ಪ್ರಚಂಡವಾಗಿ ನಾನಾ ಕಷ್ಟನಷ್ಟಗಳು ಸಂಭವಿಸಿದವು — ... ನಿಂದ ತನಕ ಸುತ್ತಲೂ ಇರುವ ಪ್ರಾಂತ್ಯದಲ್ಲೆಲ್ಲಾ ಈ ಪ್ರಕಾರ ಮಾರುತದ ಟೆಲಿಗ್ರಾಫ್ ಟೆಲಿಫೋನ್ ತಂತಿಗಳನ್ನೂ ಕಂಬಗಳನ್ನೂ ಕಿತ್ತು ಕೆಡವಿಬಿಟ್ಟಿತು ಕೆಲವು ಗಂಟೆಗಳ ತನಕ ರೈಲ್ ಗಾಡಿಗಳು ಮುಂದಕ್ಕೆ ಹೋಗದೆ ನಿಂತುಬಿಟ್ಟವು ಜನರಿಗೂ ಮನೆಗಳಿಗೂ ಎಷ್ಟು ನಷ್ಟಗೆ ಇದರಿಂದ ಕಷ್ಟನಷ್ಟಗಳುಂಟಾದವೋ ಹೇಳಲಾರೆ

❖❖❖

ನಾಗಪುರ ಪಟ್ಟಣದಲ್ಲಿ ಕಳೆದ ವಾರ ಕ್ಷತ್ರಿಯವರ್ಗದ ಮಹಾಸಭೆಯೊಂದು ನಡೆಯಿತು ಆ ಸಭೆಯಲ್ಲಿ ಆವಾಘಡದ ರಾಜಾ ಬಲವಂತಸಿಂಗ್ ಬಹದೂರ್‌ಯವರ ಆಗ್ರಾಪಟ್ಟಣದಲ್ಲಿ ೦ ಕ್ಷತ್ರಿ ಹೈಸ್ಕೂಲಿಗೆ ಐದು ಲಕ್ಷ ರೂಪಾಯನ್ನೂ, ಇನ್ನೊಂದು ವಿದ್ಯಾ ... ೧,೦೦,೦೦೦ ರೂಪಾಯನ್ನು ಧರ್ಮ ಕೊಡುವುದಾಗಿ ತಿಳಿಸಿದರು ಅವರ ಮೇಲ್ಪಂಕ್ತಿಯನ್ನು ಅನುಸರಿಸಿ ಆ ಸಭೆಯ ಇತರ ಕ್ಷತ್ರಿ ಮಹಾಜನರೂ ತಮ್ಮ ಯೋಗ್ಯತಾನುಸಾರ ಹಣ ಕೊಡುವುದಾಗಿ ವಾಗ್ದಾನಮಾಡಿದರು

❖❖❖

ಕಲ್ಕತ್ತಾ ಪಟ್ಟಣದಲ್ಲಿ ಕಾಗೆಗಳ ಉಪಟಳವನ್ನು ತಪ್ಪಿಸಬೇಕೆಂದು ಮ್ಯುನಿಸಿಪಾಲಿಟಿಯವರು ಕಟ್ಟಳೆಯನ್ನಿಟ್ಟು, ಕಾಗೆ ಗೂಡುಗಳನ್ನು ಶೋಧಿಸಿ ಮೊಟ್ಟೆಗಳನ್ನೆಲ್ಲಾ ಒಡಿಸಿ ಕೊಂದುಹಾಕಲಾರಂಭಿಸಿದಾಗ ಕೆಲವು ಸಂದರ್ಭಗಳಲ್ಲಿ ಈ ಪಕ್ಷಿಗಳ ಕಾಟ ಬಹಳವಾದಾಗ್ಯೂ ಅವುಗಳಿಂದ ಪಟ್ಟಣದ ಕಸವು ನಿವಾರಣೆಯಾಗುವುದಕ್ಕೆ ಸಹಾಯವಾದೀತು ಇಂಥಾ ಪ್ರಾಣಿಗಳನ್ನು ನಿರ್ಮೂಲಮಾಡುವುದು ಯೋಗ್ಯವಾಗಿ ಕಾಣುವುದಿಲ್ಲವೆಂದು ಕೆಲವು ಪತ್ರಿಕೆಗಳು ಆಕ್ಷೇಪ ಮಾಡಿರುತ್ತವೆ

❖❖❖

ದಕ್ಷಿಣ ಆಫ್ರಿಕಾ ಯುದ್ಧದಲ್ಲಿ ಇಂಗ್ಲಿಷರು ಕೈಸೆರೆ ಹಿಡಿದ ಬೋಯರರನ್ನು ಸಿಲೋನ್ (ಲಂಕಾ) ದ್ವೀಪಕ್ಕೂ ಪಶ್ಚಿಮ ಇಂಡೀಸ್ ಎಂಬ ದ್ವೀಪಗಳಿಗೂ ಕಳುಹಿಸಿ ಕೆಲವು ಕಾಲ ಇಟ್ಟಿದ್ದರಷ್ಟೆ ಆ ಬೋಯರರು ಆಯಾ ಸ್ಥಳಗಳಲ್ಲಿ ಪ್ರಜೆಗಳು ಮಾಡುವ ವ್ಯವಸಾಯಕ್ರಮಗಳನ್ನು ಕಲಿತುಕೊಂಡು, ಈಗ ದಕ್ಷಿಣ ಆಫ್ರಿಕಕ್ಕೆ ವಾಪಸು ಹೋಗಿ ತಮ್ಮ ಭೂಮಿಕಾಣಿಗಳಲ್ಲಿ ಅದೇ ರೀತಿ ವ್ಯವಸಾಯ ಮಾಡುತ್ತಾ ಇದ್ದಾರೆಂತಲೂ, ಇವರೆಲ್ಲಾ ಸರ್ಕಾರಿ ಕೆಲಸಗಳನ್ನಪೇಕ್ಷಿಸದೆ ವ್ಯವಸಾಯದಲ್ಲೇ ತೃಪ್ತರಾಗಿದಾರೆಂತಲೂ ತಿಳಿದುಬಂದಿದೆ.

ಮದರಾಸ್ ರೈಲು, ದಕ್ಷಿಣ ಮರಾಟ ರೈಲು, ದಕ್ಷಿಣ ಇಂಡಿಯಾ ಎಂಬೀ ಮೂರು ಕಂಪನಿಗಳನ್ನೂ ಒಂದು ಮಾಡಿ, ದಕ್ಷಿಣ ಮರಾಟ ಕಂಪನಿಯವರೇ ಆ ಮೂರನ್ನೂ ನಡಿಸಬೇಕೆಂದು ಗವರ್ನ್‌ಮೆಂಟಿನವರು ಗೊತ್ತುಮಾಡಿದರೆ ಧಾರವಾಡದಲ್ಲಿರುವ ಕಂಪನಿಯ ಕಚೇರಿಯನ್ನು ಮದರಾಸಿಗೆ ವರ್ಗಮಾಡಬೇಕೆಂದು ಚರ್ಚೆ ನಡಿಯುತ್ತಿದೆ. ಈ ವಿಷಯಗಳನ್ನೆಲ್ಲಾ ಚರ್ಚಮಾಡಿ ಗೊತ್ತುಮಾಡುವುದಕ್ಕೆ ಆ ಮೂರು ಕಂಪನಿಗಳವರೂ ಈ ತಿಂಗಳಲ್ಲಿ ಸಭೆ ಸೇರುವವರಾಗಿದ್ದಾರೆ. ಈ ಏರ್ಪಾಡು ಮುಂದಿನ ಜನವರಿ ಒಂದನೇ ತಾರೀಖಿನಿಂದ ಜಾರಿಯಲ್ಲಿ ಬರಲಿರುತ್ತದೆ.

❦❦❦

ಬೆಲ್ಗಾವ, ಷಹಾಪುರ ಮೊದಲಾದ ಪ್ರಾಂತ್ಯಗಳ ಜೈನ ಪ್ರಜೆಗಳು ಷಹಾಪುರದಲ್ಲಿ ಒಂದು ದೊಡ್ಡ ಸಭೆಯನ್ನು ನಡಿಸಿದರು. ಷಹಾಪುರದ ಚನ್ನಪ್ಪಲಿಂಗದ ಎಂಬ ಐಶ್ವರ್ಯವಂತನು ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದನು. ಈ ಸಭೆಯಲ್ಲಿ ತೀರ್ಮಾನವಾದ ವಿಷಯವೇನೆಂದರೆ— ಪಾರ್ಶ್ವನಾಥ ಬೆಟ್ಟದ ಮೇಲೆ ಶ್ರೀಖರೂರು ಎಂಬ ಭಾಗದಲ್ಲಿ ಯೂರೋಪಿಯನ್ ದೊಡ್ಡ ಮನುಷ್ಯರ ವಾಸಕ್ಕೆ ಬಂಗಲೆ ಆರಾಮಗಳನ್ನು ಕಟ್ಟಿಕೊಳ್ಳುವುದಕ್ಕೆ ಅವಕಾಶಕೊಡಕೂಡದು ಎಂಬದಾಗಿ ಲೆಫ್ಟಿನೆಂಟ್ ಗವರ್ನರಿಗೂ, ವೈಸ್‌ರಾಯಿಯವರಿಗೂ, ವಿಲಾಯತಿಯಲ್ಲಿರತಕ್ಕ ಹಿಂದುಸ್ಥಾನದ ಸ್ಟೇಟ್ ಸೆಕ್ರಿಟೆರಿಯವರಿಗೂ ಮನವಿ ಅರ್ಜಿಗಳನ್ನು ಬರೆದುಕೊಳ್ಳತಕ್ಕದ್ದೆಂದು ತೀರ್ಮಾನಿಸಿರುತ್ತಾರೆ.

❦❦❦

ಫ್ರೆಂಚ್ ಸರ್ಕಾರದವರು ಬಂಗಾಳಾದಲ್ಲಿ ತಮಗೆ ಸೇರಿರುವ ಚಂದ್ರನಗರದೊಳಗೆ ಆರು ಜನರನ್ನು ಹಿಡಿದು ದಸ್ತಗಿರ್ಮಾಡಿ, ಅವರು ರಾಜಕಂಟಕರೆಂದು ತಿಳಿದುಬಂದ ಕಾರಣ, ಅವರನ್ನು ಆಮರಣಾಂತದ ಸಜಾ ಶಿಕ್ಷೆಗೆ ಗುರಿಪಡಿಸಿ ಜೈಲ್‌ಖಾನೆಯಲ್ಲಿ ಹಾಕಿದ್ದರು. ಕಳೆದ ವಾರ ಈ ಆರು ಜನರೂ ಬಂದೀಖಾನೆಯಿಂದ ತಪ್ಪಿಸಿಕೊಂಡು ಹೋಗಿರುತ್ತಾರೆ. ಈ ಪೈಕಿ ಇಬ್ಬರು ಬೈರಾಗಿಗಳು. ಮುಖರ್ಜಿ ಎಂಬವನು ಸುಮಾರು ಎರಡೂವರೆ ವರುಷಗಳ ಹಿಂದೆ ಕಲ್ಕತ್ತೆಯ ಐಶ್ವರ್ಯವಂತರಾಗಿದ್ದ ಮುದುಕಿಯರಿಬ್ಬರನ್ನು ಕೊಂದುಹಾಕಿ ಅವರ ಬಳಿ ಇದ್ದ ನಗನಾಣ್ಯಗಳನ್ನೆಲ್ಲಾ ಅಪಹರಿಸಿಕೊಂಡು ಹೋಗಿದ್ದನು. ಇಂಥಾ ಪ್ರಜಾಕಂಟಕರನ್ನು ಹಿಡಿಯಬೇಕೆಂದು ಪೋಲೀಸಿನವರು ತುಂಬಾ ಶ್ರಮಪಡುತ್ತಿದ್ದಾರೆ.

❦❦❦

ಪ್ಲೇಗ್ ಉಪದ್ರವ ಹರಡುವುದಕ್ಕೆ ಕಾರಣಗಳಾದ ಹೆಗ್ಗಣ ಇಲಿಗಳನ್ನು ನಿರ್ಮೂಲಮಾಡತಕ್ಕ ಭಾಗದಲ್ಲಿ ಬೊಂಬಾಯಿ ಗವರ್ನ್‌ಮೆಂಟಿನವರು ಪೂನ, ಸತಾರ, ಬೆಲ್ಗಾವ, ಅಹಮದಾಬಾದ್ ಜಿಲ್ಲೆಗಳ ಅಧಿಕಾರಿಗಳಾದ ಕಲೆಕ್ಟರುಗಳಿಗೆ ತಿಳಿಸುಮಾಡಿರುವುದೇನೆಂದರೆ— ನಿಮ್ಮ ಪ್ರಾಂತ್ಯಗಳಲ್ಲಿರುವ ಇಲಿ ಹೆಗ್ಗಣಗಳನ್ನೆಲ್ಲಾ ನಿರ್ಮೂಲಮಾಡುವುದೇನೋ ಸಾಧ್ಯವಲ್ಲವಾದಾಗ್ಯೂ ಪ್ಲೇಗ್ ಶುರು ಆಗುವುದಕ್ಕೆ ಸ್ವಲ್ಪ ಮುಂಚಿತವಾಗಿಂದಲೂ ಮುಂತಾಗಿ ವಹಿಸಿ ಗ್ರಾಮಗಳಲ್ಲೂ ಪಟ್ಟಣಗಳಲ್ಲೂ ಕೂಡಿದಷ್ಟು ಇಲಿ ಹೆಗ್ಗಣಗಳನ್ನು ಹಿಡಿಸಿ ಕೊಲ್ಲಿಸುತ್ತಿರಬೇಕು. ಅವಶ್ಯಬಿದ್ದರೆ ಅವುಗಳನ್ನು ಹಿಡಿಯುವದರಲ್ಲಿ ಜಾಣರೆನಿಸಿಕೊಂಡವರನ್ನು ಸಂಬಳ ಕೊಟ್ಟು ನೇಮಿಸಿಕೊಳ್ಳಬಹುದು. ಜನರು ತಾವೇ ಇಷ್ಟಪಟ್ಟು ಇಲಿ ಹೆಗ್ಗಣಗಳನ್ನು ಹಿಡಿದು ತಂದವರಿಗೂ ತಕ್ಕ ಬಹುಮಾನವನ್ನು ಕೊಡಬಹುದು ಎಂಬುದೇ.

❦❦❦

ಹೈದರಾಬಾದ್ ಸಂಸ್ಥಾನದ ನೈಜಾಮರವರು ಕಳೆದ ವಾರ ತಮ್ಮ ಅರಮನೆಯಲ್ಲಿರುವ ಬಡಬಗ್ಗರ ಮಕ್ಕಳನ್ನೆಲ್ಲಾ ಅರಮನೆಗೆ ಕರಸಿಕೊಂಡು, ಅವರಿಗೆ ಸುಖಭೋಜನವನ್ನು ಮಾಡಿಸಿ ಅವರಿಗೆ ಕೆಲವು ವಿನೋದಗಳನ್ನು ಕಲ್ಪಿಸಿ ಸಂತೋಷಪಡಿಸಿದರು. ಈ ಸಂದರ್ಭದಲ್ಲಿ ಒಂದು ವಿನೋದಸಂಗತಿ ನಡಿಯಿತು. ಊಟವಲ್ಲಾ ಆದ ಮೇಲೆ ಒಬ್ಬ ಹುಡುಗನು ಎಲೆಗಳಲ್ಲಿ ಉಳಿದಿದ್ದ ತಿಂಡಿಪದಾರ್ಥಗಳನ್ನೆಲ್ಲಾ ಕೂಡಿಸಿ ಗಂಟುಕಟ್ಟಿಕೊಳ್ಳುತ್ತಿದ್ದನು. ನೈಜಾಮರು ಅದನ್ನು ನೋಡುತ್ತಿದ್ದು ಆ ಹುಡುಗನನ್ನು ಕರೆಸಿ ವಿಚಾರಿಸಿದಾಗ ಅವನು— ತನ್ನ ತಾಯಿ ಮನೆಯಲ್ಲಿ ಕಾಯಿಲೆ ಬಿದ್ದು ನರಳುತ್ತಿದ್ದಾಳೆ. ನನ್ನ ತಂಗಿ ಹೊಟ್ಟೆಗಿಲ್ಲದೆ ಸಂಕಟಪಡುತ್ತಾಳೆ. ಆದ್ದರಿಂದ ಅವರಿಗೆ ಕೊಡುವುದಕ್ಕೋಸ್ಕರ ಈ ತಿಂಡಿ ಪದಾರ್ಥಗಳನ್ನು ಗಂಟುಕಟ್ಟಿಕೊಂಡಿದ್ದೇನೆಂದು ಹೇಳಿದನು. ಆಗ ನೈಜಾಮರವರು ತುಂಬಾ ಕನಿಕರಪಟ್ಟು, ಆ ಹುಡುಗನ ಮನೆಯವರ ಜೀವನಕ್ಕೆ ತಕ್ಕ ಏರ್ಪಾಡು ಮಾಡಿಸುವಂತೆ ಅಪ್ಪಣೆ ಕೊಟ್ಟರು.

❦❦❦

ಒಬ್ಬ ಬಡ ಹೆಂಗಸು ಸುಮಾರು ಮೂವತ್ತು ವರುಷದವಳು ಕ್ಷಯರೋಗ ತಗಲಿ ಬನಾರಸ್‌ನ ಶಂಭುನಾಥ ಪಂಡಿತರ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಾ ಇರುತ್ತಾಳೆ. ಆಕೆ ಅಲಹಾಬಾದ್ ಆಸ್ಪತ್ರೆಯಲ್ಲಿ ಮೊದಲು ಒಂದು ತಿಂಗಳಾದ ಮೇಲೆ ಬಹಳ ನಿದ್ರೆಯಲ್ಲಿ ಬಿದ್ದುಕೊಂಡಳು. ತರುವಾಯ ಅವಳನ್ನು ಕರ್ನಲ್ ಬರ್ಡ್ ಅವರು ಬನಾರಸ್‌ನ ಆಸ್ಪತ್ರೆಗೆ ಕರೆದುತಂದು ಚಿಕಿತ್ಸೆ ಮಾಡಲಾರಂಭಿಸಿದರು. ಈಗ ಅವಳು ದೀರ್ಘನಿದ್ರೆಮಾಡುತ್ತಿದ್ದಾಳೆ. ಅವಳಿಗೆ ಎಚ್ಚರಿಕೆಯುಂಟುಮಾಡಿದಾಗ್ಯೂ ಪ್ರಯೋಜನವಾಗಲಿಲ್ಲ. ಮೂಗಿನ ಮೂಲಕ ಕೊಳವೆಯನ್ನಿಟ್ಟು ಅದರ ಮೂಲಕ ಅವಳಿಗೆ ಆಹಾರವನ್ನು ಕೊಡುತ್ತಿದ್ದಾರೆ. ರೋಗಿಯು ದಿನೇ ದಿನೇ ಕ್ಷಯಿಸುತ್ತಿದ್ದಾಳೆ. ಬಹಳ ದಿನ ಬದುಕುವಂತೆ ಕಾಣಲಿಲ್ಲ. ಅವಳು ಆಸ್ಪತ್ರೆಗೆ ಬರುವುದಕ್ಕಿಂತ ಮೊದಲು ಎಲ್ಲಿದ್ದಳೋ ಅವಳ ಪೂರ್ವೋತ್ತರವೇನೋ ಯಾರಿಗೂ ತಿಳಿಯದೆ ಇದೆ. ಆದ್ದರಿಂದ ಈ ರೋಗವು ಅವಳಿಗೆ ಹ್ಯಾಗೆ ಅಂಟಿಕೊಂಡಿತೆಂಬುವುದು ಗೊತ್ತಾಗಲಿಲ್ಲ.

❦❦❦

ಬೊಬ್ಬಿಲಿ ಸಂಸ್ಥಾನದ ಮಹಾರಾಜರವರು ಈಗಿನ ಗಲಿಬಿಲಿಯ ವಿಷಯವನ್ನು ಕುರಿತು ತಮ್ಮ ಸಂಸ್ಥಾನದಲ್ಲಿ ವಿದ್ಯಾಭ್ಯಾಸಂಗ ಮಾಡತಕ್ಕ ಬಾಲಕರಿಗೆ ಹಲವು ಬುದ್ಧಿಮಾತುಗಳನ್ನು ತಿಳಿಸಿರುತ್ತಾರೆ. ಅದರ ಮುಖ್ಯಾಂಶಗಳೇನೆಂದರೆ—ಬ್ರಾಹ್ಮಣರು ತಮ್ಮನ್ನಾಳುವ ದೊರೆಗಳ ಮೇಲೆ ತಿರಿಗಿಬಿದ್ದು ಪ್ರತಿಕಕ್ಷಿಗಳಾಗಿ ಹೊಡೆದಾಡುವುದು ಯಾವಾಗಲೂ ಉಂಟಾದದ್ದೇ. ಈಗಲಾದರೋ ಬ್ರಾಹ್ಮಣರು ಮಾತ್ರವೇ ಅಲ್ಲ, ಅವರ ಜೊತೆಗೆ ಇತರ ಪಂಗಡದವರೂ ಕೆಲವರು ಸೇರಿಕೊಂಡು ಗವರ್ನ್‌ಮೆಂಟಿನವರನ್ನು ಆಕ್ಷೇಪಣೆ ಮಾಡುತ್ತಲೂ ಬಯ್ಯುತ್ತಲೂ ದೂಷಿಸುತ್ತಲೂ ಬಂದಿದ್ದಾರೆ. ಆದದ್ದರಿಂದಲೇ ಲಾಲಾ ಲಾಜಪತ್ ರಾಯಿಗೂ ಅಜಿತ್‌ಸಿಂಗಿಗೂ ಶಿಕ್ಷೆಯಾಯಿತು. ವಿದ್ಯಾರ್ಥಿಗಳಾದ ನೀವು ಈ ಅಪಾಯಕರವಾದ ಆ ಪಕ್ಷವನ್ನು ವಹಿಸಿ ಗವರ್ನ್‌ಮೆಂಟಿಗೆ ವಿರೋಧಿಗಳಾಗಿ ಎಂದಿಗೂ ನಿಲ್ಲಬಾರದು. ನೀವು ಈಗಿನ ಗಲಭೆಯಲ್ಲಿ ಸೇರಿಕೊಂಡ ಪಕ್ಷದಲ್ಲಿ ಮುಂದೆ ನಿಮ್ಮ ಅಭ್ಯುದಯವನ್ನೆಲ್ಲಾ ಹಾಳುಮಾಡಿಕೊಳ್ಳುವಿರಿ. ಚಿಕ್ಕತನದಲ್ಲಿ ನೀವು ವ್ಯಾಸಂಗಮಾಡುತ್ತಾ ನಿಮ್ಮ ನಡೆನುಡಿಗಳನ್ನು ಕ್ರಮಪಡಿಸಿಕೊಳ್ಳತಕ್ಕದ್ದಾಗಿದೆ. ಇಂಥಾ ಬಾಲ್ಯದಲ್ಲಿ ನೀವು ರಾಜಕೀಯ ವಿಷಯಗಳಿಗೆ ಪ್ರವರ್ತಿಸಿದರೆ ಉತ್ತರೋತ್ತರ ನೀವು ಸತ್ಪ್ರಜೆಗಳಾಗಲಾರಿರಿ. ಇದರಿಂದ ನಿಮ್ಮ ದೇಶಾಭ್ಯುದಯಕ್ಕೂ ಹಾನಿಯುಂಟಾಗುವುದು. ನಿಮ್ಮಿಂದ ಯಾವ ರಾಜಕೀಯ ಕೆಲಸಗಳೂ ನಡೆಯಲಾರವು. ಅಧಿಪತಿಗಳು, ಮಹಾರಾಜರು, ರಾಜರು, ನವಾಬರು, ಜಮೀನ್ದಾರರು ಮೊದಲಾದವರೆಲ್ಲಾ ಇಂಗ್ಲಿಷ್ ರಾಜ್ಯಭಾರದ ಮೇಲೆ ಸಂಪೂರ್ಣವಾದ ಭಕ್ತಿಭರವಸೆಗಳನ್ನು ಹೊಂದಿರುತ್ತಾರೆ. ಆದಕಾರಣ ನೀವುಗಳು ವಿದ್ಯಾಸಂಪಾದನೆಯಲ್ಲಿ ನಿಮ್ಮ ಕಾಲವನ್ನು ಕಳೆಯುವುದು ನಿಮಗೂ ನಿಮ್ಮ ದೇಶಕ್ಕೂ ಎಷ್ಟೋ ಹಿತಕರವಾಗಿರುತ್ತದೆ ಎಂಬುದೇ.

ವಿದೇಶ ವರ್ತಮಾನಗಳು.

ಅಮೇರಿಕಕ್ಕೆ ಸೇರಿದ ಸಾಲ್ಟ್ ಲೇಕ್ ಸಿಟಿಯಲ್ಲಿ ಪ್ರೆಸಿಡೆಂಟ್ ಮೆ॥ ಸ್ಮಿತ್ ಎಂಬಾತನಿಗೆ ಐದು ಮಂದಿ ಹೆಂಡಿರೂ, ೪೩ ಮಂದಿ ಮಕ್ಕಳೂ ಇರುತ್ತಾರೆ.

❦❦❦

ಈಜಿಪ್ಟಿನಲ್ಲಿ ವ್ಯಾಪಾರಾರ್ಥವಾಗಿ ಏರ್ಪಾಡಾಗಿದ್ದ ಒಂದು ಇಟಲಿ ಬ್ಯಾಂಕು ಕಳೆದ ವಾರ ಮುಳುಗಿಹೋಯಿತು. ಈ ಬ್ಯಾಂಕಿನ ಮೂಲಧನವು ೬೦ ಲಕ್ಷ ರೂಪಾಯಿಗಳೆಂದು ತಿಳಿದುಬಂದಿದೆ.

❦❦❦

ಜರ್ಮನ್ ರಾಜ್ಯದ ಪ್ರಿನ್ಸ್ ಫುಷಿಮಾ ಎಂಬ ರಾಜಕುಮಾರರು ಅಮೇರಿಕಕ್ಕೆ ಹೋಗಿ ವಾಂಕೂವರ್ ಪಟ್ಟಣದಲ್ಲಿ ಇಳಿದಾಗ ಅಲ್ಲಿದ್ದ ೩,೦೦೦ ಜಪಾನ್ ಪ್ರಜೆಗಳು ಅವರನ್ನು ಎದುರುಗೊಂಡರು.

❦❦❦

ಅಮೇರಿಕಕ್ಕೆ ಸೇರಿದ ಚಿಲ್ಲಿ ಪ್ರಾಂತ್ಯದ ಸಮುದ್ರತೀರದಲ್ಲಿ ಸೆಂಟಿಯಾಗೋ ಎಂಬ ಹಡಗು ಸಮುದ್ರದಪಾಲಾಯಿತು. ಅದರೊಳಗೆ ೯೦ ಜನರು ಇದ್ದರು. ಆ ಪೈಕಿ ಒಬ್ಬನು ಮಾತ್ರ ಬದುಕಿ ಬಂದನು.

❦❦❦

ಯೂರೋಪ್ಪಿಗೆ ಸೇರಿದ ಗ್ರೀಸ್ ರಾಜ್ಯದಲ್ಲಿ ಥೆಸಿಲೀ ಎಂಬ ಪ್ರಾಂತ್ಯದೊಳಗೆ ನದೀ ಪ್ರವಾಹಗಳು ಅಪಾರವಾಗಿ ಬಂದು ೧,೦೦೦ ಮನೆಮಠಗಳು ಕೊಚ್ಚಿಹೋದವು. ೧೦೩ ಪ್ರಜೆಗಳು ಮೃತಪಟ್ಟರು. ದೊರೆಯವರು ಆ ಸ್ಥಳಕ್ಕೆ ದಯಮಾಡಿರುತ್ತಾರೆ.

❦❦❦

ಈಜಿಪ್ಟ್ ರಾಜ್ಯವನ್ನು ಬಹುಕಾಲ ಆಳಿ ತುಂಬಾ ಅಭಿವೃದ್ಧಿಸ್ಥಿತಿಗೆ ತಂದು ವೇಸ್ಟಿಮಿನ್ಸ್ಟರ್ ಕಡೆಗೆ ಹೋಗಿ ವಿಶ್ರಾಂತಿಯನ್ನು ಅನುಭವಿಸುತ್ತಿರುವ ಲಾರ್ಡ್ ಕ್ರೋಮರ್ ಎಂಬ ಕೀರ್ತಿವಂತನಿಗೆ ವಿಲಾಯತಿ ಗವರ್ನ್‌ಮೆಂಟಿನವರು ಏಳೂವರೆ ಲಕ್ಷ ದ್ರವ್ಯವನ್ನು ಇನಾಮಾಗಿ ಕೊಡಬೇಕೆಂದು ಗೊತ್ತುಮಾಡಿರುತ್ತಾರೆ.

❦❦❦

ದಕ್ಷಿಣ ಆಫ್ರಿಕಾದಲ್ಲಿ ಸರ್ಕಾರದವರ ಮೇಲೆ ದಂಗೆಯೆದ್ದು ಶಾಂತತೆಗೆ ಭಂಗವನ್ನುಂಟುಮಾಡಿದ ಮೆಸ್ಸಿನಿ, ತಿಲೊಂಕೊ, ಮಲೋವು ಕಾಟಿಮೂನಾ, ಈ ಮೊದಲಾದ ಇಪ್ಪತ್ತೈದು ಜನ ಮುಖಂಡರನ್ನು ಗವರ್ನ್‌ಮೆಂಟಿನವರು ಸೆರೆಹಿಡಿದು, ಹಡಗಿನ ಮೇಲೆ ಸೆಂಟ್ ಹೆಲೀನಾ ದ್ವೀಪಕ್ಕೆ ಗಡೀಪಾರು ಮಾಡಿರುತ್ತಾರೆ.

❦❦❦

ಚೀನಾ ರಾಜ್ಯದ ರಾಜಧಾನಿಯಾದ ಪೀಕಿಂಗ್ ಪಟ್ಟಣದಿಂದ ಫ್ರಾನ್ಸ್ ಮುಖ್ಯಪಟ್ಟಣವಾದ ಪ್ಯಾರಿಸ್‌ನಗರಕ್ಕೆ ಕೆಲವರು ಮೋಟಾರ್ ಗಾಡಿಗಳಲ್ಲಿ ಕುಳಿತು ಪಂದ್ಯ ಹೊರಟರು. ಪ್ರಿನ್ಸ್ ಬರ್ಗಿಸ್ ಎಂಬ ರಾಜಕುಮಾರನು ತನ್ನ ಮೋಟಾರ್ ಗಾಡಿಯನ್ನು ಓಡಿಸಿಕೊಂಡು ಹೋಗಿ ಮೊದಲನೆಯ ಬಹುಮಾನವನ್ನು ಸಂಪಾದಿಸಿದನು.

❦❦❦

ಇಟಲಿ ರಾಜ್ಯದಲ್ಲಿ ನೇಪಲ್ಸ್ ಪಟ್ಟಣದಿಂದ ೬೭ ಮೈಲಿ ದೂರದಲ್ಲಿರುವ ಕೆಸೆರ್ಟಾ ಎಂಬ ಊರಿನ ಹತ್ತಿರ ಐದು ಮಂದಿ ದೊಡ್ಡ ಮನುಷ್ಯರು ಒಬ್ಬ ರಾಜಕುಮಾರನ ಮೋಟಾರ್ ಗಾಡಿಯಲ್ಲಿ ಕುಳಿತು ಬಹು ವೇಗವಾಗಿ ಹೋಗುತ್ತಿರುವಾಗ್ಗೆ ಆ ಗಾಡಿಯು ರಸ್ತೆ ತಪ್ಪಿ ಕಲ್ಲುಗಳ ಮೇಲೆ ಬಿದ್ದು ಛಿದ್ರವಾಯಿತು. ಐದು ಮಂದಿಯೂ ಮೃತಪಟ್ಟರು.

❦❦❦

ಅಮೇರಿಕಕ್ಕೆ ಸೇರಿದ ಲೌಸಿಯಾನಾ ಮತ್ತು ಟೆಕ್ಸಾಸ್ ಡಿಸ್ಟ್ರಿಕ್ಟುಗಳಲ್ಲಿ ರೈತರು ಅಪಾರವಾದ ಭತ್ತದ ಬೆಳೆಮಾಡುತ್ತಾರೆ. ಪ್ರತಿ ವರುಷವೂ ಹತ್ತು ಲಕ್ಷ ಟನ್ನುಗಳಷ್ಟು ಭತ್ತದ ಹುಲ್ಲು ಆಗುತ್ತದೆ. ಈಗ ಈ ಹುಲ್ಲಿನಿಂದ ಹಸನಾದ ಕಾಗದಗಳನ್ನು ತಯಾರುಮಾಡುವುದಕ್ಕೆ ಆ ಪ್ರಾಂತ್ಯದಲ್ಲಿ ಒಂದು ಭಾರೀ ಕಾರ್ಖಾನೆಯನ್ನು ಏರ್ಪಡಿಸಿದ್ದಾರೆ. ಇದಕ್ಕಾಗಿ ಲಕ್ಷಾಂತರ ರೂಪಾಯಿ ಕೂಡಿಸಿ ಒಂದು ಕಂಪನಿ ಮಾಡಿಕೊಂಡಿರುವರು.

ಚೀನಾ ರಾಜ್ಯಕ್ಕೆ ಸೇರಿದ ಕ್ವೀಲಿನ್ ಪಟ್ಟಣದಲ್ಲಿ ಒಂದು ಭಾಗದಲ್ಲಿ ಇದ್ದಕ್ಕಿದ್ದಹಾಗೆ ಒಂದು ದಿನ ರಾತ್ರಿ ಕಳಚಿ ನೆಲಸಮವಾಯಿತು. ಅನೇಕಾನೇಕ ಕಟ್ಟಡಗಳು ಉರುಳಿಕೊಂಡವು. ಭೂಕಂಪವಾಗಲಿ ಮತ್ತಾವುದಾಗಲಿ ಪ್ರಾಪ್ತವಾಗಲಿಲ್ಲ. ಮಾರನೇದಿನ ಬೆಳಿಗ್ಗೆ ಆ ಭಾಗವನ್ನು ಅಳತೆಮಾಡಿ ನೋಡಿದಾಗ ಒಂದು ಗುಡ್ಡದಲ್ಲಿ ನೂರು ಗಜ ಉದ್ದ, ಹತ್ತು ಅಡಿ ಅಗಲದ ಭೂಮಿಯು ಬಾಯಿಬಿಟ್ಟಿತ್ತು. ಹೀಗಾಗಲು ಕಾರಣವೇನೋ ಯಾರೂ ಹೇಳಲಾರದೆಹೋದರು.

❦❦❦

ವಿಲಾಯತಿಯ ಮಹಾರಾಜಾ ಚಕ್ರವರ್ತಿಯವರು ಕಳೆದ ವಾರ ವಿಂಡ್ಸರ್ ರಾಜಭವನದಲ್ಲಿ ಒಂದು ಭಾರೀ ಔತಣಮಾಡಿದರು. ಸುಮಾರು ಎಂಟುನೂರು ಮಂದಿ ದೊಡ್ಡಮನುಷ್ಯರೂ ಅಧಿಕಾರಿಗಳೂ ರಾಯಭಾರಿಗಳೂ ಹೋಗಿದ್ದರು. ಅವರಲ್ಲಿ ಸಯಾಂ ರಾಜ್ಯದ ದೊರೆಯವರು, ಬಿಕಾನೀರ್ ಮತ್ತು ಅಲ್ವಾರ್ ಸಂಸ್ಥಾನಗಳ ಮಹಾರಾಜರುಗಳು, ಪುದುಕೋಟೆಯ ರಾಜರು ಕೂಡ ಹಾಜರಾಗಿದ್ದು, ಚಕ್ರವರ್ತಿಯವರ ಆತಿಥ್ಯವನ್ನು ಸ್ವೀಕರಿಸಿ, ಅವರ ಭೇಟಿಮಾಡಿಕೊಂಡು ಬಂದರು.

❦❦❦

ಈಜಿಪ್ಟ್ ರಾಜ್ಯದ ವಿದ್ಯಾಭ್ಯಾಸದ ಇಲಾಖಾ ಮಂತ್ರಿಯಾದ ಸೈಯದ್ ಪಾಷಾ ಜಿಕರಲೋಲ್‌ಯವರು ವಿಲಾಯತಿಗೆ ಹೋಗಿ ಅಲ್ಲಿನ ವಿದ್ಯಾಭ್ಯಾಸಕ್ರಮಗಳನ್ನು ಸ್ವತಃ ಚನ್ನಾಗಿ ಪರೀಕ್ಷೆಮಾಡಿ, ಇನ್ನು ಮುಂದೆ ಪ್ರತಿವರುಷವೂ ಈಜಿಪ್ಟಿನಿಂದ ಹದಿನೈದು ಮಂದಿಯಂತೆ ವಿದ್ಯಾರ್ಥಿಗಳನ್ನು ವಿಲಾಯತಿಯ ಸ್ಕೂಲುಗಳಿಗೆ ಕಳುಹಿಸಿಕೊಟ್ಟು, ಇಂಜನಿಯರ್, ಡಾಕ್ಟರ್, ಲಾಯರ್, ಪಂಡಿತ್, ಈ ಮೊದಲಾದ ಭಾಗಗಳಲ್ಲಿ ಪ್ರವೀಣರಾಗಿ ಬರುವಂತೆ ಏರ್ಪಾಡು ಮಾಡಿರುತ್ತಾರೆ. ದೇಶೋನ್ನತಿಗೆ ಇದೇ ಪ್ರಥಮ ಭಾಗವೆನಿಸುವುದು.

❦❦❦

ಕಳೆದ ೧೯೦೦ ನೆ ಇಸವಿಯಲ್ಲಿ ಚೀನಾದಲ್ಲಿ ಬಾಕ್ಸರ್ ದಂಗೆಯುಂಟಾಗಿ ಅನೇಕ ಮಿಷನ್ ಪಾದ್ರಿಗಳೂ ಕಷ್ಟನಷ್ಟಗಳಿಗೆ ಗುರಿಮಾಡಲ್ಪಟ್ಟರಷ್ಟೆ. ಅಂಥಾ ಮಿಷನ್ ಸಂಘದವರಿಗೆಲ್ಲಾ ಚೀನಾ ಗವರ್ನ್‌ಮೆಂಟಿನವರು ದ್ರವ್ಯರೂಪವಾಗಿ ಪ್ರತಿಫಲವನ್ನು ಕೊಡುತ್ತೇವೆಂದು ತಿಳಿಸಿದರು. ಮಿಷನ್ ಸಂಘದವರು ಆ ಹಣವನ್ನೆಲ್ಲಾ ತಮಗೆ ಕೊಡಬೇಕಾದ ಅಗತ್ಯವಿಲ್ಲವೆಂತಲೂ, ಒಂದು ಫಂಡ ಹಾಕಿ ಚೀನಾ ವಿದ್ಯಾರ್ಥಿಗಳನ್ನು ಆ ಹಣದಲ್ಲಿ ವೇತನಕೊಟ್ಟು ವಿಲಾಯತಿಗೆ ಕಳುಹಿಸಿ ವಿದ್ಯೆ ಕಲಿಸಬೇಕೆಂತಲೂ ಜವಾಬು ಕೊಟ್ಟರು. ಈಗ ಗವರ್ನ್‌ಮೆಂಟಿನವರು ಅದೇ ರೀತಿ ವರುಷಕ್ಕೆ ೩೫ ಮಂದಿ ವಿದ್ಯಾವಂತರಾದ ಯೌವನಸ್ಥರನ್ನು ವಿಲಾಯತಿಗೆ ವೇತನಕೊಟ್ಟು ಕಳುಹಿಸಲಾರಂಭಿಸಿದ್ದಾರೆ.

❦❦❦

ರಷ್ಯಾ ರಾಜ್ಯದ ವಿದ್ಯಾಭ್ಯಾಸದ ಇಲಾಖಾ ಮಂತ್ರಿಗಳು ರಾಜಧಾನಿಯಾದ ಪೀಟರ್ಸ್‌ಬರ್ಗ್ ಪಟ್ಟಣದಲ್ಲಿ ಪ್ರಜಾಪ್ರತಿನಿಧಿಗಳನ್ನು ಕೂಡಿಸಿ, ವರ್ತಮಾನ ಪತ್ರಿಕೆಗಳನ್ನು ನಡಸತಕ್ಕವರಿಗೆ ಸಂಬಂಧಪಡುವಂಥಾ ಕಾನೂನನ್ನು ಮಾಡಿ ತಿಳಿಸಿದರು. ಅದರ ಮುಖ್ಯಾಭಿಪ್ರಾಯವೇನೆಂದರೆ—ಯಾವ ವರ್ತಮಾನ ಪತ್ರಿಕೆಯವರೂ ಎದುರು ಮತವನ್ನು ಹಿಡಿದು ಚರ್ಚಿಸಿ ನಿಂದಿಸಕೂಡದು. ಸ್ವದೇಶ ಮತಭಕ್ತಿಯನ್ನು ಕುರಿತು ಯಾವ ಪತ್ರಿಕೆಯಲ್ಲೂ ಪ್ರೋತ್ಸಾಹಿಸಿ ಬರೆಯಕೂಡದು. ದುರ್ಬೋಧ, ಬೈಗಳ ಅಸಹ್ಯಕರವಾದ ಸಂಗತಿಗಳನ್ನು ಕುರಿತ ಬರವಣಿಗೆಯನ್ನು ಖಂಡಿತವಾಗಿ ತ್ಯಜಿಸತಕ್ಕದ್ದು. ಯಾವ ಪತ್ರಿಕೆಯಲ್ಲಾಗಲಿ ಇದಕ್ಕೆ ವ್ಯತಿರಿಕ್ತವಾಗಿ ನಡೆದ ಪಕ್ಷದಲ್ಲಿ ಅಂಥಾ ಪತ್ರಿಕಾಧಿಪತಿಗಳು ಮುಂತಾದವರನ್ನು ಹಿಡಿದು ಶಿಕ್ಷಿಸಲಾಗುತ್ತದೆ.

❦❦❦

ಪಿರ್ಷ್ಯದ ರಾಜ್ಯಕ್ಕೆ ಸೇರಿದ ಟಬ್ರಿಸ್ ಕಡೆ ಶಿಂದಾ ಎಂಬ ಪ್ರಾಂತದ ಮುಖ್ಯನಗರವಾದ ಟಬ್ರಿಸ್ ಪಟ್ಟಣದ ಸಮೀಪದಲ್ಲಿ ಪೋಸ್ಟ್ ಆಫೀಸಿನ ಬ್ಯಾಂಕಿಗೆ ಸುಮಾರು ನಾಲ್ಕು ಲಕ್ಷ ರೂಪಾಯಿಯನ್ನು ಸಾಗಿಸಿಕೊಂಡು ಹೋಗುತ್ತಿದ್ದರು. ಆ ಹಣದ ಪೆಟ್ಟಿಗೆಯೊಳಗೆ ಜನರಿಂದ ಕೆಲವು ಅಪಾಯವಾಗಿತ್ತು ಕಳ್ಳರು ಆ ಜನರ ಮಧ್ಯೆ ಬಾಂಬ್ ಎಂಬ ಮದ್ದಿನ ಗುಂಡುಗಳನ್ನು ಹಾಕಿ ಅನಾಹುತವನ್ನುಂಟುಮಾಡಿ, ಆ ಗಲಬೆಯಲ್ಲಿ ಸರ್ಕಾರದ ಹಣವನ್ನೆಲ್ಲಾ ಅಪಹರಿಸಿಕೊಂಡೇ ಹೋಗಿರುತ್ತಾರೆ. ಆ ಗುಂಡುಗಳು ಹಾರಿ ಒಡೆದು ಬಹು ಘೋರವಾದ ಅನಾಹುತ ಸಂಭವಿಸಿ ನೂರಾರು ಪ್ರಜೆಗಳು ಮೃತಪಟ್ಟರು. ಅನೇಕರಿಗೆ ಗಾಯಗಳಾದವು. ಪೇಟೆಯಲ್ಲಿ ವರ್ತಕರೇ ಮುಂತಾದವರಿಗೆ ತುಂಬಾ ನಷ್ಟವಾಯಿತು. ಎಷ್ಟು ಮಂದಿ ಈ ಅನಾಹುತದಲ್ಲಿ ಮೃತಪಟ್ಟರೋ ತಿಳಿದು ಬರಲಿಲ್ಲ.

❦❦❦

ಪರ್ಷಿಯಾ ರಾಜ್ಯದ ಷಾಹ ಅವರ ಸಹೋದರನಾದ ಸಾಲಾರ್ ದ್ದೌಲಾ ಎಂಬುವನು ಜನರನ್ನು ಕಟ್ಟಿಕೊಂಡು ಕೆಲವು ಕಾಲದಿಂದ ದಂಗೆಕಾರ್ಯಗಳನ್ನು ನಡಿಸಿ ಪ್ರಜಾಸೌಖ್ಯಕ್ಕೆ ಭಂಗವನ್ನುಂಟುಮಾಡುತ್ತಿದ್ದನು. ಈಗಿನ ಷಾಹ ಅವರನ್ನು ಸಿಂಹಾಸನದಿಂದ ಇಳಿಸಿ ತಾನೇ ದೊರೆಯಾಗಬೇಕೆಂದು ಪ್ರಯತ್ನಪಟ್ಟನು. ಆದರೆ ಅತನ ಸಾಹಸವೆಲ್ಲಾ ನಿಷ್ಪ್ರಯೋಜನವಾಯಿತು. ಕಳೆದ ವಾರ ಆತನು ಹೋಗಿ ಅಲ್ಲಿರುವ ಇಂಗ್ಲಿಷ್ ರಾಯಭಾರಿಯ ಆಶ್ರಯವನ್ನು ಪಡೆದುಕೊಂಡು, ತನ್ನನ್ನು ಷಾಹರವರಿಗೆ ಒಪ್ಪಿಸಿಕೊಡಬಾರದೆಂದು ಬೇಡಿಕೊಂಡನು. ಈಗ ಷಾಹರವರು ಈ ಸಹೋದರನನ್ನು ಯಾವ ರೀತಿ ಶಿಕ್ಷಿಸಬೇಕೆಂದಿರುವರೋ ನೋಡಬೇಕು. ಆದರೆ ಇಂಗ್ಲಿಷ್ ಗವರ್ನ್‌ಮೆಂಟಿನವರೂ ಪರ್ಷಿಯಾ ಸರ್ಕಾರದವರೂ ಸೇರಿ ಈತನ ವಿಷಯವನ್ನು ಇತ್ಯರ್ಥಮಾಡುವರೆಂದು ತಿಳಿದುಬರುತ್ತದೆ.

❦❦❦

ಹಿಂದುಸ್ಥಾನದಲ್ಲಿ ಸೋಸೆಯರನ್ನು ಮನೆಗಳಲ್ಲಿ ಯಾವರೀತಿ ಹಿಂಸೆಗೆ ಗುರಿಮಾಡುವರೋ ಹಾಗೆಯೇ ಚೀನಾ ಜನರೂ ಮಾಡುವರು. ಉತ್ತರಚೀನಾದಲ್ಲಿ ಹೆನೇ ಎಂಬ ಪಟ್ಟ

ಊರೊಳಗೆ ಒಂದು ಮನೆಯವರು ಹದಿನಾರು ವರುಷದ ಒಬ್ಬ ಹುಡುಗಿಯನ್ನು ಮದುವೆಮಾಡಿಕೊಳ್ಳುವುದಕ್ಕೆ ಕರೆದುಕೊಂಡುಬಂದಿಟ್ಟುಕೊಂಡರು ಆ ಹುಡುಗಿ ಬಂದ ಕೆಲವ ದಿವಸಗಳಲ್ಲೇ ಆ ಮನೆಯ ಯಜಮಾನನು (ವರನ) ಕಾಯಿಲೆಯಾಗಿ ಸತ್ತುಹೋದನು ಅತ್ತೆಯಾದವಳು ಆ ಹುಡುಗಿ ಬಂದಕಾರಣದಿಂದಲೇ ಯಜಮಾನ ಸತ್ತನೆಂದು ನಿರ್ಧರಿಸಿ, ಅವಳನ್ನು ಹಿಂಸೆಪಡಿಸಲಾರಂಭಿಸಿದಳು ಕಾದಿಯುವ ನೀರನ್ನು ಹುಡುಗಿಯ ಮೇಲೆ ಸುರಿದು, ಅವಳ ತಲೆಯ ಮೇಲೆ ಐದು ದೊಡ್ಡ ಮೊಳೆಗಳನ್ನೂ ಕತ್ತಿಗೆ ಎರಡು ಮೊಳೆಗಳನ್ನೂ ಹೊಡೆದಳು ಆ ಹುಡುಗಿ ಸತ್ತುಹೋದಳೆಂದು ಹೇಳಬೇಕಾದದ್ದಿಲ್ಲ ಅವಳ ತಂದೆ ತಾಯಿಗಳು ಬೀಗರಿಂದ ಪ್ರತಿಫಲವನ್ನು ಪಡೆಯುವುದಕ್ಕೆ ಒಪ್ಪಿಕೊಂಡರಲ್ಲದೆ ಆ ಅತ್ತೆಯ ಮೇಲೆ ಮೊಕದ್ದಮೆ ಮಾಡಲಿಲ್ಲ

ಶ್ರೀ ಶೃಂಗೇರಿ ಸ್ವಾಮಿಗಳು.

ರಾಜಧಾನಿಯಲ್ಲಿ ನಡೆದ ಅತಿಥ್ಯಗಳು.

ಕಳೆದ ಭಾನುವಾರ ಬೆಳಿಗ್ಗೆ, ಶ್ರೀ ಶೃಂಗೇರಿ ಸ್ವಾಮಿಗಳು ರಾಜಧಾನಿಗೆ ದಯಮಾಡಿದರು ವೈದಿಕಮಂಡಲಿಯವರೂ ದಿವಾನರೂ ಪಟ್ಟಣದ ಮುಖ್ಯ ಅಧಿಕಾರಿಗಳೂ ಎಲ್ಲಾ ಕೋಮುಗಳ ಪ್ರತಿನಿಧಿಗಳೂ ಬೋಪ್ಪನಹಳ್ಳಿಕೆರೆಯ ಬಳಿ ಕಾದಿದ್ದು ಸ್ವಾಮಿಗಳಿಗೆ ಸುಖಾಗಮನವನ್ನು ಬಯಸಿ, ಸೈನ್ಯ ವಾದ್ಯ ಮೊದಲಾದ ಮರ್ಯಾದೆಗಳೊಡನೆ ಮೆರವಣಿಗೆಯಾಗಿ ಕರೆದುತಂದರು ಕೋಟೆ ಬಾಗಿಲಲ್ಲಿ ಗೌರವಾರ್ಥವಾದ ೨೧ ತೋಪುಗಳು ಹಾರಿಸಲ್ಪಟ್ಟವು ಅರಮನೆಯ ಮುಂದೆ ಕೆನ್ನಾಟ್ಟಿ ನುಟ್ಟಿಗೆ ಶ್ರೀಮನ್ಮಹಾರಾಜರವರೂ ಶ್ರೀಮಾನ್ ಯುವರಾಜರವರೂ ಪಾದಚಾರಿಗಳಾಗಿ ದಯಮಾಡಿ, ಸ್ವಾಮಿಗಳನ್ನು ಕಂಡು ಅವರಿಂದ ಫಲ ಮಂತ್ರಾಕ್ಷತೆಗಳನ್ನು ಸ್ವೀಕರಿಸಿ, ಅರಮನೆಯೊಳಕ್ಕೆ ಕರೆದುಕೊಂಡುಹೋಗಿ, ಶ್ರೇಷ್ಠವಾದ ಬಂಗಾರದ ಪೀಠದಲ್ಲಿ ಕುಳ್ಳಿರಿಸಿ, ಸಾಷ್ಟಾಂಗ ಪ್ರಣಾಮಪೂರ್ವಕವಾಗಿ ಜಗದ್ಗುರುಗಳನ್ನು ವಂದಿಸಿ ಧೂಳೀ ಪಾದಪೂಜಾ ಸೇವೆಯನ್ನು ನಡಿಸಿದರು ಜನಾನಿಯವರೂ ಪಾದಪೂಜೆಮಾಡಿದ ಮೇಲೆ ಸ್ವಾಮಿಗಳು ಶ್ರೀಮನ್ಮಹಾರಾಜರವರಿಂದ ಬೀಳ್ಕೊಂಡು ಪಾಲಕ್ಕಿಯನ್ನೇರಿ, ಕೋಟೆಯ ನಾಲ್ಕು ಬೀದಿಗಳಲ್ಲೂ ಮೆರವಣಿಗೆಯಾಗಿ ಬಂದು, ಹೊರಪಾರ್ಶ್ವದಲ್ಲಿರುವ ಸಂಸ್ಕೃತ ಪಾಠಶಾಲೆಗೆ ದಯಮಾಡಿದರು. ಆ ದಿನ ಪಟ್ಟಣವನ್ನು ಚಪ್ಪರ ಮೊದಲಾದವುಗಳನ್ನು ಕಟ್ಟಿ ಅಲಂಕಾರಮಾಡಿದ್ದರು. ಸಾವಿರಾರು ಪ್ರಜೆಗಳು ಸಾಲುಕಟ್ಟಿ ನಿಂತು ಸ್ವಾಮಿಗಳನ್ನು ದರ್ಶನಮಾಡಿದರು ಸಂಸ್ಕೃತ ಪಾಠಶಾಲೆಯನ್ನು ತಲಪಿದ ಮೇಲೆ ಸ್ವಾಮಿಗಳು ತಮ್ಮ ಇಷ್ಟ ಕಪಾಲು ಬಂದಿದ್ದ ಅರಸುಗಳನ್ನೂ ಅಧಿಕಾರಿಗಳನ್ನೂ ಪ್ರಜೆಗಳ ಮುಖಂಡರನ್ನೂ ಕೂಡಿಸಿಕೊಂಡು ನಾಲ್ಕಾರು ನಿಮಿಷಗಳವರೆಗೆ ಶ್ರೀಮನ್ ಮಹಾರಾಜರವರ ಭಕ್ತಿ ಪ್ರೀತಿ ಶ್ರದ್ಧಾದಿಗಳನ್ನು ಕುರಿತು ಪ್ರಸ್ತಾಪಮಾಡಿ ತಮ್ಮ ಸಂತೋಷಾತಿಶಯವನ್ನು ಎಲ್ಲರಿಗೂ ತಿಳಿಸಿದ ಮೇಲೆ ಎಲ್ಲರಿಗೂ ಫಲ ಮಂತ್ರಾಕ್ಷತಾದಿಗಳನ್ನು ಕೊಟ್ಟು ಕಳುಹಿಸಿದರು ಪದ್ಧತಿಯಂತೆ ಮಠದಲ್ಲಿ ಸಂತರ್ಪಣೆಗಳು ಅರಮನೆಯಿಂದ ನಡಸಲ್ಪಡುತ್ತಲಿವೆ, ಈ ದಿನ ಶ್ರೀಮನ್ ಮಹಾರಾಜರವರ ಅರಮನೆಯ ಜನಾನಿಯವರೂ ಸ್ವಾಮಿಗಳನ್ನು ಅರಮನೆಗೆ ಮರ್ಯಾದೆಗಳೊಡನೆ ಕರೆಸಿಕೊಂಡು ಭಿಕ್ಷೆಪಾದಪೂಜಾದಿಗಳನ್ನು ಯಥಾವಿಧಿಯಾಗಿ ನಡಿಸಿ ತಮ್ಮ ಭಕ್ತಿ ಪ್ರೀತಿಗಳನ್ನು ಪ್ರಕಾಶಪಡಿಸುವರು. ಶ್ರೀ ಸ್ವಾಮಿಗಳು ಇನ್ನೊಂದು ವಾರದ ತನಕ ರಾಜಧಾನಿಯಲ್ಲಿದ್ದು ಮುಂದಕ್ಕೆ ದಕ್ಷಿಣ ದೇಶದ ಕಡೆ ಸಂಚಾರ ಹೊರಡುವವರಾಗಿದ್ದಾರೆಂದು ಕೇಳುತ್ತೇವೆ

ರಾಜಧಾನಿಯ ಮ್ಯುನಿಸಿಪಲ್ ಮೀಟಿಂಗು.

ಕಳದ ಶನಿವಾರ ಬೆಳಿಗ್ಗೆ ಮೈಸೂರು ಪಟ್ಟಣದ ಮ್ಯುನಿಸಿಪಲ್ ಕೌನ್ಸಲರುಗಳು ಟೌನ್ ಹಾಲ್ ಬಂಗಲೆಯಲ್ಲಿ ಸಭೆ ಸೇರಿ ತಿಂಗಳು ಕಟ್ಟಳೆಯ ಮೀಟಿಂಗನ್ನು ನಡಿಸಿದರು ಕಳೆದ ಮೇ ತಿಂಗಳಲ್ಲಿ ಮ್ಯುನಿಸಿಪಾಲಿಟಿಗೆ ಎಲ್ಲಾ ಬಾಬುಗಳಿಂದಲೂ ೧೨,೫೬೮ ಚಿಲ್ಲರೆ ರೂಪಾಯಿ ಜಮಾ ಆಯಿತು ೧೩,೦೯೯ ಚಿಲ್ಲರೆ ರೂಪಾಯಿ ಖರ್ಚಾಯಿತು. ಆ ತಿಂಗಳಲ್ಲಿ ಜನನ ೯೩, ಮರಣ—ಪ್ಲೇಗ್ ೨೦, ಕಾಲರಾ ೨ ಸಿಡುಬು ೧, ಜ್ವರ ೨೧, ಇತರ ಕಾರಣಗಳು ೧೫೦, ಒಟ್ಟು ೧೯೩ ಎಂದು ಗೊತ್ತಾಯಿತು

ಕೃಷ್ಣರಾಜ ಮೊಹಲ್ಲಾದಲ್ಲಿರುವ ಲಕ್ಷ್ಮಣರಾಜು ಎಂಬ ಪಂಡಿತರು ಅನೇಕ ಜನರಿಗೆ ಉಳುಕು ಮೊದಲಾದ ಬಾಧೆಗಳನ್ನು ನಿವಾರಣೆ ಮಾಡುತ್ತಿದ್ದಾರೆಂತಲೂ ಅವರಿಗೆ ಮ್ಯುನಿಸಿಪಾಲಿಟಿಯಿಂದ ಸ್ವಲ್ಪ ಗ್ರಾಂಟು ಕೊಡುವುದು ಅನುಕೂಲವೆಂತಲೂ ಸಿವಿಲ್ ಸರ್ಜನರವರು ಶಿಫಾರಸು ಮಾಡಿದ್ದರ ಮೇಲೆ ಕೌನ್ಸಲರುಗಳು ಆ ಪಂಡಿತರಿಗೆ ಮ್ಯುನಿಸಿಪಾಲಿಟಿಯಿಂದ ೧೦ ರೂಪಾಯನ್ನು ಕೊಡುವುದಕ್ಕೆ ಒಪ್ಪಿ ಲೋಕಲ್ ಫಂಡಿನಿಂದಲೂ ೫ ರೂಪಾಯಿ ಕೊಡಬೇಕೆಂದು ಗವರ್ನ್‌ಮೆಂಟಿಗೆ ಅರಿಕೆಮಾಡುವಂತೆ ತೀರ್ಮಾನಿಸಿರುತ್ತಾರೆ.

ರಾಜಧಾನಿಯ ಸಂಸ್ಕೃತ ಕಾಲೇಜಿನಲ್ಲಿ ಆಯುರ್ವೇದ ವೈದ್ಯವನ್ನು ಕಲಿಸುವುದಕ್ಕೆ ಇಟ್ಟಿರುವ ಪಾಠಶಾಲೆಯನ್ನು ಅಭಿವೃದ್ಧಿಪಡಿಸಿ, ಕರ್ನಾಟಕ ವೈದ್ಯಕ್ರಮಗಳನ್ನು ವಿದ್ಯಾರ್ಥಿಗಳಿಗೆ ಕಲಿಸುವುದಕ್ಕೆ ಹೆಚ್ಚಾದ ಔಷಧ್ಯಾಲಯಗಳನ್ನು ಕಲ್ಪಿಸಿ ನಡಸುವಂತೆ ಮಾಡಬೇಕೆಂದೂ, ಇಲ್ಲಿ ಹೆಸರುಗೊಂಡಿದಂಥಾ ಕರ್ನಾಟಕ ಪಂಡಿತರನ್ನು ತಾಲ್ಲೂಕುಗಳಲ್ಲೂ ಹೋಬಳಿಗಳಲ್ಲೂ ನೇಮಿಸಿ ಪ್ರಜೆಗಳ ರೋಗಕ್ಕೆ ಚಿಕಿತ್ಸೆ ಮಾಡಿಸಬೇಕೆಂದೂ, ವಿದ್ಯಾಭ್ಯಾಸದ ಇಲಾಖಾ ಇನ್ಸ್‌ಪೆಕ್ಟರ್ ಜನರಲ್‌ರವರು, ಮುಜರಾಯಿ ಸೆಕ್ರೆಟರಿಯವರು, ಸೀನಿಯರ್ ಸರ್ಜನರವರು, ಸಂಸ್ಕೃತ ಕಾಲೇಜಿನ ಪ್ರಿನ್ಸಿಪಾಲರು ಕಮಿಟಿಯ ಸೆಕ್ರೆಟರಿಯವರು, ಮೈಸೂರು ಕರ್ನಾಟಕ ಆಸ್ಪತ್ರೆಯ ಮುಖ್ಯ ಪಂಡಿತರು, ಇವರೆಲ್ಲಾ ಸಭೆ ಸೇರಿ ಈ ವೈದ್ಯಶಾಲೆಯ ಏರ್ಪಾಡಿನ ವಿಷಯವನ್ನು ಚರ್ಚಿಸಿ, ಕೂಡಲೆ ರಿಪೋರ್ಟು ಕಳುಹಿಸಬೇಕೆಂದೂ ಗವರ್ನ್‌ಮೆಂಟಿನವರು ಹುಕುಂ ಕೊಟ್ಟಿದ್ದಾರೆ ಕೌನ್ಸಲರುಗಳು ಈ ಹುಕುಮನ್ನು ಓದಿ ರಿಕಾರ್ಡುಮಾಡಿಕೊಂಡಿದ್ದಾರೆ

ಮೈಸೂರು ಪಟ್ಟಣದಲ್ಲಿ ಮೆ॥ ರಹಿಮತುಲ್ಲಾ ಅಹಮದ್ ಸೇಟರು ಇಟ್ಟು ನಡಸುತ್ತಿರುವ ಸಕ್ಕರೆ ಕಾರ್ಖಾನೆಗೆ ನೀರಿನ ನಲ್ಲಿಯನ್ನು ಇಟ್ಟುಕೊಡಬೇಕೆಂತಲೂ, ಅದರಿಂದ ಮ್ಯುನಿಸಿಪಾಲಿಟಿಗೆ ವರುಷಕ್ಕೆ ಎರಡು ಸಾವಿರ ರೂಪಾಯಿನ ತನಕ ಹುಟ್ಟುವಳಿ ಆಗುತ್ತಿರುವುದರಿಂದ ಆ ನಲ್ಲಿ ನೀರಿಗೆ ತೆರಿಗೆ ವಸೂಲ್ಮಾಡಬೇಕಾದ ಅಗತ್ಯವಿಲ್ಲವೆಂತಲೂ ಗೊತ್ತುಮಾಡಿದ್ದಾರೆ

ಮ್ಯುನಿಸಿಪಲ್ ಫಂಡಿನಿಂದ ಇಲ್ಲಿರುವ ಹೈಸ್ಕೂಲುಗಳಿಗೆ ಗ್ರಾಂಟು ಸಲ್ಲುತ್ತಿದೆ. ಈ ಗ್ರಾಂಟುಗಳನ್ನು ಗವರ್ನ್‌ಮೆಂಟಿನವರೇ ವಹಿಸಿಕೊಂಡ ಪಕ್ಷದಲ್ಲಿ ಮ್ಯುನಿಸಿಪಾಲಿಟಿಯವರು ಆ ಹಣವನ್ನೆಲ್ಲಾ ಬಾಲಕರಿಗೆ ಸಾಮಾನ್ಯ ಓದು ಬರಹವನ್ನೂ ಯಾವದಾದರೂ ಕೈಗಾರಿಕೆ ವಿದ್ಯೆಯನ್ನೂ ಕಲಿಸಿಕೊಡುವುದಕ್ಕೆ ಸಹಾಯವಾಗುತ್ತೆಂತಲೂ, ಇದಕ್ಕೆ ಈಗಿರುವ ಹಣ ಸಾಲದ್ದರಿಂದ ಮ್ಯುನಿಸಿಪಲ್ ಹಣದಲ್ಲಿ ಇನ್ನೂ ೨,೫೦೦ ರೂಪಾಯಿ ಖರ್ಚುಮಾಡುವಂತೆ ಮ್ಯುನಿಸಿಪಾಲಿಟಿಗೆ ಅಧಿಕಾರ ಕೊಡಬೇಕೆಂತಲೂ ಮೆ॥ ವೆಂಕಟಕೃಷ್ಣಯ್ಯನವರು ಸೂಚಿಸಿದ್ದನ್ನು ಕೌನ್ಸಲರುಗಳೆಲ್ಲಾ ಒಪ್ಪಿಕೊಂಡಿದ್ದಾರೆ.

ಪಟ್ಟಣಕ್ಕೆ ನೀರು ಸರಬರಾಯಿ ಮಾಡುವ ಜವಾಬ್ದಾರಿಯನ್ನು ಮ್ಯುನಿಸಿಪಾಲಿಟಿಯವರು ವಹಿಸಿಕೊಂಡಿದ್ದಾಗ್ಗೆ ಯಂತ್ರಗಳ ರಿಪೇರಿ ಮುಂತಾದ್ದಕ್ಕೆ ಅನೇಕ ಸಾಮಾನುಗಳನ್ನು ಕೊಂಡು ತರಿಸಿದ್ದರು ಈಗ ಈ ನೀರಿನ ಇಲಾಖೆಯನ್ನು ಇಂಜನಿಯರಿಗೆ ವಹಿಸಿದ್ದಾರೆ ಅವರು ಮ್ಯುನಿಸಿಪಾಲಿಟಿಯವರ ಬಳಿ ಇರುವ ತಮಗೆ ಉಪಯೋಗಕ್ಕೆ ಬರುವಂಥಾ ಮೇಲ್ಕಂಡ ಸಾಮಾನುಗಳನ್ನು ತಮಗೆ ಕೊಟ್ಟುಬಿಡಬೇಕೆಂದು ಮ್ಯುನಿಸಿಪಾಲಿಟಿಯವರನ್ನು ಕೇಳಿದರು ಕೌನ್ಸಲರುಗಳು ಆ ಸಾಮಾನಿಗೆಲ್ಲಾ ಮ್ಯುನಿಸಿಪಲ್ ಹಣ ಖರ್ಚಾಗಿರುವುದರಿಂದ ನೀರಿನ ಇಲಾಖೆಯವರಿಗೆ ಅವುಗಳನ್ನು ಮಾಮೂಲಾಗಿ ಕೊಡಲಾಗುವುದಿಲ್ಲವೆಂದು ತೀರ್ಮಾನ ಮಾಡಿದರು

ಮ್ಯುನಿಸಿಪಾಲಿಟಿಯವರು ಹೊಗೆ ಸೊಪ್ಪಿನ ಮೇಲೆ ಮಣಕ್ಕೆ ೩—೩॥ ರೂಪಾಯಿನಂತೆ ದುಬಾರಿ ಸುಂಕ ವಸೂಲ್ಮಾಡುತ್ತಿರುವುದರಿಂದ ಅನೇಕರು ಹೊಗೆ ಸೊಪ್ಪನ್ನು ಕಳ್ಳತನದಿಂದ ಊರೊಳಕ್ಕೆ ತರಲೂ, ಮ್ಯುನಿಸಿಪಲ್ ಉತ್ಪತ್ತಿ ಕಡಿಮೆಯಾಗಲೂ ಕಾರಣವಾಗಿದೆ ಎಂತಲೂ, ಆ ಸುಂಕದ ದರವನ್ನು ಮಣಕ್ಕೆ ೧॥ ರೂಪಾಯಿನಂತೆ ಇಳಿಸಿದಲ್ಲಿ ಮೋಸಕ್ಕೆ ಅವಕಾಶವಿಲ್ಲವೇನೂ ಉತ್ಪತ್ತಿ ಹೆಚ್ಚಲೂ ಸಹಾಯವಾಗುತ್ತೆಂತಲೂ ಮೆ॥ ಶ್ರೀಕಂಠಯ್ಯನವರು ಸೂಚಿಸಿದರು ಈ ವಿಷಯವನ್ನು ಕೌನ್ಸಲರುಗಳು ಚರ್ಚೆ ಮಾಡಿದ್ದರಲ್ಲಿ ಪ್ರಜೆಗಳಿಗೆ ಹೊಗೆಸೊಪ್ಪು ಅವಶ್ಯವಾದ ಪದಾರ್ಥವಲ್ಲವಾದ್ದರಿಂದ ಅಂಥಾ ವಸ್ತುಗಳ ಮೇಲೆ ಹೆಚ್ಚು ದರದ ಸುಂಕವನ್ನು ಹಾಕಿ ವಸೂಲ್ಮಾಡಬೇಕೆಂತಲೂ, ಕಡಿಮೆ ಮಾಡೋಣದರಿಂದ ಈ ನಿಷಾಪದಾರ್ಥದ ಸೇವನೆಯು ಹೆಚ್ಚುವುದೆಂತಲೂ ಅಭಿಪ್ರಾಯ ಪಟ್ಟದ್ದರಿಂದ ಮೆ॥ ಶ್ರೀಕಂಠಯ್ಯನವರು ತಮ್ಮ ಸಲಹೆಯನ್ನು ವಾಪಸು ಪಡೆದುಕೊಂಡರು

ತಾಲ್ಲೋಕು ವರ್ತಮಾನಗಳು

ತಿಪ್ಟೂರು.—ಪ್ರತಿದಿನವೂ ಮೋಡವಾಡುತ್ತಲೇ ಇರುತ್ತವೆ ಮಳೆ ಮಾತ್ರ ಇಲ್ಲ ರೈತರೆಲ್ಲ ಮಳೆಯನ್ನೇ ಎದುರುನೋಡುತ್ತಿದ್ದಾರೆ, ಭಾವಿಗಳಲ್ಲೆಲ್ಲಾ ನೀರು ಸಮೃದ್ಧಿಯಾಗಿರುತ್ತೆ ಕೆರೆಯಲ್ಲಿ ನೀರು ಬಳಸಕೂಡದೆಂದು ಹಿಂದೆ ನಿರ್ಬಂಧವಾಗಿದ್ದದ್ದು ತಪ್ಪಿಹೋದದ್ದರಿಂದ ಜನಗಳಿಗೆ ಸಂತೋಷವಾಗಿದೆ —ಸುಮಾರು ತಿಂಗಳ ಹಿಂದೆ ಈ ಊರಲ್ಲಿರುವ ರವಿನ್ಯೂ ಗುಮಾಸ್ತೆ ಸೂರಪ್ಪನವರ ಮನೆಯಲ್ಲಿಯೂ ಕರಡಿ ಸ್ಟೇಷನ್ ಮಾಸ್ಟರ ಮನೆಯಲ್ಲಿಯೂ ಕಳ್ಳರು ನುಗ್ಗಿ ಸುಮಾರು ೫೦೦ ರೂಪಾಯಿ ಬೆಲೆಯುಳ್ಳ ಬಾಳುವ ಪದಾರ್ಥಗಳನ್ನು ದೋಚಿಕೊಂಡು ಹೋಗಿರುತ್ತಾರೆ ಕಳ್ಳರು ಮಾತ್ರ ಇದುವರೆಗೂ ಪತ್ತೆಯೇ ಇಲ್ಲ. ಈ ವಿಷಯದಲ್ಲಿ ಪೋಲೀಸಿನವರು ತುಂಬಾ ಮುತುವರ್ಜಿ ವಹಿಸಿ ಪತ್ತೆ ತರದೂದು ನಡಸುತ್ತಾರೆಂದು ನಂಬಿರುತ್ತೇನೆ - ಪೇಟೆಯಲ್ಲಿ ಮೊದಲಿದ್ದ ಚರಂಡಿಗಳನ್ನು ಕಿತ್ತು ಹಾಕಿಸಿ ಸುಮಾರು ಒಂದು ತಿಂಗಳ ಮೇಲೆಯೇ ಆಯಿತು ಇದುವರೆಗೂ ಚರಂಡಿ ಕಟ್ಟಿಸದೆ ಕಲ್ಲುಗಳನ್ನು ಬೀದಿಯಲ್ಲಿ ಹರಡಿರುವದರಿಂದ ತಿರುಗಾಡುವ ಜನರಿಗೆ ತುಂಬಾ ಅನಾನುಕೂಲವಾಗಿರುವದಲ್ಲದೆ ಅಕಸ್ಮಾತ್ ಮುಗ್ಗರಿಸಿ ಬೀಳುವದೂ ಆಗಿರುತ್ತೆ. ಆದ್ದರಿಂದ ನಮ್ಮ ವೈಸ್ ಪ್ರಸಿಡೆಂಟರು ಮುತುವರ್ಜಿ ವಹಿಸಿ ಈ ಕಷ್ಟವನ್ನು ನಿವಾರಣೆ ಮಾಡುತ್ತಾರೆಂದು ನಂಬಿರುತ್ತೇನೆ

ಫ್ರೇಜರ್‌ಟೌನ್.—ಈ ಪ್ರಾಂತ್ಯ ೩ ವಾರಗಳಿಂದ ಮಳೆ ಇಲ್ಲ ಕಾರ್ ಬೆಳೆಗೆ ಮಳೆ ಬೇಕು ಮೊದಲನೇ ಮಳೆಗೇನೇ ಈ ಊರಿನ ಕೆರೆ ತುಂಬಿ ಕೋಡಿಬಿದ್ದಿತು, ರೈತರು ಎರಡು ಬೆಳೆಗಳನ್ನು ತೆಗೆಯಬಹುದು ಧಾರಣೆ ಇನ್ನೂ ಚಪಾವಿನಲ್ಲಿದೆ ಅಕ್ಕಿ ರೂಪಾಯಿಗೆ ೩ ಸೇರು, ರಾಗಿ ೧೩ ಸೇರು ಮಾರುತ್ತಾರೆ.—ಕೆರೆಯಲ್ಲಿ ಕೊಳಕು ಬಟ್ಟೆಗಳನ್ನು ಒಗೆಯುವದನ್ನೂ ಮಲಮೂತ್ರ ವಿಸರ್ಜನೆಯನ್ನೂ ನಿಲ್ಲಿಸಲಿಲ್ಲ. ಇದರಿಂದ ನೀರು ಕೆಡುತ್ತೆ ಇದನ್ನು ಕುಡಿಯುವದರಿಂದ ಜನರಿಗೆ ಕಾಯಿಲೆಗಳು ಉಂಟಾಗುತ್ತವೆ. ಮ್ಯುನಿಸಿಪಲ್ ಮೆಂಬರುಗಳು ಯೋಚಿಸತಕ್ಕದ್ದಾಗಿದೆ —ಫ್ರೇಜರ್ ಟೌನ್ ಸಬ್ ತಾಲ್ಲೂಕಿಗೆ ಸೇರಿದ ಹಾರುವಳ್ಳಿ ಎಂಬ ಗ್ರಾಮಕ್ಕೆ ಕೆಲವು ದಿನಗಳಿಂದಲೂ ಒಂದು ಚಿರತೆಯು ರಾತ್ರಿಕಾಲದಲ್ಲಿ ಪ್ರವೇಶಿಸಿ ನಾಯಿ, ಕುರಿ, ಆಡುಗಳನ್ನು ಎತ್ತಿಕೊಂಡು ಹೋಗುತ್ತಾ ಇತ್ತು ಇದನ್ನು ಮುದ್ದುರಾಮೇಗೌಡನೆಂಬುವನು ತಾ. ೧೭ ನೆ ಸೋಮವಾರ ರಾತ್ರಿ ಅದು ಹೋಗುವ ಮಾರ್ಗವನ್ನು ನೋಡಿಕೊಂಡು ಬಂದು ಒಂದು ಮರದ ಮೇಲೆ ಹತ್ತಿ ಕಾದಿದ್ದು ಒಂದೇ ಗುಂಡೇಟಿನಿಂದ ಅದನ್ನು ಹೊಡೆದನು. ಏಟು ಬಿದ್ದ ಮೇಲೆ ಅದು ಮುಕ್ಕಾಲು ಮೈಲಿ ದೂರದ ವರೆಗೆ ಅಬ್ಬರಿಸುತ್ತಾ ಓಡ್ಹೋಗಿ ಕಡೆಯಲ್ಲಿ ಊರು ಸಮೀಪ ಬಂದು ಬಿದ್ದು ಪ್ರಾಣಬಿಟ್ಟಿತು ತಾ ೧೮ ನೆ ಮಂಗಳವಾರ ಅದನ್ನು ಗಾಡಿಯ ಮೇಲೆ ಹಾಕಿ ಊರೆಲ್ಲಾ ಮೆರವಣಿಗೆ ಮಾಡಿಸಿದರು ... ರಿಂದ ಜನರಿಗೆ ಭೀತಿ ನಿವಾರಣೆಯಾಯಿತು

ಮಂಡ್ಯ.—ಕಳೆದ ಗುರುವಾರ ಬೆಳಿಗ್ಗೆ ಶ್ರೀ ಶೃಂಗೇರಿ ಗುರುಗಳು ಮದ್ದೂರಿನಿಂದ ಇಲ್ಲಿಗೆ ದಯಮಾಡಿದರು, ಅವರ ದರ್ಶನಕ್ಕಾಗಿ ... ರು ಗ್ರಾಮದಿಂದಲೂ ಬೇರೆ ಬೇರೆ ಕಡೆಯಿಂದಲೂ ಬಂದಿದ್ದರು ... ಚಪ್ಪರ ಮಾವಿನ ಎಲೆ ಮುಂತಾದವುಗಳಿಂದ ಅಲಂಕರಿಸಲ್ಪಟ್ಟ... ವಾದ್ಯಮುಂತಾದವುಗಳಿಂದ ಇಲ್ಲಿನ ಅಧಿಕಾರಿಗಳೇ ಮುಂತಾ... ಸ್ವಾಮಿಯವರನ್ನು ಎದುರುಗೊಂಡು ಪೂರ್ಣಯ್ಯನವರ ಛ... ಪರಿವಾರದೊಂದಿಗೆ ಇಳಿಸಿದರು ಆ ದಿನ ಈ ಊರಿನವರೂ ಗ್ರಾ... ರೂ ಅಮಲ್ದಾರರೂ ಪಾದಪೂಜೆಮಾಡಿದರು. ಸಾಯಂಕಾಲ ಸ... ಣೆ ನಡೆಯಿತು ಆ ರಾತ್ರಿಯಲ್ಲಿ ಸ್ವಾಮಿಗಳವರು ಅವರ ಮ... ಕೆಲವರಿಗೆ ಬುದ್ಧಿವಾದಗಳನ್ನು ಹೇಳಿ ಪಶ್ಚಿಮವಾಹಿನಿಕಡೆ ಪ್ರಯಾಣ... ಸಿದರು —ಇಲ್ಲಿಗೆ ೨ ಮೈಲಿ ದೂರದಲ್ಲಿ ಇರುವ ಗುತ್ತಲು ಗ್ರಾಮದಲ್ಲಿ ಕಳೆದ ಗುರುವಾರ ಅರ್ಕೇಶ್ವರಸ್ವಾಮಿ ರಥೋ... ನಡೆಯಬೇಕಾಗಿತ್ತು ಈ ಉತ್ಸವ ಸುಮಾರು ೪೦—೫೦ ವ... ದ ನಿಂತುಹೋಗಿತ್ತು ಮುರಿದುಹೋಗಿದ್ದ ರಥವನ್ನು ಗ್ರಾಮ... ಸೇರಿ ಸುಮಾರು ೭,೦೦೦ ರೂಪಾಯಿವರೆಗೂ ಖರ್ಚುಮಾಡಿ ... ದಿಸಿಕೊಂಡು ಉತ್ಸವ ನಡಿಸಬೇಕೆಂದಿದ್ದರು ಅನೇಕ ಜನ ಒಕ್ಕ... ಗೌಡರು ಬೇರೆ ಬೇರೆ ಕಡೆಯಿಂದ ಬಂದು ಇದ್ದರು ಆದರೆ ಗ್ರಾಮದಲ್ಲಿರುವ ತಮ್ಮಡಿಗಳು ಪೂಜೆ ಮಾಡಕೂಡದೆಂತಲೂ ಬ್ರಾಹ್ಮ... ಮಾಡಬೇಕೆಂತಲೂ ವಿವಾದ ಉಂಟಾಗಿ ಅಮಲ್ದಾರರಿಗೆ ಅರ್ಜಿ ... ರು ಅವರು ವಿವಾದ ತೀರುವವರೆಗೂ ಲೈಸೆನ್ಸು ಕೊಡುವುದಿ... ದು ಹೇಳಿದರು. ಮಾರನೆ ದಿನ ಪಂಚಾಯಿತಿ ಸೇರಿತು ಆದರೂ ... ಗೊಟ್ಟರು ಸಮಾಧಾನಕೊಂಡಲೇ ಇಲ್ಲ ಉತ್ಸವವು ನಿಂತು... ಯಿತು

ದೊಡ್ಡಬಳ್ಳಾಪುರ.—ಈಗ ಛಳಿ, ಜ್ವರಾದಿ ಕಾಯಿಲೆ ಕಡಿಮೆಯಾಗಿವೆ ಸುಮಾರಾಗಿ ಮಳೆ ಬಂದಿರುವದರಿಂದ ... ಹೊಲಗಳಿಗೆ ಬೀಜಹಾಕಿದ್ದಾರೆ —ಮುನ್ಸಿಫ್ ಕೋರ್ಟು ಜೂ... ನೇ ತಾ. ಗೆ ಚಿಕ್ಕಬಳ್ಳಾಪುರಕ್ಕೆ ವರ್ಗವಾಗಿಹೋಯಿತು. ... ಕೆಲವು ಲಾಯರುಗಳು ಸಹ ಅಲ್ಲಿಗೆ ಹೋಗುತ್ತಾರೆ. ಇ... ಮುನ್ಸಿಫರಾದ ಮೆ॥ ರಿವಪ್ರಕಾಶಂ ಪಿಳ್ಳೆಯವರು ನಂದಿಗಿರಿಗೆ ... ವಾಗಿ ಹೋದರು —ಜೂನ್ ೨೩ ನೇ ತಾ ನಲ್ಲಿ ವೀರಭದ್ರನ ... ದಲ್ಲಿ ಮಾದಿಗರು ಮೈಲಾರಿ ದೇವರನ್ನು ಮಾಡಿದರು ಆ ಸಮ... ಲ್ಲಿ ಗಾವಿನ ಕುರಿಯನ್ನು ಕಡಿಯಬೇಕಾಗಿರುವಾಗ ಕತ್ತಿ... ಕಡಿಯದೆ ೩ ಮಂದಿ ಗೊರವಯ್ಯಗಳು ತಮ್ಮ ಹಲ್ಲುಗಳಿ... ಒಂದು ಗಂಟೆಯ ತನಕ ಕಡಿದು ಪ್ರಾಣವನ್ನು ಬಿಡು ಹಿಂಸೆ... ಹೋಗುವಹಾಗೆ ಮಾಡಿದರು ಇದಕ್ಕಿಂತ ಹಿಂಸೆ ಉಂಟೇ?—ಮು... ಸಿಫ್ ಕೋರ್ಟಿನ ಮೇಲ್ಭಾಗ ರಸ್ತೆಯಲ್ಲಿ ಒಂದು ಸೇತುವೆ ... ಈ ಸೇತುವೆಯ ಹಳ್ಳದಲ್ಲಿ ಹೆಣಗಳನ್ನು ಸುಡುತ್ತಾರೆ ಹೆಣ ಸ... ವ ಈ ಸ್ಥಳವು ನಾಗರಕೆರೆಯ ಮೇಲ್ಗಡೆಯಲ್ಲಿಯೇ ಇದೆ ಇ... ನಾಗರಕೆರೆಗೆ ನೀರು ಬರುತ್ತದೆ ಈ ಕೆರೆಯ ನೀರನ್ನು ಜನರು ... ಯುವದಕ್ಕೆ ಉಪಯೋಗಿಸುತ್ತಾರೆ ಆದ್ದರಿಂದ ಇಲ್ಲಿನ ಸ... ಅಧಿಕಾರಿಗಳು ಗಮನಕ್ಕೆ ತಂದುಕೊಂಡು ಈ ಸ್ಥಳ ತಪ್ಪಿಸುವ... ಕೋರುತ್ತೇವೆ. ಈಗ ಮುನ್ಸಿಫ್ ಕೋರ್ಟು ಹೋದ ಮೇಲೆ ... ಗೆ ಸಬ್ ಡಿವಿಜನ್ ಕೋರ್ಟು ಬರುತ್ತದೆಂದು ವದಂತಿ ಇದೆ. ... ಕೋರ್ಟಾದರೆ ಒಂದುವೇಳೆ ಈ ಊರಿಗೆ ಸ್ವಲ್ಪ ಕಳೆಯುಂಟಾದೀತು ... ಕೆಲವು ದಿನಗಳಿಂದ ಗಾಳಿಯು ಬಲವಾಗಿ ಬೀಸುತ್ತಲಿದೆ

ಚಿತ್ರದುರ್ಗ—ಇಲ್ಲಿ ಈಗ ತಕ್ಕಮಟ್ಟಿಗೆ ಮಳೆಯಾಗಿ ... ಉಳುವ ಮತ್ತು ಬಿತ್ತುವ ಕೆಲಸಗಳನ್ನು ಆರಂಭಿಸಿದ್ದಾರೆ. ... ಆರೋಗ್ಯವು ತಕ್ಕಮಟ್ಟಿಗೆ ಅನುಕೂಲವಾಗಿದೆ ಆದರೆ ಧೂಳಿ... ದಿಂದ ಕೆಲವರು ನೆಗಡಿ ಕೆಮ್ಮು ಜ್ವರೋಪದ್ರವಗಳಿಂದ ನರಳುತ್ತಿ... ದೊಡ್ಡ ದೊಡ್ಡ ಬೀದಿಗಳಲ್ಲಿ ಕಸಕಡ್ಡಿ ಹಾಗಿ ತಕ್ಕಮಟ್ಟಿಗೆ ಶುಚಿ... ಗಿದ್ದರೂ ಸಂದು ಗಲ್ಲಿಗಳಲ್ಲಿ ಅಶುಚಿಯಾಗಿಯೇ ಇದೆ ... ಲದಲ್ಲಿ ಮ್ಯುನಿಸಿಪಾಲಿಟಿಯವರು ದೊಡ್ಡ ರಸ್ತೆಗಳನ್ನು ಮಾತ್ರ... ಸಣ್ಣ ಗಲ್ಲಿ ಸಂದುಗಳ ಕಸಕಡ್ಡಿ ಸಾಗಿಸಿ ಶುಚಿಯಾಗಿರಬೇಕಾಗಿ... ಅಲ್ಲಲ್ಲಿ ಊರಿನ ಮಧ್ಯೆ ದೊಡ್ಡ ದೊಡ್ಡ ಬಂಡೆಗಳಿರುವದರಿಂದ ... ರು ಒಂತೆಗಳ ಆಸರೆಯಲ್ಲಿ ಕೂತುಕೊಂಡು ಊರೊಳಗೆ ... ಮಾಡುತ್ತಾರೆ ಇದಕ್ಕೆ ತಕ್ಕ ನಿಗಾ ಕೊಡಬೇಕಾಗಿದೆ —ಅ॥ ... ಷನರ್ ಮೆ॥ ಬಿ ಜೆ ಕುಮಾರಸ್ವಾಮಿನಾಯಕ್ ಯವರು ... ದ ಕಡೂರಿಗೆ ಸಂಗಾಮಿ ಡೆಪ್ಯುಟಿ ಕಮಿಷನರಾಗಿ ವರ್ಗವಾಗಿದ್ದಾರೆ ... ಗ ಸುಮಾರು ೨॥ ತಿಂಗಳಿಗೆ ಮುಂಚೆ ಇಲ್ಲಿಗೆ ವರ್ಗವಾಗಿ ಬಂದ... ತ್ರೈ ಅಸಿಸ್ಟೆಂಟ್ ಮೆ॥ ಜವರತ್ನಂ ಯವರು ಅನುಭವಶಾಲಿಗಳಾಗಿ ... ಬಡಜನಗಳಿಗೆ ಸಹಾಯಕರಾಗಿಯೂ ಎಲ್ಲರಲ್ಲಿ ಪ್ರೀತಿಯುಳ್ಳ... ಯೂ ಇದ್ದಾರೆ. ಇವರು ಕೆಲವು ದಿವಸಗಳಿಗೆ ಮುಂಚೆ ಇಲ್ಲಿಗೆ ... ರು ಈಗ ಗಲೇ ಅವರನ್ನು ಪುನಃ ಶಿವಮೊಗ್ಗೆಗೆ ವರ್ಗಾಯಿಸಿದ... ಕೇಳಿ ಆಶ್ಚರ್ಯವೂ ವ್ಯಸನವೂ ಪಡುತ್ತಾರೆ ಸರಕಾರದವರು ... ರವಿಟ್ಟು ತಕ್ಕ ಏರ್ಪಾಡು ಮಾಡುವರೆಂದು ನಂಬಿದ್ದೇನೆ ಕಳೆದ... ವು ದಿವಸಗಳಿಗೆ ಮುಂಚೆ ಸೆಷನ್ಸ್ ಜಡ್ಜಿ ಮೆ॥ ಬ್ಲೂಮರ್ ಸಾಹೇ... ಇಲ್ಲಿರುವ ಧವಳಪ್ಪನ ಗುಡ್ಡಕ್ಕೆ ಸಾಯಂಕಾಲ ಹೋಗಿ ಕತ್ತಲಾದ... ಮಳೆ ಬಂದದ್ದರಿಂದ ದಾರಿ ಕಾಣದೆ ರಾತ್ರಿಯೆಲ್ಲಾ ಅಲ್ಲೇ ಇದ್ದು ... ಗ್ಗೆ ಇಳಿದು ಬಂದರು ಇವರಿಗೆ ಯಾವ ಅಪಾಯವೂ ಆಗದೆ ... ವಾಗಿ ಹಿಂತಿರಿಗಿ ಬಂದದ್ದು ಎಲ್ಲರಿಗೂ ಸಂತೋಷವನ್ನುಂಟುಮಾಡಿ...

ಮಂಗಳೂರು — ಮಳೆ ಕಡಿಮೆಯಾಗಿ ... ದಗಲಾಗಿ ರೈತರು ಸಾಗು... ಕೆಲಸದಲ್ಲಿ ಇದ್ದಾರೆ ರೋಗಾದಿ ಉಪದ್ರವಗಳು ಕಮ್ಮಿಯಾ... ಧಾರಣೆಯಾಸಿ ಚಪಾವಿನಲ ಇದೆ ...

ನಾಟಕದ ಮಂಡಲಿಯವರು ಒಂದು ತಿಂಗಳಿಂದ ನೋಟಕರ ಮನಸ್ಸನ್ನು ಆಕರ್ಷಿಸುವಂತೆ ಆಡುತ್ತಾರೆ.—ಮಳೆ ಬಂದು ಬೀದಿಗಳು ಕೊಳಕಾಗಿದೆ. ಇಲಿಗಳನ್ನು ಈಗ ಸಹಾ ಮುನಿಸಿಪಾಲಿಟಿಯು ಕೊಲ್ಲಿಸುತ್ತಾರೆ.—ಇಲ್ಲಿ ಇಷ್ಟು ವರೆಗೆ ಹೋಗಬಂದಿ ಬಾರದೆ ರೂ ಜುಲೈ ತಾ. ೧೫ಕ್ಕೆ ಹೊಗೆ ಬಂಡಿ ಬರುತ್ತದೆ. ಸ್ಟೇಷನ್ ಮಾಸ್ಟರ್ ವಗೈರೆ ಎಲ್ಲಾ ಕೆಲಸದವರು ಬಂದಿರುತ್ತಾರೆ ತಾ. ೨೪ಕ್ಕೆ ... ಳ ಹೊಳೆಯ ಸಂತ ಎಕ್ಸ್‌ಪ್ರೆಷ್ ಆಯಿತು. ಹೊಗೆ ಬಂಡಿ ... ನಂತರ ಇಲ್ಲಿಯ ವ್ಯಾಪಾರವು ಅಭಿವೃದ್ಧಿಗೆ ಬರುವದೆಂತಲೂ ... ಯ ವ್ಯಾಪಾರ ಹಾಳಾಯಿತೆಂತಲೂ ಕಲವರು ಅನ್ನುತ್ತಾರೆ ... ಗೂ ಇರಲಿ; ಪ್ರಯಾಣೀಕರಿಗೆ ಉತ್ತಮವಾಯಿತಲ್ಲದೆ ಇಲ್ಲಿಂದ ... ಮಾನು ಕಳುಹಿಸುವವರಿಗೂ ಬೇರೆ ಕಡೆಯಿಂದ ಸಾಮಾನು ತರಿಸುವವರಿಗೂ ಸಲಿಸ್ ಆಯಿತು.—ಇಲ್ಲಿಯ ತೇರು ಬೀದಿಯಲ್ಲಿ ರಾ॥ ಜೆ. ... ರಾವ್ ಇವರ ಪ್ರಯತ್ನದಿಂದ ಹಿಂದು ಯೂನೈಟೆಡ್ ಕ್ಲಬ್ ಎಂಬ ... ದಿನಿಂದ ಒಂದು ಲೈಬ್ರರಿ ಪ್ರತಿಷ್ಠೆಯನ್ನು ಈ ತಿಂಗಳಲ್ಲಿ ಮಾಡಿ ... ರೆ.—ಮೋಟರ್ ಗಾಡಿಗಳು ಈಗ ೮—೧೦ ದಿವಸಗಳಿಂದ ಇ... ದ ಬೆಟ್ಟವಾಳದ ವರೆಗೆ ಓಡಿಸುತ್ತಾರೆ. ಇವರು ಶ್ಯಗೋಂಡ ಕಾ... ವು ಸರಿಯಾಗಿ ನಡೆದರೆ ಪ್ರಯಾಣಿಕರಿಗೆ ಉತ್ತಮವಾಯಿತೆಂಬ... ಲ್ಲಿ ಸಂದೇಹವಿಲ್ಲ. ಇಲ್ಲಿಗೆ ಮೇಯಿಲ್ ಟ್ರೇನ್ ರಾತ್ರಿ ಬರುವ... ಲೂ ಇಲ್ಲಿಂದ ಬೆಳಿಗ್ಗೆ ೫ ಗಂಟೆಗೆ ಬಿಡುವದೆಂತಲೂ ಕೇಳುತ್ತೇ... —ಇಷ್ಟು ವರೆಗೆ ಇಲ್ಲಿ ಸ್ವದೇಶಿಯ ಕೋಲಾಹಲವಿಲ್ಲದಿದ್ದರೂ ... ಗ ತಾನೇ ಇಲ್ಲಿ ಸಹಾ ಸ್ವದೇಶಿ ಗಡಬಡಿಸುವಾಗಿರುತ್ತದೆ. ಕೆಲವು ... ಯ ಯುವಂಗರು ತಲೆಗೆ ಟೋಪಿ ಇಡುವ ಬದಲಿಗೆ ಬಿಳೇ ವಸ್ತ್ರ ... ಕಟ್ಟಿಕೊಳ್ಳುತ್ತಾರೆ. ತಾ ೨೫ರ ದಿವಸ ಸ್ಟೇಷನ್ ಇನ್‌ಸ್ಪೆಕ್ಷನ್ ... ವಾಗ್ಗೆ ಸುಮಾರು ಸಾವಿರ ಜನರ ವರೆಗೆ ಗಂಡಸರೂ ಸ್ತ್ರೀಯರೂ ... ದಲಿಕ್ಕೆ ಬಂದಿದ್ದರು

ತುಂಕೂರು.—ತುಂಕೂರು ಟವನ್ನಿನಲ್ಲಿ ಯಂಪ್ರೆಸ್ ಗರಲ್ಸ್ ... ಲ್ ಎಂಬ ಗವರ್ನಮೆಂಟು ಪಾಠಶಾಲೆಯಲ್ಲಿ ಕಳೆದ ೨೨ನೇ ... ಬನಿವಾರ ನಮ್ಮ ಶ್ರೀಮನ್ ಮಹಾರಾಜಾ ಶ್ರೀ ಕೃಷ್ಣರಾಜ ಒಡೆ... ಬಹದ್ದೂರ್, ಜಿ ಸಿ ಎಸ್ ಐ ಯವರ ವರ್ಧಂತಿ ಮಹೋ... ದ ದಿನ ಬಾಲಕಿಯರಿಗೆ ಬಹುಮಾನ ವಿನಿಯೋಗವು ವಿಜೃಂಭಣೆಯಿಂದ ಜರುಗಿತು ಆ ದಿನ ಆ ಸಭೆಯಲ್ಲಿ ಈ ಊರಿನ ... ಪತಿಯರಾದ ಘನತೆಯುಳ್ಳ ಸ್ತ್ರೀಯರೇ ಸೇರಿದ್ದರು. ಹೆಡ್ ... ನ್‌ರವರ ಕೋರಿಕೆಯಂತೆ ನಮ್ಮ ಟ್ರಿಜರಿ ಆ॥ ಕಮಿಷನರ್ ... ಧರ್ಮಪತ್ನಿಯವರಾದ ಶ್ರೀಮತಿ ಗಿರಿಜಮ್ಮನವರು ಅಗ್ರಾಸನ ... ವಹಿಸಿದ್ದರು ಮೊದಲೇ ಕ್ಲಿಪ್ತವಾಗಿದ್ದ ಪ್ರಕಾರ ಸ್ಕೂಲ್ ... ರ್ಥಿನಿಯರ ಸಂಭಾಷಣೆ, ಸಂಗೀತ, ವೀಣಾವಾದ್ಯ, ಸಂಸ್ಕೃತ, ... ಷ್, ಕನ್ನಡ ಭಾಷೆಗಳ ಅಭ್ಯಾಸ ಪ್ರದರ್ಶನ ಇವುಗಳೆಲ್ಲಾ ... ದ ನಂತರ ಸ್ಕೂಲ್ ರಿಪೋರ್ಟನ್ನು ಮುಖ್ಯೋಪಾಧ್ಯಾಯಿನಿ... ದ ಶ್ರೀಮತಿ ಸೋ॥ ಸುಬ್ಬಮ್ಮನವರು ಓದಿದರು. ಅನಂತರ ... ಸನಾಧಿಕಾರಿಗಳು ಸ್ತ್ರೀ ವಿದ್ಯಾಭ್ಯಾಸದ ವಿಚಾರವಾಗಿ ಅಲ್ಲಿ ಸೇ... ಸಾಧ್ವೀ ಮಣಿಯರೆಲ್ಲರ ಹೃದಯಂಗಮವಾಗುವಂತೆ ಬಹು ವಿಸ್ತಾರವಾಗಿ ಸರಸಭಾಷಣೆ ಮಾಡಿ ತಮ್ಮ ಹಸ್ತದಿಂದ ೧೯೦೬ನೇ ಮಾರ್ಚ ಮೈಸೂರು ಲೋವರ್ ಸೆಕಂಡರಿ ಪರೀಕ್ಷೆಯಲ್ಲಿ ಉತ್ತೀರ್ಣರಾದ ... ರು ಮಂದಿ ಬಾಲಿಕೆಯರಿಗೆ ಬಹುಮಾನಗಳನ್ನು ದಯಪಾ... ದರು ಶ್ರೀಮನ್ ಮಹಾರಾಜಾ ಚಕ್ರವರ್ತಿಗಳವರ ಶ್ರೇಯಸ್ಸಾ... ಯೂ ಆದ ನಂತರ ಜಯ-ಧ್ವನಿಯೊಡನೆ ಸಭೆಯು ಬರಖಾಸ್ತು ... —ಈ ವಾರದಲ್ಲಿ ನಮ್ಮ ಚೀಫ್ ಕೋರ್ಟ್ ಜಡ್ಜಿಗಳಾದ ... ಎಚ್ ವಿ ನಂಜುಂಡಯ್ಯನವರು ದಯಮಾಡಿಸಿ ಕೋರ್ಟುಗ... ಇನ್‌ಸ್ಪೆಕ್ಷನ್ ಮಾಡಿದರು.—ನಮ್ಮ ಮುನಿಸಿಪಾಲಿಟಿಯವರು ... ಈ ಮಳೆಗಾಲದಲ್ಲಿ ಕಾರ್ಪರೇಷನ್ ಕಿಸ್ತೇರ ಬೀದಿಯಗಳ ... ಮಾಡಿಸುವದು ಪ್ರಾಮುಖ್ಯವಾಗಿದೆ ಯಾಕೆಂದರೆ ಅಲ್ಲಿ ... ಯಾದ ಚರಂಡಿಗಳಿಲ್ಲದೆ ದುರ್ವಾಸನೆ ಬಹಳವಾಗಿ ಹರಡಿರುತ್ತದೆ ... ದಿವಾನ್ ನಮ್ಮ ಸಂಸ್ಥಾನದ ಪರಸ್ಪರ ಸಹಾಯಕ ಸಂಘಗಳ ... ಸ್ಟ್ರಾರಾಗಿರುವ ಮೆ॥ ಎಂ. ರಾಮರಾಯರು ದಯಮಾಡಿ, ಇಲ್ಲಿ ... ಸ್ಕೂಲಿನಲ್ಲಿ ಬಹು ಮಂದಿ ದೊಡ್ಡ ಮನುಷ್ಯರನ್ನು ಸೇರಿಸಿ, ... ಯೂ ದೇಶದ ಕೈಗಾರಿಕೆಗಳ ಅಭಿವೃದ್ಧಿ ಎಂಬ ಉಪನ್ಯಾಸವನ್ನು ... ರಸವತ್ತಾಗಿ ಮಾಡಿದರು ಅನಂತರ ಅಗ್ರಾಸನಾಧಿಪತಿಗಳಾದ ... ಸಿ ಶೇಷಾದ್ರಿ ಅಯ್ಯಂಗಾರ್ರವರು ಅದನ್ನೇ ಉದ್ದೇಶಿಸಿ ಒಂದು ... ವರೆಗೂ ಬಹು ವಿಶದವಾಗಿ ಉಪನ್ಯಾಸ ಮಾಡಿದರು. ಮೆ॥ ... ರಾಯರು ಸ್ವೀಯರ್ದ ಮಾರ್ಗವಾಗಿ ದಯಮಾಡಿಸಿದರು.— ... ಟವನ್ನಿನಲ್ಲಿರುವ ಪರಸ್ಪರ ಸಹಾಯಕ ಸಂಘವು ಸ್ಥಾಪಿಸಲ್ಪಟ್ಟು ... ರು ೫—೬ ತಿಂಗಳಾದರೂ ಅಭಿವೃದ್ಧಿಗೆ ಬಾರದಿರುವದನ್ನು ಪ್ರ... ಟರಾದ ಮೆ॥ ಸಿ. ಶೇಷಾದ್ರಿ ಅಯ್ಯಂಗಾರ್ರವರೂ ಸೆಕ್ರೆಟರಿಗಳಾದ ... ಸಿ ಡಿ. ರಾಮಸ್ವಾಮಯ್ಯನವರೂ ವಿಚಾರ ಮಾಡಿ, ಕೇವಲ ಅ... ದ ಮೊಬಲಗಿನ ಷೇರುಗಳನ್ನು ಗೊತ್ತು ಮಾಡಿರುವದರಿಂದ ಉ... ಷ್ಟರು ಸೇರಲು ಅಸಕ್ತಿಯುಳ್ಳವರತಲೂ, ಹಾಗೆ ಭಾರಿ ಮೊಬಲಗು ... ಯಿಸದಿರುವದರಿಂದ ಬಡವರಿಗೆ ಸಹಾಯ ಮಾಡಲು ಅನುಕೂಲ ... ಮು ಏನೂ ತಿಳಿದು, ಈಗ ಷೇರು ೧ ಕ್ಕೆ ೨೦ ರೂ ನಂತೆ ಎಷ್ಟು ... ರು ಬೇಕಾದರೂ ತೆಗೆದುಕೊಳ್ಳುವಂತೆ ಅನುಕೂಲ ಮಾಡಿದಾರೆ ... ದಾರರಲ್ಲಿ ಪ್ರತಿಯೊಬ್ಬರೂ ಪ್ರವೇಶಧನವನ್ನೂ ಮತ್ತು ಒಂದು ... ರು ತಿಂಗಳ ಕಂತನ್ನೂ ಮೊದಲೇ ಪಾವತಿ ಮಾಡಬೇಕಾಗಿರುವದು. ... ಕೋಲಸ್ಥರು ತಮ್ಮ ಷೇರು ಭಾಗಗಳನ್ನು ಒಟ್ಟಾಗಿಯೇ ಕೊಟ್ಟು ... ಲೂ ಬಹುದು ಸದ್ಯ ಸಾಲ ತೆಗೆದುಕೊಳ್ಳುವವರಿಗೆ ೫೦ ರೂ ... ನ ಮೊಬಲಗಿಗೆ ಶೇಕಡಾ ೧ ರೂ ನಂತೆಯೂ, ೭೫ ರೂ. ಒಳ... ಕ್ಕೆ ೧೪ ಆಣೆಯಂತೆಯೂ, ೧೦೦ ಕ್ಕೆ ಮೇಲ್ಪಟ್ಟದ್ದಕ್ಕೆ ೧೨ ... ಯಂತೆಯೂ ಬಡ್ಡಿ ಗೊತ್ತು ಮಾಡಿದಾರೆ. ಈ ಸಂಘವು ಅಭಿವೃ... ಹೊಂದಿದ ಹಾಗೆಲ್ಲಾ ಬಡ್ಡಿ ದರವು ಕಡಮೆ ಮಾಡುವದಾಗಿಯೂ ಮೆಂಬರುಗಳ ಉಪಯೋಗಾರ್ಥವಾಗಿ ದಿನಸಿ ಮಂಡಿಯೊಂದನ್ನು ಏರ್ಪಡಿಸುವದಾಗಿಯೂ ಪ್ರಸಿಡೆಂಟರು ಸೂಚಿಸಿರುತ್ತಾರೆ.

ಮೈಸೂರು ಸಿವಿಲ್ ಸರ್ವಿಸ್ ಪರೀಕ್ಷೆ.

ಈ ವರ್ಷದ ನವಂಬರ್ ತಿಂಗಳಿನ ೧೧ ನೇ ತಾರೀಖಿನಲ್ಲಿ ಒಂದು ಸಿವಿಲ್ ಸರ್ವಿಸ್ ಪರೀಕ್ಷೆಯು ನಡೆಸಲ್ಪಡುವದೆಂದು ಗೊತ್ತಾಗಿದೆ. ಇದಕ್ಕೆ ಮೈಸೂರು ಸೀಮೆಯಿಂದಲೂ, ಮದರಾಷ್ ಮತ್ತು ಮುಂಬೈಯ ಆಧಿಪತ್ಯದಿಂದಲೂ ವಿದ್ಯಾರ್ಥಿಗಳು ಸೇರಬಹುದು ಈ ಪರೀಕ್ಷೆಯಲ್ಲಿ ತೇರ್ಗಡೆಹೊಂದಿದ ಮೊದಲನೇ ಮತ್ತು ಎರಡನೇ ವಿದ್ಯಾರ್ಥಿಗೆ ಅಸಿಸ್ಟೆಂಟ್ ಕಮಿಷನರ ಕೆಲಸವನ್ನು ಕೊಡುವರೆಂದು ಹೇಳಿದಾರೆ ವಿದ್ಯಾರ್ಥಿಗಳು ಬಿ. ಎ. ಪರೀಕ್ಷೆಮಾಡಿರಬೇಕು. ೨೫ ವಯಸ್ಸಕ್ಕೆ ಮೀರಿ ಇರಕೂಡದು. ಒಳ್ಳೆ ನಡತೆಯುಳ್ಳವರಾಗಿರಬೇಕು ಕೆಲಸ ದೊರಕಿದಸಂತರ ಕನ್ನಡ ಪರೀಕ್ಷೆಯೊಂದನ್ನು ಇವರು ಮಾಡಬೇಕೆಂದು ಈಚೆಗೆ ಗೊತ್ತುಮಾಡಿದಾರೆ. ಇಂಥಾ ಪರೀಕ್ಷೆಯು ಹಿಂದಿನ ವರ್ಷ ಒಂದು ನಡೆದು ಇಬ್ಬರಿಗೆ ಸರ್ಕಾರಿಯ ಉದ್ಯೋಗವು ಕೊಡಲ್ಪಟ್ಟಿತು. ಆದರೆ ಕಳೆದ ಎರಡು ವರ್ಷಗಳಿಂದ ಸುಮಾರು ೫೦ ಮಂದಿ ಸರ್ಕಾರದ ಅಧಿಕಾರಿಗಳು ಕೆಲಸದಿಂದ ನಿವೃತ್ತರಾಗಿರುವಕಾರಣ ಹೊಸದಾಗಿ ಗಟ್ಟಿಗರಾದ ಅಧಿಕಾರಿಗಳನ್ನು ಕೆಲಸಕ್ಕೆ ನೇಮಿಸಬೇಕಾಯಿತು. ಈ ವಿಧವಾದ ಸಿವಿಲ್ ಸರ್ವಿಸ್ ಪರೀಕ್ಷೆಯನ್ನು ನಡಸುವದರಲ್ಲಿ ಕೆಲವು ಅನಾನುಕೂಲಗಳಿವೆ ಎಂದು ಹಿಂದೊಂದು ಬಾರಿ ತಿಳಿಸಿ ಆಗಿರುವದು. ಮೈಸೂರು ಸೀಮೆಯವರಲ್ಲದೆ ಇತರ ದೇಶದಿಂದ ಕೆಲವರು ಉದ್ಯೋಗವನ್ನು ಪಡೆಯುವದಕ್ಕೆ ಅನುಕೂಲವಾಗುವದು. ಇವರು ಗಟ್ಟಿಗರಾದರೂ ಕೂಡ, ಈ ದೇಶದ ಜನರ ವಿಷಯದಲ್ಲಿ ವಿಶ್ವಾಸವಿಲ್ಲದವರಾಗಿ, ದ್ರವ್ಯಾರ್ಜನೆಗೋಸ್ಕರ ಕೆಲಸಮಾಡತಕ್ಕವರಂತೆ ತೋರ್ಪಡಿಸಿಕೊಳ್ಳುವರೆಂಬುದು ಇದಲ್ಲದೆ ಈಗಿನ ಪದ್ಧತಿಯ ಪ್ರಕಾರ ಪ್ರತಿ ವರ್ಷವೂ ಉಂಟಾಗುವ ೯ ಉದ್ಯೋಗಗಳಿಗೆ ಇಬ್ಬರನ್ನು ಮಾತ್ರ ಪರೀಕ್ಷೆಗಳ ಮೂಲಕ ಅವರ ಯೋಗ್ಯತೆಯನ್ನು ನೋಡಿ ಕೆಲಸಕ್ಕೆ ಸೇರಿಸುವರು. ಉಳಿದ ೭ ಜನರನ್ನು ಸರ್ಕಾರದವರು ತಮ್ಮ ಇಷ್ಟಾನುಸಾರ ಸೇರಿಸುವರು ಇದನ್ನು ತಪ್ಪಿಸಿ ಎಲ್ಲರನ್ನೂ ಪರೀಕ್ಷೆ ಮಾಡಿಯೇ ಭಾರಿ ಕೆಲಸಕ್ಕೆ ನೇಮಿಸುವಂತೆ ಮಾಡಿದರೆ ಜನರು ಅವರ ಬುದ್ಧಿಯುದ್ಧಕಾಗಲ್ಲಾ ಮೇಲಿನ ಅಧಿಕಾರಕ್ಕೆ ಬರುವಂತೆ ಆಗುವದು

ಈಗಿನ ಸಿವಿಲ್ ಸರ್ವಿಸ್ ಅಧಿಕಾರಿಗಳಲ್ಲಿ ಎರಡು ಭಾಗವನ್ನು ಮಾಡಿರುವರು ಮೊದಲನೇ ತರಗತಿಗೆ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದವರನ್ನೂ, ಎರಡನೇ ತರಗತಿಯಲ್ಲಿ ಇತರರನ್ನೂ ಸೇರಿಸಿದೆ. ಆದರೆ ಇವರಿಗೆ ಪ್ರಮೋಷನ್ ಕೊಡುವಾಗ ಮೊದಲನೇ ತರಗತಿಯವರಿಗೆ ಎರಡುವರ್ಷಕ್ಕೊಂದಾವರ್ತಿ ೫೦ ರೂಪಾಯಿನಂತೆಯೂ, ಎರಡನೇ ತರಗತಿಯವರಿಗೆ ಮೂರುವರ್ಷಕ್ಕೊಂದಾವರ್ತಿ ೫೦ ರೂಪಾಯಿನಂತೆಯೂ ಪ್ರಮೋಷನ್ ದೊರೆಯುವದೆಂದು ಹಿಂದೆ ಗೊತ್ತುಮಾಡಲ್ಪಟ್ಟಿತ್ತು. ಇದನ್ನು ಈಗ ಸರ್ಕಾರದವರು ಬದಲಾಯಿಸಿ, ಎಲ್ಲರಿಗೂ ಒಂದೇ ವಿಧವಾಗಿ ೩ ವರ್ಷಕ್ಕೊಂದಾವರ್ತಿ ಬಡತಿಯನ್ನು ಕೊಡಬೇಕೆಂದು ಹೇಳಿದಾರೆ ಇದರಿಂದ ಇವರಿಬ್ಬರಿಗೆ ಯಾವ ವ್ಯತ್ಯಾಸವೂ ತೋರಿಸುವಂತೆ ಆಗಲಿಲ್ಲ ತಮ್ಮ ಬುದ್ಧಿ ಪ್ರಯತ್ನದಿಂದ ಅಧಿಕಾರವನ್ನು ಸಂಪಾದಿಸಿದವರೂ, ಇತರ ವಿಧದಿಂದ ಕೆಲಸವನ್ನು ಪಡೆದವರೂ ಒಂದೇ ರೀತಿಯಲ್ಲಿ ಕಾಣಲ್ಪಡುವದು ನ್ಯಾಯವೆಂದು ಕಾಣುವುದಿಲ್ಲ.—ನ

ಪ್ರಕಟನೆಗಳು.

ತರಿಸಿಕೊಳ್ಳಿ ಬೇಗ ತರಿಸಿಕೊಳ್ಳಿ !! ಇದೇ ಒಳ್ಳೇ ಸಮಯ !!!

41 5

ತಪ್ಪಮಾಡಿದರೆ ಪ್ರತಿಗಳು ಮುಗಿದುಹೋದಾವು.

ನೇತ್ರಾನಂದಕರಗಳಾದ ಚಿತ್ರಗಳಿಂದಲೂ, ನೀತಿರಸಪ್ರಧಾನವಾದ ವಿಷಯಗಳಿಂದಲೂ ರಂಜಿಸುವದಲ್ಲದೆ, ಸಕಲ ಜನಗಳೂ ಪಡೆಯತಕ್ಕಷ್ಟು ಸುಲಭವಾದ ಕ್ರಯಕ್ಕೆ ಸಿಕ್ಕುವವುಗಳಾಗಿಯೂ ಇವೆ. ಇವುಗಳು ಯಾವವಂದರೆ:—

		ಕ್ರಯ.
ಎಡ್ವರ್ಡ್ ಚಕ್ರವರ್ತಿಯವರ ಮತ್ತು ಅಲೆಕ್ಸಾಂಡ್ರಾ ಚಕ್ರವರ್ತಿನಿಯವರ ಚರಿತ್ರೆ	.. ..	೦—೪—೦
ಎಡ್ವರ್ಡ್ ಸಾರ್ವಭೌಮರ ಕಿರೀಟಧಾರಣೆ	..	೦—೨—೬
ಘನತೆಯುಳ್ಳ ಸ್ತ್ರೀಯರ ಚರಿತ್ರೆ	.. .	೦—೨—೬
ದಕ್ಷಿಣ ಆಫ್ರಿಕವೂ ಅದರ ನಿವಾಸಿಗಳೂ	, ,	೦—೨—೬
ಚೀನಾ ಚಕ್ರಾಧಿಪತ್ಯವೂ ಅವರ ನಿವಾಸಿಗಳೂ	..	೦—೨—೬
ಜರ್ಮನ್ ದೇಶವೂ ಬರ್ಮಿಯರೂ	.. ..	೦—೨—೬
ಪುರಾತನ ಗ್ರೀಕರ ಕಥೆಗಳು	. . .	೦—೨—೦
ಪುರಾತನ ರೋಮನರ ಕಥೆಗಳು	. .	೦—೨—೦
ಪಕ್ಷಿಗಳ ಚಿತ್ರಗಳೂ ಕಥೆಗಳೂ	.. . ..	೦—೦—೦
ಕ್ರಿಮಿವರ್ಗ ವರ್ಣನೆ	. .. ..	೦—೧—೦
ದೇಶವೆಂಬ ವಿಚಿತ್ರವಾದ ನನ್ನ ಮನೆ	..	೦—೧—೦
ಚಿಕ್ಕವರಿಗೆ ಹೇಳುವ ಕಥೆಗಳು	. . .	೦—೧—೦
ಪ್ರಾಚೀನಕಾಲದ ವಿಲಕ್ಷಣ ಜೀವರಾಶಿಗಳ ವರ್ಣನೆ		೦—೧—೦
ಹೊಗೆ ಗಾಡಿಗಳನ್ನು ಕಲ್ಪಿಸಿದ ಜಾರ್ಜ್ ಸ್ಟೀವಿನ್ಸನ್ ಎಂಬುವನ ಚರಿತ್ರೆ	. .. ..	೦—೧—೦

ವಿಳಾಸ:—ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪೋ,
ಮೈಸೂರು.

ವ್ಯವಹಾರ ನಿರ್ಣಯ

ವೆಂಬ ಕನ್ನಡ ಲಾ ಪುಸ್ತಕವು.

53-8

ಲಾ ತಿಳಿದವರಿಂದಲೂ, ತಿಳಿಯದವರಿಂದಲೂ ಇದುವರೆಗೆ ಬರೆಯಲ್ಪಟ್ಟಿರುವ ಈ ತೆರದ ಪುಸ್ತಕಗಳನ್ನೆಲ್ಲಾ ನೋಡಿ ಅವೆಲ್ಲಕ್ಕಿಂತಲೂ ಹೆಚ್ಚು ಪಯೋಗವನ್ನು ಇದೊಂದು ಪುಸ್ತಕದಿಂದುಂಟುಮಾಡಬೇಕೆಂದು ಈ ದೊಡ್ಡ ಗ್ರಂಥವು ಹೊಸದಾಗಿ ಬರೆಯಲ್ಪಟ್ಟಿದೆ. ಇದರಲ್ಲಿ ೧೪ ಆಕ್ಟುಗಳು, ೪ ಕೋಡುಗಳು, ಹಿಂದೂ, ಮಹಮದೀಯ ಲಾಗಳು, ಚೀಫ್ ಕೋರ್ಟ್ ಕೈ ಕೋರ್ಟುಗಳ ಫೈಸಲುಗಳು, ಗೌ॥ ಸರ್ಕ್ಯುಲರ್‌ಗಳು ಪ್ರೊಸೀಡಿಂಗ್ಸ್‌ಗಳು, ಸಕಲ ವಿಧ ವ್ಯವಹಾರಗಳು, (ಕ್ರಯ ಆಧಾರ ದಾನ ವಿಲ್ಲು ಮೊದಲಾದ) ೬೯ ತೆರದ ದಸ್ತಾವೇಜುಗಳ ನಮೂನೆಗಳು, ಈ ಸಂಬಂಧದ ಲಾ ವಿಧಿಗಳು, ಸಿವಲ್ ಕ್ರಿಮಿನಲ್, ಪೋಲೀಸ್, ರವಿನ್ಯೂ ಸಂಬಂಧದ ವ್ಯಾಜ್ಯಗಳು, ೫೯ ತೆರದ ಅರ್ಜಿಗಳು, ಈ ಸಂಬಂಧದ ಲಾ ವಿಧಿಗಳು, ಇವೆಲ್ಲವೂ ಅಡಕವಾಗಿವೆ.

ಪುಸ್ತಕ ದೊಡ್ಡದು. ಪುಟಗಳು ಒಟ್ಟು ೪೭೪.	ಬೆಲೆ ಕಡಮೆ. ಅಂಚೆ ಹಾಸಲು ಸೇರಿ ರೂ ೧—೮—೦

ಗ್ರಂಥಕರ್ತರು.	ಎಂ. ಮಲ್ಲಾರಾಧ್ಯರು, ೧ನೆ ಗ್ರೇಡ್ ಪ್ಲೀಡರ್, ಶ್ರೀರಾಮಪೇಟೆ, ಮೈಸೂರು.	ಇದೇ ವಿಳಾಸ.

SCHOOL BOOKS! SCHOOL BOOKS!!

56-6

		Rs.	A.	P.
New English Readers Primer I	...	0	2	6
„ „ Primer II	...	0	2	6
New English First Reader	.	0	4	0
„ Second „	...	0	6	0
„ Third „	...	0	8	0
„ Fourth „	...	0	10	0
„ Fifth „	..	0	12	0
„ Sixth „	...	0	12	0
Primer of English Grammar	.	0	3	0
Manual of English Grammar	..	0	8	0
The Way to Health	. .	0	2	0
Arithmetical Primer	...	0	2	6
Primer of Geography	...	0	5	0
Outlines of Geography	...	0	10	0
Manual of Geography	...	0	14	0
Chemistry Notes by Romilly H Ingram		1	0	0

Apply to—

THE MANAGER,
C. L. S Book Depot,
Mysore City.

THE PLACE FOR HASSAN CAPS IS
HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ?

ಆಗದಿದ್ದರೆ ಬೇಗ ಬರೆದು ತರಿಸಿಕೊಳ್ಳಿ.

11-23

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು! ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು ? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೀಳಾದದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ.—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯಿತಿಯಿಂದಲೇ ಬರುವದು. (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನನಗೆ ನೇರಾ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದು ಚನ್ನಾಗಿಲ್ಲದ್ದು ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ.

ಬಿಳುಪು, ಕೆಂಪು, ಕಪ್ಪು, ಬೂದು, ಕಾಫಿ ಟೋಪಿಗಳು ೧ ರೂ ೮ ಆ.;
೧ ರೂ ೬ ಆ ; ೧ ರೂ. ೪ ಆ
ರೇಶ್ಮೆ ಕುಚ್ಚಿನವುಳ್ಳ ಟೋಪಿಗಳು ೧ ರೂ. ೮ ಆ.; ೨ ರೂ.
ದಾರದ ಟೋಪಿಗಳು ೧ ರೂ. ೧೨ ಆ.; ೧ ರೂ. ೮ ಆ.; ೧ ರೂ. ೬ ಆ.
ಉಣ್ಣೆ ಟೋಪಿಗಳು ೧ ರೂ. ೮ ಆ ; ೧ ರೂ. ೬ ಆ.

ಕೊಡುಗಳ ಟೋಪಿ, ಸೂರ್ಥ ಮೇಜೋಡು, ಅರ್ಧ ಮೇಜೋಡು. ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು.

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ.

ಅಮೇರಿಕದಲ್ಲೆಲ್ಲಾ ತುಂಬಾ ಮುದುಕನಾಗಿರುವವನು

ಪೆರೂನಾವನ್ನು ಉಪಯೋಗ ಮಾಡಿಕೊಂಡು ಅನೇಕ
[ಶೀ]ತಕಾಲಗಳ ಭಯಸಂಕಟಗಳನ್ನು
ಜಯಿಸಿರುತ್ತಾನೆ.



ಮಿ|| ಬ್ರಾಕ್ ಎಂಬುವನು ತನ್ನ ದೇಹದ ಒಳ್ಳೇ ಆರೋಗ್ಯ ಸ್ಥಿತಿಯನ್ನೂ ತನ್ನ ಪೂರ್ಣವಾದ ಮುದಿತನವನ್ನೂ ಕುರಿತು ಹೇಳಿರುವುದೇನೆಂದರೆ —

"ಈ ಪ್ರಪಂಚದಲ್ಲಿ ನನ್ನಷ್ಟು ದೀರ್ಘ ಕಾಲ ಬದುಕಿದ ಮೇಲೆ ಯಾವ ಮನುಷ್ಯನಿಗಾಗಲಿ ಅನೇಕ ವಿಷಯಗಳು ಅನುಭವ ಪೂರ್ವಕವಾಗಿ ತಿಳಿದುಬರಬೇಕು ಎನಗೇನೇ ಅಂಥಾ ಅನುಭವ ಉಂಟಾಗಿರುತ್ತದೆ

"ಹವಾ ಬದಲಾವಣೆಯಿಂದುಂಟಾಗತಕ್ಕ ನಾನಾ ತರದ ಅಸ್ವಸ್ಥತೆಗಳಿಗೆ ನನ್ನ ಅನುಬವಕ್ಕೆ ಕಂಡುಬಂದಿರುವ ಒಂದು ಪರಿಹಾರ ಮಾತ್ರ ನನಗೆ ಸಂಪೂರ್ಣವಾದ ತೃಪ್ತಿಯನ್ನು ಉಂಟುಮಾಡಿರುವುದು ಈಗ ಕಳೆದ ೧೧೮ ವರುಷಗಳಿಂದಲೂ ಅಮೇರಿಕದಲ್ಲಿ ಆಗಾಗ್ಗೆ ಬದಲಾವಣೆಯಾಗತಕ್ಕ ಕಾಲಸ್ಥಿತಿ ಹವಾಗಳನ್ನು ನಾನು ಜಯಿಸಿಕೊಂಡು ಬಂದಿರುತ್ತೇನೆ.

'ನಾನು ಯೌವನ[ದಲ್ಲಿ] ಆರೋಗ್ಯವಾಗಿಯೇ ಇರುತ್ತಿದ್ದೆನು ಆದರೆ ಆಗಾಗ್ಗೆ ಅಕಸ್ಮಾತ್ತಾಗಿ ಹವಾ ಬದಲಾವಣೆಯಿಂದ ಉಂಟಾಗುವ ಅಸ್ವಸ್ಥತೆಗಳು ನನಗೆ ಉಂಟಾಗುತ್ತಿ[ದ್ದವು]

'ಡಾಕ್ಟರ್ ಹಾರ್ಟ್‌ಮನ್‌ರವರ ಪೆರೂನಾ ಔಷಧದ ವಿಷಯದಲ್ಲಿ ಅದು ಇಂಥಾ ಅಸ್ವಸ್ಥತೆಗಳನ್ನು ಗುಣಪಡಿಸುವುದಕ್ಕೆ ಪ್ರಮುಖವಾದದ್ದೆಂದು ನನಗೆ ಕಂಡುಬಂದಿದೆ ಅದು ನನಗೆ ಅನೇಕ ವರುಷಗಳಿಂದಲೂ ಮುಖ್ಯ ಬೆಂಬಲವಾಗಿರುತ್ತದೆ ನನ್ನ ಒಳ್ಳೇ ಆರೋಗ್ಯಸ್ಥಿತಿಗೂ ಇಷ್ಟು ಮುಪ್ಪಿನ ತನಕ ಬದುಕಿರುವುದಕ್ಕೂ ಈ ಔಷಧವೇ ಕಾರಣವೆಂದು ಹೇಳಬಲ್ಲೆನು

"ಈ ಔಷಧವು ನನ್ನ ದೇಹಾರೋಗ್ಯಕ್ಕೆ ಅವಶ್ಯವಾದದ್ದನ್ನೆಲ್ಲಾ ಕಲ್ಪಿಸಿಕೊಡುತ್ತದೆ ನನಗೆ ಅಕಸ್ಮಾತ್ತಾದ ಹವಾ ಬದಲಾವಣೆಯಿಂದ ಉಂಟಾಗತಕ್ಕ ಕೆಡಕುಗಳನ್ನೆಲ್ಲಾ ಇದು ನಿವಾರಣೆ ಮಾಡುತ್ತಿದೆ ಅದು ನನ್ನ ದೇಹದ ರಕ್ತಚಲನೆಯನ್ನು ಬಹಳ ಚನ್ನಾಗಿ ಕಾಪಾಡಿಕೊಂಡು ಬರುತ್ತಿದೆ ನನಗೆ ಆಗಾಗ್ಗೆ ಅನೇಕ ಸಣ್ಣಸಣ್ಣ ಜಾಡ್ಯಗಳು ಗಳು ಬರುತ್ತಾಗಿ ಹಲವು ತರದ ಔಷಧಗಳನ್ನು ತೆಗೆದುಕೊಳ್ಳುವದಕ್ಕೆ ಪ್ರತಿಯಾಗಿ ಇದೊಂದೇ ಎಲ್ಲಾ ವಿಷಯಗಳಲ್ಲಿ ನನಗೆ ಆರೋಗ ಕೊಡುತ್ತಿರುವುದು

ಮಿ|| ಐಸಕ್ ಬ್ರಾಕ್, ೧೧೮ ಸಂವತ್ಸರಗಳು ತುಂಬಿವೆ.

ನಾನು ನನ್ನ ಹೊಲದ ಸುತ್ತಲೂ ನಡೆದಾಡಬಲ್ಲೆನು ಇದರಿಂದ ನನಗೆ ಒಳ್ಳೇದಾದೀತು ಎನ್ನುವ ವಿಶ್ವಾಸವನ್ನು ಬಿಟ್ಟಿರಲಾರೆನು"

ನಿಮ್ಮ ವಿಧೇಯ

Isaac Brock

೧೯೦೬ನೇ ಇಸವಿ ಜೂಲೈ ೩ ರಲ್ಲಿ ಮಿ|| ಬ್ರಾಕ್‌ಯವರಿಗೆ ಅವರ ಪತ್ನಿಯಾದ ಸಾರಾ ಜೆ ಬ್ರಾಕ್ ಎಂಬಾಕೆಯು ಒಂದು ಕಾಗದ ಬರೆದು ತಿಳಿಸಿದ್ದೇನೆಂದರೆ —

"ಹೋದ ಶೀತಕಾಲದಲ್ಲಿ ನಾನು ಕಾಯಿಲೆ ಬಿದ್ದು ಗುಣಪಟ್ಟ ಕೂಡಲೇ ಪೆರೂನಾವನ್ನು ಸೇವನೆಮಾಡಲು ಪ್ರಾರಂಬಿಸಿದೆನು ಅದರಿಂದ ನನ್ನ ಆರೋಗ್ಯವು ಬಹಳಮಟ್ಟಿಗೆ ವೃದ್ಧಿಯಾಗಿದೆ ಎಂದು ನೆನಸುತ್ತೇನೆ

ಆ ಪತ್ರದ ಕಡೆಯ ಭಾಗದಲ್ಲಿ ಬರೆದಿರುವುದೇನೆಂದರೆ —"ಪೆರೂನಾದಿಂದ ಆಗತಕ್ಕ ಪ್ರಯೋಜನಗಳೇನೆಂದು ಅನೇಕರು ನನ್ನ ಗಂಡನಿಗೆ ಬರೆದು ಕೇಳುತ್ತಿದ್ದಾರೆ ನಾನು ಅವರ್ಯಾರಿಗೂ ಜವಾಬು ಕೊಡುತ್ತಿಲ್ಲ ಒಂದು ಸೀಸೆ ಔಷಧವನ್ನು ತರಿಸಿಕೊಂಡು ತಾವೇ ಉಪಯೋಗಿಸಿ ಪರೀಕ್ಷಿಸಬಹುದಾಗಿದೆ"

ಐಸಕ್ ಬ್ರಾಕ್ ಎಂಬಾತನು ಟೆಕ್ಸಾಸ್ ಡಿಸ್ಟ್ರಿಕ್ಟಿಗೆ ಸೇರಿದ ಮೆಕ್ಲೆನನ್ ಕೌಂಟಿಯಲ್ಲಿ ೧೧೮ ವರುಷಗಳ ಹಿಂದೆ ಆರತಕ್ಕ ಮನುಷ್ಯನು

ಆತನು ಅನೇಕ ವರುಷಗಳ ತನಕ ವಾಕೋವಿನ ಪಶ್ಚಿಮಕ್ಕೆ ಹದಿನೆಂಟು ಮೈಲಿ ದೂರದಲ್ಲಿರುವ ಬಾಸ್ಕ್ವೆವಿಲ್ ಎಂಬ ಸ್ಥಳದಲ್ಲಿ ವಾಸ ಮಾಡುತ್ತಿದ್ದನು ಈಗ ಟೆಕ್ಸಾಸ್ ಡಿಸ್ಟ್ರಿಕ್ಟಿನ ವಿಲ್ಸ್‌ವ್ಯಾಲಿಯಲ್ಲಿ ತನ್ನ ಅಳಿಯನ ಜೊತೆಯಲ್ಲಿ ಸಂಸಾರ ಮಾಡಿಕೊಂಡಿದ್ದಾನೆ

ಆಪೇಕ್ಷೆಪಟ್ಟ ಮೇರೆಗೆ ಕೆಲವು ದಿನಗಳ ಹಿಂದೆ ಐಸಾಕ್ ಎಂಬಿತನು ವಾಕೋವಿಗೆ ಬಂದು ತನ್ನ ಫೋಟೋ ತೆಗಿಸಿಕೊಂಡನು ಜನರಲ್ ಜಾಕ್ಸನ್ ಎಂಬಾತನಿಗೆ ಸೇರಿದ ಮೇಲೆ ಬೆಲೆಯುಳ್ಳ ಒಂದು ಗಿಡದ ರಂಬೆಯನ್ನು ಬ್ರಾಕ್ ತಂದು ದೊಣ್ಣೆಯಂತೆ ಹಿಡಿದು ಕುಳಿತುಕೊಂಡನು

ಮಿ|| ಬ್ರಾಕ್ ಎಂಬಾತನು ತನ್ನ ವಯಸ್ಸಿಗೆ ತಕ್ಕಷ್ಟು ಗಾಂಭೀರ್ಯವುಳ್ಳ ದೊಡ್ಡ ಮನುಷ್ಯನಾಗಿಂತ್ತಾನೆ ಆತನು ಶರೀರ ಸ್ಥಿತಿಯಲ್ಲಿ ಸ್ವಲ್ಪವೂ ಬಡವಾಗಲಿಲ್ಲ

ಆತನ ಸಂಸಾರದಲ್ಲಿ ಹಳೆ ಬೈಬಲ್ ಪುಸ್ತಕವು ಇನ್ನೂ ಇದ್ದೇ ಇದೆ ಅದರೊಳಗೆ ಅವನು ಹುಟ್ಟಿದ ವರ್ಷ ಯಾವದೆಂದು ತಿಳಿಯುವಂತೆ ಆತನ ಜನ್ಮ ದಿನವನ್ನು ಸ್ಪಷ್ಟವಾಗಿ ಬರೆದಿದೆ

ಸಂಯುಕ್ತ ಸಂಸ್ಥಾನಗಳು ಏರ್ಪಾಡಾಗುವುದಕ್ಕೆ ಮೊದಲು ಹುಟ್ಟಿದ್ದು

೨೨ ಮಂದಿ ಪ್ರೆಸಿಡೆಂಟರು ಚುನಾಯಿಸಲ್ಪಟ್ಟದ್ದನ್ನು ನೋಡಿದ್ದಾನೆ

ಪೆರೂನಾ ಔಷಧವು ಹವಾ ಬದಲಾವಣೆಯಿಂದ ಆತನಿಗುಂಟಾದ ಸಕಲ ಅಸ್ವಸ್ಥತೆಗಳನ್ನೂ ಗುಣಮಾಡಿರುತ್ತದೆ

ಈತನು ನಾಲ್ಕು ಯುದ್ಧಗಳಲ್ಲಿ ನಿಂತು ಕಾದಾಡಿ ಬಂದವನು

೯೯ ವರುಷವಾಗಿರುವಾಗ ಅವನು ಕುದುರೆಗೆ ಲಾಳ ಕಟ್ಟುತ್ತಾನೆ

ಪೆರೂನಾ ಸೇವನೆಯಿಂದ ವಾತ ನೋವುಗಳನ್ನು ಯಾವಾಗಲೂ ವಾಸಿ ಮಾಡಿಕೊಂಡಿರುತ್ತಾನೆ

ಒಂದು ಜಮೀನಿನ ವ್ಯಾಜ್ಯದಲ್ಲಿ ಇವನು ೧೧೦ ನೆ ವರುಷ ವಯಸ್ಸಿನಲ್ಲಿ ಸಾಕ್ಷಿಯಾಗಿ ಕೋರ್ಟಿಗೆ ಹೋಗಿದ್ದನು

ಶೀತ ವಾತ ರೋಗಗಳಿಗೆಲ್ಲಾ ಈಗಿನ ಕಾಲದಲ್ಲಿ ಪೆರೂನಾ ಎಂಬುವದೇ ಮಹೌಷಧವೆಂದು ನಂಬಿರುತ್ತಾನೆ

'ಈ ದೇಶದಲ್ಲಿ ಶೈತ್ಯಕಾಲ ಕೆಲಗಳ ಬಡಿಯುವ ರೋಗವು ಮೊದಲಾದಾಗ ನಾನು ಆ ರೋಗಕ್ಕೆ ಸಿಕ್ಕಿ ನರಳಿದೆನು

"ನನಗೆ ಈ ವಾತರೋಗವು ಹಿಡಿದು ಬಹಳಕಾಲ ಅನುಬವಿಸಿದೆನು ಪೆರೂನಾದಿಂದ ಈ ರೋಗ ವಾಸಿಯಾಗುವುದೆಂದು ಮೊದಲು ನನಗೆ ತಿಳಿದಿರಲಿಲ್ಲ ಅದು ಶೀತದಿಂದ ಹುಟ್ಟತಕ್ಕ ರೋಗವೆಂದು ನನಗೆ ತಿಳಿದಾಗ ಪೆರೂನಾವನ್ನು ಈ ರೋಗಪರಿಹಾರಕ್ಕಾಗಿ ತೆಗೆದುಕೊಂಡೆನು ಅದೇ ಆ ರೋಗಕ್ಕೆ ತಕ್ಕ ಔಷಧವೆಂದು ನನಗೆ ಬಹಳ ಚನ್ನಾಗಿ ಅನುಬವಕ್ಕೆ ಬಂದಿದೆ

ಈಚಿಗೆ ಬರೆದ ಇನ್ನೊಂದು ಕಾಗದದಲ್ಲಿ ಮಿ|| ಬ್ರಾಕ್ ಎಂಬಾತನು ತಿಳಿಸುವುದೇನೆಂದರೆ —

'ನಾನು ಸುಖವಾಗಿದ್ದೇನೆ, ಅನೇಕ ವರುಷಗಳಿಂದಲೂ ಆರೋಗ್ಯವಾಗಿರುತ್ತೇನೆ ನನ್ನ ದೃಷ್ಟಿಯೊಂದೇ ನನಗೆ ತೊಂದರೆಪಡಿಸುತ್ತಿದೆ ನನ್ನ ದೃಷ್ಟಿ ಚೆನ್ನಾದಪಕ್ಷದಲ್ಲಿ

ಈ ಔಷಧ ಸಿಕ್ಕುವ ಸ್ಥಳಗಳು.—

(೧) ಹಿಚ್‌ಕಾಕ್ ಅಂಡ್ ಸನ್ಸ್, ಬೆಂಗಳೂರು

(೨) ಇಂಗ್ಲಿಷ್ ಡ್ರಗ್ಸ್ ಕಂಪನಿ, ಶ್ರೀಕ ಮಿಂಟ್ ಬೀದಿ, ಮದರಾಸ್.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸಿ...

14-6-1907 ರಿಂದ 2?-6-1907 ರ ವರೆಗೆ

ಸ್ಥಳ	ಪ್ಲೇಗ್ ಆಗಲಿದ್ದು	ಪ್ಲೇಗ್ ಸತ್ತದ್ದು	ಕಾ[ಲರಾ] ಆಗಲಿದ್ದು
ಬೆಂಗಳೂರ ಪಟ್ಟಣ	8	8	0
ಮೈಸೂರು ,,	4	4	0
ಬೆಂಗಳೂರು ಡಿಸ್ಟ್ರಿಕ್ಟು	21	22	31
ಮೈಸೂರು ,,	17	12	118
ಕೋಲಾರ್ ,,	0	0	0
ಕೋಲಾರ್ ಚಿನ್ನದ ಗಣಿಗಳು	8	8	0
ತುಂಕೂರು ಡಿಸ್ಟ್ರಿಕ್ಟು	0	0	16
ಹಾಸನ ,,	0	0	51
ಚಿತ್ರದುರ್ಗ	0	0	0
ಕಡೂರ್	8	7	0
ಶಿವಮೊಗ್ಗ ,,	4	8	0
ಜುಮ್ಲಾ	72	56	234

ಶಾಲಿವಾಹನ ಶಕ ವರುಷಂಗಳು ೧೮೨೯ ನೇ ಪ್ಲವಂಗನಾಮ ಸಂವತ್ಸರದ ಜೇಷ್ಟ ಬಹುಳ ನವಮಿ ಗುರುವಾರದಿಂದ ಜೇಷ್ಟ ಬಹುಳ ಅಮಾವಾಸ್ಯ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೭ ನೇ ಇಸವಿ ಜೂಲೈ

ತಾ.	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ
4	ಗುರು	ನವಮಿ	15 ?	ಅ	17 3
5	ಶುಕ್ರ	ದಶಮಿ	10 32	ಭ	60 2
6	ಶನಿ ‡	ಏಕಾದಶಿ	17 2	ಕೃ	53 33
7	ರವಿ •	ದ್ವಾದಶಿ	19 56	ರೋ	60 3
8	ಸೋಮ	ತ್ರಯೋದಶಿ	23 00	ಮೃ	10 0
9	ಕುಜ *	ಚತುರ್ದಶಿ	25 20	ಮೃ	5 10
10	ಬುಧ †	ಅಮಾವಾಸ್ಯೆ	33 22	ಆ	11 13

‡ ದ್ವಾದಶೀ ಅಥಿ ಸರ್ವತ್ರ ಸುವರ್ಣಪಾರಿ ತ್ರಯೋದಶೀ ಪ್ರದೋಷ, ವಟಯೋಗ ಕಾವ್ಯರ್ಗದ್ವಾದಶಿ, ಸೋಮ್ಯಂತಿ, ... * ಕೃಷ್ಣಾಂಗಾರಕಚತುರ್ದಶಿ † ಸರ್ವತ್ರ ಅಮಾವಾಸ್ಯ — ಧೂನಿ ಪ್ರಗ್ರಹ ವಟಸಾವಿತ್ರಿ ವ್ರತಂ

ಪೇಟೇ ಧಾರಣೆ.

ದಿನಸಿ		ಮೈಸೂರು	ಬೆಂಗಳೂರು
ಬಿಳೇ ಅಕ್ಕಿ ಪಲ್ಲಾ ೧ಕ್ಕೆ	ರೂ	೧೨ ೮ ೦	೧೩
ಕಂಬಾರ ಅಕ್ಕಿ ಅಲ್ಲಿ		೧೩ ೪ ೦	೧೩
,,		೧೨ ೮ ೦	೧೨
ಸಣ್ಣರತ್ನ ಅಕ್ಕಿ		೧೨-೮ ೦	೧೩
ಸಣ್ಣಕ್ಕಿ ಅವಲ್		೧೬ ೦-೦	೧೬
,, ದುಯಂ		೧೪ ೮ ೦	೧೪
ತೊಗರೀ ಬೇಳೆ ಪಲ್ಲಾ ೧ಕ್ಕೆ		೧೬ ೮-೦	೧೬
,, ದುಯಂ		೧೨ ೧೨ ೦	೧೨
ಕೈರಾಗಿ ಪಲ್ಲಾ ೧ಕ್ಕೆ		೬ ೮ ೦	೬
ಕಾಡ್ರಾಗಿ		೫ ೮ ೦	
ಜೋಳ		೬ ೮ ೦	೬
ಕಡಲೆ ಪಲ್ಲಾ ೧ಕ್ಕೆ		೧೧ ೬ ೦	೧೧
ಬಿಳೇ ಅವರೆ		೮ ೪-೦	೮
ಹೆಸರು		೧೧-೮-೦	೧೧
ಉದ್ದು		೧೧ ೦ ೦	೧೧
ಕಡಲೆ		೧೨ ೦ ೦	೧೨
ಎಳ್ಳು ಸೇರು ೧೨ಕ್ಕೆ		೨೨-೮-೦	೨೨
ಹುರುಳಿ		೬ ೨-೦	೬
ಪುರಳಿ ೧೨ ಸೇರಿಗೆ		೧೪ ೦ ೦	೧೪
ಸೀಗೇಕಾಯಿ ಮಣ ೧ಕ್ಕೆ		೨ ೪ ೦	೨
ಮೆಣಸಿನಕಾಯಿ		೨ ೧೨ ೦	೨
,, ದುಯಂ		೦ ೮ ೦	೬
ಬೆಲ್ಲ ದೊಡ್ಡ ಅಚ್ಚು		೩ ೮ ೦	ಮ
ಒಣ ಮೆಣಸು ಮಣ ೧ಕ್ಕೆ		೫ ೮ ೦	೫
ಕರಲಸ್ಕ ,,		೫ ೮ ೦	೫
ಕೊತ್ತುಂಬರಿ ಪಲ್ಲಾ ೧ಕ್ಕೆ		೬ ೨ ೦	೬
ಉಪ್ಪು ,,		೫ ೪-೦	೫
ಹುಣಸೇ ಹಣ್ಣು		೦ ೬ ೦	೦
,, ಹಳೇದು		೦ ೧೪ ೦	೦
ತುಪ್ಪ ಮಣ ೧ಕ್ಕೆ		೦ ೮ ೦	೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ		೫ ೦-೦	
ತೆಂಗಿನಕಾಯಿ ೧೦೦ಕ್ಕೆ		೮ ೮-೦	
ಅಡಿಕೇಕಾಯಿ ಮಣ ೧ಕ್ಕೆ		೦-೨-೦	
ಅಂಟುವಾಳದ ಕಾಯಿ ಮಣ ೧ಕ್ಕೆ		೦ ೧೨ ೦	೦
ಚಿನ್ನ (ಪರ್ಗ) ತೊಲ		೧೫ ೪-೦	೧೫
,, ,, ಜಿನಿಮೆ		೧೫-೧೦-೦	೧೫
,, ಗಟ್ಟಿ ತೊಲ ೧ಕ್ಕೆ		೨೩-೧೨-೦	೨
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ		೮೫ ೦ ೦	೮

Printed and Published by the Rev E THOMPSON, M A, Proprietor and Manager, Wes[leyan] Mission Press Mysore 4/7/1907.

REGISTERED
M. 20.

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೧ ಮೈಸೂರು—ಸನ್ ೧೯೦೭ ನೇ ಇಸವಿ ಜೂಲೈ ತಾರೀಖು ೧೧ ನೇ ಗುರುವಾರ. ಸಂಚಿಕೆ ೬

WILLIAM & CO., BOMBAY.

ವಿಲಿಯಂ ಮತ್ತು ಕಂಪೆನಿ, ಫೋರ್ಟು, ಮುಂಬಯಿ.

ಗಜಕರ್ಣಪ ಮುಲಾಮು.

27-20

ಇದನ್ನು ಹಾಗಿಸುವದರಿಂದ ಎಲ್ಲಾ ತರ ಕಜ್ಜಿಯು ನಾಶವಾಗುವದು. ಮೂರು ದಿನ ಹಾಗಿಸುವದರೊಳಗೆ ಗಜಕರ್ಣವು ಹೋಗುವದು. ಇದನ್ನು ಹಚ್ಚಿದಲ್ಲಿ ಉರಿ ಇರುವದಿಲ್ಲ ಚರ್ಮ ಕಪ್ಪಾಗುವದಿಲ್ಲ.

ಇದರಿಂದ ಗುಣ ಕಂಡುಬರುವದಿಲ್ಲವಾದರೆ ಹಣ ಹಿಂತಿರುಗಿ ಕೊಡಲ್ಪಡುವದು ತ್ವರೆಮಾಡಿರಿ! ಕೊಂಡುಕೊಳ್ಳಿರಿ!! ಕ್ರಯ ಕಮ್ಮಿ. ಒಂದು ಸಾರಿ ಪರೀಕ್ಷಿಸಿ ನೋಡಿರಿ!!!

ಡಬ್ಬಿ ೧ಕ್ಕೆ ಕಿಮ್ಮತ್ತು ೦-೬-೦.

ವಿ. ಪಿ. ೦-೧೦-೦.

ಅಮೃತಾಂಜನ

ಬಾಟ್ಲಿ ಒಂದಕ್ಕೆ ಕಿಮ್ಮತ್ತು ೮ ಆಣೆ. ವಿ. ಪಿ. ೧೨ ಆಣೆ.

... ಮತ್ತು ಛಾಯಿ, ವಾತ, ಎದೆನೋವು, ಗಂಟಲನೋವು, ಕಿವಿನೋವು, ಸಂಧಿವಾತ, ತಲೆನೋವು, ಮೂಲವ್ಯಾಧಿ, ಶೀತ, ಕೆಮ್ಮು ಎಲ್ಲಾ ತರದ ರೋಗಕ್ಕೆ **ಅಮೃತಾಂಜನವು** ಒಂದೇ ಔಷಧಿಯಾಗಿರುತ್ತದೆ. ಇದರಿಂದ ಗುಣ ಕಂಡು ಬರುವದಿಲ್ಲವಾದರೆ ಹಣ ... ಕೊಡಲ್ಪಡುವದು. ತ್ವರೆ ಮಾಡಿರಿ! ಮೂವತ್ತು ವರ್ಷದಿಂದ ಅನುಭವಿಸುತ್ತಿದ್ದ ... ನಿಮ್ಮ ಒಂದೇ ಬಾಟ್ಲಿ **ಅಮೃತಾಂಜನ**ದಿಂದ ಪೂರ್ಣವಾಗಿ ಗುಣ ಸಿಕ್ಕಿತು. ದಯಮಾಡಿ ... ಬಾಟ್ಲಿ ವಿ. ಪಿ. ... ರವಾನಿಸಿರಿ. ವೆ. ರಾಮಭಟ್ಟ, ವಿಟ್ಲ, ದ. ಕನ್ನಡ. ... ನನ್ನ ಸ್ನೇಹಿತರು **ಅಮೃತಾಂಜನವನ್ನು** ... ಪ್ರಶಂಸಿಸುತ್ತಾರೆ. ಸುಬ್ಬಪ್ಪನಾಯ, ಪಂಜಾಬು. **ಅಮೃತಾಂಜನ**ದಷ್ಟು ಉಪಯೋಗ ಉಳ್ಳ ಮುಲಾಮು ಬೇರೆ ಯಾವುದೂ ಇಲ್ಲ. ಗಂಗಾಸೇವಕ, **ಕಲ್ಕತ್ತಾ**; ಆರು ವರ್ಷದಿಂದ ವಾತಪೀಡಿತನಾದ ನನ್ನ ಗೆಳೆಯನಿಗೆ **ಅಮೃತಾಂಜನವು** ಜೀವದಾನ ಕೊಟ್ಟಿತು. ರಾಮಚಂದ್ರರಾವ್ **ಅಮೃತಾಂಜನವು** ಸಾವಿರಾರು ಜನರಿಗೆ ... ಕೊಟ್ಟಿರುತ್ತದೆ. ವೀರಭದ್ರಪ್ಪ, ತುಮಕೂರು

ಸಂಜೀವನದ ಹಾಗಿರುವ **ಅಮೃತಾಂಜನವನ್ನು** ನನ್ನ ಮನೆಯಲ್ಲಿ ಸದಾಕಾಲ ಇಟ್ಟಿದ್ದೇನೆ. ಹನುಮಂತಯ್ಯ, ಬೆಂಗಳೂರು ನಿಮ್ಮ **ಅಮೃತಾಂಜನವು** ಎಂಥಾ ಕಠಿಣವಾದ ತಲೆನೋವನ್ನಾದರೂ ನಿಲ್ಲಿಸುತ್ತದೆ. ಗಂಗಣ್ಣರಾವ್, ಕೊಡಗು

... ತೈಲ ೪ ಆಣೆ. ವಟ್ಟುಗುಟಿಕ, ರೂಪಾಯಿ ೧. ದಂತಮಂಜನ ೩ ಆಣೆ. ನೇತ್ರಾಂಜನ ೪ ಆಣೆ. ಕಫಹಾರಿ ೧ ರೂ ೪ ಆ. ... ಮಾತ್ರೆ) ೧೦ ಆ ಕೇಶವರ್ಧಿನೀ ತೈಲ ೧ ರೂ. ಕಜ್ಜಮುಲಾಮು ೩ ಆಣೆ ಕುಸುಮಾರಿ ಗುಟಿಕ ೧ ರೂ. ತಾಂಬೂಲ ಗುಟಿಕ ೪ ಆಣೆ.

ವಿಲಿಯಂ ಮತ್ತು ಕಂಪೆನಿ, ೧೬ ಓಕ್ ಲೇನ್, ಫೋರ್ಟು, ಮುಂಬಯಿ.

ಟೆಲಿಗ್ರಾಫು ಅಡ್ರೆಸು; "ಅಮೃತಾಂಜನ" ಮುಂಬಯಿ.

ನೋಡಿರಿ ಬೇಗ ತರಿಸಿಕೊಳ್ಳಿ!! ಇದೇ ಒಳ್ಳೇ ಸಮಯ!!!

41 6

ತಡಮಾಡಿದರೆ ಪ್ರತಿಗಳು ಮುಗಿದುಹೋದಾವು.

ನೇತ್ರಾನಂದಕರಗಳಾದ ಚಿತ್ರಗಳಿಂದಲೂ, ನೀತಿರಸ ಪ್ರಧಾನವಾದ ವಿಷಯಗಳಿಂದಲೂ ರಂಜಿಸುವದಲ್ಲದೆ, ಸಕಲರುಗಳೂ ಪಡೆಯತಕ್ಕಷ್ಟು ಸುಲಭವಾದ ಕ್ರಯಕ್ಕೆ ಸಿಕ್ಕುವಂಥವುಗಳಾಗಿಯೂ ಇವೆ. ಇವುಗಳು ಯಾವವೆಂದರೆ:—

	ಕ್ರಯ.
ಸ್ಪೇನ್ ಚಕ್ರವರ್ತಿಯವರ ಮತ್ತು ಅಲೆಕ್ಸಾಂಡ್ರಾ ಚಕ್ರವರ್ತಿನಿಯವರ ಚರಿತ್ರೆ	೦—೪—೦
ಸ್ಪೇನ್ ಸಾರ್ವಭೌಮರ ಕಿರೀಟಧಾರಣೆ ..	೦—೨—೬
... ನತೆಯುಳ್ಳ ಸ್ತ್ರೀಯರ ಚರಿತ್ರೆ	೦—೨—೬
... ಆಫ್ರಿಕವೂ ಅದರ ನಿವಾಸಿಗಳೂ ..	೦—೨—೬
... ಚಕ್ರಾಧಿಪತ್ಯವೂ ಅದರ ನಿವಾಸಿಗಳೂ ..	೦—೨—೬
... ದೇಶವೂ ಬರ್ಮೀಯರೂ	೦—೨—೬
... ಗ್ರೀಕರ ಕಥೆಗಳು	೦—೨—೦
... ರೋಮನರ ಕಥೆಗಳು . .	೦—೨—೦
... ಚಿತ್ರಗಳೂ ಕಥೆಗಳೂ	೦—೧—೦
... ವರ್ಣನೆ	೦—೧—೦
... ವೆಂಬ ವಿಚಿತ್ರವಾದ ನನ್ನ ಮನೆ . ..	೦—೧—೦
... ಗೆ ಹೇಳಿದ ಕಥೆಗಳು	೦—೧—೦
ಪ್ರಾಚೀನಕಾಲದ ವಿಲಕ್ಷಣ ಜೀವರಾಶಿಗಳ ವರ್ಣನೆ	೦—೧—೦
... ಗೆ ಗಾಡಿಗಳನ್ನು ಕಲ್ಪಿಸಿದ ಜಾರ್ಜ್ ಸ್ಟೀವನ್ಸನ್ ಎಂಬಾತನ ಚರಿತ್ರೆ	೦—೧—೦

ವಿಳಾಸ:—ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

ವೈದ್ಯ ವೆಂಕಟಾಚಲ ಪಂಡಿತ, ಶ್ರೀಸೀತಾರಾಘವ ವೈದ್ಯಶಾಲಾ, ಕೊಳ್ಳೇಗಾಲ, ಇವರ ಸಿದ್ಧೌಷಧಗಳು.

26-21

೧. ಲೋಕಾಮಯಹರ ಕಸ್ತೂರೀ ಮಾತ್ರೆ.—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ



ಚಳಿಜ್ವರ, ಜ್ವರ, ಹೊಟ್ಟೆಶೂಲೆ, ಸಂದುಗಳ ನೋವು, ಮೈ ಕೈಕಾಲು ಕೊಡತ (ಭಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ.

ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಖಾಯಿಲೆಗೂ ದಾರಿಕೊಡದೆ, ನೀರು ಹವಾಗಳ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ.

ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ.

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.

೨೦೦ ಮಾತ್ರೆಯುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು. ೧ ರಿಂದ ೧೨ ಕುಪ್ಪಿ ವರೆಗೆ ಪೋಸ್ಟೇಜು ೪ ಆಣೆ.

ವಿಳಾಸ:—ಎಸ್. ಎಸ್. ಆರ್. ವೈದ್ಯಶಾಲಾ, ಲಕ್ಷ್ಮೀವಿಲಾಸ ರೋಡ್, ಮೈಸೂರು.

ನಿಮಗೆ ನೋವು ಇದೆಯೋ?

58-7

ಹಾಗಾದರೆ "ಸ್ಲೋಮೆಂಟ್ ಯವರ ಮ್ಯಾಜಿಕ್ ಬಾಂ" ನ್ನು ಏಕೆ ಉಪಯೋಗಿಸಬಾರದು? ಆಶ್ಚರ್ಯಕರವಾದ ಬಾಧಾಪಹಾರಿಯಿದು! ಆಗಿನ ಕಾಲದಲ್ಲಿ ಕಂಡು ಹಿಡಿದ ದೊಡ್ಡ ನೂತನವು!

ಈ ರಾಜ ಔಷಧವನ್ನು ಮೊಟ್ಟಮೊದಲು ತೊಡೆಯುತ್ತಲೇ ಕೆಲವು ನಿಮಿಷಗಳೊಳಗಾಗಿ ನರ ಮತ್ತು ಮಾಂಸ ಸಂಬಂಧವಾದ ಪಾರ್ಶ್ವನೋವು, ಕೀಲುಗಳ ಬಾಧೆ, ಕಿಬ್ಬೊಟ್ಟೆ ನೋವು, ಬೆನ್ನು ಳೆಯುವದು, ತಲೆನೋವು, ಕೆಮ್ಮು, ಕೀಲುಗಳು ಕತ್ತರಿಸ ಪದು, ಕೊರಳು ಊತ, ಕೈಕಾಲು ಒಡೆತ ಇವುಗಳನ್ನೆಲ್ಲಾ ವಿದ್ಯುಚ್ಛಕ್ತಿಯಂತೆ ಗುಣಪಡಿಸುವದು. ಈ ಔಷಧವು ಆಶ್ಚರ್ಯಕರವಾಗಿ ಗುಣಪಡಿಸುವದರಿಂದ ಎಲ್ಲರಲ್ಲಿಯೂ ಪ್ರಸರಿಸುತ್ತಾ ಬರುವದು. ಇತರ ಔಷಧಿಗಳು ಗುಣಪಡಿಸದೆ ಹೋದಾಗ ಡಾಕ್ಟರ್ ಫೀಜನ್ನು ಕಡಿಮೆಮಾಡಿ. ಇದು ನಿಸ್ಸಂದೇಹವಾಗಿಯೂ ಗುಣಪಡಿಸುವದು.

ಕ್ರಯ:—೧ ಬಾಟ್ಲಿಗೆ ೧೨ ಆಣೆ, ಪೋಸ್ಟೇಜ್ ೪ ಆಣೆ. ೩ ಬಾಟ್ಲಿಗೆ ಅಂಚೆವೆಚ್ಚ ಸೇರಿ ರೂ. ೨—೪ ಆಣೆ. ಎಲ್ಲಾ ಕೆಮಿಸ್ಟ್ ಷಾಪುಗಳಲ್ಲಿ ದೊರೆಯುವದು

ನಮ್ಮ ವಿಳಾಸ:—ಎಫ್. ಡಬ್ಲಿಯು. ಆರ್ನ್,
ಸಿಮೆಟ್ರಿ ರೋಡ್, ವೇಪೇರಿ, ಮದರಾಸ್.

ಜ್ವರಹರಿ.

47-11

ಇದು ಸಾಧಾರಣ ಜ್ವರ, ... ಜ್ವರ, ಮೋರೇಜ್ವರ, ಪಿತ್ಥಜ್ವರ ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ... ಎಸ್. ಟಿ. ವೆಂಕಟಪತಿ ಅಯ್ಯಂಗಾರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಔನ್ಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨೦ ಔನ್ಸಿನ ಸೀಸೆಯನ್ನು ವಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ —ಸೀಸೆ ೧ ಕ್ಕೆ ೮ ಆಣೆ, ೧ ರೂ , ೧—೮ ರೂ., ರೂ. ೨—೧೨ ಆ., ೧೧ ರೂ , ಇನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು

✦✦✦✦✦✦✦✦✦

ಅಮೃತಾಂಜನ ಪ್ರೋಪ್ರೈಟರ್ಸ್.

ಈ ಔಷಧವು ಅಜೀರ್ಣ, ... ಭೇದಿ, ಸಾಧಾರಣ ಹೊಟ್ಟೆಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು —ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳ ಮುಟ್ಟಾದಾಗ ಆಗುವಾಗ್ಯೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ. ಸೀಸೆಗಳಲ್ಲಿ ಸಿಕ್ಕುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆಸ್ರಿಯು ... ಕಲ್ಪನೆಯನ್ನು ನಾನೂ ನನ್ನ ಸ್ನೇಹಿತರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ಪರೀಕ್ಷೆಗಳಿಂದಲೂ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಷ್ಠರಿಗೆ ... ಕೊಟ್ಟು ಕೂಡಲೆ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧವೆಂತ ಬರೆದಿದ್ದಾರೆ.

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ:—

ಹೆಸ್ರಿಯಟ್ ಸ್ಟೋರ್ ಅಂಡ್ ಔಷಧಗಳ ಕಂಪೆನಿ, ಸೆಕೆಂಡ್ ಬೀಚ್ ಲೈನ್, ಮದ್ರಾಸ್

ವ್ಯವಹಾರ ನಿರ್ಣಯ

ಲಾ

ಎಂಬ ಕನ್ನಡ ಪುಸ್ತಕವು

58 8

ಲಾ ತಿಳಿದವರಿಂದಲೂ, ತಿಳಿಯದವರಿಂದಲೂ ಇದುವರೆಗೆ ಬರೆಯಲ್ಪಟ್ಟಿರುವ ಈ ತೆರದ ಪುಸ್ತಕಗಳನ್ನೆಲ್ಲ ನೋಡಿ ಅವೆಲ್ಲಕ್ಕಿಂತಲೂ ಹೆಚ್ಚು ಪ್ರಯೋಗವನ್ನು ಇದೊಂದು ಪುಸ್ತಕದಿಂದುಂಟುಮಾಡಬೇಕೆಂದು ಈ ದೊಡ್ಡ ಗ್ರಂಥವು ಹೊಸದಾಗಿ ಬರೆಯಲ್ಪಟ್ಟಿದೆ ಇದರಲ್ಲಿ ೧೫ ಅಧ್ಯಾಯಗಳು, ೭ ಕೋಷ್ಟಗಳು, ಹಿಂದೂ, ಮಹಮ್ಮದೀಯ ಲಾಗಳು, ಚೀಫ್ ಕೋರ್ಟು ಹೈ ಕೋರ್ಟುಗಳ ಫೈಸಲುಗಳು, ಗೌ॥ ಸರ್ಕ್ಯುಲರ್‌ಗಳು ಪ್ರೊಸೀಡಿಂಗ್ಸ್‌ಗಳು, ಸಕಲ ವಿಧ ವ್ಯವಹಾರಗಳು, (ಕ್ರಯ ಆಧಾರ ದಾನ ವಿಲ್ಲು ಮೊದಲಾದ) ೬೯ ತೆರದ ದಸ್ತಾವೇಜುಗಳ ನಮೂನೆಗಳು, ಈ ಸಂಬಂಧದ ಲಾ ವಿಧಿಗಳು, ಸಿವಲ್ ಕ್ರಿಮಿನಲ್, ಪೊಲೀಸ್, ರೆವಿನ್ಯೂ ಸಂಬಂಧದ ವ್ಯಾಜ್ಯಗಳು, ೫೯ ತೆರದ ಅರ್ಜಿಗಳು, ಈ ಸಂಬಂಧದ ಲಾ ವಿಧಿಗಳು ಇವೆಲ್ಲವೂ ಅಡಕವಾಗಿವೆ

ಪುಸ್ತಕ ದೊಡ್ಡದು	ಬೆಲೆ ಕಡಮೆ ಅಂಚೆ ಹಾಸಲು
ಪುಟಗಳು ಒಟ್ಟು ೩೩೬	ಸೇರಿ ರೂ ೧—೪—೦

ಗ್ರಂಥಕರ್ತರು: ಎಂ ವಾಸುದೇವಯ್ಯರು, ೧ನೆ ಗ್ರೇಡ್ ಪ್ಲೀಡರ್, ಶ್ರೀರಾಮ ಪೇಟೆ, ಮೈಸೂರು — ಇದೇ ವಿಳಾಸ

ಇದಕ್ಕೆ ಸಮಾನವಾದ ಪುಸ್ತಕ ಉಂಟೋ ?

ಕನ್ನಡ ಭಾಷೆಯಲ್ಲಿ ಇದುವರೆವಿಗೂ ಇಂಥಾ ಸೊಗಸಾದ ಪುಸ್ತಕವು ಪ್ರಚುರವಾಗಲಿಲ್ಲ. ಸ್ವಲ್ಪ ನೋಡಿ

"ಹಿಂದೂದೇಶ ಪ್ರದಕ್ಷಿಣ"

ಎಂದು ಕರೆಯಲ್ಪಡುವ ಈ ನೂತನ ಪುಸ್ತಕದಲ್ಲಿ ಸುಮಾರು ಸೆಂಬತ್ತು ಉತ್ಕೃಷ್ಟವಾದ ಚಿತ್ರಗಳು ಅಡಗಿವೆ ಹಿಂದೂ ದೇಶವನ್ನೆಲ್ಲಾ ಸಂಚಾರ ಮಾಡ ವದರಿಂದ ಉಂಟಾಗುವ ಪರಮಾನಂದವನ್ನು ಒಂದು ಸಾರಿ ಈ ಗ್ರಂಥವನ್ನು ಓದುವದರಿಂದ ಹೊಂದಬಹುದು ಇದು ಮೊದಲನೇ ಸಾರಿ ಪ್ರಿಂಟ್ ಆಗಿದ್ದು ಬಹು ಶೀಘ್ರವಾಗಿ ಎಲ್ಲಾ ಮುಗಿದು ಹೋದವು ಈಗ ತಿರಿಗಿ ವಿಚಿತ್ರವಾಗಿಯೂ ಉಲ್ಲಾಸಕರವಾಗಿಯೂ ಇರ ವ ಪ್ರಸಿದ್ಧವಾದ ಚಿತ ಗಳೊಡನೆ ಪ್ರಕಟಿಸಲ್ಪಟ್ಟಿದೆ ಇದರಲ್ಲಿರುವ ಚಿತ್ರಗಳನ್ನು ಸ್ವಲ್ಪ ನೋಡಿ—ಶ್ರೀರಂಗಪಟ್ಟಣದಲ್ಲಿರುವ ಹೈದರಲ್ಲಿ ಟಿಪ್ಪುಸುಲ್ತಾನು ಗೋರಿ, ಹುಮಾಯೂನನ ಗೋರಿ, ಹುಗ್ಲಿ ನದಿ, ಕಲ್ಕತ್ತಾ ನಗರ, ಕಲ್ಕತ್ತಾ ಹೈಕೋರ್ಟು, ಕಾಳಿಕಾದೇವತೆ, ಚಂದ್ರನಗರ, ಬಂಗಾಳಿಯರ ಮನೆಗಳು, ಜಗನ್ನಾಥಸ್ವಾಮಿ ಭುವನೇಶ್ವರಿವೆಂಬ ದೇವಸ್ಥಾನ, ಜಗನ್ನಾಥದ ರಥೋತ್ಸವ, ಕನರಾಕ್ ದೇವಸ್ಥಾನ, ಎವರೆಸ್ಟ್ ಶಿಖರ, ಖಟ್ಮಂಡು ನಗರದ ಒಂದು ಬೀದಿ, ಖಟ್ಮಂಡು ನಗರದ ದೇವಸ್ಥಾನಗಳು, ಜಪಚಕ್ರಗಳು, ಅಂಬಿಗರು ದೋಣಿಯನ್ನು ಎಳಕೊಂಡು ಹೋಗುವದು, ಗಯಾದಲ್ಲಿರುವ ಬುದ್ಧನ ದೇವಸ್ಥಾನ, ಔರಂಗಜೇಬನು ಕಟ್ಟಿಸಿದ ಮಸೀತಿ, ಕಾಶೀ ಪುಣ್ಯಕ್ಷೇತ್ರದಲ್ಲಿರುವ ದಶಾಶ್ವಮೇಧಘಟ್ಟ, ಕಪಿಗಳಿಗೆ ತಿಂಡಿ ಹಾಕುವದು, ಕಾಶೀ ಕ್ಷೇತ್ರದ ದೇವಸ್ಥಾನಗಳು, ಅಲಹಾಬಾದ್ ನಗರ ಮತ್ತು ಅದರ ಕೋಟೆ, ಅಲಹಾಬಾದ್‌ನಲ್ಲಿರುವ ಖುಸ್ರು ಬಾಗ್ ಅರಮನೆ, ಯಮುನಾ ನದಿಯಲ್ಲಿ ಯಾತ್ರಿಕರು ಮುಳುಗುವದು, ಕಾನ್ಪುರದಲ್ಲಿರುವ ಶಿಲಾ ಶಾಸನ, ಕಾನ್ಪುರದ ಹತ್ತರ ಗಂಗಾ ನದಿಯ ಮೇಲೆ ಕಟ್ಟಿರುವ ಸೇತುವೆ, ಲಕ್ನೋ ನಗರದ ರೆಸಿಡೆನ್ಸಿ ಬಂಗಲೆ, ಲಕ್ನೋ ಪಟ್ಟಣದ ಬಾಗಿಲು, ಸರ್ ಹೆನ್ರಿ ಲ್ಯಾಲಾರೆನ್ಸ್, ಗೋಮತಿ ನದಿಯ ಮೇಲಿರುವ ಅರಮನೆ, ಪ್ರಾಮದಲ್ಲಿ ಜನರ ಸ್ಥಿತಿ, ಹರಿದ್ವಾರಘಟ್ಟ ಗಂಗೋತ್ರಿ ದೇವಸ್ಥಾನ, ಹಿಮವತ್ಪರ್ವತಗಳ ಮೇಲಿರುವ ಪಟ್ಟಣ, ಹಿಮಪ್ರವಾಹಗಳು, ಆಗ್ರಾ ಪಟ್ಟಣದ ಕೋಟೆ, ಯಮುನಾ ನದಿಯೂ ದೂರದಲ್ಲಿ ತೋರುತ್ತಿರುವ ತಾಜ್‌ಮಹಲ್ ಗೋರಿಯೂ, ತಾಜ್ ಮಹಲಿನ ಕಲ್ಲಿನಲ್ಲಿ ಕೆತ್ತಿರುವ ಘರಡೆ, ಅಕ್ಬರನ ಅರಮನೆ, ಆಗ್ರಾ ಪಟ್ಟಣದ ಮುತ್ತಿನ ಮಸೀತಿ, ಫತ್ತೆಪುರ್ ಸಿಕ್ರಿಯಲ್ಲಿರುವ ಪಾಂಚ್ ಮಹಾಲ್ ಅರಮನೆ, ರಜಪೂತರು, ಭರತಪುರದ ಕೋಟೆ, ಅಲ್ವಾರಿನಲ್ಲಿ ಮಹಾರಾಜ ಭಕ್ತಾವರ್ ಸಿಂಗರ ಗೋರಿ, ದೆಹಲಿ ನಗರದ ದೊಡ್ಡ ಮಸೀತಿ, ಪುರಾತನ ದೆಹಲಿಯ ಒಂದು ಭಾಗ, ರಾಜ ದೇವನು ಸ್ಥಾಪಿಸಿದ ಕಬ್ಬಿಣದ ಸ್ತಂಭ, ನಾದರ್ ಷಹಾನು ದೆಹಲಿ ನಗರದಲ್ಲಿ ಪ್ರಜಾ ಸಂಹಾರವನ್ನು ನೋಡುತ್ತಿರುವದು, ದೆಹಲಿಯ ಬಳಿಯಲ್ಲಿರುವ ಕುತುಬ್ ಮಿನಾರ್, ಚಾಂದ್ನಿ ಚೌಕವೆಂಬ ಬೀದಿ ಸಿಂಲಾಕ್ಕೆ ಹೋಗುವ ದಾರಿ ಸಿಮ್ಲಾ, ಅಮೃತಸರದ ಸುವರ್ಣಾಲಯವು, ಲಾಹೋರಿನಲ್ಲಿರುವ ರಣಜಿತಸಿಂಗನ ಗೋರಿ, ಲಾಹೋರ್ ಪಟ್ಟಣ ಈ ಮುಂತಾದ ಅನೇಕ ರಮಣೀಯವಾದ ಸ್ಥಳಗಳ ಚಿತ್ರಗಳು ಈ ಪುಸ್ತಕದಲ್ಲಿ ಅಡಗಿವೆ ಅವುಗಳನ್ನೆಲ್ಲಾ ವಿವರಿಸಲು ಸ್ಥಳವಿಲ್ಲ

ಪ್ರತಿಯೊಂದು ಅಂಶದ ವಿವರಣೆಯೂ ಬಹು ಪರಿಷ್ಕಾರವಾಗಿದೆ ದಕ್ಷಿಣ ದೇಶದಲ್ಲಿರುವ ಅನೇಕ ಪ್ರಸಿದ್ಧ ಸ್ಥಳಗಳ ಚಿತ್ರಗಳೂ, ಅವುಗಳ ವಿವರಣೆಗಳೂ ಇದರಲ್ಲಿವೆ ಪುಸ್ತಕವು ಭಾರಿಯಾಗಿದೆ ಪುಸ್ತಕದ ಅಚ್ಚು ಮತ್ತು ಬೈಂಡು ಬಹು ಸುಂದರವಾಗಿವೆ ಇದರ ಕ್ರಯ ಎಂಟಾಣೆ, ವಿ ಪಿ ಪಿ ಮೂಲಕ ಹನ್ನೊಂದು ಆಣೆಯಾಗುವದು ಪುಸ್ತಕ ಜಾಗ್ರತೆಯಲ್ಲಿ ಮುಗಿದುಹೋಗುತ್ತಿರುವದರಿಂದ ತಾವುಗಳೆಲ್ಲ ಕೆಳಗೆ ಕಂಡ ವಿಳಾಸಕ್ಕೆ ಬೇಗನೆ ಬರೆದು ತರಿಸಿಕೊಳ್ಳಬೇಕು

ಮ್ಯಾನೇಜರ್, ಸಿ ಎಲ್ ಎಸ್ ಬುಕ್ ಡಿಪ್ಪೋ, ಮೈಸೂರು. 18-01

CHAMBERLAIN'S COLIC, CHOLERA AND DIARRHOEA REMEDY

ಚೇಂಬರ್ಲೇನ್ ಯವರು ಹೊಟ್ಟೆಶೂಲೆ, ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು

64



ಶೀತ ಹೊಟ್ಟೆಯ ನೋವು, ಬರೀ ಭೇದಿಯಾಗ ವುದು, ಆಮಶಂಕೆ ವಾಂತಿಭೇದಿ ಉಪದ್ರವ ಮುಂತಾಗಿ ನೋವು, ಹೊಟ್ಟೆಯ ನಾನಾ ತರದ ಶೂಲೆಗಳು— ಈ ರೋಗಗಳನ್ನೆಲ್ಲಾ ವಾಸಿಮಾಡುತ್ತವೆ ಈ ಪದಾರ್ಥವು ಉಪಯುಕ್ತವಾದ ಔಷಧವು ಜನರನ್ನು ಬದುಕಿಸಿರುವಷ್ಟು ಮತ್ತು ನೋವನ್ನೂ ಬಾಧೆಯನ್ನೂ ನಿವಾರಣೆ ಮಾಡಿರುವಷ್ಟು ಪ್ರಪಂಚದಲ್ಲೇ ಇನ್ಯಾವ ಔಷಧವೂ ಮಾಡಿರುವದಿಲ್ಲ

ಜ್ವಾಪಕದಲ್ಲಿ ಟ್ಟುಕೊಳ್ಳಿ—ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯಲ್ಲಿರುವ ಎಲ್ಲಾ ತರದ ನೋವನ್ನೂ ನಿಲ್ಲಿಸಿಬಿಡುತ್ತದೆ ಬಳಿಕ ಕಠಿಣವಾದ ಭೇದಿಯೂ ಕೂಡ ಮೂರೇ ಹೊತ್ತು ಈ ಔಷಧದಿಂದ ನಿರ್ಮೂಲನಮಾಡಿ ನಿಲ್ಲಿಸುತ್ತದೆ ಖಂಡಿತವಾಗಿ ವಾಸಿಮಾಡುವುದೇ ಇದರ ಗುಣ

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಸ್ವಲ್ಪವೂ ಮುಟ್ಟಿದ್ದಲ್ಲ

ಇದು ಎಲ್ಲೆಲ್ಲೂ ಬಿಕರಿಯಾಗುವುದು. ಸಣ್ಣ ಸೀಸೆಗೆ ೧ ರೂಪಾಯಿ. ದೊಡ್ಡ ಸೀಸೆಗೆ ೨ ರೂಪಾ

ಮಕ್ಕಳ ಹಿತಕಾರಿ

ಎಂದು

SCOTT'S EMULSION 31 17

(ಸ್ಕಾಟ್ಸ್ ಇಮಲ್ಷನ್)

ಎಂಬೀ ಸೇವನಾ ಔಷಧಕ್ಕೆ ಕೋಟ್ಯಂತರ ತಂದೆತಾಯಿಗಳು ಹೆಸರಿಟ್ಟದ್ದಾರೆ ಯಾಕೆಂದರೆ ಇದು ಮಕ್ಕಳ ಆರೋಗ್ಯವನ್ನು ವೃದ್ಧಿಪಡಿಸಿ ದೇಹವನ್ನು ಪುಷ್ಟಿಯಾಗಿ ಬೆಳಸಿರುತ್ತದೆ

ಇದು ತುಂಬಾ ರುಚಿಯಾಗಿರುವದರಿಂದ ಮಕ್ಕಳು ಬಹು ಸಂತೋಷವಾಗಿ ಸೇವನೆಮಾಡುತ್ತಾರೆ

ಇದು ಕಾಯಿಲೆ ಮಕ್ಕಳನ್ನು ಆರೋಗ್ಯಮಾಡುವುದು, ಅಶಕ್ತರಾದ ಮಕ್ಕಳನ್ನು ಬಲಿಷ್ಟರನ್ನಾಗಿ ಮಾಡುವುದು

ಕೈಸೋಕದೆ ತಯಾರಾದದ್ದು.

ಎಲ್ಲಾ ಔಷದದ ಷ್ಯಾಪು ರಸ್ಟರಲ್ಲೂ ಬಿಕರಿಯಾಗು .

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್, ಔಷಧಗಳ ಕಾರ್ಖಾನೆ ಲಂಡನ್, ಇಂಗ್ಲೆಂಡ್

ಈ ಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ

THE PLACE FOR HASSAN CAPS IS

HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ? ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

11 21

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು? ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೀಳಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು (೨) ಟೋಪಿಗಳನ್ನು ಬುದ್ಧಿಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ನೇರಾ ಬರೆದು ತರಿಸಿಕೊಳ್ಳಿ ಅಗ್ಗವಾದದ್ದು ಚೆನ್ನಾಗಿಲ್ಲದ್ದು ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ ಸಾದಾ, ಕೆಂಪು, ಕಪ್ಪು, ಬಿಳಿ ಕಾಫಿ ಟೋಪಿಗಳು ೧ ರೂ ೪ ಆ, ೧ ರೂ ೩ ಆ ೧ ರೂ ೮ ಆ

ರೇಶ್ಮೆ ಚುಕ್ಕೆಯುಳ್ಳ ಟೋಪಿಗಳು ೧ ರೂ ೪ ಆ, ೨ ರೂ ದಾರದ ಟೋಪಿಗಳು - ರೂ ೧೦ ಆ ೧ ರೂ ೪ ಆ ೧ ರೂ ೩ ಆ ಉ ಸುಕಿನ ಟೋಪಿಗಳು ೧ ರೂ ೪ ಆ, ೧ ರೂ ೩ ಆ

ಕಸೂತಿಗಳ ಟೋಪಿ, ಸೂರ್ತಿ ಮುಂಡಾಸು, ಅರ್ದ ಮೇಜೋಡು ಕತ್ತಿನ ಪಟ್ಟಿ ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳಿದವರಿಗೆ ಕಳಿಸಿ ಕಳುಹಿಸುವೆವು

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ

ಇಲ್ಲಿ ನೋಡಿ!

60 1

ಹಾಸನದ ನಿ ಷ್ಟರ ಇಲಾಖೆಯಲ್ಲಿ ಯೂರೋಪಿನ ಕೆಲ ವ್ಯಾಪಾರದ ಉತ್ತಮ ತರದ ಹಾಸನದ ಟೋಪಿಗಳ ಅತಿ ಶ್ರೇಷ್ಠವಾದ ಉಲ ದಾರದಿಂದ ತಯಾರಾಗುತ್ತವೆ

ಈಗ ಕೆಳಗೆ ನಮೂದಾಗಿರುವ ವಿವಿಧ ಬಣ್ಣದ ಟೋಪಿಗಳು ಹೆಚ್ಚಾಗಿ ನಮ್ಮಲ್ಲಿ ದಾಸ್ತಾನ (ಸ್ಟಾಕ್) ಉಂಟು

ಬಣ್ಣಗಳ ವಿಧ —ಅಚ್ಚಕೆಂಪು, ಪಂಚಕೆಂಪು, ಕಪ್ಪುಕೆಂಪು ಮಿಶ್ರವಾದದ್ದು

ಕ್ರಯ —೧ ರೂ ೭ ಆ ಮತ್ತು ೧ ರೂ ೩ ಆ

೧ ಡಜನ್ ಟೋಪಿಗಳನ್ನು ತೆಗೆದುಕೊಳ್ಳುವವರಿಗೆ ೧ ಕಾಸು ಕಡಿತ ಡಿಸ್‌ಕೌಂಟ್ ಕೊಡಲ್ಪಡುವದು

ನಮ್ಮ ವಿಳಾಸ —ಮ್ಯಾನೇಜರ್

ಹಾಸನದ ಟೋಪಿ ಕಾರ್ಖಾನೆ ನಿಷ್ಟರ ಇಲಾಖೆ ಹಾಸನ

ಇಗೋ ನೋಡಿರಿ ಎಲ್ಲರೂ ಓದತಕ್ಕ ಆಶ್ಚರ್ಯಕರವಾದ ಪುಸ್ತಕ!

"ಅರೇಬಿಯನ್ ನೈಟ್ಸ್ ಅಥವಾ ಮನುವಿನ ಯಾಮಿನೀ ವಿನೋದ ಕಥೆಗಳು"

61 3

ಎಂಬ ನಾನಾ ಸ ದ್ವವಾದ ಪುಸ್ತಕವು ತಿಳಿಗನ್ನಡದಲ್ಲಿ ಪ್ರಕಟಿಸಲ್ಪಟ್ಟಿದೆ ಸುಮಾರು ಎಪ್ಪತ್ತು ಪುಟಗಳುಳ್ಳದ್ದಾಗಿಯೂ, ಆಬಾಲವೃದ್ಧರಿಗೆ ಪ್ರೋತ್ಸಾಹಕರವಾಗಿಯೂ, ಮಹಾ ರಸಿಕವಾಗಿಯ ರಚಿತವಾಗಿರುವ ಈ ಪುಸ್ತಕದ ಅಭಿರುಚಿಯನ್ನು ವಾಚಕರ ಸ್ವಾನುಭವದಿಂದಲೆ ಗ್ರಹಿಸಿ ತಿಳಿದುಕೊಳ್ಳುವರು ಭಾಷೆಯು ಬಹು ಸರಳವಾಗಿರುವದು ಪುಸ್ತಕವನ್ನು ಒಂದಾವರ್ತಿ ಓದಿದ ಮೇಲೆ ಅದನ್ನು ಪುನಃ ಓದುವಂತೆ ಅದೇ ನಮ್ಮನ್ನು ಆಕರ್ಷಿಸುವದು

ಕ್ರಯ ರೂ ೦-೧೦ ವಿ ಪಿ ಪಿ ಮೂಲಕ ರೂ ೦-೧೩-೦

ವಿಳಾಸ —ಮ್ಯಾನೇಜರ್,

ಸಿ. ಎಲ್ ಎಸ್. ಬುಕ್ ಡಿಪ್ಪೋ

ಮೈಸೂರು

SCHOOL BOOKS! SCHOOL BOOKS!!

56 6

	Rs	
New English Readers Primer I	0	೧-೦
Primer II	0	೧-೦
New English First Reader	0	೩-೦
Second	0	೩-೦
Third	0	೫-೦
Fourth	0	೫-೦
Fifth	0	೬-೦
„ Sixth „	0	೬-೦
Primer of English Grammar	0	೨-೦
Manual of English Grammar	0	೬-೦
The Way to Health	0	೪-೦
Arithmetical Primer	0	೨-೦
Primer of Geography	0	೨-೦
Outlines of Geography	0	೨-೦
Manual of Geography	0	೧೦-೦
Chemistry Notes by Romilly H Ingram	1	೦-೦

Apply to—

THE MANAGER,

C L S Book ... Wesleyan ...

Mys...

ವೃತ್ತಾಂತ ಪತ್ರಿಕೆ

೪೯ ೧೯೦೭ ನೇ ಇಸವಿ ಜೂಲೈ ತಾ॥ ೧೧ ನೇ ಗುರುವಾರ

ರಷ್ಯಾ ರಾಜ್ಯದ ಡೂಮಾ ಪಾರ್ಲಿಮೆಂಟು.

ರಷ್ಯಾ ರಾಜ್ಯದಲ್ಲಿ ಕಾನೂನುಗಳನ್ನು ಮಾಡುವುದಕ್ಕೂ ಗವರ್ನಮೆಂಟಿನ ಜಮಾ ಖರ್ಚನ್ನು ಕ್ರಮಪಡಿಸುವುದಕ್ಕೂ ಪ್ರಜಾಪ್ರತಿನಿಧಿಗಳ ಸಭೆಯನ್ನು ನಿರ್ಮಾಣ ಮಾಡುವುದಾಗಿ ಚಕ್ರವರ್ತಿ ಜಾರ್ ಯವರು ಇಸ್ತಿಹಾರನಾಮೆಯನ್ನು ಪ್ರಕಟಿಸಿದಾಗ ಇನ್ನು ಮುಂದೆ ಆ ರಾಜ್ಯದಲ್ಲಿ ಪ್ರಜಾ ನೆಮ್ಮದಿಯು ನೆಲೆಗೊಳ್ಳುವುದೆಂತಲೂ ರಾಜ್ಯವು ಅಭಿವೃದ್ಧಿ ಹೊಂದಲು ಅವಕಾಶವಾಯಿತೆಂತಲೂ ಎಲ್ಲರೂ ತಿಳಿದು ಸಂತೋಷಪಟ್ಟರು.

ಚಕ್ರವರ್ತಿಯವರ ಆಜ್ಞಾನುಸಾರವಾಗಿ ಮೊದಲನೇ ಡೂಮಾ ಪಾರ್ಲಿಮೆಂಟು ಕೂಡಿತು ಅದರಲ್ಲಿ ರೈತ ಪ್ರಜಾಪ್ರತಿನಿಧಿಗಳೇ ವಿಶೇಷವಾಗಿ ಮೆಂಬರುಗಳಾಗಿ ಚುನಾಯಿಸಲ್ಪಟ್ಟು ಬಂದರು ಚಕ್ರವರ್ತಿಯವರ ಮಂತ್ರಿಗಳ ಅಭಿಪ್ರಾಯಕ್ಕೆ ಅನುಸಾರವಾದ ಕಾರ್ಯಗಳನ್ನು ನಡಿಸಿ ಚಲಾವಣೆಗೆ ತರುವುದರಲ್ಲಿ ಈ ಡೂಮಾ ಪಾರ್ಲಿಮೆಂಟಿನ ಮೆಂಬರುಗಳು ಇಷ್ಟಪಡದೆ ಹೋದದ್ದರಿಂದ ಚಕ್ರವರ್ತಿಯವರು ಕೆಲವು ವಾರಗಳೊಳಗಾಗಿಯೇ ಆ ಪಾರ್ಲಿಮೆಂಟನ್ನು ವಜಾಮಾಡಿಬಿಟ್ಟರು ತರುವಾಯ ಮೆಂಬರುಗಳ ಚುನಾವ ವಿಷಯದಲ್ಲಿ ಕೆಲವು ಬದಲಾವಣೆಗಳು ಮಾಡಲ್ಪಟ್ಟವು ಇದರಿಂದ ಕೀಳುದರ್ಜೆಯ ಪ್ರಜಾಪ್ರತಿನಿಧಿಗಳ ಸಂಖ್ಯೆಯು ಕೊಂಚ ಮಟ್ಟಿಗೆ ಕಡಿಮೆಯಾಯಿತು ಈ ಎರಡನೇ ಪಾರ್ಲಿಮೆಂಟು ಕೂಡಿ ಇನ್ನೂ ಬಹಳ ದಿನಗಳಾಗಿಲ್ಲ ಇಷ್ಟರಲ್ಲೇ ಚಕ್ರವರ್ತಿಯವರ ಅಪ್ಪಣೆಯ ಪ್ರಕಾರ ಈ ಎರಡನೇ ಪ್ರತಿನಿಧಿ ಸಭೆಯು ನಿಂತುಹೋಯಿತು ಯಾಕೆಂದರೆ ಈ ಪಾರ್ಲಿಮೆಂಟಿನ ಕೆಲವು ಮೆಂಬರುಗಳು ಪಿತೂರಿಗೆ ಸೇರಿ ಚಕ್ರವರ್ತಿಯವರನ್ನೂ ಅವರ ಮಂತ್ರಿಗಳನ್ನೂ ಕೊಲ್ಲಬೇಕೆಂದು ಪ್ರಯತ್ನಪಟ್ಟರಂತೆ ಆದರೆ ಆ ಪಾರ್ಲಿಮೆಂಟಿನವರು ಮಾಡಿಕೊಂಡಿದ್ದ ಕಾನೂನು ಪ್ರಕಾರ ಎಲ್ಲಾ ಮೆಂಬರುಗಳೂ ಒಪ್ಪಿದಲ್ಲದೆ ಅಂಥಾ ಅಪರಾಧಿಗಳನ್ನು ದಸ್ತಗಿರಿ ಮಾಡಲು ಅವಕಾಶವಾಗಲಿಲ್ಲ. ಈ ಪ್ರಕಾರವಾಗಿ ಪಾರ್ಲಿಮೆಂಟ್ ಮೆಂಬರುಗಳು ತುಂಬಾ ಚರ್ಚೆ ಮಾಡಿದರು ಕಡೆಗೂ ಅವರನ್ನು ದಸ್ತಗಿರಿ ಮಾಡುವುದಕ್ಕೆ ಒಪ್ಪದೆಹೋದರು ಇದರಿಂದ ಚಕ್ರವರ್ತಿಯವರು ಹುಕುಂ ಕೊಟ್ಟು ಈಗ ಈ ಎರಡನೆಯ ಸಭೆಯನ್ನು ವಜಾಮಾಡಿರುತ್ತಾರೆ ಮೂರನೇ ಪಾರ್ಲಿಮೆಂಟನ್ನು ಪ್ರಾರಂಭಿಸುವುದಕ್ಕೂ ಮೆಂಬರುಗಳ ಚುನಾವಣೆಗೂ ಈಗ ಬೇರೇ ನಿಬಂಧನೆಗಳು ಆಗಿರುವವು ಈ ನಿಬಂಧನೆಗಳ ಪ್ರಕಾರ ರೈತ ಪ್ರಜಾ ಪ್ರತಿನಿಧಿಗಳೂ ಇತರ ಕೀಳು ದರ್ಜೆಯ ಪ್ರತಿನಿಧಿಗಳೂ ಮೆಂಬರುಗಳಾಗುವುದಕ್ಕೆ ತುಂಬಾ ಅಡಚಣೆಯಾಗಿದೆ ಭಾರೀ ಜಮೀನುದಾರರುಗಳೇ ವಿಶೇಷವಾಗಿ ಮೆಂಬರಾಗಿ ಚುನಾಯಿಸಲ್ಪಡುವರು ಅಸಮಾಧಾನಪಟ್ಟಿರುವ ಪ್ರಜಾ ಕೋಟಿಗಳಿಗೆ ಆ ಮೆಂಬರುಗಳ ಕಾರ್ಯಗಳು ಸಮ್ಮತವಾಗಲಾರವೆಂದು ತೋರುವುದು ಮಂತ್ರಿಗಳೂ ಅಧಿಕಾರಿಗಳೂ ತಮಗಿರುವ ಸ್ವತಂತ್ರಾಧಿಕಾರಗಳನ್ನು ಪಾರ್ಲಿಮೆಂಟಿಗೆ ವಹಿಸುವುದಕ್ಕೆ ಇಷ್ಟಪಡುವುದಿಲ್ಲ ಪ್ರಜೆಗಳ ಮುಖಂಡರಾದರೋ ವಿವೇಕಶೂನ್ಯರಾಗಿರುತ್ತಾರೆ, ಸರ್ಕಾರದ ಕಾರ್ಯಗಳನ್ನು ನಡಸಲು ಅನುಭವಸ್ಥರಾಗಿಲ್ಲ ಅನೇಕಾನೇಕರು ಕ್ರೂರ ಕೃತ್ಯಗಳನ್ನು ಮಾಡಬೇಕೆಂದೂ ಅಭಿಪ್ರಾಯಪಡುವವರಾಗಿದ್ದಾರೆ

ಪಾದ ಪೂಜೆ

ಯೇಸುಕ್ರಿಸ್ತನ ಜೀವಮಾನ ಚರಿತ್ರೆಯಲ್ಲಿ ಒಂದು ವಿಶೇಷವಾದ ಸಂಗತಿಯು ಸೂಚಿಸಲ್ಪಟ್ಟಿರುತ್ತದೆ ಆತನು ಶಿಲುಬೆಯ ಮೇಲೆ ಮರಣವನ್ನು ಹೊಂದುವದಕ್ಕೆ ಮೊದಲು ಒಂದು ದಿನ ರಾತ್ರಿ ತನ್ನ ಶಿಷ್ಯರನ್ನೆಲ್ಲಾ ಒಟ್ಟಾಗಿ ಕೂಡಿಸಿ ಅವರೊಂದಿಗೆ ಭೋಜನಮಾಡಿದನು. ಭೋಜನವಾಗುತ್ತಿರುವಾಗ್ಗೆ ಯೇಸುಕ್ರಿಸ್ತನು ಎದ್ದು ವಸ್ತ್ರಾಪ್ರಾವರವನ್ನು ತೆಗೆದಿಟ್ಟು, ನಡುವಿಗೆ ಕಟ್ಟಿ ಬೋಗುಣಿಯಲ್ಲಿ ನೀರು ಹಾಕಿಕೊಂಡು ಶಿಷ್ಯರ ಪಾದಗಳನ್ನು ತೊಳೆದು ನಡುವಿಗೆ ಕಟ್ಟಿಕೊಂಡಿದ್ದ ವಸ್ತ್ರಾಪ್ರಾವರದಿಂದ ಒರಸುವದಕ್ಕೆ ಆರಂಭಮಾಡಿದನು ಇದನ್ನು ನೋಡುತ್ತಿದ್ದ ಶಿಷ್ಯರು ತಮ್ಮ ಗುರುವಿನ ಕಾರ್ಯಕ್ಕೆ ವ್ಯಸನಪಟ್ಟುಕೊಂಡರು ಯಾಕೆಂದರೆ ಪಾದಗಳನ್ನು ತೊಳೆಯುವ ಕೆಲಸವು ಆಳುಗಳಿಗೆ ಸೇರಿದ್ದು ಗುರುವಿನ ಪಾದಗಳನ್ನು ತೊಳೆಯುವದು ಶಿಷ್ಯರ ಕರ್ತವ್ಯವಾಗಿರಬಹುದು ಆದರೆ ಶಿಷ್ಯರ ಪಾದಗಳನ್ನು ತೊಳೆಯುವದು ಗುರುವಿನ ಕೆಲಸವಲ್ಲವೆಂದು ಜನರು ಅಭಿಪ್ರಾಯಪಡುತ್ತಾರೆ ಯೇಸುಕ್ರಿಸ್ತನು ಪಾದಗಳನ್ನು ತೊಳೆಯುತ್ತಿರುವ ಸಂದರ್ಭದಲ್ಲಿ ಪೇತ್ರನೆಂಬ ಶಿಷ್ಯನು—ಸ್ವಾಮಿ, ನೀನು ನನ್ನ ಕಾಲುಗಳನ್ನು ತೊಳೆಯಬೇಕೋ ? ಎಂದು ಕೇಳಿದನು ಅದಕ್ಕೆ ಯೇಸುಕ್ರಿಸ್ತನು—ನಾನು ಮಾಡುವದು ಈಗ ನಿನಗೆ ತಿಳಿಯುವದಿಲ್ಲ, ಇನ್ನು ಮೇಲೆ ನಿನಗೆ ತಿಳಿಯುವದು ಎಂದನು ಆತನು ತನ್ನ ಶಿಷ್ಯರ ಪಾದಗಳನ್ನು ತೊಳೆದ ಮೇಲೆ ಅವರಿಗೆ ಹೇಳಿದ್ದೇನಂದರೆ—ನಾನು ನಿಮಗೆ ಮಾಡಿದ್ದು ಏನೆಂಬುದು ಗೊತ್ತಾಯಿತೋ ನೀವು ನನ್ನನ್ನು ಗುರುವೆಂದೂ ಸ್ವಾಮಿಯೆಂದೂ ಕರೆಯುತ್ತೀರಿ ನೀವು ಆ ರೀತಿಯಲ್ಲಿ ಕರೆಯುವದು ಸರಿಯಾಗಿದೆ ನಾನು ಅಂಥವನೇ ಹೌದು. ಸ್ವಾಮಿಯೂ ಗುರುವೂ ಆಗಿರುವ ನಾನು ನಿಮ್ಮ ಕಾಲುಗಳನ್ನು ತೊಳೆದದರಿಂದ, ನೀವು ಸಹ ಒಬ್ಬರ ಕಾಲುಗಳನ್ನು ಒಬ್ಬರು ತೊಳೆಯುವ ಹಂಗಿನವರಾಗಿದ್ದೀರಿ ನಾನು ನಿಮಗೆ ಮಾಡಿದ ಮೇರೆಗೆ ನೀವು ಸಹ ಮಾಡುವಂತೆ ನಿಮಗೆ ಮಾದರಿಯನ್ನು ತೋರಿಸಿರುವೆನು.

ಲೋಕದಲ್ಲಿ ಅಧಿಕಾರವನ್ನು ಸಂಪಾದಿಸಿ ಎಲ್ಲರಿಂದಲೂ ಸನ್ಮಾನವನ್ನು ಪಡೆಯಬೇಕೆಂಬುವ ಆಶೆಯು ಮನುಷ್ಯರಲ್ಲಿ ಸಾಧಾರಣವಾಗಿರುತ್ತದೆ ಆದರೆ ಯೇಸುಕ್ರಿಸ್ತನು ಎಲ್ಲರ ಮೇಲೆ ಅಧಿಕಾರವನ್ನು ನಡಿಸುವದಕ್ಕೆ ಬದಲಾಗಿ ಅವರಿಗೆ ಸೇವಕನಂತೆ ಸೇವೆಯಲ್ಲಿ ನಿರತರಾಗಿರುವುದುತ್ತಮವೆಂದು ತಿಳಿಸಿದನು ಆತನ ಜೀವಮಾನದ ಮುಖ್ಯೋದ್ದೇಶವು ಪ್ರೀತಿಯಾಗಿತ್ತು ಸೇವೆಯ ಮೂಲಕ ಅವರಿಗೆ ಹೇಳಕೂಡದಷ್ಟು ಉಪಕಾರಗಳನ್ನು ಮಾಡಿದ್ದರಿಂದಲೇ ಆತನು ಜನಗಳನ್ನು ಪ್ರೀತಿಸಿ ಆತನ ದಿವ್ಯಮಹಿಮೆಯು ಈಗಿನವರಿವಿಗೂ ಭೂಲೋಕದಲ್ಲಿ ಪ್ರಕಾಶಿಸುತ್ತಿರುವದು ಆತನು ಪ್ರೀತಿಯಿಂದ ಸೇವೆಮಾಡುತ್ತಿರುವ ಸಮಯಗಳಲ್ಲಿ ಆತನಿಗೆ ಹಿಂಸೆಯೂ ಅವಮಾನವೂ ಉಂಟಾದವು ಅರಸನನ್ನಿಸಿಕೊಳ್ಳುವನು ಜೋನಾಸಕ್ತನಾಗಿರದೆ ತನ್ನ ವಶದಲ್ಲಿರುವ ಪ್ರಜೆಗಳಿಗೆಲ್ಲಾ ಏಳಿಗೆಗೆ ಅನುಕೂಲವಾದ ಕೆಲಸಗಳನ್ನು ಮಾಡತಕ್ಕವನಾಗಿರಬೇಕು ಹಾಗಿಲ್ಲದೆ ತನ್ನ ಸ್ವಂತ ಸುಖಭೋಗಗಳಲ್ಲಿ ಆಸಕ್ತನಾಗಿದ್ದು ಪ್ರಜೆಗಳ ಕ್ಷೇಮವನ್ನು ಮರೆತುಬಿಟ್ಟರೆ ಅಂಥಾ ಅರಸನನ್ನು ಹಿಂಸಕನೆಂದು ಕರೆಯಬಹುದಲ್ಲವೇ ಅಂಥವನಿಂದ ದೇಶಕ್ಕೆ ಯಾವ ಪ್ರಯೋಜನವೂ ಆಗಲಾರದು ಯೇಸುಕ್ರಿಸ್ತನ ಮಾದರಿಯನ್ನು ಅರಸರು ಮಾತ್ರವಲ್ಲದೆ ಎಲ್ಲಾ ಜನರು ಅನುಸರಿಸತಕ್ಕದ್ದಾಗಿರುತ್ತದೆ ಪ್ರತಿಯೊಬ್ಬನು ಎಂಥಾ ಸ್ಥಿತಿಯಲ್ಲಿದ್ದರೂ ಸರಿ ಸ್ವಪ್ರಯೋಜನವನ್ನೂ ಸ್ವಪ್ರತಿಷ್ಠೆಯನ್ನೂ ಹುಡುಕದೆ ಪರೋಪಕಾರಿಯಾಗಿ ಬದುಕುವದು ಅವನ ಕರ್ತವ್ಯವಾಗಿರುತ್ತದೆ ಕೆಲವರು ಮಾನವನ್ನು ಸಂಪಾದಿಸುವದಕ್ಕೋಸ್ಕರ ಅನ್ಯರಿಗೆ ಸಹಾಯಮಾಡುವದುಂಟು ಆದರೆ ಯೇಸುಕ್ರಿಸ್ತನ ಕಟ್ಟಳೆಯು ಹಾಗಿರದೆ, ಸಂತೋಷದಿಂದಲೂ ಪ್ರೀತಿಯಿಂದಲೂ ಸೇವಿಸಬೇಕೆಂದು ತಿಳಿಸುತ್ತದೆ ಯಾರು ನ್ಯಾಯದಿಂದಲೂ ನೀತಿಯಿಂದಲೂ ಪರೋಪಕಾರಿಗಳಾಗಿ ಜೀವಿಸುವರೋ ಅಂಥವರಿಗೆ ಮಾನವು ಖಂಡಿತವಾಗಿಯೂ ಬರುವದು

ಘನವಿಖ್ಯಾತನೂ ಕ್ರೈಸ್ತಭಕ್ತನೂ ಆಗಿದ್ದ ಪೌಲನೆಂಬುವನು ಯೇಸುಕ್ರಿಸ್ತನ ವಿಷಯ ಈ ರೀತಿಯಾಗಿ ತಿಳಿಸುತ್ತಾನೆ —ನಿಮ್ಮಲ್ಲಿ ಪ್ರತಿಯೊಬ್ಬನು ಸ್ವಹಿತವನ್ನು ಮಾತ್ರ ನೋಡದೆ ಪರಹಿತವನ್ನು ಸಹ ನೋಡಲಿ ಕ್ರಿಸ್ತಯೇಸುವಿನಲ್ಲಿದ್ದಂಥಾ ಮನಸ್ಸು ನಿಮ್ಮಲ್ಲಿಯೂ ಇರಲಿ ಆತನು ದೇವಸ್ವರೂಪಿಯಾಗಿದ್ದು ದೇವರಿಗೆ ಸರಿಸಮಾನನಾಗಿರುವದೆಂಬ ಅಮೂಲ್ಯಪದವಿಯನ್ನು ಬಿಡಲೊಲ್ಲನು ಎಂದೆಣಿಸದೆ, ಆಳಿನ ರೂಪವನ್ನು ಧರಿಸಿಕೊಂಡು ಮನುಷ್ಯರಿಗೆ ಸದೃಶನಾಗಿ ತನ್ನನ್ನು ಬರಿದುಮಾಡಿಕೊಂಡನು ಹೀಗೆ ಆತನು ಆಕಾರದಲ್ಲಿ ಮನುಷ್ಯನಾಗಿ ಕಾಣಿಸಿಕೊಂಡು, ಮರಣವನ್ನು ಅಂದರೆ ಶಿಲುಬೆಯ ಮರಣವನ್ನಾದರೂ ಹೊಂದುವಷ್ಟು ವಿಧೇಯನಾಗಿ ತನ್ನನ್ನು ದೀನನಾಗಮಾಡಿಕೊಂಡನು ಈ ಕಾರಣದಿಂದ ದೇವರು ಆತನನ್ನು ಅತ್ಯುನ್ನತಸ್ಥಿತಿಗೆ ತಂದು ಸ್ವರ್ಗ ಮರ್ತ್ಯ ಪಾತಾಳಗಳೊಳಗಿರುವ ಪ್ರತಿಯೊಬ್ಬನು ಯೇಸುವಿನ ಹೆಸರಿನಲ್ಲಿ ಮೊಣಕಾಲೂರಿ ನಮಸ್ಕಾರ ಮಾಡಬೇಕೆಂತಲೂ ತಂದೆಯಾಗಿರುವ ತನ್ನ ಸ್ತೋತ್ರಕ್ಕಾಗಿ ಪ್ರತಿಯೊಬ್ಬನ ನಾಲಿಗೆಯು ಯೇಸುಕ್ರಿಸ್ತನನ್ನು ಪ್ರಭುವೆಂದು ಪ್ರತಿಜ್ಞೆ ಮಾಡಬೇಕೆಂತಲೂ ಎಲ್ಲಾ ಹೆಸರುಗಳಿಗಿಂತ ಶ್ರೇಷ್ಠವಾದ ಹೆಸರನ್ನು ಆತನಿಗೆ ವರವಾಗಿ ಕೊಟ್ಟಿದ್ದಾನೆ

ಯೇಸುಕ್ರಿಸ್ತನು ಸೇವೆಯ ವಿಷಯ ಹೇಳಿದ ದಿವ್ಯವಾಕ್ಯವೇನಂದರೆ—ಅರಸರು ತಮ್ಮ ತಮ್ಮ ಜನಗಳ ಮೇಲೆ ದೊರೆತನ ಮಾಡುತ್ತಾರೆ, ಮತ್ತು ಅವರ ಮೇಲೆ ಅಧಿಕಾರ ನಡಿಸುವವರು ಉಪಕಾರಿಗಳೆನಿಸಿಕೊಳ್ಳುತ್ತಾರೆ ನೀವು ಹಾಗಿರಬಾರದು ಆದರೆ ನಿಮ್ಮಲ್ಲಿ ಶ್ರೇಷ್ಠನವನು ಬಾಲಕನಂತಾಗಬೇಕು

ಈ ಮೇಲ್ಕಂಡ ಮಾತುಗಳನ್ನು ವಾಚಕರೆಲ್ಲರೂ ಜ್ಞಾಪಕದಲ್ಲಿಟ್ಟುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇವೆ

ಒಳದೇಶದ ವೃತ್ತಾಂತಗಳು

ಕಳೆದ ಸೋಮವಾರ ರಾತ್ರಿ ಬೆಂಗಳೂರಿನಲ್ಲಿ ೪। ಅಂಗುಲ ಮಳೆಯಾಯಿತು ರಾಜಧಾನಿಯಲ್ಲೂ ಸ್ವಲ್ಪ ಮಳೆಯಾಗಿದೆ

◆◆◆

ದಿವಾನ್ ಮ॥ ವಿ ಪಿ ಮಾಧವರಾಯರು ನೊನ್ನೆ ಮಂಗಳವಾರ ಮಧ್ಯಾಹ್ನ ರೈಲಿನಲ್ಲಿ ರಾಜಧಾನಿಗೆ ದಯಮಾಡಿದರು.

◆◆◆

ಕೋಲಾರ್ ಚಿನ್ನದ ಗಣಿಗಳ ಪೈಕಿ ಟ್ಯಾಂಕ್ ಬ್ಲಾಕ್ ಎಂಬ ಗಣಿಯಲ್ಲಿ ಚಿನ್ನ ಸಿಕ್ಕುವುದು ನಿಂತುಹೋಯಿತಾದ್ದರಿಂದ ಆ ಗಣಿಯಲ್ಲಿ ಇನ್ನು ೨—೩ ವಾರಗಳೊಳಗೆ ಚಿನ್ನ ತೆಗೆಯುವ ಕೆಲಸ ನಿಂತು ಹೋಗುವುದೆಂದು ತಿಳಿದು ಬಂದಿದೆ

◆◆◆

ಕಳೆದ ಜೂನ್ ತಾ ೨೨ ರಿಂದ ಈ ತಿಂಗಳು ೩ ನೆ ತಾ. ವರಗೆ ಕೋಲಾರ್ ಚಿನ್ನದ ಗಣಿಗಳಿಗೆ ಸೇರಿದ ಕೆಲವು ಗಣಿಗಳಲ್ಲಿ ಸಣ್ಣ ಸಣ್ಣ ಅನಾಹುತಗಳಾಗಿ ಇನ್ನೊಬ್ಬನು ಜನರು ಮೃತಪಟ್ಟರೆಂತಲೂ ೧೦—೧೧ ಜನರಿಗೆ ನಾನಾ ಗಾಯಗಳಾದವೆಂತಲೂ ಅಲ್ಲಿನ ಮ್ಯಾನೇಜರರು ತಿಳಿಸುತ್ತಾರೆ

ಕಳೆದ ಭಾನುವಾರ ಸಾಯಂಕಾಲ ಬೆಂಗಳೂರು ದಂಡಿನ ಮತ್ತು ಪಟ್ಟಣದ ಮಹಮದೀಯ ದೊಡ್ಡಮನುಷ್ಯರು ಅಲ್ಲಿನ ಸಾಕಿ ದೊಡ್ಡಣ್ಣನವರ ಧರ್ಮ ಸತ್ರದಲ್ಲಿ ಸಭೆ ಸೇರಿ ಮಹಮದೀಯ ಸಂಘದ ಕೆಲವು ನಿಬಂಧನೆಗಳನ್ನು ವಿಮರ್ಶೆ ಮಾಡಿದರು ಒಂದು ಬಂಗಲೆಯನ್ನು ಕಟ್ಟುವುದಕ್ಕೆ ಚಂದಾ ಹಣವನ್ನು ಕೂಡಿಸಿದರು

◆◆◆

ರಾಜಧಾನಿಯ ಕಿಲ್ಲೆ ಮೋತೀಖಾನೆ ಬೀದಿಯಲ್ಲಿದ್ದ ಮ॥ ರಾಮಸಮುದ್ರದ ಭಕ್ಷಿ ಮಲ್ಲಪ್ಪನವರು ಕಾಲವಾದರು ಇವರಿಗೆ ಅವಸಾನಕಾಲದಲ್ಲಿ ಸುಮಾರು ೩೫ ವಯಸ್ಸಾಗಿತ್ತು ಇವರಿಗೆ ಐದು ಮಂದಿ ಕುಮಾರರಿರುತ್ತಾರೆ ಈ ಪೈಕಿ ಮೊದಲನೆಯವರಿಗೆ ಕರ್ನಲ್ ದೇಶರಾಜೇ ಅರಸಿನವರ ಕೈಕೆಳಗೆ ಮಿಲ್ಟೇರಿ ಅಸಿಸ್ಟೆಂಟ್ ಕೆಲಸವಿರುವುದು.

◆◆◆

ಹುಚ್ಚು ನಾಯಿ ನರಿ ಮುಂತಾದ ಪ್ರಾಣಿಗಳಿಂದ ಕಡಿಯಲ್ಪಟ್ಟವರು ಬಡಬಗ್ಗರಾಗಿದ್ದು ಕೂನೂರಿನಲ್ಲಿರುವ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಮಾಡಿಸಿಕೊಂಡು ಬರಬೇಕೆಂದು ಕಾತುರಪಡತಕ್ಕಂಥಾ ಈ ಸಂಸ್ಥಾನದ ಪ್ರಜೆಗಳು ಸಬ್ ಅಸಿಸ್ಟೆಂಟ್ ಸರ್ಜನರಿಂದ ಪಡೆದ ಸರ್ಟಿಫಿಕೇಟ್ ತೋರಿಸಿದಲ್ಲಿ ರೈಲ್ವೆ ಕಂಪನಿಯವರು ೩ನೇ ತರಗತಿಯ ಟಿಕೆಟ್ಟನ್ನು ಒಂದೇ ಛಾರ್ಜಿಗೆ ನಾಲ್ಕು ತಿಂಗಳ ಅವಧಿ ಕೊಟ್ಟು ಬಿಕರಿ ಮಾಡುವುದಾಗಿ ರಿಯಾಯತಿ ತೋರಿಸಿದ್ದಾರೆ

◆◆◆

ಕೋಲಾರದ ಚಿನ್ನದ ಗಣಿಗಳಲ್ಲಿ ಪೊಲೀಸಿನವರು ಪಾಧುರೆ, ಮರಿಎಂಬಿವರನ್ನು ಡಕಾಯಿತಿ ಮಾಡಿದರೆಂದು ಹಿಡಿದು, ಬೆಂಗಳೂರು ಸೆಷನ್ಸಿನಲ್ಲಿ ವಿಚಾರಣೆ ಮಾಡಿಸಿದರು ಸೆಷನ್ಸ್ ಜಡ್ಜರಾದ ಚೀಫ್ ಜಡ್ಜ್ ಮ॥ ನಂಜುಂಡೈಯ್ಯನವರು ಆಪಾದಿತರುಗಳಿಗೆ ತಲಾ ೧೮ ತಿಂಗಳ ಕಠಿಣ ಸಜಾ ವಿಧಿಸಿದ್ದಲ್ಲದೆ ಸಜಾ ಅನುಭವಿಸಿ ಬಂದ ಮೇಲೆ ಮೂರು ವರುಷಗಳ ತನಕ ಅವರಿಬ್ಬರೂ ತಮ್ಮ ವಾಸಸ್ಥಳ ಕಸಬು ಮುಂತಾದ್ದನ್ನು ಪೊಲೀಸಿನವರಿಗೆ ತಿಳಿಸುತ್ತಿರಬೇಕೆಂದು ಆಜ್ಞೆ ಮಾಡಿದ್ದಾರೆ

◆◆◆

ಚಿಕ್ಕನಾಯಕನ ಹಳ್ಳಿಯಲ್ಲಿ ನಡೆದ ಮೊಕದ್ದಮೆಯಲ್ಲಿ ಪೊಲೀಸಿನವರು ಒಬ್ಬ ಗೊಲ್ಲನನ್ನು ಹಿಡಿದು ಹಿಂಸೆಮಾಡಿದರೆಂದು ಮೊಕದ್ದಮೆ ಆಯಿತು ಚಿಕ್ಕನಾಯಕನ ಹಳ್ಳಿಯಲ್ಲಿ ನಡೆದ ಕೊಲೆ ಮೊಕದ್ದಮೆಯಲ್ಲಿ ಪೊಲೀಸಿನವರು ಒಬ್ಬ ಗೊಲ್ಲನನ್ನು ಹಿಡಿದು ಹಿಂಸೆ ಮಾಡಿದರೆಂದು ಮೊಕದ್ದಮೆ ಆಯಿತು ಕಲೇಂದರ್ ಎಂಬ ಪೊಲೀಸ್ ಕಾನ್ಸ್ಟೆಬಲ್ ಮೇಲೆ ಫಿರ್ಯಾದು ಬಂದು, ಬೆಂಗಳೂರು ಸೆಷನ್ಸ್ ಕೋರ್ಟಿನಲ್ಲಿ ದರ್ಯಾಪ್ತಿಯಾದಾಗ ಚೀಫ್ ಜಡ್ಜ್ ಮ॥ ನಂಜುಂಡೈಯ್ಯನವರು ಆ ಪೊಲೀಸಿನವನಿಗೆ ಒಂದು ವರುಷದ ಕಠಿಣ ಸಜಾ ವಿಧಿಸಿದರು

◆◆◆

ಜೋಧಪುರದ ಮಹಾರಾಜರವರ ಚಿಕ್ಕಪ್ಪಂದಿರಾದ ಮಹಾರಾಜಾ ಜಾಲೀಂ ಸಿಂಗ್‌ರವರು, ಇವರ ಕುಮಾರ , ಪ್ರೈವೆಟ್ ಸೆಕ್ರಟೆರಿಯವರು, ಒಬ್ಬ ಏಡಿಕಾಂಗರು ಮತ್ತು ಸುಮಾರು ೬೦ ಮಂದಿ ಪರಿವಾರ ಸಹಿತರಾಗಿ ಕಳೆದ ಶನಿವಾರ ಮಧ್ಯಾಹ್ನದ ರೈಲಿನಲ್ಲಿ ರಾಜಧಾನಿಗೆ ದಯಮಾಡಿ, ರೆಸಿಡೆನ್ಸಿ ಬಂಗಲೆಯಲ್ಲಿ ನಮ್ಮ ಮಹಾರಾಜರವರ ಆತಿಥ್ಯವನ್ನು ಸ್ವೀಕರಿಸುತ್ತಿದ್ದಾರೆ ಕಳೆದ ಭಾನುವಾರ ಸಾಯಂಕಾಲ ಶ್ರೀಮನ್ಮಹಾರಾಜರವರು ಈ ಅತಿಥಿಗಳನ್ನು ಅರಮನೆಗೆ ಕರೆಸಿಕೊಂಡು ಮರ್ಯಾದೆ ಮಾಡಿ, ಅರಮನೆಯ ಎಲ್ಲಾ ಭಾಗಗಳನ್ನು ಕಾಣಿಸಿದರು ಈ ಅತಿಥಿಗಳು ನಾಳೆಯ ದಿನ ವಾಪಸು ತೆರಳುವವರಾಗಿದ್ದಾರೆಂದು ಕೇಳುತ್ತೇವೆ

◆◆◆

ಬೆಂಗಳೂರು ಸೆಂಟ್ರಲ್ ಜೈಲ್ ಪ್ರೆಸ್ಸಿನಲ್ಲಿ ಇದುವರೆಗೆ ಸರ್ಕಾರಿ ಪರೀಕ್ಷೆಗಳ ಪ್ರಶ್ನ ಪತ್ರಿಕೆಗಳನ್ನು ಪ್ರಿಂಟು ಮಾಡುತ್ತಿದ್ದರು ಈಚೆಗೆ ಆ ಪೈಕಿ ಕೆಲವು ಪ್ರಶ್ನ ಪತ್ರಿಕೆಗಳು ಪರೀಕ್ಷೆ ಪ್ರಾರಂಭವಾಗುವುದಕ್ಕೆ ಮೊದಲೇ ಎಲ್ಲರಿಗೂ ಪ್ರಕಟವಾಗುತ್ತಿದ್ದವೆಂದು ಸರ್ಕಾರದವರಿಗೆ ತಿಳಿದು ಬಂದು ತನಿಖೆ ಮಾಡಿಸಿದ್ದರಲ್ಲಿ ಅಲ್ಲಿ ನಡೆಯುತ್ತಿದ್ದ ಅಕ್ರಮ ಕಾರ್ಯಗಳೆಲ್ಲಾ ಪ್ರಕಾಶಕ್ಕೆ ಬಂದವು ಈಗ ಸರ್ಕಾರದವರು ಆ ಪ್ರೆಸ್ಸನ್ನೇ ವಜಾ ಮಾಡಿರುತ್ತಾರೆ ಜೈಲ್ ಪ್ರೆಸ್ ಮ್ಯಾನೇಜರಾಗಿದ್ದ ಸಭಾಪತಿ ಪಿಳ್ಳೆಯನ್ನೂ ಮೇಸ್ತ್ರಿ ನಂಜುಂಡೈಯ್ಯನನ್ನೂ ಸರ್ಕಾರದ ಸರ್ವಿಸ್ಸಿನಿಂದ ವಜಾ ಮಾಡಿದರು ಡಿಪ್ಟಿ ಜೈಲರು ಆ ಪ್ರೆಸ್ಸಿನಲ್ಲಿ ತಮ್ಮ ಸ್ವಂತ ಕೆಲಸಗಳನ್ನೂ ಮಾಡಿಸಿಕೊಳ್ಳುತ್ತಿದ್ದರೆಂದು ತಿಳಿದು ಬಂದ ಕಾರಣ ಈ ವಿಚಾರವನ್ನು ತನಿಖೆಮಾಡಿಸಬೇಕೆಂದು ಹುಕುಂ ಕೊಟ್ಟಿದ್ದಾರೆ

◆◆◆

ಕಳೆದ ಶುಕ್ರವಾರದ ದಿನ ಶ್ರೀಮನ್ಮಹಾರಾಜರವರು ಶ್ರೀ ಶೃಂಗೇರಿ ಸ್ವಾಮಿಗಳನ್ನು ಸಮಸ್ತ ಬಿರುದು ಮರ್ಯಾದೆಗಳೊಡನೆ ಅರಮನೆಗೆ ಬಿಜಮಾಡಿಸಿಕೊಂಡು, ಯಥಾ ವಿಧಿಯಾಗಿ ಪಾದಪೂಜೆ ಭಿಕ್ಷಾದಿಗಳನ್ನು ನಡಿಸಿದರು ಸ್ವಾಮಿಗಳಿಗೆ ಬಹು ಬೆಲೆಯುಳ್ಳ ಶಾಲು ವಸ್ತ್ರಾದಿಗಳನ್ನು ಒಪ್ಪಿಸಿದರು ನೊನ್ನೆ ಸೋಮವಾರ ಮ॥ ಎಂ ಕಾಂತರಾಜೇ ಅರಸಿನವರು ಪಕ್ಷಿಮಾಭಿವೃದ್ಧಿಯಲ್ಲಿನ ತಮ್ಮ ಭವನಕ್ಕೆ ಸ್ವಾಮಿಗಳನ್ನು ಬಿಜಮಾಡಿಸಿಕೊಂಡು ಪಾದಪೂಜಾದಿಗಳನ್ನು ಮಾಡಿದರು ಇವತ್ತು ನಾಳೆಯೊಳಗಾಗಿ ಮ॥ ಲಕ್ಷ್ಮೀಕಾಂತರಾಜೇ ಅರಸಿನವರೂ ಸ್ವಾಮಿಗಳಿಗೆ ಪಾದಪೂಜೆ ಮಾಡುವವರಾಗಿದ್ದಾರೆಂದು ಕೇಳುತ್ತೇವೆ ಶ್ರೀ ಶೃಂಗೇರಿಸ್ವಾಮಿಗಳು ನೊನ್ನೆ ಮಂಗಳವಾರ ದಿನ ಇಲ್ಲಿ ಚಾಮುಂಡಿ ಬೆಟ್ಟಕ್ಕೆ ದಯ ಮಾಡಿದ್ದರು ನೆನ್ನೆ ಕೆಲವು ಹಂಗಡದ ಶಿಷ್ಯರು ಗೋಧಿಲ್ಲೇ ಹೋಗಿ ಸ್ವಾಮಿ ಗಳಿಗೆ ಪಾದಪೂಜೆ ಮಾಡಿದರು ಈ ದಿನವೂ ನಾಳೆಯೂ ಕೆಲವು ಅಧಿಕಾರಿಗಳೇ ಮುಂತಾದವರು ಅವರಿಗೆ ಪಾದಪೂಜಾದಿಗಳನ್ನು ನಡಸುವವರಾಗಿದ್ದಾರೆ ಇದನ್ನೆಲ್ಲಾ ತೀರಿಸಿಕೊಂಡು ಶ್ರೀ ಸ್ವಾಮಿಗಳು ಪರಿವಾರ ಸಹಿತ ನಾಡಿದ್ದು ಬೆಳಗಿನ ಝಾಮದಲ್ಲಿ ರಾಜಧಾನಿಯನ್ನು ಬಿಟ್ಟು ಗೋಪಶೆಟ್ಟಿ ಪಾಳ್ಯವನ್ನು ಕುರಿತು ಪ್ರಯಾಣ ಮಾಡುವವರಾಗಿದ್ದಾರೆಂತಲೂ, ಈ ಸಲ ಚಾತುರ್ಮಾಸ್ಯದ ಸಂಕಲ್ಪವನ್ನು ಅಲ್ಲೇ ನೆರವೇರಿಸುತ್ತಾರೆಂತಲೂ ವರ್ತಮಾನವಿದೆ

ಮಂಗಳೂರಿಗೆ ರೈಲು ಬಂತು.

ಇದೇ ತಿಂಗಳ ೩ ನೇ ತಾರೀಖು ಬುಧವಾರ ಮಂಗಳೂರಿಗೆ ರೈಲು ಮಾರ್ಗವು ತೆರೆಯಲ್ಪಟ್ಟಿತು ಎಂಬ ವಾರ್ತೆಯನ್ನು ನಮ್ಮ ವಾಚಕರಿಗೆ ಸಂತೋಷದಿಂದ ತಿಳಿಸುತ್ತೇವೆ. ಈ ಜಿಲ್ಲೆಗೆ ರೈಲು ಮಾರ್ಗವು ಆಗಬೇಕೆಂಬ ಸುಮಾರು ೩೦ ವರ್ಷದಿಂದ ಮಂಗಳೂರ ಮುನಿಸಿಪಾಲಿಟಿಯವರೂ, ಬಹುಮಾನ ಪಟ್ಟ ಆಲ್ಬರ್ಟ ಮಿಲ್ಲರ್ ಮತ್ತು ಮೋರ್ಗನ್ ಧೊರೆಗಳೂ, ದಿವಂಗತರಾದ ದಿವಾನ್ ಬಹದ್ದೂರ್ ಕೆವಧಿವ್ ಮತ್ತು ರಾವ್ ಬಹದ್ದೂರ್ ಬ್ರಿಯೋಯವರೂ, ಕಲ್ಯಾಣಪುರ ನಾರಾಯಣರಾವ್, ನಲ್ಲಿಕಾರ್ ಗಂಗುರಾವ್ ಮೊದಲಾದ ಮಹನೀಯರೂ ಪ್ರಯತ್ನ ಪಡುತ್ತಿದ್ದರು. ಹಿಂದೆ ವೈಸರಾಯರಾಗಿದ್ದ ಲೋರ್ಡ್ ಎಲ್ಜಿನ್ ಪ್ರಭುಗಳು ಮೈಸೂರಿಗೆ ಚಿತ್ತೈಸಿದ್ದಾಗ, ಇವರಲ್ಲಿ ಕೆಲವರು ಕನ್ನಡ ಜಿಲ್ಲೆಯ ಪ್ರತಿನಿಧಿಗಳಾಗಿ ಬೆಂಗಳೂರಿಗೆ ಹೋಗಿ ವೈಸರಾಯರಿಗೆ ಭೇಟಿ ಕೊಟ್ಟು ದಕ್ಷಿಣ ಕನ್ನಡ ಜಿಲ್ಲೆಗೆ ರೈಲುಮಾರ್ಗ ಮಾಡಿಸಿ ಕೊಡಬೇಕೆಂದು ತರತರದ ಕಾರಣಗಳನ್ನು ಕೊಟ್ಟು ಮನವಿ ಮಾಡಿಕೊಂಡಲ್ಲಿ — ಸದ್ಯಕ್ಕೆ ಅನುಕೂಲವಿಲ್ಲ, ಈ ವಿಷಯ ತಕ್ಕ ಸಮಯಕ್ಕೆ ಹೆಚ್ಚಿನ ಗಮನ ಕೊಡುವೆವು ಎಂಬ ತೃಪ್ತಿಕರವಲ್ಲದ ಉತ್ತರವಾಯಿತು. ಆದರೆ ಬಳಿಕ ಮದ್ರಾಸಿನ ಗವರ್ನರರಾಗಿ ಬಂದ ಲೋರ್ಡ್ ವೆನ್ಲೋಕ್ ಪ್ರಭುಗಳು ಮಂಗಳೂರಿಗೆ ಬಂದಿದ್ದಾಗ, ನಿವಾಸಿಗಳು ಎಲ್ಲಾ ಕಡೆಯಲ್ಲಿಯೂ — ಮಂಗಳೂರು ರೈಲನ್ನೇ ಬೇಡಿಕೊಳ್ಳುತ್ತದೆ ಎಂತ ತೋರಣಗಳನ್ನೂ ಪತಾಕೆಗಳನ್ನೂ ಹಾಕಿದ್ದಲ್ಲದೆ ಮುನಿಸಿಪಾಲಿಟಿಯವರೂ ಜಿಲ್ಲೆಯ ಮಹನೀಯರೂ ಇದೇ ಪ್ರಸ್ತಾಪದ ಮೇಲೆ ಅವರಿಗೆ ಅರ್ಜಿ ಬರೆಕೊಂಡಲ್ಲಿ, ಈ ವಿಷಯದಲ್ಲಿ ತಾನು ಹೆಚ್ಚು ಪ್ರಯತ್ನ ಪಡುತ್ತೇನೆಂದು ವಾಗ್ದಾನ ಮಾಡಿ ಹೋದರು. ಬಳಿಕ ಲೋರ್ಡ್ ಕರ್ಜನ್ ವೈಸರಾಯರು, ಮದ್ರಾಸ್ ಗವರ್ನರರಾಗಿದ್ದ ಲೋರ್ಡ್ ಆಮ್ಟ್‌ಹಿಲ್ ಪ್ರಭುಗಳ ಅಭಿಪ್ರಾಯದ ಮೇಲೆ ಈ ರೈಲು ಮಾರ್ಗಕ್ಕೆ ಏರ್ಪಾಡು ಮಾಡಿ ಕೊಟ್ಟರು. ನಾಲ್ಕು ವರ್ಷಗಳ ಮೊದಲು ರೈಲು ಮಾರ್ಗದ ಕೆಲಸವು ಪ್ರಾರಂಭವಾಗಿ ನೇತ್ರಾವತಿ ಸಂಕದ ದೆಸೆಯಿಂದ ಕೆಲಸವು ಸ್ವಲ್ಪ ಮೆಲ್ಲಗೆ ಸಾಗಿದರೂ, ಈಗ ಹ್ಯಾಗೂ ಮಂಗಳೂರಿಗೆ ರೈಲು ಬಂತು. ೩೦ ವರ್ಷಗಳಿಂದ ನಿರೀಕ್ಷಿಸುತ್ತಿದ್ದ ಕಾರ್ಯವು ಈಗ ನೆರವೇರಿತು ಎಂದು ಈ ಜಿಲ್ಲೆಯವರೆಲ್ಲರೂ ಸಂತೋಷ ಪಡಬಹುದು. ರೈಲು ಆಗುವದಕ್ಕೆ ಪ್ರಯಾಸ ಪಟ್ಟ ಎಲ್ಲಾ ಮಹನೀಯರಿಗೂ, ವಿಶೇಷವಾಗಿ ಲೋರ್ಡ್ ಆಮ್ಟ್‌ಹಿಲ್ ಮತ್ತು ಲೋರ್ಡ್ ಕರ್ಜನ್ ಪ್ರಭುಗಳಿಗೂ ಈ ಜಿಲ್ಲೆಯವರು ಕೃತಜ್ಞರಾಗಿರುವರು. ಆದಲ್ಲದೆ ರೈಲ್ವೇ ಇಲಾಖೆಯವರು ದೊಡ್ಡ ನೇತ್ರಾವತಿ ಸಂಕದ ಮೇಲೆ ಎರಡು ಮಗ್ಗುಲಲ್ಲಿಯೂ ಜನರು ಹೋಗುವ ಹಾಗೆ ಕಾಲು ದಾರಿಯನ್ನು ಸಹ ಮಾಡಿ ಕೊಟ್ಟದ್ದಕ್ಕಾಗಿ ಈ ಜಿಲ್ಲೆಯವರೆಲ್ಲರೂ ಅವರ ಉಪಕಾರವನ್ನು ಪ್ರತ್ಯೇಕವಾಗಿ ಸ್ಮರಿಸುತ್ತಿರುವರು.

ಮಂಗಳೂರು ರೈಲಿನ ಕಾಲನಿಯಾಮಕ ಪಟ್ಟಿ — ಮೇಲ್ ಟ್ರೇನು ಮಂಗಳೂರಿನಿಂದ ಬೆಳಿಗ್ಗೆ ೫ ಗಂಟೆ ೧೩ ನಿಮಿಷಕ್ಕೆ ಹೊರಟು ಮಾರನೇ ದಿನ ಬೆಳಿಗ್ಗೆ ೭ ಗಂಟೆ ೧೫ ನಿಮಿಷಕ್ಕೆ ಮದ್ರಾಸಿಗೆ ತಲಪುವದು. ಒಂದು ಲೋಕಲ್ ಟ್ರೇನು ಮಂಗಳೂರಿನಿಂದ ಮಧ್ಯಾಹ್ನ ೧ ಗಂಟೆ ೮ ನಿಮಿಷಕ್ಕೆ ಹೊರಟು ರಾತ್ರಿ ೧೦ ಗಂಟೆ ೫೪ ನಿಮಿಷಕ್ಕೆ ಕಲ್ಲಿಕೋಟೆಗೆ ತಲಪುವದು. ಮದ್ರಾಸಿನಿಂದ ಬರುವ ಮೇಲ್ ಟ್ರೇನು ಮಧ್ಯ ರಾತ್ರಿ ೧೨ ಗಂಟೆ ೪೮ ನಿಮಿಷಕ್ಕೆ ಜೋಲಾರ್ ಪೇಟೆಯಿಂದ ಹೊರಡುವದು. ಮತ್ತೊಂದು ಪಾಸೆಂಜರ್ ಟ್ರೇನು ಬೆಳಿಗ್ಗೆ ೬ ಗಂಟೆಗೆ ತಲಶೇರಿಯಿಂದ ಹೊರಟು ಮಧ್ಯಾಹ್ನ ೧೨ ಗಂಟೆ ೬ ನಿಮಿಷಕ್ಕೆ ಮಂಗಳೂರಿಗೆ ತಲಪುವದು. —ಸ

ಕಳುವಿನ ಸಮಾಚಾರಗಳು.

ಕೊಪ್ಪ.

ಕೊಪ್ಪ ತಾಲ್ಲೋಕು ಕುಂಚೂರಗೊಪ್ಪ ಎಂಬ ಗ್ರಾಮದಲ್ಲಿ ಸೂರೆ ಕೊಪ್ಪ ಎಂಬ ಮನೆಯಲ್ಲಿ ಇಬ್ಬರು ತಾಯಿಮಗಳು ಎರಡು ಜನ ಹೆಂಗಸರು ಮಾತ್ರ ಇದ್ದರು. ಜೂನ್ ತಾ ೨೦ ನೆ ಗುರುವಾರ ಅಲ್ಲಿಗೆ ಸಮೀಪ ಕುಸುಗೊಳ್ಳಿ ಎಂಬಲ್ಲಿಗೆ ಲಗ್ನಕ್ಕೆ ಮಗಳು ಗೌರಮ್ಮ ಹೆಗ್ಗಡಿಯು ಹೋಗಿ ಇದ್ದಳು. ತಾಯಿ ಈರಮ್ಮ ಹೆಗ್ಗಡಿಯು ಮನೆಯಲ್ಲಿಯೇ ಇದ್ದರು. ಆ ದಿನ ರಾತ್ರಿ ಯಾರೋ ಕಳ್ಳರು ಬಂದು ಸುಮಾರು ೩೦೦ ರೂಪಾಯಿ ದೇವರ ಕಾಣಿಕೆ ಹಣ, ಕೆಲವು ಬೆಳ್ಳಿ ಭಂಗಾರದ ನಗಗಳು ಸಹ ೫೦೦ ರೂಪಾಯಿ ಅಂದಾಜಿ ಜಿಂದಗಿಯನ್ನು ದೋಚಿಕೊಂಡು ಹೋದರು. ಆದರೆ ಸರಕಾರದವರು ಗುಮಾನಿ ಮೇಲೆ ಒಬ್ಬ ಹೊಲೆಯ ಭದ್ರ ಎಂಬುವನನ್ನು ಲಾಕಪ್ಪಿನಲ್ಲಿಟ್ಟಿರುತ್ತಾರೆ. ಇಲ್ಲಿನ ಪೊಲೀಸು ದಫೇದಾರರು ಬಹಳ ಮುತುವರ್ಜಿಯಿಂದ ಪತ್ತೆ ಮಾಡುವವರಾಗಿ ಇರುತ್ತಾರೆ. ಮಗಳು ಗೌರಮ್ಮ ಹೆಗ್ಗಡಿಯು ಲಗ್ನಕ್ಕೆ ಹೋಗುವಾಗ್ಗೆ ಕೆಲವು ನಗಗಳನ್ನು ತೊಂಡುಹೋಗಿ ಇದ್ದರು. ಅದು ಮಾತ್ರ ಉಳಿದ ಹಾಗೆ ಆಯಿತು. ಈ ಹೆಂಗಸರು ನಾಲ್ಕಾರು ಸಾವಿರ ರೂಪಾಯಿನ ಸ್ಥಿತಿವಂತರಾಗಿರುತ್ತಾರೆ. ಅವರಿಗೆ ಮಕ್ಕಳು ಮರಿ ಇಲ್ಲವಿನ್ನು. ಮುಂದೆ ಈ ಸ್ವತ್ತಿನ ಬಗ್ಗೆ ಪೊಲೀಸು ಕಾವಲ ಕೇಳುವವರಾಗಿದ್ದಾರೆ.

ಬೌರಿಂಗ್‌ಪೇಟ ತಾ॥ ಕಾಮಸಂದ್ರ

ಈ ಮಾಹೆ ತಾ ೪ ನೇ ಗುರುವಾರ ಕಾಮಸಂದ್ರದ ಸಂತೆಗೆ ಬಂದು ಇದ್ದ ಅಡಿಕೆ ವ್ಯಾಪಾರದ ಲಿಂಗಾಯತರು, ನೂಲಿಕಟ್ಟೆ ಮಾದಮಂಗಲದ ಮಾಸಸ್ಥರಾದ ಕುಂಬಿ ಸಂಜುಂಡಪ್ಪ, ಘಟ್ಟಣ್ಣನ ಮಗ ನಂಜುಂಡಪ್ಪ, ಮುದ್ದಗಂಗಪ್ಪ, ಬಸಪ್ಪ, ವಗ್ಯೆರೆ ಜನಗಳು ಸಂತೆಯಲ್ಲಿ ಅಡಿಕೆ ವ್ಯಾಪಾರ ಮಾಡಿ ಕೆಲಂಬ ಸಾಯಂಕಾಲವಾಗುತ್ತಲೇ ಗ್ರಾಮಕ್ಕೆ ಪಶ್ಚಿಮಕ್ಕೆ ಅರ್ಧ ಫರ್ಲಾಂಗು ದೂರದಲ್ಲಿರುವ ಗೋಪಾಲಸ್ವಾಮಿ ದೇವಸ್ಥಾನದಲ್ಲಿ ಮಾಮೂಲು ಪ್ರಕಾರ ಅಡಿಗೆ ಮಾಡುತ್ತಾ ಇರಲು, ಸುಮಾರು ೫ ಘಂಟೆ ರಾತ್ರಿಗೆ ಕಳ್ಳರು ಮೂವರು ಬಂದು, ಕಲ್ಲುಗಳಿಂದಲೂ ದೊಣ್ಣೆಗಳಿಂದಲೂ ಇವರುಗಳನ್ನು ಹೊಡೆದು, ಇವರ ಅಡಿಕೆ ಮೂಟೆಗಳು, ದುಡ್ಡು, ಬಟ್ಟೆಗಳು ವಗೈರೆ ಎತ್ತಿಕೊಂಡು ಹೋಗುತ್ತಿರಲು, ವಿಶೇಷ ಕೂಗುಗಳು ಆಗಿ ಗಲಾಟೆ ನಡೆಯುವಾಗ್ಗೆ ಗ್ರಾಮದ ಜನಗಳು ಬಂದರು. ಆಷ್ಟರಲ್ಲಿ ಕಳ್ಳರು ಮೂಟೆಗಳನ್ನು ಎತ್ತಿಕೊಂಡು ಓಡಿಹೋಗಿ ಮೂಟೆಗಳು ಭಾರಿಯಾದ್ದರಿಂದ ಓಡಿಹೋಗಲು ಸಾಧ್ಯವಾಗದೆ, ಸದರಿ ದೇವಸ್ಥಾನಕ್ಕೆ ಒಂದು ಫರ್ಲಾಂಗು ದೂರದಲ್ಲಿರುವ ಹುಣಿಸೇ ಮರಗಳ ಹತ್ತಿರ ಕತ್ತಾಳೆ ಪಕ್ಕದಲ್ಲಿ ಮೂಟೆಗಳನ್ನು ಬಿಸಾಟು ಓಡಿಹೋದರು. ಕತ್ತಲಾದದ್ದರಿಂದಲೂ ಗಿಡಗಳು ಮರೆಯಾದ್ದರಿಂದಲೂ ಕಳ್ಳರನ್ನು ಹಿಡಿಯಲು ಆಗಲಿಲ್ಲ. ನಂತರ ಗ್ರಾಮಸ್ಥರೂ ಮೇಲ್ಕಂಡ ಸಂಜುಂಡಪ್ಪ ವಗೈರೇರೂ ಲಾಂದ್ರ ಮತ್ತು ಪಂಜುಗಳನ್ನು ಹಿಡಿದುಕೊಂಡು ನೋಡಲಾಗಿ ಸದರಿ ಸೊತ್ತುಗಳು ಸಿಕ್ಕಿದವು. ಕೆಲವು ಬಟ್ಟೆಗಳು ಮಾತ್ರ ಸಿಕ್ಕಲಿಲ್ಲ. ಆದರೆ ಕುಂಬಿ ನಂಜುಂಡಪ್ಪನಿಗೂ, ಘಟ್ಟಣ್ಣನ ಮಗ ನಂಜುಂಡಪ್ಪನಿಗೆ ವಿಶೇಷ ಘಾಯಗಳಾಗಿ, ದೇವರ ದಯದಿಂದ ಪ್ರಾಣ ಬದುಕಿದೆ. ಬಾಕಿ ಇಬ್ಬರಿಗೆ ಸಾಧಾರಣವಾಗಿ ಘಾಯಗಳಾಗಿವೆ. ನಂತರ ಸದರಿ ಮೂಟೆಗಳನ್ನು ಬಿಚ್ಚಿ ನೋಡಲಾಗಿ ಅವರು ಇಟ್ಟಿದ್ದ ದುಡ್ಡು ವಗೈರೆ ಏನೂ ಖಲಲ್ಲಾಗಿರಲಿಲ್ಲ. ಪೊಲೀಸ್ ದಫೇದಾರರೂ ಪೊಲೀಸಿನವರೂ ಬಂದು ತನಿಖೆ ಮಾಡಲಾಗಿ ದೊಡ್ಡ ಮರಹಳ್ಳಿಯ ಬಳಿಯಲ್ಲಿ ಇರುವ ಒಡ್ಡರು ಸದರಿ ಸಂತೆಗೆ ಬಂದಿದ್ದರಂತೆ. ಸಾಯಂಕಾಲ ಆರೂವರೆ ಘಂಟೆ ವರಿವಿಗೂ ಸದರಿ ಕಾಮಸಂದ್ರ ಪೊಲೀಸ್ ಸ್ಪೆಷಲ್ ಕಾನಸ್ಟೇಬಲ್ ಗೋಪಣ್ಣನು ಸದರಿ ಒಡ್ಡರು ಅಂಗಡಿಸಾಲಿನಲ್ಲಿ ಇದ್ದಂತೆಯೂ ಆ ಒಡ್ಡರಿಂದಲೇ ಈ ಕಳ್ಳತನ ಆಗಿರುವದಾಗಿಯೂ ಗ್ರಾಮಸ್ಥರು ದಫೇದಾರರಿಗೆ ತಿಳಿಸಿದರು. ಗ್ರಾಮದ ಜಾಡಿನಲ್ಲಿಯೇ ಏಳು ಘಂಟೆ ಸಮಯದಲ್ಲಿ ಈ ರೀತಿ ಕಳ್ಳತನವಾದದ್ದು ಬಹಳ ಆಶ್ಚರ್ಯವಾಗಿರುತ್ತೆ. ಮುಂದೆ ಇಂಥಾ ಕಾರ್ಯಗಳಿಗೆ ಅವಕಾಶವಾಗದಂತೆ ಪೊಲೀಸ್ ಆಫೀಸರರು ನಿಗಾ ಇಟ್ಟು ಇರುವರಾಗಿ ನಂಬುತ್ತೇವೆ.

ಇಂಡಿಯಾ ದೇಶದ ವೃತ್ತಾಂತಗಳು

ಮದರಾಸ್ ಆಧಿಪತ್ಯದ ಗವರ್ನರವರು ಮುಂದಿನ ಆಕ್ಟೋಬರ್ ತಿಂಗಳಲ್ಲಿ ಮಲಬಾರ್ ಪ್ರಾಂತ್ಯ ದರ್ಶನಮಾಡುವವರಾಗಿದ್ದಾರೆಂದು ಕೇಳುತ್ತೇವೆ.

❖❖❖

ಬೊಂಬಾಯಿ ಪಟ್ಟಣದ ಪಾರೇಲ್ ಎಂಬ ವಿಭಾಗದಲ್ಲಿ ಜಾಂ ಎಂಬ ಬಟ್ಟೆ ಕಾರ್ಖಾನೆಗೆ ಬೆಂಕಿಬಿದ್ದು, ಸುಮಾರು ೩೦,೦೦೦ ರೂಪಾಯಿನ ಸರಕುಗಳು ನಷ್ಟವಾದವು.

❖❖❖

ಕಲ್ಕತ್ತಾ ಪಟ್ಟಣದಲ್ಲಿ ಹರಿಚಂದ್ರ ಚಟರ್ಜಿ ಎಂಬುವನು ತನ್ನ ಹೆಂಡತಿಯ ಮಾತನ್ನು ನಂಬಿ ಆತ್ಮೀಯನನ್ನು ಕಾಡನಿಯನನ್ನು ಕೊಂದು ಹಾಕಿದನೆಂದು ಮೊಕದ್ದಮೆ ಎಂದು ಸೆಷನ್ ಕೋರ್ಟಿನಲ್ಲಿ ವಿಚಾರಣೆಯಾಗುತ್ತಿದೆ.

❖❖❖

ಜಾನಕಮ್ಮನೆಂಬೊಬ್ಬ ತಿಯ್ಯಾ ಜಾತಿಯ ಹುಡುಗಿಯು ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ, ಕಲ್ಲೀಕೋಟೆಯ ಪೋಸ್ಟ್ ಆಫೀಸಿನಲ್ಲಿ ೨೦ ರೂಪಾಯಿ ತಲಬಿನ ಗುಮಾಸ್ತಳಾಗಿ ಸೇರಿ ಕೆಲಸಮಾಡುತ್ತಾಳೆ.

❖❖❖

ಕಲ್ಕತ್ತಾ ನಗರದಲ್ಲಿ ಕಳೆದ ವಾರ ಗಂಗಾನದಿಯಲ್ಲಿ ಅಪಾರವಾದ ಪ್ರವಾಹಗಳು ಹುಟ್ಟಿ ಅನೇಕ ಹಡಗುಗಳೂ ದೋಣಿಗಳೂ ಮುಳುಗಿ ಹೋದವು. ಅನೇಕ ಜನರೂ ತುಂಬಾ ಸರಕುಗಳೂ ನದಿಯ ಪಾಲಾದಂತೆ ತಿಳಿದುಬಂದಿದೆ.

❖❖❖

ಬಂಗಾಳಾ ಆಧಿಪತ್ಯಕ್ಕೆ ಸೇರಿದ ದರ್ಭಾಂಗ ಡಿಸ್ಟ್ರಿಕ್ಟಿನಲ್ಲಿ ಕಳೆದ ವಾರ ಕ್ಷಾಮ ಪೀಡಿತರ ಸಂಖ್ಯೆಯು ಬಹಳಮಟ್ಟಿಗೆ ಕಡಿಮೆಯಾಯಿತು. ಈಗ ೧೩,೩೫೩ ಜನರು ಕ್ಷಾಮ ಪೀಡಿತರಾಗಿ ಸರ್ಕಾರದವರ ಪೋಷಣೆಯಲ್ಲಿರುತ್ತಾರೆಂದು ತಿಳಿಯುತ್ತದೆ.

❖❖❖

ಅಫ್ಘಾನಿಸ್ಥಾನದ ಅಮೀರರು ಹಿಂದುಸ್ಥಾನದಲ್ಲಿ ಸಂಚಾರ ಮಾಡುವಾಗ ಅವರ ಬಳಿ ತೈನಾತಿಗಾಗಿ ನೇಮಿಸಲ್ಪಟ್ಟಿದ್ದ ಮಾಲಿಕ್ ಉಮ್ಮರ್ ಹಯಾತ್‌ಖಾನ್ ಎಂಬ ದೇಶದ ಮನುಷ್ಯನಿಗೆ ಅಮೀರರು ಒಂದು ಬಹುಮಾನರೂಪವಾಗಿ ಒಂದು ಚಿನ್ನದ ಗಡಿಯಾರವನ್ನು ಈಗ ಕಾಣಿಕೆ ಕಳುಹಿಸಿ ಕೊಟ್ಟಿದ್ದಾರೆ.

❖❖❖

ಚಕ್ರವರ್ತಿಯವರ ಜನ್ಮೋತ್ಸವದ ದಿನ ಅಮೃತಸರದಲ್ಲಿರುವ ಸಿಕ್ ಪ್ರಜೆಗಳು ಅಲ್ಲಿನ ತಮ್ಮ ಸುವರ್ಣ ದೇವಾಲಯದಲ್ಲಿ ಸ್ವಾಮಿ ಸೇವೆ ಉತ್ಸವಗಳನ್ನು ನಡೆಸಿ, ಚಕ್ರವರ್ತಿಯವರಿಗೆ ದೀರ್ಘಾಯುಸ್ಸನ್ನು ಬಯಸಿ ಪ್ರಾರ್ಥನೆಗಳನ್ನು ಸಲ್ಲಿಸಿದ್ದಲ್ಲದೆ ಬಹು ವಿಶೇಷವಾದ ದೀಪೋತ್ಸವವನ್ನು ನಡಸಿದರು.

❖❖❖

ಪಟ್ನಾ ನಗರದಲ್ಲಿ ಪ್ರಜೆಗಳು ಸಭೆ ಸೇರಿ ಮಿ ॥ ಲೆ ಚೌಡ್ರಿ ಎಂಬ ದೇಶಭಕ್ತ ಮನುಷ್ಯನನ್ನು ಅವರ ಸೇವೆಗಾಗಿ ಸನ್ಮಾನಿಸಿದರು. ಆ ಸಭೆಯ ಕೆಲವರು ಮಿ ॥ ಚೌಡ್ರಿಯವರು ಅಮೇರಿಕದಿಂದ ವಾಪಸು ಬಂದ ಮೇಲೆ ಅವರನ್ನು ಜಾತಿಯೊಳಕ್ಕೆ ಸೇರಿಸಿಕೊಳ್ಳಬೇಕೆಂದು ಸೂಚಿಸಿದರು. ಆದರೆ ಅನೇಕಾನೇಕರು ಅದಾಗಲಾರದೆಂದು ಹೇಳಿಬಿಟ್ಟರು. ದೇಶವನ್ನುಳಿದು ಹೀಗೆ ಬಹಿಷ್ಕಾರ ಮಾಡುತ್ತಾ ಬಂದರೆ ದೇಶಾಭ್ಯುದಯಕ್ಕೆ ನ್ಯೂನತೆಯಾದೀತೆಂದು ವಿವೇಕಿಗಳು ಹೇಳಲಿಲ್ಲಾರರು.

❖❖❖

ರಂಗೂನ್ ಪಟ್ಟಣದಲ್ಲಿ ಕೇವೆ ಎಂಬೊಬ್ಬ ಚೀನಾ ವೈದ್ಯನು ಒಬ್ಬ ರೋಗಿಯನ್ನು ಗುಣಮಾಡುತ್ತೇನೆಂದು ಮಾರ್ಫಿಯಾ ಎಂಬ ಔಷಧವನ್ನು ಕೊಟ್ಟಾಗಿ ಅವನ ಕಾಲಿನ ನರದ ಮೂಲಕ ಚುಚ್ಚಿ ಹಾಕಿದನು. ಅದರಿಂದ ಆ ರೋಗಿಯು ಸತ್ತುಹೋದದ್ದರಿಂದ ಆ ಡಾಕ್ಟರ ಮೇಲೆ ಕ್ರಿಮಿನಲ್ ಮೊಕದ್ದಮೆ ಆಗಿದೆ.

❖❖❖

ಬಂಗಾಳಾ ಆಧಿಪತ್ಯದಲ್ಲಿ ಕೆಲವು ವರ್ತಮಾನ ಪತ್ರಿಕೆಗಳು ಸರ್ಕಾರದವರಿಗೆ ವಿರೋಧವಾದಂಥಾ ಕೆಲವು ಯುಕ್ತಿಗಳನ್ನು ಪ್ರಕಟಿಸಿರುತ್ತವೆ ಎಂತಲೂ ಅದರಿಂದ ಪ್ರಜೆಗಳ ಮನಸ್ಸು ಕೆಡುವುದಕ್ಕೆ ಕಾರಣವಾಗಿದೆ ಎಂತಲೂ ಗವರ್ನಮೆಂಟಿನವರು ಯೋಚಿಸಿ, ಅಂಥಾ ಕೆಲವು ಪತ್ರಿಕೆಗಳ ಎಡಿಟರಗಳ ಮೇಲೆ ಮೊಕದ್ದಮೆ ತರಬೇಕೆಂದು ಪ್ರಯತ್ನ ಪಡುತ್ತಿದ್ದಾರೆ.

❖❖❖

ಸಿಲೋನ್ (ಲಂಕಾ) ದ್ವೀಪದಲ್ಲಿ ಕೊಲಂಬೋ ಎಂಬ ಬಾರೀ ಪಟ್ಟಣದಲ್ಲಿ ಬಹಳ ಎತ್ತರವಾದ ಒಂದು ಕಟ್ಟಡದ ಮೇಲೆ ಒಂದು ಭಾರೀ ದೀಪ ಉರಿಯುವಂತೆ ಮಾಡಬೇಕೆಂದು ಸರ್ಕಾರದವರು ತೀರ್ಮಾನಿಸಿ ೬೦,೦೦೦ ರೂಪಾಯಿ ಮಂಜೂರು ಮಾಡಿದ್ದಾರೆ. ಈ ಬೆಳಕಿನಿಂದ ಸಮುದ್ರದ ಮೇಲೆ ಸಂಚರಿಸುವ ಹಡಗುಗಳಿಗೆ ಎಂಟು ಸಹಾಯವಾಗುವುದು.

❖❖❖

ನಾಭಾ ನಗರದ ಸಂಸ್ಥಾನದ ಮಹಾರಾಜರಾದ ರಂಜೀತ್‌ಸಿಂಗ್‌ಜೀಯವರು ಅರಮನೆಯಲ್ಲಿದ್ದ ರಾಜಕುಮಾರರನ್ನೆಲ್ಲಾ ಅಂದರೆ ಎಂಟು ಮಂದಿಯನ್ನು ವಿದ್ಯೆ ಕಲಿಯುವದಕ್ಕೋಸ್ಕರ ರಾಜಕೋಟೆಯಲ್ಲಿರುವ ರಾಜ ಕುಮಾರರ ವಿದ್ಯಾಶಾಲೆಗೆ ಕಳುಹಿಸಿಕೊಟ್ಟರು. ಧರ್ಮಪುರದ ಮಹಾರಾಣಿಯವರ ಒಬ್ಬ ರಾಜಕುಮಾರನು ಪಶು ವೈದ್ಯವನ್ನು ಕಲಿತು ಬರುವುದಕ್ಕೆ ವಿಲಾಯತಿಗೆ ಹೋಗಿರುತ್ತಾನೆ.

❖❖❖

ಕಲ್ಕತ್ತಾ ಪಟ್ಟಣದಲ್ಲಿ ಒಂದು ಅಚ್ಚಿನ ಕಾರ್ಖಾನೆಯ ಯಜಮಾನನೂ ಅವನ ತಾಬೇದಾರನೂ ಸರ್ಕಾರಕ್ಕೆ ತಿಳಿಸಿ ಅವರ ಅಪ್ಪಣೆ ತೆಗೆದುಕೊಳ್ಳದೇನೇ "ಸೋನಾರ್ ಬಂಗಾಳಾ" ಎಂಬ ಒಂದು ವರ್ತಮಾನ ಪತ್ರಿಕೆಯನ್ನು ತಮ್ಮ ಕಾರ್ಖಾನೆಯಲ್ಲಿ ಪ್ರಿಂಟು ಮಾಡಿದರು. ಅವರಿಬ್ಬರ ಮೇಲೂ ಮೊಕದ್ದಮೆ ಆಗಿ, ಯಜಮಾನನಿಗೆ ೩೫೦ ರೂಪಾಯಿಯೂ, ಅವನ ತಾಬೇದಾರನಿಗೆ ೫೫ ರೂಪಾಯಿಯೂ ಜುಲ್ಮಾನೆ ವಿಧಿಸಲ್ಪಟ್ಟಿತು.

❖❖❖

ಪೂರ್ವ ಬಂಗಾಳಾ ಆಧಿಪತ್ಯಕ್ಕೆ ಸೇರಿದ ಫಾಟಿಯಾನಾ ಎಂಬ ಪಟ್ಟಣದಲ್ಲಿ ಒಂದು ದೊಡ್ಡ ದೊಂಬೀ ಕಲಹವೂ ಲೂಟಿಯೂ ನಡೆದವು. ಪೊಲೀಸಿನವರು ಸುಮಾರು ಮೂವತ್ತು ಜನ ಮುಖಂಡರನ್ನು ಹಿಡಿದು ಮೊಕದ್ದಮೆ ಮಾಡಿದರು. ಮಾಜಿಸ್ಟ್ರೇಟರು ದರ್ಯಾಪ್ತು ಮಾಡಿ ಆ ಪೈಕಿ ೧೫ ಮಂದಿಯನ್ನು ಬಿಡುಗಡೆ ಮಾಡಿಸಿ, ೧೪ ಮಂದಿಗೆ ತಲಾ ಒಂದು ವರುಷದಂತೆಯೂ ಒಬ್ಬನಿಗೆ ಮಾತ್ರ ಮೂರು ವರುಷವೂ ಕಠಿಣ ಶಿಕ್ಷೆ ವಿಧಿಸಿದರು.

❖❖❖

ಕಳೆದ ವಾರ ೧೦,೮೩೦ ಜನರು ಹಿಂದುಸ್ಥಾನದಲ್ಲಿ ಪ್ಲೇಗ್ ಉಪದ್ರದಲ್ಲಿ ಮೃತಪಟ್ಟರು, ಅಂದರೆ ಹಿಂದಿನ ವಾರದ ಸಂಖ್ಯೆಗಿಂತಲೂ ೯,೮೧೦ ಸಾವಿರಕ್ಕಿಂತಲೂ ಹೆಚ್ಚಾಗಿಯೇ ಕಡಿಮೆಯಾಗಿದೆ. ಪಂಜಾಬ್ ೯,೬೨೩ ಸಂಯುಕ್ತ ಆಧಿಪತ್ಯಗಳು ೬೩೪, ಬೊಂಬಾಯಿ ೩೭೮ ಬಂಗಾಳ ೭೮ ಬರ್ಮಾ ೧೨೦ ರಾಜಪುಟಾನಾ ೪೯, ಮದರಾಸ್ ೯, ಮಧ್ಯಪ್ರಾಂತ್ಯಗಳು ೩, ಮೈಸೂರು ೬೬, ಕಾಶ್ಮೀರ ೧೬, ಈ ರೀತಿ ಮರಣಗಳಾಗಿರುತ್ತವೆ.

❖❖❖

ಕಲ್ಕತ್ತಾ ಪಟ್ಟಣದಲ್ಲಿ ಲೇಟ್ ಸ್ವಾಮಿ ವಿವೇಕಾನಂದರವರ ಸಹೋದರರಾದ ಬಾಬು ಭೂಪೇಂದ್ರನಾಥ ದತ್ತ ಎಂಬುವರು "ಜುಗಾಂತರ" ಎಂಬ ವರ್ತಮಾನ ಪತ್ರಿಕೆಯನ್ನು ನಡಸುತ್ತಾ ಇದ್ದಾರೆ. ಆ ಪತ್ರಿಕೆಯು ಕಳೆದ ಜೂನ್ ೧೮ ನೆ ತಾರೀಖಿನ ಸಂಚಿಕೆಯಲ್ಲಿ ರಾಜ ದ್ರೋಹಕರವಾದ ವಿಷಯಗಳು ಪ್ರಕಟವಾದವೆಂದು ಕೇಳಿ ಪೊಲೀಸಿನವರು ಅವರ ಮನೆಯನ್ನೂ ಆಫೀಸನ್ನೂ ಕಳೆದ ವಾರ ಶೋಧನೆ ಮಾಡಿ ಅನೇಕ ಕಾಗದ ಪತ್ರಗಳನ್ನು ತೆಗೆದುಕೊಂಡು ಹೋಗಿದ್ದಾರೆ.

❖❖❖

ಸಿಲೋನ್ (ಲಂಕಾ) ದ್ವೀಪಕ್ಕೆ ಸೇರಿದ ಕೇಗಲ್ಲೆ ಎಂಬ ಪಟ್ಟಣದಲ್ಲಿ ಒಬ್ಬ ಬಾರೀ ಜಮೀನ್ದಾರನ ಆನೆಯ ಮುಂದೆ ಸಾವಿರಾರು ಜನರು ಸೇರಿ ಉತ್ಸವ ನಡಸುತ್ತಿದ್ದರು. ಅನೇಕರು ಅದನ್ನು ನೋಡುತ್ತಿರುವಲ್ಲಿ ಉತ್ಸವದಲ್ಲಿದ್ದ ಒಂದು ಆನೆಯು ಇದ್ದಕ್ಕಿದ್ದಹಾಗೆ ಗಾಬರಿಬಿದ್ದು ಸ್ವೇಚ್ಛೆಯಾಗಿ ಜನರ ಗುಂಪಿನ ಮೇಲೆ ನುಗ್ಗಿ ಬಹಳ ಅನಾಹುತ ಮಾಡಿತು. ಮಾವಟಿಗನು ಕೆಳಗೆ ಬಿದ್ದನು. ಆನೆಯು ನಾಲ್ಕಾರು ಮಂದಿಯನ್ನು ತುಳಿದು ತಂಟು ಗಾಯ ಮಾಡಿತು. ಈಗ ಅವರನ್ನೆಲ್ಲಾ ಆಸ್ಪತ್ರೆಯಲ್ಲಿಟ್ಟು ಇಲಾಜು ಮಾಡುತ್ತಿದ್ದಾರೆ.

❖❖❖

ಬೊಂಬಾಯಿ ಆಧಿಪತ್ಯಕ್ಕೆ ಸೇರಿದ ಸಂಗಂಧ ಎಂಬ ಸಂಸ್ಥಾನದಲ್ಲಿ ರಾಜರಿಗೂ ಅವರ ಸಹೋದರರಿಗೂ ಮನಸ್ತಾಪಗಳುಂಟಾಗಿ ಗುಲ್ಲೆಯಾಗಿರುವಂತೆ ಸಮಾಚಾರ ಬಂದಿದೆ. ಕೆಲವು ಜಮೀನ್ದಾರರ ಬಳಿಗೆ ರಾಜರು ಕಂದಾಯ ಕೊಡುವಂತೆ ಹೇಳಿ ಕಳುಹಿಸಿದಾಗ ಅವ

ರು ಕೊಡುವುದಿಲ್ಲವೆಂದು ತಿರಸ್ಕಾರವಮಾಡಿ, ಬಹಳ ಗಲಾಟೆಯಾಯಿತು ಈ ದಂಗೆಯನ್ನು ಅಡಗಿಸುವುದಕ್ಕೆ ರಾಜರು ಸೈನ್ಯವನ್ನು ಕಳುಹಿಸಬೇಕಾಯಿತೆಂತಲೂ, ಈಗ ನಥ್ವಾನದಿಂದ ಬ್ರಿಟಿಷ್ ರೆಸಿಡೆಂಟರು ತನಿಖೆ ಮಾಡುವುದಕ್ಕಾಗಿ ಅಲ್ಲಿಗೆ ಹೋಗಿದ್ದಾರೆಂತಲೂ ತಿಳಿಯಬಂದಿದೆ.

❖❖❖

ಕಲ್ಕತ್ತಾ ಪಟ್ಟಣದ ಮೆಟ್ಕಾಫ್ ಎಂಬ ಬೀದಿಯ ಅಂಚಿನಲ್ಲಿ ನಾಲ್ಕು ದಿನ ಯೂರೋಪಿಯನ್ ಜನರು ನಿಂತು ತಿರುಗಾಡುವವರ ಕಡೆಗೆ ಬಾಂಬ್ ಎಂಬ ಮದ್ದಿನ ಗುಂಡುಗಳನ್ನು ಎಸೆಯುತ್ತಿದ್ದರು ಪೊಲೀಸಿನವರು ಅವರನ್ನು ಹಿಡಿದು ಮೊಕದ್ದಮೆ ಮಾಡಿದಾಗ ಆ ಅಪರಾಧಿಗಳ ಪೈಕಿ ಸೈನಿಕನಾಗಿದ್ದ ಒಬ್ಬನನ್ನು ಸೈನ್ಯಾಧಿಕಾರಿಗಳೇ ಶಿಕ್ಷಿಸಬೇಕೆಂದು ಕಳುಹಿಸಿದರು ಇನ್ನೊಂದು ವರುಷದ ಎರಡನೇ ಅಪರಾಧಿಯನ್ನು ಚೆನ್ನಾಗಿ ಬುದ್ಧಿ ಕಲಿಸುವಂತೆ ಅವನ ತಾಯಿಯ ವಶಕ್ಕೆ ಒಪ್ಪಿಸಿದರು ಉಳಿದ ಇಬ್ಬರಿಗೂ ಹತ್ತು ರೂಪಾಯಿನಂತೆ ಜುಲ್ಮಾನೆ ಹಾಕಿದರು

❖❖❖

ಪಂಜಾಬ್ ಆಧಿಪತ್ಯದಲ್ಲಿ ಪ್ರಜಾ ನೆಮ್ಮದಿಗೆ ಭಂಗತಂದಾದ ವಿಚಾರವನ್ನು ಗಡೀಪಾರಾಗಿರುವ ಲಾಲಾ ಲಾಜಪತ್ ರಾಯರವರ ವಿಷಯವನ್ನು ಕುರಿತು ಲೆಫ್ಟಿನೆಂಟ್ ಗವರ್ನರವರನ್ನು ಕಂಡು ಮಾತನಾಡಿಕೊಂಡು ಬರುವುದಕ್ಕಾಗಿ ಲಾಹೋರ್ ಪಟ್ಟಣದ ಬ್ಯಾರಿಸ್ಟರುಗಳೂ ಇತರ ದೊಡ್ಡ ಮನುಷ್ಯರೂ ಇನ್ನೊಂದು ಮಂದಿ ಸೇರಿ, ಸಿಂಲಾ ಪಟ್ಟಣಕ್ಕೆ ಹೋಗಿದ್ದರು. ಲೆಫ್ಟಿನೆಂಟ್ ಗವರ್ನರವರು ಈ ದೊಡ್ಡ ಮನುಷ್ಯರನ್ನು ಕರೆಸಿಕೊಂಡು, ಬಹಳ ಪ್ರೀತಿಯಿಂದ ಅವರು ಹೇಳಿದ್ದನ್ನೆಲ್ಲಾ ಕೇಳಿ, ಸಮಾಧಾನ ಪಡಿಸಿ ಕಳುಹಿಸಿಕೊಟ್ಟರೆಂದು ತಂತೀ ವರ್ತಮಾನ ಬಂದಿದೆ

❖❖❖

ಬಂಗಾಳಾ ಆಧಿಪತ್ಯದಲ್ಲಿ ಚಂದ್ರನಗರವೆಂಬ ಪಟ್ಟಣವು ಫ್ರೆಂಚ್ ಸರ್ಕಾರದವರಿಗೆ ಸೇರಿದ್ದಾಗಿರುತ್ತದೆ ಆ ಪಟ್ಟಣಕ್ಕೆ ಕೆಲವು ಬಂಗಾಳಿಗಳು ಹೋಗಿ ಹೊಸದಾಗಿ ವರ್ತಮಾನ ಪತ್ರಿಕೆಗಳನ್ನು ಪ್ರಕಟಿಸಬೇಕೆಂದು ಪ್ರಯತ್ನಪಟ್ಟರು ಅಲ್ಲಿನ ಫ್ರೆಂಚ್ ಅಧಿಕಾರಿಗಳು ಅವರಿಗೆ ಅವಕಾಶ ಕೊಡಲಿಲ್ಲ. ಅಲ್ಲಿನ ಜನರು ಆಯುಧಗಳನ್ನು ಇಟ್ಟುಕೊಳ್ಳುವ ವಿಷಯದಲ್ಲಿಯೂ ನಿರ್ಬಂಧವನ್ನು ಕಲ್ಪಿಸಿರುತ್ತಾರೆ. ಇದಲ್ಲದೆ ಹಿಂದುಸ್ಥಾನದಲ್ಲಿ ಪ್ರಜಾ ನೆಮ್ಮದಿಗೆ ಭಂಗವುಂಟಾಗಿ ದಂಗೆಗಳೇನಾದರೂ ಆಗುವ ಪಕ್ಷಕ್ಕೆ ಫ್ರೆಂಚರು ಇಂಗ್ಲೀಷರಿಗೆ ಬೆಂಬಲನಾಗಿ ನಿಲ್ಲುವುದಾಗಿಯೂ ತಿಳಿಸಿರುತ್ತಾರೆ

❖❖❖

ಕಲ್ಕತ್ತಾ ಪಟ್ಟಣದ ಬಡಾ ಬಜಾರ್ ಎಂಬ ರಸ್ತೆಯ ಪಕ್ಕದಲ್ಲಿ ಒಬ್ಬ ಮನುಷ್ಯನು ಬಿದ್ದುಕೊಂಡಿದ್ದನು ಅವನ ಬಳಿ ೬ ವರುಷದ ಒಂದು ಹೆಣ್ಣುಮಗುವು ಕೂತುಕೊಂಡು ಅಳುತ್ತಿತ್ತು. ಜನರು ಹೋಗಿ ಕೇಳಿದಾಗ ಆ ಮಗು—ತನ್ನ ತಂದೆಯು ನಿದ್ರೆಮಾಡುತ್ತಿದ್ದಾನೆಂತಲೂ ಅವನನ್ನು ಎಬ್ಬಿಸಬೇಡಿ ಎಂತಲೂ ಕೇಳಿದಳು. ಆದರೆ ಅವನು ಸತ್ತುಹೋಗಿದ್ದನೆಂದು ಗೊತ್ತಾಯಿತು ಸರ್ಕಾರದವರು ಪರೀಕ್ಷೆ ಮಾಡಿಸಿ ಅವನಿಗೆ ಎಂಟೆರಿಕ್ ಜ್ವರ ತಗಲಿತ್ತೆಂದು ತಿಳಿದು ಶವವನ್ನು ದಹನ ಮಾಡಿಸಿ, ಆ ಮಗುವನ್ನು ಪೋಷಣೆ ಮಾಡುವುದಕ್ಕಾಗಿ ಒಂದು ಅನಾಥಶಾಲೆಗೆ ಕರೆದುಕೊಂಡು ಹೋಗಿ ಸೇರಿಸಿದರು

❖❖❖

ಕಳೆದ ೧೮೫೭ನೆ ಇಸವಿಯಲ್ಲಿ ನಡೆದ ದೊಡ್ಡ ಸಿಪಾಯಿದಂಗೆಯಲ್ಲಿ ಸಾಮಸಿಂಗ್ ಎಂಬುವನು ಸೇರಿದ್ದು, ಸರ್ಕಾರದವರು ಅವನನ್ನು ಎರಡು ವರ್ಷಗಳ ಮೇಲೆ ಹುಡುಕಿಸಿದಾಗ ಸಿಕ್ಕಿಬಿದ್ದನು ಅವನನ್ನು ಕೂಡಲೇ ಅಂಡಮಾನ್ ದ್ವೀಪಕ್ಕೆ ಗಡೀಪಾರುಮಾಡಿದ್ದರು ಅವನು ಕಳೆದ ನಾಲ್ವತ್ತೆಂಟು ವರುಷಗಳಿಂದಲೂ ಆ ದ್ವೀಪದಲ್ಲಿ ಸಜಾ ಶಿಕ್ಷೆಯನ್ನನುಭವಿಸಿ, ಈಗ ಬಿಡುಗಡೆ ಹೊಂದಿ ರಂಗೂನ್ ಪಟ್ಟಣಕ್ಕೆ ಬಂದಿರುತ್ತಾನೆ ಪೊಲೀಸ್ ಅಧಿಕಾರಿಗಳು ಅವನನ್ನು ಪ್ರತಿ ತಿಂಗಳ ಮೊದಲನೇ ತಾರೀಖಿನಲ್ಲೂ ತಮ್ಮ ಆಫೀಸಿಗೆ ಬಂದು ಕಾಣಿಸಿಕೊಂಡು ಹೋಗುತ್ತಿರಬೇಕೆಂದು ಹುಕುಂ ಕೊಟ್ಟು ಕಳುಹಿಸಿದಾರೆ.

❖❖❖

ಜಬ್ಬಲ್‌ಪುರದಲ್ಲಿ ಕಳೆದ ವಾರ ಜೈನದಿಗಂಬರ ಮಹಾ ಸಭೆ ನಡೆಯಿತು ಆರಾ ಪಟ್ಟಣದ ಮ್ಯಾಜಿಸ್ಟ್ರೇಟ್ ಮಿ॥ ದೇವಕುಮಾರನೆಂಬ ದೊಡ್ಡ ಮನುಷ್ಯರು ಸಭಾ ನಾಯಕರಾಗಿದ್ದು, ಜೈನ ಬಾಲಕ ಬಾಲಕಿಯರ ವಿದ್ಯಾಭಿವೃದ್ಧಿಗೆ ಅವಶ್ಯವಾದ ಏರ್ಪಾಡುಗಳನ್ನು ಕುರಿತು ಉಪನ್ಯಾಸ ಮಾಡಿದರು ಸಭಿಕರಾದ ಜೈನ ಮಹಾ ಜನರು ಆ ಅಭಿಪ್ರಾಯಗಳನ್ನು ಮೆಚ್ಚಿಕೊಂಡು, ಅದಕ್ಕಾಗಿ ತುಂಬಾ ದ್ರವ್ಯಸಹಾಯ ಮಾಡುವುದಾಗಿ ಒಪ್ಪಿಕೊಂಡಿದ್ದಾರೆ ಆ ದಿನ ಮಧ್ಯಾಹ್ನ ಜೈನ ಮಹಿಳೆಯರೂ ಸಭೆಸೇರಿ, ಹೆಣ್ಣುಮಕ್ಕಳ ಪುರೋಭಿವೃದ್ಧಿಗೂ ವಿದ್ಯಾಭ್ಯಾಸಕ್ಕೂ ಏರ್ಪಾಡು ಮಾಡಬೇಕೆಂದು ಗೊತ್ತುಮಾಡಿದರು.

❖❖❖

ಮದರಾಸ್ ಪಟ್ಟಣದ ಮೂರ್ ಮಾರ್ಕೆಟ್ಟಿನ ಹಿಂಭಾಗದಲ್ಲಿರುವ ಉದ್ಯಾನವನದಲ್ಲಿ ಕೆಲವು ಸ್ಕೂಲುಗಳ ವಿದ್ಯಾರ್ಥಿಗಳು ಒಂದು ವಾರದವರೆಗೆ ದಿನಾಲೂ ಸಭೆ ಸೇರುತ್ತಾ ರಾಜಕೀಯ ವಿಷಯಗಳನ್ನು ಕುರಿತು ಚರ್ಚಿಸುತ್ತಾ, ಸರ್ಕಾರದ ನಡವಳಿಕೆಗಳನ್ನು ಕುರಿತು ಆಕ್ಷೇಪಿಸ ಮಾಡುತ್ತಾ ಬಂದರು ಪೊಲೀಸಿನವರಿಗೆ ಈ ಸಂಗತಿ ತಿಳಿದು ಅವರು ಹೋಗಿ ಒಂದು ದಿನ ಆ ಹುಡುಗರನ್ನು ಅಲ್ಲಿಂದ ಓಡಿಸಬೇಕೆಂದು ಪ್ರಯತ್ನಪಟ್ಟರು ಅವರಿಗೆ ಸಾಧ್ಯವಾಗಲಿಲ್ಲ ಆಗ ಅಲ್ಲಿ ಅಂಗಡಿ ಇಟ್ಟಿದ್ದ ವರ್ತಕರು ಸಭೆಗೆ ಹೋಗಿ ತಮಗೆ ಸ್ಥಳ ಬೇಕಾಗಿದೆ ಎಂದು ಹೇಳಿದಾಗ ಇಲ್ಲವಾದರೆ ಆ ಸಭೆಯನ್ನು ನಡೆಯಗೊಡಿಸುವದಿಲ್ಲವೆಂದೂ ಹೇಳಿದಾಗ ಹುಡುಗರೆಲ್ಲಾ ಹೊರಟುಹೋದರು ಅಲ್ಲಿಂದೀಚೆಗೆ ಈ ಸಭೆ ನಿಂತುಹೋಯಿತು.

ಮಾಲ್ವಾ ಸಂಸ್ಥಾನದ ಸರ್ಕಾರಿ ಖಜಾಂಚಿಯಾಗಿದ್ದ ಚಾಂದ್‌ಮಲ್‌ಜಿ ಸಾಹೇಬ್ ಎಂಬ ಭಾರೀ ಜೈನ ಸಾಹುಕಾರನು ಕಾಲವಾದನೆಂದು ತಿಳಿದುಬಂದಿದೆ. ಈತನು ಅಂಗಡಿ ಇಟ್ಟು ಅನೇಕ ಊರುಗಳಲ್ಲಿ ವ್ಯಾಪಾರ ನಡಿಸಿ ತುಂಬಾ ಪ್ರಸಿದ್ಧಿಗೆ ಬಂದಿದ್ದನು ಆತನು ಮಾಡಿರುವ ಧರ್ಮಕಾರ್ಯಗಳೂ ಅನೇಕವಾಗಿರುತ್ತವೆ ಸ್ಕೂಲು, ಆಸ್ಪತ್ರೆ, ಕೊಳ, ದೇವಾಲಯ ಮೊದಲಾದವುಗಳನ್ನು ಕಟ್ಟಿಸುವುದಕ್ಕೆ ಕೆಲವು ಲಕ್ಷ ರೂಪಾಯಿಗಳನ್ನೇ ಖರ್ಚು ಮಾಡಿದನು. ಮತ್ತು ಕಳೆದ ಕ್ಷಾಮ ಕಾಲದಲ್ಲಿ ಅರ್ಧ ಲಕ್ಷ ರೂಪಾಯಿ ಧರ್ಮ ಕೊಟ್ಟನು. ಈತನು ಸಾಯುವುದಕ್ಕೆ ಮೊದಲು ತನ್ನ ಆಸ್ತಿಯಲ್ಲಿ ೫೦,೦೦೦ ರೂಪಾಯಿ ಧರ್ಮ ಕೆಲಸಗಳಿಗೆ ವಿನಿಯೋಗಿಸಬೇಕೆಂದು ಉಯಿಲು ಬರೆದಿರುತ್ತಾನೆ. ಈ ಪುಣ್ಯಾತ್ಮನನ್ನು ಆ ಪ್ರಾಂತ್ಯದವರೆಲ್ಲಾ ವಿಶೇಷವಾದ ಪ್ರೀತಿ ಗೌರವಗಳಿಂದ ಕಾಣುತ್ತಿದ್ದರು.

❖❖❖

ಕಲ್ಲಿಕೋಟೆ ಪ್ರಾಂತ್ಯದಲ್ಲಿ ಕೊತ್ತಾಕಾಳದ ಸಾಗುವಾನಿ ವರ್ತಕರು ತೊಲೆಗಳನ್ನು ಕಾಡಿನಿಂದ ಸಾಗಿಸುವುದಕ್ಕೆ ೩೩ ಭಾರೀ ಆನೆಗಳನ್ನು ಇಟ್ಟುಕೊಂಡಿದ್ದರು ಅವು ಅನೇಕ ವರುಷಗಳಿಂದಲೂ ಆ ಕೆಲಸದಲ್ಲಿ ಚೆನ್ನಾಗಿ ತರಪೇತಾಗಿ ಬಹು ಚಟುವಟಿಕೆಯಾಗಿಯೂ ವಿಧೇಯತೆಯಿಂದಲೂ ತೊಲೆಗಳನ್ನು ಸಾಗಿಸುತ್ತಿದ್ದುವು. ಈಗ ಅವುಗಳಿಗೆ ಪ್ಲೇಗ್ ಉಪದ್ರವತಗಲಿ ೧೬ ಆನೆಗಳು ಸತ್ತುಹೋದವೆಂದೂ ಸಾಹುಕಾರರು ತುಂಬಾ ನಷ್ಟಪಟ್ಟು ವ್ಯಸನಾಕ್ರಾಂತರಾಗಿದ್ದಾರೆಂದೂ ತಿಳಿದು ಬಂದಿದೆ ಅವನ್ನು ಪರೀಕ್ಷೆ ಮಾಡಿದಾಗ ಕತ್ತಿನ ಪಕ್ಕದಲ್ಲಿ ೨೦ ಗುಳ್ಳೆಗಳಾಗಿದ್ದುವು. ಮೂರು ದಿನಗಳ ತನಕ ಅವು ಜ್ವರದಿಂದ ನರಳಿ ಆ ಗಡನೆ ನಡುಗಿ ನೆಲದಲ್ಲಿ ಬಿದ್ದು ನಂತರ ನಾಲ್ಕನೆಯ ದಿನ ಮೃತಪಟ್ಟುವು. ಈ ರೋಗಕ್ಕೆ ಸರ್ಕಾರದವರು ಕೂಡಲೇ ಪರಿಹಾರವನ್ನು ಕಂಡುಹಿಡಿಯಬೇಕೆಂದು ಡಾಕ್ಟರಿಗೆ ತಿಳಿಸಿರುತ್ತಾರೆ

❖❖❖

ಹಿಂದುಸ್ಥಾನದಲ್ಲಿ ದೇಶೀಯ ವರ್ತಕರಿಗೆ ವ್ಯಾಪಾರಧರ್ಮಗಳು ಚೆನ್ನಾಗಿ ತಿಳಿದಿಲ್ಲವಾದ್ದರಿಂದ ಅವರ ಕೆಲಸ ಕಾರ್ಯಗಳು ಅಭಿವೃದ್ಧಿ ಹೊಂದದೆ ಇರುತ್ತವೆ. ಯೂರೋಪಿಯನ್ ರಾಜ್ಯಗಳಲ್ಲಿ ವ್ಯಾಪಾರವೃತ್ತಿಯೇ ಒಂದು ದೊಡ್ಡ ವಿದ್ಯೆಯಾಗಿ, ಅನೇಕ ವರ್ತಕರು ಅದರಲ್ಲಿ ಪ್ರವೀಣರೆನಿಸಿಕೊಂಡು, ಬಹಳ ಬೇಗ ಐಶ್ವರ್ಯವಂತರಾಗುತ್ತಿದಾರೆ ಇಂಡಿಯಾ ಗವರ್ನಮೆಂಟಿನವರು ಈ ರಾಷ್ಟ್ರದ ದೊಡ್ಡ ದೊಡ್ಡ ವರ್ತಕರ ಮಕ್ಕಳನ್ನು ಸರ್ಕಾರದಿಂದಲೇ ವೇತನ ಕೊಟ್ಟು ವಿಲಾಯಿತಿ ಮೊದಲಾದ ಯೂರೋಪಿಯನ್ ರಾಜ್ಯಗಳಿಗೆ ಕಳುಹಿಸಬೇಕೆಂತಲೂ, ಅವರಿಗೆ ಆಯಾ ಕಸಬುಗಳ ವ್ಯಾಪಾರ ವಿದ್ಯೆಯನ್ನು ಚೆನ್ನಾಗಿ ಕಲಿಸಬೇಕೆಂತಲೂ ತೀರ್ಮಾನ ಮಾಡಿ, ಅಂಥಾ ಪ್ರತಿ ಒಬ್ಬ ವಿದ್ಯಾರ್ಥಿಗೂ ವರುಷಕ್ಕೆ ೨,೨೫೦ ರೂಪಾಯಿನಂತೆ ವೇತನ ಕೊಡುತ್ತೇವೆಂದು ಪ್ರಕಟಿಸಿರುತ್ತಾರೆ ದೊಡ್ಡ ದೊಡ್ಡ ವ್ಯಾಪಾರ ನಡಿಸತಕ್ಕ ವರ್ತಕರ ಮಕ್ಕಳು ಅಭಿವೃದ್ಧಿಗೆ ಬರುವುದಕ್ಕೆ ಇದರಿಂದ ತುಂಬಾ ಪ್ರೋತ್ಸಾಹವಾದೀತೆಂದು ಹೇಳಬಹುದು.

❖❖❖

ಬಳ್ಳಾರಿ ಜಿಲ್ಲಾ ಆದವಾನಿ ತಾಲ್ಲೂಕಿನಲ್ಲಿ ಒಬ್ಬ ಹಣಗಾರನು ಭತ್ಯಾಮೀನನನ್ನು ಕರೆದುಕೊಂಡು ಹೋಗಿ ಗ್ರಾಮದಲ್ಲಿ ಪ್ರತಿವಾದಿಯನ್ನು ವಾರಂಟಿನಲ್ಲಿ ಹಿಡಿಸಿ ರೈಲ್ ಸ್ಟೇಷನಿಗೆ ಕರೆದುಕೊಂಡು ಬರುತ್ತಿದ್ದನು. ದಾರಿಯಲ್ಲಿ ಆ ಪ್ರತಿವಾದಿಯು ಕಾಲು ಉಳುಕಿ ನಡೆಯುವುದಕ್ಕಾಗುವುದಿಲ್ಲವೆಂದು ಕೂತುಬಿಟ್ಟನು. ಆಗ ಸಾಹುಕಾರನು ಅವನಿಗೆ ತನ್ನ ಎತ್ತನ್ನು ಕೊಟ್ಟು, ತಾನೂ ಭತ್ಯಾಮೀನನೂ ನಡೆಯುತ್ತಾ ಬಂದರು ಪ್ರತಿವಾದಿಯು ಎತ್ತು ಹತ್ತಿಕೊಂಡು ಸ್ವಲ್ಪ ದೂರ ಅವರ ಸಂಗಡಲೇ ಹೋಗುತ್ತಿದ್ದು, ಅಕಸ್ಮಾತ್ತಾಗಿ ಅದನ್ನು ಹೊಡೆದು ಜೋರಾಗಿ ಓಡಿಸಿಕೊಂಡು ಹೋಗಿಬಿಟ್ಟನು ಅವರಿಬ್ಬರೂ ಒಬ್ಬರ ಮುಖ ಒಬ್ಬರು ನೋಡಿಕೊಂಡು ಮೋಸಹೋದೆವೆಂದು ಹೇಳಿಕೊಳ್ಳುತ್ತಾ ಮನೆಗೆ ಬಂದರು ಎತ್ತು ನಾಲ್ಕಾರು ದಿನಗಳ ಮೇಲೆ ವಾಪಸು ಮನೆಗೆ ಬಂದಿತು ಪೋಲೀಸಿನವರಿಂದ ಹುಡುಕಿಸಿ ಆ ಪ್ರತಿವಾದಿಯನ್ನು ಹಿಡಿಸಿ, ಕಾಡುರ ಕಳುವಿಗೆ ಅವನ ಮೇಲೆ ಮೊಕದ್ದಮೆ ತಂದರು ಆ ಊರಿನ ಮ್ಯಾಜಿಸ್ಟ್ರೇಟರು ಅವನನ್ನು ಶಿಕ್ಷಿಸಿದರೂ ಅಪೀಲಿನಲ್ಲಿ ಆ ದಿನವೇ ಮ್ಯಾಜಿಸ್ಟ್ರೇಟರು ಅವನನ್ನು ಖುಲಾಸ್ ಮಾಡಿಸಿಬಿಟ್ಟರು

❖❖❖

ಮಧ್ಯ ಇಂಡಿಯಾ ಎಂಬ ಪ್ರಾಂತ್ಯಕ್ಕೆ ಸೇರಿದ ಧಾರ್ ಎಂಬ ಸಂಸ್ಥಾನದಲ್ಲಿ ಸ್ವಲ್ಪ ಗಲಭೆಯುಂಟಾಗಿದೆ ಕೆಲವು ದಿನಗಳ ಕೆಳಗೆ ಅಲ್ಲಿನ ಸ್ಕೂಲ್ ಹುಡುಗರು ಸೇರಿ ಕಳೆದ ಮೂರು ವರುಷಗಳಿಂದಲೂ ನಡೆಸುತ್ತಾ ಬಂದಂತೆ ಶಿವಾಜಿ ಮಹಾರಾಜನ ಜಯಂತ್ಯುತ್ಸವವನ್ನು ಮಾಡಿದರು ಅಗ್ಗ ಮೂರು ದಿನ ಸಭೆಗಳು ನಡೆದು, ಮೂರು ಮಂದಿ ದೊಡ್ಡ ಮನುಷ್ಯರು ಸ್ಕೂಲ್ ಹುಡುಗರ ಸಭಾ ನಾಯಕರಾಗಿದ್ದು, ಶಿವಾಜಿಯ ಜೀವ ಚರಿತ್ರೆಯನ್ನೂ, ಎಲ್ಲರೂ ಸ್ವತಂತ್ರ ಜೀವನವನ್ನು ಹೊಂದುಕೊಳ್ಳಬೇಕೆಂದೂ, ಹುಡುಗರು ವಿದ್ಯಾಬುದ್ಧಿಗಳನ್ನೂ ಸದ್ಗುಣ ಸದ್ಭಕ್ತಿ ಸಚ್ಚರಿತ್ರಗಳನ್ನೂ ಕಲಿಯಬೇಕೆಂದೂ, ಮಾತು ಉಪನ್ಯಾಸಗಳನ್ನು ಮಾಡಿದರು ಇದಾದ ಸುಮಾರು ಮೂರು ವಾರಗಳ ಮೇಲೆ ಆ ಸಂಸ್ಥಾನದ ಸರ್ಕಾರದವರು ಈ ಸಭೆಗಳ ವಿಚಾರವನ್ನು ತನಿಖೆ ಮಾಡಿಸಿ, ಆ ಪೈಕಿ ಕೆಲವು ಹುಡುಗರನ್ನೂ ಕೆಲವು ಉಪಾಧ್ಯಾಯರನ್ನೂ ಶಿಕ್ಷಿಸಿಬಿಟ್ಟರು, ಕೆಲವರನ್ನು ಆ ಸಂಸ್ಥಾನದ ಎಲ್ಲೆಯಿಂದಾಚೆಗೆ ಹೊರಡಿಸಿಬಿಟ್ಟರು, ಕೆಲವು ಸರ್ದಾರರ ಸಂಬಳವನ್ನು ನಿಲ್ಲಿಸಿಬಿಟ್ಟರು ಕೆಲವರ ಸಂಬಳವನ್ನು ಅರೆವಾಸಿ ಮಾಡಿದರು. ಹೀಗೆಲ್ಲಾ ನಾನಾ ಪ್ರಕಾರವಾಗಿ ಶಿಕ್ಷೆ ವಿಧಿಸಿದರು ಈಗ ಶಿಕ್ಷೆಯನ್ನು ಅನುಭವಿಸುವವರಲ್ಲಿ ಕೆಲವರು ಸೇರಿ ಇಂದೋರ್ ಸಂಸ್ಥಾನದ ಬ್ರಿಟಿಷ್ ರೆಸಿಡೆಂಟರಿಗೆ ಒಂದು ದೊಡ್ಡ ವಿಜ್ಞಾಪನಾ ಪತ್ರಿಕೆಯನ್ನು ಬರೆದುಕೊಂಡಿದಾರೆ

ವಿದೇಶ ವರ್ತಮಾನಗಳು.

ಪೋರ್ಚುಗಲ್ ರಾಜ್ಯದ ಯುವರಾಜರು ಪರಿವಾರ ಸಹಿತ ತಮ್ಮ ಆಫ್ರಿಕಾ ಸಾಮ್ರಾಜ್ಯಗಳನ್ನು ನೋಡಿಕೊಂಡು ಬರುವುದಕ್ಕಾಗಿ ಸಂಚಾರ ಹೊರಟಿದಾರೆ.

❖❖❖

ವಿಲಾಯಿತಿಯಲ್ಲಿರುವ ಮಿ॥ ವಿಲ್ಯಂ ವಾಲ್ಡಾರ್ಫ್ ಆಸ್ಟರ್ ಎಂಬ ಪುಣ್ಯಾತ್ಮನು ನಾಲ್ಕು ಧರ್ಮಕಾರ್ಯಗಳಿಗೆ ಒಂದೂವರೆ ಲಕ್ಷ ರೂಪಾಯಿ ಕೊಟ್ಟಿದಾನೆ.

❖❖❖

ದಕ್ಷಿಣ ಆಫ್ರಿಕದ ಗಣಿಗಳಲ್ಲಿ ಕೂಲಿ ಮಾಡುತ್ತಿದ್ದ ಚೀನೀಯರ ಪೈಕಿ ೧,೯೮೮ ಜನರನ್ನು ಆ ಸರ್ಕಾರದವರು ಕಳೆದ ವಾರ ಚೀಣಾಕ್ಕೆ ವಾಪಸು ಕಳುಹಿಸಿದರು.

❖❖❖

ಹಂಗೆರಿ ರಾಜ್ಯದ ಚಕ್ರವರ್ತಿಯವರಿಗೆ ರಾಜ್ಯಾಭಿಷೇಕವಾಗಿ ೪೦ ಸಂವತ್ಸರಗಳಾದವು ಈ ಸಂತೋಷೋತ್ಸವವನ್ನು ಅವರ ಪ್ರಜೆಗಳೆಲ್ಲಾ ಸೇರಿ ನೆರವೇರಿಸಿದರು. ಚಕ್ರವರ್ತಿಯವರು ೧೩೪ ಖೈದಿಗಳನ್ನು ಜೈಲಿನಿಂದ ಬಿಡುಗಡೆ ಮಾಡಿ, ಬಡಬಗ್ಗರಿಗೆ ಸುಭೋಜನಾದಿಗಳನ್ನು ನಡಿಸಿದರು

❖❖❖

ಆಸ್ಟ್ರೇಲಿಯಾ ದ್ವೀಪಕ್ಕೆ ಸೇರಿದ ಬ್ರಿಸ್ಬೇನ್ ಪಟ್ಟಣದಲ್ಲಿ ಭಾರೀ ರತ್ನಪಡಿ ವರ್ತಕನಾದ ಮಿ॥ ಬರ್ನಾರ್ಡ್ ಬಾವರ್ ಎಂಬಾತನನ್ನು ಯಾರೋ ಹೊಡೆದು ಪೂರಾ ಗಾಯ ಮಾಡಿ, ಆತನ ಬಳಿ ಸುಮಾರು ಒಂದೂವರೆ ಲಕ್ಷ ರೂಪಾಯಿ ಬೆಲೆ ಬಾಳುವ ವಜ್ರಪಡಿಗಳಿದ್ದ ಒಂದು ಚೀಲವನ್ನು ಅಪಹರಿಸಿಕೊಂಡು ಹೋದರು. ಈಚೆಗೆ ಆ ಸಾಹುಕಾರನೂ ಸತ್ತುಹೋದನು

❖❖❖

ಅಮೇರಿಕಕ್ಕೆ ಸೇರಿದ ಓಹಿಯೋ ಡಿಸ್ಟ್ರಿಕ್ಟಿನ ಕ್ಲೀವ್‌ಲೆಂಡ್ ಪಟ್ಟಣದಲ್ಲಿ ಪ್ರಜಾ ಆರೋಗ್ಯವನ್ನು ಮೇಲ್ವಿಚಾರಣೆ ಮಾಡುವ ಕಚೇರಿಯವರು ೧,೦೦೬ ಗೃಹಸ್ಥರನ್ನು ನೇಮಕ ಮಾಡಿದಾರೆ. ಇವರು ಬೀದಿ ಬೀದಿಗಳಲ್ಲೂ ಸಂದುಗೊಂದುಗಳಲ್ಲೂ ಸಂಚಾರ ಮಾಡುತ್ತಾ, ಯಾರಾದರೂ ಉಗಿದರೆ ಅವರನ್ನು ಕೂಡಲೇ ದಸ್ತಗಿರಿ ಮಾಡಿ ಶಿಕ್ಷಿಸುವರು. ಯಾಕೆಂದರೆ ಬೀದಿಗಳಲ್ಲೂ ಸಂದುಗಳಲ್ಲೂ ಕ್ಯಾಕರಿಸಿ ಉಗಿಯುವುದು ಪ್ರಜಾ ಆರೋಗ್ಯಕ್ಕೆ ಹಾನಿಯನ್ನುಂಟುಮಾಡುವುದೆಂದು ಡಾಕ್ಟರುಗಳು ತೀರ್ಮಾನ ಮಾಡಿರುತ್ತಾರೆ.

❖❖❖

ಅಮೇರಿಕಕ್ಕೆ ಸೇರಿದ ಒಂದಾನೊಂದು ರೈಲ್ವೆ ಕಂಪನಿಯ ಮುಖ್ಯಸ್ಥನಾದ ಮಿ॥ ಡೇವಿಡ್ ವಿಲ್‌ಕಾಕ್ಸ್ ಎಂಬಾತನು ಪಕ್ಷಿಪಕ್ಷಿಗಳ ವಿಷಯದಲ್ಲಿ ತುಂಬಾ ಪ್ರೀತಿಯುಳ್ಳವನಾಗಿರುತ್ತಾನೆ. ಆತನು ಮೂರು ಲಕ್ಷ ರೂಪಾಯಿನ ಫಂಡು ಹಾಕಿ ಅದರಿಂದ ರೈತಪ್ರಜೆಗಳಿಗೆ ದ್ರವ್ಯಸಹಾಯ ಮಾಡಿ, ಅವರಿಂದ ಪಕ್ಷಿಪಕ್ಷಿಗಳನ್ನು ಸಾಕಿ ಬೆಳಸುವಂತೆ ಏರ್ಪಾಡು ಮಾಡಿದಾರೆ ಈ ಪಕ್ಷಿಪಕ್ಷಿಗಳು ಹೊಲಗಳಲ್ಲಿ ಬೆಳೆಯನ್ನು ಕೆಡಿಸುವಂಥಾ ಕ್ರಿಮಿಕೀಟಗಳನ್ನು ತಿಂದು ನಾಶ ಮಾಡುವುದರಲ್ಲೂ ರೈತರ ಬೆಳೆಯನ್ನು ಕಾಪಾಡುವುದರಲ್ಲೂ ತುಂಬಾ ಸಹಾಯ ಮಾಡುವವು

❖❖❖

ವಿಲಾಯಿತಿ ಪಾರ್ಲಿಮೆಂಟಿನಲ್ಲಿ ಇಂಡಿಯಾ ಸ್ಟೇಟ್ ಸೆಕ್ರೆಟರಿ ಮೆ॥ ಜಾನ್ ಮಾರ್ಲಿಯವರು ಸರ್ ಹೆನ್ರಿ ಕಾಟನ್ ಎಂಬ ಮೆಂಬರ ಪ್ರಶ್ನೆಗೆ ಉತ್ತರವಾಗಿ ಲಾಲ ಲಾಜಪತ್ ರಾಯರವರು ೧೯೦೭ ನೆ ಜನವರಿ ೨೮ರಲ್ಲೂ, ೧೯೦೭ ನೆ ಮಾರ್ಚಿ ೨೭ರಲ್ಲೂ ಮಾಡಿರುವ ಉಪನ್ಯಾಸಗಳನ್ನು ವಿವರಿಸಿ, ಅಂಥಾ ಉಪನ್ಯಾಸಗಳು ಪ್ರಜೆಗಳು ಸರ್ಕಾರದವರ ವಿಷಯವಾಗಿ ಮಾಡತಕ್ಕವುಗಳಲ್ಲವೆಂತಲೂ, ಅವರನ್ನು ೧೮೧೮ ನೆ ಇಸವಿಯ ಕಾನೂನ್ ಪ್ರಕಾರ ಗಡೀಪಾರು ಮಾಡಿರುವುದಕ್ಕೆ ಇನ್ನೂ ಇತರ ಕಾರಣಗಳು ಇರುತ್ತವೆಂತಲೂ, ಅವುಗಳನ್ನೆಲ್ಲಾ ವಿವರಿಸಿ ಪ್ರಕಟ ಮಾಡುವುದು ಹಿತಕರವಲ್ಲವೆಂತಲೂ ಹೇಳಿದರು

❖❖❖

ವಿಲಾಯಿತಿಗೆ ಸೇರಿದ ಲಾಂಕಷೈರ್ ಮತ್ತು ಮಾಂಚೆಸ್ಟರ್ ಎಂಬ ಭಾರೀ ನಗರಗಳಲ್ಲಿ ಬಟ್ಟೆಗಳ ಕಾರ್ಖಾನೆಗಳಿರುವುದೂ ಅಲ್ಲಿ ತಯಾರಾಗತಕ್ಕ ಸರಕುಗಳೇ ಪ್ರಪಂಚದ ಸಕಲ ದಿಗ್ದೇಶಗಳಲ್ಲೂ ಬಿಕರಿಯಾಗುತ್ತಿರುವುದೂ ಲೋಕ ಪ್ರಸಿದ್ಧವಾಗಿದೆಯಷ್ಟೆ ಆ ಕಾರ್ಖಾನೆಗಳಲ್ಲಿ ಈಗ ಅನೇಕಾನೇಕ ಸರಕುಗಳು ತಯಾರಾಗಿ ತುಂಬಿರುವುದರಿಂದ ಅವೆಲ್ಲಾ ಬಿಕರಿಯಾಗುವ ತನಕ ಅಂದರೆ ಸುಮಾರು ೨—೩ ವಾರಗಳ ತನಕ ಕಾರ್ಖಾನೆಗಳ ಬಾಗಿಲು ಹಾಕಬಿಡಬೇಕೆಂತಲೂ, ಕೆಲಸವನ್ನು ನಿಲ್ಲಿಸಬೇಕೆಂತಲೂ ಸಾಹುಕಾರರು ಗೊತ್ತು ಮಾಡಿಕೊಂಡಿದಾರೆ ಇದರಿಂದ ಸುಮಾರು ಒಂದೂವರೆ ಲಕ್ಷ ಕೂಲಿಕಾರರಿಗೆ ಕೆಲಸವಿಲ್ಲದೆ ಹೋದೀತೆಂದು ಹೇಳುವರು

❖❖❖

ಉತ್ತರ ಆಫ್ರಿಕಾಕ್ಕೆ ಸೇರಿದ ಮೊರೊಕ್ಕೋ ರಾಜ್ಯದಲ್ಲಿ ರೈಸೂಲಿ ಎಂಬ ಸ್ವದೇಶೀ ದೊಡ್ಡ ಮನುಷ್ಯನು ದಂಗೆಯೆದ್ದು ಬಹಳ ಹಾವಳಿ ಮಾಡುತ್ತಿದ್ದನು. ಈಗ ಶರಣಾಗತನಾಗಿ ಬಂದ ಪಕ್ಷಕ್ಕೆ ಜೀವನನ್ನು ಕ್ಷಮಿಸಿ ಬಿಟ್ಟುಬಿಡುವುದಾಗಿ ಸರ್ ಹೆನ್ರಿ ಮೆಕ್‌ಲೀನ್ ಎಂಬುವರು ಹೇಳಿ ಕಳುಹಿಸಿದರು ಅವನು ಅದರಂತೆ ಒಪ್ಪಿ ಸರ್ ಹೆನ್ರಿಯವರನ್ನೇ ನಾಲ್ಕು ಮಂದಿ ಉದ್ಯೋಗಸ್ಥರ ಸಮೇತ ನಿರಾಯುಧರಾಗಿ ತನ್ನ ಡೇರೆಗೆ ಬರಬೇಕೆಂದು ಕೇಳಿಕೊಂಡನು ಅದೇ ಪ್ರಕಾರ ಸರ್ ಹೆನ್ರಿ ಮೆಕ್‌ಲೀನ್ ನಾಲ್ವರ ಸಮೇತ ಸಾಧಾರಣವಾಗಿ ರೈಸೂಲಿ ಇದ್ದ ಕ್ಯಾಂಪಿಗೆ ಹೋದರು ಅವನು ದ್ರೋಹ ಮಾಡಿ ಆ ನಾಲ್ವರ

ಮಂಗಳೂರಿಗೆ ರೈಲು ಬಂತು.

ಇದೇ ತಿಂಗಳ ೩ ನೇ ತಾರೀಖು ಬುಧವಾರ ಮಂಗಳೂರಿಗೆ ರೈಲು ಮಾರ್ಗವು ತೆರೆಯಲ್ಪಟ್ಟಾಯಿತು ಎಂಬ ವಾರ್ತೆಯನ್ನು ನಮ್ಮ ವಾಚಕರಿಗೆ ಸಂತೋಷದಿಂದ ತಿಳಿಸುತ್ತೇವೆ. ಈ ಜಿಲ್ಲೆಗೆ ರೈಲು ಮಾರ್ಗವು ಆಗಬೇಕೆಂಬ ಸುಮಾರು ೩೦ ವರ್ಷದಿಂದ ಮಂಗಳೂರ ಮುನಿಸಿಪಾಲಿಟಿಯವರೂ, ಬಹುಮಾನ ಪಟ್ಟ ಆಲ್ಬರ್ಟ ಮಿಲ್ಲರ್ ಮತ್ತು ಪೋರ್ಗನ್ ಧೊರೆಗಳೂ, ದಿವಂಗತರಾದ ದಿವಾನ್ ಬಹದ್ದೂರ್ ಶಿವರಾವ್ ಮತ್ತು ರಾವ್ ಬಹದ್ದೂರ್ ಶ್ರೀ ... ಯವರೂ, ಕಲ್ಯಾಣಪುರ ನಾರಾಯಣರಾವ್, ನೆಲ್ಲಿಕಾಯಿ ಗುಂಡುರಾವ್ ಮೊದಲಾದ ಮಹನೀಯರೂ ಪ್ರಯತ್ನ ನಡುತ್ತಿದ್ದರು. ಹಿಂದೆ ವೈಸರಾಯರಾಗಿದ್ದ ಲೋರ್ಡ್ ಎಲ್ಗಿನ್ ಪ್ರಭುಗಳು ಮೈಸೂರಿಗೆ ಚಿತ್ತೈಸಿದ್ದಾಗ, ಇವರಲ್ಲಿ ಕೆಲವರು ಕನ್ನಡ ಜಿಲ್ಲೆಯ ಪ್ರತಿನಿಧಿಗಳಾಗಿ ಬೆಂಗಳೂರಿಗೆ ಹೋಗಿ ವೈಸರಾಯರಿಗೆ ಭೇಟಿ ಕೊಟ್ಟು ದಕ್ಷಿಣ ಕನ್ನಡ ಜಿಲ್ಲೆಗೆ ರೈಲುಮಾರ್ಗ ಮಾಡಿಸಿ ಕೊಡಬೇಕೆಂದು ತರತರದ ಕಾರಣಗಳನ್ನು ಕೊಟ್ಟು ಮನವಿ ಮಾಡಿಕೊಂಡಲ್ಲಿ—ಸದ್ಯಕ್ಕೆ ಅನುಕೂಲವಿಲ್ಲ, ಈ ವಿಷಯ ತಕ್ಕ ಸಮಯಕ್ಕೆ ಕೊಟ್ಟಿನ ಗಮನ ಕೊಡುವೆವು ಎಂಬ ತೃಪ್ತಿಕರವಲ್ಲದ ಉತ್ತರವಾಯಿತು. ಆದರೆ ಬಳಿಕ ಮದ್ರಾಸಿನ ಗವರ್ನರರಾಗಿ ಒಂದ ಲೋರ್ಡ್ ವೆನ್‌ಲೊಕ್ ಪ್ರಭುಗಳು ಮಂಗಳೂರಿಗೆ ಒಂದಿದ್ದಾಗ, ನಿವಾಸಿಗಳು ಎಲ್ಲಾ ಕಡೆಯಲ್ಲಿಯೂ—ಮಂಗಳೂರು ರೈಲನ್ನೇ ಬೇಡಿಕೊಳ್ಳುತ್ತದೆ ಎಂತ ತೋರಣಗಳನ್ನೂ ಪತಾಕೆಗಳನ್ನೂ ಹಾಕಿದ್ದಲ್ಲದೆ ಮುನಿಸಿಪಾಲಿಟಿಯ ಪರ ಜಿಲ್ಲೆಯ ಮಹನೀಯರೂ ಇದೇ ಪ್ರಸ್ತಾಪದ ಮೇಲೆ ಅವರಿಗೆ ಅರ್ಜಿ ಒರಕೊಂಡಲ್ಲಿ, ಈ ವಿಷಯದಲ್ಲಿ ತಾನು ಹೆಚ್ಚು ಪ್ರಯತ್ನ ಪಡುತ್ತೇನೆಂದು ವಾಗ್ದಾನ ಮಾಡಿ ಹೋದರು. ಬಳಿಕ ಲೋರ್ಡ್ ಕರ್ಜನ್ ವೈಸರಾಯರು ಮದ್ರಾಸ್ ಗವರ್ನರರಾಗಿದ್ದ ಲೋರ್ಡ್ ಆಮ್ಟ್‌ಹಿಲ್ ಪ್ರಭುಗಳ ಅಭಿಪ್ರಾಯದ ಮೇಲೆ ಈ ರೈಲು ಮಾರ್ಗಕ್ಕೆ ಏರ್ಪಾಡು ಮಾಡಿ ಕೊಟ್ಟರು. ನಾಲ್ಕು ವರ್ಷಗಳ ಮೊದಲು ರೈಲು ಮಾರ್ಗದ ಕೆಲಸವು ಪ್ರಾರಂಭವಾಗಿ ನೇತ್ರಾವತಿ ಸಂಕದ ದೆಸೆಯಿಂದ ಕೆಲಸವು ಸ್ವಲ್ಪ ಮೆಲ್ಲಗೆ ಸಾಗಿದರೂ, ಈಗ ಹ್ಯಾಗೂ ಮಂಗಳೂರಿಗೆ ರೈಲು ಬಂತು. ೩೦ ವರ್ಷಗಳಿಂದ ನಿರೀಕ್ಷಿಸುತ್ತಿದ್ದ ಕಾರ್ಯವು ಈಗ ನೆರವೇರಿತು ಎಂದು ಈ ಜಿಲ್ಲೆಯವರೆಲ್ಲರೂ ಸಂತೋಷ ಪಡಬಹುದು. ರೈಲು ಈಗ ಬರುವುದಕ್ಕೆ ಪ್ರಯಾಸ ಪಟ್ಟ ಎಲ್ಲಾ ಮಹನೀಯರಿಗೂ, ವಿಶೇಷವಾಗಿ ಲೋರ್ಡ್ ಆಮ್ಟ್‌ಹಿಲ್ ಮತ್ತು ಲೋರ್ಡ್ ಕರ್ಜನ್ ಪ್ರಭುಗಳಿಗೂ ಈ ಜಿಲ್ಲೆಯವರು ಕೃತಜ್ಞರಾಗಿರುವರು. ಅಲ್ಲದೆ ರೈಲ್ವೇ ಇಲಾಖೆಯವರು ದೊಡ್ಡ ನೇತ್ರಾವತಿ ಸಂಕದ ಮೇಲೆ ಎರಡು ಮಗ್ಗಲಲ್ಲಿಯೂ ಜನರು ಹೋಗುವ ಹಾಗೆ ಕಾಲುದಾರಿಯನ್ನು ಸಹ ಮಾಡಿ ಕೊಟ್ಟದ್ದಕ್ಕಾಗಿ ಈ ಜಿಲ್ಲೆಯವರೆಲ್ಲರೂ ಅವರ ಉಪಕಾರವನ್ನು ಪ್ರತ್ಯೇಕವಾಗಿ ಸ್ಮರಿಸುತ್ತಿರುವರು.

ಮಂಗಳೂರು ರೈಲಿನ ಕಾಲನಿಯಮಾವಳಿ ಪಟ್ಟಿ—ಮೇಲ್ ಟ್ರೇನು ಮಂಗಳೂರಿನಿಂದ ಬೆಳಿಗ್ಗೆ ೫ ಗಂಟೆ ೧೩ ನಿಮಿಷಕ್ಕೆ ಹೊರಟು ಮಾರಣೇ ದಿನ ಬೆಳಿಗ್ಗೆ ೭ ಗಂಟೆ ೧೫ ನಿಮಿಷಕ್ಕೆ ಮದ್ರಾಸಿಗೆ ತಲಪುವದು. ಒಂದು ಲೋಕಲ್ ಟ್ರೇನು ಮಂಗಳೂರಿನಿಂದ ಮಧ್ಯಾಹ್ನ ೧ ಗಂಟೆ ೪ ನಿಮಿಷಕ್ಕೆ ಹೊರಟು ರಾತ್ರಿ ೧೦ ಗಂಟೆ ೫೪ ನಿಮಿಷಕ್ಕೆ ಕಲ್ಲಿಕೋಟೆಗೆ ತಲಪುವದು. ಮದ್ರಾಸಿನಿಂದ ಬರುವ ಮೇಲ್ ಟ್ರೇನು ಮಧ್ಯ ರಾತ್ರಿ ೧೨ ಗಂಟೆ ೪೦ ನಿಮಿಷಕ್ಕೆ ಜೋಲಾರ್ ಪೇಟೆಯಿಂದ ಹೊರಡುವದು. ಮತ್ತೊಂದು ಪಸೆಂಜರ್ ಟ್ರೇನು ಬೆಳಿಗ್ಗೆ ೭ ಗಂಟೆಗೆ ತಲಚೇರಿಯಿಂದ ಹೊರಟು ಮಧ್ಯಾಹ್ನ ೧೨ ಗಂಟೆ ೭ ನಿಮಿಷಕ್ಕೆ ಮಂಗಳೂರಿಗೆ ತಲಪುವದು.—ಸ

ಕಳುವಿನ ಸಮಾಚಾರಗಳು.

ಕೊಪ್ಪ

ಕೊಪ್ಪ ತಾಲ್ಲೋಕು ಕುಂಬಾರಗೊಪ್ಪ ಎಂಬ ಗ್ರಾಮದಲ್ಲಿ ಹೊರೆ ಕೊಪ್ಪ ಎಂಬ ಮನೆಯಲ್ಲಿ ಇಬ್ಬರು ತಾಯಿಮಗಳು ಎರಡು ಜನ ಹೆಂಗಸರು ಮಾತ್ರ ಇದ್ದರು. ಜೂನ್ ತಾ ೨೦ ನೆ ಗುರುವಾರ ಹಳ್ಳಿಗೆ ಸಮೀಪದ ಕುಸುಗೋಳ್ಳ ಎಂಬಲ್ಲಿಗೆ ಲಗ್ನಕ್ಕೆ ಮಗಳು ಗೌರಮ್ಮ ಹೆಗ್ಗಡಿತಿಯು ಹೋಗಿ ಇದ್ದಳು. ತಾಯಿ ಈರಮ್ಮ ಹೆಗ್ಗಡಿತಿಯು ಮನೆಯಲ್ಲಿಯೇ ಇದ್ದಳು. ಆ ದಿನ ರಾತ್ರಿ ಯಾರೋ ಕಳ್ಳರು ಬಂದು ಸುಮಾರು ೩೦೦ ರೂಪಾಯಿ ದೇವರ ಕಾಣಿಕೆ ಹಣ, ಕೆಲವು ಬೆಳ್ಳಿ ಬಂಗಾರದ ನಗಗಳು ಸೇರಿ ೫೦೦ ರೂಪಾಯಿ ಅಂದಾಜು ಬೆಂಡಿಗೆಯನ್ನು ತೆಗೆದುಕೊಂಡು ಹೋದರು. ಆದರೆ ಸರಕಾರದವರು ಗುಮಾಸ್ತನೇಲೆ ಒಬ್ಬ ಹೊಲೆಯ ಭದ್ರ ಎಂಬುವನನ್ನು ಲಾಕಪ್ಪಿನಲ್ಲಿಟ್ಟಿರುತ್ತಾರೆ. ಇಲ್ಲಿನ ಪೊಲೀಸು ದಫೇದಾರರು ಬಹಳ ಮುತುವರ್ಜಿಯಿಂದ ತನಿಖೆ ಮಾಡುವವರಾಗಿ ಇರುತ್ತಾರೆ. ಮಗಳು ಗೌರಮ್ಮ ಹೆಗ್ಗಡಿತಿಯು ಲಗ್ನಕ್ಕೆ ಹೋಗುವಾಗ್ಗೆ ಕೆಲವು ನಗಗಳನ್ನು ಕೊಂಡುಹೋಗಿ ಇದ್ದದ್ದು ಅದು ಮಾತ್ರ ಉಳಿದ ಹಾಗೆ ಆಯಿತು. ಈ ಹೆಂಗಸರು ನಾಲ್ಕಾರು ಸಾವಿರ ರೂಪಾಯಿನ ಸ್ಥಿತಿವಂತರಾಗಿರುತ್ತಾರೆ. ಅವರಿಗೆ ಮಕ್ಕಳು ಮರಿ ಇಲ್ಲವನ್ನು ... ಬಗ್ಗೆ ಪೊಲೀಸು ಕಾವಲು ಕೇಳುವವರಾಗಿದ್ದಾರೆ.

ಬೌರಿಂಗ್‌ಪೇಟ ತಾ। ಕಾಮಸಮುದ್ರ

ಈ ಮಾಹೆ ತಾ ೪ ನೇ ಗುರುವಾರ ಕಾಮಸಮುದ್ರದ ಸಂತೆಗೆ ಎಂದು ಇದ್ದ ಅಡಿಕೆ ವ್ಯಾಪಾರದ ಲಿಂಗಾಯತರು ಸಕಲೇಶಪುರ ತಾಲ್ಲೂಕು ಮಂಗಲದ ವಾಸಸ್ಥರಾದ ಕುಂದಿ ಸಂಬಂಧಪ್ಪ, ಪಟ್ಟಣ್ಣನ ಮಗ ನಂಜುಂಡಪ್ಪ, ಸಿದ್ದಗಂಗಪ್ಪ, ಬಸವಪ್ಪ, ವಗೈರೆ ಜನಗಳ ಸಂತೆಯಲ್ಲಿ ಅಡಿಕೆ ವ್ಯಾಪಾರ ಮಾಡಿಕೊಂಡು ಸಾಯಂಕಾಲವಾಗುತ್ತಲೇ ಗ್ರಾಮಕ್ಕೆ ಪಶ್ಚಿಮಕ್ಕೆ ಅರ್ಧ ಮೈಲಿಗೆ ದೂರದಲ್ಲಿರುವ ಗೋಪಾಲಸ್ವಾಮಿ ದೇವಸ್ಥಾನದಲ್ಲಿ ಮಾಮೂಲಿನಂತೆ ಬಿಡಾರ ಮಾಡುತ್ತಾ ಇರಲು, ಸುಮಾರು ೭ ಘಂಟೆ ರಾತ್ರಿಗೆ ಕಳ್ಳರು ಮೂವರು ಬಂದು, ಕಲ್ಲುಗಳಿಂದಲೂ ದೊಣ್ಣೆಗಳಿಂದಲೂ ಇವರುಗಳನ್ನು ಹೊಡೆದು, ಇವರ ಅಡಿಕೆ ಮೂಟೆಗಳು, ದುಡ್ಡು, ಬಟ್ಟೆಗಳು ವಗೈರೆ ಎತ್ತಿಕೊಂಡು ಹೋಗುತ್ತಿರಲು ವಿಶೇಷ ಕೂಗುಗಳು ಆಗಿ ಗಲಭೆ ನಡೆಯುವಾಗ್ಗೆ ಗ್ರಾಮದ ಜನಗಳು ಬಂದರು. ಅಷ್ಟರಲ್ಲಿ ಕಳ್ಳರು ಮೂಟೆಗಳನ್ನು ಎತ್ತಿಕೊಂಡು ಓಡಿಹೋಗಿ ಮೂಟೆಗಳು ಭಾರಿಯಾದ್ದರಿಂದ ಓಡಿಹೋಗಲು ಸಾಧ್ಯವಾಗದೆ, ಸದರಿ ದೇವಸ್ಥಾನಕ್ಕೆ ಒಂದು ಫರ್ಲಾಂಗು ದೂರದಲ್ಲಿರುವ ಹುಣಿಸೇ ಮರಗಳ ಹತ್ತಿರ ಕತ್ತಾಳೆ ಪಕ್ಕದಲ್ಲಿ ಮೂಟೆಗಳನ್ನು ಬಿಸಾಟು ಓಡಿಹೋದರು. ಕತ್ತಲಾದದ್ದರಿಂದಲೂ ಗಿಡಗಳು ಮರೆಯಾದ್ದರಿಂದಲೂ ಕಳ್ಳರನ್ನು ಹಿಡಿಯಲು ಆಗಲಿಲ್ಲ. ನಂತರ ಗ್ರಾಮಸ್ಥರು ಮೇಲ್ಕಂಡ ನಂಜುಂಡಪ್ಪ ವಗೈರೆಯರೂ ಲಾಂದ್ರ ಮತ್ತು ಪಂಜುಗಳನ್ನು ಹಿಡಿದುಕೊಂಡು ನೋಡಲಾಗಿ ಸದರಿ ಮೂಟೆಗಳು ಸಿಕ್ಕಿದವು. ಕೆಲವು ಬಟ್ಟೆಗಳು ಮಾತ್ರ ಸಿಕ್ಕಲಿಲ್ಲ. ಆದರೆ ಕುಂದಿ ಸಂಬಂಧಪ್ಪನಿಗೂ, ಪಟ್ಟಣ್ಣನ ಮಗ ನಂಜುಂಡಪ್ಪನಿಗೂ ವಿಶೇಷ ಪೆಟ್ಟುಗಳಾಗಿ, ದೇವರ ದಯದಿಂದ ಪ್ರಾಣ ಬಚಾವಾಯಿತು. ಬಾಕಿ ಇಬ್ಬರಿಗೆ ಸಾಧಾರಣವಾಗಿ ಗಾಯಗಳಾಗಿದೆ. ನಂತರ ಸದರಿ ಮೂಟೆಗಳನ್ನು ಬಿಚ್ಚಿ ನೋಡಲಾಗಿ ಅವರು ಇಟ್ಟಿದ್ದ ದುಡ್ಡು ವಗೈರೆ ಏನೂ ಖಲಲ್ಲಾಗಿರಲಿಲ್ಲ. ಪೊಲೀಸ್ ದಫೇದಾರರೂ ಪೊಲೀಸಿನವರೂ ಬಂದು ತನಿಖೆ ಮಾಡಲಾಗಿ ದೊಡ್ಡನಾರಹಳ್ಳಿಯ ಬಳಿಯಲ್ಲಿ ಇರುವ ಒಡ್ಡರು ಸದರಿ ಸಂತೆಗೆ ಬಂದಿದ್ದರಂತೆ. ಸಾಯಂಕಾಲ ಆರೂವರೆ ಘಂಟೆ ವರಿವಿಗೂ ಸದರಿ ಕಾಮಸಮುದ್ರ ಪೊಲೀಸ್ ಸ್ಟೇಷನ್ ಕಾನಸ್ಟೇಬಲ್ ಗೋವಿಂದಪ್ಪನು ಸದರಿ ಒಡ್ಡರು ಅಂಗಡಿಸಾಲಿನಲ್ಲಿ ಇದ್ದಂತೆಯೂ ಆ ಒಡ್ಡರಿಂದಲೇ ಈ ಕಳ್ಳತನ ಆಗಿರುವದಾಗಿಯೂ ಗ್ರಾಮಸ್ಥರು ದಫೇದಾರರಿಗೆ ತಿಳಿಸಿದರು. ಗ್ರಾಮದ ಬಾದಿಯಲ್ಲಿಯೇ ೭ ಘಂಟೆ ಸಮಯದಲ್ಲಿ ಈ ರೀತಿ ಕಳ್ಳತನವಾದದ್ದು ಬಹಳ ಆಶ್ಚರ್ಯವಾಗಿರುತ್ತೆ. ಮುಂದೆ ಇಂಥಾ ಕಾರ್ಯಗಳಿಗೆ ಅವಕಾಶವಾಗದಂತೆ ಪೊಲೀಸ್ ಆಫೀಸರರು ನಿಗಾ ಇಟ್ಟು ಇರುವರಾಗಿ ನಂಬುತ್ತೇವೆ.

ಇಂಡಿಯಾ ದೇಶದ ವೃತ್ತಾಂತಗಳು

ಮದರಾಸ್ ಆಧಿಪತ್ಯದ ಗವರ್ನರರವರು ಮುಂದಿನ ಅಕ್ಟೋಬರ್ ತಿಂಗಳಲ್ಲಿ ಮಲಬಾರ್ ಪ್ರಾಂತ್ಯ ದಯಮಾಡುವವರಾಗಿದ್ದಾರೆಂದು ಕೇಳುತ್ತೇವೆ.

❖❖❖

ಬೊಂಬಾಯಿ ಪಟ್ಟಣದ ಹರೇಲ್ ಎಂಬ ವಿಭಾಗದಲ್ಲಿ ಜಾನ್ ಎಂಬ ಒಬ್ಬ ಕಾರ್ಖಾನೆಗೆ ಬೆಂಕಿಬಿದ್ದು, ಸುಮಾರು ೩೦ ೦೦೦ ರೂಪಾಯಿನ ಸರಕುಗಳು ನಷ್ಟವಾದವು.

❖❖❖

ಕಲ್ಕತ್ತಾ ಪಟ್ಟಣದಲ್ಲಿ ಹರಿಚಂದ್ರ ಚತ್ರಜೀ ಎಂಬವನು ತನ್ನ ಹೆಂಡತಿಯ ಮಾತನ್ನು ನಂಬಿ ಅತ್ತೆಯನ್ನು ನಾದನಿಯನ್ನು ಕೊಂದುಹಾಕಿದನೆಂದು ಮೊಕದ್ದಮೆ ಒಂದು ಪೋಲೀಸ್ ಕೋರ್ಟಿನಲ್ಲಿ ವಿಚಾರಣೆಯಾಗುತ್ತಿದೆ.

❖❖❖

ಜಾನಕಮ್ಮನೆಂಬೊಬ್ಬ ತಿಯ್ಯಾ ಜಾತಿಯ ಹುಡುಗಿಯು ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ, ಕಲ್ಲಿಕೋಟೆಯ ಪೋಸ್ಟ್ ಆಫೀಸಿನಲ್ಲಿ ೨೦ ರೂಪಾಯಿ ತಲಬಿನ ಕ್ಲರ್ಕ್ ಉದ್ಯೋಗಕ್ಕೆ ಸೇರಿ ಕೆಲಸಮಾಡುತ್ತಿದ್ದಾಳೆ.

❖❖❖

ಕಲ್ಕತ್ತಾ ನಗರದಲ್ಲಿ ಕಳೆದ ವಾರ ಗಂಗಾನದಿಯ ಕ್ಷಿಪ್ರಪ್ರವಾಹದ ಪ್ರವಾಹಗಳು ಹುಟ್ಟಿ ಅನೇಕ ಹಡಗುಗಳೂ ದೋಣಿಗಳೂ ಮುಳುಗಿ ಹೋದವು. ಅನೇಕ ಜನರೂ ತುಂಬಾ ಸರಕುಗಳೂ ನದಿಯ ಪಾಲಾದಂತೆ ತಿಳಿದುಬಂದಿದೆ.

❖❖❖

ಬಂಗಾಳಾ ಆಧಿಪತ್ಯಕ್ಕೆ ಸೇರಿದ ದರ್ಭಾಂಗ ಡಿಸ್ಟ್ರಿಕ್ಟಿನಲ್ಲಿ ಕಳೆದ ವಾರ ಕ್ಷಾಮಪೀಡಿತರ ಸಂಖ್ಯೆಯು ಬಹಳ ಮಟ್ಟಿಗೆ ಕಡಿಮೆಯಾಯಿತು. ಈಗ ೧೩,೩೫೪ ಜನರು ಕ್ಷಾಮ ಪೀಡಿತರಾಗಿ ಸರಕಾರದವರ ಪೋಷಣೆಯಲ್ಲಿರುತ್ತಾರೆಂದು ತಿಳಿಯುತ್ತದೆ.

❖❖❖

ಅಫ್ಘಾನಿಸ್ಥಾನದ ಅಮೀರರು ಹಿಂದುಸ್ಥಾನದಲ್ಲಿ ಸಂಚಾರ ಮಾಡಿದಾಗ ಅವರ ಬಳಿ ಶೈನಾತಿಗಾಗಿ ನೇಮಿಸಲ್ಪಟ್ಟಿದ್ದ ಮೇಜರ್ ಉಮ್ಮರ್ ಹಯಾತ್‌ಖಾನ್ ಎಂಬ ಡಫೇದಾರನ ಸ್ಥಾನಿಗೆ ಅಮೀರರು ಬಹುಮಾನ ರೂಪವಾಗಿ ಒಂದು ಚಿನ್ನದ ಗಡಿಯಾರವನ್ನು ಈಗ ದಾನ ಕಳುಹಿಸಿ ಕೊಟ್ಟಿದ್ದಾರೆ.

❖❖❖

ಚಕ್ರವರ್ತಿಯವರ ಜನ್ಮೋತ್ಸವದ ದಿನ ಅಮೃತಸರದಲ್ಲಿದ್ದ ಸಿಕ್ ಪ್ರಜೆಗಳು ಅಲ್ಲಿನ ತಮ್ಮ ಸುವರ್ಣ ದೇವಾಲಯದಲ್ಲಿ ಸಭೆ ಸೇರಿ ಉತ್ಸವಗಳನ್ನು ನಡಿಸಿ, ಚಕ್ರವರ್ತಿಯವರಿಗೆ ದೀರ್ಘಾಯುಸ್ಸನ್ನು ಬಯಸಿ ಪ್ರಾರ್ಥನೆಗಳನ್ನು ಸಲ್ಲಿಸಿದ್ದಲ್ಲದೆ ... ವಿಶೇಷವಾದ ದೀಪೋತ್ಸವವನ್ನು ನಡಿಸಿದರು.

❖❖❖

... ನಗರದಲ್ಲಿ ಪ್ರಜೆಗಳು ಸಭೆ ಸೇರಿ ... ಎಂಬ ದೇಶಭಕ್ತರನ್ನು ಅನೇಕಕ್ಕೆ ಸಾಗಹಾಕಿದ ... ಕೆಲವರು ... ಅನೇಕರಿಂದ ... ಹಿಂದ ಮೇಲೆ ಅವರನ್ನು ಮರಳಿ ಕರೆಸಿಕೊಳ್ಳಬೇಕೆಂದು ಸೂಚಿಸಿದರು. ಆದರೆ ಅನೇಕಾನೇಕರು ಆದಾಗಲಾರದೆಂದು ... ದೇಶಾಭ್ಯುದಯಕ್ಕೆ ನ್ಯೂನತೆಯಾದೀತೆಂದು ವಿವೇಕಿಗಳು ಹೇಳದಿರಲಾರರು.

❖❖❖

ರಂಗೂನ್ ಪಟ್ಟಣದಲ್ಲಿ ತೋಪೆ ಎಂಬೊಬ್ಬ ದೇಶೀ ವೈದ್ಯನು ಒಬ್ಬ ರೋಗಿಯನ್ನು ಗುಣಮಾಡುತ್ತೇನೆಂದು ಮಾರ್ಫಿಯಾ ಎಂಬ ಔಷಧವನ್ನು ಹೆಚ್ಚಾಗಿ ಅವನ ಕಾಲಿನ ನರದ ಮೂಲಕ ಚುಚ್ಚಿ ಹಾಕಿದನು. ಅದರಿಂದ ಆ ರೋಗಿಯು ಸತ್ತುಹೋದದ್ದರಿಂದ ಆ ಡಾಕ್ಟರ ಮೇಲೆ ಕ್ರಿಮಿನಲ್ ಮೊಕದ್ದಮೆ ಆಗಿದೆ.

❖❖❖

ಬಂಗಾಳಾ ಆಧಿಪತ್ಯದಲ್ಲಿ ಕೆಲವು ವರ್ತಮಾನ ಪತ್ರಿಕೆಗಳು ಸರ್ಕಾರದವರಿಗೆ ವಿರೋಧವಾದಂಥಾ ಕೆಲವು ಬಾತ್ಮಿಗಳನ್ನು ಪ್ರಕಟಿಸಿರುತ್ತವೆ ಎಂತಲೂ ಆದರಿಂದ ಪ್ರಜೆಗಳ ಮನಸ್ಸು ಕೆಡುವುದಕ್ಕೆ ಕಾರಣವಾಗಿದೆ ಎಂತಲೂ ಗವರ್ನಮೆಂಟಿನವರು ಯೋಚಿಸಿ, ಅಂಥಾ ಕೆಲವು ಪತ್ರಿಕೆಗಳ ಎಡಿಟರಗಳ ಮೇಲೆ ಮೊಕದ್ದಮೆ ತರಬೇಕೆಂದು ಪ್ರಯತ್ನಿಸುತ್ತಿದ್ದಾರೆ.

❖❖❖

ಸಿಲೋನ (ಲಂಕಾ) ದ್ವೀಪದಲ್ಲಿ ಕೊಲಂಬೋ ಎಂಬ ಭಾರೀ ಪಟ್ಟಣದಲ್ಲಿ ಬಹಳ ಎತ್ತರವಾದ ಒಂದು ಕಟ್ಟಡದ ಮೇಲೆ ಒಂದು ಭಾರೀ ದೀಪ ಉರಿಯುವಂತೆ ಮಾಡಬೇಕೆಂದು ಸರ್ಕಾರದವರು ತೀರ್ಮಾನಿಸಿ ೭೦,೦೦೦ ರೂಪಾಯಿ ಸ್ಯಾಂಕ್ಷನ್ ಮಾಡಿದ್ದಾರೆ. ಈ ಬೆಳಕಿನಿಂದ ಸಮುದ್ರದ ಮೇಲೆ ಸಂಚರಿಸುವ ಜಹಜುಗಳಿಗೆ ತುಂಬಾ ಸಹಾಯವಾಗುವದು.

❖❖❖

ನಾಭಾ ನಗರದ ಸಂಸ್ಥಾನದ ಮಹಾರಾಜರಾದ ರಂಜೀತಸಿಂಗ್‌ಜೀಯವರು ಅರಮನೆಯಲ್ಲಿದ್ದ ರಾಜಕುಮಾರರನ್ನೆಲ್ಲಾ ಅಂದರೆ ಎಂಟು ಮಂದಿಯನ್ನು ವಿದ್ಯೆ ಕಲಿಯುವದಕ್ಕೋಸ್ಕರ ರಾಜಕೋಟೆಯಲ್ಲಿರುವ ರಾಜಕುಮಾರರ ವಿದ್ಯಾಶಾಲೆಗೆ ಕಳುಹಿಸಿಕೊಟ್ಟರು. ಧರೇಶ್ವರದ ಮಹಾರಾಣೀಯವರ ಒಬ್ಬ ರಾಜಕುಮಾರನು ಪಶು ವೈದ್ಯವನ್ನು ಕಲಿತು ಬರುವುದಕ್ಕೆ ವಿಲಾಯತಿಗೆ ಹೋಗಿರುತ್ತಾನೆ.

❖❖❖

ಕಲ್ಕತ್ತಾ ಪಟ್ಟಣದಲ್ಲಿ ಒಂದು ಅಚ್ಚಿನ ಕಾರ್ಖಾನೆಯ ಯಜಮಾನನು ಅವನ ತಾಬೇದಾರನೂ ಸರ್ಕಾರಕ್ಕೆ ತಿಳಿಸಿ ಅವರ ಅಪ್ಪಣೆ ತೆಗೆದುಕೊಳ್ಳದೇನೇ "ಸೋನಾರ ಬಂಗಾಳಾ" ಎಂಬ ಒಂದು ವರ್ತಮಾನ ಪತ್ರಿಕೆಯನ್ನು ತಮ್ಮ ಕಾರ್ಖಾನೆಯಲ್ಲಿ ಪ್ರಿಂಟು ಮಾಡಿದರು. ಅವರಿಬ್ಬರ ಮೇಲೂ ಮೊಕದ್ದಮೆ ಆಗಿ, ಯಜಮಾನನಿಗೆ ೪೫೦ ರೂಪಾಯಿಯೂ, ಅವನ ತಾಬೇದಾರನಿಗೆ ೪೫ ರೂಪಾಯಿಯೂ ಜುಲ್ಮಾನೆ ವಿಧಿಸಲ್ಪಟ್ಟಿತು.

❖❖❖

ಪೂರ್ವ ಬಂಗಾಳಾ ಆಧಿಪತ್ಯಕ್ಕೆ ಸೇರಿದ ಪಾಟಿಯಾಲಾ ... ಪಟ್ಟಣದಲ್ಲಿ ಒಂದು ದೊಡ್ಡ ಸೋಂಪಿ ಕಳವು ಲೂಟಿಯು ನಡೆದದ್ದು ಪೊಲೀಸಿನವರು ಸುಮಾರು ಮೂವತ್ತು ಜನ ಮುಖಂಡರನ್ನು ಹಿಡಿದು ಮೊಕದ್ದಮೆ ಮಾಡಿದರು. ಮಾಜಿಸ್ಟ್ರೇಟರು ದಯಾಸ್ತಿ ... ಆ ಪೈಕಿ ೧೫ ಮಂದಿಯನ್ನು ಖುಲಾಸ್ ಮಾಡಿಸಿ, ೧೪ ಮಂದಿಗೆ ತಲಾ ಒಂದು ವರುಷದಂತೆಯೂ ಒಬ್ಬನಿಗೆ ಮಾತ್ರ ಮೂರು ವರುಷವೂ ಕಠಿಣ ಸಜಾ ವಿಧಿಸಿದರು.

❖❖❖

ಕಳೆದ ವಾರ ೧೦,೮೩೦ ಜನರು ಹಿಂದುಸ್ಥಾನದಲ್ಲಿ ಪ್ಲೇಗ್ ಉಪದ್ರದಲ್ಲಿ ಮೃತಪಟ್ಟರು, ಅಂದರೆ, ಹಿಂದಿನ ವಾರದ ಸಂಖ್ಯೆಗಿಂತಲೂ ೯,೦೦೦ ಸಾವಿರಕ್ಕಿಂತಲೂ ಹೆಚ್ಚಾಗಿಯೇ ಕಡಿಮೆಯಾಗಿದೆ. ಪಂಜಾಬ್ ೯,೪೦೩ ಸಂಯುಕ್ತ ಆಧಿಪತ್ಯಗಳು ೬೩೪ ಬೊಂಬಾಯಿ ೩೭೮ ಬಂಗಾಳ ೭೮ ಬರ್ಮಾ ೧೧೧, ರಾಜಪುತಾನಾ ೪೯ ಮದರಾಸ್ ೯ ಮಧ್ಯಪ್ರಾಂತ್ಯಗಳ ೩, ಮೈಸೂರು ೫೬, ಕಾಶ್ಮೀರ ೧೮ ಈ ರೀತಿ ಮರಣಗಳಾಗಿರುತ್ತವೆ.

❖❖❖

ಕಲ್ಕತ್ತಾ ಪಟ್ಟಣದಲ್ಲಿ ಲೇಟ್ ಸ್ವಾಮಿ ವಿವೇಕಾನಂದರವರ ಸಹೋದರರಾದ ಬಾಬು ಭೂಪೇಂದ್ರನಾಥ ದತ್ತ ಎಂಬವರು "ಜುಗಾಂತರ" ಎಂಬ ವರ್ತಮಾನ ಪತ್ರಿಕೆಯನ್ನು ನಡಸುತ್ತಾ ಇದ್ದರೆ ಆ ಪತ್ರಿಕೆಯು ಕಳೆದ ಜೂನ್ ೧೮ ನೆ ತಾರೀಖಿನ ಸಂಚಿಕೆಯಲ್ಲಿ ರಾಜದ್ರೋಹಕರವಾದ ವಿಷಯಗಳು ಪ್ರಕಟವಾದವೆಂದು ಕೇಳಿ ಪೊಲೀಸಿನವರು ಅವರ ಮನೆಯನ್ನೂ ಆಫೀಸನ್ನೂ ಕಳೆದ ವಾರ ಶೋಧನೆ ಮಾಡಿ ಅನೇಕ ಕಾಗದ ಪತ್ರಗಳನ್ನು ತೆಗೆದುಕೊಂಡು ಹೋಗಿದ್ದಾರೆ.

❖❖❖

ಸಿಲೋನ (ಲಂಕಾ) ದ್ವೀಪಕ್ಕೆ ಸೇರಿದ ಕೇಗಲ್ಲೆ ಎಂಬ ಪಟ್ಟಣದಲ್ಲಿ ಒಬ್ಬ ಬಡೀ ಜಮೀನ್ದಾರನ ಮನೆಯ ಮುಂದೆ ನೂರಾರು ಜನರು ಸೇರಿ ಉತ್ಸವ ನಡಸುತ್ತಿದ್ದರು. ಅನೇಕರು ಅದನ್ನು ನೋಡುತ್ತಿರುವಲ್ಲಿ ಉತ್ಸವದಲ್ಲಿದ್ದ ಒಂದು ಆನೆಯು ಇದ್ದಕ್ಕಿದ್ದ ಹಾಗೆ ಗಾಬರಿಬಿದ್ದು ಸ್ವೇಚ್ಛೆಯಾಗಿ ಜನರ ಗುಂಪಿನ ಮೇಲೆ ನುಗ್ಗಿ ಬಹಳ ಅನಾಹುತ ಮಾಡಿತು. ಮಾವಟಿಗನು ಕೆಳಗೆ ಬಿದ್ದನು. ಆನೆಯು ನಾಲ್ಕಾರು ಮಂದಿಯನ್ನು ತುಳಿದು ಬಹಳ ಗಾಯ ಮಾಡಿತು. ಈಗ ಅವರನ್ನೆಲ್ಲಾ ಆಸ್ಪತ್ರೆಯಲ್ಲಿಟ್ಟು ಇಲಾಜ ನಡಸುತ್ತಿದ್ದಾರೆ.

❖❖❖

ಬೊಂಬಾಯಿ ಆಧಿಪತ್ಯಕ್ಕೆ ಸೇರಿದ ಪಾಲನಪುರ ಎಂಬ ಸಂಸ್ಥಾನದಲ್ಲಿ ರಾಜರಿಗೂ ಅವರ ಸಹೋದರರಿಗೂ ಮನಸ್ತಾಪಗಳು ಬೆಳೆಯುತ್ತಾ ಗಲಭೆಯಾಗಿರುವಂತೆ ಸಮಾಚಾರ ಬಂದಿದೆ. ಕೆಲವು ಜಮೀನ್ದಾರರ ಬಳಿಗೆ ರಾಜರು ಕಂದಾಯ ಕೊಡುವಂತೆ ಹೇಳಿ ಕಳುಹಿಸಿದಾಗ ಅವ

ರು ಕೊಡುವುದಿಲ್ಲವೆಂದು ತಿರಸ್ಕಾರಮಾಡಿ, ಬಹಳ ಗಲಭೆಯಾಯಿತು. ಈ ದಂಗೆಯನ್ನು ಅಡಗಿಸುವುದಕ್ಕೆ ರಾಜರು ಸೈನ್ಯವನ್ನು ಕಳುಹಿಸಬೇಕಾಯಿತೆಂತಲೂ, ಈಗ ಪಥ್ಯಾನದಿಂದ ಬ್ರಿಟಿಷ್ ರೆಸಿಡೆಂಟರು ಆನಿಖ ಮಾಡುವುದಕ್ಕಾಗಿ ಅಲ್ಲಿಗೆ ಹೋಗಿರುವರೆಂತಲೂ ತಿಳಿಯ ಬರುದು.

❦❦❦

ಕಲ್ಕತ್ತಾ ಪಟ್ಟಣದ ಮೆಟ್ಕಾಫ್ ಎಂಬ ಬೀದಿಯ ಅಂಚಿನಲ್ಲಿ ನಾಲ್ಕು ಜನ ಯೂರೋಪ್ಯರ್ ಜನರು ನಿಂತು ತಿರುಗಾಡುವವರ ಕಡೆಗೆ ಬಾಂಬ್ ಎಂಬ ಮದ್ದಿನ ಗುಂಡುಗಳನ್ನು ಎಸೆಯುತ್ತಿದ್ದರು. ಪೋಲೀಸಿನವರು ಅವರನ್ನು ಹಿಡಿದ ಮೊಕದ್ದಮೆ ಮಾಡಿದಾಗ ಆ ಅಪರಾಧಿಗಳ ಪೈಕಿ ಸೈನಿಕನಾಗಿದ್ದ ಒಬ್ಬನನ್ನು ಸೈನ್ಯಾಧಿಕಾರಿಗಳೇ ಶಿಕ್ಷಿಸಬೇಕೆಂದು ಕಳುಹಿಸಿದರು. ಹನ್ನೊಂದು ವರುಷದ ಎರಡನೇ ಅಪರಾಧಿಯನ್ನು ಚನ್ನಾಗಿ ಬುದ್ಧಿ ಕಲಿಸುವಂತೆ ಅವನ ತಾಯಿಯ ವಶಕ್ಕೆ ಒಪ್ಪಿಸಿದರು. ಉಳಿದ ಇಬ್ಬರಿಗೂ ಹತ್ತು ರೂಪಾಯಿನಂತೆ ಜುಲ್ಮಾನೆ ಹಾಕಿದರು.

❦❦❦

ಪಂಜಾಬ್ ಆಧಿಪತ್ಯದಲ್ಲಿ ಪ್ರಜಾ ನೆಮ್ಮದಿಗೆ ಭಂಗವುಂಟಾದ ವಿಚಾರವನ್ನೂ ಗಡೀಪಾರಾಗಿರುವ ಲಾಲಾ ಲಾಜಪತ್ ರಾಯಿಯವರ ವಿಷಯವನ್ನೂ ಕುರಿತು ಲೆಫ್ಟಿನೆಂಟ್ ಗವರ್ನರವರನ್ನು ಕಂಡು ಮಾತನಾಡಿಕೊಂಡು ಬರುವದಕ್ಕಾಗಿ ಲಾಹೋರ್ ಪಟ್ಟಣದ ಬ್ಯಾರಿಸ್ಟರುಗಳೂ ಇತರ ದೊಡ್ಡ ಮನುಷ್ಯರೂ ಹನ್ನೊಂದು ಮಂದಿ ಸೇರಿ, ಸಿಂಲಾ ಪಟ್ಟಣಕ್ಕೆ ಹೋಗಿದ್ದರು. ಲೆಫ್ಟಿನೆಂಟ್ ಗವರ್ನರವರು ಆ ದೊಡ್ಡ ಮನುಷ್ಯರನ್ನು ಕೂರಿಸಿಕೊಂಡು, ಬಹಳ ಪ್ರೀತಿಯಿಂದ ಅವರು ಹೇಳಿದ್ದನ್ನೆಲ್ಲಾ ಕೇಳಿ, ಸಮಾಧಾನ ಪಡಿಸಿ ಕಳುಹಿಸಿಕೊಟ್ಟರೆಂದು ತಂತೀ ವರ್ತಮಾನ ಬಂದಿದೆ.

❦❦❦

ಬಂಗಾಳಾ ಆಧಿಪತ್ಯದಲ್ಲಿ ಚಂದ್ರ ನಗರವೆಂಬ ಪಟ್ಟಣವು ಫ್ರೆಂಚ್ ಸರ್ಕಾರದವರಿಗೆ ಸೇರಿದ್ದಾಗಿರುತ್ತದೆ. ಆ ಪಟ್ಟಣಕ್ಕೆ ಕೆಲವು ಬಂಗಾಳಿಗಳು ಹೋಗಿ ಹೊಸದಾಗಿ ವರ್ತಮಾನ ಪತ್ರಿಕೆಗಳನ್ನು ಪ್ರಕಟಿಸಬೇಕೆಂದು ಪ್ರಯತ್ನಪಟ್ಟರು. ಅಲ್ಲಿನ ಫ್ರೆಂಚ್ ಅಧಿಕಾರಿಗಳು ಅವರಿಗೆ ಅವಕಾಶ ಕೊಡಲಿಲ್ಲ. ಅಲ್ಲಿನ ಜನರು ಆಯುಧಗಳನ್ನು ಇಟ್ಟುಕೊಳ್ಳುವ ವಿಷಯದಲ್ಲಿಯೂ ನಿರ್ಬಂಧವನ್ನು ಕಲ್ಪಿಸಿರುತ್ತಾರೆ. ಇದಲ್ಲದೆ ಹಿಂದೂಸ್ಥಾನದಲ್ಲಿ ಪ್ರಜಾ ನೆಮ್ಮದಿಗೆ ಭಂಗವುಂಟಾಗಿ ದಂಗೆಗಳೇನಾದರೂ ಆಗುವ ಪಕ್ಷಕ್ಕೆ ಫ್ರೆಂಚರು ಇಂಗ್ಲಿಷರಿಗೆ ಬೆಂಬಲವಾಗಿ ನಿಲ್ಲುವದಾಗಿಯೂ ತಿಳಿಸಿರುತ್ತಾರೆ.

❦❦❦

ಕಲ್ಕತ್ತಾ ಪಟ್ಟಣದ ಬಡಾ ಬಜಾರ್ ಎಂಬ ರಸ್ತೆಯ ಪಕ್ಕದಲ್ಲಿ ಒಬ್ಬ ಮನುಷ್ಯನು ಬಿದ್ದುಕೊಂಡಿದ್ದನು. ಅವನ ಬಳಿ ೬ ವರುಷದ ಒಂದು ಹೆಣ್ಣುಮಗುವು ಕೂತುಕೊಂಡು ಅಳುತ್ತಿತ್ತು. ಜನರು ಹೋಗಿ ಕೇಳಿದಾಗ ಆ ಮಗು ತನ್ನ ತಂದೆಯು ನಿದ್ದೆ ಮಾಡುತ್ತಿದ್ದಾನೆಂತಲೂ ಅವನನ್ನು ಎಬ್ಬಿಸಬೇಡಿ ಎಂತಲೂ ಹೇಳಿತು. ಆದರೆ ಅವನು ಸತ್ತುಹೋಗಿದ್ದನೆಂದು ಗೊತ್ತಾಯಿತು. ಸರ್ಕಾರದವರು ಪರೀಕ್ಷೆ ಮಾಡಿಸಿ ಅವನಿಗೆ ಪ್ಲೇಗ್ ವ್ಯಾಧಿ ತಗಲಿತ್ತೆಂದು ತಿಳಿದು ಅವನನ್ನು ದಫನ್ ಮಾಡಿಸಿ ಆ ಮಗುವನ್ನು ಪೋಷಣೆ ಮಾಡುವುದಕ್ಕಾಗಿ ಒಂದು ಅನಾಥಶಾಲೆಗೆ ಕಳುಹಿಸಿಕೊಟ್ಟು ಸೇರಿಸಿದರು.

❦❦❦

ಕಳೆದ ೧೯೦೬ನೆ ಇಸವಿಯಲ್ಲಿ ನಡೆದ ದೊಡ್ಡ ಸಿಪಾಯಿ ದಂಗೆಯಲ್ಲಿ ಸಿವರ್‍ಗ್ ಎಂಬುವನು ಸೇರಿದ್ದನು. ಸರ್ಕಾರದವರು ಅವನನ್ನು ಎರಡು ವರ್ಷಗಳ ಮೇಲೆ ಹುಡುಕಿಸಿದಾಗ ಸಿಕ್ಕಿಬಿದ್ದನು. ಅವನನ್ನು ಕೂಡಲೇ ಅಂಡಮಾನ್ ದ್ವೀಪಕ್ಕೆ ಗಡೀಪಾರು ಮಾಡಿದ್ದರು. ಅವನು ಕಳೆದ ನಾಲ್ವತ್ತೆಂಟು ವರುಷಗಳಿಂದಲೂ ಆ ದ್ವೀಪದಲ್ಲಿ ಸಜಾ ಶಿಕ್ಷೆಯನ್ನನುಭವಿಸಿ ಈಗ ಬಿಡುಗಡೆ ಹೊಂದಿ ರಂಗೂನ್ ಪಟ್ಟಣಕ್ಕೆ ಬಂದಿರುತ್ತಾನೆ. ಪೋಲೀಸ್ ಕಮಿಷನರರು ಅವನನ್ನು ಪ್ರತಿ ತಿಂಗಳು ಮೊದಲನೆ ತಾರೀಖಿನಲ್ಲಿ ತಮ್ಮ ಆಫೀಸಿಗೆ ಬಂದು ಕಾಣಿಸಿಕೊಂಡು ಹೋಗುತ್ತಿರಬೇಕೆಂದು ಹುಕುಂ ಕೊಟ್ಟು ಕಳುಹಿಸಿದಾರೆ.

❦❦❦

ಬಸ್ತಿಲ ಪುರದಲ್ಲಿ ಕಳೆದ ವಾರ ಜೈನದಿಗಂಬರ ಮಹಾ ಸಭೆ ನಡೆಯಿತು. ಆದಿಪಟ್ಟಣದ ಮ್ಯಾಜಿಸ್ಟ್ರೇಟು ಮಿ॥ ದೇವಕುಮಾರರೆಂಬ ದೊಡ್ಡ ಮನುಷ್ಯರು ಸಭಾನಾಯಕರಾಗಿದ್ದು, ಜೈನ ಜನರ ಬಾಲಕಿಯರ ವಿದ್ಯಾ ವೃದ್ಧಿಗೆ ಅವಶ್ಯವಾದ ಏರ್ಪಾಡುಗಳನ್ನು ಕುರಿತು ಉಪನ್ಯಾಸ ಮಾಡಿದರು. ಸೇರಿದ್ದ ಜೈನ ಮಹಾ ಜನರು ಆ ಅಭಿಪ್ರಾಯಗಳನ್ನು ಮೆಚ್ಚಿಕೊಂಡು, ಅದಕ್ಕಾಗಿ ತುಂಬಾ ದ್ರವ್ಯಸಹಾಯ ಮಾಡುವದಾಗಿ ವಾಗ್ದಾನ ಮಾಡಿದಾರೆ. ಆ ದಿನ ಮಧ್ಯಾಹ್ನ ಜೈನ ಮಹಿಳೆಯರೂ ಸಭೆಸೇರಿ, ಹೆಣ್ಣುಮಕ್ಕಳ ಪುರೋಭಿವೃದ್ಧಿಗೂ ವಿದ್ಯಾಭ್ಯಾಸಕ್ಕೂ ಏರ್ಪಾಡು ಮಾಡಬೇಕೆಂದು ಗೊತ್ತುಮಾಡಿದರು.

❦❦❦

ಮದರಾಸು ಪಟ್ಟಣದ ಮೌಂಟ್ ಮಾರ್ಕೆಟಿನ ಹಿಂಭಾಗದಲ್ಲಿರುವ ಉದ್ಯಾನವನದಲ್ಲಿ ಕೆಲವು ಸ್ಕೂಲುಗಳ ವಿದ್ಯಾರ್ಥಿಗಳು ಒಂದು ವಾರದವರೆಗೆ ದಿನಾಲೂ ಸಭೆ ಸೇರುತ್ತಾ ರಾಜಕೀಯ ವಿಷಯಗಳನ್ನು ಕುರಿತು ಚರ್ಚಿಸುತ್ತಾ, ಸರ್ಕಾರದ ನಡವಳಿಕೆಗಳನ್ನು ಕುರಿತು ಆಕ್ಷೇಪಣೆ ಮಾಡುತ್ತಾ ಬಂದರು. ಪೋಲೀಸಿನವರಿಗೆ ಈ ಸಂಗತಿ ತಿಳಿದು ಅವರು ಹೋಗಿ ಬಂದು ಏನ ಆ ಹುಡುಗರನ್ನು ಅಲ್ಲಿಂದ ಓಡಿಸಬೇಕೆಂದು ಪ್ರಯತ್ನಪಟ್ಟರು. ಅವರಿಗೆ ಸಾಧ್ಯವಾಗಲಿಲ್ಲ. ಆಗ ಆ ಊರಿನಲ್ಲಿ ಇದ್ದ ವರ್ತಕರು ಹೋಗಿ ಅವರಿಗೆ ಸ್ವಲ್ಪ ಬುದ್ಧಿ ಹೇಳಿ, ಇಲ್ಲದಿದ್ದರೆ ಆ ಸಭೆಯನ್ನು ನಡೆಯಗೊಡಿಸುವುದಿಲ್ಲವೆಂದೂ ಹೇಳಿದಾಗ ಹುಡುಗರೆಲ್ಲ ಹೊರಟುಹೋದರು. ಅಲ್ಲಿಂದೀಚೆಗೆ ಈ ಸಭೆ ನಿಂತುಹೋಯಿತು.

ಮಾಲ್ವಾ ಸಂಸ್ಥಾನದ ಸರ್ಕಾರಿ ಖಜಾಂಚಿಯಾಗಿದ್ದ ಚಾಂದ್‌ಮಲ್ ಬೀಸಾಪ ಎಂಬ ಭಾರೀ ಜೈನ ಸಾಹುಕಾರನು ಕಾಲವಾದನೆಂದು ತಿಳಿದುಬಂದಿದೆ. ಈತನು ಅಂಗಡಿ ಇಟ್ಟು ಅನೇಕ ಊರುಗಳಲ್ಲಿ ವ್ಯಾಪಾರ ನಡಿಸಿ ತುಂಬಾ ಪ್ರಸಿದ್ಧಿಗೆ ಬಂದಿದ್ದನು. ಆತನು ಮಾಡಿರುವ ಧರ್ಮಕಾರ್ಯಗಳೂ ಅನೇಕವಾಗಿರುತ್ತವೆ. ಸ್ಕೂಲು, ಆಸ್ಪತ್ರೆ, ಕೆರೆ, ದೇವಾಲಯ ಮೊದಲಾದವುಗಳನ್ನು ಕಟ್ಟಿಸುವುದಕ್ಕೆ ಕೆಲವು ಲಕ್ಷ ರೂಪಾಯಿಗಳನ್ನೇ ಖರ್ಚು ಮಾಡಿದನು. ಮತ್ತು ಕಳೆದ ಕ್ಷಾಮ ಕಾಲದಲ್ಲಿ ಅರ್ಧ ಲಕ್ಷ ರೂಪಾಯಿ ಧರ್ಮ ಕೊಟ್ಟನು. ಈತನು ಸಾಯುವುದಕ್ಕೆ ಮೊದಲು ತನ್ನ ಆಸ್ತಿಯಲ್ಲಿ ೫೦,೦೦೦ ರೂಪಾಯಿ ಧರ್ಮ ಕೆಲಸಗಳಿಗೆ ವಿನಿಯೋಗಿಸಬೇಕೆಂದು ಉಯಿಲು ಬರೆದಿರುತ್ತಾನೆ. ಈ ಪುಣ್ಯಾತ್ಮನನ್ನು ಆ ಪ್ರಾಂತ್ಯದವರೆಲ್ಲಾ ವಿಶೇಷವಾದ ಪ್ರೀತಿ ಗೌರವಗಳಿಂದ ಕಾಣುತ್ತಿದ್ದರು.

❦❦❦

ಕಲ್ಲೀಕೋಟೆ ಪ್ರಾಂತ್ಯದಲ್ಲಿ ಕೊತ್ತಾಕಾಳದ ಸಾಗುವಾನಿ ವರ್ತಕರು ತೊಲೆಗಳನ್ನು ಕಾಡಿನಿಂದ ಸಾಗಿಸುವುದಕ್ಕೆ ೫೩ ಭಾರೀ ಆನೆಗಳನ್ನು ಇಟ್ಟುಕೊಂಡಿದ್ದರು. ಅವು ಅನೇಕ ವರುಷಗಳಿಂದಲೂ ಆ ಕೆಲಸದಲ್ಲಿ ಚನ್ನಾಗಿ ತರಪೇತಾಗಿ ಬಹು ಚಟುವಟಿಕೆಯಾಗಿಯೂ ವಿಧೇಯತೆಯಿಂದಲೂ ತೊಲೆಗಳನ್ನು ಸಾಗಿಸುತ್ತಿದ್ದವು. ಈಗ ಅವುಗಳಿಗೆ ಪ್ಲೇಗ್ ಉಪದ್ರುತಗಲಿ ೧೨ ಆನೆಗಳು ಸತ್ತುಹೋದವೆಂದೂ ಸಾಹುಕಾರರ ತುಂಬಾ ನಷ್ಟಪಟ್ಟು ವ್ಯಸನಾಕ್ರಾಂತರಾಗಿದಾರೆಂದೂ ತಿಳಿದುಬಂದಿದೆ. ಅವನ್ನು ಪರೀಕ್ಷೆ ಮಾಡಿದಾಗ ಕತ್ತಿನ ಪಕ್ಕದಲ್ಲಿ ೪-೫ ಗುಳ್ಳೆಗಳಾಗಿದ್ದವು. ಮೂರು ದಿನಗಳ ತನಕ ಅನ್ನ ಬಿಟ್ಟು ಗಡಗಡನೆ ನಡುಗಿ ಜ್ವರದಲ್ಲಿ ಬಿದ್ದು ನರಳಿ ನಾಲ್ಕನೆಯದಿನ ಮೃತಪಟ್ಟವು. ಈ ರೋಗಕ್ಕೆ ಸರ್ಕಾರದವರು ಕೂಡಲೇ ಪರಿಹಾರವನ್ನು ಕಂಡುಹಿಡಿಯಬೇಕೆಂದು ಡಾಕ್ಟರಿಗೆ ತಿಳಿಸಿರುತ್ತಾರೆ.

❦❦❦

ಹಿಂದುಸ್ಥಾನದಲ್ಲಿ ದೇಶೀಯ ವರ್ತಕರಿಗೆ ವ್ಯಾಪಾರಧರ್ಮಗಳು ಚನ್ನಾಗಿ ತಿಳಿದಿಲ್ಲವಾದ್ದರಿಂದ ಅವರ ಕೆಲಸ ಕಾರ್ಯಗಳು ಅಭಿವೃದ್ಧಿ ಹೊಂದದೆ ಇರುತ್ತವೆ. ಯೂರೋಪ್ಯರ್ ರಾಜ್ಯಗಳಲ್ಲಿ ವ್ಯಾಪಾರವು ತ್ತಿಯೇ ಒಂದು ದೊಡ್ಡ ವಿದ್ಯೆಯಾಗಿ, ಅನೇಕ ವರ್ತಕರು ಅದರಲ್ಲಿ ಪ್ರವೀಣರೆನಿಸಿಕೊಂಡು, ಬಹಳ ಬೇಗ ಐಶ್ವರ್ಯವಂತರಾಗುತ್ತಿದಾರೆ. ಇಂಡಿಯಾ ಗವರ್ನಮೆಂಟಿನವರು ಈ ರಾಷ್ಟ್ರದ ದೊಡ್ಡ ದೊಡ್ಡ ವರ್ತಕರ ಮಕ್ಕಳನ್ನು ಸರ್ಕಾರದಿಂದಲೇ ವೇತನ ಕೊಟ್ಟು ವಿಲಾಯಿತಿ ಮೊದಲಾದ ಯೂರೋಪ್ಯರ್ ರಾಜ್ಯಗಳಿಗೆ ಕಳುಹಿಸಬೇಕೆಂತಲೂ, ಅವರಿಗೆ ಆಯಾ ಕಡೆಗಳ ವ್ಯಾಪಾರ ವಿದ್ಯೆಯನ್ನು ಚನ್ನಾಗಿ ಕಲಿಸಬೇಕೆಂತಲೂ ತೀರ್ಮಾನ ಮಾಡಿ, ಅಂಥಾ ಪ್ರತಿ ಒಬ್ಬ ವಿದ್ಯಾರ್ಥಿಗೂ ವರುಷಕ್ಕೆ ೨,೦೫೦ ರೂಪಾಯಿನಂತೆ ವೇತನ ಕೊಡುತ್ತೇವೆಂದು ಪ್ರಕಟಿಸಿರುತ್ತಾರೆ. ದೊಡ್ಡ ದೊಡ್ಡ ವ್ಯಾಪಾರ ನಡಿಸತಕ್ಕ ವರ್ತಕರ ಮಕ್ಕಳು ಅಭಿವೃದ್ಧಿಗೆ ಬರುವುದಕ್ಕೆ ಇದರಿಂದ ತುಂಬಾ ಪ್ರೋತ್ಸಾಹವಾದೀತೆಂದು ಕೇಳಬರುತ್ತದೆ.

❦❦❦

ಬಳ್ಳಾರಿ ಜಿಲ್ಲಾ ಆದವೇನಿ ತಾಲ್ಲೂಕಿನಲ್ಲಿ ಒಬ್ಬ ಹಣಗಾರನು ಬಡ್ಡಿಯವನನ್ನು ಕರೆದುಕೊಂಡು ಹೋಗಿ ಗ್ರಾಮದಲ್ಲಿ ಪ್ರತಿವಾದಿಯನ್ನು ಮುರಂಟನಲ್ಲಿ ಹಿಡಿಸಿ ರೈಲ್ ಸ್ಟೇಷನಿಗೆ ಕರೆದುಕೊಂಡು ಬರುತ್ತಿದ್ದನು. ದಾರಿಯಲ್ಲಿ ಆ ಪ್ರತಿವಾದಿಯು ಕಾಲು ಉಳುಕಿ ನಡೆಯುವುದಕ್ಕಾಗುವುದಿಲ್ಲವೆಂದು ಕುಂತ ಬಿಟ್ಟನು. ಆಗ ಸಾಹುಕಾರನು ಅವನಿಗೆ ತನ್ನ ಟಟ್ಟುವನ್ನು ಕೊಟ್ಟು, ತಾನೂ ಬಡ್ಡಿಯವನೂ ನಡೆಯುತ್ತಾ ಬಂದರು. ಪ್ರತಿವಾದಿಯು ಟಟ್ಟು ಹತ್ತಿಕೊಂಡು ಸ್ವಲ್ಪ ದೂರ ಅವರ ಸಂಗಡಲೇ ಹೋಗುತ್ತಿದ್ದು ಅಕಸ್ಮಾತ್ತಾಗಿ ಅದನ್ನು ಹೊಡೆದು ಜೋರಾಗಿ ಓಡಿಸಿಕೊಂಡು ಹೋಗಿಬಿಟ್ಟನು. ಅವರಿಬ್ಬರೂ ಒಬ್ಬರ ಮುಖ ಒಬ್ಬರು ನೋಡಿಕೊಂಡು ಮೋಸಹೋದೆವೆಂದು ಹೇಳಿಕೊಳ್ಳುತ್ತಾ ಮನೆಗೆ ಬಂದರು. ಟಟ್ಟುವು ನಾಲ್ಕಾರು ದಿನಗಳ ಮೇಲೆ ವಾಪಸು ಮನೆಗೆ ಬಂದಿತು. ಪೋಲೀಸಿನವರಿಂದ ಹುಡುಕಿಸಿ ಆ ಪ್ರತಿವಾದಿಯನ್ನು ಹಿಡಿಸಿ ಕೋರ್ಟಿಗೆ ಕಳುಹಿ ಅವನ ಮೇಲೆ ಮೊಕದ್ದಮೆ ತಂದರು. ಆ ಊರಿನ ಮ್ಯಾಜಿಸ್ಟ್ರೇಟರು ಅವನನ್ನು ಶಿಕ್ಷಿಸಿದರೂ ಅಪೀಲಿನಲ್ಲಿ ಆ ದಿನವೇ ಮ್ಯಾಜಿಸ್ಟ್ರೇಟರು ಅವನನ್ನು ಖುಲಾಸ್ ಮಾಡಿಸಿಬಿಟ್ಟರು.

❦❦❦

ಮಧ್ಯ ಇಂಡಿಯಾ ಎಂಬ ಪ್ರಾಂತ್ಯಕ್ಕೆ ಸೇರಿದ ಧಾರ್ ಎಂಬ ಸಂಸ್ಥಾನದಲ್ಲಿ ಸ್ವಲ್ಪ ಗಲಭೆಯುಂಟಾಗಿದೆ. ಕೆಲವು ದಿನಗಳ ಕೆಳಗೆ ಅಲ್ಲಿನ ಸ್ಕೂಲ್ ಹುಡುಗರು ಸೇರಿ ಕಳೆದ ಮೂರು ವರುಷಗಳಿಂದಲೂ ನಡೆಸುತ್ತಾ ಬಂದಂತೆ ಶಿವಾಜಿ ಮಹಾರಾಜನ ಜನ್ಮೋತ್ಸವವನ್ನು ಮಾಡಿದರು. ಆಗ್ಗೆ ಮೂರು ದಿನ ಸಭೆಗಳು ನಡೆದು ೩೦೦ ಮಂದಿ ದೊಡ್ಡ ಮನುಷ್ಯರು ಸ್ಕೂಲ್ ಹುಡುಗರ ಸಭಾ ನಾಯಕರಾಗಿದ್ದು, ಶಿವಾಜಿಯ ಜೀವ ಚರಿತ್ರೆಯನ್ನೂ, ಎಲ್ಲರೂ ಸ್ವತಂತ್ರ ಜೀವನವನ್ನು ಹೊಂದಬೇಕೆಂದೂ ಸ್ವದೇಶದ ಅಭಿವೃದ್ಧಿಗಳನ್ನೂ ಸದ್ಗುಣ ಸದ್ಭಕ್ತಿ ಸಚ್ಚರಿತ್ರಗಳನ್ನೂ ಕಲಿಯಬೇಕೆಂದೂ, ಮೂರು ಉಪನ್ಯಾಸಗಳನ್ನು ಮಾಡಿದರು. ಇದಾದ ಸ್ವಲ್ಪ ದಿವಸದ ಮೇಲೆ ಆ ಸಂಸ್ಥಾನದ ಸರ್ಕಾರದವರು ಈ ಸಭೆಗಳ ವಿಷಯವನ್ನು ವಿಚಾರಣೆ ಮಾಡಿಸಿ ಆ ಸ್ಕೂಲಿನ ಕೆಲವು ಹುಡುಗರನ್ನೂ ಕೆಲವು ಉಪಾಧ್ಯಾಯರನ್ನೂ ಶಿಕ್ಷಿಸಿಬಿಟ್ಟರು. ಕೆಲವರನ್ನು ಆ ಸಂಸ್ಥಾನದ ಎಲ್ಲೆಯಿಂದಾಚೆಗೆ ಹೊರಡಿಸಿಬಿಟ್ಟರು. ಕೆಲವು ಉಪಾಧ್ಯಾಯರ ಸಂಬಳವನ್ನು ನಿಲ್ಲಿಸಿಬಿಟ್ಟರು. ಕೆಲವರ ಸಂಬಳವನ್ನು ಅರ್ಧಕ್ಕಿಳಿಸಿದರು. ಹೀಗೆಲ್ಲಾ ಬಹಳ ಕಠಿಣವಾಗಿ ಶಿಕ್ಷೆ ವಿಧಿಸಿದರು. ಈಗ ಶಿಕ್ಷೆಯನ್ನು ಅನುಭವಿಸುವವರಲ್ಲಿ ಕೆಲವರು ಸೇರಿ ಇಂಡೋರ್ ಸಂಸ್ಥಾನದ ಬ್ರಿಟಿಷ್ ರೆಸಿಡೆಂಟರಿಗೆ ಒಂದು ದೊಡ್ಡ ವಿಜ್ಞಾಪನಾ ಪತ್ರಿಕೆಯನ್ನು ಬರೆದುಕೊಂಡಿದಾರೆ.

ವಿದೇಶ ವರ್ತಮಾನಗಳು.

ಪೋರ್ಚುಗಲ್ ರಾಜ್ಯದ ಯುವರಾಜರು ಪರಿವಾರ ಸಹಿತ ತಮ್ಮ ಆಫ್ರಿಕಾಸಾಮ್ರಾಜ್ಯಗಳನ್ನು ನೋಡಿಕೊಂಡು ಬರುವುದಕ್ಕಾಗಿ ಸಂಚಾರ ಹೊರಟಿದಾರೆ.

❦❦❦

ವಿಲಾಯತಿಯಲ್ಲಿರುವ ಮಿ॥ ವಿಲ್ಯಂ ವಾಲ್ಡಾರ್ಫ್ ಆಸ್ಟರ್ ಎಂಬ ಪುಣ್ಯಾತ್ಮನು ನಾಲ್ಕು ಧರ್ಮಕಾರ್ಯಗಳಿಗೆ ಒಂದೂವರೆ ಲಕ್ಷ ರೂಪಾಯಿ ಕೊಟ್ಟಿದಾನೆ.

❦❦❦

ದಕ್ಷಿಣ ಆಫ್ರಿಕದ ಗಣಿಗಳಲ್ಲಿ ಕೂಲಿ ಮಾಡುತ್ತಿದ್ದ ಚೀಣೆಯವರ ಪೈಕಿ ೧,೯೭೪ ಜನರನ್ನು ಆ ಸರ್ಕಾರದವರು ಕಳೆದ ವಾರ ಚೀಣಾಕ್ಕೆ ವಾಪಸು ಕಳುಹಿಸಿದರು.

❦❦❦

ಹಂಗೆರಿ ರಾಜ್ಯದ ಚಕ್ರವರ್ತಿಯವರಿಗೆ ರಾಜ್ಯಾಭಿಷೇಕವಾಗಿ ೪೦ ಸಂವತ್ಸರಗಳಾದವು. ಈ ಸಂತೋಷೋತ್ಸವವನ್ನು ಅವರ ಪ್ರಜೆಗಳೆಲ್ಲಾ ಸೇರಿ ನೆರವೇರಿಸಿದರು. ಚಕ್ರವರ್ತಿಯವರು ೧೬೭ ಖೈದಿಗಳನ್ನು ಜೈಲಿನಿಂದ ಬಿಡುಗಡೆ ಮಾಡಿ, ಬಡಬಗ್ಗರಿಗೆ ಸುಖಭೋಗನಾದಿಗಳನ್ನು ನಡಿಸಿದರು.

❦❦❦

ಆಸ್ಟ್ರೇಲಿಯಾ ದ್ವೀಪಕ್ಕೆ ಸೇರಿದ ಬ್ರಿಸ್‌ಬೇನ್ ಪಟ್ಟಣದಲ್ಲಿ ಭಾರೀ ರತ್ನಪಡಿ ವರ್ತಕನಾದ ಮಿ॥ ಬರ್ನಾರ್ಡ್ ಬ್ರೌನ್ ಎಂಬಾತನನ್ನು ಯಾರೋ ಹೊಡೆದು ಘೋರ ಗಾಯ ಮಾಡಿ, ಆತನ ಬಳಿ ಸುಮಾರು ಒಂದೂವರೆ ಲಕ್ಷ ರೂಪಾಯಿ ಬೆಲೆ ಬಾಳುವ ವಜ್ರಪಡಿಗಳಿದ್ದ ಒಂದು ಚೀಲವನ್ನು ಅಪಹರಿಸಿಕೊಂಡು ಹೋದರು. ಈಚೆಗೆ ಆ ಸಾಹುಕಾರನೂ ಸತ್ತು ಹೋದನು.

❦❦❦

ಅಮೇರಿಕಕ್ಕೆ ಸೇರಿದ ಓಹಿಯೋ ಡಿಸ್ಟ್ರಿಕ್ಟಿನ ಕ್ಲೀವ್‌ಲೆಂಡ್ ಪಟ್ಟಣದಲ್ಲಿ ಪ್ರಜಾ ಆರೋಗ್ಯವನ್ನು ಮೇಲ್ವಿಚಾರಣೆ ಮಾಡುವ ಹೆಲ್ತ್ ಆಫಿಸರು ೧,೦೦೦ ಗೃಹಸ್ಥರನ್ನು ನೇಮಕ ಮಾಡಿದಾರೆ. ಇವರು ಬೀದಿ ಬೀದಿಗಳಲ್ಲೂ ಸಂದುಗೊಂದುಗಳಲ್ಲೂ ಸಂಚಾರ ಮಾಡುತ್ತಾ, ಯಾರಾದರೂ ಉಗಿದರೆ ಅವರನ್ನು ಕೂಡಲೇ ದಸ್ತಗಿರಿ ಮಾಡಿ ಶಿಕ್ಷಿಸ ಬೇಕು. ಯಾಕೆಂದರೆ ಬೀದಿಗಳಲ್ಲೂ ಸಂದುಗಳಲ್ಲೂ ಕ್ಯಾಕರಿಸಿ ಉಗಿಯುವುದು ಪ್ರಜಾ ಆರೋಗ್ಯಕ್ಕೆ ಹಾನಿಯನ್ನುಂಟುಮಾಡುವುದೆಂದು ಡಾಕ್ಟರುಗಳು ತೀರ್ಮಾನ ಮಾಡಿರುತ್ತಾರೆ.

❦❦❦

ಅಮೇರಿಕಕ್ಕೆ ಸೇರಿದ ಒಂದು ನೂಂದು ರೈಲ್ವೆ ಕಂಪನಿಯ ಮಾಲೀಕರಲ್ಲೊಬ್ಬನಾದ ಮಿ॥ ಡೇವಿಡ್ ವಿಲ್‌ಕಾಕ್ಸ್ ಎಂಬಾತನು ಪಕ್ಷಿಪಕ್ಷಿಗಳ ವಿಷಯದಲ್ಲಿ ತುಂಬಾ ಪ್ರೀತಿಯುಳ್ಳವನಾಗಿರುತ್ತಾನೆ. ಆತನು ಮೂರು ಲಕ್ಷ ರೂಪಾಯಿನ ಫಂಡು ಹಾಕಿ ಅದರಿಂದ ರೈತಪ್ರಜೆಗಳಿಗೆ ದ್ರವ್ಯಸಹಾಯ ಮಾಡಿ ಅವರಿಂದ ಪಕ್ಷಿಪಕ್ಷಿಗಳನ್ನು ಸಾಕಿ ಬೆಳಸುವಂತೆ ಏರ್ಪಾಡು ಮಾಡಿದಾರೆ. ಈ ಪಕ್ಷಿಪಕ್ಷಿಗಳು ಹೊಲಗಳಲ್ಲಿ ಬೆಳೆಯನ್ನು ನಾಶಮಾಡುವ ಕ್ರಿಮಿಕೀಟಗಳನ್ನು ತಿಂದು ಹಾಕುವುದರಿಂದ ರೈತರ ಬೆಳೆಯನ್ನು ಕಾಪಾಡುವುದರಲ್ಲೂ ತುಂಬಾ ಸಹಾಯ ಮಾಡುವವು.

❦❦❦

ವಿಲಾಯತಿ ಪಾರ್ಲಿಮೆಂಟಿನಲ್ಲಿ ಇಂಡಿಯಾ ಸ್ಟೇಟ್ ಸೆಕ್ರೆಟರಿ ಮಿ॥ ಜಾನ್ ಮಾರ್ಲೀಯವರು ಸರ್ ಹೆನ್ರಿ ಕಾಟನ್ ಎಂಬ ಮೆಂಬರರ ಪ್ರಶ್ನೆಗೆ ಉತ್ತರವಾಗಿ ಲಾಲಾ ಲಾಜಪತ್ ರಾಯಿಯವರು ೧೯೦೬ ನೆ ಜನವರಿ ೨೫ ರಲ್ಲೂ ೧೯೦೭ ನೆ ಮಾರ್ಚಿ ೨೭ ರಲ್ಲೂ ಮಾಡಿರುವ ಉಪನ್ಯಾಸಗಳನ್ನು ವಿವರಿಸಿ, ಅಂಥಾ ಉಪನ್ಯಾಸಗಳು ಪ್ರಜೆಗಳು ಸರ್ಕಾರದವರ ವಿರುದ್ಧವಾಗಿ ಹೋಗತಕ್ಕವುಗಳಲ್ಲವೆಂತಲೂ, ಅವರನ್ನು ೧೮೧೮ ನೆ ಇಸವಿಯ ಕಾನೂನ್ ಪ್ರಕಾರ ಗಡೀಪಾರು ಮಾಡಿರುವುದಕ್ಕೆ ಇನ್ನು ಇತರ ಕಾರಣಗಳು ಇರುತ್ತವೆಂತಲೂ, ಅವುಗಳನ್ನೆಲ್ಲಾ ವಿವರಿಸಿ ಪ್ರಕಟ ಮಾಡುವುದು ಹಿತಕರವಲ್ಲವೆಂತಲೂ ಹೇಳಿದರು.

❦❦❦

ವಿಲಾಯತಿಗೆ ಸೇರಿದ ಲಾಂಕಷೈರ್ ಮತ್ತು ಮಾಂಚೆಸ್ಟರ್ ಎಂಬ ಭಾರೀ ನಗರಗಳಲ್ಲಿ ಬಟ್ಟೆಗಳ ಕಾರ್ಖಾನೆಗಳಿರುವದೂ ಅಲ್ಲಿ ತಯಾರಾಗತಕ್ಕ ನವಗಳೇ ಪ್ರಪಂಚದ ಸಕಲ ದಿಗ್ದೇಶಗಳಲ್ಲೂ ಬಿಕರಿಯಾಗುತ್ತಿರುವುದೂ ಲೋಕ ಪ್ರಸಿದ್ಧವಾಗಿದೆಯಷ್ಟೆ. ಆ ಕಾರ್ಖಾನೆಗಳಲ್ಲಿ ಈಗ ಅನೇಕಾನೇಕ ಸರಕುಗಳು ತಯಾರಾಗಿ ತುಂಬಿರುವುದರಿಂದ ಅವೆಲ್ಲಾ ಬಿಕರಿಯಾಗುವ ತನಕ ಒಂದರೆ ಸುಮಾರು ೫-೬ ವಾರಗಳ ತನಕ ಕಾರ್ಖಾನೆಗಳ ಬಾಗಿಲು ಹಾಕಿಬಿಡಬೇಕೆಂತಲೂ, ಕೆಲಸವನ್ನು ನಿಲ್ಲಿಸಬೇಕೆಂತಲೂ ಸಾಹುಕಾರರು ಗೊತ್ತು ಮಾಡಿಕೊಂಡಿದಾರೆ. ಇದರಿಂದ ಸುಮಾರು ಒಂದೂವರೆ ಲಕ್ಷ ಕೂಲಿಕಾರರಿಗೆ ಕೆಲಸವಿಲ್ಲದೆ ಹೋದೀತೆಂದು ಕೇಳುವರು.

❦❦❦

ಉತ್ತರ ಆಫ್ರಿಕಾಕ್ಕೆ ಸೇರಿದ ಮೊರೋಕ್ಕೋ ರಾಜ್ಯದಲ್ಲಿ ರೈಸೂಲಿ ಎಂಬ ಸ್ವದೇಶೀ ದೊಡ್ಡ ಮನುಷ್ಯನು ದಂಗೆಯೆದ್ದು ಬಹಳ ಹಾವಳಿ ಮಾಡುತ್ತಿದ್ದನು. ಅವನ ಶರಣಾಗತನಾಗಿ ಬಂದ ಪಕ್ಷಕ್ಕೆ ಅವನನ್ನು ಕ್ಷಮಿಸಿ ಬಿಟ್ಟುಬಿಡುವುದಾಗಿ ಸರ್ ಹೆನ್ರಿ ಮೆಕ್‌ಲೀನ್ ಯವರು ಹೇಳಿ ಕಳುಹಿಸಿದರು. ಅವನು ಅದರಂತೆ ಒಪ್ಪಿ ಸರ್ ಹೆನ್ರಿಯವರನ್ನೇ ನಾಲ್ಕು ಮಂದಿ ಜವಾನರ ಸಮೇತ ನಿರಾಯುಧರಾಗಿ ತನ್ನ ಡೇರಾಕ್ಕೆ ಬರಬೇಕೆಂದು ಹೇಳಿಕಳುಹಿಸಿದನು. ಅದೇ ಪ್ರಕಾರ ಸರ್ ಹೆನ್ರಿ ಮೆಕ್‌ಲೀನರವರು ನಾಲ್ವರ ಸಮೇತ ಸಾಧಾರಣವಾಗಿ ರೈಸೂಲಿ ಇದ್ದ ಕ್ಯಾಂಪಿಗೆ ಹೋದರು. ಅವನು ಮೋಸ ಮಾಡಿ ಆ ನಾಲ್ವರ

...ವರು ತಮ್ಮ ಕಡೆಯ ಅದಿ... ಕೋರಿಯಾದಲ್ಲಿ ನೇಮಿಸಿ ಅವರ ಮೂಲಕ ಆ ಉದ್ಯೋಗ ಕಾರ್ಯಭಾರಗಳನ್ನು ನಡಿಸುತ್ತಾ ಬಂದಿರುವರು. ಕೋರಿಯಾ ರಾಜ್ಯದವರಾದರೋ ಈ ಭಾಗದಲ್ಲಿ ತುಂಬಾ ಅಸಮಾಧಾನ ಪಟ್ಟು, ಯೂರೋಪ್ಪಿನ ಹೇಗ್ ಪಟ್ಟಣದಲ್ಲಿ ನಡೆದ ಪಂಚಾಯತಿ ಕೋರ್ಟಿಗೆ ತಮ್ಮ ಕಡೆಯಿಂದ ಕೆಲವು ಪ್ರತಿನಿಧಿಗಳನ್ನು ಕಳುಹಿಸಿ, ಜಪಾನಿನವರ ನಡವಳಿಕೆಯನ್ನೆಲ್ಲಾ ಆ ಪಂಚಾಯತಿ ಕೋರ್ಟಿಗೆ ತಿಳಿಸಬೇಕೆಂದು ಪ್ರಯತ್ನಪಟ್ಟರು ಆ ಪಂಚಾಯತಿ ಕೋರ್ಟಿನವರು ಈ ಪ್ರತಿನಿಧಿಗಳನ್ನು ತಮ್ಮ ಸಭೆಗೆ ಬರಗೊಡಿಸಲಿಲ್ಲ. ಈಗ ಕೋರಿಯಾ ರಾಜ್ಯದವರು ಜಪಾನಿನವರಿಂದ ತಮಗೆ ಉಂಟಾಗುತ್ತಿರುವ ಕಷ್ಟಗಳನ್ನು ಯೂರೋಪ್ಪಿನ ಸಕಲ ರಾಜ್ಯಾಧಿಕಾರಿಗಳಿಗೂ ತಿಳಿಸಿ, ಅವರೆಲ್ಲಾ ತಮ್ಮ ಪಕ್ಷವನ್ನು ವಹಿಸುವಂತೆಯೂ ಜಪಾನಿನವರನ್ನು ಕೋರಿಯಾದಿಂದ ಹೊರಡಿಸುವ ತೆಯೂ ಕೇಳಿಕೊಳ್ಳಲಾರಂಭಿಸಿರುತ್ತಾರೆ ಈ ವಿಚಾರವು ಹ್ಯಾಗೆ [illegible] ಮುಂದೆ ತಿಳಿಯಬೇಕಾಗಿದೆ

ಮೈಸೂರು ಗೆಜೆಟ್ ಸಂಗ್ರಹ.

ಕಂಟ್ರೋಲರವರ ಛೀಫ್ ಅಸಿಸ್ಟೆಂಟರಾದ ಮೆ॥ ಟಿ ವೈಯ್ಯಾಪುರಿ ಚೆಟ್ಟಿಯವರಿಗೆ ಕೊಟ್ಟಿದ್ದ ೪ ತಿಂಗಳ ರಜವನ್ನು ಜರ್ನ ಆಖೈರು ವರೆಗೆ ಜಾಸ್ತಿ ಮಾಡಿದೆ.

೧ ನೆ ಕ್ಲಾಸ್ ಸ್ಪೆಷಲ್ ರಜಿಸ್ಟ್ರಾರ್‌ಗಳಾದ ಜೆ ಶ್ರೀಕಂಠರಾಯರನ್ನು ೩ ನೆ ... ಬಿ ಎ ರಂಗೈಯ್ಯನಾಯ್ಡುರವರನ್ನು ೪ ರಿಂದ ೩ ನೆ ಕ್ಲಾಸಿಗೂ ಬಡ್ತಿ ಮಾಡಿದೆ

ತುಂಕೂರು ಡಿಸ್ಟ್ರಿಕ್ಟ್ ಅ॥ ಸರ್ಜನ್ ಮತ್ತು ಡಿಸ್ಟ್ರಿಕ್ಟ್ ಮೆಡಿಕಲ್ ಆಫಿಸರ್ ಮೆ॥ ಸಿ ಅಪ್ಪಾಮುತ್ತು ಮೊದಲಿಯಾರ್‌ರನ್ನು ಕೋಲಾರ್ ಡಿಸ್ಟ್ರಿಕ್ಟಿಗೆ ವರ್ಗ ಮಾಡಿರುತ್ತಾರೆ.

ಶಿವಮೊಗ್ಗ ಡಿವಿಜನ್ ಎಗ್ಸಿಕ್ಯೂಟಿವ್ ಇಂಜನಿಯರ್ ಮೆ॥ ಆರ್ ವಿ ಸುಂದರಂ ಐಯ್ಯರವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿನೈದು ದಿನಗಳ ಪ್ರಿವಿಲಜ್ ರಜಾ ಕೊಟ್ಟಿದೆ

ನೀರಿನ ಸರಬರಾಯಿ ಇಲಾಖೆ ಎಗ್ಸಿಕ್ಯೂಟಿವ್ ಇಂಜನಿಯರ್ ಮೆ॥ ವಿ ರಂಗಸ್ವಾಮಿ ಐಯ್ಯಂಗಾರ್‌ರಿಗೆ ಹನ್ನೆರಡು ದಿನಗಳ ಪ್ರಿವಿಲಜ್ ರಜಾ ಕೊಟ್ಟಿದೆ

ಮೈಸೂರು ಜೆಲ್ ಆಫೀಸರಾಗಿದ್ದ ಅ॥ ಸರ್ಜನ್ ಮೆ॥ ಎಂ ಬಗನ್ನಾಥಂ ಪಿಳ್ಳೆಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಮಧುಗಿರಿ ತಾಲ್ಲೂಕ್ ಅಮಲ್ದಾರ್ ಮೆ॥ ಮಹಮದ್ ಅಬ್ದುಲ್ ವಾಹಿದ್‌ರವರಿಗೆ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆಯಲ್ಲದೆ ಅದು ಮುಗಿದ ತಾರೀಖಿನಿಂದ ಸಂಬಳವಿಲ್ಲದ ಆರು ತಿಂಗಳ ರಜಾ ಕೊಟ್ಟಿದೆ

ಬದೋಡಾ ಸಂಸ್ಥಾನದ ಮಹಾರಾಜರವರು ರಾಜಧಾನಿಗೆ ದಯಮಾಡಿದ್ದು.

ಬರೋಡಾ ಸಂಸ್ಥಾನದ ಮಹಾರಾಜಾ ಶ್ರೀ ಸಯ್ಯಾಜಿರಾವ್ ಗಾಯಕವಾಡ್‌ರವರು ಬೇಸಿಗೆಯನ್ನು ಕಳೆಯುವುದಕ್ಕಾಗಿ ನೀಲಗಿರಿ ಬೆಟ್ಟಕ್ಕೆ ದಯಮಾಡಿದ್ದರಷ್ಟೆ. ಅವರು ನಮ್ಮ ಶ್ರೀಮನ್ಮಹಾರಾಜರವರ ಅಪೇಕ್ಷೆಯನ್ನು ನೆರವೇರಿಸುವುದಕ್ಕಾಗಿ ಅಲ್ಲಿಂದ ವಾಪಸು ಹೋಗುವಾಗ್ಗೆ ರಾಜಧಾನಿಯಾದ ಮೈಸೂರು ಪಟ್ಟಣಕ್ಕೆ ದಯಮಾಡುವುದಾಗಿ ಒಪ್ಪಿಕೊಂಡರು. ರಾಜಧಾನಿಯಲ್ಲಿ ಅವರನ್ನು ಮರ್ಯಾದೆಗಳೊಡನೆ ಎದುರುಗೊಳ್ಳುವುದಕ್ಕೂ ಶ್ರೇಷ್ಠವಾದ ರೀತಿಯಲ್ಲಿ ಸತ್ಕಾರ ಮಾಡುವುದಕ್ಕೂ ಅನೇಕ ಏರ್ಪಾಡುಗಳು ನಡೆದಿವೆ. ಅವರು ದಯಮಾಡುವ ರಾಜಮಾರ್ಗಗಳಲ್ಲಿಯೂ ಕರ್ಸನ್ ಪಾರ್ಕ್ ಎಂಬ ಉದ್ಯಾನ ವನದ ... ತಲುಪಿದ ಒಡನೆ ... ವಾದ ೨೧ ಕೋವಿಗಳು ಕೋಟೆಕೊತ್ತಲಗಳಿಂದ ಹಾರಿಸಲ್ಪಡುತ್ತವೆ. ಶ್ರೀಮಾನ್ ಗಾಯಕವಾಡ್ ಮಹಾರಾಜರವರು ಹಾಗೇ ಉತ್ಸವದಲ್ಲಿ ಕೆರೇ ಏರಿಯ ಮೇಲೆ ಉದ್ಯಾನಕ್ಕೆ ದಯಮಾಡಿ, ಕರ್ಸನ್ ಪಾರ್ಕಿನೊಳಕ್ಕೆ ಪೂರ್ವದ್ವಾರದಿಂದ ಪ್ರವೇಶಿಸಿ, ನೆಟ್ಟಗೆ ಬಂದು ಲೇಟ್ ಮಹಾರಾಜರವರ ಜ್ಞಾಪಕಾರ್ಥವಾದ ಪ್ರತಿಮೆಯ ಬಳಿ ಹಾದು ವಿಕ್ಟರ್ ರಸ್ತೆಯೊಳಕ್ಕೆ ಬರುವಾಗ್ಗೆ ಅಲ್ಲಿ ವೈದಿಕಮಂಡಲಿಯವರೂ ಪ್ರಜಾ ಪ್ರತಿನಿಧಿಗಳೂ ಅಧಿಕಾರಿಗಳೂ ಕಾದಿದ್ದು ಅವರಿಗೆ ಹಾರತುರಾಯಿಗಳನ್ನೊಪ್ಪಿಸಿ ಸುಸ್ವಾಗತವನ್ನು ಬಯಸುವರು ತರುವಾಯ ಗಾಯಕವಾಡ್ ಮಹಾರಾಜರವರು ಅಲ್ಲಿಂದ ಮುಂದಕ್ಕೆ ಉತ್ಸವದಲ್ಲಿ ದಯಮಾಡಿ ಲ್ಯಾನ್ಸ್‌ಡೌನ್ ಬಜಾರುಗಳ ಮುಂದೆ ಹಾದು ಕರ್ಸನ್ ಪಾರ್ಕಿನ ದಕ್ಷಿಣ ಬಾಗಿಲ ಮೂಲಕ ಪಶ್ಚಿಮಕ್ಕೆ ತಿರುಗಿ ಜಗನ್ಮೋಹನ ಬಂಗಲೆಗೆ ಚಿತ್ತೈಸುವರು.

ಗಾಯಕವಾಡ್ ಮಹಾರಾಜರವರು ೨—೩ ದಿನ ರಾಜಧಾನಿಯಲ್ಲಿದ್ದುಕೊಂಡು, ಮೋಟಾರ್ ಗಾಡಿಯಲ್ಲಿ ಬೆಂಗಳೂರಿಗೆ ಪ್ರಯಾಣ ಮಾಡುವರೆಂದು ವರ್ತಮಾನವಿದೆ

ತಂತೀ ವರ್ತಮಾನ ಸಾರ.

ರಾಯಭಾರಿಗೆ ಅಪಾಯ.

ಲಂಡನ್, ಜೂಲೈ ೬ ನೆ ಶನಿವಾರ.—ನಾರ್ವೆ ರಾಜ್ಯದಲ್ಲಿರುವ ಇಂಗ್ಲಿಷ್ ರಾಯಭಾರಿಯಾದ ಸರ್ ಆರ್ಥರ್ ಹರ್ಬರ್ಟ್‌ಯವರು ಪತ್ನಿ ಸಹಿತ ಬರ್ಗನ್ ಮತ್ತು ಕ್ರಿಶ್ಚಿಯಾನಾ ಪಟ್ಟಣಗಳ ನಡುವೆ ಸಾರೋಟಿನಲ್ಲಿ ಕುಳಿತು ಹೋಗುತ್ತಿದ್ದಾಗ ಎದುರಿಗೆ ಬಂದ ಒಂದು ಬೈಸಿಕಲ್ ಗಾಡಿಗೆ ಬಡಿದು ಅವರು ಕುಳಿತಿದ್ದ ಗಾಡಿಯು ಇಳಿಜಾರಿನಲ್ಲಿ ಬಿದ್ದುಹೋಯಿತು. ರಾಯಭಾರಿಗಳು ಬಿದ್ದು ಅವರ ಎದೆಯ ಮೂರು ಎಲುಬುಗಳು ಮುರಿದುಹೋದವು. ಆದರೆ ಗಾಯಗಳು ಅಷ್ಟೇನೂ ದೊಡ್ಡವಲ್ಲ. ಅವರ ಪತ್ನೀರವರಿಗೆ ಸ್ವಲ್ಪವೂ ಅಪಾಯ ಸಂಭವಿಸಲಿಲ್ಲ

ರಷ್ಯಾ ರಾಜ್ಯದ ಗಲಭೆ.

ಲಂಡನ್, ಜೂಲೈ ೭ ನೆ ಭಾನುವಾರ.—ರಷ್ಯಾ ರಾಜ್ಯದಲ್ಲಿ ಎರಡು ಮೂರು ಗುಂಪುಗಳ ಜನಗಳು—ಸರ್ಕಾರದವರ ಕ್ರೂರ ಕೃತ್ಯಗಳನ್ನು ಪ್ರಜೆಗಳೆಲ್ಲಾ ಸೇರಿ ತಡೆದು ಪ್ರತೀಕಾರಮಾಡಿ, ಪ್ರಜಾ ಪ್ರತಿನಿಧಿಗಳೇ ರಾಜ್ಯಭಾರ ಕಾರ್ಯಗಳು ನಡಸಿಕೊಂಡು ಬರುವಂತೆ ಏರ್ಪಾಡು ಮಾಡಿಕೊಳ್ಳಬೇಕೆಂದು ಎಲ್ಲಾ ಕಡೆಗಳಲ್ಲೂ ನೋಟೀಸು ಇಸ್ತಿಹಾರು ಡಂಗೂರ ಮುಂತಾದವುಗಳ ಮೂಲಕ ತಿಳಿಸಿರುತ್ತಾರೆ.

ಮಾಸ್ಕೋ ಪಟ್ಟಣದ ಸೈನ್ಯಾಧಿಪತಿಗಳು ಈಮ್ಮಧ್ಯೇ ಮಾತನಾಡಿಕೊಂಡು ಇನ್ನು ಮುಂದೆ ಸರ್ಕಾರದವರು ಪ್ರಜಾ ಹಿಂಸಕರವಾದ ಹುಕುಂ ಕೊಟ್ಟು ಸೈನಿಕರ್‌ ಅದನ್ನು ಚಲಾಯಿಸುವಂತೆ ಅಪ್ಪಣೆ ಮಾಡಿದರೆ ಅಂಥಾ ಕ್ರೂರಕೃತ್ಯಗಳನ್ನು ತಾವು ಮಾಡಲೇ ಕೂಡದೆಂದೂ ರಾಜ್ಯದಲ್ಲಿ ಪ್ರಜಾಪ್ರತಿನಿಧಿಗಳ ರಾಜ್ಯಭಾರವೇ ನೆಲೆಗೊಳ್ಳುವುದಕ್ಕೆ ತಾವೆಲ್ಲಾ ಸಹಾಯಕರಾಗಬೇಕೆಂತಲೂ ಇಸ್ತಿಹಾರುಗಳನ್ನು ಪ್ರಕಟಿಸಿರುತ್ತಾರೆ.

ಪರ್ಷಿಯಾ ಸಮಾಚಾರ

ಪರ್ಷಿಯಾ ರಾಜ್ಯದ ಷಾ ಸುಲ್ತಾನರವರ ಸಹೋದರನಾದ [illegible] ರುದ್ದೌಲಾ ಎಂಬಾತನು ಸೈನಿಕರನ್ನು ಕಟ್ಟಿಕೊಂಡು ರಾಜ್ಯಭಾರ [illegible] ನ್ನು ತಲೆಕೆಳಗು ಮಾಡಬೇಕೆಂದು ದಂಗೆ ಕಾರ್ಯಗಳನ್ನು [illegible] ಸಾರ್ಥಕವಾಗದೆ ಕಡೆಗೆ ಇಂಗ್ಲಿಷ್ ರಾಯಭಾರಿಗಳ ಆಶ್ರಯವನ್ನು ಹುಡುಕಿಕೊಂಡು ಹೋಗಿ ಸೇರಿದನಷ್ಟೆ. ಈಗ ಈತನನ್ನು [illegible] ಯಿಂದ ಟೆಹರಾನ್ ಎಂಬ ರಾಜಧಾನಿಗೆ ಕರೆದುಕೊಂಡು ಹೋಗಿದಾರೆ.

ಚೀನಾದಲ್ಲಿ ಗಲಭೆ.

ಲಂಡನ್, ಜೂಲೈ ೭ ನೇ ಭಾನುವಾರ.—ಚೀನಾ ರಾಜ್ಯಕ್ಕೆ ಸೇರಿದ ಅಂಕಿಂಗ್ ಎಂಬ ಅಧಿಪತ್ಯದಲ್ಲಿ ಗವರ್ನರವರು ಸೈನ್ಯದ ಕವಾತನ್ನು ಮಾಡಿಸುತ್ತಿದ್ದಾಗ ಅವರನ್ನು ಕೊಂದುಹಾಕಬೇಕೆಂದು ಯಾರೋ ... ದ ಮಹಾರಾಜರವರು ವಿಲಾಯತಿ ರಾಜ್ಯದ ಯುವರಾಜರಾದ ಪ್ರಿನ್ಸ್ ಆಫ್ ವೇಲ್ಸ್ ಮತ್ತು ಅವರ ಪತ್ನೀರವರ ಸಂಗಡ ಕುಳಿತು ಭೋಜನ ಮಾಡಿದರು.

ತಾಲ್ಲೋಕು ವರ್ತಮಾನಗಳು.

ಚಿತ್ರದುರ್ಗ —ಚಿತ್ರದುರ್ಗದ ತಾಲ್ಲೂಕು ಭರಮಸಾಗರ ಸಮೀಪದ ನಿಂಗಪ್ಪನಾಗತಿಹಳ್ಳಿ ರೈತ ಬಂಜೈಯ್ಯನು ಕಳೆದ ... ತಾ ೧೩ ನೆ ಸಾಯಂಕಾಲ ೬ ಘಂಟೆಯಲ್ಲಿ ಕೆರೋಸಿಯನ್ ಎಣ್ಣೆ ... ಒಡೆಯಬೇಕೆಂದು ಮನೆಯ ಹೊರಬಾಗಿಲ ಒಳಗೆ ಇಟ್ಟುಕೊಂಡು ಕುಡುಗೋಲಿನಿಂದ ಡಬ್ಬವನ್ನು ಕೊಯ್ಯುತ್ತಾ ಇರುವ ಕಾಲದಲ್ಲಿ ಕತ್ತಲೆಯಾದ್ದರಿಂದ ತನ್ನ ಮಗಳನ್ನು ದೀಪ ತೆಗೆದುಕೊಂಡು ಬಾ ಎಂದು ಹೇಳಿದನು ಆ ಕೂಡ್ಲೆ ಅವನ ಮಗಳು ದೀಪದ ಬುಡ್ಡಿಯನ್ನು ತಂದು ಹತ್ತಿರ ನಿಂತಿದ್ದಳು ಅವನು ಡಬ್ಬವನ್ನು ಕೊಯ್ದ ಕೂಡಲೆ ಭರ್ರನೆ ಎಣ್ಣೆ ಮೇಲಕ್ಕೆ ಚಿಮ್ಮಿ ಮಗಳ ಕೈಯಲ್ಲಿದ್ದ ದೀಪಕ್ಕೆ ತಗಲಿ ಡಬ್ಬಕ್ಕೆ ಕೂಡ್ಲೆ ಹತ್ತಿಕೊಂಡಿತು. ಇವನು ಬೇಗ ಇದನ್ನು ನೋಡಿ ಒಂದು ಕೊಡ ನೀರನ್ನು ಸುರಿದುಬಿಟ್ಟನು. ಉರಿಯು ಮತ್ತೂ ಪ್ರಬಲವಾಯಿತು ಆ ಉರಿಯನ್ನು ಕಂಡು ಬಂಜೈಯ್ಯನು ಬೆದರಿ ಡಬ್ಬವನ್ನು ಹೊರಕ್ಕೆ ಎಸೆದನು ಅದು ಹೊಸಲಿಗೆ ತಗಲಿ ... ಚಪ್ಪರಕ್ಕೆ ಹತ್ತಿ ಮನೆಯಲ್ಲಾ ಬೆಂಕಿ ವ್ಯಾಪಿಸಿತು. ಇದನ್ನು ನೋಡಿ ಮನೆಯವರೆಲ್ಲರೂ ಹೊರಕ್ಕೆ ಹೊರಟು ... ತನ್ನ ೨ ಜನ ಹೆಣ್ಣುಮಕ್ಕಳನ್ನು ಮರೆತುಬಿಟ್ಟನು. ಇಬ್ಬರು ಮಕ್ಕಳು, ೨ ಎತ್ತು, ೨,೦೦೦ ರೂಪಾಯಿನ ಧವಸ, ೯೦೦ ರೂಪಾಯಿ ಸುಟ್ಟು ಬೂದಿಯಾದವು. ರೂಪಾಯಿ ಮಾತ್ರ ಬೆಳ್ಳಿಗಟ್ಟಿಯಾಗಿತ್ತು. ಸುಮಾರು ಇದರಿಂದ ಅವನಿಗೆ ನಾಲ್ಕುಸಾವಿರ ರೂಪಾಯಿಗಳು ನಷ್ಟವಾಯಿತು. ತಿನ್ನಲಿಕ್ಕೆ ಅನ್ನವಿಲ್ಲದೆ ಅಲೆಯುತ್ತಿದ್ದಾನೆ ಈ ವಿಷಯವನ್ನು ಪಟೇಲನು ಪೋಲೀಸಿಗೆ ತಿಳಿಸಿದಲ್ಲಿ ಪೋಲೀಸು ಆಫೀಸರು ಬಂದು ಅವನಿಗೆ ಬೇರೆ ಮನೆಯನ್ನು ಕಟ್ಟಿಕೊಂಡಿರುವಂತೆ ಅಪ್ಪಣೆ ಕೊಟ್ಟರು

ಕುಣಿಗಲು—ಇಲ್ಲಿನ ಆಸ್ಪತ್ರೆ ಅಸಿಸ್ಟೆಂಟ್ ಮೆ॥ ಮಹಮ್ಮದ್ ಹುಸೇನ್ ಸಾಹೇಬರು ಕೆಲಸದಿಂದ ರಿಟೈರ್ ಆಗಿ ಹೋಗುವವರಾಗಿರುತ್ತಾರೆ ಇವರು ಇಲ್ಲಿ ಬಂದ ೫ ವರ್ಷಗಳಾರಭ್ಯ ಸಕಾಲಕ್ಕೆ ಆಸ್ಪತ್ರೆಗೆ ಹೋಗುತ್ತಾ ತಮ್ಮ ಕೆಲಸದಲ್ಲಿ ಹೆಚ್ಚು ಶ್ರದ್ಧೆಯನ್ನು ವಹಿಸಿ ರೋಗಿಗಳಿಗೆ ಚಿಕಿತ್ಸೆಯಲ್ಲಿ ಕೇವಲ ನಂಬಿಕೆಯನ್ನು ಹುಟ್ಟಿಸಿ ಬಡಬಗ್ಗರ ವಿಷಯದಲ್ಲಿ ಬಹಳ ಕನಿಕರವನ್ನು ತೋರಿಸಿ ಆದರಣೆಯಿಂದ ನೋಡಿಕೊಳ್ಳುತ್ತಿದ್ದರು ಈ ಸಂದರ್ಭದಲ್ಲಿ ಇಲ್ಲಿನ ಎ ವಿ ಸ್ಕೂಲ್ ಮಾಸ್ಟರುಗಳು ಸ್ಕೂಲಿನಲ್ಲಿ ಸ್ಥಳೀಕ ದೊಡ್ಡ ಮನುಷ್ಯರನ್ನೆಲ್ಲಾ ಸೇರಿಸಿ, ಮೆ॥ ಮಹಮ್ಮದ್ ಹುಸೇನ್ ಸಾಹೇಬರನ್ನು ಬರಮಾಡಿಕೊಂಡು ಎಲ್ಲರಿಗೂ ಫಲಹಾರ ಕೊಟ್ಟು ಇಂಗ್ಲಿಷ್, ಕನ್ನಡ, ಸಂಸ್ಕೃತ, ಹಿಂದೂಸ್ಥಾನಿ ಭಾಷೆಗಳಲ್ಲಿ ಇವರನ್ನು ಅಗಲುವದರಿಂದ ಉಂಟಾದ [illegible] ಕ್ಷಾತಾಪವನ್ನು ತೋರಿಸುವ ಅಡ್ರೆಸ್ಸುಗಳನ್ನು ಒಪ್ಪಿಸಿದರು ಸ್ಕೂಲ್ ಹುಡುಗರ ಮೂಲಕ ನಾಟಕ ಗಾನ [illegible] ವುಗಳಿಂದ ಸಭೆಯನ್ನು ಸಂತೋಷ ಪಡಿಸಿದರು. [illegible] ಅಮಲ್ದಾರ್ ಮೆ॥ ಕೇಸರ್‌ಸಿಂಗ್‌ಯವರು ಸಭೆಯ ಪರವಾಗಿ ಅವರನ್ನು [illegible] ದರು. ಸಭಿಕರಿಗೆ [illegible] ಗಂಧ ತಾಂಬೂಲಗಳು [illegible] ಬರಖಾಸ್ ಆಯ [illegible] ವರ ಸ್ಥಳಕ್ಕೆ ಬಂದಿರುವ [illegible] ದಲಿಯಾರ್‌ರು [illegible] ಗೆ [illegible] ವನ್ನು [illegible] —ಇಲ್ಲಿ [illegible] ಸ್ಕೂ [illegible] [illegible] ಗಾಗಿ [illegible]

ಬಿಟ್ಟು ಪ್ಯಾಗೆ ಹೊರಗೆ ಹೋಗಿ ಗುಡಿಸಲಿನಲ್ಲಿ ವಾಸ ಮಾಡುವದು ಎಂಬ ಯೋಚನೆಯು ಎಲ್ಲಾ ಜನರಲ್ಲಿಯೂ ಉಂಟಾಗಿರುತ್ತದೆ ಆದರೆ ಇನ್ನೂ ಯಾವ ವಿಧವಾದ ಕಾಹಿಲೆಯೂ ಇದುವರೆಗೆ ತಲೆದೋರಿಲ್ಲ ಕಳೆದ ಶನಿವಾರ ರಾತ್ರಿ ಇಲ್ಲಿ ಒಳ್ಳೇ ಮಳೆ ಬಂತು ಇದರಿಂದ ರೈತರಿಗೆ ಹೆಚ್ಚಾದ ಸಂತೋಷವು ಉಂಟಾಗಿರುತ್ತದೆ —ಕಳೆದ ಮಾರ್ಚಿ ತಿಂಗಳಿಂದ ಇಲ್ಲಿನ ವೆಸ್ಲಿ ಇಂಗ್ಲಿಷ್ ಸ್ಕೂಲ್ ಹೆಡ್ ಮಾಸ್ಟರು ವಿದ್ಯಾರ್ಥಿಗಳ ಅಭಿವೃದ್ಧಿಗಾಗಿ ಒಂದು ಸಂಘವನ್ನು ಏರ್ಪಡಿಸಿರುತ್ತಾರೆ ಈ ಸಂಘವು ದಿನೇ ದಿನೇ ಅಭಿವೃದ್ಧಿಗೆ ಬಂದಿರುವದ್ದರಿಂದ ಈ ತಿಂಗಳಿನ ಮೊದಲನೆ ತಾರೀಖಿನ ದಿನ ಸಾಯಂಕಾಲ ಒಂದು ಕೂಟವನ್ನು ಇಟ್ಟರು ಆ ಕೂಟದಲ್ಲಿ ಸಂಘಕ್ಕೆ ವಿದ್ಯಾರ್ಥಿಗಳ ಅಭಿಪ್ರಾಯದಂತೆ ವಿದ್ಯಾಪ್ರವರ್ಧಕಸಂಘವೆಂಬದಾಗಿ ಹೆಸರು ಇಟ್ಟು, ಈ ಸಂಘದ ಅಭಿವೃದ್ಧಿಗೆ ಅಧಿಕಾರಿಗಳನ್ನು ಚುನಾಯಿಸಿದರು ಮಾರನೆ ದಿನ ಚರಿತ್ರೆ ಎಂಬುವವರ ವಿಷಯದಲ್ಲಿ ಉಪನ್ಯಾಸ ನಡೆಯಿತು —ಕಳೆದ ಎರಡು ವರ್ಷಗಳಿಂದ ಇಲ್ಲಿ ಸಬ್ ರೆಜಿಸ್ಟ್ರಾರಾಗಿದ್ದ ಮಿ॥ ಬಸವಲಿಂಗಪ್ಪನವರು ಮೈಸೂರಿಗೆ ವರ್ಗವಾಗಿದ್ದಾರೆಂಬ ಸಮಾಚಾರವನ್ನು ಕೇಳಿ ವಿಷಾದಿಸಬೇಕಾಗಿದೆ ಇವರು ಒಳ್ಳೆ ಗುಣಾಢ್ಯರು, ವಿಶ್ವಾಸರು, ಎಲ್ಲಾ ಜನರ ಪ್ರೀತಿಗೆ ಪಾತ್ರರೂ ಆಗಿದ್ದರು ಇವರಿಗೆ ಬದಲಾಗಿ ಮಿ॥ ಚಕ್ರಪಾಣಿ ರಾಯರು ಗೌರಿಬಿದನೂರಿನಿಂದ ಇಲ್ಲಿಗೆ ಬರುತ್ತಾರೆಂಬ ವದಂತಿಯು ಇದೆ

ಹೊಸೂರು.—ಹಿಂದೂದೇಶದ ಚಕ್ರವರ್ತಿಯವರಾದ ಏಳನೇ ಎಡ್ವರ್ಡರವರ ಜನ್ಮ ದಿನವನ್ನು ಆಚರಿಸಿ, ತಮ್ಮ ಭಕ್ತಿಯನ್ನು ತೋರಿಸುವದಕ್ಕಾಗಿ ಜೂನ್ ೨೮ನೇ ತಾ ಇಲ್ಲಿನ ದೊಡ್ಡ ಮನುಷ್ಯರೆಲ್ಲಾ ಸೇರಿ, ಆ ದಿನವನ್ನು ಬಹು ಸಂತೋಷದಿಂದ ಕಳೆಯುವ ಹಾಗೆ ಬೇರೆ ಬೇರೆ ಏರ್ಪಾಡುಗಳನ್ನು ಮಾಡಿದ್ದರು ಆ ದಿನ ಹೊತ್ತಾರೆ ತಾಲ್ಲೋಕು ಕಛೇರಿಯಲ್ಲಿ ನಮ್ಮ ಅಮಲ್ದಾರರೂ, ಡಾಕ್ಟರೂ, ಸಬ್ ರಜಿಸ್ಟ್ರಾರರೂ, ಪೋ॥ ಇನ್ಸ್‌ಪೆಕ್ಟರರೂ, ಮಿ॥ ತಿರುವೆಂಗಡಂ ಮೊದಲಿಯಾರ್ ಮುಂತಾದ ಮರ್ಯಾದಸ್ಥರೆಲ್ಲಾ ಸೇರಿ, ಚಕ್ರವರ್ತಿಯವರ ಶ್ರೇಯೋಭಿವೃದ್ಧಿಗಾಗಿ ಒಂದು ಮೀಟಿಂಗ್ ಮಾಡಿದರು ಈ ಮೀಟಿಂಗಿನಲ್ಲಿ ನಾಲ್ಕು ಜನ ಯೂರೋಪಿಯನ್ನರು ಸಹ ಹಾಜರಾಗಿದ್ದರು ಅಮಲ್ದಾರರು ಉಪನ್ಯಾಸ ಮಾಡಿದರು ಅನಂತರ ಅಲ್ಲಿ ಕೂಡಿದ್ದ ಮಿಷನ್ ಬಾಲಕಿಯರು ಚಕ್ರವರ್ತಿಯವರ ಮೇಲೆ ಕೆಲವು ಹಾಡುಗಳನ್ನು ಹೇಳಿ, ಸಭಿಕರನ್ನು ಸಂತೋಷಪಡಿಸಿದರು ಬಾಲಕಿಯರಿಗೆಲ್ಲಾ ಮಿಠಾಯಿ ಹಣ್ಣು ಹಂಚಿದರು ಹೊರಗಡೆ ಬ್ಯಾಂಡ್ ಆಗುತ್ತಾ ಇತ್ತು. ಪೋಲೀಸಿನವರ ಕವಾತು ನಡೆಯಿತು ಮಧ್ಯಾಹ್ನ ಮುಸಾಫರ ಬಂಗಲೆ ಹತ್ತಿರ ಇರುವ ಮೈದಾನಿನಲ್ಲಿ ೧೧ ವಿಧವಾದ ಆಟಗಳು ಆಯಿತು ಪ್ರತಿ ಒಂದು ಆಟದಲ್ಲಿಯೂ ಗೆದ್ದ ಮೊದಲನೇ ಎರಡನೇಯವರಿಗೆ ಇನಾಮುಗಳು ಕೊಡಲ್ಪಟ್ಟವು ಈ ೧೧ ವಿಧವಾದ ಆಟಗಳಲ್ಲಿ ಕುಸ್ತಿ ಎಂಬುವದೊಂದು ಇದರಲ್ಲಿ ಹುಡುಗರನ್ನೇ ಬಿಟ್ಟಿದ್ದರೆ ಚೆನ್ನಾಗಿತ್ತು ಆದರೆ ದೊಡ್ಡವರನ್ನು ಸಹ ಅಖಾಡಕ್ಕೆ ಸೇರಿಸಿದ್ದರಿಂದ ಅನೇಕರಿಗೆ ಮನಸ್ತಾಪ ಉಂಟಾಗಿದೆ ಕಡೆಯಾಗಿ ಹಾಕಿ ಎಂಬ ಚೆಂಡಾಟದ ತಮಾಷೆಯು ನಡೆಯಿತು. ದೇಶೀಯರಿಗೂ ಇಂಗ್ಲೀಷರಿಗೂ ಮುಸಾಫರಿ ಬಂಗಲೆಯಲ್ಲಿ ಫಲಾಹಾರಗಳು ನಡೆಯಿತು ಸಬ್ ರೆಜಿಸ್ಟ್ರಾರ್ ಮಿ॥ ಕೃಷ್ಣರಾಯರು ವೀಣೆಯ ಮೇಲೆ ಗಾನ ಮಾಡಿ, ಸಭಿಕರನ್ನು ಸಂತೋಷಪಡಿಸಿದರು ಆ ದಿನ ಹಿಂದೂ ಗುಡಿಗಳಲ್ಲಿಯೂ ಮಹಮ್ಮದೀಯರ ಮಸೀತಿಯಲ್ಲಿಯೂ, ಕ್ರೈಸ್ತರ ದೇವಾಲಯಗಳಲ್ಲಿಯೂ ಆರಾಧನೆಗಳು ನಡೆಸಲ್ಪಟ್ಟವು. ಮಾರನೇ ದಿನ ನಮ್ಮ ಡಾಕ್ಟರವರು ಎಲ್ಲಾ ಸ್ಕೂಲುಗಳ ವಿದ್ಯಾರ್ಥಿಗಳಿಗೂ, ಹಿಂದುಸ್ಥಾನಿ ಸ್ಕೂಲ್ ಬಾಲಕಿಯರಿಗೂ ಸಕ್ಕರೆ ಬಾಳೆ ಹಣ್ಣುಗಳನ್ನು ಹಂಚಿದರು ಜನರನ್ನು ಉಪಚರಿಸಿ ಸತ್ಕರಿಸುವದಕ್ಕಾಗಿ ಡಾ॥ ಶ್ರೀನಿವಾಸ ಐಯ್ಯಂಗಾರ್ರವರೂ ಮಿ॥ ತಿರುವೆಂಗಡ ಮೊದಲಿಯಾರರೂ ನೇಮಕವಾಗಿದ್ದರು —ಇದೇ ಟವನಿನ ಅಂಗಡಿ ಬೀದಿಯಲ್ಲಿರುವ ಲಕ್ಷ್ಮಣ ಶೆಟ್ಟಿಯ ಮನೆಯಲ್ಲಿ ಇಲಿ ಸಾಯುತ್ತಲ, ಆತನು ವಾಯಿಲೆಯಾಗಿರುತ್ತಾನೆಂತಲೂ ವರ್ತಮಾನ ಕೇಳುತ್ತೇನೆ ಈ ವಿಷಯದಲ್ಲಿ ಅಮಲ್ದಾರರು ತುಂಬಾ ನಿಗಾ ಕೊಡುವದು ಮಾತ್ರವಲ್ಲದೆ, ಮ್ಯುನಿಸಿಪಾಲಿಟಿ ಪಾಕೀಜಾ ವಿಷಯದಲ್ಲಿ ಇನ್ನೂ ಹೆಚ್ಚು ನಿಗಾ ಕೊಡುವದು ಅವಶ್ಯ —ಮೊದಲು ಮಾಂಸ ಸೇರು ಒಂದಕ್ಕೆ ೩—೪ ಆಣೆ ಇದ್ದದ್ದು ಈಗ ೬ ಆಣೆ ಆಗಿದ್ದಾಗ್ಯೂ ಒಳ್ಳೇ ಮಾಂಸ ಸಿಕ್ಕುವದಿಲ್ಲ ತೂಕದಲ್ಲಿಯೂ ಸಹ ಕಡಿಮೆ ಈ ವಿಷಯದಲ್ಲಿಯೂ ಮೇಲ್ಪಟ್ಟ ಅಧಿಕಾರಿಗಳು ನಿಗಾ ಕೊಡುವದು ಅವಶ್ಯ

ಬೆಂಗಳೂರು.—ಬೆಂಗಳೂರು ದಂಡಿನಲ್ಲಿ ನೆಲ್ಲು ಮಾರುವ ಮಂಡಿಗಳ ಹತ್ತಿರ ಇದೇ ತಿಂಗಳು ಮೂರನೇ ತಾರೀಖು ಬುಧವಾರ ರಾತ್ರಿ ಒಂದು ಖೂನಿ ಮೊಖದ್ದಮೆ ನಡೆಯಿತು ಒಬ್ಬ ಮುಸಲ್ಮಾನರವರು ತನ್ನ ಹೆಂಡತಿಯ ತಂಗಿಯನ್ನು ಮತ್ತು ಈಕೆಯನ್ನು ಸ್ನೇಹ ಮಾಡಿದ ಒಬ್ಬ ಗಂಡಸನ್ನೂ ರಾತ್ರಿಯಲ್ಲಿ ಕಂಡು ಹಿಡಿದು ಕಬ್ಬು ಕತ್ತರಿಸುವ ಮಚ್ಚಿನಿಂದ (ಕತ್ತಿಯಿಂದ) ಕಡಿದನು ಮೊದಲು ಗಂಡಸನು ಹೊಡೆದನು ಕೊಂಚ ಹೊತ್ತಿನ ಮೇಲೆ ಗಂಡಸು ಸತ್ತುಹೋದನು. ಆ ಹೆಂಗಸು ಇದನ್ನು ನೋಡಿ ಅರಚಿಕೊಂಡಾಗ ಆಕೆಯನ್ನು ಸಹ ಹೊಡೆದನು ಪೆಟ್ಟು ಆಕೆಯ ಮುಖದ ಮೇಲೆ ಬೀಳಲು ಆಕೆಯ ಕಿವಿಯೂ ಮತ್ತು ಅದೇ ಪಾರ್ಶ್ವದ ಕೆನ್ನೆಯ ಕೊಂಚಭಾಗವು ಕತ್ತರಿಸಿ ಹೋಯಿತು ಇಷ್ಟುಮಾಡಿ ತಾನೇ ಪೋಲೀಸ್ ಸ್ಟೇಷನ್ನಿಗೆ ಹೋಗಿ ಹೇಳಿಬಿಟ್ಟನು ಆಗ ತನ್ನ ಕೈಯಲ್ಲಿ ಮಚ್ಚನ್ನಿಟ್ಟುಕೊಂಡಿದ್ದನು. ಅಲ್ಲಿನ ಪೋಲೀಸ್ ಕಾನ್‌ಸ್ಟೇಬಲು ಈತನನ್ನು ನೋಡಿ —ಬಹು ಒಳ್ಳೇ ಕೆಲಸ ಮಾಡಿದೆ ಎಲ್ಲಿ ಕತ್ತಿಯನ್ನು ನೋಡೋಣ ಎಂದು ಕತ್ತಿಯನ್ನು ಉಪಾಯದಿಂದ ತೆಗೆದುಕೊಂಡು, ಆತನನ್ನು [illegible] ಮಾಡಿಬಿಟ್ಟನು "ಸತ್ತುಹೋದ ಗಂಡಸು ಈಕೆಯ [illegible] ಕೊಂಡಿದ್ದನೆಂತಲೂ ಮತ್ತು ಈ ಹೆಂಗಸು ತನ್ನ ಸ್ವಂತ ಗಂಡ [illegible] ವಾಗಿದ್ದಳೆಂತಲೂ, ಖೂನಿ ಮಾಡಿದ ತನ್ನ ಭಾವನ [illegible] ಳೆಂತಲೂ ಗೊತ್ತಾಗಿದೆ ಈ ಹೆಂಗಸಿಗೂ ಖೂನಿಮಾಡಿದ ಆಕೆಯ ಭಾವನಿಗೂ ಈಚೆಗೆ ಸ್ನೇಹ ಬೆಳೆದಿತ್ತೆಂತಲೂ ಅದರಿಂದ ಇಂತಹ ಹತ್ಯೆ ನಡೆಯಿತೆಂತಲೂ, ಮತ್ತು ಆಕೆಯು ಬಹಳ ಕೆಟ್ಟ ಕಾರ್ಯಗಳಲ್ಲಿ ಪ್ರವೇಶಮಾಡಿ ಇಂತಹ ಶಿಕ್ಷೆಗೆ ಗುರಿಯಾದಳೆಂತಲೂ ಹೇಳುತ್ತಾರೆ. ಈ ಹೆಂಗಸು ಆಸ್ಪತ್ರೆಯಲ್ಲಿ ಜೀವದಿಂದಿದ್ದಾಳೆ —ಜೂನ್ ತಿಂಗಳು ೨೮ ನೆ ತಾ ಶುಕ್ರವಾರ ದಿವಸ ಬೆಂಗಳೂರ್ ಸಿಟಿ ಕಂಬಳಿ ಮಿಷನ್ ಕೆರೆಯಲ್ಲಿ ಯಾರೋ ಮೂವರು ರೋಮನ್ ಕ್ಯಾಥೊಲಿಕ್ ಮತಸ್ಥರು ಅಂದರೆ ತಂದೆಯೂ ಇಬ್ಬರು ಯೌವನಸ್ಥರಾದ ಕುಮಾರರೂ ಘಳಿಗೆ ವ್ಯತ್ಯಾಸದಿಂದ ಮತ್ಸ್ಯಗಳನ್ನು ಹಿಡಿಯಲು ಕೆರೆಗೆ ದಕ್ಷಿಣಾಭಿಮುಖವಾಗಿರುವ ಒಂದು ದೊಡ್ಡ ಬಂಡೆಯ ಬಳಿ ಕುಳಿತಿದ್ದರು. ತತ್ಸಮಯದಲ್ಲಿ ಕಿರಿಯವನು ಮತ್ಸ್ಯವು ಗಾಣವನ್ನು ಎಳೆದದ್ದನ್ನು ನೋಡಿ ತಾನು ಕುಳಿತದ್ದ ಸ್ಥಳದಿಂದ ಎದ್ದು ಮತ್ಸ್ಯವನ್ನು ಹಿಡಿಯಲು ಹೋದಾಗ, ಕಾಲಿನಲ್ಲಿ ಬೂಟ್ಸುಗಳನ್ನು ಹಾಕಿದ್ದದ್ದರಿಂದ ಬಂಡೆಯ ಮೇಲೆ ಕಾಲು ಜಾರಿ, ನೀರಲ್ಲಿ ಬಿದ್ದುಬಿಟ್ಟನು. ಕುಮಾರನು ನೀರಿನಪಾಲಾದದ್ದನ್ನು ತಂದೆಯು ನೋಡಿ, ಅವನನ್ನು ಎಳೆದು ಬದುಕಿಸಲು ಹೋದನು. ತಾನೂ ಸಹ ಕುವರನ ಸಂಗಡ ಗಂಗೆಗೆ ಆಹುತನಾದನು. ಇದನ್ನು ನೋಡುತ್ತಿದ್ದ ಜ್ಯೇಷ್ಠಪುತ್ರನು ರೋದನಗೈಯುತ್ತಾ ಪೋಲೀಸ್ ಸ್ಟೇಷನ್ನಿಗೆ ಓಡಿಹೋಗಿ ಅವರನ್ನು ಕರೆತಂದನು. ಅವರು ಬಂದು ಆ ದಿವಸವೆಲ್ಲಾ ಶವಗಳನ್ನು ಹುಡುಕಿಸಿದಾಗ್ಯೂ ಅವು ಸಿಕ್ಕಲೇ ಇಲ್ಲ ಮಾರನೆ ದಿನ ಎರಡು ಶವಗಳೂ ಸಿಕ್ಕಿದವು. ಗಾಡಿಯ ಮೇಲೆ ಹಾಕಿಸಿಕೊಂಡು ಪೋಲೀಸಿನವರಿಂದ ಮಾರ್ಚುರಿ ಬಗ್ಗೆ ಸಾಗಿದವು.

ಚಿಕ್ಕಮಗಳೂರು.—ಮಳೆಯು ಬೀಳುತ್ತಲೇ ಇದೆ ಪೈರುಗಳೆಲ್ಲಾ ಚೆನ್ನಾಗಿವೆ ಕೆರೆ ಕಟ್ಟೆಗಳಿಗೆ ಮಾತ್ರ ಇನ್ನೂ ನೀರು ಬಂದಿಲ್ಲ ಊರಿನಲ್ಲಾದರೋ ೧೦—೧೫ ದಿವಸಗಳಿಗೊಂದು ಸಾರಿ ಪ್ಲೇಗ್ ರೋಗವು ಕಾಣಿಸಿಕೊಳ್ಳುತ್ತಾ ಇಲ್ಲಿನ ಫೋರ್ಟ್ ಪೇಟೆಯಲ್ಲಿ ೩ ನೆ ತಾ॥ನಲ್ಲಿ ಒಬ್ಬನು, ೫ ನೆ ತಾ ಒಬ್ಬನು ರೋಗದಲ್ಲಿ ಕಾಲವಾದರೆಂದೂ ಇನ್ನೊಂದು ಮಗುವು ಅದೇ ಮನೆಯಲ್ಲಿ ರೋಗಪೀಡಿತವಾಗಿದೆ ಎಂದೂ ವರ್ತಮಾನ —ಇಲ್ಲಿಂದ ಬೇರೆ ಕಡೆಗಳಿಗೆ ವರ್ಗವಾದ ಆಫೀಸರುಗಳಿಗೆಲ್ಲಾ ೧ ನೆ, ೫ ನೆ, ೬ ನೆ ತಾರೀಖುಗಳಲ್ಲಿ ಹೊರಟು ಹೋದರು ಡೆಪ್ಯುಟಿ ಕಮಿಷನರಿಗೆ ಮಾತ್ರ ಅವರ ಬಂಗಲೆಯಲ್ಲಿಯೇ ಡಿಸ್ಟ್ರಿಕ್ಟಿನ ನೌಕರರೆಲ್ಲಾ ಸೇರಿ ಒಂದು ಟೀ ಪಾರ್ಟಿಯನ್ನು ಇಟ್ಟುಕೊಂಡು, ಅವರನ್ನು ಸಂತೋಷಪಡಿಸಿದರೆಂದೂ ಡೆಪುಟಿ ಕಮಿಷನರು ೭ ನೆ ತಾ ಇಲ್ಲಿನ ಮಹಮ್ಮದೀಯರ ಅಪೇಕ್ಷೆಯಂತೆ ಅವರ ಅಂಜುಮಾನ್ ಸ್ಕೂಲಿಗೆ ಹೋಗಿ ಅವರಿಂದ ಹಾರತುರಾಯಿಗಳನ್ನು ಕೊಂಡು ಅಲ್ಲಿ ಓದುವ ಹುಡುಗರ ತಿಂಡಿಗಾಗಿಯೂ ಆ ಸ್ಕೂಲಿನ ಫಂಡಿಗಾಗಿಯೂ ಕೆಲವು ರೂಪಾಯಿಗಳನ್ನು ಕೊಟ್ಟರೆಂದೂ ವರ್ತಮಾನ —ಕಳೆದ ತಿಂಗಳು ಸುಮಾರು ೯ ನೆ ತಾ ಡಾಕ್ಟರ್ ಅಪ್ಪಯ್ಯನವರ ಅಳಿಯನು ಇಲ್ಲಿನ ಕೋಟೆ ಕೆರೆಗೆ ಷಿಕಾರಿಗಾಗಿ ಹೋಗಿ ಏರಿಯ ಮೇಲಿನಿಂದ ಹಕ್ಕಿಯನ್ನು ಹೊಡೆದ ಸಣ್ಣ ಗುಂಡು ಒಳಗೆರೆಯಲ್ಲಿ ದನಗಳಿಗೆ ನೀರು ಕುಡಿಸುತ್ತಿದ್ದ ಸುಮಾರು ಹತ್ತು ವರುಷದ ಒಬ್ಬ ಬಡಹುಡುಗನ ತೊಡೆಗೆ ತಗಲಿ ಅವನು ಇದುವರೆಗೂ ಆಸ್ಪತ್ರೆಯ ಚಿಕಿತ್ಸೆ ಹೊಂದುತ್ತಿದ್ದು ಈಗ ಗುಣಪಟ್ಟಿರುತ್ತಾನೆ ಆ ಹುಡುಗನು ಆ ನೋವಿನ ಕಾಹಿಲೆ ನಡೆಯುವದಿಲ್ಲ ಆ ತೊಡೆಯಲ್ಲಿ ಸೇರಿದ ಗುಂಡನ್ನು ತೆಗೆದರೋ ಇಲ್ಲವೋ ತಿಳಿಯದು ಗುಂಡು ತೊಡೆಯಲ್ಲಿಯೇ ಇದ್ದರೆ ಆ ಹುಡುಗನಿಗೆ ತೊಂದರೆಯಾಗುವದೆಂದು ಹೇಳುತ್ತಾರೆ ಈಗ ಆ ಹುಡುಗನನ್ನು ಪೋಲೀಸಿನವರು ವಿಚಾರಿಸುತ್ತಿದ್ದಾರೆ.—ಶಿವಮೊಗ್ಗೆಯಿಂದ ಸೆಷನ್ಸ್ ಜಡ್ಜಿಯವರು ಇಲ್ಲಿಗೆ ಬಂದು ಒಂದು ವಾರದಿಂದಲೂ ಕೊಪ್ಪ, ಯಡೆಹಳ್ಳಿ ತಾಲ್ಲೋಕುಗಳ ಕೊಲೆ ಮೊಕದ್ದಮೆಯನ್ನು ವಿಚಾರಿಸುತ್ತಿದ್ದಾರೆ ಅದು ಫೈಸಲ್ ಆಗುವದಕ್ಕೆ ಇನ್ನೂ ಸುಮಾರು ಎರಡು ವಾರಗಳು ಹಿಡಿಯಬಹುದೆಂದು ಹೇಳುತ್ತಾರೆ —ಮೊದಲನೇ ತಾರೀಖಿನಿಂದ ಮುನಿಸಿಫ್ ಕೋರ್ಟ್ ಪ್ರಾರಂಭವಾಗಿ ಕೆಲಸ ನಡೆಯುತ್ತಲಿದೆ. ಬೇರೆ ಬೇರೆ ಕಡೆ ಚದರಿ ಹೋಗಿದ್ದ ಎರಡನೇ ಗ್ರೇಡ್ ಪ್ಲೀಡರುಗಳೆಲ್ಲಾ ಒಂದು ಸೇರಿಕೊಳ್ಳುತ್ತಿದ್ದಾರೆ.—ಆಕ್ಟಿಂಗ್ ಡೆಪುಟಿ ಕಮಿಷನರು ೬ ನೆ ತಾ ಬೆಳಿಗ್ಗೆ ಡಿಸ್ಟ್ರಿಕ್ಟಿನ ಚಾರ್ಜನ್ನು ವಹಿಸಿಕೊಂಡರು —ಇಲ್ಲಿನ ಹೈಸ್ಕೂಲ್ ಹೆಡ್ ಮಾಸ್ಟರ್ ಮಿ॥ ಶ್ರೀನಿವಾಸಯ್ಯಂಗಾರಿಗೆ ಹಾಸನಕ್ಕೆ ವರ್ಗವಾಗುವದೆಂಬ ವದಂತಿ ಇದೆ.—ಈ ತಾಲ್ಲೋಕಿಗೆ ಸೇರಿದ ಕೆಲವು ದೊಡ್ಡಿಗಳ ಏರ್ಪಾಡು ಸರಿಯಾಗಿಲ್ಲವೆಂತಲೂ ದೊಡ್ಡಿಗಳಿಗೆ ಸೇರಿದ ಪಶುಪ್ರಾಣಿಗಳಿಗೆ ನಿಲ್ಲುವದಕ್ಕೆ ನೆರಳೂ ಮಳೆಗೆ ಆಶ್ರಯವೂ ಇಲ್ಲದೆಯೂ ಸಕಾಲಕ್ಕೆ ಹುಲ್ಲೂ ನೀರೂ ದೊರಕದೆಯೂ ಕ್ಷೀಣವಾಗುತ್ತಲಿವೆ ಎಂದೂ ಕೇಳುತ್ತೇನೆ ಹಾಗಿದ್ದ ಪಕ್ಷದಲ್ಲಿ ಅಮಲ್ದಾರರು, ಎಲ್ಲಾ ದೊಡ್ಡಿಗಳ ಕಂಟ್ರಾಕ್ಟರಿಗೂ ತಿಳಿಸಿ ಮೂಕ ಪ್ರಾಣಿಗಳಿಗೆ ಹಿಂಸೆಯಾಗದ ರೀತಿಯಲ್ಲಿ ನಡೆಸುವಂತೆ ಅಪ್ಪಣೆ ಕೊಡುವದು ಒಳ್ಳೇದು

ಚೆನ್ನರಾಯಪಟ್ಟಣ.—ಈ ಊರಿನಲ್ಲಿ ಈಗ ಜನಗಳ ಕಾಯಿಲೆ ಕಮ್ಮಿ ಆಗುತ್ತಾ ಬಂದಿದೆ ಕೆರೆಯಲ್ಲಿ ಸ್ವಲ್ಪ ನೀರು ಇರುತ್ತೆ. ಕೆರೆ ಕೆಳಗೆ ಸುಮಾರು ೩ ಮೈಲಿ ಫಾಸಲೆ ವರೆಗೂ ತರಿ ಜಮೀನುಗಳು ಇರೋದರಿಂದ ಈ ಜಮೀನುಗಳಿಗೆಲ್ಲ ಈ ಕೆರೆ ನೀರೇ ಸಪ್ಲೈ ಆಗಬೇಕು. ರಾಯಗಾಲುವೆಯಲ್ಲಿ ಸದಾ ನೀರು ಹರಿಯುತ್ತಲೇ ಇದ್ದ ಈ ಕಾಲುವೆ ಮತ್ತು ಊರೊಳಗಿರುವ ಭಾರಿ ಕಲ್ಯಾಣಿ ಈ ನೀರುಗಳನ್ನೇ ಜನರು ಉಪಯೋಗಿಸಬೇಕಾಗಿದೆ ಮಳೆ ಸುತರಾಂ ಆಗಿಲ್ಲ ಕೊಂಚ ಮೇಘ ಕಟ್ಟ ಮಾತ್ರ, ಹಾಗೇ ಕರಗಿ ಹೋಗುವದೂ ಈ ರೀತಿ ಇರುತ್ತೆ ಗಾಳಿಯ ಆರ್ಭಟವು ಹೆಚ್ಚಾಗಿದೆಯೋ [illegible] ಆಗಿಲ್ಲ ದಿನಸಿ ಧಾನ್ಯಗಳು ದಿನೇ ದಿನೇ ಹೆಚ್ಚುತ್ತಲೇ ಇವೆ ರೈತರೆಲ್ಲಾ ಹೊಲಗಳನ್ನು ಉತ್ತುಕೊಂಡು ದೇವೇಂದ್ರನ ಕೃಪೆ ಯೆಂದಿಗೆ ದೊರೆಯುತ್ತೋ ಎಂದು ಹಂಬಲಿಸುತ್ತಾ ಇರುತ್ತಾರೆ — ನಮ್ಮ ಅಮಲ್ದಾರ್ ಮಿ॥ ಎಸ್. ಎನ್ ಅಪ್ಪಣ್ಣೈಯ್ಯಂಗಾರ್ರು [illegible] ಯಿಂದ ಟವನ್ ಇನ್ಸ್‌ಪೆಕ್ಟರ್ ಮಾರ್ಗ, ಊರು ಪಾಕೀಜಾ ವಿಷಯದಲ್ಲಿ ನಿಗಾ ಕೊಡದಿರುವದರಿಂದ ರಸ್ತೆ ಗಲ್ಲಿ ಮಗ್ಗುಲುಗಳೆಲ್ಲವೂ ಗಲೀಜು ಇಲ್ಲದೆ ಪಾಕಾಗಿರುತ್ತವೆ ಇವರು ಏನೂ ತಿಳಿಯದ ಮೂಢ ಜನಗಳಾದ ಈ ಊರು ಪಂಚಮರಿಗೋಸ್ಕರ ಒಂದು ಸ್ಕೂಲನ್ನು ಧರ್ಮಾರ್ಥವಾಗಿ ಕಟ್ಟಿಸುತ್ತಾ ಇರುತ್ತಾರೆ ಉತ್ತರೋತ್ತರ ಪಂಚಮರ ವಿದ್ಯಾಭಿವೃದ್ಧಿಯೂ ಹೆಚ್ಚಬಹುದೆಂತ ಕಾಣುತ್ತೆ —ಈ ಟವನ್ ಪೋಲೀಸ್ ಇನ್ಸ್‌ಪೆಕ್ಟರಾಗಿದ್ದ ಮಿ॥ ತಿರುಮಲ ರಾಯರಿಗೆ ಚಿಕ್ಕಬಳ್ಳಾಪುರಕ್ಕೆ ವರ್ಗವಾದದ್ದರಿಂದ ಜನಗಳೆಲ್ಲರೂ ಬಹಳ ಜಾಗ್ರತೆಯಾಗಿ ಅವರಿಗೆ ವರ್ಗವಾದದ್ದನ್ನು ಕಂಡು ತುಂಬಾ ವಿಷಾದಪಡುತ್ತಾರೆ —ಈ ಊರು ಕೋಟೆಯಿಂದ ಪೇಟೆಗೆ ಹೋಗುವ ಪಬ್ಲಿಕ್ ರೋಡಿನಲ್ಲಿ ಸೇತುವೆ ಮೇಲೆ ಒಂದು ಕಲ್ಲು ಚಪ್ಪಡಿ ಮುರಿದುಬಿದ್ದು ಸುಮಾರು ೩—೪ ತಿಂಗಳಾಯಿತು ಶ್ರವಣಬೆಳಗುಳದ ಸಂತೆಗೆ ಈ ಊರಿನಿಂದ ೩೦—೪೦ ಗಾಡಿಗಳು ಹೋಗಿ ಬರಬೇಕಾಗಿದೆ ರಾತ್ರಿ ೯ ಘಂಟೆ ವೇಳೆಯಲ್ಲಿ ಪೇಟೆಯಿಂದ ಗಾಡಿಗಳು ಬರುವಾಗ್ಗೆ ಗಾಡಿಗಳಾಗಲಿ ಜನಗಳಾಗಲಿ ಬಿದ್ದು ಅಪಾಯ ಸಂಭವಿಸುವದರಲ್ಲಿ ಏನೂ ಸಂದೇಹವಿಲ್ಲ ಇದರ ರಿಪೇರಿ ವಿಷಯದಲ್ಲಿ ತಾಲ್ಲೋಕು ಅಧಿಕಾರಿಗಳು ನಿಗಾಕೊಡಬೇಕೋ, ಇಂಜನಿಯರ್ ಇಲಾಖೆಯವರು ಗಮನಕ್ಕೆ ತೆಗೆದುಕೊಳ್ಳಬೇಕೋ, ಅಥವಾ ಕಂಟ್ರಾಕ್ಟುದಾರರ ಉದಾಸೀನವೋ ಗೊತ್ತಾಗದೆ ಜನಗಳೆಲ್ಲರೂ ತುಂಬಾ ವಿಷಾದಪಡುತ್ತಿದ್ದಾರೆ.—ಇದೇ ಊರು ವಾಸಸ್ಥರಾಗಿಯೂ, ಸ್ಮಾರ್ತ ಬ್ರಾಹ್ಮರಾಗಿಯೂ, ಸುಮಾರು ೬೦ ವರ್ಷ ವಯಸ್ಸುಳ್ಳವರಾಗಿಯೂ ಇದ್ದ ಹೊಸ ಬಾಗಿಲು ಸುಬ್ಬಯ್ಯರು ಎಂಬುವರು ಕಳೆದ ಮಾಹೆ ೧೫ ನೇ ತಾರೀಖಿನಲ್ಲಿ ಹೊಳೆನರಸೀಪುರದ ಮುನ್ಸಿಫ್ ಕೋರ್ಟಿಗೆ ಸ್ವಂತ ವ್ಯಾಜ್ಯಕೆಲಸಕ್ಕೋಸ್ಕರ ಹೋದವರು ಇವತ್ತಿನ ವರೆಗೂ ಪತ್ತೆಯೇ ಇಲ್ಲ ಅವರ ಬಂಧುವರ್ಗದವರಿಗೆಲ್ಲಾ ಕಾಗದ ವಗೈರೆ ಬರೆದು ಕೇಳಿದ್ದಕ್ಕೆ ಪ್ರತಿ ಒಂದು ಊರಿನಿಂದಲೂ ತಮ್ಮ ಸ್ಥಳಗಳಿಗೆ ಬಂದೇ ಇಲ್ಲವೆಂತ ಜವಾಬನ್ನು ಬರೆದು ಇರುತ್ತಾರೆ ಇಲ್ಲಿ ಅವರ ಮನೆಯವರ ದುಃಖವನ್ನು ಹೇಳತೀರದು. ದಯವಿಟ್ಟು ನಮ್ಮ ಪತ್ರಿಕಾ ವಾಚಕರು ಇವರು ಯಾವದಾದರೂ ಸ್ಥಳಕ್ಕೆ ಬಂದು ಕಾಯಿಲೆ ವಗೈರೆಯಿಂದ ನರಳುತ್ತಾ ಇದ್ದರೆ ಈ ಮುಖಲಕ ತಿಳಿಯಪಡಿಸಬೇಕಾಗಿ ಪ್ರಾರ್ಥಿಸುತ್ತೇವೆ.

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ನಿಗಾ ಕೊಡಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿ.

ಕರೆಸ್ಪಾಂಡೆನ್ಸ್.

ಕರ್ನಾಟಕ ಮತ್ತು ಯೂನಾನಿ ಪಂಡಿತರು.

ಅಯ್ಯಾ,

ತಮ್ಮ ಆಫೀಸಿನಿಂದ ಪ್ರಕಟವಾದ ಜೂನ್ ೨೦ ಮತ್ತು ೨೭ನೇ ಗುರುವಾರದ ಪತ್ರಿಕೆಗಳಲ್ಲಿ ಪ್ರಕಟವಾದ ವಿಶೇಷ ಸಂಗತಿಯನ್ನು ನೋಡಿ ತುಂಬಾ ಸಂತೋಷವೂ ತುಂಬಾ ಕೃತಜ್ಞತೆಯೂ ಉಳ್ಳವನಾಗಿ ಮೈಸೂರು ಗವರ್ನಮೆಂಟಿನವರನ್ನು ತುಂಬಾ ವಂದಿಸುತ್ತೇನೆ ತಾ. ೨೦ನೇ ಪತ್ರಿಕೆಯಲ್ಲಿ ನೇಟಿವ್ ಯೂನಾನಿ ಪಂಡಿತರು ಖಾಯಿಲೆ ಜನಗಳಿಗೆ ಸರ್ಟಿಫಿಕೇಟು ಕೊಡಬಹುದೆಂತ ಪ್ರಕಟವಾಗಿತ್ತು ಮತ್ತು ೨೭ನೇ ತಾ. ಪತ್ರಿಕೆಯಲ್ಲಿ ಚೆನ್ನಪಟ್ಟಣದ ಮೌಲ್ವಿ ಹಕೀಂ ಸಯ್ಯದ್ ಸಾಹೇಬರು ಈ ವಿಚಾರವನ್ನು ಕುರಿತು ಪ್ರಕಟಿಸಿರುವ ವಿಚಾರವನ್ನು ನೋಡಿದೆನು ಆದರೆ ಈಗ ಪ್ರತಿ ತಾಲ್ಲೋಕು ಕಸಬಾದಲ್ಲಿಯೂ ವೈದ್ಯ ಶಾಸ್ತ್ರವನ್ನು ಓದಿ ತಿಳುವಳಿಕೆಯಿಂದ ಚಿಕಿತ್ಸೆ ಮಾಡತಕ್ಕ ಪಂಡಿತರು ಕೊಂಚವಾಗಿದ್ದಾರೆ. ಆಳಲೇಕಾಯಿ ಪಂಡಿತರು ತುಂಬಾ ಇರುತ್ತಾರೆ ಎಲ್ಲಾ ವೈದ್ಯರೂ ಹಕೀಮರೂ ಈ ವಿಷಯದಲ್ಲಿ ಪ್ರವೇಶಮಾಡಿದರೆ ಅನೇಕ ನೌಕರರು ತಮ್ಮ ಸ್ವಂತ ಕೆಲಸಕ್ಕಾಗಿ ಸರ್ಟಿಫಿಕೇಟು ತೆಗೆದುಕೊಂಡು ಕೂತುಕೊಂಡರೆ ಸರ್ಕಾರಕ್ಕೆ ಎಷ್ಟು ನಷ್ಟವಾಗತ್ತೆ? ಆದ್ದರಿಂದ ಮೈಸೂರು ಸರ್ಕಾರದವರು ದಯವಿಟ್ಟು ಪ್ರತಿ ತಾಲ್ಲೋಕು ಕಸಬಾ ಮುನಿಸಿಪಲ್ ಮೆಂಬರುಗಳ ಅಭಿಪ್ರಾಯದ ಮೇರೆಗೆ ಮತ್ತು ನಡತೆ ನೋಡಿ ಸರ್ಕಾರದಿಂದ ಪ್ರತ್ಯೇಕ ಅವರವರಿಗೆ ಹುಕುಂ ಕೊಡಿಸುವದು ಒಳ್ಳೇದೆಂದು ೨೭ನೇ ತಾ. ಪತ್ರಿಕೆಯಲ್ಲಿ ಪ್ರಕಟಿಸಿರುತ್ತಾರೆ. ಇದು ಕೆಲವರಿಗೆ ಅನುಕೂಲ ಕೆಲವರಿಗೆ ಅನಾನುಕೂಲವಾಗುತ್ತೆ ಯಾಕಂದರೆ ಮುನಿಸಿಪಲ್ ಮೆಂಬರುಗಳಿಗೆ ಇವರು ಬೇಕಾದವರು ಯೋಗ್ಯತೆ ಜಾಸ್ತಿ ಗೊತ್ತಾಗುತ್ತೆ. ಆದ ಪ್ರಯುಕ್ತ ಮೈಸೂರು ರಾಜಧಾನಿಯಲ್ಲಿ ಈ ವಿದ್ಯೆಕ್ಕಾಗಿ ಇಟ್ಟಿರುವ ಆಯುರ್ವೇದ ಪಂಡಿತರು, ಹಕೀಮರು ಪಂಡಿತರ ಸ್ಕೂಲಿನಲ್ಲಿ ಪ್ರತಿ ತಾಲ್ಲೋಕಿನ ಪಂಡಿತರೂ ಹೋಗಿ ಓದಿ ಸರ್ಟಿಫಿಕೇಟು ತಂದಿರುವವರು ಅಥವಾ ಅಲ್ಲಿಗೆ ಹೋಗಿ ಯೋಗ್ಯತಾ ಸರ್ಟಿಫಿಕೇಟನ್ನಾದರೂ ತಂದವರು ಮತ್ತು ಯಾವ ಹಕೀಮರಿಂದಲೇ ಆಗಲಿ ಸರ್ಟಿಫಿಕೇಟು ಪಡೆದಿರತಕ್ಕವರು ಇಂಥಾವರು ಸರ್ಕಾರಿ ಖಾಯಿಲೆ ನೌಕರರಿಗೆ ಸರ್ಟಿಫಿಕೇಟು ಕೊಡಬಹುದೆಂದು ಹುಕುಂ ಮಾಡಿದ್ದಾರ ಯಾವ ಅಭ್ಯಂತರವೂ ಇಲ್ಲ. ಈ ವಿಷಯವನ್ನು ಕುರಿತು ಮೈಸೂರು ಸರ್ಕಾರದವರು ಮೇಲ್ಕಂಡಂತೆ ಹುಕುಂ ಮಾಡದಿದ್ದರೆ ಮೇಲ್ಕಂಡ ಆಳಲೇಕಾಯಿ ಪಂಡಿತರುಗಳೆಲ್ಲಾ ಸರ್ಟಿಫಿಕೇಟು ಕೊಡುವದು ನಿಂತುಹೋಗುತ್ತೆ ಇಲ್ಲವಾದರೆ ಮೌಲ್ವಿ ಹಕೀಂ ಸೈಯ್ಯದ್ ಸಾಹೇಬರು ಹೇಳುವಂತೆ ಸರ್ಕಾರಕ್ಕೆ ನಷ್ಟವಾಗುವದರಲ್ಲಿ ಯಾವ ಅಭ್ಯಂತರವೂ ಇಲ್ಲ.

ಶ್ರೀನಿವಾಸೈಯ್ಯಂಗಾರ್,

ಚೆನ್ನಪಟ್ಟಣ ತಾಲ್ಲೋಕು ಕಸಬಾ ದೇವರ ಹೊಸಹಳ್ಳಿ ಪಂಡಿತ.

ಸಮೇತ ಸರ್ ಜೇರಿಯವರನ್ನು ಕೈ ಸೆರೆ ಹಿಡಿದು ಇಟ್ಟುಕೊಂಡು, ಹಣ ಕೊಡುವುದಾದರೆ ಬಿಟ್ಟು ಕೊಡುತ್ತೇನೆಂದು ಕೇಳುತ್ತಿದಾನೆ

* * *

ಯೂರೋಪಿಯನ್ ದೇಶಗಳಲ್ಲಿ ಮೋಟಾರ್ ಗಾಡಿಗಳ ಪ್ರಯಾಣವು ಜನರಲ್ಲಿ ಬಹಳ ಪ್ರಿಯವಾಗಿರುವದು. ಇದರಮೇಲೆ ಸಂಚಾರ ಪ ೧ರಟು ಮಾಡುವ ಪದ್ಧತಿಯು ಆ ದೇಶಗಳಲ್ಲಿ ಹೆಚ್ಚಾಗಿರುವದು. ಲೆಫ್ಟಿನೆಂಟ್ ಲೀಕ್ ಎಂಬಾತನು ಮೋಟಾರ್ ಗಾಡಿಯಮೇಲೆ ಸಂಚಾರ ಹೊರಟು ೨೯ ಘಂಟೆಗಳ ಕಾಲದಲ್ಲಿ ಒಟ್ಟು ೧,೫೮೩ ಮೈಲುಗಳು ಪ್ರಯಾಣ ಮಾಡಿದನೆಂದು ತಿಳಿಯುವದು. ಇದೇ ಅತ್ಯಂತ ವೇಗವಾದ ಮೋಟರ್ ಸವಾರಿಯು.

* * *

ಅಮೇರಿಕಕ್ಕೆ ಸೇರಿದ ಸ್ಯಾನ್‌ಫ್ರಾನ್ಸಿಸ್ಕೊ ಪಟ್ಟಣದಲ್ಲಿ ಜಪಾನ್ ಪ್ರಜೆಗಳನ್ನು ನಾನಾ ಕಷ್ಟನಷ್ಟಗಳಿಗೆ ಗುರಿ ಮಾಡುತ್ತಿದಾರೆ. ಜಪಾನ್ ನವರು ವ್ಯಾಪಾರಾದಿಗಳನ್ನು ಮಾಡಕೂಡದೆಂದು ಅಡ್ಡಿ ಮಾಡುವರು. ಅವರ ಅಂಗಡಿಗಳನ್ನು ಅಮೇರಿಕದವರು ಗಲಭೆ ಮಾಡಿ ನುಗ್ಗಿದರೆ ಪೊಲೀಸಿನವರು ಜಪಾನನವರ ಮನವಿಯನ್ನು ಕೇಳುವುದಿಲ್ಲ. ಇದೆಲ್ಲಾ ಜಪಾನ್ ರಾಜ್ಯಕ್ಕೆ ತಿಳಿದು, ಅಲ್ಲಿನ ಪ್ರಜೆಗಳು ಅಮೇರಿಕದವರ ಮೇಲೆ ಆಕ್ರೋಶಪಡುವಂತಾಗಿದೆ. ಕೆಲವರು ಈ ವಿಷಯಕ್ಕಾಗಿ ಆ ಎರಡು ರಾಜ್ಯಗಳಿಗೂ ಯುದ್ಧ ಸಂಭವಿಸುವುದೆಂದು ಹೇಳಲಾರಂಭಿಸಿದರು. ಆದರೆ ಆ ಎರಡು ರಾಜ್ಯಗಳ ಅಧಿಕಾರಿಗಳೂ ಯುದ್ಧ ನಡೆಯುವುದಿಲ್ಲವೆಂತಲೂ ಎಲ್ಲಾ ಸಂಗತಿಗಳನ್ನೂ ಅವರವರೇ ಸೇರಿ ಇತ್ಯರ್ಥಪಡಿಸಿಕೊಳ್ಳುವುದಾಗಿಯೂ ಹೇಳುವರು. ಅಂತು ಈ ಭಾಗದಲ್ಲಿ ಆ ಎರಡು ರಾಜ್ಯಾಧಿಕಾರಿಗಳಿಗೂ ಕಾಗದ ಪತ್ರಗಳು ನಡೆಯುತ್ತಲಿವೆ.

* * *

ಜಪಾನರವರು ಕೋರಿಯಾ ರಾಜ್ಯವನ್ನು ಆಕ್ರಮಿಸಿಕೊಂಡು ಅದರ ಸ್ವತಂತ್ರಾಧಿಕಾರವನ್ನು ಹಾಳುಮಾಡುವುದಿಲ್ಲವೆಂದು ಕರಾರು ಬರೆದು ಕೊಟ್ಟಿದಾರೆ. ಆದಾಗ್ಯೂ ಹಿಂದೆ ಅವರು ತಮ್ಮ ಕಡೆಯ ಅಧಿಕಾರಿಗಳನ್ನೇ ಕೋರಿಯಾದಲ್ಲಿ ನೇಮಿಸಿ ಅವರ ಮೂಲಕ ಆ ರಾಜ್ಯದ ಕಾರುಬಾರುಗಳನ್ನು ನಡಿಸುತ್ತಾ ಬಂದಿರುವರು. ಕೋರಿಯಾ ರಾಜ್ಯದವರಾದರೋ ಈ ಭಾಗದಲ್ಲಿ ತುಂಬಾ ಅಸಮಾಧಾನಪಟ್ಟು, ಯೂರೋಪಿನ ಹೇಗ್ ಪಟ್ಟಣದಲ್ಲಿ ನಡೆದ ಪಂಚಾಯತಿ ಕೋರ್ಟಿಗೆ ತಮ್ಮ ಕಡೆಯಿಂದ ಕೆಲವು ಪ್ರತಿನಿಧಿಗಳನ್ನು ಕಳುಹಿಸಿ, ಜಪಾನನವರ ನಡವಳಿಕೆಯನ್ನೆಲ್ಲಾ ಆ ಪಂಚಾಯತಿ ಕೋರ್ಟಿಗೆ ತಿಳಿಸಬೇಕೆಂದು ಪ್ರಯತ್ನಪಟ್ಟರು. ಆ ಪಂಚಾಯತಿ ಕೋರ್ಟಿನವರು ಈ ಪ್ರತಿನಿಧಿಗಳನ್ನು ತಮ್ಮ ಸಭೆಗೆ ಬರಗೊಡಿಸಲಿಲ್ಲ. ಈಗ ಕೋರಿಯಾ ರಾಜ್ಯದವರು ಜಪಾನನವರಿಂದ ತಮಗೆ ಉಂಟಾಗುತ್ತಿರುವ ಕಷ್ಟಗಳನ್ನು ಯೂರೋಪಿನ ಸಕಲ ರಾಜ್ಯಾಧಿಕಾರಿಗಳಿಗೂ ತಿಳಿಸಿ, ಅವರೆಲ್ಲಾ ತಮ್ಮ ಪಕ್ಷವನ್ನು ವಹಿಸುವಂತೆಯೂ ಜಪಾನನವರನ್ನು ಕೋರಿಯಾದಿಂದ ಹೊರಡಿಸುವ ತೆಯೂ ಕೇಳಿಕೊಳ್ಳಲಾರಂಭಿಸಿರುತ್ತಾರೆ. ಈ ವಿಚಾರವು ಹ್ಯಾಗೆ ಇತ್ಯರ್ಥವಾಗುವುದೋ ಮುಂದೆ ತಿಳಿಯಬೇಕಾಗಿದೆ.

ಮೈಸೂರು ಗೆಜೆಟ್ ಸಂಗ್ರಹ.

ಕಂಟ್ರೋಲರವರ ಚೀಫ್ ಅಸಿಸ್ಟೆಂಟರಾದ ಮೆ॥ ಟಿ. ವೈಯ್ಯಾಪುರಿ ಚೆಟ್ಟಿಯವರಿಗೆ ಕೊಟ್ಟಿದ್ದ ೫ ತಿಂಗಳ ರಜವನ್ನು ೨೯ ಆಗಸ್ಟ್‌ವರೆಗೆ ಜಾಸ್ತಿ ಮಾಡಿದೆ.

೧ ನೆ ಕ್ಲಾಸ್ ಸ್ಪೆಷಲ್ ರೆಜಿಸ್ಟ್ರಾರ್‌ಗಳಾದ ಜೆ. ಶ್ರೀಕಂಠಯ್ಯನವರನ್ನು ೩ ನೇ ದರ್ಜೆಯೊಡನೆ ಕ್ಲಾಸಿಗೂ, ಬಿ. ಎ. ರಂಗಯ್ಯನಾಯ್ಡುರವರನ್ನು ೪ ರಿಂದ ೩ ನೆ ಕ್ಲಾಸಿಗೂ ಬಡ್ತಿ ಮಾಡಿದೆ.

ತುಂಕೂರು ಡಿಸ್ಟ್ರಿಕ್ಟ್ ಅ॥ ಸರ್ಜನ್ ಮತ್ತು ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರ್ ಮೆ॥ ಸಿ. ಅಪ್ಪಾದುರೈ ಮೊದಲಿಯಾರ್ರನ್ನು ಕೋಲಾರ್ ಡಿಸ್ಟ್ರಿಕ್ಟಿಗೆ ವರ್ಗ ಮಾಡಿರುತ್ತಾರೆ.

ಶಿವಮೊಗ್ಗಾ ಡಿವಿಜನ್ ಎಗ್ಸಿಕ್ಯುಟಿವ್ ಇಂಜನಿಯರ್ ಮೆ॥ ಆರ್. ವಿ. ಸುಂದರಂ ಐಯ್ಯರವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ನೀರಿನ ಸರಬರಾಯಿ ಇಲಾಖೆ ಎಗ್ಸಿಕ್ಯುಟಿವ್ ಇಂಜನಿಯರ್ ಮೆ॥ ವಿ. ರಂಗಸ್ವಾಮಿ ಐಯ್ಯಂಗಾರ್‍ರಿಗೆ ಹನ್ನೆರಡು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮೈಸೂರು ಜೈಲ್ ಆಫೀಸರಾಗಿದ್ದ ಅ॥ ಸರ್ಜನ್ ಮೆ॥ ಎಂ. ಜಗನ್ನಾಥಂ ಪಿಳ್ಳೆಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮಧುಗಿರಿ ತಾಲ್ಲೂಕ್ ಅಮಲ್ದಾರ್ ಮೆ॥ ಮಹಮದ್ ಅಬ್ದುಲ್ ಷರೀಫ್‌ಯವರಿಗೆ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆಯಲ್ಲದೆ, ಅದು ಮುಗಿದ ತಾರೀಖಿನಿಂದ ಸಂಬಳವಿಲ್ಲದ ಆರು ತಿಂಗಳ ರಜಾ ಕೊಟ್ಟಿದೆ.

ಬರೋಡಾ ಸಂಸ್ಥಾನದ ಮಹಾರಾಜರವರು ರಾಜಧಾನಿಗೆ ದಯಮಾಡಿದ್ದು.

ಬರೋಡಾ ಸಂಸ್ಥಾನದ ಮಹಾರಾಜಾ ಶ್ರೀ ಸಯ್ಯಾಜೀರಾವ್ ಗಾಯಕವಾಡ್‌ರವರು ಬೇಸಿಗೆಯನ್ನು ಕಳೆಯುವುದಕ್ಕಾಗಿ ನೀಲಗಿರಿ ಬೆಟ್ಟಕ್ಕೆ ದಯಮಾಡಿದ್ದರಷ್ಟೆ. ಅವರು ನಮ್ಮ ಶ್ರೀಮನ್ಮಹಾರಾಜರವರ ಅಪೇಕ್ಷೆಯನ್ನು ನೆರವೇರಿಸುವುದಕ್ಕಾಗಿ ಅಲ್ಲಿಂದ ವಾಪಸು ಹೋಗುವಾಗ್ಗೆ ರಾಜಧಾನಿಯಾದ ಮೈಸೂರು ಪಟ್ಟಣಕ್ಕೆ ದಯಮಾಡುವುದಾಗಿ ಒಪ್ಪಿಕೊಂಡರು. ರಾಜಧಾನಿಯಲ್ಲಿ ಅವರನ್ನು ಮರ್ಯಾದೆಗಳೊಡನೆ ಎದುರುಗೊಳ್ಳುವುದಕ್ಕೂ ಶ್ರೇಷ್ಠವಾದ ರೀತಿಯಲ್ಲಿ ಸತ್ಕಾರ ಮಾಡುವುದಕ್ಕೂ ಅನೇಕ ಏರ್ಪಾಡುಗಳು ನಡೆದಿವೆ. ಅವರು ದಯಮಾಡುವ ರಾಜಮಾರ್ಗಗಳಲ್ಲಿಯೂ ಕರ್ಜನ್ ಪಾರ್ಕ್ ಎಂಬ ಉದ್ಯಾನವನದಲ್ಲಿಯೂ ಅವರು ಇಳಿದುಕೊಳ್ಳುವ ಜಗನ್ಮೋಹನ ಬಂಗಲೆಯಲ್ಲಿಯೂ ನಾನಾ ಪ್ರಕಾರವಾಗಿ ಅಲಂಕಾರ ಮಾಡಿದಾರೆ.

ಬರೋಡಾ ಮಹಾರಾಜರವರೂ ಮಹಾರಾಣಿಯವರೂ ರಾಜಕುಮಾರ್ತೆಯವರೊಡನೆ ಈ ದಿನ ಬೆಳಗ್ಗೆ ಸುಮಾರು ೬॥—೭ ಗಂಟೆಗೆ ಮೋಟಾರು ಗಾಡಿಯಲ್ಲಿ ಕುಳಿತು ನೀಲಗಿರಿ ಬೆಟ್ಟದಿಂದ ಸೀಗೂರು ಮಾರ್ಗವಾಗಿ ಪ್ರಯಾಣಮಾಡಿ ಬೆಳಗ್ಗೆ ಸುಮಾರು ೧೦ ಗಂಟೆಗೆ ನಂಜನಗೂಡನ್ನು ತಲಪಿ ಅಲ್ಲಿನ ರೆಸಿಡೆನ್ಸಿ ಬಂಗಲೆಯಲ್ಲಿ ಇಳಿದು ಸ್ನಾನ ಭೋಜನಾದಿಗಳನ್ನು ತೀರಿಸಿಕೊಂಡು ಸ್ವಲ್ಪ ವಿಶ್ರಮಿಸಿಕೊಳ್ಳುವರು. ಅವರನ್ನು ಎದುರುಗೊಳ್ಳುವುದಕ್ಕೆ ಸರ್ದಾರ್ ಗೋಪಾಲರಾವ್ ಅರಸಿನವರೂ ಮೆ॥ ಪಿ. ರಾಘವೇಂದ್ರರಾಯರೂ ತಮ್ಮ ಮೋಟಾರ್ ಗಾಡಿಯಲ್ಲಿ ಸೀಗೂರಿನ ತನಕ ಹೋಗಿದ್ದಂತೆ ಕೇಳುತ್ತೇವೆ. ಅರಮನೆ ಇಲಾಖೆಯವರು ಮೊನ್ನೆ ಸಾಯಂಕಾಲವೇ ಬೇಕಾದ ಜನರನ್ನೂ ಸಾಮಾನು ಮುಂತಾದ್ದನ್ನೂ ನಂಜನಗೂಡು ರೆಸಿಡೆನ್ಸಿ ಬಂಗಲೆಗೆ ಕಳುಹಿಸಿ, ಬರೋಡಾ ಮಹಾರಾಜರವರ ಆತಿಥ್ಯಕ್ಕೆ ಅನುಕೂಲಪಡಿಸಿದಾರೆ. ನಮ್ಮ ಮಹಾರಾಜರವರು ಈ ಬೆಳಗ್ಗೆ ಮೋಟಾರ್ ಗಾಡಿಯಲ್ಲಿ ನಂಜನಗೂಡಿಗೆ ದಯಮಾಡಿ ಬರೋಡಾ ಮಹಾರಾಜರವರಿಗೆ ಸುಸ್ವಾಗತವನ್ನು ಬಯಸಿ ಬರುವರೆಂದು ಕೇಳುತ್ತೇವೆ.

ಈ ಸಾಯಂಕಾಲ ಸುಮಾರು ೩॥ ಗಂಟೆಯ ಮೇಲೆ ಗಾಯಕವಾಡ ಮಹಾರಾಜರವರು ಮೋಟಾರ್ ಗಾಡಿಯಲ್ಲಿ ನಂಜನಗೂಡಿನಿಂದ ಪ್ರಯಾಣ ಮಾಡಿ ರಾಜಧಾನಿಯ ಮಧುವನವೆಂಬ ಉದ್ಯಾನವನದ ಬಳಿಗೆ ದಯಮಾಡುವರು. ಅಲ್ಲಿ ಅರಮನೆಯ ದೇವಸ್ಥಾನಗಳ ಪೂರ್ಣಕಲಶಗಳೂ ಬಿರುದುಗಳೂ ಮರ್ಯಾದೆಗಳೂ ಶ್ರೇಷ್ಠತರವಾದ ಸಾರೋಟುಗಳೂ ಕಾಯುವವು. ಮಹಾರಾಜರವರು ಮೋಟಾರ್ ಗಾಡಿಯನ್ನು ಬಿಟ್ಟು ಸಾರೋಟಿನಲ್ಲಿ ಕುಳಿತು ಕೆರೆ ಏರಿಯ ಮೇಲೆ ಮೆರವಣಿಗೆಯಾಗಿ ದಯಮಾಡುವಲ್ಲಿ ಪೊಲೀಸ್ ಸೇರ್ವೆ ತಲಪಿದ ಒಡನೆ ರಾಯಲ್ ಸಲ್ಯೂಟ್ ರೂಪವಾದ ೨೧ ತೋಪುಗಳು ಕೋಟೆಕೊತ್ತಲಗಳಿಂದ ಹಾರಿಸಲ್ಪಡುತ್ತವೆ. ಶ್ರೀಮಾನ್ ಗಾಯಕವಾಡ ಮಹಾರಾಜರವರು ಹಾಗೇ ಉತ್ಸವದಲ್ಲಿ ಕೆರೇ ಏರಿಯ ಮೇಲೆ ಉದ್ದಕ್ಕೂ ದಯಮಾಡಿ, ಕರ್ಜನ್ ಪಾರ್ಕನೊಳಕ್ಕೆ ಪೂರ್ವದ್ವಾರದಿಂದ ಪ್ರವೇಶಿಸಿ, ನೆಟ್ಟಗೆ ಬಂದು ಲೇಟ್ ಮಹಾರಾಜರವರ ಜ್ಞಾಪಕಾರ್ಥವಾದ ಪ್ರತಿಮೆಯ ಬಳಿ ಹಾಸಿ ವಿಕ್ಟರ್ ರಸ್ತೆಯೊಳಕ್ಕೆ ಬರುವಾಗ್ಗೆ ಅಲ್ಲಿ ವೈದಿಕಮಂಡಲಿಯವರೂ ಪ್ರಜಾ ಪ್ರತಿನಿಧಿಗಳೂ ಅಧಿಕಾರಿಗಳೂ ಕಾದಿದ್ದು ಅವರಿಗೆ ಜಾರಿತು ರಾಯಗಳನ್ನೊಪ್ಪಿಸಿ ಸುಸ್ವಾಗತವನ್ನು ಬಯಸುವರು. ತರುವಾಯ ಗಾಯಕವಾಡ ಮಹಾರಾಜರವರು ಅಲ್ಲಿಂದ ಮುಂದಕ್ಕೆ ಉತ್ಸವದಲ್ಲಿ ದಯಮಾಡಿ ಲ್ಯಾನ್ಸ್‌ಡೌನ್ ಬಜಾರುಗಳ ಮುಂದೆ ಹಾಸಿ ಕರ್ಜನ್ ಪಾರ್ಕಿನ ದಕ್ಷಿಣ ಬಾಗಿಲ ಮೂಲಕ ಪ್ರವೇಶಕ್ಕೆ ತಿರುಗಿ ಜಗನ್ಮೋಹನ ಬಂಗಲೆಗೆ ಚಿತ್ತೈಸುವರು.

ಗಾಯಕವಾಡ ಮಹಾರಾಜರವರು ೨—೩ ದಿನ ರಾಜಧಾನಿಯಲ್ಲಿದ್ದುಕೊಂಡು, ಮೋಟಾರ್ ಗಾಡಿಯಲ್ಲಿ ಬೆಂಗಳೂರಿಗೆ ಪ್ರಯಾಣ ಮಾಡುವರೆಂದು ವರ್ತಮಾನವಿದೆ.

ತಂತೀ ವರ್ತಮಾನ ಸಾರ.

ರಾಯಭಾರಿಗೆ ಅಪಾಯ

ಲಂಡನ್, ಜೂಲೈ ೬ ನೆ ಶನಿವಾರ.—ನಾರ್ವೆ ರಾಜ್ಯದಲ್ಲಿರುವ ಇಂಗ್ಲಿಷ್ ರಾಯಭಾರಿಯಾದ ಸರ್ ಆರ್ಥರ್ ಹರ್ಬರ್ಟ್‌ಯವರು ಪತ್ನಿ ಸಹಿತ ಬರ್ಜನ್ ಮತ್ತು ಕ್ರಿಶ್ಚಿಯಾನಾ ಪಟ್ಟಣಗಳ ನಡುವೆ ಸಾರೋಟಿನಲ್ಲಿ ಕುಳಿತು ಹೋಗುತ್ತಿದ್ದಾಗ ಎದುರಿಗೆ ಒಂದು ಒಂದು ಬೈಸಿಕಲ್ ಗಾಡಿಗೆ ಬಡಿದು ಅವರು ಕುಳಿತಿದ್ದ ಗಾಡಿಯು ಇಳಿಜಾರಿನಲ್ಲಿ ಬಿದ್ದುಕೊಂಡಿತು. ರಾಯಭಾರಿಗಳು ಬಿದ್ದು ಅವರ ಎದೆಯ ಮೂರು ಎಲುಬುಗಳು ಮುರಿದುಹೋದವು. ಆದರೆ ಗಾಯಗಳು ಅಷ್ಟೇನೂ ದೊಡ್ಡವಲ್ಲ. ಅವರ ಪತ್ನೀರವರಿಗೆ ಸ್ವಲ್ಪವೂ ಅಪಾಯ ಸಂಭವಿಸಲಿಲ್ಲ.

ರಷ್ಯಾ ರಾಜ್ಯದ ಗಲಭೆ

ಲಂಡನ್, ಜೂಲೈ ೭ ನೆ ಭಾನುವಾರ.—ರಷ್ಯಾ ರಾಜ್ಯದಲ್ಲಿ ಎರಡು ಮೂರು ಗುಂಪುಗಳ ಜನಗಳು ಸರ್ಕಾರದವರ ಕ್ರೂರ ಕೃತ್ಯಗಳನ್ನು ಪ್ರಜೆಗಳೆಲ್ಲಾ ಸೇರಿ ತಡೆದು ಪ್ರತೀಕಾರಮಾಡಿ, ಪ್ರಜಾ ಪ್ರತಿನಿಧಿಗಳೇ ರಾಜ್ಯಭಾರ ಕಾರ್ಯಗಳು ನಡಸಿಕೊಂಡು ಬರುವಂತೆ ಏರ್ಪಾಡು ಮಾಡಿಕೊಳ್ಳಬೇಕೆಂದು ಎಲ್ಲಾ ಕಡೆಗಳಲ್ಲೂ ನೋಟೀಸು ಇಸ್ತಿಹಾರು ಡಂಗೂರ ಮುಂತಾದವುಗಳ ಮೂಲಕ ತಿಳಿಸಿರುತ್ತಾರೆ.

ಮಾಸ್ಕೋ ಪಟ್ಟಣದ ಸೈನ್ಯಾಧಿಪತಿಗಳು ತಮ್ಮಲ್ಲೇ ಮಾತನಾಡಿಕೊಂಡು ಇನ್ನು ಮುಂದೆ ಸರ್ಕಾರದವರು ಪ್ರಜಾ ಹಿಂಸಕರವಾದ ಹುಕುಂ ಕೊಟ್ಟು ಸೈನಿಕರಿಗೆ ಅದನ್ನು ಚಲಾಯಿಸುವಂತೆ ಅಪ್ಪಣೆ ಮಾಡಿದರೆ ಅಂಥಾ ಕ್ರೂರಕೃತ್ಯಗಳನ್ನು ತಾವು ಮಾಡಲೇ ಕೂಡದೆಂತಲೂ ರಾಜ್ಯದಲ್ಲಿ ಪ್ರಜಾಪ್ರತಿನಿಧಿಗಳ ರಾಜ್ಯಭಾರವೇ ನೆಲೆಗೊಳ್ಳುವುದಕ್ಕೆ ತಾವೆಲ್ಲಾ ಸಹಾಯಕರಾಗಬೇಕೆಂತಲೂ ಇಸ್ತಿಹಾರುಗಳನ್ನು ಪ್ರಕಟಿಸಿರುತ್ತಾರೆ.

ಪರ್ಷಿಯಾ ಸಮಾಚಾರ

ಪರ್ಷಿಯಾ ರಾಜ್ಯದ ಷಾ ಸುಲ್ತಾನರವರ ಸಹೋದರನಾದ ಸಾಲಾರುದ್ದೌಲಾ ಎಂಬಾತನು ಸೈನಿಕರನ್ನು ಕಟ್ಟಿಕೊಂಡು ರಾಜ್ಯಭಾರವನ್ನು ಆಕ್ರಮಿಸಬೇಕೆಂದು ದಂಗೆ ಕಾರ್ಯಗಳನ್ನು ನಡಿಸಿ ಸಾರ್ಥಕವಾಗದೆ ಕಡೆಗೆ ಇಂಗ್ಲಿಷ್ ರಾಯಭಾರಿಗಳ ಆಶ್ರಯವನ್ನು ಹುಡುಕಿಕೊಂಡು ಹೋಗಿ ಸೇರಿದನಷ್ಟೆ. ಈಗ ಈತನನ್ನು ಪಹರೆಯಿಂದ ಟೆಹರಾನ್ ಎಂಬ ರಾಜಧಾನಿಗೆ ಕರೆದುಕೊಂಡು ಹೋಗಿದಾರೆ.

ಚೀಣಾದಲ್ಲಿ ಗಲಭೆ.

ಲಂಡನ್, ಜೂಲೈ ೭ನೇ ಭಾನುವಾರ.—ಚೀಣಾ ರಾಜ್ಯಕ್ಕೆ ಸೇರಿದ ಅಂಕೂಯ ಎಂಬ ಆಧಿಪತ್ಯದಲ್ಲಿ ಗವರ್ನರವರು ಸೈನ್ಯದ ಕವಾತನ್ನು ಮಾಡಿಸುತ್ತಿದ್ದಾಗ ಅವರನ್ನು ಕೊಂದುಹಾಕಬೇಕೆಂದು ಯಾರೋ ಮದ್ದಿನ ಗುಂಡ ಗಳನ್ನು ಅವರ ಬಳಿ ಎಸೆದರು. ಅವು ಒಡೆದು ಅನಾಹುತವಾಯಿತು. ಮೂರು ಜನರು ಸತ್ತರು, ಒಬ್ಬನಿಗೆ ಗಾಯವಾಗಿದೆ. ಆದರೆ ಗವರ್ನರಿಗೆ ಅಪಾಯವೇನೂ ಸಂಭವಿಸಲಿಲ್ಲ.

ಬಿರುದಿನ ಕಳುವು

ಲಂಡನ್, ಜೂಲೈ ೮ ಸೋಮವಾರ.—ವಿಲಾಯತಿಯ ಚಕ್ರವರ್ತಿಯವರು ಇಷ್ಟರಲ್ಲೇ ಐರ್ಲಾಂಡಿನಲ್ಲಿ ಸಂಚಾರ ಮಾಡಿಕೊಂಡು ಬರಬೇಕೆಂದು ಇದಾರೆ. ಅದರ ಮುಖ್ಯಪಟ್ಟಣವಾದ ಡಬ್ಲಿನ್ ನಗರದಲ್ಲಿ ಚಕ್ರವರ್ತಿಯವರನ್ನು ಸತ್ಕರಿಸುವುದಕ್ಕಾಗಿ ನಾನಾ ಪ್ರಯತ್ನಗಳನ್ನು ಮಾಡುತ್ತಿದಾರೆ. ಆ ಪಟ್ಟಣದ ಅರಮನೆಯೊಳಗೆ ಇದ್ದ ಸೆಂಟ್ ಪ್ಯಾಟ್ರಿಕ್ ಎಂಬ ಒಂದು ವಿಶೇಷವಾದ ರಾಜಬಿರುದು ಯಾರೋ ಕದ್ದುಬಿಟ್ಟದಾರೆ. ಅದು ಸುಮಾರೆ ಲಕ್ಷ ರೂಪಾಯಿ ಬಾಳುವುದು. ಇದನ್ನು ಬಹು ಆತುರದಿಂದ ಹುಡುಕಿಸುತ್ತಿದಾರೆ.

ಕೋರಿಯಾ ವಿಷಯ

ಲಂಡನ್, ಜೂಲೈ ೮ ನೆ ಸೋಮವಾರ.—ಹೇಗ್ ಪಟ್ಟಣದ ಪಂಚಾಯತಿ ಕೋರ್ಟಿಗೆ ಹೋಗಿರುವ ಕೋರಿಯಾ ರಾಜ್ಯದ ಪ್ರತಿನಿಧಿಗಳು ಆ ಪಂಚಾಯತಿ ಮೆಂಬರುಗಳ ಸಂಗಡ—ಕೋರಿಯಾ ಚಕ್ರವರ್ತಿಯವರಿಂದ ನಾವು ಅಧಿಕಾರವನ್ನು ಪಡೆದು ಬಂದಿರುತ್ತೇವೆ. ಈ ಅಧಿಕಾರ ಪತ್ರಗಳೆಲ್ಲಾ ಲಕ್ಕೋಟೆಯಲ್ಲಿ ಮುದ್ರೆ ಮಾಡಿ ಇಡಲ್ಪಟ್ಟಿವೆ. ಚಕ್ರವರ್ತಿಯವರು ಜಪಾನನವರ ಸೆರೆಯಲ್ಲಿರುತ್ತಾರಾದ್ದರಿಂದ ಇದನ್ನು ನಿಜವೆಂದು ಖಂಡಿತವಾಗಿ ಹೇಳಿದರೆ ತಮಗೆ ಜಪಾನನವರಿಂದ ಇನ್ನೇನು ಕೆಡಕು ಸಂಭವಿಸುವುದೋ ಎಂದು ಹೆದರುತ್ತಾರೆ ಎಂದು ತಿಳಿಸಿದರು.

ಸನ್ಮಾನ

ಲಂಡನ್, ಜೂಲೈ ೮ ನೆ ಸೋಮವಾರ.—ಬಿಕಾನಿರ್ ಸಂಸ್ಥಾನದ ಮಹಾರಾಜರವರು ವಿಲಾಯತಿ ರಾಜ್ಯದ ಯುವರಾಜರಾದ ಪ್ರಿನ್ಸ್ ಆಫ್ ವೇಲ್ಸ್ ಮತ್ತು ಅವರ ಪತ್ನೀರವರ ಸಂಗಡ ಕುಳಿತು ಭೋಜನ ಮಾಡಿದರು.

ತಾಲ್ಲೋಕು ವರ್ತಮಾನಗಳು.

ಚಿತ್ರದುರ್ಗ.—ಚಿತ್ರದುರ್ಗ ದ ತಾಲ್ಲೂಕು ಹಿರಿಯೂರು ನಾಗರ ಕಸ್ಬೆ ತ್ತು ನಿಂಗಪ್ಪನಾಗತಿಹಳ್ಳಿ ರೈತ ಬಂಜೈಯ್ಯನು ಕಳೆದ ಫೆಬ್ರವರಿ ತಾ ೧೩ ನೆ ಸಾಯಂಕಾಲ ೬ ಘಂಟೆಯಲ್ಲಿ ಕೆರೊಸಿನ್ ಟಿನ್ನನ್ನು ಒಡೆಯಬೇಕೆಂದು ಮನೆಯ ಹೊರಬಾಗಲ ಒಳಗೆ ಇಟ್ಟುಕೊಂಡು ಕುಡುಗೋಲಿನಿಂದ ಡಬ್ಬವನ್ನು ಕೊಯ್ಯುತ್ತಾ ಇರುವ ಕಾಲದಲ್ಲಿ ಕತ್ತಲೆಯಾದ್ದರಿಂದ ತನ್ನ ಮಗಳನ್ನು ದೀಪ ತೆಗೆದುಕೊಂಡು ಬಾ ಎಂದು ಹೇಳಿದನು. ಆ ಕಳಕ್ಕೆ ಅವನ ಮಗಳು ದೀಪದ ಬುಡ್ಡಿಯನ್ನು ತಂದು ಹತ್ತಿರ ನಿಂತಿದ್ದಳು. ಅವನು ಡಬ್ಬವನ್ನು ಕೀಳಿದ ಕೂಡಲೆ ಭರ್‍ರನೆ ಎಣ್ಣೆ ಮೇಲಕ್ಕೆ ಚಿಮ್ಮಿ ಮಗಳ ಕೈಯಲ್ಲಿದ್ದ ದೀಪಕ್ಕೆ ತಗಲಿ ಡಬ್ಬಕ್ಕೆ ಕೂಡಾ ಹತ್ತಿಕೊಂಡಿತು. ಇವನ ಮಗ ಇದನ್ನು ನೋಡಿ ಒಂದು ಕೊಡ ನೀರನ್ನು ಸುರಿದುಬಿಟ್ಟನು. ಉರಿಯು ಮತ್ತೂ ಪ್ರಬಲವಾಯಿತು. ಆ ಉರಿಯನ್ನು ಕಂಡು ಬಂಜೈಯ್ಯನು ಉರಿಯುತ್ತಿದ್ದ ಡಬ್ಬವನ್ನು ಹೊರಕ್ಕೆ ಎಸೆದನು. ಅದು ಹೊಸಲಿಗೆ ತಗಲಿ ಒಳಗೆ ಚಲ್ಲಿ ಚಪ್ಪರಕಟ್ಟಿಗೆ ಹತ್ತಿ ಮನೆಯೆಲ್ಲಾ ಬೆಂಕಿ ವ್ಯಾಪಿಸಿತು. ಇದನ್ನು ನೋಡಿ ಮನೆಯವರೆಲ್ಲರೂ ಹೊರಕ್ಕೆ ಹೊರಟು ಉಳಿದ ತನ್ನ ೨ ಜನ ಹೆಣ್ಣುಮಕ್ಕಳನ್ನು ಮರೆತುಬಿಟ್ಟನು. ಇಬ್ಬರು ಮಕ್ಕಳು, ೨ ಎತ್ತು ೨,೦೦೦ ರೂಪಾಯಿನ ದವಸ, ೯೦೦ ರೂಪಾಯಿ ಸುಟ್ಟು ಬೂದಿಯಾದವು. ರೂಪಾಯಿ ಮಾತ್ರ ಬೆಳ್ಳಿಗಟ್ಟಿಯಾಗಿತ್ತು. ಸುಮಾರು ಇದರಿಂದ ಅವನಿಗೆ ನಾಲ್ಕುಸಾವಿರ ರೂಪಾಯಿಗಳು ನಷ್ಟವಾಯಿತು. ತಿನ್ನಲಿಕ್ಕೆ ಅನ್ನವಿಲ್ಲದೆ ಅಲೆಯುತ್ತಿದಾನೆ. ಈ ವಿಷಯವನ್ನು ಪಟೇಲನು ಪೊಲೀಸಿಗೆ ತಿಳಿಸದಲ್ಲಿ ಪೊಲೀಸು ಆಫೀಸರು ಬಂದು ಅವನಿಗೆ ಬೇರೆ ಮನೆಯನ್ನು ಕಟ್ಟಿಕೊಂಡಿರುವಂತೆ ಅಪ್ಪಣೆ ಕೊಟ್ಟರು.

ಕುಣಿಗಲು.—ಇಲ್ಲಿನ ಆಸ್ಪತ್ರೆ ಅಸಿಸ್ಟೆಂಟ್ ಮೆ॥ ಮಹಮದ್ ಹುಸೇನ್ ಸಾಹೇಬರು ಕೆಲಸದಿಂದ ರಿಟೈರ್ ಆಗಿ ಹೋಗುವವರಾಗಿದ್ದಾರೆ. ಇವರು ಇಲ್ಲಿ ಬಂದ ೫ ವರ್ಷಗಳಾರಭ್ಯ ಸಕಾಲಕ್ಕೆ ಆಸ್ಪತ್ರೆಗೆ ಹೋಗುತ್ತಾ ತಮ್ಮ ಕೆಲಸದಲ್ಲಿ ಹೆಚ್ಚು ಶ್ರದ್ಧೆಯನ್ನು ವಹಿಸಿ ರೋಗಿಗಳಿಗೆ ಚಿಕಿತ್ಸೆಯಲ್ಲಿ ಕೇವಲ ನಂಬಿಕೆಯನ್ನು ಹುಟ್ಟಿಸಿ ಬಡಬಗ್ಗರ ವಿಷಯದಲ್ಲಿ ಬಹಳ ಕನಿಕರವನ್ನು ತೋರಿಸಿ ಆದರಣೆಯಿಂದ ನೋಡಿಕೊಳ್ಳುತ್ತಿದ್ದರು. ಈ ಸಂದರ್ಭದಲ್ಲಿ ಇಲ್ಲಿನ ಎ. ವಿ. ಸ್ಕೂಲ್ ಮಾಸ್ಟರುಗಳು ಸ್ಕೂಲಿನಲ್ಲಿ ಸ್ಥಳಿಕ ದೊಡ್ಡ ಮನುಷ್ಯರನ್ನೆಲ್ಲಾ ಸೇರಿಸಿ, ಮೆ॥ ಮಹಮದ್ ಹುಸೇನ್ ಸಾಹೇಬರನ್ನು ಬರಮಾಡಿಕೊಂಡು ಎಲ್ಲರಿಗೂ ಫಲಹಾರ ಕೊಟ್ಟು ಇಂಗ್ಲಿಷ್, ಕನ್ನಡ, ಸಂಸ್ಕೃತ, ಹಿಂದೂಸ್ಥಾನಿ ಭಾಷೆಗಳಲ್ಲಿ ಇವರನ್ನು ಅಗಲುವದರಿಂದ ತಮಗುಂಟಾದ ಪಶ್ಚಾತ್ತಾಪವನ್ನು ತೋರಿಸುವ ಅಡ್ರೆಸುಗಳನ್ನು ಒಪ್ಪಿಸಿದರು. ಸ್ಕೂಲ್ ಹುಡುಗರ ಮೂಲಕ ನಾಟಕ ಗಾನ ಮೊದಲಾದವುಗಳಿಂದ ಸಭೆಯವರನ್ನು ಸಂತೋಷ ಪಡಿಸಿದರು. ನಂತರ ಅಮಲ್ದಾರ್ ಮೆ॥ ಕೇಸರ್‌ಸಿಂಗ್‌ಯವರು ಸಭೆಯ ಪರವಾಗಿ ಅವರನ್ನು ವಂದಿಸಿದರು. ಸಭಿಕರಿಗೆ ಪುಷ್ಪ ಗಂಧ ತಾಂಬೂಲಗಳು ವಿನಿಯೋಗವಾಗಿ ಸಭೆ ಬರಖಾಸ್ತ್ ಆಯಿತು. ಇವರ ಸ್ಥಳಕ್ಕೆ ಬಂದಿರುವ ಮೆ॥ ಧರ್ಮಲಿಂಗ ಮೊದಲಿಯಾರ್ರು ಪ್ರಜೆಗಳಿಗೆ ಹಿತವನ್ನು ಉಂಟುಮಾಡುವರೆಂತ ನಂಬುತ್ತೇವೆ.—ಇಲ್ಲಿನ ಎ. ವಿ. ಸ್ಕೂಲ್ ಸ್ಥಿತಿ ಬಹು ತೃಪ್ತಿಕರವಾಗಿದೆ. ಮಿಡ್ಲ್ ಗರ್ಲ್ಸ್ ಸ್ಕೂಲಿನ ಅಭಿವೃದ್ಧಿಗಾಗಿ ಕೆಲವು ಬದಲಾವಣೆಗಳು ನಡಿದಿವೆ.—ಮಳೆ ಇಲ್ಲ, ಬಿಸಿಲು ಬಹು ಬಲವಾಗಿದೆ. ರೋಗಾದ್ಯುಪದ್ರವಗಳು ಕಮ್ಮಿಯಾಗಿ ಕ್ಷೇಮ ಚನ್ನಾಗಿದೆ.

ಮಂಡ್ಯ.—ಈಚೆಗೆ ಒಂದೆರಡು ವಾರಗಳಿಂದ ಇಲ್ಲಿನ ಬ್ರಾಹ್ಮಣರ ಬೀದಿಯಲ್ಲಿ ಕೆಲವರ ಮನೆಗಳಲ್ಲಿ ಇಲಿ ಬಿದ್ದು ಸಾಯುತ್ತವೆಂತಲೂ ಕೆಲವರು ಆಗಲೇ ಮನೆ ಬಿಟ್ಟು ಬೇರೆ ಸ್ಥಳದಲ್ಲಿ ವಾಸ ಮಾಡುತ್ತಾರೆಂತಲೂ ವರ್ತಮಾನ ಹುಟ್ಟಿರುತ್ತದೆ. ಈ ಮಳೆಗಾಲದಲ್ಲಿ ಪ

ಬಿಟ್ಟು ಹ್ಯಾಗೆ ಹೊರಗೆ ಹೋಗಿ ಗುಡಿಸಲಿನಲ್ಲಿ ವಾಸ ಮಾಡುವದು ಎಂಬ ಯೋಚನೆಯು ಎಲ್ಲಾ ಜನರಲ್ಲಿಯೂ ಉಂಟಾಗಿರುತ್ತದೆ. ಆದರೆ ಇನ್ನೂ ಯಾವ ವಿಧವಾದ ಕಾಹಿಲೆಯೂ ಇದುವರೆಗೆ ತಲೆದೋರಿಲ್ಲ. ಕಳೆದ ಶನಿವಾರ ರಾತ್ರಿ ಇಲ್ಲಿ ಒಳ್ಳೇ ಮಳೆ ಬಂತು. ಇದರಿಂದ ರೈತರಿಗೆ ಕೆಟ್ಟದ ಸಂತೋಷವು ಉಂಟಾಗಿರುತ್ತದೆ.—ಕಳೆದ ಮಾರ್ಚಿ ತಿಂಗಳಿಂದ ಇಲ್ಲಿನ ಪಿರ್ಸ್ಟ ಇಂಗ್ಲೀಷ್ ಸ್ಕೂಲ್ ಹೆಡ್ ಮಾಸ್ಟರು ವಿದ್ಯಾರ್ಥಿಗಳ ಅಭಿವೃದ್ಧಿಗಾಗಿ ಒಂದು ಸಂಘವನ್ನು ಏರ್ಪಡಿಸಿರುತ್ತಾರೆ. ಈ ಸಂಘವು ದಿನೇ ದಿನೇ ಅಭಿವೃದ್ಧಿಗೆ ಬಂದಿರುವದ್ದರಿಂದ ಈ ತಿಂಗಳಿನ ಮೊದಲನೆ ತಾರೀಖಿನ ದಿನ ಸಾಯಂಕಾಲ ಒಂದು ಕೂಟವನ್ನು ಇಟ್ಟರು. ಆ ಕೂಟದಲ್ಲಿ ಸಂಘಕ್ಕೆ ವಿದ್ಯಾರ್ಥಿಗಳ ಅಭಿಪ್ರಾಯದಂತೆ ವಿದ್ಯಾವರ್ಧಕಸಂಘವೆಂಬದಾಗಿ ಹೆಸರು ಇಟ್ಟು, ಈ ಸಂಘದ ಅಭಿವೃದ್ಧಿಗೆ ಅಧಿಕಾರಿಗಳನ್ನು ಚುನಾಯಿಸಿದರು. ಮಾರನೇ ದಿನ ಚರಿತ್ರೆ ಎಂಬುವದರ ವಿಷಯದಲ್ಲಿ ಉಪನ್ಯಾಸ ನಡೆಯಿತು.—ಕಳೆದ ಎರಡು ವರ್ಷಗಳಿಂದ ಇಲ್ಲಿ ಸಬ್ ರಜಿಸ್ಟ್ರಾರಾಗಿದ್ದ ಮೆ॥ ಬಸವಲಿಂಗಪ್ಪನವರು ಮೈಸೂರಿಗೆ ವರ್ಗವಾಗಿದ್ದಾರೆಂಬ ಸಮಾಚಾರವನ್ನು ಕೇಳಿ ವಿಷಾದಿಸಬೇಕಾಗಿದೆ. ಇವರು ಒಳ್ಳೆ ಗುಣಾಢ್ಯರು, ನಿಸ್ಪೃಹರು, ಎಲ್ಲಾ ಜನರ ಪ್ರೀತಿಗೆ ಪಾತ್ರರೂ ಆಗಿದ್ದರು. ಇವರಿಗೆ ಬದಲಾಗಿ ಮೆ॥ ಚಕ್ರಪಾಣಿ ರಾಯರು ಗೌರಿಬಿದನೂರಿನಿಂದ ಇಲ್ಲಿಗೆ ಬರುತ್ತಾರೆಂಬ ವದಂತಿಯು ಇದೆ.

ಹುಣಸೂರು.—ಹಿಂದೂದೇಶದ ಚಕ್ರವರ್ತಿಯವರಾದ ಏಳನೇ ಎಡ್ವರ್ಡರವರ ಜನ್ಮ ದಿನವನ್ನು ಆಚರಿಸಿ, ತಮ್ಮ ಭಕ್ತಿಯನ್ನು ತೋರಿಸುವದಕ್ಕಾಗಿ ಜೂನ್ ೨೬ನೇ ತಾ॥ ಇಲ್ಲಿನ ದೊಡ್ಡ ಮನುಷ್ಯರೆಲ್ಲಾ ಸೇರಿ, ಆ ದಿನವನ್ನು ಬಹು ಸಂತೋಷದಿಂದ ಕಳೆಯುವ ಹಾಗೆ ಬೇರೆ ಬೇರೆ ಏರ್ಪಾಡುಗಳನ್ನು ಮಾಡಿದ್ದರು. ಆ ದಿನ ಸಾಯಂಕಾಲ ತಾಲ್ಲೂಕು ಕಛೇರಿಯಲ್ಲಿ ನಮ್ಮ ಅಮಲ್ದಾರರೂ, ಡಾಕ್ಟರೂ, ಸಬ್ ರಜಿಸ್ಟ್ರಾರೂ, ಪೋ॥ ಇನ್‌ಸ್ಪೆಕ್ಟರೂ, ಮೆ॥ ತಿರುವೆಂಗಡಂ ಮೊದಲಿಯಾರ್ ಮುಂತಾದ ಮಹನೀಯರೆಲ್ಲಾ ಸೇರಿ, ಚಕ್ರವರ್ತಿಯವರ ಶ್ರೇಯೋಭಿವೃದ್ಧಿಗಾಗಿ ಒಂದು ಮೀಟಿಂಗ್ ಮಾಡಿದರು. ಈ ಮೀಟಿಂಗಿನಲ್ಲಿ ನಾಲ್ಕು ಜನ ಯೂರೋಪಿಯನ್ನರು ಸಹ ಹಾಜರಾಗಿದ್ದರು. ಅಮಲ್ದಾರರು ಉಪನ್ಯಾಸ ಮಾಡಿದರು. ಅನಂತರ ಅಲ್ಲಿ ಕೂಡಿದ್ದ ಪಿರ್ಸ್ಟ ಬಾಲಕಿಯರು ಚಕ್ರವರ್ತಿಯವರ ಮೇಲೆ ಕೆಲವು ಹಾಡುಗಳನ್ನು ಹೇಳಿ, ಸಭಿಕರನ್ನು ಸಂತೋಷಪಡಿಸಿದರು. ಬಾಲಕಿಯರಿಗೆಲ್ಲಾ ಮಿಠಾಯಿ ಹಣ್ಣು ಹಂಚಿದರು. ಹೊರಗಡೆ ಬ್ಯಾಂಡ್ ಆಗುತ್ತಾ ಇತ್ತು. ಪೋಲೀಸಿನವರ ಕವಾತು ನಡೆಯಿತು. ಮಧ್ಯಾಹ್ನ ಮುಸಾಫರ ಬಂಗಲೆ ಹತ್ತಿರ ಇರುವ ಮೈದಾನಿನಲ್ಲಿ ೧೧ ವಿಧವಾದ ಆಟಗಳು ಆಯಿತು. ಪ್ರತಿ ಒಂದು ಆಟದಲ್ಲಿಯೂ ಗೆದ್ದ ಮೊದಲನೇ ಎರಡನೆಯವರಿಗೆ ಇನಾಮುಗಳು ಕೊಡಲ್ಪಟ್ಟವು. ಈ ೧೧ ವಿಧವಾದ ಆಟಗಳಲ್ಲಿ ಕುಸ್ತಿ ಎಂಬುವದೊಂದು. ಇದರಲ್ಲಿ ಹುಡುಗರನ್ನೇ ಬಿಟ್ಟಿದ್ದರೆ ಚನ್ನಾಗಿತ್ತು. ಆದರೆ ದೊಡ್ಡವರನ್ನು ಸಹ ಆಟಕ್ಕೆ ಸೇರಿಸಿದ್ದರಿಂದ ಅನೇಕರಿಗೆ ಮನಸ್ತಾಪ ಉಂಟಾಗಿದೆ. ಕಡೆಯಾಗಿ ಹಾಕಿ ಎಂಬ ಚೆಂಡಾಟದ ತಮಾಷೆಯು ನಡೆಯಿತು. ಹೇಳಿಯರಿಗೂ ಇಂಗ್ಲೀಷರಿಗೂ ಮುಸಾಫರಿ ಬಂಗಲೆಯಲ್ಲಿ ಫಲಾಹಾರಗಳು ನಡೆಯಿತು. ಸಬ್ ರಜಿಸ್ಟ್ರಾರ್ ಮೆ॥ ಕೃಷ್ಣರಾಯರು ವೀಣೆಯ ಮೇಲೆ ಗಾನ ಮಾಡಿ, ಸಭಿಕರನ್ನು ಸಂತೋಷಪಡಿಸಿದರು. ಆ ದಿನ ಹಿಂದೂ ಗುಡಿಗಳಲ್ಲಿಯೂ ಮಹಮ್ಮದೀಯರ ಮಸೀತಿಯಲ್ಲಿಯೂ, ಕ್ರೈಸ್ತರ ದೇವಾಲಯಗಳಲ್ಲಿಯೂ ಆರಾಧನೆಗಳು ನಡೆಸಲ್ಪಟ್ಟವು. ಮಾರನೇ ದಿನ ನಮ್ಮ ಡಾಕ್ಟರವರು ಎಲ್ಲಾ ಸ್ಕೂಲುಗಳ ವಿದ್ಯಾರ್ಥಿಗಳಿಗೂ, ಹಿಂದುಸ್ಥಾನಿ ಸ್ಕೂಲ್ ಬಾಲಕಿಯರಿಗೂ ಸಕ್ಕರೆ ಬಾಳೆ ಹಣ್ಣುಗಳನ್ನು ಹಂಚಿದರು. ಜನರನ್ನು ಉಪಚರಿಸಿ ಸತ್ಕರಿಸುವದಕ್ಕಾಗಿ ಡಾ॥ ಶ್ರೀನಿವಾಸ ಐಯ್ಯಂಗಾರ್ರವರೂ ಮೆ॥ ತಿರುವೆಂಗಡ ಮೊದಲಿಯಾರೂ, ನೇಮಕವಾಗಿದ್ದರು.—ಇದೇ ಟವನಿನ ಅಂಗಡಿ ಬೀದಿಯಲ್ಲಿರುವ ಲಕ್ಷ್ಮಣ ಶೆಟ್ಟಿಯ ಮನೆಯಲ್ಲಿ ಇಲಿ ಸಾಯುತ್ತಿವೆಂತಲೂ, ಆತನು ಖಾಯಿಲೆಯಾಗಿರುತ್ತಾನೆಂತಲೂ ವರ್ತಮಾನ ಕೇಳುತ್ತೇನೆ. ಈ ವಿಷಯದಲ್ಲಿ ಅಮಲ್ದಾರರು ತುಂಬಾ ನಿಗಾ ಕೊಡುವದು ಮಾತ್ರವಲ್ಲದೆ, ಮ್ಯುನಿಸಿಪಾಲಿಟಿ ಪಾಕೀಜಾ ವಿಷಯದಲ್ಲಿ ಇನ್ನು ಹೆಚ್ಚು ನಿಗಾ ಕೊಡುವದು ಅವಶ್ಯ.—ಮೊದಲು ಮಾಂಸ ಸೇರು ಒಂದಕ್ಕೆ ೪—೫ ಆಣೆ ಇದ್ದದ್ದು ಈಗ ೬ ಆಣೆ ಆಗಿದ್ದಾಗ್ಯೂ ಒಳ್ಳೇ ಮಾಂಸ ಸಿಕ್ಕುವದಿಲ್ಲ. ತೂಕದಲ್ಲಿಯೂ ಸಹ ಕಮ್ಮಿ. ಈ ವಿಷಯದಲ್ಲಿಯೂ ಮೇಲ್ಪಟ್ಟ ಅಧಿಕಾರಿಗಳು ನಿಗಾ ಕೊಡುವದು ಅವಶ್ಯ.

ಬೆಂಗಳೂರು.—ಬೆಂಗಳೂರು ದಂಡಿನಲ್ಲಿ ನೆಲಸಿ ಮಾರುವ ಮಂಡಿಗಳ ಹತ್ರ ಇದೇ ತಿಂಗಳು ಮೂರನೇ ತಾರೀಖು ಬುಧವಾರ ರಾತ್ರಿ ಒಂದು ಖೂನಿ ಮೊಕದ್ದಮೆ ನಡೆಯಿತು. ಒಬ್ಬ ಮುಸಲ್ಮಾನರವನು ತನ್ನ ಹೆಂಡತಿಯ ತಂಗಿಯನ್ನು ಮತ್ತು ಈಕೆಯನ್ನು ಸ್ನೇಹ ಮಾಡಿದ ಒಬ್ಬ ಗಂಡಸನ್ನೂ ರಾತ್ರಿಯಲ್ಲಿ ಕಂಡು ಹಿಡಿದು ಕಬ್ಬು ಕತ್ತರಿಸುವ ಮಚ್ಚಿನಿಂದ (ಕತ್ತಿಯಿಂದ) ಕಡಿದನು. ಮೊದಲು ಗಂಡಸನ್ನು ಹೊಡೆದನು. ಕೊಂಚ ಹೊತ್ತಿನ ಮೇಲೆ ಗಂಡಸು ಸತ್ತುಹೋದನು. ಆ ಹೆಂಗಸು ಇದನ್ನು ನೋಡಿ ಅರಚಿಕೊಂಡಾಗ ಆಕೆಯನ್ನು ಸಹ ಹೊಡೆದನು. ಪೆಟ್ಟು ಆಕೆಯ ಮುಖದ ಮೇಲೆ ಬೀಳಲು ಆಕೆಯ ಕಿವಿಯೂ ಮತ್ತು ಅದೇ ಪಾರ್ಶ್ವದ ಕೆನ್ನೆಯ ಕೊಂಚಭಾಗವೂ ಕತ್ತರಿಸಿ ಹೋಯಿತು. ಇಷ್ಟು ಮಾಡಿ ತಾನೇ ಪೋಲೀಸ್ ಸ್ಟೇಷನ್ನಿಗೆ ಹೋಗಿ ಹೇಳಿಬಿಟ್ಟನು. ಆಗ ತನ್ನ ಕೈಯಲ್ಲಿ ಮಚ್ಚನ್ನಿಟ್ಟುಕೊಂಡಿದ್ದನು. ಅಲ್ಲಿನ ಪೋಲೀಸ್ ಕಾನ್‌ಸ್ಟೇಬಲೊಬ್ಬನು ಈತನನ್ನು ನೋಡಿ—ಬಹು ಒಳ್ಳೇ ಕೆಲಸ ಮಾಡಿದೆ. ಎಲ್ಲಿ ಕತ್ತಿಯನ್ನು ನೋಡೋಣ ಎಂದು ಕತ್ತಿಯನ್ನು ಉಪಾಯದೊಡನೆ ತೆಗೆದುಕೊಂಡು, ಈತನನ್ನು ಲಾಕಪ್ ಮಾಡಿಬಿಟ್ಟನು. ಸತ್ತುಹೋದ ಗಂಡಸು ಈಕೆಯನ್ನಿಟ್ಟುಕೊಂಡಿದ್ದನೆಂತಲೂ ಮತ್ತು ಈ ಹೆಂಗಸು ತನ್ನ ಸ್ವಂತ ಗಂಡನಿಂದ ಪರಿತ್ಯಾಗವಾಗಿದ್ದಳೆಂತಲೂ, ಖೂನಿ ಮಾಡಿದ ತನ್ನ ಭಾವನ ಮನೆಯಲ್ಲೇ ಇದ್ದಳೆಂತಲೂ ಗೊತ್ತಾಗಿದೆ. ಈ ಹೆಂಗಸಿಗೂ ಖೂನಿಮಾಡಿದ ಆಕೆಯ ಭಾವನಿಗೂ ಈಚೆಗೆ ಸ್ನೇಹ ಬೆಳೆದಿತ್ತೆಂತಲೂ ಆದರಿಂದ ಇಂತಹ ಹತ್ಯ ನಡೆಯಿತೆಂತಲೂ, ಮತ್ತು ಆಕೆಯು ಬಹಳ ಕೆಟ್ಟ ಕಾರ್ಯಗಳಲ್ಲಿ ಪ್ರವೇಶಮಾಡಿ ಇಂತಹ ಶಿಕ್ಷೆಗೆ ಗುರಿಯಾದಳೆಂತಲೂ ಹೇಳುತ್ತಾರೆ. ಈ ಹೆಂಗಸು ಆಸ್ಪತ್ರೆಯಲ್ಲಿ ಜೀವದಿಂದಿದ್ದಾಳೆ.—ಜೂನ್ ತಿಂಗಳು ೨೮ ನೆ ತಾ॥ ಶುಕ್ರವಾರ ದಿವಸ ಬೆಂಗಳೂರ್ ಸಿಟಿ ಕಂಬಳಿ ಮಿರ್ಷ ಕೆರೆಯಲ್ಲಿ ಯಾರೋ ಹಾವರು ರೋಮನ್ ಕ್ಯಾಥೊಲಿಕ್ ಪುತಸ್ಥರು ಅಂದರೆ ತಂದೆಯೂ ಇಬ್ಬರು ಯೌವನಸ್ಥರಾದ ಕುಮಾರರೂ ಹಳಿಗೆ ವ್ಯಾಸದಿಂದ ಮತ್ಸ್ಯಗಳನ್ನು ಹಿಡಿಯಲು ಕೆರೆಗೆ ದಕ್ಷಿಣಾಭಿಮುಖವಾಗಿರುವ ಒಂದು ದೊಡ್ಡ ಬಂಡೆಯ ಬಳಿ ಕೂತಿದ್ದರು. ತತ್ಸಮಯದಲ್ಲಿ ಕಿರಿಯವನು ಮತ್ಸ್ಯವು ಗಾಳವನ್ನು ಎಳೆದದ್ದನ್ನು ನೋಡಿ ತಾನು ಕೂತಿದ್ದ ಸ್ಥಳದಿಂದ ಎದ್ದು ಮತ್ಸ್ಯವನ್ನು ಹಿಡಿಯಲು ಹೋದಾಗ, ಕಾಲಿನಲ್ಲಿ ಬೂಟ್ಸುಗಳನ್ನು ಹಾಕಿದ್ದದ್ದರಿಂದ ಬಂಡೆಯ ಮೇಲೆ ಕಾಲು ಜಾರಿ, ನೀರಲ್ಲಿ ಬಿದ್ದುಬಿಟ್ಟನು. ಕುಮಾರನು ನೀರಿನಪಾಲಾದದ್ದನ್ನು ತಂದೆಯು ನೋಡಿ, ಅವನನ್ನು ಎಳೆದು ಬದುಕಿಸಲು ಹೋದನು. ತಾನೂ ಸಹ ಕುಮಾರನ ಸಂಗಡ ಗಂಗೆಗೆ ತುತ್ತಾದನು. ಇದನ್ನು ನೋಡುತ್ತಿದ್ದ ಜ್ಯೇಷ್ಠಪುತ್ರನು ರೋದನಗೈಯುತ್ತಾ ಪೋಲೀಸ್ ಸ್ಟೇಷನ್ನಿಗೆ ಓಡಿಹೋಗಿ ಅವರನ್ನು ಕರೆತಂದನು. ಅವರು ಬಂದು ಆ ದಿವಸವೆಲ್ಲಾ ಶವಗಳನ್ನು ಹುಡುಕಿಸಿದಾಗ್ಯೂ ಅವು ಸಿಕ್ಕಲೇ ಇಲ್ಲ. ಮಾರನೆ ದಿನ ಎರಡು ಶವಗಳೂ ಸಿಕ್ಕಿದವು. ಗಾಡಿಯ ಮೇಲೆ ಹಾಕಿಸಿಕೊಂಡು ಪೋಲೀಸಿನವರಿಂದ ಮಹಜರ್ ಬಗ್ಗೆ ಹೋದವು.

ಚಿಕ್ಕಮಗಳೂರು.—ಮಳೆಯು ಬೀಳುತ್ತಲೇ ಇದೆ. ಪೈರುಗಳೆಲ್ಲಾ ಚನ್ನಾಗಿವೆ. ಕೆರೆ ಕಟ್ಟೆಗಳಿಗೆ ಮಾತ್ರ ಇನ್ನೂ ನೀರು ಬಂದಿಲ್ಲ. ಊರಿನಲ್ಲಾದರೋ ೧೦—೧೫ ದಿವಸಗಳಿಗೊಂದು ಸಾರಿ ಪ್ಲೇಗ್ ರೋಗವು ಕಾಣಿಸಿಕೊಳ್ಳುತ್ತಾ, ಇಲ್ಲಿನ ಪೋರ್ಟರ್ ಪೇಟೆಯಲ್ಲಿ ೪ ನೆ ತಾ॥ ನಲ್ಲಿ ಒಬ್ಬನು, ೫ ನೆ ತಾ. ಒಬ್ಬನು ರೋಗದಲ್ಲಿ ಕಾಲವಾದರೆಂದೂ ಇನ್ನೊಂದು ಮಗುವು ಅದೇ ಮನೆಯಲ್ಲಿ ರೋಗಪೀಡಿತವಾಗಿದೆ ಎಂದೂ ವರ್ತಮಾನ.—ಇಲ್ಲಿಂದ ಬೇರೆ ಕಡೆಗಳಿಗೆ ವರ್ಗವಾದ ಆಫೀಸರುಗಳಿಗೆಲ್ಲಾ ೧ ನೆ, ೫ ನೆ, ೬ ನೆ ತಾರೀಖುಗಳಲ್ಲಿ ಹೊರಟು ಹೋದರು. ಡೆಪ್ಯುಟಿ ಕಮಿಷನರಿಗೆ ಮಾತ್ರ ಅವರ ಬಂಗಲೆಯಲ್ಲಿಯೇ ಡಿಸ್ಟ್ರಿಕ್ಟಿನ ನೌಕರರೆಲ್ಲಾ ಸೇರಿ ಒಂದು ಟೀ ಪಾರ್ಟಿಯನ್ನು ಇಟ್ಟುಕೊಂಡು, ಅವರನ್ನು ಸಂತೋಷಪಡಿಸಿದರೆಂದೂ ಡೆಪ್ಯುಟಿ ಕಮಿಷನರು ೫ ನೆ ತಾ॥ ಇಲ್ಲಿನ ಮಹಮ್ಮದೀಯರ ಅಪೇಕ್ಷೆಯಂತೆ ಅವರ ಅಂಜುಮಾನ್ ಸ್ಕೂಲಿಗೆ ಹೋಗಿ ಅವರಿಂದ ಹಾರತುರಾಯಿಗಳನ್ನು ಕೊಂಡು ಅಲ್ಲಿ ಓದುವ ಹುಡುಗರ ತಿಂಡಿಗಾಗಿಯೂ ಆ ಸ್ಕೂಲಿನ ಫಂಡಿಗಾಗಿಯೂ ಕೆಲವು ರೂಪಾಯಿಗಳನ್ನು ಕೊಟ್ಟರೆಂದೂ ವರ್ತಮಾನ.—ಕಳೆದ ತಿಂಗಳು ಸುಮಾರು ೯ ನೆ ತಾ॥ ಡಾಕ್ಟರ್ ಅಪ್ಪಯ್ಯನವರ ಅಳಿಯನು ಇಲ್ಲಿನ ಕೋಟೆ ಕೆರೆಗೆ ಶಿಕಾರಿಗಾಗಿ ಹೋಗಿ ಏರಿಯ ಮೇಲಿನಿಂದ ಪಕ್ಷಿಯನ್ನು ಹೊಡೆದ ಸಣ್ಣ ಗುಂಡು ಒಳಗೆರೆಯಲ್ಲಿ ದನಗಳಿಗೆ ನೀರು ಕುಡಿಸುತ್ತಿದ್ದ ಸುಮಾರು ಹತ್ತು ವರುಷದ ಒಬ್ಬ ಬಡಹುಡುಗನ ತೊಡೆಗೆ ತಗಲಿ ಅವನು ಇದುವರಿಗೂ ಆಸ್ಪತ್ರೆಯ ಚಿಕಿತ್ಸೆ ಹೊಂದುತ್ತಿದ್ದು ಈಗ ಗುಣಪಟ್ಟಿರುತ್ತಾನೆ. ಆ ಹುಡುಗನು ಆ ನೋವಿನ ಕಾಲೂರಿ ನಡಿಯುವದಿಲ್ಲ. ಆ ತೊಡೆಯಲ್ಲಿ ಸೇರಿದ ಗುಂಡನ್ನು ತೆಗೆದರೋ ಇಲ್ಲವೋ ತಿಳಿಯದು. ಗುಂಡು ತೊಡೆಯಲ್ಲಿಯೇ ಇದ್ದರೆ ಆ ಹುಡುಗನಿಗೆ ತೊಂದರೆಯಾಗುವದೆಂದು ಹೇಳುತ್ತಾರೆ. ಈಗ ಆ ಹುಡುಗನನ್ನು ಪೋಲೀಸಿನವರು ವಿಚಾರಿಸುತ್ತಿದ್ದಾರೆ.—ಶಿವಮೊಗ್ಗೆಯಿಂದ ಸೆಷನ್ಸ್ ಜಡ್ಜಿಯವರು ಇಲ್ಲಿಗೆ ಬಂದು ಒಂದು ವಾರದಿಂದಲೂ ಕೊಪ್ಪ, ಯಡೆಹಳ್ಳಿ ತಾಲ್ಲೂಕುಗಳ ಕೊಲೆ ಮೊಕದ್ದಮೆಯನ್ನು ವಿಚಾರಿಸುತ್ತಿದ್ದಾರೆ. ಅದು ಫೈಸಲ್ ಆಗುವದಕ್ಕೆ ಇನ್ನೂ ಸುಮಾರು ಎರಡು ವಾರಗಳು ಹಿಡಿಯಬಹುದೆಂದು ಹೇಳುತ್ತಾರೆ.—ಮೊದಲನೇ ತಾರೀಖಿನಿಂದ ಮರ್ಸಿಫ್ ಕೋರ್ಟು ಪ್ರಾರಂಭವಾಗಿ ಕೆಲಸ ನಡಿಯುತ್ತಲಿದೆ. ಬೇರೆ ಬೇರೆ ಕಡೆ ಚದರಿ ಹೋಗಿದ್ದ ಎರಡನೇ ಗ್ರೇಡ್ ಪ್ಲೀಡರುಗಳೆಲ್ಲಾ ಬಂದು ಸೇರಿಕೊಳ್ಳುತ್ತಿದ್ದಾರೆ.—ಆಕ್ಟಿಂಗ್ ಡೆಪ್ಯುಟಿ ಕಮಿಷನರು ೬ ನೆ ತಾ॥ ಬೆಳಗ್ಗೆ ಡಿಸ್ಟ್ರಿಕ್ಟಿನ ಚಾರ್ಜನ್ನು ವಹಿಸಿಕೊಂಡರು.—ಇಲ್ಲಿನ ಹೈ ಸ್ಕೂಲ್ ಹೆಡ್ ಮಾಸ್ಟರ್ ಮೆ॥ ಶ್ರೀನಿವಾಸಯ್ಯಂಗಾರರಿಗೆ ಹಾಸನಕ್ಕೆ ವರ್ಗವಾಗುವದೆಂಬ ವದಂತಿ ಇದೆ.—ಈ ತಾಲ್ಲೂಕಿಗೆ ಸೇರಿದ ಕೆಲವು ದೊಡ್ಡಿಗಳ ಏರ್ಪಾಡು ಸರಿಯಾಗಿಲ್ಲವೆಂತಲೂ ದೊಡ್ಡಿಗಳಿಗೆ ಸೇರಿದ ಜಾನುವಾರುಗಳಿಗೆ ನಿಲ್ಲುವದಕ್ಕೆ ನೆರಳೂ ಮಳೆಗೆ ಆಶ್ರಯವೂ ಇಲ್ಲದೆಯೂ ಸಕಾಲಕ್ಕೆ ಹುಲ್ಲೂ ನೀರೂ ದೊರಕದೆಯೂ ಕೃಶವಾಗುತ್ತಲಿವೆ ಎಂದೂ ಕೇಳುತ್ತೇನೆ. ಹಾಗಿದ್ದ ಪಕ್ಷದಲ್ಲಿ ಅಮಲ್ದಾರರು, ಎಲ್ಲಾ ದೊಡ್ಡಿಗಳ ಕಂಟ್ರಾಕ್ಟರಿಗೂ ತಿಳಿಸಿ ಮೂಗು ಪ್ರಾಣಿಗಳಿಗೆ ಹಿಂಸೆಯಾಗದ ರೀತಿಯಲ್ಲಿ ನಡಿಸುವಂತೆ ಅಪ್ಪಣೆ ಕೊಡುವದು ಒಳ್ಳೇದು.

ಚನ್ನರಾಯಪಟ್ಟಣ.—ಈ ಊರಿನಲ್ಲಿ ಈಗ ಜನಗಳ ಕಾಯಿಲೆ ಕಮ್ಮಿ ಆಗುತ್ತಾ ಬಂದಿದೆ. ಕೆರೆಯಲ್ಲಿ ಸ್ವಲ್ಪ ನೀರು ಇರುತ್ತೆ. ಕೆರೆ ಕೆಳಗೆ ಸುಮಾರು ೩ ಮೈಲಿ ಫಾಸಲೆ ವರಿಗೂ ತರಿ ಜಮೀನುಗಳು ಇರೋದರಿಂದ ಈ ಜಮೀನುಗಳಿಗೆಲ್ಲಾ ಈ ಕೆರೆ ನೀರೇ ಸಪ್ಲೈ ಆಗಬೇಕು. ರಾಯಗಾಲುವೆಯಲ್ಲಿ ಸದಾ ನೀರು ಹರಿಯುತ್ತಲೇ ಇದೆ. ಕಾಲುವೆ ಮತ್ತು ಊರೊಳಗಿರುವ ಭಾರೀ ಕಲ್ಯಾಣಿ ಈ ನೀರುಗಳನ್ನೇ ಜನರು ಉಪಯೋಗಿಸಬೇಕಾಗಿದೆ. ಮಳೆ ಸುತರಾಂ ಆಗಿಲ್ಲ. ಕೊಂಚ ಮೋಡ ಕಟ್ಟುವದೂ, ಹಾಗೇ ಕರಗಿಹೋಗುವದೂ ಈ ರೀತಿ ಇರುತ್ತೆ. ಗಾಳಿಯ ಅಬ್ಬರವು ಹೆಚ್ಚಾಗಿದೆಯೇ ಹೊರತು ವೃಷ್ಟಿ ನೇರ ಆಗಿಲ್ಲ. ದಿನಸಿ ಧಾನ್ಯಗಳು ದಿನೆ ದಿನೆ ಹೆಚ್ಚುತ್ತಲೇ ಇವೆ. ರೈತರೆಲ್ಲಾ ಹೊಲಗಳನ್ನು ಉತ್ತುಕೊಂಡು ದೇವೇಂದ್ರನ ಕೃಪ ಎಂದಿಗೆ ದೊರೆಯುತ್ತೋ ಎಂದು ಹಂಬಲಿಸುತ್ತಾ ಇರುತ್ತಾರೆ.—ನಮ್ಮ ಅಮಲ್ದಾರ್ ಮೆ॥ ಎಸ್ ಎನ್ ಅಪ್ಪಣ್ಣಯ್ಯಂಗಾರ್ರು ಬಹಳ ಮುತುವರ್ಜಿಯಿಂದ ಟವನ್ ಇನ್‌ಸ್ಪೆಕ್ಷನ್ ಮಾಡಿ, ಊರು ಪಾಕೀಜಾ ವಿಷಯದಲ್ಲಿ ನಿಗಾ ಕೊಟ್ಟಿರುವದರಿಂದ ರಸ್ತೆ ಗಲ್ಲಿ ವಗೈರೆಗಳೆಲ್ಲವೂ ಗಲೀಜು ಇಲ್ಲದೆ ಪಾಕಾಗಿರುತ್ತವೆ. ಇವರು ಏನೂ ತಿಳಿಯದ ಮೂಢ ಜನಗಳಾದ ಈ ಊರು ಪಂಚಮರಿಗೋಸ್ಕರ ಒಂದು ಸ್ಕೂಲನ್ನು ಧರ್ಮಾರ್ಥವಾಗಿ ಕಟ್ಟಿಸುತ್ತಾ ಇರುತ್ತಾರೆ. ಉತ್ತರೋತ್ತರ ಪಂಚಮರ ವಿದ್ಯಾಭಿವೃದ್ಧಿಯೂ ಹೆಚ್ಚಬಹುದೆಂತ ಕಾಣುತ್ತೆ.—ಈ ಟವನ್ ಪೋಲೀಸ್ ಇನ್‌ಸ್ಪೆಕ್ಟರಾಗಿದ್ದ ಮೆ॥ ತಿರುಮಲ ರಾಯರಿಗೆ ಚಿಕ್ಕಬಳ್ಳಾಪುರಕ್ಕೆ ವರ್ಗವಾದದ್ದರಿಂದ ಜನಗಳೆಲ್ಲರೂ ಬಹಳ ಜಾಗ್ರತೆಯಾಗಿ ಅವರಿಗೆ ವರ್ಗವಾದದ್ದನ್ನು ಕಂಡು ತುಂಬಾ ವಿಷಾದಪಡುತ್ತಾರೆ.—ಈ ಊರು ಕೋಟೆಯಿಂದ ಪೇಟೆಗೆ ಹೋಗುವ ಪಬ್ಲಿಕ್ ರೋಡಿನಲ್ಲಿ ಸೇತುವೆ ಮೇಲೆ ಒಂದು ಕಲ್ಲು ಚಪ್ಪಡಿ ಮುರಿದುಬಿದ್ದು ಸುಮಾರು ೩—೪ ತಿಂಗಳಾಯಿತು. ಶ್ರವಣಬೆಳಗುಳದ ಸಂತೆಗೆ ಈ ಊರಿನಿಂದ ೩೦—೪೦ ಗಾಡಿಗಳು ಹೋಗಿ ಬರಬೇಕಾಗಿದೆ. ರಾತ್ರಿ ೯ ಘಂಟೆ ವೇಳೆಯಲ್ಲಿ ಮೇಲ್ಕಂಡ ಗಾಡಿಗಳು ಬರುವಾಗ್ಗೆ ಗಾಡಿಗಳಾಗಲಿ ಜನಗಳಾಗಲಿ ಬಿದ್ದು ಅಪಾಯ ಸಂಭವಿಸುವದರಲ್ಲಿ ಏನೂ ಸಂದೇಹವಿಲ್ಲ. ಇದರ ರಿಪೇರಿ ವಿಷಯದಲ್ಲಿ ತಾಲೂಕು ಅಧಿಕಾರಿಗಳು ನಿಗಾಕೊಡಬೇಕೋ, ಇಂಜನಿಯರ್ ಇಲಾಖೆಯವರು ಗಮನಕ್ಕೆ ತೆಗೆದುಕೊಳ್ಳಬೇಕೋ, ಅಥವಾ ಕಂಟ್ರಾಕ್ಟುದಾರರ ಉದಾಸೀನವೋ ಗೊತ್ತಾಗದೆ ಜನಗಳೆಲ್ಲರೂ ತುಂಬಾ ವಿಷಾದಪಡುತ್ತಿದ್ದಾರೆ.—ಇದೇ ಊರು ವಾಸಸ್ಥರಾಗಿಯೂ, ಸ್ಮಾರ್ತ ಬ್ರಾಹ್ಮರಾಗಿಯೂ, ಸುಮಾರು ೬೦ ವರ್ಷ ವಯಸ್ಸುಳ್ಳವರಾಗಿಯೂ ಇದ್ದ ಹೊಸ ಬಾಗಿಲು ಸುಬ್ರಾಯರು ಎಂಬುವರು ಕಳೆದ ಮಾಹೆ ೧೫ ನೇ ತಾರೀಖಿನಲ್ಲಿ ಹೊಳೆನರಸೀಪುರದ ಮರ್ಸಿಫ್ ಕೋರ್ಟಿಗೆ ಸ್ವಂತ ವ್ಯಾಜ್ಯಕ್ಕೋಸ್ಕರ ಹೋದವರು ಇವತ್ತಿನ ವರೆಗೂ ಪತ್ತೆಯೇ ಇಲ್ಲ. ಅವರ ಬಂಧುವರ್ಗದವರಿಗೆಲ್ಲಾ ಕಾಗದ ವಗೈರೆ ಬರೆದು ಕೇಳಿದ್ದಕ್ಕೆ ಪ್ರತಿ ಒಂದು ಊರಿನಿಂದಲೂ ತಮ್ಮ ಸ್ಥಳಗಳಿಗೆ ಬಂದೇ ಇಲ್ಲವೆಂತ ಜವಾಬನ್ನು ಬರೆದು ಇರುತ್ತಾರೆ. ಇಲ್ಲಿ ಅವರ ಮನೆಯವರ ದುಃಖವನ್ನು ಹೇಳತೀರದು. ದಯವಿಟ್ಟು ನಮ್ಮ ಪತ್ರಿಕಾ ವಾಚಕರ್ಯ ಇವರು ಯಾವದಾದರೂ ಸ್ಥಳಕ್ಕೆ ಬಂದು ಕಾಯಿಲೆ ವಗೈರೆಯಿಂದ ನರಳುತ್ತಾ ಇದ್ದರೆ ಈ ಮೂಲಕ ತಿಳಿಯಪಡಿಸಬೇಕಾಗಿ ಪ್ರಾರ್ಥಿಸುತ್ತೇವೆ.

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ನಿಗಾ ಕೊಡಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿ.

ಕರೆಸ್‌ಪಾಂಡೆನ್ಸ್.

ಕರ್ನಾಟಕ ಮತ್ತು ಯುನಾನಿ ಪಂಡಿತರು.

ಅಯ್ಯಾ,

ತಮ್ಮ ಆಫೀಸಿನಿಂದ ಪ್ರಕಟವಾದ ಜೂನ್ ೨೦ ಮತ್ತು ೨೭ನೇ ಗುರುವಾರದ ಪತ್ರಿಕೆಗಳಲ್ಲಿ ಪ್ರಕಟವಾದ ವಿಶೇಷ ಸಂಗತಿಯನ್ನು ನೋಡಿ ತುಂಬಾ ಸಂತೋಷವೂ ತುಂಬಾ ಕೃತಜ್ಞತೆಯೂ ಉಳ್ಳವನಾಗಿ ಮೈಸೂರು ಗವರ್ನಮೆಂಟಿನವರನ್ನು ತುಂಬಾ ವಂದಿಸುತ್ತೇನೆ. ತಾ. ೨೦ನೇ ಪತ್ರಿಕೆಯಲ್ಲಿ ನೇಟಿವ್ ಯುನಾನಿ ಪಂಡಿತರು ಬಾಗಿಲೆ ಜನಗಳಿಗೆ ಸರ್ಟಿಫಿಕೇಟು ಕೊಡಬಹುದೆಂತ ಪ್ರಕಟವಾಗಿತ್ತು. ಮತ್ತು ೨೭ ನೇ ತಾ॥ ಪತ್ರಿಕೆಯಲ್ಲಿ ಚನ್ನಪಟ್ಟದ ಮೌಲ್ವಿ ಹಕೀಂ ಸಯ್ಯದ್ ಸಾಹೇಬರು ಈ ವಿಚಾರವನ್ನು ಕುರಿತು ಪ್ರಕಟಿಸಿರುವ ವಿಚಾರವನ್ನು ನೋಡಿದೆನು. ಆದರೆ ಈಗ ಪ್ರತಿ ತಾಲ್ಲೂಕು ಕಸಬಾದಲ್ಲಿಯೂ ವೈದ್ಯ ಶಾಸ್ತ್ರವನ್ನು ಓದಿ ತಿಳುವಳಿಕೆಯಿಂದ ಚಿಕಿತ್ಸೆ ಮಾಡತಕ್ಕ ಪಂಡಿತರು ಕೊಂಚವಾಗಿದ್ದಾರೆ. ಆಳಲೇಕಾಯಿ ಪಂಡಿತರು ತುಂಬಾ ಇರುತ್ತಾರೆ. ಎಲ್ಲಾ ವೈದ್ಯರೂ ಹಕೀಮರೂ ಈ ವಿಷಯದಲ್ಲಿ ಪ್ರವೇಶಮಾಡಿದರೆ ಅನೇಕ ನೌಕರರು ತಮ್ಮ ಸ್ವಂತ ಕೆಲಸಕ್ಕಾಗಿ ಸರ್ಟಿಫಿಕೇಟು ತೆಗೆದುಕೊಂಡು ಹೊರಟುಹೋದರೆ ಸರ್ಕಾರಕ್ಕೆ ಎಷ್ಟು ನಷ್ಟವಾಗುತ್ತೆ? ಆದ್ದರಿಂದ ಮೈಸೂರು ಸರ್ಕಾರದವರು ದಯವಿಟ್ಟು ಪ್ರತಿ ತಾಲ್ಲೂಕು ಕಸಬಾ ಮುನಿಸಿಪಲ್ ಮೆಂಬರುಗಳ ಅಭಿಪ್ರಾಯದ ಮುಖಾಂತರ ಮತ್ತು ನಡತೆ ನೋಡಿ ಸರ್ಕಾರದಿಂದ ಪ್ರತ್ಯೇಕ ಅವರವರಿಗೆ ಹುಕುಂ ಕೊಡಿಸುವದು ಒಳ್ಳೇದೆಂದು ೨೭ನೇ ತಾ. ಪತ್ರಿಕೆಯಲ್ಲಿ ಪ್ರಕಟಿಸಿರುತ್ತಾರೆ. ಇದು ಕೆಲವರಿಗೆ ಅನುಕೂಲ, ಕೆಲವರಿಗೆ ಅನಾನುಕೂಲವಾಗುತ್ತೆ. ಯಾಕೆಂದರೆ ಮುನಿಸಿಪಲ್ ಮೆಂಬರುಗಳಿಗೆ ಇವರು ಓದಿರತಕ್ಕದ್ದು ಯೋಗ್ಯತೆ ಹ್ಯಾಗೆ ಗೊತ್ತಾಗುತ್ತೆ? ಆದಪ್ರಯುಕ್ತ ಮೈಸೂರು ರಾಜಧಾನಿಯಲ್ಲಿ ಈ ವಿದ್ಯೆಕ್ಕಾಗಿ ಇಟ್ಟಿರುವ ಅಂಬಲೀ ಪಂಡಿತರು, ಕೆಂಪರಾಮಾ ಪಂಡಿತರ ಸ್ಕೂಲಿನಲ್ಲಿ ಪ್ರತಿ ತಾಲ್ಲೂಕಿನ ಪಂಡಿತರೂ ಹೋಗಿ ಓದಿ ಸರ್ಟಿಫಿಕೇಟು ತಂದಿರುವವರು ಅಥವಾ ಅಲ್ಲಿಗೆ ಹೋಗಿ ಯೋಗ್ಯತಾ ಸರ್ಟಿಫಿಕೇಟನ್ನಾದರೂ ತಂದವರು ಮತ್ತು ಯಾವ ಡಾಕ್ಟರಿಂದಲೇ ಆಗಲಿ ಸರ್ಟಿಫಿಕೇಟು ಪಡೆದಿರತಕ್ಕವರು ಇಂಥವರು ಸರ್ಕಾರಿ ಖಾಯಿಲೆ ನೌಕರರಿಗೆ ಸರ್ಟಿಫಿಕೇಟು ಕೊಡಬಹುದೆಂದು ಹುಕುಂ ಮಾಡಿದಾರೆ ಯಾವ ಅಭ್ಯಂತರವೂ ಇಲ್ಲ. ಈ ವಿಷಯವನ್ನು ಕುರಿತು ಮೈಸೂರು ಸರ್ಕಾರದವರು ಮೇಲ್ಕಂಡಂತೆ ಹುಕುಂ ಮಾಡಿದರೆ ಮೇಲ್ಕಂಡ ಆಳಲೇಕಾಯಿ ಪಂಡಿತರುಗಳೆಲ್ಲಾ ಸರ್ಟಿಫಿಕೇಟು ಕೊಡುವದು ನಿಂತುಹೋಗುತ್ತೆ. ಇಲ್ಲವಾದರೆ ಮೌಲ್ವಿ ಹಕೀಂ ಸೈಯ್ಯದ್ ಸಾಹೇಬರು ಹೇಳುವಂತೆ ಸರ್ಕಾರಕ್ಕೆ ನಷ್ಟವಾಗುವದರಲ್ಲಿ ಯಾವ ಅಭ್ಯಂತರವೂ ಇಲ್ಲ.

ಶ್ರೀನಿವಾಸೈಯ್ಯಂಗಾರ್,

ಚನ್ನಪಟ್ಣ ತಾಲ್ಲೂಕು ಕಸಬಾ ದೇವರ ಹೊಸಹಳ್ಳಿ ಪಂಡಿತ.

ಅಮೇರಿಕದಲ್ಲೆಲ್ಲಾ ತುಂಬಾ ಮುದುಕನಾಗಿರುವವನು

ಪೆರೂನಾವನ್ನು ಉಪಯೋಗ ಮಾಡಿಕೊಂಡು ಅನೇಕ ಶೀತಕಾಲಗಳ ಭಯಸಂಕಟಗಳನ್ನು ಜಯಿಸಿರುತ್ತಾನೆ. 38-14

ಮಿ|| ಐಜಕ್ ಬ್ರಾಕ್, ೧೧೮ ಸಂವತ್ಸರಗಳು ತುಂಬಿವೆ.

ಮಿ|| ಬ್ರಾಕ್ ಎಂಬಾತನು ತನ್ನ ದೇಶದ ಒಳ್ಳೇ ಆರೋಗ್ಯ ಸ್ಥಿತಿಯನ್ನೂ ತನ್ನ ಪೂರ್ಣವಾದ ಮುದಿತನವನ್ನೂ ಕುರಿತು ಹೇಳಿರುವುದೇನೆಂದರೆ:—

"ಈ ಪ್ರಪಂಚದಲ್ಲಿ ನನ್ನಷ್ಟು ದೀರ್ಘಕಾಲ ಬದುಕಿದ ಮೇಲೆ ಯಾವ ಮನುಷ್ಯನಿಗಾಗಲಿ ಅನೇಕ ವಿಷಯಗಳು ಅನುಭವ ಪೂರ್ವಕವಾಗಿ ತಿಳಿದಿರಬೇಕು. ನನಗೇನೋ ಅಂಥಾ ಅನುಭವ ಉಂಟಾಗಿರುತ್ತದೆ.

"ಹವಾ ಬದಲಾವಣೆಯಿಂದುಂಟಾಗತಕ್ಕ ನಾನಾ ತರದ ಅಸ್ವಸ್ಥತೆಗಳಿಗೆ ನನ್ನ ಅನುಭವಕ್ಕೆ ಕಂಡುಬಂದಿರುವ ಒಂದು ಪರಿಹಾರ ಮಾತ್ರ ನನಗೆ ಸಂಪೂರ್ಣವಾದ ತೃಪ್ತಿಯನ್ನು ಉಂಟುಮಾಡಿರುವುದು. ಈಗ ಕಳೆದ ೧೧೮ ವರುಷಗಳಿಂದಲೂ ಅಮೇರಿಕದಲ್ಲಿ ಆಗಾಗ್ಗೆ ಬದಲಾವಣೆಯಾಗತಕ್ಕ ಕಾಲಸ್ಥಿತಿ ಹವಾಗಳನ್ನು ನಾನು ಜಯಿಸಿಕೊಂಡು ಬಂದಿರುತ್ತೇನೆ.

"ನಾನು ಯಾವಾಗ್ಲೂ ಆರೋಗ್ಯವಾಗಿಯೇ ಇರತಕ್ಕವನು. ಆದರೆ ಆಗಾಗ್ಗೆ ಅಕಸ್ಮಾತ್ತಾಗಿ ಹವಾ ಬದಲಾವಣೆಯಿಂದುಂಟಾಗುವ ಅಸ್ವಸ್ಥತೆಗಳು ನನಗೆ ಉಂಟಾಗುವವು.

"ಡಾಕ್ಟರ್ ಹಾರ್ಟ್‌ಮನ್‌ರವರ ಪೆರೂನಾ ಔಷಧದ ವಿಷಯದಲ್ಲಿ ಅದು ಇಂಥಾ ಅಸ್ವಸ್ಥತೆಗಳನ್ನು ಗುಣಪಡಿಸುವುದಕ್ಕೆ ಪ್ರಮುಖವಾದದ್ದೆಂದು ನನಗೆ ಕಂಡುಬಂದಿದೆ. ಅದು ನನಗೆ ಅನೇಕ ವರುಷಗಳಿಂದಲೂ ಮುಖ್ಯ ಬೆಂಬಲವಾಗಿರುತ್ತದೆ. ನನ್ನ ಒಳ್ಳೇ ಆರೋಗ್ಯಸ್ಥಿತಿಗೂ ಇಷ್ಟು ಮುಪ್ಪಿನ ತನಕ ಬದುಕಿರುವುದಕ್ಕೂ ಈ ಔಷಧವೇ ಕಾರಣವೆಂದು ಹೇಳಬಲ್ಲೆನು.

"ಈ ಔಷಧವು ನನ್ನ ದೇಹಾರೋಗ್ಯಕ್ಕೆ ಅವಶ್ಯವಾದದ್ದನ್ನೆಲ್ಲಾ ಕಲ್ಪಿಸಿಕೊಡುತ್ತಿದೆ. ನನಗೆ ಅಕಸ್ಮಾತ್ತಾದ ಹವಾ ಬದಲಾವಣೆಯಿಂದುಂಟಾಗತಕ್ಕ ಕೆಡಕುಗಳನ್ನೆಲ್ಲಾ ಇದು ನಿವಾರಣೆಮಾಡುತ್ತಿದೆ. ಅದು ನನ್ನ ದೇಹದ ರಕ್ತಚಲನೆಯನ್ನು ಬಹಳ ಚನ್ನಾಗಿ ಕಾಪಾಡಿಕೊಂಡು ಬರುತ್ತಿದೆ. ನನಗೆ ಆಗಾಗ್ಗೆ ಅನೇಕ ಸಣ್ಣಸಣ್ಣ ಅರಸುಮುರಸುಗಳು ಪ್ರಾಪ್ತವಾಗಿ ಹಲವು ತರದ ಔಷಧಗಳನ್ನು ತೆಗೆದುಕೊಳ್ಳುವುದಕ್ಕೆ ಪ್ರತಿಯಾಗಿ ಇದೊಂದೇ ಎಲ್ಲಾ ವಿಷಯಗಳಲ್ಲೂ ನನಗೆ ಆರೋಗ್ಯಕೊಡುತ್ತಿರುವುದು.

"ಈ ದೇಶದಲ್ಲಿ ಶೈತ್ಯಕಾಲದ ಕೀಲುಗಳು ಹಿಡಿಯುವ ರೋಗವು ಮೊದಲಾದಾಗ ನಾನೂ ಆ ರೋಗಕ್ಕೆ ಸಿಕ್ಕಿ ನರಳಿದೆನು.

"ನನಗೆ ಈ ವಾತರೋಗವು ಹಿಡಿದು ಬಹಳಕಾಲ ಅನುಭವಿಸಿದೆನು. ಪೆರೂನಾದಿಂದ ಈ ರೋಗ ವಾಸಿಯಾಗುವುದೆಂದು ಮೊದಲು ನನಗೆ ತಿಳಿದಿರಲಿಲ್ಲ. ಅದು ಶೀತದಿಂದ ಹುಟ್ಟತಕ್ಕ ರೋಗವೆಂದು ನನಗೆ ತಿಳಿದಾಗ ಪೆರೂನಾವನ್ನು ಈ ರೋಗಪರಿಹಾರಕ್ಕಾಗಿ ತೆಗೆದುಕೊಂಡೆನು. ಅದೇ ಆ ರೋಗಕ್ಕೆ ತಕ್ಕ ಔಷಧವೆಂದು ನನಗೆ ಬಹಳ ಚನ್ನಾಗಿ ಅನುಭವಕ್ಕೆ ಬಂದಿದೆ."

ಈಚೆಗೆ ಬರೆದ ಇನ್ನೊಂದು ಕಾಗದದಲ್ಲಿ ಮಿ|| ಬ್ರಾಕ್ ಎಂಬಾತನು ತಿಳಿಸುವುದೇನೆಂದರೆ:—

"ನಾನು ಸುಖವಾಗಿದ್ದೇನೆ; ಅನೇಕ ವರುಷಗಳಿಂದಲೂ ಆರೋಗ್ಯವಾಗಿರುತ್ತೇನೆ. ನನ್ನ ದೃಷ್ಟಿಯೊಂದೇ ನನಗೆ ತೊಂದರೆಪಡಿಸುತ್ತಿದೆ. ನನ್ನ ದೃಷ್ಟಿ ಚನ್ನಾದಪಕ್ಷದಲ್ಲಿ ನಾನು ನನ್ನ ಕೋಲದ ಸಹಾಯವೂ ನಡೆದಾಡಬಹುದು; ಇದರಿಂದ ನನಗೆ ಒಳ್ಳೇದಾದೀತು. ನಾನು ಪೆರೂನಾವನ್ನು ಬಿಟ್ಟಿರಲಾರೆನು."

ನಿಮ್ಮ ವಿಧೇಯ

Isaac Brock

೧೯೦೬ನೆ ಇಸವಿ ಜುಲೈ ೩ ರಲ್ಲಿ ಮಿ|| ಬ್ರಾಕ್‌ಯವರಿಗೆ ಅವರ ಪತ್ನಿಯಾದ ಸಾರಾ ಜೆ. ಬ್ರಾಕ್ ಎಂಬಾಕೆಯು ಒಂದು ಕಾಗದ ಬರೆದು ತಿಳಿಸಿದ್ದೇನೆಂದರೆ:—

"ಹೋದ ಶೀತಕಾಲದಲ್ಲಿ ನಾನು ಕಾಯಿಲೆ ಬಿದ್ದು ಗುಣಪಟ್ಟ ಕೂಡಲೇ ಪೆರೂನಾವನ್ನು ಸೇವನೆಮಾಡಲು ಪ್ರಾರಂಭಿಸಿದೆನು. ಅದರಿಂದ ನನ್ನ ಆರೋಗ್ಯವು ಬಹಳಮಟ್ಟಿಗೆ ವೃದ್ಧಿಯಾಗಿದೆ ಎಂದು ನೆನಸುತ್ತೇನೆ"

ಆಕೆ ಅದೇ ಕಾಗದ್ದ ಕಡೇ ಭಾಗದಲ್ಲಿ ಬರೆದಿರುವುದೇನೆಂದರೆ.—"ಪೆರೂನಾದಿಂದ ಆಗತಕ್ಕ ಪ್ರಯೋಜನಗಳೇನೇನೆಂದು ಅನೇಕರು ನನ್ನ ಗಂಡನಿಗೆ ಬರೆದು ಕೇಳುತ್ತಿದ್ದಾರೆ ನಾನು ಅವರ್‍ಯಾರಿಗೂ ಜವಾಬು ಕೊಡುವುದಿಲ್ಲ. ಒಂದು ಸೀಸೆ ಔಷಧವನ್ನು ಯಾರುಬೇಕಾದರೂ ಕೊಂಡು ತಂದು ಉಪಯೋಗಿಸಿ ಪರೀಕ್ಷಿಸಬಹುದಾಗಿದೆ."

ಐಜಾಕ್ ಬ್ರಾಕ್ ಎಂಬಾತನು ಟೆಕ್ಸಾಸ್ ಡಿಸ್ಟ್ರಿಕ್ಟಿಗೆ ಸೇರಿದ ಮೆಕ್ಲೆನನ್ ಕೌಂಟಿಯಲ್ಲಿ ೧೧೮ ವರುಷಗಳಿಂದ ಬದುಕಿರತಕ್ಕ ಮನುಷ್ಯನು.

ಆತನು ಅನೇಕ ವರುಷಗಳ ತನಕ ವಾಕೋಡಿಗೆ ಪಶ್ಚಿಮಕ್ಕೆ ಹದಿನೆಂಟು ಮೈಲಿ ದೂರದಲ್ಲಿರುವ ಬಾಸ್ಕ್‌ವೆಲ್ಸ್ ಎಂಬ ಸ್ಥಳದಲ್ಲಿ ವಾಸಮಾಡುತ್ತಿದ್ದು, ಈಗ ಟೆಕ್ಸಾಸ್ ಡಿಸ್ಟ್ರಿಕ್ಟಿನ ಹಿಲ್ಸ್‌ವ್ಯಾಲಿಯಲ್ಲಿ ತನ್ನ ಅಳಿಯನ ಜೊತೆಯಲ್ಲಿ ಸಂಸಾರ ಮಾಡಿಕೊಂಡಿದ್ದಾನೆ.

ಅಪೇಕ್ಷಪಟ್ಟ ಮೇರೆಗೆ ಕೆಲವು ದಿನಗಳ ಹಿಂದೆ ಐಜಾಕ್ ಎಂಬಾತನು ವಾಕೋದಿಗೆ ಬಂದು ತನ್ನ ಫೋಟೋ ತೆಗಿಸಿಕೊಂಡನು. ಜನರಲ್ ಆಂಡ್ರ್ಯು ಜಾಕ್ಸನ್ ಎಂಬಾತನ ಗೋರಿಯ ಮೇಲೆ ಬೆಳೆದಿದ್ದ ಒಂದು ಗಿಡದ ಕೊಂಬೆಯನ್ನು ಮುರಿದು ತಂದು ದೊಣ್ಣೆಯಂತೆ ಹಿಡಿದು ಕೊಳ್ಳುತ್ತಿದ್ದನು.

ಮಿ|| ಬ್ರಾಕ್ ಎಂಬಾತನು ತನ್ನ ವಯಸ್ಸಿಗೆ ತಕ್ಕಷ್ಟು ಗಾಂಭೀರ್ಯವುಳ್ಳ ದೊಡ್ಡ ಮನುಷ್ಯನಾಗಿರುತ್ತಾನೆ. ಈತನು ಶರೀರ ಸ್ಥಿತಿಯಲ್ಲಿ ಸ್ವಲ್ಪವೂ ಬಡವಾಗುತ್ತಾ ಇಲ್ಲ.

ಆತನ ಸಂಸಾರದಲ್ಲಿ ಹಳೇ ಬೈಬಲ್ ಪುಸ್ತಕವು ಇನ್ನೂ ಇದ್ದೇ ಇದೆ. ಅದರೊಳಗೆ ಅವನು ಹುಟ್ಟಿ ೧೧೮ ವರುಷಗಳಾದವೆಂದು ತಿಳಿಯುವಂತೆ ಆತನ ಜನ್ಮ ದಿನವನ್ನು ಸ್ಪಷ್ಟವಾಗಿ ಬರೆದಿದೆ.

ಸಂಯುಕ್ತ ಸಂಸ್ಥಾನಗಳು ಏರ್ಪಾಡಾಗುವುದಕ್ಕೆ ಮೊದಲು ಹುಟ್ಟಿದ್ದು.

೨೨ ಮಂದಿ ಪ್ರೆಸಿಡೆಂಟರು ಚುನಾಯಿಸಲ್ಪಟ್ಟದ್ದನ್ನು ನೋಡಿದಾನೆ.

ಪೆ-ರೂ-ನಾ ಔಷಧವು ಹವಾ ಬದಲಾವಣೆಯಿಂದ ಆತನಿಗುಂಟಾದ ಸಕಲ ಅಸ್ವಸ್ಥತೆಗಳನ್ನೂ ಗುಣಮಾಡಿರುತ್ತದೆ.

ಈತನು ನಾಲ್ಕು ಯುದ್ಧಗಳಲ್ಲಿ ನಿಂತು ಕಡಿದಾಡಿ ಬಂದವನು.

೯೯ ವರುಷವಾಗಿರುವಾಗ ಅವನು ಕುದುರೆಗೆ ಲಾಳ ಕಟ್ಟುತ್ತಿದ್ದನು.

ಪೆರೂನಾ ಸೇವನೆಯಿಂದ ವಾತ ನೋವುಗಳನ್ನು ಯಾವಾಗಲೂ ವಾಸಿಮಾಡಿಕೊಂಡಿರುತ್ತಾನೆ.

ಒಂದು ಜಮೀನಿನ ವ್ಯಾಜ್ಯದಲ್ಲಿ ಇವನು ೧೧೦ ನೆ ವರುಷ ವಯಸ್ಸಿನಲ್ಲಿ ಸಾಕ್ಷಿಯಾಗಿ ಕೋರ್ಟಿಗೆ ಹೋಗಿದ್ದನು.

ಶೀತ ವಾತ ರೋಗಗಳಿಗೆಲ್ಲಾ ಈಗಿನ ಕಾಲದಲ್ಲಿ ಪೆರೂನಾ ಎಂಬುವದೇ ಮಹೌಷಧವೆಂದು ನಂಬಿರುತ್ತಾನೆ.

ಈ ಔಷಧ ಸಿಕ್ಕುವ ಸ್ಥಳಗಳು:—

(೧) ಹಿಚ್‌ಕಾಕ್ ಅಂಡ್ ಸನ್ಸ್, ಬೆಂಗಳೂರು.

(೨) ಇಂಗ್ಲಿಷ್ ಡ್ರಗ್ ಕಂಪನಿ, ೩೯ ಮಿಂಟ್ ಬೀದಿ, ಮದರಾಸ್.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

21—6—1907 ರಿಂದ 26—6—1907 ರ ವರೆಗೆ

ಸ್ಥಳ.		ಪ್ಲೇಗ್ ಆಗಲಿ ಬಿದ್ದದ್ದು.	ಸತ್ತದ್ದು.	ಕಾಲರಾ ಆಗಲಿ ಬಿದ್ದದ್ದು.	ಸತ್ತದ್ದು.
ಬೆಂಗಳೂರು	ಪಟ್ಟಣ	8	3	0	0
ಮೈಸೂರು	"	3	1	0	0
ಬೆಂಗಳೂರು	ಡಿಸ್ಟ್ರಿಕ್ಟು	47	20	9	11
ಮೈಸೂರು	"	14	10	70	53
ಕೋಲಾರ್	"	0	0	0	0
ಕೋಲಾರ್ ಚಿನ್ನದ ಗಣಿಗಳು		5	4	0	0
ತುಮಕೂರು	ಡಿಸ್ಟ್ರಿಕ್ಟು	0	0	1	2
ಹಾಸನ	"	0	1	37	20
ಚಿತ್ರದುರ್ಗ	"	0	0	0	0
ಕಡೂರ್	"	7	3	0	0
ಶಿವಮೊಗ್ಗ	"	3	2	0	0
	ಜುಮ್ಲಾ	87	44	117	86

ಶಾಲಿವಾಹನ ಶಕ ವರುಷಂಗಳು ೧೮೨೯ ನೇ ಪ್ಲವಂಗನಾಮ ಸಂವತ್ಸರದ ಆಷಾಢ ಶುದ್ಧ ಪಾಡ್ಯಮಿ ಗುರುವಾರದಿಂದ ಆಷಾಢ ಶುದ್ಧ ಸಪ್ತಮಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ.

೧೯೦೭ ನೇ ಇಸವಿ ಜೂಲೈ.

ತಾ.	ವಾರ		ತಿಥಿ	ಘಳಿಗೆ.	ನಕ್ಷತ್ರ.	ಘಳಿಗೆ.	ತೇದಿ ಕಟಕ ಮಾಸ
11	ಗುರು	::	ಪಾಡ್ಯ	38-8	ಪು	13 28	27
12	ಶುಕ್ರ	†	ಬಿದಿಗೆ	43-33	ಪ್ಯ	23-52	28
13	ಶನಿ	‡	ತದಿಗೆ	46-19	ಶ್ಲೇ	29-24	29
14	ರವಿ		ಚೌತಿ	48-58	ಮ	33-58	30
15	ಚಂದ್ರ	::	ಪಂಚಮಿ	50-15	ಪು	37-17	31
16	ಕುಜ	*	ಷಷ್ಠಿ	50-35	ಉ	39-32	1
17	ಬುಧ		ಸಪ್ತಮಿ	49-20	ಹ	40-30	2

:: ಅಮೃತಯೋಗ, ನಂಜನಗೂಡಿನಲ್ಲಿ ಮಾರ್ಕಂಡೇಯೋತ್ಸವ. † ಚಂದ್ರೋದಯ, ಉತ್ಪಾತಯೋಗ. ‡ ಜನಾದಿಸಾನಿ ಚಂದು :: ಸ್ಕಂದಪಂಚಮಿ. * ದಕ್ಷಿಣಾಯನ ಪುಣ್ಯಕಾಲ, ಷಷ್ಠೀವ್ರತಂ.

ಪೇಟೇ ಧಾರಣೆ.

ದಿನಸು.		ಮೈಸೂರು.	ಬೆಂಗಳೂರು.
ಕಳ್ಳೇ ಅಕ್ಕಿ ಪಲ್ಲಾ ೧ಕ್ಕೆ	ರೂ.	೧-೨-೮-೦	೧೪-೦-೦
ಕೆಂಬೂತಿ ಅಕ್ಕಿ ಅವಲ್		೧೩-೪-೦	೧೩-೦-೦
" ಕಡಿಮೆ		೧-೨-೮-೦	೧-೨-೩-೦
ಜಾವಾರಿ ಅಕ್ಕಿ		೧-೨-೮-೦	೧೩-೮-೦
ಸಣ್ಣಕ್ಕಿ ಅವಲ್		೧೬-೦-೦	೧೫-೦-೦
" ಮಧ್ಯಮ		೧೪-೮-೦	೧೪-೦-೦
ತೊಗರೀ ಬೇಳೆ ಪಲ್ಲಾ ೧ಕ್ಕೆ		೧೩-೮-೦	೧೩-೪-೦
" ಮಧ್ಯಮ		೧-೨-೧-೨-೦	೧೩-೦-೦
ಕೈ ರಾಗಿ ಪಲ್ಲಾ ೧ಕ್ಕೆ		೬-೮-೦	೬-೪-೦
ಕಾಡ್ರಾಗಿ		೫-೮-೦	೬-೦-೦
ಜೋಳ		೭-೮-೦	೭-೮-೦
ಹುಲಸಂದೆ ಪಲ್ಲಾ ೧ಕ್ಕೆ		೧೧-೦-೦	೧೧-೦-೦
ಬಿಳೀ ಅವರೆ		೮-೬-೦	೭-೮-೦
ಹೆಸರು		೧೧-೮-೦	೧೧-೦-೦
ಉದ್ದು		೧೧-೦-೦	೧೧-೮-೦
ಕಡಲೆ		೧-೨-೦-೦	೧೧-೨-೦
ಎಳ್ಳು ಸೆ. ೧-೨ ಕ್ಕೆ		೨-೨-೮-೦	೨-೨-೮-೦
ಹುರುಳಿ		೬-೦-೦	೭-೪-೦
ಹರಳು ೧-೨ ಸೇರಿಗೆ		೧೪-೦-೦	೧-೨-೮-೦
ಸೀಗೇಕಾಯಿ ಮಣ ೧ಕ್ಕೆ		೨-೪-೦	೨-೦-೦
ಮೆಣಸಿನಕಾಯಿ		೨-೧-೨-೦	೩-೪-೦
" ಮಧ್ಯಮ		೨-೮-೦	೩-೦-೦
ಬೆಲ್ಲ ದೊಡ್ಡ ಅಚ್ಚು		೩-೮-೦	ಮ೧-೧-೨-೦
ಒಳ್ಳೆಣ್ಣೆ ಮಣ ೧ಕ್ಕೆ		೫-೮-೦	೫-೦-೦
ಪರಳೆಣ್ಣೆ "		೫-೮-೦	೫-೨-೦
ಕೊತ್ತುಂಬರಿ ಪಲ್ಲಾ ೧ಕ್ಕೆ		೬-೨-೦	೭-೪-೦
ಉಪ್ಪು "		೫-೩-೦	೫-೮-೦
ಹುಣಸೇ ಹಣ್ಣು		೧-೬-೦	೧-೬-೦
" ಹಳೇದು		೦-೧೪-೦	೦-೧೫-೦
ತುಪ್ಪ ಮಣ ೧ಕ್ಕೆ		೧೫-೦-೦	೧೪-೦-೦
ಸೀಮೆಯೆಂಕೆ ಪಟ್ಟೆ ೧ಕ್ಕೆ		೫-೦-೦	೪-೦-೦
ತೆಂಗಿನಕಾಯಿ ೧೦೦ ಕ್ಕೆ		೮-೮-೦	೭-೮-೦
ಅಳಲೇಕಾಯಿ ಮಣ ೧ಕ್ಕೆ		೧-೦-೦	೧-೦-೦
ಅಂಟ್ವಾಳದ ಕಾಯಿ ಮಣ ೧ಕ್ಕೆ		೦-೧-೨-೦	೦-೧-೨-೦
ಚಿನ್ನ (ಪವನ್) ಕೆಂಪು		೧೫-೪-೦	೧೫-೧-೨-೦
" " ಪಸಿಮೆ		೧೫-೧೦-೦	೧೫-೫-೦
" " ಗಟ್ಟಿ ತೊಲ ೧ಕ್ಕೆ		೨೩-೧-೨-೦	೨೪-೪-೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ		೮೫-೦-೦	೮೩-೦-೦

Printed and Published by the Rev. E. W. THOMPSON, M. A., Proprietor and Manager, Wesleyan Mission Press, Mysore. 11/7/1907.

REGISTERED
M. 20.

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಕ್ರಯ ೧ ದುಡ್ಡು. ಕ್ರಯ ೧ ದು.

ಸಂಪುಟ ೨೧ ಮೈಸೂರು–ಸನ್ ೧೯೦೭ ನೇ ಇಸವಿ ಜೂಲೈ ತಾರೀಖು ೧೮ ನೇ ಗುರುವಾರ. ಸಂಚಿಕೆ ೬

BASEL MISSION WEAVING ESTABLISHMENT, 59-3

MANGALORE, SOUTH CANARA.

ದಕ್ಷಿಣ ಕನ್ನಡ ಜಿಲ್ಲಾ ಮಂಗಳೂರು ಬಾಸೆಲ್ ಮಿಶ್ಯನ್ (ಬಟ್ಟೆ) ನೆಯ್ಯುವ ಕಾರಖಾನೆಯಲ್ಲಿ

ನಾನಾ ವಿಧದ (ಮಿಕ್ಸ್ಚರ್) ಟ್ವೀಡ್ ಸರ್ಜುಗಳೂ ಕೋಟು ಅಂಗಿಗಳ ಚೆಕ್ಕ ಬಟ್ಟೆಗಳೂ, ಅಂಗಿಗ ಳಾನೆ ಶರ್ಟು ಬಟ್ಟೆಗಳೂ, ಶರ್ಟಿಂಗ್ ಯಾನೆ ಕವಿಸ ಸಿನ ಬಟ್ಟೆಗಳೂ, ಬೇರೆ ಇತರ ಬಟ್ಟೆಗಳೂ, ಟೇಬಲ್ ಕ್ಲಾತ್ ಯಾನೆ ಮೇಜುವಸ್ತ್ರಗಳೂ, ಟುವಾಲು ವಗೈರೆ ನಮ್ಮ ಕಾರಖಾನೆಯಲ್ಲಿ ನೆಯ್ಯಲ್ಪಟ್ಟು ಯಾವಾಗಲೂ ಬಿಕ್ರಿಗಾಗಿಯಾಗಲೀ ಅಥವಾ ಆರ್ಡರಿಗಾಗಲೀ ಮಾ ಡಲ್ಪಡುತ್ತಾ ಇರುತ್ತವೆ.


TRADE MARK

ಒಳ್ಳೇ ಕಮಿಶನ್ —ರೂಪಾಯಿ ೧೦೦ ರ ಮೇಲೆ ವಸ್ತ್ರಗಳನ್ನು ತೆಗೆದುಕೊಳ್ಳುವ ಗಿರಾಕಿಗಳಿ ಗೆ ಯಾ ಸಾಹುಕಾರರಿಗೆ ಕೊಡಲಾದೀತು. ಹೆಚ್ಚಿನ ವಿವರ ಬೇಡಿದ್ದಾಗ್ಯೆ ಯಾ ಕಾಗದ ಮೂಲಕ ತಿಳಿಸಲ್ಪಡುವದು.

ನಮೂನೆ ಯಾ ಮಾದರಿಗಳು :—ಪರ ಊರಿನ ಸಾಹುಕಾರರು ಈ ಕೆಳಗಿನ ವಿಳಾಸಕ್ಕೆ ಬರ ಕೊಂಡಲ್ಲಿ ಕಳುಹಿಸಲ್ಪಡುವವು

ವಿಶೇಷ ಲಕ್ಷ್ಯವಿಡತಕ್ಕದ್ದು :—ಈ ನಮ್ಮ ವಸ್ತ್ರಗಳಿಗೆ ಇಲ್ಲಿ ಕಾಣಿಸಿರುವ "ಟ್ರೇಡ್ ಮಾರ್ಕ" ಎಂಬ ವ್ಯಾಪಾರಗುರುತಿನ ಲೇಬಿಲ್ ಯಾನೆ ಚೀಟು ಹಚ್ಚಿರುತ್ತದೆ. ಈ ಗುರುತು ಚೀ ಟುಗಳು ಇಲ್ಲದವುಗಳೆಲ್ಲಾ ತಾಜಾ ಮಿಕ್ಸ್ಚರ್ ವಸ್ತ್ರಗಳಲ್ಲವೆಂದು ತಿಳಿಯತಕ್ಕದ್ದು.

ಶರ್ತು :—ನಗದಾಗಿ ಇಲ್ಲವೆ ವಸ್ತ್ರಗಳು ವಿ. ಪಿ. ಟಪ್ಪಾಲ ಮೂಲಕ ಕಳುಹಿಸಲ್ಪಡತಕ್ಕವುಗಳಲ್ಲಿ ಕಾಲುಭಾಗ ಮೌಲ್ಯವನ್ನು ಮುಂಗಡವಾಗಿ ರವಾನಿಸತಕ್ಕದ್ದು.

ಪತ್ರಗಳನ್ನು ಇಂಗ್ಲೀಷಿನಲ್ಲಿ ಯಾ ಕನ್ನಡದಲ್ಲಿ ಸ್ಪಷ್ಟವಾಗಿ ಬರೆಯತಕ್ಕದ್ದು —

☞ ಈ "ಟ್ರೇಡ್ ಮಾರ್ಕ"ನ್ನಾಗಲೀ ನಾವು "ಕೋಪಿರೈಟ್" ಪಡೆದಿರುವ ಲೇಬಿಲುಗಳನ್ನಾಗಲೀ ಇಲ್ಲವೆ ಅ ನಮೂನೆಯ ಬೇರೆ ಲೇಬಿಲುಗಳನ್ನಾಗಲೀ ಯಾರಾದರೂ ಇತರ ವಸ್ತ್ರಗಳ ಮೇಲೆ ಪ್ರಯೋಗಿಸಲೂ ಮಾಡಲೂ ಕೂಡದು.

ವಿಳಾಸ —BASEL MISSION WEAVING ESTABLISHMENT,
MANGALORE S. CANARA

WILLIAM & CO., BOMBAY.

ವಿಲಿಯಂ ಮತ್ತು ಕಂಪೆನಿ, ಪೋರ್ಟ್, ಮುಂಬಯಿ.

ಗಜಕರ್ಣದ ಮುಲಾಮು.

27 21

ಇದನ್ನು ಹಾಗಿಸುವದರಿಂದ ಎಲ್ಲಾ ತರದ ಕಜ್ಜಿಯು ನಾಶವಾಗುವದು. ಮೂರು ಸಾರಿ ಹಾಗಿಸುವದರೊಳಗೆ ಗಜಕರ್ಣವು ಹೋಗುವದು. ಇದನ್ನು ಹಚ್ಚಿದಲ್ಲಿ ಉರಿಯು ಏಳುವದಿಲ್ಲ ಚರ್ಮ ಕಪ್ಪಾಗುವದಿಲ್ಲ.

ಇದರಿಂದ ಗುಣ ಕಂಡುಬರುವದಿಲ್ಲವಾದರೆ ಹಣ ಹಿಂತಿರುಗಿ ಕೊಡಲ್ಪಡುವದು ತ್ವರೆಮಾಡಿರಿ! ಕೊಂಡುಕೊಳ್ಳಿರಿ!! ಕ್ರಯ ಕಮ್ಮಿ. ಒಂದು ಸಾರಿ ಪರೀಕ್ಷಿಸಿ ನೋಡಿರಿ!!!
ಡಬ್ಬಿ ೧ಕ್ಕೆ ಕಿಮ್ಮತ್ತು ೦-೬-೦.
ವಿ. ಪಿ. ೦-೧೦-೦.

ಕ್ಷಯಹಾರಿ ೧ ರೂ. ೪ ಆ. ಕಸ್ತೂರಿ ಮಾತ್ರೆ ... ಕೇಶವರ್ಧಿನೀ ತೈಲ ೧ ರೂ. ಕಜ್ಜಿಯ ... ೩ ಆಣೆ ಕುಸುಮಾರಿ ಗುಟಿಕೆ ... ತಾಂಬೂಲ ಗುಟಿಕೆ ೪ ಆಣೆ

SAFE ★ EFFICACIOUS ★ SURE ★ PILLS ★ OINTMENTS ★ POWDERS
WILLIAM & Co. BOMBAY

ಸುಂದರೀ ತೈಲ ೪ ಆಣೆ, ವಜ್ರಗುಟಿಕೆ ರಸಾಯನ ..., ದಂತಮಂಜನ ೩ ಆಣೆ ನೇತ್ರಾಂಜನ ೪ ಆಣೆ

ಅಮೃತಾಂಜನ

ಬಾಟ್ಲಿ ಒಂದಕ್ಕೆ ಕಿಮ್ಮತ್ತು ೮ ಆಣೆ ವಿ. ಪಿ. ೧೨ ಆಣೆ.

ದಮ್ಮು ಮತ್ತು ಕೆಮ್ಮು, ಪಿತ್ತ, ಹೊಟ್ಟೆನೋವು, ಗಂಟ್ಲುನೋವು, ಶಿರೋಭಾರ, ಸಂಧಿವಾತ, ತಲೆನೋವು, ಮೂಲವ್ಯಾಧಿ, ಶೀತ, ಕೆಮ್ಮು, ಈ ಎಲ್ಲಾ ತರದ ರೋಗಕ್ಕೆ ಅಮೃತಾಂಜನವು ಒಂದು ದಿವ್ಯವಾದ ಔಷಧವಾಗಿರುತ್ತದೆ. ಇದರಿಂದ ಗುಣ ಕಂಡುಬಾರದಿದ್ದಲ್ಲಿ ಹಣ ತಿರುಗಿ ಕೊಡಲ್ಪಡುವದು. ತ್ವರೆ ಮಾಡಿರಿ! ... ವರ್ಷದಿಂದ ಅನುಭವಿಸುವ ... ನೋವು ನಿಮ್ಮ ಒಂದೇ ಬಾಟ್ಲು ಅಮೃತಾಂಜನದಿಂದ ಪೂರ್ಣವಾಗಿ ಗುಣ ಸಿಕ್ಕಿತು. ದಯಮಾಡಿ ೧೨ ಬಾಟ್ಲಿ ವಿ. ಪಿ. ಮೂಲಕ ರವಾನಿಸಿರಿ. ... ರಾಮಭಟ್ಟ, ವಿಟ್ಲ, ದ. ಕನ್ನಡ.

ನಾನು ನನ್ನ ಸ್ನೇಹಿತರೂ ಅಮೃತಾಂಜನವನ್ನು ಬಹಳವಾಗಿ ಪ್ರೀತಿಸುತ್ತೇವೆ. ... ಅಮೃತಾಂಜನ ಕ್ಕಿಂತಲೂ ಹೆಚ್ಚು ಉಪಯೋಗ ಉಳ್ಳ ಮುಲಾಮು ಬೇರೆ ಯಾವದೂ ಇಲ್ಲ. ... ಆರು ವರ್ಷದಿಂದ ವಾತಪೀಡಿತ ನಾದ ನನ್ನ ಗೆಳೆಯನಿಗೆ ಅಮೃತಾಂಜನವು ಜೀವದಾನ ಕೊಟ್ಟಿತು. ... ಅಮೃತಾಂಜನವು ಸಾವಿರಾರು ಜನರಿಗೆ ಗುಣಕೊಟ್ಟಿರುತ್ತದೆ. ವೀರಭದ್ರಪ್ಪ, ಟುಮಕೂರು

ಸಂಜೀವನದ ಹಾಗಿರುವ ಅಮೃತಾಂಜನವನ್ನು ನನ್ನ ಮನೆಯಲ್ಲಿ ಸದಾಕಾಲ ಇಟ್ಟಿರುತ್ತೇನೆ. ...ಯ್ಯ, ಬೆಂಗಳೂರು. ನಿಮ್ಮ ಅಮೃತಾಂಜನವು ಎಂಥಾ ಕಠಿಣವಾದ ತಲೆನೋವನ್ನಾದರೂ ನಿಲ್ಲಿಸುತ್ತದೆ. ... ಕೆ. ...

ನಿಮ್ಮ ಅಮೃತಾಂಜನವು ಶೀತ, ಕೆಮ್ಮು, ತಲೆನೋವು, ಇತ್ಯಾದಿಗಳಿಗೆ ಅತೀ ಉತ್ತಮ ... ಅದರಿಂದ ದಯಮಾಡಿ ೩ ಬಾಟ್ಲಿ ಅಮೃತಾಂಜನ, ... ಡಬ್ಬಿ ಗಜಕರ್ಣದ ಮುಲಾಮನ್ನು ವಿ. ಪಿ. ಮೂಲಕ ರವಾನಿಸಿರಿ ... ಮ್ಯಾನೇಜರ್, ... ಎಸ್ಟೇಟು, ... ಕೊಡಗು.

ವಿಲಿಯಂ ಮತ್ತು ಕಂಪೆನಿ, ೧೬ ಓಕ್ ಲೇನ್, ಪೋರ್ಟ್, ಮುಂಬಯಿ.
ಟೆಲಿಗ್ರಾಫು ಅಡ್ರೆಸು; "ಅಮೃತಾಂಜನ" ಮುಂಬಯಿ.

ನಿಮಗೆ ನೋವು ಇದೆಯೋ ?

581

ಹಾಗಾದರೆ "ಕ್ಲೆಮೆಂಟ್ ಯವರ ಮ್ಯಾಜಿಕ್ ಬಾಂ" ನ್ನು ಉಪಯೋಗಿಸಬಾರದು? ಆಶ್ಚರ್ಯಕರವಾದ ಬಾಧಾ ಶಮನ! ಈಗಿನ ಶತಮಾನದಲ್ಲಿ ಕಂಡು ಹಿಡಿದ ದೊಡ್ಡ ನೂತ... ಈ ರಾಜ ಔಷಧವನ್ನು ಹೊಟ್ಟೆ ಮೊದಲು ಹೊದೆಯುತ್ತಲೆ ನಿಮಿಷಗಳೊಳಗಾಗಿ ನರ ಮತ್ತು ಮಾಂಸ ಸಂಬಂಧವಾದ ... ನೋವು, ಕೀಲುಗಳ ಬಾಧೆ, ಹಿಬ್ಬೊಟ್ಟೆ ನೋವು, ಬೆನ್ನಿನ ... ತಲೆನೋವು, ಕೆಮ್ಮು, ಕೀಲುಗಳು ಕತ್ತರಿಸ ಪಡು, ಕೊರಳು ಕೈಕಾಲು ಒಡೆತ ಇವುಗಳನ್ನೆಲ್ಲಾ ವಿದ್ಯುಚ್ಛಕ್ತಿಯಂತೆ ಗುಣ... ಪಡು. ಈ ಔಷಧವು ಆಶ್ಚರ್ಯಕರವಾಗಿ ಗುಣಪಡಿಸುವದರಿಂದ ... ರಲ್ಲಿಯೂ ಪ್ರಸರಿಸುತ್ತಾ ಬರುವದು. ಇತರ ಔಷಧಿಗಳು ಗುಣ... ಹೋದಾಗ ಡಾಕ್ಟರ್ ಫೀಜನ್ನು ಕಡಿಮೆಮಾಡಿ. ಇದು ನಿಸ್ಸಂದೇ ಹವಾಗಿಯೂ ಗುಣಪಡಿಸುವದು.

ಕ್ರಯ —೧ ಬಾಟ್ಲಿಗೆ ೧೨ ಆಣೆ, ಪೋಸ್ಟೇಜ್ ೪ ಆಣೆ ಬಾಟ್ಲಿಗೆ ಅಂಚೆವೆಚ್ಚ ಸೇರಿ ರೂ. ೨—೪ ಆಣೆ. ಎಲ್ಲಾ ಕವಿ ಷಾಪ್ಪುಗಳಲ್ಲಿ ದೊರೆಯುವದು.

ನಮ್ಮ ವಿಳಾಸ:—ಎಫ್. ಡಬ್ಲಿಯು. ಆರ್ನ,
ಸಿಮೆಟ್ರಿ ರೋಡ್, ವೇಪೇರಿ, ಮದ್ರಾಸ್

ಜ್ವರಹರಿ. 47-

ಇದು ಸಾಧಾರಣ ಜ್ವರ, ಚಳೀಜ್ವರ, ಮೋರೀಜ್ವರ, ಪಿತ್ಥ ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್. ಟಿ. ವೆಂಕಟಪತಿ ಅಯ್ಯ ನವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ಔಷಧಿಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಆವ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೆ ಬೀಳುತ್ತಿರ ವರಿಂದ ದಯವಿಟ್ಟು ಇನ್ನೊಂದು ೨೦ ಔಷಧಿಸಿನ ಸೀಸೆಯನ್ನು ವಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಾರೆ.

ಕ್ರಯ —ಸೀಸೆ ೧ ಕ್ಕೆ ೮ ಆಣೆ, ೧ ರೂ., ೧—೮ ರೂ. ೨—೧೨ ಆ., ೧೧ ರೂ., ಹನ್ನೆರಡು ಸೀಸೆ ತರಿಸಿಕೊಂ ಪೋಸ್ಟೇಜು ಮಾಫ ಬಿಡಲಾಗುವದು.

****

ಓಮಂ ಕರ್ಪೂರ

Omum Carpoor

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಡುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂ ವುಗಳಿಗೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡು ವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತ ಕ್ರಯದ ಪರವು ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಿಗೆ ...ಂಕಾವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ನಿಮ್ಮ ಓಮಂ ಕರ್ಪೂರವನ್ನು ನಾನೂ ನನ್ನ ಸಹೋದ್ಯೋಗಿಗಳೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ಸಂದರ್ಭಗಳಿಂದಲೂ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ. ಕೊಟ್ಟ ಕೂಡ ಲೇ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧ ವೆಂತ ಬರೆದಿದ್ದಾರೆ.

ಈ ನಾಲ್ಕು ಔಷಧಗಳೂ ಊರುಗಳಲ್ಲಿರುವ ವೈಷ್ಯಶಾಲೆ ಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯ ಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಲ್ಲಿ ವಿಚಾರಿಸ —
ಚೆನ್ನಪಟ್ಟಣ ... ಔಷಧಗಳ ಕಂಪೆನಿ,
... ಮದ್ರಾಸ್

ವ್ಯವಹಾರ ನಿರ್ಣಯ

ವೆಂಬ ಕನ್ನಡ **ಲಾ** ಪುಸ್ತಕವು.

೫೩ ೪

ಲಾ ತಿಳಿದವರಿಂದಲೂ, ತಿಳಿಯದವರಿಂದಲೂ ಇದುವರೆಗೆ ಬರೆಯಲ್ಪಟ್ಟಿರುವ ಈ ತೆರದ ಪುಸ್ತಕಗಳನ್ನೆಲ್ಲ ನೋಡಿ ಅವೆಲ್ಲಕ್ಕಿಂತಲೂ ಹೆಚ್ಚು ಪ್ರಯೋಗವನ್ನು ಇದೊಂದು ಪುಸ್ತಕದಿಂದುಂಟುಮಾಡಬೇಕೆಂದು ಈ ದೊಡ್ಡ ಗ್ರಂಥವು ಹೊಸದಾಗಿ ಬರೆಯಲ್ಪಟ್ಟಿದೆ ಇದರಲ್ಲಿ ೧೪ ಆಕ್ಟುಗಳು, ೪ ಕೋಡುಗಳು, ಹಿಂದೂ, ಮಹಮದೀಯ ಲಾಗಳು, ಛೀಫ್ ಕೋರ್ಟು ಹೈ ಕೋರ್ಟುಗಳ ಫೈಸಲುಗಳು, ಗೌ॥ ಸರ್ಕ್ಯುಲರ್‌ಗಳು ಪ್ರೊಸೀಡಿಂಗ್ಸ್‌ಗಳು, ಸಕಲ ವಿಧ ವ್ಯವಹಾರಗಳು, (ಕ್ರಯ ಆಧಾರ ದಾನ ವಿಲ್ಲು ಮೊದಲಾದ) ೭೯ ತೆರದ ದಸ್ತಾವೇಜುಗಳ ನಮೂನೆಗಳು, ಈ ಸಂಬಂಧದ ಲಾ ವಿಧಿಗಳು, ಸಿವಲ್ ಕ್ರಿಮಿನಲ್, ಪೋಲೀಸ್, ರೆವಿನ್ಯೂ ಸಂಬಂಧದ ವ್ಯಾಜ್ಯಗಳು, ೫೯ ತೆರದ ಅರ್ಜಿಗಳು, ಈ ಸಂಬಂಧದ ಲಾ ವಿಧಿಗಳು. ಇವೆಲ್ಲವೂ ಅಡಕವಾಗಿವೆ.

ಪುಸ್ತಕ ದೊಡ್ಡದು ಪುಟಗಳು ಒಟ್ಟು ೪೬೪	ಬೆಲೆ ಕಡಮೆ. ಅಂಚೆ ಹಾಸಲು ಸೇರಿ ರೂ ೧—೮—೦

ಗ್ರಂಥಕರ್ತರು { ಎಂ ಮಲ್ಲಾರಾಧ್ಯರು, ೧ನೆ ಗ್ರೇಡ್ ಪ್ಲೀಡರ್, ಶ್ರೀರಾಮಪೇಟೆ, ಮೈಸೂರು } ಇದೇ ವಿಳಾಸ

ಇದಕ್ಕೆ ಸಮಾನವಾದ ಪುಸ್ತಕ ಉಂಟೋ ?

ಕನ್ನಡ ಭಾಷೆಯಲ್ಲಿ ಇದುವರಿವಿಗೂ ಇಂಥಾ ಸೊಗಸಾದ

ಪುಸ್ತಕವು ಪ್ರಚುರವಾಗಲಿಲ್ಲ. ಸ್ವಲ್ಪ ನೋಡಿ.

"ಹಿಂದೂದೇಶ ಪ್ರದಕ್ಷಿಣ"

ಎಂದು ಕರೆಯಲ್ಪಡುವ ಈ ನೂತನ ಪುಸ್ತಕದಲ್ಲಿ ಸುಮಾರು ತೊಂಬತ್ತು ಉತ್ಕೃಷ್ಟವಾದ ಚಿತ್ರಗಳು ಅಡಗಿವೆ ಹಿಂದೂ ದೇಶವನ್ನೆಲ್ಲಾ ಸಂಚಾರ ಮಾಡುವದರಿಂದ ಉಂಟಾಗುವ ಪರಮಾನಂದವನ್ನು ಒಂದು ಸಾರಿ ಈ ಗ್ರಂಥವನ್ನು ಓದುವದರಿಂದ ಹೊಂದಬಹುದು. ಇದು ಮೊದಲನೇ ಸಾರಿ ಪ್ರಿಂಟ್ ಆಗಿದ್ದು ಬಹು ಶೀಘ್ರವಾಗಿ ಎಲ್ಲಾ ಮುಗಿದು ಹೋದವು. ಈಗ ತಿರಗಿ ವಿಚಿತ್ರವಾಗಿಯೂ ಉಲ್ಲಾಸಕರವಾಗಿಯೂ ಇರುವ ಪ್ರಸಿದ್ಧವಾದ ಚಿತ್ರಗಳೊಡನೆ ಮಾಡಿಸಿರುತ್ತೇವೆ, ಇದರಲ್ಲಿರುವ ಚಿತ್ರಗಳನ್ನು ಸ್ವಲ್ಪ ನೋಡಿ—ಶ್ರೀರಂಗಪಟ್ಟಣದಲ್ಲಿರುವ ಹೈದರಲ್ಲಿ ಟಿಪ್ಪುಸುಲ್ತಾನರ ಗೋರಿ, ಹುಮಾಯೂನನ ಗೋರಿ, ಹುಗ್ಲಿ ನದಿ, ಕಲ್ಕತ್ತಾ ನಗರ, ಕಲ್ಕತ್ತಾ ಹೈ ಕೋರ್ಟು, ಕಾಳಿಕಾದೇವತೆ, ಚಂದ್ರನಗರ, ಬಂಗಾಳಿಯರ ಮನೆಗಳು, ಜಗನ್ನಾಥಸ್ವಾಮಿ ಭುವನೇಶ್ವರವೆಂಬ ದೇವಸ್ಥಾನ, ಜಗನ್ನಾಥದ ರಥೋತ್ಸವ, ಕನರಾಕ್ ದೇವಸ್ಥಾನ, ಎವರೆಸ್ಟ್ ಶಿಖರ, ಖಟ್ಮಂಡು ನಗರದ ಒಂದು ಬೀದಿ, ಖಟ್ಮಂಡು ನಗರದ ದೇವಸ್ಥಾನಗಳು, ಜಪಚಕ್ರಗಳು, ಅಂಬಿಗರು ದೋಣಿಯನ್ನು ಎಳೆಕೊಂಡು ಹೋಗುವದು, ಗಯಾದಲ್ಲಿರುವ ಬುದ್ಧನ ದೇವಸ್ಥಾನ, ಔರಂಗಜೇಬನು ಕಟ್ಟಿಸಿದ ಮಸೀತಿ, ಕಾಶೀ ಪುಣ್ಯಕ್ಷೇತ್ರದಲ್ಲಿರುವ ದಾಶಾಶ್ವಮೇಧಘಟ್ಟ, ಕಪಿಗಳಿಗೆ ತಿಂಡಿ ಹಾಕುವದು. ಕಾಶೀ ಕ್ಷೇತ್ರದ ದೇವಸ್ಥಾನಗಳು, ಅಲಹಾಬಾದ್ ನಗರ ಮತ್ತು ಅದರ ಕೋಟೆ, ಅಲಹಾಬಾದ್‌ನಲ್ಲಿರುವ ಖುಸ್ರು ಬಾಗ್ ಅರಮನೆ, ಯಮುನಾ ನದಿಯಲ್ಲಿ ಯಾತ್ರಿಕರು ಮುಳುಗುವದು, ಕಾನ್ಪುರದಲ್ಲಿರುವ ಶಿಲಾ ಶಾಸನ, ಕಾನ್ಪುರದ ಹತ್ತಿರ ಗಂಗಾ ನದಿಯ ಮೇಲೆ ಕಟ್ಟಿರುವ ಸೇತುವೆ, ಲಕ್ನೋ ನಗರದ ರೆಸಿಡೆನ್ಸಿ ಬಂಗಲೆ, ಲಕ್ನೋ ಪಟ್ಟಣದ ಬಾಗಿಲು, ಸರ್ ಹೆನ್ರಿ ಹ್ಯಾವಲಾಕನು, ಗೋಮತಿ ನದಿಯ ಮೇಲಿರುವ ಅರಮನೆ, ಗ್ರಾಮದಲ್ಲಿ ಜನರ ಸ್ಥಿತಿ, ಹರಿದ್ವಾರಘಟ್ಟ, ಗಂಗೋತ್ರಿ ದೇವಸ್ಥಾನ, ಹಿಮದ ಪರ್ವತಗಳ ಮೇಲಿರುವ ಪಟ್ಟಣ, ಹಿಮಪ್ರವಾಹಗಳು, ಆಗ್ರಾ ಪಟ್ಟಣದ ಕೋಟೆ, ಯಮುನಾ ನದಿಯ ದೂರದಲ್ಲಿ ತೋರುತ್ತಿರುವ ತಾಜ್‌ಮಹಲ್ ಗೋರಿಯೂ, ತಾಜ್ ಮಹಲಿನ ಕಲ್ಲಿನಲ್ಲಿ ಕೆತ್ತಿರುವ ಪರದೆ, ಅಕ್ಬರನ ಅರಮನೆ, ಆಗ್ರಾ ಪಟ್ಟಣದ ಮುತ್ತಿನ ಮಸೀತಿ, ಫತ್ತೆಪುರ್ ಸಿಕ್ರಿಯಲ್ಲಿರುವ ಪಾಂಚ್ ಮಹಲ್ ಅರಮನೆ, ರಜಪೂತರು, ಭರತಪುರದ ಕೋಟೆ, ಅಲ್ವಾರಿನಲ್ಲಿ ಮಹಾರಾಜ ಬಕ್ತಾವರ್ ಸಿಂಗರ ಗೋರಿ, ಡೆಹಲಿ ನಗರದ ದೊಡ್ಡ ಮಸೀತಿ, ಪುರಾತನ ಡೆಹಲಿಯ ಬಾಗಿಲು, ರಾಜ ದೇವನು ಸ್ಥಾಪಿಸಿದ ಕಬ್ಬಿಣದ ಸ್ತಂಭ, ನಾದರ್ ಷಹಾನು ಡೆಹಲಿ ನಗರದಲ್ಲಿ ಪ್ರಜಾ ಸಂಹಾರವನ್ನು ನೋಡುತ್ತಿರುವದು, ಡೆಹಲಿಯ ಬಳಿಯಲ್ಲಿರುವ ಕುಟುಬ್ ಮಿನಾರ್, ಚಾಂದ್ನಿ ಚೌಕವೆಂಬ ಬೀದಿ, ಸಿಂಲಾಕ್ಕೆ ಹೋಗುವ ದಾರಿ, ಸಿಮ್ಲಾ, ಅಮೃತಸರದ ಸುವರ್ಣಾಲಯವು, ಲಾಹೋರಿನಲ್ಲಿರುವ ರಣಜಿತಸಿಂಗನ ಗೋರಿ, ಲಾಹೋರ್ ಪಟ್ಟಣ, ಈ ಮುಂತಾದ ಅನೇಕ ರಮಣೀಯವಾದ ಸ್ಥಳಗಳ ಚಿತ್ರಗಳು ಈ ಪುಸ್ತಕದಲ್ಲಿ ಅಡಗಿವೆ ಅವುಗಳನ್ನೆಲ್ಲಾ ವಿವರಿಸಲು ಸ್ಥಳವಿಲ್ಲ.

ಪ್ರತಿಯೊಂದು ಅಂಶದ ವಿವರಣೆಯೂ ಬಹು ಪರಿಷ್ಕಾರವಾಗಿದೆ. ದಕ್ಷಿಣ ದೇಶದಲ್ಲಿರುವ ಅನೇಕ ಪ್ರಸಿದ್ಧ ಸ್ಥಳಗಳ ಚಿತ್ರಗಳೂ, ಅವುಗಳ ವಿವರಣೆಗಳೂ ಇದರಲ್ಲಿವೆ. ಪುಸ್ತಕವು ಭಾರಿಯಾಗಿದೆ ಪುಸ್ತಕದ ಅಚ್ಚು ಮತ್ತು ಬೈಂಡು ಬಹು ಸುಂದರವಾಗಿವೆ ಇದರ ಕ್ರಯ ಎಂಟೇ ಆಣೆ, ವಿ ಪಿ .ಪಿ. ಮೂಲಕ ಹನ್ನೊಂದು ಆಣೆಯಾಗುವದು ಪುಸ್ತಕ ಜಾಗ್ರತೆಯಲ್ಲಿ ಮಾರಾಟವಾಗುತ್ತಿರುವದರಿಂದ ತಾವುಗಳೆಲ್ಲ ಕೆಳಗೆ ಕಂಡ ವಿಳಾಸಕ್ಕೆ ಬೇಗನೆ ಬರೆದು ತರಿಸಿಕೊಳ್ಳಬೇಕು.

ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪ್ಪೋ,

ಮೈಸೂರು. 48-11

CHAMBERLAIN'S COUGH REMEDY.

ಚೇಂಬರ್ಲೇನ್‌ರವರು ಕಂಡು ಹಿಡಿದ ಕೆಮ್ಮಿನ ಔಷಧವು.



64-3

ಶೀತದ ಕೆಮ್ಮು, ಗಂಟಲು ಗಾರೆನ್ನುವುದು, ಮಗಿಗೆಮ್ಮು, ನಾಯಿಗೆಮ್ಮು, ಎಲ್ಲಾ ತರದ ಶೀತ, ಗಂಟಲು, ಎದೆಯಲ್ಲಿ ಹುಟ್ಟುವ ಸಮಸ್ತ ವ್ಯಾಧಿಗಳು—ಇವಕ್ಕೆಲ್ಲಾ ಈ ಔಷಧವು ಬಹುಪ್ರಯೋಜನಕಾರಿ.

ಆ ಕೆಮ್ಮನ್ನು ಅಲಕ್ಷ್ಯಮಾಡಬೇಡಿ ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ ಅದರ ಮೇಲೆ ನ್ಯೂಮೋನಿಯಾ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವುದು. ತರುವಾಯ ಉಗುಳಿನಲ್ಲಿ ರಕ್ತ ಬೀಳುವುದು ಹಾಗೆಯೇ ಕ್ಷಯರೋಗಕ್ಕೆ ಆಸ್ಪದವಾಗುವುದು

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟಲಲ್ಲಿ ಶ್ಲೇಷ್ಮ ಕಟ್ಟುವುದನ್ನೂ ಶ್ಲೇಷ್ಮ ಬೀಳುವುದನ್ನೂ ಖಂಡಿತವಾಗಿ ನಿವಾರಣೆಮಾಡುತ್ತದೆ. ಉಸಿರು ಹೊಯ್ಯುವುದು ಕಷ್ಟವಾಗಿದ್ದರೆ ಅದನ್ನು ಕೂಡಲೇ ಪರಿಹರಿಸುತ್ತದೆ ಅಪಾಯಕರವಾದ ಕೆಮ್ಮಿನ ಕಟ್ಟುವನ್ನು ನಿಲ್ಲಿಸಿಬಿಡುತ್ತದೆ ಎಷ್ಟು ಬಹುಗುಣವಂಥಾ ಕೆಟ್ಟಸ್ಥಿತಿಯನ್ನು ಸಂಪೂರ್ಣವಾಗಿ ವಾಸಿಮಾಡಬಲ್ಲದು. ಕೆಮ್ಮನ್ನು ಶಮನಮಾಡಿ, ನೀವು ಸುಖವಾಗಿ ನಿದ್ರೆಮಾಡುವಂತೆ ಮನಸ್ಸಿಗೆ ಉಲ್ಲಾಸಕೊಡುತ್ತದೆ.

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇರಿಸಿರುವುದಿಲ್ಲ.

ಈ ಔಷಧವು ವನಸ್ಪತಿಗಳ ತಯಾರಿ

ಕೆಯಿಂದಮಾತ್ರವೇ ತಯಾರಾಗಿದೆ.

ಎಲ್ಲೆಲ್ಲೂ ವಿಕರಿಯಾಗುವುದು ಸಣ್ಣ ಸೀಸೆಗೆ ೧ ರೂಪಾಯಿ. ದೊಡ್ಡ ಸೀಸೆಗೆ ೨ ರೂಪಾಯಿ

ಔಷಧಿ ತಕ್ಕೊಂಡು ಗುಣವಾಗುವದಕ್ಕಿಂತಲೂ

ತಕ್ಕ ಕ್ರಮದಲ್ಲಿರುವದು ಉತ್ತಮ.

SCOTT'S EMULSION. 31-18

(ಸ್ಕಾಟ್ಸ್ ಇಮಲ್ಷನ್)

ಭಟ್ಟ ಶರೀರವುಳ್ಳವರಿಗೆ ಪ್ಲೇಗ್, ಮಹಾಮಾರಿರೋಗ, ವಾಂತಿಭೇದಿ ಅಥವಾ ಶ್ವಾಸಕೋಶದ ರೋಗಗಳ ಭಯಕ್ಕೆ ಒಳಪಡುವ ಅಗತ್ಯವಿಲ್ಲ

ರೋಗವು ಬಲಹೀನರನ್ನೂ ದುರ್ಬಲರನ್ನೂ ಬೇಗನೆ ತಗಲಿ ಹಿಡಿಯುತ್ತದೆ

ಅಸ್ವಸ್ಥವನ್ನು ದೂರ ಹೋಗಲಾಡಿಸಿ, ಶರೀರದಲ್ಲಿರುವ ಬಲಹೀನ ಭಾಗಗಳನ್ನು ಬಲಪಡಿಸಿಕೊಳಿಸಿ, ಸಂಪೂರ್ಣ ಸೌಖ್ಯವನ್ನು ಉಂಟುಮಾಡುತ್ತದೆ

ಕೈಸೋಕದೆ ತಯಾರಾದದ್ದು.

ಎಲ್ಲಾ ಔಷಧ ವ್ಯಾಪಾರಗಾರರಲ್ಲೂ ಮಾರಾಟವಾಗುತ್ತದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್.

ಈ ವಿಶಾನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

11 25

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ವಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೀಳಾದದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು. (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚೆನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚೆನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ, ಚೆನ್ನಾಗಿ ನೆಸೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಸೀದಾ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದೂ ಚೆನ್ನಾಗಿಲ್ಲದ್ದೂ ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ.

ಸಾದ, ಕೆಂಪು, ಕಪ್ಪು, ಬಿಳಿ, ಕಾಫಿ ಟೋಪಿಗಳು ೧ ರೂ ೮ ಆ., ೧ ರೂ ೬ ಆ; ೧ ರೂ. ೪ ಆ.

ರೇಶ್ಮೆ ಚುಕ್ಕಿಯುಳ್ಳ ಟೋಪಿಗಳು ೧ ರೂ. ೮ ಆ; ೨ ರೂ.

ದಾರದ ಟೋಪಿಗಳು ೧ ರೂ. ೧೨ ಆ; ೧ ರೂ. ೮ ಆ; ೧ ರೂ. ೬ ಆ.

ಉಸುಕಿನ ಟೋಪಿಗಳು ೧ ರೂ. ೮ ಆ; ೧ ರೂ. ೬ ಆ.

ಕೂಸುಗಳ ಟೋಪಿ, ಸೂಥಿಗ ಮೇಜೋಡು, ಅರ್ಧ ಮೇಜೋಡು. ಶಾಲು ಪಟ್ಟೆ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು.

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ.

ಪಾಳ್ಯದ ವೆಂಕಟಾಚಲ ಪಂಡಿತ, ಶ್ರೀಸೀತಾರಾಘವ ವೈದ್ಯಶಾಲಾ, ಕೊಳ್ಳೇಗಾಲ, ಇವರ ಸಿದ್ಧೌಷಧಗಳು.

26-22

೧. ಲೋಕಾಮಯಹರ ಕಸ್ತೂರೀ ಮಾತ್ರೆ.—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ

ಚಳಿಜ್ವರ, ಜ್ವರ, ಹೊಟ್ಟೆಶೂಲೆ, ಸಂದುಗಳ ನೋವು, ಮೈ ಕೈಕಾಲು ಸೆಳತ (ವಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿಮಾಂದ್ಯ, ಹಲ್ಲುನೋವು, ಕೆಮ್ಮಲು, ನಗಡಿ, ನಿಶ್ಶಕ್ತಿ, ಅರೋಚಕ, ಅನ್ನಾ ಅನೇಕರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ.

ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾನ ಬಾಯಿಲೆಗೂ ದಾರಿಕೊಡದೆ, ನೀರು ಹವೆಗಳ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ.

ಸ್ತ್ರೀಯರ ಮುಟ್ಟುಶೂಲೆ, ಮಕ್ಕಳ ಎಳವು, ಜ್ವರ, ಪಚ್ಚಜ್ವರ, ಕೃಕೃತ್ವಗಳನ್ನು ಗುಣಪಡಿಸುತ್ತದೆ

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.

೨೦ ಮಾತ್ರೆಯುಳ್ಳ ಕಪ್ಪಿಗೆ ೪ ಆಣೆ; ೫ ಕಪ್ಪಿಗೆ ೬ ಕಪ್ಪು ಕೊಡ್ಡು. ೧ ರಿಂದ ೧೨ ಕಪ್ಪು ವರೆಗೆ ಪೋಸ್ಟೇಜು ೭ ಆಣೆ.

ವಿಳಾಸ:—ಎಸ್. ಎಸ್. ಆರ್. ವೈದ್ಯಶಾಲಾ,

ಲಕ್ಷ್ಮೀವಿಲಾಸ ರೋಡ್, ಮೈಸೂರು.

ತರಿಸಿಕೊಳ್ಳಿ! ಬೇಗ ತರಿಸಿಕೊಳ್ಳಿ!! ಇದೇ ಒಳ್ಳೇ ಸಮಯ!!!

11 7

ತಡಮಾಡಿದರೆ ಪ್ರತಿಗಳು ಮುಗಿದುಹೋದಾವು.

ನೇತ್ರಾನಂದಕರಗಳಾದ ಚಿತ್ರಗಳಿಂದಲೂ, ನೀತಿರಸಪ್ರದಾನವಾದ ವಿಷಯಗಳಿಂದಲೂ ರಂಜಿಸುವದಲ್ಲದೆ, ಸಕಲ ಜನಗಳೂ ಪಡೆಯತಕ್ಕಷ್ಟು ಸುಲಭವಾದ ಕ್ರಯಕ್ಕೆ ಸಿಕ್ಕುವವುಗಳಾಗಿಯೂ ಇವೆ. ಇವುಗಳು ಯಾವವೆಂದರೆ:—

	ಕ್ರಯ.
ಎಡ್ವರ್ಡ್ ಚಕ್ರವರ್ತಿಯವರ ಮತ್ತು ಅಲೆಕ್ಸಾಂಡ್ರಾ ಚಕ್ರವರ್ತಿನಿಯವರ ಚರಿತ್ರೆ	೦—೭—೦
ಎಡ್ವರ್ಡ್ ಸಾರ್ವಭೌಮರ ಕಿರೀಟಧಾರಣೆ ..	೦—೨—೬
ಘನತೆಯುಳ್ಳ ಸ್ತ್ರೀಯರ ಚರಿತ್ರೆ	೦—೨—೬
ದಕ್ಷಿಣ ಆಫ್ರಿಕವೂ ಅದರ ನಿವಾಸಿಗಳೂ ..	೦—೨—೬
ಚೀನಾ ಚಕ್ರಾಧಿಪತ್ಯವೂ ಅದರ ನಿವಾಸಿಗಳೂ ..	೦—೨—೬
ಬರ್ಮಾ ದೇಶವೂ ಬರ್ಮೀಯರೂ	೦—೨—೬
ಪುರಾತನ ಗ್ರೀಕರ ಕಥೆಗಳು	೦—೪—೦
ಪುರಾತನ ರೋಮನರ ಕಥೆಗಳು . . .	೦—೪—೦
ಪಕ್ಷಿಗಳ ಚಿತ್ರಗಳೂ ಕಥೆಗಳೂ . . .	೦—೧—೦
ಕ್ರಿಮಿವರ್ಗ ವರ್ಣನೆ	೦—೨—೦
ನೇಹವೆಂಬ ವಿಚಿತ್ರ ಹಾವ ಮನ್ನ ಮನೆ .	೦—೦—೦
ಚಿಕ್ಕವರಿಗೆ ಹೇಳಿದ ಕಥೆಗಳು	೦—೨—೦
ಪ್ರಾಚೀನಕಾಲದ ವಿಲಕ್ಷಣ ಜೀವರಾಶಿಗಳ ವರ್ಣನೆ	೦—೧—೦
ಹೊಗೆ ಗಾಡಿಗಳನ್ನು ಕಲ್ಪಿಸಿದ ಜಾರ್ಜ್ ಸ್ಟೀವೆನ್ಸನ್ ಎಂಬಾತನ ಚರಿತ್ರೆ	೦—೧—೦

ವಿಳಾಸ:—ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪ್ಪೋ,

ಮೈಸೂರು.

ವೃತ್ತಾಂತ ಪತ್ರಿಕೆ.

ಸ ೧೯೦೭ ನೇ ಇಸವಿ ಜೂಲೈ ತಾ॥ ೧೮ ನೇ ಗುರುವಾರ

ದಿನಸಿಗಳ ಧಾರಣೆ ಹೆಚ್ಚಿರುವುದು.

ಹಿಂದುಸ್ಥಾನದ ಎಲ್ಲಾ ಭಾಗಗಳಲ್ಲೂ ಪ್ರಜೆಗಳ ಜೀವನಕ್ಕೆ ಅವಶ್ಯವಾದ ಧಾನ್ಯಗಳ ಧಾರಣವಾಸಿಯು ಸಾಮಾನ್ಯವಾಗಿ ಹೆಚ್ಚಿದೆ ಎಂದು ಗೊತ್ತುಮಾಡಲ್ಪಟ್ಟಿದೆ. ಇದಕ್ಕೆ ಕ್ಷಾಮವೇ ಕಾರಣವೆಂದು ಮೊದಲು ಹೇಳುತ್ತಿದ್ದರು. ಕಳೆದ ೧೯೦೩-೦೪ ನೆಯ ಸಾಲುಗಳ ಕ್ಷಾಮವು ನಿವಾರಣೆಯಾದ ಈಚೆಗೆ ಎರಡು ಮೂರು ವರುಷಗಳಿಂದಲೂ ಎಲ್ಲೆಲ್ಲೂ ಒಳ್ಳೇ ಮಳೆಗಳಾಗಿ ಸರಾಸರಿಗಿಂತಲೂ ಸ್ವಲ್ಪ ಹೆಚ್ಚಾಗಿಯೇ ದವಸಧಾನ್ಯಗಳು ಬೆಳೆದಿರುತ್ತವೆ. ಧಾರಣವಾಸಿಗಳೂ ಸ್ವಲ್ಪ ಮಟ್ಟಿಗೆ ಇಳಿದಿದ್ದಾಗ್ಯೂ ಪ್ರಜೆಗಳು ನಿರೀಕ್ಷಿಸಿದ್ದಷ್ಟು ಅಂದರೆ ಪೂರ್ವದಲ್ಲಿದ್ದಂತೆ ಅಗ್ಗವಾಗಲಿಲ್ಲ.

ಈ ಸಂಗತಿಯನ್ನು ಮೈಸೂರು ಸರ್ಕಾರಿ ಗೆಜೆಟ್ಟೂ ಕೂಡ ಸೂಚಿಸಿರುವುದು. ನಮ್ಮ ದೇಶದಲ್ಲಿ ಎರಡು ಮೂರು ವರುಷಗಳಿಂದಲೂ ನಡೆದು ಬಂದಿರುವ ಕಾಲಸ್ಥಿತಿಯನ್ನು ನೋಡಲಾಗಿ ಕ್ಷಾಮಬಾಧೆಯು ಸಾಕ್ಷಾತ್ತಾಗಿ ಪ್ರಾಪ್ತವಾಗದೆ ಹೋದಾಗ್ಯೂ ಮಳೆಗಳು ಸರಿಯಾಗಿ ನಡೆಸಲಿಲ್ಲವೆಂತಲೂ ಇದರಿಂದ ದವಸಧಾನ್ಯಗಳು ಚೆನ್ನಾಗಿ ಬೆಳೆಯದೆ ಇವೆ ಎಂತಲೂ ಹೇಳಬಹುದು. ಆದರೂ ಮೈಸೂರು ಸಂಸ್ಥಾನದಲ್ಲಿ ನಡೆದ ಸುಗ್ಗಿಯನ್ನು ಒಟ್ಟು ಕೂಡಿಸಿ ನೋಡುವಲ್ಲಿ ಬೆಳೆಗಳು ವಿಶೇಷವಾಗಿ ಆಗಿರುತ್ತವೆಂದು ಹೇಳಲು ಅನುಮಾನವೇನೂ ಕಾಣುವುದಿಲ್ಲ. ಅದಾಗ್ಯೂ ದವಸಗಳ ಧಾರಣೆಯು ತೃಪ್ತಿಕರವಾದಷ್ಟು ಮಟ್ಟಿಗೆ ಇಳಿಯದೆ ಹೋಯಿತು. ಕಳೆದ ಹತ್ತು ವರುಷಗಳ ಸರಾಸರಿಯನ್ನು ನೋಡಿದರೆ ರಾಗಿ ೨೨ ಸೇರೂ, ಅಕ್ಕಿ ೯-೧೦ ಸೇರೂ ಬಿಕರಿಯಾಗುತ್ತಿರಬೇಕು. ಇದಕ್ಕೆ ಪ್ರತಿಯಾಗಿ ಈಗ ರಾಗಿ ರೂಪಾಯಿಗೆ ೧೭ ಸೇರೂ, ಅಕ್ಕಿ ೭ ಸೇರೂ ಮಾರಾಟವಾಗುತ್ತಿರುವುದು.

ಹಿಂದುಸ್ಥಾನದಲ್ಲಿ ರೈಲ್ ರಸ್ತೆಗಳು ಹೆಚ್ಚಾಗಿರೋಣದರಿಂದ ದವಸಧಾನ್ಯಾದಿಗಳು ಬಹಳ ಜಾಗ್ರತೆಯಿಂದಲೂ ತುಂಬಾ ಸುಲಭವಾಗಿಯೂ ಒಂದು ಕಡೆಯಿಂದ ಇನ್ನೊಂದು ಕಡೆಗೆ ಸಾಗಿಹೋಗಲು ತುಂಬಾ ಅನುಕೂಲವಾಗಿದೆ. ಇದರಿಂದ ಒಂದು ಕಡೆ ದವಸಗಳು ಅಗ್ಗವಾಗುವುದಕ್ಕೂ ಇನ್ನೊಂದು ಕಡೆ ತಗ್ಗಾಗುವುದಕ್ಕೂ ಅವಕಾಶವಿಲ್ಲ. ಉತ್ತರ ದೇಶದಲ್ಲಾಗಲಿ ದಕ್ಷಿಣ ದೇಶದಲ್ಲಾಗಲಿ ಧಾರಣೆಗಳು ಸುಮಾರಾಗಿ ಒಂದೇ ರೀತಿ ಇರುವಂತಾಗಿದೆ. ಯಾಕಂದರೆ ದವಸವು ಹೇರಳವಾಗಿರುವ ಕಡೆಯಿಂದ ಕಡಿಮೆಯಾಗಿರುವ ಪ್ರದೇಶಕ್ಕೆ ಬಹು ಬೇಗ ಸಾಗಿಹೋಗುವುದು.

ಹಾಗಾದರೆ ಈಗ ಧಾರಣೆಗಳು ಎಲ್ಲಾ ಕಡೆಗಳಲ್ಲೂ ಈ ರೀತಿ ಹೆಚ್ಚಿರುವುದಕ್ಕೆ ಕಾರಣವೇನಾಗಿರಬಹುದೆಂದು ಪ್ರಶ್ನೆ ಹುಟ್ಟುತ್ತದೆ. ಕೆಲವರು ಕ್ಷಾಮಗಳ ಗೆಳೆಯಿಂದ ದೇಶದಲ್ಲಿದ್ದ ದಾಸ್ತಾ ದವಸಗಳೆಲ್ಲಾ ಕಡಮೆಯಾದವೆಂತಲೂ ಪೂರ್ವದಲ್ಲಿದ್ದಷ್ಟು ದವಸ ಈಗ ದೇಶದಲ್ಲಿ ನಿಂತಿಲ್ಲವೆಂತಲೂ ಹೇಳುತ್ತಾರೆ. ಇನ್ನು ಕೆಲವರು ವರ್ತಕರ ಬಳಿ ಬಹಳ ದವಸಗಳು ಶೇಖರವಾಗಿರುತ್ತವೆಂತಲೂ ಅವರು ಧಾರಣೆಯನ್ನು ಹೆಚ್ಚಾಗಿಯೇ ಇಟ್ಟಿರಬೇಕೆಂದು ಗೊತ್ತುಮಾಡಿಕೊಂಡು ದವಸಗಳನ್ನು ತಡೆದಿರುತ್ತಾರೆಂತಲೂ ಹೇಳುವರು. ಆದರೆ ಈ ಕಾರಣಗಳು ತೃಪ್ತಿಕರವಾದವುಗಳಲ್ಲವೆಂದು ತೋರುತ್ತದೆ. ಹಿಂದುಸ್ಥಾನದಿಂದ ಹೊರಕ್ಕೆ ವಿಶೇಷವಾಗಿ ದವಸಗಳು ಸಾಗಿಹೋಗುವುದರಿಂದ ಈ ರಾಷ್ಟ್ರದಲ್ಲಿ ದವಸಗಳು ದಾಸ್ತಾ ನಿಲ್ಲುವುದು ಕಡಮೆಯಾಯಿತು ಮತ್ತು ಪ್ರಜೆಗಳಲ್ಲಿ ದವಸಕ್ಕೆ ಪ್ರತಿಯಾಗಿ ಹೆಚ್ಚು ನಗದು ಹಣ ಶೇಖರವಾಯಿತು.

ಹಣದ ಬೆಲೆಯನ್ನು ನಾವು ಇತರ ವ್ಯಾಪಾರ ವಸ್ತುಗಳಂತೆಯೇ ಪರಿಗಣಿಸಬೇಕು. ಹ್ಯಾಗಂದರೆ ಹಣ ಕಡಮೆಯಾದರೆ ಅದರ ಬೆಲೆ ಹೆಚ್ಚುವುದು, ಅದು ಅಪಾರವಾದರೆ ಅದರ ಬೆಲೆಯು ಕಡಮೆಯಾಗುವುದು. ರೈತ ಪ್ರಜೆಗಳ ಸ್ಥಿತಿಗತಿಗಳು ಮೊದಲಿಗಿಂತಲೂ ಈಗ ವಿಶೇಷ ಬದಲಾವಣೆಯಾಗಿರುವಂತೆ ತೋರುವುದಿಲ್ಲ. ಅವರು ಮೊದಲಿನಂತೆ ಈಗಲೂ ತಮಗೆ ಬೇಕಾಗುವಷ್ಟು ದವಸವನ್ನು ಇಟ್ಟುಕೊಂಡು, ಮಿಕ್ಕದ್ದನ್ನು ಬಿಕರಿಮಾಡುತ್ತಾರೆ. ಈ ಪ್ರಕಾರ ಬಿಕರಿ ಮಾಡುತ್ತಿದ್ದರಲ್ಲಿ ಅವರಿಗೆ ಮೊದಲು ಬರುತ್ತಿದ್ದದ್ದಕ್ಕಿಂತಲೂ ಈಗ ಹೆಚ್ಚು ಹಣ ಬರುತ್ತದೆ.

ಧಾರಣೆ ಹೆಚ್ಚಿದ್ದರಿಂದ ಬಹಳ ಕಷ್ಟಪಡತಕ್ಕವರು ತಿಂಗಳು, ತಿಂಗಳು ಕಟ್ಟೇ ಇಷ್ಟೆಂದು ಗೊತ್ತಾದ ಸ್ವಲ್ಪ ಸಂಬಳವನ್ನು ತರತಕ್ಕ ಪ್ರಜೆಗಳೇ ತುಂಬಾ ಕಷ್ಟಕ್ಕೆ ಗುರಿಯಾಗುತ್ತಾರೆ. ಮುಸಲಾ, ಸರ್ಕಾರಿ ಕೋರ್ಟು ಕಛೇರಿಗಳಲ್ಲಿ ಗುಮಾಸ್ತೆಯ ಕೆಲಸ ನೋಡುತಕ್ಕವರಿಗೂ, ಪೋಲೀಸ್ ಜವಾನರಿಗೂ, ಗ್ರಾಮಾಂತರಗಳ ಉಪಾಧ್ಯಾಯರಿಗೂ ಜೀವನಕ್ಕೆ ಕಷ್ಟವಾಗಿರುತ್ತದೆ. ಯಾಕಂದರೆ ಅವರ ಸಂಬಳದ ದರಗಳು ಮೊದಲಿದ್ದಷ್ಟೇ ಇರುವವು; ಧಾರಣವಾಸಿಗಳಾದರೋ ಮೊದಲಿದ್ದಂತೆ ಇಲ್ಲ. ಇದು ಯಥಾರ್ಥವಾದ ಸಂಗತಿಯಲ್ಲವೋ? ಹಾಗಾದರೆ ಈ ವಿಷಯವನ್ನು ಗವರ್ನಮೆಂಟಿನವರು ಯಾಕೆ ಪರ್ಯಾಲೋಚಿಸಬಾರದು?

ಒಳದೇಶದ ವೃತ್ತಾಂತಗಳು.

ನಾಳೆಯ ದಿನ ಶ್ರೀಮನ್ಮಹಾರಾಜರವರು ಬೆಂಗಳೂರಿಗೆ ಚಿತ್ತೈಸಬಹುದೆಂದು ವರ್ತಮಾನವಿದೆ.

❦❦❦

ಬೆಂಗಳೂರು ತಾಲ್ಲೂಕು ಕೆಂಗೇರಿ, ಮರಹಳ್ಳಿ ಪ್ರಾಂತ್ಯಗಳಲ್ಲಿ ಒಂದು ಚಿರತೆಯು ಸೇರಿಕೊಂಡು ದನಗಳನ್ನು ಕೊಲ್ಲುತ್ತಿದೆ ಎಂದು ಕೇಳುವೆವು.

❦❦❦

ಶ್ರೀಮನ್ ಯುವರಾಜರವರೂ ಸರ್ದಾರ್ ಗೋಪಾಲರಾಜೇ ಅರಸಿನವರೂ ಬರೋಡಾ ಮಹಾರಾಜರವರ ಕೂಡ ಕಳೆದ ಸೋಮವಾರ ಬೆಂಗಳೂರಿಗೆ ದಯಮಾಡಿದರು.

❦❦❦

ಬರೋಡಾ ಮಹಾರಾಜರವರನ್ನು ಎದುರುಗೊಳ್ಳುವುದಕ್ಕೋಸ್ಕರ ದಿವಾನ್ ಮೆ॥ ಮಾಧವರಾಯರು ಭಾನುವಾರ ರಾತ್ರಿಯೇ ರಾಜಧಾನಿಯಿಂದ ದಯಮಾಡಿದರು.

❦❦❦

ದೇವಸ್ಥಾನಗಳಲ್ಲಿ ಪೂಜಾರಿಗಳು ನಾತಾನಿಗಳಾಗಿದ್ದಲ್ಲಿ ಬ್ರಾಹ್ಮಣಭಕ್ತರಿಗೆ ದೇವರ ಪ್ರಸಾದ ಪಂಚಾಮೃತವನ್ನು ತಟ್ಟೆಯಲ್ಲಿಟ್ಟು ಕೊಡಬೇಕೆಂದು ಸರ್ಕಾರದವರು ಹುಕುಂ ಮಾಡಿರುತ್ತಾರೆ.

❦❦❦

ಚೀಫ್ ಕೋರ್ಟಿನ ಮೆ॥ ಎಂ. ಎಲ್. ಸ್ವಾಮೇಗೌಡರಿಗೆ ಡೆಪ್ಟಿ ಅಮಲ್ದಾರಿ ಕೊಟ್ಟವೆ ಎಂಬ ಹುಕುಮನ್ನು ರದ್ದುಮಾಡಿ, ಸರ್ಕಾರದವರು ಶಿವಮೊಗ್ಗಾ ಡೆಪ್ಟಿ ಕಮಿಷನರ ಆಫೀಸ್ ಹೆಡ್ ಮುನ್ಷಿ ಮೆ॥ ಎ ರಾಜಾರಾಯರನ್ನು ಕುಂಸಿ ಸಬ್ ತಾಲ್ಲೂಕಿನ ಡೆಪ್ಟಿ ಅಮಲ್ದಾರರಾಗಿ ಕೆಲಸ ನೋಡುವಂತೆ ನೇಮಕಮಾಡಿರುತ್ತಾರೆ.

❦❦❦

ಬೆಂಗಳೂರು ಸಿಟಿಯಲ್ಲಿರುವ ವೆಂಕಟಸುಬ್ಬ ಶೆಟ್ಟರು ಕಳುವಿನ ಮಾಲು ತೆಗೆದುಕೊಂಡರೆಂದು ಮೊಕದ್ದಮೆ ಆಗಿ ಸಿಟಿ ಮ್ಯಾಜಿಸ್ಟ್ರೇಟರು ಅವರಿಗೆ ಶಿಕ್ಷೆ ವಿಧಿಸಿದ್ದರಷ್ಟೆ. ಚೀಫ್ ಕೋರ್ಟಿನಲ್ಲಿ ಅವರು ಅಪೀಲ್ ಮಾಡಿಕೊಂಡಿದ್ದರು. ಈಗ ಅವರ ಮೇಲೆ ಅಪರಾಧ ರುಜುವಾತಾಗಲಿಲ್ಲವೆಂದು ಆ ಶಿಕ್ಷೆಯನ್ನು ವಜಾಮಾಡಿರುತ್ತಾರೆ.

❦❦❦

ಈ ತಿಂಗಳ ೨೪ನೇ ತಾ ಬುಧವಾರ ಬೆಂಗಳೂರು ಪಬ್ಲಿಕ್ ಆಫಿಸ್ ಕಟ್ಟಡದಲ್ಲಿ ಮೈಸೂರು ನ್ಯಾಯವಿಧಾಯಕ ಕೌನ್ಸಿಲ್ ಸಭೆಯ ಮೊದಲನೇ ಮೀಟಿಂಗು ನಡೆಯುವುದು. ಪೋಲೀಸ್ ಕಾನೂನು, ಕೋರ್ಟ್ ಫೀಜುಗಳ ಕಾನೂನು, ಗ್ರಾಮಾಧಿಕಾರಿಗಳ ಕಾನೂನು, ಈ ಮೂರನ್ನೂ ಕುರಿತು ಚರ್ಚೆಮಾಡಬೇಕೆಂದು ಆ ಸಭೆಯಲ್ಲಿ ಸೂಚಿಸಲ್ಪಡುವುದು.

❦❦❦

ಮೊನ್ನೆ ಮಂಗಳವಾರ ಬೆಳಗ್ಗೆ ಬರೋಡೆಯ ಮಹಾರಾಜರವರೂ ಮಹಾರಾಣಿಯವರೂ ಬೆಂಗಳೂರಿಂದ ಮೋಟಾರ್ ಗಾಡಿಗಳಲ್ಲಿ ಕುಣಿಗಲಿಗೆ ದಯಮಾಡಿ, ಅಲ್ಲಿರುವ ಕುದುರೆ ಫಾರವನ್ನು ಪರಾಂಬರಿಸಿಕೊಂಡು ಆ ಸಾಯಂಕಾಲವೇ ವಾಪಸು ಬಂದರು. ಅವರ ಸಂಗಡ ಶ್ರೀಮನ್ ಯುವರಾಜರವರೂ ದಿವಾನರವರೂ ಕರ್ನಲ್ ಜೋನ್ಸ್ ಸಾಹೇಬರೂ ಹೋಗಿದ್ದರೆಂದು ತಿಳಿಯುವುದು.

❦❦❦

ವಿಲಾಯತಿಯಲ್ಲಿರುವ ಇಂಡಿಯಾ ಸ್ಟೇಟ್ ಸೆಕ್ರೆಟರಿಯವರ ಪಂಚಾಲೋಚನಾ ಸಭೆಗೆ ನಮ್ಮ ದಿವಾನರಾದ ಮೆ॥ ಮಾಧವರಾಯರನ್ನು ಮೆಂಬರಾಗಿ ನೇಮಿಸಬಹುದೆಂದು ಸೀಮೆಯಿಂದ ಒಂದು ತಂತೀ ವರ್ತಮಾನ ಬಂದು ಪ್ರಕಟವಾಗಿದೆ. ಇದನ್ನು ಕೇಳಿದ ಕೆಲವು ಉತ್ತರ ದೇಶದ ದೊಡ್ಡ ಮನುಷ್ಯರು ಸಂತೋಷಪಟ್ಟು ಮೆ॥ ಮಾಧವರಾಯರಿಗೆ ತಂತೀ ವರ್ತಮಾನವನ್ನು ಕಳುಹಿಸಿದಾರೆ.

❦❦❦

ಈಗ ಒಂದೆರಡು ವಾರಗಳಿಂದಲೂ ರಾಜಧಾನಿಯಲ್ಲಿ ಪ್ಲೇಗ್ ಉಪದ್ರವ ಮತ್ತೆ ಕಾಣಿಸಿಕೊಂಡು ಪ್ರಜೆಗಳ ಮನಸ್ಸನ್ನು ಕಳವಳ ಪಡಿಸುತ್ತಿದೆ. ಈ ತಿಂಗಳ ಪ್ರಾರಂಭದಿಂದ ಸುಮಾರು ೩೦ ಜನರಿಗೆ ಆ ಉಪದ್ರ ತಗಲಿ ೧೮ ಜನರು ಕಾಲವಾದರೆಂತಲೂ, ಪ್ಲೇಗ್ ಕ್ಯಾಂಪಿನಲ್ಲಿ ೮ ಪ ೦ಪಿ ಕಾಲೋಣಿಯವರೂ ಸುಮಾರು ೫೦ ಮಂದಿಗಿಂತಲೂ ಹೆಚ್ಚಾಗಿ ಅಬ್ಸರ್‌ವೇಷನ್ನಲ್ಲಿರತಕ್ಕವರೂ ಇರುವರೆಂದೂ ಕೇಳುತ್ತೇವೆ.

❦❦❦

ಹಾಸನದಲ್ಲಿರುವ ದೊಡ್ಡ ಪಾಯಣ್ಣ, ಬ್ರಹ್ಮದೇವ ಎಂಬವರಿಗೆ ಶ್ರವಣ ಬೆಳಗೊಳದ ಜೈನ ಮಠದ ಸ್ವಾಮಿಗಳು ಬಹಿಷ್ಕಾರ ಹಾಕಿ, ಪ್ರಾಯಶ್ಚಿತ್ತ ಮಾಡಿಕೊಳ್ಳುವ ತನಕ ಅವರನ್ನು ಜೈನಬಸ್ತಿಗೆ ಬಿಡಕೂಡದೆಂದು ವಿಧಿಸಿದರು. ಸ್ವಾಮಿಗಳು ತೀರ್ಮಾನ ಮಾಡುವುದಕ್ಕೆ ಗವರ್ನಮೆಂಟಿನವರು ಪ್ರವರ್ತಿಸುವುದಿಲ್ಲವೆಂತಲೂ ಅವರಿಬ್ಬರನ್ನು ಪ್ರಾಯಶ್ಚಿತ್ತ ಮಾಡಿಕೊಳ್ಳುವ ತನಕ ಪಂಚರಾಯರು ಜೈನಬಸ್ತಿಗಳಿಗೆ ಬಿಡಲಾಗುವುದಿಲ್ಲವೆಂತಲೂ ಹುಕುಂ ಕೊಟ್ಟಿರುತ್ತಾರೆ.

❦❦❦

ತುಂಕೂರಿನ ಬಳಿ ಇರುವ ನರಸಿಂಹಸ್ವಾಮಿ ದೇವಸ್ಥಾನದಲ್ಲಿ ಕಳೆದ ತಾ ೧೨ ನೆಯ ಶುಕ್ರವಾರ ಸಾಯಂಕಾಲ ಬಹಳ ಜನ ಭಕ್ತಾದಿಗಳು ಸೇರಿ ದೇವರ ಸೇವಾದಿಗಳನ್ನು ನಡಸುತ್ತಿದ್ದಾಗ ಸುಮಾರು ಎಳು ಮಂದಿ ಕಳ್ಳರು ಜ್ಯಾಗೋ ದೇವಸ್ಥಾನದೊಳಕ್ಕೆ ನುಗ್ಗಿ ಸುಮಾರು ೩,೦೦೦ ರೂಪಾಯಿನ ನಗನಾಣ್ಯಗಳನ್ನು ಕದ್ದುಕೊಂಡು ಹೋದರೆಂತಲೂ, ಅವರನ್ನು ಯಾರೂ ಅಡ್ಡಮಾಡಿ ಹಿಡಿಯಲಾರದೆ ಹೋದರೆಂತಲೂ, ಇದುವರೆಗೆ ಯಾರೂ ಸಿಕ್ಕಲಿಲ್ಲವೆಂತಲೂ ತಿಳಿಬಂದಿದೆ. ನಮ್ಮ ತುಂಕೂರು ಬಾತ್ಮಿದಾರರೂ ಈ ವಿಷಯವನ್ನು ಸೂಚಿಸಿರುತ್ತಾರೆ.

❦❦❦

ಕಳೆದ ಶನಿವಾರ ಮಧ್ಯಾಹ್ನ ಶ್ರೀ ಶೃಂಗೇರಿ ಸ್ವಾಮಿಗಳು ಮಠದ ಮೆರವಣಿಗೆಯಲ್ಲಿ ಅರಮನೆಗೆ ದಯಮಾಡಿ, ಶ್ರೀಮನ್ಮಹಾರಾಜರೂ ಮತ್ತು ರಾಜವರ್ಗದವರ ಪಾದಪೂಜಾದಿಗಳನ್ನು ಸ್ವೀಕರಿಸಿ, ಅರಮನೆಯಲ್ಲೇ ಸುಮಾರು ಒಂದು ಗಂಟೆಯವರೆಗೆ ಇದ್ದು, ರಾಜವರ್ಗದವರಿಂದ ಬೀಳ್ಕೊಂಡು, ಮೆರವಣಿಗೆಯಲ್ಲಿ ಹೊರಟು ಗೌರವಾರ್ಥವಾದ ತೋಪುಗಳು ಹಾರುತ್ತಿರುವಲ್ಲಿ ಸಕಲ ಮರ್ಯಾದೆಗಳೊಡನೆ ರಾಜಧಾನಿಯಿಂದ ಸಂಜನಗೂಡನ್ನು ಕುರಿತು ಪ್ರಯಾಣಮಾಡಿದರು. ಸಮಸ್ತ ಅರಸುಗಳೂ ಅಧಿಕಾರಿಗಳೂ ದೊಡ್ಡ ಮನುಷ್ಯರೂ ಸಾವಿರಾರು ಪ್ರಜೆಗಳೂ ಮೆರವಣಿಗೆಯಲ್ಲಿ ಪಟ್ಟಣದ ಹೊರ ಪಾರ್ಶ್ವದವರೆಗೆ ಹೋಗಿ ಸ್ವಾಮಿಗಳನ್ನು ಸಾಗಕಳುಹಿಸಿ ಬಂದರು.

❦❦❦

ಶಿವಮೊಗ್ಗಾ ತಾಲ್ಲೂಕಿಗೆ ಸೇರಿದ ಕೂಡ್ಲಿ ಗ್ರಾಮದಲ್ಲಿ ರುಸ್ಮಾರ್ತ ಬ್ರಾಹ್ಮಣರ ಕೂಡ್ಲಿ ಶೃಂಗೇರಿ ಮಠದ ಏಜಂಟರೂ ಚಿತ್ರದುರ್ಗದ ಬರ್ಮನಲ್ಲಿರುವ ಲಿಂಗಾಯತರ ಮುರುಗಿ ಮಠದ ಏಜಂಟರೂ ಆಯಾ ಮಠಗಳ ಸ್ವಾಮಿಗಳಿಗೆ ಅಡ್ಡಪಾಲಕ್ಕಿಯಲ್ಲಿ ಕುಳಿತುಕೊಂಡು ಹೋಗುವ ಹಕ್ಕನ್ನು ಕೊಡಿಸಬೇಕೆಂತಲೂ ಪೂರ್ವದಲ್ಲಿ ಈ ಹಕ್ಕು ಅವರಿಗೆ ಇತ್ತೆಂತಲೂ ಗವರ್ನಮೆಂಟಿನವರನ್ನು ಕೇಳಿಕೊಂಡರು. ಗವರ್ನಮೆಂಟಿನವರು ಹಿಂದಿನ ರೆಕಾರ್ಡುಗಳನ್ನು ಪರಾಂಬರಿಸಿ ೧೮೦೩ ನೆ ಇಸವಿ ಡಿಸೆಂಬರ್ ೨೧ ರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರವರು ಕೊಟ್ಟ ಹುಕುಮಿನಲ್ಲಿ ಕಂಡಂತೆ ಅಡ್ಡಪಾಲಕ್ಕಿಯ ಹಕ್ಕು ಶೃಂಗೇರಿಯಲ್ಲಿರುವ ಶ್ರೀ ಶೃಂಗೇರಿ ಮಠದ ಒಂದಕ್ಕೆ ಮಾತ್ರ ಸಲ್ಲತಕ್ಕದ್ದೆಂತಲೂ ಇತರ ಮಠಗಳಿಗೆ ಆ ಹಕ್ಕನ್ನು ಕೊಡಲಾಗುವುದಿಲ್ಲವೆಂತಲೂ ತೀರ್ಮಾನ ಮಾಡಿರುತ್ತಾರೆ.

ಮೈಸೂರು ಗೆಜೆಟ್ ಸಂಗ್ರಹ.

ಮೈಸೂರು ಸಂಸ್ಥಾನದ ನ್ಯಾಯವಿಧಾಯಕ ಕೌನ್ಸಿಲ್ ಸಭೆಗೆ ಮೆ॥ ಏ. ಎ. ನರಸಿಂಹಯ್ಯಂಗಾರ‍್ರನ್ನೂ ಮೆ॥ ಸೈಯದ್ ಅಮೀರ್ ಜರ್ಫರವರನ್ನೂ ಮೆಂಬರಾಗಿ ನೇಮಕ ಮಾಡಲಾಗಿದೆ.

ಜನರಲ್ ಮತ್ತು ರೆವಿನ್ಯೂ ಸೆಕ್ರೆಟರಿಯವರು ಮೈಸೂರು ನ್ಯಾಯವಿಧಾಯಕ ಕೌನ್ಸಿಲ್ ಸಭೆಗೆ ಸೆಕ್ರೆಟರಿಯಾಗಿರತಕ್ಕದ್ದು.

ಮೆ॥ ಕೆ. ಎಸ್. ಚಂದ್ರಶೇಖರ ಅಯ್ಯರವರು ಮೈಸೂರು ನ್ಯಾಯವಿಧಾಯಕ ಕೌನ್ಸಿಲ್ ಸಭೆಯ ಮೆಂಬರ್ ಕೆಲಸಕ್ಕೆ ರಾಜೀನಾಮೆ ಕೊಟ್ಟಿರುವುದನ್ನು ಅಂಗೀಕರಿಸಲಾಗಿದೆ.

ಅರಸೀಕೆರೆ ತಾಲ್ಲೂಕು ಅಮಲ್ದಾರ್ ಮೆ॥ ಕೆ. ಶ್ರೀನಿವಾಸರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಎರಡು ತಿಂಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ಮತ್ತೊಂದು ಹುಕುಂ ಕೊಡಲ್ಪಡುವ ತನಕ ಚನ್ನಪಟ್ಟಣದ ಸಬ್ ರಜಿಸ್ಟ್ರಾರ್ ಎ. ಟಿ. ನರಸಿಂಹಯ್ಯಂಗಾರ‍್ರು ಅರಸೀಕೆರೆ ತಾಲೂಕಿನ ಅಮಲ್ದಾರ್ ಮತ್ತು ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೋಡತಕ್ಕದ್ದು.

ಮುಂದೆ ಹೇಳುವ ಮಾಸಿಕರ ವರ್ಗಾವರ್ಗೀ ಹುಕುಂ ಮಾಡಿದೆ — ಮೆ॥ ಕೆ. ಲಕ್ಷ್ಮೀನಾರಣಯ್ಯನವರು—ಶಿವಮೊಗ್ಗೆಯಿಂದ ಮೈಸೂರಿಗೆ ಮೆ॥ ಎನ್. ಹಿರಿಯಣ್ಣಯ್ಯನವರು—ಮೈಸೂರಿನಿಂದ ಶಿವಮೊಗ್ಗೆಗೆ.

ಮುಂದೆ ಹೇಳುವ ವರ್ಗಾವರ್ಗೀ ಮಂಜೂರಿನ್ನು ಹುಕುಂ ಮಾಡಿದೆ — ಮೆ॥ ಸಿ. ರಂಗನಾಥರಾವ್ ಸಾಹೇಬರವರು ದೊಡ್ಡಬಳ್ಳಾಪುರದಿಂದ ಚನ್ನಪಟ್ಟಣಕ್ಕೆ, ಮೆ॥ ಎ. ಸದಾಶಿವರಾಯರು ನೆಲಮಂಗಲದಿಂದ ದೊಡ್ಡಬಳ್ಳಾಪುರಕ್ಕೆ, ಮೆ॥ ಸಿ. ಕೃಷ್ಣರಾಯರು ಚಾಮರಾಜನಗರದಿಂದ ನೆಲಮಂಗಲಕ್ಕೆ, ಮೆ॥ ಎಚ್. ವೆಂಗಟರಮಣಶಾಸ್ತ್ರಿಗಳು ಶ್ರೀನಿವಾಸಪುರದಿಂದ ಚಾಮರಾಜನಗರಕ್ಕೆ, ಬೆಂಗಳೂರು ಡಿಸ್ಟ್ರಿಕ್ಟ್ ಶಿರಸ್ತೆದಾರ್ ಮೆ॥ ವೈ. ನರಸಿಂಗರಾಯರು ಶ್ರೀನಿವಾಸಪುರದ ಅಮಲ್ದಾರ್ ಮತ್ತು ೩ ನೆ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೋಡತಕ್ಕದ್ದು; ಮೆ॥ ಸೈಯದ್ ಯಾಕೂಬ್‌ರವರು ಶ್ರೀರಂಗಪಟ್ಟಣದಿಂದ ಮೈಸೂರಿಗೆ, ಮೆ॥ ಶೇಕ್ ಅಬುದುಲ್ಲಾರವರು ಚನ್ನಗಿರಿಯಿಂದ ಶ್ರೀರಂಗಪಟ್ಟಣಕ್ಕೆ; ಮೆ॥ ಬಿ. ಸಿ. ಕೇಶವೈಯ್ಯನವರು ಮೊಳಕಾಲ್ಮುರುವಿನಿಂದ ಚನ್ನಗಿರಿಗೆ, ಮುಜರಾಯಿ ಸೆಕ್ರೆಟರಿ ಆಫೀಸ್ ಮ್ಯಾನೇಜರ್ ಮೆ॥ ಎ. ಶ್ರೀನಿವಾಸರಾಯರು ಮೊಳಕಾಲ್ಮುರು ತಾಲ್ಲೂಕಿನ ಅಮಲ್ದಾರ್ ಮತ್ತು ೩ ನೆ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೋಡತಕ್ಕದ್ದು, ಮೆ॥ ಎಚ್. ಬಸವರಾಜೇ ಅರಸಿನವರು ಹೊಸಕೋಟೆಯಿಂದ ಮದ್ದಗಿರಿಗೆ, ಕುಂಸಿ ಡೆಪ್ಟಿ ಅಮಲ್ದಾರ್ ಮೆ॥ ಜಿ. ಪುರುಷಪ್ಪನವರು ಸೊರಬದ ತಾಲ್ಲೂಕ್ ಅಮಲ್ದಾರ್ ಮತ್ತು ಮೂರನೆ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೋಡತಕ್ಕದ್ದು, ಚೀಫ್ ಕೋರ್ಟಿನ ಡೆಪ್ಟಿ ಟ್ರಾನ್ಸ್ಲೇಟರ್ ಮೆ॥ ಎಂ. ಎಲ್. ಸ್ವಾಮೇಗೌಡರು ಕುಂಸಿ ಸಬ್ ತಾಲ್ಲೂಕಿನ ಡೆಪ್ಟಿ ಅಮಲ್ದಾರ್ ಮತ್ತು ೩ ನೆ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೋಡತಕ್ಕದ್ದು, ಬೆಂಗಳೂರು ಮ್ಯುನಿಸಿಪಲ್ ಕಲೆಕ್ಟರ್ ಮೆ॥ ಎಂ. ರಾಮಚಂದ್ರರಾಯರು ನಗರ್ ತಾಲ್ಲೂಕಿನ ಅಮಲ್ದಾರ್ ಮತ್ತು ೩ ನೆ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೋಡತಕ್ಕದ್ದು, ಕಡೂರ್ ಡಿಸ್ಟ್ರಿಕ್ಟ್ ಶಿರಸ್ತೆದಾರ್ ಮೆ॥ ಚಕ್ರಪಾಣಿ ಅಯ್ಯಂಗಾರ‍್ರು ಚಿಕ್ಕಮಗಳೂರು ತಾಲ್ಲೂಕು ಅಮಲ್ದಾರ್ ಮತ್ತು ೩ ನೆ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೋಡತಕ್ಕದ್ದು.

ಮೈಸೂರು ರೆವಿನ್ಯೂ ಸರ್ವೆ ಮತ್ತು ಸೆಟ್ಲ್‌ಮೆಂಟ್ ಸೂಪರಿಂಟೆಂಡೆಂಟರಾದ ಮೆ॥ ಪಿ. ಶಾಮರಾಯರು ಇನಾಂ ಇಲಾಖೆಯ ಛಾರ್ಜನ್ನು ಜೂಲೈ ೧ ರಲ್ಲಿ ಕರ್ನಲ್ ಜೆ. ಪಿ. ಗ್ರಾಂಟ್ ರವರಿಂದ ವಹಿಸಿಕೊಂಡಿರುತ್ತಾರೆ.

ಮಾರಿಕಣಿವೆ ಡಿವಿಜನ್ ಅ॥ ಇಂಜನಿಯರ್ ಮೆ॥ ಬಿ. ಅನಂತಾಚಾರ್ಯರಿಗೆ ಜೂನ್ ೨೭ ರ ಅಗಾಯತು ಐವತ್ತೈದು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ಚಿತ್ರದುರ್ಗದ ಡಿವಿಜನ್ ಅ॥ ಇಂಜನಿಯರ್ ಮೆ॥ ಬಿ. ಬಸಪ್ಪನವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ಬರೋಡೆಯ ಗಾಯಕವಾಡ ಮಹಾರಾಜರವರು.

ರಾಜಧಾನಿಯಲ್ಲಿ ನಡೆದ ಆತಿಥ್ಯಗಳು.

ಕಳೆದ ಗುರುವಾರ ಸಾಯಂಕಾಲ ಬರೋಡಾ ಸಂಸ್ಥಾನದ ಗಾಯಕವಾಡ ಮಹಾರಾಜಾ ಶ್ರೀ ಸಯ್ಯಾಜಿರಾವ್‌ರವರು ಮೋಟಾರ್ ಗಾಡಿಯಲ್ಲಿ ನೀಲಗಿರಿಯಿಂದ ರಾಜಧಾನಿಗೆ ದಯಮಾಡಿಸಿದರು. ಶ್ರೀಮನ್ ಮಹಾರಾಜರವರೂ ಯುವರಾಜರವರೂ ಮಧುವನದ ಬಳಿ ಚೇರಾದಲ್ಲಿ ಅವರನ್ನು ಎದುರುಗೊಂಡು ಮೋಟಾರ್ ಗಾಡಿಯಿಂದಿಳಿಸಿ, ದಿವ್ಯವಾದ ನಾಲ್ಕು ಕುದುರೆ ಕಟ್ಟಿದ ಸಾರೋಟಿನಲ್ಲಿ ಕೂಡಿಸಿಕೊಂಡು, ಗೌರವಾರ್ಥವಾದ ೨೧ ತೋಪುಗಳು ಹಾರುತ್ತಿರುವಲ್ಲಿ ಸವಾರ್, ಬಾಡಿಗಾರ್ಡ್, ಜಿಲೋ ಮೊದಲಾದ ಮರ್ಯಾದೆಗಳೊಡನೆ ಮೆರವಣಿಗೆಯಾಗಿ ಕೆರೆ ಏರಿಯ ಮೇಲೆ ದಯಮಾಡಿ, ಕರ್ಜನ್ ಪಾರ್ಕಿನೊಳಗೆ ಪ್ರವೇಶಿಸಿ, ಲೇಟ್ ಮಹಾರಾಜರವರ ಪ್ರತಿಮೆಯನ್ನಿಟ್ಟಿರುವ ಬಳಿ ಮ್ಯುನಿಸಿಪಲ್ ಕಟ್ಟಡದ ಕೆಳಗೆ ಸ್ವಲ್ಪ ಹೊತ್ತು ಸಾರೋಟನ್ನು ನಿಲ್ಲಿಸಿದರು. ಅಲ್ಲಿ ಅರಸುಗಳೂ ಅಧಿಕಾರಿಗಳೂ ಪುರಪ್ರಮುಖರೂ ಇತರ ದೊಡ್ಡ ಮನುಷ್ಯರೂ ಕಾದಿದ್ದು ಬರೋಡಾ ಮಹಾರಾಜರವರಿಗೆ ಹಾರ ತುರಾಯಿಗಳನ್ನೊಪ್ಪಿಸಿ ಪುಷ್ಪಗಳನ್ನೆರಚಿ ಸುಸ್ವಾಗತವನ್ನು ಬಯಸಿದರು. ಗಾಯಕವಾಡ ಮಹಾರಾಜರವರು ಕೃತಜ್ಞತಾ ಪೂರ್ವಕವಾಗಿಯೂ ಸಂತೋಷಾತಿಶಯದಿಂದಲೂ ಅವರನ್ನೆಲ್ಲಾ ವಂದಿಸಿ ಮುಂದಕ್ಕೆ ದಯಮಾಡಿ, ದಿವ್ಯಾಲಂಕಾರಯುಕ್ತವಾಗಿದ್ದ ಜಗನ್ಮೋಹನ ಬಂಗಲೆಗೆ ಚಿತ್ತೈಸಿದರು. ಅಲ್ಲಿ ವಾದ್ಯಗಳು ಭೋರ್ಗರೆದುವು. ಸೈನಿಕರು ಬಂದೂಕುಗಳನ್ನೆತ್ತಿ ಹಿಡಿದು ಸಲಾಮು ಮಾಡಿದರು. ಗೌರವಾರ್ಥವಾದ ೨೧ ತೋಪುಗಳು ಹಾರಿಸಲ್ಪಟ್ಟುವು. ದಿವಾನರು ಮೊದಲಾದವರು ಕಾಣಿಸಿಕೊಂಡು ಅವರನ್ನು ಸಾರೋಟಿನಿಂದಿಳಿಸಿ, ಬಂಗಲೆಯೊಳಕ್ಕೆ ಕರೆದುಕೊಂಡು ಹೋದರು. ಸ್ವಲ್ಪ ಹೊತ್ತು ವಿಶ್ರಮಿಸಿಕೊಂಡ ಮೇಲೆ ಗಾಯಕವಾಡ ಮಹಾರಾಜರವರು ಸಾರೋಟಿನಲ್ಲಿ ದಯಮಾಡಿ ಗಾಳಿಸವಾರಿ ಮಾಡಿಕೊಂಡು ಬಂದರು.

ಶುಕ್ರವಾರ ಬೆಳಿಗ್ಗೆ ಶ್ರೀಮನ್ ಮಹಾರಾಜರವರೂ ಗಾಯಕವಾಡ ಮಹಾರಾಜರವರೂ ಸವಾರಿ ಹೊರಟು ಗವರ್ನಮೆಂಟ್ ಕೈಗಾರಿಕೆಗಳ ಶಾಲೆ, ಖಾಸ್ ತಬೇಲಿ, ಪ್ರಾಣಿಶಾಲೆ ಮೊದಲಾದುವುಗಳನ್ನು ನೋಡಿಕೊಂಡು ಬಂದರು. ಬರೋಡಾ ಮಹಾರಾಜರು ಕೈಗಾರಿಕೆಗಳ ಪಾಠಶಾಲೆಯ ಎಲ್ಲಾ ಭಾಗಗಳನ್ನೂ ಪರಾಂಬರಿಸಿ ತುಂಬಾ ಸಂತೋಷಪಟ್ಟುಕೊಂಡರೆಂದು ತಿಳಿದುಬಂದಿದೆ. ಆ ದಿನ ಮಧ್ಯಾಹ್ನ ಅವರು ಬಂಗಲೆಯಲ್ಲೇ ಇದ್ದು ತಮ್ಮ ಸಂಸ್ಥಾನದ ಕಾಗದ ಪತ್ರಗಳನ್ನೂ ವರ್ತಮಾನಪತ್ರಿಕೆಗಳನ್ನೂ ನೋಡುತ್ತಿದ್ದು, ಸಾಯಂಕಾಲ ಗಾಳಿ ಸವಾರಿ ಹೋಗಿಬಂದರು. ರಾತ್ರಿ ಭೋಜನಾನಂತರ ಅವರು ಮಹಾರಾಜಾ ಸೆಕ್ರೆಟರಿ ಮಿ॥ ಅನಂತಸ್ವಾಮಿರಾಯರನ್ನು ಕರೆಸಿಕೊಂಡು, ಅವರ ಕೂಡ ಸುಮಾರು ೧॥ ಗಂಟೆಯ ಹೊತ್ತಿನವರೆಗೆ ಮಾತನಾಡುತ್ತಿದ್ದರೆಂದು ಕೇಳುತ್ತೇವೆ.

ಶನಿವಾರ ಬೆಳಿಗ್ಗೆ ಶ್ರೀಮನ್ ಮಹಾರಾಜರವರೂ ಗಾಯಕವಾಡ ಮಹಾರಾಜರವರೂ ಚಾಮುಂಡಿ ಬೆಟ್ಟದ ಮೇಲಕ್ಕೆ ದಯಮಾಡಿ, ದೇವಸ್ಥಾನಗಳಲ್ಲಿ ಪೂಜೆ ಮುಂತಾದ್ದನ್ನು ಮಾಡಿಸಿ, ಎಲ್ಲಾ ನೋಡಿಕೊಂಡು ವಾಪಸು ಬಂದರು. ಆ ದಿನ ಮಧ್ಯಾಹ್ನಕ್ಕೆ ಬರೋಡಾ ಮಹಾರಾಣೀರವರು ಪರಿವಾರ ಸಮೇತ ನೀಲಗಿರಿಯಿಂದ ಮೋಟಾರ್ ಗಾಡಿಯಲ್ಲಿ ದಯಮಾಡಿ, ಜಗನ್ಮೋಹನ ಬಂಗಲೆಯನ್ನು ತಲುಪಿದರು. ಮಧ್ಯಾಹ್ನ ಯಥಾಪ್ರಕಾರ ಗಾಯಕವಾಡ ಮಹಾರಾಜರವರು ಸ್ವಂತ ಕೆಲಸ ಕಾರ್ಯಗಳಲ್ಲಿ ಮಗ್ನರಾಗಿದ್ದು, ಸಾಯಂಕಾಲ ಗಾಳಿಸವಾರಿ ಹೋಗಿ ಬಂದರು. ಅವರ ಮಹಾರಾಣಿಯವರೂ ಸಾರೋಟಿನಲ್ಲಿ ಕುಳಿತು ಹೊರಟು ಪಟ್ಟಣದ ಕೆಲವು ಭಾಗಗಳನ್ನು ಪರಾಂಬರಿಸಿದರು.

ಭಾನುವಾರ ಬೆಳಿಗ್ಗೆ ಶ್ರೀಮನ್ ಯುವರಾಜರವರೂ ಸರ್ದಾರ್ ಕಾಂತರಾಜೇ ಅರಸಿನವರೂ ಮೋಟಾರ್ ಗಾಡಿಗಳಲ್ಲಿ ಬರೋಡಾ ಮಹಾರಾಜರವರನ್ನು ಶ್ರೀರಂಗಪಟ್ಟಣಕ್ಕೆ ಕರೆದುಕೊಂಡು ಹೋಗಿ, ಅಲ್ಲಿನ ಚರಿತ್ರಾರ್ಹವಾದ ಭಾಗಗಳನ್ನೆಲ್ಲಾ ಕಾಣಿಸಿ, ಸುಮಾರು ೧೧ ಗಂಟೆಗೆ ವಾಪಸು ಕರೆದುಕೊಂಡು ಬಂದರು. ಸಾಯಂಕಾಲ ಮಹಾಮಾತೃಶ್ರೀಯವರು ಮಹಾರಾಣಿಯವರನ್ನು ಅರಮನೆಗೆ ಕರೆದುಕೊಂಡುಹೋಗಿ ಜವಾಹಿರಿ ಮುಂತಾದವುಗಳನ್ನೂ ಕಟ್ಟಡವನ್ನೂ ತೋರಿಸಿದರು. ರಾತ್ರಿ ಅರಮನೆಯ ಅಂಬಾವಿಲಾಸದ ತೊಟ್ಟಿಯಲ್ಲಿ ಆರತಕ್ಷತೆ ಉತ್ಸವ ಬೆಳೆಯಿತು. ಅಗ್ಗೆ ಬರೋಡಾ ಮಹಾರಾಜರವರೂ, ಮಹಾರಾಣಿಯವರೂ ಪುತ್ರಪುತ್ರಿಯರೂ, ಅವರ ಕಡೆಯವರೂ ದಯಮಾಡಿ, ಆರತಕ್ಷತೆಯನ್ನು ಪರಾಂಬರಿಸಿದರು. ಅಗ್ಗೆ ಮನೋಹರವಾದ ಸಂಗೀತವೂ, ರೋಮನ್ ಕ್ಯಾಥೊಲಿಕ್ ಕಾನ್ವೆಂಟ್ ಸ್ಕೂಲಿನ ಬಾಲಕಿಯರ ನೇತ್ರಾನಂದಕರವಾದ ನರ್ತನವೂ ಆಟಪಾಟಗಳೂ, ಸಲಾಮುಜರೆಗಳೂ ನಡೆದುವು.

ಸೋಮವಾರ ಬೆಳಿಗ್ಗೆ ಬರೋಡಾ ಮಹಾರಾಜರವರೂ ಮಹಾರಾಣಿಯವರೂ ಇಲ್ಲಿನ ಮಹಾರಾಣೀ ಕಾಲೇಜೆಂಬ ಬಾಲಿಕಾ ಪಾಠಶಾಲೆಗೆ ದಯಮಾಡಿ, ಬಾಲಕಿಯರ ವಿದ್ಯಾಭಿವೃದ್ಧಿಯನ್ನೂ ಪಾಠಶಾಲೆಯ ಏರ್ಪಾಡುಗಳನ್ನೂ ಪರಾಂಬರಿಸಿ ತುಂಬಾ ಸಂತೋಷಪಟ್ಟು ಬಂದರು. ಭೋಜನಾನಂತರ ರಾಜದಂಪತಿಗಳು ಪರಿವಾರ ಸಹಿತ ನಾಲ್ಕು ಮೋಟಾರ್ ಗಾಡಿಗಳಲ್ಲಿ ಕುಳಿತು ಗೌರವಾರ್ಥವಾದ ತೋಪುಗಳು ಹಾರುತ್ತಿರುವಲ್ಲಿ ಬೆಂಗಳೂರಿಗೆ ಚಿತ್ತೈಸಿದರು.

ಇತರ ವಿಷಯಗಳು

ಬರೋಡಾ ಮಹಾರಾಜರವರ ಆತಿಥ್ಯಕ್ಕಾಗಿ ಅರಮನೆ ಇಲಾಖೆಯವರು ಮಾಡಿದ್ದ ಏರ್ಪಾಡುಗಳೆಲ್ಲಾ ತೃಪ್ತಿಕರವಾಗಿದ್ದವು. ಅವರ ಬಂಗಲೆಯೊಳಗೂ ಹೊರ ಪ್ರಾಕಾರದಲ್ಲೂ ರಾತ್ರಿ ಹೊತ್ತು ವಿದ್ಯುಚ್ಛಕ್ತಿಯ ಮತ್ತು ಗ್ಯಾಸ್ ಎಂಬ ಹೊಗೆಯ ದೀಪಗಳನ್ನು ಹಚ್ಚಿ ನೇತ್ರಾನಂದಕರವಾಗಿ ಮಾಡಿದ್ದರು. ಭಾನುವಾರ ರಾತ್ರಿ ಪಟ್ಟಣದಲ್ಲಿ ಎತ್ತರವಾದ ಎಲ್ಲಾ ಕಟ್ಟಡಗಳ ಮೇಲೂ ಸಾಲುಸಾಲಾದ ದೀಪಗಳನ್ನಿಟ್ಟು ದೀಪೋತ್ಸವ ಮಾಡಿದರು. ಬರೋಡಾ ಮಹಾರಾಜರವರಿಗಾಗಿ ಮಾಡಿದ್ದ ಎಲ್ಲಾ ಸೌಕರ್ಯಗಳೂ ಏರ್ಪಾಡುಗಳೂ ಅವರಿಗೆ ತೃಪ್ತಿಯನ್ನೂ ವಿಶೇಷ ಸಂತೋಷವನ್ನೂ ಉಂಟುಮಾಡಿದವೆಂಬುವದಕ್ಕೆ ಸಂಶಯವಿಲ್ಲ.

ಮೈಸೂರು ಪಟ್ಟಣದ ಪಾರ್ಸಿ ಜನರು.

ಒಂದು ಸಂತೋಷೋತ್ಸವವು

ಮೈಸೂರು ಪಟ್ಟಣದಲ್ಲಿ ಪಾರ್ಸಿ ಜನರ ಆರೇಳು ಸಂಸಾರಗಳು ಮಾತ್ರ ಇರುತ್ತವೆ. ಈ ಜನರ ಮತ ಸಂಪ್ರದಾಯಗಳೂ ಆಚಾರ ವಿಚಾರಗಳೂ ಇಲ್ಲಿನ ಇತರ ಪಂಗಡದವರಿಗೆ ತಿಳಿಯುವುದು ದುರ್ಲಭವಾಗಿದೆ. ಈ ಜನರಲ್ಲೆಲ್ಲಾ ಮೆ॥ ಗಳಾದ ಪಿ. ಪಾಲಂಜಿಯವರು, ಫ್ರಾಂಜಿ ಕವಾಸ್ಜಿಯವರು, ಜಹಂಗೀರ್ ಮಾಣಿಕ್ಜಿಯವರು ಮುಖಂಡರೆನಿಸಿಕೊಂಡಿದ್ದಾರೆ. ಕಳೆದ ಭಾನುವಾರ ಬೆಳಿಗ್ಗೆ ಈ ಮೂವರು ದೊಡ್ಡಮನುಷ್ಯರೂ ಒಟ್ಟಾಗಿ ಇಲ್ಲಿನ ಗವರ್ನಮೆಂಟ್ ನಾರ್ಮಲ್ ಸ್ಕೂಲ್ ಕಟ್ಟಡದಲ್ಲಿ ತಮ್ಮ ಆರುಮಂದಿ ಸಣ್ಣ ಮಕ್ಕಳಿಗೂ "ನವಜೋತ್" (ಪರಿಶುದ್ಧ ಜನಿವಾರಧಾರಣೆ) ಎಂಬ ಸಂಭ್ರಮಕಾರ್ಯವನ್ನು ನೆರವೇರಿಸಿದರು. ಇದಕ್ಕಾಗಿ ಆ ಕಟ್ಟಡದ ಒಳ ಹೊರಭಾಗಗಳನ್ನೆಲ್ಲಾ ನೇತ್ರಾನಂದಕರವಾಗಿ ಅಲಂಕರಿಸಿದ್ದರು. ಈ ಕಾರ್ಯವನ್ನು ಮಾಡಿಸಿ "ಗುರುಗಳು" ಉಪದೇಶ ಮಾಡುವುದಕ್ಕೆ ದಕ್ಷಿಣ ದೇಶದಲ್ಲೆಲ್ಲಾ ಪಾರ್ಸಿ ಜನರ ಪ್ರಧಾನಪುರೋಹಿತರಾಗಿರುವ ದಸ್ತೂರ್ ಕೈಕೋಬಾದ್ ದಸ್ತೂರ್ ಅದೇರ್‌ಬಾದ್ ಎಂಬುವರು ಪೂನಾಪಟ್ಟಣದಿಂದ ಮೊದಲನೇ ದಿನವೇ ಬಂದಿದ್ದರು. ಅವರು ಬೆಳಿಗ್ಗೆ ೮ ಗಂಟೆಗೆ ಮೇಲ್ಕಂಡ ಸ್ಕೂಲ್ ಕಟ್ಟಡದಲ್ಲಿ ಸ್ವಲ್ಪ ಎತ್ತರವಾದ ಪೀಠದ ಮೇಲೆ ಆ ಆರು ಮಕ್ಕಳನ್ನೂ ಕೂರಿಸಿಕೊಂಡು, ಒಂದು ದೊಡ್ಡ ಪಾತ್ರೆಯಲ್ಲಿ ಸುಗಂಧದ ಚಕ್ಕೆಗಳಿಂದ ಪ್ರಜ್ವಲಿಸುತ್ತಿದ್ದ ಅಗ್ನಿ ಸಾಕ್ಷಿಯಾಗಿ, ತಮ್ಮ ವೇದಗಳನ್ನು ಉಚ್ಚರಿಸುತ್ತಾ ಬ್ರಹ್ಮಜ್ಞಾನೋಪದೇಶವನ್ನು ಮಾಡಿದರು. ಮಂತ್ರಗಳನ್ನು ಹೇಳಿಕೊಡುತ್ತಾ ಹುಡುಗರಿಗೆ ಬಿಳಿಯ ಅಂಗಿಗಳನ್ನು ತೊಡಿಸಿ, ಬಿಳಿಯ ದಾರಗಳನ್ನು ಅದರ ಮೇಲೆ ಸೊಂಟಕ್ಕೆ ಕಟ್ಟಿದರು. ತರುವಾಯ ಪಾರ್ಸಿ ಸ್ತ್ರೀಯರು ಬಂದು ಆ ಹುಡುಗರಿಗೆ ಉಡುಗೆತೊಡಿಗೆಗಳನ್ನು ತೊಡಿಸಿ, ದ್ರವ್ಯರೂಪವಾಗಿಯೂ ಆಭರಣರೂಪವಾಗಿಯೂ ಉಡುಗೊರೆಗಳನ್ನು ಕೈಲಿ ಕೊಟ್ಟು, ಮುದ್ದಿಟ್ಟುಕೊಂಡು ಆಶೀರ್ವಾದ ಮಾಡಿದರು. ಈ ಉತ್ಸವವನ್ನು ನೋಡುವದಕ್ಕೆ ದಿವಾನರು, ಬಕ್ಷಿ ಬಸಪ್ಪಾಜಿ ಅರಸಿನವರು, ಮೆ॥ ಗಳಾದ ಟಿ. ಆನಂದರಾಯರು, ಅಂಬಿಲ್ ನರಸಿಂಹೈಯ್ಯಂಗಾರ್ರು, ವಿ. ಪಿ. ನರಸಿಂಹೈಯ್ಯಂಗಾರ್ರು, ಬಿ. ಸೀತಾರಾಮರಾಯರು ಈ ಮೊದಲಾದ ಸರ್ಕಾರಿ ಅಧಿಕಾರಿಗಳೂ ದೊಡ್ಡ ಮನುಷ್ಯರೂ ಎಲ್ಲಾ ಮತಸ್ಥರೂ ದಯಮಾಡಿ ಸಾಲುಸಾಲಾಗಿ ಕುರ್ಚಿಗಳ ಮೇಲೆ ಕುಳಿತಿದ್ದರು. ಬ್ರಾಹ್ಮಣರೇ ಮೊದಲಾದ ಕೆಲವು ಜಾತಿಗಳ ಸ್ತ್ರೀಯರೂ ಸಭೆಯನ್ನಲಂಕರಿಸಿದ್ದರು.

ಶಾಸ್ತ್ರಕಾರ್ಯಗಳೆಲ್ಲಾ ಆದ ತರುವಾಯ ಪಾರ್ಸಿ ಪುರೋಹಿತರು ಎದ್ದುನಿಂತು ಆ ದಿನ ತಾವು ಆ ಆರು ಮಂದಿ ಮಕ್ಕಳಿಗೂ ಮಾಡಿದ ಮಂತ್ರೋಪದೇಶದ ಉದ್ದೇಶ ಅರ್ಥ ಮೊದಲಾದವುಗಳನ್ನು ಕುರಿತು ಇಂಗ್ಲೀಷಿನಲ್ಲಿ ಉಪನ್ಯಾಸ ಪೂರ್ವಕವಾಗಿ ಸಭಿಕರಿಗೆ ವಿವರಿಸಿ ಹೇಳಿದರು. ಪಾರ್ಸಿಗಳಲ್ಲಿ ಹುಡುಗರಿಗೂ ಹುಡುಗಿಯರಿಗೂ ಏಳು ವರುಷ ತುಂಬಿದ ಮೇಲೆ ವಿವೇಚನಾ ಶಕ್ತಿಯುಂಟಾಗುತ್ತದೆ. ಆಗ್ಗೆ ಅವರಿಗೆ ಆ ದಿನ ಮಾಡಿದ ಶಾಸ್ತ್ರಕಾರ್ಯವನ್ನು ನಡಸಿ ಬ್ರಹ್ಮಜ್ಞಾನವನ್ನು ಬೋಧಿಸಿ, ಅಲ್ಲಿಂದಾಚೆಗೆ ಅವರು ಪಾಪಕೃತ್ಯಗಳನ್ನು ಮಾಡದಂತೆ ನೋಡಬೇಕಾದ್ದಾಗಿದೆ. ಆ ಶಾಸ್ತ್ರಕಾರ್ಯವು ಬಾಲಕರಿಗೂ ಬಾಲಕಿಯರಿಗೂ ಸನ್ಮಾರ್ಗದಲ್ಲಿ ನಡೆಯುವುದಕ್ಕೂ ಪಾಪಕೃತ್ಯಗಳಲ್ಲಿ ಆಸಕ್ತಿ ಹುಟ್ಟಿ ಅವನ್ನು ಮಾಡದೆ ಬಿಡುವುದಕ್ಕೂ ಸಚ್ಚರಿತ್ರರಾಗುವುದಕ್ಕೂ ಮಾರ್ಗ ತೋರಿಸುವುದಾಗಿದೆ. ಈ ನವಜೋತ್ ಎಂಬ ಕಾರ್ಯ ಮಾಡಿಕೊಂಡ ಮೇಲೆ ಬಾಲಕನೂ ಬಾಲಕಿಯೂ ಪಾರ್ಸಿ ಮತ ಸಂಬಂಧವಾದ ಪುಸ್ತಕಗಳನ್ನು ಪಠಿಸುತ್ತಾ ಅವುಗಳಲ್ಲಿ ಹೇಳಿರುವ ಪ್ರಕಾರ ನಡೆದುಕೊಳ್ಳುತ್ತಾ ಬರಬೇಕಾಗಿದೆ. ಈ ಕಾರ್ಯವಾದ ಮೇಲೆ ಪ್ರತಿಯೊಬ್ಬ ಪಾರ್ಸಿಯೂ ನಿತ್ಯವಾಗಿ ಒಪ್ಪಿ ಹೇಳತಕ್ಕದ್ದೇನೆಂದರೆ— "ದೇವರು ಸರ್ವಶಕ್ತನೆಂದೂ, ಸರ್ವಾಂತರ್ಯಾಮಿಯೆಂದೂ, ಅತ್ಯಂತ ದಯಾಳುವೆಂದೂ ನಂಬುತ್ತೇನೆ. ಜೋರೋಆಸ್ಟರ್ ಎಂಬ ಋಷಿಯಿಂದ ಸ್ಥಾಪಿಸಲ್ಪಟ್ಟ ನನ್ನ ಮತವು ಸರ್ವಶ್ರೇಷ್ಠವಾದದ್ದೆಂದೂ, ಅದರ ದೆಸೆಯಿಂದ ಭೂಲೋಕದ ಸಕಲ ಕೇಡುಗಳೂ ನಿರ್ನಾಮವಾಗಿ ಎಲ್ಲೆಲ್ಲೂ ಪ್ರೀತಿಯೂ ಸುಹೃದಯವೂ ನೆಲಗೊಳ್ಳುವುದೆಂದೂ ನಂಬುತ್ತೇನೆ. ಈ ಶ್ರೇಷ್ಠತರವಾದ ಮತವನ್ನು ಅನುಸರಿಸುತ್ತೇನೆ. ಸರ್ವದಾ ನಾನು ಮನೋವಾಕ್ಕಾಯಗಳಲ್ಲಿ ಶುದ್ಧತೆಯನ್ನು ಸಂಪಾದಿಸಿಕೊಳ್ಳುವುದಕ್ಕೆ ನನ್ನ ಕೈಲಾಗುವ ಮಟ್ಟಿಗೂ ಪ್ರಯತ್ನಪಡುತ್ತೇನೆ. ಸರ್ವದಾ ಕರ್ತನಾದ ಹಾರ್ಮಜ್ದ್ ಎಂಬ ಗುರುವಿನ ಆಜ್ಞೆಯನ್ನು ಶಿರಸಾವಹಿಸಿ ನಡೆದುಕೊಳ್ಳುತ್ತಾ ಆತನ ಪ್ರೀತಿಪಾತ್ರನಾಗಲು ಪ್ರಯತ್ನಪಡುವೆನು. ನನ್ನ ಗುರುವನ್ನೂ ನನ್ನ ಮಾತಾಪಿತೃಗಳನ್ನೂ ಯಾವಾಗಲೂ ಸನ್ಮಾನ ಮಾಡುತ್ತೇನೆ" ಎಂಬುವದೇ. ಅವರು ಸರ್ವದಾ ನಿರ್ಮಲವಾದ ಸತ್ಕಾರ್ಯಗಳನ್ನು ಮಾಡಬೇಕೆಂಬುದನ್ನು ತೋರಿಸುವುದಕ್ಕಾಗಿ ಬಿಳಿಯ ಅಂಗಿ ಹಾಕಿಕೊಳ್ಳುತ್ತಾರೆ. ಈ ಅಂಗಿಯ ಎದೆಯ ಪ್ರದೇಶದಲ್ಲಿ ಒಂದು ಸಣ್ಣ ಚೀಲವಿರುವುದು, ಅವರು ಯಾವಾಗಲೂ ಪುಣ್ಯ ಕ್ರಿಯೆಗಳನ್ನು ಮಾಡಿ, ಸಂಪಾದಿಸಿದ ಪುಣ್ಯವನ್ನು ಆ ಚೀಲದಲ್ಲಿ ತುಂಬುತ್ತಾ ಬರಬೇಕೆಂಬುದೇ ಅದರ ಉದ್ದೇಶವಾಗಿರುತ್ತದೆ. ಸೇವಕನು ಯಾವ ರೀತಿ ನಡು ಕಟ್ಟಿ ತನ್ನ ಯಜಮಾನನ ಕೆಲಸಗಳನ್ನು ನಡಸುವದಕ್ಕೆ ಸಿದ್ಧನಾಗಿರುವನೋ ಅದೇ ರೀತಿ ಪಾರ್ಸಿಯು ಬಿಳಿಯ ದಾರವನ್ನು ಚಾಕರಿ ಮಾಡುವುದಕ್ಕೆ ಅಂದರೆ ತನ್ನ ಗುರುವಿನ ಆಜ್ಞೆಯನ್ನು ಶಿರಸಾವಹಿಸಿ ನಡಸುವುದಕ್ಕೆ ಸಿದ್ಧನಾಗಿದ್ದೇನೆಂದು ತೋರಿಸುವುದಕ್ಕಾಗಿ ನಡುವಿಗೆ ಕಟ್ಟಿಕೊಳ್ಳುವನು. ಈ ದಾರದಲ್ಲಿ ಮೂರು ಸುತ್ತುಗಳುಂಟು. ಈ ಪಾರ್ಸಿ ಮತದಲ್ಲಿ ಒಳ್ಳೆ ಯೋಚನೆಗಳು, ಒಳ್ಳೆ ಮಾತುಗಳು, ಒಳ್ಳೆ ಕ್ರಿಯೆಗಳು, ಮೂರೂ ಅಡಗಿರುತ್ತವೆ. ಈ ಮಡಿಕೆಗಳು ಸೂಚಿಸತಕ್ಕವುಗಳಾಗಿವೆ ಎಂಬೀ ರೀತಿಯಾಗಿ ಪಾರ್ಸಿ ಗುರುವು ವಿವರಿಸಿದರು.

ತರುವಾಯ ಪಾರ್ಸಿ ಗುರುಗಳು ತಮ್ಮ ಸ್ಥಾನದಿಂದ ಇಳಿದು ದಿವಾನ್ ಮಿ॥ ಮಾಧವರಾಯರಿಗೆ ಹೂವಿನ ಹಾರ ಹಾಕಿ ತುರಾಯಿ ಕೊಟ್ಟರು. ಪಾರ್ಸಿ ದೊಡ್ಡ ಮನುಷ್ಯರು ಇತರ ಸಭಿಕರಿಗೆ ಹಾರಗಳನ್ನು ಹಾಕಿ ಪಾನಸುಪಾರಿ ಹಂಚಿದರು. ವಾದ್ಯಗಳು ಆರ್ಭಟಿಸುತ್ತಿರುವಲ್ಲಿ ಸಭಿಕರೆಲ್ಲಾ ಸಂತೋಷಚಿತ್ತರಾಗಿ ತೆರಳಿದರು. ಪಾರ್ಸಿ ಗುರುಗಳು ಮೊನ್ನೆ ಸೋಮವಾರ ರಾತ್ರಿ ರೈಲು ಹತ್ತಿ ವಾಪಸು ಪೂನಾಕ್ಕೆ ಪ್ರಯಾಣ ಮಾಡಿದರು.

ಇಂಡಿಯಾ ದೇಶದ ವೃತ್ತಾಂತಗಳು.

ಬೊಂಬಾಯಿ ಆಧಿಪತ್ಯಕ್ಕೆ ಸೇರಿದ ರಾಧನ್‌ಪುರದ ನವಾಬರು ಪಾರ್ಶ್ವವಾಯು ರೋಗ ಹಿಡಿದು ಮಲಗಿದ್ದಾರೆಂದು ತಂತೀ ವರ್ತಮಾನ ಬಂದಿದೆ.

❖❖❖

ಫ್ರೆಂಚ್ ಇಂಡಿಯಾ ಆಧಿಪತ್ಯಕ್ಕೆ ಸೇರಿದ ಪಾಂಡಿಚೇರಿ ಡಿಸ್ಟ್ರಿಕ್ಟಿನ ಕೆಲವು ಭಾಗಗಳಲ್ಲಿ ಮಿಡತೆಗಳ ಗುಂಪು ಅಪಾರವಾಗಿ ಎದ್ದು ರೈತರು ಮಾಡಿದ್ದ ಪೈರುಗಳನ್ನು ತಿಂದು ಹಾಳುಮಾಡುತ್ತಿವೆ ಎಂದು ತಂತಿ ವರ್ತಮಾನ ಬಂದಿದೆ.

❖❖❖

ಕಲ್ಕತ್ತಾ ಪಟ್ಟಣದಲ್ಲಿ ಯುಗಾಂತರವೆಂಬ ಪತ್ರಿಕೆಯ ಎಡಿಟರಾದ ಬಾಬು ಭೂಪೇಂದ್ರನಾಥದತ್ತರನ್ನು ಸರ್ಕಾರದವರು ಕೈದು ಮಾಡಿದ್ದಾಗಿ ಮಾಡಿದ್ದರೆಂದು ತಿಳಿಸಿದೆವಷ್ಟೆ. ಈಗ ಅವರನ್ನು ಜಾಮೀನಿನ ಮೇಲೆ ಬಿಟ್ಟಿರುತ್ತಾರೆ.

❖❖❖

ಮೆ॥ ಆರ್. ಡೇವಿಡ್ ಸಸೂನ್ ಎಂಬೊಬ್ಬ ಭಾರೀ ಪಾರ್ಸಿ ಸಾಹುಕಾರನು ಬೊಂಬಾಯಿನಲ್ಲಿ ತನ್ನ ಸುಮಾರು ಹನ್ನೊಂದೂವರೆ ಲಕ್ಷ ರೂಪಾಯಿ ಆಸ್ತಿಯನ್ನು ಬಡಬಗ್ಗರ ಕಷ್ಟನಿವಾರಣೆಗೆ ವಿನಿಯೋಗಿಸಬೇಕೆಂದು ಉಯಿಲು ಬರೆದಿಟ್ಟು ಕಾಲವಾಗಿರುತ್ತಾನೆ.

❖❖❖

ಅಲಹಾಬಾದ್ (ಪ್ರಯಾಗ) ಪಟ್ಟಣದಲ್ಲಿ ಕಳೆದ ಸೋಮವಾರ ಸೂರ್ಯಬಿಂಬದಲ್ಲಿ ಒಂದು ದೊಡ್ಡ ಕಪ್ಪು ಚುಕ್ಕೆಯು ಕಾಣುತ್ತಿತ್ತಂತೆ. ಇದಕ್ಕೆ ಕಾರಣವೇನೋ ತಿಳಿಯಬೇಕೆಂದು ಮಿ॥ ಕಾರ್ನ್ ಎಂಬ ಅಧಿಕಾರಿಯು ಅಲ್ಲಿನ ಪತ್ರಿಕೆಗೆ ಬರೆದು ಕೇಳಿರುತ್ತಾನೆ.

❖❖❖

ಹಿಂದುಸ್ಥಾನದಲ್ಲಿ ಕಳೆದ ವಾರ ೪,೭೯೩ ಜನರು ಪ್ಲೇಗ್ ಜಾಡ್ಯದಲ್ಲಿ ಕಾಲವಾದರು. ಈ ಪೈಕಿ ಪಂಜಾಬಿನಲ್ಲಿ ೩,೯೯೯ ಬೊಂಬಾಯಿ ಆಧಿಪತ್ಯದಲ್ಲಿ ೪೧೭, ಮಧ್ಯಪ್ರಾಂತ್ಯಗಳು ಮತ್ತು ಬೀಹಾರಿನಲ್ಲಿ ೩೬೦, ಸಂಯುಕ್ತ ಆಧಿಪತ್ಯಗಳಲ್ಲಿ ೧೮೭, ಈ ರೀತಿ ಮರಣಗಳಾಗಿರುತ್ತವೆ.

❖❖❖

ಮಸೂಲಿಪಟ್ಟಣದಲ್ಲಿ ಮದರಾಸ್ ರೆವಿನ್ಯೂ ಬೋರ್ಡ್ ಮೆಂಬರಾದ ಮೆ॥ ಅಟ್ಕಿನ್ಸನ್‌ರವರು ಪತ್ನಿ ಸಹಿತ ಕಳೆದ ವಾರ ಹೋಗಿದ್ದಾಗ್ಗೆ ಅವರ ಪತ್ನಿಯವರು ಅಲ್ಲಿನ ಸುಮಾರು ೩೦ ಮಂದಿ ದೇಶೀಯ ಸ್ತ್ರೀಯರನ್ನು ಬರಮಾಡಿಕೊಂಡು, ನಾನಾ ವಿನೋದಗಳನ್ನು ಕಲ್ಪಿಸಿ, ಅವರನ್ನೆಲ್ಲಾ ಸಂತೋಷಪಡಿಸಿದರೆಂದು ತಿಳಿದು ಬಂದಿದೆ.

❖❖❖

ಕಲ್ಕತ್ತಾ ಪಟ್ಟಣದ ಕಾಸಿಯಾಬಾಗ್ ಎಂಬ ಭಾಗದಲ್ಲಿದ್ದ ತಾಜಾ ಎಂಬ ಮುಸಲ್ಮಾನಿಯ ಫಕೀರನ ಗೋರಿಯನ್ನು ಪಾರ್ಕ್ ಆರ್. ಸ್ಟುವರ್ಟ್ ಎಂಬ ಸಾಹೇಬರು ಕೆಡಸಿದರೆಂದು ಮೊಕದ್ದಮೆ ಬಂದು, ಅಲಿಪುರದ ಮ್ಯಾಜಿಸ್ಟ್ರೇಟರು ದರ್ಯಾಪ್ತು ಮಾಡಿ, ಅವರು ದಂಡನಾರ್ಹರಾಗಲಿಲ್ಲವೆಂದು ಹೇಳಿ ಮೊಕದ್ದಮೆಯನ್ನು ವಜಾ ಮಾಡಿಬಿಟ್ಟರು.

❖❖❖

ಬರ್ಮಾ ಆಧಿಪತ್ಯಕ್ಕೆ ಸೇರಿದ ರಂಗೂನ್ ಪಟ್ಟಣದಲ್ಲಿ ಒಬ್ಬ ಪೋಲೀಸಿನವನು ತನ್ನ ರಾಣ್ಯದ ಒಂದು ತಿಂಗಳ ಒಟ್ಟು ಸಂಬಳವನ್ನು (ಸುಮಾರು ೫,೩೪೦ ರೂ) ಖಜಾನೆಯಿಂದ ತಂದುಕೊಡದೆ ಮರೆಮಾಡಿಕೊಂಡು ಪರಾರಿಯಾದನು. ಅವನನ್ನು ಕಡೆಗೆ ಹಿಡಿದು ದರ್ಯಾಪ್ತು ಮಾಡಿಸಿದರು. ಈಗ ಅವನಿಗೆ ಒಂಬತ್ತು ತಿಂಗಳ ಸಜಾ ಆಗಿರುತ್ತದೆ.

❖❖❖

ಸಿಲೋನ್ ಅಂದರೆ ಲಂಕಾ ದ್ವೀಪದ ಗವರ್ನರಾಗಿದ್ದ ಸರ್ ಹೆನ್ರಿ ಬ್ಲೇಕ್‌ರವರು ಪತ್ನಿ ಸಹಿತ ಕಳೆದ ವಾರ ವಿಲಾಯಿತಿಗೆ ದಯಮಾಡಿದರು. ಅಲ್ಲಿನ ದೊಡ್ಡ ಮನುಷ್ಯರು ಗವರ್ನರವರಿಗೆ ಔತಣವನ್ನು ಮಾಡಿದರು. ಅಲ್ಲಿನ ಸ್ತ್ರೀಯರು ಸಭೆಮಾಡಿ ಗವರ್ನರರ ಪತ್ನಿಯವರಿಗೆ ಒಂದು ವಿಜ್ಞಾಪನಾ ಪತ್ರಿಕೆಯನ್ನು ಒಪ್ಪಿಸಿ ತಮ್ಮ ಕೃತಜ್ಞತೆಯನ್ನು ಪ್ರಕಾಶಪಡಿಸಿದರು.

❖❖❖

ಬೊಂಬಾಯಿ ಪಟ್ಟಣದಲ್ಲಿ ಈಗ ಆಹಾರ ಪದಾರ್ಥಗಳ ಬೆಲೆಯು ಬಹಳ ಹೆಚ್ಚಿರುತ್ತದೆ. ಬಡಬಗ್ಗರೂ ಸಾಮಾನ್ಯರೂ ಜೀವಿಸುವುದು ತುಂಬಾ ಕಷ್ಟವಾಗಿದೆ ಎಂದು ಗೋಳಿಡುತ್ತಿದ್ದಾರೆ. ಇದರಿಂದಲೇ ದೇಶದಲ್ಲಿ ಜನಗಳಿಗೆ ಗವರ್ನಮೆಂಟಿನವರ ಮೇಲೆ ಅಸಮಾಧಾನ ಉಂಟಾಗಿರುವುದೆಂದು ಕೆಲವು ದೊಡ್ಡ ಮನುಷ್ಯರ ಅಭಿಪ್ರಾಯವಾಗಿರುತ್ತದೆ.

ಕಲ್ಕತ್ತಾ ಪಟ್ಟಣದಲ್ಲಿ ಪ್ರಾವಿಡೆಂಟ್ ಫಂಡನ್ನು ಸ್ಥಾಪಿಸಿ ನಡಸುತ್ತಿದ್ದ ಕೆ. ಕೆ. ಘೋಷ್ ಎಂಬಾತನ ಮೇಲೆ ಆ ಕಂಪನಿಗೆ ಸಂಬಂಧಪಟ್ಟ ಮೆಂಬರುಗಳು ರಾಜಧಾನಿಯಲ್ಲಿ ಕ್ರಿಮಿನಲ್ ಮೊಕದ್ದಮೆ ತಂದಿದ್ದರಷ್ಟೆ. ಮ್ಯಾಜಿಸ್ಟ್ರೇಟರು ಒಂದು ಮೊಕದ್ದಮೆಯಲ್ಲಿ ಅವನಿಗೆ ಒಂದು ವರುಷದ ಕಠಿಣ ಸಜಾ ವಿಧಿಸಿ ಇತರ ಮೊಕದ್ದಮೆಗಳನ್ನು ಒಂದೊಂದಾಗಿ ದರ್ಯಾಪ್ತು ಮಾಡುತ್ತಿದ್ದಾರೆ.

***

ಪೂರ್ವಬಂಗಾಳಾ ಅಧಿಪತ್ಯದಲ್ಲಿ ಮೂವರು ಮಂದಿ ಮಹಮ್ಮದೀಯರು ಒಬ್ಬ ಹಿಂದೂ ವಿಧವೆಯನ್ನು ಎತ್ತಿಕೊಂಡು ಹೋಗಿ ಬಲಾತ್ಕಾರವಾಗಿ ಆ ಸ್ತ್ರೀ ಒಬ್ಬನು ಮದುವೆ ಮಾಡಿಕೊಂಡನು. ಈ ವಿಷಯವು ಮೊಕದ್ದಮೆಯಾಗಿ ಮೈಮನಸಿಂಗಿನ ಮ್ಯಾಜಿಸ್ಟ್ರೇಟರು ಮೊದಲನೆ ಅಪರಾಧಿಗೆ ಎಂಟು ವರುಷವೂ ಉಳಿದ ಇಬ್ಬರಿಗೂ ತಲಾ ಆರು ವರುಷದಂತೆಯೂ ಕಠಿಣ ಸಜಾ ವಿಧಿಸಿರುತ್ತಾರೆ.

***

ಮದರಾಸ್ ಪಟ್ಟಣದಲ್ಲಿ ದೇಶೀಯ ಜನರೇ ಸೇರಿ ಇಂಡಿಯಾ ಬ್ಯಾಂಕ್ ಎಂಬೊಂದು ಬ್ಯಾಂಕನ್ನು ಏರ್ಪಾಡು ಮಾಡಿದರು. ಇದುವರೆಗೆ ೧೦ ಲಕ್ಷ ರೂಪಾಯಿನ ಷೇರುಗಳು ಬಿಕರಿ ಆಗಿರುತ್ತವೆ. ಬೊಂಬಾಯಿನಿಂದ ಒಬ್ಬ ವಿದ್ಯಾವಂತನನ್ನು ಕರೆಸಿ ಬ್ಯಾಂಕಿನ ಸೆಕ್ರೆಟರಿಯಾಗಿ ನೇಮಿಸಿಕೊಂಡಿರುವರು. ಲೇವಾದೇವಿಯು ಮುಂದಿನ ತಿಂಗಳ ಪ್ರಾರಂಭದಿಂದ ಶುರುವಾಗುವುದೆಂದು ತಿಳಿದುಬಂದಿದೆ.

***

ಕಲ್ಕತ್ತಾ ಪಟ್ಟಣದಲ್ಲಿ ಮೂವರು ಮಂದಿ ಕಾನ್ಸ್ಟೇಬಲರು ತಮ್ಮ ಬಾಬತು ೧-೨ ಆಣೆಯನ್ನು ಇನ್ನೊಬ್ಬ ಹುಡುಗನು ಕದ್ದನೆಂದು ಹೇಳಿ ಅವನನ್ನು ಹಿಡಿದು ನಾನಾಪ್ರಕಾರವಾಗಿ ಹಿಂಸೆಪಡಿಸಿದ್ದಲ್ಲದೆ ಗಿಡಕ್ಕೆ ನೇತುಕಟ್ಟಿ ಹಣ್ಣಾಗಿ ಹೊಡೆದು ಕೊಂದುಹಾಕಿದರಷ್ಟೆ. ಈ ಮೊಕದ್ದಮೆಯಲ್ಲಿ ಮೊದಲನೆ ಅಪರಾಧಿಗೆ ೬ ವರುಷವೂ ಇನ್ನಿಬ್ಬರಿಗೆ ತಲಾ ೫ ವರುಷವೂ ಕಠಿಣಸಜಾ ವಿಧಿಸಿದರು.

***

ಗುಜರಾತ್ ಪ್ರಾಂತ್ಯದಲ್ಲಿ ಈ ಸಲ ಇದು ವರೆಗೂ ಮಳೆಗಳು ಆಗದೆ ರೈತ ಪ್ರಜೆಗಳು ಬಹಳ ಕಳವಳಪಡುತ್ತಿದ್ದಾರೆ. ಕಠ್ಯಾವಾಡ, ಅಹಮದಾಬಾದ್ ಪ್ರಾಂತ್ಯಗಳಲ್ಲಿ ಮಾತ್ರ ಸ್ವಲ್ಪವೇ ಮಳೆಯಾಯಿತು. ಅಲ್ಲಿನ ಜನರೆಲ್ಲಾ ಈ ಸಲ ಕ್ಷಾಮ ಪ್ರಾಪ್ತವಾಗುವುದೆಂದು ಹೇಳಲಾರಂಭಿಸಿದ್ದಾರೆ. ಆ ಕಡೆ ಕೆಲವರು ಈ ವಿಚಾರವನ್ನು ಕುರಿತು ಮೊದಲೇ ಕಾಲಜ್ಞಾನ ಹೇಳಿ ಜನ ಭೀತಿಯನ್ನು ಇನ್ನೂ ಹೆಚ್ಚು ಮಾಡಿರುವರು.

***

ಕಲ್ಕತ್ತಾ ಪಟ್ಟಣದ ಪೋಲೀಸಿನವರು ಮಾರ್ಕೆಟ್ಟಿನಲ್ಲಿ ಒಬ್ಬ ವ್ಯಾಪಾರಿಯನ್ನು ಹಿಡಿದರು. ಅವನು ಒಳಭಾಗದಲ್ಲಿ ಕತ್ತಿ ಇರುವಂಥಾ ದೊಣ್ಣೆಗಳನ್ನು ಬಿಕರಿ ಮಾಡುತ್ತಿದ್ದನು. ಪೋಲೀಸಿನವರು ಆ ದೊಣ್ಣೆಗಳನ್ನೆಲ್ಲಾ ಕಿತ್ತುಕೊಂಡಾಗ ಆ ವ್ಯಾಪಾರಿಯು ಇನ್ಯಾವನೋ ಒಬ್ಬ ಬಂಗಾಳಿಯು ತನಗೆ ಆ ದೊಣ್ಣೆಗಳನ್ನು ಬಿಕರಿ ಮಾಡುವುದಕ್ಕೆ ಕೊಟ್ಟನೆಂದು ಹೇಳಿದ್ದರಿಂದ ಅವನನ್ನು ತಲಾಷ್ ಮಾಡುತ್ತಿದ್ದಾರೆ.

***

ಹೈದರಾಬಾದ್ ಸಂಸ್ಥಾನದ ವಿದ್ಯಾಭ್ಯಾಸದ ಇಲಾಖೆಯ ಡೈರೆಕ್ಟರಾಗಿದ್ದ ನವಾಬ್ ಇಮಾ ಮುಲ್‌ಮುಲ್ಕ್ ಬಹದೂರ್ ಸೈಯದ್ ಹುಸ್ಸೇನ್ ಬಿಲ್ಗ್ರಾಮಿಯವರನ್ನು ಪೆನ್ಷನ್ ಮೇಲೆ ಕೆಲಸಬಿಡಿಸಿರುತ್ತಾರೆ. ನೈಜಾಮರವರು ಅವರಿಗೆ ತಿಂಗಳಿಗೆ ೧,೦೦೦ ರೂಪಾಯಿ ಪೆನ್ಷನ್ ಕೊಡುವುದಾಗಿಯೂ, ಅವರಿಂದ ಬಾಕಿ ವಸೂಲಾಗಬೇಕಾಗಿದ್ದ ೨೦ ಸಾವಿರ ರೂಪಾಯಿ ಸಾಲವನ್ನು ಮಾಫಿ ಬಿಡುವುದಾಗಿಯೂ ಅಪ್ಪಣೆ ಕೊಟ್ಟಿದ್ದಾರೆ.

***

ಪೂನಾ ಪಟ್ಟಣದಲ್ಲಿ ಹಿಂದೂ, ಮುಸಲ್ಮಾನ್ ಯೂರೋಪಿಯನ್ ಸ್ತ್ರೀಯರು ಆಗಾಗ್ಗೆ ಒಂದು ಕಡೆ ಸೇರಿ ಸಂತೋಷವಾಗಿ ಕೆಲಕಾಲವನ್ನು ಕಳೆಯಬೇಕೆಂದು ತೀರ್ಮಾನಿಸಿ, ಅದಕ್ಕಾಗಿ ಒಂದು ಬಂಗಲೆಯನ್ನು ಗೊತ್ತುಮಾಡಿ ಸಭೆಯನ್ನು ಸ್ಥಾಪಿಸಿದರು. ಬೊಂಬಾಯಿ ಗವರ್ನರವರು ಕಳೆದ ವಾರ ಅಧ್ಯಕ್ಷತೆಯನ್ನು ವಹಿಸಿ, ಈ ಸಭೆಯನ್ನು ಪ್ರತಿಷ್ಠೆಮಾಡಿ, ಇದರ ಮೂಲಕ ಪರಸ್ಪರ ಪ್ರೀತಿ ಸಖ್ಯಗಳು ಹುಟ್ಟಿ ಅಭಿವೃದ್ಧಿಗೆ ಬರಲೆಂದು ಹಾರೈಸಿದರು.

***

ನಿಕ್ಕಲ್ ಲೋಹದ ಒಂದಾಣೆ ಬಾಬತು ಹೊಸನಾಣ್ಯಗಳು ಮುಂದಿನ ತಿಂಗಳ ಪ್ರಾರಂಭದಿಂದ ಚಲಾವಣೆಗೆ ಬರುವವೆಂದು ಪ್ರಕಟವಾಗಿದೆ. ಅದು ಪಾವಲಿಗಿಂತ ಸ್ವಲ್ಪ ದಪ್ಪನಾಗಿಯೂ ಅಗಲವಾಗಿಯೂ ಅಂಚುಗಳು ವಕ್ರವಾಗಿಯೂ ಇರುತ್ತವೆ. ಒಂದು ಕಡೆ ಇಂಗ್ಲಿಷಿನಲ್ಲಿ "೭ನೆ ಎಡ್ವರ್ಡ್ ದೊರೆ ಮತ್ತು ಚಕ್ರವರ್ತಿ" ಎಂತಲೂ ಇನ್ನೊಂದು ಕಡೆ ಉರುದು, ನಾಗರಿ, ಬಂಗಾಳಿ ಮತ್ತು ತೆಲುಗು ಭಾಷೆಗಳಲ್ಲಿ "ಇಂಡಿಯಾ, ೧ ಆಣೆ" ಎಂತಲೂ ಅಚ್ಚಾಗಿ ಬರುವುದು.

***

ವೈಸ್‌ರಾಯಿ ಲಾರ್ಡ್ ಮಿಂಟೋ ಪ್ರಭುಗಳು ಮುಂದಿನ ನವಂಬರ್ ತಿಂಗಳಲ್ಲಿ ಬರ್ಮಾ ಅಧಿಪತ್ಯದಲ್ಲಿ ಸಂಚಾರ ಮಾಡಿಕೊಂಡು ಬರುವವರಾಗಿದ್ದಾರಷ್ಟೆ. ಆಗ್ಗೆ ಅವರನ್ನು ವಿಶೇಷ ಉತ್ಸಾಹವಾಗಿ ಎದುರುಗೊಂಡು ಸತ್ಕರಿಸುವುದಕ್ಕಾಗಿ ರಂಗೂನ್ ಪಟ್ಟಣದ ಮ್ಯುನಿಸಿಪಾಲಿಟಿಯವರು ಹತ್ತುಸಾವಿರ ರೂಪಾಯಿ ಖರ್ಚುಮಾಡಬೇಕೆಂದು ಮಂಜೂರ್ ಮಾಡಿದರು. ಇದಲ್ಲದೆ ವರ್ತಕರು ಬೇರೆ ಬಹಳ ದ್ರವ್ಯವನ್ನು ವಿನಿಯೋಗಿಸಿ ಉತ್ಸವ ಕಾರ್ಯಗಳನ್ನು ನಡೆಸುವವರಾಗಿದ್ದಾರೆ.

ಧಾರವಾಡದ ಸೆಷನ್ಸ್ ಕೋರ್ಟಿನಲ್ಲಿ ಮೆ॥ ಗುರುನಾಥರಾಯರೆಂಬ ವಕೀಲರು ಒಂದು ಕೊಲೆ ಮೊಕದ್ದಮೆಯನ್ನು ಕುರಿತು ವಾದಿಸುತ್ತಿದ್ದಾಗ ಆಕಸ್ಮಾತ್ತಾಗಿ ಜ್ಞಾನತಪ್ಪಿ ಬಿದ್ದುಕೊಂಡರೆಂತಲೂ ಕೂಡಲೇ ಅವರನ್ನು ಅವರ ಮನೆಗೆ ಕಳುಹಿಸಿದರೆಂತಲೂ ಡಾಕ್ಟರು ಅವರನ್ನು ನೋಡಿ ಚಿಕಿತ್ಸೆ ಮಾಡುತ್ತಿದ್ದಾರೆಂತಲೂ ತಿಳಿದುಬಂದಿದೆ. ಇವರು ಅಲ್ಲಿ ಮುಖಂಡರೆನಿಸಿಕೊಂಡು ಒಂದು ಸಂಸ್ಕೃತ ಪಾಠಶಾಲೆಯನ್ನು ಸ್ವಂತವಾಗಿಟ್ಟು ನಡಸುತ್ತಾ ಪ್ರಜೆಗಳ ಪ್ರೀತಿಗೌರವಗಳನ್ನು ಸಂಪಾದಿಸಿಕೊಂಡಿರುತ್ತಾರೆ.

***

ಬೊಂಬಾಯಿ ಗವರ್ನರಾದ ಲಾರ್ಡ್ ಲಾಮಿಂಗ್ಟನ್ನರವರು ಪೂನಾ ಪಟ್ಟಣದಲ್ಲಿ ಇಳಿದುಕೊಂಡಿದ್ದಾಗ್ಗೆ ಆ ಪ್ರಾಂತ್ಯದ ಕೆಲವು ಗ್ರಾಮಗಳ ಪಟೇಲರುಗಳನ್ನು ತಮ್ಮ ಬಂಗಲೆಗೆ ಕರೆಸಿಕೊಂಡು, ಅವರಿಗೆಲ್ಲಾ ಔತಣವನ್ನು ಮಾಡಿ, ತಮ್ಮ ಬಂಗಲೆಯನ್ನೂ ಉದ್ಯಾನವನಾದಿಗಳನ್ನೂ ತೋರಿಸಿದ್ದಲ್ಲದೆ, ಅವರ ಕೂಡ ಬಹಳ ಹೊತ್ತು ಸಂಭಾಷಣೆ ಮಾಡುತ್ತಿದ್ದು ಅವರನ್ನೆಲ್ಲಾ ತುಂಬಾ ಸಂತೋಷಪಡಿಸಿ ವಾಪಸು ಕಳುಹಿಸಿಕೊಟ್ಟರು. ಇದು ಸ್ತೋತ್ರಾರ್ಹವಾದ ಏರ್ಪಾಡೆಂದು ಎಲ್ಲರೂ ಸಂತೋಷಿಸಬೇಕಾಗಿದೆ.

***

ತಿರುವಾಂಕೂರು (ಅನಂತಶಯನ) ಸಂಸ್ಥಾನಕ್ಕೆ ಸೇರಿದ ಕ್ವಿಲಾನಿನಲ್ಲಿ ಒಬ್ಬ ಹೆಂಗಸು ತನ್ನ ಐದು ಮಕ್ಕಳನ್ನು ಸಾಕುವುದಕ್ಕೆ ಮಾರ್ಗವಿಲ್ಲದೆ ಬಹಳ ಕಾಲ ನಾನಾ ಕಷ್ಟಸಂಕಟಗಳನ್ನನುಭವಿಸಿ ನಿರಾಶೆಯಾಗಿ ಕಡೆಗೆ ಆ ಐದು ಮಕ್ಕಳನ್ನೂ ಭಾವಿಗೆ ಎತ್ತಿಹಾಕಿ ಕೊಂದುಬಿಟ್ಟಳು. ಸರ್ಕಾರದವರು ಅವಳನ್ನು ಹಿಡಿದು ದರ್ಯಾಪ್ತು ಮಾಡಿದಾಗ ಅವಳು ಇದ್ದ ಸಂಗತಿಯನ್ನು ಸ್ವಲ್ಪವೂ ಮರೆಮಾಜದೆ ಗೋಳಾಡುತ್ತಾ ವಿವರಿಸಿದಳು. ಅಲ್ಲಿನ ಹೈಕೋರ್ಟಿನವರು ಅವಳ ಸ್ಥಿತಿಗತಿಯನ್ನು ನೋಡಿ ಕನಿಕರಪಟ್ಟು, ಅವಳ ವಿಷಯದಲ್ಲಿ ಕನಿಕರ ತೋರಿಸಬಹುದೆಂದು ಮಹಾರಾಜರವರಿಗೆ ಶಿಪಾರಸು ಮಾಡಿರುತ್ತಾರೆ.

***

ಕಠ್ಯಾವಾಡ ಪ್ರಾಂತ್ಯಕ್ಕೆ ಸೇರಿದ ಧ್ರಾಂಗಧ್ರವೆಂಬ ಸಂಸ್ಥಾನದಲ್ಲಿ ಖಾಂಡಾ ಎಂಬ ಗ್ರಾಮದ ಸುಮಾರು ೧,೫೦೦ ಮಂದಿ ಭಾಯಾತ್ ಎಂಬ ಜಮೀನ್ದಾರರು ಕಂದಾಯ ಕೊಡುವಭಾಗದಲ್ಲಿ ತಂಟೆಮಾಡಿ ಸರ್ಕಾರಕ್ಕೆ ವಿರೋಧವಾಗಿ ನಿಂತು ತುಂಬಾ ಗಲಭೆಯನ್ನುಂಟುಮಾಡಿದ್ದಾರೆ. ರಾಜರು ಅವರನ್ನೆಲ್ಲಾ ಹಿಡಿದುತರಬೇಕೆಂದು ಸೈನ್ಯವನ್ನು ಕಳುಹಿಸಿದರು. ಅವರು ಎರಡು ದಿನಗಳ ತನಕ ಒಂದು ದೊಡ್ಡ ಬಂಗಲೆಯೊಳಗೆ ಸೇರಿಕೊಂಡು ಸೈನಿಕರನ್ನು ಹೊರಗಡೆ ಕಾಯಿಸಿ ಕಡೆಗೆ ಅವರ ವಶವರ್ತಿಗಳಾದರು. ಶೋಧನೆ ಮಾಡುವಾಗ್ಗೆ ಅವರ ಹತ್ತಿರ ಅನೇಕವಾಗಿ ಆಯುಧಗಳೂ ಮದ್ದುಗುಂಡೂ ಸಿಕ್ಕಿದವು. ಈಗ ಅವರನ್ನು ದರ್ಯಾಪ್ತುಮಾಡುತ್ತಿದ್ದಾರೆ.

***

ಪಂಜಾಬಿನಲ್ಲಿ ವಕೀಲರು ಕಕ್ಷಿಗಾರರಿಂದ ಮೊಕದ್ದಮೆ ನಡಿಸುವುದಕ್ಕೆ ಒಪ್ಪಿಕೊಳ್ಳುವಾಗ್ಗೆ ಮೊದಲು ಸ್ವಲ್ಪ ಫೀಜನ್ನು ತೆಗೆದುಕೊಳ್ಳುತ್ತಲೂ, ಮೊಕದ್ದಮೆ ಗೆದ್ದರೆ ಕಕ್ಷಿಗಾರರಿಂದ ಮೊದಲು ಕೊಟ್ಟ ಹಣಕ್ಕಿಂತ ೪—೫ ರಷ್ಟು ಫೀಜನ್ನು ವಸೂಲ್ಮಾಡಿಕೊಳ್ಳುತ್ತಲೂ ಇದ್ದಾರೆ. ಈ ಕ್ರಮವು ತುಂಬಾ ನಷ್ಟಕರವಾಗಿದೆ ಎಂತಲೂ ಮದರಾಸ್, ಬೊಂಬಾಯಿ, ಕಲ್ಕತ್ತಾ ನಗರಗಳಲ್ಲಿ ಈ ಪದ್ಧತಿ ಇಲ್ಲವೆಂತಲೂ ಪಂಜಾಬ್ ಹೈಕೋರ್ಟಿಗೆ ತಿಳಿಸಿದರು. ಹೈಕೋರ್ಟ್ ಜಡ್ಜಿಗಳಿಬ್ಬರು ಈ ಅರ್ಜಿಯನ್ನು ಹಿಡಿದು ತನಿಖೆಮಾಡಿ, ಇಂಗ್ಲಿಷ್ ಬ್ಯಾರಿಸ್ಟರುಗಳು ಅಂಥಾ ಪದ್ಧತಿಯನ್ನು ಅನುಸರಿಸಕೂಡದೆಂತಲೂ ವಕೀಲರು ಎರಡು ಸಲ ಫೀಜು ತೆಗೆದುಕೊಳ್ಳಬಹುದೆಂತಲೂ ತೀರ್ಮಾನ ಮಾಡಿರುತ್ತಾರೆ.

***

ವಿಲಾಯತಿ ಪಾರ್ಲಿಮೆಂಟಿನಲ್ಲಿ ಮೆ॥ ರೆಡ್‌ಮಂಡ್ ಎಂಬ ಮೆಂಬರು ಮೆ॥ ಮಾರ್ಲಿಯವರನ್ನು ಪ್ರಶ್ನೆ ಮಾಡಿದ್ದಕ್ಕೆ ಅವರು ಪ್ರತ್ಯುತ್ತರವಾಗಿ ಲಾಲಾ ಲಜಪತ್ ರಾಯಿಯವರೂ ಅಜಿತಸಿಂಗರವರೂ ಬಂಧನದಲ್ಲಿದ್ದರೂ ತಮ್ಮ ಸ್ನೇಹಿತರಿಗೆ ಕಾಗದ ಪತ್ರಗಳನ್ನು ಧಾರಾಳವಾಗಿ ಬರೆಯಬಹುದೆಂತಲೂ, ಆದರೆ ಆ ಕಾಗದಗಳನ್ನು ಅವರ ಬಳಿ ಇರುವ ಅಧಿಕಾರಿಗಳು ನೋಡಿ, ಅದರಲ್ಲಿ ಪ್ರಜಾ ನೆಮ್ಮದಿಗೆ ಭಂಗವುಂಟಾಗುವ ಸಂಗತಿಗಳೇನೂ ಇಲ್ಲವೆಂದು ಗೊತ್ತುಮಾಡಬೇಕಾಗಿದೆ ಎಂತಲೂ, ಯಾರುಬೇಕಾದರೂ ಹೋಗಿ ಅವರನ್ನು ನೋಡಿ ಅವರ ಕೂಡ ಮಾತನಾಡಬಹುದೆಂತಲೂ, ಆದರೆ ಸಂಭಾಷಣೆಗಳು ನಡೆಯುವಾಗ ಸರ್ಕಾರದ ಅಧಿಕಾರಿಗಳು ಅವರ ಬಳಿ ಹಾಜರಾಗಿರುವರೆಂತಲೂ ತಿಳಿಸಿದ್ದಾರೆ.

***

ಮೆ॥ ಶ್ಯಾಮಜಿ ಕೃಷ್ಣವರ್ಮ, ಎಂ. ಎ ಎಂಬ ಹಿಂದುಸ್ಥಾನದ ವಿದ್ಯಾವಂತನೊಬ್ಬನು ವಿಲಾಯತಿಯಲ್ಲಿದ್ದುಕೊಂಡು ಒಂದು ವರ್ತಮಾನ ಪತ್ರಿಕೆಯನ್ನು ನಡಸುತ್ತಿದ್ದಾನೆ. ಈತನು ದೇಶಭಕ್ತ ಸಭಾ ಎಂಬ ಒಂದು ಸಂಘವನ್ನು ಬಂಗಾಳದಲ್ಲಿ ಏರ್ಪಡಿಸಿ ಅದರಲ್ಲಿ ಮೂಲಧನವನ್ನು ಹಾಕಿರುತ್ತಾನೆ. ಈ ಮೂಲಧನದಿಂದ ಮೆ॥ ಬಿಪಿನ್ ಚಂದ್ರಪಾಲ್ ಎಂಬ ಬಂಗಾಳಿ ವಿದ್ಯಾವಂತನಿಗೆ ವರುಷಕ್ಕೆ ೧,೦೦೦ ರೂಪಾಯಿನಂತೆ ಬಹುಮಾನ ಕೊಡುವರು. ಅದಕ್ಕೆ ಪ್ರತಿಯಾಗಿ ಮೆ॥ ಪಾಲ್ ಯವರು ಪ್ರತಿ ಒಂದು ಊರಿನಲ್ಲೂ ಐದೈದು ಉಪನ್ಯಾಸಗಳನ್ನು ಮಾಡಿ ಅವುಗಳನ್ನೆಲ್ಲಾ ಪುಸ್ತಕ ರೂಪದಲ್ಲಿ ಬರೆದುಕೊಡಬೇಕಾಗಿದೆ. ಸ್ವಾರಾಜ್ಯ, ಸ್ವದೇಶಿ, ಈ ವಿಚಾರಗಳನ್ನೇ ಕುರಿತು ಅವರು ಉಪನ್ಯಾಸ ಮಾಡತಕ್ಕದ್ದೆಂತಲೂ, ಮೊದಲು ಕಾಂಪುರ, ದಿಲ್ಲಿ, ಬೊಂಬಾಯಿ, ಮದರಾಸ್, ಲಾಹೋರ್, ಢಕ್ಕಾ ಈ ಮುಂತಾದ ನಗರಗಳಲ್ಲಿ ಸಂಚರಿಸಿ, ಐದೈದು ಉಪನ್ಯಾಸಗಳಂತೆ ಮಾಡಲಾರಂಭಿಸಬೇಕಾಗಿದೆ ಎಂತಲೂ ಪ್ರಕಟವಾಗಿದೆ.

ಮದರಾಸ್ ಪಟ್ಟಣದಲ್ಲಿ ದಿವಾಳಿಯಾದ ಅರ್ಬತ್ನಾಟ್ ಕಂಪನಿಯ ಮುಖಂಡರಾಗಿದ್ದ ಸರ್ ಜಾರ್ಜ್ ಅರ್ಬತ್ನಾಟ್‌ಯವರ ಮೇಲೆ ಕಂಪನಿಯ ಹಣವನ್ನು ದುರುಪಯೋಗಪಡಿಸಿದರೆಂದು ಮೂರು ಕ್ರಿಮಿನಲ್ ಮೊಕದ್ದಮೆಗಳು ವಿಚಾರಣೆಯಾಗಿ ಸೆಷನ್ಸ್ ಕೋರ್ಟಿಗೆ ಕಳುಹಿಸಿದ್ದಾರಷ್ಟೆ. ಈಗ ಆ ಅಪರಾಧಿಯನ್ನು ಜಾಮೀನಿನ ಮೇಲೆ ಬಿಡಬೇಕೆಂದು ಅರ್ಜಿ ಹಾಕಿದರು. ಮದರಾಸ್ ಹೈಕೋರ್ಟಿನ ಜಡ್ಜಿಗಳು ಈ ಅರ್ಜಿಯನ್ನು ಹಿಡಿದು ತನಿಖೆಮಾಡಿ, ಪ್ರತಿ ಒಂದು ಮೊಕದ್ದಮೆಗೂ ಅಪರಾಧಿಯು ೨॥ ಲಕ್ಷ ರೂಪಾಯಿನ ಎರಡು ಜಾಮೀನ್ದಾರರನ್ನೂ ೫ ಲಕ್ಷ ರೂಪಾಯಿನ ಸ್ವಂತ ಜಾಮೀನ್ ಮುಚ್ಚಳಿಕೆಯನ್ನೂ ಹಾಜರ್ಮಾಡುವುದಾದರೆ ಬಂದೀಖಾನೆಯಿಂದ ಬಿಡಬಹುದೆಂದು ತೀರ್ಮಾನಮಾಡಿದರು. ಜೊತೆಗೆ ಈ ಮೊಕದ್ದಮೆಗಳು ಮದರಾಸಿನಲ್ಲಿ ತಪ್ಪಿಸಿ, ಬೊಂಬಾಯಿನಲ್ಲೇ ಕಲ್ಕತ್ತೆಯಲ್ಲೇ ವಿಚಾರಣೆಯಾಗುವಂತೆ ಮಾಡಿಕೊಳ್ಳಬೇಕೆಂದು ಅಪರಾಧಿಯ ಕಡೆಯವರು ಅರ್ಜಿ ಕೊಡುವುದರಲ್ಲಿದ್ದಾರೆಂದು ಕೇಳುತ್ತೇವೆ.

ವಿದೇಶ ವರ್ತಮಾನಗಳು

ದಕ್ಷಿಣ ಆಫ್ರಿಕಾ ಯುದ್ಧದಲ್ಲಿ ಕರ್ನಲ್ ಲಿಂಚ್ ಎಂಬೊಬ್ಬ ಐರ್ಲಾಂಡಿನವನು ಟ್ರಾನ್ಸ್ವಾಲಿಗೆ ಹೋಗಿ ಇಂಗ್ಲಿಷರಿಗೆ ವಿರೋಧವಾಗಿ ನಿಂತು ಯುದ್ಧ ಮಾಡಿದ್ದರಿಂದ ೧೯೦೩ ರಲ್ಲಿ ಆತನಿಗೆ ಶಿಕ್ಷೆಯಾಯಿತು. ಈಗ ದೊರೆಯವರು ಆತನಿಗೆ ಕ್ಷಮಾಪಣೆಯನ್ನು ದಯಪಾಲಿಸಿದ್ದಾರೆ.

***

ಆಫ್ರಿಕಕ್ಕೆ ಸೇರಿದ ಮೊರಾಕ್ಕೋದಲ್ಲಿ ರಸೂಲಿ ಎಂಬ ದಂಗೆಕೋರನು ಸರ್ ಹ್ಯಾರಿ ಮೆಕ್ಲೀನ್‌ಯವರನ್ನು ಕೈಸೆರೆ ಹಿಡಿದು ಕಾನ್ ಡಿಸ್ಟ್ರಿಕ್ಟ್ ಸಲ್ಲಿದ್ದರ ತೊಂದರೆ ಸಂಭವಿಸುವದೆಂದು ಹೇಳಿ, ಕೈದಿಯವರ ಸಹಿತ ಅಲ್ಲಿಂದ ಇನ್ನೊಂದು ಪ್ರದೇಶಕ್ಕೆ ಹೊರಟುಹೋಗಿದ್ದಾನೆ.

***

ಹಿಂದುಸ್ಥಾನದಿಂದ ಷೇಕ್ಖಾ ಎಂಬೊಬ್ಬ ಯಕ್ಷಿಣೀ ಆಟಗಾರ ಪತ್ನೀಸಹಿತ ಈಗ ವಿಲಾಯತಿಯಲ್ಲಿ ಸಂಚರಿಸುತ್ತಾ, ತನ್ನ ಕಣ್‌ಕಟ್ಟು ಮಾಯದ ಆಟಗಳನ್ನು ಅಲ್ಲಿನ ಪ್ರಜೆಗಳಿಗೆ ಮಾಡಿ ತೋರಿಸುತ್ತಾ, ತುಂಬಾ ಸಂಪಾದನೆ ಮಾಡುತ್ತಿದ್ದಾನೆ. ಜನರು ಆ ಆಟಗಳನ್ನು ನೋಡಬೇಕೆಂದು ಉತ್ಸಾಹಪಡುತ್ತಿರುವರು.

***

ವಿಲಾಯತಿಯಲ್ಲಿ ಕಾಲವಾದ ಮಿಸೆಸ್ ಡೇವಿಡ್ಸನ್ ಎಂಬಾಕೆಯು ೧೬ ಲಕ್ಷ ರೂಪಾಯಿಯನ್ನೂ, ಮಿಸೆಸ್ ಕಾಕ್ಸ್ ಎಂಬಾಕೆಯು ೪ ಲಕ್ಷ ರೂಪಾಯಿಯನ್ನೂ, ಮಿಸೆಸ್ ಹರ್ಬರ್ಟ್ ಗ್ರಾಂಡಿ ಎಂಬಾಕೆಯು ೬ ಲಕ್ಷ ರೂಪಾಯಿಯನ್ನೂ ಧರ್ಮಕಾರ್ಯಗಳಿಗೆ ತಮ್ಮ ಆಸ್ತಿಯಿಂದ ತೆಗೆದಿಟ್ಟು ವಿನಿಯೋಗಿಸಬೇಕೆಂದು ಉಯಿಲು ಬರೆದಿರುತ್ತಾರೆ.

***

ಪೂರ್ವ ಆಫ್ರಿಕದಲ್ಲಿ ಪೋರ್ಚುಗೀಸರಿಗೆ ಸೇರಿದ ಮೊಜಾಂಬಿ ಎಂಬ ಸ್ವಾಸ್ಥ್ಯದಲ್ಲಿ ಅಲ್ಲಿನವರೇ ಸ್ವತಂತ್ರಾಧಿಕಾರವನ್ನು ವಹಿಸಿಕೊಂಡು ಕಾರಬಾರು ನಡಿಸಬಹುದೆಂದು ಪೋರ್ಚುಗಲ್ ದೊರೆಯವರು ಅಪ್ಪಣೆ ಕೊಟ್ಟಿದ್ದಾರೆ. ಆ ಸ್ವಾಸ್ಥ್ಯದ ಲೊರೆಂಜೊ ಮಾರ್ಕ್ವೆಸ್ ನಗರದಲ್ಲಿ ಅದಕ್ಕಾಗಿ ಪ್ರಜಾಪ್ರತಿನಿಧಿಗಳ ಸಭೆಯು ತಕ್ಕ ಇಲಾಖೆಗಳು ಏರ್ಪಡಾಗುತ್ತಲಿವೆ.

***

ಜರ್ಮನಿ ರಾಜ್ಯಕ್ಕೆ ಸೇರಿದ ಹಾನೋವರ್ ಪಟ್ಟಣದಲ್ಲಿ ವಿಂಶ್ಯ ಇಲಾಖೆಯ ಸುಮಾರು ೫೦ ಮಂದಿ ಹುದ್ದೇದಾರರುಗಳೇ ಸೇರಿ ತಮ್ಮ ಬಂಗಲೆಗಳಲ್ಲಿ ಜೂಜಾಡುತ್ತಿದ್ದರು. ಈ ವರ್ತಮಾನವು ಚಕ್ರವರ್ತಿಯವರಿಗೆ ತಿಳಿದಾಗ ಅವರು ತುಂಬಾ ಆಗ್ರಹಪಟ್ಟು ಆ ಹುದ್ದೇದಾರರನ್ನೆಲ್ಲಾ ಕರೆಸಿಕೊಂಡು ತಕ್ಕಹಾಗೆ ವಿವೇಕಹೇಳಿ ಅವರನ್ನು ಬೇರೆಬೇರೆ ಕಡೆಗಳಿಗೆ ವರ್ಗ ಮಾಡಿಬಿಟ್ಟರು.

***

ನಾರ್ವೆ ರಾಜ್ಯದಲ್ಲಿ ಹೆಂಗಸರಾಗಲಿ ಅವರ ಗಂಡಂದಿರಾಗಲಿ ಸರ್ಕಾರಕ್ಕೆ ಕಂದಾಯ ಪಾವತಿಮಾಡತಕ್ಕವರಾಗಿದ್ದ ಪಕ್ಷದಲ್ಲಿ ಅಂಥ ಹೆಂಗಸರು ಅವರು ಗಂಡಸರಂತೆ ಪಾರ್ಲಿಮೆಂಟ್ ಮೆಂಬರುಗಳನ್ನು ಚುನಾಯಿಸುವುದಕ್ಕೆ ತಮ್ಮ ಸಮ್ಮತಿಗಳನ್ನು ಹಾಕಬಹುದೆಂದು ಗವರ್ನಮೆಂಟಿನವರು ಕಾನೂನ್ ಮಾಡಿದರು. ಇದರಿಂದ ಸಮ್ಮತಿ ಹಾಕತಕ್ಕ ಓಟರುಗಳ ಸಂಖ್ಯೆಯು ಮೊದಲಿದ್ದದ್ದಕ್ಕಿಂತ ೩ ಲಕ್ಷ ಹೆಚ್ಚಾಯಿತು.

***

ಆಸ್ಟ್ರಿಯಾ ಹಂಗೆರಿ ರಾಜ್ಯದ ಚಕ್ರವರ್ತಿಯವರು ತಮ್ಮ ರೈತಪ್ರಜೆಗಳ ಕ್ಷೇಮಾಭಿವೃದ್ಧಿಯನ್ನು ಬಯಸಿ, ಅವರಿಗೆ ಕಾಯಿಲೆ ಬಂದಾಗಲೂ ವಿಪತ್ತು ಪ್ರಾಪ್ತವಾದಾಗಲೂ ಜೀವನಾದಿಗಳಿಗೆ ಕೊರತೆಯುಂಟಾಗದಂತೆ ಒಂದು ಫಂಡನ್ನು ಏರ್ಪಡು ಮಾಡಬೇಕೆಂದೂ, ಆ ಫಂಡಿಗೆ ರೈತರೆಲ್ಲರೂ ಸೇರಿ ವರುಷಕ್ಕೆ ಸ್ವಲ್ಪ ಸ್ವಲ್ಪ ಚಂದಾ ಕೊಡತಕ್ಕದ್ದೆಂತಲೂ, ಸರ್ಕಾರದಿಂದಲೂ ಆ ಫಂಡಿಗೆ ಹಣ ಕೊಡುವುದಾಗಿಯೂ ತೀರ್ಮಾನಮಾಡಿರುತ್ತಾರೆ.

***

ಆಫ್ರಿಕಾ ಖಂಡಕ್ಕೆ ಸೇರಿದ ಲೈಬೀರಿಯಾ ಎಂಬ ಪ್ರಾಂತ್ಯದಲ್ಲಿ ಎಂ ವಾಲ್ಟರ್ ಫ್ರೇಲ್ಸ್ ಎಂಬೊಬ್ಬ ಸ್ವಿಟ್ಜರ್ಲೆಂಡಿನ ಭೂವಿದ್ಯಾಶಾಸ್ತ್ರಜ್ಞನು ಸಂಚಾರಮಾಡುತ್ತಾ ಯಾವ ಯಾವ ಪ್ರದೇಶದಲ್ಲಿ ಎಂಥೆಂಥಾ ಲೋಹಗಳು ಸಿಕ್ಕುವವೆಂದು ಪರೀಕ್ಷೆ ಮಾಡುತ್ತಾ ಇರುವಾಗ್ಗೆ ಅಲ್ಲಿನ ಸ್ವದೇಶಿಗಳು ಆತನನ್ನು ಹಿಡಿದು ಕಟ್ಟಿಹಾಕಿ ಒಂದು ಮರದ ಪಂಜರದೊಳಕ್ಕೆ ಕೂಡಿ, ಬೆಂಕಿಹಾಕಿ ಸುಟ್ಟುಬಿಟ್ಟರೆಂದು ತಂತೀ ವರ್ತಮಾನ ಬಂದಿದೆ.

ಚಿತ್ರದುರ್ಗ.—ಸಂತೆಯಲ್ಲಿ ದಿನಸು ಧಾರಣೆಗಳು ಜಾಸ್ತಿಯಾಗುತ್ತಲಿವೆ. ರಾಗಿ ೧೬ ಸೇರು, ಜೋಳ ೧೭—೧೮ ಸೇರು ಮಾತ್ರ ಸಿಕ್ಕುತ್ತೆ. ಕಳೆದ ವರುಷದ ಹಾಗೆ ಈ ವರುಷವೂ ಮಳೆ ಚನ್ನಾಗಿ ಆಗಿ ಪೈರುಗಳು ಕೈಸೇರಲೆಂದು ಬಡವರು ನಿರೀಕ್ಷಿಸುತ್ತಾರೆ.—ದೊಡ್ಡಿಗೆ ಸೇರಿಸಿದ ದನಕರುಗಳಿಗೆ ಹುಲ್ಲು ನೀರು ಹಾಕದೆ ಬಹಳ ಕಷ್ಟ ಪಡಿಸುತ್ತಾರೆಂದು ಸುದ್ದಿ ಇದೆ. ಈ ವಿಷಯವನ್ನು ಶ್ರಮಪಡಿಸಿ ಮೂಗುಪ್ರಾಣಿಗಳ ಗೋಳು ತಪ್ಪಿಸುವಂತೆ ಮೇಲ್ಪಟ್ಟ ಅಧಿಕಾರಿಗಳು ತನಿಖೆಮಾಡುವದು ಒಳ್ಳೆಯದು.—ಇಲ್ಲಿನ ಅಂಚೆಮನೆಯ ಸ್ವಾಮಿಗಳು ಸಂಚಾರ ಹೋಗಿದ್ದ ಸಂಚಾರದಲ್ಲಿಯೇ ದೈವಾಧೀನರಾದ್ದರಿಂದ ನುರ್ಗಿ ಸ್ವಾಮಿಗಳು ಇನ್ನೊಬ್ಬರನ್ನು ಅವರ ಸ್ಥಾನಕ್ಕೆ ನೇಮಿಸಿದ್ದಾರೆ. ಇವರು ಸತ್ಪುರುಷರೂ ತುಂಬಾ ಯೋಗ್ಯರೂ ವಿದ್ಯಾವಂತರೂ ಮುಖ್ಯವಾಗಿ ತಪಸ್ವಿಗಳೂ ಎಂದು ಜನಗಳು ಸಂತೋಷಪಡುತ್ತಿದ್ದಾರೆ. ಇವರು ತಮ್ಮ ಶಿಷ್ಯರಿಗೆ ತಕ್ಕ ಸದ್ಬೋಧೆ ಸದ್ಧತೆಗಳನ್ನು ಕಲಿಸುವರೆಂದು ಕೋರಿಕೆ ಇದೆ.—ಇಲ್ಲಿನ ಕೆರೆಯನ್ನು ಊರಿನ ಸರಬರಾಯಿಗೋಸ್ಕರ ಪ್ರತ್ಯೇಕಿಸಿಕೊಂಡ ನಂತರ ಜಾನುವಾರುಗಳ ನೀರಿಗೆ ಅನಾನುಕೂಲವಾಗಿದೆ ಎಂದು ಅನೇಕರು ಅಂಗಲಾಚುತ್ತಾರೆ. ಅನೇಕ ವರುಷಗಳಿಗೆ ಮುಂಚೆ ಕೆರೆಯನ್ನು ಪ್ರತ್ಯೇಕಿಸಿಕೊಂಡಾಗ ಜೋಗಿಮಟ್ಟಿದ ಹಾದಿಯಲ್ಲಿರುವ ಗೋವಿನ ಕಟ್ಟೆಯನ್ನು ದುರಸ್ತು ಮಾಡಿಕೊಡುತ್ತೇವೆಂದು ಸರ್ಕಾರದವರು ಹೇಳಿದ ಹಾಗೆ ವರ್ತಮಾನವಿದೆ. ಆದರೂ ಅದು ಈವರೆಗೂ ನಾದುರಸ್ತಾಗಿ ಬಂದ ನೀರು ಬಂದಂತೆ ಹೋಗುತ್ತೆ. ಪ್ರಾಯಶಃ ಊರಿನ ಮುಕ್ಕಾಲು ಮೂರುವೀಸಪಾಲು ದನಗಳು ಆ ರಸ್ತೆಯಲ್ಲಿಯೇ ಮೇವಿಗೆ ಹೋಗಿಬರುತ್ತವೆ. ಇದನ್ನು ದುರಸ್ತು ಮಾಡುವದರಿಂದ ಅನೇಕ ದನಕರುಗಳಿಗೆ ಸಂದೇಹವಿಲ್ಲದೆ ಅನುಕೂಲವಾಗುವದು. ದಯಾಳುಗಳಾದ ಸರ್ಕಾರದವರು ಇದಕ್ಕೆ ನಿಗಾ ಕೊಡುವರೆಂದು ನಿರೀಕ್ಷೆ ಇದೆ.

ಹಾಸನ.—ಹಾಸನದ ತಾ॥ ಸಾಲಗಾಮೆ ಹೋಬಳಿ ದೇವಗೋಡನ ಹಳ್ಳಿ ಗ್ರಾಮದ ೧೫ ವರ್ಷ ವಯಸ್ಸಿನ ಪಾರ್ವತಿ ಎಂಬ ಕನ್ನಿಕೆಯನ್ನು ಸಾಲಗಾಮೆ ಗ್ರಾಮದ ಬೇವಿನ ಮರದ ರಂಗೇಗೌಡ ಮೊದಲಾದವರು, ಮಲಗಿದ್ದಾಗ ಬಲಾತ್ಕಾರವಾಗಿ ಎತ್ತಿಕೊಂಡು ಹೋಗಿ, ತಮ್ಮ ಗ್ರಾಮದಲ್ಲಿ ಅವಳನ್ನು ಕಾಳೇಗೌಡನೆಂಬ ೫೫ ವರ್ಷದವನಿಗೆ ಮದುವೆ ಮಾಡಬೇಕೆಂದು ಪ್ರಯತ್ನಪಟ್ಟರು. ಆ ಕನ್ನಿಕೆಯ ತಾಯಿ ಪೋಲೀಸಿಗೆ ತಿಳಿಸಲಾಗಿ, ಅವರು ರಂಗನ್ನೆಲ್ಲಾ ಗೊತ್ತುಮಾಡಿ ಹಿಡಿದು ತಂದು ವಿಚಾರಣೆ ನಡೆಸಿ ಸಹಲೇಖಬ್ಬರ ಸಬ್ ಡಿವಿಜನ್ ಕೋರ್ಟಿಗೆ ಹಾಜರು ಮಾಡಿದರು. ಅವರು ತನಿಖೆಮಾಡಿ ಮೊಕದ್ದಮೆಯನ್ನು ಸೆಷನ್ಸ್ ಕೋರ್ಟಿಗೆ ಈ ವಾರದಲ್ಲಿ ಕಮಿಟ್ ಮಾಡಿರುತ್ತಾರೆ. ಕಾಳೇಗೌಡನೆಂಬೊಬ್ಬನು ತಪ್ಪಿಸಿಕೊಂಡು ಪರಾರಿಯಾಗಿದ್ದಾನೆ. ಹೀಗಿರುವಲ್ಲಿ ಆ ಕನ್ಯೆಯು ಜುಲೈ ೧ನೇ ತಾ. ಸಲ್ಲಿ ಕೇಗೇಗ್ರಾಮದ ಸಂಜೀಗೌಡನ ಮಗ ಬಸವೇಗೌಡನೆಂಬುವನನ್ನು ಸಂಭ್ರಮದಿಂದ ಮದುವೆಯಾಗಿ ಸುಖವಾಗಿದ್ದಾಳೆ.—ಈ ಊರಿಗೆ ಸುಮಾರು ೪ ಮೈಲ್ ದೂರದಲ್ಲಿರುವ ಶಂಖನೆಂಬ ಗ್ರಾಮದಲ್ಲಿ ೫—೬ ತಿಂಗಳಿಂದ ಗೋಹತ್ಯೆ, ಮಹಿಷಿಹತ್ಯೆಗಳು ವಿಶೇಷವಾಗಿ ನಡೆಯುತ್ತಾ ಇರುವುದು ದುಃಖಕರವಾಗಿದೆ. ಕೊಟ್ಟಿಗೆಯಲ್ಲಿ ಕಟ್ಟಿಹಾಕಿದ್ದ ಎತ್ತು, ಹಸು, ಎಮ್ಮೆಗಳನ್ನು ದುಷ್ಟರು ರಾತ್ರಿಕಾಲದಲ್ಲಿ ಅಟ್ಟಿಕೊಂಡು ಹೋಗಿ ಕೊಂದು ಚರ್ಮ ಸುಲಿದು ಮಾರಿಕೊಳ್ಳುತ್ತಿದ್ದಾರೆ. ಮಾಲನ್ನು ಕಳೆದುಕೊಂಡವರು ಪೋಲೀಸಿಗೆ ತಿಳಿಸಿದರೂ ಪ್ರಯೋಜನವಾಗಲಿಲ್ಲ. ಈ ವಿಷಯದಲ್ಲಿ ಅಮಲ್ದಾರರು ಗಮನಕೊಡುವದು ಅವಶ್ಯ.—ಇಲ್ಲಿನ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸಿನ ಹೆಡ್ ಅಕೌಂಟೆಂಟ್ ರಾಘವೇಂದ್ರ ರಾಯರೆಂಬುವರು ಕಳೆದ ಸೋಮವಾರ ೧೯ ತಾ ಕಾಲ ತಮ್ಮ ಸ್ನೇಹಿತರಿಗೆ ತಮ್ಮ ಉದ್ದೇಶವನ್ನು ಸ್ಪಷ್ಟವಾಗಿ ಲೇಖನದ್ವಾರಾ ಪೋಸ್ಟ್ ಮೂಲಕ ತಿಳಿಸಿ, ಒಂದು ಮೈಲಿ ದೂರದಲ್ಲಿರುವ ಬೀರನಹಳ್ಳಿ ಕೆರೆಯಲ್ಲಿ ಬಿದ್ದು ಆತ್ಮಹತ್ಯ ಮಾಡಿಕೊಂಡರು. ಲೆಕ್ಕಪತ್ರದಲ್ಲಿ ವ್ಯತ್ಯಾಸವಿತ್ತೆಂಬುವದೇ ಕಾರಣವೆಂದು ಹೇಳುತ್ತಾರೆ.

ಚಿಕ್ಕಮಗಳೂರು.—ಇದೇ ತಿಂಗಳು ೮ನೇ ತಾ ಸೋಮವಾರ ರಾತ್ರಿ ಸುಮಾರು ೧—೧॥ ಗಂಟೆ ಸಮಯದಲ್ಲಿ ಇಲ್ಲಿನ ಕೋಟೆಯಲ್ಲಿರುವ ಡಿಸ್ಟ್ರಿಕ್ಟಿನ ಜುಡಿಷಿಯಲ್ ಹೆಡ್ ಮುನ್ಷಿ ಸ್ವಾಮಿರಾಯರ ಮನೆಯಲ್ಲಿ ಹಿತ್ತಲಕಡೆ ಬಾಗಲಿನ ಮೂಲಕ ನಾಲ್ಕು ಜನ ಕಳ್ಳರು ಮನೆ ಒಳಗೆ ಪ್ರವೇಶಿಸಿ ಸ್ವಾಮಿರಾಯರನ್ನು ತಲೆಯ ಮೇಲೆಯೂ ಕಾಲಿನ ಮೇಲೆಯೂ ಹೊಟ್ಟೆಯ ಮೇಲೆಯೂ ಹೊಡೆದು ಕೆಳಕ್ಕೆ ಕೆಡವಿದ ನಂತರ ಅವರ ಹೆಂಡತಿಯನ್ನು ಹಿಡಿದು ಕುತ್ತಿಗೆಯಲ್ಲಿದ್ದ ತಿಕ್ಕಿ ಮೊದಲಾದ ಒಡವೆಗಳನ್ನು ಕಿತ್ತುಕೊಂಡು, ಮಕ್ಕಳ ಕತ್ತಿನಲ್ಲಿದ್ದ ಆಭರಣಗಳನ್ನು ಕಿತ್ತುಕೊಳ್ಳುತ್ತಿರುವಲ್ಲಿ ಸ್ವಾಮಿರಾಯರ ಹೆಂಡತಿಯು ಹೊರಗೆ ಹೋಗಲು ಪ್ರಯತ್ನಿಸಿದಾಗ ಬಾಗಲಿನ ದ್ವಾರದಲ್ಲಿ ಕಾದಿದ್ದ ಕಳ್ಳರನ್ನು ನೋಡಿ ಇನ್ನೊಂದು ಕಡೆ ಸುಮಾರು ಒಂದಾಳೆತ್ತರದ ಗೋಡೆ ಹತ್ತಿ ಹೊರಗೆ ಸುಮಾರು ಅರ್ಧ ಫರ್ಲಾಂಗ್ ದೂರದಲ್ಲಿರುವ ಪೋಲೀಸ್ ಇನ್ಸ್‌ಪೆಕ್ಟರ ಮನೆಗೆ ಬಂದು ಕೂಗಿಕೊಳ್ಳಲು ಪರು ಆಕೆಯ ಸಂಗಡ ಮನೆಗೆ ಬರುವಷ್ಟರಲ್ಲಿ ಕಳ್ಳರು ಸುಮಾರು ಕೆಲ ನೂರು ರೂಪಾಯಿನ ಮಾಲು ಸಹಿತ ಪರಾರಿಯಾಗಿದ್ದರು. ಈಗ ತನಿಖೆ ನಡೆಯುತ್ತಲಿದೆ. ಸ್ವಾಮಿರಾಯರಿಗೆ ಪೆಟ್ಟು ಬಲವಾಗಿ ಬಿದ್ದಿದ್ದರೂ ಪ್ರಾಣಭಯವೇನೂ ಇಲ್ಲವೆಂದು ಹೇಳುತ್ತಾರೆ. ೧೦ ತಾರೀಖು ರಾತ್ರಿ ಇಲ್ಲಿನ ನಾಯ್ಡು ಬೀದಿಯಲ್ಲಿರುವ ಎಕ್ಸೈಸ್ ಇನ್ಸ್‌ಪೆಕ್ಟರ್ ಲಕ್ಷ್ಮಣರಾಯರ ಮನೆಗೆ ಕಲ್ಲು ಹೊಡೆದದ್ದಲ್ಲದೆ ಕದವನ್ನು ಒಡ್ಡರೆಂದು ವರ್ತಮಾನ. ಜೈಲ್ ರಸ್ತೆಯಲ್ಲಿ ಪ್ಲೇಗ್ ಭಯಕ್ಕಾಗಿ ಬೇರೆ ಕಡೆಗೆ ಹೋಗಿರುವ ಮುಸಲ್ಮಾನರ ಮನೆಗಳ ಬೀಗವನ್ನು ತೆಗೆದು ಒಳಗಿದ್ದ ಹಿತ್ತಾಳೆ ತಾಂಬ್ರದ ಪಾತ್ರೆ ಪದಾರ್ಥಗಳನ್ನು ತೆಗೆದುಕೊಂಡು ಹೋಗಿರುವದಾಗಿ ಹೇಳುತ್ತಾರೆ. ಈಗೀಗ ಟೌನಿನಲ್ಲಿ ಕಳ್ಳತನ ಹೆಚ್ಚಾಗಿರುವಂತೆ ಕಾಣುತ್ತಿದೆ. ಪೋಲೀಸ್ ಅಧಿಕಾರಿಗಳು ಮೇಲಿನ ವಿಷಯಗಳನ್ನು ಯೋಚಿಸಿ ಮುತುವರ್ಜಿ ವಹಿಸಬೇಕಾಗಿದೆ.—ಇಲ್ಲಿನ ತಾಲ್ಲೂಕ್ ಅಮಲ್ದಾರಿಯು ರೆವಿನ್ಯೂ ಶಿರಸ್ತೇದಾರ್ ಮೆ॥ ಚಕ್ರಪಾಣಿ ಅಯ್ಯಂಗಾರ್ರಿಗೆ ಆಯಿತೆಂತಲೂ, ಈಗ ಅವರೇ ತಾಲ್ಲೂಕ್ ಅಧಿಕಾರವನ್ನು ವಹಿಸಿ ನಡಿಸುತ್ತಿದ್ದಾರೆಂತಲೂ ಕೇಳುತ್ತೇವೆ.

ಅರಸೀಕೆರೆ.—ಇಲ್ಲಿ ಮಳೆ ಸ್ವಲ್ಪ ಸ್ವಲ್ಪ ಬರುತ್ತಲೇ ಇದೆ. ರೈತರು ಹೊಲಗಳನ್ನು ಬಿತ್ತುವದಕ್ಕೆ ಸಿದ್ಧಮಾಡಿಕೊಂಡು ಒಳ್ಳೇ ಹದವಾಗಿ ಬರತಕ್ಕ ಮಳೆಯನ್ನು ಎದುರುನೋಡುತ್ತಾ ಇದ್ದಾರೆ. ಇಲ್ಲಿಗೆ ಅನೇಕ ಸ್ಥಳಗಳಿಂದ ಸಂತೆಕೂಡುವ ಸ್ಥಳಕ್ಕೆ ವ್ಯಾಪಾರಕ್ಕಾಗಿ ಬರುವ ಗಾಡಿಗಳಿಗೆ ಮಾತ್ರ ಸರ್ಕಾರದವರು ಗಾಡಿಗೆ ಒಂದಾಣೆಯಂತೆ ವಸೂಲ್ ಮಾಡುತ್ತಾ ಇದ್ದರು. ಈಗ ಕಂಟ್ರಾಕ್ಟ್ ಕೊಟ್ಟಿರುವದರಿಂದ ಕಂಟ್ರಾಕ್ಟುದಾರರು ಶುಕ್ರವಾರದ ದಿನ ಮಾತ್ರ ಸಂತೆಗೆ ಬರತಕ್ಕ ಗಾಡಿಗಳಲ್ಲದೆ ಪ್ರಯಾಣಿಕರ ಗಾಡಿ, ರೈಲ್ವೆಕಂಪೌಂಡ್ ಒಳಗಿರತಕ್ಕಗಾಡಿ, ಬಂಡಿ ಮೋರ್ಟನಲ್ಲಿರತಕ್ಕ ಗಾಡಿಗಳಿಗೂ ಒಂದಾಣೆಯಂತೆ ವಸೂಲ್ ಮಾಡುವದು ತಪ್ಪಾಗಿಯೂ ಅನ್ಯಾಯವಾಗಿಯೂ ಇರುತ್ತದೆ. ಅಧಿಕಾರಿಗಳೂ ಮುನಿಸಿಪಲ್ ಮೆಂಬರುಗಳೂ ಈ ವಿಷಯವನ್ನು ವಿಚಾರಿಸಿ ತಪ್ಪಾಗಿ ವಸೂಲ್‌ಮಾಡತಕ್ಕದ್ದನ್ನು ನಿಲ್ಲಿಸುವರೆಂದು ನಂಬಿರುತ್ತೇವೆ.—ಈ ಸಂತೆಯಲ್ಲಿ ಪರೇಲಾ ಆಟವನ್ನು ಪೋಲೀಸಿನವರು ನಿಲ್ಲಿಸಿದ್ದರು. ಈಗ ಮತ್ತೆ ಪ್ರಾರಂಭವಾಗಿರುತ್ತದೆ. ಈ ವಿಷಯವನ್ನು ಪೋಲೀಸ್ ಇನ್ಸ್‌ಪೆಕ್ಟರು ತನಿಖೆಮಾಡಿ ಸದರಿ ಜನಗಳ ಆಟವನ್ನು ನಿಲ್ಲಿಸುತ್ತಾರೆಂದು ನಂಬಿರುತ್ತೇವೆ.—ಆಡ್ಮಿನಿಸ್ಟ್ರೇಟಿವ್ ಮೇಲೆ ಮುನಿಸಿಪಲ್ ಮೆಂಬರುಗಳು ತಿಂಗಳಿಗೆ ಒಬ್ಬೊಬ್ಬರಂತೆ ಸಂತೆ ದಿವಸವೂ ಇತರ ದಿವಸಗಳಲ್ಲೂ ಉಸ್ತುವಾರಿ ಮಾಡುತ್ತಾ ಇದ್ದರು. ಇದರಿಂದ ವ್ಯಾಪಾರದ ಜನಗಳಿಗೂ ಸರ್ಕಾರಕ್ಕೂ ಯಾವ ನಷ್ಟವೂ ಕಂದಾಯವೂ ಇಲ್ಲದೇ ಸರಿಯಾಗಿ ನಡೆಯುತ್ತಾ ಇತ್ತು. ಈಗ ಅವರ ವಿಚಾರಣೆಯು ನಿಂತು ಹೋಗಿರುವದು. ವ್ಯಾಪಾರದ ಜನಗಳಿಗೆ ಉಂಟಾಗಿರುವ ತೊಂದರೆಯನ್ನೂ, ಸರ್ಕಾರಕ್ಕೆ ಬರುವ ಆದಾಯವನ್ನೂ ಮುನಿಸಿಪಲ್ ಮೆಂಬರುಗಳು ಯೋಚನೆಮಾಡತಕ್ಕದ್ದಾಗಿರುತ್ತವೆ.—ದೊಡ್ಡಿಗಳಿಂದ ದನಗಳು ಜಂಗಿಗೆ ಬರುವ ಕಾಲದಲ್ಲಿ ವರ್ತಕ ಮಂಡಲಿಯವರಿಗೂ ಇತರ ಜನಗಳಿಗೂ ತಿಳಿಸುತ್ತಾ ಇದ್ದರು. ಈಗ ಈ ಪದ್ಧತಿ ತಪ್ಪಿಹೋದದ್ದರಿಂದ ಭಾರಿ ಖರೀದಿ ಬಗತಕ್ಕ ದನಗಳು ಅಲ್ಪಮೊಬಲಗಿಗೆ ಬಿಕರಿ ಆಗುತ್ತೆಂಬ ವರ್ತಮಾನವು ಊರಿನಲ್ಲಿ ಹುಟ್ಟಿರುವದರಿಂದ ಇದಕ್ಕೆ ಅವಕಾಶ ಕೊಡದಂತೆ ನೋಡಿಕೊಳ್ಳುವರೆಂದು ನಂಬಿರುತ್ತೇವೆ.—ಇಲ್ಲಿನ ಅಮಲ್ದಾರರು ಎರಡು ತಿಂಗಳ ರಜಾ ಹೋಗುವದರಿಂದ ಇವರ ಸ್ಥಾನಕ್ಕೆ ಚನ್ನಪಟ್ಟಣದ ಸಬ್ ರಿಜಿಸ್ಟ್ರಾರ್ ಮೆ॥ ನರಸಿಂಹಯ್ಯಂಗಾರು ಬರುವವರಾಗಿದ್ದಾರೆ.

ತುಂಕೂರು.—ಹವಾ ಆರೋಗ್ಯಕರವಾಗಿದೆ. ಮುಂಗಾರು ಫಸಲಿಗೆ ಅನುಕೂಲವಾಗಿ ಮಳೆ ನಡಿಸಿರುವದರಿಂದ ರೈತರು ಹೊಲವನ್ನು ಉಳ್ಳೇ ಹೊಡಿಯುತ್ತಲೂ ಕೆಲವರು ಬೀಜ ಪೇರಾವು ಮಾಡುತ್ತಲೂ ಇದ್ದಾರೆ. ಈ ಕಾರಣದಿಂದ ಮಂಡಿಗಳಿಗೆ ದಿನಸಿ ಗಾಡಿಗಳು ಕಮ್ಮಿಯಾಗಿವೆ. ಧಾರಣೆಗಳು ಬಡವರ ಕಷ್ಟವನ್ನು ಸ್ವಲ್ಪವೂ ನೀಗಿಸುವಂತಿಲ್ಲ. ಇಷ್ಟು ಸಮೃದ್ಧಿಯಾಗಿ ಮಳೆ ಬೆಳೆಗಳಾಗಿದ್ದರೂ ರಾಗಿ ಖಂಡಿ ೧ ಕ್ಕೆ (ಎರಡು ಖಂಡಗ) ೪೧—೪೨ ರೂ. ಸಂತೆಯೂ, ಭತ್ತ ೩೪—೩೫ ರೂ. ಸಂತೆಯೂ ಇದೆ. ಇವುಗಳೇ ಈ ರೀತಿ ಇರುವಾಗ್ಗೆ ಇತರ ದಿನಸಿ ಧಾರಣೆ ಹೇಳುವದೇನು? ಈ ವಾರದಲ್ಲಿ ನಮ್ಮ ತಾಲ್ಲೂಕು ಮತ್ತು ಟೌನ್‌ಗಳಲ್ಲಿ ನಡೆದಿರುವ ಕಳವು ಡಕಾಯಿತಿಗಳ ವಿಚಾರವೇ ವಿಶೇಷವಾಗಿದೆ. ಈಗ್ಗೆ ೫—೬ ದಿನಗಳಿಗೆ ಮುಂಚೆ ತುಂಕೂರಿಗೆ ಸುಮಾರು ೧೫ ಮೈಲಿ ದೂರದಲ್ಲಿ ಪ್ರಸಿದ್ಧ ಜಾತ್ರೆ ಸ್ಥಳವಾದ ಕೇಬಿಯಲ್ಲಿ ನರಸಿಂಹಸ್ವಾಮಿ ದೇವಸ್ಥಾನಕ್ಕೆ ಕಳ್ಳರು ನುಗ್ಗಿ ಭಾರಿ ಕಳವನ್ನು ಡಕಾಯಿತಿಯನ್ನು ಮಾಡಿರುತ್ತಾರೆ. ನಮ್ಮ ಟೌನಿನಲ್ಲಿ ಈಗ ಒಂದು ವಾರದಿಂದಲೂ ಕಳುವು ನಡಿಯುತ್ತಲಿದೆ. ೬—೭ ದಿನಗಳಲ್ಲಿ ಒಂದೇ ದಿನ ಕೋಟೆಯ ಅಗ್ರಹಾರದಲ್ಲಿ ನಾಲ್ಕು ಮನೆಗಳಿಗೆ ಕನ್ನಹಾಕಿ ಸಿಕ್ಕಿದ್ದನ್ನು ದೋಚಿಕೊಂಡು ಹೋಗಿರುತ್ತಾರೆ. ತಾ ೧೦ ನೇ ರಾತ್ರಿ ಬಡಾವಣೆಯಲ್ಲಿ ನಗರ್ತಿ ಗುಮಾಸ್ತರ ಮನೆಗೂ ಸ್ಕೂಲ್ ಹೆಡ್ ಮಾಸ್ತರ ಮನೆಗೂ ಕನ್ನಹಾಕಿ ಮನೆಯವರು ಎಚ್ಚೆತ್ತದ್ದರಿಂದ ಪಲಾಯನವಾದರು. ಈಗಲೂ ಅಲ್ಲಲ್ಲಿ ಸಣ್ಣ ಪುಟ್ಟ ಕಳವುಗಳು ನಡೆಯುತ್ತಿರುವದರಲ್ಲದೆ ರಾತ್ರಿ ವೇಳೆ ಮನೆಗಳ ಮೇಲೆ ಕಲ್ಲು ಬೀಳುವದೂ ಬಲಕ ಅಲ್ಲಾಡಿಸುವದೂ ಮೊದಲಾದ ಕೆಲಸಗಳು ನಡೆಯುತ್ತಲಿವೆ. ಪೋಲೀಸು ಇಲಾಖೆಯವರು ತುಂಬಾ ಚಟುವಟಿಕೆಯಿಂದ ಬೀಟು ಕೊಡುತ್ತಾ ಪತ್ತೆ ತರವೂ ನಡೆಸುತ್ತಿದ್ದಾರೆ. ಈಗಿನಂತೆಯೇ ಮೊದಲಿಂದ ಇದ್ದರೆ ಇಷ್ಟು ಗಲಾಟೆಯಾಗುತ್ತಿರಲಿಲ್ಲ. ಆದರೂ ಈ ದೊಡ್ಡ ಟೌನಿಗೆ ಈಗಿರುವ ಪೋಲೀಸು ಸಿಬ್ಬಂದಿಯು ಸಾಲದೆಂದು ಧಾರಾಳವಾಗಿ ಹೇಳಬಹುದು. ಅಂತು ನಮ್ಮ ಪೋಲೀಸ್ ಆಫೀಸರವರು ಈಗಲಾದರೂ ಶ್ರದ್ಧೆ ವಹಿಸಿ, ಎದ್ದಿರುವ ಈ ಪುಂಡರನ್ನು ತಲಾಷ್ ಮಾಡಿ ತಕ್ಕ ಬಂದೋಬಸ್ತಿನಿಂದ, ಕಳವಳಪಡುತ್ತಿರುವ ಪ್ರಜೆಗಳ ನೆಮ್ಮದಿಗೆ ಭಂಗಬಾರದಂತೆ ಮಾಡಬೇಕಾಗಿ ಕೋರುತ್ತೇವೆ.—ನಮ್ಮ ಮುನಿಸಿಫ್ ಕೋರ್ಟಿನಲ್ಲಿ ಹಿಂದೆ ಯಾವಾಗಲೂ ರಾತ್ರಿಯಾದರೂ ಮೊಕದ್ದಮೆಗಳ ವಿಚಾರಣೆ ಮುಗಿಯುತ್ತಲೇ ಇರಲಿಲ್ಲ. ಈಗಲಾದರೋ ದಿನವಹಿ ೩ ಗಂಟೆಯೊಳಗಾಗಿ ಕೋರ್ಟು ಬರಖಾಸ್ತಾಗಿ ನಿಶ್ಶಬ್ದವಾಗಿರುತ್ತೆ. ಇದರಿಂದ ನಮ್ಮ ಪ್ರಾಂತ್ಯ ಕೇಸುಗಳು ಕಡಿಮೆಯಾಗಿರುವದೆಂದು ತೋರುತ್ತೆ.—ಹಾಲಿ ಮಳೆಗಾಲವಾಗಿರುವದರಿಂದ ಈ ಊರಿನ ಅನೇಕ ಗಲ್ಲಿಗಳು ಅಧಿಕಾರಿಗಳ ದರ್ಶನವನ್ನು ಕಾಣದೆ ಎದುರು ನೋಡುತ್ತಲಿವೆ. ಮ್ಯುನಿಸಿಪಾಲಿಟಿಯವರು ಈಗಲು ಉಪಯೋಗಿಸಿರುವ ಕಚರಾ ಬಂಡಿಗಳಿಗೆ ನೀರು ಹೊಡಿಯುತ್ತಿರುವ ಬಂಡಿಗಳಿಗೆ ಕಟ್ಟಿರುವ ಎತ್ತುಗಳು ತುಂಬಾ ನಾಚಾರಾಗಿರುವದರಿಂದ ಬೇರೆ ಎತ್ತುಗಳನ್ನು ಉಪಯೋಗಿಸುವದು ಬಹಳ ಅವಶ್ಯಕವಾಗಿದೆ. ಹಿಂದೆ ಪ್ರಕಟವಾಗಿದ್ದಂತೆ ಜೈನರ ಸಭೆಯು ಇದುವರೆಗೂ ನಡೆಯದೆ ಅದರ ಸಮಾಚಾರವೇ ತಿಳಿಯದಿರುವದರಿಂದ ಅದರ ಮುಖ್ಯಸ್ಥರು ಆ ಸಭೆ ಯಾವಾಗ ನಡೆಯುತ್ತೆ ಎಂಬ ವಿಚಾರವನ್ನು ತಿಳಿಯಲು ಕುತೂಹಲವುಳ್ಳವರಾಗಿರುತ್ತಾರೆ.

ಪ್ರಕಟನೆಗಳು.

ಇಲ್ಲಿ ನೋಡಿ.

66-1

ಒಳ್ಳೇ ಹಸನಾದ ಬಿಳೀ ಮೆಣಸಿನ ಹಳು ಹಿಂಡಿ, ಅರೀ ಹರಳ ಹಿಂಡಿ, ಹೊಂಗೇ ಹಿಂಡಿ, ಮತ್ತು ಬೇವಿನ ಹಿಂಡಿಗಳು ಬೇಕಾಗಿವೆ.

ಹಸನಾದ ಮಾಲಿಗೆ ಖರೀದಿ ಚನ್ನಾಗಿ ಸಿಕ್ಕುತ್ತದೆ.

ವಿಳಾಸ.—ಮೆಸರ್ಸ್ ಪಿ. (ಟಿ) ಜೆ ಅಂಡ್ ಸನ್, ಹುಣಸೂರು

ಬೇಕಾಗಿದೆ.

67-1

೩೦ ಗಂಟೆಗಳು ನಡೆಯುವ ಬೆಲೆಯುಳ್ಳ ನಮ್ಮ ಲೀವರ್ ಗಡಿಯಾರ (ವಾಚು) ಗಳನ್ನು ೫೦೪ (ಐನೂರ ಹದಿನಾಲ್ಕು) ಉಪಯೋಗವಾದ ಬಹುಮಾನ ಪದಾರ್ಥಗಳ ಸಹಿತ ಕೊಂಡುಕೊಳ್ಳತಕ್ಕವರು ಬೇಕು. ಬಹುಮಾನ ಪದಾರ್ಥಗಳನ್ನು ಬರೆದು ತರಿಸಿಕೊಳ್ಳಿ. ವಿಳಾಸ.—ಎಂ. ಎ. ಫಾಟಾಲಾ ಕಂಪನಿ, ಚಿತ್ತೂರು, ಉತ್ತರ ಅರ್ಕಾಡು.

ಇಲ್ಲಿ ನೋಡಿ!

66-2

ತುಮಕೂರು ಮಿಷನ್ ಇಲಾಖೆಯಲ್ಲಿ ಯುರೋಪಿಯನ್ ಮೇಲ್ವಿಚಾರಣೆಯಿಂದ ಉತ್ತಮ ತರಹದ ಹಾಸನದ ಟೋಪಿಗಳು ಅತಿ ಶ್ರೇಷ್ಠವಾದ ಉಲ್ ದಾರದಿಂದ ತಯಾರಾಗುತ್ತವೆ.

ಈಗ ಕೆಳಗೆ ನಮೂದಾಗಿರುವ ವಿವಿಧ ಬಣ್ಣದ ಟೋಪಿಗಳು ಹೆಚ್ಚಾಗಿ ನಮ್ಮಲ್ಲಿ ದಾಸ್ತಾನ (ಸ್ಟಾಕ್) ಉಂಟು.

ಬಣ್ಣಗಳ ವಿವರ:—ಅಚ್ಚ ಕೆಂಪು, ಮಂದಕೆಂಪು, ಕಪ್ಪುಕೆಂಪು ಮಿಶ್ರವಾದದ್ದು.

ಕ್ರಯ:—೧ ರು. ೪ ಆ ಮತ್ತು ೧ ರು. ೬ ಆ.

೧ ಡಜನ್ ಟೋಪಿಗಳನ್ನು ತೆಗೆದುಕೊಳ್ಳುವವರಿಗೆ ಶೇಕಡ ೫ ರಂತೆ ಡಿಸ್‌ಕೌಂಟ್ ಕೊಡಲ್ಪಡುವದು

ನಮ್ಮ ವಿಳಾಸ:—ಮೇನೇಜರ್,

ಹಾಸನದ ಟೋಪಿ ಕಾರ್ಖಾನೆ, ಮಿಷನ್ ಇಲಾಖೆ, ತುಮಕೂರು.

ಇಗೋ ನೋಡಿರಿ ಎಲ್ಲರೂ ಓದತಕ್ಕ ಆಶ್ಚರ್ಯಕರವಾದ ಪುಸ್ತಕ!

"ಅರೇಬಿಯನ್ ನೈಟ್ಸ್ ಅಥವಾ ಯವನ ಯಾಮಿನೀ ವಿನೋದ ಕಥೆಗಳು.

61-4

ಈ ಪುಸ್ತಕವು ಲೋಕಪ್ರಸಿದ್ಧವಾದುದೆಂದು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ನಾನೂರು ಎಪ್ಪತ್ತು ಪುಟಗಳುಳ್ಳದ್ದು. ಭಾರಿ ಪುಸ್ತಕ. ಭಾಷೆಯು ಬಹು ಸರಳವಾಗಿದೆ. ಪುಸ್ತಕವನ್ನು ಒಂದಾವರ್ತಿ ಓದಿದ ಮೇಲೆ ಅದನ್ನು ಪುನಃ ಪುನಃ ಓದುವಂತೆ ಅದು ಮನಸ್ಸನ್ನು ಆಕರ್ಷಿಸುವದು. ಇದರ ಕ್ರಯ ಎರಡೇ ರೂಪಾಯಿ. ವಿ. ಪಿ. ಪಿ ಮೂಲಕ ೨—೫—೦ ಹತ್ತು ಅಥವಾ ಹದಿನೈದು ವರ್ಷಗಳ ಹಿಂದೆ ಇದರ ಕ್ರಯ ಎಂಟು ರೂಪಾಯಿ ಎಂದು ಅನೇಕರಿಗೆ ಗೊತ್ತು. ಇದನ್ನು ಬಡವರೂ, ಐಶ್ವರ್ಯವಂತರೂ ಓದುವಂತೆ ಪುನಃ ಛಾಪಿಸಿ ಇಷ್ಟು ದೊಡ್ಡ ಪುಸ್ತಕವನ್ನು ಇಷ್ಟು ಸುಲಭ ಕ್ರಯಕ್ಕೆ ಮಾರುತ್ತೇವೆ. ಹನ್ನೆರಡು ಪುಸ್ತಕಗಳನ್ನು ಒಟ್ಟಿಗೆ ತರಿಸಿಕೊಂಡವರಿಗೆ, ಪುಸ್ತಕಕ್ಕೆ ಎರಡು ಆಣೆಯಂತೆ ಕಮಿಷನ್ ಕೊಡುತ್ತೇವೆ. ಜಾಗ್ರತೆ ನೋಡಿ.

ವಿಳಾಸ:—ಮ್ಯಾನೇಜರ್,

ಸಿ. ಎಲ್. ಎಸ್. ಬುಕ್ ಡಿಪೋ,

ಮೈಸೂರು.

ಶಾಲಾ ಪುಸ್ತಕಗಳು.

56 7

ಬಾಲಶಿಕ್ಷೆ ಒಂದನೆಯ ಭಾಗ	ಕ್ರಯ	೦	೧	೦
ಬಾಲಶಿಕ್ಷೆ. ಎರಡನೆಯ ,,		೦	೨	೦
ಕನ್ನಡ ಬಾಲಬೋಧೆ ಒಂದನೆಯ ಭಾಗ		೦	೧	೬
ಕನ್ನಡ ಬಾಲಬೋಧೆ ಎರಡನೆಯ ,,		೦	೨	೬
ಮಾರ್ನ್ಸ್‌ಡೆನ್‌ರವರ ಕನ್ನಡ ಮೊದಲನೆಯ ಪುಸ್ತಕ		೦	೨	೦
,, ,, ಎರಡನೆಯ ಪುಸ್ತಕ		೦	೨	೬
,, ,, ಮೂರನೆಯ ಪುಸ್ತಕ		೦	೩	೦
,, ,, ನಾಲ್ಕನೆಯ ಪುಸ್ತಕ		೦	೪	೦
,, ,, ಐದನೆಯ ಪುಸ್ತಕ		೦	೫	೬
ಭೂಗೋಳ ಶಾಸ್ತ್ರದ ಮೊದಲನೆಯ ಪುಸ್ತಕ		೦	೧	೮
,, ,, ಮೈಸೂರು ಸಟಿ ಸಮೇತ		೦	೨	೧
,, ,, ೧ನೆಯ ಮತ್ತು ೨ನೆಯ ಭಾಗ		೦	೪	೦
ಹಿಂದೂ ದೇಶದ ಚರಿತ್ರೆಯ ಸುಲಭ ಪಾಠಗಳು		೦	೪	೦
ಕಥಾಸಪ್ತತಿ		೦	೨	೬
ಪದ್ಯಸಾರ		೦	೫	೦
ದೊಡ್ಡ ಅಂಕಗಣಿತ		೦	೮	೦

ವಿಳಾಸ:—ಮ್ಯಾನೇಜರ್,

ಸಿ. ಎಲ್. ಎಸ್. ಬುಕ್ ಡಿಪೋ,

ಮೈಸೂರು.

ಅಮೇರಿಕದಲ್ಲೆಲ್ಲಾ ತುಂಬಾ ಮುದುಕನಾಗಿರುವವನು

ಪೆರೂನಾವನ್ನು ಉಪಯೋಗ ಮಾಡಿಕೊಂಡು ಅನೇಕ ಶೀತಕಾಲಗಳ ಭಯಸಂಕಟಗಳನ್ನು 15 ಜಯಿಸಿರುತ್ತಾನೆ.



ಮಿ ಐಜಕ್ ಬ್ರೂಕ್, ೧೧೮ ಸಂವತ್ಸರಗಳು ತುಂಬಿವೆ.

ಮಿ॥ ಬ್ರೂಕ್ ಎಂಬಾತನು ತನ್ನ ದೇಹದ ಒಳ್ಳೇ ಆರೋಗ್ಯ ಸ್ಥಿತಿಯನ್ನೂ ತನ್ನ ಪೂರ್ಣವಾದ ಮುದಿತನವನ್ನೂ ಕುರಿತು ಹೇಳಿರುವುದೇನೆಂದರೆ —

"ಈ ಪ್ರಪಂಚದಲ್ಲಿ ನನ್ನಷ್ಟು ದೀರ್ಘಕಾಲ ಬದುಕಿದ ಮೇಲೆ ಯಾವ ಮನುಷ್ಯನಿಗಾಗಲಿ ಅನೇಕ ವಿಷಯಗಳು ಅನುಭವಪೂರ್ವಕವಾಗಿ ತಿಳಿದುಬರಬೇಕು ನನಗೂ ನೇ ಅಂದಾ ಅನುಭವ ಉಂಟಾಗಿರುತ್ತದೆ

'ಹವಾ ಬದಲಾವಣೆಯಿಂದುಂಟಾಗತಕ್ಕ ನಾನಾ ತರದ ಅಸ್ವಸ್ಥತೆಗಳಿಗೆ ನನ್ನ ಅನುಭವಕ್ಕೆ ಕಂಡುಬಂದಿರುವ ಒಂದು ಪರಿಹಾರ ಮಾತ್ರ ನನಗೆ ಸಂಪೂರ್ಣವಾದ ತೃಪ್ತಿಯನ್ನು ಉಂಟುಮಾಡಿರುವುದು ಈಗ ಕಳೆದ ೧೧೮ ವರುಷಗಳಿಂದಲೂ ಅಮೇರಿಕದಲ್ಲಿ ಆಗಾಗ್ಗೆ ಬದಲಾವಣೆಯಾಗತಕ್ಕ ಕಾಲಸ್ಥಿತಿ ಹವಾಗಳನ್ನು ನಾನು ಜಯಿಸಿಕೊಂಡು ಬಂದಿರುತ್ತೇನೆ.

'ನಾನು ಸಾಮಾನ್ಯ ಆರೋಗ್ಯವಾಗಿಯೇ ಇರತಕ್ಕವನು ಆದರೆ ಆಗಾಗ್ಗೆ ಅಕಸ್ಮಾತ್ತಾಗಿ ... ಬದಲಾವಣೆಯಿಂದುಂಟಾಗುವ ಅಸ್ವಸ್ಥತೆಗಳು ನನಗೆ ಉಂಟಾಗುವವು

'ಡಾಕ್ಟರ್ ಹಾರ್ಟ್‌ಮನ್‌ರವರ ಪೆರೂನಾ ಔಷಧದ ವಿಷಯದಲ್ಲಿ ಅದು ಇಂಥಾ ಅಸ್ವಸ್ಥತೆಗಳನ್ನು ಗುಣಪಡಿಸುವುದಕ್ಕೆ ಪ್ರಮುಖವಾದದ್ದೆಂದು ನನಗೆ ಕಂಡುಬಂದಿದೆ ಅದು ನನಗೆ ಅನೇಕ ವರುಷಗಳಿಂದಲೂ ಮುಖ್ಯ ಬೆಂಬಲವಾಗಿರುತ್ತದೆ. ನನ್ನ ಒಳ್ಳೇ ಆರೋಗ್ಯಸ್ಥಿತಿಗೂ ಇಷ್ಟು ಮುಪ್ಪಿನ ತನಕ ಬದುಕಿರುವುದಕ್ಕೂ ಈ ಔಷಧವೇ ಕಾರಣವೆಂದು ಹೇಳಬಲ್ಲೆನು

"ಈ ಔಷಧವು ನನ್ನ ದೇಹಾರೋಗ್ಯಕ್ಕೆ ಅವಶ್ಯವಾದದ್ದನ್ನೆಲ್ಲಾ ಕಲ್ಪಿಸಿಕೊಡುತ್ತದೆ ನನಗೆ ಅಕಸ್ಮಾತ್ತಾದ ಹವಾ ಬದಲಾವಣೆಯಿಂದುಂಟಾಗತಕ್ಕ ಕೆಡಕುಗಳನ್ನೆಲ್ಲಾ ಇದು ನಿವಾರಣೆಮಾಡುತ್ತದೆ ಅದು ನನ್ನ ದೇಹದ ರಕ್ತಚಲನೆಯನ್ನು ಬಹಳ ಚನ್ನಾಗಿ ಕಾಪಾಡಿಕೊಂಡು ಬರುತ್ತದೆ ನನಗೆ ಆಗಾಗ್ಗೆ ಅನೇಕ ಸಣ್ಣ ಸಣ್ಣ ಅಸ್ವಸ್ಥತೆಗಳಿಗೆ ಪ್ರತ್ಯೇಕವಾಗಿ ಹಲವು ತರದ ಔಷಧಗಳನ್ನು ತೆಗೆದುಕೊಳ್ಳುವುದಕ್ಕೆ ಪ್ರತಿಯಾಗಿ ಇದೊಂದೇ ಎಲ್ಲಾ ವಿಷಯಗಳಲ್ಲೂ ನನಗೆ ಆರೋಗ್ಯ ಕೊಡುತ್ತಿರುವುದು

"ಈ ದೇಹದಲ್ಲಿ ಕೈಕಾಲು ಕೀಲುಗಳ ಹಿಡಿಯುವ ರೋಗವು ಮೊದಲುದಾಗ ನಾನೂ ಆ ರೋಗಕ್ಕೆ ಸಿಕ್ಕಿ ನರಳಿದೆನು

"ನನಗೆ ಈ ವಾತರೋಗವು ಹಿಡಿದು ಬಹಳಕಾಲ ಅನುಭವಿಸಿದೆನು ಪೆರೂನಾದಿಂದ ಈ ರೋಗ ವಾಸಿಯಾಗುವುದೆಂದು ಮೊದಲು ನನಗೆ ತಿಳಿದಿರಲಿಲ್ಲ ಅದು ಶೀತದಿಂದ ಹುಟ್ಟತಕ್ಕ ರೋಗವೆಂದು ನನಗೆ ತಿಳಿದಾಗ ಪೆರೂನಾವನ್ನು ಈ ರೋಗಪರಿಹಾರಕ್ಕಾಗಿ ತೆಗೆದುಕೊಂಡೆನು ಆದೇ ಆ ರೋಗಕ್ಕೆ ತಕ್ಕ ಔಷಧವೆಂದು ನನಗೆ ಬಹಳ ಚನ್ನಾಗಿ ಅನುಭವಕ್ಕೆ ಬಂದಿದೆ"

ಈಚೆಗೆ ಬರೆದ ಇನ್ನೊಂದು ಕಾಗದದಲ್ಲಿ ಮಿ॥ ಬ್ರೂಕ್ ಎಂಬಾತನು ತಿಳಿಸುವುದೇನೆಂದರೆ —

'ನಾನು ಸುಖವಾಗಿದ್ದೇನೆ, ಅನೇಕ ವರುಷಗಳಿಂದಲೂ ಆರೋಗ್ಯವಾಗಿರುತ್ತೇನೆ ನನ್ನ ದೃಷ್ಟಿಯೊಂದೇ ನನಗೆ ತೊಂದರೆಪಡಿಸುತ್ತದೆ ನನ್ನ ದೃಷ್ಟಿ ಚನ್ನಾಗಿಲ್ಲದ್ದರಿಂದ ನಾನು ನನ್ನ ಕೋಲಿನ ಸಹಾಯದಿಂದ ನಡೆಯಬೇಕು ಇದರಿಂದ ನನಗೆ ಒಳ್ಳೆಯದಾಗಬೇಕು ನಾನು ಪೆರೂನಾವನ್ನು ಬಿಟ್ಟಿರಲಾರೆನು"

ನಿಮ್ಮ ವಿಧೇಯ

Isaac Brock,

೧೯೦೬ನೆ ಇಸವಿ ಜೂಲೈ ೩ ರಲ್ಲಿ ಮಿ॥ ಬ್ರೂಕ್‌ರವರಿಗೆ ಅವರ ಪತ್ನಿಯಾದ ಸಾರಾ ಜೆ ಬ್ರೂಕ್ ಎಂಬಾಕೆಯು ಒಂದು ಕಾಗದ ಬರೆದು ತಿಳಿಸಿದ್ದೇನೆಂದರೆ —

"ಹೋದ ಶೀತಕಾಲದಲ್ಲಿ ನಾನು ಕಾಯಿಲೆ ಬಿದ್ದು ಗುಣಪಟ್ಟ ಕೂಡಲೇ ಪೆರೂನಾವನ್ನು ಸೇವನೆಮಾಡಲು ಪ್ರಾರಂಭಿಸಿದೆನು ಅದರಿಂದ ನನ್ನ ಆರೋಗ್ಯವು ಬಹಳಮಟ್ಟಿಗೆ ವೃದ್ಧಿಯಾಗಿದೆ ಎಂದು ನೆನಸುತ್ತೇನೆ"

ಆಕೆ ಒದೇ ಕಾಗದದ ಕಡೇ ಭಾಗದಲ್ಲಿ ಬರೆದಿರುವುದೇನೆಂದರೆ — "ಪೆರೂನಾದಿಂದ ಆಗತಕ್ಕ ಪ್ರಯೋಜನಗಳೇನೇನೆಂದು ಅನೇಕರು ನನ್ನ ಗಂಡನಿಗೆ ಬರೆದು ಕೇಳುತ್ತಿದ್ದಾರೆ ನಾನು ಅವರ್ಯಾರಿಗೂ ಜವಾಬು ಕೊಡುವುದಿಲ್ಲ ಒಂದು ಸೀಸೆ ಔಷಧವನ್ನು ಯಾರ ಬೇಕಾದರೂ ಕೊಂಡು ತರಿಸಿ ಉಪಯೋಗಿಸಿ ಪರೀಕ್ಷಿಸಬಹುದಾಗಿದೆ"

ಐಜಾಕ್ ಬ್ರೂಕ್ ಎಂಬಾತನು ಟೆಕ್ಸಾಸ್ ಡಿಸ್ಟ್ರಿಕ್ಟಿಗೆ ಸೇರಿದ ಮೆಕ್ಲೇನಸ್ ಕೌಂಟಿಯಲ್ಲಿ ೧೦೮ ವರುಷಗಳಿಂದ ಒಂದುಕಡೆ ವಾಸವಾಗಿದ್ದಾನೆ.

ಆತನು ಅನೇಕ ವರುಷಗಳ ತನಕ ವಾಕೋ ಎನ ಪಟ್ಟಣಕ್ಕೆ ಹದಿನೆಂಟು ಮೈಲಿ ದೂರದಲ್ಲಿರುವ ಬಾಸ್ಕ್‌ವಾಲ್ಸ್ ಎಂಬ ಸ್ಥಳದಲ್ಲಿ ವಾಸಮಾಡುತ್ತಿದ್ದು ಈಗ ಟೆಕ್ಸಾಸ್ ಡಿಸ್ಟ್ರಿಕ್ಟಿನ ವ್ಯಾಲ್ಸ್ ವ್ಯಾಲಿಯಲ್ಲಿ ತನ್ನ ಅಳಿಯನ ಜೊತೆಯಲ್ಲಿ ಸಂಸಾರ ಮಾಡಿಕೊಂಡಿದ್ದಾನೆ

ಅಪೇಕ್ಷೆಪಟ್ಟ ಮೇರೆಗೆ ಕೆಲವು ದಿನಗಳ ಹಿಂದೆ ಐಜಾಕ್ ಎಂಬಿತನು ವಾಕೋವಿಗೆ ಬಂದು ತನ್ನ ಫೋಟೋ ತೆಗೆಸಿಕೊಂಡನು ಜನರಲ್ ವಾಷಿಂಗ್‌ಟನ್ ಎಂಬಾತನಿಗೋಸ್ಕರ ಮೊದಲು ನೆಡಲ್ಪಟ್ಟ ಒಂದು ಗಿಡದ ರೆಂಬೆಯನ್ನು ಮುರಿದು ಅದು ದೊಣ್ಣೆಯಂತೆ ಹಿಡಿದು ಕುಳಿತುಕೊಂಡನು

ಮಿ॥ ಬ್ರೂಕ್ ಎಂಬಾತನು ತನ್ನ ವಯಸ್ಸಿಗೆ ತಕ್ಕಷ್ಟು ಗಟ್ಟಿ ಧೈರ್ಯವುಳ್ಳ ದೊಡ್ಡ ಮನುಷ್ಯನಾಗಿರುತ್ತಾನೆ ಈತನು ಶರೀರ ಸ್ಥಿತಿಯಲ್ಲಿ ಸ್ವಲ್ಪವೂ ಬದಲಾಗಿಲ್ಲ ಇಲ್ಲ

ಈತನ ಸಂಸಾರದಲ್ಲಿ ಹಳೇ ಬೈಬಲ್ ಪುಸ್ತಕವು ಇನ್ನೂ ಇದ್ದು ಅದರೊಳಗೆ ಅನೇಕ ವರುಷಗಳಾದವೆಂದು ತಿಳಿಯುವಂತೆ ಆತನ ಜನ್ಮದಿನವನ್ನು ಸ್ಪಷ್ಟವಾಗಿ ಬರೆದಿದೆ

ಸಂಯುಕ್ತ ಸಂಸ್ಥಾನಗಳು ಏರ್ಪಾಡಾಗುವುದಕ್ಕೆ ಮೊದಲು ಹುಟ್ಟಿದ್ದು

೨೨ ಮಂದಿ ಪ್ರೆಸಿಡೆಂಟರು ಚುನಾಯಿಸಲ್ಪಟ್ಟಿದ್ದನ್ನು ನೋಡಿದ್ದಾನೆ

ಪೆರೂನಾ ಔಷಧವು ಹವಾ ಬದಲಾವಣೆಯಿಂದ ಆತನಿಗುಂಟಾದ ಸಕಲ ಅಸ್ವಸ್ಥತೆಗಳನ್ನೂ ಗುಣಮಾಡಿರುತ್ತದೆ

ಈತನು ನಾಲ್ಕು ಯುದ್ಧಗಳಲ್ಲಿ ನಿಂತು ಕಾದಾಡಿ ಬಂದವನು

೯೯ ವರುಷವಾಗಿರುವಾಗ ಅವನು ಕುದುರೆಗೆ ಲಾಳ ಕಟ್ಟುತ್ತಿದ್ದನು

ಪೆರೂನಾ ಸೇವನೆಯಿಂದ ವಾತ ನೋವುಗಳನ್ನು ಯಾವಾಗಲೂ ವಾಸಿ ಮಾಡಿಕೊಂಡಿರುತ್ತಾನೆ

ಒಂದು ಜಮೀನಿನ ವ್ಯಾಜ್ಯದಲ್ಲಿ ಇವನು ೧೧೦ ನೆ ವರುಷ ವಯಸ್ಸಿನಲ್ಲಿ ಸಾಕ್ಷಿಯಾಗಿ ಕೋರ್ಟಿಗೆ ಹೋಗಿದ್ದನು

ಶೀತ ವಾತ ರೋಗಗಳಿಗೆಲ್ಲಾ ಈಗಿನ ಕಾಲದಲ್ಲಿ ಪೆರೂನಾ ಎಂಬುವದೇ ಮಹೌಷಧವೆಂದು ನುಡಿದಿರುತ್ತಾನೆ

ಈ ಔಷಧ ಸಿಕ್ಕುವ ಸ್ಥಳಗಳು—

(೧) ಹಿಟ್‌ಕಾಕ್ ಅಂಡ್ ಸನ್ಸ್, ಬೆಂಗಳೂರು.

(೨) ಇಂಗ್ಲಿಷ್ ಡ್ರಗ್ ಕಂಪನಿ, ೩೯೪ ಮಿಂಟ್ ಬೀದಿ, ಮದರಾಸ್.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ

೨೮—೬—೧೯೦೭ ರಿಂದ ೫—೭—೧೯೦೭ ರ ವರೆಗೆ

ಸ್ಥಳ		ಪ್ಲೇಗ್ ತಗಲಿದ್ದು	ಸತ್ತದ್ದು	ಕಾಲರಾ ತಗಲಿದ್ದು
ಬೆಂಗಳೂರ ಪಟ್ಟಣ		4	4	0
ಮೈಸೂರು	,,	4	3	1
ಬೆಂಗಳೂರು ಡಿಸ್ಟ್ರಿಕ್ಟು		54	24	19
ಮೈಸೂರು	,,	22	12	57
ಕೋಲಾರ್	,,	0	0	0
ಕೋಲಾರ್ ಚಿನ್ನದ ಗಣಿಗಳು		5	4	0
ತುಮಕೂರು ಡಿಸ್ಟ್ರಿಕ್ಟು		0	0	1
ಹಾಸನ	,,	2	2	13
ಚಿತ್ರದುರ್ಗ	,,	0	0	0
ಕಡೂರ್	,,	13	8	0
ಶಿವಮೊಗ್ಗ	,,	16	12	0
	ಜುಮ್ಲಾ	120	62	84

ಶಾಲಿವಾಹನ ಶಕ ವರುಷಂಗಳು ೧೮೨೯ ನೇ ಪ್ಲವಂಗನಾಮ ಸಂವತ್ಸರದ ಆಷಾಢ ಶುದ್ಧ ಅಷ್ಟಮಿ ಗುರುವಾರದಿಂದ ಆಷಾಢ ಶುದ್ಧ ಚತುರ್ದಶೀ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೭ ನೇ ಇಸವಿ ಜೂಲೈ

ತಾ	ವಾರ		ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	
18	ಗುರು		ಅಷ್ಟಮಿ	16 58	ಚಿತ್ತಾ	40 10	3
19	ಶುಕ್ರ	†	ನವಮಿ	13 48	ಸ್ವಾತಿ	38 36	4
20	ಶನಿ		ದಶಮಿ	39 29	...	36 31	5
21	ರವಿ	‡	ಏಕಾದಶಿ	31 24	ಅನು	33 33	6
22	ಚಂದ್ರ	,	ದ್ವಾದಶಿ	25 18	ಜ್ಯೇ	30 3	7
23	ಕುಜ	*	ತ್ರಯೋದಶಿ	23 ...	ಮೂ	26 11	8
24	ಬುಧ		ಚತುರ್ದಶಿ	16 50	ಪೂರ್ವಾ	22 0	9

ಆ ಶುಕ್ರವಾರ ‡ ಸರ್ವತ್ರ ಪ್ರಥಮೈಕಾದಶೀ ಗೋಪದ್ಮವ್ರತಾರಂಭ ... ಮೃತ್ಯುಯೋಗ , ಶಯನದ್ವಾದಶೀ, ಸೋಮಪ್ರದೋಷ ಚಾತುರ್ಮಾಸ್ಯವ್ರತಾರಂಭ * ತಿಥಿದ್ವಯಂ ಪೂರ್ಣಿಮಾ ತಿಥಿ, ಚಾಮುಂಡೇಶ್ವರ ...

ಪೇಟೇ ಧಾರಣೆ.

ದಿನಸಿ		ಮೈಸೂರು	ಬೆಂಗಳೂರು
ಕಸ್ತೂರಿ ಅಕ್ಕಿ ಪಲ್ಲಾ ೧ಕ್ಕೆ	ರೂ	೧೨-೮-೦	೧೪ ೦
ಕಂಬಸಾಲಿ ಅಕ್ಕಿ ಅಗ್ಗ		೧೩ ೪ ೦	೧೩-೦
,, ಮಧ್ಯಂ		೧೨ ೮-೦	೧೨ ೪
ಜೀರಿಗೆಸಾಂಬಾ ಅಕ್ಕಿ		೧೨-೮-೦	೧೩ ೮
ಸಣ್ಣಕ್ಕಿ ಅವಲ್		೯೬-೦-೦	೭೫ ೦
, ಮಧ್ಯಂ		೧೪ ೮ ೦	೧೪-೦
ತೆಂಗರೀ ಬೇಳೆ ಪಲ್ಲಾ ೧ಕ್ಕೆ		೧೩ ೮-೦	೯೩ ೪
, ಮಧ್ಯಂ		೧೨ ೧೨ ೦	೧೩ ೦
ಸ್ವರ್ಣ ರಾಗಿ ಪಲ್ಲಾ ೧ಕ್ಕೆ		೬ ೮ ೦	೬ ೪
ಕಾರಾಗಿ		೫ ೮ ೦	೬ ೦
ಜೋಳ		೭ ೮ ೦	೭-೮
ಹಲಸಂದೆ ಪಲ್ಲಾ ೧ಕ್ಕೆ		೧೧ ೬ ೦	೧೧ ೦
ಬಿಳೀ ಅವರೆ		೮ ೪ ೦	೭-೮
ಹೆಸರು		೧೧ ೮-೦	೧೧ ೦
ಉದ್ದು		೧೧ ೦ ೦	೧೧-೮
ಕಡಲೆ		೯೨ ೦ ೦	೯೦ ೦
ಎಳ್ಳು ಸೇರು ೧೨೦ ಕ್ಕೆ		೨೨ ೮-೦	೨೨ ೮
ಹುರಳಿ		೬ ೨ ೦	೭-೪
ಹರಳು ೧೨೦ ಸೇರಿಗೆ		೧೪ ೦-೦	೧೨ ೮
ಸೀಗೇಕಾಯಿ ಮಣ ೧ಕ್ಕೆ		೨ ೪ ೦	೨ ೦
ಮೆಣಸಿನಕಾಯಿ		೨ ೧೨ ೦	೭-೪
, ಮಧ್ಯಂ		೩-೮-೦	೩-೦
ಬೆಲ್ಲ ದೊಡ್ಡ ಅಚ್ಚು		೩-೮-೦	ಮಂ ೧೨
ಒಳ್ಳೆಣ್ಣೆ ಮಣ ೧ಕ್ಕೆ		೫-೮-೦	೫-೦
ಹರಳೆಣ್ಣೆ ,,		೫-೮-೦	೫-೨
ಕೊತ್ತುಂಬರಿ ಪಲ್ಲಾ ೧ಕ್ಕೆ		೬-೨-೦	೬ ೪
ಉಪ್ಪು ,,		೫-೩-೦	೫ ೮
ಹುಣಸೇ ಹಣ್ಣು		೧ ೬ ೦	೧ ೬
ಹಳೇದು		೦-೧೪ ೦	೦ ೧೫
ತುಪ್ಪ ಮಣ ೧ಕ್ಕೆ		೧೫-೦ ೦	೧೪ ೦
ಸೀಮೆ ಯೆಂಡೆ ಪಟ್ಟೆ ೧ಕ್ಕೆ		೫-೦ ೦	೪ ೦
ತೆಂಗಿನಕಾಯಿ ೧೦೦ ಕ್ಕೆ		೮ ೮ ೦	೩ ೮
ಅಡಿಕೇಕಾಯಿ ಮಣ ೧ಕ್ಕೆ		೧-೦-೦	೧-೦
ಬಂಟ್ವಾಳದ ಕಾಯಿ ಮಣ ೧ಕ್ಕೆ		೦-೧-೨-೦	೦-೧೨
ಚಿನ್ನ (ಪಾ) ತೊಲ		೧೫-೪ ೦	೧೫-೧೨
,, ಪಸಿಮೆ		೧೫-೧೦-೦	೧೫ ೩
,, ,, ಗಟ್ಟಿ ತೊಲ ೧ಕ್ಕೆ		೨೩-೧-೨-೦	೨೩ ೪
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ		೮೫-೦-೦	೮೩-೦

Printed and Published by the Rev E W Thomson M A, Proprietor and Manager, Wesley Mission Press Mysore 18/7/1907

REGISTEI
M 20

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಕ್ರಯ ೧ ದುಡ್ಡು. ಕ್ರಯ ೧ ದು

ಸಂಪುಟ ೨೧ ಮೈಸೂರು—ಸರ್ ೧೯೦೭ ನೇ ಇಸವಿ ಜೂಲೈ ತಾರೀಖು ೨೫ನೇ ಗುರುವಾರ. ಸಂಚಿಕೆ

WILLIAM & CO., BOMBAY.

ವಿಲಿಯಂ ಮತ್ತು ಕಂಪೆನಿ, ಫೋರ್ಟು, ಮುಂಬಯಿ.

ಗಜಕರ್ಣದ ಮುಲಾಮು.

27 22

ಇದನ್ನು ತಾಗಿಸುವದರಿಂದ ಎಲ್ಲಾ ತರದ ಕಜ್ಜಿಯು ನಾಶವಾಗುವದು. ಮೂರು ಸಾರಿ ತಾಗಿಸುವದರೊಳಗೆ ಗಜಕರ್ಣವು ಹೋಗುವದು ಇದನ್ನು ಹಚ್ಚಿದಲ್ಲಿ ಉರಿಯು ಬರುವದಿಲ್ಲ ಚರ್ಮ ಕಪ್ಪಾಗುವದಿಲ್ಲ.

ಇದರಿಂದ ಗುಣ ಕಂಡುಬರುವದಿಲ್ಲವಾದರೆ ಹಣ ಹಿಂತಿರುಗಿ ಕೊಡಲ್ಪಡುವದು ತ್ವರೆಮಾಡಿರಿ! ಕೊಂಡುಕೊಳ್ಳಿರಿ!! ಕ್ರಯ ಕಮ್ಮಿ ಒಂದು ಸಾರಿ ಪರೀಕ್ಷಿಸಿ ನೋಡಿರಿ!! ಡಬ್ಬಿ ೧ಕ್ಕೆ ಕಿಮ್ಮತ್ತು ೦-೬-೦. ವಿ. ಪಿ. ೦-೧೦-೦.

ಕಫಹಾರಿ ೧ ರೂ ೪ ಆ ಕಸ್ತೂರಿ ಮಾತ್ರೆ ೧೦ ಆ ಕೇಶವರ್ಧಿನಿ ತೈಲ ೧ ರೂ ಕಜ್ಜಿನಾಶಿನಿ ೩ ಆಣೆ ಕಾಸಿಂಬಾರಿ ಗುಟಿಕೆ ೧೦ ತಾಂಬೂಲ ಗುಟಿಕೆ ೪ ಆಣೆ

ಸುದರ್ಶನ ತೈಲ ೪ ಆಣೆ ಪಪ್ಪುಗುಟಿಕೆ ರೂಪಾಯಿ ೧, ದಂತಮಂಜನ ೩ ಆಣೆ ನೇತ್ರಾಂಜನ ೪ ಆಣೆ

ಅಮೃತಾಂಜನ

ಬಾಟ್ಲಿ ಒಂದಕ್ಕೆ ಕಿಮ್ಮತ್ತು ೮ ಆಣೆ. ವಿ ಪಿ ೧೨ ಆಣೆ.

ದಮ್ಮು ಮತ್ತು ಘಾಯ, ವಾತ, ಎದೆನೋವು, ಗಂಟ್ಲುನೋವು, ಶಿರೋಭಾರ, ಸಂಧಿವಾತ, ತಲೆನೋವು, ವಾಲವ್ಯಾಧಿ, ಶೀತ, ಕೆಮ್ಮು, ಈ ಎಲ್ಲಾ ತರದ ರೋಗಕ್ಕೆ ಅಮೃತಾಂಜನವು ಒಂದೇ ದಿವ್ಯವಾದ ಔಷಧವಾಗಿರುತ್ತದೆ ಇದರಿಂದ ಗುಣ ಕಂಡುಬರುವದಿಲ್ಲವಾದರೆ ಹಣ ತಿರುಗಿ ಕೊಡಲ್ಪಡುವದು ತ್ವರೆ ಮಾಡಿರಿ! ಮೂವತ್ತು ವರ್ಷದಿಂದ ಅನುಭವಿಸುವ ವಾತದ ನೋವು ನಿಮ್ಮ ಒಂದೇ ಬಾಟ್ಲಿ ಅಮೃತಾಂಜನದಿಂದ ಪೂರ್ಣವಾಗಿ ಗುಣ ಸಿಕ್ಕಿತು. ದಯವಿಟ್ಟು ೧೨ ಬಾಟ್ಲಿ ವಿ ಪಿ ಮೂಲಕ ಕಳುಹಿಸಿರಿ ... ವಿಟ್ಲ ... ಕನ್ನಡ ... ನನ್ನ ಸ್ನೇಹಿತರು ಅಮೃತಾಂಜನವನ್ನು ಬಹಳವಾಗಿ ಪ್ರೀತಿಸುತ್ತಾರೆ. ಸುಬ್ಬರಾವ್ ... ಅಮೃತಾಂಜನದಂತಲೂ ಹೆಚ್ಚು ಉಪಯೋಗ ಉಳ್ಳ ಮುಲಾಮು ಬೇರೆ ಯಾವದೂ ಇಲ್ಲ. ಗಂಗಾಧರ ಕಲ್ಕತ್ತಾ, ಆರು ವರ್ಷದಿಂದ ಪೀಡಿತನಾದ ನನ್ನ ಸ್ನೇಹಿತನಿಗೆ ಅಮೃತಾಂಜನವು ಜೀವದಾನ ಕೊಟ್ಟಿತು ... ಅಮೃತಾಂಜನವು ಸಾವಿರಾರು ಜನರಿಗೆ ಗುಣ ಕೊಟ್ಟಿರುತ್ತದೆ ವೀರಭದ್ರಪ್ಪ, ಟುಮಕೂರು.

ಸಂಜೀವನದ ಹಾಗಿರುವ ಅಮೃತಾಂಜನವನ್ನು ನನ್ನ ಮನೆಯಲ್ಲಿ ಸದಾ ಕಾಲ ಇಟ್ಟಿದ್ದೇನೆ ಹನುಮಯ್ಯ, ಬೆಂಗಳೂರು ನಿಮ್ಮ ಅಮೃತಾಂಜನವು ಎಂಥಾ ಕಠಿಣವಾದ ತಲೆನೋವನ್ನಾದರೂ ನಿಲ್ಲಿಸುತ್ತದೆ ಗಂಗಪ್ಪ ... ಕೋಲಾರ.

ನಿಮ್ಮ ಅಮೃತಾಂಜನವು ಶೀತ, ಕೆಮ್ಮು, ತಲೆನೋವು, ಇತ್ಯಾದಿಗಳಿಗೆ ಅತೀ ಉತ್ತಮವಾದದ್ದು ಆದದರಿಂದ ದಯವಿಟ್ಟು ೩ ಬಾಟ್ಲಿ ಅಮೃತಾಂಜನ, ೨ ಬಾಟ್ಲಿ ಗಜಕರ್ಣದ ಮುಲಾಮನ್ನು ವಿ ಪಿ ಮೂಲಕ ರವಾನಿಸಿರಿ — ಆರ್ ಡಿ ಸೋಜಾ ಮ್ಯಾನೆಜರ್, ಮೊಡರು ಎಸ್ಟೇಟು, ಮಡಕೇರಿ ಕೊಡಗು

ವಿಲಿಯಂ ಮತ್ತು ಕಂಪೆನಿ, ೧೬ ಓಕ್ ಲೇನ್, ಫೋರ್ಟು, ಮುಂಬಯಿ.

ಟೆಲಿಗ್ರಾಫು ಅಡ್ರೆಸು ; "ಅಮೃತಾಂಜನ" ಮುಂಬಯಿ.

ನಿಮಗೆ ನೋವು ಇದೆಯೋ?

58

ಹಾಗಾದರೆ "ಕ್ಲಿಮೆಂಟ್ ಯವರ ಮ್ಯಾಜಿಕ್ ಟಿಂಚರ್" ನ್ನು ಉಪಯೋಗಿಸಬಾರದು? ಆಶ್ಚರ್ಯಕರವಾದ ಬಾಧಾ ಶಮನ! ಕ್ಷಣ ಮಾತ್ರದಲ್ಲಿ ಕಂಡು ಬಂದಿದ ದೊಡ್ಡ ನೋವೂ ಈ ರೀತಿ ಔಷಧವನ್ನು ಪೂಸಿಕೊಂಡಲು ಕೊಡೆಯುತ್ತಲೆ ನಿಮಿಷಗಳೊಳಗಾಗಿ ನರ ಮತ್ತು ಮಾಂಸ ಸಂಬಂಧವಾದ ನೋವು, ಕೀಲುಗಳ ಬಾಧೆ, ಹೊಟ್ಟೆ ನೋವು, ಬೆನ್ನಿನೋವು, ತಲೆನೋವು, ಕೆಮ್ಮು, ಕೀಲುಗಳು ಕತ್ತರಿಸುವದು, ಕೂರಳು ಕೈಕಾಲು ಬಿಗಿತ ಇವುಗಳನ್ನೆಲ್ಲಾ ವಿದ್ಯುಚ್ಛಕ್ತಿಯಂತೆ ಗುಣವದು ಈ ಔಷಧವು ಆಶ್ಚರ್ಯಕರವಾಗಿ ಗುಣಪಡಿಸುವದರಿಂದ ಎಲ್ಲಿಯೂ ಪ್ರಸಿದ್ಧಿಯಾಗುತ್ತಾ ಬರುವದು ಇತರ ಔಷಧಿಗಳು ಗುಣ ಹೋದಾಗ ಡಾಕ್ಟರ್ ಫೀಜನ್ನು ಕಡಿಮೆ ಮಾಡಿ ಇದು ನಿಸ್ಸಂದೇಹವಾಗಿ ಗುಣಪಡಿಸುವದು.

ಕ್ರಯ —೧ ಬಾಟ್ಲಿಗೆ ೧೨ ಆಣೆ, ಫೋಸ್ಟೇಜ್ ೪ ಆಣೆ ಬಾಟ್ಲಿಗೆ ಅಂಚೆವೆಚ್ಚ ಸೇರಿ ರೂ ೨—೪ ಆಣೆ. ಎಲ್ಲಾ ಕವಿ ಷಾಪುಗಳಲ್ಲಿ ದೊರೆಯುವದು

ನಮ್ಮ ವಿಳಾಸ:—ಎಫ್. ಡಬ್ಲಿಯು. ಆರ್ಕ, ಸಿಮೆಟ್ರಿ ರೋಡ್, ವೇಪೇರಿ, ಮದರಾಸ್.

ಜ್ವರಹರಿ.

47 1



ಇದು ಸಾಧಾರಣ ಜ್ವರ, ಚಳಿಜ್ವರ, ಮೊರೆಜ್ವರ, ಪಿತ್ತಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಕಲೆಕ್ಟರ್‌ನಲ್ಲಿರುವ ಮರಾಮತು ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್ ಟಿ ವೆಂಕಟಪತಿ ಅಂತವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ... ಬಾಗಿನ ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲಿ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಆನ್ನಾ ಗುಣ ಹೊಂದಿರುವರು ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೧೦ ಬಾಗಿನ ಸೀಸೆಯನ್ನು ವಿ ಪಿ ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ

ಕ್ರಯ —ಸೀಸೆ ೧ಕ್ಕೆ ೪ ಆಣೆ, ೧ ಡಜ, ೧—೪ ರೂ ಡಜ ೨—೧೨ ಆ, ೧೧ ರೂ., ಹನ್ನೆರಡು ಸೀಸೆ ತರಿಸಿಕೊಂಡರೆ ಫೋಸ್ಟೇಜು ಮಾಫಿ ಬಿಡಲಾಗುವದು.

****

ಓಮು ೦ ಕ ಪೂ ರ

Omum Carpoor

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಬ್ಬುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳ ಬಂದಾವರ್ತ ಹೊರಗೆ ಆಗುವಾಗ್ಗೆ ಹೊಟ್ಟೇನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯದ ದರವು ಪ್ರಕಾರ ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿರಾಯರು—ತಮ್ಮಿಂದ ... ಓಮು ಕರ್ಪೂರವನ್ನು ನಾನೂ ನನ್ನ ಕಾರ್ಪೊರೇಷನ್ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ಸಮಯಗಳಿಂದಲೂ ಕಾಲರಾ, ಅಜೀರ್ಣಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧವೆಂತ ಬರೆದಿದ್ದಾರೆ.

ಈ ಮೂಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇಲ್ಲದೆ ಕೆಳಗಿನ ವಿಳಾಸಕ್ಕೆ ಬರೆಯಬೇಕು —

ಹವ್ವುಡವರ್ ಈಸ್ಟ್ ಇಂಡಿಯಾ ಔಷಧಗಳ ಕಂಪೆನಿ,

ಕೆನೆಂಡ್ ಬೇಜ್ ಬೀದಿ, ಮದರಾಸ್

ಕೊಳ್ಳೇದ ವೆಂಕಟಾಚಲ ಪಂಡಿತ, ಶ್ರೀಸೀತಾರಾಘುವ ವೈದ್ಯಶಾಲಾ, ಕೊಳ್ಳೇಗಾಲ, ಇವರ ಸಿದ್ಧೌಷಧಗಳು

20 2

೧ ಲೋಕಾಮಯಹರ ಕಸ್ತೂರೀ ಮಾತ್ರೆ.—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ



ಚಳಿಜ್ವರ, ಜ್ವರ, ಹೊಟ್ಟೆಉಬ್ಬರ, ಸಂದುಗಳ ನೋವು, ಮೈ ಕೈಕಾಲು ಸೆಳತ (ಭಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿಮಾಂದ್ಯ, ಹಲ್ಲುನೋವು, ಕೆಮ್ಮು, ನೆಗಡಿ, ನಿಶ್ಶಕ್ತಿ, ಆರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ.

ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಬಾಯಿಲೆಗೂ ದಾರಿಕೊಡದೆ, ಶರೀರದ ಸಮಗಳ ಬಿಡಲಾವಶ್ಯವನ್ನು ಸರಿಪಡಿಸಿ, ರಕ್ತದಲ್ಲಿ ದೋಷವನ್ನು ತೆಗೆದು ಪುಷ್ಟಿಮಾಡಿ ವೃದ್ಧಿಪಡಿಸುತ್ತದೆ

ಸ್ತ್ರೀಯರ ಋತುದೋಷ, ಮಕ್ಕಳ ಎಳವು, ಜ್ವರ, ಸಚ್ಚುಜ್ವರ, ಕೃತ್ಯಗಳನ್ನು ಗುಣಪಡಿಸುತ್ತದೆ

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ

೨೦ ಮಾತ್ರೆಯುಳ್ಳ ಡಪ್ಪಿಗೆ ೪ ಆಣೆ, ೫ ಡಪ್ಪಿಗೆ ೧ ಡಪ್ಪಿ ಹೆಚ್ಚು ೧ ರಿಂದ ೧೨ ಡಪ್ಪಿ ವರೆಗೆ ಫೋಸ್ಟೇಜು ೪ ಆಣೆ

ವಿಳಾಸ:—ಎಸ್. ಎಸ್. ಆರ್. ವೈದ್ಯಶಾಲಾ,

ಲಕ್ಷ್ಮೀವಿಲಾಸ ರೋಡ್, ಮೈಸೂರು

ತರಿಸಿಕೊಳ್ಳಿ ಬೇಗ ತರಿಸಿಕೊಳ್ಳಿ!! ಇದೇ ಒಳ್ಳೇ ಸಮಯ!!!

70 1

ತಡಮಾಡಿದರೆ ಪ್ರತಿಗಳು ಮುಗಿದುಹೋದಾವು.

ನೇತ್ರಾನಂದಕರಗಳಾದ ಚಿತ್ರಗಳಿಂದಲೂ, ನೀತಿರಸ ಪ್ರಧಾನವಾದ ವಿಷಯಗಳಿಂದಲೂ ರಂಜಿಸುವದಲ್ಲದೆ, ಸಕಲ ಜನಗಳೂ ಪಡೆಯತಕ್ಕಷ್ಟು ಸುಲಭವಾದ ಕ್ರಯಕ್ಕೆ ಸಿಕ್ಕುವವುಗಳಾಗಿಯೂ ಇವೆ. ಇವುಗಳು ಯಾವವೆಂದರೆ—

	ಕ್ರಯ.
ಎಡ್ವರ್ಡ್ ಚಕ್ರವರ್ತಿಯವರ ಎತ್ತು ಅಲೆಕ್ಸಾಂಡ್ರಾ ಚಕ್ರವರ್ತಿನಿಯವರ ಚರಿತ್ರೆ	೦—೪—೦
ಎಡ್ವರ್ಡ್ ಸಾರ್ವಭೌಮರ ಕಿರೀಟಧಾರಣೆ	೦—೨—೬
ಘನತೆಯುಳ್ಳ ಸ್ತ್ರೀಯರ ಚರಿತ್ರೆ . . .	೦—೨—೬
ದಕ್ಷಿಣ ಆಫ್ರಿಕವೂ ಅದರ ನಿವಾಸಿಗಳೂ . .	೦—೨—೬
ಚೀನಾ ಚಕ್ರಾಧಿಪತ್ಯವೂ ಅದರ ನಿವಾಸಿಗಳೂ .	೦—೩—೬
ಬರ್ಮಾ ದೇಶವೂ ಬರ್ಮಿಯರೂ . .	೦—೨—೬
ಪುರಾತನ ಗ್ರೀಕರ ಕಥೆಗಳು .	೦—೨—೦
ಪುರಾತನ ರೋಮನರ ಕಥೆಗಳು .	೦—೨—೦
ಪಕ್ಷಿಗಳ ಚಿತ್ರಗಳೂ ಕಥೆಗಳೂ . . .	೦—೧—೦
ಕ್ರಿಮಿವರ್ಗ ವರ್ಣನೆ . .	೦—೧—೦
ದೇಹವೆಂಬ ವಿಚಿತ್ರವಾದ ನನ್ನ ಮನೆ	೦—೧—೦
ಚಿಕ್ಕವರಿಗೆ ಹೇಳಿದ ಕಥೆಗಳು .	೦—೧—೦
ಪ್ರಾಚೀನಕಾಲದ ವಿಲಕ್ಷಣ ಜೀವರಾಶಿಗಳ ವರ್ಣನೆ	೦—೧—೦
ಹೊಗೆ ಗಾಡಿಗಳನ್ನು ಕಲ್ಪಿಸಿದ ಜಾರ್ಜ್ ಸ್ಟೀವೆನ್ಸನ್ ಎಂಬಾತನ ಚರಿತ್ರೆ . . .	೦—೧—೦

ವಿಳಾಸ.—ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪೋ

ಮೈಸೂರು

ವ್ಯವಹಾರ ನಿರ್ಣಯ!

ಕೋಶ

ವೆಂಬ ಕನ್ನಡ **ಲಾ** ಪುಸ್ತಕವು.

63-10

ಲಾ ತಿಳಿದವರಿಂದಲೂ, ತಿಳಿಯದವರಿಂದಲೂ ಇದುವರೆಗೆ ಬರೆಯಲ್ಪಟ್ಟಿರುವ ಈ ತೆರದ ಪುಸ್ತಕಗಳನ್ನೆಲ್ಲ ನೋಡಿ ಅವೆಲ್ಲಕ್ಕಿಂತಲೂ ಹೆಚ್ಚು ಪ್ರಯೋಗವನ್ನು ಇದೊಂದು ಪುಸ್ತಕದಿಂದುಂಟುಮಾಡಬೇಕೆಂದು ಈ ದೊಡ್ಡ ಗ್ರಂಥವು ಹೊಸದಾಗಿ ಬರೆಯಲ್ಪಟ್ಟಿದೆ. ಇದರಲ್ಲಿ ೧೫ ಆಕ್ಟುಗಳು, ೩ ಕೋಡುಗಳು, ಹಿಂದೂ, ಮಹಮ್ಮದೀಯ ಲಾಗಳು, ಚೀಫ್ ಕೋರ್ಟ್ ಹೈ ಕೋರ್ಟುಗಳ ಫೈಸಲುಗಳು, ಗ॥ ಸರ್ಕ್ಯುಲರ್‌ಗಳು ಪ್ರೊಸೀಡಿಂಗ್ಸ್‌ಗಳು, ಸಕಲ ವಿಧ ವ್ಯವಹಾರಗಳು, (ಕ್ರಯ ಆಧಾರ ದಾನ ವಿಲ್ಲು ಮೊದಲಾದ) ೭೯ ತೆರದ ದಸ್ತಾವೇಜುಗಳ ನಮೂನೆಗಳು, ಈ ಸಂಬಂಧದ ಲಾ ವಿಧಿಗಳು, ಸಿವಲ್ ಕ್ರಿಮಿನಲ್, ಪೋಲೀಸ್, ರೆವಿನ್ಯೂ ಸಂಬಂಧದ ವ್ಯಾಜ್ಯಗಳು, ೫೯ ತೆರದ ಅರ್ಜಿಗಳು, ಈ ಸಂಬಂಧದ ಲಾ ವಿಧಿಗಳು, ಇವೆಲ್ಲವೂ ಅಡಕವಾಗಿವೆ.

ಪುಸ್ತಕ ದೊಡ್ಡದು: ಪುಟಗಳು ಒಟ್ಟು ೪೬೪	ಬೆಲೆ ಕಡಮೆ: ಅಂಚೆ ಹಾಸಲು ಸೇರಿ ರೂ. ೧—೮—೦

ಗ್ರಂಥಕರ್ತರು { ಎಂ. ಮಲ್ಲಾರಾಧ್ಯರು, ೧ನೆ ಗ್ರೇಡ್ ಪ್ಲೀಡರ್, ಶ್ರೀರಾಮಪೇಟೆ, ಮೈಸೂರು } ಇದೇ ವಿಳಾಸ.

ಇದಕ್ಕೆ ಸಮಾನವಾದ ಪುಸ್ತಕ ಉಂಟೋ?

ಕನ್ನಡ ಭಾಷೆಯಲ್ಲಿ ಇದುವರಿವಿಗೂ ಇಂಥಾ ಸೊಗಸಾದ ಪುಸ್ತಕವು ಪ್ರಚುರವಾಗಲಿಲ್ಲ. ಸ್ವಲ್ಪ ನೋಡಿ.

"ಹಿಂದೂದೇಶ ಪ್ರದಕ್ಷಿಣ"

ಎಂದು ಕರೆಯಲ್ಪಡುವ ಈ ನೂತನ ಪುಸ್ತಕದಲ್ಲಿ ಸುಮಾರು ತೊಂಬತ್ತು ಉತ್ಕೃಷ್ಟವಾದ ಚಿತ್ರಗಳು ಅಡಗಿವೆ ಹಿಂದೂ ದೇಶವನ್ನೆಲ್ಲಾ ಸಂಚಾರ ಮಾಡುವುದರಿಂದ ಉಂಟಾಗುವ ಪರಮಾನಂದವನ್ನು ಒಂದು ಸಾರಿ ಈ ಗ್ರಂಥವನ್ನು ಓದುವುದರಿಂದ ಹೊಂದಬಹುದು. ಇದು ಮೊದಲನೇ ಸಾರಿ ಪ್ರಿಂಟ್ ಆಗಿದ್ದು ಬಹು ಶೀಘ್ರವಾಗಿ ಎಲ್ಲಾ ಮುಗಿದು ಹೋದವು. ಈಗ ತಿರಿಗಿ ವಿಚಿತ್ರವಾಗಿಯೂ ಉಲ್ಲಾಸಕರವಾಗಿಯೂ ಇರುವ ಪ್ರಸಿದ್ಧವಾದ ಚಿತ್ರಗಳೊಡನೆ ಮಾಡಿಸಿರುತ್ತೇವೆ. ಇದರಲ್ಲಿರುವ ಚಿತ್ರಗಳನ್ನು ಸ್ವಲ್ಪ ನೋಡಿ—ಶ್ರೀರಂಗಪಟ್ಟಣದಲ್ಲಿರುವ ಹೈದರಲ್ಲಿ ಟಿಪ್ಪುಸುಲ್ತಾನರ ಗೋರಿ, ಮುಮ್ತಾಜ್‌ಮಹಲನ ಗೋರಿ, ಹುಗ್ಲಿ ನದಿ, ಕಲ್ಕತ್ತಾ ನಗರ, ಕಲ್ಕತ್ತಾ ಹೈ ಕೋರ್ಟು, ಕಾಳಿಕಾದೇವತೆ, ಚಂದ್ರನಗರ, ಬಂಗಾಳಿಯರ ಮನೆಗಳು, ಜಗನ್ನಾಥಸ್ವಾಮಿ ಭುವನೇಶ್ವರವೆಂಬ ದೇವಸ್ಥಾನ, ಜಗನ್ನಾಥದ ರಥೋತ್ಸವ, ಕನರಾಕ್ ದೇವಸ್ಥಾನ, ಎವರೆಸ್ಟ್ ಶಿಖರ, ಖಟ್ಮಂಡು ನಗರದ ಒಂದು ಬೀದಿ, ಖಟ್ಮಂಡು ನಗರದ ದೇವಸ್ಥಾನಗಳು, ಜಪಚಕ್ರಗಳು, ಅಂಬಿಗರು ದೋಣಿಯನ್ನು ಎಳಕೊಂಡು ಹೋಗುವದು, ಗಯಾದಲ್ಲಿರುವ ಬುದ್ಧನ ದೇವಸ್ಥಾನ, ಔರಂಗಜೇಬನು ಕಟ್ಟಿಸಿದ ಮಸೀತಿ, ಕಾಶೀ ಪುಣ್ಯಕ್ಷೇತ್ರದಲ್ಲಿರುವ ದಶಾಶ್ವಮೇಧಘಟ್ಟ, ಕಪಿಗಳಿಗೆ ತಿಂಡಿ ಹಾಕುವದು, ಕಾಶೀ ಕ್ಷೇತ್ರದ ದೇವಸ್ಥಾನಗಳು, ಅಲಹಾಬಾದ್ ನಗರ ಮತ್ತು ಅದರ ಕೋಟೆ, ಅಲಹಾಬಾದ್‌ನಲ್ಲಿರುವ ಖುಸ್ರು ಬಾಗ್ ಅರಮನೆ, ಯಮುನಾ ನದಿಯಲ್ಲಿ ಯಾತ್ರಿಕರು ಮುಳುಗುವದು, ಕಾನ್‌ಪುರದಲ್ಲಿರುವ ಶಿಲಾ ಶಾಸನ, ಕಾನ್‌ಪುರದ ಹತ್ತಿರ ಗಂಗಾ ನದಿಯ ಮೇಲೆ ಕಟ್ಟಿರುವ ಸೇತುವೆ, ಲಕ್ನೋ ನಗರದ ರೆಸಿಡೆನ್ಸಿ ಬಂಗಲೆ, ಲಕ್ನೋ ಪಟ್ಟಣದ ಬಾಗಿಲು, ಸರ್ ಹೆನ್ರಿ ಹ್ಯಾವಲಾಕನು, ಗೋಮತಿ ನದಿಯ ಮೇಲಿರುವ ಅರಮನೆ, ಹಳ್ಳಿಯಲ್ಲಿ ಜನರ ಸ್ಥಿತಿ, ಹರಿದ್ವಾರಘಟ್ಟ, ಗಂಗೋತ್ರಿ ದೇವಸ್ಥಾನ, ಹಿಮವತ್ಪರ್ವತಗಳ ಮೇಲಿರುವ ಪಟ್ಟಣ, ಹಿಮಪ್ರವಾಹಗಳು, ಆಗ್ರಾ ಪಟ್ಟಣದ ಕೋಟೆ, ಯಮುನಾ ನದಿಯೂ ದೂರದಲ್ಲಿ ತೋರುತ್ತಿರುವ ತಾಜ್‌ಮಹಲ್ ಗೋರಿಯೂ, ತಾಜ್ ಮಹಲಿನ ಕಲ್ಲಿನಲ್ಲಿ ಕೆತ್ತಿರುವ ಪರದೆ, ಅಕ್ಬರನ ಅರಮನೆ, ಆಗ್ರಾ ಪಟ್ಟಣದ ಮುತ್ತಿನ ಮಸೀತಿ, ಫತ್ತೆಪುರ್ ಸಿಕ್ರಿಯಲ್ಲಿರುವ ಪಾಂಚ್ ಮಹಾಲ್ ಅರಮನೆ, ರಜಪೂತರು, ಭರತಪುರದ ಕೋಟೆ, ಅಲ್ವಾರಿನಲ್ಲಿ ಮಹಾರಾಜ ಭಕ್ತವಾರ್ ಸಿಂಗರ ಗೋರಿ, ಡೆಲ್ಲಿ ನಗರದ ದೊಡ್ಡ ಮಸೀತಿ, ಪುರಾತನ ಡೆಹಲಿಯ ಬಾಗಿಲು, ರಾಜ ದೇವನು ಸ್ಥಾಪಿಸಿದ ಕಬ್ಬಿಣದ ಸ್ತಂಭ, ನಾದರ್ ಷಹಾನು ಡೆಹಲಿ ನಗರದಲ್ಲಿ ಪ್ರಜಾ ಸಂಹಾರವನ್ನು ನೋಡುತ್ತಿರುವದು, ಡೆಹಲಿಯ ಬಳಿಯಲ್ಲಿರುವ ಕುಟುಬ್ ಮಿನಾರ್, ಚಾಂದ್ನಿ ಚೌಕವೆಂಬ ಬೀದಿ, ಸಿಂಲಾಕ್ಕೆ ಹೋಗುವ ದಾರಿ, ಸಿಮ್ಲಾ, ಅಮೃತಸರದ ಸುವರ್ಣ ಆಲಯವು, ಲಾಹೋರಿನಲ್ಲಿರುವ ರಣಜಿತಸಿಂಗನ ಗೋರಿ, ಲಾಹೋರ್ ಪಟ್ಟಣ, ಈ ಮುಂತಾದ ಅನೇಕ ರಮಣೀಯವಾದ ಸ್ಥಳಗಳ ಚಿತ್ರಗಳು ಈ ಪುಸ್ತಕದಲ್ಲಿ ಅಡಗಿವೆ. ಅನ್ಯಗಳನ್ನೆಲ್ಲಾ ವಿವರಿಸಲು ಸ್ಥಳವಿಲ್ಲ.

ಪ್ರತಿಯೊಂದು ಅಂಶದ ವಿವರಣೆಯೂ ಬಹು ಪರಿಷ್ಕಾರವಾಗಿದೆ. ದಕ್ಷಿಣ ದೇಶದಲ್ಲಿರುವ ಅನೇಕ ಪ್ರಸಿದ್ಧ ಸ್ಥಳಗಳ ಚಿತ್ರಗಳೂ, ಅವುಗಳ ವಿವರಣೆಗಳೂ ಇದರಲ್ಲಿವೆ. ಪುಸ್ತಕವು ಭಾರಿಯಾಗಿದೆ. ಪುಸ್ತಕದ ಅಚ್ಚು ಮತ್ತು ಬೈಂಡು ಬಹು ಸುಂದರವಾಗಿವೆ ಇದರ ಕ್ರಯ ಎಂಟೇ ಆಣೆ, ವಿ. ಪಿ. ಪಿ. ಮೂಲಕ ಹನ್ನೊಂದು ಆಣೆಯಾಗುವದು. ಪುಸ್ತಕವು ಜಾಗ್ರತೆಯಲ್ಲಿ ಮಾರಾಟವಾಗುತ್ತಿರುವುದರಿಂದ ತಾವುಗಳಲ್ಲಿ ಕೆಳಗೆ ಕಂಡ ವಿಳಾಸಕ್ಕೆ ಬೇಗನೆ ಬರೆದು ತರಿಸಿಕೊಳ್ಳಬೇಕು.

ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪ್ಪೋ,

ಮೈಸೂರು. 69-1

CHAMBERLAIN'S PAIN BALM

ಚೇಂಬರ್ಲೆನ್ ಯವರು ಮಾಡಿದ ನೋವುಹರ ಔಷಧವು



4-4

ಬೆನ್ನೆಲುಬಿನಲ್ಲಿನ ನೋವು, ಪಕ್ಕಗಳಲ್ಲಿ ಆಗುವ ನೋವು, ಖಂಡಗಳಲ್ಲಿ ಹುಟ್ಟುವ ನೋವು, ತಲೆನೋವು, ಬಜ್ಜುಗ ಕಡೆಗಳ ನೋವು, ವಾಯುನೋವು—ಇವುಗಳನ್ನೆಲ್ಲಾ ಸಂಪೂರ್ಣವಾಗಿ ವಾಸಿಮಾಡುವಂಥಾ ಔಷಧ

ವಾಯುನೋವೆಂದರೇನು?

ಕೀಲುಗಳಲ್ಲೂ ಮಾಂಸಖಂಡಗಳಲ್ಲೂ ಗಾಯವಾಗುವುದು, ಊದಿಕೊಳ್ಳುವುದು, ಕಠಿಣವಾಗಿ ಸೆಳೆಯುವ ಖಂಡಗಳಲ್ಲಿ ಇರಿಯುವುದು, ವಿಶ್ರಾಂತಿ ಕೊಡದೆ ಇರುವುದು, ನಿದ್ದೆ ಹತ್ತದೆ ಇರುವುದು—ಇವೇ ಇದೆಲ್ಲಾ ನಿಮಗೆ ಯಾವಾಗ ಉಂಟಾಗುವುದೋ ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು.

ಆಗ ಚೇಂಬರ್ಲೆನ್‌ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ.

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹಾ ಕಾವು ಮಾಂಸಖಂಡಗಳಲ್ಲಿ ವ್ಯಾಪಿಸುತ್ತದೆ ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ. ಮನಸ್ಸಿಗೆ ಉಲ್ಲಾಸವಾಗುತ್ತದೆ. ಅದನ್ನೇ ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯುವಿನ ಜುಟ್ಟನ್ನೇ ಕಿತ್ತು ಹಾಕಿಬಿಡುವುದು

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ.

ಇದು ಎಲ್ಲೆಲ್ಲೂ ಬಿಕರಿಯಾಗುವುದು. ಸಣ್ಣ ಸೀಸೆಗೆ ೧ ರೂಪಾಯಿ. ಕ್ರಯಂದ ಮುಟ್ಟದ್ದೇನೂ ಇಲ್ಲ ದೊಡ್ಡ ಸೀಸೆಗೆ ೨ ರೂಪಾಯಿ

ಇಲ್ಲಿ ನೋಡಿ!

6-8

ತುಮಕೂರು ಮಿರ್ಜಿ ಇಲಾಖೆಯಲ್ಲಿ ಯೂರೋಪಿಯನ್ ಮೇಲ್ವಿಚಾರಣೆಯಿಂದ ಉತ್ತಮ ತರಹದ ಹಾಸನದ ಟೋಪಿಗಳು ಅತಿ ಶ್ರೇಷ್ಠವಾದ ಉಲ್ ದಾರದಿಂದ ತಯಾರಾಗುತ್ತವೆ.

ಈಗ ಕೆಳಗೆ ನಮೂದಾಗಿರುವ ವಿವಿಧ ಬಣ್ಣದ ಟೋಪಿಗಳು ಹೆಚ್ಚಾಗಿ ನಮ್ಮಲ್ಲಿ ದಾಸ್ತಾನ (ಸ್ಟಾಕ್) ಉಂಟು.

ಬಣ್ಣಗಳ ವಿಧ —ಅಚ್ಚ ಕೆಂಪು, ನೀಂಡ ಕೆಂಪು, ಕಪ್ಪು ಕೆಂಪು ಮಿಶ್ರವಾದದ್ದು.

ಕ್ರಯ:—೧ ರು. ೪ ಆ ಮತ್ತು ೧ ರು. ೬ ಆ.

೧ ಡಜನ್ ಟೋಪಿಗಳನ್ನು ತೆಗೆದುಕೊಳ್ಳುವವರಿಗೆ ಸೇಕಡ ೫ ರಂತೆ ಡಿಸ್‌ಕೌಂಟ್ ಕೊಡಲ್ಪಡುವದು.

ನಮ್ಮ ವಿಳಾಸ:— ಮೇನೇಜರ್,

ಹಾಸನದ ಟೋಪಿ ಕಾರ್ಖಾನೆ, ಮಿರ್ಜಿ ಇಲಾಖೆ, ತುಮಕೂರು.

ಇಗೋ ನೋಡಿರಿ ಎಲ್ಲರೂ ಓದತಕ್ಕ ಆಶ್ಚರ್ಯಕರವಾದ ಪುಸ್ತಕ!

"ಅರೇಬಿಯನ್ ನೈಟ್ಸ್" ಅಥವಾ ಯವನ ಯಾಮಿನೀ ವಿನೋದ ಕಥೆಗಳು.

71-1

ಈ ಪುಸ್ತಕವು ಲೋಕಪ್ರಸಿದ್ಧವಾದುದೆಂದು ಎಲ್ಲರೂ ಒಪ್ಪಿಕೊಳ್ಳುತ್ತಾರೆ ನಾನೂರು ಎಪ್ಪತ್ತು ಪುಟಗಳುಳ್ಳದ್ದು. ಭಾರಿ ಪುಸ್ತಕ. ಭಾಷೆಯು ಬಹು ಸರಳವಾಗಿದೆ. ಪುಸ್ತಕವನ್ನು ಒಂದಾವರ್ತಿ ಓದಿದ ಮೇಲೆ ಅದನ್ನು ಪುನಃ ಪುನಃ ಓದುವಂತೆ ಅದು ಮನಸ್ಸನ್ನು ಆಕರ್ಷಿಸುವದು. ಇದರ ಕ್ರಯ ಎರಡೇ ರೂಪಾಯಿ. ವಿ. ಪಿ. ಪಿ. ಮೂಲಕ ೨—೩—೦ ಹತ್ತು ಅಥವಾ ಹದಿನೈದು ವರ್ಷಗಳ ಹಿಂದೆ ಇದರ ಕ್ರಯ ಎಂಟು ರೂಪಾಯಿ ಎಂದು ಅನೇಕರಿಗೆ ಗೊತ್ತು. ಇದನ್ನು ಬಡವರೂ, ಐಶ್ವರ್ಯವಂತರೂ ಓದುವಂತೆ ಪುನಃ ಛಾಪಿಸಿ ಇಷ್ಟು ದೊಡ್ಡ ಪುಸ್ತಕವನ್ನು ಇಷ್ಟು ಸುಲಭ ಕ್ರಯಕ್ಕೆ ಮಾರುತ್ತೇವೆ. ಹನ್ನೆರಡು ಪುಸ್ತಕಗಳನ್ನು ಒಟ್ಟಿಗೆ ತರಿಸಿಕೊಂಡರೆ, ಪುಸ್ತಕಕ್ಕೆ ಎರಡು ಆಣೆಯಂತೆ ಕಮಿಷನ್ ಕೊಡುತ್ತೇವೆ. ಜಾಗ್ರತೆ ನೋಡಿ.

ವಿಳಾಸ:—ಮ್ಯಾನೇಜರ್,

ಸಿ. ಎಲ್. ಎಸ್. ಬುಕ್ ಡಿಪ್ಪೋ,

ಮೈಸೂರು.

ಶಾಲಾ ಪುಸ್ತಕಗಳು.

72-1

ಬಾಲಶಿಕ್ಷೆ: ಒಂದನೆಯ ಭಾಗ	ಕ್ರಯ	೦	೧	೦
ಬಾಲಶಿಕ್ಷೆ: ಎರಡನೆಯ ,,		೦	೨	೦
ಕನ್ನಡ ಬಾಲಬೋಧೆ. ಒಂದನೆಯ ಭಾಗ		೦	೦	೬
ಕನ್ನಡ ಬಾಲಬೋಧೆ. ಎರಡನೆಯ ,		೦	೨	೬
ನಾರ್ಮಲ್ ಡಿಪೋದವರ ಕನ್ನಡ ಮೊದಲನೆಯ ಪುಸ್ತಕ		೦	೨	೦
,, ,, ಎರಡನೆಯ ಪುಸ್ತಕ		೦	೨	೬
,, ,, ಮೂರನೆಯ ಪುಸ್ತಕ		೦	೩	೦
,, ,, ನಾಲ್ಕನೆಯ ಪುಸ್ತಕ		೦	೪	೦
,, ,, ಐದನೆಯ ಪುಸ್ತಕ		೦	೫	೬
ಭೂಗೋಳ ಶಾಸ್ತ್ರದ ಮೊದಲನೆಯ ಪುಸ್ತಕ		೦	೦	೬
,, ,, ಮೈಸೂರು ಪಟ ಸಮೇತ		೦	೨	೦
,, ,, ೨ನೆಯ ಮತ್ತು ೩ನೆಯ ಭಾಗ		೦	೪	೦
ಹಿಂದೂ ದೇಶ ಚರಿತ್ರೆಯ ಸುಲಭ ಪಾಠಗಳು		೦	೪	೦
ಕಥಾಸಪ್ತತಿ		೦	೨	೬
ಪದ್ಯಸಾರ		೦	೭	೦
ದೊಡ್ಡ ಅಂಕಗಣಿತ		೦	೮	೦

ವಿಳಾಸ.—ಮ್ಯಾನೇಜರ್,

ಸಿ. ಎಲ್. ಎಸ್. ಬುಕ್ ಡಿಪ್ಪೋ,

ಮೈಸೂರು.

ಮಕ್ಕಳ ಆರೋಗ್ಯವನ್ನು

ಯಾವಾಗಲೂ ಕಾಪಾಡುವದು ತಂದೆ ತಾಯಿಗಳ ಮೇಲೆ ಬಿದ್ದ ಭಾರವಾಗಿದೆ. ಸಣ್ಣ ಮಕ್ಕಳು ಹೇಳಿದಂತೆ ಕೇಳದೆ ಸಿಟ್ಟಿಗೆ ಒಳಪಡುವಂಥವರಾಗಿದ್ದು ಆಹಾರರುಚಿ ಕಡಿಮೆಯುಳ್ಳವರಾಗಿದ್ದಾರೆಂದು ಕಂಡು ಬಂದರೆ

SCOTT'S EMULSION. 1-19

(ಸ್ಕಾಟ್ಸ್ ಇಮಲ್ಷನ್)

ಎಂಬ ಸೇವನಾ ಔಷಧವನ್ನು ಕೊಡಬೇಕು.

ಹಾಲಿನಲ್ಲಿ ಕೆಲವು ತೊಟ್ಟು ಸೇರಿಸಿ ಕೊಟ್ಟ ಕೂಡಲೇ ದೊಡ್ಡ ವ್ಯತ್ಯಾಸ ತೋರುವದು

ಅದು ಸಂತೋಷವೂ ಆನಂದವೂ ಉಂಟುಮಾಡುವದಾಗಿ ಆಹಾರದ ರುಚಿ ಹೆಚ್ಚಿಸಿ ಚೆನ್ನಾ ತೋರಿಸುವದು

ಕ್ರಯಂದ ಮುಟ್ಟ ತಯಾರಿಸಿದ್ದಲ್ಲ.

ಎಲ್ಲಾ ಔಷಧಮಾರಾಟಗಾರರಲ್ಲೂ ಸಿಕ್ಕುತ್ತದೆ.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್.

ಈ ಮಿನಾನು ಮನುಷ್ಯ ಇರುವ ಔಷಧವನ್ನೇ ತೊಂಡುಕೊಳ್ಳಿ

THE PLACE FOR HASSAN CAPS IS

HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

11 26

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು! ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇಳಾದದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ:—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು. (೨) ಟೋಪಿಗಳನ್ನು ಹುಡುಗಿಯರು ನಾವೇ ನಿಂತು ಚೆನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚೆನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ, ಚೆನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಸೀದಾ ಬರೆದು ತರಿಸಿಕೊಳ್ಳಿ. ಅಗ್ಗವಾಗಿ ಹೆಚ್ಚು ಚೆನ್ನಾಗಿಲ್ಲದ್ದು ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ. ಸಾದಾ, ಕೆಂಪು, ಕಪ್ಪು, ಬಿಳಿ, ಕಾಫಿ ಟೋಪಿಗಳು ೧ ರೂ. ೮ ಆ; ೧ ರೂ. ೬ ಆ; ೧ ರೂ. ೪ ಆ.

ರೇಷ್ಮೆ ಚುಕ್ಕೆಯುಳ್ಳ ಟೋಪಿಗಳು ೧ ರೂ. ೮ ಆ.; ೨ ರೂ. ದಾರದ ಟೋಪಿಗಳು ೧ ರೂ. ೧೨ ಆ; ೧ ರೂ. ೮ ಆ.; ೧ ರೂ. ೬ ಆ. ಉಸುಕಿನ ಟೋಪಿಗಳು ೧ ರೂ. ೮ ಆ.; ೧ ರೂ. ೬ ಆ.

ಹೊಸುಗಳ ಟೋಪಿ, ಸೂಫಿನ್ ಮೇಜೋಡು, ಅರ್ಧ ಮೇಜೋಡು. ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು.

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ.

ವೃತ್ತಾಂತ ಪತ್ರಿಕೆ.

:೦:

ಸನ ೧೯೦೭ ನೇ ಇಸವಿ ಜೂಲೈ ತಾ|| ೨೫ ನೇ ಗುರುವಾರ.

ಒಂದು ಆಶ್ಚರ್ಯಕರವಾದ ತೀರ್ಮಾನವು

ಮೈಸೂರು ಗವರ್ನಮೆಂಟಿನವರು ಮುಜರಾಯಿ ಇಲಾಖೆಯ ಮೂಲಕ ಬಂದ ಒಂದು ನವೀನವಾದ ವ್ಯಾಜ್ಯವನ್ನು ತನಿಖೆಯಿಂದ ತೀರ್ಮಾನ ಮಾಡಬೇಕಾಯಿತು. ಹಾಸನದ ದೊಡ್ಡಪಾಯಣ್ಣನನ್ನು ಜೋಡಿನಿಂದ ಹೊಡೆದರೆಂದು ಫಿರ್ಯಾದು ಬಂದದ್ದರಿಂದ ಶ್ರವಣಬೆಳ್ಗೊಳದಲ್ಲಿರುವ ಜೈನಮಠದ ಸ್ವಾಮಿಗಳು ಈ ವಿಚಾರವನ್ನು ಚನ್ನಾಗಿ ವಿಚಾರಣೆ ಮಾಡಿ ಆತನನ್ನೂ ಬ್ರಹ್ಮದೇವನೆಂಬ ಇನ್ನೊಬ್ಬನನ್ನೂ ಬಹಿಷ್ಕಾರ ಮಾಡಿ, ಅವರು ಅಶುದ್ಧರಾಗಿರೋಣದರಿಂದ ಪ್ರಾಯಶ್ಚಿತ್ತ ಮಾಡಿಕೊಳ್ಳುವತನಕ ಅವರನ್ನು ಜೈನ ಬಸ್ತಿಗಳಿಗೆ ಬಿಡಕೂಡದೆಂದು ಶ್ರೀಮುಖವನ್ನು ಕೊಟ್ಟರು ಅವರ ಮೇಲೆ ಹಾಸನದ ಡೆಪ್ಯುಟಿ ಕಮೀಷನರವರು ಗವರ್ನಮೆಂಟಿನವರಿಗೆ ಬರೆದು, ಸ್ವಾಮಿಗಳ ಶ್ರೀಮುಖವನ್ನು ಆಚರಣೆಗೆ ತರುವ ಭಾಗದಲ್ಲಿ ಗವರ್ನಮೆಂಟಿನವರಿಗೆ ಅಧಿಕಾರವೇನೂ ಇರುವಂತೆ ಕಾಣುವುದಿಲ್ಲವೆಂತಲೂ, ಈಗ ಬಹಿಷ್ಕರಿಸಲ್ಪಟ್ಟಿರುವವರನ್ನು ಮುಜರಾಯಿ ದೇವಸ್ಥಾನಗಳೊಳಕ್ಕೆ ಧಾರಾಳವಾಗಿ ಹೋಗುವಂತೆ ಬಿಡಬಹುದೇ ಎಂತಲೂ ಕೇಳಿದರು.

ಮೈಸೂರು ಗವರ್ನಮೆಂಟಿನವರು ಹಿಂದುಗಳಲ್ಲಿ ಸರ್ವಸಾಮಾನ್ಯವಾಗಿ ಜೋಡಿನ ಪೆಟ್ಟು ತಿಂದವರು ಅಶುದ್ಧರಾಗುತ್ತಾರೆಂಬ ಅಭಿಪ್ರಾಯವಿರುತ್ತದೆ ಎಂದೂ ಆದಕಾರಣ ಅಂಥವರು ಪ್ರಾಯಶ್ಚಿತ್ತ ಮಾಡಿಕೊಂಡು ಶುದ್ಧರೆನಿಸಿಕೊಳ್ಳುವತನಕ ಅವರನ್ನು ಮುಜರಾಯಿ ಇಲಾಖೆಯ ಯಾವ ದೇವಸ್ಥಾನದೊಳಕ್ಕೂ ಬಿಡಕೂಡದೆಂದೂ ಹುಕುಂ ಕೊಟ್ಟಿದ್ದಾರೆ

ಈ ವಿಷಯವನ್ನು ಯೋಚಿಸಿ ನೋಡುವಲ್ಲಿ—ಮನುಷ್ಯನನ್ನು ಅಶುದ್ಧಿಮಾಡುವಂಥಾದ್ದು ಯಾವುದು? ಎಂಬ ಪ್ರಶ್ನೆ ಹುಟ್ಟುತ್ತದೆ. ಬೆಳದೇಶದ ವರ್ತಮಾನ ಪತ್ರಿಕೆಗಳನ್ನು ಓದಿ ನೋಡಲಾಗಿ ಅನೇಕ ಹಿಂದುಗಳು ಜೋಡಿನ ಪೆಟ್ಟು ಬಿದ್ದ ಮಾತ್ರಕ್ಕೇ ಮನುಷ್ಯನು ಅಶುದ್ಧನಾಗುತ್ತಾನೆಂದು ನಂಬುವುದಿಲ್ಲವೆಂದು ಗೊತ್ತಾಗುತ್ತದೆ ನಾವೇನೋ ಅದು ಅಶುದ್ಧಮಾಡತಕ್ಕದ್ದೆಂದು ನಂಬುವುದಿಲ್ಲ ಹಿಂದುಗಳಲ್ಲಿ ಇಂಥಾ ಅಭಿಪ್ರಾಯವಿರುವುದನ್ನು ನೋಡಿ ಸಂತೋಷಪಡುತ್ತೇವೆ ಹಾಗೆ ಪೆಟ್ಟು ತಿಂದವರನ್ನು ನೋಡಿದರೆ ಅವರನ್ನು ಶಿಕ್ಷೆಗೆ ಗುರಿಮಾಡಿ ಬಹಿಷ್ಕರಿಸುವುದಕ್ಕೆ ಪ್ರತಿಯಾಗಿ ಎಲ್ಲರೂ ಅಂಥವರ ವಿಷಯದಲ್ಲಿ ಕನಿಕರವನ್ನು ತೋರಿಸಿ ಸಮಾಧಾನ ಪಡಿಸಬೇಕಾದದ್ದು ಯೋಗ್ಯವಾಗಿರುತ್ತದೆ. ಚರ್ಮವು ಮೈ ಸೋಕಿದ ಮಾತ್ರಕ್ಕೇ ಅಶುದ್ಧಿಯುಂಟಾಗುವುದೋ? ಚರ್ಮವು ಮನುಷ್ಯನೊಳಗಿರುವ ಮನಸ್ಸನ್ನಾಗಲಿ ಚಿತ್ತವನ್ನಾಗಲಿ ಅಶುದ್ಧಿಮಾಡಬಲ್ಲುದೋ? ಅದರಿಂದ ಮನುಷ್ಯನು ಅಶುದ್ಧನಾಗಲಾರನು, ಶುದ್ಧನೂ ಆಗಲಾರನು. ಇಂಥಾ ವಿಷಯಗಳನ್ನು ನಿರ್ಧರಿಸುವುದಕ್ಕೆ ಯೇಸುಕ್ರಿಸ್ತನು ಬೋಧಿಸಿರುವ ಶ್ರೇಷ್ಠವಾಕ್ಯವನ್ನು ಸಕಲರೂ ಮನಃಪೂರ್ತಿಯಾಗಿಟ್ಟುಕೊಳ್ಳಬೇಕು. ಆ ವಾಕ್ಯವು ಏನೆಂದರೆ—

"ಮತ್ತು ಆವನು ಹೇಳಿದ್ದೇನಂದರೆ, ಮನುಷ್ಯನೊಳಗಿಂದ ಹೊರಡುವಂಥಾದ್ದೇ ಮನುಷ್ಯನನ್ನು ಹೊಲೆ ಮಾಡುತ್ತದೆ ಯಾಕಂದರೆ ಒಳಗಿನಿಂದ, ಮನುಷ್ಯರ ಹೃದಯದೊಳಗಿಂದ, ದುರಾಲೋಚನೆಗಳೂ, ವ್ಯಭಿಚಾರಗಳೂ, ಜಾರತ್ವಗಳೂ, ಕೊಲೆಗಳೂ, ಕಳ್ಳತನಗಳೂ, ಲೋಭಗಳೂ, ಕೆಟ್ಟತನಗಳೂ, ಮೋಸವೂ, ಬಂಡತನವೂ, ಕ್ರೂರ ದೃಷ್ಟಿಯೂ, ದೂಷಣೆಯೂ, ಗರ್ವವೂ, ದುರ್ಬುದ್ಧಿಯೂ, ಹೊರಡುತ್ತವೆ ಕೆಟ್ಟವಾಗಿರುವ ಇವೆಲ್ಲಾ ಒಳಗಿನಿಂದ ಹೊರಟು, ಮನುಷ್ಯನನ್ನು ಹೊಲೆ ಮಾಡುತ್ತವೆ"

ಜಪಾನ್ ದೇಶವು

ಲೋಕದ ಪ್ರಸಿದ್ಧವಾದ ರಾಜ್ಯಗಳಲ್ಲಿ ಜಪಾನ್ ದೇಶವು ಒಂದಾಗಿರುತ್ತದೆ ಇದನ್ನು ಪೂರ್ವದ ಬ್ರಿಟಿಷ್ ಚಕ್ರಾಧಿಪತ್ಯವೆಂದು ಆಂಗ್ಲೆಯರು ಕರೆಯುವರು. ಇದು ನಮ್ಮ ಮೈಸೂರು ದೇಶದ ಏಳರಷ್ಟು ವಿಸ್ತೀರ್ಣವುಳ್ಳದ್ದಾಗಿಯೂ ಜನಸಂಖ್ಯೆಯಲ್ಲಿ ಸುಮಾರು ಹತ್ತರಷ್ಟು ಹೆಚ್ಚಾಗಿಯೂ ಇರುತ್ತದೆ ಜಪಾನ್ ರಾಜ್ಯವು ಏಷ್ಯಾ ಖಂಡಕ್ಕೆ ಸೇರಿರುವುದರಿಂದಲೂ ಅದು ನಮ್ಮ ಹಿಂದೂ ದೇಶಕ್ಕೆ ಸಮೀಪವಾಗಿರುವದರಿಂದಲೂ ಅದರ ಜನಗಳು ಕೆಲವು ವರುಷಗಳಲ್ಲಿಯೇ ನವೀನ ನಾಗರೀಕತೆಗೆ ಸಂಬಂಧಪಟ್ಟ ಕುಶಲ ವಿದ್ಯೆಗಳನ್ನು ತಮ್ಮ ದೇಶಕ್ಕನುಗುಣವಾಗಿ ಸಂಗ್ರಹಿಸಿಕೊಂಡು ಯೂರೋಪ್ಯರೊಂದಿಗೆ ಸರಿಸಮಾನವಾದ ಸ್ಥಾನವನ್ನು ಆಕ್ರಮಿಸಿಕೊಂಡಿರುವುದರಿಂದಲೂ ಈಚೀಚೆಗೆ ಹಿಂದೂ ದೇಶಸ್ಥರು ಜಪಾನಿಯರನ್ನು ಬಹಳವಾಗಿ ಶ್ಲಾಘಿಸುತ್ತಲೂ ಕೆಲವು ಸಂದರ್ಭಗಳಲ್ಲಿ ಅವರಂತಾಗುವುದಕ್ಕೆ ಪ್ರಯತ್ನಪಡುತ್ತಲೂ ಬರುವರು ಜಪಾನ್ ದೇಶದ ಸ್ಥಿತಿಗತಿಯನ್ನು ಚನ್ನಾಗಿ ಪರಿಶೀಲನೆ ಮಾಡದೆ ಸ್ವಂತ ಅಭಿಪ್ರಾಯಗಳ ಮೇಲೆ ನಿಂತುಕೊಂಡು ಮಾತಾಡುವ ಅನೇಕ ಹಿಂದೂ ಜನರು ತಮ್ಮನ್ನು ಜಪಾನಿಯರೊಂದಿಗೆ ಹೋಲಿಸಿ ನೋಡಿ ತಮ್ಮಲ್ಲಿ ಕಂಡು ಬರುವ ಕೊರತೆಗಳನ್ನು ತಾವೇ ಪರಿಹಾರ ಮಾಡಿಕೊಳ್ಳುವದಕ್ಕೆ ಬದಲಾಗಿ ಅವುಗಳ ಕಾರಣವನ್ನು ತಾವು ಒಳಪಟ್ಟಿರುವ ಬ್ರಿಟಿಷ್ ಪ್ರಭುತ್ವದವರ ಮೇಲೆ ಹಾಕುವರು. ಹಿಂದೂ ದೇಶೀಯರು ತಮ್ಮಲ್ಲಿ ಕಂಡು ಬರುವ ಕೊರತೆಗಳನ್ನು ಹೋಗಲಾಡಿಸಿಕೊಳ್ಳುವದಕ್ಕೆ ವಾಗ್ಬಲದಿಂದ ಕೂಡಿದ ಉಪನ್ಯಾಸಗಳನ್ನು ಮಾಡುವರೇ ಹೊರತು ಸಾಧನಾಪೂರ್ವಕವಾದ ಪ್ರಯತ್ನಗಳನ್ನು ಮಾಡುವುದು ಅವರಲ್ಲಿ ಅಪರೂಪವಾಗಿದೆ. ಜಪಾನಿಯರು ವಾಗ್ಬಲದಿಂದ ಮಾತ್ರ ತೃಪ್ತರಾಗದೆ ಕಾರ್ಯಸಾಧಕರಾಗಿರುವುದನ್ನು ಎಲ್ಲರೂ ಬಲ್ಲರು

ಹಿಂದೂ ದೇಶೀಯರಲ್ಲಿ ಐಕಮತ್ಯವನ್ನು ಸಂಪೂರ್ಣವಾಗಿ ಹಾಳುಮಾಡಿ ಜಾತಿ ಜಾತಿಗೂ ಪಂಗಡಕ್ಕೂ ವೈರತ್ವವನ್ನು ತಂದಿರುವ ಜಾತಿ ಪದ್ಧತಿಯ ವಾಸನೆಯೇ ಜಪಾನ್ ದೇಶಿಯರಲ್ಲಿ ಕಾಣಬರುವದಿಲ್ಲ ಹಿಂದೂ ದೇಶಿಯರು ತಮ್ಮ ತಮ್ಮ ಜಾತಿಗೆ ಸೇರಿದ ಜನರನ್ನು ಅಭಿವೃದ್ಧಿಸ್ಥಿತಿಗೆ ತರುವವು ಯತ್ನದಲ್ಲಿದ್ದರೆ ಜಪಾನಿಯರು ಬಹಳಮಟ್ಟಿಗೆ ಸ್ವಾರ್ಥವನ್ನು ಮರೆತು ದೇಶಾಭಿಮಾನದಿಂದ ತುಂಬಿದವರಾಗಿ ತಮ್ಮ ದೇಶದ ಹಿತವನ್ನೇ ಬಯಸುವರು. ದೇಶಾಭಿವೃದ್ಧಿಗೆ ತಮ್ಮ ಪ್ರಾಣಗಳನ್ನು ದಾನ ಮಾಡುವುದಕ್ಕೂ ಹಿಂತೆಗೆಯರು ಒಂದೆರಡು ವರುಷಗಳ ಹಿಂದೆ ರಷ್ಯಾ ದೇಶದವರೊಂದಿಗೆ ಇವರು ನಡಿಸಿದ ಘೋರ ಯುದ್ಧದಲ್ಲಿ ಇವರಲ್ಲಿರುವ ದೇಶಾಭಿಮಾನವು ಬಹಳಮಟ್ಟಿಗೆ ಪ್ರಕಟವಾಯಿತೆಂದು ವಾಚಕರು ತಿಳಿದುಕೊಂಡಿರುವರು ಜಪಾನ್ ದೇಶಿಯರಲ್ಲಿ ಕೊರತೆಗಳಿಲ್ಲವೆಂದು ಯಾರೂ ಭಾವಿಸಬಾರದು ಆದರೆ ಅವರಿಂದ ನಾವು ಕಲಿಯತಕ್ಕ ಭಾಗಗಳು ಅನೇಕ ಉಂಟು ರಾಜಧಾನಿಯಾದ ಟೋಕಿಯೊ ಪಟ್ಟಣದಲ್ಲಿ ಕೆಲವು ತಿಂಗಳ ಹಿಂದೆ ಜಪಾನ್ ದೇಶದ ಒಂದು ಕ್ರೈಸ್ತ ಸಮಾಜವು ಜರುಗಿತು ಅದಕ್ಕೆ ಭೂಲೋಕದ ನಾಲ್ಕು ಕಡೆಗಳಿಂದ ಪ್ರತಿನಿಧಿಗಳು ಅಲ್ಲಿಗೆ ಹೋಗಿದ್ದರು. ಇವರಲ್ಲಿ ಒಬ್ಬರಾದ ಚಿತಂಬರ್ ಎಂಬವರು ಲಕ್ನೋ ಪಟ್ಟಣದಿಂದ ಹೋಗಿದ್ದರು ಇವರು ಜಪಾನ್ ದೇಶದಲ್ಲಿ ಆರು ವಾರಗಳ ತನಕ ಇದ್ದು ಅಲ್ಲಿ ತಾವು ನೋಡಿದ ಮತ್ತು ಕೇಳಿದ ಅನೇಕ ಸಂಗತಿಗಳನ್ನು ಕುರಿತು ಒಂದು ಬಾತ್ಮಿಯನ್ನು ಈ ದೇಶದ ಒಂದು ಮಾಸಪತ್ರಿಕೆಯಲ್ಲಿ ಪ್ರಕಟಿಸಿರುತ್ತಾರೆ.

ಜಪಾನಿಯರು ಪ್ರವರ್ಧಮಾನಕ್ಕೆ ಬರುವದಕ್ಕೆ ಮೊದಲನೇ ಕಾರಣವು ಯಾವದಂದರೆ, ಸ್ವಪ್ರಯಾಸ ಜಪಾನ್‌ದೇಶದವರು ತಮ್ಮ ಮೇಲೆ ಬಿದ್ದಿರುವ ಜವಾಬ್ದಾರಿಕೆಯನ್ನು ಚನ್ನಾಗಿ ಗ್ರಹಿಸಿಕೊಂಡಿರುತ್ತಾರೆ ತಮ್ಮ ದೇಶವು ಉಚ್ಚಸ್ಥಾನಕ್ಕೆ ಬರಬೇಕಾದರೆ ಪ್ರತಿಯೊಬ್ಬನೂ ಪ್ರತಿಯೊಬ್ಬಳೂ ಸ್ವಾರ್ಥವನ್ನು ತ್ಯಜಿಸಿ ಪರಾರ್ಥವನ್ನು ಚಿಂತಿಸುತಾ ಸ್ವಪ್ರಯಾಸದಿಂದ ಕಾರ್ಯ ಸಾಧನೆ ಮಾಡುವುದೇ ಪ್ರಾಮುಖ್ಯವಾದ ಕಾರ್ಯವೆಂದು ಜಪಾನಿಯರು ಪೂರ್ಣವಾಗಿ ತಿಳಿದುಕೊಂಡಿರುವರು. ಇಂಥಾ ಜನರನ್ನು ಹೊಂದಿರುವ ದೇಶವು ಏಳಿಗೆ ಸ್ಥಿತಿಯಲ್ಲಿರುವುದು ಆಶ್ಚರ್ಯವಲ್ಲ. ದೇಶವು ಸಮಾಧಾನ ಸ್ಥಿತಿಯಲ್ಲಿದ್ದರೂ ಸರಿ, ಅಥವಾ ಶತ್ರುಗಳು ಅದರ ಎಲ್ಲೆಗಳನ್ನು ಮುತ್ತಿ ಘೋರವಾದ ಯುದ್ಧವನ್ನು ನಡಿಸುತ್ತಿದ್ದರೂ ಸರಿ, ಜಪಾನಿಯನು ತನ್ನ ಮೇಲೆ ಬಿದ್ದಿರುವ ಜವಾಬ್ದಾರಿಕೆಯನ್ನು ಮಾತ್ರ ಮರೆಯನು ಆವನು ಅನ್ಯರಿಂದ ಕುಶಲ ವಿದ್ಯೆಗಳನ್ನು ಕಲಿಯುವದರಲ್ಲಿ ಬಹಳ ಆಸಕ್ತನಾಗಿದ್ದರೂ ಆಯಾ ವಿದ್ಯೆಗಳನ್ನು ಕಲಿತುಕೊಂಡ ಮೇಲೆ ಅವರ ಅಧೀನವನ್ನು ಬಿಟ್ಟು ಸ್ವತಂತ್ರನಾಗಿ ಕಾರ್ಯ ಸಾಧನೆ ಮಾಡುವುದಕ್ಕೆ ಪ್ರಯತ್ನಪಡುವನು. ಈ ಶ್ರೇಷ್ಠ ಗುಣವು ಆ ಜಪಾನಿಯರ ವಿದ್ಯೆ ವ್ಯಾಪಾರ ಕೈಗಾರಿಕೆ ಮೊದಲಾದವುಗಳಲ್ಲಿ ವಿಶದವಾಗಿ ಪ್ರಕಟವಾಗುತ್ತದೆ ಆ ದೇಶದ ಕ್ರೈಸ್ತರು ತಮ್ಮ ಅಭಿವೃದ್ಧಿಗೆ ಹೊರಗಿನಿಂದ ಸಹಾಯವನ್ನಪೇಕ್ಷಿಸದೆ ತಮ್ಮ ತಮ್ಮ ಸಭೆಗಳನ್ನು ತಾವೇ ಕಾಪಾಡಿಕೊಂಡು ಬರುವರು ಹಿಂದೂ ದೇಶೀಯರಾದ ನಾವುಗಳು ಅಭಿವೃದ್ಧಿಯನ್ನು ಹೊಂದದೇ ಇರುವುದಕ್ಕೆ ನಮ್ಮಲ್ಲಿ ಸ್ವಪ್ರಯಾಸ ಇಲ್ಲದೆ ಇರುವದೇ ದೊಡ್ಡ ಕಾರಣವಾಗಿರುತ್ತದೆ ಈ ದೇಶದ ಶ್ರೀಮಂತರು ವಿದ್ಯಾಭಿವೃದ್ಧಿಗೆ ತಮ್ಮ ಕೈಲಾದ ಮಟ್ಟಿಗೂ ಸಹಾಯಮಾಡದೆ ಅಂಥಾ ಸಹಾಯಗಳನ್ನು ಸರ್ಕಾರದವರಿಂದ ಕೋರುವವರಾಗಿರುತ್ತಾರೆ

ಜಪಾನ್ ದೇಶದವರ ಏಳಿಗೆಗೆ ಪ್ರಾಮುಖ್ಯವಾದ ಎರಡನೇ ಕಾರಣವು ಯಾವದಂದರೆ ವಿದ್ಯಾಭಿವೃದ್ಧಿ. ಜಪಾನಿಯರ ವಿದ್ಯಾಭಿವೃದ್ಧಿಯನ್ನು ಕುರಿತು ತಿಳಿಸಬೇಕಾದರೆ ಇಲ್ಲಿ ಸ್ಥಳವು ಸಾಲದು ಜಪಾನ್ ದೇಶದಲ್ಲಿ ವಿದ್ಯೆಯು ಸರ್ವಸಾಧಾರಣವಾಗಿರುತ್ತದೆ ಐಶ್ವರ್ಯವಂತರು ಬಡವರು ಉತ್ತಮರು ಕನಿಷ್ಠರು ದೊಡ್ಡವರು ಸಣ್ಣವರು ಎಂಬ ಭೇದಗಳಿಲ್ಲದೆ ಎಲ್ಲರೂ ವಿದ್ಯಾಭ್ಯಾಸವನ್ನು ಮಾಡುವಂತೆ ಅನುಕೂಲಗಳೇರ್ಪಡಿಸಲ್ಪಟ್ಟಿವೆ ಜಪಾನ್ ದೇಶದಲ್ಲಿ ಸ್ತ್ರೀವಿದ್ಯಾಭ್ಯಾಸಕ್ಕೆ ಜನರು ಹೆಚ್ಚಾದ ಗಮನವನ್ನು ಕೊಡುತ್ತಾರೆ. ಟೋಕಿಯೊ ಪಟ್ಟಣದ ಬೀದಿಯಲ್ಲಿ ಒಬ್ಬನು ಪ್ರಾತಃಕಾಲದಲ್ಲಿ ನಿಂತುಕೊಂಡರೆ ಅನೇಕ ಸಹಸ್ರ ಬಾಲಕರೂ ಬಾಲಕಿಯರೂ ತಮ್ಮ ಬಗಲಾಗಿ ಪುಸ್ತಕಗಳನ್ನು ಹಿಡಿದು ಆಯಾ ಪಾಠಶಾಲೆಗಳಿಗೆ ಹೋಗುವುದನ್ನು ನೋಡಬಹುದು. ಆರು ವರ್ಷಗಳು ತುಂಬಿದನಂತರ ಪ್ರತಿಯೊಬ್ಬ ಹುಡುಗನೂ ಹುಡುಗಿಯೂ ಪಾಠಶಾಲೆಗೆ ಹೋಗಿ ಅಲ್ಲಿ ಆರು ವರ್ಷಗಳ ಕಾಲ ವಿದ್ಯಾಭ್ಯಾಸ ಮಾಡಬೇಕೆಂದು ಸರ್ಕಾರದವರು ವಿಧಾಯಕ ಮಾಡಿರುತ್ತಾರೆ. ೧೮೭೨ನೆ ಇಸವಿಯಲ್ಲಿ ಪ್ರಕಟವಾದ ವಿದ್ಯಾಭ್ಯಾಸದ ಕಟ್ಟಳೆಯು ಎಲ್ಲರೂ ವಿದ್ಯೆಯನ್ನು ಕಲಿಯುವಂತೆ ವಿಧಿಸುತ್ತದೆ. ಜಟ್ಕಾ ಕೂಲಿಕಾರರು ತಮ್ಮ ವಿರಾಮಕಾಲದಲ್ಲಿ ತಮ್ಮ ತಮ್ಮ ಗಾಡಿಗಳ ಮೇಲೆ ಒರಗಿಕೊಂಡು ವರ್ತಮಾನ ಪತ್ರಿಕೆಗಳನ್ನಾಗಲಿ ಪುಸ್ತಕಗಳನ್ನಾಗಲಿ ಬಹು ಆತುರದಿಂದ ಓದುವದನ್ನು ನೋಡಬಹುದು ಜಪಾನ್ ದೇಶದಲ್ಲಿ ಪ್ರೈಮರಿ ವಿದ್ಯಾಭ್ಯಾಸವು ಉಚಿತಾರ್ಥವಾಗಿ ಕೊಡಲ್ಪಡುತ್ತದೆ ಬಾಲಕರಲ್ಲಿ ಶೇಕಡ ೯೭ ರಂತೆಯೂ ಬಾಲಕಿಯರಲ್ಲಿ ಶೇಕಡ ೯೦ ರಂತೆಯೂ ಜಪಾನ್ ದೇಶದಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವರು ನಮ್ಮ ಇಂಡಿಯಾ ದೇಶದ ವಿದ್ಯಾಭ್ಯಾಸವನ್ನು ಕುರಿತು ಏನೆಂದು ಹೇಳೋಣ? ಹಿಂದೂ ದೇಶವು ಜಪಾನಿಗಿಂತ ಎಷ್ಟೋ ಪಾಲು ದೊಡ್ಡದಾದರೂ ಬಾಲಕರಲ್ಲಿ ಶೇಕಡ ೪ ರಂತೆಯೂ ಬಾಲಕಿಯರಲ್ಲಿ ಸಾವಿರಕ್ಕೆ ೭ ರಂತೆಯೂ ವಿದ್ಯಾಭ್ಯಾಸವನ್ನು ಮಾಡುತ್ತಿರುವರು. ಇಂಡಿಯಾ ದೇಶವು ಅಭಿವೃದ್ಧಿಯಾಗದೇ ಇರುವುದಕ್ಕೆ ಇದು ಒಂದು ದೊಡ್ಡ ಕಾರಣವಲ್ಲವೇ?

(ಪಕೆಕ)

ಒಳದೇಶದ ವೃತ್ತಾಂತಗಳು.

ಮೈಸೂರು ಪಟ್ಟಣವನ್ನು ಅಭಿವೃದ್ಧಿಮಾಡುವುದಕ್ಕೆ ಸರ್ಕಾರದವರು ೧೯೦೭—೦೮ ನೆ ಸಾಲಿಗೆ ೫,೪೨,೬೯೦ ರೂಪಾಯಿ ಟ್ರಸ್ಟಿ ಬೋರ್ಡಿಗೆ ಕೊಡುವಂತೆ ಮಂಜೂರ್ ಮಾಡಿದ್ದಾರೆ

❧❧❧

ನೆನ್ನೆ ದಿನ ಬೆಂಗಳೂರು ದಿವಾನ್ ಕಛೇರಿಯಲ್ಲಿ ನಡೆದ ನ್ಯಾಯವಿಧಾಯಕ ಕೌನ್ಸಿಲ್ ಮೀಟಿಂಗಿಗೆ ರಾಜಧಾನಿಯಿಂದ ಮೆ|| ಕಾರಾಚೇ ಅರಸಿನವರೂ ಮೆ|| ರಂಗೈಯ್ಯಂಗಾರರೂ ಹೋಗಿದ್ದರು.

❧❧❧

ಬೆಂಗಳೂರು ಪ್ಯಾ ಗ್ರೌಂಡಿನಲ್ಲಿರುವ ಮೆ|| ರಾಮಚಂದ್ರಯ್ಯರ ಬಂಗಲೆಯನ್ನೂ ಅದಕ್ಕೆ ಸೇರಿದ ಏಳು ಎಕರೆ ಜಮೀನನ್ನೂ ಗವರ್ನಮೆಂಟಿನವರು ೪೦ ಸಾವಿರ ರೂಪಾಯಿಗೆ ಕೊಂಡುಕೊಂಡಿದ್ದಾರೆ

❧❧❧

ರಾಜಧಾನಿಯಲ್ಲಿ ಸವಾ ಬದಲಾವಣೆಯ ದೆಸೆಯಿಂದ ಕಾಯಿಲೆಗಳು ಪ್ರಬಲವಾಗಿವೆ. ಮೋಡಮಾಡುವುದು, ಆಗಾಗ್ಗೆ ಮಳೆ ಹನಿಯುವುದು, ಶೀತಗಾಳಿ ವಿಶೇಷವಾಗಿದೆ ಪ್ಲೇಗ್ ಉಪದ್ರವಕ್ಕಾಗಿ ಬಿಟ್ಟು ಹೋದ ಮನೆಗಳಲ್ಲಿ ಕನ್ನ ಚೋರಿಗಳು ನಡೆಯುವವು. ಧಾರಣೆ ಸಿಗಳು ಇನ್ನೂ ಪ್ರಿಯವಾಗಿವೆ.

❧❧❧

ಮೊನ್ನೆ ಮಂಗಳವಾರ ಸಾಯಂಕಾಲ ರಾಜಧಾನಿಯ ಮಿಷನ್ ಹೈ ಸ್ಕೂಲಿನಲ್ಲಿ ಬಾಲಕರಿಗೆ ಬಹುಮಾನಗಳನ್ನು ಕೊಟ್ಟರು ಶ್ರೀ ಮಹಾರಾಜರವರ ಪ್ರೈವೆಟ್ ಸೆಕ್ರೆಟರಿಯವರಾದ ಮೆ|| ಇ. ಮೆಕಾಲೆಯವರು ಸಭೆಯ ಅಗ್ರಾಸನವನ್ನು ವಹಿಸಿ, ಬಾಲಕರಿಗೆ ಕೆಲವು ಬುದ್ಧಿಮಾತುಗಳನ್ನು ತಿಳಿಸಿದರು.

❧❧❧

ಬೆಂಗಳೂರಿನಲ್ಲಿ ಸಂತೂರಾಂ ಎಂಬೊಬ್ಬ ಹುಡುಗನನ್ನು ಇನ್ಸ್‌ಪೆಕ್ಟರ್‌ಯವರು ಡಿಸ್ಟ್ರಿಕ್ಟ್ ಆಫೀಸಿನ ಮೆಟ್ಟಲಿಂದ ನೂಕಿದರೆಂದು ಮೊಕದ್ದಮೆ ಆಗಿತ್ತು. ಕಳೆದ ಶುಕ್ರವಾರ ಸಿಟಿ ಮ್ಯಾಜಿಸ್ಟ್ರೇಟ್ ಮೊಕದ್ದಮೆಯನ್ನು ದರ್ಯಾಫ್ತು ಮಾಡಬೇಕೆಂದು ಕೂಗಿಸಿದಾಗ ಫಿರ್ಯಾದಿಯಾಗಲಿ ಅವನ ಕಡೆ ಲಾಯರಾಗಲಿ ಹಾಜರಾಗಿರಲಿಲ್ಲವಾದ್ದರಿಂದ ಮೊಕದ್ದಮೆಯನ್ನು ವಜಾ ಮಾಡಿದರು

❧❧❧

ಇಲ್ಲಿನ ಜಗನ್ಮೋಹನ ಬಂಗಲೆಯ ಬಳಿ ಸಂತೇಪೇಟೆಯ ಬೆಂಗಳೂರು ರುದ್ರಪ್ಪನವರ ಮನೆಗೆ ಕಳೆದ ವಾರ ಮೂರು ಜನ ಹೋಗಿ ರಾತ್ರಿಹೊತ್ತು ಕದವನ್ನು ತಟ್ಟಿ ಒಳಗಿದ್ದ ಹೆಂಗಸನ್ನು ಕೇಳಬೇಕೆಂತಲೂ ಕಳವು ಮಾಡಬೇಕೆಂತಲೂ ಪ್ರಯತ್ನಪಟ್ಟಹಾಗೆ ಅವರು ಪತ್ತೆಯಾಗಿ ಈಗ ಸಿಟಿ ಮ್ಯಾಜಿಸ್ಟ್ರೇಟ್ ಕೋರ್ಟಿನ ಮೊಕದ್ದಮೆ ನಡೆಯುತ್ತಿರುವಂತೆಯೂ ಕೇಳುತ್ತೇವೆ

❧❧❧

ಮುಳಬಾಗಲ ತಾಲ್ಲೂಕಿಗೆ ಸೇರಿದ ಕಪ್ಪಲಮಡುಗು ಎಂಬ ಗ್ರಾಮದ ಬಳಿ ಒಂದು ಹೊಲದಲ್ಲಿ ಮೂರು ಮಂದಿ ಹುಡುಗರಿಗೆ ನಿಧಿ ಸಿಕ್ಕಿತೆಂತಲೂ, ಅದನ್ನು ಕಂಡು ಒಬ್ಬ ಮಹಮದೀಯನು ಹೋಗಿ ಅವರನ್ನು ಬೆದರಿಸಿ, ಒಂದು ಮಡಿಕೆಯ ತುಂಬಾ ಇದ್ದ ಭಂಗಾರ ರಾಮಟಂಕಿ ವರಹಾಗಳನ್ನು ಅವರಿಂದ ಕಿತ್ತುಕೊಂಡು ಹೋದನೆಂತಲೂ, ತಾಲ್ಲೂಕು ಶಿರಸ್ತೇದಾರರಿಗೆ ಈ ಸಂಗತಿ ತಿಳಿದು ಅಲ್ಲಿ ಹೋಗಿ ತನಿಖೆಮಾಡುವಲ್ಲಿ ಆ ಮಹಮದೀಯನು ಸಿಕ್ಕಲಿಲ್ಲವೆಂತಲೂ ಒಬ್ಬ ಬಾತ್ಮಿದಾರರು ಬರೆಯುತ್ತಾರೆ.

ಮೈಸೂರು ಗೆಜೆಟ್ ಸಂಗ್ರಹ.

ಕೋಲಾರ್ ಡಿಸ್ಟ್ರಿಕ್ಟ್ ಫಾರೆಸ್ಟುಗಳ ಡಿಪ್ಯುಟಿ ಕನ್ಸರ್ವೇಟರ್ ಮೆ|| ಎಸ್. ಎ ಬಾಪೂರಾಯರಿಗೆ ಕೊಟ್ಟಿರುವ ಒಂದು ತಿಂಗಳ ಪ್ರಿವಿಲೆಜ್ ರಜವನ್ನು ಇನ್ನೂ ಇಪ್ಪತ್ತಮೂರು ದಿನಗಳಿಗೆ ಜಾಸ್ತಿ ಮಾಡಿದೆ ಮೆ|| ವೈ ಸೀತಾರಾಮಯ್ಯನವರೇ ಅವರ ಬದಲಿ ನೋಡತಕ್ಕದ್ದು

ಗುಂಡ್ಲುಪೇಟೆ ತಾಲ್ಲೂಕು ಅಮಲ್ದಾರ್ ಮೆ|| ಎ ಕೃಷ್ಣ ಅರಸಿನವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳೂ ಹತ್ತೊಂಬತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಮತ್ತೊಂದು ಹುಕುಂ ಕೊಡಲ್ಪಡುವತನಕ ಶಿರಸ್ತೆದಾರ್ ಲಕ್ಷ್ಮೀನರಸಿಂಹೈಯ್ಯಂಗಾರರು ಗುಂಡ್ಲುಪೇಟೆ ತಾಲ್ಲೂಕಿನ ಅಮಲ್ದಾರ್ ಮತ್ತು ಮೂರನೆ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೋಡತಕ್ಕದ್ದು.

ನೆಲಮಂಗಲದ ಆಕ್ಟಿಂಗ್ ಅಮಲ್ದಾರ್ ಮೆ|| ಕಾಶೀನಾಥರಾಯರನ್ನು ಹೊಸಕೋಟೆ ತಾಲ್ಲೂಕಿನ ಅಮಲ್ದಾರ್ ಮತ್ತು ೩ ನೆ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೋಡುವಂತೆ ವರ್ಗ ಮಾಡಿದೆ

ಮುಂದೆ ಹೇಳುವವರನ್ನು ಜೂಲೈ ೧ ರಿಂದ ಸೀನಿಯರ್ ಅ|| ಕಮೀಷನರಾಗಿ ನೇಮಕ ಮಾಡಿದೆ. ಮೆ|| ಗಳಾದ ವಿ. ಆರ್ ತ್ಯಾಗರಾಜ ಐಯ್ಯರವರು, ಕೆ ಚಾಂಡಿಯವರು, ಎಂ ಶಾಮರಾಯರು, ಎ ಸುಬ್ರಹ್ಮಣ್ಯ ಐಯ್ಯರವರು, ಎಂ ಎ ನಾರಾಯಣೈಯ್ಯಂಗಾರರು

ಅ|| ಇಂಜನಿಯರ್ ಮೆ|| ಆರ್ ಎಸ್ ನವರತ್ನಯವರನ್ನು ತುಂಕೂರಿನಿಂದ ಕಡೂರು ಡಿವಿಜನ್‌ಗೆ ವರ್ಗಮಾಡಿದೆ

ಅರಮನೆ ಡಿವಿಜನ್ ಅ|| ಇಂಜನಿಯರ್ ಮೆ|| ಟಿ ಎಸ್ ಕೇಶವಯ್ಯಂಗಾರ್ರಿಗೆ ಕೊಟ್ಟಿರುವ ಆರು ತಿಂಗಳ ಕಾಯಿಲೆ ರಜವನ್ನು ಇನ್ನೂ ಎರಡು ತಿಂಗಳು ಜಾಸ್ತಿ ಮಾಡಿದೆ

ಮೈಸೂರ್ ಇನ್‌ಫೆಂಟ್ರಿ ೨ ನೇ ಬಟಾಲಿಯನ್ ಕವಿಷನ್ ರ್‍ಯಾಂಕಿಗೆ ಸೇರಿದ ಮಹಮದ್ ಅಬ್ಬಾಸ್‌ರವರನ್ನು ೧ ನೆ ಗ್ರೇಡ್ ಜಮಾದಾರಿಯಿಂದ ೨ ನೆ ಗ್ರೇಡ್ ಸುಬೇದಾರಿಗೂ, ಮಹಮದ್ ಇದ್ರೀಸ್‌ರವರನ್ನು ಹವಾಲ್ದಾರ್ ಮೇಜರಿನಿಂದ ೨ ನೇ ಗ್ರೇಡ್ ಜಮಾದಾರಿಗೂ

ಅನಾಹುತಗಳು.

ಅನೇಕ ದನಗಳು ಸತ್ತುಹೋದದ್ದು

ಈ ತಿಂಗಳು ತಾ ೧೧ನೇ ಗುರುವಾರ ಹಗಲು ಸುಮಾರು ೧ ಘಂಟೆ ಸಮಯದಲ್ಲಿ ಕಡೂರು ಡಿಸ್ಟ್ರಿಕ್ಟು ಆಲ್ದೂರು ಗ್ರಾಮಕ್ಕೆ ೪ ಮೈಲಿ ದೂರದಲ್ಲಿರುವ ಮೂಡಿಗೆರೆ ಎಂಬಲ್ಲಿ ದನಗಳು ಮೇಯುತ್ತಿರುವಾಗ್ಗೆ ಆಕಸ್ಮಿಕವಾಗಿ ಒಂದು ದೊಡ್ಡ ಮಳೆ ಎದ್ದು, ಭಯಂಕರವಾದ ಉರಿ ಯಂತೆ ಪರಿಣಮಿಸಿ, ಮೇಯುತ್ತಿದ್ದ ಮೂವತ್ತನಾಲ್ಕು ಜಾನವಾರುಗಳು (ದನಗಳು) ಮೃತಪಟ್ಟವು ತಾಲ್ಲೂಕು ಅಮಲ್ದಾರರೂ, ಇನಸ್ಪೆಕ್ಟರೂ ಸಹ ಈ ಅನಾಹುತ ನಡೆದ ಸ್ಥಳಕ್ಕೆ ದಯಮಾಡಿ ನೋಡಿ, ಬಹಳ ಪಶ್ಚಾತ್ತಾಪ ಪಟ್ಟರು. ದನಕಾಯುವ ನಾಲ್ಕಾರು ಹುಡುಗರು ದನಗಳಿದ್ದ ಸ್ಥಳಕ್ಕೆ ದೂರವಾಗಿದ್ದದ್ದರ ದೆಸೆಯಿಂದ ಜೀವಂತರಾಗಿ ಉಳಿದರು ಇಲ್ಲಿಗೆ ಆರು ಸಂವತ್ಸರಗಳಲ್ಲಿ ಅದೇ ಸ್ಥಳದಲ್ಲಿ ಇದೇ ರೀತಿಯಿಂದ ಒಬ್ಬ ಹುಡುಗನು ಮೃತಪಟ್ಟಿದ್ದನಂತೆ ದೈವನಿಯಾಮಕ ವಿಚಿತ್ರವಾದದ್ದು

ಎ ವಿ ದೇವಪ್ಪಗೌಡ

ಸಿಡಿಲಿನಿಂದುಂಟಾದ ಅನಾಹುತವು

ಹೊಸದುರ್ಗ ತಾಲ್ಲೂಕು ಬೆಲಗೂರು ಪ್ರಾಂತ್ಯ ತಾ ೧೯ ರಲ್ಲೂ ಮತ್ತು ತಾ ೧೬ನೇ ಸಾಯಂಕಾಲವೂ ವಿಪರೀತ ಮಳೆಯು ಸುರಿದು, ಕೆಲವು ಕೆರೆಗಳಿಗೆ ಸ್ವಲ್ಪ ನೀರು ಬಂತು ತಾ ೧೯ರಲ್ಲಿ ಒಂದು ಭಾರೀ ಸಿಡಿಲು ಸಾಯಂಕಾಲ ಸುಮಾರು ೭॥ ಘಂಟೆ ಸಮಯದಲ್ಲಿ ಬಹು ಶಬ್ದದೊಡನೆ ಬಿದ್ದಿತು ಪ್ರತಿ ಒಂದು ಮನೆಯಲ್ಲಿಯೂ ಎಷ್ಟೋ ಜನರು ಸಿಡಲಿನ ಶಬ್ದಕ್ಕೆ ಹೆದರಿ ಎಡಬಲಕ್ಕೆ ಬಿದ್ದುಬಿಟ್ಟರು ತಾವು ಮಾಡುತ್ತಿದ್ದ ಕೆಲಸದ ವಿಷಯವನ್ನು, ತಾವು ಸಿಡಿಲಿನ ಶಬ್ದಕ್ಕೆ ಹೆದರಿಬಿದ್ದ ವಿಷಯವನ್ನೂ ಕುರಿತು ಬೆಳಗ್ಗೆ ಮಾತನಾಡುತ್ತಿದ್ದ ಗಲಾಟೆಯೂ ಎಲ್ಲೆಲ್ಲಿಯೂ ಹರಡಿಕೊಂಡಿತ್ತು ಆ ದಿನವೂ ಸಾಯಂಕಾಲ ೫ ಗಂಟೆಗೆ ಸರಿಯಾಗಿ ಭಾರಿ ಮಳೆಯು ಪ್ರಾರಂಭವಾಯಿತು ಆ ಮಳೆಯಲ್ಲಿ ಕೂಡಾ ಎರಡು ಭಾರೀ ಸಿಡಿಲುಗಳು ಬಿದ್ದು ಜನರಲ್ಲಿ ಭಯವನ್ನುಂಟುಮಾಡಿದವು

ಈ ಬೆಲಗೂರಿಗೆ ೨॥ ಮೈಲಿ ಫಾಸಲೆಯಲ್ಲಿ ಇರುವ ಕಸಬ ರ ತಾಲ್ಲೂಕು ಓಬೇನಹಳ್ಳಿ ಎಂಬ ಗ್ರಾಮದಲ್ಲಿ ಕಾಲುಮಂತರ ಬೆಲಗೂರು ನಿಂಗ ಎಂಬುವನೂ, ಈತನ ಮಗಳೂ ಮತ್ತು ಒಬ್ಬ ಕೂಲಿಯಾಳೂ ಸಹಾ ಹೊಲಕ್ಕೆ ಹೋಗಿದ್ದವರು ಮಳೆಯು ಬಲವಾಗಿ ಬರುವುದಕ್ಕೆ ಪ್ರಾರಂಭವಾಗುತ್ತಲೇ ಜಾಗ್ರತೆಯಾಗಿ ಹೆಜ್ಜೆಗಳನ್ನು ಇಟ್ಟುಕೊಂಡು ಆತುರದಿಂದ ಆ ಗ್ರಾಮದ ಕೆರೇ ಕೋಡಿಯ ಸಮೀಪಕ್ಕೆ ಬರುವಷ್ಟರಲ್ಲಿ ಗುಡುಗೂ ಮಿಂಚೂ ಹೆಚ್ಚಾಗಿ, ಎರಡು ಭಾರೀ ಸಿಡಿಲು ಬಿದ್ದವು ಆ ಸಿಡಿಲು ಮೇಲ್ಕಂಡ ಬೆಲಗೂರು ನಿಂಗನೆಂಬುವನಿಗೆ ಬಡಿದು ದೇಹವೆಲ್ಲಾ ಉರಿಮಯವಾಗಿ, ಮುಖಾಡೆಯಾಗಿ ನೆಲದ ಮೇಲೆ ಬಿದ್ದುಕೊಂಡು ಪ್ರಾಣಬಿಟ್ಟನು. ಈತನ ಮಗಳೂ ಜೊತೆಯಾಗಿ ಬರುತ್ತಿದ್ದುದರಿಂದ ಆಕೆಯ ಮುಖಕ್ಕೆ ಏನೋ ರಟೆಯಂತೆ ಹೊಡೆದು ಮುಖವೆಲ್ಲಾ ಗುಳ್ಳೆಗುಳ್ಳೆಗಳಾಗಿ ಬಿತ್ತುಕೊಂಡು, ಕೆಳಕ್ಕೆ ಬಿದ್ದಳು ಕೂಲಿಯಾಳಿಯು ಕೊಂಚ ದೂರವಾಗಿಯೇ ಬರುತ್ತಿದ್ದನಾದ್ದರಿಂದ ಈ ಶಬ್ದದ ಭಯಕ್ಕೆ ಕೆಳಕ್ಕೆ ಬಿದ್ದು ನಡಗುತ್ತಾ ಇದ್ದನು ಮಳೆಯು ಕೊಂಚ ಇಳಿಯಲು ಮಗಳು ಎಚ್ಚರಗೊಂಡು ಆ ಹುಡುಗಿಯು ನರಳುತ್ತಾ ಎದ್ದು ಅಪ್ಪನನ್ನು ಕೂಗಲು, ಅಪ್ಪನು ಸತ್ತುಬಿದ್ದಿದ್ದನು ಆಗ ಕೂಲಿಯಾಳಿಯು ಎಚ್ಚೆತ್ತು ಎದ್ದನಾದ್ದರಿಂದ ಅವರಿಬ್ಬರೂ ಒಂದು ಫರ್ಲಾಂಗು ಫಾಸ್ಲೆಯಲ್ಲಿದ್ದ ತಮ್ಮ ಓಬೇನಹಳ್ಳಿ ಗ್ರಾಮಕ್ಕೆ ಅಳುತ್ತಾ ಬಂದು, ಎಲ್ಲರಿಗೂ ತಿಳಿಸಿದರು ಊರೆಲ್ಲಾ ಗುಲ್ಲಾಗಿ, ಮನೆಗೆ ಒಬ್ಬರಂತೆ ಆ ಶವದ ಬಳಿಗೆ ಹೋಗಿ ಬೆಳಕು ಹರಿಯುವ ತನಕ ಕಾವಲಿದ್ದರು ಬೆಳಗ್ಗೆ ಕಾರಿ ಕಾನೂಡು ಸ್ಟೇಷನಿಗೆ ವರ್ತಮಾನ ಹೋಗಿ, ಸಾಯಂಕಾಲದ ಹೊತ್ತಿಗೆ ಮಹಜರು ವಗೈರೆ ನಡಿಯಿತು ಹುಡುಗಿಗೆ ಮುಖದ ಬಾವು ತಪ್ಪಿಲ್ಲ. ಕೂಲಿಯಾಳಿಯು ಛಳಿಜ್ವರ ಕಾಹಿಲೆ ಜಾಸ್ತಿಯಾಗಿ, ಸಾಯುವಂತಿದ್ದಾನೆ.

ಕೆ ವೆಂಕಟರಾಯ ಶೆಟ್ಟಿ

ಸಿಡಿಲಿನಿಂದಾದ ಅನಾಹುತವು.

ಕೊಳ್ಳೆಗಾಲಂ ತಾಲ್ಲೋಕಿಗೆ ಸೇರಿದ ೪ ಮೈಲಿ ದೂರದಲ್ಲಿರುವ ಸಿಂಗಾನಲ್ಲೂರು ಗ್ರಾಮದ ಕುರುಬರ ಜಾತಿ ೩೦ ವರುಷ ವಯಸ್ಸುಳ್ಳ ಮಾಸ್ತಿ ಎಂಬುವನು ಈ ಜುಲಾಯಿ ೧೦ನೇ ತಾ ಬುಧವಾರ ಊರಿಗೆ ದಕ್ಷಿಣ ಒಂದು ಮೈಲಿ ದೂರದಲ್ಲಿರುವ ತನ್ನ ಹೊಲದಲ್ಲಿ ಉಳುತ್ತಾ ಇರುವಲ್ಲಿ ಮಧ್ಯಾಹ್ನ ಸುಮಾರು ೩ ಘಂಟೆಯಲ್ಲಿ ಮಳೆ ಬಂದದ್ದರಿಂದ ಏರನ್ನು ಹೊಲದಲ್ಲೇ ನಿಲ್ಲಿಸಿ ಬಲಗೋಲ ನಲ್ಲಿ ಕಟ್ಟಿದ್ದ ಎತ್ತಿನ ಮರೆಯಲ್ಲಿ ತಾನೂ ಕತಕೊಂಡು ಇದ್ದನು ಸ್ವಲ್ಪ ಗುಡುಗುತ್ತಾ ಇದ್ದು ಫಳ್ಳನೆ ಮಿಂಚು ಬಿದಿದು ಮಾಸ್ತಿ ಎಂಬುವನೂ ಆಶ್ರಯ ಮಾಡಿಕೊಂಡು ಇದ್ದ ಎತ್ತೂ ಸಹ ಮೃತಪಟ್ಟರು ಅದರ ಜೊತೆಯಲ್ಲಿ ಇದ್ದ ಎಡಗೋಲಿನ ಎತ್ತಿಗೆ ಯಾವ ಅಪಾಯವೂ ಬರಲಿಲ್ಲ ಆಕ್ಸಿಡೆಂಟಾದ ದುರ್ಮರಣವನ್ನು ವಿಚಾರಿಸುವದಕ್ಕೆ ಪೊಲೀಸ್ ಆಫೀಸರು ಬಂದು ತನಿಖೆಮಾಡಿ ಮಹಜರು ವಗೈರೆ ಮಾಡಿಸಿಕೊಂಡು ಹೋದರು ಏಕಕಾಲದಲ್ಲಿ ಕುರುಬರ ಬಡವನೂ ಒಂದು ಎತ್ತೂ ಸಹಾ ಸಿಡಿಲಿನಿಂದ ಮರಣ ಹೊಂದಿದ್ದನ್ನು ನೋಡಿ ಅನೇಕ ಜನಗಳು ವ್ಯಸನಪಡುತ್ತಾರೆ ಅವರ ಕುಟುಂಬದವರ ವ್ಯಸನವನ್ನು ಹೇಳಬೇಕಾದದ್ದೇ ಇಲ್ಲ !

ಇದೇ ತಿಂಗಳು ಇದೇ ತಾರೀಖು ಸಿಂಗಾನಲ್ಲೂರಿಗೆ ಅರ್ಧ ಮೈಲಿ ದೂರದಲ್ಲಿರುವ ಕಾಮಗೆರೆ ಗ್ರಾಮದ ಶಿವಾಚಾರದ ಮಲ್ಲದೇವರು ಎಂಬುವನು ಊರಿಗೆ ಎರಡು ಮೈಲಿ ದೂರದಲ್ಲಿರುವ ತನ್ನ ಹೊಲದಲ್ಲಿ ಕುಂಟೆ ಹೊಡೆಯುತ್ತಾ ಇರುವಾಗ ಸುಮಾರು ೪ ಘಂಟೆ ಸಮಯದಲ್ಲಿ ಮಳೆ ಬಂದದ್ದರಿಂದ ಕುಂಟೆಯನ್ನು ಬಿಚ್ಚಿಕೊಂಡು ಎತ್ತು ಕಟ್ಟಿದ ಮನೆಗೆ ಸಮೇತ ಎತ್ತುಗಳನ್ನು ಊರು ಕಡೆ ಹೊಡದುಬಿಟ್ಟು ತಾನೂ ಹಿಂದಗಡೆ ಮೆಲ್ಲಗೆ ಬರುವಷ್ಟರಲ್ಲಿ ಹೊಲಕ್ಕೆ ಅರ್ಧ ಮೈಲಿ ದೂರದಲ್ಲಿ ಇರುವ ಕಾಡಿನಿಂದ ನೀರು ಬರುವ ಮಾಮುಹಳ್ಳದಲ್ಲಿ ಸದರಿ ಎತ್ತುಗಳು ಹಳ್ಳ ದಾಟುವದಕ್ಕೆ ನೀರಿನಲ್ಲಿ ಇಳಿದಾಗ ಮೇಲಿನಿಂದ ಪ್ರವಾಹವು ಬಂದು ಎತ್ತುಗಳನ್ನು ಕೊಚ್ಚಿಕೊಂಡು ಹೋಗುತ್ತಾ ಇದ್ದದ್ದನ್ನು ಸಮೀಪದ ಒಂದು ಗೊಬ್ಬಳಿ ಮರದ ಕೆಳಗೆ ನಿಂತು ಇದ್ದ ಪರ್ತ್ಯಯ್ಯ, ನಲ್ಲಯ್ಯನೆಂಬುವರಿಬ್ಬರು ಸದರಿ ಎತ್ತುಗಳನ್ನು ಬಿಡಾವು ಮಾಡುವ ಉದ್ದೇಶ್ಯ ಹಳ್ಳದಲ್ಲಿ ಇಳಿದು ಎಷ್ಟು ಪ್ರಯತ್ನ ಮಾಡಿದಾಗ್ಯೂ ನಿಷ್ಪ್ರಯೋಜನವಾಯಿತು. ಸದರಿಯವರೂ ಕೂಡ ಅದೇ ನೀರಿನಲ್ಲಿ ಕೊಚ್ಚಿಕೊಂಡುಹೋಗುತ್ತಾ ಇದ್ದದ್ದನ್ನು ಬಾಕಿ ದರೆಮೇಲೆ ನಿಂತಿದ್ದ ಜನಗಳು ಉಳಿಸುವ ಹಗ್ಗಗಳ ಕೊನೆಯನ್ನು ಅವರ ಬಳಿಗೆ ಬೀಸಿಹಾಕಿದಾಗ ಅದರ ಸಹಾಯದಿಂದ ಅವರು ಬದುಕಿ ಬಂದ ಬಿಟ್ಟರು ಎತ್ತುಗಳು ಮಾತ್ರ ಆಚೆಗೆ ಬರುವದಕ್ಕೆ ಸಾಧ್ಯವಾಗದೆ ನೀರಿನಲ್ಲೇ ಎರಡೂ ಮೃತಪಟ್ಟವು ೧೦೦ ರೂಪಾಯಿನ ಈ ಜೋಡಿ ಎತ್ತುಗಳು ಹೀಗೆ ಆಕಸ್ಮಿಕವಾಗಿ ಸತ್ತುಹೋದದ್ದಕ್ಕಾಗಿ ಸದರಿ ಮಲ್ಲದೇವರ ವ್ಯಸನವನ್ನು ಹೇಳಲು ಅಶಕ್ಯವಾಗಿದೆ

ಪಿ ಕೃಷ್ಣಸಿಂಗ್ ರಾವ್

ಇಂಡಿಯಾ ದೇಶದ ವೃತ್ತಾಂತಗಳು.

ಬೊಂಬಾಯಿ ಪಟ್ಟಣದಲ್ಲಿ ರಾಯಲ್ ಇಂಡಿಯನ್ ಮೆರೀನ್ ಡಾಕ್ ಯಾರ್ಡ್ ಎಂಬ ಸಮುದ್ರತೀರದ ಕಟ್ಟಡಕ್ಕೆ ಬೆಂಕಿಬಿದ್ದು ೧,೯೬,೦೦೦ ರೂಪಾಯಿನ ಮಾಲುಗಳು ನಷ್ಟವಾದವು

❦❦❦

ಕತ್ತಿಯನ್ನು ಒಳಬಾಗದಲ್ಲಿ ಉಳ್ಳಂಥಾ ಬೆತ್ತಗಳನ್ನು ಕಲ್ಕತ್ತಾ ಮಾರ್ಕೆಟ್ಟಿನಲ್ಲಿ ಬಿಕರಿ ಮಾಡುತ್ತಿದ್ದ ಅಬ್ದುಲ್ ಕರೀಮ್ ಎಂಬವನಿಗೆ ೫೦ ರೂಪಾಯಿ ಜುಲ್ಮಾನೆ ಅಥವಾ ಒಂದು ತಿಂಗಳ ಕಠಿಣ ಸಜಾ ಎಂಬ ಶಿಕ್ಷೆಯಾಗಿದೆ

❦❦❦

"ನವಶಕ್ತಿ ಬಂಗಾಳಾ" ಎಂಬ ಪತ್ರಿಕೆಯ ಎಡಿಟರಾಗಿದ್ದ ೨೪ ವರ್ಷ ವಯಸ್ಸಿನ ವಾಸುದೇವ ಭಟ್ಟಾಚಾರ್ಯನೆಂಬಾತನು ಸರ್ಕಾರಕ್ಕೆ ತಿಳಿಸದೇನೇ ಆ ಪತ್ರಿಕೆಯನ್ನು ಪ್ರಕಟಿಸುತ್ತಿದ್ದನೆಂದು ಮ್ಯಾಜಿಸ್ಟ್ರೇಟರು ಆತನಿಗೆ ೨೦೦ ರೂಪಾಯಿ ಜುಲ್ಮಾನೆ ಅಥವಾ ೬ ತಿಂಗಳ ಕಠಿಣ ಸಜಾ ಶಿಕ್ಷೆಯನ್ನು ವಿಧಿಸಿದರು

❦❦❦

ಬೊಂಬಾಯಿ ಪಟ್ಟಣದಲ್ಲಿ ವಿಕ್ಟೋರಿಯಾ ಟರ್ಮಿನಸ್ ಎಂಬ ರೈಲ್ವೆ ಸ್ಟೇಷನ್ ದಕ್ಷಿಣ ಭಾಗದಲ್ಲಿ ಗವರ್ನಮೆಂಟಿನವರು ಸುಂದರವೂ ವಿಸ್ತಾರವೂ ಆದ ಒಂದು ಭಾರೀ ಪೋಸ್ಟ್ ಆಫೀಸನ್ನು ಕಟ್ಟಲಾರಂಭಿಸಿದ್ದಾರೆ ಇದಕ್ಕೆ ಸುಮಾರು ೧೦ ಲಕ್ಷ ರೂಪಾಯಿ ಖರ್ಚಾಗುವದೆಂದು ತಿಳಿದುಬಂದಿದೆ

❦❦❦

ಮಹಾಮಹೋಪಾಧ್ಯಾಯ ಹರಿಶ್ಚಂದ್ರ ವಿದ್ಯಾಭೂಷಣ, ಎಂ ಎ, ಎಂಬ ಬಂಗಾಳಾ ದೇಶಸ್ಥ ಪಂಡಿತರು ಈಚೆಗೆ ಟಿಬೆಟ್ ರಾಜ್ಯದಲ್ಲಿ ಸಂಚಾರ ಮಾಡಿ, ಅಲ್ಲಿನ ಬೌದ್ಧರ ಸರಸ್ವತೀ ಭಂಡಾರದಲ್ಲಿ ಹಿಂದೂ ತರ್ಕಶಾಸ್ತ್ರದ ಪೂರ್ಣವಾದ ಪ್ರಾಚೀನ ಗ್ರಂಥಗಳನ್ನು ಸಂಪಾದಿಸಿಕೊಂಡು ಬಂದರೆಂದು ಪ್ರಕಟವಾಗಿದೆ.

❦❦❦

ಕಳೆದ ವಾರ ಉತ್ತರದೇಶದ ಅಲಹಾಬಾದ್, ಲಕ್ನೋ ಮುಂತಾದ ಕೆಲವು ಪಟ್ಟಣಗಳಲ್ಲಿ ೩ ೪ ದಿನ ಬಿಸಲಿನ ತಾಪವು ಅಪಾರವಾಗಿತ್ತು ಸೆಕೆಯನ್ನು ಸಹಿಸಲಾರದೆ ಕೆಲವರು ಮೃತಪಟ್ಟರು ಹಲವರಿಗೆ ಸ್ಮರಣೆತಪ್ಪಿಹೋಯಿತು ಇಷ್ಟು ಪಟ್ಟಿನ ಸೆಕೆಯನ್ನು ಕಳೆದ ಏಳು ವರುಷಗಳಿಂದ ಲಕ್ನೋಯಿನಲ್ಲಿ ಅನುಭವಿಸಿದ್ದಿಲ್ಲವೆಂದು ಜನರು ಹೇಳುತ್ತಿದ್ದರು.

❦❦❦

ಕಲ್ಕತ್ತಾ ಪಟ್ಟಣದಲ್ಲಿ ಕಾಳಿ ಪ್ರಸನ್ನ ಕಾವ್ಯವಿಶಾರದನೆಂಬೊಬ್ಬ ಬಂಗಾಳಿಯು "ಹಿತವಾದಿ" ಎಂಬ ಪತ್ರಿಕೆಯ ಎಡಿಟರಾಗಿದ್ದು ಶರೀರ ಸೌಖ್ಯಕ್ಕಾಗಿ ಹವಾ ಬದಲಾಯಿಸಿಕೊಂಡು ಬರಬೇಕೆಂದು ಜರ್ಮನ್ ರಾಜ್ಯಕ್ಕೆ ಹೋಗಿ ಮೂರು ತಿಂಗಳಾಯಿತು ಈತನು ಕಳೆದ ವಾರ ವಾಪಸು ಬರುತ್ತಿದ್ದಾಗ ಜಹಜಿನಲ್ಲೇ ಕಾಲವಾದನೆಂದು ತಂತೀ ವರ್ತಮಾನ ಬಂದಿದೆ

❦❦❦

ಕಲ್ಕತ್ತಾ ಪಟ್ಟಣದಲ್ಲಿ ಒಂದು ಕಾಗದದ ಕಾರ್ಖಾನೆ ಇತ್ತು ಇದು ಸ್ವದೇಶೀ ಏರ್ಪಾಡು. ಬಹು ಕಾಲದಿಂದಲೂ ತುಂಬಾ ಒಳ್ಳೇ ಸ್ಥಿತಿಯಲ್ಲಿದ್ದ ಬಾಲಿ ಮಿಲ್ಸ್ ಎಂಬೀ ಕಾರ್ಖಾನೆಯು ಈಗ ಹೀನಸ್ಥಿತಿಗೆ ಬಂದು, ಕಾರ್ಖಾನೆಯ ಬಾಗಿಲನ್ನೇ ಮುಚ್ಚಿಬಿಡುವಂತಾಗಿದೆ ಎಂದು ತಂತೀವರ್ತಮಾನ ಬಂದಿದೆ. ಇದನ್ನು ಕೇಳಿ ಎಲ್ಲರೂ ವ್ಯಸನಪಡದಿರಲಾರರು

❦❦❦

ಬಂಗಾಳಾ ಅಧಿಪತ್ಯಕ್ಕೆ ಸೇರಿದ ಭಾಗಲ್ಪುರಕ್ಕೂ ಪೂರ್ಣಿಯಕ್ಕೂ ನಡುವೆ ಕಳೆದ ವಾರ ಇಬ್ಬರು ಅಂಚೇ ಜವಾನರು ವಸ್ತುಗಳನ್ನು ಹೊತ್ತುಕೊಂಡು ಹೋಗುತ್ತಿದ್ದಾಗ ಕಳ್ಳರು ಅವರನ್ನು ಹಿಡಿದು ಪೂರಾ ಗಾಯಮಾಡಿ ಇನ್ಷೂರ್ ಪಾರ್ಸಲುಗಳನ್ನೂ ನಗದು ಹಣವನ್ನೂ ಎತ್ತಿಕೊಂಡು ಹೋದರು. ಪೊಲೀಸಿನವರು ಅವರನ್ನು ತಲಾಷ್ ಮಾಡುತ್ತಿದ್ದಾರೆ

❦❦❦

ಸಂಯುಕ್ತ ಅಧಿಪತ್ಯಗಳಿಗೆ ಸೇರಿದ ಅಲಹಾಬಾದ್, ಕಾನ್ಪುರ ಮೊದಲಾದ ಅನೇಕ ಪಟ್ಟಣಗಳಲ್ಲಿ ಅಂಗಡಿಗಳನ್ನಿಟ್ಟು ಬಹುಕಾಲದಿಂದಲೂ ವ್ಯಾಪಾರ ನಡಿಸುತ್ತಾ ಲೇವಾದೇವಿಯನ್ನೂ ಮಾಡುತ್ತಾ ಇದ್ದ ಬೀರ್ ಸೀತಲ್ ಎಂಬ ಕಂಪನಿಯು ದಿವಾಳಿಯಾಯಿತಲ್ಲದೆ, ಇದರಿಂದ ಸುಮಾರು ಏಳು ಲಕ್ಷ ರೂಪಾಯಿ ಮುಳುಗಿಹೋಯಿತೆಂತಲೂ ತಂತೀ ವರ್ತಮಾನ ಬಂದಿದೆ

❦❦❦

ಕಾನ್ಪುರದಲ್ಲಿ ಕಳೆದ ವಾರ ಸೆಟ್ಟಿ ಕಮಿಷನರವರ ಪತ್ನಿಯವರು ಒಂದು ಸಕ್ಕರೆ ಕಾರ್ಖಾನೆಯನ್ನು ಪ್ರತಿಷ್ಠೆ ಮಾಡಿದರು ಸಕ್ಕರೆ ತಯಾರಾಗುವುದಕ್ಕೆ ಅವಶ್ಯಕವಾದ ಹೊಸ ಯಂತ್ರಸಾಮಗ್ರಿಗಳನ್ನೆಲ್ಲಾ ಈಗಿನ ಕಾಲಕ್ಕೆ ತಕ್ಕಂತೆ ಸೀಮೆಯಿಂದ ತರಿಸಿ ಈ ಕಾರ್ಖಾನೆಯಲ್ಲಿಟ್ಟಿದ್ದಾರೆ ಈ ಕಾರ್ಖಾನೆಗೆ ೩ ಲಕ್ಷ ರೂಪಾಯಿ ಖರ್ಚಾಗಿದೆ ಇದರಲ್ಲಿ ದಿನ ಒಂದಕ್ಕೆ ೨೫ ಟನ್ ತೂಕದಷ್ಟು ಸಕ್ಕರೆ ತಯಾರಾಗುವುದು

❦❦❦

ಇಂಡಿಯಾ ಗವರ್ನಮೆಂಟಿನವರು ಬಂಗಾಳಾ ಅಧಿಪತ್ಯದಲ್ಲಿ ಭಾರೀ ಜಮೀನ್ದಾರರಾಗಿಯೂ ವಿಶೇಷ ಪ್ರಜಾವತ್ಸಲರಾಗಿಯೂ ಇರುವ ದರ್ಭಾಂಗ ಮಹಾರಾಜರವರಿಗೆ ಮಹಾರಾಜಾ ಬಹದೂರ್ ಎಂಬ ಬಿರುದನ್ನು ದಯಪಾಲಿಸಿ ಆ ಬಿರುದನ್ನು ಅವರ ವಂಶೀಕರೆಲ್ಲಾ ಇಟ್ಟುಕೊಳ್ಳಬಹುದೆಂದು ತಿಳಿಸಿರುತ್ತಾರೆ ಈ ಸಂತೋಷವನ್ನು ಪ್ರಕಾಶಪಡಿಸುವುದಕ್ಕಾಗಿ ಮಹಾರಾಜರವರು ಒಂದು ಲಕ್ಷ ರೂಪಾಯಿಯನ್ನು ಧರ್ಮಕಾರ್ಯಗಳಿಗೆ ವಿನಿಯೋಗಿಸಿದರು

❦❦❦

ಪೂನಾ ಪಟ್ಟಣದಲ್ಲಿ ಕುಮಾರ ಬಾಜಾರು ಬಿಷತಕ್ಕೆ ಒಬ್ಬ ಸಾಹೇಬರು ಆಸ್ಟ್ರೇಲಿಯಾ ದ್ವೀಪದಿಂದ ೨೨೫೦ ರೂಪಾಯಿಗೆ ಸಿದ್ದೀಖ್ ಎಂಬ ಶ್ರೇಷ್ಠ ಜಾತಿಯ ಕುದುರೆಯನ್ನು ಕೊಂಡು ತರಿಸಿದ್ದರು ಈ ಕುದುರೆಯು ಕಳೆದ ವಾರ ಸತ್ತುಹೋಯಿತೆಂದು ತಿಳಿದುಬಂದಿದೆ ಆದರೆ ಅದರ ಮಾಲೀಕನು ಆ ಕುದುರೆಯನ್ನು ಇನ್ಷೂರು ಮಾಡಿಸಿ ಹಣ ಕಟ್ಟುತ್ತಿದ್ದದ್ದರಿಂದ ಆತನಿಗೆ ಆ ಬೆಲೆ ಲಂಡನ್ ಇನ್ಷೂರೆನ್ಸ್ ಕಂಪನಿಯಿಂದ ವಸೂಲಾಗುವದು

❦❦❦

ವಿಲಾಯಿತಿಯ ಪಾರ್ಲಿಮೆಂಟಿನಲ್ಲಿ ಮಿ॥ ಮೆಕ್ಕಾರ್ನೆಸ್ ಎಂಬುವನು ಕೇಳಿದ ಪ್ರಶ್ನೆಗೆ ಪ್ರತ್ಯುತ್ತರವಾಗಿ ಇಂಡಿಯಾ ಸ್ಟೇಟ್ ಸೆಕ್ರೆಟರಿ ಮಿ॥ ಮಾರ್ಲಿ ಸಾಹೇಬರು ಹೇಳಿದ್ದೇನೆಂದರೆ ಗೌರವಾನ್ವಿತ ಜನರು ಇಷ್ಟಪಟ್ಟರೆ ಇಂಡಿಯಾ ಗವರ್ನಮೆಂಟಿಗೆ ಅರ್ಜಿ ಬರೆದುಕೊಳ್ಳಬಹುದೆಂದು ಲಾಲಾ ಲಜಪತರಾಯರವರಿಗೂ ಅಜಿತಸಿಂಗರಿಗೂ ತಿಳಿಸಿದ್ದಾಯಿತು ಆ ಪ್ರಕಾರ ಲಾಲಾ ಲಜಪತರಾಯರವರು ವೈಸ್ರಾಯರವರಿಗೆ ಒಂದು ವಿಜ್ಞಾಪನಾಪತ್ರವನ್ನು ಬರೆದುಕೊಂಡಿದ್ದಾರೆ, ಎರಡನೆಯವರು ಬರೆದುಕೊಂಡಿಲ್ಲ ಅವರು ಬರೆದುಕೊಂಡಿರುವ ಸಂಗತಿ ಏನೆಂದು ಹೇಳಲಾರೆನು ಎಂದರು

❦❦❦

ಮದ್ರಾಸ್ ಅಧಿಪತ್ಯಕ್ಕೆ ಸೇರಿದ ಕಂತವಾಡಿ ಎಂಬ ಪಟ್ಟಣದಲ್ಲಿ ಸೆರ್ಜಂಟ್ ಜಿಸ್ಟರು ಒಂದು ಕೊಲೆಯ ಮೊಕದ್ದಮೆಯನ್ನು ವಿಚಾರಣೆ ಮಾಡುತ್ತಿದ್ದಾಗ ಅಸೆಸರು (ಪಂಚಾಯಿತರು)ಗಳ ಪೈಕಿ ನಾಗೇಶ್ವರ ಎಂಬಾತನು ಒಬ್ಬ ಸಾಕ್ಷಿಗಾರನಿಗೆ ಏನೋ ಹೇಳಿಕೊಟ್ಟು ಮೊಕದ್ದಮೆಯನ್ನು ಕೆಡಿಸಬೇಕೆಂದು ಪ್ರಯತ್ನಪಟ್ಟನು. ಸೆರ್ಜಂಟ್ ಜಿಸ್ಟರು ಆ ಅಸೆಸರ ಮೇಲೆ ಮೊಕದ್ದಮೆ ಮಾಡಿ ಅವನನ್ನು ಮ್ಯಾಜಿಸ್ಟ್ರೇಟರಿಂದ ವಿಚಾರಣೆ ಮಾಡಿಸಿದರು. ಮ್ಯಾಜಿಸ್ಟ್ರೇಟರು ಆ ಅಸೆಸರಿಗೆ ಎರಡು ವರುಷಗಳ ಕಠಿಣಸಜಾ ವಿಧಿಸಿದ್ದಾರೆ

❦❦❦

ಕ್ವಿಲಾನ್ ಪಟ್ಟಣದ ಬಳಿ ಪಕ್ಕಿ ಎಂಬೊಂದು ಗ್ರಾಮದಲ್ಲಿ ಕಳೆದ ಜನವರಿ ತಿಂಗಳಲ್ಲಿ ಬೆಂಕಿಯ ದೆಸೆಯಿಂದ ಮನೆಗಳೆಲ್ಲಾ ಸುಟ್ಟುಹೋದವು ಪ್ರಜೆಗಳು ಸರ್ವಸ್ವವನ್ನೂ ಕಳೆದುಕೊಂಡು ತುಂಬಾ ಕಷ್ಟಪಡುತ್ತಿದ್ದರು, ಅವರ ಕಷ್ಟ ನಿವಾರಣೆಗಾಗಿ ಕೆಲವು ಪ್ರಮುಖರು ಒಂದು ಫಂಡು ಮಾಡಿ ೪೦೦ ರೂಪಾಯಿ ಕೂಡಿಸಿದರು ತಿರುವಾಂಕೂರು (ಅನಂತಶಯನದ) ಮಹಾರಾಜರವರು ಆ ಫಂಡಿಗೆ ೯೦೦ ರೂಪಾಯಿ ಧರ್ಮ ಮಾಡಿದರು. ಈಗ ಪಂಚಾಯಿತರು ಸೇರಿ ಆ ಹಣವನ್ನೆಲ್ಲಾ ಆ ಗ್ರಾಮದ ಬಡಬಗ್ಗರಿಗೆ ಹಂಚಿಕೊಟ್ಟಿದ್ದಾರೆ

❦❦❦

ಕಲ್ಕತ್ತಾ ಪಟ್ಟಣದಲ್ಲಿ ಒಬ್ಬ ಬಂಗಾಳಿ ಬಾಬೂವು ಒಂದು ಚಿರತೆಯನ್ನು ತನ್ನ ಮನೆಯಲ್ಲಿಟ್ಟುಕೊಂಡು ಸಾಕುತ್ತಿದ್ದನು. ಅದು ಕಳೆದ ವಾರ ಮನೆಯಲ್ಲಿ ಯಾರೂ ಇಲ್ಲದಿದ್ದಾಗ ತನ್ನ ಬೋನಿನಿಂದ ಹೊರಗೆ ಬಂದು ಗಾಬರಿಯನ್ನುಂಟುಮಾಡಿತು ಅನೇಕ ಜನರು ಅದನ್ನು ಹಿಡಿಯಬೇಕೆಂದೂ ಕೊಲ್ಲಬೇಕೆಂದೂ ಮಾಡಿದ ಪ್ರಯತ್ನಗಳೆಲ್ಲಾ ವ್ಯರ್ಥವಾದವು ಈ ಪ್ರಯತ್ನದಲ್ಲಿ ಅದು ೩-೪ ಜನರಿಗೆ ಗಾಯ ಮಾಡಿತು ಕಡೆಗೆ ಮಿ॥ ಮೆರಿವೆದರ್ ಎಂಬಾತನು ಪಿಸ್ತೂಲು ಫೈರು ಮಾಡಿ ಹೊಡೆದು ಕೊಂದುಬಿಟ್ಟನು ಗಾಯಪಟ್ಟ ಜನರು ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿದ್ದಾರೆ

❦❦❦

ಕಲ್ಕತ್ತಾ ಪಟ್ಟಣದ ಪ್ರಾವಿಡೆಂಟ್ ಇನ್ಸ್ಟಿಟ್ಯೂಟ್ ಎಂಬ ಫಂಡಿಗೆ ಮ್ಯಾನೇಜರಾಗಿದ್ದ ಕಮಲ ಕೃಷ್ಣ ಬೋಸ್ ಎಂಬ ಬಂಗಾಳಿಯು ಆ ಫಂಡಿನ ಚಂದಾದಾರರಿಗೆ ಮೋಸ ಮಾಡಿದನೆಂದು ಆಗಿದ್ದ ಮೊಕದ್ದಮೆಯಲ್ಲಿ ಗೋಪಾಲಪುರಿ ಮ್ಯಾಜಿಸ್ಟ್ರೇಟರು ಜಡ್ಜ್‌ಮೆಂಟು ಹೇಳಿ, ಅಪರಾಧಿಯು ಬಹಳ ದೊಡ್ಡ ಮೋಸಕೃತ್ಯವನ್ನು ನಡಿಸಿ ಅನೇಕರನ್ನು ನಂಬಿಸಿ ಅವರ ಹಣ ಕಿತ್ತುಕೊಂಡು ವಂಚಿಸಿದನಾದ್ದರಿಂದ ಅವನಿಗೆ ಪೂರಾ ಶಿಕ್ಷೆ ವಿಧಿಸಬೇಕೆಂದು ತೀರ್ಮಾನಿಸಿ, ನಾಲ್ಕು ವರುಷ ಕಠಿಣ ಸಜಾ ೫,೦೦೦ ರೂಪಾಯಿ ಜುಲ್ಮಾನೆ, ಜುಲ್ಮಾನೆ ಪಾವತಿ ಆಗದಿದ್ದರೆ ಇನ್ನೊಂದು ವರುಷದ ಕಠಿಣ ಸಜಾ ಎಂಬೀ ಶಿಕ್ಷೆಯನ್ನು ವಿಧಿಸಿದರು

❦❦❦

ಮದರಾಸ್ ಅಧಿಪತ್ಯಕ್ಕೆ ಸೇರಿದ ರಾಜಮಂಡ್ರಿ ವಿದ್ಯಾಶಾಲೆಯ ಕೆಲವು ವಿದ್ಯಾರ್ಥಿಗಳನ್ನು ಅವರು ಅವಿಧೇಯತೆಯನ್ನು ತೋರಿಸಿದರೆಂದು ಹೇಳಿ ಮದರಾಸ್ ಗವರ್ನಮೆಂಟಿನವರು ಯೂನಿವರ್ಸಿಟಿ ಪರಿ

ಕ್ಷೆಗಳಿಗೆ ಸೇರಿಸಕೊಂಡಿಂತಲೂ ಯಾವ ಇತರ ಸ್ಕೂಲುಗಳಿಗೂ ಸೇರಿಸಕೊಂಡಿಂತಲೂ ಸಾಸಾಪ್ರಕಾರವಾಗಿ ಶಿಕ್ಷೆ ವಿಧಿಸಿದರಷ್ಟೆ. ಮದರಾಸ್ ಯೂನಿವರ್ಸಿಟಿ ವಿದ್ಯಾಸಂಘದವರು ಕಳೆದ ವಾರ ಸಭೆ ಸೇರಿ ಮದರಾಸ್ ಗವರ್ನಮೆಂಟಿನವರ ಹುಕುಮನ್ನು ಕುರಿತು ಚರ್ಚೆ ಮಾಡಿ, ಶಿಕ್ಷೆ ವಿಧಿಸಲ್ಪಟ್ಟ ಆ ವಿದ್ಯಾರ್ಥಿಗಳೆಲ್ಲಾ ತಮ್ಮ ಅಭಿಪ್ರಾಯವನ್ನು ಬರಹಮೂಲಕ ತಿಳಿಸಬೇಕೆಂದೂ ಅದನ್ನು ನೋಡಿಕೊಂಡು ವಿದ್ಯಾ ಸಂಘದವರು ತೀರ್ಮಾನ ಮಾಡಬೇಕೆಂದೂ ಗೊತ್ತು ಮಾಡಿದಾರೆ.

***

ಕಲ್ಕತ್ತಾ ಪಟ್ಟಣದಲ್ಲಿ ದೇಶಭಕ್ತ ಸ್ವರ ಗುಂಪಿಗೆ ಸೇರಿದ (ನ್ಯಾಷನಲ್ ವಾಲಂಟಿಯರ್ಸ್) ಸುಮಾರು ೨೦೦-೩೦೦ ಮಂದಿ ವಿದ್ಯಾರ್ಥಿಗಳು ದೊಣ್ಣೆಗಳನ್ನು ಹಿಡಿದು, ಆಮುಮಾ ಎಂಬ ಮಾರ್ಕೆಟ್ಟಿಗೆ ಹೋಗಿ, ಅಲ್ಲಿ ವರ್ತಕರ ಅಂಗಡಿಗಳಲ್ಲಿದ್ದ ಇಂಗ್ಲಿಷ್ (ವಿಲಾಯತಿಯಿಂದ ಬಂದ) ಸರಕುಗಳನ್ನು ಎಳೆದುಹಾಕಿ ಸುಡುತ್ತಾ ಬಂದರು. ಲಿವರ್‌ಪೂಲ್ ಉಪ್ಪನ್ನು (ವಿಲಾಯತಿಯದು) ತೆಗೆದು ನದಿಯೊಳಕ್ಕೆ ಎಸೆದವರು ಆ ಹುಡುಗರೆಲ್ಲಾ ದೊಡ್ಡ ಮನುಷ್ಯರ ಮಕ್ಕಳೆಂದು ತಿಳಿದು ಬಂತು. ಪೋಲೀಸಿನವರು ಆ ಸ್ಥಳಕ್ಕೆ ಹತ್ತು ಮಂದಿಯನ್ನು ಹಿಡಿದು ಅವರ ಮೇಲೆ ಮೊಕದ್ದಮೆ ತಂದರು. ಮ್ಯಾಜಿಸ್ಟ್ರೇಟರು ಅವರಲ್ಲಿ ಒಬ್ಬನಿಗೆ ನಾಲ್ಕು ತಿಂಗಳೂ, ಇನ್ನಿಬ್ಬರಿಗೆ ಅಲಾ ಮೂರು ತಿಂಗಳಂತೆಯೂ ಕಠಿಣಸಜಾ ವಿಧಿಸಿರುತ್ತಾರೆ.

***

ಕಳೆದ ವಾರ ಕಲ್ಕತ್ತೆಯ ಬೀಡನ್ ಎಂಬ ಚೌಕದ ಮೈದಾನಿನಲ್ಲಿ ಮಿ॥ ಬಿಪಿನ್ ಚಂದ್ರಪಾಲ್ ಯವರು ಒಂದು ಪಬ್ಲಿಕ್ ಮೀಟಿಂಗ್ ನಡಸಿ, ಸಭಿಕರನ್ನು ಕುರಿತ ಉಪನ್ಯಾಸ ಮಾಡುತ್ತಾ—"ಹಿಂದೂಸ್ಥಾನದ ಪ್ರಜೆಗಳು ಎಚ್ಚರವಾಗಬೇಕು. ಸ್ವಾತಂತ್ರ್ಯವನ್ನು ಸ್ಥಾಪಿಸುವ ಶಕ್ತಿಯುಳ್ಳರಾಗಬೇಕು. ಸ್ವದೇಶಾಭಿಮಾನದಿಂದ ಕಾರ್ಯಗಳನ್ನು ನಡಸಬೇಕು. ಇನ್ನು ಮುಂದೆ ದೇಶದ ದೊಡ್ಡ ಸಭೆಗಳನ್ನು ನಡಸಬಹುದಿಲ್ಲ. ಸಣ್ಣ ಸಣ್ಣ ಕೂಟಗಳು ಸೇರಬಹುದು. ಅಗ್ಗ ದೊಡ್ಡ ಸಭೆಗಳಲ್ಲಿ ನಡಸಲಸಾಧ್ಯವಾದಂಥಾ ಅನೇಕ ಸಂಗತಿಗಳನ್ನು ಬಹಳ ಚನ್ನಾಗಿಯೂ ತೃಪ್ತಿಕರವಾಗಿಯೂ ಚರ್ಚಿಸಬಹುದು. ಕೂಟದಲ್ಲಿ ಸೇರಿದವರು ಧಾರಾಳವಾಗಿ ತಮ್ಮ ತಮ್ಮ ಅಭಿಪ್ರಾಯಗಳನ್ನು ಪ್ರಕಾಶಪಡಿಸಲು ತುಂಬಾ ಅನುಕೂಲವಾಗುತ್ತದೆ" ಎಂಬ ರೀತಿಯಾಗಿ ಹೇಳಿದರು.

***

ಕಳೆದ ಆಗೀಷ್ಟು ತಿಂಗಳಲ್ಲಿ ೮ ಜನ ಕಳ್ಳರು ಗೋದಾವರಿ ಪಟ್ಟಣದ ಒಬ್ಬ ಸಾಹುಕಾರನ ಮನೆಗೆ ನುಗ್ಗಿ ಅವನನ್ನೂ ಅವನ ಆಶ್ರಿತರನ್ನೂ ಪುಗಿಲನ್ನೂ ಹೊಡೆದು ಗಾಯ ಮಾಡಿ ಸ್ವತ್ತನ್ನು ಅಪಹರಿಸಿಕೊಂಡು ಹೋದರು. ಗಾಯ ಪಟ್ಟ ಆ ಮೂರು ಮಂದಿಯೂ ಮೃತಪಟ್ಟರು. ಕೆಲವು ದಿನಗಳ ಮೇಲೆ ಪೋಲೀಸಿನವರು ಆರು ಜನರನ್ನು ಹಿಡಿದು ಅವರ ಮೇಲೆ ಮೊಕದ್ದಮೆ ತಂದರು. ರುಜುವಾತಾಗದೆ ಹೋದದ್ದರಿಂದ ಅವರನ್ನೆಲ್ಲಾ ಖುಲಾಸ್ ಮಾಡಿಬಿಟ್ಟರು. ಕೆಲವು ತಿಂಗಳು ಕಳೆದು ಹೋದ ಮೇಲೆ ಇನ್ನೊಬ್ಬ ಪೋಲೀಸ್ ಇನ್‌ಸ್ಪೆಕ್ಟರು ಹೋಗಿ ಪತ್ತೆ ತರಹೂದು ನಡಸಿ, ಅದೇ ಆರು ಜನರನ್ನು ಹಿಡಿದು ಮೊಕದ್ದಮೆ ಮಾಡಿದರು. ಸೆಷನ್ಸ್ ಜಡ್ಜರು ವಿಚಾರಣೆಯಿಂದ ಆ ಸ್ಥಳಕ್ಕೆ ಮೂರು ಮಂದಿಯನ್ನು ಖುಲಾಸ್ ಮಾಡಿ, ಇಬ್ಬರಿಗೆ ಮರಣದಂಡನೆಯನ್ನು ಒಬ್ಬನಿಗೆ ಟ್ರಾನ್ಸ್‌ಪೋರ್ಟೇಶನ್ ಸಜವನ್ನೂ ವಿಧಿಸಿದರು. ಈಗ ಈ ಮೂರು ಮಂದಿಯೂ ಮದರಾಸ್ ಹೈಕೋರ್ಟಿನಲ್ಲಿ ಅಪೀಲ್ ಮಾಡಿಕೊಂಡಿದಾರೆ. ಮೊಕದ್ದಮೆ ನಡೆಯುತ್ತಿರುವುದು.

***

ಗಡೀಪಾರಾಗಿರುವ ಲಾಲಾ ಲಜಪತ್ ರಾಯ್ ಯವರ ಜೊತೆ ಅಜಿತ್‌ಸಿಂಗರವರ ವಿಷಯವಾಗಿ ಕಳೆದ ವಾರ ತಿಳಿದು ಬಂದಿರುವ ಸಮಾಚಾರವೇನೆಂದರೆ—ಮಾಂಡಲೆ ಪಟ್ಟಣದ ಪೂರ್ವದಿಕ್ಕಿನ ಕೋಟೆ ಬಾಗಿಲು ಬಳಿ ಇರುವ ಬಂಗಲೆಯಲ್ಲಿ ಅವರಿಬ್ಬರನ್ನೂ ಪ್ರತ್ಯೇಕ ಪ್ರತ್ಯೇಕವಾದ ಕಟ್ಟಡಗಳಲ್ಲಿ ಇಟ್ಟು ಕಾಪಾಡುತ್ತಿದಾರೆ. ಅಜಿತಸಿಂಗರಿರುವ ಕಟ್ಟಡವು ತುಂಬಾ ದೊಡ್ಡದು. ಲಾಲಾ ಲಜಪತ್ ರಾಯ್ ಯವರು ಅವರ ಮೇಲುಸ್ತುವಾರಿ ಇರುವ ಪೋಲೀಸ್ ಇನ್‌ಸ್ಪೆಕ್ಟರ ಸಂಗಡ ಪ್ರತಿದಿನ ಸಾಯಂಕಾಲವೂ ಬಹಳ ಹೊರಕ್ಕಾಗಿ ಸವಾರಿ ಉದ್ದಿಶ್ಯ ಸಂಚಾರ ಮಾಡುತ್ತಾರೆ. ಯಾರೂ ಅವರ ಸಂಗಡ ಮಾತಾಡಕೂಡದು. ಆದರೂ ಅವರನ್ನು ಕಾಣಕೂಡದು. ಇದಕ್ಕೆ ತಪ್ಪಿ ಕಮೀಷನರಿಂದ ಅಪ್ಪಣೆ ಪಡೆದು ಬರಬೇಕು. ಆದರೆ ಅವರು ತಿರುಗಾಡುವಾಗ್ಗೆ ಅನೇಕ ಜನರು ಅವರಿಗೆ ಕೈ ಮುಗಿಯುತ್ತಾರೆ. ಅವರು ಪ್ರತಿಯಾಗಿ ಕೈ ಮುಗಿಯುವರು. ಬಂಗಲೆಯಲ್ಲಿ ರುವಾಗ್ಗೆ ಅದರ ಪಡಸಾಲೆಯಲ್ಲಿ ಒಂದು ದೊಡ್ಡ ಕುರ್ಚಿಯ ಮೇಲೆ ಒರಗಿಕೊಂಡು ಒಂದು ಪುಸ್ತಕವನ್ನು ಓದುತ್ತಾ ಇರುತ್ತಾರೆ. ಅಂತು ಇವರೂ ಅಜಿತ್ ಸಿಂಗರೂ ಆರೋಗ್ಯದಿಂದ ಚನ್ನಾಗಿದಾರೆ ಎಂಬುದೇ.

ವಿದೇಶ ವರ್ತಮಾನಗಳು

ಅಮೇರಿಕಕ್ಕೆ ಸೇರಿದ ಜಾರ್ಜಿಯಾ ಎಂಬ ಪಟ್ಟಣದಲ್ಲಿ ಆಕಸ್ಮಾತ್ತಾಗಿ ಒಂದು ಸಿರಂಗಿಯು ಹಾರಿ ಒಡೆದು ಅನಾಹುತವಾಯಿತು. ಅದರಲ್ಲಿ ಹತ್ತು ಜನರು ಸಿಕ್ಕಿ ಕೊಲೆಯಾದರು. ಗಾಯಪಟ್ಟ ಇನ್ನೂರು ಮಂದಿ ಬದುಕುವಂತಿಲ್ಲ.

***

ಇಟಲಿ ರಾಜ್ಯದ ಮಾಜಿ ಮಂತ್ರಿಯಾದ ನಾಸಿ ಎಂಬುವನು ಮಂತ್ರಿಯಾಗಿದ್ದಾಗ್ಗೆ ಅನೇಕ ಅಕ್ರಮ ಕೃತ್ಯಗಳನ್ನು ಮಾಡಿದ್ದವನಾಗಿ ತಿಳಿದು ಬಂದದ್ದರಿಂದ ಈಗಿನ ಮಂತ್ರಿಗಳೇ ಉಚಿತ ಶಿಕ್ಷೆಯನ್ನು ವಿಚಾರ್ಮಾಡಬೇಕೆಂದು ಗೊತ್ತುಮಾಡಿದಾರೆ.

***

ಟ್ರಾನ್ಸ್‌ವಾಲಿಗೆ ಸೇರಿದ ಜಾಕ್ಸನ್‌ಬರ್ಗ್ ಎಂಬ ಪಟ್ಟಣದಲ್ಲಿ ಯಾರೋ ಮದ್ದಿನ ಗುಂಡುಗಳನ್ನಿಟ್ಟು ಪಚ್ಚೆ ಒಂದು ಥಾರ್ನಿ ಹೋಟೇಲನ್ನು ಉಡಾಯಿಸಿ ಬಿಟ್ಟರು. ಇದರಿಂದ ಕಟ್ಟಡವು ಹಾಳಾದದ್ದಲ್ಲದೆ ಮೂರು ಮಂದಿ ಸತ್ತರು. ಕೆಲವರಿಗೆ ಗಾಯಗಳಾದವು.

***

ರಷ್ಯಾ ರಾಜ್ಯಕ್ಕೆ ಸೇರಿದ ದಕ್ಷಿಣ ಮತ್ತು ಮಧ್ಯ ಪ್ರಾಂತ್ಯಗಳಲ್ಲಿ ಮಳೆಯೂ ಆನೆಕಲ್ಲುಗಳೂ ಅಪಾರವಾಗಿ ಸುರಿದು ರೈತರು ಮಾಡಿದ್ದ ಬೆಳೆಗಳೆಲ್ಲಾ ಹಾಳಾದವೆಂದೂ ಇದರಿಂದ ಕ್ಷಾಮವುಪ್ಪತ್ತಿ ಯಾಗಿ ಪ್ರಜೆಗಳೆಲ್ಲಾ ಕಳವಳಪಡುತ್ತಿದ್ದಾರೆಂದೂ ತಂತೀ ವರ್ತಮಾನ ಬಂದಿದೆ.

***

ಕೋರಿಯಾ ರಾಜ್ಯದ ರಾಜಧಾನಿಯಾದ ಸಿಯೋಲ್ ಪಟ್ಟಣದಲ್ಲಿ ಅರಮನೆಯ ಜನಾನಾ ಸ್ತ್ರೀಯರು ಇರತಕ್ಕ ಭಾಗಗಳಲ್ಲಿ ೨೮ ಜನರು ಯಾವ ಕಾರಣದಿಂದಲೋ ಅಡಗಿಕೊಂಡಿದ್ದು ಆಕಸ್ಮಾತ್ತಾಗಿ ಸಿಕ್ಕಿಬಿದ್ದರು. ಅವರು ಅಲ್ಲಿನ ಮಂತ್ರಿಗಳನ್ನು ಕೊಲ್ಲಬೇಕೆಂದು ಮಸಲತ್ತು ಮಾಡಿಕೊಂಡಿದ್ದರೆಂದು ಹೇಳುತ್ತಾರೆ.

***

ಮೊರೊಕ್ಕೋದಲ್ಲಿ ಒಬ್ಬ ಮುಖಂಡನು ಸರ್ ಹ್ಯಾರಿ ಮೆಕ್ಲೀನ್ ಯವರನ್ನೂ ಇನ್ನೂ ಕೆಲವು ಇಂಗ್ಲಿಷರನ್ನೂ ಕೈಸೆರೆ ಹಿಡಿದು ಇಟ್ಟುಕೊಂಡಿದಾನಷ್ಟೆ. ಈಗ ಅವನ ಮೇಲೆ ಯುದ್ಧ ಮಾಡಿ, ಅವರನ್ನು ಬಿಡಿಸಿಕೊಂಡು ಬರುವುದಕ್ಕಾಗಿ ಇಂಗ್ಲಿಷರು ಒಂದು ಸಾವಿರ ಸೈನಿಕರನ್ನು ಫೆಜ್ ಪಟ್ಟಣದಿಂದ ಆ ಪ್ರಾಂತ್ಯಕ್ಕೆ ಕಳುಹಿಸಿದಾರೆ.

***

ಪಶ್ಚಿಮಖಂಡದಲ್ಲಿ ರಷ್ಯಾದವರಿಗೆ ಸೇರಿದ ಟ್ರಾನ್ಸ್ ಕಾಕೇಷಿಯಾ ಎಂಬ ವಿಭಾಗದೊಳಗೆ ಮುಖ್ಯಪಟ್ಟಣವಾಗಿರುವ ಟಿಫ್ಲಿಸ್ ನಗರದಲ್ಲಿ ಮಾಜಿ ಗವರ್ನರ್ ಜನರಲ್ ಅಲಿಖಾನಾಫ್ ಯವರನ್ನೂ ಅವರ ಹಿಂದಿನವರನ್ನೂ ಜನರಲ್ ಗ್ಲಿಕಾಫ್ ಯವರನ್ನೂ ಒಬ್ಬ ಸೈನಿಕನನ್ನೂ ದುಷ್ಕರ್ಮಿಯೊಬ್ಬ ಮದ್ದಿನ ಗುಂಡು ಹಾರಿಸಿ ಕೊಂದು ಹಾಕಿರುತ್ತಾರೆಂದು ತಂತೀ ವರ್ತಮಾನ ಬಂದಿದೆ.

***

ವಿಲಾಯತಿಯಲ್ಲಿ ಕಾಲವಾದ ಸರ್ ಟಿ ಡಿರ್ಕ್ಸ್ ಎಂಬ ದೊಡ್ಡ ವರ್ತಕನೂ ಪಾರ್ಲಿಮೆಂಟ್ ಮೆಂಬರೂ ೧೯,೦೦೦ ರೂಪಾಯನ್ನೂ, ವಿ ಸರ್ ವಿಲ್ ಮರ್ ಎಂಬಾತನೂ ೬೦ ಲಕ್ಷ ರೂಪಾಯನ್ನೂ, ಮಿಸೆಸ್ ಫ್ರಾನ್ಸಿಸ್ ರೇನಾಲ್ಸ್ ಎಂಬಾಕೆಯೂ ೩೦,೦೦೦ ರೂಪಾಯನ್ನೂ, ಮಿ॥ ಅಲೆಕ್ಸಾಂಡರ್ ಕ್ರೋಮರ್ ಎಂಬಾತನು ೨೦,೦೦೦ ರೂಪಾಯನ್ನೂ ಧರ್ಮಕಾರ್ಯಗಳಿಗೆ ವಿನಿಯೋಗಿಸಬೇಕೆಂದು ಮರಣಶಾಸನವನ್ನು ಬರೆದಿರುತ್ತಾರೆ.

***

ಅಮೇರಿಕದ ಮುಖ್ಯಪಟ್ಟಣವಾದ ನ್ಯೂಯಾರ್ಕಿನಲ್ಲಿ ಭಿಕ್ಷುಕರ ಹಾವಳಿ ಬಲವಾಗಿರುತ್ತದೆ. ಇವರಿಂದ ಅನೇಕ ಕಳ್ಳತನ ದರೋಡೆ, ಕೊಲೆಕೃತ್ಯ, ಈ ಮೊದಲಾದವುಗಳು ನಡೆಯುವವೆಂದು ಸರ್ಕಾರಕ್ಕೆ ತಿಳಿದು ಬಂದದ್ದರಿಂದ ಅಲ್ಲಿನ ಕೆಲವು ದೊಡ್ಡಮನುಷ್ಯರನ್ನು ಯೂರೋಪ್ಯರ ರಾಜ್ಯಗಳಿಗೆ ಕಳುಹಿಸಿ ಆ ರಾಜ್ಯಗಳಲ್ಲಿ ಭಿಕ್ಷುಕರನ್ನು ಹತೋಟಿಯಲ್ಲಿಟ್ಟುಕೊಳ್ಳುವುದಕ್ಕೆ ಯಾವ ಕ್ರಮಗಳನ್ನಿಟ್ಟುಕೊಂಡಿದಾರೆಂದು ತಿಳಿದು ಬರಬೇಕೆಂದು ಅಪ್ಪಣೆ ಕೊಟ್ಟಿರುವರು. ಇದಲ್ಲದೆ ಆ ಪಟ್ಟಣದಲ್ಲಿ ಯಾವ ಮನೆಯವರೂ ಭಿಕ್ಷುಕರಿಗೆ ಯಾವ ವಿಧವಾದ ಸಹಾಯವನ್ನೂ ಮಾಡಕೂಡದೆಂದು ಇಸ್ತಿಹಾರು ಹಾಕಿಸಿರುತ್ತಾರೆ.

***

ಗ್ರೀಸ್ ರಾಜ್ಯಕ್ಕೆ ಸೇರಿದ ಥೆಸಲಿ ಪಟ್ಟಣದಲ್ಲಿ ಅಥೇನಾಸ್ ಎಂಬ ನದಿಯ ಪ್ರವಾಹಗಳು ಅಪಾರವಾಗಿ ಬಂದು ತುಂಬಾ ನಷ್ಟ ಮಾಡಿರುತ್ತವೆ. ತ್ರಿಕಾಲಾ ಎಂಬ ಪಟ್ಟಣದ ಅನೇಕ ಭಾಗಗಳು ಪ್ರವಾಹಗಳಲ್ಲಿ ಮುಳುಗಿ ಹೋದವು. ಮರದಲ್ಲೇ ಕಟ್ಟಿಕೊಂಡಿದ್ದ ೧,೦೦೦ ಮನೆಗಳು ಕೊಚ್ಚಲ್ಪಟ್ಟವು. ನೂರಾರು ಪ್ರಜೆಗಳು ಪ್ರವಾಹದಲ್ಲಿ ಸಿಕ್ಕಿ ಮೃತಪಟ್ಟರು. ಸುಮಾರು ೩೦೦ ಮಂದಿಯ ಹೆಣಗಳು ಸಿಕ್ಕಿರುತ್ತವೆ. ಆ ಪಟ್ಟಣದಲ್ಲೂ ಸುತ್ತುಮುತ್ತಿನ ಗ್ರಾಮಾಂತರಗಳಲ್ಲೂ ಪ್ರಜೆಗಳು ಬಹಳ ಕಷ್ಟನಷ್ಟಗಳಿಗೆ ಗುರಿಯಾಗಿ ದುಃಖಪಡುತ್ತಿದಾರೆ. ಮಂತ್ರಿಶ್ರೇಷ್ಠರು ಆ ಪ್ರಾಂತ್ಯಕ್ಕೆ ಸಂಚಾರ ಹೊರಟು ಪ್ರಜೆಗಳಿಗೆ ಧೈರ್ಯ ಹೇಳುತ್ತಲೂ ಬೇಕಾದ ಸಹಾಯಸಂಪತ್ತುಗಳನ್ನು ಒದಗಿಸಿಕೊಡುತ್ತಲೂ ಇದಾರೆ.

***

ಚೀನಾ ರಾಜಧಾನಿಯಾದ ಪೀಕಿಂಗ್ ಪಟ್ಟಣದಲ್ಲಿ ಬಾಕ್ಸರ್ ದಂಗೆಗಳು ನಡೆದು ಅಲ್ಲಿದ್ದ ಪರರಾಜ್ಯಗಳ ಪ್ರಜೆಗಳಿಗೂ ಅವರ ಆಸ್ತಿಪಾಸ್ತಿಗಳಿಗೂ ತುಂಬಾ ನಷ್ಟಸಂಭವಿಸಿದ್ದರಿಂದ ಆಯಾ ರಾಜ್ಯಗಳವರಿಗೆ ಚೀನಾ ಗವರ್ನಮೆಂಟಿನವರು ಪರಿಹಾರದ್ರವ್ಯವನ್ನು ಕೊಡುವುದಾಗಿ ಒಪ್ಪಿಕೊಂಡರು. ಆ ಪ್ರಕಾರ ಅಮೇರಿಕದವರಿಗೆ ೩೦೦ ಲಕ್ಷ ರೂಪಾಯಿ ಸಲ್ಲಬೇಕಾಗಿತ್ತು. ಇದರಲ್ಲಿ ಚೀನಾದವರು ೧೮೦ ಲಕ್ಷ ರೂಪಾಯಿ ಈ ವರೆಗೆ ಪಾವತಿಮಾಡಿರುತ್ತಾರೆ. ಮೇಲ್ಕಂಡ ಹಣದ ಬಡ್ಡಿ ಮುಂತಾದ್ದು ಸೇರಿ ಇನ್ನೂ ಪಾವತಿ ಆಗಬೇಕಾಗಿರುವ ೩೩೦ ಲಕ್ಷ ರೂಪಾಯನ್ನು ಅಮೇರಿಕಾ ಗವರ್ನಮೆಂಟಿನವರು ವಸೂಲ್ಮಾಡಬೇಕಾದದ್ದಿಲ್ಲವೆಂದು ತೀರ್ಮಾನ ಮಾಡಿರುತ್ತಾರೆ. ಇದರಿಂದ ಚೀನಾ ಸರ್ಕಾರದವರಿಗೆ ತುಂಬಾ ಲಾಭವಾಯಿತೆಂದು ಹೇಳಬಹುದು.

***

ಕಳೆದ ೧೮೯೩ ನೆ ಇಸವಿಯಲ್ಲಿ ಜಾರ್ಜಿಯಾ ಎಂಬ ರಾಜ್ಯದ ದೊರೆಯು ಕರಾರು ಮಾಡಿಕೊಂಡು ತನ್ನ ರಾಜ್ಯವನ್ನು ರಷ್ಯಾ ಚಕ್ರಾಧಿಪತ್ಯಕ್ಕೆ ವಹಿಸಿಬಿಟ್ಟನು. ಅಲ್ಲಿಂದೀಚೆಗೆ ರಷ್ಯಾದವರು ಕಳೆದ ಎರಡು ವರುಷಗಳಿಂದಲೂ ಆ ಪ್ರಜೆಗಳನ್ನು ಬಹಳ ಕ್ರೂರತರವಾಗಿ ನಡೆಸುತ್ತಿದ್ದಾರೆಂದೂ, ಜಾರ್ಜಿಯಾದಲ್ಲಿ ಪಟ್ಟಣಗಳೂ ಗ್ರಾಮಗಳೂ ನಾಶವಾದವೆಂದೂ, ಅನೇಕ ಸಹಸ್ರ ಪ್ರಜೆಗಳನ್ನು ರಷ್ಯಾದವರು ಹಿಡಿದು ಸೈಬೀರಿಯಾ ಮುಂತಾದ ಕಡೆಗಳಿಗೆ ಗಡೀಪಾರು ಮಾಡಿರುತ್ತಾರೆಂದೂ ಕೆಲವು ಮುಖಂಡರು ಅರ್ಜಿಗಳನ್ನು ಬರೆದು, ಹೇಗ್ ಪಟ್ಟಣದಲ್ಲಿ ಸೇರಿರುವ ಪಂಚಾಯಿತಿ ಕೋರ್ಟಿಗೆ ಒಪ್ಪಿಸಿರುತ್ತಾರೆ. ಆ ಪಂಚಾಯಿತಿ ಕೋರ್ಟಿನವರು ರಷ್ಯಾದವರ ಮೇಲೆ ಬಂದಿರುವ ಈ ಆಕ್ಷೇಪಣೆಯನ್ನು ಕುರಿತು ತನಿಖೆ ಮಾಡುತ್ತಾರೆಯೋ ಇಲ್ಲವೋ ಮುಂದೆ ನೋಡಬೇಕು.

***

ಮಡಗಾಸ್ಕರ್ ದ್ವೀಪದ ಜರ್ಮನರಿಗೆ ಸೇರಿದ್ದ ಭಾಗದಲ್ಲಿರುವ ಕಾಡುಜನರನ್ನು ಅವರು ಇದುವರೆಗೆ ತಮ್ಮ ಸ್ವಾಧೀನಕ್ಕೆ ತಂದುಕೊಂಡಿರಲಿಲ್ಲ. ಈ ಕಾಡು ಜನರು ಬಹಳ ಬಲಿಷ್ಠರೆಂದು ವಿಳಿದ್ದರಿಂದ ಜರ್ಮನ್ ಸೈನ್ಯಗಳು ಹೋಗಿ ಅವರ ಮೇಲೆ ನಾಲ್ಕಾರು ಕಡೆ ಯುದ್ಧಕಾರ್ಯಗಳನ್ನು ನಡಸಿ, ಅವರ ಮುಖ್ಯ ಪ್ರದೇಶಗಳನ್ನೆಲ್ಲಾ ಕಿತ್ತುಕೊಂಡರು. ಈ ಕಾರ್ಯದಲ್ಲಿ ಸುಮಾರು ೩೫೦ ಮಂದಿಯವರೆಗೆ ಜರ್ಮನ್ ಸೈನಿಕರು ಪ್ರಾಣ ಕೊಡಬೇಕಾಯಿತು. ಆ ದ್ವೀಪವು ವಿರಳ ಫಲವತ್ತಾದ್ದು. ಅದರಲ್ಲಿರುವ ಕರ್ಪೂರ ಗಿಡಗಳ ಕಾಡುಗಳು ಬಹು ಅಮೂಲ್ಯವಾಗಿರುತ್ತವೆ. ಇದಲ್ಲದೆ ಅಲ್ಲಿ ಅನೇಕ ಬೆಲೆಯುಳ್ಳ ಲೋಹಗಳು ಸಿಕ್ಕುವವೆಂದೂ ಕಂಡುಬಂದಿರುವುದು. ಆದಕಾರಣ ಈಗ ಈ ದ್ವೀಪವನ್ನು ಜರ್ಮನವರು ಸಂಪೂರ್ಣವಾಗಿ ತಮ್ಮ ಸ್ವಾಧೀನಾನುಭವಕ್ಕೆ ತಂದುಕೊಂಡಿದ್ದರಿಂದ ಅವರ ಕೀರ್ತಿ ವಳಿಯು ಬಹಳವಾಗಿ ಹೆಚ್ಚಾಗಲು ಅನುಮಾನವಿಲ್ಲ.

***

ಜಪಾನವರು ಕೋರಿಯಾ ರಾಜ್ಯವನ್ನು ಆಕ್ರಮಿಸಿಕೊಂಡು ಕೋರಿಯಾ ಚಕ್ರವರ್ತಿಯನ್ನು ಪದಚ್ಯುತಿ ಮಾಡಿಸಿಬಿಟ್ಟರು. ಅಲ್ಲಿನ ಕಾರುಬಾರುಗಳನ್ನೆಲ್ಲಾ ತಮ್ಮ ಕಡೆಯ ಅಧಿಕಾರಿಗಳಿಂದಲೇ ನಡೆಸುತ್ತಾ ಬಂದಿರುವದನ್ನು ಕೋರಿಯಾ ಚಕ್ರವರ್ತಿಯವರು ಹೇಗ್ ಪಟ್ಟಣದ ಪಂಚಾಯಿತಿ ಕೋರ್ಟಿಗೆ ತಿಳಿಸುವುದಕ್ಕಾಗಿ ಕೆಲವು ರಾಯಭಾರಿಗಳನ್ನು ಕಳುಹಿಸಿದ್ದರಷ್ಟೆ. ಈ ರಾಯಭಾರಿಗಳ ಪೈಕಿ ಒಬ್ಬನು ಹೇಗ್‌ಪಟ್ಟಣದಲ್ಲಿ ಕಾಲವಾದನು. ಇದನ್ನು ಆಕ್ಷೇಪಣೆ ಮಾಡಿದರು. ಇತ್ತಲಾಗಿ ಜಪಾನ್ ಮಂತ್ರಿಯಾದ ವೈಕೌಂಟ್ ಹಯಾಷಿಯವರು ಕೋರಿಯಾ ರಾಜಧಾನಿಯಾದ ಸಿಯೋಲ್ ಪಟ್ಟಣಕ್ಕೆ ಹೋಗಿರುತ್ತಾರೆ. ಈ ವಿಷಯವು ಅಲ್ಲಿನ ಜನರಲ್ಲಿ ತುಂಬಾ ಗಾಬರಿಯನ್ನುಂಟುಮಾಡಿದೆ. ಇದುವರೆಗೆ ಜಪಾನ್ ಸೈನಿಕರು ಕೋರಿಯಾ ಚಕ್ರವರ್ತಿಯವರ ಬಳಿ ಕಾವಲಾಗಿ ನೇಮಿಸಲ್ಪಟ್ಟಿದ್ದರು. ಚಕ್ರವರ್ತಿಯವರು ಅವರಲ್ಲಿ ಅಪನಂಬಿಕೆಪಟ್ಟು ತಮ್ಮ ಕೋರಿಯಾ ಸೈನಿಕರನ್ನೇ ತಮ್ಮ ಬಳಿ ಅಂಗರಕ್ಷಕರನ್ನಾಗಿ ಇಟ್ಟುಕೊಂಡಿದಾರೆ.

***

ವಿಲಾಯತಿ ರಾಜ್ಯದವರೂ ರಷ್ಯಾ ಚಕ್ರಾಧಿಪತ್ಯದವರೂ ಐಕ್ಯಭವಿಸಿ ರಾಜಕೀಯ ವಿಚಾರದಲ್ಲಿ ಪರಸ್ಪರ ಸಹಾಯಕರಾಗುವಂತೆ ಕರಾರು ಮಾಡಿಕೊಳ್ಳಬೇಕೆಂದು ಪ್ರಯತ್ನಪಡುತ್ತಿದಾರೆ. ವಿಲಾಯತಿಯ ರಾಜಧಾನಿಯಾದ ಲಂಡನ್ ಪಟ್ಟಣದಲ್ಲಿ ಕೆಲವ ನವನಾಗರಿಕರಾದ ಇಂಗ್ಲಿಷ್ ದೊಡ್ಡಮನುಷ್ಯರು ಈ ವಿಷಯದಲ್ಲಿ ಒಂದು ಸಭೆಯನ್ನು ನಡಸಿ, ರಷ್ಯಾ ರಾಜ್ಯದಲ್ಲಿ ಪ್ರಜಾ ನೆಮ್ಮದಿಗೆ ಭಂಗವುಂಟಾಗಿದೆ ಎಂತಲೂ, ಅದನ್ನು ಅಲ್ಲಿನ ಗವರ್ನಮೆಂಟಿನವರು ಸರಿಪಡಿಸಿಕೊಳ್ಳದೆ ಪ್ರಜೆಗಳನ್ನು ಕ್ರೂರತನದಿಂದ ನಡೆಸುತ್ತಾರೆಂತಲೂ, ಅಂಥಾ ಕ್ರೂರಿಗಳಾದ ಗವರ್ನಮೆಂಟಿನವರ ಸಂಗಡ ಪ್ರಜಾಪ್ರಭುತ್ವ ನವನಾಗರಿಕರಂತಿರೂ ಆಗಿರುವ ಇಂಗ್ಲಿಷ್ ಗವರ್ನಮೆಂಟಿನವರು ಸ್ನೇಹ ಕರಾರು ಮಾಡಿಕೊಳ್ಳುವುದು ಅನುಚಿತವೆಂತಲೂ, ಉಪನ್ಯಾಸಗಳನ್ನು ಮಾಡಿ ಸ್ವಲ್ಪ ಗಲಭೆ ಎಬ್ಬಿಸಿದರು. ಆ ಸಭೆಯಲ್ಲಿ ಸೇರಿದ್ದ ಅಪಾರವಾದ ಗುಂಪನ್ನು ಚದರಿಸುವದಕ್ಕೆ ಲಂಡನ್ ಪಟ್ಟಣದ ಪೋಲೀಸಿನವರು ಅರ್ಧ ಗಂಟೆಯ ಹೊತ್ತು ಶ್ರಮಪಡಬೇಕಾಯಿತು. ಅನೇಕ ಜನರಿಗೆ ಅಲ್ಪ ಸ್ವಲ್ಪ ಗಾಯಗಳೂ ಆದವೆಂದು ತಂತೀ ವರ್ತಮಾನ ಬಂದಿದೆ.

***

ಆಸ್ಟ್ರಿಯಾ ಹಂಗೇರಿ ರಾಜ್ಯಕ್ಕೆ ಸೇರಿದ ಬುಡಾಪೆಸ್ಟ್ ಪಟ್ಟಣದಲ್ಲಿ ಸ್ಯಾಮುವೆಲ್ ಜೆಸ್ಸರ್ ಎಂಬ ಒಬ್ಬ ವಿಜಲಾಕಿ ಎಂಬುವನೂ ಸುಮಾರು ೨೦ ವರುಷಗಳ ಕೆಳಗೆ ಸೈನ್ಯದಲ್ಲಿದ್ದಾಗ ಅವರವರಿಗೆ ಪಗಳ ಬಂದು ಇಬ್ಬರೂ ಸೇರಿ ಯಾರು ಸಾಯಬೇಕೆಂದು ಚೀಟಿ ಎತ್ತಿದರು. ಅವರಲ್ಲಿ ಸ್ಯಾಮುವೆಲ್ ಜೆಸ್ಸರ್ ಎಂಬವನೇ ಸಾಯಬೇಕೆಂದು ಗೊತ್ತಾಯಿತು. ಸ್ವಲ್ಪ ದಿನಗಳಲ್ಲೇ ಅವನ ಶತೃವಾದ ವಿಜಲಾಕಿ ಎಂಬುವನು ಅಮೇರಿಕಕ್ಕೆ ಉದ್ಯೋಗಾರ್ಥವಾಗಿ ಹೊರಟು ಹೋದನು. ಇತ್ತಲಾಗಿ ಜೆಸ್ಸರನು ಆತ್ಮಹತ್ಯ ಮಾಡಿಕೊಳ್ಳದೆ ಬುಡಾಪೆಸ್ಟ್ ಪಟ್ಟಣದಲ್ಲೇ ಅಂಗಡಿ ಇಟ್ಟು ೨೦ ವರುಷಗಳಿಂದಲೂ ವ್ಯಾಪಾರ ಮಾಡುತ್ತಾ ತುಂಬಾ ಸಾಹುಕಾರನಾದನು. ವಿಜಲಾಕಿಯು ಕೆಲವು ದಿನಗಳ ಹಿಂದೆ ಅಮೇರಿಕದಿಂದ ವಾಪಸು ಬುಡಾಪೆಸ್ಟ್ ಪಟ್ಟಣಕ್ಕೆ ಬಂದು ಬೀದಿಯಲ್ಲಿ ಎಲ್ಲಿಗೋ ಹೋಗುತ್ತಿರುವಲ್ಲಿ ಜೆಸ್ಸರನ್ನು ಕಂಡು ಆಶ್ಚರ್ಯಪಟ್ಟು ಅವನನ್ನು ಕುರಿತು—"ಏನು, ನೀನು ಇನ್ನೂ ಬದುಕಿದ್ದೀಯಾ?" ಎಂದು ಪ್ರಶ್ನೆ ಮಾಡಿ, ನೀನು ಕೊಟ್ಟ ಭಾಷೆಯ ಪ್ರಕಾರ ಇನ್ನು ೩೦ ದಿನಗಳೊಳಗಾಗಿ ಸತ್ತು ಹೋಗಬೇಕೆಂದು ಹೇಳಿದನು. ಜೆಸ್ಸರನು ಅವನನ್ನು ಎಷ್ಟೋ ವಿಧದಿಂದ ಬೇಡಿಕೊಂಡದ್ದಲ್ಲದೆ, ತಾನು ಸಂಪಾದಿಸಿದ್ದ ಹಣದಲ್ಲಿ ೨೫,೦೦೦ ರೂಪಾಯಿ ಪ್ರತಿಫಲ ಕೊಡುತ್ತೇನೆಂದು ಹೇಳಿದನು. ಮತ್ತು ಅವನ ಇಷ್ಟದಲ್ಲೇ ಮದುವೆ ಮಾಡಿಕೊಳ್ಳಬೇಕೆಂದು ಎಲ್ಲಾ ಸಿದ್ಧಪಡಿಸಿಕೊಂಡಿದ್ದದ್ದರಿಂದ ತನ್ನನ್ನು ಕ್ಷಮಿಸಬೇಕೆಂದು ಕೇಳಿಕೊಂಡನು. ಕ್ರೂರಿಯಾದ ಶತೃವಾದ ಆ ವಿಜಲಾಕಿಯು ಒಪ್ಪದೆ—"ನಿನ್ನ ಹಣವೇನೂ ನನಗೆ ಅಗತ್ಯವಿಲ್ಲ. ಇನ್ನು ೩೦ ದಿನಗಳೊಳಗಾಗಿ ನೀನು ಆತ್ಮಹತ್ಯ ಮಾಡಿಕೊಳ್ಳದೆ ತಪ್ಪಿದರೆ ನಾನು ಆತ್ಮಹತ್ಯ ಮಾಡಿಕೊಳ್ಳುವೆನು" ಎಂದು ಖಂಡಿತವಾಗಿ ಹೇಳಿದನು. ಆದದರಿಂದ ಈಗ ಆ ಜೆಸ್ಸರನು ತನ್ನ ಸ್ನೇಹಿತರಿಗೆಲ್ಲಾ ಈ ಸಂಗತಿಯನ್ನು ಕಾಗದ ಬರೆದು ತಿಳಿಸಿ ತಾನು ಕೊಟ್ಟ ಮಾತಿನ ಪ್ರಕಾರ ಈಗ ಆತ್ಮಹತ್ಯ ಮಾಡಿಕೊಂಡಿರುತ್ತಾನೆ. ಪೋಲೀಸಿನವರು ವಿಜಲಾಕಿಯನ್ನು ಹಿಡಿಯಬೇಕೆಂದು ಹುಡುಕುತ್ತಿದಾರೆ.

ತಂತೀ ವರ್ತಮಾನಗಳು.

ಕೊರಿಯಾ ರಾಜ್ಯದ ವಿಶೇಷ ಸಂಗತಿಗಳು.

ಲಂಡನ್, ಜೂಲೈ ೧೫ ನೆ ಶುಕ್ರವಾರ.—ಮೈಕೌಂಟ್ ಹಯಾಷಿ ಎಂಬ ಒಬ್ಬ ಜಪಾನ್ ಮಂತ್ರಿಯವರು ಕೊರಿಯಾ ರಾಜಧಾನಿಯಾದ ಸಿಯೂಲ್ ಪಟ್ಟಣಕ್ಕೆ ಬಂದಿರುತ್ತಾರೆ. ಕೊರಿಯಾ ಚಕ್ರವರ್ತಿಯವರು ತಮ್ಮ ಮಂತ್ರಿಗಳನ್ನೆಲ್ಲಾ ಕರೆಸಿಕೊಂಡು, ಅವರ ಸಂಗಡ ಆಲೋಚನೆ ಮಾಡಿ, ತಾವು ರಾಜ್ಯದ ಪದವಿಯನ್ನು ಬಿಟ್ಟುಬಿಡುವುದಾಗಿ ಒಪ್ಪಿಕೊಂಡರು. ಅವರು ಈ ಉದ್ದೇಶದಿಂದ ತಮ್ಮ ಪ್ರಜೆಗಳಿಗೆ ಒಂದು ಇಸ್ತಿಹಾರು ಪ್ರಕಟಿಸಿರುತ್ತಾರೆ. ಅದರ ಮುಖ್ಯಾಭಿಪ್ರಾಯವೇನೆಂದರೆ—ನಾವು ರಾಜ್ಯಭಾರವನ್ನು ವಹಿಸಿದ ೪೪ ವರುಷಗಳಿಂದಲೂ ನಮ್ಮ ಜನಸಮುದಾಯಕ್ಕೆ ಅನೇಕಾನೇಕ ಕೇಡುಗಳು ಸರಂಪರೆಯಾಗಿ ಪ್ರಾಪ್ತವಾಗುತ್ತಾ ಬಂದಿರುವುದು ನಮಗೆ ತುಂಬಾ ವ್ಯಸನವನ್ನುಂಟುಮಾಡಿರುತ್ತದೆ. ಈ ಕೇಡುಗಳು ಈಗ ಬಹಳವಾಗಿ ಹೆಚ್ಚಿರೋಣಾದರಿಂದ ನಾವು ರಾಜ್ಯಪದವಿಯನ್ನು ಬಿಟ್ಟು ಯುವರಾಜರಿಗೆ ಸಮಸ್ತ ಅಧಿಕಾರವನ್ನೂ ವಹಿಸಿ ಬಿಡುತ್ತೇವೆ ಎಂಬುವದೇ.

ಕೊರಿಯಾ ರಾಜ್ಯದ ಮುಖ್ಯ ಮುಖ್ಯರಾದ ದೊಡ್ಡ ಮನುಷ್ಯರೆಲ್ಲಾ ಜಪಾನ್ ಮಂತ್ರಿಯವರಾದ ಮಾರ್ಕ್ವಿಸ್ ಐಟೋಯವರಿಗೆ—ಜಪಾನಿನವರು ನಮ್ಮ ಚಕ್ರವರ್ತಿಯವರ ವಿಷಯದಲ್ಲಿ ನ್ಯಾಯವಾಗಿ ನಡೆದುಕೊಳ್ಳುವಹಾಗಾದರೆ ನಾವೆಲ್ಲಾ ಜಪಾನಿನವರ ಪಕ್ಷವನ್ನು ವಹಿಸುತ್ತೇವೆ; ಇಲ್ಲವಾದರೆ ಕೊರಿಯಾ ಪ್ರಜೆಗಳೆಲ್ಲಾ ನಮ್ಮ ಚಕ್ರವರ್ತಿಯವರಿಗೋಸ್ಕರ ಪ್ರಾಣಕೊಡಲು ಸಿದ್ಧರಾಗಿರುವೆವು ಎಂದು ಬರೆದು ತಿಳಿಸಿದಾರೆ.

ತಾ. ೧೫ರಲ್ಲಿ ಸಿಯೂಲ್ ಪಟ್ಟಣದ ಅನೇಕ ಭಾಗಗಳಲ್ಲಿ ಸಾವಿರಾರು ಕೊರಿಯಾ ಜನರು ಸೇರಿ ದೊಂಬಿ ಮಾಡಿದ್ದಲ್ಲದೆ, ಜಪಾನಿನವರ ಮೇಲೆ ತಮ್ಮ ಕೋಪವನ್ನು ತೋರಿಸುವಂಥಾ ನೋಟೀಸುಗಳನ್ನು ಪ್ರಕಟಪಡಿಸಿದರು.

ಲಂಡನ್, ಜೂಲೈ ೧೬ನೇ ಶನಿವಾರ.—ರಾಜಧಾನಿಯಲ್ಲಿ ಕೊರಿಯಾ ಸೈನ್ಯಗಳು ದಂಗೆ ಎದ್ದು ಪೊಲೀಸ್ ಸ್ಟೇಷನ್‌ಗೆ ಗುಂಡುಗಳನ್ನು ಹೊಡೆದರು, ಅವರ ಜೊತೆಗೆ ಪ್ರಜೆಗಳು ಸೇರಿಕೊಂಡಿದಾರೆ. ಇವರೆಲ್ಲಾ ಕೆಲವು ಜಪಾನಿನವರ ಮೇಲೆ ಬಿದ್ದು, ೨೨ ಮಂದಿ ಜಪಾನಿನವರನ್ನು ಕೊಂದರು. ಕೊರಿಯಾದವರಲ್ಲಿ ಎಷ್ಟು ಮಂದಿ ಗಾಯಪಟ್ಟರೋ ತಿಳಿಯಲಿಲ್ಲ. ಜಪಾನಿನವರು ಪಹರೆ ಕೊಡುತ್ತಾ ಪಟ್ಟಣವನ್ನು ಉಸ್ತುವಾರಿ ಮಾಡುತ್ತಿದಾರೆ.

ಲಂಡನ್, ಜೂಲೈ ೧೭ನೇ ಭಾನುವಾರ.—ಒಂದು ಸಾವಿರ ಜನರು ಆಗ್ರಹಯುಕ್ತರಾಗಿ ಪ್ರಧಾನಮಂತ್ರಿಯವರ ವಾಸದ ಬಂಗಲೆಯನ್ನು ನುಗ್ಗಿ ಸುಟ್ಟುಹಾಕಿದರು.

ಎರಡು ಸಹಸ್ರ ಜನರುಳ್ಳ ಒಂದು ಗುಂಪು ಸ್ವರ್ಗದ ದೇವಸ್ಥಾನದಲ್ಲಿ ಉಪನ್ಯಾಸಗಳನ್ನು ಕೇಳಿ ಕೋಪೋದ್ರೇಕರಾಗಿ ಹೊರಗೆ ಬಂದು ಮಂತ್ರಿಗಳ ಮನೆಗಳನ್ನು ನುಗ್ಗಿತು. ಆ ಮನೆಗಳೆಲ್ಲಾ ಕೊಳ್ಳೆಯಾದವು; ಕಡೆಗೆ ಬೆಂಕಿಯಿಂದ ಸುಟ್ಟು ಬೂದಿಯಾದವು. ಆ ಜನರು ಅಷ್ಟಕ್ಕೇ ಸುಮ್ಮನಾಗಲಿಲ್ಲ. ಆ ಮಂತ್ರಿಗಳನ್ನೆಲ್ಲಾ ಕೊಲ್ಲಬೇಕೆಂದು ಪ್ರಯತ್ನಪಟ್ಟರು. ಮಿನಿಸ್ಟ್ರಿ ಆಫ್ ವಾರ್ ಎಂಬ ಯುದ್ಧದ ಇಲಾಖಾ ಆಫೀಸನ್ನು ಕಾಯುತ್ತಿದ್ದ ಜಪಾನ್ ಸೈನಿಕರು ಆ ಜನರ ಗುಂಪಿನ ಗುಂಡುಗಳನ್ನು ಹೊಡೆದು ಅನೇಕರನ್ನು ಕೊಂದು ಹಾಕಿದರು. ಜಪಾನ್ ಪೊಲೀಸಿನವರು ಪಿರಂಗಿಗಳನ್ನು ಎತ್ತಿ ಕಟ್ಟಿ ಪ್ರಧಾನಮಂತ್ರಿಯ ಬಂಗಲೆಯಿಂದ ಜನರ ಗುಂಪನ್ನೆಲ್ಲಾ ಚದರಿಸಿ ಬಿಟ್ಟರು. ಆಗ ಮಂತ್ರಿಗಳೆಲ್ಲಾ ತಲೆತಪ್ಪಿಸಿಕೊಂಡು ಹೋದರು. ಜಪಾನ್ ಸೈನಿಕರು ಈಗ ಅರಮನೆಯನ್ನು ಕಾಯುತ್ತಿದಾರೆ. ಪಿಂಗ್‌ಯಾಂಗಿನಿಂದ ಇನ್ನೊಂದು ರೆಜಿಮೆಂಟಿನ ಸೈನ್ಯ ಬಂದಿರುವುದು.

ಲಂಡನ್, ಜೂಲೈ ೧೮ನೆ ಸೋಮವಾರ.—ಕೊರಿಯಾ ಚಕ್ರವರ್ತಿಯವರು ತಮ್ಮ ರಾಜ್ಯಪದವಿಯನ್ನು ಬಿಟ್ಟುಬಿಟ್ಟ ವರ್ತಮಾನವು ಆ ರಾಜ್ಯದ ಒಳಪ್ರದೇಶಗಳಲ್ಲೆಲ್ಲಾ ಪ್ರಕಟವಾದಲ್ಲಿ ಒಳದೇಶದಲ್ಲಿರತಕ್ಕ ಜಪಾನ್ ಪ್ರಜೆಗಳಿಗೆ ತುಂಬಾ ಅಪಾಯ ಸಂಭವಿಸೀತೆಂದು ಭೀತಿಯುಂಟಾಗಿದೆ. ಜಪಾನ್ ಜನರಲ್ ಹಸೆಗಾವಾಯವರ ಕೈಕೆಳಗೆ ೨,೩೦೦ ಸೈನಿಕರು ಮಾತ್ರ ಇರುತ್ತಾರೆ. ಈ ಸೈನ್ಯವು ಆ ರಾಜ್ಯದೊಳಗೆಲ್ಲಾ ಉಂಟಾಗುವ ಗಲಭೆಗಳನ್ನು ಅಣಗಿಸುವುದಕ್ಕೆ ಸಾಕಾಗುವುದೇ ಇಲ್ಲ. ದಂಗೆ ಎದ್ದು ಪೊಲೀಸ್ ಸ್ಟೇಷನ್‌ಗೆ ಗುಂಡುಹೊಡೆದು ಜಪಾನಿನವರನ್ನು ಮೊನ್ನೆ ಕೊಂದುಹಾಕಿದ ಕೊರಿಯಾ ಸೈನಿಕರು ತಮ್ಮ ಬಳಿ ಇರತಕ್ಕ ಆಯುಧಗಳನ್ನೂ ಮದ್ದು ಗುಂಡನ್ನೂ ಕೊಡುವುದಿಲ್ಲವೆಂದು ತಿರಸ್ಕರಿಸಿ ಪತ್ತರ ಇಟ್ಟುಕೊಂಡಿದಾರೆ. ಜಪಾನಿನವರಾದರೋ ಅವರನ್ನು ಬಲಾತ್ಕಾರಮಾಡಿ ಆ ಯುದ್ಧ ಸಾಮಗ್ರಿಗಳನ್ನು ಅವರಿಂದ ಕಿತ್ತುಕೊಳ್ಳುವುದಕ್ಕೆ ಸಮರ್ಥರಾಗಿಲ್ಲ. ಆದ್ದರಿಂದ ಸಿಮೊನೊಸೆಕಿ ಎಂಬ ರೇವಿನಿಂದ ಹೊಸದಾಗಿ ಜಪಾನ್ ಸೈನ್ಯಗಳು ಬರುವುದನ್ನೇ ಎದುರುನೋಡುತ್ತಿದಾರೆ. ಕೊರಿಯಾ ಪ್ರಜೆಗಳು ಕೊರಿಯಾ ಸೈನಿಕರಿಗೆಲ್ಲಾ ಬಹು ಕೋಪಹುಟ್ಟುವಂತೆ ಉಪನ್ಯಾಸಗಳನ್ನು ಮಾಡಿ, ಜಪಾನಿನವರ ಮೇಲೆ ಎತ್ತಿಕಟ್ಟುತ್ತಿದಾರೆ. ಕೊರಿಯಾ ಸೈನಿಕರ ಬಳಿ ೫೦ ಸಾವಿರ ತೋಟಾಗಳಿರುತ್ತವೆಂದು ತಿಳಿಯುವುದು.

ಲಂಡನ್ ಜೂಲೈ ೧೬ನೇ ಶನಿವಾರ.—ನೆನ್ನೆ ಬೆಳಗ್ಗೆ ಅರಮನೆಯಲ್ಲಿ ಯುವರಾಜರಿಗೆ ಪಟ್ಟಕಟ್ಟಿದ್ದಾಯಿತು. ಮಾರ್ಕ್ವಿಸ್ ಐಟೊ, ಅನೇಕ ಜಪಾನಿನವರೂ, ಪರರಾಜ್ಯಗಳ ರಾಯಭಾರಿಗಳೂ ಎಲ್ಲಾ ಹೋಗಿ ಹೊಸ ದೊರೆಯನ್ನು ಕಂಡು ಮಾತನಾಡಿಕೊಂಡು ಬಂದರು.

ಲಂಡನ್, ಜೂಲೈ ೧೮ ನೆ ಸೋಮವಾರ.—ಹೇಗ್ ಪಟ್ಟಣದ ಪಂಚಾಯತಿ ಕೋರ್ಟಿಗೆ ಕೊರಿಯಾ ರಾಯಭಾರಿಗಳು ಕೆಲವರು ಹೋಗಿ ಜಪಾನಿನವರು ಕೊರಿಯಾ ಚಕ್ರವರ್ತಿಯವರಿಗೂ ಅವರ ರಾಜ್ಯಕ್ಕೂ ಅನ್ಯಾಯ ಮಾಡಿರುತ್ತಾರೆಂದು ದೂರು ಹೇಳಿದರಷ್ಟೆ. ಈಗ ಹೊಸದಾಗಿ ಪಟ್ಟಕ್ಕೆ ಬಂದಿರುವ ಚಕ್ರವರ್ತಿಯವರು ಆ ರಾಯಭಾರಿಗಳನ್ನೆಲ್ಲಾ ತಕ್ಕಹಾಗೆ ಶಿಕ್ಷಿಸಬೇಕೆಂದು ತಮ್ಮ ಮೊದಲನೆ ಆಜ್ಞೆಯನ್ನು ಪ್ರಕಟಿಸಿರುತ್ತಾರೆ.

ಇತರ ಕಡೆಯ ವರ್ತಮಾನಗಳು.

ಲಂಡನ್, ಜೂಲೈ ೧೫ ನೆ ಶುಕ್ರವಾರ.—ಅಮೇರಿಕಕ್ಕೆ ಸೇರಿದ ಫಿಲಡೆಲ್ಫಿಯಾ ಮತ್ತು ನ್ಯೂಯಾರ್ಕ್ ಎಂಬೀ ನಗರಗಳಲ್ಲಿ ಸೆಕೆಯ ಹವಾ ಅಕಸ್ಮಾತ್ತಾಗಿ ಬೀಸಿ ನೂರಾರು ಜನರು ಬಿಸಲಿನ ತಾಪವನ್ನು ತಡೆಯಲಾರದೆ ಬಿದ್ದುಕೊಂಡರು.

ಲಂಡನ್, ಜೂಲೈ ೧೬ ನೆ ಶನಿವಾರ.—ರಷ್ಯಾ ಚಕ್ರಾಧಿಪತ್ಯದ ರಾಜಧಾನಿಯಾದ ಸೆಂಟ್ ಪೀಟರ್ಸ್‌ಬರ್ಗಿನಲ್ಲಿ ಕೆಲವರು ಸೇರಿ ಗುಟ್ಟಾಗಿ ಪಿತೂರಿ ನಡಿಸಿ ಚಕ್ರವರ್ತಿಯವರನ್ನೂ ಪ್ರಧಾನ ಮಂತ್ರಿಯಾದ ಎಂ. ಸ್ಟೋಲಿಪಿನ್ ಯವರನ್ನೂ ಕೊಂದು ಹಾಕಬೇಕೆಂದು ಏರ್ಪಾಡು ಮಾಡಿದ್ದರೆಂತಲೂ, ಸರ್ಕಾರದವರು ಅವರ ಗುಟ್ಟು ತಿಳಿದು ಆ ಪೈಕಿ ಇಪ್ಪತ್ತು ಮಂದಿಯನ್ನು ದಸ್ತಗಿರಿ ಮಾಡಿದಾರೆಂತಲೂ, ಅವರನ್ನೆಲ್ಲಾ ಯುದ್ಧದ ಕಾನೂನುಪ್ರಕಾರ ದರ್ಯಾಫ್ತು ಮಾಡಿಸುತ್ತಾರೆಂತಲೂ ಪ್ರಕಟವಾಗಿದೆ.

ಲಂಡನ್, ಜೂಲೈ ೧೮ನೆ ಸೋಮವಾರ.—ಬಲ್ಗೇರಿಯಾದ ದಂಗೇಕೋರರ ಗುಂಪಿನವರನ್ನು ತುರ್ಕಿ ಸೈನಿಕರು ಸಂಪೂರ್ಣವಾಗಿ ಹುಟ್ಟಡಗಿಸಿದರು. ಪೆರ್ಲಪೆ ಎಂಬ ಠಾಣ್ಯದಲ್ಲಿ ಸೈನಿಕರು ೪೪ ಮಂದಿಯನ್ನು ಕೊಂದು ಇರುತ್ತಾರೆ. ಸೈನಿಕರಲ್ಲಿ ೧೨ ಮಂದಿ ನಷ್ಟ ಹೊಂದಿದರು. ಇಂಥಾ ಸಣ್ಣ ಕದನಗಳು ದಿನವಹಿ ಮ್ಯಾಸಿಡೋನಿಯಾದಲ್ಲಿ ನಡೆಯುತ್ತಲಿರುವವು.

ಹಿಂದೂಸ್ಥಾನದ ವಿಶೇಷ ವಾರ್ತೆಗಳು.

ಪೂನಾ, ಜೂಲೈ ೧೩ನೇ ಬುಧವಾರ.—ಬೊಂಬಾಯಿ ಆಧಿಪತ್ಯದ ಗವರ್ನರ್ ಲಾರ್ಡ್ ಲಾಮಿಂಗ್ಟನ್‌ರವರು ತಮ್ಮ ಪತ್ನಿಯವರಿಗೆ ವಿಲಾಯತಿಯಲ್ಲಿ ತುಂಬಾ ಕಾಯಿಲೆಯಾಗಿದೆ ಎಂದು ಕೇಳಿ, ಗವರ್ನರ್ ಕೆಲಸಕ್ಕೆ ರಾಜೀನಾಮೆ ಕೊಟ್ಟರು. ಈ ತಿಂಗಳು ೨೭ನೇ ಇಂಡಿಯಾ ಎಂಬ ಜಹಜು ಹತ್ತಿ ಸೀಮೆಗೆ ಪ್ರಯಾಣಮಾಡುವವರಾಗಿದೆ.

ಸಿಂಲಾ, ಜೂಲೈ ೧೪ನೇ ಗುರುವಾರ.—ಲಾರ್ಡ್ ಲಾಮಿಂಗ್ಟನ್‌ರವರು ತಮ್ಮ ಪತ್ನಿಯವರ ಕಾಯಿಲೆ ನಿಮಿತ್ತವಾಗಿ ಗವರ್ನರ್ ಕೆಲಸಕ್ಕೆ ರಾಜೀನಾಮೆ ಕೊಡುತ್ತೇವೆಂದು ಕಾಗದದ ಮೂಲಕ ವೈಸ್‌ರಾಯಿ ಯವರಿಗೆ ಅರಿಕೆಮಾಡಿರುತ್ತಾರೆ. ಅವರ ಬದಲಿ ಯಾರು ನೇಮಕವಾಗುವರೋ ಇನ್ನೂ ಇಲ್ಲಿ ಗೊತ್ತಾಗಲಿಲ್ಲ.

ಲಂಡನ್, ಜೂಲೈ ೧೭ನೆ ಭಾನುವಾರ.—ಲಾರ್ಡ್ ಲಾಮಿಂಗ್ಟನ್‌ರವರಿಗೆ ಬದಲಾಗಿ ಸರ್ ಜಾರ್ಜ್ ಸೈಡೆನ್‌ಹಂ ಕ್ಲಾರ್ಕ್‌ಯವರು ಬೊಂಬಾಯಿ ಗವರ್ನರಾಗಿ ನೇಮಿಸಲ್ಪಟ್ಟಿದಾರೆ. [ಇವರಿಗೆ ಈಗ ೫೯ ವರುಷ ವಯಸ್ಸಾಗಿರುವುದು.]

ಕಲ್ಕತ್ತಾ, ಜೂಲೈ ೧೮ನೆ ಸೋಮವಾರ.—ವಿಲಾಯತಿಯಲ್ಲಿರುವ ಇಂಡಿಯಾ ಸ್ಟೇಟ್ ಸೆಕ್ರೆಟರಿಯವರ ಮಂತ್ರಾಲೋಚನಾ ಸಭೆಗೆ ಘನವನ್ನೈದಿದ ಆಗಾಖಾನ್‌ರವರನ್ನೂ, ಮೈಸೂರು ಸಂಸ್ಥಾನದ ದಿವಾನ್‌ರನ್ನೂ, ಇತರ ಹಿಂದೂಸ್ಥಾನದ ದೊಡ್ಡಮನುಷ್ಯರನ್ನೂ ಮೆಂಬರುಗಳನ್ನಾಗಿ ನೇಮಕಮಾಡಿರುತ್ತಾರೆಂದು ಕೆಲವು ಪತ್ರಿಕೆಗಳು ಪ್ರಕಟಿಸಿದವಷ್ಟೆ. ಈ ವರ್ತಮಾನವು ನಿರಾಧಾರವಾದದ್ದು. ಮತ್ತು ಸ್ಟೇಟ್ ಸೆಕ್ರೆಟರಿ ಮಿ॥ ಮಾರ್ಲಿಯವರು ಯಾರನ್ನು ನೇಮಕಮಾಡುವರೋ ಇನ್ನೂ ತಿಳಿಸಿರುವುದಿಲ್ಲ.

ಬೊಂಬಾಯಿ, ಜೂಲೈ ೧೫ ನೆ ಶುಕ್ರವಾರ.—ವೈಸ್‌ರಾಯಿಯವರ ಪತ್ನೀರಾದ ಲೇಡಿ ಮಿಂಟೋರವರು ಈ ದಿನ ಬೆಳಗ್ಗೆ ವಿಲಾಯತಿಯಿಂದ ಬಂದು ಜಹಜು ಇಳಿದರು. ಬೊಂಬಾಯಿ ಗವರ್ನರ್ ಲಾರ್ಡ್ ಲಾಮಿಂಗ್ಟನ್‌ರವರು ಅವರನ್ನು ಎದುರುಗೊಂಡು ಮರ್ಯಾದೆಗಳೊಡನೆ ತಮ್ಮ ಬಂಗಲೆಗೆ ಕರೆದುಕೊಂಡು ಹೋದರು. ಭೋಜನಾನಂತರ ಲೇಡಿ ಮಿಂಟೋರವರು ಪರಿವಾರ ಸಹಿತ ರೈಲು ಹತ್ತಿ ಸಿಂಲಾ ಪಟ್ಟಣಕ್ಕೆ ದಯಮಾಡಿಸಿದರು. ಲಾರ್ಡ್ ಲಾಮಿಂಗ್ಟನ್‌ರವರು ರಾತ್ರಿ ರೈಲು ಹತ್ತಿ ಪೂನಾ ಪಟ್ಟಣಕ್ಕೆ ತೆರಳಿದರು.

ಖಾತ್ರಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಖಾತ್ರಿಗಳಿಗೆ ನಾವು ಎಡೆ ಕೊಡಲಾರೆವು. ಆದಕಾರಣ ಖಾತ್ರಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಖಾತ್ರಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ಎಡೆ ಕೊಡಲಾರೆವು.

ಖಾತ್ರಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿಟರ್.

ಕರೆಸ್‌ಪಾಂಡೆನ್ಸ್.

ಸ್ಟಾಂಪ್‌ವೆಂಡರೂ ಪತ್ರಗಳ ಕ್ರಯವೂ

ಅಯ್ಯಾ,

ಆನೇಕಲ್ ತಾಲ್ಲೂಕು ದೊಮ್ಮಸಂದ್ರದಲ್ಲಿ ಪಟೇಲರ ಮಕ್ಕಳು ಸ್ಟಾಂಪು ವೆಂಡರಾಗಿರುವದಲ್ಲದೆ ಪೋಸ್ಟು ಕೆಲಸವನ್ನೂ ವಹಿಸಿಕೊಂಡಿರುತ್ತಾರೆ. ಛಾಪಾಕಾಗದಗಳು ಅವಶ್ಯಬಿದ್ದಾಗ ಹೋಗಿ ಕೇಳಿದಲ್ಲಿ ಸರ್ಕಾರದಿಂದ ನಿಯಮಿತವಾದ ಖರೀದಿಮಾತ್ರವಲ್ಲದೆ ಹೆಚ್ಚಾದ ರುಸುಮನ್ನು ಕೇಳುತ್ತಾರೆ. ಹೆಚ್ಚಾದ ರುಸುಮನ್ನು ಕೊಡಲಾರದ ಬಡಬಗ್ಗರಿಗೆ ಛಾಪಾಕಾಗದವೇ ಇಲ್ಲ ಎಂದು ಹೇಳುತ್ತಾರೆ. ಇದುಮಾತ್ರವಲ್ಲದೆ ಛಾಪಾಕಾಗದಗಳಿಗೆ ಹೋಗತಕ್ಕತರು ಅನೇಕ ಘಂಟೆಗಳವರಿಗೂ ಬ್ಯಾರಪೂಲಕತನವನ್ನು ಮಾಡಬೇಕಾಗಿದೆ. ಇದರಿಂದ ಬಡಜನಗಳಿಗೆ ತುಂಬಾ ಕಷ್ಟವೂ ಅವರ ಕೆಲಸಗಳಿಗೆ ಕುಂದಕವೂ ಉಂಟಾಗುತ್ತೆ. ಛಾಪಾಕಾಗದಗಳಿಗೋಸ್ಕರವಾಗಿ ಹೆಚ್ಚಾದ ರುಸುಮನ್ನು ಕೊಡಕೂಡದೆಂದು ಸರ್ಕಾರದಿಂದ ರೂಲಸು ಆಗಿದೆ ಎಂದು ನಾನು ಕೇಳುತ್ತೇನೆ. ಆದರೆ ಮೇಲ್ಕಂಡ ವೆಂಡರು ಹೆಚ್ಚಾಗಿನ ರುಸುಮನ್ನು ಯಾವ ರೂಲಸು ಅನುಸರಿಸಿ ತೆಗೆದುಕೊಳ್ಳುತ್ತಾರೆಯೋ ನನಗೆ ತಿಳಿಯದು. ಈ ವಿಷಯಕ್ಕೆ ಮೇಲ್ಪಟ್ಟ ಅಧಿಕಾರಿಗಳು ಸ್ವಲ್ಪ ಕೊಟ್ಟರೆ ಬಡ ರೈತರಿಗೆ ತುಂಬಾ ಉಪಕಾರವಾಗುತ್ತೆ.

ಪೋಸ್ಟು ಇಲಾಖೆಯಂತೂ ತುಂಬಾ ಅಕ್ರಮವಾಗಿರುವ[illegible] ಪ್ಪಾಲು ಬಂದಂಥಾ ಕಾಲದಲ್ಲಿ ಕಾಗದಗಳನ್ನು ಕೇಳಲು ಹೋ[illegible] ಟಪ್ಪಾಲೇ ಬರಲಿಲ್ಲವೆಂದು ಹೇಳುತ್ತಾರೆ. ತಮ್ಮ ಇಷ್ಟಬಂದ [illegible]ನಲ್ಲಿ ಬಟವಾಡೇ ಮಾಡುತ್ತಾರೆ. ಇದರಿಂದ ದೂರದಾಗಿ ಬಂದ[illegible]ದಗಳಿಗೆ ಮರುಟಪ್ಪಾಲಿನಲ್ಲಿ ಜವಾಬುಕೊಡಲು ಅನಾನುಕೂ[illegible] ರುತ್ತೆ. ಕವರು, ಕಾರ್ಡುಗಳು ಬೇಕೆಂದು ಹೋದಲ್ಲಿ ಅವರು ಕೆಲಸಗಳ ಮೇಲೆ ಇದ್ದುಕೊಂಡು ಈಗ ಬಾ, ಆಗ ಬಾ ಎಂದು ತಿ[illegible]ತ್ತಾರೆ. ಈ ವಿಷಯಕ್ಕೆ ಪೋಸ್ಟು ಅಧಿಕಾರಿಗಳು ಸ್ವಲ್ಪ ಗಮ[illegible]ಟ್ಟರೆ ತುಂಬಾ ಅನುಕೂಲವಾಗಿರುತ್ತೆ.

ಪ್ರಜಾಭಿಮಾ[illegible]

ರೈತನೂ ಕಂದಾಯದ ಬಾಕಿಯೂ.

ಅಯ್ಯಾ,

ಕೊರಟಗೆರೆ ಸಬ್ ತಾಲ್ಲೂಕು ತೀತದ ಚಿಕ್ಕರಂಗಣ್ಣನೆಂ[illegible]ರು ಭಗತರಹಳ್ಳಿ ಗ್ರಾಮದ ಬಳಿ ಮಾವತ್ತೂರು ತಲಾವ್ [illegible] ಸೇರಿದ ಖುಷ್ಕಿ ಜಮೀನನ್ನು ಕ್ರಯಕ್ಕೆ ಪಡೆದು, ನೀರು ಸದಿಗೆ[illegible] ಯುಷ್ ಮಾಡದೇ ಇರುವ ಜಮೀನಿಗೆ ಸರ್ಕಾರಕ್ಕೆ ನೀರು[illegible] ಸೇರಿಸಿ ಸದರಿ ಹಣಕ್ಕಾಗಿ ಇವರನ್ನು ತಗಾದೆ ಮಾಡಲಾಗಿ [illegible] "ನಾನು ಕೊಡತಕ್ಕ ನ್ಯಾಯವಿಲ್ಲ" ಎಂದು ಅನೇಕವಾಗಿ [illegible]ದಾಗ್ಯೂ ನಿರಾಕರಿಸಿ ಸ್ವತ್ತು ಹರಾಜು ಮಾಡಿದರು. ಹರಾಜು[illegible] ಯಾರೂ ಖಾಯಿಷ್ ಮಾಡಲಿಲ್ಲವಾದ್ದರಿಂದ ಇವರ ಮನೆಯಲ್ಲಿ[illegible] ಅಡಿಕೆ ಮೂಟೆಯೊಂದನ್ನು ಕ್ರೋಧಿ ಸಾಲಿನ ಕಂದಾಯದ ಹಣ[illegible] ಜಪ್ತಿ ಮಾಡಿ, ಶೇಲರ ಸುಪರ್ದಿಗೆ ಕೊಟ್ಟು ನಂತರ ಚಿಕ್ಕರಂಗ[illegible]ವರು ಅಮಲ್ದಾರರು, ಅಸಿಸ್ಟೆಂಟರು, ಡೆಪ್ಯುಟಿ ಕಮಿಷನರು, ಇ[illegible]ಗಳಲ್ಲಿ ಹೇಳಿ ಅರ್ಜಿ ಮೂಲಕ ಕೇಳಿಕೊಂಡಾಗ್ಯೂ ಒಬ್ಬರೂ [illegible] ಮಾಡಿಕೊಡಲಿಲ್ಲ. ಈಗ ಪರಾಭವದಿಂದಲೂ ಸುಮ್ಮನಿದ್ದ ಈ ಮ[illegible] ೧೦ನೇ ತಾರೀಖಿನಲ್ಲಿ ಶೇಕದಾರರು ಸದರಿ ಕಂದಾಯದ ಬಾ[illegible] ಚಿಕ್ಕರಂಗಣ್ಣನವರ ಸ್ಥಿರ ಬಾಗಾಯತು ತರಿ ಖುಷ್ಕಿ ಜಮೀನ[illegible]ನ್ನು ಜಪ್ತಿಪಡಿಸಿಕೊಂಡು ಹೋದರು. ಕ್ರೋಧಿ ಸಾಲಿನ ಬಗ್ಗೆ[illegible]ಕ್ಕೆ ಅಡಿಕೆ ಮೂಟೆ ಜಪ್ತಿ ಆದದ್ದು ಏನಾಯಿತೋ, ವಿಶ್ವಾವಸು [illegible] ಕೆರೆಯಲ್ಲಿ ನೀರಿಲ್ಲದ್ದರಿಂದ ವಿಶಿಷ್ಟರಿಗೂ ನೀರು ಸರಬ[illegible] ಆದಂತೆ ನಿನಗೂ ಆಯಿತೆಂದು ಹೇಳಿದರು. ಈ ಪರಾಭವ [illegible] ನೀರು ಇಡಲಿಲ್ಲ. ಒಂದು ಪಕ್ಷ ಕಂದಾಯ ದ್ವಾದಶಾಂಶ ವಿನಾಗ್ಯೂ [illegible]ಕೆ ಮೊದಲಿಗೂ ಬಾಕಿಬಾಕಿ ಮೊದಲಿಗೂ ಇದ್ದಕ್ಕೆ ಜಪ್ತಿ [illegible] ಮಾಡದೆ ಕ್ರೋಧಿ, ವಿಶ್ವಾವಸು, ಪರಾಭವ, ಈ ಮೂರು ಸಾಲಿನ[illegible] ನಿನ್ನಿಂದ ಬಾರದ್ದರಿಂದ ಸ್ಥಿರಸ್ವತ್ತು ಜಪ್ತಿ ಮಾಡಬೇಕೆಂದು ಮ[illegible]ರು. ಇವರು ಈ ಹಣ ಕೊಡತಕ್ಕದ್ದು ನ್ಯಾಯ ಸೂಲವೆಂದು [illegible]ಧಣಿಗೆ ಹೇಳಿದಾಗ್ಯೂ ಕೇಳದೆ ನಿರಾಕರಿಸುತ್ತಾರೆ. ಸದರಿ ಆಸರಿಗೆ[illegible]ರಿದ ಗುರುರಾಯಾಚಾರ್ಯರ ಮೇಲೆ ಇದರಂತೆ ನೂರಾರು ರೂಪಾ[illegible] ಬಾಕಿ ತೇಲಿಸಿದ್ದರೂ ಅಸಿಸ್ಟೆಂಟರಲ್ಲಿ ಚರ್ಚಿಸಿದ ಮೇಲೆ ಅವರಿಗೆ [illegible] ಮಾಡಿ, ನನ್ನನ್ನು ಈ ರೀತಿ ಮನಸ್ಸಂಗ ಮಾಡುವದು ನ್ಯಾಯ[illegible] ನಾನು ಯಾರಲ್ಲಿ ಕೇಳಿಕೊಳ್ಳಲಿ? ಎಂದು ಅವರು ರೋಧಿಸುತ್ತಾ[illegible]

ಉಗ್ರಪ್ಪ

ಅಣಜಿ ಗ್ರಾಮದ ಹೀನಸ್ಥಿತಿ.

ಅಯ್ಯಾ,

ದಾವಣಗೆರೆ ತಾಲ್ಲೂಕು ಅಣಜಿ ಗ್ರಾಮವು ಬಹಳ ಹೀನಸ್ಥಿ[illegible] ಬಂದಿರುವದನ್ನು ನೋಡಿ, ಇದರ ಪೂರ್ವ ಸ್ಥಿತಿಯನ್ನು ಸ್ಮರಿಸಿಕೊ[illegible]ಡರೆ ಯಾವ ಮನುಷ್ಯನಿಗಾದರೂ ದುಃಖವುಂಟಾಗಲಾರದು [illegible] ಪೂರ್ವದಲ್ಲಿ ಪಾಳೇಗಾರರ ಉಪರಾಜಧಾನಿಯಾಗಿಯೂ [illegible] ತಾಲ್ಲೂಕಾಗಿಯೂ ನಂತರ ಹೋಬಳಿಯಾಗಿಯೂ ಇದ್ದು ಕಡೆಗೆ [illegible]ಗಿಂತಲೂ ಹೀನಸ್ಥಿತಿಗೆ ಬಂದಿರುತ್ತೆ. ಈ ಗ್ರಾಮದಲ್ಲಿ ಎಲ್ಲಿ ನೋ[illegible] ಬರೂ ಜೊಂಡು (ಹುಲ್ಲು) ಬೆಳೆದ ಅಥವಾ ಗೂರಲು ಕೆಮ್ಮು ಮು[illegible]ದ ರೋಗಗಳಿಂದ ಪೀಡಿತರಾದ ಜನಗಳೇ ತೋರಿಬರುತ್ತಿರುವ[illegible] ಮತ್ತು ಎತ್ತಕಡೆಗೆ ನೋಡಿದರೂ ಕವಾಟಗಳಿಂದ ಬಂಧಿಸಲ್ಪಟ್ಟ [illegible] ನಾದಕರವಾದ ಗೃಹಂಗಳೇ ಗೋಚರವಾಗುತ್ತಿರುವವು. ಹೆಚ್ಚಿಗೆ ಹೇ[illegible]ವದೇನು! ರೋಗಗಳಲ್ಲಿ ಮಲನಾಡು ಕೀಮೆಯನ್ನು ಮೀರಿಸಿದ್ದಾಗಿ[illegible]ತ್ತೆ. ಕಾಯಿಲೆ ಇದ್ದ ಮನುಷ್ಯನು ಸ್ವಸ್ಥನಾಗಿ ಮೇಲಕ್ಕೆದ್ದಿರುವದ[illegible] ನಾನು ಇದುವರಿಗೂ ನೋಡಿಲ್ಲ. ಇಂತಹ ಹೀನಸ್ಥಿತಿಗೆ ಬಂದಿ[illegible] ಗ್ರಾಮವನ್ನು ಬೇರೆ ಕಡೆ ಕಟ್ಟಿ ಉತ್ತಮ ಸ್ಥಿತಿಗೆ ತರಬೇಕೆಂ[illegible] ಪ್ರಯತ್ನಪಟ್ಟು, ದಯಾಳುಗಳಾದ ನಮ್ಮ ಶ್ರೀಮನ್ ಮಹಾರಾ[illegible] ಸರ್ಕಾರದವರಿಂದ ಹೋಗಿ ಗ್ರಾಮನಿವೇಶನವನ್ನು ಆ ಸ್ಥಳದಲ್ಲಿ [illegible]ಗಳು, ಭಾವಿಗಳು ಸಹ ತಯಾರುಮಾಡಿಸಿ ಸ್ವರ್ಗಸ್ಥರಾದ [illegible]ಗ ಮಿ॥ ಸ್ವಾಮಿರಾಯರು ಇದುವರೆಗೂ ಇದ್ದರೆ ಈ ಹಾಳು ಗ್ರಾಮ[illegible]ಲ್ಲಿ ಯಾರೂ ಇರುತ್ತಿದ್ದಿಲ್ಲ. ಇಲ್ಲಿನ ಜನಗಳು ಬಹಳ ಮೌಢ್ಯ[illegible]ರುತ್ತಾರೆ. ಗ್ರಾಮಕ್ಕೆ ಬಂದ ಪ್ರತಿ ಒಬ್ಬ ಆಫೀಸರೂ ಇವರಿಗೆ [illegible] ಮಾರಿಗಳೆಂಬ ಬಿರುದನ್ನು ಕೊಟ್ಟು ಹೋಗಿರುತ್ತಾರೆ. ಇವರು [illegible] ವರೆಗೂ ಹೊಸಗ್ರಾಮ ನಿವೇಶನದಲ್ಲಿ ಮನೆ ಕಟ್ಟದೆ "ಅದೃಷ್ಟವಿ[illegible]ತಾಗುತ್ತೆ. ಇಲ್ಲಿ ಸಾಯುವವರು ಅಲ್ಲಿ ಉಳಿಯುತ್ತಾರೇನು?" ಎಂ[illegible] ಅವಿವೇಕ ವಚನಗಳನ್ನಾಡುತ್ತಿರುವರು. ಆದರೆ ಈಗ ಎರಡು ತಿಂ[illegible]ಗಳ ನಮ್ಮ ತಾಲ್ಲೂಕು ಅಮಲ್ದಾರ್ ಮಿ॥ ಸಿ. ಮಾಚಯ್ಯನ[illegible] ಬಂದು ಗ್ರಾಮವನ್ನೆಲ್ಲಾ ನೋಡಿ ಬಹಳ ವ್ಯಸನಪಟ್ಟು ಈ ಗ್ರಾಮ[illegible] ಪ್ರತಿ ಒಬ್ಬ ಮನುಷ್ಯನನ್ನು ಕರೆಸಿ ಒಳ್ಳೇ ಮೃದುತರವಾದ ಮಾ[illegible]ಳಿಂದ ಹೊಸ ಗ್ರಾಮದಲ್ಲಿ ಮನೆಗಳನ್ನು ಕಟ್ಟಿಕೊಂಡು ಸುಖ[illegible] ಬಾಳಿರಿ ಎಂಬುದಾಗಿ ಬೋಧಿಸಿದಾಗ್ಯೂ ಅವರ ಎದುರಿಗೆ ಒಪ್ಪಿಕೊ[illegible]ವರು ಇನ್ನೂ ಮೌನಾವಸ್ಥೆಯಲ್ಲಿರುವರು. ಇವರುಗಳಿಗೆ ಯಾವ[illegible] ಆರೋಗ್ಯವೇ ಭಾಗ್ಯವೆಂಬ ಜ್ಞಾನವು ಉತ್ಪನ್ನವಾಗಿ, ಹೊಸ ಗ್ರಾ[illegible]ದಲ್ಲಿ ವಾಸಿಸುವರೋ ತಿಳಿಯದು. ಈ ಜನಗಳನ್ನು ದಂಡಿಸಿ[illegible]

...ಳು ಊರನ್ನು ಬಿಡಿಸಿದರೆ ಹೊರಡುವರೇ ಹೊರ್ತು ತಾವೇ ಎಂದಿಗೂ ಹೊರಡಲಾರರು. ಬಲತ್ಕಾರಪಡಿಸಿ ಹೊಸಗ್ರಾಮ ನಿವೇಶನದಲ್ಲಿ ಮನೆ ಕಟ್ಟುವಂತೆ ಏರ್ಪಾಡು ಮಾಡಿದರೆ ಪ್ರಜಾಹಿಂಸಾ ದೋಷವೇನೂ ಬರಲಾರದು. ಮುಗ್ಧರಾದ ಈ ಜನಗಳು ಆರೋಗ್ಯಭಾಗ್ಯವನ್ನು ಪಡೆದು ಸುಖದಿಂದಿದ್ದಾರು.

ಗ್ರಾಮಾಭಿಮಾನಿ.

ಬಡ ಕೋಬಳಿ ಸ್ಕೂಲ್ ಮಾಸ್ಟರುಗಳ ಕಷ್ಟ ತಪ್ಪಲಿಲ್ಲ

೧

ಅಯ್ಯಾ,

ಲೋವರ್ ಸೆಕಂಡರಿ ಪರೀಕ್ಷೆ ಕೊಟ್ಟು ಕೆಲಸಕ್ಕೆ ಸೇರಿ ೧೦-೧೫ ವರುಷ ಸರ್ವಿಸ್ ಮಾಡುತ್ತಾ ಹಾಲಿ ಇವರಿಗೆ ದೊರೆಯುವ ೭ ರೂಪಾಯಿ ಟಲಬು ಜೀವನಕ್ಕೆ ಸಾಲದೆ ಬಹಳ ದರಿದ್ರಾವಸ್ಥೆಯನ್ನು ಅನುಭವಿಸುತ್ತಾ ಇದ್ದಾರೆ. ಕಳೆದ ಅಕ್ಟೋಬರು ತಿಂಗಳ ತಾ ೧೫ ರ ಪತ್ರಿಕೆಯಲ್ಲಿ ಕೋಬಳಿ ಸ್ಕೂಲ್ ಮಾಸ್ಟರುಗಳ ಸಂಬಳವನ್ನು ೭ ರಿಂದ ೧೦ ರ ಕ್ಕೆ ಇಜಾಫೆ ಮಾಡಿಕೊಡಲು ಶ್ರೀಮಾನ್ ದಿವಾನ್ ಸಾಹೇಬರವರು ಕಳೆದ ದಸರಾ ಮೀಟಿಂಗಿನಲ್ಲಿ ಹೇಳಿರುವದು ನಿಜವೇ ಎಂತಲೂ, ಕೆಲವು ಇಲಾಖಾ ಉಪಾಧ್ಯಾಯರು ಕೋತಾ ಮಾಡಲು ತನಿಖೆ ಮಾಡುತ್ತಿದ್ದಾರೆಂತಲೂ, ಇದು ಗೊತ್ತಾಗುವ ತನಕ ಬಡ್ತಿ ವಿಚಾರ ಇರ್ಥವಾದೀತೆ ಯಾ ಈ ಮೊದಲೆ ಕೊಡುವರೊ ನಮಗೆ ತಿಳಿಯದೆಂದು ಪ್ರಶ್ನಿಸಿ ನಮೂದಿತ್ತು. ಅದರಂತೆ ಈ ಸಾಲಾಖೈರಿನಲ್ಲಿ ಕೆಲವು ಇಲಾಖಾ ಆಫೀಸುಗಳು ಕಡಿಮೆ ಮಾಡಿಯೂ ಇದ್ದಾರೆಂತಲೂ ಕೇಳುತ್ತೇನೆ. ಆದಾಗ್ಯೂ ಮಾಸ್ಟರುಗಳಿಗೆ ೧೦ ರೂ ಆಗಲಿಲ್ಲ. ಈಗಲಾದರೂ ಶ್ರೀಮಾನ್ ದಿವಾನ್ ಸಾಹೇಬರವರು ಮಾಸ್ಟರುಗಳ ಕಷ್ಟ ಪರಿಹರಿಸುವರೆಂದು ನಾ ಭರವಸ

ವಿದ್ಯಾಭಿಮಾನಿ

೨

ಅಯ್ಯಾ,

ಕೋಬಳಿ ಸ್ಕೂಲ್ ಮಾಸ್ಟರುಗಳಿಗೆ ಈಗ್ಗೆ ಮೂರು ವರ್ಷಗಳ ಹಿಂದೆ ಬಡ್ತಿ ಮಾಡುತ್ತಾರೆಂಬ ಸಂಗತಿಯು ಎಲ್ಲಾ ಕಡೆಯಲ್ಲಿಯೂ ಹರಡಿಕೊಂಡಿದ್ದು ಮತ್ತೆ ಅದರ ಸುದ್ದಿಯೇ ಇಲ್ಲದಂತೆ ಆಗಿದೆ ... ವಿದ್ಯಾಭಿವೃದ್ಧಿಯ ವಿಷಯದಲ್ಲಿ ಅನೇಕ ಏರ್ಪಾಡುಗಳ ನಡೆಸುತ್ತಿರುವರೇ ಹೊರತು ಇವರ ಬಡ್ತಿ ವಿಷಯದಲಿ ಯಾವ ಏರ್ಪಾಡೂ ಇಲ್ಲ. ದಿವಾನ್ ಸರ್ ಪಿ ಎನ್ ಕೃಷ್ಣಮೂರ್ತಿಗಳವರ ಕಾಲದಲ್ಲಿ ಇನ್ನುಳಿದ ಎಲ್ಲಾ ಮಾಸ್ಟರುಗಳಿಗೂ ಬಡ್ತಿ ದೊರೆಯುತ್ತಾ ಬಂದಿದ್ದು ಮತ್ತೆ ಕೈಗೆ ಬಂದ ತುತ್ತು ಬಾಯಿಗೆ ಬರದೇ ಹೋದಂತೆ ಆ ಸಂಗತಿಯೇ ಮಂಗಮಾಯವಾಯಿತು. ಯೋಚಿಸಿ ನೋಡಿದರೆ ಎಲ್ಲಾ ಇಲಾಖೆಗಳಿಗಿಂತಲೂ ವಿದ್ಯಾ ಇಲಾಖೆಯೇ ಉತ್ತಮವಾದುದು. ಇತರ ಇಲಾಖೆಗಳಲ್ಲೆಲ್ಲಾ ಗ್ರೇಡುಗಳೇರ್ಪಟ್ಟು ಬಡ್ತಿಗಳು ದೊರೆಯುತ್ತವೆ. ಈ ವಿದ್ಯಾ ಇಲಾಖೆಯಲ್ಲಿ ಕೆಲಸವಿದ್ದರೂ ಗ್ರಾಮದ ಕೆರೆ ಕಟ್ಟೆಯ ಮೇಲೆ ನಟ್ಟಿರುವ ಗ್ರೇಡು ಕಲ್ಲುಗಳೇ ಗ್ರೇಡುಗಳು, ಅವುಗಳನ್ನು ಒಂದರ ಮೇಲೊಂದಾಗಿ ಎದೆಯ ಮೇಲೆ ಹೇರಿಕೊಂಡರೆ ಅದೇ ಬಡ್ತಿ. ಈ ಸ್ಕೂಲ್ ಮಾಸ್ಟರುಗಳ ಸಂಕಟಕ್ಕೆ ಅಂತ್ಯವೇ ಇಲ್ಲವೇ! ಇವರಿಗೆ ಬಡ್ತಿ ಕೊಡಬೇಕೆಂಬ ವಿಷಯವಾಗಿ ಅನೇಕ ಪತ್ರಿಕೆಗಳು ಇದುವರೆಗೆ ಕೂಗಿ ಕೂಗಿ ಫಲವನ್ನು ಕಾಣದೆ ಈಗ ಮಾಸ್ಟರುಗಳಿಗೆ ನಿರಾಶೆಯನ್ನು ಸೂಚಿಸುತ್ತಿವೆ.

ಪೂರ್ವದ ವಿದ್ಯಾಭಿವೃದ್ಧಿ, ಕಾಲಸ್ಥಿತಿ, ಮಾಸ್ಟರುಗಳ ಯೋಗ್ಯತೆ, ಪತ್ರಗಳನ್ನು ಈ ಕಾಲದವುಗಳೊಂದಿಗೆ ಹೋಲಿಸಿ ನೋಡಿದರೆ ಅಜಗಜಾಂತರವಾಗಿದೆ. ಆಗಿನ ಸ್ಕೂಲುಗಳಲ್ಲಿ ಒಬ್ಬ ವಿದ್ಯಾರ್ಥಿಯು ಒಂದು ತರಗತಿಯಲ್ಲಿ ತೇರ್ಗಡೆಯಾಗಿ ಮತ್ತೊಂದು ತರಗತಿಗೆ ಹೋಗಬೇಕಾದರೆ ಕೊನೆಯ ಪಕ್ಷ ಎರಡು ವರ್ಷವಾದರೂ ಬೇಕಾಗುತ್ತಿತ್ತು. ಹೀಗಿದ್ದರೂ ಆತನ ಪಾಠ ಪುಸ್ತಕಗಳಲ್ಲಿ ಐದು ಪ್ರಶ್ನೆಗಳನ್ನು ಕೇಳಿದರೆ ೨ ಸ್ವಂತ ಎರಡು ಪ್ರಶ್ನೆಗಳಿಗಾದರೂ ತೃಪ್ತಿಕರವಾದ ಉತ್ತರವನ್ನು ಕೊಡಲು ಶಕ್ತನಾಗಿರಲಿಲ್ಲ. ಆದರೂ ಆಗಿನ ಮಾಸ್ಟರುಗಳಿಗೆ ಬಡ್ತಿಯು ದೊರೆಯುತ್ತಲೇ ಇತ್ತು. ಅವರು ಮಾಡಿದ್ದ ಘನ್ಯವೇನೋ ಈಗಿನವರು ಮಾಡಿರುವ ಪಾಪವೇನೋ ವಾಚಕ ಮಹಾಶಯರೇ ಯೋಚಿಸಬೇಕು. ಈಗ ಕೋಬಳಿ ಸ್ಕೂಲಿನಲ್ಲಿ ಕೆಲವು ಕಡೆ ಒಬ್ಬರೇ ಮಾಸ್ಟರಿದ್ದಾಗ್ಯೂ ತಮ್ಮ ಸ್ಕೂಲಿನಲ್ಲಿರುವ ಪ್ರತಿ ತರಗತಿಯಲ್ಲಿಯೂ ಶ್ರಮಪಟ್ಟು ಕೆಲಸ ಮಾಡಿ ವಿದ್ಯಾಭಿವೃದ್ಧಿಯನ್ನು ತೋರಿಸುತ್ತಿದ್ದಾರೆ. ಕೆಲವು ಸ್ಕೂಲುಗಳಲ್ಲಿ ಲೋವರ್ ಸೆಕಂಡರಿ ತರಗತಿಯನ್ನಿಟ್ಟು, ಅವರು ಪ್ರತಿ ವರ್ಷವೂ ೭—೮ ಮಂದಿ ಬಾಲಕರನ್ನು ಪರೀಕ್ಷೆಗೆ ಕಳುಹಿ, ತೇರ್ಗಡೆ ಹೊಂದಿಸುತ್ತಿದ್ದಾರೆ. ಇಷ್ಟೆಲ್ಲಾ ಮಾಡಿದಾಗ್ಯೂ ಅವರ ಶ್ರಮಕ್ಕೆ ಸಾರ್ಥಕವಾದಷ್ಟು ಪ್ರತಿಫಲವಿಲ್ಲವಾಗಿದೆ.

ಈಗ್ಗೆ ಮೊದಲಿನ ಕಾಲವು ಸುಭಿಕ್ಷವಾಗಿದ್ದುದರಿಂದ ರೂಪಾಯಿಗೆ ೧೦—೧೨ ಸೇರು ಅಕ್ಕಿ ಸಿಕ್ಕುತ್ತಿತ್ತು. ಇತರ ಪದಾರ್ಥಗಳೂ ಹಾಗೆಯೇ ಅಗ್ಗವಾಗಿ ದೊರೆಯುತ್ತಿದ್ದವು. ಈ ದುರ್ಭಿಕ್ಷಕಾಲದಲ್ಲಿ ರೂಪಾಯಿ ಒಂದಕ್ಕೆ ೬ ಸೇರು ಅಕ್ಕಿ ಸಿಕ್ಕುವುದೇ ಪರಮ ದುರ್ಲಭ. ಇದರ ಮೇಲೆ ಪೇಟೆ ಸ್ಥಳಗಳಿಗೆ ದೂರವಾಗಿರುವ ಹಳ್ಳಿಗಳಲ್ಲಿ ವಾಸಮಾಡುವ ಮಾಸ್ಟರುಗಳ ಗೋಳಂತೂ ಹೇಳತೀರದು. ಅಲ್ಲಿ ವರ್ತಕರು ಕೊಟ್ಟಷ್ಟನ್ನೇ ತೆಗೆದುಕೊಳ್ಳಬೇಕು. ಹೆಚ್ಚಾಗಿ ಕೇಳಿದರೂ ಸಿಕ್ಕುವದಿಲ್ಲ. ಬಾಕೀ ದಿನಸುಗಳೆಲ್ಲ ಇದರಂತೆಯೇ ಇವೆ. ...ರಿಗೆ ಬರುವ ೭ ರೂಪಾಯಿ ಅಕ್ಕಿ ಮತ್ತು ಇತರ ಪದಾರ್ಥಗಳಿಗೆ ...ದೇ ಹೋಗುವಾಗ ಬಾಕೀ ಖರ್ಚು ಬಾಬುಗಳಿಗೇನು ಮಾಡಬೇಕು? ಸಾಲಮಾಡಬೇಕು. ಮತ್ತೆ ಆ ಸಾಲವನ್ನು ತೀರಿಸುವ ಮಾರ್ಗವೇನು? ಅದಿಲ್ಲವೇ ಇಲ್ಲ. ಇಷ್ಟು ತೊಂದರೆ ಪಡುತ್ತಿದ್ದಾಗ್ಯೂ ...ರ್ಗಳೆರವರಲ್ಲಿ ಲಕ್ಷ್ಯಕೊಟ್ಟು ವಿದ್ಯಾಭಿವೃದ್ಧಿಯೊಂದಿಗೆ ಮಕ್ಕಳ ಸನ್ಮಾರ್ಗ ಪ್ರವರ್ತಕರನ್ನಾಗಿ ಮಾಡುವುದರಲ್ಲಿಯೂ ಕಾರ್ಯ ಶೀಲರಾಗಿದ್ದಾರೆ.

...ಘನವನ್ನು ಹೊಂದಿದ ಬರೋಡಾ ಸಂಸ್ಥಾನದ ಗಾಯಕವಾಡರವರು ತಮ್ಮ ದೇಶದಲ್ಲಿ ಮಾಸ್ಟರುಗಳಿಗೆ ಗ್ರೇಡುಗಳನ್ನು ...ಸಿ ಸಕಾಲಕ್ಕೆ ಬಡ್ತಿ ಕೊಟ್ಟು ಅವರ ತೊಂದರೆಯನ್ನು ಹೋಗಲಾಡಿಸಿ ಕೆಲಸದಲ್ಲಿ ಉತ್ಸಾಹವನ್ನು ಹೆಚ್ಚಿಸಿದ್ದಾರೆಂತಲೂ, ಇದರಂತೆ ಯೇ ಬೊಂಬಾಯಿ ಆಧಿಪತ್ಯದಲ್ಲಿ ಏರ್ಪಾಡು ಮಾಡುತ್ತಿದ್ದಾರೆಂತಲೂ ವರ್ತಮಾನವಿದೆಯಾದ್ದರಿಂದ ಘನಹೊಂದಿದ ನಮ್ಮ ಶ್ರೀಮನ್ ಮಹಾರಾಜಾ ಸರ್ಕಾರದವರು ಈ ಬಡ ಮಾಸ್ಟರುಗಳ ಅಲಾಪವನ್ನು ಚಿತ್ತಕ್ಕೆ ತೆಗೆದುಕೊಂಡು, ಇತರ ಸಂಸ್ಥಾನಗಳಲ್ಲಿರುವಂತೆ ಇವರಿಗೆ ಗ್ರೇಡುಗಳನ್ನೇರ್ಪಡಿಸಿ, ಬಡ್ತಿಗಳನ್ನು ಕೊಡುತ್ತಾ ಬಂದಲ್ಲಿ ಇವರ ಸಂತಾಪವು ಶಾಂತವಾಗಿ ಈ ನಮ್ಮ ಮೈಸೂರು ಸಂಸ್ಥಾನದ ಕೋಬಳಿ ಸ್ಕೂಲುಗಳ ವಿದ್ಯಾಭಿವೃದ್ಧಿಯು ಮತ್ತೂ ಉತ್ತಮ ಸ್ಥಿತಿಗೆ ಬಂದೀತು.

ಮಾಸ್ಟರುಗಳ ಹಿತಚಿಂತಕ

ತಾಲ್ಲೋಕು ವರ್ತಮಾನಗಳು

ಹೊಳೆಹೊನ್ನೂರು.—೬—೫ ದಿನಗಳಿಂದ ಮೋಡವಾಗುತ್ತಲೂ ಆಗಾಗ್ಗೆ ವರ್ಷಿಸುತ್ತಲೂ ಇರುವದರಿಂದ ಜನರ ಗಾಬರಿಗವಕಾಶವಿಲ್ಲ. ಇದುವರಿಗಿನ ಮಳೆಯಿಂದ ಬೆಳಸು ಉತ್ತಮ ಸ್ಥಿತಿಯಲ್ಲಿದೆ. ಮ್ಯಾಂಗನೀಸ್ ಕಂಪನಿಗಳು ದಿನೇ ದಿನೇ ಪ್ರಬಲಿಸುತ್ತಿರುವದರಿಂದ ದಿನಸಿ ದಾರಣೆ ಎಲ್ಲಿನಂತೆ ಇಲ್ಲಿಯೂ ಮಟ್ಟನ್ನು ಏರುತ್ತಲಿದೆ.—ಶ್ರೀ ಕೂಡಲಿ ಶೃಂಗೇರಿ ಸ್ವಾಮಿಗಳವರು ಶಿನ್ಮೋಗ್ಗೆಯಿಂದ ದೇಶ ಸಂಚಾರಾರ್ಥ ಹೊರಟು ತಾ ೧೫ನೇ ಪ್ರಾತಃಕಾಲ ಗ್ರಾಮ ಬಹಿಃಪ್ರದೇಶಕ್ಕೆ ಚಿತ್ತೈಸುವುದಕ್ಕೆ ಸರಿಯಾಗಿ ಇಲ್ಲಿನ ಸ್ಮಾರ್ತ ವೈಷ್ಣವ ಮಂಡಲಿಯ ಬ್ರಾಹ್ಮಣರೂ ಇತರ ಭಕ್ತ ವರ್ಗದವರೂ ಶ್ರೀಗಳವರ ಸಂದರ್ಶನ ಹೊಂದಿ, ಹಗಲು ದೀವಟಿಗೆ ಮುಂತಾದ ಬಿರುದಾವಳಿಗಳಿಂದಲೂ ಅನೇಕ ವಾದ್ಯ ವಿಶೇಷಗಳಿಂದಲೂ ತಳಿ ತೋರಣಗಳಿಂದಲೂ ಅಲಂಕರಿಸಲ್ಪಟ್ಟ ಬೀದಿಯಲ್ಲಿ ಪಾಲಕಿಯಲ್ಲಿ ಕುಳಿತು ಬರುತ್ತಿರಲು ಸಂಸ್ಥಾನದ ಆನೆಯೊಂದು ಹಿಂಗಾಲುಗಳ ಮೇಲೆ ನಿಂತು ಚಾಮರವನ್ನು ಬೀಸಿದ್ದಲ್ಲದೆ ಇನ್ನೂ ಅನೇಕ ಚಿತ್ರ ಚಮತ್ಕೃತಿಯಿಂದ ಪ್ರೇಕ್ಷಕರ ಮನಸ್ಸಿಗಾನಂದಾಶ್ಚರ್ಯವನ್ನುಂಟು ಮಾಡಿತು. ಇಲ್ಲಿನ ಮೆಂಬರು ಸರ್ಕಾರಿ ಅಧಿಕಾರಿಗಳಿಂದ ನಡೆಸಲ್ಪಟ್ಟ ಪಾದ ಪೂಜೆ ಭಿಕ್ಷಾದಿಗಳನ್ನು ಅತ್ಯಂತ ಹರ್ಷದಿಂದ ಸ್ವೀಕರಿಸಿ, ೬—೫ ಮೊಕ್ಕಾಂ ಮಾಡಿದರು. ಪೇಟೆಯಲ್ಲಿ ಮ॥ ಗೋಂದಕರ್ ರಾಮಣ್ಣನವರು ಅತಿ ವಿಜೃಂಭಣೆಯಿಂದಲೂ ಅನೇಕ ಚಿತ್ರಗಳಿಂದಲೂ ಶೃಂಗರಿಸಿದ್ದ ಭವನಕ್ಕೆ ಕರೆದುಕೊಂಡು ಬಂದು ಯಥಾಶಕ್ತಿ ಪಾದಪೂಜೆ ಭಿಕ್ಷಾದಿಗಳನ್ನು ನಡೆಯಿಸಿದರು.

ಚಿಕ್ಕಮಗಳೂರು.—ಒಂದು ವಾರದಿಂದಲೂ ಮಳೆಯು ಕವಿದುಕೊಂಡಿದೆ. ಪ್ಲೇಗ್ ರೋಗವು ಪೂರ್ತಿಯಾಗಿ ನಿಂತು ಹೋದಂತೆ ಕಾಣಲಿಲ್ಲ. ಹೋದವಾರ ಇಬ್ಬರು ಕಾಲವಾದರು. ಇನ್ನೂ ಕೆಲವರಿಗೆ ರೋಗವಿದೆ. ಕೆಲವು ಕಡೆ ಇಲಿಗಳು ಬಿದ್ದಂತೆ ವರ್ತಮಾನ.—ಸೆಷನ್ ವಿಚಾರಣೆಯಲ್ಲಿ ಕೊಪ್ಪದ ಕೊಲೆ ಮೊಕದ್ದಮೆಯಲ್ಲಿ ಅಪರಾಧಿಯಾಗಿ ಕಂಡುಬಂದ ವೆಂಕಟೇಗೌಡನಿಗೆ ಘಾಶೀ ಸಜವೂ ಹೊನ್ನಪ್ಪ ಹೆಗ್ಗಡೆಗೆ ಬಿಡುಗಡೆಯೂ ಆದ ಕಾರಣ ಇವನು ಇಲ್ಲಿನ ಬತ್ತದ ಬಳಿ ರಸ್ತೆಯಲ್ಲಿ ತನ್ನ ಕಡೆಯ ಜನರ ಮೂಲಕ ದಾರಿಯಲ್ಲಿ ತಿರುಗಾಡುವ ಜನರಿಗೆಲ್ಲಾ ಸಕ್ಕರೆಯನ್ನು ಹಂಚಿಸಿದನು. ತರೀಕೆರೆ ಕಳುವಿನಲ್ಲಿ ಸಿಕ್ಕಿದ್ದ ಅಪರಾಧಿಗೆ ಒಂದು ವರ್ಷದ ಸಜವೂ ೨೫ ಛಡಿ ಏಟುಗಳೂ ನೇಮಕವಾಯಿತೆಂದೂ, ಈಗ ಜಡ್ಜಿಯವರು ಯಡೇಹಳ್ಳಿ ಖೂನಿ ಮೊಕದ್ದಮೆಯನ್ನು ವಿಚಾರಿಸುತ್ತಿದ್ದಾರೆಂದೂ ಕೇಳುತ್ತೇನೆ.—ಈ ಊರಿನಲ್ಲಿ ಕಳವು ಹೆಚ್ಚುತ್ತಿರುವಂತೆ ಕಾಣುತ್ತಿದೆ. ೧೫ನೆ ತಾ ರಾತ್ರಿ ಇಲ್ಲಿನ ನಾಯಿಂದ್ರ ಬೀದಿಯಲ್ಲಿರುವ ಪ್ಲೀಡರ್ ಮೆ॥ ರಾಮಸ್ವಾಮಯ್ಯಂಗಾರ್ರ ಮನೆಗೆ ಅವರು ಇನ್ನೂ ಎಚ್ಚರವಾಗಿರುವಾಗಲೇ ಮನೆಯ ಮೇಲೆ ಕಲ್ಲು ಬಿದ್ದದ್ದಲ್ಲದೆ ಕಳ್ಳರು ಕದವನ್ನು ಒದ್ದರೆಂದೂ ಒಳಗೆ ಮೆ॥ ರಾಮಸ್ವಾಮಯ್ಯಂಗಾರ್ರು ಎಚ್ಚರವಾಗಿರುವದನ್ನು ಕಂಡು ಓಡಿ ಹೋದರೆಂದೂ ಕೇಳುತ್ತೇನೆ.—ಬಸವನಹಳ್ಳಿಯಲ್ಲಿರುವ ಶ್ಯಾನುಭೋಗ ಸೀತಾರಾಮಯ್ಯನವರ ಮನೆಯಲ್ಲಿಯೂ ಕೆಲವು ಪಾತ್ರೆಗಳು ಕಳುವಾದಂತೆ ವರ್ತಮಾನ.—ಕಳೆದ ತಿಂಗಳು ಇಲ್ಲಿನ ಕೋಟೆ ಕೆರೆಯಲ್ಲಿ ವಾಕ್ಟರ ಆಳಿಯನು ಷಿಕಾರಿ ಮಾಡುವಾಗ ಗುಂಡು ತಪ್ಪಿಹೋಗಿ, ಬಳಿಗರೆಯಲ್ಲಿ ಎತ್ತುಗಳಿಗೆ ನೀರು ಕುಡಿಸುತ್ತಿದ್ದ ಹುಡುಗನಿಗೆ ತಗಲಿ ಆಸ್ಪತ್ರೆಯಲ್ಲಿದ್ದು ಈಚೆಗೆ ಪೋಲೀಸ್ ವಿಚಾರಣೆಯಲ್ಲಿದೆ ಎಂದು ಬರೆದಿತ್ತಷ್ಟೆ. ಈ ವಿಷಯವನ್ನು ಕೋರ್ಟಿಗೆ ಹೋಗುವದಕ್ಕಿಂತ ಮೊದಲೇ ಸಮಾಧಾನ ಮಾಡಿಕೊಂಡರು.—ಈಗ ಬಂದಿರುವ ನಮ್ಮ ಡೆಪ್ಯುಟಿ ಕಮಿಷನರು ಆಶ್ರಯವಿಲ್ಲದ ಜಾಗದಲ್ಲಿ ಏರ್ಪಾಡಾಗಿದ್ದ ಸಂತೆಯನ್ನು, ಮಳೆ ಬಂದಾಗ್ಗೆ ವ್ಯಾಪಾರಸ್ಥರಿಗೂ ಅವರ ಸರಕಿಗೂ ವ್ಯಾಪಾರಕ್ಕಾಗಿ ಬಂದವರಿಗೂ ಆಗುವ ಮಳೆ ನೀರಿನ ಸ್ನಾನವನ್ನೂ ನೋಡಿ ಅಂತಃಕರಣಪಟ್ಟು ಮೊದಲಿದ್ದ ಸ್ಥಳಕ್ಕೇನೆ ಸಂತೆಯನ್ನು ಬದಲಾಯಿಸಿದ್ದು ತುಂಬಾ ಉಪಕಾರ ಮಾಡಿದಂತಾಯಿತು.—ಇಲ್ಲಿನ ಇಂಗ್ಲಿಷ್ ಸ್ಕೂಲಿನ ಹೆಡ್ ಮಾಸ್ಟರ್ ಮೆ॥ ಎಂ ಬಿ ಶ್ರೀನಿವಾಸಯ್ಯಂಗಾರ್ರಿಗೆ ಆ ಸ್ಕೂಲಿನ ಸಹಾಯೋಪಾಧ್ಯಾಯರೂ ವಿದ್ಯಾರ್ಥಿಗಳೂ ಸೇರಿ ೧೯ನೇ ತಾ ಒಂದು ಅಡ್ರೆಸ್ಸನ್ನು ಕೊಟ್ಟು ಫಲಾದಿಗಳಿಂದ ಅವರನ್ನು ಆ ಅಡ್ರೆಸ್ಸಿನ ಕಾಲದಲ್ಲಿ ಬಂದಿದ್ದವರನ್ನು ಸಂತೋಷಪಡಿಸಿದರು.

ದೊಡ್ಡಬಳ್ಳಾಪುರ.—ಬಿಕ್ರಾಸೇಗ ...ಂಬವರು ಸಿಡಿಲಿನಿಂದಾಗಿ ಮರಕತ್ತಿ ಬಿದ್ದು ಸತ್ತುಹೋದರು. ಹುಲಿಕುಂಟೆಯಲ್ಲಿ ಒಕ್ಕಲಿಗರ ಪೈಕಿ ಹಿರಿ ಕೆಂಡತಿಯ ಮಗ ನಂಜ ಎಂಬವನು ಭಾಗಾಂಶದ ವಿಷಯದಲ್ಲಿ ಮಾತು ನಡೆದು, ತಂದೆಯನ್ನು ಒಲತಾಗಿಯೂ ನಗನದ ಕತ್ತಿಯಿಂದ ತಿವಿದು ಬಹಳ ಗಾಯ ಮಾಡಿದನು. ಈ ಗಾಯಪಟ್ಟವರನ್ನು ಆಸ್ಪತ್ರೆಗೆ ತಂದು ಇದ್ದರು. ಈಗ ಪೋಲೀಸಿನವರು ಆ ಪಾತಕನನ್ನು ಹಿಡಿದು ವಿಚಾರಣೆಗೆ ಗುರಿಮಾಡಿದ್ದಾರೆ.—ಈ ಜುಲೈ ತಾ ೧೨ ರಲ್ಲಿ ಬಲವಾದ ಗಾಳಿ ಬಂತು. ಆಗ ರಾಮಣ್ಣನ ಭೂಪತ್ರ ಹಳ್ಳಿದಲ್ಲಿ ಒಂದು ಮಗು ಕೊಚ್ಚಿಕೊಂಡು ಹೋಯಿತು. ಇದನ್ನು ಯಾರೋ ಮುಂದೆಯೇ ಹಿಡಿದ್ದ ಕಾರಣ ಹೆಚ್ಚು ಕೆಡಕೇನೂ ಆಗಲಿಲ್ಲ ಕಾಣುತ್ತೆ.—ಇಲ್ಲಿ ೨೦ ವರ್ಷದಿಂದಲೂ ಇದ್ದು ಜನಪ್ರೀತಿ ಗೌರವಗಳನ್ನು ಸಂಪಾದಿಸಿಕೊಂಡಿದ್ದ ಅಮಲ್ದಾರರಾದ ಮೆ॥ ಸಿ ರಂಗನಾಥರಾವ್ ಸಾಹೇಬ್ ಯವರು ಇಲ್ಲಿಂದ ಚನ್ನಪಟ್ಟಣಕ್ಕೆ ವರ್ಗವಾಗಿ ಈ ಜುಲೈ ತಾ ೧೫ ರಲ್ಲಿ ಹೋದರು. ಇವರ ವರ್ಗದ ಸುದ್ದಿಯನ್ನು ಇಲ್ಲಿನವರು ಕೇಳಿದ ಮೇಲೆ ತುಂಬಾ ವ್ಯಸನಕ್ಕೆ ಗುರಿಯಾದರು. ಯಾರ ಬಾಯಲ್ಲಿಯೂ ಇಂಥಾ ಯಥಾರ್ಥವಂತರು ಬೇರೆ ಕಡೆಗೆ ಹೋಗುತ್ತಾರಲ್ಲಾ ಎಂಬುವದೇ ಇತ್ತು. ಇವರಲ್ಲಿ ಪ್ರೀತಿ, ಸತ್ಯತೆ, ಕನಿಕರ ತುಂಬಿತ್ತೆಂದು ಹೇಳಬಹುದು. ಯಾವ ಹಳ್ಳಿಯವನನ್ನು ಕೇಳಿದರೂ ಇವರು ಸತ್ಯವಂತರು, ಲಂಚ ಎಂಬುವದು ಇವರ ಕನಸು ಮನಸ್ಸಿನಲ್ಲಿಯೂ ಇರಲಿಲ್ಲವೆಂದು ಹೇಳುತ್ತಿದ್ದಾರೆ. ಇಲ್ಲಿನ ವೈಶ್ಯ ಮಂಡಲಿಯವರು ತಮ್ಮ ಕೃತಜ್ಞತೆಯನ್ನು ತೋರಿಸುವುದಕ್ಕಾಗಿ ಅಲಂಪಲ್ಲಿಯವರ ಛತ್ರದಲ್ಲಿ ಸಭೆಸೇರಿ, ಅಮಲ್ದಾರರನ್ನು ಬರಮಾಡಿಕೊಂಡು, ತಮ್ಮ ಕೃತಜ್ಞತೆಯನ್ನು ಸಲ್ಲಿಸಿದರು. ತರುವಾಯ ತಾ ೧೭ ರಲ್ಲಿ ಇಲ್ಲಿನ ತಾಲ್ಲೂಕು ಕಚೇರಿಯವರೂ, ಪೋಲೀಸ್ ಇಲಾಖೆಯವರೂ, ಎಲ್ಲಾ ಸರ್ಕಾರಿ ಕೆಲಸದವರೂ, ಮುನ್ಸಿಫ್ ಕೋರ್ಟಿನಲ್ಲಿ ಸಭೆಸೇರಿ, ಅಮಲ್ದಾರರನ್ನು ಬರಮಾಡಿಕೊಂಡು, ತಮ್ಮ ಭಕ್ತಿ ವಿಶ್ವಾಸಗಳನ್ನು ತೋರಿಸಿ, ನಮ್ಮ ಅಮಲ್ದಾರರ ಗುಣಕಥನವನ್ನು ಮಾಡಿ, ಅನೇಕ ವಿನೋದಗಳನ್ನು ನಡಿಸಿದರು. ತಾ ೧೫ ರಲ್ಲಿ ಇಲ್ಲಿನ ಮ್ಯುನಿಸಿಪಲ್ ಮೆಂಬರುಗಳೂ, ಸ್ಕೂಲ್ ಮಾಸ್ಟರುಗಳೂ, ಪುರಜನರೂ ಸಭೆಸೇರಿ, ಅಮಲ್ದಾರರನ್ನು ವಾದ್ಯಗಳ ಸಮೇತ ಬರಮಾಡಿಕೊಂಡು, ತಮ್ಮ ಕೃತಜ್ಞತೆಯನ್ನು ತೋರಿಸುವದಕ್ಕೆ ಅಡ್ರೆಸ್ ಒಪ್ಪಿಸಿದರು. ಇದರಲ್ಲಿ ಇವರ ಸುಗುಣಗಳೂ, ಕೆಲಸಗಳೂ ವರ್ಣಿತವಾಗಿ ಇದ್ದವು. ತರುವಾಯ ಸಭೆಯವರಿಗೆ ಗಂಧ, ಪುಷ್ಪ, ತಾಂಬೂಲವನ್ನು ಕೊಟ್ಟು ಮುಕ್ತಾಯ ಮಾಡಿ, ಸಕಲ ವಾದ್ಯಗಳ ಸಮೇತ ಮೆರವಣಿಗೆ ಮಾಡಿಕೊಂಡು ರೈಲ್ ಸ್ಟೇಷನ್‌ಗೆ ಕರಕೊಂಡು ಹೋದರು. ಆ ದಿನ ಒಂದು ದೊಡ್ಡ ಉತ್ಸವಕ್ಕಾಗಿ ಜನರು ಸೇರುವಹಾಗೆ ಸೇರಿದ್ದರು. ಅಲ್ಲಿಂದ ಮುಕ್ತಿಮನೆಯ ಮೋರಿಬಾಯಮ್ಮನವರು, ಸದರಿ ಅಮಲ್ದಾರರನ್ನು ತಮ್ಮ ಮುಕ್ತಿ ಮನೆಗೆ ಬರಮಾಡಿಕೊಂಡು, ತಮ್ಮ ಕೃತಜ್ಞತೆಯನ್ನು ತೋರಿಸಿದರು. ಇವರ ಭಕ್ತಿಗೆ ಅಮಲ್ದಾರರು ತುಂಬಾ ಮೆಚ್ಚಿಕೊಂಡರು. ಅಷ್ಟರಲ್ಲಿ ರೈಲ್ ಗಾಡಿಯು ಬಂತು. ಅಮಲ್ದಾರರು ರೈಲು ಹತ್ತಿದ ಕೂಡ್ಲೆ ಬಹು ಜನರು ಕಣ್ಣೀರಿಟ್ಟು ಅತ್ತರು. ಅಮಲ್ದಾರರು ಸಹ ಕಣ್ಣೀರು ಸುರಿಸಿಕೊಂಡು ದುಃಖದ ಮುಖವುಳ್ಳವರಾಗಿ ಹೋದರು. ಇವರಿಗೆ ಬದಲಿಯಾಗಿ ವರ್ಗಪಟ್ಟಿರುವ ಮೆ॥ ಸದಾಶಿವರಾಯರು ಇನ್ನೂ ಇಲ್ಲಿಗೆ ಬಂದಿಲ್ಲ.

ಪ್ರಕಟನೆಗಳು

ಇಲ್ಲಿ ನೋಡಿ.

೬೦-2

ಒಳ್ಳೇ ಹಸನಾದ ಬಿಳೀ ಮೆಣಸಿನ ಹರಳು ಹಿಂಡಿ, ಕರೀ ಹರಳು ಹಿಂಡಿ, ಹೊಂಗೇ ಹಿಂಡಿ, ಮತ್ತು ಬೇವಿನ ಹಿಂಡಿಗಳು ಬೇಕಾಗಿವೆ. ಹಸನಾದ ಮಾಲಿಗೆ ಖರೀದಿ ಚನ್ನಾಗಿ ಸಿಕ್ಕುತ್ತದೆ.

ವಿಳಾಸ — ಮೆಸರ್ಸ್ ಪೀಟ್ರಿ ಹೆ ಅಂಡ್ ಸನ್, ಹುಣಸೂರು

ಬೇಕಾಗಿದೆ.

67 2

೩೦ ಗಂಟೆಗಳು ನಡೆಯುವ ಬೆಲೆಯುಳ್ಳ ನಮ್ಮ ಲೀವರ್ ಗಡಿಯಾರ (ವಾಚು) ಗಳನ್ನು ೫೦೪ (ದಿನೂರ ಹದಿನಾಲ್ಕು) ಉಪಯೋಗವಾದ ಬಹುಮಾನ ಪದಾರ್ಥಗಳ ಸಹಿತ ಕೊಂಡುಕೊಳ್ಳತಕ್ಕವರು ಬೇಕು. ಬಹುಮಾನ ಪದಾರ್ಥಗಳನ್ನು ಬರೆದು ತರಿಸಿಕೊಳ್ಳಿ. ವಿಳಾಸ — ಎಂ ಎ. ಫಾಟೂಲಾ ಕಂಪನಿ, ಚಿತ್ತೂರು, ಉತ್ತರ ಆರ್ಕಾಡು

ಕಬ್ಬಿನ ಹಾಲು ತೆಗೆಯುವ ಗಾಣಗಳು.

68 1

ಈ ಗಾಣಗಳಿಗೆ ೬—೫—೬ ಕಡೆ ಕಟ್ಟು ಕೊಟ್ಟು ಹಾಲು ತೆಗೆಯಬಹುದು. ಬಹಳ ಗಟ್ಟಿಯಾದ ಸಾಮಾನಿನಿಂದ ತಯಾರಿಸಿದೆ. ಈ ಗಾಣದಿಂದ ಹೆಚ್ಚು ಲಾಭ ಬಂದೀತು. ಇದಕ್ಕೆ ಸಮಾನವಾದ ಗಾಣವೇ ದೊರದು ಸಿಕ್ಕಲಾರದು. ಈ ವಿಳಾಸಕ್ಕೆ ಬರೆದರೆ ಎಲ್ಲಾ ತಿಳಿಯುತ್ತೆ.

ಮೆಕರಾಜಿ ಕಂಪನಿ, ಕೆಂಗೇರಿ ರೋಡ್,

ಬೆಂಗಳೂರು ಸಿಟಿ

ಅತಿ ಆಶ್ಚರ್ಯ! ಎಲೆಕ್ಟ್ರಿಕ್ ಕೈದೀಪ ಸುಲಭ ಖರೀದಿ!!

78 1

ಈ ದೀಪವನ್ನು ಜೇಬಿನಲ್ಲಿ ಇಟ್ಟುಕೊಳ್ಳುವ ಹಾಗೆ ಚಿಕ್ಕ ಸೈಜಿನಲ್ಲಿ ಮಾಡಿರುತ್ತೆ. ಇದಕ್ಕೆ ಬೆಂಕಿ, ಬತ್ತಿ, ಎಣ್ಣೆ ಸ್ವಲ್ಪವೂ ಅವಶ್ಯಕವಿಲ್ಲ. ಇದು ವಿದ್ಯುಚ್ಛಕ್ತಿಯಿಂದ ಉರಿಯುವದು. ಇದರಿಂದ ಯಾವ ಅಪಾಯವೂ ಉಂಟಾಗಲಿಕ್ಕಿಲ್ಲ.



ಇದರಿಂದ ಪ್ರಯಾಣಿಕರಿಗೆ ಬಹಳ ಅನುಕೂಲ. ಎಂಥಾ ದೊಡ್ಡ ಗಾಳಿಗೂ ಆರುವದಿಲ್ಲವು. ಇದನ್ನು ಸೋಲ್ಜರುಗಳು ಕಾಡುಗಳಲ್ಲಿ ಪ್ರಯಾಣ ಮಾಡುವದಕ್ಕೆ ಬಹಳ ಉಪಯೋಗಿಸುತ್ತಿದ್ದಾರೆ. ಬೇಕಾದಾಗ ಈ ಪೆಟ್ಟಿಗೆ ಮೇಲೆ ಇಟ್ಟಿರುವ ಬಟನ್ನನ್ನು ಬೆಟ್ಟಿನಿಂದ ಒತ್ತಿದ ಕೂಡಲೇ ೧೦೦ ದೀಪಗಳು ಹಚ್ಚಿದಷ್ಟು ಬೆಳಕು ಕೊಡುವದು. ಇದು ಎಷ್ಟು ದಿವಸವಾದರೂ ಒಳ್ಳೇ ಬರುವದು. ಉಪಯೋಗಿಸುವ ವಿಧಾನವು ಇದರ ಸಂಗಡ ಬರೆದು ಇಟ್ಟಿದೆ.

ಕ್ರಯ...ರೂ ೩—೦—೦ ವಿ ಪಿ ಪಿ ಛಾರ್ಜು ೭ ಅಣೆ ಸಹ. —ಆಗೋಸ್ಟು ಆಖೈರಿನೊಳಗೆ ತರಿಸಿಕೊಳ್ಳತಕ್ಕವರಿಗೆ ಬಹುಮಾನವಾಗಿ ರೂ ೨—೮—೦ ಕ್ರಯದ ನಮ್ಮ ಕಾಪಿ ಕಳುಹಿಸುವೆವು. ಇದರಿಂದ ಒಂದು ಬೆಳ್ಳಿ ವಾಚು ಅವಶ್ಯ ಸಿಗುತ್ತದೆ.

ವಿಳಾಸ —ಟಿ ಸಿ ನಾಗಲಿಂಗಪ್ಪ ಅಂಡ್ ಕಂಪನಿ,

ಸಾಹುಕಾರ್ ಪೇಟೆ ಮದರಾಸು.

ಅಮೇರಿಕದಲ್ಲೆಲ್ಲಾ ತುಂಬಾ ಮುದುಕನಾಗಿರುವನು

ಪೆರೂನಾವನ್ನು ಉಪಯೋಗ್ಯ ಮಾಡಿಕೊಂಡು ಅನೇಕ, ೩
ಶೀತಕಾಲಗಳ ಭಯಸಂಕಟಗಳನ್ನು 38-16
ಜಯಿಸಿರುತ್ತಾನೆ.



ಮಿ. ಐಜಕ್ ಬ್ರಾಕ್, ೧೧೮ ಸಂವತ್ಸರಗಳು ತುಂಬಿವೆ.

ನಾನು ನನ್ನ ಕೋಲಿನ ಸಹಾಯದಿಂದ ನಡೆದಾಡಬಲ್ಲೆನು, ಇದರಿಂದ ನನಗೆ ಒಳ್ಳೇದಾದೀತು ನಾನು ಪೆರೂನಾವನ್ನು ಬಿಟ್ಟಿರಲಾರೆನು."

ನನ್ನ ವಿಧೇಯ

Isaac Brock

೧೯೦೬ನೇ ಇಸವಿ ಜೂಲೈ ೭ ರಲ್ಲಿ ಮಿ॥ ಬ್ರಾಕ್‌ಯವರಿಗೆ ಅವರ ಪತ್ನಿಯಾದ ಸಾರಾ ಜೆ ಬ್ರಾಕ್ ಎಂಬಾಕೆಯು ಒಂದು ಕಾಗದ ಬರೆದು ತಿಳಿಸಿದ್ದೇನೆಂದರೆ:—

"ಹೋದ ಶೀತಕಾಲದಲ್ಲಿ ನಾನು ಕಾಯಿಲೆ ಬಿದ್ದು ಗುಣಪಟ್ಟ ಕೂಡಲೇ ಪೆರೂನಾವನ್ನು ಸೇವನೆಮಾಡಲು ಪ್ರಾರಂಭಿಸಿದೆನು. ಅದರಿಂದ ನನ್ನ ಆರೋಗ್ಯವು ಬಹಳಮಟ್ಟಿಗೆ ವೃದ್ಧಿಯಾಗಿದೆ ಎಂದು ನೆನಸುತ್ತೇನೆ"

ಆಕೆ ಅದೇ ಕಾಗದ್ದ ಕಡೇ ಭಾಗದಲ್ಲಿ ಬರೆದಿರುವುದೇನೆಂದರೆ.—"ಪೆರೂನಾದಿಂದ ಆಗತಕ್ಕ ಪ್ರಯೋಜನಗಳೇನೇನೆಂದು ಅನೇಕರು ನನ್ನ ಗಂಡನ ಬಳಿಯಲ್ಲಿ ಕೇಳುತ್ತಿದ್ದಾರ ನಾನು ಅವರ್‍ಯಾರಿಗೂ ದುಬಾಬು ಕೊಡುವುದಿಲ್ಲ. ಒಂದು ಕೇಸ ಔಷಧವನ್ನು ಯಾರುಬೇಕಾದರೂ ಕೊಂಡು ತರಿಸಿ ಉಪಯೋಗಿಸಿ ಪರೀಕ್ಷಿಸಬಹುದಾಗಿದೆ."

ಐಜಾಕ್ ಬ್ರಾಕ್ ಎಂಬಾತನು ಟೆಕ್ಸಾಸ್ ಡಿಸ್ಟ್ರಿಕ್ಟಿಗೆ ಸೇರಿದ ಮೆಕ್ಲೀನ್ ಕೌಂಟಿಯಲ್ಲಿ ೧೧೮ ವರುಷಗಳಿಂದ ಬದುಕಿರತಕ್ಕ ಮನುಷ್ಯನು.

ಆತನು ಅನೇಕ ವರುಷಗಳ ತನಕ ವಾಕೋವಿನ ಪಶ್ಚಿಮಕ್ಕೆ ಹದಿನೆಂಟು ಮೈಲಿ ದೂರದಲ್ಲಿರುವ ಬೋಸ್ಕೆಘಾಲ್ಸ್ ಎಂಬ ಸ್ಥಳದಲ್ಲಿ ವಾಸಮಾಡುತ್ತಿದ್ದ, ಈಗ ಟೆಕ್ಸಾಸ್ ಡಿಸ್ಟ್ರಿಕ್ಟಿನ ಮಿಲ್ಸ್ ವ್ಯಾಲಿಯಲ್ಲಿ ತನ್ನ ಅಳಿಯನ ಜೊತೆಯಲ್ಲಿ ಸಂಸಾರ ಮಾಡಿಕೊಂಡಿದ್ದಾನೆ.

ಅಪೇಕ್ಷಿಸಲ್ಪಟ್ಟ ಮೇರೆಗೆ ಕೆಲವು ದಿನಗಳ ಹಿಂದೆ ಐಜಾಕ್ ಎಂಬೀತನು ವಾಕೋವಿಗೆ ಬಂದು ತನ್ನ ಫೋಟೋ ತೆಗಿಸಿಕೊಂಡನು. ಜನರಲ್ ಆಂಡ್ರೂ ಜಾಕ್ಸನ್ ಎಂಬಾತನ ಗೋರಿಯ ಮೇಲೆ ಬೆಳೆದಿದ್ದ ಒಂದು ಗಿಡದ ರೆಂಬೆಯನ್ನು ಮುರಿದು ತಂದು ದೊಣ್ಣೆಯಂತೆ ಹಿಡಿದು ಕುಳಿತುಕೊಂಡನು

ಮಿ॥ ಬ್ರಾಕ್ ಎಂಬಾತನು ತನ್ನ ವಯಸ್ಸಿಗೆ ತಕ್ಕಷ್ಟು ಗಾಂಭೀರ್ಯವುಳ್ಳ ದೊಡ್ಡ ಮನುಷ್ಯನಾಗಿರುತ್ತಾನೆ. ಈತನು ಶರೀರ ಸ್ಥಿತಿಯಲ್ಲಿ ಸ್ವಲ್ಪವೂ ಬಡವಾಗುತ್ತಾ ಇಲ್ಲ

ಆತನ ಸಂಸಾರದಲ್ಲಿ ಹಳೇ ಬೈಬಲ್ ಪುಸ್ತಕವು ಇನ್ನೂ ಇದ್ದೇ ಇದೆ ಅದರೊಳಗೆ ಅವನು ಹುಟ್ಟಿ ೧೧೮ ವರುಷಗಳಾದವೆಂದು ತಿಳಿಯುವಂತೆ ಆತನ ಜನ್ಮ ದಿನವನ್ನು ಸ್ಪಷ್ಟವಾಗಿ ಬರೆದಿದೆ

ಸಂಯುಕ್ತ ಸಂಸ್ಥಾನಗಳು ಏರ್ಪಾಡಾಗುವುದಕ್ಕೆ ಮೊದಲು ಹುಟ್ಟಿದ್ದು.

೨೨ ಮಂದಿ ಪ್ರೆಸಿಡೆಂಟರು ಚುನಾಯಿಸಲ್ಪಟ್ಟದ್ದನ್ನು ನೋಡಿದಾನೆ.

ಪೆರೂನಾ ಔಷಧವು ಹವಾ ಬದಲಾವಣೆಯಿಂದ ಆಕಸ್ಮಿಕವಾದ ಸಕಲ ಅಸ್ವಸ್ಥತೆಗಳನ್ನೂ ಗುಣಮಾಡಿರುತ್ತದೆ.

ಈತನು ನಾಲ್ಕು ಯುದ್ಧಗಳಲ್ಲಿ ನಿಂತು ಕಡಿದಾಡಿ ಬಂದವನು.

೧೧೦ ವರುಷವಾಗಿರುವಾಗ ಅವನು ಕುದುರೆಗೆ ಲಾಳ ಕಟ್ಟುತ್ತಾನೆ.

ಪೆರೂನಾ ಸೇವನೆಯಿಂದ ವಾತ ನೋವುಗಳನ್ನು ಯಾವಾಗಲೂ ವಾಸಿ ಮಾಡಿಕೊಂಡಿರುತ್ತಾನೆ.

ಒಂದು ಜಮೀನಿನ ವ್ಯಾಜ್ಯದಲ್ಲಿ ಇವನು ೧೧೦ ನೆ ವರುಷ ವಯಸ್ಸಿನಲ್ಲಿ ಸಾಕ್ಷಿಯಾಗಿ ಕೋರ್ಟಿಗೆ ಹೋಗಿದ್ದನು.

ಶೀತ ವಾತ ರೋಗಗಳಿಗೆಲ್ಲಾ ಈಗಿನ ಕಾಲದಲ್ಲಿ ಪೆರೂನಾ ಎಂಬುವದೇ ಮಹೌಷಧವೆಂದು ನಂಬಿರುತ್ತಾನೆ.

ಮಿ॥ ಬ್ರಾಕ್ ಎಂಬಾತನು ತನ್ನ ದೇಹದ ಒಳ್ಳೇ ಆರೋಗ್ಯ ಸ್ಥಿತಿಯನ್ನೂ ತನ್ನ ಪೂರ್ಣವಾದ ಮುದಿತನವನ್ನೂ ಕುರಿತು ಹೇಳಿರುವುದೇನೆಂದರೆ:—

"ಈ ಪ್ರಪಂಚದಲ್ಲಿ ನನ್ನಷ್ಟು ದೀರ್ಘ ಕಾಲ ಬದುಕಿದ ಮೇಲೆ ಯಾವ ಮನುಷ್ಯನಿಗಾಗಲಿ ಅನೇಕ ವಿಷಯಗಳು ಅನುಭವ ಪೂರ್ವಕವಾಗಿ ತಿಳಿದುಬರಬೇಕು ನನಗೇನೋ ಅಂಥಾ ಅನುಭವ ಉಂಟಾಗಿರುತ್ತದೆ.

"ಹವಾ ಬದಲಾವಣೆಯಿಂದುಂಟಾಗತಕ್ಕ ನಾನಾ ತರದ ಅಸ್ವಸ್ಥತೆಗಳಿಗೆ ನನ್ನ ಅನುಭವಕ್ಕೆ ಕಂಡುಬಂದಿರುವ ಒಂದು ಪರಿಹಾರ ಮಾತ್ರ ನನಗೆ ಸಂಪೂರ್ಣವಾದ ತೃಪ್ತಿಯನ್ನು ಉಂಟುಮಾಡಿರುವುದು. ಈಗ ಕಳೆದ ೧೧೮ ವರುಷಗಳಿಂದಲೂ ಅಮೇರಿಕದಲ್ಲಿ ಆಗಾಗ್ಗೆ ಬದಲಾವಣೆಯಾಗತಕ್ಕ ಕಾಲ ಸ್ಥಿತಿ ಹವಾಗಳನ್ನು ನಾನು ಜಯಿಸಿಕೊಂಡು ಬಂದಿರುತ್ತೇನೆ.

"ನಾನು ಯಾವಾಗ್ಯೂ ಆರೋಗ್ಯವಾಗಿಯೇ ಇರತಕ್ಕವನು ಆದರೆ ಆಗಾಗ್ಗೆ ಆಕಸ್ಮಾತ್ತಾಗಿ ಹವಾ ಬದಲಾವಣೆಯಿಂದುಂಟಾಗುವ ಅಸ್ವಸ್ಥತೆಗಳು ನನಗೆ ಉಂಟಾಗುತ್ತವೆ.

"ಡಾಕ್ಟರ್ ಹಾರ್ಟ್‌ಮನ್‌ರವರ ಪೆರೂನಾ ಔಷಧದ ವಿಷಯದಲ್ಲಿ ಅದು ಇಂಥಾ ಅಸ್ವಸ್ಥತೆಗಳನ್ನು ಗುಣಪಡಿಸುವುದಕ್ಕೆ ಪ್ರಮುಖವಾದದ್ದೆಂದು ನನಗೆ ಕಂಡುಬಂದಿದೆ. ಅದು ನನಗೆ ಅನೇಕ ವರುಷಗಳಿಂದಲೂ ಮುಖ್ಯ ಬೆಂಬಲವಾಗಿರುತ್ತದೆ. ನನ್ನ ಒಳ್ಳೇ ಆರೋಗ್ಯಸ್ಥಿತಿಗೂ ಇಷ್ಟು ಮುಪ್ಪಿನ ತನಕ ಬದುಕಿರುವುದಕ್ಕೂ ಈ ಔಷಧವೇ ಕಾರಣವೆಂದು ಹೇಳಬಲ್ಲೆನು.

"ಈ ಔಷಧವು ನನ್ನ ದೇಹಾರೋಗ್ಯಕ್ಕೆ ಆವಶ್ಯವಾದದ್ದನ್ನೆಲ್ಲಾ ಕಲ್ಪಿಸಿಕೊಡುತ್ತಿದೆ. ನನಗೆ ಆಕಸ್ಮಾತ್ತಾದ ಹವಾ ಬದಲಾವಣೆಯಿಂದುಂಟಾಗತಕ್ಕ ಕೆಡಕುಗಳನ್ನೆಲ್ಲಾ ಇದು ನಿವಾರಣೆಮಾಡುತ್ತಿದೆ. ಅದು ನನ್ನ ದೇಹದ ರಕ್ತಚಲನೆಯನ್ನು ಬಹಳ ಚನ್ನಾಗಿ ಕಾಪಾಡಿಕೊಂಡು ಬರುತ್ತಿದೆ. ನನಗೆ ಆಗಾಗ್ಗೆ ಅನೇಕ ಸಣ್ಣಸಣ್ಣ ಖಾಯಿಲೆಗಳು ಪ್ರಾಪ್ತವಾಗಿ ಹಲವು ತರದ ಔಷಧಗಳನ್ನು ತೆಗೆದುಕೊಳ್ಳುವುದಕ್ಕೆ ಪ್ರತಿಯಾಗಿ ಇದೊಂದೇ ಎಲ್ಲಾ ವಿಷಯಗಳಲ್ಲೂ ನನಗೆ ಆರೋಗ್ಯಕೊಡುತ್ತಿರುವುದು.

"ಈ ದೇಶದಲ್ಲಿ ಕೈಕಾಲು ಕೀಲುಗಳು ಹಿಡಿಯುವ ರೋಗವು ಮೊದಲುದಾಗ ನಾನೂ ಆ ರೋಗಕ್ಕೆ ಸಿಕ್ಕಿ ನರಳಿದೆನು.

"ನನಗೆ ಈ ವಾತರೋಗವು ಹಿಡಿದು ಬಹಳಕಾಲ ಅನುಭವಿಸಿದೆನು. ಪೆರೂನಾದಿಂದ ಈ ರೋಗ ವಾಸಿಯಾಗುವುದೆಂದು ಮೊದಲು ನನಗೆ ತಿಳಿದಿರಲಿಲ್ಲ. ಅದು ಶೀತದಿಂದ ಹುಟ್ಟತಕ್ಕ ರೋಗವೆಂದು ನನಗೆ ತಿಳಿದಾಗ ಪೆರೂನಾವನ್ನು ಈ ರೋಗಪರಿಹಾರಕ್ಕಾಗಿ ತೆಗೆದುಕೊಂಡೆನು. ಅದೇ ಆ ರೋಗಕ್ಕೆ ತಕ್ಕ ಔಷಧವೆಂದು ನನಗೆ ಬಹಳ ಚನ್ನಾಗಿ ಅನುಭವಕ್ಕೆ ಬಂದಿದೆ."

ಈಚೆಗೆ ಬರೆದ ಇನ್ನೊಂದು ಕಾಗದದಲ್ಲಿ ಮಿ॥ ಬ್ರಾಕ್ ಎಂಬಾತನು ತಿಳಿಸುವುದೇನೆಂದರೆ:—

"ನಾನು ಸುಖವಾಗಿದ್ದೇನೆ; ಅನೇಕ ವರುಷಗಳಿಂದಲೂ ಆರೋಗ್ಯವಾಗಿರುತ್ತೇನೆ. ನನ್ನ ದೃಷ್ಟಿಯೊಂದೇ ನನಗೆ ತೊಂದರೆಪಡಿಸುತ್ತಿದೆ. ನನ್ನ ದೃಷ್ಟಿ ಚನ್ನಾದಿದ್ದರಲ್ಲಿ

ಈ ಔಷಧ ಸಿಕ್ಕುವ ಸ್ಥಳಗಳು:—

(೧) ಹಿಚ್‌ಕಾಕ್ ಅಂಡ್ ಸನ್ಸ್, ಬೆಂಗಳೂರು.

(೨) ಇಂಗ್ಲಿಷ್ ಡ್ರಗ್ ಹೌಸ್, ೩೯೪ ಮಿಂಟ್ ಬೀದಿ, ಮದರಾಸ್.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ

28-6-1907 ರಿಂದ 5-7-1907 ರ ವರೆಗೆ

ಸ್ಥಳ	ಪ್ಲೇಗ್ ಆಗಲಿದ್ದು.	ಪ್ಲೇಗ್ ಸತ್ತದ್ದು	ಕಾಲರಾ ಆಗಲಿದ್ದು
ಬೆಂಗಳೂರು ಪಟ್ಟಣ	4	4	0
ಮೈಸೂರು ,,	4	3	1
ಬೆಂಗಳೂರು ಡಿಸ್ಟ್ರಿಕ್ಟು	54	23	18
ಮೈಸೂರು ,,	22	12	57
ಕೋಲಾರ್ ,,	0	0	0
ಕೋಲಾರ್ ಚಿನ್ನದ ಗಣಿಗಳು	5	3	0
ತುಮಕೂರು ಡಿಸ್ಟ್ರಿಕ್ಟು	0	0	1
ಹಾಸನ ,,	2	2	12
ಚಿತ್ರದುರ್ಗ ,,	0	0	0
ಕಡೂರ್ ,,	13	3	0
ಶಿವಮೊಗ್ಗ ,,	16	12	0
ಜುಮ್ಲಾ	120	62	84

ಶಾಲಿವಾಹನ ಶಕ ವರುಷಂಗಳು ೧೮೨೯ ನೇ ಪ್ಲವಂಗನಾಮ ಸಂವತ್ಸರದ ಆಷಾಢ ಶುದ್ಧ ಪೌರ್ಣಮಿ ಗುರುವಾರದಿಂದ ಆಷಾಢ ಬಹುಳ ಸಪ್ತಮಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ.

೧೯೦೭ ನೇ ಇಸವಿ ಜೂಲೈ.

ತಾ	ವಾರ		ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಶಕವರ
25	ಗುರು		ಪೌರ್ಣಮಿ	10-45	ಉತ್ತರಾ	17 16	10
26	ಶುಕ್ರ	†	ಪಾಡ್ಯ	4 40	ಶ್ರವಣ	51-42	11
27	ಶನಿ		ತದಿಗೆ	54-18	ಧ	10-20	12
28	ರವಿ	‡	ಚೌತಿ	50-10	ಶ	7-37	13
29	ಚಂದ್ರ	,,	ಪಂಚಮಿ	47-8	ಪೂಭಾ	5-40	14
30	ಕುಜ	*	ಷಷ್ಠಿ	44-50	ಉ.ಭಾ	4-32	15
31	ಬುಧ	..	ಸಪ್ತಮಿ	44-3	ರೇ	4-28	16

† ಸಿಂಹಾಸನಗತೋ ರವಿ, ವ್ಯಾಸಪೂರ್ಣಿಮಾ ‡ ಅಧಿಕೃಷ್ಣಮಾ ,, ಸಂಕಷ್ಟ ಚತುರ್ಥಿ * ಶ್ರೀಕಾಬಾಯರ ಪುಣ್ಯತಿಥಿ, ಮೇಲುಕೋಟೆಯಲ್ಲಿ ಕೃಷ್ಣರಾಜಮುಡಿ ಉತ್ಸವ ' ಉತ್ಪಾತಯೋಗ, ಶ್ರೀಜಮುಂಡೇಶ್ವರೀ ಜನ್ಮೋತ್ಸವ

ಪೇಟೇ ಧಾರಣೆ.

ದಿನಸಿ.	ಮೈಸೂರು.	ಬೆಂಗಳೂರು
ಕಪ್ಪೇ ಅಕ್ಕಿ ಪಲ್ಲಾ ೧ಕ್ಕೆ ರೂ.	೧೩-೦-೦	೧೪-೦-
ಕಂಬೋತಿ ಅಕ್ಕಿ ಅವಲ್ ..	೧೩-೮-೦	೧೩-೦-
,, ಗುಂಡು	೧೨-೮-೦	೧೨-೬
ಜಾಪಾಳೆ ಅಕ್ಕಿ	೧೨-೮-೦	೧೩-೮-
ಸಣ್ಣಕ್ಕಿ ಅವಲ್ ..	೧೭-೦-೦	೧೭-೦-
,, ದುಯ್ಯಂ ..	೧೬-೮-೦	೧೪-೮-೦
ತೊಗರೀ ಬೇಳೆ ಪಲ್ಲಾ ೧ಕ್ಕೆ	೧೩-೮-೦	೧೩-೮-೦
,, ದುಯ್ಯಂ	೧೨-೧೨-೦	೧೩-೦-೦
ಹುರುಳಿ ಪಲ್ಲಾ ೧ಕ್ಕೆ	೭-೮-೦	೭-೧೨-೦
ರಾಗಿ	೫-೮-೦	೬-೬-೦
ಜೋಳ ..	೭-೮-೦	೭-೮-೦
ಹಲಸಂದೆ ಪಲ್ಲಾ ೧ಕ್ಕೆ ..	೧೧-೦-೦	೧೦-೮-೦
ಬಿಳೇ ಅವರೆ ..	೯-೪-೦	೮-೦-೦
ಹೆಸರು ..	೧೧-೦-೦	೧೧-೦-೦
ಉದ್ದು ..	೧೦-೦-೦	೧೦-೮-೦
ಕಡಲೆ ..	೯-೨-೦-೦	೧೦-೪-೦
ಎಳ್ಳು ಸೆ. ೧೨೭ ಕ್ಕೆ ..	೨೨-೦-೦	೨೨-೮-೦
ಹುರುಳಿ ..	೭-೮-೦	೭-೮-೦
ಹರಳು ೧೨೭ ಸೇರಿಗೆ ..	೧೪-೦-೦	೧೨-೮-೦
ಸೀಗೇಕಾಯಿ ಮಣ ೧ಕ್ಕೆ .	೨-೦-೦	೨-೦
ಮೆಣಸಿನಕಾಯಿ	೨-೧೨-೦	೩-೪
,, ದುಯ್ಯಂ ..	೨-೮-೦	೩-೦
ಬೆಲ್ಲ ದೊಡ್ಡ ಅಚ್ಚು ..	೩-೮-೦	ಮ ೨-೦
ಒಳ್ಳೆಣ್ಣೆ ಮಣ ೧ಕ್ಕೆ .	೫-೧೨-೦	೫-
ಹರಳೆಣ್ಣೆ ,, ..	೫ ೧೨-೦	೫-
ಕೊತ್ತುಂಬರಿ ಪಲ್ಲಾ ೧ಕ್ಕೆ ..	೭-೨-೦	೭-೪
ಉಪ್ಪು ,, ..	೫-೧-೦	೫-೮
ಹುಣಸೇ ಹಣ್ಣು ..	೧-೭-೦	೧-
,, ಹಳೇದು ..	೦-೧೪-೦	೧-೪
ತುಪ್ಪ ಮಣ ೧ಕ್ಕೆ ..	೧೫-೦-೦	೧೪-
ಸೀಮೆಯೆಂಣೆ ಪಟ್ಟ ೧ಕ್ಕೆ	೫-೦-೦	೪-
ತೆಂಗಿನಕಾಯಿ ೧೦೦ ಕ್ಕೆ	೭-೮-೦	೭-೪
ಅಳಲೇಕಾಯಿ ಮಣ ೧ಕ್ಕೆ ..	೧-೦-೦	೧-
ಅಂಟ್ವಾಳದ ಕಾಯಿ ಮಣ ೧ಕ್ಕೆ	೦-೧೨-೦	೦-೧
ಚಿನ್ನ (ಪೌನ್) ಕೆಂಪು ..	೧೫-೪-೦	೧೫-೮
,, ,, ಪಸಿಮೆ ..	೧೫-೧೦-೦	೧೫-೩
,, ,, ಗಟ್ಟಿ ತೊಲ ೧ಕ್ಕೆ ..	೨೩-೧೨-೦	೨೪-೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ ..	೮೫-೦-೦	೮೪-೦

Printed and Published by the Rev. E. W. THOMPSON, M. A., Proprietor and Manager, Wesleyan Mission Press, Mysore. 25/7/1907.

REGISTERED
M. 20

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು. ಕ್ರಯ ೧ ದುಡ್ಡು.

ಸಂಪುಟ ೨೧ . ಮೈಸೂರು—ಸನ್ ೧೯೦೭ ನೇ ಇಸವಿ ಆಗಸ್ಟ್ ತಾರೀಖು ೧ ನೇ ಗುರುವಾರ. ಸಂಚಿಕೆ ೬

BASEL MISSION WEAVING ESTABLISHMENT, 59-4

MANGALORE, SOUTH CANARA.

ದಕ್ಷಿಣ ಕನ್ನಡ ಜಿಲ್ಲಾ ಮಂಗಳೂರು ಬಾಸೆಲ್ ಮಿಶ್ಯನ್ (ಬಸ್ತ್ರ) ನೆಯ್ಯುವ ಕಾರಖಾನೆಯಲ್ಲಿ

ನಾನಾ ವಿಧದ (ಮಿಶ್ರ) ಟ್ವೀಡ್ ನಮೂನೆಯು ಕೋಟು ಇಜಾರುಗಳ ಚೆಕ್ಕ್ ಬಟ್ಟೆಗಳೂ, ಹಂಟಿಂಗ್ ಯಾನೆ ಶಿಕಾರಿ ಬಟ್ಟೆಗಳೂ, ಶರ್ಟಿಂಗ್ ಯಾನೆ ಕಮಿಸಿನ ಬಟ್ಟೆಗಳೂ, ಬೇರೆ ಇತರ ಬಟ್ಟೆಗಳೂ, ಟೇಬ್ಲ್ ಕ್ಲೋತ್ ಯಾನೆ ಮೇಜುವಸ್ತ್ರಗಳೂ, ಟುವಾಲು ವಗೈರೆಗಳೂ ನಾಜೂಕಾಗಿ ತಯಾರಿಸಲ್ಪಟ್ಟು ಯಾವಾಗಲೂ ಬೆಲ್ಲೆರಿಯಾಗಿಯಾಗಲೀ ರಖಂ ಆಗಿಯಾಗಲೀ ಮಾರಾಟಕ್ಕೆ ತಯಾರಿರುತ್ತವೆ.

ಒಳ್ಳೇ ಕಮಿಶ್ಶನ್ :—ರೂಪಾಯಿ ೧೦೦ ರ ಮೇಲೆ ಮಾಲುಗಳನ್ನು ತೆಗದುಕೊಳ್ಳುವ ಗಿರಾಕಿಗಳಿಗೆ ಯಾ ಸಾಹುಕಾರರಿಗೆ ಕೊಡಲಾದೀತು. ಹೆಚ್ಚಿನ ವಿವರ ಖುದ್ದಾಗಿ ಯಾ ಕಾಗದ ಮೂಲಕ ತಿಳುಕೊಳ್ಳಬಹುದು.

ನಮೂನೆ ಯಾ ಮಾದರಿಗಳು :—ಪರ ಊರಿನ ಸಾಹುಕಾರರು ಈ ಕೆಳಗಿನ ವಿಳಾಸಕ್ಕೆ ಬರಕೊಂಡಲ್ಲಿ ಕಳುಹಿಸಲ್ಪಡುವವು

ವಿಶೇಷ ಲಕ್ಷಿಸತಕ್ಕದ್ದು :—ಈ ನಮ್ಮ ಮಾಲುಗಳಿಗೆ ಇಲ್ಲಿ ಕಾಣಿಸಿರುವ "ಟ್ರೇಡ್ ಮಾರ್ಕ್" ಎಂಬ ವ್ಯಾಪಾರಗುರ್ತಿನ ಲೇಬಿಲ್ ಯಾನೆ ಚೀಟು ಹಚ್ಚಿರುತ್ತದೆ ಈ ಗುರ್ತಿನ ಚೀಟುಗಳು ಇಲ್ಲದವುಗಳೆಲ್ಲಾ ತಾಜಾ ಮಿಶ್ರ ಮಾಲುಗಳಲ್ಲವೆಂದು ತಿಳಿಯತಕ್ಕದ್ದು.

ಶರ್ತ :—ನಗದಾಗಿ ಇಲ್ಲವೆ ಮಾಲುಗಳು ವಿ. ಪಿ. ಟಪ್ಪಾಲ ಮೂಲಕ ಕಳುಹಿಸಲ್ಪಡಬೇಕಾದ್ದರಲ್ಲಿ ಕಾಲುಪಾಲು ಮೌಲ್ಯವನ್ನು ಮುಂಗಡವಾಗಿ ರವಾನಿಸತಕ್ಕದ್ದು.

ಪತ್ರಗಳನ್ನು ಇಂಗ್ಲೀಷಿನಲ್ಲಿ ಯಾ ಕನ್ನಡದಲ್ಲಿ ಸ್ಪಷ್ಟವಾಗಿ ಬರಿಯತಕ್ಕದ್ದು.—

☞ ಈ "ಟ್ರೇಡ್ ಮಾರ್ಕ"ನ್ನಾಗಲೀ ನಾವು "ಕೋಪಿರೈಟ್" ಪಡದಿರುವ ಲೇಬಿಲುಗಳನ್ನಾಗಲೀ ಇಲ್ಲವೆ ಅದರ ನಮೂನೆಯ ಬೇರೆ ಲೇಬಿಲುಗಳನ್ನಾಗಲೀ ಯಾರಾದರೂ ಇತರ ಮಾಲುಗಳ ಮೇಲೆ ಪ್ರಯೋಗಿಸಲೂ ಮಾಡಲೂ ಕೂಡದು

ವಿಳಾಸ.—BASEL MISSION WEAVING ESTABLISHMENT,
MANGALORE, S. CANARA

WILLIAM & CO., BOMBAY.

ವಿಲಿಯಮ್ ಮತ್ತು ಕಂಪನಿ, ಪೋರ್ಟು, ಮುಂಬಯಿ.

ಗಜಕರ್ಣದ ಮುಲಾಮು.

37-23

ಇವನ್ನು ತಾಗಿಸುವದರಿಂದ ಎಲ್ಲಾ ತರದ ಕಜ್ಜಿಯು ನಾಶವಾಗುವದು. ಮೂರು ಸಾರಿ ತಾಗಿಸುವದರೊಳಗೆ ಗಜಕರ್ಣವು ಹೋಗುವದು. ಇವನ್ನು ಹಚ್ಚಿದಲ್ಲಿ ಉರಿಯು ಬರುವದಿಲ್ಲ ಚರ್ಮ ಕಪ್ಪಾಗುವದಿಲ್ಲ

ಇದರಿಂದ ಗುಣ ಕಂಡುಬರುವದಿಲ್ಲವಾದರೆ ಹಣ ಹಿಂತಿರುಗಿ ಕೊಡಲ್ಪಡುವದು ತ್ವರೆಮಾಡಿರಿ! ಕೊಂಡುಕೊಳ್ಳಿರಿ!! ಕ್ರಯ ಕಮ್ಮಿ. ಒಂದು ಸಾರಿ ಪರೀಕ್ಷಿಸಿ ನೋಡಿರಿ!!

ಡಬ್ಬಿಗಕ್ಕೆ ಕಿಮ್ಮತ್ತು ೦-೬-೦.
ವಿ. ಪಿ. ೦-೧೨-೦.

SAFE ★ EFFICACIOUS ★ SURE ★ POWDERS ★ OINTMENTS ★ PILLS
WILLIAM & Co. BOMBAY

ಕಫಹಾರಿ ೧ ರೂ ೪ ಆ ಕಸ್ತೂರಿ ಮಾತ್ರೆ ೧೦ ಆ. ಕೇಶವರ್ಧಿನೀ ತೈಲ ೧ ರೂ. ಕಜ್ಜಿಮುಲಾಮು ೩ ಆಣೆ. ಕುಸುಮಾರಿ ಗುಟಿಕೆ ೧ ರೂ. ತಾಂಬೂಲ ಗುಟಿಕೆ ೮ ಆಣೆ

ಅಮೃತಾಂಜನ

ಸುಂದರೀ ತೈಲ ೪ ಆಣೆ ಪಚ್ಚಗುಟಿಕ ೧ ರೂಪಾಯಿ ೧, ದಂತಮಂಜನ ೩ ಆಣೆ ನೇತ್ರಾಂಜನ ೪ ಆಣೆ

ಬಾಟ್ಲಿ ಒಂದಕ್ಕೆ ಕಿಮ್ಮತು ೮ ಆಣೆ. ವಿ. ಪಿ. ೧೨ ಆಣೆ.

ಜಖಂ ಮತ್ತು ಘಾಯ, ವಾತ, ಎದೆನೋವು, ಗಂಟ್ಲುನೋವು, ಶಿರೋಭಾರ, ಸಂಧಿವಾತ, ತಲೆನೋವು, ಮೂಲವ್ಯಾಧಿ, ಶೀತ, ಕೆಮ್ಮು, ಈ ಎಲ್ಲಾ ತರದ ರೋಗಕ್ಕೆ **ಅಮೃತಾಂಜನವು** ಒಂದು ದಿವ್ಯವಾದ ಔಷಧವಾಗಿರುತ್ತದೆ. ಇದರಿಂದ ಗುಣ ಕಂಡುಬರುವದಿಲ್ಲವಾದರೆ ಹಣ ತಿರುಗಿ ಕೊಡಲ್ಪಡುವದು. ತ್ವರೆ ಮಾಡಿರಿ! ಮೂರು ವರ್ಷದಿಂದ ಅನುಭವಿಸುವ ವಾತದ ನೋವು ನಿಮ್ಮ ಒಂದೇ ಬಾಟ್ಲಿ **ಅಮೃತಾಂಜನದಿಂದ** ಪೂರ್ಣವಾಗಿ ಗುಣ ಸಿಕ್ಕಿತು ದಯಮಾಡಿ ೧೨ ಬಾಟ್ಲಿ ವಿ. ಪಿ. ಮೂಲಕ ರವಾನಿಸಿರಿ ವೆ ರಾಮಭಟ್ಟ, ವಿಟ್ಲ, ದ. ಕನ್ನಡ.

ನಾನೂ ನನ್ನ ಸ್ನೇಹಿತರೂ **ಅಮೃತಾಂಜನವನ್ನು** ಬಹಳವಾಗಿ ಪ್ರೀತಿಸುತ್ತೇವೆ. ಸುಬ್ಬಪ್ಪನಾಯ, ಬಂಟ್ವಾಳ **ಅಮೃತಾಂಜನ**ಕ್ಕಿಂತಲೂ ಹೆಚ್ಚು ಉಪಯೋಗ ಉಳ್ಳ ಮುಲಾಮು ಬೇರೆ ಯಾವದೂ ಇಲ್ಲ. ಗಂಗಾಸೇವಕ ಕಲ್ಕತ್ತಾ; ಆರು ವರ್ಷದಿಂದ ವಾತಪೀಡಿತನಾದ ನನ್ನ ಗೆಳೆಯನಿಗೆ **ಅಮೃತಾಂಜನವು** ಬೇಗ ಗುಣ ಕೊಟ್ಟಿತು. ರಾಮಚಂದ್ರರಾವ್. **ಅಮೃತಾಂಜನವು** ಸಾವಿರಾರು ಜನರಿಗೆ ಗುಣಕೊಟ್ಟಿರುತ್ತದೆ. ವೀರಭದ್ರಪ್ಪ, ಟುಮಕೂರು

ಸಂಜೀವನದ ಹಾಗಿರುವ **ಅಮೃತಾಂಜನ**ವನ್ನು ನನ್ನ ಮನೆಯಲ್ಲಿ ಸದಾಕಾಲ ಇಟ್ಟದೇನೆ ಹನುಮಯ್ಯ, ಬೆಂಗಳೂರು. ನಿಮ್ಮ **ಅಮೃತಾಂಜನವು** ಎಂಥಾ ಕಠಿಣವಾದ ತಲೆನೋವನ್ನಾದರೂ ನಿಲ್ಲಿಸುತ್ತದೆ. ಗಂಗಣ್ಣರಾವ್, ಕೊಡಗು

ನಿಮ್ಮ ಅಮೃತಾಂಜನವು ಶೀತ, ಕೆಮ್ಮು, ತಲೆನೋವು, ಇತ್ಯಾದಿಗಳಿಗೆ ಅತೀ ಉತ್ತಮವಾದದ್ದು. ಆದದರಿಂದ ದಯಮಾಡಿ ೩ ಬಾಟ್ಲಿ ಅಮೃತಾಂಜನ, ೬ ಬಾಟ್ಲಿ ಗಜಕರ್ಣದ ಮುಲಾಮನ್ನು ವಿ. ಪಿ. ಮೂಲಕ ರವಾನಿಸಿರಿ.—ಆರ್. ಡಿ. ಸೋಜಾ ಮ್ಯಾನೆಜರ್, ಮೊಡಕರು ಎಸ್ಟೇಟು, ಸಿದಾಪುರ, ಕೊಡಗು

ವಿಲಿಯಮ್ ಮತ್ತು ಕಂಪನಿ, ೧೬ ಓಕ್ ಲೇನ್, ಪೋರ್ಟು, ಮುಂಬಯಿ.
ಟೆಲಿಗ್ರಾಫು ಅಡ್ರೆಸು; "ಅಮೃತಾಂಜನ" ಮುಂಬಯಿ.

ನಿಮಗೆ ನೋವು ಇದೆಯೋ?

58-10

ಹಾಗಾದರೆ "ಕ್ಲೆಮೆಂಟ್ ಯವರ ಮ್ಯಾಜಿಕ್ ಬಾಂ" ನ್ನು ಏಕೆ ಉಪಯೋಗಿಸಬಾರದು? ಅತ್ಯಾಶ್ಚರ್ಯಕರವಾದ ಬಾಧಾಪಹಾರಿಣಿಯು! ಈಗಿನ ಶತಮಾನದಲ್ಲಿ ಕಂಡು ಹಿಡಿದ ದೊಡ್ಡ ನೂತನವು!

ಈ ದಿವ್ಯ ಔಷಧವನ್ನು ಮೊಟ್ಟಮೊದಲು ಕೊಡೆಯುತ್ತಲೆ ಕೆಲವು ನಿಮಿಷಗಳೊಳಗಾಗಿ ನರ ಮತ್ತು ಮಾಂಸ ಸಂಬಂಧವಾದ ಹಾಕ್ಕನೋವು, ಕೀಲುಗಳ ಬಾಧೆ, ಕಿಬ್ಬೊಟ್ಟೆ ನೋವು, ಬೆನ್ನೆಳೆಯುವದು, ತಲೆನೋವು, ಕೆಮ್ಮು, ಕೀಲುಗಳು ಕತ್ತರಿಸುವದು, ಕೊರಳು ಊತ, ಕೈಕಾಲು ಒಡೆಕ ಇವುಗಳನ್ನೆಲ್ಲಾ ವಿದ್ಯುಚ್ಛಕ್ತಿಯಂತೆ ಗುಣಪಡಿಸುವದು. ಈ ಔಷಧವು ಆಶ್ಚರ್ಯಕರವಾಗಿ ಗುಣಪಡಿಸುವದರಿಂದ ಎಲ್ಲರಲ್ಲಿಯೂ ಪ್ರಸರಿಸುತ್ತಾ ಬರುವದು. ಇತರ ಔಷಧಿಗಳು ಗುಣಪಡಿಸದೆ ಹೋದಾಗ ಡಾಕ್ಟರ್ ಫೀಜನ್ನು ಕಡಿಮೆಮಾಡಿ. ಇದು ನಿಸ್ಸಂದೇಹವಾಗಿಯೂ ಗುಣಪಡಿಸುವದು.

ಕ್ರಯ.—೧ ಬಾಟ್ಲಿಗೆ ೧೨ ಆಣೆ, ಪೋಸ್ಟೇಜ್ ೪ ಆಣೆ ೩ ಬಾಟ್ಲಿಗೆ ಅಂಚೆವೆಚ್ಚ ಸೇರಿ ರೂ ೨—೪ ಆಣೆ. ಎಲ್ಲಾ ಕೆಮಿಸ್ಟ್‌ರ ಷಾಪುಗಳಲ್ಲಿ ದೊರೆಯುವದು,

ನಮ್ಮ ವಿಳಾಸ:—ಎಫ್. ಡಬ್ಲಿಯು. ಆರ್ಜ್,
ಸಿಮೆಟ್ರಿ ರೋಡ್, ವೇಪೇರಿ, ಮದರಾಸ್.

ಜ್ವ ರ ಹ ರಿ

74-1



ಇದು ಸಾಧಾರಣ ಜ್ವರ, ಚಳೀಜ್ವರ, ಮೋರೇಜ್ವರ, ಪಿತ್ತಜ್ವರ ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನು ಬಹು ಬೇಗನೆ ನಾಶಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್. ಟಿ. ವೆಂಕಟಪತಿ ಅಯ್ಯನವರು.—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೬ ಔನ್ಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವುದರಿಂದ ದಯಮಾಡಿ ಇನ್ನೊಂದು ೬ ಔನ್ಸಿನ ಸೀಸೆಯನ್ನು ವಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ

ಕ್ರಯ —ಸೀಸೆ ೧ ಕ್ಕೆ ೮ ಆಣೆ, ೧ ರೂ , ೧—೮ ರೂ , ರೂ. ೨—೧೨ ಆ., ೧೯ ರೂ., ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

****

ಓ ಮ ಂ ಕ ರ್ಪೂ ರ

Omum Carpoor

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುತ್ತದೆ ಇದು ಹೆಂಗಸರು ತಿಂಗಳು ಒಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯದ ವರವು ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ಸಿಗುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗೂಡಪತಿಯವರು.—ಹೆಸ್ರಿನ ಓಮಂ ಕರ್ಪೂರವನ್ನು ನಾನೂ ನನ್ನ ಕಾರ್ಯದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧವೆಂದು ಬರೆದಿದ್ದಾರೆ.

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರ್ರಲ್ಲಿ ವಿಶೇಷ.—
ಕೆಮಿಯಾಕ್ ಸೌತ್ ಇಂಡಿಯಾ ಔಷಧಗಳ ಕಾಲೆಜಿ,
ಕೆಥೆಡ್ರಲ್ ರೋಡ್ ಪೋ., ಮದ್ರಾಸ್

ವ್ಯವಹಾರ ನಿರ್ಣಯ

ವೆಂಬ ಕನ್ನಡ **ಲಾ** ಪುಸ್ತಕವು.

೬೪-11

ಲಾ ತಿಳಿದವರಿಂದಲೂ, ತಿಳಿಯದವರಿಂದಲೂ ಇದುವರೆಗೆ ಬರೆಯಲ್ಪಟ್ಟಿರುವ ಈ ತೆರದ ಪುಸ್ತಕಗಳನ್ನೆಲ್ಲ ನೋಡಿ ಅವೆಲ್ಲಕ್ಕಿಂತಲೂ ಹೆಚ್ಚು ಪಯೋಗವನ್ನು ಇದೊಂದು ಪುಸ್ತಕದಿಂದುಂಟುಮಾಡಬೇಕೆಂಬು ಈ ದೊಡ್ಡ ಗ್ರಂಥವು ಹೊಸದಾಗಿ ಬರೆಯಲ್ಪಟ್ಟಿದೆ. ಇದರಲ್ಲಿ ೧೪ ಆಕ್ಟುಗಳು, ೪ ಕೋಡುಗಳು, ಹಿಂದೂ, ಮಹಮದೀಯ ಲಾಗಳು, ಛೀಫ್ ಕೋರ್ಟು ಹೈ ಕೋರ್ಟುಗಳ ಫೈಸಲಾಗಳು, ಗೌ॥ ಸರ್ಕ್ಯುಲರ್‌ಗಳು ಪ್ರೊಸೀಡಿಂಗ್ಸ್‌ಗಳು, ಸಕಲ ವಿಧ ವ್ಯವಹಾರಗಳು, (ಕ್ರಯ ಆಧಾರ ದಾನ ಎಲ್ಲಾ ಮೊದಲಾದ) ೭೯ ತೆರದ ದಸ್ತಾವೇಜುಗಳ ನಮೂನೆಗಳು, ಈ ಸಂಬಂಧದ ಲಾ ವಿಧಿಗಳು, ಸಿವಲ್ ಕ್ರಿಮಿನಲ್, ಪೊಲೀಸ್, ರವಿನ್ಯೂ ಸಂಬಂಧದ ವ್ಯಾಜ್ಯಗಳು, ೧೪೯ ತೆರದ ಅರ್ಜಿಗಳು, ಈ ಸಂಬಂಧದ ಲಾ ವಿಧಿಗಳು, ಇವೆಲ್ಲವೂ ಅಡಕವಾಗಿವೆ

ಪುಸ್ತಕ ದೊಡ್ಡದು ಪುಟಗಳು ಒಟ್ಟು ೪೬೪	ಬೆಲೆ ಕಡಮೆ. ಅಂಚೆ ಹಾಸಲು ಸೇರಿ ರೂ ೧—೮—೦

ಗ್ರಂಥಕರ್ತರು.	ಎಂ ಮಲ್ಲಾರಾಧ್ಯರು, ೧ನೆ ಗ್ರೇಡ್ ಪ್ಲೀಡರ್, ಶ್ರೀರಾಮಪೇಟೆ, ಮೈಸೂರು.	ಇದೇ ವಿಳಾಸ.

ಇದಕ್ಕೆ ಸಮಾನವಾದ ಪುಸ್ತಕ ಉಂಟೋ ?

ಕನ್ನಡ ಭಾಷೆಯಲ್ಲಿ ಇದುವರಿವಿಗೂ ಇಂಥಾ ಸೊಗಸಾದ ಪುಸ್ತಕವು ಪ್ರಚುರವಾಗಲಿಲ್ಲ. ಸ್ವಲ್ಪ ನೋಡಿ.

"ಹಿಂದೂದೇಶ ಪ್ರದಕ್ಷಿಣ"

ಎಂದು ಕರೆಯಲ್ಪಡುವ ಈ ನೂತನ ಪುಸ್ತಕದಲ್ಲಿ ಸುಮಾರು ತೊಂಬತ್ತು ಉತ್ಕೃಷ್ಟವಾದ ಚಿತ್ರಗಳು ಅಡಗಿವೆ ಹಿಂದೂ ದೇಶವನ್ನೆಲ್ಲಾ ಸಂಚಾರ ಮಾಡುವದರಿಂದ ಉಂಟಾಗುವ ಪರಮಾನಂದವನ್ನು ಒಂದು ಸಾರಿ ಈ ಗ್ರಂಥವನ್ನು ಓದುವದರಿಂದ ಹೊಂದಬಹುದು. ಇದು ಮೊದಲನೇ ಸಾರಿ ಪ್ರಿಂಟ್ ಆಗಿದ್ದು ಬಹು ಶೀಘ್ರವಾಗಿ ಎಲ್ಲಾ ಮುಗಿದು ಹೋಯಿತು. ಈಗ ಶಿಗಿ ವಿಚಿತ್ರವಾಗಿಯೂ ಉಲ್ಲಾಸಕರವಾಗಿಯೂ ಇರುವ ಪ್ರಸಿದ್ಧವಾದ ಚಿತ್ರಗಳೊಡನೆ ಮಾಡಿಸಿರುತ್ತೇವೆ. ಇದರಲ್ಲಿರುವ ಚಿತ್ರಗಳನ್ನು ಸ್ವಲ್ಪ ನೋಡಿ—ಶ್ರೀರಂಗಪಟ್ಟಣದಲ್ಲಿರುವ ಪೈದರಲ್ಲಿ ಟಿಪ್ಪುಸುಲ್ತಾನರ ಗೋರಿ, ಹುಮಾಯೂನನ ಗೋರಿ, ಹುಗ್ಲಿ ನದಿ, ಕಲ್ಕತ್ತಾ ನಗರ, ಕಲ್ಕತ್ತಾ ಹೈಕೋರ್ಟು, ಕಾಳಿಕಾದೇವತೆ, ಚಂದ್ರನಗರ, ಬಂಗಾಳಿಯರ ಮನೆಗಳು, ಜಗನ್ನಾಥಸ್ವಾಮಿ ಭುವನೇಶ್ವರವೆಂಬ ದೇವಸ್ಥಾನ, ಜಗನ್ನಾಥದ ರಥೋತ್ಸವ, ಕನರಾಕ್ ದೇವಸ್ಥಾನ, ಎವರೆಸ್ಟ್ ಶಿಖರ, ಖಟ್ಮಂಡು ನಗರದ ಒಂದು ಬೀದಿ, ಖಟ್ಮಂಡು ನಗರದ ದೇವಸ್ಥಾನಗಳು, ಜಪಚಕ್ರಗಳು, ಆಂಟಿಗರು ದೋಣಿಯನ್ನು ಎಳೆಕೊಂಡು ಹೋಗುವದು, ಗಯಾದಲ್ಲಿರುವ ಬುದ್ಧನ ದೇವಸ್ಥಾನ, ಔರಂಗಜೇಬನು ಕಟ್ಟಿಸಿದ ಮಸೀತಿ, ಕಾಶೀ ಪುಣ್ಯಕ್ಷೇತ್ರದಲ್ಲಿರುವ ದಾಶಾಶ್ವಮೇಧಘಟ್ಟ, ಕಪಿಗಳಿಗೆ ತಿಂಡಿ ಹಾಕುವದು, ಕಾಶೀ ಕ್ಷೇತ್ರದ ದೇವಸ್ಥಾನಗಳು, ಅಲಹಾಬಾದ್ ನಗರ ಮತ್ತು ಅದರ ಕೋಟೆ, ಅಲಹಾಬಾದ್‌ನಲ್ಲಿರುವ ಖುಸ್ರು ಬಾಗ್ ಅರಮನೆ, ಯಮುನಾ ನದಿಯಲ್ಲಿ ಯಾತ್ರಿಕರು ಮುಳುಗುವದು, ಕಾನ್ಪುರದಲ್ಲಿರುವ ಶಿಲಾ ಶಾಸನ, ಕಾನ್ಪುರದ ಹತ್ತಿರ ಗಂಗಾ ನದಿಯ ಮೇಲೆ ಕಟ್ಟಿರುವ ಸೇತುವೆ, ಲಕ್ನೋ ನಗರದ ರೆಸಿಡೆನ್ಸಿ ಬಂಗಲೆ, ಲಕ್ನೋ ಪಟ್ಟಣದ ಬಾಗಿಲು, ಸರ್ ಹೆನ್ರಿ ಹ್ಯಾವಲಾಕನು, ಗೋಮತಿ ನದಿಯ ಮೇಲಿರುವ ಅರಮನೆ, ಹ್ಯಾಮ ಹಲ್ಲಿ ದಸರ ಸ್ಥಿತಿ, ಹರಿದ್ವಾರಘಟ್ಟ, ಗಂಗೋತ್ರಿ ದೇವಸ್ಥಾನ, ಹಿಮವತ್ಪರ್ವತಗಳ ಮೇಲಿರುವ ಪಟ್ಟಣ, ಹಿಮಪ್ರವಾಹಗಳು, ಆಗ್ರಾ ಪಟ್ಟಣದ ಕೋಟೆ, ಯಮುನಾ ನದಿಯ ದೂರದಲ್ಲಿ ತೋರುತ್ತಿರುವ ತಾಜ್‌ಮಹಲ್ ಗೋರಿಯೂ, ತಾಜ್ ಮಹಲಿನ ಕಲ್ಲಿನಲ್ಲಿ ಕೆತ್ತಿರುವ ಘಟದೆ, ಅಕ್ಬರನ ಅರಮನೆ, ಆಗ್ರಾ ಪಟ್ಟಣದ ಮುತ್ತಿನ ಮಸೀತಿ, ಫತ್ತೆಪುರ್ ಸಿಕ್ರಿಯಲ್ಲಿರುವ ಪಾಂಚ್ ಮಹಾಲ್ ಅರಮನೆ, ರಜಪೂತರು, ಭರತಪುರದ ಕೋಟೆ, ಅಲ್ವಾರಿನಲ್ಲಿ ಮಹಾರಾಜ ಭಕ್ತಾವರ್ ಸಿಂಗರ ಗೋರಿ, ದೆಹಲಿ ನಗರದ ದೊಡ್ಡ ಮಸೀತಿ, ಪುರಾತನ ದೆಹಲಿಯ ಬಾಗಿಲು, ರಾಜ ದೇವನು ಸ್ಥಾಪಿಸಿದ ಕಬ್ಬಿಣದ ಸ್ತಂಭ, ನಾದರ್ ಷಹಾನು ದೆಹಲಿ ನಗರದಲ್ಲಿ ಪ್ರಜಾ ಸಂಹಾರವನ್ನು ನೋಡುತ್ತಿರುವದು, ದೆಹಲಿಯ ಬಳಿಯಲ್ಲಿರುವ ಕುತುಬ್ ಮಿನಾರ್, ಚಾಂದ್ನಿ ಚೌಕವೆಂಬ ಬೀದಿ, ಸಿಂಲಾಕ್ಕೆ ಹೋಗುವ ದಾರಿ, ಸಿಮ್ಲಾ, ಅಮೃತಸರದ ಸುವರ್ಣಾಲಯವು, ಲಾಹೋರಿನಲ್ಲಿರುವ ರಣಜಿತ್‌ಸಿಂಗನ ಗೋರಿ, ಲಾಹೋರ್ ಪಟ್ಟಣ, ಈ ಮುಂತಾದ ಅನೇಕ ರಮಣೀಯವಾದ ಸ್ಥಳಗಳ ಚಿತ್ರಗಳು ಈ ಪುಸ್ತಕದಲ್ಲಿ ಅಡಗಿವೆ ಅವುಗಳನ್ನೆಲ್ಲಾ ವಿವರಿಸಲು ಸ್ಥಳವಿಲ್ಲ.

ಪ್ರತಿಯೊಂದು ಅಂಶದ ವಿವರಣೆಯೂ ಬಹು ಪರಿಷ್ಕಾರವಾಗಿದೆ. ದಕ್ಷಿಣ ದೇಶದಲ್ಲಿರುವ ಅನೇಕ ಪ್ರಸಿದ್ಧ ಸ್ಥಳಗಳ ಚಿತ್ರಗಳೂ, ಅವುಗಳ ವಿವರಣೆಗಳೂ ಇದರಲ್ಲಿವೆ. ಪುಸ್ತಕವು ಭಾರಿಯಾಗಿದೆ. ಪುಸ್ತಕದ ಅಚ್ಚು ಮತ್ತು ಬೈಂಡು ಬಹು ಸುಂದರವಾಗಿವೆ. ಇದರ ಕ್ರಯ ಎಂಟೇ ಆಣೆ, ವಿ. ಪಿ. ಪಿ. ಮೂಲಕ ಹನ್ನೊಂದು ಆಣೆಯಾಗುವದು ಪುಸ್ತಕವು ಜಾಗ್ರತೆಯಲ್ಲಿ ಮಾರಾಟವಾಗುತ್ತಿರುವದರಿಂದ ತಾವುಗಳು ಕೆಳಗೆ ಕಂಡ ವಿಳಾಸಕ್ಕೆ ಬೇಗನೆ ಬರೆದು ತರಿಸಿಕೊಳ್ಳಬೇಕು.

ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪೋ,

ಮೈಸೂರು. 69-2

CHAMBERLAIN'S COLIC, CHOLERA AND DIARRHOEA REMEDY.

ಚೇಂಬರ್ಲೇನ್ ಯವರು ಹೊಟ್ಟೆಶೂಲೆ, ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು



4-5

ಕಳ ಹೊಟ್ಟೆಯ ನೋವು, ಬರೀ ಭೇದಿಯಾಗುವುದು. ಆಮಶಂಕೆ, ವಾಂತಿಭೇದಿ (ಕಾಲರ), ಕೀಲು ನೋವು, ಹೊಟ್ಟೆಯ ನಾನಾ ತರದ ಶೂಲೆಗಳು—ಈ ರೋಗಗಳನ್ನೆಲ್ಲಾ ವಾಸಿಮಾಡುತ್ತದೆ ಈ ಪರಮ ಯೋಗ್ಯವಾದ ಔಷಧವು ಜನರನ್ನು ಬದುಕಿಸಿರುವಷ್ಟು ಮತ್ತು ನೋವನ್ನೂ ಬಾಧೆಯನ್ನೂ ನಿವಾರಣೆ ಮಾಡಿರುವಷ್ಟು ಪ್ರಪಂಚದಲ್ಲೇ ಇನ್ಯಾವ ಔಷಧವೂ ಮಾಡಿರುವುದಿಲ್ಲ.

ಜ್ಞಾಪಕದಲ್ಲಿಟ್ಟುಕೊಳ್ಳಿ—ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯಲ್ಲಿರುವ ಎಲ್ಲಾ ತರದ ನೋವನ್ನೂ ನಿಲ್ಲಿಸಿಬಿಡುತ್ತದೆ. ಬಹಳ ಕಠಿಣವಾದ ಭೇದಿಯೂ ಕೂಡ ಮರೇ ಹೊತ್ತಿಗೆ ಈ ಔಷಧದಿಂದ ನಿರ್ಮೂಲಮಾಡಿ ನಿಲ್ಲಿಸುತ್ತದೆ. ಖಂಡಿತವಾಗಿ ವಾಸಿಮಾಡುತ್ತದೇ ಇದರ ಗುಣ

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಸ್ವಲ್ಪವೂ ಮುಟ್ಟಿದ್ದಲ್ಲ

ಇದು ಎಲ್ಲೆಲ್ಲೂ ವಿಕರಿಯಾಗುವುದು ಸಣ್ಣ ಶೀಸೆಗೆ ೧ ರೂಪಾಯಿ ದೊಡ್ಡ ಶೀಸೆಗೆ ೨ ರೂಪಾಯಿ

ಇಲ್ಲಿ ನೋಡಿ!

65 4

ತುಮಕೂರು ಡಿಸ್ಟ್ರಿಕ್ಟ್ ಇಲಾಖೆಯಲ್ಲಿ ಯುರೋಪಿಯನ್ ಮೇಲ್ವಿಚಾರಣೆಯಿಂದ ಉತ್ತಮ ತರಹದ ಹಾಸನದ ಟೋಪಿಗಳು ಅತಿ ಶ್ರೇಷ್ಠವಾದ ಉಲ್ ದಾರದಿಂದ ತಯಾರಾಗುತ್ತವೆ.

ಈಗ ಕೆಳಗೆ ನಮೂದಾಗಿರುವ ವಿವಿಧ ಬಣ್ಣದ ಟೋಪಿಗಳು ಹೆಚ್ಚಾಗಿ ನಮ್ಮಲ್ಲಿ ದಾಸ್ತಾನ (ಸ್ಟಾಕ್) ಉಂಟು

ಬಣ್ಣಗಳ ವಿದ —ಅಚ್ಚಕೆಂಪು, ಗುಂದಕೆಂಪು, ಕಪ್ಪು ಕೆಂಪು ಮಿಶ್ರವಾದದ್ದು.

ಕ್ರಯ —೧ ರೂ. ೪ ಆ ಮತ್ತು ೧ ರೂ ೬ ಆ

೧ ಡಜನ್ ಟೋಪಿಗಳನ್ನು ತೆಗೆದುಕೊಳ್ಳುವವರಿಗೆ ಶೇಕಡ ೫ ರಂತೆ ಡಿಸ್‌ಕೌಂಟ್ ಕೊಡಲ್ಪಡುವದು.

ನಮ್ಮ ವಿಳಾಸ —ಮ್ಯಾನೇಜರ್.

ಹಾಸನದ ಟೋಪಿ ಕಾರ್ಖಾನೆ, ಡಿಸ್ಟ್ರಿಕ್ಟ್ ಇಲಾಖೆ, ತುಮಕೂರು.

ಇಗೋ ನೋಡಿರಿ ಎಲ್ಲರೂ ಓದತಕ್ಕ ಆಶ್ಚರ್ಯಕರವಾದ ಪುಸ್ತಕ!

"ಅರೇಬಿಯನ್ ನೈಟ್ಸ್ ಅಥವಾ ಯವನ ಯಾಮಿನೀ ವಿನೋದ ಕಥೆಗಳು.

71-2

ಈ ಪುಸ್ತಕವು ರೀಕಾಪ್ರಸಿದ್ಧವಾದುದೆಂದು ಎಲ್ಲರೂ ಒಪ್ಪಿಕೊಳ್ಳುತ್ತಾರೆ ನಾನೂರ ಎಪ್ಪತ್ತು ಪುಟಗಳುಳ್ಳದ್ದು, ಭಾರಿ ಪುಸ್ತಕ ಭಾಷೆಯು ಬಹು ಸರಳವಾಗಿದೆ ಪುಸ್ತಕವನ್ನು ಒಂದಾವರ್ತಿ ಓದಿದ ಮೇಲೆ ಅದನ್ನು ಪುನಃ ಪುನಃ ಓದ ಹಂತೆ ಅದು ಮನಸ್ಸನ್ನು ಆಕರ್ಷಿಸುವದು. ಇದರ ಕ್ರಯ ಎರಡೇ ರೂಪಾಯಿ. ವಿ ಪಿ ಪಿ ಮೂಲಕ ೨—೩—೦ ಹತ್ತು ಅಥವಾ ಹನ್ನೆರಡು ವರ್ಷಗಳ ಹಿಂದೆ ಇದರ ಕ್ರಯ ಎಂಟು ರೂಪಾಯಿ ಎಂದು ಅನೇಕರಿಗೆ ಗೊತ್ತು. ಇದನ್ನು ಬಡವರೂ, ಐಶ್ವರ್ಯವಂತರೂ ಓದುವಂತೆ ಪುನಃ ಛಾಪಿಸಿ ಇಷ್ಟು ದೊಡ್ಡ ಪುಸ್ತಕವನ್ನು ಇಷ್ಟು ಸುಲಭ ಕ್ರಯಕ್ಕೆ ಮಾರುತ್ತೇವೆ. ಹನ್ನೆರಡು ಪುಸ್ತಕಗಳನ್ನು ಒಟ್ಟಿಗೆ ತರಿಸಿಕೊಂಡರೆ, ಪುಸ್ತಕಕ್ಕೆ ಎರಡು ಆಣೆಯಂತೆ ಕಮಿಷನ್ ಕೊಡುತ್ತೇವೆ ಜಾಗ್ರತೆ ನೋಡಿ

ವಿಳಾಸ:—ಮ್ಯಾನೇಜರ್,

ಸಿ. ಎಲ್. ಎಸ್. ಬುಕ್ ಡಿಪೋ,

ಮೈಸೂರು.

ಶಾಲಾ ಪುಸ್ತಕಗಳು.

72 2

ಬಾಲಶಿಕ್ಷೆ. ಒಂದನೆಯ ಭಾಗ	ಕ್ರಯ	೦	೧	೦
ಬಾಲಶಿಕ್ಷೆ. ಎರಡನೆಯ ,,		೦	೨	೦
ಕನ್ನಡ ಬಾಲಬೋಧೆ ಒಂದನೆಯ ಭಾಗ		೦	೦	೬
ಕನ್ನಡ ಬಾಲಬೋಧೆ ಎರಡನೆಯ ,,		೦	೨	೬
ಮಾರ್ಸ್ಡೆನರವರ ಕನ್ನಡ ಮೊದಲನೆಯ ಪುಸ್ತಕ		೦	೨	೦
,, ,, ಎರಡನೆಯ ಪುಸ್ತಕ		೦	೨	೬
,, ,, ಮೂರನೆಯ ಪುಸ್ತಕ		೦	೩	೦
,, ,, ನಾಲ್ಕನೆಯ ಪುಸ್ತಕ		೦	೪	೦
,, ,, ಐದನೆಯ ಪುಸ್ತಕ		೦	೫	೬
ಭೂಗೋಳ ಶಾಸ್ತ್ರದ ಮೊದಲನೆಯ ಪುಸ್ತಕ		೦	೧	೦
,, ,, ಮೈಸೂರು ಪಟ ಸಮೇತ		೦	೨	೦
,, ,, ೧ನೆಯ ಮತ್ತು ೨ನೆಯ ಭಾಗ		೦	೪	೦
ಹಿಂದೂ ದೇಶದ ಚರಿತ್ರೆಯ ಸುಲಭ ಪಾಠಗಳು		೦	೪	೦
ಕಥಾಸಪ್ತತಿ		೦	೨	೬
ಪದ್ಯಸಾರ		೦	೫	೦
ದೊಡ್ಡ ಅಂಕಗಣಿತ		೦	೮	೦

ವಿಳಾಸ:—ಮ್ಯಾನೇಜರ್,

ಸಿ. ಎಲ್. ಎಸ್. ಬುಕ್ ಡಿಪೋ,

ಮೈಸೂರು.

ಅಪಾಯದ ಕುರುಹುಗಳು.

ಸ್ವಾಭಾವಿಕವಾಗಿ ಅಪಾಯ ಬರಬಹುದಾದ ಕಾರಣಗಳನ್ನು ಕಂಡುಹಿಡಿಯಬಹುದು.

ಕೆಮ್ಮು ಅಪಾಯದ ಕಾರಣವು!

ಶ್ವಾಸಕೋಶಗಳು ಬಲಹೀನವುಳ್ಳವುಗಳೆಂದು ಇದರಿಂದ ತೋರಿಬರುತ್ತದೆ. ಅವನ್ನು ಬೇಗನೇ ಬಲಪಡಿಸತಕ್ಕದ್ದು ಬಹು ಅವಶ್ಯಕ.

SCOTT'S EMULSION. 31-20

(ಸ್ಕಾಟ್ಸ್ ಇಮಲ್ಷನ್.

ಎಂಬೀ ಔಷಧವು ಈ ಕಾರಣಗಳನ್ನು ಹೋಗಲಾಡಿಸುವದು.

ಬಲಹೀನವಾದ ಶ್ವಾಸಕೋಶಗಳನ್ನು ಬಲಪಡಿಸಿ, ಕೆಮ್ಮನ್ನು ನಿಲ್ಲಿಸುತ್ತದೆ

ಕೈಯಿಂದ ಮುಟ್ಟಿ ತಯಾರಿಸಿದ್ದಲ್ಲ.

ಎಲ್ಲಾ ಔಷಧ ಮಾರಾಟಗಾರರಲ್ಲಿ ದೊರಕುತ್ತವೆ.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್

ಔಷಧಗಳ ಕಾರ್ಖಾನೆ,

ಲಂಡನ್ ಇಂಗ್ಲೆಂಡ್.

ಈ ವಿಹಾನ ಮನುಷ್ಯ ಇರುವ ಔಷಧವನ್ನೇ ಕೇಳಿಕೊಳ್ಳಿ.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ?

ಹಾಗಿಲ್ಲದರೆ ಬೇಗ ಬರೆದು ತರಿಸಿಕೊಳ್ಳಿ.

75 1

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು? ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ವಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೀಳಾದದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು. (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳಿಸುತ್ತೇವೆ.

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಸೀದಾ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದು ಚನ್ನಾಗಿಲ್ಲದ್ದೂ ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ.

ಸಾದ, ಕೆಂಪು, ಕಪ್ಪು, ಬಿಳಿಕ, ಕಾಫಿ ಟೋಪಿಗಳು ೧ ರೂ ೮ ಆ; ೧ ರೂ ೬ ಆ, ೧ ರೂ. ೪ ಆ

ರೇಷ್ಮೆ ಚುಕ್ಕೆಯುಳ್ಳ ಟೋಪಿಗಳು ೧ ರೂ. ೮ ಆ.; ೨ ರೂ.

ದಾರದ ಟೋಪಿಗಳು ೧ ರೂ. ೧೨ ಆ; ೧ ರೂ. ೮ ಆ.; ೧ ರೂ. ೬ ಆ.

ಉಣ್ಣೆಕಿನ ಟೋಪಿಗಳು ೧ ರೂ. ೮ ಆ; ೧ ರೂ. ೬ ಆ.

ಕೂಸುಗಳ ಟೋಪಿ, ಸೂಫಿ ಮೇಜೋಡು, ಅರ್ಧ ಮೇಜೋಡು. ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು.

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ.

ವೃತ್ತಾಂತ ಪತ್ರಿಕೆ.

ಸ ೧೯೦೭ ನೇ ಇಸವಿ ಆಗಸ್ಟ್ ತಾ|| ೧ ನೇ ಗುರುವಾರ

ಮೈಸೂರು ನ್ಯಾಯವಿಧಾಯಕ ಕೌನ್ಸಿಲ್ಲು.

ಶ್ರೀಮನ್ ಮಹಾರಾಜರವರು ತಮ್ಮ ರಾಜ್ಯಭಾರವು ಇನ್ನೂ ವಿಸ್ತರಣೆಯಾಗಿ ನಡೆಯಬೇಕೆಂತಲೂ ಪ್ರಜಾರಂಜಕವಾದದ್ದಾಗಬೇಕೆಂತಲೂ ಉತ್ಸಾಹಪೂರಿತರಾಗಿ ನ್ಯಾಯವಿಧಾಯಕ ಕೌನ್ಸಿಲ್ ಎಂಬ ಒಂದು ಸಭೆಯನ್ನು ಸ್ಥಾಪಿಸಿದ್ದು ಈ ಸಂಸ್ಥಾನದ ಚರಿತ್ರೆಯಲ್ಲಿ ಬಹು ವಿಶೇಷವಾದ ಸಂಗತಿಯಾಗಿರುತ್ತದೆ. ಸಾಮಾನ್ಯವಾಗಿ ಪ್ರಜೆಗಳ ಕೊರತೆಗಳನ್ನು ಸಾಕ್ಷಾತ್ತಾಗಿ ತಿಳಿದುಕೊಂಡು ಸಾಧ್ಯವಾಗುವಷ್ಟಿಗೂ ಅವರ ಇಂಗಿತಗಳ ಪ್ರಕಾರ ರಾಜ್ಯಭಾರ ಕ್ರಮಗಳನ್ನು ನಡೆಸುತ್ತಾ ಬರಬೇಕೆಂಬ ಉದ್ದೇಶದಿಂದ ಪ್ರಜಾಪ್ರತಿನಿಧಿ ಸಭೆಯನ್ನು ಸ್ಥಾಪಿಸಿ, ಇಪ್ಪತ್ತೈದು ವರುಷಗಳಿಗಿಂತಲೂ ಹೆಚ್ಚೇ ಆಗಿದೆ. ಈ ಸಭೆಯಿಂದ ಸರ್ಕಾರದವರಿಗೂ ಪ್ರಜಾ ಸಾಮಾನ್ಯಕ್ಕೂ ಎಷ್ಟುಮಟ್ಟಿನ ಪ್ರಯೋಜನವಾಗಿರುವುದೋ ವಾಚಕರ ಪೈಕಿ ಅನೇಕರಿಗೆ ಅನುಭವಸಿದ್ಧವಾಗಿರುತ್ತದೆ. ಈಗ ಈ ಎರಡನೆಯ ಸಭೆಯನ್ನು ಸ್ಥಾಪಿಸಿದ್ದು ಈ ಸಂಸ್ಥಾನದ ಏಳಿಗೆಗೂ ಕೀರ್ತಿಗೂ ಇನ್ನೂ ಅವಕಾಶವಾಯಿತೆನ್ನುವುದಕ್ಕೆ ಸಂಶಯವಿಲ್ಲ.

ಈ ನ್ಯಾಯವಿಧಾಯಕ ಕೌನ್ಸಿಲ್ ಎಂಬ ಹೊಸ ಸಭೆಯಲ್ಲಿ ನಡೆದ ವಿಷಯಗಳನ್ನು ಇನ್ನೊಂದು ಭಾಗದಲ್ಲಿ ಪ್ರಕಟಿಸಿರುತ್ತೇವೆ. ದಿವಾನರವರ ಭಾಷಣದಿಂದ ಈ ಸಭೆಯ ಉದ್ದೇಶಗಳೂ ಕಾರ್ಯಗಳೂ ಸ್ಪಷ್ಟವಾಗಿ ಗೊತ್ತಾಗುವವು. ಈ ಸಭೆಯನ್ನು ಈಗತಾನೇ ಪ್ರಾರಂಭಿಸಿರೋಣವಿಂದ ಮೆಂಬರುಗಳನ್ನು ಸರ್ಕಾರದವರೇ ನೇಮಕ ಮಾಡುವುದು ಅವಶ್ಯವಾಯಿತು. ಆದರೆ ಮೆಂಬರುಗಳು ಗವರ್ನ್‌ಮೆಂಟಿನವರಿಗೂ ಪ್ರಜೆಗಳಿಗೂ ಮಧ್ಯವರ್ತಿಗಳಾಗಿ ನಿಂತು ಉಭಯರಿಗೂ ಪ್ರಯೋಜನವಾಗುವಂತೆ ಕಾರ್ಯಗಳನ್ನು ನಡಿಸಿ ಸಭೆಯ ಉದ್ದೇಶಗಳನ್ನು ಸಾರ್ಥಕಪಡಿಸುವರೆಂದು ತಿಳಿಸುಬಂದ ಬಳಿಕವೋ ಆ ಮೆಂಬರುಗಳ ಚುನಾವಣೆಯ ಸ್ವಾತಂತ್ರ್ಯವನ್ನು ಶ್ರೀಮನ್ ಮಹಾರಾಜರವರು ಪ್ರಜೆಗಳಿಗೇನೂ ವಹಿಸಿಕೊಟ್ಟಿರೆನ್ನುವುದರಲ್ಲಿ ಅನುಮಾನವಿಲ್ಲ. ರಾಜ್ಯಭಾರದ ನ್ಯೂನಾತಿರಿಕ್ತಗಳನ್ನು ಜಮಾ ಖರ್ಚನ್ನೂ ಪ್ರಜೆಗಳ ಕುಂದು ಕೊರತೆಗಳನ್ನೂ ಕುರಿತು ಪ್ರಜಾಪ್ರತಿನಿಧಿ ಸಭೆಯಲ್ಲಿ ಮೆಂಬರುಗಳು ಇದುವರೆಗೂ ಚರ್ಚಿಸುತ್ತಲೇ ಬಂದಿದ್ದಾರೆ. ಅಲ್ಲದೇ ಈ ಹೊಸ ಸಭೆಯಲ್ಲೂ ಮತ್ತೆ ಅಂಥಾ ಚರ್ಚೆಯನ್ನೇ ಮಾಡಲು ಅವಕಾಶ ಕೊಡಬೇಕಾದ ಅವಶ್ಯವೇನೂ ನಮ್ಮ ಕಂಡುಬರುವುದಿಲ್ಲ. ಮುಖ್ಯವಾಗಿ ಈ ಸಭೆಯಲ್ಲಿ ಪ್ರಜಾ ಸಾಮಾನ್ಯಕ್ಕೆ ಅನುಕೂಲಿಸುವಂಥಾ ಕಾನೂನುಗಳನ್ನು ಸೂಚಿಸುವುದು, ಅವುಗಳ ಪಕ್ಷ ಪರಪಕ್ಷಗಳನ್ನೂ ಸಾಧಕ ಬಾಧಕಗಳನ್ನೂ ಕುರಿತು ಚರ್ಚಿಸುವುದು, ಪ್ರಜಾಕ್ಷೇಮಾಭಿವೃದ್ಧಿಗೆ ಸಹಾಯಕಗಳಾದ ಕಾನೂನುಗಳನ್ನು ಮಾಡಿ ಜಾರಿಗೆ ತರುವುದು, ಇವೇ ಅದರ ಕರ್ತವ್ಯಗಳಾಗಿರುತ್ತವೆ. ಇಂಥಾ ನ್ಯಾಯವಿಧಾಯಕ ಸಭೆಯು ಈ ಸಂಸ್ಥಾನದಲ್ಲಿ ಸ್ಥಾಪನೆಯಾಗಬೇಕೆಂದು ಪ್ರಜಾಪ್ರತಿನಿಧಿ ಸಭೆಯಲ್ಲಿ ಕೆಲವು ವರುಷಗಳಿಂದ ಆ ಮೆಂಬರುಗಳು ಚರ್ಚಿಸುತ್ತಲೂ ಗವರ್ನ್‌ಮೆಂಟಿನವರನ್ನು ಕೇಳಿಕೊಳ್ಳುತ್ತಲೂ ಇದ್ದರು. ಈಗ ನಮ್ಮ ಮಹಾರಾಜರವರ ದೌಲತ್ತಿನ ಪ್ರಾರಂಭಕಾಲದಲ್ಲೂ ಮಾಧವರಾಯರ ದಿವಾನಗಿರಿಯಲ್ಲೂ ಈ ಪ್ರಜಾರಂಜಕವಾದ ಎರಡನೇ ಸಭೆಯು ಸ್ಥಾಪನೆಯಾದದ್ದು ತುಂಬಾ ಸಂತೋಷಕರವಾಗಿರುತ್ತದೆ. ಈ ಸಭೆಯ ಮೆಂಬರುಗಳು ಸ್ವಾರ್ಥವನ್ನು ಕಿಂಚಿತ್ತಾದರೂ ಯೋಚಿಸದೆ, ಸಂಸ್ಥಾನಾಭಿವೃದ್ಧಿಗೂ ಪ್ರಜೆಗಳ ಹಿತವನ್ನು ಬಯಸಿ, ಸರ್ವಸಮ್ಮತವಾದ ಕಾನೂನುಗಳು ಜಾರಿಗೆ ಬರುವಂತೆ ಮಾಡಬೇಕೆಂದು ಹಾರೈಸುತ್ತೇವೆ.

ಜಪಾನ್ ದೇಶವು—II

ಜಪಾನ್ ದೇಶೀಯರು ಈಗಿನ ಸ್ಥಿತಿಗೆ ಬರುವುದಕ್ಕೆ ಪೂರನೇ ಕಾರಣವು ಯಾವದೆಂದರೆ—ಅವರ ಸ್ತ್ರೀಯರು ಉತ್ತಮಸ್ಥಿತಿಯಲ್ಲಿರುವುದು. ವಿದ್ಯಾಬುದ್ಧಿಯಲ್ಲಿ ಮುಂದರಿದ ದೇಶಗಳಲ್ಲಿರುವ ಸ್ತ್ರೀಯರ ಸ್ಥಿತಿಗಿಂತ ಜಪಾನ್ ದೇಶದ ಸ್ತ್ರೀಯರ ಸ್ಥಿತಿಯು ಮೇಲಾದದ್ದು. ಈ ಸಂಗತಿಯು ಅನೇಕರಿಗೆ ಆಶ್ಚರ್ಯವನ್ನುಂಟುಮಾಡಬಹುದು. ಏಕೆಂದರೆ—ಜಪಾನೀಯರು ಬೌದ್ಧಮತಕ್ಕೆ ಸೇರಿದವರು. ಬೌದ್ಧಮತವು ಸ್ತ್ರೀ ಸಮುದಾಯಕ್ಕೆ ಉತ್ತಮಸ್ಥಾನವಿಲ್ಲವೆಂದು ತಿಳಿಸುತ್ತದೆ. ಆದರೂ ಈಗಿನ ಜಪಾನೀಯರು ಬಹು ಧೈರ್ಯದಿಂದ ಈ ತಪ್ಪಾದ ಕಟ್ಟಳೆಯನ್ನು ಮೀರಿ ತಮ್ಮ ಸ್ತ್ರೀಯರನ್ನು ವಿದ್ಯಾವತಿಯರನ್ನಾಗಿ ಮಾಡುತ್ತಿರುವರು. ಸ್ತ್ರೀ ವಿದ್ಯಾಭ್ಯಾಸದ ವಿಷಯವು ಮೊದಲೇ ತಿಳಿಸಿರುತ್ತೇನಷ್ಟೆ. ಅವರಲ್ಲಿ ಗೋಷಾಪದ್ಧತಿಯು ಇಲ್ಲವೇ ಇಲ್ಲ. ಎಲ್ಲರೂ ಧಾರಾಳವಾಗಿ ಸಂಚರಿಸುವರು. ಗಂಡಸರು ಹೆಂಗಸರನ್ನು ಬಹು ಮರ್ಯಾದೆಯಿಂದ ಕಾಣುವದಲ್ಲದೆ ಅವರಿಗೆ ಅವಶ್ಯಕವಾಗಿರುವ ಸಹಾಯಗಳನ್ನು ಮಾಡುವದಕ್ಕೂ ಸಿದ್ಧರಾಗಿರುವರು. ಬೀದಿಗಳಲ್ಲಿ ಗಂಡಸರು ತಾವು ಗಾಡಿಗಳಲ್ಲಿ ಪ್ರಯಾಣಮಾಡುತ್ತಿರುವಾಗ್ಗೆ ಹೆಂಗಸರನ್ನು ನೋಡಿದರೆ ಎದ್ದು ನಮಸ್ಕಾರಮಾಡುವರು. ಅವರು ಪ್ರಯಾಣಮಾಡುವವರಾಗಿದ್ದರೆ ತಮ್ಮ ಗಾಡಿಗಳನ್ನು ಬಿಟ್ಟುಕೊಡುವುದಕ್ಕೂ ಹಿಂತೆಗೆಯರು. ಪಟ್ಟಣ ಕೂಲಿಗಳು ಕೂಡ ತಮ್ಮ ಗಾಡಿಗಳಿಂದ ಹೆಂಗಸರು ಇಳಿಯುವದಾದರೆ ಅವರು ತಕ್ಷಣವೇ ಗಾಡಿಗಳಿಂದಿಳಿದು ಹೆಂಗಸರ ಮೂಟೆಗಳನ್ನು ಕ್ರಮವಾಗಿಡುವದಲ್ಲದೆ ಅವರ ಕೊಡೆಗಳನ್ನು ಸಹ ಬಿಚ್ಚಿ ಅವರ ಕೈಗಳಿಗೆ ಕೊಟ್ಟು ಮರ್ಯಾದಾಪೂರ್ವಕವಾಗಿ ನಮಸ್ಕಾರವನ್ನು ಮಾಡಿ ಅವರನ್ನು ಕಳುಹಿಸಿಕೊಡುವರು. ಮಂತ್ರಾಲೋಚನಾ ಸಭೆಯಲ್ಲಿ ಒಬ್ಬ ಜಪಾನಿ ಕ್ರೈಸ್ತನು ವ್ಯಭಿಚಾರ ಮಾಡುವವರನ್ನು ಖಂಡಿತವಾಗಿಯೂ ಶಿಕ್ಷಿಸಬೇಕೆಂಬುವ ಸಲಹೆಯನ್ನು ಕೊಟ್ಟನು. ತಮ್ಮ ದೇಶೋನ್ನತಿಗೆ ಹೆಂಗಸರೇ ಕಾರಣಭೂತರಾಗಿರುವರೆಂದು ಜಪಾನೀಯರು ಪರಿಷ್ಕಾರವಾಗಿ ತಿಳಿದುಕೊಂಡಿರುವರು. ಇದು ಸತ್ಯವಾದ ಸಂಗತಿಯಾಗಿರುತ್ತದೆ. ಜಪಾನ್ ಚಕ್ರಾಧಿಪತ್ಯಕ್ಕೆ ಎಲ್ಲಾ ವಿಧವಾದ ಕಷ್ಟಗಳು ಬಂದರೂ ಹೆಂಗಸರು ಯಾವಾಗಲೂ ಬಹು ಧೈರ್ಯದಿಂದ ಗಂಡಸರೊಂದಿಗೆ ಸಹಾಯಕರಾಗಿ ನಿಲ್ಲುವರು. ಹಿಂದೂ ದೇಶೀಯರು ಈ ವಿಷಯದಲ್ಲಿ ಜಪಾನೀಯರಿಂದ ವಿಶೇಷವಾದ ಪಾಠಗಳನ್ನು ಕಲಿಯಬೇಕಾಗಿರುತ್ತದೆ. ಈ ದೇಶದಲ್ಲಿ ಅನೇಕರು ಹೆಂಗಸರನ್ನು ಪಶುಗಳಂತೆ ಕಾಣುವರು. ವಿಧವೆಗಳ ಸ್ಥಿತಿಯಂತು ಬಹು ಶೋಚನೀಯವಾದದ್ದಾಗಿದೆ. ಸ್ತ್ರೀಯರು ಕನಿಷ್ಠಸ್ಥಿತಿಯಲ್ಲಿದ್ದರೆ ದೇಶವು ಹ್ಯಾಗೆತಾನೆ ಉತ್ತಮಸ್ಥಿತಿಗೆ ಬಂದೀತು?

ಜಪಾನೀಯರು ಉತ್ತಮ ಸ್ಥಿತಿಗೆ ಬರುವುದಕ್ಕೆ ಮೂರನೆಯ ಕಾರಣವು ಯಾವದೆಂದರೆ ಅವರ ನಿಷ್ಕಪಟತ್ವ. ಜಪಾನೀಯರು ಗರ್ವಿಗಳಲ್ಲ. ಬಾಲಕರಂತೆ ವಿನಯದಿಂದ ಒಳ್ಳೆಯದನ್ನು ಎಲ್ಲರಿಂದಲೂ ಕಲಿತುಕೊಳ್ಳುವುದಕ್ಕೆ ಇಷ್ಟಪಡುತ್ತಾರೆ. ಇದು ನನ್ನ ದೇಶದ್ದು, ಆದ್ದರಿಂದ ಇದೇ ಸತ್ಯವಾದುದು, ಬೇರೆ ದೇಶದವುಗಳು ಅಬದ್ಧವೆಂದು ಹೇಳಿಕೊಳ್ಳುವ ದುರಭಿಮಾನವು ಜಪಾನೀಯರಲ್ಲಿ ಲೇಶಮಾತ್ರವೂ ಇಲ್ಲ. ಯುರೋಪಿನಿಂದಲೂ ಅಮೇರಿಕಾ ದೇಶಗಳಿಂದಲೂ ಸಕಲ ವಿದ್ಯೆಗಳನ್ನು ಕಲಿತುಕೊಂಡಿರುವರು. ಇಂಗ್ಲಿಷ್ ಭಾಷೆಯು ಜಪಾನ್ ದೇಶದಲ್ಲಿ ಸಾಧಾರಣವಾಗಿ ಆಡಲ್ಪಡುವದು. ಜಪಾನೀಯರು ತಮ್ಮಲ್ಲಿ ಕಂಡು ಬರುವ ಕುಂದಕಗಳನ್ನು ಮುಚ್ಚಿಕೊಳ್ಳದೆ ಅವುಗಳ ವಿಷಯ ಬಹಳ ನಯವಾಗಿ ತರ್ಕಿಸಿ ಹೇಳುತ್ತಾರೆ. ಯಾವದು ಒಳ್ಳೆಯದೋ ಅಥವಾ ಯಾವದು ದೇಶೋನ್ನತಿಗೆ ಪ್ರಯೋಜನಕರವಾದದ್ದೋ ಅಂಥಾದ್ದನ್ನು ಜಪಾನೀಯರು ಸಂಪಾದಿಸುವ ತನಕ ಸುಮ್ಮನಿರರು. ಜಾತಿಯ ಕಟ್ಟುಗಳನ್ನು ಮುರಿದು ಹಾಕಿ ಹೇಳಿದ ಕಡೆ ಪ್ರಯಾಣ ಮಾಡುವರು. ಲೌಕಿಕ ಕಾರ್ಯಗಳಲ್ಲಿ ಆಸಕ್ತಿಯನ್ನು ತೋರಿಸುವದಲ್ಲದೆ ಪಾರಮಾರ್ಥಿಕ ಕಾರ್ಯಗಳಲ್ಲಿಯೂ ವಿಚಾರಕರಾಗಿರುವರು. ಎಲ್ಲಾ ಮತಗಳಿಗಿಂತ ಶ್ರೇಷ್ಠವಾಗಿರುವ ಮತವನ್ನೇ ಪರಿಗ್ರಹಿಸುವರು. ಕ್ರೈಸ್ತ ಮತವು ಜಪಾನ್ ದೇಶದಲ್ಲಿ ಹರಡಿಕೊಳ್ಳುತ್ತಿರುವದು. ಜನರು ಅದರಲ್ಲಡಗಿರುವ ತತ್ವಗಳನ್ನು ಬಹು ಆದರದಿಂದ ಪರೀಕ್ಷಿಸುತ್ತಿರುವರು. ಸರ್ಕಾರದ ಮಂತ್ರಾಲೋಚನಾ ಸಭೆಯಲ್ಲಿ ಅನೇಕ ದೇಶೀಯ ಕ್ರೈಸ್ತರು ಮೆಂಬರುಗಳಾಗಿರುತ್ತಾರೆ. ಆಗಾಗ ಮತಸ್ಥರು ಒಬ್ಬರನ್ನೊಬ್ಬರು ದ್ವೇಷಿಸದೆ ಸಹೋದರರಂತಿರುವರು.

ಒಳದೇಶದ ವೃತ್ತಾಂತಗಳು.

ಮೆ|| ಪಿ. ಶ್ರೀನಿವಾಸರಾಯರು ಈ ವಾರ ರಾಜಧಾನಿಗೆ ಬಂದು ಇಲ್ಲಿನ ಟೌನ್ ಮ್ಯಾಜಿಸ್ಟ್ರೇಟ್ ಕೋರ್ಟಿನ ಭಾರವನ್ನು ಮೆ|| ಎನ್. ವೆಂಕಟರಾಯರಿಂದ ವಹಿಸಿಕೊಳ್ಳಬೇಕಾಗಿದೆ.

❦❦❦

ಹಾಸನದ ಡೆಪ್ಯುಟಿ ಕಮಿಷನರಾಗಿದ್ದು ರಜೆಯ ಮೇಲೆ ಹೋಗಿರುವ ಮೆ|| ನೆಪರಾಲ್ ಯವರಿಗೆ ಸರ್ಕಾರದವರು ಕೊಟ್ಟಿರುವ ರಜವನ್ನು ಇನ್ನೂ ಎರಡು ತಿಂಗಳು ಜಾಸ್ತಿ ಮಾಡಿದರೆಂದು ಕೇಳುತ್ತೇವೆ.

❦❦❦

ಮೈಸೂರು ರೆವಿನ್ಯೂ ಸರ್ವೆ ಇಲಾಖೆಯಲ್ಲಿ ಸಬ್ ಅ|| ಸೂಪರಿಂಟೆಂಡೆಂಟಾಗಿದ್ದ ಮೆ|| ವೈ. ಶ್ರೀನಿವಾಸರಾಯರನ್ನು ಅ|| ಕಮಿಷನರ ದರ್ಜೆಗೆ ಬಡ್ತಿಮಾಡಿ ಸರ್ವೆ ಇಲಾಖೆಗೆ ವರ್ಗ ಮಾಡಿರುತ್ತಾರೆ.

❦❦❦

ನಮ್ಮ ರಾಜಧಾನಿಯಲ್ಲಿ ಗಾಳಿಯೂ ಶೀತ ಹವಾ ಬಹಳ ಹೆಚ್ಚಾಗಿದೆ. ಮೋಡವು ಕೆಲವು ಕಾಲ ಬೀಳುವುದಲ್ಲದೆ ದೊಡ್ಡ ಮಳೆಗಳೇನೂ ಬರಲಿಲ್ಲ. ಪ್ಲೇಗ್ ಉಪದ್ರವು ಏನಕ್ಕೆ ನಿಲ್ಲುವುದು ಜನರಿಗೆ ತಗಲುತ್ತಲಿದೆ.

❦❦❦

ಮಳವಳ್ಳಿ ತಾಲ್ಲೂಕು ಕಲ್ಕುಣಿ ಗ್ರಾಮದ ಪಡ್ಡಕಲ್ಲು ರಂಗನ ಬೆಟ್ಟದಲ್ಲಿ ಒಂದು ಚಿರತೆಯು ಸೇರಿಕೊಂಡು ಗೋಕಾಯಿಗಳನ್ನು ಹಿಡಿದು ತಿನ್ನುತ್ತಾ ರೈತ ಪ್ರಜೆಗಳಿಗೆ ನಷ್ಟಪಡಿಸುತ್ತಿದೆ ಎಂದು ಕೇಳುತ್ತೇವೆ.

❦❦❦

ಈಗ ಕಬ್ಬಿನಿ, ಕಾವೇರಿ ನದಿಗಳಲ್ಲಿ ತುಂಬಾ ಪ್ರವಾಹಗಳು ಬಂದಿರುತ್ತವೆ. ಅದನ್ನು ನೋಡುವುದಕ್ಕೆ ಅನೇಕರು ನಂಜನಗೂಡಿಗೂ ಶ್ರೀರಂಗಪಟ್ಟಣಕ್ಕೂ ಹೋಗಿ ಬರುತ್ತಾರೆ. ಶ್ರೀಮನ್ ಮಹಾರಾಜರವರೂ ಕಳೆದ ವಾರ ದಯಮಾಡಿದ್ದರು.

ತರೀಕೆರೆ ಸ್ಕೂಲಿನ ಹೆಡ್ ಮಾಸ್ಟರ್ ಮೆ|| ಎನ್. ಗೋಪಾಲಶಾಸ್ತ್ರಿಗಳವರಿಗೆ ಚಿಕ್ಕಮಗಳೂರು ಹೈಸ್ಕೂಲಿಗೆ ವರ್ಗವಾಯಿತು. ತರೀಕೆರೆಯ ಪ್ರಜೆಗಳು ಕಳೆದ ಗುರುವಾರ ಒಂದು ಸಂತೋಷ ಸಭೆಯನ್ನು ನಡಿಸಿ ಅವರಿಗೆ ಸನ್ಮಾನಮಾಡಿ ಔತಣ ನಡಿಸಿದರೆಂದು ಒಬ್ಬ ಬಾತ್ಮೀದಾರರು ಬರೆಯುತ್ತಾರೆ.

❦❦❦

ಶ್ರೀರಂಗಪಟ್ಟಣದಲ್ಲಿ ಬಹು ಕಾಲದಿಂದಲೂ ತುಂಬಾ ಗೌರವಸ್ಥರಾಗಿಯೂ ಸಭ್ಯರಾಗಿಯೂ ಪ್ರಜೆಗಳ ಪ್ರೀತಿಗೌರವಗಳನ್ನು ಸಂಪಾದಿಸಿಕೊಂಡೂ ಇದ್ದ ಮೆ|| ಪ್ಲೀಡರ್ ಮೈಲಾರೈಯ್ಯನವರು ಕಳೆದ ಶುಕ್ರವಾರ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರಿಗೆ ಸುಮಾರು ೬೦ ವರುಷ ವಯಸ್ಸಾಗಿತ್ತು.

❦❦❦

ಕಳೆದ ಸೋಮವಾರ ರಾತ್ರಿ ರಾಜಧಾನಿಯ ಲಷ್ಕರ್ ಮೊಹಲ್ಲಾದಲ್ಲಿ ನಂಜಿ ಎಂಬೊಬ್ಬ ಅಗಸರ ಹೆಂಗಸು ಭಾವಿಯಲ್ಲಿ ಬಿದ್ದು ಒಳಗೆ ಒಂದು ಬಂಡೆಯಮೇಲೆ ಕೂತಿದ್ದಳು. ಮರುದಿನ ಮಧ್ಯಾಹ್ನ ಪೋಲೀಸಿಗೆ ತಿಳಿದು ಅವರು ಅವಳನ್ನು ಮೇಲಕ್ಕೆ ಎತ್ತಿಸಿ, ದೇಹದಲ್ಲಿ ಗಾಯವಾಗಿದ್ದದ್ದರಿಂದ ಇಲಾಜಿಗಾಗಿ ಆಸ್ಪತ್ರೆಗೆ ಕಳುಹಿಸಿದರು.

❦❦❦

ಕಳೆದ ಗುರುವಾರ ಸಾಯಂಕಾಲ ಶ್ರೀಮನ್ ಯುವರಾಜರವರು ಬೆಂಗಳೂರಿನಲ್ಲಿ ಬಿಸ್ಕೋಡ ಒಬ್ಬ ರಾಜಕುಮಾರರನ್ನು ಕರೆದುಕೊಂಡು ಅಲ್ಲಿನ ಸರ್ಕಾರಿ ಹುಚ್ಚರ ಆಸ್ಪತ್ರೆಗೆ ದಯಮಾಡಿ, ಅಲ್ಲಿನ ಸಂಗತಿಗಳನ್ನೆಲ್ಲಾ ತೋರಿಸಿದರು. ಮರುದಿನ ಅಲ್ಲಿರುವ ಹುಚ್ಚರಿಗೆಲ್ಲಾ ಯುವರಾಜರವರು ವಿಶೇಷ ಮೇಲಾದ ತಿಂಡಿಯನ್ನು ಕೊಡಿಸಿದರು.

❦❦❦

ಕೆಲವು ದಿನಗಳ ಕೆಳಗೆ ರಾಜಧಾನಿಯ ಕೋಟೆಯಲ್ಲಿರುವ ಸರ್ದಾರ್ ಗೋಪಾಲಕೃಷ್ಣೇ ಅರಸಿನವರ ಕುಮಾರರಿಗೆ ಚೌಲಕರ್ಮವನ್ನು ನಡಿಸಿದರು. ಅದಕ್ಕಾಗಿ ಅವರು ಶ್ರೀಮನ್ ಮಹಾರಾಜರವರನ್ನೂ ಅರಮನೆಯ ಜನಾನಿಯವರನ್ನೂ ತಮ್ಮ ಮನೆಗೆ ಕಳೆದ ಭಾನುವಾರ ಚಿತ್ತೈಸಿಕೊಂಡು, ಪಾದಪೂಜೆ ಔತಣಾದಿಗಳನ್ನು ನಡಿಸಿ ಸಂತೋಷಪಡಿಸಿದರು.

❦❦❦

ಬೆಂಗಳೂರು ದಂಡಿನ ಎರಡನೆ ಮ್ಯಾಜಿಸ್ಟ್ರೇಟರಾದ ಮೆ|| ಖಾನ್ ಬಹದೂರ್ ಅಬ್ದುಲ್ ರಹಮಾನ್ ಯವರನ್ನು ಕಳೆದ ಭಾನುವಾರ ಬೆಳಿಗ್ಗೆ ಒಂದು ನಾಯಿ ಕಚ್ಚಿಯಿತು. ಅದನ್ನು ಕೊಂದು, ಅದಕ್ಕೆ ಹುಚ್ಚು ಹಿಡಿದಿತ್ತೋ ಇಲ್ಲವೋ ಎಂಬುವುದನ್ನು ಪರೀಕ್ಷೆಮಾಡುವುದಕ್ಕೋಸ್ಕರ ಅದರ ತಲೆಯನ್ನು ಮದರಾಸಿನ ಗಿಂಡಿ ಕೂನೂರು ಆಸ್ಪತ್ರೆಗೆ ಕಳುಹಿಸಿದಾರೆ.

❦❦❦

ಕಾಫಿ ವ್ಯವಸಾಯಕ್ಕೆ ಸರ್ಕಾರದವರು ೫ ಎಕರೆಗಿಂತ ಕಡಿಮೆಯಾಗಿ ಯಾರಿಗೂ ಕೊಡಕೂಡದೆಂದು ನಿರ್ಧರಿಸಿದ್ದರು. ಇದರಿಂದ ಅನೇಕ ತೊಂದರೆಗಳುಂಟೆಂದು ಗವರ್ನ್‌ಮೆಂಟಿಗೆ ಪ್ರಜೆಗಳೂ ಪ್ರಜಾಪ್ರತಿನಿಧಿಗಳೂ ಹೇಳಿಕೊಳ್ಳುತ್ತಾ ಬಂದಿದ್ದರು. ಈಗ ಆ ೧೫ ಎಕರೆ ಎಂಬುದನ್ನು ತಪ್ಪಿಸಿ, ೫ ಎಕರೆಯಾದರೂ ಕೊಡಬಹುದೆಂದು ಸರ್ಕಾರದವರು ಹುಕುಂ ಕೊಟ್ಟಿದ್ದಾರೆ. ಇದರಿಂದ ಸಣ್ಣ ರೈತರಿಗೆ ತುಂಬಾ ಉಪಕಾರವಾಯಿತು.

❦❦❦

ಅಮಲ್ದಾರ್ ಮೆ|| ಆಬ್ದುಲ್ ಕರೀಂ ರವರನ್ನು ಮೊಳಕಾಲ್ಮೂರು ತಾಲ್ಲೂಕಿಗೂ ಆಕ್ಟಿಂಗ್ ಅಮಲ್ದಾರ್ ಮೆ|| ಪಿ. ಸುಬ್ಬರಾಯರನ್ನು ಮಾಲೂರಿನಿಂದ ತೀರ್ಥಹಳ್ಳಿ ತಾಲ್ಲೂಕಿಗೂ ವರ್ಗಮಾಡಿದಾರೆ. ಮತ್ತು ರೆಜಿಸ್ಟ್ರೇಷನ್ ಇಲಾಖಾ ಇನ್ಸ್‌ಪೆಕ್ಟರ್ ಜನರಲ್ ರವರ ಆಫೀಸ್ ಮ್ಯಾನೇಜರ್ ಮೆ|| ಕೆ. ಕೆ. ವೆಂಕಟಸುಬ್ಬಯ್ಯನವರಿಗೆ ಮಾಲೂರ್ ತಾಲ್ಲೂಕಿನ ಅಮಲ್ದಾರಿಯೂ, ಮೈಸೂರು ರೀಟೆಂಗ್ ಇನ್ಸ್‌ಪೆಕ್ಟರ್ ಮೆ|| ಎಂ. ಕೇಶವೈಯ್ಯನವರಿಗೆ ತಿರುಮಕೂಡ್ಲು ನರಸೀಪುರದ ತಾಲ್ಲೂಕಿನ ಅಮಲ್ದಾರಿಯೂ ನೇಮಕವಾಯಿತೆಂದು ಕೇಳುತ್ತೇವೆ.

ಮೈಸೂರು ಗೆಜೆಟ್ ಸಂಗ್ರಹ.

ಅ|| ಕಮಿಷನರ್ ಮೆ|| ಪಿ. ಶ್ರೀನಿವಾಸರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಹಾಸನದ ಡಿಸ್ಟ್ರಿಕ್ಟ್ ಖಜಾನೆ ಭಾರವನ್ನು ವಹಿಸಿರುವ ಆಕ್ಟಿಂಗ್ ಅ|| ಕಮಿಷನರ್ ಮೆ|| ಟಿ. ಧರ್ಮರಾಜಯ್ಯನವರಿಗೆ ಜೂನ್ ೨೦ ರಿಂದ ಹದಿಮೂರು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು.

ಮೈಸೂರು ಜೈಲ್ ಸೂಪರಿಂಟೆಂಡೆಂಟಾದ ಮೆ|| ಇ. ಎಸ್. ಕೃಷ್ಣಸ್ವಾಮಿ ಐಯ್ಯರವರಿಗೆ ೧ ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ವಹಿಸಿದೆ (ಅವರು ಜೈಲ್ ಅಧಿಕಾರದ ಕಚೇರಿಯ ತಕ್ಸೀರುಗಳಲ್ಲಿ ಅಪರಾಧಿಗಳಿಗೆ ಛಡಿ ಶಿಕ್ಷೆಯನ್ನು ವಿಧಿಸತಕ್ಕದ್ದು).

ಅಮಲ್ದಾರ್ ಮೆ|| ಎನ್. ಶ್ರೀನಿವಾಸರಾಯರನ್ನು ಮೊಳಕಾಲ್ಮೂರು ತಾಲ್ಲೂಕಿನಿಂದ ಹೊಸಕೋಟೆ ತಾಲ್ಲೂಕಿಗೆ ವರ್ಗಮಾಡಿದೆ.

ಚನ್ನರಾಯಪಟ್ಟಣದ ಸಬ್ ಡಿವಿಜನ್ ಭಾರವನ್ನು ವಹಿಸಿರುವ ಆಕ್ಟಿಂಗ್ ಎಕ್‌ಸ್ಟ್ರಾ ಅ|| ಕಮಿಷನರ್ ಮೆ|| ಎಂ. ಲಕ್ಷ್ಮಣಶಾಸ್ತ್ರಿ ಯವರಿಗೆ ೧ ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ವಹಿಸಿದೆ.

ಮಾರಿಕಣಿವೆ ಡಿವಿಜನ್ ಅ|| ಇಂಜನಿಯರ್ ಮೆ|| ಕೆ. ಅನಂತಾಚಾರ್ಯರಿಗೆ ಕೊಟ್ಟಿರುವ ಹದಿನೈದು ದಿನಗಳ ಪ್ರಿವಿಲೇಜ್ ರಜವನ್ನು ಇನ್ನೊಂದು ತಿಂಗಳು ಜಾಸ್ತಿ ಮಾಡಿದೆ.

ಸಬ್ ಅ|| ಇಂಜನಿಯರ್ ಮೆ|| ಕೆ. ಎಂ. ವಾಸುದೇವರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಇಪ್ಪತ್ತೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ರಾಜಧಾನಿಯ ಮ್ಯುನಿಸಿಪಲ್ ಮೀಟಿಂಗು.

ಕಳೆದ ಶನಿವಾರ ಬೆಳಿಗ್ಗೆ ಮೈಸೂರು ಮ್ಯುನಿಸಿಪಲ್ ಕೌನ್ಸಿಲರುಗಳು ಇಲ್ಲಿನ ಟೌನ್ ಹಾಲ್ ಬಂಗಲೆಯಲ್ಲಿ ಸಭೆ ಸೇರಿ ತಿಂಗಳು ಕಟ್ಟಿಯ ಮೀಟಿಂಗ್ ನಡಿಸಿದರು. ಮೊದಲು ಜೂನ್ ತಿಂಗಳ ಜಮಾಖರ್ಚು ಮುಂತಾದ ಲೆಕ್ಕಗಳನ್ನು ಓದಿಸಿದರು. ಆ ತಿಂಗಳಲ್ಲಿ ಮ್ಯುನಿಸಿಪಾಲಿಟಿಗೆ ಎಲ್ಲಾ ಬಾಬುಗಳಿಂದಲೂ ೧೫,೭೦೧ ಚಿಲ್ಲರೆ ರೂಪಾಯಿ ಜಮಾ ಆಯಿತೆಂತಲೂ ೧೪,೮೦೫ ಚಿಲ್ಲರೆ ರೂಪಾಯಿ ಖರ್ಚಾಯಿತೆಂತಲೂ ತಿಳಿಯಿತು. ಜೂನ್ ತಿಂಗಳಲ್ಲಿ ಜನನ ೯೫, ಮರಣ—ಪ್ಲೇಗ್ ೯, ಜ್ವರ ೧೫, ಇತರ ಕಾರಣಗಳು ೧೩೩, ಅಂತು ೧೫೭ ಆಗಿದೆ. ಆಕ್ಟ್ರಾಯಿ ಬಾಬಿನಲ್ಲಿ ಆ ತಿಂಗಳ ಉತ್ಪತ್ತಿಯು ೬,೦೩೩ ರೂಪಾಯಿ ಆಯಿತು. ಈ ಬಾಬಿಗೆ ಮ್ಯುನಿಸಿಪಾಲಿಟಿಯವರು ಸರಿಯಾದ ಮೇಲ್ವಿಚಾರಣೆಯನ್ನು ಇಟ್ಟಿದ್ದರಿಂದ ಉತ್ಪತ್ತಿಯು ಹೋದ ವರುಷದ ಆ ತಿಂಗಳ ಉತ್ಪತ್ತಿಗಿಂತಲೂ ಪ್ರತಿ ಒಂದು ಬಾಬಿನಲ್ಲೂ ಜಾಸ್ತಿಯಾಗಿದೆ ಎಂದು ಕೌನ್ಸಿಲರುಗಳು ಸಂತೋಷಪಟ್ಟುಕೊಂಡರು.

ಜಮಾಖರ್ಚಿನ ಲೆಕ್ಕಗಳನ್ನು ಇತ್ಯರ್ಥ ಮಾಡುವಲ್ಲಿ ಕೌನ್ಸಿಲರುಗಳು ಏಕವಾಕ್ಯತೆಯಿಂದ ತೀರ್ಮಾನಿಸಿದ್ದೇನೆಂದರೆ—ಹಿಂದೆ ಮ್ಯುನಿಸಿಪಲ್ ಮೀಟಿಂಗುಗಳಲ್ಲಿ ತೀರ್ಮಾನವಾಗಿರುವ ಪ್ರಕಾರ ಮ್ಯುನಿಸಿಪಾಲಿಟಿಯವರು ಕೆಲಸಗಳನ್ನು ನಡಸುತ್ತಾ ಇಲ್ಲವೆಂದು ವ್ಯಸನಪಡಬೇಕಾಗಿದೆ ಎಂಬುದೇ. ಇಂಥಾ ಶೋಚನೀಯವಾದ ಮಾತು ರಿಕಾರ್ಡಿನಲ್ಲಿ ಬರೆಯಲು ಕಾರಣವೇನಾಯಿತೆಂದರೆ—ಮ್ಯುನಿಸಿಪಲ್ ಕಾಮಗಾರಿಗಳು ನಡೆಯುವುದಕ್ಕೆ ಮುಂಚೆ ಆಯಾ ಮೊಹಲ್ಲಾ ಕೌನ್ಸಿಲರುಗಳಿಗೆ ಮ್ಯುನಿಸಿಪಾಲಿಟಿಯವರು ತಿಳಿಯಪಡಿಸಬೇಕೆಂತಲೂ, ಕಾಮಗಾರಿ ಪೂರೈಸಿದ ಮೇಲೆ ಅದರ ಖರ್ಚಿನ ಪಟ್ಟಿಯನ್ನು ನೋಡಿ ತನಿಖೆಯಿಂದ ಪ್ಯಾಸ್ ಮಾಡುವುದಕ್ಕೆ ಕೌನ್ಸಿಲರುಗಳಿಗೆ ಕಳುಹಿಸಿಕೊಡಬೇಕೆಂತಲೂ ಹಿಂದಿನ ಮೀಟಿಂಗುಗಳಲ್ಲೇ ನಿರ್ಧಾರಕ ಮಾಡಲ್ಪಟ್ಟಿದ್ದರೂ ಮ್ಯುನಿಸಿಪಾಲಿಟಿಯವರು ಅದರಂತೆ ನಡೆಯುವುದಿಲ್ಲವೆಂದು ಕೌನ್ಸಿಲರುಗಳು ಆಕ್ಷೇಪಣೆ ಮಾಡಿದರು. ಆಗ ವೈಸ್ ಪ್ರೆಸಿಡೆಂಟರು ಅದಕ್ಕೆ ಪ್ರತಿಯಾಗಿ ಹಿಂದೆ ಅಂಥಾ ನಿರ್ಧಾರಕವೇನೂ ಬರಹ ಮೂಲಕ ನಡೆದಿಲ್ಲವೆಂತಲೂ, ಆದರೂ ಅವರು ಕೆಲವು ಕೌನ್ಸಿಲರುಗಳಿಗೆ ಅಂಥಾ ಖರ್ಚು ಪಟ್ಟಿಗಳನ್ನು ಕಳುಹಿಸಿದಾಗ ಕೌನ್ಸಿಲರುಗಳು ಅವುಗಳನ್ನು ನೋಡಿ ಪ್ಯಾಸ್ ಮಾಡದೆ ವಾಪಸು ಮಾಡಿದರಾದಕಾರಣ ವೈಸ್ ಪ್ರೆಸಿಡೆಂಟರು ಕಳುಹಿಸುವುದನ್ನು ನಿಲ್ಲಿಸಿದರೆಂತಲೂ ತಿಳಿಸಿದರು. ಅದರ ಮೇಲೆ ಕೌನ್ಸಿಲರುಗಳು—ತಮ್ಮಲ್ಲಿಗೆ ಬಂದ ಖರ್ಚು ಪಟ್ಟಿಗಳನ್ನು ಅಬವಾಯಿಷಿ ಮಾಡಿದ್ದರಲ್ಲಿ ಆಯಾ ಕಾಮಗಾರಿಗಳು ನಡೆದು ೩—೪—೫ ವರುಷಗಳಾಗಿ ಹೋಗಿದ್ದುವೆಂತಲೂ, ಅದನ್ನೆಲ್ಲಾ ಈಗ ಸರಿಯಾಗಿ ತನಿಖೆ ಮಾಡುವುದು ಅಸಾಧ್ಯವಾದ್ದರಿಂದ ವಾಪಸು ಮಾಡಬೇಕಾಯಿತೆಂತಲೂ ಹೇಳಿದರು. ಅಲ್ಲಿಗೆ ಆ ಚರ್ಚೆಯು ಪೂರೈಸಿ ಮೇಲ್ಕಂಡ ತೀರ್ಮಾನ ಮಾಡಲಾಯಿತು.

ಕೆಲವು ಮೊಹಲ್ಲಾಗಳಲ್ಲಿ ಮ್ಯುನಿಸಿಪಾಲಿಟಿಗೆ ಬರಬೇಕಾಗಿರುವ ತೆರಿಗೆಗಳ ಪೈಕಿ ಕೆಲವು ವಸೂಲಾಗುವಂತಿಲ್ಲವೆಂದು ಬಾಕೀ ಪಟ್ಟಿಗಳನ್ನು ತಯಾರುಮಾಡಿ ಆ ಕುಳಗಳಿಗೆಲ್ಲಾ ರಿಮಿಷನ್ ಆಗಬೇಕೆಂದು ಸೂಚಿಸಿದರು. ಆಯಾ ಮೊಹಲ್ಲಾ ಕೌನ್ಸಿಲರು ಕೆಲವು ಕಡೆ ರಿಮಿಷನ್ ಕೊಡಬೇಕೆಂದು ಶಿಫಾರಸುಮಾಡಿದ್ದರು. ಈ ವಿಷಯವು ಚರ್ಚೆಯಾದಾಗ ಕೌನ್ಸಿಲರ್ ಮೆ॥ ಹಸನಲ್ಲಿಬೇಗ್‌ಯವರು—ಆ ಪಟ್ಟಿಯಂತೆ ರಿಮಿಷನ್ ಮಾಡುವುದು ಸರಿಯಲ್ಲ. ರೂಲಿನ ಪ್ರಕಾರ ವೈಸ್ ಪ್ರೆಸಿಡೆಂಟರೂ ಮೊಹಲ್ಲಾ ಕೌನ್ಸಿಲರುಗಳೂ ಸುತ್ತಿ ಆ ಪಟ್ಟಿಗಳಲ್ಲಿ ದಾಖಲಾಗಿರುವ ಕುಳಗಳನ್ನೆಲ್ಲಾ ಮೊಖ್ತಾ ತನಿಖೆಮಾಡಿ, ಸಾಧ್ಯವಾದಷ್ಟು ಹಣ ವಸೂಲ್ಮಾಡಬೇಕು. ಅಸಾಧ್ಯವಾದವುಗಳನ್ನು ಆ ತರುವಾಯ ರಿಮಿಷನ್ ಮಾಡಬಹುದು ಎಂದು ಹೇಳಿದರು. ಇದಲ್ಲದೆ ಮೆ॥ ರಂಗೈಯಂಗಾರ್ರು—ಎಲ್ಲಾ ಮೊಹಲ್ಲಾಗಳ ರಿಮಿಷನ್ ಪಟ್ಟಿಗಳನ್ನೂ ಒಂದೇ ಸಲ ತಯಾರ್ಮಾಡಿಸಿ ತಂದರೆ ಅನುಕೂಲವೆಂದು ಹೇಳಿದ್ದರ ಮೇಲೆ ಎಲ್ಲರೂ ಅದರಂತೆಯೇ ಅಭಿಪ್ರಾಯಪಟ್ಟರು.

ಮೆ॥ ಸುಬ್ರಹ್ಮಣ್ಯರಾಯರಿಗೆ ಕಾಲೇಜ್ ರೋಡಿನಲ್ಲಿದ್ದ ಅವರ ಭೂಮಿಯನ್ನು ಮುಚ್ಚಿಸಿದ್ದಕ್ಕೆ ಪ್ರತಿಫಲಕೊಡುವ ವಿಚಾರದಲ್ಲಿ ಮೊದಲು ಮ್ಯುನಿಸಿಪಲ್ ವೈಸ್ ಪ್ರೆಸಿಡೆಂಟರಾಗಿದ್ದ ಮೆ॥ ಎಚ್. ನಂಜುಂಡರಾಜೇ ಅರಸಿನವರು ಅವರಿಗೆ ಆ ಪ್ರತಿಫಲವನ್ನು ಕೊಡಬೇಕಾದದ್ದಿಲ್ಲವೆಂದು ಮೊದಲಾಗಿ ಕಾಗದ ಬರೆದಿದ್ದರು. ಈ ವಿಷಯದಲ್ಲಿ ನಡೆದಿರುವ ಎಲ್ಲಾ ಕಾಗದ ಪತ್ರಗಳನ್ನೂ ಮುಂದಿನ ಮೀಟಿಂಗಿನಲ್ಲಿ ಹಾಜರ್ಮಾಡಬೇಕೆಂದೂ ಆಗ್ಗೆ ಅವರು ನೋಡಿ ತೀರ್ಮಾನ ಮಾಡಬೇಕೆಂದೂ ಗೊತ್ತಾಯಿತು.

ಪುರಾಭಿವೃದ್ಧಿ ಮಾಡುವುದಕ್ಕಾಗಿ ಏರ್ಪಟ್ಟ ಟ್ರಸ್ಟ್ ಬೋರ್ಡಿನವರು ಬರೆದಿರುವ ಪ್ರಕಾರ ಆರೋಗ್ಯಕರವಾದ ಏರ್ಪಾಡುಗಳನ್ನು ಮಾಡುವುದಕ್ಕೆ ವೀರಣ್ಣನವರ ಲೈನ್ ಮನೆಗಳನ್ನು ಮ್ಯುನಿಸಿಪಾಲಿಟಿಯವರು ಅವರ ಸ್ವಾಧೀನಕ್ಕೆ ಕೊಡಬಹುದೆಂದು ತೀರ್ಮಾನಮಾಡಿದರು.

ಮಂಡಿ ಮೊಹಲ್ಲಾದಲ್ಲಿ ಕುರಿಗಳನ್ನು ಕಡಿಯುವ ಮ್ಯುನಿಸಿಪಲ್ ಕಸಾಬ್‌ಖಾನೆಯಲ್ಲಿ ನೆಲಕ್ಕೆ ಕಡಪ ಕಲ್ಲುಗಳನ್ನು ಹಾಸುವುದಕ್ಕೆ ೫೪೫ ರೂಪಾಯಿ ಅಂದಾಜು ಪಟ್ಟಿ ತಯಾರಾಗಿತ್ತು. ಈ ಕಾಮಗಾರಿ ಮಾಡಬೇಕಾದ ಅವಶ್ಯಕವಿಲ್ಲವೆಂಬು ಸುಮಾರು ಒಂದು ವರುಷದ ಕೆಳಗೆ ಚರ್ಚೆಯಾಗಿ ತೀರ್ಮಾನವಾಗಿತ್ತು. ಆದ್ದರಿಂದ ಅದನ್ನು ಸರಿಯಾದ ರೀತಿಯಲ್ಲಿ ಮುಂದಿನ ತಿಂಗಳ ಮೀಟಿಂಗಿನಲ್ಲಿ ಚರ್ಚೆಗೆ ತರತಕ್ಕದ್ದೆಂದು ಗೊತ್ತುಮಾಡಿದರು.

ಇಂಡಿಯಾ ದೇಶದ ವೃತ್ತಾಂತಗಳು.

ನಿಕ್ಕಲ್ ಲೋಹದ ಒಂದಾಣೆಯ ಹೊಸ ನಾಣ್ಯಗಳು ಈ ತಿಂಗಳ ಪ್ರಾರಂಭದಿಂದ ಕಲ್ಕತ್ತೆಯಲ್ಲಿ ಚಲಾವಣೆಗೆ ಬಂದಂತೆ ಪ್ರಕಟವಾಗಿದೆ.

ಪುದುಚೇರಿಯಲ್ಲಿ ಕಳೆದ ವಾರ ಒಂದು ಸಾಲಿನ ಅಂಗಡಿಗಳು ಬೆಂಕಿ ಬಿದ್ದು ಉರಿದು ಹೋದವು. ವರ್ತಕರಿಗೆ ೧೦,೦೦೦ ರೂಪಾಯಿ ತನಕ ನಷ್ಟವಾಯಿತು.

***

ಬೊಂಬಾಯಿ ಅಧಿಪತ್ಯಕ್ಕೆ ಸೇರಿದ ಪಂಡರಾಪುರದಲ್ಲಿ ಅನೇಕಾನೇಕ ಹಿಂದು ಯಾತ್ರಾರ್ಥಿಗಳು ಹೋಗಿ ಸೇರಿದ್ದಾರೆ. ಈಗ ಅಲ್ಲಿ ವಾಂತಿಭೇದಿ ಉಪದ್ರವು ಪ್ರಾರಂಭವಾಗಿದೆ ಎಂದು ತಿಳಿದು ಬರುವುದು.

***

ಜಯಪುರದ ಮಹಾರಾಜರವರು ಕಳೆದ ಶನಿವಾರ ಸಿಂಲಾ ಪಟ್ಟಣಕ್ಕೆ ದಯಮಾಡಿದರು. ಅವರು ಅಲ್ಲಿ ಹತ್ತು ದಿನಗಳ ತನಕ ಇದ್ದು ವೈಸ್‌ರಾಯಿಯವರ ಭೇಟಿ ಮಾಡಿಕೊಂಡು ವಾಪಸು ಬರುವವರಾಗಿದ್ದಾರೆ.

***

ಬರ್ಮಾ ರಾಜ್ಯದ ಮಾಜಿ ದೊರೆಯಾದ ಥೀಬಾರವರ ದಾಯಾದ್ಯರ ಹೆಂಡತಿ ಮಕ್ಕಳನ್ನು ಕಲ್ಕತ್ತೆಯಿಂದ ಬರ್ಮಾಕ್ಕೆ ಕಳುಹಿಸಬಹುದೆಂದು ಇಂಡಿಯಾ ಗವರ್ನ್‌ಮೆಂಟಿನವರು ಸ್ಯಾಂಕ್ಷನ್ ಮಾಡಿರುವಂತೆ ಪ್ರಕಟವಾಗಿದೆ.

***

ಕಳೆದ ವಾರ ರಂಗೂನ್ ಪಟ್ಟಣದ ೨೯ ದೊಡ್ಡ ಬೀದಿಗಳಲ್ಲಿ ಪರೀಕ್ಷಾರ್ಥವಾಗಿ ವಿದ್ಯುಚ್ಛಕ್ತಿಯ ದೀಪಗಳನ್ನು ರಾತ್ರಿ ೬ ಗಂಟೆಯಿಂದ ೧೦ ಗಂಟೆಯ ತನಕ ಉರಿಸಿದರು. ಬೆಳಕು ತೃಪ್ತಿಕರವಾಗಿತ್ತೆಂದು ತಿಳಿಯುವುದು.

***

ಕಲ್ಕತ್ತಾ ಪಟ್ಟಣದ ಸ್ಮಾಲ್ ಕಾಸ್ ಕೋರ್ಟಿನ ಚೀಫ್ ಜಡ್ಜರಾದ ಮೆ॥ ಅಬ್ದುಲ್ ಹರ್ಮರವರ ಮನೆಗೆ ಕಳ್ಳರು ಬಿದ್ದು, ಅವರ ಮೇಜಿನಲ್ಲಿಟ್ಟಿದ್ದ ೩,೦೦೦ ರೂಪಾಯಿನ ಕರೆನ್ಸಿ ನೋಟುಗಳನ್ನು ಅಪಹರಿಸಿರುತ್ತಾರೆ.

***

ಮದರಾಸ್ ಗವರ್ನ್‌ಮೆಂಟಿನವರು ತಿರುಚಿನಾಪಳ್ಳಿ ಟವುನ್ ಪ್ರಜೆಗಳಿಗೆ ಒಳ್ಳೇ ಕುಡಿಯುವ ನೀರನ್ನು ಒದಗಿಸುವ ಕಾಮಗಾರಿಗಾಗಿ ಅಲ್ಲಿನ ಮ್ಯುನಿಸಿಪಾಲಿಟಿಯವರಿಗೆ ೯೦,೦೦೦ ರೂಪಾಯಿ ಸಾಲ ಕೊಡುವುದಾಗಿ ಒಪ್ಪಿಕೊಂಡಿದ್ದಾರೆ.

***

ಡಾಕ್ಟರ್ ಲಾಂಗ್‌ಸ್ಟಾಫ್ ಎಂಬೊಬ್ಬ ಶಾಸ್ತ್ರಜ್ಞನು ಮೂರು ಮಂದಿ ಸಹಾಯಕರನ್ನು ಕಟ್ಟಿಕೊಂಡು, ಹಿಮಾಲಯ ಪರ್ವತವನ್ನು ಹತ್ತಿ ಹೋಗುತ್ತಿದ್ದಾನೆಂತಲೂ ಆತನು ಇದುವರೆಗೆ ೨೩,೪೦೬ ಅಡಿ ಎತ್ತರಕ್ಕೆ ಹತ್ತಿರುತ್ತಾನೆಂತಲೂ ತಿಳಿಯುವುದು.

***

ಭಾವನಗರ ಸಂಸ್ಥಾನದವರು ಸಾಗರದ ಚರ್ಮದಲ್ಲೇ ಒಂದು ಸುಂದರವಾದ ದೊಡ್ಡ ದೀಪವನ್ನು ತಯಾರ್ಮಾಡಿಸುತ್ತಿದ್ದಾರೆ. ಅದು ೬೦ ಅಡಿ ಎತ್ತರವಾಗಿಯೂ ೪೦ ಅಡಿ ಅಗಲವಾಗಿಯೂ ಆಗುವುದು. ಅದಕ್ಕೆ ೫೦ ಸಾವಿರ ರೂಪಾಯಿ ಖರ್ಚಾಗುವುದೆಂದು ಅಂದಾಜು ಹಾಕಿದ್ದಾರೆ.

***

ಈಚೆಗೆ ಉತ್ತರ ದೇಶದ ಅನೇಕ ಜನರು ಕಾಶ್ಮೀರ ಸಂಸ್ಥಾನಕ್ಕೆ ಹೋಗಿ ಪ್ರಜಾನೆಮ್ಮದಿಗೆ ಭಂಗವನ್ನುಂಟುಮಾಡುವಂಥಾ ಉಪನ್ಯಾಸಗಳನ್ನೂ ಕಾರ್ಯಗಳನ್ನೂ ನಡಸುತ್ತಾರೆಂದು ತಿಳಿದುಬಂದ್ದರಿಂದ ಕಾಶ್ಮೀರ ಸಂಸ್ಥಾನದವರು ಅಂಥವರನ್ನೆಲ್ಲಾ ಅಲ್ಲಿಂದ ಹೊರಡಿಸಿರುತ್ತಾರೆಂದು ತಿಳಿದು ಬಂದಿದೆ.

***

ಅಫ್ಘಾನಿಸ್ಥಾನದ ಅಮೀರರವರ ಸಹೋದರರಾದ ಸರ್ದಾರ್ ನಸ್ರುಲ್ಲಾಖಾನರವರು ಮಕ್ಕಾ ಮದೀನಾಗಳಿಗೆ ಯಾತ್ರೆ ಹೋಗಿಬರಬೇಕೆಂದು ತೀರ್ಮಾನ ಮಾಡಿದ್ದಾರೆ. ಅಮೀರರವರು ಸರ್ಕೀಟನ್ನು ತೀರಿಸಿಕೊಂಡು ಬಂದ ನಂತರ ಸರ್ದಾರರ ಪ್ರಯಾಣ ಹೊರಡುವ ದಿನ ಮುಂತಾದ್ದು ಗೊತ್ತಾಗುವುದು.

***

ಸಿಲೋನ್ (ಲಂಕಾ) ದ್ವೀಪಕ್ಕೆ ಸೇರಿದ ನ್ಯೂವಾರ ಇಲಿಯಾ ಎಂಬ ಪಟ್ಟಣದಲ್ಲಿ ಸಾಮಾನ್ಯವಾಗಿ ಪ್ರಜೆಗಳೆಲ್ಲಾ ವಿಷಮಶೀತರೋಗವನ್ನು ಅನುಭವಿಸುತ್ತಾರೆಂದು ಗೊತ್ತಾದದ್ದರಿಂದ ಆ ರೋಗ ಅವರನ್ನು ಬಿಟ್ಟು ಹೋಗುವಂತೆ ಒಂದು ಹೊಸ ಕಾಲನ್ನು ಜನರ ಮೈಗೆ ಚುಚ್ಚಿ ಹಾಕಬೇಕೆಂದು ಸರ್ಕಾರದವರು ಪ್ರಯತ್ನಪಡುತ್ತಿದ್ದಾರೆ.

***

ಕಳೆದ ವಾರ ಗಂಜಾಂ ಡಿಸ್ಟ್ರಿಕ್ಟಿನ ಕಲೆಕ್ಟರವರ ಪತ್ನೀರವರಾದ ಮಿಸೆಸ್ ಪಾರಿಡ್ಜ್ ಯವರು ಬರಹಂಪುರಕ್ಕೆ ಹೋಗಿದ್ದಾಗ ಅಲ್ಲಿನ ಹಿಂದು ಮಹಮದೀಯ ಸ್ತ್ರೀಯರನ್ನೆಲ್ಲಾ ಕರೆಸಿಕೊಂಡು, ತಮ್ಮ ಬಂಗಲೆಯಲ್ಲಿ ಅವರಿಗೆ ನಾನಾ ವಿನೋದಗಳನ್ನು ಕಲ್ಪಿಸಿ, ಫಲಾಹಾರಾದಿಗಳನ್ನು ಕೊಡಿಸಿ, ಎಲ್ಲರ ಪರಿಚಯವನ್ನೂ ಪ್ರೀತಿ ವಿಶ್ವಾಸಗಳನ್ನೂ ಸಂಪಾದಿಸಿಕೊಂಡರು.

***

ಕಾಲಕ್ಕೆ ಸರಿಯಾಗಿ ಮಳೆಗಳಾಗದೆ ಬೆಳೆಗಳು ಕೆಟ್ಟುಹೋದ್ದರಿಂದಲೂ ಪ್ಲೇಗಿನ ಗೆಡಿಯಿಂದ ರೈತರಿಗೆ ನಾನಾ ಕಷ್ಟನಷ್ಟಗಳು ಪ್ರಾಪ್ತವಾಗಿ ವ್ಯವಸಾಯದ ಕೆಲಸಗಳು ನಿಂತುಹೋದದ್ದರಿಂದಲೂ ಪಂಜಾಬ್ ಆಧಿಪತ್ಯದಲ್ಲಿ ಈ ವರುಷ ೧೮ ಲಕ್ಷ ರೂಪಾಯಿ ಜಮೀನ್ ಕಂದಾಯವೂ, ೧೫ ಲಕ್ಷ ರೂಪಾಯಿ ನೀರಾವರಿ ಕಂದಾಯವೂ ಸರ್ಕಾರಕ್ಕೆ ವಸೂಲಾಗುವಂತಿಲ್ಲವೆಂದು ಪ್ರಕಟವಾಗಿದೆ.

***

ಮಥುರೆಯಲ್ಲಿ ಈಗೀಗತಾನೇ ಯಾದವರ (ಕುರುಬರ) ಮಕ್ಕಳು ಸರ್ಕಾರಿ ಪಾಠಶಾಲೆಗಳಿಗೆ ಹೋಗಿ ವಿದ್ಯೆ ಕಲಿಯಲಾರಂಭಿಸಿದ್ದಾರೆ. ಅವರು ವಿದ್ಯೆ ಕಲಿತು ಬುದ್ಧಿಶಾಲಿಗಳಾಗುವಂತೆ ಪ್ರೋತ್ಸಾಹಪಡಿಸಬೇಕೆಂದು ಅಲ್ಲಿನ ಮ್ಯುನಿಸಿಪಾಲಿಟಿಯವರು ಅಂಥಾ ಹುಡುಗರಿಂದ ಫೀಜೇನೂ ವಸೂಲ್ಮಾಡಕೂಡದೆಂದೂ ಮಾಫಿ ಬಿಡಬೇಕೆಂದೂ ಮದರಾಸ್ ಗವರ್ನ್‌ಮೆಂಟಿಗೆ ಬರೆದಿರುತ್ತಾರೆ.

***

ಮದರಾಸ್ ಗವರ್ನ್‌ಮೆಂಟಿನವರು ಸರ್ಕಾರಿ ನೌಕರರಿಗೆಲ್ಲಾ ಒಂದು ಹುಕುಮನ್ನು ಕೊಟ್ಟಿದ್ದಾರೆ. ಅನೇಕ ಸರ್ಕಾರಿ ನೌಕರರೂ ಅಧಿಕಾರಿಗಳೂ ರಾಜಕೀಯ ವಿಷಯಗಳನ್ನು ಕುರಿತು ಚರ್ಚೆ ನಡೆಯುವಂಥಾ ಸಭೆಗಳಿಗೆ ಹೋಗುತ್ತಾರೆ. ಮತ್ತು ಅವರು ಅಂಥಾ ಸಭೆಗಳಲ್ಲಿ ಅಗ್ರಾಸನವನ್ನೂ ವಹಿಸುವುದುಂಟು. ಇದು ಯೋಗ್ಯವಾದುದಲ್ಲ. ಇದನ್ನು ಅವರು ಬಿಟ್ಟು ಬಿಡಬೇಕು ಎಂಬುದೇ.

***

ಕಲ್ಕತ್ತೆಯಲ್ಲಿ ಒಬ್ಬ ಬಂಗಾಳಿಯು ತನ್ನ ಮಗನನ್ನು ಕರೆದು ವಿದ್ಯಾಭ್ಯಾಸದಲ್ಲಿ ಅಸಡ್ಡೆ ಮಾಡುವುದೇತಕ್ಕೆಂದು ಅವನನ್ನು ದಂಡಿಸಿದ್ದಕ್ಕೆ ಆ ಹುಡುಗನು ಅಫೀಮು ತಿಂದು ಆತ್ಮಹತ್ಯ ಮಾಡಿಕೊಂಡನು. ಅವನಿಗೆ ಇಬ್ಬರು ಹೆಂಡರಿರುತ್ತಾರೆ. ಅವನ ಹೆಂಡಿರೊಳಗಾದರೋ ೧೦ ವರುಷದ ಕನ್ಯಾ ಪತ್ನಿ ಇರುವಳು. ಇದರಿಂದ ಆ ಬಾಲ್ಯ ವಿವಾಹವೆಂಬುದು ಮಕ್ಕಳಾಟಿಕೆಯಾಗಿ ಪರಿಣಮಿಸಿದೆ ಎಂದು ಅಲ್ಲಿನ ಪತ್ರಿಕೆಯೊಂದು ಹೇಳುತ್ತಿದೆ.

***

ಹಿಂದಿನ ವಾರ ಬೊಂಬಾಯಿ ಪಟ್ಟಣದಲ್ಲಿ ಅಪಾರವಾದ ಮಳೆ ಸುರಿಯಿತು. ಅಲ್ಲೂ ಪೂನಾ ಪಟ್ಟಣದಲ್ಲೂ ಹಿಂದೆ ಯಾವಾಗಲೂ ಇಷ್ಟು ಮಳೆ ಆಗಿಲ್ಲವೆಂದು ಹೇಳುತ್ತಾರೆ. ಅನೇಕಾನೇಕರ ಮನೆ ಜೋಪಡಿಗಳೂ ರಸ್ತೆಗಳೂ ಮುಳುಗಿ ಹೋದವು. ರೈಲ್ ಗಾಡಿಗಳನ್ನು ಕೂಡ ಬಹಳ ಎಚ್ಚರಿಕೆಯಿಂದ ನಡಿಸಿದರೆಂದು ತಿಳಿಯುವುದು. ಆ ಒಂದು ವಾರದಲ್ಲಿ ೩೩॥ ಅಂಗುಲ ಪ್ರಮಾಣದಷ್ಟು ಮಳೆಯು ಬೊಂಬಾಯಿನಲ್ಲಿ ಆಗಿರುತ್ತದೆ.

***

ದೆಹಲಿ ಪಟ್ಟಣದ ಮ್ಯುನಿಸಿಪಲ್ ಆಫೀಸಿನ ನೌಕರನಾದ ಮೆ॥ ಸ್ಮೈಡ್ ಎಂಬಾತನು ತನ್ನ ಕೈಕೆಳಗಿನ ಒಬ್ಬ ಬೀದಿ ಗುಡಿಸುವ ಜಾಡಮಾಲಿಯನ್ನು ಒದ್ದು ಕೊಂದುಬಿಟ್ಟನು. ಮ್ಯಾಜಿಸ್ಟ್ರೇಟರು ಅವನಿಗೆ ೫೦ ರೂಪಾಯಿ ಜುಲ್ಮಾನೆ ವಿಧಿಸಿ, ಆ ಪೈಕಿ ೪೦ ರೂಪಾಯನ್ನು ಮೃತಪಟ್ಟವನ ಬಂಧುಗಳಿಗೆ ಪ್ರತಿಫಲ ಕೊಡಿಸಿದರು. ಆದರೆ ಅವರು ಅದನ್ನು ತೆಗೆದುಕೊಳ್ಳದೆ ವಾಪಸು ಮಾಡಿದರು. ಅತ್ತಲಾಗಿ ಮ್ಯುನಿಸಿಪಾಲಿಟಿಯವರು ಮೆ॥ ಸ್ಮೈತ್ ಎಂಬಾತನನ್ನು ಕೆಲಸದಿಂದ ತೆಗೆದುಬಿಟ್ಟರು.

***

ಮೆ॥ ಎಸ್. ಗೋಪಾಲಾಚಾರ್ಯರು ಸುಮಾರು ಒಂದು ವರುಷದ ಕೆಳಗೆ ಅನಂತಶಯನದ ದಿವಾನಗಿರಿಯನ್ನು ವಹಿಸಿ ಕೆಲಸ ಮಾಡುತ್ತಿದ್ದಾರಷ್ಟೆ. ಈಗ ಅವರು ಆ ಕೆಲಸಕ್ಕೆ ರಾಜೀನಾಮೆ ಕೊಟ್ಟುಬಿಡುವವರಾಗಿದ್ದಾರೆಂತಲೂ, ಮೊದಲು ಕೊಚ್ಚಿ ಸಂಸ್ಥಾನದ ದಿವಾನರಾಗಿದ್ದು ಈಗ ಮದರಾಸ್ ಗವರ್ನ್‌ಮೆಂಟ್ ಪರಸ್ಪರ ಸಹಾಯಕ ಕಂಪನಿಗಳ ರಜಿಸ್ಟ್ರಾರ್ ಕೆಲಸವನ್ನು ನೋಡುತ್ತಿರುವ ಮೆ॥ ಪಿ. ರಾಜಗೋಪಾಲಾಚಾರ್ಯರು ದಿವಾನರಾಗಿ ನೇಮಕವಾಗಬಹುದೆಂತಲೂ ತಿಳಿದು ಬಂದಿದೆ.

***

ಮೊನ್ನೆ ಶುಕ್ರವಾರ ಪುದುಕೋಟೆ ಸಂಸ್ಥಾನದ ದಿವಾನರವರ ಬಂಗಲೆ ಎಂಬ ಕಟ್ಟಡದಲ್ಲಿ ವೃತನರ್ತಕರುಗಳ ಆರನೆಯ ಪ್ರತಿನಿಧಿ ಸಭೆಯು ಪ್ರಾರಂಭವಾಯಿತು. ಸರ್ಕಾರದವರು ಪ್ರತಿನಿಧಿಗಳಿಗೆ ಪ್ರಯಾಣಕ್ಕೂ ಭೋಜನಾದಿಗಳಿಗೂ ತಗಲುವ ಖರ್ಚನ್ನು ಸರ್ಕಾರದಿಂದಲೇ ಕೊಡುತ್ತಾರೆ. ಪ್ರತಿ ಒಬ್ಬ ಮೆಂಬರೂ ಈ ಸಭೆಯಲ್ಲಿ ದಿವಾನರವರನ್ನು ಎರಡು ವಿಷಯಗಳಿಗಿಂತ ಹೆಚ್ಚಾಗಿ ಕೇಳಕೂಡದೆಂತಲೂ, ಆ ಎರಡನ್ನೂ ಸಭೆ ಸೇರುವುದಕ್ಕೆ ಮೊದಲೇ ದಿವಾನರವರಿಗೆ ತಿಳಿಸಿ, ಸಭೆಯಲ್ಲಿ ಚರ್ಚಿಸಬಹುದೆಂದು ಅವರಿಂದ ಅಪ್ಪಣೆ ಪಡೆಯಬೇಕೆಂತಲೂ ವಿಧಿಸಿರುತ್ತಾರೆ.

***

ಕಲ್ಕತ್ತಾ ಪಟ್ಟಣದ ಪೊಲೀಸ್ ಕೋರ್ಟ್ ಮ್ಯಾಜಿಸ್ಟ್ರೇಟರಾದ ಮೆ॥ ಕಿಂಗ್ಸ್‌ಫರ್ಡ್ ಯವರು "ಯುಗಾಂತರ" ವೆಂಬ ಪತ್ರಿಕೆಯ ಎಡಿಟರ್ ಭೂಪೇಂದ್ರನಾಥದತ್ತನೆಂಬ ೨೬ ವರುಷದ ಯೌವನಸ್ಥನನ್ನು ಹಿಡಿದು ರಾಜದ್ರೋಹಕರವಾದ ಚಾತ್ಮಿಯನ್ನು ಆ ಪತ್ರಿಕೆಯಲ್ಲಿ ಪ್ರಕಟಿಸಿದನೆಂಬದಾಗಿ ಆತನನ್ನು ದರ್ಯಾಫ್ತು ಮಾಡಿ ಆತನಿಗೆ ಒಂದು ವರುಷದ ಕಠಿಣ ಸಜಾ ವಿಧಿಸಿದರು. ಮತ್ತು ಆ ಪತ್ರಿಕೆ ಅಚ್ಚಾಗುತ್ತಿದ್ದ "ಸಾಧನ ಪ್ರಿಂಟಿಂಗ್ ಪ್ರೆಸ್" ಎಂಬ ಕಾರ್ಖಾನೆಯನ್ನು ಮುಚ್ಚಿಬಿಡಬೇಕೆಂತಲೂ ಅದರಲ್ಲಿರುವ ಯಂತ್ರ ಮೊಳೆ ಮೊದಲಾದವುಗಳನ್ನೆಲ್ಲಾ ಸರ್ಕಾರದವರು ಸ್ವಾಧೀನ ಪಡಿಸಿಕೊಳ್ಳಬೇಕೆಂತಲೂ ಜಡ್ಜ್‌ಮೆಂಟು ಬರೆದಿದ್ದಾರೆ.

***

ಬೊಂಬಾಯಿ ಗವರ್ನರಾಗಿದ್ದ ಲಾರ್ಡ್ ಲಾಮಿಂಗ್ಟನ್‌ರವರು ತಮ್ಮ ಪತ್ನೀರವರ ಕಾಯಿಲೆ ನಿಮಿತ್ತ ಗವರ್ನರ್ ಕೆಲಸಕ್ಕೆ ರಾಜೀನಾಮೆ ಕೊಟ್ಟು, ಕಳೆದ ಶನಿವಾರ ಬೊಂಬಾಯಿ ಪಟ್ಟಣದಲ್ಲಿ ಜಹಜು ಹತ್ತಿ ಸೀಮೆಗೆ ತೆರಳಿದರು. ಅದಕ್ಕಿಂತ ಮೊದಲು ಆ ಪಟ್ಟಣದ ಸರ್ ಕವಾಸ್ಜಿ ಎಂಬ ಪಾರ್ಸಿ ದೊಡ್ಡ ಮನುಷ್ಯರು ಗವರ್ನರವರನ್ನು ತಮ್ಮ ಬಂಗಲೆಗೆ ಕರೆಸಿಕೊಂಡು, ಅನೇಕ ರಾಜರು, ಮಹಾರಾಜರು, ಜಮೀನ್ದಾರರು, ಸಾಹುಕಾರರು, ಹುದ್ದೇದಾರರುಗಳನ್ನೆಲ್ಲಾ ಸೇರಿಸಿ, ಔತಣ ಮಾಡಿ ತಮ್ಮ ಕೃತಜ್ಞತೆಯನ್ನು ಪ್ರಕಾಶಪಡಿಸಿದರು. ಲಾರ್ಡ್ ಲಾಮಿಂಗ್ಟನ್‌ರವರು ಸಭಿಕರಿಂದ ಬೀಳ್ಕೊಂಡು ಹೋಗುವಾಗ್ಗೆ ಸರ್ ಕವಾಸ್ಜಿ ಯವರು ತಮ್ಮ ಆಸ್ತಿಯಿಂದ ಒಂದು ಲಕ್ಷ ರೂಪಾಯನ್ನು ಎತ್ತಿ ಗವರ್ನರವರ ಕೈಗೆ ಒಪ್ಪಿಸಿ, "ಈ ಹಣವನ್ನು ನಿಮಗೆ ತೋರಿ

ಪಂಥಾ ಧರ್ಮ ಕಾರ್ಯಗಳಿಗೆ ವಿನಿಯೋಗಿಸಬಹುದೆಂದು ಬೇಡುತ್ತೇವೆ" ಎಂದು ಅರಿಕೆ ಮಾಡಿದರು.

***

ಬಂಗಾಳಾ ಗವರ್ನಮೆಂಟಿನವರು ಜೈಲುಗಳಲ್ಲಿರುವ ಖೈದಿಗಳ ಪೈಕಿ ಒಳ್ಳೇ ನಡತೆ ವಿಧೇಯತೆ ಸತ್ಯಶೀಲತೆಯುಳ್ಳಂಥಾ ಖೈದಿಗಳಿಗೆ ಪಾರಿತೋಷಕವಾಗಿ ಕೆಲವು ಬಹುಮಾನಗಳನ್ನು ಕೊಡುವಂತೆ ಏರ್ಪಾಡು ಮಾಡಬೇಕೆಂದು ಹುಕುಂ ಕೊಟ್ಟಿದ್ದಾರೆ. ಆ ಬಹುಮಾನಗಳೇನೆಂದರೆ—ಕೆಲವರಿಗೆ ಜೈಲಿನಲ್ಲೇ ಮೇಜು ಕುರ್ಚಿ ದೀಪ ಪುಸ್ತಕ ಶಾಯಿ ಕಡ್ಡಿ ಕಾಗದಗಳನ್ನೂ, ಊಟಕ್ಕೆ ಎನಾಮಲ್ ತಟ್ಟೆ ಬಟ್ಟಲುಗಳನ್ನೂ, ಕೆಲವರಿಗೆ ಸೊಳ್ಳೆ ಪರದೆಯನ್ನೂ, ಚುಟ್ಟಾ ಸಿಗರೆಟ್ಟುಗಳನ್ನೂ ಕೊಡುವರು. ಆದ್ದರಿಂದ ಜೈಲಿನಲ್ಲಿ ಖೈದಿಗಳಾಗಿದ್ದಾಗ್ಯೂ ಅಲ್ಲಿ ಒಳ್ಳೆಯವರೆನಿಸಿಕೊಂಡ ಪಕ್ಷದಲ್ಲಿ ಗೌರವವೂ ಸನ್ಮಾನವೂ ದೊರಕುವವೆನ್ನುವುದಕ್ಕೆ ಇದು ದೃಷ್ಟಾಂತವಾಗಿರುತ್ತದೆ.

***

ಜಬಲ್ಪೂರ್ ಜಿಲ್ಲೆಗೆ ಸೇರಿದ ಜಾಟು ಎಂಬ ಸಣ್ಣ ಸಂಸ್ಥಾನದ ರಾಜರು ೧೮೯೫ ನೆ ಇಸವಿಯಲ್ಲಿ ಕಾಲವಾದರು. ಆ ಲಾಗಾಯತು ಆ ಸಂಸ್ಥಾನವನ್ನು ಬೊಂಬಾಯಿ ಗವರ್ನಮೆಂಟಿನವರೇ ಆಳುತ್ತಿದ್ದರು. ಜಾಟು ರಾಜರ ಜ್ಯೇಷ್ಠ ಪುತ್ರರಾದ ಕುಮಾರ ಶ್ರೀ ರಾಮರಾವ್ ಅಬಾಸಾಹೇಬ್ ಸಾಸೆಯವರನ್ನು ರಾಜಕುಮಾರರ ಕಾಲೇಜಿಗೆ ಕಳುಹಿಸಿ, ಸಂಸ್ಥಾನವನ್ನಾಳುವುದಕ್ಕೆ ಯೋಗ್ಯತೆಯನ್ನುಂಟುಮಾಡುವ ವಿದ್ಯಾದಿಗಳನ್ನು ಕಲಿಸಿದರು. ಕಳೆದ ವಾರ ಆ ರಾಜಕುಮಾರರಿಗೆ ಅನೇಕ ಉತ್ಸವಗಳೊಡನೆ ಪಟ್ಟಾಭಿಷೇಕವಾಯಿತು. ಈ ಸಂತೋಷದಲ್ಲಿ ಬೆರೆಯುವದಕ್ಕೆ ಅನೇಕ ಬಂಧುವರ್ಗದವರೂ ರಾಜರೂ ಯೂರೋಪ್ಯರ ಸರ್ದಾರರೂ ಹೋಗಿದ್ದರು.

***

ಕಲ್ಕತ್ತಾ ಪಟ್ಟಣದಲ್ಲಿ ಪೋಲೀಸಿನವರು ಅನುಮಾನದ ಮೇಲೆ ಒಬ್ಬ ಬಂಗಾಳಿ ಕಣಗಾರನ ಮನೆಯನ್ನು ಶೋಧನೆ ಮಾಡಿದಾಗ ಅವನ ಮನೆಯಲ್ಲಿ ಅನೇಕ ಕೈದುಗಳೂ ಮದ್ದು ಗುಂಡುಗಳೂ ಸಿಕ್ಕಿದವು. ಅದಕ್ಕಾಗಿ ಆ ಕಣಗಾರನಿಗೆ ೬೦೦ ರೂಪಾಯಿ ಜುಲ್ಮಾನೆಯಾಗಿದೆ. ಅದರ ಮೇಲೆ ಸರ್ಕಾರದವರು ಆ ಪಟ್ಟಣದಲ್ಲಿ ಆಯುಧ ಮದ್ದು ಗುಂಡನ್ನು ವಿಕರಿಮಾಡುವಂಥಾ ವರ್ತಕರ ಅಂಗಡಿಗಳಿಗೆ ಹೋಗಿ ಅವರ ಲೆಕ್ಕ ಪತ್ರಗಳನ್ನು ತನಿಖೆಮಾಡುವಾಗ್ಗೆ ಈಚೆಗೆ ಅವರು ಅನೇಕವಾಗಿ ಆಯುಧಗಳನ್ನೂ ಮದ್ದು ಗುಂಡನ್ನೂ ವಿಕರಿ ಮಾಡಿರುವುದು ಗೊತ್ತಾಯಿತು. ಈ ಯುದ್ಧ ಸಾಮಗ್ರಿಗಳೆಲ್ಲಾ ಎಲ್ಲೆಲ್ಲಿ ಯಾರ ಯಾರ ವಶದಲ್ಲಿ ಸೇರಿರುತ್ತವೆ ಎಂದು ತನಿಖೆಮಾಡಿಸುತ್ತಿದ್ದಾರೆ.

***

ಕಲ್ಕತ್ತದಲ್ಲಿ ಒಂದು ಕಂಪೆನಿಯವರು ಈಜಿಪ್ತು ದೇಶದ ಹತ್ತೀ ಬೀಜವನ್ನು ತರಿಸಿಟ್ಟುಕೊಂಡು ಅದನ್ನು ಸಾಗುವಳಿ ಮಾಡುವದಕ್ಕೆ ಅಪೇಕ್ಷೆಯುಳ್ಳವರಿಗೆ ಧರ್ಮಾರ್ಥವಾಗಿ ಕೊಡುತ್ತಾರೆ. ಅದನ್ನು ಅಪೇಕ್ಷಿಸುವವರಿಗೆ ೫—೧೦ ಸೇರು ಬೀಜಗಳನ್ನು ಒಂದು ಚೀಲದಲ್ಲಿ ಹಾಕಿ ಟಪ್ಪಾಲು ಮೇಲೆ ಕಳುಹಿಸಿಕೊಡುವರು. ಬೇಕಾದವರು ಟಪ್ಪಾಲು ಖರ್ಚು ಮಾತ್ರ ಕೊಡಬೇಕು. ೫ ಸೇರಿನ ಬೀಜಕ್ಕೆ ನಾಲ್ಕಾಣೆ, ೧೦ ಸೇರಿನದಕ್ಕೆ ಎಂಟಾಣೆ ಬೀಳುವದು. ದಕ್ಷಿಣ ಮಹಾರಾಷ್ಟ್ರ ಜಿಲ್ಲೆಯಲ್ಲಿ ಹತ್ತೀ ಸಾಗುವಳಿ ಮಾಡುವ ನಮ್ಮ ವಾಚಕರು ಈಜಿಪ್ತು ದೇಶದ ಈ ಹತ್ತೀ ಬೀಜವನ್ನು ತರಿಸಿಕೊಂಡು ಬೆಳೆಸಿ ನೋಡಬಾರದೇ. ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಲಿ—ಕಲ್ಕತ್ತಾ ಪಟ್ಟಣದ ರತ್ನ ಸರ್ಕಾರ್ ಯವರ ಗಾರ್ಡನ್ ಬೀದಿಯಲ್ಲಿ ೩೩ ನೆ ನಂಬರು ಷಾಪಿನಲ್ಲಿರುವ ಜಿ ಎಲ್. ಮುಲ್ಲಿಕ್ ಮತ್ತು ಕಂಪನಿ ಮ್ಯಾನೇಜರಿಗೆ ಎಂದು ಇಂಗ್ಲೀಷಿನಲ್ಲಿ ಬರೆದರೆ ಉತ್ತಮ.

***

ಬರ್ಮಾ ಆಧಿಪತ್ಯಕ್ಕೆ ಸೇರಿದ ರಂಗೂನ್ ಪಟ್ಟಣದಲ್ಲಿ ಗಾಡ್ವಿನ್ ರಸ್ತೆಯೊಳಗೆ ಒಂದು ಬೌದ್ಧ ದೇವಾಲಯವೂ ಮಠವೂ ಇರುತ್ತವೆ. ಈ ಮಠದಲ್ಲಿ ಕಳೆದ ಎರಡು ತಿಂಗಳಲ್ಲಿ ೬—೭ ಮಂದಿ ಬೌದ್ಧ ಸನ್ಯಾಸಿಗಳು ಪ್ಲೇಗಿನಲ್ಲಿ ಕಾಲವಾದರು. ಸರ್ಕಾರಿ ಹೆಲ್ತ್ ಆಫೀಸರ ಅಪ್ಪಣೆ ಪ್ರಕಾರ ಆ ಶವಗಳೆಲ್ಲಾ ದಹನಮಾಡಲ್ಪಟ್ಟವು. ಕಳೆದ ವಾರ ಪಾ ಸೋಂದಾ ಎಂಬ ದೊಡ್ಡ ಗುರುವು ಆ ಮಠದಲ್ಲೇ ಅದೇ ಉಪದ್ರ ತಗಲಿ ಕಾಲವಾದನು. ಸರ್ಕಾರದವರು ಆ ಶವವನ್ನೂ ದಹನಮಾಡಬೇಕೆಂದು ಹುಕುಂ ಕೊಟ್ಟಿರುವುದನ್ನು ಕೇಳಿ ಸಾವಿರಾರು ಬರ್ಮಾ ಜನರು ಆ ಶವವನ್ನು ದಹನಮಾಡದೆ ಕೆಲವು ತಿಂಗಳತನಕಲಾದರೂ ಹಾಗೇ ಇಡುವಂತೆ ಅಪ್ಪಣೆ ಕೊಡಬೇಕೆಂದು ಬೇಡಿಕೊಂಡಿದ್ದಾರೆ. ಇನ್ನು ಕೆಲವರು ಅವರಿಗೆ ವಿರೋಧವಾಗಿ ನಿಂತು, ಒಂದು ಶವವನ್ನು ಸುಡಿಸುವುದೂ, ಒಂದನ್ನು ಹಾಗೇ ಬಿಡುವುದೂ ತರವಲ್ಲವೆಂದು ಸರ್ಕಾರದವರಿಗೆ ಹೇಳಿಕೊಂಡಿದ್ದಾರೆ. ತೀರ್ಮಾನವೇನಾಗುವುದೋ ನೋಡಬೇಕು.

***

ಮಧ್ಯಪ್ರಾಂತ್ಯಗಳಿಗೆ ಸೇರಿದ ನೇಥೂಲ್ ಎಂಬ ಡಿಸ್ಟ್ರಿಕ್ಟಿನಲ್ಲಿ ಒಂದು ವಿಚಿತ್ರವಾದ ಮೋಕದ್ದಮೆ ನಡೆದಿದೆ. ರಾಮಗೈಕಿ ಎಂಬುವನು ತನ್ನ ಕಾಯಿಲೆಯಾದ ಹೆಂಡತಿಯನ್ನು ಬಹುಕಾಲ ಆರೈಕೆ ಮಾಡಿ ಅವಳಿಗೆ ಔಷಧಾದಿಗಳನ್ನು ಕೊಡಿಸಿದರೂ ವಾಸಿಯಾಗಲಿಲ್ಲವೆಂದು ತುಂಬಾ ಜಿಗುಪ್ಸೆಪಡುತ್ತಿದ್ದು ಕಡೆಗೆ ಒಂದು ದಿನ ಅವಳನ್ನು ಒಂದು ಗಾಡಿಯಲ್ಲಿ ಮಲಗಿಸಿ ಊರು ಹೊರಕ್ಕೆ ಕರೆದುಕೊಂಡು ಹೋಗಿ, ಅವಳಿಗೆ ಪ್ರಜ್ಞೆತಪ್ಪಿದ್ದಾಗ ಒಂದು ಹಳ್ಳದಲ್ಲಿ ಹಾಕಿ ಮೇಲೆ ಕಡ್ಡಿ ಎಲೆ ಕಲ್ಲು ಮಣ್ಣನ್ನು ಎಳೆದು ಹೊರಟು ಬಂದನು. ಐದು ದಿನಗಳಾದ ಮೇಲೆ ಒಬ್ಬ ಕುರುಬನು ಆ ಪ್ರಾಂತ್ಯ ತನ್ನ ದನಗಳನ್ನು ಬಿಟ್ಟು ಮೇಯಿಸುತ್ತಿದ್ದಾಗ ಒಂದು ದನವು ಆ ಹಳ್ಳದ ಹತ್ತಿರ ಹೋಗಿ ಗಾಬರಿಬಿದ್ದು ಹಿಂದಕ್ಕೆ ಬಂದಿತು. ಆ ಕುರುಬನು ಅದೇನೆಂದು ಅಲ್ಲಿ ಹೋಗಿ ನೋಡಿದನು. ಅವಳು ಧ್ವನಿಕೊಟ್ಟಳು. ಅವನು ಗಾಬರಿಬಿದ್ದು ಓಡಿ ಹೋಗಿ ಊರಿನಲ್ಲಿ ಜನರ ಸಂಗಡ ಹೇಳಿದನು. ಗ್ರಾಮಾಧಿಕಾರಿಯೂ ಇನ್ನು ಕೆಲವರೂ ಸೇರಿಕೊಂಡು ಮರುದಿನ ಬೆಳಗ್ಗೆ ಆ ಹಳ್ಳದ ಬಳಿಗೆ ಹೋದರು. ಮಲಗಿದ್ದ ಹೆಂಗಸು ಅವರನ್ನು ಕುರಿತು—ನಾನು ಸತ್ತಿಲ್ಲ, ಬದುಕಿರುತ್ತೇನೆಂದು ಕೂಗಿ ಹೇಳಿದಳು. ಅವರು ಹತ್ತಿರ ಹೋಗಿ ನೀನಾರು ಏನೆಂದು ವಿಚಾರಿಸಿದಾಗ ಅವಳು ತನ್ನ ಗಂಡನು ತಾನು ಕಾಯಿಲೆಯಲ್ಲಿ ಬಿದ್ದುಕೊಂಡದ್ದರಿಂದ ಜಿಗುಪ್ಸೆಪಟ್ಟು ಗಾಡಿಯಲ್ಲಿ ತಂದು ಇಲ್ಲಿ ಮಲಗಿಸಿ ಹೋದನೆಂದು ತಿಳಿಸಿದರು. ಗ್ರಾಮಸ್ಥರು ಆಗ ಅವಳನ್ನು ಮೇಲಕ್ಕೆ ಎತ್ತಿಸದೆ ಅಲ್ಲೇ ಬಿಟ್ಟು ಗ್ರಾಮಕ್ಕೆ ಹೋಗಿ ಅವಳ ನೆಂಟರಿಗೆ ತಿಳಿಸಿದರು. ಅವರು ಹೋಗಿ ಅವಳನ್ನು ಎತ್ತಿ ಕರೆದುತಂದು ಆಸ್ಪತ್ರೆಯಲ್ಲಿ ಹಾಕಿದರು. ಅನಂತರ ಅವಳು ಹದಿಮೂರು ದಿನಗಳ ತನಕ ಬದುಕಿದ್ದಳು. ಪೋಲೀಸಿನವರು ಅವಳ ಗಂಡನನ್ನು ಹುಡುಕಿ ಪತ್ತೆ ಮಾಡಿದರು. ಆದರೆ ಆ ಕಾಯಿಲೆ ಹೆಂಗಸು ಆರು ದಿನವೂ ಅನ್ನಪಾನವೇನೂ ಇಲ್ಲದೆ ಹ್ಯಾಗೆ ಬದುಕಿದ್ದಳೆಂದು ಎಲ್ಲರೂ ಆಶ್ಚರ್ಯಪಡುತ್ತಾರೆ.

ಮೈಸೂರು ನ್ಯಾಯ ವಿಧಾಯಕ ಕೌನ್ಸಿಲ್ಲು.

ಸಭಾ ಪ್ರಾರಂಭದ ವೃತ್ತಾಂತವು.

ಕಳೆದ ೨೪ ನೆ ತಾರೀಖು ಬುಧವಾರ ಮಧ್ಯಾಹ್ನ ೩ ಘಂಟೆಗೆ ವೆಂಗಳೂರು ಪಬ್ಲಿಕ್ ಆಫೀಸ್ ಕಟ್ಟಡದ ಕೌನ್ಸಿಲ್ ಕೊಠಡಿಯಲ್ಲಿ ಮೇಲ್ಕಂಡ ಸಭೆಯು ಸೇರಿತು. ಸಭೆಯಲ್ಲಿ ಕೂಡಿದ್ದ ಮೆಂಬರುಗಳು ಯಾರೆಂದರೆ—ಮೆ॥ ಗಳಾದ ದಿವಾನ್ ವಿ ಪಿ. ಮಾಧವರಾಯರು, ಸಿ ಐ. ಇ (ಪ್ರೆಸಿಡೆಂಟ್), ಮೊದಲನೆ ಕೌನ್ಸಲರ್ ಟಿ. ಆನಂದರಾಯರು, ಎರಡನೆ ಕೌನ್ಸಲರ್ ಕೆ. ಪಿ. ಪುಟ್ಟಣ್ಣಚೆಟ್ಟಿಯವರು, ಎ. ರಂಗಸ್ವಾಮೈಯ್ಯಂಗಾರ್ರು, ಹೆಚ್ ಜೆ ಭಾಭಾಯವರು, ರಾವ್ ಬಹದೂರ್ ಎಂ ಮುತ್ತಣ್ಣನವರು, ಎಂ. ಕಾಂತರಾಜೇ ಅರಸಿನವರು, ಎಸ್. ನಾರಾಯಣರಾಯರು, ರಾಜಮಂತ್ರ ಪ್ರವೀಣ ಸಿ ಶ್ರೀನಿವಾಸೈಯ್ಯಂಗಾರ್ರು, ವಿ ಎನ್ ನರಸಿಂಹೈಯ್ಯಂಗಾರ್ರು, ಎಂ ಸಿ ರಂಗೈಯ್ಯಂಗಾರ್ರು, ಬಿ ನಾಗಪ್ಪನವರು, ಸೈಯದ್ ಅನ್ವಾರ್ ಅರ್ಜಯವರು, ಕೆ ಮೈಲಾರಿರಾಯರು (ಸೆಕ್ರೆಟರಿ).

ದಿವಾನರವರ ಭಾಷಣವು.

ದಿವಾನರಾದ ಮೆ॥ ಮಾಧವರಾಯರು ಸಭೆಯನ್ನು ಪ್ರಾರಂಭಿಸಿ, ಮೆಂಬರುಗಳನ್ನು ಕುರಿತು ತಿಳಿಸಿದ ಮುಖ್ಯ ವಿಷಯಗಳೇನೆಂದರೆ — ಕೌನ್ಸಿಲ್ ಸಭೆಯನ್ನು ಪ್ರಾರಂಭಿಸುವುದಕ್ಕೆ ಮೊದಲು ನಾನು ಶ್ರೀಮನ್ ಮಹಾರಾಜರವರ ಪರವಾಗಿ ನಿಮಗೆ ಸುಖಾಗಮನವನ್ನು ಬಯಸುತ್ತೇನೆ. ಮೈಸೂರು ಸಂಸ್ಥಾನವು ಶ್ರೀಮನ್ಮಹಾರಾಜರವರ ಆಳ್ವಿಕೆಗೆ ಬಂದಾರಭ್ಯ ಈ ಸಭೆಯನ್ನು ಸ್ಥಾಪಿಸಿದ್ದು ಎರಡನೆ ಏರ್ಪಾಡಾಗಿರುತ್ತದೆ. ಮೈಸೂರು ಪ್ರಜಾ ಪ್ರತಿನಿಧಿ ಸಭೆಯೇ ಮೊದಲನೆಯ ಏರ್ಪಾಡು. ಅದು ಸುಮಾರು ಇಪ್ಪತ್ತೈದು ವರುಷಗಳಿಂದಲೂ ಈ ಸಂಸ್ಥಾನದ ರಾಜ್ಯಭಾರದ ಅಂಗಗಳಲ್ಲಿ ಒಂದಾಗಿ ಪರಿಣಮಿಸಿ, ತುಂಬಾ ಉಪಯುಕ್ತವಾದ ಸಭೆಯಾಗಿರುತ್ತದೆ. ಈಗ ಈ ಎರಡನೆ ಸಭೆಯನ್ನು ಏರ್ಪಾಡು ಮಾಡಿರುತ್ತೇವೆ. ಈ ಸಂಸ್ಥಾನದ ಪ್ರಜೆಗಳಿಗೆ ಅನ್ವಯಿಸುವಂಥಾ ಕಾನೂನುಗಳನ್ನು ಮಾಡುವುದಕ್ಕೆ ಪ್ರಜೆಗಳ ಅಭಿಪ್ರಾಯವನ್ನು ಸಂಗ್ರಹಿಸಿ ಅದರಂತೆ ವಿಧಿಸಬೇಕೆಂದು ಪ್ರಾರಂಭಿಸಿರುತ್ತೇವೆ. ಈ ನ್ಯಾಯವಿಧಾಯಕ ಕೌನ್ಸಿಲ್ಲಿನ ಮುಖ್ಯ ಉದ್ದೇಶಗಳೇನೆಂದರೆ—(೧) ಈ ಸಭೆಯಲ್ಲಿ ಪ್ರಜೆಗಳು ಕೊರತೆಗಳನ್ನೂ ತಮ್ಮ ಅಭಿಪ್ರಾಯವನ್ನೂ ತಮ್ಮ ಪ್ರತಿನಿಧಿಗಳ ಮೂಲಕ ತಿಳಿಸಬಹುದು. (೨) ಕಾನೂನು ವಿಷಯದಲ್ಲಿ ಸರ್ಕಾರಿ ಮೆಂಬರುಗಳೂ ಪ್ರಜಾಪ್ರತಿನಿಧಿಗಳಾದ ಮೆಂಬರುಗಳೂ ಧಾರಾಳವಾಗಿ ಈ ಸಭೆಯಲ್ಲಿ ಚರ್ಚೆಮಾಡಬಹುದು. (೩) ಕಾನೂನುಗಳನ್ನು ರಚಿಸುವುದರಲ್ಲಿ ಅನುಭವವುಳ್ಳಂಥಾ ಸರ್ಕಾರಿ ಅಧಿಕಾರಿಗಳ, ಲಾಯರುಗಳ ಅಥವಾ ಇತರ ಪ್ರಜೆಗಳ ಸಹಾಯವನ್ನು ಈ ಸಭೆಯು ಪಡೆಯುವುದು. (೪) ಈ ಸಭೆಗೆ ಸೇರಿದ ಕೆಲವು ಮೆಂಬರುಗಳನ್ನು ಒಂದು ಕಮಿಟಿಯಾಗಿ ಮಾಡಿ, ಉದ್ದೇಶಪಟ್ಟ ಕಾನೂನನ್ನು ಅವರು ಚರ್ಚಿಸಿ ನಿರ್ಧರಿಸುವಂತೆ ಮಾಡುವುದು. (೫) ಮುಖ್ಯವಾಗಿ ಕಾನೂನು ಮಾಡುವ ವಿಷಯದಲ್ಲಿ ಅದನ್ನು ಕುರಿತು ಸಕಲ ಪ್ರಜೆಗಳೂ ಚೆನ್ನಾಗಿ ತಿಳಿದು ಚರ್ಚಿಸುವುದಕ್ಕೆ ಸಾಧ್ಯವಾಗುವಂತೆ ಅಂಥಾ ಕಾನೂನನ್ನು ತಕ್ಕ ಕಾಲಕ್ಕೆ ಈ ಸಭೆಯ ಮೂಲಕ ಪ್ರಕಟಪಡಿಸಬಹುದಾಗಿದೆ.

ಕೌನ್ಸಿಲ್ ವಿಷಯದಲ್ಲಿ ಆಕ್ಷೇಪಣೆಗಳು.

ಈ ಕೌನ್ಸಿಲ್ ಸಭೆಯನ್ನು ಸ್ಥಾಪಿಸುವ ವಿಷಯದಲ್ಲಿ ಅದರ ಕಟ್ಟುಪಾಡನ್ನು ಗವರ್ನಮೆಂಟಿನವರು ಅನಾವಶ್ಯವಾದಷ್ಟು ಜಾಗರೂಕತೆಯಿಂದ ಮಾಡಿರುತ್ತಾರೆಂತಲೂ, ಬ್ರಿಟಿಷ್ ಇಂಡಿಯಾ ಕೌನ್ಸಿಲ್ ಸಭಿಕರಿಗೆ ಇರುವಂಥಾ ಸೌಲಭ್ಯಗಳನ್ನು ಅಂದರೆ ಮೆಂಬರುಗಳು ಸರ್ಕಾರದವರನ್ನು ಪ್ರಶ್ನೆ ಕೇಳುವುದು, ಜಮಾಖರ್ಚಿನ ವಿಷಯದಲ್ಲಿ ಚರ್ಚೆ ಮಾಡುವುದು ಈ ಮುಂತಾದ ಸೌಲಭ್ಯಗಳನ್ನು ಮೈಸೂರು ಕೌನ್ಸಿಲ್ ಮೆಂಬರುಗಳಿಗೆ ವಹಿಸಲಿಲ್ಲವೆಂತಲೂ, ಪ್ರಜಾಪಕ್ಷದ ಮೆಂಬರುಗಳನ್ನು ಚುನಾಯಿಸುವಂಥಾ ಹಕ್ಕನ್ನು ಪ್ರಜೆಗಳಿಗೆ ವಹಿಸದೆ ಸರ್ಕಾರದವರೇ ಇಟ್ಟುಕೊಂಡಿದ್ದಾರೆಂತಲೂ ಈಚೆಗೆ ಅನೇಕರು ಆಕ್ಷೇಪಣೆ ಮಾಡಿರುತ್ತಾರೆ. ಆದರೆ ಹೀಗೆ ಆಕ್ಷೇಪಣೆ ಮಾಡತಕ್ಕವರು ಮೈಸೂರು ಸಂಸ್ಥಾನದ ಸ್ಥಿತಿಗತಿಯನ್ನು ಚೆನ್ನಾಗಿ ತಿಳಿದುಕೊಂಡಿಲ್ಲವೆಂದು ಕಾಣುತ್ತದೆ.

ಬೇರೆ ಬೇರೆ ಸಂಗಡಗಳ ಮತ್ತು ಜನಾಂಗಗಳ ಪ್ರತಿನಿಧಿಗಳನ್ನು ಈ ಸಭೆಗೆ ಚುನಾಯಿಸಲಿಲ್ಲವೆಂದು ಆಕ್ಷೇಪಣೆ ಮಾಡಿದ್ದಾರೆ. ಹೀಗೆ ಮೆಂಬರುಗಳನ್ನು ಪ್ರತಿ ಒಂದು ಸಂಗಡದಿಂದಲೂ ಚುನಾಯಿಸುವುದು ತುಂಬಾ ಕಷ್ಟವಾಗಿರುವುದು. ಯಾಕೆಂದರೆ ಪ್ರತಿಸಂಗಡದಲ್ಲೂ ಕಾನೂನುಗಳನ್ನು ಕುರಿತು ವಿವೇಕವಾಗಿ ಚರ್ಚಿಸುವಂಥಾ ಯೋಗ್ಯತಾ ಸಿದ್ಧಿ ಮುಂತಾದ್ದನ್ನು ಪಡೆದಿರುವ ಮೆಂಬರುಗಳು ಸಿಕ್ಕುವುದಿಲ್ಲ. ಆದರೆ ಕಮಿಟಿಗಳನ್ನು ಮಾಡುವಾಗ್ಗೆ ಆಯಾ ಸಂಗಡದಿಂದ ಕೆಲವು ಪ್ರತಿನಿಧಿಗಳೂ ಚುನಾಯಿಸಲ್ಪಡುತ್ತಾರೆ. ವಿದ್ಯಾವಂತರಾದವರು ಸರ್ಕಾರಿ ಉದ್ಯೋಗಗಳಲ್ಲೂ ಲಾಯರುಗಳಲ್ಲೂ ಇರುತ್ತಾರಲ್ಲದೆ ಇತರ ಕಸಬುಗಳಲ್ಲಿ ದೊರಕುವುದಿಲ್ಲ. ಬ್ರಿಟಿಷ್ ಇಂಡಿಯಾ ಕೌನ್ಸಿಲ್ ಮೆಂಬರುಗಳು ಪ್ರಶ್ನೆಗಳನ್ನು ಕೇಳುವುದಕ್ಕೂ ಜಮಾಖರ್ಚಿನ ವಿಷಯದಲ್ಲಿ ಚರ್ಚೆ ಮಾಡುವುದಕ್ಕೂ ಅಧಿಕಾರ ಉಳ್ಳವರಾಗಿದ್ದಾರೆ. ಇಂಡಿಯಾ ಗವರ್ನಮೆಂಟಿನವರು ಮೆಂಬರುಗಳಿಗೆ ಈ ಅಧಿಕಾರವನ್ನು ಈಚೀಚೆಗೆ ಕೊಟ್ಟಿರುವರೇ ಹೊರತು ಮೊದಲು ಕೊಟ್ಟಿರಲಿಲ್ಲ. ಮತ್ತು ನಮ್ಮ ಸಭಿಕರಿಗೆ ಆ ಅಧಿಕಾರವನ್ನು ಕೊಡಬೇಕಾದ ಅಗತ್ಯವೂ ತೋರುವುದಿಲ್ಲ. ಯಾಕೆಂದರೆ ಮೈಸೂರು ಸಂಸ್ಥಾನದಲ್ಲಿ ಪ್ರಜಾಪ್ರತಿನಿಧಿ ಸಭೆ ಇರುತ್ತದೆ. ಅದರಲ್ಲಿ ಮೆಂಬರುಗಳು ಪ್ರಜಾ ಬಾಹುಳ್ಯಕ್ಕೆ ಸಂಬಂಧಪಡುವಂಥಾ ಸಮಸ್ತ ವಿಷಯಗಳನ್ನೂ ಕುರಿತು ಧಾರಾಳವಾಗಿ ಚರ್ಚಿಸುವುದು ಮೈಸೂರಿನವರಿಗೇ ಅಲ್ಲ, ಇತರ ಕಡೆಗಳವರಿಗೂ ಚೆನ್ನಾಗಿ ಗೊತ್ತಿರುತ್ತದೆ. ಈಚೆಗೆ ಆ ಸಭೆಯಲ್ಲಿ ಕೆಲವು ಮೆಂಬರುಗಳು ಎದ್ದು ಗವರ್ನಮೆಂಟಿನವರನ್ನು ಕುರಿತು—ನ್ಯಾಯ ವಿಧಿಯ ಕೌನ್ಸಿಲ್ ಏರ್ಪಾಡಾದರೆ ಪ್ರಜಾ ಪ್ರತಿನಿಧಿ ಸಭೆಯ ಅಧಿಕಾರ ಹಕ್ಕು ಸ್ವಾತಂತ್ರ್ಯಾದಿಗಳಿಗೇನಾದರೂ ಕುಂದಕ ಉಂಟಾದೀತೋ ಎಂದು ಪ್ರಶ್ನೆ ಮಾಡಿದ್ದು, ಅಂಥಾದ್ದೇನೂ ಆಗುವುದಿಲ್ಲವೆಂದು ಗವರ್ನಮೆಂಟಿನವರು ಅಭಯ ಕೊಟ್ಟದ್ದು ಎಲ್ಲರಿಗೂ ತಿಳಿದಿದೆ.

ಮೆಂಬರುಗಳ ಚುನಾವಣೆ

ಈ ನ್ಯಾಯವಿಧಾಯಕ ಸಭೆಗೆ ಪ್ರಜೆಗಳಿಂದಲೇ ಚುನಾಯಿಸಲ್ಪಟ್ಟ ಮೆಂಬರುಗಳು ಬರಬೇಕೆಂದು ನಾವೂ ಅನುಕೂಲ ಪಡುತ್ತೇವೆ. ಮತ್ತು ಅದನ್ನು ಇಷ್ಟರಲ್ಲೇ ಜಾರಿಗೆ ತರಲು ಅನುಮಾನವಿಲ್ಲ. ಪ್ರಜಾಪ್ರತಿನಿಧಿ ಸಭೆ, ಡಿಸ್ಟ್ರಿಕ್ಟ್ ಮತ್ತು ಲೋಕಲ್ ಫಂಡ್ ಬೋರ್ಡುಗಳೇ ಮೊದಲಾದ ಸಂಘಟಿತವಾದ ಸಂಘಗಳಿಂದ ಮೆಂಬರುಗಳು ಚುನಾವಣೆಯಾಗಿ ಈ ಸಭೆಗೆ ಬರುವಂತಾಗುವುದು. ಇದಕ್ಕಾಗಿಯೇ ಈಗ ಮಾಡಿರುವ ಈ ಸಭೆಯ ಕಾನೂನಿನಲ್ಲಿ ಅವಕಾಶವನ್ನುಂಟು ಮಾಡಲಾಗಿದೆ. ಅತ್ತಲಾಗಿ, ಈಗ ಚುನಾಯಿಸಲ್ಪಟ್ಟಿರುವ ಪ್ರಜಾಪಕ್ಷದ ಮೆಂಬರುಗಳು ಸರ್ಕಾರಿ ನೌಕರಿಯಲ್ಲಿದ್ದು ಪೆನ್ಷನ್ ಪಡೆದವರಾಗಿರುತ್ತಾರೆಂದು ಆಕ್ಷೇಪಣೆ ಹುಟ್ಟಿದೆ. ಪೆನ್ಷನ್ ಪಡೆದವರು ಈ ಸಭೆಗೆ ಅಯೋಗ್ಯರೆಂದು ಅಭಿಪ್ರಾಯ ಪಡಲಾಗದು. ಅವರ ಅನುಭವವೂ ಅವರ ಬುದ್ಧಿಕುಶಲತೆಯೂ ಈ ಸಭೆಗೆ ತುಂಬಾ ಸಹಾಯ ಮಾಡುತ್ತವೆ. ಅವರು ಪ್ರತಿನಿಧಿಗಳೇ ಹೌದು. ಅವರು ಜನರ ಮಧ್ಯೆ ಮನೆ ಮಠ ಆಸ್ತಿಪಾಸ್ತಿಗಳನ್ನು ಮಾಡಿಕೊಂಡಿರತಕ್ಕವರು. ಅವರೂ ಇತರ ಪ್ರಜೆಗಳಂತೆ ಕಷ್ಟಸುಖಾದಿಗಳಲ್ಲಿ ಭಾಗಿಗಳಾಗಿರುತ್ತಾರೆ. ಕಾನೂನು ಜಾರಿಗೆ ತಂದ ಪಕ್ಷದಲ್ಲಿ ಪ್ರಜೆಗಳ ಕೂಡ ಅವರೂ ಕ್ಷೇಮದಿಂದಿರುವರು. ಒಂದು ವೇಳೆ ಸರಿಯಾಗಿ ಚರ್ಚಿಸದೆ ದಾಕ್ಷಿಣ್ಯಕ್ಕೆ ಒಳಗಾದರೆ ಜಾರಿಗೆ ಬರತಕ್ಕ ಕಾನೂನಿನಿಂದ ಇತರ ಪ್ರಜೆಗಳು ಹ್ಯಾಗೋ ಹಾಗೆ ಆ ಮೆಂಬರುಗಳೂ ಕಷ್ಟನಷ್ಟಗಳಿಗೆ ಗುರಿಯಾಗಬೇಕಾಗುವುದು. ಆದ್ದರಿಂದ ನಿಜವಾಗಿಯೂ ಅವರು ಪ್ರಜಾಪ್ರತಿನಿಧಿಗಳೇ ಆಗಿರುತ್ತಾರೆ. ಚುನಾವಣೆ ಜಾರಿಗೆ ಬರುವಾಗಲೂ ಪ್ರಜೆಗಳು ಅನುಭವಶಾಲಿಗಳಾದ ಇಂಥಾ ಪೆನ್ಷನ್‌ದಾರರನ್ನೇ ಮೆಂಬರಾಗಿ ಚುನಾಯಿಸತಕ್ಕವರಾಗಿರುತ್ತಾರೆ.

ಈ ಸಂಸ್ಥಾನದಲ್ಲಿ ಇವರು ಅಧಿಕಾರಿಗಳು, ಇವರು ಬೇರೋಜುಗಾರರು ಎಂಬ ವ್ಯತ್ಯಾಸವಾಗಲಿ, ಇದು ಸರ್ಕಾರಿ ಅಭಿಪ್ರಾಯ, ಇದು ಪ್ರಜೆಗಳ ಅಭಿಪ್ರಾಯ ಎಂಬ ವ್ಯತ್ಯಾಸವಾಗಲಿ ಇರುವಂತೆ ಕಾಣುವುದಿಲ್ಲ. ಸರ್ಕಾರವೆಂಬುವುದೆಲ್ಲಾ ಇಲ್ಲಿ ಶ್ರೀಮನ್ ಮಹಾರಾಜರವರೊಬ್ಬರಲ್ಲೇ ಐಕ್ಯವಾಗುತ್ತದೆ. ಆ ಮಹಾಸ್ವಾಮಿಯವರ ಅಭಿಪ್ರಾಯ ಬೇರೆ, ಪ್ರಜಾ ಅಭಿಪ್ರಾಯ ಬೇರೆ ಎಂದು ಎಷ್ಟು ಮಾತ್ರಕ್ಕೂ ಹೇಳಲಾಗದು. ಅವರ ಅಭಿಪ್ರಾಯೋದ್ದೇಶಗಳೂ ಪ್ರಜೆಗಳ ಇಂಗಿತಗಳೂ ಏಕವಾಗಿಯೇ ಇರುತ್ತವೆ. ಈ ಸಂದರ್ಭದಲ್ಲಿ ಪ್ರಸಿದ್ಧ ಕಾಳಿದಾಸ ಮಹಾಕವಿಯು ಹೇಳಿರುವುದನ್ನು ನಮ್ಮ ಮಹಾರಾಜರವರಿಗೆ ಅನುವರ್ತಿಸಬಹುದಾಗಿದೆ.

ಶ್ಲೋ॥ ಪ್ರಜಾನಾಮೇವ ಭೂತ್ಯರ್ಥಂ ಸತಾಭ್ಯೋಬಲಿಮಗ್ರಹೀತ್ ॥
ಸಹಸ್ರಗುಣಮುತ್ಸ್ರಷ್ಟುಮಾದತ್ತೇ ಹಿ ರಸಂ ರವಿಃ ॥

ಅಂದರೆ, ಸೂರ್ಯನು ತನ್ನ ಉರಿಬಿಸಿಲಿನಿಂದ ಭೂಮಿಯ ಮೇಲಿರುವ ನೀರನ್ನು ತನ್ನ ಬಳಿಗೆ ಸೇದಿಕೊಂಡರೂ ಅದರ ಸಹಸ್ರ ಪಾಲಿನಷ್ಟು ಮಳೆಗರೆದು ಭೂಮಿಯನ್ನು ಹ್ಯಾಗೆ ತಣಿಸುವನೋ ಅದೇ ರೀತಿ ಪ್ರಜೆಗಳಿಗೆ ಕ್ಷೇಮವನ್ನುಂಟುಮಾಡಲೋಸುಗವೇ ದೊರೆಯು ಅವರಿಂದ ಕಂದಾಯ ಕೌಳಿಗೆಗಳನ್ನು ತೆಗೆದುಕೊಳ್ಳುವನು.

ಅಪಕಾರಣ ಶ್ರೀಮನ್ ಮಹಾರಾಜರವರು ತಮ್ಮ ಪ್ರಜೆಗಳ ಕ್ಷೇಮಚಿಂತನೆಯಿಂದ ಈ ಎರಡನೆಯ ಕೌನ್ಸಿಲ್ ಸಭೆಯನ್ನು ಏರ್ಪಾಡು ಮಾಡಿ, ಅದಕ್ಕೆ ಬೇರೋಜುಗಾರ ಮೆಂಬರುಗಳನ್ನು ನೇಮಕ ಮಾಡಿ, ತಮ್ಮ ಪ್ರಜಾ ಪ್ರೀತಿ ವಾತ್ಸಲ್ಯಾದಿಗಳನ್ನು ಪ್ರಕಾಶಪಡಿಸಿರುತ್ತಾರೆ. ನಾವು ಅದನ್ನು ಮನಸ್ಸಿನಲ್ಲಿಟ್ಟುಕೊಂಡು ಪ್ರಜಾ ಬಾಹುಳ್ಯಕ್ಕೆ ಕ್ಷೇಮಕರವಾಗುವಂಥಾ ರೀತಿಯಲ್ಲಿ ಕಾರ್ಯಗಳನ್ನು ನಡಿಸಿ ಸರ್ಕಾರಕ್ಕೆ ಕೈಲಾದಷ್ಟು ಸಹಾಯ ಮಾಡಿ, ಶ್ರೀಮನ್ಮಹಾರಾಜರವರ ಶ್ರೇಷ್ಠವಾದ ಸದುದ್ದೇಶಗಳನ್ನು ಸಾರ್ಥಕಪಡಿಸಬೇಕಾಗಿರುತ್ತದೆ.

ಪ್ರತ್ಯುತ್ತರವು.

ದಿವಾನರವರು ಈ ರೀತಿ ಭಾಷಣ ಮಾಡಿ ತಮ್ಮ ಸ್ಥಾನದಲ್ಲಿ ಕುಳಿತುಕೊಂಡನಂತರ ಮೆ॥ ವಿ. ಎನ್. ನರಸಿಂಹಯ್ಯಂಗಾರ್ರು ಗವರ್ನಮೆಂಟಿನವರನ್ನು ಕುರಿತು ಅಭಿನಂದನಪೂರ್ವಕವಾದ ಪ್ರತ್ಯುತ್ತರವನ್ನು ಕೊಟ್ಟರು. ಅವರು ತಿಳಿಸಿದ ಮುಖ್ಯಾಭಿಪ್ರಾಯವೇನೆಂದರೆ.— ಈ ಸಭೆಯ ಬೇರೋಜುಗಾರ ಮೆಂಬರುಗಳ ಪರವಾಗಿ ಶ್ರೀಮನ್ ಮಹಾರಾಜಾ ಸರ್ಕಾರದವರನ್ನು ಈ ನ್ಯಾಯವಿಧಾಯಕ ಕೌನ್ಸಿಲ್ ಸ್ಥಾಪನೆ ಮಾಡಿದ್ದಕ್ಕಾಗಿ ಮನಃಪೂರ್ವಕವಾದ ವಂದನೆಗಳನ್ನು ಸಮರ್ಪಿಸುತ್ತೇನೆ. ಈ ಸಭೆ ಏರ್ಪಾಡಾದ ಈ ದಿನವು ಮೈಸೂರುಸಂಸ್ಥಾನದ ಚರಿತ್ರೆಯಲ್ಲಿ ಬಹು ವಿಶೇಷದಿನವೆನಿಸಿಕೊಂಡಿದೆ. ಹಿಂದುಸ್ಥಾನದಲ್ಲಿ ಚುನಾವಣೆಯ ಏರ್ಪಾಡು ಇನ್ನೂ ಬಾಲ್ಯದಲ್ಲಿರುತ್ತದೆ; ಮೈಸೂರಿನಲ್ಲಿ ಅದಕ್ಕಿಂತಲೂ ಕಡಿಮೆ ಎಂದು ಹೇಳಬಹುದು. ಆದ್ದರಿಂದ ಮೊದಲು ಸರ್ಕಾರದವರು ಮೆಂಬರುಗಳನ್ನು ತಾವೇ ಚುನಾ

ಯಿಸಿ ನೇಮಿಸುವುದು ಅವಶ್ಯವಾಯಿತು ಆದರೆ ಈ ಅಧಿಕಾರವನ್ನು ಕಾಲಕ್ರಮದಲ್ಲಿ ಪ್ರಜೆಗಳಿಗೇನೇ ಸರ್ಕಾರದವರು ವಹಿಸಿಕೊಟ್ಟಾರೆಂದು ಎಲ್ಲರೂ ತಿಳಿದುಕೊಂಡಿರುವರು ಸದ್ಯ ಈ ಸಭೆಯು ಪರೀಕ್ಷಾರ್ಥವಾಗಿ ಏರ್ಪಟ್ಟದ್ದಾಗಿರುವುದು. ಆದ್ದರಿಂದ ಸ್ವಾತಂತ್ರ್ಯಾದಿಗಳು ಕಡಿಮೆಯಾಗಿಯೇ ಇರುತ್ತವೆ ಆದರೆ ಇಲ್ಲಿ ಮೆಂಬರಾದ ನಾವುಗಳು ಏನೇನು ಕೇಳುವೆವೋ, ಇದರಲ್ಲಿ ನಾವು ಎಷ್ಟುಮಟ್ಟಿಗೆ ನಮ್ಮ ಉತ್ಸಾಹವನ್ನು ತೋರಿಸಿ ಕಾರ್ಯ ನಡೆಸುವೆವೋ ಅದನ್ನೆಲ್ಲಾ ಈ ಸಂಸ್ಥಾನದವರು ಮಾತ್ರವೇ ಅಲ್ಲ ಬೇರೆಯವರೂ ಬಹು ಕುತೂಹಲದಿಂದ ನೋಡುತ್ತಲಿದ್ದಾರೆ ಆದಕಾರಣ ನಾವುಗಳೆಲ್ಲಾ ಈ ಸಭೆಯನ್ನು ಉಚ್ಚಾಸ್ಥಿತಿಗೆ ತರಲು ಸಾಹಸಪಡಬೇಕಾಗಿರುವುದು. ಕಡೆಯದಾಗಿ, ಶ್ರೀಮನ್ಮಹಾರಾಜಾ ಸರ್ಕಾರದವರು ಈ ಸಭೆಯನ್ನು ನಿಜವಾಗಿಯೂ ಪ್ರತಿನಿಧಿ ಸಭೆಯೇ ಆಗುವಂತೆ ಕಾಲಕ್ರಮದಲ್ಲಿ ಪ್ರಜೆಗಳಿಗೆ ಮೆಂಬರುಗಳನ್ನು ಚುನಾಯಿಸುವ ಹಕ್ಕನ್ನು ದಯಪಾಲಿಸುತ್ತಾರೆಂದು ಕೋರುತ್ತೇನೆ ಎಂದರು.

ಕಾನೂನುಗಳ ಸೂಚನೆ.

ತರುವಾಯ ಮೆ॥ ಟಿ ಆನಂದರಾಯರು ಮೈಸೂರು ಗ್ರಾಮಾಧಿಕಾರಿಗಳಿಗೆ ಸಂಬಂಧ ಪಡುವಂಥಾ ಒಂದು ಕಾನೂನಿನ ಮಸೂದೆ ತಯಾರಾಗಿ, ಅದರ ಪ್ರೊವಿಷನ್ನುಗಳನ್ನೆಲ್ಲಾ ಕುರಿತು ವಿವರಿಸಿ, ಆ ಮಸೂದೆಯನ್ನು ಚರ್ಚಿಸಿ ಕಾನೂನು ಮಾಡಬೇಕಾದದ್ದು ಬಹು ಆವಶ್ಯಕವಾಗಿದೆ ಎಂದು ತಿಳಿಸಿದರು ಮೆ॥ ಎಂ ಕಾಂತರಾಜೇ ಅರಸಿನವರೂ ಆ ಕಾನೂನು ಆಗಬೇಕಾಗಿದೆ ಎಂದು ಸೂಚಿಸಿದರು ತರುವಾಯ ಕೌನ್ಸಿಲ್ ಮೆಂಬರುಗಳೆಲ್ಲಾ ಆ ಮಸೂದೆಯನ್ನು ಚರ್ಚಿಸಬಹುದೆಂದು ಒಪ್ಪಿದರು

ಅನಂತರ ಮೆ॥ ಕೆ ಪಿ ಪುಟ್ಟಣ್ಣಚೆಟ್ಟಿಯವರು ಮೈಸೂರು ಪೊಲೀಸ್ ಕಾನೂನಿನ ಮಸೂದೆಯನ್ನು ತಯಾರಾಗಿ, ಅದರ ವಿಷಯವಾಗಿ ಇದುವರೆಗೆ ನಡೆದಿರುವ ಬದಲಾವಣೆಗಳನ್ನೂ ಈಗ ಆ ಕಾನೂನಿನಲ್ಲಿ ಸೇರಿಸಿರುವ ಹೊಸ ವಿಷಯಗಳನ್ನೂ ವಿವರಿಸಿ ಅದು ಜಾರಿಗೆ ಬರುವಂತಾಗಬೇಕೆಂದು ಸೂಚಿಸಿದರು ಮೆ॥ ಎ ರಂಗಸ್ವಾಮಿ ಐಯ್ಯಂಗಾರ್ರು ಕೂಡ ಅವರ ಅಭಿಪ್ರಾಯದ ಪ್ರಕಾರ ಒಪ್ಪಿಕೊಂಡರು ಕಡೆಗೆ ಆ ಮಸೂದೆಯೂ ಕೌನ್ಸಿಲಿನಲ್ಲಿ ಚರ್ಚೆಯಾಗತಕ್ಕದ್ದೆಂದು ತೀರ್ಮಾನವಾಯಿತು.

ಕಡೆಯಲ್ಲಿ ಮೆ॥ ಟಿ ಆನಂದರಾಯರು ಮೈಸೂರು ಕೋರ್ಟ್ ಫೀಜುಗಳ ಕಾನೂನನ್ನು ಸ್ವಲ್ಪ ಬದಲಾವಣೆ ಮಾಡಬೇಕಾಗಿದೆ ಎಂದು ಸೂಚಿಸಿ ವಿವರಿಸಿದರು. ಮೆ॥ ಎಸ್ ನಾರಾಯಣರಾಯರು ಆ ಬದಲಾವಣೆಯು ಬಹಳ ಅವಶ್ಯವಾಗಿದೆ ಎಂದು ತಿಳಿಸಿದರು ಈ ಬದಲಾವಣೆಯು ಕೌನ್ಸಿಲಿನಲ್ಲಿ ಚರ್ಚಿಸೋಣವೆಂದು ಮೆಂಬರುಗಳು ಒಪ್ಪಿಕೊಂಡರು

ಅಂತ್ಯ ವಿಷಯಗಳು

ಪ್ರಸಿಡೆಂಟರಾದ ಮೆ॥ ಮಾಧವರಾಯರು ಎದ್ದು—ಈ ದಿನ ನಾವು ಮಾಡಬೇಕಾಗಿದ್ದ ಕಾರ್ಯಗಳೆಲ್ಲಾ ಪೂರೈಸಿದವು. ಇನ್ನು ಮೇಲ್ಕಂಡ ಕಾನೂನುಗಳ ಮಸೂದೆಯನ್ನು ಮೈಸೂರು ಗವರ್ನಮೆಂಟ್ ಗೆಜೆಟ್ಟಿನಲ್ಲಿ ಪ್ರಚುರ ಮಾಡಬೇಕಾಗಿದೆ ಅದಾದ ಮೇಲೆ ನಾವು ಸಭೆ ಸೇರಿ, ಅವುಗಳನ್ನು ಕುರಿತು ಚರ್ಚೆ ಮಾಡಬೇಕಾಗುವುದು. ಅವಶ್ಯಬಿದ್ದರೆ ಆ ಮಸೂದೆಗಳನ್ನು ಚರ್ಚಿಸುವುದಕ್ಕೆ ಒಂದು ಕಮಿಟಿಯನ್ನು ನೇಮಿಸುವುದೂ ಉಂಟು. ಈ ಮಸೂದೆಗಳೆಲ್ಲಾ ಬೇರೆ ಕಾಲದಿಂದ ಇತ್ಯರ್ಥವಾಗದೆ ನಿಂತಿರುತ್ತವೆಂದು ನಿಮಗೆಲ್ಲಾ ತಿಳಿದೇ ಇದೆ ಇನ್ನು ಹದಿನೈದು ದಿನಗಳೊಳಗೆ ಆ ಮೂರು ಮಸೂದೆಗಳನ್ನೂ ಗೆಜೆಟ್ಟಿನಲ್ಲಿ ಪ್ರಕಟಿಸುವೆನು ಸಬೆಕ್ಟುಗಳೆಲ್ಲಾ ಆ ಕಾಲದಲ್ಲಿ ಅಂಥಾ ದಿನ ಸೇರಿ ಅವನ್ನು ಇತ್ಯರ್ಥ ಮಾಡೋಣ ಎಂದು ತಿಳಿಸಿದರು

ಎರಡನೆ ಮೀಟಿಂಗಿನ ದಿನ

ದಿವಾನರವರು ಇತರ ಮೆಂಬರುಗಳ ಕೂಡ ಆಲೋಚನೆ ಮಾಡಿ ಆಗೋಸ್ಟು ತಾರೀಖು ೨೮ನೇ ಬುಧವಾರ ಎರಡನೇ ಮೀಟಿಂಗ್ ನಡೆಯುವುದು ಎಂದು ತಿಳಿಸುತ್ತಾ ಆ ದಿನದ ಮೀಟಿಂಗನ್ನು ಬರಖಾಸ್ತು ಮಾಡಿದರು

ಬಾತ್ಮಿದಾರರಿಗೆ ನೋಟೀಸು.

ಹಲವು ವಿಭಾಗಗಳಲ್ಲಿಗೆ ಬರತಕ್ಕ ಬಾತ್ಮಿಗಳಿಗೆ ನಾವು ಸಿಗಬೇಕಾದಲ್ಲಾರೆವು ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ಸ್ಥಳ ಕೊಡಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿಟರ್

ಕರೆಸ್‌ಪಾಂಡೆನ್ಸ್

ಹುಲಿಯ ಶಿಕಾರಿ ಮಾಡಿದ್ದು

ಅಯ್ಯಾ,

ಕಳೆದ ತಾ ೧೭ನೆ ಬುಧವಾರ ಬೆಳಿಗ್ಗೆ ಹುಣಸೂರು ಸಬ್ ತಾಲ್ಲೂಕು ಕೊಂಡಜ್ಜಿಯಲ್ಲಿರುವ ತಳವಾರ ಕರೀಗನುಮನೆಂಬುವನು ಹೊಲದ ಬೇಟೆಗೋಸ್ಕರ ತನ್ನ ಎರಡು ನಾಯಿಗಳ ಸಮೇತ ಹೋಗಿರಲಾಗಿ ಈ ಗ್ರಾಮದ ಗೌಡರನ್ನ ಪ್ಪನವರ ದವಿರ್ಗ ಪಟಿಯ ಬೋರಿನಲ್ಲಿ ಅಕಸ್ಮಾತ್ ಬೆಳಿಗ್ಗೆ ನೋಡಲಾಗಿ ಅದರೊಳಗೆ ಮಲಗಿದ್ದ ಒಂದು ಹೊನ್ನಿಗ (ಹುಲಿಯು) ಇವನ ಮೇಲೆ ಹಾರಿಬಂದು ಎಡಭುಜವನ್ನೂ ಎಡದ ಕಣ್ಣಿನ ಕೊನೆಭಾಗವನ್ನೂ ಕಚ್ಚಿ ಗಾಯಮಾಡಲು, ಇವನ ಎರಡು ನಾಯಿಗಳೂ ಆ ಹುಲಿಯನ್ನು (ದೊಡ್ಡ ಕೊನ್ನಿಗನನ್ನು) ಬೆನ್ನಟ್ಟಿ ಹೋಗಲಾಗಿ ಆ ಹುಲಿಯು ಸದರಿ ಮನುಷ್ಯನನ್ನು ಬಿಟ್ಟು ಸಮೀಪದಲ್ಲಿದ್ದ ಒಂದು ಬೇವಿನ ಮರಕ್ಕೆ ಹುಟ್ಟಿ ಹಾರಿ ಕುಳಿತುಕೊಂಡಿತು. ಇಷ್ಟರಲ್ಲಿ ಸದರಿ ಗಾಯಪಟ್ಟ ಹನುಮನು ನೆಲಕ್ಕೆ ಬಿದ್ದು ಘಟ್ಟಿಯಾಗಿ ಕೂಗಿಕೊಂಡನು ಈ ಶಬ್ದವನ್ನು ಸಮೀಪದ ತೋಟದಲ್ಲಿದ್ದ ನಾಲು ಜನರು ಕೇಳಿ, ಅವನ ಹತ್ತಿರ ಓಡಿ ಹೋಗಿ ಹುಲಿಯು ಮರ ಹತ್ತಿದ್ದನ್ನು ಕಂಡು ಆ ಮನುಷ್ಯನಿಂದ ನಡೆದ ಸಂಗತಿಯನ್ನು ಕೇಳಿ, ಸಮೀಪದಲ್ಲಿದ್ದ ಕೊಂಡಜ್ಜಿ ಬಿಳ್ಳಾಪುರದಿಂದ ಆಯುಧಪಾಣಿಗಳಾದ ಕೆಲವು ಜನಗಳನ್ನು ಬರಮಾಡಿಕೊಂಡು, ಕೊಂಡಜ್ಜಿ ಪೊಲೀಸ್ ಸ್ಟೇಷನಿಗೆ ವರ್ತಮಾನ ಕೊಟ್ಟು, ಸದರಿ ಸ್ಟೇಷನ್ನಿನಲ್ಲಿ ಹಾಜರಿದ್ದ ಕಾನ್‌ಸ್ಟೆಬಲ್ ಸೈದ್ ಪೀರ್ ಸಾಬಿಯು ಬಂದೂಕು ಸಮೇತ ಬಂದು ಮರದ ಮೇಲೆ ಕೂತಿದ್ದ ಹುಲಿಯನ್ನು ಗುರಿಯಿಟ್ಟು ಹೊಡೆಯಲಾಗಿ ಆ ಏಟು ಅದರ ಪಕ್ಕೆಗೆ ಬಡಿದು, ಒಂದೇ ಏಟಿಗೆ ಪ್ರಾಣ ಹೋಗಿ ಗಿಡದಿಂದ ಕೆಳಕ್ಕೆ ಬಿತ್ತು. ನಂತರ ಸದರಿ ಪ್ರಾಣಿಯನ್ನು ಬಹಳ ಸಂತೋಷದಿಂದ ಉತ್ಸವಪೂರ್ವಕವಾಗಿ ಊರೊಳಕ್ಕೆ ತೆಗೆದುಕೊಂಡು ಬಂದು, ಅಮಲ್ದಾರ್ರಿಗೆ ಕಳುಹಿಸಲಾಯಿತು ಇಂತಹ ಧೈರ್ಯಶಾಲಿಯಾದ ಕಾನ್‌ಸ್ಟೇಬಲಿಗೆ ಸರ್ಕಾರದವರು ಬಹುಮಾನ ಕೊಡುವರೆಂದು ಕೋರುತ್ತೇವೆ

ಚಂದಾದಾರ

ತಾಲ್ಲೋಕು ವರ್ತಮಾನಗಳು

ಅನಂತಪುರ (ಶಿವಮೊಗ್ಗಾ ಡಿ||)—ಈ ಊರಿನಲ್ಲಿ ೧—೨ ತಿಂಗಳು ಲಾಗಾಯತು ಮಳೆಯು ಬಹು ಜೋರಾಗುತ್ತಾ ಇದೆ ಇತ್ತಲಾಗಿ ಈ ಊರಿನಲ್ಲಿ ಪ್ಲೇಗಿನ ಗಲಾಟೆ ಮುಂತಾದದ್ದು ಏನೂ ಇರುವದಿಲ್ಲ ಪ್ಲೇಗಿನಿಂದ ಊರುಬಿಟ್ಟು ಹೋದ ಜನಗಳೆಲ್ಲರೂ ವಾಪಸು ತಮ್ಮ ತಮ್ಮ ಗೃಹಕ್ಕೆ ಬಂದು ಸೇರಿದರು —ಈ ಊರಿಗೆ ಹೊಸದಾಗಿ ಆಸ್ಪತ್ರೆ ಬಂದಿರುತ್ತೆ ಈ ವರಿಗೂ ೮ ದಿನಕ್ಕೆ ಒಂದಾವರ್ತಿ ಸಾಗರದಿಂದ ಡಾಕ್ಟರು ಬಂದು ಒಂದು ದಿವಸ ಮಾತ್ರ ಇದ್ದು ಜನಗಳಿಗೆ ಔಷಧ ಕೊಟ್ಟು ಹೋಗುತ್ತಿದ್ದರು ಈಗ ೩ ತಿಂಗಳ ಹಿಂದೆ ಇಲ್ಲಿನ ಆಸ್ಪತ್ರೆಗೆ ಮೆ॥ ಗಂಗಾಧರರಾವ್ ಎಂಬ ಡಾಕ್ಟರು ಬಂದಿರುತ್ತಾರೆ ಇವರು ಬಂದ ಲಾಗಾಯಿತು ೮—೧೦ ವರುಷದಿಂದ ನರಳುತ್ತಾ ಇದ್ದ ರೋಗಿಗಳನ್ನು ಗುಣಪಡಿಸಿದರು ಇವರು ಪ್ರತಿ ಜನರಲ್ಲಿಯೂ ಒಳ್ಳೆ ವಿಶ್ವಾಸ, ಒಳ್ಳೇ ನಡತೆ ನಯ ವರ್ತನೆ ಇಟ್ಟು ಚಿಕಿತ್ಸೆ ಮಾಡಿ, ಪ್ರತಿಒಬ್ಬ ರೋಗಿಯ ಮನೆಗೆ ಹೋಗಿ ನೋಡಿಕೊಂಡು ಬರುತ್ತಾರೆ ಈ ಆಸ್ಪತ್ರೆಯು ಕಾಂಪೋಂಡರು ಬಂದು ೮ ತಿಂಗಳಾಯಿತು ಈ ವರೆಗೂ ಡ್ಯೂಟಿಗೆ ಮೇಲೆ ಇದ್ದಾಗ್ಯೂ ಸದರಿಯವನಿಗೆ ತಲಬು ಕೊಡಲಿಲ್ಲ ಕಾರಣವೇನೋ ತಿಳಿಯದು

ಕೋಲಾರ—ಈ ವಾರ ಈ ಊರಿಗೆ ೨ ಅಂಗುಲ ಮಳೆಯಾಯಿತು ರಾಜಮಾರ್ಗವಿನಹಾ ಇತರ ರಸ್ತೆಗಳಲ್ಲಿ ಮತ್ತು ಗಲ್ಲಿಗಳಲ್ಲಿ ವ್ಯಾಪಾರಕ್ಕಾಗಿ ಸಾಲುಸಾಲಾಗಿ ಇಟ್ಟಿರುವ ಕಟ್ಟಿಗೆಯ ದಿಬ್ಬಿ, ಕಲ್ಲುದಗೇರಿ ಮುಂತಾದ್ದರ ಪ್ರಕಿ ದಾರಿಯನ್ನು ಗುಡಿಸುವುದಾಗಲಿ ಬಿಡುವಾಗಲಿ ಕಾಣಲಿಲ್ಲ —ಹಗಲು ನೀರಿಗಾಗಿದೆಯೋ ಏನೋ ೧—೨ ಘಂಟೆಗೆ [illegible] ದೇವಸ್ಥಾನದ ರಾಜಮಾರ್ಗದ ಮನೆಗಳನ್ನು ನುಗ್ಗಿ ಸುಮಾರು ೫೦೦ ರೂಪಾಯಿನ ಬೆಳ್ಳಿ ಪಾತ್ರೆಗಳನ್ನು ಕದ್ದುಕೊಂಡು ಹೋದರು ಈ ಊರಿನಲ್ಲಿ ಕಾಫಿ ಪ್ಲಾಂಟರ್ ಮೆ॥ ಬಿ ನರಸಿಂಹೈಯ್ಯಂಗಾರ್ರು ಪ್ರೋತ್ಸಾಹದ ಮೇಲೆ ಕೆಲವು ದಮಿನ್ದಾರರೂ ಸ್ಕೂಲ್ ಮಾಸ್ಟರುಗಳೂ ಸರ್ಕಾರಿ ನೌಕರರೂ ಸೇರಿ ಸದ್ವ್ಯಾಚಕ ಕಲಂಬ [illegible] ವಾಚಕಶಾಲೆಯನ್ನು ಸ್ಥಾಪಿಸಿ ಅದಕ್ಕೆ ಆ ಪ್ರೋತ್ಸಾಹಕರನ್ನೇ ಸೆಕ್ರೆಟರಿಗಳನ್ನಾಗಿ ನಿಯಮಿಸಿ, [illegible] ಭಾನುವಾರ ಪ್ರಾರಂಭವಾಗಿ [illegible] ದಾದಾರರು [illegible] ಈ ಊರು ಪೈಕಿ ರಲ್ಲಿ ಕೆಲವ [illegible] ಮಲ್ಲಿರುವ ಕಾಫಿ ಪ್ಲಾಂಟರ್ ಮೆ॥ ಬಿ [illegible] ಮನೆಯಲ್ಲಿ [illegible] ವಾಚಕಶಾಲಾ [illegible] ರಿನಂದ ತಾ [illegible] ನೇ ಭಾನುವಾರ ಸ್ಥಾಪಿಸಿದರು.

ಹೊಸದುರ್ಗ.—ಈ ಪ್ರಾಂತ್ಯ ಜೋಳದ ಗಿಡ ಎರಡು ಅಡಿ ಎತ್ತರವಿದೆ. ರೈತರೆಲ್ಲಾ ರಾಗಿ ಪಗ್ಗೆ ಕಾಳು ಬಿತ್ತಿದಾರೆ ಮಳೆಯು ಚೆನ್ನಾಗಿ ಹದ ಕೊಟ್ಟಿಗೆ ರೈತರು ಬೆರಿಯತ್ತು ಕೆಲಸದಲ್ಲಿ ಇರುವುದರಿಂದ ಸಂತೆ ಚೆನ್ನಾಗಿ ಸೇರುವದಿಲ್ಲ ಹೆಡ್ ಮಾಸ್ಟರು ರಿಟೈರ್ ಆದರು ಇಲ್ಲಿ ನೌಕರರಲ್ಲಿ ೩ ಜನರು ಹೋದಂತೆ ಆಯ್ತು ಪ್ರೊ॥ ಇನ್ಸ್‌ಪೆಕ್ಟರ್ ಟಾಲ್‌ಟುವರು ಹೊಸದಿನಂತರ ರುದ್ರಪ್ಪ ಎಂಬುವರು ಬಂದಿದ್ದರಷ್ಟೆ ಇವರು ವರ್ಗವೂ ರಜಾನೋ ಹೋಗಿರುವದರಿಂದ ಸಂಧಿ [illegible] ಎಂಬ ಇನ್ಸ್‌ಪೆಕ್ಟರು ಬಂದಿರುತ್ತಾರೆ ಅಮಲ್ದಾರ್ರು ಜಮಾಬಂದಿ ಪ್ರಾಂತ್ಯ ಕಳವು ವಿಚಾರಣೆ ಪತ್ತೆದಾರಿಗೆ ಹೋಗಿರುತ್ತಾರೆ. ಈ ತಾಲ್ಲೂಕಿನಲ್ಲಿ ೩೦೧ ಮನೆಗಳಿಗೆ ಜಾಸ್ತಿಯಾಗಿರುವ ೪—೫ ಗ್ರಾಮಗಳ ಪೈಕಿ ಬೂದಿಹಾಲ್ ಮತ್ತು ಮಾಗೂರು ಇನೆರಡಕ್ಕೆ ಯೂನಿಯನ್ ಬಂದಂತೆ ಆಯಿತು ಇದೇ ರೀತಿ ಇತರ ದೊಡ್ಡ ಗ್ರಾಮಗಳಿಗೂ ಯೂನಿಯನ್ ಜಾಗ್ರತೆ ಬಂದರೆ ನಾಕೀಜಾ ವಿಷಯದಲ್ಲಿ ತಕ್ಕ ಏರ್ಪಾಡಾದೀತು —ಬೆಲಗೂರಿನಲ್ಲಿ ಸ್ಕೂಲ್ ಕಟ್ಟಡವು ಅತಿ ಕ್ಷೀಣ ದಸೆಗೆ ಬಂದು ಕಿಟಕಿಗಳೆಲ್ಲಾ ಕಿತ್ತು ಬಿದ್ದು ಹೋದವಾದ್ದರಿಂದಲೂ ಕಟ್ಟಡವೆಲ್ಲಾ ಸೋರುತ್ತಾ ಗೋಡೆಗಳೆಲ್ಲಾ ಬೀಳುತ್ತಿರುವದರಿಂದಲೂ ದೇವಸ್ಥಾನದಲ್ಲಿ ಸ್ಕೂಲ್ ಇಟ್ಟಿರುತ್ತಾರೆ ಹುಡುಗರು ಮೊದಲಿನಂತೆ ಬರುತ್ತಿಲ್ಲ. ಇಲ್ಲಿಗೆ ಡೆಪಿ ಇನ್ಸ್‌ಪೆಕ್ಟರು ಬಂದಾಗ ಗ್ರಾಮಸ್ಥರು ಹೊಸಕಟ್ಟಡಕ್ಕಾಗಿ ೩೦೦ ರೂಪಾಯಿ ಕೊಡುವಂತೆ ಮುಚ್ಚಳಿಕೆ ಕೊಟ್ಟು ಆಚೆಗೆ ಅದರಂತೆ ನಡೆಯಲಿಲ್ಲವಾದ್ದರಿಂದ ಸದ್ಯದಲ್ಲಿಯೇ ಸ್ಕೂಲನ್ನೇ ವಜಾ ಮಾಡಿಬಿಡುತ್ತಾರೆಂದು ವಾಹಿನಿ ಇರುತ್ತೆ ಸುಮಾರು ೪೦೦ ಬಾಲಕರಿಂದಲೂ ಎಷ್ಟೋ ಧನಿಕ ರೈತರಿಂದಲೂ ವ್ಯಾಪಾರಸ್ಥರಿಂದಲೂ ಕೂಡಿದ ಈ ಗ್ರಾಮದಲ್ಲಿ ಸ್ಕೂಲನ್ನೇ ವಜಾ ಮಾಡುವದು ವಿಷಾದವಾಗಿದೆ

ಚಾಮರಾಜನಗರ.—ಇಲ್ಲಿ ಕೆಲವು ದಿನಗಳಿಂದ ಮೋಡವಾಡುತ್ತಾ ಆಗಾಗ್ಗೆ ಸಣ್ಣ ಸಣ್ಣ ಹನಿಗಳನ್ನು ಹಾಕುತ್ತಾ ಇದ್ದರೂ ಪೈರುಗಳಿಗೆ ಅನುಕೂಲವಾಗಿಲ್ಲ ರೈತರು ಆಕಾಶವನ್ನು ನೋಡುವುದು ತಪ್ಪಲಿಲ್ಲ ಹವಾ ಶೀತವಾಗದೆ ರೋಗಾದಿಗಳೇನೂ ಇಲ್ಲದಿರೂ ನಂಜನಗೂಡಿನ ನಿವಾಸಿಗಳು ಈ ಊರನ್ನು ಸೇರಿರುವ ಕಾರಣ ಪ್ರತಿ ದಿನವೂ ನಂಜನಗೂಡು ಗಾಡಿಗಳು ಇಲ್ಲಿಗೂ ಇಲ್ಲಿನ ಗಾಡಿಗಳು ಅಲ್ಲಿಗೂ ತಿರುಗುತ್ತಾ ಉಪದ್ರವನ್ನು ಕರತರುವವೋ ಎಂದು ಯೋಚನೆಯಾಗಿದೆ ನಮ್ಮ ಅಮಲ್ದಾರರು ಅಲ್ಲಿಂದ ಬರತಕ್ಕವರನ್ನು ತಡೆದು ತನಿಖೆಯಿಂದ ಪ್ರಜಾ ನೆಮ್ಮದಿಗೆ ಭಂಗ ಬರದಂತೆ ಕಾಪಾಡುವರೆಂದು ನಂಬುತ್ತೇನೆ—ಶ್ರೀ ಶೃಂಗೇರಿ ಜಗದ್ಗುರುಗಳವರ ಸವಾರಿಯು ೯ನೇ ತಾರೀಖು ಈ ಊರಿಗೆ ಚಿತ್ತೈಸುವದೆಂಬ ವದಂತಿಯನ್ನು ತಿಳಿದು ಸುತ್ತುಮುತ್ತಲಿನ ಜನರೆಲ್ಲಾ ಸ್ವಾಮಿಗಳ ದರ್ಶನೋದ್ದಿಶ್ಯ ಬಂದಿದ್ದರು ಸ್ವಾಮಿಗಳು ಮೂರು ದಿನ ಇಲ್ಲಿದ್ದು ಭಾನುವಾರ ಇಲ್ಲಿಂದ ಹೊರಡುವ ಕಾಲದಲ್ಲಿ ಈ ಊರು ವೈಶ್ಯ ಮಂಡಲಿಯ ಪ್ರಮುಖರಾದ ಮೆ॥ ಸುಬ್ಬರಾಯ ಶೆಟ್ಟರಿಂದ ಪ್ರಾರ್ಥಿತರಾಗಿ ಕನ್ಯಕಾಪರಮೇಶ್ವರೀ ದೇವಸ್ಥಾನಕ್ಕೆ ಚಿತ್ತೈಸಿ ಪಾದಪೂಜೆ ಮೊದಲಾದ ಉಪಚಾರಗಳಿಂದ ತೃಪ್ತರಾಗಿ ದೇವರಿಗೆ ಅಮೂಲ್ಯವಾದ ವಸ್ತ್ರವನ್ನು ದಯಪಾಲಿಸಿ ಮುಂದಕ್ಕೆ ದಯಮಾಡಿದರು—ಅಮಲ್ದಾರ್ ಮೆ॥ ಸಿ ಕೃಷ್ಣರಾಯರಿಗೆ ನೇಮಂಗಲಕ್ಕೆ ವರ್ಗವಾದ ಕಾರಣ ಇಲ್ಲಿನ ಪ್ರಜೆಗಳೆಲ್ಲ ವಿಷಾದಪಡಬೇಕಾದವರಾಗಿದ್ದಾರೆ ಇವರು ಪ್ರಜಾ ಪಕ್ಷಪಾತಿಗಳೂ ನ್ಯಾಯಪರರೂ ಆಗಿದ್ದರೆಂದು ಹೇಳಬೇಕಾದದ್ದಿಲ್ಲ ಹೊಸಬರು ತಾ॥ ೨೩ಕ್ಕೆ ಈ ಊರಿಗೆ ಚಿತ್ತೈಸಿದರು ಇವರನ್ನು ದರ್ಶನ ಮಾಡಿದ ಮಾತ್ರಕ್ಕೇ ಪ್ರಜೆಗಳು ಸಂತೋಷಚಿತ್ತರಾಗಿರುವರು —ಪೊಲೀಸ್ ಇಲಾಖೆಯವರ ಜಾಗರೂಕತೆಯಿಂದ ಕಳವು ಮೊದಲಾದದ್ದೆಲ್ಲಾ ಹೆಸರಿಲ್ಲದೆ ಅಡಗಿವೆ ಮ್ಯುನಿಸಿಪಾಲಿಟಿ ಚೆನ್ನಾಗಿದೆ ಎಂಬುವುದಕ್ಕೆ ಊರಿನ ಆರೋಗ್ಯಸ್ಥಿತಿಯೇ ಸಾಕ್ಷಿ

ಹೊಸಕೋಟೆ.—ಈ ಊರಲ್ಲಿ ಮಳೆ ಕೊಂಚಕೊಂಚವಾಗಿ ಸುರಿಯುತ್ತಲಿದೆ. ಪ್ಲೇಗ್ ರೋಗವು ಇದ್ದ ಸ್ಥಳವನ್ನು ಬಿಟ್ಟು ಬ್ರಾಹ್ಮಣರ ಬೀದಿಗೆ ತಲೆದೋರಿದೆ. ಇಲ್ಲಿನ ಅಮಲ್ದಾರ್ ಮೆ॥ ಬಸವರಾಜೇ ಅರಸಿನವರಿಗೆ ವರ್ಗವಾದ ಸುದ್ದಿ ತಿಳಿದು ಇಲ್ಲಿ ಯುವರು ಮೇಲಕ್ಕೆ ಅರ್ಜಿ ಬರೆದುಕೊಂಡಿದ್ದರಷ್ಟೆ ಆ ಅರ್ಜಿಗಳಿಗೂ ತಂತಿ ವರ್ತಮಾನಕ್ಕೂ ಜವಾಬು ಬರಲೇ ಇಲ್ಲ ಅಮಲ್ದಾರರು ಕಳೆದ ಗುರುವಾರ ಇಲ್ಲಿಂದ ಹೊರಟುಹೋದರು ಹೊರಡುವ ದಿನವೂ ಮುಂದಿನ ದಿನವೂ ಅವರನ್ನು ವಿಜೃಂಭಣೆಯಿಂದ ಮರ್ಯಾದೆ ಪೂರ್ವಕ ಸಂಭಾವಿಸಿದರು. ಕಳೆದ ಬುಧವಾರ ಅವರನ್ನು ಶ್ರೀ ಕೃಷ್ಣವಿಲಾಸ ಸೊಸೈಟಿಯ ಸದಸ್ಯರೆಲ್ಲ ಸೇರಿ ಮೇಳ ವಾದ್ಯಗಳೊಂದಿಗೆ ಮನೆಯಿಂದ ಶ್ರೀಕೃಷ್ಣದೇವಾಲಯಕ್ಕೆ ಕರೆತಂದು ಅದರ ಮುಂಭಾಗಕ್ಕೆ ಮಧ್ಯದಲ್ಲಿ ಅಮಲ್ದಾರರನ್ನು ನಿಲ್ಲಿಸಿ [illegible] ನಂತರ ಟೀ ಪಾರ್ಟಿ ನಡೆಯಿತು. ಸೊಸೈಟಿ ಮೆಂಬರುಗಳು ಅಲ್ಲದ ಜನಗಳೂ ಅಲ್ಲಿ ಸೇರಿದರು ಮೆ॥ [illegible] ಅಯ್ಯಂಗಾರ್ರು, ಆಗಾ ಸೀನಪ್ಪನವರು, ಮೆ॥ ಚಲುವಯ್ಯಂಗಾರ್ರು ಮುಂತಾದವರು ಉಪನ್ಯಾಸ ಮಾಡಿದರು [illegible] ಅಮಲ್ದಾರ್ರವರ ಗುಣಗಳನ್ನು ಕುರಿತು ಮಾತನಾಡಿದರು [illegible] ಅಮಲ್ದಾರರನ್ನು ಅವರ ಮನೆಗೆ ಬಿಟ್ಟು ಬಂದರು. [illegible] ತಮ್ಮ ಮನೆಗಳಿಗೆ ಹೋದರು [illegible] ಅಮಲ್ದಾರ್ರವರ [illegible] ಕಾಲ್, ಜನರೆಲ್ಲಾ [illegible]

ತೀರ್ಥಹಳ್ಳಿ. ಈ ತಾಲ್ಲೂಕಿನ ಆತ್ಯಂತ ಮಳೆ ನಾಡಿನ ಪ್ರಧಾನ ಉತ್ಪತ್ತಿಗೆ ಮೂಲವಿದ್ದನವ ಈ ದಿನಗಳಲ್ಲಿ ಇಲ್ಲಿ [illegible] ಅತಿ [illegible] ಈ ಊರಿನಲ್ಲಿ ಅಡಿಕೆ, ಭತ್ತ ಇವುಗಳ [illegible] ಬೈಲುಸೀಮೆಯಂತೆ ತರಿ ವ್ಯವಸಾಯಕ್ಕೆ ಅನುಕೂಲವಾದ ಕೆರೆಗಳು ಇಲ್ಲಿ ಇಲ್ಲವೇ ಇಲ್ಲ ಮಳೆ ಸಹಾಯದಿಂದಲೇ ಸರ್ವವೂ ಆಗಬೇಕು. ಅಡಿಕೆಯ ತೋಟಕ್ಕೆ ತನುವು ಉಂಟುಮಾಡುವದಕ್ಕೆ ಈ ಮಳೆಗಳೇ ಮುಖ್ಯ ಸೀಸಿಗಳನ್ನು ನಿಶ್ಚಯಿಸಿ [illegible] ಅಧಿಕವಾಗಿ, ನೆಟ್ಟಿಯ ಕೆಲಸವು ನಿಂತು ಹೋಗಿದ್ದುದರಿಂದ ಬಹು ಜನಗಳೆಲ್ಲರೂ ಕಂಗೆಟ್ಟು ಹೋಗಿದ್ದರು. ಅಂಥಾದ್ದರಲ್ಲಿ ಈಗ ನಾಲ್ಕಾರು ದಿವಸಗಳಿಂದ ಮಳೆಯಾಗಿ ಜನಗಳ ಭೀತಿಯು ನಿವಾರಣೆಯಾಯಿತು —ಈಗ ೫—೬ ತಿಂಗಳುಗಳಿಂದ ಗ್ರಾಮಾಂತರಗಳಲ್ಲೆಲ್ಲಾ ಜನಗಳನ್ನು ಬಾಧಿಸುತ್ತಿದ್ದ ವೈಲಿಯ ಉಪದ್ರವವು ಸಮಾಧಾನಕ್ಕೆ ಬಂದಿದೆ ಕಾಲುಬೇನೆಗಳ ರೋಗದಿಂದ ಉಂಟಾಗಿದ್ದ ಭಯವೂ ತಪ್ಪಿತು ಆದರೆ ಧಾರಣೆವಾಸಿಗಳು ದಿನದಿನಕ್ಕೆ ಏರುತ್ತಿರುವವು ಈ ತಾಲ್ಲೂಕಿನಲ್ಲಿಯೇ ಸಂತೆ ಇಲ್ಲವಾದ್ದರಿಂದ ವರ್ತಕರು ಹೇಳಿದ ಕ್ರಯ ಕೊಡಬೇಕು —ಅಮಲ್ದಾರ್ ಮೆ॥ ಕೆ ಆರ್ ಸುಬ್ಬರಾಯರು ಈ ತಾಲ್ಲೂಕಿಗೆ ದಯಮಾಡಿ ಇನ್ನೂ ಒಂದು ವರ್ಷ ಕೂಡಾ ಆಗಿಲ್ಲ ಇಷ್ಟರಲ್ಲಿಯೇ ಇವರಿಗೆ ವಿಶ್ರಾಂತಿ ಕೊಡುವರೆಂದು ವದಂತಿಯುಂಟಾಗಿದೆ ಇವರು ಬಂದಾರಭ್ಯ ಪ್ರಜೆಗಳಿಗೆ ಅನೇಕ ಅನುಕೂಲಗಳನ್ನು ಮಾಡಿಕೊಟ್ಟದ್ದಲ್ಲದೆ ಸರಕಾರದ ಕೆಲಸದಲ್ಲಿಯೂ ತುಂಬಾ ಅನುಭವ ಪಡೆದವರಾಗಿದ್ದರು ಈ ತಾಲ್ಲೂಕಿನಲ್ಲಿರುವಷ್ಟು ದೇವಾಲಯ ಬ್ರಹ್ಮರಾಯ ಸ್ವಾಸ್ಥ್ಯಗಳು ಇನ್ನೆಲ್ಲಿಯೂ ಇಲ್ಲ ಇವು ಸಮೃದ್ಧಿಯಾಗಿ ಬ್ರಹ್ಮದಾಯ ದೇವಾದಾಯಗಳ ಕಂದಾಯ ಗೊತ್ತಾಗದೆ ಅನೇಕ ವರ್ಷಗಳಿಂದ ಬಹು ತೊಂದರೆಯುಂಟಾಗಿ ಸಕಾಗ್ಗೆ [illegible] ಯು ನಿಂತು ಹೋಗಿತ್ತು ಈ ಭಾಗದಲ್ಲಿ ಇವರು ಮಾಡಿದಾಯ[illegible] ಸಗಳನ್ನು ಒಪ್ಪಿ ಇನಾಂದಾರರು ಬಾಕಿಯನ್ನು ಕೊಡುತ್ತಾನೆ ತೋ[illegible]

ಇದರಿಂದ ಅನೇಕ ರೈತರಿಗೆ ಅತ್ಯಾನಂದವುಂಟಾಗಿದೆ. ಮುಜರಾಯಿಗೆ ಸಂಬಂಧಪಟ್ಟ ಈ ತಾಲೂಕಿನ ದೇವಸ್ಥಾನಗಳ ವಿಷಯದಲ್ಲಿ ಅತಿಶ ಯವಾದ ದೃಷ್ಟಿ ಇಟ್ಟು ಅವುಗಳಲ್ಲಿ ಅನಾದಿಯಿಂದ ಬಂದಿರುವ ತಸ್ತೀಕು ಬದಿಲಾನು ಉತ್ಪತ್ತಿ ಮುಂತಾದವು ಅರ್ಚನಾದಿಗಳಲ್ಲಿ ಸದ್ವಿನಿಯೋಗವಾಗುವಂತೆ ಏರ್ಪಾಡು ನಡಿಸಿರುತ್ತಾರೆ. ಇವರು ಈ ಮಲೆನಾಡು ಸ್ಥಳದವರು ಈ ಡಿಸ್ಟ್ರಿಕ್ಟಿನಲ್ಲಿ ಬಹು ಕಾಲ ಸರ್ವಿಸ್ ಮಾಡಿರುವದು ಇಲ್ಲಿನ ಜನಗಳ ಕಷ್ಟಸುಖಗಳನ್ನು ಚೆನ್ನಾಗಿ ಅರಿತವರು ಇವರು ಸ್ಥಳಾಂಗದಾಗಿರುತ್ತಾರೆ. ಸಧ್ಯದಲ್ಲಿಯೇ ಈ ತಾಲೂಕಿನಲ್ಲಿ ಮತ್ತೆ ಸರ್ವೆ ಆಗುವ ಸಂಭವವಿದೆ. ಆ ಕಾಲದಲ್ಲಿ ಇಂತಹ ಅನುಭವಶಾಲಿಗಳಾದ ಆಫೀಸರಿಂದ ಸಹಾಯವಾಗಬಹುದೆಂಬ ಪ್ರಜೆಗಳ ಕೋರಿಕೆಗೆ ಭಂಗವುಂಟಾಗಿದೆ—ಇಲ್ಲಿನ ಸ್ಕೂಲ್ ಹೆಡ್ ಮಾಸ್ಟರನ್ನು ಹಿರಿಯೂರಿಗೂ ಅಲ್ಲಿಂದ ಮಿ॥ ಸಂಜೀವಯ್ಯನವರನ್ನು ಇಲ್ಲಿಗೂ ವರ್ಗ ಮಾಡಿರುತ್ತಾರಂತೆ

ವಿದೇಶ ವರ್ತಮಾನಗಳು.

—೧—

ಕಳೆದ ಮಂಗಳವಾರವೂ ಬುಧವಾರವೂ ವಿಲಾಯತಿ ರಾಜ್ಯದಲ್ಲೆಲ್ಲಾ ಅಪಾರವಾದ ಮಳೆಗಳು ಸುರಿದು ಎಲ್ಲಾ ಪ್ರದೇಶಗಳಲ್ಲೂ ಪೈರು ಪಚ್ಚೆಗಳು ಹಾಳಾದವೆಂದು ತಂತೀ ವರ್ತಮಾನ ಬಂದಿದೆ.

❖❖❖

ವಿಲಾಯತಿಯ ಡಾಕ್ಟರುಗಳು ನಾರು ಹುಣ್ಣಿಗೆ ಪರಿಹಾರವನ್ನೂ ಚಿಕಿತ್ಸೆ ಔಷಧಗಳನ್ನೂ ಕಂಡು ಹಿಡಿಯಬೇಕೆಂದು ಅನೇಕ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಅವರ ಖರ್ಚು ಮುಂತಾದದ್ದಕ್ಕೆ ಒಂದು ಫಂಡು ಏರ್ಪಾಡಾಗಿರುವುದು ಈ ಫಂಡಿಗೆ ಬಿಷಪಬೆಸ್ಲೀ ಎಂಬ ದಂಪತಿಗಳು ಆರು ಲಕ್ಷ ರೂಪಾಯಿ ಧರ್ಮ ಕೊಟ್ಟರು

❖❖❖

ಜರ್ಮನಿ ರಾಜ್ಯದ ಚಕ್ರವರ್ತಿಯವರು ತಮ್ಮ ರಾಜ್ಯದ ಕಾರ್ಖಾನೆಯಿಂದ ಆಫ್ರಿಕಕ್ಕೆ ಸೇರಿದ ಅಬ್ಸೀನಿಯಾ ದೇಶಕ್ಕೆ ಯಾರೂ ಯುದ್ಧ ಸಾಮಗ್ರಿಗಳನ್ನಾಗಲಿ ಮದ್ದು ಗುಂಡುಗಳನ್ನಾಗಲಿ ರಫ್ತುಮಾಡಲೇ ಕೂಡದೆಂದು ಆಜ್ಞೆಮಾಡಿ ತಡೆದಿದ್ದರು ಚಕ್ರವರ್ತಿಯವರು ಈಗ ಆ ತಡೆಯನ್ನು ತೆಗೆದುಹಾಕಿರುತ್ತಾರೆಂದು ತಂತೀ ವರ್ತಮಾನ ಬಂದಿದೆ.

❖❖❖

ಟರ್ಕಿಯ ರಾಜ್ಯದಲ್ಲಿ ಮಹಾ ಐಶ್ವರ್ಯವಂತನಾಗಿದ್ದ ಒಬ್ಬ ಪಾರ್ಸಿಯನ್ನು ಕೆಲವು ದುಷ್ಟರು ಆತನ ಮನೆಯಲ್ಲೇ ಕೊಲೆ ಮಾಡಿದರು. ಸರ್ಕಾರದವರು ಕೊಲೆಗಾರರನ್ನು ಹಿಡಿದು ಇಟ್ಟುಕೊಂಡಿದ್ದು ಕಾರಣಾಂತರದಿಂದ ಅವರನ್ನು ಬಿಟ್ಟುಬಿಟ್ಟರು. ಈ ಸುದ್ದಿಯನ್ನು ಬೊಂಬಾಯಿ ಪಟ್ಟಣದ ಪಾರ್ಸಿ ಜನರು ಕೇಳಿ ಅಲ್ಲಿನ ಅಧಿಕಾರಿಗಳ ಮೇಲೆ ಅಸಮಾಧಾನಪಡುತ್ತಿದ್ದಾರೆ

❖❖❖

ಅಮೇರಿಕಕ್ಕೆ ಸೇರಿದ ಗ್ವಾಟಿಮಾಲಾ ಎಂಬ ಸ್ವತಂತ್ರ ಪ್ರಜಾಪ್ರಭುತ್ವದಲ್ಲಿ ಪ್ರೆಸಿಡೆಂಟ್ ಕಬ್ರೇರಾ ಯವರು ತಮ್ಮನ್ನು ಕೊಲ್ಲಬೇಕೆಂದು ಪ್ರಯತ್ನಪಡಿಸಿದರೆಂದು ಕೇಳಿ ೧೩೦ ಜನ ದೊಡ್ಡ ಮನುಷ್ಯರನ್ನು ಪ್ರಜೆಗಳನ್ನೂ ಹಿಡಿದು ಸೆರೆಮನೆಗೆ ಕಳುಹಿಸಿದ್ದಲ್ಲದೆ ಆ ಪ್ರತಿ ಯೊಬ್ಬನಿಗೂ ದಯದಾಕ್ಷಿಣ್ಯ ಮಾಡದೆ ಅವರಲ್ಲಿ ಕೆಲವರನ್ನು ಗಲ್ಲಿಗೆ ಏರುವಂತೆ ಮರಣ ದಂಡನೆಯನ್ನು ವಿಧಿಸಿದಾರೆ.

❖❖❖

ಟರ್ಕಿಯ ರಾಜ್ಯದಲ್ಲಿ ಸುಲ್ತಾನರ ಚಿಕ್ಕಪ್ಪನಾದ ಪ್ರಿನ್ಸ್ ಹಾಬಿಬ್ ಸುಲ್ತಾನ ಎಂಬುವನು ಯುದ್ಧದ ಇಲಾಖೆಯ ಮಂತ್ರಿಯಾಗಿದ್ದಾನೆ. ಕಳೆದ ವಾರ ಆ ರಾಜ್ಯದ ಪಾರ್ಲಿಮೆಂಟಿನಲ್ಲಿ ಯುದ್ಧದ ಇಲಾಖೆಯ ಆಡಳಿತದ ವಿಷಯದಲ್ಲಿ ಚರ್ಚೆಯಾಯಿತು ಹಾಜರಿದ್ದ ೧೬೦ ಮೆಂಬರುಗಳ ಪೈಕಿ ೧೬೭ ಜನರು ಆ ಮಂತ್ರಿಯನ್ನು ಕೆಲಸದಿಂದ ವಜಾ ಮಾಡಬೇಕೆಂದು ಸಮ್ಮತಿ ಹಾಕಿದರು ಅದ್ದರಿಂದ ಸಾ ಸುಲ್ತಾನರು ಆತನನ್ನು ಕೆಲಸದಿಂದ ತೆಗೆದುಬಿಟ್ಟಿದ್ದಾರೆ

❖❖❖

ಲಾರ್ಡ್ ಕ್ರೋಮರ್ ಯವರು ಈಜಿಪ್ಟಿನಲ್ಲಿ ಮಹಾ ಘನತರವಾದ ರಾಜ್ಯಾಭಿವೃದ್ಧಿಯ ಕಾರ್ಯವನ್ನು ನಡಿಸಿರುತ್ತಾರಾದ್ದರಿಂದ ಅವರಿಗೆ ಬಹುಮಾನ ರೂಪವಾಗಿ ಐವತ್ತು ಲಕ್ಷ ರೂಪಾಯನ್ನು ಇಂಗ್ಲೆಂಡ್ ಖಜಾನೆಯಿಂದ ಕೊಡಬೇಕೆಂಬದಾಗಿ ವಿಲಾಯತಿ ರಾಜ್ಯದ ಮಹಾರಾಜಾ ಚಕ್ರವರ್ತಿಯವರು ಅಪ್ಪಣೆಕೊಡಿಸಿದಾರೆಂದು ಮಂತ್ರಿ ಶ್ರೇಷ್ಠರಾದ ಸರ್ ಹೆನ್ರಿ ಕ್ಯಾಂಬೆಲ್ ಬ್ಯಾನರ್ಮನ್ ರವರು ಹೌಸ್ ಆಫ್ ಕಾಮನ್ಸ್ ಎಂಬ ಪಾರ್ಲಿಮೆಂಟ್ ಸಭೆಯಲ್ಲಿ ಮೆಂಬರುಗಳಿಗೆ ತಿಳಿಯಪಡಿಸಿದರು

❖❖❖

ಉತ್ತರಧ್ರುವವನ್ನು ಪರಿಶೋಧನೆ ಮಾಡಿಕೊಂಡು ಬರುವುದಕ್ಕಾಗಿ ವಾಲ್ಟರ್ ವೆಲ್ಮನ್ ಎಂಬ ಶಾಸ್ತ್ರಜ್ಞರು ಎರಡು ಮೂರಾವರ್ತಿ ಹೊಸ ತರಹಾ ವಿಮಾನಗಳನ್ನು ಕಟ್ಟಿ ಅದರಲ್ಲಿ ಪ್ರಯಾಣಮಾಡಿ ಕೆಲವು ದೂರ ಹೋಗುವಷ್ಟರಲ್ಲೇ ಅನಿರೀಕ್ಷ್ಯವಾದ ಕಷ್ಟಗಳು ಒದಗಿದ್ದರಿಂದ ವಾಪಸು ಬಂದುಬಿಟ್ಟರಷ್ಟೆ. ಈಗ ಅವರು ತಮ್ಮ ಅಪೇಕ್ಷೆಯನ್ನು ನೆರವೇರಿಸುವುದಕ್ಕೆ ಇನ್ನೊಂದು ತರಹಾ ವಿಮಾನವನ್ನು ತಯಾರುಮಾಡಿ ಸಿದ್ಧಪಡಿಸಿಕೊಂಡಿದಾರೆಂತಲೂ, ಸ್ಪಿಟ್ಸ್ ಬರ್ಗ ಪಟ್ಟಣದಲ್ಲಿ ಇರುತ್ತಾರೆಂತಲೂ ತಿಳಿದುಬಂದಿದೆ

❖❖❖

ಅಮೇರಿಕಕ್ಕೆ ಸೇರಿದ ಸ್ಯಾನ್ ಫ್ರಾನ್ಸಿಸ್ಕೋ ಪಟ್ಟಣದ ಬಳಿ ಸಮುದ್ರದಲ್ಲಿ ಮಂಜು ವಿಶೇಷವಾಗಿ ಸುರಿಯುತ್ತಿದ್ದಾಗ ಸ್ಯಾನ್ ಪೆಡ್ರೋ ಎಂಬ ಹಡಗು ಎದುರಿಗೆ ಬರುತ್ತಿದ್ದ ಕೊಲಂಬಿಯಾ ಎಂಬ ಹಡಗನ್ನು ಕಾಣದೆ ಅದಕ್ಕೆ ಬಡಿದದ್ದರಿಂದ ಕೊಲಂಬಿಯಾ ಎಂಬ ಹಡಗು ಒಡೆದು ಸಮುದ್ರದೊಳಗೆ ಮುಳುಗಿಹೋಯಿತು ಅದರಲ್ಲಿದ್ದ ೨೦೦ ಜನರು ಸತ್ತರೆಂತಲೂ ೧೦ ಮಂದಿ ಬದುಕಿಬಂದರೆಂತಲೂ ಮೊದಲನೇ ವರ್ತಮಾನ ಬಂದಿತು ಈಚೆಗೆ ಆ ಹಡಗಿನ ಅಧಿಪತಿ ೧೧೦ ಜನರು ನೀರಿನಪಾಲಾದರೆಂದು ಎರಡನೇ ಸುದ್ದಿ ಬಂತು ಅಗ್ನಿಬೋಟಿಗೆ ಆ ಹಡಗಿನಲ್ಲಿದ್ದ ಜನರ ಪೈಕಿ ೧೫೪ ಮಂದಿಯನ್ನು ಮತ್ತೊಂದು ಹಡಗು ಬದುಕಿಸಿಕೊಂಡು ಬಂದಿರುವುದಾಗಿಯೂ, ಅರವತ್ತು ಜನರು ಸತ್ತುಹೋದರೆಂತಲೂ ಮೂರನೆಯ ತಂತೀ ವರ್ತಮಾನ ಬಂದಿದೆ

❖❖❖

ಅಮೇರಿಕಕ್ಕೆ ಸೇರಿದ ನ್ಯೂಜರ್ಸಿಯಲ್ಲಿ ಸ್ಯಾಮ್ಯುಯಲ್ ಸ್ಮಿತ್ ಎಂಬೊಬ್ಬನು ಕುಡುಕನಾಗಿ ಅನೇಕ ವೇಳೆ ಮ್ಯಾಜಿಸ್ಟ್ರೇಟರಿಂದ ಶಿಕ್ಷೆಯನ್ನು ಅನುಭವಿಸಿದನು. ಕಡೇಸಲ ಅದೇ ಅಪರಾಧವು ಅವನ ಮೇಲೆ ರುಜುವಾತಾದಾಗ ಆ ಮ್ಯಾಜಿಸ್ಟ್ರೇಟರು ಬೇಗುಸ್ಸೆಪಟ್ಟು ನಿನಗೆ ಏನು ಮಾಡಿದರೆ ನಿನ್ನ ದುಷ್ಕಾರ್ಯವನ್ನು ಬಿಡುವೆ ಎಂದು ಕೇಳಿದರು. ಅದಕ್ಕವನು ತನ್ನ ಹೆಂಡತಿ ಯಾವ ಶಿಕ್ಷೆ ಕೊಡುವಳೋ ಆ ಶಿಕ್ಷೆಯನ್ನು ಅನುಭವಿಸುತ್ತೇನೆಂದು ಹೇಳಿದನು. ಆದರಂತೆ ಮ್ಯಾಜಿಸ್ಟ್ರೇಟರು ಒಪ್ಪಿ ಅವನ ಹೆಂಡತಿಯನ್ನು ಕೋರ್ಟಿಗೆ ಕರೆಸಿ, ಆಕೆಗೆ ತಮ್ಮ ಸ್ಥಾನವನ್ನು ಬಿಟ್ಟರು. ಆಕೆ ಬುದ್ಧಿಯಾಗಿ ಕುಳಿತು ತನ್ನ ಗಂಡನನ್ನು ಕುರಿತು—"ಸ್ಯಾಮ್ಯುಯಲ್, ನೀನು ಜೈಲಿನಲ್ಲಿ ೩೦ ದಿನ ಇದ್ದು ಬಾ. ನಾನೂ ನನ್ನ ಐದು ಮಕ್ಕಳೂ ಜೀವನ ಮಾಡ ಬಲ್ಲೆವು. ಜೈಲಿನಲ್ಲಿ ದುಡಿದಾದರೂ ನೀನು ಆ ದುರಭ್ಯಾಸವನ್ನು ಬಿಟ್ಟರಾದೀತು" ಎಂದು ಹೇಳಿದಳು. ಮ್ಯಾಜಿಸ್ಟ್ರೇಟರು ಅದೇ ರೀತಿ ಅವನಿಗೆ ಒಂದು ತಿಂಗಳ ಸಜಾ ವಿಧಿಸಿ, ಅವನನ್ನು ಜೈಲಿಗೆ ಕಳುಹಿಸಿಕೊಟ್ಟರು. ಹೆಂಡತಿಯು ಗಂಡನಿಗೆ ಶಿಕ್ಷೆಮಾಡಿದ್ದು ಇದೇ ಮೊದಲು.

❖❖❖

ಜಪಾನಿನವರು ಕೊರಿಯಾ ರಾಜ್ಯವನ್ನು ಆಕ್ರಮಿಸಿಕೊಂಡು ಕರಾರಿಗೆ ವಿರೋಧವಾಗಿ ನಡೆಯುತ್ತಿದ್ದಾರೆಂದು ಕೊರಿಯಾ ಚಕ್ರವರ್ತಿಯವರ ಕಡೆಯಿಂದ ಕೆಲವು ದೊಡ್ಡ ಮನುಷ್ಯರು ಯೂರೋಪ್ ಖಂಡದಲ್ಲಿರುವ ಹೇಗ್ ಪಟ್ಟಣದ ಪಂಚಾಯತಿ ಕೋರ್ಟಿಗೆ ಹೋಗಿ ಜಪಾನಿನವರ ಮೇಲೆ ಫಿರ್ಯಾದು ಹೇಳಿದಾಗ ಅಮೇರಿಕದ ಪ್ರತಿನಿಧಿಯು ಅವರನ್ನು ಕುರಿತು—ನಿಮ್ಮ ದೂರನ್ನೆಲ್ಲಾ ಅಮೇರಿಕಕ್ಕೆ ಹೋಗಿ ಅಲ್ಲಿ ಹೇಳಿಕೊಳ್ಳಿ; ಇಲ್ಲಿ ಈ ವಿಷಯವನ್ನು ಹಿಡಿದು ತನಿಖೆ ಮಾಡುವುದಿಲ್ಲವೆಂದು ಹೇಳಿ ಕಳುಹಿಸಿದರು ಈಗ ಆ ಕೊರಿಯಾ ಪ್ರತಿನಿಧಿಗಳು ವಿಲಾಯತಿಗೆ ಹೋಗಿ ಅಲ್ಲಿಂದ ಜಹಜು ಹತ್ತಿ ಅಮೇರಿಕಕ್ಕೆ ಪ್ರಯಾಣ ಮಾಡಿರುತ್ತಾರೆ ವಿಲಾಯತಿಯಲ್ಲಿ ಒಬ್ಬ ಪತ್ರಿಕಾದಾರರು ಆ ದೊಡ್ಡ ಮನುಷ್ಯರನ್ನು ಕಂಡು ಪ್ರಶ್ನೆ ಮಾಡಿದಾಗ ಅವರ ಮುಖಂಡನಾದ ಪ್ರಿನ್ಸ್ ಯಾಂಗ್ ಎಂಬುವನು ಕೇಳಿದ್ದೇನೆಂದರೆ— ನಾವು ಅಮೇರಿಕಕ್ಕೆ ಹೋಗಿ ಅಲ್ಲಿನ ಪ್ರೆಸಿಡೆಂಟ್ ರೂಸ್‌ವೆಲ್ಟ್ ಯವರನ್ನು ಕಂಡು ಅವರ ಸಂಗಡ ಹೇಳಿಕೊಳ್ಳುತ್ತೇವೆ. ತರುವಾಯ ಅಮೇರಿಕದ ಮುಖ್ಯ ಪಟ್ಟಣಗಳಿಗೆಲ್ಲಾ ಹೋಗಿ ವಾಪಸು ವಿಲಾಯತಿಗೆ ಬರುತ್ತೇವೆ ನಮ್ಮ ನಮ್ಮನ್ನು ಚಕ್ರವರ್ತಿಯವರೇ ಕಳುಹಿಸಿರುತ್ತಾರೆ ಜಪಾನಿನವರು ಚಕ್ರವರ್ತಿಯವರಿಗೆ ರಾಜ್ಯಪದವಿಯನ್ನು ತಪ್ಪಿಸಿಬಿಡುವವರಾಗಿದಾರೆಂದು ಚಕ್ರವರ್ತಿಯವರು ಮೊದಲೇ ತಿಳಿದಿದ್ದದ್ದರಿಂದ ಅವರು ನಮ್ಮನ್ನು ಕಳುಹಿಸಿದಾಗ್ಗೆ ನಮ್ಮನ್ನು ಕುರಿತು—ನಾನು ಕೊಲ್ಲಲ್ಪಟ್ಟಾಗ್ಯೂ ನೀವು ನಿಮ್ಮ ಈ ಕೆಲಸವನ್ನು ಬಿಡಬೇಡಿ. ಎಲ್ಲಾ ರಾಜ್ಯಗಳಿಗೂ ಹೋಗಿ ಜಪಾನಿನವರು ನನಗೆ ಮಾಡಿರುವ ಅನ್ಯಾಯಗಳನ್ನೆಲ್ಲಾ ತಿಳಿಸುತ್ತಾ ಬನ್ನಿ ಮತ್ತು ಹ್ಯಾಗಾದರೂ ಮಾಡಿ ನಮ್ಮ ರಾಜ್ಯವು ಪುನಃ ಸ್ವತಂತ್ರಾಧಿಕಾರವನ್ನು ಪಡೆಯುವಂತೆ ಶ್ರಮಿಸಬೇಕೆಂದು ಹೇಳಿದರು. ಇದಲ್ಲದೆ ಜಪಾನಿನವರು ದುಷ್ಟರೂ ಕೊರಿಯಾದಲ್ಲಿರುವ ಪ್ರತಿನಿಧಿಗಳಾದ ಚಕ್ರವರ್ತಿಯವರು ರಾಜ್ಯಾಧಿಪತ್ಯವನ್ನು ಬಿಟ್ಟುಬಿಡಬೇಕಾಯಿತಲ್ಲದೆ ಬೇರೇನೂ ಇಲ್ಲ ಎಂದಾಗ ಆ ದೊಡ್ಡ ಮನುಷ್ಯರು ಆ ಪತ್ರಿಕಾದಾರರ ಕೂಡ ಹೇಳಿದರು

ಪ್ರಕಟನೆಗಳು.

ಬಾಳ್ಯದ ವೆಂಕಟಾಚಲ ಪಂಡಿತ, ಶ್ರೀಸೀತಾರಾಮುವ ವೈದ್ಯಶಾಲಾ, ಕೊಳ್ಳೇಗಾಲ, ಇವರ ಸಿದ್ಧೌಷಧಗಳು.

20-24

೧ ರೋಗಶಾಮಯಹರ ಕಸ್ತೂರೀ ಮಾತ್ರೆ.—ಈ ಮಾತ್ರೆಗಳನ್ನು ಜಲಜಿವ ಭಸ್ಮ, ಚಿನ್ನ ಹರೀಖ, ಉತ್ತಮವಾದ ಕಸ್ತೂರಿ ಮೊದಲಾದ ಬೆಲೆಬಾಳುವ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ.

ಚಳಿಜ್ವರ, ಜ್ವರ, ಹೊಟ್ಟೆಶೂಲೆ, ಸಂಧುಗಳ ನೋವು, ಮೈ ಕೈಕಾಲು ಕೊಡತ (ಭಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿಮಾಂದ್ಯ, ಜಲ್ಲು ನೋವು, ಕೆಮ್ಮು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ.

ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಬಾಧೆಗೂ ದಾರಿಕೊಡದೆ, ನೀರು ಹವಾಗಳ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧಿ ಮಾಡಿ ವೃದ್ಧಿಪಡಿಸುತ್ತದೆ.

ಸ್ತ್ರೀಯರ ಋತುಶೂಲೆ, ಮಕ್ಕಳ ಸೆಳವು, ಪ್ರಸವ ಸನ್ನಿಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ರೋಗಕ್ಕೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.

೨೦ ಮಾತ್ರೆಯುಳ್ಳ ಕುಪ್ಪಿಗೆ ೩ ಆಣೆ; ೪ ಕುಪ್ಪಿಗೆ ೧ ರೂಪಾಯಿ. ೧ ರಿಂದ ೧೦ ಕುಪ್ಪಿ ವರೆಗೆ ಪೋಸ್ಟೇಜು ೪ ಆಣೆ.

ವಿಳಾಸ:—ಎಸ್. ಎಸ್. ಆರ್. ವೈದ್ಯಶಾಲಾ, ಲಕ್ಷ್ಮೀವಿಲಾಸ ರೋಡ್, ಮೈಸೂರು

ಇಲ್ಲಿ ನೋಡಿ.

66-3

ಒಳ್ಳೇ ಹಸನಾದ ಬಿಳೀ ಮೆಣಸಿನ ಕಾಳು ಹಿಂಡಿ, ಕರೀ ಹರಳು ಹಿಂಡಿ, ಹೊಂಗೇ ಹಿಂಡಿ, ಮತ್ತು ಬೇವಿನ ಹಿಂಡಿಗಳು ಬೇಕಾಗಿವೆ. ಹಸನಾದ ಮಾಲಿಗೆ ಖರೀದಿ ಚನ್ನಾಗಿ ಸಿಕ್ಕುತ್ತದೆ

ವಿಳಾಸ:—ಮೆಸರ್ಸ್ ಬೀಟ್ಕ ಹೆ ಅಂಡ್ ಸನ್, ಹುಣಸೂರು.

ಬೇಕಾಗಿದೆ.

67-3

೩೦ ಗಂಟೆಗಳು ನಡೆಯುವ ಚಲಿಸುವುಳ್ಳ ನಮ್ಮ ಲೀವರ್ ಗಡಿಯಾರ(ವಾಚು)ಗಳನ್ನು ಕೊಳ್ಳೆ (ಬಸೂರ ಹದಿನಾಲ್ಕು) ಉಪಯೋಗವಾದ ಬಹುಮಾನ ಪದಾರ್ಥಗಳ ಸಹಿತ ಕೊಂಡುಕೊಳ್ಳತಕ್ಕವರು ಬೇಕು ಬಹುಮಾನ ಪದಾರ್ಥಗಳನ್ನು ಬರೆದು ತರಿಸಿಕೊಳ್ಳಿ. ವಿಳಾಸ:—ಎಂ. ಎ. ಘಾಟಾಲಾ ಕಂಪನಿ, ಚಿತ್ತೂರು, ಉತ್ತರ ಆರ್ಕಾಡು.

ಲೋವರ್ ಸೆಕೆಂಡರಿ. ಕ್ಷೇತ್ರಗಣಿತ. ಅಪ್ಪರ್ ಸೆಕೆಂಡರಿ.

76-1

ನೇರ್ಲ್ಕಂಡ ವಿದ್ಯಾರ್ಥಿಗಳಿಗೂ ಟ್ರೈನಿಂಗ್ ಇನ್ಸ್‌ಪೆಕ್ಟರ್ ಒವರ್ಸಿಯರುಗಳಿಗೆ ಬಹು ಉಪಯೋಗವಾಗುವಂತೆಯೂ ಸುಲಭವಾಗಿ ತಿಳಿಯುವಂತೆ ಬರುವಂತೆ ಸವಿಸ್ತರವಾಗಿ ರಚಿಸಲ್ಪಟ್ಟ ೩೫ ಮಾದರಿ ಉದಾಹರಣೆಗಳೂ ಪಟಗಳೂ ೩೦೦ ವಿವಿಧ ಪ್ರಶ್ನೆಗಳೂ ಕೂಡಿದ್ದಾಗಿರುವದೆ. ಪ್ರತಿ ಅಧ್ಯಾಯದಲ್ಲಿಯೂ ಅಭ್ಯಾಸಗಳೂ ಸೂತ್ರಗಳೂ ಇವೆ ಕ್ರಯ ೦—೩—೦.

ವಿಳಾಸ-ಎಂ. ಕೃಷ್ಣಯ್ಯ. 72 ಮೀವರ್ಸ್ ಲೈನ್, ಮೈಸೂರು.

ಕಬ್ಬಿನ ಹಾಲು ತೆಗೆಯುವ ಗಾಣಗಳು.

68-2

ಈ ಗಾಣಗಳಿಗೆ ೬—೮—೩ ಕಡೆ ಕಬ್ಬು ಕೊಟ್ಟು ಹಾಲು ತೆಗೆಯಬಹುದು. ಬಹಳ ಗಟ್ಟಿಯಾದ ಸಾಮಾನಿಂದ ತಯಾರಿಸಿದೆ ಈ ಗಾಣದಿಂದ ಹೆಚ್ಚು ಲಾಭ ಬಂದೀತು ಇದಕ್ಕೆ ಸಮಾನವಾದ ಗಾಣ ಬೇರೊಂದು ಸಿಕ್ಕಲಾರದು ಈ ವಿಳಾಸಕ್ಕೆ ಬರೆದರೆ ಎಲ್ಲಾ ತಿಳಿಯುತ್ತೆ

ಮೆಕೆಂಜಿ ಕಂಪನಿ ಕೆಂಗೇರಿ ರೋಡ್, ಬೆಂಗಳೂರು ಸಿಟಿ.

ಅತಿ ಆಶ್ಚರ್ಯ! ಎಲೆಕ್ಟ್ರಿಕ್ ಕೈದೀಪ ಸುಲಭ ಖರೀದಿ!!

73 2

ಈ ದೀಪವನ್ನು ಜೇಬಿನಲ್ಲಿ ಇಟ್ಟುಕೊಳ್ಳಬಹುದು ಹಾಗೆ ಚಿಕ್ಕ ಸ್ಥಳದಲ್ಲಿ ಮಾಡಿರುತ್ತೆ. ಇದಕ್ಕೆ ಬೆಂಕಿ ಒತ್ತಿ, ಎಣ್ಣೆ ಸ್ವಲ್ಪವೂ ಅವಶ್ಯಕವಿಲ್ಲ. ಇದು ವಿದ್ಯುಚ್ಛಕ್ತಿಯಿಂದ ಉರಿಯುವದು ಇದರಿಂದ ಯಾವ ಅಪಾಯವೂ ಉಂಟಾಗಲಿಕ್ಕಿಲ್ಲ

ಇದರಿಂದ ಪ್ರಯೋಜನಗಳು ಬಹಳ ಅನುಕೂಲ. ಎಂಥಾ ದೊಡ್ಡ ಗಾಳಿಗೂ ಆರುವದಿಲ್ಲವು. ಇದನ್ನು ಸೋಪು ಜಾಗಳು ಕಾಡುಗಳಲ್ಲಿ ಪ್ರಯಾಣ ಮಾಡುವದಕ್ಕೆ ಬಹಳ ಉಪಯೋಗಿಸುತ್ತಾರೆ ಬೇಕಾದಾಗ ಈ ಪಟ್ಟೆಗೆ ಮೇಲೆ ಇಟ್ಟಿರುವ ಬಟನನ್ನು ಒತ್ತಿದರೆ ಬೆಳಕು ಕೊಡುವುದು ೧೦೦ ದೀಪಗಳಿಗೆ ಆಗುವಷ್ಟು ಬೆಳಕು ಕೊಡುವದು ಇದು ಎಷ್ಟು ಸಿವನವದರು. ಬಳಿಕ ಬರುವದು. ಉಪಯೋಗಿಸುವ ವಿಧಾನವು ಇದರ ಸಂಗಡ ಬರೆದು ಇಟ್ಟಿದೆ

ಕ್ರಯ ರೂ ೩—೦—೦ ವಿ. ಪಿ. ಪಿ. ಛಾರ್ಜ ೬ ಆಣೆ.

ಸೂಚನೆ:—ಆಗ್ರಾನ್ಸ್ ಅಪ್ಪರೆಂಟಿಸ್ ನೇಮಿಸಿಕೊಳ್ಳತಕ್ಕವರಿಗೆ ಬಹುಮಾನವಾಗಿ ರೂ ೫—೮—೦ ಕ್ಕೆ ಬೆಲೆ ನಮ್ಮ ಕೂಡ್ ಕಳುಹಿಸುವೆವು ಇದರಿಂದ ಒಂದು ಬೆಳ್ಳಿ ಮಡಿ ಅವಶ್ಯ ಸಿಗುತ್ತದೆ

ವಿಳಾಸ ಎಟ ಸಿ ನಾಗಲಿಂಗ ಅಂಡ್ ಕಂಪನಿ, ಸಾಹುಕಾರ್ ಪೇಟೆ, ಮದರಾಸು.

ತರಿಸಿಕೊಳ್ಳಿ! ಬೇಗ ತರಿಸಿಕೊಳ್ಳಿ!! ಇದೇ ಒಳ್ಳೇ ಸಮಯ!!!

70 2

ತಡಮಾಡಿದರೆ ಪ್ರತಿಗಳು ಮುಗಿದುಹೋದಾವು.

ನೇತ್ರಾನಂದಕರಗಳಾದ ಚಿತ್ರಗಳಿಂದಲೂ, ನೀತಿರಸಪ್ರಧಾನವಾದ ವಿಷಯಗಳಿಂದಲೂ ರಂಜಿಸುವದಲ್ಲದೆ, ಸಕಲ ಜನಗಳೂ ಕೊಳ್ಳುವುದಕ್ಕೆ ಸುಲಭವಾದ ಕ್ರಯಕ್ಕೆ ಸಿಕ್ಕುವವುಗಳಾಗಿಯೂ ಇವೆ. ಇವುಗಳು ಯಾವುವೆಂದರೆ:—

ಎಡ್ವರ್ಡ್ ಚಕ್ರವರ್ತಿಯವರ ಮತ್ತು ಅಲೆಕ್ಸಾಂಡ್ರಾ	ಕ್ರಯ.
ಚಕ್ರವರ್ತಿನಿಯವರ ಚರಿತ್ರೆ . .	೦—೩—೦
ಎಡ್ವರ್ಡ್ ಸಾರ್ವಭೌಮರ ಪಟ್ಟಾಭಿಷೇಕ . .	೦—೨—೬
ಘನತೆಯುಳ್ಳ ಸ್ತ್ರೀಯರ ಚರಿತ್ರೆ . .	೦—೨—೬
ದಕ್ಷಿಣ ಆಫ್ರಿಕವೂ ಅದರ ನಿವಾಸಿಗಳೂ . .	೦—೨—೬
ಚೀನಾ ಚಕ್ರಾಧಿಪತ್ಯವೂ ಅದರ ನಿವಾಸಿಗಳೂ .	೦—೨—೬
ಬರ್ಮಾ ದೇಶವೂ ಬರ್ಮೀಯರೂ . .	೦—೨—೦
ಪುರಾತನ ಗ್ರೀಕರ ಕಥೆಗಳು . .	೦—೨—೦
ಪುರಾತನ ರೋಮನರ ಕಥೆಗಳು . .	೦—೬—೦
ಪಕ್ಷಿಗಳ ಚಿತ್ರಗಳೂ ಕಥೆಗಳೂ . .	೦—೦—೦
ಕ್ರಿಮಿವರ್ಗ ವರ್ಣನೆ . . .	೦—೧—೦
ದೇವರೆಂಬ ವಿಚಿತ್ರವಾದ ನನ್ನ ಮನೆ .	೦—೧—೦
ಚಿಕ್ಕವರಿಗೆ ಹೇಳಿದ ಕಥೆಗಳು . .	೦—೧—೦
ಪ್ರಾಚೀನಕಾಲದ ವಿಲಕ್ಷಣ ಜೀವರಾಶಿಗಳ ವರ್ಣನೆ	೦—೧—೦
ಹೊಸ ಗಾಡಿಗಳನ್ನು ಕಲ್ಪಿಸಿದ ಜಾರ್ಜ್ ಸ್ಟೀವನ್ಸನ್	
ಎಂಬಾತನ ಚರಿತ್ರೆ . .	೦—೧—೦

ವಿಳಾಸ:—ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

ಮಿಸೆಸ್ ಅಡ್ಡಿ ಹಾರ್ಡಿಂಜ್ | ಮಿಸೆಸ್ ಮೇರಿ ಮೇಯರ್ | ಮಿಸೆಸ್ ಫ್ರಾನ್ಸಿಸ್ ವಿಲ್ಸರ್ 38 17

ಮಿಸೆಸ್ ಅಡ್ಡಿ ಹಾರ್ಡಿಂಜ್, ೮೧೦ ಕೋರ್ಟ್ ಬೀದಿ, ಸ್ಯಾರಾಕ್ಯೂಸ್, ನ್ಯೂಯಾರ್ಕ್ ಈಕೆ ಬರೆಯುವುದೇನೆಂದರೆ—

' ನಾನು ಕಳೆದ ಹನ್ನೆರಡು ವರುಷಗಳಿಂದಲೂ ಪೆರೂನಾವನ್ನು ಉಪಯೋಗಿಸುತ್ತಿದ್ದೇನೆ ಇದಕ್ಕೆ ಸಮಾನವಾದ ಔಷಧವು ಪ್ರಪಂಚದಲ್ಲೇ ಇಲ್ಲವೆಂದು ನಿಜವಾಗಿ ಹೇಳಬಲ್ಲೆನು

ನನಗೆ ಎಲ್ಲಾ ವಿಧವಾದ ಶೀತಗಳನ್ನೂ ಇತರ ಅನೇಕ ಕಾಯಿಲೆಗಳನ್ನೂ ಬಾರದಂತೆ ಈ ಔಷಧವು ಖಂಡಿತವಾಗಿ ತಡೆದಿರುತ್ತದೆ ನನ್ನ ಮನೆಯಲ್ಲಿ ಪೆರೂನಾ ಔಷಧದ ಸೀಸೆಯೊಂದು ಯಾವಾಗಲೂ ಇದ್ದೇ ಇರುವುದು ವರುಷಕ್ಕೆ ಎರಡು ಮೂರು ಸಲ ನನಗೆ ಗಂಟಲಲ್ಲಿ ಬಾಧೆಯುಂಟಾಗುತ್ತಲೇ ಇರುತ್ತದೆ

" ಖಂಡಿತವಾಗಿ ತಡೆಯುವ ಔಷಧ

' ಪ್ರತಿಸಲ ನನಗೆ ಹೀಗೆ ಉಂಟಾದಾಗಲೂ ಎರಡು ಮೂರು ವೇಳೆ ವೈದ್ಯನನ್ನು ನಾನು ಕರೆಸಿಕೊಳ್ಳಬೇಕಾಗಿತ್ತು ನಾನು ಪೆರೂನಾವನ್ನು ಉಪಯೋಗಿಸತಕ್ಕವಳಾಗಿದ್ದಾಗ್ಯೂ ಈಗ್ಗೆ ಸುಮಾರು ಎರಡು ವರುಷಗಳ ತನಕ ನನ್ನ ಗಂಟಲು ಬಾಧೆ ಯಾಸ್ಕರ ಅದನ್ನು ತೆಗೆದುಕೊಳ್ಳಬೇಕೆಂಬ ಯೋಚನೆಯೇ ನನಗೆ ಉಂಟಾಗಿರಲಿಲ್ಲ

ಈ ಬಾಧೆಯನ್ನು ತಡೆಯುವುದಕ್ಕೆ ಪೆರೂನಾವನ್ನು ತೆಗೆದುಕೊಂಡೆನು ಅಂದಿನಿಂದೀಚೆಗೆ ನನ್ನ ಗಂಟಲು ಎಲ್ಲಾ ವಿಧವಾದ ಬಾಧೆಯ ಕಷ್ಟಕೋಳ್ಳುವುದು ನಿವಾರಣೆಯಾಗಿದೆ ಎಂದು ಬಹಳ ಸಂತೋಷದಿಂದ ಹೇಳುತ್ತೇನೆ

ಆ ಗಂಟಲುಬಾಧೆಯನ್ನು ಪ್ರತಿಸಲವೂ ಪೆರೂನಾ ಸೇವನೆಯಿಂದ ತಡೆಯಬಲ್ಲೆನು ನಿಜವಾಗಿ ನಾನು ಪೆರೂನಾ ಇಲ್ಲದೆ ಒಂದು ನಿಮಿಷವೂ ಇರಲಾರೆನು '

ಕ್ಷಯರೋಗವನ್ನು ನಿವಾರಿಸುವುದಕ್ಕೆ ಸಕಲ ಜನಾಂಗಗಳೂ ವಿಶೇಷವಾದ ಪ್ರಯತ್ನಗಳನ್ನು ಮಾಡುತ್ತಲಿದ್ದಾರೆ

ಎಲ್ಲೆಲ್ಲೂ ಅನೇಕಾನೇಕ ಕ್ಷಯರೋಗಪೀಡಿತರನ್ನಿಟ್ಟು ಚಿಕಿತ್ಸೆ ಮಾಡುವುದಕ್ಕೆ ಸರ್ಕಾರಿ ಖರ್ಚಿನಿಂದ ವಿಸ್ತಾರವಾದ ಆಲಯಗಳನ್ನು ಸ್ಥಾಪನೆ ಮಾಡಿ ನಡಿಸುತ್ತಿದ್ದಾರೆಂದು ಕೇಳುತ್ತೇವೆ

ವೈದ್ಯವೇ ಕಸುಬಾಗಿ ಇಟ್ಟುಕೊಂಡಿರುವವರೆಲ್ಲಾ ಎಲ್ಲಾ ಸ್ಥಿತಿಗಳಲ್ಲೂ ಇರತಕ್ಕ ಕ್ಷಯರೋಗಪೀಡಿತರಿಗೆ ಚಿಕಿತ್ಸೆ ಮಾಡುವುದರಲ್ಲಿ ಬಿಸಿಲು, ನಿರ್ಮಲವಾದ ಹೊಸಗಾಳಿ, ಬಯಲುಪ್ರದೇಶ, ಇವುಗಳ ಮೂಲಕ ಮಾಡತಕ್ಕ ಚಿಕಿತ್ಸೆಗಳೇ ಪರಮಾವಶ್ಯವಾದ ಪರಿಹಾರಗಳೆಂದು ಸರ್ವಸಾಮಾನ್ಯವಾಗಿ ಒಪ್ಪಿಕೊಂಡಿರುತ್ತಾರೆ

ಪಾಕ್ಸ್ಟರ್ ಹಾರ್ಟ್‌ವ ಗರವರು ಅನೇಕ ವರುಷಗಳಿಂದಲೂ ನಿರ್ಮಲವಾದ ಹೊಸಗಾಳಿಯ ಚಿಕಿತ್ಸೆಯೇ ಕ್ಷಯರೋಗಕ್ಕೆ ಸರ್ವೋತ್ತಮವಾದ ಚಿಕಿತ್ಸೆಯೆಂದು ಹೇಳುತ್ತಾರೆ ಇದಲ್ಲದೆ ಈ ಬಿಳಿಯ ಪ್ಲೇಗೆಂಬ ರೋಗದ ನಾನಾ ತರದ ಕಠಿಣ ಬಾಧೆಗಳಿಗೆಲ್ಲಾ ಪೆರೂನಾ ಔಷಧವು ಬಹುಮಟ್ಟಿಗೆ ಪರಿಹಾರವನ್ನು ಕೊಡತಕ್ಕದ್ದೆಂದು ಒಪ್ಪಿಕೊಂಡಿದ್ದಾರೆ

ಮಿಸೆಸ್ ಮೇರಿ ಮೇಯರ್ ಥಾಂಸ್ ಬೀದಿ, ಎಲ್‌ಮೋರ್ ಒಳ, ವಿಲ್ಲಿಯಮ್ಸ್ ಬರ್ಗ್ ನಾ, ನ್ಯೂಯಾರ್ಕ್, ಈಕೆ ಬರೆಯುವುದು—

ನಾನು ಅನೇಕ ವರುಷಗಳ ಪರ್ಯಂತ ನ್ಯುಮೋನಿಯಾ ಉಪದ್ರದಲ್ಲಿ ಕಷ್ಟಪಡುತ್ತಿದ್ದೆನು '

" ಅನೇಕ ವೇಳೆ ಅದರ ಬಾಧೆಯಿಂದ ರಾತ್ರಿಯಲ್ಲಿ ಅರ್ಧಭಾಗ ನನಗೆ ನಿದ್ರೆಯೇ ತಪ್ಪಿಹೋಗುತಿತ್ತು ನನಗೆ ಕ್ಷಯರೋಗ ಪ್ರಾಪ್ತವಾಗಿದೆ ಎಂದು ಅನೇಕರು ಯೋಚಿಸಿದ್ದರು

ಕ್ಷಯರೋಗವೆಂಬ ಹೆದರಿಕೆಯುಂಟಾಗಿತ್ತು

' ಎರಡು ವರುಷಗಳ ಕೆಳಗೆ ಒಬ್ಬ ಹೆಂಗಸು ಪೆರೂನಾವನ್ನು ಸೇವಿಸೆಂದು ಶಿಫಾರಸು ಮಾಡಿದಳು ನಾನು ಪೆರೂನಾ ತೆಗೆದುಕೊಳ್ಳುವುದಕ್ಕೆ ಪ್ರಾರಂಭ ಮಾಡಿದೆನು ಈಗ ನನ್ನ ಕೆಮ್ಮಲು ಉಸಿರುವೆಲ್ಲಾ ಸಂಪೂರ್ಣವಾಗಿ ವಾಸಿಯಾಗಿರುತ್ತದೆ

" ಪೆರೂನಾವು ನನ್ನ ಕಾಯಿಲೆಯನ್ನು ಪೂರ್ಣವಾಸಿಮಾಡಿತೆಂದು ಸಂತೋಷಪಟ್ಟು ಹೇಳುತ್ತೇನೆ ಆಗಾಗ್ಗೆ ನನಗೆ ಸ್ವಲ್ಪ ಅಲಸ್ಯವಾದಾಗಲೆಲ್ಲಾ ಪೆರೂನಾವನ್ನು ತೆಗೆದುಕೊಳ್ಳುತ್ತೇನೆ ಮತ್ತು ಅದನ್ನು ನನ್ನ ಮಕ್ಕಳಿಗೂ ಕೊಡುತ್ತೇನೆ

ಶೀತ, ನೆಗಡಿ, ಕೆಮ್ಮುಗಳಿಗೆ ಪೆರೂನಾ ಸರ್ವೋತ್ತಮವಾದ ಔಷಧವು ಅದರಿಂದ ನನಗೆ ಎಷ್ಟು ಸಹಾಯವಾಗಿದೆಯೋ ಅದನ್ನು ಅನೇಕ ಜನರಿಗೆ ವಿವರಿಸಿ ಹೇಳಿರುತ್ತೇನೆ '

ಪೆರೂನಾ ಎಂಬ ಔಷಧವು ಕೆಮ್ಮಲನ್ನು ಶಮನ ಮಾಡುವುದು ಶ್ಲೇಷ್ಮವನ್ನು ಕಡಮೆ ಮಾಡುತ್ತದೆ ರೋಗಿಗೆ ಬಲಕಾರಿಯಾಗಿದೆ, ಆಹಾರದಲ್ಲಿ ರುಚಿಯನ್ನು ಹೆಚ್ಚಿಸುವುದು ಮತ್ತು ಅನೇಕ ಸಂದರ್ಭಗಳಲ್ಲಿ ಸಹಾಯವಾದ ನಿದ್ರೆಯನ್ನು ಕೊಡುತ್ತದೆ

ಅದರ ಪೆರೂನಾ ಔಷಧವು ಕ್ಷಯರೋಗವನ್ನು ಹೀಗೆಯೇ ತಡೆಯುವುದರಲ್ಲಿ ಗುಣಕಾರಿಯಾಗುವುದು ಕ್ಷಯರೋಗ ಬಂದ ವೇಳೆ ಅದನ್ನು ನಿವಾರಣೆ ಮಾಡುವುದಕ್ಕೆ ಅಷ್ಟು ಬಲಕಾರಿಯಾದದ್ದಲ್ಲ

ಶೀತ ನೆಗಡಿ, ಕೆಮ್ಮುಗಳಿಂದಲೇ ಪ್ರಾರಂಭವಾಗಿ ಅಲಕ್ಷ್ಯಮಾಡಿದರೆ ಅದೇ ಅಂತ್ಯದಲ್ಲಿ ಕ್ಷಯರೋಗವಾಗಿ ಪರಿಣಮಿಸುತ್ತದೆಂದು ಎಲ್ಲಾ ಕಡೆಗಳಲ್ಲೂ ತಿಳಿದುಬಂದಿರೋಣದರಿಂದ ಅವುಗಳನ್ನೂ ನಿವಾರಣೆ ಮಾಡುವಂಥಾ ಔಷಧವೇ ಕ್ಷಯರೋಗ ಪರಿಹಾರದ ಔಷಧವೆಂದು ಪೂರ್ಣಭರವಸದಿಂದ ನಂಬಬೇಕಾಗಿದೆ

ಕ್ಷಯರೋಗದ ಪ್ರಾರಂಭದೆಸೆಯಲ್ಲೂ ಕಠಿಣತರವಾದ ಕೆಮ್ಮುಗಳನ್ನೂ ನಿಂತ ಶೀತ ನೆಗಡಿಗಳನ್ನೂ ಅನುಭವಿಸುತ್ತಿದ್ದ ಸಾವಿರಾರು ರೋಗಿಗಳು ಅವಕ್ಕೆಲ್ಲಾ ಪೆರೂನಾವೇ ಕ್ಷೇಮಕರವಾದ ಮತ್ತು ನಂಬಿಕೆಯಾದ ಪರಿಹಾರವೆಂದು ತಿಳಿಸಿರುತ್ತಾರೆ

ಮಿಸೆಸ್ ಫ್ರಾನ್ಸಿಸ್ ವಿಲ್ಸರ್, ೩೨ ನೆಲ್ಸರ್ ಬೀದಿ, ಕ್ವಿಂಸಿ, ಮ್ಯಾಸ್ ಎಂಬಾಕೆಯ ಬರೆಯುವುದೇನೆಂದರೆ —

ಕಾಯಿಲೆಯನ್ನು ಅನುಭವಿಸುತ್ತಿದ್ದಾಗ ನನ್ನ ಸ್ಥಿತಿಯನ್ನೂ ಈಗ ನಾನಿರುವ ಸ್ಥಿತಿಯನ್ನೂ ನೀವು ನೋಡಿದ ಪಕ್ಷದಲ್ಲಿ ನಾನು ಸಂತೋಷದಿಂದ ಪೆರೂನಾವನ್ನು ಹೊಗಳುವ ಮಾತುಗಳೇನೂ ವಿಶೇಷವಾದದ್ದಲ್ಲವೆಂದು ಧಾರಾಳವಾಗಿ ಒಪ್ಪಿಕೊಳ್ಳುತ್ತೀರಿ

' ಬಹಳ ಕಠಿಣವಾದ ಶೀತವು ನನಗೆ ಪ್ರಾಪ್ತವಾಗಿ ಅದರಿಂದ ನನ್ನ ಶ್ವಾಸಕೋಶವೂ ಶ್ವಾಸನಾಳಗಳೂ ಕೆಟ್ಟುಹೋಗಿದ್ದವು

" ನೀವು ಬತ್ತಿ ಹೇಳಿದ ಪ್ರಕಾರವೇ ನಾನು ಮಾಡುತ್ತಾ ಬಂದೆನು ಆರು ಬಾಟ್ಲುಗಳಷ್ಟು ಪೆರೂನಾವನ್ನು ಸೇವಿಸಿದಮೇಲೆ ನಾನು ಯಥಾಪ್ರಕಾರ ಹಾಸಿಗೆಯಿಂದ ಏಳುವಂತಾದೆನು

' ಪೆರೂನಾವು ಒಂದು ಅದ್ಭುತವಾದ ಔಷಧವೆಂದು ನಾನು ಯೋಚಿಸಿಕೊಂಡಿರುತ್ತೇನೆ '

ಹೊಸದಾಗಿ ಪ್ರಾಪ್ತವಾದ ಕೃತ್ಯವನ್ನು ಅತಿ ಜಾಗ್ರತೆಯಾಗಿ ಪರಿಹರಿಸುವುದರಲ್ಲೂ ನಿಂತ ಶೀತ ನೆಗಡಿಗಳನ್ನು ನಿವಾರಣೆ ಮಾಡುವುದರಲ್ಲೂ ಪೆರೂನಾವು ಈ ದೇಶದ ಎಲ್ಲಾ ಕಡೆಗಳಲ್ಲೂ ಪ್ರಸಿದ್ಧಿ ಪಡೆದಿರುತ್ತದೆ ಕ್ಷಯರೋಗಕ್ಕೆ ಪೆರೂನಾ ಇದವು ಬಹಳ ಒಳ್ಳೆಯ ಪರಿಹಾರವೆಂದು ಪ್ರಸಿದ್ಧವಾಗಿರುತ್ತದೆ

ಕ್ಷಯರೋಗ ನಿವಾರಣೆ

ಮಿ॥ ವಿಲಿಯಂ ಸ್ವೆಯರ್ ೩೨ ಸ್ಟೈಲ್ ಬೀದಿ ಪಶ್ಚಿಮ ಫಿಲಡೆಲ್ಫಿಯಾ ಪಾ, ಎಂಬಾತನು ಬರೆಯುವದನ್ನು ಓದಿನೋಡಿ —

' ನನಗೆ ಒಂದಿಷ್ಟು ನೆಗಡಿ ಶೀತವನ್ನು ವಾಸಿಮಾಡಿಕೊಳ್ಳುವುದಕ್ಕೆ ಪೆರೂನಾ ಔಷಧವನ್ನು ಉಪಯೋಗಿಸುವುದಕ್ಕಿಂತ ಮೊದಲು ನನ್ನ ಯೋಚನೆಗೆ ತೋರಿದ ಔಷಧಿಗಳನ್ನೆಲ್ಲಾ ಸೇವನೆ ಮಾಡಿದ್ದೆನು

' ಬೆಳಿಗ್ಗೆ ಹಾಸಿಗೆಯಿಂದ ಏಳುವಾಗ ನನಗೆ ತುಂಬಾ ಆಯಾಸವಾಗುತ್ತಿತ್ತು ನನ್ನ ಶ್ವಾಸಕೋಶಗಳು ಒಣಗಿ ಹುಣ್ಣಾಗಿದ್ದಂತೆ ನನಗೆ ತೋರಿಬರುತ್ತಿತ್ತು ಅನುಭವಪೂರ್ವಕವಾಗಿ ತಿಳಿಯದೆ ಇರತಕ್ಕವರು ನಾನು ಅನುಭವಿಸಿದ ಕಷ್ಟವನ್ನೆಲ್ಲಾ ತಿಳಿದುಕೊಳ್ಳಲಾರರು ಅದರ ಪರಿಹಾರಕ್ಕೆ ಯಾರ್ಯಾರು ಏನೇನು ಔಷಧ ಚಿಕಿತ್ಸೆಗಳನ್ನು ಹೇಳಿದರೋ ಅದನ್ನೆಲ್ಲಾ ಮಾಡಿಕೊಂಡೆನು ಆದರೆ ಯಾವದೂ ನನಗೆ ಸಂಪೂರ್ಣವಾದ ಗುಣಕೊಡದೆ ಹೋಯಿತು

' ಪೆರೂನಾ ಔಷಧವನ್ನು ತೆಗೆದುಕೊಳ್ಳಲು ಆರಂಭಿಸಿ ಒಂದು ಬಾಟ್ಲಿಯಷ್ಟು ತೀರುವದರೊಳಗಾಗಿ ನನಗೆ ತುಂಬಾ ಗುಣವಾಯಿತು ತರುವಾಯ ನನ್ನ ರೋಗವೆಲ್ಲಾ ನಿವಾರಣೆಯಾಗುವತನಕ ಅದನ್ನೇ ಸೇವಿಸಿದೆನು ಪೆರೂನಾವಿನ ಗುಣವನ್ನು ಎಷ್ಟು ಹೊಗಳಿ ಹೇಳಲಾರೆನು ಅದರ ಯೋಗ್ಯತೆಯನ್ನು ಪ್ರತಿ ಒಬ್ಬರೂ ತಿಳಿದುಕೊಳ್ಳಲೆಂದು ಅಪೇಕ್ಷಿಸುತ್ತೇನೆ "

ನೆಗಡಿ ಕೃತ್ಯ ಕೆಮ್ಮುಗಳನ್ನು ಅನುಭವಿಸುವವರು ಒಂದು ಬಾಟ್ಲು ಪೆರೂನಾ ಔಷಧವನ್ನು ತರಿಸಿಕೊಂಡು, ಉಪಯೋಗಮಾಡಿ ಅದರ ಯೋಗ್ಯತೆಯನ್ನು ತಿಳಿದುಕೊಳ್ಳಬೇಕಾಗಿದೆ

ಈ ಔಷಧ ಸಿಕ್ಕುವ ಸ್ಥಳಗಳು—

(೧) ಹಿಚ್‌ಕಾಕ್ ಅಂಡ್ ಸನ್ಸ್, ಬೆಂಗಳೂರು.

(೨) ಇಂಗ್ಲಿಷ್ ಡ್ರಗ್ ಕಂಪನಿ, ೩೯೪ ಮಿಂಟ್ ಬೀದಿ, ಮದರಾಸ್.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ

12—7—1907 ರಿಂದ 19—7—1907 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು
ಬೆಂಗಳೂರ ಪಟ್ಟಣ	8	3	0
ಮೈಸೂರು ,,	29	14	4
ಬೆಂಗಳೂರು ಡಿಸ್ಟ್ರಿಕ್ಟು	58	91	0
ಮೈಸೂರು ,,	25	15	26
ಕೋಲಾರ್ ,,	2	0	24
ಕೋಲಾರ್ ಚಿನ್ನದ ಗಣಿಗಳು	14	15	0
ತುಂಕೂರು ಡಿಸ್ಟ್ರಿಕ್ಟ	0	0	4
ಹಾಸನ ,,	11	8	34
ಚಿತ್ರದುರ್ಗ ,,	0	0	0
ಕಡೂರ್ ,,	10	5	0
ಶಿವಮೊಗ್ಗ ,,	11	5	0
ಜುಮ್ಲಾ	261	161	92

ಶಾಲಿವಾಹನ ಶಕ ವರುಷಂಗಳು ೧೮೩೦ ನೇ ಪ್ಲವಂಗನಾಮ ಸಂವತ್ಸರದ ಆಷಾಢ ಬಹುಳ ಅಷ್ಟಮಿ ಗುರುವಾರದಿಂದ ಆಷಾಢ ಬಹುಳ ತ್ರಯೋದಶಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೭ ನೇ ಇಸವಿ ಆಗಸ್ಟ್

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	
1	ಗುರು	ಅಷ್ಟಮಿ	14 14	ಕೃ	5 56	1?
2	ಶುಕ್ರ †	ನವಮಿ	40 39	ಭ	8 23	18
3	ಶನಿ	ದಶಮಿ	46 26	ಕೃ	12 12	19
4	ರವಿ ‡	ಏಕಾದಶಿ	52 16	ರೋ	16 18	20
5	ಸೋಮ ,,	ದ್ವಾದಶಿ	56 8	ಮೃ	22 9	21
6	ಕುಜ *	ತ್ರಯೋದಶಿ	60 0	ಆ	29 9	22
7	ಬುಧ	ತ್ರಯೋದಶಿ	1 56	ಪು	3? 46	23

[ಪ ಹಾವ್ಯಪ್ರ ವೇಳೆ ಕೋಷ್ಟಕದಲ್ಲಿ ಕೃಷ್ಣಪಕ್ಷ ... ಆಷಾಢ ಕೃಷ್ಣ ಪದಿನಷ್ಟಾಂಕದಲ್ಲಿ † ಸ್ಮಾರ್ತ ವೈಷ್ಣವ ಏಕಾದಶಿ ಹರಿವಾಸರ, ವೈಷ್ಣವ ನಾಂಗುಪಾಸದ್ವಾದಶಿ * ಪ್ರದೋಷ, ಮಾಸ ಶಿವರಾತ್ರಿ

ಪೇಟೇ ಧಾರಣೆ

ದಿನಸಿ	ಮೈಸೂರು	ಬೆಂಗಳೂರು
ಕಡ್ಡೀ ಅಕ್ಕಿ ಪಲ್ಲಾ ೧ಕ್ಕೆ ರೂ	೯೩ ೦	೧೩
ಕಲಮತ ಅಕ್ಕಿ ,,	೧೩ ೯ ೦	೧೩
,, ,,	೧೨ ೮ ೦	೧೨
ಗುಂಡಾನ ಅಕ್ಕಿ	೧೨ ೮ ೦	೧೩
ಸಣ್ಣಕ್ಕಿ ಅವಲ್	೯೪ ೦ ೦	೧೯
ದುಂಡು	೧೪ ೮ ೦	೧೪
ತೊಗರಿ ಬೇಳೆ ಪಲ್ಲಾ ೧ಕ್ಕೆ	೯೩ ೮ ೦	೯೪
ದುಂಡು	೧೨ ೧೨ ೦	೧೩
ಕಡ್ಲೆ ರಾಗಿ ಪಲ್ಲಾ ೧ಕ್ಕೆ	೪ ೮ ೦	೪ ೦
ಕಾರ್ರಾಗಿ	೫ ೮ ೦	೪
ಜೋಳ	೬ ೮ ೦	೪
ಹುರುಳಿಕಾಳು ಪಲ್ಲಾ ೧ಕ್ಕೆ	೧೯ ೬ ೦	೧೦
ಬಿಳೀ ಅವರೆ	೯ ೩ ೬	೮
ಹೆಸರು	೧೧ ೦ ೦	೧೧
ಉದ್ದು	೧೧ ೦ ೦	೧೦
ಕಡಲೆ	೧೨ ೦ ೦	೧೧
ಎಳ್ಳು ಸೆ ೧೨೪ ಕ್ಕೆ	೨೨ ೦ ೦	೨೨
ಹುರುಳಿ	೪ ೮ ೦	೪
ಹರಳು ೧೨೪ ಸೇರಿಗೆ	೧೩ ೦ ೦	೧೨
ನೆಲಗಡಲೆಕಾಯಿ ಮಣ ೧ಕ್ಕೆ	೨ ೦ ೦	೨
ಮೆಣಸಿನಕಾಯಿ	೨ ೧೨ ೦	೩
,, ದುಂಡು	೬ ೮ ೦	೩
ಗೆಲ್ಲ ದೊಡ್ಡ ಅಚ್ಚು	೮ ೮ ೦	ಮ ೨
ಒಳ್ಳೆ ಸಕ್ಕರೆ ಮಣ ೧ಕ್ಕೆ	೫ ೧೨ ೦	೫
ಹರಳು ಸಕ್ಕರೆ ,,	೫ ೧೨ ೦	೫
ಕೊತ್ತುಂಬರಿ ಪಲ್ಲಾ ೧ಕ್ಕೆ	೪ ೨ ೦	೪
ಉಪ್ಪು ,,	೫ ೧ ೦	೫
ಹುಣಸೇ ಹಣ್ಣು	೧ ೪ ೦	೨
,, ಹಳೇದು	೧ ೯ ೮ ೬	೧
ತುಪ್ಪ ಮಣ ೧ಕ್ಕೆ	೧೫ ೦ ೦	೧೩
ಸೀಮೆಯೆಣ್ಣೆ ಪಟ್ಟ ೧ಕ್ಕೆ	೫ ೦ ೦	೫
ತೆಂಗಿನಕಾಯಿ ೧೦೦ ಕ್ಕೆ	೪ ೮ ೦	೪
ಅಡಿಕೆಕಾಯಿ ಮಣ ೧ಕ್ಕೆ	೧ ೦ ೦	೧
ಅಂಟ್ವಾಳದ ಕಾಯಿ ಮಣ ೧ಕ್ಕೆ	೦ ೧೨ ೦	೦
ಚಿನ್ನ (ಪರ್) ಕೆಂಪು	೧೫ ೪ ೦	೧೫
,, ,, ಪಸಿಮೆ	೧೫ ೧೦ ೦	೧೫
,, ,, ಗಟ್ಟಿ ತೊಲ ೧ಕ್ಕೆ	೨೩ ೧೨ ೦	೨೩
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	೮೫ ೦ ೦	೮೫

Printed and Published by the Rev E THOMPSON M A Proprietor and Manager, Wesleyan Mission Press Mysore 1/8/1907

REGISTERED
M 20

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೧ ಮೈಸೂರು—ಸನ್ ೧೯೦೭ ನೇ ಇಸವಿ ಆಗಸ್ಟ್ ತಾರೀಖು ೮ ನೇ ಗುರುವಾರ. ಸಂಚಿಕೆ ೧೦

WILLIAM & CO., BOMBAY.

ವಿಲಿಯಂ ಮತ್ತು ಕಂಪನಿ, ಪೋರ್ಟು, ಮುಂಬಯಿ.

ಗಜಕರ್ಣದ ಮುಲಾಮು.

27 91

ಇದನ್ನು ಹಾಗಿಸುವದರಿಂದ ಎಲ್ಲಾ ತರದ ಕಜ್ಜಿಯು ನಾಶವಾಗುವದು. ಮೂರು ಸಾರಿ ಹಾಗಿಸುವದರೊಳಗೆ ಗಜಕರ್ಣವು ಹೋಗುವದು. ಇದನ್ನು ಹಚ್ಚಿದಲ್ಲಿ ಉರಿಯು ಬರುವದಿಲ್ಲ ಚರ್ಮ ಕಪ್ಪಾಗುವದಿಲ್ಲ.

ಇದರಿಂದ ಗುಣ ಕಂಡುಬರುವದಿಲ್ಲವಾದರೆ ಹಣ ಹಿಂತಿರುಗಿ ಕೊಡಲ್ಪಡುವದು ತ್ವರೆಮಾಡಿರಿ! ಕೊಂಡುಕೊಳ್ಳಿರಿ!! ಕ್ರಯ ಕಮ್ಮಿ ಒಂದು ಸಾರಿ ಪರೀಕ್ಷಿಸಿ ನೋಡಿರಿ!! ಡಬ್ಬಿ ೧ಕ್ಕೆ ಕಿಮ್ಮತ್ತು ೦-೩-೦. ವಿ. ಪಿ. ೦-೧೦-೦.

[illegible]

ಸು. ಏಂ. ತೈಲ ೩ ಆಣೆ [illegible] ದಂತಮಂಜನ ೩ ಆಣೆ [illegible] ನೇತ್ರಾಂಜನ ೩ ಆಣೆ

ಅಮೃತಾಂಜನ

ಬಾಟ್ಲಿ ಒಂದಕ್ಕೆ ಕಿಮ್ಮತ್ತು ೮ ಆಣೆ ವಿ. ಪಿ. ೧೨ ಆಣೆ.

[illegible] ವಾತ, ಎದೆನೋವು, ಗಂಟ್ಲುನೋವು, ಶಿರೋಭಾರ, ಸಂಧಿವಾತ, ತಲೆನೋವು, [illegible], ಶೀತ, ಕೆಮ್ಮು ಈ ಎಲ್ಲಾ ರೋಗಗಳಿಗೆ ಅಮೃತಾಂಜನವು ಒಂದು ನಿಸ್ಸಂಶಯ ಔಷಧವಾಗಿರುತ್ತದೆ. [illegible] ಗುಣ ಕಂಡುಬಾರದಿದ್ದರೆ ಹಣ ಹಿಂತಿರುಗಿ ಕೊಡಲ್ಪಡುವದು. ತ್ವರೆ ಮಾಡಿರಿ! [illegible] ವರ್ಷದಿಂದ ಅನುಭವಿಸಿದ [illegible] ನಿಮ್ಮ ಒಂದೇ ಬಾಟ್ಲಿ ಅಮೃತಾಂಜನದಿಂದ [illegible] ಕನ್ನಡ.

[illegible] ಅಮೃತಾಂಜನವನ್ನು [illegible] ಅಮೃತಾಂಜನ [illegible] ಅಮೃತಾಂಜನವು [illegible] ಅಮೃತಾಂಜನವು [illegible]

[illegible] ಅಮೃತಾಂಜನ [illegible] ಅಮೃತಾಂಜನವು [illegible] ತಲೆನೋವನ್ನು [illegible]

[illegible] ತಲೆನೋವು, [illegible] ಬಾಟ್ಲಿ [illegible]

ವಿಲಿಯಂ ಮತ್ತು ಕಂಪನಿ, ೧೭ ಬಿಕ್ ಲೇನ್, ಪೋರ್ಟು, ಮುಂಬಯಿ.

ಟೆಲಿಗ್ರಾಫ್ ಅಡ್ರೆಸು, "ಅಮೃತಾಂಜನ" ಮುಂಬಯಿ.

ನಿಮಗೆ ನೋವು ಇದೆಯೋ?

53 11

ಹಾಗಾದರೆ "ಕ್ಲೆಮೆಂಟ್ ಯವರ ನ್ಯೂಮಾಟಿಕ್ [illegible]" ನ್ನು ಏಕೆ ಉಪಯೋಗಿಸಬಾರದು! ಅತ್ಯಾಶ್ಚರ್ಯಕರವಾದ ಬಾಧಾಪಹಾರಿಣಿಯು! ಈಗಿನ ಶತಮಾನದಲ್ಲಿ ಕಂಡು ಹಿಡಿದ ದೊಡ್ಡ ನೂತನವು!

ಈ ರೋಗ ಔಷಧವನ್ನು ಮೊಟ್ಟಮೊದಲು ತೊಡೆಯುತ್ತಲೇ ಕೆಲವು ನಿಮಿಷಗಳೊಳಗಾಗಿ ನರ ಮತ್ತು ಮಾಂಸ ಸಂಬಂಧವಾದ ಮಾಕ್ಯ ನೋವು, ಕೀಲುಗಳ ಬಾಧೆ, ಕಿಬ್ಬೊಟ್ಟೆ ನೋವು, ಬೆನ್ನು ಳೆಯುವದು, ತಲೆನೋವು, ಕೆಮ್ಮು, ಕೀಲುಗಳು ಕತ್ತರಿಸುವದು, ಕೊರಳು ಊತ, ಕೈಕಾಲು ಒಸೆತ ಇವುಗಳನ್ನೆಲ್ಲಾ ವಿದ್ಯುಚ್ಛಕ್ತಿಯಂತೆ ಗುಣಪಡಿಸುವದು. ಈ ಔಷಧವು ಆಶ್ಚರ್ಯಕರವಾಗಿ ಗುಣಪಡಿಸುವದರಿಂದ ಎಲ್ಲರಲ್ಲಿಯೂ ಪ್ರಸಿದ್ಧಿಹೊಂದುತ್ತಾ ಬರುವದು. ಇತರ ಔಷಧಿಗಳು ಗುಣಪಡಿಸದೆ ಹೋದಾಗ ಡಾಕ್ಟರ್ ಫೀಜನ್ನು ಉಳಿಸುವದಾದಿ ಇದು ನಿಸ್ಸಂದೇಹವಾಗಿಯೂ ಗುಣಪಡಿಸುವದು.

ಕ್ರಯ ೨ ಬಾಟ್ಲಿಗೆ ೧೨ ಆಣೆ, ಪೋಸ್ಟೇಜ್ ೩ ಆಣೆ. ೩ ಬಾಟ್ಲಿಗೆ ಅಂಚೆವೆಚ್ಚ ಸೇರಿ ರೂ ೨—೩ ಆಣೆ. ಎಲ್ಲಾ ಕೆಮಿಸ್ಟ್ ಷಾಪುಗಳಲ್ಲಿ ದೊರೆಯುವದು.

ನಮ್ಮ ವಿಳಾಸ—ಎಫ್. ಡಬ್ಲಿಯು. ಆರ್ಗ,
ಸಿಮೆಟ್ರಿ ರೋಡ್, ವೇಪೇರಿ, ಮದರಾಸ್.

ಜ್ವರಹರ

74 2



ಇದು ಸಾಧಾರಣ ಜ್ವರ, [illegible]ಜ್ವರ, ವೇಲೆಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನು ಬಹು ಬೇಗನೆ ನಾಶಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮಹಮದ್ ಇಬ್ರಾಹಿಂ ಸಬ್ ಓವರ್‌ಸೀರ್ ಆಫೀಸರ್ ಎಸ್. ಟಿ. ವೆಂಕಟಪತಿ ಅಯ್ಯ ನವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ [illegible] ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಜನರು ಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾದು ಕೇಳುತ್ತಿರುವದರಿಂದ ದಯವಿಟ್ಟು ಇನ್ನೊಂದು [illegible] ಸೀಸೆಯನ್ನು ವಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ—ಸೀಸೆ ೧ಕ್ಕೆ ೮ ಆಣೆ, [illegible], ೧—೮ ರೂ, ರೂ ೨—೧೨ [illegible], ೧೧ ರೂ, ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

****

[illegible]

Omum Carpoor

ಈ ಔಷಧವು ಅಜೀರ್ಣ, ಶೀತಭೇದಿ, ಸಾಮಾನ್ಯ ಹೊಟ್ಟೆಕಳ್ಳುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ [illegible] ಇದು ಹೆಂಗಸರು ತಿಂಗಳ ಮುಟ್ಟಾದಾಗ ಹೊರಗೆ ಆಗುವಾಗ್ಯೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ದರವು ಬ್ಯಾಂಕರ ಎಂಬ ಔಷಧದಂತೆಯೇ ಸೀಸೆಗಳಲ್ಲಿ ಕೊಡುವದು.

ಅತನದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆಪ್ರಿಯ [illegible] ನ್ನು ನಾನೂ ನನ್ನ [illegible] ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅತಿಸಾರ, ಭೇದಿ, ಅಜೀರ್ಣ ರೋಗಿಗಳಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧ ಹೇಳಿ ಬರೆದಿದ್ದಾರೆ.

ಈ ಎಲ್ಲಾ ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇಲ್ಲದೆ ಕೆಳಗಿನ ವಿಳಾಸದಾಸ್ತ್ರಲ್ಲಿ ವಿಶೇಷ:—

[illegible] ಔಷಧಗಳ [illegible],
[illegible], ಮದರಾಸ್

ಇಲ್ಲಿ ನೋಡಿ.

66 4

[illegible] ಬೇವಿನ ಹಿಂಡಿಗಳು [illegible] ಚೆನ್ನಾಗಿ ಸಿಕ್ಕುತ್ತದೆ.

ವಿಳಾಸ [illegible]

ಇಗೋ ನೋಡಿರಿ ಎಲ್ಲರೂ ಓದತಕ್ಕ ಆಶ್ಚರ್ಯಕರವಾದ ಪುಸ್ತಕ!

"ಅರೇಬಿಯನ್ ನೈಟ್ಸ್ ಅಥವಾ ಯವನ ಯಾಮಿನೀ ವಿನೋದ ಕಥೆಗಳು"

71 3

ಈ ಪುಸ್ತಕವು ಲೋಕಪ್ರಸಿದ್ಧವಾದುದರಿಂದ ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಸಾವಿರದ ಎಪ್ಪತ್ತು ಪುಟಗಳುಳ್ಳದ್ದು. ಭಾರಿ ಪುಸ್ತಕ ಭಾಷೆಯು ಬಹು ಸರಳವಾಗಿದೆ. ಪುಸ್ತಕವನ್ನು ಒಂದಾವರ್ತಿ ಓದಿದ ಮೇಲೆ ಅದನ್ನು ಪುನಃ ಪುನಃ ಓದ ಬೇಕೆಂದು ಮನಸ್ಸನ್ನು ಆಕರ್ಷಿಸುವದು. ಇದರ ಕ್ರಯ ಎರಡು ರೂಪಾಯಿ. ವಿ. ಪಿ. ಕೂಲಿ ೨—೩—೦ ಹತ್ತು ಅಥವಾ ಹದಿನೈದು ವರ್ಷಗಳ ಹಿಂದೆ ಇದರ ಕ್ರಯ ಎಂಟು ರೂಪಾಯಿ ಎಂದು ಅನೇಕರಿಗೆ ಗೊತ್ತು. ಇದನ್ನು ಬಡವರೂ, ಐಶ್ವರ್ಯವಂತರೂ ಓದುವಂತೆ ಪುನಃ ಛಾಪಿಸಿ ಇಷ್ಟು ದೊಡ್ಡ ಪುಸ್ತಕವನ್ನು ಇಷ್ಟು ಸುಲಭ ಕ್ರಯಕ್ಕೆ ಮಾರುತ್ತೇವೆ. ಹನ್ನೆರಡು ಪುಸ್ತಕಗಳನ್ನು ಒಟ್ಟಿಗೆ ತರಿಸಿಕೊಂಡರೆ, ಪುಸ್ತಕಕ್ಕೆ ಎರಡು ಆಣೆ ಮೇರೆ ಕಮಿಷನ್ ಕೊಡುತ್ತೇವೆ. ಜಾಗ್ರತೆ ನೋಡಿ.

ವಿಳಾಸ—ಮ್ಯಾನೇಜರ್,
ಸಿ. ಎಲ್. ಎಸ್. ಬುಕ್ ಡಿಪೋ,
ಮೈಸೂರು.

ವಿದ್ವಾನ್ ವೆಂಕಟಾಚಲ ಪಂಡಿತ, ಶ್ರೀಸೀತಾರಾಘವ ವೈದ್ಯಶಾಲಾ, ಕೊಳ್ಳೇಗಾಲ, ಇವರ ಸಿದ್ಧೌಷಧಗಳು.

26 25

೧ [illegible] ಕಸ್ತೂರೀ ಮಾತ್ರೆ—ಈ ಮಾತ್ರೆಗಳನ್ನು [illegible] ಉತ್ತಮವಾದ [illegible] ಹೆಚ್ಚುಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ [illegible]



[illegible], ಜ್ವರ, ಹೊಟ್ಟೆಶೂಲೆ, ಸಂದುಗಳ ನೋವು, [illegible] (ಭಾರ), ಮೈ ನಡುಕ, [illegible] ಅಜೀರ್ಣ, ಅಗ್ನಿಮಾಂದ್ಯ, ಹಲ್ಲು ನೋವು, [illegible], ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣವಾಗುತ್ತದೆ.

[illegible] ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಬಾಯಿ ಹೊತ್ತು ಸುವಾಸನೆಯಾಗಿರುತ್ತದೆ. ಆಹಾರವನ್ನು ಬೇಗನೆ ಜೀರ್ಣಗೊಳಿಸಿ, [illegible] ನೀರು ಹವೆಗಳ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ.

ಸ್ತ್ರೀಯರ [illegible], ಮಕ್ಕಳ ಎಳವು, ಜ್ವರ, ಸಾಕ್ಷ್ಯಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ.

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.

೨೦ ಮಾತ್ರೆಯುಳ್ಳ ಡಪ್ಪಿಗೆ ೩ ಆಣೆ, ೪ ಡಪ್ಪಿಗೆ ೧ ರೂಪಾಯಿ [illegible] ೧ ರಿಂದ ೧೨ ಡಪ್ಪಿ ವರೆಗೆ ಪೋಸ್ಟೇಜು ೪ ಆಣೆ.

ವಿಳಾಸ—ಎಸ್. ಎಸ್. ಆರ್. ವೈದ್ಯಶಾಲಾ,
ಲಕ್ಷ್ಮೀವಿಲಾಸ ರೋಡ್, ಮೈಸೂರು.

ಬಡ ಜೀವನೋಪಾಯ. ಸಣ್ಣ ಕೈಗಾರಿಕೆ

28—1

ಬ್ಲ್ಯೂಬ್ಲಾಕ್ ಇಂಕ್ ಅಂದರೆ ನೀಲಿ ಕಪ್ಪು ಶಾಯಿ ಪೌಡರುಗಳನ್ನು ತಯಾರಿಸುವ ಕ್ರಮ ಇದ್ದಕಡೆಯಲ್ಲಿಯೇ ಬೇಕಾದಷ್ಟು ತಯಾರಿಸಿಕೊಳ್ಳಬಹುದು. ಹದಿ ಸಾವಿರಕ್ಕೆ ೩ ರೂಪಾಯಿಗಿಂತಲೂ ಕಡಮೆಯಾಗಿಯೇ ಖರ್ಚು ಹತ್ತುತ್ತದೆ. ಯಂತ್ರ ಸಾಮಗ್ರಿಗಳೇ ಆಗಲಿ ಹೆಚ್ಚಿನ ಬಂಡವಾಳವೇ ಆಗಲಿ ಬೇಕಾಗಿಲ್ಲ. ಸುಲಭವಾಗಿ ಸಿಕ್ಕತಕ್ಕ ಜಿನಸಿಗಳೇ ಆಗಿರುತ್ತವೆ.

ವಿ. ಪಿ. ಯಿಂದ ಕಳುಹಿಸಲಾಗುವುದಿಲ್ಲ. ಮಾಡುವ ಪದಾರ್ಥಗಳೊಂದಿಗೆ ತಯಾರಿಸುವ ಕ್ರಮ ಸಂಪೂರ್ಣ ೩ ರೂ ೪ ಆಣೆ. ಪ್ಯಾಕಿಂಗ್ ಮತ್ತು ಟಪಾಲ್ ಹಾಸಲು ೬ ಆಣೆ. ಒಂದು ಊರಿಗೆ ಒಬ್ಬರಿಗೆ ಮಾತ್ರ. ಹೆಚ್ಚಾಗಿ ಕಳುಹಿಸಲಾಗುವದಿಲ್ಲ. ಸುಸ್ತಿಯಿಂದ ಬಂದವರ ಹಣವು ವಾಪಸು ಮಾಡಲಾಗುವದು. ಖರ್ಚು ಮಾಡಿದ ಹಣವನ್ನು ಒಂದು ವಾರದ ಒಳಗಾಗಿ ಸಂಪಾದಿಸಿ ಮುಂದೆ ಲಾಭ ಹೊಂದಬಹುದು. ಅಂಗಡಿಗಳಲ್ಲಿ ಚಿಲ್ಲರೆ ೩ ಪೈಗೆ ೧ ಪೊಟ್ಟಣದಂತೆಯೂ ದೊಡ್ಡ ಕಂಪನಿಗಳಲ್ಲಿ ಒಟ್ಟಾಗಿ ಸಾವಿರಕ್ಕೆ ೬ ರೂಪಾಯಿಗೆ ಕಡಮೆ ಇಲ್ಲದೆಯೂ ಖರ್ಚಾಗುತ್ತವೆ. ಬಡ ಜೀವನೋಪಾಯ ಮತ್ತು ಸುಲಭ ಸಾಧ್ಯವಾದ ಕೈಗಾರಿಕೆ. ಸ್ಕೂಲ್ ಮಾಸ್ಟರುಗಳ ವಿದ್ಯಾರ್ಥಿಗಳು ವರ್ತಕರು ವಗೈರೆಯವರು ಕಲಿತ ಚೆನ್ನಾಗಿ ಲಾಭ ಹೊಂದಬಹುದು.

ವಿಳಾಸ — ಎಸ್. ಸಿ. ಇಂಕ್ ಮ್ಯಾನುಫ್ಯಾಕ್ಚರರ್,

ಶಿಕಾರ್‌ಪುರ, ಶಿವಮೊಗ್ಗಾ ಡಿ.

ಹುಣಸೂರು ಪ್ರಸಿದ್ಧ ಪತ್ರಿಕೆ

77—1

ಹುಣಸೂರು ತಾಲೂಕು ಕಸಬಾಕ್ಕೆ ಸೇರಿದ ಕಿರಿಜಾಜಿ ಗ್ರಾಮದಲ್ಲಿದ್ದ ಕೆಂಪಣ್ಣರಳೇಗೌಡನೆಂಬಾತನ ಜೀವಂತನಾಗಿದ್ದಾಗಲೇ ನಮ್ಮ ಹೆಸರಿಗೆ ಉಯಿಲನ್ನು ಬರೆದು ಕೊಟ್ಟು ತನ್ನ ಆಸ್ತಿಗೆಲ್ಲಾ ನಮ್ಮನ್ನು ಒಶ್ವಾದಾರರನ್ನಾಗಿ ಮಾಡಿರುತ್ತಾನಾದ್ದರಿಂದ ಆತನ ಆಸ್ತಿಗೆ ಮತ್ಯಾರೂ ಹಕ್ಕುದಾರರಾಗಿರುವದಿಲ್ಲ. ಮೇಲ್ಕಂಡ ಗೌಡನ ಆಸ್ತಿಯನ್ನು ರಕ್ಷಿಸುವದಕ್ಕೂ ವಿಲೆಯೇಗ ಮಾಡುವದಕ್ಕೂ (ಆತನ) ಕೃಕ್ಕತ್ಯದ ಕೆಲಸವನ್ನು ಜರುಗಿಸುವದಕ್ಕೂ ಸಹ ನಮಗೆ ಸಂಪೂರ್ಣ ಸ್ವಾತಂತ್ರ್ಯವನ್ನು ಕೊಟ್ಟು ಮೃತಪಟ್ಟಿರುತ್ತಾನೆ. ಹೀಗಿದ್ದಾಗ್ಯೂ ಈಗ ಆತನ ಆಸ್ತಿಯನ್ನು ಖಲಲ್ ಮಾಡಬೇಕೆಂಬ ದುರಾಲೋಚನೆಯಿಂದ ಹಕ್ಕಿಲ್ಲದ ಕೆಲವು ಜನಗಳು ಆತನ ಚರ ಸ್ಥಿರ ಆಸ್ತಿಗಳನ್ನು ಕ್ರಯ ಮಾಡಲು ಉದ್ಯುಕ್ತರಾಗಿರುತ್ತಾರೆಂಬ ವರ್ತಮಾನವನ್ನು ನಾವು ಕೇಳುತ್ತೇವೆ. ಆದ್ದರಿಂದ ಕೆಂಪಣ್ಣರಳೇಗೌಡನ ಚರ ಸ್ಥಿರ ಆಸ್ತಿಗಳನ್ನು ಕ್ರಯಮೂಲಕವಾಗಿಯಾಗಲೀ ಅಥವಾ ಇನ್ಯಾವ ವಿಧವಾಗಿಯಾಗಲೀ ಯಾರೂ ತೆಗೆದುಕೊಳ್ಳಕೂಡದು. ಇದನ್ನತಿಕ್ರಮಿಸಿ ಮೇಲ್ಕಂಡ ಗೌಡನ ಚರ ಸ್ಥಿರ ಆಸ್ತಿಗಳನ್ನು ಯಾರಾದರೂ ತೆಗೆದುಕೊಂಡರೆ ಅಂಥವರು ಕಳುವಿನ ಛಾರ್ಜಿಗೆ ಗುರಿಯಾಗಬೇಕಾಗುವುದು ಮತ್ತು ತಾವು ಕೊಟ್ಟ ಹಣವನ್ನು ಕಳೆದುಕೊಳ್ಳುವದಲ್ಲದೆ ಆಸ್ತಿಯನ್ನೂ ಸಹಾ ಕಳೆದುಕೊಳ್ಳುವರು. ಆದ್ದರಿಂದ ನಮಗೆ ತಿಳಿಯದ ಹಾಗೆ ಯಾರೂ ಯಾವವಿಧವಾದ ಪದಾರ್ಥವನ್ನೂ ತೆಗೆದುಕೊಳ್ಳಕೂಡದೆಂದು ಈ ಪ್ರಸಿದ್ಧ ಪತ್ರಿಕೆಯ ಮೂಲಕ ಸಕಲರಿಗೂ ವಿನಯದಿಂದ ಸೂಚಿಸುವ

೨೮—೭—೧೯೦೨

ಹುಣಸೂರು ತಾಲೂಕು ಕಸಬಾ ಟಪಾ ಕಲ್ಕುಣಿ ಗ್ರಾಮ

ಕಲ್ಕುಣಿಕೆ ಮಾಲೀಮಾಧ್ಯಕ್ಷರಾದ ಶಿವ್ವೆಯ್ಯಸ್ವಾಮಿಗಳ ರಜ—

ಉಪಾಧ್ಯಾಯರೆಲ್ಲರೂ

ಓದತಕ್ಕ ನೋಟೀಸ್.

20 1

ಮೈಸೂರು ಸರ್ಕಾರದ ವಿದ್ಯಾಭ್ಯಾಸದ ಇಲಾಖೆ ಇನ್ಸ್‌ಪೆಕ್ಟರ್ ಜನರಲ್‌ರವರು ಕೆಳಗೆ ಕಂಡ ಪುಸ್ತಕಗಳನ್ನು ಸರ್ಕಾರದ ಸ್ಕೂಲುಗಳಲ್ಲಿಯೂ, ಗ್ರಾಂಟ್ ಪಡೆಯುತಕ್ಕ ಪಾಠಶಾಲೆಗಳಲ್ಲಿಯೂ ಮತ್ತು ಆಂಗ್ಲೋ ವರ್ನಾಕ್ಯುಲರ್ ಸ್ಕೂಲ್‌ಗಳಲ್ಲಿಯೂ ಮತ್ತೊಂದು ಹುಕುಂ ಕೊಡುವತನಕ ಉಪಯೋಗಿಸಬೇಕೆಂದು ಕಳೆದ ಜೂಲೈ ೨೯ನೆ ತಾರೀಖಿನ ಮೈಸೂರು ಗೆಜೆಟ್ಟಿನಲ್ಲಿ ಪ್ರಾಮಿಸ್ ಮಾಡಿರುತ್ತಾರೆ.

ಭೂಗೋಳ ಶಾಸ್ತ್ರದ ಮೊದಲನೆಯ ಪುಸ್ತಕ (೧ನೆಯ ೨ನೆಯ ಭಾಗ, ಒಂದೇ ಪುಸ್ತಕ. ಈ ಪುಸ್ತಕದಲ್ಲಿ ನಾಲ್ಕು ಬಣ್ಣದ ನಕ್ಷೆಗಳೂ ಮಕ್ಕಳಿಗೆ ಭೂಗೋಳಶಾಸ್ತ್ರವನ್ನು ವಿಶದವಾಗಿ ಹೇಳಿಕೊಡುವುದಕ್ಕೆ ಸಾಹಿತ್ಯವಾಗಿರುವ ಬೇರೆ ಹನ್ನೆರಡು ಚಿತ್ರಗಳೂ ಇರುತ್ತವೆ) ಎರಡನೇ ಕ್ಲಾಸಿಗೆ ಕ್ರಯ ೪ ಆಣೆ.

ಭೂಗೋಳ ಸಂಗ್ರಹ (ಮ॥ ಪಿ. ಎಂ. ರಾಮಸ್ವಾಮಯ್ಯನವರು ಬರೆದುದು. ಈ ಪುಸ್ತಕವು ಪ್ರಚುರವಾದಂದಿನಿಂದ ಅನೇಕ ಸಹಸ್ರ ಪ್ರತಿಗಳು ಮಾರಾಟವಾಗಿವೆಯೆಂದು ವಾಚಕ ಮಹಾಶಯರು ತಿಳಿದಿರಬಹುದು.) ಮೂರನೇ ಕ್ಲಾಸಿಗೆ ಕ್ರಯ ೭ ಆಣೆ.

ಮೇಲ್ಕಂಡ ಪುಸ್ತಕಗಳನ್ನು ಉಪಾಧ್ಯಾಯರೆಲ್ಲರೂ ತಡಮಾಡದೆ ಜಾಗ್ರತೆಯಲ್ಲಿ ತರಿಸಿಕೊಳ್ಳತಕ್ಕದ್ದು.

ವಿಳಾಸ — ಮ್ಯಾನೇಜರ್,

ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು

CHAMBERLAIN'S COUGH REMEDY.

ಚೇಂಬರ್ಲೇನ್‌ರವರು ಕಂಡು ಹಿಡಿದ ಕೆಮ್ಮಿನ ಔಷಧವು.

16

ಶೀತದ ಕೆಮ್ಮು, ಗಂಟಲು ಗೊರಗುಟ್ಟುವುದು, ಹುಡಿಗೆಮ್ಮು, ನಾಯಿಕೆಮ್ಮು, ಎಲ್ಲಾ ತರದ ಶೀತ, ಗಂಟಲು ನಾಳಗಳಲ್ಲಿ ಹುಟ್ಟುವ ಸಮಸ್ತ ವ್ಯಾಧಿಗಳು—ಇವಕ್ಕೆಲ್ಲಾ ಈ ಔಷಧವು ಬಹಳ ಶ್ರೇಯವಾಗಿದೆ.

ಆ ಕೆಮ್ಮನ್ನು ಅಲಕ್ಷ್ಯಮಾಡಬೇಡಿ. ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ. ಅದರ ನ್ಯೂಮೋನಿಯಾ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವುದು. ತರುವಾಯ ಉಗುಳಿನಲ್ಲಿ ರಕ್ತ ಬೀಳುವುದೂ ಹಾಗೆಯೇ ಕ್ಷಯರೋಗಕ್ಕೆ ಆಸ್ಪದವಾಗುವುದು.

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟಲಿನಲ್ಲಿ ಶ್ಲೇಷ್ಮ ಕಟ್ಟುವುದನ್ನೂ ಶ್ಲೇಷ್ಮಬೀಳುವದನ್ನೂ ಖಂಡಿತವಾಗಿ ನಿವಾರಣೆಮಾಡುತ್ತದೆ. ಉಸುರು ಕೊಳ್ಳುವುದು ಕಷ್ಟವಾಗಿದ್ದರೆ ಅದನ್ನು ಕೂಡಲೇ ಪರಿಹರಿಸುತ್ತದೆ. ಅಪಾಯಕರವಾದ ಕೆಮ್ಮಿನ ಶಬ್ದವನ್ನು ನಿಲ್ಲಿಸಿಬಿಡುತ್ತದೆ. ಎದೆ ಒಣಗುವಂಥಾ ಕೆಟ್ಟ ಸ್ಥಿತಿಯನ್ನು ಪೂರ್ಣವಾಗಿ ನಾಶಮಾಡಬಲ್ಲದು. ಕೆಮ್ಮನ್ನು ಶಮನಮಾಡಿ, ನೀವು ಸುಖವಾಗಿ ನಿದ್ರೆಮಾಡುವಂತೆ ಮಾಡಿ ಉಲ್ಲಾಸಕೊಡುತ್ತದೆ.

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇರಿಸಿರುವದಿಲ್ಲ.

ಈ ಔಷಧವು ವನಸ್ಪತಿಗಳ ತಯಾರಿ

ಕೈಯಿಂದ ಮುಟ್ಟದೆ ತಯಾರಾಗಿದೆ

ಎಲ್ಲೆಲ್ಲೂ ಬಿಕರಿಯಾಗುವದು. ಸಣ್ಣ ಸೀಸೆಗೆ ೧೦ ಆಣೆ. ದೊಡ್ಡ ಸೀಸೆಗೆ ೨ ರೂಪಾಯಿ.

ವ್ಯವಹಾರ ನಿರ್ಣಯ

ವೆಂಕಟ ಕೃಷ್ಣ | ಲಾ | ಪುಸ್ತಕವು

311

ಲಾ ಕಲಿಯುವವರಿಗೆ ಮತ್ತು ವಕೀಲರುಗಳಿಗೆ ಇದುವರೆಗೆ ಬರೆಯಲ್ಪಟ್ಟಿರುವ ಈ ತೆರದ ಪುಸ್ತಕಗಳೆಲ್ಲವುಗಳಿಗೂ ಅವೆಲ್ಲಕ್ಕಿಂತಲೂ ಹೆಚ್ಚು ಉಪಯೋಗವಾಗುವ ಇದೊಂದು ಪುಸ್ತಕವನ್ನುಂಟುಮಾಡಬೇಕೆಂದು ಈ ದೊಡ್ಡ ಗ್ರಂಥವು ಕನ್ನಡದಲ್ಲಿ ಬರೆಯಲ್ಪಟ್ಟಿದೆ. ಇದರಲ್ಲಿ ೧೮ ಆಕ್ಟುಗಳು, ೪ ರೆಗ್ಯುಲೇಷನ್‌ಗಳು, ಹಿಂದೂ, ಮಹಮದೀಯ ಲಾಗಳು, ಛೀಫ್ ಕೋರ್ಟಿನ ಕೈಕೆ (ತೀರ್ಮಾನ)ಗಳ ಫೈಸಲುಗಳು, ಗವರ್ನಮೆಂಟ್ ಸರ್ಕ್ಯುಲರ್‌ಗಳು, ಪ್ರೊಸೀಡಿಂಗ್‌ಗಳು, ಸಕಲ ವಿಧ ವ್ಯವಹಾರಗಳು, (ಕ್ರಯ ಆಧಾರ ದಾನ ವಿಲ್ಲು ಮೊದಲಾದ) ೫೯ ತೆರದ ದಸ್ತಾವೇಜುಗಳ ನಮೂನೆಗಳು, ಈ ಸಂಬಂಧದ ಲಾ ವಿಧಿಗಳು, ಸಿವಲ್ ಕ್ರಿಮಿನಲ್, ಪೋಲೀಸ್, ರೆವಿನ್ಯೂ ಸಂಬಂಧದ ವ್ಯಾಜ್ಯಗಳು, ೫೯ ತೆರದ ಅರ್ಜಿಗಳು, ಈ ಸಂಬಂಧದ ಲಾ ವಿಧಿಗಳು, ಇವೆಲ್ಲವೂ ಅಡಕವಾಗಿವೆ.

ಪುಸ್ತಕ ದೊಡ್ಡದು. ಪುಟಗಳು ಒಟ್ಟು ೩೬೪	ಬೆಲೆ ಕಡಮೆ. ಅಂಚೆ ಹಾಸಲು ಸೇರಿ ರೂ ೧—೮—೦
ಗ್ರಂಥಕರ್ತರು: ಎಂ. ಮಲ್ಲಾರಾಧ್ಯರು, ೧ನೆ ಗ್ರೇಡ್ ಪ್ಲೀಡರ್, ಶ್ರೀರಾಮಪೇಟೆ, ಮೈಸೂರು	ಇದೇ ವಿಳಾಸ

ತರಿಸಿಕೊಳ್ಳಿ! ಬೇಗ ತರಿಸಿಕೊಳ್ಳಿ!! ಇದೇ ಒಳ್ಳೇ ಸಮಯ!!!

50 1

ತಡಮಾಡಿದರೆ ಪ್ರತಿಗಳು ಮುಗಿದುಹೋದಾವು.

ನೇತ್ರಾನಂದಕರಗಳಾದ ಚಿತ್ರಗಳಿಂದಲೂ, ನೀತಿರಸಪ್ರಧಾನವಾದ ವಿಷಯಗಳಿಂದಲೂ ರಂಜಿಸುವದಲ್ಲದೆ, ಸಕಲ ಜನಗಳೂ ಪಡೆಯುತಕ್ಕಷ್ಟು ಸುಲಭವಾದ ಕ್ರಯಕ್ಕೆ ಸಿಕ್ಕುವವುಗಳಾಗಿಯೂ ಇವೆ. ಇವುಗಳು ಯಾವವೆಂದರೆ—

ಎಡ್ವರ್ಡ್ ಚಕ್ರವರ್ತಿಯವರ ಮತ್ತು ಅಲೆಕ್ಸಾಂಡ್ರಾ ಚಕ್ರವರ್ತಿನಿಯವರ ಚರಿತ್ರೆ	ಕ್ರಯ. ೦—೪—೦
ಎಡ್ವರ್ಡ್ ಸಾರ್ವಭೌಮರ ಕಿರೀಟಧಾರಣೆ	೦—೨—೬
ಘನತೆಯುಳ್ಳ ಸ್ತ್ರೀಯರ ಚರಿತ್ರೆ	೦—೨—೬
ದಕ್ಷಿಣ ಆಫ್ರಿಕವೂ ಅದರ ನಿವಾಸಿಗಳೂ	೦—೨—೬
ಚೀನಾ ಚಕ್ರಾಧಿಪತ್ಯವೂ ಅದರ ನಿವಾಸಿಗಳೂ	೦—೨—೬
ಬರ್ಮಾ ದೇಶವೂ ಬರ್ಮೀಯರೂ	೦—೨—೬
ಪುರಾತನ ಗ್ರೀಕರ ಕಥೆಗಳು	೦—೨—೦
ಪುರಾತನ ರೋಮನರ ಕಥೆಗಳು	೦—೨—೦
ಪಕ್ಷಿಗಳ ಚಿತ್ರಗಳೂ ಕಥೆಗಳೂ	೦—೧—೦
ಕ್ರಿಮಿವರ್ಗ ವರ್ಣನೆ	೦—೧—೦
ದೇಹವೆಂಬ ವಿಚಿತ್ರವಾದ ನನ್ನ ಮನೆ	೦—೧—೦
ಚಿಕ್ಕವರಿಗೆ ಹೇಳಿದ ಕಥೆಗಳು	೦—೧—೦
ಪ್ರಾಚೀನಕಾಲದ ವಿಲಕ್ಷಣ ಜೀವರಾಶಿಗಳ ವರ್ಣನೆ	೦—೧—೦
ಹೊಗೆ ಗಾಡಿಗಳನ್ನು ಕಲ್ಪಿಸಿದ ಜಾರ್ಜ್ ಸ್ಟೀವೆನ್‌ಸನ್ ಎಂಬಾತನ ಚರಿತ್ರೆ	೦—೧—೦

"ಹಿಂದೂ ದೇಶ ಪ್ರದಕ್ಷಿಣ" ಎಂದು ಕರೆಯಲ್ಪಡುವ ಈ ನೂತನ ಪುಸ್ತಕದಲ್ಲಿ ಸುಮಾರು ತೊಂಬತ್ತು ಉತ್ಕೃಷ್ಟವಾದ ಚಿತ್ರಗಳು ಅಡಗಿವೆ. ಹಿಂದೂ ದೇಶವನ್ನೆಲ್ಲಾ ಸಂಚಾರ ಮಾಡುವದರಿಂದ ಉಂಟಾಗುವ ಪರಮಾನಂದವನ್ನು ಒಂದು ಸಾರಿ ಈ ಗ್ರಂಥವನ್ನು ಓದುವದರಿಂದ ಹೊಂದಬಹುದು. ಇದು ಮೊದಲನೇ ಸಾರಿ ಪ್ರಿಂಟ್ ಆಗಿದ್ದು ಬಹು ಶೀಘ್ರವಾಗಿ ಎಲ್ಲಾ ಮುಗಿದು ಹೋದವು. ಈಗ ತಿರಿಗಿ ವಿಶೇಷವಾಗಿಯೂ ಉಲ್ಲಾಸಕರವಾಗಿಯೂ ಇರುವ ಪ್ರಸಿದ್ಧವಾದ ಚಿತ್ರಗಳಿಂದ ಪ್ರಕಟಿಸಿರುತ್ತೇವೆ.

ಕ್ರಯ ೦—೮—೦ (ವಿ. ಪಿ. ಪಿ. ಮೂಲಕ ೦—೧೧—೦)

ವಿಳಾಸ — ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪೋ,

ಮೈಸೂರು

ಹಿಂದೂಸ್ಥಾನದಲ್ಲಿ ಮಕ್ಕಳು

ಬಹಳ ಮಕ್ಕಳು ಎಳೆತನದಿಂದ ನಾನಾ ಬಾಧೆಗಳನ್ನು ಅನುಭವಿಸಬೇಕಾಗಿದೆ.

ಅವರ ನಿತ್ಯಗಳಿಗೆ ಅಂಗಗಳ ಮಾಂಸವು ದಿನ ಪರಿಯಾಗಿ ಬೆಳೆಯುವದಕ್ಕೂ ಅವುಗಳು ಚಿಕ್ಕಂದಿನಿಂದಲೇ ಬಲಕರವಾದ ಸೇವನಾ ಔಷಧವನ್ನು ಕೊಡುವದು ಅವಶ್ಯಕ.

SCOTT'S EMULSION

31-91

(ಸ್ಕಾಟ್ಸ್ ಇಮಲ್‌ಷನ್)

ಈ ಬಲ ಸೇವನಾ ಔಷಧದಲ್ಲಿ ಮಕ್ಕಳ ಸಮಸ್ತ ಅಂಗಗಳನ್ನೂ ಬಲಪಡಿಸಿ ಬೆಳೆಸುವಂಥಾ ಬಹು ಉತ್ಕೃಷ್ಟವಾದ ಗುಣಗಳಿರುತ್ತವೆ.

ಇದಕ್ಕೆ ಸಮಾನವಾದದ್ದು ಮತ್ಯಾವದೂ ಇಲ್ಲ.

ಈ ಔಷಧವನ್ನು ಸೇವನೆ ಮಾಡುವಂದಿನಿಂದ ಒಡನೆಯೇ ಅದರ ಗುಣಗಳು ಕಂಡುಬರುವವು.

ಕೈಯಿಂದ ಮುಟ್ಟದೇನೇ ತಯಾರಾದದ್ದು

ಎಲ್ಲಾ ಔಷಧ ವ್ಯಾಪಾರಸ್ಥರಲ್ಲಿ ಬಿಕರಿಯಾಗುತ್ತಿದೆ.

ಮೀನುಮನುಷ್ಯ ಇರುವ ಈ ಔಷಧದ ಗುರುತು

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್, ಔಷಧಗಳ ಕಾರ್ಖಾನೆ, ಲಂಡನ್, ಇಂಗ್ಲೆಂಡ್

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

752

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು? ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ಧಾರವೆಲ್ಲಾ ಬೀಳಾದದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ — (೧) ನಮ್ಮಲ್ಲಿ ತಯಾರಾಗುವ ಟೋಪಿಗಳ ಧಾರವೆಲ್ಲಾ ನೆಟ್ಟಗೆ ವಿಲಾಯಿತಿಯಿಂದಲೇ ಬರುವದು. (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚೆನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚೆನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ, ಚೆನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಸೀದಾ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದು ಚೆನ್ನಾಗಿಲ್ಲದದ್ದು ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ. ಸಾದ, ಕೆಂಪು, ಕಪ್ಪು, ಹಳದಿ, ಕಾಪಿ ಟೋಪಿಗಳು ೧ ರೂ ೮ ಆ; ೧ ರೂ ೬ ಆ ೧ ರೂ ೪ ಆ.

ರೇಷ್ಮೆ ಜರಿಯುಳ್ಳ ಟೋಪಿಗಳು ೧ ರೂ ೮ ಆ, ೨ ರೂ. ದಾರದ ಟೋಪಿಗಳು ೧ ರೂ ೨ ಆ, ೧ ರೂ ೮ ಆ, ೧ ರೂ ೬ ಆ. ಜರಿಕಸೂತಿಯ ಟೋಪಿಗಳು ೧ ರೂ ೮ ಆ, ೧ ರೂ ೬ ಆ.

ಕೂಸುಗಳ ಟೋಪಿ, ಸೂರ್ಯ ಮೇಜೋಡು, ಅರ್ಧ ಮೇಜೋಡು ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕಳುಹಿಸುವೆವು.

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ

ವೃತ್ತಾಂತ ಪತ್ರಿಕೆ.

—:o:—

ಸ ೧೯೦೨ ನೇ ಇಸವಿ ಆಗಸ್ಟ್ ತಾ॥ ೮ ನೇ ಗುರುವಾರ

ದೇವರು ಪರಿಶುದ್ಧನು ; ದೇವಸಾ ಸವ್ರೂ ಪರಿಶುದ್ಧವಾಗಿರಬೇಕು

ಬೊಂಬಾಯಿ ಅಧಿಸತ್ಯದಲ್ಲಿ ಖಂಡೋಬಾ ಎಂಬ ದೇವರಿಗೆ ಹುಡುಗಿಯರನ್ನು ಕೊಟ್ಟು ವಿವಾಹ ಮಾಡುವ ಪದ್ಧತಿ ಉಂಟು. ಅಂಥಾ ಹುಡುಗಿಯರಲ್ಲಿ ಬಹುಮಂದಿ ದೇಹ ವಿಕ್ರಯಾದಿ ದುರ್ವ್ಯಾಪಾರಗಳಲ್ಲಿ ಆಸಕ್ತರಾಗಿರುತ್ತಾರೆ ಆದಕಾರಣ ಇಂಥಾ ದುಷ್ಟಪದ್ಧತಿಯನ್ನು ನಿಲ್ಲಿಸಿಬಿಡಬೇಕೆಂತಲೂ ಇನ್ನು ಮುಂದೆ ಯಾರೂ ಅಂಥಾ ಅಂತಕವಾದ ವಿವಾಹಗಳನ್ನು ನಡಿಸದಂತೆ ಕಾನೂನ್ ಮಾಡಿ ತಡೆಯಬೇಕೆಂತಲೂ ಬೊಂಬಾಯಿ ಅಧಿಸತ್ಯದ ಹಿಂದುಗಳೂ ಕ್ರೈಸ್ತರೂ ಸೇರಿ ಗವರ್ನಮೆಂಟಿಗೆ ವಿಜ್ಞಾಪನೆ ಮಾಡಿಕೊಂಡಿದ್ದರು. ಜಡ್ಜಿಗಳಾದ ಚಂದಾವಾರ್ಕರವರೂ ಆ ಸ್ಥೈಕೆ ಒಬ್ಬರಾಗಿರುತ್ತಾರೆ ಗವರ್ನಮೆಂಟಿನವರು ಈ ಅರ್ಜಿಯನ್ನು ಪರಾಂಬರಿಸಿ, ಈಗ ಜಾರಿಯಲ್ಲಿರುವ ಪೀನಲ್ ಕೋಡ್ ಎಂಬ ಶಿಕ್ಷಾಪ್ರಕರಣಗಳನ್ನೊಳಗೊಂಡಿರುವಂಥಾ ಕಾನೂನು ಸಾಕಾಗಿದೆ ಎಂತಲೂ, ಪ್ರತ್ಯೇಕವಾದ ಕಾನೂನ್ ಮಾಡಬೇಕಾದದ್ದಿಲ್ಲವೆಂತಲೂ, ಈಗಿರುವ ಕಾನೂನನ್ನು ತೃಪ್ತಿಕರವಾಗಿಯೂ ... ಜಾರಿಗೆ ತರಬೇಕೆಂತಲೂ ... ಅಪ್ಪಣೆ ಕೊಡಿಸಿದಾರೆ ಇದಲ್ಲದೆ ಅಂಥಾ ವಿವಾಹವನ್ನು ನಡಿಸುವ ... ಹಿಡಿದು ಅವರ ಮೇಲೆ ಕ್ರಿಮಿನಲ್ ಮೊಕದ್ದಮೆ ನಡಿಸಬೇಕೆಂದು ಪೋಲೀಸ್ ಅಧಿಕಾರಿಗಳಿಗೆಲ್ಲಾ ಸರ್ಕ್ಯುಲರುಗಳನ್ನು ಕಳುಹಿಸಿರುತ್ತಾರೆ

ಹೀಗೆ ಕೋರ್ಟುಗಳಲ್ಲಿ ದಯಾ ... ಕಡೆಗೆ ಬಿಡುಗಡೆಯಾಗುವಂಥಾ ಹುಡುಗಿಯರನ್ನು ... ಪಾಲಿಸುವದು? ಅವರನ್ನು ಸುಮಾರ್ಗ ರೀತಿಯಲ್ಲಿ ... ನಡಿಸತಕ್ಕದ್ದವರು ಯಾರು? ಅಂಥಾ ಹುಡುಗಿಯರ ಸಂರಕ್ಷಣೆ ... ಹಿಂದುಗಳ ... ಅವರ ... ಅವರ ... ಭಾಗದಲ್ಲಿ ಹಿಂದುಗಳು ... ಆದ ಕಾರಣ ಅವರು ... ಮಾಡಬೇಕು ಎಂಬದಾಗಿ ಗವರ್ನಮೆಂಟಿನವರು ... ಅರ್ಜಿದಾರರಿಗೆ ತಿಳಿಸಿರುತ್ತಾರೆ ... ಸಮಸ್ತ ಹಿಂದುಗಳೂ ಈ ವಿಷಯವನ್ನು ಕುರಿತು ಯೋಚನೆ ಮಾಡಿ, ಅವರ ... ಅಂಥಾ ಅನಾಥಾಲಯಗಳನ್ನು ಸ್ಥಾಪಿಸಿಕೊಳ್ಳಬೇಕು ... ಮತ್ತು ... ವಿವಾಹಗಳು ನಿರ್ನಾಮವಾಗುವವು.

ನಮಗೆ ತೋರುವ ಇನ್ನೊಂದು ವಿಷಯವೇನೆಂದರೆ ... ವಿವಾಹಗಳು ನಡೆಯುವಂಥಾ ದೇವಸ್ಥಾನಗಳ ... ಭಾಗದಲ್ಲಿ ಎಲ್ಲರಿಗೂ ಪರಿಷ್ಕಾರವಾಗಿ ತಿಳಿಯುವಂತೆ ಗವರ್ನಮೆಂಟಿನವರು ಇಸ್ತಿಹಾರುಗಳನ್ನೂ ನೋಟೀಸುಗಳನ್ನೂ ಅಂಟಿಸಿ, ಆ ವಿವಾಹ ನಡಿಸಿದವರನ್ನು ಹಿಡಿದು ಕಠಿಣ ಶಿಕ್ಷೆಗೆ ಗುರಿಮಾಡುತ್ತೇವೆಂದು ತಿಳಿಯಪಡಿಸಬೇಕಿದೆ. ಯಾಕಂದರೆ ದೇವಸ್ಥಾನಗಳ ಆವರಣದಲ್ಲಿ ಈ ತರದ ದುಷ್ಕಾರ್ಯಗಳು ನಡೆಯುವುದಕ್ಕೂ ಅವಕಾಶ ಕೊಡಬಾರದು. ಸತ್ವಾತ್ತಿಕನೂ ನಿಷ್ಕಳಂಕನೂ ಆದ ... ಕರ್ತನನ್ನು ಅಯೋಗ್ಯವೂ ಲಜ್ಜಾಸ್ಪದವೂ ಆದ ... ಕಾರ್ಯಗಳಲ್ಲಿ ಸಂಬಂಧವುಳ್ಳವನಂತೆ ವಿವರಿಸಿ ಹೇಳುವ ವೇದವಾಕ್ಯವೂ ಪುರಾಣವಚನವೂ ಮಾನುಷಕಲ್ಪಿತವುಗಳೇ ವಿನಹ ಮತ್ತೇನೂ ಅಲ್ಲವು ಪರಾತ್ಪರನು ಶುದ್ಧನೇ ಆಗಿರುತ್ತಾನೆಂಬುವುದನ್ನು ಆತನ ಪರಮಭಕ್ತರು ದೇವಸ್ಥಾನಗಳಲ್ಲಿ ಮರೆಯಕೂಡದು.

ಒಳದೇಶದ ವೃತ್ತಾಂತಗಳು.

ಆರವತ್ತಾರುಮಣ್ಣು ನರಸೀಪುರದ ತಾಲ್ಲೂಕಿನ ಆಕ್ಟಿಂಗ್ ಅಮಲ್ದಾರರಾಗಿದ್ದ ಮಿ. ಬಿ ಎಸ್ ಚನ್ನಿಗಪ್ಪನವರಿಗೆ ಸರ್ಕಾರದವರು ಒಂದು ವರುಷದ ರಜಾ ಕೊಟ್ಟಿದಾರೆ

❖❖❖

ಅರಸೀಕೆರೆಯಿಂದ ಮಂಗಳೂರಿಗೆ ರೈಲು ರಸ್ತೆ ಹಾಕಿಸಿಕೊಡಬೇಕೆಂದು ಇಂಡಿಯಾ ಗವರ್ನಮೆಂಟಿನವರಿಗೂ ಮೈಸೂರು ಸರ್ಕಾರದವರಿಗೂ ಅರಿಕೆ ಮಾಡಬೇಕೆಂದು ದಕ್ಷಿಣ ಮೈಸೂರು ಪ್ಲಾಂಟರುಗಳು ಸಕಲೇಶಪುರದಲ್ಲಿ ಸಭೆ ಸೇರಿ ತೀರ್ಮಾನ ಮಾಡಿರುತ್ತಾರೆ

❖❖❖

ರಾಜಧಾನಿಯ ಪಶ್ಚಿಮಭಾಗದಲ್ಲಿರುವ ... ಕೆರೆ ಬಳಿ ಒಂದು ತೋಟದ ಪ್ರಾಂತ್ಯದಲ್ಲಿ ಒಂದು ಚಿರತೆಯು ತನ್ನ ಎರಡು ಮರಿಗಳನ್ನು ಕಟ್ಟಿಕೊಂಡು ಸಂಚಾರಮಾಡುತ್ತಾ ... ಜನರನ್ನು ... ಗಾಬರಿಪಡಿಸುತ್ತದೆ ಎಂದು ತಿಳಿಯುತ್ತದೆ

❖❖❖

ಸರ್ಕಾರದವರು ಮುಂದೆ ಹೇಳುವ ಅಮಲ್ದಾರರನ್ನು ವರ್ಗಮಾಡುತ್ತಾರೆಂದು ಕೇಳುತ್ತೇವೆ —ಮಿ॥ ನಂಜುಂಡಯ್ಯನವರು ದಾವಣಗೆರೆಯಿಂದ ಚಿತ್ರದುರ್ಗಕ್ಕೆ, ಮಿ॥ ... ಚಿತ್ರದುರ್ಗದಿಂದ ಚಳ್ಳಕೆರೆಗೆ, ಮಿ॥ ಮಹಮದ್ ... ಚಳ್ಳಕೆರೆಯಿಂದ ದಾವಣಗೆರೆಗೆ

❖❖❖

ಬೆಂಗಳೂರು ಪೋಲೀಸ್ ಟ್ರೈನಿಂಗ್ ಸ್ಕೂಲಿನಲ್ಲಿ ತರ್ಬೇತಿ ಹೊಂದಿದ ವಿದ್ಯಾರ್ಥಿಗಳೆಲ್ಲಾ ಕಳೆದ ಬುಧವಾರ ರಾತ್ರಿ ಅಲ್ಲಿರುವ ಸಾ॥ ದೊಡ್ಡಣ್ಣನವರ ಹಾಲ್ ಎಂಬ ಕಟ್ಟಡದಲ್ಲಿ ತಮ್ಮ ಉಪಾಧ್ಯಾಯರುಗಳನ್ನು ಕರೆಸಿಕೊಂಡು ಅವರಿಗೆ ಸಂತೋಷಕರವಾದ ವಿತರಣೆಗಳನ್ನು ಮಾಡಿದರು

❖❖❖

ಕಳೆದ ಶನಿವಾರ ಸಾಯಂಕಾಲ ಬೆಂಗಳೂರು ಸಿಟಿ ವೆಸ್ಲಿಯನ್ ಮಿಷನ್ ಹೈಸ್ಕೂಲಿನಲ್ಲಿ ಬಾಲಕರಿಗೆ ವಾರ್ಷಿಕ ಬಹುಮಾನಗಳು ಕೊಡಲ್ಪಟ್ಟವು ದಿವಾನರಾದ ಮಿ॥ ವಿ ಪಿ ಮಾಧವರಾಯರವರು ಅಗ್ರಾಸನವನ್ನು ಸ್ವೀಕರಿಸಿ, ಕಳೆದ ೩೦ ವರುಷಗಳಿಂದಲೂ ಮಿಷನ್ ಸಂಘದವರು ಈ ಸಂಸ್ಥಾನದಲ್ಲಿ ವಿದ್ಯಾಭಿವೃದ್ಧಿ ಮಾಡುವುದಕ್ಕಾಗಿ ಸಾಗಿಸಿದ ... ದನ್ನು ಕೊಂಡಾಡಿದರು

❖❖❖

ರಾಜಧಾನಿಯಿಂದ ೯ ಮೈಲಿ ದೂರದಲ್ಲಿರುವ ... ಕಡೆ ... ಬಾಗಿಲು ... ಮಿ॥ ... ದಳದ ಇನ್ಸ್ಪೆಕ್ಟರ ... ಆ ... ತಿಳಿಯುತ್ತದೆ

❖❖❖

ಮದ್ದೂರಿನ ಬಳಿ ಇರುವ ... ಹೊಳೆಗೆ ಹೊಸದಾಗಿ ಒಂದು ರೈಲ್ ಸೇತುವೆಯನ್ನು ಕಟ್ಟಬೇಕೆಂದು ಸ್ಯಾಂಕ್ಷನ್ ಆಗಿದೆ ... ಅದು ... ಕಡೆ ರೈಲು ... ಸಂಚಾರ ... ಇದಲ್ಲದೆ ... ಕಟ್ಟಡ ... ಸ್ಯಾಂಕ್ಷನ್ ಆಗಿದೆ

❖❖❖

ಕ ... ಗಳ ... ನ್ನು ... ಮಾಡತಕ್ಕ ... ಕಾಗದ ... ಕಂಟ್ರಾಕ್ಟರುಗಳಿಗೆ ... ಎಂದು ... ಬೆಂಗಳೂರು ... ಗಳೆಲ್ಲಾ ... ಖಾತೆ ... ಗವರ್ನಮೆಂಟಿಗೆ ಅರಿಕೆ ಮಾಡಬೇಕೆಂದು ಗೊತ್ತುಮಾಡಿರುತ್ತಾರೆ

❖❖❖

ಕೋಲಾರಕ್ಕೆ ಸೇರಿದ ನಂದಿದುರ್ಗದ ಗಣಿಯಲ್ಲಿ ಒಬ್ಬ ... ಅವನ ... ಕೆಲಸ ... ಮೈಮೇಲೆಲ್ಲಾ ಬರೆಗಳನ್ನು ... ಹಿಂಸೆ ... ಆಗಿದೆ ಆ ಹುಡುಗಿಯನ್ನು ಆಸ್ಪತ್ರೆಯಲ್ಲಿಟ್ಟು ಇಲಾಜು ಮಾಡುತ್ತಿದ್ದರೂ ಬದುಕುವುದು ಕಷ್ಟವೆಂದು ಹೇಳುತ್ತಾರೆ ಹಿಂಸೆ ಮಾಡಿದವರನ್ನು ಹಿಡಿದು ... ತನಿಖೆ ಮಾಡುತ್ತಿದ್ದಾರೆ.

❖❖❖

ಶ್ರೀಮನ್ ಮಹಾರಾಜರವರು ತಾ ೧೦ ನೇ ಸೋಮವಾರ ಬೆಳಿಗ್ಗೆ ರಾಜಧಾನಿಯಿಂದ ಮೋಟಾರ್ ಕಾರಿನಲ್ಲಿ ಹೊರಟು, ಮಳವಳ್ಳಿ ಕಿಲ್ಲ ಮುಡು, ಸಾತನೂರು, ಕೋಡಿಹಾಳ, ಕನಕಪುರ ... ಈ ಪ್ರಾಂತ್ಯಗಳಲ್ಲಿ ಸಂಚಾರ ಮಾಡಿಕೊಂಡು, ತಾ ೧೭ ನೆ ಶನಿವಾರ ಬೆಂಗಳೂರನ್ನು ತಲುಪುವರಾಗಿದಾರೆ ಅವರ ಸಂಗಡ ಮಿ॥ ಪೊಳಾನಿಕೆಯವರೂ, ಮಿ॥ ರಾಘವೇಂದ್ರರಾಯರೂ, ಮಿ॥ ಕಾಂತರಾಜೇಅರಸಿನವರೂ ಪ್ರಯಾಣ ಮಾಡುತ್ತಾರೆಂದೂ, ಕೆಲವು ಸ್ಥಳಗಳಲ್ಲಿ ಮೋಟಾರ್ ಗಾಡಿಗಳಲ್ಲೂ ಕೆಲವು ಕಡೆ ಕುದುರೆ ಸವಾರಿ ಮಾಡಿಕೊಂಡೂ ಹೋಗುವರೆಂದೂ ಕೇಳುತ್ತೇವೆ

❖❖❖

ಒಬ್ಬ ಬ್ರಾಹ್ಮಣರು ಬರೆಯುವದು — ಬಳ್ಳಾರಿ ಜಿಲ್ಲಾ ಹೊಸಪೇಟೆ ತಾಲ್ಲೂಕು ... ಗ್ರಾಮದಲ್ಲಿ ಹಳೆ ಕಟ್ಟಡವೆಂಬ ದಾರಿಯಲ್ಲಿ ನೆಲದೊಳಗೆ ದೊಡ್ಡ ಗುಡಿಯು ಸಿಕ್ಕಿರುತ್ತದೆ ಅದು ಎರಡು ಫರಲಾಂಗ್ ದೂರ ಇರುತ್ತದೆ ಆ ಗುಡಿಯಲ್ಲಿ ... ಇರುತ್ತದೆ ಆ ಗುಡಿಯಲ್ಲಿ ಧ್ವಜಸ್ತಂಭ ದೊಡ್ಡದು, ಮತ್ತು ಸಾಲ ಮಂಟಪಗಳೂ ದೊಡ್ಡ ಮಹಾದ್ವಾರವೂ ಇರುತ್ತದೆ ಈ ದಿನದ ವರಿವಿಗೆ ಓವರ್ಸಿಯರವರು ೫೦೦—೬೦೦ ಜನರಿಂದ ಕೆಲಸ ಮಾಡಿಸುತ್ತಾ ಇದಾರೆ ... ವಿರೂಪಾಕ್ಷಸ್ವಾಮಿಯ ಗುಡಿಯ ... ಇರುತ್ತದೆ ಅನೇಕ ಜನರು ಬಂದು ಈ ಗುಡಿಯನ್ನು ನೋಡಿ ಹೋಗುತ್ತಾರೆ

❖❖❖

ಲೇಟ್ ಮಿ॥ ತಾತಾರವರ ಹೆಸರಿನಲ್ಲಿ ಬೆಂಗಳೂರಿನಲ್ಲಿ ಸ್ಥಾಪಿಸಲ್ಪಡುವ ಶಾಸ್ತ್ರಪರಿಶೋಧಕ ವಿದ್ಯಾಶಾಲೆಯನ್ನು ಕಟ್ಟುವುದಕ್ಕೆ ಅಂದಾಜು ಪಟ್ಟಿಗಳು ತಯಾರಾಗಿರುತ್ತವೆ ಕಟ್ಟಡಗಳಿಗೆ ೩॥ ಲಕ್ಷ ರೂಪಾಯಿ ಹಣ ಖರ್ಚಾಗುವದು ಈ ವಿದ್ಯಾಶಾಲೆಯ ಮುಖ್ಯ ಪಾಠಕರಾದ ಡಾಕ್ಟರ್ ಮಾರಿಸ್ ಟ್ರಾವರ್ಸ್ ಎಂಬುವರು ಸಿಂಲಾದಿಂದ ಈ ವಾರ ಬೆಂಗಳೂರಿಗೆ ಬರುತ್ತಾರೆಂತಲೂ, ಬೊಂಬಾಯಿ ಪಟ್ಟಣದಿಂದ ಮಿ॥ ಸ್ಟೀವನ್ಸ್ ಎಂಬ ಇಂಜನಿಯರನ್ನು ಕರೆಸಿಕೊಂಡು ಕಟ್ಟಡಗಳನ್ನು ಪ್ರಾರಂಭಮಾಡುತ್ತಾರೆಂತಲೂ, ತರುವಾಯ ಆ ಪಾಠಕರವರು ವಿಲಾಯತಿಗೆ ಹೋಗಿ ಅಲ್ಲಿಂದ ಇಬ್ಬರು ಶಿಕ್ಷಕರನ್ನು ಆರಿಸಿ ಬೆಂಗಳೂರಿಗೆ ಕರೆದುತರುತ್ತಾರೆಂತಲೂ ಪ್ರಕಟವಾಗಿದೆ

ಮೈಸೂರು ಗೆಜೆಟ್ ಸಂಗ್ರಹ.

ಮೈಸೂರು ಚೀಫ್ ಕೋರ್ಟ್ ರಿಜಿಸ್ಟ್ರಾರ್ ಮಿ॥ ವಿ ಎ ರಾಜರತ್ನಮೊದಲಿಯಾರ್ ೧ ಜೂಲೈ ೧೯೦೨ ರಿಂದ ಹದಿನೈದು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ

ಡೆಪ್ಯುಟಿ ರಿಜಿಸ್ಟ್ರಾರ್ ಮಿ॥ ಬಿ ... ರವರು ತಮ್ಮ ಕೆಲಸಗಳೊಂದಿಗೆ ರಿಜಿಸ್ಟ್ರಾರ್ ಆಫೀಸಿನ ... ಕೆಲಸಗಳ ಭಾರವನ್ನೂ ವಹಿಸತಕ್ಕದ್ದು

ಮೈಸೂರು ಸಿಟಿ ಮ್ಯಾಜಿಸ್ಟ್ರೇಟ್ ಕೋರ್ಟಿನ ಭಾರವನ್ನು ವಹಿಸಿರುವ ಸೀನಿಯರ್ ಅಸಿಸ್ಟೆಂಟ್ ಕಮಿಷನರ್ ಮಿ॥ ಎಸ್ ವೆಂಕಟರಾಯರಿಗೆ ಕೊಟ್ಟಿರುವ ಪ್ರಿವಿಲೇಜ್ ರಜಾವನ್ನು ... ಆಗಸ್ಟ್ ೧ ರಿಂದ ... ಗಿಸಿಕೊಳ್ಳಬಹುದು

ಅಸಿಸ್ಟೆಂಟ್ ಕಮಿಷನರ್ ಮಿ॥ ... ರವರು ರಜದಿಂದ ಬಂದು ಮೈಸೂರು ಸಿಟಿ ಮ್ಯಾಜಿಸ್ಟ್ರೇಟ್ ಕೋರ್ಟಿನ ಭಾರವನ್ನು ವಹಿಸತಕ್ಕದ್ದು

... ಡೆಪ್ಯುಟಿ ಕಮಿಷನರ್ ಮಿ॥ ... ರವರಿಗೆ ... ತಿಂಗಳು ... ಮಾಡಿದೆ

ತುಮಕೂರು ಡಿಸ್ಟ್ರಿಕ್ಟ್ ... ಅಸಿಸ್ಟೆಂಟ್ ಕಮಿಷನರ್ ಮಿ॥ ಎಂ ಶ್ರೀನಿವಾಸ ... ಕೊಳ್ಳುವ ತಾರೀಖಿನಿಂದ ... ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ

ಮೈಸೂರು ರೆವಿನ್ಯೂ ಸರ್ವೆ ... ಸೂಪರಿಂಟೆಂಡೆಂಟ್ ಮಿ॥ ... ಶ್ರೀನಿವಾಸರಾಯರನ್ನು ಆಗಸ್ಟ್ ೧ ರಿಂದ ... ದರ್ಜೆ ... ವರ್ಗ ಮಾಡಿದೆ

ಮಿ॥ ಜೆ ಇ ರೋಜೇರಿಯೋಯರನ್ನು ಜೂಲೈ ೫ ರಿಂದ ಬೆಂಗಳೂರು ಡಿಸ್ಟ್ರಿಕ್ಟ್ ಎಕ್ಸೈಜ್ ಆಫೀಸರಾಗಿ ನೇಮಿಸಿದೆ.

ಮುಂದೆ ಹೇಳುವ ಅಮಲ್ದಾರ್ರ ವರ್ಗಾವರ್ಗಿ ಹುಕುಂ ಮಾಡಿದೆ — ಮಿ॥ ಅಬ್ದುಲ್ ಹಕೀಂ ರವರು ನೆಲಮಂಗಲದವರಿಗೆ, ಮಿ॥ ವಿ ... ರಾಯರು ಪಾವಗಡದಿಂದ ... ಗೆ, ಮಿ॥ ಕೆ ಕೆ ... ವೆಂಕಟರಾಮಯ್ಯರವರು ಮಾಲೂರು ತಾಲ್ಲೂಕಿನ ಅಮಲ್ದಾರರಾಗಿಯೂ, ಮಿ॥ ಎಂ ಕೇಶವೈಯ್ಯನವರು ... ನರಸೀಪುರದ ತಾಲ್ಲೂಕಿನ ಅಮಲ್ದಾರರಾಗಿಯೂ ... ನೇಮಿಸಲ್ಪಟ್ಟಿರುತ್ತಾರೆ

ಮಿ॥ ವೈ ಸೀತಾರಾಮೈಯ್ಯನವರು ಚಿತ್ರದುರ್ಗದ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರಾಗಿ ವರ್ಗಾಯಿಸಲ್ಪಟ್ಟಿದಾರೆ

ಮಿ॥ ಬಿ ರಾಮಸ್ವಾಮೈಯ್ಯನವರು ಗುಂಡ್ಲುಪೇಟೆ ... ನಗರ ... ಕೆಲಸಕ್ಕೆ ... ಲಾಗತಕ್ಕದ್ದು

ಶಿವಮೊಗ್ಗಾ ಡಿವಿಜನ್ ... ಮಿ॥ ಎ ಬಿ ರಂಗೈಯ್ಯನವರಿಗೆ ಅವರು ... ತಾರೀಖಿನಿಂದ ಹದಿನೈದು ದಿವಸಗಳ ಪ್ರಿವಿಲೇಜ್ ರಜಾ ಕೊಟ್ಟಿದೆ

ಅಸ್ಸಿಸ್ಟೆಂಟ್ ಇಲಾಖಾ ಸೂಪರಿಂಟೆಂಡೆಂಟ್ ಮಿ॥ ... ನಂಜುಂಡರಾಜೇ ಅರಸಿನವರಿಗೆ ಅವರು ... ಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಟ್ಟಿದೆ

ಮೈಸೂರು ದಸರಾ ಪ್ರದರ್ಶನವು.

ಕೈಗಾರಿಕೆಗಳೂ ವ್ಯವಸಾಯೋಪಕರಣಗಳೂ

ಮೇಲ್ವಿಚಾರಣೆಯ ಕಮಿಟಿ

ರೆವಿನ್ಯೂ ಕಮಿಷನರ್ ಮೆ॥ ಎ. ರಂಗಸ್ವಾಮಿ ಐಯ್ಯಂಗಾರು (ಪ್ರೆಸಿಡೆಂಟರು); ಮೆಂಬರುಗಳು .—ಮೆ॥ ಗಳಾದ ಛೀಫ್ ಇಂಜನಿ ಯರ್ ಡಬ್ಲ್ಯು ಮೆಕ್ಹಚ್ ಯವರು, ಛ. ಕಾರಿ ಡಾ॥ ಡಬ್ಲ್ಯು. ಎಫ್. ಸ್ಮೀತ್ ಇ ಇಲಾಖಾ ಇನ್ಸ್‌ಪೆಕ್ಟರ್ ಜನರಲ್ ಎಚ್ ಜ ಮನ್ಮಹಾರಾಜರವರ ಪ್ರೈವೇಟ್ ಸೆಕ್ರೆಟರಿ ಫಾರೆಸ್ಟ್ ಕನ್ಸರ್ವೇಟರ್ ಎಂ ಮುತ್ತಣ್ಣ ಇಲಾಖಾ ಅಧಿಕಾರಿ ಡಾ॥ ಎ. ಲೀವೋರನರು ಕ್ಸ್ ಡೆಪ್ಟಿ ಕಮಿಷನರ್ ಬಿ ದೇವರಾಜೇ ಅ ಡಿಸ್ಟ್ರಿಕ್ಟ್ ಡೆಪ್ಟಿ ಕಮಿಷನರ್ ಎಂ ಕಾಂ ಗವರ್ನಮೆಂಟ್ ಉದ್ಯಾನವನಗಳ ಸೂಪರಿಂಟೆ ರಾಯರವರು, ದರ್ಬಾರ್ ಭಕ್ಷಿ ಎಚ್ ಲಿಂಗ ಮ್ಯೂಸಿಯಂ ಸೂಪರಿಂಟೆಂಡೆಂಟ್ ಎಚ್ ನ ವರು, ಗವರ್ನಮೆಂಟ್ ಪ್ರೆಸ್ ಸೂಪರಿಂಟೆಂಡೆ ಟ್ ಯವರು, ಹೆಸರುಘಟ್ಟ ನೀರು ಸರಬರಾ ಟಿವ್ ಇಂಜನಿಯರ್ ವಿ. ರಂಗಸ್ವಾಮಿ ಐ ಮೆಂಟ್ ಇಂಡಸ್ಟ್ರಿಯಲ್ ಸ್ಕೂಲ್ ಸೂಪರಿ ಸ್ವಾಮಿ ಐಯ್ಯರವರು

ಪ್ರದರ್ಶನದ ಮುಖ್ಯ ವಿಷಯ

ಶ್ರೀಮನ್ ಮಹಾರಾಜಾ ಸರ್ಕಾರದವರು ಲ್ಲಿ ನವರಾತ್ರಿ (ದಸರಾ) ಉತ್ಸವ ಕಾಲದಲ್ಲಿ ಯೋಪಕರಣಗಳ ಮತ್ತು ಕಾರಿ ಗೋ ಕಾಂ ನಡಿಸಬೇಕೆಂದು ನಿರ್ಧರಿಸಿ, ಅದರ ಮೇಲ್ವಿ ಕಮಿಟಿ ಮೆಂಬರುಗಳನ್ನು ನೇಮಕಮಾಡಿ ಬುದ್ಧಿ ಕುಶಲತೆಯನ್ನು ಉಂಟುಮಾಡುವುದೂ ಳನ್ನೂ ಯಂತ್ರಸಾಧನಗಳನ್ನು ರೈತರಿಗೂ ಕ ರಿಸಿಕೊಡುವುದೂ, ಅವುಗಳ ತಯಾರಿ ಮು ಸಾಕ್ಷಾತ್ತಾಗಿ ಮಾಡಿ ತೋರಿಸುವುದೂ ಈ ಪ್ರ ಶಗಳಾಗಿರುತ್ತವೆ ಪದಾರ್ಥಗಳ ಮಾರಾಟವನ ವುದು ಅದರ ಉದ್ದೇಶವಲ್ಲವಾದ್ದರಿಂದ ನಾರಿಕ ವಸ್ತುಗಳನ್ನು ಈ ಶಾಲೆಯಲ್ಲಿ ಇಡುವುದಕ್ಕೆ ಕಾಶ ಕೊಡಲಾಗದು ಮಾದರಿ ವಸ್ತುಗಳನ್ನು ಗುವಂತೆ ಪ್ರೋತ್ಸಾಹಿಸಬೇಕಾದಾಗಿದೆ ಈ ಪ್ರ ಸ್ರುತಿ ವರುಷವೂ ನಡೆಯತಕ್ಕದ್ದಾದಕಾರಣ ಅಭಿವೃದ್ಧಿಗೆ ತರಬೇಕಾಗಿರುತ್ತದೆ ಈ ಪ್ರದರ್ ಕೆಗಳ ವಿಷಯವಾಗಿಯೂ, ವ್ಯವಸಾಯೋಪ ಯೂ, ಆವುಗಳ ಬೆಲೆ, ಕಟ್ಟುಪಾಡು, ರಿಪೇರಿ ಮುಂತಾದವುಗಳ ವಿಷಯವಾಗಿಯೂ ಇಂಗ್ಲಿಷಿ ಯಲ್ಲೂ ಉಪನ್ಯಾಸಗಳು ನಡೆಯುವಂತೆ ಏ ವುದು ಸಾಧ್ಯವಾದಲ್ಲಿ ಉಳಿವುವನ್ನೂ ನ ಸಾಕ್ಷಾತ್ತಾಗಿ ತೋರಿಸಲ್ಪಡುತ್ತೆ ವ್ಯವಸಾಯ ಳಲ್ಲಿ ಯಾವುದಕ್ಕಾದರೂ ಪ್ರೋತ್ಸಾಹಕರು ಡುವುದಾಗಿ ತಿಳಿಸಿದ ಪಕ್ಷದಲ್ಲಿ ಕಮಿಟಿಯವರ ಸಾಭಿಪ್ರಾಯವಾಗಿ ಅಂಗೀಕರಿಸಿ, ಕೊಡುವು ಯೋಗ ಮಾಡುತ್ತಾರೆ ಈ ಸಂಸ್ಥಾನದ ಎಲ್ ಹೊರಗಿನವರೂ ಪ್ರದರ್ಶನಕ್ಕೆ ವಸ್ತುಗಳನ್ನು ಇಂಡಿಯಾ, ಬರ್ಮಾ, ಸಿಲೋನ್ (ಲಂಕಾ) ವ್ಯವಸಾಯದ ಇಲಾಖೆಗಳಿಂದಲೂ, ಸಂಘಗಳಿ ಕ್ಕೆ ಪದಾರ್ಥಗಳನ್ನು ಕಳುಹಿಸಿಕೊಡುವರೆಂದು ಕ್ಷಿಸುತ್ತಾರೆ.

ಪ್ರದರ್ಶನ ನಡೆಯುವ ಕಾಲ ಮ

ಸಾಮಾನ್ಯವಾಗಿ ಪ್ರದರ್ಶನವು ಪ್ರತಿ ವರು ವು ದಿನಗಳ ಮುಂಚಿತವಾಗಿಯೇ ಪ್ರಾರಂಭವಾಗಿ ನಾಲ್ಕು ವಾರಗಳ ತನಕ ನಡೆಯುವುದು ಈ ವರುಷ ಪ್ರದರ್ಶನವನ್ನು ಅಕ್ಟೋಬರ್ ೫ನೆ ತಾ. ಶನಿವಾರ ಬೆಳಿಗ್ಗೆ ೮ ಗಂಟೆಗೆ ಪ್ರಾರಂಭ ಮಾಡಿ ಅಕ್ಟೋಬರ್ ೩೧ನೆ ತಾ ಗುರುವಾರ ಸಾಯಂಕಾಲದ ವರೆಗೂ ತೆರೆದಿರುತ್ತದೆ. ಗೋಕಾಯ್ಲುಗಳ ಪ್ರದರ್ಶನವಾದರೋ ಸಾಧಾರಣವಾಗಿ ಪ್ರತಿ ವರುಷವೂ ವಿಜಯದಶಮಿ ಆದ ಒಡನೆಯೇ ಪ್ರಾರಂಭಿಸಲ್ಪಟ್ಟು, ನಾಲ್ಕು ದಿನಗಳ ತನಕ ಮಾತ್ರ ನಡೆದೀತು ಈ ವರುಷ ಮಾತ್ರ ಅಕ್ಟೋಬರ್ ೧೭ ನೆ ತಾ. ಗುರುವಾರ ಪ್ರಾರಂಭವಾಗಿ ಅಕ್ಟೋಬರ್ ೨೧ ನೆ ಸೋಮವಾರಕ್ಕೆ ಮುಕ್ತಾಯವಾಗುತ್ತದೆ ಉಪನ್ಯಾಸಗಳೇ ಮುಂತಾದುವನ್ನು ಅಕ್ಟೋಬರ್ ೧೪ ನೆ ಸೋಮವಾರದಿಂದ ೨೪ ನೆ ತಾ ಗುರುವಾರ ದೊಳಗಾಗಿ ಆಗ್ಗೆ ಪ್ರಕಟಿಸಲ್ಪಡುವ ನೋಟೀಸುಗಳಲ್ಲಿ ಕಂಡ ಸ್ಥಳ ಕಾಲಗಳಲ್ಲಿ ನಡಿಸುವಂತೆ ಏರ್ಪಾಡು ಮಾಡಲ್ಪಡುವುದು ಪ್ರದರ್ಶನಕ್ಕೆ ಬಂದಂಥಾ ವಸ್ತುಗಳ ಯೋಗ್ಯತಾಪತ್ರಗಳನ್ನು ನಿರ್ಧರಿಸಿ ಬಹುಮಾನಗಳನ್ನು ವಿನಿಯೋಗ ಮಾಡುವುದರಲ್ಲಿ ಮುಖ್ಯರಾದ ರೈತರೂ ಬೇರೋಜಗಾರರಾದ ದೊಡ್ಡಮನುಷ್ಯರೂ ಕಮಿಟಿಯವರಿಗೆ ಸಹಾಯ ಮಾಡುವರೆಂದು ನಿರೀಕ್ಷಿಸಲ್ಪಟ್ಟಿದೆ

ಪ್ರದರ್ಶನ ನಡೆಯುವ ಸ್ಥಳವು

ಮೈಸೂರು ಪಟ್ಟಣದ ಪಶ್ಚಿಮಾಭಿವೃದ್ಧಿಯಲ್ಲಿ ಕಟ್ಟಿರುವ ಓಡ ವರ್ ಪೋಲೀಸ್ ಲೈನ್ಸ್ ಎಂಬ ಆವರಣದಲ್ಲಿ ಬೇಕಾದ ಬದಲಾವಣೆಗಳನ್ನು ಮಾಡಿಕೊಂಡು ಪ್ರದರ್ಶನವನ್ನು ನಡಸಬೇಕೆಂದು ಗೊತ್ತಾಗಿದೆ ಅದರ ಹೊರಪಾರ್ಶ್ವದಲ್ಲಿ ಜಿಂಕ್ ತಗಡುಗಳ ಮೇಲ್ಛಾವಣಿ ಹಾಕಿ ಕಟ್ಟಲ್ಪಡುವ ವಿಸ್ತಾರ ಸ್ಥಳದಲ್ಲಿ ಉಪಕರಣಗಳೂ ಯಂತ್ರ ವಿಶೇಷಗಳೂ ಪ್ರದರ್ಶನ ಮಾಡಲ್ಪಡುವವು.

ಪ್ರದರ್ಶನದ ವಸ್ತು ವಿಚಾರಗಳು.

ಪ್ರದರ್ಶನಕ್ಕೆ ವಸ್ತು ವಿಶೇಷಗಳನ್ನು ಕಳುಹಿಸಿಕೊಡತಕ್ಕವರು ಸರ್ಕಾರದವರಿಂದ ಅದಕ್ಕಾಗಿ ವಿಧಿಸಲ್ಪಟ್ಟಿರುವ ಫಾರಮಿನಲ್ಲಿ ಎಲ್ಲಾ ವಿವರಗಳನ್ನೂ ಬರೆದು ಸೆಪ್ಟೆಂಬರ್ ೫ನೇ ತಾ ನೊಳಗಾಗಿ ಮೇಲ್ಕಂಡ ಕಮಿಟಿಯ ಸೆಕ್ರೆಟರಿಯವರಿಗೆ ರವಾನೆ ಮಾಡಬೇಕು ಡೆಪ್ಟಿ ಕಮಿಷನರುಗಳೂ, ಸಬ್ ಡಿವಿಜನ್ ಆಫಿಸರುಗಳೂ, ಅಮಲ್ದಾರರೂ

ಗಳೂ ಕಾಣಬರುತ್ತಿದ್ದವು ಜನ ವಾಸವಾಗಲಿ ಜನ ಸಂಚಾರವಾಗಲಿ ಆ ಪ್ರದೇಶಗಳು ಕಂಡು ಇರಲಿಲ್ಲ. ಇಂಜನಿಯರುಗಳು ಮಾಡಿರುವ ಅಪೂರ್ವವಾದ ಸಾಹಸಕಾರ್ಯಗಳಿಂದ ಈಗ ಆ ಮೈದಾನಗಳಲ್ಲಿ ೮,೮೦೦ ಚದರ ಮೈಲಿಯಷ್ಟು ವಿಸ್ತಾರವಾದ ಪ್ರದೇಶಗಳು ಫಲಭರಿತವಾಗಿಯೂ ಜನಭರಿತವಾಗಿಯೂ ಆಗಿರುತ್ತವೆ. ಈ ಪೈಕಿ ಮುಖ್ಯವಾದ ಭಾಗವು ಚೇನಾಬ್ ನದಿಯ ಪ್ರಾಂತ್ಯವಾಗಿರುವುದು ಇದರಲ್ಲಿ ೫,೩೦೦

ತರಲು ಅರ್ಹವಾದಂಥಾ ಯಂತ್ರ ಅಥವಾ ಸಾಧನಕ್ಕೆ (ನೂಲುವ ಯಂತ್ರಗಳು ವಿನಾ), (೩) ಯಥಾರ್ಥ ದೇವಾಂಗದವನು (ನೆಯ್ಗೆ ಕಸಬಿನವನು) ಲಾಳಿಯಂತ್ರವುಳ್ಳ ಮಗ್ಗವನ್ನು ಹೂಡಿ ಪ್ರದರ್ಶನಶಾಲೆಯಲ್ಲಿ ಕಮಿಟಿಯವರು ತೋರಿಸುವಂಥಾ ಬಟ್ಟೆಗಳನ್ನು ನೆಯ್ದು ತೋರಿಸುವವನಿಗೆ (ಇವನು ಯಾವ ಇಂಡಸ್ಟ್ರಿಯಲ್ ಸ್ಕೂಲಿನಲ್ಲೂ ತರಪೇತಾದವನಾಗಿರಕೂಡದು)

ಕಾಡು ಫಲಭರಿತವಾದ ಜಮೀನಾದದ್ದು.

ಒಂದು ಅಪೂರ್ವವಾದ ನೀರಾವರಿ

ಉತ್ತರದೇಶದಲ್ಲಿ ಅಂದರೆ ಪಂಜಾಬ್ ಮತ್ತು ಸಿಂಧುದೇಶಗಳಲ್ಲಿ ಸಿಂಧು ನದಿಯೂ ಅದರ ಶಾಖೆಗಳಾದ ಪಂಚನದಿಗಳೂ ಕಾಲಾನುಕಾಲದಿಂದ ವ್ಯರ್ಥವಾಗಿ ಹರಿಯುತ್ತಿದ್ದವು ಇಂಗ್ಲಿಷ್ ಗವರ್ನಮೆಂಟಿನವರು ಈಚೆಗೆ ಶಕ್ತಿ ಸಾಹಸವಂತರಾದ ಇಂಜನಿಯರುಗಳ ಮೂಲಕ ಆ ನದಿಗಳ ಅಪಾರವಾದ ನೀರನ್ನು ಕಾಲುವೆಗಳ ಹಾಯಿಸಿ ಕಾಡನ್ನೆಲ್ಲಾ ಫಲಭರಿತವಾದ ಜಮೀನುಗಳನ್ನಾಗಿ ತಿರಿಗಿಸಿರುತ್ತಾರೆ. ಈ ನೀರಾವರಿ ಕಾಲುವೆಗಳನ್ನೂ ಈಗ ಅಲ್ಲಿ ಗ್ರಾಮ ಭೂಮಿ ಜಮೀನುಗಳಾಗಿರುವುದನ್ನೂ ಪ್ರಜಾವೃದ್ಧಿಯಾಗುತ್ತಿರುವುದನ್ನೂ ಇಲ್ಲಿ ಸ್ವಲ್ಪಮಟ್ಟಿಗೆ ವಿವರಿಸಬೇಕೆಂದು ಕುತೂಹಲಪಡುತ್ತೇವೆ.

ಕಾಡನ್ನು ಜಮೀನಾಗಿ ತಿರಿಗಿಸಿದ್ದು.

ಸುಮಾರು ಹದಿನೈದು ಸಂವತ್ಸರಗಳ ಹಿಂದೆ ಆ ಪ್ರಾಂತ್ಯಗಳಲ್ಲಿ ಎತ್ತ ನೋಡಿದರೂ ಬೆಂಗಾಡದ ಜಮೀನುಗಳೂ ಅಸಾಧ್ಯವಾದ ಕಾಡು

ಮಂಡೇಕರಿಗಾಗಲೀ ಅಂಥಾ ಜಮೀನನ್ನು ಕ್ರಯ ದಾನ ಭೋಗ್ಯ ಆಧಾರವೇ ಮೊದಲಾದ ಯಾವ ರೀತಿಯಲ್ಲೂ ಪರಾಧೀನ ಮಾಡಕೂಡದು ಇದಕ್ಕೆ ಅವನಿಗೆ ಹಕ್ಕು ಕೊಡಲಿಲ್ಲ ಉಳಿದ ಎರಡು ದರ್ಜೆಯವರಿಗೂ ಅವರವರ ಜಮೀನುಗಳ ಮೇಲೆ ಸಂಪೂರ್ಣವಾದ ಅಧಿಕಾರಗಳನ್ನು ಕೊಟ್ಟರು ಆದರೆ ಎರಡನೆ ದರ್ಜೆಯ ಜಮೀನುಗಳನ್ನು ಪಡೆಯತಕ್ಕ ಪ್ರತಿ ಎಕರೆಗೂ ೭ ಅಥವಾ ೫ ರೂಪಾಯಿನಂತೆ ಇನಾಮು ಪಾವತಿ ಮಾಡಬೇಕು ಕೆಲಗಾರನಾದರೋ ಜಮೀನಿನ ಒಟ್ಟು ಕಂದಾಯವನ್ನು ಕೊಟ್ಟು ಕ್ರಯ ಪತ್ರವನ್ನು ಬರೆಸಿಕೊಳ್ಳಬಹುದು ಈ ರೀತಿ ಹೊಸದಾಗಿ ಬಂದು ನಿಂತು ವ್ಯವಸಾಯ ಮಾಡಿ ಪ್ರತಿ ಒಬ್ಬನೂ ಎರಡು ಸಾರಿ ಸರ್ಕಾರಕ್ಕೆ ಒಂದು ಕಾಸೂ ಕೊಡದೇ ಫಸಲನ್ನೆಲ್ಲಾ ತಾನೇ ಅನುಭವಿಸ ತಕ್ಕದ್ದೆಂದು ವಿಧಿಸಿದರು ಇದಲ್ಲದೆ ಜಮೀನನ್ನು ಸಾಗುವಳಿಗೆ ತರುವುದಕ್ಕೂ, ಮನೆ ಮಠಗಳನ್ನು ಕಟ್ಟಿಕೊಳ್ಳುವುದಕ್ಕೂ ಬೀಜ ದನ ನೇಗಲು ಮುಂತಾದವುಗಳನ್ನು ಸಿದ್ಧಪಡಿಸಿಕೊಳ್ಳುವುದಕ್ಕೂ ಸರ್ಕಾರದವರು ಸಕಲರಿಗೂ ಬಹು ಧಾರಾಳವಾಗಿ ತಕಾವಿಯನ್ನು ಸಾಲ ಕೊಡುವಂತೆ ಏರ್ಪಾಡು ಮಾಡಿದರು ಆ ರೈತರ ಪೈಕಿ ಮಂಜಬಾರಿ ಎಂಬ ಸಿಕ್ಖ್ ಜನರನ್ನು ತಂದಿಟ್ಟು ಅವರಿಗೆ ಜಮೀನು ಕೊಡಿಸಿದರು. ಇವರು ಇಂಗ್ಲಿಷ್ ಸೈನ್ಯಕ್ಕೆ ಬೇಕಾದಂಥಾ ಯೌವನಸ್ಥರನ್ನು ತಮ್ಮಲ್ಲಿ ಬೆಳಸಿ ಒಪ್ಪಿಸಬೇಕೆಂದು ವಿಧಿಸಿದರು. ಒಂಟೆಗಳನ್ನು ಸಾಕತಕ್ಕವರಿಗೂ ಜಮೀನು ಕೊಟ್ಟು ಅದಕ್ಕೆ ಪ್ರತಿಯಾಗಿ ಅವರು ಸೈನ್ಯದ ಇಲಾಖೆಗೆ ಒಳ್ಳೆಯ ಒಂಟೆಗಳನ್ನು ಬೆಳೆಸಿ ಕೊಡಬೇಕೆಂದು ಗೊತ್ತು ಮಾಡಿದರು ಜೇಲಂ ನದೀ ಪ್ರಾಂತ್ಯದಲ್ಲಿ ಮೇಲ್ಕಂಡ ಪ್ರಕಾರವೇ ಜಮೀನುಗಳನ್ನು ರೈತ ಪ್ರಜೆಗಳಿಗೆ ಕೊಟ್ಟಿ

ಕಾರು ಮಾಡಿಕೊಂಡು, ಜಮೀನಿಗೆ ಪ್ರತಿಯಾಗಿ ಅವರಿಂದ ಸೈನ್ಯಕ್ಕೆ ಬೇಕಾಗುವಂಥಾ ಕುದುರೆಗಳನ್ನು ಪಡೆವು ಬೇಕೆಂದು ಉದ್ದೇಶ ಪಟ್ಟರು ಇನ್ನು ಕೆಲವು ರೈತರಿಗೆ ಜಮೀನುಗಳನ್ನು ಕೊಟ್ಟು, ಅವರಿಂದ ಅದಕ್ಕೆ ಪ್ರತಿಯಾಗಿ ಸೈನ್ಯಕ್ಕೆ ಅವಶ್ಯವಾದ ಹೆಣ್ಣು ಕುದುರೆಗಳನ್ನು ಸಾಕುವುದಕ್ಕೂ ಕೇಳಿದಾಗ ಒದಗಿಸುವುದಕ್ಕೂ ಏರ್ಪಾಡು ಮಾಡಿದರು. ಈ ಏರ್ಪಾಡುಗಳು ಇದುವರೆಗೆ ತುಂಬಾ ತೃಪ್ತಿಕರವಾಗಿ ನಡೆದು ಬಂದಿರುತ್ತವೆ ಎಂದು ತಿಳಿದು ಬಂದಿದೆ

ಜಾಂಗ್ ಎಂಬ ಪ್ರಾಂತ್ಯದ ಜಮೀನುಗಳಲ್ಲೂ ಮೇಲ್ಕಂಡತೆಯೇ ಏರ್ಪಾಡು ಮಾಡಿ ಸಾಗುವಳಿ ಮಾಡಿಸಬೇಕೆಂದಿದ್ದರು. ಆದರೆ ಸಿಂಧು ದೇಶದಲ್ಲಿನ ಪ್ರಜಾ ಸಂಖ್ಯೆಯು ಬಹು ಸ್ವಲ್ಪವೇ ಆಗಿರೋಣದರಿಂದ ಅಲ್ಲಿನವರು ಬಂದು ನಿಂತು ಹೊಸ ಗ್ರಾಮಗಳನ್ನು ಕಟ್ಟುವುದು ಸಾಧ್ಯವಾಗಲಿಲ್ಲ ಗವರ್ನಮೆಂಟಿನವರು ಈ ಅನಾನುಕೂಲವನ್ನು ಯೋಚಿಸಿ ಪಂಜಾಬ್ ಪ್ರಾಂತ್ಯದಿಂದಲೇ ಇಲ್ಲಿಗೂ ವ್ಯವಸಾಯಗಾರರ ಸಂಸಾರಗಳನ್ನು ಕರೆಸಬೇಕಾಯಿತು ಮತ್ತು ತಲಪೂರ್ ಎಂಬ ಜನರನ್ನು ಕರೆದು ತಂದು ಅವರಿಗೆ ವಿಶೇಷ ಸೌಲಭ್ಯಗಳನ್ನು ಕಲ್ಪಿಸಿ ಕೊಟ್ಟರು ಈ ತಲಪೂರುಗಳು ಸಿಂಧು ದೇಶವನ್ನು ಪೂರ್ವಕಾಲದಲ್ಲಿ ಆಳುವವರಾಗಿದ್ದರು ಸಿಂಧು ದೇಶವು ಇಂಗ್ಲಿಷರ ಸ್ವಾಧೀನಕ್ಕೆ ಬಂದ ಮೇಲೆ ಇವರು ಆ ರಾಜವಂಶಿಕರಿಗೆಲ್ಲಾ ಜಹಗೀರುಗಳನ್ನೂ ಪೆನ್ಶನ್‌ಗಳನ್ನೂ ಕೊಟ್ಟರು ಅವರ ವಂಶಿಕರು ವಿದ್ಯಾವಂತರಾಗದೆ ತಮ್ಮ ಆಸ್ತಿಪಾಸ್ತಿಗಳನ್ನೆಲ್ಲಾ ಕಳೆದುಕೊಂಡು ಈಗ ಬಹಳ ನಿರ್ಗತಿಕರಾಗಿರುತ್ತಾರೆ ಇಂಥಾ ವಂಶಿಕರ ಸಂಸಾರಿಕರಿಗೆಲ್ಲಾ ಈ ಜಾಂಗ್ ಪ್ರಾಂತ್ಯದಲ್ಲಿ ನಾಲೆಯ ಕೆಳಗಣ ಜಮೀನುಗಳನ್ನು ಸರ್ಕಾರದವರು ವಿಂಗಡಿಸಿ ಕೊಟ್ಟರು ಆ ಜಮೀನುಗಳಲ್ಲಿ ಹೋಗಿ ನಿಂತ ಆ ಜನರಿಗೆ ಬೇಕಾಗುವಷ್ಟು ದ್ರವ್ಯಸಹಾಯವನ್ನೂ ಮಾಡಿದರು.

ಕಷ್ಟನಷ್ಟಾದಿಗಳು.

ಈ ಮೇಲ್ಕಂಡ ವಿಸ್ತಾರವಾದ ಜಮೀನುಗಳು ಈಗಿನಷ್ಟು ಆಬಾದಿಗೆ ಬರುವುದಕ್ಕೆ ಅನೇಕ ಕಷ್ಟನಷ್ಟಗಳನ್ನು ಆ ಸ್ಥಳಿಕರು ಅನುಭವಿಸಬೇಕಾಯಿತು. ಕಾಯಿಲೆಗಳು ಪ್ರಾರಂಭದಲ್ಲಿ ರೈತ ಪ್ರಜೆಗಳನ್ನು ಬಹಳ ಕಷ್ಟಪಡಿಸಿದವು ಅನೇಕಾನೇಕ ವರುಷಗಳ ವರೆಗೂ ಬೀಳಾಗಿಯೂ ಕಾಡಾಗಿಯೂ ಬಿದ್ದಿದ್ದ ಅಷ್ಟೊಂದು ವಿಸ್ತಾರವಾದ ಜಮೀನುಗಳಿಗೆ ಹೊಳೆಯ ನೀರನ್ನು ತಂದು ಹಾಯಿಸುವುದಕ್ಕಾರಂಭವಾದ ಕೂಡಲೇ ಆ ಪ್ರಾಂತ್ಯವೊಳಗೆಲ್ಲಾ ಬಹು ಕಠಿಣವಾದ ವಿಷಮಶೀತ ಜ್ವರವು ಕಾಣಿಸಿಕೊಂಡಿತು. ವರುಷದ ಕೆಲವು ಋತುಗಳಲ್ಲಿ ಈ ಜ್ವರದ ದೆಸೆಯಿಂದ ಆ ಪ್ರಾಂತ್ಯದಲ್ಲಿದ್ದ ಸಮಸ್ತ ಪ್ರಜೆಗಳೂ ಕಾಯಿಲೆಬಿದ್ದು ನರಳುತ್ತಿದ್ದರು. ಅವರು ಯಾವ ಕೆಲಸವನ್ನು ಮಾಡುವುದೂ ಅಸಾಧ್ಯವಾಗಿತ್ತು ಕೆಲವು ವರುಷಗಳ ವರೆಗೆ ಪ್ರತಿ ಸಾಲಿನಲ್ಲೂ ರೈತರು ಕಷ್ಟಪಟ್ಟು ಮಾಡಿದ ಬೆಳೆಯು ಜಮೀನುಗಳಲ್ಲಿ ಆಳ ಕಳಿಸುತ್ತಾ ಕೊಯ್ಯುವದಕ್ಕೆ ಸಿದ್ಧವಾಗಿದ್ದರೂ ಕೊಯ್ಯುವವರಿಗೆ ಗತಿಯಿಲ್ಲದೆ ಸಮಸ್ತ ಪ್ರಜೆಗಳೂ ಕಾಯಿಲೆ ಬಿದ್ದುಕೊಂಡಿರುವುದರಿಂದ ನೆಲಗಳಲ್ಲಿ ಪಕ್ಷಿಪಕ್ಷಿಗಳ ಮತ್ತು ಕಾಡು ಮೃಗಗಳ ಪಾಲು ಬೀಳುತ್ತಿರುವುದನ್ನು ಅನೇಕ ಅಧಿಕಾರಿಗಳು ನೋಡಿ ವ್ಯಸನಪಟ್ಟಿರುತ್ತಾರೆ. ಜೇಲಂ ನದೀ ಪ್ರಾಂತ್ಯಗಳಲ್ಲೂ ಮೂರನೆಯ ಸಂವತ್ಸರ ವಿಷ ಕೆಟ್ಟ ಜ್ವರಗಳು ಪ್ರಜೆಗಳನ್ನು ನರಳಿಸಿದ್ದಲ್ಲದೆ ಅತ್ಯಂತ ಕಠಿಣವಾದ ಪ್ಲೇಗ್ ಉಪದ್ರವು ಕಾಣಿಸಿಕೊಂಡು, ಅನೇಕಾನೇಕ ಗ್ರಾಮಗಳನ್ನು ಹಾಳು ಕೆಡವಿತು. ಆ ಪ್ರಾಂತ್ಯದ ಪ್ರಜೆಗಳಿಗೆಲ್ಲಾ ಒಳ್ಳೆಯ ಕುಡಿಯುವ ನೀರನ್ನು ಒದಗಿಸುವುದಕ್ಕೆ ಸರ್ಕಾರದವರು ಬಹಳ ಸಾಹಸಪಟ್ಟು ಬಹಳ ಹಣವನ್ನು ವ್ಯಯಮಾಡಿ ಅನೇಕಾನೇಕ ಬಾವಿಗಳನ್ನು ತೋಡಿಸಿದರು. ಇಷ್ಟೆಲ್ಲಾ ಅನುಕೂಲಮಾಡಿ ಕೊಡುತ್ತಿರುವುದಕ್ಕೆ ಪಲವು ಕಡೆಗಳಿಂದ ಕಾಡು ಜನರು ಆಗಾಗ್ಗೆ ಆ ಪ್ರಾಂತ್ಯದಿಂದ ರೈತರ ಜೀವನಾಧಾರಗಳಾದ ಗೋಕಾದಿಗಳನ್ನೆಲ್ಲಾ ಅಪಹರಿಸಿಕೊಂಡು ಹೋಗಲಾರಂಭಿಸಿದರು ಸರ್ಕಾರದವರು ಈ ಕಾತಿಬಾಧೆಯ ನಿವಾರಣೆಗಾಗಿ ಆ ಕಾಡು ಕಳ್ಳರನ್ನೇ ಹಿಡಿಯುವವರನ್ನಾಗಿ ಮಾಡಿಕೊಂಡು ಕರೆದುಕೊಂಡು ಬಂದು, ಅವರಿಗೂ ಜಮೀನುಗಳನ್ನು ಕೊಟ್ಟು ಮನೆಮಠಗಳನ್ನು ಕಟ್ಟಿಕೊಂಡು ಸಭ್ಯ ಪ್ರಜೆಗಳಾಗಿ ವ್ಯವಸಾಯ ಮಾಡುತ್ತಾ ಬರುವಂತೆ ಏರ್ಪಾಡು ಮಾಡಲಾಯಿತು ಈ ಜನರೆಲ್ಲಾ ಈಗ ಬಹಳ ನಿಪುಣರಾದ ರೈತರೆನಿಸಿಕೊಂಡಿದಾರೆಂದು ತಿಳಿದು ಎಲ್ಲರೂ ಸಂತೋಷಪಡುತ್ತಾರೆ

ಪ್ರಜಾ ಸಂಖ್ಯೆ ಮುಂತಾದದ್ದು.

ಚೇನಾಬ್ ಕಾಲನಿಯೆಂಬ ಪ್ರಾಂತ್ಯದಲ್ಲಿ ಈಗತಾನೇ ಖಾನೇಷುಮಾರಿ ಲೆಕ್ಕಗಳನ್ನು ಕೂಡಿಸಿದ್ದರಲ್ಲಿ ಒಟ್ಟು ೧೦,೫೮,೦೦೦ ಪ್ರಜೆಗಳಿರುತ್ತಾರೆಂದು ತಿಳಿದು ಬಂದಿದೆ ೧೯೦೩ನೇ ಇಸವಿಯಲ್ಲಿ ಆ ರೈತರು ಬೆಳೆದ ದವಸದ ಪೈಕಿ ೭೦॥ ಲಕ್ಷ ರೂಪಾಯಿನ ಧಾನ್ಯಾದಿಗಳು ಅಲ್ಲಿಂದ ರೈಲಿನ ಮೇಲೆ ಹೊರಕ್ಕೆ ಸಾಗಿಹೋಗಿರುತ್ತವೆ ಅಲ್ಲಿಂದಮೇಲೆ ಅದು ಇನ್ನೂ ಹೆಚ್ಚಿರಬೇಕೆನ್ನುವುದಕ್ಕೆ ಸಂಶಯವಿಲ್ಲ. ಹತ್ತು ವರುಷಗಳ ಕೆಳಗೆ ಆ ಪ್ರಾಂತ್ಯದಲ್ಲಿ ೨,೭೦,೦೦೦ ಎಕರೆ ಜಮೀನುಗಳು ಸಾಗುವಳಿಯಾಗುತ್ತಿದ್ದವು. ಈಗಲಾದರೋ ೨೦ ಲಕ್ಷ ಎಕರೆಗಳಿಗಿಂತಲೂ ಹೆಚ್ಚಾಗಿಯೇ ಸಾಗುವಳಿಯಾಗುತ್ತಿದೆ ಮೇಲ್ಕಂಡ ಮೂರು ಪ್ರದೇಶಗಳಲ್ಲೂ ಆಬಾದಿಗೆ ಬಂದಿರುವ ಜಮೀನುಗಳನ್ನು ನೋಡಲಾಗಿ ಕಳೆದ ೧೯೦೫-೦೬ನೇ ಸಾಲಿನಲ್ಲಿ ೨೫ ಲಕ್ಷ ಎಕರೆಗಳಿಗೆ ನಾಲೆಯ ನೀರು ಸರಬರಾಜಾಗುತ್ತಿತ್ತೆಂತಲೂ, ಆ ಜಮೀನಿನ ಬೆಳೆಗಳನ್ನೆಲ್ಲಾ ಕ್ರಯಕಟ್ಟಿದರೆ ೩ ರಿಂದ ೯ ಕೋಟಿ ರೂಪಾಯಿನ ವರೆಗೆ ಬೆಲೆಯಾದೀತೆಂತಲೂ ಧಾರಾಳವಾಗಿ ಹೇಳಬಹುದು ಈ ಮೂರು ನೀರಾವರಿ ಕಾಮಗಾರಿಗಳಿಗೂ ಒಟ್ಟು ೫೨೫ ಲಕ್ಷ ರೂಪಾಯಿ ಮೂಲಧನ ಖರ್ಚಾಗಿರುತ್ತದೆ ಜಮೀನುಗಳ ಬೆಲೆಯು ಬರಬರುತ್ತಾ ಬಹಳವಾಗಿ ಹೆಚ್ಚುತ್ತಿರುವುದು ಪ್ರಾರಂಭದಲ್ಲಿ ಚೇನಾಬ್ ನದೀ ಪ್ರಾಂತ್ಯದಲ್ಲಿ ಜಮೀನುಗಳು ಎಕರೆ ಒಂದಕ್ಕೆ ಸುಮಾರು ೭೫ ರೂಪಾಯಿನಂತೆ ಬಿಕರಿ ಆಗುತ್ತಿದ್ದವು. ಈಗಲಾದರೋ ಎಕರೆಗೆ ೭೫೦ ರೂಪಾಯಿನ ಪ್ರಕಾರ ಬಿಕರಿಯಾಗುತ್ತಿದೆ.

ಊರುಗಳಲ್ಲಿ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಸ್ಥಳಗಳನ್ನು ವಿಂಗಡಿಸಿ ಚರಂಡಿ ರಸ್ತೆ ಬೀದಿಗಳನ್ನು ಮೊದಲು ಮಾಡಿಕೊಟ್ಟರು ಪ್ರತಿ ಬೀದಿಯೂ ೮೦ ಅಡಿಯಷ್ಟು ಅಗಲವಾಗಿರುತ್ತದೆ ಮನೆಗಳೆಲ್ಲಾ ಸುಟ್ಟ ಇಟ್ಟಿಗೆಯಿಂದಲೇ ಕಟ್ಟಿಕೊಳ್ಳುವಂತೆ ಏರ್ಪಾಡು ಮಾಡಿದ್ದಾರೆ ಚೇನಾಬ್ ನಾಲೆಯ ಪ್ರಾಂತ್ಯದಲ್ಲಿ ಈಗ ಹೊಸದಾಗಿ ಕಟ್ಟಿರುವ ಲೈಯಲ್‌ಪುರ್ ಪಟ್ಟಣವೇ ಮುಖ್ಯ ನಗರವಾಗಿರುತ್ತದೆ. ಅದು ಅನೇಕ ಹೊಸ ಮತ್ತು ವಿಸ್ತಾರವಾದ ರಸ್ತೆಗಳಿಂದಲೂ ಕಟ್ಟಡಗಳಿಂದಲೂ ಅನೇಕ ಆರೋಗ್ಯಕರವಾದ ಏರ್ಪಾಡುಗಳಿಂದಲೂ ಶೋಭಿಸುತ್ತಲಿರುವುದು. ಕಳೆದ ೧೯೦೧ ರಲ್ಲಿ ಈ ಪಟ್ಟಣದೊಳಗೆ ೧೦,೦೦೦ ಪ್ರಜೆಗಳು ವಾಸಮಾಡುತ್ತಿದ್ದರು ಈಗ ಈ ಸಂಖ್ಯೆಯು ಇನ್ನೂ ಹೆಚ್ಚಾಗಿರುವುದರಲ್ಲಿ ಸಂದೇಹವಿಲ್ಲ.

ಹತ್ತಿಯ ಬೆಳೆ

ಜಾಂಗ್ ಎಂಬ ಮೇಲ್ಕಂಡ ಪ್ರಾಂತ್ಯದಲ್ಲಿ ಈಜಿಪ್ಟ್ (ಐಗುಪ್ತ) ರಾಜ್ಯದ ಹತ್ತಿ ಬೆಳೆಯು ಈಗ ಬಹಳ ಹುಲುಸಾಗಿ ಆಗುತ್ತದೆ ಅಲ್ಲಿ ಬೆಳೆಯುವ ಹತ್ತಿಗೆ ಬಹಳ ಒಳ್ಳೆಯ ಕ್ರಯ ಸಿಕ್ಕುವುದು ಕಳೆದ ವರುಷ ೬,೦೦೦ ಎಕರೆ ಜಮೀನಿನಲ್ಲಿ ಈ ಹತ್ತಿಯ ಬೆಳೆಯನ್ನು ಮಾಡಿದರು ಆದರೆ ಒಂದು ತರಹ ಹುಳುವು ಹುಟ್ಟಿ ಆ ಗಿಡಗಳ ಬೆಳೆಸನ್ನೆಲ್ಲಾ ನಾಶ ಮಾಡಿತು ಈಚೆಗೆ ಆ ಜಾತಿಯ ಹತ್ತಿಯನ್ನು ಬಿಟ್ಟು ಅಮೇರಿಕದ ಹತ್ತಿಯನ್ನು ಬೆಳೆಯುವದಕ್ಕೆ ಶುರುಮಾಡಿದರು. ಅದರ ಇದಕ್ಕೂ ಹುಳು ಹಿಡಿದು ನಾಶವಾಯಿತು ಸರ್ಕಾರಿ ವ್ಯವಸಾಯ ಶಾಸ್ತ್ರಜ್ಞರು ಈ ಹುಳುವನ್ನು ಕೊಲ್ಲುವದಕ್ಕೆ ಪರಿಹಾರಗಳನ್ನು ಕಂಡು ಹಿಡಿಯಬೇಕೆಂದು ಪ್ರಯತ್ನಪಡುತ್ತಿದ್ದಾರೆ ಇದು ಸಾಧ್ಯವಾದ ಪಕ್ಷದಲ್ಲಿ ಆ ಪ್ರಾಂತ್ಯದ ಐಶ್ವರ್ಯಾಭಿವೃದ್ಧಿಯು ಸ್ಥಿರವಾಗಿ ನೆಲೆಗೊಳ್ಳುವುದಕ್ಕೆ ಸಂಶಯವಿಲ್ಲ.

ಉತ್ಪತ್ತಿ ಮೊದಲಾದದ್ದು.

ಕಳೆದ ೧೯೦೫—೦೬ನೇ ಸಾಲಿನಲ್ಲಿ ಮೇಲ್ಕಂಡ ಮೂರು ಪ್ರಾಂತ್ಯಗಳಲ್ಲೂ ಸರ್ಕಾರಕ್ಕೆ ೬೭ ಲಕ್ಷ ರೂಪಾಯಿ ಜಮೀನ್ ಕಂದಾಯ ಬರಬೇಕಾಗಿತ್ತು ; ಅಂದರೆ, ಆ ನೀರಾವರಿ ಕಾಮಗಾರಿಗಳಿಗಾಗಿ ಖರ್ಚಾದ ಒಟ್ಟು ಮೂಲಧನಕ್ಕೆ ಶೇಕಡಾ ೯ ರಂತೆ ಬಡ್ಡಿ ಉತ್ಪತ್ತಿಯಾದ ಹಾಗಾಯಿತು ಸರ್ಕಾರದವರು ಆ ಪ್ರಾಂತ್ಯದಲ್ಲಿ ದುಷ್ಕಾಲ ಪ್ರಾಪ್ತವಾದದರಿಂದ ಅನೇಕ ರೈತರಿಗೆ ಕಂದಾಯಗಳನ್ನು ರಿಮಿಷನ್ ಮಾಡುತ್ತಲೂ, ನಿರ್ಗತಿಕರಾದವರನ್ನೂ ಪ್ಲೇಗ್ ಮುಂತಾದ ರೋಗಗಳಲ್ಲಿ ಕಷ್ಟಪಡುತ್ತಿರುವವರನ್ನೂ ಪೋಷಣೆ ಮಾಡುತ್ತಲೂ ಬಂದಿದ್ದಾರೆ

ಈ ಜಮೀನುಗಳು ವ್ಯವಸಾಯಕ್ಕೆ ಬಂದದ್ದರಿಂದ ಪ್ರಜೆಗಳಿಗೆ ಧಾನ್ಯ ಸಿಕ್ಕುವುದು ಹೆಚ್ಚಾಯಿತು ಅನೇಕಾನೇಕ ರೈತ ಪ್ರಜೆಗಳಿಗೆ ಸುಖಜೀವನ ದೊರಕಿತು ಧಾನ್ಯಗಳು ಅಪಾರವಾಗಿ ಸಾಗಿಹೋಗೋಣದರಿಂದ ರೈಲ್ವೆ ಉತ್ಪತ್ತಿಯನ್ನು ಹೆಚ್ಚುಮಾಡಿತು ಪ್ರಜೆಗಳಿಗೆ ಕಂದಾಯದ ಭಾರವೂ ಬಹುಮಟ್ಟಿಗೆ ಕಡಿಮೆಯಾಯಿತು

ಇಂಡಿಯಾ ದೇಶದ ವೃತ್ತಾಂತಗಳು.

ಕಳೆದ ಜೂಲೈ ೨೮ನೇ ತಾರೀಖು ಭಾನುವಾರಕ್ಕೆ ಆಖೈರಾದ ಹನ್ನೆರಡು ದಿನಗಳಲ್ಲಿ ಬೊಂಬಾಯಿ ಪಟ್ಟಣದೊಳಗೆ ೭೨ ಅಂಗುಲ ಪ್ರಮಾಣದಷ್ಟು ಮಳೆ ಸುರಿಯಿತೆಂದು ತಿಳಿಯುವುದು

❖❖❖

ಬೊಂಬಾಯಿ ಪಟ್ಟಣದಲ್ಲಿರುವ ಮೆ॥ ಚೂಬಿಲ್‌ದಾಸ್ ಎಂಬ ದೇಶಸ್ಥ ಸಾಹುಕಾರರು ಎಲ್ಫಿನ್‌ಸ್ಟನ್ ಕಾಲೇಜ್ ಎಂಬ ವಿದ್ಯಾಶಾಲೆಯನ್ನು ಕಟ್ಟುವುದಕ್ಕೆ ೧೦೦ ಎಕರೆ ವಿಸ್ತಾರವುಳ್ಳ ಜಮೀನನ್ನು ಧರ್ಮಾರ್ಥವಾಗಿ ಕೊಟ್ಟಿರುತ್ತಾರೆ.

❖❖❖

ಕಲ್ಕತ್ತೆಯಲ್ಲಿ ಪ್ರಕಟವಾಗುತ್ತಿದ್ದ "ಯುಗಾಂತರ" ವೆಂಬ ಪತ್ರಿಕೆಯ ಎಡಿಟರನ್ನು ಸರ್ಕಾರದವರು ಸಜಾ ಶಿಕ್ಷೆಗೆ ಗುರಿಮಾಡಿದರಷ್ಟೆ ಈಚೆಗೆ ಬೇರೆ ಕೆಲವರು ಸೇರಿ ಆ ಪತ್ರಿಕೆಯನ್ನು ಮತ್ತೆ ಪ್ರಕಟಮಾಡಲಾರಂಭಿಸಿದಾರೆ

❖❖❖

ಅಲಿಘಡದಲ್ಲಿ ಒಂದು ಮಹಮ್ಮದೀಯ ಬಾಲಿಕಾ ಪಾಠಶಾಲೆಯನ್ನು ಸ್ಥಾಪಿಸುವುದಕ್ಕೆ ಗವರ್ನಮೆಂಟಿನವರು ಒಂದು ದೊಡ್ಡ ಕಟ್ಟಡವನ್ನೂ ೧೫,೦೦೦ ರೂಪಾಯಿಗಳನ್ನೂ ಕೊಡುವುದಾಗಿ ಒಪ್ಪಿಗೆ ಕೊಡಿಸಿದಾರೆ. ಈ ಸ್ಕೂಲಿನ ಸಿಬ್ಬಂದಿ ಖರ್ಚು ತಿಂಗಳಿಗೆ ೨೫೦ ರೂಪಾಯಿ ವರೆಗೆ ಆಗುವಂತೆ ಏರ್ಪಾಡಾಗಿದೆ.

❖❖❖

ಸಂಯುಕ್ತ ಅಧಿಪತ್ಯಗಳ ದಕ್ಷಿಣಭಾಗದಲ್ಲಿ ಅನೇಕಾನೇಕ ಪ್ರಜೆಗಳು ಹೊಟ್ಟೆಗಿಲ್ಲದೆ ಮನೆಮಠಗಳನ್ನು ಬಿಟ್ಟು ಜೀವನಾರ್ಥವಾಗಿ ಬೊಂಬಾಯಿನ ಕಡೆಗೆ ಬರುತ್ತಿದಾರೆಂತಲೂ, ಎರಡು ವರುಷಗಳಿಂದ ಆ ಪ್ರಾಂತ್ಯ ಸರಿಯಾಗಿ ಮಳೆ ಬೆಳೆ ಇಲ್ಲದೆ ಹೋಯಿತೆಂತಲೂ ಸರ್ಕಾರಿ ಅಧಿಕಾರಿಗಳು ತಿಳಿಸಿರುತ್ತಾರೆ

❖❖❖

ಸಯಾಂ ರಾಜ್ಯದ ದೊರೆಯವರು ವಿಲಾಯತಿಯಲ್ಲಿ ದೇಶಾಟನೆಯನ್ನು ತೀರಿಸಿಕೊಂಡು ಈ ತಿಂಗಳಲ್ಲಿ ಹಿಂತಿರುಗಿ ಸಿಲೋನ್ (ಲಂಕಾ) ದ್ವೀಪವನ್ನು ಹಾಸಿಹೋಗುವವರಾಗಿದಾರೆಂದು ಕೇಳಿ ಅಲ್ಲಿನ ಬೌದ್ಧ ಪ್ರಜೆಗಳು ದೊರೆಯವರಿಗೆ ಸುಖಾಗಮನವನ್ನು ಬಯಸಿ ಸನ್ಮಾನ ಮಾಡಬೇಕೆಂದು ಏರ್ಪಾಡು ಮಾಡುತ್ತಿದಾರೆ.

❖❖❖

ಬೊಂಬಾಯಿ ಪಟ್ಟಣದಲ್ಲಿ ಪುರಾತನ ಕಟ್ಟಡಗಳ ಪೈಕಿ ಎರಡು ಮನೆಗಳು ಕಳೆದ ವಾರ ಅಕಸ್ಮಾತ್ತಾಗಿ ರಾತ್ರಿ ಹೊತ್ತು ಕಳಚಿ ಬಿದ್ದು ಕೊಂಡವು ಅವರ ಕೆಳಗೆ ೨೬ ಜನರು ಸಿಕ್ಕಿಕೊಂಡರು ಆ ಪೈಕಿ ೧೯ ಜನರನ್ನು ಹೊರಕ್ಕೆ ತೆಗೆದು ಬದುಕಿಸಿದರು. ಐದು ಹೆಣಗಳು ಸಿಕ್ಕಿದವು ಇನ್ನೆರಡು ಶವಗಳು ಇನ್ನೂ ಸಿಕ್ಕಿ ಇಲ್ಲ

ಮಾಂಡಲೇ ಪಟ್ಟಣದಲ್ಲಿ ಗಡೀಪಾರು ಶಿಕ್ಷೆಯನ್ನನುಭವಿಸುತ್ತಿರುವ ಲಾಲಾ ಲಾಜಪತ್ ರಾಯರವರು ವೈಸ್‌ರಾಯ್ ಲಾರ್ಡ್ ಮಿಂಟೋರವರಿಗೆ ಒಂದು ವಿಜ್ಞಾಪನಾ ಪತ್ರಿಕೆಯನ್ನು ಬರೆದುಕೊಂಡು, ಅದನ್ನು ವಿಲಾಯತಿಯಲ್ಲಿರುವ ಮಹಾರಾಜಾ ಚಕ್ರವರ್ತಿಯವರಿಗೆ ರವಾನೆ ಮಾಡಬೇಕೆಂದು ಬೇಡಿಕೊಂಡಿದಾರೆಂದು ತಂತೀ ವರ್ತಮಾನ ಬಂದಿದೆ

❖❖❖

ಕಲ್ಕತ್ತಾ ಪಟ್ಟಣದಲ್ಲಿ ಪೋಲೀಸಿನವರು "ವಂದೇ ಮಾತರಂ" ಎಂಬ ವರ್ತಮಾನ ಪತ್ರಿಕೆಯ ಆಫೀಸಿಗೆ ಪ್ರವೇಶಿಸಿ ಒಂದು ದಿನ ರಾತ್ರಿ ಸುಮಾರು ೯ ಗಂಟೆಯ ತನಕ ಕಾಗದ ಪತ್ರಗಳನ್ನೆಲ್ಲಾ ಶೋಧನೆ ಮಾಡಿ, ಕೆಲವು ಕಾಗದಗಳನ್ನು ತೆಗೆದುಕೊಂಡು ಹೋದರು. ಆದರೆ ಇದುವರೆಗೂ ಆ ಪತ್ರಿಕೆಯ ಎಡಿಟರ ಮೇಲೆ ಯಾವ ತರದ ಮೊಕದ್ದಮೆಯನ್ನೂ ಮಾಡಲಿಲ್ಲ.

❖❖❖

ಹಿಂದಿನ ವಾರ ಪ್ಲೇಗ್ ಉಪದ್ರವದಲ್ಲಿ ಹಿಂದುಸ್ಥಾನದೊಳಗೆ ೩,೭೧೧ ಮರಣಗಳಾಗಿದ್ದವು ಕಳೆದ ವಾರ ೨,೩೯೦ ಮರಣಗಳಾಗಿರುತ್ತವೆ. ಬೊಂಬಾಯಿ ಅಧಿಪತ್ಯದಲ್ಲಿ ೮೦, ಮದರಾಸ್ ಅಧಿಪತ್ಯ ೧೯, ಬಂಗಾಳಾ ೨೩, ಸಂಯುಕ್ತ ಅಧಿಪತ್ಯಗಳು ೩೩, ಪಂಜಾಬ್ ಪಂಜಾಬ್ ೧,೭೨೯, ಮೈಸೂರು ಸಂಸ್ಥಾನ ೧೫೭, ವಾಯವ್ಯ ಸರಹದ್ದಿನ ಪ್ರಾಂತ್ಯ ೩೬, ಈ ರೀತಿ ಮರಣಗಳಾಗಿವೆ.

❖❖❖

ಬೊಂಬಾಯಿ ಪಟ್ಟಣದಲ್ಲಿ ಮ್ಯೂಜಿಯಂ ಎಂಬ ವಿಚಿತ್ರ ವಸ್ತುಗಳ ಆಲಯವನ್ನು ಕಟ್ಟಿಸಬೇಕೆಂದು ಗೊತ್ತಾಗಿದೆ ಈ ಬಂಗಲೆಯ ಮುಂದುಗಡೆಯಲ್ಲಿ ಲಾರ್ಡ್ ಲಾಮಿಂಗ್ಟನ್‌ರವರ ಪ್ರತಿಮೆಯನ್ನು ಮಾಡಿಸಿ ನಿಲ್ಲಿಸಬೇಕೆಂದೂ ಅದಕ್ಕೆ ತಗಲುವ ಖರ್ಚನ್ನೆಲ್ಲಾ ತಾವೇ ವಹಿಸಿಕೊಳ್ಳುವದಾಗಿಯೂ ಅಲ್ಲಿನ ಪಾರ್ಸಿ ಸಾಹುಕಾರರಾದ ಸರ್ ಕರೀಂಭಾಯಿ ಇಬ್ರಾಹಿಂರವರು ತಿಳಿಸಿರುತ್ತಾರೆ.

❖❖❖

ರಂಗೂನ್ ಪಟ್ಟಣದ ಬೌದ್ಧ ಸನ್ಯಾಸಿಗಳ ಪೈಕಿ ಇನ್ನೊಬ್ಬ ಗುರುವು ಪ್ಲೇಗ್ ತಗಲಿ ಆಶ್ರಮದೊಳಗೇ ಕಾಲವಾದನು. ಸರ್ಕಾರದವರು ಪ್ರಜೆಗಳ ಪ್ರಾರ್ಥನೆಯಂತೆ ಅಂಥಾ ಶವಗಳನ್ನು ದೀರ್ಘಕಾಲ ಇಡುವುದಕ್ಕೆ ಒಪ್ಪದೆ ದಹನಮಾಡಿಸುತ್ತಿದಾರೆ ಅಲ್ಲಿರುವ ಪದ್ಧತಿಯನ್ನು ನೋಡಿದರೆ ಶಿಷ್ಯರು ತಮ್ಮ ಗುರುವಿನ ಶವವನ್ನು ೫-೬ ತಿಂಗಳ ತನಕ ದಹನಮಾಡದೆ ಹಾಗೇ ಇಟ್ಟುಕೊಳ್ಳುವರು ಪ್ಲೇಗ್ ತಗಲಿ ಕಾಲವಾದವರನ್ನು ಈ ರೀತಿ ಇಟ್ಟಿರುವುದು ಪ್ರಜೆಗಳ ಕ್ಷೇಮಕ್ಕೆ ತುಂಬಾ ಹಾನಿಕರವಾದದ್ದೆಂದು ಯಾರೂ ಹೇಳಬಲ್ಲರು.

❖❖❖

ಕಳೆದ ಮೂರು ವರೆ ವರುಷಗಳಿಂದ ಬೊಂಬಾಯಿ ಅಧಿಪತ್ಯದ ಗವರ್ನರಾಗಿದ್ದು ಸಕಲ ಪ್ರಜೆಗಳ ಪ್ರೀತಿ ವಿಶ್ವಾಸಗಳನ್ನು ಸಂಪಾದಿಸಿಕೊಂಡ ಲಾರ್ಡ್ ಲಾಮಿಂಗ್ಟನ್‌ರವರು ಹಿಂದಿನ ವಾರ ಜಹಜು ಹತ್ತಿ ವಾಪಸು ವಿಲಾಯತಿಗೆ ಹೊರಟುಹೋದರಷ್ಟೆ. ಬೊಂಬಾಯಿನಲ್ಲಿ ಪ್ರಸಿದ್ಧರಾದ ಇಬ್ಬರು ಪಾರ್ಸಿ ದೊಡ್ಡ ಮನುಷ್ಯರು ಗವರ್ನರ ಪರಕ್ಕೆ ಧರ್ಮ ಮಾಡಬೇಕೆಂದು ಎರಡು ಲಕ್ಷ ರೂಪಾಯಿ ಒಪ್ಪಿಸಿದರು. ಗವರ್ನರವರು ತುಂಬಾ ಸಂತೋಷಪಟ್ಟು ಆ ಹಣವನ್ನೆಲ್ಲಾ ಅದೇ ಪಟ್ಟಣದಲ್ಲಿರುವ ಆಸ್ಪತ್ರೆಗಳೇ ಮೊದಲಾದ ಧರ್ಮಕಾರ್ಯಗಳ ಫಂಡಿಗೆ ಹಂಚಿಕೊಟ್ಟು ಇರುತ್ತಾರೆ

❖❖❖

ಬೊಂಬಾಯಿ ಪಟ್ಟಣದಲ್ಲಿ ಕೆಲವು ದಿನಗಳ ಕೆಳಗೆ ಸೀತಾರಾಂ ಎಂಬ ಮಾಳಿಗೆ ಮನೆಗಳ ಸಾಲಿಗೆ ಬೆಂಕಿಬಿದ್ದು ಉರಿದುಹೋದವು. ಆಗ ಬೆಂಕಿ ಆರಿಸುವುದಕ್ಕೆ ನಲ್ಲಿಗಳನ್ನು ಎಷ್ಟು ತಿರುಗಿಸಿದರೂ ಅವುಗಳಲ್ಲಿ ನೀರು ಬರಲಿಲ್ಲವೆಂದು ಕೇಳಿ ಮ್ಯುನಿಸಿಪಾಲಿಟಿಯವರು ನೀರಿನ ಇನ್ಸ್ಪೆಕ್ಟರಾಗಿದ್ದ ಫಿರೋಜ್ ಜಾಂಸೆಟ್‌ಜಿ ಮೊಲ್ಲಾಗಿರೋಜ್ ಎಂಬ ತಮ್ಮ ನೌಕರನನ್ನು ಕೆಲಸದಿಂದ ವಜಾಮಾಡಿಬಿಟ್ಟರು. ಈಗ ವಜಾ ಆದ ಆ ನೌಕರನು ಲಾಯರನ್ನಿಟ್ಟು ಮ್ಯುನಿಸಿಪಾಲಿಟಿಯವರಿಗೆ ನೋಟೀಸ್ ಕೊಟ್ಟು, ಅನ್ಯಾಯವಾಗಿ ತನ್ನನ್ನು ಕೆಲಸದಿಂದ ತೆಗೆದುಬಿಟ್ಟದ್ದಕ್ಕಾಗಿ ೭೦,೦೦೦ ರೂಪಾಯಿ ಡಾಮಿಜು ಕೊಡಬೇಕೆಂದು ತಿಳಿಸಿರುತ್ತಾನೆ.

❖❖❖

ಪಂಜಾಬಿನಲ್ಲಿ "ಇಂಡಿಯಾ, "ಹಿಂದುಸ್ಥಾನ್" ಎಂಬೀ ಎರಡು ದೇಶೀಯ ವರ್ತಮಾನ ಪತ್ರಿಕೆಗಳಲ್ಲಿ ರಾಜದ್ರೋಹಕರವಾದ ವಾರ್ತೆಗಳನ್ನು ಪ್ರಕಟಿಸಿ ಪ್ರಜೆಗಳಿಗೆ ಸರ್ಕಾರದವರ ಮೇಲಿರಬೇಕಾದ ಭಯಭಕ್ತಿ ವಿಶ್ವಾಸಾದಿಗಳನ್ನು ಕೆಡಿಸಬೇಕೆಂದು ಪ್ರಯತ್ನಪಟ್ಟರೆಂಬ ಅಪರಾಧಕ್ಕೆ ಗುರಿಮಾಡಿ, ಆ ಪತ್ರಿಕೆಗಳ ಎಡಿಟರುಗಳಾದ ಪಿಂಡಿದಾಸ್, ದೀನಾನಾಥ್ ಎಂಬಿಬ್ಬರ ಮೇಲೂ ಮೊಕದ್ದಮೆ ನಡಿಸಿ, ಕಳೆದ ವಾರ ಅವರಿಬ್ಬರಿಗೂ ತಲಾ ಐದು ವರುಷದಂತೆ ಕಠಿಣ ಸಜಾ ವಿಧಿಸಿರುತ್ತಾರೆ. ಮತ್ತು ಹಿಂದುಸ್ಥಾನ್ ಪ್ರೆಸ್ ಎಂಬ ಮುದ್ರಾಶಾಲೆಯಲ್ಲಿರುವ ಯಂತ್ರ ಮೊದಲಾದ ಸಾಧನಗಳನ್ನೆಲ್ಲಾ ಸರ್ಕಾರಕ್ಕೆ ಸೇರಿಸಿಕೊಳ್ಳಬೇಕೆಂದು ಹುಕುಂ ಆಗಿರುತ್ತದೆ

❖❖❖

ಅಲ್ಲಹಾಬಾದ್ (ಪ್ರಯಾಗ) ಪಟ್ಟಣದಲ್ಲಿ ಸ್ಪೆಷಲ್ ಮ್ಯಾಜಿಸ್ಟ್ರೇಟರು ಒಂದು ಅಪೂರ್ವವಾದ ಮೊಕದ್ದಮೆಯನ್ನು ದರ್ಯಾಫ್ತಿ ಮಾಡುತ್ತಿದಾರೆ ಸೀತಾಪುರ, ಬಾರಾಬಂಕಿ, ಲಕ್ನೋ ಎಂಬೀ ಡಿಸ್ಟ್ರಿಕ್ಟುಗಳಲ್ಲಿ ಬಹುಕಾಲದಿಂದಲೂ ಅನೇಕ ಡಕಾಯಿತಿ, ಕನ್ನಾ ಕಳುವು, ಕೊಲೆ ಮೊದಲಾದ ಅಕೃತ್ಯಗಳನ್ನು ನಡಿಸುತ್ತಾ ಪ್ರಜಾ ಕಂಟಕರಾಗಿದ್ದ ಒಂದು ಗುಂಪಿನ ಕಳ್ಳರನ್ನು ಪೋಲೀಸಿನವರು ಸುಮಾರು ೩,೦೦೦ ಗ್ರಾಮವಾಸಿಗಳ ಸಹಿತ ಹೋಗಿ ಮೂರು ದಿನ ಹೊಂಚು ಹಾಕಿ ಹಿಡಿದಿರುತ್ತಾರೆ ಈ ಕಳ್ಳರ ಗುಂಪಿನಲ್ಲಿ ೨೦೦ ಮಂದಿ ಸೇರಿಕೊಂಡಿದಾರೆ. ಈ ಗುಂಪಿನ ಮುಖಂಡನಿಗೆ ಫಾಸಿ ಸಜಾ ವಿಧಿಸಲ್ಪಟ್ಟಿತು. ಇತರರನ್ನು ದರ್ಯಾಫ್ತು ಮಾಡುತ್ತಿದಾರೆ,

ದಕ್ಷಿಣ ದೇಶಕ್ಕೆ ಸೇರಿದ ಕ್ವಿಲಾನ್ ಪಟ್ಟಣದ ಬಳಿ ಸಮುದ್ರವು ಪರ್ಕ್ಕಿ ಎಂಬ ಗ್ರಾಮವನ್ನು ಹೆಚ್ಚ ಬಂದು ಮುಳುಗಿಸುತ್ತಿದೆ ಈಗ ಸುಮಾರು ಹತ್ತು ಮನೆಗಳೂ ಅನೇಕ ಗಿಡಗಳೂ ಸಮುದ್ರದ ಪಾಲಾದವು ಹೋದ ವರುಷವೂ ಇದೇ ರೀತಿ ೪೦ ಮನೆಗಳೂ ವಿಸ್ತಾರವಾದ ಭೂಪ್ರದೇಶವೂ ಸಮುದ್ರದೊಳಕ್ಕೆ ಸೇರಿಹೋದವು ಈಗ ಆ ಗ್ರಾಮದವರೆಲ್ಲಾ ಅತ್ಯಂತ ಪುರಾತನ ಕಟ್ಟಡವೆಂದು ಪ್ರಸಿದ್ಧಿ ಹೊಂದಿರುವ ಒಂದು ಕ್ರೈಸ್ತ ದೇವಾಲಯವೂ ಸಮುದ್ರದ ಪಾಲಾಗುವಂತಿದೆ ಅದಕ್ಕೆ ಸೇರಿದ ಕೆಲವು ಮನೆಗಳು ಅಲೆಗಳ ಹೊಡತದಿಂದ ಬಿದ್ದುಹೋದವು ಪ್ರಜೆಗಳು ಆ ದೇವಾಲಯವನ್ನು ಉಳಿಸಿಕೊಳ್ಳುವದಕ್ಕೆ ಅಡ್ಡ ಕಟ್ಟ ಮುಂತಾದ್ದನ್ನು ಹಾಕಬೇಕೆಂದು ಪ್ರಯತ್ನಪಡುತ್ತಿದ್ದಾರೆ

***

ಮದರಾಸ್ ಅಧಿಕಾರಕ್ಕೆ ಸೇರಿದ ಚೀನಾದ ಪಟ್ಟಣ (ಬಿಮಿ ಪಟ್ಟಂ) ಎಂಬ ಸ್ಥಳದಲ್ಲಿ ಕಾಗದ ಪಿರ್ಸಲ್ (ಸೀಸದ ಕಡ್ಡಿ) ಗಳನ್ನು ತಯಾರು ಮಾಡತಕ್ಕಂಥಾ ಒಂದು ಕಾರ್ಖಾನೆಯು ಹೊಸದಾಗಿ ಸ್ಥಾಪನೆಯಾಗಿದೆ ಒಬ್ಬ ಸ್ವದೇಶಿ ಬಂಗಾಳಿ ವಿದ್ಯಾವಂತನು ಜರ್ಮನ್ ರಾಜ್ಯಕ್ಕೆ ಹೋಗಿ ಆ ಕಸಬನ್ನು ಕಲಿತು ಬಂದು ಈ ಕಾರ್ಖಾನೆಯನ್ನು ಹಾಕಿರುವನು ಇದು ಮೊದಲನೆಯ ಸ್ವದೇಶೀ ಕಾರ್ಖಾನೆಯಾಗಿರುತ್ತದೆ ಅಲ್ಲಿ ತಯಾರಾಗಿ ಬರುವಂಥಾ ಸೀಸದಕಡ್ಡಿಗಳು ಪರದೇಶದಿಂದ ಬರುವಂಥಾ ಪೆನ್ಸಿಲುಗಳಿಗಿಂತ ಕಡಿಮೆಯಾಗಿಲ್ಲವೆಂದು ಬರೆದಿರುವ ವಿಷಯವು ಪಟ್ಟಿ ಅದು ತೃಪ್ತಿಕರವಾಗಿರುತ್ತದೆ ಈ ಕಾರ್ಖಾನೆಯಲ್ಲಿ ಪೆನ್ಸಿಲ್ ತಯಾರು ಮಾಡತಕ್ಕ ಯಂತ್ರಗಳೆಲ್ಲಾ ಜರ್ಮನಿಯಿಂದ ಬಂದಿರುತ್ತವೆ

***

ಹೌರಾ ಪಟ್ಟಣದಲ್ಲಿ ನಾರಾಯಣ ಮುಖರ್ಜಿ ಎಂಬ ಬಂಗಾಳಿಯ ಮನೆಯೊಳಗೆ ಒಂದು ವಿಚಿತ್ರ ಪ್ರಸಂಗ ನಡೆಯಬೇಕಾಯಿತು ಲಗ್ನದ ದಿನ ಗಂಡು ಹೆಣ್ಣಿನ ಕಡೆಯವರೆಲ್ಲಾ ಸೇರಿ, ವಿವಾಹ ಕಾರ್ಯಗಳು ಪ್ರಾರಂಭವಾದವು ಆಗ ಗಂಡಿನ ಕಡೆಯವರಿಗೆ ಹೆಣ್ಣಿನವರು ವರದಕ್ಷಿಣೆ ಕೊಡಬೇಕೆಂಬ ವಿಷಯ ಪ್ರಸ್ತಾಪವಾಯಿತು. ಮೊದಲು ಜಗ್ಗಾಟಗಳು ಪ್ರಾರಂಭವಾದವು ಕಡೆಗೆ ಹೆಣ್ಣಿನ ಕಡೆಯವರು ನಾಲ್ಕು ಮಂದಿ ಎದ್ದು ನಿಂತು ಗಂಡಿನ ಕಡೆಯ ನಾಲ್ಕು ಮಂದಿಯನ್ನು ಹೊಡೆದು ಕೆಡವಿದರು ಆ ಪೈಕಿ ಒಬ್ಬನು ಸತ್ತೂ ಹೋದನು ಇದು ಪೋಲೀಸರವರ ವಿಚಾರಣೆಯಲ್ಲಿ ಎಲ್ಲಾ ರುಜುವಾತಾದ್ದರಿಂದ ಮೊದಲನೆಯ ಆಪರಾಧಿಗೆ ಬಂಕೋರೆ ಶಿಕ್ಷೆಯೂ ಉಳಿದ ಮೂವರಿಗೆ ತಲಾ ಆರಾರು ವರುಷದಂತೆ ಕಠಿಣ ಸಜಾ ಶಿಕ್ಷೆಯೂ ವಿಧಿಸಲಾಯಿತು

***

ಕಲ್ಕತ್ತಾ ಪಟ್ಟಣದ ದೊಡ್ಡ ಅಂಗಡಿ ಬೀದಿಯಲ್ಲಿ ಇಬ್ಬರು ಕಳ್ಳರು ಒಂದು ಅಂಗಡಿಗೆ ನುಗ್ಗಿ ಸುಮಾರು ೩೦೦೦ ರೂಪಾಯಿನ ನಗ ನಾಣ್ಯಗಳನ್ನು ಕದ್ದು ತೆಗೆದುಕೊಂಡುಹೋಗಿ ಒಂದು ತೋಟದಲ್ಲಿ ಕಳಿತು ಹಂಚಿಕೊಳ್ಳುತ್ತಿದ್ದರು ಇದನ್ನು ದೂರದಲ್ಲಿ ನಿಂತು ನೋಡುತ್ತಿದ್ದ ೧೨ ವರುಷದ ಒಬ್ಬ ಹುಡುಗನು ಅನುಮಾನಪಟ್ಟು ಪೋಲೀಸಿಗೆ ತಿಳಿಸಿದನು ಅವನು ಅವರಿಬ್ಬರನ್ನು ಹಿಡಿದು ಕೋರ್ಟಿನಲ್ಲಿ ನಿಲ್ಲಿಸಿದ್ದನು ತಂದರು ಮ್ಯಾಜಿಸ್ಟ್ರೇಟರ ಮುಂದೆ ಅವರಿಬ್ಬರೂ ತಾವು ಕಳವು ಮಾಡಿದ್ದುದಾಗಿ ಒಪ್ಪಿಕೊಂಡರು ಆಗ ಅವರಿಬ್ಬರಿಗೂ ತಲಾ ಆರು ತಿಂಗಳ ಕಠಿಣ ಸಜಾ ವಿಧಿಸಿ, ಆ ಹುಡುಗನಿದ್ದರೆ ಈ ಕಳವು ಪತ್ತೆಯೇ ಆಗುತ್ತಿರಲಿಲ್ಲವೆಂದು ಹೇಳಿ, ಆ ಹುಡುಗನಿಗೆ ೧೦ ರೂಪಾಯಿ ಬಹುಮಾನ ಕೊಡುವಂತೆ ಅಪ್ಪಣೆ ಮಾಡಿದರು

***

ಮಧ್ಯಪ್ರಾಂತ್ಯಗಳಿಗೆ ಸೇರಿದ ಪಾರ್ಶ್ವನಾಥ ಪರ್ವತದ ಮೇಲೆ ಜೈನಮತಸ್ಥರ ಪುಣ್ಯಸ್ಥಳಗಳು ದೇವಸ್ಥಾನಗಳೂ ಇರೋದರಿಂದ ಯೂರೋಪಿಯನ್ ಜನರಿಗೆ ಅಲ್ಲಿ ವಸತಿ ಬಂಗಲೆಗಳನ್ನು ಕಟ್ಟಿಕೊಳ್ಳುವದಕ್ಕೆ ಅವಕಾಶಕೊಡಕೂಡದೆಂದು ಹಿಂದುಸ್ಥಾನದ ಎಲ್ಲಾ ಭಾಗಗಳಿಂದಲೂ ಆ ಜನಸ್ಥರು ಬಂಗಾಳಿ ಲೆಫ್ಟಿನೆಂಟ್ ಗವರ್ನರವರಿಗೆ ಅರಿಕೆ ಮಾಡಿಕೊಂಡಿದ್ದರು ಗವರ್ನರವರು ಸೆಪ್ಟಂಬರ್ ೩ನೇ ಆ ಬೆಟ್ಟದ ಮೇಲೆ ದಯಮಾಡುತ್ತೇವೆಂತಲೂ, ಜೈನಪ್ರತಿನಿಧಿಗಳು ಅಂದಿನ ಮುಖಂಡರಾದವರು ಮಾತ್ರ ಅಲ್ಲಿಗೆ ಆ ದಿನ ಬಂದು ವಿಚಾರ್ತ್ತಾ ತಮ್ಮ ಅಭಿಪ್ರಾಯಗಳನ್ನು ತಿಳಿಸಬಹುದೆಂತಲೂ, ಆ ಆರ್ಜಿ ಯು ತಾವು ಇತ್ಯರ್ಥ ಮಾಡುತ್ತೇವೆಂತಲೂ ಬರೆದಿದ್ದರು ಈಚಿಗೆ ಜೈನ ಪ್ರತಿನಿಧಿಗಳು ಗವರ್ನರವರನ್ನು ಕಂಡು, ಸೆಪ್ಟಂಬರ್ ೩ನೇ ಹಬ್ಬಗಳು ತಮಗೆ ಅನಾನುಕೂಲವೆಂದು ಅರಿಕೆ ಮಾಡಿಕೊಂಡದ್ದರಿಂದ ಗವರ್ನರವರು ಇದೇ ಆಗಸ್ಟ್ ೨೮ ನೇ ಬುಧವಾರ ಅಲ್ಲಿಗೆ ದಯಮಾಡುವುದಾಗಿಯೂ ಆ ದಿನ ಜೈನಪ್ರತಿನಿಧಿಗಳು ಅಲ್ಲಿ ಹಾಜರಾಗಬೇಕೆಂತಲೂ ಅಪ್ಪಣೆ ಕೊಡಿಸಿರುತ್ತಾರೆ

ಗತಿಸಿದ ಗಿರಿಯಪ್ಪಗೌಡರು.

ನಾಲೂರು ಎಂ ಆರ್. ಗಿರಿಯಪ್ಪಗೌಡರು ಈಗ ಸುಮಾರು ೩೬ ವಿವಸಗಳಾಗಾಯ್ತು ಜ್ವರಪೀಡಿತರಾಗಿ ಇದೇ ಜೂಲೈ ತಾ ೨೯ ನೇ ಸ್ವರ್ಗಸ್ಥರಾದರು ಇವರಿಗೆ ಯಾವತರವಾದ ಔಷಧಿಯೂ ಫಲಿಸದೆ ಹೋದದ್ದು ದೇವರ ಚಿತ್ತವೇ ಕಾರಣವು ಇವರ ಜೀವಮಾನ ಚರಿತ್ರೆಯನ್ನು ಸ್ವಲ್ಪಮಟ್ಟಿಗೆ ವಿವರಿಸುವೆನು ಇವರು ೧೯೭೦ ನೇ ಇಸ್ವಿಯಲ್ಲಿ ಜನಿಸಿ ಈ ಕಾಲಕ್ಕೆ ಸರಿಯಾಗಿ ೩೭ ವರುಷ ಬದುಕಿದ್ದು ತಮ್ಮ ವಿದ್ಯಾಭ್ಯಾಸಕ್ಕೆ ಸುಮಾರು ೨೪ ವರುಷಗಳನ್ನು ಕಳೆದು, ಉಳಿದ ೧೩ ವರುಷಗಳಲ್ಲಿ ಇವರ ಕೆಲಸದ ಪ್ರಾರಂಭವು ಬೀಜಬಿತ್ತು ಈ ವಿದ್ಯಾಭ್ಯಾಸವಾಗಿತ್ತು ಮುಖ್ಯರಾದ ನಮ್ಮಗಳಿಗೆ ಕನ್ನಡಿ ತೋರಿಸುವದಕ್ಕಾಗಿ ಬಹಳ ಪ್ರಯಾಸಪಟ್ಟು ಒಬ್ಬ ಫನಬಾಧ್ಯ ಸಾಹೇಬರ ಸ್ನೇಹ ಬೆಳಸಿಕೊಂಡು ಪ್ರರು ಈ ನಾಲೂರಿಗೆ ಬಂದು ಪಾಠಶಾಲೆಯನ್ನು ಇಡಿಸಿದರು ಅನಂತರ ಕನ್ನಡಿಯೋಪಾದಿಯಲ್ಲಿ ವಿದ್ಯೆಯನ್ನು ಕಲಿಸಿದ ನಮ್ಮ ಜಾತಿಯವರೆಲ್ಲರೂ ಅಲ್ಲಲ್ಲಿ ಸ್ಕೂಲ್ ಇಡಿಸಿಕೊಂಡ ರೆಂದು ನಮ್ಮ ದಯಾಳು ಪ್ರಭುವು ಮಲನಾಡು ಪ್ರಜೆಗಳ ತಂದೆಯೋಪಾದಿಯಲ್ಲಿ ಇರುವಂಥ ಮಿ॥ ಗಿರಿಯಪ್ಪಗೌಡರಲ್ಲಿ ಬೇಡಿಕೊಳ್ಳಲು, ತಾವು ಹಿಡಿದ ಬೀಜವನ್ನು ಬಿತ್ತುವದಕ್ಕೆ ಈಶ್ವರ ಸದರಿಯವರು ತಮ್ಮ ದೋಸ್ತಿಗಳಾದ ಪಾದ್ರಿ ಸಾಹೇಬರ ಸಹಾಯದಿಂದ ನಮ್ಮಗಳ ಇಷ್ಟದಂತೆ ದಯಾಳುಗಳಾದ ನಮ್ಮ ಘನ ಸೈಟಂಗ್ವೆಲ್ ಸಾಹೇಬರು ಅಲ್ಲಲ್ಲಿ ಹಳ್ಳಿಗಳಲ್ಲಿ ಸುಮಾರು ೬–೭ ಪಾಠಶಾಲೆಗಳನ್ನು ಇಡಿಸಿಕೊಟ್ಟಿರುತ್ತಾರೆ ಭಾರಿ ಭಾರೀ ಸಾಹುಕಾರರ ಬಲೆಯೊಳಗೆ ಸಿಕ್ಕಿ ನರಳುತ್ತಿದ್ದ ನಾವುಗಳು ಸ್ವಲ್ಪ ಚೇತರಿಸಿಕೊಂಡು ಅರ್ಧ ಬೆಳಕನ್ನು ನೋಡುತ್ತಿರುವನ್ನು ಇವರಲ್ಲಿಯೇ ನಮ್ಮಗಳ ಉದ್ಧಾರಕನನ್ನು ದೇವರು ಕರೆದು ಕೊಂಡನು ಈಗ ನಮ್ಮಗಳ ದುಃಖವನ್ನು ಯಾರು ಶಮನ ಮಾಡಿಯಾರು! ಈ ಪುಣ್ಯಪುರುಷರು ಚಿಕ್ಕತನದಲ್ಲಿ ಬಡತನದಲ್ಲಿಯೇ ಕಷ್ಟಪಟ್ಟು ವಿದ್ಯಾಭ್ಯಾಸ ಮಾಡಿ, ಈಗ ದೇವರ ದಯದಿಂದ ತುಂಬಾ ಭಾಗ್ಯವಂತರಾಗಿ ಇದ್ದರು ಇವರಿಗೆ ಚಿಕ್ಕವರಾದ ೩ ಗಂಡು ಮಕ್ಕಳೂ ೩ ಹೆಣ್ಣು ಮಕ್ಕಳೂ ವೃದ್ಧರಾದ ಇವರ ತಂದೆಯವರು ಸಹಾ ಇರುತ್ತಾರೆ ಈಚಿಗೆ ಇವರು ಪ್ರಯಾಸಪಟ್ಟು ಹೊಸದಾಗಿ ಏಲಕ್ಕಿ ಸಿಲಿಯನ್ನು ಸಹಾ ಪ್ರಾರಂಭಿಸಿ, ಅಗಲೇ ಒಂದೆರಡು ಬೆಳೆಯನ್ನು ತೆಗೆದರು ಈ ಕಸಬನ್ನು ನೋಡಿದು ಬೇರೆ ಕೆಲವರ ಸಹಾ ಇದಕ್ಕೆ ಕೈಹಾಕಿದವರೂ ಇದ್ದರು ಇವರ ಪ್ರೀತ್ಯರ್ಥವಾಗಿ ಮಾಡಿದ ಇನ್ನ ಕೆಲವು ಕೆಲಸಗಳನ್ನು ವಿವರಿಸಲು ನನ್ನ ಕಣ್ಣಿನೊಳಗೆ ನೀರು ಬರುತ್ತದೆ ಈ ಚಿಕ್ಕ ಪ್ರಾಂತ್ಯದಲ್ಲಿಯೇ ಇಷ್ಟೆಲ್ಲಾ ಮಾಡಿದ ಇವರನ್ನು ಇನ್ನೂ ಕೆಲವು ಕಾಲದವರೆಗೆ ದೇವರು ಇಟ್ಟಿದ್ದರೆ ನಮ್ಮ ಮಲೆನಾಡಿನಲ್ಲಿ ಬಿತ್ತಕಿಟ್ಟ ಬಿತ್ತನೆ ಕೆಲಸವನ್ನು ಪೂರೈಸುತ್ತಿದ್ದರೆಂಬುದರಲ್ಲಿ ಯಾವ ಸಂದೇಹವೂ ಇಲ್ಲ ಇನ್ನು ಯಾರು ಯಾಗಿ ನಮ್ಮ ಪಟ್ಟಿ ಬಂಥಾ ಖಭಿಸನ್ನು ತಳಕೊಂಡದ್ದು ನಮ್ಮ ದೌರ್ಭಾಗ್ಯವೇ ಹೊರತು ಬೇರೊಂದಿಲ್ಲ. ನಾವುಗಳೆಲ್ಲ ದೇವರ ಸನ್ನಿಧಿಯಲ್ಲಿ ಬೇಡಿಕೊಳ್ಳಬೇಕೇ ಹೊರತು ಬೇರೆ ಯಾರಲ್ಲಿ ಮೊರೆಯಿಟ್ಟರೂ ನಮ್ಮಗಳಿಗೆ ಬುದ್ಧಿ ಮಾರ್ಗವನ್ನು ತಿಳಿಸತಕ್ಕವರು ಈ ಕಾಲಕ್ಕೆ ಯಾರೂ ಕಾಣುವುದಿಲ್ಲ

ಕೆ. ಟಿ. ದೇವಪ್ಪ ಗೌಡ

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸಿಗಾ ಕೊಡಲಾರೆವು ಆದಕಾರಣ ಬಾತ್ಮಿದಾರರು ಸತ್ಯ ತಿಳಿಯಬೇಕೆಂದರೆ ಸ್ವರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ಸಿಗಾ ಕೊಡಲಾರೆವು

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರು ಗುವುದಿಲ್ಲವೆಂಬುದನ್ನು ಸಕಲರೂ ತಿಳಿಯತಕ್ಕದ್ದು —ಎಡಿಟರ್

ಕರೆಸ್ಪಾಂಡೆನ್ಸ್

ಅಂಜುಮನ್ ಹಿಮಾಯತ್ ಇಸ್ಲಾಂ, ಮೈಸೂರು.

ಅಯ್ಯಾ,

ಮೈಸೂರು ಪಟ್ಟಣದಲ್ಲಿ ಕಳೆದ ಜೂಲೈ ೧ರಲ್ಲಿ ಅಂಜುಮನ್ ಹಿಮಾಯತ್ ಇಸ್ಲಾಂ ಎಂಬ ಒಂದು ಮಹಮ್ಮದೀಯ ಸಂಘವು ಸ್ಥಾಪನೆಯಾಗಿರುತ್ತದೆ ಆ ಲಗಾಯಿತು ಈ ಸಂಘಕ್ಕೆ ಮೆಂಬರುಗಳಾಗಿ ಸೇರಿರತಕ್ಕ ಸ್ತ್ರೀಪುರುಷರನ್ನು ಈ ಸಂಘವು ಬಹು ಆದರದಿಂದ ವಂದಿಸುತ್ತದೆ ಈ ಸಂಘಕ್ಕೆ ಮೈಸೂರು ಅತಿ ಘನವೊಡ್ಡರಾದ ಮೇ॥ ಟಿ ಕೆ ಸುಂದರರಾಜ್ಯೆಂಗಾರ್ರು ಮೈಸೂರು ಸಿ (ಕಲ್ ಸರ್ವಿಸ್) ರೆಜಿಮೆಂಟ್ ದಿನ್ ಮೇ॥ ಸಯ್ಯದ್ ಅಬ್ದುಲ್ ಲತೀಫ್‌ರ ವರೂ ಇಬ್ರಾಹಿಮಗಳಾಗಿರುತ್ತಾರೆ ಸಧ್ಯದಲ್ಲಿ ಈ ಸಂಘಕ್ಕೆ ಹೊಸ ಮೆಂಬರುಗಳನ್ನು ಸೇರಿಸಿಕೊಳ್ಳುವುದರಲ್ಲೇ ಸಾಹಸಪಡುತ್ತಿರುವರು ಮತ್ತು ಈ ಸಂಘದ ಸದುಪಯೋಗಕ್ಕೋಸ್ಕರಲೂ ಕಟ್ಟು ಪಾಡಿಗಾಗಿಯೂ ಕಮಿಟಿಯವರು ಕೆಲವು ನಿಬಂಧನೆಗಳನ್ನು ಮಾಡಿಕೊಳ್ಳಬೇಕೆಂದು ಹರ್ಷ ಮಾಡುತ್ತಿದ್ದಾರೆ ಆದಕಾರಣ ಇದುವರೆಗೆ ಈ ಸಂಘಕ್ಕೆ ಮೆಂಬರಾಗಿ ಸೇರಿರತಕ್ಕವರೂ ಮತ್ತು ಇನ್ನು ಮುಂದೆ ಮೆಂಬರಾಗಿ ಸೇರತಕ್ಕವರೂ ತಮ್ಮ ತಮ್ಮ ಹಾಗ್ಯಾದ ಚಂದಾ ಮೊಬಲಗನ್ನಾಗಲಿ, ಡೊನೇಷನ್ ಎಂಬ ಧರ್ಮದ ಹಣವನ್ನಾಗಲಿ ಕಳುಹಿಸುವವರು ತಮ್ಮನ್ನು ಕೇಳುವ ತನಕ ಕಾಯುತ್ತಿರಬೇಕಾದ ಅಗತ್ಯವಿಲ್ಲವೆಂದು ಕೃತಜ್ಞರಾಗುತ್ತೇವೆ ಆದರೆ ಕೆಲವು ಮೆಂಬರುಗಳು ತಮ್ಮ ಚಂದಾ ಮೊಬಲಗನ್ನು ಹೊಣೆ ಮನ್ನನ್ನು ಕೇಳದೇನೇ ಪಾವತಿ ಮಾಡಿರುತ್ತಾರೆ.

ಈ ಸಂಘದ ಮೂಲಧನಕ್ಕೂ ಚಾಲ್ತಿ ಖರ್ಚುಗಳಿಗೂ ಸ್ತ್ರೀಪುರುಷರು ಇದುವರೆಗೆ ೧,೯೦೦ ರೂಪಾಯಿ ಡೊನೇಷನನ್ನೂ ರೂ ೩೯–೪–೦ ಮಾಹೇಯಾನಾ ಚಂದಾವನ್ನು ಕೊಡುವುದಾಗಿ ವಾಗ್ದಾನ ಮಾಡಿರುತ್ತಾರೆ ಈ ಪೈಕಿ ಕೆಲವರು ಹಣವನ್ನ ಕೊಟ್ಟು ಇದ್ದಾರೆ ಮತ್ತು ಕಂಟ್ರಾಕ್ಟರ್ ಮೇ॥ ಅಬ್ದುಲ್ ರಹಿಮಾನ್ ಖಾನ್ ರವರು ಸುಮಾರು ೨ ೫೦೦ ರೂಪಾಯಿ ಬೆಲೆ ಬಾಳುವಂಥಾ ಕಟ್ಟಡವನ್ನು ಈ ಸಂಘಕ್ಕಾಗಿ ಒಪ್ಪಿಸಿರುತ್ತಾರೆ

ಮೈಸೂರು,	ಎಂ ಬಾಕರಲ್ಲಿ ಖಾನ್,
೩೧ನೇ ಜುಲೈ, ೧೯೦೭	ಸೆಕ್ರೆಟರಿ

ಅರಸೀಕೆರೆ ತಾಲ್ಲೂಕು ತಿರುಪತಿ ಜಾತ್ರೆಯು

ಅಯ್ಯಾ,

ಪ್ರತಿ ವರ್ಷಕ್ಕಿಂತಲೂ ಈ ವರ್ಷ ಈ ಜಾತ್ರೆಯಲ್ಲಿ ಬಹು ಜನರು ಸೇರಿದ್ದರು ಬ್ರಾಹ್ಮಣರು ಸುಮಾರು ೫,೦೦೦ ಜನರೂ, ೧,೫೦೦ ಜನ ವೈಶ್ಯರೂ, ೫,೫೦೦ ಜನ ಇತರರೂ ಒಟ್ಟು ಸುಮಾರು ೬,೦೦೦ ಜನರ ವರಿವಿಗೂ ಸೇರಿದ್ದರು ಸುಮಾರು ೧೫೦ ಅಂಗಡಿಗಳು ಬಂದಿದ್ದವು ೨೦೦ ಗಾಡಿಗಳ ವರಿವಿಗೂ ಇಲ್ಲಿಗೆ ಬಂದಿದ್ದವು ತಾ ೨೩ನೇ ಸೋಮವಾರ ಮಧ್ಯಾಹ್ನ ಬ್ರಹ್ಮೋತ್ಸವವೂ, ಮರು ದಿನ ರಾತ್ರಿ ಆಲದಲ್ಲಿಕ್ಕಿ ಉತ್ಸವವೂ ಬಹು ವಿಜೃಂಭಣೆಯಿಂದ ನಡೆದವು ತಾ ೨೫ನೇ ಈ ಜಾತ್ರೆಯು ಮುಕ್ತಾಯವಾಯಿತು ಸರ್ಕಾರದಿಂದ ತಾ ೨೨ ರಿಂದ ೨೬ ರಲ್ಲಿ ಸಂತರ್ಪಣೆ ನಡೆಸಿದರು ವೈಶ್ಯ ಜನರು ಇಳಿಯುವದಕ್ಕೂ ಊಟ ಉಪಚಾರಾದಿಗಳಿಗೂ ತಿಪಟೂರು ಸರಾಫ್ ನಂಜುಂಡೈಯ್ಯನವರು ಸುಮಾರು ಇಪ್ಪತ್ತು ಸಾವಿರ ರೂಪಾಯಿಗಳ ವರಿವಿಗೂ ಮುಟ್ಟಿಸಿ ಒಂದು ಭಾರೀ ಸತ್ರವನ್ನು ಕಟ್ಟಿಸಿದ್ದಾರೆ. ಈ ಸತ್ರದಲ್ಲಿ ವೈಶ್ಯ ಜನರಿಗೆ ತಾ ೨೦ ರಲ್ಲಿ ಹಾರನಹಳ್ಳಿ ವೈಶ್ಯರಿಂದಲೂ, ತಾ ೨೩ರಲ್ಲಿ ಅರಸೀಕೆರೆ ತಾಲ್ಲೂಕು ಚೆನ್ನಯ್ಯ ಶೆಟ್ಟರಿಂದಲೂ ತಾ ೨೪ ರಲ್ಲಿ ಕಣಕಾರದ ವೈಶ್ಯರಿಂದಲೂ ತಾ ೨೫ಕ್ಕೆ ಅರಸೀಕೆರೆ ವೈಶ್ಯರಿಂದಲೂ ಬಹು ವಿಜೃಂಭಣೆಯಾಗಿ ನಾಲ್ಕು ದಿನಗಳ ವರಿವಿಗೂ ವಿಶೇಷ ಸಂತರ್ಪಣೆ ನಡೆಯಿತು ಯಾತ್ರಾರ್ಥಿಗಳಾಗಿ ಬಂದ ಜನರೆಲ್ಲಾ ತಾ ೨೩–೨೪ ರಲ್ಲಿ ಗುಡ್ಡದ ಮೇಲಕ್ಕೆ ಹತ್ತಿ ಮಂಗಳಾರತಿ ಮಾಡಿಸಿಕೊಂಡು ಬಂದರು ಗುಡ್ಡದ ಮೇಲೂ ಕೆಳಗಡೆ ಇರುವ ಗೋವಿಂದ ಸ್ವಾಮಿ ದೇವಸ್ಥಾನದಲ್ಲೂ ಮಂಗಳಾರತಿಗಾಗಲೀ ದೇವರ ದರ್ಶನಕ್ಕಾಗಲೀ ಒಳಕ್ಕೆ ಹೋಗುವುದಕ್ಕೆ ಬಾಗಲಲ್ಲಿ ಇಸಂಗೆ ಒಂದಾಣೆಯಂತೆಯೂ ತೆಂಗಿನಕಾಯಿ ಒಂದಕ್ಕೆ ಒಂದಾಣೆಯಂತೆಯೂ ಸಾವಿರಾರು ರೂಪಾಯಿ ಕಾಣಿಕೆ ವಸೂಲು ಮಾಡಲ್ಪಟ್ಟಿತು ಈ ಜಾತ್ರೆಯಲ್ಲಿ ಅರಸೀಕೆರೆ ನಾಟಕದವರು ಕೆಲವು ನಾಟಕಗಳನ್ನು ಆಡಿ ಸಂತೆ ಅಪ್ಪುಸಿದರು ಅಲ್ಲಲ್ಲಿ ರಾತ್ರಿವೇಳೆ ಕಳ್ಳತನದ ನಡೆಯುತ್ತಲೇ ಇತ್ತು ಎಷ್ಟೋ ಜನರು ತಮ್ಮ ಬಟ್ಟೆ ಬರೆಗಳನ್ನು ಕೆಲವರು ನಗನಾಣ್ಯಗಳನ್ನೂ ಕಳಕೊಂಡರು ಲಾಟ್ರಿ ಎಂಬ ಆಟಗಳು ಸುಮಾರು ೧೦–೧೨ ಬಿದ್ದವು ಈ ಆಟಕ್ಕೆ ಎಷ್ಟೋ ಜನರು ಮೋಸಹೋಗಿದ್ದು ನೋಡಿ ತಾವು ತಂದಿದ್ದ ಹಣವನ್ನೆಲ್ಲಾ ಕಳಕೊಂಡು ಹೋದರು ಈ ಆಟಗಳನ್ನು ನಿಲ್ಲಿಸಬೇಕೆಂದು ತಡೆಯುವದಕ್ಕೆ ಬಂದ ಪೋಲೀಸಿನವರಿಗೆ ಬಂದಾಗ್ಲೇ ಕಾಸು ದೇವರ ಖರ್ಚು ಸಿಕ್ಕಿದ್ದರಿಂದಲೋ ಏನೋ ಆಟಕೊಳ್ಳಲೆಂದು ಮೊದಲನ್ನು ನಿದ್ದರಿದ್ದರಿಂದ ಈ ಆಟಗಳು ೬ ದಿವಸಗಳ ವರಿವಿಗೂ ಸಂಗವಾಗಿ ನಡೆಯುತ್ತಿದ್ದವು ಹಳ್ಳಿಯ ಜನರು ಇವರ ಜಪತ್ಕಾರಕ್ಕೆ ಬೆರಗಾಗಿ ಬಿದ್ದು ತನ್ನ ಹಣವನ್ನೆಲ್ಲಾ ಕಳದುಕೊಂಡು, ರಾಮನ ತಮ್ಮನ ಹೆಸರನ್ನು ಗಳಿಕೊಂಡು ತಮ್ಮ ಬಾಯ ಹಳ್ಳಿಗೆ ಹೋಗುತ್ತಿದ್ದರು ಈ ಜಾತ್ರೆಯಲ್ಲಿ ಎಲ್ಲೆಲ್ಲಿ ನೋಡಿದಾಗ್ಯೂ ತಿರುಕರು, ಡ ಸ್ಯರುಗಳೂ, ಕಾಲು ಮುರುಕರೂ, ಕೈಮುರುಕರೂ ತುಂಬಿದ್ದರು ಗುಡ್ಡದಿಂದ ಕೆಳಕ್ಕೆ ೧ ೫೦೦ ಮೆಟ್ಟಲುಗಳಿರುವವು ಮೇಲಿನಿಂದ ಕೆಳಕ್ಕೆ ಇಳಿಯುವ ಒಬ್ಬ ಯಾತ್ರಾರ್ಥಿಯು ಪ್ರತಿ ಒಬ್ಬ ತಿರುಕನಿಗೂ ಒಂದೊಂದು ಕಾಸಿನಂತೆ ಧರ್ಮ ಕೊಡುವಾಗ ಬಡವರು ೬ ರೂಪಾಯಿನ ಕಾಸುಗಳು ಬೇಕಾಗುತ್ತವೆ ಬರುತ್ತಿದ್ದವು ಒಬ್ಬ ಮುಸ್ಲೀಮನು ರಾತ್ರಿವೇಳೆ ತನ್ನ ಬಾಯಲ್ಲಿ ತಿಳಿಯಂತೆ ವೇಷವನ್ನು ಧರಿಸಿಕೊಂಡು ಎರಡು ಕೈಯಲ್ಲಿಯೂ ಎರಡು ಸಣ್ಣ ಪಂಜುಗಳನ್ನು ಹಿಡಿದುಕೊಂಡು, ಉರಿಯುವ ಪಂಜನ್ನು ತನ್ನ ಬಾಯಿಯೊಳಕ್ಕೆ ಎಲ್ಲರೂ ಕಾಣುವಂತೆ ಇಟ್ಟುಕೊಳ್ಳುತ್ತಿದ್ದನು ಇಂಥಾ ಎಷ್ಟೋ ಆಶ್ಚರ್ಯಗಳಿಂದ ತುಂಬಿದ್ದು ತನ ಪಕ್ಕದಲ್ಲಿ ಆರನೇ ದಿನ ಎಷ್ಟೋ ಜನ ಸ್ತ್ರೀಯರು ನಗಗಳಿಂದ ಅಲಂಕೃತರಾಗಿ ಬಂದಿದ್ದರು ಆದರೆ ಪಾರ್ಥ್ಯ ಸೇವನ್ನೇ ಬಳಿ ಪೋಲೀಸಿನವರನ್ನು ಕಾವಲು ಇಟ್ಟಿದ್ದುದರಿಂದ ಎಷ್ಟೋ ಜನರಿಗೆ ಕ್ಷೇಮವುಂಟಾಯಿತು. ತಾ ೨೩–೨೪ ರಲ್ಲಿ ಈ ಪ್ರಾಂತ್ಯ ವೀರಕ ಮಳೆಯು ಪ ೮ ಅಗಿ ಎಲ್ಲೆಲ್ಲಿಯೂ ಗಲೀಜ, ಕೆಸರೂ ಮಯವಾಯಿತು ಮತ್ತದ್ದರಿಂದ ಎಷ್ಟೋ ಜನರಿಗೆ ಪ್ರಯಾಣಕ್ಕೆ ತೊಂದರೆಯಾಯಿತು. ನಾಲ್ಕಾರು ದಿನಗಳ ವರಿವಿಗೆ ಪ್ರತಿ ನಿತ್ಯವೂ ರೈಲುಗಾಡಿ ಬಿರ್ಕಿಯಾಗಿ ಹೋಗುತ್ತಿತ್ತು ಯಾತ್ರಾರ್ಥಿಗಳು ನಿರಿಗಂತಲೂ ಈ ವರ್ಷ ಜಾಸ್ತಿ ಜನ ಸೇರಿದ್ದರಿಂದ ಹೇಳಬಹುದು ಮೇ॥ ಸ್ಟಾಲ್ ಕಂಪನಿಯ ಸಿ ೮ ಲಿಸಿಕೆರೆ ಬಜಾರಿನಲ್ಲಿ ಒಂದು ಚಾರಿ ಸತ್ರವನ್ನು ಬೆ ಸರಿ ಕಟ್ಟಿಸಬೇಕುವದೆ ಈ ಸತ್ರದ ಕಟ್ಟಡ ಮುಗಿಯಲು ಬಂದಿದೆ. ಈ ಕಟ್ಟಡವು ಪರಸ್ಥಳದವರಿಗೆ ಬಹು ಅನುಕೂಲವನ್ನು ಉಂಟುಮಾಡುವುದು.

ಕೆ ವಿ ಎಸ್

ತಾಲ್ಲೂಕು ವರ್ತಮಾನಗಳು

ಚಿಕ್ಕಮಗಳೂರು — ಇಲ್ಲಿ ಮಳೆಯು ಸರಿಯಾಗಿ ಆದ ಕೆರೆ ಕಟ್ಟೆಗಳೆಲ್ಲಾ ತುಂಬಿ ಕೋಡಿ ಬಂದಿದೆ ಪೈರುಗಳೆಲ್ಲಾ ಬಹು ಚೆನ್ನಾಗಿ ಆದರೆ ಟೌನಿನಲ್ಲಿ ಮಾತ್ರ ಪ್ಲೇಗು ಉಪದ್ರವ ತಪ್ಪಲಿಲ್ಲ ದಿವಸವಹಿತ ಹೆಚ್ಚಾಗುತ್ತಲಿದೆ ಊರಿನ ಎಲ್ಲಾ ಕಡೆಗಳಲ್ಲಿಯೂ ಇಲಿಗಳು ಬೀಳುವುದಾಗಿ ವರ್ತಮಾನ ಕಳೆದ ವಾರ ೩–೪ ಜನರು ಈ ರೋಗದಿಂದ ಸತ್ತರೆಂದು ಕೇಳುತ್ತೇವೆ ಇಲ್ಲಿನ ಕೆಲ ಸಾಹುಕಾರರೂ ಇವರಿಗಿಂತಲೂ ಅನೇಕರು ಸಾಧಾರಣವಾದ ಜ್ವರಪೀಡಿತರಾಗಿದ್ದಾರೆ —ಡೇವಹಳ್ಳಿ ಮುಖ್ಯ ವೇಳೆಯಲ್ಲಿ ಕೆಲವರಿಗೆ ಥಾಸ್ತಿ ಸಹಾ ಆಯಿತೆಂದು ಹೇಳುತ್ತಾರೆ ಇಲ್ಲಿನ ಎಕ್ಸಿಕ್ಯೂಟಿವ್ ಇಂಜಿನಿಯರ್ ಮೇ॥ ಮಲ್ಲಾಯ ಸಾಹೇಬರು ರಜದ ಮೇಲೆ ಹೋಗುತ್ತಾರೆಂದು ಕೇಳುತ್ತೇವೆ ಅವರ ಬದಲಿಗೆ ಯಾರು ಬರುತ್ತಾರೋ ಇನ್ನೂ ಗೊತ್ತಿಲ್ಲ

ಮಂಡ್ಯ—ಇಲ್ಲಿ ಮೂರು ವಾರಗಳ ಕೆಳಗೆ ಬ್ರಾಹ್ಮಣರ ಕೇರಿಯಲ್ಲಿ ಇಲಿಗಳು ಸಾಯುತ್ತವೆಂದು ತಿಳಿಸಿತ್ತಷ್ಟೆ ಈಚಿಗೆ ಪ್ಲೇಗು ಪ್ರಾರಂಭವಾಗಿ ಈ ವರೆಗೂ ನಾಲ್ಕು ಜನರು ಆ ವ್ಯಾಧಿಯಿಂದ ಮೃತಪಟ್ಟಿರುತ್ತಾರೆ ಇನ್ನು ಇಬ್ಬರು ಕಾಯಿಲೆಯಾಗಿದ್ದಾರೆ ಜನರೆಲ್ಲರೂ ಊರು ಬಿಡುತ್ತಾ ಗುಡಿಸಲುಗಳಿಗೆ ಹೋಗುತ್ತಲಿದ್ದಾರೆ ಸರ್ಕಾರದವರು ಜನರಿಗೆ ಗುಡಿಸಲು ಕಟ್ಟುವ ಸ್ಥಳದ ವಿಷಯದಲ್ಲಿ ನೀರಿಲ್ಲದ ಕಡೆಯಲ್ಲಿ ಅವರು ಸ್ಥಳವನ್ನು ತೋರಿಸಿರುತ್ತಾರೆ ಈ ವಿಷಯದಲ್ಲಿ ಪ್ರಜೆಗಳಿಗೆ ಗಾಗಬಟ್ಟುವಿಕೆ ಉಂಟು ಆದ್ದರಿಂದ ಸರ್ಕಾರದವರು ಈ ಕಾಲದಲ್ಲಿ ಜನರಿಗೆ ಹೆಚ್ಚಾದ ಪ್ರೋತ್ಸಾಹ ಕೊಡಬೇಕಾಗಿದೆ — ಇಲ್ಲಿ ಮೂರು ವಾರಗಳ ಕೆಳಗೆ ಜೈನರ ಬೀದಿಯಲ್ಲಿ ಶೃಂಗಾರರತ್ನಾಗಿರಿ ನಾಟಕದ ಕಂಪೆನಿಯವರು ಪ್ರಭಾವತಿ ದರ್ಬಾರು ಎಂಬ ನಾಟಕವನ್ನು

ಅಡಿದರು.—ಕಳೆದ ತಿಂಗಳು ೧೫ ನೆ ತಾ ಇಲ್ಲಿ ಒಂದು ವರ್ಷದಿಂದ ತಾಲ್ಲೂಕು ಶಿರಸ್ತೆದಾರರಾಗಿದ್ದ ಮಿ॥ ಕೆ ನಾರಣೈಯ್ಯಂಗಾರ್ಯರು ಕೆಲಸದಿಂದ ರಿಟೈರಾದರು ಇವರು ಒಳ್ಳೆ ನಿಸ್ಪೃಹರು, ಗುಣಾಢ್ಯರು, ಎಲ್ಲಾ ಜನರಿಗೂ ಪರಿಚಿತಸ್ಥರಾಗಿಯೂ ಇದ್ದರು ಇವರಿಗೆ ಬದಲಾಗಿ ಬೆಂಗಳೂರು ರೆವಿನ್ಯೂ ಕಮೀಷನರ ಆಫೀಸಿನಿಂದ ಮಿ॥ ರಾಮಚಂದ್ರ ರಾಯರು ಬಂದು ಶಿರಸ್ತೇದಾರಿ ಛಾರ್ಜನ್ನು ವಹಿಸಿರುತ್ತಾರೆ

ಹಾಸನ.—ಒಂದೆರಡು ವಾರಗಳಿಂದಲೂ ಮಳೆಯು ಬಿಡುವಿಲ್ಲದೆ ಸುರಿಯುತ್ತಲೇ ಇದೆ ಗಾಳಿಯು ಹೊಡತವಾದರೋ ಹೇಳತೀರದು ಸುತ್ತ ಮುತ್ತಲೂ ರಾಗಿ ಭತ್ತ ಮೊದಲಾದ ಪೈರುಗಳು ಚನ್ನಾಗಿವೆ ದೇವರ ಕೃಪೆಯಿಂದ ಈ ವರ್ಷ ರೈತರು ಲಾಭ ಪಡೆಯುವ ಹಾಗೆ ಇರುವದು ಸಂತೋಷವೇ ಸದ್ಯದಲ್ಲಿ ರೋಗಾದಿಗಳು ಏನೂ ಕಾಣುವುದಿಲ್ಲ ಚಿಕ್ಕಮಗಳೂರಿನಿಂದ ಇಲ್ಲಿಗೆ ವರ್ಗಪಟ್ಟ ಹೈಸ್ಕೂಲ್ ಹೆಡ್ ಮಾಸ್ತರವರು ಈ ವಾರ ಬಂದು ಹೈಸ್ಕೂಲ್ ಇಂಡಸ್ಟ್ರಿಯಲ್ ಸ್ಕೂಲ್‌ಗಳ ಛಾರ್ಜನ್ನು ವಹಿಸಿಕೊಂಡರು ಇವರು ಸಮರ್ಥರೆಂದು ಕೇಳಿದೆ. ಬಂದಿದೆ ಇಂಗ್ಲಿಷ್ ಸ್ಕೂಲ್ ಒಳ್ಳೇ ಅಭಿವೃದ್ಧಿಗೆ ಬರಬಹುದು.—ಚನ್ನರಾಯಪಟ್ಟಣದ ತಾಲ್ಲೂಕು ಎಲಿಯೂರೆಂಬ ಗ್ರಾಮದಲ್ಲಿ ಭಾಗಮ್ಮನೆಂಬ ಸುಮಾರು ೩೦ ವರ್ಷದ ಸ್ತ್ರೀಯು ತನ್ನ ಮೈದುನನ ಹೆಂಡತಿ ಕಲ್ಯಾಣಮ್ಮನನ್ನು ಏತಕ್ಕೋ ವ್ಯಾಜ್ಯದ ನೆವದಿಂದ ಊಗೆ ಸಮೀಪವಾದ ಕೊಳದಲ್ಲಿ ಆಕೆಯು ಹಿಮ್ಮುಖವಾಗಿ ಬಗ್ಗುತ್ತಿದ್ದಾಗ ಕಳೆದ ಬುಧವಾರ ಕದಲದೇ ಹೋಗಿ ಕೊಳಕ್ಕೆ ತಳ್ಳಿಬಿಟ್ಟಳೆಂದೂ ಆ ಕಾಲದಲ್ಲಿ ಅಲ್ಲಿದ್ದ ಇನ್ನೊಬ್ಬ ಹೆಂಗಸು ತನ್ನ ಕೈಲಾದ ಪ್ರಯತ್ನವನ್ನೆಲ್ಲಾ ಮಾಡಿದರೂ ಆಕೆಯು ಪ್ರಾಣಹೋಗಿ ಮೃತಳಾದಳೆಂತಲೂ ಈ ಕೃತ್ಯ ನಡಸಿದವಳು ಚನ್ನರಾಯಪಟ್ಟಣದ ಕಡೆಗೆ ಓಡಿಹೋಗಿಯೂ, ಪೋಲೀಸಿನವರು ಹಿಂಬಾಲಿಸಿ ಹೋಗಿ ದಸ್ತಗಿರಿಮಾಡಿ ಹಿಡಿದು ತಂದರೆಂತಲೂ ತಿಳಿದು ಬಂದಿದೆ

ತಿಪ್ಟೂರು.—ಗಾಳಿ ಬಹಳವಾಗಿ ಬೀಸುತ್ತಿದೆ ಮೋಡಗಳು ವಿಪರೀತವಾಗಿ ಮುಂಬರುತ್ತವೆ ಮಳೆ ಸುತರಾಂ ಇಲ್ಲ ಆಸಾಮ ಬಾ ಜದಲ್ಲಿ ಮಳೆ ಇದೆ ಎಂದು ಜನರು ಹೇಳುತ್ತಾರೆ ಧಾನ್ಯಾದಿಗಳ ದಾರಣೆಯೂದರೋ ಏರುತ್ತಲೇ ಇದೆ ಬಡಬಡಿ ಸಂಬಳದವರ ಪಾಡಂತೂ ಹೇಳಬಾರದಂತಾಗಿದೆ ಕಾಯಿಕೊಬರಿಗಳ ವ್ಯಾಪಾರವು ಜೋರಾಗಿರುವದರಿಂದ ಛತ್ರಕ್ಕೆ ಅವಕಾಶವೇ ಇಲ್ಲ.—ಮುನಿಸಿಪಲ್ ಛತ್ರದಲ್ಲಿ ಅಮಲ್ದಾರರು ನೂತನವಾಗಿ ಒಂದು ಕಟ್ಟಡವನ್ನು ಕಟ್ಟಿಸಿದ್ದಾರೆ ಇದರಿಂದ ಆಫೀಸರೇ ಮುಂತಾದ ಪ್ರಯಾಣಿಕರಿಗೆ ಬಹಳ ಪ್ರಯೋಜನವಾಯಿತು—ರೈಲ್ ರಸ್ತೆಯ ಆಚೇ ಭಾಗದಲ್ಲಿ ಸರ್ಕಾರದವರು ಏ ವಿ ಸ್ಕೂಲ್ ಕಟ್ಟಿಸುತ್ತಿದ್ದಾರೆ ಇದು ಅನುಕೂಲವಾದದ್ದೇ ಸರಿ ಇದರಂತೆ ಗ್ರಾಮ ಬಡಾವಣೆಯನ್ನೂ ಮಾಡಿಸಿದರೆ ನಮ್ಮ ಅಮಲ್ದಾರರಿಗೆ ಮತ್ತಷ್ಟು ಕೀರ್ತಿ ಬಂದೀತು ೬—೭ ವರುಷಗಳಿಂದ ನೆಮ್ಮದಿಯಾಗಿದ್ದ ಏ ವಿ ಸ್ಕೂಲ್ ಹೆಡ್ ಮಾಸ್ಟರಿಗೆ ವರ್ಗವಾಗುತ್ತೆಂಬ ಸಮಾಚಾರ ಹುಟ್ಟಿದೆ.—ಪಟ್ಟವರ್ಧನ ಸರ್ಕಸ್ ಆಟದ ಒಂದು ಆನೆಯು ಸತ್ತುಹೋಯಿತು ಆನೆಯ ರೋಗವು ಯಾರಿಗೂ ತಿಳಿಯಲಿಲ್ಲ.—ನಮ್ಮ ಮುನಿಸಿಪಲ್ ಕಮಿಟಿಯವರು ಈ ಸಾರಿ ತರಾತುರಿಯಿಂದ ಮೂರು ಸಾವಿರ ರೂಪಾಯಿ ನೀಲಾಮು ಮಾಡಿದರೂ ಪೇಟೆಗೆ ಹಣ ಮಾತ್ರ ಇನ್ನೂ ಸಾಪತಿಯಾಗಿಲ್ಲವೆಂದು ತಿಳಿಯಿತು—ಟವುನ್ ಮುಂಭಾಗದಲ್ಲಿರುವ ಮಾದಿಗರ ಕೇರಿ ಖಾಲಿಭೂಮಿಯಲ್ಲಿ ಧರ್ಮ ಒಂದು ಹಾವಡಿಯನ್ನು ಪಟೇಲ್ ಶಾನುಭೋಗರಿಗೆ ಕಟ್ಟಿಸಿಕೊಟ್ಟರೆ ಉತ್ತಮವೆಂದು ತೋರುತ್ತೆ

ಹೊಳೆನರಸಿಪುರ.—ಈಚೆಗೆ ಸೋನೆ ಮಳೆಯು ಬಹು ಜೋರಿದ್ದರಿಂದ ರೈತರು ಗದ್ದೆಗಳಿಗೆ ಸಸಿಗಳನ್ನು ನೆಡುವುದೇ ಬಹು ಕಷ್ಟವಾಯಿತು ಶೀತಗಾಳಿಯು ಬಹು ಜೋರಾಗಿರುವದರಿಂದ ಊರಲ್ಲಿ ಜ್ವರ ಕೆಮ್ಮು ಇದೆ ರಾಗೀ ಫಸಲು ಬಹು ಚನ್ನಾಗಿ ತೆನೆಗಳಿಂದ ತೊನೆಯುತ್ತದೆ ಧಾರಣೆವಾಸಿಗಳು ಸಾಧಾರಣವಾಗಿ ರೂಪಾಯಿಗೆ ರಾಗಿ ೧೪–೧೫ ಸೇರು ಅಕ್ಕಿ ೯ ಸೇರೂ ಸಿಕ್ಕುತ್ತದೆ. ಹೇಮಾವತಿ ಪ್ರವಾಹವು ಬಹು ಭಯಂಕರವಾಗಿ ಬರುತ್ತಿದೆ ಹೊಳೆಯಲ್ಲಿ ಬ್ರಾಹ್ಮಣರು ಮುಂತಾದ ಜನಗಳು ಸ್ನಾನ ಮಾಡಿ ಬಟ್ಟೆಗಳನ್ನು ಒಗೆಯುವ ಸ್ಥಳದಲ್ಲಿ ಬಹು ಚನ್ನಾಗಿ ಸೋಪಾನಗಳು ಕಟ್ಟಿ ಅನುಕೂಲವಾಗಿದೆ ವಿಶ್ವಕರ್ಮದಲ್ಲಿ ಈ ಪ್ರವಾಹದ ಕಾಲದಲ್ಲಿ ನಿಲ್ಲಲು ಸ್ಥಳವಿಲ್ಲ ಕೊಳಗಳಲ್ಲಿ ಬಹು ಬಯಪಟ್ಟು ನೀರು ತರಬೇಕಾಗಿದೆ ಅಂಥಾ ಅಪಾಯಕರವಾದ ಸ್ಥಳದಿಂದ ನೀರು ತರದಿದ್ದರೆ ವಿಧಿಯಿಲ್ಲ.—ಕೆಲ್ಲು ಸುಗಳಿಲ್ಲ ಜನಗಳು ಹೊಳೆಯ ದಡವನ್ನೇ ಆಶ್ರಯಿಸಿದ್ದಾರೆ ಈ ವಿಷಯದಲ್ಲಿ ಬೋರ್ಡ್ ಮೆಂಬರುಗಳು ತೂಕಡಿಸುತ್ತಿರುವರೋ ಏನೋ ತಿಳಿಯಲಿಲ್ಲ ಕಳೆದ ಕಾಲರಾ ಕಾಲದಲ್ಲಿ ನಮ್ಮ ಡಾಕ್ಟರು ಕೆಲವು ದಿನಗಳವರಿಗೆ ಮಾಂಸ ವಿಕ್ರಯ ಮಾಡಬಾರದೆಂದು ಅಪ್ಪಣೆ ಮಾಡಿದ್ದರು ಅದು ಒಳ್ಳೇದೇ ಆದರೆ ಆರೋಗ್ಯವಾಗಿರುವ ಕಾಲದಲ್ಲಿ ಮಾಂಸ ಮೀನು ಮೊದಲಾದವುಗಳನ್ನು ಪ್ರತ್ಯೇಕವಾದ ಸ್ಥಳದಲ್ಲಿಟ್ಟು ನ್ಯಾಯವಾದ ಖರೀದಿಗೆ ಮಾರಾಟವಾಗೆ ಏರ್ಪಾಡು ಮಾಡುವುದು ಅದಕ್ಕಿಂತ ಉತ್ತಮವಲ್ಲವೇ? ಈ ವಿಷಯವು ಯಾವ ಉದ್ಯೋಗಸ್ಥರ ಚಿತ್ತಕ್ಕೂ ಬರುವದಿಲ್ಲವೇ? ಪೋಲೀಸ್ ಬೀಟ್ ಎನ್ನುವುದಾಕ್ಕೇ ಇಲ್ಲ ರಾತ್ರಿಕಾಲದಲ್ಲಿ ಪೋಲೀಸಿನವರನ್ನು ನೋಡುವದೇ ಅಪರೂಪವಾಗಿದೆ.—ಹಾಸನದಲ್ಲಿ ಪ್ಲೇಗ್ ಇರುವದರಿಂದ ಅಲ್ಲಿನ ಜನಗಳು ಧಾರಾಳವಾಗಿ ಈ ಊರಿಗೆ ಬಂದಿರುವರು ಅವರಿಗೆ ಇನ್ನು ಬೇರ್ಪಡಿಸುವ ಪಾರಂ ಈಗ ಇಲ್ಲ ಈ ಊರಿನಲ್ಲಿ ಪ್ಲೇಗ್ ಪ್ರಾರಂಭವಾದಾಗ್ಗೆ ಊರಿನ ಜನಗಳಿಗೆ ಪಾರಂಗಳು ಉಂಟು ಪ್ಲೇಗ್ ಆಫೀಸು ಏನಾಗಿದೆಯೋ ತಿಳಿಯಲಿಲ್ಲ

ತುಂಕೂರು.—ಗಾಳಿಯು ವಿಶೇಷದಿಂದ ಮೋಡ ಮುಚ್ಚಿಕೊಂಡು ಮಳೆ ಇಲ್ಲದಂತಾಗಿದೆ ಹೊಲಗಳಿಗೆ ಈಗ ಮಳೆ ಅತ್ಯಂತ ಅವಶ್ಯಕ ಮಂದಿಗಳಿಗೆ ದಿನಸಿ ಗಾಸಿಗಳು ವಿಶೇಷವಾಗಿ ಖರುತ್ತವೆ ದಾರಣೆ ಯು ಹಾಸ್ಯಕರವೇ ಇದೆ ಈಗ ಎರಡು ವಾರಗಳಿಂದ ಈ ಪ್ರಾಂತ್ಯ ಕಳ್ಳತನದ ಅವಾಂತ್ರವಿಲ್ಲ. ಹೋದ ವಾರ ನಮ್ಮ ಪೋಲೀಸ್ ಇನ್ಸ್‌ಪೆಕ್ಟರ್ ಸಾಹೇಬರು ಬೆಂಗಳೂರಿನಿಂದ ಇಲ್ಲಿಗೆ ಮೋಟಾರ್ ಕಾರಿನಲ್ಲಿ ದಯಮಾಡಿಸಿ ಚಾರಿ ಕಳ್ಳತನ ನಡೆದಿರುವ ಕೇರಿಗೆ ಹೋಗಿ ಎಲ್ಲವನ್ನೂ ಪರಾಂಬರಿಸಿ ಕಳ್ಳರನ್ನು ತಲಾಷ್ ಮಾಡಲು ಕೆಲವು ಜನ ಸಮರ್ಥರಾದ ಪೋಲೀಸು ಆಫೀಸರನ್ನು ನೇಮಕಮಾಡಿ ಬೆಂಗಳೂರಿಗೆ ದಯಮಾಡಿಸಿದರು ಇದುವರಿಗೂ ಆ ಕಳ್ಳತನ ಮಾಡಿದವರ ಸುಳಿವೇ ಗೊತ್ತಿಲ್ಲದಂತಾಗಿದೆ ಪತ್ತೆ ತರುವುದಕ್ಕಾಗಿ ಬಳ್ಳಾರಿ ಪ್ರಾಂತ್ಯದ ವರೆಗೂ ಅಧಿಕಾರಿಗಳು ಹೋಗಿರುತ್ತಾರೆ.—ಈ ವಾರ ಒಬ್ಬನು ತನ್ನ ಧಣಿಯ ಮನೆಯಲ್ಲಿ ಬೆಳ್ಳಿ ಪಾತ್ರೆ ಮೊದಲಾದವನ್ನು ಅಪಹರಿಸಿಕೊಂಡು ರೈಲಿಗೆ ಹೋಗುತ್ತಿದ್ದವನು ಸಿಕ್ಕಿಬಿದ್ದು ಲಾಕಪ್ಪಿನಲ್ಲಿರುತ್ತಾನೆ.—ಹೋದ ವಾರ ಇಲ್ಲಿಗೆ ನಮ್ಮ ಮೈಸೂರು ಶ್ರೀಮಯ ವಿಂಶ ಸಂಘದ ಎಲ್ಲಾ ಉಪದೇಶಿಗಳೂ ಬಂದು ಸೇರಿ ಪ್ರತಿ ದಿನವೂ ದೇವಾಲಯದಲ್ಲಿ ಆರಾಧನೆ ಪ್ರಸಂಗ ಮುಂತಾದ ಪುಣ್ಯ ಕೆಲಸಗಳನ್ನು ಒಂದು ವಾರದ ವರಿಗೆ ಮಾಡಿ, ತಮ್ಮ ನಿವಾಸಗಳಿಗೆ ತೆರಳಿದರು. ಇವರ ಜೊತೆಗೆ ಆ ಸಂಘದ ಛೇರ್‌ಮೆನ್ ಸಾಹೇಬರವರೂ ದೇಶೀಯ ವಾದ್ಯಗಳೂ ಸಹ ದಯಮಾಡಿಸಿದ್ದರು.—ಇಲ್ಲಿನ ಬಾಳನಕಟ್ಟೆ ವಿಚಾರವಾಗಿ ಸರಿಪಡಿಸಲಿಲ್ಲ ಮನಿಸಿಪಾಲಿಟಿಯವರಿಗೆ ಮೊರೆ ಇಟ್ಟಾಗ್ಯೂ ಸ್ವಲ್ಪವೂ ಪ್ರಯೋಜನವಿಲ್ಲದಂತಾಗಿದೆ ಈಸಾರಿಯಾದರೂ ಈಗ ಹೊಸದಾಗಿ ಬಂದಿರುವ ವೈಸ್ ಪ್ರಸಿಡೆಂಟರು ಖುದ್ದಾಗಿ ಬಂಡಗಳ ಪ್ರಾಂತ್ಯದ ಬಾಳನಕಟ್ಟೆಯ ಭಾಗವನ್ನು ಪರಾಂಬರಿಸಿ, ಬೆಟ್ಟದ ಝರಿಗಳಂತೆ ಕೊರೆದುಕೊಂಡು ಹೋಗಿ ಡೊಂಗರ ಬಿದ್ದಿರುವ ಆ ಭಾಗಕ್ಕಾದರೂ ಮೆಟ್ಟಿಲುಗಳನ್ನು ಕಟ್ಟಿಸಿ ತಗ್ಗುಗಳಿಗೆ ಭರ್ತಿ ಹಾಕಿಸಿದರೆ ಅಲ್ಲಿ ಸಿಲ್ಲುವ ಬಂಡಿಗಳಿಗೂ ತಿರುಗಾಡುವ ಜನರಿಗೂ ತುಂಬಾ ಸವತಿಯಾಗುತ್ತೆ ಅದರಲ್ಲೂ ಅಲ್ಲಿ ರಾತ್ರಿಹೊತ್ತು ತಿರುಗುವ ಜನರ ಶ್ರಮ ಹೇಳತೀರದು.—ಈಗ ಹೊಸದಾಗಿ ಬಂದಿರುವ ಪೋಸ್ಟ್ ಮಾಸ್ಟರು ಪೋಸ್ಟ್ ಮ್ಯಾನ್‌ಗಳ ಬೀಟನ್ನು ಬದಲಾಯಿಸಿರುವದರಿಂದ ಅವರಿಗೂ ಜನರಿಗೂ ತುಂಬಾ ತೊಂದರೆಗೆ ಕಾರಣವಾಗಿರುತ್ತೆ ಆದ್ದರಿಂದ ಮೊದಲಿನಂತೆ ಏರ್ಪಾಡು ಮಾಡುವದು ಅವಶ್ಯಕ.—ಈಗ ೧೦—೧೫ ದಿನಗಳಿಗೆ ಮುಂಚೆ ಇಲ್ಲಿನ ವಿಂಶ ಇಂಡಸ್ಟ್ರಿಯಲ್ ಸ್ಕೂಲಿನ ಕಾರ್ಖಾನೆಯಲ್ಲಿ ಯಾರೋ ಕಬ್ಬಿಣದ ಪೆಟ್ಟಿಗೆ ತೆಗೆದು ಸುಮಾರು ೩೫ ರೂಪಾಯಿ ಮಾತ್ರ ತೆಗೆದುಕೊಂಡು ಹೋದರು ಕಳ್ಳರಿಗೆ ನಮ್ಮ ಟವುನಿನಲ್ಲಿ ಪೋಲೀಸಿನವರೂ ಮತ್ತು ಲಾಂದ್ರಗಳೂ ಕಮ್ಮಿಯಾಗಿರುವದು ತುಂಬಾ ಸಹಾಯವಾಗಿರುವದರಿಂದ ಸರ್ಕಾರದವರು ಇವೆರಡನ್ನೂ ಹೆಚ್ಚಿಸುವದು ತುಂಬಾ ಅವಶ್ಯಕವಾಗಿರುತ್ತೆ

ವಿದೇಶ ವರ್ತಮಾನಗಳು.

ಜರ್ಮನಿನವರು ಕೋರಿಯಾದಲ್ಲಿದ್ದ ಕೋರಿಯಾ ಜನರ ಸೈನ್ಯಗಳನ್ನು ವಜಾ ಮಾಡಿ ಅವರ ಸ್ಥಾನಕ್ಕೆ ಜರ್ಮ ಸೈನಿಕರ ರೆಜಿಮೆಂಟುಗಳನ್ನು ತಂದಿಟ್ಟರು

❦❦❦

ವಿಲಾಯತಿ ರಾಜ್ಯಕ್ಕೆ ಸೇರಿದ ಬೆಲ್‌ಫೆಸ್ಟ್ ಪಟ್ಟಣದಲ್ಲಿ ಒಂದು ಭಾರೀ ಅರಳೆಯ ಕಾರ್ಖಾನೆಯನ್ನು ಮುಚ್ಚಿಬಿಡಬೇಕಾಯಿತು ಅದರಲ್ಲಿ ಕೂಲಿ ಮಾಡುತ್ತಿದ್ದ ೬,೦೦೦ ಜನರು ಜೀವನಕ್ಕಿಲ್ಲದೆ ಕಷ್ಟಪಡುತ್ತಿದ್ದಾರೆ

❦❦❦

ರಷ್ಯಾ ರಾಜ್ಯದ ಚಕ್ರವರ್ತಿ ಜಾರ್‌ಯವರನ್ನು ಕೊಂದುಹಾಕಬೇಕೆಂದು ಏರ್ಪಾಡಾಗಿದ್ದ ಇನ್ನೊಂದು ಫಿತೂರಿಯು ಬಯಲಾಯಿತು ಸರ್ಕಾರದವರು ಆ ಫಿತೂರಿಗೆ ಸೇರಿದ್ದವರೆಂದು ತಿಳಿದುದರಿಂದ ಅನೇಕ ಜನರನ್ನು ದಸ್ತಗಿರಿ ಮಾಡಿಸಿದ್ದಾರೆ

❦❦❦

ಈಜಿಪ್ಟ್ (ಐಗುಪ್ತ) ರಾಜ್ಯವನ್ನು ಬಹುಕಾಲದಿಂದಲೂ ಆಳಿ ಅಭಿವೃದ್ಧಿಗೆ ತಂದು ತುಂಬಾ ಪ್ರಖ್ಯಾತಿ ಪಡೆದಿರುವ ಲಾರ್ಡ್ ಕ್ರೋಮರ್ ಯವರಿಗೆ ವಿಲಾಯತಿಯ ದೊರೆಯವರು ಗವರ್ನಮೆಂಟಿನಿಂದ ೭೫ ಲಕ್ಷ ರೂಪಾಯಿ ಬಹುಮಾನ ಕೊಡಬೇಕೆಂದು ಸೂಚಿಸಿದರು ಪಾರ್ಲಿಮೆಂಟ್ ಮೆಂಬರುಗಳು ಈ ವಿಷಯವನ್ನು ಚರ್ಚಿಸಿ ಅವರಿಗೆ ಆ ಹಣವನ್ನು ಕೊಡತಕ್ಕದ್ದೇ ಧರ್ಮವೆಂದು ಒಪ್ಪಿಕೊಂಡಿರುತ್ತಾರೆ

❦❦❦

ಆಫ್ರಿಕಕ್ಕೆ ಸೇರಿದ ಜಾಂಜಿಬಾರ್ ದೇಶದಲ್ಲಿ ಗುಲಾಮರನ್ನು ಕೊಂಡು ಮಾರುವ ದುಷ್ಟ ಪದ್ಧತಿಯುಂಟು ಈ ಪದ್ಧತಿಯನ್ನು ಅಕ್ಟೋಬರ್ ತಿಂಗಳಿಂದಾಚೆಗೆ ನಿಲ್ಲಿಸಬೇಕೆಂದು ಸರ್ಕಾರದವರು ನಿಘಾಯಕ ಮಾಡಿರುತ್ತಾರೆ ಈಗ ಗುಲಾಮರನ್ನು ಕೊಂಡು ಇಟ್ಟುಕೊಂಡಿರುವವರಿಗೆಲ್ಲಾ ಸರ್ಕಾರದಿಂದ ಆರು ಲಕ್ಷ ರೂಪಾಯಿ ಹಂಚಿಕೊಟ್ಟು ಆ ಗುಲಾಮರನ್ನು ಅವರ ವಶದಿಂದ ಬಿಡುಗಡೆ ಮಾಡುವವರಾಗಿದ್ದಾರೆ

❦❦❦

ಅಂತರಿಕ್ಷದಲ್ಲಿರುವ ಮಾರ್ಸ್ ಎಂಬ ಗ್ರಹವು ಈಗ ಭೂಮಿಗೆ ಬಹಳ ಸಮೀಪದಲ್ಲಿ ಅಂದರೆ ೧೦೦ ಲಕ್ಷ ಮೈಲಿಗಳ ದೂರದಲ್ಲಿದೆ ಎಂದು ಖಗೋಳಶಾಸ್ತ್ರಕಾರರು ಕಂಡು ಹಿಡಿದಿದ್ದಾರೆ ಅದರಿಂದ ಫೋಟೋ ನಕ್ಷೆಗಳನ್ನು ಸಂಗ್ರಹ ಮಾಡಿದ್ದಾರೆ ಈ ಗ್ರಹದಲ್ಲಿ ಅನೇಕಾನೇಕ ನಾಲೆಗಳು ಇರುತ್ತವೆಂದೂ ಆದ್ದರಿಂದ ಅದರಲ್ಲಿ ಪ್ರಜೆಗಳಿರುತ್ತಾರೆಂದೂ ಇಬ್ಬರು ಶಾಸ್ತ್ರಜ್ಞರು ತಿಳಿಸಿರುವರು ಆದರೆ ಇತರ ಶಾಸ್ತ್ರಜ್ಞರು ಈ ಅಭಿಪ್ರಾಯವನ್ನು ಒಪ್ಪದೆ ಚರ್ಚೆ ಮಾಡುತ್ತಿದ್ದಾರೆ

❦❦❦

ಲಂಡನ್ ಪಟ್ಟಣದಲ್ಲಿ ಇಂಡಿಯಾ ದೇಶದ ಜನರ ಕಷ್ಟ ಸುಖಗಳನ್ನು ಅಲ್ಲಿನ ಜನರಿಗೆ ತಿಳಿಸುವದಕ್ಕಾಗಿ 'ಇಂಡಿಯನ್ ಸೋಷಿಯಾಲಜಿಸ್ಟ್' ಎಂಬ ಪತ್ರಿಕೆಯನ್ನು ಶ್ಯಾಮಾಜಿ ಕೃಷ್ಣವರ್ಮ ಎಂಬ ಭಾರತೀಯರು ನಡೆಸುತ್ತಿರುವರು ಈ ಪತ್ರಿಕಾಕರ್ತರ ಲೇಖನಗಳು ಸರ್ಕಾರದವರಿಗೆ ವಿರೋಧವನ್ನು ಉಂಟುಮಾಡುತ್ತಿರುವರೆಂದೂ ಅದಕ್ಕಾಗಿ ಆ ಪತ್ರಿಕಾಕರ್ತರನ್ನು ಶಿಕ್ಷೆಗೆ ಗುರಿಮಾಡಬೇಕೆಂದೂ ವಿಲಾಯತಿಯ ಪಾರ್ಲಿಮೆಂಟ್ ಸಭೆಯಲ್ಲಿ ಮಿ॥ ರೀಸ್ ಭೊರೆಗಳು ಮ॥ ಮಾರ್ಲಿಯವರನ್ನು ಕಳೆದ ವಾರ ಕೇಳಿದರು ಆದರೆ ಸರ್ಕಾರದವರು ಅದಕ್ಕೆ ಒಪ್ಪಲಿಲ್ಲ

ಕೆನಡಾ ಎಂಬ ಇಂಗ್ಲಿಷ್ ಸಾಮ್ರಾಜ್ಯದಲ್ಲಿ ಆಗುವ ದವಸ ಧಾನ್ಯಗಳನ್ನು ನೆಟ್ಟಗೆ ವಿಲಾಯತಿಗೆ ಸಾಗಿಸುವುದಕ್ಕೆ ಸಮುದ್ರದ ಮೇಲೆ ಹತ್ತಿರದ ಮಾರ್ಗವನ್ನು ತಯಾರುಮಾಡಬೇಕೆಂದು ಆ ಸಾಮ್ರಾಜ್ಯದವರು ಪ್ರಯತ್ನಪಟ್ಟಿದ್ದಾರೆ ಉದ್ದಕ್ಕೂ ಸಮುದ್ರವನ್ನು ಕಡೇ ಪಕ್ಷ ೨೫ ಅಡಿಯಷ್ಟಾದರೂ ಆಳವಾಗಿ ಮಾಡಿ ಭಾರೀ ಹಡಗುಗಳ ಸಂಚಾರಕ್ಕೆ ಅನುಕೂಲಿಸುವಂತೆ ಮಾಡಬೇಕೆಂಬುವದೇ ಅವರ ಉದ್ದೇಶವು ಈ ಏರ್ಪಾಡಿಗೆ ಕೆನಡಾ ಗವರ್ನಮೆಂಟಿನವರು ೩೦ ಕೋಟಿ ರೂಪಾಯಿ ಖರ್ಚು ಮಾಡಬೇಕೆಂದು ಅಂದಾಜುಪಟ್ಟಿ ತಯಾರು ಮಾಡಿರುತ್ತಾರೆ

❦❦❦

ವಿಲಾಯತಿಯಲ್ಲಿ ಮುದುಕರಿಗೆ ಸರ್ಕಾರದವರು ಜೀವನಾರ್ಥವಾದ ಪೇನ್ಷನ್ ಕೊಡಬೇಕೆಂದು ಚರ್ಚೆಮಾಡುತ್ತಿದ್ದಾರಷ್ಟೆ ೬೫ ವರುಷ ತುಂಬಿದಂಥಾ ಮುದುಕರ ಈಗ ೨೦ ಲಕ್ಷ ಮಂದಿಗಿಂತಲೂ ಹೆಚ್ಚಾಗಿಯೇ ಇರುವರಾಗಿಯೂ ಈ ಸೈಕಿ ಕಾಲುಪಾಲಿನಷ್ಟು ಜನರಿಗೆ ಈಗ ೨೨೫ ಲಕ್ಷ ರೂಪಾಯಿ ಪೇನ್ಷನ್ ಸಲ್ಲುತ್ತಿರುವುದಾಗಿಯೂ, ಈಗ ಮಾಡಿರುವ ಏರ್ಪಾಡಿನ ಪ್ರಕಾರ ೬೫ ವರುಷ ತುಂಬಿದವರಿಗೆಲ್ಲಾ ವಾರಕ್ಕೆ ತಲೆ ೭॥ ರೂಪಾಯಿನಂತೆ ಪೇನ್ಷನ್ ಕೊಡಬೇಕಾದಲ್ಲಿ ಗವರ್ನಮೆಂಟಿಗೆ ವರುಷಕ್ಕೆ ೪೦॥ ಕೋಟಿ ರೂಪಾಯಿ ವೆಚ್ಚವಾಗಬೇಕೆಂಬದಾಗಿಯೂ ಗೊತ್ತುಮಾಡಿದ್ದಾರೆ ಈ ವರುಷದ ಬಜೆಟ್ಟಿನಲ್ಲಿ ಖಜಾನಾ ಛಕ್ಷಿಯವರು ಈ ಫಂಡಿಗೆ ೨೨೫ ಲಕ್ಷ ರೂಪಾಯಿ ತೆಗೆದಿಟ್ಟಿರುವರು

ಪ್ರಕಟನೆಗಳು.

ಲೋವರ್ ಸೆಕೆಂಡರಿ ಕ್ಷೇತ್ರಗಣಿತ, ಅಪ್ಪರ್ ಸೆಕೆಂಡರಿ

76 2

ಮೇಲ್ಕಂಡ ವಿದ್ಯಾರ್ಥಿಗಳಿಗೂ ಟ್ಯಾಂಕ್ ಇನ್ಸ್‌ಪೆಕ್ಟರ್ ಓವರ್ಸಿಯರುಗಳಿಗೆ ಬಹು ಉಪಯೋಗವಾಗುವಂತೆಯೂ ಸುಲಭವಾಗಿ ಬೋಧೆಗೆ ಬರುವಂತೆ ಸವಿಸ್ತಾರವಾದ ರೂಪದಲ್ಲಿ ೩೫ ಮಾದರಿ ಉದಾಹರಣೆಗಳಿಂದಲೂ ೩೦೦ ವಿವಿಧ ಪ್ರಶ್ನೆಗಳಿಂದಲೂ ಕೂಡಿದ್ದಾಗಿರುತ್ತದೆ ಪ್ರತಿ ಅಧ್ಯಾಯದಲ್ಲಿಯೂ ಆಕೃತಿಗಳೂ ಸೂತ್ರಗಳೂ ಇವೆ. ಕ್ರಯ ೦—೩—೦.

ವಿಳಾಸ-ಎಂ ಕೃಷ್ಣಯ್ಯ 72 ವೀವರ್ಸ್ ಲೈನ್, ಮೈಸೂರು.

ಕಬ್ಬಿನ ಹಾಲು ತೆಗೆಯುವ ಗಾಣಗಳು.

68 3

ಈ ಗಾಣಗಳಿಗೆ ೭—೫—೬ ಕಡೆ ಕಟ್ಟಿ ಕೊಟ್ಟು ಹಾಲು ತೆಗೆಯಬಹುದು ಬಹಳ ಗಟ್ಟಿಯಾದ ಸಾಮಾನಿಂದ ತಯಾರಿಸಿದೆ ಈ ಗಾಣದಿಂದ ಹೆಚ್ಚು ಲಾಭ ಬಂದೀತು, ಇದಕ್ಕೆ ಸಮಾನವಾದ ಗಾಣ ಬೇರೊಂದು ಸಿಕ್ಕಲಾರದು ಈ ವಿಳಾಸಕ್ಕೆ ಬರೆದರೆ ಎಲ್ಲಾ ತಿಳಿಯುತ್ತೆ.

ಮೆಕೆಂಜಿ ಕಂಪನಿ ಕೆಂಗೇರಿ ರೋಡ್,

ಬೆಂಗಳೂರು ಸಿಟಿ.

ಇಲ್ಲಿ ನೋಡಿ!

65 5

ತುಮಕೂರು ಡಿಸ್ಟ್ರಿಕ್ಟ್ ಇಲಾಖೆಯಲ್ಲಿ ಯೂರೋಪಿಯನ್ ಮೋಸ್ತರಿನಿಂದ ಉತ್ತಮ ತರಹದ ಹಾಸನದ ಟೋಪಿಗಳು ಅತಿ ಶ್ರೇಷ್ಠವಾದ ಉಲ್ ದಾರದಿಂದ ತಯಾರಾಗುತ್ತವೆ

ಈಗ ಕೆಳಗೆ ನಮೂದಾಗಿರುವ ವಿವಿಧ ಬಣ್ಣದ ಟೋಪಿಗಳು ಹೆಚ್ಚಾಗಿ ನಮ್ಮಲ್ಲಿ ದಾಸ್ತಾನ (ಸ್ಟಾಕ್) ಉಂಟು

ಬಣ್ಣಗಳ ವಿಧ —ಅಚ್ಚಕೆಂಪು, ಮಂದಕೆಂಪು, ಕಪ್ಪುಕೆಂಪು ಮಿಶ್ರವಾದದ್ದು.

ಕ್ರಯ —೧ ರು ೪ ಆ ಮತ್ತು ೧ ರು ೬ ಆ

೧ ಡಜನ್ ಟೋಪಿಗಳನ್ನು ತೆಗೆದುಕೊಳ್ಳುವವರಿಗೆ ಶೇಕಡ ೫ ರಂತೆ ಡಿಸ್‌ಕೌಂಟ್ ಕೊಡಲ್ಪಡುವದು

ನಮ್ಮ ವಿಳಾಸ —ಮೇನೇಜರ್,

ಹಾಸನದ ಟೋಪಿ ಕಾರ್ಖಾನೆ, ಡಿಸ್ಟ್ರಿಕ್ಟ್ ಇಲಾಖೆ, ತುಮಕೂರು.

ಅತಿ ಆಶ್ಚರ್ಯ! ಎಲೆಕ್ಟ್ರಿಕ್ ಕೈದೀಪ ಸುಲಭ ಖರೀದಿ!!

73 3

ಈ ದೀಪವನ್ನು ಪಾಕೆಟ್ಟಿನಲ್ಲಿ ಇಟ್ಟುಕೊಳ್ಳುವ ಹಾಗೆ ಚಿಕ್ಕ ಸೈಜಿನಲ್ಲಿ ಮಾಡಿರುತ್ತೆ ಇದಕ್ಕೆ ಬೆಂಕಿ, ಬತ್ತಿ, ಎಣ್ಣೆ ಸ್ವಲ್ಪವೂ ಅವಶ್ಯಕವಿಲ್ಲ. ಇದು ವಿದ್ಯುಚ್ಛಕ್ತಿಯಿಂದ ಉರಿಯುವದು ಇದರಿಂದ ಯಾವ ಅಪಾಯವೂ ಉಂಟಾಗಲಿಕ್ಕಿಲ್ಲ



ಇದರಿಂದ ಪ್ರಯಾಣಿಕರಿಗೆ ಬಹಳ ಅನುಕೂಲ ಎಂಥಾ ದೊಡ್ಡ ಗಾಳಿಗೂ ಆರುವದಿಲ್ಲವು ಇದನ್ನು ಸೋಲ್ಜರ್ಸು ಕಾಡುಗಳಲ್ಲಿ ಪ್ರಯಾಣ ಮಾಡುವದಕ್ಕೆ ಬಹಳ ಉಪಯೋಗಿಸುತ್ತಿದ್ದಾರೆ ಬೇಕಾದಾಗ ಈ ಪೆಟ್ಟಿಗೆ ಮೇಲೆ ಇಟ್ಟಿರುವ ಬಟನ್ನನ್ನು ಬೆಟ್ಟಿನಿಂದ ಒತ್ತಿದ ಕೂಡಲೇ ೧೦೦ ದೀಪಗಳು ಹಚ್ಚಿದಷ್ಟು ಬೆಳಕು ಕೊಡುವದು ಇದು ಎಷ್ಟು ದಿನಸವಾದರೂ ಬಾಳಿಕೆ ಬರುವದು ಉಪಯೋಗಿಸುವ ವಿಧಾನವು ಇದರ ಸಂಗಡ ಒಂದು ಹಚ್ಚಿದೆ

ಕ್ರಯ ರೂ ೩—೦—೦ ವಿ. ಪಿ ಪಿ ಛಾರ್ಜು ೬ ಆಣೆ.

ಸೂಚನೆ —ಆಗಸ್ಟು ಅಖೈರಿನೊಳಗೆ ತರಿಸಿಕೊಳ್ಳತಕ್ಕವರಿಗೆ ಬಹುಮಾನವಾಗಿ ರೂ ೨—೮—೦ ಕ್ರಯದ ನಮ್ಮ ಕೂಪನ್ ಕಳುಹಿಸುವೆವು ಇದರಿಂದ ಒಂದು ಪೆಳ್ಳಿ ವಾಚು ಅವಶ್ಯ ಸಿಗುತ್ತದೆ

ವಿಳಾಸ —ಟಿ ಸಿ ನಾಗಲಿಂಗಪ್ಪ ಅಂಡ್ ಕಂಪನಿ,

ಸೌಕಾರ್ ಪೇಟೆ, ಮದರಾಸು.

ಮಿಸೆಸ್ ಅಡ್ಡಿ ಹಾರ್ಡಿಂಜ್. ಮಿಸೆಸ್ ಮೇರಿ ಮೇಯರ್. ಮಿಸೆಸ್ ಫ್ರಾನ್ಸೆಸ್ ವಿಲ್ಸನ್. 38-18

ಮಿಸೆಸ್ ಅಡ್ಡಿ ಹಾರ್ಡಿಂಜ್, ೪೧೦ ಕೋರ್ಟ್ ಬೀದಿ, ಸ್ಯಾರಕ್ಯೂಸ್, ನ್ಯೂಯಾರ್ಕ್, ಈಕೆ ಬರೆಯುವುದೇನೆಂದರೆ—

"ನಾನು ಕಳೆದ ಹನ್ನೆರಡು ವರುಷಗಳಿಂದಲೂ ಪೆರೂನಾವನ್ನು ಉಪಯೋಗಿಸುತ್ತಿದ್ದೇನೆ. ಇದಕ್ಕೆ ಸಮಾನವಾದ ಔಷಧವು ಪ್ರಪಂಚದಲ್ಲೇ ಇಲ್ಲವೆಂದು ನಿಜವಾಗಿ ಹೇಳಬಲ್ಲೆನು.

ನನಗೆ ಎಲ್ಲಾ ವಿಧವಾದ ಶೀತಗಳನ್ನೂ ಇತರ ಅನೇಕ ಕಾಯಿಲೆಗಳನ್ನೂ ಬಾರದಂತೆ ಈ ಔಷಧವು ಖಂಡಿತವಾಗಿ ತಡೆದಿರುತ್ತದೆ. ನನ್ನ ಮನೆಯಲ್ಲಿ ಪೆರೂನಾ ಔಷಧದ ಸೀಸೆಯೊಂದು ಯಾವಾಗಲೂ ಇದ್ದೇ ಇರುವುದು. ವರುಷಕ್ಕೆ ಎರಡು ಮೂರು ಸಲ ನನಗೆ ಗಂಟಲಲ್ಲಿ ಬಾಧೆಯುಂಟಾಗುತ್ತಲೇ ಇರುತ್ತದೆ.

"ಖಂಡಿತವಾಗಿ ತಡೆಯುವ ಔಷಧ."

"ಪ್ರತಿಸಲ ನನಗೆ ಬಾಧೆ ಉಂಟಾದಾಗಲೂ ಎರಡು ಮೂರು ವೇಳೆ ವೈದ್ಯನನ್ನು ನಾನು ಕರೆಸಿಕೊಳ್ಳಬೇಕಾಗಿತ್ತು. ನಾನು ಪೆರೂನಾವನ್ನು ಉಪಯೋಗಿಸತಕ್ಕವಳಾಗಿದ್ದಾಗ್ಯೂ ಈಗ್ಗೆ ಸುಮಾರು ಎರಡು ವರುಷಗಳವರೆಗೆ ನನ್ನ ಗಂಟಲು ಬಾಧೆಗೋಸ್ಕರ ಅದನ್ನು ತೆಗೆದುಕೊಳ್ಳಬೇಕೆಂಬ ಯೋಚನೆಯೇ ನನಗೆ ಉಂಟಾಗಿರಲಿಲ್ಲ.

"ಈ ಬಾಧೆಯನ್ನು ತಡೆಯುವುದಕ್ಕೆ ಪೆರೂನಾವನ್ನು ತೆಗೆದುಕೊಂಡೆನು. ಅಂದಿನಿಂದೀಚೆಗೆ ನನ್ನ ಗಂಟಲು ಎಲ್ಲಾ ವಿಧವಾದ ಬಾಧೆಯಿಂದ ತಪ್ಪಿಸಿಕೊಳ್ಳುವುದು ನಿವಾರಣೆಯಾಗಿದೆಯೆಂದು ಬಹಳ ಸಂತೋಷದಿಂದ ಹೇಳುತ್ತೇನೆ.

"ಆ ಗಂಟಲುಬಾಧೆಯನ್ನು ಪ್ರತಿಸಲವೂ ಪೆರೂನಾ ಸೇವನೆಯಿಂದ ತಡೆಯಬಲ್ಲೆನು. ನಿಜವಾಗಿ ನಾನು ಪೆರೂನಾ ಇಲ್ಲದೆ ಒಂದು ದಿವಸವೂ ಇರಲಾರೆನು."

ಕ್ಷಯರೋಗವನ್ನು ನಿವಾರಣೆ ಮಾಡುವುದಕ್ಕೆ ಸಕಲ ಜನಾಂಗಗಳೂ ವಿಶೇಷವಾದ ಪ್ರಯತ್ನಗಳನ್ನು ಮಾಡುತ್ತಲಿದ್ದಾರೆ.

ಎಲ್ಲೆಲ್ಲೂ ಅನೇಕಾನೇಕ ಕ್ಷಯರೋಗಿಗಳನ್ನಿಟ್ಟು ಚಿಕಿತ್ಸೆ ಮಾಡುವುದಕ್ಕೆ ಸರ್ಕಾರದವರಿಂದ ವಿಸ್ತಾರವಾದ ಆಲಯಗಳನ್ನು ಸ್ಥಾಪನೆ ಮಾಡಿ ನಡಿಸುತ್ತಿದ್ದಾರೆಂದು ಕೇಳುತ್ತೇವೆ.

ವೈದ್ಯರೇ ಕಾವಲಾಗಿ ಇಟ್ಟುಕೊಂಡಿರುವ ಇಲ್ಲಾ ಎಲ್ಲಾ ಸ್ಥಿತಿಗಳಲ್ಲೂ ಇರತಕ್ಕ ಕ್ಷಯರೋಗಿಗಳಿಗೆ ಚಿಕಿತ್ಸೆ ಮಾಡುವುದರಲ್ಲಿ ಬಿಸಿಲು, ನಿರ್ಮಲವಾದ ಹೊರಗಾಳಿ, ಬಯಲುಪ್ರದೇಶ, ಗಿಡಗಳ ಮೂಲಕ ಮಾಡತಕ್ಕ ಚಿಕಿತ್ಸೆಗಳೇ ಅವಶ್ಯವಾದ ಪರಿಹಾರಗಳೆಂದು ಸರ್ವಸಾಮಾನ್ಯವಾಗಿ ಒಪ್ಪಿಕೊಂಡಿರುತ್ತಾರೆ.

ಡಾಕ್ಟರ್ ಹಾರ್ಟ್‌ಮನ್‌ರವರು ಅನೇಕ ವರುಷಗಳಿಂದಲೂ ನಿರ್ಮಲವಾದ ಹೊರಗಾಳಿಯ ಚಿಕಿತ್ಸೆಯೇ ಕ್ಷಯರೋಗಕ್ಕೆ ಸರ್ವೋತ್ತಮವಾದ ಚಿಕಿತ್ಸೆಯೆಂದು ಹೇಳುತ್ತಿದ್ದಾರೆ. ಇದಲ್ಲದೆ ಈ ಬಿಳಿಯ ಪ್ಲೇಗೆಂಬ ರೋಗದ ನಾನಾ ರೀತಿಯ ಕಠಿಣ ಬಾಧೆಗಳಿಗೆಲ್ಲಾ ಪೆರೂನಾ ಔಷಧವು ಹುಟ್ಟಿಗೆ ಪರಿಹಾರವನ್ನು ಕೊಡತಕ್ಕದ್ದೆಂದು ಒಪ್ಪಿಕೊಂಡಿದ್ದಾರೆ.

ಮಿಸೆಸ್ ಮೇರಿ ಮೇಯರ್, ಥಾಂಪ್ಸನ್ ಬೀದಿ, ಪೆಲ್‌ಹೋಮ್ ಹಿಲ್, ಸೆಕ್‌ಫೀಲ್ಡ್ ಲೋಸಿಯಾನಾ, ನ್ಯೂಯಾರ್ಕ್, ಈಕೆ ಬರೆಯುವುದು:—

"ನಾನು ಅನೇಕ ವರುಷಗಳ ವರೆಗೂ ಶ್ಲೇಷ್ಮದ ಉಪದ್ರವದಲ್ಲಿ ಕಷ್ಟಪಡುತ್ತಿದ್ದೆನು."

"ಅನೇಕ ವೇಳೆ ಅದರ ಬಾಧೆಯಿಂದ ರಾತ್ರಿಯಲ್ಲಿ ಅರ್ಧಘಳಿಗೆ ನನಗೆ ನಿದ್ರೆಯೇ ತಪ್ಪಿಹೋಗುತಿತ್ತು. ನನಗೆ ಕ್ಷಯರೋಗ ಪ್ರಾಪ್ತವಾಗಿದೆ ಎಂದು ಅನೇಕರು ಯೋಚಿಸಿದ್ದರು.

ಕ್ಷಯರೋಗವೆಂಬ ಹೆದರಿಕೆಯುಂಟಾಗಿತ್ತು.

"ಎರಡು ವರುಷಗಳ ಕೆಳಗೆ ಒಬ್ಬ ಹೆಂಗಸು ಪೆರೂನಾವನ್ನು ಸೇವಿಸೆಂದು ಶಿಫಾರಸು ಮಾಡಿದಳು. ನಾನು ಪೆರೂನಾ ತೆಗೆದುಕೊಳ್ಳುವುದಕ್ಕೆ ಪ್ರಾರಂಭಿಸಿದೆನು. ಈಗ ನನ್ನ ಶ್ಲೇಷ್ಮದ ಉಪದ್ರವೆಲ್ಲಾ ಸಂಪೂರ್ಣವಾಗಿ ವಾಸಿಯಾಗಿರುತ್ತದೆ.

"ಪೆರೂನಾವು ನನ್ನ ಕಾಯಿಲೆಯನ್ನು ಪೂರಾ ವಾಸಿಮಾಡಿದೆ ಎಂದು ಸಂತೋಷಪಟ್ಟು ಹೇಳುತ್ತೇನೆ. ಆಗಾಗ್ಗೆ ನನಗೆ ಸ್ವಲ್ಪ ಅಲಸ್ಯವಾದಾಗಲೆಲ್ಲಾ ಪೆರೂನಾವನ್ನು ತೆಗೆದುಕೊಳ್ಳುತ್ತೇನೆ; ಮತ್ತು ಅದನ್ನು ನನ್ನ ಮಕ್ಕಳಿಗೂ ಕೊಡ ಕೊಡುತ್ತೇನೆ.

"ಶೀತ, ನೆಗಡಿ, ಕೆಮ್ಮುಗಳಿಗೆ ಪೆರೂನಾ ಸರ್ವೋತ್ತಮವಾದ ಔಷಧವು. ಆದರಿಂದ ನನಗೆ ಎಷ್ಟು ಸಹಾಯವಾಗಿದೆಯೋ ಅದನ್ನು ಅನೇಕ ಜನರಿಗೆ ವಿವರಿಸಿ ಹೇಳಿರುತ್ತೇನೆ."

ಪೆರೂನಾ ಎಂಬ ಔಷಧವು ಕೆಮ್ಮಲನ್ನು ಶಮನ ಮಾಡುವುದು; ಶ್ಲೇಷ್ಮವನ್ನು ಕಡಮೆ ಮಾಡುತ್ತದೆ; ರೋಗಿಗೆ ಬಲಕಾರಿಯಾಗಿದೆ; ಆಹಾರದಲ್ಲಿ ರುಚಿಯನ್ನು ಹೆಚ್ಚಿಸುವುದು; ಮತ್ತು ಅನೇಕ ಸಂದರ್ಭಗಳಲ್ಲಿ ಸುಖವಾದ ನಿದ್ರೆಯನ್ನು ಕೊಡುತ್ತದೆ.

ಆದರೆ ಪೆರೂನಾ ಔಷಧವು ಕ್ಷಯರೋಗವನ್ನು ಬಾರದಂತೆ ತಡೆಯುವುದರಲ್ಲಿ ಗುಣಕಾರಿಯಾಗಿದ್ದರೂ ಕ್ಷಯರೋಗ ಬಂದ ಮೇಲೆ ಅದನ್ನು ನಿವಾರಣೆ ಮಾಡುವುದಕ್ಕೆ ಅಷ್ಟು ಬಲಕಾರಿಯಾದದ್ದಲ್ಲ.

ಶೀತ, ನೆಗಡಿ, ಕೆಮ್ಮಲಿನಿಂದಲೇ ಪ್ರಾರಂಭವಾಗಿ ಅಲಕ್ಷ್ಯ ಮಾಡಿದರೆ ಅದೇ ಅಂತ್ಯದಲ್ಲಿ ಕ್ಷಯರೋಗವಾಗಿ ಪರಿಣಮಿಸುತ್ತದೆಂದು ಎಲ್ಲಾ ಕಡೆಗಳಲ್ಲೂ ತಿಳಿದುಬಂದಿರೋಣದರಿಂದ ಆ ವ್ಯಾಧಿಯನ್ನು ನಿವಾರಣೆ ಮಾಡುವಂಥಾ ಔಷಧವೇ ಕ್ಷಯರೋಗ ಪರಿಹಾರದ ಔಷಧವೆಂದು ಪೂರ್ಣಭರವಸದಿಂದ ನಂಬಬೇಕಾಗಿದೆ.

ಕ್ಷಯರೋಗದ ಪ್ರಾರಂಭದೆಸೆಯನ್ನೂ ಕಠಿಣತರವಾದ ಕೆಮ್ಮುಗಳನ್ನೂ ನಿಂತ ಶೀತ ನೆಗಡಿಗಳನ್ನೂ ಅನುಭವಿಸುತ್ತಿದ್ದ ಸಾವಿರಾರು ರೋಗಿಗಳು ಅವಕ್ಕೆಲ್ಲಾ ಪೆರೂನಾವೇ ಕ್ಷೇಮಕರವಾದ ಮತ್ತು ನಂಬಿಕೆಯಾದ ಪರಿಹಾರವೆಂದು ತಿಳಿಸಿರುತ್ತಾರೆ.

ಮಿಸೆಸ್ ಫ್ರಾನ್ಸೆಸ್ ವಿಲ್ಸನ್, ೩೧೦ ನೆಲ್ಸನ್ ಬೀದಿ, ಕ್ಲೀವ್ಲೆಂಡ್, ವಾಷಿಂಗ್ಟನ್, ಎಂಬುವಳು ಬರೆಯುವುದೇನೆಂದರೆ:—

"ಕಾಯಿಲೆಯನ್ನು ಅನುಭವಿಸುತ್ತಿದ್ದಾಗ ನನ್ನ ಸ್ಥಿತಿಯನ್ನೂ ಈಗ ನಾನಿರುವ ಸ್ಥಿತಿಯನ್ನೂ ನೀವು ನೋಡಿದ ಪಕ್ಷದಲ್ಲಿ ನಾನು ಸಂತೋಷದಿಂದ ಪೆರೂನಾವನ್ನು ಹೊಗಳುವಂಥಾ ಮಾತುಗಳೇನೂ ವಿಶೇಷವಾದದ್ದಲ್ಲವೆಂದು ಯಥಾರ್ಥವಾಗಿ ಒಪ್ಪಿಕೊಳ್ಳುತ್ತೀರಿ.

"ಬಹಳ ಕಠಿಣವಾದ ಶೀತವು ನನಗೆ ಪ್ರಾಪ್ತವಾಗಿ ಅದರಿಂದ ನನ್ನ ಶ್ವಾಸಕೋಶವೂ ಶ್ವಾಸನಾಳಗಳೂ ಕೆಟ್ಟುಹೋಗಿದ್ದುವು.

"ನೀವು ಬುತ್ತಿ ಹೇಳಿದ ಪ್ರಕಾರವೇ ನಾನು ಮಾಡುತ್ತಾ ಬಂದೆನು. ಆರು ಬಾಟ್ಲುಗಳನ್ನು ಪೆರೂನಾವನ್ನು ಸೇವಿಸಿದಮೇಲೆ ನಾನು ಯಥಾಪ್ರಕಾರ ಹಾಸಿಗೆಯಿಂದ ಏಳುವಂತಾದೆನು.

"ಪೆರೂನಾವು ಒಂದು ಅದ್ಭುತವಾದ ಔಷಧವೆಂದು ನಾನು ಯೋಚಿಸಿಕೊಂಡಿರುತ್ತೇನೆ."

ಹೊಸದಾಗಿ ಪ್ರಾಪ್ತವಾದ ಕೃತ್ಯವನ್ನು ಅತಿಜಾಗ್ರತೆಯಾಗಿ ಪರಿಹರಿಸುವುದರಲ್ಲೂ ನಿಂತ ಶೀತ ನೆಗಡಿಗಳನ್ನು ಸ್ವಾಧೀನ ಮಾಡುವುದರಲ್ಲೂ ಪೆರೂನಾವು ಈ ದೇಶದ ಎಲ್ಲಾ ಕಡೆಗಳಲ್ಲೂ ಪ್ರಸಿದ್ಧಿ ಪಡೆದಿರುತ್ತದೆ. ಕ್ಷಯರೋಗಕ್ಕೆ ಪೆರೂನಾ ಔಷಧವು ಬಹು ಬಲವಾದ ಪರಿಹಾರವೆಂದು ಕಂಡುಬಂದಿರುತ್ತದೆ.

ಕ್ಷಯರೋಗ ನಿವಾರಣೆ.

ಮಿ॥ ವಿಲಿಯಂ ಸ್ಟೆಯಿನ್, ೭೦೭೫ ಸ್ಟೈಲ್ಸ್ ಬೀದಿ, ಪಶ್ಚಿಮ ಫಿಲಡೆಲ್ಫಿಯಾ, ಪಾ, ಎಂಬುವನು ಬರೆಯುವುದನ್ನು ನೋಡಿರಿ:—

"ನನಗೆ ಬಂದಿದ್ದ ನೆಗಡಿ ಶೀತವನ್ನು ವಾಸಿಮಾಡಿಕೊಳ್ಳುವುದಕ್ಕೆ ಪೆರೂನಾ ಔಷಧವನ್ನು ಉಪಯೋಗಿಸುವುದಕ್ಕಿಂತ ಮೊದಲು ನನ್ನ ಯೋಚನೆಗೆ ತೋರಿದ ಔಷಧಿಗಳನ್ನೆಲ್ಲಾ ಸೇವನೆ ಮಾಡಿದ್ದೆನು.

"ಬೆಳಿಗ್ಗೆ ಹಾಸಿಗೆಯಿಂದ ಏಳುವಾಗ ನನಗೆ ತುಂಬಾ ನಿತ್ರಾಣವಾಗುತ್ತಿತ್ತು. ನನ್ನ ಶ್ವಾಸಕೋಶಗಳು ಒಣಗಿ ಸುಕ್ಕಾಗಿದ್ದಂತೆ ನನಗೆ ತೋರಿಬರುತ್ತಿತ್ತು. ಅನುಭವಪೂರ್ವಕವಾಗಿ ತಿಳಿಯದೆ ಇರತಕ್ಕವರು ನಾನು ಅನುಭವಿಸಿದ ಕಷ್ಟವನ್ನೆಲ್ಲಾ ತಿಳಿದುಕೊಳ್ಳಲಾರರು. ಅದರ ಪರಿಹಾರಕ್ಕೆ ಯಾರ್ಯಾರು ಏನೇನು ಔಷಧ ಚಿಕಿತ್ಸೆಗಳನ್ನು ಹೇಳಿದರೋ ಅದನ್ನೆಲ್ಲಾ ಮಾಡಿಕೊಂಡೆನು. ಆದರೆ ಯಾವುದೂ ನನಗೆ ಸಂಪೂರ್ಣವಾದ ಗುಣಕೊಡದೆ ಹೋಯಿತು.

"ಪೆರೂನಾ ಔಷಧವನ್ನು ತೆಗೆದುಕೊಳ್ಳಲು ಆರಂಭಿಸಿ ಒಂದು ಬಾಟ್ಲು ಮುಗಿಯುವುದರೊಳಗಾಗಿ ನನಗೆ ತುಂಬಾ ಹುಷಾರಾಯಿತು. ತರುವಾಯ ನನ್ನ ರೋಗವೆಲ್ಲಾ ನಿವಾರಣೆಯಾಗುವತನಕ ಅದನ್ನೇ ಸೇವಿಸಿದೆನು. ಪೆರೂನಾವಿನ ಗುಣವನ್ನು ಇಷ್ಟೆಷ್ಟೆಂದು ಹೊಗಳಿ ಹೇಳಲಾರೆನು. ಅದರ ಯೋಗ್ಯತೆಯನ್ನು ಪ್ರತಿ ಒಬ್ಬರೂ ತಿಳಿದುಕೊಳ್ಳಲೆಂದು ಅಪೇಕ್ಷಿಸುತ್ತೇನೆ."

ನೆಗಡಿ ಕೃತ್ಯ ಕೆಮ್ಮುಗಳನ್ನು ಅನುಭವಿಸುವವರು ಒಂದು ಬಾಟ್ಲು ಪೆರೂನಾ ಔಷಧವನ್ನು ತರಿಸಿಕೊಂಡು, ಉಪಯೋಗವಾದ ಅದರ ಯೋಗ್ಯತೆಯನ್ನು ತಿಳಿದುಕೊಳ್ಳಬೇಕಾಗಿದೆ.

ಈ ಔಷಧ ಸಿಕ್ಕುವ ಸ್ಥಳಗಳು:—

(೧) ಹಿಜ್‌ಕಾಕ್ ಅಂಡ್ ಸನ್ಸ್, ಬೆಂಗಳೂರು.

(೨) ಇಂಗ್ಲಿಷ್ ಡ್ರಗ್ ಕಂಪನಿ, ಕ್ರಾಸ್ ಮಿಂಟ್ ಬೀದಿ, ಮದರಾಸ್.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿ[illegible]

19—7—1907 ರಿಂದ 31—7—1907 ರ ವರೆಗೆ

ಸ್ಥಳ	ಪ್ಲೇಗ್ ಆಗಲಿದ್ದು.	ಪ್ಲೇಗ್ ಸತ್ತದ್ದು.	ಆಗಲಿದ್ದು.	[illegible]
ಬೆಂಗಳೂರು ಪಟ್ಟಣ	6	10	0	[illegible]
ಮೈಸೂರು ,,	23	10	0	[illegible]
ಬೆಂಗಳೂರು ಡಿಸ್ಟ್ರಿಕ್ಟು	09	73	0	[illegible]
ಮೈಸೂರು ,,	69	44	17	[illegible]
ಕೋಲಾರ್ ,,	2	8	2	[illegible]
ಕೋಲಾರ್ ಚಿನ್ನದ ಗಣಿಗಳು	17	8	0	[illegible]
ತುಮಕೂರು ಡಿಸ್ಟ್ರಿಕ್ಟು	0	0	17	[illegible]
ಹಾಸನ ,,	9	7	8	[illegible]
ಚಿತ್ರದುರ್ಗ ,,	0	0	0	[illegible]
ಕಡೂರ್ ,,	18	16	0	[illegible]
ಶಿವಮೊಗ್ಗ ,,	8	11	0	[illegible]
ಜುಮ್ಲಾ	861	181	58	[illegible]

ಶಾಲಿವಾಹನ ಶಕ ವರುಷಂಗಳು ೧೮೩೦ ನೇ ಪ್ಲವಂಗನಾಮ[illegible] ತ್ಸರದ ಆಷಾಢ ಬಹುಳ ಚತುರ್ದಶಿ ಗುರುವಾರದಿಂದ ಶ್ರಾವಣ ಶು[illegible] ಪಂಚಮಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ.

೧೯೦೭ ನೇ ಇಸವಿ ಆಗಸ್ಟು.

ತಾ	ವಾರ		ತಿಥಿ	ಘಳಿಗೆ	ನಕ್ಷತ್ರ.	ಘಳಿಗೆ.	[illegible]
8	ಗುರು	†	ಚತುರ್ದಶಿ	6-5	ಪುಷ್ಯ	12-2	24
9	ಶುಕ್ರ	‡	ಅಮಾವಾಸ್ಯ	11-39	ಶ್ಲೇ	47-37	25
10	ಶನಿ	;;	ಪಾಡ್ಯಮಿ	15-10	ಮ	52-20	26
11	ರವಿ	*	ಬಿದಿಗೆ	17-50	ಪು	55-53	27
12	ಚಂದ್ರ	::	ತದಿಗೆ	19-20	ಉ	55-28	28
13	ಕುಜ	¶	ಚೌತಿ	19-34	ಹಸ್ತ	59-46	29
14	ಬುಧ	,,	ಪಂಚಮಿ	18-40	ಚಿ	59-36	30

† ಸರ್ವತ್ರ ಅಮಾವಾಸ್ಯೆ, ಜ್ಯೋತಿರ್ಮಹೇಶ್ವರವ್ರತ ‡ [illegible] ತ್ಯಯೋಗ, ಭೀಮೇಶ್ವರ ವ್ರತ, ಅಧಿಕಶ್ರಾವಣ, ಕಟಕ ದಂಡ[illegible] ಯೋಗ ;; ಚಂದ್ರೋದಯ, ಶ್ರಾವಣ ಶನಿವಾರ * ತೃತೀಯಾ [illegible] ಜವಾದಿನಾವಿ ಚಂ ೧. :: ಚತುರ್ಥಿ ತಿಥಿ. ¶ ನಾಗರಚತುರ್ಥಿ [illegible] ಮಂಗಳಗೌರೀವ್ರತ, ಪಂಚಮೀತಿಥಿ ,, ಗರುಡಪಂಚಮಿ

ಪೇಟೇ ಧಾರಣೆ.

ದಿನಸಿ.		ಮೈಸೂರು.	ಬೆಂಗಳೂರು.
ಕಪ್ಪೇ ಅಕ್ಕಿ ಪಲ್ಲ ೧ಕ್ಕೆ	ರೂ	೧೩-೦-೦	೧೩.[illegible]
ಕೆಂಬೂತಿ ಅಕ್ಕಿ ಅವಲ್ ..		೧೩-೮-೦	೧೩-[illegible]
,, ಗುಂಡು		೧೨-೮-೦	೧೨.[illegible]
ಜಿಬ್ರಾಣ ಅಕ್ಕಿ ..		೧೨-೮-೦	೧೩.[illegible]
ಸಣ್ಣಕ್ಕಿ ಅವಲ್ ..		೧೬-೦-೦	೧೫.[illegible]
,, ಗುಂಡು ..		೧೪-೮-೦	೧೪.[illegible]
ತೊಗರಿ ಬೇಳೆ ಪಲ್ಲ ೧ಕ್ಕೆ		೧೩-೮-೦	೧೪.[illegible]
,, ದುಂಡು		೧೨-೧೨-೦	೧೩-[illegible]
ಸ್ವಿರ ರಾಗಿ ಪಲ್ಲ ೧ಕ್ಕೆ .		೬-೮-೦	೬.೦[illegible]
ಕಾರ್ರಾಗಿ ..		೫-೮-೦	೬.[illegible]
ಜೋಳ ..		೭-೮-೦	೯.[illegible]
ಹಲಸಂದೆ ಪಲ್ಲ ೧ಕ್ಕೆ .		೧೧-೦-೦	೧೦.೦[illegible]
ಬಿಳೀ ಅವರೆ		೯-೩-೦	೮.[illegible]
ಹೆಸರು .		೧೧-೦-೦	೧೧-[illegible]
ಉದ್ದು ..		೧೧-೦-೦	೧೦.[illegible]
ಕಡಲೆ ..		೦-೧೦-೦	೧೧.[illegible]
ಎಳ್ಳು ಸ. ೧೨೩ ಕ್ಕೆ .		೧೯-೦-೦	೨೩-[illegible]
ಹುರುಳಿ ..		೬-೮-೦	೬.೮[illegible]
ಹರಳು ೧೨೩ ಸೇರಿಗೆ ..		೧೪-೦-೦	೧೨.[illegible]
ಸೀಗೇಕಾಯಿ ಮಣ ೧ಕ್ಕೆ ..		೨-೦-೦	೨.[illegible]
ಮೆಣಸಿನಕಾಯಿ ..		೨-೧೨-೦	೨-೦[illegible]
,, ದುಂಡು ..		೨-೮-೦	[illegible]
ಬೆಲ್ಲ ದೊಡ್ಡ ಅಚ್ಚು ..		೩-೮-೦ ಮ	[illegible]
ಒಳ್ಳೆಣ್ಣೆ ಮಣ ೧ಕ್ಕೆ ..		೫-೩-೦	೫-[illegible]
ಹರಳೆಣ್ಣೆ ,, ..		೫-೧೨-೦	೫-[illegible]
ಕೊತ್ತುಂಬರಿ ಪಲ್ಲ ೧ಕ್ಕೆ ..		೬-೨-೦	೮-[illegible]
ಉಪ್ಪು ,, ..		೫-೧-೦	೫-೦[illegible]
ಮೆಣಸೇ ದಪ್ಪ ..		೧ ೬-೦	[illegible]
,, ಹಳೇದು ..		೦-೧೪-೦	[illegible]
ತುಪ್ಪ ಮಣ ೧ಕ್ಕೆ ..		೧೫-೦-೦	[illegible]
ಸೀಮೆಯೆಂಣೆ ಪೆಟ್ಟಿ ೧ಕ್ಕೆ ..		೫-೦-೦	[illegible]
ತೆಂಗಿನಕಾಯಿ ೧೦೦ ಕ್ಕೆ ..		೬-೮-೦	[illegible]
ಅಡಕೆಕಾಯಿ ಮಣ ೧ಕ್ಕೆ ..		೧-೦-೦	[illegible]
ಅಂಟ್ವಾಳದ ಕಾಯಿ ಮಣ ೧ಕ್ಕೆ ..		೬-೧೨-೦	[illegible]
ಚಿನ್ನ (ಪೌಂ) ಕೆಂಪು ..		೧೫-೪-೦	೧೫-[illegible]
,, ,, ಪಸುಮೆ ..		೧೫-೧೦-೦	೧೫-[illegible]
,, ,, ಗಟ್ಟಿ ತೊಲ ೧ಕ್ಕೆ ..		೨೩-೧೨-೦	೨೪-[illegible]
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ ..		೮೫-೦-೦	೮[illegible]

Printed and Published by the Rev. E. Thompson, M. A., Proprietor and Manager, Wesleyan Mission Press, Mysore. 8/8/1907.

REGISTERED
M 20

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು. ಕ್ರಯ ೧ ದುಡ್ಡು

ಸಂಪುಟ ೨೧ ಮೈಸೂರು—ಸರ್ ೧೯೦೭ ನೇ ಇಸವಿ ಆಗಸ್ಟ್ ತಾರೀಖು ೧೫ ನೇ ಗುರುವಾರ. ಸಂಚಿಕೆ ೧೧

BASEL MISSION WEAVING ESTABLISHMENT,

59-5

MANGALORE, SUOTH CANARA.

ದಕ್ಷಿಣ ಕನ್ನಡ ಜಿಲ್ಲಾ ಮಂಗಳೂರು ಬಾಸೆಲ್ ಮಿಶ್ಯನ್ (ಖ್ಯಾತ) ನೆಯ್ಗೆಯ ಕಾರಖಾನೆಯಲ್ಲಿ

ನಾನಾ ವಿಧದ (ಮಿಶ್ರ) ಟ್ವೀಡ್ ನಮೂನೆಯ ಕೋಟು ಹಾಕುವುದಕ್ಕೆ ಚಿಕ್ಕ ಬಟ್ಟೆಗಳು, ಷರ್ಟಿಂಗ್ ಎಂಬ ಅಂಗಿ ಬಟ್ಟೆಗಳು, ಕರ್ಟನ್ ಎಂಬ ತೆರೆ ಬಟ್ಟೆಗಳು, ಬೇರೆ ಇತರ ಬಟ್ಟೆಗಳು, ಟೇಬಲ್ ಕ್ಲೋತ್ ಎಂಬ ಮೇಜುವಸ್ತ್ರಗಳು, ಟುವಾಲು ವಗೈರೆಗಳು ಸಹ ಮಾರಾಟಕ್ಕಾಗಿ ತಯಾರಿಸಲ್ಪಟ್ಟು ಯಾವಾಗಲೂ ಬಹಳ ದಾಸ್ತಾನು ಇರುತ್ತವೆ ಅವುಗಳ ವಾರಾ ಟಿಕೆಟ್ ಇರುತ್ತವೆ

ವಿಶೇಷ ಲಕ್ಷ್ಯವಿಡತಕ್ಕದ್ದು:— ಈ ನ... ವಸ್ತ್ರಗಳಲ್ಲಿ ಹಾಕಿರುವ "ಟ್ರೇಡ್ ಮಾರ್ಕ್" ಎಂಬ ... ಗುರುತಿನ ಲೇಬಲ್ ಎಂಬ ಚೀಟು ಅಂಟಿಸಿರುತ್ತದೆ ಈ ಗುರುತಿನ ಚೀಟುಗಳು ಇಲ್ಲದವುಗಳೆಲ್ಲಾ ತಾಜಾ ಮಿಶ್ರ ವಸ್ತ್ರಗಳಲ್ಲವೆಂದು ತಿಳಿಯತಕ್ಕದ್ದು

TRADE MARK

ಒಳ್ಳೇ ಕಮಿಷನ್:— ರೂಪಾಯಿ ೧೦೦ ರ ಮೇಲೆ ವಸ್ತ್ರಗಳನ್ನು ತೆಗೆದುಕೊಳ್ಳುವ ಗಿರಾಕಿಗಳಿಗೆ ಯಥಾ ಸಾಹುಕಾರರಿಗೆ ಕೊಡಲಾಗುವ ಕಮಿಷನ ವಿವರ ಬೇಕಾದರೆ ನಮ್ಮ ಕಾಗದ ಮೂಲಕ ತಿಳಕೊಳ್ಳಬಹುದು.

ನಮೂನೆ ಯಾ ಮಾದರಿಗಳು :— ಬರೂವ ಸಾಹುಕಾರರು ಈ ಕೆಳಗಿನ ವಿಳಾಸಕ್ಕೆ ಬರೆದು ಕೇಳಿದಲ್ಲಿ ಕಳುಹಿಸಲ್ಪಡುವವು

ಶರ್ತ:— ನಗದಾಗಿ ಇಲ್ಲವೆ ವಸ್ತ್ರಗಳು ವಿ. ಪಿ. ಟಪ್ಪಾಲು ಮೂಲಕ ಕಳುಹಿಸಲ್ಪಡುವುದು ... ರವಾನಿಸತಕ್ಕದ್ದು

ಪತ್ರಗಳನ್ನು ಇಂಗ್ಲೀಷಿನಲ್ಲಿ ಯಾ ಕನ್ನಡದಲ್ಲಿ ಸ್ಪಷ್ಟವಾಗಿ ಬರೆಯತಕ್ಕದ್ದು.—

☞ ಈ 'ಟ್ರೇಡ್ ಮಾರ್ಕ'ನ್ನಾಗಲೀ ನಾವು "ಕೋಪಿರೈಟ" ಪಡೆದಿರುವ ಲೇಬಲುಗಳನ್ನಾಗಲೀ ಇಲ್ಲವೆ ಆ ನಮೂನೆಯ ಬೇರೆ ಲೇಬಲುಗಳನ್ನಾಗಲೀ ಯಾರಾದರೂ ಇತರ ವಸ್ತ್ರಗಳ ಮೇಲೆ ಪ್ರಯೋಗಿಸಲೂ ಮಾಡಲೂ ಕೂಡದು

ವಿಳಾಸ —BASEL MISSION WEAVING ESTABLISHMENT,
MANGALORE S CANARA

WILLIAM & CO., BOMBAY.

ವಿಲಿಯಂ ಮತ್ತು ಕಂಪನಿ, ಫೋರ್ಟು, ಮುಂಬಯಿ.

ಗಜಕರ್ಣದ ಮುಲಾಮು.

27 21

ಇದನ್ನು ಹಾಗಿಸುವದರಿಂದ ಎಲ್ಲಾ ತರ ... ನಾಶವಾಗುವದು. ಮೂರು ಸಾರಿ ಹಾಗಿಸುವದರೊಳಗೆ ಗಜಕರ್ಣವು ಹೋಗುವದು. ಇದನ್ನು ಹಚ್ಚಿದಲ್ಲಿ ಉರಿಯು ಏರುವದಿಲ್ಲ ಚರ್ಮ ಕಪ್ಪಾಗುವದಿಲ್ಲ.

ಇದರಿಂದ ಗುಣ ಕಂಡುಬರುವದಿಲ್ಲವಾದರೆ ಹಣ ಹಿಂತಿರುಗಿ ಕೊಡಲ್ಪಡುವದು. ತ್ವರೆಮಾಡಿರಿ! ಕೊಂಡುಕೊಳ್ಳಿರಿ!! ಕ್ರಯ ಕಮ್ಮಿ. ಒಂದು ಸಾರಿ ಪರೀಕ್ಷಿಸಿ ನೋಡಿರಿ" ಡಬ್ಬಿ ೧ಕ್ಕೆ ಕಿಮ್ಮತ್ತು ೦-೬-೦. ವಿ. ಪಿ. ೦-೧೦-೦.

SAFE EFFICACIOUS SURE · WILLIAM & Co · BOMBAY · OINTMENTS · POWDERS · PILLS

[illegible]

ಅಮೃತಾಂಜನ

[illegible]

ಬಾಟ್ಲಿ ಒಂದಕ್ಕೆ ಕಿಮ್ಮತು ೮ ಆಣೆ. ವಿ. ಪಿ. ೧೨ ಆಣೆ.

[illegible] ... ಅಮೃತಾಂಜನವು ಒಂದು ದಿವ್ಯವಾದ ಔಷಧವಾಗಿರುತ್ತದೆ. ... ಅಮೃತಾಂಜನವನ್ನು ... ಅಮೃತಾಂಜನ ... ಅಮೃತಾಂಜನವು ... ಅಮೃತಾಂಜನವು ... ಅಮೃತಾಂಜನವನ್ನು ... ಅಮೃತಾಂಜನವು ... [illegible]

ವಿಲಿಯಂ ಮತ್ತು ಕಂಪನಿ, ೧೬ ಓಕ್ ಲೇನ್, ಫೋರ್ಟು, ಮುಂಬಯಿ.
ಟೆಲಿಗ್ರಾಫು ವಿಳಾಸ; "ಅಮೃತಾಂಜನ" ಮುಂಬಯಿ.

ನಿಮಗೆ ನೋವು ಇದೆಯೋ?

58 12

... "ಕ್ಲೆಮೆಂಟ್ ಯವರ ಪ್ಯಾಲೆಕ್ ಬಾಂ" ನ್ನು ಏಕೆ ಉಪಯೋಗಿಸಬಾರದು? ಆಶ್ಚರ್ಯಕರವಾದ ... ಈ ಶತಮಾನದಲ್ಲಿ ಕಂಡು ಹಿಡಿದ ದೊಡ್ಡ ... ಈ ದಿವ್ಯ ಔಷಧವನ್ನು ಮೊಟ್ಟಮೊದಲು ತೊಡೆಯುತ್ತಲೆ ಕೆಲವು ನಿಮಿಷಗಳೊಳಗಾಗಿ ನರ ಮತ್ತು ಮಾಂಸ ಸಂಬಂಧವಾದ ... ನೋವು, ಕೀಲುಗಳ ಬಾವು, ಕಿಬ್ಬೊಟ್ಟೆ ನೋವು, ಬೆನ್ನು ... ತಲೆನೋವು, ಕೆಮ್ಮು, ಕೀಲುಗಳು ಕಟ್ಟಿದ ಹಾಗಿರುವದು, ಕೊರಳು ... ಕೈಕಾಲು ಒಡೆತ ಇವುಗಳನ್ನೆಲ್ಲಾ ಮಂತ್ರಶಕ್ತಿಯಂತೆ ಗುಣಪಡಿಸುವದು. ಈ ಔಷಧವು ಆಶ್ಚರ್ಯಕರವಾಗಿ ಗುಣಪಡಿಸುವದರಿಂದ ಎಲ್ಲರಲ್ಲಿಯೂ ಪ್ರಸರಿಸುತ್ತಾ ಬರುವದು ಇತರ ಔಷಧಿಗಳು ಗುಣಪಡಿಸದೆ ಹೋದಾಗ ಡಾಕ್ಟರ್ ಫೀಜನ್ನು ಕಡಿಮೆಮಾಡಿ ಇದು ನಿಸ್ಸಂದೇಹವಾಗಿಯೂ ಗುಣಪಡಿಸುವದು.

ಕ್ರಯ —೧ ಬಾಟ್ಲಿಗೆ ... ಆಣೆ, ಪೋಸ್ಟೇಜ್ ೪ ಆಣೆ ಬಾಟ್ಲಿಗೆ ಅಂಚೆವೆಚ್ಚ ಸೇರಿ ರೂ ... ಆಣೆ. ಎಲ್ಲಾ ಕೆಮಿಸ್ಟ ಷಾಪುಗಳಲ್ಲಿ ದೊರೆಯುವದು

ನಮ್ಮ ವಿಳಾಸ:—ಎಫ್. ಡಬ್ಲಿಯು. ಆರಕ್,
ಸಿಮೆಟ್ರಿ ರೋಡ್, ವೇಪೇರಿ, ಮದರಾಸ್

ಜ್ವರಹರಿ

7 3



ಇದು ಸಾಧಾರಣ ಜ್ವರ, ಚಳೀಜ್ವರ, ಮಲೇರಿಯಜ್ವರ, ... ಶೀತಜ್ವರ, ವಾತಜ್ವರ, ... ಇವುಗಳನ್ನು ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ... ವೆಂಕಟಪತಿ ... ಕಳುಹಿಸಿಕೊಟ್ಟ ... ಸೀಸೆಯು ... ಜ್ವರ ... ಅಮೃತ ... ಗುಣ ಹೊಂದಿರುವರು. ... ಸೀಸೆಯನ್ನು ವಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿರುವರು

ಕ್ರಯ.—ಸೀಸೆ ೧ಕ್ಕೆ ೮ ಆಣೆ, ೧ ರೂ., ... ೧೧ ರೂ., ಹನ್ನೆರಡು ಸೀಸೆ ತರಿಸಿಕೊಂಡರೆ ... ವಿ. ಪಿ. ಖರ್ಚು ಬೀಳಲಾಗುವದು.

ಓಮುಂ ಕರ್ಪೂರ.

Omum Carpoor

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಶೂಲೆ ... ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು— ... ಮಹೌಷಧವಾಗಿ ಪರಿಣಮಿಸಿ, ... ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ... ಔಷಧವೆಂತಲೇ ಸೀಸೆಗಳಲ್ಲಿ ... ಕೊಡುವದು.

ಕಡಪದ ಅಸಿಸ್ಟೆಂಟ್ ಸರ್ಜನ ... ಓಮುಂ ಕರ್ಪೂರವನ್ನು ... ಆಸ್ಪತ್ರೆಯಲ್ಲಿ ಅನೇಕ ... ಅಜೀರ್ಣ ... ಅಜೀರ್ಣ ರೋಗಿಗಳಿಗೆ ಕೊಡುತ್ತೇನೆ. ಹೊಟ್ಟೆ ... ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂತ ಬರೆದಿರುವರು

ಈ ಪಾಲ್ಕು ಔಷಧಗಳೂ ... ವೈದ್ಯಶಾಲೆಗಳಲ್ಲೂ, ದೊಡ್ಡ ದಾಕಾನುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇಲ್ಲದೆ ಕೆಳಗಿನ ವಿಳಾಸದಲ್ಲಿ ವಿಚಾರ:—
[illegible]
[illegible]

ಇಗೋ! ನೋಡಿರಿ ಎಲ್ಲರೂ ಓದತಕ್ಕ ಅಶ್ಚರ್ಯ ಕರವಾದ ಪುಸ್ತಕ!

"ಅರೇಬಿಯನ್ ನೈಟ್ಸ್" ಅಥವಾ ಯವನ ಯಾಮಿನೀ ವಿನೋದ ಕಥೆಗಳು.

71-4

ಈ ಪುಸ್ತಕವು ಲೋಕಪ್ರಸಿದ್ಧವಾದುದೆಂದು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ನಾನೂರು ಎಪ್ಪತ್ತು ಪುಟಗಳುಳ್ಳದ್ದು. ಭಾರಿ ಪುಸ್ತಕ. ಭಾಷೆಯು ಬಹು ಸರಳವಾಗಿದೆ ಪುಸ್ತಕವನ್ನು ಒಂದಾವರ್ತಿ ಓದಿದ ಮೇಲೆ ಅದನ್ನು ಪುನಃ ಪುನಃ ಓದುವಂತೆ ಅದು ಮನಸ್ಸನ್ನು ಆಕರ್ಷಿಸುವುದು. ಇದರ ಕ್ರಯ ಎರಡೇ ರೂಪಾಯಿ. ವಿ. ಪಿ. ಮೂಲಕ ೨-೩-೦. ಹತ್ತು ಅಥವಾ ಹದಿನೈದು ವರ್ಷಗಳ ಹಿಂದೆ ಇದರ ಕ್ರಯ ಎಂಟು ರೂಪಾಯಿ ಎಂದು ಅನೇಕರಿಗೆ ಗೊತ್ತು. ಇದನ್ನು ಬಹಳ ವರ್ಷ, ಪ್ರಯತ್ನವಂತರೂ ಓದುವಂತೆ ಪುನಃ ಛಾಪಿಸಿ ಇಷ್ಟು ದೊಡ್ಡ ಪುಸ್ತಕವನ್ನು ಇಷ್ಟು ಸುಲಭ ಕ್ರಯಕ್ಕೆ ಮಾರುತ್ತೇವೆ. ಹನ್ನೆರಡು ಪುಸ್ತಕಗಳನ್ನು ಒಟ್ಟಿಗೆ ಖರೀದಿಕೊಂಡರೆ, ಪುಸ್ತಕಕ್ಕೆ ಎರಡು ಆಣೆ ಕಮಿಷನ್ ಕೊಡುತ್ತೇವೆ. ಜಾಗ್ರತೆ ನೋಡಿ.

ವಿಳಾಸ:—ಮ್ಯಾನೇಜರ್,
ಸಿ. ಎಲ್. ಎಸ್. ಬುಕ್ ಡಿಪೋ,
ಮೈಸೂರು.

CHAMBERLAIN'S PAIN BALM
ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವು



4-7

ಚೆನ್ನ ಬಳಿಸಲ್ಪಿನ ನೋವು ಖಕ್ಕೆಗಳಲ್ಲಿ ಆಗುವ ನೋವು, ಖಂಡಗಳಲ್ಲಿ ಹುಟ್ಟುವ ನೋವು, ತಲೆನೋವು, ಬಜ್ಜಾದ ಕಡೆಗಳ ನೋವು, ವಾಯುನೋವು—ಇವುಗಳನ್ನೆಲ್ಲಾ ಸಂಪೂರ್ಣವಾಗಿ ವಾಸಿಮಾಡುವಂಥಾ ಔಷಧ.

ವಾಯುನೋವೆಂದರೇನು?

ಕೀಲುಗಳಲ್ಲೂ ಮಣಿಕಟ್ಟುಗಳಲ್ಲಿ ಗಾಯವಾಗುವುದು, ಊದಿಕೊಳ್ಳುವುದು, ಕಠಿಣವಾಗಿ ಕೆಳೆಯುವ ಖಂಡಗಳಲ್ಲಿ ಸೆಳೆಯುವುದು, ವಿಶ್ರಾಂತಿಕೊಡದೆ ಇರುವುದು, ನಿದ್ದೆ ಹತ್ತದೆ ಇರುವುದು—ಇವೇ ಇವೆಲ್ಲಾ ವಿಪರೀತವಾಗಿ ಉಂಟಾಗುವುದೋ ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು.

ಆಗ ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹಾ ಕಾವು ಮೈಮೇಲೆಲ್ಲಾ ವ್ಯಾಪಿಸುತ್ತದೆ. ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ. ಮನುಷ್ಯನಿಗೆ ಉಲ್ಲಾಸವಾಗುತ್ತದೆ. ಆದಷ್ಟೇ ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯುವಿನ ಹುಟ್ಟನ್ನೇ ಕಿತ್ತು ಹಾಕಿಬಿಡುವುದು.

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ.

ಇದು ಎಲ್ಲೆಲ್ಲೂ ಬಿಕರಿಯಾಗುವುದು. | ಸಣ್ಣ ಸೀಸೆಗೆ ೧ ರೂಪಾಯಿ | ಕೈಯಿಂದ ಮುಟ್ಟಿದ್ದೇನೂ ಅಲ್ಲ. ದೊಡ್ಡ ಸೀಸೆಗೆ ೨ ರೂಪಾಯಿ.

ಬಾಳ್ಯದ ವೆಂಕಟಾಚಲ ಪಂಡಿತ, ಶ್ರೀಸೀತಾರಾಘವ ವೈದ್ಯಶಾಲಾ, ಕೊಳ್ಳೇಗಾಲ, ಇವರ ಸಿದ್ಧೌಷಧಗಳು.

26-26

೧ ಲೋಕಾಮಯಹರ ಕಸ್ತೂರೀ ಮಾತ್ರೆ.—ಈ ಮಾತ್ರೆಗಳನ್ನು ಪವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಶ್ರೇಷ್ಠವಾದ ಪದಾರ್ಥಗಳ ವಿಶೇಷದಿಂದ ತಯಾರಿಸಿದೆ.



ಚಳಿಜ್ವರ, ಜ್ವರ, ಕೊಟ್ಟೆಬೇನೆ, ಗಂಟುಗಳ ನೋವು, ಮೈ ಪ್ರಸವಕಾಲದ ವಾತ (ಜ್ವರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿಮಾಂದ್ಯ, ಕಲ್ಪು ನೋವು, ಕೆಮ್ಮು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕರೋಗಗಳಿಗೆ ಕೊಟ್ಟರೆ ಬಹು ಬೇಗ ಗುಣಪಡಿಸುತ್ತದೆ.

ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತೆ. ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಬಾಧೆಯೂ ಬಾರದಂತೆ ಮಾಡುತ್ತದೆ, ನೀರು ಇವುಗಳ ವಿಕಾರವನ್ನು ಪರಿಹರಿಸಿ, ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ.

ಸ್ತ್ರೀಯರ ಋತುದೋಷ, ಸೂತಕ ಜ್ವರ, ಸನ್ನಿಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ.

ಇದನ್ನು ಸೇವಿಸುತ್ತಿರುವವರು ಜೀವಿತವಾಗಿಯೂ ಸ್ತ್ರೀಗಿನ ರೋಗಕ್ಕೆ ಗುರಿಯಾಗುವುದಿಲ್ಲ. ಒಟ್ಟಿನ ಆರೋಗ್ಯಾರ್ಥಕವಾಗಿದೆ.

೨೦ ಮಾತ್ರೆಯುಳ್ಳ ಡಬ್ಬಿಗೆ ೮ ಆಣೆ, ೫ ಡಬ್ಬಿಗೆ ೧ ಡಬ್ಬಿ ಹೆಚ್ಚು. ೧ ರಿಂದ ೧೨ ಡಬ್ಬಿ ವರೆಗೆ ಪೋಸ್ಟೇಜು ೪ ಆಣೆ.

ವಿಳಾಸ:—ಎಸ್. ಎಸ್. ಆರ್. ವೈದ್ಯಶಾಲಾ, ಲಕ್ಷ್ಮೀವಿಲಾಸ ರೋಡ್, ಮೈಸೂರು.

೧೮೯೭ ರಿಂದ ೧೯೦೧ ವರೆಗೆ.

ಕಾಲದ ಪರೀಕ್ಷೆ!

ಮೂವತ್ತೇಳು ವರ್ಷಗಳಿಗಿಂತಲೂ ಹೆಚ್ಚಾಗಿ

SCOTT'S EMULSION
31-22

(ಸ್ಕಾಟ್ಸ್ ಇಮಲ್‌ಷನ್)

ಎಲ್ಲಾ ಸೇವನಾ ಔಷಧಿಯನ್ನು ಘನ ಪಂಡಿತರೆಲ್ಲಾ ಅನೇಕ ವೇಳೆ ಪರೀಕ್ಷಿಸಿ ನೋಡಿ ಸರ್ವೋತ್ತಮವಾದದ್ದೆಂದು ಶ್ಲಾಘಿಸಿದ್ದಾರೆ.

ಆದದರಿಂದ ಮುಂದಿನ ರೋಗಗಳಿಗೆ ಪ್ರಪಂಚದಲ್ಲೆಲ್ಲಾ ಈ ಔಷಧವು ಸರ್ವ ಶ್ರೇಷ್ಠವಾದದ್ದಾಗಿ ಪರಿಣಮಿಸಿದೆ:—

ಶ್ವಾಸಕೋಶದ ಆಪತ್ತುಗಳು, ನಾನಾ ತರದ ಕೆಮ್ಮುಗಳು, ಸಕಲವಿಧ ಕೃಶತ್ವಗಳು, ಮಾಂಸಖಂಡಗಳ ಕ್ಷೀಣತೆ, ಆಹಾರದಲ್ಲಿ ಅರುಚಿ.

ಇದಲ್ಲದೆ ದಂಡೆಯ ಮಕ್ಕಳಿಗೂ ಬಿಲ್ಕಾರಿಯಾದ ಮತ್ತು ಅಂಗ ಬೆಳೆಸುವ ಸೇವನಾ ಔಷಧವೂ ಇದೇ.

ಕೈಸೋಕದೆ ತಯಾರಾದದ್ದು.

ಔಷಧಗಳ ಅಂಗಡಿಗಳಲ್ಲೆಲ್ಲಾ ಬಿಕರಿಯಾಗುವುದು.

ಸ್ಕಾಟ್ ಅಂಡ್ ಬೋನ್, ಲಿಮಿಟೆಡ್, ಔಷಧಗಳ ಕಾರ್ಖಾನೆ, ಲಂಡನ್, ಇಂಗ್ಲೆಂಡ್.

ಈ ಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ.

ವ್ಯವಹಾರ ನಿರ್ಣಯ

ಎಂಬ ಕನ್ನಡ **ಲಾ** ಪುಸ್ತಕವು.

59-4

ಲಾ ತಿಳಿದವರಿಂದಲೂ, ತಿಳಿಯದವರಿಂದಲೂ ಇದುವರೆಗೆ ಬರೆಯಲ್ಪಟ್ಟಿರುವ ಈ ತರದ ಪುಸ್ತಕಗಳನ್ನೆಲ್ಲ ನೋಡಿ ಅವೆಲ್ಲಕ್ಕಿಂತಲೂ ಹೆಚ್ಚು ಪ್ರಯೋಜನವನ್ನು ಇನ್ನೊಂದು ಪುಸ್ತಕವೆಂದುಂಟುಮಾಡದೇ ಇರುವಂತೆ ಈ ದೊಡ್ಡ ಗ್ರಂಥವು ಕನ್ನಡದಲ್ಲಿ ಬರೆಯಲ್ಪಟ್ಟಿದೆ. ಇದರಲ್ಲಿ ಅಕ್ರಮಗಳು, ೭ ಶಾಸನಗಳು, ಹಿಂದೂ, ಮಹಮ್ಮದೀಯ ಲಾಗಳು, ಛೀಫ್ ಕೋರ್ಟಿನ ಹೈಕೋರ್ಟಿಗಳ ಡಿಸಿಷನ್‌ಗಳು, ಗಿರವಿ ಕರಾರುಗಳು, ಪೌತಿ ಹಿಡಿಗಳು, ಸಕಲ ವಿಧ ವ್ಯವಹಾರಗಳು, ಕ್ರಯ ಆಧಾರ ದಾನ ವಿಲ್ಲು ಮೊದಲಾದ, ೩೯ ತರದ ದಸ್ತಾವೇಜುಗಳ ನಕಲುಗಳು, ಈ ಸಂಬಂಧದ ಲಾ ವಿಧಿಗಳು, ಸಿವಿಲ್ ಕ್ರಿಮಿನಲ್ ಪೊಲೀಸ್, ರೆವಿನ್ಯೂ ಸಂಬಂಧದ ವ್ಯವಹಾರಗಳು, ೨೯ ತರದ ಅರ್ಜಿಗಳು ಈ ಸಂಬಂಧದ ಲಾ ವಿಧಿಗಳು, ಇವೆಲ್ಲವೂ ಅಡಕವಾಗಿವೆ.

ಪುಸ್ತಕ ದೊಡ್ಡದು ಪುಟಗಳು ಒಟ್ಟು ೬೩೭.		ಬೆಲೆ ಕಡಿಮೆ. ಅಂಚೆ ಕೂಲಿ ಸೇರಿ ರೂ ೦—೮—೦	
ಗ್ರಂಥಕರ್ತರು.	ಎಂ. ಪಾಲ್ ರಾವ್ಸ್ವರ್, ೧ನೆ ಗ್ರೇಡ್ ಪ್ಲೀಡರ್, ಶ್ರೀರಾಮಪೇಟೆ, ಮೈಸೂರು.		ಇದೇ ವಿಳಾಸ.

ತರಿಸಿಕೊಳ್ಳಿ! ಬೇಗ ತರಿಸಿಕೊಳ್ಳಿ!! ಇದೇ ಒಳ್ಳೆ ಸಮಯ!!!

60-2

ತಡಮಾಡಿದರೆ ಪ್ರತಿಗಳು ಮುಗಿದುಹೋದಾವು.

ನೇತ್ರಾನಂದಕರಗಳಾದ ಚಿತ್ರಗಳಿಂದಲೂ, ನೀತಿಪ್ರಧಾನವಾದ ವಿಷಯಗಳಿಂದಲೂ ರಂಜಿಸುವದಲ್ಲದೆ, ಸಕಲ ಜನಗಳೂ ಪಡೆಯುತಕ್ಕಷ್ಟು ಸುಲಭವಾದ ಕ್ರಯಕ್ಕೆ ಸಿಕ್ಕುವವುಗಳಾಗಿಯೂ ಇವೆ. ಇವುಗಳು ಯಾವುವೆಂದರೆ.—

	ಕ್ರಯ.
ಎಡ್ವರ್ಡ್ ಚಕ್ರವರ್ತಿಯವರ ಮತ್ತು ಅಲೆಕ್ಸಾಂಡ್ರಾ ಚಕ್ರವರ್ತಿನಿಯವರ ಚರಿತ್ರೆ . .	೦—೬—೦
ಎಡ್ವರ್ಡ್ ಸಾರ್ವಭೌಮರ ಪಟ್ಟಾಭಿಷೇಕ . .	೦—೪—೨
ಘನತೆಯುಳ್ಳ ಸ್ತ್ರೀಯರ ಚರಿತ್ರೆ . .	೦—೪—೨
ದಕ್ಷಿಣ ಆಫ್ರಿಕವೂ ಅದರ ನಿವಾಸಿಗಳೂ .	೦—೪—೨
ಚೀನಾ ಚಕ್ರಾಧಿಪತ್ಯವೂ ಅದರ ನಿವಾಸಿಗಳೂ .	೦—೬—೨
ಬರ್ಮಾ ದೇಶವೂ ಬರ್ಮೀಯರೂ . .	೦—೪—೦
ಪುರಾತನ ಗ್ರೀಕರ ಕಥೆಗಳು . .	೦—೨—೦
ಪುರಾತನ ರೋಮನರ ಕಥೆಗಳು . .	೦—೨—೦
ಪಕ್ಷಿಗಳ ಚಿತ್ರಗಳೂ ಕಥೆಗಳೂ . .	೦—೨—೦
ಕ್ರಿಮಿವರ್ಗ ವರ್ಣನೆ . .	೦—೧—೦
ದೇವರೆಂಬ ಚಿತ್ರಕಾರನು ನನ್ನ ಮುಂದೆ .	೦—೧—೦
ಚಿಕ್ಕವರಿಗೆ ಹೇಳುವ ಕಥೆಗಳು . .	೦—೧—೦
ಪುರಾತನ ಕಾಲದ ವಿಲಕ್ಷಣ ಜೀವರಾಶಿಗಳ ವರ್ಣನೆ	೦—೦—೬
ಜಗತ್ತಿಗೆ ಗಾಡಿಗಳನ್ನು ಕಲ್ಪಿಸಿದ ಜಾರ್ಜ್ ಸ್ಟೀವನ್ಸನ್ ರವರ ಚರಿತ್ರೆ . .	೦—೦—೬

"ಹಿಂದೂ ದೇಶ ಪ್ರದಕ್ಷಿಣೆ" ಎಂಬ ಹೆಸರುಳ್ಳ ಈ ನೂತನ ಪುಸ್ತಕದಲ್ಲಿ ಸುಮಾರು ಮೂವತ್ತು ಉತ್ಕೃಷ್ಟವಾದ ಚಿತ್ರಗಳು ಅಡಗಿವೆ. ಹಿಂದೂ ದೇಶವನ್ನೆಲ್ಲಾ ಸಂಚಾರ ಮಾಡುವದರಿಂದ ಉಂಟಾಗುವ ಪರಮಾನಂದವನ್ನು ಒಂದು ಸಾರಿ ಈ ಗ್ರಂಥವನ್ನು ಓದುವದರಿಂದ ಹೊಂದಬಹುದು. ಇದು ಮೊದಲನೇ ಸಾರಿ ಪ್ರಿಂಟ್ ಆಗಿದ್ದು ಬಹು ಶೀಘ್ರವಾಗಿ ಎಲ್ಲಾ ಮಾರಿಹೋಯಿತು. ಈಗ ತಿರಿಗಿ ವಿಚಿತ್ರವಾಗಿಯೂ ಉಲ್ಲಾಸಕರವಾಗಿಯೂ ಇರುವ ಸ್ಪಷ್ಟವಾದ ಚಿತ್ರಗಳೊಡನೆ ಮಾಡಿಸಿದ್ದೇವೆ.

ಕ್ರಯ ೦—೮—೦ (ವಿ. ಪಿ. ಮೂಲಕ ೦—೧೦—೦)

ವಿಳಾಸ:—ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

75-3

ಒಳ್ಳೇ ಟೋಪಿಗಳು ಯಾವುವು? ಯಾಕೆ? ಸಂದೇಹವೇನು? ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಸರಬರಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳು ದಾರವೆಲ್ಲಾ ಬೇರೆಯದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯಿತಿಯಿಂದಲೇ ಬರುವದು. (೨) ಟೋಪಿಗಳನ್ನು ಒಡ್ಡಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹುತ್ತೇವೆ.

ಒಳ್ಳೆದಾದ, ಚನ್ನಾಗಿ ಹಸಿದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ನೇರ ಬರೆದು ತರಿಸಿಕೊಳ್ಳಿ. ಅಗ್ಗವಾದ ಮತ್ತು ಚನ್ನಾಗಿಲ್ಲದ್ದು ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ. ಸಾದ, ಕೆಂಪು, ಕಪ್ಪು, ಬಿಳಿ, ಕಾಫಿ ಟೋಪಿಗಳು ೧ ರೂ. ೮ ಆ.; ೧ ರೂ. ೬ ಆ., ೧ ರೂ. ೪ ಆ.

ರೇಷ್ಮೆ ಚುಕ್ಕೆಯುಳ್ಳ ಟೋಪಿಗಳು ೧ ರೂ. ೮ ಆ.; ೨ ರೂ.

ದಾರದ ಟೋಪಿಗಳು ೧ ರೂ. ೧೨ ಆ.; ೧ ರೂ. ೮ ಆ., ೧ ರೂ. ೬ ಆ.

ಜರತಾರಿ ಟೋಪಿಗಳು ೧ ರೂ. ೮ ಆ.; ೧ ರೂ. ೬ ಆ.

ಕೂಸುಗಳ ಟೋಪಿ, ಸೂಕ್ಷ್ಮ ಮೇಜೋಡು, ಅರ್ಧ ಮೇಜೋಡು, ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳಿಕೊಂಡವರಿಗೆ ಕೊಟ್ಟು ಕಳುಹಿಸುವೆವು.

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ.

ಉಪಾಧ್ಯಾಯರೆಲ್ಲರೂ
ಓದತಕ್ಕ ನೋಟೀಸ್.

29-2

ಮೈಸೂರು ಸರ್ಕಾರದ ವಿದ್ಯಾಭ್ಯಾಸದ ಇಲಾಖೆ ಇನ್‌ಸ್ಪೆಕ್ಟರ್ ಜನರಲ್‌ರವರು ಕೆಳಗೆ ಕಂಡ ಪುಸ್ತಕಗಳನ್ನು ಸರ್ಕಾರದ ಸ್ಕೂಲುಗಳಲ್ಲಿಯೂ, ಗ್ರಾಂಟ್ ಪಡೆಯುತಕ್ಕ ಪಾಠಶಾಲೆಗಳಲ್ಲಿಯೂ ಮತ್ತು ಆಂಗ್ಲೋ ವರ್ನಾಕ್ಯುಲರ್ ಸ್ಕೂಲುಗಳಲ್ಲಿಯೂ ಮತ್ತೊಂದು ಹುಕುಂ ಕೊಡುವತನಕ ಉಪಯೋಗಿಸಬೇಕೆಂದು ಕಳೆದ ಜೂಲೈ ೨೯ನೆ ತಾರೀಖಿನ ಮೈಸೂರು ಗೆಜೆಟ್ಟಿನಲ್ಲಿ ಪ್ರಾಯಿಷ್ ಮಾಡಿರುತ್ತಾರೆ.

ಭೂಗೋಳ ಶಾಸ್ತ್ರದ ಮೊದಲನೆಯ ಪುಸ್ತಕ (೧ನೆಯ ೨ನೆಯ ಭಾಗ, ಒಂದೇ ಪುಸ್ತಕ. ಈ ಪುಸ್ತಕದಲ್ಲಿ ನಾಲ್ಕು ಬಣ್ಣದ ನಕ್ಷೆಗಳೂ ಮಕ್ಕಳಿಗೆ ಭೂಗೋಳಶಾಸ್ತ್ರವನ್ನು ವಿಶದವಾಗಿ ಹೇಳಿಕೊಡುವುದಕ್ಕೆ ಸಾಹಿತ್ಯವಾಗಿರುವ ಬೇರೆ ಹನ್ನೆರಡು ಚಿತ್ರಗಳೂ ಇರುತ್ತವೆ). ಎರಡನೇ ಕ್ಲಾಸಿಗೆ ಕ್ರಯ ೪ ಆಣೆ.

ಭೂಗೋಳ ಸಂಗ್ರಹ (ಮ|| ರಾ|| ಎಂ. ರಾಮಸ್ವಾಮಯ್ಯನವರು ಬರೆದದ್ದು. ಈ ಪುಸ್ತಕವು ಪ್ರಚುರವಾದಂದಿನಿಂದ ಅನೇಕ ಸಹಸ್ರ ಪ್ರತಿಗಳು ಮಾರಾಟವಾಗಿವೆಯೆಂದು ವಾಚಕ ಮಹಾಶಯರು ತಿಳಿದಿರಬಹುದು) ಮೂರನೇ ಕ್ಲಾಸಿಗೆ ಕ್ರಯ ೪ ಆಣೆ.

ಮೇಲ್ಕಂಡ ಪುಸ್ತಕಗಳನ್ನು ಉಪಾಧ್ಯಾಯರೆಲ್ಲರೂ ತಡಮಾಡದೆ ಜಾಗ್ರತೆಯಲ್ಲಿ ತರಿಸಿಕೊಳ್ಳತಕ್ಕದ್ದು.

ವಿಳಾಸ:—ಮ್ಯಾನೇಜರ್,
ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

ವೃತ್ತಾಂತ ಪತ್ರಿಕೆ.

———:೦:———

೧೯೦೭ ನೇ ಇಸವಿ ಆಗಸ್ಟ್ ತಾ॥ ೧೫ ನೇ ಗುರುವಾರ

ಜಗದ್ಗುರು ಯಾವನು?

[ಒಬ್ಬ ಬುಕ್ಕಿದಾರರಿಂದ.]

ಕೆಲವು ವಾರಗಳ ಹಿಂದೆ "ನಡೆಗನ್ನಡಿ" ಎಂಬ ಪತ್ರಿಕೆಯವರು ಶ್ರೀ ಶೃಂಗೇರಿ ಗುರುಗಳನ್ನು ಕುರಿತು ಒಂದು ಸಂಗತಿಯನ್ನು ಪ್ರಕಾಸಿದ್ದರು. ಅದರಲ್ಲಿ ಅವರು ಬರೆದಿದ್ದದ್ದೇನಂದರೆ—"ಶೃಂಗೇರಿ ಮಠದ ಗುರುಗಳು ಜಗದ್ಗುರುಗಳಾಗಿದಾರೆಯೋ?" ಎಂಬದು. ಈ ವಿಷಯದಲ್ಲಿ ಆ ಪತ್ರಿಕೆಯವರು ಸಿದ್ಧಾಂತ ಮಾಡುವದೇನಂದರೆ, ಶೃಂಗೇರಿ ಗುರುಗಳು ಈ ಭರತಖಂಡದಲ್ಲಿರುವ ಸಮಸ್ತ ಮತದವರಿಗೂ ಗುರುಗಳಾಗಿದ್ದ ಪಕ್ಷದಲ್ಲಿ ಅವರನ್ನು ಜಗದ್ಗುರುಗಳೆಂದು ಹೇಳಬಹುದು, ಆದರೆ ಈ ದೇಶದಲ್ಲಿ ಮಹಮದಿಯರೂ, ಲಿಂಗಾಯತರೂ, ಜೈನರೂ, ಕ್ರೈಸ್ತರೂ, ಪಾರ್ಸಿಗಳೂ, ಮಾಧ್ವರೂ, ಶ್ರೀವೈಷ್ಣವರೂ ಇತ್ಯಾದಿ ಅನೇಕ ಮತಗಳವರು ಇದಾರಷ್ಟೆ. ಆ ಮತಗಳವರು ಶೃಂಗೇರಿ ಗುರುಗಳನ್ನು ತಮ್ಮ ಗುರುಗಳೆಂದು ಭಾವಿಸುವದೂ ಇಲ್ಲ; ಮತ್ತು ಪೂಜಿಸುವದೂ ಇಲ್ಲ, ಆದರೆ ಶಂಕರಾಚಾರ್ಯರ ಮತಕ್ಕೆ ಯಾರುಯಾರು ಸೇರಿದಾರೋ ಅವರುಗಳಿಗೆ ಮಾತ್ರ ಅವರು ಗುರುಗಳಾಗಿದಾರೆಯೇ ವಿನಹಾ ಸಮಸ್ತ ಮತಗಳಿಗೂ ಜಗದ್ಗುರುಗಳಾಗಿರುವದಿಲ್ಲವೆಂದು ಸಿದ್ಧಾಂತ ಮಾಡಿದಾರೆ.

ಇದನ್ನು ವಿಚಾರ ಶೀಲರಾದ ಪುರುಷರೆಲ್ಲಾ ಒಪ್ಪಿಕೊಳ್ಳಬೇಕಾಗಿದೆ. ಇದೂ ಅಲ್ಲದೆ ಕೆಲವು ದಿನಗಳ ಕೆಳಗೆ ಶೃಂಗೇರಿ ಗುರುಗಳು ಮೈಸೂರಿಗೆ ಚಿತ್ತೈಸಿದ್ದಾಗ ಒಂದೆರಡು ಉಪನ್ಯಾಸಗಳನ್ನು ಮಾಡಿದರಷ್ಟೆ. ಅವುಗಳಲ್ಲಿ ಆ ಸ್ವಾಮಿಗಳು—ನದಿಗಳು ಅನೇಕ ಕಡೆ ಇದ್ದು ಬೇರೆ ಬೇರೆ ಕಡೆಗೆ ಪ್ರವಹಿಸಿದರೂ ಕಡೆಯಲ್ಲಿ ಅವುಗಳೆಲ್ಲಾ ಒಂದೇ ದೊಡ್ಡ ಸಮುದ್ರಕ್ಕೆ ಬಂದು ಸೇರುತ್ತವೆ ಎಂದು ಬೋಧಿಸಿದರಷ್ಟೆ. ಅದರಲ್ಲಿ ಗುರುಗಳು ತೋರಿಸಿರುವ ನಿತ್ಯವೇನಂದರೆ, ಮತಗಳು ಅನೇಕವಾಗಿದ್ದು ಅವುಗಳಲ್ಲಿ ಪರಸ್ಪರ ವಿರೋಧವಿದ್ದರೂ ಕಡೆಯಲ್ಲಿ ಎಲ್ಲವೂ ಪರಬ್ರಹ್ಮವನ್ನೇ ಹೊಂದುತ್ತವೆ. ಇವರ ಬೋಧನೆಯು ನಿಜವಾದ ಪಕ್ಷಕ್ಕೆ ಇವರು ಜಗದ್ಗುರುಗಳಾಗಿರುವದು ಅಸಾಧ್ಯ.

ಒಳ್ಳೇದು, ಯೇಸುಸ್ವಾಮಿಯು ಜಗದ್ಗುರುವಾಗಿದ್ದಾನೋ ಎಂಬದು ಈಗ ವಿಚಾರಿಸೋಣ. ಯಾಕಂದರೆ ಕ್ರೈಸ್ತರೆಲ್ಲರೂ ಆತನು ಜಗದ್ಗುರುವಾಗಿದಾನೆಂದು ಅನೇಕ ರೀತಿ ಬಹು ಸಂಭ್ರಮದೊಡನೆ ಆತನನ್ನು ಆರಾಧಿಸುತ್ತಾ ಬರುತ್ತಾರೆ. ಈ ಯೇಸುಕ್ರಿಸ್ತನು ಯಾರು? ಈತನು ಏಷ್ಯಾ ಖಂಡಕ್ಕೆ ಸೇರಿದ ಪಾಲೆಸ್ತೀನ್ ಎಂಬ ಒಂದು ಸಣ್ಣ ರಾಜ್ಯದಲ್ಲಿ ಅವತರಿಸಿ, ಅವಿದ್ಯಾವಂತರಾದ ಕೆಲವರನ್ನು ತನ್ನ ಶಿಷ್ಯರನ್ನಾಗಿ ಮಾಡಿಕೊಂಡು, ದೈವಿಕವಾದ ಬೋಧನೆಗಳನ್ನು ಮಾಡುತ್ತಾ, ಪರಿಶುದ್ಧವಾದ ನಡತೆಗಳಲ್ಲಿ ಪ್ರಕಾಶಿಸುತ್ತಾ; ಹೋದ ಕಡೆಗಳಲ್ಲಿ ಜನಗಳಿಗೆ ಉಪಕಾರ ಮಾಡುತ್ತಾ, ಲೋಕದ ಪಾಪಾತ್ಮರನ್ನು ಉದ್ಧಾರ ಮಾಡುವದಕ್ಕಾಗಿ, ತನ್ನ ದೇಹವನ್ನು ಯಜ್ಞವಾಗಿ ಅರ್ಪಿಸಿಬಿಟ್ಟು ಸಮಾಧಿಯನ್ನು ಜಯಿಸಿ ತಿರಿಗಿ ಎದ್ದವನಾಗಿ, ಈ ರೀತಿ ಪ್ರಪಂಚವನ್ನು ಉದ್ಧಾರ ಮಾಡುವದಕ್ಕಾಗಿ ತಾನು ಬಂದ ಉದ್ದೇಶವನ್ನು ಪೂರೈಸಿ ಜಗದ್ಗುರುವಾಗಿದ್ದಾನೆ.

ಯೇಸುಸ್ವಾಮಿಯು ತನ್ನ ಗುರುಪಟ್ಟದ ವಿಷಯ ಬೋಧಿಸಿರುವದೇನಂದರೆ, "ನಾನೇ ಜಗಜ್ಜ್ಯೋತಿಯಾಗಿದ್ದೇನೆ" "ನಾನೇ ಮೋಕ್ಷಕ್ಕೆ ಹೋಗುವವರ ಮಾರ್ಗವೂ ಸತ್ಯವೂ ಜೀವವೂ ಆಗಿದ್ದೇನೆ." "ನನ್ನ ಮುಖಾಂತ್ರವಾಗಿ ಅಲ್ಲದೆ ಯಾವನೂ ಭಗವಂತನನ್ನು ಸೇರಕೂಡದು," "ನಾನೇ ಆತ್ಮೀಯ ಆಹಾರವಾಗಿಯೂ ಜ್ಞಾನ ತೀರ್ಥವಾಗಿಯೂ ಇದ್ದೇನೆ" ಎಂಬೀ ರೀತಿ ತನ್ನ ಅಧಿಕಾರವನ್ನು ಸ್ಪಷ್ಟವಾಗಿ ತಿಳಿಸಿರುತ್ತಾನೆ. ಅಲ್ಲದೆ ಆತನು ಇದರ ವಿಷಯದಲ್ಲಿ ತನ್ನ ಶಿಷ್ಯರಿಗೆ ಕೊಟ್ಟಿರುವ ಅಪ್ಪಣೆ ಏನಂದರೆ, "ನೀವು ಸಮಸ್ತ ಭೂಲೋಕಕ್ಕೆ ಹೋಗಿ ಸಮಸ್ತ ಸೃಷ್ಟಿಗಳಿಗೂ ನನ್ನ ಸುವಾರ್ತೆಯನ್ನು ಸಾರಿ ಹೇಳಿ" ಎಂಬುವದೇ.

ಯೇಸುಕ್ರಿಸ್ತನು ಜಗದ್ಗುರುವಾಗಿದಾನೆಂಬುವದಕ್ಕೆ ಸಾಕ್ಷಿಯೇನು? ಅಜ್ಞಾನದ ರಾತ್ರಿಯು ಕತ್ತಲೆಯನ್ನು ಪರಿಹರಿಸಿ, ಬರಬರ ಲೋಕಕ್ಕೆಲ್ಲಾ ಪ್ರಕಾಶವನ್ನು ಕೊಡುವಂತೆ ಆ ಸಣ್ಣ ಪಾಲೆಸ್ತೀನ್ ದೇಶದಲ್ಲಿ ತನ್ನ ಸತ್ಯವೆಂಬ ಅರುಣೋದಯವನ್ನು ತೋರಿಸಿದಾತನು ಬರಬರ ನಿಶ್ಚಯವಾಗಿ, ಏಷ್ಯಾ, ಯೂರೋಪ್, ಆಫ್ರಿಕ, ಅಮೇರಿಕ, ಆಸ್ಟ್ರೇಲಿಯಾ ಎಂಬೀ ಪಂಚ ಖಂಡಗಳಿಗೂ ಅವುಗಳಿಗೆ ಸೇರಿದ ಎಲ್ಲಾ ದ್ವೀಪಗಳಿಗೂ ತನ್ನ ಸುವಾರ್ತೆಯ ತೇಜಸ್ಸನ್ನು ತೋರಿಸುತ್ತಾ, ಜನಗಳ ಪಾಪವನ್ನು ಹೋಗಲಾಡಿಸಿ, ಅವರನ್ನು ಸನ್ಮಾರ್ಗಿಗಳನ್ನಾಗಿ ಮಾಡಿ ತನ್ನ ಪಾದಪೀಠಕ್ಕೆ ಎರಗುವಹಾಗೆ ಮಾಡಿದಾನೆ.

ಹಾಗಾದರೆ, ಯೇಸುಕ್ರಿಸ್ತನ ಮತವೇ ನಿಜವಾದ ಮತವೋ? ಮಿಕ್ಕಾದ ಮತಗಳೆಲ್ಲಾ ಸುಳ್ಳೋ? ಅವುಗಳಲ್ಲಿ ಸತ್ಯವಿಲ್ಲವೋ? ಎಂದು ಪ್ರಶ್ನೆಮಾಡುವವರಿಗೆ—ಹೌದು, ಯೇಸುಕ್ರಿಸ್ತನ ಮತದಲ್ಲಿ ಮಾತ್ರ ಸತ್ಯವುಂಟು. ಮಿಕ್ಕಾದ ಮತಗಳಲ್ಲಿ ಸತ್ಯವಿಲ್ಲ ಎಂದು ಹೇಳುವದಕ್ಕೆ ನಾವು ಬಹು ಆತುರವಾದ ತೀರ್ಮಾನ ಮಾಡಿದವರಾಗಿರುವೆವು. ಸತ್ಯವೇನಂದರೆ, ಎಲ್ಲಾ ಗ್ರಹಗಳಲ್ಲಿಯೂ ಥಳಥಳಿಸುವ ಬೆಳಕುಂಟು. ಆ ಗ್ರಹಗಳಿಗೆಲ್ಲಾ ಬೆಳಕು ಕೊಡ ಮಹಾ ದೊಡ್ಡದಾದ ಸೂರ್ಯನೇ. ಅದರಂತೆ ಜಗದ್ಗುರುವಾದ ಯೇಸುಕ್ರಿಸ್ತನು ನೀತಿಸೂರ್ಯನಾಗಿ ಪ್ರಪಂಚದ ಎಲ್ಲಾ ಕಡೆಗಳಿಗೂ ತನ್ನ ಸತ್ಯವೆಂಬ ಕಿರಣಗಳನ್ನು ಪ್ರಸರಿಸುತ್ತಾ ಇರುತ್ತಾನಾದಕಾರಣ ಈ ಸದ್ಗುರುವನ್ನು ವಿಚಾರಿಸಿ ಕಂಡುಕೊಂಡು, ಆತನ ಭಕ್ತರಾಗುವದು ಸದ್ವಿಚಾರಕರ ಕರ್ತವ್ಯವಾಗಿದೆ. ತಮ್ಮ ಶಿಷ್ಯರ ಪಾಪಗಳನ್ನು ಪರಿಹರಿಸಲಾರದಂಥಾ, ತಮ್ಮನ್ನು ತಾವೇ ಗುರುಗಳಾಗಿ ಮಾಡಿಕೊಂಡಿರುವಂಥಾ ಮನುಷ್ಯರನ್ನು ಶರಣು ಹೊಗದೆ, ಜಗದೀಶನಾದ ದೇವರ ಯೇಸುಕ್ರಿಸ್ತನಲ್ಲಿ ಜಗದ್ಗುರುವಾಗಿದ್ದುಕೊಂಡು ಲೋಕದ ಪಾಪಾತ್ಮರನ್ನು ರಕ್ಷಿಸುವದಕ್ಕೆ ಶಕ್ತನು ತ್ತನಾದಕಾರಣ ಇಂಥಾ ಸಮಯವನ್ನು ಕಳೆದುಕೊಳ್ಳದೆ ಆತನನ್ನು ನಮ್ಮ ರಕ್ಷಕನೆಂದು ಅಂಗೀಕಾರ ಮಾಡಿಕೊಳ್ಳೋಣ.

[ನಮ್ಮ ಬುಕ್ಕಿದಾರರು "ಜಗದ್ಗುರು" ವೆಂಬ ಪದದ ಅರ್ಥವನ್ನು ಯಾವ ರೀತಿ ತಿಳಿದುಕೊಂಡಿದ್ದಾರೆಯೋ ಅದನ್ನು ಸ್ಪಷ್ಟವಾಗಿ ವಿವರಿಸಿಲ್ಲವು. ಜಗದ್ಗುರುವೆಂಬಾತನು ಲೋಕದವರೆಲ್ಲಾ ತಮ್ಮ ಗುರುವೆಂದು ಅಂಗೀಕರಿಸಲ್ಪಟ್ಟಾತನೋ? ಅಥವಾ, ಲೋಕವೆಲ್ಲಾ ಒಪ್ಪಿ ಅಂಗೀಕರಿಸುವಂಥಾ ಶ್ರೇಷ್ಠ ಗುಣಗಳನ್ನೂ ಅಧಿಕಾರಗಳನ್ನೂ ಪಡೆದಿರತಕ್ಕ ಪುರುಷನು ಜಗದ್ಗುರುವೋ? ಇವೆರಡು ವಿಚಾರಗಳೂ ಬೇರೆ ಬೇರಾಗಿರುತ್ತವೆ

ಮೊದಲನೆಯ ಅಭಿಪ್ರಾಯದ ಪ್ರಕಾರ ನೋಡಿದಲ್ಲಿ ಯಾವ ಗುರುವೂ ಇದುವರೆಗೆ ಜಗದ್ಗುರುವೆನಿಸಿಕೊಂಡಿಲ್ಲವು. ಶ್ರೀ ಶೃಂಗೇರಿ ಗುರುಗಳು ಕೂಡ ಹಿಂದುಸ್ಥಾನದ ಕೆಲವು ಜನರಿಗೆ ಮಾತ್ರ ಗುರುಗಳಾಗಿರುವರೇ ಹೊರತು ಈ ರಾಷ್ಟ್ರದ ಸಮಸ್ತ ಪ್ರಜೆಗಳೂ ಅವರ ಶಿಷ್ಯವರ್ಗಕ್ಕೆ ಸೇರಿದವರಲ್ಲ. ಈ ಪಕ್ಷಕ್ಕೆ ಯೇಸು ಕ್ರಿಸ್ತನೂ ಜಗದ್ಗುರುವಲ್ಲವು. ಆತನ ಶಿಷ್ಯ ವರ್ಗಕ್ಕೆ ಸೇರಿದವರು ಪ್ರಪಂಚದ ಸಕಲ ಭಾಗಗಳಲ್ಲೂ ಅಸಂಖ್ಯಾತರಾಗಿರುತ್ತಾರೆ. ಕ್ರೈಸ್ತ ಮತಾವಲಂಬಿಗಳ ಸಂಖ್ಯೆಯೇ ಇತರ ಮತಸ್ಥರಿಗಿಂತಲೂ ಹೆಚ್ಚಾಗಿರಬಹುದು. ಆದರೂ ಇನ್ನೂ ಆತನ ವಿಚಾರವನ್ನೇ ಕೇಳಿ ಅರಿಯದವರು ಅನೇಕರಿರುವರು; ಮತ್ತು ಆತನ ಬೋಧನೆಯನ್ನು ಕೇಳಿರತಕ್ಕವರಲ್ಲಿ ಬಹು ಜನರು ಆತನನ್ನು ತಿರಸ್ಕಾರ ಮಾಡಿರುತ್ತಾರೆ

ಎರಡನೆಯ ಅಭಿಪ್ರಾಯದ ಪ್ರಕಾರ ಯೇಸು ಕ್ರಿಸ್ತನೇ ಜಗದ್ಗುರುವಾಗಿದ್ದಾನೆಂದು ನಾವು ನಂಬುತ್ತೇವೆ. ಯಾಕಂದರೆ ಸಮಸ್ತ ಮಾನವರ ಶಿಷ್ಟಸನ್ಮಾನಾದಿಗಳಿಗೂ ಅರ್ಹವಾದಂಥಾ ಲಕ್ಷಣಗಳೂ ಅಧಿಕಾರಗಳೂ ಆತನೊಬ್ಬನಲ್ಲಿ ಮಾತ್ರ ಇರುತ್ತವೆ. ಈ ಮಾತನ್ನು ಆತನ ಜೀವಚರಿತ್ರೆಯನ್ನೋದಿ, ಆತನ ಬೋಧನೆಯನ್ನು ಪರಿಷ್ಕಾರವಾಗಿ ತಿಳಿದುಕೊಂಡು, ಆತನು ದಯಪಾಲಿಸುವ ದೈವಶಕ್ತಿಯಿಂದಲೇ ಜೀವಿಸುತ್ತಿರುವಂಥಾವರು ಮಾತ್ರ ಸಿದ್ಧಾಂತಪಡಿಸಬಲ್ಲರು.

ಯೇಸುಕ್ರಿಸ್ತನ ಶಿಷ್ಯನಾದ ಯೋಹಾನನು ಆತನ ಸುವಾರ್ತೆಯನ್ನು ಬರೆಯುವಾಗ್ಗೆ ಅದರ ಪೀಠಿಕೆಯಲ್ಲಿ ಕೇಳಿರುವ ವಾಕ್ಯಗಳನ್ನು ಇಲ್ಲಿ ಸೂಚಿಸುತ್ತೇವೆ. ವಾಚಕರು ಆ ವಾಕ್ಯಗಳನ್ನು ಓದಿ, ಸಾವಧಾನಚಿತ್ತದಿಂದ ಮನನಮಾಡಲಿ. ಯೇಸು ಕ್ರಿಸ್ತನೇ ಬೆಳಕೂ, ಸಕಲ ಸೃಷ್ಟಿಗೂ ಮೊದಲಿದ್ದವನೂ. ಮತ್ತು ಸಕಲ ಸೃಷ್ಟಿಗಳಲ್ಲೂ ಅದ್ವಿತೀಯನೂ ಆಗಿರತಕ್ಕವನೆಂದು ಸ್ಪಷ್ಟವಾಗಿ ತಿಳಿದು ಬಂದೀತು. ಆ ವಾಕ್ಯಗಳ್ಯಾವವೆಂದರೆ.—

"ನಿಜವಾದ ಬೆಳಕು ಲೋಕಕ್ಕೆ ಬರುವದಾಗಿತ್ತು; ಆ ಬೆಳಕೇ ಪ್ರತಿ ಮನುಷ್ಯನಿಗೂ ಬೆಳಕನ್ನು ಕೊಡುವಂಥಾದ್ದು. ಆತನು ಲೋಕದಲ್ಲಿ ಇದ್ದನು, ಮತ್ತು ಲೋಕವು ಆತನ ಮೂಲಕವಾಗಿ ಉಂಟಾಯಿತು. ಆದರೂ ಲೋಕವು ಆತನನ್ನು ಅರಿಯಲಿಲ್ಲ. ಆತನು ತನ್ನ ಸ್ವಾಸ್ಥ್ಯಕ್ಕೆ ಬಂದನು; ಆದರೆ ಸ್ವಂತ ಜನರು ಆತನನ್ನು ಅಂಗೀಕರಿಸಲಿಲ್ಲ. ಯಾರ್‍ಯಾರು ಆತನನ್ನು ಅಂಗೀಕರಿಸಿದರೋ, ಅಂದರೆ ಆತನ ಹೆಸರಿನಲ್ಲಿ ನಂಬಿಕೆಯಿಟ್ಟರೋ ಅವರಿಗೆ ದೇವರ ಮಕ್ಕಳಾಗುವ ಅಧಿಕಾರ ಕೊಟ್ಟನು. ಇವರು ರಕ್ತಸಂಬಂಧದಿಂದಾಗಲಿ ಕಾಮದಿಂದಾಗಲಿ ಪುರುಷಸಂಕಲ್ಪದಿಂದಾಗಲಿ ಹುಟ್ಟಿದವರಲ್ಲ, ದೇವರಿಂದಲೇ ಹುಟ್ಟಿದವರು.

ಆ ವಾಕ್ಯವೆಂಬುವನು ನರಾವತಾರ ಎತ್ತಿ ನಮ್ಮ ಮಧ್ಯದಲ್ಲಿ ವಾಸಮಾಡಿದನು. ನಾವು ಆತನ ಮಹಿಮೆಯನ್ನು ನೋಡಿದೆವು, ಆ ಮಹಿಮೆಯು ತಂದೆಯ ಬಳಿಯಿಂದ ಬಂದ ಒಬ್ಬನೇ ಮಗನಿಗೆ ತಕ್ಕ ಮಹಿಮೆ. ಆತನು ಕೃಪೆಯಿಂದಲೂ ಸತ್ಯದಿಂದಲೂ ತುಂಬಿದವನಾಗಿದ್ದನು."

—ಎಡಿಟರ್]

ಒಳದೇಶದ ವೃತ್ತಾಂತಗಳು.

ಶಿವಮೊಗ್ಗ ಡಿಸ್ಟ್ರಿಕ್ಟಿಗೆ ಸೇರಿದ ತಂಬಿಹಳ್ಳಿ ಎಂಬ ಗ್ರಾಮದ ಸರಹದ್ದಿನಲ್ಲಿ ಬಹು ಶ್ರೇಷ್ಠವಾದ ಚಿನ್ನದ ಗಣಿಯು ಸಿಕ್ಕಿರುತ್ತದೆಂದು ಪ್ರಕಟವಾಗಿದೆ

●●●

ರಾಜಧಾನಿಗೆ ಸುಮಾರು ಹತ್ತು ಮೈಲಿ ದೂರದಲ್ಲಿರುವ ಮೊಲ್ಲಹಳ್ಳಿ ಗ್ರಾಮದಲ್ಲಿ ಒಬ್ಬನು ತನ್ನ ದಾಯಾದಿಗಳನ್ನು ಒದ್ದುದರಿಂದ ಅವನ ಪ್ರಾಣ ಹೋಯಿತೆಂದು ಮೊಕದ್ದಮೆ ಆಗಿದೆ

●●●

ದಿವಾನ್ ಮೆ॥ ಮಾಧವರಾಯರು ಕಳೆದ ಭಾನುವಾರ ಬೆಳಿಗ್ಗೆ ರಾಜಧಾನಿಗೆ ಬಂದ. ಶ್ರೀಮನ್ಮಹಾರಾಜರವರು ನಂದಿಬೆಟ್ಟದಿಂದ ಇಳಿದ ಮೇಲೆ ಸೋಮವಾರ ರಾತ್ರಿ ಮೈಸೂರಿಗೆ ಪ್ರಯಾಣ ಮಾಡಿದರು.

●●●

ರಾಜಧಾನಿಯಲ್ಲಿ ಶೀತಗಾಳಿ, ಮೋಡವಾಗುವುದು, ಸೋನೆಮಳೆ, ಇವು ಇನ್ನೂ ತಪ್ಪಲಿಲ್ಲ. ಪ್ಲೇಗ್ ಉಪದ್ರವು ಹೆಚ್ಚಾಗಿದ್ದರೂ ಅದರ ಭೀತಿಯು ಜನರಲ್ಲಿ ತುಂಬಾ ಆಗಿದೆ. ಧಾರಣೆವಾಸಿಗಳು ಇನ್ನೂ ಪ್ರಿಯವಾಗಿರುತ್ತವೆ

●●●

ಕಳೆದ ಸೋಮವಾರ ಬೆಳಿಗ್ಗೆ ೧೧ ಗಂಟೆಗೆ ಶ್ರೀಮನ್ಮಹಾರಾಜರವರು ಮೇಟೂರ್ ಗಾಡಿಯಲ್ಲಿ ಮಳವಳ್ಳಿ, ಶಿವಸಮುದ್ರ, ಕಾವೇರಿಪುರ ಹಳ್ಳಿಗಳ ಕಡೆ ಸರ್ಕೀಟು ದಯಮಾಡಿದರು. ಗೌರವಾರ್ಥವಾದ ೨೧ ತೋಪುಗಳು ಹಾರಿಸಲ್ಪಟ್ಟವು. ಅವರು ತಾ ೧೭ನೇ ಶನಿವಾರ ಬೆಂಗಳೂರನ್ನು ತಲುಪುವವರಾಗಿದಾರೆ

ಮೊನ್ನೆ ಮಂಗಳವಾರ ಸಾಯಂಕಾಲ ಬೆಂಗಳೂರು ಲಂಡನ್ ಮಿಷನ್ ಹೈಸ್ಕೂಲಿನಲ್ಲಿ ದಿವಾನ್ ಮೆ॥ ಮಾಧವರಾಯರು ಅಗ್ರಾಸನವನ್ನು ವಹಿಸಿ, ವಿದ್ಯಾರ್ಥಿಗಳಿಗೆ ವಾರ್ಷಿಕ ಬಹುಮಾನಗಳನ್ನು ಕೊಟ್ಟು ಆ ವಿದ್ಯಾಶಾಲೆಯ ಅಭಿವೃದ್ಧಿಯನ್ನು ನೋಡಿ ಸಂತೋಷಪಟ್ಟೆವೆಂದು, ಆ ಅರ್ಥಕ್ಕೆ ಉಪನ್ಯಾಸಮಾಡಿದರು

●●●

ರಾಜಬಂಧುಗಳಾದ ಮೆ॥ ಪುಟ್ಟಣ್ಣಾಜಿ ಅರಸಿನವರು ಕೆಲವು ಕಾಲಗಳಿಂದಲೂ ಆಲನಹಳ್ಳಿ ಬಂಗಲೆಯಲ್ಲಿ ವಾಸಮಾಡುತ್ತಿದ್ದರು. ಕ್ಷಯರೋಗವನ್ನನುಭವಿಸುತ್ತಿದ್ದ ಅವರ ಪತ್ನೀರವರು ಕಳೆದ ಶನಿವಾರ ರಾತ್ರಿ ಆ ಬಂಗಲೆಯಲ್ಲಿ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮಾರುದಿನ ಅರಮನೆ ಮರ್ಯಾದೆಗಳೆಲ್ಲಾ ಅಲ್ಲಿಗೆ ಹೋಗಿದ್ದು ಶವವನ್ನು ಯಥಾವಿಧಿಯಾಗಿ ಸಂಸ್ಕಾರಮಾಡಿದರು.

●●●

ರಾಜಧಾನಿಯ ಕಾರನಗರ ಆಸ್ಪತ್ರೆಯಲ್ಲಿ ದಾಕ್ಟರಾಗಿದ್ದ ಮೆ॥ ಮೇಲುಯಮ್ ಮೊದಲಿಯಾರ್ರವರು ಮೊನ್ನೆ ಸೋಮವಾರ ಪ್ಲೇಗಿನ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ. ಕೆಲವು ಕಾಲಕ್ಕೆ ಮುಂಚೆ ಇವರ ಪತ್ನಿಯವರು ನಂಜನಗೂಡಿನಲ್ಲಿ ವಾಂತಿಭೇದಿಯಿಂದ ಕಾಲವಾದರು. ಈ ದಂಪತಿಗಳು ತುಂಬಾ ಪರೋಪಕಾರಿಗಳಾಗಿದ್ದರಂತಲ್ಲ, ಅನಾಥರಾದ ನಾಲ್ಕುರು ಮಕ್ಕಳನ್ನು ಬಿಟ್ಟಿರುತ್ತಾರೆಂತಲೂ ಕೇಳುತ್ತೇವೆ.

●●●

ಮೊದಲು ಶ್ರೀಮನ್ಮಹಾರಾಜರವರ ವಿದ್ಯಾಬೋಧಕರಾಗಿಯೂ ತರುವಾಯ ಸೂಪರಿಂಟೆಂಡಿಂಗ್ ಇಂಜನಿಯರಾಗಿಯೂ, ಈಚೆ ಕೆಲವು ಕಾಲ ಪ್ರೈವೇಟ್ ಸೆಕ್ರೆಟರಿಯವರಾಗಿಯೂ ಕೆಲಸ ನೋಡಿದ್ದು ರಜಾ ಪಡೆದು ಸೀಮೆಗೆ ಪ್ರಯಾಣ ಮಾಡಿರುವ ಮೆ॥ ಜೆ ಡಿ ವೈಟ್ಲಿಯವರಿಗೆ ಲಂಡನ್ ಪಟ್ಟಣದಲ್ಲಿ ತುಂಬಾ ಖಾಯಿಲೆಯಾಗಿದೆ ಎಂಬ ವರ್ತಮಾನ ಬಂದಿದೆ. ಅವರಿಗೆ ಬೇಗನೆ ರೋಗ ನಿವಾರಣೆಯಾಗಲೆಂದು ಹಾರೈಸುತ್ತೇವೆ.

●●●

ಮೈಸೂರು ಮರಿಮಲ್ಲಪ್ಪನವರ ಹೈಸ್ಕೂಲ್ ಹೆಡ್ ಮಾಸ್ಟರಾದ ಮೆ॥ ಎಂ. ವೆಂಕಟಕೃಷ್ಣಯ್ಯನವರ ಮನೆಯಲ್ಲಿ ಅವರ ಕುಮಾರನಿಗೂ, ಮೊಮ್ಮಗನಿಗೂ, ಇನ್ನೊಬ್ಬ ಬಂಧುವಾದ ಹುಡುಗನಿಗೂ ಪ್ಲೇಗ್ ತಗಲಿ ಕುಮಾರನೂ, ಮೊಮ್ಮಗನೂ ಕಾಲವಾದರು. ವೃದ್ಧಾಪ್ಯದಲ್ಲಿ ಮೆ॥ ವೆಂಕಟಕೃಷ್ಣಯ್ಯನವರಿಗೆ ಇಂಥಾ ಶೋಕ ಸಂಘಟಿಸಿದ್ದಕ್ಕಾಗಿ ಸಕಲರೂ ತುಂಬಾ ವ್ಯಥೆಪಡುತ್ತಾರೆ. ಇದಲ್ಲದೆ ಅವರ ಹಿರಿಯ ಕುಮಾರನಿಗೆ ಬುದ್ಧಿ ವಿಕಲ್ಪವಾಗಿರುವುದು ಅವರ ಮನೋವ್ಯಥೆಯನ್ನು ಇನ್ನೂ ಹೆಚ್ಚಿಸಿರುವುದಕ್ಕಾಗಿಯೂ ನಾವು ಬಹಳ ಸಂತಾಪಪಡುವೆವು.

●●●

ಮದರಾಸ್ ಪಟ್ಟಣದಲ್ಲಿ ಈ ತಿಂಗಳ ೨೮ನೇ ತಾ. ನಿಂದ ೩೦ ವರೆಗೆ ವಿದ್ಯಾಭ್ಯಾಸದ ಉಪಕರಣಗಳನ್ನೂ ಪ್ರೋತ್ಸಾಹಕ ವಸ್ತುಗಳನ್ನೂ ಇಟ್ಟು ಪ್ರದರ್ಶನ ಮಾಡುತ್ತಾರೆ. ಪಾಶ್ಚಾತ್ಯ ರಾಜ್ಯಗಳಿಂದ ಹಲವು ವಸ್ತುಗಳನ್ನೂ ತರಿಸಿ ತೋರಿಸುವರು. ಮೈಸೂರು ಸರ್ಕಾರದವರು ಇಲ್ಲಿನ ವಿದ್ಯಾಭ್ಯಾಸದ ಇಲಾಖೆಯಿಂದ ಸ್ಕೂಲುಗಳ ಇನ್ಸ್‌ಪೆಕ್ಟರುಗಳನ್ನೂ ಅನೇಕ ಸ್ಕೂಲ್ ಮಾಸ್ಟರುಗಳನ್ನೂ ಭತ್ಯ ಮಂಜೂರು ಕೊಟ್ಟು ಮದರಾಸಿಗೆ ಆ ಪ್ರದರ್ಶನ ಶಾಲೆಯಲ್ಲಿ ಇರುವ ವಸ್ತುವಿಶೇಷಗಳನ್ನೂ ಇತರ ಸಂಗತಿಗಳನ್ನೂ ನೋಡಿಕೊಂಡು ಬರುವಂತೆ ಕಳುಹಿಸುತ್ತಾರೆಂದು ಕೇಳುತ್ತೇವೆ.

●●●

ರಾಜಧಾನಿಯಲ್ಲಿರುವ ಸಿಂಗರ್ ಕಂಪನಿ ಅಂಗಡಿಯನ್ನು ಮದರಾಸ್ ಡಿಸ್ಟ್ರಿಕ್ಟಿನ ಮ್ಯಾನೇಜರವರು ಕಳೆದ ವಾರ ಬಂದು ಪರಿಶೀಲನೆ ಮಾಡಿದರು. ಈ ಕಂಪನಿಯವರು ದರ್ಜಿಯವರಿಂದಲೂ ಇತರರಿಂದಲೂ ಹೊಲಿಯುವ ಯಂತ್ರಗಳ ಮುರುಕಲು ಭಾಗಗಳನ್ನು ಕ್ರಯಕೊಟ್ಟು ತೆಗೆದುಕೊಳ್ಳುವುದುಂಟು. ಅಂಥಾ ಮುರುಕಲು ಭಾಗಗಳನ್ನು ಕಂಪನಿಯವರು ಹೊಸ ಯಂತ್ರಗಳಿಗೆ ಜೋಡಿಸಿ ಸರಿಮಾಡುತ್ತಾರೇನೋ ಎಂಬ ಅನುಮಾನವು ಜನಗಳಲ್ಲಿ ಉಂಟಾಗಬಾರದೆಂದು ಮೇಲ್ಕಂಡ ಮ್ಯಾನೇಜರು ಅವುಗಳನ್ನೆಲ್ಲಾ ತಮ್ಮ ಮುಂದೆಯೇ ಚೂರುಚೂರು ಮಾಡಿಸಿ ಕಳೆದ ಶುಕ್ರವಾರ ಬಿಸಾಡಿಸಿ, ಮಾರುದಿನ ಪ್ರಯಾಣಮಾಡಿದರು. ಇದರಿಂದ ಈ ಕಂಪನಿಯ ಯಂತ್ರಗಳು ಬಹು ನಂಬಿಕೆಯಾದವುಗಳೆಂದು ಹೇಳಬಹುದಾಗಿದೆ.

●●●

ರಾಜಧಾನಿಯಲ್ಲಿ ಗವರ್ನಮೆಂಟ್ ಕನಡಾ ಸ್ಕೂಲಿನ ಹೆಡ್ ಮಾಸ್ಟರಾಗಿದ್ದ ಮೆ॥ ಡಿ ವೆಂಕಟನಾರಣಪ್ಪನವರು ಪೆನ್ಷನ್ ಪಡೆದು ಕೆಲಸ ಬಿಟ್ಟರು. ಅವರಲ್ಲಿ ವಿದ್ಯಾಭ್ಯಾಸಮಾಡಿದ ಕೆಲಕರೇ ಮೊದಲಾದವರು ಹಿಂದಿನ ವಾರ ಇಲ್ಲಿನ ಸದ್ವಿದ್ಯಾ ಪಾಠಶಾಲೆಗೆ ಅವರನ್ನು ಕರೆಸಿಕೊಂಡು, ಅವರಲ್ಲಿ ತಮಗಿರುವ ಭಕ್ತಿ ವಿಶ್ವಾಸ ಕೃತಜ್ಞತೆಗಳನ್ನು ಬಹು ವಿಧ್ಯುಕ್ತಿಯಿಂದ ಪ್ರಕಾಶಪಡಿಸಿ, ತಮ್ಮ ಜ್ಞಾಪಕಾರ್ಥವಾಗಿ ಅವರಿಗೆ ಬೆಳ್ಳಿಯ ಪಾತ್ರೆಯನ್ನು ಒಪ್ಪಿಸಿದರು. ಸಭೆಯ ಅಗ್ರಾಸನವನ್ನು ವಹಿಸಿದ್ದ ಮೆ॥ ಎಂ ವೆಂಕಟಕೃಷ್ಣಯ್ಯನವರೂ, ಮೆ॥ ಅಡ್ವೊಕೇಟ್ ರಾಮಣ್ಣನವರೂ, ಮೆ॥ ವೆಂಕಟನಾರಣಪ್ಪನವರಲ್ಲಿ ವಿದ್ಯಾರ್ಥಿಗಳಾಗಿದ್ದು ಈಗ ಸರ್ಕಲ್ ಇನ್ಸ್‌ಪೆಕ್ಟರಾಗಿರುವ ಮೆ॥ ಎಂ ಶ್ರೀನಿವಾಸರಾಯರೂ, ರಾಜಧಾನಿಯ ಮ್ಯುನಿಸಿಪಲ್ ವೈಸ್ ಪ್ರೆಸಿಡೆಂಟಾಗಿರುವ ಮೆ॥ ಬಿ ಹನುಮಂತರಾಯರೇ ಮುಂತಾದವರೂ ಮೆ॥ ವೆಂಕಟನಾರಣಪ್ಪನವರ ಬೋಧನಾಶಕ್ತಿ ಸಾಮರ್ಥ್ಯಾದಿಗಳನ್ನು ವಿವರಿಸಿ ಕೊಂಡಾಡಿದರು. ಮೆ॥ ವೆಂಕಟನಾರಣಪ್ಪನವರು ಬಹುಕಾಲ ವಿಶ್ರಾಂತಿ ಸುಖವನ್ನು ಅನುಭವಿಸಲೆಂದು ಹಾರೈಸುತ್ತೇವೆ

ಒಕ್ಕಲಿಗರ ಸಂಘವು.

ರಾಜಧಾನಿಯಲ್ಲಿ ಒಂದು ಶಾಖೆಯನ್ನು ಸ್ಥಾಪಿಸಿದ್ದು.

ಕಳೆದ ತಾರೀಖು ೧೧ ನೆ ಭಾನುವಾರ ಮಧ್ಯಾಹ್ನ ೪ ಘಂಟೆಯಲ್ಲಿ ಒಕ್ಕಲಿಗರ ಸಂಘದ ಮೈಸೂರು ಬ್ರಾಂಚ (ಶಾಖೆಯು) ನ್ನು ಸ್ಥಾಪಿಸಲು ಇಟ್ಟದ್ದ ಜನರಲ್ ಮೀಟಿಂಗು ಮೈಸೂರು ಟವರ್ ಹಾಲಿನಲ್ಲಿ ನಡೆಯಿತು. ಆ ಕಾಲದಲ್ಲಿ ಮೈಸೂರು ಟವನ್ನಿನ ಸಮಸ್ತ ಒಕ್ಕಲಿಗ ಮಹಾ ಜನರೂ ಸೇರಿದ್ದರು.

ಮ್ಯುನಿಸಿಪಲ್ ಕೌನ್ಸಿಲರ್ ಮ॥ ರಾ॥ ಗೂಳಪ್ಪನವರು ಸಭಾಧ್ಯಕ್ಷರಾಗಬೇಕೆಂದು ಮ॥ ಪುಟ್ಟನಂಜಪ್ಪನವರು ಸೂಚಿಸಿದ್ದನ್ನು ಇಟಗೆ ಗೂಡು ಮ॥ ಬ್ಯಾಂಕಂ ಹುಚ್ಚಣ್ಣನವರು ಅನುಮೋದಿಸಿದರು. ಇದನ್ನು ಸರ್ವರೂ ಒಪ್ಪಿದರು. ಅದೇ ಪ್ರಕಾರ ಅವರು ಸಭೆಯ ಅಧ್ಯಕ್ಷತೆಯನ್ನು ವಹಿಸಿದರು.

ಒಕ್ಕಲಿಗರ ಸಂಘದ ಸೆಕ್ರೆಟರಿಯಾಗಿರುವ ಮ॥ ಕೆ. ಎಚ್. ರಾಮಯ್ಯನವರು ಸ್ವಲ್ಪ ಹೊತ್ತು ಪರಮೇಶ್ವರನ ಧ್ಯಾನ ಮಾಡಿದ ನಂತರ ನಮ್ಮ ಶ್ರೀಮನ್ಮಹಾರಾಜರವರಿಗೆ ಭಕ್ತಿಪೂರ್ವಕವಾದ ವಂದನೆಗಳನ್ನು ಅರ್ಪಿಸಿ, ನಮ್ಮ ಸಂಸ್ಥಾನದ ದಿವಾನರವರು ನಮ್ಮ ಸಂಘಕ್ಕೆ ಪೋಷಕರಾಗಿರುವದಕ್ಕಾಗಿ ನಮ್ಮಗಳ ಕೃತಜ್ಞತೆಯನ್ನು ಸೂಚಿಸಿ, ಮುಂದಿನ ಅಕ್ಟೋಬರ್ ಮಾಹೆಯಲ್ಲಿ ಮೈಸೂರಿನಲ್ಲಿ ನಡೆಯಬೇಕಾದ ಮಹಾ ಸಭೆ (ಕಾನ್ಫರೆನ್ಸ್) ವಿಷಯದಲ್ಲಿ ಸರ್ವರೂ ಐಕಮತ್ಯದಿಂದ ನಿಂತು ಸರ್ವವಿಧದಲ್ಲೂ ಕ್ರಮವಾದ ಸಲಕರಣೆಯಿಂದ ಕಾರ್ಯ ನೆರವೇರಿಸತಕ್ಕದ್ದೆಂತಲೂ, ಇದಕ್ಕಾಗಿ ಊಟದ ಖರ್ಚನ್ನು ಮ॥ ಮರಿಯಣ್ಣನವರು ವಹಿಸಿಕೊಂಡು ನಡಿಸುವದರಿಂದ ಮೇಲು ಖರ್ಚಿಗಾಗಿ ಆಗಬೇಕಾದ ಸಹಾಯಗಳನ್ನು ಮಾಡಬೇಕಾಗಿರುತ್ತೆಂತಲೂ, ಮತ್ತು ಇದಕ್ಕಾಗಿ ಒಂದು ಕಮಿಟಿ ನೇಮಿಸಲ್ಪಡಬೇಕೆಂತಲೂ ನಗ್ಗರ ಸಭೆಗೆ ಶ್ರುತಪಡಿಸಿದರು.

ಮ॥ ಪುಟ್ಟನಂಜಪ್ಪನವರು ಮೇಲ್ಕಂಡ ವಿಷಯವನ್ನೇ ಅನುಸರಿಸಿ, ಎಲ್ಲರೂ ಐಕಮತ್ಯವನ್ನು ಹೊಂದಿ ಪರಮೇಶ್ವರನ ಸಹಾಯದಿಂದ ಮುಂದೆ ನಡೆಯಬೇಕಾದ ಮಹಾ ಸಭೆಯನ್ನು ನಡಿಸಲು ಉದ್ಯುಕ್ತಪಟ್ಟು ಕಮಿಟಿ ನೇಮಿಸಬೇಕೆಂದು ಪ್ರಾರ್ಥಿಸಿದನು. ಮ॥ ಮರಿಯಣ್ಣನವರು ಮಹಾ ಸಭೆಯಲ್ಲಿ ತಾವು ಮಹಾ ಜನಗಳ ಸೇವೆ ಮಾಡತಕ್ಕ ವಿಷಯದಲ್ಲಿ ಸರ್ವರೂ ತಮಗೆ ಸಹಾಯ ಮಾಡಬೇಕೆಂದು ಸಭೆಯ ಒಕ್ಕಲಿಗರ ಮಹಾಜನರನ್ನೆಲ್ಲಾ ಪ್ರಾರ್ಥಿಸಿದರು. ಪರ್ಷಿಯನ್ ಅಸಿಸ್ಟೆಂಟ್ ಮ॥ ಹಸನಲ್ಲಿಶೇಗ್ ಸಾಹೇಬರು, ಮ॥ ಬ್ಯಾಂಕಿನ ತಿಬ್ಬಣ್ಣನವರು, ಮ॥ ಎಂ. ಸಿಂಗ್ರಯ್ಯನವರು ಮತ್ತು ಮ॥ ಕೆಂಚಯ್ಯನವರು ಸಂಘದ ವಿಷಯವಾಗಿ ಅನೇಕ ಪ್ರೋತ್ಸಾಹಕರಗಳಾದ ವಿಷಯಗಳನ್ನು ಕುರಿತು ಮಾತನಾಡಿದರು. ನಂತರ ಒಂದು ಎಗ್ಸಿಕ್ಯುಟಿವ್ ಕಮಿಟಿ (ಕಾರ್ಯನಿರ್ವಾಹಕಸಭೆ) ಯು ನೇಮಿಸಲ್ಪಟ್ಟಿತು. ಇದಕ್ಕೆ ಮ॥ ಗುಜ್ಜಾರಿ ಮಿಷಿನ್ ಕೆಂಪಣ್ಣನವರ ಗುರುಮೂರ್ತಪ್ಪನವರನ್ನು ಪ್ರೆಸಿಡೆಂಟರನ್ನಾಗಿಯೂ, ಮ್ಯುನಿಸಿಪಲ್ ಕೌನ್ಸಿಲರ್ ಮ॥ ಗೂಳಪ್ಪನವರನ್ನು ವೈಸ್ ಪ್ರೆಸಿಡೆಂಟರನ್ನಾಗಿಯೂ, ಮರಿಮಲ್ಲಪ್ಪನವರ ಹೈಸ್ಕೂಲ್ ಹೆಡ್ ಮಾಸ್ಟರ್ ಮ॥ ಪುಟ್ಟನಂಜಪ್ಪನವರು ಸೆಕ್ರೆಟೆರಿಯವರಾಗಿಯೂ ಇರಬೇಕೆಂದು ಅಕ್ಕಿ ಅಂಗಡಿ ಮ॥ ಮರಿಯಣ್ಣನವರು ಸೂಚಿಸಿದ್ದನ್ನು ಅಕ್ಕಿ ಅಂಗಡಿ ಮ॥ ಲಿ. ಸಿದ್ದಯ್ಯನವರೂ ಮ॥ ಸಿಂಗ್ರಯ್ಯನವರೂ ಅನುಮೋದಿಸಿದರು. ಸರ್ವರೂ ಒಪ್ಪಿದರು. ನಂತರ ಕಾರ್ಯನಿರ್ವಾಹಕಸಭೆಗಾಗಿ ಕೆಲವು ಮೆಂಬರುಗಳು ಚುನಾಯಿಸಲ್ಪಟ್ಟರು.

ಮಹಾ ಸಭೆ ನಡೆಯಲು ಮಾಡಬೇಕಾದ ಏರ್ಪಾಡುಗಳ ಖರ್ಚಿಗಾಗಿ ಒಂದು ಚಂದಾ ಪಟ್ಟಿಯನ್ನು ಹಾಕತಕ್ಕದ್ದೆಂದು ಅಕ್ಕಿ ಅಂಗಡಿ ಮ॥ ಲಿ. ಸಿದ್ದಯ್ಯನವರು ಸೂಚಿಸಿದ್ದನ್ನು ಸ್ಕೂಲ್ ಮಾಸ್ಟರ್ ಮ॥ ಮುದ್ದಪ್ಪನವರು ಅನುಮೋದಿಸಿದರು. ಸರ್ವರೂ ಒಪ್ಪಿದರು.

ತರುವಾಯ ಸಭಾಧ್ಯಕ್ಷರಾದ ಮ॥ ಗೂಳಪ್ಪನವರು ಎದ್ದು ನಿಂತು ಸಭಿಕರನ್ನು ಕುರಿತು ಈ ಕೆಳಗೆ ಕಂಡಂತೆ ಉಪನ್ಯಾಸ ಮಾಡಿದರು —

ಸಹೋದರರೇ, ಈ ದಿವಸ ಟವರ್ ಹಾಲಿನಲ್ಲಿ ಸೇರಿರುವ ಒಕ್ಕಲಿಗ ಮಹಾ ಜನರ ಜನರಲ್ ಮೀಟಿಂಗಿಗೆ ನನನ್ನು ಸಭಾಧ್ಯಕ್ಷನನ್ನಾಗಿ ನೇಮಕ ಮಾಡಿದಕ್ಕಾಗಿ ತಮ್ಮೆಲ್ಲರನ್ನೂ ನಾನು ವಂದಿಸುತ್ತೇನೆ.

ಮ॥ ಕೆ. ಎಚ್. ರಾಮಯ್ಯನವರೂ ಮ॥ ಪುಟ್ಟನಂಜಪ್ಪನವರೂ ಶ್ರಮ ತೆಗೆದುಕೊಂಡು ತಮ್ಮಗಳ ತಿಳಿವಳಿಕೆಗಾಗಿ ಒಂದು ಘಂಟೆ ಕಾಲ ಒಕ್ಕಲಿಗರ ಸಂಘ ಪ್ರಾರಂಭಿಸಿದ ಮೊದಲುಗೊಂಡು ಇದುವರೆಗೆ ನಡೆದಿರುವ ಕಾರ್ಯಗಳನ್ನೂ, ಮುಂದೆ ನಡೆಯಬೇಕಾಗಿರುವ ಕಾರ್ಯಗಳನ್ನೂ ಮತ್ತು ಸಂಘದ ನಿಬಂಧನೆಗಳನ್ನೂ ಕುರಿತು ಪರಿಷ್ಕಾರವಾಗಿ ಸೂಚಿಸಿದ ಉಪನ್ಯಾಸಗಳನ್ನು ಸಾವಧಾನಚಿತ್ತದಿಂದ ಕೇಳಿ ಮೈಸೂರಿನಲ್ಲಿ ಒಕ್ಕಲಿಗರ ಸಂಘದ ಒಂದು ಬ್ರಾಂಚನ್ನೂ ಇದಕ್ಕೆ ಒಂದು ಎಗ್ಸಿಕ್ಯುಟಿವ್ ಕಮಿಟಿ ಅಂದರೆ ಕಾರ್ಯನಿರ್ವಾಹಕ ಸಭೆಯನ್ನೂ ನೇಮಿಸಿದ್ದಕ್ಕಾಗಿ ನಾನು ಬಹಳ ಸಂತೋಷಪಡುತ್ತೇನೆ.

ಮ॥ ರಾಮಯ್ಯನವರು ಹೇಳಿದಂತೆ ಪ್ರಪಂಚದಲ್ಲಿ ಅನಿತ್ಯವಾದ ಮನುಷ್ಯನಿಗೆ ಪರೋಪಕಾರವೇ ಮುಖ್ಯವಾದ್ದರಿಂದ ಈ ಕಾಲದಲ್ಲಿ ನಮ್ಮ ಮೈಸೂರಿನಲ್ಲಿ ನಡೆಯುವ ಮಹಾ ಸಭೆಗೆ ಸಂಸ್ಥಾನದ ಎಲ್ಲಾ ಕಡೆಗಳಿಂದಲೂ ದಯಮಾಡಿಸುವ ನಮ್ಮ ಕುಲಬಾಂಧವರುಗಳಾದ ನಮ್ಮ ಮಿತ್ರಮಂಡಲಿಯನ್ನು ಬರಮಾಡಿಕೊಂಡು ಅವರಿಗೆ ನಮ್ಮಿಂದ ಆಗಬೇಕಾದ ಆದರಣೆ ಮತ್ತು ಸೇವೆಯನ್ನು ಅತ್ಯಾದರದಿಂದ ಸಲ್ಲಿಸಿ ನಾವು ಧನ್ಯರಾಗತಕ್ಕ ಸಮಯವು ನಮಗೆ ದೊರೆತಿರುವುದರಿಂದ ಈ ಕಾಲದಲ್ಲಿ ನಾವು ಉದಾಸೀನರಾಗಿರದೆ ಕೈಲಾದಷ್ಟು ಕೆಲಸವನ್ನೂ ಉದಾರವಾದ ಮನಸ್ಸನ್ನೂ ದ್ರವ್ಯವನ್ನೂ ಸಹಾ ಕೊಟ್ಟು ಕೀರ್ತಿ ಸಂಪಾದಿಸಿಕೊಳ್ಳತಕ್ಕ ಕೆಲಸವು ನಮ್ಮದಾಗಿರುತ್ತೆ. ಇದರಿಂದ ಪರಮೇಶ್ವರನು ಮೆಚ್ಚಿ ನಮ್ಮಗಳಿಗೆ ಯಾವ ತೊಂದರೆ ಬಂದಾಗ್ಯೂ ಅದರಿಂದ ಪಾರು ಮಾಡಿ ನಮ್ಮನ್ನು ಉದ್ಧಾರ ಮಾಡುತ್ತಾನೆಂದು ನಿಸ್ಸಂದೇಹವಾಗಿ ಹೇಳಬಹುದು. ಹ್ಯಾಗೆಂದರೆ ಈ ಸಂಘಕ್ಕೆ ಸಹಾಯಕವಾದ ಕೆಲಸವನ್ನು ನಮ್ಮ ಸ್ನೇಹಿತರೊಡನೆ ಇದುವರೆಗೆ ನಾನು ಸ್ವಲ್ಪವೇ ಮಾಡಿದ್ದಾಗ್ಯೂ ಇಷ್ಟು ಮಾತ್ರಕ್ಕೇನೇ ಈಶ್ವರನಿಗೆ ನನ್ನ ಮೇಲೆ ಕೃಪೆಯುಂಟಾಗಿ ವ್ಯಾಧಿಪೀಡಿತಳಾಗಿದ್ದ ನನ್ನ ಕುಟುಂಬವನ್ನು ಸಂರಕ್ಷಿಸಿದನೆಂದು ದೃಢವಾಗಿ ನಂಬಿದ್ದೇನೆ. ಆದ್ದರಿಂದ ಕುಲಸ್ವಾಮಿಗಳ ಸೇವೆಗಾಗಿ ನಾವು ಎಷ್ಟು ಶ್ರಮಪಟ್ಟಾಗ್ಯೂ ಅದು ಈಶ್ವರನಿಗೆ ಪ್ರೀತಿಯಾದದ್ದೆಂಬುವದಕ್ಕೆ ಸಂದೇಹವಿಲ್ಲ.

ಅಪರೆ ಈ ಸಂದರ್ಭದಲ್ಲಿ ಮತ್ತೊಂದು ಮುಖ್ಯವಾದ ವಿಷಯವನ್ನು ತಮ್ಮಗಳಿಗೆ ವಿಜ್ಞಾಪಿಸಲು ಅಪೇಕ್ಷಿಸುತ್ತೇನೆ. ಏನಂದರೆ—ಯಾವನಾದರೂ ಒಂದು ದೊಡ್ಡ ಕೆಲಸವನ್ನು ನಡಿಸಲು ಉದ್ಯುಕ್ತಪಟ್ಟರೆ ಆದರೆ ಅದಕ್ಕೆ ಅನೇಕ ಪ್ರತಿಬಂಧಕಗಳು ಬರುವುದುಂಟು. ಅಷ್ಟು ಮಾತ್ರದಲ್ಲೇ ಧೈರ್ಯ ಕೆಡದೆ ಈಶ್ವರನ ಮೇಲೆ ಭಾರವಿಟ್ಟು ನಮ್ಮಗಳಲ್ಲಿರುವ ಗುಂಪುಗಳ ವೈಷಮ್ಯ, ಪರಸ್ಪರ ಅಸೂಯೆ ಎಂಬ ಸಣ್ಣ ಸಣ್ಣ ಕೊರತೆಗಳನ್ನು ತ್ಯಜಿಸಿ, ಸರ್ವರೂ ಏಕಮನಸ್ಕರಾಗಿ ನಮ್ಮ ಬುದ್ಧಿ ಸಾಹಸಗಳನ್ನು ವ್ಯಯಮಾಡಿ, ಹಿಡಿದ ಕೆಲಸವನ್ನು ಸಾಧಿಸಬೇಕು. ಗಾಢಾಂಧಕಾರದಲ್ಲಿದ್ದ ನಮ್ಮ ಒಕ್ಕಲಿಗ ಜನರಿಗೆ ಬೆಳಕು ತೋರಿಸುವುದರಲ್ಲಿ ಉದ್ಭವಿಸಿರುವ ಈ ನಮ್ಮ ಒಕ್ಕಲಿಗರ ಸಂಘದ ವಿಷಯದಲ್ಲಿ ಯಾರು ಅನ್ಯಥಾ ಯೋಚಿಸುವರೋ ಅವರ ಯೋಚನೆಗೆ ಈಶ್ವರನು ಸಹಾಯನಾಗಲಾರನು. ಈಶ್ವರನ ಕಟಾಕ್ಷಕ್ಕೆ ಪಾತ್ರವಾದ ಈ ನಮ್ಮ ಸಂಘವು ಅವನ ಆಶೀರ್ವಾದದಿಂದ ಏಳಿಗೆಗೆ ಬರಲು ಯಾವ ಸಂದೇಹವೂ ಇಲ್ಲ. ಈ ಸಂಘದ ಆಶಯವನ್ನು ಸಂಪೂರ್ಣವಾಗಿ ತಿಳಿಯದೆ ಇದಕ್ಕೆ ಕೆಲವರು ವಿರೋಧವಾಗಿ ಹೇಳಬಹುದು. ಅದಕ್ಕೆ ವಿವೇಕಿಗಳು ಕಿವಿಗೊಡಬಾರದು. ನಾನು ಬೆಂಗಳೂರು ಮಹಾ ಸಭೆಯ ವಿಜೃಂಭಣೆಯನ್ನು ನೋಡಿದವನು ಮತ್ತು ಅಲ್ಲಿನ ಎಗ್ಸಿಕ್ಯುಟಿವ್ ಕಮಿಟಿಗೆ ಮೆಂಬರೂ ಆಗಿರುವೆನು. ಮೆಂಬರುಗಳೆಲ್ಲರೂ ದೊಡ್ಡ ಮನುಷ್ಯರೂ, ವಿವೇಕಶಾಲಿಗಳೂ, ಮತ್ತು ಸತ್ಯವಂತರೂ ಎಂಬುವದಕ್ಕೆ ಯಾವ ಸಂದೇಹವೂ ಇಲ್ಲವೆಂದು ನಾನು ಧೃಢವಾಗಿ ಹೇಳುತ್ತೇನೆ. ಇವರಲ್ಲಿ ಕೆಲವರು ಸಾವಿರಾರು ರೂಪಾಯಿಗಳನ್ನು ಚಂದಾ ಹಾಕಿರುವದರಿಂದ ಸಂಘದ ಅಭಿವೃದ್ಧಿಯನ್ನೇ ಸದಾ ಕೋರುವವರಾಗಿದ್ದಾರೆ. ಸರ್ವರೂ ಇವರ ಮೇಲ್ಪಂಕ್ತಿಯನ್ನು ಅನುಸರಿಸಿ ಉದಾರಮನಸ್ಸಿನಿಂದ ಚಂದಾ ಹಾಕುವದಾದರೆ ನಮ್ಮ ಸಂಘದ ಕಾರ್ಯಗಳೆಲ್ಲವೂ ಜಾಗ್ರತೆಯಾಗಿ ನೆರವೇರುವದಲ್ಲದೆ ಈ ಸಂಘವು ಶಾಶ್ವತವಾಗಿ ನಡೆಯುವದರಿಂದ ನಮ್ಮ ಜನ್ಮಗಳೆಲ್ಲವೂ ಸಫಲವಾಗುವವು.

"ಸತ್ಯಮೇವ ಜಯತೇ, ನಾನೃತಂ" ಎಂಬಂತೆ ಸತ್ಯಕ್ಕೆ ಜಯವೇ ಹೊರತು ಅಸತ್ಯಕ್ಕೆ ಎಂದಿಗೂ ಜಯವಾಗಲಾರದು. ಆದ್ದರಿಂದ ಈ ನಮ್ಮ ಕುಲದ ಏಳಿಗೆಯ ಕೆಲಸಕ್ಕೆ ಸಹಾಯ ಮಾಡಲು ಯಾರೂ ಹಿಂದೆಗೆಯಲಾರರೆಂದು ಅಭಿಪ್ರಾಯಪಡುತ್ತೇನೆ. ಪ್ರತಿ ಒಬ್ಬರೂ ತಮ್ಮ ಶಕ್ತಿ ಮೀರಿ ಸಹಾಯ ಮಾಡದೇ ಹೋದರೆ ಈ ಕಾರ್ಯ ನೆರವೇರಲು ಸಾಧ್ಯವಾಗುವದಿಲ್ಲ.

ಒಕ್ಕಲಿಗರ ಸಂಘವು ಸ್ಥಾಪಿಸಲ್ಪಟ್ಟು ಒಕ್ಕಲಿಗರ ಪತ್ರಿಕೆ ಪ್ರಕಟಿಸಿದಂದಿನಿಂದಲೂ "ಒಕ್ಕಲಿಗರು" ಎಂಬ ಶಬ್ದಕ್ಕೆ ಎಷ್ಟು ಗೌರವ ಉಂಟಾಗಿದೆಯೋ ಅದು ತಮಗೆ ತಿಳಿಯದೇ ಇರಲಾರದು. ಇಲ್ಲಿ ನಾವು ಮಾಡಬೇಕೆಂದಿರುವ ಕಾರ್ಯವು ಮುಖ್ಯವಾಗಿರುವದು. ಈ ವರ್ಷ ಒಕ್ಕಲಿಗರ ಮಹಾ ಸಭೆಯು ಈ ಊರಿನಲ್ಲಿ ಅಕ್ಟೋಬರ್ ತಿಂಗಳ ಆಖೈರಿನಲ್ಲಿ ನಡೆಯಬೇಕೆಂಬುದು ತಮ್ಮಗಳಿಗೆ ತಿಳಿಯದ ವಿಷಯವಲ್ಲ. ಹೋದ ವರ್ಷದ ಮಹಾ ಸಭೆಗೆ ಬೆಂಗಳೂರಿಗೆ ಬಂದಿದ್ದ ಮಹನೀಯರ ಊಟ ಉಪಚಾರಾದಿಗಳನ್ನು ಮ॥ ಮಾದಣ್ಣನವರು ಮತ್ತು ಮ॥ ಮುನಿಸ್ವಾಮಪ್ಪನವರು ಮಾಡಿದಂತೆ ಈ ನಗರದ ಸಭೆಗೆ ಇಲ್ಲಿಗೆ ಬರುವ ಮಹನೀಯರ ಊಟ ಉಪಚಾರದ ಖರ್ಚನ್ನು ಅಕ್ಕಿ ಅಂಗಡಿ ಮ॥ ಮರಿಯಣ್ಣನವರು ಒಪ್ಪಿಕೊಂಡಿರುವದಕ್ಕಾಗಿ ನಾವು ಅವರನ್ನು ಎಷ್ಟು ವಂದಿಸಿದಾಗ್ಯೂ ತೀರದು. ಈ ಮಹಾ ಸಭೆಗೆ ಶ್ರೀಮನ್ಮಹಾರಾಜರವರನ್ನೂ ಮತ್ತು ನಮ್ಮ ಸಂಘದ ಪೋಷಕರಾದ ದಿವಾನ್ ಮ॥ ವಿ. ಪಿ. ಮಾಧವರಾಯರವರನ್ನೂ ಕರೆಸಬೇಕೆಂಬ ಉದ್ದೇಶವಿರುವದರಿಂದ ನಾನು ಮೊದಲು ಹೇಳಿದಂತೆ ತಾವೆಲ್ಲರೂ ಸಣ್ಣ ಸಣ್ಣ ಕೊರತೆಗಳೇನಿದ್ದಾಗ್ಯೂ ಲಕ್ಷ್ಯಕ್ಕೆ ತರದೆ ಏಕಮತದಿಂದ ಉತ್ಸಾಹಪರರಾಗಿ ಕಾರ್ಯನಿರ್ವಹಿಸಬೇಕೆಂದು ಪ್ರಾರ್ಥಿಸುತ್ತೇನೆ.

ಮತ್ತು ನೀವು ನನ್ನನ್ನು ಮೈಸೂರು ಕಾರ್ಯನಿರ್ವಾಹಕಸಭೆಗೆ ವೈಸ್ ಪ್ರೆಸಿಡೆಂಟರನ್ನಾಗಿ ನೇಮಿಸಿದಕ್ಕಾಗಿ ಮತ್ತೊಂದಾವರ್ತಿ ತಮ್ಮನ್ನು ವಂದಿಸುತ್ತೇನೆ.

ಎಂ. ಪುಟ್ಟನಂಜಪ್ಪ, ಸೆಕ್ರೆಟರಿ

ಇಂಡಿಯಾ ದೇಶದ ವೃತ್ತಾಂತಗಳು.

ಹಿಂದಿನ ವಾರ ನಾಗಪುರದಲ್ಲಿ ಒಂದು ಕಾರ್ಖಾನೆಗೆ ಬೆಂಕಿ ಬಿದ್ದು ಅದರಲ್ಲಿ ಕೆಲಸ ಮಾಡುತ್ತಿದ್ದವರ ಪೈಕಿ ಹನ್ನೊಂದು ಮಂದಿ ಸತ್ತು ಹೋದರು.

***

ವೈಸ್‌ರಾಯಿ ಲಾರ್ಡ್ ಮಿಂಟೋರವರ ಇಬ್ಬರು ಕುಮಾರ್ತೆಯರೂ ವಿಲಾಯಿತಿಯಿಂದ ಅಕ್ಟೋಬರ್ ತಿಂಗಳಲ್ಲಿ ಹಿಂದುಸ್ಥಾನಕ್ಕೆ ಬರುವವರಾಗಿದ್ದಾರೆ.

***

ಕೆ. ಜಾನಕಮ್ಮನೆಂಬೊಬ್ಬ ಮಳೆಯಾಳಿ ಯುವತಿಯು ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ, ಈಗ ತಲಚೇರಿ ಪೋಸ್ಟ್ ಆಫೀಸಿನಲ್ಲಿ ಗುಮಾಸ್ತೆ ಕೆಲಸಕ್ಕೆ ಸೇರಿಕೊಂಡಿದ್ದಾಳೆ.

***

ಕಳೆದ ವಾರ ಹಿಂದುಸ್ಥಾನದಲ್ಲಿ ಪ್ಲೇಗ್ ಉಪದ್ರವ ದೆಸೆಯಿಂದ ೭,೩೩೫ ಮಂದಿ ಕಾಲವಾದರು. ಈ ಪೈಕಿ ಪಂಜಾಬಿನಲ್ಲಿ ೧,೯೭೦, ಬೊಂಬಾಯಿ ಅಧಿಪತ್ಯದಲ್ಲಿ ೯೯೯, ಮೈಸೂರು ಸಂಸ್ಥಾನ, ಬಿಹಾರ್ ಅಧಿಪತ್ಯ ೧೩೦.

***

ಬಳ್ಳಾರಿ ಜಿಲ್ಲೆಯ ಕೆಲವು ಗ್ರಾಮಗಳಲ್ಲಿ ಅನೇಕಲ್ಲಾಗಳ ಯಾದ್ದರಿಂದ ರೈತರು ಕಷ್ಟಪಟ್ಟು ಬೆಳೆದಿದ್ದ ಫಸಲು ಕೆಟ್ಟುಹೋಯಿತು. ಹೀಗೆ ಕೆಟ್ಟುಹೋದಂಥಾ ರೈತರಿಗೆ ಕಂದಾಯವನ್ನು ರಿಮಿಷನ್ ಮಾಡುವುದಕ್ಕೆ ಗವರ್ನಮೆಂಟಿನವರು ಕಲೆಕ್ಟರಿಗೆ ಅಧಿಕಾರ ಕೊಟ್ಟಿದ್ದಾರೆ.

***

ಬೊಂಬಾಯಿ ಅಧಿಪತ್ಯಕ್ಕೆ ಗವರ್ನರಾಗಿ ನೇಮಿಸಲ್ಪಟ್ಟ ಸರ್ ಜಾರ್ಜ್ ಕ್ಲಾರ್ಕ್ ಯವರು ಮುಂದಿನ ಅಕ್ಟೋಬರ್ ೭ ರಲ್ಲಿ ವಿಲಾಯಿತಿಯಿಂದ ಹೊರಟು, ಪರ್ಸಿಯಾ ಎಂಬ ಹಡಗಿನಲ್ಲಿ ಪ್ರಯಾಣ ಮಾಡಿಕೊಂಡು, ತಾ. ೧೯ ರಲ್ಲಿ ಬೊಂಬಾಯಿಯನ್ನು ತಲಪುವವರಾಗಿದ್ದಾರೆಂದು ತಂತೀ ವರ್ತಮಾನ ಬಂದಿದೆ.

***

ಒಂದಾಣೆ ಬಾಬತು ಹೊಸ ನಿಕ್ಕಲ್ ಲೋಹದ ನಾಣ್ಯವು ಚಲಾವಣೆಗೆ ಬಂದ ಮೇಲೆ ಬೊಂಬಾಯಿ ಟಂಕಸಾಲೆಯವರು ಈವರೆಗೆ ೨೦ ಲಕ್ಷ ನಾಣ್ಯಗಳನ್ನು ತಯಾರುಮಾಡಿಕೊಟ್ಟಿದ್ದರೂ ಜನರು ೧—೨ ಕೊಟ್ಟು ಆ ನಾಣ್ಯಗಳನ್ನು ಕೊಂಡುಕೊಳ್ಳುವದರಲ್ಲಿ ಉತ್ಸುಕರಾಗಿರೋಣದರಿಂದ ಅವು ಸಿಕ್ಕುವುದೇ ದುರ್ಲಭವಾಗಿರುವುದು.

***

ಬಂಗಾಳಾ ಅಧಿಪತ್ಯಕ್ಕೆ ಸೇರಿದ ಭಾಗಲ್‌ಪುರ ಡಿವಿಜನ್ ಸೋನ್‌ಬರ್ಸಾದ ಮಹಾರಾಜರವರನ್ನು ಗುಂಡು ಹೊಡೆದು ಕೊಲ್ಲಬೇಕೆಂದು ಸಹಕಾರಿಗಳು ಮೂವರು ಜನರನ್ನು ಹಿಡಿದು ಮೊಕದ್ದಮೆ ತಂದಿದ್ದರು. ಸೆಷನ್ಸ್ ಜಡ್ಜರು ಫಿರ್ಯಾದಿ ಕಡೆಯ ಸಾಕ್ಷಿ ಹೇಳಿಕೆಯನ್ನು ನಂಬದೆ ಮೊಕದ್ದಮೆಯನ್ನು ವಜಾ ಮಾಡಿದ್ದಾರೆ.

***

ಬಿಹಾರ ಅಧಿಪತ್ಯಕ್ಕೆ ಸೇರಿದ ಬೆಲ್ಗೆರ್ ಪಟ್ಟಣದಲ್ಲಿ ಭತ್ತ ಕುಟ್ಟುವ ಒಂದು ಭಾರೀ ಕಾರ್ಖಾನೆಗೆ ಕಳೆದ ವಾರ ಬೆಂಕಿಬಿದ್ದು ಕಟ್ಟಡವೂ ಯಂತ್ರಗಳೂ ಹಾಳಾದವು. ಅದರ ಧಾನ್ಯತುಂಬಿದ್ದ ಉಗ್ರಾಣಗಳೂ ಸಾಮಾನುಗಳೂ ಹೊರಕ್ಕೆ ಬೇಗನೆ ಸಾಗಿಸಿದ್ದರಿಂದ ಉಳಿದುಕೊಂಡವು. ಆದಾಗ್ಯೂ ಸಾಹುಕಾರರಿಗೆ ಒಂದೂವರೆ ಲಕ್ಷ ರೂಪಾಯಿಗಳ ನಷ್ಟವಾಗಿರುತ್ತದೆ.

***

ಆಗ್ರಾ ಸಂಸ್ಥಾನದ ಅಮೀರರು ತಮ್ಮ ರಾಜ್ಯದಲ್ಲಿ ಅಂಚೆ ಇಲಾಖೆಯನ್ನು ಇಟ್ಟು ನಡಿಸಬೇಕೆಂದು ಹಿಂದೂಸ್ಥಾನದಲ್ಲಿರುವಂತೆ ಪದಾರ್ಥಗಳನ್ನು ಮಾಡಿಸುತ್ತಿದ್ದಾರೆ. ಎಲ್ಲಾ ಕಡೆಗಳಲ್ಲೂ ಕಾಗದಗಳನ್ನು ಹಾಕುವುದಕ್ಕೆ ಅಂಚೆ ಪೆಟ್ಟಿಗೆಗಳನ್ನು ಇಡಬೇಕೆಂದೂ, ಕಾಗದಗಳ ಮೇಲೆ ಸ್ಟಾಂಪು ತಲೆ ಚೀಟಿಗಳನ್ನು ಅಚ್ಚು ಹಾಕಿಸಬೇಕೆಂತಲೂ ಹುಕುಂ ಕೊಟ್ಟಿದ್ದಾರೆ.

***

ಕಲ್ಕತ್ತಾ ಪಟ್ಟಣದಲ್ಲಿ ಪೋಲೀಸ್ ನವರ ಕಿರುಕುಳವನ್ನು ಸಹಿಸಲಾರದೆ ಎಂಟು ಹತ್ತು ಸಾವಿರ ಜನಗಳು ಸ್ವದೇಶೀಯರಾದ ಕೆಲವರ ಸಹಾಯದಿಂದ ತಮ್ಮ ತಮ್ಮ ಮೇಲ್ಪಟ್ಟ ಅಧಿಕಾರಿಗಳಿಗೆ ಅರ್ಜಿಗಳನ್ನು ಬರೆದುಕೊಂಡು, ತಮ್ಮ ಸಂಬಳ ಸಾಲದೆ ಇರುವದಕ್ಕೆ ತೃಪ್ತಿಕರವಾಗಿಲ್ಲವೆಂತಲೂ, ಆದಕಾರಣ ಅಧಿಕಾರಿಗಳು ಕೆಲಸಕ್ಕೆ ರಜೆ ಕೊಟ್ಟು ಹೀಗೆ ಬಾಕಿ ಹೋಗಬೇಕಾಗಿರೋಣವರಿಂದ ಅದಕ್ಕೆ ಸರ್ಕಾರದ ಅನುಜ್ಞೆಯಾಗಬೇಕೆಂತಲೂ ಕೇಳಿರುತ್ತಾರೆ.

***

ಬೊಂಬಾಯಿ ಪಟ್ಟಣದಲ್ಲಿರುವ ಬನಿಯಾ ಸಾಹುಕಾರರಾದ ಪ್ರಾಣಜೀವನದಾಸ್ ಮತ್ತು ನಾನಾಲ್‌ಚಂದ್ ಪಟೇಲ್‌ಜಿ ಎಂಬ ಪ್ರಖ್ಯಾತರು ಆ ಪಟ್ಟಣದಲ್ಲಿರುವ ತಮ್ಮ ಬನಿಯಾ ಜಾತಿಯ ಬಾಲಕರ ವಿದ್ಯಾಭ್ಯಾಸಕ್ಕೋಸ್ಕರ ಒಂದು ದೊಡ್ಡ ಪಾಠಶಾಲೆಯನ್ನು ಸ್ಥಾಪಿಸುವುದಕ್ಕೆ ಇಬ್ಬರೂ ಸೇರಿ ೫೫,೦೦೦ ರೂಪಾಯಿ ಕೊಟ್ಟಿರುತ್ತಾರೆ. ಇವರ ಉದಾರ ಮನಸ್ಸನ್ನು ನೋಡಿ ಅವರ ಜಾತಿಯ ಜನರೂ ಇತರ ದೊಡ್ಡ ಮನುಷ್ಯರೂ ಅವರಿಬ್ಬರನ್ನೂ ಕೊಂಡಾಡುತ್ತಿದ್ದಾರೆ.

***

ಡಿಸೆಂಬರ್ ತಿಂಗಳ ಕಡೇ ವಾರದಲ್ಲಿ ನಡೆಯುವ ಹಿಂದುಸ್ಥಾನ ರಾಷ್ಟ್ರೀಯ ಸಭೆಯು ಈ ಸಲ ನಾಗಪುರದಲ್ಲಿ ಕೂಡುವುದು. ಈ ಸಭೆಯ ಅಧ್ಯಕ್ಷತೆಯನ್ನು ಇನ್ನೂ ಯಾರೂ ಒಪ್ಪಿಕೊಳ್ಳಲಿಲ್ಲ. ಡಾಕ್ಟರ್ ರಾಷ್ ಬಿಹಾರಿ ಘೋಷ್ ಯವರೋ ನವಾಬ್ ಸಯ್ಯದ್ ಮಹಮದ್ ಯವರೋ ಅಧ್ಯಕ್ಷರಾಗಬಹುದೆಂದು ಹೇಳುತ್ತಾರೆ. ಬೊಂಬಾಯಿ ಪಟ್ಟಣದ ಸರ್ ಫಿರೋಜ್ ಷಾ ಮೆಹತಾಯವರನ್ನು ಅಧ್ಯಕ್ಷರನ್ನಾಗಿ ಮಾಡಬೇಕೆಂದು ಕೆಲವರು ಕೇಳಿದ ಹಾಗೂ ಅವರು ಆ ಪದವಿಯನ್ನು ಇನ್ಕಾರ ಮಾಡಿದ ಹಾಗೂ ಒಂದು ಪತ್ರಿಕೆಯು ಹೇಳುತ್ತದೆ.

***

ಮೊಗಲಾಯಿ ಚಕ್ರವರ್ತಿಗಳ ಸ್ಮೃತಿ ಷಹಾ ಷುಜಾ ಎಂಬಾತನ ವಂಶೀಕರಿಂದ ಅಫ್ಘಾನಿಸ್ಥಾನದ ಅಮೀರರು ೫೦,೦೦೦ ರೂಪಾಯಿಗೆ ಒಂದು ವಜ್ರವನ್ನು ಕೊಂಡುಕೊಂಡರು. ಈಗ ಈ ವಜ್ರವು ರಾವಲ್‌ಪಿಂಡಿ ಪಟ್ಟಣದ ಇಂಗ್ಲಿಷ್ ಸರ್ಕಾರಿ ಖಜಾನೆಯಲ್ಲಿರುತ್ತದೆ. ಅದು ಸುಮಾರಾಗಿ ನಾಲ್ಕೈದು ಲಕ್ಷ ರೂಪಾಯಿ ಆಗುತ್ತೆಂದು ಹೇಳುತ್ತಾರೆ. ಈ ವಜ್ರವನ್ನು ಅನೇಕರು ನನ್ನದು ತನ್ನದೆಂದು ಅರ್ಜಿ ಹಾಕಿ ಕೇಳುತ್ತಿದ್ದಾರೆ. ಇವರುಗಳ ಕೊಡೆದಾಟವೆಲ್ಲಾ ಪೂರೈಸಿದ ಮೇಲೆ ಇದನ್ನು ಅಮೀರರ ವಶಕ್ಕೆ ಕೊಡತಕ್ಕದ್ದೆಂದು ಗವರ್ನಮೆಂಟಿನವರು ತಡೆದು ಇಟ್ಟುಕೊಂಡಿರುವಂತೆ ಪ್ರಕಟವಾಗಿದೆ.

ಮಂಗಳೂರು ಪ್ರಾಂತ್ಯದಲ್ಲಿ ಹಿಂದೂಗಳ ಆಚಾರವಿಚಾರಗಳನ್ನು ಈಗಿನ ಕಾಲಕ್ಕೆ ತಕ್ಕಂತೆ ಬದಲಾವಣೆ ಮಾಡುವುದರಲ್ಲಿ ತುಂಬಾ ಶ್ರಮಪಡುತ್ತಿರುವ ಮೆ॥ ರಾಮಚಂದ್ರರಾಯರು ಕಳೆದ ತಿಂಗಳು ಆದೇ ಮಂಗಳೂರಿನ ಬಳಿ ಇರುವ ಕಾದ್ರಿ ಎಂಬ ಸ್ಥಳದಲ್ಲಿ ಒಂದು ಅನಾಥಶಾಲೆಯನ್ನು ಸ್ಥಾಪನೆ ಮಾಡಿದಾರೆ. ಈ ಕಟ್ಟಡವನ್ನು ಕಲೆಕ್ಟರಾದ ಖಾನ್ ಸಾಹೆಬ್ ಎಂ. ಅಜೀಜುದ್ದೀನ್ ಸಾಹೆಬ್ ಬಹದೂರ್ ಯವರು ಪ್ರತಿಷ್ಠೆ ಮಾಡಿ ಪ್ರಾರಂಭಿಸಿದರು. ವಿಧವೆಯರನ್ನೂ ಅನಾಥ ಮಕ್ಕಳನ್ನೂ ಈ ನಿಲಯದಲ್ಲಿಟ್ಟು ಅವರಿಗೆ ವಿದ್ಯೆ ಬುದ್ಧಿ ಕಸಬು ಮುಂತಾದುವನ್ನು ಕಲಿಸಿಕೊಡುತ್ತಾರೆ.

❖❖❖

ಪಂಜಾಬ್ ಆಧಿಪತ್ಯಕ್ಕೆ ಸೇರಿದ ಚೀನಾಬ್ ನದೀ ಪ್ರಾಂತ್ಯದಲ್ಲಿ ಹೊಸದಾಗಿ ಕಟ್ಟಲ್ಪಟ್ಟಿರುವ ಲೈಯಲ್‌ಪುರದಲ್ಲಿ ಒಬ್ಬ ಭಿಕ್ಷುಕನು ಲಾಲಾ ಲಜಪತ್ ರಾಯರವರನ್ನು ಸರ್ಕಾರದವರು ಗಡೀಪಾರು ಮಾಡಿದ ವಿಚಾರವನ್ನು ಕುರಿತು ಹಾಡುಕಟ್ಟಿ ಬೀದಿ ಬೀದಿಗಳಲ್ಲೂ ಮನೆಗಳ ಮೇಲೂ ಹೇಳುತ್ತಾ ಭಿಕ್ಷವೆತ್ತುತ್ತಾ ಇದ್ದನು. ಅಲ್ಲಿನ ಪೋಲೀಸಿನವರು ಅವನನ್ನು ಹಿಡಿದು ಬಂದೀಖಾನೆಯಲ್ಲಿ ಹಾಕಿಕೊಂಡಿದ್ದರು. ಈ ವಿಚಾರವು ಗವರ್ನಮೆಂಟಿಗೆ ತಿಳಿದ ಕೂಡಲೇ ಅವನನ್ನು ಬಂದೀಖಾನೆಯಿಂದ ಬಿಟ್ಟುಬಿಡಬೇಕೆಂದು ಹುಕುಂ ಕೊಟ್ಟಿರುವುದರಿಂದ ಪೋಲೀಸಿನವರು ಅವನನ್ನು ಬಿಡುಗಡೆ ಮಾಡಿದರು.

❖❖❖

ಕಾಯಿಲೆಯವರನ್ನು ಆರೈಕೆ ಮಾಡುವಂಥಾ ನರ್ಸ್ ಎಂಬ ದಾದಿಯರನ್ನು ತರಪೇತು ಮಾಡುವುದು ಅವಶ್ಯವೆಂದು ಹೇಳಿ, ಇಂಡಿಯಾ ಗವರ್ನರ್ ಜನರಲ್‌ರವರ ಪತ್ನೀರಾದ ಲೇಡಿ ಮಿಂಟೋ ಯವರು ಒಂದು ಫಂಡನ್ನು ಏರ್ಪಡಿಸಿರುತ್ತಾರಷ್ಟೆ. ಈ ಫಂಡಿನ ಕಮಿಟಿಯವರು ಕಳೆದ ವಾರ ಸಿಂಲಾ ಪಟ್ಟಣದಲ್ಲಿ ಸಭಾ ಸೇರಿ, ಕಳೆದ ವರುಷದ ರಿಪೋರ್ಟನ್ನೂ ಜಮಾಖರ್ಚನ್ನೂ ಪಾಸ್ ಮಾಡಿದರು. ಲೇಡಿ ಮಿಂಟೋರವರೇ ಸಭಾನಾಯಕಿಯಾಗಿದ್ದರು. ಈ ಫಂಡಿನಲ್ಲಿ ೩ ಲಕ್ಷ ರೂಪಾಯಿ ಉಳಿದಿರುತ್ತದೆ. ಈ ವರುಷ ಲೇಡಿ ಮಿಂಟೋರವರು ಏರ್ಪಡಿಸಿದ ಫ್ಯಾನ್ಸಿ ಫೇಟ್ ಎಂಬ ವಿನೋದದಿಂದ ಈ ಫಂಡಿಗೆ ೨೦ ಸಾವಿರ ರೂಪಾಯಿ ದೊರೆತಿರುತ್ತದೆ. ಇದಲ್ಲದೆ ಜಯಪುರದ ಮಹಾರಾಜರವರು ೧೦ ಸಾವಿರ ರೂಪಾಯಿ ದಯಪಾಲಿಸಿದರು.

❖❖❖

ರಾಜಮಹೇಂದ್ರಿ ಜಿಲ್ಲೆಗೆ ಸೇರಿದ ಕಾಕಿನಾಡಾ ಪಟ್ಟಣದಲ್ಲಿ ಪ್ರಜಾ ಶಾಂತಿಗೆ ಭಂಗವುಂಟಾಗಿರುವುದೆಂದು ಮದರಾಸ್ ಸರ್ಕಾರದವರು ಭಾವಿಸಿ, ಶೀಘ್ರವಾಗಿ ಅಲ್ಲಿಗೆ ಹೆಚ್ಚು ಪೋಲೀಸ್ ದಿಟ್ಟಿಂದಿಯನ್ನು ಕಳುಹಿಸಿ, ಅದರ ಸಂಬಳವನ್ನು ಅಲ್ಲಿನ ಪ್ರಜೆಗಳಿಂದಲೇ ವಸೂಲು ಮಾಡಬೇಕೆಂದು ಹುಕುಂ ಕೊಟ್ಟರು. ಈಚೆಗೆ ಅಲ್ಲಿನ ಮ್ಯುನಿಸಿಪಾಲಿಟಿಯ ಮೀಟಿಂಗಿನಲ್ಲಿ ಮೆಂಬರುಗಳು ಸೇರಿದ್ದಾಗ ಈ ಶೀಘ್ರವಾದ ಪೋಲೀಸನ್ನು ಮದರಾಸ್ ಸರ್ಕಾರದವರು ನೇಮಿಸಿದ್ದಕ್ಕೆ ಕಾರಣವಿಲ್ಲವೆಂತಲೂ ಅದನ್ನು ಕೂಡಲೇ ರಜಾ ಮಾಡಿಬಿಡಬೇಕೆಂತಲೂ ತೀರ್ಮಾನಮಾಡಿ ಗವರ್ನಮೆಂಟಿಗೆ ಅರಿಕೆ ಮಾಡಿಕೊಂಡರು. ಅದಾದ ಮೇಲೆ ಕಾಕಿನಾಡ ಪಟ್ಟಣದ ಪ್ರಜಾಜನರುಗಳೇ ಒಂದು ಸಭೆಯನ್ನು ನಡಿಸಿ, ಅದೇ ತರಹ ಅರ್ಜಿಯನ್ನು ಬರೆದು ಗವರ್ನಮೆಂಟಿಗೆ ಕಳುಹಿಸಿದಾರೆ.

❖❖❖

ಪಾಟಿಯಾಲಾ ಸಂಸ್ಥಾನದ ಮಹಾರಾಜರವರು ಕಳೆದ ಶನಿವಾರ ಅಕಸ್ಮಾತ್ತಾಗಿ ಸತ್ತುಹೋದರೆಂದು ದುಃಖ ವರ್ತಮಾನ ಬಂದಿದೆ. ಆ ಸಂಸ್ಥಾನವು ಪಂಜಾಬಿನಲ್ಲಿ ಇರುತ್ತದೆ. ಅದರ ವಿಸ್ತೀರ್ಣವು ೫೯೫೨ ಚದರ ಮೈಲಿ. ಪ್ರಜಾ ಸಂಖ್ಯೆ ೧,೫೯೬,೦೦೦ ಹಿಂದೂಗಳೇ ವಿಶೇಷವಾಗಿದ್ದಾರೆ. ಈಗ ಗತಿಸಿದ ಮಹಾರಾಜರವರು ೧೮೭೭ ರಲ್ಲಿ ಜನಿಸಿ ೧೮೭೬ ರಲ್ಲಿ ಪಟ್ಟಕ್ಕೆ ಬಂದರು. ೧೮೯೧ ನೆ ಇಸವಿಯಲ್ಲಿ ಇಂಡಿಯಾ ಗವರ್ನಮೆಂಟಿನವರು ಅವರಿಗೂ ಅವರ ವಂಶೀಕರಿಗೂ "ಮಹಾರಾಜಾ" ಎಂಬ ಬಿರುದನ್ನು ವಹಿಸಿ ಕೊಟ್ಟರು. ೧೮೭೭ ನೆ ಇಸವಿಯಲ್ಲಿ ನಡೆದ ಡೆಹಲಿ ದರ್ಬಾರ್ ಕಾಲದಲ್ಲಿ ಈ ಮಹಾರಾಜರಿಗೂ ಅವರ ವಂಶಕರಿಗೂ "ಮಹೇಂದ್ರ" ಎಂಬೋ ಬಿರುದನ್ನು ದಯಪಾಲಿಸಿದರು. ಕಳೆದ ೧೯೦೪ ನೆ ಜನವರಿ ೧ ರಲ್ಲಿ ಚಕ್ರವರ್ತಿಸಾರ್ವಭೌಮರವರು ಅವರಿಗೆ ಜಿ. ಸಿ. ಎಸ್. ಐ. ಎಂಬ ಬಿರುದು ಕೊಟ್ಟರು.

❖❖❖

ಹಿಂದೂಸ್ಥಾನಕ್ಕೆ ಪರರಾಜ್ಯಗಳಿಂದ ಪ್ರತಿ ವರುಷವೂ ಒಂದುವರೆ ಕೋಟಿ ರೂಪಾಯಿನ ಗಾಜಿನ ಸಾಮಾನುಗಳು ಬಂದು ಬಿಕರಿ ಆಗುತ್ತಿವೆ. ಈ ರಾಷ್ಟ್ರದಲ್ಲಿ ಜಿಂದಪೆ ಕಲ್ಕತ್ತಾ ಪಟ್ಟಣದ ಹತ್ತರ ಗಾಜು ತಯಾರುಮಾಡುವುದಕ್ಕೆ ಎರಡು ಕಾರ್ಖಾನೆಗಳು ಪ್ರಾರಂಭವಾದರೂ ಸ್ವಲ್ಪ ದಿನಗಳಲ್ಲೇ ಕೆಲಸಗಳು ನಿಂತು ಕಟ್ಟಡಗಳು ಹಾಳುಬೀಳುವ ಹಾಗಾದವು. ಗಾಜಿನ ತಯಾರಿಗೆ ಬೇಕಾಗುವ ಸಮಸ್ತ ಉಪಕರಣಗಳೂ ಈ ದೇಶದಲ್ಲಿ ಬಹಳ ಸುಲಭವಾಗಿಯೂ ಅಪಾರವಾಗಿಯೂ ಸಿಕ್ಕುತ್ತವೆ. ಕೂಲಿಕಾರರಿಗೆ ಕೊಡಬೇಕಾದ ವರಗಳು ಬಹಳ ಅಲ್ಪವಾಗಿರುವವು. ಇಂಥಾದ್ದರಲ್ಲಿ ಈ ಪರಮಾವಶ್ಯವಾದ ಸರಕನ್ನು ತಯಾರುಮಾಡುವ ಕಾರ್ಖಾನೆಗಳನ್ನು ವಿದ್ಯಾವಂತರೂ ಹಣಗಾರರೂ ಏಕೆ ಸ್ಥಾಪಿಸಿ ಯಾಕೆ ಏರ್ಪಾಡು ಮಾಡಬಾರದೋ ತಿಳಿಯಲಿಲ್ಲ. ಇದು ಯಥಾರ್ಥ ಸ್ವದೇಶೀ ಕಸಬು ಎನ್ನಿಸಿಕೊಳ್ಳುವುದಕ್ಕೆ ಅಡ್ಡಿ ಇಲ್ಲ.

❖❖❖

ಹಿಂದೂಸ್ಥಾನದಿಂದ ವಿದ್ಯಾಸಂಪಾದನಾರ್ಥವಾಗಿ ಅನೇಕಾನೇಕ ದೇಶೀಯ ಯೌವನಸ್ಥರು ವಿಲಾಯತಿಗೆ ಹೋಗುತ್ತಾರಷ್ಟೆ. ಇವರು ಅಲ್ಲಿರುವಾಗ್ಗೆ ನಾನಾ ದುಸ್ಸಹವಾಸಗಳಿಗೆ ಬಿದ್ದು ಕೆಟ್ಟುಹೋಗುತ್ತಾರೆಂತಲೂ, ಇದನ್ನು ತಪ್ಪಿಸುವುದಕ್ಕೂ ಅಂಥಾ ವಿದ್ಯಾರ್ಥಿಗಳನ್ನು ಸರಿಯಾಗಿ ನೋಡಿಕೊಳ್ಳುವುದಕ್ಕೆ ಏರ್ಪಾಡೇನಾದರೂ ಮಾಡಿದ್ದೀರಾ ಎಂತಲೂ ಮಿ॥ ಜೆ. ಡಿ. ರೀಸ್ ಎಂಬ ಪಾರ್ಲಿಮೆಂಟ್ ಮೆಂಬರು ಸ್ಟೇಟ್ ಸೆಕ್ರೆಟರಿ ಮಿ॥ ಜಾನ್ ಮಾರ್ಲಿಯವರನ್ನು ಕಳೆದ ವಾರ ಪ್ರಶ್ನೆ ಮಾಡಿದರು. ಅದಕ್ಕೆ ಮಿ॥ ಮಾರ್ಲಿಯವರು ಪ್ರತ್ಯುತ್ತರವಾಗಿ— "ನೀವು ಪ್ರಶ್ನೆ ಮಾಡುವ ವಿಚಾರವು ಬಹು ವಿಶೇಷವಾದದ್ದರಿಂದ ಅದನ್ನು ತನಿಖೆ ಮಾಡಿ ತಿಳಿಸಬೇಕೆಂದು ಕೆಲವು ದೊಡ್ಡಮನುಷ್ಯರನ್ನು ನೇಮಕಮಾಡಿರುತ್ತೇನೆ. ಅವರಿಂದ ರಿಪೋರ್ಟು ಬಂದ ಮೇಲೆ ಎಲ್ಲಾ ಭಾಗಗಳಲ್ಲೂ ತೃಪ್ತಿಕರವಾದ ಏರ್ಪಾಡುಗಳನ್ನು ಮಾಡುವೆವು" ಎಂಬೋ ಅರ್ಥವನ್ನು ತಿಳಿಸಿದರು.

ವಿದೇಶ ವರ್ತಮಾನಗಳು.

ಪ್ರಸಿದ್ಧ ಕೋಟ್ಯಾಧೀಶ್ವರನಾದ ಮಿ॥ ಆಂಡ್ರೂ ಕಾರ್ನೆಗಿ ಎಂಬಾತನು ಲಂಡನ್ ಪಟ್ಟಣದಲ್ಲಿ ಚಕ್ರವರ್ತಿಯವರ ಹೆಸರಿನ ಮೇಲೆ ಕಟ್ಟಿರುವ ಆಸ್ಪತ್ರೆಯ ಮೂಲಧನಕ್ಕೆ ೧೫ ಲಕ್ಷ ರೂಪಾಯಿ ಧರ್ಮ ಮಾಡಿರುತ್ತಾನೆ.

❖❖❖

ರಷ್ಯಾ ಗವರ್ನಮೆಂಟಿನವರು ೧೯೦೮ನೆ ಸಾಲಿನಿಂದ ೧೯೨೦ನೆ ಸಾಲಿನವರೆಗೆ ಪ್ರತಿ ವರುಷವೂ ೪೫ ಲಕ್ಷ ರೂಪಾಯಿಯಂತೆ ವಿನಿಯೋಗಿಸಿ, ಈ ಹಣದಲ್ಲಿ ಕೆಲವು ಯುದ್ಧದ ಹಡಗುಗಳನ್ನು ತಯಾರುಮಾಡಿಸಬೇಕೆಂದು ತೀರ್ಮಾನ ಮಾಡಿರುತ್ತಾರೆ.

❖❖❖

ಲಂಡನ್ ಪಟ್ಟಣದಲ್ಲಿ ೧೯೦೮ನೇ ವರುಷದ ಪ್ರಾರಂಭದಲ್ಲಿ ಒಂದು ಪ್ರದರ್ಶನವು ನಡೆಯುವುದು. ದಕ್ಷಿಣ ಆಫ್ರಿಕದ ಸ್ವಾಸ್ಥ್ಯಗಳೊಳಗೆ ತಯಾರಾಗತಕ್ಕ ಸಮಸ್ತ ಕಸಬುದಾರಿ ವಸ್ತುಗಳೂ ಈ ಪ್ರದರ್ಶನಶಾಲೆಗೆ ಬರುವವು. ಅಲ್ಲಿನ ಸರಕುಗಳು ವಿಲಾಯತಿಗೆ ಬಂದು ಬಿಕರಿಯಾಗುವುದಕ್ಕೆ ಪ್ರೋತ್ಸಾಹವಾಗಬೇಕೆಂಬುದೇ ಈ ಪ್ರದರ್ಶನದ ಉದ್ದೇಶವಾಗಿದೆ. ಇದರಿಂದ ಆ ಸ್ವಾಸ್ಥ್ಯಗಳ ಕಸಬುಗಳು ಅಭಿವೃದ್ಧಿಯಾಗುವುದಕ್ಕೆ ಮಾರ್ಗವಾಯಿತು.

❖❖❖

ಅಮೇರಿಕದ ಉತ್ತರ ಪಾರ್ಶ್ವದಲ್ಲಿರುವ ನ್ಯೂಫೌಂಡ್ಲೆಂಡ್ ದ್ವೀಪದಲ್ಲಿ ಉಪ್ಪಿನ ಸರಕು ತಯಾರುಮಾಡುವ ಒಂದು ಭಾರೀ ಕಂಪನಿಯವರ ಉಗ್ರಾಣದ ಮನೆಯು ಬೆಂಕಿ ಬಿದ್ದು ಉರಿದು ಹೋಯಿತು. ಸುಮಾರು ಒಂದೂವರೆ ಲಕ್ಷ ರೂಪಾಯಿನ ಸರಕು ನಷ್ಟವಾಗಿರುವುದಲ್ಲದೆ ಒಂದು ಸಾವಿರ ಜನಗಳ ಕಲ್ಲಿದ್ದಲೂ ಸುಟ್ಟುಹೋಯಿತು. ಆ ಸ್ಥಳವನ್ನು ಚೊಕ್ಕಟಮಾಡುವುದಕ್ಕೆ ಕಂಪನಿಯವರು ೯೦೦ ಮಂದಿ ಕೂಲಿ ಆಳುಗಳನ್ನು ನೇಮಿಸಿದಾರೆ.

❖❖❖

ರಷ್ಯಾ ರಾಜ್ಯದಲ್ಲಿ ಸರ್ಕಾರದವರು ರಾಜದ್ರೋಹಿಗಳೆಂದು ಕೆಲವು ಜನ ಮಂದಿ ದೊಡ್ಡಮನುಷ್ಯರನ್ನು ಹಿಡಿಸಿ ಗಡೀಪಾರು ಮಾಡಿಸಿದರು. ಡೂಮಾ ಪಾರ್ಲಿಮೆಂಟು ಬರಖಾಸ್ತಾದ ಈಚೆಗೆ ರಾಜಧಾನಿಯಾದ ಸೆಂಟ್ ಪೀಟರ್ಸ್‌ಬರ್ಗಿನಲ್ಲೇ ಒಂದು ಸಾವಿರ ಜನರಿಗಿಂತಲೂ ಹೆಚ್ಚಾಗಿಯೇ ದೇಶಭ್ರಷ್ಟರಾಗಿ ಕಳುಹಿಸಲ್ಪಟ್ಟರು. ರಾಜ್ಯದ ಎಲ್ಲಾ ಭಾಗಗಳಲ್ಲೂ ಜನರು ಸ್ವಾತಂತ್ರ್ಯವಾದಿಗಳು ಗವರ್ನಮೆಂಟಿನವರ ಮೇಲೆ ರೇಗಿ ಬೀಳುತ್ತಿದಾರೆ.

❖❖❖

ಪೋಲಾ ರಾಜ್ಯಕ್ಕೆ ಸೇರಿದ ನಾರ್ಸಾವ್ ಎಂಬ ಅಧಿಕಾರದ ಗವರ್ನರ್ ರಾದ ಎರ್ಮಲಿನ್ ಎಂಬವರು ಪೋಲೀಸ್ ಸ್ಕೂಲಿಗೆ ಹೋಗಿ ಅಲ್ಲಿ ತೇಗಡಿಕೆ ಕೊಂಡಿದುದರಿಂದ ಯಾರನ್ನೂ ರಿಗಲ್ಲಾ ಸರ್ಟಿಫಿಕೇಟುಗಳನ್ನು ಕಂಡುಕೊಟ್ಟರು. ಆ ಸಮಯದಲ್ಲಿದ್ದ ಒಬ್ಬ ಪೋಲೀಸ್ ಅಧಿಕಾರಿಯು ಪಿಸ್ತೂಲನ್ನು ಹಾರಿಸುತ್ತ ಗುರಿಕಟ್ಟಿ ಮುಂದಾಗಿ ಆ ಗವರ್ನರಿಗೆ ಹೊಡೆದನು. ಗವರ್ನರು ಅಲ್ಲೇ ಬಿದ್ದು ಸತ್ತುಹೋದರು. ಕೊಲೆಗಾರನನ್ನು ಅಲ್ಲಿದ್ದವರೇ ಹಿಡಿದು ಕತ್ತಿಹಾಕಿ ಅವನ ತಲೆಯನ್ನು ಕಡಿದು ಬಿಟ್ಟಿದ್ದಲ್ಲದೆ, ಅವನ ಸಹಪಾಠಿಗಳನ್ನೆಲ್ಲಾ ಕೂಡು ಬಂಧನದಲ್ಲಿ ಹಾಕಿಕೊಂಡಿದಾರೆ.

❖❖❖

ತುರ್ಕಿ ಸೈನಿಕರು ಬಲ್ಗೇರಿಯ ಸಮೀಪ ಪರ್ಷಿಯಾ ರಾಜ್ಯದೊಳಗೆ ನುಗ್ಗಿ ಅರ್ಮೇನಿಯಾ ಎಂಬ ಕ್ರಿಸ್ತಮತಸ್ಥರ ಮಾರ್ಹಾನೇ ಎಂಬ ಗ್ರಾಮವನ್ನು ಸಂಪೂರ್ಣವಾಗಿ ನಾಶಮಾಡಿಬಿಟ್ಟರೆಂತಲೂ, ಕ್ರೈಸ್ತ ಪಾದ್ರಿಗಳನ್ನೂ ೧೯ ಮಂದಿ ಗಂಡಸರನ್ನೂ ೬೦ ಜನ ಹೆಂಗಸರು ಮಕ್ಕಳುಗಳನ್ನೂ ಕೊಂದುಹಾಕಿದರೆಂತಲೂ, ತುರುಕರು ಸಮೀಪದಲ್ಲಿದ್ದ ಪರ್ಷಿಯಾ ಸೈನ್ಯವನ್ನು ನುಗ್ಗಿ ಸೋಲಿಸಿ ಹೊಡೆದು ಓಡಿಸಿದರೆಂತಲೂ ಒಂದು ವರ್ತಮಾನ ಬಂದಿದೆ. ಇದಲ್ಲದೆ ೬೦೦ ಪರ್ಷಿಯಾ ಸವಾರರು ಹೋಗಿ ತುರ್ಕಿಯ ಸೈನಿಕರ ಕೂಡ ಸೇರಿಕೊಂಡರೆಂದು ವರ್ತಮಾನ ಉಂಟಾಗಿದೆ.

❖❖❖

ಕಳೆದ ವಾರ ರೈಲ್ ಗಾಡಿಯು ಫ್ರಾನ್ಸಿಗೆ ಸೇರಿದ ಆಂಜೀರ್ಸ್ ನಗರದಿಂದ ಪಾಯಿಟಿಯರ್ಸ್ ನಗರಕ್ಕೆ ಹೋಗುತ್ತಿದ್ದಾಗ ಲಾಯರ್ ಎಂಬ ನದಿಯ ಸಮೀಪದಲ್ಲಿ ಗಾಡಿಯು ಕಂಬಿ ತಪ್ಪಿ ನೆಲದ ಮೇಲೆ ಜರಿದುಕೊಂಡು ಹೋಗಿ ನದಿಯೊಳಕ್ಕೆ ಮಗುಚಿಕೊಂಡಿತು. ಎಂಜಿನ್ ಗಾಡಿ, ಲಗ್ಗೇಜ್ ಗಾಡಿ, ಒಂದು ಮೂರನೆ ತರಗತಿಯ ಗಾಡಿ, ಈ ಮೂರು ಮಾತ್ರ ನೀರಿನಲ್ಲಿ ಬಿದ್ದು ಮುಳುಗಿ ಹೋದವು. ಅಷ್ಟರಲ್ಲೇ ಹಿಂದಿನ ಗಾಡಿಗಳ ಕೊಂಡಿಕೆ ತನಗೆ ತಾನೇ ಕಳಚಿಕೊಂಡದ್ದರಿಂದ ಆ ಗಾಡಿಗಳೆಲ್ಲಾ ಮೇಲೆಯೇ ಉಳಿದುಕೊಂಡವು. ಆದರೂ ಬಿದ್ದ ಆ ಮೂರು ಗಾಡಿಗಳೊಳಗಿದ್ದ ೮೦ ಜನ ಪ್ರಯಾಣಿಕರು ಸಿಕ್ಕಿ ಇಲ್ಲ. ಇದಿ ಮೂರು ಹೆಣಗಳನ್ನು ಇಂದಾಕೆ ತೆಗೆದಿರುತ್ತಾರೆ.

❖❖❖

ವಿಲಾಯತಿಗೆ ಸೇರಿದ ರಿಚ್ಮಂಡ್ ಪಟ್ಟಣದಲ್ಲಿದ್ದು ಕಾಲವಾದ ಮಿ॥ ವಿಲಿಯಂ ಕ್ಯಾಂಡ್ಲರ್ ಎಂಬಾತನು ತನ್ನ ಆಸ್ತಿಯಲ್ಲಿ ಸುಮಾರು ಒಂದು ಲಕ್ಷ ರೂಪಾಯಿಯನ್ನು ವಿನಿಯೋಗಿಸಿ, ಬಡಬಗ್ಗರೂ ಅನಾಥರೂ ಆದಂಥಾ ಮುದುಕರನ್ನು ಪೋಷಣೆ ಮಾಡುವುದಕ್ಕೆ ಒಂದು ನಿಲಯವನ್ನು ಕಟ್ಟಿಸಿ ನಡಸಬೇಕೆಂದು ಉಯಿಲು ಬರೆದಿರುತ್ತಾನೆ. ವಿಲಾಯತಿಯಲ್ಲಿ ಹುಟ್ಟಿ ಬೆಳೆದು ಚೀನಾ ರಾಜ್ಯಕ್ಕೆ ಹೋಗಿ ವ್ಯಾಪಾರಾದಿಗಳನ್ನು ನಡೆಸುತ್ತಾ, ಹದಿನೈದು ಲಕ್ಷ ರೂಪಾಯಿ ಸಂಪಾದನೆ ಮಾಡಿ, ಈ ಗತಾನೇ ಕಾಲವಾದ ಸರ್ ಟಿ. ಹ್ಯಾನ್‌ಬರಿ ಎಂಬಾತನು ತನ್ನ ಆಸ್ತಿಯಲ್ಲಿ ಸುಮಾರ ಎರಡು ಲಕ್ಷ ರೂಪಾಯಿಯನ್ನು ವಿನಿಯೋಗಿಸಿ ಚೀನಾ ರಾಜ್ಯದಲ್ಲಿ ವಿದ್ಯಾಶಾಲೆಗಳನ್ನಿಡಬೇಕೆಂತಲೂ ಚೀನಾ ಜನರಿಗೆ ಭಕ್ತಿ ಮಾರ್ಗವನ್ನು ಕಲಿಸಬೇಕೆಂತಲೂ ಉಯಿಲು ಬರೆದಿರುತ್ತಾನೆ.

❖❖❖

ಅಮೇರಿಕಕ್ಕೆ ಸೇರಿದ ಫಿಲಡೆಲ್ಫಿಯಾ ಪಟ್ಟಣದಲ್ಲಿ ಮಿಸ್ ಅನ್ನಾ ಟಿ. ಜೀನ್ಸ್ ಎಂಬೊಬ್ಬ ಧರ್ಮಿಷ್ಠೆಯು ಇರುತ್ತಾಳೆ. ಈಕೆಗೆ ಈಗ ೮೪ ವಯಸ್ಸಾಗಿರುವುದು. ಈಕೆ ತನ್ನ ಅಪಾರವಾದ ಐಶ್ವರ್ಯವನ್ನು ಇಹಲೋಕದ ಸುಖಸಂತೋಷಾದಿಗಳಿಗೆ ವಿನಿಯೋಗಿಸದೆ ಅನೇಕ ಪಾಠಶಾಲೆಗಳಿಗೂ, ಸಂಘಗಳಿಗೂ, ಇತರ ಧರ್ಮಕಾರ್ಯಗಳಿಗೂ ಹಂಚಿಕೊಡುತ್ತಾ ಬಂದಿರುತ್ತಾಳೆ. ಮುದುಕರಾಗಿಯೂ ಜೀವನಕ್ಕೆ ಮಾರ್ಗವಿಲ್ಲದವರಾಗಿಯೂ ಇರುವಂಥಾ ಸ್ತ್ರೀ ಪುರುಷರನ್ನು ಸಾಕಿ ಸಲಹುವುದಕ್ಕೆ ಒಂದು ದೊಡ್ಡ ಸತ್ರವನ್ನು ಕಟ್ಟಿಸಿ ನಡಸುತ್ತಿರುವಳು. ಇದಲ್ಲದೆ ಈಗ ಮೂವತ್ತು ಲಕ್ಷ ರೂಪಾಯಿ ಮೂಲಧನ ಹಾಕಿ, ಈ ಹಣದ ಬಡ್ಡಿಯಿಂದ ನೀಗ್ರೋಸ್ ಎಂಬ ಕಾಪುಜನರಿಗೋಸ್ಕರ ಪಾಠಶಾಲೆಗಳನ್ನಿಟ್ಟು ವಿದ್ಯೆ ಬುದ್ಧಿ ಮೊದಲಾದ ನಾಗರಿಕತೆಯನ್ನು ಕಲಿಸಿಕೊಡುವಂತೆ ಏರ್ಪಾಡು ಮಾಡಿರುತ್ತಾಳೆ.

❖❖❖

ಗತಿಸಿದ ಡಾಕ್ಟರ್ ಬರ್ನಾರ್ಡೋ ಯವರು ಲಂಡನ್ ಪಟ್ಟಣದಲ್ಲಿ ಸ್ಥಾಪಿಸಿದ ಅನಾಥಾಲಯವು ಪ್ರಖ್ಯಾತವಾದ ಧರ್ಮ ನಿಲಯವಾಗಿರುತ್ತದೆ. ಈ ಅನಾಥ ಶಾಲೆಯು ಸ್ಥಾಪನೆಯಾಗಿ ೪೦ ವರ್ಷಗಳಾದವು. ಇದುವರೆಗೆ ೬೩,೦೦೦ ಗಂಡು ಹೆಣ್ಣು ಮಕ್ಕಳನ್ನು ಈ ಶಾಲೆಯಲ್ಲಿ ಸಾಕಿ ವಿದ್ಯೆ ಕಲಿಸಿ ಕಸಬುಗಳನ್ನು ಹೇಳಿಕೊಟ್ಟು, ಸತ್ಪ್ರಜೆಗಳಾಗಿ ಜೀವನ ಮಾಡುವಂತೆ ತರಪೇತು ಮಾಡಿ ಕಳುಹಿಸಿರುತ್ತಾರೆ. ಕಳೆದ ವರುಷ ತರಪೇತಾದ ೬೯೦ ಮಂದಿ ಮಕ್ಕಳು ಜೀವನವನ್ನು ಹುಡುಕಿಕೊಂಡು ಈ ಶಾಲೆಯನ್ನು ಬಿಟ್ಟು ಹೋದರು. ಈ ಅನಾಥಶಾಲೆಯ ಶಾಖೆಗಳು ವಿಲಾಯತಿಯ ಎಲ್ಲಾ ಮುಖ್ಯ ಪಟ್ಟಣಗಳಲ್ಲೂ ಸ್ಥಾಪನೆಯಾಗಿರುತ್ತವೆ. ಪ್ರತಿದಿನವೂ ಅನಾಥ ಮಕ್ಕಳು ೮,೦೦೦ ಮಂದಿ ಈ ಶಾಲೆಗಳಲ್ಲಿ ಸಾಕಲ್ಪಡುತ್ತಿರುವರು. ದಿನಕ್ಕೆ ಅವರ ಪೋಷಣಾದಿಗಳ ಖರ್ಚು ೪,೫೦೦ ರೂಪಾಯಿ ಆಗುವದು. ಪ್ರತಿದಿನವೂ ದಿಕ್ಕಿಲ್ಲದಂಥಾ ಮಕ್ಕಳು ಈ ಅನಾಥ ಶಾಲೆಗೆ ಬಂದು ಸೇರುತ್ತಿದಾರೆ. ಈ ಅನಾಥಶಾಲೆಯು ಪ್ರಪಂಚದಲ್ಲೆಲ್ಲಾ ತುಂಬಾ ಪ್ರಖ್ಯಾತಿಗೆ ಬಂದಿರುತ್ತದೆ. ಬಹು ಜನ ಧರ್ಮಾತ್ಮರು ಅದಕ್ಕೆ ದ್ರವ್ಯಸಹಾಯ ಮಾಡುತ್ತಾರೆ.

❖❖❖

ಆಫ್ರಿಕಕ್ಕೆ ಸೇರಿದ ಯುಗಾಂಡಾ ಎಂಬ ಸೀಮೆಯಲ್ಲಿ ನಿದ್ರಾರೋಗವು ಪ್ರಬಲವಾಗುತ್ತಾ, ಅನೇಕಾನೇಕ ಪ್ರದೇಶಗಳಿಗೆ ವ್ಯಾಪಿಸುತ್ತಾ, ಇದುವರೆಗೆ ಲಕ್ಷಾಂತರ ಪ್ರಜೆಗಳನ್ನು ಅಕಾಲಮರಣಕ್ಕೆ ಗುರಿಮಾಡುತ್ತಾ ಬಂದಿದೆಯಷ್ಟೆ. ಗಟ್ಟಿಗರಾದ ಕೆಲವು ಡಾಕ್ಟರುಗಳು ಇದುವರೆಗೆ ಪರೀಕ್ಷೆಮಾಡಿದ್ದರಲ್ಲಿ ಆಟೋಕ್ಸಿಲ್ ಎಂಬೊಂದು ಔಷಧವು ಚಿಕಿತ್ಸೆಯು ಈ ರೋಗಕ್ಕೆ ತಕ್ಕಮಟ್ಟಿಗೆ ಪರಿಹಾರ ಕೊಡುವುದೆಂದು ಕಂಡುಬಂದಿದೆ. ಈ ಚಿಕಿತ್ಸೆಯು ಖಂಡಿತವಾಗಿ ಆ ರೋಗವನ್ನು ನಾಶಮಾಡುತ್ತೆಂದು ಇನ್ನೂ ನಂಬಿಕೆಯುಂಟಾಗಿಲ್ಲ. ಈಗ ಆ ರೋಗವನ್ನು ಅಣಗಿಸುವುದಕ್ಕೆ ಇನ್ನೊಂದು ಹೊಸ ಏರ್ಪಾಡು ಮಾಡಲಾರಂಭಿಸಿದಾರೆ. ಈಗ ರೋಗಪೀಡಿತರಾಗಿ ನರಳುತ್ತಿರುವಂಥಾ ಸಕಲ ಪ್ರಜೆಗಳನ್ನೂ ಅವರವರ ಪ್ರದೇಶದಿಂದ ಬಿಡಿಸಿ ಆರೋಗ್ಯಕರವಾದ ಇನ್ನೊಂದು ಸ್ಥಳಕ್ಕೆ ಕರೆದುಕೊಂಡು ಹೋಗಿ ಇಟ್ಟು, ಅವರಿಗೂ ಇತರರಿಗೂ ಯಾವ ಸಂಪರ್ಕವೂ ಇಲ್ಲದಂತೆ ಏರ್ಪಾಡು ಮಾಡುವರು. ಅಂದರೆ, ಅವರನ್ನೆಲ್ಲಾ ದೊಡ್ಡ ದೊಡ್ಡ ಸೆಗ್ರಿಗೇಷನ್ ಕ್ಯಾಂಪುಗಳಲ್ಲಿಟ್ಟು ಅವರಿಗೆ ಔಷಧಾದಿಗಳ ಚಿಕಿತ್ಸೆಗಳನ್ನು ಮಾಡಿಸುವರು. ಇವರು ಸುಮಾರು ೩೦,೦೦೦ ಜನರಾಗಬಹುದೆಂದು ಹೇಳುತ್ತಾರೆ. ಇದಲ್ಲದೆ ಈ ನಿದ್ರಾರೋಗವು ಒಂದು ತರಹಾ ನೊಣ ಕಡಿಯೋಣದಿಂದ ಉಂಟಾಗುತ್ತದೆನ್ನುವದರಿಂದ ಆ ನೊಣಗಳಿರುವಂಥಾ ಪ್ರದೇಶಗಳಲ್ಲೇ ಯಾವ ನರಪ್ರಾಣಿಗಳೂ ಇರದಂತೆ ಮಾಡುವರು. ಮತ್ತು ಆ ನೊಣಗಳು ದಿನೇದಿನೇ ಹೆಚ್ಚುವದಕ್ಕೆ ಅವಕಾಶವಾಗದಂತೆ ಆ ಪ್ರಾಂತ್ಯದಲ್ಲಿ ಬೆಳೆದಿರುವಂಥಾ ಸಮಸ್ತವಾದ ಕುರುಚಲುಗಿಡಗಳನ್ನೂ ಕತ್ತರಿಸಿಹಾಕಿ, ನೀರಿನ ಗುಂಡಿಗಳನ್ನು ಹಳ್ಳಕೊಳ್ಳಗಳನ್ನೂ ಮುಚ್ಚಿಬಿಡಬೇಕೆಂದೂ ತೀರ್ಮಾನ ಮಾಡಿದಾರೆ. ಗವರ್ನಮೆಂಟಿನವರೂ ಸ್ವದೇಶಿಗಳ ಪೈಕಿ ದೊಡ್ಡದೊಡ್ಡವರೂ ವಿಶೇಷವಾಗಿ ಮೇಲ್ಕಂಡ ಕಾರ್ಯಗಳಿಗೆ ಬೇಕಾಗುವಷ್ಟು ಹಣವನ್ನು ಖರ್ಚುಮಾಡುವುದಲ್ಲದೆ ಎಲ್ಲಾ ವಿಧವಾದ ಸಹಾಯ ಸಂಪತ್ತುಗಳನ್ನೂ ಒದಗಿಸಿಕೊಡುವುದಕ್ಕೂ ಸಿದ್ಧರಾಗಿದಾರೆ.

❖❖❖

ಅಮೇರಿಕಕ್ಕೆ ಸೇರಿದ ಚಿಕಾಗೋ ಪಟ್ಟಣದಲ್ಲೆಲ್ಲಾ ಮಹಾ ಸೌಂದರ್ಯವತಿಯಾದಂಥಾ ಸ್ತ್ರೀಯಾರೆಂಬ ಚರ್ಚೆ ಹುಟ್ಟಿತು. ಆಗ ಎರಡು ಪಕ್ಷಗಳುಂಟಾಗಿ ಒಂದು ಪಕ್ಷದವರು ಸೌಂದರ್ಯವತಿಯಾದ ಸ್ತ್ರೀಯೇ ಆ ಪ್ರಾಂತ್ಯದಲ್ಲಿ ಇಲ್ಲವೆಂದರು, ಪ್ರತಿಪಕ್ಷದವರು ಅಂಥಾ ಸ್ತ್ರೀಯರು ಅನೇಕವಾಗಿರುತ್ತಾರೆಂದು ಹೇಳಿ ಪಂತಕಟ್ಟಿದರು. ಇದನ್ನು ಇತ್ಯರ್ಥಮಾಡುವುದಕ್ಕೆ ಪ್ರತಿ ಪಕ್ಷದವರೂ ಒಂದೂವರೆ ಲಕ್ಷ ರೂಪಾಯಿಯನ್ನು ತೆಗೆದಿಟ್ಟು ಆ ಪೈಕಿ ಅರ್ಧ ಹಣವನ್ನು ಖರ್ಚುಮಾಡಿ ಅತ್ಯಂತ ಸುಂದರಿಗಳ ಫೋಟೋಗಳನ್ನು ಕಳುಹಿಸಿಕೊಡಬೇಕೆಂದು ಎಲ್ಲಾ ಪತ್ರಿಕೆಗಳಲ್ಲೂ ಪ್ರಕಟಮಾಡಿದರು. ಅಂಥಾ ಸುಂದರಿಯು ದೊರೆತಲ್ಲಿ ಆಕೆಗೆ ಒಂದೂವರೆ ಲಕ್ಷ ರೂಪಾಯಿ ಬಹುಮಾನ ಕೊಡುವಂತೆ ತೀರ್ಮಾನವಾಯಿತು. ಲಕ್ಷಾಂತರ ಮಂದಿ ಸ್ತ್ರೀಯರು ತಮ್ಮ ಫೋಟೋಗಳನ್ನು ತೆಗಿಸಿ ಮೇಲ್ಕಂಡ ಸಂಘಕ್ಕೆ ಕಳುಹಿಸಿಕೊಟ್ಟರು. ಜಡ್ಜಿಗಳು ನೋಡಿ ಆ ಸುಂದರಿಯರ ಫೋಟೋಗಳನ್ನೆ

ಲ್ಲ ಪ್ರಕಟಿಸಿದ್ದು, ಅವುಗಳಲ್ಲಿ ಸರ್ವೋತ್ಕೃಷ್ಟವಾದಂಥಾ ಫೋಟೋವುಳ್ಳ ಸ್ತ್ರೀಶಿರೋಮಣಿಗೆ ಮೇಲ್ಕಂಡ ಬಹುಮಾನವನ್ನು ಕೊಡಿಸಿರುತ್ತಾರೆ ಆ ಸುಂದರಿಯ ಹೆಸರು ಮಿಸ್ ಕಾಸರ್ ಎಂಬುದು, ಈಕೆ ಚಿಕಾಗೋ ಪಟ್ಟಣದಲ್ಲಿ ಸಂಕ್ಷೇಪಲಿಪಿಯನ್ನು ಕಲಿತು ಅದರಿಂದ ವಾರಕ್ಕೆ ೩೬ ರೂಪಾಯಿಯನ್ನು ಸಂಪಾದಿಸುತ್ತ ಜೀವನಮಾಡಿಕೊಂಡಿದ್ದಾಳೆ. ಈಕೆಯೇ ಈ ಪ್ರಾಂತ್ಯದಲ್ಲೆಲ್ಲಾ ಪರಮ ಸುಂದರಳಾದ ಸ್ತ್ರೀಯೆಂದೂ ಈಕೆಗೆ ಬಹುಮಾನ ದೊರಕಿತೆಂದೂ ಪ್ರಕಟವಾದ ಕೂಡಲೆ ಸುಮಾರು ಮುನ್ನೂರು ಗಂಡಸರು ಆಕೆಗೆ ಕಾಗದ ಬರೆದು ವಿವಾಹಮಾಡಿಕೊಳ್ಳುವುದಾಗಿ ಪ್ರಯತ್ನಪಟ್ಟು ಕೇಳಿದರು. ಆದರೆ ಆಕೆ ಯಾರನ್ನೂ ಒಪ್ಪದೆ ಹೋದಳು ಈ ಪಂಥಕ್ಕೆ ಕಳುಹಿಸಲ್ಪಟ್ಟ ಸುಂದರಿಯರ ಸಮಸ್ತ ಫೋಟೋಗಳನ್ನೂ ಆ ಪಟ್ಟಣದಲ್ಲಿ ಪ್ರಕಟವಾಗುವ ಟ್ರಿಬ್ಯೂನ್ ಎಂಬ ವರ್ತಮಾನಪತ್ರಿಕೆಯ ಕರ್ತರು ಆ ಸಂಘಕ್ಕೆ ೭೫,೦೦೦ ರೂಪಾಯಿ ಕೊಟ್ಟು ಕೊಂಡುಕೊಂಡು, ಅವುಗಳ ಕಾಪಿರೈಟು ರಿಜಿಸ್ಟರು ಮಾಡಿಸಿಕೊಂಡಿದ್ದಾರೆ

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸ್ಥಳ ಕೊಡಲಾರೆವು ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ಸ್ಥಳ ಕೊಡಲಾರೆವು

ಬಾತ್ಮಿದಾರರು ಬರೆವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬುದನ್ನು ಸಕಲರೂ ತಿಳಿಯತಕ್ಕದ್ದು.—ಎಡಿಟರ್.

ಕರೆಸ್ಪಾಂಡೆನ್ಸ್.

ಅರಳಿಮಲ್ಲಿಗೆ ಗ್ರಾಮದ ಸ್ಕೂಲು.

ಅಯ್ಯಾ!

"ದೊಡ್ಡಬಳ್ಳಾಪುರದ ತಾಲ್ಲೂಕು ಕಸಬಾ ಹೋಬಳಿ ಅರಳಿಮಲ್ಲಿಗೆ ಗ್ರಾಮದಲ್ಲಿ ಸುಮಾರು ೩೦ ವರುಷದ ಲಾಗಾಯತು ಗವರ್ನಮೆಂಟಿನವರು ವಿದ್ಯಾಭಿವೃದ್ಧಿಗಾಗಿ ಒಂದು ಸ್ಕೂಲನ್ನು ಏರ್ಪಡಿಸಿದ್ದಾರೆ. ಆ ಲಾಗಾಯತು ಇದ್ದ ಮಾಸ್ತರುಗಳು ಒಳ್ಳೆಯ ವಿದ್ಯಾಶೋಧಕರಾಗಿದ್ದ ಕಾರಣ ಹುಡುಗರಿಗೆ ಚನ್ನಾಗಿ ವಿದ್ಯೆ ಬರುತ್ತಾ ಇತ್ತು. ಈಚೆಗೆ ಸದರಿ ಗ್ರಾಮದ ವಾಸಸ್ಥರಾದಂಥಾ ಇಬ್ಬರು ಮಾಸ್ತರುಗಳನ್ನು ಏರ್ಪಡಿಸಿದರು. ಈ ಮಾಸ್ತರುಗಳು ಹುಡುಗರಿಗೆ ಪಾಠಗಳು ಹೇಳದೆ ಇತರ ಕಸಬುಗಳಲ್ಲಿ ಪ್ರವೇಶ ಮಾಡಿ ಸಂಪಾದಿಸುತ್ತಿರುವದರಿಂದ ಹುಡುಗರೆಲ್ಲ ವಿದ್ಯಾಹೀನರಾಗಿದ್ದಾರೆ ಆದ್ದರಿಂದ ಗವರ್ನಮೆಂಟಿನವರು ಸ್ಥಳಸಂಬಂಧಿಗಳಾಗಿರುವ ಮಾಸ್ತರುಗಳನ್ನು ವರ್ಗಾಯಿಸಿ ಪರಸ್ಥಳದವರನ್ನು ಈ ಗ್ರಾಮದ ಸ್ಕೂಲಿಗೆ ತಂದರೆ ವಿದ್ಯಾಭಿವೃದ್ಧಿಯಾದೀತೆಂದು ನಂಬಿಕೆ ಇರುವದು

ವಿದ್ಯಾಭಿಮಾನಿ.

ಗ್ರಾಮಪಾಠಶಾಲೆಗೆ ಗ್ರಾಂಟು ಬೇಕು.

ಅಯ್ಯಾ,

ತುರುವೇಕೆರೆ ಸಬ್ ತಾಲ್ಲೂಕು ಮಾಯಸಂದ್ರದ ಸಮ್ಮತು ಬೆನಕನಕೆರೆ ಗ್ರಾಮದಲ್ಲಿ ವಿದ್ಯಾಭ್ಯಾಸಕ್ಕೆ ತಕ್ಕ ಅನುಕೂಲಗಳು ಇಲ್ಲದೆ ಇರುವದರಿಂದ ಒಂದು ಕೂಲಿ ಮಠ ಇಡಿಸಿ ಈಗ ಸುಮಾರು ೩—೪ ವರುಷವಾಗುತ್ತಾ ಬಂತು, ಗ್ರಾಂಟ್ ಸ್ಕೂಲ್ ಮಾಡಿಸಿಕೊಡಬೇಕೆಂತಲೂ ದ್ರವ್ಯಸಹಾಯ ಮಾಡಬೇಕೆಂತಲೂ ಸರ್ಕಾರದವರನ್ನು ಕೇಳಿ ಸುಮಾರು ೩ ವರ್ಷವಾಯಿತು ಗ್ರಾಂಟು ದಯಪಾಲಿಸಾಪದಾಗಿ ಸಾಕೆಂಬ ಬಂದು ಇರುವದಲ್ಲದೆ ಸ್ಕೂಲುಗಳ ಡೆಪ್ಯುಟಿ ಇನ್ಸ್ಪೆಕ್ಟರೂ ಮತ್ತು ಅಸಿಸ್ಟೆಂಟ್ ಡೆ॥ ಇನ್ಸ್ಪೆಕ್ಟರೂ ಸಹ ಪರೀಕ್ಷೆಮಾಡಿ ಗ್ರಾಂಟು ಕೊಡಿಸುವದಾಗಿ ಹೇಳಿದರು ಈ ವಿಧವಾದ ನಡವಳಿಕೆಗಳು ನಡೆದು ೪ ತಿಂಗಳಾಗುತ್ತಾ ಬಂದು, ಇದುವರಿಗೂ ಯಾವ ಉತ್ತರ್ವೂ ಇಲ್ಲದಾಗಿದೆ. ಸರ್ಕಾರಿ ಸ್ಕೂಲಿನಂತೆ ಲೆಕ್ಕಗಳನ್ನು ಕಳುಹಿಸಬೇಕೆಂತ ಅಪ್ಪಣೆಯಾಗಿರುತ್ತೆ. ಆದ್ದರಿಂದ ಪೋಸ್ಟಾಫೀಸಿಗೆ ದಂಡಾ ತೆರಬೇಕಾಗಿರುತ್ತೆಯೇ ಹೊರತು ಇದುವರೆಗೆ ಯಾವ ಸಹಾಯವೂ ಸರ್ಕಾರದವರು ಮಾಡಿಕೊಡಲಿಲ್ಲ

ವಿದ್ಯಾಭಿಲಾಷಿ, ಬೆನಕನ ಕೆರೆ

ಸ್ಕೂಲ್ ಕಾವ್ಯಸುಪಿಕೆ

ಅಯ್ಯಾ,

ತೀರ್ಥಹಳ್ಳಿ ತಾಲ್ಲೂಕು ಬಾಗಿಮನೆ ಎಂಬ ಮಜರೆ ಗ್ರಾಮದಲ್ಲಿ ೩೦—೩೫ ಜನ ಬಾಲಕರು ಇದ್ದಾರೆ ಇವರುಗಳಿಗೆ ವಿದ್ಯಾಭ್ಯಾಸಕ್ಕೆ ಏನೂ ಮಾರ್ಗವಿಲ್ಲ. ಈ ತರಫು ವಯನಾಡಿನ ಶಿವಮೊಗ್ಗಾ ಅ॥ ಸಬ್ ಡಿಪ್ಟಿ ಇನ್ಸ್ಪೆಕ್ಟರಲ್ಲಿ ಗ್ರಾಮಸ್ಥರು ಬೇಳಿಕೊಂಡು ಅವರಿಗೆ ಇಲ್ಲಿರುವ ಬಾಲಕರನ್ನೆಲ್ಲಾ ತೋರಿಸಿದ್ದಕ್ಕೆ ಸ್ಕೂಲ್ ಬಗ್ಗೆ ಶಿಫಾರಸು ಮಾಡುವದಾಗಿ ಅಪ್ಪಣೆ ಕೊಡಿಸಿದರು, ಸ್ಕೂಲ್ ಬಾರದೆಹೋದದ್ದು ನೋಡಿ ಪುನಹಾ ಅರ್ಜಿ ಹಾಕಿದ್ದಕ್ಕೆ ಸ್ಕೂಲ್ ಕಟ್ಟಡವೂ ಮಾಸ್ತರ ವಾಸದ ಮನೆಯೂ ಸಿದ್ಧಪಡಿಸಿ ಕೇಳಿದಲ್ಲಿ ಸ್ಕೂಲ್ ಬಗ್ಗೆ ಶಿಫಾರಸು ಮಾಡುವದಾಗಿ ಕೊಟ್ಟ ಆರ್ಡರ್ ಮೇರೆಗೆ ೩೦—೪೦ ರೂಪಾಯಿ ಬಾಗಡದು ಮುಟ್ಟಿಸಿ ಕಟ್ಟಡಗಳನ್ನು ತಯಾರುಮಾಡಿ ಪುನಹಾ ಅರ್ಜಿ ಹಾಕಿಕೊಂಡದ್ದಕ್ಕೆ ಶಿಫಾರಸು ಮಾಡಿರುವದಾಗಿ ಜವಾಬು ಬಂತು ಸ್ಕೂಲ್ ಇದುವರೆಗೂ ಬರಲಿಲ್ಲ ಇಲ್ಲಿ ಬಾಲಕರ ವಿದ್ಯಾಭ್ಯಾಸಕ್ಕೆ ಯಾವ ಅನುಕೂಲವೂ ಇಲ್ಲ. ಗವರ್ನಮೆಂಟಿನವರು ದಯಮಾಡಿ ಒಂದು ಸೋಬಳಿ ಸ್ಕೂಲ್ ಇಡಿಸಿಕೊಟ್ಟಲ್ಲಿ ಇಲ್ಲಿನ ಬಾಲಕರು ವಿದ್ಯಾಭಿವೃದ್ಧಿ ಹೊಂದಿಕೆಯಿರಾರೆಂದು ಹಾರೈಸುತ್ತೇನೆ.

ಬಾ ನಾರಣಭಟ್ಟ, ಸಾ ನಾಗಪ್ಪ, ಬಾ ಶೇಷಗಿರಿಯಪ್ಪ.

ಹೊಯಿಸಲ ಕರ್ನಾಟಕ ಬ್ರಾಹ್ಮಣರು

ಅಯ್ಯಾ

ಮೈಸೂರು ದೇಶದಲ್ಲಿರತಕ್ಕ ಅನೇಕ ಬ್ರಾಹ್ಮಣರ ಪಂಗಡಗಳ ಪೈಕಿ ಇವರು ಒಂದು ಪಂಗಡಕ್ಕೆ ಸೇರಿದವರು ಇವರು ಕಡೂರು, ಹಾಸನ, ಶಿವಮೊಗ್ಗೆ ಮುಂತಾದ ಮಲೆನಾಡು ಪ್ರದೇಶಗಳಲ್ಲಿ ಬಹು ವಿಶೇಷವಾಗಿಯೂ, ಮೈಸೂರು, ಬೆಂಗಳೂರು ಪ್ರಾಂತ್ಯದಲ್ಲಿ ಅಲ್ಪಸ್ವಲ್ಪವಾಗಿಯೂ ಇರುತ್ತಾರೆ ಇವರ ಪೈಕಿ ಕೆಲವರು ತೋಟಕಾಯಿತೋಟಗಳನ್ನು ಮಾಡಿಕೊಂಡು ಜೀವನ ಮಾಡುತ್ತಾರೆ ಮತ್ತೆ ಕೆಲವರು ವ್ಯಾಸಂಗೋಪಭೋಗಿಗಳಾಗಿರುತ್ತಾರೆ ಇನ್ನು ಕೆಲವರು ಅಂದರೆ ಸ್ವಲ್ಪ ಜನಗಳು ಸರ್ಕಾರದ ಉದ್ಯೋಗ ನೌಕರಿಯಲ್ಲಿರುತ್ತಾರೆ ಇವರು ಈಗಿನ ಕಾಲದ ವಿದ್ಯೆಯಲ್ಲಿ ಇತರ ಪಂಗಡದವರಿಗಿಂತ ಕೇವಲ ಹೀನಸ್ಥಿತಿಯಲ್ಲಿರುತ್ತಾರೆ, ಈ ಪಂಗಡಕ್ಕೆ ಸೇರಿದ ಅನೇಕ ವಿದ್ಯಾರ್ಥಿಗಳು ವಿದ್ಯಾಶಾಲಾಪ್ರವೇಶಕ್ಕೆ ಅನುಕೂಲವಿಲ್ಲದೆ ಬಹಳ ತೊಂದರೆಪಡುತ್ತಾ ವ್ಯಾಸಂಗ ಮಾಡುತ್ತಾ ಇದ್ದಾರೆ ಈ ಸ್ಥಿತಿಯನ್ನೆಲ್ಲಾ ಈ ಪಂಗಡಕ್ಕೆ ಸೇರಿದ ವಿದ್ಯಾವಂತರು ಯೋಚಿಸದೆ ಸುಮ್ಮನೆ ಸ್ತಂಭೀಭೂತರಾಗಿ ಕುಳಿತಿದ್ದಾರೆ. ದ್ರವ್ಯವಂತರೂ ಕೂಡ ಗುಡಿಗಳನ್ನು ಕಟ್ಟುವದೇ ಒಂದು ದೊಡ್ಡ ಧರ್ಮ ಕೆಲಸವೆಂದು ತಿಳಿದುಕೊಂಡು ವೃಥಾ ಹಣವನ್ನು ವ್ಯಯಗೊಳಿಸುತ್ತಾರೆ. ಇಂಥಾದ್ದನ್ನು ಮಾಡಿರುವವರಲ್ಲಿ ಶ್ರೀರಂಗಪಟ್ಟಣದಲ್ಲಿ ವಾಸಿಸುವ ಈ ಪಂಗಡಕ್ಕೆ ಸೇರಿದವರು ಒಬ್ಬ ಲಾಯರಾಗಿರುತ್ತಾರೆ ಇವರು ಈ ಹಣವನ್ನು ತಮ್ಮ ಪಂಗಡಕ್ಕೆ ಸೇರಿದ ಬಡ ವಿದ್ಯಾರ್ಥಿಗಳ ಅನಾಥಾಲಯವನ್ನು ಕಟ್ಟುವದರಲ್ಲಿ ಉಪಯೋಗಿಸಿದ್ದರೆ ಇವರಿಗೆ ಕೀರ್ತಿಯುಂಟಾಗುತ್ತಿತ್ತು. ಮತ್ತು ಮೋಕ್ಷವೂ ದೊರಕುತ್ತಿತ್ತು ಹೀಗಿರುವಲ್ಲಿ ಈ ಪಂಗಡವು ಹ್ಯಾಗೆ ಅಭಿವೃದ್ಧಿಗೆ ಬಂದೀತು? ಈಗಲೂ ಕೂಡ ಇದಕ್ಕೆ ಸೇರಿದ ವಿದ್ಯಾವಂತರೂ ಮತ್ತು ಧನಿಕರೂ ಕಲೆತು ಪರ್ಯಾಲೋಚಿಸಿ ಅಭಿವೃದ್ಧಿಗೆ ತಕ್ಕ ಏರ್ಪಾಡುಗಳನ್ನು ಮಾಡ್ಯಾರೆಂದು ನಂಬಿದ್ದೇನೆ

ಹೊಯಿಸಲ ಕರ್ನಾಟಕ

ಅಜ್ಜಂಪುರದ ಟಿ ಬಿ ಸ್ಕೂಲ್ ಅಭಿವೃದ್ಧಿಯು.

ಅಯ್ಯಾ,

ಇದೇ ಆಗಸ್ಟ್ ಮಾಸ ೯ ನೇ ತಾ ಸೋಮವಾರ ಮಧ್ಯಾಹ್ನ ಇದೇ ಊರು ಟಿ ಬಿ ಸ್ಕೂಲಿನ ಕಟ್ಟಡದಲ್ಲಿ ವಿದ್ಯಾಭಿಮಾನಿಗಳಾದ ಗ್ರಾಮಸ್ಥರು, ಸ್ಥಳೀಯ ಅಧಿಕಾರಿಗಳು, ಸೆಟ್ಟರು, ವರ್ತಕರು, ರೈತರು ಸಹ ಸಭೆ ಸೇರಿದರು. ಆಸ್ಪತ್ರೆ ಅಸಿಸ್ಟೆಂಟ್ ಮೆ॥ ವರದೈಯ್ಯನವರು ಸೂಚಿಸಿದ ಮೇರೆ ಸಭಿಕರ ಸಮ್ಮತಿಯಿಂದ ಮೆ॥ ಗುಂಡೇರಾಯರು ಆಗ್ರಾಸನವನ್ನಲಂಕರಿಸಿದರು ಸ್ಕೂಲ್ ಹೆಡ್ ಮಾಸ್ಟರ್ ಮೆ॥ ಕೆ ಶಂಕರಪ್ಪನವರು ಇಲ್ಲಿಗೆ ದಯಮಾಡುವ ಪೂರ್ವದಲ್ಲಿ ಈ ಸ್ಕೂಲು ಬಹಳ ಹೀನಸ್ಥಿತಿಯಲ್ಲಿದ್ದು, ಅತ್ಯಲ್ಪ ವಿದ್ಯಾರ್ಥಿಗಳಿಂದಲೂ ೧ ನೆ ತರಗತಿ ಮಾತ್ರದಿಂದಲೂ ಇದ್ದು, ಈಚೆಗೆ ಹೆಡ್ ಮಾಸ್ತರ ಅಶ್ರಾಂತಪ್ರಯತ್ನದಿಂದ ೧೨೦ ವಿದ್ಯಾರ್ಥಿಗಳ ವರಿವಿಗೂ ಹೆಚ್ಚಿ, ಲೋಅರ್ ಸೆಕಂಡರಿ ತರಗತಿಗಳ ವರಿವಿಗೆ ಎಲ್ಲಾ ತರಗತಿಗಳೂ ಏರ್ಪಟ್ಟಿದ್ದಲ್ಲದೆ ಕಳೆದ ವರುಷ ಮೈಸೂರು ಲೋಅರ್ ಸೆಕಂಡರಿ ಪರೀಕ್ಷೆಯಲ್ಲಿಯೂ ಒಬ್ಬ ವಿದ್ಯಾರ್ಥಿಯು ತೇರ್ಗಡೆಯಾಗಿರುವ ಅಂಶವು ಈ ಸ್ಕೂಲ್ ಸ್ಥಾಪನೆಯಾದ ಮೊದಲುಗೊಂಡು ಈವರಿವಿಗೆ ಇದೇ ಪ್ರಥಮವಾದುದರಿಂದ ಈ ವಿಷಯವು ಸ್ಥಳೀಕರಾದ ನಮ್ಮಗಳಿಗೆ ಅತ್ಯಾನಂದಪ್ರದವಾದದ್ದೇ ಆಗಿದೆ. ಇದಲ್ಲದೆ ಒಂದು ವರ್ಷದಿಂದ ಮೆ॥ ಶಂಕರಪ್ಪನವರು ಒಬ್ಬರು ಅಸಿಸ್ಟೆಂಟ್ ಮಾಸ್ತರೊಂದಿಗೆ ೧೦೦—೧೨೦ ವಿದ್ಯಾರ್ಥಿಗಳನ್ನೂ ೬—೭ ತರಗತಿಗಳನ್ನೂ ಇಟ್ಟುಕೊಂಡು ಇಷ್ಟರಮಟ್ಟಿನ ವಿದ್ಯಾಭಿವೃದ್ಧಿಯನ್ನು ತೋರಿಸಿರುವದೂ, ಇನ್ಸ್ಪೆಕ್ಷನ್ ಆಫೀಸರಿಂದ ಅಭಿಪ್ರಾಯಕ್ಕೂ ಒಳಗಾಗಿರುವದೂ ಮೊದಲಾದವುಗಳನ್ನು ನಮ್ಮ ಡೆಪ್ಟಿ ಇನ್ಸ್ಪೆಕ್ಟರು ಪರ್ಯಾಲೋಚಿಸಿ, ಒಬ್ಬ ಅ॥ ಮಾಸ್ಟರನ್ನು ಈಗ ನಾಲ್ಕು ತಿಂಗಳ ಕೆಳಗೆ ದಯಪಾಲಿಸಿ, ಈಗ ಪುನಃ ಇಬ್ಬರನ್ನು ದಯಪಾಲಿಸಿರುತ್ತಾರಾಗಿ ಸಕಲರೂ ಅವರ ವಿಷಯದಲ್ಲಿ ತಂಬಾ ಕೃತಜ್ಞರಾಗಿ ವಂದನೆಗಳನ್ನು ಅರ್ಪಿಸಬೇಕಲ್ಲದೆ, ಈ ಸ್ಕೂಲ್ ಕಟ್ಟಡದಲ್ಲಿ ಎಲ್ಲಾ ತರಗತಿಗಳನ್ನಿಟ್ಟುಕೊಂಡು ಪಾಠ ನಡಿಯಿಸುವದು ಸ್ಥಳಸಂಕೋಚದಿಂದ ಅಸಾಧ್ಯವಾದುದರಿಂದ ಪೇಟೆಯಲ್ಲಿರುವ ಸಾಯರ್ ಕಟ್ಟೆಯನ್ನು ಈ ಸ್ಕೂಲಿನ ಬಗ್ಗೆ ಕೊಡಿಸಿಕೊಡಬೇಕಾಗಿ ಕಡೂರು ಡೆಪ್ಟಿ ಕಮಿಷನರವರಲ್ಲಿ ಅರ್ಜಿಯ ಮೂಲಕ ಕೇಳಿಕೊಂಡದ್ದಕ್ಕೆ ಗ್ರಾಮನೌಕರರ ಕಛೇರಿ ಬಗ್ಗೆ ಬೇಕಾಗುವುದರಿಂದ ಸದರೀ ಕಟ್ಟೆಯನ್ನು ಸ್ಕೂಲಿಗೆ ಕೊಡಲು ಅವಕಾಶವಿಲ್ಲವಾಗಿಯೂ ಅದರ ಸಮೀಪದಲ್ಲಿರುವ ಹಳೆ ಅಂಚೆಮನೆಯನ್ನು ರಿಪೇರಿ ಮಾಡಿಸಿಕೊಂಡು ಸ್ಕೂಲಿಗೆ ಉಪಯೋಗಿಸಿಕೊಳ್ಳಬಹುದೆಂಬ ಅರ್ಥದಲ್ಲಿ ಅಪ್ಪಣೆಯಾಗಿರುವಂತೆ ತರೀಕೆರೆ ತಾಲ್ಲೂಕು ಅಮಲ್ದಾರ್ರವ ಇಂಡಾರಸು ಬಂದಿರುವದರಿಂದ ಆದಷ್ಟು ಜಾಗ್ರತೆ ಸದರೀ ಹಳೇ ಅಂಚೆ ಮನೆಯನ್ನು ರಿಪೇರಿ ಮಾಡಿಸತಕ್ಕ ಬಗ್ಗೆ ಈ ಸ್ಕೂಲು ಕಟ್ಟಡದ ಬೇಲಿ ಯಾ ಗೋಡೆಯನ್ನು ಹಾಕಿಸಿಕೊಟ್ಟು ವಿದ್ಯಾರ್ಥಿಗಳ ವ್ಯವಸಾಯ ವಿಷಯಕ ಪಾಠಾನುಭವಕ್ಕೆ ಮಾರ್ಗ ಮಾಡಿಕೊಡತಕ್ಕ ಬಗ್ಗೆ ಕೆಲವು ಸೌಲಭ್ಯಗಳು ಅವಶ್ಯಕ ಒದಗಬೇಕಾಗಿರುವುದರಿಂದ ಸ್ಕೂಲಿಗೆ ವಿದ್ಯಾರ್ಥಿಗಳನ್ನು ಕಳುಹಿಸುವವರು ಪ್ರತಿ ಒಬ್ಬ ವಿದ್ಯಾರ್ಥಿಗೆ ಒಂದೊಂದು ರೂಪಾಯಿ ಮೇರೆಯಲೂ, ಇತರ ದೊಡ್ಡಮನುಷ್ಯರೂ ತಮ್ಮ ತಮ್ಮ ಸ್ವಶಕ್ತ್ಯನುಸಾರವು ಸಹಾಯ ಮಾಡಿದಲ್ಲಿ ಉದ್ದಿಷ್ಟಕಾರ್ಯವು ನೆರವೇರುವುದಕ್ಕೆ ಅನುಕೂಲವಾಗುವುದೆಂದು ಅಪ್ಪಣೆ ಕೊಡಿಸಿದರು ಈ ಅಭಿಪ್ರಾಯವನ್ನು ಕಸಬಾ ಪಟ್ಟಣಭಾಗದ ಮೆ॥ ವೆಂಕಟಕೃಷ್ಣಪ್ಪನವರು ಅನುಮೋದಿಸಿದರು. ಸಕಲರೂ ಒಪ್ಪಿದರು ಸರ್ವರಿಂದ ಮೊಬಲಗನ್ನು ವಸೂಲ್ಮಾಡುವ ಕೆಲಸ ಮಾಡಿಸಬೇಕಾದ ಕೆಲಸಗಳನ್ನು ನೆರವೇರಿಸತಕ್ಕ ಬಗ್ಗೆ ಪಟೇಲರು ಮೆ॥ ಮಂಜಪ್ಪನವರೂ, ಡಾ ಮೆ॥ ವೆಂಕಟಕೃಷ್ಣಪ್ಪನವರೂ ಮೆ॥ ಬಿ ಸುಬ್ಬಪ್ಪನವರೂ ಸಹ ಒಪ್ಪಿಕೊಂಡ ಬಗ್ಗೆ ಸಕಲರೂ ಕೃತಜ್ಞತೆಯಿಂದ ಅನುಮೋದಿಸಿದರು. ಕೆಲವು ಸಹಾಯ ದ್ರವ್ಯವೂ ಕೆಲವರಿಂದ ಕೊಡಲ್ಪಟ್ಟಿತು ಶ್ರೀಮಾನ್ ಮಹಾರಾಜರವರಿಗೂ, ಇಲಾಖಾ ಅಧಿಕಾರಿಗಳಿಗೂ, ಸಭಾಧ್ಯಕ್ಷರಿಗೂ ಮಂಗಳಾಚರಣಪೂರ್ವಕ ಸಭೆಯು ಪೂರೈಸಲ್ಪಟ್ಟಿತು ಇದೀಗಜ್ಞಾನ, ಇದೀಗಮಾನ, ಇದೀಗದಾನ, ಇದೀಗ ದಿನೋದ್ಧರಣವಿದಾಚ

ಪ್ರೇಕ್ಷಕ.

ತಾಲ್ಲೂಕು ವರ್ತಮಾನಗಳು

ಕಿಕ್ಕೇರಿ ಹೋಬಳಿ.—ಮಳೆಗಳಿಲ್ಲದೆ ಬೆಳೆಗಳು ಬಾಡಿಹೋಗುತ್ತಾ ಕುಂಟೆಗಳಲ್ಲಿಯೂ ಮತ್ತು ಭಾವಿಗಳಲ್ಲಿಯೂ ನೀರು ಕಡಿಮೆ ಬೀಳುತ್ತಾ ಬರಲು ಪ್ರಾರಂಭವಾಗಿರುವುದು ದೇವರ ಕೃಪೆಯಿಂದ ೫—೬ ದಿನಗಳಿಂದ ಮೋಡವಾಡುತ್ತಾ ಕೊಂಚ ಕೊಂಚ ಮಳೆ ಹನಿಗಳು ಆಕಾಶದಿಂದ ಉದುರುತ್ತಾ ಇದೆಯೇ ಹೊರತು ಕುಂಟೆಗಳಿಗೇನೂ ನೀರು ಬರಲಿಲ್ಲ. ಹೊಲಗಳಲ್ಲಿ ರಾಗಿಯು ಮಾತ್ರ ಚನ್ನಾಗಿದೆ. ರೈತರು ಹೊಲಗಳಲ್ಲಿ ಕಳೆ ತೆಗೆಯುವದಕ್ಕೆ ಪ್ರಯತ್ನಿಸುತ್ತಿದ್ದಾರೆ —ನಮ್ಮ ಪ್ರಾಂತ್ಯ ಭಾವಿಗಳ ನೀರು ಬಹಳ ಆಳವಾಗಿರುವದರಿಂದ ತೋಟ ವಗೈರೆ ಬೆಳೆಯುವ ಕೆಲಸಗಳು ಮಾಡಲು ರೈತ ಪ್ರಜೆಗಳ ಕಷ್ಟಗಳು ವರ್ಣಿಸಲು ಅಸಾಧ್ಯವಾಗಿದೆ ಆದಕಾರಣ ತಾವಾಗಲೀ, ಅಥವಾ ಯಾವ ಮಹಾನುಭಾವರಾಗಲೀ ಭಾವಿಯಿಂದನೀರು ಸುಲಭವಾಗಿ ಬರತಕ್ಕಂಥಾ ಯಂತ್ರ, ಅವು ಇರುವ ವಿಚಾರವನ್ನೂ ಅದನ್ನು ಉಪಯೋಗಿಸುವ ಕ್ರಮ ಮತ್ತು ಅವು ಯಾವ ಕಂಪನಿಯಲ್ಲಿ ದೊರಕುತ್ತದೋ ಅವರ ಹೆಸರು ವಿಳಾಸವನ್ನೂ ವಿವರವಾಗಿ ಇದೇ ಪತ್ರಿಕೆಯ ಮೂಲಕ ತಿಳಿಸಿ ಈ ಬಡ ರೈತರ ಕಷ್ಟವನ್ನು ನಿವಾರಣೆಮಾಡ್ಯಾರೆಂದು ನಂಬುತ್ತೇನೆ ನೆಲ್ಲನ್ನು ಕಾಯ್ಚತಕ್ಕಂಥಾ ಯಂತ್ರ, ಇದನ್ನು ಉಪಯೋಗಿಸುವ ವಿಧಾನ ಸಹ ತಿಳಿಸುವರೆಂದು ನಂಬುತ್ತೇನೆ

ಫ್ರೇಜರ್‌ಪೇಟ್.—ಈ ಕಡೆ ಹವೆ ವಿಪರೀತವಾಗಿದೆ ಮೋಡಗಳುಂಟು, ಮಳೆ ಮಾತ್ರ ಇಲ್ಲ ರೈತರು ಬಿತ್ತಿದ ಪೈರುಗಳಿಗೂ ಬಿತ್ತುವದಕ್ಕೂ ಆಕಾಶವನ್ನೇ ಎದುರುನೋಡುತ್ತಾರೆ ಹವಾ ಬದಲಾಯಿಸಿದೆ ಗಾಳಿಯ ಸೋಂಕಿನಿಂದ ಜನರಿಗೆ ಕ್ಷೇಮವಿಲ್ಲ ಇಲ್ಲಿ ಪ್ಲೇಗ ದೆಸೆಯಿಂದ ಜನರು ತಲ್ಲಣಿಸುತ್ತಾರೆ ಜೂನ್ ೪ ರಿಂದ ಈ ವರೆಗೆ ೩೬ ಜನರಿಗೆ ತಗಲಿತು ೨೩ ಮಂದಿ ಸತ್ತರು, ಜನರೆಲ್ಲಾ ಸಂಪೂರ್ಣವಾಗಿ ಊರು ಬಿಡಲಿಲ್ಲ. ಸರಕಾರದ ನಿರ್ಬಂಧವಿಲ್ಲದಕಾರಣ ಜನರಿಗೆ ಲಕ್ಷ್ಯವಿಲ್ಲ. ಹೊರಗೆ ಹೋಗುವದರ ಪ್ರಯೋಜನವನ್ನು ಜನರು ಚನ್ನಾಗಿ ತಿಳಿದುಕೊಂಡಿದ್ದಾಗ್ಯೂ ಹೊರಗೆ ಜೋಪಡಿಗಳಲ್ಲಿ ಉಂಟಾಗುವ ಸ್ವಲ್ಪ ಕಷ್ಟಕ್ಕೆ ಭಯಪಟ್ಟು ತಮ್ಮ ಪ್ರಾಣಗಳನ್ನು ಬಲಿ ಕೊಡುವುದು ಉಚಿತವಲ್ಲ ನಮ್ಮ ಅಮಲ್ದಾರರು ಗಳು ಬೊಂಬುಗಳನ್ನು ತರಿಸಿದ್ದಾರೆ ಬಡವರು ಇದ ಪ್ರಯೋಜನವನ್ನು ಹೊಂದಬಹುದು ಪೇಟೆಯಲ್ಲಿ ಕಾಯಿಲೆಯಾದವರ್ನು ಊರಿಗೂ ಊರಿನಲ್ಲಿ ಕಾಯಿಲೆಯಾದವರೆ ಪೇಟೆಗೂ ಜನರು ಕಾಯಿಲೆಯವರನ್ನು ತಿರುಗಾಡಿಸುವದು ಚನ್ನಾಗಿಲ್ಲ. ಇದರಿಂದ ಕ್ಷೇಮವಾಗಿರತಕ್ಕ ಇತರರಿಗೆ ಬಹಳ ಭಯವುಂಟಾಗುತ್ತೆ ಸರಕಾರದವರು ಕಾಯಿಲೆಯಾದವರಿಗೆ ಪ್ರತ್ಯೇಕವಾದ ಸ್ಥಳವನ್ನು ಸಿದ್ಧಪಡಿಸಿ, ಕಾಯಿಲೆಯಾದವರನ್ನೆಲ್ಲಾ ಸೇರಿಸಿ ಉಪಚರಿಸಿದರೆ ಬಹಳ ಒಳ್ಳೇದಾಗಿದೆ. ಈ ವಿಷಯಕ್ಕೆ ಅಮಲ್ದಾರರು ಗಮನ ಕೊಡಬೇಕು ಪ್ರಕೃತ ನಮ್ಮ ಆಸ್ಪತ್ರೆ ಅಸಿಸ್ಟೆಂಟರೂ ಕಾಂಪೌಂಡರೂ ಪ್ರತಿ ಕಾಯಿಲೆಯವರ ಮನೆಯಲ್ಲೂ ಸಾಧ್ಯ ತಕ್ಕ ಚಿಕಿತ್ಸೆಗಳನ್ನು ಮಾಡುತ್ತಾರೆ ಕಾಯಿಲೆಯವರಿಗೆ ಇವರ ಔಷಧಿಗಳ ಮೇಲೆ ನಂಬಿಕೆ ಇರುವದರಿಂದ ವಿಶೇಷವಾಗಿ ಪ್ರೀತಿಸುತ್ತಾರೆ ಈ ಕಾಲದಲ್ಲಿ ಪೋಲೀಸ್ ದಫೇದಾರರು ಹೊರಗೆ ಪೇಟೆಯಲ್ಲಿಯೂ ಊರಿನಲ್ಲಿಯೂ ಪೋಲೀಸ್ ಬೀಟನ್ನು ಸರಿಯಾಗಿ ನಡೆಯುವಂತೆ ತಕ್ಕ ಕ್ರಮ ಮಾಡಿದ್ದಾರೆ. ಕಸಾಯಿಬರು ತಕ್ಕ ಕುರಿಗಳನ್ನು ಕೊಯ್ಯುತ್ತಾರೋ ಇಲ್ಲವೋ ಎಂಬುದಾಗಿ ತಾಕ್ಕರು ವಿಚಾರಿಸತಕ್ಕದ್ದಾಗಿದೆ ಯಾಕೆಂದರೆ ರೋಗದ ಕುರಿಮಾಂಸವನ್ನು ಜನರು ತಿನ್ನುವದರಿಂದ ಕಾಯಿಲೆಗಳಿಗೆ ಆಸ್ಪದವುಂಟು ಸ್ಕೂಲುಗಳೆಲ್ಲಾ ಮುಚ್ಚಲ್ಪಟ್ಟಿವೆ ಮಿಡ್ಲ್ ಇಂಗ್ಲಿಷ್ ಸ್ಕೂಲ್ ಮಕ್ಕಳಿಗೆ ಹೊರಗೆ ಪಡಸ್ತಿ ಕಟ್ಟಿಸಿ ಪಾಠ ನಡೆಸುತ್ತಾರೆ ಹುಡುಗರೆಲ್ಲಾ ಬರಬಹುದಾಗಿದೆ

ಚಿತ್ರದುರ್ಗ.—ಈಗ ೨೦—೨೫ ದಿನಗಳಿಂದ ಮೋಡ ಕವಿದು ಮಧ್ಯೆ ಮಧ್ಯೆ ಬರೀ ತುಂತುರು ಮಳೆ ಬರುತ್ತಿದೆ ವಿಪರೀತ ಶೀತಗಾಳಿ ಬೀಸುವದು ಅವುಗಳಿಂದ ಎಲ್ಲಾ ವಿಷಯದಲ್ಲೂ ಹವೆ ಕೆಟ್ಟು ಜನಗಳಿಗೆ ಕಾಯಿಲೆ ಭಯ ಸಹ ಉಂಟಾಗಿದೆ —ಹರಿಹರದಲ್ಲಿ ಕಾಲರ ವಿಶೇಷವಾಗಿ ಬಂದಿದೆ ಎಂತ ಕೇಳಿ ಡೆ॥ ಕಮಿಷನರವರು ಅಲ್ಲಿಗೆ ದಯಮಾಡಿಸಿದ್ದಾರೆ —ಈ ಸ್ಥಳದಲ್ಲಿ ವಾಸವಾಗಿರುವ ಶ್ರೀ ಮುರಿಗರಾಜೇಂದ್ರ ಸ್ವಾಮಿಗಳವರಿಗೆ ನಮ್ಮ ಶ್ರೀಮನ್ಮಹಾರಾಜರವರು ಸಾಹೇಬ್ ಬಹದ್ದೂರವರು ಅಡ್ಡಪಾಲಕಿ ವಿನಹ ಶ್ರೀ ಶೃಂಗೇರಿ ಗುರುಗಳಿಗೆ ಸಲ್ಲತಕ್ಕ ಸಮಸ್ತ ಬಿರುದುಗಳೂ ಸಲ್ಲುವವು ಎಂದು ಈಗ್ಗೆ ಕೆಲವು ದಿನಸಗಳ ಕೆಳಗೆ ಪೂರ್ವದ ಮಾಮೂಲು ಜಾರಿಗೆ ಹುಕುಂ ಕೊಟ್ಟರು ಈ ವಿಷಯದಲ್ಲಿ ಆ ಗದ್ದುಗೆಕ್ಕೆ ಸಂಬಂಧಪಟ್ಟ ಪ್ರಜೆಗಳಿಗೆಲ್ಲಾ ಸಂತೋಷವಾದಾಗ್ಯೂ ಅಡ್ಡಪಾಲಕಿಯಲ್ಲಿ ಕೂಡುವ ಹಕ್ಕು ಬರಲಿಲ್ಲವಲ್ಲಾ ಎಂಬ ವ್ಯಸನ ಉಂಟಾಗಿದೆ ಈ ಮಧ್ಯೆ ಮುರಿಗರಾಜೇಂದ್ರಸ್ವಾಮಿಗಳ ಉತ್ಸವದ ಸಮಾಪ್ತಿ ಈ ತಿಂಗಳು ೧೧ ನೇ ತಾ ಚಿತ್ರದುರ್ಗದ ಟೌನಿಗೆ ದಯಮಾಡಿಸುವರೆಂದು ಊರಲ್ಲಿ ಜನಗಳು ಚಪ್ಪರ ಮುಂತಾದ ಅಲಂಕಾರಗಳನ್ನು ಮಾಡಿಕೊಳ್ಳುತ್ತಿದ್ದರು ಆದರೆ ಕೆಲವು ಬ್ರಾಹ್ಮಣರು ಮಾತ್ರ ಸಂಕಟಪಟ್ಟುಕೊಂಡು ಒದ್ದಾಡುತ್ತಿದ್ದರು. ವಿಚಾರಿಸಿದಲ್ಲಿ ಸ್ವಾಮಿಗಳ ಉತ್ಸವವು ಕಾರಣಾಂತರದಿಂದ ನಾಳೆ ೧೫ ನೆ ತಾ ಗುರುವಾರದ ವರಿಗೂ ಆಗುವದಿಲ್ಲವೆಂದೂ ಆ ದಿನ ದಯಮಾಡಿಸುತ್ತಾರೆಂದೂ ತಿಳಿಯಿತು ನಂತರ ಕೇಳಿದ್ದರಲ್ಲಿ ಊರಲ್ಲಿರತಕ್ಕ ಬ್ರಾಹ್ಮಣೋತ್ತರರಿಗೆಲ್ಲಾ ಪರ್ಗಪಟ್ಟ ಅಮಲ್ದಾರ್ ಮೆ॥ ರಾಮಚಂದ್ರರಾಯರ ನೋಟೀಸು ಕೊಟ್ಟು ತಮ್ಮಲ್ಲಿಗೆ ಕರೆದುಕೊಂಡು ಮೇಲ್ಕಂಡ ಸ್ವಾಮಿಗಳು ಈ ಊರಿನೊಳಗೆ ಬರತಕ್ಕ ಪದ್ಧತಿ ಇದೆಯೇ, ಹಿಂದೆ ಯಾವಾಗಲಾದರೂ ಬಂದಿದ್ದರೇ ಎಂದು ವಿಚಾರಿಸಿದರೆಂತಲೂ, ಕಾರಣ ವಿಚಾರಿಸಿದ್ದಕ್ಕೆ ಸ್ವಾಮಿಗಳ ಸವಾರಿ ಬರತಕ್ಕ ರೋಡಿನಲ್ಲಿ ಅಷ್ಟ

ಗಳು ಪಾಕಲಿಕ್ಕೆ ಸಾಹುಕಾರ್ ಕಾಡಪ್ಪ ವಸ್ಯರೆ ದೊಡ್ಡ ಮನುಷ್ಯರು ಪಟ್ಟ ಕಮಿಷನರವರಿಗೆ ಅರ್ಜಿಗಳು ಕೊಟ್ಟರುದೆಂತಲೂ, ಅವರು ಅರ್ಜಿಗಳನ್ನು ವೈಸ್ ಪ್ರಸಿಡೆಂಟರಿಗೆ ಕಳುಹಿಸಿದಂತೆಯೂ, ಇವರು ಈ ವಿಷಯವನ್ನು ವಿಚಾರಿಸಿ ರಿಪೋರ್ಟ್ ಮಾಡಬೇಕೆಂದು ಅಮಲ್ದಾರ್ರಿಗೆ ಹುಕುಂ ಕೊಟ್ಟರೆಂತಲೂ, ಅಮಲ್ದಾರ್ರು ಶಿಂಗಾಯತರ ವಿಷಯ ಬಾಕಿ ಜನರನ್ನೆಲ್ಲಾ ವಿಚಾರಿಸಿದರೆಂತಲೂ ತಿಳಿಯಬರುತ್ತೆ.

ಯಸಳೂರು (ಹಾಸನ ಡಿ॥) — ಈ ಊರಿನಲ್ಲಿ ಈಗ ೫ ಮಾಸ ತಿಂಗಳ ಬಾಗಾಯಿತು ಮಳೆ ಪ್ರಕೃತಿ ಹೆಚ್ಚಾಗಿರುವದರಿಂದ ಸರ್ವರಿಗೂ ಅಪರೂಪವಾಗಿದೆ. ಮಳೆಯ ದೆಸೆಯಿಂದ ರೈತರು ಬೇಸಾಯ ಕೆಲಸವನ್ನು ಸರಿ ಮಾಡುವದಕ್ಕೆ ಅನುಕೂಲವಿಲ್ಲದೆ ಬಹಳ ವ್ಯಸನ ಪಡುತ್ತಾರಲ್ಲದೆ, ಇನ್ನೂ ಈ ಮಳೆಯು ಕಳೆದ ವರುಷಕ್ಕಿಂತಲೂ ಜಾಸ್ತಿಯಾಗಿ ೫—೬ ತಿಂಗಳ ವರಿವಿಗೂ ಬರುವದಾಗಿ ಹೇಳುತ್ತಾರೆ. ದನಕರುಗಳು ಥಾಳಿ ಮಳೆಗಳ ದೆಸೆಯಿಂದ ಹಳ್ಳಿಗಳ ಮೈದಾನದಲ್ಲಿ ಮೇಯುವದಕ್ಕೆ ಭಯಪಟ್ಟುಕೊಂಡು ಹೀನಸ್ಥಿತಿಯಲ್ಲಿ ರುವದನ್ನು ನೋಡಿದರೆ ಬಹಳ ವ್ಯಸನವುಂಟಾಗುತ್ತೆ. ಆದಕಾರಣ ಜನಗಳೇ ತಮ್ಮ ದನಕರುಗಳ ವಿಷಯ ಒಳ್ಳೆ ನೋಡಿಕೊಳ್ಳಬೇಕಾದ್ದು ಬಹಳ ಯುಕ್ತ. — ಈ ಊರಿನ ಕೆಲವು ಜನಗಳು ರಾತ್ರಿ ಕಾಲದಲ್ಲಿ ಪೊಲೀಸು ಗಸ್ತಿಗೆ ಬರಲಿಲ್ಲವೆಂದು ಪೊಲೀಸಿನವರು ಅವರ ಮೇಲೆ ಮೊಕದ್ದಮೆ ಹಾಕಿ ಇದ ಸಕಲೇಶಪುರದ ಅಮಲ್ದಾರರ ಕೋರ್ಟಿನಲ್ಲಿ ವಿಚಾರಣೆಯಾಗುತ್ತಿದೆ. — ಸುಮಾರು ೩—೪ ತಿಂಗಳ ಹಿಂದೆ ಇಲ್ಲಿನ ಆಸ್ಪತ್ರೆಗೆ ಮಿ॥ ವೇದನಾಯಕಂ [illegible] ಎಂಬ ಡಾಕ್ಟರು ಬಂದಿರುತ್ತಾರೆ. ಇವರು ರೋಗಿಗಳನ್ನು ಪ್ರೀತಿಯಿಂದ ನೋಡಿ ಚಿಕಿತ್ಸೆ ಮಾಡುವದರಿಂದ ಇದನ್ನು ಗ್ರಾಮಾಂತರದ ಅನೇಕ ಜನಗಳು ಬಂದು ಔಷಧವನ್ನು ತೆಗೆದುಕೊಂಡು ಗುಣ ಹೊಂದುತ್ತಾರೆ. ಆದರೆ ಕೆಲವು ರೋಗಗಳಿಗೆ ಸರಿಯಾದ ಔಷಧವು ಆಸ್ಪತ್ರೆಗೆ ಇನ್ನೂ ಬಂದಿರುವದಿಲ್ಲವೆಂದು ಅವರು ಹೇಳುವದನ್ನು ಕೇಳಿ ವ್ಯಸನಪಡಬೇಕಾಗಿದೆ. ದಯಾಳುಗಳಾದ ಸರ್ಕಾರದವರು ಒಪ್ಪತಕ್ಕ ಮೇಲೆ ಅಭಿಮಾನವಿಟ್ಟು ಆಸ್ಪತ್ರೆಗೆ ಬೇಕಾಗುವ ಔಷಧವನ್ನು ಕೂಡಲೆ ಕಳುಹಿಸಿದಲ್ಲಿ ಬಹಳ ಉಪಕಾರವಾಗುವದು. — ಈ ಊರಿ [illegible] ಬಹಳ [illegible] ಬಂದ [illegible] ಗಳಿಂದ [illegible] ಗಳನ್ನು [illegible] ಮಾಡಿಸುತ್ತ ಇದೆ. — ಈ ಊರ [illegible] ಜನಗಳು ಸಕ್ಕೆ ಮನೆಗಳು [illegible] ಬಹಳ [illegible] [illegible] ಆಯಾ [illegible] ಗಳನ್ನು [illegible] — ಈ [illegible] ಈ ಪ್ರಾಂತ್ಯ ಸಂಚಾರ ಮಾಡಿಕೊಂಡು [illegible] ಗಿ ಜನಕಲಗಳಿಗೆ [illegible] ವಾಗಿ [illegible]

ನಂಜನಗೂಡು — ಇಲ್ಲಿ ಪ್ಲೇಗ್ [illegible] ತಿಂಗಳಿಂದ ಲೂ ಜನರನ್ನು ಬಹಳವಾಗಿ ಕಷ್ಟಪಡಿಸಿ ಅನೇಕರನ್ನು [illegible] ಮಾಡಿದೆ. ಈಗ [illegible] ಜನರು ಊರನ್ನು ಬಿಟ್ಟು ಸುತ್ತ ಮುತ್ತ ಗ್ರಾಮಗಳಲ್ಲೂ ಷೆಡ್ಡುಗಳಲ್ಲೂ ವಾಸಿಸುತ್ತಾರೆ. [illegible] ರು ಕೊಠಡಿಗಳಿಗೆ ಪ್ಲೇಗ್ ಉಪದ್ರವು ಜಾಸ್ತಿಯಾಗುತ್ತಾ ಇದೆ. [illegible] ಗಳಿಗೆಲ್ಲಾ [illegible] ಇದೆ. ಆದರೆ ಮಾಸ್ತರು ಗಳು [illegible] ಗಳನ್ನು [illegible] ಇಂಗ್ಲಿಷ್ ಸ್ಕೂ ಲಿನ ಮಾಸ್ತರು [illegible] ಗಳು [illegible] ದರು. ಸದ್ಯಕ್ಕೆ ಅಮ ಲ್ದಾರರ ದಯದಿಂದ ವ [illegible] ಲಿ ಇಂಗ್ಲಿಷ್ ಸ್ಕೂಲ್ ನಡೆ ಯುತ್ತಿದೆ. — ಇಲ್ಲಿ [illegible] ಗಳ ಅವ [illegible] ಮನೆಗಳನ್ನು [illegible] ಗ್ಗವಿವ, ಮಿತ್ರಗಳನ್ನೂ [illegible] ಗಳನ್ನು [illegible] ದಲ್ಲಿ [illegible] ನಿರ್ಮಾಣ [illegible], ಇವೇ ಮುಂತಾದ ಅನೇಕ ಸತ್ಕಾರಪಾದ ಚೇಷ್ಟೆಗಳನ್ನು ನಡೆಸುತ್ತಾ ಬಂದಿರು [illegible] ಇದರ ನಿವಾರಣೆಗಾಗಿ ರೈತರು ಬಹಳ [illegible] ವೃದ್ಧರ ಕೈಗೆ ಕೊಟ್ಟರೆ ತ್ತಾರೆ [illegible] ಈ ವರಿವಿಗೂ ಯಾವ [illegible] ಮಾಡದೆ ಇರುವದು ತುಂಬಾ [illegible] ವಾಗಿದೆ. — ಇದೇ ಕಾಲದಲ್ಲಿ ಬಂದ ಮನೆಗೆ ಹಿರಿಯದ್ದೇ ಲಾಭವೆಂದು ಕಳ್ಳರು ಇಲ್ಲಲ್ಲಿ ಮನೆಗಳಿಗೆ ನುಗ್ಗಿ ಕೈಗೆ ಸಿಕ್ಕಿದ್ದನ್ನು ಕದಿಯುತ್ತಾ ಇದ್ದಾರೆ. ಇದರ ನಿಮಿತ್ತ ಪೊಲೀಸಿನವರು ಕೆಲವು ಮನೆಗಳನ್ನು ಜಪ್ತಿ ಮಾಡಿದರು. ಈಗ ಕಳುವಾದ ಸಾಮಾನುಗಳು ಸಿಕ್ಕದೆ [illegible] ಕೆಲವು ವರ್ಷ ಗಳ ಹಿಂದೆ ಕಳುವಾದದ್ದು ಸಿಕ್ಕಿದೆ ಎಂದ ವರ್ತಮಾನವಿದೆ. — ಈ ವರ್ಷ ಗಸ್ತು ಮಾಡಲು ಪೊಲೀಸ್ ನ ಮಳ [illegible] ಜನರು ಇಂಥಾ ಕಾಲದಲ್ಲಿ ಷೆಡ್ಡುಗಳಿಗೆ [illegible] ಗಸ್ತು [illegible] ದರು. ನೇಮಿಸ್ಪಟ್ಟ ಅಧಿಕಾರಿಗಳು ಇದನ್ನು ಯೋಚಿಸಿ, ಇನ್ನು ಕೆಲಸರನ್ನು [illegible] ಕ್ಕಾಗಿ ಕೊಟ್ಟರೆ ಚೆನ್ನಾ ಕ್ಷೇಮವಾದೀತು. — ೩ನೇ ಗುರು ವಾರ ಇಲ್ಲಿನ ಕಪಿಲಾ ನದಿಯಲ್ಲಿ ಪ್ರವಾಹವು ಹೆಚ್ಚಾಗಿ ಬಂದು ಇಲ್ಲಿನ ತೇರು, ಚಾಮುಂಡಿ ದೇವಸ್ಥಾನ, ತೋಟಗಳು, ಮುಂತಾದವುಗಳೆ ಲ್ಲಾ ನೀರಿನಲ್ಲಿ ಮುಳುಗಿಸಿತು. ಶೇಡಿನಲ್ಲಿ [illegible] ಗಳನ್ನು ಹಾಕಿ ಕೊಂಡಿದ್ದವರು ಮನೆಗೆ ಬಂದು ಬಿಟ್ಟರು. ನೀಲಗಿರಿಯ ರಸ್ತೆಯಲ್ಲಿ ಮೂರು ಅಡಿ ನೀರು ನಿಂತಿತ್ತು. ಈ ಪ್ರವಾಹದ ನೋಟವನ್ನು ನೋಡ ಲಿಕ್ಕೆ ಅನೇಕ ಜನರು ಗುಂಪು ಗುಂಪಾಗಿ ಹೋಗಿದ್ದರು. ಇಂಥಾ ಪ್ರವಾಹವು ಕೆಲವು ವರ್ಷಗಳಿಂದ ಬರಲಿಲ್ಲನೆಂದು ಜನರ ಹೇಳುತ್ತಾರೆ. ಇಲ್ಲಿನ ಸ್ಟೇಷನ್ ಮಾಸ್ತರು ಒಂದು ವರ್ಷದ ಲಾಗಾಯಿತು ಕಂಪನಿಯ ಹಣವನ್ನು ಸ್ವಂತಕ್ಕೆ ಉಪಯೋಗಿಸುತ್ತಾ ಆ ಲೆಕ್ಕಗಳನ್ನು ಕ್ರಮವಾಗಿ ಇಟ್ಟಿರಲಿಲ್ಲ. ಆಡಿಟರು ಬಂದಾಗ್ಗೆ ಅವರನ್ನು ಮೋಸ ಪಡಿಸಿ ಕಳುಹಿಸುತ್ತಾ ಇದ್ದರು. ಈ ವರಿವಿಗೂ ಅವರು ಐದುನೂರ ಎಂಬತ್ತು ರೂಪಾಯಿಯನ್ನು ತಮ್ಮ ಮನೆಗೆ ಉಪಯೋಗಿಸಿಕೊಂಡಿದ್ದರು. ಈಚೆಗೆ ಇವರು ಒಂದು ದಿನ ರಜಾದ ಮೇಲೆ ಹೋದರು. ಅದೇ ದಿನ ಆಡಿಟರು ಬಂದು ಲೆಕ್ಕಗಳನ್ನು ನೋಡಿದರು. ಆಗ ಐದುನೂರ ಎಂಬತ್ತು ರೂಪಾಯಿಗಳ ಲೆಕ್ಕ ಗೊತ್ತಾಯಿತು. ಕೂಡಲೆ ಅವರನ್ನು ಸಸ್ಪೆಂಡ್ ಮಾಡಿದರು. ಮತ್ತು ಅವರ ಪ್ರಾವಿಡೆಂಟ್ ಫಂಡಲ್ಲಿ ತಮಗೆ ಬರಬೇಕಾದ ವೇತನವನ್ನು ತೆಗೆದುಕೊಂಡು, ಕೆಲಸದಿಂದ ವಜಾ ಮಾಡಿ ದರು. ಸ್ಟೇಷನ್ ಮಾಸ್ತರಾದರೋ ತುಂಬಾ ದೊಡ್ಡ ಸಂಸಾರಿಗಳೂ ಸಣ್ಣ ಸಣ್ಣ ಮಕ್ಕಳುಳ್ಳವರಾಗಿರುತ್ತಾರೆ. ಮುಂದೆ ಯಾವ ಕೆಲ ಸಕ್ಕೆ ಸೇರುತ್ತಾರೋ ಗೊತ್ತಾಗಲಿಲ್ಲ.

ಮೈಸೂರು ಗೆಜೆಟ್ ಸಂಗ್ರಹ.

ಮೈಸೂರು ಅಸಿಸ್ಟಂಟ್ ಸರ್ಜನ್ ಮೆ॥ ಕೆ ಲಕ್ಷ್ಮೀನಾರಾಯಣಯ್ಯನವ ರಿಗೆ ಜುಲೈ ೨೩ ರಿಂದ ಹದಿನೈದು ದಿವಸಗಳ ಪ್ರಿವಿಲೆಜ್ ರಜಾ ಕೊಟ್ಟಿ ತ್ತು. ಚಡಿಷನಲ್ ಪ್ರೊಫೆಸರ್ ಮೆ॥ ಎ ಕೆ ಶ್ರೀನಿವಾಸರಾಘವಾ ಚಾರ್ರು ಮೈಸೂರು ಅಡಿಷನಲ್ ಸರ್ಜನ್ ಕೆಲಸದ ಛಾರ್ಜನ್ನು ವಹಿಸಿದ್ದರು.

ಅಮಲ್ದಾರ್ ಮೆ॥ ಎಂ ಸದಾಶಿವರಾಯರಿಗೆ ಒಂಬತ್ತು ತಿಂಗಳ ರಜಾ ಕೊಟ್ಟಿತ್ತು. ಅವರು ಜುಲೈ ೩ರಲ್ಲಿ ನೆಲಮಂಗಲದ ತಾಲ್ಲೂಕ್ ಛಾರ್ಜನ್ನು ವಹಿಸಿಕೊಂಡು, ಕೆಲಸದ ವೇಳೆ ಹಾಜರಾಗಿರೋದ ರಿಂದ ಅವರು ಉಪಯೋಗಿಸಿಕೊಳ್ಳದೆ ಇರುವ ರಜವನ್ನು ರದ್ದುಮಾ ಡಿದೆ.

ಯಡೆಹಳ್ಳಿ ಸಬ್ ತಾಲ್ಲೂಕ್ ಛಾ ಅಮಲ್ದಾರ್ ಬಿ ಜಗನ್ನಾಥ ರಾಯರಿಗೆ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ತರೀಕೆರೆ ತಾ ಲ್ಲೂಕಿನ ಶಿರಸ್ತೇದಾರ್ ಎಸ್ ಸುಬ್ಬರಾಯರು ಯಡೆಹಳ್ಳಿಯ ಡೆಪ್ಯುಟಿ ಅಮಲ್ದಾರ್ ಮತ್ತು ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಒದಲಿ ನಡೆಯತಕ್ಕದ್ದು.

[illegible] ಪುರದ ತಾಲ್ಲೂಕು ಆಕ್ಟಿಂಗ್ ಅಮಲ್ದಾರ್ ಮೆ॥ ಬಿ ಎಸ್ ಚನ್ನಿಗಪ್ಪನವರಿಗೆ ಒಂದು ವರುಷದ ರಜಾ ಕೊಟ್ಟಿದೆ.

[illegible] ತಾಲ್ಲೂಕು ಆಕ್ಟಿಂಗ್ ಅಮಲ್ದಾರ್ ಮೆ॥ [illegible] ರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂ ದ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಹಾಸನದ ಡಿಪ್ಯುಟಿ ಕಮಿಷನರ ಆಫೀಸ್ ಇಂಗ್ಲಿಷ್ ಹೆಡ್ ಕ್ಲಾರ್ಕ್ [illegible] ಅವರು ಅರಕಲಗೂಡು ತಾಲ್ಲೂಕ್ ಅಮ ಲ್ದಾರ್ ಮತ್ತು ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಒದಲಿ ಹೋಗ ತಕ್ಕದ್ದು.

ಆಸ್ಪತ್ರೆ ಅಸಿಸ್ಟಂಟರ ಗಳಲ್ಲಿ [illegible] ಲಿಂಗ ಮೊದಲಿ ಯಾರ್ರನ್ನು ೯ ಗಣಪತಿ ಅಯ್ಯರನ್ನು, ಎ ವಿ ನರಸಿಂಹಾಚಾ ರ್ರನ್ನು ೧ನೇ ಕ್ಲಾಸಿಗೂ, ಬಿ. ಸುಬ್ಬರಾಯರನ್ನು ಬಿ [illegible] ರನ್ನು ೨ನೇ ಕ್ಲಾಸಿಗೂ ಬಡ್ತಿ ಮಾಡಿದೆ.

ಮೆ॥ ಸಯ್ಯದ್ ತಾಜ್ [illegible] ಯವರನ್ನು ಕಳೆದ ಸೆಪ್ಟೆಂ ಬರ್ ೧೬ ರಿಂದ ೩ನೇ ಕ್ಲಾಸ್ ಅಸಿಸ್ಟಂಟರ ದರ್ಜೆಯಲ್ಲಿ ಖಾಯಂ ಮಾಡಿದೆ.

ಮುಂದೆ ಹೇಳುವ ಸ್ಪೆಷಲ್ ಸಬ್ ರೆಜಿಸ್ಟ್ರಾರುಗಳ ನೇಮ ಕ [illegible] ಮಾಡಿದೆ — ಕೆ ದೊರೆಸ್ವಾಮಿ ಅಯ್ಯಂಗಾರ್ರನ್ನು ಸ್ವ [illegible] ರಿಂದ [illegible] ಎಂ [illegible] ರಾಯರನ್ನು [illegible] ಟಿ ಜಿ [illegible] ವರ ನ್ನು [illegible] ದಿಂದ ಮೈಸೂರಿಗೆ.

ಮುಂದೆ ಹೇಳುವ ಅಮಲ್ದಾರರ ವರ್ಗಾವರ್ಗಿ ಹುಕುಂ ಮಾಡಿದೆ — [illegible] ವರನ್ನು [illegible] ಚಿತ್ರದುರ್ಗಕ್ಕೆ [illegible] ಚಂದ್ರಾಯರನ್ನು ಚಿತ್ರದುರ್ಗದಿಂದ ತಳ್ಳಕೆರೆಗೆ [illegible] ಯವರನ್ನು ತಳ್ಳಕೆರೆಯಿಂದ ದಾವಣಗೆರೆಗೆ.

[illegible] ತಾಲ್ಲೂಕ್ ಅಮಲ್ದಾರ್ ಮೆ॥ ಕೆ [illegible] ರಾಯರಿಗೆ ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ಕೊಟ್ಟಿದೆ.

ಮೆ॥ ವಿ ಸುಬ್ಬರಾಯರಿಗೆ ಅವರು ಅಮಲ್ದಾರರಾಗಿರುವ ವರೆಗೆ ೨ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ಕೊಟ್ಟಿದೆ.

ಮಹಮದ್ ಸುಲೈಮಾನರವರನ್ನು ಮೈಸೂರು ಇರ್ರಿಗೇಷನ್ ೩ನೆ ಬ್ಲಾಕಿನಲ್ಲಿ ೩ನೇ ಗ್ರೇಡ್ ಜಮಾದಾರಿ ಕೆಲಸಕ್ಕೆ ನೇಮಕ ಮಾಡಲಾಗಿದೆ.

ಮೈಸೂರು ಡಿವಿಷನ್ ಅ॥ ಇಂಜಿನಿಯರ್ ಜೆ ಕೆ ಪೊನ್ನಪ್ಪನ ವರಿಗೆ ಕೊಟ್ಟಿದ್ದ [illegible] ತಿಂಗಳ ಪ್ರಿವಿಲೆಜ್ ರಜವನ್ನು ರದ್ದು ಮಾಡಿದೆ.

ಓವರ್ಸಿಯರ್ ವಿ ಲಕ್ಷ್ಮಣರಾಯರು ಮೈಸೂರು ಮ್ಯುನಿಸಿಪಾ ಲಿಟಿಯ [illegible] ಇಂಜಿನಿಯರ್ ಇರುವಾಗ ಹಿಂದಿದ್ದರಿಂದ ಬಿ ನರಸಿಂಹ ಯ್ಯಂಗಾರ್ರನ್ನು ೩ ನ ಕ್ಲಾಸ್ ಓವರ್ಸಿಯರಾಗಿ ಖಾಯಂ ಮಾಡಿದೆ.

[illegible] ಪುರ ತಾಲ್ಲೂಕ್ ಅಮಲ್ದಾರ್ ಮೆ॥ ಗುಲಾಂ ಮಹಮದ್ ನಕ್ಕೆಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಇಪ್ಪ ತ್ತೈದು ದಿವಸಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಶಿರಸ್ತೇದಾರ್ ಲಕ್ಷ್ಮಣರಾ ಯರು ತಾಲ್ಲೂಕ್ ಛಾರ್ಜನ್ನು ವಹಿಸಿಕೊಳ್ಳತಕ್ಕದ್ದು.

ಪ್ರಕಟನೆಗಳು.

ಲೋಯರ್ ಸೆಕೆಂಡರಿ ಕ್ಷೇತ್ರಗಣಿತ. ಅಪ್ಪರ್ ಸೆಕೆಂಡರಿ

70 3

ಮೇಲ್ಕಂಡ ವಿದ್ಯಾರ್ಥಿಗಳಿಗೆ ಟ್ರೈನಿಂಗ್ ಇನ್ಸ್‌ಪೆಕ್ಟರ್ ಓವರ್ಸಿಯರು ಗಳಿಗೆ ಬಹು ಉಪಯೋಗವಾಗ ತಕ್ಕಂತೆಯೂ ಸುಲಭವಾಗಿ ತಿಳಿಯಬರುವಂತೆ ಸವಿಸ್ತರಣ ರೂಪದಲ್ಲಿ ೩೫ ಮಾದರಿ ಉದಾಹರಣೆಗಳಿಂ ದಲೂ ೩೦೦ ವಿವಿಧ ಪ್ರಶ್ನೆಗಳಿಂದಲೂ ಕೂಡಿದ್ದಾಗಿರುತ್ತದೆ. ಪ್ರತಿ ಅಧ್ಯಾ ಯದಲ್ಲಿಯೂ ಆಕೃತಿಗಳೂ ಸೂತ್ರಗಳೂ ಇವೆ. ಕ್ರಯ ೦—೩—೦

ವಿಳಾಸ-ಎಂ ಕೃಷ್ಣಯ್ಯ 72 ವೀವರ್ಸ್ ಲೈನ್, ಮೈಸೂರು

ಕಬ್ಬಿನ ಹಾಲು ತೆಗೆಯುವ ಗಾಣಗಳು.

68 4

ಈ ಗಾಣಗಳಿಗೆ ೭—೯—೩ ಕಡೆ ಕಬ್ಬು ಕೊಟ್ಟು ಹಾಲು ತೆಗೆ ಯಬಹುದು. ಬಹಳ ಗಟ್ಟಿಯಾದ ಸಾಮಾನಿನಿಂದ ತಯಾರಿಸಿದೆ. ಈ ಗಾಣದಿಂದ ಹೆಚ್ಚು ಲಾಭ ಬಂದೀತು. ಇದಕ್ಕೆ ಸಮಾನವಾದ ಗಾಣ ಬೇ ರೊಂದು ಸಿಕ್ಕಲಾರದು. ಈ ವಿಳಾಸಕ್ಕೆ ಬರೆದರೆ ಎಲ್ಲಾ ತಿಳಿಯುತ್ತೆ.

ಮೆಕಾನಿಜಿ ಕಂಪನಿ, ಕೆಂಗೇರಿ ರೋಡ್,

ಬೆಂಗಳೂರು ಸಿಟಿ.

ಹಿ ತ ವಾ ದಿ.

62—1

ಈ ಕನ್ನಡ ಮಾಸಪತ್ರಿಕೆಯು ಸೌಜನ್ಯಕಾಂಕ್ಷಿಗಳ ಸಂತೋಷ ಕ್ಕಾಗಿಯೇ ಹುಟ್ಟಿರುವದು. ವಾರ್ಷಿಕ ಚಂದಾ (ಅಂಚೆ ಹಾಸಲು ಸೇರಿ) ಒಂದು ರೂಪಾಯಿ, ಸ್ಕೂಲ್ ಮಾಸ್ತರುಗಳ ಮುಖಾಂತರ ಸೇರಿಕೊಳ್ಳುವ ವಿದ್ಯಾರ್ಥಿಗಳಿಗೆ ಅರ್ಧ ರೂಪಾಯಿ. ಧರ್ಮದ ವಾಚಕ ಮಂದಿರಗಳಿಗೂ ಹೀನಜಾತಿಯವರ ಪಾಠಶಾಲೆಗಳಿಗೂ ಪತ್ರಿಕೆಯು ಉಚಿತವಾಗಿ ಕೊಡಲ್ಪಡುವದು. ಬೇಕಾದವರು ಅಂಚೆ ಹಾಸಲಿಗೆ ೩ ಆಣೆ ಕಳುಹಿಸಬೇಕು. ಮಾದರಿ ಪ್ರತಿಯನ್ನು ಅಪೇಕ್ಷಿಸುವವರು ಅಂಚೆ ಹಾಸಲಿಗೆ ಅರ್ಧಾಣೆ ಸ್ಟಾಂಪನ್ನು ಕಳುಹಿಸಿದರೆ ಅವರಿಗೆ ಪತ್ರಿಕೆಯೊಂ ದಿಗೆ "ಬಾಲ್ಯವಿವಾಹ" ಪುಸ್ತಕವು ಉಚಿತವಾಗಿ ಕಳುಹಿಸಲ್ಪಡುವದು.

ಮ್ಯಾನೇಜರ್, "ಹಿತವಾದಿ" ಆಫೀಸ್, ಬೆಂಗಳೂರು

ಇಲ್ಲಿ ನೋಡಿ!

65 6

ತುಮಕೂರು ಮಿಷನ್ ಇಲಾಖೆಯಲ್ಲಿ ಯುರೋಪಿಯನ್ ಮೇ ಲ್ವಿಚಾರಣೆಯಿಂದ ಉತ್ತಮ ತರಹದ ಹಾಸನದ ಟೋಪಿಗಳು ಅತಿ ಶ್ರೇಷ್ಠವಾದ ಉಲ್ ದಾರದಿಂದ ತಯಾರಾಗುತ್ತವೆ.

ಈಗ ಕೆಳಗೆ ನಮೂದಾಗಿರುವ ವಿವಿಧ ಬಣ್ಣದ ಟೋಪಿಗಳು ಹೆಚ್ಚಾಗಿ ನಮ್ಮಲ್ಲಿ ದಾಸ್ತಾನ (ಸ್ಟಾಕ್) ಉಂಟು.

ಬಣ್ಣಗಳ ವಿಧ — ಅಚ್ಚಕೆಂಪು, ಮಂದಕೆಂಪು, ಕಪ್ಪುಕೆಂಪು ಮಿಶ್ರವಾದದ್ದು.

ಕ್ರಯ — ೧ ರೂ ೭ ಆ ಮತ್ತು ೧ ರೂ ೬ ಆ

೧ ಡಜನ್ ಟೋಪಿಗಳನ್ನು ತೆಗೆದುಕೊಳ್ಳುವವರಿಗೆ ಕೇಕಡ ೫ ರಂತೆ ಡಿಸ್ಕೌಂಟ್ ಕೊಡಲ್ಪಡುವದು.

ನಮ್ಮ ವಿಳಾಸ — ಮ್ಯಾನೇಜರ್

ಹಾಸನದ ಟೋಪಿ ಕಾರ್ಖಾನೆ, ಮಿಷನ್ ಇಲಾಖೆ, ತುಮಕೂರು.

ಪ್ರದರ್ಶನದ ಪ್ರಕಟನೆ.

೧೯೦೭ ನೇ ಇಸವಿ ಮೈಸೂರು ದಸರಾ ಇಂಡಸ್ಟ್ರಿಯಲ್ ಮತ್ತು ಅಗ್ರಿಕಲ್ಚರಲ್ ಯಗ್ಜಿಬಿಷನ್.

ಈ ಪ್ರದರ್ಶನವು ಸನ್ ೧೯೦೭ನೆ ಇಸವಿ ಅಕ್ಟೋಬರ್ ೩ನೆ ತಾರೀಖಿಗೆ ಪ್ರಾರಂಭವಾಗಿ ಅದೇ ಮಾಹೆ ೩ನೇ ತಾರೀಖಿಗೆ ಪೂರೈಸುತ್ತದೆ.

ಈ ಪ್ರದರ್ಶನಕ್ಕೆ ವಸ್ತುಗಳನ್ನು ಕಳುಹಿಸಲು ಅಪೇಕ್ಷೆಯುಳ್ಳವರು ಈ ಸಂಬಂಧದ ಪ್ರಕಟನೆಗಳನ್ನು ತಾಲ್ಲೂಕು ಅಮಲ್ದಾರುಗಳಿಂದಲೂ ಮತ್ತು ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರುಗಳಿಂದಲೂ ಹೊಂದಬಹುದೆಂತ ಈ ಮೂಲಕ ಪ್ರಸಿದ್ಧಪಡಿಸಿರುತ್ತೆ.

ಬೆಂಗಳೂರು, ೮ನೇ ಆಗಸ್ಟ್ ೧೯೦೭ — ಕೆ. ಸುಬ್ಬರಾವ್, ಸೆಕ್ರೆಟರಿ.

ಕನ್ನಡ ಲೋಯರ್ ಸೆಕೆಂಡರಿ ಮೊದಲಾದ ಪರೀಕ್ಷೆಗಳಿಗೆ ಹೋಗ ತಕ್ಕ ವಿದ್ಯಾರ್ಥಿಗಳಿಗೆ ಇದು ಬಹಳ ಒಳ್ಳೇ ಸಮಯ ಸಿದ್ಧವಾಗಿದೆ. ಕ್ರಯ [illegible] ಎಂಟೇ ಆಣೆ

ಉಪನ್ಯಾಸ ಮಂಜರಿ.

83 1

ಈ ಪುಸ್ತಕವು ಅನೇಕ ಉಪಯುಕ್ತವಾದ ಉಪನ್ಯಾಸಗಳನ್ನು ಅಡಗಿಸಿಕೊಂಡಿರುವುದು. ಇದನ್ನು ಓದುವದರಿಂದ ವಿದ್ಯಾರ್ಥಿಗಳು ಉಪನ್ಯಾಸ ಬರೆಯುವದರಲ್ಲಿ ಸಮರ್ಥರಾಗುವದರಲ್ಲಿ ಸಂಶಯವು ಇಲ್ಲ. ಲೋಯರ್ ಸೆಕೆಂಡರಿ ಮೊದಲಾದ ಪರೀಕ್ಷೆಗಳಿಗೆ ಹೋಗತಕ್ಕ ವಿದ್ಯಾರ್ಥಿಗಳಿಗೆ ತುಂಬಾ ಸಹಾಯಕವಾಗಿರುವುದು. ಉಪನ್ಯಾಸ ಬರೆ ಯತಕ್ಕ ಕ್ರಮವನ್ನೆಲ್ಲಾ ವಿಶದವಾಗಿ ತಿಳಿಸುವುದು. ಬಹಳ ಅಂದ ವಾಗಿ ಒಳ್ಳೇ ಕಾಗದದ ಮೇಲೆ ಮುದ್ರಿಸಿನಲ್ಲಿ ಛಾಪಾ ಆಗಿರುತ್ತದೆ.

ಕ್ರಯ ೦—೮—೦ ವಿ ಪಿ ಮೂಲಕ ೦—೧೦—೦

ಒಟ್ಟಿಗೆ ೧೦ ಪ್ರತಿಗಳನ್ನು ಕರಿಸಿಕೊಳ್ಳುವವರಿಗೆ ಒಂದು ಪ್ರತಿ ಯು ಉಚಿತವಾಗಿ ಕೊಡಲ್ಪಡುವದು.

ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆದು ತೊಳ್ಳಬೇಕು.

ಟಿ. ವೀರಪ್ಪ, ಪ್ಲೀಡರ್, ಚಿಕ್ಕಬಳ್ಳಾಪುರ.

ಮಿಸೆಸ್ ಅಡ್ಡಿ ಹಾರ್ಡಿಂಜ್ | ಮಿಸೆಸ್ ಮೇರಿ ಮೋಯರ್ | ಮಿಸೆಸ್ ಫ್ರಾನ್ಸಿಸ್ ವಿಲ್ಲರ್ 30-19

ಮಿಸೆಸ್ ಅಡ್ಡಿ ಹಾರ್ಡಿಂಜ್, ೪೧೦ ಕೋರ್ಟ್ ಬೀದಿ, ಸೈರಾಕ್ಯೂಸ್, ನ್ಯೂಯಾರ್ಕ್, ಈಕೆ ಬರೆಯುವುದೇನೆಂದರೆ—

"ನಾನು ಕಳೆದ ಸನ್ನೆರಡು ವರುಷಗಳಿಂದಲೂ ಪೆರೂನಾವನ್ನು ಉಪಯೋಗಿಸುತ್ತಿದ್ದೇನೆ ಇದಕ್ಕೆ ಸಮಾನವಾದ ಔಷಧವು ಪ್ರಪಂಚದಲ್ಲೇ ಇಲ್ಲವೆಂದು ನಿಜವಾಗಿ ಹೇಳಬಲ್ಲೆನು

ನನಗೆ ಎಲ್ಲಾ ವಿಧವಾದ ಶೀತಗಳನ್ನೂ ಇತರ ಅನೇಕ ಕಾಯಿಲೆಗಳನ್ನೂ ಬಾರದಂತೆ ಈ ಔಷಧವು ಖಂಡಿತವಾಗಿ ತಡೆದಿರುತ್ತದೆ ನನ್ನ ಮನೆಯಲ್ಲಿ ಪೆರೂನಾ ಔಷಧದ ಶೀಸೆಯೊಂದು ಯಾವಾಗಲೂ ಇದ್ದೇ ಇರುವುದು ವರುಷಕ್ಕೆ ಎರಡು ಮೂರು ಸಲ ನನಗೆ ಗಂಟಲಲ್ಲಿ ಬಾಧೆಯುಂಟಾಗುತ್ತಲೇ ಇರುತ್ತದೆ.

"ಖಂಡಿತವಾಗಿ ತಡೆಯುವ ಔಷಧ."

"ಪ್ರತಿಸಲ ನನಗೆ ಬಾಧೆ ಉಂಟಾದಾಗಲೂ ಎರಡು ಮೂರು ವೇಳೆ ವೈದ್ಯನನ್ನು ನಾನು ಕರೆಸಿಕೊಳ್ಳಬೇಕಾಗಿತ್ತು ನಾನು ಪೆರೂನಾವನ್ನು ಉಪಯೋಗಿಸತಕ್ಕವಳಾಗಿದ್ದಾಗ್ಯೂ ಈಗ್ಗೆ ಸುಮಾರು ಎರಡು ವರುಷಗಳ ಹಿಂದೆ ನನ್ನ ಗಂಟಲು ಬಾಧೆಗೋಸ್ಕರ ಅದನ್ನು ತೆಗೆದುಕೊಳ್ಳಬೇಕೆಂಬ ಯೋಚನೆಯೇ ನನಗೆ ಉಂಟಾಗಿರಲಿಲ್ಲ.

"ಈ ಬಾಧೆಯನ್ನು ತಡೆಯುವುದಕ್ಕೆ ಪೆರೂನಾವನ್ನು ತೆಗೆದುಕೊಂಡೆನು. ಅಂದಿನಿಂದೀಚೆಗೆ ನನ್ನ ಗಂಟಲ ಎಲ್ಲಾ ವಿಧವಾದ ಬಾಧೆಯೂ ಕಟ್ಟಿಕೊಳ್ಳುವುದೂ ನಿವಾರಣೆಯಾಗಿದೆ ಎಂದು ಬಹಳ ಸಂತೋಷದಿಂದ ಹೇಳುತ್ತೇನೆ

"ಆ ಗಂಟಲಬಾಧೆಯನ್ನು ಪ್ರತಿಸಲವೂ ಪೆರೂನಾ ಸೇವನೆಯಿಂದ ತಡೆಯಬಲ್ಲೆನು ನಿಜವಾಗಿ ನಾನು ಪೆರೂನಾ ಇಲ್ಲದೆ ಒಂದು ನಿಮಿಷವೂ ಇರಲಾರೆನು"

ಕ್ಷಯರೋಗವನ್ನು ನಿವಾರಿಸಿ ಮಾಡುವುದಕ್ಕೆ ಸಕಲ ದೇಶಗಳಲ್ಲೂ ವಿಶೇಷವಾದ ಪ್ರಯತ್ನಗಳನ್ನು ಮಾಡುತ್ತಲಿದ್ದಾರೆ.

ಎಲ್ಲೆಲ್ಲೂ ಅನೇಕಾನೇಕ ಕ್ಷಯರೋಗಿಗಳ ಚಿಕಿತ್ಸೆ ಮಾಡುವುದಕ್ಕೆ ಸರ್ಕಾರಿ ಖರ್ಚಿನಿಂದ ವಿಸ್ತಾರವಾದ ಆಲಯಗಳನ್ನು ಸ್ಥಾಪನೆಮಾಡಿ ನಡಿಸುತ್ತಿದ್ದಾರೆಂದು ಕೇಳುತ್ತೇವೆ

ವೈದ್ಯರೇ ಕಡೆಯಾಗಿ ಇಟ್ಟುಕೊಂಡಿರುವವರೆಲ್ಲಾ ಎಲ್ಲಾ ಸ್ಥಿತಿಗಳಲ್ಲೂ ಇರುವ ಕ್ಷಯರೋಗಪೀಡಿತರ ಚಿಕಿತ್ಸೆ ಮಾಡುವುದರಲ್ಲಿ ಬಿಸಿಲು, ನಿರ್ಮಲವಾದ ಹೊರಗಾಳಿ, ಬಯಲುಪ್ರದೇಶ, ಇವುಗಳ ಮೂಲಕ ಮಾಡತಕ್ಕ ಚಿಕಿತ್ಸೆಗಳೇ ಅವಶ್ಯವಾದ ಪರಿಹಾರಗಳೆಂದು ಸರ್ವಸಮ್ಮತವಾಗಿ ಒಪ್ಪಿಕೊಂಡಿರುತ್ತಾರೆ.

ಡಾಕ್ಟರ್ ಹಾರ್ಟ್‌ಮನ್‌ರವರು ಅನೇಕ ವರುಷಗಳಿಂದಲೂ ನಿರ್ಮಲವಾದ ಹೊರಗಾಳಿಯ ಚಿಕಿತ್ಸೆಯೇ ಕ್ಷಯರೋಗಕ್ಕೆ ಸರ್ವೋತ್ತಮವಾದ ಚಿಕಿತ್ಸೆಯೆಂದು ಹೇಳುತ್ತಿದ್ದಾರೆ ಇದಲ್ಲದೆ ಈ ಬಿಳಿಯ ಪ್ಲೇಗೆಂಬ ರೋಗದ ನಾನಾ ತರದ ಕಡೆ ಬಾಧೆಗಳಿಗೆಲ್ಲಾ ಪೆರೂನಾ ಔಷಧವು ಬಹುಮಟ್ಟಿಗೆ ಪರಿಹಾರವನ್ನು ಕೊಡತಕ್ಕದ್ದೆಂದು ಒಪ್ಪಿಕೊಂಡಿದ್ದಾರೆ

ಮಿಸೆಸ್ ಮೇರಿಮೋಯರ್, ಥಾಂಸನ್ ಬೀದಿ, ಎಲ್‌ರೋಡ್ ಬಳಿ, ವೆಸ್ಟ್‌ಫೀಲ್ಡ್ ಲೊಸಿಯಾನಾ, ನ್ಯೂಯಾರ್ಕ್, ಈಕೆ ಬರೆಯುವುದು—

"ನಾನು ಅನೇಕ ವರುಷಗಳ ವರೆಗೂ ಕ್ಷಯರೋಗದ ಉಪದ್ರವದಲ್ಲಿ ಕಷ್ಟಪಡುತ್ತಿದ್ದೆನು"

"ಅನೇಕ ವೇಳೆ ಅದರ ಬಾಧೆಯಿಂದ ರಾತ್ರಿಯಲ್ಲಿ ಅರ್ಧಭಾಗ ನನಗೆ ನಿದ್ರೆಯೇ ತಪ್ಪಿಹೋಗುತ್ತಿತ್ತು

ಕ್ಷಯರೋಗವೆಂಬ ಹೆದರಿಕೆಯುಂಟಾಗಿತ್ತು.

ನನಗೆ ಕ್ಷಯರೋಗ ಪ್ರಾಪ್ತವಾಗಿದೆ ಎಂದು ಅನೇಕರು ಯೋಚಿಸಿದ್ದರು

"ಎರಡು ವರುಷಗಳ ಕೆಳಗೆ ಒಬ್ಬ ಹೆಂಗಸು ಪೆರೂನಾವನ್ನು ಸೇವಿಸೆಂದು ಶಿಫಾರಸು ಮಾಡಿದಳು. ನಾನು ಪೆರೂನಾ ತೆಗೆದುಕೊಳ್ಳುವುದಕ್ಕೆ ಶುರುಮಾಡಿದೆನು. ಈಗ ನನ್ನ ಕೆಮ್ಮಿನ ಉಪದ್ರವೆಲ್ಲಾ ಸಂಪೂರ್ಣವಾಗಿ ವಾಸಿಯಾಗಿರುತ್ತದೆ

"ಪೆರೂನಾವು ನನ್ನ ಕಾಯಿಲೆಯನ್ನು ಪೂರಾ ವಾಸಿಮಾಡಿದೆ ಎಂದು ಸಂತೋಷಪಟ್ಟು ಹೇಳುತ್ತೇನೆ ಆಗಾಗ್ಗೆ ನನಗೆ ಸ್ವಲ್ಪ ಅಲಸ್ಯವಾದಾಗಲೆಲ್ಲಾ ಪೆರೂನಾವನ್ನು ತೆಗೆದುಕೊಳ್ಳುತ್ತೇನೆ, ಮತ್ತು ಅದನ್ನು ನನ್ನ ಮಕ್ಕಳಿಗೂ ಕೂಡ ಕೊಡುತ್ತೇನೆ.

"ಶೀತ, ನೆಗಡಿ, ಕೆಮ್ಮುಗಳಿಗೆ ಪೆರೂನಾ ಸರ್ವೋತ್ತಮವಾದ ಔಷಧವು ಅದರಿಂದ ನನಗೆ ಎಷ್ಟು ಸಹಾಯವಾಗಿದೆಯೋ ಅದನ್ನು ಅನೇಕ ಜನರಿಗೆ ವಿವರಿಸಿ ಹೇಳಿರುತ್ತೇನೆ"

ಪೆರೂನಾ ಎಂಬ ಔಷಧವು ಕೆಮ್ಮಲನ್ನು ಶಮನ ಮಾಡುವುದು, ಶ್ಲೇಷ್ಮವನ್ನು ಕಡಮೆ ಮಾಡುತ್ತದೆ, ರೋಗಿಗೆ ಬಲಕಾರಿಯಾಗಿದೆ, ಆಹಾರದಲ್ಲಿ ರುಚಿಯನ್ನು ಕೊಡುವುದು, ಮತ್ತು ಅನೇಕ ಸಂದರ್ಭಗಳಲ್ಲಿ ಸುಖವಾದ ನಿದ್ರೆಯನ್ನು ಕೊಡುತ್ತದೆ

ಆದರೆ ಪೆರೂನಾ ಔಷಧವು ಕ್ಷಯರೋಗ ವನ್ನು ಬಾರದಂತೆ ತಡೆಯುವುದರಲ್ಲಿ ಗುಣಕಾರಿಯಾದುದು ಕ್ಷಯರೋಗ ಬಂದ ಮೇಲೆ ಅದನ್ನು ನಿವಾರಣೆ ಮಾಡುವುದಕ್ಕೆ ಅಷ್ಟು ಬಲಕಾರಿಯಾದದ್ದಲ್ಲ

ಶೀತ, ನೆಗಡಿ, ಕೆಮ್ಮುಗಳಿಂದಲೇ ಪ್ರಾರಂಭವಾಗಿ ಅಲಕ್ಷ್ಯಮಾಡಿದರೆ ಅವೇ ಅಂತ್ಯದಲ್ಲಿ ಕ್ಷಯರೋಗವಾಗಿ ಪರಿಣಮಿಸುತ್ತವೆಂದು ಎಲ್ಲಾ ಜನಗಳಲ್ಲೂ ತಿಳಿದ ಬಂದಿರೋಣವರಿಂದ ಆ ಮೂರನ್ನೂ ನಿವಾರಣೆ ಮಾಡುವಂಥಾ ಔಷಧವೇ ಕ್ಷಯರೋಗ ಪರಿಹಾರದ ಔಷಧವೆಂದು ಪೂರ್ಣ ಬರವಸದಿಂದ ನಂಬಬೇಕಾಗಿದೆ

ಕ್ಷಯರೋಗದ ಪ್ರಾರಂಭದೆಸೆಯನ್ನೂ ಕಠಿಣತರವಾದ ಕೆಮ್ಮುಗಳನ್ನೂ ನಿಂತ ಶೀತ ನೆಗಡಿಗಳನ್ನೂ ಅನುಭವಿಸುತ್ತಿದ್ದ ಸಾವಿರಾರು ರೋಗಿಗಳು ಅವಕ್ಕೆಲ್ಲಾ ಪೆರೂನಾವೇ ಕ್ಷೇಮಕರವಾದ ಮತ್ತು ನಂಬಿಕೆಯಾದ ಪರಿಹಾರವೆಂದು ತಿಳಿಸಿರುತ್ತಾರೆ.

ಮಿಸೆಸ್ ಫ್ರಾನ್ಸಿಸ್ ವಿಲ್ಲರ್, ೩೦ ವೆಲ್ಸ್ ಬೀದಿ, ಕ್ಲಿಂಟನ್, ಮ್ಯಾಸ್, ಎಂಬಾಕೆಯು ಬರೆಯುವುದೇನೆಂದರೆ—

"ಕಾಯಿಲೆಯನ್ನು ಅನುಭವಿಸುತ್ತಿದ್ದಾಗ ನನ್ನ ಸ್ಥಿತಿಯನ್ನೂ ಈಗ ನಾನಿರುವ ಸ್ಥಿತಿಯನ್ನೂ ನೀವು ನೋಡಿದ ಪಕ್ಷದಲ್ಲಿ ನಾನು ಸಂತೋಷದಿಂದ ಬರೆಯುವ ಈ ಮಾತುಗಳೇನೂ ವಿಶೇಷವಲ್ಲವೆಂದು ಯಥಾರ್ಥವಾಗಿ ಒಪ್ಪಿಕೊಳ್ಳುತ್ತೀರಿ

"ಬಹಳ ಕಠಿಣವಾದ ಶೀತವು ನನಗೆ ಪ್ರಾಪ್ತವಾಗಿ ಅದರಿಂದ ನನ್ನ ಶ್ವಾಸಕೋಶವೂ ಶ್ವಾಸನಾಳಗಳೂ ಕಟ್ಟಿಕೊಂಡಿದ್ದವು

"ನೀವು ಬರೆದು ಹೇಳಿದ ಪ್ರಕಾರವೇ ನಾನು ಮಾಡುತ್ತಾ ಬಂದೆನು. ಆರು ಬಾಟ್ಲುಗಳಷ್ಟು ಪೆರೂನಾವನ್ನು ಸೇವಿಸಿದಮೇಲೆ ನಾನು ಯಥಾಪ್ರಕಾರ ಕ್ಷೇಮವಾದ ಸ್ಥಿತಿಗೆ ಬಂದೆನು.

"ಪೆರೂನಾವು ಒಂದು ಅದ್ಭುತವಾದ ಔಷಧವೆಂದು ನಾನು ಯೋಚಿಸಿಕೊಂಡಿರುತ್ತೇನೆ"

ಹೊಸದಾಗಿ ಪ್ರಾಪ್ತವಾದ ಶೈತ್ಯವನ್ನು ಅತಿ ಜಾಗ್ರತೆಯಾಗಿ ಪರಿಹರಿಸುವುದರಲ್ಲೂ ನಿಂತ ಶೀತ ನೆಗಡಿಗಳನ್ನು ನಿವಾರಣೆ ಮಾಡುವುದರಲ್ಲೂ ಪೆರೂನಾವು ಈ ದೇಶದ ಎಲ್ಲಾ ಕಡೆಗಳಲ್ಲೂ ಪ್ರಸಿದ್ಧಿಪಡೆದಿರುತ್ತದೆ ಪ್ರತಿಯೊಬ್ಬರಿಗೂ ಪೆರೂನಾ ಔಷಧವು ಬಹು ಉಪಯುಕ್ತವಾದ ಪರಿಹಾರವೆಂದು ಕಂಡುಬಂದಿರುತ್ತದೆ

ಕ್ಷಯರೋಗ ನಿವಾರಣೆ

ಮೇ ವಿಲಿಯಂ ಸ್ಪೈಯರ್, ೪೮ ನಸ್ಟ್ರೀಟ್ ಬೀದಿ, ಪಶ್ಚಿಮ ಫಿಲಡೆಲ್ಫಿಯಾ, ಪ, ಎಂಬಾತನು ಬರೆದಿರುವುದನ್ನು ಓದಿನೋಡಿ—

"ನನಗೆ ಬಂದಿದ್ದ ನೆಗಡಿ ಶೀತವನ್ನು ವಾಸಿಮಾಡಿಕೊಳ್ಳುವುದಕ್ಕೆ ಪೆರೂನಾ ಔಷಧವನ್ನು ಉಪಯೋಗಿಸುವುದಕ್ಕಿಂತ ಮೊದಲು ನನ್ನ ಯೋಚನೆಗೆ ತೋರಿದ ಔಷಧಗಳನ್ನೆಲ್ಲಾ ಸೇವನೆ ಮಾಡಿದ್ದೆನು

"ಬೇಗ ಹುಸಿಗೆಯಿಂದ ಏಳುವಾಗ ನನಗೆ ತುಂಬಾ ನಿಶ್ಯಕ್ತಿಯಾಗುತ್ತಿತ್ತು ನನ್ನ ಶ್ವಾಸಕೋಶಗಳು ಒಣಗಿ ಕಟ್ಟಿಕೊಂಡಂತೆ ನನಗೆ ತೋರುತ್ತಿತ್ತು ಆದ ಬದಲು ಪೂರ್ವಕವಾಗಿ ತಿಳಿಯದೆ ಇರಬೇಕು ನಾನು ಅನುಭವಿಸಿದ ಕಷ್ಟವನ್ನೆಲ್ಲಾ ತಿಳಿದುಕೊಳ್ಳಲಾರರು ಅವರ ಪಂಚಾಂಗಕ್ಕೆ ಯಾದ್ಯಂತ ಪೆರೂನಾ ಔಷಧದ ಚಿಕಿತ್ಸೆಗಳನ್ನು ಕೇಳಿದರೆ ಅದನ್ನೆಲ್ಲಾ ನಾನು ಕಂಡೆನು ಅದರ ಗುಣದಿಂದ ನನಗೆ ಸಂಪೂರ್ಣವಾದ ಗುಣಕಂಡಿವೆ ಹೋಯಿತು.

"ಪೆರೂನಾ ಔಷಧವನ್ನು ತೆಗೆದುಕೊಳ್ಳಲು ಆರಂಭಿಸಿ ಒಂದು ಬಾಟ್ಲಿಯಷ್ಟು ಕುಡಿದಿದ್ದಾಗ ನನಗೆ ತುಂಬಾ ಸುಧಾರಿಸಿತು ತರುವಾಯ ನನ್ನ ರೋಗವೆಲ್ಲಾ ನಿವಾರಣೆಯಾಗುವವರೆಗೆ ಅದನ್ನು ಸೇವಿಸಿದೆನು ಪೆರೂನಾದ ಗುಣವನ್ನು ಬಿಟ್ಟೆಂದು ರೋಗಿಗಳು ಕೇಳಲಾರೆನು ಅದರ ಯೋಗ್ಯತೆಯನ್ನು ಪ್ರತಿಯೊಬ್ಬರೂ ತಿಳಿದುಕೊಳ್ಳಲೆಂದು ಅಪೇಕ್ಷಿಸುತ್ತೇನೆ"

ನೆಗಡಿ ಶೈತ್ಯ ಕೆಮ್ಮುಗಳನ್ನು ಅನುಭವಿಸುವವರು ಒಂದು ಬಾಟ್ಲು ಪೆರೂನಾ ಔಷಧವನ್ನು ತರಿಸಿಕೊಂಡು, ಉಪಯೋಗಿಸಿ ಅದರ ಯೋಗ್ಯತೆಯನ್ನು ತಿಳಿದುಕೊಳ್ಳಬೇಕಾಗಿದೆ

ಈ ಔಷಧ ಸಿಕ್ಕುವ ಸ್ಥಳಗಳು:—

(೧) ಹಿಚ್‌ಕಾಕ್ ಅಂಡ್ ಸನ್ಸ್, ಬೆಂಗಳೂರು.

(೨) ಇಂಗ್ಲಿಷ್ ಡ್ರಗ್ ಕಂಪನಿ, ೩೯೬ ಮಿಂಟ್ ಬೀದಿ, ಮದರಾಸ್.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿ[illegible]

28—7—1907 ರಿಂದ 2—8—1907 ರ ವರೆ[illegible]

ಸ್ಥಳ		ಪ್ಲೇಗ್ ತಗಲಿದ್ದು	ಸತ್ತದ್ದು	ತಗಲಿದ್ದು
ಬೆಂಗಳೂರು ಪಟ್ಟಣ		12	14	0
ಮೈಸೂರು	,,	38	13	0
ಬೆಂಗಳೂರು ಡಿಸ್ಟ್ರಿಕ್ಟು		114	83	0
ಮೈಸೂರು		88	89	8
ಕೋಲಾರ್	,,		0	8
ಕೋಲಾರ್ ಚಿನ್ನದ ಗಣಿಗಳು		2	10	0
ತುಂಕೂರು ಡಿಸ್ಟ್ರಿಕ್ಟ್		0		49
ಹಾಸನ	,,	5	5	11
ಚಿತ್ರದುರ್ಗ	,,	0	0	0
ಕಡೂರ್	,,	12	9	0
ಶಿವಮೊಗ್ಗ	,,	12	14	0
ಮೊತ್ತ		295	217	86

ಶಾಲಿವಾಹನ ಶಕ ವರುಷಂಗಳು ೧೮೨೯ ನೇ ಪ್ಲವಂಗನಾಮ [illegible] ರದ ಪ್ರಾಚೀನ ಸಿದ್ಧಾಂತ ಗುರುವಾರದಿಂದ ಪ್ರಾಚೀನ ಸಿದ್ಧಾಂತ [illegible] ನ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೭ ನೇ ಇಸವಿ ಆಗಸ್ಟ್.

ತಾ	ವಾರ		ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	[illegible]
15	ಗುರು	†	ಷಷ್ಟಿ	16 26	ಸ್ವಾ	58 28	31
16	ಶುಕ್ರ	‡	ಸಪ್ತಮಿ	13 12	,,	56-22	32
17	ಶನಿ	,,	ಅಷ್ಟಮಿ	5 55	ಅ	53-29	1
18	ರವಿ		ನವಮಿ	3 39	ಉಷ	54-01	2
19	ಸೋಮ	.	ಏಕಾದ	52 30	ಮೂ	16 16	3
20	ಕುಜ	¶	ದ್ವಾದ	16 26	ಪೂಷಾ	41-58	4
21	ಬುಧ	,,	ತ್ರಯೋದಶಿ 40-20		ಉತ್ತರಾ	37-55	5

† ದಗ್ಧಯೋಗ ‡ ಮಹಾವ್ಯತಿಪಾತ, ಅತಿಸಂಕ್ರಮಣ, ಸಂಕ್ರಮ[illegible] ವಾರ ,, ಶ್ರಾವಣಶನಿವಾರ ಸ್ಮಾರ್ತರ ಏಕಾದಶಿ, ದಗ್ಧಯೋಗ ¶ ಭಾಗವತ ಮಧ್ವ ಶ್ರೀಮನ್ನಾರಾಯಣ ಏಕಾದಶಿ, ಹರಿವಾಸರ, ಮಂ[illegible] ಗೌರೀವ್ರತ ,, ಪ್ರದೋಷ

ಪೇಟೇ ಧಾರಣೆ.

ದಿನಸಿ.		ಮೈಸೂರು.	ಬೆಂಗಳೂರು
ಕಸ್ತೂರಿ ಅಕ್ಕಿ ಪಲ್ಲ ೧ಕ್ಕೆ	ರೂ	೧೩-೦-೦	೧[illegible]
ಕಂಬೂತಿ ಅಕ್ಕಿ ಅವಲ್		೧೩-೮-೦	೧೩[illegible]
,, ೧ ರಡಂ		೧೨-೮-೦	೧೨[illegible]
ರಾಜಭೋಗ ಅಕ್ಕಿ		೧೨-೮-೦	೧೩[illegible]
ಸಣ್ಣಕ್ಕಿ ಅವಲ್		೧೩-೦-೦	೧೧[illegible]
,, ದುಯಂ		೧೧-೮-೦	೧೬[illegible]
ತೊಗರೀ ಬೇಳೆ ಪಲ್ಲ ೧ಕ್ಕೆ		೧೩ ೮-೦	೧೩[illegible]
,, ದುಯಂ		೧೨-೧೨-೦	೧೩[illegible]
ಸೈರಾಗಿ ಪಲ್ಲ ೧ಕ್ಕೆ		೩-೮-೦	೩ ೦[illegible]
ಕಾಡ್ರಾಗಿ		೫-೧-೦	೩[illegible]
ಜೋಳ		೬-೮-೦	೯[illegible]
ಹಲಸಂದೆ ಪಲ್ಲ ೧ಕ್ಕೆ		೧೧-೦ ೦	೧೦ ೦[illegible]
ಬಿಳೀ ಅವರೆ		೯-೩ ೨	೮[illegible]
ಹೆಸರು		೧೧-೦ ೦	೧೧[illegible]
ಉದ್ದು		೧೧-೦-೦	೧೦-[illegible]
ಕಡಲೆ		೧೨-೦-೦	೧೧[illegible]
ಎಳ್ಳು ಸೇ ೧೦೦ಕ್ಕೆ		೧೯-೦-೦	೨೩-[illegible]
ಹುರುಳಿ		೩-೮-೦	೩ ೮[illegible]
ಹರಳು ೧೦೦ ಸೇರಿಗೆ		೧೩-೦-೦	೧೨-[illegible]
ಸೀಗೇಕಾಯಿ ಮಣ ೧ಕ್ಕೆ		೨-೦ ೦	೨[illegible]
ಮೆಣಸಿನಕಾಯಿ		೨೦-೧೨-೦	೨ ೦[illegible]
,, ದುಯಂ		೯-೮-೦	೨[illegible]
ಬೆಲ್ಲ ದೊಡ್ಡ ಅಚ್ಚು		೭-೮-೦	ಮ ೨[illegible]
ಒಳ್ಳೆಣ್ಣೆ ಮಣ ೧ಕ್ಕೆ		೫-೩-೦	೫-[illegible]
ಹರಳೆಣ್ಣೆ ,,		೫ ೧೨-೦	೫-[illegible]
ಕೊತ್ತುಂಬರಿ ಪಲ್ಲ ೧ಕ್ಕೆ		೩-೨-೦	೪-[illegible]
ಉಪ್ಪು ,,		೫-೧-೦	೫-೦[illegible]
ಹುಣಿಸೇ ಹಣ್ಣು		೧-೩-೦	[illegible]
,, ಹಳೇದು		೦-೧೩-೦	೧[illegible]
ತುಪ್ಪ ಮಣ ೧ಕ್ಕೆ		೧೫-೦ ೦	೧೬[illegible]
ಸೀಮೆಯಿಂಡೆ ಪಟ್ಟೆ ೧ಕ್ಕೆ		೫-೦-೦	[illegible]
ತೆಂಗಿನಕಾಯಿ ೧೦೦ಕ್ಕೆ		೩-೮-೦	೩ [illegible]
ಅಡಿಕೇಕಾಯಿ ಮಣ ೧ಕ್ಕೆ		೧-೦-೦	೧-[illegible]
ಒಣ್ಯೆಲೆದ ಕಾಯಿ ಮಣ ೧ಕ್ಕೆ		೦-೧೨-೦	೦-೨[illegible]
ಚಿನ್ನ (ಪವನ್) ಕೆಂಪು		೧೫-೩-೦	೧೫-[illegible]
,, ,, ಪಸಿಮೆ		೧೫-೧೦-೦	೧೫-[illegible]
,, ,, ಗಟ್ಟಿ ತೊಲ ೧ಕ್ಕೆ		೨೩-೧೨-೦	೨೩-[illegible]
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ		೮೫-೦-೦	೮[illegible]

Printed and Published by the Rev. E [illegible] THOMPSON, M A, Proprietor and Manager, Wesley[illegible] Mission Press, Mysore. 15/8/1907.

REGISTERED
M. 20

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಕ್ರಯ ೧ ದುಡ್ಡು.

ಕ್ರಯ ೧ ದುಡ್ಡು

ಸಂಪುಟ ೨೧ ಮೈಸೂರು—ಸನ್ ೧೯೦೭ ನೇ ಇಸವಿ ಆಗಸ್ಟ್ ತಾರೀಖು ೨೨ ನೇ ಗುರುವಾರ. ಸಂಚಿಕೆ ೧೨

WILLIAM & CO., BOMBAY.

ವಿಲಿಯಂ ಮತ್ತು ಕಂಪೆನಿ, ಪೋರ್ಟು, ಮುಂಬಯಿ.

ಗಜಕರ್ಣದ ಮುಲಾಮು.

27-26

ಇದನ್ನು ಹಾಗಿಸುವದರಿಂದ ಎಲ್ಲಾ ತರದ ಕಜ್ಜಿಯು ನಾಶವಾಗುವದು. ಮೂರು ಸಾರಿ ಹಾಗಿಸುವದರೊಳಗೆ ಗಜಕರ್ಣವು ಹೋಗುವದು. ಇದನ್ನು ಹಚ್ಚಿದಲ್ಲಿ ಉರಿಯು ಬರುವದಿಲ್ಲ ಚರ್ಮ ಕಪ್ಪಾಗುವದಿಲ್ಲ.

ಇದರಿಂದ ಗುಣ ಕಂಡುಬರುವದಿಲ್ಲವಾದರೆ ಹಣ ಹಿಂತಿರುಗಿ ಕೊಡಲ್ಪಡುವದು ತ್ವರೆಮಾಡಿರಿ! ಕೊಂಡುಕೊಳ್ಳಿರಿ!! ಕ್ರಯ ಕಮ್ಮಿ. ಒಂದು ಸಾರಿ ಪರೀಕ್ಷಿಸಿ ನೋಡಿರಿ!! ಡಬ್ಬಿ ೧ಕ್ಕೆ ಕಿಮ್ಮತ್ತು ೦-೩-೦. ವಿ ಪಿ ೦-೧೦-೦.

[illegible]

ಅಮೃತಾಂಜನ

[illegible] ದಂತಮಂಜನ ೩ ಆಣೆ. ನೇತ್ರಾಂಜನ ೪ ಆಣೆ.

ಬಾಟ್ಲಿ ಒಂದಕ್ಕೆ ಕಿಮ್ಮತ್ತು ೮ ಆಣೆ. ವಿ ಪಿ ೧೨ ಆಣೆ.

ದುಃಖ ಮತ್ತು ಚೇಳು, ವಾತ, ಎದೆನೋವು, ಗಂಟ್ಲುನೋವು, ಶಿರೋಭಾರ, ಸಂಧಿವಾತ, [illegible], ಮೂಲವ್ಯಾಧಿ, ಶೀತ, ಕೆಮ್ಮು, ಈ ಎಲ್ಲಾ ತರದ ರೋಗಕ್ಕೆ **ಅಮೃತಾಂಜನವು** ಒಂದು ವಿಶ್ವಾಸದ ಔಷಧವಾಗಿರುತ್ತದೆ. [illegible] ತ್ವರೆ ಮಾಡಿರಿ! [illegible] ಅಮೃತಾಂಜನದಿಂದ [illegible]

ನಾನು ನನ್ನ ಸ್ನೇಹಿತರೂ **ಅಮೃತಾಂಜನವನ್ನು** [illegible] **ಅಮೃತಾಂಜನ** [illegible] **ಅಮೃತಾಂಜನವು** [illegible] **ಅಮೃತಾಂಜನವು** [illegible]

[illegible] **ಅಮೃತಾಂಜನವನ್ನು** [illegible] ಬೆಂಗಳೂರು. [illegible] **ಅಮೃತಾಂಜನವು** [illegible]

ನಿಮ್ಮ ಅಮೃತಾಂಜನವು ಶೀತ, ಕೆಮ್ಮು, ತಲೆನೋವು, [illegible] ಮ್ಯಾನೇಜರ್, [illegible]

ವಿಲಿಯಂ ಮತ್ತು ಕಂಪೆನಿ, ೧೬ ಬಿಕ್ ಲೇನ್, ಪೋರ್ಟು, ಮುಂಬಯಿ.
ಟೆಲಿಗ್ರಾಫು ಅಡ್ರೆಸು; "ಅಮೃತಾಂಜನ" ಮುಂಬಯಿ.

ನಿಮಗೆ ನೋವು ಇದೆಯೋ?

58-13

ಕಾಗಾದರೆ "[illegible]" ನ್ನು ಏಕೆ ಉಪಯೋಗಿಸಬಾರದು? ಆಶ್ಚರ್ಯಕರವಾದ [illegible]! ಈಗಿನ ಶತಮಾನದಲ್ಲಿ ಕಂಡು ಹಿಡಿದ ದೊಡ್ಡ ನೂತನವು.

ಈ [illegible] ಔಷಧವನ್ನು [illegible] ನರ ಮತ್ತು ಮಾಂಸ ಸಂಬಂಧವಾದ [illegible] ನೋವು, ಕೀಲುಗಳ ಬಾಧೆ, ಕಿಬ್ಬೊಟ್ಟೆ ನೋವು, [illegible], ತಲೆನೋವು, ಕೆಮ್ಮು, [illegible] ವಿದ್ಯುಚ್ಛಕ್ತಿಯಂತೆ ಗುಣಪಡಿಸುವದು. ಈ ಔಷಧವು ಆಶ್ಚರ್ಯಕರವಾಗಿ ಗುಣಪಡಿಸುವದರಿಂದ ಎಲ್ಲರಲ್ಲಿಯೂ ಪ್ರಸಿದ್ಧವಾಗಿ ಬರುವದು. [illegible] ಇದು ನಿಸ್ಸಂದೇಹವಾಗಿಯೂ ಗುಣಪಡಿಸುವದು.

ಕ್ರಯ:—೧ ಬಾಟ್ಲಿಗೆ ೧೨ ಆಣೆ, ಪೋಸ್ಟೇಜ್ ೪ ಆಣೆ [illegible] ಬಾಟ್ಲಿಗೆ [illegible] ರೂ ೨—೪ ಆಣೆ. ಎಲ್ಲಾ ಕೆಮಿಸ್ಟ್ ಷಾಪುಗಳಲ್ಲಿ ದೊರೆಯುವದು.

ನಮ್ಮ ವಿಳಾಸ:—ಎಫ್. ಡಬ್ಲ್ಯು. ಆರ್ಮ್,
ಸಿಮೆಟ್ರಿ ರೋಡ್, ವೇಪೇರಿ, ಮದರಾಸ್.

ಜ್ವರಹರಿ.

7+4

ಇದು ಸಾಧಾರಣ ಜ್ವರ, ಚಳೀಜ್ವರ, [illegible], ಪಿತ್ತಜ್ವರ, ಶೀತಜ್ವರ, [illegible], ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನು ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ [illegible] ವೆಂಕಟಪತಿ ಅಯ್ಯರವರು [illegible] ಸ್ವಲ್ಪ ಕಾಲದಲ್ಲೇ [illegible] ಔಷಧದಿಂದ ಅನೇಕ ಮಂದಿ [illegible] ಇನ್ನೊಂದು [illegible] ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ [illegible] ಪೋಸ್ಟೇಜು ಪ್ರತ್ಯೇಕ ವಿಧಿಸಲಾಗುವದು.

****

ಓಮಂ ಕರ್ಪೂರ.

ಈ ಔಷಧವು ಅಜೀರ್ಣ, [illegible] ಸಾಧಾರಣ ಹೊಟ್ಟೆಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, [illegible] ಇದು [illegible] ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು [illegible] ಗುಣಪಡಿಸುತ್ತದೆ. ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ [illegible] [illegible]ವದು.

[illegible] ಅಸಿಸ್ಟೆಂಟ್ ಸರ್ಜನ್ [illegible] ಕರ್ಪೂರವನ್ನು ನಾನೂ ನನ್ನ [illegible] ಅನೇಕ ವರುಷಗಳಿಂದಲೂ [illegible], ಅಜೀರ್ಣ ರೋಗಿಸ್ಥರಿಗೆ [illegible] ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂತ ಬರೆದಿದ್ದಾರೆ.

ಈ ನಾಲ್ಕು ಔಷಧಗಳೂ [illegible]ಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾತ್ರಲ್ಲಿ ವಿಶೇಷ:—
[illegible] ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,
[illegible], ಮದ್ರಾಸ್

ವೈದ್ಯ ವೆಂಕಟಾಚಲ ಪಂಡಿತ, ಶ್ರೀಸೀತಾರಾಮ ವೈದ್ಯಶಾಲಾ, ಕೊಳ್ಳೇಗಾಲ, ಇವರ ಸಿದ್ಧೌಷಧಗಳು.

26-27

೧ ಲೋಕಾಮಯಹರ ಕಸ್ತೂರೀ ಮಾತ್ರೆ.—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ.

ಚಳಿಜ್ವರ, ಜ್ವರ, ಹೊಟ್ಟೆಶೂಲೆ, [illegible] ವೈಶ್ವಕಾಲು ಕೊಡತ (ಭಾರ), [illegible], ಶೀತವಾತಗಳ ಬಾಧೆ, ಅಜೀರ್ಣ, [illegible] ನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, [illegible], ಇನ್ನೂ ಅನೇಕರೋಗಗಳಿಗೆ ಕೊಟ್ಟರೆ [illegible] ಗುಣಪಡಿಸುತ್ತದೆ.

ತಾಂಬೂಲದೊಡನೆ ಅಥವಾ [illegible] ಉಪಯೋಗಿಸುತ್ತಿದ್ದರೆ ಬಹಳ ಹೊತ್ತು [illegible] ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ ಯಾವ ಬಾಧೆಯೂ ಬಾರಿಕೊಡದೆ, [illegible] ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧಮಾಡಿ ವೃದ್ಧಿಪಡಿಸುತ್ತದೆ.

ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, [illegible] ಕೃಶತ್ವಗಳನ್ನು ಗುಣಪಡಿಸುತ್ತದೆ.

ಇದನ್ನು ಸೇವಿಸುತ್ತಿರುವವರು [illegible] ರೋಗಕ್ಕೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.

[illegible] ಮಾತ್ರೆಯುಳ್ಳ ಡಪ್ಪಿಗೆ ೪ ಆಣೆ; [illegible] ೧ ರಿಂದ ೧೨ ಡಪ್ಪಿ ವರೆಗೆ ಪೋಸ್ಟೇಜು ೩ ಆಣೆ.

ವಿಳಾಸ:—ಎಸ್. ಎಸ್. ಆರ್. ವೈದ್ಯಶಾಲಾ,
ಲಕ್ಷ್ಮೀವಿಲಾಸ ರೋಡ್, ಮೈಸೂರು

ಉಪಾಧ್ಯಾಯರೆಲ್ಲರೂ

ಓದತಕ್ಕ ನೋಟೀಸ್.

29-3

ಮೈಸೂರು ಸರ್ಕಾರದ ವಿದ್ಯಾಭ್ಯಾಸದ ಇಲಾಖೆ ಇನ್‌ಸ್ಪೆಕ್ಟರ್ ಜನರಲ್‌ರವರು ಕೆಳಗೆ ಕಂಡ ಪುಸ್ತಕಗಳನ್ನು ಸರ್ಕಾರದ ಸ್ಕೂಲುಗಳಲ್ಲಿಯೂ, ಗ್ರ್ಯಾಂಟ್ ಪಡೆಯತಕ್ಕ ಪಾಠಶಾಲೆಗಳಲ್ಲಿಯೂ ಮತ್ತು ಆಂಗ್ಲೋ ವರ್ನಾಕ್ಯುಲರ್ ಸ್ಕೂಲ್‌ಗಳಲ್ಲಿಯೂ ಮತ್ತೂ [illegible] ಕೊಡುವತನಕ ಉಪಯೋಗಿಸಬೇಕೆಂದು ಕಳೆದ ಜೂಲೈ [illegible] ನೆ ತಾರೀಖಿನ ಮೈಸೂರು ಗೆಜೆಟ್ಟಿನಲ್ಲಿ ಪ್ರಕಟಿಸಿ ಮಾಡಿರುತ್ತಾರೆ.

ಭೂಗೋಳ ಶಾಸ್ತ್ರದ ಮೊದಲನೆಯ ಪುಸ್ತಕ (೧ನೆಯ [illegible] ನೆಯ ಭಾಗ, ಒಂದೇ ಪುಸ್ತಕ. ಈ ಪುಸ್ತಕದಲ್ಲಿ ನಾಲ್ಕು ಬಣ್ಣದ ನಕ್ಷೆಗಳೂ ಮಕ್ಕಳಿಗೆ ಭೂಗೋಳಶಾಸ್ತ್ರವನ್ನು ವಿಶದವಾಗಿ ಹೇಳಿಕೊಡುವುದಕ್ಕೆ ಸಹಿತ್ಯವಾಗಿರುವ ಬೇರೆ ಹನ್ನೆರಡು ಚಿತ್ರಗಳೂ ಇರುತ್ತವೆ). ಎರಡನೇ ಕ್ಲಾಸಿಗೆ ಕ್ರಯ ೪ ಆಣೆ.

ಭೂಗೋಳ ಸಂಗ್ರಹ (ಮ॥ ಟಿ. ಎಂ. ರಾಮಸ್ವಾಮಯ್ಯನವರು ಬರೆದುದು. ಈ ಪುಸ್ತಕವು ಪ್ರಚುರವಾದಂದಿನಿಂದ ಅನೇಕ ಸಹಸ್ರ ಪ್ರತಿಗಳು ಮಾರಾಟವಾಗಿವೆಯೆಂದು ವಾಚಕ ಮಹಾಶಯರು ತಿಳಿದಿರಬಹುದು.) ಮೂರನೇ ಕ್ಲಾಸಿಗೆ ಕ್ರಯ ೪ ಆಣೆ.

ಮೇಲ್ಕಂಡ ಪುಸ್ತಕಗಳನ್ನು ಉಪಾಧ್ಯಾಯರೆಲ್ಲರೂ ತಡಮಾಡದೆ ಜಾಗ್ರತೆಯಲ್ಲಿ ತರಿಸಿಕೊಳ್ಳತಕ್ಕದ್ದು.

ವಿಳಾಸ:—ಮ್ಯಾನೇಜರ್,
ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

ಕಳ್ಳರಿಗೆ ಶತ್ರುವಾದ ಕಬ್ಬಿಣದ ಪೆಟ್ಟಿಗೆ.

69-1

ಮದರಾಸು ತಿ. ಮು. ರಾಮಯ್ಯಶೆಟ್ಟಿ ಕಂಪನಿ ವರ್ಕಶಾಪಿನಲ್ಲಿ ತಯಾರಾಗುವ ಕಬ್ಬಿಣದ ಟ್ರಂಕು (ಅಥವಾ ಪೆಟ್ಟಿಗೆಗಳು) ಮದರಾಸು ಸಾಹುಕಾರ ಪೇಟೆಯಲ್ಲಿಯೂ ಮತ್ತು ಬೆಂಗಳೂರು ನಗರ್ತರಪೇಟೆ ನಮ್ಮ ಷಾಪಿನಲ್ಲಿಯೂ ಸೈದಾವಾರು ಪೆಟ್ಟಿಗೆಗಳು ಬಿಕರಿಗೆ ಸಿದ್ಧವಾಗಿ ಇರುತ್ತವೆ.

ಮದರಾಸು ರೇಟು.		ಬೆಂಗಳೂರು ರೇಟು.
೨-೧||-೧|| ಅಡಿ ಪೆಟ್ಟಿಗೆ ರೂ	೫೦-೦-೦	೫೫-೦-೦
೩|-೧||-೧|	೬೦-೦-೦	೬೬-೦-೦
೩|-೧|||-೧||	೬೫-೧-೦	೭೫-೦-೦
೩-೨-೧||	೧೦೫-೦-೦	೧೨೫-೦-೦

ಮತ್ತು ೧೨೫ ರೂಪಾಯಿ ಲಾಗಾಯಿತು ೫೦೦ ರೂಪಾಯಿನ ವರೆಗೂ ಸಹಾ ಪೆಟ್ಟಿಗೆಗಳು ಪ್ರತಿ ಮನೆಯಲ್ಲಿಯೂ ಇರುವದರಿಂದ ಚೋರರ ಭಯ ಅಗ್ನಿಭಯವಿರುವದಿಲ್ಲ. ಇದರ ಕ್ರಯ ಯಾವಾಗ್ಯೂ ಬೀಗದ ಕೀಲಿನ ಆಕಲಿಗೆ ಎಂದಿಗೂ ಲೋಪ ಬರುವದಿಲ್ಲ. ಇಂಥಾ ಟ್ರಂಕುಗಳು ಮನೆಯಲ್ಲಿರುವದರಿಂದ ಲಕ್ಷ್ಮೀ ವಾಸವಾಗಿಯೂ ಮಂಗಳಕರವಾಗಿಯೂ ಇರುತ್ತದೆ. ಸ್ಥಳವಿಲ್ಲವ್ದರಿಂದ ಸ್ವಲ್ಪಪೆಟ್ಟಿಗೆ ಇಲ್ಲಿ ದರ ತಿಳಿಯಪಡಿಸಿದ್ದೇವೆ. ವಿಶೇಷ ಮಾಹಿತಿ ಬೇಕಾದಲ್ಲಿ ಕೆಳಗಿನ ಅಡ್ರೆಸ್ಸಿಗೆ ಅರ್ಧಾಣೆ ಸ್ಟ್ಯಾಂಪು ಕಳುಹಿಸಿದರೆ ನಮ್ಮ ಕ್ಯಾಟಲಾಗು ಕಳಿಸಲಾಗುವುದು. ಟ್ರಂಕುಗಳು ಬೇಕಾದವರು ೧೦ ರೂಪಾಯಿ ಅಡ್ವಾನ್ಸು ಕಳುಹಿಸಿದಲ್ಲಿ ವಿ. ಪಿ. ಮೂಲಕ ರವಾನಿಸಲ್ಪಡುವವು.

☞ ಮತ್ತು ನಮ್ಮ ಬ್ರಾಂಚ್ ಆಫೀಸಿನಲ್ಲಿ ಆಯರ್ನ ಟ್ರಂಕುಗಳು, ಸ್ಟೀಲು ಟ್ರಾಂಕುಗಳು ಸಹ ದೊರೆಯುತ್ತವೆ. ನಮ್ಮ ವಿಳಾಸ:—

ಟಿ. ಎಂ. ರಾಮಯ್ಯಶೆಟ್ಟಿ ಮತ್ತು ಕಂಪನಿ,

ಕಬ್ಬಿಣದಪೆಟ್ಟಿ ಷಾಪು, ನಗರ್ತರಪೇಟೆ, ಬೆಂಗಳೂರು ಸಿಟಿ.

ಹಾಸನದ ನೋಟೀಸು.

90 1

ಇದರಿಂದ ಹಾಸನ ತಾಲ್ಲೂಕು ಗ್ರಾಮದ ಹೋಬಳಿ ಅಂಬುಗ ಪ ಫಿರ್ಕಾ ಬನವಾಸೆ ಗ್ರಾಮದಲ್ಲಿರುವ ಪಟೇಲ್ ಸೋಮೇಗೌಡನ ದತ್ತು ಮಗ ಸೋಮೇಗೌಡನು ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ —ನನ್ನ ತಂದೆ ಪಟೇಲ್ ಸೋಮೇಗೌಡನು ಈಗ್ಗೆ ೧೫ ತಿಂಗಳಲ್ಲಿ ಮೃತಪಟ್ಟನು. ಅವನು ಕಾಲವಾದ ಕೂಡಲೆ ನನ್ನ ದತ್ತು ತಾಯಿಯಾದ ಮೇಲ್ಕಂಡ ಸೋಮೇಗೌಡನ ಹೆಂಡತಿ ಹನುಮಂತಿಯು, ತನ್ನ ಅಳಿಯ ಬೋರೇಗೌಡ ಮತ್ತು ಇನ್ನು ಕೆಲವು ಜನರ ದುರ್ಬೋಧನೆಗೆ ಕಿವಿಗೊಟ್ಟು ನನ್ನ ದತ್ತು ವಿಚಾರವಾಗಿ ವಿವಾದವನ್ನುಂಟುಮಾಡಿ, ಕೋರ್ಟಿಗೆ ಠಕ್ರಾರು ಅರ್ಜಿ ಕೊಂಟ ಇರುವದರಿಂದ ನನ್ನ ತಂದೆ ಪಟೇಲ್ ಸೋಮೇಗೌಡನ ಬಾಬತು ಕುಟುಂಬದ ಆಸ್ತಿಗಳನ್ನು ಪ್ರತಿಫಲವಿಲ್ಲದೆ ಇತರರಿಗೆ ಆಧಾರ, ಭೋಗ್ಯ, ಕ್ರಯ ಮುಂತಾದವುಗಳನ್ನು ಮಾಡಲು ಪ್ರಯತ್ನಪಟ್ಟಿರುತ್ತಾಳೆ. ಹಾಗೆ ಈಕೆಯು ಸದರಿ ಸ್ವತ್ತುಗಳನ್ನು ಯಾವ ವಿಧವಾಗಿಯೂ ಪರಭಾರೆಮಾಡಲು ಹಕ್ಕಿಲ್ಲ. ಅಲ್ಲದೆ ಅಂಥಾ ನ್ಯಾಯವಾದ ಕಾರಣವೂ ಇರುವದಿಲ್ಲ. ಮೇಲ್ಕಂಡ ಸ್ವತ್ತುಗಳಲ್ಲಿ ಇವಳಿಗೆ ಜೀವನಾಂಶದ ಹಕ್ಕು ವಿನಹ ಇನ್ಯಾವದೂ ಇರುವದಿಲ್ಲ. ಹಾಗೆ ಯಾರಾದರೂ ಈಕೆಯಿಂದ ಮೇಲ್ಕಂಡ ಪಟೇಲ್ ಸೋಮೇಗೌಡನ ಆಸ್ತಿಗಳನ್ನು ಆಧಾರ ವಗೈರೆ ಮಾಡಿಸಿಕೊಂಡ ಪಕ್ಷದಲ್ಲಿ ಸದರಿ ಸ್ವತ್ತುಗಳು ಊರ್ಜಿತವಾಗಲಾರವು. ಅಲ್ಲದೆ ಕೋರ್ಟಿಗೆ ಸದರಿ ದಸ್ತಾವೇಜುಗಳು ಸೇರಿದ ಪಕ್ಷದಲ್ಲಿ ನನ್ನ ಖರ್ಚಿಗೆ ಸಹಾ ಗುರಿಯಾಗುತ್ತಾರೆಂತ ಈ ಮೂಲಕ ಸರ್ವರಿಗೂ ಎಚ್ಚರ ಪಡಿಸಿರುತ್ತೇನೆ. ತಾ ೧೯ ನೇ ಆಗಸ್ಟು ೧೯೦೭ ನೇ ಇಸವಿ

ಪಟೇಲ್ ಸೋಮೇಗೌಡನ ಮಗ ಸೋಮೇಗೌಡನ ರುಜು.

ಮಕ್ಕಳ ಹಿತಕಾರಿ

ಎಂದು

SCOTT'S EMULSION

31-23

(ಸ್ಕಾಟ್ಸ್ ಇಮಲ್ಷನ್)

ಎಂಬೀ ಸೇವನಾ ಔಷಧಕ್ಕೆ ಕೋಟ್ಯಂತರ ತಂದೆತಾಯಿಗಳು ಹೆಸರಿಟ್ಟಿದ್ದಾರೆ. ಯಾಕೆಂದರೆ ಇದು ಮಕ್ಕಳ ಆರೋಗ್ಯವನ್ನು ವೃದ್ಧಿಪಡಿಸಿ ದೇಹವನ್ನು ಪುಷ್ಟಿಯಾಗಿ ಬೆಳೆಸಿರುತ್ತದೆ.

ಇದು ತುಂಬಾ ರುಚಿಯಾಗಿರುವದರಿಂದ ಮಕ್ಕಳು ಬಹು ಸಂತೋಷವಾಗಿ ಸೇವನೆಮಾಡುತ್ತಾರೆ.

ಇದು ಕಾಯಿಲೆ ಮಕ್ಕಳನ್ನು ಆರೋಗ್ಯಮಾಡುವದು; ಅಶಕ್ತರಾದ ಮಕ್ಕಳನ್ನು ಬಲಿಷ್ಟರನ್ನಾಗಿ ಮಾಡುವದು.

ಕೈ ಸೋಕದೆ ತಯಾರಾದದ್ದು.

ಎಲ್ಲಾ ಔಷಧ ವ್ಯಾಪಾರಸ್ಥರಲ್ಲೂ ಬಿಕರಿಯಾಗುತ್ತೆ.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್.

ಈ ಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ.

CHAMBERLAIN'S COLIC, CHOLERA AND DIARRHOEA REMEDY.

ಚೇಂಬರ್ಲೇನ್ ಯವರು ಹೊಟ್ಟೆಶೂಲೆ, ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು.

4-8



ಕೆಳ ಹೊಟ್ಟೆಯ ನೋವು, ಬರೀ ಭೇದಿಯಾಗುವದು, ಆಮಶಂಕೆ, ವಾಂತಿಭೇದಿ ಉಪದ್ರ, ಶೀಘ್ರ ನೋವು, ಹೊಟ್ಟೆಯ ನಾನಾ ತರದ ಶೂಲೆಗಳು—ಈ ರೋಗಗಳನ್ನೆಲ್ಲಾ ವಾಸಿಮಾಡುತ್ತದೆ. ಈ ಪರಮ ಉಪಯುಕ್ತವಾದ ಔಷಧವು ಜನರನ್ನು ಬದುಕಿಸಿರುವಷ್ಟು ಮತ್ತು ನೋವನ್ನೂ ಬಾಧೆಯನ್ನೂ ನಿವಾರಣೆ ಮಾಡಿರುವಷ್ಟು ಪ್ರಪಂಚದಲ್ಲೇ ಇನ್ಯಾವ ಔಷಧವೂ ಮಾಡಿರುವದಿಲ್ಲ.

ಜ್ಞಾಪಕದಲ್ಲಿಟ್ಟುಕೊಳ್ಳಿ—ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯಲ್ಲಿರುವ ಎಲ್ಲಾ ತರದ ನೋವನ್ನೂ ನಿಲ್ಲಿಸಿಬಿಡುತ್ತದೆ. ಬಹಳ ಕಠಿಣವಾದ ಭೇದಿಯೂ ಕೂಡ ಮೂರೇ ಹೊತ್ತು ಈ ಔಷಧದಿಂದ ನಿಮೂರ್ಲನಮಾಡಿ ನಿಲ್ಲಿಸುತ್ತದೆ. ಖಂಡಿತವಾಗಿ ವಾಸಿಮಾಡುವುದೇ ಇದರ ಗುಣ.

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ.

ಕೈಯಿಂದ ಸ್ವಲ್ಪವೂ ಮುಟ್ಟಿದ್ದಲ್ಲ.

ಇದು ಎಲ್ಲೆಲ್ಲೂ ಬಿಕರಿಯಾಗುವುದು. ಸಣ್ಣ ಸೀಸೆಗೆ ೧ ರೂಪಾಯಿ. ದೊಡ್ಡ ಸೀಸೆಗೆ ೨ ರೂಪಾಯಿ.

ಲೋವರ್ ಸೆಕೆಂಡರಿ ಕ್ಷೇತ್ರಗಣಿತ, ಅಪ್ಪರ್ ಸೆಕೆಂಡರಿ

76 4

ಮೇಲ್ಕಂಡ ವಿದ್ಯಾರ್ಥಿಗಳಿಗೆ, ಟ್ರೈನಿಂಗ್ ಇನ್ಸ್ಪೆಕ್ಟರ್ ಓವರ್ಸಿಯರುಗಳಿಗೆ ಬಹು ಉಪಯೋಗವಾಗಿಯೂ ಸುಲಭವಾಗಿ ಬೋಧೆಗೆ ಬರುವಂತೆ ಸವಿಸ್ತರಣ ರೀತಿಯಲ್ಲಿ ೬೫ ಮಾದರಿ ಉದಾಹರಣೆಗಳಿಂದಲೂ ೩೦೦ ವಿವಿಧ ಪ್ರಶ್ನೆಗಳಿಂದಲೂ ಕೂಡಿದ್ದಾಗಿರುತ್ತದೆ. ಪ್ರತಿ ಅಧ್ಯಾಯದಲ್ಲಿಯೂ ಆಕೃತಿಗಳೂ ಸೂತ್ರಗಳೂ ಇವೆ. ಕ್ರಯ ೦—೩—೦

ವಿಳಾಸ-ಎಂ. ಕೃಷ್ಣಯ್ಯ, 73 ವೀವರ್ಸ್ ಲೈನ್, ಮೈಸೂರು

ವ್ಯವಹಾರ ನಿರ್ಣಯ

ವೆಂಬ ಕನ್ನಡ **ಲಾ** ಪುಸ್ತಕವು.

33 13

ಲಾ ತಿಳಿದವರಿಂದಲೂ, ತಿಳಿಯದವರಿಂದಲೂ ಇದುವರೆಗೆ ಬರೆಯಲ್ಪಟ್ಟಿರುವ ಈ ತೆರದ ಪುಸ್ತಕಗಳೆಲ್ಲ ನೂರಿ ಅವೆಲ್ಲಕ್ಕಿಂತಲೂ ಹೆಚ್ಚು ಉಪಯೋಗವನ್ನು ಇದೊಂದು ಪುಸ್ತಕದಿಂದುಂಟುಮಾಡಬೇಕೆಂದು ಈ ದೊಡ್ಡ ಗ್ರಂಥವು ಹೊಸದಾಗಿ ಬರೆಯಲ್ಪಟ್ಟಿದೆ. ಇದರಲ್ಲಿ ೧೫ ಆಕ್ಟುಗಳು, ೭ ಕೋಡುಗಳು, ಹಿಂದೂ, ಮಹಮದೀಯ ಲಾಗಳು, ಛೀಫ್ ಕೋರ್ಟು ಹೈಕೋರ್ಟುಗಳ ಫೈಸಲುಗಳು, ಗೌ|| ಸರ್ಕ್ಯುಲರ್‌ಗಳು ಪ್ರೊಸೀಡಿಂಗ್ಸ್‌ಗಳು, ಸಕಲ ವಿಧ ವ್ಯವಹಾರಗಳು, (ಕ್ರಯ ಆಧಾರ ದಾನ ವಿಲ್ಲು ಮೊದಲಾದ) ೬೯ ತೆರದ ದಸ್ತಾವೇಜುಗಳ ನಮೂನೆಗಳು, ಈ ಸಂಬಂಧದ ಲಾ ವಿಧಿಗಳು, ಸಿವಿಲ್ ಕ್ರಿಮಿನಲ್, ಪೋಲೀಸ್, ರೆವಿನ್ಯೂ ಸಂಬಂಧದ ವ್ಯಾಜ್ಯಗಳು, ೫೯ ತೆರದ ಅರ್ಜಿಗಳು, ಈ ಸಂಬಂಧದ ಲಾ ವಿಧಿಗಳು, ಇವೆಲ್ಲವೂ ಅಡಕವಾಗಿವೆ.

ಪುಸ್ತಕ ದೊಡ್ಡದು ಪುಟಗಳು ಒಟ್ಟು ೭೨೭	ಬಿಳಿ ಕಾಗದ. ಅಂಚೆ ಹಾಸಲು ಸೇರಿ ರೂ ೧—೮—೦

ಗ್ರಂಥಕರ್ತರು. ಎಂ. ಮಲ್ಲಾರಾಧ್ಯರು, ೧ನೆ ಗ್ರೇಡ್ ಪ್ಲೀಡರ್, ಶ್ರೀರಾಮಪೇಟೆ, ಮೈಸೂರು. ಇದೇ ವಿಳಾಸ.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

75 1

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೀಳುವದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯಿತಿಯಿಂದಲೇ ಬರುವದು. (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಸೀದಾ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದು ಚನ್ನಾಗಿಲ್ಲದಷ್ಟು ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ.

ಸಾದ, ಕೆಂಪು, ಕಪ್ಪು, ಬಿಳಿ, ಕಾಫಿ ಟೋಪಿಗಳು ೧ ರೂ. ೮ ಆ.; ೧ ರೂ ೬ ಆ; ೧ ರೂ ೭ ಆ

ರೇಷ್ಮೆ ಚುಕ್ಕೆಯುಳ್ಳ ಟೋಪಿಗಳು ೧ ರೂ ೮ ಆ.; ೨ ರೂ.

ದಾರದ ಟೋಪಿಗಳು ೧ ರೂ. ೧೨ ಆ; ೧ ರೂ. ೮ ಆ.; ೧ ರೂ. ೬ ಆ.

ಉಸುಕಿನ ಟೋಪಿಗಳು ೧ ರೂ ೮ ಆ. ೧ ರೂ. ೬ ಆ.

ಹೊಸಬಗೆಯ ಟೋಪಿ, ಸೂಫಿ ಮೇಜೋಡು, ಅರ್ಧ ಮೇಜೋಡು ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು.

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ.

೨,೦೦೦ ವರುಷಗಳ ಸಮಾಚಾರ!

ಶ್ರೀ ಮಚ್ಛಂಕರಾಚಾರ್ಯರ ಚರಿತ್ರೆಯು, ಇವರ ಫೋಟೋ !!

891

ಕ್ರಯ ಪ್ರತಿ ೧ ಕ್ಕೆ ಹಾಸಲು ಸಹಿತ ೧೨ ಆಣೆ. ದೊಡ್ಡ ಸೈಜಿನ ಫೋಟೋ ೧ ಕ್ಕೆ ಹಾಸಲು ಸಹಿತ ೫ ಆಣೆ. ೧೦ ಕ್ಕೆ ೧ ಸಹಿತ ಫೋಟೋಗಳು ೩ ಕ್ಕೆ ಕಮ್ಮಿ ವಿ ಪಿ ಮಾಡಲ್ಪಡುವದಿಲ್ಲ.

ಶಂಕರವಿಜಯಾದಿ ಗ್ರಂಥಗಳಲ್ಲಿ ಉಕ್ತವಾಗಿರುವ ಆಟಾರ್ಯ ಚರಿತ್ರೆಗಳು ಅಡಕವಾಗಿವೆ. ೧೦ ಕ್ಕೆ ೧ ಹೆಚ್ಚು

ವಿಳಾಸ:— ಸುಬ್ಬನರಸಿಂಹಯ್ಯ,

ದಿವಾನ್ ವೆಂಕಟೇ ಅರಸಿನವರ ಛಾಯು, ಮೈಸೂರು

ಪ್ರದರ್ಶನದ ಪ್ರಕಟನೆ.

814

೧೯೦೭ ನೇ ಇಸವಿ ಮೈಸೂರು ದಸರಾ ಇಂಡಸ್ಟ್ರಿಯಲ್ ಮತ್ತು ಅಗ್ರಿಕಲ್ಚರಲ್ ಯಗ್ಜಿಬಿಷನ್.

ಈ ಪ್ರದರ್ಶನವು ಸನ್ ೧೯೦೭ನೆ ಇಸವಿ ಅಕ್ಟೋಬರ್ ೫ನೆ ತಾರೀಖಿಗೆ ಪ್ರಾರಂಭವಾಗಿ ಅದೇ ಮಾಹೆ ೩೧ನೇ ತಾರೀಖಿಗೆ ಪೂರೈಸುತ್ತದೆ.

ಈ ಪ್ರದರ್ಶನಕ್ಕೆ ವಸ್ತುಗಳನ್ನು ಕಳುಹಿಸಲು ಅಪೇಕ್ಷೆಯುಳ್ಳವರು ಈ ಸಂಬಂಧದ ಪ್ರಕಟನೆಗಳನ್ನು ತಾಲ್ಲೂಕು ಅಮಲ್ದಾರುಗಳಿಂದಲೂ ಮತ್ತು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮೀಷನರುಗಳಿಂದಲೂ ಹೊಂದಬಹುದೆಂತ ಈ ಮೂಲಕ ಪ್ರಸಿದ್ಧಪಡಿಸಿರುತ್ತೆ.

ಬೆಂಗಳೂರು, ಕೆ. ಸುಬ್ಬರಾವ್,

೮ನೇ ಆಗಸ್ಟ್ ೧೯೦೭. ಸೆಕ್ರೆಟರಿ.

ಕನ್ನಡ ಲೋಯರ್ ಸೆಕಂಡರಿ ಮೊದಲಾದ ಪರೀಕ್ಷೆಗಳಿಗೆ ಹೋಗತಕ್ಕ ವಿದ್ಯಾರ್ಥಿಗಳಿಗೆ ಇದು ಬಹಳ ಒಳ್ಳೇ ಸಹಾಯ ಸಿದ್ಧವಾಗಿದೆ. ಕ್ರಯ ಸುಲಭ ಎಂಟೇ ಆಣೆ.

ಉಪನ್ಯಾಸ ಮಂಜರಿ.

33 2

ಈ ಪುಸ್ತಕವು ಅನೇಕ ಉಪಯುಕ್ತವಾದ ಉಪನ್ಯಾಸಗಳನ್ನು ಅಡಗಿಸಿಕೊಂಡಿರುವುದು. ಇದನ್ನು ಓದುವುದರಿಂದ ವಿದ್ಯಾರ್ಥಿಗಳಿಗೆ ಉಪನ್ಯಾಸ ಬರೆಯುವುದರಲ್ಲಿ ಸಾಮರ್ಥ್ಯಬರುವುದಕ್ಕೆ ಸಂಶಯವಿಲ್ಲ. ಲೋಯರ್ ಸೆಕಂಡು ಮೊದಲಾದ ಪರೀಕ್ಷೆಗಳಿಗೆ ಹೋಗುವ ವಿದ್ಯಾರ್ಥಿಗಳಿಗೆ ತುಂಬಾ ಸಹಾಯಕವಾಗಿರುವುದು. ಉಪನ್ಯಾಸ ಬರೆಯತಕ್ಕ ಕ್ರಮವನ್ನೆಲ್ಲಾ ವಿಶದವಾಗಿ ತಿಳಿಸುವುದು. ಬಹಳ ಅಂದವಾಗಿ ಒಳ್ಳೆ ಕಾಗದದ ಮೇಲೆ ಮುದ್ರಾಕ್ಷರದಲ್ಲಿ ಛಾಪಾ ಆಗಿದೆ.

ಕ್ರಯ ೦—೮—೦ ವಿ. ಪಿ. ಮೂಲಕ. ೦—೧೦—೦.

ಒಟ್ಟಿಗೆ ೧೦ ಪ್ರತಿಗಳನ್ನು ತರಿಸಿಕೊಳ್ಳುವವರಿಗೆ ಒಂದು ಪ್ರತಿಯು ಉಚಿತವಾಗಿ ಕೊಡಲ್ಪಡುವದು.

ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬೇಕು.

ಟಿ. ವೀರಪ್ಪ, ಪ್ಲೀಡರ್, ಚಿಕ್ಕಬಳ್ಳಾಪುರ.

ವೃತ್ತಾಂತ ಪತ್ರಿಕೆ.

ಸನ್ ೧೯೦೭ ನೇ ಇಸವಿ ಆಗಸ್ಟ್ ತಾ|| ೨೨ ನೇ ಗುರುವಾರ.

ಶ್ರೀಮನ್ಮಹಾರಾಜರವರ ಸರ್ಕೀಟು.

ಶ್ರೀಮನ್ ಮಹಾರಾಜರವರು ಈಗೀಗ ಮೋಟಾರ್ ಗಾಡಿಯಲ್ಲಿ ಪ್ರಯಾಣ ಮಾಡಿಕೊಂಡು ಈ ಸಂಸ್ಥಾನದ ಭಾಗಗಳಲ್ಲಿ ಸಂಚರಿಸುವುದಕ್ಕೆ ಪ್ರಾರಂಭಿಸಿದ್ದನ್ನು ನೋಡಿ ನಾವು ತುಂಬಾ ಸಂತೋಷಪಡುತ್ತೇವೆ. ರಾಜಧಾನಿಯಿಂದ ಬಹಳ ದೂರದಲ್ಲಿರುವ ಮೂಲೆಯಾದ ತಾಲ್ಲೂಕು, ಊರು

ಗ್ರಾಮಗಳಿಗೂ ಅವರು ಮೋಟಾರ್ ಗಾಡಿಯಲ್ಲಿ ಹೋಗಿ ಬಂದದ್ದು ಇದೇ ಪ್ರಾರಂಭವಾಗಿರುತ್ತದೆ. ಇದರಿಂದ ಈ ಹಿಂದುಸ್ಥಾನದಲ್ಲಿ ಮೋಟಾರ್ ಗಾಡಿಯೊಳಗೆ ಊರಿಂದೂ ರಿಗೆ ಸಂಚಾರ ಮಾಡುವುದು ಸುಲಭಸಾಧ್ಯವೂ ಮನೋಜ್ಞವೂ ಆಗಿರುತ್ತದೆಂದು ನಾವು ಹೇಳಬೇಕಾದದ್ದಿಲ್ಲ. ಆದರೆ ಪ್ರಯಾಣವನ್ನು ಇಷ್ಟು ಸುಲಭ ಮಾಡತಕ್ಕ ಈ ಮೋಟಾರ್ ಗಾಡಿಗಳ ಕ್ರಯವು ಸದ್ಯದಲ್ಲಿ ಸ್ವಲ್ಪ ಹೆಚ್ಚಾಗಿರುತ್ತಾದಕಾರಣ ಎಲ್ಲರೂ ಸರ್ವಸಾಮಾನ್ಯವಾಗಿ ಉಪಯೋಗಿಸುವುದಕ್ಕೆ ಸಾಧ್ಯವಿಲ್ಲವಾಗಿದೆ. ಆದಾಗ್ಯೂ ಇನ್ನು ಕೆಲವು ಕಾಲದೊಳಗಾಗಿ ಈ ವಿಮಾನಗಳೋಪಾದಿಯಲ್ಲಿರುವ ಸುಖಕರವಾದ ಗಾಡಿಗಳ ಬೆಲೆಯು ಸುಲಭಸಾಧ್ಯವಾದೀತೆಂದು ನಿರೀಕ್ಷಿಸಬಹುದು. ಆಗ್ಗೆ ಆತುರವಾದ ಕೆಲಸದ ಮೇಲೆ ಯಾರೇ ಆಗಲಿ ಎಷ್ಟು ದೂರಕ್ಕಾದರೂ ಬಹು ಬೇಗ ಹೋಗಿ ಬರುವುದಕ್ಕೆ, ಈಗಿನ ಪ್ರಯಾಣದ ಕಷ್ಟ ಅನಿವಾರ್ಯಗಳೆಲ್ಲಾ ನಿವಾರಣೆಯಾಗಿ, ಅನುಕೂಲವಾದೀತು. ...ರ್ಯ ಮಹಾರಾಜರವರು ಈ ಸಂಸ್ಥಾನದ ಯಾವ ಭಾಗದ ಸ್ಥಿತಿಗತಿಯನ್ನಾಗಲಿ ನೋಡಿಬರುವುದಕ್ಕೂ ಪ್ರಜೆಗಳ ಕಷ್ಟಸುಖಾದಿಗಳನ್ನು ಸಾಕ್ಷಾತ್ತಾಗಿ ವಿಚಾರಿಸಿಕೊಂಡು ಬರುವುದಕ್ಕೂ ಈಗ ಹಾಕಿಕೊಟ್ಟಿರುವ ಮೇಲ್ಪಂಕ್ತಿಯನ್ನು ಹಿಂದುಸ್ಥಾನದ ಇತರ ಪ್ರಜಾಪಾಲಕರೂ ಅನುವರ್ತಿಸುತ್ತಾರೆಂದು ಹಾರೈಸುತ್ತೇವೆ. ಈ ಮೋಟಾರ್ ಗಾಡಿಗಳು ಪ್ರಜೆಗಳ ಮತ್ತು ಪ್ರಜಾಪಾಲಕರ ಪರಸ್ಪರವಾದ ಪ್ರೀತಿ ವಿಶ್ವಾಸಾದಿಗಳನ್ನು ವಿಶೇಷವಾಗಿ ಹೆಚ್ಚಿಸಿ ಐಕಮತ್ಯವನ್ನು ವೃದ್ಧಿಪಡಿಸಲು ಸಹಕಾರಿಗಳಾಗಿರುತ್ತವೆ. ನಮ್ಮ ಮುಂದೆಯೂ ನಮ್ಮ ಮಹಾರಾಜರವರು ಆಗಿಂದಾಗ್ಗೆ ಇದೇ ರೀತಿ ಈ ಸಂಸ್ಥಾನದ ಎಲ್ಲಾ ಭಾಗಗಳಲ್ಲೂ ಸಂಚಾರ ಮಾಡುತ್ತಾ, ಪ್ರಜಾಪಾಲನಾ ಕಾರ್ಯಭಾರವನ್ನು ಇಕೋಸ್ಮತಿಯಾಗಿ ನಿರ್ವಹಿಸಿ, ಈ ಸಂಸ್ಥಾನದ ಎಲ್ಲಾ ಭಾಗಗಳಲ್ಲೂ ಪ್ರಜೆಗಳು ನೆಮ್ಮದಿ ಸುಖಸಂತೋಷಗಳಿಂದ ಅಭಿವೃದ್ಧಿ ಹೊಂದುವಂತೆ ಮಾಡಿಯಾರೆಂದು ನಂಬಬಹುದಾಗಿದೆ.

ಹಿಂದೂದೇಶದ ಕನಿಷ್ಠಜಾತಿಯವರೂ ಕ್ರೈಸ್ತಮತವೂ.

...ಲ್ಲಿ ಪಟ್ಟಣವು ಪಂಜಾಬ್ ದೇಶದಲ್ಲಿ ಪ್ರಸಿದ್ಧವಾದುದು. ಈ ಪಟ್ಟಣದಲ್ಲಿ ಕ್ರೈಸ್ತಮತದ ಪಾದ್ರಿಗಳು ಒಂದು ದೊಡ್ಡ ಪಾಠಶಾಲೆಯನ್ನು ಸ್ಥಾಪಿಸಿರುವರು. ಈ ವಿದ್ಯಾಶಾಲೆಯಲ್ಲಿ ... ಸ್ತ್ರೀಯುದ್ಧ... ಗಣಿತ ಶಾಸ್ತ್ರದಲ್ಲಿ ಮಹಾ ಜ್ಞಾನಿಗಳಾಗಿದ್ದ ಪಾದ್ರಿಗಳು ತಾವು ಅಭ್ಯಸಿಸಿಕೊಂಡಿದ್ದ ಉನ್ನತ ಸ್ಥಾನವನ್ನು ಬಿಟ್ಟು ದಕ್ಷಿಣ ಹಿಂದೂಸ್ಥಾನದಲ್ಲಿ ಬಡವರೂ ಕೀಳು ಜಾತಿ ಸೇರಿದವರೂ ಆಗಿರುವ ಜನರ ಮಧ್ಯದಲ್ಲಿ ಕೆಲಸ ಮಾಡುವುದಕ್ಕೆ ಹೊರಟಿದ್ದಾರೆ. ಈ ಮಹನೀಯರು ತಮ್ಮ ಕೆಲಸವನ್ನು ಬಿಟ್ಟು ಬರುವಾಗ್ಗೆ ತಮ್ಮ ಹತ್ತಿರ ವಿದ್ಯಾಭ್ಯಾಸಂಗ ಮಾಡಿದ ಉತ್ತಮ ಜಾತಿಗೆ ಸೇರಿದ ವಿದ್ಯಾರ್ಥಿಗಳಿಗೆ ಅರ್ಥಗರ್ಭಿತವಾದ ಒಂದು ಕಾಗದವನ್ನು ಬರೆದಿರುವರು. ಅವರು ಹೇಳುವುದೇನೆಂದರೆ ಕ್ರೈಸ್ತಮತ ಸ್ಥಾಪಕರೂ ಜಗದ್ಗುರುವೂ ಆಗಿರುವ ಯೇಸು ಕ್ರಿಸ್ತನು ಬಡವರೂ ಹೀನಸ್ಥಿತಿಯಲ್ಲಿ ಬಿಟ್ಟವರೂ ಆದ ಜನಗಳಿಗೆ ಮಾಡಿದಂಥಾ ಸೇವೆಯು ಚರಿತ್ರೆಯನ್ನು ನೀವೆಂದಿಗೂ ಮರೆಯಲಾರಿರಿ. ಆತನು ಬೋಧಿಸಿದ್ದಲ್ಲದೆ ತಾನು ಬೋಧಿಸಿದ್ದನ್ನು ತನ್ನ ಪ್ರತಿ ದಿನದ ನಡತೆಯಲ್ಲಿ ಸಾಧಿಸಿದನು. ಯೇಸು ಕ್ರಿಸ್ತನು ಜ್ಞಾನಿಗಳನ್ನಾಗಲಿ ಐಶ್ವರ್ಯವಂತರನ್ನಾಗಲಿ ವಿಶೇಷವಾಗಿ ಹುಡುಕದೆ ಕನಿಷ್ಠ ಸ್ಥಿತಿಯಲ್ಲಿ ಬಿದ್ದು ನರಳುತ್ತಿದ್ದ ಜನರಿಗೆ ಮಾಡುತ್ತಿದ್ದ ಪರೋಪಕಾರದ ವಿಷಯ ನಾವು ಆಗಾಗ್ಗೆ ಚರ್ಚಿಸಿರುವೆ. ನಾನು ನಿಮ್ಮಗಳ ಮುಖ್ಯೋಪಾಧ್ಯಾಯನಾಗಿ ಅನೇಕ ವರ್ಷ ನಿಮ್ಮನ್ನು ಕಳೆದಿರುತ್ತೇನೆಂದು ನೀವು ಬಲ್ಲಿರಿ ಈಗ್ಗೆ ಬಡವರ ಮಧ್ಯದಲ್ಲಿ ಕ್ರಿಸ್ತನಿಗೋಸ್ಕರ ಸೇವೆಯನ್ನು ಮಾಡಬೇಕೆಂದಿರುತ್ತೇನೆ. ಹಿಂದೂ ದೇಶೀಯರೆಲ್ಲರೂ ತಿಳಿದಿರುವ ಪ್ರಕಾರ ಕ್ರೈಸ್ತಮತ ಒಂದೇ ದೇಶದ ಕನಿಷ್ಠ ಜಾತಿಯವರನ್ನು ಉತ್ತಮಸ್ಥಿತಿಗೆ ತರುವಂಥಾದ್ದು. ಇದನ್ನು ನೀವು ಪರಿಷ್ಕಾರವಾಗಿ ತಿಳಿದಿರುವಿರಿ. ನಾನು ಹಿಂದೂ ದೇಶದ ಅನೇಕ ಕಡೆಗಳಲ್ಲಿ ಪ್ರಯಾಣ ಮಾಡಿರುತ್ತೇನೆ. ನಿಮ್ಮ ದೊಡ್ಡ ಊರುಗಳನ್ನು ಸಾಕ್ಷಾತ್ ನೋಡಿರುತ್ತೇನೆ. ವಿಧವಿಧ ದೇವತೆಗಳೆಲ್ಲಾ ...ಮತವನ್ನವಲಂಬಿಸಿರುವ ನಿಮ್ಮ ದೇಶೀಯರ ಮಧ್ಯದಲ್ಲಿ ವಾಸಮಾಡಿರುತ್ತೇನೆ. ಕ್ರೈಸ್ತ ಮತವು ನಿಮ್ಮ ದೇಶೀಯರಲ್ಲಿ ಯಾವ ಬದಲಾವಣೆಯನ್ನುಂಟುಮಾಡಿದೆಯೋ ಅದನ್ನು ಸಹ ಅನುಭವಪೂರ್ವಕವಾಗಿ ತಿಳಿದಿರುತ್ತೇನೆ.

ನಾನು ಈ ದೇಶಕ್ಕೆ ಬರುವುದಕ್ಕೆ ಅನೇಕ ವರ್ಷಗಳ ಮುಂಚೆನಿಂದ ಸತ್ಯಮತ ಪ್ರಚಾರಣೆಯೂ ಈ ದೇಶದ ಕನಿಷ್ಠಜಾತಿಯವರ ... ಹಾಕಿಕೊಳ್ಳುತ್ತಿರುವುದು. ಇನ್ನು ಕೊಂಚಕಾಲದಲ್ಲಿಯೇ ಹಿಂದೂ ದೇಶಸ್ಥರೆಲ್ಲರೂ ಕ್ರೈಸ್ತಮತವನ್ನನುಸರಿಸುವರೆಂಬುವದರಲ್ಲಿ ಯಾವ ಸಂದೇಹವೂ ಇರುವುದಿಲ್ಲ. ನನ್ನ ಪ್ರಿಯ ವಿದ್ಯಾರ್ಥಿಗಳೇ ಕ್ರೈಸ್ತಮತವು ನಿಮ್ಮ ದೇಶಸ್ಥರ ಮಧ್ಯದಲ್ಲಿ ಮಾಡುತ್ತಾ ಬರುವ ಉತ್ತಮವಾದ ಕೆಲಸಗಳನ್ನು ಅರಿತಿರುವಿರಾ? ನಿಮ್ಮ ದೇಶಸ್ಥರಲ್ಲಿ ಕೆಲವರು ಈ ಮತದ ಪ್ರೇರಣೆಯ ಮೂಲಕ ಆತ್ಮಿಕಜ್ಞಾನವನ್ನು ಹೆಚ್ಚಾಗಿ ಸಂಪಾದಿಸಿಕೊಂಡಿರುವರು. ನೀವು ಅವರ ಜೀವಮಾನದ ಚರಿತ್ರೆಯನ್ನು ಓದಿ ತಿಳಿದುಕೊಂಡರೆ ನಾನು ಹೇಳುವದು ಸತ್ಯವೆಂದು ಒಪ್ಪಿಕೊಳ್ಳುವಿರಿ. ಕ್ರೈಸ್ತಮತವು ಹಿಂದೂ ದೇಶಕ್ಕೆ ಬಂದಂದಿನಿಂದ ಕನಿಷ್ಠಜಾತಿಗೆ ಸೇರಿದವರೂ ಉತ್ತಮ ವರ್ಣದವರಿಂದ ಸಂಪೂರ್ಣವಾಗಿ ತ್ಯಜಿಸಲ್ಪಟ್ಟವರೂ ಆಗಿರುವ ಜನಗಳ ಸ್ಥಿತಿಯು ಬಹಳ ಮಟ್ಟಿಗೆ ಬದಲಾವಣೆಯನ್ನು ಹೊಂದಿರುತ್ತದೆ. ಕೀಳುಜಾತಿಯವರು ಹಿಂದೂ ಮತದಲ್ಲಿ ಉತ್ತಮಸ್ಥಿತಿಗೆ ಬರುವದು ಕೇವಲ ಅಸಾಧ್ಯವಾಗಿತ್ತು. ಅವರು ನಿರೀಕ್ಷೆ ಇಲ್ಲದವರಾಗಿದ್ದರು. ಆದರೆ ಕ್ರೈಸ್ತಮತವು ನಿರೀಕ್ಷೆಯ ಬುಗ್ಗೆಯಾಗಿದೆ. ನೀವೆಲ್ಲರೂ ಸ್ವತಂತ್ರರಾಗಬೇಕೆಂದು ಕುತೂಹಲಪಡುತ್ತಿರುವಿರಷ್ಟೆ? ಕ್ರೈಸ್ತಮತವು ನಿಮ್ಮ ಮಾತೃದೇಶಕ್ಕೆ ಆಗಲೇ ಪರಮೋತ್ತಮವಾದ ಸ್ವಾತಂತ್ರ್ಯವನ್ನು ತಂದಿರುವದು. ಅದು ನಿಮ್ಮ ದೇಶವನ್ನು ಜಾತಿಯೆಂಬ ಬಲವಾದ ರಾಕ್ಷಸನ ಕೈಯಿಂದ ಬಿಡಿಸಿರುವುದು. ನಿಮ್ಮ ಹೆಂಗಸರ ಸ್ಥಿತಿಯು ದಿನೇ ದಿನೇ ಅಭಿವೃದ್ಧಿಯನ್ನೊಂದುತ್ತಲಿರುವುದು. ವಿಗ್ರಹಾರಾಧನೆಯು ಸಡಿಲವಾಯಿತು. ಜನರು ಸತ್ಯಾಸತ್ಯವಿಚಾರಕರಾಗುತ್ತಾ ಇದ್ದಾರೆ. ಹಿಂದೂ ದೇಶೀಯರು ತಮ್ಮ ದೇಶೋದ್ಧಾರಕ್ಕೆ ಮಾಡಿದಂಥಾ ಪ್ರಯತ್ನಗಳಲ್ಲಿ ಕ್ರೈಸ್ತಮತವನ್ನವಲಂಬಿಸಿರುವ ಹಿಂದೂ ಜನಗಳ ಪ್ರಯತ್ನವೇ ಶ್ರೇಷ್ಠವಾಗಿರುವುದು. ಯಾಕೆಂದರೆ ಅವರು ಅವಲಂಬಿಸಿರುವ ನೂತನ ಮತವು ಅವರಿಗೆ ಆತ್ಮೀಯ ಸ್ವಾತಂತ್ರ್ಯವನ್ನು ಕೊಟ್ಟಿರುವುದಲ್ಲದೆ ಅವರನ್ನು ಎಲ್ಲಾ ತರದ ಯೋಗ್ಯವಾದ ಅಭಿವೃದ್ಧಿಗೂ ಪಕ್ಷಧಾರರನ್ನಾಗಿ ಮಾಡಿರುತ್ತದೆ.

ಒಳದೇಶದ ವೃತ್ತಾಂತಗಳು.

ಸರ್ಕಾರದವರು ಡೆಪ್ಯುಟಿ ಕಮಿಷನರ ದರ್ಜೆಯಲ್ಲಿ ಮಿ॥ ಡಿ ದೇವರಾಜೇ ಅರಸಿನವರನ್ನು ೧ನೇ ಕ್ಲಾಸಿಗೂ, ಮಿ॥ ಎಂ ಕಾಂತರಾಜೇ ಅರಸಿನವರನ್ನು ೩ನೇ ಕ್ಲಾಸಿಗೂ ಬಡ್ತಿ ಮಾಡಿರುತ್ತಾರೆ.

***

ಈ ತಿಂಗಳ ೨೪ನೇ ತಾ. ಬುಧವಾರ ಮಧ್ಯಾಹ್ನ ೩ ಘಂಟೆಗೆ ಬೆಂಗಳೂರು ಪಬ್ಲಿಕ್ ಆಫೀಸ್ ಕಟ್ಟಡದಲ್ಲಿ ಮೈಸೂರು ನ್ಯಾಯವಿಧಾಯಕ ಕೌನ್ಸಿಲ್ ಸಭೆಯು ನಡೆಯುವುದೆಂದು ಪ್ರಕಟವಾಗಿದೆ.

***

ಮಿ॥ ಎಫ್ ಎ. ಸ್ಮೈಲ್ ಯವರು ಮೂರು ತಿಂಗಳ ರಜಾ ಪಡೆದದ್ದರಿಂದ ಸರ್ಕಾರದವರು ಎ! ಇಂಜನಿಯರ್ ಮಿ॥ ಕೆ ಪ್ರಹ್ಲಾದ ರಾಯರನ್ನು ಚಿತ್ರದುರ್ಗದಿಂದ ಹಾಸನಕ್ಕೆ ವರ್ಗಮಾಡಿರುತ್ತಾರೆ.

***

ಒಂದಾನೆ ಬಾಬತು ನಿಕ್ಕಲ್ ಲೋಹದ ನಾಣ್ಯಗಳನ್ನು ಇಂಡಿಯಾ ಗವರ್ನಮೆಂಟಿನವರು ಛಾಪಾ ಹಾಕಿಸಿ ಚಲಾವಣೆಗೆ ತಂದಿರುತ್ತಾರೆಂದು ಮೈಸೂರು ಸರ್ಕಾರಿ ಗೆಜೆಟ್ಟಿನ ಮೂಲಕ ಪ್ರಕಟವಾಗಿರುತ್ತದೆ.

***

ಕಳೆದ ಶನಿವಾರ ಬೆಳಿಗ್ಗೆ ಸುಮಾರು ೧೧ ಗಂಟೆಗೆ ಶ್ರೀಮನ್ಮಹಾರಾಜರವರು ಮೋಟಾರ್ ಗಾಡಿಯಲ್ಲಿ ಕಾನಕಾನಹಳ್ಳಿಯಿಂದ ಬೆಂಗಳೂರು ಅರಮನೆಗೆ ಚಿತ್ತೈಸಿದರು. ಗೌರವಾರ್ಥವಾದ ೨೧ ತೋಪುಗಳು ಹಾರಿಸಲ್ಪಟ್ಟವು.

***

ಮೈಸೂರು ತಾಲ್ಲೂಕಿಗೆ ಸೇರಿದ ಬೆಳ್ಳಹಳ್ಳಿ ಕೊಲೆ ಮೊಕದ್ದಮೆಯು ಸೆಷನ್ ವಿಚಾರಣೆಗೆ ಗುರಿಯಾಗಿದೆ. ಗಿರಿಯಾಬೋಯಿ ಪಾಳ್ಯದಲ್ಲಿ ನಡೆದ ಕೊಲೆಯ ವಿಚಾರವನ್ನು ಮ್ಯಾಜಿಸ್ಟ್ರೇಟರು ಇನ್ನೂ ತನಿಖೆ ಮಾಡುತ್ತಿದ್ದಾರೆ.

***

ಹೊಸ ಅರಮನೆಯು ದರ್ಬಾರ್ ಹಾಲ್ ಎಂಬ ಆಸ್ಥಾನಮಂದಿರವು ಇನ್ನೂ ಪೂರೈಸಲಿಲ್ಲವಾದ್ದರಿಂದ ಈ ಸಲ ನವರಾತ್ರಿ ಉತ್ಸವಗಳು ಎಂದಿನಂತೆ ಜಗನ್ಮೋಹನ ಬಂಗಲೆಯಲ್ಲೇ ಜರುಗತಕ್ಕದ್ದೆಂದು ತೀರ್ಮಾನವಾಗಿದೆ.

***

ಸರ್ಕಾರದವರು ಮಾರಿಕಣಿವೆ ಡಿವಿಜನನ್ನು ವಜಾಮಾಡಿ, ಚಿತ್ರದುರ್ಗದ ಡಿವಿಜನಿಗೆ ಸೇರಿಸಿದ್ದಾರೆ. ಇನ್ನು ಮೇಲೆ ಚಿತ್ರದುರ್ಗದ ಎಗ್ಜಿಕ್ಯುಟಿವ್ ಇಂಜನಿಯರವರು ಮಾರಿಕಣಿವೆಯಲ್ಲೇ ತಮ್ಮ ಆಫೀಸನ್ನು ನಡಿಸುವರು. ಸಧ್ಯ ಮಿ॥ ಎಚ್. ಡಿ ರೈನ್ ಯವರು ಆ ಡಿವಿಜನ್ ಛಾರ್ಜನ್ನು ವಹಿಸಿರುತ್ತಾರೆ.

***

ಅಸಿಸ್ಟೆಂಟ್ ಕಮಿಷನರುಗಳ ದರ್ಜೆಗೆ ಯೋಗ್ಯತೆ ಪಡೆದವರನ್ನು ಪರೀಕ್ಷೆಯ ಮೂಲಕ ಗೊತ್ತುಮಾಡಿ ಸೇರಿಸಿಕೊಳ್ಳುವುದಕ್ಕೆ ನಮ್ಮ ಸರ್ಕಾರದವರು ಒಂದು ಕಮಿಟಿಯನ್ನು ನೇಮಕಮಾಡಿದ್ದಾರೆ. ಈ ಕಮಿಟಿಗೆ ಶ್ರೀಮನ್ಮಹಾರಾಜರವರ ಪ್ರೈವೇಟ್ ಸೆಕ್ರಿಟರಿ ಮಿ॥ ಇ. ಮೆಕಾನಕಿಯವರು ಪ್ರೆಸಿಡೆಂಟರು. ವಿದ್ಯಾಭ್ಯಾಸದ ಇಲಾಖಾ ಇನ್ಸ್‌ಪೆಕ್ಟರ್ ಜನರಲ್ ಮಿ॥ ಎಚ್. ಜೆ ಭಾಭಾ ಯವರು ಸೆಕ್ರಿಟರಿಯಾಗಿರುತ್ತಾರೆ. ಈ ಸಿವಿಲ್ ಸರ್ವಿಸ್ ಪರೀಕ್ಷೆಯು ಮುಂದಿನ ನವಂಬರ್ ತಿಂಗಳಲ್ಲಿ ನಡೆಯುವುದು.

***

ರಾಜಧಾನಿಯಲ್ಲಿ ಮೋಡವಾಗುವುದೂ, ಆಗಾಗ್ಗೆ ತುಂತುರು ಮಳೆ ಬೀಳುವುದೂ, ಶೀತಗಾಳಿ ಬಡಿಯುವುದೂ ಇನ್ನೂ ತಪ್ಪಲಿಲ್ಲ. ಸೂರ್ಯ ಕಿರಣಗಳು ಇನ್ನೂ ಅಪರೂಪವಾಗಿದೆ. ಪಟ್ಟಣವಾಸಿಗಳು ಅಗ್ಗವಾಗದ ಆಹಾರದಿಂದಲೂ ಪ್ಲೇಗ್ ಉಪದ್ರವು ಕ್ರಮಕ್ರಮವಾಗಿ ಹೆಚ್ಚುತ್ತಿರುವುದರಿಂದಲೂ ಬಡಬಗ್ಗರೂ ಅಲ್ಪ ಸಂಬಳಗಾರರೂ ಆದ ಪ್ರಜೆಗಳು ವ್ಯಥೆಪಡುತ್ತಿದ್ದಾರೆ. ಪ್ಲೇಗ್ ಕ್ಯಾಂಪಿನಲ್ಲಿ ಮೊನ್ನೆಯ ದಿನ ೨೨ ಮಂದಿ ರೋಗಿಗಳೂ, ಸಗ್ರೇಷನ್ ಕ್ಯಾಂಪಿನಲ್ಲಿ ೫೫ ಜನರೂ ಇದ್ದರೆಂದು ತಿಳಿಯುವುದು.

***

ಉತ್ತರದೇಶಕ್ಕೆ ಸೇರಿದ ಪಾರ್ಶ್ವನಾಥ ಬೆಟ್ಟದ ಮೇಲೆ ಯೂರೋಪಿಯನರು ವಿಹಾರಸ್ಥಾನಗಳನ್ನು ಕಟ್ಟಿ ವಾಸಮಾಡುವುದು ಯೋಗ್ಯವಲ್ಲವೆಂದೂ ಜೈನಮತಕ್ಕೆ ವಿರೋಧವಾದದ್ದೆಂದೂ ಅರಿಕೆಮಾಡುವುದಕ್ಕಾಗಿ ಮೈಸೂರು ಜೈನ ಪ್ರಜೆಗಳು ಮ್ಯುನಿಸಿಪಲ್ ಕೌನ್ಸಿಲರ್ ಮಿ॥ ಎಂ. ಅನಂತರಾಜಯ್ಯನವರನ್ನು ತಮ್ಮ ಪ್ರತಿನಿಧಿಗಳಾಗಿ ಆರಿಸಿ ಕಳುಹಿಸಿ ಕೊಟ್ಟಿದ್ದಾರೆ. ಬಂಗಾಳಾ ಲೆಫ್ಟಿನೆಂಟ್ ಗವರ್ನರವರು ಈ ತಿಂಗಳ ೨೪ ನೆ ತಾ॥ ಆ ಬೆಟ್ಟಕ್ಕೆ ದಯಮಾಡಿ, ಅಲ್ಲಿ ಸೇರತಕ್ಕ ಜೈನ ಪ್ರಮುಖಪ್ರತಿನಿಧಿಗಳ ಅಭಿಪ್ರಾಯವನ್ನು ಕೇಳಿ ತಿಳಿಯುವವರಾಗಿದ್ದಾರೆ.

***

ಮೈಸೂರು ಪೋಲೀಸ್ ಸೂಪರಿಂಟೆಂಡೆಂಟ್ ಮಿ॥ ಮೆಕ್ಕೆಯವರು ಕಳೆದ ವಾರ ತಮ್ಮ ಕುದುರೆ ಗಾಡಿಯನ್ನು ಹೊರಗೆ ನಿಲ್ಲಿಸಿ ಕಚೇರಿಯೊಳಗಿದ್ದರು. ಗಾಡಿಯಲ್ಲಿ ಅವರ ಮಗುವು ಕುಳಿತಿತ್ತು. ಅಕಸ್ಮಾತ್ತಾಗಿ ಕುದುರೆಯು ಗಾಬರಿಬಿದ್ದು ಗಾಡಿಯನ್ನು ಸ್ವೇಚ್ಛೆಯಿಂದ ಎಳೆದುಕೊಂಡು ಓಡಿ ಹೋಯಿತು. ಗಾಡಿಯಲ್ಲಿದ್ದ ಮಗುವು ಸ್ವಲ್ಪ ದೂರದಲ್ಲಿ ಬಿದ್ದುಹೋದಾಗ ಒಬ್ಬ ಪೋಲೀಸಿನವನು ನೋಡಿ ಎತ್ತಿಕೊಂಡನು. ಮಗುವಿಗೇನೂ ಅಪಾಯವಾಗಲಿಲ್ಲ. ಆದರೆ ಕುದುರೆಯು ಗಾಡಿಯನ್ನು ಒಡೆದು ಹಾಕಿ, ಕಡೆಗೆ ಮಂಡಿ ಮೊಹಲ್ಲಾದಲ್ಲಿ ಸಿಕ್ಕಿಬಿತ್ತು.

***

ವ್ಯವಸಾಯಕ್ಕೆ ಸಹಕಾರಿಯಾಗುವಂಥಾ ೫೦ ಅಡಿ ಆಳವುಳ್ಳ ಭಾವಿಗಳನ್ನು ತೋಡುವದಕ್ಕೆ ಕೆಲವು ಉಪಕರಣಗಳನ್ನು ತರಿಸಿ ಕೊಟ್ಟಲ್ಲಿ ಅಂಥಾ ಭಾವಿಗಳನ್ನು ತೋಡಿಸುವ ಪ್ರಯತ್ನ ಮಾಡಬಹುದಾಗಿದೆ ಎಂದು ಕೋಲಾರದ ಡೆಪ್ಯುಟಿ ಕಮಿಷನರು ಗವರ್ನಮೆಂಟಿಗೆ ಬರೆದರು. ಸರ್ಕಾರದವರು ಈ ಉದ್ದೇಶಕ್ಕಾಗಿ ೧,೦೦೦ ರೂಪಾಯಿ ಸ್ಯಾಂಕ್ಷನ್ ಮಾಡಿ, ಬೇಕಾದ ಸಾಧನಗಳನ್ನು ತರಿಸಬೇಕೆಂತಲೂ, ಭಾವಿಗಳನ್ನು ತೋಡುವ ವಿಧಾನ ಮುಂತಾದದ್ದನ್ನು ನಮ್ಮ ದೇಶದ ಜನರಿಗೆ ಕಲಿಸಿಕೊಡಬೇಕೆಂತಲೂ, ಇದಕ್ಕೆ ನೀರಿನ ಸರಬರಾಯಿ ಇಲಾಖೆಯ ಎಗ್ಜಿಕ್ಯುಟಿವ್ ಇಂಜನಿಯರಾದ ಮಿ॥ ರಂಗಸ್ವಾಮಿಯ್ಯಂಗಾರ್ರ ಸಹಾಯವನ್ನು ಪಡೆದುಕೊಳ್ಳಬೇಕೆಂತಲೂ, ಇಂಥಾ ಭಾವಿಗಳನ್ನು ತೋಡುವುದಕ್ಕೆ ರೈತರಿಗೆ ಬೇಕಾಗುವಷ್ಟು ತಕಾವಿ ಹಣವನ್ನು ಕೊಡಬಹುದೆಂತಲೂ ಹುಕುಂ ಕೊಟ್ಟಿದ್ದಾರೆ.

***

ಶ್ರೀಮನ್ಮಹಾರಾಜರವರು ಕಳೆದ ವಾರ ಸರ್ಕೀಟು ದಯಮಾಡಿದ್ದಾಗ್ಗೆ ಟಿ. ನರಸೀಪುರದ ಬಳಿ ಪೋಲೀಸ್ ಇಲಾಖೆಯವರೂ ಇತರರೂ ಸೇರಿ ಬಹು ಸುಂದರವಾದ ಚಪ್ಪರವನ್ನು ಹಾಕಿಸಿದ್ದರು. ಮಳೆವಳ್ಳಿಯಲ್ಲಿರುವಾಗ್ಗೆ ಶ್ರೀಮನ್ಮಹಾರಾಜರವರು ಅನಿರೀಕ್ಷ್ಯವಾಗಿ ಒಂದು ಗ್ರಾಮವನ್ನು ಪ್ರವೇಶಿಸಿ, ಆ ಗ್ರಾಮಾಧಿಕಾರಿಗಳ ಬಳಿ ಇರುವ ಖಾತೆ, ಕಿರದಿ, ಜನಸಮರಣಾದಿ ಲೆಕ್ಕಗಳನ್ನು ತರಿಸಿ ತನಿಖೆಮಾಡಿದರು ಮತ್ತು ಮಕ್ಕಳಿಗೆ ಜನರು ಸಿಡುಬುಹಾಕಿಸುವ ವಿಷಯದಲ್ಲಿ ಎಷ್ಟುಮಟ್ಟಿಗೆ ಉತ್ಸಾಹಪೂರ್ಣರಾಗಿದ್ದಾರೆಂಬುವುದನ್ನೂ ವಿಚಾರಣೆ ಮಾಡಿ, ಆ ಗ್ರಾಮದ ಮಕ್ಕಳನ್ನೆಲ್ಲಾ ಕರೆಸಿ ಪರಾಂಬರಿಸಿ, ಸಿಡುಬು ಹಾಕಿಸಿಕೊಂಡಿದ್ದ ಮಕ್ಕಳಿಗೆಲ್ಲಾ ಪ್ರೋತ್ಸಾಹವಾಗುವಂತೆ ಬಹುಮಾನಗಳನ್ನು ಕೊಡಿಸಿದರು. ಇತ್ತಲಾಗಿ ಡೆಪ್ಯುಟಿ ಕಮಿಷನರ್ ಮಿ॥ ಎಂ. ಕಾಂತರಾಜೇ ಅರಸಿನವರು ಮಳವಳ್ಳಿ ಕ್ಯಾಂಪಿನಲ್ಲಿ ಬಡಬಗ್ಗರಾದ ಪ್ರಜೆಗಳಿಗೂ ಕಷ್ಟಪಡುವ ಗ್ರಾಮರಕ್ಷಕರಾದ ಅಲ್ಪ ನೌಕರರಿಗೂ ಸುಖಭೋಜನ ಮಾಡಿಸಿ, ಬಡವರಲ್ಲಿ ತಮಗಿರುವ ಕನಿಕರವನ್ನೂ ಪ್ರೇಮಾತಿಶಯವನ್ನೂ ಪ್ರಕಾಶಪಡಿಸಿದರು.

ಅಪೂರ್ವವಾದ ವರ್ತಮಾನ.

ಮೂಡಿಗೆರೆ ತಾಲ್ಲೋಕು ಕಳಸದ ಮಾಗಣೆಯಲ್ಲಿ ಈಗ್ಗೆ ಒಂದು ತಿಂಗಳು ಲಾಗಾಯತು ಬಹಳ ಮಳೆಯಾಗಿ ಅಳ್ಳ ಹೊಳೆ ಒಂದಾಗಿ ಬೇರೆ ಸ್ಥಳದಿಂದ ಸಾಮಾನುಗಳು ತರುವದಕ್ಕೆ ಅನುಕೂಲವಿಲ್ಲದೆ ಈ ಸ್ಥಳದ ಜನರಿಗೆ ಇರತಕ್ಕ ತೊಂದರೆ ಹೇಳುವದಕ್ಕಾಗದು —ನೆನ್ನೆ ದಿವಸ ಒಂದು ಅಪೂರ್ವವಾದ ವರ್ತಮಾನ ಕೇಳಿ ನಾನು, ಬ್ಯಾಳೆಹೊಳೆ ಅಂಗಡಿ ಸಾಹುಕಾರ್ ಹಂಪಣ್ಣಪ್ಯಾರಿಗಳು, ವೆಂಕಟೇಶಸೆಟ್ಟರು ವಗೈರೆ ಜನರು ಸೇರಿ ಮೂಡಿಗೆರೆ ತಾ॥ ಕಳಸದ ಮಾಗಣೆ ತಲಗೋಡು ಗ್ರಾಮದ ಕಾಫಿತೋಟದ ಮೇಲಗಡೆ ಸುಂದರೆಂಬ ಗುಡ್ಡದ ತುದಿಯಿಂದ ಒಂದೂವರೆ ಮೈಲು ದೂರದ ೨ ಗಜ ಹೊಂದ ಸುಮಾರು ಒಂದು ಗಜ ಅಗಲವಾಗಿ ಬಗಾಲು ಬಿಟ್ಟು ಅಲ್ಲಲ್ಲಿ ಭೂಮಿಯೆಲ್ಲಾ ಕೀಳೀಳಾಗಿ ಇತ್ತು. ಕೆಲವು ಕಡೆ ಬಗಾಲು ಆಗಿರತಕ್ಕ ಹೊಂಡಕ್ಕೆ ಆಳ ಎತ್ತರವಾಗಿರುವ ಗಣೆ ಹಾಕಿ ನೋಡಿದಲ್ಲಿ ಗಣೆ ಪೂರಾ ಕೆಳಗೆ ಹೋಯಿತೇ ಹೊರತು ಬುಡ ಸಿಕ್ಕಲಿಲ್ಲ —ಹಾಗೇ ನೋಡುತ್ತಾ ಒಂದು ಮೈಲಿ ದೂರ ಬರುವಲ್ಲಿ ಹತ್ತಿರ ಮಕ್ಕಿಯಲ್ಲಿ ೩೦ ವರುಷ ವಯಸ್ಸಿನ ೨ ಕಣ್ಣು ಇಲ್ಲದ ಕೃಷ್ಣಯ್ಯ ಇವರ ಕುಟುಂಬ ೪೦ ವರುಷ ವಯಸ್ಸಿನ ಹೆಂಗಸು ವಾಸವಾಗಿದ್ದ ಮನೆ ಅರ್ಧದ ವರಿಗೆ ಇವರ ಮನೆ ಮೇಲುಗಡೆ ಇರುವ ಕಾಫಿ ತೋಟವು ಜಾರಿಬಂದು ಮುಚ್ಚಿತ್ತು. ನಾವು ಗಾಬರಿಯಿಂದ ಹೋಗಿ ವಿಚಾರಿಸುವಲ್ಲಿ ಇವರ ಮನೆಯಿಂದ ಇದ್ದ ಹಿಂದ ಬಚ್ಚಲ ಕೊಟ್ಟಿಗೆ ಕಾಫಿತೋಟ ಬಂದು ಮುಚ್ಚುವಾಗ್ಗೆ ಹೆಂಡತಿ ಕಣ್ಣಿಲ್ಲದ ಗಂಡನನ್ನು ಕರಕೊಂಡು ಅಂಗಳಕ್ಕೆ ಇಳಿಯುವಾಗ್ಗೆ ಜಗಲಿ ಮರಬಿತ್ತು. ಸಮೀಪ ಹೋಗುವಾಗ್ಗೆ ಅರ್ಧ ಮನೆ ಮುಚ್ಚಿತ್ತು ಎಂದು ಹೇಳಿದರು. ಆ ಹೆಂಗಸಿನ ಬುದ್ಧಿಗೆ ಸಂತೋಷಪಡಬೇಕಾಗಿದೆ. ಸದರಿ ಮನೆ ಬಲಭಾಗದಲ್ಲಿ ಸಾಗುವಳಿಯಾದ ಸುಮಾರು ಒಂದು ಎಕರೆ ತರೀ ಸಹ ಮುಚ್ಚಿಕೊಂಡಿದೆ. ಅವರ ಕೆಳಗೆ ಫರ್ಲಾಂಗ್ ದೂರದಲ್ಲಿರುವ ಕುಂಬಾರ ಬಗ್ಗು ಮನೆಯವರು ಹೆದರಿ ಮನೆ ತೊರೆದು, ಬಿಡಾರಕ್ಕೆ ಜಾಗ ಹುಡುಕುತ್ತಾರೆ. ಈಗ್ಗೆ ಬಹಳ ಮಳೆಗಾಲ, ಮೈಲಿಗೆ ಒಂದು ಮನೆ ಇಂತಕ್ಕಷ್ಟು ಮಲ್ನಾಡು ಪದ್ಧತಿ. ಹೀಗೆ ಇರುತ್ತಾ ಇವರಿಗೆ ವಾಸಕ್ಕೆ ಮನೆ ಸಿಕ್ಕುವದು ಕಷ್ಟ.

ಸತ್ಯವಾದಿ.

ಶ್ರೀಮನ್ಮಹಾರಾಜರವರ ಸರ್ಕೀಟು.

ಮಳವಳ್ಳಿ.

ಇದೇ ತಿಂಗಳು ೧೨ ನೆ ತಾ ಸೋಮವಾರ ಶ್ರೀಮನ್ಮಹಾರಾಜರಾಜಾ ಸಾಹೇಬ್ ಶ್ರೀಕೃಷ್ಣರಾಜ ಒಡೆಯರ್ ಬಹದ್ದೂರ್, ಜಿ. ಸಿ. ಯಸ್. ಐ. ರವರು ತಮ್ಮ ಪ್ರೈವೆಟ್ ಸೆಕ್ರೆಟರಿ ಮೆ॥ ಮೆಕಾನಕಿಯವರು, ಅ॥ ಪ್ರೈವೆಟ್ ಸೆಕ್ರೆಟರಿ ಮೆ॥ ರಾಘವೇಂದ್ರರಾಯರು ಮತ್ತು ನಮ್ಮ ಡೆಪ್ಯುಟಿ ಕಮಿಷನರ್ ಮೆ॥ ಕಾಂತರಾಜೇ ಅರಸಿನವರು ಇವರುಗಳ ಸಮೇತ ಶ್ರೀರಂಗಪಟ್ಟಣದ ಮಾರ್ಗವಾಗಿ ಈ ಊರಿಗೆ ಮಧ್ಯಾಹ್ನ ೧। ಗಂಟೆಗೆ ದಯಮಾಡಿಸಿ, ತಾಲ್ಲೂಕ್ ಕಚೇರಿಯ ಹತ್ತಿರ ಹಾಕಿದ್ದ ಮುನಿಸಿಪಲ್ ಪೆಂಡಾಲಿನಲ್ಲಿ ಸೇರಿದ್ದ ಅಧಿಕಾರಸ್ಥರೂ, ಮುನಿಸಿಪಲ್ ಮತ್ತು ಡಿಸ್ಟ್ರಿಕ್ಟು ಬೋರ್ಡ್ ಮೆಂಬರುಗಳೂ, ವರ್ತಕರೂ ಇವರುಗಳಿಗೋಸ್ಕರ ನಾಗರನೂನೇರ ತರಫು ಪ್ರೆಂಚ್ ರಾಕ್ಸ್ ಡಿವಿಜನ್ ಆಫೀಸರ್ ಮೆ॥ ಬಿ. ಕೃಷ್ಣರಾಯರವರೂ ಮತ್ತು ಪ್ರಜೆಗಳ ತರಫು ಲಾಯರು ಮತ್ತು ರೆಪ್ರಜೆಂಟೆಟಿವ್ ಮೆಂಬರ್ ಮೆ॥ ಎ ನರಸಿಂಹಯ್ಯನವರೂ ಸಹಾ ಒಪ್ಪಿಸಿದ ಹಾರ ತುರಾಯಿ ವಗೈರೆಯನ್ನು ಮಹಾಸ್ವಾಮಿಗಳವರು ಹಸನ್ಮುಖಿಗಳಾಗಿ ಸ್ವೀಕರಿಸಿ, ಪ್ರಜೆಗಳ ಯೋಗಕ್ಷೇಮವನ್ನು ವಿಚಾರಿಸಿ ಟ್ರಾವಿಲರ್ಸ್ ಬಂಗ್ಲೆಯ ಹತ್ತಿರ ಹಾಕಿದ್ದ ಚಪ್ಪರದ ಮುಖಾಂತರ ಬಂಗ್ಲೆಗೆ ದಯಮಾಡಿಸಿದರು ಅಲ್ಲಿ ೪ ಗಂಟೆ ವರಿಗೂ ವಿಶ್ರಮಿಸಿಕೊಂಡು ನಂತರ ಮೋಟಾರ್ ಗಾಡಿಯಲ್ಲಿ ಕುಳಿತು ತಾಲ್ಲೂಕ್ ಕಚೇರಿಯನ್ನು ಇನ್ಸ್ಪೆಕ್ಷನ್ ಮಾಡಿ, ಸಬ್ ರಿಜಿಸ್ಟ್ರಾರ್ ಆಫೀಸಿಗೆ ದಯಮಾಡಿಸಿದ್ದು, ಅಲ್ಲಿಂದ ಎ ವಿ ಸ್ಕೂಲ್ ಹೊಸ ಕಟ್ಟಡಕ್ಕೆ ದಯಮಾಡಿಸಿದ್ದು, ಲೋಕಲ್ ಫಂಡ್ ಡಿಸ್ಪೆನಸರಿಗೆ ಚಿತ್ತೈಸಿ, ಅಲ್ಲಿ ಔಷಧ ಮತ್ತು ಚಿಕಿತ್ಸಾರ್ಥವಾದ ಆಯುಧಗಳನ್ನು ಪರಾಮರಿಸಿ, ಮೋಟಾರ್ ಗಾಡಿಯಲ್ಲಿ ಕುಳಿತು, ಕೋಟೆ ದೇವಸ್ಥಾನದ ಬೀದಿಯ ಮಾರ್ಗವಾಗಿ ಗರ್ಲ್ಸ್ ಸ್ಕೂಲಿಗೆ ಚಿತ್ತೈಸಿ ಅಲ್ಲಿಯ ಸಣ್ಣ ಮಕ್ಕಳ ಗಾನದಿಂದ ಸಂತೋಷಭರಿತರಾಗಿ, ಈಶ್ವರಗುಡಿ ಬೀದಿಯಲ್ಲಿ ಹೊರಟು ಹಿಂದೂಸ್ಥಾನಿ ಸ್ಕೂಲಿಗೆ ದಯಮಾಡಿ, ಕಾಳಮ್ಮನ ಗುಡಿ ಮುಖಾಂತರ ಕನ್ಸರ್ವೆನ್ಸಿ ರಸ್ತೆ ದಾರಿಯಲ್ಲಿ ಹೊರಟು ಪೇಟೆಗೆ ದಯಮಾಡಿ, ಅಲ್ಲಿ ತಾಲ್ಲೂಕ್ ಬೋರ್ಡ್ ಮೆಂಬರು ಮೆ॥ ದವಲತ್ ಹನುಮಯ್ಯ ಶೆಟ್ಟರೂ, ಮುನಿಸಿಪಲ್ ಮೆಂಬರು ಮೆ॥ ಕೆ. ಸುಬ್ಬಯ್ಯಸೆಟ್ಟರೂ ಒಪ್ಪಿಸಿದ ಹಾರತುರಾಯಿಗಳನ್ನು ಸ್ವೀಕರಿಸಿ, ಪೇಟೆಯ ಕೊನೆಯ ವರೆಗೂ ದಯಮಾಡಿಸಿದ್ದು, ನಂತರ ಕೊಂಚ ದೂರ ಕಾಲ್ನಡಿಗೆಯಲ್ಲಿ ಮಾರೆಹಳ್ಳಿ ಶ್ರೀಲಕ್ಷ್ಮೀನರಸಿಂಹಸ್ವಾಮಿಯವರ ದೇವಸ್ಥಾನಕ್ಕೆ ದಯಮಾಡಿಸಿ, ರಿಸೇರಿಗೆ ಯೋಗ್ಯವಾದ ಸ್ಥಳಗಳನ್ನೆಲ್ಲಾ ಪರಾಂಬರಿಸಿ, ನಂತರ ಮೋಟಾರ್ ಗಾಡಿಯಲ್ಲಿ ಹೊರಟು ಬಂಗ್ಲೆಗೆ ಸಾಯಂಕಾಲ ೬॥ ಗಂಟೆಗೆ ದಯಮಾಡಿಸಿದರು ರಾತ್ರಿ ೭॥ ಗಂಟೆಯಲ್ಲಿ ದರ್ಬಾರು ಪ್ರಾರಂಭವಾಯಿತು. ಅಲ್ಲಿ ಸರ್ಕಾರಿ ಅಧಿಕಾರಿಗಳಲ್ಲದೆ ಸುಮಾರು ೪೦ ಜನದ ವರೆಗೆ ಪಟ್ಟಣದ ಮುಖ್ಯಸ್ಥರೆಲ್ಲರೂ ಸೇರಿದ್ದರು. ಪುರನಿವಾಸಿಗಳೆಲ್ಲರೂ ತಮ್ಮ ರಾಜಭಕ್ತಿ ವಿಶ್ವಾಸಗಳನ್ನು ತೋರಿಸಲು ಶ್ರೀಮನ್ಮಹಾರಾಜರಾಜಾ ಸಾಹೇಬ್ ಬಹದ್ದೂರ್ ರವರಿಗೆ ಒಂದು ಅಡ್ರೆಸ್ಸನ್ನೂ ಮತ್ತು ತಮಗೆ ಅನುಕೂಲವಾಗಬೇಕಾದ ಕೆಲವು ಅಹವಾಲ ಗಳನ್ನೂ ಕುರಿತು ಒಂದು ವಿಜ್ಞಾಪನಾ ಪತ್ರಿಕೆಯನ್ನು ಮೆ॥ ನರಸಿಂಹಯ್ಯನವರ ಮೂಲಕ ಓದಿಸಿ ನಕಾಸೆ ಪೆಟ್ಟಿಗೆಯಲ್ಲಿಟ್ಟು ಒಪ್ಪಿಸಿದರು. ತದನಂತರ ಸದರಿ ಮುಜರೆಗಳು ಸಹಾ ನಡೆದವು ಶ್ರೀಮನ್ಮಹಾರಾಜರವರು ಅಪ್ಪಣೆ ಕೊಡಿಸಿದ ಅಂಶಗಳನ್ನು ಇದರಡಿ ನಮೂದಿಸಿದೆ.

ಬಂಗ್ಲೆಯ ಸುತ್ತಲೂ ದೀಪೋತ್ಸವಗಳು ಬಹು ವಿಜೃಂಭಣೆಯಾಗಿ ನಡೆದವು ತಾ॥ ೧೩ ನೆ ಮಂಗಳವಾರ ಪ್ರಾತಃಕಾಲ ೧೦॥ ಗಂಟೆಗೆ ಸವಾರಿಯು ಶಿವನಸಮುದ್ರಕ್ಕೆ ಚಿತ್ತೈಸಿ ಬ್ಲಫ್‌ನಲ್ಲಿ ನಡಿಯುತ್ತಾ ಇರುವ ವಿದ್ಯುಚ್ಛಕ್ತಿಯ ಕೆಲಸವನ್ನು ಪರಾಂಬರಿಸಿ ನಂತರ ಮಧ್ಯಾಹ್ನ ೨॥ ಗಂಟೆಗೆ ಬರಚುಕ್ಕಿಗೆ ಸವಾರಿಯು ದಯಮಾಡಿಸಿ, ಅಲ್ಲಿ ಕಾವೇರಿ ಜಲಪಾತವನ್ನು ಪರಾಂಬರಿಸಿ, ಡೆಪ್ಯುಟಿ ಕಮಿಷನರಿಂದಲೂ ಮತ್ತು ಬಹಗೀರುದಾರರಿಂದಲೂ ಮಾಡಲ್ಪಟ್ಟಿದ್ದ ಫಲಾಹಾರಾದಿಗಳನ್ನು ಸ್ವೀಕರಿಸಿ ಸಾಯಂಕಾಲ ೬ ಗಂಟೆಗೆ ವಾಪಸು ಮಳವಳ್ಳಿಗೆ ದಯಮಾಡಿಸಿದರು. ಇಲ್ಲಿನ ಎಲ್ಲಾ ಸ್ಕೂಲುಗಳ ವಿದ್ಯಾರ್ಥಿವಿದ್ಯಾರ್ಥಿನಿಯರಿಗೆ ಬಹುಮಾನಾರ್ಥವಾಗಿ ೧೦೦ ರೂಪಾಯಿ ಪೋಲೀಸಿನವರಿಗೆ ೭೦ ರೂಪಾಯಿ ಸಹಾ ದಯಪಾಲಿಸಿದರು. ತಾ. ೧೪ ನೆ ಬುಧವಾರ ಬೆಳಿಗ್ಗೆ ೯ ಗಂಟೆಗೆ ಹಲಗೂರು ಮಾರ್ಗವಾಗಿ ಕನಕನಹಳ್ಳಿಗೆ ಸವಾರಿಯು ಚಿತ್ತೈಸಿತು ಶಿಂಷಾನದಿಯ ಬಳಿ ತಾ॥ ಆಫೀಸರುಗಳು ಏರ್ಪಡಿಸಿದ್ದ ಮರದ ಸೇತುವೆಯು ಪ್ರಯಾಣಕ್ಕೆ ಬಹಳ ಅನುಕೂಲವಾಗಿದ್ದದ್ದನ್ನು ಮಹಾಸ್ವಾಮಿಯವರು ಪರಾಂಬರಿಸಿ ಸಂತೋಷಪಟ್ಟು ಮುಂದಕ್ಕೆ ದಯಮಾಡಿಸಿದರು ಸಮಸ್ತ ವಿಷಯದಲ್ಲೂ ಮಹಾಸ್ವಾಮಿಯವರು ಬಹು ಸಂತೋಷಪಟ್ಟರು ಸವಾರಿಯು ಚಿತ್ತೈಸಿದ ಮೇಲೆ ಮಳೆ ವಗೈರೆ ಆಗಿ ಪಟ್ಟಣವು ಸುಭಿಕ್ಷವಾಗಿದೆ.

ವಿಜ್ಞಾಪನಾ ಪತ್ರಿಕಾ.

ಶ್ರೀಮನ್ಮಹಾರಾಜರಾಜಾಸಾಹೇಬ್ ಶ್ರೀಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರ್ ಜಿ. ಸಿ. ಎಸ್. ಐ. ರವರ ಚರಣಸನ್ನಿಧಾನಂಗಳಲ್ಲಿ:—

ಮಳವಳ್ಳಿ ಪುರನಿವಾಸಿಗಳಾದ ಸನ್ನಿಧಿಯ ಆಶ್ರಿತಾಪೇಕ್ಷರು ಅತ್ಯಂತ ವಿನಯಪೂರ್ವಕವಾಗಿ ರಾಜ ಭಕ್ತಿ ವಿಶ್ವಾಸದೊಡನೆ ಸಮರ್ಪಿಸಿದ ವಿಜ್ಞಾಪನಾ ಪತ್ರಿಕಾ

ಸ್ವರಾಜ್ಯ ಪ್ರಜಾಕ್ಷೇಮಾಭಿವೃದ್ಧಿಯೇ ಮುಖ್ಯವೆಂಬ ಮಹಾಸ್ವಾಮಿಯವರ ಸವಾರಿಯು ಈ ತಾಲ್ಲೋಕು ಪ್ರಾಂತ್ಯ ಚಿತ್ತೈಸುವ ಉದ್ದೇಶಮಾತ್ರದಿಂದಲೇ ಪ್ರಜಾಪೇಕ್ಷಿತವಾಗಿದ್ದ ವರ್ಷವು ಅಂಕುರಿಸಿ, ಸಕಲರಿಗೂ ಸಂತೋಷವುಂಟಾಗಿ ಬಹುಕಾಲದಿಂದ ಅಪೇಕ್ಷಿಸುತ್ತಾ ಇದ್ದ ಚಾತಕ ಪಕ್ಷಿಗಳಂತೆ ದೀನರಾಗಿ ಇದ್ದ ನಮ್ಮಗಳಿಗೆ ಪ್ರತ್ಯಕ್ಷತಃ ಘನವಾದ ಪ್ರಭುಸಂದರ್ಶನವು ಈ ದಿವಸ ಲಭಿಸಿ, ಮಹಾಸ್ವಾಮಿಯವರ ಮುಖೋದ್ಗತವಾದ ವಾಗ್ಪುಷ್ಪಬಿಂದುಗಳಿಂದ ನಮ್ಮ ಹೃದಯಗಳು ಸುಧಾಸೇಚನವಾದಂತೆ ಅತ್ಯಂತ ಸಂತೋಷಪುಳಕಿತಗಳಾದವು ಆದ್ದರಿಂದ ಈ ಘನವಾದ ಸಂದರ್ಶನವು ಪ್ರಜಾಪುರೋಭಿವೃದ್ಧಿಗೆ ಸಾಧನವಾದುದೆಂಬುವುದು ನಿಸ್ಸಂದೇಹವಾಗಿದೆ

ಇಂಥಾ ಅಭ್ಯುದಯ ಕಾರಣಭೂತನಾದ ಭಗವಂತನು ಸಬಾಂಧವ ಸಾಮಾತ್ಯ ಸಪರಿವಾರ ಸಮೇತರಾದ ದೀನದಯಾಳುಗಳಾದ ಮಹಾಸ್ವಾಮಿಯವರಿಗೆ ದೀರ್ಘಾಯುರಾರೋಗ್ಯ ಐಶ್ವರ್ಯಾಭಿವೃದ್ಧಿಗಳನ್ನು ಕೊಟ್ಟು ಕಾಪಾಡಬೇಕೆಂದು ಸರ್ವಕಾಲದಲ್ಲೂ ಪ್ರಾರ್ಥಿಸುತ್ತೇವೆ ಮಹಾಸ್ವಾಮಿ.

ಪ್ರಾರ್ಥನೆಗಳು

೧. ಪುರಾತನವಾಗಿಯೂ, ಪುರಾಣಪ್ರಸಿದ್ಧವಾಗಿಯೂ, ವಿಸ್ತಾರವಾಗಿಯೂ, ಶಿಥಿಲವಾಗಿ ಇರುವ ಮಾರೇಹಳ್ಳಿ ಶ್ರೀ ಲಕ್ಷ್ಮೀನರಸಿಂಹಸ್ವಾಮಿ ದೇವಸ್ಥಾನದ ದುರಸ್ತಿಗೆ ೧೨,೦೦೦ ರೂಪಾಯಿಗಳು ಅಂದಾಜಾಗಿ ಭಕ್ತಾದಿಗಳು ೧,೫೦೦ ರೂಪಾಯಿ ಚಂದಾಕೊಟ್ಟು ಇರುತ್ತಾರೆ ಉಳಿಕೆ ೧,೫೦೦ ರೂಪಾಯನ್ನು ಕೊಡುವದಕ್ಕೂ ಸಿದ್ಧವಾಗಿದ್ದಾರೆ ಸರ್ಕಾರದ ಕಂಟ್ರಿಬ್ಯೂಷನ್ ೩,೦೦೦ ರೂಪಾಯಿಗೆ ಮೂರರಷ್ಟು ವೋಲಗನ್ನು ಕೊಡಿಸಿ ಕೆಲಸವನ್ನು ಮಾಡಿಸಿಕೊಡಬೇಕು ಈಗ ವಸೂಲಾಗಿ ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟನಲ್ಲಿರುವ ೧,೫೦೦ ರೂಪಾಯಿಗಳಿಗೆ ಮೂರರಷ್ಟು ವೋಲಗನ್ನು ಪ್ರಕೃತ ಸ್ಯಾಂಕ್ಷನ್ ಮಾಡಿಸಿ ಮುಖ್ಯವಾದ ಕಾಮಗಾರಿಗೆ ಆರಂಭವಾದ ಬಳಿಕ ಭಕ್ತಾದಿಗಳಿಂದ ವಸೂಲಾಗುವ ಉಳಿಕೆ ಕಂಟ್ರಿಬ್ಯೂಷನ್ ೧,೫೦೦ ರೂಪಾಯಿಗಳು ಬಂದನಂತರ ಅದಕ್ಕೆ ಮೂರರಷ್ಟು ವೋಲಗು ೪,೫೦೦ ರೂಪಾಯಿಗಳು ಕೊಡಿಸಿ ಜೀರ್ಣೋದ್ಧಾರಮಾಡಿಸಬೇಕಾಗಿ ಬೇಡುತ್ತೇವೆ

೨ ಪ್ರಕೃತದಲ್ಲಿ ಕಸಬಾ ಮಳವಳ್ಳಿ ಮತ್ತು ಮಾರೇಹಳ್ಳಿ ಕೆರೆಗಳಿಗೆ ಸಾಕಾದಷ್ಟು ನೀರು ಸರಬರಾಯಿ ಆಗುವದಿಲ್ಲ ಪೂರ್ವಕಾಲದಲ್ಲಿ ಮಾರೇಹಳ್ಳಿ ಕೆರೆಗೆ ಕಾವೇರಿ ನದಿಯಿಂದ ಬನ್ನೂರು ಕೆರೆ ಮೂಲಕ ನಾಲೆಯಿಂದ ನೀರು ಬರುತ್ತಾ ಇತ್ತು ಈಗ ಈ ನಾಲೆಯಲ್ಲಿ ನೀರು ಸಪ್ಲೈ ಆಗುವದಿಲ್ಲ. ನೀರಿಲ್ಲದೆ ಕೆರೆ ಕೆಳಗಿನ ಜಮೀನುಗಳಲ್ಲಿ ತರೀ ಫಸಲಾಗದೆ, ಆಗಾಗ್ಗೆ ತೊಂದರೆ ಉಂಟಾಗುತ್ತಾ ಇದೆ ಹಾಲಿ ಬನ್ನೂರು ಕೆರೆಯಿಂದ ನೆಟ್ಟಕಲ್‌ವರಿಗೆ ಇಂಜನಿಯರ್ ಇಲಾಖೆಯವರು ಲೆವಲ್ ಮಾಡಿ ಇರುವದರಲ್ಲಿ ತುಂಬಾ ಅನುಕೂಲವಿರುತ್ತೆಂದು ತಿಳಿಯಬರುತ್ತದೆ. ಈ ಲೆವಲ್ ನಾಲೆ ಇರತಕ್ಕ ಮಾರ್ಗವಾಗಿ ಮಾರೇಹಳ್ಳಿ ಕೆರೆಗೆ ನೀರು ಸರಬರಾಯಿ ಮಾಡಿಸಿಕೊಟ್ಟಲ್ಲಿ ಇದರಿಂದ ಮಾರೇಹಳ್ಳಿ ಕೆರೆ ಕೆಳಗಿನ ಜಮೀನುಗಳಿಗೆ ನೀರಿನ ಅನುಕೂಲತೆಯು ಉಂಟಾಗುತ್ತಲ್ಲದೆ ಖುಷ್ಕಿಯಲ್ಲಿರತಕ್ಕ ಅನೇಕ ಜಮೀನುಗಳು ತರೀ ಆಗಿ ಸರ್ಕಾರಕ್ಕೆ ವಾಯಿದೆಯೂ, ರೈತರಿಗೆ ಅನುಕೂಲವೂ ಆಗುವ ಸಂಭವ ಉಳ್ಳದ್ದಾಗುವದರಿಂದ ಧರ್ಮಪ್ರಭುಗಳು ಬಡರೈತರ ಮೇಲೆ ಸಂಪೂರ್ಣಕಟಾಕ್ಷವಿಟ್ಟು ಆಚಂದ್ರಾರ್ಕವಾಗಿ ಪ್ರಜಾನುಕೂಲವನ್ನು ಕಲ್ಪಿಸಿ ಕಾಪಾಡಲು ಮಹಾ ಸನ್ನಿಧಿಯಲ್ಲಿ ಪ್ರಾರ್ಥಿಸಿಕೊಳ್ಳುತ್ತೇವೆ

೩. ಮಳವಳ್ಳಿ ಕೋಡಿಹಳ್ಳದ ನೀರಿಗೂ, ಈ ಕೆರೆ ಕೆಳಗಿನ ತರೀ ಜಮೀನುಗಳ ಸೋರುನೀರಿಗೂ ಅಡ್ಡಲಾಗಿ ಕಟ್ಟಿದ್ದ ಅಣೆಕಟ್ಟು ಒಡೆದು ಹೋದಂಥಾ ಅಣೆಯು ಮತ್ತು ಕೋಡಿಹಳ್ಳದ ನೀರು ವ್ಯರ್ಥ ಹಳ್ಳದಲ್ಲಿ ಬಿದ್ದು ಹೋಗುತ್ತಾ ಇರುವದರಿಂದ ತರೀ ಜಮೀನುಗಳ ಬೆಳೆಯನ್ನು ನಷ್ಟಪಡಿಸುತ್ತಾ ಇದೆ ಮರಾಮತ್ ಇಲಾಖೆಯವರು ಈ ಅಣೆಯ ಕಾಮಗಾರಿ ಮಾಡಿಸಲು ಅಂದಾಜು ಮಾಡಿ ಆದಾಯವಿಲ್ಲವೆಂಬ ಸಬಬಿನ ಮೇಲೆ ನಿಲ್ಲಿಸಿ ಇರುತ್ತಾರೆ. ಈ ಅಣೆಯು ದುರಸ್ತಾಗುವದರಿಂದ ಕೆರೆಯ ಮತ್ತು ಅಣೆಯ ಕೆಳಗಣ ಜಮೀನುಗಳಲ್ಲಿ ನಿರಾತಂಕವಾಗಿ ತರೀ ಫಸಲ್ ಆಗುವದು ಒಂದು. ಕೋಡಿಹಳ್ಳದ ನೀರಿನಿಂದ ಬೆಳೆ ಬಾಳುವ ಜಮೀನುಗಳು ಕೊರೆಯದೆ ನಿಲ್ಲುವದು ಒಂದು, ಈ ಟವನ್ ನಿವಾಸಿಗಳಾದ ೬—೮ ಸಾವಿರ ಪ್ರಜೆಗಳಿಗೆ ನೀರಿನ ತಾಪತ್ರಯ ತಪ್ಪುವದು ಒಂದು ಮತ್ತು ಸರ್ಕಾರಕ್ಕೆ ತರೀ ಕಂದಾಯ ಜಾಸ್ತಿ ಹುಟ್ಟುವಳಿ ಆಗುವದು ಒಂದು ಈ ಮೇಲೆ ನಾಲ್ಕು ವಿಧವಾದ ಅನುಕೂಲಗಳು ಉಂಟಾಗುತ್ತೆಯಾಗಿ ಉದಾರಗುಣಭೂಷಿತರಾದ ಮಹಾಸ್ವಾಮಿಗಳವರು ನಮ್ಮ ಪ್ರಾರ್ಥನೆಗಳನ್ನು ನೆರವೇರಿಸಿಕೊಟ್ಟು ರಾಜಭಕ್ತಿ ವಿಶ್ವಾಸವುಳ್ಳ ಸ್ವಕೀಯ ಪ್ರಜಾನುಕೂಲವನ್ನು ಕಲ್ಪಿಸಿ ಕಾಪಾಡಬೇಕೆಂದು ಮಹಾ ಸನ್ನಿಧಿಯಲ್ಲಿ ನಮಸ್ಕಾರಪೂರ್ವಕವಾಗಿ ವಿಜ್ಞಾಪಿಸಿಕೊಳ್ಳುತ್ತೇವೆ.

ತಾ ೧೨—೮—೧೯೦೭ ಮಳವಳ್ಳಿಯ ಪುರನಿವಾಸಿಗಳು.

ಶ್ರೀಮನ್ಮಹಾರಾಜರವರ ಪ್ರತ್ಯುತ್ತರ.

ಮಳವಳ್ಳಿ ತಾಲ್ಲೋಕು ನಿವಾಸಿಗಳೇ,

ನಮ್ಮ ಸಂದರ್ಶನಕ್ಕಾಗಿ ನೀವುಗಳೆಲ್ಲರೂ ಈ ದಿವಸ ಇಲ್ಲಿ ಸೇರಿ ನಿಮ್ಮ ರಾಜಭಕ್ತಿ ವಿಶ್ವಾಸವನ್ನು ತೋರ್ಪಡಿಸಿಕೊಂಡದ್ದು ನಮಗೆ ತುಂಬಾ ಸಂತೋಷವನ್ನು ಉಂಟುಮಾಡುತ್ತೆ ಈ ತಾಲ್ಲೋಕಿಗೆ ಇದು ನಮ್ಮ ಪ್ರಥಮ ಆಗಮನವಲ್ಲ ಮುಂದೆಯೂ ಅವಕಾಶಗಳು ಪದೇ ಪದೇ ಸಿಕ್ಕಿ ನಿಮ್ಮ ತಾಲ್ಲೋಕಿನ ಸ್ಥಿತಿಯು ಇನ್ನೂ ಮೇಲಾಗುವುದನ್ನೇ ನೋಡಬೇಕೆಂದು ಕೋರುತ್ತೇವೆ

ಈ ತಾಲ್ಲೋಕಿಗೆ ಸಂಬಂಧಪಟ್ಟ ಕೆಲವು ವಿಷಯಗಳನ್ನು ನಮಗೆ ವಿಜ್ಞಾಪಿಸಿಕೊಳ್ಳಲು ಈ ಸಂದರ್ಭವನ್ನು ನೀವು ಗ್ರಹಿಸಿದ್ದು ಸರಿಯೇ ಆದರೆ ಸರ್ಕಾರದಿಂದ ಸಾಧ್ಯವಾದ ಸಹಾಯವನ್ನು ಮಾಡಲಾದೀತೆಂದು ಹೇಳಬಹುದೇ ಹೊರತು ಎಲ್ಲಾ ಸಹಾಯವೂ ದೊರೆಯುತ್ತೆಂದು ಹೇಳಲು ಆಗುವುದಿಲ್ಲ

ಬಹಳ ಪುರಾತನವಾದ ಮಾರೆಹಳ್ಳಿ ಶ್ರೀ ಲಕ್ಷ್ಮೀನರಸಿಂಹ ಸ್ವಾಮಿಯವರ ದೇವಸ್ಥಾನದ ವಿಚಾರದಲ್ಲಿ ಭಕ್ತರಾದ ನೀವೆಲ್ಲರೂ ಸೇರಿ ಅದರ ಜೀರ್ಣೋದ್ಧಾರಕ್ಕಾಗಿ ೧,೫೦೦ ರೂಪಾಯಿ ಸೇವಿಂಗ್ಸ್ ಬ್ಯಾಂಕಿನಲ್ಲಿ ಇಟ್ಟು ಇರುವದು ತಿಳಿದು ಸಂತೋಷವಾಯಿತು ಈ ಕೆಲಸಕ್ಕಾಗಿ ಮರಾಮತ್ತು ಇಲಾಖೆಯವರ ಅಂದಾಜು ೨೦,೬೬೬ ರೂಪಾಯಿ ಆಗುತ್ತೆ. ನೀವು ಹೇಳುವ ಹಾಗೆ ೧೨,೦೦೦ ರೂಪಾಯಿ ಅಲ್ಲ. ಆದ್ದರಿಂದ ಈ ಕೆಲಸ ಶೀಘ್ರದಲ್ಲಿ ಆಗಬೇಕಾದರೆ ನೀವು ಇನ್ನು ಹೆಚ್ಚಾದ ಮುತವರ್ಜಿಯನ್ನು ವಹಿಸಿದ ಹೊರತು ಆಗಲಾರದು ಆದರೆ ಸಧ್ಯಕ್ಕೆ ದೇವಸ್ಥಾನದ ಮುಖ್ಯ ಭಾಗಗಳನ್ನಾದರೂ ಈ ಬಾಕಿಯುತು ಇನ್ನು ಒಂದೆರಡು ವರುಷಗಳಲ್ಲಿ ೮,೫೦೦ ರೂಪಾಯಿ ವ್ಯಯಮಾಡಿ ಸರಿಪಡಿಸಲು ಸಾಧ್ಯವೇ ಎಂಬ ಅಂಶವು ಯೋಚನೆಯಲ್ಲಿದೆ.

ಕಸಬಾ ಮತ್ತು ಮಾರೆಹಳ್ಳಿ ಕೆರೆಗಳಿಗೆ ನಾಲಾ ಮೂಲಕ ನೀರು ಸರಬರಾಯಿ ಮಾಡುವ ವಿಷಯದಲ್ಲಿ ಈ ಕೆಲಸ ಸಾಧ್ಯವಲ್ಲವೆಂದು ಪರಿಶೋಧಿಸಿ ತೀರ್ಮಾನಿಸಲ್ಪಟ್ಟಿದೆ. ಬಂಡುಕಡುವಿನ ವಿಷಯದಲ್ಲಿ ಚೀಫ್ ಇಂಜನಿಯರ್‌ರವರು ವಿಚಾರಿಸಿ ನಿಮಗೆ ಏನು ಸಹಾಯ ಮಾಡಬಹುದೋ ಅದನ್ನು ತಿಳಿಸಬೇಕೆಂದು ಹುಕುಂ ಆಗಿದೆ

ಮುಖ್ಯವಾಗಿ ಕಾಲಿ ಇರತಕ್ಕ ನಾಲೆಗಳ ಬಿಡಾವಣೆಯಿಂದ ನಿಮ್ಮ ತಾಲ್ಲೋಕಿಗೆ ನೀರಾವರಿ ಹೆಚ್ಚುತ್ತೆಂದು ಹೇಳಲು ಆಗುವದಿಲ್ಲ. ಆದರೆ ಈಗ ಇನ್ನೂ ಚರ್ಚೆಯಲ್ಲಿರುವ ಮತ್ತೊಂದು ಭಾರೀ ನೀರಾವರಿ ಕಾಮಗಾರಿಯು ಸಾಧ್ಯವಾಗುವ ಪಕ್ಷದಲ್ಲಿ ಇತರ ತಾಲ್ಲೂಕುಗಳಿಗಿಂತಲೂ ನಿಮ್ಮ ತಾಲ್ಲೋಕು ವಿಶೇಷವಾದ ಪ್ರಯೋಜನವನ್ನು ಹೊಂದುವುದರಲ್ಲಿ ಸಂದೇಹವೇ ಇಲ್ಲ ಸಧ್ಯಕ್ಕೆ ಇರುವದನ್ನೇ ಕೈಲಾಕನ್ನುಟ್ಟಗೆ ಸರಿಯಾದ ಸ್ಥಿತಿಯಲ್ಲಿ ಇಟ್ಟುಕೊಂಡಿದ್ದರೆ ಸಾಕಾಗಿರುತ್ತೆ,

ನೀವು ನನ್ನ ಸುಖಾಗಮನಕ್ಕಾಗಿ ಭಕ್ತಿ ವಿಶ್ವಾಸದಿಂದ ಮಾಡಿರುವ ಏರ್ಪಾಡುಗಳಿಂದ ನಮ್ಮ ಮನಸ್ಸಿಗೆ ತುಂಬಾ ಸಂತೋಷವುಂಟಾಗಿರುತ್ತೆ ಭಗವಂತನು ನಿಮ್ಮಗಳಿಗೆ ಎಲ್ಲಾ ಭಾಗದಲ್ಲೂ ಸೌಖ್ಯವನ್ನು ದಯಪಾಲಿಸಲೆಂದು ಪ್ರಾರ್ಥಿಸುತ್ತೇವೆ

ಕನಕಾನಹಳ್ಳಿ.

ಶ್ರೀಮನ್ಮಹಾರಾಜರವರನ್ನು ಡೆಪ್ಯುಟಿ ಕಮಿಷನರ್ ಮೆ॥ ಡಿ. ಸೇನವಾಜೇ ಅರಸಿನವರೂ ಪ್ರೊ॥ ಇನ್ಸ್ಪೆಕ್ಟರ್ ಜನರಲ್ ಮೆ॥ ಕಾರ್ಯವರೂ ಮೋಟಾರ್ ಗಾಡಿಯಲ್ಲಿ ಬೆಂಗಳೂರಿಂದ ಹೋಗಿ ಎದುರುಗೊಂಡರು ಸಾತನೂರಿನ ಬಾಗಿಲಲ್ಲಿ ಒಂದು ಚಪ್ಪರವನ್ನು ಹಾಕಿ ಅಲಂಕರಿಸಿದ್ದರು ಅಧಿಕಾರಿಗಳೆಲ್ಲಾ ಶ್ರೀಮನ್ ಮಹಾರಾಜರವರಿಗೆ ಹಾರ ತುರಾಯಿಗಳನ್ನೊಪ್ಪಿಸಿ ಸುಖಾಗಮನವನ್ನು ಬಯಸಿದರು ಅಲ್ಲಿ ಸರ್ಕಾರದು ಮಾಡಿಸಿದ್ದ ಡೇರಾಗಳಲ್ಲಿ ಆ ದಿನವನ್ನು ಕಳೆದು ಶ್ರೀಮನ್ಮಹಾರಾಜರವರ ಪರಿವಾರ ಸಹಿತ ಮರುದಿನ ಬೆಳಿಗ್ಗೆ ಸ್ವಲ್ಪ ದೂರ ಮೋಟಾರ್ ಗಾಡಿಯಲ್ಲೂ ಸ್ವಲ್ಪ ದೂರ ಅಶ್ವಾರೂಢರಾಗಿಯೂ ಪ್ರಯಾಣ ಮಾಡಿಕೊಂಡು ಅಲಹಳ್ಳಿ ನೀರಾವರಿ ಕಾಮಗಾರಿಯ ಏರ್ಪಡನ್ನೂ ಮೇಕೆದಾಟು ಸ್ಥಳವನ್ನೂ ಪರಾಂಬರಿಸಿದರು ಕನಕಾನಹಳ್ಳಿಯ ಪುರಜನರು ಮರು ದಿನ ಸಾಯಂಕಾಲ ಶ್ರೀಮನ್ ಮಹಾರಾಜರವರಿಗೆ ಒಂದು ಅಡ್ರೆಸ್ಸನ್ನು ಓದಿ ಒಪ್ಪಿಸಿದರು ಅದರ ಮುಖ್ಯಾಭಿಪ್ರಾಯವೇನೆಂದರೆ —

ವಿಜ್ಞಾಪನಾ ಪತ್ರಿಕೆ

ಕಾನಕಾನಹಳ್ಳಿಯ ಪ್ರಜೆಗಳಾದ ನಾವು ಭಯಭರಿತರಾಗಿಯೂ ವಿಶ್ವಾಸಪೂರಿತರಾಗಿಯೂ ರಾಜಭಕ್ತಿಯುತರಾಗಿಯೂ ಮಹಾಸ್ವಾಮಿಯವರಿಗೆ ಸುಸ್ವಾಗತವನ್ನು ಬಯಸುತ್ತೇವೆ ಮಹಾಸ್ವಾಮಿಯವರು ಕಟ್ಟಕಡೆ ಮೂಲೆಯಲ್ಲಿರುವಂಥಾ ನಮ್ಮ ತಾಲ್ಲೂಕಿನ ಮೇಲೆ ಕರುಣಾಪೂರಿತರಾಗಿ ದಯಮಾಡಿಸಿದ್ದರಿಂದ ನಮ್ಮಗಳಿಗೆಲ್ಲಾ ಅಪಾರ ಸಂತೋಷ ಉಂಟಾಗಿರುವುದು ತಾವು ಈ ಪ್ರಾಂತ್ಯ ಚಿತ್ತೈಸಿರುವುದು ತಮ್ಮಲ್ಲಿರುವ ಪ್ರಜಾ ಪ್ರೀತಿಯನ್ನು ಪ್ರಕಾಶಪಡಿಸುತ್ತದೆ ಎಂತಲೂ ನಮ್ಮ ಭಾಗ್ಯೋದಯವಾಗಿ ಸೂಚಿಸುವ ನೆಲಸುವುದಕ್ಕೆ ಚಿನ್ಹೆಯಾಗಿದೆ ಎಂತಲೂ ಚಿನ್ನೈಸುತ್ತೇವೆ

ನಮ್ಮ ತಾಲ್ಲೂಕಿನಲ್ಲಿ ನೀರಾವರಿ ಕಾಮಗಾರಿಗಳನ್ನು ಮಾಡಿಸುವುದಕ್ಕೆ ಹಲವು ಮಾರ್ಗಗಳಿರುತ್ತವೆ. ಆದಾಗ್ಯೂ ತರೀ ಫಸಲನ್ನು ನಾವುಗಳು ಈ ದಿನ ಅನುಭವಿಸುವುದು ನಮ್ಮ ಭಾಗಕ್ಕೆ ಬರಲಿಲ್ಲವೆ. ಬಹಳ ಬೆಂಗಾಡಾಗಿರತಕ್ಕ ತಾಲ್ಲೂಕುಗಳು ಪ್ರಜೆಗಳುಕೂಡ ತರೀ ಫಸಲು ಮಾಡಿಕೊಳ್ಳುವದಕ್ಕೆ ಅವರಿಗೆ ಮಹಾಸ್ವಾಮಿಯವರ ಗವರ್ನಮೆಂಟಿನವರು ಅನೇಕ ಸೌಖ್ಯಗಳನ್ನು ಕಲ್ಪಿಸಿಕೊಟ್ಟದ್ದಾರೆ ನಮ್ಮ ತಾಲ್ಲೂಕಿನಲ್ಲಿ ನೀರು ನಾಲೆಗಳ್ಯಾವೂ ಇಲ್ಲದಿರೋಣದರಿಂದ ವರ್ಷಕಾಲವನ್ನೇ ನಾವೆಲ್ಲಾ ಎದುರು ನೋಡುತ್ತಾ, ಖುಷ್ಕಿ ಫಸಲಿನಲ್ಲೇ ತೃಪ್ತರಾಗಬೇಕಾಗಿದೆ ಆದಕಾರಣ ಮಹಾಸ್ವಾಮಿಯವರು ಇಲ್ಲಿಗೆ ದಯಮಾಡಿದುದರ ಜ್ಞಾಪಕಾರ್ಥವಾಗಿ ದಾಪಕರು ಮತ್ತು ಅಲಹಳ್ಳಿ ನೀರಾವರಿ ಕಾಮಗಾರಿಗಳನ್ನು ಮಾಡಿಸುವದಕ್ಕೆ ಹಣ ಸ್ಯಾಂಕ್ಷನ್ ಮಾಡಿ ಹುಕುಂ ದಯಪಾಲಿಸಬೇಕೆಂತಲೂ ಆ ಮೂಲಕ ನಮ್ಮ ತಾಲ್ಲೂಕಿನ ಪ್ರಜೆಗಳಿಗೆ ವ್ಯವಸಾಯಕ್ಕೂ ಜೀವನೋಪಾಯಕ್ಕೂ ಮಾಡಿಕೊಟ್ಟು ಆಚಂದ್ರಾರ್ಕವಾದ ಕೀರ್ತಿಯುತರಾಗಬೇಕೆಂತಲೂ ಅತ್ಯಂತ ವಿನಯದೊಡನೆ ಪ್ರಾರ್ಥಿಸುತ್ತೇವೆ ಮಹಾಸ್ವಾಮಿ

ಮಹಾಸ್ವಾಮಿಯವರು ನಮ್ಮ ಇನ್ನೊಂದು ಪ್ರಾರ್ಥನೆಯನ್ನು ನೆರವೇರಿಸಿಕೊಡಬೇಕಾಗಿರುವದು ನಮ್ಮ ತಾಲ್ಲೂಕಿನ ಸರಕು ಬೇರೆ ಊರಿಗಲ್ಲದೆ ಮತ್ತೆಲ್ಲಿಗೂ ಸುಲಭವಾಗಿ ಸಾಗಿಹೋಗಿ ಬಿಕರಿಯಾಗುವುದಕ್ಕೆ ಮಾರ್ಗವಿಲ್ಲ. ಬೆಂಗಳೂರಿಗೆ ಹೋಗಬೇಕಾದರೆ ಅರ್ಕಾವತಿ ಹೊಳೆಯು ದೊಡ್ಡ ಅಡಚಣೆಯಾಗಿರುತ್ತದೆ ಇದನ್ನು ದಾಟಿ ಹೋಗಲು ಸೇತುವೆ ಇರುವುದಿಲ್ಲ ಮಹಾಸ್ವಾಮಿಯವರು ಈ ನದಿಗೆ ಸೇತುವೆ ಕಟ್ಟಿಸಿಕೊಟ್ಟು ಈ ಪ್ರಾಂತ್ಯದ ರೈತವರ್ಗದ ಪ್ರಜೆಗಳನ್ನು ಕಾಪಾಡಬೇಕೆಂದು ಬೇಡುತ್ತೇವೆ

ಸರ್ವಶಕ್ತನಾದ ಶ್ರೀ ಭಗವಂತನು ಮಹಾಸ್ವಾಮಿಯವರಿಗೂ ರಾಜವರ್ಗದವರಿಗೂ ದೀರ್ಘಾಯುರಾರೋಗ್ಯಾದಿಗಳನ್ನು ದಯಪಾಲಿಸಿ ವಂಶೋದ್ಧಾರ ಮಾಡಲೆಂದು ಭಕ್ತಿ ಪೂರ್ವಕವಾಗಿ ಪ್ರಾರ್ಥಿಸುತ್ತೇವೆ.

ಇಂಡಿಯಾ ದೇಶದ ವೃತ್ತಾಂತಗಳು.

ವೈಸ್‍ರಾಯಿ ಲಾರ್ಡ್ ಮಿಂಟೋರವರ ಎರಡನೇ ಕುಮಾರ್ತೆಯನ್ನು ಲಾರ್ಡ್ ಕ್ರೋಮರ್ ಯವರ ಜ್ಯೇಷ್ಠ ಪುತ್ರನಿಗೆ ಕೊಟ್ಟು ವಿವಾಹ ಮಾಡುವಂತೆ ಏರ್ಪಾಡಾಗಿದೆ.

❦❦❦

ಮಕ್ಕಾ ಮೆಡೀನಾ ಎಂಬ ಪುಣ್ಯಸ್ಥಳಗಳಿಗೆ ಯಾತ್ರೆ ಹೋಗಬೇಕೆಂಬ ಹಿಂದುಸ್ಥಾನದ ಮಹಮ್ಮದೀಯರೆಲ್ಲಾ ಬೊಂಬಾಯಿ ಪಟ್ಟಣದಲ್ಲೇ ಹಡಗು ಹತ್ತಬೇಕೆಂದು ಸರ್ಕಾರದವರು ವಿಧಿಸಿದ್ದಾರೆ.

❦❦❦

ಬಳ್ಳಾರಿ ಜಿಲ್ಲೆಗೆ ಸೇರಿದ ಸಂಡೂರ್ ಜಹಗೀರಿಯಲ್ಲಿ ಮಾಂಗನೀಸ್ ಎಂಬ ಲೋಹ ತೆಗೆಯುತ್ತಾರೆ. ಮದರಾಸ್ ಸರ್ಕಾರದವರು ಪ್ರತಿ ಒಂದು ಟನ್ ಲೋಹದ ಮೇಲೂ ಆರಾಣೆ ರಾಜಾದಾಯ ಕೊಡಬೇಕೆಂದು ವಿಧಿಸಿದ್ದಾರೆ.

❦❦❦

ಕಳೆದ ವರುಷ ಇಂಡಿಯಾ ಗವರ್ನಮೆಂಟಿನವರು ಟಂಕಸಾಲೆಗಳಲ್ಲಿ ೨೫ ಕೋಟಿಯೂ ೪೦ ಲಕ್ಷ ರೂಪಾಯಿಗಳನ್ನು ಛಾಪಾ ಹಾಕಿದರು ಇದರಲ್ಲಿ ಪ್ರತಿ ರೂಪಾಯಿಗೂ ಸರ್ಕಾರಕ್ಕೆ ನಾಲ್ಕಾಣೆಯಂತೆ ಆದಾಯ ಉತ್ಪತ್ತಿಯಾಗಿರುತ್ತದೆ.

❦❦❦

ಲಕ್ನೋ ಪಟ್ಟಣದ ರೈಲ್ ಸ್ಟೇಷನ್ನಿನಲ್ಲಿ ಒಂದು ಸಾಮಾನು ಗಾಡಿಯು ಇನ್ನೊಂದು ಗಾಡಿಗೆ ಹೋಗಿ ಬಡಿಯಿತು ಆ ಗಾಡಿಯ ಪಕ್ಕದಲ್ಲಿ ಕೆಲಸ ಮಾಡುತ್ತಿದ್ದ ಕೂಲಿಗಳ ಪೈಕಿ ಅನೇಕ ಜನರಿಗೆ ಗಾಯಗಳಾದವು ಅವರಲ್ಲಿ ನಾಲ್ಕು ಮಂದಿ ಸತ್ತು ಹೋದರು

❦❦❦

ಬಿಕಾನೀರ್ ಸಂಸ್ಥಾನದ ಮಹಾರಾಜರವರು ಪರಿವಾರ ಸಹಿತ ಜೂಲೈ ೨೧ ರಲ್ಲಿ ವಿಲಾಯತಿಯಿಂದ ಪ್ರಯಾಣ ಮಾಡಿದರು. ಅವರು ಯೂರೋಪ್ ಖಂಡದ ಕೆಲವು ರಾಜ್ಯಗಳಲ್ಲಿ ಸಂಚಾರ ಮಾಡಿಕೊಂಡು, ಅಕ್ಟೋಬರ್ ತಿಂಗಳಲ್ಲಿ ಹಿಂದುಸ್ಥಾನಕ್ಕೆ ಬರುವವರಾಗಿದ್ದಾರೆ.

❦❦❦

ಬೊಂಬಾಯಿ ಪಟ್ಟಣದಲ್ಲಿ ಇದುವರೆಗೆ ೯೩ ಅಂಗುಲ ಮಳೆ ಸುರಿಯಿತು ಆದರೂ ಮಳೆ ಸುರಿಯುವುದು ನಿಲ್ಲಲಿಲ್ಲ. ಇಷ್ಟು ಮಳೆ ಆದದ್ದು ಹಿಂದೆ ಯಾವ ವರುಷದಲ್ಲೂ ಕಾಣಲಿಲ್ಲವೆಂದು ಹೇಳುತ್ತಾರೆ ಪೂನಾ ಪಟ್ಟಣದಲ್ಲೂ ಅನೇಕ ದಿನಗಳಿಂದ ಹಿಡಿದ ಮಳೆ ಬಿಡದೆ ಸುರಿಯುತ್ತಿರುವುದು.

❦❦❦

ಇಬ್ಬರು ಬಂಗಾಳಾ ಪೋಲೀಸಿನವರು ಕಳೆದ ವಾರ ರೈಲಿನಲ್ಲಿ ೫೦,೭೦೦ ರೂಪಾಯನ್ನು ಟ್ರೆಷರಿಸಿಂಗೆ ಸಾಗಿಸಿಕೊಂಡು ಹೋಗುತ್ತಿರುವಾಗ ಕಳ್ಳರು ಆ ಹಣವನ್ನೆಲ್ಲಾ ಹ್ಯಾಗೋ ಎತ್ತಿ ಹಾಕಿಕೊಂಡು ಹೋದರೆಂತಲೂ ಇದುವರೆಗೂ ಅವರ ಸುಳಿವೇ ತಿಳಿಯಲಿಲ್ಲವೆಂತಲೂ ತಂತೀ ವರ್ತಮಾನ ಬಂದಿದೆ.

❦❦❦

ಗುಜರಾತಿ ಭಾಷೆಯ ಆರನೇ ರೀಡರ್ ಎಂಬ ಸ್ಕೂಲ್ ಪುಸ್ತಕದಲ್ಲಿ ಮಹಮ್ಮದ್ ಮತ್ತು ಇಸ್ಲಾಂ ಎಂಬ ವಿಷಯವನ್ನು ಕುರಿತು ಬರೆದಿರುವ ಪಾಠವು ಮುಸಲ್ಮಾನ ಮತಸ್ಥರಿಗೆ ವಿರೋಧವಾಗಿರುತ್ತದೆಂದು ತಿಳಿದುಬಂದದ್ದರಿಂದ ಬೊಂಬಾಯಿ ಗವರ್ನಮೆಂಟಿನವರು ಆ ಪಾಠವನ್ನೇ ವಜಾ ಮಾಡಿಸಿ ಬೇರೊಂದನ್ನು ಸೇರಿಸುವಂತೆ ಹುಕುಂ ಕೊಟ್ಟಿದ್ದಾರೆ

❦❦❦

ಉತ್ತರ ದೇಶಕ್ಕೆ ಸೇರಿದ ಸಂಯುಕ್ತ ಆಧಿಪತ್ಯಗಳಲ್ಲಿ ೧೯೦೬ನೇ ಇಸವಿಯಲ್ಲಿ ಇಪ್ಪತ್ತೊಂದು ಹೊಸ ಕಾರ್ಖಾನೆಗಳು ಸ್ಥಾಪನೆಯಾಗಿ ನಡೆಯುತ್ತವೆ ಎಂತಲೂ, ಈಗ ಆ ಆಧಿಪತ್ಯದಲ್ಲೆಲ್ಲಾ ಒಟ್ಟು ೧೫೫ ಕಾರ್ಖಾನೆಗಳಿರುತ್ತವೆ ಎಂತಲೂ, ಅವುಗಳಲ್ಲಿ ೬೭,೮೦೯ ಜನ ಜನರು ಕೂಲಿ ಸಂಪಾದಿಸುತ್ತಿದ್ದಾರೆಂತಲೂ ತಿಳಿದುಬಂದಿದೆ.

❦❦❦

ದಿವಾಳಿಯಾದ ಮದರಾಸ್ ಆರ್ಬತ್ನಾಟ್ ಕಂಪನಿಯವರ ಪಟುಲ್ಲೊದ್ದ ಕಸಬುಗಳ ಕಂಪನಿ ಷೇರುಗಳನ್ನು ಕಳೆದ ವಾರ ಮದರಾಸ್ ಪಟ್ಟಣದಲ್ಲಿ ಸರ್ಕಾರದವರು ಹರಾಜು ಹಾಕಿದರು ಅವನ್ನು ನೀಲಗಿರಿಯ ಮಿ॥ ಫರ್ಗಿಸ್ ಮಾಕ್‍ಲಾಡ್ ಸೇಟರೂ, ಬೆಂಗಳೂರಿನ ಮಿ॥ ಸಾಬಿ ಇಸ್ಮೈಲ್ ಸೇಟರೂ, ಏಕವಾಗಿ ಎಂತು ಬೀಟ್ ಮಾಡಿ, ೩,೮೫,೦೦೦ ರೂಪಾಯಿಗೆ ಕೊಂಡುಕೊಂಡಿದ್ದಾರೆ

❦❦❦

ಬರ್ಮಾ ಆಧಿಪತ್ಯಕ್ಕೆ ಸೇರಿದ ರಂಗೂನ್ ಪಟ್ಟಣದ ಮುನ್ಸಿಪಾಲಿಟಿಯವರು ಅಲ್ಲಿರುವ ಕೂಲಿಯವರಿಂದ ಪ್ರತಿ ವರುಷವೂ ಎರಡು ರೂಪಾಯಿನಂತೆ ತಲೆತೆರಿಗೆ ಹಾಕಿ ವಸೂಲ್ಮಾಡಬೇಕೆಂದು ಚರ್ಚೆ ಮಾಡಿದರು ಈ ಕಂದಾಯವನ್ನು ಹಾಕಿದರೆ ಲಂಚ ವಸೂಲ್ಮಾಡುವುದಕ್ಕೂ ಇತರ ಕಾರಣಗಳಿಂದ ಜನರು ಬಾಧೆಪಡುವಂತೆ ತಡೆಯಾಗುವುದಕ್ಕೂ ಅವಕಾಶವಾಗುತ್ತೆಂದು ಮೆಂಬರುಗಳು ಹೇಳಿ, ಆ ಸಲಹೆಯನ್ನೇ ವಜಾ ಮಾಡಿದರು

❦❦❦

ಟುಟಿಕೋರಿನ್ (ತಟ್ಟುಗುಡಿ) ಎಂಬ ಪಟ್ಟಣದಲ್ಲಿರುವ ಸ್ವದೇಶೀ ಜಹಜಿನ ಕಂಪನಿಯ ಲಾವ್ರೋ ಎಂಬ ಜಹಜು ಸಿಲೋನ್ (ಲಂಕಾ) ದ್ವೀಪಕ್ಕೆ ಸೇರಿದ ಕೊಲಂಬೋ ಪಟ್ಟಣದ ರೇವಿನಲ್ಲಿದ್ದ ಬ್ರಿಟಿಷ್ ಇಂಡಿಯಾ ಸ್ಟೀಂ ನೇವಿಗೇಷನ್ ಕಂಪನಿಯ ಸ್ಕುಮಾರ್ ಎಂಬ ಇನ್ನೊಂದು ಕಂಪನಿ ಜಹಜಿಗೆ ತಗಲಿ ಅದಕ್ಕೆ ನಷ್ಟಪಡಿಸಿತು ಇದಕ್ಕಾಗಿ ಆ ಜಹಜಿನ ಮುಖ್ಯಸ್ಥನು ಸ್ವದೇಶೀ ಕಂಪನಿಯ ಮೇಲೆ ೪೯,೩೦೦ ರೂಪಾಯಿ ಡ್ಯಾಮೇಜಿಗೆ ದಾವಾ ತಂದಿರುತ್ತಾನೆ ಸ್ವದೇಶೀ ಕಂಪನಿಯವರು ೩೦,೦೦೦ ರೂಪಾಯಿನ ಜಾಮೀನು ಕೊಟ್ಟು, ಮೊಕದ್ದಮೆ ನಡಿಸುತ್ತಿದ್ದಾರೆ

❦❦❦

ಕಲ್ಕತ್ತೆಯ ಹತ್ತಿರ ಫ್ರೆಂಚರಿಗೆ ಸೇರಿದ ಚಂದ್ರನಗರದಲ್ಲಿ ಸುಮಾರು ೩೦೦ ಮಂದಿ ಸ್ಕೂಲು ಹುಡುಗರು ಬಂಗಾಳಾ ವಿಭಜನೆಯಾದ ಎರಡನೇ ವರ್ಷದ ದಿನವನ್ನು ಅಂದರೆ ಕಳೆದ ೭ ನೆ ತಾರೀಖಿನ ದಿನವನ್ನು ಉತ್ಸಾಹದಿಗಳಿಂದ ಆಚರಿಸಿದರು. ಹುಡುಗರು ಹೀಗೆ ರಾಜಕೀಯ ವಿಚಾರಗಳಲ್ಲಿ ಪ್ರವರ್ತಿಸಿದ್ದು ತುಂಬಾ ಅನುಚಿತವೆಂದು ಹೇಳಿ, ಆ ಸ್ಕೂಲಿನ ಹೆಡ್ ಮಾಸ್ಟರು ಅವರನ್ನು ಎರಡನೇ ದಿನ ಸ್ಕೂಲಿಗೆ ಸೇರಿಸಿಕೊಳ್ಳದೆ ಹೋದರು ಈಗ ಆ ೩೦೦ ಹುಡುಗರೂ ಅವಿವೇಕದಿಂದ ಮಾಡಿಕೊಂಡ ಕಾರ್ಯಕ್ಕೆ ವ್ಯಸನಪಡುತ್ತಿದ್ದಾರೆ.

❦❦❦

ಕಳೆದ ೧೯೦೬ ನೆ ಇಸವಿಯಲ್ಲಿ ಬಂಗಾಳಾ ಆಧಿಪತ್ಯದೊಳಗೆ ೨೮೫ ಕೊಲೆಗಳು ನಡೆದವು ಈ ಪೈಕಿ ೧೨೮ ಮೊಕದ್ದಮೆಗಳಲ್ಲಿ ಪೋಲೀಸಿನವರು ಅಪರಾಧಿಗಳನ್ನು ಪತ್ತೆಮಾಡಲಾರದೆ ಹೋದರು ಪತ್ತೆ ತರದೂದು ನಡಿಸಿ ಅಪರಾಧಿಗಳೆಂದು ಗೊತ್ತು ಮಾಡಿ ಮೊಕದ್ದಮೆ ಆದ ೧೫೬ ಮೊಕದ್ದಮೆಗಳಲ್ಲಿ ೭೩ ಮೊಕದ್ದಮೆಗಳು ಮಾತ್ರ ರುಜುವಾಗಿ ಶಿಕ್ಷೆಯಾಗಿರುತ್ತವೆ. ಉಳಿದವುಗಳೆಲ್ಲಾ ರುಜುವಾತಾಗದೆ ವಜಾ ಆದವು ಇದನ್ನು ನೋಡಲಾಗಿ ಪೋಲೀಸಿನವರ ಪತ್ತೆ ತರದೂದು ತುಂಬಾ ಅತೃಪ್ತಿಕರವಾದದ್ದಾಗಿದೆ ಎಂದು ಲೆಫ್ಟಿನೆಂಟ್ ಗವರ್ನರವರು ಪೋಲೀಸ್ ರಿಪೋರ್ಟಿನ ಮೇಲೆ ಹುಕುಂ ಮಾಡಿದ್ದಾರೆ

❦❦❦

ನೀಲಗಿರಿ ರೈಲ್ವೆಯಲ್ಲಿ ಮೇಟುಪಾಳ್ಯಂ ಸ್ಟೇಷನ್ ಬಳಿ ೧೨ ವರುಷದ ಒಬ್ಬ ಹುಡುಗನು ರೈಲ್ ಕಂಬಿಗೆ ಕೀಲನ್ನು ಇನ್ನೊಂದು ಕಡೆಗೆ ತಿರುಗಿಸಿಹಾಕಿ, ಗಾಡಿಗಳಿಗೆ ಅಪಾಯವಾಗುವಂತೆ ಮಾಡಿದ್ದನು ಆದರೆ ರೈಲು ಬರುವುದಕ್ಕೆ ಮೊದಲೇ ಪಾಯಿಂಟ್ಸ್‍ಮನ್ ಎಂಬ ಆಳು ಅದನ್ನು ನೋಡಿ ಸರಿಮಾಡಿ, ಆ ಹುಡುಗನನ್ನು ಹಿಡಿದುಕೊಂಡನು ದರ್ಯಾಫ್ತು ಆದಾಗ ಆ ಹುಡುಗನು—ತಿರುಪನ್ನು ತಿರುಗಿಸಿಟ್ಟರೆ ಏನಾಗುವುದೋ ನೋಡೋಣವೆಂದು ತಿರುಗಿಸಿದೆನಲ್ಲದೆ ಮತ್ತೆ ಬೇರೆ ಇಲ್ಲವೆಂದು ವಾಜ್ಮೂಲ ಕೊಟ್ಟನು ಮ್ಯಾಜಿಸ್ಟ್ರೇಟರು ಅವನಿಗೆ ಸರಿಯಾಗಿ ಬುದ್ಧಿ ಹೇಳಿ ಒಂದು ವಾರದ ಸಜಾ ವಿಧಿಸಿದರು.

❦❦❦

ಬಂಗಾಳಾ ಆಧಿಪತ್ಯದಲ್ಲಿ ಕಾಯಸ್ಥರೆಂಬ ಜನರೊಳಗೆ ಮದ್ಯಪಾನ ಮಾಡುವುದು ಬಹಳ ಸಾಮಾನ್ಯವಾಗಿತ್ತಲ್ಲದೆ ದಿನೇ ದಿನೇ ಈ ದುರಭ್ಯಾಸವು ಹೆಚ್ಚುತ್ತಾ ಇತ್ತು ಇದನ್ನು ನಿಲ್ಲಿಸಬೇಕೆಂದು ಕೆಲವು ದೊಡ್ಡ ಮನುಷ್ಯರು ಒಂದು ಸಭೆಯನ್ನು ಮಾಡಿಕೊಂಡು, ಆ ಜನರಿಗೆ ವಿವೇಕ ಹೇಳಲಾರಂಭಿಸಿದರು ಈಗೀಗ ಹಬ್ಬ ಹರಿದಿನಗಳಲ್ಲೂ ಶುಭ ಶೋಭನಾದಿಗಳಲ್ಲೂ ಮದ್ಯಪಾನ ಮಾಡುವುದು ಅಪರೂಪವಾಗುತ್ತಾ ಬಂದಿದೆ ಮದ್ಯಪಾನ ಮಾಡತಕ್ಕವರನ್ನು ಜನರು ಜಾತಿಯಿಂದ ಹೊರಗ ಹಾಕಿ, ನಾನಾ ಅವಮಾನಗಳಿಗೆ ಗುರಿಮಾಡುತ್ತಾರೆ ಇದರಿಂದ ಮದ್ಯಪಾನವು ಬಹಳ ಮಟ್ಟಿಗೂ ನಿಂತುಹೋಗಿದೆ ಎಂದು ಕೇಳಿ ಸಂತೋಷಪಡಬೇಕಾಗಿದೆ

❦❦❦

ಕಾಕಿನಾಡಾ ಪಟ್ಟಣದಲ್ಲಿ ಮದರಾಸ್ ಸರ್ಕಾರದವರು ಶಿಕ್ಷಾರ್ಥವಾದ ಪೋಲೀಸ್ ಶಿಬ್ಬಂದಿಯನ್ನು ನೇಮಕ ಮಾಡಿರುವ ವಿಚಾರದಲ್ಲಿ ಮಿ॥ ಒಗ್ರಾಡಿ ಎಂಬ ಪಾರ್ಲಿಮೆಂಟ್ ಮೆಂಬರು ಸ್ಟೇಟ್ ಸೆಕ್ರಟರಿ ಮಿ॥ ಮಾರ್ಲೆಯವರನ್ನು ಪ್ರಶ್ನೆಮಾಡಿದ್ದಕ್ಕೆ ಅವರು ಪ್ರತ್ಯುತ್ತರವಾಗಿ ಆ ಪಟ್ಟಣದಲ್ಲಿ ಗಲಭೆ ನಡೆಯುತ್ತಾದ್ದರಿಂದ ಹೆಚ್ಚು ಪೋಲೀಸನ್ನು ನೇಮಿಸುವುದು ಅವಶ್ಯವೆಂದು ಮದರಾಸ್ ಗವರ್ನಮೆಂಟಿನವರಿಗೆ ತೋರಿ ಬಂತು ಕಾನೂನು ಪ್ರಕಾರ ಆ ಶಿಬ್ಬಂದಿಯ ಖರ್ಚನ್ನು ಅಲ್ಲಿನ ಪ್ರಜೆಗಳೇ ವಹಿಸಿಕೊಳ್ಳತಕ್ಕದ್ದಾಗಿದೆ ಸದ್ಯದಲ್ಲಿ ಈ ವಿಷಯಕ್ಕೆ ನಾನು ಪ್ರವರ್ತಿಸುವುದು ಸರಿಯಾದದ್ದಲ್ಲವೆಂದು ಕಂಡುಬರುವುದು ಎಂಬೀ ಅರ್ಥವನ್ನು ತಿಳಿಸಿದ್ದಾರೆ

❦❦❦

ಕಳೆದ ೧೮೫೭ ನೆ ಇಸವಿಯಲ್ಲಿ ದೊಡ್ಡ ದಂಗೆ ನಡೆಯಿತಷ್ಟೆ ಈಗಲೀ ಐವತ್ತನೇ ವರುಷದಲ್ಲಿ ಅಂಥಾ ದಂಗೆಯೊಂದು ನಡೆಯುತ್ತದಾಗಿದೆ ಎಂದು ಡೆಹಲಿ ಪಟ್ಟಣದಲ್ಲಿ ಒಬ್ಬ ದೇಶೀಯ ಕ್ರೈಸ್ತನು ವರ್ತಮಾನ ಹುಟ್ಟಿಸಿದನು ಅಲ್ಲಿರುವ ಯೂರೋಪ್ಯನ್ ಪ್ರಜೆಗಳು ಈ ಸುದ್ದಿಯನ್ನು ಕೇಳಿ ಗಾಬರಿ ಬಿದ್ದು ಎಲ್ಲಾ ಸೇರಿ ಆಯುಧಪಾಣಿಗಳಾಗಿ ಲತ್ಲೋಕ್ಯಾಸಲ್ ಎಂಬ ದೊಡ್ಡ ಬಂಗಲೆಯೊಳಗೆ ಕಾದುಕೊಂಡು ಬೆಳೆಸುತ್ತಿದ್ದರು. ಆದರೆ ಆ ವರ್ತಮಾನವು ಸುಳ್ಳಾಯಿತು ದಂಗೆಯಾಗಲಿ ಗಲಭೆಯಾಗಲಿ ನಡೆಯಲಿಲ್ಲ ಎಲ್ಲರೂ ತಮ್ಮ ತಮ್ಮ ಮನೆಗಳಿಗೆ ಓಡಿ ಬಿಟ್ಟರು ಈಗ ಆ ವರ್ತಮಾನವನ್ನು ಹುಟ್ಟಿಸಿದ ಆ ದೇಶೀಯ ಕ್ರೈಸ್ತನನ್ನು ಹಿಡಿದು ದರ್ಯಾಫ್ತು ಮಾಡುತ್ತಿದ್ದಾರೆ.

❦❦❦

ಕೊಯಮುತ್ತೂರಿನಲ್ಲಿ ನೂಲುವ ಮತ್ತು ನೇಯುವ ಒಂದು ಸ್ವದೇಶೀ ಕಾರ್ಖಾನೆ ಏರ್ಪಟ್ಟಾಗಿದೆ ಈ ಕಾರ್ಖಾನೆಯಲ್ಲಿ ಕಳೆದ ವರುಷ ಖರ್ಚು ಕಳೆದು ೨೫,೭೯೦ ರೂಪಾಯಿ ಲಾಭ ಉತ್ಪತ್ತಿ ಆಯಿತು ಆ ವರುಷದ ಆದಾಯದಲ್ಲಿ ಷೇರುದಾರರಿಗೆ ಶೇಕಡಾ ೨೦ ರಂತೆ ಬಡ್ಡಿ ಹಂಚಿಕೊಟ್ಟಿರುತ್ತಾರೆ ಈ ಕಾರ್ಖಾನೆಯ ಮೂಲಧನ ಆರು ಲಕ್ಷ ರೂಪಾಯಿ ಆಗಿದ್ದಾಗ್ಯೂ ಇಷ್ಟು ಅಭಿವೃದ್ಧಿಗೆ ಬಂದಿರುವುದು ಸಂತೋಷಕರವಾಗಿದೆ ಈಗ ಈ ಕಾರ್ಖಾನೆಯನ್ನು ಇನ್ನೂ ವಿಸ್ತಾರ ಮಾಡಿ, ಹೆಚ್ಚು ಕೆಲಸಗಳು ನಡೆಯುವಂತೆ ಮಾಡಬೇಕೆಂದು ಕಂಪನಿಯವರು ತೀರ್ಮಾನಿಸಿರುತ್ತಾರೆ ಇಂಥಾ ಕಾರ್ಖಾನೆಗಳು ಈ ರಾಜ್ಯದಲ್ಲಿ ಹೆಚ್ಚುವಷ್ಟು ದೇಶೋನ್ನತಿಗೆ ಸಹಾಯವಾಗುವುದು ದೇಶದಲ್ಲೆಲ್ಲರೂ ಪ್ರಯತ್ನಪರರಾಗಿ ಕಲಬುರ್ಗಿ ಕಾರ್ಖಾನೆಗಳನ್ನು ಇಟ್ಟು ನಡಿಸುತ್ತಾ ಬರಬೇಕೆಂದು ಹಾರೈಸುತ್ತೇವೆ

❦❦❦

ಇಂಡಿಯಾ ಸ್ಟೇಟ್ ಸೆಕ್ರೆಟರಿಯವರ ಮಂತ್ರಾಲೋಚನಾ ಸಭೆಗೆ ಮಿ॥ ರಮೇಶ ಚಂದ್ರ ದತ್ತರವರನ್ನು ಒಬ್ಬ ಮೆಂಬರಾಗಿ ಸ್ಟೇಟ್ ಸೆಕ್ರೆಟರಿಯವರು ನೇಮಕ ಮಾಡುವ ಸಂಭವವಿದೆ ಎಂದು ತಂತೀ ವರ್ತಮಾನ ಬಂದಿದೆ ಮಿ॥ ದತ್ತರವರು ಹಿಂದುಸ್ಥಾನದ ಸಿವಿಲ್ ಸರ್ವಿಸ್ ಪರೀಕ್ಷೆಯನ್ನು ಪ್ಯಾಸ್ ಮಾಡಿ, ಒರಿಸ್ಸಾ ಡಿಸ್ಟ್ರಿಕ್ಟಿನಲ್ಲಿ ಬಹುಕಾಲ ಕಮೀಷನರಾಗಿದ್ದರು ಸರ್ವಿಸ್ಸನ್ನು ಬಿಟ್ಟ ಬಳಿಕ ಬರೋಡಾ ಸಂಸ್ಥಾನದಲ್ಲಿ ರೆವಿನ್ಯೂ ಕಮೀಷನರಾಗಿ ಕೆಲಸ ಮಾಡಿರುತ್ತಾರೆ. ಮತ್ತು ಹಿಂದುಸ್ಥಾನದ ನ್ಯಾಷನಲ್ ಕಾಂಗ್ರೆಸ್ ಎಂಬ ಸಾರ್ವಜನಿಕ ಸಭೆಯಲ್ಲಿ ಪ್ರಮುಖರೆನಿಸಿಕೊಂಡಿದ್ದರು ಇವರಿಗೆ ಪ್ರಜಾಪಾಲನಾ ವಿಷಯವು ಬಹಳ ಚನ್ನಾಗಿ ಅನುಭವಕ್ಕೆ ಬಂದಿರುವುದರಿಂದ ಇಂಥವರನ್ನು ಸ್ಟೇಟ್ ಸೆಕ್ರೆಟರಿಯವರು ತಮ್ಮ ಮಂತ್ರಾಲೋಚನಾ ಮಂದಿರದಲ್ಲಿ ಮೆಂಬರಾಗಿ ನೇಮಕಮಾಡಿಕೊಳ್ಳೋಣದರಿಂದ ಹಿಂದುಸ್ಥಾನಕ್ಕೆ ಅನುಕೂಲವಾದೀತೆನ್ನುವುದಕ್ಕೆ ಸಂಶಯವಿಲ್ಲ

❦❦❦

ತಿರುವಾಂಕೂರು (ಅನಂತಶಯನ) ಸಂಸ್ಥಾನದ ದಿವಾನ್ ಮಿ॥ ರಾಜಗೋಪಾಲಾಚಾರ್ರು ಇದೇ ತಾ. ೧೬ ರಲ್ಲಿ ಆ ಕೆಲಸಕ್ಕೆ ರಾಜೀನಾಮೆ ಕೊಟ್ಟುಹೋಗಿದ್ದಾರೆ. ಇವರು ದಿವಾನಗಿರಿಯನ್ನು ಪಡೆದು ಸುಮಾರು ಒಂದು ವರುಷವಾಗಿದ್ದೀತು. ಈಗ ಅವರ ಸ್ಥಾನಕ್ಕೆ ದಿವಾನ್ ಬಹದೂರ್ ಮಿ॥ ಪಿ ರಾಜಗೋಪಾಲಾಚಾರ್ರು ನೇಮಕವಾಗುವ ಸಂಭವವಿದೆ ಇವರು ಈಗ ಮದರಾಸ್ ಗವರ್ನಮೆಂಟಿನಲ್ಲಿ ಪರಸ್ಪರ ಸಹಾಯಕ ಸಂಘಗಳ ರೆಜಿಸ್ಟ್ರಾರ್ ಕೆಲಸ ನೋಡುತ್ತಿದ್ದಾರೆ. ಇದಕ್ಕೆ ಮೊದಲು ಇವರು ಐದು ವರುಷ ಕಾಲ ಕೊಚ್ಚಿ ಸಂಸ್ಥಾನದಲ್ಲಿ ದಿವಾನಗಿರಿ ಮಾಡಿ ಒಳ್ಳೇ ಹೆಸರು ಪಡೆದಿರುವರು ಇವರಿಗೇ ದಿವಾನಗಿರಿ ಆಗಬೇಕೆಂದೂ ಅವರಿಂದ ಅನೇಕ ಅಭಿವೃದ್ಧಿಕಾರ್ಯಗಳು ನಡೆಯುವವೆಂದೂ ಅನಂತಶಯನದ ಪ್ರಜೆಗಳು ಅಭಿಪ್ರಾಯಪಡುತ್ತಿದ್ದಾರೆ ಮಿ॥ ರಾಜಗೋಪಾಲಾಚಾರ್ರು ಕಳೆದ ವಾರ ಮದರಾಸಿನಿಂದ ನೀಲಗಿರಿಗೆ ಹೋಗಿ ಗವರ್ನರವರ ಭೇಟಿ ಮಾಡಿಕೊಂಡು ಬಂದರು ಇವರು ಬಹುಶಃ ಸೆಪ್ಟೆಂಬರ್ ತಿಂಗಳ ಎರಡನೇ ವಾರದಲ್ಲಿ ಅನಂತಶಯನಕ್ಕೆ ಹೋಗಿ ದಿವಾನಗಿರಿಯ ಭಾರವನ್ನು ವಹಿಸಿಕೊಳ್ಳಬಹುದು

❦❦❦

ಸಿಗರೆಟ್ ಎಂಬ ಹೊಗೇ ಬತ್ತಿಯನ್ನು ಸೇದುವ ದುರಭ್ಯಾಸವು ಸ್ಕೂಲ್ ಹುಡುಗರಲ್ಲಿ ಬಹಳವಾಗಿ ಹೆಚ್ಚುತ್ತಿದೆ ಇದರಿಂದ ಬಾಲಕರ ದೇಹವು ಕೆಟ್ಟು ಕೆಟ್ಟ ರೋಗಗಳು ಪ್ರಾಪ್ತವಾಗುವುದಕ್ಕೂ ಅಕಾಲ ಮರಣಕ್ಕೂ ಕಾರಣವಾಗುತ್ತೆಂದು ಡಾಕ್ಟರುಗಳು ತಿಳಿಸಿರುತ್ತಾರೆ. ಆದಕಾರಣ ವಿದ್ಯಾರ್ಥಿಗಳಲ್ಲಿ ಹಬ್ಬುತ್ತಿರುವ ಈ ದುರಭ್ಯಾಸವನ್ನು ತಂದೆತಾಯಿಗಳೂ ಉಪಾಧ್ಯಾಯರೂ ಸಾಹಸಪಟ್ಟು ನಿಲ್ಲಿಸಬೇಕಾಗಿದೆ. ಈ ಭಾಗದಲ್ಲಿ ಉತ್ತರ ದೇಶಕ್ಕೆ ಸೇರಿದ ಸಂಯುಕ್ತ ಆಧಿಪತ್ಯಗಳ ವಿದ್ಯಾಭ್ಯಾಸದ ಇಲಾಖಾ ಡೈರೆಕ್ಟರವರು ಕೊಟ್ಟಿರುವ ಸರ್ಕಿಲರ್ ಹುಕುಮನ್ನು ನಮ್ಮ ಸಂಸ್ಥಾನದವರೂ ಆಚರಣೆಗೆ ತಂದರೆ ಎಷ್ಟೋ ಕ್ಷೇಮವಾದೀತು ಅವರು ತಿಳಿಸಿರುವುದೇನೆಂದರೆ—ಬಹಳ ಚಿಕ್ಕ ವಯಸ್ಸಿನ ಬಾಲಕರು ಈ ಸಿಗರೆಟ್ ಬೀಡಿ ಸೇದುವ ದುರಭ್ಯಾಸದಲ್ಲಿ ಬಿದ್ದು ಕೆಡುತ್ತಿದ್ದಾರೆಂದು ಕೇಳಿ ವ್ಯಸನಪಡ ಬೇಕಾಗಿದೆ. ಇದರಿಂದ ಅವರ ದೇಹ ಸ್ಥಿತಿಯೇ ಕೆಟ್ಟುಹೋಗುತ್ತದೆಂಬುವುದು ಖಂಡಿತ ಆದಕಾರಣ ಈ ಅಭ್ಯಾಸವನ್ನು ಅವರಿಂದ ಬಿಡಿಸ ಬೇಕು. ಸ್ಕೂಲ್ ಉಪಾಧ್ಯಾಯರು ಅಂಥಾ ಹುಡುಗರನ್ನು ಅವಶ್ಯ ಬಿದ್ದರೆ ಕಠಿಣತರವಾದ ಶಿಕ್ಷೆಗೆ ಗುರಿಮಾಡ ಬಹುದು ಹ್ಯಾಗೂ ಹುಡುಗರು ಯಾವ ಸಮಯದಲ್ಲಾಗಲಿ ಯಾವ ಸ್ಥಳದಲ್ಲಾಗಲಿ ಸಿಗರೆಟ್ ಸೇದದಂತೆ ಮಾಡಬೇಕು. ಹುಡುಗರಿಗೆ ಅಂಗಡಿಯವರು ಬೀಡಿ ಸಿಗರೆಟ್ ಚುಟ್ಟಾಗಳನ್ನು ಬಿಕರಿ ಮಾಡದಂತೆ ಉಪಾಧ್ಯಾಯರು ವರ್ತಕರಿಗೂ ಅಂಗಡಿಯವರಿಗೂ ಹೇಳಿ ಅದನ್ನು ತಡೆಯುವುದಕ್ಕೆ ತಮ್ಮ ಕೈಲಾದಷ್ಟು ಸಾಹಸ ಪಡಬೇಕು ಮತ್ತು ಸ್ಕೂಲುಗಳ ಆವರಣದಲ್ಲಿ ಯಾರೂ ಆ ಪದಾರ್ಥವನ್ನು ಇಟ್ಟು ಮಾರಲೇ ಕೂಡದೆಂದು ವಿಧಿಸತಕ್ಕದ್ದು

❦❦❦

ಕಮಲಾಕರಮ್ಮನೆಂಬೊಬ್ಬ ಹಿಂದೂ ಸ್ತ್ರೀಯು ಈಗತಾನೇ ಮದರಾಸ್ ಪಟ್ಟಣದಲ್ಲಿ ಡಾಕ್ಟರ್ ಪರೀಕ್ಷೆಯೊಳಗೆ ತೇರ್ಗಡೆ ಹೊಂದಿರುತ್ತಾಳೆ ಈಕೆ ೧೧ ವರುಷ ತುಂಬುವುದರೊಳಗೆ ಮರಾಟಿ ಭಾಷೆಯನ್ನು ಬಹಳ ಚನ್ನಾಗಿ ಕಲಿತುಕೊಂಡಳು ಅದುವರೆಗೆ ಆಕೆ ಎರಡು ವರುಷ ಮನೆಯಲ್ಲೇ ಇಂಗ್ಲಿಷ್ ಓದುತ್ತಿದ್ದು, ಸುಮಾರಾಗಿ ಓದಿ ಬರೆಯುವುದಕ್ಕೆ ಅಭ್ಯಾಸ ಮಾಡಿಕೊಂಡಿದ್ದಳು ಅವಳ ತಂದೆ ತಾಯಿಗಳು ಅವಳ ಅಭಿಲಾಷೆಯನ್ನೂ ಚಟುವಟಿಕೆಯನ್ನೂ ನೋಡಿ ಸಂತೋಷಪಟ್ಟು ಅವಳನ್ನು ಇಂಗ್ಲಿಷ್ ಕಲಿಯುವುದಕ್ಕಾಗಿ ಪೂನಾ ಪಟ್ಟಣದ ಒಂದು ಬಾಲಿಕಾ ವಿದ್ಯಾಶಾಲೆಗೆ ಹಾಕಿದರು ಈಕೆ ಬಹು ಮನೋಯೋಗವಾಗಿ ಓದಿ ಅದೇ ಸ್ಕೂಲಿನಲ್ಲಿ ಮೆಟ್ರಿಕ್ಯುಲೇಷನ್ ಪರೀಕ್ಷೆ ಕೊಟ್ಟಳು ಅಷ್ಟರೊಳಗೇ ಈಕೆಗೆ ವಿವಾಹವೂ ಆಗಿತ್ತು. ಪರೀಕ್ಷೆಯಲ್ಲಿ ತೇರ್ಗಡೆಹೊಂದಿದ ಕೆಲವು ಕಾಲದೊಳಗಾಗಿ ಅವಳಿಗೆ ಒಂದು ಮಗುವೂ ಆಯಿತು ಇದರಿಂದ ಆಕೆಗೆ ಸಂಸಾರ ತಾಪತ್ರಯವು ಹೆಚ್ಚಾದಾಗ್ಯೂ, ಆಕೆಯಲ್ಲಿ ವೈದ್ಯವನ್ನು ಕಲಿತುಕೊಳ್ಳಬೇಕೆಂಬ ಕುತೂಹಲವು ತುಂಬಾ ಇದ್ದುದ್ದರಿಂದ ಬೊಂಬಾಯಿನ ವೈದ್ಯ ವಿದ್ಯಾಶಾಲೆಗೆ ಸೇರಿ, ಅಷ್ಟರಲ್ಲೇ ಎನಗೆ ಎರಡನೆಯ ಮಗು ಹುಟ್ಟಿದಾಗ್ಯೂ ತನ್ನ ಉದ್ದೇಶವನ್ನು ಬಿಡದೆ, ಕೆಲವು ಕಾಲ ವೈದ್ಯ ಕಲಿಯುತ್ತಾ ಬಂದಳು ಆದರೆ ಅಲ್ಲಿನ ಹವಾ ಆಕೆಗೆ ಸರಿಬೀಳಲಿಲ್ಲ ಕಾಯಿಲೆ ಬಿದ್ದುಕೊಂಡಳು. ಆಗ ಡಾಕ್ಟರುಗಳು ಆಕೆಯನ್ನು ಇನ್ನೆಲ್ಲಿಗಾದರೂ ಹೋಗಿ ವಾಸ ಮಾಡುವಂತೆ ಹೇಳಿದರು. ಆಕೆ ತನ್ನಿಬ್ಬರು ಮಕ್ಕಳನ್ನೂ ಕಟ್ಟಿಕೊಂಡು ಮದರಾಸಿಗೆ ಬರಬೇಕಾಯಿತು ಕೆಲವು ದೊಡ್ಡ ಮನುಷ್ಯರು ಸಾಹಸಪಟ್ಟು ಆಕೆಯ ಗಂಡನನ್ನು ಮದರಾಸಿಗೆ ಕರೆಸಿಕೊಂಡು ಅಲ್ಲೇ ಒಂದು ನೌಕರಿ ಮಾಡಿಸಿದರು. ಆಕೆ ಮದರಾಸಿನ ವೈದ್ಯ ವಿದ್ಯಾಶಾಲೆಯಲ್ಲಿ ಒಂದು ವೇತನವನ್ನು ಪಡೆದು ವೈದ್ಯವನ್ನು ಕಲಿಯಲಾರಂಭಿಸಿದಳು ಆದರೆ ಎಫ್. ಎ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಹೊರತು ಅಲ್ಲಿ ಡಾಕ್ಟರ ಪರೀಕ್ಷಾ ತರಗತಿಗೆ ಸೇರಿಸುವುದಿಲ್ಲವೆಂದು ತಿಳಿಯಿತು ಆಗ ಕಮಲಾಕರಮ್ಮನು ಮನೆಯಲ್ಲೇ ವ್ಯಾಸಂಗಮಾಡಿ ಎಫ್. ಎ. ಪರೀಕ್ಷೆಯನ್ನು ಪ್ಯಾಸ್‍ಮಾಡಿ, ವೈದ್ಯ ವಿದ್ಯಾಶಾಲೆಗೆ ಸೇರಿ ಈಗ ಡಾಕ್ಟರ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುತ್ತಾಳೆ. ಈಚೆಗೆ ಈ ವಿದ್ಯಾವತಿಯನ್ನು ವೇತನ ಕೊಟ್ಟು ಸೀಮೆಗೆ ಕಳುಹಿಸಿ, ವೈದ್ಯ ವಿದ್ಯಾಪಾರಂಗತಳಾಗಿ ಬರುವಂತೆ ಮಾಡಬೇಕೆಂದು ಏರ್ಪಾಡಾಗಿರುತ್ತದೆ.

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಜಾಗಾ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ಜಾಗಾ ಕೊಡಲಾರೆವು

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು —ಎಡಿಟರ್.

ಕರೆಸ್‌ಪಾಂಡೆನ್ಸ್.

ಬೆಂಗಳೂರು ಸಿಟಿ ಮಾರ್ಕೆಟ್ಟಿನ ಬಳಿ ನಡೆದ ಗಲಭೆ.

ಆಲ್ಯಾ,

ಬೆಂಗಳೂರು ಚರ್ಚ್ ಮಿಷನರಿ ಸೊಸೈಟಿ ಹಿಂದೂಸ್ಥಾನಿ ಮಿಷನ್ನಿಗೆ ಸೇರಿದ ರೆವರೆಂಡ್ ಗೋಲ್ಡ್‌ಸ್ಮಿತ್‌ರವರು, ರೆವರೆಂಡ್ ಧರ್ಮಸಿಂಗ್‌ರವರು, ಹಜರತ್ ನಸೀರುದ್ದೀನ್ ಸಾಹೇಬರು ಮತ್ತು ಮಿ॥ ನರಸಿಂಹಯ್ಯನವರು ಇದೇ ತಿಂಗಳು ೮ ನೇ ತಾ ಗುರುವಾರ ಸಾಯಂಕಾಲ ಸುಮಾರು ೭ ಗಂಟೆ ಸಮಯದಲ್ಲಿ ಬೆಂಗಳೂರು ಸಿಟಿ ಮಾರ್ಕೆಟ್ಟಿಗೆ ಎದುರಿನಲ್ಲಿರುವ ಬೈಲಿನಲ್ಲಿ ಮಾಮೂಲ್ ಮೇರೆಗೆ ಪ್ರಸಂಗಮಾಡಿ, ತಮ್ಮ ತಮ್ಮ ಮನೆಗಳಿಗೆ ತೆರಳುವ ಸಮಯದಲ್ಲಿ, ಸುಮಾರು ಐನ್ನೂರು ಮಂದಿ ಸರಿವಿಗೆ ಸೇರಿದ್ದ ಮಹಮ್ಮದೀಯರು ಬಹಳ ಗಲಭೆ ಮಾಡಿ, ಸುವಾರ್ತೆ ಸಾರುವುದಕ್ಕೆ ಬಂದಿದ್ದವರನ್ನು ಒಂದೆರಡು ಪೆಟ್ಟುಗಳು ಹೊಡೆಯುವಷ್ಟರಲ್ಲಿ ಪೋಲೀಸಿನವರು ಬಂದು ಕುಮ್ಮಕ್ ಮಾಡಿ, ಭಾರಿ ಅಪಾಯಗಳೇನೂ ಸಂಭವಿಸದ ಹಾಗೆ ಗಲಾಟೆಯನ್ನು ಬಹಳ ಮಟ್ಟಿಗೆ ಅಡಗಿಸಿದರು

ರೆವರೆಂಡ್ ಗೋಲ್ಡ್‌ಸ್ಮಿತ್ ಸಾಹೇಬರ ವಿನಹ ವಿಶ್ವ ಮೇಲೆ ಗೂ ಒಂದೆರಡು ಬಲವಾದ ಕೈ ಗುದ್ದುಗಳು ಬಿದ್ದವು ಸರ್ಕಾರೀ ಡ್ಯೂಟಿ ಮೇಲಿದ್ದ ಮಾರ್ಕೆಟ್ಟು ಸೂಪರಿಂಟು ಮಹಾ ಘರ್ಜನೆಯಿಂದ "ಮಾರೋ, ಮಾರೋ! ಠೋಕೋ, ಠೋಕೋ!" ಎಂದು ಘಟ್ಟಿಯಾಗಿ ಕೂಗುತ್ತಾ ಇನ್ನಷ್ಟು ಗಲಭೆ ಹೆಚ್ಚು ಮಾಡಿದ್ದರಿಂದ ಸರ್ಕಾರದವರು ಇವರ ವಿಷಯ ತಕ್ಕ ಆಲೋಚನೆ ಮಾಡ್ಯಾರೆಂದು ನಂಬುತ್ತೇನೆ

ಮೊಳದುದ್ದ ಗಡ್ಡಗಳನ್ನು ಬೆಳಸಿಕೊಂಡು, ನಿಲುವಂಗಿಗಳನ್ನು ಧರಿಸಿಕೊಂಡು, ದಿನಕ್ಕೆ ಐದು ಸಲ ನಮಾಜ್ ಮಾಡುವ ಈ ಮಹಮ್ಮದೀಯರು ಇಂಥಾ ಲುಚ್ಚಾ ಜನರೆಂತಲೂ, ಪೈಗಳ್ಳರೆಂತಲೂ, ಕಾಠಿಣ್ಯಹೃದಯರೆಂತಲೂ ಇದುವರೆಗೂ ಗೋಚರವಾಗಿರಲಿಲ್ಲ ವೃಕ್ಷವು ಎಂಥಾದೋ ಫಲವೂ ಅಂಥಾದ್ದೇ ಮತವು ಎಂಥಾದ್ದೋ ಆ ಮತಸ್ಥರೂ ಅಂಥವರೇ ಮಹಮ್ಮದೀಯರ ಮತವು ಸತ್ಯವಾಗಿದ್ದರೆ ಆ ಮತವನ್ನವಲಂಬಿಸಿರುವವರು ಸತ್ಯವನ್ನನುಸರಿಸಿ ನಡೆಯುತ್ತಿದ್ದರಷ್ಟೆ

ಯಾವ ಮತವು ದೇವರನ್ನು ಸಂಪೂರ್ಣ ಶಕ್ತಿಯಿಂದ ಪ್ರೀತಿಮಾಡಿ, ಮನುಷ್ಯರನ್ನು ನಮ್ಮ ಸಹೋದರರಂತೆ ಪ್ರೀತಿಮಾಡಬೇಕೆಂದು ಬೋಧಿಸಿ, ಆ ಮತವನ್ನು ಭಕ್ತಿಯಿಂದ ಅವಲಂಬಿಸುವವರಿಗೆಲ್ಲಾ ಮನೋವಾಕ್ಕಾಯಗಳಿಂದ ಅಂತರಂಗದಲ್ಲಿಯೂ, ಬಹಿರಂಗದಲ್ಲಿಯೂ ಅಂಥಾ ಸಹೋದರವಾತ್ಸಲ್ಯವನ್ನು ತೋರ್ಪಡಿಸುವ ಶಕ್ತಿಯನ್ನು ದಯಪಾಲಿಸುತ್ತದೋ ಅಂಥಾ ಮತವನ್ನು ಜನರು ಇಹಪರಲೋಕ ಸುಖಗಳನ್ನು ಹೊಂದುವಹಾಗೆ ಪ್ರಸಿದ್ಧಿಪಡಿಸುವುದು ಅತ್ಯವಶ್ಯಕ

ಮುಂದೆ ಇಂಥಾ ಅನಿವಾರ್ಯಗಳು ಸಂಭವಿಸದ ಹಾಗೆ ಸರ್ಕಾರದವರು ತಕ್ಕ ಬಂದೋಬಸ್ತು ಮಾಡುತ್ತಾರೆಂದು ನಂಬುತ್ತೇನೆ

ಬೆಂಗಳೂರು ಸಿಟಿ ಸತ್ಯಾಭ್ಯುದಯ

ತಾಲ್ಲೋಕು ವರ್ತಮಾನಗಳು.

ದಾವಣಗೆರೆ —ಕಳೆದ ೧೦ ತಿಂಗಳಿಂದಲೂ ದಾವಣಗೆರೆಯ ಪ್ರಜೆಗಳನ್ನು ನೀತಿ ನ್ಯಾಯಗಳಿಂದ ಪರಿಪಾಲಿಸಿದ ಅಮಲ್ದಾರ್ ಮಿ॥ ಮಾಧ್ಯಯ್ಯ, ಬಿ. ಎ ಯವರು ಇಲ್ಲಿಂದ ಚಿತ್ರದುರ್ಗಕ್ಕೆ ವರ್ಗವಾಗಿ ಹೋಗುತ್ತಾರೆಂಬುವ ವಾರ್ತೆಯನ್ನು ಪ್ರಜೆಗಳು ಕೇಳಿ ತುಂಬಾ ವಿಷಾದಪಟ್ಟರು. ಇವರು ಸರ್ಕಾರದ ಕೆಲಸವನ್ನು ಯಾರ ಮುಖದಾಕ್ಷಿಣ್ಯವಿಲ್ಲದೆ ದೇವರು ಮೆಚ್ಚುವಂತೆ ಮಾಡುತ್ತಾ ಬಂದಕಾರಣ ಇವರ ಕೈಕೆಳಗಿದ್ದ ಸಣ್ಣ ನೌಕರರು ಸಹ ಭಯಭಕ್ತಿಯಾಗಿ ನಡೆಕೊಳ್ಳುತ್ತಾ ಕಾಲಕ್ಕೆ ಸರಿಯಾಗಿ ತಮ್ಮ ಕೆಲಸಗಳ ಮೇಲೆ ಹಾಜರಾಗುತ್ತಾ ಬರುತ್ತಿದ್ದರು ಇಂಥಾ ಸತ್ಯಸಂಧರನ್ನು ಇಷ್ಟು ಶೀಘ್ರ ಈ ತಾಲ್ಲೋಕಿನಿಂದ ವರ್ಗಮಾಡಿದ್ದನ್ನು ನೋಡಿದರೆ ತುಂಬಾ ಆಶ್ಚರ್ಯಪಡಬೇಕಾಗಿದೆ ಅವರು ಕಳೆದ ತಾ. ೮ ರಲ್ಲಿ ಶಿರಸ್ತೇದಾರರಿಗೆ ಛಾರ್ಜು ಕೊಟ್ಟು ತಾ ೧೧ ರಲ್ಲಿ ದುರ್ಗಕ್ಕೆ ಹೋಗುವದಕ್ಕೆ ಸಿದ್ಧರಾದರು ಆ ದಿವಸ ಇಲ್ಲಿನ ಮುನಿಸಿಪಲ್ ಮೆಂಬರುಗಳು ಮತ್ತು ಅನೇಕ ವರ್ತಕರು ಮುಂತಾದವರು ಮೊದಲುಗೊಂಡು ಎಲ್ಲರೂ ಅವರನ್ನು ಕರೆದು ತಂದು ರೈಲ್ವೆ ಸ್ಟೇಷನಿಗೆ ಬಂದು ದುಃಖದೊಂದಿಗೆ ಸಾಗಕಳುಹಿಸಿದರು —ಈ ಊರಿನಲ್ಲಿ ಕೇರಿಯ ಕಾಳಗವು ಬಹು ವಿಶೇಷವಾಗಿ ನಡೆಯುತ್ತದೆ. ಇದಕ್ಕೋಸ್ಕರ ಇಲ್ಲಿನ ಪ್ರಜೆಗಳು ಸಾವಿರಾರು ರೂಪಾಯಿ ಖರ್ಚುಮಾಡಿ ಅನೇಕ ಕುರಿಗಳನ್ನು ತಂದು ಕಟ್ಟಿಕೊಂಡಿದ್ದಾರೆ ಈಗ್ಗೆ ತಿಂಗಳಿಗೆ ಮುಂಚೆ ಒಂದು ಕಾಳಗ ನಡೆಯಿತು ಆ ಕಾಲದಲ್ಲಿ ಜನರಲ್ಲಿ ಸ್ವಲ್ಪ ಗಲಾಟೆ ಆಗಬಹುದೆಂದು ಯೋಚಿಸಿ, ಹಿಂದಿನ ಅಮಲ್ದಾರರು ನಿಲ್ಲಿಸಿಬಿಟ್ಟಿದ್ದರು. ಹಾಗೂ ಒಂದಾವರ್ತಿ ರಾಣೆಬೆನ್ನೂರಿಗೆ ಕುರಿಗಳನ್ನು ತೆಗೆದುಕೊಂಡು ಹೋಗಿ ಅಲ್ಲಿ ಕಾಳಗ ಬಿಟ್ಟರು ಇನ್ನು ಮುಂದಕ್ಕೆ ಈ ಊರಿನಲ್ಲಿಯೇ ಬಿಡುವದಕ್ಕೆ ಪ್ರಯತ್ನ ಮಾಡುವರೆಂದು ಕಾಣುತ್ತದೆ.—ಈ ಊರಿನಲ್ಲಿ ನಾಗರ ಪಂಚಮಿಯು ಬಹು ವಿಜೃಂಭಣೆಯಿಂದ ನಡಿಸಲ್ಪಟ್ಟಿತು ಅನೇಕ ಯಜಮಾನರು ಕೆಲಸವನ್ನು ಬಿಟ್ಟು ಕಾಯಿ ಜೂಜಿನಲ್ಲಿಯೇ ಕಾಲವನ್ನು ಕಳೆಯುತ್ತಾನೆ —ಈ ಗ್ರಾಮದಿಂದ ಅನೇಕ ಲಿಂಗಾಯತ ಮಂಡಲಿಯು ಮುಖ್ಯಸ್ಥರು ಚಿತ್ರದುರ್ಗಕ್ಕೆ ತಮ್ಮ ಸ್ವಾಮಿಗಳಾದ ಮುರಿಗೇಂದ್ರರವರಿಗೆ ಗವರ್ನಮೆಂಟಿನವರು ಕೊಟ್ಟಿರುವ ಬಿರುದುಗಳನ್ನು ನೋಡುವ ಉದ್ದೇಶ್ಯ ತಾ ೧೫ ರಲ್ಲಿ ಹೋದರು —ಈ ತಾಲ್ಲೋಕಿನಲ್ಲಿ ಮಳೆ ಬೆಳೆಗಳು ಬಹು ಚನ್ನಾಗಿವೆ ಹರಿಹರದ ತುಂಗಭದ್ರಾ ಹೊಳೆಯು ಈ ವರುಷ ಅಪಾರವಾಗಿ ಬಂದಿತ್ತು. ಅದನ್ನು ನೋಡುವ ಉದ್ದೇಶ್ಯ ಡೆಪ್ಟಿ ಕಮಿಷನರು ಮತ್ತು ಅನೇಕ ಪ್ರಜೆಗಳು ಗುಂಪುಗುಂಪಾಗಿ ಹೋಗಿದ್ದರು

ಯೆಡೇಹಳ್ಳಿ.—ಮಳೆ ೧೫ ದಿವಸದಿಂದ ಬಿಟ್ಟಿಲ್ಲ ತುಂಗಾ, ಭದ್ರಾ ನದಿಗಳಲ್ಲಿ ಪ್ರವಾಹ ಯಥೇಚ್ಛವಾಗಿ ಹೋಗುತ್ತಾ ಇದೆ ಲಕ್ಕವಳ್ಳಿ ಫಾರೆಸ್ಟಿನ ಸರ್ಕಾರಿ ಆನೆಯು ಕಾಲಿಗೆ ಸರಪಳಿ ಕಟ್ಟಿಬಿಟ್ಟದ್ದು ಮೇಯಲಿಕ್ಕೆ ಹೋದದ್ದು ನೀರಿಗಾಗಿ ಒಂದು ನದಿಗೆ ಇಳಿದು ಗಂಗೆಯೊಳಗೆ ಕೊಚ್ಚಿಹೋಯಿತು.—ಯೆಡೇಹಳ್ಳಿ ಡಿಪ್ಟಿ ಅಮಲ್ದಾರ್ ಮೆ॥ ಬಿ ಜಗನ್ನಾಥರಾಯರು ರಜಾದ ಮೇಲೆ ಹೋಗುವಂತೆಯೂ, ಬದಲಿಗೆ ತರೀಕೆರೆ ಶಿರಸ್ತೇದಾರ್ ಮಿ॥ ಸುಬ್ರಾಯರು ಬರುವುದಾಗಿಯೂ ಪ್ರವಾದವಿರುತ್ತೆ. ನಮ್ಮ ಅಮಲ್ದಾರರು ಛತ್ರಕ್ಕೆ ಆಳನ್ನು ನೇಮಿಸಿ ಪರಸ್ಥಳದವರಿಗುಂಟಾದ ಅನಾನುಕೂಲಗಳು ತಪ್ಪಿಸಬೇಕೆಂದು ಸರಿಕ್ಕಿಸಿದೆ ಮುಸಾಫರಿ ಛತ್ರದ ವಿಷಯ ಹೇಳತೀರದು ಇದಕ್ಕಿಂತಲೂ ಜಾನುವಾರು ದೊಡ್ಡಿ ಉತ್ತಮ.—ಬಾಳೆಹೊನ್ನೂರು ದಫೇದಾರ್, ಕೇಠದಾರ್ ವಗೈರೆಯರನ್ನು ಗಾಡಿ ಬಿಟ್ಟು ಹಿಡಿದ್ದಕ್ಕಾಗಿ ಮಿ॥ ಕ್ರಾಫರ್ಡ್ ಸಾಹೇಬರು ಮಾಡಿದ ಫಿರ್ಯಾದು ಕೋರ್ಟಿನಲ್ಲಿ ವಜಾ ಆಗಿರುತ್ತೆ ಅಪರಾಧಿಗಳು ಫಿರ್ಯಾದಿಗಳ ಮೇಲೆ ಮಾನನಷ್ಟಕ್ಕೆ ದಾವಾ ಹಾಕಿರುತ್ತಾರೆ ಕಾನ್‌ಸ್ಟೇಬಲ್ ಮಾಡಿದ ಫಿರ್ಯಾದು ನಿಜಾ ಆದದ್ದು ಇದೇ ಹೊಸದು —ಗುಡ್ಡದ ಎಸ್ಟೇಟು ಕೂಲಿಯವನು ನೆನ್ನೆ ಕೆಲಸಕ್ಕಾಗಿಯೇ ಮಾಳಿಯಿಂದ ಬಿದ್ದು ಒಲೆಯಲ್ಲಿದ್ದ ಬೆಂಕಿ ಹುಲ್ಲಿಗೆ ಹತ್ತಿ ಅದರಲ್ಲಿ ಮಲಗಿದ್ದ ಎರಡು ಜನರು ಮೃತಪಟ್ಟರು ಇನ್ನೆರಡು ಜನಕ್ಕೆ ಜಖಂ ಆಗಿದೆ ಬಾಳೆಹೊನ್ನೂರ್ ಸರ್ಕಾರಿ ದೊಡ್ಡಿಗೆ ದಾಖಲಾದ ಜಾನುವಾರುಗಳನ್ನು ಲೆಕ್ಕಕ್ಕೆ ಸೇರಿಸದೆ ದುಡ್ಡು ವಸೂಲ್ಮಾಡಿಕೊಂಡಿದ್ದದ್ದು ಗೊತ್ತಾಗಿ ಪ್ಲಾಂಟ್ ರೈಟರಿಗೆ ಸಾಹೇಬರು ೩೦ ರೂ ಜುಲ್ಮಾನೆ ಹಾಕಿದರಂತೆ —ಬಾಳೆಹೊನ್ನೂರಲ್ಲಿ ಜಾನುವಾರುಗಳು ರೋಗದಿಂದ ದಿನಕ್ಕೆ ೮—೧೦ ಸಾಯುತ್ತವೆ. ಸರ್ಕಾರದವರು ಇದಕ್ಕೇನಾದರೂ ಪರಿಹಾರ ಮಾಡಬೇಕು ಸರ್ಕಾರಕ್ಕೆ ಇದು ಗೊತ್ತಾಗಿದೆಯೋ ಇಲ್ಲವೋ. ಇಲ್ಲಿನ ಕೇಠದಾರರು ಚಿಕ್ಕಮಗಳೂರಲ್ಲಿರುತ್ತಾರೆ

ದೊಡ್ಡಬಳ್ಳಾಪುರ.—ಈ ಪ್ರಾಂತ್ಯ ಬಲವಾಗಿ ಗಾಳಿ ಬೀಸುತ್ತಾ ಇದ್ದು ಮಳೆಗಾಗಿ ಆಕಾಶವನ್ನು ಎದುರು ನೋಡುತ್ತಾ ಇದ್ದ ರೈತರು ಸಂತೋಷಪಡುವಂತೆ ೨—೩ ದಿನಗಳಿಂದಲೂ ಸೋನೆ ಮಳೆಯಾಗಿ, ಬಾಡುತ್ತಿದ್ದ ಪೈರುಗಳು ನಗೆಮುಖದಿಂದ ಕೂಡಿರುತ್ತವೆ ಕೆಲವು ಕಡೆ ಪೈರುಗಳು ಕಳೆ ತೀರಿ ಇರುತ್ತವೆ ಊರಿನ ಹವಾ ಆರೋಗ್ಯವಾಗಿರುತ್ತೆ. ತ್ಯಾಮಗೊಂಡ್ಲು, ದೊಡ್ಡಬೆಲೆ, ಈ ಪ್ರಾಂತ್ಯ ಇದ್ದ ಪ್ಲೇಗ್ ರೋಗವು ಈ ತಾಲ್ಲೂಕು ಕಂಟನಹಳ್ಳಿ ಗ್ರಾಮಕ್ಕೆ ತಲೆ ಹಾಕಿ ೪—೫ ಜನಗಳು ಕಾಲವಾದರು ಮಾಕಳಿಹಳ್ಳಿ ಗ್ರಾಮದಲ್ಲಿ ಕಾಲರಾದಿಂದ ೫—೬ ಜನರು ಸತ್ತರು ಇನ್ಸ್‌ಪೆಕ್ಟರೂ ಡಾಕ್ಟರೂ ಹೋಗಿ ನೋಡಿ ಔಷಧಾದಿಗಳನ್ನು ಕೊಟ್ಟು ಬಂದರು ಈ ಟೌನ್ ಸುತ್ತಲೂ ಈ ರೋಗಗಳಿರುವದರಿಂದ ಜನಗಳು ತುಂಬಾ ಭಯಪಡುತ್ತಿದ್ದಾರೆ ನಮ್ಮ ಹೊಸ ಅಮಲ್ದಾರರು ತುಂಬಾ ಮೇಹನತ್ತಿನಿಂದ ಪೇಟೆ ಬೀದಿಗಳಲ್ಲಿ ಕಶ್ಮಲ ವಗೈರೆ ಇಲ್ಲದಂತೆ ನೋಡಿಕೊಳ್ಳುತ್ತಾ ಇದ್ದಾರೆ.—ಪೇಟೆ ವರ್ತಕರಲ್ಲಿ ಕೆಲವರು ಕಮ್ಮಿ ತೂಕದ ಕಲ್ಲು ಬಟ್ಟುಗಳನ್ನು ಇಟ್ಟಿರುತ್ತಾರೆ ಈಗ್ಗೆ ೫—೬ ದಿನಗಳಲ್ಲಿ ಒಬ್ಬ ಕೋಮಟಿಯು ಕಮ್ಮಿ ತೂಕದ ಕಲ್ಲಿನಲ್ಲಿ ತೂಗುತ್ತಿದ್ದದ್ದು ತಿಳಿದು ಪೋಲೀಸಿನವರು ಪತ್ತೆಮಾಡಿ ದಫೇದಾರರಿಗೆ ತಿಳಿಸಲು, ಇವರು ತೂಕದ ಕಲ್ಲುಗಳನ್ನು ಆತನ ಅಂಗಡಿಯಲ್ಲಿ ಅಪವಾಯಿಷಿ ಮಾಡಿ, ೨೦ ರೂಪಾಯಿ ತೂಕ ಇದ್ದ ಕಲ್ಲುಗಳನ್ನೂ ಆಸಾಮಿಯನ್ನೂ ಸ್ಟೇಷನ್ನಿಗೆ ತಂದು ಇರಿಸಿದ್ದರು ಅಷ್ಟರಲ್ಲೇ ೨೧ ರೂಪಾಯಿತೂಕದ ಕಲುಗಳನ್ನಿಟ್ಟಿದ್ದ ವರ್ತಕ ಮಹಾಶಯರು ಎಚ್ಚೆತ್ತು, ಕಟ್ಟಿಣದ ಅಂಗಡಿಯಲ್ಲಿ ಹೊಸ ಕಲ್ಲುಗಳನ್ನು ತಂದು ಕಮ್ಮಿ ಕಲ್ಲುಗಳನ್ನು ಮಂಗಮಾಯಮಾಡಿಬಿಟ್ಟರು ಪೋಲೀಸಿನಲ್ಲಿದ್ದ ವರ್ತಕನನ್ನು ಸಾಯಂಕಾಲದೊಳಗಾಗಿ ಅವನ ತೂಕದ ಕಲು ಕಮ್ಮಿ ಇಲ್ಲ, ಸರಿಯಾಗಿತ್ತು ಎಂದು ದಫೇದಾರರು ವದಂತಿ ಮಾಡಿದರು. ಮಧ್ಯಾಹ್ನ ಕಮ್ಮಿ ಎಂದು ಹಿಡಿದು ಸಾಯಂಕಾಲ ಸರಿಯಾಗಿರಬೇಕಾದರೆ ಏನಾಗಿರಬೇಕೋ ತಿಳಿಯಲಿಲ್ಲ ಅದರೂ ಈ ಗಲಾಟೆಯಲ್ಲಿ ಕಬ್ಬಿಣದ ಅಂಗಡಿ ಸಾಹುಕಾರನಿಗೆ ನೂರಾರು ತೂಕದ ಕಲ್ಲುಗಳು ಖರ್ಚಾಗಿ ಲಾಭವು ಬಂದದ್ದೇ ಫಾಯಿದೆ ಎಂದು ಬಡಜನರು ನಿಟ್ಟುಸಿರುಬಿಟ್ಟರು. ಮುಂದೆಯಾದರೂ ಸರಿಯಾದ ಏರ್ಪಾಡು ಮಾಡಿಯಾರೆಂದು ಹಾರೈಸುತ್ತಿರುವದಾಗಿದೆ

ಚಿಕ್ಕಮಗಳೂರು.—ಇಲ್ಲಿ ಹಿಡಿದ ಮಳೆ ಬಿಡದೆ ಸುರಿಯುತ್ತಲಿದೆ ಮಳೆಯು ಜೋರಾಗಿಲ್ಲದೆ ಇದ್ದಾಗ್ಯೂ ಸಾಧಾರಣ ಸೋನೆಯಾಗುತ್ತ ಸುಮಾರು ಎರಡು ವಾರಗಳಿಂದೀಚೆಗೆ ಆರು ಇಂಚು ಮಳೆಯಾಗಿದೆ ಮಲೆನಾಡಿನ ಕಡೆಗಾದರೋ ಮಳೆಯು ವಿಪರೀತವಾಗಿದೆ ಎಂದು ಹೇಳುತ್ತಾರೆ ಈಗ್ಗೆ ಹತ್ತು ವರುಷಗಳಿಂದೀಚೆಗೆ ಈ ಮನಃ ದಷ್ಟು ಮಳೆಯು ಇಲ್ಲಿ ಬೀಳಲಿಲ್ಲವೆಂದು ಇಲ್ಲಿನ ಜನರು ಹೇಳುತ್ತಾರೆ ಕೆರೆಕಟ್ಟೆಗಳೆಲ್ಲಾ ತುಂಬಿ ತುಳುಕುತ್ತಲಿವೆ ಕೊಯಿಲಿಗೆ ಬಂದಿರುವ ರಾಗಿ ಉದುರುತ್ತಾ ಕೀಳುವದಕ್ಕೆ ಸಿದ್ಧವಾಗಿರುವ ಆಲುಗೆಡ್ಡೆಯು ಭೂಮಿಯಲ್ಲಿಯೇ ಕೊಳೆಯುತ್ತಾ ನೀರುಳ್ಳಿ ಬೆಳ್ಳುಳ್ಳಿ, ಧನಿಯಾ, ಮೊದಲಾದ ಪೈರುಗಳು ಕೆಟ್ಟುಹೋಗುತ್ತಾ ಇವೆಯಲ್ಲಾ ಎಂದು ರೈತರು ಪ್ರಲಾಪಿಸುತ್ತಿದ್ದಾರೆ ಸೂರ್ಯನ ಪ್ರಕಾಶವೇ ಅಪರೂಪವಾಗಿದೆ ಇಂಥಾ ಕಾಲದಲ್ಲಿ ಪ್ಲೇಗ್ ಉಪದ್ರವು ದಿನದಿನಕ್ಕೂ ಹೆಚ್ಚುತ್ತಲಿದೆ ಹೋದ ತಿಂಗಳು ಅಪರೂಪವಾಗಿದ್ದದ್ದು ಈ ತಿಂಗಳಲ್ಲಿ ಹೆಚ್ಚುತ್ತಾ ದಿನಕ್ಕೆ ೪-೫ ರಂತೆ ಮರಣಗಳಾಗುತ್ತಾ ಇವೆ ರೋಗ ತಗಲಿದವರು ಬದುಕುವದೇ ಅಪರೂಪವಾಗಿದೆ ಜನರಿಗೆ ಇದರ ದೆಸೆಯಿಂದ ಭಯವೂ ಕಷ್ಟವೂ ಬಹಳವಾಗಿದೆ ಈ ಕಾಲದಲ್ಲಿ ರೋಗಕ್ಕೆ ತಪ್ಪಿಸಿಕೊಂಡು ಹೊರಗೆ ಹೋಗಿ ಷೆಡ್ಡು ಕಟ್ಟಿ ವಾಸಮಾಡುವದಕ್ಕೂ ಅನುಕೂಲವಿಲ್ಲದಂತಾಗಿದೆ ಯಾಕೆಂದರೆ ಅತಿವೃಷ್ಟಿಯ ದೆಸೆಯಿಂದ ಎಲ್ಲಿ ನೋಡಿದರೂ ಭೂಮಿಯ ಮೇಲೆ ನೀರು ಆಡುತ್ತಿದೆ ಕೆಲರು ಷೆಡ್ಡುಗಳಿಗೆ ಹೋಗಿ ಮಳೇ ಗಾಳೀ ಛಳಿಯನ್ನು ಸಹಿಸಲಾರದೆ ಹಿಂತಿರಿಗಿ ಮನೆಗಳಿಗೇನೇ ಬಂದರೆಂದು ಕೇಳುತ್ತೇನೆ. ಊರಿನಲ್ಲಾದರೋ ಕೆಲವು ಕಡೆಗಳಲ್ಲಿ ಮಳೇ ನೀರು ಚರಂಡಿಗಳ ಮೂಲಕ ಸರಿಯಾಗಿ ಹೋಗುವದಕ್ಕೆ ಬದಲಾಗಿ ಮನೆಗಳ ಮುಂಭಾಗದಲ್ಲಿಯೇ ನಿಂತುಕೊಂಡು ಪಕ್ಕದ ಗೋಡೆಗಳಿಗೆ ಅಪಾಯವನ್ನುಂಟುಮಾಡುವದಲ್ಲದೆ ಅಲ್ಲಿಯೇ ನೀರು ಪಾಚಿಕಟ್ಟಿ ದುರ್ವಾಸನೆಯಾಗುವದಕ್ಕೂ ಮಕ್ಕಳು ಮರಿ ಅದರಲ್ಲಿ ಬಿದ್ದು ಮೈಯ್ಯನ್ನೆಲ್ಲಾ ಕೆಸರುಮಾಡಿಕೊಳ್ಳುವದಕ್ಕೂ ಅವಕಾಶವಾಗಿದೆ. ಆದ್ದರಿಂದ ಮುನಿಸಿಪಾಲಿಟಿಯವರು ಅಂಥಾ ಸ್ಥಳಗಳನ್ನು ಬೇಗನೆ ದುರಸ್ತು ಮಾಡಿಸಿ ರಸ್ತೆಯ ಉಭಯ ಪಾರ್ಶ್ವಗಳಲ್ಲಿನ ಹುಲ್ಲನ್ನು ಕೆತ್ತಿಸಿ ಕಾಡಿಯಾಗಿರುವಂತೆ ಮಾಡುವದು ಅವಶ್ಯವಾಗಿದೆ — ಈ ತಾಲ್ಲೋಕಿಗೆ ಸೇರಿದ ಆದೆಹಳ್ಳೀ ಕಡೆ ದನಗಳಿಗೆ ದೊಡ್ಡರೋಗವೆಂಬ ಜಾಡ್ಯವು ತಗಲಿ ಸುಮಾರು ನೂರು ರಾಸುಗಳು ಸತ್ತವೆಂದು ಕೇಳುತ್ತೇನೆ

ತುಂಕೂರು.—ಹೋದ ವಾರವೆಲ್ಲಾ ಮೋಡಗಳು ಮುಚ್ಚಿಕೊಂಡು ಜಡಿ ಮಳೆ ಬೀಳುತ್ತಲೇ ಇದ್ದು ಈಗ ನಿಂತುಹೋಗಿ ಬಿಸಿಲು ಕಾಯುತ್ತದೆ. ಹವಾ ಅನುಕೂಲವಾಗಿದೆ ಹೊಲಗಳಲ್ಲಿ ಪುಷ್ಟ ಪೈರುಗಳು ಕಳಕಳಿಸುತ್ತವೆ. ಪಂಜಿಗಳಿಗೆ ದಿನಸಿ ಗಾಡಿಗಳು ಸಾಧಾರಣವಾಗಿ ಬರುತ್ತವೆ ಧಾರಣೆಯಾಸಿ ಕೇಳಿನ ಕೊಂಡಿಯ ಹಾಗೆ ಇದೆ. ಸಂತೆಗಳಲ್ಲಿ ರೂಪಾಯಿಗೆ ೧೩ ಸೇರು ರಾಗಿ ಚೆನ್ನ ಸೇರುಗಳಲ್ಲಿ ಇದೆ — ಇಲ್ಲಿ ತಿಂಗಳಿಂದ ಕಳ್ಳರ ಅವಾಂತ್ರವೆಂದು ತಿಳಿಸಿದ್ದು ಸರಿಯಷ್ಟೆ ಸರ್ಕಾರದವರು ಕೆಲವು ಜನರನ್ನು (ಪರಸ್ಥಳೀಕರನ್ನು) ಗುಮಾನಿಯ ಮೇಲೆ ಹಿಡಿದು ಮೊದಲು ಪೋಲೀಸ್ ಸ್ಟೇಷನ್ ಇಟ್ಟಿದ್ದ ಸಂತೇಬೀದಿಯಲ್ಲಿ ಇಬ್ಬರು ಪೋಲೀಸಿನವರ ಉಸ್ತುವಾರಿ ಮೇಲೆ ಇಟ್ಟಿದ್ದರು. ಈಗ್ಗೆ ಮೂರನೆ ಮಂಗಳವಾರ ಸುಮಾರು ಮಳ ಹುಯ್ಯುತ್ತಿರುವಾಗ ಆಗು ಮಾನಿ ಇಸಂಗಳು ತಮ್ಮಲ್ಲೇ ಮಾತನಾಡಿಕೊಂಡದ್ದು ಒಬ್ಬನೇ ಪೋಲೀಸಿನವನು ಇರುವಾಗ ಅವನಿಕ್ಕೆ ತನ್ನ ತಾ ನೀರು ಆರಬೇಕೆಂದು ಆ ದವಾನನನ್ನು ಕೇಳಲು ಆತನು ಉದಾಸೀನದಿಂದ ಅವರಲ್ಲೊಬ್ಬನಿಗೆ ಪಾಗ್ಗಲ ಮನೆಯಲ್ಲಿ ಹೋಗಿ ನೀರು ತೆಗೆದುಕೊಂಡು ಬರುವಂತೆ ಹೇಳಿದ್ದರಿಂದ ಅವನು ಅದರಂತೆ ನೀರಿಗಾಗಿ ಹೊರಕ್ಕೆ ಹೋಗಿ ನೀರು ಹಾಕಿಸಿಕೊಳ್ಳುತ್ತಾ ಉಳಿದ ಮೂರು ಜನರಿಗೆ ಸನ್ನೆಮಾಡಲು ತಕ್ಷಣವೇ ಅವರು ಪೋಲೀಸಿನವನನ್ನು ಲಕ್ಷ್ಯಮಾಡದೆ ಹೊರಕ್ಕೆ ಹಾರಿ ಬಹು ವೇಗವಾಗಿ ಓಡಿಹೋದರು. ಕೂಡಲೇ ಪೋಲೀಸಿನವನು ಬಹಳ ಗಾಬರಿಯಿಂದ ರಂಪಾಟಮಾಡುತ್ತ ಅಮೀಬಾಬು ಮನೆಯವರನ್ನು ಕೂಗಲು ಕೆಲವರು ಓಡಿಬಂದರಲ್ಲದೆ ಆ ನಾಲ್ಕು ಜನರೂ ಪರಾರಿಯಾಗಿದ್ದರು ಮಾರನೇ ಬೆಳಿಗ್ಗೆ ಪೋಲೀಸ್ ಆಫೀಸರು ತನಿಖೆ ಬಗ್ಗೆ ಬಂದು ಹೋದಂತೆ ಆ ಚೋರರನ್ನು ಹುಡುಕಲು ಕೆಲವು ಪೋಲೀಸಿನವರನ್ನು ಕಳುಹಿಸಿದ್ದರು ಇದು ವರೆಗೂ ಅವರು ದೆ ಸೆದೆ ಹೋಗಿದ್ದವರು ಪಾಪಾಸ್ ಬಂದರು. ಈಗಲಾದರೆ ಬೆಂಗಳೂರಿಂದ ಹತ್ತು ಮಂದಿ ರಿಜರ್ವ್ ಪೋಲೀಸಿನವರನ್ನು ಕರೆಸಿ ರಾತ್ರಿ ವೇಳೆ ಗಸ್ತು ಮಾಡಿಸುತ್ತಿದ್ದಾರೆ ಮುಂದೆಯೂ ಹೀಗೆಯೇ ಮೊದಲಿದ್ದಂತೆ ರಿಜರ್ವ್ ಪೋಲೀಸು ಶಿಬ್ಬಂದಿಯನ್ನು ಇಲ್ಲಿ ಖಾಯಂ ಮಾಡಿದರೆ ಬಹಳ ಅನುಕೂಲವಾಗುತ್ತೆ —ಹಿಂದೆ ೧೯೦೩ ನೇ ಇಸ್ವಿಯಲ್ಲಿ ಉಂಟಾದ ಅಧಿಕವಾದ ಮಳೆಯಿಂದ ಮ್ಯುನಿಸಿಪಾಲಿಟಿಯವರು ತಾಲ್ಲೂಕು ಕಛೇರಿಯ ಸಮೀಪದಲ್ಲಿರುವ ಪ್ಲೀಡರ್ ಮಿ॥ ಬಿ ಕೃಷ್ಣಯ್ಯಂಗಾರ್ರ ಮನೆ ಹಿಂಭಾಗದಲ್ಲಿ ಕಟ್ಟಿಸಿದ್ದ ಛಾವಣಿಯು ಸಂಪೂರ್ಣವಾಗಿ ಕುಸಿದುಬಿದ್ದು, ಅದರ ದೆಸೆಯಿಂದ ಅವರ ಮನೆಗೆ ಅಪಾಯವಾಗಿ ಗೋಡೆ ಅಪ್ಪಾಪತ್ತು ಬಿದ್ದುಹೋಯಿತು ಅನಂತರ ಆ ಲಾಯರು ಅದನ್ನೆಲ್ಲಾ ಕೆಡವಿಸಿ ಹೊಸದಾಗಿ ಮನೆ ಕಟ್ಟಿಸಿಕೊಂಡರು ಈ ರೀತಿ ಮ್ಯುನಿಸಿಪಾಲಿಟಿಯವರು ಕಟ್ಟಿಸಿದ್ದ ಅತಂತ್ರವಾದ ಛಾವಣಿಯ ದೆಸೆಯಿಂದ ತಮ್ಮ ಮನೆಗೆ ಅಪಾಯ ಉಂಟಾಗಿ ಬಿದ್ದುಹೋಯಿತೆಂದೂ ಅದರ ನಷ್ಟವನ್ನು ಮ್ಯುನಿಸಿಪಾಲಿಟಿಯವರು ಕೊಡಬೇಕೆಂದೂ ದಾವಾ ಮಾಡಿ ಅಂದಿನಿಂದ ಇದುವರಿಗೂ ವಿಚಾರಣೆಯಾಗುತ್ತಿದ್ದ ಮೊಕದ್ದಮೆಯು ಈಗ ಫೈಸಲಾಗಿ ಮ್ಯುನಿಸಿಪಾಲಿಟಿಯವರು ಮಿ॥ ಬಿ. ಕೃಷ್ಣಯ್ಯಂಗಾರ್ರಿಗೆ ಎರಡು ಸಾವಿರವೂ ಚಿಲ್ಲರೆ ರೂಪಾಯಿ ಕೊಡುವಂತೆ ಕೋರ್ಟಿನವರು ತೀರ್ಮಾನಿಸಿರುವಂತೆ ವರ್ತಮಾನ ಕೇಳುತ್ತೇನೆ ಇದರ ಮೇಲೆ ಮ್ಯುನಿಸಿಪಾಲಿಟಿಯವರು ಕೋರ್ಟಿನಲ್ಲಿ ಅಪೀಲ್ ಮಾಡುವಂತೆ ವದಂತಿ ಇದೆ

ಹುಣಸೂರು.—ಸುಮಾರು ಎರಡು ತಿಂಗಳಿಂದ ಮಳೆ, ಗಾಳಿ ಅಪಾರವಾಗಿವೆ ಇದರಿಂದ ಅನೇಕರಿಗೆ ಆರೋಗ್ಯವಿರಲಿಲ್ಲ ಈ ಮಧ್ಯೆ ಪ್ಲೇಗ್ ರೋಗವು ಕಾಣಿಸಿಕೊಂಡು ಜನರನ್ನು ತಲ್ಲಣಪಡಿಸುತ್ತ ಇದೆ ಜುಲೈ ೧೨ ರಿಂದ ಈ ವರಿವಿಗೂ ೧೪೩ ಜನರಿಗೆ ತಗಲಿ, ೧೧೦ ಜನರು ಕಾಲವಾದರು ಜನರೆಲ್ಲಾ ಊರನ್ನು ಸಂಪೂರ್ಣವಾಗಿ ಬಿಡಲಿಲ್ಲ ಅಮಲ್ದಾರ್, ಡಾಕ್ಟರ್, ಪ್ಲೇಗ್ ಇನ್ಸ್‌ಪೆಕ್ಟರ್, ಮತ್ತು ಪೋಲೀಸಿನವರ ಬಲವಂತದಿಂದ ೧.೨೩೬ ಮನೆಗಳು ಖಾಲಿಯಾಗಿವೆ ಈ ಕಾಲದಲ್ಲಿ ಅಮಲ್ದಾರರು ಜನರಿಗೆ ಬೇಕಾಗಿರುವ ಗಳ, ಬೊಂಬು, ಕವೆ ಮುಂತಾದ ಸಾಮಾನುಗಳನ್ನು ಒದಗಿಸಿಕೊಡುವದರಲ್ಲಿ ತುಂಬಾ ಪ್ರಯಾಸಪಡುತ್ತಾ, ಜನರಿಗೆ ಧೈರ್ಯ ಹೇಳುತ್ತಾ ಇರುವದನ್ನು ನೋಡಿ ತುಂಬಾ ಸಂತೋಷಪಡಬೇಕಾಗಿದೆ. ಎಲ್ಲಾ ಜನರನ್ನೂ ಊರಿದ ಹೊರಡಿಸುವುದಕ್ಕಾಗಿ ಅಮಲ್ದಾರರು ಎಲ್ಲಿಯೂ ಷೆಡ್ ಹಾಕದೆ ಮನೆಯಲ್ಲೇ ಇದ್ದರು. ಅದರೆ ತಮ್ಮ ಮನೆಯಲ್ಲೇ ಇದ್ದುಕೊಂಡು ನೌಕರಿ ಮಾಡುತ್ತಿದ್ದಂಥಾ ಒಬ್ಬನಿಗೆ ಪ್ಲೇಗ್ ತಗಲಿ ಮನೆಯಲ್ಲೇ ಸತ್ತುಹೋದನಾದ್ದರಿಂದ ಅವರು ಊರು ಬಿಡಬೇಕಾಯಿತು ಷೆಡ್ಡುಗಳಲ್ಲಿಯೂ ಸಹ ಪ್ಲೇಗ್ ಕಾಣಿಸಿಕೊಂಡಿದೆ ಷೆಡ್ಡಿನಲ್ಲಿ ಕಾಯಿಲೆಯಾದವರನ್ನು ಊರಿಗೂ, ಊರಿನಲ್ಲಿ ಕಾಯಿಲೆಯಾದವರನ್ನು ಷೆಡ್ಡಿಗೂ ತಿರುಗಾಡಿಸುತ್ತಾ ಇರುವದರಿಂದ ಜನರಿಗೆ ಭೀತಿಯುಂಟಾಗುತ್ತಿದೆಯೇ ಹೊರತು ನೆಮ್ಮದಿ ಎಂದಿಗೂ ಉಂಟಾಗುವದಿಲ್ಲ. ಸರ್ಕಾರದವರು ಕಾಯಿಲೆಯಾದವರನ್ನು ಪ್ರತ್ಯೇಕವಾದ ಸ್ಥಳದಲ್ಲಿರಿಸಿ, ಉಪಚರಿಸಿದರೆ ಎಷ್ಟೋ ಒಳ್ಳೇದು, ಈ ವಿಷಯಕ್ಕೆ ಅಮಲ್ದಾರರು ತುಂಬಾ ಗಮನ

ಕೊಡಬೇಕಾಗಿದೆ. ಈ ಕಾಲದಲ್ಲಿ ಪೊಲೀಸ್ ಸ್ಟೇಷನ್ ಊರಿನಲ್ಲಿಯೂ, ಪೇಟೆಗಳಲ್ಲಿಯೂ ತಕ್ಕಮಟ್ಟಿಗೂ ಸರಿಯಾಗಿ ನಡೆಯುತ್ತಾಗೆ. ಆದರೆ ಇಲ್ಲಿನ ಪೊಲೀಸ್ ಸಿಬ್ಬಂದಿಯನ್ನು ಹೆಚ್ಚಿಸಿ, ಊರಿನಲ್ಲಾಗಲಿ ಪೇಟೆಗಳಲ್ಲಾಗಲಿ ಕಳ್ಳತನವಾಯಿತೆಂಬ ಪ್ರಕಾರೇನೂ ಇಲ್ಲದಂತೆ ಮಾಡಿದರೆ ಎಷ್ಟೋ ಉಪಕಾರವಾಗಿರುವದು. ಪ್ಲೇಗ್ ಸಾಂಕ್ರಾಮಿಕವಲ್ಲಿ ಗಳ, ಟೋಂಬಿಗಳು ಇಲ್ಲದೆ ಇನ್ನೂ ಅನೇಕರು ಎಷ್ಟೋ ತೊಂದರೆಪಡು ತ್ತಲಿದ್ದಾರೆ. ಈ ವಿಷಯದಲ್ಲಿ ಅಮಲ್ದಾರ್ರು ಇಲ್ಲಿನ ರೇಂಜ್ ಆಫೀಸರಿಗೂ, ಡಿಸ್ಟ್ರಿಕ್ಟ್ ಛೇರಮನ್ನು ಆಫೀಸರಿಗೂ ತಡವೆ ಬರೆದಾಗ್ಯೂ ಇನ್ನೂ ಅವರಿಗೆ ಜವಾಬರಿಲ್ಲ. ನೇಮಿಸಲ್ಪಟ್ಟ ಅಧಿಕಾರಿಗಳು ನಿಗಾ ಕೊಟ್ಟು ಜನರನ್ನು ಕಾಪಾಡುವಂತೆ ಕೋರುತ್ತೇವೆ. ಟರ್ಮನಲ್ಲಿ ಪ್ಲೇಗ್ ರೋಗವು ಇರುವದು ಮಾತ್ರವಲ್ಲದೆ ಸುತ್ತು ಮುತ್ತು ಇರುವ ಹಳ್ಳಿಗಳಿಗೂ ಅದು ವ್ಯಾಪಿಸಿಕೊಂಡಿದೆ.—ಇಂಗ್ಲಿಷರಿಗೆ ಸೇರಿದ ಅಮ್ಮ ಕಮಲ್ ಇಲಾಖೆಯು ಬಹುಕಾಲದಿಂದಲೂ ಇಲ್ಲಿದ್ದು ವಜಾ ಆದ್ದು ಕರಿಯಿಸ್ಟ. ಈ ಇಲಾಖೆಗೆ ಸೇರಿದ ಸುಲ್ಲುಗಾವಲುಗಳ ಪೈಕಿ ಕೆಲವನ್ನು ಅವರು ತಮ್ಮ ವಶದಲ್ಲೇ ಇಟ್ಟುಕೊಂಡು, ಹುಲ್ಲು ಬೆಳಸಿ ಬೇರೆ ಬೇರೆ ಕಡೆ ಇರುವ ಸೈನ್ಯದ ಎತ್ತುಗಳಿಗೂ, ಸಾಸರಕತ್ತೆಗಳಿಗೂ ಕಳಿಸುವಂತೆಯೂ, ಬಾಕಿ ಹುಲ್ಲುಗಾವಲನ್ನು ಮೈಸೂರು ಸರ್ಕಾರಕ್ಕೆ ವಹಿಸಿಬಿಡುವಂತೆಯೂ ಮೇಲಿನಿಂದ ಹುಕುಂ ಆಗಿರುವಂತೆ ವರ್ತಮಾನ ಕೇಳುತ್ತೇನೆ.—ಪ್ಲೇಗ್ ದೆಸೆಯಿಂದ ಪಟ್ಟಣದಲ್ಲಿ ಅನೇಕರು ಊರು ಬಿಟ್ಟು ಹೋಗಿರುವದರಿಂದಲೂ, ಸಂತೆ ಸರಿಯಾಗಿ ಕೂಡದೆ ಇರುವದರಿಂದಲೂ ಬಡಬಗ್ಗರಿಗೆ ಬಹು ತೊಂದರೆಯಾಗಿದೆ. ಕೆಲವು ಅಂಗಡಿಗಳಿದ್ದಾಗ್ಯೂ ದಿನಸಿಗಳಿಗೆ ತುಂಬಾ ಕ್ರಯ ಹೇಳುತ್ತಾರೆ. ಪ್ಲೇಗ್ ಒಂದು ಕಡೆ, ಹೊಟ್ಟೆಗಿಲ್ಲದೆ ಇರುವದು ಮತ್ತೊಂದು ಕಡೆ. ಈ ಗಾಗ ಲೇ ಅನೇಕ ಕಡೆಗಳಲ್ಲಿ ದಾಗಿ ಕಟಾಸಾಗುತ್ತ ಇದೆ. ಆದರೆ ಮಳೆಯ ದೆಸೆಯಿಂದ ತಮ್ಮ ಕಷ್ಟಕ್ಕೆ ಏನು ಕುಂದಕ ಬರುತ್ತದೆಯೋ ಎಂಬ ಭೀತಿಯು ಅನೇಕ ರೈತರನ್ನು ಹಿಡಿದುಕೊಂಡಿದೆ.

ಚಿತ್ರದುರ್ಗ.—ಶ್ರೀಮನ್ ನಿರಂಜನ ಜಗದ್ಗುರು ಮುರಿಗಿರಾಜೇಂದ್ರಸ್ವಾಮಿಗಳ ಉತ್ಸವ ಈ ತಿಂಗಳು ೧೫ನೇ ತಾ ಪ್ರಾತಃಕಾಲ ೭ ಗಂಟೆಗೆ ಮಠದಿಂದ ಹೊರಟು, ೮ ಗಂಟೆಗೆ ಚಿತ್ರದುರ್ಗದ ಊರು ಮಂದಕ್ಕೆ ದಯಮಾಡಿಸಿತು. ಉತ್ಸವದ ಜೊತೆಯಲ್ಲಿ ಡೆಪ್ಯುಟಿ ಕಮಿಷನರು ಮೊದಲ್ಗೊಂಡು ಎಲ್ಲಾ ಅಧಿಕಾರಿಗಳೂ ಇದ್ದರು. ಈ ಉತ್ಸವಕ್ಕಾಗಿ ಒಂದಿರತಕ್ಕ ಸಿಲ್ಲೇದಾರ್ರು, ಪೊಲೀಸ್ ಇನ್ಸ್ಪೆಕ್ಟರುಗಳು ಯಸ್ಕಾರ್ಟಾಗಿ ಇದ್ದರು. ವಾದ್ಯಗಳು ಭೋರ್ಗರೆಯುತ್ತಿದ್ದವು. ಸ್ವಾಮಿಗಳು ಕಲ್ಯಾಣವಿಲ್ಲದ ಸಾದಾ ಪಾಲ್ಕಿಯಲ್ಲಿ ಮುಹೂರ್ತ ಮಾಡಿದ್ದರು. ಅವರ ಡ್ರೆಸ್ ಸಾಧಾರಣ ವೂಲ್ ಶಾಲುಗಳಿಗೇ ಆಗಿದ್ದಿತು. ಅವರು ಹಸ್ತದಲ್ಲಿ ನಿರತರ ಗಿರುವಂತೆ ಪಾಲ್ಕಿಯಲ್ಲಿ ಇಟ್ಟುಕೊಂಡಿದ್ದ ಪೂಜಾಗೃಹಗಳ ಕಲಶದ ಮೇಲೇನೇ ದೃಷ್ಟಿ ಇಟ್ಟುಕೊಂಡಿದ್ದರು. ಪಾಲ್ಕಿಯ ಸುತ್ತಲೂ ಆಚಾರೀಣರಾದ ಪಟ್ಟಿಗಳು ವೇದಘೋಷವನ್ನು ನಡೆಸುತ್ತಿದ್ದರು. ಪ್ರಜೆಗಳು ಅವರನ್ನೇ ನೋಡಿದರೇ ಕೇವಲ ಉತ್ಸವವನ್ನಾಗಲಿ ಸ್ವಾಮಿಗಳನ್ನಾಗಲಿ ನೋಡುತ್ತಿದ್ದಂತೆ ಕಾಣಲಿಲ್ಲ. ಈ ಉತ್ಸವವನ್ನು ನೋಡಲಿಕ್ಕೆ ಸುಮಾರು ೩೦ ಸಾವಿರ ಜನಗಳಿಗಿಂತಲೂ ಹೆಚ್ಚಾಗಿಯೇ ಸೇರಿದ್ದರು. ಪ್ರತಿ ಬೀದಿಯಲ್ಲೂ ಚಪ್ಪರಗಳು ಹಾಕಿ ಬಹು ಚನ್ನಾಗಿ ಅಲಂಕಾರ ಮಾಡಿದ್ದರು. ಪ್ರತಿ ಬೀದಿಯಲ್ಲೂ ಜನಗಳ ತುಂಬಿದ್ದರು ಮತ್ತು ಸ್ಥಳ ಸಾಲದೆ ಕೆಲವು ಜನಗಳು, ಕೋಟೆಗಳ ಮೇಲೂ ಕೆಲವರು ಮಾಳಿಗೆಗಳ ಮೇಲೂ ನಿಂತು ನೋಡುತ್ತಿದ್ದರು. ಹೀಗೆ ಎಲ್ಲಿಲ್ಲಿ ನೋಡಿದರೂ ಜನಗಳೇ ಕಾಣುತ್ತಿದ್ದರು. ಸ್ವಾಮಿಗಳ ಸವಾರಿ ಬಿವಿ ೧೧ ಗಂಟೆಗೆ ಸಾಹುಕಾರ್ ಕಾಪಣ್ಣನವರ ಗೃಹಕ್ಕೆ ಬಿಜಮಾಡಿ, ಸಾಯಂಕಾಲ ೪೫ ಗಂಟೆ ವರೆಗೂ ಅಲ್ಲಿದ್ದು ಭಕ್ತಾದಿಗಳ ಸೇವೆ ಅಂಗೀಕರಿಸಿದನಂತರ ಉತ್ಸವದಿಂದಲೇ ಮಠಕ್ಕೆ ದಯಮಾಡಿಸಿದರು. ಸಾಹುಕಾರ್ ಕಾಪಣ್ಣನವರ ಚತ್ರ, ಸಾಹುಕಾರ್ ಬೆಳ್ಳಪ್ಪನವರ ತೋಟವಲ್ಲಿರತಕ್ಕ ಛತ್ರೀ ಮನೆ, ನುಂಗೀಮಠ, ಸ್ವಾಮಿಗಳ ಮಠ, ಈ ಸ್ಥಳಗಳಲ್ಲಿ ಪರಸ್ಥಳೀಕರಾದ ಪ್ರಜೆಗಳಿಗೆ ಅಡಿಗೆ ಸಿದ್ಧವಾಗಿತ್ತು. ಬಂದಿದ್ದವರಲ್ಲಿ ಯಾರು ಎಲ್ಲಿ ಬೇಕಾದರೂ ಊಟ ಮಾಡಲಿಕ್ಕೆ ಅಡ್ಡಿ ಇರಲಿಲ್ಲ. ಬ್ರಾಹ್ಮಣರು ವಿನಾ ಬಾಕೀ ಜಾತಿಯವರೆಲ್ಲಾ ಈ ಸ್ಥಳಗಳಲ್ಲಿ ಊಟ ಉಪಚಾರಗಳು ತೃಪ್ತಿಯಾಗಿ ನಡೆದವು. ಈ ಚಿತ್ರದುರ್ಗದಲ್ಲಿ ಇಷ್ಟು ಪ್ರಜಾ ಸೇರಿದ್ದು, ಇಂಥಾ ಉತ್ಸವ ನಡೆದದ್ದು ಇದೇ ಮೊದಲೆಂದು ಆಬಾಲವೃದ್ಧರೆಲ್ಲಾ ಹೇಳಿಕೊಂಡು ಸಂತೋಷಪಡುತ್ತಾರೆ. ಈ ಉತ್ಸವದಿಂದ ಈ ಸ್ಥಳದ ವರ್ತಕರಿಗೆ ಒಳ್ಳೇ ವ್ಯಾಪಾರ ನಡೆಯಿತು. ಈಗ ಗುರುಗಳಾಗಿರತಕ್ಕ ವಿಶ್ವಾರಾಧ್ಯರೇಂದ್ರಸ್ವಾಮಿಗಳವರು ಯಾವ ಮುರುಗರಾಜೇಂದ್ರಸ್ವಾಮಿಗಳು ಒಳ್ಳೇ ವಿದ್ವಾಂಸರು, ಹಾಗೂ ತಪಸ್ವಿಗಳು.—ಈ ಊರಿನಲ್ಲಿ ದಟ್ಟಾಗಾಣಿಕೆಯವರ ಅನಾಯ್ಕ ಬಕಳವಾಗಿದೆ. ಒಬ್ಬ ದೊಡ್ಡ ಮನುಷ್ಯರಿಗೆ ಬೀರುಜನ ಕಟ್ಟ ಜಿರ್ಮಿಸಾನಿ ಎಂಬವನು ಹೊಳಲ್ಕೆರೆ ಸ್ಟೇಷನಿಂದ ಚಿತ್ರದುರ್ಗಕ್ಕೆ ಹೋಗುತ್ತಾ ಬರುತ್ತಾ ೫ ರೂಪಾಯಿಗೆ ಒಪ್ಪಿಕೊಂಡವನು ಸಾಯಂಕಾಲ ೦ ಗಂಟೆ ಸಂಧ್ಯಾಸ್ತಕ್ಕೆ ಗಾಡಿ ತೆಗೆದುಕೊಂಡು ಬಾ ಎಂದು ಹೇಳಿದ ಮಾತಿಗೆ ಒಪ್ಪಿಕೊಂಡು ಬರದೇ ಹೋದ್ದರಿಂದ ಪುನಃ ಅವನ ಮನೆಗೆ ಎರಡಾವರ್ತಿ ಆಳುಗಳನ್ನು ಕಳುಹಿಸಿದಾಗ್ಯೂ ಬಾರದೇ ಕಡೆಗೆ ಮಧ್ಯಾಹ್ನ ೩ ಗಂಟೆಗೆ ಅವನ ಜುಲುಮಿನಿಂದ ಬಂದು, ಕಡೆಗೆ ಆ ದೊಡ್ಡ ಮನುಷ್ಯರು ತಮ್ಮ ಸಾಮಾನು ಸಾಗಿಸಿ ಊಟ ಉಪಾಹಾರ ಪದಾರ್ಥಗಳು, ಆಳು ಸಹ ಹಿಂದೆ ನಿಂತು ಒಂಟಿಯಾಗಿ ಹೋಗಿ ರಾತ್ರಿಯೆಲ್ಲಾ ಹಾಗೆಯೇ ದಾವಣಗೆರೆಯಲ್ಲಿ ಕಾಲಕ್ಷೇಪಮಾಡುವಂತೆ ಮಾಡಿದನು. ಅಧಿಕಾರಿಗಳು ಈ ವಿಧ ನಡತೆಗೆ ಗಮನಕೊಟ್ಟು ಪ್ರಯಾಣಸ್ಥರಿಗೆ ತೊಂದರೆ ತಪ್ಪಿಸಬೇಕಾಗಿದೆ.

ತಿಪ್ಟೂರು.—ಕಳೆದ ವರುಷ ಆಗಸ್ಟ್ ತಿಂಗಳಲ್ಲಿ ಈ ಪ್ರಾಂತ್ಯದ ಕೆರೆಗಳು ಕೋಡಿ ಹರಿಯುತಿದವು. ಆದರೆ ಈಗ ಮಳೆಯು ಪ್ರಯಾಣಮಾಡತಕ್ಕವರಿಗೆ ಅನುಕೂಲ.—ಎಷ್ಟೋ ಯು ಮೆಸ್ಕೀನ್ ಬಹಳ ದಿನಗಳಿಂದ ಕಾಯಿಲೆಯಾಗಿದ್ದು ಮೆ॥ ಮುದ್ದಪ್ಪನವರ ಚಿಕಿತ್ಸೆಯಿಂದ ಈಗೀಗ ಕೂಗಾಡುತ್ತ. ವಿದ್ಯಾಪ್ರೋತ್ಸಾಹಕರಾದ ಸಾಹುಕಾರ್ ಉರುಮಳೊಂಡೆಯವರ ಮನೆಯ ಮೇಲೆ ಒಬ್ಬ ಸಂಗೀತಗಾರರು ಅನೇಕರನ್ನು ಸಂತೋಷಗೊಳಿಸಿದರು.—ರೀಡಿಂಗ್ ರೂಮಿನಲ್ಲಿ ನೆಂಬರು ಪವರ್ತಕಳಾದ ಶ್ರೀಯರೇ ಮುಂಬಾಯಿ ದೊಡ್ಡ ಮನುಷ್ಯರೆಲ್ಲಾ ಕೂಡಿದ್ದ ಸಾಗಿ ಅವಲ್ದಾರರು ಚಿತ್ತೈಸಿದರು. ಆಗ ಕಡೆವೆ ಕೆಳಗಿನ ಮೆ॥ ಷಡಗೋಪಾಲಾಚಾರ್ಯರಂಬ ಸಂಗೀತಗಾರರು ತಮ್ಮ ಅಭಿನಯರಾದಿ ಸಂಗೀತದಿಂದ ಸದ್ಗೀತ ಕೃತಿಗಳನ್ನು ಸೆಳೆದು ಕಾರ್ಯಸಂಚಯವನ್ನುಂಟುಮಾಡಿದರು.—ಈಗ ರಾತ್ರಿ ಕಾಲದಲ್ಲಿ ಪೊಲೀಸಿನವರ ಗಸ್ತು ಕ್ರಮವಾಗಿದೆ ಎಂದು ಕೇಳಿಸುವ ಶಿಳ್ಳಿನಿಂದ ಗೊತ್ತಾಗುತ್ತದೆ.—ಬೇಲೂರಿಗೆ ವರ್ಗವೆಂದು ಸುದ್ದಿಹೊಂದಿದ್ದ ಸ್ಕೂಲ್ ಹೆಡ್ ಮಾಸ್ಟರಿಗೆ ಇಲ್ಲಿಯೇ ಕಾಯಂ ಆಯಿತೆಂದು ತಿಳಿಯಿತು. ಊರಲ್ಲಿ ಪೇಟೆಯಲ್ಲಿರುವ ಮ್ಯುನಿಸಿಪಲ್ ಭಾವಿಗೆ ಎರಡು ಚಕ್ರವಿದ್ದದ್ದು ಈಗ ಒಂದೇ ಚಕ್ರವಿರುವದು ಬಹುಜನರಿಗೆ ತೊಂದರೆ.—ಟರ್ಮ ಸ್ಥಿತಿಯು ಮುಲ್ಕೀನೆಯಂತೆಯೂ ನೆಲಗೊಂಡೀತೇನೋ ಎಂದು ಜನರು ಹೆದರುತ್ತಾರೆ.—ಮೈಸೂರು ಡಿ॥ ತಿರುಮಕೂಡ್ಲು ನರಸೀಪುರ ತಾ॥ ತಲಕಾಡಿನಲ್ಲಿರುವ ಭಾಗವತ ಸಂಪ್ರದಾಯದ ಶ್ರೀ ಕೃಷ್ಣಾನಂದ ಸ್ವಾಮಿಗಳವರು ಶಿಷ್ಯಾನುಗ್ರಹಾರ್ಥವಾಗಿ ನಿಜ ಭೃತ್ಯ ಟಕಾಳದಲ್ಲಿ ದೇಶಸಂಚಾರ ಹೊರಟು ಮಳವಳ್ಳಿ, ಮಂಡ್ಯ, ಗುತ್ತಲು, ನಾಗಮಂಗಲ, ಈ ಗ್ರಾಮಗಳಲ್ಲಿ ಸಂಚಾರ ಮಾಡಿಕೊಂಡು ಹಾಗಮಂಗಲಕ್ಕೆ ಶ್ರೀ ಸಂಸ್ಥಾನಾಗಮನ ಉಂಟಾಗಲು ಕಾಡೆಗಲು, ಮಾಗಡಿ, ತುಮಕೂರು, ಗುಬ್ಬಿ ತಾಲ್ಲೂಕುಗಳಲ್ಲಿರುವ ಶಿಷ್ಯರುಗಳಿಗೆ ಅನುಗ್ರಹಮಾಡಿ ಚಿಕ್ಕನಾಯಕನಹಳ್ಳಿಗೆ ಬರಲು, ತೀರ್ಥಪುರದ ಶ್ಯಾ॥ ನಂಜಪ್ಪನವರು ಸಂಸ್ಥಾನವನ್ನು ತಮ್ಮ ಗ್ರಾಮಕ್ಕೆ ಬರಮಾಡಿಕೊಂಡು ಶ್ರೀಯವರಿಗೆ ಪಂಚಭಕ್ಷ್ಯದೊಡನೆ ಭಿಕ್ಷಮಾಡಿಸಿ ಯಥಾಶಕ್ತಿ ಪಾದಪೂಜೆ ನಡಸಿದರು. ಈ ರೀತಿಯಾಗಿ ಅಲ್ಲಿ ಅನುಗ್ರಹಿಸಿದನಂತರ ತಿಪ್ಟೂರು ತಾ॥ ಹೊನ್ನವಳ್ಳಿ, ಸಾರ್ಥವಳ್ಳಿ ಮಾರ್ಗವಾಗಿ ತಿಪ್ಟೂರಿಗೆ ಶ್ರೀಯವರ ಸವಾರಿ ಚಿತ್ತೈಸಲು, ಚಾತುರ್ಮಾಸ್ಯ ವ್ರತ ಸಮೀಪವಾಗಲು, ಈ ಗ್ರಾಮದ ಸುಬೇದಾರ್ರು, ಶಿರಸ್ತೇದಾರ್ರು, ಸೂಪ್ರವೈಜರು ಮೊದಲಾದ ಅಧಿಕಾರಸ್ಥರೂ ವೈದಿಕ ಲೌಕಿಕ ಸಭಾ ಮಹಾಜನಂಗಳೂ, ಸಾಹುಕಾರರೂ ಸೇರಿ ಈ ಗ್ರಾಮದಲ್ಲೇ ಚಾತುರ್ಮಾಸ್ಯವ್ರತ ನಡೆಯಬೇಕೆಂದು ಶ್ರೀಸ್ವಾಮಿಗಳವರಿಗೆ ವಿಜ್ಞಾಪಿಸಲು, ಶ್ರೀಯವರು ಅದೇ ರೀತಿ ಒಪ್ಪಿ ಇಲ್ಲೇ ನಿಂತು ಇರುತ್ತಾರೆ. ಸ್ಥಳದವರು ವ್ಯಾಸಪೂಜೆ ದಿವಸ ಮೊದಲುಗೊಂಡು ೭ ದಿವಸದ ವರೆಗೂ ಬಹು ದೊಡ್ಡ ಸಂತರ್ಪಣೆಗಳನ್ನು ಮಾಡಿ, ನಿತ್ಯಾರಾಧನೆಗೆ ಪ್ರತಿದಿನವೂ ಅನುಕೂಲಪಡಿಸಿಕೊಡುತ್ತಾರೆ.—ತಾ ೧೫ ರಲ್ಲಿ ಇಲ್ಲಿಗೆ ತುಂಕೂರ್ ಡೆಪ್ಯುಟಿ ಕಮಿಷನರ್ ಮೆ॥ ಕೆ ಎಸ್. ಶೇಷಗಿರಿರಾವ್‌ರವರು ಬಂದರು ಮೆಂಬರುಗಳು, ಅಮಲ್ದಾರರೇ ಮುಂತಾದ ಅಧಿಕಾರಿಗಳು ಸ್ವೀಕರಿಸಿ ಕಾದಿದ್ದ ಕಾರಣಗಳನ್ನು ಸಮರ್ಪಿಸಿದರು. ಹಾಗೆಯೇ ಆಸ್ಪತ್ರೆ, ಮುನಿಸಿಪಾಲಿಟಿ ಈ ಬಿಡಾರವಿ ಕಾಮಗಾರಿಗಳನ್ನು ಪರಾಂಬರಿಸಿದರು. ನಂತರ ಈಗ ಇಲ್ಲಿಗೆ ಬಂದು ಚಾತುರ್ಮಾಸ್ಯಸಂಕಲ್ಪಕ್ಕಾಗಿ ಮೆ॥ ವಿ ಯರ್. ನರಸಿಂಹಯ್ಯಂಗಾರ್ರವರ ಚತ್ರದಲ್ಲಿ ತಂಗಿರುವ ಶ್ರೀ ಶೃಂಗೇರಿ ತಲಕಾಡು ಶ್ರೀಕೃಷ್ಣಾನಂದಸ್ವಾಮಿಗಳಿಂದ ಕಳುಹಿಸಲ್ಪಟ್ಟದ್ದ ಶ್ರೀಮುಖ ಫಲಮಂತ್ರಾಕ್ಷತೆಗಳನ್ನು ಸ್ವೀಕರಿಸಿದರು.

೩—೪ ತಿಂಗಳಲ್ಲೇ ಪೇಟೆಯಲ್ಲಿ ಕಿತ್ತು ಹಾಕಿರುವ ಎರಡು ಪಕ್ಕದ ಚರಂಡಿ ಕಲ್ಲುಗಳೂ ಹಾಗೆ ಬಿದ್ದಿರುತ್ತವೆ. ಪೇಟೆ ಕಮಿಷನರು ಇದನ್ನೆಲ್ಲಾ ಪರಾಂಬರಿಸಿ ಅನುಕೂಲ ಮಾಡ್ಯಾರು ಎಂದು ಕೆಲವರು ಯೋಚಿಸಿದ್ದರು.—ಕೆರೆಯಲ್ಲಿ ಸದಾ ನೀರಾನು ಹಿಡಿಯುತ್ತಲಿರುವ ಮಡಕ್ಕಾರ ಹುಡುಗರ ಕಾಟದಿಂದ ಮಾಸಿದ್ದರಾದ ಹೆಂಗಸರು ಕೆರೆಗೆ ಹೋಗುವದು ಕಷ್ಟವಾಗಿದೆ. ಈ ಟರ್ಮಿನ ಸಂದುಗೊಂದುಗಳ ಶೀಸಿಗೆ ತೆಗೆಯಲು ಅಲ್ಲಾಯಿದಾ ಒಬ್ಬ ಹಲಾಲುಕೋರನನ್ನು ಇಡುವದೂ, ಕೆಲವು ಕಕ್ಕಸ್ಸುಗಳನ್ನು ಕಟ್ಟಿಸುವದೂ ಅತ್ಯವಶ್ಯವಾಗಿದೆ. ಇಲ್ಲಿ ಸ್ಯಾನಿಟರಿ ಇನ್ಸ್ಪೆಕ್ಟರು ಇರುವಂತೆ ತೋರುತ್ತಿಲ್ಲ. ಮುನಿಸಿಪಾಲಿಟಿಯವರ ದೃಷ್ಟಿ ಸಂದುಗೊಂದುಗಳ ಮೇಲೆ ಬಿದ್ದರೆ ಅನುಕೂಲವಾದೀತು. ಈ ವಿಷಯವನ್ನೆಲ್ಲಾ ನಮ್ಮ ಅಮಲ್ದಾರ್ ಮೆ॥ ಸಿ ಗೋಪಾಲಾಚಾರ್ರು ಚಿತ್ತಕ್ಕೆ ತಂದುಕೊಂಡರೆ ಅನುಕೂಲವಾಗುತ್ತದೆಂದು ನಿರೀಕ್ಷಿಸಲ್ಪಟ್ಟಿದೆ.

ಪ್ರಕಟನೆಗಳು.

ವ್ಯವಸಾಯ ಶಾಸ್ತ್ರ ಪ್ರಶ್ನೋತ್ತರ (೧೯೦೬—೧೯೦೭.)

85-1

ಈಗಷ್ಟೇ ಬಿಕರಿಗೆ ಸಿದ್ಧವಾಗಿದೆ. ಲೋವರ್‌ಪರೀಕ್ಷಾ ವಿದ್ಯಾರ್ಥಿಗಳಿಗೆ ಅತ್ಯಂತ ಉಪಯೋಗವಾದದ್ದು. ಬೆಲೆ ಪ್ರತಿಗೆ ಐದಾಣೆ ವಿಳಾಸ ಮ್ಯಾನೇಜರ್, ದಿ ಎಗ್ಜಿಬಿಷನ್ ಆಫೀಸ್, ಚಿಕ್ಕಬಳ್ಳಾಪುರ.

"ಸಾಲಿಗ್ರಾಮ"

86 1

ಇದು ಮೆ॥ ವೆಂಕಟಕೃಷ್ಣಯ್ಯನವರಿಂದ ಮುದ್ರಿಸಲ್ಪಡುತ್ತಲಿರುವ ಮಾಸಪತ್ರಿಕೆ. ಭಾರತೀಯರೆಲ್ಲರ ವಿದ್ಯಾಭ್ಯಾಸವಿಷಯಗಳನ್ನು, ಅವರ ಇಹ ಪರ ಸೌಖ್ಯಗಳಿಗೆ ಸಾಧಕವಾದ ವಿಷಯಗಳನ್ನೂ ಒಳಗೊಂಡಿರುತ್ತದೆ. ಈ ಪತ್ರಿಕೆಯು ಇಷ್ಟನ್ನು ಎಲ್ಲ ಘಟಗಳಲ್ಲಿದ್ದು ಇವಕ್ಕೆ ಚಂದಾ ವರುಷಕ್ಕೆ ಒಂದು ರೂಪಾಯಿ ಎಂಟಾಣೆ, ವಿದ್ಯಾರ್ಥಿಗಳಿಗೆ ಒಂದು ರೂಪಾಯಿ ಮಾತ್ರ. ಟಪಾಲ್ ಹಾಸಲು ಮಾಫ. ... ... ಕಳುಹಿಸಿಕೊಡಬಹುದು.

ಇಲ್ಲಿ ನೋಡಿ!

66 7

ತುಮಕೂರು ವಿಷ್ಣು ಇಲಾಖೆಯಲ್ಲಿ ಯೂರೋಪಿಯನ್ ಮೇಸ್ತ್ರಿ ವಿಚಾರಣೆಯಿಂದ ಉತ್ತಮ ತರಹದ ಹಾಸನದ ಟೋಪಿಗಳು ಅತಿ ಶ್ರೇಷ್ಠವಾದ ಉಲ್ ದಾರದಿಂದ ತಯಾರಾಗುತ್ತವೆ.

ಈಗ ಕೆಳಗೆ ನಮೂದಾಗಿರುವ ವಿವಿಧ ಬಣ್ಣದ ಟೋಪಿಗಳು ಬೇಕಾದಷ್ಟು ನಮ್ಮಲ್ಲಿ ದಾಸ್ತಾನ (ಸ್ಟಾಕ್) ಉಂಟು.

ಬಣ್ಣಗಳ ವಿಧ:—ಅಚ್ಚಕೆಂಪು, ಮಂದಕೆಂಪು, ಕಪ್ಪುಕೆಂಪು ಮಿಶ್ರವಾದದ್ದು.

ಕ್ರಯ:—೧ ರು. ೭ ಅ ಮಾತ್ರ ೧ ರು. ೩ ಅ.

೧ ಡಜನ್ ಟೋಪಿಗಳನ್ನು ತೆಗೆದುಕೊಳ್ಳುವವರಿಗೆ ಕೇಕಡ ೫ ರಂತೆ ಡಿಸ್‌ಕೌಂಟ್ ಕೊಡಲ್ಪಡುವದು.

ನಮ್ಮ ವಿಳಾಸ:—ಮೇನೇಜರ್,

ಹಾಸನದ ಟೋಪಿ ಕಾರ್ಖಾನೆ, ವಿಷ್ಣು ಇಲಾಖೆ, ತುಮಕೂರು.

ಕಾರ್ಡು ಸೈಜು ೪¼ × ೩¼.

ಫೋಟೋ ತೆಗೆಯುವ ಘುದಾ ಕ್ಯಾಮೆರಾ.

84 1

ಬೆಲೆ ಫಕ್ತ ಮೂರು ರೂಪಾಯಿ.

ಇದರಿಂದ ಬೇಕಾದ ಮನುಷ್ಯನ ಫೋಟೋ ಅವನಿಗೆ ತಿಳಿಯದಂತೆ ತೆಗೆಯಲಿಕ್ಕೆ ಬರುತ್ತದೆ. ವೇಗದಿಂದ ಓಡುವ ಗಾಡಿಯು ಮತ್ತು ಹಾರುವ ಪಕ್ಷಿಯು ಫೋಟೋ ಸಹ ತೆಗೆಯಬಹುದು. ಇದರಲ್ಲಿ ಕಲಿಯತಕ್ಕದ್ದೇನೂ ಇಲ್ಲ. ಈ ಕ್ಯಾಮರಾದ ಮಾಹಿತಿಯನ್ನು ಕೊಳ್ಳುವವರಿಗೆ ನಾವು ಕಾಗದಲ್ಲಿಯೇ ಮಾಡಿಕೊಡುವೆವು. ಎಷ್ಟೋ ಕಡೆಗೆ ಇದಕ್ಕೆ ೧೦ ರಿಂದ ೧೫ ರೂ. ಬೆಲೆ ಬೀಳುತ್ತದೆ. ಆದರೆ ಇದರ ಖರೇ ಕಿಮ್ಮತ್ತು ೩ ರೂಪಾಯಿ ಮಾತ್ರ ಇರುವದು. ಟಪಾಲ್ ಚಾರ್ಜ F ಅಣೆ.

ಛೋಟಾಲಾಲ ಭಗನಲಾಲ ಮಹಾಜನ,
ಠಾಕೂರದ್ವಾರ ರೋಡ, ಪೋಸ್ಟ ಕಾಲಬಾದೇವಿ, ಮುಂಬಯಿ.

ಆರ್ಡರ್ ಬರುತ್ತಿವೆ! ಬೇಗ ನೋಡಿ!

ಪ್ರಪಂಚವೇ ಆಶ್ಚರ್ಯ ಪಡುವದು.

87 1

ದೊಡ್ಡ ಮನುಷ್ಯರೇ, ಹಿಂದುಸ್ಥಾನದಲ್ಲಿ ಪ್ರಕಟನೆಗಳ ಸಂಖ್ಯೆ ಹಾಗಿದೆ. ಕೆಲವು ಕಂಪನಿಯವರು ಮೋಸ ಮಾಡೋಣದರಿಂದ ಪ್ರಕಟನೆಯನ್ನು ಕಂಡರೆ ಜನರು ಅಸಹ್ಯಪಟ್ಟು ಎಸೆಯುತ್ತಾರೆ. ಸತ್ಯವಂತರ ಪ್ರಕಟನೆಯನ್ನೂ ಕೂಡ ನಂಬುವದು ಕಷ್ಟ. ಯಥಾರ್ಥ ವುಳ್ಳ ಕಂಪನಿಯ ನೋಟೀಸುಗಳನ್ನು ಸಹ ಸಕ್ಕರೆ ಔಷಧ ಕಟ್ಟುವುದಕ್ಕೆ ಕೊಟ್ಟು ಬಿಡುವರು. ಆದರೆ ಸಾಹೇಬರುಗಳೇ, ನಮ್ಮ ಕಂಪನಿಯ ಯೋಗ್ಯತೆಯನ್ನು ಒಂದಾವರ್ತಿ ಪರೀಕ್ಷಿಸಿ ನೋಡಿ. ಈ ಪ್ರಕಟನೆಯು ನವೀನವಾದದ್ದು, ಆಶ್ಚರ್ಯಕರವಾದದ್ದು. ನಾವು ೩೦ ಗಂಟೆ ನಡೆಯುವ ಗ್ಯಾರಂಟಿ ಇರುವ ಒಂದು ವರುಷದ ಗ್ಯಾರಂಟಿ ಉಳ್ಳ ಲೀವರ್ ಗಡಿಯಾರವನ್ನು ಕಂಡಿ ಬೆಲೆಗೆ ನಾನಾಪ್ರಕಾರಗಳೊಡನೆ ಕಳುಹಿಸುತ್ತೇವೆ. ಇದರಲ್ಲಿ ಸತ್ಯವಾದ ಕಂಪನಿಯ ಕೀರ್ತಿ ಹೆಚ್ಚಬೇಕೆಂಬುವದೊಂದೇ ನಮ್ಮ ಮುಖ್ಯ ಉದ್ದೇಶ. ಒಂದಾವರ್ತಿ ನಮಗೆ ಬರೆದು ತರಿಸಿ ನಮ್ಮ ಸತ್ಯತೆಯನ್ನು ಪರೀಕ್ಷಿಸಿ. ಗಡಿಯಾರದ ಕೂಡ ನಾವು ಕಳುಹಿಸುವ ಬಹುಮಾನಗಳೆಂದರೆ—ಒಂದು ಗಡಿಯಾರ, ಬಲವಾದದ್ದು, ೩೦ ಗಂಟೆ ನಡೆಯುವದು, ಹಿಂದೆ ಎರಡು ಮುಚ್ಚಳ, ಪರೀಕ್ಷೆಯಿಂದ ಸರಿ ಮಾಡಿದ್ದು, ಒಂದು ಸೊಗಸಾದ ಪೆಟ್ಟಿಗೆಯಲ್ಲಿ, ಇದು ವರುಷದ ಗ್ಯಾರಂಟಿ ಉಳ್ಳದ್ದು. ಒಂದು ಸೊಗಸಾದ ಗಡಿಯಾರದ ಸರಪಳಿ ಆ ಬೆಳೆಗದ ಕ್ಕ ಉಳ್ಳ ಬಲವಾದ ಇಂಗ್ಲಿಷ್ ಖಜಾನೆ ಪೆಟ್ಟಿಗೆ ಒಂದು ಸೊಗಸಾದ ಒಂದು ದೊಡ್ಡ ಡಬ್ಬಿ, ಒಂದಾಸೆಯ ಎಷ್ಟು ಕಾಲದ ಒಂದು ತಿಂಗಳು ಉರಿಯುವ ಲೇಪ ತರದ ಲಾಂದ್ರ ಒಂದಾವರ್ತಿ ಬಳಸಿದರೆ ಅನೇಕ ದಿನಗಳ ತನಕ ಬರೆಯುವ ಫೌಂಟನ್ ಪೆನ್ ಒಂದು ಜೊತೆ ದೊಡ್ಡ ಕಾಲುಚೀಲ, ಬಲವಾದ ದಂತದ ಹ್ಯಾಂಡಲುಳ್ಳ ಚಾಕು ಒಂದು ದೊಡ್ಡ ಕತ್ತರಿ ಒಂದು ದೊಡ್ಡ ಚಾಮದ ಮುದ್ದಾಗಾಗಿರುವ ಚೀಲ, ಒಳ್ಳೇ ಬಾಚಣಿಗೆ ನಂತರ ಕನ್ನಡಿ ಕೂದಲು ಬಾಚಿಕೊಳ್ಳುವ ಬ್ರಷ್, ಪರಟಿನ ಒಂದು ಸೆಟ್ ಗುಂಡಿಗಳು ಒಂದು ಸೊಗಸಾದ ಕನ್ನಡಕ ಒಂದು ಸಾಬೂನಿನ ಡಬ್ಬಿ ಒಂದು ಸೊಟ್ಟೋಡಬ್ಬಿ, ಒಂದು ಕೈಪಸ್ತ್ರ ಎಂದಿಗೂ ಸೋಲುವ ಜೂಜಿನ ಚಮತ್ಕಾರ ಒಂದು ಸುಂದರವಾದ ದೊಡ್ಡ ಕಾಯಕಾಂತಿ ಒಂದು ಪರಸಲ್ ಬರೆಯುವ ... ಲೇಖನಿ ಕಡ್ಡಿಗಳು ೨ ಕಪ್ಪು ಪೆನ್ಸಿಲುಗಳು ೧೦ ಲಕೋಟೆಗಳು ೧೦ ಲೆಟರ್ ಪೇಪರುಗಳು ಪೋಸ್ಟ್ ಮಾಡುವ ಸೊಗಸಾದ ೧೦೦ ಪೋಸ್ಟ್ ಕಾರ್ಡುಗಳು ೩೩ ಸ್ಟೀಲ್ ಮಳ್ಳುಗಳು.

ಇವೆಲ್ಲಕ್ಕೂ ಕ್ರಯ ರೂ. ೩—೪—೦ ಮಾತ್ರವೇ.

ಅರ್ಧ ಹಣ ಅಡ್ವಾನ್ಸ್ ಮನಿಆರ್ಡರ್ ಬಂದಲ್ಲಿ ಉಳಿದ ಅರ್ಧಕ್ಕೆ ವಿ. ಪಿ. ಮಾಡುತ್ತೇವೆ. ಒಪ್ಪದಿದ್ದರೆ ಹಣ ವಾಪಸು ಕಳುಹಿಸುವೆವು.

ಈ ವಿಳಾಸಕ್ಕೆ ಬೇಗ ಬರೆಯಿರಿ:—

ಎಂ. ಎ. ಘಟಾಲಾ ಮತ್ತು ಕಂಪನಿ,

ಮಿಸೆಸ್ ಅಡ್ಡಿ ಹಾರ್ಟಿಂಜ್. ಮಿಸೆಸ್ ಮೇರಿ ಮೇಯರ್. ಮಿಸೆಸ್ ಫ್ರಾನ್ಸಸ್ ವಿಲ್ಸನ್. 38-20

ಮಿಸೆಸ್ ಅಡ್ಡಿ ಹಾರ್ಟಿಂಜ್, ೮೦೦ ಕೋರ್ಟ್ ಬೀದಿ, ಸೈರಾಕ್ಯೂಸ್, ನ್ಯೂಯಾರ್ಕ್, ಈಕೆ ಬರೆಯುವುದೇನೆಂದರೆ—

"ನಾನು ಕಳೆದ ಹನ್ನೆರಡು ವರುಷಗಳಿಂದಲೂ ಪೆರೂನಾವನ್ನು ಉಪಯೋಗಿಸುತ್ತಿದ್ದೇನೆ. ಇದಕ್ಕೆ ಸಮಾನವಾದ ಔಷಧವು ಪ್ರಪಂಚದಲ್ಲೇ ಇಲ್ಲವೆಂದು ನಿಜವಾಗಿ ಹೇಳಬಲ್ಲೆನು.

ನನಗೆ ಎಲ್ಲಾ ವಿಧವಾದ ಶೀತಗಳನ್ನೂ ಇತರ ಅನೇಕ ಕಾಯಿಲೆಗಳನ್ನೂ ಬಾರದಂತೆ ಈ ಔಷಧವು ಖಂಡಿತವಾಗಿ ತಡೆದಿರುತ್ತದೆ. ನನ್ನ ಮನೆಯಲ್ಲಿ ಪೆರೂನಾ ಔಷಧದ ಸೀಸೆಯೊಂದು ಯಾವಾಗಲೂ ಇದ್ದೇ ಇರುವುದು. ವರುಷಕ್ಕೆ ಎರಡು ಮೂರು ಸಲ ನನಗೆ ಗಂಟಲಲ್ಲಿ ಬಾಧೆಯುಂಟಾಗುತ್ತಲೇ ಇರುತ್ತಿತ್ತು.

"ಖಂಡಿತವಾಗಿ ತಡೆಯುವ ಔಷಧ."

"ಪ್ರತಿಸಲ ನನಗೆ ಬಾಧೆ ಉಂಟಾದಾಗಲೂ ಎರಡು ಮೂರು ವೇಳೆ ವೈದ್ಯನನ್ನು ನಾನು ಕರೆಸಿಕೊಳ್ಳಬೇಕಾಗಿತ್ತು. ನಾನು ಪೆರೂನಾವನ್ನು ಉಪಯೋಗಿಸತಕ್ಕವಳಾಗಿದ್ದಾಗ್ಯೂ ಈಗ್ಗೆ ಸುಮಾರು ಎರಡು ವರುಷಗಳವರೆಗೆ ನನ್ನ ಗಂಟಲು ಬಾಧೆಗೋಸ್ಕರ ಅದನ್ನು ತೆಗೆದುಕೊಳ್ಳಬೇಕೆಂಬ ಯೋಚನೆಯೇ ನನಗೆ ಉಂಟಾಗಿರಲಿಲ್ಲ.

"ಈ ಬಾಧೆಯನ್ನು ತಡೆಯುವುದಕ್ಕೆ ಪೆರೂನಾವನ್ನು ತೆಗೆದುಕೊಂಡೆನು. ಅಂದಿನಿಂದೀಚೆಗೆ ನನ್ನ ಗಂಟಲು ಎಲ್ಲಾ ವಿಧವಾದ ಬಾಧೆಯೂ ತಪ್ಪಿಹೋಗಿರುವುದು ನಿವಾರಣೆಯಾಗಿದೆ ಎಂದು ಬಹಳ ಸಂತೋಷದಿಂದ ಹೇಳುತ್ತೇನೆ.

"ಆ ಗಂಟಲುಬಾಧೆಯನ್ನು ಪ್ರತಿಸಲವೂ ಪೆರೂನಾ ಸೇವನೆಯಿಂದ ತಡೆಯಬಲ್ಲೆನು ನಿಜವಾಗಿ ನಾನು ಪೆರೂನಾ ಇಲ್ಲದೆ ಒಂದು ನಿಮಿಷವೂ ಇರಲಾರೆನು."

ಕ್ಷಯರೋಗವನ್ನು ನಿವಾರಣೆ ಮಾಡುವುದಕ್ಕೆ ಸಕಲ ಜನಾಂಗಗಳೂ ವಿಶೇಷವಾದ ಪ್ರಯತ್ನಗಳನ್ನು ಮಾಡುತ್ತಲಿದ್ದಾರೆ.

ಎಲ್ಲೆಲ್ಲೂ ಅನೇಕಾನೇಕ ಕ್ಷಯರೋಗಪೀಡಿತರನ್ನಿಟ್ಟು ಚಿಕಿತ್ಸೆಮಾಡುವುದಕ್ಕೆ ಸರ್ಕಾರಿ ಖರ್ಚಿನಿಂದ ವಿಸ್ತಾರವಾದ ಆಲಯಗಳನ್ನು ಸ್ಥಾಪನೆಮಾಡುತ್ತಿದ್ದಾರೆಂದು ಕೇಳುತ್ತೇವೆ.

ವೈದ್ಯರೇ ಕಟ್ಟಿಸಿಕೊಂಡಿರುವವರೆಲ್ಲಾ ಎಲ್ಲಾ ಸ್ಥಿತಿಗಳಲ್ಲೂ ಇದಕ್ಕೆ ಪ್ರಿಯರೋಗಟೀರತರ ಚಿಕಿತ್ಸೆಮಾಡುವುದರಲ್ಲಿ ಬಿಸಿಲು, ನಿರ್ಮಲವಾದ ಹೊಸಗಾಳಿ, ಬಯಲುಪ್ರದೇಶ, ಇವುಗಳ ಮೂಲಕ ಮಾಡತಕ್ಕ ಚಿಕಿತ್ಸೆಗಳೇ ಪರಮಾವಶ್ಯವಾದ ಪರಿಹಾರಗಳೆಂದು ಸರ್ವಸಾಮಾನ್ಯವಾಗಿ ಒಪ್ಪಿಕೊಂಡಿರುತ್ತಾರೆ.

ಡಾಕ್ಟರ್ ಹಾರ್ಟ್‌ಮನ್‌ರವರು ಅನೇಕ ವರುಷಗಳಿಂದಲೂ ನಿರ್ಮಲವಾದ ಹೊಸಗಾಳಿಯ ಚಿಕಿತ್ಸೆಯೇ ಕ್ಷಯರೋಗಕ್ಕೆ ಸರ್ವೋತ್ಕೃಷ್ಟವಾದ ಚಿಕಿತ್ಸೆಯೆಂದು ಹೇಳುತ್ತಿದ್ದಾರೆ. ಇದಲ್ಲದೆ ಈ ಬಿಳಿಯ ಪ್ಲೇಗೆಂಬ ರೋಗದ ನಾನಾ ತರದ ಕಠಿಣ ಬಾಧೆಗಳಿಗೆಲ್ಲಾ ಪೆರೂನಾ ಔಷಧವು ಬಹುಮಟ್ಟಿಗೆ ಪರಿಹಾರವನ್ನು ಕೊಡತಕ್ಕದ್ದೆಂದು ಒಪ್ಪಿಕೊಂಡಿದ್ದಾರೆ.

ಮಿಸೆಸ್ ಮೇರಿಮೇಯರ್, ಥಾಂಪ್ಸನ್ ಬೀದಿ, ಷೆಲ್‌ರೋಡ್ ಬಳಿ, ವೆಸ್ಟ್‌ಫೀಲ್ಡ್ ಲೌಸಿಯಾನಾ, ನ್ಯೂಯಾರ್ಕ್, ಈಕೆ ಬರೆಯುತ್ತಾಳೆ.—

"ನಾನು ಅನೇಕ ವರುಷಗಳ ವರೆಗೂ ಕೆಮ್ಮಿನ ಉಪದ್ರವದಲ್ಲಿ ಕಷ್ಟಪಡುತ್ತಿದ್ದೆನು."

"ಅನೇಕ ವೇಳೆ ಅದರ ಬಾಧೆಯಿಂದ ರಾತ್ರಿಯಲ್ಲಿ ಅರ್ಧಭಾಗ ನನಗೆ ನಿದ್ರೆಯೇ ತಪ್ಪಿಹೋಗುತಿತ್ತು. ನನಗೆ ಕ್ಷಯರೋಗ ಪ್ರಾಪ್ತವಾಗಿದೆ ಎಂದು ಅನೇಕರು ಯೋಚಿಸಿದ್ದರು.

ಕ್ಷಯರೋಗವೆಂಬ ಹೆದರಿಕೆಯುಂಟಾಗಿತ್ತು.

"ಎರಡು ವರುಷಗಳ ಕೆಳಗೆ ಒಬ್ಬ ಹೆಂಗಸು ಪೆರೂನಾವನ್ನು ಸೇವಿಸೆಂದು ಶಿಫಾರಸು ಮಾಡಿದಳು. ನಾನು ಪೆರೂನಾ ತೆಗೆದುಕೊಳ್ಳುವುದಕ್ಕೆ ಶುರುಮಾಡಿದೆನು. ಈಗ ನನ್ನ ಕೆಮ್ಮಿನ ಉಪದ್ರವೆಲ್ಲಾ ಸಂಪೂರ್ಣವಾಗಿ ವಾಸಿಯಾಗಿರುತ್ತದೆ.

"ಪೆರೂನಾವು ನನ್ನ ಕಾಯಿಲೆಯನ್ನು ಪೂರಾ ವಾಸಿಮಾಡಿದೆ ಎಂದು ಸಂತೋಷಪಟ್ಟು ಹೇಳುತ್ತೇನೆ ಆಗಾಗ್ಗೆ ನನಗೆ ಸ್ವಲ್ಪ ಅಲಸ್ಯವಾದಾಗಲೆಲ್ಲಾ ಪೆರೂನಾವನ್ನು ತೆಗೆದುಕೊಳ್ಳುತ್ತೇನೆ, ಮತ್ತು ಅದನ್ನು ನನ್ನ ಮಕ್ಕಳಿಗೂ ಕೂಡ ಕೊಡುತ್ತೇನೆ.

"ಶೀತ, ನೆಗಡಿ, ಕೆಮ್ಮುಗಳಿಗೆ ಪೆರೂನಾ ಸರ್ವೋತ್ತಮವಾದ ಔಷಧವು. ಅದರಿಂದ ನನಗೆ ಎಷ್ಟು ಸಹಾಯವಾಗಿದೆಯೋ ಅದನ್ನು ಅನೇಕ ಜನರಿಗೆ ವಿವರಿಸಿ ಹೇಳಿರುತ್ತೇನೆ."

ಪೆರೂನಾ ಎಂಬ ಔಷಧವು ಕೆಮ್ಮಲನ್ನು ಶಮನ ಮಾಡುವುದು; ಶ್ಲೇಷ್ಮವನ್ನು ಕಡಮೆ ಮಾಡುತ್ತದೆ; ರೋಗಿಗೆ ಬಲಕಾರಿಯಾಗಿದೆ; ಆಹಾರದಲ್ಲಿ ರುಚಿಯನ್ನು ಹೆಚ್ಚಿಸುವುದು, ಮತ್ತು ಅನೇಕ ಸಂದರ್ಭಗಳಲ್ಲಿ ಸುಖವಾದ ನಿದ್ರೆಯನ್ನು ಕೊಡುತ್ತದೆ.

ಆದರೆ ಪೆರೂನಾ ಔಷಧವು ಕ್ಷಯರೋಗವನ್ನು ಬಾರದಂತೆ ತಡೆಯುವುದರಲ್ಲಿ ಗುಣಕೊಡುವುದು ಕ್ಷಯರೋಗ ಬಂದ ಮೇಲೆ ಅದನ್ನು ನಿವಾರಣೆ ಮಾಡುವದಕ್ಕೆ ಅಷ್ಟು ಬಲಕಾರಿಯಾಗದಲ್ಲ.

ಶೀತ, ನೆಗಡಿ, ಕೆಮ್ಮಿನಿಂದಲೇ ಪ್ರಾರಂಭವಾಗಿ ಅಲಕ್ಷ್ಯಮಾಡಿದರೆ ಅದೇ ಅಂತ್ಯದಲ್ಲಿ ಕ್ಷಯರೋಗವಾಗಿ ಪರಿಣಮಿಸುತ್ತದೆಂದು ಎಲ್ಲಾ ಕಡೆಗಳಲ್ಲೂ ತಿಳಿದುಬಂದಿರೋದರಿಂದ ಆ ವಿಕಾರವನ್ನೂ ನಿವಾರಣೆ ಮಾಡುವಂಥಾ ಔಷಧವೇ ಕ್ಷಯರೋಗ ಪರಿಹಾರದ ಔಷಧವೆಂದು ಪೂರ್ಣಭರವಸದಿಂದ ನಂಬಬೇಕಾಗಿದೆ.

ಕ್ಷಯರೋಗದ ಪ್ರಾರಂಭದೆಸೆಯನ್ನೂ ಕಠಿಣವಾದ ಕೆಮ್ಮುಗಳನ್ನೂ ನಿಂತ ಶೀತ ನೆಗಡಿಗಳನ್ನೂ ಅನುಭವಿಸುತ್ತಿದ್ದ ಸಾವಿರಾರು ರೋಗಿಗಳು ಅವಕ್ಕೆಲ್ಲಾ ಪೆರೂನಾವೇ ಕ್ಷೇಮಕರವಾದ ಮತ್ತು ನಂಬಿಕೆಯಾದ ಪರಿಹಾರವೆಂದು ತಿಳಿಸಿರುತ್ತಾರೆ.

ಮಿಸೆಸ್ ಫ್ರಾನ್ಸಸ್ ವಿಲ್ಸನ್, ೩೦ ನೆಲ್ಸನ್ ಬೀದಿ, ಕ್ಲಿಂಟನ್, ಮ್ಯಾಸ್, ಪಂಚಾಕೆಯು ಬರೆಯುವುದೇನೆಂದರೆ.—

"ಕಾಯಿಲೆಯನ್ನು ಅನುಭವಿಸುತ್ತಿದ್ದಾಗ ನನ್ನ ಸ್ಥಿತಿಯನ್ನೂ ಈಗ ನಾನಿರುವ ಸ್ಥಿತಿಯನ್ನೂ ನೀವು ನೋಡಿದ ಪಕ್ಷದಲ್ಲಿ ನಾನು ಸಂತೋಷದಿಂದ ಪೆರೂನಾವನ್ನು ಹೊಗಳುವಂಥಾ ಮಾತುಗಳೇನೂ ವಿಶೇಷವಾದದ್ದಲ್ಲವೆಂದು ಯಥಾರ್ಥವಾಗಿ ಒಪ್ಪಿಕೊಳ್ಳುತ್ತೀರಿ.

"ಬಹಳ ಕಠಿಣವಾದ ಶೀತವು ನನಗೆ ಪ್ರಾಪ್ತವಾಗಿ ಅದರಿಂದ ನನ್ನ ಶ್ವಾಸಕೋಶವೂ ಶ್ವಾಸನಾಳಗಳೂ ಕೆಟ್ಟುಹೋಗಿದ್ದವು.

"ನೀವು ಬರೆದು ಹೇಳಿದ ಪ್ರಕಾರವೇ ನಾನು ಮಾಡುತ್ತಾ ಬಂದೆನು. ಆರು ಬಾಟ್ಲುಗಳಷ್ಟು ಪೆರೂನಾವನ್ನು ಸೇವಿಸಿದನಂತರ ನಾನು ಯಥಾಪ್ರಕಾರ ಹಾಸಿಗೆಯಿಂದ ಏಳುವಂತಾದೆನು

"ಪೆರೂನಾವು ಒಂದು ಅದ್ಭುತವಾದ ಔಷಧವೆಂದು ನಾನು ಯೋಚಿಸಿಕೊಂಡಿರುತ್ತೇನೆ."

ಹೊಸದಾಗಿ ಪ್ರಾಪ್ತವಾದ ಶೈತ್ಯವನ್ನು ಅತಿ ಜಾಗ್ರತೆಯಾಗಿ ಪರಿಹರಿಸುವುದರಲ್ಲೂ ನಿಂತ ಶೀತ ನೆಗಡಿಗಳನ್ನು ನಿವಾರಣ ಮಾಡುವುದರಲ್ಲೂ ಪೆರೂನಾವು ಈ ದೇಶದ ಎಲ್ಲಾ ಕಡೆಗಳಲ್ಲೂ ಪ್ರಸಿದ್ಧಿ ಪಡೆದಿರುತ್ತದೆ. ಕ್ಷಯರೋಗಕ್ಕೆ ಪೆರೂನಾ ಔಷಧವು ಬಹು ಬಲವಾದ ಪರಿಹಾರವೆಂದು ಹೆಸರಾಗಿರುತ್ತದೆ.

ಕ್ಷಯರೋಗ ನಿವಾರಣೆ.

ಮೆ|| ವಿಲಿಯಂ ಸ್ಪೈಯರ್, ೫೦೫೬ ಸ್ಟೈಲ್ ಬೀದಿ, ಪಶ್ಚಿಮ ಫಿಲಡೆಲ್ಫಿಯಾ, ಪಾ., ಏನು ಬರೆಯುವುದನ್ನು ಓದಿನೋಡಿ:—

"ನನಗೆ ಬಂದಿದ್ದ ನೆಗಡಿ ಶೀತವನ್ನು ವಾಸಿ ಮಾಡಿಕೊಳ್ಳುವುದಕ್ಕೆ ಪೆರೂನಾ ಔಷಧವನ್ನು ಉಪಯೋಗಿಸುವುದಕ್ಕಿಂತ ಮೊದಲು ನನ್ನ ಯೋಚನೆಗೆ ತೋರಿದ ಔಷಧಿಗಳನ್ನೆಲ್ಲಾ ಸೇವನೆ ಮಾಡಿದ್ದೆನು

"ಬೆಳಿಗ್ಗೆ ಹಾಸಿಗೆಯಿಂದ ಏಳುವಾಗ ನನಗೆ ತುಂಬಾ ನಿತ್ರಾಣವಾಗುತ್ತಿತ್ತು. ನನ್ನ ಶ್ವಾಸಕೋಶಗಳು ಒಣಗಿ ಹುಣ್ಣಾಗಿದ್ದಂತೆ ನನಗೆ ತೋರಿಬರುತ್ತಿತ್ತು ಅನುಭವ ಪೂರ್ವಕವಾಗಿ ತಿಳಿಯದೆ ಇರತಕ್ಕವರು ನಾನು ಅನುಭವಿಸಿದ ಕಷ್ಟವನ್ನೆಲ್ಲಾ ತಿಳಿದುಕೊಳ್ಳಲಾರರು ಅದರ ಪರಿಹಾರಕ್ಕೆ ಯಾರ್‍ಯಾರು ಏನೇನು ಔಷಧ ಚಿಕಿತ್ಸೆಗಳನ್ನು ಹೇಳಿದರೋ ಅದನ್ನೆಲ್ಲಾ ಮಾಡಿಕೊಂಡೆನು. ಆದರೆ ಯಾವುದೂ ನನಗೆ ಸಂಪೂರ್ಣವಾದ ಗುಣಕೊಡದೆ ಹೋಯಿತು

"ಪೆರೂನಾ ಔಷಧವನ್ನು ತೆಗೆದುಕೊಳ್ಳಲು ಆರಂಭಿಸಿ ಒಂದು ಬಾಟ್ಲಿಯಷ್ಟು ತೀರುವದರೊಳಗಾಗಿ ನನಗೆ ತುಂಬಾ ಸುಧಾರಿಸಿತು. ಆರುವಾರ ನನ್ನ ರೋಗವೆಲ್ಲಾ ನಿವಾರಣೆಯಾಗುವತನಕ ಅದನ್ನೇ ಸೇವಿಸಿದೆನು ಪೆರೂನಾವಿನ ಗುಣವನ್ನು ಅಷ್ಟಿಷ್ಟೆಂದು ಹೊಗಳಿ ಹೇಳಲಾರೆನು ಅದರ ಯೋಗ್ಯತೆಯನ್ನು ಪ್ರತಿ ಒಬ್ಬರೂ ತಿಳಿದುಕೊಳ್ಳಬೇಕೆಂದು ಅಪೇಕ್ಷಿಸುತ್ತೇನೆ"

ನೆಗಡಿ ಶೈತ್ಯ ಕೆಮ್ಮುಗಳನ್ನು ಅನುಭವಿಸುವವರು ಒಂದು ಬಾಟ್ಲಿ ಪೆರೂನಾ ಔಷಧವನ್ನು ತರಿಸಿಕೊಂಡು, ಉಪಯೋಗಮಾಡಿ ಅದರ ಯೋಗ್ಯತೆಯನ್ನು ತಿಳಿದುಕೊಳ್ಳಬೇಕಾಗಿದೆ.

ಈ ಔಷಧ ಸಿಕ್ಕುವ ಸ್ಥಳಗಳು:—

(೧) ಹಿಚ್‌ಕಾಕ್ ಅಂಡ್ ಸನ್ಸ್, ಬೆಂಗಳೂರು.

(೨) ಇಂಗ್ಲಿಷ್ ಡ್ರಗ್ ಕಂಪನಿ, ೩೯೮ ಮಿಂಟ್ ಬೀದಿ, ಮದರಾಸ್.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿ[ತಿ]

3—8—1907 ರಿಂದ 9—8—1907 ರ ವರೆಗೆ

ಸ್ಥಳ.	ಪ್ಲೇಗ್ ತಗಲಿದ್ದು.	ಪ್ಲೇಗ್ ಸತ್ತದ್ದು.	ತಗಲಿದ್ದು.
ಬೆಂಗಳೂರು ಪಟ್ಟಣ	19	17	0
ಮೈಸೂರು ,,	93	21	0
ಬೆಂಗಳೂರು ಡಿಸ್ಟ್ರಿಕ್ಟ್	117	84	0
ಮೈಸೂರು ,,	100	57	1
ಕೋಲಾರ್ ,,	13	8	27
ಕೋಲಾರ್ ಚಿನ್ನದ ಗಣಿಗಳು	18	10	0
ತುಮಕೂರು ಡಿಸ್ಟ್ರಿಕ್ಟ್	0	0	7
ಹಾಸನ ,,	9	5	0
ಚಿತ್ರದುರ್ಗ ,,	0	0	0
ಕಡೂರ್ ,,	16	8	0
ಶಿವಮೊಗ್ಗ ,,	22	7	0
ಜುಮ್ಲಾ.	399	218	35

ಶಾಲಿವಾಹನ ಶಕ ವರುಷಂಗಳು ೧೮೨೯ ನೇ ಪ್ಲವಂಗನಾಮ ಸಂವತ್ಸರದ ಶ್ರಾವಣ ಶುದ್ಧ ಚತುರ್ದಶಿ ಗುರುವಾರದಿಂದ ಶ್ರಾವಣ ಬ[ಹುಳ] ಪಂಚಮಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ.

೧೯೦೭ ನೇ ಇಸವಿ ಅಗಸ್ಟ್.

ತಾ.	ವಾರ.	ತಿಥಿ.	ಘಳಿಗೆ.	ನಕ್ಷತ್ರ.	ಘಳಿಗೆ.	[illegible]
22	ಗುರು †	ಚತುರ್ದಶಿ	31-24	ಶ್ರ	34 28	6
23	ಶುಕ್ರ ‡	ಪೌರ್ಣಮಿ	27-10	ಧ	30-36	7
24	ಶನಿ ;;	ಪ್ರಾಡ್ಯಮಿ	24-10	ಶ	27-25	8
25	ರವಿ ::	ಬಿದಿಗೆ	20-3	ಪೂಭಾ	25-23	9
26	ಚಂದ್ರ ¶	ತದಿಗೆ	16-26	ಉತ್ತಭಾ	23-52	10
27	ಕುಜ ,,	ಚೌತಿ	14-24	ರೆ	23-46	11
28	ಬುಧ *	ಪಂಚಮಿ	13-30	ಅ	21 18	12

† ಅಶ್ವಲಾಯನೋಪಾಕರ್ಮ ‡ ಆಪಸ್ತಂಭೋಪಾಕರ್ಮ, ಮಹಾಲಕ್ಷ್ಮೀವ್ರತಂ. ;; ಗಾಯತ್ರೀಜಪ, ಶ್ರಾವಣಶನಿವಾರ :: [illegible] ದ್ವಯಂ ¶ ಸಂಕಷ್ಟಚತುರ್ಥಿ. ,, ಮಂಗಳಗೌರೀವ್ರತ * [illegible] ತ್ಯಯೋಗ.

ಪೇಟೇ ಧಾರಣೆ.

ವಿನಸು.	ಮೈಸೂರು.	ಬೆಂಗಳೂರು.
ಸಣ್ಣ ಅಕ್ಕಿ ಪಲ್ಲ ೧ಕ್ಕೆ ರೂ.	೧೩-೪-೦	೧೪-[illegible]
ಕಂಬಾತಿ ಅಕ್ಕಿ ಸಣ್ಣ	೧೩-೮-೦	೧೩-[illegible]
,, ದಪ್ಪ	೧೨-೮-೦	೧೨-[illegible]
ಜೀರಸಾಲೆ ಅಕ್ಕಿ	೨೨-೮-೦	೧೩-[illegible]
ಸಣ್ಣ ಅವಲ್	೧೫-೮-೦	೧೫-[illegible]
,, ಸಾಯಂ	೧೪-೪-೦	೧೪-[illegible]
ಶಿಗರೀ ಬೇಳೆ ಪಲ್ಲ ೧ಕ್ಕೆ	೧೪-೦-೦	೧೪-[illegible]
,, ದುಯಂ	೧೩-೦-೦	೧೩-[illegible]
ಕೈ ರಾಗಿ ಪಲ್ಲ ೧ಕ್ಕೆ	೫-೦-೦	೬-೦-[illegible]
ಕಾರ್ರಾಗಿ	೫-೮-೦	೬-೦
ಜೋಳ	೬-೦-೦	೯-೦
ಕಡಲೆಕಾಳು ಪಲ್ಲ ೧ಕ್ಕೆ	೧೦-೦-೦	೧೧-೦
ಬಿಳೀ ಅವರೆ	೮-೧೪-೦	೮-೦
ಹೆಸರು	೧೦-೮-೦	೧೦-[illegible]
ಉದ್ದು	೧೦-೮-೦	೧೦-೮
ಕಡಲೆ	೧೨-೮-೦	೧೧-[illegible]
ಎಳ್ಳು ಪ ೧೨೭ ಕ್ಕೆ	೧೮-೦-೦	೨೩-[illegible]
ಹುರುಳಿ	೫-೧೨-೦	೬-೮
ಪರಳು ೧೨೭ ಸೇರಿಗೆ	೧೪-೦-೦	೧೨-[illegible]
ಸೀಗೇಕಾಯಿ ಮಣ ೧ಕ್ಕೆ	೨-೦-೦	೨-[illegible]
ಮೆಣಸಿನಕಾಯಿ	೨-೮-೦	೨-೦[illegible]
,, ದುಯಂ	೨-೪-೦	೨-[illegible]
ಬೆಲ್ಲ ದೊಡ್ಡ ಅಚ್ಚು	೪-೮-೦	ಮ ೨-[illegible]
ಒಳ್ಳೆಣ್ಣೆ ಮಣ ೧ಕ್ಕೆ	೫-೧೦-೦	೫-[illegible]
ಹರಳೆಣ್ಣೆ ,,	೫-೦-೨-೦	೫-[illegible]
ಕೊತ್ತುಂಬರಿ ಪಲ್ಲ ೧ಕ್ಕೆ	೫-೧೨-೦	೮-[illegible]
ಉಪ್ಪು ,,	೫-೪-೦	೫-೦[illegible]
ಹುಣಿಸೇ ಹಣ್ಣು	೦-೬-೦	೦-[illegible]
,, ಹಳೇದು	೦-೧೪-೦	೦[illegible]
ತುಪ್ಪ ಮಣ ೧ಕ್ಕೆ	೧೫-೦-೦	೧[illegible]
ಸೀಮೆಯೆಣ್ಣೆ ಪಟ್ಟ ೧ಕ್ಕೆ	೪-೧೫-೦	೪[illegible]
ತೆಂಗಿನಕಾಯಿ ೧೦೦ಕ್ಕೆ	೬-೮-೦	೬[illegible]
ಅಡಿಕೇಕಾಯಿ ಮಣ ೧ಕ್ಕೆ	೧-೦-೦	[illegible]
ಅಂಕೋಲದ ಕಾಯಿ ಮಣ ೧ಕ್ಕೆ	೦-೧೨-೦	೦-[illegible]
ಚಿನ್ನ (ಪೌನ್) ಕೆಂಪು	೧೫-೬-೦	೧೫[illegible]
,, ,, ಪಸಿಮೆ	೧೫-೧೦-೦	೧೫[illegible]
,, ,, ಗಟ್ಟಿ ತೊಲ ೧ಕ್ಕೆ	೨೩-೧-೨-೦	೨೩[illegible]
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	೮೫-೦-೦	೮[illegible]

Printed and Published by the Rev. E. THOMPSON, M. A., Proprietor and Manager, Wes[leyan] Mission Press, Mysore. 22/8/1907.

REGISTERED
M 20

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೧ ಮೈಸೂರು—೧೯೦೭ ನೇ ಇಸವಿ ಆಗಸ್ಟ್ ತಾರೀಖು ೨೯ ನೇ ಗುರುವಾರ. ಸಂಚಿಕೆ ೧೩

BASEL MISSION WEAVING ESTABLISHMENT, 59-6

MANGALORE, SUOTH CANARA.

ದಕ್ಷಿಣ ಕನ್ನಡ ಜಿಲ್ಲಾ ಮಂಗಳೂರು ಬಾಸೆಲ್ ಮಿಶ್ಯನ್ (ಬತ್ತಿ) ನೆಯ್ಯುವ ಕಾರಖಾನೆಯಲ್ಲಿ

ನಾನಾ ವಿಧದ (ಮಿಕ್ಸ್ಚರ್) ಟ್ವೀಡ್ ನಮೂನೆಯು ಕೋಟು ಇಜಾರುಗಳ ಚೆಕ್ಸ್ ಬಟ್ಟೆಗಳೂ, ಷರ್ಟಿಂಗ್ ಯಾನೆ ಕಮೀಜು ಶಿಕಾರಿ ಬಟ್ಟೆಗಳೂ, ಕರ್ಟೆಂಗ್ ಯಾನೆ ತೆರೆಯ ಬಟ್ಟೆಗಳೂ, ಬೇರೆ ಇತರ ಬಟ್ಟೆಗಳೂ, ಟೇಬಲ್ ಕ್ಲೋತ್ ಯಾನೆ ಮೇಜುವಸ್ತ್ರಗಳೂ, ಟುವಾಲು ವಗೈರೆಗಳು ನಾಜೂಕಾಗಿ ತಯಾರಿಸಲ್ಪಟ್ಟು ಯಾವಾಗಲೂ ಬಿಲ್ಲೆಯಾಗಿಯಾಗಲೀ ರಖಂ ಆಗಿಯಾಗಲೀ ಮಾರಾಟಕ್ಕೆ ತಯಾರಿರುತ್ತವೆ.

ಒಳ್ಳೇ ಕಮಿಶ್ಯನ್ :—ರೂಪಾಯಿ ೧೦೦ ರ ಮೇಲೆ ಮಾಲುಗಳನ್ನು ತೆಗೆದುಕೊಳ್ಳುವ ಗಿರಾಕಿಗಳಿಗೆ ಯಾ ಸಾಹುಕಾರರಿಗೆ ಕೊಡಲಾದೀತು ಹೆಚ್ಚಿನ ವಿವರ ಖುದ್ದಾಗಿ ಯಾ ಕಾಗದ ಮೂಲಕ ತಿಳುಕೊಳ್ಳಬಹುದು

ನಮೂನೆ ಯಾ ಮಾದರಿಗಳು :—ಪರ ಊರಿನ ಸಾಹುಕಾರರು ಈ ಕೆಳಗಿನ ವಿಳಾಸಕ್ಕೆ ಬರೆ ಕೊಂಡಲ್ಲಿ ಕಳುಹಿಸಲ್ಪಡುವವು

ವಿಶೇಷ ಲಕ್ಷಿಸತಕ್ಕದ್ದು :—ಈ ನಮ್ಮ ಮಾಲುಗಳಿಗೆ ಹಚ್ಚಿ ಕಾಣಿಸಿರುವ "ಟ್ರೇಡ್ ಮಾರ್ಕ" ಎಂಬ ವ್ಯಾಪಾರಗುರ್ತು ಇರುವ ಲೇಬಿಲ್ ಯಾನೆ ಚೀಟು ಹಚ್ಚಿರುತ್ತದೆ ಈ ಗುರ್ತಿನ ಚೀಟುಗಳು ಇಲ್ಲದವುಗಳೆಲ್ಲಾ ಖಾಜಾ ಮಿಕ್ಸ್ಚರ್ ಮಾಲುಗಳಲ್ಲವೆಂದು ತಿಳಿಯತಕ್ಕದ್ದು.

ಶರ್ತ :—ನಗದಾಗಿ ಇಲ್ಲವೆ ಮಾಲುಗಳು ವಿ. ಪಿ. ಟಪ್ಪಾಲು ಮೂಲಕ ಕಳುಹಿಸಲ್ಪಡಬೇಕಾದ್ದಲ್ಲಿ ಕಾಲುಪಾಲು ಮೌಲ್ಯವನ್ನು ಮುಂಗಡವಾಗಿ ರವಾನಿಸತಕ್ಕದ್ದು.

ಪತ್ರಗಳನ್ನು ಇಂಗ್ಲೀಷಿನಲ್ಲಿ ಯಾ ಕನ್ನಡದಲ್ಲಿ ಸ್ಪಷ್ಟವಾಗಿ ಬರೆಯತಕ್ಕದ್ದು —

☞ ಈ "ಟ್ರೇಡ್ ಮಾರ್ಕ"ನ್ನಾಗಲೀ ನಾವು "ಕೋಪಿರೈಟ್" ಪಡೆದಿರುವ ಲೇಬಿಲುಗಳನ್ನಾಗಲೀ ಇಲ್ಲವೆ ಆ ನಮೂನೆಯ ಬೇರೆ ಲೇಬಿಲುಗಳನ್ನಾಗಲೀ ಯಾರಾದರೂ ಇತರ ಮಾಲುಗಳ ಮೇಲೆ ಪ್ರಯೋಗಿಸಲೂ ಮಾಡಲೂ ಕೂಡದು

ವಿಳಾಸ :—BASEL MISSION WEAVING ESTABLISHMENT,
MANGALORE S CANARA

WILLIAM & CO., BOMBAY.

ವಿಲಿಯಂ ಮತ್ತು ಕಂಪನಿ, ಫೋರ್ಟು, ಮುಂಬಯಿ.

ಗಜಕರ್ಣದ ಮುಲಾಮು.

27 27

ಇದನ್ನು ಹಾಗಿಸುವದರಿಂದ ಎಲ್ಲಾ ತರದ ಕಜ್ಜಿಯು ನಾಶವಾಗುವದು. ಮೂರು ಸಾರಿ ಹಾಗಿಸುವದರೊಳಗೆ ಗಜಕರ್ಣವು ಹೋಗುವದು. ಇದನ್ನು ಹಚ್ಚಿದಲ್ಲಿ ಉರಿಯು ಬರುವದಿಲ್ಲ ಚರ್ಮ ಕಪ್ಪಾಗುವದಿಲ್ಲ.

ಇದರಿಂದ ಗುಣ ಕಂಡುಬರುವದಿಲ್ಲವಾದರೆ ಹಣ ಹಿಂತಿರುಗಿ ಕೊಡಲ್ಪಡುವದು. ತ್ವರೆಮಾಡಿರಿ! ಕೊಂಡುಕೊಳ್ಳಿರಿ!! ಕ್ರಯ ಕಮ್ಮಿ. ಒಂದು ಸಾರಿ ಪರೀಕ್ಷಿಸಿ ನೋಡಿರಿ!!

ಡಬ್ಬಿ ೧ಕ್ಕೆ ಕಿಮ್ಮತ್ತು ೦-೬-೦.
ವಿ. ಪಿ. ೦-೧೦-೦.

ಕಫಹಾರಿ ೧ ರೂ. ೪ ಆ. ಕಸ್ತೂರಿ ೩-೩ ೧೦ ಆ. ಕೇಶವರ್ಧಿನೀ ತೈಲ ೧ ರೂ. ಕಣ್ಣಮುಲಾಮು ೩ ಆಣೆ ಕುಸುಮಾರಿ ಗುಟಿಕೆ ೧ ರೂ. ತಾಂಬೂಲ ಗುಟಿಕೆ ೮ ಆಣೆ

ಸುಂದರೀ ತೈಲ ೪ ಆಣೆ ನಪ್ರಗುಟಿಕ ರೂಪಾಯಿ ೧, ದಂತಮಂಜನ ೩ ಆಣೆ ನೇತ್ರಾಂಜನ ೪ ಆಣೆ

ಅಮೃತಾಂಜನ

ಬಾಟ್ಲಿ ಒಂದಕ್ಕೆ ಕಿಮ್ಮತು ೮ ಆಣೆ. ವಿ. ಪಿ. ೧೨ ಆಣೆ.

ಶಿಖ ಮತ್ತು ಘಾಯ, ವಾತ, ಎದೆನೋವು, ಗಂಟ್ಲುನೋವು, ಶಿರೋಭಾರ, ಸಂಧಿವಾತ, ತಲೆನೋವು, ಮೂಲವ್ಯಾಧಿ, ಶೀತ, ಕೆಮ್ಮು, ಈ ಎಲ್ಲಾ ತರದ ರೋಗಕ್ಕೆ **ಅಮೃತಾಂಜನವು** ಒಂದು ದಿವ್ಯವಾದ ಔಷಧವಾಗಿರುತ್ತದೆ ಇದರಿಂದ ಗುಣ ಕಂಡುಬರುವದಿಲ್ಲವಾದರೆ ಹಣ ಹಿಂತಿರುಗಿ ಕೊಡಲ್ಪಡುವದು. ತ್ವರೆ ಮಾಡಿರಿ! ಮುವತ್ತು ವರ್ಷದಿಂದ ಅನುಭವಿಸುವ ವಾತದ ನೋವು ನಿಮ್ಮ ಒಂದೇ ಬಾಟ್ಲಿ ಅಮೃತಾಂಜನದಿಂದ ಪೂರ್ಣವಾಗಿ ಗುಣ ಸಿಕ್ಕಿತು. ದಯಮಾಡಿ ೧೨ ಬಾಟ್ಲಿ ವಿ. ಪಿ. ಮೂಲಕ ರವಾನಿಸಿರಿ ವೆ. ರಾಮಭಟ್ಟ, ವಿಟ್ಲ, ದ. ಕನ್ನಡ

ನಾನು ನನ್ನ ಸ್ನೇಹಿತರೂ **ಅಮೃತಾಂಜನವನ್ನು** ಬಹಳವಾಗಿ ಪ್ರೀತಿಸುತ್ತೇನೆ. ಸುರಾಬಪ್ಪನಾದ, ಪಂಜಾಬು. **ಅಮೃತಾಂಜನ**ಕ್ಕಿಂತಲೂ ಹೆಚ್ಚು ಉಪಯೋಗ ಉಳ್ಳ ಮುಲಾಮು ಬೇರೆ ಯಾವದೂ ಇಲ್ಲ. ಗಂಗಾಸೇವಕ, ಕಲ್ಕತ್ತಾ, ಆರು ವರ್ಷದಿಂದ ವಾತಪೀಡಿತವಾದ ನನ್ನ ಗೆಳೆಯನಿಗೆ **ಅಮೃತಾಂಜನವು** ಜೀವದಾನ ಕೊಟ್ಟಿತು ರಾಮಚಂದ್ರರಾವ್. **ಅಮೃತಾಂಜನವು** ಸಾವಿರಾರು ಜನರಿಗೆ ಗುಣಕೊಟ್ಟಿರುತ್ತದೆ. ವೀರಭದ್ರಪ್ಪ, ಟುಮಕೂರು

ಸಂಜೀವನದ ಹಾಗಿರುವ **ಅಮೃತಾಂಜನವನ್ನು** ನನ್ನ ಮನೆಯಲ್ಲಿ ಸದಾಕಾಲ ಇಟ್ಟದೇನೆ ಹನುಮಯ್ಯ, ಬೆಂಗಳೂರು. ನಿಮ್ಮ **ಅಮೃತಾಂಜನವು** ಎಂಥಾ ಕಠಿಣವಾದ ತಲೆನೋವನ್ನಾದರೂ ನಿಲ್ಲಿಸುತ್ತದೆ ಗಂಗಣ್ಣರಾವ್, ಕೊಡಗು.

ನಿಮ್ಮ ಅಮೃತಾಂಜನವು ಶೀತ, ಕೆಮ್ಮು, ತಲೆನೋವು, ಇತ್ಯಾದಿಗಳಿಗೆ ಅತೀ ಉತ್ತಮವಾದದ್ದು ಆದದರಿಂದ ದಯಮಾಡಿ ೩ ಬಾಟ್ಲಿ ಅಮೃತಾಂಜನ, ೨ ಬಾಟ್ಲಿ ಗಜಕರ್ಣದ ಮುಲಾಮನ್ನು ವಿ. ಪಿ. ಮೂಲಕ ರವಾನಿಸಿರಿ.— ಆರ್. ಡಿ. ಸೋಜಾ ಮ್ಯಾನೇಜರ್, ಪೊನ್ನಂಪೇಟೆ ಎಸ್ಟೇಟು, ಮರಕಾರ, ಕೊಡಗು

ವಿಲಿಯಂ ಮತ್ತು ಕಂಪನಿ, ೧೬ ಓಕ್ ಲೇನ್, ಫೋರ್ಟು, ಮುಂಬಯಿ.
ಟೆಲಿಗ್ರಾಪು ಅಡ್ರೆಸು; "ಅಮೃತಾಂಜನ" ಮುಂಬಯಿ.

ನಿಮಗೆ ನೋವು ಇದೆಯೋ ?

ಅ8 14

ಹಾಗಾದರೆ "ಕ್ಲೆಮೆಂಟ್ ಯವರ ಮ್ಯಾಜಿಕ್ ಬಾಂ" ನ್ನು ಏಕೆ ಉಪಯೋಗಿಸಬಾರದು? ಅತ್ಯಾಶ್ಚರ್ಯಕರವಾದ ಬಾಧಾಪಹಾರಿಣಿಯು! ಈಗಿನ ಶತಮಾನದಲ್ಲಿ ಕಂಡು ಹಿಡಿದ ದೊಡ್ಡ ನೂತನವು!

ಈ ರಾಜ ಔಷಧವನ್ನು ಮೊಟ್ಟಮೊದಲು ತೊಡೆಯುತ್ತಲೆ ಕೆಲವು ನಿಮಿಷಗಳೊಳಗಾಗಿ ನರ ಮತ್ತು ಮಾಂಸ ಸಂಬಂಧವಾದ ಪಾರ್ಶ್ವನೋವು, ಕೀಲುಗಳ ಬಾಧೆ, ಕಿಬ್ಬೊಟ್ಟೆ ನೋವು, ಬೆನ್ನೆಳೆಯುವದು, ತಲೆನೋವು, ಕೆಮ್ಮು, ಕೀಲುಗಳು ಕತ್ತರಿಸುವದು, ಕೊರಳು ಊತ, ಕೈಕಾಲು ಒಡೆತ ಇವುಗಳನ್ನೆಲ್ಲಾ ವಿದ್ಯುಚ್ಛಕ್ತಿಯಂತೆ ಗುಣಪಡಿಸುವದು. ಈ ಔಷಧವು ಆಶ್ಚರ್ಯಕರವಾಗಿ ಗುಣಪಡಿಸುವದರಿಂದ ಎಲ್ಲರಲ್ಲಿಯೂ ಪ್ರಸರಿಸುತ್ತಾ ಬರುವದು. ಇತರ ಔಷಧಿಗಳು ಗುಣಪಡಿಸದೆ ಹೋದಾಗ ಡಾಕ್ಟರ್ ಫೀಜನ್ನು ಕಡಿಮೆಮಾಡಿ ಇದು ನಿಸ್ಸಂದೇಹವಾಗಿಯೂ ಗುಣಪಡಿಸುವದು.

ಕ್ರಯ :—೧ ಬಾಟ್ಲಿಗೆ ೧೨ ಆಣೆ, ಪೋಸ್ಟೇಜ್ ೪ ಆಣೆ. ೩ ಬಾಟ್ಲಿಗೆ ಅಂಚೆವೆಚ್ಚ ಸೇರಿ ರೂ. ೨—೪ ಆಣೆ. ಎಲ್ಲಾ ಕೆಮಿಸ್ಟ್ ಷಾಪುಗಳಲ್ಲಿ ದೊರೆಯುವದು.

ನಮ್ಮ ವಿಳಾಸ :—ಎಫ್. ಡಬ್ಲಿಯು. ಆರ್ಕ,
ಸಿಮೆಟ್ರಿ ರೋಡ್, ವೇಪೇರಿ, ಮದರಾಸ್.

ಜ್ವರಹರಿ. 74-6



ಇದು ಸಾಧಾರಣ ಜ್ವರ, ಚಳಿಜ್ವರ, ಮರುಕಜ್ವರ, ಪಿತ್ಥಜ್ವರ ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನು ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ತಾಲೂಕಾ ಸಬ್ ಡಿವಿಜನ್ ಆಫೀಸರ್ ಎಸ್. ಬಿ. ವೆಂಕಟಪತಿ ಅಯ್ಯನವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨ ಔನ್ಸಿನ ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು ಇನ್ನೂ ಜನಗಳು ಅದನ್ನೇ ಕೇಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨ ಔನ್ಸಿನ ಸೀಸೆಯನ್ನು ವಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ :—ಸೀಸೆ ೧ ಕ್ಕೆ ೮ ಆಣೆ, ೧ ರೂ., ೧—೮ ರೂ., ರೂ. ೨—೧೨ ಆ., ೧೨ ರೂ.; ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

****

ಬಿ. ಮ. ಂ. ಕ ಷ ನ ರ.

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೊಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು.

ಕಡಪದ ಆಸಿಸ್ಟೆಂಟ್ ಸರ್ಜನ್ ಗಣಪತಿಯವರು—ಜಿಂದಾ ತಿಲಿಸ್ಮಾತ್ ವಂ ಕರ್ಪೂರವನ್ನು ನಾನೂ ನನ್ನ ಹಾಜರಾದವರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧವೆಂತ ಬರೆದಿದ್ದಾರೆ.

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯರುಗಳಲ್ಲೂ, ದೊಡ್ಡ ಅಂಗಡಿಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ...
ಹನ್ನಿಯವರ ಗ್ರೇಟ್ ಇಂಡಿಯನ್ ಔಷಧಗಳ ಡಿಪೋ
ಸೆಕೆಂಡ್ ಲೈನ್ ಬೀಚ್, ಮದ್ರಾಸ್

ವ್ಯವಹಾರ ನಿರ್ಣಯ

ಎಂಬ ಕನ್ನಡ **ಲಾ** ಪುಸ್ತಕವು.

58-15

ಲಾ ತಿಳಿದವರಿಂದಲೂ, ತಿಳಿಯದವರಿಂದಲೂ ಇದುವರೆಗೆ ಬರೆಯಲ್ಪಟ್ಟಿರುವ ಈ ತೆರದ ಪುಸ್ತಕಗಳನ್ನೆಲ್ಲ ನೋಡಿ ಅವೆಲ್ಲಕ್ಕಿಂತಲೂ ಹೆಚ್ಚು ಪ್ರಯೋಗವನ್ನು ಇದೊಂದು ಪುಸ್ತಕದಿಂದುಂಟುಮಾಡಬೇಕೆಂಬು ಈ ದೊಡ್ಡ ಗ್ರಂಥವು ಹೊಸದಾಗಿ ಬರೆಯಲ್ಪಟ್ಟಿದೆ ಇದರಲ್ಲಿ ೧೪ ಶಾಸ್ತ್ರಗಳು, ೪ ಕೋಡುಗಳು, ಹಿಂದೂ, ಮಹಮ್ಮದೀಯ ಲಾಗಳು, ಛೀಫ್ ಕೋರ್ಟು ಹೈ ಕೋರ್ಟುಗಳ ಪೈಸಲುಗಳು, ಗೌ॥ ಸರ್ಕ್ಯುಲರ್‌ಗಳು ಪ್ರೊಸೀಡಿಂಗ್ಸ್‌ಗಳು, ಸಕಲ ವಿಧ ವ್ಯವಹಾರಗಳು, (ಕ್ರಯ ಆಧಾರ ದಾನ ವಿಲ್ಲು ಮೊದಲಾದ) ೭೯ ತೆರದ ದಸ್ತಾವೇಜುಗಳ ನಮೂನೆಗಳು, ಈ ಸಂಬಂಧದ ಲಾ ವಿಧಿಗಳು, ಸಿವಲ್ ಕ್ರಿಮಿನಲ್, ಪೊಲೀಸ್, ರೆವಿನ್ಯು ಸಂಬಂಧದ ವ್ಯಾಜ್ಯಗಳು, ೫೯ ತೆರದ ಅರ್ಜಿಗಳು, ಈ ಸಂಬಂಧದ ಲಾ ವಿಧಿಗಳು, ಇವೆಲ್ಲವೂ ಅಡಕವಾಗಿವೆ.

ಪುಸ್ತಕ ದೊಡ್ಡದು ಪುಟಗಳು ಒಟ್ಟು ೬೩೪	ಬೆಲೆ ಕಡಮೆ. ಅಂಚೆ ಹಾಸಲು ಸೇರಿ ರೂ ೧—೮—೦

ಗ್ರಂಥಕರ್ತರು. — ಎಂ ವಾಲ್ಲೂರಾಧ್ಯರು, ೧ನೆ ಗ್ರೇಡ್ ಪ್ಲೀಡರ್, ಶ್ರೀರಾಮಪೇಟೆ, ಮೈಸೂರು. — ಇದೇ ವಿಳಾಸ

ಔಷಧ ತಕ್ಕೊಂಡು ಗುಣವಾಗುವದಕ್ಕಿಂತಲೂ ರೋಗ ಬಾರದಂತೆ ನೋಡಿಕೊಳ್ಳುವುದು ಉತ್ತಮ.

SCOTT'S EMULSION. 31-24

(ಸ್ಕಾಟ್ಸ್ ಇಮಲ್‌ಷನ್)

ಈಗ ಪ್ರಬಲವಾಗಿರುವ ಪ್ಲೇಗ್, ಮಹಾಮಾರಿರೋಗ, ವಾಂತಿಭೇದಿ ಅಥವಾ ಶ್ವಾಸಕೋಶದ ರೋಗಗಳ ಭಯಕ್ಕೆ ಒಳಪಡುವ ಅಗತ್ಯವಿಲ್ಲ

ದೇಹ ಬಲಹೀನರನ್ನೂ ದುರ್ಬಲರನ್ನೂ ಬೇಗನೆ ಸಶಕ್ತರನ್ನಾಗಿ ಮಾಡುತ್ತದೆ

ಅಸ್ವಸ್ಥವನ್ನು ದೂರ ಹೋಗಲಾಡಿಸಿ, ಶರೀರದಲ್ಲಿರುವ ಬಲಹೀನ ಭಾಗಗಳನ್ನು ಬಲಪಡಿಸಿ, ಸಂಪೂರ್ಣ ಸೌಖ್ಯವನ್ನು ಉಂಟುಮಾಡುತ್ತದೆ.

ಕೈಸೋಕದೆ ತಯಾರಾದದ್ದು.

ಎಲ್ಲಾ ಔಷಧ ವ್ಯಾಪಾರಗಾರರಲ್ಲೂ ಮಾರಾಟವಾಗುತ್ತದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,
ಔಷಧಗಳ ಕಾರ್ಖಾನೆ,
ಲಂಡನ್, ಇಂಗ್ಲೆಂಡ್

ಈ ಚಿಹ್ನೆಯ ಮುದ್ರೆ ಇರುವ ಸೀಸೆಯನ್ನೇ ಕೊಂಡುಕೊಳ್ಳಿ

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

75-5

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು? ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾರಿ ಬಿಕರಿಯಾಗುತ್ತಿರುವ ಟೋಪಿಗಳು ದಾರವೆಲ್ಲ ಬಿಳಾದದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ — (೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲ ನೆಟ್ಟಗೆ ವಿಲಾಯತಿಯಿಂದಲೇ ಬರುವದು. (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕ ಪುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ, ಚನ್ನಾಗಿ ಕೆಲಸದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ನೇರಾ ಬರೆದು ತರಿಸಿಕೊಳ್ಳಿ. ಅಗ್ಗವಾದ ದಪ್ಪ ಚನ್ನಾಗಿಲ್ಲದ್ದು ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ.

ಸಾದ, ಕೆಂಪು ಕಪ್ಪು, ನೀಲಿ, ಕಾಫಿ ಟೋಪಿಗಳು ೧ ರೂ ೮ ಆ.; ೧ ರೂ ೬ ಆ; ೧ ರೂ ೪ ಆ

ರೇಷ್ಮೆ ಚುಕ್ಕೆಯುಳ್ಳ ಟೋಪಿಗಳು ೧ ರೂ ೮ ಆ, ೨ ರೂ

ಜರದ ಟೋಪಿಗಳು ೧ ರೂ. ೧೨ ಆ; ೧ ರೂ. ೮ ಆ; ೧ ರೂ ೬ ಆ.

ಚೀನಿ ಟೋಪಿಗಳು ೧ ರೂ. ೮ ಆ, ೧ ರೂ. ೬ ಆ.

ಕೊಡುವಾಗ ಟೋಪಿ, ಸೂರ್ಥಿ ಮೇಜೋಡು, ಅರ್ಧ ಮೇಜೋಡು ... ಪಟ್ಟು, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥ ... ಗೆ ಕೊಟ್ಟು ಕಳುಹಿಸುವೆವು.

... ಸಾಹೇ ... ಹಾಸನದ ಟೋಪಿ ಕಾರ್ಖಾನೆ, ಹಾಸನ.

CHAMBERLAIN'S COUGH REMEDY.

ಚೇಂಬರ್ಲೇನ್‌ಯವರು ಕಂಡು ಹಿಡಿದ ಕೆಮ್ಮಿನ ಔಷಧವು.



4-9

ಶೀತದ ಕೆಮ್ಮು, ಗಂಟಲು ಗಾರೆನ್ನುವುದು, ಹಾವಿಗೆಮ್ಮು, ನಾಯಿಗೆಮ್ಮು, ಎಲ್ಲಾ ತರದ ಶೀತ, ಗಂಟಲು ಎದೆಯಲ್ಲೂ ಹುಟ್ಟುವ ಸಮಸ್ತ ವ್ಯಾಧಿಗಳು—ಇವಕ್ಕೆಲ್ಲಾ ಈ ಔಷಧವು ಬಹಳ ಪ್ರಯೋಜನವಾಗಿದೆ

ಆ ಕೆಮ್ಮನ್ನು ಅಲಕ್ಷ್ಯಮಾಡಬೇಡಿ ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ ಅದರ ಮೇಲೆ ನ್ಯುಮೋನಿಯಾ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವುದು. ತರುವಾಯ ಉಗುಳಿನಲ್ಲಿ ರಕ್ತಬೀಳುವುದು, ಹಾಗೆಯೇ ಕ್ಷಯರೋಗಕ್ಕೆ ಆಸ್ಪದವಾಗುವುದು.

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟಲಿನಲ್ಲಿ ಶ್ಲೇಷ್ಮ ಕಟ್ಟುವುದನ್ನೂ ಶ್ಲೇಷ್ಮ ಬೀಳುವುದನ್ನೂ ಖಂಡಿತವಾಗಿ ನಿವಾರಣೆಮಾಡುತ್ತದೆ. ಉಸುರು ಹೊಯ್ಯುವುದು ಕಷ್ಟವಾಗಿದ್ದರೆ ಅದನ್ನು ಕೂಡಲೇ ಪರಿಹರಿಸುತ್ತದೆ. ಅಪಾಯಕರವಾದ ಕೆಮ್ಮಿನ ಶಬ್ದವನ್ನು ನಿಲ್ಲಿಸಿಬಿಡುತ್ತದೆ ಎದೆ ಒಣಗುವಂಥಾ ಕೆಟ್ಟಸ್ಥಿತಿಯನ್ನು ಸಂಪೂರ್ಣವಾಗಿ ವಾಸಿಮಾಡಬಲ್ಲದು. ಕೆಮ್ಮನ್ನು ಶಮನಮಾಡಿ, ನೀವು ಸುಖವಾಗಿ ನಿದ್ರೆಮಾಡುವಂತೆ ಮನಸ್ಸನ್ನು ಉಲ್ಲಾಸಗೊಳಿಸುತ್ತದೆ

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇರಿಸಿರುವುದಿಲ್ಲ

ಈ ಔಷಧವು ವನಸ್ಪತಿಗಳ ತಯಾರಿ

ಕೈಯಿಂದಮುಟ್ಟದೆ ತಯಾರಾಗಿದೆ.

ಎಲ್ಲೆಲ್ಲೂ ಬಿಕರಿಯಾಗುವುದು. ಸಣ್ಣಸೀಸೆಗೆ ೧ ರೂಪಾಯಿ. ದೊಡ್ಡಸೀಸೆಗೆ ೨ ರೂಪಾಯಿ

ಕಾವ್ಯದ ವೆಂಕಟಾಚಲ ಪಂಡಿತ, ಶ್ರೀಸೀತಾರಾಘುವ ವೈದ್ಯಶಾಲಾ, ಕೊಳ್ಳೇಗಾಲ, ಇವರ ಸಿದ್ಧೌಷಧಗಳು.

26-28

೧ ಲೋಕಾಮಯಹರ ಕಸ್ತೂರೀ ಮಾತ್ರೆ — ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು. ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ



ಚಳಿಜ್ವರ, ಜ್ವರ, ಹೊಟ್ಟೆಶೂಲೆ, ಸಂದುಗಳ ನೋವು, ಮೈ ಕೈ ಕಾಲು ಕೊಡತ (ಭಾರ), ಮೈ ನಡುಕ, ಶೀತವಾತಗಳ ಬಾಧೆ. ಅಜೀರ್ಣ, ಅಗ್ನಿಮಾಂದ್ಯ, ಹಲ್ಲುನೋವು, ಕೆಮ್ಮು, ನೆಗಡಿ, ಸೀನಿಕೆ, ಅರೋಚಕ, ಇನ್ನೂ ಅನೇಕರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ.

ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಖಾಯಿಲೆಗೂ ದಾರಿಕೊಡದೆ, ನೀರು ಗಾಳಿಗಳ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧಿ ಮಾಡಿ ವೃದ್ಧಿ ಪಡಿಸುತ್ತದೆ

ಸ್ತ್ರೀಯರ ಪ್ರಸೂತಿಶೂಲೆ, ಮಕ್ಕಳ ಎಳವು ಜ್ವರ. ಚಳ್ಳೆಜ್ವರ, ಕೃತ್ರಿಮಗಳನ್ನು ಗುಣಪಡಿಸುತ್ತದೆ

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ ಒಳ್ಳೇ ಶಕ್ತಿವರ್ಧಕವಾಗಿದೆ

೨೦ ಮಾತ್ರೆಯುಳ್ಳ ಡಪ್ಪಿಗೆ ೪ ಆಣೆ, ೫ ಡಪ್ಪಿನ ೧ ಡಪ್ಪಿ ಕೆಚ್ಚು. ೧ ರಿಂದ ೧೨ ಡಪ್ಪಿ ವರೆಗೆ ಪೋಸ್ಟೇಜು ೬ ಆಣೆ.

ವಿಳಾಸ:—ಎಸ್. ಎಸ್. ಆರ್. ವೈದ್ಯಶಾಲಾ,
ಲಕ್ಷ್ಮೀವಿಲಾಸ ರೋಡ್, ಮೈಸೂರು

"ಸಾಧ್ವಿ"

86 2

ಇದು ಎಂ॥ ವೆಂಕಟಕೃಷ್ಣಯ್ಯನವರಿಂದ ಮುದ್ರಿಸಲ್ಪಡುತ್ತಿರುವ ವಾರಪತ್ರಿಕೆ ಭಾರತಮಹಿಳೆಯರ ವಿದ್ಯಾಭ್ಯಾಸವಿಷಯಗಳನ್ನೂ, ಅವರ ಇಹ ಪರ ಸೌಖ್ಯಗಳಿಗೆ ಸಾಧಕವಾದ ವಿಷಯಗಳನ್ನೂ ಒಳಗೊಂಡಿರುತ್ತದೆ ಈ ಪತ್ರಿಕೆಯು ಇಪ್ಪತ್ತನಾಲ್ಕು ಪುಟಗಳುಳ್ಳದ್ದು ಇದಕ್ಕೆ ಚಂದಾ ವರುಷಕ್ಕೆ ಒಂದು ರೂಪಾಯಿ ಎಂಟಾಣೆ. ವಿದ್ಯಾರ್ಥಿನಿಯರಿಗೆ ಒಂದು ರೂಪಾಯಿ ಮಾತ್ರ ಟಪಾಲ್ ಹಾಸಲು ಮಾಫಿ ಬೇಕಾದವರು ಕೆಳಗಿನ ವಿಳಾಸದಿಂದ ತರಿಸಿಕೊಳ್ಳಬಹುದು.

ವಿಳಾಸ :—ಮ್ಯಾನೇಜರ್, "ಸಾಧ್ವಿ," ಮೈಸೂರು.

೨,೦೦೦ ವರುಷಗಳ ಸಮಾಚಾರ!

ಶ್ರೀ ಮಚ್ಛಂಕರಾಚಾರ್ಯರ ಚರಿತ್ರೆಯು, ಇವರ ಫೋಟೋ !!

88 2

ಶಂಕರವಿಜಯಾದಿ ಗ್ರಂಥಗಳಲ್ಲಿ ಮುಖ್ಯವಾಗಿ ೭ ನ ಆಚಾರ್ಯರ ಚರಿತ್ರೆಗಳು ಅಡಕವಾಗಿವೆ ೧೦ ಕ್ಕೆ ೧ ಕೊಡ್ಡು

ಕ್ರಯ ಪ್ರತಿ ೧ ಕ್ಕೆ ಹಾಸಲು ಸಹಿತ ೧೨ ಆಣೆ ... ನ ಫೋಟೋ ೧ ಕ್ಕೆ ಹಾಸಲು ಸಹಿತ ೫ ಆಣೆ. ೧೦ ಕ್ಕೆ ೧ ಕೊಡ್ಡು ಫೋಟೋಗಳು ೬ ಕ್ಕೆ ಕಡಿಮೆ ವಿ ಪಿ ಮಾಡಲ್ಪಡುವದಿಲ್ಲ

ವಿಳಾಸ.— ಸುಬ್ಬನರಸಿಂಹಯ್ಯ,
ದಿವಾನ್ ವೆಂಕಟೇ ಅರಸಿನವರ ಛಾಯ, ಮೈಸೂರು

ಕನ್ನಡ ಲೋಯರ್ ಸೆಕಂಡರಿ ಮೊದಲಾದ ಪರೀಕ್ಷೆಗಳಿಗೆ ಹೋಗತಕ್ಕ ವಿದ್ಯಾರ್ಥಿಗಳಿಗೆ ಇದು ಬಹಳ ಒಳ್ಳೇ ಸಮಯಸಿದ್ಧವಾಗಿದೆ. ಕ್ರಯ ಸುಲಭ ಎಂಟೇ ಆಣೆ.

ಉಪನ್ಯಾಸ ಮಂಜರಿ.

83 3

ಈ ಪುಸ್ತಕವು ಅನೇಕ ಉಪಯುಕ್ತವಾದ ಉಪನ್ಯಾಸಗಳನ್ನು ಅಡಗಿಸಿಕೊಂಡಿರುವುದು. ಇದನ್ನು ಓದುವುದರಿಂದ ವಿದ್ಯಾರ್ಥಿಗಳು ಉಪನ್ಯಾಸ ಬರೆಯುವದರಲ್ಲಿ ಸಮರ್ಥರಾಗುವದರಲ್ಲಿ ಸಂಶಯವಿಲ್ಲ. ಲೋಯರ್ ಸೆಕಂಡರಿ ಮೊದಲಾದ ಪರೀಕ್ಷೆಗಳಿಗೆ ಹೋಗತಕ್ಕ ವಿದ್ಯಾರ್ಥಿಗಳಿಗೆ ತುಂಬಾ ಸಹಾಯಕವಾಗಿರುವುದು. ಉಪನ್ಯಾಸ ಬರೆಯತಕ್ಕ ಕ್ರಮವನ್ನೆಲ್ಲಾ ವಿಶದವಾಗಿ ತಿಳಿಸುವುದು. ಒಳ್ಳೆ ಅಂದವಾಗಿ ಕಪ್ಪು ಕಾಗದದ ಮೇಲೆ ಮುದ್ರಾಕ್ಷರದಲ್ಲಿ ಛಾಪಾ ಆಗಿರುತ್ತದೆ.

ಕ್ರಯ. ೦—೮—೦ ವಿ ಪಿ ಮೂಲಕ ೦—೧೦—೦

ಒಟ್ಟಿಗೆ ೧೦ ಪ್ರತಿಗಳನ್ನು ತರಿಸಿಕೊಳ್ಳುವವರಿಗೆ ಒಂದು ಪ್ರತಿಯು ಉಚಿತವಾಗಿ ಕೊಡಲ್ಪಡುವುದು.

ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬೇಕು.

ಪಿ. ವೀರಪ್ಪ, ಪ್ಲೀಡರ್, ಚಿಕ್ಕಬಳ್ಳಾಪುರ.

ಉಪಾಧ್ಯಾಯರೆಲ್ಲರೂ

ಓದತಕ್ಕ ನೋಟೀಸ್.

29 4

ಮೈಸೂರು ಸರ್ಕಾರದ ವಿದ್ಯಾಭ್ಯಾಸದ ಇಲಾಖೆ ಇನ್ಸ್‌ಪೆಕ್ಟರ್ ಜನರಲ್‌ರವರು ಕೆಳಗೆ ಕಂಡ ಪುಸ್ತಕಗಳನ್ನು ಸರ್ಕಾರದ ಸ್ಕೂಲುಗಳಲ್ಲಿಯೂ, ಗ್ರಾಂಟ್ ಪಡೆಯತಕ್ಕ ಪಾಠಶಾಲೆಗಳಲ್ಲಿಯೂ ಮತ್ತು ಆಂಗ್ಲೋ ವರ್ನಾಕ್ಯುಲರ್ ಸ್ಕೂಲ್‌ಗಳಲ್ಲಿಯೂ ಮತ್ತೊಂದು ಹುಕುಂ ಕೊಡುವತನಕ ಉಪಯೋಗಿಸಬೇಕೆಂದು ಕಳೆದ ಜೂಲೈ ೨೫ನೆ ತಾರೀಖಿನ ಮೈಸೂರು ಗೆಜೆಟ್ಟಿನಲ್ಲಿ ಫಾಯಿಷ್ ಮಾಡಿರುತ್ತಾರೆ.

ಭೂಗೋಳ ಶಾಸ್ತ್ರದ ಮೊದಲನೆಯ ಪುಸ್ತಕ (೧ನೆಯ ೨ನೆಯ ಭಾಗ, ಒಂದೇ ಪುಸ್ತಕ. ಈ ಪುಸ್ತಕದಲ್ಲಿ ನಾಲ್ಕು ಬಣ್ಣದ ನಕ್ಷೆಗಳೂ ಮಕ್ಕಳಿಗೆ ಭೂಗೋಳಶಾಸ್ತ್ರವನ್ನು ವಿಶದವಾಗಿ ಹೇಳಕೊಡುವುದಕ್ಕೆ ಸಾಹಿತ್ಯವಾಗಿರುವ ಬೇರೆ ಹನ್ನೆರಡು ಚಿತ್ರಗಳೂ ಇರುತ್ತವೆ). ಎರಡನೇ ಕ್ಲಾಸಿಗೆ ಕ್ರಯ ೪ ಆಣೆ.

ಭೂಗೋಳ ಸಂಗ್ರಹ (ಮ॥ ಟಿ. ಎಂ. ರಾಮಸ್ವಾಮಯ್ಯನವರು ಬರೆದುದು ಈ ಪುಸ್ತಕವು ಪ್ರಕಟವಾದಂದಿನಿಂದ ಅನೇಕ ಸಹಸ್ರ ಪ್ರತಿಗಳು ಮಾರಾಟವಾಗಿವೆಯೆಂದು ವಾಚಕ ಮಹಾಶಯರು ತಿಳಿದಿರಬಹುದು.) ಮೂರನೇ ಕ್ಲಾಸಿಗೆ ಕ್ರಯ ೪ ಆಣೆ

ಮೇಲ್ಕಂಡ ಪುಸ್ತಕಗಳನ್ನು ಉಪಾಧ್ಯಾಯರೆಲ್ಲರೂ ತಡಮಾಡದೆ ಜಾಗ್ರತೆಯಲ್ಲಿ ತರಿಸಿಕೊಳ್ಳತಕ್ಕದ್ದು.

ವಿಳಾಸ:—ಮ್ಯಾನೇಜರ್,
ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

ಪ್ರದರ್ಶನದ ಪ್ರಕಟನೆ.

81-3

೧೯೦೭ ನೇ ಇಸವಿ ಮೈಸೂರು ದಸರಾ ಇಂಡಸ್ಟ್ರಿಯಲ್ ಮತ್ತು ಅಗ್ರಿಕಲ್ಚರಲ್ ಎಗ್ಜಿಭಿಷನ್.

ಈ ಪ್ರದರ್ಶನವು ಸನ್ ೧೯೦೭ನೆ ಇಸವಿ ಅಕ್ಟೋಬರ್ ೫ನೆ ತಾರೀಖಿಗೆ ಪ್ರಾರಂಭವಾಗಿ ೨ನೇ ನವೆಂಬರ್ ... ನೇ ತಾರೀಖಿಗೆ ಪೂರೈಸುತ್ತದೆ.

ಈ ಪ್ರದರ್ಶನಕ್ಕೆ ವಸ್ತುಗಳನ್ನು ಕಳುಹಿಸಲು ಅಪೇಕ್ಷೆಯುಳ್ಳವರು ಈ ಸಂಬಂಧದ ಪ್ರಕಟನೆಗಳನ್ನು ತಾಲ್ಲೂಕು ಅಮಲ್ದಾರರುಗಳಿಂದಲೂ ಮತ್ತು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮೀಷನರುಗಳಿಂದಲೂ ಹೊಂದಬಹುದು ... ಮೂಲಕ ಪ್ರಸಿದ್ಧಪಡಿಸಿರುತ್ತೆ.

ಬೆಂಗಳೂರು, ೮ನೇ ಆಗಸ್ಟ್, ೧೯೦೭.

ಕೆ. ಸುಬ್ಬರಾವ್
ಸೆಕ್ರೆಟರಿ.

ವೃತ್ತಾಂತ ಪತ್ರಿಕೆ.

ಸನ್ ೧೯೦೭ ನೇ ಇಸವಿ ಆಗಸ್ಟ್ ತಾ॥ ೨೯ ನೇ ಗುರುವಾರ.

ದನಕರಗಳ ಪ್ರದರ್ಶನವು.

ಮೈಸೂರು ಸರ್ಕಾರದವರು ಮುಂದಿನ ನವರಾತ್ರಿ ಉತ್ಸವದ ಕಡೆಯಲ್ಲಿ ರಾಜಧಾನಿಯ ಪಶ್ಚಿಮಾಭಿವೃದ್ಧಿಯಲ್ಲಿರುವ ಪೊಲೀಸ್ ಲೈನ್ ಎಂಬ ಕಟ್ಟಡದಲ್ಲಿ ರೈತರ ಬೆಳೆಗಳನ್ನೂ ವ್ಯವಸಾಯದ ಉಪಕರಣಗಳನ್ನೂ ದನಕರಗಳನ್ನೂ ಇಡಿಸಿ ಪ್ರದರ್ಶನ ಮಾಡಬೇಕೆಂದು ಏರ್ಪಾಡು ಮಾಡಿ, ಪ್ರದರ್ಶನ ಮಾಡಲ್ಪಡುವವುಗಳಿಗೆ ಬಹುಮಾನಗಳನ್ನು ಕೊಡುವಂತೆ ಕ್ರಮಪಡಿಸಿರುತ್ತಾರೆ. ಇದರಿಂದ ರೈತ ಪ್ರಜೆಗಳು ತಮ್ಮ ವ್ಯವಸಾಯ ಕ್ರಮಗಳನ್ನು ಅಭಿವೃದ್ಧಿಪಡಿಸಿಕೊಳ್ಳುವುದಕ್ಕೂ, ಲಾಭಕರವಾದ ಹೊಸ ದವಸಗಳನ್ನು ಬೆಳೆಯುವುದಕ್ಕೂ, ಜಿರಾಯತಿನ ದನಕರಗಳನ್ನು ಚನ್ನಾಗಿ ಸಾಕಿ ಬೆಳೆಸುವುದಕ್ಕೂ ಸಹಾಯವಾದೀತೆಂದು ನಿರೀಕ್ಷಿಸಲ್ಪಟ್ಟಿದೆ. ಪ್ರದರ್ಶನದ ಮೇಲ್ವಿಚಾರಣಾ ಕಮಿಟಿಯವರು ಈ ಮೊದಲನೇ ಸಲದ ಪ್ರದರ್ಶನವನ್ನು ನಡೆಸುವುದಕ್ಕೆ ಮಾಡಿರುವ ಕ್ರಮಗಳು ತೃಪ್ತಿಕರವಾಗಿರುತ್ತವೆ. ಆದರೆ ಈ ಪ್ರದರ್ಶನದ ಕಮಿಟಿಯು ತೃಪ್ತಿಕರವಾದದ್ದಾಗಿಲ್ಲವೆಂದು ನಾವು ಮೊದಲಿನಂತೆ ಈಗಲೂ ಆಕ್ಷೇಪಣೆ ಮಾಡುವೆವು. ಯಾಕೆಂದರೆ ಈ ಕಮಿಟಿಯ ಮೆಂಬರುಗಳೆಲ್ಲಾ ಸರ್ಕಾರಿ ಉದ್ಯೋಗಸ್ಥರೇ ಆಗಿರುವರು. ಉದ್ಯೋಗಸ್ಥರಲ್ಲದವರು ಒಬ್ಬರಾದರೂ ಮೆಂಬರಾಗಿಲ್ಲ. ಮತ್ತು ಈ ಉದ್ಯೋಗಸ್ಥರಲ್ಲಿ ಹಲವರಿಗೆ ವ್ಯವಸಾಯ ವಿಚಾರಗಳು ತಿಳಿಯವೆಂದು ಹೇಳಬಹುದಾಗಿದೆ. ಆದಕಾರಣ ಗವರ್ನಮೆಂಟಿನವರು ಪುಣ್ಯವಂತರೂ ಮುಖಂಡರೂ ಆದ ಗೌಡರನ್ನೂ ಇತರ ದೊಡ್ಡ ಮನುಷ್ಯರನ್ನೂ ಇಂಥಾ ಪ್ರದರ್ಶನದ ಮೇಲ್ವಿಚಾರಣೆಯ ಕಮಿಟಿಗೆ ಚುನಾಯಿಸಿ ನೇಮಿಸಬೇಕಾದದ್ದು ಬಹಳ ಅವಶ್ಯವಾಗಿರುತ್ತದೆ.

ಇತ್ತಲಾಗಿ ಚುಂಚನಕಟ್ಟೆ ಜಾತ್ರೆಯ ಕಾಲದಲ್ಲಿಯೂ ಹೊಸಕೋಟೆಯಲ್ಲಿಯೂ ನಡೆದ ಎರಡು ಸಣ್ಣ ಪ್ರದರ್ಶನಗಳ ವಿಷಯದಲ್ಲಿ ಗವರ್ನಮೆಂಟಿನವರು ಮಾಡಿರುವ ಹುಕುಮುಗಳು ಸಂತೋಷಕರವಾಗಿವೆ. ಚುಂಚನಕಟ್ಟೆ ಜಾತ್ರೆಯಲ್ಲಿ ದನಕರಗಳ ಜಾತ್ರೆ ನಡೆಯಿತು. ಉತ್ತಮವಾದ ದನಗಳಿಗೆ ೧೦೦ ರೂಪಾಯಿ ತನಕ ಬಹುಮಾನಗಳು ಕೊಡಲ್ಪಟ್ಟವು. ಗವರ್ನಮೆಂಟಿನವರು ಈ ಪ್ರದರ್ಶನವನ್ನು ನಡೆಸುವುದರಲ್ಲಿ ಸಾಹಸಪಟ್ಟಂಥಾ ಮ॥ ಗಳಾದ ಗೌಡ್ಯಯ್ಯನವರು, ಹಿರಿಯೆಗೌಡರು, ಚಿಕ್ಕೇಗೌಡರು, ವೆಂಕಟೇಗೌಡರು, ಇವರನ್ನು ಸಂತೋಷದಿಂದ ವಂದಿಸಿರುತ್ತಾರೆ. ಹೊಸಕೋಟೆಯಲ್ಲಿ ನಡೆದ ಪ್ರದರ್ಶನವನ್ನು ಪ್ರಜೆಗಳೇ ಸೇರಿ ನೆರವೇರಿಸಿದರು. ಇವರು ಇಷ್ಟು ಉತ್ಸಾಹದಿಂದ ತಾವಾಗಿಯೇ ಸಾಹಸಪಟ್ಟು ಪ್ರದರ್ಶನವನ್ನು ನಡೆಸಿರುವುದು ಸ್ತೋತ್ರಾರ್ಹವಾಗಿರುತ್ತದೆ ಎಂದೂ, ಹೊಸಕೋಟೆಯವರಂತೆಯೇ ಇತರ ಸ್ಥಳಗಳ ಪ್ರಜೆಗಳೂ ಸಾಹಸಪಟ್ಟು ಅಂಥಾ ಪ್ರದರ್ಶನಗಳನ್ನು ನಡೆಸಬಹುದಾಗಿದೆ ಎಂದೂ ಸರ್ಕಾರದವರು ಪ್ರೋತ್ಸಾಹಪಡಿಸಿ ತಿಳಿಸಿದ್ದಾರೆ.

ಈ ಮಾತು ಸಹಜವಾದದ್ದೆಂದು ನಾವು ಒಪ್ಪಿಕೊಳ್ಳುತ್ತೇವೆ. ಪ್ರದರ್ಶನವು ಎಷ್ಟೇ ಸಣ್ಣದಾದಾಗ್ಯೂ ಅದನ್ನು ಪ್ರಜೆಗಳೇ ಮುಂದರಿಸಿ ನಡೆಸುವುದರಲ್ಲಿ ಸರ್ಕಾರಿ ನೌಕರರೇ ಮೇಲ್ವಿಚಾರಕರಾಗಿ ನಿಂತು ನಡೆಸುವ ದೊಡ್ಡ ಪ್ರದರ್ಶನಗಳಿಗಿಂತಲೂ ಹೆಚ್ಚು ಪ್ರಯೋಜನವಾದೀತೆನ್ನುವುದಕ್ಕೆ ಸಂಶಯವಿಲ್ಲ. ಒಂದೇ ಸ್ಥಳದಲ್ಲಿ ಭಾರೀ ಪ್ರದರ್ಶನ ನಡೆಯುವುದಕ್ಕಿಂತಲೂ ಅನೇಕ ಕಡೆಗಳಲ್ಲಿ ಹಲವು ಚಿಕ್ಕ ಚಿಕ್ಕ ಪ್ರದರ್ಶನಗಳು ನಡೆಯುವುದರಲ್ಲಿ ಮೇಲ್ಕಂಡ ಮೂರು ಉದ್ದೇಶಗಳೂ ಸಾರ್ಥಕವಾಗುವುವು. ಮತ್ತು ಇದರಿಂದ ಜನರಲ್ಲಿ ಪರಸ್ಪರ ಸಹಾಯ ಶಕ್ತಿಯು ಹುಟ್ಟಿ ಅವರು ತಾವು ತಾವೇ ಒಂದಾಗಿ ಸೇರಿ ಕಾರ್ಯಗಳನ್ನು ನಡೆಸುವುದೂ ಅಭಿವೃದ್ಧಿಯಾದೀತು. ಈ ವಿಷಯಕ್ಕೆ ಈ ಸಂಸ್ಥಾನದ ಎಲ್ಲಾ ಭಾಗಗಳ ಜನರೂ ಗಮನ ಕೊಟ್ಟಾರೆಂದು ನಿರೀಕ್ಷಿಸುತ್ತೇವೆ.

ಮತಸಂಭಾಷಣೆ.

ಆಗ್ರಾ ಪಟ್ಟಣದಲ್ಲಿ ಮತವಿಷಯವಾದ ಒಂದು ತರ್ಕವು ಜರುಗಿತ್ತೆಂದು ಅಲ್ಲಿನ ವರ್ತಮಾನ ಪತ್ರಿಕೆಯು ತಿಳಿಸುತ್ತದೆ. ಆ ಪಟ್ಟಣದ ಮಹಮದೀಯರು ಕ್ರೈಸ್ತ ಮತವನ್ನವಲಂಬಿಸಿರುವ ಮೌಲ್ವಿ ಅಹಮದ್ ಷಾ ಎಂಬ ಪ್ರಸಿದ್ಧ ಬೋಧಕರನ್ನು ತಮ್ಮ ಮಸೀತಿಗೆ ಬರಮಾಡಿಕೊಂಡು ಅವರಿಂದ ಕೆಲವು ಉಪನ್ಯಾಸಗಳನ್ನು ಕೇಳಿದರು. ಉಪನ್ಯಾಸಗಳು ಪ್ರಾರಂಭವಾಗುವದಕ್ಕೆ ಮೊದಲು ಮತ್ತು ಅವುಗಳು ಮುಗಿದ ಮೇಲೆ ಮೌಲ್ವಿ ಅಹಮದ್‌ರವರು ಭಗವತ್ಪ್ರಾರ್ಥನೆಯನ್ನು ಮಾಡುತ್ತಿದ್ದರು. ದಿಲ್ಲಿ ಪಟ್ಟಣದಲ್ಲಿರುವ ಜಗತ್ಪ್ರಸಿದ್ಧವಾದ ಜುಮ್ಮಾ ಮಸೀತಿಯ ಮೌಲ್ವಿಯವರು ತಮ್ಮ ಶಿಷ್ಯರೊಂದಿಗೆ ಆಗ್ರಾ ಪಟ್ಟಣಕ್ಕೆ ಹೋಗಿ ಅಲ್ಲಿ ನಡೆದ ಕೂಟಗಳಲ್ಲಿ ಮಾತನಾಡಿದರು. ಅವರು ಹೇಳಿದ್ದೇನಂದರೆ "ನಮ್ಮ ಪ್ರವಾದಿಯಾದ ಮಹಮದನು ತಾನು ಬದುಕಿರುವಾಗ ಕ್ರೈಸ್ತರನ್ನು ತಾನಿದ್ದ ಮಸೀತಿಗೆ ಬರಮಾಡಿಕೊಂಡು ಅವರ ಸಂಗಡ ಮತವಿಷಯವಾದ ತರ್ಕಗಳನ್ನು ನಡೆಸುತ್ತಿದ್ದನು. ನಾವು ಯಾವ ರೀತಿಯಲ್ಲಿ ಭಗವತ್ಪ್ರಾರ್ಥನೆಯಿಂದ ಕೂಟಗಳನ್ನು ಪ್ರಾರಂಭಮಾಡಿ ಮುಗಿಸುತ್ತೇವೆಯೋ ಅದೇ ರೀತಿಯಲ್ಲಿ ಅತನು ಸಹ ಮಾಡುತ್ತಿದ್ದನೆಂದು ನಾವೆಲ್ಲರೂ ಓದಿರುತ್ತೇವೆ" ಎರಡು ವಾರಗಳ ಹಿಂದೆ ಮೈಸೂರು ಪಟ್ಟಣದಲ್ಲಿ ಪಾದ್ರಿಗಳಾದ ಗೋಲ್ಡ್‌ಸ್ಮಿತ್ ಸಾಹೇಬರೂ ಮತ್ತು ಹಕೀಮ್ ನಸಿರುದ್ದೀನ್ ಸಾಹೇಬರೂ ಕ್ರೈಸ್ತ ಮತದ ವಿಷಯವಾಗಿ ಉಪನ್ಯಾಸಗಳನ್ನು ಮಾಡಿದರು. ಅವರ ಉಪನ್ಯಾಸಗಳನ್ನು ಕೇಳುವುದಕ್ಕೆ ನೂರಾರು ಮಂದಿ ಮಹಮದೀಯ ಸಹೋದರರು ನೆರದು ಬಂದಿದ್ದರು. ಉಪನ್ಯಾಸಕರು ಕ್ರೈಸ್ತ ಮತಕ್ಕೂ ಮಹಮದೀಯ ಮತಕ್ಕೂ ಇರುವ ತಾರತಮ್ಯಗಳನ್ನು ತೋರಿಸಿದರು. ಉಪನ್ಯಾಸಗಳು ಮುಗಿದನಂತರ ತರ್ಕಗಳು ಜರುಗಿದವು. ಉಭಯತ್ರರೂ ಕೇವಲ ಶಾಂತರಾಗಿ ತಮ್ಮ ತಮ್ಮ ಅಭಿಪ್ರಾಯಗಳನ್ನು ಗಾಂಭೀರ್ಯದಿಂದಲೂ ಸದ್ಭಾವದಿಂದಲೂ ತಿಳಿಸಿದರು. ಇಂಥಾ ಕೂಟಗಳ ವಿಷಯ ಕೇಳುವುದಕ್ಕೆ ಎಲ್ಲರಿಗೂ ಸಂತೋಷವಾಗುವದಲ್ಲದೆ ಇವುಗಳ ಮೂಲಕ ಒಬ್ಬರನ್ನೊಬ್ಬರು ಚೆನ್ನಾಗಿ ಸ್ನೇಹಿಸುವುದಕ್ಕೂ ಪರಸ್ಪರ ಪ್ರೀತಿ ಹುಟ್ಟುವುದಕ್ಕೂ ಆಸ್ಪದವಾಗಿರುವುದು. ಕ್ರೈಸ್ತ ಮತವು ಮಹಮದೀಯ ಮತವನ್ನಿರಿಸಿಕೊಳ್ಳಲಾರದು, ಅಥವಾ ಮಹಮದೀಯ ಮತವು ಕ್ರೈಸ್ತ ಮತವನ್ನಿರಿಸಿಕೊಳ್ಳಲಾರದು ಹೀಗೆಂದು ಕೆಲವು ವ್ಯತ್ಯಾಸಗಳು ಇದ್ದೇ ಇರುವವು. ಆದರೂ ಮನುಷ್ಯನು ಬಲಾತ್ಕಾರದಿಂದ ಸತ್ಯವನ್ನೆಂದಿಗೂ ಹೊಂದಿಕೊಳ್ಳಲಾರನು. ಸತ್ಯತೆಯಿಂದಲೂ ದೀನಭಾವದಿಂದಲೂ ಪರಸ್ಪರ ಪ್ರೀತಿಯಿಂದಲೂ ದೇವರು ತನ್ನ ಸತ್ಯವನ್ನು ತೋರಿಸುವಂತೆ ಪ್ರಾರ್ಥನೆ ಮಾಡಿದರೆ ಆತನು ಖಂಡಿತವಾಗಿಯೂ ನಮ್ಮ ಪ್ರಾರ್ಥನೆಗಳನ್ನು ಕೇಳಿ ನಮ್ಮನ್ನು ಸತ್ಯಮಾರ್ಗದಲ್ಲಿ ನಡೆಸುವನೆನ್ನುವುದರಲ್ಲಿ ಯಾವ ಸಂಶಯವೂ ಇರಲಾರದು.

ಬಳದೇಶದ ವೃತ್ತಾಂತಗಳು.

ಮೂರು ತಿಂಗಳ ಪ್ರಿವಿಲೆಜ್ ರಜವನ್ನೂ ಮೂರು ತಿಂಗಳ ಕಾಯಿಲೆ ರಜವನ್ನೂ ಪಡೆದುಕೊಂಡಿದ್ದ ಅ॥ ಕಮಿಷನರ್ ಮೆ॥ ವಿ. ಆರ್. ತ್ಯಾಗರಾಜ ಅಯ್ಯರವರಿಗೆ ಸರ್ಕಾರದವರು ಇನ್ನೊಂದು ತಿಂಗಳ ರಜವನ್ನು ಸ್ಯಾಂಕ್ಷನ್ ಮಾಡಿದಾರೆ.

* * *

ಬೆಂಗಳೂರು ಸಿಟಿ ರೈಲ್ವೆ ಸ್ಟೇಷನ್ ಬಳಿ ಇರುವ ಧರ್ಮಾಂಬುಧಿ ಕೆರೆಯನ್ನು ಮುಚ್ಚಿ ಅದರಲ್ಲಿ ಒಂದು ಉದ್ಯಾನವನವೂ ಎರಡು ಸ್ನಾನದ ಕೊಳಗಳೂ ಮಾಡಬೇಕೆಂದೂ, ಕೆರೆ ಏರಿಯನ್ನು ಸುಮಾರು ಏಳು ಅಡಿಯಷ್ಟು ತಗ್ಗಿಸಬೇಕೆಂದೂ ಏರ್ಪಾಡಾಗಿದೆ.

* * *

ಬೆಂಗಳೂರಿನಲ್ಲಿ ಮಾಜಿ ದಿವಾನ್ ಸರ್ ಕೃಷ್ಣಮೂರ್ತಿಯವರ ಮನೆಯಲ್ಲಿ ಸುಮಾರು ೬೦೦ ರೂಪಾಯಿನ ಬೆಳ್ಳಿ ಪಾತ್ರೆಗಳನ್ನೂ ವಸ್ತ್ರಗಳನ್ನೂ ಕದ್ದುಕೊಂಡಿದ್ದ ಸುಂದರರಾವ್, ಶಾಮರಾವ್ ಎಂಬಿಬ್ಬರನ್ನು ಪೊಲೀಸಿನವರು ದಸ್ತಗಿರಿ ಮಾಡಿದಾರೆ.

* * *

ಕಳೆದ ಶನಿವಾರ ಬೆಳಗ್ಗೆ ರಾಜಧಾನಿಯ ದೊಡ್ಡ ಕೆರೆ ಏರಿಯ ಮೇಲೆ ಒಬ್ಬ ಹೆಂಗಸು ಅಕಸ್ಮಾತ್ತಾಗಿ ಸತ್ತುಬಿಟ್ಟಳು. ಅವಳ ಸ್ಥಿತಿಯನ್ನು ನೋಡಿದವರೆಲ್ಲಾ ಕನಿಕರಪಟ್ಟು ಹಣ ಬಟ್ಟೆ ಬರೆಗಳನ್ನು ಕೊಟ್ಟು, ಮಗುವಿನ ಕೂಡ ಅವಳನ್ನು ಮನೆಗೆ ಕಳುಹಿಸಿದರು.

* * *

ಮದರಾಸಿನಲ್ಲಿ ನಡೆಯುವ ವಿದ್ಯಾಭಿವೃದ್ಧಿಯ ಉಪಕರಣಗಳ ಪ್ರದರ್ಶನವನ್ನು ನೋಡಿ ಬರುವದಕ್ಕಾಗಿ ದಿವಾನ್ ಮೆ॥ ಮಾಧವರಾಯರು ಇಬ್ಬರು ಸೆಕ್ರಿಟರಿಗಳೊಡನೆ ಕಳೆದ ಸೋಮವಾರ ರಾತ್ರಿ ಬೆಂಗಳೂರಿಂದ ಪ್ರಯಾಣವಾಗಿದ್ದು ನೆನ್ನೆ ವಾಪಸು ಬರುವವರಾಗಿದ್ದರು.

* * *

ಬರುವ ವಿಜಯದಶಮಿಯ ಮಾರನೆಯ ದಿನದಿಂದ ಮೈಸೂರಿನಲ್ಲಿ ನಡೆಯುವ "ಒಕ್ಕಲಿಗರ ಸಭೆಗೆ" ಜಗನ್ಮೋಹನ ಬಂಗಲೆಯ ಹಾಲನ್ನು ಉಪಯೋಗಿಸಿಕೊಳ್ಳುವಂತೆ ಶ್ರೀಮನ್ಮಹಾರಾಜಾವರು ಅಪ್ಪಣೆ ದಯಪಾಲಿಸಿರುವದಾಗಿಯೂ ತಾವೆ ಸ್ವತಃ ಅಗ್ರಾಸನವನ್ನು ವಹಿಸುವದಾಗಿಯೂ ಅರಿಯುವೆವು.

* * *

ಇಲ್ಲಿನ ಮಂಡಿ ಮೊಹಲ್ಲೆಯಲ್ಲಿ ಒಬ್ಬ ದರ್ಜಿ ಹೆಂಗಸು ಸತ್ತು ಹೋದಳೆಂದು ಊಹಿಸಿ, ಅವಳ ಸಂಬಂಧಿಗಳು ದಫನ್ ಮಾಡುವುದಕ್ಕೆ ಸಾಮಾನುಗಳನ್ನು ತಂದು ಶವವನ್ನು ಎತ್ತಬೇಕೆಂದು ಪ್ರಯತ್ನಪಟ್ಟಾಗ ಅವಳಿಗೆ ಪ್ರಾಣ ಹೋಗಿರಲಿಲ್ಲ. ಸರ್ಕಾರದವರು ಅವಳನ್ನು ಗಾಡಿಯಲ್ಲಿ ಮಲಗಿಸಿ ಪ್ಲೇಗ್ ಕ್ಯಾಂಪಿಗೆ ಕಳುಹಿಸಿದರು.

ಸರ್ಕಾರದವರು ರಾಜಧಾನಿಯ ಕೋಟೆ ಮತ್ತು ನಜರ್‌ಬಾದು ಮೊಹಲ್ಲಾಗಳಲ್ಲಿ ಪ್ಲೇಗ್ ಕಾಯಿಲೆಯಾದವರನ್ನೂ ಅವರ ಸಂಪರ್ಕದಲ್ಲಿದ್ದವರನ್ನೂ ಬಲಾತ್ಕಾರಮಾಡಿ ಕ್ಯಾಂಪಿಗೆ ಸಾಗಿಸುತ್ತಿದ್ದದ್ದು ಆ ಮೊಹಲ್ಲೆಗಳ ಪ್ರಜೆಗಳಿಗೂ ತುಂಬಾ ಮನೋವ್ಯಥೆಯನ್ನುಂಟುಮಾಡಿತ್ತು. ಆದರೆ ಈ ಬಲಾತ್ಕಾರದ ರೂಲನ್ನು ಮೊನ್ನೆ ಸೋಮವಾರದಿಂದ ವಜಾ ಮಾಡಿರುತ್ತಾರೆಂದು ತಿಳಿದುಬಂದಿದೆ.

* * *

ತರೀಕೆರೆಯಿಂದ ಸುಮಾರು ೨೧ ಮೈಲಿ ದೂರದಲ್ಲಿರುವ ಪ್ರಸಿದ್ಧವಾದ ಬಾಬಾಬುಡನ್‌ಗಿರಿ ಬೆಟ್ಟದ ಮೇಲೆ ಸರ್ಕಾರದವರು ಒಂದು ಬಂಗಲೆಯನ್ನು ಕಟ್ಟಿಸಿದಾರೆ. ದೇಹಾರೋಗ್ಯಕ್ಕಾಗಿ ಹೋಗತಕ್ಕವರು ಮಾತ್ರ ಆ ಬಂಗಲೆಯಲ್ಲಿ ಇದ್ದು ಬರಬಹುದೆಂತಲೂ, ಸಾಮಾನ್ಯ ಪ್ರಯಾಣಿಕರು ಅಲ್ಲಿ ಇಳಿದುಕೊಳ್ಳಕೂಡದೆಂತಲೂ, ಅಲ್ಲಿ ಇದ್ದು ಬರತಕ್ಕವರು ದಿನಕ್ಕೆ ತಲೆಗೆ ಒಂದು ರೂಪಾಯಿನಂತೆ ಬಾಡಿಗೆ ಕೊಡತಕ್ಕದ್ದೆಂತಲೂ ವಿಧಿಸಿದಾರೆ.

* * *

ದೇವನಹಳ್ಳಿ ತಾಲ್ಲೂಕಿನ ಸುಮಾರು ೫೦ ಜನ ಪಟೇಲ್ ಶ್ಯಾನುಭೋಗರುಗಳು ಸೇರಿ ನ್ಯಾಯವಿಧಾಯಕ ಸಭೆಯ ಆಲೋಚನೆಗಾಗಿ ತಯಾರಾಗಿರುವ ಗ್ರಾಮ ಉದ್ಯೋಗಸ್ಥರ ಕಾನೂನನ್ನು ಜಾರಿಗೆ ತರಕೂಡದೆಂದು ಬರೆದುಕೊಂಡಿರುವರು. ಈ ವಿಜ್ಞಾಪನೆಯನ್ನು ಮೆ॥ ವಿ. ಪಿ. ನರಸಿಂಹ ಅಯ್ಯಂಗಾರ್ಯರವರಿಗೂ, ಈ ವಿಚಾರವಾಗಿ ಕಾಗದಗಳನ್ನು ರಾಜಧರ್ಮ ಪ್ರವೀಣ ಮೆ॥ ಸಿ. ಶ್ರೀನಿವಾಸ ಅಯ್ಯಂಗಾರ್ಯರು, ಮೆ॥ ಬ್ಯಾರಿಸ್ಟರ್ ನಾಗಪ್ಪನವರು, ಮೆ॥ ಎಂ. ಸಿ. ರಂಗಯ್ಯಂಗಾರ್ಯರು ಇವರಿಗೂ ಬರೆದಿರುವದಾಗಿ ತಿಳಿದುಬಂದಿದೆ.

* * *

ಕೋಲಾರ್ ಚಿನ್ನದ ಗಣಿಗಳಿಂದ ದೊಡ್ಡಬಳ್ಳಾಪುರಕ್ಕೂ ಅಲ್ಲಿಂದ ಬೆಂಗಳೂರು ಹಿಂದೂಪುರ—ರೈಲಿನ ಮಾರ್ಗವಾಗಿ ದೊಡ್ಡಬೆಲೆ ಸ್ಟೇಷನಿಗೂ ಸುಮಾರು ೭೩॥ ಮೈಲಿ ದೂರ ರೈಲ್ ಹಾಕಬೇಕೆಂದು ಇಂಜನಿಯರುಗಳು ಶೋಧನೆ ಮಾಡಿದ್ದಾಯಿತು. ರಸ್ತೆಯನ್ನು ಸುಲಭವಾಗಿ ಹಾಕಬಹುದೆಂತಲೂ, ಭಾರಿ ಸೇತುವೆ ಮುಂತಾದವುಗಳ ಕಾಮಗಾರಿ ಅವಶ್ಯವಿಲ್ಲವೆಂತಲೂ, ಉದ್ದಕ್ಕೂ ಕೂಲಿ ಜನರು ಸಿಕ್ಕುತ್ತಾರೆಂತಲೂ ರಿಪೋರ್ಟ್ ಕೊಟ್ಟಿದಾರೆ. ಈ ರೈಲ್ ರಸ್ತೆಯ ಕಾಮಗಾರಿಗೆ ಸುಮಾರು ೩೩॥ ಲಕ್ಷ ರೂಪಾಯಿ ಖರ್ಚಾದೀತೆಂದು ಅಂದಾಜು ಕಟ್ಟಿದಾರೆ.

* * *

ಭತ್ಯವಿಲ್ಲದ ನೌಕರರು ಸರ್ಕಾರಿ ಕೆಲಸದ ಮೇಲೆ ಊರಿಂದೂರಿಗೆ ಹೋಗಿಬರುವಲ್ಲಿ ಅಂಥವರಿಂದ ಅವರ ಗಾಡಿ ಕುದುರೆಗಳಿಗೆ ಟೋಲ್ ಸುಂಕವನ್ನು ವಸೂಲ್ಮಾಡಕೂಡದೆಂತಲೂ, ಡೆಪ್ಯುಟಿ ಕಮಿಷನರು ಅಂಥಾ ನೌಕರರಿಗೆ ಒಂದು ರಹದಾರಿಯನ್ನು ಬರೆದುಕೊಟ್ಟಿರಬೇಕೆಂತಲೂ, ಟೋಲ್ ಗೇಟ್ ಕಂಟ್ರಾಕ್ಟುದಾರರಿಗೂ ಅಂಥಾ ನೌಕರರ ಹೆಸರುಗಳನ್ನೆಲ್ಲಾ ಕಾಣಿಸಿ ಒಂದು ಪಟ್ಟಿ ಕಳುಹಿಸಬೇಕೆಂತಲೂ, ನೌಕರರು ತಮ್ಮ ಸಂಚಾರಕಾಲದಲ್ಲಿ ತಮ್ಮ ಬಳಿ ಇರುವ ರಹದಾರಿಯನ್ನು ಟೋಲ್ ಗೇಟುಗಳಲ್ಲಿ ತೋರಿಸಬೇಕೆಂತಲೂ ಸರ್ಕಾರದವರು ಹುಕುಂ ಕೊಟ್ಟಿದಾರೆ.

* * *

ಕಳೆದ ಶನಿವಾರ ಸಾಯಂಕಾಲ ಬೆಂಗಳೂರು ಕೋಟೆ ಪೆರೇಡ್ ಮೈದಾನಿನಲ್ಲಿ ಪೊಲೀಸಿನವರ ಕವಾಯತು ಮುಂತಾದ ಆಟ ವಿನೋದಗಳೂ ಕಸರತ್ತುಗಳೂ ನಡೆದವು. ಮುಖ್ಯರಾದ ಅಧಿಕಾರಿಗಳೆಲ್ಲಾ ಹಾಜರಾಗಿದ್ದರು. ಅದರಲ್ಲಿ ಗೆದ್ದವರಿಗೆ ಕೌನ್ಸಿಲರ್ ಮೆ॥ ಕೆ. ಪಿ. ಪುಟ್ಟಣ್ಣಚೆಟ್ಟಿಯವರು ಬಹುಮಾನಗಳನ್ನು ಕೊಟ್ಟರು. ಕಡೆಯಲ್ಲಿ ಮೈಸೂರು ಇಂಪೀರಿಯಲ್ ಸರ್ವಿಸ್ ರೆಜಿಮೆಂಟಿನಿಂದ ಕಳುವಾಗಿದ್ದ ನಾಲ್ಕು ಬಂದೂಕುಗಳನ್ನು ಪತ್ತೆ ಮಾಡಿದಂಥಾ ಇನ್ಸ್‌ಪೆಕ್ಟರ್ ಮಹಮದ್ ಜಾಫರ್ ಮೇಸ್ತ್ರಿ ಯವರಿಗೆ ಬಹುಮಾನರೂಪವಾದ ಒಂದು ಗಡಿಯಾರವು ಕೊಡಲ್ಪಟ್ಟಿತು.

* * *

ಶ್ರೀಮನ್ಮಹಾರಾಜರವರು ಮಳವಳ್ಳಿ ಕಾನಕಾನಹಳ್ಳಿಗಳ ಕಡೆ ಸಂಚಾರ ತೀರಿಸಿಕೊಂಡು ಬೆಂಗಳೂರನ್ನು ತಲುಪಿದ ಮೇಲೆ ಅವರಿಗೆ ಜ್ವರ ಮುಂತಾದದ್ದು ಪ್ರಾಪ್ತವಾಗಿ ಸ್ವಲ್ಪ ದೇಹಾಲಸ್ಯವಾಗಿತ್ತು. ಆದಕಾರಣ ಅವರು ಮೊನ್ನೆ ಸೋಮವಾರ ಕೋಲಾರದ ಕಡೆ ಸಂಚಾರ ಹೊರಡಬೇಕಾಗಿದ್ದುದನ್ನು ನಿಲ್ಲಿಸಿ ನೆನ್ನೆ ಹೊರಡುವಂತೆ ಗೊತ್ತು ಮಾಡಿದ್ದರು. ಈ ಸಂಚಾರದ ವಿವರ ಹೇಗಂದರೆ:—ಆಗಸ್ಟ್ ತಾ ೨೯ ಬೆಂಗಳೂರಿನಿಂದ ಕೋಲಾರ, ೨೯ ಕೋಲಾರದಿಂದ ಬೇತಮಂಗಲ; ೩೧ ಬೇತಮಂಗಲದಿಂದ ಮುಳಬಾಗಲು, ಸೆಪ್ಟೆಂಬರ್ ೧ ಮುಳಬಾಗಲಿನಿಂದ ಚಿಂತಾಮಣಿ, ೩ ಚಿಂತಾಮಣಿಯಿಂದ ಶಿಡ್ಲಘಟ್ಟ, ೪ ಶಿಡ್ಲಘಟ್ಟದಿಂದ ನಂದಿದುರ್ಗ, ೬ ನಂದಿದುರ್ಗದಿಂದ ಬೆಂಗಳೂರು.

* * *

ಚಿತ್ರದುರ್ಗದ ಮುರಿಘಮಠದಿಂದ ಆಗಮನೆಗೆ ಕಳುಹಿಸಿದ್ದ ಗಾಂಧದವಾದ ದೊಡ್ಡ ಆನೆಯು ತನ್ನ ಮಾವತನನ್ನು ಕಳೆದ ಶನಿವಾರ ಬೆಳಗ್ಗೆ ಬಹು ರೋಷದಿಂದ ರಾಜಧಾನಿಯ ಕೆರೆಯೊಳಗೆ ಹಿಂಸೆಮಾಡಿಕೊಂದುಹಾಕಿ, ಸಮೀಪದಲ್ಲಿದ್ದ ಅಗಸರ ಬಟ್ಟೆಗಳನ್ನು ಹರಿದು ಹರಿದುಬಿಟ್ಟು, ಪೇಟೆಗೆ ಬಾರದೆ ಹಿಂದಿನ ಬಳಿಗೆ ಹೋಗಿ ಒಂಟಿ ಮಂಟಪದಲ್ಲಿದ್ದ ಬೇರೆ ಜೊತೆಯ ಆನೆಗಳನ್ನು ತಿಗದುಕೊಂಡು ಹೋಗಿ ಹಿಡಿದುತಂದು ಅರಮನೆಯ ಆನೆ ಕಟ್ಟುವ ಸ್ಥಳದಲ್ಲಿ ಕಟ್ಟಿಹಾಕಿದರು. ಈ ಆನೆಯು ಅರಮನೆಗೆ ಬರುವುದಕ್ಕೆ ಮೊದಲೇ ಇಬ್ಬರನ್ನು ಕೊಂದುಹಾಕಿತ್ತೆಂದು ತಿಳಿಯಬರುವುದು. ಮೇಲ್ಕಂಡ ಮಾವುತನು ಸುಮಾರು ೩೦—೩೫ ವಯಸ್ಸಿನವನು. ಅವನಿಗೆ ಮಾರನೆಯ ದಿನ ವಿವಾಹವು ನಿಶ್ಚಯವಾಗಿತ್ತು. ಆತನ ಈ ದುಷ್ಕಾಲ ಮರಣವನ್ನು ನೋಡಿ ಕೇಳಿದ ನೂರಾರು ಜನರು ಮರುಗಿದರು.

ಕೊಬ್ಬಿ ಬಂದ ಆನೆಯನ್ನು ಹಿಡಿದದ್ದು.

ಶಿವಮೊಗ್ಗೆಗೆ ೬ ಮೈಲಿ ಫಾಸಲೆಯಲ್ಲಿ ಬೆರಗೊಂಡನ ಹಳ್ಳಿ ಎಂಬ ಗ್ರಾಮವಿರುತ್ತದೆ. ಆ ಸ್ಥಳದವರಾದವರು ಕೆಲವರು ತುಂಗಭದ್ರಾ ಹೊಳೆಯು ಪೂರ್ಣ ಪ್ರವಾಹವಾಗಿ ಬಂದಿರುವಾಗ ತಾ ೬ ರಲ್ಲಿ ತಮ್ಮ ಗ್ರಾಮಕ್ಕೆ ಮೇಲ್ಭಾಗ ೨-೩ ಮೈಲಿ ಫಾಸಲೆಯ ಹೊಳೆಯಲ್ಲಿ ಒಂದು ಸತ್ತಹೋದ ಆನೆಯು ತೇಲಿಬರುವ ಸಮಾಚಾರ ತಿಳಿಯಬಂದಾಕ್ಷಣ ವೇ ಆ ಗ್ರಾಮದ ವಡ್ಡರ ಸಣ್ಣಬಸಪ್ಪ, ರುದ್ರಪ್ಪ, ತಳವಾರ ಹಾಲಾ ಮಾದಿಗರ ಹನುಮ, ರಕ್ಷ್ಮಯ್ಯ, ದೊಡ್ಡ ಬಸಪ್ಪ, ಕಾಲ್ದಾರ ಗಫ್ಫಾರ ಚಂದಪ್ಪನ ಮಗ ಬಸಪ್ಪ, ದೊಡ್ಡ ಭದ್ರಪ್ಪನ ಮಲ್ಲಪ್ಪ, ಮಲ್ಲಪ್ಪನ ಈರಪ್ಪ, ಈ ಜನರುಗಳು ಹೊಳೆ ಅಂಚಿಗೆ ಹೋಗಿ ಕಾದು ನಿಂತರು. ಸುಮಾರು ಒಂದು ಮೈಲಿಯ ಮೇಲೆ ಹೊಳೆಯಲ್ಲಿ ಒಂದು ಕಪ್ಪಗೆ ಭಾರಿಯಾದದ್ದು ನೀರಿನಲ್ಲಿ ತೇಲಿಬರುವಂಥಾದ್ದು ಕಾಣಲಾಗಿ ಎಲ್ಲ ರೂ ಒಂದಾಗಿ ಯೋಚಿಸಿಕೊಂಡು, ಈ ದಿವಸ ರಾತ್ರಿ ಇದನ್ನು ನಾವು ಹಿಡಿಯದೆ ಬಿಟ್ಟರೆ ರಾತ್ರಿಯಲ್ಲಿ ಯಾರೂ ಹಿಡಿಯಲು ಆಗುವದಿಲ್ಲ. ನಮ್ಮ ಕೇಮೆ ಸರಹದ್ದು ಬಿಟ್ಟು ಧಾರವಾಡ ಜಿಲ್ಲೆಕ್ಕೆ ಹೋಗಿ ಪರ ಳಕ್ಕೆ ಹೋಗುತ್ತಾನೆ. ನೀರು ರೈಲ್‌ಗಾಡಿ ವೇಗದಂತೆ ಪೂರ್ಣ ಪ್ರವಾಹವಿರುವದರಿಂದ ಬಹಳ ದೂರಾಗಿ ಓಡುತ್ತದೆ. ಇನ್ನು ೬-೭ ಮೈಲಿಯಲ್ಲಿ ನಮ್ಮ ಗಡಿ ಅಷ್ಟರಿಂದ ನಾವೇ ಸರಕಾರಕ್ಕೆ ಹಿಡಿದು ಕೊಡಬೇಕೆಂಬದಾಗಿ ಉದ್ದೇಶಿಸಿಬಿಟ್ಟು ಎಲ್ಲರೂ ಒಂದಾಗಿ ಹೊಳೆಯಲ್ಲಿ ಈಜುಬಿದ್ದು ಸುಮಾರು ಸ್ಟೂನು ಹೋಗಿ ಸದರಿ ಆನೆಯನ್ನು ಹಿಡಿದು ತಮ್ಮ ಅನುಕೂಲತೆಯಂತೆ ನೀರು ಸೆಳವು ಆಗ ಆನೆಯು ಜಾರದೆ ಒಂದು ಬಂಡೆಯ ಸಂದಿಗೆ ಸಿಕ್ಕಲು ಅಲ್ಲಿಯೇ ಕೆಲವರು ಮುಳುಗಿದರು. ತಳವಾರ ಹಾಲನು ಸದರಿ ಆನೆಯನ್ನು ಕೈಬಿಡದೆ ೧-೨ ಫರ್ಲಾಂಗು ನೀರಿನಲ್ಲಿ ಈಜಾಡಿಕೊಳ್ಳುತ್ತಲೂ ಆನೆಯನ್ನು ದೂಡಿಕೊಳ್ಳುತ್ತಲೂ ಬರುವಷ್ಟರಲ್ಲಿ ಬಾಕಿಯವರು ಬಹಳ ಸಾಹಸಮಾಡಿ ಬಂದರು. ಸದರಿ ಆನೆಯನ್ನು ೨ ಮೈಲಿಯ ವರೆಗೂ ನೀರಿನಲ್ಲಿ ದೂಡಿಕೊಳ್ಳುತ್ತಾ ಬಸಪ್ಪನ ಗದ್ದೆ ಸಮೀಪ ಇರುವ ನೀರಿನ ತೋಪಿನ ಜಾಗಕ್ಕೆ ತಂದರು. ಅಷ್ಟರಲ್ಲಿ ಸಾಯಂಕಾಲವಾಯಿತು. ಒಂದು ದೊಡ್ಡ ಹಾಸಿ ಆನೆಯನ್ನು ಒಂದು ಗಿಡಕ್ಕೆ ಕಟ್ಟಿದರು. ಸತ್ತು ಇರುವ ಆನೆಯ ಕಾಲಿನಲ್ಲಿ ಒಂದು ಕಟ್ಟಿನಾದ ಸರಪಣಿ ಇತ್ತು. ಭಾರೀ ಆನೆ ಇದು ಮೇಲು ಭಾಗದ ಜಂಗಲಿನಿಂದ ನೀರಿನಲ್ಲಿ ತೇಲಿಕೊಳ್ಳುತ್ತಾ ಬರುವದರಲ್ಲಿ ಪ್ರವಾಹ ಜಾಸ್ತಿಯಾಗಿ ಸತ್ತು ಹೋಗಿ ಹೊಳೆಯಲ್ಲಿ ತೇಲಿ ಬಂತು. ಇದನ್ನು ಈ ಗ್ರಾಮದವರು ಸಾಹಸಪಟ್ಟು ಪ್ರಾಣ ಹಾಕಿ ಬಿಟ್ಟು ಹಿಡಿದದ್ದನ್ನು ನೋಡಲು ಆಯಾ ಗ್ರಾಮದವರು ಪರಸ್ಪರ ಹೋಗಿದ್ದರು. ಈ ಸಂಗತಿ ಪಟೇಲರು ರಿಪೋರ್ಟ್ ಮಾಡಿದರು. ಅಮಲ್ದಾರರೂ ಇನ್ಸ್‌ಪೆಕ್ಟರೂ ಹೋಗಿ ಸದರಿ ಆನೆಯನ್ನು ಪಂಚನಾಮೆ ಮಾಡಿಸಿದಾರೆ. ಈ ಗ್ರಾಮದವರು ಜೀವದಾಶೆ ಇಲ್ಲದೆ ಈ ರೀತಿ ಸಾಹಸಪಟ್ಟು ಸದರಿ ಹಿಡಿದ ಆನೆಯ ಬೆಲೆಯು ಸುಮಾರು ಸಾವಿರ ರೂಪಾಯಿ ಸರಕಾರದವರಿಗೆ ಫಾಯಿದೆ ಆಗಿದೆ. ಅವರಿಗೆಲ್ಲಾ ತಕ್ಕ ಬಹುಮಾನ ಕೊಡಬಹುದಾಗಿ ಕಾಣುತ್ತದೆ.

ಎಚ್. ಎಂ. ಆರ್.

ಒಕ್ಕಲಿಗರ ಸಂಘದ ವಿಚಾರವು.

ಅಬಾಲವೃದ್ಧರಾದ ಸರ್ವಜನರಿಗೂ ಉಪಯೋಗಕರವಾಗಿರುವ ವೃತ್ತಾಂತ ಪತ್ರಿಕೆ ಎಂಬುವದರಲ್ಲಿ ೧೯೦೭ನೇ ಇಸವಿ ೧೫ನೇ ಆಗಸ್ಟು ತಾರೀಖಿನಲ್ಲಿ ಒಕ್ಕಲಿಗರ ಸಂಘವೆಂಬ ಆರ್ಟಿಕಲ್ ನೋಡಿ ಬಹಳ ಆನಂದವುಂಟಾಯಿತು.

ಆದರೆ ರಾಜಧಾನಿಯಲ್ಲಿ ಒಕ್ಕಲಿಗರ ಸಂಘದ ಶಾಖೆಯನ್ನು ಒಕ್ಕಲಿಗರ ಮಠದ ಮಹನೀಯರುಗಳೆಲ್ಲಾ ಸೇರಿ ಸ್ಥಾಪಿಸಿದ್ದಕ್ಕಾಗಿ ಈ ಮಠದವರೆಲ್ಲರೂ ಸಂತೋಷಪಡುತ್ತೇವೆ. ಪ್ರಪಂಚ ಹುಟ್ಟಿದ ಲಾಗಾಯತು ಅನುಭವಿಸುತ್ತಿದ್ದ ಈ ವರ್ಣಾಶ್ರಮದವರ ಅವಿದ್ಯತೆಯನ್ನು ಹೋಗಲಾಡಿಸಿ, ಮಹನೀಯರ ಕೃಪೆಗೂ ಪ್ರಜೆಗಳ ವಿಶ್ವಾಸಕ್ಕೂ ಮತ್ತು ಪರೋಪಕಾರಕ್ಕೂ ಆಧಾರವನ್ನುಂಟುಮಾಡಿದಂತೆ ಈ ಶಾಖೆಯು ಸ್ಥಾಪನೆಯಿಂದ ಎಣಿಸಬೇಕಾಗಿರುತ್ತೆ.

ಮೇಲ್ಕಂಡ ಶಾಖೆಯ ಅಧ್ಯಕ್ಷರೇ ಮೊದಲಾದ ಮಹನೀಯರುಗಳು ಬರುವ ಅಕ್ಟೋಬರು ತಿಂಗಳಲ್ಲಿ ರಾಜಧಾನಿಯಲ್ಲಿ ನಡೆಸಲು ಏರ್ಪಡಿಸಿರುವ ಮಹಾ ಸಭೆ ಎಂಬುವದನ್ನು ಕೇಳಿ ಬಹಳ ಸಂತೋಷಭರಿತರಾಗಿದ್ದೇವೆ. ಮತ್ತು ಈ ಮಹಾ ಸಭೆಯು ನಿರ್ವಹಕ್ಕಾಗಿ, ಅನೇಕಾನೇಕ ಖರ್ಚು ಉಂಟಾಗುವುದೆಂದೂ ಈ ಖರ್ಚಿಗಾಗಿ ಮಠದವರೆಲ್ಲಾ ಸಹಾಯಮಾಡಬೇಕೆಂದೂ ಪ್ರಕಟವಾಗಿರುತ್ತದೆ. ಈ ಸಭೆಯು ಏರ್ಪಾಡಾಗಿರುವದು ಮಠದ ಸರ್ವಜನರ ಸೌಲಭ್ಯಕ್ಕೆಂಬುವದರಲ್ಲಿ ಏನೊಂದು ಸಂದೇಹವೂ ಇರುವದಿಲ್ಲ. ಈ ಮಹತ್ಕಾರ್ಯದ ಫಲವು ಸರ್ವರಿಗೂ ಉಂಟಾಗಬೇಕಾಗಿರುವದರಿಂದ ಮಠದವರೆಲ್ಲರೂ ಸಹಾಯ ಮಾಡತಕ್ಕದ್ದಾಗಿರುತ್ತೆ. ಈ ಸಹಾಯಕ್ಕಾಗಿ ಗ್ರಾಮಾಂತರಗಳಲ್ಲಿ ವಾಸಮಾಡತಕ್ಕ ಮುಗ್ಧಜನಗಳಿಗೆ ತಿಳುವಳಿಕೆ ಕೊಟ್ಟು ಅವರ ಮುಗ್ಧತ್ವವನ್ನು ನಿವಾರಣೆ ಮಾಡಿದ ಹೊರತು ಸಹಾಯಾಪೇಕ್ಷೆಯು ಸುಲಭವೆಂದು ಎಣಿಸಲಾಗಲಾರದು.

ಈ ಸಂಘದ ಏರ್ಪಾಡು ಪತ್ರಿಕೆಯ ಪ್ರಕಟಣೆಯಿಂದ ಅನೇಕ ಓದುಬರಹ ಬಾರದೆ ಹಳ್ಳಿಗಳಲ್ಲಿ ವಾಸಮಾಡತಕ್ಕಂಥ ಈ ಮಠದವರಿಗೆ ಗೊತ್ತಾಗದೆ, ಅವರು ಯಾವ ಜನ್ಮದಿಂದಲೂ ಬಿದ್ದು ನರಳುತ್ತಿರುವ ಪಾಪಕೂಪವೆಂಬ ಸಮುದ್ರದಲ್ಲೇ ಬಿಟ್ಟಂತೆ ಆಗುವದರಿಂದ ನಾವುಗಳು ಮಹಾ ಸಭೆಯ ಅಧ್ಯಕ್ಷರನ್ನು ಬೇಡಿಕೊಳ್ಳುವದೇನೆಂದರೆ—ಪ್ರತಿ ಒಂದು ಡಿಸ್ಟ್ರಿಕ್ಟಿಗೂ ಒಬ್ಬ ಅಥವಾ ಇಬ್ಬರನ್ನು ಚುನಾಯಿಸಿ ಕಳುಹಿಸಿಕೊಟ್ಟು ಅವರವರು ಹೋದ ಡಿಸ್ಟ್ರಿಕ್ಟುಗಳಲ್ಲಿ ಇರತಕ್ಕ ತಾಲ್ಲೋಕುಗಳಲ್ಲಿ ಎರಡು ಮೂರು ಸಭೆಗಳನ್ನು ಕೂಡಿಸಿ, ಈ ಸಂಘದ ಸ್ಥಾಪನೆಯಿಂದಲೂ ಮತ್ತು ಈ ಮಹಾಸಭೆಯ ನಿರ್ವಾಹದಿಂದಲೂ ಒದಗುವ ಮಹಾ ದೇವರ ಕೃಪೆಯನ್ನೂ ಮತ್ತು ಪರೋಪಕಾರವನ್ನುಂಟುಮಾಡುವ ಸ್ಥಿತಿಗಳನ್ನು ಉಪನ್ಯಾಸದ ಮೂಲಕ ಸರ್ವರಿಗೂ ಬೋಧನೆ ಮಾಡಿದಲ್ಲಿ ಈ ಮುಗ್ಧಜನಗಳ ಮುಗ್ಧತ್ವವು ಸ್ವಲ್ಪಮಟ್ಟಿಗೆ ಸಧ್ಯದಲ್ಲಿ ಪರಿಹರಿಸಿದಂತಾಗಿ ಈ ಜನ್ಮವು ಉತ್ಪತ್ತಿ ಆದಲಾಗಾಯತು ಅನುಸರಿಸಿಕೊಂಡು ಬಂದಿರುವ ವೈಧವ್ಯವೆಂಬ ಪಿಶಾಚವನ್ನು ಹೊರಡಿಸಿ ದಂತಾಗಿ ನಂತರ ನಿಷ್ಕಲ್ಮಷರಾದ ಎಲ್ಲಾ ಮುಗ್ಧಜನಗಳು ಒಂದೇ ಮನಸ್ಸಿನಿಂದ ಸೇರಿ ಈ ಸಂಘದ ಸಾರೋದ್ಧಾರಕ್ಕೂ ಮಹಾ ಸಭೆಯ ನಿರ್ವಾಹಕ್ಕೂ ಸಹಾಯಮಾಡಗುತ್ತಾರೆಂಬುವದರಲ್ಲಿ ಯಾವದೊಂದು ಸಂದೇಹವೂ ಇರುವದಿಲ್ಲ. ಹೀಗೆ ಮಾಡುವದರಲ್ಲಿ ಮುಗ್ಧಜನಗಳ ಪಾಪವನ್ನು ನಿವಾರಣೆ ಮಾಡಿ, ಈ ಸಭೆಯ ಮಹನೀಯರುಗಳನ್ನು ಜೊತೆಗೆ ಸೇರಿಸಿಕೊಂಡು, ಈ ಮಹನೀಯರುಗಳು ಅನುಭವಿಸುತ್ತಿರುವ ಈಶ್ವರ ಕೃಪೆಗೂ ಪ್ರಜೆಗಳ ವಿಶ್ವಾಸಕ್ಕೂ ಭಾಗಿಗಳಾಗಿ ನಾವು ವರೆಂದು ವಿಶ್ವಾಸಪೂರ್ವಕವಾಗಿ ಬೇಡಿಕೊಳ್ಳುತ್ತೇವೆ.

ಈ ನಮ್ಮ ಅಲ್ಪವಿದ್ಯೆಯ ವಿಜ್ಞಾಪನೆಗಳನ್ನು ಮಹನೀಯರುಗಳು ತಮ್ಮ ಘನವಾದ ಚಿತ್ತದಲ್ಲಿ ಲಾಲಿಸಿ, ನಮ್ಮಗಳನ್ನು ಕಾಪಾಡುವ ಮನಸ್ಸನ್ನು ಈಶ್ವರನು ಕೊಡಲೆಂದು ಆತ್ಮಶುದ್ಧಿಯಾಗಿ ಬೇಡಿಕೊಳ್ಳುವದೇ ತಮ್ಮ ವಿಧೇಯ ಒಬ್ಬನೊಬ್ಬ ಮಠದ ಪಾಮರನ ಪ್ರಾರ್ಥನೆಯಾಗಿರುತ್ತದೆ.

ಎಂ. ಆರ್.

ಮಿಷನ್ ಆಸ್ಪತ್ರೆಯ ವರುಷೋತ್ಸವವು.

ಮೈಸೂರು ಪಟ್ಟಣದ ಉತ್ತರ ಭಾಗದಲ್ಲಿರುವ ಕರುಣಾಲಯವೆಂಬ ಮಿಷನ್ ಆಸ್ಪತ್ರೆಯ ವರುಷ ವರ್ಧಂತಿ ಹಬ್ಬವನ್ನು ಹೋದ ೨೫ನೇ ತಾ ಗುರುವಾರ ಸಾಯಂಕಾಲ ಬಹು ಸಂಭ್ರಮದೊಡನೆ ಆಚರಿಸಿದರು. ಈ ಉತ್ಸವಕ್ಕೆ ಬಹಳ ಜನರನ್ನು ಕರೆಸಿದೆ. ಇದ್ದರೂ ಬಂದಿದ್ದವರಿಗೆಲ್ಲಾ ಘನ ಪಾದ್ರಿ ಬೋಟ್ ದೊರೆಗಳು ನಾನಾ ವಿನೋದಗಳನ್ನು ತೋರಿಸಿ, ಸಂತೋಷಪಡಿಸಿದರು. ಕಡೆಯಲ್ಲಿ ಘನ ಥಾಂಸನ್ ದೊರೆಗಳು ವೇದಪಾರಾಯಣ ಭಗವತ್ಪ್ರಾರ್ಥನೆಗಳಿಂದ ಈ ಮೊದಲನೇ ವರುಷೋತ್ಸವವನ್ನು ಸಮಾಪ್ತಿಗೊಳಿಸಿದರು.

ಹೋದ ವರುಷದ ಅಂದರೆ ೧೯೦೬ನೇ ಸೆಪ್ಟಂಬರ್ ೧೦ ಲಾಗಾಯತು ೧೯೦೭ನೇ ಆಗಸ್ಟು ೨೫ನೇ ತಾರೀಖಿನ ವರೆಗೆ ಆಸ್ಪತ್ರೆಯ ಲೇಡಿ ಡಾಕ್ಟರವರ ರಿಪೋರ್ಟಿನ ಮೇರೆಗೆ ಆಸ್ಪತ್ರೆಗೆ ಬಂದ ಜನಸಂಖೆಗಳ ವಿವರವೇನೆಂದರೆ—ಡಿಸ್ಪೆನ್ಸರಿಗೆ ಹಾಜರಾದವರು ೯೯೦೩ ಮಂದಿ, ಹೊಸ ಕಾಯಿಲೆಯವರು ೬೯೬೩ ಮಂದಿ, ಆಸ್ಪತ್ರೆಯಲ್ಲಿದ್ದುಕೊಂಡು ಗುಣವಾದವರು ೩೯೯ ಮಂದಿ, ಮೇಜರ್‌ವರ್ಕ್‌ಯಲ್ಲಿ ಆದ ಚಿಕಿತ್ಸೆಗಳು ೧೯.

ಈ ಆಸ್ಪತ್ರೆಗೆ ವಿರೋಧಿಗಳಾಗಿರುವವರು ಹಬ್ಬಿಸಿದ ಕೇವಲ ಅಬದ್ಧಗಳನ್ನು ನಂಬಿ ಜನರು ಬರುವದು ಸ್ವಲ್ಪ ಕಡಿಮೆಯಾದರೂ ಇದರಿಂದ ಅನೇಕಾನೇಕ ಪ್ರಯೋಜನಗಳನ್ನು ಹೊಂದಿರುವವರು ಕ್ರಮವಾಗಿ ಬರುತ್ತಾ ಇದ್ದಾರೆ. ಈ ಊರಿನವರು ಮಾತ್ರವೇ ಅಲ್ಲದೆ ಈ ಡಿಸ್ಟ್ರಿಕ್ಟಿನ ಬೇರೆ ಬೇರೆ ಕಡೆಗಳಿಂದಲೂ ಜನಗಳು ತಮ್ಮ ರೋಗಿಷ್ಠರನ್ನು ತಂದು ಗುಣಪಡಿಸಿಕೊಂಡು ಹೋಗುತ್ತಾ ಇದ್ದಾರೆ. ಮತ್ತು ಕಾಂಪೌಂಡಿನ ಕೆಲವರೂ ಕಾಯಿಲೆಯವರು ಬಂದು ಕ್ಷೇಮವಾಗಿ ಹೋಗುತ್ತಿದ್ದಾರೆ.

ಈ ಆಸ್ಪತ್ರೆಯಲ್ಲಿ ನೇತ್ರರೋಗಿಗಳನ್ನು ಸ್ವಸ್ಥಮಾಡುವದೂ ಉಂಟು. ಕೆಲವು ದಿನಗಳ ಕೆಳಗೆ ಕೊಳ್ಳೇಗಾಲದಿಂದ ಭಯಂಕರವಾದ ಕಣ್ಣಿನ ಉಪದ್ರದಿಂದ ಬಂದಿದ್ದ ಒಬ್ಬ ಬ್ರಾಹ್ಮಣ ವೃದ್ಧಳಿಗೆ ಪೂರ್ಣಕ್ಷೇಮ ಉಂಟಾದ್ದರಿಂದ ಸಂತೋಷವಾಗಿ ತನ್ನ ಊರಿಗೆ ಹೋದಳು. ವಾರವಾರಕ್ಕೂ ತಪ್ಪದೆ ಹಗಲು ಇರುಳೆನ್ನದೆ ಇಲ್ಲಿ ಸುಖಕರವಾದ ಚಿಕಿತ್ಸೆಗಳು ಆಗುತ್ತಲೇ ಇರುತ್ತವೆ.

ಆಯಾ ಜಾತಿಯವರ ಅನ್ನ ಕೂಲಕ್ಕಾಗಿ ಪ್ರತ್ಯೇಕಪ್ರತ್ಯೇಕವಾದ ಅಡಿಗೆ ಮನೆಗಳು ಕಟ್ಟಲ್ಪಟ್ಟಿವೆ. ಉತ್ತಮ ಜಾತಿಯವರನ್ನು ಅಡಿಗೆ ಕೆಲಸಕ್ಕೆ ನೇಮಿಸಿಕೊಂಡಿದೆ. ಬ್ರಾಹ್ಮಣರು ಪ್ರತ್ಯೇಕವಾದ ಮನೆಯಲ್ಲಿ ಅಡಿಗೆ ಮಾಡಿಕೊಳ್ಳುತ್ತಾರೆ.

ಈ ಆಸ್ಪತ್ರೆಯಲ್ಲಿದ್ದು ಗುಣವಾಗಿ ಹೋಗುವ ಸ್ತ್ರೀಯರನ್ನು ಕಂಡು—ಅಮ್ಮಾ, ಇವರಲ್ಲಿ ನಿಮ್ಮ ಜಾತಿ ಕೆಡಿಸುವದಕ್ಕೆ ಪ್ರಯತ್ನ ಮಾಡಲಿಲ್ಲವೇ? ಜನರು ಹಾಗೆ ಸುದ್ದಿಯನ್ನು ಹುಟ್ಟಿಸಿದರಲ್ಲಾ ಎಂದು ಕೇಳಿದರೆ, ಅವರು—ಅಯ್ಯೋ, ಯಾರಪ್ಪ ಇಂಥಾ ಸುಳ್ಳನ್ನು ಜೋಡಿಸಿದರು. ನಮ್ಮನ್ನು ಹೆತ್ತವರಿಗಿಂತ ಹೆಚ್ಚಾಗಿ ಸಂರಕ್ಷಣೆ ಮಾಡಿದರಲ್ಲ. ಅಂಥವರ ಮೇಲೆ ಸುಳ್ಳು ಹೇಳುವವರನ್ನು ಭಗವಂತನು ಸುಮ್ಮನೆ ಬಿಟ್ಟಾನೇ ಎಂದು ಅನ್ನುತ್ತಾರೆ. ಈಗ ಒಳಗೆ ಇದ್ದುಕೊಂಡು ಕಾಯಿಲೆ ದುರಸ್ತು ಮಾಡಿಕೊಳ್ಳುವವರು ಅನೇಕರಿದ್ದಾರೆ. ಔಷಧಕ್ಕಾಗಿ ಬರುವವರ ಲೆಕ್ಕವು ದಿನೇದಿನೇ ಹೆಚ್ಚುತ್ತಲೇ ಇರುತ್ತದೆ.

ರೋಗಿಗಳನ್ನು ಸ್ವಸ್ಥಮಾಡುವದಕ್ಕಾಗಿ ಮಾಡುವ ಎದು ಪ್ರಯತ್ನಗಳು ನಮ್ಮವು. ಗುಣವಾದರೆ ಆರನೇ ಪ್ರಯತ್ನವು ದೇವರದು ಎಂಬ ನೀತಿಯನ್ನು ಕ್ರೈಸ್ತರು ಸತ್ಯವಾಗಿ ನಂಬಿರುವದರಿಂದ ಪ್ರತಿ ದಿನವೂ ಬೆಳಿಗ್ಗೆ ಆಸ್ಪತ್ರೆಯ ಕೆಲಸ ಪ್ರಾರಂಭವಾಗುವದಕ್ಕಿಂತ ಮೊದಲೇ ಎಲ್ಲರೂ ಒಂದು ಸ್ಥಳದಲ್ಲಿ ಕೂಡಿಕೊಂಡು ಸ್ವಲ್ಪ ಹೊತ್ತು ವೇದಪಾರಾಯಣ ಭಗವತ್ಪ್ರಾರ್ಥನೆಗಳನ್ನು ಮಾಡುವದುಂಟು. ಇಷ್ಟವುಳ್ಳವರು ಆ ಸ್ಥಳಕ್ಕೆ ಹೋಗಬಹುದೇ ಹೊರತು ಯಾರನ್ನಾದರೂ ಬಲಾತ್ಕಾರದಿಂದ ಕರೆಯುವದಿಲ್ಲ. ಇಷ್ಟವಿಲ್ಲದವರು ನೆಟ್ಟಗೆ ಬಂದು ಔಷಧ ತೆಗೆದುಕೊಂಡು ಹೋಗಬಹುದು. ಶ್ರೀ ಭಗವಂತನು ಈ ಕರುಣಾಲಯವೆಂಬ ಆಸ್ಪತ್ರೆಯನ್ನು ಬಾಳಿಸುವಾಗಿ ಆಶೀರ್ವದಿಸಲಿ ಎಂಬುವದೇ ನನ್ನ ಪ್ರಾರ್ಥನೆ.

ಹಿತೈಷಿ.

ಇಂಡಿಯಾ ದೇಶದ ವೃತ್ತಾಂತಗಳು.

ಆಗ್ರಾಪಟ್ಟಣದಲ್ಲಿ ಪೋಲೀಸ್ ನೌಕರರು ಹಲವರು ಲಂಚ ತಿಂದು ದು. ಮೊಕದ್ದಮೆ ಆಗಿ ಸರ್ಕಾರ ವಿಚಾರಣೆಗೆ ಗುರಿಮಾಡಲ್ಪಟ್ಟಿದಾರೆ.

***

ಹಿಂದುಸ್ಥಾನದಲ್ಲಿ ೧೮೯೬ನೇ ಇಸವಿ ಲಾಗಾಯತು ಈ ವರುಷ ಮೇ ತಿಂಗಳ ಆಖೈರು ವರೆಗೆ ಅಂದರೆ ೧೧ ವರುಷವೂ ೫ ತಿಂಗಳವರೆಗೆ ೫೫,೦೦,೨೦೦ ಜನರು ಪ್ಲೇಗ್ ಉಪದ್ರದಲ್ಲಿ ಮರಣಹೊಂದಿರುವರೆಂದು ತಿಳಿದುಬರುತ್ತದೆ.

***

ಬೆಂಗಳೂರು ಮ್ಯುನಿಸಿಪಾಲಿಟಿಯವರ ಇಲಿ ಕೊಲ್ಲುವ ಕೆಲಸಗಳ ಕಳ್ಳರು ಬಿದ್ದು, ಇಲಿಗಳನ್ನು ಕೊಲ್ಲುವುದಕ್ಕೆ ನೀರು ಕಾದಿಸುವ ಒಂದು ಭಾರೀ ತಾಂಬ್ರದ ಹಂಡೆಯನ್ನು ಎತ್ತಿಹಾಕಿಕೊಂಡು ಹೋದರಂತಲೂ, ಅವರು ಪತ್ತೆ ಆಗಲಿಲ್ಲವೆಂತಲೂ ಪ್ರಕಟವಾಗಿದೆ.

***

ಇಂಡಿಯಾ ಗವರ್ನಮೆಂಟಿನವರು ಹಿಂದುಸ್ಥಾನದ ಏಳು ಮಂದಿ ದೇಶೀಯ ವಿದ್ಯಾವಂತರಾದ ಯೌವನಸ್ಥರಿಗೆ ವೇತನಗಳನ್ನು ಗೊತ್ತು ಮಾಡಿ, ಅವರೆಲ್ಲಾ ವಿಲಾಯತಿಗೆ ಹೋಗಿ ಅಲ್ಲಿನ ಕಾರ್ಖಾನೆಗಳಲ್ಲಿ ಕಸಬುದಾರಿ ವಿದ್ಯೆಗಳನ್ನು ಕಲಿತುಕೊಂಡು ಬರಬೇಕೆಂದು ತೀರ್ಮಾನ ಮಾಡಿದಾರೆ. ಗಣಿಯ ವಿದ್ಯೆ, ಲೋಹಕೆಲಸ, ಚರ್ಮದ ಪದಾರ್ಥಗಳ ತಯಾರಿ, ಈ ಮೊದಲಾದ ಕಸಬುಗಳನ್ನು ಅವರು ಕಲಿತು ಬರುವವರಾಗಿದಾರೆ.

***

ಹಿಂದುಸ್ಥಾನದಲ್ಲಿ ಗವರ್ನಮೆಂಟಿನವರು ನ್ಯಾಯಗಳನ್ನು ಛಾಪಾಹಾಕೋಣದರಲ್ಲಿ ಉತ್ಪತ್ತಿಯಾಗುವ ಹುಟ್ಟುವಳಿಯನ್ನು ಯಾವ ಬಾಬಿಗೂ ಖರ್ಚು ಮಾಡದೆ ಪ್ರತ್ಯೇಕವಾಗಿಡುತ್ತಾ ಬಂದಿದಾರೆ. ಈ ಕಲೆಹಾಕಿಟ್ಟ ಹಣವು ೩೦ ಕೋಟಿ ರೂಪಾಯಿ ಆಗಿರುತ್ತದೆ. ಈಗ ಈ ಹಣದಲ್ಲಿ ೪೦ ಕೋಟಿ ರೂಪಾಯನ್ನು ಹಿಂದುಸ್ಥಾನದ ರೈಲ್ ರಸ್ತೆಗಳ ಬಿಡುವಳಿ ಕಾಮಗಾರಿಗೆ ಈ ವರುಷವೇ ವಿನಿಯೋಗಿಸಬೇಕೆಂದು ತೀರ್ಮಾನ ಮಾಡಿರುವರು.

***

ವಿ. ಪಿ. ಕೃಷ್ಣಸ್ವಾಮಯ್ಯರವರು ಬಳ್ಳಾರಿಯಲ್ಲೂ ಕನ್ನಾನೂರಿನಲ್ಲೂ ಎರಡು ದರ್ಜಾದ ಪೋಲೀಸ್ ಸ್ಕೂಲುಗಳನ್ನು ತಮ್ಮ ಸ್ವಂತ ಖರ್ಚಿನಿಂದ ಇಟ್ಟು ನಡಸುವುದಕ್ಕೆ ಏರ್ಪಾಡು ಮಾಡಿದಾರೆ. ಈ ಸ್ಕೂಲುಗಳಲ್ಲಿ ಉತ್ತರಮಲಬಾರ್ ಜಿಲ್ಲೆಗೆ ಸೇರಿದ ಪೋಲೀಸ್ ಕಾನ್‌ಸ್ಟೇಬಲ್‌ಗಳ ಮಕ್ಕಳನ್ನು ಸೇರಿಸಿಕೊಂಡು, ಅವರಿಗೆ ವಿದ್ಯೆ ಕಲಿಸುವರು. ಇದಲ್ಲದೆ ಅವರು ಸರ್ಕಾರಿ ಖರ್ಚಿನಿಂದ ಪೋಲೀಸ್ ಗಜೆಟ್ ಎಂಬ ಪತ್ರಿಕೆಯನ್ನು ಪ್ರಕಟಿಸುವವರಾಗಿದಾರೆ. ಅದರಲ್ಲಿ ಪೋಲೀಸ್ ಇಲಾಖೆಯವರು ಕಲಿಯಬೇಕಾಗಿರುವ ವಿಷಯಗಳನ್ನು ಬರೆದು ತಿಳಿಸುವರು.

***

ಮಧ್ಯ ಹಿಂದುಸ್ಥಾನದಲ್ಲಿ ಒಬ್ಬ ಕುರುಬನು ತನ್ನ ಕುರಿ ಹಿಂಡನ್ನು ಕಾಯುವುದಕ್ಕೆ ಒಂದು ಹಂದಿಯನ್ನು ಸಾಕಿ ಇಟ್ಟುಕೊಂಡಿದಾನೆ. ಆ ಹಂದಿಯು ಪ್ರತಿದಿನವೂ ಕುರಿಗಳ ಮಂದೆಯನ್ನು ಮನೆಯಿಂದ ಕಾಡಿಗೆ ಬಿಟ್ಟುಕೊಂಡುಹೋಗಿ ಸಾಯಂಕಾಲದ ತನಕ ಜಾಗ್ರತೆಯಿಂದ ಕಾದು, ವಾಪಸು ಮನೆಗೆ ಕರೆದು ತಂದು ಬಿಡುತ್ತದೆ. ಇದು ಸರಿಯೆ. ಆದರೆ ಮಾಂಸಕ್ಕೆ ಬಂದು ಆಹಾರವೂ ತಪ್ಪಿಸಿಕೊಂಡು ಹೋಗಲಿಲ್ಲ. ಅವು ಮೇಯುತ್ತಿರುವಾಗ್ಗೆ ಹಂದಿಯು ಅವುಗಳನ್ನು ಚದರಿ ಹೋಗದಂತೆಯೂ, ಇತರ ಗುಂಪುಗಳ ಆಡುಗಳು ಈ ಮಂದೆಗೆ ಸೇರದಂತೆಯೂ ಕಾಯುತ್ತದೆ ಎಂದು ಆ ಪ್ರಾಂತ್ಯದ ಫಾರೆಸ್ಟ್ ಡಿಪ್ಯೂಟಿ ಕನ್ಸರ್ವೇಟರವರು ತಿಳಿಯಪಡಿಸಿದ್ದಾರೆ.

***

ಪೂನಾ ಪಟ್ಟಣಕ್ಕೆ ೫೦ ಮೈಲಿ ದೂರದಲ್ಲಿರುವ ಒಂದು ಗ್ರಾಮಕ್ಕೆ ಕಳೆದ ವಾರ ಆರು ಜನ ಪಠಾಣರು ರಾತ್ರಿ ೧೦—೧೧ ಗಂಟೆಯ ವೇಳೆ ನುಗ್ಗಿ ಮೂರು ಮನೆಗಳನ್ನು ಕೊಳ್ಳೆಹೊಡೆದರು. ಆ ಮೂರು ಮನೆಗಳಲ್ಲೂ ಇದ್ದಾರು ಜನರನ್ನು ಹೊಡೆದು ಗಾಯಮಾಡಿದರು. ಅಷ್ಟರಲ್ಲೇ ಗ್ರಾಮಸ್ಥರೆಲ್ಲಾ ಬಂದು ಸೇರಿ ಆ ಕಳ್ಳರ ಸಂಗಡ ಹೋರಾಡುತ್ತಿರುವಲ್ಲಿ ಅವರು ಸುಮಾರು ೨,೦೦೦ ರೂಪಾಯಿ ಮಾಲ್‌ಗಳ ಸಹಿತ ತಪ್ಪಿಸಿಕೊಂಡು ಹೋದರು. ಆ ಹೋರಾಟದಲ್ಲೂ ಅನೇಕರಿಗೆ ಗಾಯಗಳಾದವು. ಈಗ ಆ ಗಾಯಪಟ್ಟವರೆಲ್ಲಾ ಬಂದು ಪೂನಾ ಆಸ್ಪತ್ರೆಯಲ್ಲಿ ಇಲಾಜು ಮಾಡಿಸಿಕೊಳ್ಳುತ್ತಿದಾರೆ. ಈಚೆಗೆ ಪೋಲೀಸಿನವರು ಕಳ್ಳರಲ್ಲಿ ಮೂರು ಮಂದಿಯನ್ನು ಪತ್ತೆ ಮಾಡಿದರೆಂದು ತಿಳಿದುಬಂದಿದೆ.

***

ಅನಂತಕಳ್ಳನ ಸಂಸ್ಥಾನಕ್ಕೆ ಸೇರಿದ ಕ್ವಿಲಾನ್ ನಗರದ ಬಳಿ ಒಂದು ಗ್ರಾಮದಲ್ಲಿ ಸಮುದ್ರವು ಹೆಚ್ಚಿ ಬಂದು ಅನೇಕ ಮನೆಗಳನ್ನೂ ಬಯಲುಗಳನ್ನೂ ಮುಳುಗಿಸಿಕೊಂಡಿದೆ ಎಂದೂ ಆ ಜನರು ತುಂಬಾ ಕಷ್ಟನಷ್ಟಗಳಿಗೆ ಗುರಿಯಾಗಿದಾರೆಂದೂ ಕಳೆದ ವಾರ ತಿಳಿಸಿದ್ದೆವಷ್ಟೆ. ಈಚೆಗೆ ದಿವಾನರು ಆ ಪ್ರಾಂತ್ಯ ಹೋಗಿ ಅವರ ಕಷ್ಟವನ್ನು ನೋಡಿ ತುಂಬಾ ಕನಿಕರಪಟ್ಟು, ಅವರಿಗೆಲ್ಲಾ ಒಂದು ಪಕ್ಷದ ತನಕ ಸರ್ಕಾರದಿಂದ ಆಹಾರ ದಿನಸುಗಳನ್ನು ಕೊಡಿಸಿದ್ದಲ್ಲದೆ ಬೇರೆಕಡೆ ಮನೆ ಕಟ್ಟಿಕೊಳ್ಳುವುದಕ್ಕೆ ಅವರಿಗೆ ನಿವೇಶನಗಳನ್ನು ಕೂಡಿಸುವಮಟ್ಟಿಗೂ ಸಾಮಾನುಗಳನ್ನೂ ಕೊಡಿಸಿದರು. ರೆಸಿಡೆಂಟರು ಆ ಪ್ರಾಂತ್ಯದ ಸ್ಥಳ್ಯಾನಂತರವೂ ಆ ಜನರಿಗೆ ತಕ್ಕಮಟ್ಟಿಗೆ ದ್ರವ್ಯ ಸಹಾಯ ಮಾಡಿರುತ್ತಾರೆ. ಇನ್ನು ಕೆಲವು ದಿನಗಳೊಳಗಾಗಿ ಆ ಗ್ರಾಮವೆಲ್ಲಾ ಸಮುದ್ರದೊಳಕ್ಕೆ ಸೇರಿಹೋಗುವಂತಿದೆ ಎಂದು ತಿಳಿಯುವುದು.

ಜರ್ಮನಿ ರಾಜ್ಯಕ್ಕೆ ಸೇರಿದ ಸ್ಟಟ್ಗಾರ್ಟ್ ಎಂಬ ನಗರದಲ್ಲಿ ಐಕ್ಯವೂ ಅಧಿಕಾರವೂ ಸರ್ವತ್ರ ಸಮನಾಗಿರಬೇಕೆಂದು ಹೋರಾಡುವವರು ಒಂದು ಸಭೆಯನ್ನು ನಡಿಸಿದರು. ಈ ಸಭೆಗೆ ಹಿಂದುಸ್ಥಾನದವರ ಪ್ರತಿನಿಧಿಗಳು ಹೋಗಿ ಹಿಂದುಸ್ಥಾನದ ರಾಜಕೀಯ ವಿಚಾರಗಳನ್ನು ಕುರಿತು ಉಪನ್ಯಾಸಮಾಡುತ್ತಾ—"ಹಿಂದುಸ್ಥಾನದಲ್ಲಿ ಇಂಗ್ಲಿಷ್ ಪ್ರಭುತ್ವವು ನೆಲೆಗೊಂಡಿರುವುದು ಆ ರಾಷ್ಟ್ರದ ಏಳಿಗೆಗೆ ತುಂಬಾ ಹಾನಿಕರವಾಗಿದೆ. ಅವರ ಪ್ರಭುತ್ವದಿಂದ ಹಿಂದುಸ್ಥಾನವು ಅನೇಕ ಕಷ್ಟ ದುಃಖಗಳಿಗೆ ಗುರಿಯಾಗಿರುತ್ತದೆ. ಸ್ವತಂತ್ರಾಧಿಕಾರದಲ್ಲಿ ಅಭಿಲಾಷೆಯೂ ಪ್ರೀತಿಯೂ ಉಳ್ಳವರಾದ ನೀವುಗಳೆಲ್ಲಾ ಒಂದಾಗಿ ಸೇರಿ, ಪ್ರಪಂಚದ ಪ್ರಜಾಸಂಖ್ಯೆಯಲ್ಲಿ ಐದನೇ ಒಂದಂಶದ ಪ್ರಜೆಗಳು ಗುಲಾಮರಾಗಿ ಬಿದ್ದಿರುವುದನ್ನು ಸಾಹಸಪಟ್ಟು ಪರಿಹರಿಸಿ ಸಂರಕ್ಷಿಸಬೇಕಾಗಿದೆ" ಎಂಬೀ ರೆಜಲ್ಯೂಷನನ್ನು ಸೂಚನೆ ಮಾಡಿದರೆಂದು ತಂತೀ ವರ್ತಮಾನ ಬಂದಿದೆ.

⁂

ಕಳೆದ ೨೯ನೇ ಬೊಂಬಾಯಿ ಪಟ್ಟಣದ ಪ್ರಾರ್ಥನಸಮಾಜಹಾಲ್ ಎಂಬ ಬಂಗಲೆಯಲ್ಲಿ ಒಂದು ವಿಧವಾ ವಿವಾಹ ನಡೆಯಿತು. ಕಾಶೀಬಾಯಿ ಎಂಬ ಹದಿನಾರು ವರುಷದ ಹಿಂದೂ ವಿಧವೆಯು ನರಸಿಂಗರಾವ್ ಎಂಬ ವಿದ್ಯಾವಂತನಾದ ಯೌವನಸ್ಥನನ್ನು ವರಿಸಿ ಮದುವೆಮಾಡಿಕೊಂಡಳು. ವಿವಾಹವು ಬ್ರಹ್ಮಸಮಾಜ ಮತರೀತಿಯಲ್ಲಿ ಜರುಗಿತು. ಗುಜರಾತಿ ಭಾಷೆಯಲ್ಲಿ ಮಂತ್ರಗಳನ್ನು ಹೇಳಿ ವಿವಾಹ ಮಾಡಿದರು. ಈ ವಿವಾಹವನ್ನು ನೋಡುವುದಕ್ಕೆ ಬಹು ಜನ ದೊಡ್ಡ ಮನುಷ್ಯರೂ ಹೆಂಡೂ ಸ್ತ್ರೀಯರೂ ಹೋಗಿದ್ದರು. ಹೈಕೋರ್ಟ್ ಜಡ್ಜಿಗಳಾದ ಚಂದಾವರ್ಕರವರೂ ಅವರ ಪತ್ನಿಯವರೂ, ಗತಿಸಿದ ರಾನಡೆಯವರ ಪತ್ನಿಯವರೂ, ಮೆ॥ ಅಂಡ್ರುಸ್ಟ್ರಯವರೂ, ಡಾ॥ ಭಂಡಾರ್ಕರವರೂ, ಮೆ॥ ಪಾರೇಖ್‌ಯವರು ಮೊದಲಾದವರಲ್ಲಾ ಹಾಜರಾಗಿದ್ದು ನೂತನ ದಂಪತಿಗಳಿಗೆ ಉಡಿಗೆರೆಗಳನ್ನು ಕೊಟ್ಟು ಹರಸಿದರು. ಕಡೆಯಲ್ಲಿ ಸತ್ಯಾನಂದಸ್ವಾಮಿಯವರು ಭಗವತ್ಪ್ರಾರ್ಥನೆಯನ್ನು ನಡಿಸಿದರು. ಸರ್ ಚಂದಾವರ್ಕರವರು ನೂತನ ದಂಪತಿಗಳಿಗೆ ಕೆಲವು ಹಿತೋಕ್ತಿಗಳನ್ನು ಹೇಳಿ, ವಿವಾಹಕಾರ್ಯಗಳನ್ನು ಮುಕ್ತಾಯಮಾಡಿದರು.

⁂

ಬರ್ಮಾ ಅಧಿಪತ್ಯಕ್ಕೆ ಸೇರಿದ ಸಂತವಷ್ಟು ಜಿಲ್ಲೆಯ ಸೆಷನ್ಸ್ ಜಡ್ಜರು ಒಂದು ವಿಚಿತ್ರವಾದ ಮೊಕದ್ದಮೆಯನ್ನು ದರ್ಯಾಪ್ತು ಮಾಡಿದರು. ಸಾಯಾ ಎಂಬುವನೂ ಪೋಪ್ಯೆಯಾ ಎಂಬುವನೂ ೭೦ ಮತ್ತು ೬೫ ವಯಸ್ಸಿನ ಡಾಕ್ಟರುಗಳು. ಇವರಿಬ್ಬರೂ ನೂರು ಮಂದಿಯನ್ನು ಕೊಂದರೆಂದೂ, ನರಮಾಂಸ ಭಕ್ಷಣೆ ಮಾಡಿದರೆಂದೂ ಮೊಕದ್ದಮೆ ಆಯಿತು. ದರ್ಯಾಪ್ತಿಯಲ್ಲಿ ಮೊದಲನೆಯ ಅಪರಾಧಿಯು ತಾನು ನಡಿಸಿದ ಕೃತ್ಯವನ್ನು ಒಪ್ಪಿಕೊಂಡು ಹೇಳಿದ್ದೇನೆಂದರೆ—ಮಾಟ ಬಿಟ್ಟವನ ಮಗುವನ್ನು ಹಿಡಿದು ಬೇಯದ ಬಳಿಕ ತಿನ್ನಬೇಕೆಂದೂ, ಹೀಗೆ ಮಾಡಿದರೆ ತನಗೆ ಅದ್ಭುತಶಕ್ತಿಗಳುಂಟಾಗುವುವೆಂದೂ, ಮೂರಾವರ್ತಿ ಸ್ವಪ್ನ ಬಿದ್ದಿತು. ಆದಕಾರಣ ನಾನು ಆ ಮಗುವಿನ ತಂದೆ ತಾಯಿಗಳನ್ನು ಕೊಂದುಹಾಕಿ, ಆ ಮಗುವಿನ ಹೊಟ್ಟೆಯನ್ನು ಬಗೆದು ತಿಂದದ್ದುಂಟು. ಈ ಎರಡನೆಯ ಅಪರಾಧಿಯಾದ ಪೊಪ್ಯೆಯಾ ಎಂಬವನಿಗೆ ನನ್ನ ಸ್ವಪ್ನದ ವಿಚಾರವನ್ನು ಹೇಳಲಿಲ್ಲ. ಅವನು ನಾನು ಈ ಕೃತ್ಯ ನಡಿಸುವಾಗ್ಗೆ ಸುಮ್ಮನೇ ಕುಳಿತು ನೋಡುತ್ತಿದ್ದನು ಎಂದು ಹೇಳಿದನು. ಸೆಷನ್ಸ್ ಜಡ್ಜರು ಆ ಮೊದಲನೆಯ ಅಪರಾಧಿಗೆ ಮರಣ ದಂಡನೆಯನ್ನೂ, ಎರಡನೆಯವನಿಗೆ ಯಾವಜ್ಜೀವವೂ ಬಂದೀಖಾನೆ ಶಿಕ್ಷೆಯನ್ನೂ ವಿಧಿಸಿರುತ್ತಾರೆ.

ವಿದೇಶ ವರ್ತಮಾನಗಳು.

ರೆಹೆನಿಷ್ ಪ್ರಷ್ಯಾಕ್ಕೆ ಸೇರಿದ ಬೋಹಿಂಗ್ ಗಣಿಯಲ್ಲಿ ಅನಾಹುತವಾಗಿ ಹದಿನೆಂಟು ಜನರು ಮೃತಪಟ್ಟರು. ಇನ್ನೊಂದು ಮಂದಿಗೆ ಪೆಟ್ಟು ಆಗಿದೆ.

⁂

ಫ್ರಾನ್ಸಿಗೆ ಸೇರಿದ ಪ್ಯಾರಿಸ್ ಪಟ್ಟಣದಲ್ಲಿ ಒಬ್ಬ ಇಂಗ್ಲಿಷ್ ಸ್ತ್ರೀಯು ತನ್ನ ಗಂಡನಲ್ಲಿ ವ್ಯಭಿಚಾರದ ಅಪರಾಧವನ್ನು ಕಂಡು ಅವನನ್ನು ಗುಂಡಿನಿಂದ ಹೊಡೆದು ಕೊಂದುಹಾಕಿರುತ್ತಾಳೆ.

⁂

ಜರ್ಮನ್ ರಾಜ್ಯಕ್ಕೆ ಸೇರಿದ ಟೊಯೊ ಒಕಾ ಎಂಬ ಊರಿನ ಗಣಿಗಳಲ್ಲಿ ಒಂದು ಅನಾಹುತವಾಯಿತು. ಅಗ್ನಿ ಆ ಗಣಿಗಳಲ್ಲಿ ಕೆಲಸ ಮಾಡುತ್ತಿದ್ದ ೪೭೦ ಜನರ ಪೈಕಿ ಅನೇಕರು ಮೃತಪಟ್ಟರೆಂದು ತಂತೀ ವರ್ತಮಾನ ಬಂದಿದೆ.

⁂

ಅಮೇರಿಕದ ಮುಖ್ಯಪಟ್ಟಣವಾದ ನ್ಯೂಯಾರ್ಕಿನಲ್ಲಿ ಒಬ್ಬನು ಒಬ್ಬ ಐಶ್ವರ್ಯವಂತನ ಅಂಗಡಿಗೆ ಹೋಗಿ ತನಗೆ ಹಣಬೇಕೆಂದು ಕೇಳಿದರೂ ಕೊಡದೆ ಹೋದನಲ್ಲಾ ಎಂದು ಕೋಪಯುಕ್ತನಾಗಿ ಆ ಐಶ್ವರ್ಯವಂತನನ್ನು ಗುಂಡಿನಿಂದ ಹೊಡೆದು ಕೊಂದುಬಿಟ್ಟನು.

⁂

ವಿಲಾಯಿತಿಯಲ್ಲಿ ಮೃತಳಾದ ವಿಸ್ ಇ. ಆರ್. ಲಿಯಾರ್ ಎಂಬಾಕೆಯು ೧,೪೦,೦೦೦, ರೂಪಾಯನ್ನೂ, ಜನರಲ್ ಜೆ. ಸಿ. ಬೈಲಿ ಎಂಬಾತನು ೫೬,೫೦೦ ರೂಪಾಯನ್ನೂ, ಮಿಸ್ ಸೂಸನ್ಗ್ರೇ ಎಂಬಾಕೆಯು ೩೦,೦೦೦ ರೂಪಾಯನ್ನೂ, ಮಿಸ್ ಇಲಿಯಾ ಆಸ್ಟ್ರೇರ್ ಎಂಬಾಕೆಯು ೩೭,೫೦೦ ರೂಪಾಯನ್ನೂ ಆಸ್ಪತ್ರೆಗಳಿಗೂ ಇತರ ಧರ್ಮಕಾರ್ಯಗಳಿಗೂ ತಮ್ಮ ಆಸ್ತಿಯಿಂದ ಖರ್ಚು ಮಾಡತಕ್ಕದ್ದೆಂದು ಉಯಿಲು ಬರೆದಿರುತ್ತಾರೆ.

ಅಮೇರಿಕಕ್ಕೆ ಸೇರಿದ ನೂರಾರು ಪಟ್ಟಣಗಳಲ್ಲಿ ಟೆಲಿಗ್ರಾಫ್ ಇಲಾಖೆಯ ನೌಕರಮಾನೇಜರುಗಳು ತಮ್ಮ ಸಂಬಳ ಮುಂತಾದ್ದನ್ನು ಹೆಚ್ಚಿಸಿಕೊಡಬೇಕೆಂದು ಹಟಹಿಡಿದು ಕೆಲಸಬಿಟ್ಟಿರುತ್ತಾರೆ. ಇದರಿಂದ ತಂತೀ ವರ್ತಮಾನಗಳು ಊರಿಂದೂರಿಗೆ ಹೋಗಿ ದಾಖಲೆ ಆಗುವುದಕ್ಕೆ ತುಂಬಾ ಅಡಚಣೆಯಾಗಿದೆ.

⁂

ಚೀನಾ ಗವರ್ನಮೆಂಟಿನವರು ಟಿಬೆಟ್ ರಾಜ್ಯದ ಸಂರಕ್ಷಣೆಗೋಸ್ಕರ ೩,೭೦೦ ಜನ ಚೀನಾ ಸೈನಿಕರನ್ನೂ ೨,೪೦೦ ಜನ ಟಿಬೆಟ್ಟಿನ ಸೈನಿಕರನ್ನೂ ಹೊಸದಾಗಿ ನೇಮಕ ಮಾಡುತ್ತಾರೆಂತಲೂ ಈ ಸೈನ್ಯವನ್ನು ಚಾಂಡೊ, ಚಕಿಂಗ್, ಚರ್ಬಿ ಎಂಬೀ ಮೂರು ರಾಜ್ಯಗಳಿಗೆ ನೇಮಿಸುತ್ತಾರೆಂತಲೂ ತಿಳಿದು ಬಂದಿದೆ.

⁂

ದಕ್ಷಿಣ ಆಫ್ರಿಕಕ್ಕೆ ಸೇರಿದ ಟ್ರಾನ್ಸ್‌ವಾಲ್ ಎಂಬ ಇಂಗ್ಲಿಷ್ ಸ್ವಾಸ್ಥ್ಯದ ಗಣಿಗಳೊಳಗೆ ಕಳೆದ ಜೂನ್ ೩೦ಕ್ಕೆ ಆಖೈರಾದ ೬ ತಿಂಗಳಲ್ಲಿ ೪೦ ಕೋಟಿ ರೂಪಾಯಿನ ಚಿನ್ನವೂ, ೭ ಕೋಟಿ ರೂಪಾಯಿನ ವಜ್ರಗಳೂ, ೧೫ ಕೋಟಿ ರೂಪಾಯಿನ ಕಲ್ಲಿದ್ದಲೂ, ೧೩ ಲಕ್ಷ ರೂಪಾಯಿನ ಬೆಳ್ಳಿಯೂ, ಲಕ್ಷ ರೂಪಾಯಿನ ಇತರ ಲೋಹಗಳೂ ಉತ್ಪತ್ತಿ ಮಾಡಿರುತ್ತಾರೆ.

⁂

ಉತ್ತರ ಮತ್ತು ದಕ್ಷಿಣ ಅಮೇರಿಕಗಳ ನಡುವೆ ಇರುವ ಪನಾಮಾ ಎಂಬ ಭೂಕಂಠವನ್ನು ಕತ್ತರಿಸಿ ಜಲ ಮಾರ್ಗವನ್ನು ಮಾಡಬೇಕೆಂದು ಕಾಮಗಾರಿ ನಡೆಯುತ್ತಿದೆ. ೨೬,೦೦೦ ಕೂಲಿಕಾರರು ಈ ಕೆಲಸವನ್ನು ಮಾಡುತ್ತಿದ್ದಾರೆ. ಈಗಿನ ಪ್ರಕಾರ ಕಾಮಗಾರಿ ನಡೆದರೆ ೧೯೧೫ ನೆ ಇಸವಿಯಲ್ಲಿ ಪೂರೈಸಿ ಜಲ ಮಾರ್ಗವು ಸ್ಥಾಪನೆಯಾಗುವುದೆಂದು ಹೇಳುತ್ತಾರೆ.

⁂

ವಿಲಾಯಿತಿಯಲ್ಲಿ ಕಾಲವಾದ ಮಾರ್ಥಾ ಮಿಲ್ಲರ್ ಎಂಬಾಕೆಯು ೭೫,೦೦೦ ರೂಪಾಯನ್ನೂ, ಮೆ॥ ಜೋನಾಥಾನ್ ಅಂಡ್ರೂಸ್ ಎಂಬಾತನು ೧೫,೦೦೦ ರೂಪಾಯನ್ನೂ, ೯೦ ವರುಷದ ತನಕ ಮದುವೆ ಮಾಡಿಕೊಳ್ಳದೆ ಇದ್ದು ಕಾಲವಾದ ಒಬ್ಬ ಸ್ತ್ರೀಯು ೪೦ ಲಕ್ಷ ರೂಪಾಯನ್ನೂ ನಾನಾ ಧರ್ಮಕಾರ್ಯಗಳಿಗೂ ಅನಾಥಾಲಯಗಳಿಗೂ ತಮ್ಮ ಆಸ್ತಿಯಿಂದ ವಿನಿಯೋಗಿಸಬೇಕೆಂದು ಉಯಿಲು ಬರೆದಿರುತ್ತಾರೆ.

⁂

ರಷ್ಯಾ ರಾಜ್ಯದಲ್ಲಿ ಟ್ರಾನ್ಸ್ ಕಾಕೇಷಿಯಾ ರೈಲ್ ರಸ್ತೆಯೊಳಗೆ ರಷ್ಯಾ ಅಧಿಕಾರಿಯೊಬ್ಬನು ೭೫,೦೦೦ ರೂಪಾಯನ್ನು ಖಜಾನೆಗೆ ಸಾಗಿಸಿಕೊಂಡು ಹೋಗುವಾಗ ಒಂದು ಸ್ಟೇಷನ್ನಲ್ಲಿ ೨೦ ಮಂದಿ ಕಳ್ಳರು ಗುಂಡು ಹೊಡೆಯುತ್ತಾ ಗಾಡಿಯೊಳಕ್ಕೆ ನುಗ್ಗಿ ಅಷ್ಟು ಹಣವನ್ನೂ ಅಪಹರಿಸಿಕೊಂಡು ಹೋದರು. ಅವರು ಹಾರಿಸಿದ ಮದ್ದಿನ ಗುಂಡುಗಳಿಂದ ರೈಲ್ ನೌಕರರೂ ಪ್ರಯಾಣಿಕರೂ ಗಾಯ ಪಟ್ಟರು. ಈ ಪೈಕಿ ಕೆಲವರು ಸತ್ತು ಹೋದರೆಂದೂ ತಿಳಿಯುವುದು.

⁂

ಯೂರೋಪ್‌ಖಂಡಕ್ಕೆ ಸೇರಿದ ಆಸ್ಟ್ರಿಯಾ ರಾಜ್ಯದಲ್ಲಿ ಜೇಬ್ರಗ್ಗಿಸ್ ಎಂಬಲ್ಲಿಗೆ ಜಹಜುಗಳು ಹೋಗಿ ಬರುವುದಕ್ಕೆ ಅನುಕೂಲವಾಗುವಂಥಾ ಜಲ ಮಾರ್ಗವನ್ನು ಈಗ ತಾನೇ ಮಾಡಿ ಪೂರೈಸಿದರು. ಇದನ್ನು ಕಳೆದ ವಾರ ಲಿಯೋಪಾಲ್ಡ್ ದೊರೆಯವರು ನಿಂತು ಪ್ರತಿಷ್ಠೆ ಮಾಡಿರುತ್ತಾರೆ. ಈ ಜಲ ಮಾರ್ಗವು ೪॥ ಮೈಲಿ ಉದ್ದವಾಗಿಯೂ, ೨೬॥ ಅಡಿ ಆಳವಾಗಿಯೂ, ತಳದಲ್ಲಿ ೭೩ ಅಡಿ, ಮೇಲ್ಭಾಗದಲ್ಲಿ ೨೩೦ ಅಡಿ ಅಗಲವಾಗಿಯೂ ಇರುತ್ತದೆ. ಇದನ್ನು ಪ್ರಾರಂಭಿಸಿ ಇಲ್ಲಿಗೆ ಹತ್ತು ವರುಷಗಳಾದವು.

⁂

ಮೇಲಣ ಈಜಿಪ್ಟ್ (ಐಗುಪ್ತ)ಕ್ಕೆ ಸೇರಿದ ಯೇಡ್‌ಪೂ ಎಂಬ ಪುರಾತನ ಪಟ್ಟಣದಲ್ಲಿ ಪ್ರಾಚೀನ ಲಿಪ್ಯನ್ವೇಷಣ ಇಲಾಖೆಯವರು ಕೆಲವು ನಾನಾ ವಿಶೇಷವಾದ ಬರಹಗಳನ್ನು ಕಂಡುಹಿಡಿದು ಸ್ವಾಧೀನ ಮಾಡಿಕೊಂಡಿದ್ದಾರೆ. ಇವೆಲ್ಲಾ ಯೇಸುಕ್ರಿಸ್ತನು ಹೇಳಿದ ಇದುವರೆಗೆ ಯಾರಿಗೂ ತಿಳಿಯದೆ ಇದ್ದ ವಾಕ್ಯಗಳೆಂದು ಗೊತ್ತಾಗಿದೆ. ಆ ಲಿಪಿಗಳನ್ನು ಇಂಗ್ಲಿಷ್ ಲಿಪ್ಯನ್ವೇಷಕನು ೭,೫೦೦ ರೂಪಾಯಿ ಕ್ರಯ ಕೊಟ್ಟು ಪಡೆದಿರುತ್ತಾನೆ. ಅದು ಪ್ರಾಚೀನ ಭಾಷೆಯಲ್ಲಿ ಬರೆಯಲ್ಪಟ್ಟಿರುತ್ತೆಂತಲೂ, ಈಗಿನ ಭಾಷೆಗೆ ಪರಿವರ್ತನೆ ಮಾಡುತ್ತಿರುವುದಾಗಿಯೂ ಆತನು ತಿಳಿಸಿರುವನು.

⁂

ರಷ್ಯಾ ರಾಜ್ಯಕ್ಕೆ ಸೇರಿದ ಬಸರಾಬ್ ಎಂಬ ಅಧಿಪತ್ಯದಲ್ಲಿ ರೈತ ಪ್ರಜೆಗಳು ಸರ್ಕಾರದವರ ಮೇಲೆ ತಿರುಗಿ ಬಿದ್ದು ನಾನಾ ಅಕೃತ್ಯಗಳನ್ನು ಮಾಡಲಾರಂಭಿಸಿದಾರೆ. ಕಂದಾಯದ ವಸೂಲಿಗೆ ಹೋದ ನೌಕರರನ್ನು ಹೊಡೆದು ಬಡಿದು ಓಡಿಸುವರು. ಒಬ್ಬ ಉದ್ಯೋಗಸ್ಥನನ್ನು ಕೊಂದೇ ಹಾಕಿದರು. ಸರ್ಕಾರದವರು ಮೂವರು ರೈತರನ್ನು ಕೊಂದು ನಾಲ್ವರನ್ನು ಗಾಯಗೊಳಿಸಿದರು. ಕಾಸ್ಟ್ರೋಮಾ ಎಂಬ ಡಿಸ್ಟ್ರಿಕ್ಟಿನಲ್ಲಿ ಇಬ್ಬರು ರೈತರು ಕೊಲ್ಲಲ್ಪಟ್ಟರು. ಹತ್ತು ಮಂದಿಗೆ ಗಾಯಗಳಾದವು. ಇತರ ಡಿಸ್ಟ್ರಿಕ್ಟುಗಳಿಂದಲೂ ಇಂಥಾ ದಾಂದಲೆ ನಡೆದ ವರ್ತಮಾನಗಳು ಬಂದಿರುತ್ತವೆ.

⁂

ಐರ್ಲಾಂಡೆಂಬ ದ್ವೀಪದಲ್ಲಿ ಬೆಲ್ಫಾಸ್ಟ್ ಪಟ್ಟಣದೊಳಗೆ ಕೂಲಿಕಾರರು ತಮ್ಮ ಕೂಲಿ ಸಾಲದೆಂದು ಹಟ ಹಿಡಿದು ಕಾರ್ಖಾನೆಯವರ ಮೇಲೆ ಸಿಟ್ಟು ಮಾಡಿ, ಸುಮಾರು ಎರಡು ವಾರಗಳಿಂದಲೂ ತುಂಬಾ ದಾಂಧಲೆ ನಡಿಸುತ್ತಿದ್ದಾರೆ. ಇಂಗ್ಲಿಷ್ ಗವರ್ನಮೆಂಟಿನವರು ಸೈನಿಕರನ್ನೂ ಮಿಲಿಟರಿ ಪೋಲೀಸಿನವರನ್ನೂ ಕಳುಹಿಸಿ ಬಂದೋಬಸ್ತು ಮಾಡುವಂತೆ ಅಪ್ಪಣೆ ಕೊಟ್ಟರು. ಆದರೆ ಆ ಜನರು ಇನ್ನೂ ಗಲಭೆ ಮಾಡುವುದನ್ನು ಬಿಟ್ಟಿಲ್ಲ. ಸೈನಿಕರ ಗುಂಡೇಟಿನಿಂದ ಕೆಲವರು ಸತ್ತರು, ಅನೇಕಾನೇಕರಿಗೆ ಗಾಯಗಳಾಗಿ ಆಸ್ಪತ್ರೆಗಳಲ್ಲಿ ಇಲಾಜು ಹೊಂದುತ್ತಿದ್ದಾರೆ. ಆ ಪಟ್ಟಣದ ಆಸ್ಪತ್ರೆಗಳ ತುಂಬಾ ಈ ಗಾಯಪಟ್ಟ ರೋಗಿಗಳೇ ತುಂಬಿ ಹೋಗಿದ್ದಾರೆಂದು ತಂತೀ ವರ್ತಮಾನ ಬಂದಿದೆ.

⁂

ಹೆಂಡತಿ ಸತ್ತರೆ ಅವಳ ಸಹೋದರಿಯನ್ನು ಮದುವೆಮಾಡಿಕೊಳ್ಳಕೂಡದೆಂದು ವಿಲಾಯಿತಿಯಲ್ಲಿ ಒಂದು ನಿರ್ಬಂಧವಿರುತ್ತದೆ. ಈಗಿನ ಪಾರ್ಲಿಮೆಂಟಿನಲ್ಲಿ ಗವರ್ನಮೆಂಟಿನವರು ಈ ನಿರ್ಬಂಧವನ್ನು ತೆಗೆದು ಹಾಕಿಬಿಡಬೇಕೆಂದು ಒಂದು ಮಸೂದೆ ಕಾನೂನು ಮಾಡಿ ಸೂಚಿಸಿದರು. ಹೌಸ್ ಆಫ್ ಕಾಮನ್ಸ್ ಎಂಬ ಪಾರ್ಲಿಮೆಂಟಿನವರು ಈ ಕಾನೂನನ್ನು ಒಪ್ಪಿ ಪ್ಯಾಸ್ ಮಾಡಿದ್ದಾಯಿತು. ಹೌಸ್ ಆಫ್ ಲಾರ್ಡ್ಸ್ ಎಂಬ ಪಾರ್ಲಿಮೆಂಟಿನಲ್ಲಿಯೂ ಮೆಂಬರುಗಳು ಅದನ್ನು ಓದಿಟ್ಟು ಎರಡಾವರ್ತಿ ಪ್ಯಾಸ್ ಮಾಡಿದ್ದಾಯಿತು. ಅವರು ಅದನ್ನು ಇನ್ನೊಂದಾವರ್ತಿ ತೆಗೆದುಕೊಂಡು ಓದಿ ಪ್ಯಾಸ್‌ಮಾಡಿ, ಚಕ್ರವರ್ತಿಯವರ ಸಮ್ಮತಿ ಪಡೆಯುವುದಕೋಸ್ಕರ ಅದನ್ನು ಅವರಿಗೆ ಒಪ್ಪಿಸುವರು. ದೊರೆಯವರೂ ಅದರಂತೆ ಒಪ್ಪಿಬಿಟ್ಟ ಪಕ್ಷದಲ್ಲಿ ಈ ಮಸೂದೆಯು ಕಾನೂನಾಗಿ ಜಾರಿಗೆ ಬರುವುದು. ಅಂದರೆ ಆ ತರುವಾಯ ಹೆಂಡತಿ ಸತ್ತರೆ ಅವಳ ಸಹೋದರಿಯನ್ನು ಮದುವೆಮಾಡಿಕೊಳ್ಳುವುದು ರೂಢಿಗೆ ಬರುತ್ತದೆ.

⁂

ಕೋವಿಸ್ ನಗರದಲ್ಲಿ ಲೆಫ್ಟಿನೆಂಟ್ ಇ. ಎಚ್. ಷಾಕಲ್ಟನ್ ಎಂಬಾತನು ನೀಂರಾಡ್ ಎಂಬೊಂದು ಹಡಗನ್ನು ಕಟ್ಟಿ ದಕ್ಷಿಣ ಸಮುದ್ರದಲ್ಲಿ ಪ್ರಯಾಣ ಮಾಡಿ ದಕ್ಷಿಣ ಧ್ರುವವನ್ನು ಪರಿಶೋಧನೆಮಾಡಿಕೊಂಡು ಬರಬೇಕೆಂದು ಪ್ರಯತ್ನಪಟ್ಟಿರುತ್ತಾನೆ. ಇದಕ್ಕಾಗಿ ಬಹುಮಂದಿ ಐಶ್ವರ್ಯವಂತರು ಆತನಿಗೆ ದ್ರವ್ಯಸಹಾಯಮಾಡಿದ್ದಾರೆ. ವಿಲಾಯಿತಿಯ ಮೆ॥ ಬೆಲ್ ಎಂಬಾತನೂ ೬೦,೦೦೦ ರೂಪಾಯಿ ಕೊಟ್ಟನು. ವಿಲಾಯಿತಿಯ ಚಕ್ರವರ್ತಿಯವರು, ಚಕ್ರವರ್ತಿನಿಯವರು, ಪ್ರಿನ್ಸ್ ಆಫ್ ವೇಲ್ಸ್‌ರವರು, ಡ್ಯೂಕ್ ಆಫ್ ಕನ್ನಾಟ್‌ರವರು ಹಿಂದಿನ ವಾರ ಪರಿವಾರ ಸಹಿತ ಕೋವೀಸಿಗೆ ದಯಮಾಡಿದ್ದಾಗ್ಗೆ ಆ ನೀಂರಾಡ್ ಎಂಬ ಜಹಜನ್ನು ಪರೀಕ್ಷಿಸಿ ತುಂಬಾ ಸಂತೋಷಪಟ್ಟು ಲೆಫ್ಟಿನೆಂಟ್ ಷಾಕಲ್ಟನ್ ಎಂಬಾತನನ್ನು ವಂದಿಸಿದ್ದಲ್ಲದೆ ಚಕ್ರವರ್ತಿಯವರು ಆತನಿಗೆ ಒಂದು ಬಿರುದನ್ನು ದಯಪಾಲಿಸಿದರು. ಚಕ್ರವರ್ತಿನಿಯವರು ಆತನಿಗೆ ರೇಷ್ಮೆಯ ಇಂಗ್ಲಿಷ್ ಬಾವುಟವನ್ನು ಕೊಟ್ಟು "ಇದು ನಿಮ್ಮನ್ನು ಸುರಕ್ಷಿತನಾಗಿ ದಕ್ಷಿಣ ಧ್ರುವವನ್ನು ತಲಪುವಂತೆ ಮಾಡಲಿ" ಎಂದು ಆಶೀರ್ವದಿಸಿದರು.

⁂

ವಿಲಾಯಿತಿಯ ವೈದ್ಯಶಾಸ್ತ್ರ ಪಂಡಿತರಲ್ಲಿ ಪ್ರಖ್ಯಾತಿಪಡೆದಿರುವ ಮಹನೀಯರು ಹಿಂದಿನ ವಾರ ಲಂಡನ್ ಪಟ್ಟಣದ ಬಳಿ ಎಕ್ಸೇಟರ್ ಹಾಲ್ ಹರಿನಲ್ಲಿ ಸಭೆ ಸೇರಿದ್ದರು. ಈ ಸಭೆಯಲ್ಲಿ ಅಧ್ಯಕ್ಷತೆಯನ್ನು ವಹಿಸಿದ್ದ ಡಾಕ್ಟರ್ ಹೆನ್ರಿ ಡೇವಿ ಎಂಬ ಪ್ರಸಿದ್ಧ ಪಂಡಿತರು ಸಭಾಸದರನ್ನು ಕುರಿತು "ಮನುಷ್ಯನ ಆರೋಗ್ಯಭಾಗ್ಯ, ಅವನ ದೀರ್ಘಾಯುಸ್ಸು" ಎಂಬೀ ವಿಚಾರದ ಮೇಲೆ ಬಹು ಶ್ರೇಷ್ಠವಾದ ಉಪನ್ಯಾಸ ಮಾಡಿದರು. ಅವರು ತಿಳಿಸಿದ ಮುಖ್ಯಾಭಿಪ್ರಾಯಗಳನ್ನು ನಮ್ಮ ವಾಚಕರಿಗೋಸ್ಕರ ಸಂಗ್ರಹಿಸಿ ಇಲ್ಲಿ ಉದಾಹರಿಸುತ್ತೇವೆ.—ಈಗಿನ ಕಾಲದಲ್ಲಿ ಮನುಷ್ಯನು ಬೆವರು ಇಳಿಯುವಂತೆ ಕಷ್ಟಕೆಲಸ ಮಾಡುವುದು ಅನೇಕ ಕಾರಣಗಳಿಂದ ಕಡಿಮೆಯಾಗುತ್ತಾ ಬಂದಿದೆ. ದೇಹಾರೋಗ್ಯವು ಚೆನ್ನಾಗಿದ್ದು ದೀರ್ಘಾಯುಸ್ಸುಂಟಾಗಬೇಕಾದರೆ ಮನುಷ್ಯನ ದೇಹದಲ್ಲಿರುವ ಸಮಸ್ತ ಅಂಗಗಳೂ ಚೆನ್ನಾಗಿ ಚಲಿಸುವಂತೆ ಕಷ್ಟಕೆಲಸವನ್ನು ಮಾಡಬೇಕು. ಮತ್ತು ಶರೀರದಲ್ಲಿರುವ ಮಾಂಸಖಂಡಗಳು ವೃದ್ಧಿಹೊಂದಿ ಬೆಳೆಯುವಂತೆ ಅವುಗಳಿಗೆ ಸಾಧನೆ ಕೊಡಬೇಕು. ಈ ಮಾಂಸಖಂಡಗಳು ಎಷ್ಟುಮಟ್ಟಿಗೆ ಪುಷ್ಟಿಹೊಂದಿ ಬೆಳೆಯುವವೋ ಮನುಷ್ಯನ ಆರೋಗ್ಯವೂ ದೀರ್ಘಾಯುಸ್ಸೂ ಅಷ್ಟುಮಟ್ಟಿಗೂ ಅಭಿವೃದ್ಧಿ ಹೊಂದುವವು. ಆದಕಾರಣ ಈ ಮಾಂಸಖಂಡಗಳಿಗೆ ವಿಶೇಷವಾಗಿ ಸಂಬಂಧಪಡುವಂಥಾ ಸಾಧನೆ ಕಸರತ್ತುಗಳನ್ನು ಮನುಷ್ಯನು ಮಾಡಬೇಕಾಗಿರುತ್ತದೆ. ಈಗ ಎಲ್ಲಿ ನೋಡಿದರೂ ಯಂತ್ರಗಳೂ ಗಾಡಿಗಳೂ ಇತರ ಸಾಧನಗಳೂ ವಿಶೇಷವಾಗಿ ಪ್ರಚಾರಕ್ಕೆ ಬಂದು, ಮನುಷ್ಯನು ಕಷ್ಟಪಡುವುದನ್ನೆಲ್ಲಾ ತಪ್ಪಿಸಬಿಟ್ಟಿರುವವು. ಊರಿಂದೂರಿಗೆ ಅಥವಾ ಸ್ಥಳದಿಂದ ಸ್ಥಳಕ್ಕೆ ಹೋಗಬೇಕಾದರೆ ಗಾಡಿಗಳೂ, ರೈಲ್ ಬಂಡಿಗಳೂ, ಸ್ವತಂತ್ರವಾಗಿ ಓಡುವ ಮೋಟಾರ್ ಗಾಡಿಗಳೂ ಕಾರ್ಖಾನೆಗಳಲ್ಲಿ ಕಷ್ಟಕೆಲಸ ಮಾಡುವುದಾದರೆ ಹಬೆಯ ಶಕ್ತಿಯೂ ವಿದ್ಯುಚ್ಛಕ್ತಿಯೂ, ಯಂತ್ರಶಕ್ತಿಯೂ ಬಹಳ ಹೆಚ್ಚಾಗಿ ರೂಢಿಗೆ ಬಂದಿರೋಣವರಿಂದಲೂ, ಈ ಸಾಧನಗಳು ದಿನೇದಿನೇ ಇನ್ನೂ ಹೆಚ್ಚುತ್ತಾ ಹೊಸದಾಗಿ ಕಂಡುಹಿಡಿಯಲ್ಪಡುತ್ತಾ ಬಂದಿರೋಣದರಿಂದಲೂ ಮನುಷ್ಯನ ಖಂಡಗಳು ಬೆಳೆಯುವಂಥಾ ಕಷ್ಟಕೆಲಸಗಳೆಲ್ಲಾ ತಪ್ಪಿಹೋಗಿರುತ್ತವೆ. ಇದರಿಂದ ಈಗಿನ ಕಾಲದ ಜನರು ಕೃಶಾಂಗಿಗಳಾಗಿಯೂ ರೋಗಪೀಡಿತರಾಗಿಯೂ ಅಲ್ಪಾಯುಗಳಾಗಿಯೂ ಬೆಳೆಯುವುದಕ್ಕೆ ಆಕರವಾಗಿರುವುದು. ಗರಡಿಸಾಮು, ಕಸರತ್ತು, ಕುಸ್ತಿ, ನಾನಾ ತರದ ಬೈಲ್ ಆಟಗಳು, ಕಾಲ್ನಡಿಗೆ, ಈ ಮೊದಲಾದಂಥಾ ಪೂರ್ವಕಾಲದ ಸಾಧನೆಗಳ ಮೇಲೆಲ್ಲಾ ಜನರ ಅಭಿಲಾಷೆಯು ಕಡಿಮೆಯಾಗುತ್ತಾ ಬಂದಿರುವುದನ್ನು ನೋಡಿ ಪ್ರಜಾವತ್ಸಲರು ಮರುಗುತ್ತಾರೆ. ಬಾಲಕ ಬಾಲಕಿಯರು ವಿದ್ಯಾಪಾರಂಗತೆಯನ್ನು ಹೊಂದಿ ಪಾಠಶಾಲೆಗಳನ್ನು ಬಿಟ್ಟು ಹೋಗುವಾಗಲೂ ಅವರು ಪಾಠಶಾಲೆಗಳಲ್ಲಿ ವಿದ್ಯಾಭ್ಯಾಸ ಮಾಡುವಾಗಲೂ ತುಂಬಾ ಬಲಹೀನರಾಗಿಯೂ ಕಷ್ಟಸಾಧನೆ ಕಸರತ್ತುಗಳಲ್ಲಿ ಅಭಿರುಚಿ ಇಲ್ಲದವರಾಗಿಯೂ ಇರುತ್ತಾರೆ. ಅವರ ಮಾಂಸಖಂಡಗಳ ಬೆಳವಳಿಗೆಗೆ ಯೋಗ್ಯವೂ ಆವಶ್ಯವೂ ಆದಂಥಾ ಕಸರತ್ತುಗಳನ್ನು ಮಾಡಿಸಿ, ಅವುಗಳಲ್ಲಿ ಅವರಿಗೆ ಪ್ರೀತಿ ಹುಟ್ಟಿಸಬೇಕಾಗಿದೆ. ಇದರಿಂದ ಆರೋಗ್ಯದೃಢಕಾಯರೂ ದೀರ್ಘಾಯುಗಳೂ ಆದಂಥಾ ಪ್ರಜೆಗಳೇ ದೇಶದಲ್ಲೆಲ್ಲಾ ಹರಡಿಕೊಂಡು, ದೇಶಾಭ್ಯುದಯಕ್ಕೆ ಸಹಾಯಭೂತರಾಗುವುದರಲ್ಲಿ ಸಂಶಯವಿಲ್ಲ.

ಬಾತ್ಮೀದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು. ಆದಕಾರಣ ಬಾತ್ಮೀದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ನಿಗಾ ಕೊಡಲಾರೆವು.

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿಟರ್.

ಕರೆಸ್‌ಪಾಂಡೆನ್ಸ್.

ವಿದ್ಯಾ ಪ್ರೋತ್ಸಾಹ.

ಅಯ್ಯಾ,

ದಾವಣಗೆರೆ ತಾಲ್ಲೂಕು ಬಾಡಗ್ರಾಮದಲ್ಲಿ ಒಂದು ಗೌರ್ನಮೆಂಟು ಹೋಬಳಿ ಸ್ಕೂಲು ಇದೆ ಈ ಸ್ಕೂಲ್ ಮಾಸ್ಟರು ಈಗ ೭—೮ ವರುಷಗಳಿಂದ ಶ್ರಮಪಟ್ಟು ಕೆಲಸ ಮಾಡುತ್ತಾ ಬಂದಿರುವದರಿಂದ ತುಂಬಾ ಅಭಿವೃದ್ಧಿಯಲ್ಲಿರುತ್ತೆ ಮತ್ತು ಈ ಗ್ರಾಮದಲ್ಲಿರುವ ಗಂಗಪ್ಪಳ ಕಲ್ಲಪ್ಪನವರೂ ಮತ್ತು ಹೆಬ್ಬಾಳು ನಾರಪ್ಪನವರೂ ಪರಸ್ಥಳಗಳಿಂದ ಬರತಕ್ಕ ವಿದ್ಯಾರ್ಥಿಗಳಿಗೆ ಅಭಿಮಾನಿಗಳಾಗಿ ಊಟಕ್ಕೆ ಸಹಾಯ ಮಾಡುತ್ತಾ ಬರುತ್ತಿದ್ದಾರೆ. ಇವರ ಉದಾರಗುಣವನ್ನು ತುಂಬಾ ಕೊಂಡಾಡಬೇಕಲ್ಲದೆ, ಇದು ಸತ್ಪುರುಷರ ಗುಣವಲ್ಲವೇ ?

ವಿದ್ಯಾಭಿಮಾನಿ.

ಹೆಬ್ಬೂರು ಸಂತೆಯಲ್ಲಿ ಪಸಿಗೆಯೆತ್ತುವುದು

ಅಯ್ಯಾ,

ತುಂಕೂರು ತಾಲ್ಲೂಕಿಗೆ ಸೇರಿದ ಹೆಬ್ಬೂರು ಗ್ರಾಮದಲ್ಲಿ ಪ್ರತಿ ಶುಕ್ರವಾರ ಸಂತೆ ಆಗುತ್ತೆ. ಈ ಸಂತೆಯಲ್ಲಿ ವ್ಯಾಪಾರವು ಪ್ರತಿಯೊಬ್ಬ ಅಂಗಡಿಯವನಿಗೂ ಸುಮಾರು ೯ ರೂಪಾಯಿ ಮೊದಲುಗೊಂಡು ೧೦ ರೂಪಾಯಿನ ವರೆಗೆ ಆಗಬಹುದು. ಈ ಸಂತೆಯಲ್ಲಿ ಕೊಳ್ಳತಕ್ಕವರು ಅಬಾಬಾದೂ ಗ್ರಾಮದ ರೈತಾಪಿ ಜನಗಳು ವಿನಹಾ ಮತ್ಯಾರೂ ಇಲ್ಲ. ಈ ಸಂತೆಗೆ ಈ ಗ್ರಾಮದ ಪಟೇಲ್ ದರುವೆಗೌಡ ಎಂಬುವರು ಸದರಿ ಗ್ರಾಮದ ತಳವಾರ ತೋಟಿಕಾರ ವಗೈರೆ ಜನಗಳನ್ನು ಸೇರಿಸಿಕೊಂಡು ಬಂದು ಪ್ರತಿ ಪರಸ್ಥಳದವರ ಅಂಗಡಿಗಳಿಗೂ ಬಂದು ಪಸಿಗೆ ತೆಗೆದುಕೊಳ್ಳುತ್ತಾರೆ. ಅಂದರೆ ಪ್ರತಿ ಒಬ್ಬನಿಗೂ ಪಸಿಗೆ ಗೌಡನೇ ಕೊಡುತ್ತಾರೆ. ಕೊಡುವದಿಲ್ಲವೆಂದರೆ ಜುಲುಂ ನಡಿಸುವದಲ್ಲದೆ ಮನ್ನಾನೆ ಮಾತುಗಳಾಡುತ್ತಾರೆ. ಪಸಿಗೆ ಕೊಡತಕ್ಕ ಸರಕು ಪ್ರತಿ ಅಂಗಡಿಗೂ ಸುಮಾರು ಒಂದಾಣೆಯಿಂದ ನಾಲ್ಕು ಆಣೆ ವರೆಗೂ ಆಗುತ್ತೆ. ಈ ವಿಷಯವನ್ನು ಅಮಲ್ದಾರರು ತನಿಖೆ ಮಾಡಿ ಈ ತೊಂದರೆಯನ್ನು ನಿವಾರಣೆ ಮಾಡುವರೆಂದು ನಂಬಿದೇನೆ.

ಗೋವಿಂದ ಶೆಟ್ಟಿ.

ಕೋಪ್ಪದ ಆಸ್ಪತ್ರೆಯು.

ಅಯ್ಯಾ,

ಆಸ್ಪತ್ರೆಯಲ್ಲಿರತಕ್ಕ ಔಷಧಿಕೊಡುವ ಕಾಂಪೌಂಡರು ಯಾವ ರೋಗಿಗಳು ಹೋದಾಗ್ಯೂ ೨೦—೨೫—೩೦ ರೂಪಾಯಿ ಕೊಟ್ಟರೆ ಸರಿಯಾದ ಔಷಧಿ ಹಾಕಿ ಗುಣ ಮಾಡುತ್ತೇನೆ; ಇಲ್ಲವಾದರೆ ಸಾಧ್ಯವಿಲ್ಲವೆಂದು ಬಹಿರಂಗವಾಗಿ ಹೇಳುವದೂ ತೆಗೆದುಕೊಳ್ಳುವದೂ ಈ ಆಚರಣೆ ಜಾರಿಗೆ ಬಂದು ೭—೮ ವರುಷವಾಯಿತು. ಸರಕಾರದವರು ಇವನಿಗೆ ಕೊಡತಕ್ಕ ಸಂಬಳವು ಇವನ ಖರ್ಚಿಗೆ ಸಾಕಾಗದೋ ಏನೋ ಸರ್ಕಾರದವರ ವಿಚಾರಣೆ ಇಲ್ಲದೆ ಇರುವದೂ ನೌಕರರನ್ನು ಬಹು ವರ್ಷ ಒಂದೇ ಕಡೆ ಇರಗೊಡಿಸುವದೂ ಇವೇ ಮುಖ್ಯಕಾರಣಗಳಲ್ಲವೇ ? ಹ್ಯಾಗೂ ಇರಲಿ ರೋಗದಿಂದ ಪೀಡಿತರಾದ ಬಡವರು ನಿರೋಗಿಗಳಾಗುವದಕ್ಕೆ ದ್ರವ್ಯವಿಲ್ಲದೆ ವ್ಯಥೆಪಟ್ಟು ಸಾಯುವದೇ ಅವರ ಪಾಡಾಗಿದೆ. ಮೈಸೂರು ಸರಕಾರದವರು ಈ ವಿಷಯದಲ್ಲಿ ಪೂರ್ಣ ಗಮನಕೊಟ್ಟು ಬಡವರ ಕ್ಷೇಮಚಿಂತನೆಯಿಂದ ಅನುಕೂಲಪಡಿಸಿ ಕೀರ್ತಿ ಸಂಪಾದಿಸುವವರಾಗಲಿ

ಮಾದಲು ಸುಬ್ಬನಾಯಕ

ವಿದ್ಯೆಯಲ್ಲಿ ಅಲಕ್ಷ್ಯ

ಅಯ್ಯಾ,

ಕೋಲಾರ ಡಿಸ್ಟ್ರಿಕ್ಟ್ ಬೌರಿಂಗ್‌ಪೇಟೆ ತಾಲ್ಲೂಕು ದಾಸರಹೊಸಳ್ಳಿ ಹೋಬಳಿ ಬೊಡ್ಡೂರು ಗ್ರಾಮದ ಮತ್ತು ಇದರ ಸುತ್ತಮುತ್ತಲಿರುವ ಗ್ರಾಮಗಳ ಪೈಕಿ ಇರುವ ಜನಗಳಿಗೆಲ್ಲಾ ವಿದ್ಯೆ ಎಂಬುವದು ಲೇಶಾಂಶವೂ ಇಲ್ಲದ ದೊಡ್ಡ ಕೊರೆಗಳು ಇರುವ ಪ್ರಕಾರ ಇದ್ದುಕೊಂಡು, ಸಂಸಾರವನೆಯು ವಿಶೇಷವಾಗಿ ನಡಿಸುತ್ತಾ ಭಾಗ್ಯವಂತರಾಗಿ ಚಟುವಟಿಕೆ ಇಲ್ಲದೆ ವಾಸ ಮಾಡುತ್ತಾ ಇದಾರೆ. ನಮ್ಮ ಮೈಸೂರು ಸಂಸ್ಥಾನವು ಇಷ್ಟು ಚಟುವಟಿಕೆಯುಳ್ಳದಾಗಿಯೂ ನಾಗರೀಕತೆಯುಳ್ಳದಾಗಿಯೂ ಇದ್ದಾಗ್ಯೂ ಮೇಲೆ ಹೇಳಿರುವ ೫—೬ ಗ್ರಾಮಗಳಲ್ಲಿರುವ ಬಾಲಕರು ಇಷ್ಟು ವಿದ್ಯಾವಿಹೀನರಾಗಿರುವದು ಬಹಳ ವಿಷಾದಕರವಾಗಿದೆ. ಈ ಗ್ರಾಮಗಳು ದೊಡ್ಡವಾಗಿಯೂ ಇರುತ್ತವೆ ಆದರೆ ನಮ್ಮ ಮೈಸೂರು ಸಂಸ್ಥಾನದಲ್ಲೆಲ್ಲಾ ಇಷ್ಟು ವಿದ್ಯಾವಿಹೀನತೆಯುಳ್ಳದಾಗಿರುವ ಗ್ರಾಮಗಳು ಯಾವವೂ ಇಲ್ಲವೆಂದು ಖಂಡಿತವಾಗಿ ನಂಬುತ್ತೇನೆ ಆದುದರಿಂದ ನಮ್ಮ ಗೌರ್ನಮೆಂಟಿನವರು ಈ ವಿಷಯಗಳನ್ನು ನಿಗಾ ಇಟ್ಟು ಈ ಗ್ರಾಮಗಳಲ್ಲಿರುವ ಜನಗಳ ಉಪಯೋಗಕ್ಕೋಸ್ಕರ ಒಂದು ಪಾಠಶಾಲೆಯನ್ನು ಸ್ಥಾಪಿಸಿ ಈ ಚಟುವಟಿಕೆ ಇಲ್ಲದೆ ದೊಡ್ಡ ಕೊರೆಗಳ ಪ್ರಕಾರ ಇರುವ ಬಾಲಕರನ್ನು ವಿದ್ಯೆಯಲ್ಲಿ ವೃದ್ಧಿಗೊಳಿಸಬೇಕೆಂದು ಪ್ರಾರ್ಥಿಸುವ

ಜಿ ಕೆ

ಆಶ್ಚರ್ಯವಾದ ಗಿಡ.

ಅಯ್ಯಾ,

ನಾನು ೮ ದಿವಸದ ಹಿಂದೆ ಗೋಪಿಬಿದನೂರು ತಾಲ್ಲೂಕು ದೊಡ್ಡಮುಚ್ಚೇನಹ ಗ್ರಾಮಕ್ಕೆ ಹೋಗಿ ಇದ್ದೆ ಅಲ್ಲಿ ಯಾರೋ ನಾರಾಣಪ್ಪನವರು ಇಲ್ಲಿ ಆಶ್ಚರ್ಯವಾದ ಒಂದು ಗಿಡ ಇದೆ ನೋಡಬನ್ನಿ ಎಂದು ಕರೆದುಕೊಂಡು ಹೋದರು ಅಲ್ಲಿ ನೋಡಲಾಗಿ ಕಂಬಳಿಗಿಡದಲ್ಲಿ ಒಂದೇ ಬಳ್ಳಿ ಹೊರಟು ಸುಮಾರು ೫—೬ ಗಜದ ವರಿವಿಗೂ ಸಮನಾಗಿ ಬೆಳೆದುಕೊಂಡು ಬಂದು, ತುದಿಯಲ್ಲಿ ೧॥ ಅಡಿ ಅಗಲವಾಗಿ ಚೇಳಕ್ಕೆ ಸರ್ಪದ ಹೆಡೆಯಹಾಗೆ ನಿಂತು, ಅದರಲ್ಲಿ ೭—೮ ಸರ್ಪದ ತಲೆಗಳ ಭಾಗವಾಗಿ, ಆ ತಲೆಗಳ ಮೇಲೆ ಒಂದು ತರಹಾ ಬೆಗರು ಸುಟ್ಟು, ಅದರ ಪಕ್ಕದಲ್ಲಿ ಸಣ್ಣದಾಗಿ ಕಳಶಗಳ ಹಾಗೆ ಕಾಯಿಗಳು ಬಿಟ್ಟು ಇರುತ್ತೆ. ಹೆಡೆಯಲ್ಲಿ ಸರ್ಪದಲ್ಲಿರುವ ರೇಖೆಗಳ ಹಾಗೆ ಇದರಲ್ಲಿ ಕಾಣಿಸುತ್ತದೆ ನೋಡುವಲ್ಲಿ ೬ ತಲೆಗಳ ಸರ್ಪದ ಆಕಾರವಾಗಿ ಕಾಣಿಸುತ್ತೆ ಸುತ್ತಮುತ್ತಲಿನ ಹಳ್ಳಿಗಳ ಜನಗಳು ಬಂದು ನೋಡಿ ಆಶ್ಚರ್ಯಪಟ್ಟುಕೊಂಡು ಹೋಗುತ್ತಾರೆ ಗಿಡ ಹಾಕಿರತಕ್ಕವರು ಭಯಸ್ಥರಾಗಿ ನಮಗೆ ಮುಂದೆ ಏನು ಅಪಾಯ ಸಂಭವಿಸುತ್ತೋ ಎಂದು ಹೆದರುತ್ತಿದ್ದಾರೆ. ಅದಕ್ಕೆ ಅರಿಸಿನ ಕುಂಕುಮ ವಗೈರೆ ಇಟ್ಟು ಇರುತ್ತಾರೆ ಹೀಗಾಗುವದಕ್ಕೆ ಕಾರಣವೇನೆಂದು ತಾವು ದಯವಿಟ್ಟು ತಿಳಿಸಿದರೆ ಆ ಜನರ ಭಯ ನಿವಾರಣೆಯಾಗುತ್ತೆ.

ಬಾತ್ಮೀದಾರ.

[ಇದರಲ್ಲಿ ಭಯಭಕ್ತಿಗೆ ಕಾರಣವಾದ ಅಂಶವೇನೂ ಇಲ್ಲ.—ಎಡಿ.]

ಅರ್ಜಿ ಫೈಸಲಾಗಲಿಲ್ಲ.

ಅಯ್ಯಾ,

ಮಂಡ್ಯ ತಾಲ್ಲೂಕು ತೈಲೂರು ಗ್ರಾಮದಲ್ಲಿ ನನ್ನ ಬಾಬ್ತು ಸರ್ವೆ ೨೦೬ ನೇ ನಂಬರು ಜಮೀನಿನಲ್ಲಿ ಬಾಜು ಜಮೀನ್ದಾರನು ಕಲ್ಲು ಬಂದು ಸಹ ನಾಶಪಡಿಸಿ ಜಮೀನು ಒತ್ತರಿಸಿಕೊಂಡಿರುವ ವಿಚಾರದಲ್ಲಿ ಹೋಬಳಿ ಶೇಕದಾರರು ಬಂದು ಗ್ರಾಮಸ್ಥರ ಮಹಜರು ವಗೈರೆ ರಿಕಾರ್ಡು ಮಾಡಿಕೊಂಡುಹೋಗಿ ಒಂದು ವರುಷವಾಯಿತು. ನಂತರ ಮಂಡ್ಯ ತಾಲ್ಲೂಕು ಅಮಲ್ದಾರರು ದಸ್ತಪಾಡಿಸಿ ನೋಡಿ ಅಳತೆ ಮಾಡಿಸಿದ್ದರಲ್ಲಿ ಜಾಸ್ತಿ ಜಮೀನು ಹಿಡಿಸಿಕೊಡುತ್ತೇವೆಂತ ಅಪ್ಪಣೆ ಕೊಡಿಸಿದರು ಅದೂ ಒಂದು ವರುಷವಾಗುತ್ತಾ ಬಂತು. ಫ್ರಂಚರಾಕ್ಸ್ ಡಿವಿಜನ್ ಆಫೀಸರವರಿಗೂ, ಮೈಸೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರವರಿಗೂ, ರೆವಿನ್ಯೂ ಕಮಿಷನರ್ ಸಾಹೇಬರವರಿಗೂ ಬರೆದುಕೊಂಡದ್ದಕ್ಕೆ ಯಾರೂ ಈ ಬಡವನ ಅಲ್ಪ ವಿಷಯಕ್ಕೆ ಗಮನ ಕೊಟ್ಟ ಹಾಗೆ ಇಲ್ಲ. ಸರ್ಕಾರದವರ ಇಷ್ಟ ಬಂದಹಾಗೆ ಯಾವಾಗಲಾದರೂ ಫೈಸಲಾಗಲಿ ಎಂದು ಸುಮ್ಮನಿದ್ದರೆ ಮೇಲ್ಕಂಡ ಬಾಜು ಜಮೀನ್ದಾರನು ನಿರ್ಭೀತನಾಗಿ ತೀಟೆ ಜಗಳ ತೆಗೆದು ಮನಸ್ಸಿನ ಪರತ್ತು ಮಾತುಗಳಾಡುತ್ತಾನೆ. ನಾನು ಬಡಸಂಸಾರಿ, ಒಬ್ಬಂಟಿಗ, ಯಾರೂ ಈ ಗ್ರಾಮದಲ್ಲಿ ದಿಕ್ಕಿಲ್ಲ. ದಯಾಳು ಸರ್ಕಾರದವರು ಕೂಡಲೆ ಫೈಸಲ್ ಮಾಡದೇ ಹೋದಲ್ಲಿ ನನ್ನ ಪರಿಣಾಮ ಉಳಿಯುವಂತೆ ಕಾಣೆನು ಆದ್ದರಿಂದ ಈ ಮೂಲಕವಾದರೂ ಚಿತ್ತಕ್ಕೆ ತಂದು ಕಾಪಾಡುತ್ತಾರೆಂದು ನಂಬಿ ಪ್ರಾರ್ಥಿಸಿಕೊಂಡಿದ್ದೇನೆ.

ತೈಲೂರು ಮಹಮದ್ ಪೀರ್ ಸಾಬ್.

ಪೈರಿಗೆ ಹುಳ ಹಿಡಿದಿದೆ.

ಅಯ್ಯಾ,

ದಾವಣಗೆರೆ ತಾಲ್ಲೂಕು ಕರೂರು ಗ್ರಾಮದ ಬಡಜನಗಳು ಮಳೆ ಇಲ್ಲದೆ ಪೇಚಾಡುತ್ತಾ, ತುಂತುರಿನಲ್ಲಿ ಬಿತ್ತನೆ ಮೊದಲಾದ ಕೆಲಸವನ್ನು ಮಾಡಿಕೊಂಡರು ಈಗ ಪಸಿಗಳು ಒಂದಡಿ ಎತ್ತರ ಬೆಳೆದಿವೆ. ಮಳೆ ಈಗ ಇಲ್ಲವೇ ಇಲ್ಲ ಇಂಥಾ ಮಳೆ ಇಲ್ಲದ ಕಾಲದಲ್ಲಿ ಹ್ಯಾಗಾದರೂ ಮಳೆ ಬರುವವರೆಗೆ ಪಸಿಗಳು ಬದುಕಿಕೊಂಡಾವೆಂದು ಯೋಚನೆ ಮಾಡುತ್ತಿರುವಲ್ಲಿ "ಬಿದ್ದವನಿಗೆ ಮೂರು ಗುದ್ದು" ಎನ್ನುವಹಾಗೆ ಪಸಿಗಳಿಗೆ ಬಿಳಿ ಕಾಟನ ಹಾವಳಿ, ಹುಳ ಬೀಳುವುದು, ಮೊದಲಾದ ಕಾಟಗಳು ಹೆಚ್ಚಾಗಿವೆ. ಹಾಲಿ ಪರಳು ಗಿಡಕ್ಕೆ ಬೂದುಹುಳ ಇದು ಕಂಬಳಿಹುಳಕ್ಕಿಂತ ಸಣ್ಣದು ಈ ಹುಳಗಳ ದಾಂಧಲೆ ಈ ಗ್ರಾಮದಲ್ಲಿ ವಿಶೇಷವಾಗಿದೆ. ಈಗ ಸೈಯದ್ ಅಬ್ದುಲ್ ಸಮ್ಮದ್‌ಸಾಬನ ಹೊಲದಲ್ಲಿ ಅರ್ಧಭಾಗ ತಿಂದಿವೆ ಇನ್ನೂ ಅನೇಕರ ಹೊಲಗಳು ನಷ್ಟಹೊಂದಿವೆ. ಮತ್ತು ದೊಡ್ಡ ಹತ್ತಿಗೆ ಕರಜಿಗೆ ಎಂಬ ರೋಗ ಅಪಾರವಾಗಿದೆ. ಇಂಥಾ ಕಷ್ಟಕಾಲದಲ್ಲಿ ಎಲ್ಲಾ ಪೈರುಗಳಿಗೂ ನಾನಾ ರೋಗ ವ್ಯಾಪ್ತವಾಗಿರುವದನ್ನು ನೋಡಿದರೆ ಯಾರುತಾನೇ ಪಶ್ಚಾತ್ತಾಪಪಡಲಾರರು ಈ ಕಾಲದಲ್ಲಿ ಬಡವರಿಗೆ ಎಲ್ಲಿಯಾದರೂ ಪಣ, ಕಾಸು, ದವಸ, ಧಾನ್ಯ ಇವುಗಳ ಹುಟ್ಟುವದೇ ಇಲ್ಲ. ಈ ಗ್ರಾಮದ ಬಡಜನಗಳ ಗೋಳಾಟವನ್ನು ಹೇಳತೀರದು ದಾವಣಗೆರೆಯಲ್ಲಿ ಭಾನುವಾರ ಸಂತೇ ದಿವಸ ಪಸಿಗೆ, ಭಿಕ್ಷ, ಇವುಗಳ ತೊಂದರೆ ಬಹಳ. ದ್ರೋಹ ಕ್ಕಾದಾಟ ಹೆಚ್ಚಾಗಿದೆ. ಮೇಲ್ಕಂಡ ಹುಳಗಳ ಮತ್ತು ಕರಜಿಗೆ ರೋಗಕ್ಕೆ ಯಾರಾದರೂ ತಕ್ಕ ಸುಲಭವಾದ ಪರಿಹಾರವನ್ನು ಯಾವ ಕಂಪನಿಯಲ್ಲಿ ದೊರಕುತ್ತದೋ, ಅವರ ಹೆಸರು ವಿಳಾಸವನ್ನು ವಿವರವಾಗಿ ತಿಳಿಸಿ ಬಡರೈತರ ಕಷ್ಟವನ್ನು ನಿವಾರಣೆ ಮಾಡುವರೆಂದು ನಂಬುತ್ತೇನೆ

ಬಾತ್ಮೀದಾರ.

ರತ್ನಾವಳಿ ನಾಟಕ ಸಂಘ.

ಅಯ್ಯಾ,

ರಾಜಧಾನಿಯಲ್ಲಿ ರಂಗಾಚಾರ್ಯರ ಮೆಮೋರಿಯಲ್ ಹಾಲಿನಲ್ಲಿ ತಾ. ೧೭ ರಲ್ಲಿ ರತ್ನಾವಳಿ ನಾಟಕ ಸಂಘದವರು "ಕೆನಿತ್" ಎಂಬ ಇಂಗ್ಲೀಷು ನಾಟಕದ ಆಧಾರದ ಮೇಲೆ ಬರೆಯಲ್ಪಟ್ಟಿರುವ "ಕಾಮಪಾಲ ಚರಿತ್ರೆ" ಎಂಬ ನಾಟಕವನ್ನು ಆಡಿದರು. ಆ ದಿವಸ ನನ್ನನ್ನು ಅತ್ಯಂತ ಆದರಪೂರ್ವಕವಾಗಿ ಬರಮಾಡಿಕೊಂಡಿದ್ದರು ನಾಟಕಾವಲೋಕನದಿಂದ ಉಂಟಾದ ಆನಂದವನ್ನು ಈ ಕೆಳಗಿನ ಬರವಣಿಗೆಯಿಂದ ಸೂಚಿಸಲು ತುಂಬಾ ಕುತೂಹಲವುಳ್ಳವನಾಗಿದ್ದೇನೆ—ದೇಶದಲ್ಲಿ ಜನರು ವಿವೇಕವನ್ನೂ ಸದ್ವೃತ್ತಿಯನ್ನೂ ಸಂಪಾದಿಸಲು ವಿದ್ಯಾಶಾಲೆಗಳು ಹೇಗೆ ಆವಶ್ಯಕವೋ ನಾಟಕಶಾಲೆಗಳೂ ಹಾಗೆಯೇ ಅತ್ಯಾವಶ್ಯಕವಾಗಿವೆ ಅಲ್ಲದೆ ವಿದ್ಯಾಶಾಲೆಗಳಲ್ಲಿ ಬಹುಕಾಲ ವ್ಯಾಸಂಗ ಮಾಡುವದರಿಂದ ವಿವೇಕ ಸದ್ವೃತ್ತಿಗಳು ಬರುತ್ತವೆ. ನಾಟಕಶಾಲೆಗಳಲ್ಲಿ ಕ್ಷಣಕಾಲ ಗಮನಿಸಿ ನಾಟಕವನ್ನು ನೋಡಿದವರ ಕೂಡಲೇ ವಿವೇಕ ಸದ್ವೃತ್ತಿಗಳು ಬರುತ್ತವೆ ಎನ್ನುವದಕ್ಕೆ ಅನೇಕ ನಿದರ್ಶನಗಳುಂಟು ಈ ರತ್ನಾವಳಿ ನಾಟಕದ ಕಂಪನಿ ಮ್ಯಾನೇಜರಾದ ಮಿ॥ ಎ ವಿ ವರದಾಚಾರ್ಯರು ಸಂಗೀತಶಾಸ್ತ್ರದಲ್ಲಿ ಒಳ್ಳೇ ಪರಿಶ್ರಮವುಳ್ಳವರಾಗಿಯೂ ಕನ್ನಡ ಮತ್ತು ಇಂಗ್ಲೀಷು ಭಾಷೆಗಳಲ್ಲಿ ಜ್ಞಾನವುಳ್ಳವರಾಗಿಯೂ ಇರುತ್ತಾರೆ. ಅಹಂಕಾರಪಡಲು ಸಾಕಾದ ಅನೇಕ ಕಾರಣಗಳಿದ್ದರೂ ಇವರು ವಿನೀತರಾಗಿಯೂ ವಿದ್ವತ್ ಪ್ರಿಯರಾಗಿಯೂ ಇರುವುದು ಸಂತೋಷವಾಗಿದೆ. ಕಾಳಿದಾಸಾದಿ ಮಹಾ ಕವಿಗಳಿಂದ ರಚಿಸಲ್ಪಟ್ಟ ಸಂಸ್ಕೃತ ನಾಟಕಗಳನ್ನೂ, ಷೇಕ್ಸ್‌ಪಿಯರ್ ಮೊದಲಾದ ಕವಿಗಳಿಂದ ರಚಿತವಾದ ಇಂಗ್ಲೀಷು ನಾಟಕಗಳನ್ನೂ ಗ್ರಂಥಕಾರರ ಅಭಿಪ್ರಾಯಕ್ಕೆ ಲೋಪಬಾರದಂತೆ ಅಭಿನಯಿಸುವುದರಲ್ಲಿ ಇವರು ವಿಶೇಷವಾದ ಖ್ಯಾತಿಯನ್ನು ಸಂಪಾದಿಸಿಕೊಂಡಿರುತ್ತಾರೆ. ಇವರು ಸ್ವಂತವಾಗಿ ನಾಟಕಸಂಘವನ್ನು ಸ್ಥಾಪಿಸಿಕೊಂಡು, ಅದರ ಮೂಲಕ ಅನೇಕರನ್ನು ಆ ವಿದ್ಯದಲ್ಲಿ ಪರಿಶ್ರಮವುಳ್ಳವರನ್ನಾಗಿ ಮಾಡಿ, ಅವರೊಡನೆ ನಾಟಕಗಳನ್ನು ಆಡಿ ಜನಗಳಿಗೆ ತುಂಬಾ ಸಂತೋಷಪಡಿಸುತ್ತಿದ್ದಾರೆ. ಆದ್ದರಿಂದ ಉದಾರ ಸ್ವಭಾವವುಳ್ಳ ಮಹನೀಯರು, ಜನಗಳಿಗೆ ಅತ್ಯುಪಯುಕ್ತವಾದ ಇವರು ಮಾಡತಕ್ಕ ಕೆಲಸಕ್ಕೆ ಆಗಾಗ್ಗೆ ಸಹಾಯಕರಾಗುತ್ತಾ, ಇವರ ಪ್ರಯತ್ನವನ್ನು ಉತ್ತರೋತ್ತರ ಅಭಿವೃದ್ಧಿಪಡಿಸುತ್ತಾ ಬರಬೇಕೆಂಬ ವಿಷಯವನ್ನು ಅತ್ಯಂತ ಸಂತೋಷದಿಂದ ಸೂಚಿಸುತ್ತೇನೆ

ಅರಮನೇ ವಿದ್ವಾಂಸ ವೀಣೆ ಶಾಮಣ್ಣ,
ಶ್ರೀಮನ್ ಮಹಾರಾಜರವರ ಸಂಗೀತ ಶಾಸ್ತ್ರೋಪಾಧ್ಯಾಯ.

ಯೇಸುಸ್ವಾಮಿಯು ಜಗದ್ಗುರುವಾಗಿದ್ದಾನೆ.

ಅಯ್ಯಾ,

ನಾನು ಹಿಂದಿನ ಪತ್ರಿಕೆಯಲ್ಲಿ ಯೇಸುಸ್ವಾಮಿಯು ಜಗದ್ಗುರುವಾಗಿದ್ದಾನೆಂದೂ ಆತನು ಹೊರತು ಮನುಷ್ಯರಲ್ಲಿ ಬೇರೆ ಜಗದ್ಗುರುವಿಲ್ಲವೆಂದೂ ಪ್ರಸ್ತಾಪಿಸಿರುವ ವಿಷಯದಲ್ಲಿ ಹೋದ ಬುಧವಾರದ "ವೃತ್ತಾಂತ ಚಿಂತಾಮಣಿ" ಯಲ್ಲಿ "ಮಾರ್ಗದರ್ಶಿ" ಎಂದು ದಸ್ತಕತ್ತು ಮಾಡಿರುವವರು ಕೆಲವು ಆಕ್ಷೇಪಣೆಗಳನ್ನು ಮಾಡಿದ್ದಾರೆ

ಮೊದಲನೇದು ಯೇಸುಕ್ರಿಸ್ತಸ್ವಾಮಿಯು ಪುರುಷ ಸಂಯೋಗವಿಲ್ಲದ ಕನ್ನಿಕೆಯಲ್ಲಿ ಉದ್ಭವಿಸಿದನೆಂದು ಬೈಬಿಲ್ಲಿನಲ್ಲಿ ಬರೆದಿದೆ. ಇಂಥವನನ್ನು ಜಗದ್ಗುರುವೆಂದು ಹೇಳಬಹುದೇ ? ಇಂಥವನನ್ನು ಯಾರಾದರೂ ಮರ್ಯಾದಿಸುತ್ತಾರೋ ? ಎಂಬುವದು ಒಂದು ಮತ್ತು ಕ್ರಿಸ್ತನ ಭಕ್ತರಲ್ಲದ ಇತರ ಜಾತಿಯವರಲ್ಲಿ ಯಾರಾದರೂ ಒಪ್ಪುತ್ತಾರೆಯೋ ? ಎಂಬುವದು ಇನ್ನೊಂದು.

ಮೊದಲನೇ ಆಕ್ಷೇಪಣೆಗೆ "ಮಾರ್ಗದರ್ಶಿ" ಯು ಬೈಬಲ್ ಎಂಬ ಸತ್ಯವೇದವನ್ನು ಚೆನ್ನಾಗಿ ಪರೀಕ್ಷೆ ಮಾಡಿದ್ದರೆ, ಯೇಸುಸ್ವಾಮಿಯ ಅದ್ಭುತ ಜನ್ಮವನ್ನು ಈಗ ಸಾಧಾರಣವಾಗಿ ಹುಟ್ಟುವ ಮನುಷ್ಯರ ಜನ್ಮಕ್ಕೆ ಸಮಾನಮಾಡುತ್ತಿರಲಿಲ್ಲ ಯೇಸುಸ್ವಾಮಿಯು ಸಾಧಾರಣ ಮನುಷ್ಯನಲ್ಲವೆಂದೂ, ಈತನೇ ತ್ರಿಲೋಕಗಳ ಒಡೆಯನೆಂದೂ ಈ ಮಹಾಪ್ರಭುವಿನ ಜನನದ ವಿಷಯವಾಗಿ ಪೂರ್ವಕಾಲದಲ್ಲಿ ಕಾಲಜ್ಞಾನಿಗಳೆಂಬ ಪ್ರವಾದಿಗಳು—ಇಗೋ, ಕನ್ಯಾಸ್ತ್ರೀಯು ಗರ್ಭಧರಿಸಿಕೊಂಡು ಮಗನನ್ನು ಹೆರುವಳು; ಆತನಿಗೆ ದೇವರು ಮನುಷ್ಯರ ಸಂಗಡ ಇದ್ದಾನೆಂಬ ಅರ್ಥಕೊಡುವ ಇಮ್ಮಾನುವೇಲನೆಂಬದಾಗಿ ನಾಮಕರಣ ಮಾಡುವರು ಎಂದು ನುಡಿದಂತೆ ಆ ಮಹಾದೇವರು ಮನುಷ್ಯಾವತಾರ ತಾಳಿದ್ದರಿಂದ ನರಕಾಲೋತ್ತಮನಾಗಿಯೂ ಪ್ರಪಂಚಕ್ಕೆಲ್ಲಾ ಜಗದ್ಗುರುವಾಗಿಯೂ ಇದ್ದಾನೆ. ಯೇಸುಸ್ವಾಮಿಯ ಪುಣ್ಯಚರಿತ್ರೆಯನು ಪಕ್ಷಪಾತವಿಲ್ಲದೆ ವಿಚಾರ ಮಾಡುವವರು ಈ ವಿಷಯಗಳನ್ನು ಒಪ್ಪಿಕೊಳ್ಳುತ್ತಾರೆಂಬುವದಕ್ಕೆ ಯಾವ ಸಂಶಯವೂ ಇರಲಾರದು.

"ಮಾರ್ಗದರ್ಶಿ" ಯು ಕ್ರಿಸ್ತನ ಭಕ್ತರು ಮಾತ್ರ ಆತನ ಜನನವನ್ನು ಒಪ್ಪುತ್ತಾರೆಯೇ ವಿನಹ ಇತರ ಜಾತಿಯವರು ಒಪ್ಪುತ್ತಾರೆಯೇ ಎಂದು ಆಕ್ಷೇಪಣೆ ಮಾಡುತ್ತಾರೆ ಕ್ರಿಸ್ತನ ಭಕ್ತರು ಕ್ರಿಸ್ತನ ವಿಷಯವಾದವುಗಳನ್ನು ಒಪ್ಪುವದು ಸಹಜ, ಅದು ಸ್ವಾಭಾವಿಕವಾದದ್ದು. ಆದರೆ ಇತರ ಜಾತಿಯವರು ಒಪ್ಪುವದಿಲ್ಲವೆಂದರೆ ಜಗತ್ತಿನಲ್ಲಿರುವ ಕೋಟ್ಯಾನುಕೋಟಿ ಮುಸಲ್ಮಾನರೆಲ್ಲರೂ ಯೇಸುಕ್ರಿಸ್ತಸ್ವಾಮಿಯನ್ನು ಈಸಾಮಸಿ ಎಂದೂ, ಆತನು ಪುರುಷನನ್ನರಿಯದಂಥ ಕನ್ನಿಕೆಯಾದ ಬೀಬಿಮರಿಯಮ್ಮನ ಗರ್ಭದಲ್ಲಿ ಜನಿಸಿ, ಪೂರ್ಣ ಪರಿಶುದ್ಧನಾಗಿದ್ದಾನೆಂದೂ, ಆತನೇ ಪೈಗಂಬರ್ ಅಂದರೆ ಪ್ರವಾದಿ ಎಂದೂ, ಆತನೇ ಜಗತ್ತಿಗೆಲ್ಲಾ ಲೋಕಾಂತ್ಯದಲ್ಲಿ ನ್ಯಾಯ ತೀರಿಸುವದಕ್ಕೆ ಬರತಕ್ಕವನೆಂದೂ ಒಪ್ಪಿಕೊಳ್ಳುತ್ತಾರೆ

ಯೇಸುಸ್ವಾಮಿಯ ಭಕ್ತರು ತಮ್ಮ ಗುರುಸ್ವಾಮಿಯ ಮಹಿಮೆ ಸ್ತೋತ್ರಗಳಿಗಾಗಿ ಲಕ್ಷೋಪಲಕ್ಷ ಕೋಟ್ಯಾನುಕೋಟಿ ದ್ರವ್ಯಗಳನ್ನು ಧರ್ಮಾರ್ಥವಾಗಿ ಕೊಟ್ಟು, ಅನೇಕಾನೇಕ ಸತ್ಯಕಾರ್ಯಗಳನ್ನು ಮಾಡಿ, ಪರೋಪಕಾರಿಗಳಾಗಿ ಪ್ರಕಾಶಿಸುವದಲ್ಲದೆ, ಬೇಕಾಗಿದ್ದರೆ ಈ ದಿನ ತಮ್ಮ ಗುರುಸ್ವಾಮಿಯ ನಾಮಕ್ಕಾಗಿ ತಮ್ಮ ಪ್ರಾಣಗಳನ್ನು ಕಳಕೊಳ್ಳಬೇಕಾಗಿದ್ದರೂ ಅದಕ್ಕೂ ಸಿದ್ಧರಾಗಿದ್ದಾರಲ್ಲವೇ ? ಇಂಥಾ ಪ್ರೀತಿಯ ಜ್ವಾಲೆಯನ್ನೇ ತನ್ನ ಶಿಷ್ಯರಲ್ಲಿ ಹುಟ್ಟಿಸತಕ್ಕವನಲ್ಲದೆ ಬೇರೆ ಜಗದ್ಗುರು ಇದ್ದಾನೆಯೋ ? ಎಲ್ಲರ ಅಂಗೀಕಾರಕ್ಕೆ ಯೋಗ್ಯವಾದಂಥ ಮತ್ತು ನಂಬತಕ್ಕಂಥ ವಾಕ್ಯವೇನಂದರೆ—ಕ್ರಿಸ್ತ ಯೇಸುಸ್ವಾಮಿಯು ಪಾಪಿಗಳನ್ನು ರಕ್ಷಿಸುವದಕ್ಕೆ ಲೋಕಕ್ಕೆ ಬಂದನೆಂಬುವುದೇ.

ಕ್ರಿಸ್ತಭಕ್ತನೊಬ್ಬನು

ತಾಲ್ಲೋಕು ವರ್ತಮಾನಗಳು.

ದೊಡ್ಡಬಳ್ಳಾಪುರ.—೨೫ ನೇ ತಾ ಸುಮಾರು ಮಳೆ ಬಂತು. ಇಲ್ಲಿನ ಹಳೇ ತಾಲ್ಲೂಕ್ ಕಚೇರಿಯಿಂದ ಕರೆ ಬಾಗಲಿನ ವರಿಗೂ ಇರುವ ದೊಡ್ಡ ರಸ್ತೆಯು ಮಳೆ ಬಂದಾಗ ಬಹಳ ಕೆಸರಾಗಿ, ಕಾಲು ಹೂತುಕೊಳ್ಳದೆ ಮತ್ತು ಜಾರುವದೆ ನಡೆಯುವದೇ ಕಷ್ಟ. ಮ್ಯುನಿಸಿಪಾಲಿಟಿಯವರು ಇದಕ್ಕೆ ಜಲ್ಲಿ ಕಲ್ಲು ಹಾಕಿಸಿದರೆ ಎಷ್ಟೋ ಉತ್ತಮ.—ಇಲ್ಲಿದ್ದ ಸಬ್ ಓವರ್‌ಸಿಯರ್ ಮಿ॥ ಮುತ್ತೆ

...ರಿಗೆ ಕಾರ್ಕಳದವರಿಗೆ ವರ್ಗವೆಂದು ತಿಳಿದಿದೆ. ಇವರು ಬಹ ...ಳ್ಳೆಯವರಾಗಿದ್ದರು.—ಇಲ್ಲಿದ್ದ ಮಾರ್ಸಿಥ್ ಕೋರ್ಟಿನ ಚಿಕ್ಕಬ ...ಪುರಕ್ಕೆ ವರ್ಗವಾಯಿತಷ್ಟೆ. ಇದಕ್ಕಾಗಿ ದೊಡ್ಡಬಳ್ಳಾಪುರದಿಂದ ...ಬಳ್ಳಾಪುರಕ್ಕೆ ಹೋಗಿ ಬರತಕ್ಕ ಜನರಿಗೆ ಇಬ್ರಾಹಿಂ ಸಾಹೇಬರು ...ಮರೆ ಟಪಾಲ್ ಗಾಡಿಗಳನ್ನು ಇಟ್ಟಿದ್ದಾರೆ.

ಚನ್ನಪಟ್ಟಣ.—ತಿಂಗಳಿಂದ ಮೋಡವಾಡುತ್ತಾ ಅಲ್ಪ ಸ್ವಲ್ಪ ...ತರು ಮಳೆ ಬರುತ್ತಿದೆಯೇ ಹೊರತು ದೊಡ್ಡ ಮಳೆ ಇಲ್ಲ. ಬಹ ...ತಗಾಳಿ ಬೀಸುತ್ತಾ ಹವಾ ಕೆಡುವಂತಿದೆ. ಇಲ್ಲಿನ ಡ್ರಿಲ್ಲಿಂಗ್ ...ಸ್ಟರು ಕಳೆದ ವಾರ ಮೈಸೂರಿಗೆ ಹೋಗಿ ಬಂದ ನಾಲ್ಕಾರು ದಿನಗ ...ಪ್ಲೇಗಿನಿಂದ ಕಾಲವಾದರು. ಪ್ಲೇಗಿನ ಪ್ರದೇಶಗಳಿಂದ ಜನರು ...ಗೆ ಬಹಳವಾಗಿ ಬಂದಿದ್ದಾರೆ.—ಈಚೆಗೆ ಈ ಊರಿನಲ್ಲಿ ಕಳ್ಳರ ...ತ್ರ ಹೆಚ್ಚುತ್ತಿದೆ. ತಾ. ೧೭ ನೇ ರಾತ್ರಿ ರಾಮಣ್ಣನ ಕೇರಿ ಬಳಿ ...ಗೆ ಕಾಯುವವನ ಗುಡಿಸಲಿಗೆ ೪ ಜನ ಕಳ್ಳರು ನುಗ್ಗಿ ಹೊಡೆದ ...ತಲೂ, ಮಾರನೆ ರಾತ್ರಿ ಮಂಗಳವಾರ ಪೇಟೆಯ ಮೂರು ಮನೆಗ ...ಕನ್ನ ಹಾಕಿದರೆಂತಲೂ, ನೆನ್ನೆ ರಾತ್ರಿ ಕೋಟೆಯಲ್ಲಿ ಜಮೇದಾ ...ಪಕ್ಕದ ಮನೆಗೆ ನುಗ್ಗಿ ಬಟ್ಟೆಬರೆ ತೆಗೆದುಕೊಂಡು ಹೋದರಂತ ... ಮೂವರನ್ನು ಹಿಡಿದಿರುವರೆಂತಲೂ ತಿಳಿದು ಬರುತ್ತೆ. ಕೆಲವು ...ಲವಿಂದೀಚೆಗೆ ಪೋಲೀಸಿನವರ ಬೀಟಿನ ವಾಸನೆಯಾದರೂ ಸಿಕ್ಕು ...ವು ದುರ್ಲಭವಾಗಿದೆ. ನಮ್ಮ ಅಮಲ್ದಾರರೂ ಪೋಲೀಸ್ ಅಧಿಕಾ ...ರೂ ಸರಿಪಡಿಸುವರೆಂದು ನಂಬಿದೇನೆ.

ಆನೇಕಲ್ಲು.—ಆನೇಕಲ್ ಕಸಬೆಯಲ್ಲಿ ಯಂಗ್ ಮೆನ್ಸ್ ಯೂ ...ರ್ ಎಂಬ ಒಂದು ಸಂಘವು ಲಂಡನ್ ಮಿಷನ್ ಸ್ಕೂಲಿನಲ್ಲಿ ಏರ್ಪಾ ...ಗಿರುತ್ತೆ. ಇದು ಪ್ರಾರಂಭವಾಗಿ ಈ ಮಾಹೆ ೪ಕ್ಕೆ ಐದು ವರುಷಗ ...ದ್ದರಿಂದ ೧೪ ನೇ ತಾ. ಬುಧವಾರ ಸಾಯಂಕಾಲ ಇದರ ವರ್ಷಾಂತ್ಯ ...ವವು ನಡೆಯಿತು. ಈ ಮಹೋತ್ಸವ ವೀಕ್ಷಣಾಪೇಕ್ಷಿತರಾದ ಸ ...ಸ್ತ ಸರ್ಕಾರಿ ನೌಕರರೂ ದೊಡ್ಡ ಮನುಷ್ಯರೂ ಆಹ್ವಾನ ಪತ್ರಿಕೆ ...ಮೂಲಕ ಕರೆಯಲ್ಪಟ್ಟವರಾಗಿ ಸರ್ವರೂ ಸೇರಿದ್ದರು. ಇಂಥಾ ...ಸಭೆಯಲ್ಲಿ ಅಮಲ್ದಾರ್ ಮೆ॥ ಸಿ. ಎಸ್. ಕೃಷ್ಣಸ್ವಾಮಿ ಐ ...ಯ್ಯಂಗಾರ್ಯರು ಅಗ್ರಾಸನವನ್ನಲಂಕರಿಸಿದ್ದರು. ತರುವಾಯ ನಡೆದ ...ಕಾರ್ಯಗಳಾವುವೆಂದರೆ—ಸ್ಕೂಲಿನ ಬಾಲಕರು ಎಸ್. ರಾಮಸ್ವಾಮಿ ...ಯ್ಯಂಗಾರ್ಯರಿಂದ ರಚಿಸಲ್ಪಟ್ಟಿದ್ದ ಅಗ್ರಾಸನಾಧಿಪತಿಗಳ ವಿಷಯವಾದ ...ಸ್ವಾಗತ ಕೀರ್ತನೆಯನ್ನು ಹಾಡಿದರು. ಸೆಕ್ರೆಟರಿಯವರು ಯೂ ...ನಿಯನ್ ರಿಪೋರ್ಟನ್ನು ಓದಿದರು. ಬಾಲಕರಿಂದ ರಿಸಿಟೇಷನ್‌ಗಳು ನ ...ಡಿಸಲ್ಪಟ್ಟವು. ಇಂಗ್ಲೀಷಿನಲ್ಲಿಯೂ ಕನ್ನಡದಲ್ಲಿಯೂ ವಿದ್ಯಾರ್ಥಿಗಳು ...ನಾಟಕಗಳನ್ನು ನಟಿಸಿ ಜನಮನೋರಂಜನ ಮಾಡಿದರು. ಅಗ್ರಾಸನಾ ...ಧಿಪತಿಗಳು ಈ ಯೂನಿಯನ್ ಪ್ರತಿಷ್ಠಿಸಿರುವವರ ಫಲಿತಾಂಶವನ್ನೂ ಈ ಯೂನಿಯನ್ ಅಧಿಕಾರಿಗಳೆಲ್ಲರೂ ಮನಃಪೂರ್ತಿಯಾಗಿ ತೃಪ್ತಿಕರ ...ವಾದ ಕಾರ್ಯಗಳನ್ನು ಮಾಡಿರುತ್ತಾರೆಂಬ ವಿಷಯವನ್ನೂ ಅನು ...ಹಿಸಿ, ಸರ್ವರಿಗೂ ಆನಂದವನ್ನುಂಟುಮಾಡಿದ ಸಂಗತಿಯನ್ನು ನೆಟ್ ...ಮಿಸ್ಟ್ರೆಸ್ ಮೆ॥ ಬಿ. ವೆಂಕಟಾಚಾರ್ಯ ಕನ್ನಡದಲ್ಲಿ ಉಪಾದಕೆ ...ಮಾಡಿ ಮುಗಿಸಿದರು. ಕಡೆಗೆ ಬಾಲಕರಿಂದ ದೇವರ ಪ್ರಾರ್ಥನಾ ಕೀರ್ತನೆಯೂ ಶ್ರೀಮನ್ಮಹಾರಾಜರವರ ವಿಷಯವಾದ ಮಂಗಳವೂ ...ಹಾಡಲ್ಪಟ್ಟವು. ತರುವಾಯ ಸಭಾಸದರೆಲ್ಲರೂ ಪುಷ್ಪಮಾಲಿಕಾ ಚಂ ...ದನ ತಾಂಬೂಲಗಳಿಂದ ಸನ್ಮಾನಿತರಾಗಿ ತೆರಳಿದರು.

ಮಂಡ್ಯ.—ಇಲ್ಲಿನ ಪ್ಲೇಗಿನ ಗಲಾಟೆಗೋಸ್ಕರ ಜನರು ಊರು ಬಿಟ್ಟು ನಾಲ್ಕಾರು ವಾರಗಳಿಂದ ಷೆಡ್ಡುಗಳಲ್ಲಿ ವಾಸ ಮಾಡುತ್ತಾ ಇದ್ದಾ ...ಗ್ಯೂ ಸೌಖ್ಯವಿಲ್ಲ. ಷೆಡ್ಡುಗಳಲ್ಲಿಯೂ ಸಹಾ ಆಗಾಗ್ಗೆ ವ್ಯಾಧಿಯು ...ತಗಲಿ ಜನರು ಮೃತಪಟ್ಟಿರುತ್ತಾರೆ. ಇಲ್ಲಿ ಒಂದು ಕಟ್ಟು ಇಲ್ಲ. ...ಷೆಡ್ಡುಗಳಲ್ಲಿ ಕಾಯಿಲೆ ಆದರೆ ಅವರನ್ನು ಊರೊಳಕ್ಕೆ ಕರೆದುಕೊಂ ...ಡು ಹೋಗುತ್ತಾರೆ. ಸರ್ಕಾರದವರು ಯಾವವಿಧವಾದ ಏರ್ಪಾಡೂ ...ಮಾಡಿಲ್ಲ. ...ಲಗೇರಿಯಲ್ಲಿಯೂ ಸುತ್ತಮುತ್ತಲಿನ ಕೆಲವು ಗ್ರಾಮ ...ಗಳಲ್ಲಿಯೂ ಇಲಿಗಳು ಸತ್ತದ್ದರಿಂದ ಅಲ್ಲಿನವರು ಸಹಾ ಊರು ...ಬಿಟ್ಟು ಷೆಡ್ಡುಗಳಲ್ಲಿ ವಾಸ ಮಾಡುವದಕ್ಕೆ ಪ್ರಯತ್ನಿಸಿರುತ್ತಾರೆ. ಸದ್ಯ ...ಕ್ಕೆ ಮಿಡ್ಲ್ ಸ್ಕೂಲುಗಳು ಪ್ಲೇಗಿನ ಗಲಾಟೆಯಿಂದ ಮುಚ್ಚಲ್ಪಟ್ಟಿರು ...ವವು. ಪೋಸ್ಟ್ ಆಫೀಸು ತಾಲ್ಲೂಕು ಕಚೇರಿಗೆ ರವಾನಿಸಲ್ಪಟ್ಟಿರು ...ತ್ತದೆ.—ಇಲ್ಲಿ ಕಳ್ಳರ ಅವಾಂತ್ರ ಬಹಳವಾಗಿದೆ. ಜನರು ಊರು ಬಿಟ್ಟು ತಮ್ಮ ಮನೆಗಳನ್ನು ಬೀಗ ಹಾಕಿಕೊಂಡು ಷೆಡ್ಡುಗಳಲ್ಲಿ ವಾಸ ಮಾಡು ...ತ್ತಾ ಇದ್ದಾಗ್ಯೂ ಪೋಲೀಸ್ ಉಸ್ತುವಾರಿ ಕಡಿಮೆಯಾಗಿರುತ್ತದೆ. ಕಳೆ ...ದ ಸೋಮವಾರ ರಾತ್ರಿ ಇಲ್ಲಿನ ಮಿಡ್ಲ್ ಮನೆಗೆ ಕಳ್ಳರು ಇಳಿ ...ದಿದ್ದು, ಬೀಗ ಒಡೆದದ್ದನ್ನು ಮಂಗಳವಾರ ಬೆಳಿಗ್ಗೆ ಪೋಲೀಸ್ ...ದಫೇದಾರರು ಹೋಗಿ ನೋಡಿದಾಗ ಬಾಗಲು ಒಳಗಡೆ ಚಿಲಕ ...ಹಾಕಿತ್ತು. ದಫೇದಾರರು ಚಿಲಕವನ್ನು ತೆಂದರು. ಕಳ್ಳರು ಕೆಲವು ...ಸಾಮಾನುಗಳನ್ನು ತೆಗೆದುಕೊಂಡು ಹೋಗಿರುವದು ಗೊತ್ತಾಯಿತು. ...ಮನೆಯ ಬೀಗ ಮುರಿದು ಅಲ್ಲಿಯೇ ಹಾಕಿದ್ದರು. ಪೋಲೀಸ್ ಇನ್ಸ್ಪೆ ...ಕ್ಟರು ಈ ವಿಷಯದಲ್ಲಿ ಹೆಚ್ಚಿನ ನಿಗಾ ಕೊಡಬೇಕಾಗಿದೆ.—ಕಳೆದ ...ಎರಡು ವರ್ಷಗಳಿಂದ ಇಲ್ಲಿ ಆಬ್ಕಾರಿ ಇನ್ಸ್ಪೆಕ್ಟರ್ ಕೆಲಸ ನೋಡು ...ತ್ತಿದ್ದ ಮೆ॥ ಲಿಂಗಪ್ಪರವರಿಗೆ ಕೋಲಾರಕ್ಕೆ ವರ್ಗವಾಯಿತು. ಅವರ ...ನ್ನು ಕಳೆದ ಶುಕ್ರವಾರ ಇಲ್ಲಿನವರು ಬ್ಯಾಂಡ್ ಮುಂತಾದ ವಾದ್ಯಗ ...ಳಿಂದ ಸಾಗಕಳುಹಿಸಿದರು. ಇವರು ಜನರಲ್ಲಿ ಬಹಳ ಪ್ರೀತಿವುಳ್ಳವರಾಗಿ ...ದ್ದರು. ಇವರಿಗೆ ಬದಲಾಗಿ ಮೆ॥ ಸೈಯದ್ ಅಬ್ದುಲ್ ಅಜೀಜ್‌ಯವ ...ರು ಕಳೆದ ಬೃಹಸ್ಪತಿವಾರ ಸಾಯಂಕಾಲ ಇಲ್ಲಿಗೆ ಬಂದು ಸ್ವಾಧೀನ ...ಛಾರ್ಜ ವಹಿಸಿದರು.

ಮೊಳೆಹೊನ್ನೂರು.—೬–೭ ವರುಷಗಳ ಪೂರ್ವ ಈ ಗ್ರಾ ...ಮವು ತುಂಬಾ ಜನನಿಬಿಡೀಕೃತವಾಗಿ ಅನೇಕ ವಿದ್ವನ್ಮಣಿಗಳಿಂದಲೂ ...ವರ್ತಕರಿಂದಲೂ ದೊಡ್ಡ ಮನುಷ್ಯರಿಂದಲೂ ಶೋಭಾಯಮಾನವಾ ...ಗಿತ್ತು. ಈಗ ನಾಮಾವಶೇಷತೆಯನ್ನು ಪ್ಲೇಗ್ ಉಪದ್ರವದಿಂದ ಪಡೆದು ...ಇಲ್ಲಿಯ ಸ್ಥಿತಿಯನ್ನು ಕೇಳುವ ಯಾರಿಗಾದರೂ ಸಂಕಟವಾಗದಿರದು. ...ಈಚೆಗೆ ೩ ಸಂವತ್ಸರಗಳಾರಭ್ಯ ಸುಖವಾಗಿದ್ದು, ಪುನಃ ಚೇತರಿಸಿಕೊ ...ಳ್ಳುವ ಸಂದರ್ಭದಲ್ಲಿಯೇ ಇತ್ತು. ಇದಕ್ಕೆ ಸುತ್ತಮುತ್ತಲಿನ ಪ್ರ...

ದೇಶಗಳ ಪ್ಲೇಗಿನ ಹಾವಳಿಯ ಸಂಗತಿ ತಿಳಿದು ಗಾಬರಿಯಾಗಿ, ಸಮೀ ಪದಲ್ಲಿರುವ ಶಿವಮೊಗ್ಗೆಗೆ ಬಂದಿರುವದ್ದರಿಂದ ಜನರೆಲ್ಲರೂ ಒಂದು ಮುಂದೆ ತೋಚದೆ ಪ್ರತಿಮೆಗಳ ಹಾಗೆ ಸುಮ್ಮನೆ ಇದ್ದಾರೆ. ಕುಂಸಿಯ ಲ್ಲಿ ಮ್ಯಾಂಗನೀಸ್ ಕಂಪೆನಿಯು ಸ್ಥಾಪಿತವಾದ ಲಾಗಾಯ್ತು ಮಾರಿಕಾ ಉಪದ್ರ, ಪ್ಲೇಗ್ ಇವು ಇದ್ದೇ ಇವೆ. ಈಚೆಗೆ ೨ ತಿಂಗಳ ಲಾಗಾಯ್ತು ವಿಶಪ್ರಕಾರವಾಗಿ ವಿರಾಮವಿಲ್ಲದೆ ಮಳೆಯು ಸುರಿಯಲಾರಂಭಿಸಿ, ಜನ ಗಳಿಗಾನಂದವನ್ನುಂಟು ಮಾಡಿತ್ತು. ಈಗ ಮಳೆಗಾಲದಲ್ಲಿ ಮನೆಯ ನ್ನು ಬಿಡಲು ಸಂಕಟಪಡುತ್ತಿರುವರು. ಈ ಊರಿನಲ್ಲಿ ಎಲ್ಲೆಲ್ಲಿಯೂ ಗೊಬ್ಬರದ ಗುಂಡಿ, ತುಂಬಾ ಲಂಟಾನಾ ಕಾಡುಗಿಡಗಳು, ಇವೇ ಮೊ ದಲಾದವು ಪ್ಲೇಗಿಗೆ ಅನುಕೂಲವಾಗಿಯೇ ಇವೆ. ಪ್ಲೇಗಾದ ಶಿವಮೊಗ್ಗೆ ಮುಂತಾದ ಪ್ರದೇಶಗಳಿಂದ ಜನಗಳು ಬಂದು ಧುಮುಕುತ್ತಿರುವರು. ಇಲ್ಲಿ ಕೊಟ್ಟಣಿಗರು, ಉಪ್ಪಾರರು ದಿನವೂ ಶಿವಮೊಗ್ಗೆಗೆ ಹೋಗಿ ಬ ರುತ್ತಲೇ ಇರುವರು. ಹೀಗೆಯೇ ಇದ್ದರೆ ಪ್ರವೇಶಕ್ಕನುಕೂಲವಾಗು ವುದು. ಗ್ರಾಮಸ್ಥರೂ ಯೂನಿಯನ್ ಮೆಂಬರುಗಳೂ ತಕ್ಕ ಏರ್ಪಾ ಟು ಮಾಡಿ ಪ್ಲೇಗಿಗೆ ಆಸ್ಪದವಾಗದಂತೆ ಮಾಡುವರೆಂದು ನಂಬಿದೆ.—ಬೆಂ ಕೀಪುರದ ಆಸ್ಪತ್ರೆ ಅಸಿಸ್ಟೆಂಟರು ಜನರಿಗೆ ಔಷಧ ಕೊಡುವದಕ್ಕೆ ವಾ ರಕ್ಕೊಂದಾವರ್ತಿ ಬರುತ್ತಿದ್ದುದನ್ನು ತಪ್ಪಿಸಿ, ಸರ್ಕಾರದವರು ನೇಟಿ ವ್ ಡಾಕ್ಟರನ್ನು ಸ್ಥಿರವಾಗಿ ಇರುವಂತೆ ನಿಯಾಮಕ ಮಾಡಿದಂತೆ ಮೈ ಸೂರಿನಿಂದ ಮೆ॥ ರಹಿಮಾನ್ ಷರೀಫ್‌ಯವರು ಕೆಲಸದ ಮೇಲೆ ಬಂದು ಒಂದು ತಿಂಗಳಾಯಿತು. ಹೊಸಬರಾಗಿದ್ದರೂ ಜನಗಳ ಪ್ರೀತಿ ಗೌರವ ಗಳನ್ನು ಸಂಪಾದಿಸುತ್ತಿದ್ದಾರೆ. ರೋಗಿಗಳ ಮನೆಗೆ ಹೋಗಿ ಅವರದಿಂದ ತಕ್ಕ ಚಿಕಿತ್ಸೆಯನ್ನು ಮಾಡುತ್ತಾರೆ.

ಹುಣಸೂರು.—ಜುಲೈ ತಿಂಗಳು ೧೦ ನೇ ತಾ. ಪ್ರಾರಂಭವಾದ ಪ್ಲೇಗ್‌ರೋಗವು ಇನ್ನೂ ಶಮನವಾಗದೆ ದಿನಕ್ಕೆ ೩ ರಿಂದ ೯ ರವರೆ ಗೂ ಸಾಯುತ್ತಲೇ ಇದ್ದಾರೆ. ಷೆಡ್ಡುಗಳಲ್ಲಿಯೂ ತಗಲಿಕೊಂಡದ್ದರಿಂದ ಅನೇಕರು ಮೊದಲು ಹಾಕಿದಂಥ ಸ್ಥಳಗಳಿಂದ ಕಿತ್ತು ಬೇರೆಕಡೆ ಷೆಡ್ಡು ಹಾಕಬೇಕಾಯಿತು. ಈ ತಿಂಗಳು ೨೪ ನೇ ತಾ. ವರಿಗೆ ೧೬೯ ಜನ ಕ್ಕೆ ತಗಲಿ ೧೩೧ ಮರಣಗಳಾದವು. ಈ ಕಷ್ಟವನ್ನು ತಪ್ಪಿಸಿಕೊಂಡು ಬೇರೆಬೇರೆಕಡೆ ಹೋಗಿ ಷೆಡ್ಡುಗಳಲ್ಲಿ ವನವಾಸಪಡುತ್ತಿರುವಲ್ಲಿ, ಊರಿ ನೊಳಗೆ ಕಳ್ಳತನವೆಂಬ ಪ್ಲೇಗ್ ಬಂದು ದಗಿ, ಭತ್ತ, ಇನ್ನೂ ಮನೆ ಯಲ್ಲಿನ ಅನೇಕ ಸಾಮಾನುಗಳನ್ನು ಹೊತ್ತುಕೊಂಡು ಹೋಗುತ್ತಾ ಇರುವದನ್ನು ಜನರು ಕೇಳಿ, ಕಾಡಿನಲ್ಲಿದ್ದುಕೊಂಡು ಕಷ್ಟಪಡುವ ದಕ್ಕಿಂತಲೂ ಮನೆಯಲ್ಲೇ ಇದ್ದುಕೊಂಡು ಸಾಯುವದು ಉತ್ತಮ ವೆಂದು ಊರನ್ನು ಸೇರಲು ಪ್ರಯತ್ನಪಡುತ್ತಲಿದ್ದಾರೆ. ಇಲ್ಲಿನ ಅಮ ಲ್ದಾರರ ನೌಕರನೊಬ್ಬನು ಪ್ಲೇಗ್‌ರೋಗದಿಂದ ಅವರ ಮನೆಯಲ್ಲೇ ಸತ್ತುಹೋದದ್ದರಿಂದ ಅವರು ತಮ್ಮ ಮನೆಯನ್ನು ಬಿಟ್ಟು ಷೆಡ್ಡು ಹಾಕಿಸಬೇಕಾಯಿತು. ತಮ್ಮ ಮನೆಯ ಉಸ್ತುವಾರಿಗಾಗಿ ತಮ್ಮ ಸ್ವಂ ತ ಜವಾನರಾದ ಕರಿಯ, ಮಾದ, ಚೆನ್ನಸ್ವಾಮಿ, ಮುತ್ತ ಎಂಬ ನಾಲ್ವ ರನ್ನು ಬಿಟ್ಟಿದ್ದರು. ಅಮಲ್ದಾರರೂ ಪೋ॥ ಇನ್ಸ್‌ಪೆಕ್ಟರೂ ಊರಿನ ಲ್ಲಿಲ್ಲದಿರುವಾಗ್ಗೆ ಇದೇ ತಿಂಗಳು ೧೬ ನೇ ತಾ. ರಾತ್ರಿ ಡಾಕ್ಟರ ಮನೆ ಯ ಮುಂದೆ ಇರುವ ತೆಂಗಿನ ಮರವನ್ನು ಮಾದ ಎಂಬುವವನು ಹತ್ತಿ ಎಳನೀರುಗಳನ್ನು ಕಡಿದಿದಂತೆಯೂ ಬಾಕಿಯವರು ಕೆಳಗಿದ್ದು ಉಸ್ತು ವಾರಿಯಿಂದ ಅವುಗಳನ್ನೆಲ್ಲಾ ಆರಿಸುತ್ತಾ, ಕೊನೆಯಲ್ಲಿ ಇವರೆಲ್ಲಾ ಅಮಲ್ದಾರರ ಮನೆ ಅಂಗಳದಲ್ಲಿ ಕೂಡಿ, ಎಳನೀರುಗಳನ್ನು ಕುಡಿದು, ಚಿಪ್ಪುಗಳನ್ನೆಲ್ಲಾ ಅಮಲ್ದಾರರ ಮನೆಯ ಎದುರಿನಲ್ಲಿರುವ ಚರಂಡಿ ಯ ಕೆಳಗೆ ಹಾಕಿದ್ದು ಅಮಲ್ದಾರರು ಸರ್ಕೀಟಿನಿಂದ ಬಂದನಂತರ ತಮ್ಮ ಜವಾನರನ್ನು ವಿಚಾರಿಸಿದ್ದಾಗ್ಗೆ ಮಾದ ಎಂಬುವನು ತಾನು ತೆಂ ಗಿನಮರ ಹತ್ತಿ ಕಾಯಿಗಳನ್ನು ಕೆಡವಿದ್ದನೆಂದು ಒಪ್ಪಿಕೊಂಡಹಾಗೂ ಅವರಿಗೆ ಶಿಕ್ಷೆಯಾಗಲಿಲ್ಲವೆಂದೂ ಕೇಳುತ್ತೇನೆ.—ಇದೇ ತಿಂಗಳು ೧೭ ನೇ ತಾ. ರಾತ್ರಿ ಸರಾಫ್ ನರಸಿಂಹಯ್ಯನವರ ಮನೆಯಲ್ಲಿ ಕಳ್ಳತನ ವಾಯಿತು. ನಮ್ಮ ಪೋ॥ ಇನ್ಸ್‌ಪೆಕ್ಟರು ಪತ್ತೆ ತರದೂದಿಗಾಗಿ ಗುಮಾ ನಿ ಆಸಾಮಿಗಳ ಮನೆಗಳ ಹತ್ತಿರ ಪೋಲೀಸ್ ಜವಾನರನ್ನು ಇಟ್ಟಿದ್ದ ರು. ಖಾದರ್ ಷರೀಫ್ ರವರ ಮೇಲಿದ್ದಾಗ್ಯೂ ಆಸಾಮಿ ಗಳನ್ನು ಪತ್ತೆ ಮಾಡಿ, ಇನ್ಸ್‌ಪೆಕ್ಟರಿಗೆ ತಿಳಿಸಲು ಅವರು ಆಸಾಮಿಗಳನ್ನು ಹಿಡಿದು ಮನೆ ಜಪ್ತಿ ಮಾಡಿದಾಗ ಕಳುವಾದ ಮಾಲುಗಳಲ್ಲಿ ಕೆಲವು ಸಿಕ್ಕಿರುತ್ತ ವೆ. ವಿಕ್ರಯ ಮಾಡಿದ ಮಾಲುಗಳ ಪೈಕಿ ಕೆಲವು ಒಬ್ಬ ಮೋಚಿಯ ನನ ಮನೆಯಲ್ಲಿ ಸಿಕ್ಕಿದವು. ಕಳುವು ಮಾಡಿದ ಆಸಾಮಿಗಳು ಇಸು ಫ್, ಗೌಸ, ಹೆಂಡತಿ, ಈತನ ರಖಾವದಾರಳು ಮತ್ತು ಬುಡನ್. ಇವರ ಪೈಕಿ ಇಸುಫ್, ಬುಡನ್ ಎಂಬುವರನ್ನು ಹಿಡಿದಿಟ್ಟಿದ್ದಾರೆ. ಒಬ್ಬಳಿಗೆ ಪ್ಲೇಗ್ ತಗಲಿದೆ. ಒಬ್ಬನು ಎಲ್ಲೋ ಪರಾರಿಯಾಗಿದ್ದಾನೆ. ಇವರ ಜೊತೆಗೆ ಕಾನ್ಸ್‌ಟೇಬಲ್ ಖಾದರ್ ಷರೀಫ್ ಎಂಬುವನು ಸಹ ಸೇರಿದ್ದನೆಂದು ತಿಳಿದುಬಂದು ಇವನನ್ನು ಸಹ ಲಾಕಪ್ಪಿನಲ್ಲಿಟ್ಟಿರುತ್ತಾರೆ. ಇನ್ನು ಕೆಲವು ಮನೆಗಳಲ್ಲಿ ಕಳುವಾಗಿರುತ್ತದೆ. ಕಳ್ಳತನಕ್ಕೆ ಕಳ್ಳರ ಸಮೂಹ ದರನ್ನೂ ಹಿಡಿಯಬೇಕೆಂದು ಇನ್ಸ್‌ಪೆಕ್ಟರು ರಾತ್ರಿ ಹಗಲು ತುಂಬಾ ಪ್ರಯಾಸಪಡುವದನ್ನು ನೋಡಲು ತುಂಬಾ ಸಂತೋಷವಾಗುತ್ತದೆ.

ಪ್ರಕಟನೆಗಳು.

ಇಲ್ಲಿ ನೋಡಿ!

66 3

ತುಮಕೂರು ಮಿಷನ್ ಇಲಾಖೆಯಲ್ಲಿ ಯೂರೋಪಿಯನ್ ಮೇ ಸ್ತ್ರಿಚಾರಣೆಯಿಂದ ಉತ್ತಮ ತರಹದ ಕಾಸನದ ಟೋಪಿಗಳು ಅತಿ ಶ್ರೇಷ್ಠವಾದ ಉಲ್ ದಾರದಿಂದ ತಯಾರಾಗುತ್ತವೆ.

ಈಗ ಕೆಳಗೆ ನಮೂದಾಗಿರುವ ವಿವಿಧ ಬಣ್ಣದ ಟೋಪಿಗಳು ಹೆಚ್ಚಾಗಿ ನಮ್ಮಲ್ಲಿ ದಾಸ್ತಾನ (ಸ್ಟಾಕ್) ಉಂಟು.

ಬಣ್ಣಗಳ ವಿವರ.—ಅಚ್ಚ ಕೆಂಪು, ನೀಲದ ಕೆಂಪು, ಕಪ್ಪು ಕೆಂಪು ಮಿಶ್ರವಾದದ್ದು.

ಕ್ರಯ —೧ ರೂ ೩ ಆ ಮತ್ತು – ರೂ ೬ ಆ

೧ ಡಜನ್ ಟೋಪಿಗಳನ್ನು ತೆಗೆದುಕೊಳ್ಳುವವರಿಗೆ ಕೆಳದ ಅ ರಂತೆ ಡಿಸ್‌ಕೌಂಟ್ ಕೊಡಲ್ಪಡುವದು.

ನಮ್ಮ ವಿಳಾಸ:—ಮೇನೇಜರ್.

ಕಾಸನದ ಟೋಪಿ ಕಾರ್ಖಾನೆ, ಮಿಷನ್ ಇಲಾಖೆ, ತುಮಕೂರು.

ವ್ಯವಸಾಯ ಶಾಸ್ತ್ರ ಪ್ರಶ್ನೋತ್ತರ (೧೮೯೧—೧೯೦೭)

85-2

ಈಗತಾನೇ ಅಚ್ಚಿಗೆ ಸಿದ್ಧವಾಗಿದೆ. ಎಲ್.ಎ.ಜಿ.-ಪರೀಕ್ಷಾ ವಿದ್ಯಾ ರ್ಥಿಗಳಿಗೆ ಅತ್ಯಂತ ಉಪಯೋಗವಾದದ್ದು. ಬೆಲೆ ೧ ಪ್ರತಿಗೆ ಐದಾಣೆ. ವಿಳಾಸ:-ಮ್ಯಾನೇಜರ್, ದಿ ಎಗ್ರಿಕಲ್ಚರಿಸ್ಟ್ ಆಫೀಸ್, ಚಿಕ್ಕಬಳ್ಳಾಪುರ.

ಕಾರ್ಡಿನ ಸೈಜು ೩½ × ೩½.

ಫೋಟೋ ತೆಗೆಯುವ ಭುವಾ ಕ್ಯಾಮರಾ.

84-2

ಬೆಲೆ ಫಕ್ತ ಮೂರು ರೂಪಾಯಿ.

ಇದರಿಂದ ಬೇಕಾದ ಮನುಷ್ಯನ ಫೋಟೋ ಅವನಿಗೆ ತಿಳಿಯದಂತೆ ತೆಗೆಯಲಿಕ್ಕೆ ಬರುತ್ತದೆ. ವೇಗದಿಂದ ಓಡುವ ಗಾಡಿಯು ಮತ್ತು ಹಾರುವ ಪಕ್ಷಿಯು ಫೋಟೋ ಸಹ ತೆಗೆ ಯಬಹುದು. ಇದರಲ್ಲಿ ಕಲಿಯತಕ್ಕದ್ದೇನೂ ಇಲ್ಲ. ಈ ಕ್ಯಾಮರಾದ ಮಾಹಿತಿಯನ್ನು ಕೊಳ್ಳುವವರಿಗೆ ನಾವು ಉಚಿತ ಲ್ಲಿಯೇ ಮಾಡಿಕೊಡುವೆವು. ಎಷ್ಟೋ ಕಡೆಗೆ ಇದಕ್ಕೆ ೧೦ ರಿಂದ ೧೫ ರೂ. ಬೆಲೆ ಬೀಳುತ್ತದೆ. ಆದರೆ ಇದರ ಖರೇ ಕಿಮ್ಮತ್ತು ೩ ರೂಪಾಯಿ ಮಾತ್ರ ಇರುವದು. ಟಪ್ಪಾಲ್ ಖರ್ಚು ೯ ಆಣೆ.

ಛೋಟಾಲಾಲ ಛಗನಲಾಲ ಮಹಾಜನ, ಠಾಕೂರದ್ವಾರ ರೋಡ್, ಪೋಸ್ಟ್ ಕಾಲಬಾದೇವಿ, ಮುಂಬಯಿ.

ಪಂಡಿತ ಕೆ. ವೆಂಕಟೇಶಯ್ಯನವರ ದಿವ್ಯ ಮಹೌಷಧಗಳು.

91-1

ಜ್ವರವೈರಿ:—ಇದು ಎಲ್ಲಾ ವಿಧ ಜ್ವರಗಳನ್ನೂ ನಿವಾರಣೆ ಮಾ ಡುವದರಲ್ಲಿ ಸರ್ವೋತ್ತಮವಾಗಿದೆ ಎಂದು ಸೇವಿಸಿ ಗುಣಹೊಂದಿದ ಅನೇಕ ಮಂದಿ ದೊಡ್ಡಮನುಷ್ಯರು ಬಾಲಕರು ವೃದ್ಧರು ಇವರುಗಳ ಹೇಳಿಕೆಯೋ ಬರವಣಿಗೆಯೋ ಇದು ಅತ್ಯುತ್ತಮವಾದ ಒಳ್ಳೆ ಔಷಧ ವೆನ್ನುವುದಕ್ಕೆ ನಿಜವಾದ ಖಾತ್ರಿ. ಈ ಜ್ವರವೈರಿಯು ಈಗಿನ ಕಾಲದ ಪ್ಲೇಗ್ ಎಂಬ ಜ್ವರಕ್ಕಾದರೂ ರಾಮಬಾಣ ಸಮಾ ನವಾದದ್ದು. ತಕ್ಷಣ ಪರಿಹಾರ. ಇದರ ಅನುಪಾನ ಕ್ರಮಪತ್ರ ಶೀಶೆ ಸಂಗಡಲೇ ಕಳುಹಿಸಲ್ಪಡುವದು. ಅನೇಕ ಮಂದಿ ಇದರ ವಿಷ ಯವಾಗಿ ಬರೆದಿರುವ ಪತ್ರಗಳನ್ನು ಅಪೇಕ್ಷಿಸಿದವರಿಗೆ ರವಾನಿಸಲ್ಪಡು ವದು. ಇದು ಎಲ್ಲಾ ಕಾಲದಲ್ಲಿಯೂ ಪ್ರತಿಯೊಂದು ಕುಟುಂಬದಲ್ಲಿ ಯೂ ಇರಬೇಕಾದದ್ದು. ಇದರ ಕ್ರಯ ಶೀಶೆ ೧ಕ್ಕೆ ಒಂದು ರೂಪಾಯಿ ಮಾತ್ರ. ಒಟ್ಟಿಗೆ ಒಂದು ಡಜನ್ ಶೀಶೆಗಳನ್ನು ತರಿಸಿಕೊಳ್ಳುವವರಿಗೆ ಒಂದು ಶೀಶೆ ಮುಫತ್ತಾ ಕೊಡುತ್ತೇವೆ.

ಪ್ಲೇಗಿನ ಗಡ್ಡೆಗೆ ಉಜ್ಜುವ ಮುಲಾಮು.—ಇದನ್ನು ಉ ಪಯೋಗಿಸುವದರಿಂದ ಎಂಥಾ ಗಡ್ಡೆಯಾದರೂ ಬಹು ಜಾಗ್ರತೆಯಾಗಿ ಒಡೆದು ಅಥವಾ ಕರಗಿ ಬೇಗನೆ ಗುಣವಾಗುವದು. ಡಬ್ಬಿಗೆ ೪ ಆಣೆ.

ಪಂಡಿತ ಕೆ. ವೆಂಕಟೇಶಯ್ಯ,

ಇಂಗ್ಲೀಷ್ ಹಿಂದೂ ವೈದ್ಯಶಾಲಾ, ಶಿವಮೊಗ್ಗಾ.

ಆಸ್ತಿ ಕಲಾಲ್ ನೋಟೀಸು.

92-1

ದೊಡ್ಡಬಳ್ಳಾಪುರದ ತಾಲ್ಲೂಕು ದೊಡ್ಡಬೆಳವಂಗಲದ ಹೋಬ ಳಿ ಹಾಡ್ರಿಪುರದಲ್ಲಿರುವ ಶಿವಭಕ್ತರ ಸಾನಂದಪ್ಪನವರ ವೀರಣ್ಣನ ಮಗ ಚನ್ನವೀರಪ್ಪನಾದ ನಾನು ಇದರಿಂದ ಸಮಸ್ತರಿಗೂ ತಿಳಿಯಪಡಿ ಸುವದೇನಂದರೆ—ನನ್ನ ಚಿಕ್ಕಪ್ಪನಾದ ವೀರಭದ್ರಪ್ಪನ ಹೆಸರಿನಲ್ಲಿ ಸಕಲ ಪಿತರಾರ್ಜಿತ ತೋಟಗಳ ಖಾತೆಯೂ ಇತ್ತು. ಈತನಿಗೂ ನನಗೂ ಭಾಗವಾಗಿ ಈ ಪಿತ್ರಾರ್ಜಿತದಲ್ಲಿ ಅರ್ಧ ಆಸ್ತಿಗಳನ್ನು ನನಗೆ ಕೊಟ್ಟಿದ್ದು, ಬಾಕಿ ಅರ್ಧ ಹಿಸ್ಸೆಯನ್ನು ತಾನು ಅನುಭವಿಸುತ್ತಾ ಇದ್ದು, ಈಗ ವರ್ಷದ ಹಿಂದೆ ಮೃತಪಟ್ಟನು. ಈ ಖಾತೆಯು ಈತನ ೩ ನೇ ಮಗ ಸಿದ್ದಪ್ಪನ ಹೆಸರಿಗೆ ಆಯಿತು. ಈಗ ನನ್ನ ನಾದನಿಯಾ ದ ಮಾನಿಯಮ್ಮನಿಗೆ ಈಗ ಖಾತೇದಾರನಾದ ಸಿದ್ದಪ್ಪ, ಈತನ ಅಣ್ಣ ಹುಚ್ಚವೀರಪ್ಪ, ಖಾತೇದಾರನ ಖಾಸಾ ಮಾವನಾದ ಚಿಕ್ಕಕುರ್ಕನಹ ಳ್ಳಿಯಲ್ಲಿರುವ ಪಟೇಲ್ ಸ್ಪಿರೇಗೌಡ, ಮತ್ತು ಕೋಡಿಹಳ್ಳಿಯಲ್ಲಿರುವ ಚನ್ನವೀರೇಗೌಡ ಇವರುಗಳೆಲ್ಲರೂ ಸೇರಿ, ಮಸಲತ್ತು ಮಾಡಿ, ಈ ಪಿತ್ರಾರ್ಜಿತ ಅಂದರೆ—೭, ೯, ೩೬, ೩೭, ೩೪, ೩೯, ೧೯೩, ೧೫೮, ೧೭೩, ಈ ೯ ನಂಬರುಗಳಲ್ಲಿ ಖಾತೆದಾರನಿಗೆ ಅರ್ಧ ಹಿಸ್ಸೆ ಯೂ ನನಗೆ ಅರ್ಧ ಹಿಸ್ಸೆಯೂ ಇರುತ್ತೆ. ಮತ್ತು ೧೦೭, ೧೩೦ ನೇ ನಂಬರುಗಳು ನನಗೆ ಪೂರ್ತಿಯಾಗಿ ಸೇರಿವೆ. ಇದಲ್ಲದೆ ೫೦ ನೇ ನಂಬರ್ ಮಾಳವೂ, ೬೭,೬೪ ನೇ ನಂಬರ್ ಮಾಳವೂ ನನ್ನ ಹಿಸ್ಸೆಗೆ ಬಂದಿವೆ. ಈ ಮೇಲ್ಕಂಡ ಪಿತರಾರ್ಜಿತ ಆಸ್ತಿಗಳನ್ನು ನನ್ನ ನಾದನಿ ಯಾದ ಮಾನಿಯಮ್ಮನಿಂದ ಪರಾಧೀನ ಮಾಡಿಸುವದಾಗಿ ತಿಳಿಯಬರು ತ್ತೆ. ಆದರೆ ಈಕೆಗೆ ಗಂಡು ಸಂತತಿ ಇಲ್ಲದೆ ನಾನೇ ಖಾಸಾ ಹಕ್ಕುದಾರ ನಾಗಿರುತ್ತೇನೆ. ನನ್ನ ಅನುಮತಿ ಇಲ್ಲದೆ, ನನ್ನ ನಾದನಿ ಅಂದರೆ, ನನ್ನ ತಮ್ಮನಾದ ರುದ್ರಯ್ಯನ ಹೆಂಡತಿ ಮಾನಿಯಮ್ಮನಿಂದ ಮೇಲೆ ನಮೂ ದಿಸಿರುವ ತೋಟಗಳನ್ನು ಯಾರೂ ಆಧಾರ, ಕ್ರಯ, ಭೋಗ್ಯ, ಮುಂ ತಾದವುಗಳಿಂದ ಬರೆಯಿಸಿಕೊಂಡು ರುಜು ಹಾಕಿಸಿಕೊಂಡವರಿಗೆ ಸದರಿ ಸ್ವತ್ತಿನಮೇಲೆ ಯಾವ ಹಕ್ಕೂ ಬರುವದಿಲ್ಲ. ಸದರಿ ಮಾನಿಯಮ್ಮನ ಗಂಡನಾದ ನನ್ನ ತಮ್ಮ ರುದ್ರಪ್ಪನು ಕೆಲವು ವರ್ಷಗಳ ಹಿಂದೆ ಮೃತ ಪಟ್ಟನು. ಈಕೆಗೆ ಸ್ವತಂತ್ರ ಪರಾಧೀನ ಮಾಡುವ ಹಕ್ಕೇ ಇಲ್ಲ.

ಸಾನಂದಪ್ಪನವರ ವೀರಣ್ಣನ ಮಗ ಚನ್ನವೀರಪ್ಪ.

ಮಿಸೆಸ್ ಅಡ್ಡಿ ಹಾರ್ಡಿಂಜ್   ಮಿಸೆಸ್ ಮೇರಿ ಮೇಯರ್   ಮಿಸೆಸ್ ಫ್ರಾನ್ಸೆಸ್ ಎಲ್ಸ್ನರ್.   38-21

ಮಿಸೆಸ್ ಅಡ್ಡಿ ಹಾರ್ಡಿಂಜ್, ೧೯೦ ಪೋರ್ಟರ್ ಬೀದಿ, ಸ್ಯಿರಾಕ್ಯೂಸ್, ನ್ಯೂಯಾರ್ಕ್, ಈಕೆ ಬರೆಯುವುದೇನೆಂದರೆ—

"ನಾನು ಕಳೆದ ಹನ್ನೆರಡು ವರುಷಗಳಿಂದಲೂ ಪೆರೂನಾವನ್ನು ಉಪಯೋಗಿಸುತ್ತಿದ್ದೇನೆ ಇದಕ್ಕೆ ಸಮಾನವಾದ ಔಷಧವು ಪ್ರಪಂಚದಲ್ಲೇ ಇಲ್ಲವೆಂದು ನಿಜವಾಗಿ ಹೇಳಬಲ್ಲೆನು

ನನಗೆ ಎಲ್ಲಾ ವಿಧವಾದ ಶೀತಗಳನ್ನೂ ಇತರ ಅನೇಕ ಕಾಯಿಲೆಗಳನ್ನೂ ಬಾರದಂತೆ ಈ ಔಷಧವು ಖಂಡಿತವಾಗಿ ತಡೆದಿರುತ್ತದೆ.

"ಖಂಡಿತವಾಗಿ ತಡೆಯುವ ಔಷಧ."

ನನ್ನ ಮನೆಯಲ್ಲಿ ಪೆರೂನಾ ಔಷಧದ ಸೀಸೆಯೊಂದು ಯಾವಾಗಲೂ ಇದ್ದೇ ಇರುವುದು ವರುಷಕ್ಕೆ ಎರಡು ಮೂರು ಸಲ ನನಗೆ ಗಂಟಲಲ್ಲಿ ಬಾಧೆಯುಂಟಾಗುತ್ತಲೇ ಇರುತ್ತದೆ

"ಪ್ರತಿಸಲ ನನಗೆ ಬಾಧೆ ಉಂಟಾದಾಗಲೂ ಎರಡು ಮೂರು ವೇಳೆ ವೈದ್ಯನನ್ನು ನಾನು ಕರೆಸಿಕೊಳ್ಳಬೇಕಾಗಿತ್ತು ನಾನು ಪೆರೂನಾವನ್ನು ಉಪಯೋಗಿಸತಕ್ಕವಳಾಗಿದ್ದಾಗ್ಯೂ ಈಗ್ಗೆ ಸುಮಾರು ಎರಡು ವರುಷಗಳತನಕ ನನ್ನ ಗಂಟಲು ಬಾಧೆಗೋಸ್ಕರ ಅದನ್ನು ತೆಗೆದುಕೊಳ್ಳಬೇಕೆಂಬ ಯೋಚನೆಯೇ ನನಗೆ ಉಂಟಾಗಿರಲಿಲ್ಲ.

"ಈ ಬಾಧೆಯನ್ನು ತಡೆಯುವುದಕ್ಕೆ ಪೆರೂನಾವನ್ನು ತೆಗೆದುಕೊಂಡೆನು. ಅಂದಿನಿಂದೀಚೆಗೆ ನನ್ನ ಗಂಟಲ ಎಲ್ಲಾ ವಿಧವಾದ ಬಾಧೆಯೂ ಕಟ್ಟಿಕೊಳ್ಳುವುದೂ ನಿವಾರಣೆಯಾಗಿದೆ ಎಂದು ಬಹಳ ಸಂತೋಷದಿಂದ ಹೇಳುತ್ತೇನೆ.

"ಆ ಗಂಟಲಬಾಧೆಯನ್ನು ಪ್ರತಿಸಲವೂ ಪೆರೂನಾ ಸೇವನೆಯಿಂದ ತಡೆಯಬಲ್ಲೆನು ನಿಜವಾಗಿ ನಾನು ಪೆರೂನಾ ಇಲ್ಲದೆ ಒಂದು ನಿಮಿಷವೂ ಇರಲಾರೆನು"

ಕ್ಷಯರೋಗವನ್ನು ನಿವಾರಣೆ ಮಾಡುವುದಕ್ಕೆ ಸಕಲ ಜನಾಂಗಗಳೂ ವಿಶೇಷವಾದ ಪ್ರಯತ್ನಗಳನ್ನು ಮಾಡುತ್ತಲಿದ್ದಾರೆ.

ಎಲ್ಲೆಲ್ಲೂ ಅನೇಕಾನೇಕ ಕ್ಷಯರೋಗಪೀಡಿತರನ್ನಿಟ್ಟು ಚಿಕಿತ್ಸೆಮಾಡುವುದಕ್ಕೆ ಸರ್ಕಾರಿ ಖರ್ಚಿನಿಂದ ವಿಸ್ತಾರವಾದ ಆಲಯಗಳನ್ನು ಸ್ಥಾಪನೆಮಾಡಿ ನಡೆಸುತ್ತಾರೆಂದು ಕೇಳುತ್ತೇವೆ

ವೈದ್ಯವೇ ಕಸಬಾಗಿ ಇಟ್ಟುಕೊಂಡಿರುವವರೆಲ್ಲಾ ಎಲ್ಲಾ ಸ್ಥಿತಿಗಳಲ್ಲೂ ಇರತಕ್ಕ ಕ್ಷಯರೋಗಪೀಡಿತರಿಗೆ ಚಿಕಿತ್ಸೆಮಾಡುವುದರಲ್ಲಿ ಬಿಸಿಲು, ನಿರ್ಮಲವಾದ ಹೊರಗಾಳಿ, ಬಯಲುಪ್ರದೇಶ, ಇವುಗಳ ಮೂಲಕ ಮಾಡತಕ್ಕ ಚಿಕಿತ್ಸೆಗಳೇ ಪರಮಾವಶ್ಯವಾದ ಪರಿಹಾರಗಳೆಂದು ಸರ್ವಸಮ್ಮತವಾಗಿ ಒಪ್ಪಿಕೊಂಡಿರುತ್ತಾರೆ

ಡಾಕ್ಟರ್ ಹಾರ್ಟ್‌ಮನ್‌ರವರು ಅನೇಕ ವರುಷಗಳಿಂದಲೂ ನಿರ್ಮಲವಾದ ಹೊರಗಾಳಿಯ ಚಿಕಿತ್ಸೆಯೇ ಕ್ಷಯರೋಗಕ್ಕೆ ಸರ್ವೋತ್ತಮವಾದ ಚಿಕಿತ್ಸೆಯೆಂದು ಹೇಳುತ್ತಿದ್ದಾರೆ. ಇದಲ್ಲದೆ ಈ ಬಿಳಿಯ ಪ್ಲೇಗೆಂಬ ರೋಗದ ನಾನಾ ತರದ ಕಠಿಣ ಬಾಧೆಗಳಿಗೆಲ್ಲಾ ಪೆರೂನಾ ಔಷಧವು ಬಹುಮಟ್ಟಿಗೆ ಪರಿಹಾರವನ್ನು ಕೊಡತಕ್ಕದ್ದೆಂದು ಒಪ್ಪಿಕೊಂಡಿದ್ದಾರೆ.

ಮಿಸೆಸ್ ಮೇರಿಮೇಯರ್, ಫ್ರಾನ್ಸಿಸ್ ಬೀದಿ, ಷಲ್‌ರೋಡ್ ಬಳಿ, ವಿರ್ಫೀಲ್ಡ್ ಅಸೋಸಿಯಾನಾ, ನ್ಯೂಯಾರ್ಕ್, ಈಕೆ ಬರೆಯುವುದು —

"ನಾನು ಅನೇಕ ವರುಷಗಳ ವರೆಗೂ ಶ್ವಾಸವಿಸ್ತೃತ ಉಪದ್ರದಲ್ಲಿ ಕಷ್ಟಪಡುತ್ತಿದ್ದೆನು."

"ಅನೇಕ ವೇಳೆ ಅದರ ಬಾಧೆಯಿಂದ ರಾತ್ರಿಯಲ್ಲಿ ಅರ್ಧಭಾಗ ನನಗೆ ನಿದ್ರೆಯೇ ತಪ್ಪಿಹೋಗುತಿತ್ತು

ಕ್ಷಯರೋಗವೆಂಬ ಹೆದರಿಕೆಯುಂಟಾಗಿತ್ತು.

ನನಗೆ ಕ್ಷಯರೋಗ ಪ್ರಾಪ್ತವಾಗಿದೆ ಎಂದು ಅನೇಕರು ಯೋಚಿಸಿದ್ದರು.

"ಎರಡು ವರುಷಗಳ ಕೆಳಗೆ ಒಬ್ಬ ಹೆಂಗಸು ಪೆರೂನಾವನ್ನು ಸೇವಿಸೆಂದು ಶಿಫಾರಸು ಮಾಡಿದಳು. ನಾನು ಪೆರೂನಾ ತೆಗೆದುಕೊಳ್ಳುವುದಕ್ಕೆ ಮರುಮಾಡಿದೆನು ಈಗ ನನ್ನ ಕೆಮ್ಮಲು ಉಪದ್ರವೆಲ್ಲಾ ಸಂಪೂರ್ಣವಾಗಿ ವಾಸಿಯಾಗಿರುತ್ತದೆ.

"ಪೆರೂನಾವು ನನ್ನ ಕಾಯಿಲೆಯನ್ನು ಪೂರಾ ವಾಸಿಮಾಡಿದೆ ಎಂದು ಸಂತೋಷಪಟ್ಟು ಹೇಳುತ್ತೇನೆ. ಆಗಾಗ್ಗೆ ನನಗೆ ಸ್ವಲ್ಪ ಆಲಸ್ಯವಾದಾಗಲೆಲ್ಲಾ ಪೆರೂನಾವನ್ನು ತೆಗೆದುಕೊಳ್ಳುತ್ತೇನೆ, ಮತ್ತು ಅದನ್ನು ನನ್ನ ಮಕ್ಕಳಿಗೂ ಕೂಡ ಕೊಡುತ್ತೇನೆ.

"ಶೀತ, ನೆಗಡಿ, ಕೆಮ್ಮುಗಳಿಗೆ ಪೆರೂನಾ ಸರ್ವೋತ್ತಮವಾದ ಔಷಧವು. ಅದರಿಂದ ನನಗೆ ಎಷ್ಟು ಸಹಾಯವಾಗಿದೆಯೋ ಅದನ್ನು ಅನೇಕ ಜನರಿಗೆ ವಿವರಿಸಿ ಹೇಳಿರುತ್ತೇನೆ"

ಪೆರೂನಾ ಎಂಬ ಔಷಧವು ಕೆಮ್ಮಲನ್ನು ಶಮನ ಮಾಡುವುದು; ಶ್ಲೇಷ್ಮವನ್ನು ಕಡಮೆ ಮಾಡುತ್ತದೆ, ರೋಗಿಗೆ ಬಲಕಾರಿಯಾಗಿದೆ, ಆಹಾರದಲ್ಲಿ ರುಚಿಯನ್ನು ಹೆಚ್ಚಿಸುವುದು, ಮತ್ತು ಅನೇಕ ಸಂದರ್ಭಗಳಲ್ಲಿ ಸುಖವಾದ ನಿದ್ರೆಯನ್ನು ಕೊಡುತ್ತದೆ.

ಆದರೆ ಪೆರೂನಾ ಔಷಧವು ಕ್ಷಯರೋಗವನ್ನು ಬಾರದಂತೆ ತಡೆಯುವುದರಲ್ಲಿ ಗುಣಕೊಡುವುದು ಕ್ಷಯರೋಗ ಬಂದ ಮೇಲೆ ಅದನ್ನು ನಿವಾರಣೆ ಮಾಡುವುದಕ್ಕೆ ಅಷ್ಟು ಬಲಕಾರಿಯಾದದ್ದಲ್ಲ

ಶೀತ, ನೆಗಡಿ, ಕೆಮ್ಮಲಿನಿಂದಲೇ ಪ್ರಾರಂಭವಾಗಿ ಅಲಕ್ಷ್ಯಮಾಡಿದರೆ ಅದೇ ಅಂತ್ಯದಲ್ಲಿ ಕ್ಷಯರೋಗವಾಗಿ ಪರಿಣಮಿಸುತ್ತದೆಂದು ಎಲ್ಲಾ ಕಡೆಗಳಲ್ಲೂ ತಿಳಿದುಬಂದಿರೋಣದರಿಂದ ಆ ಮೂರನ್ನೂ ನಿವಾರಣೆ ಮಾಡುವಂಥಾ ಔಷಧವೇ ಕ್ಷಯರೋಗ ಪರಿಹಾರದ ಔಷಧವೆಂದು ಪೂರ್ಣಭರವಸದಿಂದ ನಂಬಬೇಕಾಗಿದೆ

ಕ್ಷಯರೋಗದ ಪ್ರಾರಂಭದೆಸೆಯನ್ನೂ ಕಠಿಣತರವಾದ ಕೆಮ್ಮುಗಳನ್ನೂ ನಿಂತ ಶೀತ ನೆಗಡಿಗಳನ್ನೂ ಅನುಭವಿಸುತ್ತಿದ್ದ ಸಾವಿರಾರು ರೋಗಿಗಳು ಅವಕ್ಕೆಲ್ಲಾ ಪೆರೂನಾವೇ ಕ್ಷೇಮಕರವಾದ ಮತ್ತು ನಂಬಿಕೆಯಾದ ಪರಿಹಾರವೆಂದು ತಿಳಿಸಿರುತ್ತಾರೆ.

ಮಿಸೆಸ್ ಫ್ರಾನ್ಸಿಸ್ ಎಲ್ಸ್ನರ್ ೩೦ ನೆಲ್ಸನ್ ಬೀದಿ, ಕ್ಲಿಂಟನ್, ಮ್ಯಾಸ್, ಎಂಬಾಕೆಯು ಬರೆಯುವುದೇನೆಂದರೆ —

ಕಾಯಿಲೆಯನ್ನು ಅನುಭವಿಸುತ್ತಿದ್ದಾಗ ನನ್ನ ಸ್ಥಿತಿಯನ್ನೂ ಈಗ ನಾನಿರುವ ಸ್ಥಿತಿಯನ್ನೂ ನೀವು ನೋಡಿದ ಪಕ್ಷದಲ್ಲಿ ನಾನು ಸಂತೋಷದಿಂದ ಪೆರೂನಾವನ್ನು ಹೊಗಳುವಂಥಾ ಮಾತುಗಳೇನೂ ವಿಶೇಷವಾದದ್ದಲ್ಲವೆಂದು ಯಥಾರ್ಥವಾಗಿ ಒಪ್ಪಿಕೊಳ್ಳುತ್ತೀರಿ

"ಬಹಳ ಕಠಿಣವಾದ ಶೀತವು ನನಗೆ ಪ್ರಾಪ್ತವಾಗಿ ಅದರಿಂದ ನನ್ನ ಶ್ವಾಸಕೋಶವೂ ಶ್ವಾಸನಾಳಗಳೂ ಕಟ್ಟಿಕೊಂಡಿದ್ದವು

"ನೀವು ಬತ್ತಿ ಹೇಳಿದ ಪ್ರಕಾರವೇ ನಾನು ಮಾಡುತ್ತಾ ಬಂದೆನು ಆರು ಬಾಟ್ಲುಗಳಷ್ಟು ಪೆರೂನಾವನ್ನು ಸೇವಿಸಿದಮೇಲೆ ನಾನು ಯಥಾಪ್ರಕಾರ ಹಾಸಿಗೆಯಿಂದ ಏಳುವಂತಾದೆನು

"ಪೆರೂನಾವು ಒಂದು ಅದ್ಭುತವಾದ ಔಷಧವೆಂದು ನಾನು ಯೋಚಿಸಿಕೊಂಡಿರುತ್ತೇನೆ"

ಹೊಸದಾಗಿ ಪ್ರಾಪ್ತವಾದ ಕೆಮ್ಮನ್ನು ಅತಿ ಜಾಗ್ರತೆಯಾಗಿ ಪರಿಹರಿಸುವುದರಲ್ಲೂ ನಿಂತ ಶೀತ ನೆಗಡಿಗಳನ್ನು ನಿವಾರಣೆ ಮಾಡುವುದರಲ್ಲೂ ಪೆರೂನಾವು ಈ ದೇಶದ ಎಲ್ಲಾ ಕಡೆಗಳಲ್ಲೂ ಪ್ರಸಿದ್ಧಿ ಪಡೆದಿರುತ್ತದೆ. ಕ್ಷಯರೋಗಕ್ಕೆ ಪೆರೂನಾ ಔಷಧವು ಬಹು ಬಲವಾದ ಪರಿಹಾರವೆಂದು ಹೆಸರಾಗಿರುತ್ತದೆ

ಕ್ಷಯರೋಗ ನಿವಾರಣೆ.

ಮಿ॥ ವಿಲಿಯಂ ಸ್ಪೆಂಸರ್, ೩೦೨೬ ಸ್ಟೈಲ್ಸ್ ಬೀದಿ, ಪಶ್ಚಿಮ ಫಿಲಡೆಲ್ಫಿಯಾ, ಪಾ, ಎಂಬಾತನು ಬರೆಯುವುದನ್ನು ಓದಿನೋಡಿ.—

'ನನಗೆ ಬಂದಿದ್ದ ನೆಗಡಿ ಶೀತವನ್ನು ವಾಸಿಮಾಡಿಕೊಳ್ಳುವುದಕ್ಕೆ ಪೆರೂನಾ ಔಷಧವನ್ನು ಉಪಯೋಗಿಸುವುದಕ್ಕಿಂತ ಮೊದಲು ನನ್ನ ಯೋಚನೆಗೆ ತೋರಿದ ಔಷಧಿಗಳನ್ನೆಲ್ಲಾ ಸೇವನೆ ಮಾಡಿದ್ದೆನು

"ಬೆಳಿಗ್ಗೆ ಹಾಸಿಗೆಯಿಂದ ಏಳುವಾಗ ನನಗೆ ತುಂಬಾ ನಿತ್ರಾಣವಾಗುತ್ತಿತ್ತು. ನನ್ನ ಶ್ವಾಸಕೋಶಗಳು ಒಣಗಿ ಹುಣ್ಣಾಗಿದ್ದಂತೆ ನನಗೆ ತೋರಿಬರುತ್ತಿತ್ತು ಅನುಭವಪೂರ್ವಕವಾಗಿ ತಿಳಿಯದೆ ಇರತಕ್ಕವರು ನಾನು ಅನುಭವಿಸಿದ ಕಷ್ಟವನ್ನೆಲ್ಲಾ ತಿಳಿದುಕೊಳ್ಳಲಾರರು ಅವರ ಪರಿಹಾರಕ್ಕೆ ಯಾರ್ಯಾರು ಏನೇನು ಔಷಧ ಚಿಕಿತ್ಸೆಗಳನ್ನು ಹೇಳಿದರೋ ಅದನ್ನೆಲ್ಲಾ ಮಾಡಿಕೊಂಡೆನು. ಆದರೆ ಯಾವುದೂ ನನಗೆ ಸಂಪೂರ್ಣವಾದ ಗುಣಕೊಡದೆ ಹೋಯಿತು

"ಪೆರೂನಾ ಔಷಧವನ್ನು ತೆಗೆದುಕೊಳ್ಳಲು ಆರಂಭಿಸಿ ಒಂದು ಬಾಟ್ಲಿಯಷ್ಟು ತೀರುವುದರೊಳಗಾಗಿ ನನಗೆ ತುಂಬಾ ಗುಣವಾಯಿತು. ತರುವಾಯ ನನ್ನ ರೋಗವೆಲ್ಲಾ ನಿವಾರಣೆಯಾಗುವತನಕ ಅದನ್ನೇ ಸೇವಿಸಿದೆನು ಪೆರೂನಾವಿನ ಗುಣವನ್ನು ಇಷ್ಟಿಷ್ಟೆಂದು ಹೊಗಳಿ ಹೇಳಲಾರೆನು. ಅದರ ಯೋಗ್ಯತೆಯನ್ನು ಪ್ರತಿ ಒಬ್ಬರೂ ತಿಳಿದುಕೊಳ್ಳಲೆಂದು ಅಪೇಕ್ಷಿಸುತ್ತೇನೆ"

ನೆಗಡಿ ಶೈತ್ಯ ಕೆಮ್ಮುಗಳನ್ನು ಅನುಭವಿಸುವವರು ಒಂದು ಬಾಟ್ಲಿ ಪೆರೂನಾ ಔಷಧವನ್ನು ತರಿಸಿಕೊಂಡು, ಉಪಯೋಗಮಾಡಿ ಅದರ ಯೋಗ್ಯತೆಯನ್ನು ತಿಳಿದುಕೊಳ್ಳಬೇಕಾಗಿದೆ.

ಈ ಔಷಧ ಸಿಕ್ಕುವ ಸ್ಥಳಗಳು:—

(೧) ಕಿಂಟ್‌ಕಾಕ್ ಅಂಡ್ ಸನ್ಸ್, ಬೆಂಗಳೂರು.

(೨) ಇಂಗ್ಲಿಷ್ ಡ್ರಗ್ ಕಂಪನಿ, ೩೯೮ ಮಿಂಟ್ ಬೀದಿ, ಮದರಾಸ್.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

9—8—1907 ರಿಂದ 16—8—1907 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ [illegible]
ಬೆಂಗಳೂರು ಪಟ್ಟಣ	20	12	0	[illegible]
ಮೈಸೂರು ,,	31	16	0	[illegible]
ಬೆಂಗಳೂರು ಡಿಸ್ಟ್ರಿಕ್ಟು	142	92	0	[illegible]
ಮೈಸೂರು ,,	120	86	0	[illegible]
ಕೋಲಾರ್ ,,	9	8	15	1[illegible]
ಕೋಲಾರ್ ಚಿನ್ನದ ಗಣಿಗಳು	17	15	0	[illegible]
ತುಮಕೂರು ಡಿಸ್ಟ್ರಿಕ್ಟು	0	0	6	[illegible]
ಹಾಸನ	5	3	0	[illegible]
ಚಿತ್ರದುರ್ಗ ,,	0	0	0	[illegible]
ಕಡೂರ್ ,	91	8	0	[illegible]
ಶಿವಮೊಗ್ಗ	58	42	0	[illegible]
ಜುಮ್ಲಾ	423	291	21	11

ಶಾಲಿವಾಹನ ಶಕ ವರುಷಂಗಳು ೧೮೨೯ ನೇ ಪ್ಲವಂಗನಾಮ ಸಂವತ್ಸರದ ಶ್ರಾವಣ ಬಹುಳ ಷಷ್ಠಿ ಗುರುವಾರದಿಂದ ಶ್ರಾವಣ ಬಹುಳ ದ್ವಾದಶೀ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ.

೧೯೦೭ ನೇ ಇಸವಿ ಆಗಸ್ಟ್, ಮತ್ತು ಸೆಪ್ಟಂಬರ್.

ತಾ	ವಾರ		ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	[illegible]
29	ಗುರು	†	ಷಷ್ಠಿ	13-42	ಭ	27-16	13
30	ಶುಕ್ರ	‡	ಸಪ್ತಮಿ	15-15	ಕೃ	30-26	14
31	ಶನಿವಾ	,,	ಅಷ್ಟಮಿ	18-4	ರೋ	34-56	15
1	ರವಿವಾ	.	ನವಮಿ	21-58	ಮೃ	40 44	16
2	ಚಂದ್ರ		ದಶಮಿ	26 30	ಆ	46 54	17
3	ಕುಜ	,,	ಏಕಾದ	30-50	ಪು	53-20	18
4	ಬುಧ		ದ್ವಾದಶಿ	36 36	ಪು	59-36	19

† ಮಹಾಷಷ್ಠಿ, ಹರ್ಷಯೋಗ, ಪ್ರಸನ್ನ ಕೃಷ್ಣಸ್ವಾಮಿ [illegible] ಮಹಾಷ್ಟಮಿ, ಸ್ಮಾರ್ತ ಸಂಪ್ರದಾಯಕ್ಕೆ ಶ್ರೀ ಕೃಷ್ಣಜಯಂತಿ ನವಮಿತಿಥಿ, ಕೋಳಿಪ್ಪರ್ ಸಂಪ್ರದಾಯಕ್ಕೆ ಶ್ರೀ ಕೃಷ್ಣಜಯಂತಿ ಶ್ರಾವಣಶನಿವಾರ ಶೂನ್ಯತಿಥಿ, ಶಿಕ್ಯೋತ್ಸವ ,, ಮಂಗಳ ಗೌರೀ ವ್ರತ, ಸರ್ವತ್ರ ಏಕಾದಶಿ

ಪೇಟೇ ಧಾರಣೆ

ದಿನಸಿ		ಮೈಸೂರು	ಬೆಂಗಳೂರು
ಕಮ್ಮೀ ಅಕ್ಕಿ ಪಲ್ಲಾ ೧ಕ್ಕೆ	ರೂ	೧೩-೪-೦	೧೪-೦
ಕಂಬಸಾತಿ ಅಕ್ಕಿ ಅವಲ್		೧೩-೮-೦	೧೩-೦
,, ದುಯಂ		೧೨-೮-೦	೧೨-೧
ಜಾವಾಳ ಅಕ್ಕಿ		೧೨-೮-೦	೧೩-೦
ಸಣ್ಣಕ್ಕಿ ಅವಲ್		೧೫-೮-೦	೧೪-೮
,, ದುಯಂ		೧೪-೬-೦	೧೪-೦
ತೊಗರೀ ಬೇಳೆ ಪಲ್ಲಾ ೧ಕ್ಕೆ		೧೪-೦-೦	೧೪-೦
,, ದುಯಂ		೧೩-೦-೦	೧೩-೦
ಹೈರಾಗಿ ಪಲ್ಲಾ ೧ಕ್ಕೆ		೫-೧೨-೦	೬-೦
ಕಾರಾಗಿ		೫-೮-೦	೫ ೧೨
ಜೋಳ		೬-೦-೦	೮-೦
ಹಲಸಂದೆ ಪಲ್ಲಾ ೧ಕ್ಕೆ		೧೦-೦-೦	೧೧-೦
ಬಿಳೀ ಅವರೆ		೮ ೧೪-೦	೮-೦
ಹೆಸರು		೧೧-೧೨-೦	೧೧ [illegible]
ಉದ್ದು		೧೦-೮-೦	೧೧-೮
ಕಡಲೆ		೧೨-೧೨-೦	೧೧-೪
ಎಳ್ಳು ಸೆ ೧೨೩ ಕ್ಕೆ		೧೮-೦-೦	೨೦-೦
ಹುರುಳಿ		೫-೧೨-೦	೬-೦
ಹರಳು ೧೨೩ ಸೇರಿಗೆ		೧೪-೦-೦	೧೨-೪
ಸೀಗೇಕಾಯಿ ಮಣ ೧ಕ್ಕೆ		೨-೦-೦	೨-೦
ಮೆಣಸಿನಕಾಯಿ		೨-೧೨-೦	೨-೧೦
ದುಯಂ		೨-೪-೦	೨-೮
ಬೆಲ್ಲ ದೊಡ್ಡ ಅಚ್ಚು		೪-೮-೦	ಮ ೨-೪
ಒಳ್ಳೆಣ್ಣೆ ಮಣ ೧ಕ್ಕೆ		೫-೧೦-೦	೫-೪
ಹರಳೆಣ್ಣೆ ,,		೫-೧೨-೦	೫-೦
ಕೊತ್ತುಂಬರಿ ಪಲ್ಲಾ ೧ಕ್ಕೆ		೫-೧೨-೦	೬-೮
ಉಪ್ಪು ,,		೫-೪-೦	೫-೧೨
ಹುಣಿಸೇ ಹಣ್ಣು		೧-೬-೦	೧-[illegible]
,, ಹಳೇದು		೦-೧೪-೦	೦-[illegible]
ತುಪ್ಪ ಮಣ ೧ಕ್ಕೆ		೧೫-೦-೦	೧೩-೮
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ		೪-೧೫-೦	೪
ತೆಂಗಿನಕಾಯಿ ೧೦೦ ಕ್ಕೆ		೬-೮-೦	೬
ಅಳಲೇಕಾಯಿ ಮಣ ೧ಕ್ಕೆ		೧ ೦-೦	೧-[illegible]
ಅಂಟ್ವಾಳದ ಕಾಯಿ ಮಣ ೧ಕ್ಕೆ		೦-೧೨-೦	೦-೧-[illegible]
ಚಿನ್ನ (ಪೌ೯) ಕೆಂಪು		೧೫-೬-೦	೧೫-[illegible]
,, ,, ಬಿಳುಪು		೧೫-೧೦-೦	೧೫-೦[illegible]
,, ,, ಗಟ್ಟಿ ತೊಲ ೧ಕ್ಕೆ		೨೩-೧೨-೦	೨೪-[illegible]
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ		೮೫-೦-೦	೮೬-[illegible]

Printed and Published by the Rev E. THOMPSON, M A, Proprietor and Manager, Wesleyan Mission Press, Mysore. 29/8/1907.

REGISTERED
M. 20

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೧ ಮೈಸೂರು—ಸರ್ ೧೯೦೭ ನೇ ಇಸವಿ ಸೆಪ್ಟೆಂಬರ್ ತಾರೀಖು ೫ ನೇ ಗುರುವಾರ. ಸಂಚಿಕೆ ೧೪

WILLIAM & CO., BOMBAY.

ವಿಲಿಯಂ ಮತ್ತು ಕಂಪನಿ, ಫೋರ್ಟು, ಮುಂಬಯಿ.

ಗಜಕರ್ಣದ ಮುಲಾಮು.

27-28

ಇದನ್ನು ತಾಗಿಸುವದರಿಂದ ಎಲ್ಲಾ ತರದ ಕಜ್ಜಿಯೂ ನಾಶವಾಗುತ್ತದೆ. ಮೂರು ಸಾರಿ ತಾಗಿಸುವದರೊಳಗೆ ಗಜಕರ್ಣವು ಹೋಗುವದು. ಇದನ್ನು ಹಚ್ಚಿದಲ್ಲಿ ಉರಿಯು ಬರುವದಿಲ್ಲ. ಮತ್ತು ಚರ್ಮ ಕಪ್ಪಾಗುವದಿಲ್ಲ. ಒಂದು ಸಾರಿ ಪರೀಕ್ಷಿಸಿ ನೋಡಿರಿ. ಗುಣ ಕಂಡುಬರುವದಿಲ್ಲವಾದರೆ ಹಣ ಹಿಂತಿರುಗಿ ಕೊಡಲ್ಪಡುವದು. ಡಬ್ಬಿ ೧ಕ್ಕೆ ಕಿಮ್ಮತ್ತು ೦-೩-೦ ವಿ. ಪಿ. ೦-೧೦-೦ ತರಿಸಿಕೊಳ್ಳಿರಿ! ತ್ವರೆಮಾಡಿರಿ!

ವಿದ್ಯಾಗುಟಿಕ ೧-೮-೦. ಸುಂದರೀ ತೈಲ ೦-೮-೦ ದಂತಮಂಜನ ೦-೨-೦ ಕಫಹಾರಿ ೧-೪-೦ ಕೇಶವರ್ಧಿನೀ ತೈಲ ೧-೦-೦. ಜೀರ್ಣರಸಾಯನ ೧-೦-೦ ಬಿಚ್ಚು ಮುಲಾಮು ೦-೩-೦ ಈ ಕಂಪನಿಯ ಎಲ್ಲಾ ಔಷಧಗಳನ್ನು ಸ್ವತಹಾ ತಯಾರಿಸುವದರಿಂದ ಕ್ಯಾಟಲಾಗು ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು

ಅಮೃತಾಂಜನ

ಬಾಟ್ಲಿ ಒಂದಕ್ಕೆ ಕಿಮ್ಮತ್ತು ೮ ಆಣೆ. ವಿ. ಪಿ. ೧೨ ಆಣೆ.

ಅಮೃತಾಂಜನ—ಸುಖಾಂಜನ.
ಅಮೃತಾಂಜನ—ದಿವ್ಯಾಂಜನ.
ಅಮೃತಾಂಜನ—ಸಂಜೀವನ.
ಅಮೃತಾಂಜನ—ಪರಮಾಂಜನ.

ವಾತ, ಎದೆನೋವು, ಗಂಟ್ಲುನೋವು, ಸಂಧಿವಾತ ತಲೆನೋವು, ಸೂಲವ್ಯಾಧಿ, ಈ ಎಲ್ಲಾ ತರದ ರೋಗಕ್ಕೆ ಈ ಅಮೃತಾಂಜನವು ದಿವ್ಯ ಔಷಧವಾಗಿರುತ್ತದೆ.

ಅಮೃತಾಂಜನ ಬಾಟ್ಲಿ ೧೭ ವರ್ಷ

ಅಮೃತಾಂಜನ—ಶೀತಭಂಜನಿ.
ಅಮೃತಾಂಜನ—ತಕ್ಷಣಾಪಹಾರಿಣಿ.
ಅಮೃತಾಂಜನ—ಅಪೂರ್ವದರ್ಶನಿ.
ಅಮೃತಾಂಜನ—ಭಂಜನವಿಮರ್ಧಿನಿ.

ಇದರಿಂದ ಗುಣ ಕಂಡುಬರುವದಿಲ್ಲವಾದರೆ ಹಣ ಹಿಂತಿರಿಗಿ ಕೊಡಲ್ಪಡುವದು. ಜಕಂ ಮತ್ತು ಘಾಯ, ಅರ್ಧಾಂಗವಾಯು, ಈ ರೋಗಕ್ಕೆ ಇದು ಸಂಜೀವನವಾಗಿರುತ್ತದೆ. ತರಿಸಿಕೊಳ್ಳಿರಿ! ಪರೀಕ್ಷಿಸಿರಿ!!

ವಿಲಿಯಂ ಮತ್ತು ಕಂಪನಿ, ೧೬ ಓಕ್ ಲೇನ್, ಫೋರ್ಟು, ಮುಂಬಯಿ.
ಟೆಲಿಗ್ರಾಪು ಅಡ್ರೆಸು; "ಅಮೃತಾಂಜನ," ಮುಂಬಯಿ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

26-29

೧ ಶೋಕಾಮಯಹರ ಕಸ್ತೂರೀ ಮಾತ್ರೆ.—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ.

ಚಳಿಜ್ವರ, ಜ್ವರ, ಹೊಟ್ಟೆಶೂಲೆ, ಸಂದುಗಳ ನೋವು, ಮೈ ಕೈಕಾಲು ಕೊಡತ (ಭಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿಮಾಂದ್ಯ, ಹಲ್ಲು ನೋವು, ಕೆಮ್ಮಲು, ನೆಗಡಿ, ಬಿಕ್ಕಳಿಕೆ, ಅರೋಚಕ, ಇನ್ನೂ ಅನೇಕರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ.

ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತೆ. ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಖಾಯಿಲೆಗೂ ದಾರಿಕೊಡದೆ, ನೀರು ಹವಾಗಳ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ.

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.

ಅನುಪಾನಪತ್ರ ಔಷಧದ ಸಂಗಡಲೇ ಇರುತ್ತದೆ

೨೦ ಮಾತ್ರೆಯುಳ್ಳ ಕಾಪ್ಪಿಗೆ ೪ ಆಣೆ; ೫ ಕಾಪ್ಪಿಗೆ ೧ ಕಾಪ್ಪಿ ಬಿಟ್ಟು. ೧ ರಿಂದ ೧೦ ಕಾಪ್ಪಿ ವರೆಗೆ ಪೋಸ್ಟೇಜು ೪ ಆಣೆ.

ವಿಳಾಸ.—ಪಾಳ್ಯದ ವೆಂಕಟಾಚಲ ಪಂಡಿತ,
ಎಸ್. ಎಸ್. ಆರ್. ವೈದ್ಯಶಾಲಾ,
ಲಕ್ಷ್ಮೀವಿಲಾಸ ರೋಡ್, ಮೈಸೂರು

ಉಪಾಧ್ಯಾಯರೆಲ್ಲರೂ

ಓದತಕ್ಕ ನೋಟೀಸ್.

29-5

ಮೈಸೂರು ಸರ್ಕಾರದ ವಿದ್ಯಾಭ್ಯಾಸದ ಇಲಾಖೆ ಇನ್‌ಸ್ಪೆಕ್ಟರ್ ಜನರಲ್‌ರವರು ಕೆಳಗೆ ಕಂಡ ಪುಸ್ತಕಗಳನ್ನು ಸರ್ಕಾರದ ಸ್ಕೂಲುಗಳಲಿಯೂ, ಗ್ರಾಂಟ್ ಪಡೆಯತಕ್ಕ ಪಾಠಶಾಲೆಗಳಲ್ಲಿಯೂ ಮತ್ತು ಆಂಗ್ಲೋ ವರ್ನಾಕ್ಯುಲರ್ ಸ್ಕೂಲ್‌ಗಳಲಿಯೂ ಮತೊಂದು ಹುಕುಂ ಕೊಡುವತನಕ ಉಪಯೋಗಿಸಬೇಕೆಂದು ಕಳೆದ ಜೂಲೈ ೨೫ ನೆ ತಾರೀಖಿನ ಮೈಸೂರು ಗೆಜೆಟ್ಟಿನಲ್ಲಿ ಪ್ರಾಯಿಷ್ ಮಾಡಿರುತ್ತಾರೆ.

ಭೂಗೋಳ ಶಾಸ್ತ್ರದ ಮೊದಲನೆಯ ಪುಸ್ತಕ (೧ನೆಯ ೨ನೆಯ ಭಾಗ, ಒಂದೇ ಪುಸ್ತಕ. ಈ ಪುಸ್ತಕದಲ್ಲಿ ನಾಲ್ಕು ಬಣ್ಣದ ನಕ್ಷೆಗಳೂ ಮಕ್ಕಳಿಗೆ ಭೂಗೋಳಶಾಸ್ತ್ರವನ್ನು ವಿಶದವಾಗಿ ಹೇಳಿಕೊಡುವುದಕ್ಕೆ ಸಾಹಿತ್ಯವಾಗಿರುವ ಬೇರೆ ಹನ್ನೆರಡು ಚಿತ್ರಗಳೂ ಇರುತ್ತವೆ). ಎರಡನೇ ಕ್ಲಾಸಿಗೆ ಕ್ರಯ ೪ ಆಣೆ.

ಭೂಗೋಳ ಸಂಗ್ರಹ (ಮ॥ ಟಿ. ಎಂ. ರಾಮಸ್ವಾಮಯ್ಯನವರು ಬರೆದುದು. ಈ ಪುಸ್ತಕವು ಪ್ರಚುರವಾದಂದಿನಿಂದ ಅನೇಕ ಸಹಸ್ರ ಪ್ರತಿಗಳು ಮಾರಾಟವಾಗಿವೆಯೆಂದು ವಾಚಕ ಮಹಾಶಯರು ತಿಳಿದಿರಬಹುದು.) ಮೂರನೇ ಕ್ಲಾಸಿಗೆ ಕ್ರಯ ೪ ಆಣೆ.

ಮೇಲ್ಕಂಡ ಪುಸ್ತಕಗಳನ್ನು ಉಪಾಧ್ಯಾಯರೆಲ್ಲರೂ ತಡಮಾಡದೆ ಜಾಗ್ರತೆಯಲ್ಲಿ ತರಿಸಿಕೊಳ್ಳತಕ್ಕದ್ದು.

ವಿಳಾಸ:—ಮ್ಯಾನೇಜರ್,
ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

ನಿಮಗೆ ನೋವು ಇದೆಯೋ?

58-15

ಹಾಗಾದರೆ "ಸ್ಲೋನ್ಸ್ ಲಿನಿಮೆಂಟ್" ಯಾಕೆ ಉಪಯೋಗಿಸಬಾರದು? ಆಶ್ಚರ್ಯಕರವಾದ ಬಾಧಾಪಹಾರಿಣಿಯು! ಈಗಿನ ಕಾಲದಲ್ಲಿ ಕಂಡು ಹಿಡಿದ ದೊಡ್ಡ ನೂತನವು!

ಈ ಔಷಧವನ್ನು ಮೊಟ್ಟಮೊದಲು ಉಪಯೋಗಿಸುತ್ತಿರುವ ಕೆಲವು ನಿಮಿಷಗಳೊಳಗಾಗಿ ನರ ಮತ್ತು ಮಾಂಸ ಸಂಬಂಧವಾದ ನೋವು, ಕೀಲುಗಳ ಬಾಧೆ, ಕಿಬ್ಬೊಟ್ಟೆ ನೋವು, ಬೆನ್ನು ಹಿಡಿಯುವದು, ತಲೆನೋವು, ಕೆಮ್ಮು, ಕೀಲುಗಳು ಕತ್ತರಿಸುವದು, ಗಂಟಲು ಊತ, ಕೈಕಾಲು ಬಿಗಿತ ಇವುಗಳನ್ನೆಲ್ಲಾ ಆಶ್ಚರ್ಯಕರವಾಗಿ ಗುಣಪಡಿಸುವದು. ಈ ಔಷಧವು ಆಶ್ಚರ್ಯಕರವಾಗಿ ಗುಣಪಡಿಸುವದರಿಂದ ಎಲ್ಲರಲ್ಲಿಯೂ ಪ್ರಸಿದ್ಧವಾಗಿ ಬರುವದು. ಇತರ ಔಷಧಗಳು ಗುಣಪಡಿಸದೆ ಹೋದಾಗ ಡಾಕ್ಟರ್ ಫೀಜನ್ನು ಕಡಿಮೆಮಾಡಿ ಇದು ನಿಸ್ಸಂದೇಹವಾಗಿಯೂ ಗುಣಪಡಿಸುವದು.

ಕ್ರಯ:—೧ ಬಾಟ್ಲಿಗೆ ೧೦ ಆಣೆ, ಪೋಸ್ಟೇಜ್ ೪ ಆಣೆ. ೩ ಬಾಟ್ಲಿಗೆ ಅಂಚೆವೆಚ್ಚ ಸೇರಿ ರೂ. ೨—೪ ಆಣೆ. ಎಲ್ಲಾ ಕೆಮಿಸ್ಟು ಷಾಪುಗಳಲ್ಲಿ ದೊರೆಯುವದು.

ನಮ್ಮ ವಿಳಾಸ:—ಎಫ್. ಡಬ್ಲಿಯು. ಆರ್ಲ,
ಸಿಮೆಟ್ರಿ ರೋಡ್, ವೇಪೇರಿ, ಮದರಾಸ್.

ಜ್ವರಹರಿ.

74-6



ಇದು ಸಾಧಾರಣ ಜ್ವರ, ಚಳಿಜ್ವರ, ಮರೆಜ್ವರ, ಪಿತ್ಥಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಪಾಲಾವರ್ ಇಲಾಖಾ ಸಬ್ ಡಿವಿಜನ್ ಅಫೀಸರ್ ಎಸ್. ಟಿ. ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಔನ್ಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು. ಇನ್ನೂ ದಿನಗಳು ಕಾಹಿಲೇ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨೦ ಔನ್ಸಿನ ಸೀಸೆಯನ್ನು ವಿ. ಪಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ:—ಸೀಸೆ ೧ ಕ್ಕೆ ೮ ಆಣೆ, ೧ ರೂ.; ೧—೮ ರೂ., ರೂ. ೨—೧೨ ಆ.; ೧೧ ರೂ., ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು

ಓಮಂಕರ್ಪೂರ.

Omum Carpoor

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಗೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗುಣಧರಿಯವರು—ಹೆವಿಯ ಓಮಂ ಕರ್ಪೂರವನ್ನು ನಾನೂ ನನ್ನ ತಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂತ ಬರೆದಾರೆ.

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರ್ರಲ್ಲಿ ವಿಶೇಷ:—

ಹೆವಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,
ಸೆಕೆಂಡ್ ಬೀಚ್ ಲೈನ್, ಮದರಾಸ್.

ವ್ಯವಹಾರ ನಿರ್ಣಯ

ವೆಂಬ ಕನ್ನಡ **ಲಾ** ಪುಸ್ತಕವು.

53-16

ಲಾ ತಿಳಿದವರಿಂದಲೂ, ತಿಳಿಯದವರಿಂದಲೂ ಇದುವರೆಗೆ ಬರೆಯಲ್ಪಟ್ಟಿರುವ ಈ ತೆರದ ಪುಸ್ತಕಗಳನ್ನೆಲ್ಲ ನೋಡಿ ಅವೆಲ್ಲಕ್ಕಿಂತಲೂ ಹೆಚ್ಚು ಪ್ರಯೋಗವನ್ನು ಇದೊಂದು ಪುಸ್ತಕದಿಂದುಂಟುಮಾಡಬೇಕೆಂತ ಈ ದೊಡ್ಡ ಗ್ರಂಥವು ಹೊಸದಾಗಿ ಬರೆಯಲ್ಪಟ್ಟಿದೆ. ಇದರಲ್ಲಿ ೧೪ ಆಕ್ಟುಗಳು, ೪ ಕೋಡುಗಳು, ಹಿಂದೂ, ಮಹಮದೀಯ ಲಾಗಳು, ಚೀಫ್ ಕೋರ್ಟು ಹೈ ಕೋರ್ಟುಗಳ ತೀರ್ಪುಗಳು, ಗೌ। ಸರ್ಕ್ಯುಲರ್‌ಗಳು ಪ್ರೊಸೀಡಿಂಗ್ಸ್‌ಗಳು, ಸಕಲ ವಿಧ ವ್ಯವಹಾರಗಳು, (ಕ್ರ)ಯ ಆಧಾರ ದಾನ ವಿಲ್ಲು ಮೊದಲಾದ) ೬೯ ತೆರದ ದಸ್ತಾವೇಜುಗಳ ಸ ಮೂನೆಗಳು, ಈ ಸಂಬಂಧದ ಲಾ ವಿಧಿಗಳು, ಸಿವಿಲ್ ಕ್ರಿಮಿನಲ್, ಪೊಲೀಸ್, ರೆವಿನ್ಯು ಸಂಬಂಧದ ವ್ಯಾಜ್ಯಗಳು, ೫೯ ತೆರದ ಅರ್ಜಿಗಳು, ಈ ಸಂಬಂಧದ ಲಾ ವಿಧಿಗಳು, ಇವೆಲ್ಲವೂ ಅಡಕವಾಗಿವೆ.

ಪುಸ್ತಕ ದೊಡ್ಡದು ಪುಟಗಳು ಒಟ್ಟು ೬೩೪	ಬೆಲೆ ಕಡಮೆ. ಅಂಚೆ ಹಾಸಲು ಸೇರಿ ರೂ. ೧—೮—೦

ಗ್ರಂಥಕರ್ತರು	ಎಂ. ವೆಂಕಟಾಚಾರ್ಯರು, ೧ನೆ ಗ್ರೇಡ್ ಪ್ಲೀಡರ್, ಶ್ರೀರಾಮಪೇಟೆ, ಮೈಸೂರು.	ಇದೇ ವಿಳಾಸ.

ಮಕ್ಕಳ ಆರೋಗ್ಯವನ್ನು

ಯಾವಾಗಲೂ ಕಾಪಾಡುವದು ಹೆತ್ತವರ ಮೇಲೆ ಬಿದ್ದ ಭಾರವಾಗಿದೆ

ಸಣ್ಣ ಮಕ್ಕಳು ಹೇಳಿದಂತೆ ಕೇಳದೆ ಸಿಟ್ಟಿಗೆ ಒಳಪಡುವಂಥವರಾಗಿದ್ದು ಆಹಾರರುಚಿ ಕಡಿಮೆಯುಳ್ಳವರಾಗಿದ್ದಾರೆಂದು ಕಂಡ ಕೂಡಲೇ

SCOTT'S EMULSION. 31-25

(ಸ್ಕಾಟ್ಸ್ ಇಮಲ್ಶನ್)

ಎಂಬೀ ಸೋನಾ ಔಷಧವನ್ನು ಕೊಡಬೇಕು.

ನಾಲಿನಲ್ಲಿ ಕೆಲವು ತೊಟ್ಟು ಬೆರಸಿ ಕೊಟ್ಟ ಕೂಡಲೇ ದೊಡ್ಡ ವ್ಯತ್ಯಾಸ ತೋರುವದು.

ಅದು ಸಂತೋಷವೂ ಆನಂದವೂ ಪಡುವದಾಗಿ ಆಹಾರದ ರುಚಿ ಹೊಂದಿ ಸುಖ ಚನ್ನ ತೋರಿಸುವದು.

ಕೈಯಿಂದ ಮುಟ್ಟಿ ತಯಾರಿಸಿದ್ದಲ್ಲ

ಎಲ್ಲಾ ಔಷಧಮಾರಾಟಗಾರರಲ್ಲೂ ಸಿಕ್ಕುತ್ತದೆ.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,
ಔಷಧಗಳ ಕಾರ್ಖಾನೆ,
ಲಂಡನ್, ಇಂಗ್ಲೆಂಡ್

ಈ ಮೀನು ಸಮೇತ ಇರುವ ಔಷಧವನ್ನೇ ಕೊಂಡುಕೊಳ್ಳಿ.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

75 6

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೀಳಾಪದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು. (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಸೀದಾ ಬರೆದು ತರಿಸಿಕೊಳ್ಳಿ. ಅಗ್ಗವಾದ ಮತ್ತು ಚನ್ನಾಗಿಲ್ಲದದ್ದು ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ.

ಸಾದ, ಕೆಂಪು, ಕಪ್ಪು, ಜರಿಕೆ, ಕಾಫಿ ಟೋಪಿಗಳು ೧ ರೂ. ೮ ಆ.; ೧ ರೂ. ೩ ಆ, ೧ ರೂ. ೪ ಆ

ರೇಷ್ಮೆ ಚುಕ್ಕೆಯುಳ್ಳ ಟೋಪಿಗಳು ೧ ರೂ. ೮ ಆ; ೨ ರೂ.

ದಾರದ ಟೋಪಿಗಳು ೧ ರೂ. ೧೨ ಆ, ೧ ರೂ. ೮ ಆ., ೧ ರೂ. ೩ ಆ.

ಉಣ್ಣೆಯ ಟೋಪಿಗಳು ೧ ರೂ ೮ ಆ, ೧ ರೂ. ೩ ಆ.

ಕೂಸುಗಳ ಟೋಪಿ. ಪೂರ್ತಿ ಮೋಜೋಡು, ಅರ್ಧ ಮೋಜೋಡು. ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ.

CHAMBERLAIN'S PAIN BALM

ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವು

1-10

ಬೆನ್ನು ಬಿನಲ್ಲಿನ ನೋವು, ಪಕ್ಕಗಳಲ್ಲಿ ಆಗುವ ನೋವು, ಖಂಡಗಳಲ್ಲಿ ಹುಟ್ಟುವ ನೋವು, ತಲೆನೋವು, ಬಜ್ಜಿದ ಕಡೆಗಳ ನೋವು, ವಾಯುನೋವು—ಇವುಗಳನ್ನೆಲ್ಲಾ ಸಂಪೂರ್ಣವಾಗಿ ವಾಸಿಮಾಡುವಂಥಾ ಔಷಧ

ವಾಯುನೋವೆಂದರೇನು?

ಕೀಲುಗಳಲ್ಲೂ ಮಾಂಸಖಂಡಗಳಲ್ಲೂ ಗಾಯವಾಗುವುದು, ಊದಿಕೊಳ್ಳುವುದು, ಕಠಿಣವಾಗಿ ಸೆಳೆಯುವ ಬಾಧೆ, ಖಂಡಗಳಲ್ಲಿ ಇರಿಯುವುದು, ವಿಶ್ರಾಂತಿಕೊಡದೆ ಇರುವುದು, ನಿದ್ದೆ ಹತ್ತದೆ ಇರುವುದು—ಇದೇ ಇದೆಲ್ಲಾ ನಿಮಗೆ ಯಾವಾಗ ಉಂಟಾಗುವುದೋ ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು

ಆಗ ಚೇಂಬರ್ಲೇನ್‌ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹ ಕಾವು ಮೈಯೊಳ್ಳೆ ವ್ಯಾಪಿಸುತ್ತದೆ ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ, ಮನಸ್ಸಿಗೆ ಉಲ್ಲಾಸವಾಗುತ್ತೆ. ಅದನ್ನೇ ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯುವಿನ ಹುಟ್ಟನ್ನೇ ಕಿತ್ತುಹಾಕಿಬಿಡುವುದು

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಮುಟ್ಟಿದ್ದೇನೂ ಅಲ್ಲ

ಇದು ಎಲ್ಲೆಲ್ಲೂ ಬಿಕರಿಯಾಗುವುದು. ಸಣ್ಣ ಸೀಸೆಗೆ ೧ ರೂಪಾಯಿ ದೊಡ್ಡ ಸೀಸೆಗೆ ೨ ರೂಪಾಯಿ

ಕನ್ನಡ ಲೋಯರ್ ಸೆಕಂಡರಿ ಮೊದಲಾದ ಪರೀಕ್ಷೆಗಳಿಗೆ ಹೋಗ ತಕ್ಕ ವಿದ್ಯಾರ್ಥಿಗಳಿಗೆ ಇದು ಬಹಳ ಒಳ್ಳೇ ಸಹಾಯ. ಸಿದ್ಧವಾಗಿದೆ. ಕ್ರಯ ಸುಲಭ. ಎಂಟೇ ಆಣೆ.

ಉಪನ್ಯಾಸ ಮಂಜರಿ.

63 4

ಈ ಪುಸ್ತಕವು ಅನೇಕ ಉಪಯುಕ್ತವಾದ ಉಪನ್ಯಾಸಗಳನ್ನು ಅಡಗಿಸಿಕೊಂಡಿರುವುದು. ಇದನ್ನು ಓದುವುದರಿಂದ ವಿದ್ಯಾರ್ಥಿಗಳು ಉಪನ್ಯಾಸ ಬರೆಯುವುದರಲ್ಲಿ ಸಮರ್ಥರಾಗುವರೆನ್ನುವದಕ್ಕೆ ಸಂಶಯವಿಲ್ಲ. ಲೋವರ್ ಸೆಕಂಡರಿ ಮೊದಲಾದ ಪರೀಕ್ಷೆಗಳಿಗೆ ಹೋಗತಕ್ಕ ವಿದ್ಯಾರ್ಥಿಗಳಿಗೆ ತುಂಬಾ ಸಹಾಯಕವಾಗಿರುವ್ವುದು. ಉಪನ್ಯಾಸ ಬರೆಯತಕ್ಕ ಕ್ರಮವನ್ನೆಲ್ಲಾ ವಿಶದವಾಗಿ ತಿಳಿಸುವುದು. ಬಹಳ ಅಂದವಾಗಿ ಪಸಂದ ಕಾಗದದ ಮೇಲೆ ಮದರಾಸಿನಲ್ಲಿ ಛಾಪಾ ಆಗಿರುತ್ತದೆ

ಕ್ರಯ. ೦—೮—೦ ವಿ. ಪಿ. ಮೂಲಕ ೦—೧೦—೦

ಒಟ್ಟಿಗೆ ೧೦ ಪ್ರತಿಗಳನ್ನು ತರಿಸಿಕೊಳ್ಳುವವರಿಗೆ ಒಂದು ಪ್ರತಿಯು ಉಚಿತವಾಗಿ ಕೊಡಲ್ಪಡುವುದು

ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬೇಕು:

ಟಿ. ವೀರಪ್ಪ, ಪ್ಲೀಡರ್, ಚಿಕ್ಕಬಳ್ಳಾಪುರ.

ಆರ್ಡರ್ ಬರುತ್ತಿವೆ! ಬೇಗ ನೋಡಿ!

ಪ್ರಪಂಚವೇ ಆಶ್ಚರ್ಯ ಪಡುವದು.

87 2

ದೊಡ್ಡ ಮನುಷ್ಯರೇ, ಹಿಂದುಸ್ಥಾನದಲ್ಲಿ ಪ್ರಕಟನೆಗಳ ಮಯವಾಗಿದೆ ಕೆಲವು ಕಂಪನಿಯವರು ಮೋಸ ನಾಕೋಣದರಿಂದ ಪ್ರಕಟನೆಯನ್ನು ಕಂಡರೆ ಜನರು ಅಸಹ್ಯಪಟ್ಟು ಎಸೆಯುತ್ತಾರೆ. ಸತ್ಯವಂತರ ಪ್ರಕಟನೆಯನ್ನೂ ಕೂಡ ನಂಬುವದು ಕಷ್ಟ. ಯಥಾರ್ಥವುಳ್ಳ ಕಂಪನಿಯ ನೋಟೀಸುಗಳನ್ನು ಸಹ ಸಕ್ಕರೆ ಔಷಧಿ ಕಟ್ಟುವದಕ್ಕೆ ಕೊಟ್ಟು ಬಿಡುವರು. ಆದರೆ ಮಹನೀಯರೇ, ನಮ್ಮ ಕಂಪನಿಯ ಯೋಗ್ಯತೆಯನ್ನು ಒಂದಾವರ್ತಿ ಪರೀಕ್ಷಿಸಿ ನೋಡಿ. ಈ ಪ್ರಕಟನೆಯು ನವೀನವಾದದ್ದು, ಆಶ್ಚರ್ಯಕರವಾದದ್ದು ನಾವು ೩೦ ಗಂಟೆ ನಡೆಯುವ ಶಾಶ್ವತವಾದ ಐದು ವರುಷದ ಗ್ಯಾರಂಟಿ ಉಳ್ಳ ಲೀವರ್ ಗಡಿಯಾರವನ್ನು ೫೦ ಬಹುಮಾನವಸ್ತುಗಳೊಡನೆ ಕಳುಹಿಸುತ್ತೇವೆ. ಇದರಲ್ಲಿ ಸತ್ಯವಾದ ಕಂಪನಿಯ ಕೀರ್ತಿ ಹೆಚ್ಚಬೇಕೆಂಬುವದೊಂದೇ ನಮ್ಮ ಮುಖ್ಯ ಉದ್ದೇಶ. ಒಂದಾವರ್ತಿ ನಮಗೆ ಬರೆದು ತರಿಸಿ ನಮ್ಮ ಸತ್ಯತೆಯನ್ನು ಪರೀಕ್ಷೆಮಾಡಿ ಗಡಿಯಾರದ ಕೂಡ ನಾವು ಕಳುಹಿಸುವ ಬಹುಮಾನಗಳೇನೆಂದರೆ—ಒಂದು ಗಡಿಯಾರ, ಬಲವಾದದ್ದು, ೩೦ ಗಂಟೆ ನಡೆಯುವದು, ಹಿಂದೆ ಎರಡು ಮುಚ್ಚಳ, ಪರೀಕ್ಷೆಯಿಂದ ಸರಿ ಮಾಡಿದ್ದು, ಒಂದು ಸೊಗಸಾದ ಪೆಟ್ಟಿಗೆಯಲ್ಲಿ, ಐದು ವರುಷದ ಜಾಮೀನು ಉಳ್ಳದ್ದು. ಒಂದು ಸೊಗಸಾದ ಗಡಿಯಾರದ ಸರಪಳಿ ಅರೆ ಬೀಗದ ಕೈ ಉಳ್ಳ ಬಲವಾದ ಇಂಗ್ಲಿಷ್ ಖಜಾನೆ ಪೆಟ್ಟಿಗೆ ಒಂದು ದೊಡ್ಡ ಪರಾಯಿ ಒಂದು ದೊಡ್ಡ ಜುಬ್ಬ. ಒಂದಾಸಲಿಯ ಎಣ್ಣೆ ಹಾಕಿದರೆ ಒಂದು ತಿಂಗಳು ಉರಿಯುವ ಹೊಸ ತರಹ ಲಾಂಪು ಒಂದಾವರ್ತಿ ಶಾಯಿ ತುಂಬಿದರೆ ಅನೇಕ ದಿನಗಳ ತನಕ ಬರೆಯುವ ಫೌಂಟನ್ ಪೆನ್ನು ಒಂದು ಜೊತೆ ದೊಡ್ಡ ಕಾಲುಚೀಲ ಒಬ್ಬನಾದ ದಂತದ ಕೈಪಿಡಿಯುಳ್ಳ ಚಾಕು ಒಂದು ದೊಡ್ಡ ಕತ್ತರಿ ಒಂದು ದೊಡ್ಡ ಚರ್ಮದ ದುಡ್ಡುಹಾಕಿಡುವ ಚೀಲ ಒಳ್ಳೇ ಬಾಚಣಿಗೆ ೧೦ತರದ ಕನ್ನಡಿ ಕೂದಲು ಬಾಚಿಕೊಳ್ಳುವ ಬಿರುಸು ಮರಟಿನ ಒಂದು ಸೆಟ್ ಗುಂಡಿಗಳು. ಒಂದು ಸೊಗಸಾದ ಕನ್ನಡಕ. ಒಂದು ಸಾಬೂನುಬಿಲ್ಲೆ ಒಂದು ಸೆಂಟಿನ ದಬ್ಬಿ. ಒಂದು ಕೈವಸ್ತ್ರ ಎರಡು ಸೊಳ್ಳೆಪರದೆ ಚಮ್ಮಾಳಿ ಒಂದು ರಬ್ಬರು ಸುಂದರವಾದ ದೊಡ್ಡ ಕಾಯಿಕಂಡಿಕೆ ಒಂದು ಪೆನ್ಸಿಲ್ ಬರೆಯುವದು ೧೨ ಲೇಖಣಿ ಕಡ್ಡಿಗಳು ೬ ಕಪ್ಪು ಪೆನ್ಸಿಲುಗಳು ೧೫೦ ಲಕೋಟೆಗಳು ೧೫೦ ಲೆಟರ್ ಪೇಪರುಗಳು. ಪೋಸ್ಟ್ ರೂಲಸಿಗನುಸಾರವಾದ ೧೦೦ ಪೋಸ್ಟ್ ಕಾರ್ಡುಗಳು ೩೩ ಸ್ಟೀಲ್ ಮುಳ್ಳುಗಳು.

ಇಷ್ಟಕ್ಕೆಲ್ಲಾ ಕ್ರಯ ರೂ. ೩—೮—೦ ಮಾತ್ರವೇ.

ಅರ್ಧ ಹಣ ಅಡ್ವಾನ್ಸ್ ಮೊನಿಆರ್ಡರ್ ಬಂದಲ್ಲಿ ಉಳಿದ ಅರ್ಧಕ್ಕೆ ವಿ. ಪಿ. ಮಾಡುತ್ತೇವೆ. ಒಪ್ಪದಿದ್ದರೆ ಹಣ ವಾಪಸು ಕಳುಹಿಸುವೆವು.

ಈ ವಿಳಾಸಕ್ಕೆ ಬೇಗ ಬರೆಯಿರಿ:—

ಎಂ. ಎ. ಘಟವಾಲಾ ಮತ್ತು ಕಂಪನಿ,
ಚಿತ್ತೂರು, ಉತ್ತರ ಆರ್ಕಾಟು.

ಅಡಿಗೆಯವನು ಬೇಕು.

96-1

ಕರಾಚಿಯಲ್ಲಿ ನಮ್ಮ ಮನೆಯಲ್ಲಿ ಅಡಿಗೆ ಕೆಲಸಕ್ಕೋಸ್ಕರ ಒಬ್ಬ ವೈಷ್ಣವ ಅಡಿಗೆಯವನು ಬೇಕಾಗಿದೆ. ಊಟ ಕಳೆದು ಸಂಬಳ ೧೫ ರೂಪಾಯಿಗಳು ಸಿಕ್ಕುವದು ಇಷ್ಟವುಳ್ಳವರು ಇಬ್ಬರು ದೊಡ್ಡ ಮನುಷ್ಯರ ಖಾತ್ರಿ ಲಾಯಖು ದಾಖಲೆಗಳ ಸಹಿತ ನಮ್ಮಲ್ಲಿಗೆ ಬರೆದುಕೊಳ್ಳಬೇಕು ನಮ್ಮ ವಿಳಾಸ —

ಕರ್ಪೂರ ಶ್ರೀನಿವಾಸರಾವ್, ಯಕ್ಸಿಕ್ಯೂಟಿವ್ ಇಂಜನಿಯರ್, ಕರಾಚಿ.

ಇಲ್ಲಿ ನೋಡಿ!

65 9

ತುಮಕೂರು ಮಿಷನ್ ಇಲಾಖೆಯಲ್ಲಿ ಯೂರೋಪಿಯನ್ ಮೇಲ್ವಿಚಾರಣೆಯಿಂದ ಉತ್ತಮ ತರಹದ ಹಾಸನದ ಟೋಪಿಗಳು ಅತಿ ಶ್ರೇಷ್ಠವಾದ ಉಲ್ ದಾರದಿಂದ ತಯಾರಾಗುತ್ತವೆ.

ಈಗ ಕೆಳಗೆ ನಮೂದಾಗಿರುವ ವಿವಿಧ ಬಣ್ಣದ ಟೋಪಿಗಳು ಹೆಚ್ಚಾಗಿ ನಮ್ಮಲ್ಲಿ ದಾಸ್ತಾನ (ಸ್ಟಾಕ್) ಉಂಟು

ಬಣ್ಣಗಳ ವಿಧ —ಅಚ್ಚಕೆಂಪು, ನಾಮದಕೆಂಪು, ಕಪ್ಪುಕೆಂಪು ಮಿಶ್ರವಾದದ್ದು.

ಕ್ರಯ —೧ ರೂ. ೪ ಆ ಮತ್ತು ೧ ರೂ. ೩ ಆ

೧ ಡಜನ್ ಟೋಪಿಗಳನ್ನು ತೆಗೆದುಕೊಳ್ಳುವವರಿಗೆ ಸೇಕಡ ೫ರಂತೆ ಡಿಸ್‌ಕೌಂಟ್ ಕೊಡಲ್ಪಡುವದು.

ನಮ್ಮ ವಿಳಾಸ:—ಮ್ಯಾನೇಜರ್

ಹಾಸನದ ಟೋಪಿ ಕಾರ್ಖಾನೆ, ಮಿಷನ್ ಇಲಾಖೆ, ತುಮಕೂರು

ಆಸೆಬಿಟ್ಟಿದ್ದು.

93 1

ಸ್ವಲ್ಪ ಮಾತ್ರ ಅವಕಾಶವೆಂಬುದರ ಅರ್ಥವು ಮರಣವೆಂಬುದಾಗಿರುತ್ತದೆ. ವರ್ತಮಾನಪತ್ರಿಕೆಗಳಲ್ಲಿ ಆಶ್ಚರ್ಯಕರವಾದ ಬರವಣಿಗೆಯನ್ನು ನೀವು ಎಂದೂ ಓದಲಿಲ್ಲವೋ? ಮತ್ತು ಅದು ಒಂದು ಔಷಧ ಪ್ರಕಟನೆಯಾಗಿರುತ್ತದಾಗಿ ತಿಳಿದು ಬರಲಿಲ್ಲವೋ? ಆ ಲೇಖನವನ್ನು ಕುರಿತು ತೃಪ್ತಿಪಟ್ಟಿದ್ದೀರೋ? ಬಹುಶಃ ಪಡಲಿಲ್ಲವೆಂದು ನಾವು ತಿಳಿದುಕೊಳ್ಳುತ್ತೇವೆ. ಯಾಕೆಂದರೆ ಅದು ನಿಮಗೆ ಪರಿಚಿತವಿಲ್ಲದ ದೂರ ಪ್ರಾಂತ್ಯದಲ್ಲಿರುವ ಒಬ್ಬನ ಅನುಭವವಾಗಿದ್ದದ್ದರಿಂದ ಮಾತ್ರವಾಗಿರಬಹುದು ಆದರೆ ಕಲ್ಕತ್ತೆಯ ಪ್ರಸಿದ್ಧ ಡಾಕ್ಟರುಗಳಲ್ಲಿ ಒಬ್ಬರ ಹೇಳಿಕೆಯಾಗಿದ್ದರೆ ನೀವು ನಂಬುತ್ತಿದ್ದಿರಿ ಕಲ್ಕತ್ತೆಯ ಹಾರಿಸನ್ ರೋಡ್ ನಂ. ೧೨೮ ಮಾರ್ವಾಡಿ ಹಿಂದು ಆಸ್ಪತ್ರೆಯ ಹೌಸ್ ಸರ್ಜನರಾಗಿರುವ ಡಾಕ್ಟರ್. ಪಿ ಸಿ ರಾಯ್ ಎಂಬವರು ಹೇಳುವದೇನೆಂದರೆ:—ಡೋನ್ಸ್ ಎಂಬವರ ಬೆನ್ನುನೋವು ಮೂತ್ರಕೋಶದ ಔಷಧಗುಳಿಗೆಗಳು (ಡೋನ್ಸ್ ಬ್ಯಾಕ್ ಏಕ್ ಕಿಡ್ನಿ ಪಿಲ್ಸ್) ಅತ್ಯುತ್ತಮವಾದ ಔಷಧವಾಗಿರುತ್ತದೆ. ನಾವು ಕೈ ಬಿಟ್ಟ ಒಬ್ಬ ರೋಗಿಗೆ ಜಲೋದರವು ಈ ಔಷಧದಿಂದ ಚನ್ನಾಗಿ ಗುಣವಾಗಿಯದೆ. ಕಿಬ್ಬೊಟ್ಟೆಯಲ್ಲಿ ನೀರು ತುಂಬಿ ಕೈ ಕಾಲು ಮುಖವು ಬಾತು ಬಹಳ ಸಂಕಟ ಪಡುತ್ತಿದ್ದನು ಹೊಟ್ಟೆಯೊಳಗೆ ಸೂಜಿ ಹಾಕಿ ಸುಮಾರು ೧೦೪ ಔನ್ಸ್ ನೀರು ತೆಗೆಯುತು ಹೀಗೆಯೇ ವಾರಕ್ಕೊಮ್ಮೆ ಮೂರು ಧಪಾ ತೆಗೆಯಬೇಕಾಯಿತು ರೋಗಿಗೆ ದಿನ ಒಂದಕ್ಕೆ ೩ ಔನ್ಸ್ ಮಾತ್ರ ಮೂತ್ರ ಹೋಗುತ್ತಿತ್ತು. ಆತನಿಗೆ ಡೋನ್ಸ್ ಮೇಲೆ ಹೇಳಿದ ಮಾತ್ರೆಗಳು ಕೊಡುತ್ತಲೆ ದಿನ ಒಂದಕ್ಕೆ ೩೨ ಔನ್ಸ್ ಮೂತ್ರ ಹೋಗಲಿಕ್ಕೆ ಮೊದಲಾಗಿ ಬೇಗ ಪೂರಾ ನಿಂತು ಹೋಗಿ ಅತನು ಪುನಃ ಆರೋಗ್ಯಸ್ಥಿತಿಗೆ ಬಂದನು ಹೀಗೆಯೇ ಡೋನ್ಸ್‌ರ ಈ ಔಷಧದಿಂದ ಅನೇಕ ಜನರಿಗೆ ಗುಣಾಂಶ ಸಿಕ್ಕಿರುವದರಿಂದ ಇದು ಬಹಳ ಅಮೌಲ್ಯವಾದ ಔಷಧವಾಗಿರುತ್ತದೆ ಜಲೋದರ ವ್ಯಾಧಿಯು ಇಷ್ಟು ಹೆಚ್ಚು ವಿಕಾರಿಸೋದರೆ ಅಪಾಯಕರವೆಂದು ಎಣಿಸೋಣಾಗುತ್ತದೆ ಈ ಸಂಗತಿಯು ಮಾರ್ವಾಡಿ ಆಸ್ಪತ್ರೆಯಲ್ಲಿ ರಿಕಾರ್ಡು ಮಾಡಲ್ಪಟ್ಟಿರುವದರಿಂದ ಯಾರೂ ಸಂಶಯಪಡತಕ್ಕದ್ದಿಲ್ಲ ಬೆನ್ನುನೋವು, ಮೂತ್ರ ಬಾಧೆ—ವಾತನೋವು ಇವುಗಳೊಡನೆ ಜಲೋದರವು ಮೂತ್ರಕೋಶದ ದೋಷದಿಂದ ಉಂಟಾಗುವಂಥಾದ್ದಾಗಿದೆ. ಇವುಗಳಿಗೆಲ್ಲಾ ಈ ಮಾತ್ರೆಗಳು ಉತ್ಕೃಷ್ಟವಾದ ಔಷಧವಾಗಿರುವದು

ಎಲ್ಲಾ ಔಷಧ ವರ್ತಕರಿಂದ ಮಾರಲ್ಪಡುತ್ತದೆ. ಸೀಸೆ ಒಂದಕ್ಕೆ ರೂ ೨. ಅಥವಾ ೬ ಸೀಸೆಗಳಿಗೆ ರೂ ೧೦—೮— ೦. ಅಥವಾ ಮುಂಬಯಿಯಲ್ಲಿಯ ಡೋನ್ಸ್‌ರ ಔಷಧಗಳ ಕೋಠಿಯಿಂದ ಸೀದಾ ತರಿಸಿಕೊಳ್ಳಬಹುದು. ಪಿ. ಬಿ. ಬಾಕ್ಸ್ ನಂ. ೨೦, ಮುಂಬಾಯಿ.

ವೃತ್ತಾಂತ ಪತ್ರಿಕೆ.

ಸನ್ ೧೯೦೭ ನೇ ಇಸವಿ ಸೆಪ್ಟಂಬರ್ ತಾ॥ ೫ ನೇ ಗುರುವಾರ

ವೈಸ್‌ರಾಯಿಯವರ ಮತ್ತು ಗವರ್ನರುಗಳ ಮಂತ್ರಾಲೋಚನಾ ಸಭೆಗಳು.

ಇಂಡಿಯಾ ಸ್ಟೇಟ್ ಸೆಕ್ರೆಟರಿ ಮ॥ ಜಾನ್ ಮಾರ್ಲಿಯವರಿಂದ ಕಳುಹಿಸಲ್ಪಟ್ಟ ಬಹು ವಿಶೇಷವಾದ ಏರ್ಪಾಡನ್ನು ಕುರಿತ ಬರವಣಿಗೆಯನ್ನು ವೈಸ್‌ರಾಯಿ ಲಾರ್ಡ್ ಮಿಂಟೋ ಪ್ರಭುಗಳು ಪ್ರಕಟಮಾಡಿರುತ್ತಾರೆ. ಈ ಬರವಣಿಗೆಯಲ್ಲಿ ಸೆಕ್ರೆಟರಿಯವರು ಹಿಂದುಸ್ಥಾನದ ರಾಜ್ಯಭಾರ ಕ್ರಮಗಳಲ್ಲಿ ಕೆಲವು ವಿಸ್ತಗಳನ್ನು ಸೂಚಿಸಿ ವಿವರಿಸಿರುವರು. ಕಳೆದ ೧೮೯೨ನೆ ಇಸವಿಯಲ್ಲಿ ಹಿಂದುಸ್ಥಾನದ ಮಂತ್ರಾಲೋಚನಾ ಸಭೆಗಳ ವಿಸ್ತಾರದ ಕಾನೂನು ಆಗಿ ಜಾರಿಗೆ ಬಂದಿರುವುದು ತದಾರಭ್ಯ ಈ ರಾಷ್ಟ್ರದ ರಾಜ್ಯಭಾರಕ್ರಮಗಳಲ್ಲಿ ವಿಶೇಷ ಬದಲಾವಣೆಗಳೇನೂ ಆಗಿರುವುದಿಲ್ಲ. ಪ್ರಕೃತದಲ್ಲಿ ಸೆಕ್ರೆಟರಿಯವರು ಸೂಚಿಸಿರುವ ಎರಡು ವಿಸ್ತಗಳ್ಯಾವವೆಂದರೆ-

(೧) ಇಂಪೀರಿಯಲ್ ಕೌನ್ಸಿಲ್ ಎಂಬ ಹೊಸ ಸಭೆಯು ಏರ್ಪಾಡು. ಮಂತ್ರಾಲೋಚನಾ ಸಭೆಗಳಲ್ಲಿ ಸರ್ಕಾರಿ ನೌಕರರಲ್ಲದ ದೊಡ್ಡ ಮನುಷ್ಯರೂ ಮೆಂಬರುಗಳಾಗಿರುತ್ತಾರಷ್ಟೆ. ವಕೀಲರ ಸಂಖ್ಯೆಯು ಈ ರಾಷ್ಟ್ರದಲ್ಲಿ ಸ್ವಲ್ಪವೇ ಆಗಿದ್ದಾಗ್ಯೂ ಇವರೇ ವಿಶೇಷವಾಗಿ ಆ ಸಭೆಗಳಲ್ಲಿ ಮೆಂಬರಾಗಿರುವರು. ಆದಕಾರಣ ಈ ಹಿಂದುಸ್ಥಾನದ ಎಲ್ಲಾ ಕೋಮುಗಳ ಪ್ರತಿನಿಧಿಗಳೂ ಆ ಮಂತ್ರಾಲೋಚನಾ ಸಭೆಗಳಲ್ಲಿ ಮೆಂಬರುಗಳಾಗಿಲ್ಲವೆಂಬುವುದು ಗವರ್ನಮೆಂಟಿನವರ ಅಭಿಪ್ರಾಯವಾಗಿರುತ್ತದೆ. ಇಂಥಾ ಲೋಪವನ್ನು ಸರಿಪಡಿಸುವುದಕ್ಕೆ ಗವರ್ನಮೆಂಟಿನವರು ಇಂಪೀರಿಯಲ್ ಮಂತ್ರಾಲೋಚನಾ ಸಭೆಯನ್ನು ನೇಮಿಸಿ ಅದಕ್ಕೆ ದೇಶೀಯ ರಾಜರನ್ನೂ, ಭಾರೀ ಜಮೀನ್‌ದಾರರನ್ನೂ, ದೊಡ್ಡ ಇತರ ಕೆಲವು ಪ್ರಮುಖರನ್ನೂ ಮೆಂಬರುಗಳಾಗಿ ನೇಮಿಸುವರು. ಹೀಗೆ ಈ ಸಭೆಯಲ್ಲಿ ೬೦ ಮಂದಿ ಮೆಂಬರುಗಳು ಇದ್ದಂತಾಗುವರು. ಈ ಪೈಕಿ ೨೦ ಮಂದಿ ದೇಶೀಯ ರಾಜರಾಗಿಯೂ ಉಳಿದವರು ಬೇರೆ ಬೇರೆ ಕಸುಬು ಮತ್ತು ಸಂಗಡಗಳಿಗೆ ಸೇರಿದವರಾಗಿಯೂ ಇದ್ದಾರು. ಇವರೆಲ್ಲಾ ಐದು ವರುಷಗಳ ಕಾಲ ಮೆಂಬರುಗಳಾಗಿರತಕ್ಕದ್ದು. ಸಾಮಾನ್ಯವಾಗಿ ಮಂತ್ರಾಲೋಚನಾ ಸಭೆಗಳಲ್ಲಿ ಮುಖ್ಯವಾದ ಕಾನೂನುಗಳ ಅಚ್ಚುಕಟ್ಟಿನ ವಿಚಾರಗಳೇ ಚರ್ಚೆಯಾಗುವವು. ಆದರೆ ಈ ಇಂಪೀರಿಯಲ್ ಕೌನ್ಸಿಲ್ ಎಂಬ ಸಭೆಯಲ್ಲಿ ಮೆಂಬರುಗಳು ಕಾನೂನ್ ವಿಚಾರಮಾತ್ರವೇ ಅಲ್ಲ, ಪರಿಮುಖ್ಯವಾದ ಇತರ ಸಂಗತಿಗಳನ್ನೂ ಕೂಡ ಹಿಡಿದು ಚರ್ಚಿಸಿ ತಮ್ಮ ಅಭಿಪ್ರಾಯಗಳನ್ನು ಗವರ್ನಮೆಂಟಿಗೆ ತಿಳಿಸುತ್ತಾರೆ. ಇತ್ತಲಾಗಿ ರಾಜ್ಯಭಾರವನ್ನು ವಿಶರಣೆಯಿಂದ ನಡಿಸುವುದಕ್ಕಾಗಿ ಇಂಡಿಯಾ ಗವರ್ನಮೆಂಟಿನವರು ಈಚೆಗೆ ಈ ರಾಷ್ಟ್ರವನ್ನು ಪೂರ್ವ ಬಂಗಾಳಾ ಮತ್ತು ಆಸ್ಸಾಂ, ಬಂಗಾಳ, ಸಂಯುಕ್ತ ಆಧಿಪತ್ಯಗಳು, ಪಂಜಾಬ್, ಬೊಂಬಾಯಿ, ಮದರಾಸ್ ಬರ್ಮ ಎಂಬೀ ಏಳು ಆಧಿಪತ್ಯಗಳಾಗಿ ವಿಭಾಗ ಮಾಡಿ, ಗವರ್ನರ್ ಅಥವಾ ಲೆಫ್ಟಿನೆಂಟ್ ಗವರ್ನರುಗಳನ್ನು ಆ ಆಧಿಪತ್ಯಗಳಿಗೆ ನೇಮಿಸಿರುತ್ತಾರಷ್ಟೆ. ಈ ಗವರ್ನರ್ ಅಥವಾ ಲೆಫ್ಟಿನೆಂಟ್ ಗವರ್ನರುಗಳ ಸಹಾಯಕ್ಕೂ ಮೇಲ್ಕಂಡಂಥಾ ಒಂದೊಂದು ಸಣ್ಣ ಆಲೋಚನಾ ಸಭೆಯು ಏರ್ಪಾಡಾಗುವುದು.

(೨) ಮಂತ್ರಾಲೋಚನಾ ಸಭೆಗಳ ತಿದ್ದುಪಾಡು. ವೈಸ್‌ರಾಯಿಯವರ ಮಂತ್ರಾಲೋಚನಾ ಸಭೆಯಲ್ಲಿ ಚರ್ಚೆಯಾಗಿ ಪ್ಯಾಸ್ ಆದ ಹೊರ್ತು ಯಾವ ಕಟ್ಟಲೆಯೂ ಕಾನೂನಾಗುವುದಿಲ್ಲವಷ್ಟೆ. ಸೆಕ್ರೆಟರಿಯವರು ಈ ಮಂತ್ರಾಲೋಚನಾ ಸಭೆಯ ಮೆಂಬರುಗಳ ಸಂಖ್ಯೆಯನ್ನು ಹೆಚ್ಚಿಸಬೇಕೆಂದು ಸೂಚಿಸಿರುತ್ತಾರೆ. ಇನ್ನುಮೇಲೆ ಈ ಸಭೆಯಲ್ಲಿ ವೈಸ್‌ರಾಯಿಯವರೂ ಸೇರಿ ೫೩ ಮೆಂಬರುಗಳಿದ್ದಾರು. ಈ ಪೈಕಿ ೨೮ ಮಂದಿ ಸರ್ಕಾರಿ ಉದ್ಯೋಗಸ್ಥರು. ಮತ್ತು ಇವರಲ್ಲಿ ಆವರ್ತಿಯ ಪ್ರಕಾರ ಬಂಗಾಳಾ ಅಥವಾ ಪಂಜಾಬ್ ಲೆಫ್ಟಿನೆಂಟ್ ಗವರ್ನರುಗಳೂ, ಛೀಫ್ ಕಮಿಷನರುಗಳೂ ಮೆಂಬರಾಗಿ ನೇಮಿಸಲ್ಪಡುತ್ತಾರೆ. ಒಬ್ಬ ದೇಶೀಯ ರಾಜರೂ ಮೆಂಬರಾಗಿ ಸೇರುವರು. ಮೇಲ್ಕಂಡ ಏಳು ಆಧಿಪತ್ಯಗಳ ಮಂತ್ರಾಲೋಚನಾ ಸಭೆಗಳಿಂದಲೂ ಸರ್ಕಾರಿ ಉದ್ಯೋಗಸ್ಥರಲ್ಲದ ಏಳು ಮಂದಿ ಮೆಂಬರುಗಳು ಆ ವೈಸ್‌ರಾಯಿಯವರ ಮಂತ್ರಾಲೋಚನಾ ಸಭೆಗೆ ಮೆಂಬರಾಗಿ ಹೋಗುತ್ತಾರೆ. ಇದಲ್ಲದೆ ಭಾರಿ ಜಮೀನ್‌ದಾರರಾಗಿರತಕ್ಕವರು ಏಳು ಮಂದಿ, ಬಂಗಾಳಾ ಮತ್ತು ಬೊಂಬಾಯಿ ವರ್ತಕ ಮಂಡಲಿಗಳ ಪ್ರತಿನಿಧಿಗಳು ಇಬ್ಬರಿಬ್ಬರು, ಮಹಮದೀಯ ಪ್ರತಿನಿಧಿಗಳಿಬ್ಬರು ಮೆಂಬರುಗಳಾಗುವರು. ಮತ್ತು ವೈಸ್‌ರಾಯಿಯವರೇ ಪ್ರತ್ಯೇಕವಾಗಿ ಇಬ್ಬರು ಮಹಮದೀಯರನ್ನೂ ಬೇರೆ ನಾಲ್ಕು ಮಂದಿಯನ್ನೂ ಮೆಂಬರ ಕೆಲಸಕ್ಕೆ ನೇಮಕಮಾಡುತ್ತಾರೆ.

ಮೇಲ್ಕಂಡ ಏಳು ಆಧಿಪತ್ಯಗಳಲ್ಲೂ ಇರುವಂಥಾ ಮಂತ್ರಾಲೋಚನಾ ಸಭೆಗಳ ರಚನೆ ಮತ್ತು ಕಟ್ಟುಪಾಡುಗಳು ತೃಪ್ತಿಕರವಾಗಿಲ್ಲವೆಂದು ಗವರ್ನಮೆಂಟಿನವರು ತಿಳಿದಿರುತ್ತಾರೆ. ಯಾಕಂದರೆ ಈ ಸಭೆಗೆ ಸಾಮಾನ್ಯವಾಗಿ ಮ್ಯುನಿಸಿಪಲ್ ಮತ್ತು ಲೋಕಲ್ ಬೋರ್ಡುಗಳಿಂದಲೇ ಬೇರೋಜುಗಾರ ಮೆಂಬರುಗಳು ಚುನಾಯಿಸಲ್ಪಡುವರು. ಆದರೆ ಈ ಬೋರ್ಡುಗಳಲ್ಲಿರತಕ್ಕ ಮೆಂಬರುಗಳು ವಿಶೇಷವಾಗಿ ಒಂದೆರಡು ಕೋಮುಗಳ ಪ್ರತಿನಿಧಿಗಳಾಗಿರುತ್ತಾರಲ್ಲದೆ ಮತ್ತೆ ಬೇರೆ ಅಲ್ಲವೆನ್ನುವುದು ಗವರ್ನಮೆಂಟಿನವರ ಅಭಿಪ್ರಾಯವಾಗಿರುತ್ತದೆ. ಇದಕ್ಕಾಗಿ ಆ ಆಧಿಪತ್ಯಗಳವರು ಅಂಥಾ ಬೋರ್ಡುಗಳ ಮೆಂಬರ ಚುನಾವಣೆಯ ವಿಷಯದಲ್ಲಿ ಬೇರೆ ರೀತಿಯಾದ ಕ್ರಮಗಳನ್ನು ಮಾಡಿ ಜಾರಿಗೆ ತರಬೇಕೆಂದೂ, ಪ್ರತಿ ಒಂದು ಜಾತಿ, ಮತ, ಪಂಗಡದ ಪ್ರಜೆಗಳೂ ಅವರವರ ಸಂಖ್ಯೆಗೆ ತಕ್ಕಂತೆ ಬೇರೆ ಬೇರೆ ಪ್ರತಿನಿಧಿಗಳನ್ನು ಚುನಾಯಿಸಿ ಆಯಾ ಜಾತಿ, ಮತ, ಪಂಗಡದಿಂದ ಮೆಂಬರಾಗಿಬರುವಂತೆ ಮಾಡಬೇಕೆಂದೂ ಸೂಚಿಸಿದಾರೆ.

ಒಳದೇಶದ ವೃತ್ತಾಂತಗಳು

ಬೊಂಬಾಯಿನ ಬಳಿ ನೌಕಾಧಿಕಾರಿಗಳವರು ಮೋಟಾರ್ ಗಾಡಿಗಳ ಪಂದ್ಯವನ್ನು ಏರ್ಪಾಡುಮಾಡಿದಾರೆ. ಇದು ಈ ತಿಂಗಳ ೧೯ನೆ ತಾ॥ ನಡಿಯುವದು. ಅದಕ್ಕೆ ಶ್ರೀಮನ್ಮಹಾರಾಜರವರವರು ತಮ್ಮ ಮೋಟಾರ್ ಗಾಡಿಗಳನ್ನು ಅಲ್ಲಿಗೆ ಕಳುಹಿಸುವವರಾಗಿದಾರೆ.

❖❖❖

ಪಬ್ಲಿಕ್ ವರ್ಕ್ಸ್ ಇಲಾಖಾ ೧ನೆ ಕ್ಲಾಸ್ ಸೂಪ್ರವೈಸರ್ ಮ॥ ಎ. ಸಿ. ನರಸಿಂಹಯ್ಯಂಗಾರು) ಮೈಸೂರು ಸಂಸ್ಥಾನದಲ್ಲಿ ಬಹುಕಾಲ ತುಂಬಾ ನಂಬಿಕೆಯಾದ ಸರ್ವಿಸ್ ಮಾಡಿದ್ದರಿಂದ ಶ್ರೀಮನ್ಮಹಾರಾಜರವರ ಗವರ್ನಮೆಂಟಿನವರು ಅವರಿಗೆ ಆ॥ ಇಂಜನಿಯರ್ ಎಂಬ ಪದವಿಯನ್ನು ದಯಪಾಲಿಸಿರುತ್ತಾರೆ.

❖❖❖

ರಾಜಧಾನಿಯಲ್ಲಿ ಮ॥ ಎಂ. ವೆಂಕಟಕೃಷ್ಣಯ್ಯನವರ ಎರಡನೇ ಹೆಣ್ಣುಮಗನು ಕಳೆದ ವಾರ ಪ್ಲೇಗ್ ತಗಲಿ ಕಾಲವಾದನು. ಇದುವರೆಗೆ ಅವರ ಇಬ್ಬರು ಹೆಣ್ಣುಮಕ್ಕಳೂ ಒಬ್ಬ ಮಗನೂ ತೀರಿಹೋಗಿ, ವಯೋವೃದ್ಧರಾದ ಮ॥ ವೆಂಕಟಕೃಷ್ಣಯ್ಯನವರಿಗೆ ಮನೋವ್ಯಥೆಯುಂಟಾಗಿರುವ ವಿಷಯದಲ್ಲಿ ಎಲ್ಲರೂ ವಿಷಾದಪಡುತ್ತಾರೆ.

❖❖❖

ಬೆಂಗಳೂರು ಪ್ಲೇಗ್ ಇಲಾಖೆಯವರು ತಮ್ಮಲ್ಲಿಗೆ ಕೊಲ್ಲುವುದಕ್ಕಾಗಿ ಹಿಡಿದು ತರಲ್ಪಡುವ ಹೆಗ್ಗಣ ಇಲಿಗಳನ್ನು ಪರೀಕ್ಷೆ ಮಾಡಿ, ಬಣ್ಣ ಬಾಲ ಕಿವಿ ಉದ್ದ ಕಾಲು ಮೊದಲಾದ ಅಂಗಗಳ ಲಕ್ಷಣ ಮುಂತಾದ್ದನ್ನು ಗುರ್ತು ಮಾಡುತ್ತಿದಾರೆ. ಇಲಿ ಹೆಗ್ಗಣಗಳು ಎಷ್ಟು ಜಾತಿಯವು ಇರುತ್ತವೆ ಎಂಬುದನ್ನು ನಿರ್ಧರಿಸಬೇಕೆಂಬುವುದೇ ಅವರ ಉದ್ದೇಶವೆಂದು ತಿಳಿದು ಬಂದಿದೆ.

❖❖❖

ಹೊಸದುರ್ಗ ತಾಲ್ಲೋಕ್ ಪ್ರತಿನಿಧಿಗಳಾದ ಮ॥ ವೆಂಕಟನಾರಣಪ್ಪನವರು ಬಿದರಕೆರೆ ಗ್ರಾಮವನ್ನು ಹೊಳಲ್ಕೆರೆಯಿಂದ ಹೊಸದುರ್ಗ ತಾಲ್ಲೋಕಿಗೆ ಸೇರಿಸುವುದೇ ತುಂಬಾ ಅನುಕೂಲವೆಂದು ಗವರ್ನಮೆಂಟಿನವರಿಗೆ ತಿಳಿಸಿದ್ದರು. ಈ ವಿಷಯವನ್ನು ರೆವಿನ್ಯೂ ಕಮಿಷನರವರು ತನಿಖೆ ಮಾಡಿ ಅದೇ ರೀತಿ ಮಾಡಬಹುದೆಂದು ಶಿಫಾರಸು ಮಾಡಿದರು. ಗವರ್ನಮೆಂಟಿನವರು ಅದರಂತೆ ಆ ಗ್ರಾಮವನ್ನು ಹೊಸದುರ್ಗ ತಾಲ್ಲೋಕಿಗೆ ಸೇರಿಸತಕ್ಕದ್ದೆಂದು ಹುಕುಂ ಕೊಟ್ಟಿದಾರೆ.

❖❖❖

ಬೆಂಗಳೂರು ಹುಚ್ಚರ ಆಸ್ಪತ್ರೆಯಿಂದ ಹತ್ತು ಜನ ಹುಚ್ಚರು ವಾಸಿಯಾಗಿ ಕಳೆದ ವಾರ ಬಿಡುಗಡೆ ಹೊಂದಿದರು. ಆ ಪೈಕಿ ಐದು ಮಂದಿ ಅಪರಾಧಿಗಳು. ಮೂರು ಜನರು ಕೊಲೆಗಳನ್ನು ನಡಿಸಿದವರು. ಇಬ್ಬರು ಬುದ್ಧಿ ಸ್ವಾಧೀನವಿಲ್ಲದಿದ್ದಾಗ ಅಪರಾಧಗಳನ್ನು ನಡಿಸಿದರು. ಈ ಐದು ಜನರನ್ನೂ ಅವರಿಗೆ ವಿಧಿಸಿದ್ದ ಸಜಾ ಶಿಕ್ಷೆಯನ್ನು ಅನುಭವಿಸುವುದಕ್ಕೋಸ್ಕರ ಆಸ್ಪತ್ರೆಯಿಂದ ಸೆಂಟ್ರಲ್ ಜೈಲಿಗೆ ಕಳುಹಿಸಿರುತ್ತಾರೆ. ಈಗ ಈ ಹುಚ್ಚರ ಆಸ್ಪತ್ರೆಯಲ್ಲಿ ೨೨೯ ಜನ ರೋಗಿಗಳಿರುವರೆಂತಲೂ, ಈ ಪೈಕಿ ಯೂರೋಪ್ಯನರೂ ಯೂರೇಷಿಯನ್ನರೂ ೨೨ ಮಂದಿ ಎಂತಲೂ ತಿಳಿದು ಬಂದಿದೆ.

ಶ್ರೀರಂಗಪಟ್ಟಣದ ಬಳಿ ದೇವರಾಜ ನಾಲಾ ಬಸವನಕಟ್ಟೆಯಲ್ಲಿ ಐದನೇ ಮೈಲಿಯಿಂದ ಆಚೆಗೆ ಇರುವ ಜಮೀನುಗಳ ರೈತರಿಗೆ ಫೆಬ್ರುವರಿ, ಮಾರ್ಚಿ, ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಎರಡನೆಯ ಫಸಲು ಬೆಳೆಯುವುದಕ್ಕೆ ನಾಲೆಯ ನೀರು ಕೊಡಲಾಗುವುದಿಲ್ಲವೆಂತಲೂ, ಆ ನೀರು ರಾಜಧಾನಿಯ ಉಪಯೋಗಕ್ಕೆ ಅವಶ್ಯವಾಗಿದೆ ಎಂತಲೂ, ಹೀಗೆ ಎರಡನೇ ಫಸಲಿಗೆ ನೀರು ಕೊಡದೆ ಹೋಗೋಣದರಿಂದ ರೈತರಿಗೆ ತೊಂದರೆಯೂ ನಷ್ಟವೂ ಆಗುತ್ತೆಂದು ರೆವಿನ್ಯೂ ಕಮಿಷನರು ಯೋಚಿಸುವುದಾದರೆ ಅವರು ಅಂಥಾ ರೈತರಿಗೆ ಯಾವ ರಿಯಾಯಿತಿಗಳನ್ನು ತೋರಿಸಬಹುದೆನ್ನುತ್ತಾರೋ ಗವರ್ನಮೆಂಟಿಗೆ ತಿಳಿಸಿದಲ್ಲಿ ಪರ್ಯಾಲೋಚಿಸಬಹುದಾಗಿದೆ ಎಂತಲೂ, ಮೈಸೂರು ಪಟ್ಟಣಕ್ಕೆ ವಿದ್ಯುಚ್ಛಕ್ತಿಯ ಸಹಾಯದಿಂದ ನೀರು ಎತ್ತಿ ಕಳುಹಿಸುವ ಏರ್ಪಾಡು ಮಾಡಿದೆ ಎಂತಲೂ, ಅದಕ್ಕಾಗಿ ೧೮೦,೦೦೦ ರೂಪಾಯಿ ಸ್ಯಾಂಕ್ಷನ್ ಮಾಡಲಾಗಿದೆ ಎಂತಲೂ, ಇದು ಏರ್ಪಾಡಾದ ಮೇಲೆ ಮೇಲ್ಕಂಡ ನಾಲೆ ನೀರನ್ನು ಜಮೀನುಗಳಿಗೆ ಪೂರ್ವದಂತೆ ಕೊಡಲಾಗುವುದೆಂತಲೂ ಗವರ್ನಮೆಂಟಿನವರು ಹುಕುಂ ಕೊಟ್ಟಿದಾರೆ.

ಪೋಸ್ಟ್ ಆಫೀಸಿನ ಹೊಸ ಅನುಕೂಲಗಳು

ಇಂಡಿಯಾ ಗವರ್ನಮೆಂಟಿನವರು ಈ ರಾಷ್ಟ್ರದ ಪೋಸ್ಟ್ ಇಲಾಖೆಯಲ್ಲಿ ಉತ್ತರೋತ್ತರವಾಗಿ ಪ್ರಜೆಗಳಿಗೆ ಅನುಕೂಲವಾಗುತ್ತಲೂ ಬಂದ ಹಾಗೆಲ್ಲಾ ಊರಿಂದೂರಿಗೆ ಆ ಇಲಾಖೆಯ ಮೂಲಕ ಹೋಗಿಬರತಕ್ಕ ಕಾರಡು, ಕವರು, ರಿಜಿಸ್ಟರು, ಮನಿ ಆರ್ಡರು, ಭಾಂಗಿ, ಈ ಮೊದಲಾದವುಗಳ ರುಸುಮನ್ನೂ ಸಂದರ್ಭಾನುಸಾರವಾಗಿ ಸುಲಭಮಾಡಿಕೊಡುತ್ತಾ ಬಂದಿರುವುದು ಸಕಲ ಪ್ರಜೆಗಳಿಗೂ ಅನುಭವಪೂರ್ವಕವಾಗಿ ತಿಳಿದಿರುತ್ತದೆ. ಮೂರು ಕಾಸಿಗೆ ಒಂದು ಕಾರ್ಡನ್ನಾಗಲಿ, ಒಂದು ಆಣೆಗೆ ಒಂದು ಮುಚ್ಚಿದ ರವಾನೆಯನ್ನಾಗಲಿ, ಎರಡು ಆಣೆಗೆ ಒಂದು ಭಾಂಗಿಯನ್ನಾಗಲಿ ಹಿಂದುಸ್ಥಾನದೊಳಗಲ್ಲದೆ ಪ್ರಪಂಚದ ಇನ್ಯಾವ ಭಾಗದಲ್ಲೂ ಊರಿಂದೂರಿಗೆ ಕಳುಹಿಸಿಕೊಡುವ ವ್ಯವಸ್ಥೆ ಮಾಡುವ ಅಂಚೆ ಇಲಾಖೆಯು ಇರುವುದಿಲ್ಲ. ಅವರೂ ಈ ಸೌಲಭ್ಯವನ್ನು ಹಿಂದುಸ್ಥಾನದ ಅಂಚೆ ಇಲಾಖೆಯವರು ಪ್ರಜೆಗಳಿಗೆ ಕಲ್ಪಿಸಿಕೊಟ್ಟಿರುತ್ತಾರೆ. ಮಾತ್ರ ಗವರ್ನಮೆಂಟಿನವರು ಇಷ್ಟಕ್ಕೇ ತೃಪ್ತರಾಗಲಿಲ್ಲ. ಇನ್ನೂ ಹೆಚ್ಚು ರಿಯಾಯಿತಿಗಳನ್ನು ತೋರಿಸಬೇಕೆಂಬ ಅಭಿಲಾಷೆಯುಳ್ಳವರಾಗಿದಾರೆಂಬುವದು ಈಚೆಗೆ ಪ್ರಕಟಿಸಿರುವ ಸೌಲಭ್ಯಗಳಿಂದ ಗೊತ್ತಾಗುತ್ತದೆ.

ಈಗ ಅರ್ಧಾಣೆಯ ಕವರು (ಲಕೋಟೆ) ಗಳಲ್ಲಿ ಮುಕ್ಕಾಲು ತೊಲೆ ತೂಕವುಳ್ಳಷ್ಟು ಕಾಗದಗಳನ್ನು ಬರೆದು ಹಾಕಬಹುದು. ಒಂದಾಣೆ ಲಕೋಟೆಯಲ್ಲಿ ಒಂದೂವರೆ ತೊಲಾ ತೂಕದಷ್ಟು ಕಾಗದ ಬರೆದು ಹಾಕಬಹುದು. ಮತ್ತು ಭಾಂಗಿಗಳಿಗೆ ಪ್ರತಿ ೨೦ ರೂಪಾಯಿ ತೂಕಕ್ಕೂ ಎರಡಾಣೆಯಂತೆ ಪೋಸ್ಟ್ ರುಸುಂ ಕೊಡಬೇಕಾಗಿದೆ. ಇಂಡಿಯಾ ಗವರ್ನಮೆಂಟಿನವರು ಈ ರುಸುಮುಗಳನ್ನು ಇನ್ನೂ ಕಡಮೆ ಮಾಡಿ, ಪ್ರಜೆಗಳಿಗೆ ಅನುಕೂಲ ಮಾಡಿಕೊಟ್ಟಿದಾರೆಂದು ತಿಳಿಸಲು ಸಂತೋಷಪಡುತ್ತೇವೆ. ಇನ್ನು ಮೇಲೆ ಅರ್ಧಾಣೆ ಲಕೋಟೆಯಲ್ಲಿ ಒಂದು ತೊಲಾ ತೂಕದಷ್ಟು ಕಾಗದಗಳನ್ನೂ, ಒಂದಾಣೆ ಲಕೋಟೆಯಲ್ಲಿ ಹತ್ತು ತೊಲಾ ತೂಕದಷ್ಟು ಕಾಗದಗಳನ್ನೂ ಬರೆದು ಹಾಕಬಹುದಾಗಿದೆ. ಇದಲ್ಲದೆ ಭಾಂಗಿಗಳಿಗೆ ೪೦ ರೂಪಾಯಿ ತೂಕಕ್ಕೆ ಎರಡಾಣೆಯಂತೆ ರುಸುಂ ಕೊಡತಕ್ಕದೆಂದು ನಿಷ್ಕರ್ಷೆಯಾಗಿರುವುದು. ಇದೆಲ್ಲಾ ನಾಳೆ ಅಕ್ಟೋಬರ್ ತಾ॥ ೧ ರಿಂದ ಜಾರಿಗೆ ಬರುತ್ತವೆ. ಇದರಿಂದ ಪ್ರಜೆಗಳಿಗೂ ವ್ಯಾಪಾರಸ್ಥರಿಗೂ ತುಂಬಾ ಸುಲಭವಾಯಿತೆನ್ನುವುದಕ್ಕೆ ಸಂಶಯವಿಲ್ಲ. ಇತ್ತಲಾಗಿ ಪೋಸ್ಟಾಫೀಸಿನಲ್ಲಿ ಬಿಕರಿ ಆಗುವಂಥಾ ೩ ಕಾಸಿನ ಜವಾಬು ಪೋಸ್ಟ್ ಕಾರ್ಡಿನ ವಿಳಾಸ ಬರೆಯುವ ಭಾಗದಲ್ಲಿ ಜನರು ವಿಳಾಸವನ್ನೂ, ಬರೆಯತಕ್ಕವನ ಅಡ್ರೆಸ್ಸನ್ನೂ, ತಾರೀಖನ್ನೂ ಬರೆಯಬಹುದೇ ಹೊರತು ಇನ್ನೇನೂ ಬರೆದಿರಕೂಡದು. ಅಂಗಡಿಗಳಲ್ಲಿ ಬಿಕರಿಯಾಗುವ ದೊಡ್ಡ ಸೈಜಿನ ಪೋಸ್ಟ್ ಕಾರ್ಡಿನ ಮೇಲೆ ಮೇಲಿನಿಂದ ಕೆಳಕ್ಕೆ ಅರ್ಧಭಾಗವನ್ನು ವಿಂಗಡಿಸಿ, ಬಲಭಾಗವನ್ನು ಪೂರ್ತಾ ಅಡ್ರೆಸ್ಸಿಗೂ ಸ್ಟಾಂಪು ಹಚ್ಚುವುದಕ್ಕೂ ಬಿಡಬೇಕು. ಎಡಭಾಗದಲ್ಲಿ ಬೇಕಾದ ಸಂಗತಿಗಳನ್ನು ಬರೆಯಬಹುದು. ಹೀಗೆ ಬರೆದದ್ದಾಗಲಿ ಅಚ್ಚು ಹಾಕಿದ್ದಾಗಲಿ ಎಡಭಾಗದ ಅರ್ಧಕ್ಕೆ ಹೆಚ್ಚಾಗಿ ಎಷ್ಟು ಸ್ವಲ್ಪ ಬಂದಿದ್ದರೂ, ಪ್ರಿಂಟು ಮಾಡಿದ್ದರೂ ಅಂಥವುಗಳನ್ನು ಕಾಯಿದೆ ನಿಂದ ಹೋದದಿದ್ದರೂ ಅಂಥಾ ಕಾರ್ಡಿಗೆ ಡಬಲ್ ಛಾರ್ಜನ್ನು ಪೋಸ್ಟ್ ಆಫೀಸಿನವರು ವಿಳಾಸದಾರರಿಂದ ವಸೂಲ್ಮಾಡುತ್ತಾರೆ. ಈ ವಿಷಯದಲ್ಲಿ ಜನರು ತುಂಬಾ ಎಚ್ಚರಿಕೆಯಾಗಿರಬೇಕೆಂದು ಸೂಚಿಸುತ್ತೇವೆ.

ಪೋಸ್ಟ್ ಮಾಸ್ತರುಗಳಿಗೂ ಸಬ್ ಪೋಸ್ಟ್ ಮಾಸ್ತರುಗಳಿಗೂ ಕವರು, ಕಾರ್ಡು, ಚಿಲ್ಲರೆ (ಸ್ಟ್ಯಾಂಪು) ಗಳನ್ನು ಬಿಕರಿ ಮಾಡಿದ್ದಕ್ಕೆ ರೂಪಾಯಿಗೆ ೩ ಪೈನಂತೆ ಕಮಿಷನ್ ಕೊಡುತ್ತಿದ್ದರಷ್ಟೆ. ಇದನ್ನು ಪೋಸ್ಟ್ ಇಲಾಖೆಯವರು ಈಗ ನಾಲ್ಕಾರು ತಿಂಗಳಿಂದ ನಿಲ್ಲಿಸಿಬಿಟ್ಟರು. ಇದರಿಂದ ಅಂಥಾ ಪೋಸ್ಟ್ ಮಾಸ್ತರುಗಳಿಗೆಲ್ಲಾ ಬರುತ್ತಿದ್ದ ಅಲ್ಪಸ್ವಲ್ಪ ವರಮಾನವು ನಿಂತುಹೋಗಿ ಅವರಲ್ಲಿ ಗೊಣಗಾಟಕ್ಕೂ ಅಸಮಾಧಾನಕ್ಕೂ ಕಾರಣವಾಗಿತ್ತು. ಈ ಕಮಿಷನ್ ರೂಪದಲ್ಲಿ ಅವರಿಗೆಲ್ಲಾ ಎರಡು ಲಕ್ಷ ರೂಪಾಯಿ ಸಲ್ಲುತ್ತಿದ್ದಷ್ಟು. ಸರ್ಕಾರದವರು ನಿಲ್ಲಿಸಿಬಿಟ್ಟು, ಇನ್ನು ಮುಂದೆ ಅಂದರೆ ಬರುವ ಅಕ್ಟೋಬರ್ ೧ನೇ ತಾ॥ ಲಾಗಾಯತು ಆ ಹಣವಲ್ಲಿ ಅಂಥಾ ಪೋಸ್ಟ್ ಮಾಸ್ತರುಗಳಿಗೂ ಸಬ್ ಪೋಸ್ಟ್ ಮಾಸ್ತರುಗಳಿಗೂ ಸಂಬಳವನ್ನು ಬಡ್ತಿ ಮಾಡುವಂತೆ ಪ್ರಕಟಿಸಿದಾರೆ. ಹೀಗೆ ಕಮಿಷನ್ ತಪ್ಪಿಸಿ ಖಂಡಿತವಾದ ಸಂಬಳವನ್ನೇ ಬಡ್ತಿ ಮಾಡಿದ್ದರಿಂದ ಅವರಿಗೆಲ್ಲಾ ತುಂಬಾ ಸಹಾಯವಾಯಿತೆನ್ನುವುದಕ್ಕೆ ಸಂಶಯವಿಲ್ಲ.

ಒಕ್ಕಲಿಗರ ಸಂಘದ ವಿಚಾರವು.

ಕಳೆದ ವಾರದ "ವೃತ್ತಾಂತ ಪತ್ರಿಕೆ"ಯಲ್ಲಿ ಪ್ರಸಿದ್ಧಪಡಿಸಿದ ಒಕ್ಕಲಿಗರ ಸಂಘದ ವಿಚಾರವೆಂಬ ಬಾತ್ಮಿಯನ್ನು ಓದಿ ಬಹಳ ಸಂತೋಷಪಟ್ಟೆನು. ಆ ದೊಡ್ಡಮನುಷ್ಯರು ತಿಳಿಸಿರುವ ವಿಷಯಗಳ ಜೊತೆಯಲ್ಲಿ ನಾನು ಒಂದೆರಡು ವಿಷಯಗಳನ್ನು ತಿಳಿಯಪಡಿಸಬೇಕೆಂದು ಬಹಳ ಆಸೆಪಡುತ್ತೇನೆ. ಏನೆಂದರೆ —ರಾಜ್ಯಕ್ಕೆ ಬೆಂಬಲರಾಗಿರತಕ್ಕ ಒಕ್ಕಲಿಗರ ಮಹನೀಯರಲ್ಲಿ ಅನೇಕರಿಗೆ ಓದುಬರಹ ಬಾರದೆ ಯಾವ ಜ್ಞಾನವೂ ಅಜ್ಞಾನವೆಂಬ ಸಮುದ್ರದಲ್ಲಿ ಮುಳುಗಿ ತೇಲುವದಲ್ಲದೆ ದಂಡ ರುಮಾನತ್ತು ಎಂಬುವದು ಹೇರಳವಾಗಿತ್ತು. ಇದನ್ನು ನೋಡಿ ಈಶ್ವರಾಜ್ಞೆಯಿಂದ ಬೆಂಗಳೂರಲ್ಲಿ ಇರತಕ್ಕ ಕೆಲವು ವಿದ್ಯಾವಂತರಾದ ದೊಡ್ಡಮನುಷ್ಯರು ಸೇರಿದವರು ಒಕ್ಕಲಿಗರ ಸಂಘವೆಂದು ಒಂದು ಸಂಘವನ್ನು ಸ್ಥಾಪನೆಮಾಡಿ, ಬೆಂಗಳೂರಲ್ಲಿ ಮಹಾ ಸಭೆಯನ್ನು ನಡಿಸಿದರು. ಆ ಸಭೆಯಲ್ಲಿ ಈ ವರ್ಷದ ಮಹಾ ಸಭೆಯು ರಾಜಧಾನಿಯಲ್ಲಿ ಸೇರಬೇಕೆಂದು ವಿದಾಯಕವಾಯಿತು. ಅಜ್ಞಾನವೆಂಬ ಸಮುದ್ರದಲ್ಲಿ ಇನ್ನೂ ಮುಳುಗಿ ತೇಲುತ್ತಿರುವ ಕೆಲವರು ನಾನಾ ವಿಧವಾಗಿ ಅಪಾರ್ಥಗಳನ್ನು ಮಾಡಿಕೊಂಡು ವೈಮನಸ್ಯವನ್ನು ವೃದ್ಧಿಪಡಿಸುತ್ತಿದಾರೆಂದು ತಿಳಿಯಬರುತ್ತೆ. ಈ ಸಂಘದ ಉದ್ದೇಶವನ್ನು ಮೊದಲೇ ಸಂಘದ ಕಾರ್ಯಕರ್ತರು ತಿಳಿಸಿದ್ದಾಗ್ಯೂ ಅದನ್ನು ಮರೆತು, ಹೀಗೆ ವೈಮನಸ್ಯವನ್ನು ಬೆಳಸುತ್ತಿದಾರೆಂದು ಕಾಣುತ್ತೆ. ಆದ್ದರಿಂದ ನಾನೂ ಕೊಂಚ ಅವರ ಜ್ಞಾಪಕಕ್ಕೆ ಮತ್ತೊಂದಾವರ್ತಿ ತಿಳಿಸುತ್ತೇನೆ. ನಮ್ಮ ಒಕ್ಕಲಿಗ ರೈತರು ವಿದ್ಯೆಯಿಲ್ಲದೆಯೂ ಮತ್ತು ಇನ್ಯಾವ ವಿಧವಾದ ಕೈಗಾರಿಕೆ ಕಸಬು ಇಲ್ಲದೆಯೂ ಬರೇ ವ್ಯವಸಾಯ ಮಾತ್ರ ಮಾಡುತ್ತಾರೆ. ಇವನ್ನು ಕೆಲವರು ವ್ಯವಸಾಯವನ್ನು ಬಿಟ್ಟು ಬರೇ ವಿದ್ಯವನ್ನು ಕಲಿತು ಪ್ಯಾಸುಗಳನ್ನು ಮಾಡಿಕೊಂಡು, ಹತ್ತಾರು ರೂಪಾಯಿನ ಕಲಬಿಗೆ ಸರ್ಕಾರಿ ನೌಕರಿ ಮಾಡುತ್ತಾರೆ. ಇಂಥಾದ್ದನ್ನೆಲ್ಲಾ ತಪ್ಪಿಸಿ ವಿದ್ಯಾವಂತರನ್ನಾಗಿಯೂ ಕಸಬುದಾರರನ್ನಾಗಿಯೂ ಎತ್ತಿ ತಮ್ಮ ವೃತ್ತಿಯಲ್ಲಿ ಅಭಿವೃದ್ಧಿಗೆ ಬರುವಂತೆಯೂ ಮಾಡಬೇಕೆಂಬುವದೇ ಇವರ ಉದ್ದೇಶ. ಪ್ರತಿ ಒಬ್ಬ ಒಕ್ಕಲಿಗ ದೊಡ್ಡಮನುಷ್ಯರೂ ಈ ವಿಷಯವನ್ನು ತಪ್ಪೀರಸಂತೆ ಬದ್ಧವಾಗಿ ಟೊಂಕಕಟ್ಟಿ ಕನ್ನಡಿ ಹಾಕಿ ತಮ್ಮ ಮನಸ್ಸಿನಲ್ಲಿ ಯಥಾಯೋಗ್ಯ ಇಟ್ಟುಕೊಂಡು, ಈ ದೊಡ್ಡಮನುಷ್ಯರು ಕೈಕೊಂಡಿರುವ ಈ ಮಹತ್ಕಾರ್ಯವನ್ನು ಪ್ರೋತ್ಸಾಹಪಡಿಸಿದರೆ ಇನ್ನು ನಾಲ್ಕಾರು ವರ್ಷಗಳಲ್ಲಿ ಒಕ್ಕಲಿಗರಾದ ನಾವೂ ಮತ್ತು ನಮ್ಮ ದೇಶವೂ ಸಹಾ ಈಗ ಅಭಿವೃದ್ಧಿಯಲ್ಲಿರುವ ಜರ್ಮಾ ದೇಶಕ್ಕೆ ಹೋಲಿಸಬಹುದೆಂದು ನಾನು ದೃಢವಾಗಿ ನಂಬುತ್ತೇನೆ. ಈ ವರ್ಷದ ಮಹಾ ಸಭೆಯು ರಾಜಧಾನಿಯ ಸುಂದರವಾದ ಜಗನ್ಮೋಹನ ಅರಮನೆಯಲ್ಲಿ ನಡೆಯುತ್ತಿರಬಹುದಾಗಿಯೂ ನಮ್ಮನ್ನಾಳುವ ಶ್ರೀಮನ್ಮಹಾರಾಜರವರು ಈ ಸಭೆಯಲ್ಲಿ ಆಗ್ರಾಸನವನ್ನು ವಹಿಸುವರೆಂಬದಾಗಿಯೂ ಮತ್ತು ಈ ಲೋಕಪ್ರಸಿದ್ಧ ಮಹಾರಾಜರವರ ಸನ್ನಿಧಾನದಲ್ಲಿ ಕೆಲವರು ಒಕ್ಕಲಿಗರ ಮಹನೀಯರು ಈ ಸಂಘದ ಪ್ರೋತ್ಸಾಹಕ್ಕಾಗಿ ೪೫,೦೦೦ ರೂಪಾಯಿಗಳನ್ನು ಒಪ್ಪಿಸುವರೆಂಬದಾಗಿಯೂ ಕೇಳಿ ಆನಂದಭರಿತನಾದೆನು. ಇದೇ ರೀತಿ ಪ್ರತಿ ಒಬ್ಬರೂ ಪ್ರೋತ್ಸಾಹಪಡಿಸುವದಕ್ಕೆ ಮುಂದಾಗಿ ಬಂದು ಇಹಲೋಕದಲ್ಲಿ ಕೀರ್ತಿಯನ್ನೂ ಪರಲೋಕದಲ್ಲಿ ಸದ್ಗತಿಯನ್ನೂ ಸಂಪಾದಿಸಬೇಕೆಂದು ದೈನ್ಯದಿಂದ ಬೇಡಿಕೊಳ್ಳುತ್ತೇನೆ.

ಎಂ. ಎಸ್. ಕೆ.

ಮೈಸೂರು ನ್ಯಾಯವಿಧಾಯಕ ಸಭೆಯು.

ಎರಡನೇ ಸಭೆಯ ವೃತ್ತಾಂತವು.

ಮೈಸೂರು ಸಂಸ್ಥಾನದ ನ್ಯಾಯವಿಧಾಯಕ ಕೌನ್ಸಿಲ್ಲಿನ ಎರಡನೆಯ ಸಭೆಯು ಕಳೆದ ೨೮ನೆ ತಾ॥ ಬುಧವಾರ ಮಧ್ಯಾಹ್ನ ಬೆಂಗಳೂರು ಸರ್ಕಾರಿ ಪಬ್ಲಿಕ್ ಆಫೀಸ್ ಕಟ್ಟಡದಲ್ಲಿ ಜರುಗಿತು. ಮೆ॥ ಸಿ ಶ್ರೀನಿವಾಸಯ್ಯಂಗಾರ್ರವರು ವಿನಾ ಉಳಿದ ಕೌನ್ಸಿಲ್ ಮೆಂಬರುಗಳೆಲ್ಲಾ ಹಾಜರಾಗಿದ್ದರು. ಸಭೆಯು ಪ್ರಾರಂಭವಾದ ಕೂಡಲೇ ಪ್ರಸಿಡೆಂಟ್ ಮೆ॥ ಮಾಧವರಾಯರು ಎದ್ದು, ಮೆ॥ ಸಿ ಶ್ರೀನಿವಾಸಯ್ಯಂಗಾರ್ರು ಮೀಟಿಂಗಿಗೆ ಬರಲು ಅಸಂದರ್ಭವಾಯಿತೆಂತಲೂ, ಆದರೆ ಆ ದಿನ ಚರ್ಚಿಸಲ್ಪಡುವ ಕಾನೂನಿನ ಮುಸೂದೆಗಳ ಮುಖ್ಯ ಭಾಗಗಳನ್ನು ಅವರು ಸರಿಯಾದವುಗಳೆಂದು ಒಪ್ಪಿ ಸಮ್ಮತಿ ಹಾಕುತ್ತೇನೆಂತಲೂ ಇನ್ನು ಮುಂದಣ ಮೀಟಿಂಗುಗಳಲ್ಲಿ ಆ ಮುಸೂದೆಗಳ ವಿಷಯವಾಗಿ ಕೆಲವು ಸಲಹೆಗಳನ್ನು ಕೊಡಬೇಕೆಂದಿದೇನೆಂತಲೂ ಬರೆದಿದ್ದ ಕಾಗದವನ್ನು ಓದಿ ಹೇಳಿದರು. ತರುವಾಯ ಸೆಕ್ರೆಟರಿ ಮೆ॥ ಕೆ. ಮೈಲಾರಿರಾಯರು ಎದ್ದು ಸಭಿಕರ ಪರ್ಯಾಲೋಚನೆಗಾಗಿ ಪ್ಲಾಗ್ ಅ॥ ಕಮಿಷನರ್ ಮೆ॥ ಹೇಮಾ ಹನುಮಂತಯ್ಯನವರೂ, ಅಡ್ವೊಕೇಟ್ ಮೆ॥ ಎಸ್ ಆರ್ ಬಾಲಕೃಷ್ಣರಾಯರೂ, ಪಟೇಲ್ ಸುಬ್ಬರಾಯಪ್ಪನವರೂ, ಲಕ್ಷ್ಮೀನರಸಿಂಹಾಚಾರ್ರು ಬರೆದಿದ್ದ ವಿಚಾರಗಳನ್ನು ಓದಿ ಹೇಳಿದರು. ಅನಂತರ ಗ್ರಾಮಾಧಿಕಾರಿಗಳ ಕಾನೂನು ವಿಷಯವಾಗಿ ದೇವನಹಳ್ಳಿ ತಾಲ್ಲೂಕಿನ ಕೆಲವು ರೈತರು ಪ್ರತಿಭಟಿಸಿ ಬರೆದುಕೊಂಡಿದ್ದ ಅರ್ಜಿಯನ್ನು ಮೆ॥ ನರಸಿಂಹಯ್ಯಂಗಾರ್ರು ಸಭೆಯಲ್ಲಿ ಓದಿದರು.

ರೆವಿನ್ಯೂ ಕಮಿಷನರ್ ಮೆ॥ ಎ ರಂಗಸ್ವಾಮಯ್ಯಂಗಾರ್ರು, ಈಗ ಜಾರಿಯಲ್ಲಿರುವ ಸ್ಟಾಂಪ್ ಮತ್ತು ರೆಗ್ಯುಲೇಷನ್ ಎಂಬ ಕಾನೂನನ್ನು ಸ್ವಲ್ಪ ಮಟ್ಟಿಗೆ ಬದಲಾವಣೆ ಮಾಡತಕ್ಕ ಭಾಗದಲ್ಲಿ ಕೆಲವು ಸಲಹೆಗಳನ್ನು ಕೊಟ್ಟರು. ಡೆಪ್ಯುಟಿ ಕಮಿಷನರು ಪತ್ರಗಳ ಮೇಲಿನ ದಸ್ತಾವೇಜುಗಾರರಿಂದ ಹತ್ತು ರೂಪಾಯಿ ವಸೂಲ್ಮಾಡಬೇಕೆಂದು ಕಾನೂನಿದೆ. ಇದನ್ನು "ಹತ್ತು ರೂಪಾಯಿಗೆ ಮೀರದ ಪೆನಲ್ಟಿಗಳನ್ನು" ಎಂದು ಬದಲಾವಣೆ ಮಾಡಬೇಕು ಎಂತಲೂ ಇದರಿಂದ ಅವರಿಗೆ ಸಂದರ್ಭಾನುಸಾರ ಸೂಕ್ತ ತೋರಿದಷ್ಟು ಪೆನಲ್ಟಿ ವಸೂಲ್ಮಾಡುವ ಅಧಿಕಾರವನ್ನು ವಹಿಸಬೇಕಾದದ್ದು ಅವಶ್ಯವಾಗಿದೆ ಎಂತಲೂ ತಿಳಿಸಿದರು. ಇದಲ್ಲದೆ ಆ ಕಾನೂನಿನ ಇನ್ನು ಕೆಲವು ಭಾಗಗಳಲ್ಲೂ ಕೆಲವು ಬದಲಾವಣೆಗಳನ್ನು ಅವರು ಸೂಚಿಸಿದರು. ಗವರ್ನಮೆಂಟ್ ಅಡ್ವೊಕೇಟ್ ಮೆ॥ ಎಸ್. ನಾರಾಯಣರಾಯರು ಈ ಬದಲಾವಣೆಗಳು ಅವಶ್ಯವಾದವುಗಳೆಂದು ಸಮ್ಮತಿ ಹಾಕಿದರು. ತರುವಾಯ ಇತರ ಮೆಂಬರುಗಳೂ ಅದರಂತೆಯೇ ಒಪ್ಪಿಕೊಂಡರು.

ಗ್ರಾಮಾಧಿಕಾರಿಗಳ ಕಾನೂನು.

ಕೌನ್ಸಿಲರ್ ಮೆ॥ ಟಿ ಆನಂದರಾಯರು ಎದ್ದು ಗ್ರಾಮಾಧಿಕಾರಿಗಳ ಕಾನೂನು ವಿಚಾರವನ್ನು ಕುರಿತು ಉಪನ್ಯಾಸ ಮಾಡಿದರು. ಸರ್ಕಾರಿ ಗ್ರಾಮಗಳ ಪಟೇಲ, ಶಾನುಭೋಗ, ನೀರುಗಂಟಿ, ತೋಟಿ, ತಳವಾರಿ ಎಂಬುವರ ಅಧಿಕಾರಕ್ಕೂ ಇನಾಮತಿ ಗ್ರಾಮಗಳಲ್ಲಿರುವ ಅಂಥಾ ನೌಕರರ ಅಧಿಕಾರಕ್ಕೂ ಈ ಕಾನೂನಿನಲ್ಲಿ ಕೆಲವು ವ್ಯತ್ಯಾಸಗಳನ್ನು ಮಾಡಿದೆ. ಇಂಥಾ ವ್ಯತ್ಯಾಸಗಳೇನೂ ಇರಬಾರದೆಂದು ತೋರುತ್ತದೆ. ಇನಾಂದಾರರೂ ತಮ್ಮ ಗ್ರಾಮನೌಕರರಿಂದ ತೃಪ್ತಿಕರವಾಗಿ ಕೆಲಸ ತೆಗೆದುಕೊಳ್ಳುವುದಕ್ಕೆ ಅನುಕೂಲಿಸುವಂತೆ ಮಾಡಬೇಕು. ಈ ಭಾಗವನ್ನು ಮುಂದಕ್ಕೆ ಚರ್ಚೆಮಾಡಬಹುದು. ಮೆ॥ ಹೇಮಾ ಹನುಮಂತಯ್ಯನವರು ಹೇಳುವ ಕೆಲವು ಬದಲಾವಣೆಗಳು ಸಹಜವಾಗಿರುತ್ತವೆ. ಅಪುತ್ರವತಿಯಾದ ವಿಧವೆಯ ಹೆಸರನ್ನು ಸರ್ಕಾರಿ ರಿಜಿಸ್ಟರಿನಲ್ಲಿ ದಾಖಲ್ ಮಾಡಿಕೊಳ್ಳುವುದಕ್ಕೂ, ಆ ನೌಕರಿಯ ಆದಾಯದಲ್ಲಿ ಅವಳಿಗೆ ನಾಲ್ಕನೇ ಒಂದು ಹಿಸ್ಸೆ ಜೀವನಕ್ಕಾಗಿ ಸಲಿಕೆಯಾಗುವಂತೆ ಮಾಡುವುದಕ್ಕೂ ಕಾನೂನು ಬದಲಾಯಿಸಬೇಕೆಂದು ಅವರು ನ್ಯಾಯವಾಗಿ ಸೂಚಿಸಿರುತ್ತಾರೆ. ಇಂಥಾ ಹಕ್ಕುದಾರಿಗೆ ಲೋಪ ಬಾರದಂತೆ ಸರ್ಕಾರದವರು ನೋಡಿಕೊಳ್ಳಬೇಕಾಗಿದೆ ಎಂಬೀ ರೀತಿ ಮೆ॥ ಟಿ ಆನಂದರಾಯರು ತಿಳಿಸಿದರು. ತರುವಾಯ ಮೆ॥ ಗಳಾದ ರಂಗೈಯ್ಯಂಗಾರೂ ರಂಗಸ್ವಾಮಯ್ಯಂಗಾರೂ ಕೆಲವು ಮಾತನ್ನಾಡಿದರು. ದಿವಾನರವರು ಹಕ್ಕುದಾರಿಗೆ ಲೋಪ ಬಾರದಂತೆ ಕಾನೂನು ಮಾಡಬೇಕೆಂಬುವುದೇ ಮುಖ್ಯ ಉದ್ದೇಶವೆಂದು ತಿಳಿಸಿದರು. ಕಡೆಗೆ ಈ ಕಾನೂನನ್ನು ಚನ್ನಾಗಿ ಚರ್ಚೆ ಮಾಡಿ ಲೋಪದೋಷಗಳನ್ನೆಲ್ಲಾ ತೆಗೆದು ಅವಶ್ಯವಾದ ಸಂಗತಿಗಳನ್ನು ಸೇರಿಸಿ ಗೊತ್ತುಮಾಡಿ ತರಬೇಕೆಂದು ಒಂದು ಕಮಿಟಿಯನ್ನು ನೇಮಕ ಮಾಡಿದರು. ಈ ಕಮಿಟಿಗೆ ಮೆ॥ ಗಳಾದ ಟಿ ಆನಂದರಾಯರು, ಎ ರಂಗಸ್ವಾಮಯ್ಯಂಗಾರ್ರು, ವಿ ಎಸ್. ನರಸಿಂಹಯ್ಯಂಗಾರ್ರು, ಎಂ. ಕಾಂತರಾಜೇ ಅರಸಿನವರು, ಎಂ ಸಿ. ರಂಗೈಯ್ಯಂಗಾರ್ರು ಮೆಂಬರಾಗಿ ನೇಮಿಸಲ್ಪಟ್ಟರು. ಇವರು ನವೆಂಬರ್ ೨೦ ರೊಳಗಾಗಿ ಈ ಕಾನೂನನ್ನು ಸಿದ್ಧಮಾಡಿ ಕೌನ್ಸಿಲ್ಲಿಗೆ ಕಳುಹಿಸಬೇಕಾಗಿದೆ.

ಪೋಲೀಸ್ ಕಾನೂನು

ತರುವಾಯ ಕೌನ್ಸಿಲರ್ ಮೆ॥ ಕೆ ಪಿ. ಪುಟ್ಟಣ್ಣಚೆಟ್ಟಿಯವರು ಪೋಲೀಸ್ ಕಾನೂನನ್ನು ಕುರಿತು ಕೆಲವು ಮಾತು ಹೇಳಿದರು. ಈ ಕಾನೂನು ವಿಷಯದಲ್ಲಿ ಈಚೆಗೆ ಕೆಲವರು ಆಕ್ಷೇಪಣೆ ಮಾಡಿರುವುದನ್ನು ಕುರಿತು ತಿಳಿಸಿದರು. ಅಮಲ್ದಾರರಿಗೂ ಡೆಪ್ಯುಟಿ ಕಮಿಷನರಿಗೂ ಪೋಲೀಸ್ ಅಧಿಕಾರವಿರಕೂಡದೆಂತಲೂ ಮೊಕದ್ದಮೆ ಹಿಡಿದು ನ್ಯಾಯಾನ್ಯಾಯಗಳನ್ನು ಇತ್ಯರ್ಥ ಮಾಡತಕ್ಕ ಈ ಅಧಿಕಾರಿಗಳಿಗೆ ಪೋಲೀಸಿನವರ ಮೇಲೆ ಅಧಿಕಾರವಿರುವುದು ಸರಿಯಲ್ಲವೆಂತಲೂ ಆಕ್ಷೇಪಣೆ ಮಾಡುತ್ತಾರೆ. ಪೋಲೀಸಿನವರ ಮೇಲೆ ಆ ಅಧಿಕಾರಿಗಳಿಗೆ ಅಧಿಕಾರವಿರುವುದರಿಂದ ತುಂಬಾ ತೃಪ್ತಿಕರವಾಗಿ ಕೆಲಸ ಕಾರ್ಯಗಳು ನಡೆಯುವವು. ಈಗ ಜಾರಿಯಲ್ಲಿರುವ ಕ್ರಮಗಳನ್ನೇ ಕಾನೂನಾಗಿ ಮಾಡಿದೆ. ಮತ್ತು ಅದರಲ್ಲಿ ಬದಲಾವಣೆ ಏನಾದರೂ ಕಂಡುಬಂದಲ್ಲಿ ಪೋಲೀಸಿನವರಿಗೇ ಹೆಚ್ಚು ಅಧಿಕಾರ ವಹಿಸಿಕೊಡಲಾಗಿದೆ. ಈಗ ಅಮಲ್ದಾರರಿಗೂ ಡೆಪ್ಯುಟಿ ಕಮಿಷನರಿಗೂ ಪೋಲೀಸ್ ಅಧಿಕಾರವಿರೋಣವರಿಂದ ಯಾವ ಅನ್ಯಾಯವೂ ಅನಾನುಕೂಲವೂ ಉಂಟಾಗಿರುವದಿಲ್ಲ. ಅತ್ತಲಾಗಿ ಜುಡಿಷಲ್ ಮತ್ತು ಎಗ್ಜಿಕ್ಯುಟಿವ್ ಅಧಿಕಾರಗಳನ್ನು ಪ್ರತ್ಯೇಕ ಮಾಡಿಡುವುದು ತುಂಬಾ ಅನಾನುಕೂಲವಾಗಿರುತ್ತದೆ. ಇದು ದೊಡ್ಡ ವಿಷಯ. ಇದನ್ನು ಗವರ್ನಮೆಂಟಿನವರು ಇನ್ನೂ ಆಲೋಚನೆಯಲ್ಲಿ ಇಟ್ಟುಕೊಂಡಿದಾರೆ ಎಂಬೀ ರೀತಿ ಹೇಳಿದರು. ಈ ಅಭಿಪ್ರಾಯಗಳನ್ನು ಬ್ಯಾರಿಸ್ಟರ್ ಮೆ॥ ಬಿ ನಾಗಪ್ಪನವರು ಅನುಮೋದಿಸಿದರು. ಮೆಂಬರುಗಳೆಲ್ಲಾ ಅದರಂತೆ ಒಪ್ಪಿಕೊಂಡರು. ಈ ಕಾನೂನನ್ನು ತಿದ್ದಿ ಸರಿಪಡಿಸಿ ಮೇಲ್ಕಂಡ ತಾರೀಖಿನೊಳಗಾಗಿ ಹಾಜರು ಮಾಡುವಂತೆ ಒಂದು ಕಮಿಟಿ ನೇಮಕವಾಯಿತು. ಈ ಕಮಿಟಿಗೆ ಮೆ॥ ಗಳಾದ ಕೆ ಪಿ ಪುಟ್ಟಣ್ಣ ಚೆಟ್ಟಿಯವರು, ವಿ ಎಸ್ ನರಸಿಂಹಯ್ಯಂಗಾರ್ರು, ಎಂ. ಸಿ ರಂಗೈಯ್ಯಂಗಾರ್ರು, ಬಿ. ನಾಗಪ್ಪನವರು ಮೆಂಬರುಗಳಾಗಿ ನೇಮಿಸಲ್ಪಟ್ಟರು.

ಕೋರ್ಟ್ ಫೀಜಿನ ಕಾನೂನು

ಅನಂತರ ಕೌನ್ಸಿಲರ್ ಮೆ॥ ಟಿ ಆನಂದರಾಯರು ಕೋರ್ಟ್ ಫೀಜಿನ ಕಾನೂನಿನಲ್ಲಿ ಫಸಲಿಗಾಗಿ ದಾವಾ ತರತಕ್ಕವನು ಫಸಲಿನ ಬೆಲೆಗೆ ತಕ್ಕಷ್ಟು ಫೀಜು ಕಟ್ಟತಕ್ಕ ವಿಚಾರದಲ್ಲಿ ಕೆಲವು ಬದಲಾವಣೆಗಳಾಗಬೇಕೆಂದು ಸೂಚಿಸಿದರು. ಮೆ॥ ಬಿ. ನಾಗಪ್ಪನವರು ಈ ವಿಷಯವನ್ನು ಕಮಿಟಿಗೆ ಒಪ್ಪಿಸಿ ತಿದ್ದಿ ಸರಿಪಡಿಸಬೇಕೆಂದು ಸೂಚಿಸಿದರು. ಮೆ॥ ರಂಗೈಯ್ಯಂಗಾರೂ ಅದೇ ಅರ್ಥಕ್ಕೆ ಕೆಲವು ಸಂಗತಿಗಳನ್ನು ತಿಳಿಸಿದರು. ಕಡೆಗೆ ದಿವಾನರವರು ಈ ಕಾನೂನು ಬದಲಾವಣೆಯನ್ನು ಕಮಿಟಿಯವರು ಚರ್ಚಿಸಿ ಮೇಲ್ಕಂಡ ತಾರೀಖಿನೊಳಗಾಗಿ ತಿಳಿಸಬೇಕೆಂದು ಇತ್ಯರ್ಥ ಮಾಡಿದರು. ಇದಕ್ಕಾಗಿ ನೇಮಿಸಲ್ಪಟ್ಟಿರುವ ಕಮಿಟಿಯಲ್ಲಿ ಮೆ॥ ಗಳಾದ ಟಿ ಆನಂದರಾಯರು, ಎ ರಂಗಸ್ವಾಮಯ್ಯಂಗಾರ್ರು, ಎಸ್ ನಾರಾಯಣರಾಯರು, ಎಂ. ಸಿ. ರಂಗೈಯ್ಯಂಗಾರ್ರು, ಬಿ ನಾಗಪ್ಪನವರು ಮೆಂಬರುಗಳಾಗಿರುತ್ತಾರೆ.

ಅನಂತರ ಈ ಎರಡನೇ ಸಭೆಯು ಬರಖಾಸ್ತಾಯಿತು.

ಇಂಡಿಯಾ ದೇಶದ ವೃತ್ತಾಂತಗಳು.

ಪಂಜಾಬ್ ಆಧಿಪತ್ಯಕ್ಕೆ ಸೇರಿದ ಧಾತಿಯಾ ಸಂಸ್ಥಾನದಲ್ಲಿ ಮಹಾರಾಜಾ ಗೋವಿಂದಸಿಂಗ್‌ಜೆಯವರಿಗೆ ಕಳೆದ ವಾರ ಪಟ್ಟಾಭಿಷೇಕವಾಯಿತು. ಇವರಿಗೆ ೨೨ ವರುಷ ವಯಸ್ಸಾಗಿ ಸಂಸ್ಥಾನವನ್ನು ಆಳುವದಕ್ಕೆ ಅವಶ್ಯವಾದ ವಿದ್ಯಾದಿ ಸಾಮರ್ಥ್ಯಗಳನ್ನು ಸಂಪಾದಿಸಿಕೊಂಡಿರುತ್ತಾರೆ. ಇವರ ಆಳ್ವಿಕೆಯಲ್ಲಿ ಸಂಸ್ಥಾನವು ಅಭಿವೃದ್ಧಿಗೆ ಬಂದೀತೆಂದು ನಿರೀಕ್ಷಿಸಲ್ಪಟ್ಟಿದೆ.

* * *

ಬಿಹಾರ್ ಆಧಿಪತ್ಯಕ್ಕೆ ಸೇರಿದ ಚಂಪಾರಣ್ಯ ಡಿಸ್ಟ್ರಿಕ್ಟ್ ಜೈಲ್‌ಖಾನೆಯಲ್ಲಿ ಹತ್ತು ಮಂದಿ ಖೈದಿಗಳು ದಂಗೆಮಾಡಿ ಹತ್ತು ಬಂದೂಕುಗಳನ್ನೂ ಕೆಲವು ಮಟ್ಟಿಗೆ ಮದ್ದುಗುಂಡು ತೋಟಾಗಳನ್ನೂ ಅಪಹರಿಸಿಕೊಂಡು ಓಡಿಹೋದರು. ಅವರು ರಂಗೂನ್ ಪಟ್ಟಣದ ಕಡೆ ಹೋಗಿರುತ್ತಾರೆಂದು ತಿಳಿದದ್ದರಿಂದ ಅಲ್ಲಿನ ಪೋಲೀಸಿನವರು ಅವರನ್ನು ಹಿಡಿಯುವುದಕ್ಕೆ ಹೊಂಚುಹಾಕಿಕೊಂಡಿದ್ದಾರೆ. ಈ ಸೈನಿಕ ಒಬ್ಬನನ್ನು ಕೊಂದು, ೫ ಮಂದಿಯನ್ನು ಹಿಡಿದಿರುತ್ತಾರೆಂದು ತಿಳಿದು ಬಂದಿದೆ.

* * *

ರಾವಲ್ ಪಿಂಡಿ ಪಟ್ಟಣದ ರೈಲ್ವೆ ಸ್ಟೇಷನ್ ಮಾಸ್ಟರ್ ಮೂರ್ ಎಂಬವನು ರೈಲಿನಲ್ಲಿ ಪ್ರಯಾಣ ಮಾಡುತ್ತಿದ್ದ ಒಬ್ಬ ದೇಶೀಯ ಸ್ತ್ರೀಯನ್ನು ತಡೆದು ಅವಳನ್ನು ಮಾನಭಂಗಪಡಿಸಿದನೆಂದು ಮೊಕದ್ದಮೆ ಆಗಿ ಸೆಷನ್ ಕೋರ್ಟಿಗೆ ಗುರಿಯಾಗಿದೆ. ಛೀಫ್ ಕೋರ್ಟಿನವರು ಅಪರಾಧಿಯನ್ನು ೩,೦೦೦ ರೂಪಾಯಿನ ಬಾಬತು ಮೂರು ಜನರನ್ನು ಜಾಮೀನು ತೆಗೆದುಕೊಂಡು ಬಿಟ್ಟಿದಾರೆ.

* * *

ಹಿಂದುಸ್ಥಾನದಲ್ಲಿ ಹಿಂದಿನ ವರುಷ ೧೯೬೬ ಅಚ್ಚಿನ ಕಾರ್ಖಾನೆ (ಮುದ್ರಾಯಂತ್ರ)ಗಳಿದ್ದವು. ಕಳೆದ ವರುಷ ಅವುಗಳ ಸಂಖ್ಯೆಯು ೨,೩೯೦ಕ್ಕೆ ಏರಿತು. ವರ್ತಮಾನ ಪತ್ರಿಕೆಗಳ ಸಂಖ್ಯೆಯು ೬೩೮ರಿಂದ ೬೬೬ಕ್ಕೆ ಏರಿರುತ್ತದೆ. ಮಾಸ, ಪಕ್ಷಗಳ ಪತ್ರಿಕೆಗಳ ಸಂಖ್ಯೆಯು ೫೧೦ರಿಂದ ೬೯೩ಕ್ಕೆ ಏರಿರುವುದು. ವರ್ತಮಾನ ಪತ್ರಿಕೆಗಳು ಬೊಂಬಾಯಿ ಆಧಿಪತ್ಯದೊಳಗೆ ೧೬೩, ಮದರಾಸ್ ಆಧಿಪತ್ಯದಲ್ಲಿ ೧೨೩, ಬಂಗಾಳದಲ್ಲಿ ೧೨೨ ಪ್ರಕಟವಾಗುತ್ತಿರುವವೆಂದು ೧೯೦೫—೦೬ನೇ ಸಾಲಿನ ರಿಪೋರ್ಟಿನಿಂದ ತಿಳಿಯಬರುತ್ತದೆ.

* * *

ಕೋಚಿನ್ ಸಂಸ್ಥಾನದ ರಾಜರು ಮದರಾಸಿಗೆ ಬಂದಾಗ ಇಳಿದುಕೊಳ್ಳುವುದಕ್ಕೋಸ್ಕರ ಅಲ್ಲಿ ೪೦,೦೦೦ ರೂಪಾಯಿ ಕೊಟ್ಟು ತಲ್ಬೋಟ್ ಗಾರ್ಡನ್ ಎಂಬ ಬಂಗಲೆಯನ್ನು ಕ್ರಯಕ್ಕೆ ಪಡೆದುಕೊಂಡು, ಅದರಲ್ಲಿದ್ದ ಹಳೆಯ ಕಟ್ಟಡಗಳನ್ನೆಲ್ಲಾ ಒಡೆಸಿಹಾಕಿ, ಮೆ॥ ನಂಬೆರುಮಾಳ್ ಚೆಟ್ಟಿ ಎಂಬ ಕಂಟ್ರಾಕ್ಟರಿಗೆ ವಹಿಸಿ, ೧,೫೦,೦೦೦ ರೂಪಾಯಿಗೆ ಹೊಸ ಕಟ್ಟಡವನ್ನು ಯೋಗ್ಯವಾದ ರೀತಿಯಲ್ಲಿ ಅರಮನೆ ಕಟ್ಟಿಸುವಂತೆ ಹೇಳಿದರು. ಈಗ ಆ ಕಂಟ್ರಾಕ್ಟರು ಕಾಮಗಾರಿಯನ್ನೆಲ್ಲಾ ಪೂರೈಸಿರುತ್ತಾನೆ. ಕೋಚಿನ್ ಸರ್ಕಾರದವರು ಆತನಿಗೆ ಆ ಹಣವನ್ನು ಬಟವಾಡೆ ಮಾಡಲಿಲ್ಲವೆಂತಲೂ, ಈಗ ಆತನು ಅದಕ್ಕಾಗಿ ರಾಜರ ಮೇಲೆ ದಾವಾ ಮಾಹಸನವನಾಗಿದಾನೆಂತಲೂ ಪ್ರಕಟವಾಗಿದೆ.

* * *

ಕೆಲವು ಕಾಲಕ್ಕೆ ಮುಂಚೆ ಪೂರಿ (ಜಗನ್ನಾಥ) ಹತ್ತಿರ ರೈಲ್ ಗಾಡಿಯಲ್ಲಿ ಪಟೇಲ ಕುಮಾರನೆಂಬೊಬ್ಬನು ಸತ್ತುಹೋಗಿದ್ದನು. ಗವರ್ನಮೆಂಟಿನವರು ತಕ್ಕಮಟ್ಟಿಗೆ ಅವನ ಮರಣಕ್ಕೆ ಕಾರಣವನ್ನು ವಿಚಾರಿಸಿ ಅನುಮಾನವೇನೂ ಕಂಡುಬಾರದೆ ಹೋದದ್ದರಿಂದ ಅದು ಅಕಸ್ಮಾತ್ತಾದ ಮರಣವೆಂದು ತೀರ್ಮಾನಿಸಿ ಆ ವಿಷಯವನ್ನು ಮುಕ್ತಾಯ ಮಾಡಿದ್ದರು. ಆದರೆ ಬಂಗಾಳಾ ವರ್ತಮಾನ ಪತ್ರಿಕೆಗಳು ಅವನ ಮರಣದ ವಿಷಯದಲ್ಲಿ ನಾನಾ ರೀತಿ ಬಾತ್ಮಿಗಳನ್ನು ಪ್ರಕಟಿಸುತ್ತಾ ಬಂದವು. ಆದರ ಮೇಲೆ ಈಗ ಗವರ್ನಮೆಂಟಿನವರು ಮತ್ತೆ ಈ ಮರಣದ ಪೂರ್ವೋತ್ತರವೇನೆಂದು ಕಂಡುಹಿಡಿಯುವಂತೆ ಒಬ್ಬ ಪೋಲೀಸ್ ಸೂಪರಿಂಟೆಂಡೆಂಟರಿಗೆ ಹುಕುಂ ಕೊಟ್ಟಿದಾರೆ.

* * *

ಬಂಗಾಳಾ ಆಧಿಪತ್ಯಕ್ಕೆ ಸೇರಿದ ಬಾರಾಸೇತ್ ಪಟ್ಟಣದ ಬಳಿ ಜಾಪೂರು ಎಂಬೊಂದು ಜಮೀನ್ದಾರಿ ಇರುತ್ತದೆ. ಉಮೇಶ ಚಂದ್ರದಾಸನೆಂಬ ಜಮೀನ್ದಾರನ ಮನೆಗೆ ಕಳೆದ ವಾರ ಒಂದು ದಿನ ರಾತ್ರಿ ಸುಮಾರು ೩೫ ಮಂದಿ ಆಯುಧಪಾಣಿಗಳಾಗಿ ನುಗ್ಗಿ, ಮಲಗಿದ್ದವರನ್ನೆಲ್ಲಾ ಚನ್ನಾಗಿ ಹೊಡೆಯಲಾರಂಭಿಸಿದರು. ಯಜಮಾನನು ಇನ್ನೊಬ್ಬನೂ ಇನ್ನೊಂದು ಬಾಗಿಲಿನಿಂದ ನುಗ್ಗಿ ಹೊರಕ್ಕೆ ಹೋದರು. ಅವನ ಮಗ, ಸೇವಕರು, ಮತ್ತು ಹೆಂಗಸರು ಮೊದಲಾದವರನ್ನೆಲ್ಲಾ ಕಳ್ಳರು ಬಹಳವಾಗಿ ಹಿಂಸೆ ಮಾಡಿ, ಸುಮಾರಾಗಿ ಏಳುಸಾವಿರ ರೂಪಾಯಿ ನಗನಾಣ್ಯಗಳನ್ನು ಅಪಹರಿಸಿಕೊಂಡು ಹೋದರು. ಏಟು ತಿಂದವರೆಲ್ಲಾ ಈಗ ಆಸ್ಪತ್ರೆಯಲ್ಲಿ ಚಿಕಿತ್ಸೆ ಮಾಡಿಸಿಕೊಳ್ಳುತ್ತಿದಾರೆ. ಕಳ್ಳರೇನೋ ಇನ್ನೂ ಪತ್ತೆ ಆಗಲಿಲ್ಲ.

* * *

ಇಂಗ್ಲಿಷ್ ಚಕ್ರಾಧಿಪತ್ಯದ ಯುವರಾಜರಾದ ಪ್ರಿನ್ಸ್ ಆಫ್ ವೇಲ್ಸ್‌ರವರು ಹಿಂದುಸ್ಥಾನಕ್ಕೆ ದಯಮಾಡಿದ್ದಾಗ್ಗೆ ಮಧುರಾ ಪಟ್ಟಣಕ್ಕೆ ಅವರನ್ನು ಕರೆಸಿಕೊಳ್ಳಬೇಕೆಂದು ಅಲ್ಲಿನ ಪುರಜನರು ಬಹಳ ಉತ್ಸಾಹಪಟ್ಟರು. ಆದರೆ ಯುವರಾಜರವರಿಗೆ ಅಲ್ಲಿಗೆ ದಯಮಾಡಲು ಅವಕಾಶವಾಗದೆ ಹೋಯಿತು. ಆದರೂ ಅಲ್ಲಿನ ಪ್ರಜೆಗಳು ತಮ್ಮ ಊರಿನಲ್ಲಿರುವ ಪ್ರಖ್ಯಾತವಾದ ಮೀನಾಕ್ಷಿ ದೇವಸ್ಥಾನದ ತಸ್ವೀರನ್ನು ಬರೆಸಿ, ಯುವರಾಜರವರಿಗೆ ಒಪ್ಪಿಸುವುದರ ಮೂಲಕ ತಮ್ಮ ರಾಜಭಕ್ತಿಯನ್ನು ಪ್ರಕಾಶಪಡಿಸಬೇಕೆಂದು ಗೊತ್ತುಮಾಡಿದರು. ಶಿವಗಂಗೆಯಲ್ಲಿರುವ ಮೆ॥ ಮಿಲ್ಲರ್ ಎಂಬ ಪ್ರಸಿದ್ಧ ಚಿತ್ರಗಾರನು ಈ ತಸ್ವೀರನ್ನು ಬರೆಯುತ್ತಿದಾನೆ. ಅದಕ್ಕೆ ಸುಮಾರು ೩,೦೦೦ ರೂಪಾಯಿ ಖರ್ಚಾಗುವುದೆಂತಲೂ, ಅದು ೭೨ ಅಂಗುಲ ಅಗಲವಾಗಿಯೂ ೪೮ ಅಂಗುಲ ಎತ್ತರವಾಗಿಯೂ ಇರುವುದೆಂತಲೂ ಪ್ರಕಟವಾಗಿದೆ.

* * *

ಕಲ್ಕತ್ತಾ ಪಟ್ಟಣದಲ್ಲಿ ಪ್ರಕಟವಾಗುವ "ವಂದೇ ಮಾತರಂ" ಎಂಬ ವರ್ತಮಾನಪತ್ರಿಕೆಯ ಎಡಿಟರ ಮೇಲೆ ಸರ್ಕಾರದವರು ರಾಜ

ದ್ರೋಹದ ಕ್ರಿಮಿನಲ್ ಮೊಕದ್ದಮೆಯನ್ನು ತಂದಿದ್ದಾರೆ. ಈ ಮೊಕದ್ದಮೆಯಲ್ಲಿ ಮಿ॥ ಬಿಪಿನ್ ಚಂದ್ರಪಾಲ್‌ಯವರನ್ನು ಸಾಕ್ಷಿ ಹೇಳಬೇಕೆಂದು ಕರೆಸಿ ಕೇಳಿದರು. ಅದಕ್ಕೆ ಮಿ॥ ಪಾಲ್‌ಯವರು—ಸಾಕ್ಷಿ ನುಡಿಯುವುದು ನನ್ನ ಮನಸ್ಸಾಕ್ಷಿಗೆ ಒಪ್ಪಿತವಾಗಿಲ್ಲವಾದದ್ದರಿಂದ ನಾನು ಸಾಕ್ಷ್ಯ ಹೇಳಲಾರೆನು ಎಂದು ಉತ್ತರ ಕೊಟ್ಟರು. ಮ್ಯಾಜಿಸ್ಟ್ರೇಟರು ಅವರಿಗೆ ಚನ್ನಾಗಿ ಆಲೋಚನೆ ಮಾಡಿ ಮಾತನಾಡಿ ಎಂದು ಎಚ್ಚರಿಸಿ ಮೂರು ದಿನ ಅವಕಾಶಕೊಟ್ಟರು. ಕಡೆಗೂ ಮಿ॥ ಪಾಲ್‌ಯವರು ಸಾಕ್ಷ್ಯ ಕೊಡಲಾರೆನೆಂದು ತಿರಸ್ಕರಿಸಿದ್ದರಿಂದ ಮ್ಯಾಜಿಸ್ಟ್ರೇಟರು ಮಿ॥ ಪಾಲ್‌ಯವರ ಮೇಲೆ ಕೋರ್ಟಿಗೆ ಅವಮಾನ ಮಾಡಿದರೆಂಬ ಅಪರಾಧವನ್ನು ಹೊರಿಸಿ, ವಿಚಾರಣೆಗೆ ಗುರಿಮಾಡಿರುತ್ತಾರೆ.

***

ಕಲ್ಕತ್ತಾ ಹೈಕೋರ್ಟಿನಲ್ಲಿ ಜಸ್ಟಿಸ್ ಚಿಟ್ಟಿಯವರು ಶಂಕರಿಯಾ ದಾಸ್ ಎಂಬುವನನ್ನು ಕೊಲೆಯ ಅಪರಾಧಕ್ಕಾಗಿ ದಯರ್ಯಾಫ್ತು ಮಾಡಿದರು. ಮೊದಲನೆಯ ದಯರ್ಯಾಫ್ತಿಯಲ್ಲಿ ಪಂಚಾಯಿತರ ಪೈಕಿ ನಾಲ್ಕು ಜನರು ಅವನು ಅಪರಾಧಿಯಲ್ಲವೆಂದು ಹೇಳಿದರು. ಎರಡನೆಯ ದಯರ್ಯಾಫ್ತಿಯಲ್ಲಿ ಆರು ಮಂದಿ ಪಂಚಾಯಿತರು ಅವನು ನಿರಪರಾಧಿ ಎಂದು ಅಭಿಪ್ರಾಯಪಟ್ಟರು. ಇದಲ್ಲದೆ ಅವನು ಕೊಲೆ ನಡಿಸಿದನೆಂಬುವುದಕ್ಕೆ ನೇರವಾದ ರುಜುವಾತೇನೂ ಬರಲಿಲ್ಲ. ಆದರೂ ಜಡ್ಜಿಗಳು ಅವನಿಗೆ ಮರಣ ದಂಡನೆಯನ್ನು ವಿಧಿಸಿದ್ದಾರೆ. ಇದನ್ನು ನೋಡಿ ಕಲ್ಕತ್ತಾ ಪಟ್ಟಣದ ಸುಮಾರು ೬೦೦ ಮಂದಿ ಲಾಯರುಗಳೂ ದೊಡ್ಡಮನುಷ್ಯರೂ ಒಂದು ಅರ್ಜಿಯನ್ನು ಬರೆದು, ಶಂಕರಿಯಾ ದಾಸ್ ಎಂಬುವನ ವಿಷಯದಲ್ಲಿ ಲೆಫ್ಟಿನೆಂಟ್ ಗವರ್ನರವರು ಕರುಣವನ್ನು ತೋರಿಸಿ ಕ್ಷಮಾಪಣೆ ಮಾಡಬೇಕೆಂದು ಬೇಡಿಕೊಂಡಿದ್ದಾರೆ

***

ಪೂರ್ವ ಬಂಗಾಳಾ ಆಧಿಪತ್ಯಕ್ಕೆ ಸೇರಿದ ಒರಿಸ್ಸಾ ಡಿಸ್ಟ್ರಿಕ್ಟಿನಲ್ಲಿ ಪ್ರವಾಹಗಳ ದೆಸೆಯಿಂದ ಅಪಾರವಾದ ಕಷ್ಟನಷ್ಟಗಳುಂಟಾಗಿವೆ ಎಂದು ತಂತೀ ವರ್ತಮಾನ ಬಂದಿದೆ. ಸುಮಾರು ೧೦೦ ಮೈಲಿ ಉದ್ದವೂ ೬೦ ಮೈಲಿ ಅಗಲವೂ ಉಳ್ಳ ಪ್ರದೇಶವೆಲ್ಲಾ ನೀರಿನಲ್ಲಿ ಮುಳುಗಿ ಹೋಗಿದೆ. ಆ ಪ್ರಾಂತ್ಯದಲ್ಲಿ ಪ್ರಜೆಗಳಾಗಲಿ ಅವರ ಮನೆಮಠಗಳಾಗಲಿ ಜಮೀನುಗಳಾಗಲಿ ಕಾಣುತ್ತಿಲ್ಲ. ಅನೇಕಾನೇಕ ಸಂಸಾರಗಳು ಮಕ್ಕಳ ಸಹಿತ ಆಹಾರವಿಲ್ಲದೆ ಚಳಿ ಗಾಳಿಗಳಲ್ಲಿ "ಸಿಕ್ಕಿ" ಅಲೆಯುತ್ತಿದ್ದಾರೆ. ಮಳೆಯು ಈವರೆಗೂ ಸಾರೋದ್ಧಾರವಾಗಿ ಸುರಿಯುತ್ತಲೇ ಇದೆ. ಆಸ್ತಿಪಾಸ್ತಿಗಳೂ ಗೋಕಾಯಿಗಳೂ ಪ್ರವಾಹದಲ್ಲಿ ಕೊಚ್ಚಿಕೊಂಡು ಹೋದವು. ಕೆಲವು ಗ್ರಾಮಗಳಲ್ಲಿ ಪೋಲೀಸಿನವರು ತುಂಬಾ ಸಾಹಸಪಟ್ಟು ಸಾಧ್ಯವಾದಷ್ಟು ಜನರನ್ನು ಇತರ ಕಡೆಗಳಿಗೆ ಕರೆದುತಂದರು. ಇನ್ನೂ ಅನೇಕ ಗ್ರಾಮಗಳಲ್ಲಿ ಪ್ರಜೆಗಳು ಬಹಳ ಕಷ್ಟಕ್ಕೆ ಗುರಿಯಾಗಿದ್ದಾರೆ. ಎಷ್ಟು ಮಂದಿ ಪ್ರಾಣ ಕಳಕೊಂಡರೋ ಇನ್ನೂ ಪ್ರಕಟವಾಗಲಿಲ್ಲ. ಸಬ್ ಡಿವಿಜನ್ ಆಫೀಸರವರೂ ಇತರ ನೌಕರರೂ ಆ ಪ್ರಾಂತ್ಯಕ್ಕೆ ಹೋಗಿ ಜನರಿಗೆ ಸಹಾಯಮಾಡಲಾರಂಭಿಸಿದ್ದಾರೆ.

***

ವಿಜಯನಗರದ ಹತ್ತಿರ ಬಂಟುಪಲ್ಲಿ ಎಂಬ ಒಂದು ಗ್ರಾಮವಿರುತ್ತದೆ. ಅಲ್ಲಿ ಬರೀ ಚೆಟ್ಟಿದ ನಿವಾಸಿಗಳೇ ವಾಸಮಾಡುತ್ತಾರೆ. ಅವರು ಮನೆಮಠಗಳನ್ನೂ ಕಟ್ಟಿಕೊಂಡಿಲ್ಲ. ಈಚೆಗೆ ಅವರಲ್ಲಿ ಐದು ಮಂದಿ ಒಂದು ಕಳುವನ್ನು ನಡಸಿದರೆಂದು ತಿಳಿದುಬಂದದ್ದರಿಂದ ಅವರನ್ನು ಹಿಡಿದುತರುವುದಕ್ಕೆ ಒಬ್ಬ ಸಬ್ ಇನಸ್ಪೆಕ್ಟರೂ ಹತ್ತು ಮಂದಿ ಪೋಲೀಸಿನವರೂ ಆ ಗ್ರಾಮಕ್ಕೆ ಹೋದರು. ಪತ್ತೆಮಾಡಿ ಆ ಐದು ಜನರನ್ನೂ ಆ ರಾತ್ರಿಯೇ ಹಿಡಿದು, ಮಾರನೆದಿನ ಬೆಳಿಗ್ಗೆ ಅವರನ್ನು ಕರೆತರುತ್ತಿದ್ದಾಗ ಆ ಗ್ರಾಮದ ಬೇರೆ ಸುಮಾರು ೧೦೦ ಜನರು ಗುಂಪುಕಟ್ಟಿಕೊಂಡು ಬಂದು, ಸಬ್ ಇನಸ್ಪೆಕ್ಟರನ್ನೂ ಪೋಲೀಸಿನವರನ್ನೂ ಚನ್ನಾಗಿ ಹೊಡೆದು ಕೆಡವಿ, ಆ ಐದು ಮಂದಿಯನ್ನೂ ಬಿಡಿಸಿಕೊಂಡು ಹೊರಟುಹೋದರು. ಪೆಟ್ಟು ತಿಂದವರೆಲ್ಲಾ ಈಗ ವಿಜಯನಗರದ ಆಸ್ಪತ್ರೆಯಲ್ಲಿ ಇಲಾಜು ಮಾಡಿಸಿಕೊಳ್ಳುತ್ತಿದ್ದಾರೆ. ಈ ವರ್ತಮಾನವು ಅಧಿಕಾರಿಗಳಿಗೆ ತಿಳಿದ ಕೂಡಲೇ ಇಬ್ಬರು ಇನಸ್ಪೆಕ್ಟರುಗಳ ಕೂಡ ಬಲವಾದ ಪೋಲೀಸ್ ಸಿಬ್ಬಂದಿಯನ್ನು ಅಲ್ಲಿಗೆ ಕಳುಹಿಸಿ, ಅವರನ್ನು ಹಿಡಿದುತರಬೇಕೆಂದು ಹುಕುಂ ಆಗಿರುತ್ತದೆ.

***

ಇಂಡಿಯಾ ಸ್ಟೇಟ್ ಸೆಕ್ರೆಟರಿ ಮಿ॥ ಜಾನ್ ಮಾರ್ಲಿಯವರ ಸಹಾಯಕ್ಕೆ ಒಂದು ಕೌನ್ಸಿಲ್ಲು ವಿಲಾಯತಿಯಲ್ಲಿ ಏರ್ಪಾಡಾಗಿರುತ್ತೆ. ಈ ಕೌನ್ಸಿಲ್ಲಿನಲ್ಲಿ ಇದುವರೆಗೆ ಹಿಂದುಸ್ಥಾನದ ಬೇರೆಬೇರೆ ಇಲಾಖೆಗಳಲ್ಲಿ ನೌಕರಿಮಾಡಿ ಪೆನ್ಶನ್ ಪಡೆದು ವಾಪಸು ವಿಲಾಯತಿಗೆ ಹೋದಂಥಾ ಇಂಗ್ಲಿಷ್ ದೊಡ್ಡಮನುಷ್ಯರನ್ನೇ ಮೆಂಬರಾಗಿ ನೇಮಿಸುತ್ತಿದ್ದರಲ್ಲದೆ ದೇಶೀಯ ಹಿಂದೂ ಮಹಮ್ಮದೀಯ ದೊಡ್ಡಮನುಷ್ಯರನ್ನು ನೇಮಕಮಾಡುತ್ತಿರಲಿಲ್ಲ. ಈಗ ಸೆಕ್ರೆಟರಿಯವರು ಪ್ರಜಾಪಕ್ಷಪಾತಿಗಳೆಂಬ ಕೀರ್ತಿವಂತರಾಗಿರೋಣದರಿಂದ ಇವರು (ಜಾನ್ ಮಾರ್ಲಿಯವರು) ಕೌನ್ಸಿಲ್ಲಿನ ಕಾನೂನನ್ನೇ ಪಾರ್ಲಿಮೆಂಟಿನಲ್ಲಿ ಬದಲಾವಣೆಮಾಡಿಸಿಕೊಂಡದ್ದಲ್ಲದೆ ಹಿಂದುಸ್ಥಾನದ ದೇಶೀಯ ದೊಡ್ಡಮನುಷ್ಯರನ್ನು ನೇಮಕಮಾಡುವುದಕ್ಕೆ ಅಧಿಕಾರವನ್ನು ಪಡೆದುಕೊಂಡರು. ಅದರಂತೆ ಈಗ ಮಿ॥ ಕೃಷ್ಣಗೋವಿಂದಗುಪ್ತ ಎಂಬ ದೊಡ್ಡಮನುಷ್ಯರನ್ನೂ, ಹೈದರಾಬಾದ್ ಸಂಸ್ಥಾನದ ವಿದ್ಯಾಭ್ಯಾಸದ ಇಲಾಖಾ ಡೈರೆಕ್ಟರಾಗಿದ್ದು ಈಗತಾನೇ ಪೆನ್ಶನ್ ಪಡೆದಿರುವ ಮಿ॥ ನವಾಬ್ ಸೈಯದ್‌ಹುಸೇನ್ ಬಿಲ್‌ಗ್ರಾಮಿಯವರನ್ನೂ ಇಂಡಿಯಾ ಕೌನ್ಸಿಲ್ಲಿಗೆ ಮೆಂಬರಾಗಿ ನೇಮಿಸಿಕೊಂಡಿರುತ್ತಾರೆ. ಇವರು ಕೌನ್ಸಿಲ್ ಮೆಂಬರಾಗಿರುವ ತನಕ ವರುಷಕ್ಕೆ ೧೫ ಸಾವಿರ ರೂಪಾಯಿನಂತೆ ಪ್ರತಿಫಲ ದೊರಕುವುದು.

***

ಬಂಗಾಳಾ ಆಧಿಪತ್ಯಕ್ಕೆ ಸೇರಿದ ದಿನಾಪುರವೆಂಬ ಪಟ್ಟಣದಲ್ಲಿ ಲಕ್ಷ್ಮಣ ಮಹದೇವನೆಂಬ ಬಂಗಾಳಿಯು ತನ್ನ ಹೆಂಡತಿ ಮತ್ತು ಎರಡು ವರುಷದ ಮಗು ಸಹಿತ ಮಂಚದ ಮೇಲೆ ಮಲಗಿ ನಿದ್ರೆಮಾಡುತ್ತಿದ್ದನು. ಮಗುವು ಮಧ್ಯರಾತ್ರಿಯಲ್ಲಿ ಮಂಚದಿಂದ ಉರುಳಿ ಕೆಳಕ್ಕೆ ಬಿದ್ದುಬಿಟ್ಟಿತು. ಹಿಸ್ಸ್ ಎಂಬ ಶಬ್ದವು ಹೆಚ್ಚಿ ಮಂಚದ ಮೇಲಿದ್ದ ಗಂಡ ಹೆಂಡರನ್ನು ಎಬ್ಬಿಸಿತು. ಅವರು ಮಗುವನ್ನು ಹುಡುಕುವಾಗ್ಗೆ ಸುಮಾರು ಆರು ಅಡಿಯ ಪ್ರಮಾಣದ ಒಂದು ನಾಗರ ಹಾವು ಆ ಮಗುವಿನ ಮೈಗೆ ಸುತ್ತಿಕೊಂಡಿರುವುದೂ, ಮಗುವು ಹಾವನ್ನು ಹೊಡೆಯುತ್ತಿದ್ದರೂ ಅದು ಇನ್ನೇನೂ ಮಾಡದೆ ಹಿಸ್ಸ್ ಎಂದು ಶಬ್ದಮಾಡುತ್ತಿರುವುದೂ ಕಂಡು ಬಂತು. ಗಂಡ ಹೆಂಡರು ಗಾಬರಿಬಿದ್ದು ಹಾವನ್ನು ಬಿಡಿಸಬೇಕೆಂದು ಏನೇನೋ ಉಪಾಯಗಳನ್ನು ಮಾಡಿದರೂ ಅದು ಬೇರೆ ಮಗುವನ್ನು ಬಿಡದೆ ಇತ್ತು. ಅಷ್ಟುಹೊತ್ತಿಗೆ ನೆರೆಹೊರೆಯವರಲ್ಲಿ ಒಬ್ಬನು ಎಲ್ಲೋ ಒಂದು ಕಪ್ಪೆಯನ್ನು ಹಿಡಿದು ತಂದು ಅದಕ್ಕೆ ದಾರಕಟ್ಟಿ ಅಟ್ಟದ ಮೇಲಿನಿಂದ ಹಾವಿನ ಮುಂದೆ ಇಳಿಯಬಿಟ್ಟು ಆಡಿಸಲಾರಂಭಿಸಿದನು. ಆಗ ಆ ಸರ್ಪವು ತನಗೆ ಆಹಾರ ಸಿಕ್ಕಿತೆಂಬ ಆಸೆಯಿಂದ ಮಗುವನ್ನು ಬಿಟ್ಟು, ಕಪ್ಪೆಯ ಕಡೆಗೆ ಹೋಯಿತು. ಸ್ವಲ್ಪ ದೂರ ಹೋಗುವಷ್ಟರೊಳಗಾಗಿ ಒಬ್ಬನು ಕಡಕತ್ತಿಯಿಂದ ಅದನ್ನು ಕತ್ತರಿಸಿಹಾಕಿದನು. ಮಗುವು ಸಂರಕ್ಷಿತನಾಗಿದೆ ಎಂದು ಅಲ್ಲಿನ ಪತ್ರಿಕೆಯೊಂದು ತಿಳಿಸಿರುತ್ತದೆ

***

ರಾಜಮಂಡ್ರಿ ಜಿಲ್ಲೆಗೆ ಸೇರಿದ ಕಾಕಿನಾಡಾ ಪಟ್ಟಣದಲ್ಲಿ ಪ್ರಜಾನೆಮ್ಮದಿಗೆ ಭಂಗ ಉಂಟುಮಾಡಿದರೆಂದು ಮದರಾಸ್ ಗವರ್ನಮೆಂಟಿನವರು ಊಹಿಸಿ, ಶಿಕ್ಷಾರ್ಥವಾದ ಪೋಲೀಸ್ ಸಿಬ್ಬಂದಿಯನ್ನು ನೇಮಕಮಾಡಿ ಅವರ ಸಂಬಳವನ್ನು ಅಲ್ಲಿನ ಪ್ರಜೆಗಳಿಂದ ವಸೂಲ್ಮಾಡಿಸುತ್ತಿದ್ದಾರಷ್ಟೆ. ಕಳೆದ ವಾರ ಅಲ್ಲಿನ ಪುರಜನರು ಒಂದು ದೊಡ್ಡ ಸಭೆಯನ್ನು ನಡಿಸಿ, ಈ ಹೆಚ್ಚು ಸಿಬ್ಬಂದಿಯನ್ನು ವಜಾ ಮಾಡಿಕೊಡಬೇಕೆಂದು ಗವರ್ನಮೆಂಟಿನವರಿಗೆ ಅರ್ಜಿ ಬರೆಯುವಂತೆ ತೀರ್ಮಾನ ಮಾಡಿದರು. ಆ ಪಟ್ಟಣದಲ್ಲಿ ಒಬ್ಬ ಹುಡುಗನು ಕ್ಯಾಪ್ಟನ್ ಕೆಂಪ್ ಎಂಬ ಡಾಕ್ಟರ ಮೇಲೆ ಅವರು ತನ್ನನ್ನು ಹೊಡೆದರೆಂದು ಫಿರ್ಯಾದು ಮಾಡಿ ೨,೦೦೦ ರೂಪಾಯಿ ಡಾಮಿಜು ಕೇಳಿದ್ದನು. ಮುನ್ಸಿಫರು ಕಳೆದ ವಾರ ಆ ಹುಡುಗನಿಗೆ ೧೦೦ ರೂಪಾಯಿ ಡಾಮಿಜು ಕೊಡಿಸಿದರು. ಮತ್ತು ಈ ಸಂದರ್ಭದಲ್ಲೇ ಕೆಲವು ಜನರು ಸೇರಿ ಅಲ್ಲಿನ ಯೂರೋಪಿಯನ್ ಕ್ಲಬ್ ಮನೆಗೆ ನುಗ್ಗಿ ಗಲಭೆಮಾಡಿ ದೊಂಬಿಕಲಹ ನಡಿಸಿದರೆಂದು ಮೊಕದ್ದಮೆ ಆಯಿತು. ಇದರಲ್ಲಿ ಪೋಲೀಸಿನವರು ಗ್ಯಾರಾಹ ಹದಿನೈದು ಜನರನ್ನು ಹಿಡಿದು ಮ್ಯಾಜಿಸ್ಟ್ರೇಟರಿಂದ ದಯರ್ಯಾಫ್ತು ಮಾಡಿಸಿದರು. ಮ್ಯಾಜಿಸ್ಟ್ರೇಟರು ಎಲ್ಲಾ ಅಪರಾಧಿಗಳಿಗೂ ೧॥ ವರುಷಗಳ ಪ್ರಕಾರ ಕಠಿಣಸಜೆಯನ್ನೂ ೧೫೦, ೨೫೦, ೫೦೦ ರೂಪಾಯಿ ವರೆಗೆ ಜುಲ್ಮಾನೆಗಳನ್ನೂ ವಿಧಿಸಿದ್ದಲ್ಲದೆ, ಅವರು ಜೈಲಿನಿಂದ ಬಿಡುಗಡೆಯಾಗಿ ಬಂದನಂತರ ತಲಾ ೩ ವರುಷಗಳ ವರೆಗೆ ನೇಕಚಾಲಿಗೆ ಜಾಮೀನ್ ಕೊಡಬೇಕೆಂದು ತೀರ್ಮಾನಮಾಡಿರುತ್ತಾರೆ.

***

ಈಗತಾನೇ ಚಲಾವಣೆಗೆ ಬಂದಿರುವ ಹೊಸ ಒಂದಾಣೆಯ ನಿಕ್ಕಲ್ ನಾಣ್ಯವು ಒಬ್ಬ ಹಳ್ಳಿಕಾರನಿಗೆ ಬಹಳ ದುಃಖವನ್ನು ಉಂಟುಮಾಡಿತು. ಮದರಾಸ್ ಪ್ರಾಂತ್ಯದ ಒಂದು ಊರಿನಲ್ಲಿ ಸರ್ಕಾರಿ ಗುಮಾಸ್ತನೊಬ್ಬನು ಬೆರಣಿ ಮಾರುವವನನ್ನು ಕರೆದು ಬೆರಣಿ ಕೊಂಡುಕೊಂಡು ಒಂದಾಣೆಯ ಹೊಸ ನಾಣ್ಯವನ್ನು ಕೊಟ್ಟನು. ಅವನು ಅನುಮಾನಪಟ್ಟು ಆ ನಾಣ್ಯವನ್ನು ತೆಗೆದುಕೊಳ್ಳದೆ ಹೋದನು. ಆಗ ಆ ನೌಕರನು ಬೇರೆ ಚಿಲ್ಲರೆ ದುಡ್ಡು ಕೊಟ್ಟು ಕಳುಹಿಸದೆ ಪೋಲೀಸಿಗೆ ತಿಳಿಸಿದನು. ಪೋಲೀಸಿನವರು ಆ ಹಳ್ಳಿಕಾರನನ್ನು ಹಿಡಿದು ಮ್ಯಾಜಿಸ್ಟ್ರೇಟರ ಮುಂದೆ ನಿಲ್ಲಿಸಿದರು. ಅವರು ದಯರ್ಯಾಫ್ತು ಮಾಡಿದಾಗ ಆ ಹಳ್ಳಿಕಾರನು ಗೋಳಾಡುತ್ತಾ ತನಗೆ ಅದು ಚಲಾವಣೆಯ ನಾಣ್ಯವೆಂದು ತಿಳಿಯಲಿಲ್ಲವೆಂತಲೂ ಮಾಫ್‌ಮಾಡಿ ಬಿಟ್ಟುಬಿಡಬೇಕೆಂತಲೂ ಎಷ್ಟು ಬಗೆಯಾಗಿ ಬೇಡಿಕೊಂಡಾಗ್ಯೂ ಮ್ಯಾಜಿಸ್ಟ್ರೇಟರು ಅವನಿಗೆ ಎರಡು ತಿಂಗಳ ಸಾದಾ ಸಜಾ ವಿಧಿಸಿಬಿಟ್ಟರು. ಇತ್ತಲಾಗಿ ತಿನ್ನವೆಲ್ಲಿಯ ಬಳಿ ಒಂದು ಅಂಗಡಿಗೆ ಒಬ್ಬನು ಈ ಹೊಸ ನಾಣ್ಯವನ್ನು ಕೊಟ್ಟನು. ಅಂಗಡಿಯವನು ಅದು ಚಲಾವಣೆಯ ನಾಣ್ಯವೆಂದು ಅರಿಯದೆ ಅದು ಖೋಟಾ ನಾಣ್ಯವೆಂದು ಕೇಳುತ್ತಾ, ನಾಣ್ಯ ಕೊಟ್ಟವನನ್ನು ಹಿಡಿದು ಪೋಲೀಸಿಗೆ ಒಪ್ಪಿಸಿದನು. ಪೋಲೀಸಿನವನಾದರೋ ಖೋಟಾ ನಾಣ್ಯದ ಮೊಕದ್ದಮೆಯನ್ನು ಆಸಾಮಿಯನ್ನೂ ಸುಲಭವಾಗಿ ಹಿಡಿದೆನೆಂದು ಹಿಗ್ಗುತ್ತಾ, ಅವನನ್ನು ನಾಣ್ಯದ ಸಹಾ ಪೋಲೀಸ್ ಠಾಣೆಕ್ಕೆ ಹಿಡಿದುಕೊಂಡು ಹೋದನು. ಅಲ್ಲಿ ಅಧಿಕಾರಿಗಳು ಅದನ್ನು ನೋಡಿ, ಅದು ಚಲಾವಣೆಯ ನಾಣ್ಯವೆಂದು ಆ ಪೋಲೀಸಿನವನಿಗೆ ಹೇಳಿ ನಂಬಿಕೆ ಹುಟ್ಟಿಸಿದರು. ಆಗ ಆ ನಾಣ್ಯದ ಮಾಲೀಕನು ಆ ಪೋಲೀಸಿನವನ ಮೇಲೆ ಅಕ್ರಮವಾಗಿ ಮಾಡಿದನೆಂದೂ ಅವಮಾನಮಾಡಿದನೆಂದೂ ಫಿರ್ಯಾದು ಮಾಡುವುದಕ್ಕೆ ಪ್ರಯತ್ನಪಟ್ಟನು. ಆದರೆ ಕೆಲವು ಪಂಚಾಯಿತರು ಸೇರಿ ಪೋಲೀಸಿನವನು ಆ ನಾಣ್ಯದ ಮಾಲೀಕನ ಕ್ಷಮಾಪಣೆ ಬೇಡುವಂತೆ ಮಾಡಿ, ಈ ಮೊಕದ್ದಮೆಯನ್ನು ಅಷ್ಟಕ್ಕೇ ಅಣಗಿಸಿಬಿಟ್ಟರು

***

ಆಗ್ರಾ ಪಟ್ಟಣದ ಹತ್ತಿರ ಒಂದು ಗ್ರಾಮದಲ್ಲಿ ಹುಲಿಯ ದೆಸೆಯಿಂದ ಬಹು ಭಯಂಕರವಾದ ಪ್ರಾಣಹಾನಿಯಾದಂತೆ ತಂತೀ ವರ್ತಮಾನ ಬಂದಿದೆ. ಆ ಗ್ರಾಮದಲ್ಲಿ ಒಂದುಕಡೆ ಒಂದು ಹುಲಿ ಸೇರಿಕೊಂಡಿದ್ದದ್ದನ್ನು ಒಬ್ಬ ರೈತನು ಕಂಡು, ಅದನ್ನು ಒಂದು ಇಟ್ಟಿಗೆಯಿಂದ ಹೊಡೆದನು. ಕೂಡಲೇ ಹುಲಿಯು ಅವನ ಮೇಲೆ ಬಿದ್ದು ಅವನನ್ನು ಕೊಂದುಹಾಕಿತು. ಅವನ ಮಗನು ತಂದೆಯನ್ನು ಬಿಡಿಸಿಕೊಳ್ಳಬೇಕೆಂದು ಒಂದು ದೊಣ್ಣೆಯನ್ನು ಹಿಡಿದುಕೊಂಡು ಹೋಗಿ ಹುಲಿಯನ್ನು ಹೊಡೆದನು. ಹುಲಿಯು ಅವನನ್ನೂ ಹಿಡಿದು ಕೊಂದುಬಿಟ್ಟಿತು. ಅಷ್ಟರಲ್ಲೇ ಗ್ರಾಮದ ಜನಗಳೂ ಪೋಲೀಸಿನವರೂ ಆಯುಧಪಾಣಿಗಳಾಗಿ ಸೇರಿಕೊಂಡು ಅಲ್ಲಿಗೆ ಹೋಗಿ ಹುಲಿಯ ಮೇಲೆ ಗುಂಡಿನ ಮಳೆಗರೆದರು. ಹುಲಿಯಾದರೋ ತಂದೆಮಕ್ಕಳ ಹೆಣದ ಬಳಿ ಕುಳಿತುಕೊಂಡು, ಆ ಪೈಕಿ ಕೆಲವು ಭಾಗಗಳನ್ನು ತಿಂದುಹಾಕಿತು. ಹುಲಿಯು ಗುಂಡಿನ ಏಟುಗಳನ್ನು ತಪ್ಪಿಸಿಕೊಂಡು ಓಡಿಹೋಗಿ ಒಂದು ದೊಡ್ಡ ಪೊದೆಯಲ್ಲಿ ಸೇರಿಕೊಂಡಿತು. ಅದನ್ನು ಹೊಡೆಯಬೇಕೆಂದು ಇಬ್ಬರು ಪೋಲೀಸಿನವರು ಬಂದೂಕು ಸಹಿತ ಅದು ಇದ್ದ ಪೊದೆಯ ಬಳಿಗೆ ಹೋದರು. ಇವರ ಸಂಗಡ ಒಬ್ಬ ಗ್ರಾಮಸ್ಥನೂ ಹೋದನು. ಸನೀಪದಿಂದ ತಿವಿಯುತ್ತಾ ಪೋಲೀಸಿನವರು ಪೊದೆಯೊಳಕ್ಕೆ ನುಗ್ಗಿದಾಗ ಹುಲಿಯು ಅರ್ಭಟಿಸಿಕೊಂಡು ಅವರ ಮೇಲೆ ಹಾರಿ ಒಬ್ಬನ ಕೆನ್ನೆಯನ್ನು ಕಡಿದುಬಿಟ್ಟಿತು. ಕೂಡಲೇ ಗುರಿ ಹಿಡಿಯದೆ ಗುಂಡು ಹೊಡೆದರು. ಹುಲಿಯು ತಪ್ಪಿಸಿಕೊಂಡು ಎಲ್ಲಿಗೋ ಓಡಿಹೋಯಿತು. ಅವರು ಹೊಡೆದ ಗುಂಡುಗಳಲ್ಲಿ ಒಂದು ಆ ಗ್ರಾಮಸ್ಥನಿಗೆ ತಗಲಿ ಅವನು ಮೃತಪಟ್ಟನು. ಪೋಲೀಸಿನವರು ಗಾಯಪಟ್ಟು ಬಂದು ಆಸ್ಪತ್ರೆಯಲ್ಲಿ ಬಿದ್ದುಕೊಂಡಿದ್ದಾರೆ

ವಿದೇಶ ವರ್ತಮಾನಗಳು.

ಟ್ರಾನ್ಸ್‌ವಾಲಿಗೆ ಸೇರಿದ ಪೋಚಫ್‌ಸ್ಟ್ರೂಂನಗರದಲ್ಲಿ ಒಬ್ಬ ವರ್ತಕನ ಮೇಲೆ ಕಳುವಿನ ಮೊಕದ್ದಮೆ ಬಂದಿದೆ. ಅವನು ಆತ್ಮಹತ್ಯ ಮಾಡಿಕೊಂಡರೆ ಜಾಮೀನ್‌ದಾರರು ೬೦,೦೦೦ ರೂಪಾಯಿ ಕೊಟ್ಟುಬಿಡಬೇಕೆಂದು ಮ್ಯಾಜಿಸ್ಟ್ರೇಟರು ಆಜ್ಞೆಮಾಡಿರುತ್ತಾರೆ.

***

ಪ್ರಸಿದ್ಧ ಕೋಟ್ಯಾಧೀಶ್ವರನಾದ ಮಿ॥ ಆಂಡ್ರು ಕಾರ್ನೆಗಿ ಎಂಬಾತನು ಲಂಡನ್ ಪಟ್ಟಣದಲ್ಲಿ ಎಡ್ವರ್ಡ್ ದೊರೆಯವರ ಹೆಸರಿನ ಮೇಲೆ ಕಟ್ಟುವ ಭಾರೀ ಆಸ್ಪತ್ರೆಯ ಮೂಲಧನಕ್ಕೆ ೧೫ ಲಕ್ಷ ರೂಪಾಯನ್ನು ಧರ್ಮಾರ್ಥವಾಗಿ ಕಳುಹಿಸಿಕೊಟ್ಟಿರುತ್ತಾನೆ.

***

ಲಾಂಕಷೈರ್ ನಗರದ ಸನ್ಯಾಸಾಶ್ರಮದಲ್ಲಿ ಥಾಮಸ್ ಹೆರ್ರಿಂಗ್ ಎಂಬಾತನು ಕಾಲವಾದನು. ಈತನಿಗೆ ೭೯ ವರುಷ ವಯಸ್ಸಾಗಿತ್ತು. ಈ ಫಕೀರ್ಯಾತ್ಮನು ಪ್ರಪಂಚದಲ್ಲಿ ಈಗ ಪ್ರಚಾರಕ್ಕೆ ಬಂದಿರುವಂಥಾ ಮತ್ತು ಪ್ರಾಚೀನಕಾಲದ ಮೂವತ್ತುಮೂರು ಭಾಷೆಗಳನ್ನು ಚನ್ನಾಗಿ ಕಲಿತಿದ್ದನೆಂದು ತಿಳಿದು ಬಂದಿದೆ

***

ಕೆನಡಾ ಎಂಬ ಇಂಗ್ಲಿಷ್ ಸ್ವಾಸ್ಥ್ಯದ ಗವರ್ನಮೆಂಟಿನವರು ತಮ್ಮ ದೇಶಕ್ಕೆ ಜಪಾನ್ ರಾಜ್ಯದ ಜನರನ್ನು ಬಾರದಂತೆ ತಡೆಯಬೇಕೆಂದು ಸಾಹಸಪಟ್ಟರು. ಈಗ ಆ ಎರಡು ಗವರ್ನಮೆಂಟುಗಳಿಗೂ ಕರಾರಾಗಿ ಪ್ರತಿ ವರುಷವೂ ೬೦೦ ಮಂದಿಗಿಂತ ಹೆಚ್ಚು ಜಪಾನಿನವರು ಕೆನಡಾ ರಾಜ್ಯಕ್ಕೆ ಹೋಗಕೂಡದೆಂದು ವಿಧಿಸಲ್ಪಟ್ಟಿದೆ.

***

ರಷ್ಯಾ ಚಕ್ರವರ್ತಿಯವರನ್ನೂ ಅವರ ಪ್ರಧಾನ ಮಂತ್ರಿ [illegible]ರನ್ನೂ ಕೊಂದುಹಾಕಬೇಕೆಂದು ಹಿತೂರಿ ಮಾಡಿದ್ದ ಅಪರಾಧಿಗಳನ್ನು ದಯರ್ಯಾಫ್ತು ಮಾಡಿ, ಆ ಪೈಕಿ ಮೂರು ಮಂದಿಗೆ ಮರಣ ದಂಡನೆಯನ್ನೂ ೯ ಮಂದಿಗೆ ಬಿಂಕೋಲ್ ಮೊದಲಾದ ಕಠಿಣ ಸಜಾವನ್ನೂ ವಿಧಿಸಿ, ಉಳಿದವರನ್ನು ಖುಲಾಸ್ ಮಾಡಿಸಿರುತ್ತಾರೆ.

***

ಫ್ರಾನ್ಸ್ ರಾಜ್ಯದಲ್ಲಿ ಚೆರ್ನೋಂ ಪಟ್ಟಣದಿಂದ ಪ್ಯಾರಿಸ್ ನಗರಕ್ಕೆ ಹೋಗುತ್ತಿದ್ದ ಎಕ್ಸ್‌ಪ್ರೆಸ್ ರೈಲ್‌ಗಾಡಿಯು ಕೌಟ್ರಾಸ್ ಎಂಬ ಸ್ಟೇಷನಿನ ಹತ್ತಿರ ಒಂದು ಸಾಮಾನ್ ಗಾಡಿಗೆ ಬಡಿದು ಅನಾಹುತವಾಯಿತು. ಅದರಲ್ಲಿ ಹನ್ನೆರಡು ಮಂದಿ ಪ್ರಾಣಕಳೆದುಕೊಂಡರೆಂತಲೂ ಮೂವತ್ತು ಜನರಿಗೆ ಗಾಯಗಳಾದವೆಂತಲೂ ತಂತೀವರ್ತಮಾನ ಬಂದಿದೆ.

***

ಪೂರ್ವದಿಗ್ಭಾಗದಲ್ಲಿ ಹಾಲೆಂಡಿಗೆ ಸೇರಿದ ಇಂಡೀಸ್ ಎಂಬ ದ್ವೀಪ ಸಮುದಾಯದಲ್ಲಿ ಸೆಲಿಬೀಸ್ ಎಂಬುದು ಒಂದಾಗಿರುತ್ತದೆ. ಈ ದ್ವೀಪದಲ್ಲಿ ಪ್ರಜೆಗಳು ದಂಗೆಯೆದ್ದು ಸರ್ಕಾರಿ ಸೈನಿಕರ ಮೇಲೆ ಹಲ್ಲೆ ಮಾಡಿ, ಇಬ್ಬರು ಉದ್ಯೋಗಸ್ಥರನ್ನೂ ಒಂಬತ್ತು ಮಂದಿ ಯೂರೋಪಿಯನ್ ಸೋಲ್ಜರುಗಳನ್ನೂ ಇಪ್ಪತ್ತೆರಡು ಜನ ದೇಶೀಯ ಸಿಪಾಯಿಗಳನ್ನೂ ಕೊಂದುಹಾಕಿರುತ್ತಾರೆಂದು ತಿಳಿದು ಬಂದಿದೆ.

***

ಯೂರೋಪ್ ಖಂಡಕ್ಕೆ ಸೇರಿದ ರೋಮೇನಿಯಾ ರಾಜ್ಯದಲ್ಲಿ ಕೆಲವು ತಿಂಗಳ ಕೆಳಗೆ ಪ್ರಜೆಗಳು ದಂಗೆಮಾಡಿ ನಾನಾ ಅಕೃತ್ಯಗಳನ್ನು ನಡಿಸಿದ್ದರಿಂದ ಸರ್ಕಾರದವರು ಪ್ರಜೆಗಳ ಮುಖಂಡರನ್ನೆಲ್ಲಾ ಅಂದರೆ ೪,೦೦೦ ಜನರನ್ನು ಹಿಡಿದು ಬಂದೀಖಾನೆಯಲ್ಲಿ ಹಾಕಿದ್ದರು. ದೊರೆಯವರು ಈಗ ಅವರಿಗೆಲ್ಲಾ ಕ್ಷಮಾಪಣೆಯನ್ನು ದಯಪಾಲಿಸಿ, ಎಲ್ಲರನ್ನೂ ಜೈಲಿನಿಂದ ಬಿಟ್ಟುಬಿಡುವಂತೆ ಹುಕುಂ ಕೊಟ್ಟಿದ್ದಾರೆಂದು ತಂತೀವರ್ತಮಾನ ಬಂದಿದೆ.

***

ರಷ್ಯಾ ಚಕ್ರಾಧಿಪತ್ಯದ ಕೆಲವು ಭಾಗಗಳಲ್ಲಿ ವರುಷಕ್ಕೆ ಆರು ತಿಂಗಳ ದಿನ ಹಿಮಗಡ್ಡೆಗಳು ಮಳೆಯೋಪಾದಿಯಲ್ಲಿ ಸುರಿಯುವುದರಿಂದ ಗೋಕಾಯಿಗಳು ಅಂಥಾ ಕಾಲದಲ್ಲಿ ಹುಲ್ಲು ಮೇಯುವಾಗ್ಗೆ ಅವುಗಳ ಕಣ್ಣು ಕಾಣದೆ ಹೋಗುತ್ತವೆ. ಇದನ್ನು ಪರಿಹರಿಸುವುದಕ್ಕೆ ಈ ಕಡೆ ಇರುವ ರೈತರು ಒಂದು ತರಹ ಕನ್ನಡಕ (ಸುಲೋಚನ)ಗಳನ್ನು ಗೋಕಾಯಿಗಳಿಗೆ ಕಟ್ಟಿಬಿಡುತ್ತಿದ್ದಾರೆ. ಇದರಿಂದ ಗೋಕಾಯಿಗಳ ಕಣ್ಣಿಗೆ ಯಾವ ಅಪಾಯವೂ ಆಗುವುದಿಲ್ಲ.

***

ಚೀನಾ ರಾಜ್ಯಕ್ಕೆ ಸೇರಿದ ಅಮಾಯಿ ಪಟ್ಟಣದಲ್ಲಿ ಸರ್ಕಾರದವರು ಅಫೀಂ ಸೇವನೆಯ ಬಿಡಾರಗಳನ್ನೆಲ್ಲಾ ಮುಚ್ಚಿಸಿಬಿಟ್ಟಿದ್ದಲ್ಲದೆ ಆ ಪದಾರ್ಥ ಬಿಕರಿ ಆಗತಕ್ಕ ಅಂಗಡಿಗಳನ್ನೂ ಮುಚ್ಚಿಸಿ ಬಿಟ್ಟರು. ಸರ್ಕಾರದವರೇ ಒಂದು ಗಡಂಗನ್ನು ನೇಮಿಸಿದ್ದಾರೆ. ಅಲ್ಲಿ ೬೦ ವರುಷಕ್ಕಿಂತಲೂ ಹೆಚ್ಚು ವಯಸ್ಸಿನವರಿಗೆ ಮಾತ್ರ ಅಫೀಂ ಸ್ವಲ್ಪವೇ ಬಿಕರಿ ಮಾಡುತ್ತಾರೆ. ಅಂಥಾ ವಯಸ್ಸು ಕಳೆದವರಿಗೆಲ್ಲಾ ಸರ್ಕಾರದವರು ಲೈಸೆನ್ಸು ಕೊಡುವರು. ಈ ಲೈಸೆನ್ಸು ತೋರಿಸಿದವರಿಗಲ್ಲದೆ ಇತರರಿಗೂ ಅಫೀಂ ವಿಕ್ರಯಿಸಕೂಡದೆಂದು ವಿಧಿಸಿದ್ದಾರೆ.

ಇಂಗ್ಲಿಷ್ ರಾಜ್ಯಾಂಗವಾದ ಐರ್ಲೆಂಡಿನಲ್ಲಿ ಪ್ರಜಾನಿವಾಸಿಗಳ ಭಂಗವನ್ನುಂಟುಮಾಡಿ ದೊಂಬಿಯನ್ನೆಬ್ಬಿಸಿದರೆಂದು ಸರ್ಕಾರದವರು ಮೆ॥ ಫಾರೆಲ್, ಮಿ॥ ಮೆಕ್ಕನ್ನಾ ಎಂಬೀ ಪಾರ್ಲಿಮೆಂಟ್ ಮೆಂಬರುಗಳನ್ನೂ ಬೇರೆ ೫೭ ಜನ ಪ್ರಜಾನಾಯಕರನ್ನೂ ಹಿಡಿದು ವಿಚಾರಣೆ ಮಾಡಲಾರಂಭಿಸಿದ್ದಾರೆ. ಇದಲ್ಲದೆ ಪ್ರಜಾನಿವಾಸಿಯನ್ನು ಕಾಪಾಡುವುದಕ್ಕೋಸ್ಕರ ೭—೮ ಡಿಸ್ಟ್ರಿಕ್ಟುಗಳಿಗೆ ಹೊಸ ಸೈನ್ಯಗಳನ್ನೂ ಹೆಚ್ಚು ಪೋಲೀಸ್ ಸಿಬ್ಬಂದಿಯನ್ನೂ ಕಳುಹಿಸಿ ಕೊಡಿಸಿರುತ್ತಾರೆ.

* * *

ಹೆಂಡತಿ ಸತ್ತರೆ ಅವಳ ತಂಗಿಯನ್ನು ಮದುವೆ ಮಾಡಿಕೊಳ್ಳುವ ಭಾಗದಲ್ಲಿ ಒಂದು ಕಾನೂನು ಆಗಬೇಕೆಂದು ವಿಲಾಯತಿಯ ಪಾರ್ಲಿಮೆಂಟಿನವರು ಚರ್ಚಿಸಿ ಗೊತ್ತು ಮಾಡಿದ್ದಾಯಿತು. ಈ ಕಾನೂನಿಗೆ ಚಕ್ರವರ್ತಿಯವರು ಇನ್ನೂ ಸಮ್ಮತಿ ಹಾಕಲಿಲ್ಲ. ಇತ್ತಲಾಗಿ ಆರ್ಚ್‌ಬಿಷಪ್ ಆಫ್ ಕ್ಯಾಂಟ್ರುಬರಿ ಎಂಬ ದೊಡ್ಡ ಮಠಾಧಿಪತಿಯು ತಮ್ಮ ಕೈಕೆಳಗಿರುವ ಪಾದ್ರೀ ಗುರುಗಳ್ಯಾರೂ ಅಂಥಾ ವಿವಾಹಗಳನ್ನು ಮಾಡಿಸಕೂಡದೆಂದು ಅವರಿಗೆಲ್ಲಾ ಶ್ರೀಮುಖವನ್ನು ಕಳುಹಿಸಿರುತ್ತಾರೆ.

* * *

ಜಪಾನ್ ರಾಜ್ಯಕ್ಕೆ ಸೇರಿದ ಹಾಕೋಡೇಟ್ ಎಂಬ ನಗರದಲ್ಲಿ ಬಹು ಅಪೂರ್ವವೂ ಮಹಾ ದುಃಖಕರವೂ ಆದ ಬೆಂಕಿಯ ಅನಾಹುತ ಸಂಭವಿಸಿದಂತೆ ತಂತೀ ವರ್ತಮಾನ ಬಂದಿದೆ. ಆ ಪಟ್ಟಣದಲ್ಲಿರುವ ಕಡಿಮೆ ೭೦ ರಷ್ಟು ಮನೆಮಾಡಗಳು ಉರಿದುಹೋದವು. ಪರರಾಜ್ಯಗಳ ರಾಯಭಾರಿಗಳು ವಾಸಮಾಡುವಂಥಾ ಬಂಗಲೆಗಳೆಲ್ಲಾ ನಾಶವಾಗಿರುತ್ತವೆ. ಇನ್ನೊಂದು ಪ್ರದೇಶದಲ್ಲಿ ಪ್ರವಾಹಗಳ ದೆಸೆಯಿಂದ ಅನೇಕ ಕೋಟಿ ದ್ರವ್ಯದ ಆಸ್ತಿಪಾಸ್ತಿಗಳು ನಷ್ಟವಾದಂತೆ ತಿಳಿಯುತ್ತದೆ. ಈ ಅನಾಹುತಗಳ ದೆಸೆಯಿಂದ ಎಷ್ಟು ಮಂದಿಗೆ ಪ್ರಾಣನಷ್ಟವಾಯಿತೋ ಇನ್ನೂ ಪ್ರಕಟವಾಗಲಿಲ್ಲ.

* * *

ಚೀನಾ ರಾಜ್ಯದ ಕೆಲವು ದೇಶೀಯ ಯೌವನಸ್ಥರು ಬೇರೆ ಬೇರೆ ಶಾಸ್ತ್ರಗಳನ್ನು ಕಲಿತು ಬರುವುದಕ್ಕಾಗಿ ಯೂರೋಪಿನ ರಾಜ್ಯಗಳಿಗೆ ಹೋಗಿರುತ್ತಾರಷ್ಟೆ. ಇವರು ವಿದ್ಯೆ ಕಲಿತು ವಾಪಸು ಮನೆಗೆ ಬಂದಲ್ಲಿ ಪರದೇಶಗಳ ಉಡುಪುಗಳನ್ನು ಹಾಕಿಕೊಳ್ಳಕೂಡದೆಂತಲೂ, ಚೀನಾದೇಶದಲ್ಲಿ ಆರ್ವೀಯರಿಂದಲೂ ರೂಢಿಗೆ ಬಂದಿರುವಂಥಾ ಬಟ್ಟೆಬರೆಗಳನ್ನೇ ಹಾಕಿಕೊಳ್ಳಬೇಕೆಂತಲೂ, ಹಾಗಿಲ್ಲವಾದರೆ ಅಂಥವರನ್ನು ಚೀನಾ ಅಧಿಕಾರಿಗಳು ತಮ್ಮ ದರ್ಬಾರಿಗೆ ಬರಗೊಡಿಸುವುದಿಲ್ಲವೆಂತಲೂ ಮಂತ್ರಿಗಳು ಪ್ರಕಟಿಸಿರುತ್ತಾರೆ. ಉಡುಪು ಮನುಷ್ಯನ ಸ್ಥಿತಿಗತಿ ಯೋಗ್ಯತೆಗಳನ್ನು ನಿರ್ಧರಿಸುವವೆಂತಲೂ ಪರದೇಶಗಳ ದಿರಸುಗಳನ್ನು ಹಾಕಿಕೊಳ್ಳೋಣದರಿಂದ ಜನರು ಕ್ಷೀಣಗತಿಗೆ ಬಂದು ಕೆಡುವರೆಂತಲೂ ಆ ಮಂತ್ರಿಗಳು ಅಭಿಪ್ರಾಯ ಪಟ್ಟಿದ್ದಾರೆ.

* * *

ದಕ್ಷಿಣ ಆಫ್ರಿಕಕ್ಕೆ ಸೇರಿದ ಟ್ರಾನ್ಸ್‌ವಾಲ್ ಆಧಿಪತ್ಯಕ್ಕೆ ವಿಲಾಯತಿ ಗವರ್ನಮೆಂಟಿನವರು ಸ್ವತಂತ್ರ ರಾಜ್ಯಾಧಿಕಾರಗಳನ್ನು ವಹಿಸಿಕೊಟ್ಟರಷ್ಟೆ. ಇದರ ಜ್ಞಾಪಕಾರ್ಥವಾಗಿಯೂ ದಕ್ಷಿಣ ಆಫ್ರಿಕಾ ಪ್ರಜೆಗಳು ತಮ್ಮ ರಾಜಭಕ್ತಿ ಕೃತಜ್ಞತೆಗಳನ್ನು ಪ್ರಕಾಶಪಡಿಸುವುದಕ್ಕಾಗಿಯೂ ಟ್ರಾನ್ಸ್‌ವಾಲಿನ ವಜ್ರದ ಗಣಿಯಲ್ಲಿ ೧೯೦೫ ನೇ ಇಸವಿ ಜನವರಿ ೨೬ರಲ್ಲಿ ಸಿಕ್ಕಿದಂಥಾ ಅಮೂಲ್ಯವಾದ ಭಾರೀ ವಜ್ರವನ್ನು ಎಡ್ವರ್ಡ್ ಚಕ್ರವರ್ತಿಯವರಿಗೆ ಒಪ್ಪಿಸಬೇಕೆಂದು ಜನರಲ್ ಬೋಥಾಯವರೂ ಅವರ ಕೈಕೆಳಗಿನ ಗವರ್ನಮೆಂಟಿನವರೂ ತೀರ್ಮಾನಿಸಿರುತ್ತಾರೆ. ಈ ವಜ್ರವು ಈಗ ೩,೦೨೫ ! ಕ್ಯಾರೆಟ್ ತೂಕವುಳ್ಳದ್ದಾಗಿಯೂ ೧೯ ಕೋಟಿ ರೂಪಾಯಿ ಬೆಲೆ ಬಾಳುವುದಾಗಿಯೂ ಇದೆ ಎಂದೂ ಇದಕ್ಕಿಂತ ದೊಡ್ಡ ವಜ್ರವು ಪ್ರಪಂಚದಲ್ಲೆಲ್ಲೂ ಇಲ್ಲವೆಂದೂ ತಿಳಿವು ಬಂದಿದೆ.

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸ್ಥಳ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ಸ್ಥಳ ಕೊಡಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿಟರ್.

ಕರೆಸ್‌ಪಾಂಡೆನ್ಸ್

ಫಸಲಿನ ನಷ್ಟವು

ಅಯ್ಯಾ,

ದಾವಣಗೆರೆ ತಾಲ್ಲೂಕು ಕಳಸಾ ಹೋಬಳಿ ಮಾಸಿನ ಕೆರೆ ಗ್ರಾಮದ ಸಮ್ಮತು ಮನ್ನೂರು ಪಾಲ್ ಎಂಬ ಪ್ರಾಂತ್ಯದಲ್ಲಿ ಜುಲೈ ೧೦ ರ ಲಾಗಾಯತು ಆಗಸ್ಟ್ ತಾ ೨೩ ರ ವರೆಗೆ ಭಾರೀ ಮಳೆಯಾದ ದೆಸೆಯಿಂದ ಕಾಫಿ ಫಸಲಿಗೆ ಕೊಳೆ ರೋಗ ಉಂಟಾಗಿ ೩೦೦ ಖಂಡಿಯಾಗತಕ್ಕವರಿಗೆ ೫೦—೬೦ ಖಂಡಿಯಾಗುವದು ಕಷ್ಟವಾಗಿದೆ. ಈ ರೀತಿ ಮಳೆಯ ದೆಸೆಯಿಂದ ಪೈರು ನಷ್ಟವಾದರೆ ಕಂದಾಯ ಕೊಡುವದಕ್ಕೂ ಮತ್ತು ಕಾರುಬಾರು ಮಾಡುವದಕ್ಕೂ ಅನೇಕ ತರ ಯೋಚಿಸಬೇಕಾಗಿದೆ. ಮತ್ತು ಬಾಗಾಯತು ಎಕರೆ ಒಂದಕ್ಕೆ ೧೫ ಮಣ ಆಗತಕ್ಕವರಿಗೆ ೫ ಯಾ ೬ ಮಣ ಆಗಬೇಕಾದರೆ ಬಹು ತೊಂದರೆ ಉಂಟಾಗಿದೆ. ಅದು ಏನೆಂದರೆ ಕಪಿಗಳ ಅವಾಂತ್ರದಿಂದಲೂ ಮಳೆಯ ದೆಸೆಯಿಂದಲೂ ಕಂದಾಯ ಕೊಡುವದಕ್ಕೂ ಜೀವನ ಮಾಡುವದಕ್ಕೂ ಈ ಊರು ಮಲೆನಾಡು ಪ್ರಾಂತ್ಯವಾದಕಾರಣ ಗಾಡಿ ವಗೈರೆ ಬರುವದಕ್ಕೂ ರಸ್ತೆಯಲ್ಲಿ ಇರತಕ್ಕ ಕಾಲುವೆ ಸೇತುವೆಗಳು ಮುರಿದು ಹೋಗಿ ಬಂಡಿ ಬರಲು ಯತ್ನವಿಲ್ಲದೆ ಅನೇಕ ತೊಂದರೆಗಳು ಉಂಟಾಗಿದೆ. ಆದಕಾರಣ ಎಲ್ಲಾ ಸಂಗತಿಗಳನ್ನೂ ಸರಕಾರದವರು ವಿಚಾರಣೆ ಕೊಡದೆ ಇದ್ದರೆ ಗರೀಬರಾದ ಬಡಜನಗಳು ಜೀವನ ಮಾಡುವದು ಕಷ್ಟವಾಗುತ್ತೆ.

ಸತ್ಯವಾದಿ.

"ಪತ್ರಿಕೆ ಬಂತು, ಬಹುಮಾನ ಬರಲಿಲ್ಲ"

ಅಯ್ಯಾ,

ಮದರಾಸ್ ಸಾಹುಕಾರ್ ಪೇಟೆ ತಾಲಸಿರಾಂಡಾಸ್ ಕಂಪನಿಯವರು ಪಬ್ಲಿಷ್ ಮಾಡುತ್ತಿರುವ "ಕನ್ನಡನುಡಿಗನ್ನಡಿ" ಎಂಬ ಮಾಸಪತ್ರಿಕೆಗೆ ಚಂದಾದಾರರಾದ ಪಕ್ಷದಲ್ಲಿ ೧೫ ರೂ ಬರೀದಿ ಬಾಳತಕ್ಕ ಘಾರೀ ವಾಚ್ ಕಂಪನಿ ಸಾಮಾನುಗಳಲ್ಲಿ ಒಂದನ್ನು ಬಹುಮಾನವಾಗಿ ಕಳುಹಿಸುತ್ತೇವೆಂದು ಒಂದು ಪ್ರಕಟನೆಯನ್ನು ಪ್ರಕಟ ಪಡಿಸಿದ್ದರು. ಅದನ್ನು ನಂಬಿ ನಾವು ಒಬ್ಬ ಚಂದಾದಾರರಾಗಬೇಕೆಂದು ಊಹಿಸಿ, ಬಹುಮಾನಕ್ಕಾಗಿ ನಮ್ಮ ಹೆಸರಿನ ರಬ್ಬರು ಸೀಲಿನ ಸಂಗಡ ಪತ್ರಿಕೆಯನ್ನು ವಿ. ಪಿ. ಮಾಡಿ ರವಾನಿಸಿ ಎಂದು ಬರೆದೆವು. ಅವರು ಪತ್ರಿಕೆಯನ್ನು ಮಾತ್ರ ವಿ. ಪಿ. ಮಾಡಿ ಕಳುಹಿಸಿ, ಮೊಹರನ್ನು ಹಿಂದಿನಿಂದ ಕಳುಹಿಸುತ್ತೇವೆಂದು ಬರೆದರು. ಈ ನಮ್ಮ ಹಿಂದೂದೇಶಹಿತೈಷಿಗಳ ಮಾತನ್ನು ನಿಜವೆಂದು ನಂಬಿ ವಿ. ಪಿ. ಯನ್ನು ತೆಗೆದುಕೊಂಡೆವು. ಈ ತಸಲ್ ವರಿವಿಗೆ ೮—೧೦ ಕಾರಡುಗಳನ್ನು ಬರೆದಾಗ್ಯೂ ಅವರು ಜವಾಬಾಗಲಿ, ಬಹುಮಾನದ ಮೊಹರಾಗಲಿ ಕಳುಹಿಸದೆ ಸುಮ್ಮನೆ ಇರುತ್ತಾರೆ. ಇದು ಅವರ ತಪ್ಪೋ, ಅವರ ಗುಮಾಸ್ತೆಯ ತಪ್ಪೋ ತಿಳಿಯದು. ಈಗಲಾದರೂ ಅವರು ನಮ್ಮ ರಬ್ಬರು ಸ್ಟಾಂಪನ್ನು ನಮಗೆ ಕಳುಹಿಸಿಯಾರೆಂದು ನಂಬಿ ಇರುತ್ತೇನೆ.

೨—೯—೦೩. ತಳ್ಳಂವೆಂಕಟನಾರ್ಯಯ್ಯಶೆಟ್ಟಿ,
ಜವಳಿ ವ್ಯಾಪಾರ, ಮಂಚೇನಹಳ್ಳಿ.

ಧರ್ಮಕ್ಕಾಗಿ ಬಲಾತ್ಕಾರವೆ?

ಅಯ್ಯಾ,

ನಮ್ಮ ಶಿವಮೊಗ್ಗೆಯಲ್ಲಿ ಶಾವಣಗೆರೆಯು ದೊಡ್ಡ ವ್ಯಾಪಾರಸ್ಥಳವಾಗಿಯೂ, ಬಹು ಮಂದಿ ಲಿಂಗಾಯಿತ ಪ್ರಜೆಗಳನ್ನು ಒಳಗೊಂಡದ್ದಾಗಿಯೂ ಇರುವುದು ಎಲ್ಲರಿಗೂ ವಿದಿತವಾಗಿಯೇ ಇದೆ. ಈಗ ಸುಮಾರು ಒಂದೆರಡು ವಾರಗಳ ಕೆಳಗೆ ಕೆಲವು ಲಿಂಗಾಯಿತ ಪ್ರಮುಖರು ಇಲ್ಲಿ ವಿಕ್ರಯವಾಗುವ ದವಸ, ಹತ್ತಿ, ಅರಳೆ, ಇವುಗಳ ಮೇಲೆ ಚೀಲ ಒಂದಕ್ಕೆ ಅರ್ಧಪಾವು ಕಾಳು, ಮಣ ಒಂದಕ್ಕೆ ಒಂದು ಸೇರು ಹತ್ತಿ, ಒಂದು ಸೇರು ಅರಳೆ ಕೊಡಬೇಕೆಂದೂ, ಈ ಮಾಲೆಲ್ಲಾ ಇಲ್ಲಿಂದು ಮುರಿಘ ಮಠದ ಶಾಖೆಯಾದ ವಿರಕ್ತ ಮಠಕ್ಕೆ ಸೇರಬೇಕೆಂದೂ, ಇದರಿಂದ ಅಲ್ಲಿ ದಿನಂಪ್ರತಿಯಲ್ಲಿಯೂ ದಾಸೋಹ ಮುಂತಾದವು ಜರಗಬೇಕೆಂದೂ ತೀರ್ಮಾನ ಮಾಡಿ, ಈ ಅಭಿಪ್ರಾಯಕ್ಕೇನೇ ಒಂದು ಕರಾರು ಪತ್ರ ಬರೆದು, ವರ್ತಕರ ರುಜು ಸಹ ತೆಗೆದುಕೊಂಡಿದ್ದಾರೆ. ಈ ಒಪ್ಪಂದಕ್ಕೆ ತಪ್ಪಿದರೆ ಮಠಕ್ಕೆ ಹತ್ತು ರೂಪಾಯಿ ದಂಡ ಕೊಡಬೇಕಂತೆ. ಈ ಕರಾರಿಗೆ ಇತರ ಮತದ ಕೆಲವು ಭಾರಿ ವರ್ತಕರು ಅನುಮೋದಿಸಿರುವುದಿಲ್ಲವಾಗಿ ಇವರಿಗೆ ಬಹಿಷ್ಕಾರ ಹಾಕಲ್ಪಟ್ಟಿದೆ. ಇವರ ವ್ಯಾಪಾರವು ಕಟ್ಟಾಗಿದೆ. ಪ್ರಕೃತದಲ್ಲಿ ಎಲ್ಲಿ ನೋಡಿದರೂ ಇದೇ ವಿಷಯವೇ ಚರ್ಚೆಯಾಗುತ್ತಿದೆ. ಈ ದರ್ಮದ ಸುಲಿಗೆಯ ವಿಷಯದಲ್ಲಿ ಸರ್ಕಾರದವರಿಗೆ ವಿಜ್ಞಾಪಿಸಿಕೊಳ್ಳಬೇಕೆಂದು ಕೆಲವರು ಯೋಚಿಸುತ್ತಿದ್ದಾರೆ. ಸಾರ್ವಜನಿಕ ಧರ್ಮದ ಕೆಲಸವಾದರೆ ಚಿಂತೆಯಿಲ್ಲ. ಒಂದು ಪಂಗಡಕ್ಕೆ ಮಾತ್ರ ಸಲ್ಲಬೇಕೆಂದು ಮಾಡಿರುವ ಈ ವಿಧಾಯಕವು ಯೋಗ್ಯವೇ?

ಪ್ರೇಕ್ಷಕ

ಹೊಸ ಒಂದಾಣೆ ನಾಣ್ಯ

ಅಯ್ಯಾ,

ಒಂದಾಣೆ ನಾಣ್ಯವು ಈ ತಿಂಗಳು ಮೊದಲನೆ ತಾರೀಖಿನಿಂದ ಹಿಂದುಸ್ಥಾನದಲ್ಲೆಲ್ಲಾ ಚಲಾವಣೆಗೆ ತರಲ್ಪಟ್ಟಿದೆ ಎಂದು ಒಮ್ಮೆಬರದ ಬರುವ ಜನಗಳಿಗೂ, ಇತರ ವ್ಯವಹಾರಜ್ಞಾನವುಳ್ಳವರಿಗೂ ತಿಳಿದಿರುವದು ಸರಿಯಷ್ಟೆ. ಈ ಮಧ್ಯೆ ಇದು ಚಲಾವಣೆಗೆ ಬಂದ ಮೇಲೆ ಮದರಾಸಿನಲ್ಲಿ ಒಬ್ಬ ಸರ್ಕಾರಿ ನೌಕರನು ಬೆರಣಿ ಮಾರುವ ಒಬ್ಬಳಿಂದ ಬೆರಣಿ ಕ್ರಯಕ್ಕೆ ತೆಗೆದುಕೊಂಡು ಈ ಹೊಸ ನಾಣ್ಯವನ್ನು ಅವಳಿಗೆ ಕೊಟ್ಟನೆಂದೂ, ಅವಳು ಈ ಹೊಸ ನಾಣ್ಯವು ಚಾಲ್ತಿಯಲ್ಲಿ ಜಾರಿಯಲ್ಲಿ ಬಂದಿದೆ ಎನ್ನುವ ವಿಷಯವೇ ತಿಳಿಯದೆ, ಅದನ್ನು ತೆಗೆದುಕೊಳ್ಳಲು ತಿರಸ್ಕರಿಸಿದಳೆಂದೂ, ಆ ಮೇಲೆ ಅವಳು ಕ್ರಿಮಿನಲ್ ಶಿಕ್ಷೆಗೆ ಗುರಿಮಾಡಲ್ಪಟ್ಟಳೆಂದೂ, ಒಂದು ಇಂಗ್ಲೀಷು ಪತ್ರಿಕೆಯು ತಿಳಿಸುವದು. ಈ ಸಂಭವವು ನಮ್ಮ ಮೈಸೂರು ಸೀಮೆಯಲ್ಲೂ ಆಗಬಹುದು. ಅನೇಕ ಅನಕ್ಷರಸ್ಥರೂ, ಪ್ರಪಂಚಜ್ಞಾನವಿಲ್ಲದೆ ಇರತಕ್ಕಂಥಾ ಅನೇಕ ಹಳ್ಳಿ ಜನಪ್ರೈತರುಗಳೂ ಮತ್ತು ಇನ್ನೂ ಇತರ ಮುಗ್ಧಜನಗಳೂ ಈ ಕಷ್ಟಕ್ಕೆ ಗುರಿಯಾಗಬಹುದು. ಆದಕ್ಕೆ ಸರ್ಕಾರದವರು ಇಂಥಾ ಅನಾಹುತಗಳು ನಡೆಯದಂತೆ ಪ್ರತಿ ಸ್ಥಾನಿಕ ಬೋರ್ಡುಗಳ ಮುಖಾಂತರ ಮುನಾದಿ ಮೂಲಕ ಈ ಹೊಸ ನಾಣ್ಯವು ಜಾರಿಯಲ್ಲಿ ಬಂದಿರುತ್ತೆಂದೂ ಮತ್ತು ಜನಗಳು ಅದನ್ನು ಉಪಯೋಗಿಸಬಹುದೆಂದೂ ಪ್ರತಿ ಹಳ್ಳಿಯಲ್ಲಿಯೂ ಪ್ರಸಿದ್ಧಿಪಡಿಸಲು ಏರ್ಪಾಡು ಮಾಡಿದರೆ ಮುಗ್ಧಜನಗಳು ಮುಂದಕ್ಕೆ ಇಂಥಾ ಕಷ್ಟಕ್ಕೆ ಗುರಿಯಾಗದೆ ನೆಮ್ಮದಿಯಾಗಿರುತ್ತಾರೆಂದು ನಂಬಿದ್ದೇನೆ.

ಹೆ. ಕೋಟೆ ಜಿ. ಎಸ್. ಆರ್.

ಮೋಸವೋ ನಾಶವೋ

ಅಯ್ಯಾ,

ಈಚೀಚಿಗೆ ಕಾಲಕ್ಕೆ ತಕ್ಕಂಥಾ ಮಾಲುಗಳು ಹೆಚ್ಚಿ ಮದರಾಸ್ ವಗೈರೆ ಪಟ್ಟಣ ಜಾಗಗಳಲ್ಲಿ ಅನೇಕ ಕಂಪನಿಗಳು ಏರ್ಪಾಡು ಮಾಡಿಕೊಂಡು ಅವರಲ್ಲಿರತಕ್ಕ ಪದಾರ್ಥಗಳು ಅಂದರೆ ಚಿನ್ನದ ಗಿಲೀಟು ಒಡವೆಗಳು, ಸಿಲ್ವರ್ ಸಾಮಾನುಗಳು ತಯಾರಿಸಿ, ತೂಕವಿಲ್ಲ ಬಣ್ಣವಿಲ್ಲ, ಮನಸ್ಸು ಬಂದಂತೆ ಕ್ರಯಗಳು ಕಲ್ಪಿಸಿಕೊಂಡು, ಪ್ರತಿಯೊಂದು ತಾಲ್ಲೂಕು ಮತ್ತು ಹಳ್ಳಿಗಳಿಗೆಲ್ಲಾ ನೋಟೀಸ್ ಪ್ರಕಟನ ಪತ್ರಿಕೆಗಳನ್ನು ಪೋಸ್ಟ್ ಮೂಲಕ ರವಾನಿಸಿ, ಜನಗಳ ಮನಸ್ಸು ಮರುಳುಮಾಡಿ, ಅನೇಕ ದರಖಾಸ್ತು ಬರಮಾಡಿಕೊಂಡು, ನಂತರ ವಿ. ಪಿ. ದ್ವಾರ ಕೆಲವು ಕಳುಹಿಸಿಕೊಟ್ಟು ಮುಂದಾಗಿಯೇ ಅವರ ದುಡ್ಡು ಬರಮಾಡಿಕೊಳ್ಳುವರು. ನಂತರ ಈ ಹಳ್ಳೀ ಅಜ್ಞರು ಪಾರ್ಸಲ್ ಬಿಚ್ಚಿ ನೋಡಿ ಅದರಲ್ಲಿ ಒಳ್ಳೇದೇ ಇರಲೀ, ಕೆಟ್ಟದ್ದೇ ಇರಲೀ ತೆಗೆದುಕೊಂಡು ನೋಡಿ ವ್ಯಸನಪಡುತ್ತಾ, ಸದರಿ ಪದಾರ್ಥಗಳು ಇಂಥಾದ್ದು ಕೆಟ್ಟಿವೆ, ಇದನ್ನು ಭಾಗಿಯಾಗಿ ವಾಪಸು ರವಾನಿಸುವೆನೆಂಬದಾಗಿ ಒಳ್ಳೇದು ನೋಡಿ ಒಡನೆ ರವಾನಿಸಬೇಕೆಂದು ಬರೆಯುವರು. ಈ ರೀತಿ ೧—೨—೩ ದಫಾ ಬರೆದಾಗ್ಯೂ ಜವಾಬು ಇಲ್ಲ, ಪದಾರ್ಥವೂ ಇಲ್ಲ. ಬಾಯಿ ಮುಚ್ಚಿಕೊಂಡು ಸುಮ್ಮನಾಗುವರು. ಹೀಗೆ ಎಷ್ಟೋ ಜನಗಳು ಕಳೆದುಕೊಂಡು ಗೋಳಾಡುತ್ತಾರೆ. ಇದಕ್ಕೆ ತಕ್ಕ ಉಪಾಯವನ್ನು ಯಾವ ಸರ್ಕಾರದವರೂ ಮತ್ತು ಪೋಸ್ಟ್ ಆಫೀಸಿನವರೂ ಮಾಡಲಿಲ್ಲ. ಮಿತ್ರರೇ, ಕೆಟ್ಟುಹೋಗಬೇಡಿ. ಯಾವ ಕಂಪನಿಯವನೇ ಆಗಲಿ ತನ್ನ ಪದಾರ್ಥವು ಸರಿಯಾಗಿಲ್ಲದೆ ಹೋದರೂ ಮತ್ತು ಕೆಟ್ಟಿದ್ದರೂ ಹಣ ವಾಪಸು ಕೊಡಲು ಜವಾಬ್ದಾರನೆಂದು ಪ್ರಕಟನೆ ಮಾಡಿದಲ್ಲಿ ನಿಮಗೆ ಬೇಕಾದ ಪದಾರ್ಥಗಳು ತರಿಸಿಕೊಳ್ಳಬಹುದು. ಪ್ರತಿಯೊಬ್ಬರೂ ಇದೇ ರೀತಿ ಬರೆದು ಜವಾಬು ಪಡೆದು ಆ ಕರಾರಿನಂತೆ ನಡೆದುಕೊಳ್ಳಿ. ಈ ಕಂಪನಿಗಳ ಮೋಸವನ್ನು ಸರ್ಕಾರಿಂದ ದೃಢಪಡುತ್ತದೆ. ಸರ್ಕಾರದವರು ಜನಗಳ ಕ್ಷೇಮಚಿಂತನೆಯ ಮೇಲೆ ದಯವಿಟ್ಟು ಇಂಥಾವರನ್ನು ಯಾತಕ್ಕೆ ಶಿಕ್ಷೆಮಾಡಬಾರದು. ಕಳ್ಳತನ, ಮೋಸಗಾರಿಕೆ ಮೊದಲಾದ್ದಕ್ಕೆ ಶಿಕ್ಷೆಯೇ ಇಲ್ಲದಿದ್ದರೆ ಪ್ರಜಾಕ್ಷೇಮವು ಹ್ಯಾಗಾಗುವದು? ಆದ್ದರಿಂದ ಘನವನ್ನು ಹೊಂದಿದ ಸರ್ಕಾರದವರು ಈ ವಿ. ಪಿ. ಮೂಲಕ ಕಂಪನಿಯವರು ಮಾಡುವ ಮೋಸಕ್ಕೆ ಆಸ್ಪದವಾಗದಂತೆ ಯಾವದಾದರೊಂದು ಉಪಾಯವನ್ನು ಕಂಡುಹಿಡಿದು, ಸದರಿ ಕಾಯಂ ಜಾರಿಗೆ ತಂದು ಬಡವರನ್ನು ಕಾಪಾಡಬೇಕಾದೇ ಎಂಬದಾಗಿ ಪ್ರಾರ್ಥಿಸುವ

ದೇಶಾಭಿಮಾನಿ

ಆಶ್ಚರ್ಯಕರವಾದ ಕಳ್ಳತನ

ಅಯ್ಯಾ,

ಈಗ ಸುಮಾರು ೧—೨ ತಿಂಗಳ ಹಿಂದೆ ತುಮಕೂರಿನ ಬ್ರಹ್ಮ ಶ್ರೀ ಬೇದೇವಸ್ಥಾನದಲ್ಲಿ ಕಳ್ಳತನವಾಗಿ ಸುಮಾರು ೪ ಸಾವಿರ ರೂಪಾಯಿಗಳ ಮಾಲು ಅಂದರೆ ಬಹಳ ಪುರಾತನವಾಗಿದ್ದ ರತ್ನಖಚಿತವಾದ ಕಿರೀಟ ಮತ್ತು ಪದಕಗಳು ಚಿನ್ನದ ಆಭರಣಗಳು ಸಹಾ ೬ ಜನ ಕೂರರು ಬಂದು ತಾವು ಯಾವನೋ ನೌಕರರ ಹಾಗೂ ದೇವರ ಮೇಲೆ ಭಯವುಳ್ಳವರಂತೆಯೂ ಕಾಣಿಸಿಕೊಂಡು, ಸಾಯಂಕಾಲ ೮ ಗಂಟೆಯಲ್ಲೇ ಮಂಗಳಾರತಿ ಆಗುವ ಕಾಲಕ್ಕೆ ತಾವು ಸಲೀಸಾಗಿ ಒಳಗೆ ಹೋಗಿ ಚಪಾವು ಕಾಲಿನಿಂದಲೇ ಗರ್ಭಗುಡಿಯನ್ನು ಪ್ರವೇಶಮಾಡಿದ್ದರು. ಅರ್ಚಕನು—ಇದೇನಿರ್ರಯ್ಯಾ, ಹೀಗೆ ಚಪಾವು ಮೆಟ್ಟಿಕೊಂಡು ಒಳಗೆ ಬರುತ್ತೀರೆಂದು ಕೇಳಿದ್ದಕ್ಕೆ ಅವನಿಗೆ ಎರಡು ಖಡ್ಗಗಳನ್ನು ತೋರಿಸಿ ಬೆದರಿಸಿದ್ದು ಸುಮ್ಮನಾದನು. ನಂತರ ಕ್ರಮವಾಗಿ ಎಲ್ಲಾ ಸಾಮಾನುಗಳನ್ನು ಸೇವೆ ಮಾಡಿಕೊಂಡು ೪ ಜನರು ದರೋಡೆಗಾಗಿ ಪೂರ್ವ ದಿಕ್ಕಿನ ಬಾಗಿಲಲ್ಲಿದ್ದ ಕಾವಲುಗಾರನು—ಯಾರೋ ಜನಗಳು ಬಂದರೇ ನರಬಿ ಕೇಳುವದಕ್ಕೆ ಒಳಕ್ಕೆ ಹೋದನಂತೆ. ಅಷ್ಟರೊಳಗಾಗಿ ದೇವನ ಬಾಗಿಲ ಕಾವಲಿನವನು ಹೊರಕ್ಕೆ ತೂರಿ ಓಡಿ ಬಂದು. ಕಳ್ಳರ ದಂಡಿನ ಬಂದವರ ಜೊತೆಗೆ ಸೇರಿಕೊಂಡನು. ಇವರೆಲ್ಲಾ ಬಾಗಿಲ ಹೊರಗಡಲ್ಲಿದ್ದರು. ಆಗ ಒಳಗಿದ್ದ ೬ ಜನ ಧೀರ ಚೋರರು ಎಲ್ಲಾ ಗಂಟು ಕಟ್ಟಿ ಹೆಗಲಿಗೆ ಸೇರಿಸಿಕೊಂಡು, ಉತ್ತರ ದಿಕ್ಕಿನ ಬಾಗಿಲ ಬಳಿ ಬರುತ್ತಿದ್ದರು. ಅಷ್ಟರಲ್ಲೇ ಇವರೆಲ್ಲಾ—ಎಲ ಎಲಾ, ಆ ಕಡೆ ಹೋಗುತ್ತಾರೆಂದು ಎಲ್ಲರೂ ಅಲ್ಲಿಗೆ ಹೋದರು. ಪೂರ್ವ ದಿಕ್ಕಿನ ಬಾಗಿಲಲ್ಲಿ ಒಬ್ಬರಾದರೂ ನಿಂತಿರಲಿಲ್ಲ. ಈ ಸಂದರ್ಭ ಒಳಗಿನವರು ನೋಡಿದ್ದೇ. ಕೂಡಲೆ ಒಟ್ಟೊಟ್ಟಾಗಿ ಕತ್ತಿ ದೊಣ್ಣೆ ಪಿಸ್ತೂಲ್ ತಿರುಗಿಸುತ್ತಾ ಸಲೀಸಾಗಿ ನಡೆದರು. ಇದೆಲ್ಲಾ ಹಳ್ಳಿಯವರು ನೋಡಿ ಆಶ್ಚರ್ಯಪಟ್ಟು ಗಾಬರಿಯಾಗಿ ನಿಂತರು. ಒಬ್ಬ ಕುಂಬಾರರ ಹುಡುಗನು ಹೊರಗೆ ಕಾದಿದ್ದು, ತೇರಿನ ಬೀದಿಯಲ್ಲಿದ್ದ ಜಾಗದ ಬಳಿ ಹೋಗುತ್ತಿದ್ದ ಕಳ್ಳರ ಪೈಕಿ ಹಿಂದೆ ಇದ್ದ ೬ ನೇ ಕಳ್ಳನನ್ನು ದೊಣ್ಣೆಯಿಂದ ಕಾಲಿಗೆ ಹೊಡೆದ ಕೂಡಲೇ, ಕೂಡಲೆ ಅವನು ಸತ್ತನಲ್ಲಪ್ಪಾ ಎಂದು ಕೂಗಿಕೊಂಡನಾಗ ಒಡನೆ ಇನ್ನಿಬ್ಬರು ಹಿಂದಿರುಗಿ ಬಂದು ಅವನನ್ನು ಹೊತ್ತುಕೊಂಡು ಹೋದರಂತೆ. ಕಳ್ಳನು ಬಿದ್ದ ಕಾಲದಲ್ಲಿ ಅವನ ಬಳಿ ಒಂದು ಚಿನ್ನದ ವಿಗ್ರಹ ಮಾತ್ರ ಕೆಳಕ್ಕೆ ಬಿದ್ದಿತ್ತು. ಅವರು ಅದನ್ನು ತೆಗೆದುಕೊಂಡು ಕತ್ತಲೆಯಲ್ಲಿ ಪಲಾಯನವಾದರು. ಈ ವರೆಗೂ ಅವರ ಪತ್ತೆಯೇ ಇಲ್ಲ. ನಂತರ ನೆರೆಹಾಳು ಗ್ರಾಮದ ಪೋಲೀಸ್ ಸ್ಟೇಷನಿನವರೂ ಇನ್ನೂ ಅನೇಕರು ಬಂದು ನೋಡಿದರು. ಕಳ್ಳರು ಸಿಕ್ಕಲಿಲ್ಲ. ಬೆಳಿಗ್ಗೆ ಎಲ್ಲಾ ತಾಲ್ಲೂಕುಗಳಿಗೂ, ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್‌ರವರಿಗೂ ತಂತಿ ವರ್ತಮಾನ ಹೋಯಿತು. ಅವರುಗಳು ಬಂದು ನೋಡಿ, ವಾಸ್ತವಾಂಶಗಳನ್ನು ವಿಚಾರಿಸಿ ಬರೆದುಕೊಂಡು, ತನಿಖೆ ತರಹವೊಂದು ಮಾಡುತ್ತಾ ಇದ್ದಾರೆ.

ಪ್ರಜಾಭಿಮಾನಿ

ತಾಲ್ಲೂಕು ವರ್ತಮಾನಗಳು.

ಚಿಕ್ಕಮಗಳೂರು.—ಮಳೆ ಒಂದು ವಾರದಿಂದಲೂ ನಿಂತಿದೆ. ಜನರೆಲ್ಲಾ ಕಾಲ್ರಾಗಿ ಪೈರನ್ನು ಕೊಯ್ಯುತ್ತಲಿದ್ದಾರೆ. ಕಟಾವಿಗೆ ಬಂದಿರುವ ಫಸಲನ್ನೆಲ್ಲಾ ಸಂಗ್ರಹಿಸುವದಕ್ಕೆ ಒಳ್ಳೇ ಸಮಯವಾಗಿದೆ. ಪ್ಲೇಗ್ ರೋಗವಾದರೋ ದಿನದಿನಕ್ಕೆ ಹೆಚ್ಚುತ್ತಲಿದೆ. ಈಗ್ಗೆ ಒಂದು ವಾರದಿಂದಲೂ ದಿನ ಒಂದಕ್ಕೆ ಆರು ಏಳರಂತೆ ಮರಣವಾಗುತ್ತಿದೆ. ಇಂಗ್ಲಿಷ್ ಡಾಕ್ಟರುಗಳು ಒಂದು ಕಡೆಯಲ್ಲಿಯೂ ದೇಶೀಯ ವೈದ್ಯರು ಒಂದು ಕಡೆಯಲ್ಲಿಯೂ ರೋಗಿಗಳಿಗೆ ಚಿಕಿತ್ಸೆಗಳನ್ನು ಮಾಡುತ್ತಾ ಬಂದದ್ದರಲ್ಲಿ ಕೆಲವರು ಬದುಕಿಕೊಂಡಿರುವದಾಗಿ ಕೇಳುತ್ತೇವೆ. ಕಳೆದ ಆಗಸ್ಟ್ ೩೦ನೇ ತಾ ಇಲ್ಲಿನ ಪ್ರಜಾಸಮ್ಮತಿಯ ಆಂಗ್ಲೋ ವರ್ನಾಕ್ಯುಲರ್ ಸಂಘದವರು ಒಂದು ಮೀಟಿಂಗ್ ಮಾಡಿದರು. ಅದರ ಉದ್ದೇಶವೇನೆಂದರೆ—ಈ ಸಂಘದಿಂದ ಮೈಸೂರು ಪ್ರಜಾಪ್ರತಿನಿಧಿ ಸಭೆಗೆ ಒಬ್ಬರನ್ನು ಕಳುಹಿಸಬಹುದೆಂದು ಗವರ್ನಮೆಂಟಿನವರು ಅಪ್ಪಣೆ

…ರಿಂದ ಅವರಿಗೆ ತಮ್ಮ ಕೃತಜ್ಞತೆಯನ್ನು ತೋರಿಸುವದಕ್ಕಾಗಿ ಆ ದಿನ ಸಾಯಂಕಾಲ ಇಲ್ಲಿನ ಅಂಡಾಚತ್ರದಲ್ಲಿ ಸಭೆ ಸೇರಿತ್ತು. …ಕ್ಕೆ ನಮ್ಮ ಡೆಪ್ಟಿ ಕಮಿಷನರ್ ಮೆ|| ಶಿವಶಂಕರಸ್ವಾಮಿ ನಾಯಕ್ …ರು ಅಗ್ರಾಸನವನ್ನು ವಹಿಸಿದ್ದರು. ಇಲ್ಲಿನ ಮಹಮ್ಮದೀಯ ದೊಡ್ಡ …ಷ್ಯರೆಲ್ಲಾ ಸೇರಿದ್ದರು. ಮೆ|| ಅಬ್ದುಲ್ ಅಜೀಜ್ ಯವರು ಡೆಪ್ಟಿ …ಷನರವರು ಆ ದಿನದ ಸಭೆಯನ್ನು ಅಲಂಕರಿಸಿದ್ದಕ್ಕಾಗಿ ಅವರಿಗೆ …ವನೆ ಸಲ್ಲಿಸಿದರು. ಮೆ|| ಅಬ್ದುಲ್ ಜಬ್ಬಾರ್ ಯವರು ಮಹಮ್ಮದೀಯರು ವಿದ್ಯೆ ಬುದ್ಧಿ ಧರ್ಮಸದ್ಗುಣ ಮೊದಲಾದ ವಿಷಯಗಳಲ್ಲಿ ದಿನಕ್ಕೂ ಅಭಿವೃದ್ಧಿ ಹೊಂದಬೇಕಾಗಿರುವದರಿಂದ ಅದಕ್ಕಾಗಿ …ರೂ ಪ್ರಯತ್ನಿಸಲೇ ಬೇಕಾಗಿದೆ ಎಂಬುವ ಸ್ವಾರಸ್ಯವಾದ ಉಪ…ಸವನ್ನು ಮಾಡಿದನಂತರ ಡೆಪ್ಟಿ ಕಮಿಷನರು ಎದ್ದು ವಿದ್ಯಾ ವಿಷ…ದಲ್ಲಿ ನಮ್ಮ ಜನರಂತೆಯೇ ನಿಮ್ಮವರು ಕೂಡ ಹಿಂದೆ ಬಿದ್ದಿರುವ…ದ ವಿದ್ಯಾವಂತರಾಗಿ ಮುಂದೆ ಎಲ್ಲಾ ವಿಷಯಗಳಲ್ಲಿ ಅಭಿವೃದ್ಧಿ …ಹೊಂದುವದು ಒಳ್ಳೇದೆಂದು ಹೇಳಿದರು. ಅಂಜುಮಾನ್ ರಾತ್ರಿ ಸ್ಕೂಲಿ ಹುಡುಗರಿಗೆ ತಿಂಡಿಯನ್ನು ಹಂಚಿದರು. ಆ ಸಂಘದಿಂದ ಮೆ|| ದಸ್ತೂರ್ ಯವರನ್ನು ಪ್ರತಿನಿಧಿ ಸಭೆಗೆ ಮೆಂಬರಾಗಿ ಕಳುಹಿಸುವಂತೆ …ಮಾಡಿದರು. ಸಭೆಯು ಬರ್ಖಾಸ್ತಾಯಿತು.—ಎಗ್ಸಿಕ್ಯೂಟಿವ್ …ಜನಿಯರ್ ಮೆ|| ವಾಲ್ಟ್ಸ್ ಯು ಸಾಹೇಬರು ೨೯ನೇ ತಾ. ಇಲ್ಲಿಂದ …ಮೇರ ಹೋದರು. ಅವರ ಬದಲಿಗೆ ಮೆ|| ನವರತ್ನರಾಯರವರು …ಬಂದಿದಾರೆ

ಚಿತ್ರದುರ್ಗ.—ಈಗ ಸುಮಾರು ಎರಡೂವರೆ ತಿಂಗಳಿಂದ ಒಂದೇ ಸಮನಾಗಿ ಮೋಡಮುಚ್ಚಿಕೊಂಡು ಶೀತಗಾಳಿ ಬೀಸುತ್ತ ಮಧ್ಯೆ ಮಧ್ಯೆ ಮಳೆ ಬರತಕ್ಕದ್ದು ಈಗ ಜಾಸ್ತಿಯಾಗಿದೆ. ಈ ಊರಲ್ಲಿ ಪ್ರಾಯಶಃ ಮುಕ್ಕಾಲುಪಾಲು ಜನಗಳು ವಾಸಮಾಡತಕ್ಕ ಮನೆಗಳಿಗೆ …ಮನೆಗಳು ಇಲ್ಲ. ಅವರು ಮೊದಲಿನಿಂದ ಊರಿಗೆ ದಕ್ಷಿಣಭಾಗದಲ್ಲಿರ…ಕ್ಕ ಅಗಳಿಗೆ ಹೋಗುತ್ತಿದ್ದರು. ಈಚೆಗೆ ಅದು ತಪ್ಪಿ ಊರಲ್ಲೇ ಪಶ್ಚಿಮ ದಕ್ಷಿಣಗಳಲ್ಲಿರತಕ್ಕ ಎತ್ತರವಾದ ದಿಣ್ಣೆಗಳ ಮೇಲು ಮನೆಗಳ ಹಿಂದೆಯೂ ಸಹ ಶೌಚಮಾಡುತ್ತಾರೆ. ಮಳೆ ಬಂದಾಗ ಆ ಗಲೀಜೆಲ್ಲಾ ಕೊಚ್ಚಿಕೊಂಡು ಮನೆಗಳಿಗೆ ಬರುತ್ತದೆ. ಇದು ಸಾಲದಕ್ಕೆ ಊರ ಸಣ್ಣ ಸಣ್ಣ ಗಲ್ಲಿಗಳಲ್ಲಿ ಕಸ, ಎಂಜಲೆಲೆ, ಬಚ್ಚಲು ನೀರು ಸಲೀಸಾಗಿ ಹೋಗದೆ ಇರುವದು, ಇವುಗಳಿಂದ ಆ ಗಲ್ಲಿಗಳಲ್ಲಿ ತಿರುಗಾಡಲು ಅಸಹ್ಯವಾಗುತ್ತೆ. ಈಗ ಎಲ್ಲಿ ನೋಡಿದರೂ ಪ್ಲೇಗ್ ರೋಗವು ಹೆಚ್ಚುತ್ತಾ ಇದೆ. ಊರೆಲ್ಲಾ ಶುಚಿಯಾಗಿರಬೇಕೆಂದು ಒಂದೆರಡು ಸಾರಿ ಡಂಗುರ ಹಾಕಿದ್ದು ಪ್ರಯೋಜನವಾಗಬೇಕಾದರೆ ಮುನಿಸಿಪಾಲಿಟಿಯವರು ಸಾಧಾರಣ ಜನಗಳಿಗೆ ಮೇಲ್ವಿಚಾರಣೆ ಮಾಡಬೇಕೆಂದೇ. ಊರಿನ ಜನಗಳೆಲ್ಲಾ ಸ್ನಾನಕ್ಕೆ ಮೊದಲ್ಗೊಂಡು ಎಲ್ಲಾ ಕೆಲಸಕ್ಕೂ ಕೊಳದ ನೀರನ್ನೇ ಉಪಯೋಗಿಸುತ್ತಾರೆ. ಆದರೆ ಈಚೆಗೆ ಕೆಲವು ದಿನಗಳಿಂದ ಅಗಸರು … ಬಾಕಿ ಹೆಂಗಸರು ಗಂಡಸರು ಸಹ … ಮಕ್ಕಳ ರೊಚ್ಚು ಬಟ್ಟೆಗಳನ್ನು ಮುಸುರೆಪಾತ್ರೆಗಳನ್ನು ತೊಳೆಯುವದು, ಈ ಕೆಲಸಗಳೆಲ್ಲಾ ಕೊಳಾಯಿ ಒಳಿಯಲ್ಲೇ ಆಗುತ್ತವೆ. ಇದರಿಂದ ಆ ಸ್ಥಳಗಳಲ್ಲಿ ಕೆಟ್ಟ ವಾಸನೆಯಾಗುತ್ತಾ ಇದೆ. ಪ್ಲೇಗ್ ಆಗಿರತಕ್ಕ ಸ್ಥಳಗಳಿಂದ ಜನಗಳು ಬಂದು ಈ ಊರಲ್ಲಿ ಸೇರುತ್ತಿದ್ದಾರೆ. ಇಲ್ಲಿನ ಅಧಿಕಾರಿಗಳು ಈ ಕಾಲದಲ್ಲಿ ಉಚಿತವಾದ ನಿಷೇಧಗಳನ್ನು ಜಾರಿ ಇಟ್ಟರೆ ಒಳ್ಳೇದಾದೀತು. ಚನ್ನಪಟ್ಟಣದಿಂದ ಬಂದ ಕೆಲವರನ್ನು ಊರಿನಲ್ಲಿ ವಾಸ ಮಾಡಲು ಅವಕಾಶಕೊಡದೆ ಕ್ಯಾಂಪಿಗೆ ಕಳುಹಿಸಿದರು. ಶಿವಮೊಗ್ಗೆಯಿಂದ ಪ್ಲೀಡರ ಮನೆಗೆ ಬಂದವರು ಊರಲ್ಲೇ ಇದ್ದಾರೆ. ಊರಲ್ಲಿ ಕೆಲವು ದಿನಗಳಿಂದ ಜನಗಳಿಗೆ ಜ್ವರ ಬಂದು ಗಂಟಲಲ್ಲಿ ಗಡ್ಡೆಗಳಾಗಿ ಅವು ಕೂಡಿಕೊಂಡಕೂಡಲೆ ಪ್ರಾಣ ಹೋಗುವ ಕಾಯಿಲೆ ಆರಂಭವಾಗಿ ಕೆಲವರು ಅದರಲ್ಲೇ ಮೃತಪಟ್ಟರು.

ತುಂಕೂರು.—ನಮ್ಮ ಇಲ್ಲಿ … ಹಿಂಡಿಯಾಗಿ ಅನಾರೋಗ್ಯವಾಗಿದೆ. ಅಂಗಡಿಗಳಿಗೆ ದಿನಸಿ ಗಾಡಿಗಳು ಬರುವದು ಕಡಮೆಯಾಗಿ ರಾಗಿ ಧಾರಣೆ ೧ಕ್ಕೆ ೧೭ ರೂ., ಭತ್ತ ೨೦ ರೂ. ವರೆಗೂ ಇದೆ. ಬಡವರಿಗೆ ಬಹಳ ಕಷ್ಟವಾಗಿದೆ. ಈ ವಾರದಲ್ಲಿ ತಿಳಿಸಬೇಕಾದ ವಿಷಾದಕರವಾದ ಸಂಗತಿಯು ನಮ್ಮ ಪಟ್ಟಣಕ್ಕೆ ಪ್ಲೇಗ್ ರೋಗವು ಪ್ರವೇಶ ಮಾಡಿರುವದೇ ಮುಖ್ಯವಾದದ್ದು. ಈ ರೋಗದ ಪ್ರವೇಶಕ್ಕೆ ಅತಿ ಮುಖ್ಯಕಾರಣಗಳು ಎರಡೆಂಬದಾಗಿ ಜನರು … ನಿಶ್ಚಯಿಸಲ್ಪಟ್ಟಿದೆ. ಅವುಗಳಾವುವೆಂದರೆ—ಮೊದಲನೇದು ಮಂಡಿಗಳಿಂದ. ಎರಡನೇದು ಪರಸ್ಥಳದಿಂದ ಸೋಂಕುಳ್ಳ ಜನರು ಈ ಪಟ್ಟಣಕ್ಕೆ ಬರಲು ಯಾವ ಅಡಚಣೆಯೂ ಇಲ್ಲದಿರುವದು. ಸ್ವಲ್ಪ ಹೆಚ್ಚುಕಡಮೆ ಎಲ್ಲಾ ಮಂಡಿಗಳಲ್ಲೂ ಇಲಿಗಳು ಸಾಯುತ್ತಿರುವದಾದರೂ ಧನಾಪೇಕ್ಷಾಬದ್ಧರಾದ ಈ ವರ್ತಕರು ತಮ್ಮ ಪ್ರಾಣಗಳ ಮೇಲಣ ಆಸೆಯನ್ನು ತೃಣೀಕರಿಸಿ ಉದಾಸೀನತೆಯಿಂದ ಸೋಂಕುಳ್ಳ ಪ್ರದೇಶದಿಂದ ಸರಕುಗಳನ್ನು ತರಿಸುತ್ತಾ ತಮ್ಮಲ್ಲಿರುವ ಪ್ಲೇಗಿನ ಸೋಂಕಿನ ಸರಕುಗಳನ್ನು ಇತರಕಡೆಗೆ ಭರ್ತಿ ಮಾಡುತ್ತಾ ಇದ್ದಾರೆ. ಈಗ ಎಲ್ಲಾ ಮಂಡಿಗಳಿಗೂ ಸೀಲ್ ಮಾಡಿಸುತ್ತಿದ್ದಾರೆ. ಆದರೆ ರೋಗವು ಬೇರೂರಿದ ಮೇಲೆ ಈ ಪ್ರಯತ್ನ ತಾನೇ ಸಾರ್ಥಕವಾದೀತೇ? ಎರಡನೇದಾಗಿ ಇತರಕಡೆ ಪ್ಲೇಗ್ ವ್ಯಾಪಿಸಿರುವ ತ್ಯಾಮಗೊಂಡ್ಲು, ಬೆಂಗಳೂರು, ಮುಂತಾದ ಸ್ಥಳಗಳಿಂದ ಬಂದು ಇಲ್ಲಿಯೇ ಅನೇಕ ಸಂಸಾರದವರು ನೆಲೆಯಾಗಿದ್ದಾರೆ. ಈ ರೀತಿಯಾದರೆ ರೋಗ ಬಾರದೆ ಏನು ತಾನೇ ಮಾಡೀತು? ಕೋಟೆಪೇಟೆಯಲ್ಲಿ ತಾ. ೧೮ರವರೆಗೆ ಐದು ಜನರು ಸತ್ತರು. ಇಬ್ಬರಿಗೆ ಕಾಯಿಲೆ ಆಗಿದೆ. ಊರಿನಲ್ಲೆಲ್ಲಾ ಅಲ್ಲಲ್ಲಿ ದಿನಂಪ್ರತಿ ಮನೆಗಳಲ್ಲಿ ಇಲಿಗಳು ಸಾಯುತ್ತವೆ. ಈಗ ಒಂದು ವಾರದಲ್ಲೇ ನಮ್ಮ ಡಾಕ್ಟರು ಮಂಡಿಪೇಟೆಗೆ ಬಂದು ವರ್ತಕರಿಗೆ ಈ ಸಾರಿಯ ಪ್ಲೇಗ್ ಕಾಯಿಲೆಯು ಔಷಧಿ ಕೊಡುವುದಕ್ಕೂ ಅವಕಾಶ ಕೊಡದಷ್ಟು ಜಾಗ್ರತೆ ಮರಣವನ್ನುಂಟುಮಾಡುತ್ತಿರುವುದರಿಂದ ಜನರೆಲ್ಲರೂ ತಕ್ಷಣವೇ ಕೆಲವು ಕಾಲ ಊರು ಬಿಡುವದು ಕ್ಷೇಮಕರ ಎಂದು ಅಪ್ಪಣೆ ಕೊಡಿಸಿದರು. ಆದಾಗ್ಯೂ ಜನರಲ್ಲಿ ಉದಾಸೀನವೇ ಇದೆ. ಇಂಥಾ ಉದಾಸೀನತೆಯಿಂದ ನರಳುವರಾದ ತ್ಯಾಮಗೊಂಡ್ಲಿನವರು ಎಷ್ಟು ದುಃಖಪಟ್ಟಿರುವರೋ ವಿಚಾರಿಸಿದರೆ ಗೊತ್ತಾಗುತ್ತೆ. ಇನ್ನೂ ಕೋಟೆಯಲ್ಲಿ ಇರುವರಿಗೂ ಇಲಿಗಳು ಸಾಯುವದೇ ಹೊರತು ಜನರಿಗೆ ಕಾಯಿಲೆ ಇಲ್ಲ. ಈಗಲೇ ಜನರು ಎಷ್ಟು ಅನಾನುಕೂಲಗಳಿದ್ದರೂ ಲಕ್ಷ್ಯಮಾಡದೆ ಹೊರಗಡೆಗೆ ಹೋಗುವದು ಕ್ಷೇಮಕರವಾಗಿದೆ. ಈಗ ಮೂರು ವರುಷಗಳಿಂದಲೂ ಈ ರೋಗದ ಭಯವೇ ಇಲ್ಲದಿದ್ದ ಈ ಪುರನಿವಾಸಿಗಳು ಈ ಮಳೆಗಾಲದಲ್ಲಿ ಹೊರಗಡೆ ಹೋಗಿ ವಾಸಿಸುವ ಸಂಕಟವು ಭಗವಂತನೊಬ್ಬನಿಗೇ ಗೊತ್ತಾಗಬೇಕು. ಮೊದಲಿನಿಂದ ಹೊಗೆಯಾಡುತ್ತಿದ್ದ ಕಳ್ಳತನದ ಅವಾಂತ್ರವು ಈ ಸಂದರ್ಭದಲ್ಲಿ ಎಲ್ಲಿ ಜೋರಾಗುವದೋ ಎಂಬ ಹೆದರಿಕೆಯು ಜನರಲ್ಲಿ ಭಯಪಡಿಸುತ್ತದೆ. ಅಂತು ನಮ್ಮ ತುಂಕೂರು ನಿವಾಸಿಗಳಿಗೆ ನಾನಾ ತರವಾದ ಸಂಕಟಗಳು ಉಂಟಾಗಿರುತ್ತವೆ.

ನಂಜನಗೂಡು.—ಕಳೆದ ಮೂರು ತಿಂಗಳಿಂದಲೂ ಸುಮಾರು ೩೦೦ ಜನಗಳ ಮಟ್ಟಿಗೆ ಪ್ಲೇಗಿನಿಂದ ಕಾಲವಾಗಿರುತ್ತಾರೆ. ಈಗಲೂ ದಿನವಹಿ ೩—೪ ಜನಗಳಿಗೆ ಕಮ್ಮಿ ಇಲ್ಲದೆ ಸಾಯುತ್ತಲಿದ್ದಾರೆ. ಊರನ್ನು ಸಂಪೂರ್ಣವಾಗಿ ಎಲ್ಲಾ ಜನರೂ ಬಿಟ್ಟಿರುವದಿಲ್ಲ. ದೇವೂರು ರಸ್ತೆಯ ಸಮೀಪದಲ್ಲಿರುವ ಬಡಾವಣೆಗೆ ಅನೇಕರು ೨ ತಿಂಗಳ ಹಿಂದೆ ಬಂದು ವಾಸವಾಗಿದ್ದಾಗ್ಯೂ ಪ್ಲೇಗ್ ಜಾಸ್ತಿಯಾದ ಮೇಲೆ ಊರಿನವರು ಅನೇಕರು ಹೊಸದಾಗಿ ಗುಡಿಸಲುಗಳನ್ನು ಕಟ್ಟಲು ಪ್ರಾರಂಭಿಸಿ ವಾಸಕ್ಕೆ ಸಹ ಬಂದಿರುತ್ತಾರೆ. ಮರಣದ ಭೀತಿಯನ್ನು ತಪ್ಪಿಸಿಕೊಳ್ಳಲು ಗುಡಿಸಲಿಗೆ ಬಂದರೆ ಪರಸ್ಥಳಕ್ಕೆ ಹೋಗಿದ್ದ ಕಾಯಂ ನಿಶಾಚರರು ಸಹ ವಾಪಸು ಬಂದು, ಬಿಟ್ಟಿದ್ದ ಮನೆಗಳಿಗೆ ನುಗ್ಗಿ ಬೀಗ ಒಡೆದು ತಮ್ಮ ಭಾಗಗಳನ್ನು ಸರಿಯಾಗಿ ಇಟ್ಟಿದ್ದಾರೆಯೋ ಇಲ್ಲವೋ ಎಂಬುದನ್ನು ನಿದಾನವಾಗಿ ನೋಡಿ ತೆಗೆದುಕೊಂಡು ತಮ್ಮ ಕೈಲಾದಮಟ್ಟಿಗೆ ೧೧—೧೨ ಮನೆಗಳಿಗೆ ಉಪಕಾರ ಮಾಡಿ ಹೋಗಿರುತ್ತಾರೆ. ಸರ್ಕಾರದವರಾದರೋ ೨೫ ಗಳು, ೨ ಬೊಂಬು ಕೊಡುತ್ತೇವೆ ನೀವೇ ಹಾಕಿಕೊಳ್ಳಿ ಎಂದು ಸಮಯಭಯಗಳಿಂದ ಹೇಳುತ್ತಲಿದ್ದಾರೆ. ಈಗ ಪ್ರಜೆಗಳಾದ ನಾವುಗಳು ಮೇಲಿನ ಮೂರು ಆರ್ಡರುಗಳಲ್ಲಿ ಯಾವ ಆರ್ಡರನ್ನು ಜಾರಿಗೆ ತರಬೇಕು? ಕೆಲವರು ತಮ್ಮ ಮಾಲುಗಳನ್ನು ಕಳಕೊಂಡದ್ದಲ್ಲದೆ ಮೇಲಿನ ಅಧಿಕಾರಿಗಳು ಕಳ್ಳರನ್ನು ಹಿಡಿದು ಪ್ರಾಸಿಕ್ಯೂಟು ಮಾಡುವರೆಂಬ ಆಶೆಯಿಂದ ಮೂರು ನಾಲ್ಕು ದಿನಗಳ ವರೆಗೆ ಪೋಲೀಸಿನವರ ಜೊತೆಯಲ್ಲಿ ಸುತ್ತಿದ್ದಾಯಿತು. ಪೋಲೀಸ್ ಇನ್ಸ್‌ಪೆಕ್ಟರವರು ಕೂಡ ಬೇಜಾರಾಗಿ ಸದ್ಯದಲ್ಲಿ ತಟಸ್ಥರಾಗಿರುತ್ತಾರೆ.—ಕೆಲವು ವಾರಗಳ ಕೆಳಗೆ ಇಲ್ಲಿನ ಸ್ಟೇಷನ್ ಮಾಸ್ಟರು ಸರ್ಕಾರಿ ಹಣವನ್ನು ತಿಂದುಹಾಕಿದ್ದರಿಂದ ಡಿಸ್‌ಮಿಸ್ ಆದುದನ್ನು ತಮ್ಮ ಪತ್ರಿಕೆಯಲ್ಲಿ ಸಮೂದಿಸಿತ್ತು. ಈ ವರುಷ ಮೇ, ಜೂನ್ ತಿಂಗಳಲ್ಲಿ ಸಹ ರೈಲ್ವೆ ಆಡಿಟರು ಒಂದು ಲೆಕ್ಕಗಳನ್ನು ತನಿಖೆ ಮಾಡಿಕೊಂಡರು. ಸದರಿ ಸ್ಟೇಷನ್ ಮಾಸ್ಟರು ಸುಮಾರು ೩ ತಿಂಗಳೊಳಗಾಗಿ ಈ ಊರು ಸ್ಟೇಷನಲ್ಲಿ ಉತ್ಪತ್ತಿಯಾದ ೩೦ ಸಾವಿರ ರೂಪಾಯನ್ನು ನಿರ್ವಂಚನೆಯಿಂದ ಮೇಲಕ್ಕೆ ರವಾನೆ ಮಾಡಿರುತ್ತಾರೆ. ಹೀಗಿರುವಲ್ಲಿ … ಅಲ್ಪ ನೋಟುಗಳನ್ನು ಅವರು ತಿಂದರೆಂಬುವದು ಆಶ್ಚರ್ಯವಾಗಿದೆ. ಈ ಸ್ಟೇಷನ್ ಮಾಸ್ಟರು ಜನಗಳಲ್ಲಿ ಸ್ನೇಹ ಬೆಳೆಸಬೇಕೆಂಬುವ ಇರಾದೆಯಿಂದ ತಮ್ಮ ಆಫೀಸ್ ಕೊಠಡಿಗೆ ಎಲ್ಲರನ್ನೂ ಸೇರಿಸುತ್ತಿದ್ದರು. ಯಾರೋ ಒಬ್ಬರು ಇಟ್ಟಿದ್ದ ಹಣವನ್ನು ಅಪಹರಿಸಲು ಕೈಯಿಂದ ಹಾಕುವದಕ್ಕೆ ಸ್ಟೇಷನ್ ಮಾಸ್ಟರಿಗೆ ಗತಿಯಿಲ್ಲದೆ ಈ ಪದವಿಗೆ ಬರಬೇಕಾಯಿತು.—ಕೊಳ್ಳೇಗಾಲದಿಂದ ಸುಮಾರು ಒಂದು ವರ್ಷದ ಹಿಂದೆ ಈ ಊರು ಮುನ್ಸಿಫರವರು ವರ್ಗವಾಗಿ ಬಂದರು. ಇವರ ವಿಷಯವಾಗಿ ಕೊಳ್ಳೇಗಾಲದವರು ಸೃಷ್ಟಿಸಿದ್ದ ನಾನಾತರದ ವರ್ತಮಾನಗಳನ್ನು ಈ ಊರು ನಿವಾಸಿಗಳು ಕೇಳಿ ತಲ್ಲಣಿಸುತ್ತಲಿದ್ದರು. ಪ್ರಾರಂಭಕ್ಕಾಗಿ ಎಲ್ಲರನ್ನೂ ಒಂದೇ ರೀತಿಯಾಗಿ ಕಾಣುವ ನಿಷ್ಪಕ್ಷಪಾತಿಯಾದ ಈ ಮುನ್ಸಿಫರವರಿಗೆ ಭಗವಂತನು ದೊಡ್ಡ ಪದವಿಯನ್ನು ಕೊಟ್ಟು ಕಾಪಾಡಬೇಕೆಂಬುವದೇ ಇಲ್ಲಿನ ಪ್ರಜೆಗಳ ಪ್ರಾರ್ಥನೆ

ಪ್ರಕಟನೆಗಳು.

ಪಂಡಿತ ಕೆ. ವೆಂಕಟೇಶೈಯನವರ ದಿವ್ಯ ಮಹೌಷಧಗಳು.

91-2

ಜ್ವರವೈರಿ —ಇದು ಎಲ್ಲಾ ವಿಧಜ್ವರಗಳನ್ನೂ ನಿವಾರಣೆ ಮಾಡುವದರಲ್ಲಿ ಸರ್ವೋತ್ತಮವಾಗಿದೆ ಎಂದು ಸೇವಿಸಿ ಗುಣಹೊಂದಿದ ಅನೇಕ ಮಂದಿ ದೊಡ್ಡಮನುಷ್ಯರು ಬಾಲಕರು ವೃದ್ಧರು ಇವರುಗಳ ಕೇಳ್ವಿಕೆಯೇ ಪ್ರಮಾಣಗಳು. ಇದು ಅತ್ಯುತ್ತಮವಾದ ಒಳ್ಳೇ ಔಷಧವೆನ್ನುವುದಕ್ಕೆ ನಿರ್ವಿವಾದ ಮಾತೆ. ಈ ಜ್ವರವೈರಿಯು ಈಗಿನ ಕಾಲದ ಪ್ಲೇಗ್ ಎಂಬ ಜ್ವರಕ್ಕಾದರೂ ರಾಮಬಾಣ ಸಮಾನವಾದದ್ದು. ತಕ್ಷಣ ಪರಿಹಾರ. ಇದರ ಅನುಪಾನ ಕ್ರಮಪತ್ರಿಕೆ ಸಂಗಡಲೇ ಕಳುಹಿಸಲ್ಪಡುವದು. ಅನೇಕ ಮಂದಿ ಇದರ ವಿಷಯವಾಗಿ ಬರೆದಿರುವ ಪತ್ರಗಳನ್ನು ಅಪೇಕ್ಷಿಸಿದವರಿಗೆ ರವಾನಿಸಲ್ಪಡುವದು. ಇದು ಎಲ್ಲಾ ಕಾಲದಲ್ಲಿಯೂ ಪ್ರತಿಯೊಂದು ಕುಟುಂಬದಲ್ಲಿಯೂ ಇರಬೇಕಾದದ್ದು. ಇದರ ಕ್ರಯ ಸೀಸೆ ೧ಕ್ಕೆ ಒಂದು ರೂಪಾಯಿ ಮಾತ್ರ. ಒಟ್ಟಿಗೆ ೬ … ಸೀಸೆಗಳನ್ನು ತರಿಸಿಕೊಳ್ಳುವವರಿಗೆ ಒಂದು ಸೀಸೆ ಮುಫತ್ತು ಕೊಡುತ್ತೇವೆ

ಪ್ಲೇಗಿನ ಗಡ್ಡೆಗೆ ಉಜ್ಜುವ ಮುಲಾಮು:—ಇದನ್ನು ಉಪಯೋಗಿಸುವದರಿಂದ ಎಂಥಾ ಗಡ್ಡೆಯಾದರೂ ಬಹು ಜಾಗ್ರತೆಯಾಗಿ ಒಡೆದು ಅಥವಾ ಕರಗಿ ಬೇಗನೆ ಗುಣವಾಗುವದು. ಡಬ್ಬಿಗೆ ೪ ಆಣೆ

ಪಂಡಿತ ಕೆ. ವೆಂಕಟೇಶೈಯ್ಯ,
ಇಂಗ್ಲಿಷ್-ಹಿಂದೂ ವೈದ್ಯಶಾಲಾ, ಶಿವಮೊಗ್ಗಾ

ನಜರಬಾದಿನಲ್ಲಿ ತಡೆಯ ನೋಟೀಸ್.

97-1

ಮೈಸೂರು ನಜರಬಾದ್ ಮೊಹಲ್ಲಾದಲ್ಲಿದ್ದು ಕಾಲವಾದ ನನ್ನ ಗಂಡ ಬಾಲಕೃಷ್ಣಚೆಟ್ಟಿಯು ತಮ್ಮಂದಿರು ಸಮುಸ್ಥಪ್ಪದಲ್ಲಿರುವ ಮನೆಯನ್ನು ಪರಾಧೀನಮಾಡಬೇಕೆಂದು ಪ್ರಯತ್ನ ಪಡುತ್ತಿದ್ದಾರೆ. ಈ ಮನೇ ಮೇಲೆ ನನಗೆ ಜೀವನಾಂಶದ ಹಕ್ಕು ಇದೆ. ಆದ್ದರಿಂದ ಯಾರೇ ಆಗಲಿ ನನ್ನ ಜೀವನಾಂಶಕ್ಕೆ ಲೋಪಬರುವಂತೆ ಮನೆಯನ್ನು ಪಡಕೊಂಡರೆ ಅವರು ನನ್ನ ನಷ್ಟಕ್ಕೆ ಗುರಿಯಾಗುತ್ತಾರೆಂದು ಈ ಮೂಲಕ ಎಚ್ಚರಿಸುತ್ತೇನೆ

ನಜರಬಾದ್ ಬಾಲಕೃಷ್ಣಚೆಟ್ಟಿಯ ಹೆಂಡತಿ ಗೌರಮ್ಮ.

ಇಲ್ಲಿ ನೋಡಿ! ಹೊಸ ಪುಸ್ತಕ!! ಹೊಸ ಫೋಟೋಗಳು!!!

88-3

ಶ್ರೀಮಚ್ಛಂಕರಭಗವತ್ಪಾದಾಚಾರ್ಯರ ಚರಿತ್ರೆ, ಕ್ರಯ ೧೦ ಆ. ಇವರ ಫೋಟೋ ೪ ಆ. ಈಗಿನ ಶ್ರೀಶೃಂಗಗಿರಿ ಸ್ವಾಮಿಗಳ ಫೋಟೋ ಚಿಕ್ಕದು ೬ ಪೈ, ದೊಡ್ಡದು ಜನದಲ್ಲಿ ಶಿಷ್ಯೋಪದೇಶಾರ್ಥವಾಗಿ ಕುಳಿತಿರತಕ್ಕದ್ದು ೧ ಆ. ಫೋಟೋಗಳು ೬ಕ್ಕೆ ಕಮ್ಮಿ. ವಿ. ಪಿ. ಮಾಡುವದಿಲ್ಲ.

ವಿಳಾಸ:— ಸುಬ್ಬನರಸಿಂಹಯ್ಯ,
ದಿವಾನ್ ವೆಂಕಟೇ ಅರಸಿನವರ ಲಾಯ,
ಚಾಮರಾಜ ರೋಡು, ಮೈಸೂರು.

"ಸಾಧ್ವಿ."

86-3

ಇದು ಮಿ|| ವೆಂಕಟಕೃಷ್ಣಯ್ಯನವರಿಂದ ಮುದ್ರಿಸಲ್ಪಡುತ್ತಲಿರುವ ಮಾಸಪತ್ರಿಕೆ. ಭಾರತಮಹಿಳೆಯರ ವಿದ್ಯಾಭ್ಯಾಸವಿಷಯಗಳನ್ನೂ, ಅವರ ಇಹ ಪರ ಸೌಖ್ಯಗಳಿಗೆ ಸಾಧಕವಾದ ವಿಷಯಗಳನ್ನೂ ಒಳಗೊಂಡಿರುತ್ತದೆ. ಈ ಪತ್ರಿಕೆಯು ಇಪ್ಪತ್ತನಾಲ್ಕು ಪುಟಗಳುಳ್ಳದ್ದು. ಇದಕ್ಕೆ ಚಂದಾ ವರುಷಕ್ಕೆ ಒಂದು ರೂಪಾಯಿ ಎಂಟಾಣೆ. ವಿದ್ಯಾರ್ಥಿನಿಯರಿಗೆ ಒಂದು ರೂಪಾಯಿ ಮಾತ್ರ. ಟಪಾಲ್ ಹಾಸಲು ಮಾಫಿ. ಬೇಕಾದವರು ಕೆಳಗಿನ ವಿಳಾಸದಾರರಿಂದ ತರಿಸಿಕೊಳ್ಳಬಹುದು.

ವಿಳಾಸ:—ಮ್ಯಾನೇಜರ್, "ಸಾಧ್ವಿ," ಮೈಸೂರು.

ಕಾರ್ಡ್ ಸೈಜು ೪½ × ೩.

ಫೋಟೋ ತೆಗೆಯುವ

ಫ್ರಾಪ ಕ್ಯಾಮರಾ.

84-3

ಬೆಲೆ ಫಕ್ತ ಮೂರು ರೂಪಾಯಿ.

ಇದರಿಂದ ಬೇಕಾದ ಮನುಷ್ಯನ ಫೋಟೋ ಅವನಿಗೆ ತಿಳಿಯದಂತೆ ತೆಗೆಯಲಿಕ್ಕೆ ಬರುತ್ತದೆ. ವೇಗದಿಂದ ಓಡುವ ಗಾಡಿಯು ಮತ್ತು ಹಾರುವ ಪಕ್ಷಿಯು ಫೋಟೋ ಸಹ ತೆಗೆಯಬಹುದು. ಇದರಲ್ಲಿ ಕಲಿಯತಕ್ಕದ್ದೇನೂ ಇಲ್ಲ. ಈ ಕ್ಯಾಮರಾದ ಮಾಹಿತಿಯನ್ನು ಕೊಳ್ಳುವವರಿಗೆ ನಾವು ಕೂಡಲೇ ಮಾಡಿಕೊಡುವೆವು. ಎಷ್ಟೋ ಕಡೆಗೆ ಇದಕ್ಕೆ ೧೦ರಿಂದ ೧೫ ರೂ. ಬೆಲೆ ಹೇಳುತ್ತದೆ. ಆದರೆ ಇದರ ಖರೀ ಕಿಮ್ಮತ್ತು ೩ ರೂಪಾಯಿ ಮಾತ್ರ ಇರುವದು ಟಪಾಲ್ ಖರ್ಚು ೯ ಆಣೆ.

ಛೋಟಾಲಾಲ ಛಗನಲಾಲ ಮಹಾಜನ, ಠಾಕೂರದ್ವಾರ ರೋಡ, ಪೋಸ್ಟ್ ಕಾಲಬಾದೇವಿ, ಮುಂಬಯಿ.

ಗ್ರಾಹಕತ್ವದ ನೋಟೀಸು

95-1

ಮಂಡ್ಯ ತಾ|| ಹೊಸ ಬೂದನೂರು ಗ್ರಾಮದಲ್ಲಿರುವ ಗೋಸೇಗೌಡನ ಹೆಂಡತಿ ತಿರುಮಲಮ್ಮನು ಇದರಿಂದ ಸಮಸ್ತ ಜನಗಳಿಗೂ ತಿಳಿಸುವದೇನೆಂದರೆ—ನನ್ನ ಗಂಡ ಗೋಸೇಗೌಡನು ಬುದ್ಧಿಯಲ್ಲಿ ಮಂಕಾಗಿಯೂ ವ್ಯವಹಾರಗಳಲ್ಲಿ ತನಗೆ ಆಗತಕ್ಕ ಸಾಧಕ ಬಾಧಕಗಳನ್ನು ಅರಿಯದವನಾಗಿಯೂ ಇರುವದರಿಂದ ನನ್ನ ಗಂಡ ಗೋಸೇಗೌಡನಿಗೂ ನನಗೂ ಮತ್ತು ನಮ್ಮಿಬ್ಬರ ಗಂಡುಮಕ್ಕಳಾದ ಚನ್ನ ಮತ್ತು ಬಸವ ಇವರುಗಳು ಉತ್ತರೋತ್ತರ ಜೀವಿಸಬೇಕೆಂಬ ಇರಾದೆಯಿಂದಲೂ ಹಾಲಿ ನಮ್ಮಗಳ ಕುಟುಂಬ ಜೀವನ ಸರಿಯಾಗಿ ನಡೆಯುವದಕ್ಕೆ ಕುಂದಕ ಮಾಡಬೇಕೆಂಬ ಇರಾದೆಯಿಂದಲೂ ಇವನ ಅಣ್ಣ ಜವರೇಗೌಡನು ಸದರಿ ಗೋಸೇಗೌಡನಿಂದ ಸುಳ್ಳು ದಸ್ತಾವೇಜು ಮಾಡಿಸಿಕೊಂಡು ಆ ಮೂಲಕ ನನ್ನ ಗಂಡನ ಪಿತ್ರಾರ್ಜಿತವಾದ ಜಮೀನುಗಳನ್ನು … ಫಸಲುಗಳನ್ನು ತಾನೇ ಹೊಂದಲು ತರದೂದು ನಡಿಸುತ್ತಲೂ, ಬೇನಾಮಿ ಮಾಡಿರತಕ್ಕ ದಸ್ತಾವೇಜುಗಳನ್ನು … ಮಾಡಿಕೊಳ್ಳುವ ತರದೂದು ನಡಿಸುತ್ತಲೂ ಇರುತ್ತಾನೆಂದು ತಿಳಿದುಬರುವದರಿಂದ ನನ್ನ ಗಂಡನಾದ … ಗೋಸೇಗೌಡನ … ದವಸಗಳನ್ನು ನನ್ನ ಮತ್ತು ನನ್ನ ಮೈನರು ಮಕ್ಕಳ ವಶಕ್ಕೆ … ನನ್ನ ಗಂಡನ ದೇಣೇದಾರರು ಅವರು ಕೊಡಬೇಕಾದ ದೇಣೆಯನ್ನು ತೀರಿಸಿ, ನನ್ನ ಮತ್ತು ನನ್ನ ಮಕ್ಕಳಿಂದ ರಸೀದಿ ಪಡೆಯುವದಲ್ಲದೆ, ನನ್ನ ಸ್ವಾಧೀನದಲ್ಲಿರತಕ್ಕ ದಸ್ತಾವೇಜುಗಳಿಗೆ … ನನ್ನ ಮತ್ತು ನನ್ನ ಮಕ್ಕಳ ರುಜು ಹಾಕಿಸಿ ವಾಪಸು ತೆಗೆದುಕೊಳ್ಳಬೇಕು. ಇದಕ್ಕೆ ವಿರೋಧವಾಗಿ ನಡೆಯುವ ಕೆಲಸಗಳಿಗೆ ನಾವು ಬದ್ಧರಾಗುವದಿಲ್ಲ. ಇದಕ್ಕೆ ವಿರೋಧವಾಗಿ ನಡೆಸುವ ಕೆಲಸಗಳಿಂದುಂಟಾಗುವ ನಮ್ಮ ಎಲ್ಲಾ ನಷ್ಟಕ್ಕೂ ಮೇಲ್ಕಂಡ ಕ್ರಯದಾರರೂ ಮತ್ತು ದೇಣೇದಾರರೂ ಬದ್ಧರಾಗಿರುತ್ತಾರೆಂದು ಈ ಮೂಲಕ ತಿಳಿಸಿದೆ. ಈ ತರುವಾಯ ನನ್ನ ಗಂಡನಿಗೆ ಯಾವ ಸಾಲಗಳೂ ಇರುವುದಿಲ್ಲ. ಅವನು ಈ ಲಾಗಾಯ್ತು ಮಾಡಬಹುದಾದ ಸಾಲಗಳಿಗೆ ನಾನೇ ಆಗಲಿ ಮೇಲ್ಕಂಡ ನನ್ನ ಮಕ್ಕಳೇ ಆಗಲಿ ನನ್ನ ಗಂಡನ ಪಿತ್ರಾರ್ಜಿತ ಸ್ವತ್ತುಗಳೇ ಆಗಲಿ ಯಾವವೂ ಗುರಿಯಾಗುವದಿಲ್ಲ.

ಗೋಸೇಗೌಡನ ಹೆಂಡತಿ ತಿರುಮಲಮ್ಮನ ರುಜು.

ನೆತ್ತಿಹತ್ತಿದ ಶೀತದಿಂದ ಮೂಗಿನಲ್ಲಿ ಹರಿಯು ವದು. ಇದೇ ಪ್ರಪಂಚದಲ್ಲೆಲ್ಲಾ ರೋಗಕ್ಕೆ ಮೂಲಕಾರಣವು. ಇದಕ್ಕೆ ಪೆ-ರೂ-ನಾ ಸರ್ವಶ್ರೇಷ್ಠವಾದ ಪರಿಹಾರ.

38-22

ಉಷ್ಣದ ನೀರು ಹರಿಯುವ
ನೆತ್ತಿ ಹತ್ತಿದ ಶೀತ
ನೆಗಡಿ

ಇದು ಅನ್ನಕೋಶ, ಮಲಕೋಶ, ದೊಡ್ಡ ಸಣ್ಣ ಕರುಳುಗಳು, ಕುಂಡಿಯ ಕೋಶಗಳು, ಇವೆಲ್ಲಾ ವ್ಯಾಪನೆಯಾಗುತ್ತದೆ

ಶೀತದ ನೀರು ಹರಿಯುವ
ನೆತ್ತಿಹತ್ತಿದ ಶೀತ
ನೆಗಡಿ

ಇದು ನೆತ್ತಿ, ಗಂಟಲು, ಶ್ವಾಸಕೋಶ, ಶ್ವಾಸನಾಳಗಳು, ಇವಕ್ಕೆಲ್ಲಾ ವ್ಯಾಪಿಸಿಕೊಳ್ಳುತ್ತದೆ

ನೆತ್ತಿಹತ್ತಿದ ಶೀತ ಅಥವಾ ಉಷ್ಣದ ನೆಗಡಿಯಿಂದ ಮೂಗಿನಲ್ಲಿ ನೀರು ಹರಿಯುವುದು ಮಹಾ ಕಠಿಣತರವಾದ ಜಾಡ್ಯವೆಂದು ಪ್ರಪಂಚದಲ್ಲಿ ಸಮಸ್ತ ಜನರಿಗೂ ತಿಳಿದೇ ಇರುತ್ತದೆ. ಅಮೇರಿಕ ಖಂಡಕ್ಕೆ ಸೇರಿದ ಸಂಯುಕ್ತ ಸಂಸ್ಥಾನಗಳೆಂಬ ಒಂದು ರಾಜ್ಯದೊಳಗೇನೇ ಪ್ರತಿ ವರುಷವೂ ಎರಡು ಲಕ್ಷ ಪ್ರಜೆಗಳು ಈ ರೋಗಕ್ಕೆ ಸಿಕ್ಕಿ ನರಳುತ್ತಾ ಇದ್ದಾರೆ. ಹೀಗಿರುವಲ್ಲಿ ಇತರ ದೇಶಗಳೊಳಗೆ ಈ ರೋಗದಲ್ಲಿ ಬಿದ್ದು ಕಷ್ಟಪಡುವಂಥಾವರ ಸಂಖ್ಯೆಯು ಸರಾಸರಿ ನೋಡಿದರೆ ಅಷ್ಟು ಹೆಚ್ಚಾಗಿಯೇ ಇರಬೇಕೆಂದು ಹೇಳಲು ಸಂದೇಹವಿಲ್ಲ

ಈ ನೆತ್ತಿ ಹಿಡಿದ ಶೀತ ಅಥವಾ ಉಷ್ಣದ ನೀರು ಸುರಿಯುವಂಥಾ ರೋಗಕ್ಕೆ ಪೆ ರೂ ನಾ ಎಂಬೀ ಔಷಧವೇ ಸರ್ವಶ್ರೇಷ್ಠವಾದದ್ದೆಂದೂ ಇತರ ಔಷಧಗಳಿಗಿಂತ ಮೊದಲನೆಯ ಸ್ಥಾನವನ್ನು ಪಡೆದಿರುವಂಥಾದ್ದೆಂದೂ ಅನೇಕ ವರುಷಗಳಿಂದಲೂ ಅನುಭವಕ್ಕೆ ಬಂದಿರುತ್ತದೆ.

ಪೆ-ರೂ-ನಾ ಎಂಬೀ ಔಷಧವು ಪ್ರಪಂಚದ ಪಶ್ಚಿಮಾರ್ಧ ಮತ್ತು ಪೂರ್ವಾರ್ಧಗೋಳಗಳಲ್ಲೆಲ್ಲಾ ಬಹು ಉತ್ತಮವಾದದ್ದೆಂದು ಪ್ರಖ್ಯಾತಿಯನ್ನು ಪಡೆದಿರುತ್ತದೆ.

ಈ ಔಷಧ ಸಿಕ್ಕುವ ಸ್ಥಳಗಳು:—

(೧) ಹಿಗ್‌ಬಾಥಮ್ ಅಂಡ್ ಸನ್ಸ್, ಬೆಂಗಳೂರು.

(೨) ಇಂಗ್ಲಿಷ್ ಡ್ರಗ್ ಕಂಪನಿ, ೩೯೪ ಮಿಂಟು ಬೀದಿ, ಮದರಾಸ್.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

16—8—1907 ರಿಂದ 23—8—1907 ರ ವರೆಗೆ

ಸ್ಥಳ	ಪ್ಲೇಗ್ ಆಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ಆಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	33	24	0	0
ಮೈಸೂರು ,,	47	33	0	0
ಬೆಂಗಳೂರು ಡಿಸ್ಟ್ರಿಕ್ಟು	211	148	0	0
ಮೈಸೂರು ,,	155	100	0	0
ಕೋಲಾರ್ ,,	4	3	1	1
ಕೋಲಾರ್ ಚಿನ್ನದ ಗಣಿಗಳು	12	7	0	0
ತುಂಕೂರು ಡಿಸ್ಟ್ರಿಕ್ಟು	9	1	4	3
ಹಾಸನ ,,	17	15	0	0
ಚಿತ್ರದುರ್ಗ ,,	0	0	0	0
ಕಡೂರ್ ,,	30	20	0	0
ಶಿವಮೊಗ್ಗ ,,	33	19	0	0
ಜುಮ್ಲಾ	544	368	5	4

ಶಾಲಿವಾಹನ ಶಕ ವರುಷಂಗಳು ೧೮೨೯ ನೇ ಪ್ಲವಂಗನಾಮ ಸಂವತ್ಸರದ ಶ್ರಾವಣ ಬಹುಳ ತ್ರಯೋದಶಿ ಗುರುವಾರದಿಂದ ಭಾದ್ರಪದ ಶುದ್ಧ ಚೌತಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ.

೧೯೦೭ ನೇ ಇಸವಿ ಸಪ್ಟಂಬರ್

ತಾ॥	ವಾರ		ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಶ್ರಾವಣ ಮಾಸ
5	ಗುರು	†	ತ್ರಯೋ	11 2	ಪ್ಲ	60 0	20
6	ಶುಕ್ರ	‡	ಚತುರ್ದ	45 3	ಪ್ಲ	5-40	21
7	ಶನಿವಾ	,,	ಅಮಾವಾ	47 09	ಮ	10 18	22
8	ರವಿವಾ		ಪಾಡ್ಯ	49 25	ಪು	11 24	23
9	ಚಂದ್ರ		ಬಿದಿಗೆ	49 58	ಉ	17 2	24
10	ಕುಜ	,,	ತದಿಗೆ	49 2	ಹ	14-36	25
11	ಬುಧ	^	ಚೌತಿ	46 30	ಚಿ	14 04	26

ಪ್ರದೋಷ ‡ ಮಾಸಶಿವರಾತ್ರಿ ,, ಸರ್ವತ್ರ ಅಮಾವಾಸ್ಯೆ, ಶ್ರೀಕೃಷ್ಣ ಚಾತುರ್ಮಾಸ್ಯ, ಶ್ರಾವಣ ನಿವಾರ ಚಂದ್ರೋದಯ ,, ಸ್ವರ್ಣಗೌರೀ ವ್ರತ, ಸಾಮಗ ಉಪಾಕರ್ಮ ವರಾಹಜಯಂತಿ, ಸಿದ್ಧಿವಿನಾಯಕ ವ್ರತ

ಪೇಟೇ ಧಾರಣೆ

ದಿನಸು		ಮೈಸೂರು	ಬೆಂಗಳೂರು
ಕಡ್ಡೀ ಅಕ್ಕಿ ಪಲ್ಲಾ ೧ಕ್ಕೆ	ರೂ	೧೩-೪-೬	೧೩ ೧-೦
ಗಂಬುತಿ ಅಕ್ಕಿ ಅವಲ್		೧೩ ೪-೦	೧೩ ೦-೦
,, ೯ ನಂ೦		೧೨-೮ ೦	೧೨-೪-೦
ಜೀರಾಸಣ್ಣ ಅಕ್ಕಿ		೧೨-೦ ೦	೧೩ ೮-೦
ಸಣ್ಣಕ್ಕಿ ಅವಲ್		೯೫-೦-೦	೧೪ ೧-೨
ದುಯ್ಯಂ		೧೪ ೪ ೦	೧೪-೦-೦
ಕೆಂಗರೀ ಬೇಳೆ ಪಲ್ಲಾ ೧ಕ್ಕೆ		೯೪ ೦ ೦	೯೪-೦-೦
,, ದುಯ್ಯಂ		೯೩ ೦-೦	೧೩-೦-೦
ಸ್ಯಾಗಿ ಪಲ್ಲಾ ೧ಕ್ಕೆ		೫ ೧೨-೦	೬ ೦ ೦
ರಾಗಿ		೫-೮ ೦	೫ ೧೨-೦
ಜೋಳ		೫-೪-೦	೮-೪-೦
ಹುರುಳಿ ಪಲ್ಲಾ ೧ಕ್ಕೆ		೧೧-೦ ೦	೧೦-೦-೦
ಬಿಳೀ ಅವರೆ		೮-೧೪-೦	೮-೦-೦
ಹೆಸರು		೯೧-೦-೦	೧೧ ೮-೦
ಉದ್ದು		೧೦-೮-೦	೧೦-೧೨-೦
ಕಡಲೆ		೧೨-೮-೦	೧೧-೮-೦
ಎಳ್ಳು ಸೇರು ೧ಕ್ಕೆ		೧೯-೮-೦	೨೦-೦-೦
ಹುರುಳಿ		೫-೧೨-೦	೬-೦-೦
ಹರಳು ೧ ಖಂ ಸೇರಿಗೆ		೧೪-೦-೦	೧೨-೪-೦
ಸೀಗೇಕಾಯಿ ಮಣ ೧ಕ್ಕೆ		೨-೦ ೦	೨ ೦ ೦
ಮೆಣಸಿನಕಾಯಿ		೨-೮-೦	೨-೨-೦
ದುಯ್ಯಂ		೨-೪-೦	೨ ೦-೦
ಬೆಲ್ಲ ದೊಡ್ಡ ಅಚ್ಚು		೪-೮-೦	೩ ೦-೦
ಒಳ್ಳೆಣ್ಣೆ ಮಣ ೧ಕ್ಕೆ		೬-೦ ೦	೫-೬-೦
ಹರಳೆಣ್ಣೆ ,,		೫-೧೨-೦	೫-೦-೦
ಕೊತ್ತುಂಬರಿ ಪಲ್ಲಾ ೧ಕ್ಕೆ		೫-೧೨-೦	೬ ೪-೦
ಉಪ್ಪು ,,		೫-೪-೦	೫-೧೨-೦
ಮೆಣಸೇ ಪಣ್ಣು		೧-೬-೦	೦-೬-೦
,, ಜಳೇವು		೦-೧೪-೦	೧-೪-೦
ತುಪ್ಪ ಮಣ ೧ಕ್ಕೆ		೧೬-೧-೦	೧೬-೦-೦
ನೀರುಳ್ಳಿ ಪೆಟ್ಟಿ ೧ಕ್ಕೆ		೪-೧೫-೦	೪-೦-೦
ತೆಂಗಿನಕಾಯಿ ೧೦೦ ಕ್ಕೆ		೬-೮-೦	೬ ೪-೦
ಅಳಲೇಕಾಯಿ ಮಣ ೧ಕ್ಕೆ		೧-೦-೦	೧ ೪-೦
ಅಂಟುವಾಳದ ಕಾಯಿ ಮಣ ೧ಕ್ಕೆ		೦-೧೨-೦	೦-೧೨-೦
ಚಿನ್ನ (ಪೌನ್) ಕೆಂಪು		೧೫-೬-೦	೧೫-೬-೦
,, ,, ಹಸುರು		೧೫-೧೦-೦	೧೫-೧೨-೦
,, ,, ಗಟ್ಟಿ ತೊಲ ೧ಕ್ಕೆ		೨೩-೧೨-೦	೨೪-೬-೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ		೮೫-೦-೦	೮೫-೦-೦

Printed and Published by the Rev E W THOMPSON, M A, Proprietor and Manager, Wesleyan Mission Press, Mysore 5/9/1907

REGISTERED
M. 20

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೦ ಮೈಸೂರು—ಸನ್ ೧೯೧೨ ನೇ ಇಸವಿ ಸೆಪ್ಟೆಂಬರ್ ತಾರೀಖು ೧೨ ನೇ ಗುರುವಾರ. ಸಂಚಿಕೆ ೧೫

BASEL MISSION WEAVING ESTABLISHMENT, 59-7

MANGALORE, SOUTH CANARA.

ದಕ್ಷಿಣ ಕನ್ನಡ ಜಿಲ್ಲಾ ಮಂಗಳೂರಿನ ಬಾಸೆಲ್ ಮಿಶ್ಯನ್ (ಬಿಳ್ತಿ) ನೆಯ್ಯುವ ಕಾರಖಾನೆಯಲ್ಲಿ

ನಾನಾ ವಿಧದ (ಪ್ಯೂರ್) ಟ್ವೀಡ್ ನಮೂನೆಯ [illegible] ಬಟ್ಟೆಗಳೂ [illegible] ಸರ್ಟಿಂಗ್ [illegible] ಬಟ್ಟೆಗಳು, [illegible] ಇತರ ಬಟ್ಟೆಗಳೂ, [illegible] ಟವೆಲ್ [illegible] ತಯಾರಿಸಲ್ಪಟ್ಟು [illegible] ಮಾರಾಟಕ್ಕೆ ಸಿದ್ಧವಾಗಿರುತ್ತವೆ.

ಒಳ್ಳೇ ಕಮಿಶ್ಯನ್.—ರೂಪಾಯಿ ೧೦೦ ರ ಮೇಲಿ ವಸ್ತ್ರಗಳನ್ನು ತೆಗೆದುಕೊಳ್ಳುವ ಗಿರಾಕಿಗಳಿಗೆ [illegible] ಕೊಡಲಾಗುವುದು. [illegible] ವಿವರ [illegible] ತಿಳಿಯಬಹುದು.

ನಮೂನೆ ಯಾ ಮಾದರಿಗಳು :—[illegible] ಈ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಕಳುಹಿಸಲ್ಪಡುವವು.

ವಿಶೇಷ ಲಕ್ಷ್ಯವಿಡತಕ್ಕದ್ದು :—ಈ ನಮ್ಮ ವಸ್ತ್ರಗಳ [illegible] "ಟ್ರೇಡ್ ಮಾರ್ಕ್" ಎಂಬ [illegible] ಲೇಬಲ್ [illegible] ಈ ಗುರ್ತಿನ [illegible] ಇಲ್ಲದವುಗಳೆಲ್ಲಾ ತಾಜಾ ಮಿಶ್ಯನ್ ವಸ್ತ್ರಗಳಲ್ಲವೆಂದು ತಿಳಿಯತಕ್ಕದ್ದು.

ಶರ್ತ :—ನಗದಾಗಿ ಇಲ್ಲವೆ ವಸ್ತ್ರಗಳು ವಿ. ಪಿ. ಟಪ್ಪಾಲು [illegible] ಕಳುಹಿಸಲ್ಪಡಬೇಕಾದ್ದಲ್ಲಿ [illegible] ಮುಂಗಡವಾಗಿ ರವಾನಿಸತಕ್ಕದ್ದು.

ಪತ್ರಗಳನ್ನು ಇಂಗ್ಲೀಷಿನಲ್ಲಿ ಯಾ ಕನ್ನಡದಲ್ಲಿ ಸ್ಪಷ್ಟವಾಗಿ ಬರೆಯತಕ್ಕದ್ದು.—

☞ ಈ 'ಟ್ರೇಡ್ ಮಾರ್ಕ'ನ್ನಾಗಲೀ ನಾವು 'ಕೋಪಿರೈಟ್' ಪಡದಿರುವ ಲೇಬಲುಗಳನ್ನಾಗಲೀ ಇಲ್ಲವೆ ಆ ನಮೂನೆಯ ಬೇರೆ ಲೇಬಲುಗಳನ್ನಾಗಲೀ ಯಾರಾದರೂ ಇತರ ವಸ್ತ್ರಗಳ ಮೇಲೆ ಪ್ರಯೋಗಿಸಲೂ ಮಾಡಲೂ ಕೂಡದು.

ವಿಳಾಸ :—BASEL MISSION WEAVING ESTABLISHMENT,
MANGALORE S CANARA

WILLIAM & CO., BOMBAY.

ವಿಲಿಯಂ ಮತ್ತು ಕಂಪನಿ, ಫೋರ್ಟು, ಮುಂಬಯಿ.

ಗಜಕರ್ಣದ ಮುಲಾಮು.

27-29

ಇದನ್ನು ಹಾಗಿಸುವದರಿಂದ ಎಲ್ಲಾ ತರದ ಕಜ್ಜಿಯೂ ನಾಶವಾಗುತ್ತದೆ. ಮೂರು ಸಾರಿ ಹಾಗಿಸುವದರೊಳಗೆ ಗಜಕರ್ಣವು ಹೋಗುವದು. ಇದನ್ನು ಹಚ್ಚಿದಲ್ಲಿ ಉರಿಯು ಬರುವದಿಲ್ಲ ಮತ್ತು ಚರ್ಮ ಕಪ್ಪಾಗುವದಿಲ್ಲ. ಒಂದು ಸಾರಿ ಪರೀಕ್ಷಿಸಿ ನೋಡಿರಿ ಗುಣ ಕಂಡುಬರುವದಿಲ್ಲವಾದರೆ ಹಣ ಹಿಂತಿರುಗಿ ಕೊಡಲ್ಪಡುವದು. ಡಬ್ಬಿ ೧ಕ್ಕೆ ಕಿಮ್ಮತ್ತು ೦-೩-೦. ವಿ. ಪಿ. ೦-೧೦-೦ ತರಿಸಿಕೊಳ್ಳಿರಿ! ತ್ವರೆಮಾಡಿರಿ!!

ವಜ್ರಗುಟಿಕಾ [illegible]. ಸುಂದರ ತೈಲ ೦-೪-೦ ದಂತಮಂಜನ ೦-[illegible] ಕಫಹಾರಿ [illegible] ಕೇಶವರ್ಧಿನೀ ತೈಲ ೧-೦-[illegible] [illegible] ಬಜ್ಜಿ [illegible] ಈ ಕಂಪನಿಯ [illegible] ಔಷಧಗಳನ್ನು ಸ್ವತಃ ತಯಾರಿಸುವದರಿಂದ [illegible] ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು.

ಅಮೃತಾಂಜನ

ಬಾಟ್ಲಿ ಒಂದಕ್ಕೆ ಕಿಮ್ಮತ್ತು ೮ ಆಣೆ ವಿ. ಪಿ. ೧೨ ಆಣೆ.

ಅಮೃತಾಂಜನ—ಸುಖಾಂಜನ.
ಅಮೃತಾಂಜನ—ದಿವ್ಯಾಂಜನ.
ಅಮೃತಾಂಜನ—ಸಂಜೀವನ.
ಅಮೃತಾಂಜನ—ಪರಮಾಂಜನ.

ವಾತ, ಎದೆನೋವು, ಗಂಟ್ಲುನೋವು, ಸಂಧಿವಾತ ತಲೆನೋವು, ಸೂಲವ್ಯಾಧಿ, ಈ ಎಲ್ಲಾ ತರದ ರೋಗಕ್ಕೆ ಈ ಅಮೃತಾಂಜನವು ದಿವ್ಯ ಔಷಧವಾಗಿರುತ್ತದೆ.

ಅಮೃತಾಂಜನದ ಡಬ್ಬಿ, ೧೬ ಡಜನಿಗೆ

ಅಮೃತಾಂಜನ—ಶಿರಶೂಲಭಂಜನಿ
ಅಮೃತಾಂಜನ—ತಕ್ಷಣಶಾಂತಿಕಾರಿಣಿ
ಅಮೃತಾಂಜನ—ಅಪೂರ್ವದರ್ಶನಿ.
ಅಮೃತಾಂಜನ—ಭಂಜನವಿನುಧಿನಿ

ಇದರಿಂದ ಗುಣ ಕಂಡುಬರುವದಿಲ್ಲವಾದರೆ ಹಣ ಹಿಂತಿರುಗಿ ಕೊಡಲ್ಪಡುವದು. ಜಕಂ ಮತ್ತು ಘಾಯ, ಅರ್ಧಾಂಗವಾಯು, ಈ ರೋಗಕ್ಕೆ ಇದು ಸಂಜೀವನವಾಗಿರುತ್ತದೆ. ತರಿಸಿಕೊಳ್ಳಿರಿ! ಪರೀಕ್ಷಿಸಿರಿ!!

ವಿಲಿಯಂ ಮತ್ತು ಕಂಪನಿ, ೧೬ ಓಕ್ ಲೇನ್, ಫೋರ್ಟು, ಮುಂಬಯಿ.
ಟೆಲಿಗ್ರಾಫು ಅಡ್ರೆಸು; "ಅಮೃತಾಂಜನ," ಮುಂಬಯಿ.

ನಿಮಗೆ ನೋವು ಇದೆಯೋ?

38-16

ಹಾಗಾದರೆ "ಕ್ಲೆಮೆಂಟ್ [illegible] ಬಾಂ" ನ್ನು ಏಕೆ ಉಪಯೋಗಿಸಬಾರದು? ಅತ್ಯಾಶ್ಚರ್ಯಕರವಾದ ಉಪಕಾರಿಯು! ಈಗಿನ ಕಾಲದಲ್ಲಿ [illegible] ನೂತನವು!

ಈ [illegible] ಔಷಧವನ್ನು ಹಚ್ಚಿದ [illegible] ಕೆಲವು ನಿಮಿಷಗಳೊಳಗಾಗಿ [illegible] ಸಂಬಂಧವಾದ [illegible] ನೋವು ಕೀಲುಗಳ ಬಾಧೆ, [illegible] ತಲೆನೋವು, ಕೆಮ್ಮು, ಕೀಲುಗಳು [illegible], [illegible] ಎಲ್ಲವೂ [illegible] ಗುಣವಾಗುವದು. ಈ ಔಷಧವ [illegible] ಗುಣಪಡಿಸುವದರಿಂದ ಎಲ್ಲರಲ್ಲಿಯೂ ಪ್ರಸಿದ್ಧಿಗೆ ಬರುವದು. [illegible] ಗುಣಪಡಿಸದೆ ಹೋದಾಗ [illegible] ಇದು ನಿಸ್ಸಂದೇಹವಾಗಿಯೂ ಗುಣಪಡಿಸುವದು.

ಕ್ರಯ —೧ ಬಾಟ್ಲಿಗೆ [illegible] ಆಣೆ. ಪೋಸ್ಟೇಜ್ ೭ ಆಣೆ. [illegible] ಬಾಟ್ಲಿಗೆ ಅಂಚೆವೆಚ್ಚ ಸೇರಿ [illegible] ಆಣೆ. ಎಲ್ಲಾ ಕೆಮಿಸ್ಟು ಷಾಪುಗಳಲ್ಲಿ ದೊರೆಯುವದು.

ನಮ್ಮ ವಿಳಾಸ :—ಎಫ್. ಡಬ್ಲ್ಯು ಆರ್,
ಸಿಮೆಟ್ರಿ ರೋಡ್, ವೇಪೇರಿ, ಮದರಾಸ್.

ಜ್ವರಹರಿ.

747

ಇದು ಸಾಧಾರಣ ಜ್ವರ, ವಿಷಜ್ವರ, ಮಲೇರಿಯ ಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ [illegible] ಸಬ್ ಡಿವಿಜನ್ ಆಫೀಸರ್ ಎಸ್. ಟಿ. ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ [illegible] ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ [illegible] ಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು ಇನ್ನೂ ಜನಗಳು ಕಾಯಿಲೆ [illegible] ದರಿಂದ ದಯವಿಟ್ಟು ಇನ್ನೊಂದು [illegible] ಸೀಸೆಯನ್ನು ವಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದಾರೆ.

ಕ್ರಯ.—ಸೀಸೆ ೧ ಕ್ಕೆ ೮ ಆಣೆ ೧ ರೂ., [illegible] ರೂ., ರೂ. [illegible], ೧೦ ರೂ. [illegible] ಸೀಸೆ ತರಿಸಿಕೊಂಡವರಿಗೆ ಪೋಸ್ಟೇಜು ಮಾಫಿ ಬಿಡಲಾಗುವದು.

****

ಓಮಂ ಕರ್ಪೂರ

Omum Carpoor

ಈ ಔಷಧವು ಅಜೀರ್ಣ, [illegible] ಯುವದು, ವಾಂತಿಭೇದಿ, ನಾನಾತರದ [illegible]—ಮುಂತಾದ್ದಕ್ಕೆಲ್ಲ ಮಹೌಷಧವಾಗಿ [illegible] ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ [illegible] ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು [illegible] ಕ್ರಯದ [illegible] ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟೆಂಟು ಸರ್ಜನ [illegible]—ನಿಮ್ಮ ಓಮಂ ಕರ್ಪೂರವನ್ನು ನಾನೂ ನನ್ನ [illegible] ಆಸ್ಪತ್ರೆಯಲ್ಲಿ ಅನೇಕ [illegible], ಅಜೀರ್ಣ ಭೇದಿ, ಅಜೀರ್ಣ [illegible] ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂತ ಬರೆದಾರೆ.

ಈ ಎರಡು ಔಷಧಗಳೂ ಊರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾತ್ರಲಿ ವಿಶೇಷ.—
ಕನ್ನಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,
ಸೆಕೆಂಡ್ ಬೀಚ್ ಲೈನ್, ಮದರಾಸ್.

ಅಡಿಗೆಯವನು ಬೇಕು.

96 2

ಕರಾಚಿಯಲ್ಲಿ ನಮ್ಮ ಮನೆಯಲ್ಲಿ ಅಡಿಗೆ ಕೆಲಸಕ್ಕೋಸ್ಕರ ಒಬ್ಬ ವೈಷ್ಣವ ಅಡಿಗೆಯವನು ಬೇಕಾಗಿದೆ. ಊಟ ಕಳೆದು ಸಂಬಳ ೧೫ ರೂಪಾಯಿಗಳು ಸಿಕ್ಕುವದು. ಇಷ್ಟವುಳ್ಳವರು ಇಬ್ಬರು ದೊಡ್ಡ ಮನುಷ್ಯರ ಖಾತ್ರಿ ಲಾಯಖು ದಾಖಲೆಗಳ ಸಹಿತ ನಮ್ಮಲ್ಲಿಗೆ ಬರೆದು ಕೊಳ್ಳಬೇಕು. ನಮ್ಮ ವಿಳಾಸ —

ಕರ್ಪೂರಶ್ರೀನಿವಾಸರಾವ್, ಯಕ್ಸಿಕ್ಯುಟಿವ್ ಇಂಜನಿಯರ್, ಕರಾಚಿ.

ಇಲ್ಲಿ ನೋಡಿ!

65 10

ತುಮಕೂರು ಡಿಸ್ಟ್ರಿಕ್ಟ್ ಇಲಾಖೆಯಲ್ಲಿ ಯೂರೋಪಿಯನ್ ಮೇಲ್ವಿಚಾರಣೆಯಿಂದ ಉತ್ತಮ ತರಹದ ಹಾಸನದ ಟೋಪಿಗಳು ಅತಿ ಶ್ರೇಷ್ಠವಾದ ಉಲ್ ಬಾಲದಿಂದ ತಯಾರಾಗುತ್ತವೆ.

ಈಗ ಕೆಳಗೆ ನಮೂದಾಗಿರುವ ವಿವಿಧ ಬಣ್ಣದ ಟೋಪಿಗಳು ಹೆಚ್ಚಾಗಿ ನಮ್ಮಲ್ಲಿ ದಾಸ್ತಾನ (ಸ್ಟಾಕ್) ಉಂಟು.

ಬಣ್ಣಗಳ ವಿವರ:—ಅಚ್ಚ ಕೆಂಪು, ಪಾಂಡಕೆಂಪು, ಕಪ್ಪು ಕೆಂಪು ಮಿಶ್ರವಾದದ್ದು.

ಕ್ರಯ:—೧ ರು. ೪ ಅ ಮತ್ತು ೧ ರು. ೬ ಅ.

೧ ಡಜನ್ ಟೋಪಿಗಳನ್ನು ತೆಗೆದುಕೊಳ್ಳುವವರಿಗೆ ಶೇಕಡ ೫ ರಂತೆ ಡಿಸ್‌ಕೌಂಟ್ ಕೊಡಲ್ಪಡುವದು.

ನಮ್ಮ ವಿಳಾಸ:—ಮೇನೇಜರ್,

ಹಾಸನದ ಟೋಪಿ ಕಾರ್ಖಾನೆ ಜೈಲ್ ಇಲಾಖೆ, ತುಮಕೂರು.

ಅಪಾಯದ ಗುರುತುಗಳು.

ಸ್ವಾಭಾವಿಕವಾಗಿ ಅಪಾಯ ಬರುವುದಾದ ಕುರುಹುಗಳನ್ನು ಕಂಡುಹಿಡಿಯಬಹುದು.

ಕೆಮ್ಮು ಅಪಾಯದ ಕಾರಣ!

ಶ್ವಾಸಕೋಶಗಳು ಒಳಗೊಳ್ಳುವ ರೋಗದಿಂದ ಇದರಿಂದ ತೀವ್ರ ಬರುತ್ತದೆ. ಅವನ್ನು ಬೇಗನೆ ಬಲಪಡಿಸತಕ್ಕದ್ದು ಬಹು ಅವಶ್ಯಕ

SCOTT'S EMULSION. 31-26

(ಸ್ಕಾಟ್ಸ್ ಇಮಲ್‌ಷನ್.)

ಎಂಬ ಔಷಧವು ಈ ತರದ ರೋಗಗಳನ್ನು ಹೋಗಲಾಡಿಸುವದು ಬಲಹೀನವಾದ ಶ್ವಾಸಕೋಶಗಳನ್ನು ಬಲಪಡಿಸಿ ಕೆಮ್ಮನ್ನು ನಿಲ್ಲಿಸುತ್ತದೆ

ಕ್ರಮದ ಮಟ್ಟು ತಯಾರಿಸಿದ್ದಲ್ಲ

ಎಲ್ಲಾ ಔಷಧ ವ್ಯಾಪಾರಗಾರರಲ್ಲಿ ದೊರೆಯುತ್ತವೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್.

ಈ ಚಿತ್ರದ ಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

75 7

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು? ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನ ದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ವಿಕರಿಯಾಗುತ್ತಿರುವ ಟೋಪಿಗಳ ವ್ಯಾಪಾರವೆಲ್ಲಾ ಬೀಳುವದು. ಅವು ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ:—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ವ್ಯಾಪಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು. (೨) ಟೋಪಿಗಳನ್ನು ಖುದ್ದಾಗಿ ನಾವೇ ಸ್ವಂತ ಚನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ನೇರಾ ಬರೆದು ತರಿಸಿಕೊಳ್ಳಿ. ಅಗ್ಗವಾದ ಸಣ್ಣ ಚನ್ನಾಗಿಲ್ಲದ್ದು ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ.

ಸಾದ, ಕೆಂಪು, ಕಪ್ಪು, ಬಿಳಿ, ಕಾಫಿ ಟೋಪಿಗಳು ೧ ರೂ. ೪ ಅ.; ೧ ರೂ. ೬ ಅ.; ೧ ರೂ. ೮ ಅ.

ರೇಷ್ಮೆ ಚುಕ್ಕೆಯುಳ್ಳ ಟೋಪಿಗಳು ೧ ರೂ. ೪ ಅ.; ೨ ರೂ.

ಹಾರದ ಟೋಪಿಗಳು ೧ ರೂ. ೧೨ ಅ. ೧ ರೂ. ೪ ಅ.; ೧ ರೂ. ೬ ಅ.

ಉಣ್ಣೆಯ ಟೋಪಿಗಳು ೧ ರೂ. ೪ ಅ. ೧ ರೂ. ೬ ಅ.

ಹೊಸಗಾಗ ಟೋಪಿ, ಸೂರ್ಯ ಮೇಜೋಡು, ಅರ್ಧ ಮೇಜೋಡು ಇತ್ಯಾದಿ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವವರಿಗೆ ಕೊಟ್ಟು ಕಳುಹಿಸುವೆವು.

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ.

CHAMBERLAIN'S COLIC, CHOLERA AND DIARRHOEA REMEDY.

ಚೇಂಬರ್ಲೆನ್ ಯವರು ಹೊಟ್ಟೆಶೂಲೆ, ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು.

4-11



ಕೆಳ ಹೊಟ್ಟೆಯ ನೋವು, ಬರೀ ಭೇದಿಯಾಗುವುದು, ಆಮಶಂಕೆ, ವಾಂತಿಭೇದಿ ಉಪದ್ರ, ಕೀಲು ನೋವು, ಹೊಟ್ಟೆಯ ನಾನಾ ತರದ ಶೂಲೆಗಳು—ಈ ರೋಗಗಳನ್ನೆಲ್ಲಾ ನಾಶಮಾಡುತ್ತದೆ. ಈ ಸರಿಯಾದ ಉಪಯುಕ್ತವಾದ ಔಷಧವು ಜನರನ್ನು ಬದುಕಿಸಿರುವಷ್ಟು ಮತ್ತು ನೋವನ್ನೂ ಬಾಧೆಯನ್ನೂ ನಿವಾರಿಸಿರುವಷ್ಟು ಪ್ರಪಂಚದಲ್ಲೇ ಇನ್ನಾವ ಔಷಧವೂ ಮಾಡಿರುವುದಿಲ್ಲ.

ಜ್ಞಾಪಕದಲ್ಲಿಟ್ಟುಕೊಳ್ಳಿ—ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯಲ್ಲಿರುವ ಎಲ್ಲಾ ತರದ ನೋವನ್ನೂ ನಿಲ್ಲಿಸಿಬಿಡುತ್ತದೆ. ಬಹಳ ಕಠಿಣವಾದ ಭೇದಿಯನ್ನೂ ಕೂಡ ಮೂರೇ ಹೊತ್ತಿನ ಈ ಔಷಧದಿಂದ ನಿರ್ಮೂಲವಾಗಿ ನಿಲ್ಲಿಸುತ್ತದೆ. ಖಂಡಿತವಾಗಿ ನಾಶಮಾಡುವುದೇ ಇದರ ಗುಣ.

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ.

ಕ್ರಮದಿಂದ ಸ್ವಲ್ಪವೂ ಮುಟ್ಟಿದ್ದಲ್ಲ.

ಇದು ಎಲ್ಲೆಲ್ಲೂ ವಿಕರಿಯಾಗುವುದು. ಸಣ್ಣ ಸೀಸೆಗೆ ೧ ರೂಪಾಯಿ. ದೊಡ್ಡ ಸೀಸೆಗೆ ೨ ರೂಪಾಯಿ.

ಮಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು

26-10

೧ ಲೋಕಾಮಯಹರ ಕಸ್ತೂರೀ ಮಾತ್ರೆ.—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ವೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ.

ಚಳಿಜ್ವರ, ಜ್ವರ, ಹೊಟ್ಟೆಶೂಲೆ, ಗಂಡಮಾಲೆ ನೋವು, ಮೈ ಕೈಕಾಲು ಕೊಡತ (ಭಾರ), ಮೈ ಸಡಿಲ, ಕ್ಷಯವಾತಗಳ ಬಾಧೆ, ಅಜೀರ್ಣ, ಅಗ್ನಿಮಾಂದ್ಯ, ತಲೆನೋವು, ಕೆಮ್ಮಲು, ನೆಗಡಿ, ನಿದ್ರೆ, ಅಪಸ್ಮಾರ, ಇವುಗಳ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ.

ತಾಂಬೂಲದೊಡನೆ ಅಥವಾ ಹಾಲ್ ಜೊತೆಯ ಗುಳಿಗೆಯ ಬಳಕೆ ಜೊತೆ ಸುವಾಸನೆಯುಳ್ಳ ಎಂತಹ ಆಹಾರವನ್ನಾದರೂ ಜೀರ್ಣಿಸಿ, ಯಾವ ಬಾಯಿರುಚಿಯೂ ಹಾಳಾದರೆ, ನೀರು ಬಾಯಿಗೆ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿ ದೋಷವನ್ನು ತೆಗೆದು ಪುಷ್ಟಿಯಾಗಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ಸನ್ನಿಜ್ವರ, ಕೈಕೆತ್ತಗಳನ್ನು ಗುಣಪಡಿಸುತ್ತವೆ.

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ರಸಿದ್ಧ ಸೌಖ್ಯಕ್ಕೆ ಗುರಿಯಾಗುವರಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.

ಅನುಪಾನ(ಪಥ್ಯ) ಔಷಧದ ಸಂಗಡಲೇ ಇರುತ್ತದೆ.

೨೦ ಮಾತ್ರೆಯುಳ್ಳ ಡಬ್ಬಿಗೆ ೪ ಆಣೆ, ೫ ಡಬ್ಬಿಗೆ ೧ ರೂಪಾಯಿ. ೧ ರಿಂದ ೧೦ ಡಬ್ಬಿ ವರೆಗೆ ಪೋಸ್ಟೇಜು ೪ ಆಣೆ.

ವಿಳಾಸ:—ಮಾಳ್ಯದ ವೆಂಕಟಾಚಲ ಪಂಡಿತ,

ಎಸ್. ಎಸ್. ಆರ್. ವೈದ್ಯಶಾಲಾ,

ಲಕ್ಷ್ಮೀವಿಲಾಸ ರೋಡ್ ಮೈಸೂರು.

ಉಪಾಧ್ಯಾಯರೆಲ್ಲರೂ

ಓದತಕ್ಕ ನೋಟೀಸ್.

ಮೈಸೂರು ಸರ್ಕಾರದ ವಿದ್ಯಾ ಇಲಾಖೆಯ ಇನ್‌ಸ್ಪೆಕ್ಟರ್ ಜನರಲ್‌ರವರು ಕೆಳಗೆ ಕಂಡ ಪುಸ್ತಕಗಳನ್ನು ಸರ್ಕಾರದ ಸ್ಕೂಲುಗಳಲ್ಲಿಯೂ, ಗ್ರಾಂಟ್ ಪಡೆಯತಕ್ಕ ಪಾಠಶಾಲೆಗಳಲ್ಲಿಯೂ ಮತ್ತು ಆಂಗ್ಲೋ ವರ್ನಾಕ್ಯುಲರ್ ಸ್ಕೂಲ್‌ಗಳಲ್ಲಿಯೂ ಮತ್ತೊಂದು ಹುಕುಂ ಕೊಡುವತನಕ ಉಪಯೋಗಿಸಬೇಕೆಂದು ಕಳೆದ ಜೂಲೈ ೨೨ನೇ ತಾರೀಖಿನ ಮೈಸೂರು ಗೆಜೆಟ್ಟಿನಲ್ಲಿ ಘಾಯಿಷ್ ಮಾಡಿರುತ್ತಾರೆ.

ಭೂಗೋಳ ಶಾಸ್ತ್ರದ ಮೊದಲನೆಯ ಪುಸ್ತಕ (೧ನೆಯ ೨ನೆಯ ಭಾಗ, ಒಂದೇ ಪುಸ್ತಕ. ಈ ಪುಸ್ತಕದಲ್ಲಿ ನಾಲ್ಕು ಬಣ್ಣದ ನಕ್ಷೆಗಳೂ ಮಕ್ಕಳಿಗೆ ಭೂಗೋಳಶಾಸ್ತ್ರವನ್ನು ವಿಶದವಾಗಿ ಹೇಳಿಕೊಡುವುದಕ್ಕೆ ಸಾಹಿತ್ಯವಾಗಿರುವ ಬೇರೆ ಹನ್ನೆರಡು ಚಿತ್ರಗಳೂ ಇರುತ್ತವೆ). ಎರಡನೇ ಕ್ಲಾಸಿಗೆ ಕ್ರಯ ೪ ಆಣೆ.

ಭೂಗೋಳ ಸಂಗ್ರಹ (ಮ|| ಟಿ. ಎಂ. ರಾಮಸ್ವಾಮಯ್ಯನವರು ಬರೆದುದು. ಈ ಪುಸ್ತಕವು ಪ್ರಚುರವಾದಂದಿನಿಂದ ಅನೇಕ ಸಹಸ್ರ ಪ್ರತಿಗಳು ಮಾರಾಟವಾಗಿವೆಯೆಂದು ವಾಚಕ ಮಹಾಶಯರು ತಿಳಿದಿರಬಹುದು.) ಮೂರನೇ ಕ್ಲಾಸಿಗೆ ಕ್ರಯ ೪ ಆಣೆ.

ಮೇಲ್ಕಂಡ ಪುಸ್ತಕಗಳನ್ನು ಉಪಾಧ್ಯಾಯರೆಲ್ಲರೂ ತಡಮಾಡದೆ ೭ ಗ್ರತೆಯಲ್ಲಿ ತರಿಸಿಕೊಳ್ಳತಕ್ಕದ್ದು.

ವಿಳಾಸ:—ಮ್ಯಾನೇಜರ್,

ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

ಇಲ್ಲಿ ನೋಡಿ! ಹೊಸ ಪುಸ್ತಕ!! ಹೊಸ ಫೋಟೋಗಳು!!!

884

ಶ್ರೀಮದ್ವಿಶಿಷ್ಟಾದ್ವೈತಾಚಾರ್ಯರ ಚರಿತ್ರೆ ಕ್ರಯ ೦೦೬. ಇವರ ಫೋಟೋ ೬ ಅ. ಈಗಿನ ಶ್ರೀಶೃಂಗಗಿರಿ ಸ್ವಾಮಿಗಳ ಫೋಟೋ ಚಿಕ್ಕದು ೬ ಅ., ದೊಡ್ಡದು ವನದಲ್ಲಿ ಪಿತ್ಯಸಮೇತನಾಗಿ ಕಾಣಿಸಿರತಕ್ಕದ್ದು ೧ ಅ. ಫೋಟೋಗಳು ೬ ಅ. ಕಮ್ಮಿ ಮಾಡುವದಿಲ್ಲ.

ವಿಳಾಸ:— ಸುಬ್ಬನರಸಿಂಹಯ್ಯ,

ದಿವಾನ್ ವಂಕಟೇಅರಸಿನವರ ಛತ್ರ,

ಚಾಮರಾಜ ರೋಡು, ಮೈಸೂರು.

"ಸಾಧ್ವಿ"

884

ಇದು ಮ. ವೆಂಕಟಕೃಷ್ಣಯ್ಯನವರಿಂದ ಮುದ್ರಿಸಲ್ಪಡುತ್ತಿರುವ ವಾರಪತ್ರಿಕೆ. ಭಾರತಖಂಡದವರ ವಿದ್ಯಾಭ್ಯಾಸವನ್ನೂ, ಅವರ ಉನ್ನತ ಸೌಖ್ಯಗಳಿಗೆ ಸಾಧಕವಾದ ವಿಷಯಗಳನ್ನೂ ಒಳಗೊಂಡಿರುತ್ತದೆ. ಈ ಪತ್ರಿಕೆಯು ಇಷ್ಟ್ರಪ್ರಮಾಣಕ್ಕೂ ಘಟನೆಗಳನ್ನು ಇದಕ್ಕೆ ಚಂದಾ ವರುಷಕ್ಕೆ ಒಂದು ರೂಪಾಯಿ ಎಂಟಾಣೆ. ವಿದ್ಯಾರ್ಥಿಗಳಿಗೆ ಒಂದು ರೂಪಾಯಿ ಮಾತ್ರ. ಟಪಾಲ್ ಹಾಸಲು ಸಹ ಬೇಕಾದವರು ಕೆಳಗಿನ ವಿಳಾಸದವರಿಂದ ತರಿಸಿಕೊಳ್ಳಬಹುದು.

ವಿಳಾಸ:—ಮ್ಯಾನೇಜರ್, "ಸಾಧ್ವಿ" ಮೈಸೂರು.

ಊರಜನರ ಹೇಳಿಕೆಯಲ್ಲಿನ ನಂಬಿಕೆ.

9 2

ಕಲ್ಕತ್ತೆಯ ಇತ್ಯಾದಿ ದೊಡ್ಡ ಡಾಕ್ಟರು ಕೊಟ್ಟ ಅಭಿಪ್ರಾಯವನ್ನು ಇದರಲ್ಲಿ ಕೆಳಗೆ ಕೊಟ್ಟಿರುತ್ತದೆ. ಇದರಿಂದ ಈ ಪತ್ರಿಕೆಯಲ್ಲಿ ನಾಗಪುರದ ಪ್ರಚುರವಾಗಿರುವ ಅನೇಕ ಸ್ಥಳೀಯ ವೃತ್ತಾಂತಗಳಿಗೆ ಇದು ಒಂದು ಸರಿಯಿಂತಾಗುವದು.

ಇಂತಹ ಸ್ಥಳೀಯ ಸಾಕ್ಷ್ಯದ ಯಥಾರ್ಥತ್ವವನ್ನು ನೀವು ಪರೀಕ್ಷಿಸಬಹುದಾದ್ದರಿಂದ ಸಾವಿರಾರು ಮೈಲು ದೂರದಲ್ಲಿರುವವರಿಂದ ಕೊಡಲ್ಪಡುವ ಸಾಕ್ಷ್ಯಕ್ಕಿಂತಲೂ ಇದು ಹೆಚ್ಚು ಪ್ರಯೋಜನಕರವಾಗಿರುವದು. ಕಲ್ಕತ್ತೆಯ ಜನರಿಗೆ ಕಲ್ಕತ್ತೆಯ ಜನರ ಮಾತೇ ಶ್ರೇಷ್ಠವು. ಹಾರಿಸನ್ ರೋಡ್ ನಂ ೬೭ನೇ ಡಿಸ್ಪೆನ್ಸರಿ ಡಾಕ್ಟರ ಎಸ್. ಸಿ. ಸೇನ, ಎಲ್. ಎಂ. ಎಸ್. ಇವರ ಹೇಳಿಕೆಗಳ ವಿಲಾಯಿತಿ ಬೇರೆ ಇರಲಾರದು. ಅವರು ಗವರ್ನಮೆಂಟ್ ವೈದ್ಯ ಆಸ್ಪತ್ರೆಗಳಲ್ಲಿ ಅನೇಕ ವರುಷ ಇದ್ದು ಅನುಭವವುಳ್ಳವರು. ಪ್ರಖ್ಯಾತ ಕಲ್ಕತ್ತೆಯ ಟ್ರಾನೇ ಕಂಪನಿಯ ವೈದ್ಯಚಿಕಿತ್ಸಕರಾಗಿರುತ್ತಾರೆ. ಅವರು ಹೇಳುವದೇನೆಂದರೆ —ಡೋನ್ಸ್‌ರ (ಬ್ಯಾಕ್ ಏಕ್ ಕಿಡ್ನಿಪಿಲ್ಸ್) ನನ್ನ ನೋವಿನ ಮೂತ್ರಕೋಶದ ಔಷಧ ಗುಳಿಗೆಗಳು ಮೂತ್ರಕೋಶ ಸಂಬಂಧವಾದ ಬಾಧೆಗಳಲ್ಲಿ ಕೊಟ್ಟು ನೋಡಿದ್ದೇನೆ. ಅಂಥಾ ಸಂಗತಿಗಳಲ್ಲಿ ತಕ್ಷಣವೇ ಉಪಶಮನ ಸಿಕ್ಕುವ ಬಗ್ಗೆ ಇವು ಅತ್ಯಂತ ಉಪಯೋಗಕರವಾಗಿವೆ.

ಬೆನ್ನು ನೋವು ಮೂತ್ರನಾಡಿಗಳು ದುರ್ಬಲವಾಗಿಯೂ ಅನಾರೋಗ್ಯಸ್ಥಿತಿಯಲ್ಲಿ ಇರುತ್ತವೆಂಬದಕ್ಕೆ ಒಂದು ಲಕ್ಷಣವಾಗಿರುವದು. ಆ ಸಮಯದಲ್ಲಿ ಅವುಗಳಿಂದ ನಿವಿಸಕೂಡುವದಕ್ಕಿಂತ ಹೆಚ್ಚು ಮೋಸತ್ತು ಅವುಗಳ ಮೇಲೆ ಹೊರಿಸಿದರೆ ತಲೆನೋವು, ಆಯಾಸ, ಗಾನಿ ಅಧಿರಾವಿಕೆ, ಮೈಯಿಗೆ ನೀರು, ಅಂಚಿಕೆ ಮುಂತಾದದ್ದು ಉಂಟಾಗುವದು. ಇವನ್ನು ಅಲಕ್ಷಿಸಿದರೆ ಜಲೋದರವ್ಯಾಧಿ, ವಾತನೋವು, ಮೂತ್ರಕೋಶಗಳ ಮತ್ತು ಪ್ರಾಣಹಾನಿಕರವಾದ ಇತರ ವ್ಯಾಧಿಗಳು ಸಂಭವಿಸುವು. ಈ ಮಾತ್ರೆಗಳು ಮೂತ್ರಕೋಶ, ಮುಂತಾದದ್ದಕ್ಕೆ ಸಂಬಂಧಿಸುವ ವಿಶಿಷ್ಟಬಾಧೆಗಳಿಗೆ ಮುಖ್ಯಕರಿಗೂ, ಯೌವನಸ್ಥರಿಗೂ ನಿರ್ದಿಷ್ಟವಾದ ಔಷಧವಾಗಿರುವದು. ಇದನ್ನು ಸೇವಿಸಿದ್ದರಿಂದ ಯಾವ ದುಷ್ಟಬಾಧಕವೂ ಇರಲಾರದು.

ಎಲ್ಲಾ ಔಷಧ ವರ್ತಕರಿಂದ ಮಾರಲ್ಪಡುತ್ತದೆ. ಸೀಸೆ ಒಂದಕ್ಕೆ ರೂ. ೨ ಅಥವಾ ೬ ಸೀಸೆಗಳಿಗೆ ರೂ. ೧೦—೮—೦ ಅಥವಾ ಮುಂಬಯಿಯಲ್ಲಿಯ ಡೋನ್ಸ್‌ರ ಔಷಧಗಳ ಕೋಠಿಯಿಂದ ನೇರಾ ತರಿಸಿಕೊಳ್ಳಬಹುದು. ಪಿ. ಒ. ಬಾಕ್ಸ್, ನಂ. ೨೦, ಮುಂಬಯಿ.

ವೃತ್ತಾಂತ ಪತ್ರಿಕೆ.

———:o:———

ಸ೯ ೧೯೦೭ ನೇ ಇಸವಿ ಸೆಪ್ಟಂಬರ್ ತಾ॥ ೧೨ ನೇ ಗುರುವಾರ

ಕೋಲಾರದ ರೈತರೂ ಶ್ರೀಮನ್ಮಹಾರಾಜರವರ ಪ್ರತ್ಯುತ್ತರವೂ.

ಕಳೆದವಾರ ಶ್ರೀಮನ್ಮಹಾರಾಜರವರು ಕೋಲಾರದಲ್ಲಿದ್ದಾಗ್ಗೆ ಅಲ್ಲಿನ ಪ್ರಜೆಗಳು ವಿಜ್ಞಾಪನೆ ಮಾಡಿಕೊಂಡ ಕೋರತೆಗಳನ್ನು ಲಾಲಿಸಿ ಅವರಿಗೆ ದಯಪಾಲಿಸಿರುವ ಪ್ರತ್ಯುತ್ತರದ ವಿಷಯದಲ್ಲಿ ಕೆಲವರು ಚರ್ಚೆ ಮಾಡಿರುತ್ತಾರೆ. ಕೋಲಾರ್ ಡಿಸ್ಟ್ರಿಕ್ಟಿನಲ್ಲಿ ತರಿ ವ್ಯವಸಾಯವೇನಿದ್ದರೂ ಕೆರೆಗಳ ಆಸರೆಯಿಂದಲೇ ಆಗಬೇಕೆಂತಲೂ, ಕ್ರಮವಾಗಿ ಮಳೆಗಳು ಆದ ಹೊರತು ಆ ಕೆರೆಗಳು ತುಂಬುವುದಕ್ಕೆ ಮಾರ್ಗವಿಲ್ಲವೆಂತಲೂ, ಈಚೆಗೆ ಕೆಲವು ಸಾಲುಗಳಿಂದ ಮಳೆಗಳು ಸರಿಯಾಗಿ ನಡಿಸದೆಹೋಗಿದೆ ಎಂತಲೂ, ಕೆರೆಗಳಲ್ಲಿ ನೀರಿಲ್ಲದ್ದರ ದೆಸೆಯಿಂದ ಫಸಲಾಗದೆಹೋದರೂ ಗವರ್ನಮೆಂಟಿನವರು ಬಲಾತ್ಕಾರಮಾಡಿ ರೈತರಿಂದ ತರೀ ಕಂದಾಯವನ್ನು ವಸೂಲ್ಮಾಡುತ್ತಾರೆಂತಲೂ, ಆದಕಾರಣ ಮಳೆ ಆಗದೆ ಫಸಲು ಬೆಳೆಯದೆ ಹೋದ ಸಾಲುಗಳಲ್ಲಿ ತರೀ ಕಂದಾಯವನ್ನು ವಸೂಲ್ಮಾಡದಂತೆ ಅಪ್ಪಣೆ ಕೊಡಿಸಬೇಕೆಂತಲೂ ಕೋಲಾರದ ಪ್ರತಿನಿಧಿಗಳು ಶ್ರೀಮನ್ಮಹಾರಾಜರವರನ್ನು ಬೇಡಿಕೊಂಡರು.

ಕಂದಾಯವನ್ನು ಸಿರಬುಮಾಡುವ ಕ್ರಮಗಳು ಎಲ್ಲರಿಗೂ ತಿಳಿದಿರುವಂತೆ ಕೆಲವು ವರುಷಗಳ ಫಸಲಿನ ಸರಾಸರಿಯನ್ನು ಇಟ್ಟುಕೊಂಡು, ಅದರ ಮೇಲೆ ಸರ್ಕಾರಕ್ಕೆ ಈ ದರದಂತೆ ಕೊಡುತ್ತಾ ಬರಬೇಕೆಂದು ವಿಧಿಸುತ್ತಾರೆ. ಮಳೆ ಆಗದ ವರುಷ ರೈತನಿಗೆ ಫಸಲಾಗುವುದಿಲ್ಲ, ಆದರೂ ಗವರ್ನಮೆಂಟಿಗೆ ಕಂದಾಯ ಕೊಡುವನು. ಸುಭಿಕ್ಷವಾದ ಸಾಲಿನಲ್ಲಾದರೋ ರೈತನಿಗೆ ಹುಲುಸಾದ ಬೆಳೆಯು ಕೈಸೇರಿದಾಗ್ಯೂ ಗವರ್ನಮೆಂಟಿಗೆ ಸ್ವಲ್ಪವೇ ಕಂದಾಯ ಕೊಡುವನಲ್ಲದೆ ಆ ವರುಷದ ಫಸಲಿಗೆ ತಕ್ಕಷ್ಟು ಕೊಡುವುದಿಲ್ಲ. ಆದಕಾರಣ ಕೆಲವು ವರುಷಗಳ ಸರಾಸರಿಯನ್ನು ಹಾಕಿ ನೋಡುವಲ್ಲಿ ರೈತನಿಗೂ ಸರ್ಕಾರಕ್ಕೂ ಒಂದೇ ವಿಧವಾದ ಲಾಭನಷ್ಟಗಳುಂಟಾಗುವವೆಂದು ನಿರ್ಧರವಾಗುವುದು.

ಕೋಲಾರದ ರೈತರಿಗೆ ಉಂಟಾಗಿರುವ ಕಷ್ಟವನ್ನು ನಿವಾರಣೆ ಮಾಡುವುದಕ್ಕೆ ಮೇಲ್ಕಂಡ ಪ್ರತಿನಿಧಿಗಳು ಸೂಚಿಸಿದ ಪರಿಹಾರವು ವಿವೇಕವಾದದ್ದೆಂದು ನಮಗೆ ತೋರುವುದಿಲ್ಲ. ಗವರ್ನಮೆಂಟಿನವರು ಪ್ರತಿ ವರುಷವೂ ಕಂದಾಯವನ್ನು ಗೊತ್ತುಮಾಡುತ್ತಿರಬೇಕೋ? ರಾಜ್ಯಭಾರಕ್ರಮಗಳನ್ನು ತಿಳಿದಿರುವವರ್‍ಯಾರೂ ಇಂಥಾ ಕ್ರಮವು ಸಹಜವಾದದ್ದೆಂದು ಒಪ್ಪಲಾರರು. ಪ್ರತಿ ವರುಷವೂ ಪ್ರತಿ ಜಮೀನಿಗೂ ಹೋಗಿ ಫಸಲಿನ ಸ್ಥಿತಿಗತಿಯನ್ನು ನೋಡಿ ಕಂದಾಯ ಮೊಕರರ್ಮಾಡುತ್ತಾ ಬರುವುದರಲ್ಲಿ ಗವರ್ನಮೆಂಟಿನವರ ಖರ್ಚೂ ಅವರ ಶ್ರಮವೂ ಬಹಳ ಮಟ್ಟಿಗೆ ಹೆಚ್ಚುವುದಿಲ್ಲವೋ? ಪ್ರತಿ ವರುಷವೂ ಒಂದೊಂದು ತರಹಾ ಕಂದಾಯವನ್ನು ಕೊಡುವುದಕ್ಕೆ ರೈತ ತಾನೇ ಒಪ್ಪುವನೇ? ಸಣ್ಣಪುಟ್ಟ ಸರ್ಕಾರಿ ನೌಕರರ ಹಿಂಸೆಯು ರೈತನಿಗೆ ಹೆಚ್ಚುವುದಿಲ್ಲವೇ? ಈ ಏರ್ಪಾಡಿನ ಅನಾನುಕೂಲಗಳೂ ಕಷ್ಟನಷ್ಟಗಳೂ ರೈತನಿಗೆ ಅಪಾರವಾಗುವುದರಲ್ಲಿ ಸಂಶಯವಿಲ್ಲ. ಆದಕಾರಣ ಈಗ ರೈತನಿಗಿರುವಂಥಾ ಕಷ್ಟವನ್ನು ನಿವಾರಣೆ ಮಾಡುವುದಕ್ಕೆ ಮೇಲ್ಕಂಡ ಪ್ರತಿನಿಧಿಗಳು ಸೂಚಿಸಿರತಕ್ಕ ಪರಿಹಾರವು ಇನ್ನೂ ಕಡಕನ್ನು ಹೆಚ್ಚಿಸುವುದಲ್ಲದೆ ಎಷ್ಟು ಮಾತ್ರಕ್ಕೂ ಕಡಿಮೆಮಾಡಲಾರದು.

ಸರ್ಕಾರದವರು ರೈತನಿಂದ ತೆಗೆದುಕೊಳ್ಳುವ ಕಂದಾಯವನ್ನು ಇಷ್ಟೇ ಎಂದು ನಿರ್ಧರಮಾಡಬೇಕಾದ್ದು ಅವಶ್ಯವಾಗಿರುತ್ತದೆ. ಹಾಗಾದರೆ ರೈತನಿಗೆ ಕಷ್ಟನಷ್ಟಗಳುಂಟಾದರೆ ಪರಿಹಾರವೇ ಇಲ್ಲವೋ ಎಂದು ಪ್ರಶ್ನೆಮಾಡಬಹುದು. ಸತ್ಯವಂತರಾದ ರೈತಪ್ರತಿನಿಧಿಗಳು ತಮ್ಮ ಜನರ ಸ್ಥಿತಿಗತಿಯ ವಿಷಯದಲ್ಲಿ ಸಹಜವೂ ಯಥಾರ್ಥವೂ ಆದಷ್ಟನ್ನು ಮಾತ್ರವೇ ವಿವರಿಸಿ ಮೇಲ್ಪಟ್ಟವರಲ್ಲಿ ಅರಿಕೆ ಮಾಡಿಕೊಳ್ಳೋಣದರಲ್ಲಿ ಪರಿಹಾರ ದೊರಕೀತೆನ್ನುವುದಕ್ಕೆ ಸಂಶಯವಿಲ್ಲ. ಹ್ಯಾಗೆಂದರೆ, ಕೆರೆಯ ಆಸರೆಯುಳ್ಳ ಒಂದು ಗ್ರಾಮದಲ್ಲಾಗಲಿ, ಅಥವಾ ಒಂದು ತಾಕಿನ ರೈತರಿಗಾಗಲಿ ಕಂದಾಯವು ರಿಮಿಷನ್ ಆಗಬೇಕಾಗಿದ್ದಲ್ಲಿ ಅವರು ಎಷ್ಟು ಸಾಲುಗಳಿಂದ ಮಳೆ ಆಗಲಿಲ್ಲವೋ, ಫಸಲು ಬೆಳೆಯಲಿಲ್ಲವೋ, ಕೆರೆಯ ಸ್ಥಿತಿ ಹ್ಯಾಗಿದೆಯೋ, ಈ ಮೊದಲಾದ ವಿಚಾರಗಳನ್ನು ಕುರಿತು ಯಥಾರ್ಥವಾದ ತಃಖ್ತೆಯನ್ನು ಹಾಕಿ, ಗವರ್ನಮೆಂಟಿಗೆ ತಿಳಿಸಿ, ಮುಸಲಾ ಎರಡು ಮೂರು ಸಾಲುಗಳಿಂದ ಬೆಳೆಯಾಗಲಿಲ್ಲವೆಂಬ ವಿಚಾರವನ್ನು ಅರಿಕೆಮಾಡಿಕೊಂಡರೆ ಗವರ್ನಮೆಂಟಿನವರು ಅಂಥಾ ಸಂದರ್ಭಗಳಲ್ಲಿ ಕಂದಾಯಗಳನ್ನು ಮಾಫಿ ಬಿಟ್ಟಾರೆಂದು ಧಾರಾಳವಾಗಿ ನಂಬಬಹುದಾಗಿದೆ. ಹೀಗೆ ಮಾಡುವುದನ್ನು ಬಿಟ್ಟು, ಪ್ರತಿನಿಧಿ ಸಭೆಯ ಒಬ್ಬ ಮೆಂಬರು ಬಂದು ಸರ್ವಸಾಮಾನ್ಯವಾಗಿ ಎಲ್ಲರಿಗೂ ಕಂದಾಯ ರಿಮಿಷನ್ ಆಗಬೇಕೆಂದು ಕೇಳಿಕೊಳ್ಳುವುದು ಫಲಕಾರಿಯಾದದ್ದಲ್ಲ. ರೈತರಿಗೆ ನಾವು ತಿಳಿಸುವುದೇನೆಂದರೆ— 'ನೀವು ನೀವೇ ಒಂದಾಗಿ ಸೇರಿಕೊಳ್ಳಿ. ಯಥಾರ್ಥವಾದ ವಿಷಯವನ್ನೇ ಸೂಚಿಸಿ, ಯಾವದು ಸಹಜವಾಗಿರುವುದೋ ಅದನ್ನು ಮಾತ್ರ ಕೇಳಿಕೊಳ್ಳಿ. ನೀವು ಸೂಚಿಸುವ ಲೆಕ್ಕಗಳೂ ಕೇಳಿಕೊಳ್ಳುವ ವಿಷಯಗಳೂ ಆಕ್ಷೇಪಣೆಗೆ ಸಿಕ್ಕದವುಗಳಾಗಿರಲಿ."

ಆದಾಗ್ಯೂ ಕೆಲವು ಸಂದರ್ಭಗಳಲ್ಲಿ ರಿಮಿಷನ್ ಆಗಬೇಕೆಂಬ ಅರ್ಜಿಗಳನ್ನು ಸ್ಥಳೀಯ ರೆವಿನ್ಯೂ ಅಧಿಕಾರಿಗಳು ಪ್ರೀತಿಪೂರ್ವಕವಾಗಿ ಲಾಲಿಸಿ ತನಿಖೆಮಾಡುವುದಿಲ್ಲವಲ್ಲಾ ಎಂದು ಆಕ್ಷೇಪಣೆ ಮಾಡಬಹುದು ಅಧರ್ಮಿಗಳಾಗಿಯೂ ಅಪ್ರೀತಿವಂತರಾಗಿಯೂ ಇರುವ ಅಧಿಕಾರಿಗಳು ನ್ಯಾಯವಾದ ಪ್ರಾರ್ಥನೆಯನ್ನೂ ತಿರಸ್ಕರಿಸಿಬಿಡುವರು. ಇಂಥಾ ಸಂದರ್ಭಗಳಲ್ಲಿ ಕಷ್ಟನಷ್ಟಗಳನ್ನನುಭವಿಸುವ ರೈತ ಪ್ರಜೆಗಳು ರೆವಿನ್ಯೂ ಕಮಿಷನರಿಗಾಗಲಿ, ದಿವಾನರವರಿಗಾಗಲಿ, ಅಥವಾ ಶ್ರೀಮನ್ಮಹಾರಾಜರವರಿಗಾಗಲಿ ತಮ್ಮ ವಿಜ್ಞಾಪನೆಗಳನ್ನು ಅರಿಕೆಮಾಡಿಕೊಳ್ಳುವುದಕ್ಕೆ ಸುಲಭಸಾಧ್ಯಗಳಾದ ಮಾರ್ಗಗಳುಂಟೇ? ಗವರ್ನಮೆಂಟಿನವರು ಈ ವಿಷಯವನ್ನು ಪರ್ಯಾಲೋಚಿಸತಕ್ಕದ್ದಾಗಿದೆ.

ಒಳದೇಶದ ವೃತ್ತಾಂತಗಳು.

ಕಳೆದ ಭಾನುವಾರ ಮಧ್ಯಾಹ್ನ ೧೨ ಗಂಟೆಗೆ ಶ್ರೀಮನ್ಮಹಾರಾಜರವರೂ ಶ್ರೀನರ್ಸ್ ಯುವರಾಜರವರೂ ಪರಿವಾರ ಸಹಿತ ಮೇಲ್ ಟ್ರೇನ್ ಗಾಡಿಯಲ್ಲಿ ಬೆಂಗಳೂರಿಂದ ಹೊರಟು ಸುಮಾರು ೩ ಗಂಟೆಗೆ ರಾಜಧಾನಿಯನ್ನು ಸುರಕ್ಷಿತವಾಗಿ ತಲುಪಿದರು. ಗೌರವಾರ್ಥವಾದ ೨೧ ತೋಫುಗಳು ಹಾರಿಸಲ್ಪಟ್ಟವು.

❖❖❖

ಈ ಸಲ ನವರಾತ್ರಿ ಉತ್ಸವ ಕಾಲಕ್ಕೆ ರಾಜಧಾನಿಗೆ ಬರತಕ್ಕ ದೇಶೀಯ ಅಧಿಕಾರಿಗಳು, ದೊಡ್ಡ ಮನುಷ್ಯರು, ಪ್ರಜಾಪ್ರತಿನಿಧಿಗಳು, ಇವರಿಗೆಲ್ಲಾ ಇಲ್ಲಿ ಸ್ಥಳ ಮುಂತಾದ ಸೌಕರ್ಯಗಳನ್ನು ಒದಗಿಸಿಕೊಡುವುದಕ್ಕಾಗಿ ಸರ್ಕಾರದವರು ದಿವಾನರವರ ಆಫೀಸ್ ರೆಜಿಸ್ಟ್ರಾರ್ ಮ॥ ಸಿ. ವೆಂಕಟರಾಯರನ್ನು ನೇಮಕಮಾಡಿರುತ್ತಾರೆ.

❖❖❖

ಕೋಲಾರ್ ಚಿನ್ನದಗಣಿಗಳಲ್ಲಿ ಗಂಗಾಧರನೆಂಬವನು ತನ್ನ ಹೆಂಡತಿಗೆ ವೈಮನಸ್ಯದಿಂದಲೇ ಬರೆಗಳನ್ನು ಹಾಕಿ ಹಿಂಸೆ ಮಾಡಿ, ಬೆಂಗಳೂರು ಸೆಷನ್ಸ್ ಕೋರ್ಟಿನಲ್ಲಿ ದರ್ಯಾಫ್ತು ಮಾಡಲ್ಪಟ್ಟನು. ವಿಚಾರಣೆಯಲ್ಲಿ ಅವನು ಬರೆಹಾಕಿದ್ದುಂಟೆಂದು ಒಪ್ಪಿಕೊಂಡನು. ಸೆಷನ್ಸ್ ಜಡ್ಜಿ ಮ॥ ಚಂದ್ರಶೇಖರಯ್ಯನವರು ಅವನಿಗೆ ನಾಲ್ಕು ವರುಷ ಕಠಿಣ ಸಜಾ ವಿಧಿಸಿರುತ್ತಾರೆ.

❖❖❖

ಮೈಸೂರು ಸಂಸ್ಥಾನದ ಖಾಯಂ ಬ್ರಿಟಿಷ್ ರೆಸಿಡೆಂಟರಾದ ಮ॥ ಎಸ್. ಎಂ. ಫ್ರೇಸರ್ ಯವರು ದೇಹಾರೋಗ್ಯಕ್ಕಾಗಿ ರಜಾ ಪಡೆದು ಈಗ ಸೀಮೆಗೆ ದಯಮಾಡಿಸಿರುತ್ತಾರಷ್ಟೆ. ಇವರು ಮುಂದಿನ ನವಂಬರ್ ತಿಂಗಳಲ್ಲಿ ಬಂದು ಕೆಲಸದ ಛಾರ್ಜನ್ನು ವಹಿಸುವವರಾಗಿದಾರೆ. ಈಗ ಆಕ್ಟಿಂಗ್ ರೆಸಿಡೆಂಟರಾಗಿರುವ ಮ॥ ಎ. ವಿಲ್ಲಿಯಂಸ್‌ಯವರು ಆ ತರುವಾಯ ಬಲೂಚಿಸ್ಥಾನಕ್ಕೆ ರೆವಿನ್ಯೂ ಮತ್ತು ಜುಡಿಷಲ್ ಕಮಿಷನರಾಗಿ ದಯಮಾಡುವರು

❖❖❖

ಮುನಿರಾಮಶರ್ಮ, ಕಾಸಿಂಸಾಬಿ, ಚಲುವೇಗೌಡ, ಹಲಗೈಯ್ಯ, ನರಸೈಯ ಎಂಬೀ ಐದು ಮಂದಿ ಯಡತೊರೆ ತಾಲ್ಲೂಕು ಹಾದ್ದದಲ್ಲಿ ದೇವನ್ಮಾನೆಂಬೊಬ್ಬ ಹೆಂಗಸನ್ನು ಜಮೀನ್ ಪ್ಯಾದ್ಯದಲ್ಲಿ ಹೊಡೆದು ಮನೋವ್ಯಥೆಯನ್ನುಂಟು ಮಾಡಿದರೆಂದು ಯಡತೊರೆ ಅಮಲ್ದಾರ್ ಮ್ಯಾಜಿಸ್ಟ್ರೇಟರು ಮೊದಲನೇ ಅಪರಾಧಿಗೆ ೨೦೦ ರೂಪಾಯನ್ನೂ ಉಳಿದ ನಾಲ್ವರಿಗೂ ತಲಾ ೫೦ ರೂಪಾಯನ್ನೂ ಜುಲ್ಮಾನೆ ವಿಧಿಸಿ, ವಸೂಲಾಗುವ ಜುಲ್ಮಾನೆ ಹಣದಲ್ಲಿ ೧೫೦ ರೂಪಾಯನ್ನು ಫಿರ್ಯಾದಿಯಾದ ಹೆಂಗಸಿಗೆ ಪರಿಹಾರರೂಪವಾಗಿ ಕೊಡಬೇಕೆಂದು ತೀರ್ಮಾನ ಮಾಡಿದಾರೆ

❖❖❖

ಬೆಂಗಳೂರು ಸಿಟಿ ಬಸವನಗುಡಿ ಬಡಾವಣೆಯಲ್ಲಿ ಹಿಂದೂ ಅನಾಥ ಪ್ರೇಯರ ನಿಲಯವನ್ನು ಕಟ್ಟಬೇಕೆಂದು ಪ್ರೆಸಿಡೆಂಟ್ ಮಿಸೆಸ್ ಹಿಟ್ ಯವರೂ ವೈಸ್ ಪ್ರೆಸಿಡೆಂಟ್ ಮ॥ ಕೆ. ರಾಮಚಂದ್ರರಾಯರೂ ಪ್ರಯತ್ನಪಟ್ಟು, ಅದಕ್ಕೆ ಒಂದೂವರೆ ಲಕ್ಷ ರೂಪಾಯಿ ಫಂಡು ಬೇಕಾಗಿದೆ ಎಂತಲೂ, ಧರ್ಮಚಿತ್ತವೃತ್ತಿಯುಳ್ಳ ಮಹನೀಯರು ಈ ಸತ್ಕಾರ್ಯಕ್ಕೆ ದ್ರವ್ಯಸಹಾಯ ಮಾಡಬೇಕೆಂತಲೂ ಪ್ರಕಟಿಸಿದಾರೆ ಚಂದಾ ಹಣವನ್ನು ಕಳುಹಿಸತಕ್ಕವರು ಬೆಂಗಳೂರು ಸಿಟಿ ಬಸವನಗುಡಿಯಲ್ಲಿರುವ ಪೋಲ್ಕಂಡ ಸಂಘದ ಸೆಕ್ರೆಟರಿ ಮ॥ ಸಿ. ವೆಂಕಟವರದ ಐಯ್ಯಂಗಾರ್ರಿಗೆ ತಲಪುವಂತೆ ಕಳುಹಿಸಬೇಕಾಗಿದೆ.

❖❖❖

ಮೈಸೂರು ಪ್ರಾಂತ್ಯದ ಒಬ್ಬ ಮುಸಲ್ಮಾನ ಫಕೀರನು ಆಚೇಪಾರ ಬಳ್ಳಾರಿಗೆ ಹೋಗಿ ಅಲ್ಲಿ ಪ್ಲೇಗ್ ಉಪದ್ರ ಹೆಚ್ಚುತ್ತಿರುವುದನ್ನು ನಿಲ್ಲಿಸುತ್ತೇನೆಂದು ಬೀದಿ ಬೀದಿಯಲ್ಲೆಲ್ಲಾ ಹೇಳಿಕೊಂಡು ತಿರುಗಾಡುತ್ತಾ ಬಂದನು. ಕೆಲವು ಜನರು ಸೇರಿ, ಆ ಫಕೀರನ ಹೇಳಿಕೆಯ ಪ್ರಕಾರ ಸುಮಾರು ೩೦೦ ರೂಪಾಯಿ ಚಂದಾ ಕೊಡಿಸಿಕೊಟ್ಟರು. ಅವನು ಕಪ್ಪಗಿರುವ ಒಂದು ಆಡನ್ನು ಹಿಡಿದುಕೊಂಡು ಮೂರು ದಿನಗಳ ತನಕ ಪೇಟೆಗಳ ಮೇಲೆ ತಿರುಗುತ್ತಾ ಇದ್ದು, ನಾಲ್ಕನೇ ದಿನ ಆ ಆಡನ್ನು ಪೋಲೀಸ್ ಸ್ಟೇಷನ್ ಎದುರಿಗ ನಾಲ್ಕು ರಸ್ತೆಗಳು ಕೂಡುವ ಚೌಕದ ಮಧ್ಯೆ ನಡುಹಗಲಿನಲ್ಲಿ ಸಾವಿರಾರು ಜನರು ನೋಡುತ್ತಿದ್ದಾಗ "ಪ್ಲೇಗ್ ಮಾರಿಗೆ" ಆಹುತಿಯಾಗಿ ಕಡಿದು, ಅದರ ಮಾಂಸವನ್ನು ಅಪೇಕ್ಷಿಸಿದ ಜನರಿಗೆಲ್ಲಾ ಹಂಚಿಕೊಟ್ಟನು ಅದರ ಗೊರಸು, ತಲೆ, ಕೊಂಬು, ಮೂಳೆ ಮೊದಲಾದವುಗಳನ್ನು ಅದೇ ಚೌಕದ ನಡುವೆ ಹಳ್ಳವನ್ನು ತೋಡಿ ಹೂತುಬಿಟ್ಟು—"ಇನ್ನು ಐದಾರು ದಿನಗಳೊಳಗಾಗಿ ಪ್ಲೇಗ್ ಉಪದ್ರವು ನಿಂತುಹೋಗುವುದು" ಎಂದು ಹೇಳಿ, ಆ ಹಣದಲ್ಲಿ ಆ ಊರಿನ ಬಡಬಗ್ಗರನೇಕರಿಗೆ ಸಮಾರಾಧನೆ ಮಾಡಿಸಿ, ಹೊರಟುಹೋದನು

❖❖❖

ಒಬ್ಬ ಬಾತ್ಮೀದಾರರು ಬರೆಯುವುದು.—ಬೆಂಗಳೂರಿನಲ್ಲಿ ಕ್ಷತ್ರಿಯ ವರ್ಣಾಶ್ರಮಕ್ಕೆ ಸೇರಿದ ಯೋಗ್ಯತೆ ಮತ್ತು ಮರ್ಯಾದೆ ಪಡೆದಿದ್ದ ರಿಟೈರ್ಡ್ ಅಮಲ್ದಾರ್ ಮ॥ ವೆಂಕಟರಾವ್ ಸಿಂಧಿಯಾ ಯವರು ಈ ಮಾಹೆ ೩ ನೇ ತಾ॥ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇನೆ ಇವರು ಮೈಸೂರು ಸರ್ಕಾರದ ಕೆಲಸದಲ್ಲಿ ೨೯ ವರ್ಷಗಳ ನೌಕರಿಮಾಡಿ, ಸುಮಾರು ೧೩ ವರ್ಷಗಳ ಕೆಳಗೆ ಪೆನ್ಷನ್ ಪಡೆದರು ಪೋಲೀಸ್ ಮತ್ತು ರೆವಿನ್ಯೂ ಇಲಾಖೆಗಳಲ್ಲಿ ಇವರು ಪ್ರಖ್ಯಾತಿಯಾದ ಕೆಲಸಗಳನ್ನು ಮಾಡಿದ್ದಾರೆ ೧೮೭೬—೭೭ ನೇ ಸಾಲಿನ ಕ್ಷಾಮದಲ್ಲಿ ರಿಲೀಫ್ ಕೆಲಸಗಳ ವಿಷಯವಾಗಿ ಇವರು ಬಹಳ ಪ್ರಯಾಸಪಟ್ಟು ಮೇಲಿನ ಅಧಿಕಾರಿಗಳ ಪ್ರಶಂಸನಂಟಿಕೆಯನ್ನು ಸಂಪಾದಿಸಿ, ಮೆಚ್ಚಲ್ಪಟ್ಟು ಇದ್ದಾರೆ. ಸರ್ಕಾರಿ ಕೆಲಸದಿಂದ ನಿವೃತ್ತಿಯಾದ ನಂತರವೂ ಇವರು ೧೮೯೮—೯೯ ನೇ ಸಾಲಿನಲ್ಲಿ ಜನಗಳ ಸೌಖ್ಯದ ಬಗ್ಗೆ ಬೆಂಗಳೂರಿನಲ್ಲಿ ಪ್ಲೇಗ್ ಸೂಪರಿಂಟೆಂಡೆಂಟಾಗಿದ್ದು, ಪ್ರತಿಯೊಂದು ಮನೆಗೂ ತಾವೇ ಖುದ್ದಾಗಿ ಹೋಗಿ ನೋಡಿ ಬರುತ್ತಾ, ತಮ್ಮ ಡಿವಿಜನಿನಲ್ಲಿ ಆರೋಗ್ಯಭಾಗ್ಯವನ್ನು ಬಹಳ ಉತ್ತಮ ಸ್ಥಿತಿಗೆ ತಂದಿದ್ದರು. ಇವರಿಗೆ ವಯಸ್ಸು ೬೮ ತುಂಬಿತ್ತು. ಕಳೆದ ೨ ವರ್ಷಗಳಿಂದ ಇವರ ದೇಹಾರೋಗ್ಯವು ಕ್ಷೀಣದೆಶೆಯಲ್ಲಿದ್ದು, ಈಗ್ಗೆ ೨ ತಿಂಗಳಿಂದ ಪಾರ್ಶ್ವವಾಯು ಮತ್ತು ಬಹುಮೂತ್ರ ಬಾಧೆಗಳಿಂದ ನರಳುತ್ತಿದ್ದು, ಇವುಗಳಿಂದಲೇ ಮೃತಿಯನ್ನು ಹೊಂದಿದರು

ಮೈಸೂರು ಗೆಜೆಟ್ ಸಂಗ್ರಹ.

ಬೆಂಗಳೂರು ಸಿಟಿ ಬಸವನಗುಡಿ ಡಿವಿಜನಿಗೆ ಮ॥ ಸಿ ಕೃಷ್ಣಮೂರ್ತಿಯವರನ್ನು ಮ್ಯುನಿಸಿಪಲ್ ಕೌನ್ಸಿಲರಾಗಿ ನೇಮಕ ಮಾಡಿದೆ

ಆಸ್ಪತ್ರೆ ಅ॥ ಮಿಸೆಸ್ ಬಿ. ಹೇಕಟ್ಸ್ ಎಂಬಾಕೆಯು ಎಂ ಬಾಲಸುಂದರಮ್ಮನೆಂಬ ಹೆಸರನ್ನು ಇಟ್ಟುಕೊಂಡಿದ್ದಾರೆ.

ಮೈಸೂರು ಛೀಫ್ ಕೋರ್ಟ್ ರೆಜಿಸ್ಟ್ರಾರ್ ಮ॥ ವಿ. ಎ ರಾಜರತ್ನ ಮೊದಲಿಯಾರ್ರಿಗೆ ಕೊಟ್ಟಿರುವ ಪ್ರಿವಿಲೇಜ್ ರಜವನ್ನು ಇನ್ನೂ ಆರು ದಿನಗಳಿಗೆ ಜಾಸ್ತಿ ಮಾಡಿದೆ.

ಮ॥ ಬಿ. ಬಸವಾರಾಧ್ಯರು ಅವರ ಆಫೀಸಿನ ಜಾಸ್ತಿ ಕೆಲಸಗಳ ಛಾರ್ಜನ್ನು ವಹಿಸಿರತಕ್ಕದ್ದು

ಆಕ್ಟಿಂಗ್ ಯಾಕ್‌ಸ್ಟ್ರಾ ಅ॥ ಕಮಿಷನರ್ ಮ॥ ಎಂ. ಲಕ್ಷ್ಮಣ ಶಾಸ್ತ್ರಿಯವರಿಗೆ ಕೊಟ್ಟಿದ್ದ ಎರಡು ತಿಂಗಳ ಪ್ರಿವಿಲೇಜ್ ರಜವನ್ನು ಅವರು ಉಪಯೋಗಿಸಿಕೊಳ್ಳಲಿಲ್ಲವಾಗಿ ವಜಾ ಮಾಡಿದಾರೆ.

ಸ್ಯಾನಿಟರಿ ಕಮಿಷನರವರ ಪರ್ಸನಲ್ ಅಸಿಸ್ಟೆಂಟ್ ಮ॥ ಪಿ. ಪಲ್ಪುಯವರನ್ನು ಮೈಸೂರು ಗವರ್ನಮೆಂಟಿನ ಡಿಪ್ಟಿ ಸ್ಯಾನಿಟರಿ ಕಮಿಷನರಾಗಿ ನೇಮಕ ಮಾಡಿದೆ.

ಮುಂದೆ ಹೇಳುವವರನ್ನು ೩ ನೆ ಕ್ಲಾಸ್ ಸಬ್ ಅ॥ ಸರ್ಜನರಾಗಿ ನೇಮಕಮಾಡಿ ಕೆಳಗೆ ಕಂಡಂತೆ ವರ್ಗ ಮಾಡಿದೆ:—೧ ಮ॥ ಟಿ ಪರುಮಾಳ್ ನಾಯ್ಡುಯವರು—ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಗೆ; ೨. ಮ॥ ಜಿ. ನಾರಾಯಣರಾಯರು—ಮೈಸೂರು ಜನರಲ್ ಆಸ್ಪತ್ರೆಗೆ

ನಾಲಗಳ ಡಿವಿಜನ್ ಅಸಿಸ್ಟೆಂಟ್ ಅ॥ ಇಂಜನಿಯರ್ ಮ॥ ಎಂ. ನಲ್ಲನಾಯಗ ಮುದಲಿಯಾರ್ರಿಗೆ ತಾ. ೮ ರಿಂದ ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ಮೈಸೂರು ಸಂಸ್ಥಾನದಲ್ಲಿ ನೌಕರಿ ಬಗ್ಗೆ ಕಳುಹಿಸಲ್ಪಟ್ಟಿದ್ದ ಸೂಪರಿಂಟೆಂಡಿಂಗ್ ಇಂಜನಿಯರ್ ಮ॥ ಜೆ ಜೆ. ವೈಟ್ಲೀಯವರನ್ನು ಇಂಡಿಯಾ ಗವರ್ನಮೆಂಟಿನವರು ಮದರಾಸ್ ಇಂಜನಿಯರ್ ಇಲಾಖೆಗೆ ವರ್ಗ ಮಾಡಿರುತ್ತಾರೆ.

ಸಬ್ ಅ॥ ಇಂಜನಿಯರ್ ಮ॥ ಎ ಜಿ. ರಂಗೈಯ್ಯನವರನ್ನು ಶಿವಮೊಗ್ಗದಿಂದ ಬೆಂಗಳೂರು ಡಿವಿಜನಿಗೆ ವರ್ಗ ಮಾಡಿದೆ

ಅರಮನೆ ಡಿವಿಜನ್ ಅ॥ ಇಂಜನಿಯರ್ ಮ॥ ಟಿ. ಎಸ್ ಶೇಷಯ್ಯಂಗಾರ್ರಿಗೆ ಕೊಟ್ಟಿರುವ ಎಂಟು ತಿಂಗಳ ಕಾಯಿಲೆ ರಜವನ್ನು ಇನ್ನೂ ನಾಲ್ಕು ತಿಂಗಳು ಜಾಸ್ತಿ ಮಾಡಿದೆ

ಹೆಗ್ಗಡದೇವನಕೋಟೆ ತಾಲ್ಲೂಕ್ ಅಮಲ್ದಾರ್ ಮ॥ ಪಿ. ರಂಗರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಟ್ಟಿದೆ

ತಾಲ್ಲೂಕು ಶಿರಸ್ತೇದಾರ್ ಎಂ ಎ. ನರಸಿಂಹಾಚಾರ್ರು ಮತ್ತೊಂದು ಹುಕುಂ ಕೊಡಲ್ಪಡುವ ತನಕ ಹೆಗ್ಗಡದೇವನಕೋಟೆ ತಾಲ್ಲೂಕಿನ ಛಾರ್ಜನ್ನು ವಹಿಸಿರತಕ್ಕದ್ದು.

ಜೈನಾಭ್ಯುದಯ ವಾರ್ತೆಯು.

ಈ ತಿಂಗಳು ೧ ನೇ ತಾ ಆದಿತ್ಯವಾರದ ದಿನ ಮೈಸೂರು ಪಟ್ಟಣದ ಜೈನ ವಿದ್ಯಾರ್ಥಿಗಳೆಲ್ಲರೂ ಮೋತೀಖಾನಾ ಲಕ್ಷ್ಮೀಪತಯ್ಯನವರ ಛತ್ರದಲ್ಲಿ ಕ್ರೀನಾ ಮೋತೀಖಾನೆ ವರ್ಧಮಾನಯ್ಯನವರಿಗೆ ಮೆಜಾರಿಟಿ ಬಂದದ್ದರಿಂದ ಅವರಲ್ಲಿ ತಮಗಿರತಕ್ಕ ಭಕ್ತಿ ವಿಶ್ವಾಸಗಳನ್ನು ತೋರ್ಪಡಿಸುವುದಕ್ಕಾಗಿ ಒಂದು ಅಡ್ರೆಸ್ಸನ್ನು ಓದಿ, ಟಕರ್ ಅಂಡ್ ಸನ್ಸ್ ಕಂಪೆನಿಯಲ್ಲಿ ಸುಂದರವಾದ ಚಿತ್ರಕೆಲಸಮಾಡಿದ ಒಂದು ಬೆಳ್ಳಿ ಬಟ್ಟಲಿನೊಡನೆ ಅವರಿಗೆ ಒಪ್ಪಿಸಿದರು ಅಲ್ಲಿ ಅನೇಕ ವಿದ್ಯಾರ್ಥಿಗಳೂ ದೊಡ್ಡಮನುಷ್ಯರೂ ಸೇರಿದ್ದರು ಗ್ರಾಮಫೋನ್, ಹಾರ್ಮೋನಿಯಂಗಳ ಇಂಪಾದ ಗಾನವು ಸರ್ವರ ಮನಸ್ಸನ್ನೂ ಉಲ್ಲಾಸಗೊಳಿಸಿತು ಮ॥ ವರ್ಧಮಾನಯ್ಯನವರು—ಜೈನ ವಿದ್ಯಾರ್ಥಿಗಳು ಈ ರೀತಿಯಾಗಿ ತಮಗೆ ತೋರಿಸಿದ ಮರ್ಯಾದೆಗಾಗಿ ಅವರನ್ನು ಬಹಳವಾಗಿ ವಂದಿಸಿ, ಪೂರ್ವದಲ್ಲಿ ಜೈನಮತವು ಎಷ್ಟು ಉಚ್ಛ್ರಾಯಸ್ಥಿತಿಯಲ್ಲಿದ್ದು ಈಗ ಎಷ್ಟು ಹೀನಸ್ಥಿತಿಗೆ ಬಂದಿರುವುದನ್ನು ನೋಡಿ ವಿಷಾದಪಟ್ಟರು ಮತ್ತು ಈ ಮೈಸೂರಲ್ಲಿ ಫ್ರೀ(ಫ್ರೀ)ಯಾಗಿ ಒಂದು ಬೋರ್ಡಿಂಗ್ ಹೌಸ್ (ವಿದ್ಯಾರ್ಥಿನಿಲಯ) ವನ್ನು ಸ್ಥಾಪಿಸಿಕೊಡುತ್ತೇನೆಂಬದಾಗಿಯೂ ಅಪ್ಪಣೆ ಕೊಡಿಸಿದರು ಇವರ ಕೋರಿಕೆಯು ನೆರವೇರುವುದರಲ್ಲಿ ಯಾವ ಸಂದೇಹವೂ ಇರಲಾರದು ಗಂಧ, ಪುಷ್ಪ ತಾಂಬೂಲಗಳನ್ನು ಹಂಚಿದ ನಂತರ ಸಭೆಯು ಬರಖಾಸ್ತಾಯಿತು ಇವರಿಗೆ ಈಗಲೇ ಉಂಟಾಗಿರುವ ಮತಾಭಿಮಾನವೂ, ಪರೋಪಕಾರ ಗುಣವೂ, ಸುಶೀಲಗಳೂ ದಿನೇ ದಿನೇ ಹೆಚ್ಚಬೇಕೆಂತಲೂ, ಇವರಿಗೆ ಆಯುರಾರೋಗ್ಯಾದಿಗಳನ್ನು ದಯಪಾಲಿಸಬೇಕೆಂತಲೂ ಶ್ರೀ ಜಿನದೇವರನ್ನು ಚಿರಕಾಲ ಪ್ರಾರ್ಥಿಸುತ್ತೇನೆ.

ಟಿ. ಬಿ

ರೈತರಿಗೆ ಉಪಯುಕ್ತವಾದ ವಿಷಯಗಳು.

ದನಗಳ ಪ್ರದರ್ಶನ

ಸಾ ೧೯೦೭ನೆ ಇಸವಿ ಫೆಬ್ರವರಿ ಮಾಹೆ ೧೯ನೆ ತಾರೀಖಿನಲ್ಲಿ ಪ್ರಾರಂಭವಾಗಿ ಹತ್ತು ದಿನಗಳ ವರೆಗೂ ಹೊನ್ನಾಳಿ ತಾಲ್ಲೂಕ್ ರಾಂಪುರದಲ್ಲಿ ನಡೆಯುವ ಜಾತ್ರೆ ಕಾಲದಲ್ಲಿ ದನಗಳ ಪ್ರದರ್ಶನವು ನಡೆಯುತ್ತದೆ ಅತ್ಯುತ್ತಮವಾದ ಗಂಡು ಎತ್ತು ಜೋತೆಗಳು, ಉಳುವ ಎತ್ತು ಜೋತೆಗಳು ಬೀಜದ ಹೋರಿಗಳು, ಹಸುಗಳು, ಎಮ್ಮೆಗಳು, ಇವುಗಳಿಗೆ ೩೦ ರೂಪಾಯಿಂದ ೭ ರೂಪಾಯಿವರಿವಿಗೆ ಬಹುಮಾನಗಳು ಕೊಡಲ್ಪಡುವವು ಮೇಲ್ಕಂಡ ದನ್ಯದ ಇನಾಂ ಅಲ್ಲದೆ ಒಂದು ಯೋಗ್ಯತಾ ಪತ್ರವೂ ದೊರೆಯುತ್ತದೆ

ಜಾನುವಾರುಗಳನ್ನು ಪ್ರದರ್ಶನಮಾಡಲು ಇಷ್ಟವುಳ್ಳವರು ಹೊನ್ನಾಳಿ ತಾಲ್ಲೂಕು ಅಮಲ್‌ದಾರ್ರವರಿಗೇ ಆಗಲಿ, ಪ್ರದರ್ಶನ ಮೊದಲಾಗುವುದಕ್ಕೆ ಒಂದು ದಿವಸ ಮುಂಚಿತವಾಗಿ ಅವಕಾಶವಿರುವಂತೆ ಬರೆದು ತಮ್ಮ ಹೆಸರು ಮುಂತಾದುವುಗಳನ್ನು ರಿಜಿಸ್ಟರ್ ದಾಖಲ್‌ಮಾಡಿಸಿಕೊಳ್ಳಬೇಕು ಈ ಜಾತ್ರೆಗೆ ಬಹಳ ಜನಗಳು ಮತ್ತು ಜಾನುವಾರುಗಳು ಸೇರುವುದರಿಂದ ವ್ಯಾಪಾರ ಬಹಳ ಚನ್ನಾಗಿ ನಡೆಯುವುದು

ಹೊಸತರದ ನೇಗಿಲು.

ಶ್ರೀ ಅಮೇರಿಕನ್ ಮಿಷನ್ ಸ್ಕೂಲುಗಳ ಇನ್ಸ್‌ಪೆಕ್ಟರವರು ತುರುವೇಕೆರೆ ಪ್ರಾಂತ್ಯಕ್ಕೆ ಕಳೆದ ಜೂನ್ ತಿಂಗಳಲ್ಲಿ ಹೋಗಿದ್ದ ಕಾಲದಲ್ಲಿ ಅಲ್ಲಿನ ರೆವರೆಂಡ್ ಸಂಟಿಸ್ (?) ಎಂಬುವರ ನಾರಣಪ್ಪನವರು ತಾವು ಉಪಯೋಗಿಸುತ್ತಿದ್ದ ''ಕ್ಲೈವಲಾಕ್ಸ್ ಪ್ಲೋ'' ಎಂಬ ಹೊಸ ತರಹಾ ನೇಗಿಲನ್ನು ಅವರಿಗೆ ತೋರಿಸಿದರು ಸಾಧಾರಣವಾದ ನೇಗಿಲಿನಿಂದ ಆರು ದಿವಸಗಳಲ್ಲಿ ಮಾಡಬೇಕಾದ ಕೆಲಸವನ್ನು ಆ ನೇಗಿಲಿನಿಂದ ಎರಡು ದಿವಸಗಳಲ್ಲಿ ಮಾಡಬಹುದು ಸಾದಾ ನೇಗಿಲಿನಿಂದ ಉತ್ತರೆ ಸಾಲುದಿಬ್ಬಗಳು ವಿಶೇಷವಾಗಿ ಬೀಳುತ್ತವೆ ಮತ್ತು ಕಳೆಯು ಚನ್ನಾಗಿ ಹೋಗುವುದಿಲ್ಲ ಆ ಹೊಸ ನೇಗಿಲಿನಿಂದ ಉಳುವದರಿಂದ ಈ ದೋಷಗಳು ಇರುವುದಿಲ್ಲವೆಂದು ಮ॥ ನಾರಣಪ್ಪನವರು ತೋರಿಸಿದರು ಇದಲ್ಲದೆ ಉಳುವ ಖರ್ಚು ಸಹ ಕಡಿಮೆಯಾಗುತ್ತದೆ ಹೇಗೆಂದರೆ, ಸಾದಾ ನೇಗಿಲಿಗೆ ದಿನಕ್ಕೆ ೪ ಆಣೆಯಂತೆ ಆರು ದಿವಸ ಕೆಲಸಮಾಡುವುದಕ್ಕೆ ೧॥ ರೂಪಾಯಿ ಖರ್ಚಾಗುತ್ತದೆ ಕ್ಲೈವಾಕ್ಸ್ ನೇಗಿಲಿಗೆ ದಿನಕ್ಕೆ ೬ ಆಣೆಯಂತೆ ಎರಡು ದಿವಸ ಕೆಲಸಮಾಡುವುದಕ್ಕೆ ೧೨ ಆಣೆ ತಗಲುತ್ತದೆ ಆದ್ದರಿಂದ ಈ ಹೊಸ ನೇಗಿಲನ್ನು ಉಪಯೋಗಿಸುವದರಿಂದ ತುಂಬಾ ಲಾಭ ಉಂಟೆಂದು ಕಂಡುಬರುತ್ತದೆ. ಆದರೆ ಈ ನೇಗಿಲು ಅತಿ ಗಟ್ಟಿಯಲ್ಲದ ಭೂಮಿಗೆ ಅನುಕೂಲವಾದದ್ದೆಂದು ತಿಳಿಯಬಂದಿದೆ. ಈ ನೇಗಿಲಿನ ಕ್ರಯ ಮೊದಲು ೬ ರೂಪಾಯಿ ಇದ್ದದ್ದು ಈಗ ೭॥ ರೂಪಾಯಿಗೆ ಮದ್ರಾಸಿನಲ್ಲಿರುವ ಮ್ಯಾಸಿ ಅಂಡ್ ಕೋ ಯವರಲ್ಲಿ ದೊರಕುತ್ತದೆ

ಚರ್ಮಕ್ಕೆ ಹದಕೊಡುವುದು.

ಮದರಾಸು ಪಟ್ಟಣದಲ್ಲಿ ಈಗ ಸ್ವಲ್ಪಕಾಲದಿಂದ ''ಕ್ರೋಂ'' ಎಂಬ ಧಾತುವಿನಿಂದ ಹದಮಾಡಲ್ಪಟ್ಟ ಚರ್ಮದಿಂದ ಬೂಟುಸು ಮುಂತಾದ ಅನೇಕ ಪದಾರ್ಥಗಳನ್ನು ತಯಾರುಮಾಡುವ ಕಾರ್ಖಾನೆಯು ಏರ್ಪಟ್ಟಿರುವುದು ಸರಿಯಷ್ಟೆ. ಈಚೆಗೆ ಸರ್ಕಾರದವರ ಸಹಾಯದಿಂದ ಈ ಚರ್ಮದ ಎರಡು ಕಾರ್ಖಾನೆಗಳು (ಒಂದು ಸೇಲಂನಲ್ಲಿಯೂ ಮತ್ತೊಂದು ಕೊಯಮುತ್ತೂರಿನಲ್ಲಿಯೂ) ಖಾಸಗಿಯಾಗಿ ಸ್ಥಾಪಿಸಲ್ಪಟ್ಟವೆ ಈ ಪ್ರಾಂತ್ಯದಲ್ಲಿ ಬಾವಿಯ ಸಹಾಯದಿಂದಲೇ ವಿಶೇಷವಾಗಿ ವ್ಯವಸಾಯ ಸಾಗುವಳಿಯಾಗುತ್ತದರಿಂದ ಕಪಿಲೆ ಮುಂತಾದವುಗಳಿಗೆ ಅವಶ್ಯವಾಗಿ ಚರ್ಮದ ಕಪಿಲೆಬಾನೆ ಮುಂತಾದ್ದಕ್ಕೋಸ್ಕರ ವರ್ಷವರ್ಷ ಭಾರೀ ಲಾಗವಡು ತಗಲುತ್ತಿರುವುದು ಮುಂದೆ ಈ ಹೊಸ ತರಹದ ಚರ್ಮದ ಸಾಮಾನುಗಳಿಂದ ಸುಮಾರು ಅರ್ಧಕ್ಕರ್ಧ ಖರ್ಚು ಕಡಿಮೆಯಾಗುವುದೆಂದು ನಿರೀಕ್ಷಿಸಿದೆ ನಮ್ಮ ಸಂಸ್ಥಾನದಲ್ಲಿಯೂ ಅನುಕೂಲಸ್ಥರು ಇಂಥಾ ಕಾರ್ಖಾನೆಗಳನ್ನು ಸ್ಥಾಪಿಸುವುದರಿಂದ ಬಹಳ ಪ್ರಯೋಜನವುಂಟು ದಕ್ಷಿಣ ಇಂಡಿಯಾದಲ್ಲಿ ಚರ್ಮದ ವ್ಯಾಪಾರವು ವಿಶೇಷವಾಗಿ ನಡೆಯುವುದರಿಂದ ''ಕ್ರೋಂ'' ಚರ್ಮಕ್ಕೆ ಮುಂದೆ ಭಾರೀ ಗಿರಾಕಿಗಳು ದೊರೆಯುವುದರಲ್ಲಿ ಸಂದೇಹವಿಲ್ಲ ಇದಲ್ಲದೆ ಕ್ರೋಂ ಚರ್ಮವು ಇತರ ರಘಂ ಚರ್ಮಗಳಿಗಿಂತ ಶ್ರೇಷ್ಠವಾದುದಲ್ಲದೆ ಬಹಳಕಾಲ ಬಾಳಿಕೆಯೂ ಬರುವಂಥಾದ್ದಾಗಿದೆ.

ರಾಜಧಾನಿಯ ಮ್ಯುನಿಸಿಪಲ್ ಮೀಟಿಂಗು.

ಕಳೆದ ಆಗಸ್ಟು ೩೧ ನೆ ತಾ ಶನಿವಾರ ಮೈಸೂರು ಪಟ್ಟಣದ ಮ್ಯುನಿಸಿಪಲ್ ಕೌನ್ಸಲರುಗಳು ಟೌನ್‌ಹಾಲಿನಲ್ಲಿ ಸಭೆ ಸೇರಿ ತಿಂಗಳ ಕಟ್ಟಳೆಯ ಮ್ಯುನಿಸಿಪಲ್ ಮೀಟಿಂಗನ್ನು ನಡಿಸಿದರು ಮೊದಲು ಓದಿದ ಜುಲೈ ತಿಂಗಳ ಜಮಾಖರ್ಚಿನಲ್ಲಿ ಮ್ಯುನಿಸಿಪಾಲಿಟಿಗೆ ಎಲ್ಲಾ ಬಾಬುಗಳಿಂದಲೂ ೧೫,೫೩೭ ಚಿಲ್ಲರೆ ರೂಪಾಯಿ ಉತ್ಪತ್ತಿಯೂ, ೧೯,೭೦೬ ಚಿಲ್ಲರೆ ರೂಪಾಯಿ ಖರ್ಚು ಆದಂತೆ ತಿಳಿಯಿತು ಆ ತಿಂಗಳಲ್ಲಿ ಮೈಸೂರು ಪಟ್ಟಣದೊಳಗೆ ಜನನ ೧೦೫, ಮರಣ—ಪ್ಲೇಗ್ ೪೫, ಮಾಂಶೀಷ(?) ೪. ಜ್ವರ ೧೦, ಇತರ ಕಾರಣಗಳು ೫೯ ಒಟ್ಟು ೧೧೮ ಆದವು

ನಾಂಬಿಯೆಕಲ್ಲಾದಲ್ಲಿರುವ ಕಸಾಯಿಖಾನೆಯೊಳಗೆ ನೆಲಕ್ಕೆ ಕಡಪಾ ಕಲ್ಲುಗಳನ್ನು ಹಾಸಿ, ರಕ್ತವು ಭೂಮಿಯೊಳಕ್ಕೆ ಇಳಿಯದಂತೆಯೂ, ಆರೋಗ್ಯಕರವಾಗಿರುವಂತೆಯೂ ಕಾಮಗಾರಿ ಮಾಡಿಸುವುದಕ್ಕೆ ೬೭೬ ರೂಪಾಯನ್ನು ಖರ್ಚು ಮಾಡಬೇಕೆಂದು ತೀರ್ಮಾನವಾಯಿತು

ಟೌನ್‌ಹಾಲಿನಲ್ಲಿ ಅರಮನೆ ಇಂಜನಿಯರು ಕಟ್ಟಿಸಿದ ಚಿತ್ರಮಂಟಪದ ಸಾಮಾನುಗಳನ್ನು ಮ್ಯುನಿಸಿಪಾಲಿಟಿಯವರು ತೆಗೆದಿಟ್ಟರೆ ಬೇಕೆಂದು ಇಂಜನಿಯರು ಬರೆದಿದ್ದರು ಮ್ಯುನಿಸಿಪಾಲಿಟಿಯವರ ಆದರ ಜವಾಬ್ದಾರಿಯನ್ನು ವಹಿಸಿಕೊಳ್ಳಲಾಗುವುದಿಲ್ಲವೆಂದು ಕೌನ್ಸಲರುಗಳು ತೀರ್ಮಾನ ಮಾಡಿದರು.

ಮ್ಯುನಿಸಿಪಾಲಿಟಿಯವರು ಪಟ್ಟಣದಲ್ಲಿ ಆರೋಗ್ಯ ದೃಷ್ಟಿಗಾಗಿ ಮಾಡಿಸತಕ್ಕ ಕಾಮಗಾರಿಗಳ ಅಂದಾಜು ಪಟ್ಟಿಗಳನ್ನು ಸ್ಯಾನಿಟರಿ ಇಂಜನಿಯರವರು ನೋಡಿ ತನಿಖೆ ಮಾಡುವಂತೆ ಛೀಫ್ ಇಂಜನಿಯರವರು ಒಪ್ಪಿಕೊಂಡು ಬರೆದಿದ್ದ ಪತ್ರವನ್ನು ಕೌನ್ಸಲರುಗಳು ಮೀಟಿಂಗಿನಲ್ಲಿ ಓದಿಸಿ ರಿಕಾರ್ಡು ಮಾಡಿಕೊಂಡರು.

ಪೂರ್ವದಲ್ಲಿ ಹೊರಗಿನಿಂದ ಪಟ್ಟಣಕ್ಕೆ ಬರುವಂಥಾ ಜನರ ಮನೆ ತಾವುಗಳಿಗೆ ವರ್ತಕರು ಸ್ವಂತ ತೀರಿಸುವಾಗ್ಗೆ ಅವರಿಗೆ ಆದ ಸ್ಥಳ ಖರೀದಿ ಪಟ್ಟಿಗಳನ್ನು ಮಾತ್ರ ನೋಡಿ, ಅದರಂತೆ ಮ್ಯುನಿಸಿಪಾಲಿಟಿಯವರು ಸ್ವಂತ ವಸೂಲ್ಮಾಡುತ್ತಿದ್ದರು ಈಗಲಾದರೋ ಆ ಪಟ್ಟಿಗಳನ್ನು ನೋಡುವುದಲ್ಲದೆ ಜವಳಿ ಗಟ್ಟುಗಳನ್ನು ಬಿಚ್ಚಿಸಿ ಪ್ರತಿ ಸರಕನ್ನು ಪರೀಕ್ಷೆಮಾಡಿ ಮುಂದೆ ಸುಂಕ ವಸೂಲ್ಮಾಡುತ್ತಾರೆ ಇದರಿಂದ ಸರಕುಗಳು ಹಲಿಗೆಯಾಗುತ್ತವೆಂತಲೂ, ಮುಂದೆ ಇಟ್ಟುಕೊಳ್ಳುವಲ್ಲಿ ಬೆಲೆಯಲ್ಲಿ ಪಟ್ಟಿಗಳು ಕೆಟ್ಟುಹೋಗುತ್ತವೆಂತಲೂ ಪೂರ್ವದಲ್ಲಿದ್ದ ಪದ್ಧತಿಯ ಪ್ರಕಾರ ಸ್ಥಳದ ಖರೀದಿ ಪಟ್ಟಿಗಳನ್ನು ಮಾತ್ರ ನೋಡಿ ಮ್ಯುನಿಸಿಪಲ್ ಸುಂಕವನ್ನು ವಸೂಲ್ಮಾಡಬೇಕೆಂತಲೂ ಅನೇಕ ಮಂದಿ ವರ್ತಕರು ಸೇರಿ ಮ್ಯುನಿಸಿಪಾಲಿಟಿಗೆ ಅರ್ಜಿ ಬರೆದುಕೊಂಡಿದ್ದರು ಕೌನ್ಸಲರುಗಳು ಈ ವಿಷಯವನ್ನು ಚರ್ಚೆಮಾಡಿ ಪೂರ್ವದ ಪದ್ಧತಿಯನ್ನು ಅನುಸರಿಸಲು ಆಗುವುದಿಲ್ಲವೆಂತಲೂ, ಎರಡು ತರಹಾ ಮುದ್ರೆಗಳನ್ನು ಮಾಡಿಸಿಟ್ಟುಕೊಂಡು, ಬೆಲೆಯುಳ್ಳ ಸರಕುಗಳು ಕೆಡದಂತೆ ನಾಜೂಕಾಗಿ ಮುದ್ರೆಹಾಕಿ ಕೊಡಬೇಕೆಂತಲೂ ತೀರ್ಮಾನಮಾಡಿರುತ್ತಾರೆ

ರಾಜಧಾನಿಯ ಪೂರ್ವಭಾಗದಲ್ಲಿರುವ ಕಾಲಂಜಿಕಟ್ಟೆ ಮಂಡಿ ಮೋಟೆ ಎರಡು ಕಡೆಗಳಿಗೂ ಕಲ್ಲುಗಳನ್ನು ನಿಲ್ಲಿಸಿ ಒಂದು ಮನೆ ಅಂಗುಲ ಪ್ರಮಾಣದ ಸಲ್ಲಿಗಳನ್ನು ಉದ್ದಕ್ಕೂ ಎರಡು ಸಾಲು ಹಾಕಿ ಕಟಕಟೆಗಳನ್ನು ಕಟ್ಟಿಸುವುದು ಅವಶ್ಯವೆಂತಲೂ, ಅದಕ್ಕೆ ಅಂದಾಜು ಪಟ್ಟಿ ತಯಾರಾಗುವ ಪ್ರಕಾರ ಹಣ ಖರ್ಚುಮಾಡಬಹುದೆಂತಲೂ ಕೌನ್ಸಲರುಗಳು ಒಪ್ಪಿ ತೀರ್ಮಾನಮಾಡಿದರು

ಜಯರಾಂ ಪಂಡಿತರೆಂಬುವರು ಅನೇಕರಿಗೆ ಧರ್ಮಾರ್ಥವಾಗಿ ಔಷಧಗಳನ್ನು ಕೊಡುವುದಾಗಿಯೂ ಮ್ಯುನಿಸಿಪಾಲಿಟಿಯಿಂದ ಅದಕ್ಕಾಗಿ ತಮಗೆ ಗ್ರಾಂಟು ಕೊಡಿಸಬೇಕೆಂತಲೂ ಅರ್ಜಿ ಬರೆದುಕೊಂಡಿದ್ದರು ಕೌನ್ಸಲರುಗಳು ಹಾಗೆ ಗ್ರಾಂಟು ಕೊಡಲು ಸಾಧ್ಯವಿಲ್ಲವೆಂದು ತೀರ್ಮಾನ ಮಾಡಿದರು

ದೇವೀರಂಬಾ ಮೊದಲಾದ ಅಗ್ರಹಾರಗಳಲ್ಲಿ ವಾಸಮಾಡುವ ಕೆಲವು ಪ್ರಜೆಗಳು ನಲ್ಲಿಯ ನೀರನ್ನು ನಲ್ಲಿಯಿಂದ ತೆಗೆದುಕೊಳ್ಳುವುದಿಲ್ಲವೆಂತಲೂ, ಅದಕ್ಕೆ ಪ್ರತಿಯಾಗಿ ಮ್ಯುನಿಸಿಪಾಲಿಟಿಯವರು ನಲ್ಲಿಯ ನೀರನ್ನು ಒಂದು ಬಾವಿಯೊಳಕ್ಕೆ ತಂದುಬಿಡಬೇಕೆಂತಲೂ, ಅಂಥಾ ಭೂಸ್ಪರ್ಶವಾದ ನೀರನ್ನು ಮಾತ್ರ ತಾವು ಉಪಯೋಗಿಸುವೆವೆಂತಲೂ, ಇಲ್ಲವಾದರೆ ತಮಗೆ ನೀರಿಗೆ ತುಂಬಾ ಅನಾನುಕೂಲವಾಗುವುದೆಂತಲೂ ಅರ್ಜಿ ಬರೆದುಕೊಂಡಿದ್ದರು. ಹೆಲ್ತ್ ಆಫಿಸರೂ, ಸಿವಿಲ್ ಸರ್ಜನರೂ ನೀರನ್ನು ಆ ರೀತಿ ಬಿಡುವುದೂ ಆ ನೀರನ್ನು ಜನರು ಉಪಯೋಗಿಸುವುದೂ ಅನಾರೋಗ್ಯಕ್ಕೆ ಕಾರಣವಾದೀತೆಂದು ಅಭಿಪ್ರಾಯಪಟ್ಟದ್ದರಿಂದ ಇತರ ಕೌನ್ಸಲರುಗಳೂ ಅದರಂತೆ ಅಭಿಪ್ರಾಯಪಟ್ಟು, ಆ ರೀತಿ ನೀರನ್ನು ಬಾವಿಗಾಗಲಿ ಕೊಳಕ್ಕಾಗಲಿ ತೊಟ್ಟಿಗಾಗಲಿ ಬಿಡುವುದಕ್ಕಾಗುವುದಿಲ್ಲವೆಂದು ತೀರ್ಮಾನ ಮಾಡಿದರು ಕೌನ್ಸಲರ್ ಮ॥ ಎಂ. ಸಿ ರಂಗಯ್ಯಂಗಾರರೂ) ವೈಸ್ ಪ್ರೆಸಿಡೆಂಟ್ ಮ॥ ಬಿ. ಹನುಮಂತರಾಯರೂ ಈ ತೀರ್ಮಾನವನ್ನು ಒಪ್ಪಲಿಲ್ಲ

ಚಾಮರಾಜ ಮೊಹಲ್ಲಾದ ಕೆಲವು ನಿವಾಸಿಗಳು ತಾವೇ ಸ್ವಂತ ಖರ್ಚಿನಿಂದ ದವಾಸರನ್ನು ನೇಮಿಸಿ ತಮ್ಮ ಸುತ್ತಲು ಮನೆಗಳನ್ನು ಶುಚಿಮಾಡಿಸಿಕೊಳ್ಳುತ್ತೇವೆಂತಲೂ, ಮ್ಯುನಿಸಿಪಲ್ ಸಿಬ್ಬಂದಿಯನ್ನು ತಮ್ಮ ಮನೆಗೆ ಕಳುಹಿಸಬೇಕಾದದ್ದಿಲ್ಲವೆಂತಲೂ, ತಾವು ಮ್ಯುನಿಸಿಪಾಲಿಟಿಗೆ ಕೊಡತಕ್ಕ ಗುಡಿಸುವ ತೆರಿಗೆಯನ್ನು ಕೊಡದಂತೆ ವಿನಾಯಿತಿ ಮಾಡಿಸಿಕೊಡಬೇಕೆಂತಲೂ ಅರ್ಜಿ ಬರೆದುಕೊಂಡಿದ್ದರು ಕೌನ್ಸಲರುಗಳು ಅದನ್ನು ಅಂಗೀಕರಿಸಿಕೊಂಡು, ಅಂಥವರಿಗೆ ವಿನಾಯಿತಿ ಮಾಡಬಹುದೆಂದು ತೀರ್ಮಾನಿಸಿದರು

ಮ್ಯುನಿಸಿಪಾಲಿಟಿ ನೌಕರಿಯಲ್ಲಿರುವ ಮರಹಮ್ಮದ್ (?) ಸಾಬಿಯವರು ಓವರ್‌ಸಿಯರ ಕೆಲಸವನ್ನೂ ಮಾಡುತ್ತಿರುವುದರಿಂದ, ಅದಕ್ಕಾಗಿ ತಮಗೆ ವಾಹನದ ಖರ್ಚಿಗೆ ಅಲೋವೆನ್ಸನ್ನು ಕೊಡಿಸಬೇಕೆಂತಲೂ ಕೇಳಿದ್ದರು ಕೌನ್ಸಲರುಗಳು ಅವರಿಗೆ ಸಲ್ಲುತ್ತಿರುವ ರೂಪಾಯಿ ಸಂಬಳದ ಜೊತೆಗೆ ವಾಹನದ ಖರ್ಚು ೭॥ ರೂಪಾಯಿ ಕೊಡಬಹುದೆಂದು ಒಪ್ಪಿಕೊಂಡರು

ಟ್ರಸ್ಟ್ ಬೋರ್ಡಿನವರು ಪಟ್ಟಣದ ಬಿಳೀಕಲ್ಲಿನಲ್ಲೆಲ್ಲಾ ಸಾಗಿಸುವುದಕ್ಕೆ ಹೊಸದಾಗಿ ನಲ್ಲಿಗಳನ್ನು ಹಾಕಿ ಕಾಮಗಾರಿ ಮಾಡಿಸಿರುತ್ತಾರೆ ಇದನ್ನು ಮ್ಯುನಿಸಿಪಾಲಿಟಿಯವರು ವಹಿಸಿಕೊಂಡು, ಒಳ್ಳೇ ಸ್ಥಿತಿಯಲ್ಲಿಟ್ಟುಕೊಂಡಿರುವುದಕ್ಕೆ ಏರ್ಪಾಡು ಮಾಡಬೇಕಾಗಿದೆ ಎಂದು ಗವರ್ನಮೆಂಟಿನವರು ಹುಕುಂ ಕೊಟ್ಟರು ಕೌನ್ಸಲರುಗಳು ಈ ವಿಷಯವನ್ನು ಚರ್ಚೆಮಾಡಿ, ಮ್ಯುನಿಸಿಪಲ್ ಪ್ರೆಸಿಡೆಂಟರೂ ಹೆಲ್ತ್ ಆಫೀಸರವರೂ ಆ ನಲ್ಲಿಗಳನ್ನೆಲ್ಲಾ ಪರಾಂಬರಿಸಿ, ಅದು ಮ್ಯುನಿಸಿಪಾಲಿಟಿಯವರು ವಹಿಸಿಕೊಳ್ಳಬಹುದಾದ ಸ್ಥಿತಿಯಲ್ಲಿರುವುದೇ ಎಂದು ತಿಳಿಸಬೇಕೆಂದು ತೀರ್ಮಾನ ಮಾಡಿದರು.

ಗವರ್ನಮೆಂಟಿನವರು ಮೈಸೂರು ಪಟ್ಟಣಕ್ಕೆ ೨೫೦ ರೂಪಾಯಿಂದ ೩೦೦ ರೂಪಾಯಿ ವರೆಗೆ ಏರಿ ಆಗುವ ಸಂಬಳವನ್ನುಳ್ಳ ಒಬ್ಬ ಹೆಲ್ತ್ ಆಫೀಸರನ್ನು ನೇಮಕಮಾಡಿ ಇವರ ಸಂಬಳವನ್ನು ಮ್ಯುನಿಸಿಪಲ್ ಫಂಡಿನಿಂದ ಕೊಡುವ ಭಾಗದಲ್ಲಿ ಕೌನ್ಸಲರುಗಳ ಅಭಿಪ್ರಾಯವನ್ನು ತಿಳಿಸಬೇಕೆಂದು ಕೇಳಿದ್ದರು ಚಿ. ಡಿ ನಮ್ಮ ಈ ವಿಷಯವನ್ನು ಸ್ವಲ್ಪಹೊತ್ತು ಆಲೋಚನೆಮಾಡಿ, ಮ್ಯುನಿಸಿಪಾಲಿಟಿಯಿಂದ ಹೆಲ್ತ್ ಆಫೀಸರ ಅರ್ಧ ಸಂಬಳವನ್ನು ಕೊಡುವದಕ್ಕೆ ಒಪ್ಪಿ ಸಮ್ಮತಿಕೊಟ್ಟರು

ಮ್ಯುನಿಸಿಪಾಲಿಟಿಯ ಎಲ್ಲಾ ಕೆಲಸ ಕಾರ್ಯಗಳನ್ನು ನಿರ್ವಹಿಸುವುದಕ್ಕೆ ಒಂದು ಕಮಿಟಿಯು ಏರ್ಪಾಡಾಯಿತು ಮೆಂಬರುಗಳು—ವೈಸ್ ಪ್ರೆಸಿಡೆಂಟರು, ಎಗ್ಸಿಕ್ಯೂಟಿವ್ ಇಂಜನಿಯರವರು, ಮ॥ ಗಳಾದ ಎ. ಬಿ. ಪಂಡಿತರು, ಎಂ ಸಿ ರಂಗಯ್ಯಂಗಾರರು, ಎಂ ವರಸೂರ್ಯ (?) ಸಿ. ಪಿ.ವಯ್ಯರು, ರಾಮಪ್ಪನವರು, ತಿರುಮಲಗಪಮೊದಲಿಯಾರ್ರು, ಎಂ ವೆಂಕಟಕೃಷ್ಣಯ್ಯನವರು, ಅನಂತರಾಜೈಯ್ಯನವರು. ಮ್ಯುನಿಸಿಪಾಲಿಟಿಯ ಜಮಾಖರ್ಚನ್ನು ತನಿಖೆ ಮಾಡುವದಕ್ಕೆ ಮ॥ ಗಳಾದ ರಾಮಪ್ಪನವರು, ಶ್ರೀಕಂಠಯ್ಯನವರು, ಅಂಬಳೆ ಮುನಿಸ್ವಾಮಿ ಅಯ್ಯರು ಸಹ ಕಮಿಟಿ ಮೆಂಬರಾಗಿರಬೇಕೆಂದು ಗೊತ್ತುಮಾಡಿದರು

ಪಟ್ಟಣದಲ್ಲಿ ಇನ್ನು ಮುಂದಕ್ಕೆ ಪ್ರಜೆಗಳಿಗೆ ಮನೆ ಕಟ್ಟಿಕೊಳ್ಳುವದಕ್ಕಾಗಲಿ ರಿಪೇರಿಮಾಡಿಕೊಳ್ಳುವುದಕ್ಕಾಗಲಿ ವೈಸ್ ಪ್ರೆಸಿಡೆಂಟರು ಹೆಲ್ತ್ ಆಫೀಸರವರ ಅಭಿಪ್ರಾಯವನ್ನು ತೆಗೆದುಕೊಳ್ಳದೆ ಲೈಸೆನ್ಸು ಕೊಡಕೂಡದೆಂದು ಕೌನ್ಸಲರುಗಳು ತೀರ್ಮಾನ ಮಾಡಿದರು

ಪಾರ್ಶ್ವನಾಥಪರ್ವತವು

ಸರ್ ಎ ಫ್ರೇಸರ್‌ಯವರೂ ಜೈನಪ್ರತಿನಿಧಿಗಳೂ

ಬಂಗಾಳಾ ಲೆಪ್ಟಿನೆಂಟ್ ಗವರ್ನರ್ ಸರ್ ಆಂಡ್ರು ಫ್ರೇಸರ್ ಯವರು ಸರ್ಕೀಟು ಮಾಡಿಕೊಂಡು, ಕಳೆದ ಆಗಸ್ಟು ೨೩ ನೆ ತಾರೀಖು ಸಾಯಂಕಾಲ ೪ ಗಂಟೆಗೆ ಪಾರ್ಶ್ವನಾಥಪರ್ವತದ ತಪ್ಪಲಿಗೆ ಮಧುವನಕ್ಕೆ ದಯಮಾಡಿದರು ಹಿಂದುಸ್ತಾನದ ಎಲ್ಲಾ ಭಾಗಗಳಿಂದಲೂ ದಿಗಂಬರ ಮತ್ತು ಶ್ವೇತಾಂಬರ ಜೈನ ಯಾತ್ರಾರ್ಥಿಗಳು ಸುಮಾರು ೨೦,೦೦೦ ಜನರು ಕಾದಿದ್ದು, ಆ ದಿನ ಲೆಫ್ಟಿನೆಂಟ್ ಗವರ್ನರವರನ್ನು ಮರ್ಯಾದೆಯೊಡನೆ ಎದುರುಗೊಂಡರು ತರುವಾಯ ಲೆಫ್ಟಿನೆಂಟ್ ಗವರ್ನರವರು ಜೈನಮಂಡಲಿಯ ೫ ಮೆಂಬರರೊಡನೆ ಒಂದೆರಡು ಗಂಟೆಗಳ ತನಕ ಸಂಭಾಷಣೆ ಮಾಡುತ್ತಿದ್ದು, ಅವರಲ್ಲಿ ಮುಖ್ಯ ಮುಖ್ಯರಾದವರು ಮಾರಾದಿನ ಬೆಟ್ಟದ ಮೇಲಕ್ಕೆ ಬಂದು ತಮ್ಮ ಅಭಿಪ್ರಾಯಗಳನ್ನು ತಿಳಿಸಿ ಚರ್ಚೆಮಾಡಬಹುದೆಂದು ಅಪ್ಪಣೆ ಕೊಟ್ಟು, ಆಶ್ಚರ್ಯಕರವಾಗಿ ಬೆಟ್ಟದ ಮೇಲೆ ೪,೭೫೦ ಅಡಿ ಎತ್ತರದಲ್ಲಿ ಇರುವ ಬಂಗಲೆಗೆ ದಯಮಾಡಿದರು ಈ ಬೆಟ್ಟದಲ್ಲಿ ಇನ್ನೂ ಮೇಲ್ಭಾಗದಲ್ಲಿ ಪ್ರಖ್ಯಾತವಾದ ಪಾರ್ಶ್ವನಾಥ ದೇವಸ್ಥಾನವಿರುತ್ತದೆ ಸರ್ ಫ್ರೇಸರ್‌ಯವರು ಭೋಜನಾನಂತರ ಪರಿವಾರ ಸಹಿತ ಬೆಟ್ಟದ ಮೇಲಕ್ಕೆ ದಯಮಾಡಿ ಬೆಟ್ಟದ ಗಟ್ಟ ಕಾಡಿನ ರಸ್ತೆ ಮೊದಲಾದ ಭಾಗಗಳನ್ನೆಲ್ಲಾ ಅಜಮಾಯಿಷಿ ಮಾಡಿದರು. ಮಾರಾದಿನ ಪಂಜಾಬ್, ಸಂಯುಕ್ತ ಪ್ರಾಂತ್ಯಗಳು, ಮಧ್ಯ ಇಂಡಿಯಾ, ರಾಜಪುಟಾನಾ, ಮಧ್ಯಪ್ರಾಂತ್ಯಗಳು, ಬೊಂಬಾಯಿ, ಬನಾರಸ್, ಹೈದರಾಬಾದು, ಮೈಸೂರು, ಬಂಗಾಳಾ, ಈ ಮೊದಲಾದ ಪ್ರಾಂತ್ಯಗಳಿಂದ ಹೋಗಿದ್ದ ದಿಗಂಬರ ಕಡೆಯ ಜೈನಪ್ರಮುಖರು ಲೆಫ್ಟಿನೆಂಟ್ ಗವರ್ನರವರ ಕೂಡ ಬೆಟ್ಟದ ಮೇಲೆ ಸಂಚಾರ ಹೊರಟು, ಜೈನದೇವಸ್ಥಾನಗಳನ್ನೂ ಪಾರ್ಶ್ವನಾಥ ದೇವಸ್ಥಾನದ ಪೂರ್ವದಿಕ್ಕಿನಲ್ಲಿರುವ ವಿಸ್ತಾರವಾದ ಪ್ರದೇಶಗಳನ್ನೂ, ಜೈನ ಯಾತ್ರಾರ್ಥಿಗಳು ಸಂಚಾರಮಾಡುವ ರಸ್ತೆಗಳನ್ನೂ ಸುಮಾರು ೪ ಗಂಟೆ ಹೊತ್ತು ಸುತ್ತಿ ನೋಡಿಕೊಂಡು ಬಂದರು ಕೆಲವು ಏರ್ಪಾಡುಗಳ ವಿಷಯದಲ್ಲಿ ಏನೋ ಸಂಶಯಪಟ್ಟುಕೊಂಡು ಬೆಳಿಗ್ಗೆ ಹೋಗದೆ ನಿಂತುಬಿಟ್ಟಿದ್ದ ಶ್ವೇತಾಂಬರ ಕಡೆಯ ಜೈನ ಪ್ರತಿನಿಧಿಗಳನ್ನು ಲೆಫ್ಟಿನೆಂಟ್ ಗವರ್ನರವರು ಭೋಜನಾನಂತರ ತಮ್ಮ ಬಂಗಲೆಗೆ ಕರೆಸಿಕೊಂಡು, ಅವರ ಕೂಡ ಸ್ವಲ್ಪಹೊತ್ತು ಧಾರಾಳವಾಗಿ ಸಂಭಾಷಣೆ ಮಾಡುತ್ತಿದ್ದು ಅವರ ಅಭಿಪ್ರಾಯವನ್ನು ತಿಳಿದುಕೊಂಡು ಕಳುಹಿಸಿಬಿಟ್ಟರು ಮಾರಾದಿನ ಬೆಳಿಗ್ಗೆ ಲೆಫ್ಟಿನೆಂಟ್ ಗವರ್ನರವರು ಪರಿವಾರ ಸಹಿತ ೭ ಗಂಟೆಗೆ ಹೊರಟು, ಸೋಮವಾರ

ಟ್ಟದ ಸರಹದ್ದನ್ನು ಅಜಮಾಯಿಷಿ ಮಾಡಿಕೊಂಡು, ಮಧುವನಕ್ಕೆ ಹಿಂದಿರುಗಿ ಬಂದು, ಜೈನಪ್ರತಿನಿಧಿಗಳಿಗೆ ಭೇಟಿಕೊಟ್ಟರು. ಇದಲ್ಲದೆ ಅವರು ದೇವಸ್ಥಾನಗಳನ್ನೆಲ್ಲಾ ಪರಾಂಬರಿಸಿ, ಮದರಾಸ್ ಆಧಿಪತ್ಯಕ್ಕೆ ಸೇರಿದ ಕೊಲ್ಹಾಪುರದಿಂದ ಹೋದ ದಿಗಂಬರ ಶಾಖೆಯ ಜೈನ ಮಹಾಜನರ ದೊಡ್ಡ ಗುಂಪಿನ ಸಂಗಡ ಕಲೆತು ಸ್ವಲ್ಪಹೊತ್ತು ಮಾತನಾಡಿ ಅವರ ಅಭಿಪ್ರಾಯಗಳನ್ನು ತಿಳಿದುಕೊಂಡಿದ್ದರು. ಮತ್ತು ಆ ಎರಡು ಶಾಖೆಗಳ ಪ್ರಮುಖರನ್ನು ಬೇರೆ ಬೇರೆ ಕರೆಸಿಕೊಂಡು ಅವರ ಕೂಡ ಸಂಭಾಷಣೆ ಮಾಡಿದ್ದರು. ತರುವಾಯ ಜೈನಮಹಾಜನರ ಎರಡು ಶಾಖೆಗಳ ಪ್ರತಿನಿಧಿಗಳಿಂದಲೂ ಓದಿ ಒಪ್ಪಿಸಲ್ಪಟ್ಟ ದೀರ್ಘವಾದ ಅಡ್ರೆಸ್ಸುಗಳನ್ನು ಲಾಲಿಸಿ ಅಂಗೀಕರಿಸಿ ಪ್ರತ್ಯುತ್ತರಗಳನ್ನು ದಯಪಾಲಿಸಿದರು. ತರುವಾಯ ಲೆಫ್ಟಿನೆಂಟ್ ಗವರ್ನರವರು ಮೋಟಾರ್ ಗಾಡಿಯಲ್ಲಿ ಕುಳಿತು ರೈಲ್ವೆಸ್ಟೇಷನಿಗೆ ಪರಿವಾರ ಸಹಿತ ತೆರಳಿದರು.

ಲೆಫ್ಟಿನೆಂಟ್ ಗವರ್ನರವರ ಪ್ರತ್ಯುತ್ತರವು.

ಜೈನಮಹಾಸಭೆಯವರು ಒಪ್ಪಿಸಿದ ಅಡ್ರೆಸ್ಸುಗಳನ್ನು ಅಂಗೀಕರಿಸಿ, ಅದಕ್ಕಾಗಿಯೂ ಅವರು ತಮಗೆ ಪ್ರೀತಿಪೂರ್ವಕವಾಗಿ ಮಾಡಿದ ಮರ್ಯಾದೆಗಳಿಗಾಗಿಯೂ ಅವರನ್ನೆಲ್ಲಾ ವಂದಿಸಿ, ಲೆಫ್ಟಿನೆಂಟ್ ಗವರ್ನರ್ ಸರ್ ಆಂಡ್ರು ಫ್ರೇಸರ್‌ಯವರು ಅವರಿಗೆ ಪ್ರತ್ಯುತ್ತರವಾಗಿ ಅಪ್ಪಣೆಕೊಡಿಸಿದ ಮುಖ್ಯಾಭಿಪ್ರಾಯಗಳೇನೆಂದರೆ :—

ಡೆಪ್ಟಿ ಕಮಿಷನರು ಈ ಬೆಟ್ಟದ ಮೇಲೆ ಬಂಗಲೆ ಆರಾಮಾದಿಗಳನ್ನು ಕಟ್ಟಿಕೊಳ್ಳುವುದಕ್ಕೆ ಅವಕಾಶವನ್ನುಂಟುಮಾಡಿಕೊಡುವ ಭಾಗದಲ್ಲಿ ಮಾಡಿರತಕ್ಕ ಸಲಹೆಗಳನ್ನು ನೀವು ಕೇಳಿ ಕಳವಳಪಡುತ್ತಿರುವುದು ನ್ಯಾಯವಾಗಿರುತ್ತದೆ. ಈ ವಿಷಯದಲ್ಲಿ ನಾನು ಸಂತಾಪಪಡುವೆನು. ಈ ಸುಂದರವೂ ಏಕಾಂತವೂ ಆದ ಸ್ಥಳವು ನಿಮಗೆ ಬಹುಕಾಲದಿಂದಲೂ ನಿಮ್ಮ ಪೂಜಾದಿ ಸೇವಾರ್ಥಗಳಿಗೂ ಧ್ಯಾನಧಾರಣಾದಿಗಳಿಗೂ ಅನುಕೂಲವಾಗಿರೋಣದರಿಂದ ಈ ಭಾಗದಲ್ಲಿ ನಿಮಗೆ ಇಲ್ಲಿ ಯಾವ ವಿಧವಾದ ಅಡಚಣೆಗಳೂ ಇರಕೂಡದೆಂದು ನೀವು ಅಭಿಲಾಷೆ ಪಡುವವರಾಗಿದ್ದೀರಿ. ಇಂಥಾ ನಿಮ್ಮ ಅಭಿಲಾಷೆಯು ಸಹಜವಾದದ್ದೆಂದು ನಾನು ನಿಸ್ಸಂಶಯವಾಗಿ ಒಪ್ಪಿಕೊಳ್ಳುತ್ತೇನೆ. ಆದರೆ ಡೆಪ್ಟಿಕಮಿಷನರಿಗೆ ಜಮೀನ್ದಾರನ ಹಕ್ಕಿರುತ್ತದೆ. ಈ ಹಕ್ಕಿನ ಮೇಲೆ ಅವರು ಹೇಳ್ಪಟ್ಟ ಸಲಹೆಯನ್ನು ಮಾಡಿರುತ್ತಾರೆ. ಆ ಹಕ್ಕನ್ನು ನೀವು ಮರೆಯಬಾರದು. ಇದರ ವಿಷಯದಲ್ಲಿ ವಿವಾದವೇನಾದರೂ ಹುಟ್ಟಿದರೆ ಅದನ್ನು ವಿಚಾರಣೆಯಿಂದ ಇತ್ಯರ್ಥಪಡಿಸಬೇಕಾಗಿರುತ್ತದೆ. ಡೆಪ್ಟಿ ಕಮಿಷನರು ಜಮೀನಿನ ಹಕ್ಕುಬಾಧ್ಯತೆಗಳನ್ನೆಲ್ಲಾ ಸ್ಪಷ್ಟವಾಗಿಯೂ ಸಂಕ್ಷೇಪವಾಗಿಯೂ ನನಗೆ ತಿಳಿಸಿದ್ದಾರೆ. ನೀವುಗಳಾದರೋ ವ್ಯಾಪಾರಾದಿಗಳಲ್ಲಿ ಪ್ರವೇಶವಾದಿರತಕ್ಕವರಾದಕಾರಣ ಇತರರ ಹಕ್ಕುಬಾಧ್ಯತೆಗಳು ಎಷ್ಟು ಮಟ್ಟಿನವು ಎಂಬುವುದನ್ನು ತಿಳಿದವರಾಗಿಯೇ ಇರುತ್ತೀರಿ. ಆದ್ದರಿಂದ ಜಮೀನ್ದಾರನಿಗಿರತಕ್ಕ ಹಕ್ಕುಬಾಧ್ಯತೆಗಳನ್ನು ನೀವು ಬಹು ಜಾಗರೂಕತೆಯಿಂದ ಪರ್ಯಾಲೋಚಿಸಬೇಕಾದುತ್ತೀರೆಂದು ನಿರೀಕ್ಷಿಸುತ್ತೇನೆ. ಪಟ್ಟ ಆಮೀರರಿಗೆ ತಮ್ಮ ಹಕ್ಕನ್ನು ಸ್ಥಿರಪಡಿಸಿಕೊಳ್ಳಬೇಕೆಂಬುವುದೊಂದೇ ಉದ್ದೇಶವಲ್ಲ. ಆ ಮೂಲಕ ಜನಸಮುದಾಯಕ್ಕೆ ಅಂದರೆ, ಯೂರೋಪಿಯನರಿಗೂ ದೇಶೀಯ ಜನರಿಗೂ, ಏಕರೀತಿಯಾಗಿ ದೇಹಾರೋಗ್ಯವನ್ನು ಸಂಪಾದಿಸಿಕೊಳ್ಳುವುದಕ್ಕೆ ಅನುಕೂಲವಾಗುವಂತೆ ಮಾಡಬೇಕಾಗಬೇಕೆಂಬ ವಿಶೇಷವಾದ ಉದ್ದೇಶವುಳ್ಳವರಾಗಿರುತ್ತಾರೆ. ಭಕ್ತಿಪೂರ್ವಕವಾಗಿ ಬರತಕ್ಕ ನಿಮಗೂ ಕೂಡ ಈ ಬೆಟ್ಟದ ಮೇಲಿರುವ ಶೈತ್ಯವೂ ನಿರ್ಮಲವೂ ಆದ ವಾಯುಗುಣವನ್ನೂ ಈ ಪ್ರದೇಶಗಳ ಸೌಂದರ್ಯಾತಿಶಯಗಳನ್ನೂ ನೋಡಿದರೆ ಪರಮಾನಂದವನ್ನುಂಟುಮಾಡುವುದು. ನಿಮ್ಮಲ್ಲಿ ಅನೇಕರು ಬಂಗಾಳಾ ಅಧಿಪತ್ಯವನ್ನು ನೋಡಿಯೇ ಇರಬಹುದು. ಆ ಪ್ರಾಂತ್ಯದಲ್ಲಿರತಕ್ಕ ಜನರಿಗೆ ನಿರ್ಮಲವಾದ ಸ್ವಚ್ಛಪ್ರದೇಶವಾಗಿಯೂ ಆರೋಗ್ಯಪ್ರದವಾಗಿಯೂ ಇರುವಂಥಾ ಸ್ಥಳಗಳು ಬೇಕಾಗಿರುತ್ತವೆ. ಈ ಬೆಟ್ಟಪ್ರದೇಶವು ಅಲ್ಲಿನ ದೇಶೀಯ ಪ್ರಜೆಗಳಿಗೂ ಯೂರೋಪಿಯನರಿಗೂ ತುಂಬಾ ಅನುಕೂಲಸ್ಥಳವಾಗಿರುತ್ತದೆಂದು ನೀವುಗಳೆಲ್ಲಾ ಒಪ್ಪಿಕೊಳ್ಳದಿರಲಾರಿರಿ. ಆ ಜನರಿಗೆ ಹಿಮಾಚಲಪರ್ವತದ ತಪ್ಪಲುಗಳು ಇದರಷ್ಟು ಸುಲಭಸಾಧ್ಯವಾಗಿರುವುದಿಲ್ಲ. ಅನುಕೂಲವುಳ್ಳಂಥಾವರು ಬಂದು ಕೆಲವುಕಾಲ ಇದ್ದು ಆರೋಗ್ಯಹೊಂದಿ ಹೋಗುವುದಕ್ಕೆ ಈ ಪ್ರದೇಶವು ತುಂಬಾ ಸಮಾಗಮವಾಗಿರುತ್ತದೆ. ಡೆಪ್ಟಿ ಕಮಿಷನರು ಹೇಳಿರುವುದೆಲ್ಲಾ ಇಷ್ಟೇ. ಅದು ಸಕಾರಣವಾಗಿಯೂ ಯೋಗ್ಯವಾಗಿಯೂ ಇರುತ್ತೆಂದು ನನಗೆ ತೋರಿದೆ. ಆದರೂ ತಲೆತಲಾಂತ್ರಗಳಿಂದ ನಡೆದು ಬಂದಿರುವಂಥಾ ನಿಮ್ಮ ಪೂಜೆಪುನಸ್ಕಾರಗಳಿಗೂ ಜಪತಪಗಳಿಗೂ ಸಾಧ್ಯವಾಗುವ ಮಟ್ಟಿಗೂ ಯಾವ ವಿಧವಾದ ಅಡ್ಡಿ ಆತಂಕಗಳೂ ಉಂಟಾಗಬಾರದೆಂದೂ, ಇಲ್ಲಿರುವಾಗ್ಗೆ ನಿಮ್ಮ ಚಿತ್ತೈಕಾಗ್ರತೆಯನ್ನಾಗಲಿ ನಿಮ್ಮ ಅರ್ಚನಾದಿಗಳನ್ನಾಗಲಿ ಕೆಡಿಸಿ ಕೆಡಿಸುವಂಥಾ ಐಹಿಕ ವ್ಯಾಪಾರಗಳ್ಯಾವವೂ ನಡೆಯದಂತೆ ಕಾಪಾಡಬೇಕೆಂದೂ ನಾನು ತುಂಬಾ ಅನುತಾಪಪೂರ್ವಕವಾಗಿ ಒಪ್ಪಿಕೊಳ್ಳುತ್ತೇನೆ. ನಾನು ಮೊದಲು ಬಂದು ನೋಡಿದ್ದರಿಂದ ಬಹಳ ಒಳ್ಳೇದಾಯಿತು. ಬಂಗಲೆ ಆರಾಮಾದಿಗಳನ್ನು ಕಟ್ಟುವುದಕ್ಕೆ ಈ ಪ್ರಾಂತ್ಯವು ಬಹಳ ರಮಣೀಯವಾಗಿದ್ದಾಗ್ಯೂ ಶಾಂತನಾಥ ದೇವಸ್ಥಾನವಾಗಲಿ, ಇತರ ದೇವಸ್ಥಾನಗಳಾಗಲಿ, ಚರಣಗಳಾಗಲಿ ಇರುವಂಥಾ ಪ್ರದೇಶದ ಸಮೀಪದಲ್ಲಿ ಯಾವ ವಿಧವಾದ ಆವಾಸಸ್ಥಾನಗಳೂ ಕಟ್ಟಲ್ಪಡುವುದು ಸರ್ವಥಾ ಸಹಜವಲ್ಲ. ಹಾಗೆ ಕಟ್ಟುವುದು ನನಗೆ ತುಂಬಾ ಮನೋವ್ಯಥೆಯನ್ನುಂಟುಮಾಡೀತು. ಅವುಗಳ ಸುತ್ತಮುತ್ತಲೂ ನಿರ್ಮಾನುಷ್ಯವಾಗಿರಬೇಕಾದದ್ದು ಅತ್ಯವಶ್ಯವೆಂದು ನಾನು ಖಂಡಿತವಾಗಿ ಹೇಳುತ್ತೇನೆ. ಈ ಭಾಗದಲ್ಲಿ ನನ್ನಿಂದಾಗುವ ಮಟ್ಟಿಗೂ ನಿಮಗೆ ಸಹಾಯವೂ ಮಾಡುವೆನು.

ಈಗ ಈ ಬೆಟ್ಟದ ಮಾಲೀಕನಿಗೆ ಯಾವ ತೊಂದರೆವೂ ಕೊರತೆಯೂ ಉಂಟಾಗದಂತೆ ನೋಡಿಕೊಳ್ಳಬೇಕಾಗಿದೆ. ಜಮೀನ್ದಾರನ ಹಕ್ಕಿಗೂ ಸ್ವಾತಂತ್ರ್ಯಕ್ಕೂ ಯಾವ ಲೋಪವೂ ಬರಬಾರದು. ಈ ಬೆಟ್ಟವು ನಿಮ್ಮ ಸ್ವತ್ತಲ್ಲವು. ಆದರಲ್ಲಿ ಮಾಲೀಕನ ಒಪ್ಪಿಗೆಯನ್ನು ಪಡೆದು ನೀವು ತಲೆತಲಾಂತ್ರಗಳಿಂದಲೂ ಪೂಜೆಪುನಸ್ಕಾರಾದಿಗಳನ್ನೂ ಜಪತಪಾದಿಗಳನ್ನೂ ಮಾಡಿಕೊಳ್ಳುತ್ತಾ ಬಂದಿರುತ್ತೀರಿ. ನಿಮ್ಮ ಪೂಜಾದಿಗಳಿಗೂ ನಿಮಗೆ ಅವಕಾಶ ಕೊಡುವುದಲ್ಲದೆ, ಮನೆಮಠಾದಿಗಳನ್ನೂ ಕಟ್ಟುವುದಕ್ಕೆ ಅವಕಾಶ ಕೊಡುವುದಿಲ್ಲವೆಂದೂ ಒಪ್ಪಿಕೊಂಡು, ಈ ಬೆಟ್ಟವನ್ನೆಲ್ಲಾ ಪಕ್ಕಾವಾಗಿ ನಿಮ್ಮ ಸ್ವಾಧೀನಾನುಭವಕ್ಕೆ ಬಿಟ್ಟುಕೊಡಬೇಕಾದಲ್ಲಿ ನೀವು ಅದರ ಮಾಲೀಕನಿಗೆ (ಜಮೀನ್ದಾರನಿಗೆ) ಅವನು ಕೇಳುವಷ್ಟು ಪ್ರತಿಫಲವನ್ನು ಕೊಡಬೇಕಾಗುವುದು. ಈಗಲೂ ನೀವು ಜಮೀನ್ದಾರನಿಗೆ ಪ್ರತಿ ವರುಷವೂ ವರುಷಾಸನವನ್ನು ಸಲ್ಲಿಸುತ್ತಿದ್ದೀರೆಂದು ಕೇಳುತ್ತೇನೆ. ಬೆಟ್ಟದ ಮೇಲೆ ಕೆಲವು ಭಾಗಗಳಲ್ಲಿ ನೀವು ದೇವಸ್ಥಾನಾದಿಗಳನ್ನು ಕಟ್ಟಿಕೊಂಡು ಪೂಜೆ ಮುಂತಾದ್ದು ಮಾಡಿಕೊಳ್ಳುವುದಕ್ಕೆ ನಿಮಗೆ ಅವಕಾಶ ಕೊಟ್ಟಿರೋಣದರಿಂದಲೇ ನೀವು ಜಮೀನ್ದಾರನಿಗೆ ವರುಷಾಸನವನ್ನು ಕೊಡುತ್ತಾ ಬಂದಿದ್ದೀರೆಂದು ಗೊತ್ತಾಗುವುದು. ನಿಮಗೆ ಇದಕ್ಕಿಂತಲೂ ಹೆಚ್ಚು ಅನುಕೂಲಗಳು ಬೇಕಾದರೆ ಅದಕ್ಕೆ ತಕ್ಕಷ್ಟು ಪ್ರತಿಫಲವನ್ನೂ ಕೊಟ್ಟೇ ಕೊಡಬೇಕಾದೀತು.

ಪಾರ್ಶ್ವನಾಥವೆಂಬ ಬೆಟ್ಟಸಾಲೆಲ್ಲಾ ಪರಿಶುದ್ಧವಾದ ಸ್ಥಳವೆಂತಲೂ ಪುಣ್ಯಭೂಮಿ ಎಂತಲೂ ನಾನು ಒಪ್ಪಲಾರೆನು. ಆಚರಣೆಯನ್ನು ನೋಡಿದರೆ ಇದು ಹಾಗಿಲ್ಲವೆಂದು ಗೊತ್ತಾಗುತ್ತದೆ. ಮತ್ತು ಆ ಮಾತು ಸಕಾರಣವಾದದ್ದೂ ಅಲ್ಲ. ನಿಮ್ಮಲ್ಲೇ ಅನೇಕರು ಹಾಗೆ ಅಭಿಪ್ರಾಯಪಡುವವರಾಗಿಲ್ಲ. ಈ ಬೆಟ್ಟಗಳ ಪೂರ್ವಚರಿತ್ರೆಯನ್ನು ರಿಕಾರ್ಡುಗಳನ್ನೂ ನೋಡಿದರೂ ಈ ಮಾತು ಸ್ಥಿರಪಡುವುದಿಲ್ಲ. ಆದರೂ ಪಾರ್ಶ್ವನಾಥವೆಂಬ ಎತ್ತರವೂ ಸುಂದರವೂ ಆದ ಬೆಟ್ಟ ಮಾತ್ರ ದೇವಸ್ಥಾನಾದಿಗಳಿಂದ ತುಂಬಿದೆ ಎಂದೂ, ಆ ಒಂದು ಬೆಟ್ಟಕ್ಕೇ ಯಾತ್ರಿಕರು ಬಂದುಹೋಗುತ್ತಾರೆಂದೂ, ಆ ದೇವಸ್ಥಾನದ ಹೊರ್ತು ಮತ್ತೆ ಯಾವ ಪುಣ್ಯಸ್ಥಳವೂ ಇಲ್ಲವೆಂದೂ, ಪಕ್ಕಮಗ್ಗುಲಲ್ಲಿರುವ ಗುಡ್ಡಗಳಿಗೆ ಯಾವನೊಬ್ಬ ಯಾತ್ರಿಕನೂ ಹೋಗುವುದಿಲ್ಲವೆಂದೂ ಖಂಡಿತ ಹೇಳಬಹುದಾಗಿದೆ. ಈ ಗುಡ್ಡಗಳ ಮೇಲೆ ಈಗಲೂ ಒಂದು ಟೀ ಸೊಪ್ಪಿನ ತೋಟವೂ, ಕೂಲಿಗಳ ಕೈ ಮನೆಗಳೂ, ಗ್ರಾಮಗಳೂ, ಸೆಟ್ಲ್‌ಮೆಂಟುಗಳೂ ಇರುವವು. ನಾನು ಇಳಿದುಕೊಂಡಿರುವ ಬಂಗಲೆಯೂ ಇರುತ್ತದೆ. ಇದಕ್ಕೆ ಮೊದಲು ಇಲ್ಲಿ ಸೈನ್ಯಗಳು ಇರುತ್ತಿದ್ದವು. ಕೆಲವು ಕಾಲಕ್ಕೆ ಮುಂಚೆ ಹಂದಿಯ ಕಾರ್ಖಾನೆಯೊಂದಿತ್ತು. ಅದರಲ್ಲಿ ಹಂದಿಗಳನ್ನು ಕೊಂದು ಕೊಬ್ಬುತೆಗೆದು ಸಾಗಿಸುತ್ತಿದ್ದರು. ಇದು ನಿಮ್ಮ ಮತಭಕ್ತಿಗೆ ಬಹಳ ಅಸಹ್ಯವಾದದ್ದು. ಅದ್ದರಿಂದ ಸರ್ಕಾರದವರು ಅದನ್ನು ವಜಾ ಮಾಡಿದರು. ಇಲ್ಲಿರತಕ್ಕ ಗ್ರಾಮಸ್ಥರೆಲ್ಲಾ ಸರ್ವ ಪ್ರಜೆಗಳೆಂತಲೂ, ಅವರಿಂದ ನಿಮ್ಮ ಪೂಜಾ ಕಾರ್ಯಗಳಿಗೆ ಯಾವ ಅಡಚಣೆಯೂ ಆಗುವುದಿಲ್ಲವೆಂತಲೂ ನೀವೇ ಹೇಳಿ ಒಪ್ಪಿಕೊಂಡಿರುತ್ತೀರಿ. ಆದಕಾರಣ ಈ ಬೆಟ್ಟಸಾಲನ್ನೆಲ್ಲಾ ಜೈನಪ್ರಜೆಗಳಿಗಾಗಿಯೇ ಪ್ರತ್ಯೇಕವಾಗಿ ಬಿಟ್ಟುಕೊಡಬೇಕೆಂದು ಕೇಳುವುದು ಸಹಜವಲ್ಲ. ಇದುವರೆಗೆ ಮನೆಮಾರುಗಳನ್ನು ಕಟ್ಟಿ ವಾಸಮಾಡಿಕೊಂಡಿರತಕ್ಕವರ ಮೇಲೆ ನನ್ನ ಆಕ್ಷೇಪಣೆಯಾವುದೂ ಇಲ್ಲ. ಇನ್ನು ಮುಂದೆಯೂ ಅದೇ ರೀತಿ ಮನೆ ಕಟ್ಟಿಕೊಳ್ಳುವುದಕ್ಕೆ ಅಡ್ಡಿಮಾಡಲಾರೆನೆಂದು ನಂಬುತ್ತೇನೆ

ಇಂಡಿಯಾ ದೇಶದ ವೃತ್ತಾಂತಗಳು.

ದೊಡ್ಡ ದೊಡ್ಡ ಸರ್ಕಾರಿ ಅಧಿಕಾರಿಗಳೂ ಉದ್ಯೋಗಸ್ಥರೂ ಸರ್ಕೀಟು ಹೋಗುವಾಗ್ಗೆ ಅವರಿಗಾಗಿ ರೈಲ್ ಗಾಡಿಗಳಲ್ಲಿ ರಿಸರ್ವ್ ಕಂಪಾರ್ಟ್‌ಮೆಂಟುಗಳನ್ನು ಬಿಟ್ಟುಕೊಡಬೇಕೆಂದು ಚರ್ಚೆ ನಡೆಯುತ್ತಿದೆ

***

ಪೂನಾ ಪಟ್ಟಣದಲ್ಲಿ ಮುಖ್ಯವಾದ ಬೀದಿಗಳಿಗೆಲ್ಲಾ ರಾತ್ರಿಹೊತ್ತು ದೀಪ ಹಚ್ಚುವುದಕ್ಕೂ ಕಾರ್ಖಾನೆಗಳಲ್ಲಿ ಯಂತ್ರಗಳನ್ನು ನಡೆಸುವುದಕ್ಕೂ ವಿದ್ಯುಚ್ಛಕ್ತಿಯನ್ನು ಉಪಯೋಗಿಸಬೇಕೆಂದು ಮ್ಯುನಿಸಿಪಾಲಿಟಿಯವರು ತೀರ್ಮಾನ ಮಾಡಿರುತ್ತಾರೆ.

***

ವಾಯುವ್ಯ ಪ್ರಾಂತ್ಯಕ್ಕೆ ಸೇರಿದ ಈಟಾ ಎಂಬ ಪಟ್ಟಣದ ವಿಕ್ಟೋರಿಯಾ ಪಾರ್ಕ್ ಎಂಬ ಉದ್ಯಾನವನದೊಳಗೆ ಲೇಟ್ ಮಹಾರಾಜ್ಞಿ ವಿಕ್ಟೋರಿಯಾ ಚಕ್ರವರ್ತಿನಿಯವರ ಪ್ರತಿಮೆಯನ್ನು ಕಳೆದ ವಾರ ಪ್ರತಿಷ್ಠೆ ಮಾಡಿದರು. ಇದಕ್ಕಾಗಿ ಪ್ರಜೆಗಳೇ ೩೧,೦೦೦ ರೂಪಾಯಿ ಚಂದಾ ಕೊಟ್ಟಿದ್ದರು.

***

ಬಂಗಾಳಾ ಅಧಿಪತ್ಯದಲ್ಲಿ ಪಾಸಿ ಮತ್ತು ಸುವರ್ಣರೇಖಾ ಎಂಬೀ ನದಿಗಳಲ್ಲಿ ಅಪಾರವಾದ ಪ್ರವಾಹಗಳು ಬಂದು, ನೂರಾರು ಮೈಲಿ ದೂರ ಜಮೀನುಗಳೆಲ್ಲಾ ಮುಳುಗಿ ಹೋಗಿರುತ್ತವೆ. ಒಂದೆರಡು ಕಡೆ ರೈಲ್ ರಸ್ತೆಗಳೂ ಸೇತುವೆಗಳೂ ಕಳಚಿ ಹೋಗಿ ತುಂಬಾ ಅಪಾಯಕರವಾದ ಸ್ಥಿತಿಯಲ್ಲಿರುವವು.

***

ಭೂಕಂಪದ ಸೂಚನೆಯನ್ನು ತೋರಿಸುವಂಥಾ ಯಂತ್ರಸಾಧನಗಳನ್ನು ಸಿಮ್ಲಾ ಪಟ್ಟಣದಲ್ಲಿ ಇಟ್ಟಿರುತ್ತಾರೆ. ಸುಮಾರು ೫,೦೦೦ ಮೈಲಿ ದೂರದಲ್ಲಿ ಪ್ರಕಟವಾಗಿರಬಹುದಾದ ಭೂಕಂಪದ ಸೂಚನೆಯು ಕಳೆದ ವಾರ ಈ ಯಂತ್ರಮುಖದಿಂದ ಗೊತ್ತಾಯಿತು. ಆದರೆ ಭೂಕಂಪ ನಡೆದ ಸ್ಥಳವು ಇಂಥಾದ್ದೆಂದು ಇನ್ನೂ ತಿಳಿಯಲಿಲ್ಲ.

***

ಕಳೆದ ಏಪ್ರೆಲ್ ೨೭ ರಲ್ಲಿ ವಿಲಾಯಿತಿಗೆ ಪ್ರಯಾಣಮಾಡಿ ದೇಶಾಟನೆ ಮಾಡುತ್ತಿದ್ದ ಅಲ್ವಾರ್ ಸಂಸ್ಥಾನದ ಮಹಾರಾಜರವರು ಕಳೆದ ವಾರ ಪರಿವಾರಸಹಿತ ಸುರಕ್ಷಿತವಾಗಿ ಬೊಂಬಾಯಿಗೆ ವಾಪಸು ಬಂದು ಹಡಗು ಇಳಿದರು. ಗೌರವಾರ್ಥವಾದ ೧೫ ತೋಪುಗಳು ಹಾರಿಸಲ್ಪಟ್ಟವು. ಅನೇಕರು ಸೇರಿ ಅವರಿಗೆ ಸುಸ್ವಾಗತವನ್ನು ಬಯಸಿದರು.

ಕಾಕಿನಾಡಾ ದಂಗೆ ಮೊಕದ್ದಮೆಯಲ್ಲಿ ಮ್ಯಾಜಿಸ್ಟ್ರೇಟರು ಎರಡನೇ ಗುಂಪಿನ ಅಪರಾಧಿಗಳನ್ನು ದರ್ಯಾಫ್ತುಮಾಡಿ, ಆ ಪೈಕಿ ೪ ಮಂದಿಗೆ ತಲಾ ೧೮ ತಿಂಗಳಂತೆ ಕಠಿಣ ಸಜವನ್ನೂ ೫೦ ರೂಪಾಯಿನಂತೆ ಜುಲ್ಮಾನೆಯನ್ನೂ ವಿಧಿಸಿದ್ದಲ್ಲದೆ, ಶಿಕ್ಷೆಯನ್ನನುಭವಿಸಿ ಬಂದಮೇಲೆ ಅವರು ಮೂರು ವರುಷದ ತನಕ ನೇಕಚಾಲಿಗೆ ಜಾಮೀನ್ ಕೊಡಬೇಕೆಂದೂ ತಿಳಿಸಿರುತ್ತಾರೆ.

***

ಕಥ್ಯವಾಡ ಸಂಸ್ಥಾನಗಳಲ್ಲಿ ಒಂದಾದ ಜಾಂನಗರ ಸಂಸ್ಥಾನದ ರಂಜಿತ್ ಸಿಂಗ್‌ಜಿ ರಾಜರು ಕ್ರಿಕೆಟ್ ಎಂಬ ಚಂಡಾಟದ ಪಂದ್ಯಗಳನ್ನು ನೋಡುವುದಕ್ಕಾಗಿ ಬೊಂಬಾಯಿಗೆ ಬಂದಿದ್ದರು. ಅವರಿಗೆ ಈಗ ಅಲ್ಲಿ ಘಸಿಯ ರೋಗವು ಪ್ರಾಪ್ತವಾಗಿದೆ ಎಂತಲೂ, ತಮ್ಮ ದಿವಾನರವರಿಗೆ ತಂತೀವರ್ತಮಾನ ಕೊಟ್ಟು ಅವರನ್ನು ಬೊಂಬಾಯಿಗೆ ಕರೆಸಿಕೊಂಡಿದಾರೆಂತಲೂ ತಿಳಿದುಬಂದಿದೆ.

***

ಪಂಜಾಬ್ ಆಧಿಪತ್ಯಕ್ಕೆ ಸೇರಿದ ಲಾಹೋರ್, ಅಮೃತಸಾರ ಎಂಬೀ ಪಟ್ಟಣಗಳಿಗೆ ವಿದ್ಯುಚ್ಛಕ್ತಿಯ ದೀಪಗಳನ್ನು ಹಚ್ಚುವುದಕ್ಕೂ, ಅಲ್ಲಿನ ಕಾರ್ಖಾನೆಗಳಲ್ಲಿ ವಿದ್ಯುಚ್ಛಕ್ತಿಯ ಸಹಾಯದಿಂದ ಕೆಲಸಗಳನ್ನು ನಡಿಸುವುದಕ್ಕೂ ಒಂದು ಕಂಪನಿಯವರು ಕಂಟ್ರಾಕ್ಟು ಪಡೆದಿರುತ್ತಾರೆ. ಇದಕ್ಕೆಲ್ಲಾ ಹಾರಿ ದೋವಾಬ್ ನದಿ ನಾಲೆಯಲ್ಲಿ ಧುಮುಕುವ ನೀರಿನಿಂದ ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡುವರೆಂದು ತಿಳಿದುಬಂದಿದೆ.

***

ತಿರುವಾಂಕೂರು (ಅನಂತಶಯನ) ಸಂಸ್ಥಾನದಲ್ಲಿ ಆಲಪ್ಪೆ ಎಂಬೊಂದು ಸಮುದ್ರತೀರಪಟ್ಟಣವಿರುತ್ತದೆ. ಈಚೆಗೆ ಕೆಲವು ವಾರಗಳಿಂದ ಅದರ ರೇವಿನಲ್ಲಿ ಸಮುದ್ರವು ತುಂಬಾ ಮಣ್ಣು ದಿಬ್ಬಗಳನ್ನು ತಂದುಹಾಕುತ್ತಿರೋಣದರಿಂದ ತೀರದಿಂದ ಹಡಗುಗಳ ಬಳಿಗೆ ದೋಣಿಗಳನ್ನು ಹಾಕಿಕೊಂಡು ಹೋಗಿ ಬರುವುದೇ ಅಸಾಧ್ಯವಾಗಿದೆ. ಇದನ್ನು ನೋಡಿ ಅಲ್ಲಿನ ಜನರು ತುಂಬಾ ಆಶ್ಚರ್ಯವೂ ವ್ಯಸನವೂ ಪಡುತ್ತಿದಾರೆ.

***

ಕಳೆದ ಡಿಸೆಂಬರ್ ೩೧ ಕ್ಕೆ ಅಖೈರಾದ ಒಂದು ವರುಷದಲ್ಲಿ ಹಿಂದುಸ್ಥಾನದಲ್ಲೆಲ್ಲಾ ರೈಲ್ವೆ ಅಪಾಯಗಳಿಂದ ಒಟ್ಟು ೧,೬೦೫ ಜನರು ಮೃತಪಟ್ಟರು; ೧,೯೯೮ ಜನರಿಗೆ ಜಖಂ ಆಯಿತು. ಹಿಂದಿನ ವರುಷ ೧,೩೦೫ ಜನರು ಮೃತಪಟ್ಟರೆಂತಲೂ, ೧,೭೯೩ ಜನರಿಗೆ ಗಾಯಗಳಾದವೆಂತಲೂ ತಿಳಿಯುವುದು. ಆ ಪೈಕಿ ಮದರಾಸ್ ರೈಲ್ವೆ ಒಂದರಲ್ಲೇ ೭೩ ಜನ ಪ್ರಯಾಣಿಕರು ಸತ್ತುಹೋದರು, ೧೫ ಮಂದಿಗೆ ಗಾಯಗಳಾದವು.

***

ಕೊಚ್ಚಿ ಸಂಸ್ಥಾನದ ಒಂದು ಗ್ರಾಮದಲ್ಲಿ ಸಮುದ್ರವು ಹೆಚ್ಚಿ ಒಂದು ಗ್ರಾಮವನ್ನೇ ಸಮುದ್ರದೊಳಕ್ಕೆ ಮುಳುಗಿಸಿಕೊಳ್ಳುತ್ತಿದೆ ಎಂದು ತಿಳಿಸಿದ್ದೇವಷ್ಟೆ. ಈಗ ನಾಲ್ಕಾರು ಮಂದಿ ಇಂಜನಿಯರುಗಳು ಅಲ್ಲಿ ಸೇರಿ ಆ ಸ್ಥಳವನ್ನು ಅಜಮಾಯಿಷಿಮಾಡಿ, ಸಮುದ್ರವನ್ನು ಹೆಚ್ಚಿ ಬಾರದಂತೆ ತಡೆಯುವುದಕ್ಕೆ ಭಾರೀ ಅಡ್ಡಕಟ್ಟೆಗಳನ್ನು ಕಟ್ಟಬೇಕೆಂದು ಯೋಚಿಸುತ್ತಿದಾರೆ. ಇದಕ್ಕೆ ಸುಮಾರು ೫—೬ ಲಕ್ಷ ರೂಪಾಯಿ ಖರ್ಚಾಗಬಹುದೆಂದು ಕಾಣುವುದು.

***

ಈಚೆ ಬಂಗಾಳಿಗಳು ಅಲ್ಲಿನ ನ್ಯಾಯಸ್ಥಾನಗಳಿಗೆ ಮೊಕದ್ದಮೆಗಳು ಹೋಗಿ ದಾಖಲಾಗದಂತೆ ಪ್ರಯತ್ನಪಟ್ಟಿದಾರೆಂದು ತಿಳಿಯುವುದು. ಯೂನಿವರ್ಸಿಟಿ ಇನ್ಸ್ಟಿಟ್ಯೂಟ್ ಎಂಬ ಕಟ್ಟಡದ ಬಳಿಯಲ್ಲೂ ಕಾಲೇಜ್ ಚೌಕದಲ್ಲೂ ಕೆಲವು ವಿದ್ಯಾವಂತರು ಪಂಚ್‌ಗಳಾಗಿ ಕುಳಿತುಕೊಂಡು, ತಾವೇ ಮೊಕದ್ದಮೆಗಳನ್ನು ಹಿಡಿದು ವ್ಯವಸ್ಥೆ ಮಾಡುತ್ತಾ ಬಂದಿದಾರೆ. ಪ್ರೆಸಿಡೆನ್ಸಿ ಕಾಲೇಜಿನ ಪಂಡಿತ ವಿನಯ ಎಂಬಾತನು ನ್ಯಾಯಾಧಿಪತಿಯಾಗಿಯೂ ಕೆಲವು ವಿದ್ಯಾವಂತರು ಪಂಚಾಯಿತಿದಾರರಾಗಿಯೂ ಕುಳಿತು ಕೋರ್ಟು ಮಾಡಿಕೊಂಡಿದಾರೆ

***

ಕಟಕ್ ಡಿಸ್ಟ್ರಿಕ್ಟಿಗೆ ಸೇರಿದ ವೈಣಿ, ವೈತರಣಿ ಎಂಬ ಹೊಳೆಗಳಲ್ಲಿ ಪ್ರವಾಹಗಳು ಬಂದು ಎರಡು ಕಡೆಯೂ ದಡಗಳ ಮೇಲೆ ಹರಿದು, ಅನೇಕ ಮೈಲಿಗಳ ದೂರ ಗ್ರಾಮಭೂಮಿಗಳೆಲ್ಲಾ ಮುಳುಗಿ ಹೋಗಿವೆ. ಕೇಂದ್ರಪಾರ, ಜೈಪುರ್ ಎಂಬೀ ಸಬ್ ಡಿವಿಜನ್‌ಗಳಲ್ಲಿ ಬಹಳ ಕಷ್ಟನಷ್ಟಗಳುಂಟಾಗಿವೆ ಎಂದೂ, ಅನೇಕ ಗ್ರಾಮಗಳು ಕೊಚ್ಚಿಹೋದವೆಂದೂ, ಸುಮಾರು ೧,೫೦೦ ಮನೆಗಳು ನಾಶವಾದವೆಂದೂ, ಪ್ರಜೆಗಳ ಕಷ್ಟವು ನಿವಾರಿಸುವುದಕ್ಕಾಗದೆಂದೂ ವರ್ತಮಾನ ಬಂದಿದೆ. ಕಟಕ್‌ನ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಆ ಪ್ರಾಂತ್ಯ ಅಜಮಾಯಿಷಿಗಾಗಿ ಪ್ರಯಾಣ ಮಾಡಿದಾರೆ.

***

ಬೊಂಬಾಯಿ ಪಟ್ಟಣದಲ್ಲಿ ಬೋರಾ ಮಹಮ್ಮದೀಯರಲ್ಲಿ ಪ್ರಮುಖನಾಗಿದ್ದ ಮಿ|| ಲಕ್ಮಾಜಿ ಸುಲೇಮಾನ್‌ಜಿ ಎಂಬ ಧನಾಢ್ಯನು ಕಾಲವಾದನೆಂದು ವಿಷಾದಪಡಬೇಕಾಗಿದೆ. ಈತನು ಸ್ವತಃ ಕಷ್ಟಪಟ್ಟು ಮಹದೈಶ್ವರ್ಯವಂತನಾದನು. ಕಥ್ಯವಾಡದಲ್ಲೂ ಬೊಂಬಾಯಿನಲ್ಲೂ ಬೋರಾ ಮಹಮ್ಮದೀಯ ಬಡಬಗ್ಗರಿಗೆ ವಿದ್ಯಾಶಾಲೆಗಳನ್ನೂ ದೇವಸ್ಥಾನಗಳನ್ನೂ ಮಸೀತಿಗಳನ್ನೂ ಬಹಳ ಹಣ ಖರ್ಚುಮಾಡಿ ಕಟ್ಟಿಸಿಕೊಟ್ಟನು. ಇದಲ್ಲದೆ ಇನ್ನೂ ಅನೇಕ ಧರ್ಮ ಕಾರ್ಯಗಳನ್ನು ಮಾಡಿರುತ್ತಾನೆ. ಮತ್ತು ಈತನು ಕಾಲವಾಗುವಾಗ್ಗೆ ತನ್ನ ಆಸ್ತಿಯಲ್ಲಿ ಮೂರು ಲಕ್ಷ ರೂಪಾಯಿಗಳನ್ನು ಬೇರೆ ಬೇರೆ ಧರ್ಮ ಕೆಲಸಗಳಿಗೆ ವಿನಿಯೋಗಿಸಬೇಕೆಂದು ಮರಣಶಾಸನವನ್ನು ಬರೆದಿರುವನು. ಈ ಧನಾಢ್ಯನಿಗೆ ನಾಲ್ಕು ಮಂದಿ ಗಂಡು ಮಕ್ಕಳಿದಾರೆಂದು ತಿಳಿದು ಬಂದಿದೆ.

ಅಲ್ಪ ಸಂಗತಿಗಳ ವಿಷಯ ವಿಪರೀತ ಸಂಭಾಷಣೆ.

ಶ್ರೀ ಮುರುಘರಾಜೇಂದ್ರ ಸ್ವಾಮಿಗಳವರು ಪಾಲಕಿಯಲ್ಲಿ ಕುಳಿತು ತಮ್ಮ ಶಿಷ್ಯಮಂಡಲಿಯೊಂದಿಗೆ ಚಿತ್ರದುರ್ಗದ ಪಟ್ಟಣವನ್ನು ಪ್ರವೇಶ ಮಾಡಿದರೆಂದು ವಾಚಕಮಹಾಶಯರು ತಿಳಿದಿರುವರು. ಇಂಥಾ ನೂತನ ಪುರಪ್ರವೇಶವು ವೀರಶೈವ ಮತಸ್ಥರಿಗೂ ಬ್ರಾಹ್ಮಣರಿಗೂ ಒಂದು ದೊಡ್ಡ ಜಗಳವನ್ನು ಹುಟ್ಟಿಸಿರುವುದು. ಸುಮಾರು ಎಪ್ಪತ್ತು ವರುಷಗಳ ಹಿಂದೆ ಸ್ವಾಮಿಗಳು ಗುರುಮರ್ಯಾದೆಗಳಿಂದ ಕೂಡಿದ ಅಟ್ಟಹಾಸದ ಮೆರವಣಿಗೆಯಲ್ಲಿ ಪುರಪ್ರವೇಶ ಮಾಡಬಾರದೆಂದು ಸರ್ಕಾರದವರು ನಿಷೇಧ ಮಾಡಿದ್ದರಂತೆ. ಅದರಿಂದೀಚೆಗೆ ಇವರ ವಿಷಯದಲ್ಲಿ ವೀರಶೈವರು ಸರ್ಕಾರಕ್ಕೆ ಅರ್ಜಿ ಬರೆದುಕೊಂಡರು. ಸರ್ಕಾರದವರು ಎಲ್ಲವನ್ನು ಪರ್ಯಾಲೋಚಿಸಿ ಗುರುಗಳು ತಮ್ಮ ಸ್ಥಾನಕ್ಕೆ ಯೋಗ್ಯವಾದ ಮರ್ಯಾದೆಗಳಿಂದ ಕೂಡಿ ಮೆರವಣಿಗೆಯಲ್ಲಿ ಪುರಪ್ರವೇಶ ಮಾಡಬಹುದೆಂದು ಅಪ್ಪಣೆ ಕೊಟ್ಟರು. ಇಂತಾ ಅಪ್ಪಣೆಯನ್ನನುಸರಿಸಿ ಕಳೆದ ಆಗಸ್ಟ್ ತಿಂಗಳು ೧೫ ನೇ ತಾರೀಖಿನಲ್ಲಿ ಶ್ರೀಜಗದ್ಗುರುಗಳಾದ ಮುರುಘರಾಜೇಂದ್ರ ಸ್ವಾಮಿಗಳವರು ಪಾಲಕಿಯಲ್ಲಿ ಕುಳಿತು ಬಹು ವಿಜೃಂಭಣೆಯಿಂದ ಚಿತ್ರದುರ್ಗವನ್ನು ಪ್ರವೇಶಮಾಡಿದರು. ಈ ಕಾರ್ಯಗಳ ವಿಷಯ ಒಂದು ಮತಸ್ಥರು ಮತ್ತೊಂದು ಮತಸ್ಥರೊಂದಿಗೆ ವೈರತ್ವದಿಂದ ಜಗಳವಾಡುವುದಕ್ಕೆ ಕಾರಣವೇನೋ ನಮಗೆ ತಿಳಿಯದು. ಅಂತು ಇದು ವಿಷಾದಿಸತಕ್ಕ ಸಂಗತಿಯಾಗಿದೆ.

ಸರ್ಕಾರದ ರಸ್ತೆಗಳನ್ನು ಪಯೋಗಿಸುವುದಕ್ಕೆ ಎಲ್ಲರೂ ಸ್ವಾತಂತ್ರ್ಯವನ್ನು ಪಡೆದಿರುತ್ತಾರೆ. ಅವುಗಳಲ್ಲಿ ಇಂಥವರೇ ಮೆರವಣಿಗೆ ಮಾಡಬೇಕೆಂತಲೂ ಇಂಥವರೇ ಮಾಡಬಾರದೆಂತಲೂ ಯಾವ ಸರ್ಕಾರದ ವಿಧಾಯಕವೂ ಇಲ್ಲವೆಂದು ನಮಗೆ ತೋರುತ್ತದೆ. ಮೆರವಣಿಗೆಗಳಲ್ಲಿ ಗುಂಪುಕಟ್ಟಿಕೊಂಡು ದೊಂಬಿ ಮಾಡುವುದಾಗಲಿ ಅಥವಾ ರಸ್ತೆಗಳಲ್ಲಿ ತಿರುಗುವ ಬೇರೆ ಜನಗಳಿಗೆ ಹಿಂಸೆ ಮಾಡುವುದಾಗಲಿ ಕಂಡುಬಂದರೆ ಅಂಥಾ ಮೆರವಣಿಗೆಗಳನ್ನು ತಡೆಯುವುದು ಸರ್ಕಾರದವರ ಕರ್ತವ್ಯವಾಗಿರುತ್ತದೆ. ವೀರಶೈವರು ತಮ್ಮ ಗುರುಗಳನ್ನು ಮರ್ಯಾದಾಪೂರ್ವಕವಾಗಿ ಮೆರವಣಿಗೆ ಮಾಡಿಸಿಕೊಂಡು ಬಂದರೆ ಅಂಥಾ ಕಾರ್ಯದಿಂದ ಯಾರಿಗೂ ಯಾವ ವಿಧವಾದ ತೊಂದರೆಯಾಗುವ ಪ್ರಮೇಯವಿಲ್ಲವೆಂದು ನಮಗೆ ತೋರುತ್ತದೆ. ಅದೂ ಅಲ್ಲದೆ ಒಂದು ಮತದ ಗುರುವಿಗೆ ಎಷ್ಟೇ ಅಧಿಕಾರವಿದ್ದರೂ ಅಂಥಾ ಅಧಿಕಾರವನ್ನು ತನ್ನ ಗುರುಪೀಠಕ್ಕೆ ಸೇರಿದವರ ಮೇಲೆ ತೋರಿಸಬೇಕೇ ಹೊರತು ಬೇರೆ ಮತಸ್ಥರ ಮೇಲೆ ಚಲಾಯಿಸುವದು ಅಸಾಧ್ಯವು. ಅಂಥಾ ಕಾರ್ಯವನ್ನು ಯಾರೂ ಒಪ್ಪಲಾರರು. ವೀರಶೈವರೆಲ್ಲರೂ ಈ ವಿಷಯ ಚನ್ನಾಗಿ ತಿಳಿದುಕೊಂಡಿರುವರೆಂದು ನಾವು ನಂಬುತ್ತೇವೆ. ಜನರು ಸತ್ಯಕ್ಕೆ ಸಂಬಂಧಪಟ್ಟ ಕಾರ್ಯಗಳ ವಿಷಯ ಹೆಚ್ಚಾದ ಗಮನ ಕೊಡದೆ ಅಲ್ಪವಿಷಯಗಳಾದ ಪಾಲಕಿ, ವಾದ್ಯ, ಬಿರುದಾವಳಿಗಳು, ಇವುಗಳನ್ನು ಕುರಿತು ಚರ್ಚಿಸುವರು. ಅನೇಕವೇಳೆ ಪರಸ್ಪರ ಜಗಳವಾಡಿ ಕೋರ್ಟು ಕಚೇರಿಗಳನ್ನು ಹತ್ತುವರು. ದೇಶದೇಳಿಗೆಯನ್ನು ಕೋರುವ ದೇಶಾಭಿಮಾನಿಗಳು ಇಂಥಾ ಕಿತ್ತಾಟಗಳನ್ನು ನೋಡಿ ವಿಷಾದಿಸುವದು ಅವರ ಕರ್ತವ್ಯವಾಗಿರುತ್ತದೆ. ಪೂರ್ವಕಾಲದಲ್ಲಿ ಆಚಾರಶೀಲರಾಗಿದ್ದ ಫರಿಸಾಯರೆಂಬ ಒಂದು ಪಂಗಡದ ಜನರು ತಮಗಿದ್ದ ಎಲ್ಲವುಗಳಲ್ಲಿ ಒಂದು ಪಾಲನ್ನು ದೇವಸ್ಥಾನಕ್ಕೆ ಕಾಣಿಕೆಯಾಗಿ ಅರ್ಪಿಸುತ್ತಿದ್ದರು. ಆದರೇನು ಅವರಲ್ಲಿದ್ದ ಕಾಪಟ್ಯವನ್ನೂ ಸ್ವಾರ್ಥಪರತೆಯನ್ನೂ ಅಸತ್ಯತೆಯನ್ನೂ ಯೇಸುಕ್ರಿಸ್ತನು ಕಂಡು ಅವರಿಗೆ ಈ ರೀತಿಯಾಗಿ ತಿಳಿಸಿದನು. "ಅಯ್ಯೋ ಕಪಟಿಗಳಾದ ಶಾಸ್ತ್ರಿಗಳೇ, ಫರಿಸಾಯರೇ, ನೀವು ಮರುಗ ಸೋಪು ಜೀರಿಗೆಗಳಲ್ಲಿ ಹತ್ತರಲ್ಲೊಂದು ಪಾಲು ಕೊಡುತ್ತೀರಿ, ಆದರೆ ಧರ್ಮಶಾಸ್ತ್ರದಲ್ಲಿ ಗೌರವವಾದದ್ದನ್ನು, ಅಂದರೆ ನ್ಯಾಯವನ್ನೂ ಕರುಣೆಯನ್ನೂ ನಂಬಿಕೆಯನ್ನೂ ಬಿಟ್ಟುಬಿಟ್ಟಿರಿ"

ಹಾಗಾದರೆ ಬ್ರಾಹ್ಮಣರೂ ಲಿಂಗಾಯತರೂ ಎಲ್ಲರೂ ಯೋಚಿಸತಕ್ಕ ಮುಖ್ಯ ಸಂಗತಿಗಳಾವುವು? ಅಭಿವೃದ್ಧಿಗೆ ಅನ್ಯೋನ್ಯವೇ ಕಾರಣ. ಹಿಂದೂ ದೇಶಸ್ಥರೆಲ್ಲರೂ ಯೋಚಿಸತಕ್ಕ ಮೊದಲನೇ ಸಂಗತಿ ಯಾವುದೆಂದರೆ—ವಿದ್ಯಾಭಿವೃದ್ಧಿ. ನಮ್ಮ ದೇಶದ ಅನೇಕಲಕ್ಷ ಜನರು ವಿದ್ಯೆಯಿಲ್ಲದ ಮೂಢರಾಗಿರುತ್ತಾರೆ. ಇವರಲ್ಲಿ ಲೌಕಿಕವಿದ್ಯೆಯು ಕೂಡ ಶೂನ್ಯವಾಗಿರುವುದಲ್ಲದೆ ಪಾರಮಾರ್ಥಿಕಜ್ಞಾನವೂ ಕೂಡ ಇಲ್ಲದೆ ಇರುತ್ತದೆ. ಇಂಥವರಿಗೆ ವಿದ್ಯಾದಾನಮಾಡುವುದು ವಿದ್ಯಾವಂತರ ಕರ್ತವ್ಯವಾಗಿರುತ್ತದೆ. ಎರಡನೇ ಸಂಗತಿಯು ಯಾವದೆಂದರೆ—ಎಲ್ಲಾ ದುಷ್ಟಪದ್ಧತಿಗಳ ವಿಸರ್ಜನೆ. ಲಜ್ಜೆಯನ್ನುಂಟುಮಾಡುವ ವಿಗ್ರಹಗಳೂ ಪಟಗಳೂ ಅನೇಕ ದೇವಸ್ಥಾನಗಳಲ್ಲಿರುವುದು ಸಾಧಾರಣವಷ್ಟೆ. ಪವಿತ್ರನಾದ ದೇವರನ್ನು ಪೂಜಿಸುವ ಸ್ಥಳಗಳಲ್ಲಿ ಇಂಥಾ ಅಸಹ್ಯಗಳು ಇದ್ದರೆ ಅವನು ಅವುಗಳನ್ನಾಗಲೀ ಅಥವಾ ಅವುಗಳನ್ನು ಮಾಡಿದವರನ್ನಾಗಲೀ ಮೆಚ್ಚುವನೋ? ಎಂದಿಗೂ ಮೆಚ್ಚಲಾರನು. ಎಲ್ಲಾ ಅಬದ್ಧ ಕಥೆಗಳನ್ನು ವಿಸರ್ಜಿಸಿ ತಂದೆಯಾಗಿರುವ ದೇವರಿಗೆ ಪ್ರಾರ್ಥಿಸುವದು ನಿಜಭಕ್ತರ ಲಕ್ಷಣವಾಗಿದೆ. ಮೂರನೇ ಸಂಗತಿ ಯಾವದೆಂದರೆ ಪ್ರತಿಯೊಬ್ಬನೂ ಪವಿತ್ರನಾಗಿರಬೇಕು. ಕ್ರೋಧ, ಮೋಹ, ಮದ, ಮತ್ಸರ, ಇವೇ ಮುಂತಾದ ದುರ್ಗುಣಗಳನ್ನು ತ್ಯಜಿಸಿ ಪಾವನನಾಗಬೇಕು. ಎಲ್ಲರಲ್ಲಿಯೂ ಏಕ ರೀತಿಯಾಗಿ ನೀತಿಯನ್ನನುಸರಿಸುವುದೂ ಕಷ್ಟದಲ್ಲಿ ಬಿದ್ದವರನ್ನು ಕಾಪಾಡುವುದೂ ಚಿಂತೆಯಲ್ಲಿ ಮುಳುಗಿದವರನ್ನು ಆದರಿಸುವುದೂ ಗುಣಾಢ್ಯರ ಭೂಷಣವಾಗಿರುತ್ತದೆ. ಅಲ್ಪಕಾರ್ಯಗಳ ವಿಷಯ ಜಗಳವಾಡುವುದು ಮಕ್ಕಳ ಕೆಲಸವಾಗಿದೆ. ಆದರೆ ಭೂಲೋಕದಲ್ಲಿ ಸತ್ಯತೆಯನ್ನು ಸ್ಥಾಪಿಸುವುದಕ್ಕೆ ಪ್ರಯತ್ನಪಡುವವನೇ ಧೀರನು.

ಚಾತ್ರಿದಾರರಿಗೆ ನೋಟೀಸು

ಸರಿಯಾದ ವಿಳಾಸಗಳಿಲ್ಲದೆ ಬರತಕ್ಕ ಚಾತ್ರಿಗಳಿಗೆ ನಾವು ನಿಗಾ ಕೊಡಲಾರೆವು. ಆದಕಾರಣ ಚಾತ್ರಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಚಾತ್ರಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ನಿಗಾ ಕೊಡಲಾರೆವು.

ಚಾತ್ರಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿಟರ್

ಶಿಕಾರಿಪುರ—ಹೆಗ್ಗಡದೇವನ ಕೋಟೆ, ಮಹಾತ್ಮೆ—ದಾವಣಗೆರೆ, ಜಿ. ವಿ. ಬಿ.—ಅರಕಲಗೂಡು, ಯಥಾರ್ಥವಾದಿ—ಅರಗ, ಹಿತಚಿಂತಕ—ನೆಲಕೋಟೆ, ಎಚ್. ನಾರಾಯಣಶಾಸ್ತ್ರಿ—ಬೆಂಗಳೂರು—ಈ ಚಾತ್ರಿಗಳನ್ನು ಪ್ರಕಟಿಸಲಾರೆವೆಂದು ತಿಳಿಸಲು ವಿಷಾದಿಸುತ್ತೇವೆ

—ಎಡಿ.

ಕರೆಸ್ಪಾಂಡೆನ್ಸ್.

ಒಕ್ಕಲಿಗರ ಸಂಘದ ವಿಚಾರವು

ಅಯ್ಯಾ,

ತಮ್ಮ ಆಗಸ್ಟ್ ೨೯ ಮತ್ತು ಸೆಪ್ಟಂಬರು ೫ ನೆ ತಾರೀಖುಗಳ ಪತ್ರಿಕೆಯಲ್ಲಿ ಇಬ್ಬರು ಚಾತ್ರಿದಾರರು ನಮ್ಮ ಸಂಘದ ವಿಚಾರವಾಗಿ ಬರೆದಿದ್ದ ಲೇಖನಗಳನ್ನು ನೋಡಿ ನಮಗೆ ಬಹಳ ಸಂತೋಷವಾಯಿತು. ವಿದ್ಯಾವಂತರಾದ ಒಕ್ಕಲಿಗರೆಲ್ಲರೂ ಸಂಘದ ವಿಷಯವಾಗಿ ಆದರವನ್ನಿಟ್ಟುಕೊಂಡು ಅದರ ಉದ್ದೇಶಗಳು ಸಫಲವಾದುವುಗಳೆಂದು ಜ್ಞಾಪಿಸುತ್ತಿರುವುದು ಬಹಳ ಶುಭಸೂಚಕವಾಗಿರುತ್ತದೆ. ಇವರ ಉತ್ಸಾಹವು ಇದೇ ರೀತಿ ಹೆಚ್ಚಿ ಇವರು ಸಂಘದ ಅಭಿಮತಗಳನ್ನು ಸರಿಯಾಗಿ ಅರಿತುಕೊಂಡು, ಅರಿಯದ ತಮ್ಮ ಸಹೋದರ ಒಕ್ಕಲಿಗರೆಲ್ಲರಿಗೂ ಸಂಘದ ವಿಚಾರವನ್ನು ಬೋಧಿಸಿ ಸರ್ವದ ಏಕಮತ್ಯವನ್ನೂ ಸಂಪಾದಿಸಿ ಕೊಡುವರೆಂದು ಮುಖ್ಯ ಸಂಘದವರು ಪೂರ್ಣವಾಗಿ ನಂಬಿರುತ್ತಾರೆ. ಆದಕಾರಣ ಬರುವ ಒಕ್ಕಲಿಗರ ಎರಡನೇ ಮಹಾಸಭೆಯ ವಿಚಾರವಾಗಿ ಕೆಲವು ಸಂಗತಿಗಳನ್ನು ಸಂಕ್ಷೇಪವಾಗಿ ಈ ಮೂಲಕ ಅವರಿಗೆ ತಿಳಿಯಪಡಿಸಲು ಅಪ್ಪಣೆಪ್ತನಾಗಿದ್ದೇನೆ

ಈ ಸಭೆಯು ಶ್ರೀಮನ್ಮಹಾರಾಜರವರ ಮತ್ತು ದಿವಾನ್ ಸಾಹೇಬರವರ ಕರುಣೆಯಿಂದ ಬರುವ ಆಕ್ಟೋಬರು ತಿಂಗಳಲ್ಲಿ ಮೈಸೂರು ಜಗನ್ಮೋಹನ ಅರಮನೆಯ ಸಭಾಮಂಟಪದಲ್ಲಿ ನಡೆಯುವುದು. ಮೊದಲನೇ ದಿನ ಶ್ರೀಮನ್ಮಹಾರಾಜರವರು ಸ್ವತಃ ಸಭೆಗೆ ದಯಮಾಡಿಸಿ ಸಭೆಯನ್ನು ಆರಂಭಿಸುವಂತೆ ಅನುಜ್ಞೆಯನ್ನು ದಯಪಾಲಿಸಿರುವರು. ಆ ಕಾಲದಲ್ಲಿ ಮೈಸೂರು ಸಂಸ್ಥಾನದ ಒಕ್ಕಲಿಗ ಪ್ರಜೆಗಳ ಪರವಾಗಿ ಒಂದು ವಿಜ್ಞಾಪನಾ ಪತ್ರಿಕೆಯು ಸುಮಾರು ಒಂದು ಸಾವಿರ ರೂಪಾಯಿಗಳ ಬೆಲೆ ಬಾಳುವ ಸುಂದರವಾದ ಬಂಗಾರ ಮತ್ತು ಬೆಳ್ಳಿಯಿಂದ ತಯಾರಾದ ಪೆಟ್ಟಿಗೆಯಲ್ಲಿ ಇರಿಸಲ್ಪಟ್ಟು ಶ್ರೀಮನ್ಮಹಾರಾಜರವರ ಸನ್ನಿಧಿಯಲ್ಲಿ ಸಮರ್ಪಿಸಲ್ಪಡುವುದು

ಮುಖ್ಯ ಸಂಘದ ಪ್ರೆಸಿಡೆಂಟರು ಮತ್ತು ವೈಸ್ ಪ್ರೆಸಿಡೆಂಟರು ಸಹ ತಾವು ಸಂಘವನ್ನು ಊರ್ಜಿತಪಡಿಸುವುದಕ್ಕೋಸ್ಕರ ವಾಗ್ದಾನ ಮಾಡಿರುವ ದ್ರವ್ಯವನ್ನು ಸಭೆಯಲ್ಲಿ ಸಂಘಕ್ಕೆ ಒಪ್ಪಿಸುವರು. ಸಂಘಕ್ಕೆ ಕೊಡಲ್ಪಡುವ ಹಣವು ದುರುಪಯೋಗವಾಗುತ್ತದೆಂಬ ಭೀತಿಯನ್ನುಳ್ಳವರು ಸಂಘಕ್ಕೆ ಸಹಾಯಮಾಡಲು ಮುಂದೆಬಾರದೆ ಹಿಂತೆಗೆಯಬಾರದೆಂಬ ಘನ ಉದ್ದೇಶದಿಂದಲೇ ಈ ಮಹನೀಯರು ಈ ರೀತಿ ಬಹಿರಂಗವಾಗಿ ದ್ರವ್ಯವನ್ನು ಕೊಡಲು ನಿಶ್ಚಯಿಸಿರುವರಲ್ಲದೆ ಆತ್ಮಪ್ರತಿಷ್ಠೆಗೋಸ್ಕರವಾಗಿ ಅಲ್ಲವೆಂದು ಸರ್ವರೂ ದಯವಿಟ್ಟು ನೆನಪಿನಲ್ಲಿಡಬೇಕೆಂದು ಸಂಘದವರು ಪ್ರಾರ್ಥಿಸುತ್ತಾರೆ. ಸಂಘಕ್ಕೆ ಈ ಪ್ರಕಾರವಾಗಿ ದ್ರವ್ಯಸಹಾಯವಾಗುವುದನ್ನು ಕೇಳಿ ಸಂಘದವರ ವಿಚಾರವಾಗಿ ಭೀತಿಯನ್ನು ಕಳೆದುಕೊಂಡ ಮಹನೀಯರೆಲ್ಲರೂ ಮುಂದೆಬಂದು ಸಂಘಕ್ಕೋಸ್ಕರವಾಗಿ ಯಥೇಚ್ಛವಾಗಿ ಸಹಾಯಮಾಡುವುದಕ್ಕೆ ಅನುಕೂಲವಾದ ಸಮಯವು ಈಗ ದೊರಕಿರುತ್ತದೆಂದು ಸೂಚಿಸುತ್ತೇವೆ. ಸಂಘದ ಉದ್ದೇಶಗಳನ್ನು ಜಾಗ್ರತೆಯಾಗಿ ಈಡೇರಿಸಬೇಕಾಗಿರುವುದರಿಂದ ಎಷ್ಟು ಜಾಗ್ರತೆಯಾಗಿ ಸಹಾಯವು ದೊರಕಿದರೆ ಅಷ್ಟು ಒಳ್ಳೇದಾಗುವುದು. ಆದಕಾರಣ ಒಂದು ಸಾವಿರ ರೂಪಾಯಿಗೆ ಮೇಲ್ಪಟ್ಟ ದ್ರವ್ಯವನ್ನು ಕೊಡಲುಳ್ಳವರೆಲ್ಲರೂ ಮೇಲ್ಕಂಡ ಮಹನೀಯರ ಮೇಲ್ಪಂಕ್ತಿಯನ್ನು ಅನುಸರಿಸಿದಲ್ಲಿ ಬಹಳ ಉಪಕಾರ ಮಾಡಿದಂತಾಗುವುದು

ಸಂಘವು ಚಿರಸ್ಥಾಯಿಯಾಗಿ ನಡೆಯುವುದಕ್ಕೋಸ್ಕರ ಅದಕ್ಕೆ ದ್ರವ್ಯವನ್ನು ಕೊಟ್ಟಂಥಾವರನ್ನು ಜ್ಞಾಪಕದಲ್ಲಿಡುವುದಕ್ಕಾಗಿ ಅವರ ಹೆಸರಿನಲ್ಲಿ ಕಟ್ಟಡವನ್ನು ಕಟ್ಟಿಸುವುದು, ಅವರ ಛಾಯಾ ಪ್ರತಿಮೆಗಳನ್ನು ಇರಿಸುವುದು, ಅವರ ಹೆಸರುಗಳನ್ನು ಬರೆಸಿ ಇಡುವುದು ಸಹ ಯಾವ ಜನಾಂಗದವರೂ ಮಾಡದೇ ಇರುವ ಹೊಸ ಪದ್ಧತಿಯಲ್ಲ. ಆದಕಾರಣ ನಮ್ಮ ಸಂಘವನ್ನು ಊರ್ಜಿತಪಡಿಸಿದಂಥಾ ಮಹನೀಯರು ಯಾರ್ಯಾರೆಂಬುದನ್ನು ಜ್ಞಾಪ್ತಿಯಲ್ಲಿಟ್ಟುಕೊಳ್ಳುವುದಕ್ಕೆ ಉಪಾಯವನ್ನು ಕಲ್ಪಿಸುವುದರಿಂದ ಉತ್ತರೋತ್ತರ ಆ ದೊಡ್ಡಮನುಷ್ಯರ ಹೆಸರು ಶಾಶ್ವತವಾಗಿ ನಿಲ್ಲುವುದಕ್ಕೂ ಮತ್ತು ಉತ್ತರೋತ್ತರ ಹುಟ್ಟುವ ಜನರಿಗೆ ಸ್ಪರ್ಧೆಯನ್ನುಂಟುಮಾಡಿ ತನ್ಮೂಲಕ ಸಂಘವು ಸಾತೋದ್ಧಾರವಾಗಿ ನಡೆದುಕೊಂಡು ಬರುವುದಕ್ಕೂ ಕಾರಣವಾಗುತ್ತದೆ. ಆದುದರಿಂದ ನಮ್ಮ ಸಂಘಕ್ಕೆ ಹೆಚ್ಚು ದ್ರವ್ಯವನ್ನು ಕೊಡುವಂಥವರ ಛಾಯಾಚಿತ್ರಗಳನ್ನು (ಫೋಟೋಗಳನ್ನು) ಮಾಡಿಸಿ ಅವುಗಳನ್ನೆಲ್ಲಾ ಸೇರಿಸಿ ಪುಸ್ತಕರೂಪವಾಗಿ ಮಾಡಿ ಆ ಪುಸ್ತಕವನ್ನು ಎಲ್ಲರಿಗೂ ಕೊಡಿಸಬೇಕೆಂದು ನಿಶ್ಚಯಿಸಲಾಗಿದೆ. ಸಾವಿರ ರೂಪಾಯಿಗೆ ಮೇಲ್ಪಟ್ಟ ದ್ರವ್ಯವನ್ನು ಕೊಡಲುಳ್ಳವರು ತಪ್ಪದೆ ರುಜುಮಾಡಿಸಿಕೊಳ್ಳಬಹುದಾದ್ದರಿಂದ ಅಂಥವರು ಸಂಘದ ಜನರಲ್ ಸೆಕ್ರೆಟರಿಯವರಿಗೆ ಬರೆದು ವಿವರವನ್ನು ತಿಳಿದುಕೊಳ್ಳಬಹುದು

ಪರಸ್ಥಳದಿಂದ ದಯಮಾಡಿಸುವ ಇವರೆಲ್ಲರಿಗೂ ಸಭೆಯು ನಡೆಯುವ ಮೂರು ದಿವಸಗಳೂ ಮಹಾರಾಜಾ ಅಕ್ಕಿ ಅಂಗಡಿ ಮರಿಯಣ್ಣನವರು ಭೋಜನಾದಿ ಸೌಕರ್ಯಗಳನ್ನು ಒದಗಿಸುವರು. ಮಹಾಸಭೆಯು ಅರಮನೆಯಲ್ಲಿ ನಡೆಯುವುದರಿಂದ ಬಹಳ ಮೂಲಕ ಜನರನ್ನು ಸಭಾಮಂದಿರದೊಳಕ್ಕೆ ಬಿಡಬೇಕೆಂದು ಯಿಸಿದೆ. ಆದಕಾರಣ ಸಭೆಯು ಪ್ರಾರಂಭವಾಗುವುದಕ್ಕೆ ಮುಂಚಿತವಾಗಿ ೪ ದಿವಸಗಳಿಂದ ಈ ಟಿಕೇಟುಗಳು ವ್ಯಸನದಲ್ಲಿ ದೇವಮಾರ್ಕೆಟ್ಟಿನ ಮಹಡಿಯಲ್ಲಿರುವ ಒಕ್ಕಲಿಗರ ಬ್ರಾಂಚ್ ಸಂಘದಲ್ಲಿ ಒಕ್ಕಲಿಗ ಮಹಾಜನರಿಗೆ ಉಚಿತವಾಗಿ ಕೊಡಲ್ಪಡುವವು. ಮಹಾಸಭೆಯಲ್ಲಿ ಪ್ರತಿಯೊಬ್ಬರಲ್ಲೂ ಚಂದಾ ಹಣಕ್ಕೋಸ್ಕರ ವಸೂಲು ಮಾಡಿಕೊಳ್ಳುವುದು ದುರ್ಲಭವಾಗಿರುವದರಿಂದ, ಸಂಘದ ಮೊದಲೇ ಚಂದಾ ಹಾಕಿರುವವರೂ ಮತ್ತು ಮುಂದೆ ಹಾಕತಕ್ಕವರು ಸಹ ತಮ್ಮ ತಮ್ಮ ಚಂದಾ ಮೊಬಲಗುಗಳನ್ನು ದಯವಿಟ್ಟು ಟಿಕೇಟುಗಳನ್ನು ಪಡೆಯುವ ಕಾಲದಲ್ಲಿ ಪಾವತಿ ಮಾಡಿ ರಶೀತಿಗಳನ್ನು ಪಡೆದು ಉಪಕಾರ ಮಾಡಬೇಕೆಂದು ಪ್ರಾರ್ಥಿಸುತ್ತೇವೆ. ಮತ್ತು ಕೆಲವು ಟಿಕೇಟು ದೊರೆಯುತ್ತದೆ ಎಂಬ ಭೀತಿಯನ್ನು ಯಾರೂ ಇಟ್ಟುಕೊಳ್ಳಬಾರದು. ನಿರ್ಬಂಧದಿಂದ ಹಣವನ್ನು ವಸೂಲ್ಮಾಡುವುದು ಸಂಘದವರ ಅಭಿಮತವಾಗಿಲ್ಲ. ಪರಂತು ಒಕ್ಕಲಿಗರಲ್ಲಿ ಪ್ರತಿಯೊಬ್ಬರೂ ತಮ್ಮ ಚೈತನ್ಯಾನುಸಾರವಾಗಿ ಏನಾದರೂ ಸಹಾಯಮಾಡಿದರೆ ಬಹಳ ಉಪಕಾರವಾಗುತ್ತದೆಂದು ಈ ಮೂಲಕ ಕೃತಜ್ಞತೆ ಹೇಳುತ್ತೇವೆ

ಈ ಲೇಖನದಲ್ಲಿ ಕಾಣಿಸಿರುವ ವಿಷಯಗಳನ್ನು ಓದಿಕೊಂಡು ಒಕ್ಕಲಿಗರ ದೊಡ್ಡ ಮನುಷ್ಯರೆಲ್ಲರೂ ತಮ್ಮ ಸಹೋದರ ಒಕ್ಕಲಿಗ ಮಂಡಲಿಯಲ್ಲಿ ಇಲ್ಲಿ ವಿವರಿಸಿರುವ ಸಂಘದ ಉದ್ದೇಶಗಳನ್ನು ಪ್ರಚುರಪಡಿಸಿ ಸಂಘದ ವಿಚಾರವಾಗಿ ಅವರಿಗೆ ಸ್ನೇಹಭಾವವನ್ನುಂಟುಮಾಡಿಸಬೇಕೆಂದು ಪ್ರಾರ್ಥಿಸುತ್ತೇವೆ. ಸಮಸ್ತ ಒಕ್ಕಲಿಗರೂ ಸಭೆಗೆ ದಯಮಾಡಿಸಿ ಕಾರ್ಯವನ್ನು ಆಗಮಾಡಬೇಕೆಂತಲೂ ಈ ರೀತಿ ದಯಮಾಡಿಸುವವರೆಲ್ಲರೂ ತಮ್ಮ ಹೆಸರುಗಳನ್ನು ಮೈಸೂರು ಒಕ್ಕಲಿಗರ ಸಂಘದ ಸೆಕ್ರೆಟರಿ ವಿ. ಎಂ. ಪುಟ್ಟನಂಜಪ್ಪನವರಿಗೆ ಕಾಗದ ಮೂಲಕ ತಿಳಿಯಪಡಿಸಬೇಕೆಂತಲೂ ಕೇಳಿಕೊಳ್ಳುತ್ತೇನೆ.

ಬೆಂಗಳೂರು, ಇಂತೆ ಸಂಘದಿಂದ ಅಪ್ಪಣೆಪ್ತನಾದ
೪—೯—೧೯೦೭ ... ಪುಟ್ಟಯ್ಯ,
ಅ॥ ಜನರಲ್ ಸೆಕ್ರೆಟರಿ

ತಾಲ್ಲೋಕು ವರ್ತಮಾನಗಳು

ಚಾಮರಾಜನಗರ—ಕೆಲವು ದಿವಸಗಳಿಂದ ಈ ಊರಿನಲ್ಲಿ ಕೆಲವರು ಸೇರಿ ಇಲ್ಲಿಂದ ನಂಜನಗೂಡಿಗೆ ಟಪ್ಪಾಲು ಬಂಡಿಯನ್ನು ನಡೆಸುತ್ತಿರುವರು. ಇದರಿಂದ ಜನರಿಗೆ ಸ್ವಲ್ಪಮಟ್ಟಿಗೆ ಸಹಾಯವಾಗುತ್ತೆಂದು ತಿಳಿಯಬರುತ್ತೆ. ಎಸ್. ವಿ. ಆರ್. ಎಸ್. ಎಂಬ ಟ್ರಾನ್ಸಿಟ್ ಕಂಪೆನಿಯು ಶಾಶ್ವತವಾಗಿ ನಡೆಯುತ್ತೆಂದು ಭಾವಿಸುತ್ತೇನೆ—ಕೆಲವು ಕೆಲವು ದಿವಸಗಳಿಗೆ ಹಿಂದೆ ಗತಿಸಿದ ಸ್ವಾಮಿ ವಿವೇಕಾನಂದರವರ ಮೆಮೋರಿಯಲ್ ರೀಡಿಂಗ್ ರೂಂ, ಲೈಬ್ರರಿ ಸ್ಥಾಪಿಸಲು ಸ್ಥಳೀಕರಿಂದ ನೂರಾರು ರೂಪಾಯಿ ಚಂದಾ ಕೇಳಿಸಿದರು. ಈಚೆಗೆ ಕೆಲವು ದೊಡ್ಡ ಮನುಷ್ಯರೊಡನೆ ಉಪಸಭೆ ಸೇರಿ, ಇದಕ್ಕೆ ಕಾರಣಭೂತರಾದ ಮಿ॥ ಲಕ್ಷ್ಮಣಯ್ಯಂಗಾರರು ಬೇರೆ ಉಪಯೋಗಿಸಲು ಯತ್ನಪಟ್ಟಂತೆ ಗೊತ್ತಾಗುತ್ತೆ. ಸಾರ್ವಜನಿಕರಿಂದ ಈ ಲೈಬ್ರರಿಯನ್ನು ಸ್ಥಾಪಿಸದೆ ಇವರು ಬೇರೆ ಯೋಚನೆ ಮಾಡಿದ್ದು ಅಸಮ್ಮತ. ಹಾಗೆ ಮಾಡದೆ ನಮ್ಮ ಸ್ಥಳದಲ್ಲಿ ಶಾಶ್ವತವಾದ ಈ ಏರ್ಪಾಡು ಮಾಡುವರೆಂದು ನಂಬಿರುತ್ತೇನೆ—ನಮ್ಮ ಊರಿನಲ್ಲಿ ಅನೇಕಾನೇಕ ದೇವಾಂಗದವರ ಬಾಲಕರೂ, ಇತರರೂ ಕೆಲಸ ಕಾರ್ಯವಿಲ್ಲದೆ ಅಲೆಯುತ್ತಿರುವರು. ಅಂಥವರಿಗೂ ಮತ್ತು ಅಭ್ಯಾಸಿಗಳಿಗೂ ಉಪಯೋಗವಾಗುವಂತೆ ನಮ್ಮ ಗವರ್ನಮೆಂಟಿನವರು ಇತರ ಊರುಗಳಲ್ಲಿರುವಂತೆ ಇಲ್ಲೂ ಒಂದು ಕೈಗಾರಿಕೆ ಪಾಠಶಾಲೆಯನ್ನು ಸ್ಥಾಪಿಸಿಕೊಡಬೇಕಾಗಿ ಕೋರುತ್ತೇವೆ—ನಮ್ಮ ಊರಿಗೆ ನೆನ್ನೆ ಬುಧವಾರ ಸಾಯಂಕಾಲ ಡೆಪ್ಯುಟಿ ಕಮಿಷನರ್ ಮೆ॥ ಕಾಂತರಾಜೇ ಅರಸಿನವರ ಸವಾರಿಯು ಚಿತ್ತೈಸಿತು. ಊರ ಹೊರಗೆ ಗ್ರಾಮಾಧಿಕಾರಿಗಳೂ ವರ್ತಕರೂ ಮೆಂಬರುಗಳೂ ಕಾದಿದ್ದು ಅವರಿಗೆ ಹಾರ ತುರಾಯಿಗಳನ್ನು ಒಪ್ಪಿಸಿ, ಅವರನ್ನು ಬ್ಯಾಂಡಿನೊಡನೆ ಬಂಗ್ಲೆಗೆ ಕರೆದುಕೊಂಡು ಹೋಗಿ ಬಿಟ್ಟು ಬಂದರು. ಅವರು ಮಾರನೇ ದಿನ ನೋಡತಕ್ಕ ಭಾಗಗಳನ್ನೆಲ್ಲಾ ನೋಡಿಕೊಂಡು ಶುಕ್ರವಾರ ಬೆಳಗ್ಗೆ ಗುಂಡ್ಲುಪೇಟೆಗೆ ದಯಮಾಡಿದರು

ಚನ್ನಪಟ್ಟಣ.—ಕಳೆದ ವಾರ ಇಲ್ಲಿ ೩—೪ ದಿನ ಒಳ್ಳೇ ಮಳೆಯಾಯಿತು. ಈಚೆಗೆ ಪೊಲೀಸ್ ಇನ್ಸ್‌ಪೆಕ್ಟರವರೂ ಜಮೇದಾರರೂ ಪೊಲೀಸಿನವರೂ ತುಂಬಾ ಮೆಹನತ್ತಿನಿಂದ ನಾಲ್ಕಾರು ಮಂದಿ ಕಳ್ಳರನ್ನು ಹಿಡಿದು, ಸೆರೆ ಮನೆಗೆ ಕಳುಹಿಸಿರುವಂತೆ ತಿಳಿದುಬಂದಿರುತ್ತೆ. ಕಳೆದ ತಿಂಗಳು ತಾ ೨೫ ರಿಂದ ಇದುವರೆಗೆ ೯—೧೦ ಪ್ಲೇಗ್ ಮರಣಗಳಾಗಿವೆ. ಈಗ ನಾಲ್ಕಾರು ಜನರು ಕಾಯಿಲೆಯಾಗಿದ್ದಾರೆ. ರೋಗದ ಸುಂಕು ವಿಶೇಷವಾಗಿದ್ದ ದ್ಯಾವರೆ, ಅಕ್ಕಸಾಲೆಯ ಬೀದಿಯವರೆಲ್ಲಾ ಊರು ಬಿಟ್ಟು ಗುಡಿಸಲುಗಳಿಗೆ ಸೇರಿಯೂ ಸೇರುತ್ತಲೂ ಇದ್ದಾರೆ. ಊರಿನ ಹಲವು ಭಾಗಗಳಲ್ಲಿ ಇಲಿಗಳು ಸಾಯುತ್ತಿರುವಂತೆ ತಿಳಿದುಬಂದಿದೆ. ಈ ಸಂದರ್ಭದಲ್ಲಿ ನಮ್ಮ ಅಮಲ್ದಾರ್ ಮೆ॥ ರಂಗನಾಥರಾವ್ ಸಾಹೇಬರೂ ಅ॥ ಅಸಿಸ್ಟೆಂಟ್ ಮೆ॥ ಕಾಳಪ್ಪಸ್ವಾಮಿ ಪಿಳ್ಳೆಯವರೂ, ಪೋ॥ ಡಾ॥ ಸುಬ್ಬರಾಯರೇ ಮೊದಲಾದವರೊಡನೆ ಪ್ರತಿದಿನ ಬೆಳಿಗ್ಗೆ ಸಾಯಂಕಾಲ ಪ್ರತಿ ರೋಗಿಯನ್ನೂ ನೋಡುತ್ತಾ ಸುಂಕಿನ ಪ್ರದೇಶಗಳನ್ನು ವಿಚಾರಿಸುತ್ತಾ ತಕ್ಕ ಬುದ್ಧಿಮಾತು, ಎಚ್ಚರಿಕೆ, ಸಲಹೆಗಳನ್ನು ಹೇಳುತ್ತಾ, ಧೈರ್ಯಪಡಿಸುತ್ತಿದ್ದಾರೆ. ನಮ್ಮ ಅಮಲ್ದಾರರು ತುಂಬಾ ಸಂಭಾಷಣಾಶೀಲಿಗಳಾಗಿ ಇಲ್ಲಿನ ಸಕಲ ಕೋಮಿನ ವರ್ತಕರನ್ನೂ ಬರಮಾಡಿಕೊಂಡು, ಅವರಿಗೆಲ್ಲಾ ಪರಿಪರಿ ಆಲೋಚನೆ, ನೀತಿ, ಧರ್ಮಗಳನ್ನೂ ಬಡವರ ಸ್ಥಿತಿಗತಿಯನ್ನೂ ತಿಳಿಸಿ, ಪ್ರೋತ್ಸಾಹಪಡಿಸಿದ್ದರಿಂದ ಇಲ್ಲಿನ ವರ್ತಕ ಮಹನೀಯರೆಲ್ಲಾ ಸೇರಿ ತಮ್ಮ ಶಕ್ತ್ಯಾನುಸಾರವಾದ ಸಹಾಯ ದ್ರವ್ಯದಿಂದಲೇ ಬಡಪ್ರಜೆಗಳಿಗೆ ಬೇಕಾದ ಷೆಡ್ಡು ಕಟ್ಟಿಕೊಳ್ಳುವುದಕ್ಕೆ ಗಳ ಬೊಂಬು ತೆಂಗಿನ ಮಟ್ಟೆಗಳನ್ನು

ಬಡವರಿಗೆ ಕಣ ಧಾನ್ಯಗಳನ್ನು ಸಹಾಯ ಮಾಡಲು ಏರ್ಪಾಡು ಮಾಡಿರುವರೆಂದು ತಿಳಿದುಬರುತ್ತೆ.—ಬೆಂಗಳೂರಿನಿಂದ ಡಿಸ್ಟ್ರಿಕ್ಟ್ ಸರ್ಜನ್ ಮಿ| ಡೇವಿಸ್ ಯವರು ಬಂದು ಮೂರು ದಿನಗಳಿಂದ ಇಲ್ಲಿ ಹಾಫ್‌ಕೀನ್ ಎಂಬ ಪ್ಲೇಗ್ ಪೇಟೆ ಹಾಕುತ್ತಿರುವರು. ಇದುವರೆಗೆ ೨೦೦ ಜನ ಹಾಕಿಸಿಕೊಂಡರು. ಇನ್ನೂ ಅನೇಕಾನೇಕರು ಹಾಕಿಸಿಕೊಳ್ಳುವವರಾಗಿದ್ದಾರೆ.—ತಾ ೭ ನೇ ಭಾನುವಾರ ಸಾಯಂಕಾಲ ಶ್ರೀಮನ್ಮಹಾರಾಜರವರೂ ಯುವರಾಜರವರೂ ಬೆಂಗಳೂರಿಗೆ ದಯಮಾಡಿಸುವಾಗ ಪೇಟೆಯು ತೋರಣದಿಂದ ಅಲಂಕೃತವಾಗಿತ್ತು. ಇಲ್ಲಿನ ಮುಖ್ಯ ಉದ್ಯೋಗಸ್ಥರು ಹಾರ ತುರಾಯಿಗಳೊಂದಿಗೆ ಮುಸಾಫರಿ ಬಂಗಲೆಯ ಬಳಿ ಹಾಜರಿದ್ದರು. ಜನಸ್ತೋಮವು ರಸ್ತೆಯ ಉಭಯ ಪಾರ್ಶ್ವದಲ್ಲೂ ಪೋಲೀಸಿನವರೊಡನೆ ಮಹಾರಾಜರವರ ಆಗಮನವನ್ನೇ ನಿರೀಕ್ಷಿಸುತ್ತಲಿದ್ದರು.

ಆನೇಕಲ್ಲು — ಈ ಮಾಹೆ ೫ ನೇ ತಾ ಮಧ್ಯಾಹ್ನ ಸುಮಾರು ೪ ಘಂಟೆಯ ಸಮಯದಲ್ಲಿ ಈ ಊರಿನ ಚಿಕ್ಕ ಅಂಗಡಿ ಬಳಿ ಇರುವ ರಸ್ತೆ ಬಲಭಾಗದಲ್ಲಿ ಚಿಕ್ಕದಾದ ಒಂದು ಹಳ್ಳದಲ್ಲಿ ಸುಮಾರು ೫ ವರುಷದ ಒಂದು ಗಂಡು ಶಿಶುವು ಸತ್ತು ಬಿದ್ದಿತ್ತು. ಈ ಶಿಶುವು ಮರಾಟಿಗರ ಜಾತಿ ಸೇರಿದ ವೆಂಕೋಬರಾವ್ ಎಂಬುವನದು. ತಂದೆ ತಾಯಿಗಳು ಬಹು ಪ್ರೀತಿಯಿಂದ ಸಾಕಿ ಸಲಹಿ ನಡುವಿಗೆ ಬೆಳ್ಳಿ ಉಡಿದಾರವೂ, ಕೈಗಳಿಗೆ ಬೆಳ್ಳಿ ಬಳೆಗಳೂ ಕಿವಿಗಳಿಗೆ ಕಡಕುಗಳೂ ಹಾಕಿದ್ದರು. ಈ ಆಭರಣಗಳನ್ನು ಅಪಹರಿಸಬೇಕೆಂಬ ದುರಾಶೆಯಿಂದ ಈ ಶಿಶುವನ್ನು ಹತ್ಯೆಮಾಡಿದ ದುರಾತ್ಮನಿಗೆ ಬೆಳ್ಳಿಯ ಉಡಿದಾರ ಒಂದು ಮಾತ್ರ ದೊರೆಯಿತೇ ಹೊರತು ಮತ್ತಾವ ಪ್ರಯೋಜನವೂ ಆಗಲಿಲ್ಲ. ಕೈಯಿನ ಬಳೆ ತೆಗೆವಾಗ ಮಗುವಿನ ಕೈ ನೊಂದು ರಕ್ತ ಕಟ್ಟಿ ಇತ್ತು. ಬಳೆಗಳೇ ತೆಗೆಯಲು ಸಾಧ್ಯವಾಗಲಿಲ್ಲ. ಕಿವಿಯಲ್ಲಿದ್ದ ಕಡಕುಗಳನ್ನು ಕೀಳುವ ಸಂದರ್ಭದಲ್ಲಿ ಹರಿದುಹೋದ ಕಿವಿಯಿಂದ ರಕ್ತಧಾರೆಯು ಹರಿಯುತ್ತಿತ್ತು. ಇಂಥಾ ಘೋರ ಕೃತ್ಯಗಳಿಗೆ ಗುರಿಯಾದ ಈ ಮಗುವಿನ ಮಾತಾಪಿತೃಗಳ ವ್ಯಸನವನ್ನು ವಿಸ್ತರಿಸಲು ಅಸದಳವಾಗಿರುತ್ತೆ. ಪೋಲೀಸ್ ಇನ್ಸ್‌ಪೆಕ್ಟರು ಕೃತ್ಯ ನಡೆದಿದ್ದ ಸ್ಥಳಕ್ಕೆ ಬಂದು ಹ್ಯಾಗೆ ನಡೆದಿರಬಹುದೆಂದು ವಿಚಾರಿಸಲು ಸಾಧ್ಯವಾಗದೆ ಏನೂ ಗೊತ್ತಾಗಲಿಲ್ಲವಾಗಿ ಚಿತ್ರವಿಧ್ವಂಸ ಪತ್ರಿಕೆ ಮಾಡಲು ಉತ್ತರವಾಯಿತು. ಈ ಮಗುವು ಬಿದ್ದಿದ್ದ ಹಳ್ಳದಲ್ಲಿ ನೀರು ಒಂದು ಅಡಿ ಆಳವಾಗಿದ್ದಿತೇ ಹೊರತು ವಿಶೇಷವಾಗಿರಲಿಲ್ಲ. ಈ ನೀರಿನಲ್ಲಿ ಮಗು ಬಿದ್ದು ಮರಣವನ್ನೈದಿದೆ ಎಂದು ಹೇಳಲು ಆಧಾರವೇನೂ ತೋರ ಬರಲಿಲ್ಲ. ಇಂಥಾ ಕೊಲೆಗಾರನು ದಯಾಪಿಸ್ಟನಾಗದೆ ಕೋರ್ಟಿನ ದೃಷ್ಟಿಗೆ ತಪ್ಪಿಸಿಕೊಳ್ಳಬಾರದು.

ಕುರ್ಬಿಸ್ ಪೇಟೆ — ಈ ಸ್ಥಳದ ಅಸಿಸ್ಟೆಂಟ್ ಸರ್ಜನ್ ಪ್ರತಿ ದಿನವೂ ಪ್ರತಿ ಗಲ್ಲಿಯ ನಲ್ಲಿ ತಿರುಗಿ ನೀರಿನ ಪಾಕೀಜಾ ವಿಷಯದಲ್ಲಿ ಕಟ್ಟಡ ಮಾಡುತ್ತಾ ಇದ್ದಾರೆ. ಒಂದು ಕೇರಿಯಲ್ಲಿ ಇಲಿ ಸತ್ತಿತೆಂಬ ಸಮಾಚಾರ ಕೇಳಿ ಕತ್ತಲೇ ಆ ಮನೆಯನ್ನು ಬಿಡಿಸಿ ಅದಕ್ಕೆ ಜಿಸ್ಸಿ ಫೆಕ್ಷನ್ ಮಾಡಿಸಿದರು. ಆದರೆ ಈ ಊರಿಗೆ ಸಮೀಪವಾಗಿರುವ ಚನ್ನಪಟ್ಟಣದಲ್ಲಿ ಕಾರ್ಖಾನೆಗಳಲ್ಲಿಯೂ ಪ್ಲೇಗ್ ರೋಗ ವ್ಯಾಪಿಸಿರುವಾಗ ಈ ಊರಿಗೂ ಇದೇ ಸ್ಥಿತಿ ಬರುವುದೋ ಎಂಬ ಭೀತಿ ಉಂಟಾಗಿದೆ.—ಭಗವಂತನ ಕೃಪೆಯಿಂದ ಈ ಕಾಲಕ್ಕೆ ಮಳೆಗಳು ನಡೆದು, ಈ ಹಟ್ಟಿಯಲ್ಲಿ ನೀರೂ ಆಹಾರವೂ ಉಳ್ಳದ್ದಾಗಿದೆ—ಬೆಂಗಳೂರಿನ ಸ್ಟೀಲ್ ರೇಷ್ಮೆ ಕಾರ್ಖಾನೆಯ ಒಂದು ಶಾಖೆಯು ಈ ಊರಿನಲ್ಲಿ ಸ್ಥಾಪಿಸಲ್ಪಡಲು ಕಟ್ಟಡಗಳಿಗಾಗಿ ಇಕ್ಕಟ್ಟು ... ಕೆಲಸಗಳು ಮುಕ್ತಾಯಕ್ಕೆ ಬಂದಿವೆ. ಈ ಕಂಪನಿಯು ಇಲ್ಲಿ ಸ್ಥಾಪಿತವಾದದ್ದು ಕೂಲಿಗೆ ತುಂಬಾ ಉಪಯೋಗವಾಗಿದೆ.—ಈ ಊರಿನ ವರ್ತಕರಾದ ಎಂ ರಾಮಯ್ಯನವರ ಮನೆಯಲ್ಲಿ ಗಣೇಶ ಹಬ್ಬದ ಒಬ್ಬ ಸಂಗೀತಗಾರರ ತಮ್ಮ ಪಿಟೀಲಿನ ಕಲೆಯನ್ನು ಸಂತೋಷಪಡಿಸಿದರು.—ಈ ಕಾಲದಿಂದಲೂ ಇಲ್ಲಿದ್ದ ಪ್ಲೇಗ್ ಮಾಸ್ತರನ್ನು ಅನಂತಪುರಕ್ಕೆ ವರ್ಗಮಾಡಿ ಇಲ್ಲಿಗೆ ಈ ಊರಿನ ಜನರ ಮನಸ್ಸನ್ನು ತನ್ನ ಕಡೆ ಸೆಳೆದುಕೊಂಡಿದ್ದ ಅಸಿಸ್ಟೆಂಟರನ್ನು ದೊಡ್ಡಬಳ್ಳಾಪುರಕ್ಕೆ ವರ್ಗ ಮಾಡಿರುತ್ತಾರೆ.—ಶ್ರೀಮನ್ಮಹಾರಾಜರವರು ಕಾರ್ಖಾನೆಯ ಕಡೆ ಸರ್ಕೀಟ್ ದಯಮಾಡಿಸಿದ್ದ ಕಾಲದಲ್ಲಿ ಕೆಲವು ಕಾಲ ತಂಗಿದ್ದ ಪಿತ್ತನಹಳ್ಳಿ ಬೆಟ್ಟಕ್ಕೆ ಸಮೀಪದ ಬಯಲಿನಲ್ಲಿ ಕೆಲವು ಜನರು ವಕೀಲರು ಇನ್ಸ್‌ಪೆಕ್ಟರ ಜೊತೆಯಲ್ಲಿ ಬೆಟ್ಟಕ್ಕೆ ಹೋಗಿ ಮೋಟಾರ್ ಗಾಡಿ ಬರಲು ಬೇಕಾದ ರಸ್ತೆಗಳ ಕೆಲಸವನ್ನು ಸುತ್ತಲಿನ ಗ್ರಾಮದ ಜನರಿಂದ ಮಾಡಿಸಿ ಬೆಟ್ಟದಮೇಲೆ ವಾಸಯೋಗ್ಯವಾದ ಚಪ್ಪರವನ್ನು ಬಹು ಮನೋಹರವಾಗಿ ಸಿದ್ಧಪಡಿಸಿ ನಿಯಮಿತ ದಿನದಲ್ಲಿ ಮಹಾರಾಜರವರು ತಮ್ಮ ಸಿಬ್ಬಂದಿ ಪರಿವಾರದವರೂ, ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್‌ರವರೂ ಬೆಂಗಳೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರರೂ, ಡಾಕ್ಟರ್ ನಂಜಪ್ಪನವರೂ ಇವರುಗಳೊಡನೆ ಬೆಟ್ಟದ ಮೇಲಕ್ಕೆ ಕಾಲು ನಡೆಯಾಗಿ ಹೋಗಿ ನಂಗಳಿಗಾಗಿ ನೂರು ರೂಪಾಯಿ ಕೊಟ್ಟು ಜನರ ಅನುಕೂಲಕ್ಕಾಗಿ ಛತ್ರ ಮಂಟಪಗಳು ಆಗಬೇಕೆಂದು ಹೇಳಿದ್ದನ್ನೂ ಪ್ರತಿದಿನ ದೇವರ ಪೂಜೆಗಾಗಿ ಕೊಡತಕ್ಕ ಮೊಬಲಗು ಸಾಲದೆಂದೂ ಪಾರುಪತ್ತೇಗಾರರ ಸಂಬಳ ಅವರ ಜೀವನಕ್ಕೆ ಸಾಲದೆಂದೂ ಹೇಳಿಕೊಂಡ ಎಲ್ಲಾ ವಿಜ್ಞಾಪನೆಗಳನ್ನೂ ಗುರುತು ಮಾಡಿಕೊಂಡು ವಾಪಸು ಒಂದು ಘಂಟೆಯೊಳಗಾಗಿ ಹೊರಟು ಹೋದರು.

ಚಿಂತಾಮಣಿ—ನಮ್ಮ ಶ್ರೀಮನ್ಮಹಾರಾಜರವರು ಸಂಸ್ಥಾನದಲ್ಲಿ ಸಂಚರಿಸಿ ತಮ್ಮ ಪ್ರಜೆಗಳ ಸ್ಥಿತಿಯನ್ನು ಕಣ್ಣಾರ ನೋಡಬೇಕೆಂದು ಚಿಂತಾಮಣಿಗೆ ಚಿತ್ತೈಸುವರೆಂದು ಬಹು ದೂರದವರೆಗೆ ಅಂದರೆ ಗಂಗಮ್ಮನ ಪೇಟೆಯು ಮದನಪಲ್ಲಿ, ಕದಿರಿ, ಕಡಪ, ತಿಪ್ಪಸಮುದ್ರ, ಇವೇ ಮೊದಲಾದ ಸ್ಥಳಗಳಿಂದ ಆಬಾಲವೃದ್ಧರು ಮೊದಲುಗೊಂಡು ಇದೇ ತಿಂಗಳು ತಾ. ೧ನೇ ಭಾನುವಾರ ನಡೆಯತಕ್ಕ ಉತ್ಸವಕ್ಕೆ ಮೂರು ದಿನಗಳ ಹಿಂದೆಯೇ ಬಂದು ಕಾದಿದ್ದರು. ಭಾನುವಾರಕ್ಕೆ ಲಕ್ಷಾನುಲಕ್ಷ ಪ್ರಜೆಗಳೂ ಸೇರಿದರು ೩—೪ ತಾಲ್ಲೂಕುಗಳ ಪೋಲೀಸ್ ಸಿಬ್ಬಂದಿ ಯಾವತ್ತೂ ಹಾಜರಾಗಿತ್ತು. ಇಲ್ಲಿಗೆ ಆರು ಮೈಲಿ ದೂರದ ವರೆಗೂ ಪ್ರಜೆಗಳು ಇಕ್ಕೆಡೆಗಳಲ್ಲಿಯೂ ಕೂಡಿದ್ದರು. ಸರಕಾರದ ಮಾದರಿಗೆಂದು ೩—೪ ಕಡೆಗಳಲ್ಲಿ ಹಾಕಿದ್ದ ದಿವ್ಯವಾದ ಚಪ್ಪರಗಳಲ್ಲಿ ಆಯಾ ಗ್ರಾಮದ ಮುಖಂಡರು ಕಾದಿದ್ದರು. ಮಹಾಸ್ವಾಮಿಯವರ ಸವಾರಿಯು ದಯಮಾಡಿಸಿತು. ಪ್ರಜೆಗಳು ಕೂಡಿ ಕಾದಿದ್ದ ಸ್ಥಳದಿಂದ ಜೋಡು ಕುದುರೆಯ ಸಾರೋಟಿನಲ್ಲಿ ಕುಳಿತು, ಸಾವಧಾನದಿಂದ ಗಾಡಿ ಬಿಟ್ಟುಕೊಂಡು ಮುಂದರಿಯುತ್ತಾ, ಇಕ್ಕೆಡೆಗಳಲ್ಲಿ ಕಿಕ್ಕಿರಿಯುತ್ತಿದ್ದ ಪ್ರಜೆಗಳನ್ನು ನೋಡುತ್ತಾ, ಎಲ್ಲರಿಗೂ ತಮ್ಮ ಸಂದರ್ಶನದಿಂದ ಮನೋಲ್ಲಾಸವನ್ನುಂಟುಮಾಡುತ್ತಾ, ಆರು ಘಂಟೆಗೆ ಸರಿಯಾಗಿ ಇಲ್ಲಿಗೆ ಚಿತ್ತೈಸಿದರು. ಇಲ್ಲಿ ಕಾದಿದ್ದ ಅಧಿಕಾರಿಗಳು ಮ್ಯಾಜಿಸ್ಟ್ರೇಲ್ ಮೆಂಬರುಗಳು ಶೆಟ್ಟಿ ವರ್ತಕರು ಮಹಮ್ಮದೀಯ ದೊಡ್ಡ ಮನುಷ್ಯರು ಆದಿಯಾಗಿ ಹಾರಗಳನ್ನು ಹಾಕುತ್ತಾ ಫಲಪುಷ್ಪಗಳನ್ನು ಒಪ್ಪಿಸಿದರು. ನಂತರ ಸವಾರಿಯು ಅಲಂಕೃತವಾದ ಬಂಗಲೆಗೆ ದಯಮಾಡಿಸಿತು. ಸಾಯಂಕಾಲ ಈ ನಗರದ ನಾಲ್ಕು ಕಡೆ ಇರುವ ಬೆಟ್ಟದ ಮೇಲೆ ದೀಪೋತ್ಸವಗಳು ನಡೆದವು. ಮಾರನೇ ಬೆಳಿಗ್ಗೆ ಮಹಾಸ್ವಾಮಿಯವರ ಸವಾರಿಯು ಕನಮಕೊಂಟೆ ಕೆರೆಗೆ ಮೋಟಾರ್ ಗಾಡಿಯಲ್ಲಿ ದಯಮಾಡಿಸಿ, ಅಲ್ಲಿಂದ ಸುಮಾರು ೮ ಘಂಟೆಗೆ ಬಂಗ್ಲೆಗೆ ದಯಮಾಡಿಸಿದರು. ಮಧ್ಯಾಹ್ನ ೩ ಘಂಟೆಗೆ ಗ್ರಾಮ ಬಿಡಾರಕ್ಕಾಗಿ ಬಿಡಿಸಿದ್ದ ಸ್ಥಳದಲ್ಲಿ ವಿಶಾಲವಾಗಿದ್ದ ಮಹಾ ಸುಂದರವಾದ ದರ್ಬಾರ್ ಹಾಲಿಗೆ ಸವಾರಿಯು ದಯಮಾಡಿಸುತ್ತೆಂದು ತಿಳಿದು, ಸುಮಾರು ಮುನ್ನೂರು ಜನಗಳ ವರಿಗೆ ದರ್ಬಾರ್ ಡ್ರೆಸ್ ಹಾಕಿಕೊಂಡು ಕಾದಿದ್ದರು. ಮತ್ತು ಅಮಲ್ದಾರರು, ಹೊಸದಾಗಿ ನಿರ್ಮಿಸಲ್ಪಟ್ಟ ಸುಂದರವಾದ ಗೇಟಿನ ಬಳಿ ಕೆಲವು ದೊಡ್ಡ ಮನುಷ್ಯರೊಡನೆ ಕಾದಿದ್ದು ಮಹಾಸ್ವಾಮಿಯವರ ಸವಾರಿಯು ದಯಮಾಡಿಸುತ್ತಲೇ ವಂದನೆಗಳನ್ನು ಮಾಡಿ ದರ್ಬಾರ್ ಹಾಲಿನವರೆಗ ಎಲ್ಲರೂ ಮುಂದಾಗಿ ನಡೆದರು. ಸ್ವಾಮಿಗಳವರು ಸಿಂಹಾಸನಾರೂಢರಾಗಲು, ಡೆಪ್ಯುಟಿ ಕಮಿಷನರವರು ಇಂಗ್ಲಿಷಿನಲ್ಲಿ ಬರೆಯಲ್ಪಟ್ಟ ವಿಜ್ಞಾಪನಾ ಪತ್ರಿಕೆಯನ್ನು ಒಪ್ಪಿಸಿದರು. ಅದಕ್ಕೆ ಮಹಾಸ್ವಾಮಿಯವರು ಸದುತ್ತರವನ್ನು ಅಪ್ಪಣೆ ಕೊಡಿಸಿ, ಪುರನಿವಾಸಿಗಳ ಕೋರಿಕೆಯಂತೆ ಕಾವು ಅಲಂಕರಿಸಿದ್ದ ಹೊಸ ಬಿಡಾರಕ್ಕೆ ತಮ್ಮ ಹೆಸರಿನ ಶ್ರೀಕೃಷ್ಣರಾಜ ನಗರವೆಂಬ ಅಂಕಿತವನ್ನು ದಯಪಾಲಿಸಿದರು. ಪುಷ್ಪಾದಿಗಳು ಒಪ್ಪಿಸಲ್ಪಟ್ಟ ಮೇಲೆ ಸವಾರಿಯು ಪೇಟೆ ಕಡೆ ದಯಮಾಡಿಸುತ್ತಾ, ದಾರಿಯಲ್ಲಿದ್ದ ಆಸ್ಪತ್ರೆಯನ್ನು ಪರಾಂಬರಿಸಿ ವೈದ್ಯರು ಕಾದಿದ್ದ ಮಂಟಪಕ್ಕೆ ಚಿತ್ತೈಸಿ ಅಲ್ಲಿ ನೆರೆದಿದ್ದ ದೊಡ್ಡ ಮನುಷ್ಯರಿಂದ ಫಲಪುಷ್ಪಗಳನ್ನು ಸ್ವೀಕರಿಸಿ, ಹಿಂದುಸ್ತಾನಿ ಸ್ಕೂಲು, ಎ ವಿ ಸ್ಕೂಲು, ಗರ್ಲ್ಸ್ ಸ್ಕೂಲುಗಳನ್ನು ಪರಾಂಬರಿಸಿ, ಅಲ್ಲಿ ನಡೆದ ಬಾಲಿಕೆಯರ ಗಾನದಿಂದ ಸಂತುಷ್ಟರಾಗಿ, ಪೇಟೆ ಬೀದಿಯೊಳಗೆ ದಯಮಾಡಿಸಿ ಮುಸಲ್ಮಾನರ ರೀತಿ ಬಳಿ ಹಾಜಿ ಸಾಹೇಬರೇ ಮೊದಲಾದ ದೊಡ್ಡ ಮನುಷ್ಯರು ಒಪ್ಪಿಸಿದ ಹಾರ ತುರಾಯಿಗಳನ್ನು ಸ್ವೀಕರಿಸಿ, ಕಡೆ ಚೌಕದಲ್ಲಿ ಹಾಕಿದ್ದ ಸುಂದರವಾದ ಮಂಟಪದಲ್ಲಿ ನಿಂತು, ಹಾರ ತುರಾಯಿಗಳನ್ನು ಒಪ್ಪಿಸಿಕೊಂಡು, ಪೋಸ್ಟ್ ಆಫೀಸಿನ ಮುಂದೆ ಹೊರಟು ತಾಲ್ಲೂಕು ಕಚೇರಿ ಚಿತ್ತೈಸಿ ರೆವಿನ್ಯೂ, ಪೋಲೀಸ್ ಖಜಾನೆ, ರೆಜಿಸ್ಟ್ರೇಷನ್ ಮೊದಲಾದ ಖಾತೆಗಳನ್ನು ಪರಾಂಬರಿಸಿ, ಸಾಯಂಕಾಲ ೭ ಘಂಟೆ ಬಂಗಲೆಯವರೆಗೆ ನಡೆದ ದೀಪೋತ್ಸವದಲ್ಲಿ ಸವಾರಿಯು ದಯಮಾಡಿಸಿತು. ಆ ರಾತ್ರಿ ೮ ಘಂಟೆಗೆ ಬಂಗ್ಲೆಯಲ್ಲಿ ದರ್ಬಾರ್ ನಡೆಯಿತು. ಕನ್ನಡದಲ್ಲಿ ತಯಾರಾಗಿದ್ದ ಅಡ್ರೆಸ್ಸನ್ನು ವೈದ್ಯರ ಕೆ ವೆಂಕಟಪ್ಪಯ್ಯ ಶೆಟ್ಟರು ಓದಿ ರೇಷ್ಮೆ ಸಂಚಿಯಲ್ಲಿಟ್ಟು ಒಪ್ಪಿಸಿದರು. ಶ್ರೀನಿವಾಸಪುರದ ಗಾಲ್ವಿಕ್ ಮಹಾ ಜನಗಳೂ ಇಲ್ಲಿಯೇ ಅಡ್ರೆಸ್ಸು ಒಪ್ಪಿಸಿದರು. ಈ ಎರಡು ಅಡ್ರೆಸ್ಸುಗಳಿಗೂ ಶ್ರೀಮನ್ಮಹಾರಾಜರವರು ಸದುತ್ತರವನ್ನಿತ್ತರು. ನಡುವೆ ಮಾಜಲೆಗಳು ನೆರವೇರಿದವು. ಮಾರು ದಿನ ಸವಾರಿಯು ೧೦ ಘಂಟೆಗೆ ಶಿಡ್ಲಘಟ್ಟಕ್ಕೆ ದಯಮಾಡಿಸಿತು. ಇತ್ತಲಾಗಿ ಈ ೩—೪ ದಿನಗಳಲ್ಲಿ ಸೇರಿದ್ದ ಲಕ್ಷಾನುಲಕ್ಷ ಪ್ರಜೆಗಳಿಗೆ ಸಾಹುಕಾರ್ ನಾಮಗಿರಿಯ್ಯನವರೇ ವೈಶ್ಯ ಮಹಾಜನರೂ ಸಮಾರಾಧನೆಗಳನ್ನು ಬಹಳ ವಿಸ್ತಾರದಿಂದ ನಡೆಸಿದರು. ಇವರ ಮೇಲ್ಪಂಕ್ತಿಯನ್ನನುಸರಿಸಿ ಆಜಾಬಾಜಿ ಗ್ರಾಮಗಳಲ್ಲಿರುವ ಪಟೇಲ ಶ್ಯಾನುಭೋಗರುಗಳೂ ಕೂಡ ಇತರ ಜನಗಳ ಅವಶ್ಯಕತೆಗಳಿಗೆ ಅನುಕೂಲ ಮಾಡಿ ಕೊಟ್ಟದ್ದು ಚನ್ನಾಗಿತ್ತು.

ಪ್ರಕಟನೆಗಳು

ಕಾರ್ಡು ಸೈಜು ೪|×೩.

ಫೋಟೋ ತೆಗೆಯುವ

ಫ್ರಾ ಕ್ಯಾಮರಾ.

84 1

ಬೆಲೆ ಪಕ್ಕ ಮೂರು ರೂಪಾಯಿ.

ಇದರಿಂದ ಬೇಕಾದ ಮನುಷ್ಯನ ಫೋಟೋ ಅವನಿಗೆ ತಿಳಿಯದಂತೆ ತೆಗೆಯಲಿಕ್ಕೆ ಬರುತ್ತದೆ. ವೇಗದಿಂದ ಓಡುವ ಗಾಡಿಯು ಮತ್ತು ಹಾರುವ ಪಕ್ಷಿಯ ಫೋಟೋ ಸಹ ತೆಗೆಯಬಹುದು. ಇದರಲ್ಲಿ ಕಲಿಯತಕ್ಕದ್ದೇನೂ ಇಲ್ಲ. ಈ ಕ್ಯಾಮರಾದ ಮಾಹಿತಿಯನ್ನು ಕೊಳ್ಳುವವರಿಗೆ ನಾವು ಕೂಡ ಲೇ ಯೇ ಮಾಡಿಕೊಡುವೆವು. ಎಷ್ಟೋ ಕಡೆಗೆ ಇದಕ್ಕೆ ೧೦ ರಿಂದ ೧೫ ರೂ. ಬೆಲೆ ಬೀಳುತ್ತದೆ. ಆದರೆ ಇದರ ಖರೀದಿ ಕಿಮ್ಮತ್ತು ೩ ರೂಪಾಯಿ ಮಾತ್ರ ಇರುವದು. ಟಪ್ಪಾಲ್ ಚಾರ್ಜ್ ೯ ಆಣೆ.

ಛೋಟಾಲಾಲ ಛಗನಲಾಲ ಮಹಾಜನ, ಠಾಕೂರದ್ವಾರ ರೋಡ, ಪೋಸ್ಟ್ ಕಾಲಬಾದೇವಿ, ಮುಂಬಯಿ.

ಅನಂತನ ದಾರಗಳು

98 1

ರೂಪಾಯಿ ೧ಕ್ಕೆ ೧೨, ೧೦, ೮, ದಾರಗಳು ಪರಸ್ಥಳಕ್ಕೆ ವಿ ಪಿ ಮೂಲಕ ರವಾನಿಸಲ್ಪಡುತ್ತೆ. ನಮ್ಮ ವಿಳಾಸ—

ಎಚ್ ಎಂ ರಾವ್ ಬ್ರದರ್ಸ್, ಚಿಕ್ಕಪೇಟೆ, ಬೆಂಗಳೂರು ಸಿಟಿ

ನಜರ್ಬಾದಿನಲ್ಲಿ ತಡ ನೋಟೀಸಿಗೆ ಜವಾಬು.

99 1

ಮೈಸೂರು ನಜರ್ಬಾದ್ ಮೊಹಲ್ಲಾದಲ್ಲಿರುವ ಮೃತಪಟ್ಟ ಬಾಲಕೃಷ್ಣಾಚಾರ್ಯಪ್ಪನ ಹೆಂಡತಿ ಗೌರಮ್ಮನು ಸಮಸ್ತರಿಗೂ ತಿಳಿಯಪಡಿಸುವುದೇನೆಂದರೆ—ಇದೇ ಸೆಪ್ಟಂಬರ್ ತಾ ೬ ನೇ ವೃತ್ತಾಂತಪತ್ರಿಕೆಯ ೩ ನೇ ಪೇಜಿನಲ್ಲಿ ಪ್ರಕಟಿಸಿರುವ ತಡೆ ನೋಟೀಸನ್ನು ನಾನು ಹಾಕಿಸಿದವಳಲ್ಲ. ಯಾರು ಹಾಕಿಸಿದರೋ ನನಗೆ ತಿಳಿಯದು. ನನ್ನ ಪ್ರೈದುಂದಿರು ೯—೯—೦೭ ರಲ್ಲಿ ಸಮಷ್ಟಿ ಆಸ್ತಿಯಾದ ಬಿಡಾರದ ಮನೆಯನ್ನು ಪಂಚಾಯತರ ಮೂಲಕ ವಿಭಾಗ ಮಾಡಿಕೊಂಡಿರುತ್ತಾರೆ. ಇದಕ್ಕಾಗಿ ಹುಟ್ಟಿದ ದಸ್ತಾವೇಜಿಗೆ ನಾನೂ ಒಪ್ಪಿ ರುಜು ಹಾಕಿರುತ್ತೇನೆ. ಸದರಿ ಮನೆಯ ಮೇಲೆ ನನ್ನ ಹಕ್ಕು ಬಾಧ್ಯತೆ ಯಾವದೂ ಇರುವದಿಲ್ಲ. ವ್ಯವಹಾರ ಚತುಷ್ಟಯಕ್ಕೂ ನನ್ನ ಪ್ರೈದುಂದಿರೇ ಬಾಧ್ಯರಾಗಿರುತ್ತಾರೆ. ನನ್ನ ಜೀವನಾಂಶಕ್ಕೆ ನನ್ನ ಗಂಡನಿಗೆ ಇದ್ದವ ನೌಕರಿಯ ಮೊಬಲಗಿನಲ್ಲಿ ಪೆನ್ಷನ್ ಪಡೆಯಲು, ನನ್ನ ಪ್ರೈದುಂದಿರಿಬ್ಬರೂ ಬರೆತಕ್ಕದ್ದು ಒಪ್ಪಿ ನಾನು ಅರಮನೆ ಕಂಟ್ರೋಲರ್ ಸಾಹೇಬ್ ಹಜೂರಿಗೆ ಕೊಟ್ಟಿರುವ ಅರ್ಜಿಗೆ ರುಜು ಹಾಕಿರುತ್ತಾರೆ.

೦ ಈ ಬಳೆ ಗುರುತು. ಗೌರಮ್ಮನವರು

ವ್ಯವಹಾರ ನಿರ್ಣಯ

53-17

ವೆಂಬ ಕನ್ನಡ ಲಾ ಪುಸ್ತಕವು

ನಾವು ಮಾಡಿಸಿದ್ದ ಪ್ರಥಮ ಮುದ್ರಣದ ೧,೫೦೦ ಪ್ರತಿಗಳೆಲ್ಲವೂ ಅವಿತರ್ಕಿತವಾಗಿ ಮೂರು ತಿಂಗಳಲ್ಲಿಯೇ ಮುಗಿದು ಹೋಗಿವೆ. ಇನ್ನೂ ಅನೇಕಗಳಾದ ಶಾಸನಗಳೂ ರೂ ವಿಧಿಗಳೂ, ಸೇರಿಸಲ್ಪಟ್ಟು, ಗುಣದಲ್ಲೂ, ಪರಿಮಾಣದಲ್ಲೂ, ಛಾಪೆಯಲ್ಲೂ, ಪ್ರಥಮ ಮುದ್ರಣಕ್ಕಿಂತಲೂ ಅತ್ಯುತ್ತಮವಾದ ದ್ವಿತೀಯ ಮುದ್ರಣವು ಪ್ರಾರಂಭವಾಗಿ ನಡೆಯುತ್ತಲಿದೆ. ಕಡಲೇ ಪೂರೈಸುವುದು. ಈ ದ್ವಿತೀಯ ಮುದ್ರಣದ ಪ್ರತಿಯನ್ನು ಅಪೇಕ್ಷಿಸಿ ನಮ್ಮಲ್ಲಿ ಬರೆದರೆ, ಅವರ ಹೆಸರನ್ನು ರಿಜಿಸ್ಟರಿಗೆ ದಾಖಲ್ಮಾಡಿಕೊಂಡು, ಮುದ್ರಣವು ಪೂರೈಸಿದ ಕೂಡಲೇ, ಮೊದಲು ಪ್ರೆಂಡ್ ಮಾಡಿಸಿ ಅವರಿಗೆ ಪ್ರತಿಯನ್ನು ರವಾನಿಸುತ್ತೇವೆ. ಕ್ರಯವು, ಪ್ರಥಮ ಮುದ್ರಣದ ಪುಸ್ತಕಕ್ಕಿಂತಲೂ ಹೆಚ್ಚುದರ ಅತಿಯಾಗಿ ಹೆಚ್ಚುವುದಿಲ್ಲ. ಪ್ರಥಮ ಮುದ್ರಣದ ಪ್ರತಿಗಳಿಗೆ ಬರೆಯಬೇಕಾದ ಅವಶ್ಯವಿಲ್ಲ.

ಎಂ. ಮಲ್ಲಾರಾಧ್ಯರು, ಫಸ್ಟ್ ಗ್ರೇಡ್ ಪ್ಲೀಡರ್,
ಶ್ರೀರಾಂಪೇಟೆ, ಮೈಸೂರು.

ಆರ್ಡರ್ ಬರುತ್ತಿವೆ! ಬೇಗ ನೋಡಿ!

ಪ್ರಪಂಚವೇ ಆಶ್ಚರ್ಯ ಪಡುವದು.

67 3

ದೊಡ್ಡ ಮನುಷ್ಯರೇ, ಹಿಂದುಸ್ಥಾನದಲ್ಲಿ ಪ್ರಕಟನೆಗಳ ಮಯವಾಗಿದೆ. ಕೆಲವು ಕಂಪನಿಯವರು ಮೋಸ ಮಾಡೋಣದರಿಂದ ಪ್ರಕಟನೆಯನ್ನು ಕಂಡು ಜನರು ಅಸಹ್ಯಪಟ್ಟು ಎಸೆಯುತ್ತಾರೆ. ಸತ್ಯವಂತರ ಪ್ರಕಟನೆಯನ್ನು ಕೂಡ ನಂಬುವದು ಕಷ್ಟ. ಯದ್ಧಕಷ್ಟ ಕಂಪನಿಯ ನೋಟೀಸುಗಳನ್ನು ಸಕ್ಕರೆ ಔಷಧಿ ಕಟ್ಟುವ ದಕ್ಕೆ ಕೊಟ್ಟು ಬಿಡುವರು. ಆದರೆ ನಾನಿಯರೇ, ನಮ್ಮ ಕಂಪನಿಯ ಯೋಗ್ಯತೆಯನ್ನು ಒಂದಾವರ್ತಿ ಪರೀಕ್ಷಿಸಿ ನೋಡಿ. ಈ ಪ್ರಕಟನೆಯು ನವೀನವಾದದ್ದು, ಆಶ್ಚರ್ಯಕರವಾದದ್ದು. ನಾವು ೩೦ ಗಂಟೆ ನಡೆಯುವ ಶಾಶ್ವತವಾದ ಐದು ವರುಷದ ಗ್ಯಾರಂಟಿ ಉಳ್ಳ ಲೀವರ್ ಗಡಿಯಾರವನ್ನು ೫೧ ಬಹು ಜನರಿಗೆ ಕಳುಹಿಸುತ್ತೇವೆ. ಇದರಲ್ಲಿ ಸತ್ಯವಾದ ಕಂಪನಿಯ ಕೆಲ ಮಚ್ಛೆಗಳೆಂಬುವದೇನೆಂದರೆ ನಮ್ಮ ಮುಖ್ಯ ಉದ್ದೇಶ ಒಂದಾವರ್ತಿ ಸಾಮಾನು ತರಿಸಿ ನಮ್ಮ ಸತ್ಯತೆಯನ್ನು ಪರೀಕ್ಷೆಮಾಡಿ. ಗಡಿಯಾರದ ಕೂಡ ನಾವು ಕಳುಹಿಸುವ ಬಹುಮಾನಗಳೇನೆಂದರೆ—ಒಂದು ಗಡಿಯಾರ, ಬಲವಾದದ್ದು ೩೦ ಗಂಟೆ ನಡೆಯುವದು, ಒಂದೆ ಎರಡು ಮುಖ್ಯ ಪರೀಕ್ಷೆಯಿಂದ ಸರಿ ಮಾಡಿದ್ದು, ಒಂದು ಸೊಗಸಾದ ಸರಪಳಿ, ಐದು ವರುಷದ ಗ್ಯಾರಂಟಿ ಉಳ್ಳದ್ದು, ಒಂದು ಸೊಗಸಾದ ಗ್ಯಾರಂಟಿ ಸರಪಳಿ ಅನೇಕ ಬೀಗದ ಕೈ ಉಳ್ಳ ಬಲವಾದ ಇಂಗ್ಲಿಷ್ ಪೆಟ್ಟಿಗೆ, ಒಂದು ದುಸ್ತ ಪರಾಯಿ ಒಂದು ದೊಡ್ಡ ಜುಬ್ಬ, ಒಂದು ಸೊಗಸು ಎಷ್ಟು ಸಾಗದ ಒಂದು ತಿಂಗಳು ಉರಿಯುವ ಹೊಸ ದೀಪ, ಒಂದು ಬಾರಿ ಒಂದಾವರ್ತಿ ಕಾಗದ ತುಂಬಿದರೆ ಅನೇಕ ದಿನಗಳ ತನಕ ಬರೆಯುವ ಫೌಂಟನ್ ಪೆನ್, ಒಂದು ಜೋಡಿ ಗೊಂಬೆ ಕೋಲುಬೇ, ಬಲವಾದ ದಂತದ ಕೈಪಿಡಿಯುಳ್ಳ ಚಾಕು ಒಂದು ದೊಡ್ಡ ಕತ್ತರಿ, ಒಂದು ದೊಡ್ಡ ಚಿನ್ನದ ಮುದ್ದುಹಾಕಿರುವ ಬೇಲ ಒಳ್ಳೆ ರಿಂಗ್ ದಂತದ ಕನ್ನಡಿ, ಕೂದಲು ಬಾಚಿಕೊಳ್ಳುವ ಬಾಚಣಿಗೆ ಸೊಗಸಾದ ಒಂದು ಸೆಟ್ ಗುಂಡಿಗಳು, ಒಂದು ಸೊಗಸಾದ ಕನ್ನಡಕ, ಒಂದು ಸಾಬೂನು ಪೆಟ್ಟಿಗೆ, ಒಂದು ಸಾಬೂನು ದಬ್ಬಿ, ಒಂದು ಕೈವಸ್ತ್ರ, ಎಂದಿಗೂ ಹೊಳೆಯುವ ಚೆಂದದ ಚೆಪ್ಪಲು, ಒಂದು ಚಿಬ್ಬರು ಸುಂದರವಾದ ಗೊಂಬೆ ಚಿತ್ರಗಳು, ಒಂದು ಪೆನ್ಸಿಲ್ ಬರೆಯುವದು, ೧೨ ಲೇಸುಪಟ್ಟಿಗಳು, ೩ ಕಪ್ಪು ಪೆನ್ಸಿಲುಗಳು, ೧೨ ಲಕೋಟೆಗಳು, ೧೨ ಲೆಟರ್ ಪೇಪರುಗಳು, ಪೋಸ್ಟ್ ರೂಲಿಗೆ ಅನುಸಾರವಾದ ೧೦೦ ಪೋಸ್ಟ್ ಕಾರ್ಡುಗಳು, ೭೩ ಸ್ಟೀಲ್ ಮುಳ್ಳುಗಳು.

ಇಷ್ಟಕ್ಕೆಲ್ಲಾ ಕ್ರಯ ರೂ. ೩—೯—೦ ಮಾತ್ರವೇ.

ಆರ್ಡರ್ ಹಣ ಅಡ್ವಾನ್ಸ್ ಮನಿಆರ್ಡರ್ ಬಂದಲ್ಲಿ ಉಳಿದ ಆರ್ಡರ್‌ಕ್ಕೆ ವಿ. ಪಿ. ಮಾಡುತ್ತೇವೆ. ಒಪ್ಪದಿದ್ದರೆ ಹಣ ವಾಪಸು ಕಳುಹಿಸುವೆವು.

ಈ ವಿಳಾಸಕ್ಕೆ ಬೇಗ ಬರೆಯಿರಿ:--

ಎಂ. ಎ. ಘಟಾಲಾಲ ಮತ್ತು ಕಂಪನಿ,
ಚಿತ್ತೂರು, ಉತ್ತರ ಆರ್ಕಾಟು.

ಅಲ್ಪಸಂಗತಿಗಳ ವಿಷಯ ವಿಪರೀತ ಸಂಭಾವನೆ.

ಶ್ರೀಮುರುಘರಾಜೇಂದ್ರ ಸ್ವಾಮಿಗಳವರು ಪಾಲಕಿಯಲ್ಲಿ ಕುಳಿತು ತಮ್ಮ ಶಿಷ್ಯಮಂಡಲಿಯೊಂದಿಗೆ ಚಿತ್ರದುರ್ಗದ ಪಟ್ಟಣವನ್ನು ಪ್ರವೇಶ ಮಾಡಿದರೆಂದು ವಾಚಕಮಹಾಶಯರು ತಿಳಿದಿರುವರು. ಇಂಥಾ ನೂತನ ಪುರಪ್ರವೇಶವು ವೀರಶೈವ ಮತಸ್ಥರಿಗೂ ಬ್ರಾಂಹ್ಮಣರಿಗೂ ಒಂದು ದೊಡ್ಡ ಜಗಳವನ್ನು ತಂದಿಟ್ಟಿರುವುದು. ಸುಮಾರು ಎಪ್ಪತ್ತು ವರುಷಗಳ ಹಿಂದೆ ಸ್ವಾಮಿಗಳು ಗುರುಮರ್ಯಾದೆಗಳಿಂದ ಕೂಡಿದ ಆಟ್ಟಹಾಸದ ಮೆರವಣಿಗೆಯಲ್ಲಿ ಪುರಪ್ರವೇಶ ಮಾಡಬಾರದೆಂದು ಸರ್ಕಾರದವರು ನಿರ್ಬಂಧ ಮಾಡಿದ್ದರಂತೆ. ಅದರಿಂದೀಚೆಗೆ ಇವರ ವಿಷಯದಲ್ಲಿ ವೀರಶೈವರು ಸರ್ಕಾರಕ್ಕೆ ಅರ್ಜಿ ಬರೆದುಕೊಂಡರು. ಸರ್ಕಾರದವರು ಎಲ್ಲವನ್ನು ಪರ್ಯಾಲೋಚಿಸಿ ಗುರುಗಳು ತಮ್ಮ ಸ್ಥಾನಕ್ಕೆ ಯೋಗ್ಯವಾದ ಮರ್ಯಾದೆಗಳಿಂದ ಕೂಡಿ ಮೆರವಣಿಗೆಯಲ್ಲಿ ಪುರಪ್ರವೇಶಮಾಡಬಹುದೆಂದು ಅಪ್ಪಣೆ ಕೊಟ್ಟರು. ಇಂಥಾ ಅಪ್ಪಣೆಯನ್ನನುಸರಿಸಿ ಕಳೆದ ಆಗಸ್ಟ್ ತಿಂಗಳು ೨೫ ನೇ ತಾರೀಖಿನಲ್ಲಿ ಶ್ರೀಜಗದ್ಗುರುಗಳಾದ ಮುರುಘರಾಜೇಂದ್ರ ಸ್ವಾಮಿಗಳವರು ಪಾಲಕಿಯಲ್ಲಿ ಕುಳಿತು ಬಹು ವಿಜೃಂಭಣೆಯಿಂದ ಚಿತ್ರದುರ್ಗವನ್ನು ಪ್ರವೇಶಮಾಡಿದರು. ಈ ಕಾರ್ಯಗಳ ವಿಷಯ ಒಂದು ಮತಸ್ಥರು ಮತ್ತೊಂದು ಮತಸ್ಥರೊಂದಿಗೆ ವೈಶಮ್ಯದಿಂದ ಜಗಳವಾಡುವುದಕ್ಕೆ ಕಾರಣವೇನೋ ನಮಗೆ ತಿಳಿಯದು. ಇಂತು ಇದು ವಿಷಾದಿಸತಕ್ಕ ಸಂಗತಿಯಾಗಿದೆ.

ಸರ್ಕಾರದ ರಸ್ತೆಗಳನ್ನು ಪ್ರಯೋಗಿಸುವುದಕ್ಕೆ ಎಲ್ಲರೂ ಸ್ವಾತಂತ್ರ್ಯವನ್ನು ಪಡೆದಿರುತ್ತಾರೆ. ಅವುಗಳಲ್ಲಿ ಇಂಥವರೇ ಮೆರವಣಿಗೆ ಮಾಡಬೇಕೆಂತಲೂ ಇಂಥವರೇ ಮಾಡಬಾರದೆಂತಲೂ ಯಾವ ಸರ್ಕಾರದ ನಿರ್ಬಂಧವೂ ಇಲ್ಲವೆಂದು ನಮಗೆ ತೋರುತ್ತದೆ. ಮೆರವಣಿಗೆಗಳಲ್ಲಿ ಗುಂಪುಕಟ್ಟಿಕೊಂಡು ದೊಂಬಿ ಮಾಡುವುದಾಗಲಿ ಅಥವಾ ರಸ್ತೆಗಳಲ್ಲಿ ತಿರುಗುವ ಬೇರೆ ಜನಗಳಿಗೆ ಹಿಂಸೆ ಮಾಡುವುದಾಗಲಿ ಕಂಡುಬಂದರೆ ಅಂಥಾ ಮೆರವಣಿಗೆಗಳನ್ನು ತಡೆಯುವುದು ಸರ್ಕಾರದವರ ಕರ್ತವ್ಯವಾಗಿರುತ್ತದೆ. ವೀರಶೈವರು ತಮ್ಮ ಗುರುಗಳನ್ನು ಮರ್ಯಾದಾಪೂರ್ವಕವಾಗಿ ಮೆರವಣಿಗೆ ಮಾಡಿಸಿಕೊಂಡು ಬಂದರೆ ಅಂಥಾ ಕಾರ್ಯದಿಂದ ಯಾರಿಗೂ ಯಾವ ವಿಧವಾದ ತೊಂದರೆಯಾಗುವ ಪ್ರಮೇಯವಿಲ್ಲವೆಂದು ನಮಗೆ ತೋರುತ್ತದೆ. ಅದೂ ಅಲ್ಲದೆ ಒಂದು ಮತದ ಗುರುವಿಗೆ ಎಷ್ಟೇ ಅಧಿಕಾರವಿದ್ದರೂ ಅಂಥಾ ಅಧಿಕಾರವನ್ನು ತನ್ನ ಗುರುಪೀಠಕ್ಕೆ ಸೇರಿದವರ ಮೇಲೆ ತೋರಿಸಬೇಕೇ ಹೊರತು ಬೇರೆ ಮತಸ್ಥರ ಮೇಲೆ ಚಲಾಯಿಸುವದು ಅಸಾಧ್ಯವು. ಅಂಥಾ ಕಾರ್ಯವನ್ನು ಯಾರೂ ಒಪ್ಪಲಾರರು. ವೀರಶೈವರೆಲ್ಲರೂ ಈ ವಿಷಯ ಚೆನ್ನಾಗಿ ತಿಳಿದುಕೊಂಡಿರುವರೆಂದು ನಾವು ನಂಬುತ್ತೇವೆ. ಜನರು ಸತ್ಯಕ್ಕೆ ಸಂಬಂಧಪಟ್ಟ ಕಾರ್ಯಗಳ ವಿಷಯ ಹೆಚ್ಚಾದ ಗಮನ ಕೊಡದೆ ಅಲ್ಪವಿಷಯಗಳಾದ ಪಾಲಕಿ, ವಾದ್ಯ, ಬಿರುದಾವಳಿಗಳು, ಇವುಗಳನ್ನು ಕುರಿತು ಚರ್ಚಿಸುವರು. ಅನೇಕವೇಳೆ ಪರಸ್ಪರ ಜಗಳವಾಡಿ ಕೋರ್ಟು ಕಚೇರಿಗಳನ್ನು ಹತ್ತುವರು. ದೇಶದೇಳಿಗೆಯನ್ನು ಕೋರುವ ದೇಶಾಭಿಮಾನಿಗಳು ಇಂಥಾ ಕಿತ್ತಾಟಗಳನ್ನು ನೋಡಿ ವಿಷಾದಿಸುವದು ಅವರ ಕರ್ತವ್ಯವಾಗಿರುತ್ತದೆ. ಪೂರ್ವಕಾಲದಲ್ಲಿ ಆಚಾರಶೀಲರಾಗಿದ್ದ ಫರಿಸಾಯರೆಂಬ ಒಂದು ಸಂಗಡದ ಜನರು ತಮಗಿದ್ದ ಎಲ್ಲವುಗಳಲ್ಲಿ ಒಂದು ಪಾಲನ್ನು ದೇವಸ್ಥಾನಕ್ಕೆ ಕಾಣಿಕೆಯಾಗಿ ಅರ್ಪಿಸುತ್ತಿದ್ದರು. ಅವರೇನು ಅವರಲ್ಲಿದ್ದ ಕಾಠಿಣ್ಯವನ್ನೂ ಸ್ವಾರ್ಥತೆಯನ್ನೂ ಅಸತ್ಯತೆಯನ್ನೂ ಯೇಸುಕ್ರಿಸ್ತನು ಕಂಡು ಅವರಿಗೆ ಈ ರೀತಿಯಾಗಿ ತಿಳಿಸಿದನು: "ಅಯ್ಯೋ ಕಪಟಿಗಳಾದ ಶಾಸ್ತ್ರಿಗಳೇ, ಫರಿಸಾಯರೇ, ನೀವು ಮರುಗ ಸೋಂಪು ಜೀರಿಗೆಗಳಲ್ಲಿ ಹತ್ತರಲ್ಲೊಂದು ಪಾಲು ಕೊಡುತ್ತೀರಿ, ಆದರೆ ಧರ್ಮಶಾಸ್ತ್ರದಲ್ಲಿ ಗೌರವವಾದವನ್ನು, ಅಂದರೆ ನ್ಯಾಯವನ್ನೂ ಕರುಣೆಯನ್ನೂ ನಂಬಿಕೆಯನ್ನೂ ಬಿಟ್ಟುಬಿಟ್ಟಿರಿ"

ಹಾಗಾದರೆ ಬ್ರಾಂಹ್ಮಣರೂ ಲಿಂಗಾಯತರೂ ಎಲ್ಲರೂ ಯೋಚಿಸತಕ್ಕ ಮುಖ್ಯ ಸಂಗತಿಗಳಾವುವು? ಅಭಿವೃದ್ಧಿಗೆ ಅನ್ಯೋನ್ಯವೇ ಕಾರಣ. ಹಿಂದೂ ದೇಶಸ್ಥರೆಲ್ಲರೂ ಯೋಚಿಸತಕ್ಕ ಮೊದಲನೇ ಸಂಗತಿ ಯಾವುದೆಂದರೆ—ವಿದ್ಯಾಭಿವೃದ್ಧಿ. ನಮ್ಮ ದೇಶದ ಅನೇಕಲಕ್ಷ ಜನರು ವಿದ್ಯೆಯಿಲ್ಲದ ಮೂಢರಾಗಿರುತ್ತಾರೆ. ಇವರಲ್ಲಿ ಲೌಕಿಕವಿದ್ಯೆಯು ಶೂನ್ಯವಾಗಿರುವುದಲ್ಲದೆ ಪಾರಮಾರ್ಥಿಕಜ್ಞಾನವೂ ಕೂಡ ಇಲ್ಲದೆ ಇರುತ್ತದೆ. ಇಂಥವರಿಗೆ ವಿದ್ಯಾದಾನಮಾಡುವುದು ವಿದ್ಯಾವಂತರ ಕರ್ತವ್ಯವಾಗಿರುತ್ತದೆ. ಎರಡನೇ ಸಂಗತಿಯು ಯಾವದೆಂದರೆ—ಎಲ್ಲಾ ದುಷ್ಟಪದ್ಧತಿಗಳ ವಿಸರ್ಜನೆ. ಲಜ್ಜೆಯನ್ನುಂಟುಮಾಡುವ ವಿಗ್ರಹಗಳೂ ಚಿತ್ರಗಳೂ ಅನೇಕ ದೇವಸ್ಥಾನಗಳಲ್ಲಿರುವುದು ಸಾಧಾರಣವಷ್ಟೆ. ಪವಿತ್ರನಾದ ದೇವರನ್ನು ಪೂಜಿಸುವ ಸ್ಥಳಗಳಲ್ಲಿ ಇಂಥಾ ಅಸಹ್ಯಗಳು ಇದ್ದರೆ ಅವನು ಅವುಗಳನ್ನಾಗಲೀ ಅಥವಾ ಅವುಗಳನ್ನು ಮಾಡಿದವರನ್ನಾಗಲೀ ಮೆಚ್ಚುವನೋ? ಎಂದಿಗೂ ಮೆಚ್ಚಲಾರನು. ಎಲ್ಲಾ ಅಬದ್ಧ ಕಥೆಗಳನ್ನು ವಿಸರ್ಜಿಸಿ ತಂದೆಯಾಗಿರುವ ದೇವರಿಗೆ ಪ್ರಾರ್ಥಿಸುವದು ನಿಜಭಕ್ತರ ಲಕ್ಷಣವಾಗಿದೆ. ಮೂರನೇ ಸಂಗತಿ ಯಾವದೆಂದರೆ ಪ್ರತಿಯೊಬ್ಬನೂ ಪವಿತ್ರನಾಗಿರಬೇಕು. ಕ್ರೋಧ, ಮೋಹ, ಮದ, ಮತ್ಸರ, ಇವೇ ಮುಂತಾದ ದುರ್ಗುಣಗಳನ್ನು ತ್ಯಜಿಸಿ ಪಾವನನಾಗಬೇಕು. ಎಲ್ಲರಲ್ಲಿಯೂ ಏಕ ರೀತಿಯಾಗಿ ನೀತಿಯನ್ನನುಸರಿಸುವುದೂ ಕಷ್ಟದಲ್ಲಿ ಬಿದ್ದವರನ್ನು ಕಾಪಾಡುವುದೂ ಬಂಕೆಯಲ್ಲಿ ಮುಳುಗಿದವರನ್ನು ಆದರಿಸುವುದೂ ಗುಣಾಢ್ಯರ ಭೂಷಣವಾಗಿರುತ್ತದೆ. ಅಲ್ಪಕಾರ್ಯಗಳ ವಿಷಯ ಜಗಳವಾಡುವುದು ಮಕ್ಕಳ ಕೆಲಸವಾಗಿದೆ. ಆದರೆ ಭೂಲೋಕದಲ್ಲಿ ಸತ್ಯತೆಯನ್ನು ಸ್ಥಾಪಿಸುವುದಕ್ಕೆ ಪ್ರಯತ್ನಪಡುವವನೇ ಧೀರನು.

ಬಾತ್ಮೀದಾರರಿಗೆ ನೋಟೀಸು

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ನಿಗಾ ಕೊಡಲಾರೆವು.

ಬಾತ್ಮಿದಾರರು ಪತ್ರುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿಟರ್.

ರಿಫಾರಂ—ಜೆಗ್ಗದದೇವನ ಕೋಟೆ, ಮಹಾತ್ಮ—ಮಾವಿನಕೆರೆ, ಜೊ ನ ಭ—ಅರಕಲಗೂಡು, ಯಥಾರ್ಥವಾದಿ—ಆರಗ, ಹಿತಚಿಂತಕ—ನೆಲಕೋಟೆ, ಎಚ್ ನಾರಾಯಣಶಾಸ್ತ್ರಿ—ಬೆಂಗಳೂರು.—ಈ ಬಾತ್ಮಿಗಳನ್ನು ಪ್ರಕಟಿಸಲಾರೆವೆಂದು ತಿಳಿಸಲು ವಿಷಾದಿಸುತ್ತೇವೆ

—ಎಡಿ।

ಕರೆಸ್ಪಾಂಡೆನ್ಸ್

ಒಕ್ಕಲಿಗರ ಸಂಘದ ವಿಚಾರವು

ಅಯ್ಯಾ,

ತಮ್ಮ ಆಗಸ್ಟ್ ೨೯ ಮತ್ತು ಸೆಪ್ಟಂಬರು ೫ ನೆ ತಾರೀಖುಗಳ ಪತ್ರಿಕೆಯಲ್ಲಿ ಇಬ್ಬರು ಬಾತ್ಮಿದಾರರು ನಮ್ಮ ಸಂಘದ ವಿಚಾರವಾಗಿ ಬರೆದಿದ್ದ ಲೇಖನಗಳನ್ನು ನೋಡಿ ನಮಗೆ ಬಹಳ ಸಂತೋಷವಾಯಿತು. ವಿದ್ಯಾವಂತರಾದ ಒಕ್ಕಲಿಗರೆಲ್ಲರೂ ಸಂಘದ ವಿಷಯವಾಗಿ ಆದರವನ್ನಿಟ್ಟುಕೊಂಡು ಅದರ ಉದ್ದೇಶಗಳು ಸಫಲವಾಗುವುದಕ್ಕಾಗಿ ಹಾರೈಸುತ್ತಿರುವುದು ಬಹಳ ಶುಭಸೂಚಕವಾಗಿರುತ್ತದೆ. ಇವರ ಉತ್ಸಾಹವು ಇದೇ ರೀತಿ ಹೆಚ್ಚಿ ಎಲ್ಲರು ಸಂಘದ ಅಭಿಮತಗಳನ್ನು ಸರಿಯಾಗಿ ಅರಿತುಕೊಂಡು, ಅವರವರ ತಮ್ಮ ಸಹೋದರ ಒಕ್ಕಲಿಗರೆಲ್ಲರಿಗೂ ಸಂಘದ ವಿಚಾರವನ್ನು ಬೋಧಿಸಿ, ಸರ್ವರ ಐಕಮತ್ಯವನ್ನೂ ಸಂಪಾದಿಸಿ ಕೊಡುವರೆಂದು ಮುಖ್ಯ ಸಂಘದವರು ಪೂರ್ಣವಾಗಿ ನಂಬಿರುತ್ತಾರೆ. ಆದಕಾರಣ ಬರುವ ಒಕ್ಕಲಿಗರ ಎರಡನೇ ಮಹಾಸಭೆಯ ವಿಚಾರವಾಗಿ ಕೆಲವು ಸಂಗತಿಗಳನ್ನು ಸಂಕ್ಷೇಪವಾಗಿ ಈ ಮೂಲಕ ಅವರಿಗೆ ತಿಳಿಯಪಡಿಸಲು ಅಪ್ಪಣೆಯಾಗಿದೇನೆ.

ಈ ಸಭೆಯು ಶ್ರೀಮನ್ಮಹಾರಾಜರವರ ಮತ್ತು ದಿವಾನ್ ಸಾಹೇಬರವರ ಕರುಣೆಯಿಂದ ಬರುವ ಅಕ್ಟೋಬರು ತಿಂಗಳಲ್ಲಿ ಮೈಸೂರು ಜಗನ್ಮೋಹನ ಅರಮನೆಯ ಸಭಾಮಂಟಪದಲ್ಲಿ ನಡೆಯುವುದು. ಮೊದಲನೇ ದಿನ ಶ್ರೀಮನ್ಮಹಾರಾಜರವರು ಸ್ವತಃ ಸಭೆಗೆ ದಯಮಾಡಿಸಿ ಸಭೆಯನ್ನು ಆರಂಭಿಸುವಂತೆ ಅನುಜ್ಞೆಯನ್ನು ದಯಪಾಲಿಸಿರುವರು. ಆ ಕಾಲದಲ್ಲಿ ಮೈಸೂರು ಸಂಸ್ಥಾನದ ಒಕ್ಕಲಿಗ ಪ್ರಜೆಗಳ ಪರವಾಗಿ ಒಂದು ವಿಜ್ಞಾಪನಾ ಪತ್ರಿಕೆಯು ಸುಮಾರು ಒಂದು ಸಾವಿರ ರೂಪಾಯಿಗಳ ಬೆಲೆ ಬಾಳುವ ಸುಂದರವಾದ ಭಂಗಾರ ಮತ್ತು ಬೆಳ್ಳಿಯಿಂದ ತಯಾರಾದ ಪೆಟ್ಟಿಗೆಯಲ್ಲಿ ಇರಿಸಲ್ಪಟ್ಟು ಶ್ರೀಮನ್ಮಹಾರಾಜರವರ ಸನ್ನಿಧಿಯಲ್ಲಿ ಸಮರ್ಪಿಸಲ್ಪಡುವುದು.

ಮುಖ್ಯ ಸಂಘದ ಪ್ರೆಸಿಡೆಂಟರು ಮತ್ತು ವೈಸ್ ಪ್ರೆಸಿಡೆಂಟರು ಸಹ ತಾವು ಸಂಘವನ್ನು ಊರ್ಜಿತಪಡಿಸುವುದಕ್ಕೋಸ್ಕರ ಸಾಗ್ಯಾನ ಮಾಡಿರುವ ದ್ರವ್ಯವನ್ನು ಸಭೆಯಲ್ಲಿ ಸಂಘಕ್ಕೆ ಒಪ್ಪಿಸುವರು. ಸಂಘಕ್ಕೆ ಕೊಡಲ್ಪಡುವ ಹಣವು ದುರುಪಯೋಗವಾಗುತ್ತದೆಂಬ ಭೀತಿಯನ್ನಿಟ್ಟವರು ಸಂಘಕ್ಕೆ ಸಹಾಯಮಾಡಲು ಮುಂದೆಬಾರದೆ ಹಿಂತೆಗೆಯಬಾರದೆಂಬ ಘನ ಉದ್ದೇಶದಿಂದಲೇ ಈ ಮಹನೀಯರು ಈ ರೀತಿ ಬಹಿರಂಗವಾಗಿ ದ್ರವ್ಯವನ್ನು ಕೊಡಲು ಸಮ್ಮತಿಸಿಟ್ಟಿರುವದಲ್ಲದೆ ಆತ್ಮಪ್ರತಿಷ್ಠೆಗೋಸ್ಕರವಾಗಿ ಅಲ್ಲವೆಂದು ಸರ್ವರೂ ದಯವಿಟ್ಟು ನೆನಪಿನಲ್ಲಿಡಬೇಕೆಂದು ಸಂಘದವರು ಪ್ರಾರ್ಥಿಸುತ್ತಾರೆ. ಸಂಘಕ್ಕೆ ಈ ಪ್ರಕಾರವಾಗಿ ದ್ರವ್ಯಸಹಾಯವಾಗುವುದನ್ನು ಕೇಳಿ ಸಂಘದವರ ವಿಚಾರವಾಗಿ ಭೀತಿಯನ್ನು ಕಳೆದುಕೊಂಡ ಮಹನೀಯರೆಲ್ಲರೂ ಮುಂದೆಬಂದು ಸಂಘಕ್ಕೋಸ್ಕರವಾಗಿ ಯಥೇಚ್ಛವಾಗಿ ಸಹಾಯಮಾಡುವುದಕ್ಕೆ ಅನುಕೂಲವಾದ ಸಮಯವು ಈಗ ದೊರಕಿರುತ್ತದೆಂದು ಸೂಚಿಸುತ್ತೇವೆ. ಸಂಘದ ಉದ್ದೇಶಗಳನ್ನು ಜಾಗ್ರತೆಯಾಗಿ ಈಡೇರಿಸಬೇಕಾಗಿರುವುದರಿಂದ ಎಷ್ಟು ಜಾಗ್ರತೆಯಾಗಿ ಸಹಾಯವು ದೊರಕಿದರೆ ಅಷ್ಟು ಒಳ್ಳೇದಾಗುವುದು. ಆದಕಾರಣ ಒಂದು ಸಾವಿರ ರೂಪಾಯಿಗೆ ಮೇಲ್ಪಟ್ಟ ದ್ರವ್ಯವನ್ನು ಕೊಡಲಿಚ್ಛೆಯುಳ್ಳವರೆಲ್ಲರೂ ಮೇಲ್ಕಂಡ ಮಹನೀಯರ ಮೇಲ್ಪಂಕ್ತಿಯನ್ನು ಅನುಸರಿಸಿದಲ್ಲಿ ಬಹಳ ಉಪಕಾರ ಮಾಡಿದಂತಾಗುವುದು.

ಸಂಘವು ಚಿರಸ್ಥಾಯಿಯಾಗಿ ನಡೆಯುವುದಕ್ಕೋಸ್ಕರ ಅದಕ್ಕೆ ದ್ರವ್ಯವನ್ನು ಕೊಟ್ಟಂಥಾವರನ್ನು ಜ್ಞಾಪಕದಲ್ಲಿಡುವುದಕ್ಕಾಗಿ ಅವರ ಹೆಸರಿನಲ್ಲಿ ಕಟ್ಟಡವನ್ನು ಕಟ್ಟಿಸುವುದು, ಅವರ ಭಾವ ಪ್ರತಿಮೆಗಳನ್ನು ಇಡಿಸುವುದು, ಅವರ ತಸ್ವೀರುಗಳನ್ನು ಬರೆಸಿ ಇಡುವುದು ಸಹ ಯಾವ ಜನಾಂಗದವರೂ ಮಾಡದೇ ಇರುವ ಹೊಸ ಪದ್ಧತಿಯಲ್ಲ. ಆದಕಾರಣ ನಮ್ಮ ಸಂಘವನ್ನು ಊರ್ಜಿತಪಡಿಸಿದಂಥಾ ಮಹನೀಯರು ಯಾರ್ಯಾರೆಂಬುದನ್ನು ಜ್ಞಾಪ್ತಿಯಲ್ಲಿಟ್ಟುಕೊಳ್ಳುವುದಕ್ಕೆ ಉಪಾಯವನ್ನು ಕಲ್ಪಿಸುವುದರಿಂದ ಉತ್ತರೋತ್ತರ ಆ ದೊಡ್ಡಮನುಷ್ಯರ ಹೆಸರು ಶಾಶ್ವತವಾಗಿ ನಿಲ್ಲುವುದಕ್ಕೂ ಮತ್ತು ಉತ್ತರೋತ್ತರ ಹುಟ್ಟುವ ಜನರಿಗೆ ಸ್ಪರ್ಧೆಯನ್ನುಂಟುಮಾಡಿ ತನ್ಮೂಲಕ ಸಂಘವು ಸಾರೋದ್ಧಾರವಾಗಿ ನಡೆದುಕೊಂಡು ಬರುವುದಕ್ಕೂ ಕಾರಣವಾಗುತ್ತದೆ. ಆದುದರಿಂದ ನಮ್ಮ ಸಂಘಕ್ಕೆ ಹೆಚ್ಚು ದ್ರವ್ಯವನ್ನು ಕೊಡುವಂಥವರ ಛಾಯಾಪಟಗಳನ್ನು (ಫೋಟೋಗಳನ್ನು) ಮಾಡಿಸಿ ಅವುಗಳನ್ನೆಲ್ಲಾ ಸೇರಿಸಿ ಪುಸ್ತಕರೂಪವಾಗಿ ಮಾಡಿ ಆ ಪುಸ್ತಕವನ್ನು ಎಲ್ಲರಿಗೂ ಕೊಡಿಸಬೇಕೆಂದು ನಿಶ್ಚಯಿಸಲಾಗಿದೆ. ಸಾವಿರ ರೂಪಾಯಿಗೆ ಮೇಲ್ಪಟ್ಟ ದ್ರವ್ಯವನ್ನು ಕೊಡಲಿಚ್ಛೆಯುಳ್ಳವರು ತಸ್ವೀರುಹಾಕಿಸಿಕೊಳ್ಳಬಯಸಿದ್ದರಿಂದ ಅಂಥವರು ಸಂಘದ ಜನರಲ್ ಸೆಕ್ರೆಟರಿಯವರಿಗೆ ಬರೆದು ವಿವರವನ್ನು ತಿಳಿಯಬಹುದು.

ಪರಸ್ಥಳದಿಂದ ದಯಮಾಡಿಸುವ ಇವರೆಲ್ಲರಿಗೂ ಸಭೆಯು ನಡೆಯುವ ಮೂರು ದಿವಸಗಳೂ ಮ॥ ರಾ॥ ಅಕ್ಕಿ ಅಂಗಡಿ ಮರಿಯಣ್ಣನವರು ಭೋಜನಾದಿ ಸೌಕರ್ಯಗಳನ್ನು ಒದಗಿಸುವರು.

ಮಹಾಸಭೆಯು ಅರಮನೆಯಲ್ಲಿ ನಡೆಯುವುದರಿಂದ ಟಿಕೇಟುಗಳ ಮೂಲಕ ಜನರನ್ನು ಒಳಗೆ ಬಿಡಬೇಕೆಂದು ನಿಶ್ಚಯಿಸಿದೆ. ಆದಕಾರಣ ಸಭೆಯು ಪ್ರಾರಂಭವಾಗುವುದಕ್ಕೆ ಮುಂಚೆ ೮ ದಿವಸಗಳಿಂದ ಈ ಟಿಕೇಟುಗಳು ವೈಸ್ ಗಲ್ಲಿ ದೇವರಾಜ ಮಾರ್ಕೆಟ್ಟಿನ ಮಹಡಿಯಲ್ಲಿರುವ ಒಕ್ಕಲಿಗರ ಬ್ರಾಂಚ್ ಸಂಘದ ಆಫೀಸಿನಲ್ಲಿ ಒಕ್ಕಲಿಗ ಮಹಾಜನರಿಗೆ ಉಚಿತವಾಗಿ ಕೊಡಲ್ಪಡುವವು. ಮಹಾಸಭೆಯಲ್ಲಿ ಪ್ರತಿಯೊಬ್ಬರಲ್ಲೂ ಚಂದಾ ಹಣಕ್ಕೋಸ್ಕರ ಯಾಚನೆ ಮಾಡಿಕೊಳ್ಳುವುದು ದುರ್ಲಭವಾಗಿರುವದರಿಂದ, ಸಂಘಕ್ಕೆ ಮೊದಲೇ ಚಂದಾ ಹಾಕಿರುವವರೂ ಮತ್ತು ಮುಂದೆ ಹಾಕತಕ್ಕವರೂ ಸಹ ತಮ್ಮ ತಮ್ಮ ಚಂದಾ ಮೊಬಲಗುಗಳನ್ನು ದಯವಿಟ್ಟು ಟಿಕೇಟುಗಳನ್ನು ಪಡೆಯುವ ಕಾಲದಲ್ಲಿ ಪಾವತಿ ಮಾಡಿ ರಶೀತಿಗಳನ್ನು ಪಡೆದು ಉಪಕಾರ ಮಾಡಬೇಕೆಂದು ಪ್ರಾರ್ಥಿಸುತ್ತೇವೆ. ಮತ್ತು ಕೆಲವರು ಟಿಕೇಟು ದೊರೆಯುತ್ತದೆ ಎಂಬ ಭೀತಿಯನ್ನು ಯಾರೂ ಇಟ್ಟುಕೊಳ್ಳಬಾರದು. ನಿರ್ಬಂಧದಿಂದ ಹಣವನ್ನು ವಸೂಲ್ಮಾಡುವುದು ಸಂಘದವರ ಅಭಿಮತವಾಗಿಲ್ಲ. ಪರಂತು ಒಕ್ಕಲಿಗರಲ್ಲಿ ಪ್ರತಿಯೊಬ್ಬರೂ ತಮ್ಮ ಚೈತನ್ಯಾನುಸಾರವಾಗಿ ಸ್ವಲ್ಪವಾದರೂ ಸಹಾಯಮಾಡಿದರೆ ಬಹಳ ಉಪಕಾರವಾಗುತ್ತದೆಂದು ಈ ಮೂಲಕ ಕೃತಜ್ಞತೆಪಡಿಸುತ್ತೇವೆ.

ಈ ಲೇಖನದಲ್ಲಿ ಕಾಣಿಸಿರುವ ವಿಷಯಗಳನ್ನು ಓದಿಕೊಂಡು ಒಕ್ಕಲಿಗರ ದೊಡ್ಡ ಮನುಷ್ಯರೆಲ್ಲರೂ ತಮ್ಮ ಸಹೋದರ ಒಕ್ಕಲಿಗ ಮಂಡಲಿಯಲ್ಲಿ ಇಲ್ಲಿ ವಿವರಿಸಿರುವ ಸಂಘದ ಉದ್ದೇಶಗಳನ್ನು ತಿಳಿಯಪಡಿಸಿ ಸಂಘದ ವಿಚಾರವಾಗಿ ಅವರಿಗೆ ಸ್ನೇಹಭಾವವನ್ನುಂಟುಮಾಡಿಸಬೇಕೆಂದು ಪ್ರಾರ್ಥಿಸುತ್ತೇವೆ. ಸಮಸ್ತ ಒಕ್ಕಲಿಗರೂ ಸಭೆಗೆ ಬರುವಂತೆ ಮಾಡಿಸಿ ಕಾರ್ಯವನ್ನು ಆಗಮಾಡಬೇಕೆಂತಲೂ ಈ ರೀತಿ ದಯಮಾಡಿಸುವವರೆಲ್ಲರೂ ತಮ್ಮ ಹೆಸರುಗಳನ್ನು ಮೈಸೂರು ಒಕ್ಕಲಿಗರ ಸಂಘದ ಸೆಕ್ರೆಟರಿ ಮ॥ ಎಂ. ಪುಟ್ಟನಂಜಪ್ಪನವರಿಗೆ ಕಾಗದ ಮೂಲಕ ತಿಳಿಯಪಡಿಸುತ್ತಾ ಬರಬೇಕೆಂತಲೂ ಕೇಳಿಕೊಳ್ಳುತ್ತೇನೆ.

ಬೆಂಗಳೂರು,
೮—೯—೧೯೦೭

ಇಂತಿ ಸಂಘದಿಂದ ಆಜ್ಞಪ್ತನಾದ
ಪಿ. ಪುಟ್ಟಯ್ಯ,
ಅ॥ ಜನರಲ್ ಸೆಕ್ರೆಟರಿ

ತಾಲ್ಲೋಕು ವರ್ತಮಾನಗಳು

ಚಾಮರಾಜನಗರ.—ಕೆಲವು ದಿವಸಗಳಿಂದ ಈ ಊರಿನಲ್ಲಿ ಕೆಲವರು ಸೇರಿ ಇಲ್ಲಿಂದ ನಂಜನಗೂಡಿಗೆ ಟಪಾಲು ಬಂಡಿಯನ್ನು ಹೊಡೆಸುತ್ತಿರುವರು. ಇದರಿಂದ ಜನರಿಗೆ ಸ್ವಲ್ಪಮಟ್ಟಿಗೆ ಸಹಾಯವಾಗುತ್ತೆಂದು ತಿಳಿಯಬರುತ್ತೆ. ಎಸ್ ವಿ ಆರ್ ಎಸ್ ಎಂಬ ಟ್ರಾನ್ಸಿಟ್ ಕಂಪೆನಿಯು ಶಾಶ್ವತವಾಗಿ ನಡಿಯುತ್ತೆಂದು ಭಾವಿಸುತ್ತೇನೆ.—ಕೆಲವು ಕೆಲವು ದಿವಸಗಳಿಗೆ ಹಿಂದೆ ಗತಿಸಿದ ಸ್ವಾಮಿ ವಿವೇಕಾನಂದರವರ ಮೆಮೋರಿಯಲ್ ರೀಡಿಂಗ್ ರೂಂ, ಲೈಬ್ರರಿ ಸ್ಥಾಪಿಸಲು ಸ್ಥಳೀಕರು ನೂರಾರು ರೂಪಾಯಿ ಚಂದಾ ಸೇರಿಸಿವರು. ಈಚೆಗೆ ಕೆಲವು ದೊಡ್ಡ ಮನುಷ್ಯರೊಡನೆ ಉಪಸಭೆ ಸೇರಿ, ಇದಕ್ಕೆ ಕಾರಣಭೂತರಾದ ಲಕ್ಷ್ಮಣಯ್ಯಂಗಾರ್ರು ಬೇರೆ ಉಪಯೋಗಿಸಲು ಯತ್ನಪಟ್ಟಂತೆ ನೋಡಲಾಗುತ್ತೆ. ಸಾರ್ವಜನಿಕರಿಂದ ಈ ಲೈಬ್ರರಿಯನ್ನು ಸ್ಥಾಪಿಸದೆ ಇನ್ನು ಬೇರೆ ಯೋಚನೆ ಮಾಡಿದ್ದು ಅಸಮ್ಮತ. ಹಾಗೆ ಮಾಡದೆ ನಮ್ಮ ಸ್ಥಳದಲ್ಲಿ ಶಾಶ್ವತವಾದ ಈ ಏರ್ಪಾಡು ಮಾಡುವರೆಂದು ನಂಬಿರುತ್ತೇನೆ. ನಮ್ಮ ಊರಿನಲ್ಲಿ ಅನೇಕಾನೇಕ ದೇವಾಂಗದವರ ಬಾಲಕರೂ, ಇತರರೂ ಕೆಲಸ ಕಾರ್ಯವಿಲ್ಲದೆ ಅಲೆಯುತ್ತಿರುವರು. ಇಂಥವರಿಗೂ ಮತ್ತು ಅಭ್ಯಾಸಿಗಳಿಗೂ ಉಪಯೋಗವಾಗುವಂತೆ ನಮ್ಮ ಗವರ್ನಮೆಂಟಿನವರು ಇತರ ಊರುಗಳಲ್ಲಿರುವಂತೆ ಇಲ್ಲೂ ಒಂದು ಕೈಗಾರಿಕಾಶಾಲೆಯನ್ನು ಸ್ಥಾಪಿಸಿಕೊಡಬೇಕಾಗಿ ಕೋರುತ್ತೇವೆ.—ನಮ್ಮ ಊರಿಗೆ ನೆನ್ನೆ ಬುಧವಾರ ಸಾಯಂಕಾಲ ಡೆಪ್ಯುಟಿ ಕಮಿಷನರ್ ರವರು ಕಾಂತರಾಜೇ ಅರಸಿನವರ ಸವಾರಿಯು ಚಿತ್ತೈಸಿತು. ಊರ ಹೊರಗೆ ಗ್ರಾಮಾಧಿಕಾರಿಗಳೂ ವರ್ತಕರೂ ಮೆಂಬರುಗಳೂ ಕಾದಿದ್ದು ಅವರಿಗೆ ಹಾರ ತುರಾಯಿಗಳನ್ನು ಒಪ್ಪಿಸಿ, ಅವರನ್ನು ಬ್ಯಾಂಡಿನೊಡನೆ ಬಂಗ್ಲೆಗೆ ಕರೆದುಕೊಂಡು ಹೋಗಿ ಬಿಟ್ಟು ಬಂದರು. ಅವರು ಮಾರನೇ ದಿನ ನೋಡತಕ್ಕ ಭಾಗಗಳನ್ನೆಲ್ಲಾ ನೋಡಿಕೊಂಡು ಶುಕ್ರವಾರ ಬೆಳಿಗ್ಗೆ ಗುಂಡ್ಲುಪೇಟೆಗೆ ದಯಮಾಡಿದರು.

ಚನ್ನಪಟ್ಟಣ.—ಕಳೆದ ವಾರ ಇಲ್ಲಿ ೩—೪ ದಿವಸ ಬಳ್ಳೇ ಪ್ಲೇಗ್ ಆಯಿತು. ಈಚೆಗೆ ಪೋಲೀಸ್ ಇನ್ಸ್‌ಪೆಕ್ಟರವರೂ ಜಮೇದಾರ ಪೋಲೀಸಿನವರೂ ತುಂಬಾ ಮೊಸನತ್ತಿನಿಂದ ನಾಲ್ಕಾರು ಮಂದಿ ಕಳ್ಳರನ್ನು ಹಿಡಿದು, ಶಿರೆ ಮನೆಗೆ ಕಳುಹಿಸಿರುವಂತೆ ತಿಳಿದುಬಂದಿರುತ್ತೆ. ಕಳೆದ ತಿಂಗಳು ತಾ ೨೫ ರಿಂದ ಇದುವರೆಗೆ ೯—೧೦ ಪ್ಲೇಗ್ ಕೇಸುಗಳಾಗಿವೆ. ಈಗ ನಾಲ್ಕಾರು ಜನರು ಕಾಯಿಲೆಯಾಗಿದಾರೆ. ರೋಗದ ಸಂಕಟ ವಿಶೇಷವಾಗಿದ್ದ ದಾರಿಯರೆ, ಅಕ್ಕಸಾಲೆಯ ಬೀದಿಯವರೆಲ್ಲಾ ಊರು ಬಿಟ್ಟು ಗುಡಿಸಲುಗಳಿಗೆ ಸೇರಿಯಾನ ಸೇರುತ್ತಾ ಇದಾರೆ. ಊರಿನ ಹಲವು ಭಾಗಗಳಲ್ಲಿ ಇಲಿಗಳು ಸಾಯುತ್ತಿರುವ ತಿಳಿದುಬಂದಿದೆ. ಈ ಸಂದರ್ಭದಲ್ಲಿ ನಮ್ಮ ಅಮಲ್ದಾರ್ ಮೆ॥ ರಂಗನಾಥರಾವು ಸಾಹೇಬರೂ ಆ॥ ಅಸಿಸ್ಟೆಂಟ್ ಮೆ॥ ಕಾಮಾಕ್ಷಯ್ಯನವರೂ, ಪೋ॥ ಇ॥ ಸುಬ್ಬರಾಯರೇ ಮೊದಲಾದವರೊಡನೆ ಪ್ರತಿದಿನ ಬೆಳಿಗ್ಗೆ ಸಾಯಂಕಾಲ ಪ್ರತಿ ರೋಗಿಯನ್ನೂ ನೋಡುತ್ತಾ, ಸಂಕಟದ ಪ್ರದೇಶಗಳನ್ನು ವಿಚಾರಿಸುತ್ತಾ ತಕ್ಕ ಬುದ್ಧಿವಾದ, ಸಲಹೆಗಳನ್ನು ಹೇಳುತ್ತಾ, ಧೈರ್ಯಪಡಿಸುತ್ತಿದಾರೆ. ಸದರಿ ಅಮಲ್ದಾರ್ರು ತುಂಬಾ ಸಂತಾಪಶಾಲಿಗಳಾಗಿ ಇಲ್ಲಿನ ಸಕಲ ಕೋಮಿನ ವರ್ತಕರನ್ನೂ ಬರಮಾಡಿಕೊಂಡು, ಅವರಿಗೆಲ್ಲಾ ಪರಿಪರಿ ಆಲೋಚನೆ, ನೀತಿ, ಧರ್ಮಗಳನ್ನೂ ಬಡವರ ಸ್ಥಿತಿಗತಿಯನ್ನೂ ತಿಳಿಸಿ, ಬೋಧಿಸಿ ಸ್ನಾಹಪಡಿಸಿದ್ದರಿಂದ ಇಲ್ಲಿನ ವರ್ತಕ ಮಹನೀಯರೆಲ್ಲಾ ಸೇರಿ ಅವರ ಶಕ್ತ್ಯನುಸಾರವಾದ ಸಹಾಯ ದ್ರವ್ಯದಿಂದಲೇ ಬಡಪ್ರಜೆಗಳಿಗೆ ಅಲ್ಲಲ್ಲಿ ಕಟ್ಟಿಕೊಳ್ಳುವುದಕ್ಕೆ ಗಳ ಬೊಂಬು ತೆಂಗಿನ ಮಟ್ಟೆಗಳನ್ನು

...ತಿ ಬಡವರಿಗೆ ಅನ್ನ ವಸ್ತ್ರಗಳನ್ನು ಸರಬರಾಜು ಮಾಡಲು ಏರ್ಪಾಡು ಮಾಡಿರುವರೆಂದು ತಿಳಿದುಬರುತ್ತೆ.—ಬೆಂಗಳೂರಿನಿಂದ ಡಿಸ್ಟ್ರಿಕ್ಟ್ ಇಂಜನಿಯರ್ ಮಿ॥ ಡೇವಿಡ್ ಯವರು ಬಂದು ಮೂರು ದಿನಗಳಿಂದ ಡಾಕ್ಟರ್ ಎಂಬ ಪ್ಲೇಗ್ ಪೈಲಿ ಹಾಕುತ್ತಿರುವರು. ಇದುವರೆ ೧೨೦೦ ಜನರು ಹಾಕಿಸಿಕೊಂಡರು. ಇನ್ನೂ ಅನೇಕಾನೇಕರು ಹಾಕಿಸಿಕೊಳ್ಳುವವರಾಗಿದ್ದಾರೆ.—ತಾ ೪ ನೇ ಭಾನುವಾರ ಮಧ್ಯಾಹ್ನ ನಮ್ಮ ಶ್ರೀಮನ್ಮಹಾರಾಜರವರೂ ಯುವರಾಜರವರೂ ಬೆಂಗಳೂರಿನಿಂದ ಮೈಸೂರಿಗೆ ಹೋಗುವ ದಯಮಾಡಿಸುವಾಗ ಪೇಟೆಯು ತೋರಣಗಳಿಂದ ಅಲಂಕೃತವಾಗಿತ್ತು. ಇಲ್ಲಿನ ಮುಖ್ಯ ಉದ್ಯೋಗಸ್ಥರು ಹಾರ ತುರಾಯಿಗಳೊಂದಿಗೆ ಮುಸಾಫರಿ ಬಂಗಲೆ ಬಳಿ ಹಾಜರಿದ್ದರು. ಜನ ಸಮೂಹವು ರಸ್ತೆಯ ಉಭಯ ಪಾರ್ಶ್ವದಲ್ಲೂ ಪೋಲೀಸಿನವರೊಡನೆ ನಿಂತು ಮಹಾರಾಜರವರ ಸುಮಾಗಮನವನ್ನೇ ನಿರೀಕ್ಷಿಸುತ್ತಲಿದ್ದರು.

ಆನೇಕಲ್ಲು.—ಈ ವಾರ ೫ ನೇ ತಾ॥ ಮಧ್ಯಾಹ್ನ ಸುಮಾರು ೩ ಘಂಟೆಯ ಸಮಯದಲ್ಲಿ ಈ ಊರಿನ ಬಿಟ್ಟ[illegible] ಬಳಿ ಇರುವ ರಸ್ತೆಗೆ ಬಲಭಾಗದಲ್ಲಿ ಚಿಕ್ಕದಾದ ಒಂದು ಹಳ್ಳದಲ್ಲಿ ಸುಮಾರು ೬ ವರುಷದ ಒಂದು ಗಂಡು ಕೂಸು ಸತ್ತು ಬಿದ್ದಿತ್ತು. ಈ ಕೂಸು ಮರಾಟಗರ ಜಾತಿಗೆ ಸೇರಿದ ವೆಂಕೋಜೀರಾವ್ ಎಂಬುವನದು. ಅಂದೆ ತಾಯಿಗಳು ಬಹು ಪ್ರೇಮದಿಂದ ಸ್ನಾನ ಸಲಹಿ ನಡುವಿಗೆ ಬೆಳ್ಳಿ ಉಡಿದಾರವೂ, ಕೈಗಳಿಗೆ ಬೆಳ್ಳಿ ಬಳೆಗಳೂ ಕಿವಿಗಳಿಗೆ ಕಡಕುಗಳೂ ಹಾಕಿದ್ದರು. ಈ ಆಭರಣಗಳನ್ನು ಅಪಹರಿಸಬೇಕೆಂಬ ದುರಾಶೆಯಿಂದ ಈ ಶಿಶುವನ್ನು ಹತ್ಯಮಾಡಿದ ದುರಾತ್ಮನಿಗೆ ಬೆಳ್ಳಿಯ ಉಡಿದಾರ ಒಂದು ಮಾತ್ರ ದೊರೆಯಿತೇ ಹೊರತು ಮತ್ತಾವ ಪ್ರಯೋಜನವೂ ಆಗಲಿಲ್ಲ. ಕೈಯ್ಯಿನ ಬಳೇ ಕೀಳುವಾಗ ಮಗುವಿನ ಕೈ ನೊಂದು ರಕ್ತ ಕಟ್ಟಿ ಇತ್ತು. ಬಳೆಗಳೇ ನೇ ಕಳ್ಳನಿಗೆ ಸಾಧ್ಯವಾಗಲಿಲ್ಲ. ಕಿವಿಯಲ್ಲಿದ್ದ ಕಡಕುಗಳನ್ನು ಕೀಳುವ ಸಂದರ್ಭದಲ್ಲಿ ಹರಿದುಹೋದ ಕಿವಿಯಿಂದ ರಕ್ತಧಾರೆಯು ಹರಿಯುತ್ತಿತ್ತು. ಇಂಥಾ ಘೋರಮರಣಕ್ಕೆ ಗುರಿಯಾದ ಈ ಮಗುವಿನ ಮಾತಾಪಿತೃಗಳ ವ್ಯಸನವನ್ನು ವಿವರಿಸಲು ಅಸದಳವಾಗಿರುತ್ತೆ. ಪೋಲೀಸ್ ಇನ್ಸ್ಪೆಕ್ಟರ್ ನಡೆದಿದ್ದ ಸ್ಥಳಕ್ಕೆ ಬಂದು ಸ್ವಾಗೆ ನಡೆಸಿರುವರೆಂದು ವಿಚಾರಿಸಲು ಪ್ರತ್ಯಗಾರರ ಸಿಕ್ಕಿಯಾಗಲಿಲ್ಲವಾಗಿ ಚಿತ್ತವಿದ್ದಂತೆ ವ್ಯಕ್ತಿ ಮಾಡಲು ಉತ್ತರವಿಲ್ಲ [illegible] ಈ ಮಗುವು ಬಿದ್ದ ಸ್ಥಳದಲ್ಲಿ [illegible] ಒಂದು ಅಡಿ ಆಳವಾಗಿದ್ದಿತೇ ಹೊರತು ನೀರೇ ಇರಲಿಲ್ಲ. ಈ ನೀರಿನಲ್ಲಿ ಮಗು ಬಿದ್ದು ಪ್ರಾಣವನ್ನು ಬಿಟ್ಟಿದೆ ಎಂದು ಹೇಳಲು ಅವಕಾಶವೇನೂ ತೋರುವುದಿಲ್ಲ. ಇಂಥಾ ಕೊಲೆಗಾರನು ಶಿಕ್ಷೆಗೆ ಗುರಿಯಾಗದೆ ಹೋದಾಗ್ಯೂ ದೇವರ ದೃಷ್ಟಿಗೆ ತಪ್ಪಿಸಿಕೊಳ್ಳಲಾರನು.

ಕುಲೀನ್ಸ್‌ಪೇಟೆ.—ಈ ಸ್ಥಳದ ಆಸ್ಪತ್ರೆ ಅಸಿಸ್ಟೆಂಟರು ಪ್ರತಿ ದಿನವೂ ಪ್ರತಿ ಗಲ್ಲಿಯಲ್ಲಿ [illegible] ಪ್ಲೇಗು ಖಾಯಿಲೆ ವಿಷಯದಲ್ಲಿ ಬಹಳ ಶ್ರಮಪಡುತ್ತಾ ಇದ್ದಾರೆ. ಒಂದು ಮನೆಯಲ್ಲಿ ಇಲಿ ಸತ್ತಿತೆಂಬ ಸಮಾಚಾರ ಕೇಳಿ ಕೂಡಲೇ ಆ ಮನೆಯನ್ನು ಬಿಡಿಸಿ ಅದಕ್ಕೆ ಡಿಸ್‌ಇನ್‌ಫೆಕ್ಷನ್ ಮಾಡಿಸಿದರು. ಆದರೂ ಈ ಊರಿಗೆ ಸಮೀಪದಲ್ಲಿರುವ [illegible] ಕಾರ್ಖಾನೆಗಳಿಂದ ಪ್ಲೇಗ್ ರೋಗ ವ್ಯಾಪಿಸಿ ಈ ಊರಿಗೂ ಇಂದೋ ನಾಳೆಯೋ ವ್ಯಾಪಿಸೀತೆಂಬುವ ಭೀತಿ ಉಂಟಾಗಿದೆ.—ಭಗವಂತನ ಕಟಾಕ್ಷದಿಂದ ಕಾಲಕಾಲಕ್ಕೆ ಮಳೆಗಳು ನಡೆದು, ಈ ವಸಂತ[illegible] ಯಲ್ಲಿ ನೀರು ಅನುಕೂಲವಾಗಿದೆ.—ಒಂಗೋಳಿದ ಸ್ಪೆಷಲ್ ರೇಂಜ್ ಆಫೀಸನೆಂದು ಒಂದು ಆಫೀಸು ಈ ಊರಿನಲ್ಲಿ ಸ್ಥಾಪಿಸಲ್ಪಡಲು, ಕಟ್ಟಡಗಳಿಗಾಗಿ ಇಪ್ಪತ್ತು ಸಾವಿರ ರೂಪಾಯಿ [illegible] ನಡೆಯುತ್ತಿದ್ದ ಕೆಲಸಗಳು ಮುಕ್ತಾಯಕ್ಕೆ ಬಂದಿವೆ. ಈ ಕಂಪನಿಯಲ್ಲಿ ಸ್ಥಾಪಿತವಾದದ್ದು ರೈತರಿಗೆ ತುಂಬಾ ಉಪಯೋಗವಾಗಿದೆ.—ಈ ಊರಿನ ವರ್ತಕರಾದ [illegible] ರವರ ಮನೆಯಲ್ಲಿ ಗುಪ್ತಿಯಿಂದ ಬಂದಿದ್ದ ಒಬ್ಬ ಸಂಗೀತಗಾರರು ತಮ್ಮ ವಿದ್ಯೆಯಿಂದ ಸಭಿಕರನ್ನು ಸಂತೋಷಪಡಿಸಿದರು.—[illegible] ಇಲ್ಲಿದ್ದ ರೈಲ್ವೆ [illegible] ಮಾಸ್ಟರನ್ನು ಅನಂತಪುರಕ್ಕೆ ಬದಲಾಯಿಸಿರುವರನ್ನು ಇಲ್ಲಿಗೆ. ಈ ಊರಿನ ಜನರ ಮನಸ್ಸನ್ನು ತಮ್ಮ ಪ್ರೀತಿಯಿಂದ ವಶಪಡಿಸಿಕೊಂಡಿದ್ದ ಅಸಿಸ್ಟೆಂಟರನ್ನು ದೊಡ್ಡಬಳ್ಳಾಪುರಕ್ಕೆ ವರ್ಗ ಮಾಡಿರುತ್ತಾರೆ.—ಶ್ರೀಮನ್ಮಹಾರಾಜರವರು ಕಾರ್ಖಾನೆಗಳಿಯು ಕಡೆ ಸರ್ಕೀಟ್ ದಯಮಾಡಿಸಿದ್ದ ಕಾಲದಲ್ಲಿ ಕೈಸ್ತೋಪೇಟೆ ಇಲ್ಲೋಕಿನ [illegible] ಪ್ರಸಿದ್ಧೇಶ್ವರನ ಬೆಟ್ಟಕ್ಕೆ ಸಹ ಬಿಜಯಂಗೈಯುವ ವದಂತಿ ಕೇಳಿ ಅಮಲ್ದಾರರು ಪಬ್ಲಿಕ್ ಇನ್ಸ್ಪೆಕ್ಟರ ಜೊತೆಯಲ್ಲಿ ಬೆಟ್ಟಕ್ಕೆ ಹೋಗಿ ಮೋಟಾರ್ ಗಾಡಿ ಬರಲು ಸುಮಾರು ಆರು ಮೈಲುಗಳ ಕೆಲಸವನ್ನು ಸುತ್ತಲಿನ ಗ್ರಾಮದ ಜನರಿಂದ ಮಾಡಿಸಿ ಬೆಟ್ಟದಡಿಯಲ್ಲಿ ಸವಾರಿ ಬರುವ ದಾರಿಯನ್ನು ಬಹು ಮನೋಹರವಾಗಿ ಸಿದ್ಧಪಡಿಸಿ ನೇಮಕದ ದಿನದಲ್ಲಿ ಮಹಾರಾಜರವರು ತಮ್ಮ ಸಿಬ್ಬಂದಿ ಮುಂದಾಳುಗಳೂ, ಪೋಲೀಸ್ ಇನ್ಸ್ಪೆಕ್ಟರ್ ಜನರಲ್‌ರವರೂ ಬೆಂಗಳೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರೂ, ಡಾಕ್ಟರ್ ನಂಜಪ್ಪನವರೂ ಇವರುಗಳೊಡನೆ ಬೆಟ್ಟದ ಮೇಲಕ್ಕೆ ಕಾಲು ನಡೆಯಾಗಿ ಹೋಗಿ ಮಂಗಳಾರತಿಗಾಗಿ ನೂರು ರೂಪಾಯಿ ಕೊಟ್ಟು ಜನರ ವಸತಿಗಾಗಿ ಛತ್ರ ಮಂಟಪಗಳು ಆಗಬೇಕೆಂದು ಕೇಳಿದ್ದನ್ನು ಪ್ರತಿದಿನ ದೇವರ ಪೂಜೆಗಾಗಿ ಕೊಡತಕ್ಕ ಮೊಬಲಗು ಸಾಲದೆಂದೂ ಜಾರುಪತ್ತೇಗಾರರ ಸಬಳ ಅವರ ಜೀವನಕ್ಕೆ ಸಾಲದೆಂದೂ ಕೇಳಿಕೊಂಡ ಎಲ್ಲಾ ವಿಜ್ಞಾಪನೆಗಳನ್ನೂ ಗುರುತು ಮಾಡಿಕೊಂಡು ವಾಪಸು ಒಂದು ಘಂಟೆಯೊಳಗಾಗಿ ಹೊರಟು ಹೋದರು.

ಚಿಂತಾಮಣಿ.—ನಮ್ಮ ಶ್ರೀಮನ್ಮಹಾರಾಜರವರು ಸಂಸ್ಥಾನದಲ್ಲಿ ಸಂಚರಿಸಿ ತಮ್ಮ ಪ್ರಜೆಗಳ ಸ್ಥಿತಿಯನ್ನು ಕಣ್ಣಾರ ನೋಡಬೇಕೆಂದು ಚಿಂತಾಮಣಿಗೆ ಚಿತ್ತೈಸುವರೆಂದು ಬಹು ದೂರದವರೆಗೆ ಅಂದರೆ ಕಂಪನೀ ಸೀಮೆಯ ಮದನಪಲ್ಲಿ, ಕದಿರಿ, ಕಡಪ, ತಿಪ್ಪಸಮುದ್ರ, ಇವೇ ಮೊದಲಾದ ಸ್ಥಳಗಳಿಂದ ಆಬಾಲವೃದ್ಧರು ಮೊದಲುಗೊಂಡು ಇದೇ ತಿಂಗಳು ತಾ. ೧ ನೇ ಭಾನುವಾರ ನಡೆಯತಕ್ಕ ಉತ್ಸವಕ್ಕೆ ಮೂರು ದಿನಗಳ ಹಿಂದೆಯೇ ಬಂದು ಕಾದಿದ್ದರು. ಭಾನುವಾರಕ್ಕೆ ಲಕ್ಷಾನುಲಕ್ಷ ಪ್ರಜೆಗಳೂ ಸೇರಿದರು. ೩—೪ ತಾಲ್ಲೂಕುಗಳ ಪೋಲೀಸ್ ಸಿಬ್ಬಂದಿಯೂ ಜಾಗ್ರತೆ ಮಾಡುತ್ತಿದ್ದರೂ ಇಲ್ಲಿಗೆ ಆರು ಮೈಲಿ ದೂರದ ವರೆಗೂ ಪ್ರಜೆಗಳು ಇಕ್ಕೆಡೆಗಳಲ್ಲಿಯೂ ಕೂಡಿದ್ದರು. ಸರಹದ್ದು ಸೋಮದೇವನಹಳ್ಳಿಯಿಂದ ೨—೩ ಕಡೆಗಳಲ್ಲಿ ಹಾಕಿದ್ದ ದಿವ್ಯವಾದ ಚಪ್ಪರಗಳಲ್ಲಿ ಆಯಾ ಗ್ರಾಮದ ಮುಖಂಡರು ಕಾದಿದ್ದರು. ಮಹಾಸ್ವಾಮಿಯವರ ಸವಾರಿಯು ದಯಮಾಡಿಸಿತು. ಪ್ರಜೆಗಳು ಕೂಡಿ ಕಾದಿದ್ದ ಸ್ಥಳದಿಂದ ಜೋಡು ಕುದುರೆಯ ಸಾರೋಟಿನಲ್ಲಿ ಕುಳಿತು, ಸಾವಧಾನದಿಂದ ಗಾಡಿ ಬಿಟ್ಟುಕೊಂಡು ಮುಂದರಿಯುತ್ತಾ, ಇಕ್ಕೆಡೆಗಳಲ್ಲಿ ಕಿಕ್ಕಿರಿಯುತ್ತಿದ್ದ ಪ್ರಜೆಗಳನ್ನು ನೋಡುತ್ತಾ, ಎಲ್ಲರಿಗೂ ತಮ್ಮ ಸಂದರ್ಶನದಿಂದ ಮನೋಲ್ಲಾಸವನ್ನುಂಟುಮಾಡುತ್ತಾ, ಆರು ಘಂಟೆಗೆ ಸರಿಯಾಗಿ ಇಲ್ಲಿಗೆ ಚಿತ್ತೈಸಿದರು. ಇಲ್ಲಿ ಕಾದಿದ್ದ ಅಧಿಕಾರಿಗಳು ಮ್ಯುನಿಸಿಪಲ್ ಮೆಂಬರುಗಳು ಶೆಟ್ಟಿ ವರ್ತಕರು ಮುಜಮ್ಮದಿಯ ದೊಡ್ಡ ಮನುಷ್ಯರು ಆದಿಯಾಗಿ ಪರಾಕುಗಳನ್ನು ಹೇಳುತ್ತಾ ಫಲಪುಷ್ಪಗಳನ್ನು ಒಪ್ಪಿಸಿದರು. ನಂತರ ಸವಾರಿಯು ಅಲಂಕೃತವಾದ ಬಂಗಲೆಗೆ ದಯಮಾಡಿಸಿತು. ಸಾಯಂಕಾಲ ಈ ನಗರದ ನಾಲ್ಕು ಕಡೆ ಇರುವ ಬೆಟ್ಟದ ಮೇಲೆ ದೀಪೋತ್ಸವಗಳು ನಡೆದವು. ಮಾರನೇ ಬೆಳಿಗ್ಗೆ ಮಹಾಸ್ವಾಮಿಯವರ ಸವಾರಿಯು ಕನಮಕುಂಟೆ ಕೆರೆಗೆ ಮೋಟಾರ್ ಗಾಡಿಯಲ್ಲಿ ದಯಮಾಡಿಸಿ, ಅಜಮಾಯಿಷಿಯಿಂದ ಸುಮಾರು ೪ ಘಂಟೆಗೆ ಬಂಗ್ಲೆಗೆ ದಯಮಾಡಿಸಿದರು. ಮಧ್ಯಾಹ್ನ ೩ ಘಂಟೆಗೆ ಗ್ರಾಮ ಬಿಡಾರಕ್ಕಾಗಿ ಬಿಡಿಸಿದ್ದ ಸ್ಥಳದಲ್ಲಿ ಏರ್ಪಾಟಾಗಿದ್ದ ಮಹಾ ಸುಂದರವಾದ ದರ್ಬಾರ್ ಹಾಲಿಗೆ ಸವಾರಿಯು ದಯಮಾಡಿಸುತ್ತೆಂದು ತಿಳಿದು, ಸುಮಾರು ಮುನ್ನೂರು ಜನಗಳ ವರಿಗ ದರ್ಬಾರ್ ಡ್ರೆಸ್ ಧರಿಸಿಕೊಂಡು ಕಾದಿದ್ದರು. ಮತ್ತೂ ಆಸ್ಪತ್ರೆ, ಹೊಸದಾಗಿ ನಿರ್ಮಿಸಲ್ಪಟ್ಟ ಸಂದರ್ಶಕ [illegible] ಬಳಿ ಕೆಲವು ದೊಡ್ಡ ಮನುಷ್ಯರೊಡನೆ ಕಾದಿದ್ದು ಮಹಾಸ್ವಾಮಿಯವರ ಸವಾರಿಯು ದಯಮಾಡಿಸುತ್ತಲೇ ಪಂಡಿತರುಗಳು ಮಾಡಿ ದರ್ಬಾರ್ ಹಾಲಿನವರೆಗೆ ಎಲ್ಲರೂ ಮುಂಬಾಗಿ ನಡಿದು ತಾ. ಸ್ವಾಮಿಗಳವರು ಸಿಂಹಾಸನಾರೂಢರಾಗಲು, ಡೆಪ್ಯುಟಿ ಕಮಿಷನರವರು ಇಂಗ್ಲಿಷಿನಲ್ಲಿ ಬರೆಯಲ್ಪಟ್ಟ ವಿಜ್ಞಾಪನಾ ಪತ್ರಿಕೆಯನ್ನು ಒಪ್ಪಿಸಿದರು. ಅದಕ್ಕೆ ಮಹಾಸ್ವಾಮಿಯವರು ಸದುತ್ತರವನ್ನು ಅಪ್ಪಣೆ ಕೊಡಿಸಿ, ಪುರನಿವಾಸಿಗಳ ಕೋರಿಕೆಯಂತೆ ತಾವು ಅಲಂಕರಿಸಿದ್ದ ಹೊಸ ಬಡಾವಣೆಗೆ ತಮ್ಮ ಅಂದರೆ ಕೃಷ್ಣರಾಜ ನಗರವೆಂಬ ಅಂಕಿತವನ್ನು ದಯಪಾಲಿಸಿದರು. ಪುಷ್ಪಾದಿಗಳು ಒಪ್ಪಿಸಲ್ಪಟ್ಟ ಮೇಲೆ ಸವಾರಿಯು ಪೇಟೆ ಕಡೆ ದಯಮಾಡಿಸುತ್ತಾ, ದಾರಿಯಲ್ಲಿದ್ದ ಆಸ್ಪತ್ರೆಯನ್ನು ಪರಾಂಬರಿಸಿ ವೈಶ್ಯರು ಹಾಕಿಸಿದ್ದ ಮಂಟಪಕ್ಕೆ ಚಿತ್ತೈಸಿ ಅಲ್ಲಿ ನೆರೆದಿದ್ದ ವೈಶ್ಯ ದೊಡ್ಡ ಮನುಷ್ಯರಿಂದ ಫಲಪುಷ್ಪಗಳನ್ನು ಸ್ವೀಕರಿಸಿ, ಹಿಂದುಸ್ಥಾನಿ ಸ್ಕೂಲು, ಎ. ವಿ. ಸ್ಕೂಲು, ಗರ್ಲ್ಸ್ ಸ್ಕೂಲುಗಳನ್ನು ಪರಾಂಬರಿಸಿ, ಅಲ್ಲಿ ನಡೆದ ಬಾಲಕ ಬಾಲಕಿಯರ ಗಾನದಿಂದ ಸಂತುಷ್ಟರಾಗಿ, ಜಸ್ಟ್ರ [illegible] ಪೇಟೆಯೊಳಗೆ ದಯಮಾಡಿಸಿ ಮುಸಲ್ಮಾನರ ಮಸೀದಿ ಬಳಿ ಬಾಜಿ ಸಾಹೇಬರೇ ಮೊದಲಾದ ದೊಡ್ಡ ಮನುಷ್ಯರು ಒಪ್ಪಿಸಿದ ಹಾರ ತುರಾಯಿಗಳನ್ನು ಸ್ವೀಕರಿಸಿ, ಕಡೇ ಚೌಕದಲ್ಲಿ ಹಾಕಿದ್ದ ಸುಂದರವಾದ ಮಂಟಪದಲ್ಲಿ ನಿಂತು, ಹಾರ ತುರಾಯಿಗಳನ್ನು ಒಪ್ಪಿಸಿಕೊಂಡು, ಪೋಸ್ಟ್ ಆಫೀಸಿನ ಮುಂದೆ ಹೊರಟು ತಾಲ್ಲೂಕ್ ಕಚೇರಿ ಚಿತ್ತೈಸಿ ರಿವಿನ್ಯೂ, ಪೋಲೀಸ್ ಖಜಾನೆ, ರಿಜಿಸ್ಟ್ರೇಷನ್ ಮೊದಲಾದ ಆಫೀಸುಗಳನ್ನು ಪರಾಂಬರಿಸಿ, ಸಾಯಂಕಾಲ ೭ ಘಂಟೆಗೆ ಬಂಗಲೆಯ ಸಮೀಪ ನಡೆದ ದೀಪೋತ್ಸವದಲ್ಲಿ ಸವಾರಿಯು ದಯಮಾಡಿಸಿತು. ಆ ರಾತ್ರಿ ೯ ಘಂಟೆಗೆ ಬಂಗ್ಲೆಯಲ್ಲಿ ದರ್ಬಾರ್ ನಡೆಯಿತು. ಕನ್ನಡದಲ್ಲಿ ತಯಾರಾಗಿದ್ದ ಅಡ್ರೆಸ್ಸನ್ನು ವೈಶ್ಯರ ಕಡೆ ವೆಂಕಟಾಚಲಯ್ಯ ಶೆಟ್ಟರು ಓದಿ ಬೆಳ್ಳಿ ಪೆಟ್ಟಿಗೆಯಲ್ಲಿಟ್ಟು ಒಪ್ಪಿಸಿದರು. ಶ್ರೀನಿವಾಸಪುರದ ತಾಲ್ಲೂಕು ಜನಗಳೂ ಇಲ್ಲಿಯೇ ಅಡ್ರೆಸ್ಸು ಒಪ್ಪಿಸಿದರು. ಈ ಎರಡು ಅಡ್ರೆಸ್ಸುಗಳಿಗೂ ಶ್ರೀಮನ್ಮಹಾರಾಜರವರು ಸದುತ್ತರವನ್ನಿತ್ತರು. ನಜರ್ ಮುಜರೆಗಳು ನೆರವೇರಿದವು. ಮಾರು ದಿನ ಸವಾರಿಯು ೧೧ ಘಂಟೆಗೆ ಶಿಡ್ಲಘಟ್ಟಕ್ಕೆ ದಯಮಾಡಿಸಿತು. ಇತ್ತಲಾಗಿ ಈ ೪—೩ ದಿನಗಳಲ್ಲಿ ನೆರೆದಿದ್ದ ಲಕ್ಷಾನುಲಕ್ಷ ಪ್ರಜೆಗಳಿಗೆ ಸಾಹುಕಾರ್ ನಾಮಾರಂಗಯ್ಯನವರೂ ವೈಶ್ಯ ಮಹಾಜನರೂ ಸಮಾರಾಧನೆಗಳನ್ನು ಬಹಳ ವಿಸ್ತರಣೆಯಿಂದ ನಡಿಸಿದರು. ಇವರ ಮೇಲ್ಪಂಕ್ತಿಯನ್ನನುಸರಿಸಿ ಅಜುಬಾಜು ಗ್ರಾಮಗಳಲ್ಲಿರುವ ಹಣವಂತರಾದ ರಡ್ಡಿಗಳೂ ಕೂಡ ಇತರ ಜನಗಳಿಗೆ ಅನ್ನೋದಕಗಳಿಗೆ ಅನುಕೂಲ ಮಾಡಿ ಕೊಟ್ಟಿದ್ದರೆ ಚೆನ್ನಾಗಿತ್ತು.

ಪ್ರಕಟನೆಗಳು

ಕಾರ್ಡು ಸೈಜು ೪|×೩.

ಫೋಟೋ ತೆಗೆಯುವ

ಘಾ ಪಾ ಕ್ಯಾ ಮೆ ರಾ.

844

ಬೆಲೆ ಫಕ್ತ ಮೂರು ರೂಪಾಯಿ.

ಇದರಿಂದ ಬೇಕಾದ ಮನುಷ್ಯನ ಫೋಟೋ ಅವನಿಗೆ ತಿಳಿಯದಂತೆ ತೆಗೆಯಲಿಕ್ಕೆ ಬರುತ್ತದೆ. ವೇಗದಿಂದ ಓಡುವ ಗಾಡಿಯು ಮತ್ತು ಹಾರುವ ಪಕ್ಷಿಯ ಫೋಟೋ ಸಹ ತೆಗೆಯಬಹುದು. ಇದರಲ್ಲಿ ಕಲಿಯತಕ್ಕದ್ದೇನೂ ಇಲ್ಲ. ಈ ಕ್ಯಾಮರಾದ ಮಾಹಿತಿಯನ್ನು ಕೊಳ್ಳುವವರಿಗೆ ನಾವು ಕೂತಲ್ಲಿಯೇ ಮಾಡಿಕೊಡುವೆವು. ಎಷ್ಟೋ ಕಡೆಗೆ ಇದಕ್ಕೆ ೧೦ ರಿಂದ ೧೫ ರೂ. ಬೆಲೆ ಹೇಳುತ್ತದೆ. ಆದರೆ ಇದರ ಖರೇ ಕಿಮ್ಮತ್ತು ೩ ರೂಪಾಯಿ ಮಾತ್ರ ಇರುವದು. ಟಪ್ಪಾಲ ಖರ್ಚು ೯ ಆಣೆ.

ಘೋಟಾಲಾಲ ಭಗನಲಾಲ ಮಹಾಜನ, ಠಾಕೂರದ್ವಾರ ರೋಡ, ಪೋಸ್ಟ್ ಕಾಲಬಾದೇವಿ, ಮುಂಬಯಿ.

ಅನಂತನ ದಾರಗಳು

981

ರೂಪಾಯಿ ೧ಕ್ಕೆ ೧೨, ೧೦, ೮, ೬. ಜತೆಗಳು. ಪರಸ್ಥಳಕ್ಕೆ ವಿ. ಪಿ. ಮೂಲಕ ರವಾನಿಸಲ್ಪಡುತ್ತೆ. ನಮ್ಮ ವಿಳಾಸ—
ಎಚ್. ಎಸ್. ರಾವ್ ಬ್ರದರ್ಸ್, ಚಿಕ್ಕಪೇಟೆ, ಬೆಂಗಳೂರು ಸಿಟಿ.

ನಜರ್ಬಾದಿನಲ್ಲಿ ತಡೆ ನೋಟೀಸಿಗೆ ಜವಾಬು.

991

ಮೈಸೂರು ನಜರ್ಬಾದ್ ಮೊಹಲ್ಲಾದಲ್ಲಿರುವ ಪ್ಯಾಕಪಟ್ಟಿ ಬಾಲಕೃಷ್ಣಪ್ಪನ ಹೆಂಡತಿ ಗೌರಮ್ಮನು ಸಮಸ್ತರಿಗೂ ತಿಳಿಯಪಡಿಸುವದೇನಂದರೆ—ಇದೇ ಸೆಪ್ಟೆಂಬರ್ ತಾ ೯ ನೇ ವೃತ್ತಾಂತಪತ್ರಿಕೆಯ ೩ ನೇ ಪೇಜಿನಲ್ಲಿ ಪ್ರಕಟಿಸಿರುವ ತಡೆ ನೋಟೀಸನ್ನು ನಾನು ಹಾಕಿಸಿದವಳಲ್ಲ. ಯಾರು ಹಾಕಿಸಿದರೋ ನನಗೆ ತಿಳಿಯದು. ನನ್ನ ಮೈದುನಿರು ೯—೯—೦೭ ರಲ್ಲಿ ಸದರಿ ಆಸ್ತಿಯಾದ ಪಿತ್ರಾರ್ಜಿತವಾದ ಮನೆಯನ್ನು ಪಂಚಾಯಿತರ ಮುಖಾ ವಿಭಾಗ ಮಾಡಿಕೊಂಡಿರುತ್ತಾರೆ. ಇದಕ್ಕಾಗಿ ಹುಟ್ಟಿದ ದಸ್ತಾವೇಜಿಗೆ ನಾನೂ ಒಪ್ಪಿ ರುಜು ಹಾಕಿರುತ್ತೇನೆ. ಸದರಿ ಮನೆಯ ಮೇಲೆ ನನ್ನ ಹಕ್ಕು ಬಾಧ್ಯತೆ ಯಾವದೂ ಇರುವದಿಲ್ಲ. ವ್ಯವಹಾರ ಚತುಷ್ಟಯಕ್ಕೂ ನನ್ನ ಮೈದುನರೇ ಬಾಧ್ಯರಾಗಿರುತ್ತಾರೆ. ನನ್ನ ಜೀವನಾಂಶಕ್ಕೆ ನನ್ನ ಗಂಡನಿಗೆ ಇರುವ ನೌಕರಿಯ ಮೊಬಲಗಿನಲ್ಲಿ ವರ್ಷ ಪಡೆಯಲು ನನ್ನ ಮೈದುನರಿಬ್ಬರೂ ಬಿಗ್ತಕರಾರು ಒಪ್ಪಿ ನಾನು ಅದನ್ನ ಲೋಕಲ್ ಫಂಡ್ ಸಾಹೆಬ್ ಇಲಾಖೆಗೆ ಕೊಟ್ಟಿರುವ ಅರ್ಜಿಗೆ ರುಜು ಹಾಕಿರುತ್ತಾರೆ.

೬ ಈ ಬಳೆ ಗುರುತು, ಗೌರಮ್ಮ ಸಹಜು.

ವ್ಯವಹಾರ ನಿರ್ಣಯ

53-17

ವೆಂಬ ಕನ್ನಡ **ಲಾ** ಪುಸ್ತಕವು

[illegible] ನಾವು ಮಾಡಿಸಿದ್ದ ಪ್ರಥಮ ಮುದ್ರಣದ ೧,೫೦೦ ಪ್ರತಿಗಳೆಲ್ಲವೂ ಅವಿತರ್ಕಿತವಾಗಿ ಮೂರು ತಿಂಗಳಲ್ಲಿಯೇ ಮುಗಿದು ಹೋಗಿವೆ. ಇನ್ನೂ ಅನೇಕಗಳಾದ ಶಾಸನಗಳೂ ೦. ವಿಧಿಗಳೂ, ಸೇರಿಸಲ್ಪಟ್ಟು, ಗುಣದಲ್ಲೂ, ಪರಿಮಾಣದಲ್ಲೂ, ಭಾಷೆಯಲ್ಲೂ, ಪ್ರಥಮ ಮುದ್ರಣಕ್ಕಿಂತಲೂ ಅತ್ಯುತ್ತಮವಾದ ದ್ವಿತೀಯ ಮುದ್ರಣವು ಪ್ರಾರಂಭವಾಗಿ ನಡೆಯುತ್ತಲಿದೆ. ಕೂಡಲೇ ಪೂರಯಿಸುವುದು. ಈ ದ್ವಿತೀಯ ಮುದ್ರಣದ ಪ್ರತಿಯನ್ನು ಅಪೇಕ್ಷಿಸಿ ನಮ್ಮಲ್ಲಿ ಬರೆದರೆ, ಅವರ ಹೆಸರನ್ನು ರಿಜಿಸ್ಟರಿಗೆ ದಾಖಲ್ಮಾಡಿಕೊಂಡು, ಮುದ್ರಣವು ಪೂರಯಿಸಿದ ಕೂಡಲೇ, ಮೊದಲು ಬೈಂಡ್ ಮಾಡಿಸಿ ಅವರಿಗೆ ಪ್ರತಿಯನ್ನು ರವಾನಿಸುತ್ತೇವೆ. ಕ್ರಯವು, ಪ್ರಥಮ ಮುದ್ರಣದ ಪುಸ್ತಕಕ್ಕಿಂತಲೂ ಹೆಚ್ಚು ದರ ಅತಿಯಾಗಿ ಹೆಚ್ಚುವುದಿಲ್ಲ. ಪ್ರಥಮ ಮುದ್ರಣದ ಪ್ರತಿಗಳಿಗೆ ಬರೆಯಬೇಕಾದ ಅವಶ್ಯವಿಲ್ಲ.

ಎಂ. ಮಲ್ಲಾರಾಧ್ಯರು, ಫಸ್ಟ್ ಗ್ರೇಡ್ ಪ್ಲೀಡರು,
ಶ್ರೀರಾಂಪೇಟೆ, ಮೈಸೂರು.

ಆರ್ಡರ್ ಬರುತ್ತಿವೆ! ಬೇಗ ನೋಡಿ:

ಪ್ರಾಣಿಚೆಪೇ ಆಕ್ಷನ್ ಸಾತುವದು.

67 J

ದೊಡ್ಡ ಮನುಷ್ಯರೇ, ಹಿಂದುಸ್ಥಾನದಲ್ಲಿ ಪ್ರಕಟನೆಗಳ ಮಯವಾಗಿದೆ. ಕೆಲವು ಕಂಪನಿಯವರು ಮೋಸ ಮಾತುಗಾರರಿಂದ ಪ್ರಕಟನೆಯನ್ನು ಕಂಡರೆ ಜನರು ಅಸಹ್ಯಪಟ್ಟು ಎಸೆಯುತ್ತಾರೆ. ಸತ್ಯ ನಂತರ ಪ್ರಕಟನೆಯನ್ನು ಕೂಡ ನಂಬುವುದ ಕಷ್ಟ. ಯಥಾರ್ಥವಲ್ಲ ಕಂಪನಿಯ ನೋಟೀಸುಗಳನ್ನು ಸಹ ಸಕ್ಕರೆ ಔಷಧಿ ಕಟ್ಟುವುದಕ್ಕೆ ಕೊಟ್ಟು ಬಿಡುವರು. ಆದರೆ ಮಹನೀಯರೇ, ನಮ್ಮ ಕಂಪನಿಯ ಯೋಗ್ಯತೆಯನ್ನು ಒಂದಾವರ್ತಿ ಪರೀಕ್ಷಿಸಿ ನೋಡಿ. ಈ ಪ್ರಕಟನೆಯು ನವೀನವಾದದ್ದು, ಆಶ್ಚರ್ಯಕರವಾದದ್ದು. ನಾವು ೩೦ ಗಂಟೆ ನಡಿಯುವ ಶಾಶ್ವತವಾದ ಐದು ವರುಷದ ಗ್ಯಾರಂಟಿ ಉಳ್ಳ ಲೀವರ್ ಗಡಿಯಾರವನ್ನು ೫೦೦ ಬಹುಮಾನವನ್ನಾಗಿ ಜೊತೆ ಕಳುಹಿಸುತ್ತೇವೆ. ಇದರಲ್ಲಿ ಸತ್ಯವಾದ ಕಂಪನಿಯು ಕೇವಲ ಒಬ್ಬರೇ ಕೆಂಬುವದೊಂದೇ ನಮ್ಮ ಮುಖ್ಯ ಉದ್ದೇಶ. ಒಂದಾವರ್ತಿ ನಮಗೆ ಬರೆದು ತರಿಸಿ ನಮ್ಮ ಸತ್ಯತೆಯನ್ನು ಪರೀಕ್ಷೆಮಾಡಿ. ಗಡಿಯಾರದ ಕೂಡ ನಾವು ಕಳುಹಿಸುವ ಬಹುಮಾನಗಳೇನೆಂದರೆ—ಒಂದು ಗಡಿಯಾರ, ಬಲವಾದದ್ದು ೩೦ ಗಂಟೆ ನಡಿಯುವದು, ಒಂದೆ ಎರಡು ಮಾಡ್ಡಿಕ್ ಪರೀಕ್ಷೆಯಿಂದ ಸರಿಮಾಡಿದ್ದು, ಒಂದು ಸೊಗಸಾದ ಪಟ್ಟಿಗೆಯಲ್ಲಿ ಐದು ವರುಷದ ಗ್ಯಾರಂಟಿ ಉಳ್ಳದ್ದು. ಒಂದು ಸೊಗಸಾದ ಗಡಿಯಾರದ ಸರಪಣಿ ಅದಕ್ಕೆ ಬೀಗದ ಕೈ ಉಳ್ಳ ಬಲವಾದ ಇಂಗ್ಲಿಷ್ ಖಾನ್ ಪೆಟ್ಟಿಗೆ, ಒಂದು ದೊಡ್ಡ ಪರ್ಸು, ಒಂದು ದೊಡ್ಡ ಜಟ್ಟಿ, ಒಂದಾವರ್ತಿ ಎಣ್ಣೆ ಹಾಕಿದರೆ ಒಂದು ತಿಂಗಳು ಉರಿಯುವ ಹೊಸ ತರ, ಒಂದು ಒಂದಾವರ್ತಿ ಕಾಯಿ ತುಂಬಿದರೆ ಅನೇಕ ದಿನಗಳ ತನಕ ಉರಿಯುವ ಫೌಂಟೆನ್ ಪೆನ್ನು, ಒಂದು ಜೊತೆ ದೊಡ್ಡ ಕಾಲುಚೀಲ, ಬಲವಾದ ದಂತದ ಹಿಡಿಯುಳ್ಳ ಚಾಕು, ಒಂದು ದೊಡ್ಡ ಕತ್ತರಿ, ಒಂದು ದೊಡ್ಡ ಚರ್ಮದ ದುಡ್ಡು ಹಾಕುವ ಚೀಲ, ಒಳ್ಳೇ [illegible] ದಂತದ ಕನ್ನಡಿ, ಕೂದಲು ಬಾಚಿಕೊಳ್ಳುವ ಬಾಚಣಿಗೆ, ಒಂದು ಸೆಟ್ [illegible] ಗಳು. ಒಂದು ಸೊಗಸಾದ ಕನ್ನಡಕ, ಒಂದು ಸಾಬೂನು, ಒಂದು ಸೆಂಟ್ ಬಾಟ್ಲು. ಒಂದು ಕೈಮಸ್ [illegible] ಹೊಳೆಯುವ ಚಿಮ್ಮಟ, ಒಂದು ಉಂಗುರ, ಸುಂದರವಾದ ದೊಡ್ಡ ಟಾಯ್‌ಲೆಟ್, ಒಂದು ಪೆನ್ಸಿಲ್ ಬರೆಯುವದು, ೧೨ ಲೇಖನಿ ಕಡ್ಡಿಗಳು, ೩ ಕಪ್ಪು ಪೆನ್ಸಿಲುಗಳು, ೧೫೦ ಲಕೋಟೆಗಳು, ೧೫೦ ಲೆಟರ್ ಪೇಪರುಗಳು, ಪೋಸ್ಟ್ ರೂಲಿಸಿಗನುಸಾರವಾದ ೧೦೦ ಪೋಸ್ಟ್ ಕಾರ್ಡುಗಳು, ೭೩ ಸ್ಟೀಲ್ ಮೊಳೆಗಳು.

ಇಷ್ಟಕ್ಕೆಲ್ಲಾ ಕ್ರಯ ರೂ. ೩—೮—೦ ಮಾತ್ರವೇ.

ಆರ್ಡರ್ ಹೋಂ ಅಡ್ರೆಸ್ ಮಾಡಿಸಿರಿ ಬಂದಲ್ಲಿ ಉಳಿದ ಆರ್ಡರ್ಕ್ಕೆ ವಿ. ಪಿ. ಮಾಡುತ್ತೇವೆ. ಒಪ್ಪದಿದ್ದರೆ ಹಣ ವಾಪಸು ಕಳುಹಿಸುವೆವು.

ಈ ವಿಳಾಸಕ್ಕೆ ಬೇಗ ಬರಿಯಿರಿ:—

ಎಂ. ಎ. ಘಟಾಲಾ ಮತ್ತು ಕಂಪನಿ,
ಚಿತ್ತೂರು, ಉತ್ತರ ಆರ್ಕಾಟ್.

ನೆತ್ತಿಹತ್ತಿದ ಶೀತದಿಂದ ಮೂಗಿನಲ್ಲಿ ಹರಿಯುವದು. ಇದೇ ಪ್ರಪಂಚದಲ್ಲೆಲ್ಲಾ ರೋಗಕ್ಕೆ ಮೂಲಕಾರಣವು. ಇದಕ್ಕೆ ಪೆ-ರೂ-ನಾ ಸರ್ವಶ್ರೇಷ್ಠವಾದ ಪರಿಹಾರ.

38 23

ಉಷ್ಣದ ನೀರು ಹರಿಯುವ
ನೆತ್ತಿ ಹತ್ತಿದ ಶೀತ
ನೆಗಡಿ

ಇದು ಅನ್ನಕೋಶ, ಮಲಕೋಶ ದೊಡ್ಡ ಸಣ್ಣ ಕರುಳುಗಳು, ಕುಂಡಿಯ ಕೋಶಗಳು, ಇವೆಲ್ಲಾ ವ್ಯಾಪನೆಯಾಗುತ್ತದೆ

ಶೀತದ ನೀರು ಹರಿಯುವ
ನೆತ್ತಿಹತ್ತಿದ ಶೀತ
ನೆಗಡಿ

ಇದು ನೆತ್ತಿ, ಗಂಟಲು, ಶ್ವಾಸಕೋಶ ಶ್ವಾಸನಾಳಗಳು, ಇವಕ್ಕೆಲ್ಲಾ ವ್ಯಾಪಿಸಿಕೊಳ್ಳುತ್ತದೆ

ನೆತ್ತಿ ಹತ್ತಿದ ಶೀತ ಅಥವಾ ಉಷ್ಣದ ನೆಗಡಿಯಿಂದ ಮೂಗಿನಲ್ಲಿ ನೀರು ಹರಿಯುವುದು ಮಹಾ ಕಠಿಣತರವಾದ ಜಾಡ್ಯವೆಂದು ಪ್ರಪಂಚದಲ್ಲಿ ಸಮಸ್ತಜನರಿಗೂ ತಿಳಿದೇ ಇರುತ್ತದೆ ಅಮೇರಿಕ ಖಂಡಕ್ಕೆ ಸೇರಿದ ಸಂಯುಕ್ತ ಸಂಸ್ಥಾನಗಳೆಂಬ ಒಂದು ರಾಜ್ಯದೊಳಗೇನೇ ಪ್ರತಿ ವರುಷವೂ ಎರಡು ಲಕ್ಷ ಪ್ರಜೆಗಳು ಈ ರೋಗಕ್ಕೆ ಸಿಕ್ಕಿ ಸರಳುತ್ತಾ ಇದಾರೆ. ಹೀಗಿರುವಲ್ಲಿ ಇತರ ದೇಶಗಳೊಳಗೆ ಈ ರೋಗದಲ್ಲಿ ಬಿದ್ದು ಕಷ್ಟಪಡುವಂಥಾವರ ಸಂಖ್ಯೆಯು ಸರಾಸರಿ ನೋಡಿದರೆ ಅಷ್ಟು ಹೆಚ್ಚಾಗಿಯೇ ಇರಬೇಕೆಂದು ಹೇಳಲು ಸಂದೇಹವಿಲ್ಲ

ಈ ನೆತ್ತಿ ಹಿಡಿದ ಶೀತ ಅಥವಾ ಉಷ್ಣದ ನೀರು ಸುರಿಯುವಂಥಾ ರೋಗಕ್ಕೆ ಪೆ ರೂ-ನಾ ಎಂಬೋ ಔಷದವೇ ಸರ್ವಶ್ರೇಷ್ಠವಾದದ್ದೆಂದೂ ಇತರ ಔಷಧಗಳಿಗಿಂತ ಮೊದಲನೆಯ ಸ್ಥಾನವನ್ನು ಪಡೆದಿರುವಂತಾದ್ದೆಂದೂ ಅನೇಕ ವರುಷಗಳಿಂದಲೂ ಅನುಭವಕ್ಕೆ ಬಂದಿರುತ್ತದೆ.

ಪೆ-ರೂ-ನಾ ಎಂಬೋ ಔಷಧವು ಪ್ರಪಂಚದ ಪಶ್ಚಿಮ ಮತ್ತು ಪೂರ್ವಾರ್ಧಗೋಳಗಳಲ್ಲೆಲ್ಲಾ ಬಹು ಉತ್ತಮವಾದದ್ದೆಂದು ಪ್ರಖ್ಯಾತಿಯನ್ನು ಪಡೆದಿರುತ್ತದೆ

ಈ ಔಷಧ ಸಿಕ್ಕುವ ಸ್ಥಳಗಳು —

(೧) ಹಿಚ್‌ಕಾಕ್ ಅಂಡ್ ಸನ್ಸ್, ಬೆಂಗಳೂರು.

(೨) ಇಂಗ್ಲಿಷ್ ಡ್ರಗ್ ಕಂಪನಿ, ಫ಼ರ್ಸ ಮಿಂಟ್ ಬೀದಿ, ಮದರಾಸ್.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

23—8—1907 ರಿಂದ 30—8—1907 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	23	15	0	0
ಮೈಸೂರು ,,	38	26	0	0
ಬೆಂಗಳೂರು ಡಿಸ್ಟ್ರಿಕ್ಟು	203	164	5	5
ಮೈಸೂರು ,,	320	135	0	0
ಕೋಲಾರ್ ,,	3	1	2	1
ಕೋಲಾರ್ ಚಿನ್ನದ ಗಣಿಗಳು	17	9	0	0
ತುಮಕೂರು ಡಿಸ್ಟ್ರಿಕ್ಟು	4	3	17	8
ಹಾಸನ ,,	39	15	0	0
ಚಿತ್ರದುರ್ಗ ,,	0	0	0	0
ಕಡೂರ್ ,,	33	26	0	0
ಶಿವಮೊಗ್ಗ ,,	98	67	0	0
ಜಮ್ಲಾ	6[illegible]4	[illegible]69	34	[illegible]

ಶಾಲಿವಾಹನ ಶಕ ವರ್ಷಂಗಳ ೧೮೨೯ ನೇ ಪ್ಲವಂಗನಾಮ ಸಂವತ್ಸರದ ಭಾದ್ರಪದ ಕೃಷ್ಣ ಪಂಚಮಿ ಗುರುವಾರದಿಂದ ಭಾದ್ರಪದ ಕೃಷ್ಣ ಏಕಾದಶಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೭ ನೇ ಇಸವಿ ಸೆಪ್ಟಂಬರ್

ತಾ.	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಶ್ರಾವಣ/ಭಾದ್ರ ತಾರೀಖು
12	ಗುರು T	ಪಂಚಮಿ	43 2	ಭ.	15 5	27
13	ಶುಕ್ರ	ಷಷ್ಠಿ	39 31	ರೋ	16 1	28
14	ಶನಿ ,	ಸಪ್ತಮಿ	31 41	ಮೃ	13 3	29
15	ರವಿ ‡	ಅಷ್ಟಮಿ	29 9	ಆ	10 2	30
16	ಚಂದ್ರ	ನವಮಿ	3 12	ಪುನ	6 16	31
17	ಕುಜ ,	ದಶ	17 25	ಪುಷ್ಯ	1-56	1
18	ಬುಧ *	ಏಕಾದಶಿ	11 30	ಆ	53 53	3

T ಖುಸ್ರಾಮಂಜಿವಿರಾ ವ್ರತ ಆವ ಕಾ ಎರಣ ಗಪ್ತಮಿ ‡ ಜ್ಯೇಷ್ಠಾಷ್ಟಮಿ, ಜ್ಯೇಷ್ಠಾಲಕ್ಷ್ಮಿ ಸಿದ್ಧಲಕ್ಷ್ಮೀ ಮಹಾಲಕ್ಷ್ಮೀ ವ್ರತ ಕಿರಿಧ್ಯಯಂ, ಏಕಾದಶಿ ಇತಿ ಮಹಾತಿಪ್ರತ್ಯುಕಾಲ * ಸರ್ವತ್ರ ಪರಿವರ್ತನೈಕಾದಶಿ ದಶಿ ಆ ಸದಾ ಎತಿ

ಪೇಟೆ ಧಾರಣೆ

ದಿನಸು		ಮೈಸೂರು	ಬೆಂಗಳೂರು
ಕಪ್ಪು ಅಕ್ಕಿ ಪಲ್ಲಾ ೧ಕ್ಕೆ	೨೬	೧೩-೪	೧೩ ೦-೦
ಕಂಬಳಿ ಅಕ್ಕಿ ,,		೧೫-೩ ೦	೧೩-೦-೯
ದೊಡ್ಡ		೧೨ ೮ ೦	೧೨ ೬-೦
,,		೧೨-೦ ೦	೧೩ ೮-೦
ಜೋಳದ ಅಕ್ಕಿ		೯೫-೦ ೦	೧೬ ೯-೦
ಸಣ್ಣಕ್ಕಿ ಅವಲ್		೧೬ ೬ ೦	೧೪ ೦-೦
ದಪ್ಪ		೧೪ ೦ ೦	೯೪ ೦-೦
ತೊಗರೀ ಬೇಳೆ ಪಲ್ಲಾ ೧ಕ್ಕೆ		೧೩ ೦ ೦	೧೩ ೦-೦
,, ದುಂಡು		೫ ೦-೦	೬ ೯ ೦
ಕೈರಾಗಿ ಪಲ್ಲಾ ೧ಕ್ಕೆ		೫-೮-೦	೯ ೧೨-೦
ಕಾರಾಗಿ		೯-೪ ೦	೮ ೪ ೦
ಜೋಳ		೯೦-೦ ೦	೧೦ ೦ ೦
ಹುರುಳಿ ಪಲ್ಲಾ ೧ಕ್ಕೆ		೮ ೧೬ ೦	೮ ೦ ೦
ಬಿಳೀ ಅವರೆ		೯೦ ೦ ೦	೯೦ ೮ ೦
ಹೆಸರು		೧೧-೮-೦	೧೦ ೧೨-೦
ಉದ್ದು		೧೨ ೮ ೦	೧೧ ೮
ಕಡಲೆ		೧೯ ೮ ೦	೨೦ ೦-೦
ಎಳ್ಳು ಸೆ ೧೨೦ ಕ್ಕೆ		೫ ೧೨ ೦	೬ ೦-೦
ಹುರುಳಿ		೯೪-೦ ೦	೧೨-೮-೦
ಹರಳು ೯೬ ಸೇರಿಗೆ		೨ ೦ ೦	೨ ೨
ಸೀಗೇಕಾಯಿ ೭ ಮಣ ೧ಕ್ಕೆ		೩ ೮ ೧	೨ ೨-೦
ಮೆಣಸಿನಕಾಯಿ		೨-೪-೦	೨ ೦-೦
ದುಂಡು		೬ ೮-೦	೩೨ ೨ ೦
ಬೆಲ್ಲ ದೊಡ್ಡ ಅಚ್ಚು		೬ ೦ ೦	೫ ೬-೦
ಬೆಳ್ಳುಳ್ಳಿ ಮಣ ೧ಕ್ಕೆ		೯ ೧೨ ೦	೫ ೦
ಹರಳಿಕ್ಕೆ ,,		೯ ೧೨-೦	೬ ೪-೦
ಕೊತ್ತಂಬರಿ ಪಲ್ಲಾ ೧ಕ್ಕೆ		೫ ೪ ೦	೫ ೧೨-೦
ಉಪ್ಪು ,,		೧-೬ ೦	೧ ೬-೦
ಹುಣಸೇ ಹಣ್ಣು		೦-೧೪-೦	೧ ೪
,, ಹಸೀದ		೧೬ ೯ ೦	೧೯-೦
ತುಪ್ಪ ಮಣ ೧ಕ್ಕೆ		೪ ೧೫-೦	೪ ೬
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ		೬-೮-೦	೬ ೪
ತೆಂಗಿನಕಾಯಿ ೧೦೦ ಕ್ಕೆ		೧-೦-೦	೧ ೪
ಹರಳೆಣ್ಣೆ ಮಣ ೧ಕ್ಕೆ		೦ ೧೨ ೦	೦ ೧೨
ಅಂಟ್ವಾಳದ ಕಾಯಿ ಮಣ ೧ಕ್ಕೆ		೧೫-೬-೦	೧೫ ೬
ಚಿನ್ನ (ಪವನ್) ಕೆಂಪು		೧೫ ೧೦-೦	೧೫-೦-೦
,, , ಪಸಿಮೆ		೨೩-೧೨ ೦	೨೪ ೬
,, ,, ಗಟ್ಟಿ ತೊಲ ೧ಕ್ಕೆ		೮೫ ೦ ೦	೮೫-೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ			

Printed and Published by the Rev E W THOMPSON M A Proprietor and Manager, Wesleyan Mission Press, Mysore 12/9/1907

REGISTER
M 20

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೧ ಮೈಸೂರು—ಸ ೧೯೦೭ ನೇ ಇಸವಿ ಸೆಪ್ಟೆಂಬರ್ ತಾರೀಖು ೧೯ ನೇ ಗುರುವಾರ. ಸಂಚಿಕೆ ೧೬

WILLIAM & CO., BOMBAY.

ವಿಲಿಯಂ ಮತ್ತು ಕಂಪೆನಿ, ಫೋರ್ಟು, ಮುಂಬಯಿ.

ಗಜಕರ್ಣದ ಮುಲಾಮು.

27 30

ಇದನ್ನು ಹಾಗಿಸುವದರಿಂದ ಎಲ್ಲಾ ತರ ಕಜ್ಜಿಯೂ ನಾಶವಾಗುತ್ತದೆ. ಮೂರು ಸಾರಿ ಹಾಗಿಸುವದರೊಳಗೆ ಗಜಕರ್ಣವು ಹೋಗುವದು ಇದನ್ನು ಹಚ್ಚಿದಲ್ಲಿ ಉರಿ ಯು ಬರುವದಿಲ್ಲ. ಮತ್ತು ಚರ್ಮ ಕಪ್ಪಾಗುವದಿಲ್ಲ. ಒಂದು ಸಾರಿ ಪರೀಕ್ಷಿಸಿ ನೋಡಿರಿ ಗುಣ ಕಂಡುಬರುವದಿಲ್ಲವಾದರೆ ಹಣ ಹಿಂತಿರುಗಿ ಕೊಡಲ್ಪಡುವದು ಡಬ್ಬಿ ೧ಕ್ಕೆ ಕಿಮ್ಮತ್ತು ೦-೬-೦. ವಿ ಪಿ ೦-೧೨-೦ ತರಿಸಿಕೊಳ್ಳಿರಿ' ತ್ವರೆಮಾಡಿರಿ''

ವಜ್ರಗುಟಿಕ ೧-೦-೦ ಸುಂದರೀ ತೈಲ ೦-೪-೦ ದಂತಮಂಜನ ೦ ೨-೦ ಕಫಹಾರಿ ೧-೩-೦ ಕೇಶವರ್ಧಿನೀ ತೈಲ ೧-೦-೦ ಜೀರ್ಣ ರಸಾಯನ ೧ ೦-೦ ಖಸ್ತಿ ಮುಲಾಮು ೦-೩-೦ ಈ ಕಂಪನಿಯವರು ಶ್ರೇಷ್ಟ ನಮೂನೆಯ ಔಷಧಗಳನ್ನು ಸ್ವತಹಾ ತಯಾರಿಸುವವರಿಂದ ಕ್ಯಾಟಲಾಗು ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು

ಅಮೃತಾಂಜನ

ಬಾಟ್ಲಿ ಒಂದಕ್ಕೆ ಕಿಮ್ಮತು ೮ ಆಣೆ ವಿ. ಪಿ. ೧೨ ಆಣೆ.

ಅಮೃತಾಂಜನ—ಸುಖಾಂಜನ.
ಅಮೃತಾಂಜನ—ದಿವ್ಯಾಂಜನ.
ಅಮೃತಾಂಜನ—ಸಂಜೀವನ.
ಅಮೃತಾಂಜನ—ಪರಮಾಂಜನ

ವಾತ, ಎದೆನೋವು, ಗಂಟ್ಲುನೋವು, ಸಂಧಿವಾತ ತಲೆನೋವು, ಮೂಲವ್ಯಾಧಿ, ಈ ಎಲ್ಲಾ ತರದ ರೋಗಕ್ಕೆ ಈ ಅಮೃತಾಂಜನವು ದಿವ್ಯ ಔಷಧವಾಗಿರುತ್ತದೆ

ಅಮೃತಾಂಜನ ಡಬ್ಬಿ ೧ಕ್ಕೆ ೧ ಆಣೆ

ಅಮೃತಾಂಜನ—ಶೀತಭಂಜನಿ.
ಅಮೃತಾಂಜನ—ತಕ್ಷಣಸಹಾರಿಣಿ.
ಅಮೃತಾಂಜನ—ಅಪೂರ್ವದರ್ಶನಿ.
ಅಮೃತಾಂಜನ—ಭಂಜನವಿಮರ್ಧಿನಿ

ಇದರಿಂದ ಗುಣ ಕಂಡುಬರುವದಿಲ್ಲವಾದರೆ ಹಣ ಹಿಂತಿರಿಗಿ ಕೊಡಲ್ಪಡುವದು ಜಕಂ ಮತ್ತು ಘಾಯು, ಅರ್ಧಾಂಗವಾಯು, ಈ ರೋಗಕ್ಕೆ ಇದು ಸಂಜೀವನವಾಗಿರುತ್ತದೆ ತರಿಸಿಕೊಳ್ಳಿರಿ! ಪರೀಕ್ಷಿಸಿರಿ!!

ವಿಲಿಯಂ ಮತ್ತು ಕಂಪೆನಿ, ೧೬ ಓಕ್ ಲೇನ್. ಫೋರ್ಟು, ಮುಂಬಯಿ.
ಟೆಲಿಗ್ರಾಫು ಅಡ್ರೆಸು; 'ಅಮೃತಾಂಜ ,"ಮುಂಬಯಿ.

ಮೈಸೂರು ವೆಂಕಟಾಚಲ ಪಂಡಿತರ ಸಿದ್ಧೌಷಧಗಳು

28 31

೧. ಲೋಕಾಮಯಹರ ಕಸ್ತೂರೀ ಮಾತ್ರೆ—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ

ಚಳಿಜ್ವರ, ಜ್ವರ, ಹೊಟ್ಟೆಶೂಲೆ, ಸಂದುಗಳ ನೋವು, ಮೈ ಕೈಕಾಲು ಕೊಡತ (ಭಾರ), ಮೈ ನವೆತ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿಮಾಂದ್ಯ, ಕಲ್ಲನೋವು ಜನ್ನೊಸೂ, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ

ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತೆ ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಬಾಯಿಲೆಗೂ ದಾರಿಕೊಡದೆ, ನೀರು ಹವಾಗಳ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿ ದೋಷವನ್ನು ತೆಗೆದು ಪುಷ್ಟಿಯಾಗಿ ವೃದ್ಧಿಪಡಿಸುತ್ತದೆ ಸ್ತ್ರೀಯರ ಋತುಶೂಲೆ, ಮಕ್ಕಳ ಕೆಮ್ಮು, ಜ್ವರ, ನಚ್ಚುಜ್ವರ ಕೃತಕತ್ವಗಳನ್ನು ಗುಣಪಡಿಸುತ್ತದೆ

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಜಾಂಕೆಗೆ ಗುರಿಯಾಗುವುದಿಲ್ಲ ಒಳ್ಳೇ ಶಕ್ತಿವರ್ಧಕವಾಗಿದೆ

ಅನುಪಾನಪತ್ರ ಔಷಧದ ಸಂಗಡಲೇ ಇರುತ್ತದೆ

೩೦ ಮಾತ್ರೆಯುಳ್ಳ ಕಾಪ್ಪಿಗೆ ೪ ಆಣೆ, ೫ ಕಾಪ್ಪಿಗೆ ೧ ಕಾಪ್ಪಿ ಉಚಿತ. ೧ ರಿಂದ ೧೨ ಕಾಪ್ಪಿ ವರೆಗೆ ಪೋಸ್ಟೇಜು ೪ ಆಣೆ

ವಿಳಾಸ—ಮೈಸೂರು ವೆಂಕಟಾಚಲ ಪಂಡಿತ,
ಎಸ್. ಎಸ್. ಆರ್. ವೈದ್ಯಶಾಲೆ
ಲಕ್ಷ್ಮೀವಿಲಾಸ ರೋಡ್, ಮೈಸೂರು

ಅಡಿಗೆಯವನು ಬೇಕು

96 3

ಕರಾಚಿಯಲ್ಲಿ ನಮ್ಮ ಮನೆಯಲ್ಲಿ ಅಡಿಗೆ ಕೆಲಸಕ್ಕೋಸ್ಕರ ಒಬ್ಬ ವೈಷ್ಣವ ಅಡಿಗೆಯವನು ಬೇಕಾಗಿದೆ ಊಟ ಕಳೆದು ಸಂಬಳ ೧೫ ರೂಪಾಯಿಗಳು ಸಿಕ್ಕುವದು ಇಷ್ಟವುಳ್ಳವರು ಇಬ್ಬರು ದೊಡ್ಡ ಮನುಷ್ಯರ ಖಾತ್ರಿ ಲಾಯಖು ದಾಖಲೆಗಳ ಸಹಿತ ನಮ್ಮಲ್ಲಿಗೆ ಬರೆದುಕೊಳ್ಳಬೇಕು ನಮ್ಮ ವಿಳಾಸ —
ಕಪ್ಪೂರಶ್ರೀನಿವಾಸರಾವ್, ಯಕ್ಸಿಕ್ಯೂಟಿವ್ ಇಂಜನಿಯರ್, ಕರಾಚಿ

ಕಾರ್ಡು ಸೈಜು ೪|೪ ೩

ಫೋಟೋ ತೆಗೆಯುವ

ಫೋಟೋಕ್ಯಾಮೆರಾ.

84 5

ಬೆಲೆ ಪಕ್ತ ಮೂರು ರೂಪಾಯಿ

ಇದರಿಂದ ಬೇಕಾದ ಮನುಷ್ಯನ ಫೋಟೋ ಅವನಿಗೆ ತಿಳಿಯದಂತೆ ತೆಗೆಯಲಿಕ್ಕೆ ಬರುತ್ತದೆ ವೇಗದಿಂದ ಓಡುವ ಗಾಡಿಯು ಮತ್ತು ಹಾರುವ ಪಕ್ಷಿಯ ಫೋಟೋ ಸಹ ತೆಗೆಯಬಹುದು. ಇದರಲ್ಲಿ ಕಲಿಯತಕ್ಕದ್ದೇನೂ ಇಲ್ಲ ಈ ಕ್ಯಾಮರಾದ ಮಾಹಿತಿಯನ್ನು ಕೊಳ್ಳುವವರಿಗೆ ನಾವು ಕೂಡ ಲೇ ಮಾಡಿಕೊಡುವೆವು ಎಷ್ಟೋ ಕಡೆಗೆ ಇದಕ್ಕೆ ೧೦ ರಿಂದ ೧೫ ರೂ. ಬೆಲೆ ಬೀಳುತ್ತದೆ ಆದರೆ ಇದರ ಖರೇ ಕಿಮ್ಮತ್ತು ೩ ರೂಪಾಯಿ ಮಾತ್ರ ಇರುವದು. ಟಪ್ಪಾಲ್ ಖರ್ಚು ೯ ಆಣೆ

ಛೋಟಾಲಾಲ ಛಗನಲಾಲ ಮಹಾಜನ, ಠಾಕೂರದ್ವಾರ ರೋಡ, ಪೋಸ್ಟ ಕಾಲಬಾದೇವಿ, ಮುಂಬಯಿ

ನಿಮಗೆ ನೋವು ಇದೆಯೋ?

68-17

ಹಾಗಾದರೆ "ಕ್ಲಿಮೆಂಟ್ ಯವರ ಮ್ಯಾಜಿಕ್ ಬಾಂ" ನ್ನು ಏಕೆ ಉಪಯೋಗಿಸಬಾರದು? ಆಶ್ಚರ್ಯಕರವಾದ ಬಾಧಾಪಹಾರಿ ಔಷಧವು! ಈಗಿನ ಕಾಲಮಾನದಲ್ಲಿ ಕಂಡು ಹಿಡಿದ ದೊಡ್ಡ ನೂತನವು!

ಈ ರಾಜ ಔಷಧವನ್ನು ಮೊಟ್ಟಮೊದಲು ಕಂಡುಹಿಡಿಯುತ್ತಲೆ ಕೆಲವು ನಿಮಿಷಗಳೊಳಗಾಗಿ ನರ ಮತ್ತು ಮಾಂಸ ಸಂಬಂಧವಾದ ಶೂಲೆ ನೋವು, ಕೀಲುಗಳ ಬಾಧೆ, ಕಿಬ್ಬೊಟ್ಟೆ ನೋವು ಬೆನ್ನುಳುಕುವದು, ತಲೆನೋವು, ಕೆಮ್ಮು, ಕೀಲುಗಳು ಕತ್ತರಿಸುವದು, ಕೊರಳು ಊತ, ಕೈಕಾಲು ಒಡೆತ ಇವುಗಳನ್ನೆಲ್ಲಾ ವಿಸ್ಮಯಕ್ಕೆ ತಕ್ಕಂತೆ ಗುಣಪಡಿಸುವದು ಈ ಔಷಧವು ಆಶ್ಚರ್ಯಕರವಾಗಿ ಗುಣಪಡಿಸುವದರಿಂದ ಎಲ್ಲರಲ್ಲಿಯೂ ಪ್ರಸರಿಸುತ್ತಾ ಬರುವದು ಇತರ ಔಷಧಿಗಳು ಗುಣಪಡಿಸದೆ ಹೋದಾಗ ಡಾಕ್ಟರ್ ಫೀಜನ್ನು ಕಡಿಮೆಮಾಡಿ ಇದು ನಿಸ್ಸಂದೇಹವಾಗಿಯೂ ಗುಣಪಡಿಸುವದು.

ಕ್ರಯ —೧ ಬಾಟ್ಲಿಗೆ ೧೨ ಆಣೆ, ಪೋಸ್ಟೇಜು ೪ ಆಣೆ ೩ ಬಾಟ್ಲಿಗೆ ಅಂಚೆವೆಚ್ಚ ಸೇರಿ ರೂ ೨—೪ ಆಣೆ ಎಲ್ಲಾ ಕೆಮಿಸ್ಟ್ ಷಾಪುಗಳಲ್ಲಿ ದೊರೆಯುವದು.

ನಮ್ಮ ವಿಳಾಸ:—ಎಫ್ ಡಬ್ಲಿಯು ಆರ್ಕ್,
ಸಿಮೆಟ್ರಿ ರೋಡ್, ವೇಪೇರಿ, ಮದರಾಸ್

ಜ್ವರ ಹರಿ.

74 6



ಇದು ಸಾಧಾರಣ ಜ್ವರ, ಹಳೇಜ್ವರ ಮೊರೇಜ್ವರ, ಪಿತ್ಥಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಟು ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್ ಪಿ ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಔನ್ಸಿನ ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚನ್ನಾಗಿ ಗುಣ ಹೊಂದಿರುವರು ಇನ್ನೂ ಜನಗಳು ಕಾಟಲೇ ಬೇಕೆಂತ್ತಿರುವವರಿಂದ ದಯವಿಟ್ಟು ಇನ್ನೊಂದು ೨೦ ಔನ್ಸಿನ ಸೀಸೆಯನ್ನು ವಿ ಪಿ ಪಿ ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ

ಕ್ರಯ —ಸೀಸೆ ೧ ಕ್ಕೆ ೪ ಆಣೆ ೧ ರೂ., ೧—೪ ರೂ., ರೂ ೨—೧೨ ಅ., ೧೧ ರೂ., ಡಜನ್ನಿನ ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು

****

ಪಿಮೆಂಕ ಪೂರ

ಈ ಔಷಧವು ಅಜೀರ್ಣ, ಶೀತಬೇದಿ, ಸಾಧಾರಣ ಹೊಟ್ಟೆ ಕಳೆಯುವದು, ವಾಂತಿಬೇದಿ, ನಾನಾತರದ ಹೊಟ್ಟೆ ನೋವುಗಳು— ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದುವರ್ತಿ ಹೊರಗೆ ಆಗುವಾಗ್ಗೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಪೆನ್ನಿಯವರ ಕರ್ಪೂರವನ್ನು ನಾನೂ ನನ್ನ ಕೈಕೆಳಗಿನವರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ಪರೀಕ್ಷೆಗಳಿಂದಲೂ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಷ್ಠರಿಗೆ ಕೊಡುತ್ತೇವೆ ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧವೆಂತ ಬರೆದಾರೆ

ಈ ಎರಡು ಔಷಧಗಳೂ ಊರ ಇರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರರನ್ನು ವಿಶೇಷ —
ಪೆನ್ನಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,
ಸೆಕೆಂಡ್ ಬೀಚ್ ಲೈನ್, ಮದರಾಸ್.

೩ ನೆ ಭಾವಿ ಪ್ರಶ್ನೋತ್ತರ ಲೇಖ್ಯಬೋಧಿನಿ

102 1

ಸ್ವಲ್ಪ ಪ್ರತಿಗಳು ಇವೆ ಮಾರಿಹೋದನಂತರ ಖಂಡಿತ ದೊರೆಯಲಾರದು

ಕ್ಷೇಮಸಮಾಚಾರ ಕಾಗದಗಳು, ಅರ್ಜಿಗಳು, ಸಿವಿಲ್, ಕ್ರಿಮಿನಲ್, ರೆವಿನ್ಯೂ, ಇಂಜನಿಯರ್, ಫಾರೆಸ್ಟು ಮೊದಲಾದ ಇಲಾಖೆಗಳ ಸಂಗತಿಗಳು, ಸಿವಿಲ್ ಪ್ರೊಸೀಜರ್ ಕೋಡು, ಕ್ರಿಮಿನಲ್ ಪ್ರೊಸೀಜರ್ ಕೋಡು, ಪೆನಲ್ ಕೋಡು, ಹಿಂದೂ ಲಾ, ಮಹಮ್ಮದೀ ಲಾ, ಕಂಟ್ರಾಕ್ಟು, ವಾರಸು, ನ್ಯಾಯ, ಕೋರ್ಟು ಫೀಜು, ಪೊಲೀಸು, ಮೊಕ್ಕಾ, ಅರಣ್ಯ, ಮೊದಲಾದ ಎಲ್ಲಾ ಆಕ್ಟುಗಳ ಸಾರಾಂಶಗಳೂ, ಲೇವಾದೇವಿ ಸಾಲಭಾವಿಕೆ ಲೆಖ್ಖ, ವರ್ತಕರ ಲೆಖ್ಖ, ಇವುಗಳನ್ನೂ ಬರೆಯುವ ರೀತಿ, ಇವುಗಳನ್ನೆಲ್ಲಾ ಪ್ರಶ್ನೋತ್ತರ ರೀತಿಯಾಗಿ ಬರೆದಿರುತ್ತೆ ೧-೨ ನೆ ಮುದ್ರಣದಲ್ಲಿದ್ದಂತೆ ಖಂಡಿತವಾಗಿ ಈ ಮುದ್ರಣದಲ್ಲಿ ತಪ್ಪುಗಳಿಲ್ಲ ಕ್ರಯ ೧-೮-೦

ಬೋಧಿಣಿ ಪುಸ್ತಕ —ಭೂಮಿಯನ್ನ ಸರ್ವೆ (ಅಳೆಯುವ) ರೀತಿಯನ್ನು ತಿಳಿಸುತ್ತದೆ ಕ್ರಯ ೦-೧೪-೦ ಆಣೆ

ಸುಭಾಷಿತ ಸಮುದಾಯ —ಶ್ರೀಮದ್ರಾಮಾಯಣ ಭಾರತ ಮೊದಲಾದ ಗ್ರಂಥಗಳಿಂದ ೫೦೦ ಶ್ಲೋಕಗಳನ್ನು ಆರಿಸಿ ಇಂಗ್ಲೀಷಿನಲ್ಲಿಯೂ ಕನ್ನಡದಲ್ಲಿಯೂ ಅರ್ಥ ಬರೆದಿರುತ್ತೆ ಕ್ರಯ ೧-೮-೦

ವಿಳಾಸ —ಬಿ ಕೆ ಮೂರ್ತಿ ಕಂಪೆನಿ,

ಅಠ್ಠೂರ್ ಪೋಸ್ಟ್

ಹಿಂದುಸ್ಥಾನದಲ್ಲಿ ಮಕ್ಕಳು

ಬಹಳ ಉಷ್ಣದೇಶ್ಯವಾದದ್ದರಿಂದ ನಾನಾ ರೋಗಬಾಧೆಗಳನ್ನು ಸಹಿಸಿಕೊಂಡು ಬೆಳೆಯಬೇಕಾಗಿದೆ

ಅವರ ಸಣ್ಣ ಸಣ್ಣ [illegible] ಮಾಂಸಖಂಡಗಳೂ ಸರಿಯಾಗಿ ಬಲಗೊಂಡು ಬೆಳೆಯುವುದಕ್ಕೆ ಅವರಿಗೆ ಚಿಕ್ಕಂದಿನಿಂದಲೇ ಬಲಕಾರಿಯಾದ [illegible] ಔಷಧವನ್ನು ಕೊಡುವುದು ಆವಶ್ಯಕ

SCOTT'S EMULSION 31 27

(ಸ್ಕಾಟ್ಸ್ ಇಮಲ್‌ಷನ್).

ಎಂಬ ಔಷಧದಲ್ಲಿ ಮಕ್ಕಳ ಸಮಸ್ತ ಅಂಗಗಳನ್ನೂ ಬಲಪಡಿಸಿ ಬೆಳೆಸುವಂಥಾ [illegible] ಗುಣಗಳುಂಟು

ಇದಕ್ಕೆ ಸಮಾನವಾದದ್ದು ಮತ್ತಾವುದೂ ಇಲ್ಲ

ಈ ಔಷಧವನ್ನು [illegible] ಅದರ ಗುಣಗಳು [illegible]

ಕೈಯಿಂದ ಮುಟ್ಟದೇನೇ ತಯಾರಾದದ್ದು

ಈ ಔಷಧ ವ್ಯಾಪಾರಸ್ಥರಲ್ಲಿ ಬಿಕರಿಯಾಗುತ್ತದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,

ವಿಳಾಸ [illegible] ಔಷಧಗಳ ಕಾರ್ಖಾನೆ,

ಈ ಔಷಧದ [illegible] ಲಂಡನ್, ಇಂಗ್ಲೆಂಡ್

ಉಪಾಧ್ಯಾಯರೆಲ್ಲರೂ

ಗಮನಕ್ಕೆ ನೋಟೀಸ್.

29 7

ಮೈಸೂರು ಸರ್ಕಾರದ ವಿದ್ಯಾಇಲಾಖೆಯ ಇನ್‌ಸ್ಪೆಕ್ಟರ್ ಜನರಲ್‌ರವರು ಕೆಳಗೆ ಕಂಡ ಪುಸ್ತಕಗಳನ್ನು ಸರ್ಕಾರದ ಸ್ಕೂಲುಗಳಲ್ಲಿಯೂ, ಗ್ರಾಂಟ್ ಪಡೆಯತಕ್ಕ ಪಾಠಶಾಲೆಗಳಲ್ಲಿಯೂ ಮತ್ತು ಆಂಗ್ಲೋ ವರ್ನಾಕ್ಯುಲರ್ ಸ್ಕೂಲ್‌ಗಳಲ್ಲಿಯೂ ಮತ್ತೊಂದು ಹುಕುಂ ಕೊಡುವತನಕ ಉಪಯೋಗಿಸಬೇಕೆಂದು ಕಳೆದ ಜುಲೈ ೩೧ ನೇ ತಾರೀಖಿನ ಮೈಸೂರು ಗೆಜೆಟ್ಟಿನಲ್ಲಿ ಪ್ರಕಟಿಸಿ ಮಾಡಿರುತ್ತಾರೆ

ಭೂಗೋಳ ಶಾಸ್ತ್ರದ ಮೊದಲನೆಯ ಪುಸ್ತಕ (೧ನೆಯ ೨ನೆಯ ಭಾಗ ಒಂದೇ ಪುಸ್ತಕ ಈ ಪುಸ್ತಕದಲ್ಲಿ ನಾಲ್ಕು ಬಣ್ಣದ ನಕ್ಷೆಗಳೂ ಮಕ್ಕಳಿಗೆ ಭೂಗೋಳಶಾಸ್ತ್ರವನ್ನು ವಿಶದವಾಗಿ ತಿಳಿಸಿಕೊಡುವುದಕ್ಕೆ ಸಾಹಿತ್ಯವಾಗಿರುವ ಬೇಕಾದಷ್ಟು ಚಿತ್ರಗಳೂ ಇರುತ್ತವೆ) ಎರಡನೇ ಕ್ಲಾಸಿಗೆ ಕ್ರಯ ೪ ಆಣೆ

ಭೂಗೋಳ ಸಂಗ್ರಹ (ಮ॥ ಟಿ ಎಂ ರಾಮಸ್ವಾಮಯ್ಯನವರು ಬರೆದುದು ಈ ಪುಸ್ತಕವು ಪ್ರಚುರವಾದಂದಿನಿಂದ ಅನೇಕ ಸಹಸ್ರ ಪ್ರತಿಗಳು ಮಾರಾಟವಾಗಿವೆಯೆಂದು ವಾಚಕ ಮಹಾಶಯರು ತಿಳಿದಿರಬಹುದು) ಮೂರನೇ ಕ್ಲಾಸಿಗೆ ಕ್ರಯ ೪ ಆಣೆ

ಮೇಲ್ಕಂಡ ಪುಸ್ತಕಗಳನ್ನು ಉಪಾಧ್ಯಾಯರೆಲ್ಲರೂ ತಡಮಾಡದೆ ಜಾಗ್ರತೆಯಲ್ಲಿ ತರಿಸಿಕೊಳ್ಳತಕ್ಕದ್ದು

ವಿಳಾಸ — ಮ್ಯಾನೇಜರ್,

ಸಿ. ಎಲ್ ಎಸ್. ಬುಕ್ ಡಿಪೋ, ಮೈಸೂರು.

CHAMBERLAIN'S COUGH REMEDY.

ಚೇಂಬರ್ಲೇನ್‌ರವರು ಕಂಡುಹಿಡಿದ ಕೆಮ್ಮಿನ ಔಷಧವು

4 12



ಶೀತದ ಕೆಮ್ಮು, ಗಂಟಲು ಗೊರಗುವುದು ಹುಡಿಗೆಮ್ಮು, ನಾಯಿಗೆಮ್ಮು, ಎಲ್ಲಾ ತರಹ ಶೀತ, ಗಂಟಲು ಎದೆಯಲ್ಲಿ ಹುಟ್ಟುವ ಸಮಸ್ತ ವ್ಯಾಧಿಗಳು—ಇವಕ್ಕೆಲ್ಲಾ ಈ ಔಷಧವು ಉಪಯುಕ್ತವಾಗಿದೆ

ಈ ಕೆಮ್ಮನ್ನು ಅಲಕ್ಷ್ಯಮಾಡಬೇಡಿ ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ ಅದರ ನಿಮಿತ್ತ ನ್ಯೂಮೋನಿಯಾ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವುದು. ತರುವಾಯ ಉಗುಳಿನಲ್ಲಿ ರಕ್ತಬೀಳುವುದು ಹಾಗೆಯೇ ಕ್ಷಯರೋಗಕ್ಕೆ ಆಸ್ಪದವಾಗುವುದು

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟಲಿನಲ್ಲಿ ಶ್ಲೇಷ್ಮ ಕಟ್ಟುವುದನ್ನೂ ಶ್ಲೇಷ್ಮ ಬೀಳುವುದನ್ನೂ ಖಂಡಿತವಾಗಿ ನಿವಾರಣೆಮಾಡುತ್ತದೆ ಉಸುರು ಹೊಯ್ಯುವುದು ಕಷ್ಟವಾಗಿದ್ದರೆ ಅದನ್ನು ಕೂಡಲೇ ಪರಿಹರಿಸುತ್ತದೆ ಅಪಾಯಕರವಾದ ಕೆಮ್ಮಿನ ಕಟ್ಟನ್ನು ನಿಲ್ಲಿಸಿಬಿಡುತ್ತದೆ ಎದೆ ಒಣಗುವಂಥಾ ಕೆಟ್ಟಸ್ಥಿತಿಯನ್ನು ಸಂಪೂರ್ಣವಾಗಿ ವಾಸಿಮಾಡಬಲ್ಲದು ಕೆಮ್ಮನ್ನು ಶಮನಮಾಡಿ, ನೀವು ಸುಖವಾಗಿ ನಿದ್ರೆಮಾಡುವಂತೆ ಮನಸ್ಸಿಗೆ ಉಲ್ಲಾಸಕೊಡುತ್ತದೆ

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇರಿಸುವುದಿಲ್ಲ

ಈ ಔಷಧವು ವನಸ್ಪತಿಗಳ ತಯಾರಿ

ಕೈಯಿಂದಮುಟ್ಟದೆ ತಯಾರಾಗಿದೆ

ಎಲ್ಲೆಲ್ಲೂ ಬಿಕರಿಯಾಗುವುದು ಸಣ್ಣಸೀಸೆಗೆ ೧ ರೂಪಾಯಿ ದೊಡ್ಡಸೀಸೆ ೨ ರೂಪಾಯಿ

"ಲಾಗೆಜೆಟ್" ಎಂಬ ಮಾಸಪತ್ರಿಕೆಯು

101 1

ಸಿವಿಲ್, ಕ್ರಿಮಿನಲ್, ರೆವಿನ್ಯೂ, ಲಾ ಪಾಯಿಂಟುಗಳನ್ನು ತಿಳಿಸತಕ್ಕ ಲಾಗೆಜೆಟ್ ಮಾಸಪತ್ರಿಕೆಯನ್ನು ಕೂಡಲೇ ತರಿಸಿಕೊಳ್ಳಿ ವಾರ್ಷಿಕ ಚಂದಾ ಟಪ್ಪಾಲ್ ಹಾಸಲು ಸಹಿತ ರೂ ೧ [illegible] ವಿಳಾಸ — ಬಿ ನರಸಿಂಗರಾವ್ ಎಡಿಟರ್, ಲಾಗೆಜೆಟ್ ಬೆಂಗಳೂರು.

"ಸಾಧ್ವಿ"

[illegible]

ಇದು ಮ॥ ವೆಂಕಟಕೃಷ್ಣಯ್ಯನವರಿಂದ ಪ್ರಸಿದ್ಧಪಡಿಸಲ್ಪಡುತ್ತಿರುವ ಮಾಸಪತ್ರಿಕೆ ಭಾರತಮಹಿಳೆಯರ [illegible] ಸೌಖ್ಯಗಳ [illegible] ವಿಷಯಗಳನ್ನು [illegible] ಪತ್ರಿಕೆಯ [illegible] [illegible] ವಿಳಾಸ - ಮ್ಯಾನೇಜರ್ "ಸಾಧ್ವಿ" ಮೈಸೂರು

ಆರ್ಡರ್ ಬರುತ್ತಿವೆ! ಬೇಗ ನೋಡಿ!

ಸ್ವಾಮಿಯ ಅಷ್ಟ ಪಾಡುವಾ

[illegible]

ಇಷ್ಟಕ್ಕೆಲ್ಲಾ ಕ್ರಯ ರೂ ೩-೧೫-೦ ಮಾತ್ರವೇ.

ಆರ್ಡರ್ ಹಣ ಅಡ್ವಾನ್ಸ್ ಮನಿಆರ್ಡರ್ ಬಂದಲ್ಲಿ ಉಳಿದ ಅರ್ಧಕ್ಕೆ ವಿ ಪಿ ಮಾಡುತ್ತೇವೆ. ಒಪ್ಪದಿದ್ದರೆ ಹಣ ವಾಪಸು ಕಳುಹಿಸುವೆವು

ಈ ವಿಳಾಸಕ್ಕೆ ಬೇಗ ಬರೆಯಿರಿ.—

ಎಂ. ಗಿ. ಘಟಾಲಾ ಮತ್ತು ಕಂಪನಿ,

ಚಿತ್ತೂರು, ಉತ್ತರ ಆರ್ಕಾಟು.

ಒಕ್ಕಲಿಗರ ಎರಡನೇ ಮಹಾಸಭೆ

10ಠ 1

ಒಕ್ಕಲಿಗ ಮಹಾಜನರಿಗೆಲ್ಲಾ ಪ್ರಾರ್ಥನೆ

ಈ ಸಭೆಯು ಬರುವ ಅಕ್ಟೋಬರ್ ತಿಂಗಳು ೧೭, ೧೮ ಮತ್ತು ೧೯ನೇ ತಾರೀಖುಗಳಲ್ಲಿ ಮೈಸೂರು ಟೌನ್ ಹಾಲಿನಲ್ಲಿ ನಡೆಯುವುದು [illegible]

[illegible]

ಈ ಪ್ರಕಟನೆಯಲ್ಲಿ [illegible]

ಕೆ ಎಚ್ ರಾಮಯ್ಯ ಬಿ ಎ

ಒಕ್ಕಲಿಗರ [illegible] ಸೆಕ್ರೆಟರಿ

[illegible] ಬೆಂಗಳೂರು [illegible]

ಡಾಕ್ಟರು ಏನು ಹೇಳುತ್ತಾರೆ?

93 1

ಇವರು ಪಟ್ಟಣದಲ್ಲೆಲ್ಲಾ ತಕ್ಕವೈದ್ಯ ಕೆಂದು ತಿಳಿದವರಾಗಿರುತ್ತಾರೆ ಮತ್ತು ಅವರು ಬಹಿರಂಗವಾಗಿ ಹೇಳಿದ ಮಾತು ಕಲ್ಕತ್ತಾ ಪಟ್ಟಣದವರಿಗೆ ಪ್ರಖ್ಯಾತವಾಗಿರುವುದು. ಇಂಡಿಯನ್ ಮೆಡಿಕಲ್ ಕಾಲೇಜಿನ ಎಲ್. ಎಂ. ಎಸ್. ಡಾಕ್ಟರ್ [illegible] ತಮ್ಮ ಸ್ವಂತ ಅನುಭವದ ಮೇಲೆ ಖಂಡಿತವಾಗಿ ಹೇಳುವುದೇನೆಂದರೆ —ಕಿಡ್ನಿ ರೋಗ [illegible] ಸಂಬಂಧವಾದ ಇತರ ಬಾಧೆಗಳಿಂದ ಪೀಡಿತರಾಗಿ ಬೇರೆ ಔಷಧಗಳಿಂದ ಉಪಶಮನ ಸಿಕ್ಕದಂಥ ರೋಗಿಗಳು ಬೆನ್ನುನೋವಿನ ಮಾತ್ರೆಗಳ ಔಷಧಗಳಿಗೆ (ಫಾಸ್ಟ್ಸ್ ಬ್ಯಾಕ್ ಏಕ್ ಕಿಡ್ನಿ ಪಿಲ್ಸ್) ಗಳನ್ನು ಸೇವಿಸುವ ಮೊದಲು ಆಧ್ಯಯನ [illegible] ಇತರ ಔಷಧಗಳಿಂದ ಗುಣ ಸಿಕ್ಕದೆ ಇದ್ದವರಿಗೆ ಇದರಿಂದ ಗುಣವಾಗಿದೆ

ಬೆನ್ನಿನ ಬಿಗಿದಲ್ಲಿಯ ನೋವು ಮೂತ್ರದಿಂದ ಉಂಟಾಗುವುದಾಗಿ ಸೂಚಿಸುತ್ತದೆ [illegible] ತಲೆ ತಿರುಗುವಿಕೆ, ತಲೆ ನೋವು, [illegible] ಮೂತ್ರರೋಗಗಳನ್ನು ಪರಿಹರಿಸಿ ಬೆನ್ನುನೋವಿನ, [illegible] ಮೂತ್ರಾಧಾರಗಳ ಮತ್ತು ಮೂತ್ರಸಂಬಂಧವಾದ ಇತರ ವ್ಯಾಧಿಗಳ ಹೇತುವನ್ನು ಪರಿಹರಿಸುತ್ತವೆ

ಎಲ್ಲಾ ಔಷಧ ವರ್ತಕರಿಂದ ದೊರೆಯುತ್ತದೆ. [illegible] ರೂ ೨, [illegible] ಬುಕ್ಕು ಸನ್ ಅಂಡ್ ಕಂ, ಮುಂಬಾಯಿ

ವೃತ್ತಾಂತ ಪತ್ರಿಕೆ.

—— — ೧. ——

೫೯ ೧೯೦೭ ನೇ ಇಸವಿ ಸೆಪ್ಟೆಂಬರ್ ತಾ|| ೧೯ ನೇ ಗುರುವಾರ

ಮೊರೊಕ್ಕೊ ರಾಜ್ಯದ ಗಲಭೆಯು

ಆಫ್ರಿಕಾ ಖಂಡದ ಉತ್ತರಭಾಗದಲ್ಲಿರುವ ಮೊರೋಕ್ಕೋ ಎಂಬ ಸಣ್ಣ ರಾಜ್ಯದಲ್ಲಿ ಉಂಟಾಗಿರುವ ಗಲಭೆಯನ್ನು ಕುರಿತು ಆಗಿಂದಾಗ್ಗೆ ಬಂದಿರುವ ತಂತೀ ವರ್ತಮಾನಗಳನ್ನು ಪ್ರಕಟಿಸಿರುವೆವು ಸದ್ಯದಲ್ಲಿ ಆ ರಾಜ್ಯದೊಳಗೆ ನಾಲ್ಕು ಪಂಗಡಗಳು ಹುಟ್ಟಿರುತ್ತವೆ—ಸುಲ್ತಾನ್ ಮುಲ್ಲೈ ಅಬ್ದುಲ್ ಅಜೀಜಿಯವರ ಗುಂಪು, ಇವರ ಸಹೋದರನಾದ ಮುಲ್ಲೈ ಹಫೀದನ ಗುಂಪು, ದಂಗೆಯೆದ್ದಿರುವ ರೈಸೂಲಿಯ ಗುಂಪು, ಕಸಬ್ಲಾಂಕಾ ನಗರದಲ್ಲಿ ಫ್ರೆಂಚರ ಸೈನ್ಯ, ಇವೇ. ಈ ನಾಲ್ಕು ಪಂಗಡದವರೂ ಏಕಕಾಲದಲ್ಲಿ ಗಲಭೆಯೆಬ್ಬಿಸಿರೋಣವರಿಂದ ಅವರ ವೃತ್ತಾಂತವನ್ನು ಸ್ವಲ್ಪಮಟ್ಟಿಗೆ ವಿವರಿಸಿದಲ್ಲದೆ ಚನ್ನಾಗಿ ತಿಳಿಯಲಾಗುವದಿಲ್ಲ.

ಮುಲ್ಲೈ ಅಬ್ದುಲ್ ಅಜೀಜ್ ಎಂಬುವರು ಮೊರೊಕ್ಕೋ ಸಂಸ್ಥಾನದ ಸುಲ್ತಾನರು. ಇವರು ಈಗ ಸುಮಾರು ೧೩ ವರುಷಗಳಿಂದ ಆಳುತ್ತಿದ್ದಾರೆ. ಮೂರ್ ಎಂಬ ಮಹಮ್ಮದೀಯರೇ ಅಲ್ಲಿನ ಪ್ರಜೆಗಳು. ಇವರು ಆಚಾರ ವ್ಯವಹಾರಗಳಲ್ಲಿ ಬಹಳ ಕಟ್ಟುನಿಟ್ಟಾಗಿದ್ದಾರೆ. ತಮ್ಮ ಸುಲ್ತಾನರೇ ತಮ್ಮ ದೊರೆ ಎಂತಲೂ ತಮ್ಮ ಗುರು (ಖಲೀಫಾ) ವೆಂತಲೂ ಎಣಿಸಿಕೊಂಡಿರುವವರು. ತುರ್ಕಿ ಸುಲ್ತಾನರು ಖಲೀಫರೆಂಬುದು ಕೂಡ ಅವರು ಒಪ್ಪುವದಿಲ್ಲ. ಮೊರೋಕ್ಕೋ ರಾಜ್ಯದ ಒಳಭಾಗಗಳಲ್ಲಿರುವ ಬೆಟ್ಟ ಸೀಮೆಯಲ್ಲಿ ಅನೇಕ ಜಾತಿ ಜಾತಿ ಗುಂಪಿನ ಜನರಿರುತ್ತಾರೆ. ಇವರೆಲ್ಲಾ ಹೆಸರಿಗೆ ಸುಲ್ತಾನರ ಅಧೀನರಾಗಿರುವವರು. ಆಗಾಗ್ಗೆ ಅವರಲ್ಲೇ ಗುಂಪುಗುಂಪುಗಳಿಗೆ ಪರಸ್ಪರ ಕಲಹಗಳು ಹುಟ್ಟಿ ಕದನಗಳು ನಡೆಯುವವು. ಸುಲ್ತಾನರಾದರೋ ಈ ಜನರಿಂದ ತಮಗೆ ಸಲ್ಲತಕ್ಕ ಕಪ್ಪ ಕಾಣಿಕೆಗಳನ್ನು ವಸೂಲ್ಮಾಡುವುದು ತುಂಬಾ ಪ್ರಯಾಸ. ಅವರು ವಸೂಲಾತಿಗೆ ಪ್ರತಿ ವರುಷವೂ ಸೈನ್ಯವನ್ನೇ ಕಳುಹಿಸುವುದೂ, ಈ ಸೈನಿಕರಿಗೂ ಆ ಗುಂಪುಗಳವರಿಗೂ ಕದನಗಳು ನಡೆದು ಅನೇಕರು ಮೃತಪಡುವುದೂ, ಕಪ್ಪ ಕಾಣಿಕೆಗಳನ್ನೂ ಕೊಲ್ಲಲ್ಪಟ್ಟವರ ತಲೆಗಳನ್ನೂ ಸೈನಿಕರು ತಂದು ಸುಲ್ತಾನರಿಗೆ ಒಪ್ಪಿಸುವುದೂ ಅಪರೂಪವಲ್ಲ.

ಇಂಥಾ ಪ್ರಜೆಗಳನ್ನು ಆಳುತ್ತಿರುವ ಸುಲ್ತಾನರು ಗುಣಾಢ್ಯರಾಗಿದ್ದಾಗ್ಯೂ ಪರಾಕ್ರಮಿಗಳಲ್ಲ. ರಾಜ್ಯದಲ್ಲಿ ಮಂತ್ರಿಗಳೇ ಪ್ರಬಲರೆನಿಸಿಕೊಂಡಿದ್ದಾರೆ. ಸುಲ್ತಾನರು ಯೂರೋಪಿನ ಆಟದ ಸಾಮಾನು ಮುಂತಾದದ್ದಕ್ಕೆ ಬಹಳ ಹಣ ಹಾಕುತ್ತಿರುವುದನ್ನೂ, ಯೂರೋಪಿಯನ್ ಜನರಲ್ಲಿ ವಿಶ್ವಾಸವಿಟ್ಟುಕೊಂಡಿರುವುದನ್ನೂ ಮೇಲ್ಕಂಡ ಗುಂಪುಗಳ ಜನರು ನೋಡಿ ತುಂಬಾ ಕಳವಳಪಡಲಾರಂಭಿಸಿರುವಂತೆ ಕಾಣುವುದು. ಇದಲ್ಲದೆ ಮಂತ್ರಿಗಳು ಲಂಚಕೋರರಾಗಿ ಅಯೋಗ್ಯರೆನಿಸಿಕೊಂಡಿರುವುದರಿಂದ ರಾಜ್ಯಭಾರಕಾರ್ಯಗಳು ಯಾವಾಗಲೂ ತೃಪ್ತಿಕರವಾಗಿ ನಡೆಯುವುದಿಲ್ಲ. ಪ್ರಜಾ ಸಮೃದ್ಧಿಯನ್ನು ಕಾಪಾಡತಕ್ಕ ಸೈನ್ಯವು ತರಪೇತಾದದ್ದಲ್ಲ. ಸೈನಿಕರಿಗೆ ಸಂಬಳ ಸಾರಿಗೆಗಳೂ ಕ್ರಮವಾಗಿ ಪಾವತಿ ಆಗುವುದಿಲ್ಲ. ಎಲ್ಲಿ ನೋಡಿದರೂ ಕೊಲೆಗಳೂ ಹಿಂಸೆಯ ಕೃತ್ಯಗಳೂ ನಡೆಯುತ್ತಲೇ ಇರುವವು. ಈಗ ದಂಗೆಯೆದ್ದಿರುವ ರೈಸೂಲಿ ಎಂಬ ಮುಖಂಡನು ಕೆಲವು ವರುಷಗಳಿಂದಲೂ ಸುಲ್ತಾನರ ಅಧಿಕಾರವನ್ನು ಪ್ರತಿಭಟಿಸುತ್ತಲೇ ಬಂದಿರುವ. ಆತನು ಸುಲ್ತಾನರ ಸೈನ್ಯವನ್ನು ಸೋಲಿಸಿ, ಕೆಲವು ಪ್ರದೇಶಗಳನ್ನು ಆಕ್ರಮಿಸಿಕೊಂಡೂ ಇರುವನು. ಈತನಿಗೆ ಯೂರೋಪಿಯನ್‌ರಲ್ಲಿ ದ್ವೇಷವಿಲ್ಲ. ಸುಲ್ತಾನರ ಕೈಕೆಳಗಿರತಕ್ಕ ದುಷ್ಟರೂ ಅಯೋಗ್ಯರೂ ಆದ ಮಂತ್ರಿಗಳು ಹೋಗಿ ರಾಜ್ಯದಲ್ಲಿ ಕ್ರಮವೂ ಪ್ರಜಾಸಮೃದ್ಧಿಯೂ ನೆಲೆಗೊಳ್ಳಬೇಕೆಂದು ಈತನು ಅಪೇಕ್ಷಿಸತಕ್ಕವನಾಗಿದ್ದಾನೆ.

ಈ ರಾಜ್ಯದ ಸಮುದ್ರ ತೀರ ಪಟ್ಟಣಗಳಲ್ಲಿ ಯೂರೋಪಿಯನ್ ಜನರು ಹೋಗಿ ನಿಂತು, ಅಲ್ಲಿಂದ ಚಕ್ಕಳ, ಹಣ್ಣು ಹಂಪಲು, ಕುದುರೆ, ಮೊಟ್ಟೆ, ಈ ಮೊದಲಾದವುಗಳನ್ನು ರಫ್ತು ಮಾಡುತ್ತಲೂ, ಅಲ್ಲಿಗೆ ಇತರ ಕಡೆಗಳಿಂದ ಬಟ್ಟೆಬರೆ, ಲೋಹಸಾಮಾನು, ಸಕ್ಕರೆ ಮುಂತಾದ ಸರಕನ್ನು ತರಿಸಿ ಬಿಕರಿ ಮಾಡುತ್ತಲೂ ಬಂದಿರುವರು. ಇವರ ಮಾನ ಪ್ರಾಣ ಧನಗಳನ್ನು ಸಂರಕ್ಷಣೆ ಮಾಡುವುದಕ್ಕೋಸ್ಕರ ಸ್ಪೆಯಿನ್ ಮತ್ತು ಫ್ರೆಂಚರ ಪೋಲೀಸ್ ಪಟಾಲಂ ನೇಮಿಸಲ್ಪಟ್ಟಿದೆ. ಫ್ರೆಂಚ್ ಜನರು ಕಸಬ್ಲಾಂಕಾದಲ್ಲಿ ರೈಲ್ ರಸ್ತೆಯನ್ನು ಹಾಕುತ್ತಿದ್ದಾಗ ಸ್ವದೇಶಿಗಳು ಕೂಲಿ ಜನರನ್ನೂ ಇಂಜನಿಯರುಗಳನ್ನೂ ಹಿಡಿದು ಹೊಡೆದು ಕೊಂದುಹಾಕಿದ್ದರಿಂದ ಫ್ರೆಂಚರು ಯುದ್ಧದ ಹಡಗುಗಳನ್ನು ತಂದು ಆ ಪಟ್ಟಣದ ಮೇಲೆ ಗುಂಡು ಹೊಡೆದು ಕದನ ಮಾಡಿದರು. ಇದು ಇನ್ನೂ ಶಮನವಾಗಿಲ್ಲ.

ಅತ್ತ ಸುಲ್ತಾನರ ಸಹೋದರನೇ ಬಹಳ ಸೈನ್ಯವನ್ನು ಕೂಡಿಸಿ ದಂಗೆ ಎದ್ದಿರುತ್ತಾನೆ. ಬಹು ಮಂದಿ ಮುಖಂಡರೂ ಅತನ ಬೆಂಬಲಿಗರಾಗಿರುವರು. ಎರಡು ಸೈನ್ಯಗಳೂ ರಾಬತ್ ಎಂಬ ತೀರ ಪಟ್ಟಣದ ಕಡೆಗೆ ಹೋಗುತ್ತಲಿವೆ. ಈ ರೀತಿಯಾದ ಗಲಭೆಗಳೆಲ್ಲಾ ಆ ರಾಜ್ಯದಲ್ಲಿ ಹ್ಯಾಗೆ ಕೊನೆಮುಟ್ಟುವವೋ ನೋಡಬೇಕಾಗಿದೆ. ಯೂರೋಪಿಯನ್ ರಾಜ್ಯಗಳವರಾದರೋ ಅಲ್ಲಿರುವ ತಮ್ಮ ಜನಗಳಿಗೆ ಮಾನಪ್ರಾಣವು ಭದ್ರವಾಗಿರುವದೆಂದು ಕೇಳುತ್ತಿದ್ದಾರೆ. ಇವರು ಒಟ್ಟಾರೆ ಮೊರೊಕ್ಕೊ ಸ್ವದೇಶದ ಕಲಹಗಳಲ್ಲಿ ಪ್ರವೇಶಿಸಲಾರರು. ಅಂತು ಸುಲ್ತಾನರು ಸಮರ್ಥರಲ್ಲವಾದ್ದರಿಂದ ಆ ರಾಜ್ಯವು ಬಹಳ ಹೀನಸ್ಥಿತಿಯಲ್ಲಿದೆ; ಅಂದರೆ, ಪ್ರಜೆಗಳಿಗೆ ಸಿದ್ಧವಿಲ್ಲ, ನ್ಯಾಯಾನ್ಯಾಯದ ವಿಮರ್ಶೆಯಿಲ್ಲ, ಕಸಬುಗಳೂ ಕೈಗಾರಿಕೆಗಳೂ ಹಾಳಾಗುತ್ತಲಿವೆ. ಆದಕಾರಣ ಶಕ್ತನಾದ ಪುರುಷನು ಸುಲ್ತಾನ್ ಪದವಿಗೆ ಬಂದು, ಮೊರೋಕ್ಕೋ ಸಂಸ್ಥಾನದಲ್ಲಿ ನಾಗರಿಕವಾದ ರಾಜ್ಯಭಾರವನ್ನು ಸ್ಥಾಪಿಸಿ ನಡಸುವುದಾದರೆ ಎಷ್ಟೋ ಮೇಲಾದೀತೆಂದು ಆ ರಾಜ್ಯದ ಹಿತೈಷಿಗಳೆಲ್ಲಾ ಹಾರೈಸುತ್ತಿದ್ದಾರೆ.

ಒಳದೇಶದ ವೃತ್ತಾಂತಗಳು.

ಯಳಂದೂರು ತಾಲ್ಲೂಕು ಕಸಬೆ ಗೆರೆಯಲ್ಲಿರುವ ಅನ್ನ ಸತ್ರವನ್ನು ಸರ್ಕಾರದವರು ಮುಂಚಿನಷ್ಟೇ ಜಾರಿಮಾಡಬೇಕೆಂದು ಹುಕುಂ ಕೊಟ್ಟಿದ್ದಾರೆ.

●●●

ಸಮೋಗ್ರ ಕಡೆ ಪ್ಲೇಗಿನ ಹಾವಳಿ ಬಹಳವಾಗಿರುವುದರಿಂದ ಅದನ್ನು ಅಡಗಿಸುವ ಏರ್ಪಾಡು ಮಾಡಿ ಬರುವುದಕ್ಕಾಗಿ ದಿವಾನ್ ಮೆ|| ಮಾಧವರಾಯರು ಇಷ್ಟರಲ್ಲೇ ಆ ಪ್ರಾಂತ್ಯ ಹೋಗಿ ಬರುವವರಾಗಿದ್ದಾರೆಂದು ವರ್ತಮಾನವಿದೆ.

●●●

ವ್ಯವಸಾಯ ಮತ್ತು ಕೈಗಾರಿಕೆಗಳ ಪ್ರದರ್ಶನಕ್ಕೆ ತಕ್ಕ ಏರ್ಪಾಡುಗಳನ್ನು ಮಾಡುವದಕ್ಕೆ ರವಿನ್ಯೂ ಕಮಿಷನರ್ ಮೆ|| ಪಿ. ರಂಗಸ್ವಾಮಯ್ಯಂಗಾರು ಬೆಂಗಳೂರಿನಿಂದ ರಾಜಧಾನಿಗೆ ಬಂದಿರುತ್ತಾರೆ.

●●●

ನವರಾತ್ರಿ ಉತ್ಸವ ಕಾಲದಲ್ಲಿ ರಾಜಧಾನಿಯಲ್ಲಿ ನಡೆಯುವ ಪ್ರದರ್ಶನದ ಕಾಲದಲ್ಲಿ ಸರ್ಕಾರದವರು ಅಮೃತಮಹಲ್ ಇಲಾಖೆಯ ಕೆಲವು ಎತ್ತುಗಳನ್ನು ಹರಾಜು ಮೂಲಕ ವಿಕ್ರಯಿಸುವವರಾಗಿದ್ದಾರೆ.

●●●

ಶ್ರೀಮನ್ಮಹಾರಾಜರವರು ಕೋಟೆಯೊಳಗೆ ಪ್ಲೇಗ್ ಉಪದ್ರವು ಇರುವುದರಿಂದ ಹೊಸ ಮೈಸೂರು ಅರಮನೆಯನ್ನು ಬಿಟ್ಟು ಪ್ಯಾಲೆಸ್ ಬಂಗಲೆಯ ಎದುರು ಪಾರ್ಕಿನಲ್ಲಿರುವ "ವಸಂತಮಹಲ್" ಎಂಬ ಬಂಗಲೆಯಲ್ಲಿ ದಯಮಾಡಿಸಿರುತ್ತಾರೆ.

●●●

ಕೋಲಾರ್ ಡಿಸ್ಟ್ರಿಕ್ಟ್ ಕಾಮಸಮುದ್ರದ ಒಬ್ಬ ಪೋಲಿಸ್ ದಫೇದಾರನು ಸುಮಾರು ಮಂಡ್ಯ ಕೆರೆ (ಟಿಬಿ) ಕೆಲವು ದೈವರಿಂದ ಬಂದದ್ದು ಕಸುಕೊಳ್ಳಬೇಕೆಂದು ಕ್ರಿಮಿನಲ್ ಅಪರಾಧ ಹೊರಿಸಿ ವಸ್ತುಗಿರಿ ಮಾಡಿದರೆಂದು ಮೊಕದ್ದಮೆಯನ್ನು ಹರೂಪಿಸ್ತು ಮಾಡುತ್ತಿದ್ದಾರೆ.

●●●

ಕಳುವು ಕೊಲೆಗಳನ್ನು ನಡಿಸಿ ಪೋಲೀಸ್ ಲಾಕಪ್ಪಿನಿಂದ ಸುಮಾರು ೬ ವರ್ಷಗಳ ಕೆಳಗೆ ತಪ್ಪಿಸಿಕೊಂಡು ಹೋಗಿದ್ದ ಕೊರಚರ ಹುಚ್ಚಗಾರನೆಂಬುವನನ್ನು ಬೆಂಗಳೂರು ಪೋಲೀಸಿನವರು ಚಿತ್ರದುರ್ಗದ ಬಳಿ ಹೊಳಲ್ಕೆರೆಯಲ್ಲಿ ಅವನ ಸಹಪಾಟಿಗಳನ್ನು ಹಾಸನದಲ್ಲೂ ಪತ್ತೆ ಮಾಡಿ ಹಿಡಿದಿರುತ್ತಾರೆಂದು ತಿಳಿಯುವುದು.

●●●

ಮೈಸೂರು ಸಂಸ್ಥಾನದ ವ್ಯವಸಾಯದ ಇಲಾಖಾ ಕೆಮಿಸ್ಟರಾದ ಡಾಕ್ಟರ್ ಲೆಮಾರ್ಚಂಡರು ಕೊಡಗಿನ ಕಡೆ ಪ್ರಯಾಣ ಮಾಡಿರುತ್ತಾರೆ. ಈ ಪಿನ ಅಲ್ಲಿನ ಪ್ಲಾಂಟರುಗಳ ಮಂಡಳಿಯವರು ಸೇರಿ, ಕಾಫಿ ಮೊದಲಾದ ಬೆಳೆಗಳ ವಿಷಯವನ್ನು ಕುರಿತು ಅವರ ಕೂಡ ಚರ್ಚೆ ಮಾಡುವವರಾಗಿದ್ದಾರೆ.

ರಾಜಧಾನಿಯ ನಾರ್ಮಲ್ ಸ್ಕೂಲಿಗೆ ಬೆಂಗಳೂರಿನಿಂದ ಬಂದು ಓದುತ್ತಿರುವ ವಿದ್ಯಾರ್ಥಿಗಳಿಬ್ಬರು ತುಂಬಾ ಕಾಯಿಲೆಯಾಗಿದ್ದರೆಂತಲೂ, ವಿಕ್ಟೋರಿಯ ಆಸ್ಪತ್ರೆ ಅಸಿಸ್ಟೆಂಟರಾದ ಮೆ|| ಪೆರಿಯಸ್ವಾಮಿ ಪಿಳ್ಳೆಯವರು ಬಹು ಕರುಣೆಯಿಂದ ಬಂದುನೋಡಿ ಚಿಕಿತ್ಸೆಮಾಡಿ ಸ್ವಸ್ಥಪಡಿಸಿದರೆಂದೂ ಒಬ್ಬ ಬಾತ್ಮಿದಾರರು ತಿಳಿಸುತ್ತಾರೆ.

●●●

ಮೈಸೂರು ಸಂಸ್ಥಾನದ ಆಕ್ಟಿಂಗ್ ರೆಸಿಡೆಂಟರಾದ ಮೆ|| ವಿಲಿಯಂ ಸನ್ ಯವರು ಪತ್ನಿ ಪರಿವಾರ ಸಹಿತ ಕಳೆದ ಶುಕ್ರವಾರ ಮಧ್ಯಾಹ್ನ ಬೆಂಗಳೂರಿಂದ ರಾಜಧಾನಿಗೆ ದಯಮಾಡಿ, ಮೂರು ದಿನಗಳ ತನಕ ರೆಸಿಡೆನ್ಸಿ ಬಂಗಲೆಯಲ್ಲಿದ್ದು, ಮೊನ್ನೆ ಸೋಮವಾರ ರಾತ್ರಿ ವಾಪಸು ಬೆಂಗಳೂರಿಗೆ ಪ್ರಯಾಣ ಮಾಡಿದರು. ಎರಡುವೇಳೆಯೂ ಗೌರವಾರ್ಥವಾದ ೧೩ ತೋಪುಗಳು ಹಾರಿಸಲ್ಪಟ್ಟವು.

●●●

ಸದ್ಯ ರಾಜಧಾನಿಯಲ್ಲಿ ಪ್ಲೇಗ್ ಉಪದ್ರವು ಸ್ವಲ್ಪಮಟ್ಟಿಗೆ ಹೆಚ್ಚುತ್ತಾ ಬಂದು, ಪ್ರಜೆಗಳಿಗೆ ಕಳವಳವನ್ನುಂಟುಮಾಡಿದೆ. ಮ್ಯುನಿಸಿಪಾಲಿಟಿಯವರು ವೀಲಪ್ಲಾನ ಲೈನ್ ಮನೆಗಳನ್ನು ಪ್ರಜೆಗಳಿಗೆ ವಿಕ್ರಯ ಮಾಡಿರೋಣದರಿಂದ ಅನೇಕರು ಕೆಲವು ಕಾಲ ಪ್ಲೇಗ್ ಸೋಂಕನ್ನು ತಪ್ಪಿಸಿಕೊಂಡು ಇರಬೇಕೆಂದರ ಪ್ರತ್ಯೇಕವಾದ ಮನೆಗಳು ಸಿಕ್ಕದೆ ಚಿಂತಿಸುತ್ತಿದ್ದಾರೆ. ಕಳೆದ ವಾರ ಅರಮನೆಯ ಸಿವಿಲ್ ಸರ್ಜನ್ ಮೆ|| ಪಿ. ಎಸ್. ಅಚ್ಯುತನವರ ಸುಮಾರು ೪೯ ವರುಷದ ಹೆಣ್ಣು ಮಗುವು ಪ್ಲೇಗಿನಲ್ಲಿ ಕಾಲವಾಯಿತೆಂದು ತಿಳಿಸಲು ವಿಷಾದಿಸುತ್ತೇವೆ.

●●●

ನವರಾತ್ರಿ ಉತ್ಸವಕಾಲದಲ್ಲೂ ಪ್ರಜಾಪ್ರತಿನಿಧಿ ಸಮಾಜವು ಜರುಗುವಾಗಲೂ ರಾಜಧಾನಿಯಲ್ಲಿ ದರ್ಬಾರವರ ಕ್ಯಾಂಪಿನ ಬಳಿ ಒಂದು ಸ್ಪೆಷಲ್ ಪೋಸ್ಟ್ ಆಫೀಸನ್ನು ಇಡಿಸುವ ಏರ್ಪಾಡು ನಡೆದಿದೆ. ಇದಲ್ಲದೆ ರಾಜಧಾನಿಯ ಎಲ್ಲಾ ಭಾಗಗಳಲ್ಲೂ ಇಟ್ಟಿರುವ "ಲೆಟರ್ ಬಾಕ್ಸ್" ಎಂಬ ಅಂಚೆ ಕಾಗದದ ಪೆಟ್ಟಿಗೆಗಳಿಂದ ಕಾಗದವನ್ನು ಕಂಡಿಸಿ ಜಾಗ್ರತೆಯಾಗಿ ದೊಡ್ಡ ಪೋಸ್ಟ್ ಆಫೀಸಿಗೆ ತರುವುದಕ್ಕೆ ಅಂಚೆ ಇಲಾಖೆಯವರು ಜವಾನರಿಗೆ ಬೈಸಿಕಲ್ ಗಾಡಿಗಳನ್ನು ಕೊಡಿಸುವವರಾಗಿದ್ದಾರೆಂತಲೂ ಕೇಳುತ್ತೇವೆ. ಈಗ ರಾಜಧಾನಿಯಲ್ಲಿ ಸಾಯಂಕಾಲ ೬ ಘಂಟೆಯಾದ ಮೇಲೆ ಕಾಗದ ಹಾಕಿದರೆ ಆ ರಾತ್ರಿ ರೈಲಿನಲ್ಲಿ ಹೋಗುವುದಿಲ್ಲ. ಇನ್ನು ಮೇಲೆ ಸಾಯಂಕಾಲ ೭ ಗಂಟೆ ತನಕ ಕಾಗದಗಳನ್ನು ಜನರು ಹಾಕುವಂತೆ ಸಮಯವನ್ನು ಹೆಚ್ಚಿಸಿಕೊಡುತ್ತಾರೆಂದು ಕೇಳುತ್ತೇವೆ. ಈ ಏರ್ಪಾಡುಗಳು ರಾಜಧಾನಿಯ ಪ್ರಜೆಗಳಿಗೆ ತುಂಬಾ ಸಂತೋಷವಾದೀತೆನ್ನುವದಕ್ಕೆ ಸಂಶಯವಿಲ್ಲ.

●●●

ವಿಲಾಯತಿಯಿಂದ ಮಿಸ್ ಲ್ಯೂಸಿ ಎಂಬುವಳು ಬೆಂಗಳೂರಿಗೆ ಬಂದಿರುತ್ತಾಳೆ. ಆಕೆ ಬೆಂಗಳೂರಿನಲ್ಲಿ ಮೆ|| ಕಾಂತರಾಜೇ ಅರಸಿನವರ "ಬೋಲೀ" ಎಂಬ ಬಂಗಲೆಯಲ್ಲಿ ಬೆಂಗಳೂರು ಗವರ್ನ್‌ಮೆಂಟ್ ಬಾಲಿಕಾ ಪಾಠಶಾಲೆಯ ಉಪಾಧ್ಯಾಯಿನಿಗೆ ಕಿಂಡರ್‌ಗಾರ್ಟನ್ ಎಂಬ ಬಾಲಬೋಧೆಗಳನ್ನು ಮೂರು ತಿಂಗಳ ತನಕ ಹೇಳಿಕೊಡುವರು. ತರುವಾಯ ಆಕೆ ರಾಜಧಾನಿಗೆ ನವಂಬರ್ ತಿಂಗಳಲ್ಲಿ ಬಂದು, ಇಲ್ಲಿರುವ ಮಹಾರಾಣಿ ಕಾಲೇಜಿನ ಮತ್ತು ವಿಕ್ಟೋರಿಯಾ ಸ್ಕೂಲಿನ ಬಾಲಕಿಯರಿಗೆ ಕಿಂಡರ್‌ಗಾರ್ಟನ್ ವಿದ್ಯೆಯನ್ನು ಮೂರು ತಿಂಗಳ ತನಕ ಕಲಿಸುವರು. ಇತ್ತಲಾಗಿ ಅಮೇರಿಕದಿಂದ ಬೆಂಗಳೂರಿಗೆ ಬಂದಿರುವ ಮಾಸ್ಟರ್ ಲಾರ್ಸನ್ ಎಂಬುವರು ಬೆಂಗಳೂರಿನಲ್ಲಿ ರ್ಯಾಪ್ಟಿಸ್ಟ್ ಮಿಷನ್ ಮೆಮೋರಿಯಲ್ ಹಾಲ್ ಎಂಬ ಬಂಗಲೆಯಲ್ಲಿ ಸರ್ಕಾರಿ ಸ್ಕೂಲುಗಳ ಉಪಾಧ್ಯಾಯರುಗಳನ್ನು ಬರಮಾಡಿಕೊಂಡು, ಈ ದೇಶದ ಬಾಲಕರಿಗೆ ಅಂಗಸಾಧನಾ ವಿದ್ಯೆಗಳನ್ನು ಕಲಿಸತಕ್ಕ ಮಾರ್ಗ ವಿಧಾನಗಳನ್ನು ಹೇಳಿಕೊಡುವರು. ಇವರು ಮೂರು ತಿಂಗಳ ತನಕ ಬೆಂಗಳೂರಿನಲ್ಲಿದ್ದು ತರುವಾಯ ರಾಜಧಾನಿಯಲ್ಲಿ ಮೂರು ತಿಂಗಳ ತನಕ ಆ ವಿದ್ಯೆಗಳನ್ನು ಕಲಿಸುವವರಾಗಿದ್ದಾರೆ.

ಮೈಸೂರು ಗೆಜೆಟ್ ಸಂಗ್ರಹ

ಹೆಗ್ಗಡದೇವನಕೋಟೆ ತಾಲ್ಲೂಕ್ ಶಿರಸ್ತೇದಾರರು ಮುತ್ತೋಂದು ಹುಕುಂ ಕೊಡಲ್ಪಡುವ ತನಕ ಆ ತಾಲೂಕಿನ ಅಮಲ್ದಾರ್ ಮತ್ತು ೩ ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೋಡತಕ್ಕದ್ದು.

ಅಮಲ್ದಾರ್ ಮೆ|| ಎಂ. ರಂಗನಾಥರಾಯರು ರಜದಿಂದ ವಾಪಸು ಬಂದಕೂಡಲೇ ಕಾರ್ಕಳದಲ್ಲಿ ತಾಲ್ಲೂಕಿಗೆ ವರ್ಗ ಮಾಡಲ್ಪಟ್ಟಿದ್ದಾರೆ.

ಅಮಲ್ದಾರ್ ಮೆ|| ಎಂ. ಕೃಷ್ಣರಾಯರನ್ನು ಕಾರ್ಕಳದಲ್ಲಿಯಿಂದ ಅರಕಲಗೂಡು ತಾಲ್ಲೂಕಿಗೆ ವರ್ಗ ಮಾಡಿದೆ.

ಮಳವಳ್ಳಿ ತಾಲ್ಲೂಕು ಅಮಲ್ದಾರ್ ಮೆ|| ಬಿ. ಎನ್. ಗುರುರಾಯರಿಗೆ ಆಗೀಷ್ಟು ೬ ರಿಂದ ಮೂರು ತಿಂಗಳು ಪ್ರಿವಿಲೇಜ್ ರಜಾ ಕೊಟ್ಟಿದೆ.

ಪ್ರೆಂಚ್‌ರಾಕ್ಸ್ ಸಬ್ ತಾಲ್ಲೂಕಿನ ಡೆಪ್ಯುಟಿ ಅಮಲ್ದಾರ್ ಮೆ|| ಎನ್. ಶ್ರೀನಿವಾಸಯ್ಯಂಗಾರು ಮುತ್ತೊಂದು ಹುಕುಂ ಕೊಡಲ್ಪಡುವ ತನಕ ಮಳವಳ್ಳಿ ತಾಲ್ಲೂಕಿನ ಅಮಲ್ದಾರ್ ಮತ್ತು ಮೊದಲನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೋಡುವಂತೆ ನೇಮಿಸಲ್ಪಟ್ಟಿದ್ದಾರೆ.

ಶ್ರೀರಂಗಪಟ್ಟಣದ ತಾಲ್ಲೂಕ್ ಅಮಲ್ದಾರರು ಪ್ರೆಂಚ್‌ರಾಕ್ಸ್ ಸಬ್ ತಾಲ್ಲೂಕಿನ ಛಾರ್ಜನ್ನೂ ವಹಿಸತಕ್ಕದ್ದು.

ಸೀನಿಯರ್ ಅಸಿಸ್ಟೆಂಟ್ ಕಮಿಷನರ್ ಮೆ|| ಎ. ಎ. ನಾರಾಯಣ ಅಯ್ಯಂಗಾರರು ರಜದಿಂದ ವಾಪಸು ಬರುವ ತನಕ ಆಕ್ಟಿಂಗ್ ಅಸಿಸ್ಟೆಂಟ್ ಕಮಿಷನರ್ ಮೆ|| ಎ. ಕೃಷ್ಣಸ್ವಾಮಿ ಅಯ್ಯಂಗಾರರು ಹಾಸನದ ಡಿಸ್ಟ್ರಿಕ್ಟಿನಲ್ಲಿ ಸಕಲೇಶಪುರದ ಸಬ್ ಡಿವಿಜನ್ ಛಾರ್ಜನ್ನು ವಹಿಸತಕ್ಕದ್ದು.

ಮೈಸೂರು ಸರ್ಕಾರಿ ಹುಕುಮು.

ತಿರುಪತಿ ಕ್ಷೇತ್ರದಲ್ಲಿರುವ ಶ್ರೀ ತಿರುಮಲಪುರವಸ್ತು ಆಳಗಿಯ ಮಣವಾಳರಾಮಾನುಜ ಜೀಯರವರ ಮಠದಿಂದ ಸ್ವಾಮಿಗಳು ಮೈಸೂರು ಸೀಮೆಯಲ್ಲಿ ಸಂಚಾರ ಹೊರಡುವವರಾಗಿದ್ದಾರೆಂತಲೂ ಅವರ ಪ್ರಯಾಣಕ್ಕೆ ತಕ್ಕ ರಹದಾರಿಯನ್ನು ಕೊಡಿಸಬೇಕೆಂತಲೂ ಗವರ್ನಮೆಂಟಿನವರನ್ನು ಕೇಳಿಕೊಂಡಿದ್ದರು ಈ ಭಾಗದಲ್ಲಿ ಮೈಸೂರು ಸರ್ಕಾರದವರು ಹುಕ್ಕುಂ ಕೊಟ್ಟಿರುವುದೇನೆಂದರೆ—

ಮೈಸೂರು ಶ್ರೀಮನ್ಮಹಾರಾಜರವರ ಗವರ್ನಮೆಂಟ್ ಮುಖರಾಯ ಇಲಾಖೆಯಿಂದ ಮೈಸೂರು ಸೀಮೆಯ ತಮಾಂ ತಾಲ್ಲೂಕು ಅಮಲ್ದಾರ್, ಶಿರಸ್ತೆದಾರ್, ಪೋಲೀಸ್ ಇನ್ಸ್‌ಪೆಕ್ಟರ್ ವಗೈರೇರಿಗೆ.— ಶ್ರೀಮಾನ್ ಪರವಸ್ತು ತಿರುವೆಂಗಡರಾಮಾನುಜ ಜೀಯ್ಯರ್ ಎಂಬುವರು ಮೈಸೂರು ಸೀಮೆಯಲ್ಲಿ ಸಂಚಾರ ಮಾಡಲು ಬರುವದ್ದರಿಂದ ನಿಮ್ಮ ನಿಮ್ಮ ಗಡಿಗಳ ಮಾರ್ಗವಾಗಿ ಬಂದಲ್ಲಿ ಇಳುಕೊಳ್ಳುವ ಬಗ್ಗೆ ಜಾಗಾ ತೋರಿಸಿ, ರಾತ್ರಿಕಾಲದಲ್ಲಿ ಇಳಿವ ಬಳಿಯಲ್ಲಿ ಕಳ್ಳಕಾಕರ ಉಪದ್ರವೇ ಆಗದಂತೆ ಖಬರ್ದಾರಿ ವಹಿಸಿ, ವಾಜಬೀ ಕಿಮ್ಮತ್ತಿಗೆ ಇವರಿಂದ ಹಣ ತೆಗೆದುಕೊಂಡು, ವಾಲೀಕರಿಗೆ ಕೊಡಿಸಿಕೊಟ್ಟು, ಪ್ರಯಾಣಕ್ಕೆ ಬೇಕಾದ ಸಾಮಾನು ಒದಗಿಸಿಕೊಡುವುದು ಇವರ ಸ್ವಂತ ಖಬರ್ದಾರಿ ಬಗ್ಗೆ ಜನಾರಣ ಇರುವ ತಕ್ಕಷ್ಟು ಹತ್ಯಾರು ಸವಾರಗಳು ಸಹ ಉತ್ಸವ, ಆಟವಗಳಲ್ಲಿ ಅಟಕಾಯಿಸದೇ ಬಿಟ್ಟು ಬಿಡುವುದು ಎಂಬುದೇ ಈ ಪ್ರಕಾರವಾದ ರಹದಾರಿಯನ್ನು ದಯಪಾಲಿಸಿದ್ದಕ್ಕಾಗಿ ಈ ಸಂಸ್ಥಾನದಲ್ಲಿರುವ ಸಂಪ್ರದಾಯದ ಶ್ರೀವೈಷ್ಣವಮತಸ್ಥರೆಲ್ಲರೂ ಆ ಗುರುಗಳ ಶಿಷ್ಯರಾಗಿ ಶ್ರೀಮನ್ಮಹಾರಾಜರವರ ಸರ್ಕಾರದವನ್ನು ಕೃತಜ್ಞತಾಪೂರ್ವಕವಾಗಿ ವಂದನೆ ಮಾಡುತ್ತಾರೆ. ಇನ್ನು ಕೆಲವು ದಿನಗಳೊಳಗಾಗಿ ಸ್ವಾಮಿಗಳು ತಮ್ಮ ಪೀಠಕ್ಕೆ ಅನುರೂಪವಾಗಿ ಬಂದ ಸಮಸ್ತವಾದ ಮರ್ಯಾದೆಗಳೊಡನೆ ಪರಿವಾರ ಸಹಿತ ತಿರುಪತಿಯಿಂದ ಸಂಚಾರ ಹೊರಟು, ಈ ಸಂಸ್ಥಾನದಲ್ಲಿ ಪರ್ಯಟಣ ಮಾಡಿ, ತಮ್ಮ ಶಿಷ್ಯವರ್ಗದವರಿಗೆಲ್ಲಾ ಅನುಗ್ರಹ ಅಶೀರ್ವಾದಗಳನ್ನು ಮಾಡಲು ಬರುವವರಾಗಿದಾರೆ ಅವರ ಶಿಷ್ಯವರ್ಗದವರೆಲ್ಲಾ ಸ್ವಾಮಿಗಳನ್ನು ಮರ್ಯಾದೆಗಳೊಡನೆ ಕಂಡು ಸತ್ಕರಿಸುವ ಭಾಗದಲ್ಲಿ ತುಂಬಾ ಸಂತೋಷ ಮತ್ತು ಉತ್ಸಾಹಯುಕ್ತರಾಗಿರುವರು

ಶ್ರೀಮನ್ಮಹಾರಾಜರು ಕೋಲಾರನ್ನು ಸಂಧಿಸಿದ್ದು.

ಶ್ರೀಮನ್ಮಹಾರಾಜಾ ಕೃಷ್ಣರಾಜ ಒಡೆಯರ್ ಬಹದ್ದೂರ್, ಜಿ ಸಿ ಎಸ್ ಐ ಯವರು ಕೋಲಾರನ್ನು ಭೇಟಿ ಮಾಡುವದಕ್ಕೆ ಬರುತ್ತಾರೆಂದು ಸುಮಾರು ೩ ವರ್ಷಗಳ ಹಿಂದೆಯೇ ಪ್ರಕಾರವಾಗಿತ್ತು. ಈಗ ಕೌನ್ಸೆಲರಾಗಿರುವ ಮೆ॥ ಕೆ ಪಿ ಪುಟ್ಟಣ್ಣಚೆಟ್ಟಿಯವರು ಆಗಿನ ಕಾಲದಲ್ಲಿ ಈ ಕೋಲಾರ್ ಡೆಪ್ಯುಟಿಕಮಿಷನರಾಗಿದ್ದರು. ಘನವನ್ನೈದಿದ ಮಹಾರಾಜರವರು ಈ ನಮ್ಮ ಡಿಸ್ಟ್ರಿಕ್ಟಿಗೆ ಬರುತ್ತಾರೆಂಬ ಸುದ್ದಿಯನ್ನು ಕೇಳಿ, ಟೌನಿನ ಪ್ರಜೆಗಳು ಬಹು ಉಲ್ಲಾಸಭರಿತರಾಗಿದ್ದರು ಅದರೆ ಪ್ರೋಗ್ರಾಮ್‍ನಲ್ಲಿ ಅದು ತಕ್ಕ ವೇಳೆಯಾಗಿರಲಿಲ್ಲ. ನಮ್ಮ ಮಹಾರಾಜರವರು ಆಗಸ್ಟ್ ತಿಂಗಳಿನಲ್ಲಿ ಈ ಕೋಲಾರ್ ಡಿಸ್ಟ್ರಿಕ್ಟಿನ ಕಡೆಗೆ ತೆರಳುತ್ತಾರೆಂಬ ಸುದ್ದಿಯು ಇದ್ದಕಿದ್ದಹಾಗೆಯೇ ಹೊರಟಿತು ಈಗಿನ ನಮ್ಮ ಡೆಪ್ಯುಟಿ ಕಮಿಷನರಾಗಿರುವ ಮೆ॥ ಕೆ ಶ್ರೀಕಂಠೇಶ್ವರ ಐಯ್ಯರವರು ಊರಿನ ದೊಡ್ಡ ಮನುಷ್ಯರಲ್ಲಿ ಹಲವರನ್ನು ಇಲ್ಲಿನ ಟೌನ್ ಹಾಲಿಗೆ ಬರಮಾಡಿಕೊಂಡು, ಪ್ರಭುವರ್ಯರು ಬರುವಾಗ್ಗೆ ಏನೇನು ಮಾಡತಕ್ಕದ್ದು ಎಂದು ಎಲ್ಲರನ್ನೂ ಕೇಳಿ, ಅವರವರು ಪಟ್ಟ ಅಭಿಪ್ರಾಯಗಳನ್ನು ತಿಳಿದು, ಆಗಸ್ಟ್ ತಾ. ೧೩ರಲ್ಲಿ ಬೆಂಗಳೂರಿಗೆ ಹೋಗಿ ಅಲ್ಲಿ ಸಂಧಿಸಬೇಕಾದವರನ್ನೆಲ್ಲಾ ಕಂಡು, ಪ್ರಭುವರ ಅಭಿಪ್ರಾಯವನ್ನು ತಿಳಿದು, ಅಲ್ಲಿಂದ ಮಹಾರಾಜರು ಕೋಲಾರಿಗೆ ಬರುತ್ತಾರೆಂದು ತಂತಿ ವರ್ತಮಾನವನ್ನು ಕೊಟ್ಟರು. ಇದಾದನಂತರ ಇಲ್ಲಿನ ವೈಸ್ ಪ್ರೆಸಿಡೆಂಟರೂ, ಕಮಿಷನರುಗಳೂ, ಮ್ಯುನಿಸಿಪಾಲಿಟಿಯವರೂ, ಟೌನಿನ ಮಹಾ ಜನಗಳೂ ತಿರುಗಿ ಒಂದಾವರ್ತಿ ಸಭೆ ಸೇರಿ, ನಮ್ಮ ಮಹಾರಾಜರವರನ್ನು ಎದುರುಗೊಳ್ಳುವುದಕ್ಕೆ ಬೇಕಾದ ಏರ್ಪಾಡುಗಳನ್ನೆಲ್ಲಾ ಮಾಡುತ್ತಿದ್ದರು. ಅಷ್ಟರಲ್ಲಿ ಪ್ರಭುವರು ಆಗಸ್ಟ್ ತಾ "೨೬ಕ್ಕೆ ಬರುವದಿಲ್ಲವಂತೆ" ಎಂಬ ಸುದ್ದಿಯು ಊರು ಕೇರಿಗಳನ್ನೆಲ್ಲಾ ಹರಡಿಕೊಂಡು, ಪ್ರಜೆಗಳಲ್ಲಿ ತುಂಬಾ ವಿಚಾರವನ್ನುಂಟುಮಾಡಿ— "ನಮ್ಮ ಒಡೆಯರವರು ಕೋಲಾರಿಗೆ ಬರಬೇಕೆಂದು ಯೋಚಿಸುವಾಗಲೆಲ್ಲಾ ಇಂಥಾ ಅತ್ಯವಿಘ್ನಗಳು ಬರುವದು ಯಾಕೆ? ಇದು ತುಂಬಾ ವ್ಯಸನಕರವಾದ ಸಂಗತಿ" ಎಂದು ತಮ್ಮ ತಮ್ಮಲ್ಲೇ ಮರುಗುತ್ತಿರುವಾಗ್ಗೆ "ನಮ್ಮ ಮಹಾರಾಜರವರು ಆಗಸ್ಟ್ ತಾ ೨೮ ನೇ ಬುಧವಾರ ಮಧ್ಯಾಹ್ನ ೧೨॥ ಗಂಟೆಗೆ ಬರುವದು ಖರೇವು" ಎಂದು ಈ ಪುರನಿವಾಸಿಗಳೆಲ್ಲರಿಗೂ ತಿಳಿಸಲ್ಪಟ್ಟಿತು ಈ ಸುದ್ದಿಯು ಊರಿನಿಂದ ಹೊರಟು, ಹಳ್ಳಿಗಳೊಳಗಾದಿಯಲ್ಲಿ ಸುತ್ತು ಮುತ್ತಲಿನ ಗ್ರಾಮಾಂತ್ರಗಳಲ್ಲೆಲ್ಲಾ ಕಾಡ್ಗಿಚ್ಚಿನಂತೆ ಹರಡಿಕೊಂಡಿತು ನಮ್ಮ ಮಹಾರಾಜರವರು ಕೋಲಾರಿಗೆ ಬರುತ್ತಾರೆಂಬ ಸುದ್ದಿಯು ಹೊರಡುವದಕ್ಕಿಂತ ಒಂದೆರಡು ವಾರಗಳ ಹಿಂದೆ ಪ್ಲೇಗಿನ ಗಲಾಟೆಯಿಂದ ಊರಿನಲ್ಲಿ ಅಲ್ಲಲ್ಲಿ ಇಲಿಗಳು ಬೀಳುತ್ತವೆ ಎಂದೂ, ಇದರ ದೆಸೆಯಿಂದ ಜನರು ಊರನ್ನು ಖಾಲಿ ಮಾಡುವುದು ಅವಶ್ಯವೆಂದೂ ಮ್ಯುನಿಸಿಪಾಲಿಟಿಯವರು ಉದ್ದೇಶಪಟ್ಟಂತೆ ತೋರುತ್ತದೆ. ಜನಗಳೋ ವಿಶ್ಯಯವಾಗಿ ಬಹುಭೀತಿಯಲ್ಲಿ ಇದ್ದರು ಅದರೆ ಏನು ಹೇಳಲಿ! ಕತ್ತಲಿನ ಪರಿಹಾರಕ್ಕೆ ಸೂರ್ಯನು ಹುಟ್ಟಿದಂತೆ ಪ್ಲೇಗಿನ ಹಾವಳಿ ಎಂಬ ಭೀತಿ ಕತ್ತಲೆಯು ಪ್ರಜೆಗಳನ್ನು ಆವರಿಸಿಕೊಂಡಿದ್ದಾಗ ಘನವನ್ನೈದಿದ ನಮ್ಮ ಮಹಾರಾಜರವರು ಬರುತ್ತಾರೆಂಬ ಸೂರ್ಯ ಕಿರಣಗಳು ಹೊರಡುತ್ತಲೇ ಪ್ಲೇಗಿನ ಸುದ್ದಿಯೇ ಅಡಗಿಹೋಯಿತು ಸದ್ಯ ಈ ವಿಷಯ ಹಾಗಿರಲಿ.

ಊರಿನಲ್ಲಿರುವ ಕೋಳೆಯ ಮನೆಗಳಿಗೆಲ್ಲಾ ಸುಣ್ಣದ ದರ್ಶನವಾಯಿತು ಕೌಳಿ ಗೋಡೆಗಳಿಗೆ ಶುದ್ಧಿಯ ದರ್ಶನವಾಯಿತು. ಊರು ಸ್ವಲ್ಪ ಮುಗುಳು ನಗೆಗೆ ಕಾರಣವಾಯಿತು ನಮ್ಮ ಮಹಾರಾಜರು ಇಲ್ಲಿಗೆ ದಯಮಾಡಿಸುವಾಗ್ಗೆ ನಡೆಯಬೇಕಾದ ಕೆಲಸ ಕಾರ್ಯಗಳ ವಿಷಯಕ್ಕೆ ತಕ್ಕ ಪ್ರೋಗ್ರಾಂ ನಮ್ಮ ಡೆಪ್ಯುಟಿ ಕಮಿಷನರವರಿಂದ ತಯಾರಿಸಲ್ಪಟ್ಟು, ಊರಿನ ಮುಖಂಡರಾದವರಿಗೆ ಹಂಚಿಕೆ ಮಾಡಲ್ಪಟ್ಟಿತು. ನಮ್ಮ ಡೆಪ್ಯುಟಿ ಕಮಿಷನರವರು ಕೆಲಸ ಕಾರ್ಯಗಳನ್ನು ತೂಗಿಸುವದರಲ್ಲಿ ಬಹು ಗಟ್ಟಿಗರೆಂಬುದು ಈ ರಾಜಕಾರ್ಯದಲ್ಲಿ ಎಲ್ಲರಿಗೂ ಗೋಚರವಾಯಿತು. ಮಹಾರಾಜರನ್ನು ಎದುರುಗೊಳ್ಳುವುದಕ್ಕೆ ದರ್ಗಾದಿಂದ ಪ್ರಾರಂಭವಾಗಿ ಡೆಂಪ್ಸ್ ಪೇಟೆಯ ವರೆಗೂ ನಾಲ್ಕು ಚಪ್ಪರಗಳನ್ನು ಏರ್ಪಡಿಸಿದ್ದರು ಮಹಾರಾಜರವರು ತಮ್ಮ ಮೋಟಾರ್ ಗಾಡಿಯಲ್ಲಿ ಬೇಡಾಗಲೂ ಮೊದಲಿಂದ ಗಾರ್ ಹತ್ತಿರ ಸ್ವಲ್ಪ ಹೊತ್ತು ಗಾಡಿಯನ್ನು ನಿಲ್ಲಿಸಿ, ಮಹಮದೀಯ ಪ್ರಜೆಗಳಿಂದ ಗೌರವಾದಿಗಳನ್ನು ಸ್ವೀಕರಿಸಿ, ಅಲ್ಲಿಂದ ಮುಂದಕ್ಕೆ ದೊಡ್ಡ ಪೇಟೆಯಲ್ಲಿ ಈ ಊರಿನ ವೈಶ್ಯ ಮಂಡಲಿಯವರಿಂದ ಚಂದಲೂರು ವೆಂಕಟಪ್ಪನವರ ಶಾಪಿನ ಮುಂಗಡೆ ಹಾಕಲ್ಪಟ್ಟಿದ್ದ ಚಪ್ಪರದ ಕೆಳಗೆ ಸ್ವಲ್ಪ ನಿಲ್ಲಿಸಿ, ಅಲ್ಲಿಯೂ ಜನಗಳು ನಮ್ಮ ಮಹಾರಾಜರವರಿಗೆ ತೋರಿಸಿದ ಮಾನ ಮರ್ಯಾದೆಗಳನ್ನು ವಾತ್ಸಲ್ಯದಿಂದ ಸ್ವೀಕರಿಸಿ, ಅಲ್ಲಿಂದ ಇನ್ನು ಸ್ವಲ್ಪ ಮುಂಗಡೆಯಲ್ಲಿ ಈ ಊರಿನ ಬಣಜಿಗರ ಮಂಡಲಿಯವರ ಮಂಟಪದ ಕೆಳಗೆ ಸ್ವಲ್ಪ ಕಾಲ ನಿಲ್ಲಿಸಿ, ಅಲ್ಲಿಯೂ ಗೌರವಗಳನ್ನು ಹೊಂದಿ, ಮುಂದಕ್ಕೆ ಮ್ಯುನಿಸಿಪಾಲಿಟಿಯವರು ತಾಲ್ಲೂಕ್ ಕಚೇರಿ ಬಳಿಯ ಕಚೇರಿಯ ಕೌಳಿ ಗೋಡೆಗೂ ಚಂದಾಟದ ವೈಭವಿನಿಗೂ ಮಧ್ಯದಲ್ಲಿ ನಮ್ಮ ಡಿಸ್ಟ್ರಿಕ್ಟ್ ಇಂಜನಿಯರವರ ಶ್ರಮಸ ಪ್ರಯತ್ನಗಳಿಂದ ಬಹು ಶೀಘ್ರದಲ್ಲಿ ಹಾಕಿದ್ದ ದೊಡ್ಡ ಚಪ್ಪರದ ಕೆಳಗೆ ಮಧ್ಯಾಹ್ನ ಒಂದು ಗಂಟೆ ಐವತ್ತು ನಿಮಿಷದ ಹೊತ್ತಿಗೆ ತಲಪಿದರು ಈ ಚಪ್ಪರದ ಹತ್ತಿರ ಮ್ಯುನಿಸಿಪಾಲಿಟಿಯ ವೈಸ್ ಪ್ರೆಸಿಡೆಂಟರೂ, ಆ॥ ಕಮಿಷನರುಗಳೂ, ಇಂಜನಿಯರೂ, ಮುನಸೀಫರೂ, ಪೋಲೀಸ್ ಸೂಪರಿಂಟೆಂಡೆಂಟರೂ, ಈ ಡಿಸ್ಟ್ರಿಕ್ಟ್ ಸ್ಕೂಲುಗಳ ಡೆಪ್ಯುಟಿ ಇನ್ಸ್‌ಪೆಕ್ಟರೂ, ಎಲ್ಲಾ ಸ್ಕೂಲ್ ಮಾಸ್ಟರುಗಳೂ, ಆಯಾ ಸ್ಕೂಲುಗಳ ವಿದ್ಯಾರ್ಥಿಗಳೂ, ತಾಲ್ಲೂಕ್ ಮತ್ತು ಡಿಸ್ಟ್ರಿಕ್ಟ್ ಆಫೀಸುಗಳಲ್ಲಿ ಕೆಲಸ ಮಾಡುವ ಎಲ್ಲಾ ಉದ್ಯೋಗಸ್ಥರೂ, ವಿಸ್ತಾರ ಇಲಾಖೆಯವರಾದ ಘನ ಡಬ್ಲ್ಯು. ಹಾಲಿಸ್ಟರ್ ಥೋರೆ ಥೋರೆಸಾನಿಯವರೂ, ಜನಾನಾ ಇಲಾಖೆಯವರೂ, ಅವರ ಅಸಿಸ್ಟೆಂಟುಗಳೂ ವೇಳೆಗೆ ಸರಿಯಾಗಿ ಹಾಜರಿದ್ದು, ನಮ್ಮ ಮಹಾರಾಜರವರ ಭೇಟಿಮಾಡಿಕೊಂಡರು. ಮೋಟಾರು ಗಾಡಿಯು ಚಪ್ಪರದ ಕೆಳಗೆ ಒಂದೆರಡು ನಿಮಿಷಗಳು ಮಾತ್ರವೇ ನಿಂತಿತ್ತು. ಗಾಡಿಯಲ್ಲಿ ನಮ್ಮ ಮಹಾರಾಜರೊಂದಿಗೆ ಬಂದವರು— ಅವರ ಪ್ರೈವೇಟ್ ಸೆಕ್ರೆಟರಿ ಮೆ॥ ಆ ವೆಂಕಟಸುಬ್ಬಯ್ಯವರು, ಆ॥ ಸೆಕ್ರೆಟರಿ ಮೆ॥ ರಾಘವೇಂದ್ರರಾಯರು, ನಮ್ಮ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರಾದ ಮೆ॥ ಶ್ರೀಕಂಠೇಶ್ವರ ಐಯ್ಯರವರೂ, ಅವರ ಹಿಂಗಡೆ ಇನ್ನೊಂದು ಸಣ್ಣ ಮೋಟಾರ್ ಗಾಡಿಯಲ್ಲಿ ಡಾಕ್ಟರ್ ಸಂಜೀವನವರೂ ಇನ್ನು ಕೆಲ ಉದ್ಯೋಗಸ್ಥರೂ ಬಂದಿದ್ದರು ಸಮಯ ಸಂಕೋಚದಿಂದ ಮ್ಯುನಿಸಿಪಾಲಿಟಿಯವರು ನಮ್ಮ ಮಹಾರಾಜರವರಿಗೆ ಓದಿ ಒಪ್ಪಿಸಬೇಕೆಂದಿದ್ದ ಅಡ್ರಸ್ ರಾತ್ರಿಯ ದರ್ಬಾರಿನ ಪರ್ಯಂತರ ಓದಲ್ಪಡಲಿಲ್ಲ ಅಲ್ಲಿಂದ ಮಹಾರಾಜರವರು ಅವರ ಬಿಡಾರಕ್ಕಾಗಿ ಅಲಂಕರಿಸಿದ್ದ ಗವರ್ನಮೆಂಟ್ ಬಂಗಲಿಗೆ ದಯಮಾಡಿಸಿ, ಸುಮಾರು ನಾಲ್ಕು ತಾಸುಗಳ ತನಕ ವಿಶ್ರಾಂತಿಯಲ್ಲಿದ್ದರು ೪ ಗಂಟೆಗೆ ಗವರ್ನಮೆಂಟ್ ಬಂಗಲೆಯನ್ನು ಬಿಟ್ಟು ಡಿಸ್ಟ್ರಿಕ್ಟ್ ಕಚೇರಿಗೆ ದಯಮಾಡಿಸಿ, ಆಫೀಸ್ ಇಲಾಖೆಗಳನ್ನೆಲ್ಲಾ ಪರಾಂಬರಿಸಿ, ಅಲ್ಲಿಂದ ಹೊರಟು ಕೋಲಾರ್ ಮೆಡಿಕಲ್ ಎಡ್‌ವರ್ಡ್ ಮೆಮೊರಿಯಲ್ ಮಿಷನ್ ಕಾಂಪೌಂಡಿಗೆ ೪॥ ಘಂಟೆಗೆ ದಯಮಾಡಿದರು ಡೀಕನೆಸ್ ಹೋಂ ಕಾಂಪೌಂಡಿನ ಪೂರ್ವದಿಕ್ಕಿನ ಒಳಗಲ್ಲಿ ಮಿಷನರಿಗಳಾದ ಘನ ಹಾಲಿಸ್ಟರ್ ಸಹೋದರೂ ಲೇಡಿ ಸೂಪರಿಂಟೆಂಡರೂ ಕಾದಿದ್ದು, ನಮ್ಮ ಮಹಾರಾಜರನ್ನು ಸನ್ಮಾನಗಳಿಂದ ಎದುರುಗೊಂಡರು. ೪॥ ಗಂಟೆಗೆ ಬಾಲಿಕಾ ಪಾಠಶಾಲೆಗೆ ದಯಮಾಡಿದವರು ೩ ಘಂಟೆಯ ತನಕ ಹುಡುಗಿಯರ ಶಾಲೆಯ ಏರ್ಪಾಡುಗಳನ್ನೆಲ್ಲಾ ಪರಾಂಬರಿಸಿ ಸಂತೋಷಪಟ್ಟರು ೬ ಘಂಟೆಗೆ ಕೋಲಾರ್ ಮಿಷನ್ ಟ್ರೈನಿಂಗ್ ಮತ್ತು ನಾರ್ಮಲ್ ಸ್ಕೂಲಿಗೆ ದಯಮಾಡಿಸಿದರು ಇಲ್ಲಿ ಸದರಿ ಸ್ಕೂಲಿನ ಪ್ರಿನ್ಸಿಪಲರಾದ ಘನ ಡಬ್ಲ್ಯು. ಎಚ್ ಹಾಲಿಸ್ಟರ್ ಸಾಹೇಬರು ಹಾಜರಿದ್ದು ಸದರಿ ಸ್ಕೂಲಿನಲ್ಲಿ ಕಲಿಸುವ ಎಲ್ಲಾ ಕೆಲಸಗಳನ್ನೂ ಉಪಯೋಗಿಸಲ್ಪಡುತ್ತಿರುವ ಯಂತ್ರಗಳನ್ನೂ ತೋರಿಸಲು, ಮಹಾರಾಜರು ತುಂಬಾ ಸಂತೋಷಪಟ್ಟುಕೊಂಡು, ನಿಮ್ಮ ಸ್ಕೂಲಿನ ಅಭಿವೃದ್ಧಿಯನ್ನು ಕುರಿತು ಕೇಳಲು ಸಂತೋಷಪಡುವೆವು ಎಂಬೀ ಅಪ್ಪಣೆಯನ್ನಿತ್ತು, ೩ ಘಂಟೆಗೆ ಕಾರ್ಖಾನೆಯನ್ನು ಬಿಟ್ಟು ತೆರಳಿದರು. ಈ ಸ್ಕೂಲನ್ನು ನೋಡಿದ್ದರಲ್ಲಿ ತಮಗೆ ಅಧಿಕ ಸಂತೋಷವಾಯಿತೆಂಬುದನ್ನು ತೋರಿಸುವದಕ್ಕೆ ಗುರುತಾಗಿ ಗರ್ಲ್ಸ್ ಸ್ಕೂಲಿನ ಹುಡುಗಿಯರನ್ನು ಸಂತೋಷ ಪಡಿಸಲು ೧೦೦ ರೂಪಾಯಿಯನ್ನೂ, ಇಂಡಸ್ಟ್ರಿಯಲ್ ಸ್ಕೂಲಿಗೆ ಯಂತ್ರ ಮುಂತಾದವುಗಳನ್ನು ಒದಗಿಸಿಕೊಳ್ಳಲು ೧,೦೦೦ ರೂಪಾಯಿಯನ್ನೂ ದಯಪಾಲಿಸಿರುತ್ತಾರೆ. ತಾ. ೨೮ನೇ ಸಾಯಂಕಾಲ ೭॥ ಘಂಟೆಗೆ ಗೌರ್ನಮೆಂಟ್ ಬಂಗಲಿಯ ದರ್ಬಾರ್ ಮಂದಿರದಲ್ಲಿ ದರ್ಬಾರು ನಡಿಸಲ್ಪಟ್ಟಿತು. ಇದರಲ್ಲಿ ಮ್ಯುನಿಸಿಪಾಲಿಟಿಯವರಿಂದ ಒಂದು ಅಡ್ರಸ್ ಓದಿ ಒಪ್ಪಿಸಲ್ಪಟ್ಟಿತು. ಅವರಲ್ಲಿ ಈ ಡಿಸ್ಟ್ರಿಕ್ಟಿನ ಪ್ರಜೆಗಳಿಗೆಮಾಡಿದ ೧ ಲಕ್ಷ ಅರವತ್ತು ಸಾವಿರ ರೂಪಾಯಿ ಕಂದಾಯದ ರಿಮಿಷನ್‍ಗಾಗಿ ವಿನಯ ವಂದನೆಗಳನ್ನು ಸಲ್ಲಿಸಿ, ಬ್ರಿಟಿಷ್ ರಾಜ್ಯದಲ್ಲಿರುವ ಪ್ರಕಾರ ಬೆಳೆಯಾದಾಗ ಕಂದಾಯ ವಸೂಲು ಮಾಡುವಂತೆಯೂ, ಬೆಳೆಯಿಲ್ಲದಿರುವಾಗ ಕಂದಾಯ ರಿಮಿಷನ್ ಮಾಡಿಸುವಂತೆಯೂ ಅಪ್ಪಣೆಯಾಗಬೇಕೆಂದು ಬಿನ್ನೈಸಿಕೊಂಡರು ರಿಮಿಷನ್ ವಿಷಯ ಯೋಚಿಸಲ್ಪಡತಕ್ಕ ಅಂಶವಾಗಿದೆ ಎಂದು ಪ್ರಭುವರು ಅಪ್ಪಣೆ ಕೊಡಿಸಿದರು ತರುವಾಯ ತಕ್ಕ ರಾಜ ಮರ್ಯಾದೆಗಳೊಂದಿಗೆ ದರ್ಬಾರು ಮುಕ್ತಾಯವಾಯಿತು. ತಾ ೨೯ ರಲ್ಲಿ ಬೆಳಗ್ಗೆ ೩ ಘಂಟೆಗೆ ಗವರ್ನಮೆಂಟ್ ಬಂಗಲೆಯನ್ನು ಬಿಟ್ಟು, ಮುಂದುಮಾಡಿಕೊಂಡು, ದಕರಖಾನೆ, ಗವರ್ನಮೆಂಟ್ ಗರ್ಲ್ಸ್ ಸ್ಕೂಲು, ಕನ್ನಡ ಮತ್ತು ಹಿಂದುಸ್ಥಾನಿ ಬಾಲಕರ ಶಾಲೆ, ಹೆಂಗಸರ ಆಸ್ಪತ್ರೆ, ಸಿವಿಲ್ ಆಸ್ಪತ್ರೆ ಮೊದಲಾದವುಗಳನ್ನು ಪರಾಂಬರಿಸಿ, ೧೦ ಘಂಟೆಗೆ ಗವರ್ನಮೆಂಟ್ ಬಂಗಲೆಯನ್ನು ತಲಪಿ, ಅಲ್ಲಿ ಸ್ನಾನ ದೇವತಾರ್ಚನೆ ಭೋಜನಾದಿಗಳನ್ನು ತೀರಿಸಿಕೊಂಡು ಸ್ವಲ್ಪ ವಿಶ್ರಾಂತಿಯಲ್ಲಿದ್ದು, ತರುವಾಯ ಸಾಯಂಕಾಲ ೭ ಗಂಟೆಗೆ ಬೇತಮಂಗಲಕಡೆ ದಯಮಾಡಿದರು ನಮ್ಮ ಮಹಾರಾಜರವರು ಕೋಲಾರಿನ ಕಡೆ ದಯಮಾಡಿಸಿದ್ದು ಇದೇ ಮೊದಲನೇ ಸಾರಿ. ಇದು ನಮ್ಮ ಭಾಗ್ಯೋದಯವೇ ಸರಿ ಮಹಾ ದೇವರು ಅವರಿಗೆ ದೀರ್ಘಾಯುಷ್ಯವನ್ನೂ ಸುಖ ಸಂಪತ್ತನ್ನೂ ಸತ್ಯವಾದ ಆಳಿಕೆಗೆ ಬೇಕಾಗಿರುವ ಸಲಕರಣೆಗಳನ್ನೂ ದಯಪಾಲಿಸಿ ಚಿರಕಾಲ ಆಳಿಸಲೆಂದು ಪ್ರಾರ್ಥಿಸುತ್ತೇವೆ

ಜಿ. ಜಿ

ಇಂಡಿಯಾ ದೇಶದ ವೃತ್ತಾಂತಗಳು.

ಈ ವರುಷದ ಕಡೇ ಪಾರದಲ್ಲಿ ಹಿಂದುಸ್ಥಾನದ ಮಹಮದೀಯ ಮಹಾ ಸಭೆಯು ಕರಾಚಿ ಪಟ್ಟಣದಲ್ಲಿ ನಡೆಯುವುದೆಂತಲೂ, ಢಕ್ಕಾ ನವಾಬರಾದ ನವಾಬ್ ಸಾಲಿಮುಲ್ಲಾಯವರು ಆ ಸಭೆಯ ಪ್ರೆಸಿಡೆಂಟರಾಗುತ್ತಾರೆಂತಲೂ ಪ್ರಕಟವಾಗಿದೆ

***

ದಕ್ಷಿಣ ದೇಶದಲ್ಲಿ ಸಿಂಗರಾಯನಕೊಂಡಾದಿಂದ ಕಾಣಿಗಿರಿಗೆ ೩೯ ಮೈಲಿ ದೂರವು. ಚಿತ್ರಗುಂಟಾದಿಂದ ಉದಯಗಿರಿಗೆ ೫೦ ಮೈಲಿ ದೂರವು ರೈಲ್ ರಸ್ತೆ ಹಾಕುವದಕ್ಕೆ ಸರ್ವೆ ಮಾಡಬೇಕೆಂದು ಗವರ್ನಮೆಂಟಿನವರು ಮದರಾಸ್ ರೈಲ್ವೆ ಕಂಪನಿಯವರಿಗೆ ವಹಿಸುತ್ತಾರೆ.

***

ಸಂಯುಕ್ತ ಆಧಿಪತ್ಯಗಳಲ್ಲಿ ಪ್ಲೇಗ್ ಉಪದ್ರವು ಪ್ರಾರಂಭವಾಗುವಂಥಾ ಊರು ಗ್ರಾಮಗಳಲ್ಲೆಲ್ಲಾ ಪ್ರಜೆಗಳಿಗೆ ಇನಾಕ್ಯುಲೇಷನ್ ಮಾಡಿಸಬೇಕೆಂದು ಗವರ್ನಮೆಂಟಿನವರು ಬಹುಜನ ವೈದ್ಯರೇ ಮೊದಲಾದ ಸಿಬ್ಬಂದಿಯನ್ನು ಹೊಸದಾಗಿ ನೇಮಕ ಮಾಡಿಕೊಳ್ಳಬಹುದೆಂದು ಈ ವಿಷಯ ಗವರ್ನಮೆಂಟಿನವರು ಸ್ಯಾಂಕ್ಷನ್ ಮಾಡಿದಾರೆ

***

ಕಾಲ್ನಡೆಯಲ್ಲೇ ಪ್ರಪಂಚವನ್ನು ಸುತ್ತಿ ಬರುತ್ತೇವೆಂದು ಹೊರಟ ಇಬ್ಬರು ಈಗ ಕಲ್ಕತ್ತೆಗೆ ಬಂದಿರುತ್ತಾರೆ. ೧೯೦೩ ರಲ್ಲಿ ಮೂರು ಮಂದಿ ಬಲ್ಗೇರಿಯಾದಿಂದ ಹೊರಟರು. ಈ ಪೈಕಿ ಒಬ್ಬನನ್ನು ಸೋ ಎಂಬ ಪಟ್ಟಣದ ಮುಸಲ್ಮಾನರು ಕೊಂದುಹಾಕಿದರು. ಈಗ ಕಲ್ಕತ್ತೆಗೆ ಬಂದಿರುವವರಿಬ್ಬರಿಗೂ ಇಂಗ್ಲಿಷ್ ಭಾಷೆ ತಿಳಿಯದು

***

ಬಂಗಾಳಾ ಆಧಿಪತ್ಯಕ್ಕೆ ಸೇರಿದ ಷೆರಪುರಾ ಎಂಬ ಊರಿನಲ್ಲಿ ಕೆಲವು ಜನರು ಸೇರಿ ಒಂದು ಸರ್ವೆ ಸ್ಕೂಲನ್ನು ಸ್ಥಾಪಿಸಿ ಅದಕ್ಕೆ ಸರ್ಕಾರದವರ ಬೆಂಬಲವಿದೆ ಎಂದು ಪ್ರಕಟಿಸಿದರು. ಸರ್ಕಾರದವರು ಇದನ್ನು ಕೇಳಿ, ಆ ಮೋಸಗಾರರಲ್ಲಿ ಕೆಲವರನ್ನು ದಸ್ತಗಿರಿ ಮಾಡಿರುತ್ತಾರೆ. ಆ ಸ್ಕೂಲಿನ ಮೂಲಕರ್ತರೆಲ್ಲಾ ಪರಾರಿಯಾಗಿದಾರೆ.

***

ರಾಜದ್ರೋಹ ಮಾಡಿದರೆಂದು ವರ್ತಮಾನ ಪತ್ರಿಕೆಗಳ ಮೇಲೆ ತರಲ್ಪಡುವ ಮೊಕದ್ದಮೆಗಳಲ್ಲಿ ಮೆ॥ ಬಿಪಿನಚಂದ್ರಪಾಲ್‍ಯವರು ಸಾಕ್ಷಿ ನುಡಿಯುವುದು ತಮ್ಮ ಮನಸ್ಸೊಪ್ಪುವುದಿಲ್ಲವಾದ್ದರಿಂದ ಸಾಕ್ಷಿ ಹೇಳುವುದಿಲ್ಲವೆಂದು ಹೇಳಿ ಕೋರ್ಟಿಗೆ ಅವಮಾನಪಡಿಸಿದ್ದಕ್ಕಾಗಿ ಮ್ಯಾಜಿಸ್ಟ್ರೇಟರು ಅವರಿಗೆ ಆರು ತಿಂಗಳ ಸಾಧಾರಣ ಸಜವನ್ನು ವಿಧಿಸಿರುತ್ತಾರೆ.

***

ಹಿಂದುಸ್ಥಾನದ ವಾಯುವ್ಯ ಸರಹದ್ದಿನ ಆಚೆ ಇರುವ ಮಾಸುದ್ ಎಂಬ ಜನರು ೩೦೦ ಮಂದಿ ಜಕ್ಕಾಕೇಲ್ ಎಂಬ ಪ್ರಾಂತ್ಯಕ್ಕೆ ನುಗ್ಗಿ ಬಂದು ೩ ಮಂದಿಯನ್ನು ಕೊಂದು, ಮೂವರನ್ನು ಗಾಯಮಾಡಿ, ಅನೇಕ ಗೋಕಾಯಿಗಳನ್ನು ಎತ್ತಿಕೊಂಡು ಹೋದರು. ಮಿಲಿಟರಿ ಪೋಲೀಸಿನವರು ಅವರನ್ನು ಅಟ್ಟಿಕೊಂಡು ಹೋಗಿ ಸುಮಾರು ೬೦ ಗೋಕಾಯಿಗಳ ವರೆಗೂ ಬಿಡಿಸಿಕೊಂಡು ಬಂದರು.

***

ಬೊಂಬಾಯಿ ಆಧಿಪತ್ಯಕ್ಕೆ ನೇಮಕವಾಗಿರುವ ಹೊಸ ಗವರ್ನರಾದ ಸರ್ ಜಾರ್ಜ್ ಸೈಡನ್‌ಹಂ ಕ್ಲಾರ್ಕ್‌ಯವರು ಮುಂದಿನ ತಿಂಗಳಲ್ಲಿ ಸೀಮೆಯಿಂದ ದಯಮಾಡುವವರಾಗಿದಾರಷ್ಟೆ ಇವರನ್ನು ಗೌರವದಿಂದಲೂ ಮರ್ಯಾದೆಗಳಿಂದಲೂ ಎದುರುಗೊಳ್ಳುವದಕ್ಕೂ ಒಂದು ವಿಜ್ಞಾಪನಾ ಪತ್ರಿಕೆಯನ್ನು ಅವರಿಗೆ ಒಪ್ಪಿಸುವುದಕ್ಕೂ ಬೊಂಬಾಯಿ ಮ್ಯುನಿಸಿಪಾಲಿಟಿಯವರು ಒಪ್ಪಿಕೊಂಡಿರುತ್ತಾರೆ.

***

ಮದರಾಸ್ ಆಧಿಪತ್ಯದಲ್ಲಿ ಬೇರೆ ಬೇರೆ ಜಾತಿಯ ಜನರು ಅನೇಕ ಸಂದರ್ಭಗಳಲ್ಲಿ ಕುರಿ, ಕೋಣ ಮೊದಲಾದ ಮೂಗು ಪ್ರಾಣಿಗಳನ್ನು ಕ್ರೂರತರವಾಗಿ ಕೊಂದು ಬಲಿಕೊಡುತ್ತಾ ಬಂದಿರುವುದು ತುಂಬಾ ದುಃಖಕರವಾಗಿದೆ ಎಂತಲೂ ವಿದ್ಯಾವಂತರು ಈ ವಿಷಯದಲ್ಲಿ ಜನರಿಗೆ ವಿವೇಕವನ್ನು ಹೇಳಿ ಅಂಥಾ ಹಿಂಸೆಯನ್ನು ಕಡಮೆ ಮಾಡುತ್ತಾ ಬರಬೇಕೆಂತಲೂ ಗವರ್ನರವರು ಕಾತೂಹಲಪಟ್ಟು ಬರೆದಿರುತ್ತಾರೆ.

***

ಬೊಂಬಾಯಿನ ಭಾರೀ ವರ್ತಕನಾದ ಮೆ॥ ಜೇಕಬ್ ಸಸ್ಸೂನ್ ಎಂಬ ಐಶ್ವರ್ಯವಂತನು ಹಿಂದುಸ್ಥಾನದ ಪ್ರಜೆಗಳಿಗೆ ಉಪಯೋಗವಾಗುವಂಥಾ ಯಾವದಾದರೂ ಒಂದು ಕೆಲಸಕ್ಕೆ ಉಪಯೋಗಮಾಡುವದಕ್ಕೆಂದು ೨೫ ಲಕ್ಷ ರೂಪಾಯಿ ಕೊಟ್ಟಿರುತ್ತಾನೆ. ಈತನು ಹೋದ ವರುಷ ಪೂನಾ ಪಟ್ಟಣದಲ್ಲಿ ಒಂದು ಆಸ್ಪತ್ರೆಯನ್ನು ಕಟ್ಟಿಸಿಕೊಟ್ಟ

೨॥ ಲಕ್ಷ ರೂಪಾಯಿ ಕೊಟ್ಟಿರುತ್ತಾನೆಂಬುವುದು ವಾಚಕರಿಗೆ ಗೊತ್ತಿರಬಹುದು.

❖❖❖

ಕಳೆದ ೧೯೦೬ ನೆ ಇಸವಿಯಲ್ಲಿ ಹಿಂದುಸ್ಥಾನದೊಳಗೆ ಕಾಡು ಮೃಗಗಳಿಂದ ೨,೦೮೪ ಜನರು ಮೃತಪಟ್ಟರು. ವಾಯವ್ಯಪ್ರಾಂತ್ಯದಲ್ಲಿ ತೋಳಗಳು ೧೬೮ ಜನರನ್ನು ಕೊಂದುಬಿಟ್ಟವು. ಮದರಾಸ್ ಪ್ರಾಂತ್ಯದಲ್ಲಿ ಅನೇಕರು ಹುಲಿಗಳಿಂದಲೇ ಮೃತಪಟ್ಟರು. ಷೋಲಾಪುರ ಡಿಸ್ಟ್ರಿಕ್ಟಿನಲ್ಲಿ ಒಂದು ತೋಳವು ೧೬ ಜನರನ್ನು ಕೊಂದುಹಾಕಿತು. ಬಂಗಾಳದಲ್ಲಾದರೋ ೧೮ ಜನರು ಆನೆಗಳಿಂದ ಕೊಲ್ಲಲ್ಪಟ್ಟರು. ಹಾವುಕಡಿದು ೨೨,೮೫೪ ಜನರು ಸತ್ತಿರುತ್ತಾರೆ.

❖❖❖

ಹಿಮಾಚಲಪರ್ವತದಲ್ಲಿರುವ ಭೂತಾನ್ ಎಂಬ ದೇಶೀಯ ಸಂಸ್ಥಾನದಲ್ಲಿ ಇಂಡಿಯಾ ಗವರ್ನಮೆಂಟಿನವರು ಡಾಂಗ್ಸಾ ಪೆಲೊಪ್ ಎಂಬ ದೊಡ್ಡ ಮನುಷ್ಯನಿಗೆ ಮುಂದಿನ ಡಿಸೆಂಬರ್ ತಿಂಗಳಲ್ಲಿ ಪಟ್ಟಾಭಿಷೇಕಮಾಡಿ, ರಾಜ್ಯವನ್ನು ವಹಿಸಿಕೊಡುವವರಾಗಿದ್ದಾರೆ. ಇದುವರೆಗೆ ದೇವಧರ್ಮರಾಜ ಎಂಬಾತನು ದೊರೆಯಾಗಿಯೂ ವೈದಿಕ ಗುರುವಾಗಿಯೂ ಇದ್ದನು. ಈಗ ಈತನು ಲೌಕಿಕ ಅಧಿಕಾರವನ್ನು ತ್ಯಜಿಸಿ, ಗುರುಪದವಿಯನ್ನು ಮಾತ್ರ ವಹಿಸಿಕೊಂಡಿರುತ್ತಾನಾದ್ದರಿಂದ ಮೇಲ್ಕಂಡ ದೊಡ್ಡಮನುಷ್ಯನಿಗೆ ಲೌಕಿಕ ದೊರೆತನವನ್ನು ಕೊಡುತ್ತಾರೆ.

❖❖❖

ಹೈದರಾಬಾದ್ ನೈಜಾಮರವರ ಅರಮನೆಗೆ ಸೇರಿದ ಖಾಸಗಿ ಜಮೀನು ತೋಟ ಕಾವಲುಗಳು ಮೊದಲಾದವುಗಳನ್ನು ಮೇಲ್ವಿಚಾರಣೆ ನೋಡಿಕೊಳ್ಳುವ ಅಧಿಕಾರವನ್ನು ವಹಿಸಿದ್ದ ನವಾಬ್ ಸೈಯದ್ ಜಂಗ್ ಸೈಯದುಸ್ ದೌಲಾ ಬಹದ್ದೂರ್ ಎಂಬಾತನು ಕೆಲವು ಸರ್ಕಾರಿ ಕಾಗದಪತ್ರಗಳಲ್ಲಿ ಬಹಳ ಕಠಿಣವಾದ ಮತ್ತು ಅಗೌರವವಾದ ಮಾತುಗಳನ್ನು ಪ್ರಯೋಗಿಸಿ ಬರದದ್ದನ್ನು ನೈಜಾಮರವರು ಪರಾಂಬರಿಸಿ, ಆಗ್ರಹಪಟ್ಟು ಆತನನ್ನು ತಮ್ಮ ರಾಜಧಾನಿಯಿಂದ ಗಡೀಪಾರು ಮಾಡಿದ್ದಲ್ಲದೆ ಆತನಿಗೆ ಕೊಟ್ಟಿದ್ದ ಜಹಗೀರುಗಳನ್ನೆಲ್ಲಾ ಅರಮನೆಗೆ ಸೇರಿಸಿಕೊಂಡಿರುತ್ತಾರೆ.

❖❖❖

ಮಹಮ್ಮದೀಯರ ಯಾತ್ರಾಸ್ಥಾನಗಳಾದ ಮಕ್ಕೆಗೂ ಮದೀನಾವಿಗೂ ರೈಲ್ ರಸ್ತೆಗಳನ್ನು ಹಾಕಲು ಕಳೆದ ೧೯೦೦ ನೆ ಇಸವಿ ಸೆಪ್ಟೆಂಬರ್ ೧ ರಲ್ಲಿ ಪ್ರಾರಂಭವಾಯಿತು. ಇದುವರೆಗೆ ೫೦೭ ಮೈಲಿ ದೂರ ಕಾಮಗಾರಿ ಮುಗಿದು ರೈಲ್ ಗಾಡಿಗಳು ಹೋಗಿ ಬರುತ್ತಿರುವವು. ಅದರೆ ಅರ್ಧಪಾಲು ರಸ್ತೆಯೆಲ್ಲಾ ಪೂರೈಸಿದಂತಾಯಿತು. ಮುಂದಿನ ವರುಷ ರೈಲ್ ರಸ್ತೆಯು ಮದೀನಾವನ್ನು ಸಂಧಿಸುವುದೆಂತಲೂ, ಇನ್ನು ಮೂರು ವರುಷಗಳಲ್ಲಿ ಮಕ್ಕೆಗೂ ರೈಲ್ ಹಾಕುವರೆಂತಲೂ, ಇದುವರೆಗೆ ರೈಲ್ವೆಫಂಡಿಗೆ ೩೬೦ ಲಕ್ಷ ರೂಪಾಯಿ ಚಂದಾ ಕೂಡಿಸಲ್ಪಟ್ಟಿರುವದಾಗಿಯೂ ತಿಳಿಯಬಂದಿದೆ

❖❖❖

ಈ ವರುಷದ ಜನವರಿ ತಿಂಗಳಲ್ಲಿ ಬರ್ಮಾ ಅಧಿಪತ್ಯಕ್ಕೆ ಸೇರಿದ ಪ್ರೋಮ್ ಪಟ್ಟಣದಲ್ಲಿ ಮಹಮ್ಮದೀಯರ ಬಕ್ರೀದ್ ಹಬ್ಬದ ದಿನ ಮುಸಲ್ಮಾನರ್ಯಾರೋ ಹಿಂದೂ ದೇವಸ್ಥಾನದ ಬಳಿ ಒಂದು ಹಸುವನ್ನು ಕಡಿದರೆಂದು ಹಿಂದುಗಳು ಮಹಮ್ಮದೀಯರ ಮೇಲೆ ಬಿದ್ದು ದಂಗೆ ಮಾಡಿದ್ದರು. ಈ ಮೊಕದ್ದಮೆಯಲ್ಲಿ ೫೯ ಮಂದಿ ಚೆಟ್ಟಿಗಳೂ, ೩೦ ಜನ ಹಿಂದೂಗಳೂ, ೪ ಮಂದಿ ಪೊಲೀಸಿನವರೂ ಅಪರಾಧಿಗಳಾಗಿ ಹಿಡಿಯಲ್ಪಟ್ಟು ಆ ಬಗ್ಗೆ ಕಳೆದ ವಾರದ ವರೆಗೂ ದರ್ಯಾಫ್ತು ನಡೆಯುತ್ತಲೇ ಇತ್ತು. ಮ್ಯಾಜಿಸ್ಟ್ರೇಟರು ಈಗ ಅಪರಾಧ ರುಜುವಾಗಲಿಲ್ಲವೆಂದು ಹೇಳಿ ಆ ಅಪರಾಧಿಗಳನ್ನೆಲ್ಲಾ ಖುಲಾಸ್ ಮಾಡಿಸಿರುತ್ತಾರೆ

❖❖❖

ಕಳೆದ ೧೯೦೬ ನೆ ಇಸವಿಯಲ್ಲಿ ೮೯೦ ಜನರು ಮದರಾಸ್ ಕಡೆಯಿಂದಲೂ ೧,೩೦೦ ಜನರು ಕಲ್ಕತ್ತೆಯ ಕಡೆಯಿಂದಲೂ ಜೀವನಕ್ಕಾಗಿ ಫೀಜೀ ದ್ವೀಪಕ್ಕೆ ಹೋದರು. ಆ ವರುಷ ೩,೫೧೦ ಜನರು ಆ ದ್ವೀಪದಿಂದ ವಾಪಸು ಹಿಂದುಸ್ಥಾನಕ್ಕೆ ಬಂದರು. ಇವರ ಬಳಿ ೧,೨೦,೦೦೦ ರೂಪಾಯಿ ಅಲ್ಲಿ ಸಂಪಾದನೆ ಮಾಡಿದ ಹಣವಿತ್ತು. ಆ ಪೈಕಿ ಒಬ್ಬನ ಬಳಿಯಲ್ಲಿ ೧೪,೩೦೦ ರೂಪಾಯಿ ಇತ್ತು. ಆ ವರುಷಾಂತ್ಯದಲ್ಲಿ ಆ ದ್ವೀಪದೊಳಗೆಲ್ಲಾ ಹಿಂದುಸ್ಥಾನದಿಂದ ಹೋದವರು ೨೮,೫೩೦ ಮಂದಿ ಇದ್ದರು. ಈ ಪೈಕಿ ೧೫,೦೦೦ ಮಂದಿ ಗಂಡಸರು, ೬,೦೦೦ ಜನ ಹೆಂಗಸರು ಎಂದು ತಿಳಿದು ಬಂದಿದೆ. ಇವರೆಲ್ಲಾ ಆ ದ್ವೀಪಗಳಲ್ಲಿರುವ ಕಬ್ಬಿನ ತೋಟ, ಸಕ್ಕರೆ ಕಾರ್ಖಾನೆ ಮುಂತಾದ ಕಡೆಗಳಲ್ಲಿ ಕೆಲಸ ಮಾಡುವವರು

❖❖❖

ಕಳೆದ ೧೯೦೪-೦೫ನೇ ಸಾಲಿನಲ್ಲಿ ಹಿಂದುಸ್ಥಾನದೊಳಗೆ ದೊಡ್ಡ ನಾಲೆಗಳ ಕೆಳಗೆ ಒಟ್ಟು ಎರಡು ಕೋಟಿ ಎಕರೆ ಜಮೀನಿನಲ್ಲಿ ತರೀಫಸಲಾಯಿತು. ಆ ನಾಲೆಗಳನ್ನು ತೆಗೆಯುವುದಕ್ಕೆ ಹಾಕಿರುವ ಮೂಲಧನದ ಮೇಲೆ ಶೇಕಡಾ ವರುಷಕ್ಕೆ ೭ ರಂತೆ ಬಡ್ಡಿ ಉತ್ಪತ್ತಿ ಆಯಿತು. ಈಚೆಗೆ ೧೯೦೫-೦೬ನೇ ಸಾಲಿನಲ್ಲಿ ಒಟ್ಟು ಎರಡು ಕೋಟಿ ೩೦ ಲಕ್ಷ ಎಕರೆ ಜಮೀನು ತರೀಫಸಲಿಗೆ ಬಂತು. ಈ ಜಮೀನಿನ ಕಂದಾಯವನ್ನು ಮೇಲ್ಕಂಡ ಮೂಲಧನಕ್ಕೆ ಜಮಾಮಾಡಿ ಹಾಕಿದರೆ ಶೇಕಡಾ ವರುಷಕ್ಕೆ ೬॥ ರೂಪಾಯಿ ಬಡ್ಡಿ ಉತ್ಪತ್ತಿಯಾಗುವುದು. ಈ ಪೈಕಿ ಪಂಜಾಬಿನ ಭಾರೀ ನಾಲೆಗಳಿಂದ ಶೇಕಡಾ ೧೧ ರಂತೆಯೂ, ಮದರಾಸ್ ಅಧಿಪತ್ಯದ ನಾಲೆಗಳಿಂದ ಶೇಕಡಾ ೯ ರೂಪಾಯಿನಂತೆಯೂ ಬಡ್ಡಿ ಉತ್ಪತ್ತಿಯಾಗಿದೆ.

❖❖❖

ಬಂಗಾಳಾ ಹೈಕೋರ್ಟಿನ ಜಡ್ಜಿಗಳುಸವರು ಕಂಕೂರಿಯಾದಾಸ್ ಎಂಬುವನಿಗೆ ಅವನು ಕೊಲೆ ಮಾಡಿದನೆಂದು ಮರಣದಂಡನೆಯನ್ನು ವಿಧಿಸಿದರೆಂತಲೂ, ಅವನ ಮೇಲೆ ಕೊಲೆಯ ಅಪರಾಧವು ಪರಿಷ್ಕಾರವಾಗಿ ರುಜುವಾತಾಗಲಿಲ್ಲವೆಂತಲೂ ಬಂಗಾಳಾ ಲಾಯರುಗಳೂ ದೊಡ್ಡ ಮನುಷ್ಯರೂ ಲೆಫ್ಟಿನೆಂಟ್ ಗವರ್ನರವರಿಗೆ ಅರ್ಜಿ ಬರೆದು ಅವನಿಗೆ ಮರಣದಂಡನೆಯನ್ನು ತಪ್ಪಿಸಬೇಕೆಂದು ಕೇಳಿಕೊಂಡಿದ್ದರಷ್ಟೆ. ಈಚೆಗೆ ಲೆಫ್ಟಿನೆಂಟ್ ಗವರ್ನರವರು ಆ ಮೊಕದ್ದಮೆಯ ಕಟ್ಟನ್ನು ತರಿಸಿಕೊಂಡು ನೋಡಿ, ಆ ಅಪರಾಧಿಗೆ ಮರಣದಂಡನೆಯನ್ನು ಮಾಫ್ ಮಾಡಿ, ಜಂಕೇಲ್ ಶಿಕ್ಷೆಯನ್ನು ವಿಧಿಸಿರುತ್ತಾರೆ. ಅವನು ತನ್ನ ಸೇವಾವೃತ್ತಿಯಲ್ಲಿದ್ದ ಒಬ್ಬ ಹುಡುಗಿಯನ್ನು ಕೊಂದುಹಾಕಿದನೆಂದು ಮೊಕದ್ದಮೆ ಆಗಿತ್ತು.

❖❖❖

ಕಲ್ಕತ್ತಾ ಪಟ್ಟಣದಲ್ಲಿ ರಾಮ ಅದಿತ್ಯನವಿಯಾ ಎಂಬೊಬ್ಬ ಹಿಂದು ತನ್ನ ಅತ್ತೇ ಮನೆಗೆ ಹೋಗಿ ಹೆಂಡತಿಯನ್ನು ಕರೆದಾಗ ಅವಳಿಗೂ ಅವನಿಗೂ ಮಾತುನಡೆದು, ಅವನು ಹೆಂಡತಿಯನ್ನು ಚಾಕುವಿನಿಂದ ತಿವಿದು ಬಹಳ ಗಾಯಮಾಡಿದನು. ಪೊಲೀಸಿನವರು ಅವನನ್ನು ಹಿಡಿದು ಮೊಕದ್ದಮೆ ತಂದರು. ವಿಚಾರಣೆಯಾಗುವಾಗ್ಗೆ ಅವನು ಹೊಡೆದದ್ದಾಗಿ ಒಪ್ಪಿಕೊಂಡನು. ಅವನ ಹೆಂಡತಿಯಾದರೋ ಗಾಯವು ಬಹಳ ನರಳುತ್ತಿದ್ದರೂ ಕೋರ್ಟಿಗೆ ಬಂದು ಆಕೆ ಜಡ್ಜಿಯನ್ನು ಕುರಿತು ತನ್ನ ಗಂಡನು ಕೋಪದಿಂದ ತನ್ನನ್ನು ಹೊಡೆದನೆಂತಲೂ, ಅವನಲ್ಲಿ ಅಪರಾಧವೇನೂ ಇಲ್ಲವೆಂತಲೂ, ಅವನಿಗೆ ಕರುಣೆ ತೋರಿಸಬೇಕೆಂತಲೂ ಬೇಡಿಕೊಂಡಳು. ಆದರ ಮೇಲೆ ಮ್ಯಾಜಿಸ್ಟ್ರೇಟರು ಅವನಿಗೆ ಒಂದು ವಾರದಷ್ಟು ಮಾತ್ರ ಕಠಿಣ ಸಜಾ ವಿಧಿಸಿ ಕಳುಹಿಸಿದರು

❖❖❖

ರಾಜಮಂಡ್ರಿ ಪಟ್ಟಣದ ಪೊಲೀಸ್ ಇನ್ಸ್ಪೆಕ್ಟರ್ ಮಿ॥ ಎಫ್. ಎಲ್ ಬೆಲ್ ಎಂಬ ಯೂರೋಪಿಯನನು ರಿಜರ್ವ್ ಪೊಲೀಸ್ ಕಾನ್ಸ್ಟೇಬಲ್ ಬಸವೈಯ್ಯನೆಂಬುವನನ್ನು ಮೈದಾನಿನಲ್ಲಿ ಡ್ರಿಲ್ ಮಾಡಿಸುವಾಗ್ಗೆ ಅವನಲ್ಲಿ ತಪ್ಪುಕಂಡು ಆಗ್ರಹದಿಂದ ಕೆಲವು ಕಠಿಣ ಮಾತುಗಳನ್ನಾಡಿದ್ದಕ್ಕೆ ಬಸವೈಯ್ಯನು ಬಂದೂಕನ್ನು ಬಿಸಾಡಿಕೊಂಡು ಹೋಗಿ ಇನ್ಸ್ಪೆಕ್ಟರು ಆಫೀಸಿನಲ್ಲಿ ಕುಳಿತು ಬರೆಯುತ್ತಿದ್ದಾಗ ಬೆನ್ನ ಕಡೆಯಿಂದ ಹೊಡೆದು ಕೊಂದುಹಾಕಿ, ಹೊರಗೆ ಮೈದಾನಿನಲ್ಲಿ ಕುಳಿತುಕೊಂಡು ಆ ಕೂಡಲೇ ಆತ್ಮಹತ್ಯ ಮಾಡಿಕೊಂಡನು. ಮರುದಿನ ಊರಜನರು ಬಸವೈಯ್ಯನ ಶವವನ್ನು ಬಹಳ ವಿಜೃಂಭಣೆಯಿಂದ ಪಟ್ಟಣದ ಬೀದಿಗಳಲ್ಲೆಲ್ಲಾ ಮೆರವಣಿಗೆ ಮಾಡಿಕೊಂಡು ಹೋಗಿ ದಫನಮಾಡಿಬಂದರು. ಇನ್ಸ್ಪೆಕ್ಟರು ನಿಷ್ಕಾರಣವಾಗಿ ಕೊಲ್ಲಲ್ಪಟ್ಟದ್ದನ್ನು ಕೇಳಿ ಬಹುಜನರು ವಿಷಾದಿಸುವರು

❖❖❖

ಕಸೌಲಿ ಮತ್ತು ಕೂನೂರು ಪಟ್ಟಣಗಳಲ್ಲಿ ಸ್ಥಾಪಿಸಿ ನಡಿಸುತ್ತಿರುವಂಥಾ, ಹುಚ್ಚು ನಾಯಿ ನರಿ ಮುಂತಾದ ಪ್ರಾಣಿಗಳಿಂದ ಕಡಿಸಿಕೊಂಡವರಿಗೆ ಚಿಕಿತ್ಸೆ ಮಾಡುವ ಆಸ್ಪತ್ರೆಯೊಂದನ್ನು ಬರ್ಮಾ ಅಧಿಪತ್ಯದಲ್ಲೂ ಸ್ಥಾಪಿಸಿಕೊಳ್ಳಬೇಕೆಂದು ಅಲ್ಲಿನ ಪ್ರಜೆಗಳು ಸಾಹಸಪಡುತ್ತಿದ್ದಾರೆ. ಇದಕ್ಕಾಗಿ ಪ್ರಜೆಗಳ ಸಹಾಯವನ್ನು ಪಡೆಯಬೇಕೆಂದು ಲೆಫ್ಟಿನೆಂಟ್ ಗವರ್ನರವರೇ ಮೊದಲಾದ ದೊಡ್ಡಮನುಷ್ಯರೆಲ್ಲಾ ಸೇರಿ ನಾಳೆ ೧೭ ನೆ ತಾ. ಒಂದು ಸಭೆಯನ್ನು ನಡಿಸುವವರಾಗಿದ್ದಾರೆ. ಬರ್ಮಾ ಅಧಿಪತ್ಯದಿಂದ ಅಂಥಾ ರೋಗಿಗಳು ಹಿಂದುಸ್ಥಾನದ ಉತ್ತರ ದೇಶದಲ್ಲಿರುವ ಕಸೌಲಿ ಆಸ್ಪತ್ರೆಗಾಗಲಿ, ದಕ್ಷಿಣ ದೇಶದಲ್ಲಿರುವ ಕೂನೂರು ಆಸ್ಪತ್ರೆಗಾಗಲಿ ಬಂದು ಚಿಕಿತ್ಸೆ ಮಾಡಿಸಿಕೊಂಡು ಹೋಗುವುದು ತುಂಬಾ ಪ್ರಯಾಸವೂ ದೂರಭಾರವೂ ಆಗಿದೆ ಎಂಬುವದೇ ಬರ್ಮಾದವರ ಮುಖ್ಯ ಅಭಿಪ್ರಾಯ.

❖❖❖

ಬೊಂಬಾಯಿ ಗವರ್ನಮೆಂಟಿನವರು ನಾಸಿಕ್ ಡಿಸ್ಟ್ರಿಕ್ಟಿನಲ್ಲಿ ಧರಣಾ ಎಂಬ ನದಿಯಿಂದ ನಾಲೆಯನ್ನು ತೋಡಿ ಈ ನಾಲೆ ಕೆಳಗೆ ೨,೪೦,೦೦೦ ಎಕರೆ ಜಮೀನು ತರೀ ಫಸಲಾಗುವಂತೆ ೮೮ ಲಕ್ಷ ರೂಪಾಯಿ ವೆಚ್ಚಿಸಿ ಒಂದು ವರುಷದಿಂದ ಕಾಮಗಾರಿ ಮಾಡಿಸುತ್ತಿದ್ದಾರೆ. ಈಗ ಅದರ ಸಮೀಪದಲ್ಲೇ ಪ್ರವರಾ ಎಂಬ ನದಿಯ ನೀರನ್ನು ಒಂದು ಗುಡ್ಡದ ಮೇಲೆ ಭಾರೀ ಕೊಳ ಕಟ್ಟಿ ತುಂಬಿಕೊಂಡು, ಅದರಿಂದ ಒಂದು ಕಡೆ ೩೭ ಮೈಲಿ ದೂರವೂ ಇನ್ನೊಂದು ಕಡೆ ೪೪ ಮೈಲಿ ದೂರವೂ ಉಳ್ಳ ಎರಡು ನಾಲೆಗಳನ್ನು ತೆಗೆದು ಈ ನಾಲೆಗಳ ಕೆಳಗೆ ಲಕ್ಷಾಂತರ ಎಕರೆ ಜಮೀನು ವ್ಯವಸಾಯಕ್ಕೆ ಬರುವಂತೆ ಮಾಡಬೇಕೆಂದು ಅಂದಾಜು ಪಟ್ಟಿಯ ಪ್ರಕಾರ ೬೭ ಲಕ್ಷ ರೂಪಾಯಿ ಸ್ಯಾಂಕ್ಷನ್ ಮಾಡಿರುತ್ತಾರೆ. ಇದರಿಂದ ಆ ಪ್ರಾಂತ್ಯದ ಘಾಟ ಸೀಮೆಯು ತುಂಬಾ ಫಲಭರಿತವಾದೀತೆನ್ನುವುದಕ್ಕೆ ಸಂಶಯವಿಲ್ಲ.

❖❖❖

ಜಬ್ಬಲ್ಪುರದ ವಿದ್ಯಾಶಾಲೆಯಲ್ಲಿ ಗಣೇಶನೆಂಬೊಬ್ಬ ವಿದ್ಯಾರ್ಥಿಯು ಜೋಡು ಹಾಕಿಕೊಂಡು ಮುಖ್ಯೋಪಾಧ್ಯಾಯನನ್ನು ನೋಡುವುದಕ್ಕೆ ಕೊಠಡಿಗೆ ಹೋದನು. ಮುಖ್ಯೋಪಾಧ್ಯಾಯನು ಆ ವಿದ್ಯಾರ್ಥಿಯನ್ನು ಹೊರಗೆ ಹೋಗಿ ಜೋಡು ಬಿಟ್ಟುಬಾ ಎಂದು ಹೇಳಕಳುಹಿಸಿದನು. ವಿದ್ಯಾರ್ಥಿಯು ಅದಕ್ಕೆ ಒಪ್ಪದೆ ಪ್ರತಿಭಟಿಸಿ ಅಲ್ಲೇ ನಿಂತುಕೊಂಡನು. ಮುಖ್ಯೋಪಾಧ್ಯಾಯನಿಗೆ ಸಿಟ್ಟುಬಂದು ಆ ವಿದ್ಯಾರ್ಥಿಯನ್ನು ಸ್ಕೂಲಿನಿಂದ ವಜಾ ಮಾಡಿದನು. ಈ ವರ್ತಮಾನವನ್ನು ಕೇಳಿ ಆ ಸ್ಕೂಲಿನ ವಿದ್ಯಾರ್ಥಿಗಳೆಲ್ಲ ಒಟ್ಟಾಗಿ, ಮೇಲ್ಕಂಡ ಗಣೇಶನೆಂಬ ಹುಡುಗನನ್ನು ಸ್ಕೂಲಿಗೆ ಸೇರಿಸಿಕೊಳ್ಳಬೇಕೆಂದು ಹೇಳಿ ಒಂದು ಅರ್ಜಿ ಬರೆದು ಅದೇ ಮುಖ್ಯೋಪಾಧ್ಯಾಯನಿಗೆ ಕೊಟ್ಟರು. ಆಗ ಆ ಮುಖ್ಯೋಪಾಧ್ಯಾಯನು ಎಲ್ಲಾ ವಿದ್ಯಾರ್ಥಿಗಳನ್ನೂ ಕರೆಸಿಕೊಂಡು, ಹಾಗೆ ಅರ್ಜಿ ಬರೆಯಬಾರದಾಗಿತ್ತೆಂತಲೂ, ಆ ತಪ್ಪಿತಕ್ಕಾಗಿ ಅವರು ಕ್ಷಮಾಪಣೆಯನ್ನು ಕೇಳಿಕೊಳ್ಳಬೇಕೆಂತಲೂ ತಿಳಿಸಿದರು. ಆ ವಿದ್ಯಾರ್ಥಿಗಳಾದರೋ ತಾವು ಕ್ಷಮಾಪಣೆಯನ್ನು ಕೇಳುವುದಿಲ್ಲವೆಂತಲೂ, ಗಣೇಶನನ್ನು ಮತ್ತೆ ಸ್ಕೂಲಿಗೆ ಸೇರಿಸಿಕೊಳ್ಳುವ ತನಕ ತಮ್ಮ ಪೈಕಿ ಯಾರೂ ಸ್ಕೂಲಿಗೂ ಬರುವುದಿಲ್ಲವೆಂತಲೂ ಪ್ರತ್ಯುತ್ತರಕೊಟ್ಟು, ಎಲ್ಲರೂ ಹೊರಟುಹೋದರು. ಈಗ ಆ ವಿದ್ಯಾಶಾಲೆಯಲ್ಲಿ ವಿದ್ಯಾರ್ಥಿಗಳೇ ಇಲ್ಲವೆಂದು ತಿಳಿದುಬಂದಿದೆ.

❖❖❖

ಸೀಮೆಯಲ್ಲಿ ಕೃತಕವಾದ ಕೆಂಪುಗಳು ತಯಾರಾಗುತ್ತವೆಂದೂ, ಅವಕ್ಕೂ ಯಥಾರ್ಥವಾದ ಕೆಂಪುಗಳಿಗೂ ಸಾಮಾನ್ಯವಾಗಿ ಭೇದವೇ ಗೊತ್ತಾಗುವುದಿಲ್ಲವೆಂದೂ ನಮ್ಮ ವಾಚಕರಿಗೆ ಜ್ಞಾಪಕವಿದ್ದೀತೆಂದು ನಿರೀಕ್ಷಿಸುತ್ತೇವೆ. ಇದುವರೆಗೆ ಆ ಮೋಸದ ಕೆಂಪುಗಳು ಹಿಂದುಸ್ಥಾನಕ್ಕೆ ಬಂದಿರಲಿಲ್ಲ. ಒಬ್ಬ ವರ್ತಕನು ವಿಲಾಯತಿಯಿಂದ ಕೆಲವು ದಿವಸಗಳ ಕೆಳಗೆ ಇಂಥಾ ಕೃತಕ ಕೆಂಪುಗಳನ್ನು ತರಿಸಿರುವುದಾಗಿಯೂ, ಅವುಗಳ ಕ್ರಯ ವಿಕ್ರಯಾದಿಗಳಲ್ಲಿ ಪ್ರಜೆಗಳು ತುಂಬಾ ಎಚ್ಚರಿಕೆಯಿಂದಿರಬೇಕೆಂತಲೂ ಒಬ್ಬ ಹಿತವಾದಿಯು ಸೂಚನೆ ಕೊಟ್ಟಿರುತ್ತಾನೆ. ಇನ್ನು ಮುಂದೆ ವರ್ತಕರಾಗಲಿ ಸಂಸಾರಿಗಳಾಗಲಿ ಕೆಂಪುಗಳನ್ನೂ ಕೆಂಪುಹಾಕಿದ ಒಡವೆಗಳನ್ನೂ ಕೊಂಡು ಮಾರುವಾಗ್ಗೆ ಬಹಳ ಜಾಗರೂಕರಾಗಿರಬೇಕೆಂದು ನಮ್ಮ ವಾಚಕರಿಗೆ ತಿಳಿಸುವೆವು. ರತ್ನಗಳನ್ನು ಪರೀಕ್ಷೆ ಮಾಡುವುದರಲ್ಲಿ ಪ್ರವೀಣರೆನಿಸಿಕೊಂಡಿರುವವರನ್ನೂ ಈ ಮೋಸಕರವಾದ ಕೆಂಪುಗಳು ನಷ್ಟಪಡಿಸುವಹಾಗಿವೆ ಎಂದು ಧಾರಾಳವಾಗಿ ಹೇಳಬಹುದು.

❖❖❖

ಮದರಾಸ್ ಪಟ್ಟಣದಲ್ಲಿ ದೇಶಾಭ್ಯುದಯಾರ್ಥವಾಗಿ ಒಂದು ಫಂಡು ಏರ್ಪಾಡಾಗಿದೆ. ಈ ಫಂಡಿನಿಂದ ವಿದ್ಯಾವಂತರಾದ ದೇಶೀಯ ಯೌವನಸ್ಥರಿಗೆ ವೇತನ, ಪ್ರಯಾಣದ ಖರ್ಚು, ಮುಂತಾದವುಗಳನ್ನು ಕೊಟ್ಟು ವಿಲಾಯತಿ ಮೊದಲಾದ ಯುರೋಪಿಯನ್ ರಾಜ್ಯಗಳಿಗೆ ಕಳುಹಿಸಿ, ಅಲ್ಲಿನ ಕಾರ್ಖಾನೆಗಳಲ್ಲೂ ವಿದ್ಯಾಶಾಲೆಗಳಲ್ಲೂ ಬೇರೆ ಬೇರೆ ಕಸಬುಗಳನ್ನು ಕಲಿತು ಬರುವಂತೆ ಏರ್ಪಾಡು ಮಾಡಿದ್ದಾರೆ. ಈಗ ಕರಿಯಪ್ಪ, ಅಚ್ಚಯ್ಯ ಎಂಬಿಬ್ಬರು ಹೋಗಿರುತ್ತಾರೆ. ಇವರು ವ್ಯವಸಾಯ, ಕಾಗದದ ತಯಾರಿ ಮೊದಲಾದವುಗಳನ್ನು ಕಲಿತು ಬರುವರು. ಗುಲಾಂ ಖಾದರ್ ಸಾಹೇಬ್ ಎಂಬಾತನು ವಿಲಾಯತಿಯಲ್ಲಿ ಚರ್ಮಕ್ಕೆ ಹದಕೊಡುವಂಥಾ ಕಸಬನ್ನು ಕಲಿತು ಬರುವುದಕ್ಕೆ ತನಗೆ ಈ ಫಂಡಿನಿಂದ ವೇತನಕೊಡಬೇಕೆಂದು ಅರ್ಜಿ ಹಾಕಿಕೊಂಡಿದ್ದನು. ಈ ಸಂಘದವರು ಸಭೆ ಸೇರಿ ಆ ಮಹಮ್ಮದೀಯ ಯೌವನಸ್ಥನಿಗೆ ವೇತನ ಕೊಡಬಹುದೆಂದು ತೀರ್ಮಾನಿಸಿದ್ದಾರೆ. ಈತನು ಈ ತಿಂಗಳ ಆಖೈರಿನಲ್ಲಿ ಶೀಘ್ರ ಪ್ರಯಾಣ ಮಾಡುತ್ತಾನೆ.

❖❖❖

ಲಾಲಾ ಲಾಜಪತ್ ರಾಯ್, ಲಾಲಾ ಅಜಿತ ಸಿಂಗ್ ಎಂಬುವರಿಬ್ಬರನ್ನೂ ಇಂಡಿಯಾ ಗವರ್ನಮೆಂಟಿನವರು ಗಡೀಪಾರು ಮಾಡಿ ಪಂಜಾಬಿನಿಂದ ಬರ್ಮಾ ಅಧಿಪತ್ಯಕ್ಕೆ ಸಾಗಿಸಿರುತ್ತಾರಷ್ಟೆ. ಇವರ ಮೇಲೆ ಬಂದ ಅಪರಾಧವು ಇಂಥಾದ್ದೆಂದು ಇದುವರೆಗೆ ಯಾರಿಗೂ ತಿಳಿಯದಾಗಿತ್ತು. ಈಗ ಒಬ್ಬ ಟಿಪ್ಪಣಿಕಾರನು ಅವರು ನಡಿಸಿದ ಕಾರ್ಯಗಳನ್ನೂ ಅವರಿಗೆ ಗಡೀಪಾರು ಆದದ್ದಕ್ಕೆ ಕಾರಣಗಳನ್ನೂ ಕುರಿತು ಬರೆಯುವುದೇನೆಂದರೆ—ಹೋದವರುಷವೇ ಪಂಜಾಬಿನ ದೇಶೀಯ ಸೈನಿಕರ ರಾಜಭಕ್ತಿಯನ್ನು ಕೆಡಿಸಬೇಕೆಂದು ಪ್ರಯತ್ನಗಳು ಒಂದುಕವಾಗಿ ನಡೆದಿದ್ದವು. ಆ ಸೈನ್ಯಗಳ ದೇಶೀಯ ಉದ್ಯೋಗಸ್ಥರು ತಮ್ಮ ಮೇಲ್ಪಟ್ಟ ಇಂಗ್ಲೀಷ್ ಉದ್ಯೋಗಸ್ಥರಿಗೆ ಗುಟ್ಟಾಗಿ ತಿಳಿಸಿದರು. ಆ ಇಂಗ್ಲೀಷ್ ಉದ್ಯೋಗಸ್ಥರು ತಮಗೆ ಮೇಲ್ಪಟ್ಟ ಮಿಲಿಟರಿ ಅಧಿಕಾರಿಗಳಿಗೆ ಈ ಸಂಗತಿಯು ತಿಳಿಸಿದರು. ಈ ವರುಷದ ಪ್ರಾರಂಭದಲ್ಲೂ ದೇಶೀಯ ಸೈನಿಕರನ್ನು ಎತ್ತಿ ಕಟ್ಟಬೇಕೆಂದು ಪ್ರಯತ್ನಗಳು ನಡೆಯುತ್ತಲಿವೆ ಎಂಬುದಾಗಿ ಎಲ್ಲಾ ಸೈನ್ಯಗಳ ಅಧಿಪತಿಗಳೂ ಇಂಗ್ಲಿಷ್ ಕಮ್ಯಾಂಡರುಗಳಿಗೆ ಅರಿಕೆ ಮಾಡಿದರು. ಗಲಭೆ ಎಬ್ಬಿಸಬೇಕೆಂದು ಪ್ರಯತ್ನ ಪಡುವವರಲ್ಲಿ ಲಾಜಪತ್ ರಾಯಿಯೂ, ಅಜಿತ ಸಿಂಗರೂ ಮುಖಂಡರಾಗಿರುತ್ತಾರೆಂತಲೂ, ಈ ಗುಂಪಿನವರೆಲ್ಲಾ ಪಂಜಾಬಿನ ಹೊಸ ನಾಲಾ ಬಡಾವಣೆಗಳ ವಿಷಯದಲ್ಲಿ ರೈತರುಗಳಿಗೆ ದುರ್ಬೋಧನೆ ಮಾಡುತ್ತಾ ಅವರನ್ನು ಗವರ್ನಮೆಂಟಿನವರ ಮೇಲೆ ತಿರುಗಿ ಬೀಳುವಂತೆ ಮಾಡಬೇಕೆಂದು ತರಬೇತು ನಡೆಸುತ್ತಿದ್ದಾರೆಂತಲೂ, ಆ ನಾಲೆಗಳ ವಿಷಯವಾದ ಹೊಸ ಕಾನೂನನ್ನು ರದ್ದು ಮಾಡಿ ಈ ಮುಖಂಡರನ್ನು ಗಡೀಪಾರು ಮಾಡದಿದ್ದರೆ ದೊಡ್ಡ ದಂಗೆಯುಂಟಾಗುವುದರಲ್ಲಿ ಸಂದೇಹವೇ ಇಲ್ಲವೆಂತಲೂ ಸರ್ವ ಸೈನ್ಯಾಧಿಪತಿಯಾದ ಲಾರ್ಡ್ ಕಿಚ್ನರ್‌ರವರು ವೈಸ್ರಾಯಿಯವರಿಗೆ ಬರೆದು ತಿಳಿಸಿದರು. ಆದರೆ ವೈಸ್ರಾಯಿಯವರು ಆ ಮುಖಂಡರಿಬ್ಬರನ್ನೂ ಗಡೀಪಾರು ಮಾಡುವುದಕ್ಕೆ ಒಪ್ಪಿಕೊಂಡರಲ್ಲದೆ ಆ ಕಾನೂನನ್ನು ರದ್ದು ಮಾಡುವವರಾಗಿರಲಿಲ್ಲ. ಆಗ ಲಾರ್ಡ್ ಕಿಚ್ನರ್‌ರವರು ತಾವು ಸೂಚಿಸಿದ ಎರಡು ವಿಷಯಗಳನ್ನೂ ನಡಿಸಿಕೊಡದೆ ಹೋದರೆ ತಾವು ಕೆಲಸಕ್ಕೆ ರಾಜೀನಾಮೆ ಕೊಟ್ಟು ಶೀಘ್ರ ಹೊರಟುಹೋಗುತ್ತೇವೆಂದು ಖಂಡಿತವಾಗಿ ತಿಳಿಸಿದರು. ಇಂಥಾ ಸೈನ್ಯಾಧಿಪತಿಯನ್ನು ಕಳೆದುಕೊಳ್ಳುವುದು ಸರಿಯಲ್ಲವೆಂದು ಹೇಳಿ ಆಗ ವೈಸ್ರಾಯಿಯವರು ಮಿ॥ ಜಾನ್ ಮಾರ್ಲಿಯವರ ಅನುಮತಿ ಪಡೆದು ಅವೆರಡನ್ನೂ ನೆರವೇರಿಸಿದರು. ಗಡೀಪಾರಾಗಿರುವ ಇವರಿಬ್ಬರನ್ನೂ ಈಗಾಗಲೇ ಬರ್ಮಾದಿಂದ ಬಿಟ್ಟು ಬಿಡುವುದು ಎಷ್ಟುಮಾತ್ರಕ್ಕೂ ಕ್ಷೇಮಕರವಾದದ್ದಲ್ಲ. ಅವರನ್ನು ಬಿಟ್ಟಕೂಡಲೇ ಪ್ರಜಾಸಮ್ಮತಿಗೆ ಭಂಗಬಂದೀತು ಎಂಬುದೇ.

ವಿದೇಶ ವರ್ತಮಾನಗಳು.

ರಾಜ್ಯರಾಜ್ಯಗಳಿಗೆ ಹುಟ್ಟುವ ವಿವಾದಗಳನ್ನು ಇತ್ಯರ್ಥಪಡಿಸುವುದಕ್ಕೆ ಹೇಗ್ ಪಟ್ಟಣದಲ್ಲಿ ಸ್ಥಾಪನೆಯಾಗಿರುವ ಪಂಚಾಯತಿ ಕೋರ್ಟಿನವರು ವೆನಿಜುವೇಲಾ ರಾಜ್ಯಕ್ಕೂ ಬೆಲ್ಜಿಯಂ ರಾಜ್ಯಕ್ಕೂ ಉಂಟಾಗಿದ್ದ ವ್ಯಾಜ್ಯವನ್ನು ತನಿಖೆಯಿಂದ ಇತ್ಯರ್ಥಮಾಡಿ, ವೆನಿಜುವೇಲಾ ಸಂಸ್ಥಾನವು ಬೆಲ್ಜಿಯಂ ರಾಜ್ಯಕ್ಕೆ ಒಂದು ಕೋಟಿ ರೂಪಾಯಿ ಪ್ರತಿಫಲ ಕೊಡಬೇಕೆಂದು ತೀರ್ಮಾನ ಮಾಡಿದರು. ಅದರಂತೆ ಈಗ ಕೊಡಲು ವೆನಿಜುವೇಲಾದವರು ಒಪ್ಪಿಕೊಂಡಿರುತ್ತಾರೆ.

ರಷ್ಯಾ ರಾಜ್ಯದಲ್ಲಿ ಪ್ರಕಟವಾಗುವ ಎರಡು ಮುಖ್ಯ ವರ್ತಮಾನ ಪತ್ರಿಕೆಗಳಲ್ಲಿ ಅಲ್ಲಿನ ಚಕ್ರವರ್ತಿಯವರನ್ನು ದೂಷಣೆ ಮಾಡಿದ ವಾರ್ತೆಗಳು ಪ್ರಕಟವಾದದ್ದರಿಂದ ಸರ್ಕಾರದವರು ಆ ಎರಡು ಪತ್ರಿಕೆಗಳ ಸಂಪಾದಕರಿಗೂ ತಲಾ ಒಂಬತ್ತು ಸಾವಿರ ರೂಪಾಯಿ ಜುಲ್ಮಾನೆ ವಿಧಿಸಿದರು.

❖❖❖

ನ್ಯೂಜೀಲೆಂಡಿನಲ್ಲಿ ಪಾರ್ಲಿಮೆಂಟಿನ ಮೆಂಬರುಗಳು ಸ್ತ್ರೀಯರನ್ನು ಮೆಂಬರಾಗಿ ಚುನಾಯಿಸಬಹುದೆಂದು ಕಾನೂನು ಮಾಡಿ, ಸ್ಪೀಕರ್ ಬಗ್ಗೆ ಕಳುಹಿಸಿದರು. ಆದರೆ ಅಲ್ಲಿನ ನ್ಯಾಯವಿಧಾಯಕ ಕೌನ್ಸಿಲ್ ಮೆಂಬರುಗಳು ಆ ಕಾನೂನನ್ನು ಒಪ್ಪದೆ ವಜಾ ಮಾಡಿದ್ದಾರೆ.

❖❖❖

ವಿಲಾಯಿತಿಯಲ್ಲಿ ಕಾಲವಾದ ಮೆ॥ ಪೇಜ್ ಎಂಬಾತನು ನಾನಾ ಧರ್ಮಕೆಲಸಗಳಿಗೆ ಆರು ಲಕ್ಷ ರೂಪಾಯನ್ನೂ, ಡಾಕ್ಟರ್ ಜಾಕ್ ಎಂಬಾತನು ಗ್ಲಾಸ್ಗೋ ಪಟ್ಟಣದ ವಿದ್ಯಾಶಾಲೆಯ ಮೂಲಧನಕ್ಕೆ ಮೂರು ಲಕ್ಷ ರೂಪಾಯನ್ನು ತಮ್ಮ ಆಸ್ತಿಯಿಂದ ಖರ್ಚುಮಾಡಬೇಕೆಂದು ಉಯಿಲು ಬರೆದಿದ್ದಾರೆ.

❖❖❖

ಕೆನಡಾ ಎಂಬ ಇಂಗ್ಲಿಷ್ ರಾಜ್ಯಕ್ಕೆ ಸೇರಿದ ಕ್ವಿಬೆಕ್ ಪಟ್ಟಣದಲ್ಲಿ ಒಂದು ರೈಲ್ವೆ ಸೇತುವೆಯನ್ನು ಕಟ್ಟುಗಾರರು ಮಾಡುತ್ತಿದ್ದಾಗ ಆ ಸೇತುವೆಯಲ್ಲಿ ೯,೫೦೦ ಅಡಿಯಷ್ಟು ಉದ್ದವುಳ್ಳ ಭಾಗವು ಅನಾಮತ್ತಾಗಿ ಕಳಚಿಬಿದ್ದು ಅನಾಹುತವಾಯಿತು. ಅಲ್ಲಿ ಕೆಲಸಮಾಡುತ್ತಿದ್ದ ಜನಗಳ ಪೈಕಿ ೩೧ ಜನರು ಮೃತಪಟ್ಟರೆಂದು ತಂತಿ ವರ್ತಮಾನ ಬಂದಿದೆ.

❖❖❖

ಅನ್ನಾಂ ರಾಜ್ಯದ ದೊರೆಯವರು ಬುದ್ಧಿ ಸ್ಥಿಮಿತವಿಲ್ಲದೆ ಅರಮನೆಯಲ್ಲೂ ಹೊರಗಡೆಯಲ್ಲೂ ನಾನಾ ಕ್ರೂರಕೃತ್ಯಗಳನ್ನು ನಡೆಸುತ್ತಿದ್ದಾರೆಂದು ತಿಳಿದುಬಂದದ್ದರಿಂದ ಅವರನ್ನು ಸಿಂಹಾಸನದಿಂದ ಇಳಿಸಿ ಒಂದು ಕೊಠಡಿಯಲ್ಲಿ ಹಾಕಿ ಪಹರೆ ಇಟ್ಟಿದ್ದರಷ್ಟೆ. ಈಗ ಈ ದೇಶದ ದೊರೆತನಕ್ಕೆ ಫ್ರಾನ್ಸಿನವರು [illegible] ಎಂಬ ಹುಡುಗನಿಗೆ ಪಟ್ಟ ಕಟ್ಟಬೇಕೆಂದು ಒಪ್ಪಿಕೊಂಡಿದ್ದಾರೆ.

❖❖❖

ಉತ್ತರಧ್ರುವ ಪ್ರಾಂತ್ಯವನ್ನು ಶೋಧಿಸಬೇಕೆಂದು ಬಹುವರುಷಗಳಿಂದ ಪ್ರಯಾಣ ಮಾಡಿದ್ದ ಒಂದು ನಾವೆಯು [illegible] ಸ್ಥಳದ ಬಳಿ ನಾಶವಾಯಿತೆಂದು ತಂತಿ ವರ್ತಮಾನ ಬಂದಿದೆ. ಅದರಲ್ಲಿದ್ದ ಕ್ಯಾಪ್ಟನ್ ಮಿಕೆಲ್ಸನ್ ಎಂಬಾತನೂ ಲಿಫಿಂಗ್‌ವೆಲ್ ಎಂಬಾತನೂ ಏನಾದರೋ ಎಪ್ಪತ್ತು ದಿನಗಳಿಂದಲೂ ವರ್ತಮಾನವೇ ತಿಳಿಯದಿಲ್ಲವಾದ್ದರಿಂದ ಅವರೂ ಮೃತಪಟ್ಟರೆಂದು ಊಹಿಸುತ್ತಾರೆ.

❖❖❖

ಅಮೇರಿಕಕ್ಕೆ ಸೇರಿದ ವಾಷಿಂಗ್‌ಟನ್ ಎಸ್ಟೇಟಿನಲ್ಲಿ ಬೆಲ್ಲಿಂಗ್‌ಹಾಂ ಎಂಬ ಪಟ್ಟಣದ ಕಾರ್ಖಾನೆಗಳಲ್ಲಿ ಕೆಳದರ್ಜೆ ಅಮೇರಿಕದವರು ನುಗ್ಗಿ ಒಳಗೆ ಕೆಲಸ ಮಾಡುತ್ತಿದ್ದ ಹಿಂದುಗಳನ್ನೂ ಇತರ ದೇಶೀಯರನ್ನೂ ಹೊಡೆದು, ಕಾರ್ಖಾನೆಯಲ್ಲಿ ದಾಂಧಲೆ ನಡೆಸಿದ್ದಾರೆ. ೩೫೦ ಹಿಂದುಗಳು ಆ ಪಟ್ಟಣವನ್ನು ಬಿಟ್ಟು ಹೋದರೆಂತಲೂ ಅಲ್ಲಿ ಜನಾಂಗ ದ್ವೇಷವು ಹೆಚ್ಚುತ್ತಿದೆ ಎಂತಲೂ ತಂತಿ ವರ್ತಮಾನ ಬಂದಿದೆ.

❖❖❖

ಈಚೆಗೆ ಸೈಬೀರಿಯಾ ರೈಲ್ವೆಯಲ್ಲಿ ಅನೇಕ ಖುದ್ದುಪಡುಗಳು ನಡೆದವೆಂದೂ ಬಲವು ಅಕ್ರಮ ನಡವಳಿಕೆಗಳು ನಡೆಯುತ್ತಲಿವೆ ಎಂದೂ ವರ್ತಮಾನ ಬಂದದ್ದರಿಂದ ಅದನ್ನೆಲ್ಲಾ ವಿಚಾರಮಾಡಬೇಕೆಂದು ರಷ್ಯಾ ಗವರ್ನ್‌ಮೆಂಟಿನವರು ಕೆಲವು ಮಂದಿ ದೊಡ್ಡ ಮನುಷ್ಯರನ್ನು ಕಮಿಷನ್ ಜಡ್ಜಿಗಳನ್ನಾಗಿ ನೇಮಿಸಿ ಕಳುಹಿಸಿಕೊಟ್ಟರು. ಇವರು ಹೋಗಿ ತನಿಖೆ ಮಾಡಿದ್ದರಲ್ಲಿ ರಷ್ಯಾ ಗವರ್ನ್‌ಮೆಂಟಿಗೆ ಸಲ್ಲಬೇಕಾಗಿದ್ದ ಸುಮಾರು ೧೮ ಕೋಟಿ ರೂಪಾಯನ್ನು ಅಲ್ಲಿನ ರೈಲ್ವೆ ನೌಕರರು ತಿಂದುಹಾಕಿದ್ದಾರೆಂದು ವರ್ತಮಾನ ಬಂದಿದೆ.

❖❖❖

ಸೈಯಾಂ ರಾಜ್ಯದಲ್ಲಿ ಸುಮಾರು ೩೦,೦೦೦ ಚೀನೀಯರು ಬೇರೆ ಬೇರೆ ಉದ್ಯೋಗಗಳನ್ನು ಮಾಡುತ್ತಿದ್ದಾರೆ. ಇವರು ಸೈಯಾಂ ಹುಡುಗಿಯರನ್ನು ಮದುವೆಮಾಡಿಕೊಳ್ಳುವರು. ಆದರೆ ಸೈಯಾಂ ಪ್ರಜೆಗಳು ಸೈನ್ಯಕ್ಕೆ ಸೇರಲೆಬೇಕೆಂದು ಮಾಡಿರುವ ವಿಧಿಯು ಇವರಿಗೆ ಅನ್ವಯಿಸುವುದಿಲ್ಲ. ಚೀನಾ ರಾಜ್ಯದವರು ತಮ್ಮ ಪ್ರಜೆಗಳನ್ನೂ ಅವರ ಆಸ್ತಿಪಾಸ್ತಿಗಳನ್ನೂ ಕಾಪಾಡುವುದಕ್ಕೋಸ್ಕರ ಸೈಯಾಂ ರಾಜಧಾನಿಯಾದ ಬ್ಯಾಂಕಾಕ್ ಪಟ್ಟಣಕ್ಕೆ ತಮ್ಮ ಕಡೆಯಿಂದ ಒಬ್ಬ ರಾಯಭಾರಿಯನ್ನು ನೇಮಕಮಾಡಿ ಕಳುಹಿಸುವವರಾಗಿದ್ದಾರೆ.

❖❖❖

ವಿಲಾಯಿತಿಯಲ್ಲಿ ಕಾಲವಾದ ಮೆ॥ ಎಚ್. ಕೋಟ್ಸ್ ಎಂಬ ವೈದ್ಯನು ೩ ಲಕ್ಷ ರೂಪಾಯನ್ನೂ, ಮೆ॥ ಜಿ. ಯೇಟ್ಸ್ ಎಂಬ ಮನೆ ಕಟ್ಟುವವನು ೧೩೮ ಲಕ್ಷ ರೂಪಾಯನ್ನೂ, ಮೆ॥ ಆರ್. ಗ್ರಾಂಟ್ ಎಂಬಾತನು ೩೩ ಲಕ್ಷ ರೂಪಾಯನ್ನೂ, ಮೆ॥ ಟಿ. ಎಫ್. ಬ್ಲಾಕ್‌ವೆಲ್ ಎಂಬಾತನು ೨೫ ಲಕ್ಷ ರೂಪಾಯನ್ನೂ, ಸರ್ ಎ. ವಿಲ್ಸನ್ ಎಂಬಾತನು ೩೦ ಲಕ್ಷ ರೂಪಾಯನ್ನೂ, ಮೆ॥ ಮಿಸಿಯಾಳ್ ಟೊಲವರ್ನ್ ಎಂಬಾತನು ೯ ಲಕ್ಷ ರೂಪಾಯನ್ನೂ, ವಿಧವೆ ಕ್ಯಾಥರೀನ್ ಎಂಬಾಕೆಯು ೫೧ ಲಕ್ಷ ರೂಪಾಯನ್ನೂ ತಮ್ಮ ಆಸ್ತಿಯಿಂದ ಧರ್ಮಕಾರ್ಯಗಳಿಗೆ ವಿನಿಯೋಗಿಸಬೇಕೆಂದು ಮರಣಶಾಸನವನ್ನು ಬರೆದಿದ್ದಾರೆ.

❖❖❖

ಪರ್ಷಿಯಾ ರಾಜ್ಯದ ಪ್ರಧಾನಮಂತ್ರಿಯನ್ನೂ ಇನ್ನೊಬ್ಬ ಅಧಿಕಾರಿಯನ್ನೂ ಅವರು ಪಾರ್ಲಿಮೆಂಟಿನಿಂದ ವಾಪಸು ಬರುವಾಗ್ಗೆ ಅಬ್ಬಾಸ್ ಅಲಿ ಎಂಬ ಕಟುಕನು ಸಂಧಿಸಿ ಗುಂಡುಗಳು ಹೊಡೆದು ಕೊಂದುಹಾಕಿಬಿಟ್ಟನು. ಅನಂತರ [illegible] ಕೊಲೆಗಾರನು ಅವನ ಸ್ವ ಪಿಸ್ತೂಲಿನಿಂದ ಗುಂಡು ಹೊಡೆದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುತ್ತಾನೆ. ಈ ಸುಲ್ತಾನರವರು ಪಾರ್ಲಿಮೆಂಟ್ ಮೆಂಬರುಗಳಲ್ಲಿ ಮುಖಂಡರಾದವರನ್ನು ಅರಮನೆಗೆ ಕರೆಸಿಕೊಂಡು, ಹೊಸದೊಬ್ಬ ಮಂತ್ರಿಯನ್ನು ಅವರ ಅಭಿಪ್ರಾಯಾನುಸಾರ ನೇಮಕಮಾಡಿದ್ದಲ್ಲದೆ ಇನ್ನು ಮುಂದೆ ರಾಜ್ಯಭಾರ ಕಾರ್ಯಗಳಲ್ಲಿ ತಾವು ವಿಶೇಷವಾಗಿ ಪ್ರವರ್ತಿಸಿ ಪ್ರಜೆಗಳಿಗೂ ದೇಶಾಭಿವೃದ್ಧಿಗೂ ಹೊಸ ಕ್ರಮಗಳನ್ನು ಜಾರಿಗೆ ತರುವುದಾಗಿ ವಾಗ್ದಾನ ಮಾಡಿದಾರೆ.

❖❖❖

ಸತ್ತ ನೊಣಗಳನ್ನು ಊರಿಂದ ಹೊರಗೆ ಸಾಗಿಸುವುದನ್ನು ಇದುವರೆಗೆ ಯಾರೂ ಕೇಳಿರಲಾರರು. ಬ್ರೆಜಿಲ್ ಸೀಮೆಯೆಂಬ ವಿಲಾಯಿತಿಗೆ ಒಂದು ಟನ್ ತೂಕದಷ್ಟು ಸತ್ತ ನೊಣಗಳನ್ನು ಹಡಗಿನಲ್ಲಿ ಭರ್ತಿಮಾಡಿ ತೆಗೆದುಕೊಂಡು ಹೋಗಿದಾರೆ. ಯಾಕೆಂದರೆ, ಆ ಪಟ್ಟಣದ ಪ್ರಾಣಿಗಳ ನಿಲಯದಲ್ಲಿ ಇಟ್ಟು ಸಾಕುವಂಥ ನಾನಾ ತರದ ಪಕ್ಷಿಗಳಿಗೆ ಈ ಸತ್ತ ನೊಣಗಳನ್ನು ಆಹಾರವಾಗಿ ಹಾಕುವರು. ಈ ನೊಣಗಳು ಬ್ರೆಜಿಲ್ ಸೀಮೆಯ ಅಮೆಜಾನ್ ನದಿಯ ಮೇಲೆ ಲಕ್ಷೋಪಲಕ್ಷ ಹಿಂಡುಕಟ್ಟಿ ಮುಸುಕಿಕೊಂಡಿರುತ್ತವೆ. ದೋಣಿಗಳಲ್ಲಿ ಹೋಗುತ್ತಾ ಅವನ್ನು ಹಿಡಿದು ಚೀಲಗಳಿಗೆ ಭರ್ತಿ ಮಾಡುವರು. ಸುಮಾರು ಎರಡು ವರುಷಗಳ ಹಿಂದೆ ಈ ನೊಣಗಳು ನದಿಯಲ್ಲಿರುವ ಮೀನುಗಳ ಆಹಾರವಾಗಿರೋಣದರಿಂದ ಅವನ್ನು ಹಿಡಿಯಕೂಡದೆಂದು ಅಲ್ಲಿನ ಗವರ್ನ್‌ಮೆಂಟಿನವರು [illegible] ತಡೆದಿದ್ದರು. ಆದರೆ ಈಚೆಗೆ ಈ [illegible] ವಜಾ ಮಾಡಿರುತ್ತಾರೆ. ಈಗ ಅಲ್ಲಿ ಕೆಲವರು ಈ ನೊಣಗಳನ್ನು ಹಿಡಿದು ಸಾಗಿಸುವುದೇ ಒಂದು ಉದ್ಯೋಗವಾಗಿ ಇಟ್ಟುಕೊಂಡಿದಾರೆಂದೂ ತಿಳಿದುಬಂದಿದೆ.

ತಾಲ್ಲೂಕು ವರ್ತಮಾನಗಳು.

ಹರಿಹರ.—ಮೇಲ್ಕಂಡ ಪಟ್ಟಣದಲ್ಲಿ [illegible] ಕಟ್ಟಡವು ಪ್ರಾರಂಭಿಸಿ ೧೫ ದಿನಗಳು ಆದವು. ಹೊಸದಾಗಿ ಬಂದಿರುವ ಮೆ॥ ವೃಷ್ ಎಂ. ಇ. ಡಿಸ್ಟ್ರಿಕ್ಟ್ ಸಾಹೇಬರು ಪರಾಂಬರಿಸಿ ನೋಡುವಾಗ್ಗೆ ಅಮೇರಿಕದಲ್ಲಿ ಹೊಸದಾಗಿ ತಯಾರಾಗುವ ಆರ್ಮರ್ಡ್ ಕಾಂಕ್ರೀಟ್ ಸ್ಲ್ಯಾಬ್ಸ್ ಎಂಬುವ ಹೊಸ ರೀತಿಯ ಕೆಲಸವನ್ನು ಇನ್‌ಸ್ಪೆಕ್ಷನ್ ಮಾಡಿ, ಸಂತೋಷಪಟ್ಟುಕೊಂಡು ಹೋದರು. ಅಕ್ಟೋಬರ್ ತಾ ೧ ಕ್ಕೆ ಅಮಲ್ದಾರರು ಈ ಹೊಸ ಕಟ್ಟಡದಲ್ಲಿ ಕಚೇರಿ ಮಾಡುತ್ತಾರೆ ಎಂಬ ಸಮಾಚಾರವಿದೆ.—ತಾ ೨ ಕ್ಕೆ ಬೆಳ್ಳಿಗೆ ಮುನಸೀಫ್ ಬಾಸಿಂ ಸಾಹೇಬರ ಮನೆಯಲ್ಲಿ ಇಲಿಗಳು ಬಿದ್ದವು. ಅಮಲ್ದಾರರು, ಆಸ್ಪತ್ರೆ ಅಸಿಸ್ಟೆಂಟರೂ ಪೋಲೀಸಿನವರೂ ಸಹಾ ಹೋಗಿ ಬೇರೆ ಸ್ಥಳಕ್ಕೆ ಕಳುಹಿಸಿ ಮನೆಯನ್ನು ಡಿಸಿನ್‌ಫೆಕ್ಟ್ ಮಾಡಿಸಿದರು. ಸುಂಕದ ಬೂರದಂತೆ ಅವರ ಮನೆಗಳಿಗೂ [illegible] ಮಾಡಿಸಿದರು. ನಮ್ಮ ಅಮಲ್ದಾರರೂ ಅಸಿಸ್ಟೆಂಟರೂ ಇಷ್ಟು ಜಾಗ್ರತೆಯಾಗಿ ಕೆಲಸ ಮಾಡಿಸಿದ್ದು ನಮ್ಮಗಳಿಗೆ ಬಹಳ ಉಪಕಾರ ಮಾಡಿದಂತೆ ಆಯಿತು.—ತಾ ೧೦ ಕ್ಕೆ ಡೆ॥ ಕಮಿಷನರರು ಬಂದು ಇಲಿ ಬಿದ್ದ ಮನೆಗಳನ್ನು ಪರಾಂಬರಿಸಿ ಮನೆಯವರಿಗೆ ಧೈರ್ಯ ಹೇಳಿ ನದಿ ತೀರ ಹೋಗಿ ಸಂತೋಷವಾಗಿ ಅಮಲ್ದಾರರೊಡನೆ ದೋಣಿಯಲ್ಲಿ ಕುಳಿತುಕೊಂಡು ವಿಹಾರ ಮಾಡಿ ರೈಲಿಗೆ ದಾವಣಗೆರೆಗೆ ದಯಮಾಡಿದರು.

ಮಂಡ್ಯ.—ಇಲ್ಲಿ ಪ್ಲೇಗ್ ವ್ಯಾಧಿಯು ಪ್ರಾರಂಭವಾಗಿ ಎರಡು ತಿಂಗಳಾದಾಗ್ಯೂ ಇನ್ನೂ ಉಪಶಮನಕ್ಕೆ ಬಂದಿಲ್ಲ. ಜನರು ಒಂದು ವಾರ ತಿಂಗಳಿಂದ ಪಟ್ಟಗಳಲ್ಲಿ ವಾಸಮಾಡುತ್ತಾ ಇದ್ದಾರೆ. ಈ ವ್ಯಾಧಿಯು ಪಟ್ಟಗಳಲ್ಲಿಯೂ ವ್ಯಾಪಿಸಿದ್ದರಿಂದ ಜನರು ಮೊದಲು ಹಾಕಿಕೊಂಡಿದ್ದ ಸ್ಥಳವನ್ನು ಬಿಟ್ಟು ಬೇರೆ ಕಡೆಯಲ್ಲಿ ಪಟ್ಟಗಳನ್ನು ಹಾಕಿಕೊಳ್ಳುವದಕ್ಕೆ ಪ್ರಾರಂಭಿಸಿದ್ದಾರೆ. ಈ ವರೆಗೂ ೪೫ ಜನರಿಗೆ ಗಲಿರುತ್ತದೆ. ೩೯ ಜನ ಮರಣಹೊಂದಿರುತ್ತಾರೆ. ಬಿಸಿಲಿನ ತಾಪ ಬಹಳವಾಗಿದೆ. ರೈತರು ಮಳೆ ಇಲ್ಲವೆಂದು ಆಕಾಶವನ್ನೇ ನೋಡುತ್ತಾ ಇದ್ದಾರೆ.—ಇಲ್ಲಿನ ಮಿಡ್ಲ್ ಸ್ಕೂಲುಗಳು ಪ್ಲೇಗ್ ವ್ಯಾಧಿಯಿಂದ ಒಂದು ತಿಂಗಳಿಂದ ಮುಚ್ಚಲ್ಪಟ್ಟಿತ್ತು. ಮಕ್ಕಳ ವಿದ್ಯಾಭ್ಯಾಸಕ್ಕೆ ಕೊರತೆಯಾಗುತ್ತದಲ್ಲಾ ಎಂದು ತಿಳಿದು, ತಾಲ್ಲೂಕ್ ಕಚೇರಿ ಪಕ್ಕದಲ್ಲಿ ವಿಂಚರ್ ಸೂಪರಿಂಟೆಂಡೆಂಟರು ಒಂದು ಪಟ್ಟವನ್ನು ಕಟ್ಟಿಸಿ, ಸ್ಕೂಲುಗಳನ್ನು ೧೭ ನೇ ತಾ ನಿಂದ ನಡಿಸುವಹಾಗೆ ಮಾಡಿರುತ್ತಾರೆ. ಈ ಕಾಲದಲ್ಲಿ ಇದು ಒಂದು ನಿರೀಕ್ಷಣೆಯಾದ ಸಹಾಯವಾಗಿರುತ್ತದೆ.—ಈಗ್ಗೆ ಮೂರು ತಿಂಗಳಿಗೆ ಮುಂಚೆ ಇಲ್ಲಿಗೆ ಸಬ್ ರಿಜಿಸ್ಟ್ರಾರಾಗಿ ಬಂದಿರುವ ಮೆ॥ ಚಕ್ರಪಾಣಿರಾಯರು ತಮ್ಮ ಕೆಲಸವನ್ನು ಬಹಳ ಶ್ರದ್ಧೆಯಿಂದಲೂ, ನೀತಿಯಿಂದಲೂ ನಡೆಸುತ್ತಾ ಇದಾರೆ. ಇವರು ಮುಂದಕ್ಕೆ ಅಭಿವೃದ್ಧಿಗೆ ಬರುವರೆಂದು ನಿರೀಕ್ಷಿಸುತ್ತೇನೆ.—ಕಳೆದ ಎರಡು ವರ್ಷಗಳಿಂದ ಇಲ್ಲಿನ ರೈಲ್ವೆ ಸ್ಟೇಷನ್ ಮಾಸ್ಟರಾಗಿದ್ದ ಮೆ॥ ವರದರಾಜಯ್ಯಂಗಾರ್ಯರು ಕೆಲವು ಕಾಲದ ಮಟ್ಟಿಗೆ [illegible] ಸ್ಟೇಷನ್ನಿಗೆ ವರ್ಗವಾಗಿ ಹೊರಟು ಹೋದರು. ಇವರು ಎಲ್ಲರಲ್ಲಿಯೂ ವಿಶ್ವಾಸ, ಪ್ರೀತಿಯುಳ್ಳವರಾಗಿದ್ದರು. ಇವರಿಗೆ ಬದಲಾಗಿ ಹಕ್ಕಿಮಟ್ಟಿನ ಸ್ಟೇಷನ್ನಿಂದ ಮೆ॥ ಶ್ರೀನಿವಾಸಯ್ಯಂಗಾರರು ಬಂದಿರುತ್ತಾರೆ.

ಚಿಕ್ಕಮಗಳೂರು.—ಈಚೆಗೆ ಮಳೆ ಸ್ವಲ್ಪವೂ ಬರಲಿಲ್ಲ. ಬಿಸಿಲು ಕಾಯುತ್ತಲೂ ರಾತ್ರಿಯಲ್ಲಿ ಚಳಿಯಾಗುತ್ತಲೂ ಇದೆ. ಪ್ಲೇಗ್ ರೋಗವು ದಿನದಿನಕ್ಕೆ ಹೆಚ್ಚುವರೀತಿಯಲ್ಲಿದೆಯಲ್ಲದೆ ಇಳಿಮುಖವೇ ಇಲ್ಲ. ಅನೇಕ ಜನರು ಊರು ಬಿಟ್ಟು ಪಟ್ಟಗಳಿಗೂ ಪರಸ್ಥಳಗಳಿಗೂ ಹೋಗಿ ಸೇರಿಕೊಂಡಿರುವರು. ಇಲ್ಲಿ ಸುತ್ತಲಿರುವ ಗ್ರಾಮಗಳಿಗೆ ಹರಡಿಕೊಳ್ಳುವಂತೆ ಕಾಣುತ್ತಲಿದೆ. ಈಗಾಗಲೇ ಹಿರೇಮಗಳೂರಿನಲ್ಲಿ ಪ್ಲೇಗು. ಜನರು ಮೃತಪಟ್ಟರೆಂದು ವರ್ತಮಾನ.—ಕಳೆದ ಶನಿವಾರ ೩ ನೆ ತಾ. ಬಸವನಹಳ್ಳಿಯಲ್ಲಿರುವ ಡಿಸ್ಟ್ರಿಕ್ಟ್ ಆಫೀಸಿನ ಹೆಡ್ [illegible] ಮಹಾರಾಯರ ಹತ್ತಿರದ [illegible] ಸೇರಿಕೊಂಡು ಮೂರು ಮೊಲೆಗಳನ್ನೂ ಒಂದು ಹಾವನ್ನೂ ಕೊಂದು ತಿಂದು [illegible] ಕಡೆಗೆ ಹೋದ ಮಾರ್ಗವನ್ನು ಪರಿಚೆ ಘಾಯಮಾಡಿ, [illegible] ಹೋದ ಒಬ್ಬನನ್ನು ಬಲವಾಗಿ ಕಚ್ಚಿ ಮಹಾ ಚಿರತೆಯನ್ನು [illegible] ಡಿಸ್ಟ್ರಿಕ್ಟ್ ಕಚೇರಿಯ ಜಮಾದಾರ್ ಹುಸೇನಪ್ಪ ಮತ್ತು [illegible] ಫ್ರಿಲ್ ಇನ್‌ಸ್ಪೆಕ್ಟರ್ ಇವರಿಬ್ಬರೂ ಸೇರಿ ಹೊಡೆದು, ಬೀದಿಯಲ್ಲಿ [illegible] ದಿಯ ಮೇಲಿಟ್ಟು ಮೆರವಣಿಗೆ ಮಾಡಿಕೊಂಡು, ಡಿಪ್ಯುಟಿ ಕಮಿಷನರ್ ಸಾಹೇಬರ ಬಂಗಲೆಯ ವರೆಗೂ ಬಂದು, ಅವರಿಗೆ ತೋರಿಸಿ, ಫೋಟೋ ತೆಗೆದುಕೊಂಡು ಇಟ್ಟಿರುವುದಾಗಿ ವರ್ತಮಾನ. [illegible] ಕಚ್ಚಿಸಿಕೊಂಡವರೆಲ್ಲರೂ ಆರೋಗ್ಯವಾಗಿದಾರೆ. ಹೀಗೆ ದುಷ್ಟಮೃಗಗಳು ಊರಿಗೆ ಬಂದು ಸೇರಿಕೊಂಡು ಹಿಂಸೆಮಾಡಲು, ಬೇಟೆಗಾರರು ಶಿಕಾರಿಮಾಡಿ, ದುಷ್ಟಮೃಗಗಳನ್ನು ಕೊಲ್ಲದೆ ಇರುವುದರಿಂದಲೋ ಅಥವ ಅವರಿಗೆ ಅವುಗಳನ್ನು ಕೊಲ್ಲಲು ಸರ್ಕಾರದವರು ಲೈಸನ್ಸ್ ಕೊಡದೆ ಇರುವುದರಿಂದಲೋ ತಿಳಿಯದು.—ಈಗ್ಗೆ ಸುಮಾರು ಇಪ್ಪತ್ತು ದಿನಗಳ ಹಿಂದೆ ಇಲ್ಲಿಗೆ ಒಂಬತ್ತು ಮೈಲಿ ದೂರದಲ್ಲಿರುವ ಲಿಂಗದಹಳ್ಳಿ ಪ್ರಾಂತ್ಯ ಒಬ್ಬ ವೃದ್ಧನು ಚಿರತೆಯಿಂದ [illegible] ಬಂದು ಇಲ್ಲಿನ ಆಸ್ಪತ್ರೆಯಲ್ಲಿ ಸತ್ತನು.—ನಮ್ಮ [illegible] ಕಮಿಷನರರೂ, ಜನರಲ್ ಅಸಿಸ್ಟೆಂಟರೂ, ಪೋಲೀಸ್ ಸೂಪರಿಂಟೆಂಡೆಂಟರೂ ಸರ್ಕೀಟಿನಲ್ಲಿದಾರೆ. ಜನರಲ್ ಅಸಿಸ್ಟೆಂಟ್ ಕಮಿಷನರರು [illegible] ಗಲಾಟೆ ತೀರುವವರೆಗೂ ಬೀರೂರಿನಲ್ಲಿದ್ದುಕೊಂಡು [illegible] ಈ ಪ್ರಾಂತ್ಯ ಸರ್ಕೀಟು ಮಾಡುತ್ತಾ, ಕೆಲಸಬಿದ್ದಾಗ ಚಿಕ್ಕಮಗಳೂರಿಗೆ ಬಂದು ಹೋಗುತ್ತಿದ್ದಾರೆಂದು ಕೇಳುತ್ತೇನೆ. [illegible] ಜರು ಸಹ ಸರ್ಕೀಟಿನಲ್ಲಿಯೇ ಇದಾರೆ.—ಮೈಸೂರಿನಲ್ಲಿ ನಡೆಯುವ ವಸ್ತುಪ್ರದರ್ಶನಶಾಲೆಗೆ ಮೂಡಿಗೆರೆ ಮತ್ತು ಚಿಕ್ಕಮಗಳೂರು [illegible] ಜಿಲ್ಲೆಯ ವಿಶೇಷ ಪದಾರ್ಥಗಳನ್ನು ಶೇಖರಿಸಿ ಇಲ್ಲಿಂದ ರವಾನಿಸಬಹುದು ವರ್ತಮಾನವಿದೆ.

ದೊಡ್ಡಬಳ್ಳಾಪುರ.—ಇಲ್ಲಿ [illegible] ಇಲ್ಲದೆ [illegible] ಗಳೆಲ್ಲಾ [illegible] ಗಿಹೋಗುತ್ತಾ ಇದ್ದವು. ೫ನೇ ತಾ. [illegible] ಸ್ವಲ್ಪ ಮಳೆಯಾದ್ದರಿಂದ ಜನರಿಗೆ ತಕ್ಕ ಮಟ್ಟಿಗೆ ಧೈರ್ಯವಾಗಿದೆ. ಕೆಲವು ದಿನಗಳ ಹಿಂದೆ ಕೆಲವರ ಮನೆಗಳಲ್ಲಿ ಇಲಿ ಸತ್ತವು. ಈಗ ಇಲಿಗಳ ಸುದ್ದಿ ಏನೂ ಕೇಳಿಸಿಲ್ಲ. ಈ ಊರಿನ ಸುತ್ತಲೂ ಕೆಲವು ಗ್ರಾಮಗಳಲ್ಲಿ ಪ್ಲೇಗ್ ಗಲಾಟೆ ಇಲ್ಲ ಎಂದು ಹೇಳಲಾಗಿದೆ. ಕಂಚಿಗನಾಳದಲ್ಲಿ ಕೆಲವು ದಿನಗಳಿಂದ ಗಲಾಟೆ ಇಲ್ಲವಂತೆ. ರಾಜಗಟ್ಟದಲ್ಲಿ ಇದುವರೆಗೆ ಪ್ರಾರಂಭವಾಗಿ ೫—೬ ಜನ ಸತ್ತರೆಂದು ಇನ್ನು ೧—೨ ಜನರಿಗೆ ಕಾಯಿಲೆ ಇರುವುದಾಗಿ ವರ್ತಮಾನ.—ಇಲ್ಲಿ ಶಿರಸ್ತೇದಾರರಾಗಿದ್ದ ಮೆ॥ ನರಸಿಂಹಸ್ವಾಮಿಯವರಿಗೆ [illegible] ವರ್ಗವಾಗಿ ಹೋದರು. ಇವರು ಒಳ್ಳೆ ಸಭ್ಯರುಗಳು. ಇಲ್ಲಿನ [illegible] ಪ್ರೀತಿ ಗೌರವಗಳನ್ನು ಪಡೆದುಕೊಂಡಿದ್ದರು. ಇವರಿಗೆ ವರ್ಗವಾದುದರಿಂದ ಬಹಳ ಜನರು ವ್ಯಸನಪಟ್ಟರು. ಇವರಿಗೆ ಪ್ರತಿಯಾಗಿ ಮೆ॥ [illegible] ರಾಮರಾಯರು ಬಂದಿದಾರೆ.—ಕೆಲವು ದಿನಗಳಿಂದ ಒಂದು ಹುಲಿಯು [illegible] ಪ್ರಾಂತ್ಯದಲ್ಲಿ ಸೇರಿಕೊಂಡು ಬಹಳ ಗಾಬರಿಯನ್ನುಂಟುಮಾಡುತ್ತಾ ಇದೆ. ಈ ಊರಿನ ಸಮೀಪದಲ್ಲಿಯೇ ಇದೆ. ೬ ಕುದುರೆಗಳನ್ನು ಕೊಂದಿದೆ. ಬೀರಸಂದ್ರ, ಬೈರದೇನಹಳ್ಳಿ ಕಡೆ ಒಂದು ಎಮ್ಮೆಯನ್ನು ಒಂದು [illegible] ವನ್ನು ಕೊಂದಿತು. ಇದನ್ನು ಕೊಲ್ಲುವುದಕ್ಕೆ ನೆಲದಲ್ಲಿ ಗುಂಡಿ ತೋಡಿ ಮೇಲೆ ಎರಡು ಕುರ್ಚಿಗಳನ್ನು ಹಾಕಿಕೊಂಡು ಕಾದು ಇದ್ದರೂ ಹುಲಿಯು ಮೇಲೆ ಬಂದು ಇಬ್ಬರನ್ನೂ ಕೊಂದುಹಾಕಿತು. [illegible] ದೇಹಬಿಟ್ಟರಂತೆ. ರಾಜಗಟ್ಟದಾಗಲು ಊರು ಬಿಟ್ಟು ಜೋಪಡಿಗಳಲ್ಲಿ ಇರುವಾಗ ಹುಲಿಯು ೩ ದನಗಳನ್ನು ತೆಗೆದುಕೊಂಡು ಹೋಯಿತು. ಕಂಚಿಗನಾಳದವರು ಊರು ಬಿಟ್ಟು ಇರುವಾಗ ೪—೫ ಮೇಕೆಗಳನ್ನು ಕೊಂದು ಹಾಕಿತು. ಈ ರೀತಿ ಇದು ಬಹಳ ಭಯವನ್ನು ಹುಟ್ಟಿಸಿ ಸಂಜೆ ಹೊತ್ತಿನಲ್ಲಿ ಜನರು ಸಂಚಾರ ಮಾಡದಹಾಗೆ ಮಾಡಿ ಇದೆ. ಈ ಹುಲಿಯು ಕತ್ತಿನಲ್ಲಿ ಸರಪಣಿ ಕಟ್ಟಿದಂತೆ ಇದೆಯಂತೆ. ಅದ್ದರಿಂದ ಇದು ಸರ್ಕಸ್ ಆಟದವರ ಸ್ವಾಧೀನದಿಂದ ತಪ್ಪಿಸಿಕೊಂಡು ಬಂದದ್ದು ಎಂದು ಕಾಣುತ್ತೆ. ಇದರಿಂದ ಜನರಿಗೆ ಭಯವುಂಟಾಗಿ ಮನುಷ್ಯರಿಗೆ ಕಾಟ ಕೊಡುತ್ತೆ. ವ್ಯವಸಾಯಗಾರರಿಗೆ ಬಹಳ ಕಷ್ಟವಾಗಿದೆ. ಇದನ್ನು ಕೊಲ್ಲುವ ಜನರಿಗೆ ಬಹುಮಾನ ಕೊಡುವುದಾಗಿ ಸರ್ಕಾರದವರು ಹೇಳಿದರೂ ಕೋವಿಯಿಂದ ಹೊಡೆಯುವ ಜನರು ಕೊಲ್ಲುವುದಕ್ಕೆ ಧೈರ್ಯಪಡುವುದಿಲ್ಲ. ಇದರಿಂದ ದನ ಮನೆಗಳ ಕಾಯುವುದು ಕಷ್ಟವಾಗಿ ಜನರಿಗೆ ಹಿಂಸೆಯಾಗಿದೆ ಎಂದು ಕೇಳುತ್ತೇನೆ. ಸರ್ಕಾರದವರಿಗೆ ದುಷ್ಟಮೃಗಗಳ ಮೇಲೆ ಇಷ್ಟು ಪ್ರೀತಿ ಇದ್ದರೆ ದನ, ಕರು, ಜನಗಳ ಮೇಲೆ ಇನ್ನೂ ಹೆಚ್ಚಾದ ಕನಿಕರವಿರಬೇಕಾಗಿದೆ. ಆದ್ದರಿಂದ ಸರ್ಕಾರದವರು ಇದಕ್ಕೆ ತಕ್ಕ ಏರ್ಪಾಡು ಮಾಡುವರೆಂದು ಕೋರುತ್ತೇವೆ.—ನಮ್ಮ ಶ್ರೀಮನ್ ಮಹಾರಾಜರು ಎಂಟೀಪುಗಳಿಗೆ ದಯಮಾಡಿಸಿದಾಗ, ಈ ದೊಡ್ಡಬಳ್ಳಾಪುರದವರ ಪರವಾಗಿ ಸಲ್ಲಿಸಿದ ಪತ್ರಿಕೆಯಲ್ಲಿ ಒಂದು ಚಪ್ಪರ ಹಾಕಿಸಿ ಮಹಾರಾಜರನ್ನು ಇಲ್ಲಿನ ಶೆಟ್ಟರುಗಳೂ ದೊಡ್ಡ ಮನುಷ್ಯರೂ ಎದುರುಗೊಂಡು ತಮ್ಮ ಕಷ್ಟಗಳನ್ನು ಅರಿಕೆ ಮಾಡಿದರು. ಅದರಲ್ಲಿ ಮುನ್ಸಿಫ್ ಕೋರ್ಟಿನ ಮತ್ತು ಹಳ್ಳಿಗಳ ವಿಷಯ ಯೋಚನೆ ಮಾಡುತ್ತೇನೆಂದು ಅಪ್ಪಣೆ ಕೊಟ್ಟರಂತೆ. ಸಂದಿದಾಗದಲ್ಲಿ ಶಿಕಾರಿ ಮಾಡುವುದಕ್ಕೆ ಅನೇಕ ಏರ್ಪಾಡು ಮಾಡಿದ್ದರು. ಅಷ್ಟರಲ್ಲಿ ನಮ್ಮ ಮಹಾರಾಜರವರಿಗೆ ಸ್ವಲ್ಪ ದೇಹಾಲಸ್ಯವಾದ್ದರಿಂದ ಎಲ್ಲವನ್ನೂ ನಿಲ್ಲಿಸಬೇಕಾಯಿತು.

ಪ್ರಾರ್ಥನೆ.

ಸಂದೇಶ ಕೊಡುವ [illegible] ಉತ್ತರ ದೇಶದಲ್ಲಿ ಪ್ರಕಟವಾಗುವ ಒಂದು ಪ್ರಸಿದ್ಧವಾದ [illegible] ಪತ್ರಿಕೆಯ ಪ್ರಾರ್ಥನೆಯ ವಿಷಯ ಒಂದು ವಾರ್ತೆಯನ್ನು ಬರೆದಿರುವರು. ಇವರು ಬರೆದಿರುವ ಅಭಿಪ್ರಾಯಗಳೆಲ್ಲಾ ನಾವು ಅನುಮೋದಿಸದೆ ಹೋದರೂ ಇವರು [illegible] ಹಿಡಿದ ಒಂದೆರಡಂಶಗಳು [illegible] ಬಹು ಮುಖ್ಯವಾದವುಗಳಾಗಿರುತ್ತವೆ.

[illegible]

"... ತಪ್ಪಿನ. ಎಂದು ಪ್ರಾರ್ಥಿಸಿರಿ."

ಬಾತ್ಮೀದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು ಆದಕಾರಣ ಬಾತ್ಮೀದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಅಂಥ ಪತ್ರಗಳಿಗೆ ನಾವು ನಿಗಾ ಕೊಡಲಾರೆವು

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ನಾವು ಜೋಕೆಗಾರರಾಗುವುದಿಲ್ಲವೆಂಬುದನ್ನು ಸಕಲರೂ ತಿಳಿಯತಕ್ಕದ್ದು.—ಎಡಿಟರ್.

ಶ್ರೀ ರಂಗಯ್ಯಶೆಟ್ಟಿ—ಬೆಂಗಳೂರು, ರಾಜಶೈಯ್ಯ—ಮಾಕನಹಳ್ಳಿ, ಎಲ್. ಎಸ್. ವಿ.—ಲಿಂಗದಹಳ್ಳಿ, ಡಿ. ಬಿ. ನಂಜುಂಡಪ್ಪ—ದೊಡ್ಡಬಳ್ಳಾಪುರ, ಎಚ್. ವಿ. ಸುಂದರನಾರಾಯಣಸ್ವಾಮಿ—ಕೊತ್ತನೂರು—ಈ ಬಾತ್ಮಿಗಳನ್ನು ಪ್ರಕಟಿಸಲಾಗುವುದಿಲ್ಲವೆಂದು ತಿಳಿಸಲು ವಿಷಾದಿಸುತ್ತೇವೆ.—ಎಡಿ.]

ಕರೆಸ್‌ಪಾಂಡೆನ್ಸ್.

ಶ್ರೀಮನ್ಮಹಾರಾಜರವರು ದೇಶದ ಮೇಲೆ ಹೊರಡುವುದು ದೇಶಕ್ಕೆ ಕ್ಷೇಮವೇ?

ಅಯ್ಯಾ,

ಕೆಲವು ದಿನಗಳಿಗೆ ಹಿಂದೆ ಒಬ್ಬ ರೈತನು ಈ ಪ್ರಶ್ನೆಯನ್ನು ಲೇಖನದಾರನನ್ನು ಕೇಳಿದನು. ಆ ರೈತನ ಅಭಿಪ್ರಾಯವೇನೆಂದರೆ—ನಮ್ಮನ್ನು ಆಳುವ ಒಡೆಯರು ಈ ರೀತಿ ದೇಶದಲ್ಲಿ ಸಂಚರಿಸುವುದರಿಂದ ದೇಶದಲ್ಲಿ ಮಳೆಗಳಿಲ್ಲದೆ ಕ್ಷಾಮವೂ ನಾನಾ ವಿಧವಾದ ರೋಗಾದಿಗಳೂ ಸಂಭವಿಸಿ ಜನರಿಗೆ ತೊಂದರೆಯಾಗುವುದೆಂಬುದೇ. ನಾನು ಅಂಥ ಜನಗಳಲ್ಲಿ ನಾಗರೀಕತೆ ಇಲ್ಲದೆ ಇರುವುದೇ ಈ ವಿಧವಾದ ಆಲೋಚನೆಗಳಿಗೆ ಆಕರವುಂಟಾಗುತ್ತೆ ಎಂದು ಮನಸ್ಸಿನಲ್ಲಿ ನೊಂದುಕೊಂಡು ಮಹಾರಾಜರವರು ದೇಶದ ಮೇಲೆ ಹೊರಡೋಣದ್ದರಿಂದ ಉಂಟಾಗತಕ್ಕ ಪ್ರಯೋಜನಗಳನ್ನು ತಿಳಿದು ಆ ಬಡರೈತನಿಗೆ ಕೆಲವು ವಿಧವಾದ ಬುದ್ಧಿಮಾತುಗಳನ್ನು ಹೇಳಬೇಕಾಯಿತು. ಶ್ರೀಮನ್ಮಹಾರಾಜರವರು ತಮ್ಮ ಸಂಸ್ಥಾನದಲ್ಲಿ ಸಂಚಾರವಾದ ಅಂಶ ಮುಖ್ಯಸ್ಥಳಗಳನ್ನು ಸಂದರ್ಶಿಸುವುದರಿಂದ ಜನಗಳಿಗೂ ದೇಶದ ಏಳಿಗೆಗೂ ... ಪ್ರಯೋಜನವುಂಟು. ಉದಾಹರಣೆಗಾಗಿ ಒಬ್ಬ ರೈತನು ...

[illegible]

ಕೊಳ್ಳಲು ಒಂದು ಸಾವಿರ ರೂಪಾಯಿಗಳನ್ನು ಇನಾಮಾಗಿ ಕೊಟ್ಟದ್ದರಲ್ಲಿ ನಮ್ಮ ಮಹಾಪ್ರಭುಗಳವರಿಗೆ ದೇಶದ ಕೈಗಾರಿಕೆ ಕೆಲಸಗಳು ಶ್ರೇಷ್ಠಸ್ಥಿತಿಗೆ ಬರುವುದರಲ್ಲಿ ಎಂಥಾ ಕುತೂಹಲವುಳ್ಳವರಾಗಿರುತ್ತಾರೆಂಬುದೂ ಶ್ರೀಮನ್ಮಹಾರಾಜರವರು ಹೀಗೇ ಸಂಸ್ಥಾನದಲ್ಲಿ ಸಂಚಾರ ಮಾಡುವುದರಿಂದ ನಿಜಾನಿಜ ಸಂಗತಿಗಳೆಲ್ಲಾ ಹ್ಯಾಗೆ ಬೈಲಾಗುತ್ತವೆಂಬುದೂ ವೇದ್ಯವಾಗುತ್ತೆ.

ಹೀಗೆ ನಮ್ಮ ಮಹಾರಾಜರವರ ಸವಾರಿಯು ಪದೇ ಪದೇ ಸಂಸ್ಥಾನದ ಮೇಲೆ ಚಿತ್ತೈಸಿ ಪ್ರಜೆಗಳಿಗೂ ದೇಶದ ಅಭಿವೃದ್ಧಿಗೂ ಮಹಾ ಪ್ರಯೋಜನವನ್ನುಂಟುಮಾಡಲೆಂದು ಹಾರೈಸಿ ಪ್ರಾರ್ಥಿಸುತ್ತಿರುವ

ದೇಶದ ಕ್ಷೇಮಾಪೇಕ್ಷಕ

ಇಲ್ಲಿ ನೋಡಿ!

65 1

ತುಮಕೂರು ಮಿಷನ್ ಇಂಡಸ್ಟ್ರಿಯಲ್ ಸ್ಕೂಲಿನಲ್ಲಿ ಯೂರೋಪಿಯನ್ ಮೇಸ್ತ್ರಿಗಳ ಮೇಲ್ವಿಚಾರಣೆಯಿಂದ ಉತ್ತಮ ತರಹದ ಹಾಸನದ ಟೋಪಿಗಳು ಅತಿ ಶ್ರೇಷ್ಠವಾದ ಉಲ್ ದಾರದಿಂದ ತಯಾರಾಗುತ್ತವೆ.

ಕ್ರಯ:—೧॥ ಆಣೆ ಮೊದಲ್ಗೊಂಡು ೯ ರೂ. ೧೨ ಆಣೆಯವರಿಗೆ

೧ ಡಜನ್ ಟೋಪಿಗಳನ್ನು ತೆಗೆದುಕೊಳ್ಳುವವರಿಗೆ ಕೇಳಿದ ಮರ್ಯಾದೆ ಡಿಸ್‌ಕೌಂಟ್ ಕೊಡಲ್ಪಡುವುದು

ನಮ್ಮ ವಿಳಾಸ:—ಮೇನೇಜರ್,

ಹಾಸನದ ಟೋಪಿ ಕಾರ್ಖಾನೆ, ಮಿಷನ್ ಇಲಾಖೆ, ತುಮಕೂರು.

ಬಸ್ಸೂರು ಗ್ರಾಮದಲ್ಲಿ ಗೃಹಕೃತ್ಯದ ನೋಟೀಸ್.

100 1

ಶ್ರೀ ನರಸೀಪುರದ ತಾಲ್ಲೂಕು ಬಸ್ಸೂರು ಗ್ರಾಮದಲ್ಲಿರುವ ...

[illegible]

ಈ ಮೂಲಕ ತಿಳಿಸಿರುತ್ತೇನೆ ... ೧೬-೯-೦೭

೦ ಈ ಗುತ್ತಿಗೆ ... ಗೌಡ

ಪ್ರಕಟನೆಗಳು.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವುದೇನು?

ಹಾಸನದ ಟೋಪಿ ಅಲ್ಲವೋ?

ಇಲ್ಲವಾದರೆ ಬೇಗ ಬರೆದು ತರಿಸಿಕೊಳ್ಳಿ.

75 8

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂತ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇಗಾವದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ:—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯಿತಿಯಿಂದಲೇ ಬರುವದು. (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕ ಪತ್ರಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಸೀದಾ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದು ಚನ್ನಾಗಿಲ್ಲದ್ದು ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ.

ಸಾದ, ಕೆಂಪು, ಕಪ್ಪು, ಬಿಳಿ, ಕಾಫಿ ಟೋಪಿಗಳು ೧ ರೂ. ೪ ಆ.; ೧ ರೂ. ೬ ಆ.; ೧ ರೂ. ೮ ಆ.

ರೇಶ್ಮೆ ಚುಕ್ಕೆಯುಳ್ಳ ಟೋಪಿಗಳು ೧ ರೂ. ೪ ಆ., ೨ ರೂ.

ದಾರದ ಟೋಪಿಗಳು ೧ ರೂ. ೧೨ ಆ., ೧ ರೂ. ೪ ಆ.; ೧ ರೂ. ೬ ಆ.

ಉಣ್ಣೆಯ ಟೋಪಿಗಳು ೧ ರೂ. ೪ ಆ.; ೧ ರೂ. ೬ ಆ.

ಕೂಸುಗಳ ಟೋಪಿ, ಸೂಫಿನ್ ಮೇಜೋಡು, ಅರ್ಧ ಮೇಜೋಡು, ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು.

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ.

ನೆತ್ತಿಹತ್ತಿದ ಶೀತದಿಂದ ಮೂಗಿನಲ್ಲಿ ಹರಿಯುವದು. ಇದೇ ಪ್ರಪಂಚದಲ್ಲೆಲ್ಲಾ ರೋಗಕ್ಕೆ ಮೂಲಕಾರಣವು. ಇದಕ್ಕೆ ಪೆ-ರೂ-ನಾ ಸರ್ವಶ್ರೇಷ್ಠವಾದ ಪರಿಹಾರ.

38-24

ಉಷ್ಣದ ನೀರು ಹರಿಯುವ
ನೆತ್ತಿ ಹತ್ತಿದ ಶೀತ
ನೆಗಡಿ

ಇದು ಅನ್ನಕೋಶ, ಮಲಕೋಶ, ದೊಡ್ಡ ಸಣ್ಣ ಕರುಳುಗಳು, ಕುಂಡಿಯ ಕೋಶಗಳು, ಇವೆಲ್ಲಾ ವ್ಯಾಪನೆಯಾಗುತ್ತದೆ

ಶೀತದ ನೀರು ಹರಿಯುವ
ನೆತ್ತಿಹತ್ತಿದ ಶೀತ
ನೆಗಡಿ

ಇದು ನೆತ್ತಿ, ಗಂಟಲು, ಶ್ವಾಸಕೋಶ ಶ್ವಾಸನಾಳಗಳು, ಇವಕ್ಕೆಲ್ಲಾ ವ್ಯಾಪಿಸಿಕೊಳ್ಳುತ್ತದೆ

ನೆತ್ತಿಹತ್ತಿದ ಶೀತ ಅಥವಾ ಉಷ್ಣದ ನೆಗಡಿಯಿಂದ ಮೂಗಿನಲ್ಲಿ ನೀರು ಹರಿಯುವುದು ಮಹಾ ಕಠಿಣತರವಾದ ಜಾಡ್ಯವೆಂದು ಪ್ರಪಂಚದಲ್ಲಿ ಸಮಸ್ತ ಜನರಿಗೂ ತಿಳಿದೇ ಇರುತ್ತದೆ. ಅಮೇರಿಕ ಖಂಡಕ್ಕೆ ಸೇರಿದ ಸಂಯುಕ್ತ ಸಂಸ್ಥಾನಗಳೆಂಬ ಒಂದು ರಾಜ್ಯದೊಳಗೇನೇ ಪ್ರತಿ ವರುಷವೂ ಎರಡು ಲಕ್ಷ ಪ್ರಜೆಗಳು ಈ ರೋಗಕ್ಕೆ ಸಿಕ್ಕಿ ನರಳುತ್ತಾ ಇದ್ದಾರೆ. ಹೀಗಿರುವಲ್ಲಿ ಇತರ ದೇಶಗಳೊಳಗೆ ಈ ರೋಗದಲ್ಲಿ ಬಿದ್ದು ಕಷ್ಟಪಡುವಂಥಾವರ ಸಂಖ್ಯೆಯು ಸರಾಸರಿ ನೋಡಿದರೆ ಅಷ್ಟು ಹೆಚ್ಚಾಗಿಯೇ ಇರಬೇಕೆಂದು ಹೇಳಲು ಸಂದೇಹವಿಲ್ಲ

ಈ ನೆತ್ತಿ ಹಿಡಿದ ಶೀತ ಅಥವಾ ಉಷ್ಣದ ನೀರು ಸುರಿಯುವಂಥಾ ರೋಗಕ್ಕೆ ಪೆ-ರೂ ನಾ ಎಂಬೀ ಔಷಧವೇ ಸರ್ವಶ್ರೇಷ್ಠವಾದದ್ದೆಂದೂ ಇತರ ಔಷಧಗಳಿಗಿಂತ ಮೊದಲನೆಯ ಸ್ಥಾನವನ್ನು ಪಡೆದಿರುವಂಥಾದ್ದೆಂದೂ ಅನೇಕ ವರುಷಗಳಿಂದಲೂ ಅನುಭವಕ್ಕೆ ಬಂದಿರುತ್ತದೆ.

ಪೆ-ರೂ-ನಾ ಎಂಬೀ ಔಷಧವು ಪ್ರಪಂಚದ ಪಶ್ಚಿಮಾರ್ಧ ಮತ್ತು ಪೂರ್ವಾರ್ಧಗೋಳಗಳಲ್ಲೆಲ್ಲಾ ಬಹು ಉತ್ತಮವಾದದ್ದೆಂದು ಪ್ರಖ್ಯಾತಿಯನ್ನು ಪಡೆದಿರುತ್ತದೆ

ಈ ಔಷಧ ಸಿಕ್ಕುವ ಸ್ಥಳಗಳು —

(೧) ಹಿಚ್‌ಕಾಕ್ ಅಂಡ್ ಸನ್ಸ್ ಬೆಂಗಳೂರು.

(೨) ಇಂಗ್ಲಿಷ್ ಡ್ರಗ್ ಕಂಪನಿ ೩೯೪ ಮಿಂಟ್ ಬೀದಿ, ಮದರಾಸ್.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

30—8—1907 ರಿಂದ 6—9—1907 ರ ವರೆಗೆ

ಸ್ಥಳ		ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ		38	37	0	[illegible]
ಮೈಸೂರು	,,	32	30	0	[illegible]
ಬೆಂಗಳೂರು ಡಿಸ್ಟ್ರಿಕ್ಟ್		169	95	0	[illegible]
ಮೈಸೂರು	,,	174	135	0	[illegible]
ಕೋಲಾರ್	,,	19	6	0	[illegible]
ಕೋಲಾರ್ ಚಿನ್ನದ ಗಣಿಗಳು		33	14	15	[illegible]
ತುಮಕೂರು ಡಿಸ್ಟ್ರಿಕ್ಟ್		1	9	0	[illegible]
ಹಾಸನ	,,	95	91	0	[illegible]
ಚಿತ್ರದುರ್ಗ	,,	0	0	0	[illegible]
ಕಡೂರ್	,,	65	40	0	[illegible]
ಶಿವಮೊಗ್ಗ	,,	90	54	0	[illegible]
	ಜುಮ್ಲಾ	606	430	15	[illegible]

ಶಾಲಿವಾಹನ ಶಕ ವರುಷಂಗಳು ೧೮೨೯ ನೇ ಪ್ಲವಂಗನಾಮ ಸಂವತ್ಸರದ ಭಾದ್ರಪದ ಶುದ್ಧ ದ್ವಾದಶಿ ಗುರುವಾರದಿಂದ ಭಾದ್ರಪದ ಬಹುಳ ಚೌತಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೭ ನೇ ಇಸವಿ ಸೆಪ್ಟೆಂಬರ್

ತಾ	ವಾರ		ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	[illegible]
19	ಗುರು	†	ದ್ವಾದಶಿ	5 33	ಧ	50 15	3
20	ಶುಕ್ರ	¶	ತ್ರಯೋ	0 4	ಶತ	55 24	4
21	ಶನಿವಾ	,,	ಪೌರ್ಣಮಿ	55 11	ಪೂಭಾ	44 44	5
22	ರವಿವಾ	‡	ಪಾಡ್ಯ	48 2	ಉ ಭಾ	43 20	6
23	ಚಂದ್ರ	.	ಬಿದಿಗೆ	40 3	ರ	42 39	7
24	ಕುಜ	,,	ತದಿಗೆ	44 54	ಅ	13 33	8
25	ಬುಧ	*	ಚೌತಿ	45 25	ಭ	45 32	9

† ಶಲ್ಕಿದ್ವಾದಶಿ, ಪ್ರದೋಷ ¶ ಶ್ರೀಮದನಂತಪದ್ಮನಾಭಸ್ವಾಮಿವ್ರತ ,, ಉಮಾಮಹೇಶ್ವರವ್ರತ ‡ ಮಹಾಲಯಾ ಪಕ್ಷಾರಂಭ ಮಹಾವ್ಯಾಪ್ತಿ, ಪ್ರೇತದ್ವಿತೀಯಾ ,, ಯಮತ್ರಿತೀಯಾ * ತುಲಾಯುತಗೌರಿ, ಪಂಚಾಭರಣ, ಕಾಣಿಯೋಗ

ಪೇಟೇ ಧಾರಣೆ.

ದಿನಸಿ		ಮೈಸೂರು	ಬೆಂಗಳೂರು.
ಸಣ್ಣ ಅಕ್ಕಿ ಪಲ್ಲ ೧ಕ್ಕೆ	ರೂ	೧೩-೪-೦	೧೩ ೮-೦
ಕಂಬೊತಿ ಅಕ್ಕಿ ಅವಲ್		೧೩-೪-೦	೧೩-೦-೦
,, ಮಧ್ಯಮ	.	೧೨-೮-೦	೧೨-೮-೦
ಜಾಡ್ರಾಣ ಅಕ್ಕಿ	.	೧೨-೦-೦	೧೪ ೦-೦
ಸಣ್ಣಕ್ಕಿ ಅವಲ್		೧೫-೮-೦	೧೫ ೧೦-೦
,, ಮಧ್ಯಮ		೧೪-೮-೦	೧೪-೦-೦
ತೊಗರೀ ಬೇಳೆ ಪಲ್ಲ ೧ಕ್ಕೆ		೧೪-೦-೦	೧೪ ೦-೦
,, ಮಧ್ಯಮ		೧೩-೦-೦	೧೩-೦-೦
ಸೈರ್ ರಾಗಿ ಪಲ್ಲ ೧ಕ್ಕೆ	. .	೫-೧೨-೦	೬ ೮-೦
ಕಾರ್ರಾಗಿ	.	೫-೮-೦	೬-೦-೦
ಜೋಳ	.	೫-೪-೦	೮-೪-೦
ಹಲಸಂದೆ ಪಲ್ಲ ೧ಕ್ಕೆ		೧೧-೮-೦	೮-೦-೦
ಬಿಳೀ ಅವರೆ	.	೮-೧೪-೦	೧೨ ೦-೦
ಹೆಸರು		೧೧-೦-೦	೧೧ ೦-೦
ಉದ್ದು		೧೧-೮-೦	೧೧ ೦-೦
ಕಡಲೆ . .	.	೧೨-೮-೦	೧೧ ೮ ೦
ಎಳ್ಳು ಸೆ ೧೨೭ ಕ್ಕೆ		೧೯-೮-೦	೧೯ ೦-೦
ಹುರುಳಿ .	.	೬ ೧೨-೦	೭-೦-೦
ಹರಳು ೧ ೦೭ ಸೇರಿಗೆ		೧೪-೦-೦	೧೦-೮-೦
ಸೀಗೇಕಾಯಿ ಮಣ ೧ಕ್ಕೆ		೨-೩-೦	೨ ೦ ೦
ಮೆಣಸಿನಕಾಯಿ	.	೨-೮-೦	೨-೪-೦
ಮಧ್ಯಮ		೨-೪-೦	೨-೦-೦
ಬೆಲ್ಲ ದೊಡ್ಡ ಅಚ್ಚು		೩-೮-೦	ನ ೧-೦-೦
ಒಳ್ಳೆಣ್ಣೆ ಮಣ ೧ಕ್ಕೆ		೬-೦-೦	೫ ೬-೦
ಹರಳೆಣ್ಣೆ ,,		೫-೧೨-೦	೫-೬-೦
ಕೊತ್ತುಂಬರಿ ಪಲ್ಲ ೧ಕ್ಕೆ		೫-೧೨-೦	೬ ೮-೦
ಉಪ್ಪು ,,		೫ ೮-೦	೫-೧೨-೦
ಹೊಗೇಸೊಪ್ಪು	.	೧-೬-೦	೧-೬-೦
,, ಹಳೇದು		೦-೧೪-೦	೦ ೪ ೦
ತುಪ್ಪ ಮಣ ೧ಕ್ಕೆ	.	೧೬-೮-೦	೧೭-೦-೦
ಸೀಮೆಯೆಣ್ಣೆ ಪೆಟ್ಟಿಗೆ ೧ಕ್ಕೆ		೩-೧೫-೦	೪-೦-೦
ತೆಂಗಿನಕಾಯಿ ೧೦೦ ಕ್ಕೆ		೬-೮-೦	೬ ೮ ೦
ಅಳಲೇಕಾಯಿ ಮಣ ೧ಕ್ಕೆ		೧-೦-೦	೧ ೬-೦
ಅಂಟುವಾಳದ ಕಾಯಿ ಮಣ ೧ಕ್ಕೆ	.	೦-೧೨-೦	೦-೧೨-೦
ಚಿನ್ನ (ಪವನ್) ಕೆಂಪು		೧೫-೬-೦	೧೫ ೬-೦
,, ,, ಪಸಿಮೆ		೧೫-೧೧-೦	೧೫ ೧೧ ೦
,, ,, ಗಟ್ಟಿ ತೊಲ ೧ಕ್ಕೆ		೨೩-೧೨-೦	೨೪-೩-೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ		೮೫-೦-೦	೮೪-೦-೦

Printed and Published by the Rev E W Thompson M A, Proprietor and Manager, Wesleyan Mission Press, Mysore 19/9/1907

REGISTERED
M. 20

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೦ ಮೈಸೂರು—ಸನ್ ೧೯೦೭ ನೇ ಇಸವಿ ಸೆಪ್ಟೆಂಬರ್ ತಾರೀಖು ೨೬ ನೇ ಗುರುವಾರ. ಸಂಚಿಕೆ ೧೭

WILLIAM & CO., BOMBAY.

ವಿಲಿಯಂ ಮತ್ತು ಕಂಪನಿ, ಪ್ರೋಪ್ರೈಟರ್ಸ್, ಮುಂಬಯಿ.

ಗಜಕರ್ಣಾದಿ ಮುಲಾಮು.

37 31

ಇದನ್ನು ಹಾಗಿಸುವದರಿಂದ ಎಲ್ಲಾ ತರ ಹ ಕಜ್ಜಿಯೂ ನಾಶವಾಗುತ್ತದೆ. ಮೂರು ಸಾರಿ ಹಾಗಿಸುವದರೊಳಗೆ ಗಜಕರ್ಣವು ಹೋಗುವದು. ಇದನ್ನು ಹಚ್ಚುವಲ್ಲಿ ಉರಿ ಯು ಬರುವದಿಲ್ಲ. ಮತ್ತು ಚರ್ಮ ಕಪ್ಪಾ ಗುವದಿಲ್ಲ. ಒಂದು ಸಾರಿ ಪರೀಕ್ಷಿಸಿ ನೋಡಿರಿ ಗುಣ ಕಂಡುಬರುವದಿಲ್ಲವಾದರೆ ಹಣ ಹಿಂತಿರುಗಿ ಕೊಡಲ್ಪಡುವದು ಡಬ್ಬಿ ೧ಕ್ಕೆ ಕಿಮ್ಮತ್ತು ೦-೬-೦. ವಿ. ಪಿ. ೦-೧೧-೦ ತರಿಸಿಕೊಳ್ಳಿರಿ! ತ್ವರೆಮಾಡಿರಿ!!

ವಜ್ರಗುಟಿಕ ೧-೦-೦. ಸುಂದರೀ ತೈಲ ೦-೮-೦ ದಂತಮಂಜನ ೦-೨-೦. ಕಫಹಾರಿ ೧-೪-೦ ಕೇಶವರ್ಧಿನೀ ತೈಲ ೧-೦-೦ ಜೀರ್ಣ ರಸಾಯನ ೧-೪-೦. ಬಿಚ್ಚು ಮುಲಾಮು ೦-೩-೦ ಈ ಕಂಪನಿಯವರು ಹೆಚ್ಚು ಸಮೂನೆಯ ಔಷಧಗಳನ್ನು ಸ್ವತಹಾ ತಯಾರಿಸುವದರಿಂದ ಕ್ಯಾಟಲಾಗು ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರದು ತರಿಸಿಕೊಳ್ಳಬಹುದು.

ಅಮೃತಾಂಜನ

ಬಾಟ್ಲಿ ಒಂದಕ್ಕೆ ಕಿಮ್ಮತ್ತು ೮ ಆಣೆ. ವಿ. ಪಿ. ೧೨ ಆಣೆ.

ಅಮೃತಾಂಜನ—ಸುಖಾಂಜನ.
ಅಮೃತಾಂಜನ—ದಿವ್ಯಾಂಜನ.
ಅಮೃತಾಂಜನ—ಸಂಜೀವರ.
ಅಮೃತಾಂಜನ—ಪರಮಾಂಜನ.

ವಾತ, ಎದೆನೋವು, ಗಂಟ್ಲುನೋವು, ಸಂಧಿವಾತ ತಲೆನೋವು, ಮೂಲವ್ಯಾಧಿ, ಈ ಎಲ್ಲಾ ತರದ ರೋಗಕ್ಕೆ ಈ ಅಮೃತಾಂಜನವು ದಿವ್ಯ ಔಷಧವಾಗಿರುತ್ತದೆ.

ಅಮೃತಾಂಜನ ಡಜನ್ ೧ಕ್ಕೆ ೫ ರೂಪಾಯಿ

ಅಮೃತಾಂಜನ—ಶೀತಭಂಜನಿ.
ಅಮೃತಾಂಜನ—ತಕ್ಷಣಾಪಹಾರಿಣಿ.
ಅಮೃತಾಂಜನ—ಅಪೂರ್ವರಂಜನಿ.
ಅಮೃತಾಂಜನ—ಭಂಜನವಿಮರ್ದಿನಿ.

ಇದರಿಂದ ಗುಣ ಕಂಡುಬರುವದಿಲ್ಲವಾದರೆ ಹಣ ಹಿಂತಿರಿಗಿ ಕೊಡಲ್ಪಡುವದು ಜಕಾಂ ಮತ್ತು ಘಾಯ, ಅರ್ಧಾಂಗವಾಯು, ಈ ರೋಗಕ್ಕೆ ಇದು ಸಂಜೀವನವಾಗಿರುತ್ತದೆ. ತರಿಸಿಕೊಳ್ಳಿರಿ! ಪರೀಕ್ಷಿಸಿರಿ!!

ವಿಲಿಯಂ ಮತ್ತು ಕಂಪನಿ, ೧೭ ಓಕ್ ಲೇನ್, ಪ್ರೋಪ್ರೈಟರ್ಸ್, ಮುಂಬಯಿ.
ಟೆಲಿಗ್ರಾಫು ಅಡ್ರೆಸು; "ಅಮೃತಾಂಜನ," ಮುಂಬಯಿ.

ನಿಮಗೆ ನೋವು ಇದೆಯೋ?

58-16

ಹಾಗಾದರೆ "ಕ್ಲೆಮೆಂಟ್ ಪೇಪರ ಮ್ಯಾಜಿಕ್ ಬಾಂ" ನ್ನು ಏಕೆ ಉಪಯೋಗಿಸಬಾರದು! ಆಶ್ಚರ್ಯಕಾರಕವಾದ ಬಾಧಾಪಹಾರಿಣಿಯು! ಈಗಿನ ರಸಾಯನದಲ್ಲಿ ಅಂತು ಹಿಡಿದ ದೇಶ್ಯ ನೂತನವು!

ಈ ರಾಜ ಔಷಧವನ್ನು ವೈದ್ಯ ಶೋಧನೆಯಂತೆ ಮೆದುಳಿನ ಕೆಲವು ವಿಧಿಮಾರ್ಗಗಳಿಗಾಗಿ ಚರ್ಮ ಮತ್ತು ನರಾಂಗ ಸಂಬಂಧವಾದ ಪಾರ್ಶ್ವನೋವು, ಕೀಲುಗಳ ಬಾಧೆ, ಸ್ನಾಯುನೋವು, ಬೆನ್ನು ಳುಕುವದು, ತಲೆನೋವು, ಕೆಮ್ಮು, ಕೀಲುಗಳು ಉತ್ತರಿಸುವದು, ಕೊರಳು ಊತ, ಕೈಕಾಲು ಬಡಿತ ಇವುಗಳನ್ನೆಲ್ಲಾ ವಿದ್ಯುಚ್ಛಕ್ತಿಯಂತೆ ಗುಣಪಡಿಸುವದು. ಈ ಔಷಧವು ಅಶ್ಚರ್ಯಕಾರವಾಗಿ ಗುಣಪಡಿಸುವದರಿಂದ ಎಲ್ಲರಲ್ಲಿಯೂ ಪ್ರಸಿದ್ಧಿಸುತ್ತಾ ಬರುವದು. ಇತರ ಔಷಧಿಗಳು ಗುಣಪಡಿಸದೆ ಹೋದಾಗ ಡಾಕ್ಟರ್ ಫೀಜನ್ನು ಉಳಿಸುವಾಹಿ. ಇದು ನಿಸ್ಸಂದೇಹವಾಗಿಯೂ ಗುಣಪಡಿಸುವದು

ಕ್ರಯ:—೧ ಬಾಟ್ಲಿಗೆ ೧೨ ಆಣೆ, ಪೋಸ್ಟೇಜ್ ೪ ಆಣೆ. ೩ ಬಾಟ್ಲಿಗೆ ಅಂಚೆವೆಚ್ಚ ಸೇರಿ ರೂ. ೨—೪ ಆಣೆ. ಎಲ್ಲಾ ಕೆಮಿಸ್ಟ್ ಷಾಪುಗಳಲ್ಲಿ ದೊರೆಯುವದು

ನಮ್ಮ ವಿಳಾಸ:—ಎಫ್ ಡಬ್ಲ್ಯು. ಆರ್ಕ್,
ಸಿಮೆಟ್ರಿ ರೋಡು, ವೇಪೇರಿ, ಮದರಾಸ್.

ಜ್ವರಹರ.

74-9



ಇದು ಸಾಧಾರಣ ಜ್ವರ, ಚಳಿಜ್ವರ, ಮೊಪೇಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲ ವಿಧವಾದ ಜ್ವರಗಳನ್ನು ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್ ಟಿ. ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೬೦ ಔನ್ಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೆ ಬೀಳುತ್ತಿರುವುದರಿಂದ ದಯಾವಿಟ್ಟು ಇನ್ನೊಂದು ೬೦ ಔನ್ಸಿನ ಸೀಸೆಯನ್ನು ವಿ. ಪಿ. ಬಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದಾರೆ.

ಕ್ರಯ:—ಸೀಸೆ ೧ಕ್ಕೆ ೮ ಆಣೆ, ೧ ರೂ.; ೧—೮ ರೂ., ರೂ. ೨—೧೨ ಆ.; ೧೧ ರೂ.. ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫ ಬಿಡಲಾಗುವದು.

****

ಬಿಮಂಕಪ್ರಾರ.

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಗೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಸುಪ್ರಿಯ ಬಿಮಂಕಪ್ರಾರವನ್ನು ನಾನೂ ನನ್ನ ತಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ ಭೇದಿ ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧವೆಂತ ಬರೆದಾರೆ

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವ್ಯಾಪಾರಿಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ.—

ಸುಪ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,
ಸೆಕೆಂಡ್ ಬೀಚ್ ಲೈನ್, ಮದರಾಸ್.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು

26-32

೧. ಲೋಕಾಮಯಹರ ಕಸ್ತೂರೀ ಮಾತ್ರೆ.—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ.

ಚಳಿಜ್ವರ, ಜ್ವರ, ಹೊಟ್ಟೆಶೂಲೆ, ಸಂದುಗಳ ನೋವು, ಮೈ ಕೈಕಾಲು ಕೊಡತ (ಭಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿಮಾಂದ್ಯ, ಕಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ ಇವನ್ನು ಅನೇಕರೋಗಿಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ

ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಬಾಯಿಲೆಗೂ ದಾರಿಕೊಡದೆ, ನೀರು ಮಲಗಳ ವಿಸರ್ಜನೆಯನ್ನು ಸರಿಪಡಿಸಿ, ರಕ್ತದಲ್ಲಿ ದೋಷವನ್ನು ತೆಗೆದು ಪುಷ್ಟಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಸೆಳೆ, ಜ್ವರ, ನಷ್ಟಜ್ವರ, ಕೈಕತ್ತಗಳನ್ನು ಗುಣಪಡಿಸುತ್ತದೆ.

ಇವನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ರೋಗಕ್ಕೆ ಗುರಿಯಾಗುವುದಿಲ್ಲ ಒಳ್ಳೇ ಶಕ್ತಿವರ್ಧಕವಾಗಿದೆ ಅನುಪಾನ(ಪಥ್ಯ) ವಿಧಿಗಳು ಸಂಗಡಲೇ ಇರುತ್ತದೆ

೩೦ ಮಾತ್ರೆಯುಳ್ಳ ಡಪ್ಪಿಗೆ ೪ ಆಣೆ; ೫ ಡಪ್ಪಿಗೆ ೧ ಡಪ್ಪಿ ಹೆಚ್ಚು. ೧ ರಿಂದ ೧೦ ಡಪ್ಪಿ ವರೆಗೆ ಪೋಸ್ಟೇಜು ೪ ಆಣೆ.

ವಿಳಾಸ:—ಪಾಳ್ಯದ ವೆಂಕಟಾಚಲ ಪಂಡಿತ,
ಎಸ್. ಎಸ್. ಅರ್. ವೈದ್ಯಶಾಲಾ,
ಲಕ್ಷ್ಮೀವಿಲಾಸ ರೋಡ್, ಮೈಸೂರು

"ಲಾಗೆಜೆಟ್" ಎಂಬ ಮಾಸಪತ್ರಿಕೆಯು.

101-2

ಸಿವಿಲ್, ಕ್ರಿಮಿನಲ್, ರೆವಿನ್ಯು, ಅಕೌಂಟುಗಳನ್ನು ತಿಳಿಸತಕ್ಕ ಲಾಗೆಜೆಟ್ ಮಾಸಪತ್ರಿಕೆಯನ್ನು ಕೂಡಲೇ ತರಿಸಿಕೊಳ್ಳಿ ವಾರ್ಷಿಕ ಚಂದಾ ಟಪ್ಪಾಲ್ ಹಾಸಲು ಸಹಿತ ರೂ. ೧-೮-೦. ವಿಳಾಸ:—
ಬಿ. ನರಸಿಂಗರಾವ್, ಎಡಿಟರ್, ಲಾಗೆಜೆಟ್, ಬೆಂಗಳೂರು

ಕಾರ್ಡು ಸೈಜು ೪|×೩.

ಫೋಟೋ ತೆಗೆಯುವ

ಛಾಯಾ ಕ್ಯಾಮರಾ.

84 6

ಬೆಲೆ ಫಕ್ತ ಮೂರು ರೂಪಾಯಿ.

ಇದರಿಂದ ಬೇಕಾದ ಮನುಷ್ಯನ ಫೋಟೋ ಅವನಿಗೆ ತಿಳಿಯದಂತೆ ತೆಗೆಯಲಿಕ್ಕೆ ಬರುತ್ತದೆ. ವೇಗದಿಂದ ಓಡುವ ಗಾಡಿಯು ಮತ್ತು ಹಾರುವ ಪಕ್ಷಿಯ ಫೋಟೋ ಸಹ ತೆಗೆಯಬಹುದು. ಇದರಲ್ಲಿ ಕಲಿಯತಕ್ಕದ್ದೇನೂ ಇಲ್ಲ. ಈ ಕ್ಯಾಮರಾದ ಮಾಹಿತಿಯನ್ನು ಕೊಳ್ಳುವವರಿಗೆ ನಾವು ಕೊಡುತ್ತೀವೆ ಮಾಡಿಕೊಡುವೆವು. ಎಷ್ಟೋ ಕಡೆಗೆ ಇದಕ್ಕೆ ೧೦ ರಿಂದ ೧೫ ರೂ. ಬೆಲೆ ಬೀಳುತ್ತದೆ. ಆದರೆ ಇದರ ಬರೇ ಕಿಮ್ಮತ್ತು ೩ ರೂಪಾಯಿ ಮಾತ್ರ ಇರುವದು. ಟಪ್ಪಾಲ್ ಖರ್ಚು ೯ ಆಣೆ

ಛೋಟಾಲಾಲ ಭಗನಲಾಲ ಮಹಾಜನ, ಠಾಕೂರದ್ವಾರ ರೋಡ್, ಪೋಸ್ಟ್ ಕಾಲಬಾದೇವಿ, ಮುಂಬಯಿ.

ಒಕ್ಕಲಿಗರ ಎರಡನೇ ಮಹಾಸಭೆ.

103-2

ಒಕ್ಕಲಿಗ ಮಹಾಜನರಿಗೆಲ್ಲಾ ಪ್ರಾರ್ಥನೆ

ಈ ಸಭೆಯು ಬರುವ ಅಕ್ಟೋಬರ್ ತಿಂಗಳು ೧೬, ೧೭ ಮತ್ತು ೧೮ನೆ ತಾರೀಖುಗಳಲ್ಲಿ ಮೈಸೂರು ಟೌನ್ ಹಾಲಿನಲ್ಲಿ ನಡೆಯುವದು

ನಮ್ಮ ಶ್ರೀಮನ್ಮಹಾರಾಜರವರು ಮೊದಲನೇ ದಿವಸ ಆವೇ ಸಭೆಗೆ ಸ್ವತಃ ದಯಮಾಡಿಸಿ, ಸಭೆಯ ಕಾರ್ಯವನ್ನು ಪ್ರಾರಂಭಿಸುವಂತೆ ಅನುಜ್ಞೆಯನ್ನು ದಯಪಾಲಿಸಿರುತ್ತಾರೆ ಆ ಕಾಲದಲ್ಲಿ ಒಂದು ವಿಜ್ಞಾಪನಾ ಪತ್ರಿಕೆಯು ಸುಮಾರು ೧,೦೦೦ ರೂ ಬೆಲೆಯುಳ್ಳ ಸುಂದರವಾದ ಬಂಗಾರ ಮತ್ತು ಬೆಳ್ಳಿಯಿಂದ ತಯಾರಾದ ಪೆಟ್ಟಿಗೆಯಲ್ಲಿ ಇರಿಸಲ್ಪಟ್ಟು ಶ್ರೀಮನ್ಮಹಾರಾಜರವರ ಸನ್ನಿಧಿಯಲ್ಲಿ ಸಮರ್ಪಿಸಲ್ಪಡುವುದು.

ನಮ್ಮ ಸಂಘದ ಪ್ರೆಸಿಡೆಂಟರು ಮತ್ತು ವೈಸ್ ಪ್ರೆಸಿಡೆಂಟರು ಸಹ ವಾಗ್ದಾನಮಾಡಿರುವ ಸಾವಿರಾರು ರೂಪಾಯಿಗಳನ್ನು ಸಭೆಯಲ್ಲಿ ಸಂಘ ಕಾರ್ಯಕ್ಕಾಗಿ ಒಪ್ಪಿಸುವರು ಒಂದು ಸಾವಿರ ರೂಪಾಯಿಗಳಿಗೆ ಮೇಲ್ಪಟ್ಟ ದ್ರವ್ಯವನ್ನು ಸಂಘಕ್ಕೆ ಕೊಡಲುಳ್ಳವರೆಲ್ಲರೂ ಇದೇ ಮೇರೆಗೆ ಮಾಡಬಹುದು. ಇಂಥಾವರ ಭಾವಚಿತ್ರಗಳು (ಫೋಟೋಗಳು) "ಆಲ್ಬಂ" ಎಂಬ ಚಿತ್ರಪುಸ್ತಕದಲ್ಲಿ ಹಾಕಿಸಲ್ಪಟ್ಟು, ಆ ಪುಸ್ತಕವು ಮಹಾಸಭೆಯ ದಿನಗಳಲ್ಲಿ ತೋರಲ್ಪಡುವುದು ಇಷ್ಟವುಳ್ಳವರು ಈ ತಿಂಗಳು ಆಖೈರಿನೊಳಗಾಗಿ ಈ ವಿಚಾರವಾಗಿ ಸೆಕ್ರೆಟರಿಯವರಿಗೆ ಬರೆದುಕೊಳ್ಳಬಹುದು

ಪರಸ್ಥಳದಿಂದ ದಯಮಾಡಿಸುವವರೆಲ್ಲರಿಗೂ ಸಭೆಯು ನಡೆಯುವ ಮೂರು ದಿವಸಗಳೂ ಮು॥ ರಾ॥ ಅಕ್ಕಿ ಅಂಗಡಿ ಮರಿಯಣ್ಣನವರು ಭೋಜನಾದಿ ಸೌಕರ್ಯಗಳನ್ನು ಒದಗಿಸುವರು

ಮಹಾಸಭೆಗೆ ಶ್ರೀಮನ್ಮಹಾರಾಜರವರು ದಯಮಾಡಿಸುವದರಿಂದ ಟಿಕೇಟುಗಳ ಮೂಲಕ ಜನರನ್ನು ಟೌನ್ ಹಾಲಿಗೆ ಬಿಡಬೇಕೆಂದು ನಿಶ್ಚೈಸಿದೆ ಆದಕಾರಣ ಸಭೆಯು ಪ್ರಾರಂಭವಾಗುವ ವಳಕ್ಕೆ ಮುಂಚಿತವಾಗಿ ೭ ದಿವಸಗಳಿಂದ ಈ ಟಿಕೇಟುಗಳು ಮೈಸೂರಲ್ಲಿ ದೇವರಾಜಮಾರ್ಕೆಟ್ಟಿನ ಮಹಡಿಯಲ್ಲಿರುವ ಒಕ್ಕಲಿಗರ ಸಂಘದ ಬ್ರಾಂಚ್ ಆಫೀಸಿನಲ್ಲಿ ಒಕ್ಕಲಿಗ ಮಹಾಜನರಿಗೆ ಉಚಿತವಾಗಿ ಕೊಡಲ್ಪಡುವವು. ಸಂಘಕ್ಕೆ ಮೊದಲೇ ಚಂದಾ ಹಾಕಿರುವವರೂ ಮತ್ತು ಮುಂದೆ ಹಾಕತಕ್ಕವರೂ ಸಹ ತಮ್ಮ ತಮ್ಮ ಚಂದಾ ಮೊಬಲಗುಗಳನ್ನು ಪಾವತಿಮಾಡಿ ರಶೀತಿ ಪಡೆಯಬೇಕೆಂದು ಪ್ರಾರ್ಥಿಸುತ್ತೇನೆ

ಈ ಪ್ರಕಟನೆಯಲ್ಲಿ ಕಾಣಿಸಿರುವ ವಿಷಯಗಳನ್ನು ತಮ್ಮ ಬಂಧುಮಿತ್ರವರ್ಗದಲ್ಲಿ ಪ್ರಚುರಪಡಿಸಿ ಸಭೆಗೆ ಬರತಕ್ಕವರ ಹೆಸರುಗಳನ್ನು ಕಾಗದ ಮೂಲಕ ಮೈಸೂರು ಒಕ್ಕಲಿಗರ ಸಂಘದ ಬ್ರಾಂಚ್ ಸೆಕ್ರೆಟರಿ ಮಾ॥ ೩೦ ಪುಟ್ಟಸುಬ್ಬನವರಿಗೆ ತಿಳಿಯಪಡಿಸಬೇಕೆಂದು ಅತ್ಯಂತ ವಿನಯಪೂರ್ವಕವಾಗಿ ಪ್ರಾರ್ಥಿಸುವ ತಮ್ಮ ವಿಧೇಯ

ಕೆ ಎಚ್ ರಾಮಯ್ಯ, ಬಿ. ಎ.,

ಒಕ್ಕಲಿಗರ ಸಂಘದ ಜನರಲ್ ಸೆಕ್ರೆಟರಿ.

೫೩, ಅರಳೇಪೇಟೆ, ಬೆಂಗಳೂರು ಸಿಟಿ.

ಆರ್ಡರ್ ಬರುತ್ತಿವೆ! ಬೇಗ ನೋಡಿ!

ಪ್ರಪಂಚವೇ ಆಶ್ಚರ್ಯಪಡುವದು.

87 5

ದೊಡ್ಡ ಮನುಷ್ಯರೇ, ಹಿಂದುಸ್ಥಾನದಲ್ಲಿ ಪ್ರಕಟನೆಗಳ ಮುಖಾಂತರ ಕೆಲವು ಕಂಪನಿಯವರು ಮೋಸ ಮಾಡೋಣದರಿಂದ ಪ್ರಕಟನೆಯನ್ನು ಕಂಡರೆ ಜನರು ಅಸಹ್ಯಪಟ್ಟು ಎಸೆಯುತ್ತಾರೆ. ಸತ್ಯವಂತರ ಪ್ರಕಟನೆಯನ್ನೂ ಕೂಡ ನಂಬುವದು ಕಷ್ಟ. ಯಥಾರ್ಥ ಕ್ಕೆ ಕಂಪನಿಯ ನೋಟೀಸುಗಳನ್ನು ಸಕ್ಕರೆ ಔಷಧಿ ಕಟ್ಟುವದಕ್ಕೆ ಕೊಟ್ಟು ಬಿಡುವರು ಆದರೆ ಮಹನೀಯರೇ, ನಮ್ಮ ಕಂಪನಿಯ ಯೋಗ್ಯತೆಯನ್ನು ಒಂದಾವರ್ತಿ ಪರೀಕ್ಷಿಸಿ ನೋಡಿ. ಈ ಪ್ರಕಟನೆಯು ನವೀನವಾದದ್ದು, ಆಶ್ಚರ್ಯಕರವಾದದ್ದು ನಾವು ೩೦ ಗಂಟೆ ನಡಿಯುವ ಶಾಶ್ವತವಾದ ಐದು ವರುಷದ ಗ್ಯಾರಂಟಿ ಉಳ್ಳ ಲೀವರ್ ಗಡಿಯಾರವನ್ನು ೫೦ ಬಹುಮಾನವಸ್ತುಗಳೊಡನೆ ಕಳುಹಿಸುತ್ತೇವೆ. ಇದರಲ್ಲಿ ಸತ್ಯವಾದ ಕಂಪನಿಯ ಕೀರ್ತಿ ಹೆಚ್ಚಬೇಕೆಂಬುವದೊಂದೇ ನಮ್ಮ ಮುಖ್ಯ ಉದ್ದೇಶ. ಒಂದಾವರ್ತಿ ನಮಗೆ ಬರೆದು ತರಿಸಿ ನಮ್ಮ ಸತ್ಯತೆಯನ್ನು ಪರೀಕ್ಷೆಮಾಡಿ ಗಡಿಯಾರದ ಕೂಡ ನಾವು ಕಳುಹಿಸುವ ಬಹುಮಾನಗಳೇನೆಂದರೆ—ಒಂದು ಗಡಿಯಾರ, ಬಲವಾದದ್ದು, ೩೦ ಗಂಟೆ ನಡಿಯುವದು, ಹಿಂದೆ ಎರಡು ಮುಚ್ಚಳ, ಪರೀಕ್ಷೆಯಿಂದ ಸರಿಮಾಡಿದ್ದು, ಒಂದು ಸೊಗಸಾದ ಪೆಟ್ಟಿಗೆಯಲ್ಲಿ, ಐದು ವರುಷದ ಜಾಮೀನು ಉಳ್ಳದ್ದು. ಒಂದು ಸೊಗಸಾದ ಗಡಿಯಾರದ ಸರಪಣಿ ಅರೆಬೇಗದ ಕೈ ಉಳ್ಳ ಬಲವಾದ ಇಂಗ್ಲಿಷ್ ಖಜಾನೆ ಪೆಟ್ಟಿಗೆ. ಒಂದು ದೊಡ್ಡ ಷರಾಯಿ. ಒಂದು ದೊಡ್ಡ ಜುಬ್ಬ. ಒಂದಾವೇಳೆಯು ಎಣ್ಣೆ ಹಾಕಿದರೆ ಒಂದು ತಿಂಗಳು ಉರಿಯುವ ಹೊಸ ತರಹಾ ಲ್ಯಾಂಪು. ಒಂದಾವರ್ತಿ ಕಾಯಿ ತುಂಬಿದರೆ ಅನೇಕ ದಿನಗಳ ತನಕ ಬರೆಯುವ ಫೌಂಟೆನ್ ಲೇಖಣಿ. ಒಂದು ಜೊತೆ ದೊಡ್ಡ ಕಾಲುಚೀಲ ಬಲವಾದ ದಂತದ ಕೈಹಿಡಿಯುಳ್ಳ ಚಾಕು ಒಂದು ದೊಡ್ಡ ಕತ್ತರಿ ಒಂದು ದೊಡ್ಡ ಚರ್ಮದ ದುಡ್ಡು ಹಾಕಿಡುವ ಚೀಲ ಒಳ್ಳೇ ಜಾಣೆಗೆ ದಂತದ ಕನ್ನಡಿ ಕೂಡಲು ಬಾಚಿಕೊಳ್ಳುವ ಬಾಚಣಿಗೆ ಪರಟಿನ ಒಂದು ಸೆಟ್ ಗುಂಡಿಗಳು, ಒಂದು ಸೊಗಸಾದ ಕನ್ನಡಕ ಒಂದು ಸಾಬೂನಬಿಲ್ಲೆ, ಒಂದು ಸೋಬೋಕಾಡಬ್ಬಾ ಒಂದು ಕೈಪಸ್ತ್ರ ಎಂದಿಗೂ ಬೊಳಪುಕೇಡದ ಚಮ್ಮಚ ಒಂದು ಗಬ್ಬಿರು ಸುಂದರವಾದ ದೊಡ್ಡ ಉಯಿಕಾಡಿಕೆ. ಒಂದು ಪೆನ್ಸಿಲ್ ಒರೆಯುವದು ೧೨ ಲೇಖಣಿ ಕಡ್ಡಿಗಳು ೬ ಕಪ್ಪು ಪೆನ್ಸಿಲುಗಳು. ೧೫೦ ಲಕೋಟೆಗಳು ೧೫೦ ಲೆಟರ್ ಪೇಪರುಗಳು. ಪೋಸ್ಟು ರುಜುಗಳಿಗನುಕೂಲವಾದ ೧೦೦ ಪೋಸ್ಟ್ ಕಾರ್ಡುಗಳು ೫೩ ಸ್ಟೀಲ್ ಮುಳ್ಳುಗಳು.

ಇಷ್ಟಕ್ಕೆಲ್ಲಾ ಕ್ರಯ ರೂ. ೩—೯—೦ ಮಾತ್ರವೇ.

ಆರ್ಧ ಹಣ ಅಡ್ವಾನ್ಸ್ ಮನೀಆರ್ಡರ್ ಬಂದಲ್ಲಿ ಉಳಿದ ಅರ್ಧಕ್ಕೆ ವಿ. ಪಿ. ಮಾಡುತ್ತೇವೆ ಒಪ್ಪದಿದ್ದರೆ ಹಣ ವಾಪಸು ಕಳುಹಿಸುವೆವು.

ಈ ವಿಳಾಸಕ್ಕೆ ಬೇಗ ಬರೆಯಿರಿ:—

ಎಂ. ೧. ಘುಟಾಲಾ ಮತ್ತು ಕಂಪನಿ,

ಚಿತ್ಪೂರು, ಉತ್ತರ ಕಲ್ಕತ್ತಾ.

CHAMBERLAIN'S PAIN BALM

ಚೇಂಬರ್ಲೈನ್ ಯವರು ಮಾಡಿದ ನೋವುಹರ ಔಷಧವು



ಬೆನ್ನೆಲುಬಿನಲ್ಲಿನ ನೋವು, ಪಕ್ಕಗಳಲ್ಲಿ ಆಗುವ ನೋವು, ಖಂಡಗಳಲ್ಲಿ ಹುಟ್ಟುವ ನೋವು, ತಲೆನೋವು ಜಜ್ಜಿದ ಕಡೆಗಳ ನೋವು, ವಾಯುನೋವು—ಇವುಗಳನ್ನೆಲ್ಲಾ ಸಂಪೂರ್ಣವಾಗಿ ವಾಸಿಮಾಡುವಂಥಾ ಔಷಧ

ವಾಯುನೋವೆಂದರೇನು?

ಕೀಲುಗಳಲ್ಲೂ ಮಣಿಕಟ್ಟುಗಳಲ್ಲೂ ಗಾಯವಾಗುವುದು, ಊದಿಕೊಳ್ಳುವುದು, ಕಠಿಣವಾಗಿ ಕಳೆಯುವ ಬಾಧೆ ಖಂಡಗಳಲ್ಲಿ ಇರಿಯುವುದು, ವಿಶ್ರಾಂತಿಕೊಡದೆ ಇರುವುದು, ನಿದ್ದೆಹತ್ತದೆ ಇರುವುದು—ಇದೇ ಇದೆಲ್ಲಾ ವಿಷಯ ಯಾವಾಗ ಉಂಟಾಗುವುದೋ ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು

ಆಗ ಚೇಂಬರ್ಲೈನ್ ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹಾ ಕಾವು ಮೈಯೊಳಗೆಲ್ಲಾ ವ್ಯಾಪಿಸುತ್ತದೆ. ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ. ಮನಸ್ಸಿಗೆ ಉಲ್ಲಾಸವಾಗುತ್ತೆ. ಅದನ್ನೇ ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯುವಿನ ಹುಟ್ಟನ್ನೇ ಕಿತ್ತುಹಾಕಿಬಿಡುವುದು

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಮುಟ್ಟದ್ದೇನೂ ಅಲ್ಲ.

ಇದು ಎಲ್ಲೆಲ್ಲೂ ಬಿಕರಿಯಾಗುವುದು. ಸಣ್ಣ ಸೀಸೆಗೆ ೧ ರೂಪಾಯಿ. ದೊಡ್ಡ ಸೀಸೆಗೆ ೨ ರೂಪಾಯಿ.

೧೮೭೬ ರಿಂದ ೧೯೦೬ ವರೆಗೆ.

ಕಾಲದ ಪರೀಕ್ಷೆ!

ಮೂವತ್ತೇಳು ವರ್ಷಗಳಿಗಿಂತಲೂ ಹೆಚ್ಚಾಗಿ

SCOTT'S EMULSION

31-28

(ಸ್ಕಾಟ್ಸ್ ಇಮಲ್ಷನ್)

ಎಂಬೀ ಸೇವನಾ ಔಷಧಿಯನ್ನು ಘನ ಪಂಡಿತರೆಲ್ಲಾ ಅನೇಕ ವೇಳೆ ಪರಿಶೋಧನೆಮಾಡಿ, ಸರ್ವೋತ್ತಮವಾದದ್ದೆಂದು ಹೇಳಿರುತ್ತಾರೆ ಆದದರಿಂದ ಮುಂದಿನ ರೋಗಗಳಿಗೆ ಪ್ರಪಂಚದಲ್ಲೆಲ್ಲಾ ಈಗ ಈ ಔಷಧವು ಸರ್ವ ಶ್ರೇಷ್ಠವಾದದ್ದಾಗಿ ಪರಿಣಮಿಸಿದೆ:—

ನಾನಾ ತರದ ಕೆಮ್ಮುಲು, ಶ್ವಾಸಕೋಶದ ಅಶ್ವಸ್ಥತೆಗಳು, ಮಾಂಸಖಂಡಗಳ ಕ್ಷೀಣತೆ, ಸಕಲವಿಧ ಕೃಶತ್ವಗಳು, ಆಹಾರದಲ್ಲಿ ಅರುಚಿ

ಇದಲ್ಲದೆ ತಿಂಗಳೂ ಮಗುವಿಗೆ ಬಲಕಾರಿಯಾದ ಮತ್ತು ಅಂಗ ಬೆಳಸುವ ಸೇವನಾ ಔಷಧವೂ ಇದೇ

ಕೈ ಸೋಕದೆ ತಯಾರಾದದ್ದು.

ಔಷಧಗಳ ಅಂಗಡಿಗಳಲ್ಲೆಲ್ಲಾ ಬಿಕರಿಯಾಗುವದು

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್.

ಈ ಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

75 9

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇಳಾದದ್ದು. ಆನೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ.—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು. (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಸೀದಾ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದು ಚನ್ನಾಗಿಲ್ಲದ್ದು ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ.

ಹಾದ, ಕೆಂಪು, ಕಪ್ಪು, ಬೆರಿಕೆ, ಕಾಫಿ ಟೋಪಿಗಳು ೧ ರೂ ೮ ಆ.; ೧ ರೂ ೬ ಆ; ೧ ರೂ ೪ ಆ

ರೇಶ್ಮೆ ಜಾಕ್ಕಿಯುಳ್ಳ ಟೋಪಿಗಳು ೧ ರೂ. ೮ ಆ; ೨ ರೂ.

ದಾರದ ಟೋಪಿಗಳು ೧ ರೂ. ೧೨ ಆ; ೧ ರೂ ೮ ಆ, ೧ ರೂ ೬ ಆ.

ಉಸಾಕಿನ ಟೋಪಿಗಳು ೧ ರೂ ೮ ಆ.; ೧ ರೂ. ೬ ಆ.

ಕೂಸುಗಳ ಟೋಪಿ, ಸೂಳಿ ಮೇಜೋಡು, ಅರ್ಧ ಮೇಜೋಡು ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವವರಿಗೆ ಕೊಟ್ಟು ಕಳುಹಿಸುವೆವು

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ

ಉಪಾಧ್ಯಾಯರೆಲ್ಲರೂ

ಓದತಕ್ಕ ನೋಟೀಸ್.

29 8

ಮೈಸೂರು ಸರ್ಕಾರದ ವಿದ್ಯಾಭ್ಯಾಸದ ಇಲಾಖೆ ಇನ್ಸ್ಪೆಕ್ಟರ್ ಜನರಲ್‌ರವರು ಕೆಳಗೆ ತಿಳಿಸಿದ ಪುಸ್ತಕಗಳನ್ನು ಸರ್ಕಾರದ ಸ್ಕೂಲುಗಳಲ್ಲಿಯೂ, ಗ್ರಾಂಟ್ ಪಡೆಯುತ್ತ ಪಾಠಶಾಲೆಗಳಲ್ಲಿಯೂ ಮತ್ತು ಇಂಗ್ಲೋ ವರ್ನಾಕ್ಯುಲರ್ ಸ್ಕೂಲುಗಳಲ್ಲಿಯೂ ಮತ್ತೊಂದು ಹುಕುಂ ಕೊಡುವವರೆಗೂ ಉಪಯೋಗಿಸಬೇಕೆಂದು ಕಳೆದ ಜೂಲೈ ೨೩ನೆ ತಾರೀಖು ಮೈಸೂರು ಗೆಜೆಟ್ಟಿನಲ್ಲಿ ಪ್ರಾಯಿಷ್ ಮಾಡಿರುತ್ತಾರೆ.

ಭೂಗೋಳ ಶಾಸ್ತ್ರದ ಮೊದಲನೆಯ ಪುಸ್ತಕ (ಸೀಮೆ ೨ನೆಯ ಭಾಗ, ಒಂದೇ ಪುಸ್ತಕ. ಈ ಪುಸ್ತಕದಲ್ಲಿ ನಾಲ್ಕು ಬಣ್ಣದ ನಕ್ಷೆಗಳೂ ಮಕ್ಕಳಿಗೆ ಭೂಗೋಳಶಾಸ್ತ್ರವನ್ನು ವಿಶದವಾಗಿ ಹೇಳಿಕೊಡುವುದಕ್ಕೆ ಸಾಹಿತ್ಯವಾಗಿರುವ ಚಿಕ್ಕ ಪನ್ನೆರಡು ಚಿತ್ರಗಳೂ ಇರುತ್ತವೆ). ಎರಡನೇ ಕ್ಲಾಸಿಗೆ ಕ್ರಯ ೪ ಆಣೆ.

ಭೂಗೋಳ ಸಂಗ್ರಹ (ಮ॥ ಟಿ. ಎಂ. ರಾಮಸ್ವಾಮಯ್ಯನವರು ಬರೆದುದು. ಈ ಪುಸ್ತಕವು ಪ್ರಾರಂಭದಿಂದ ಅನೇಕ ಸಹಸ್ರ ಪ್ರತಿಗಳು ಮಾರಾಟವಾಗಿವೆಯೆಂದು ವಾಚಕ ಮಹನೀಯರು ತಿಳಿದಿರಬಹುದು.) ಮೂರನೇ ಕ್ಲಾಸಿಗೆ ಕ್ರಯ ೪ ಆಣೆ.

ಮೇಲ್ಕಂಡ ಪುಸ್ತಕಗಳನ್ನು ಉಪಾಧ್ಯಾಯರೆಲ್ಲರೂ ತಡಮಾಡದೆ ಜಾಗ್ರತೆಯಲ್ಲಿ ತರಿಸಿಕೊಳ್ಳತಕ್ಕದ್ದು.

ವಿಳಾಸ:—ಮ್ಯಾನೇಜರ್,

ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

ನೀವೇ ನಿದಾನಿಸಿ ನೋಡಿರಿ.

98-4

ಯಾವದು ಉತ್ತಮ? ಸ್ವತಃ ಪರೀಕ್ಷಿಸಿ ನೋಡುವದೋ ಅಥವಾ ಕಲ್ಕತ್ತೆಯ ಒಬ್ಬ ಪ್ರಸಿದ್ಧ ಡಾಕ್ಟರರ ಅನುಭವವನ್ನು ನಂಬುವದೋ? ನೂತನವಾಗಿದ್ದರೆ ಪರಿಶೋಧನೆಮಾಡಿ ಹೇಳಿಕೆಗೆ ಸರಿಯಾಗಿ ಉಂಟೋ ಎಂಬದನ್ನು ಖಾತ್ರಿ ಮಾಡಿಕೊಳ್ಳಬೇಕು. ಹಳೆದಾದರೆ ಸಂದೇಹ ಹುಟ್ಟುವದು. ಪರಕೀಯರವರ ಮಾತು ಪರಿಸ್ಥಿತವಾದ ರುಜುವಾತಾಗಿರುವದಿಲ್ಲ. ಡೋನ್ಸ್‌ರ ಬ್ಯಾಕ್ ಏಕ್-ಮ-ಕಿಡ್ನಿ ಪಿಲ್ಸ್‌ಗಳಿಗೆ ನ ಪ್ರತಿ ಒಂದು ಸೀಸೆಯೊಂದಿಗೆ ಸ್ವದೇಶಿಯ ಸಾಕ್ಷ್ಯವು ಇರುತ್ತದೆ ಈ ಕೆಳಗಿನದನ್ನು ಓದಿ ನೋಡಿರಿ ಮೆಡಿಕಲ್ ಕಾಲೇಜಿನಲ್ಲಿ ವನಸ್ಪತಿಶಾಸ್ತ್ರದ (ಬಾಟನಿ)-ಮ-ಕಣ್ಣುನೋವಿನ ವೈದ್ಯದ ಉಪನ್ಯಾಸಕರಾಗಿಯೂ ಈಸ್ಟ್ ಎಂಡ್ ಮೆಡಿಕಲ್ ಹಾಲಿನಲ್ಲಿ ವೈದ್ಯ ಚಿಕಿತ್ಸಕರಾಗಿಯೂ, ಇರುವ ಡಾಕ್ಟರ್ ಎ ಟಿ ರೇ ಯವರು ಹೇಳುವದೇನಂದರೆ.— ಡೋನ್ಸ್‌ರ (ಬ್ಯಾಕ್ ಏಕ್ ಕಿಡ್ನಿ ಪಿಲ್ಸ್)ಗಳು ಬೆನ್ನುನೋವು-ಮೂತ್ರಕೋಶದ ಔಷಧಿ ಗುಳಿಗೆಗಳನ್ನು ಮುಖ್ಯವಾಗಿ ಬೆನ್ನುನೋವಿ ನದಬವಾದ ಬಾಧೆಯಾಗಿರುವಲ್ಲಿ ಸ್ತ್ರೀಯರಿಗೆ ಮುಖ್ಯವಾಗಿ ಚಿಕಿತ್ಸೆ ನಡಿಸಿ ಹೆಚ್ಚು ಸಮಾಧಾನ ಪಟ್ಟಿದ್ದೇನೆ ಸ್ತ್ರೀಯರ ಅನೇಕ ಅಸ್ವಸ್ಥತೆಗಳು ಮೂತ್ರಪಿಂಡಗಳ ದೋಷದಿಂದಾಗುವಂಥಾದ್ದಾಗಿವೆ ಮತ್ತು ಅಂಥಾ ಯಾವತ್ತೂ ಸಂಗತಿಗಳಲ್ಲಿ ಈ ಔಷಧದಿಂದ ತಕ್ಷಣವೇ ಮತ್ತು ನಿಶ್ಚಯವಾಗಿ ಗುಣಾಂಶ ಸಿಕ್ಕುತ್ತದೆ.

ಅವು ಮೂತ್ರಕೋಶದ ಬಗ್ಗೆನೇ ಮುಖ್ಯವಾಗಿ ಉದ್ದೇಶಿಸಲ್ಪಟ್ಟ ಔಷಧವಾಗಿ ಮೂತ್ರಸಂಬಂಧವಾದ ವಿಷಪದಾರ್ಥಗಳನ್ನು ದೂರಪಡಿಸುವಲ್ಲಿ ಸಹಕಾರಿಯಾಗಿವೆ. ಈ ರೀತಿ ನಿದ್ರೆಗೇಡು, ಬೆನ್ನುನೋವು, ವಾತರೋಗ, ಮೂತ್ರಬಾಧೆ ಇವುಗಳಿಗೆ ಕಾರಣವಾಗಿರುವ ರಕ್ತದಲ್ಲಿರುವ ಮಲಿನತ್ವವನ್ನು ಶುದ್ಧಿಪಡಿಸುತ್ತದೆ

ಎಲ್ಲಾ ಔಷಧ ವರ್ತಕರಿಂದ ಮಾರಲ್ಪಡುತ್ತವೆ ಸೀಸೆ ಒಂದಕ್ಕೆ ರೂ ೨, ಅಥವಾ ೬ ಸೀಸೆಗಳಿಗೆ ರೂ. ೧೦-೮-೦, ಅಥವಾ ಮುಂಬಯಿಯಲ್ಲಿಯ ಡೋನ್ಸ್‌ರ ಔಷಧಗಳ ಕಂಪನಿಯಿಂದಾ ನೇರಾ ತರಿಸಿಕೊಳ್ಳಬಹುದು ಪಿ ಒ. ಬಾಕ್ಸ್, ನಂ ೨೦, ಮುಂಬಾಯಿ.

ವೃತ್ತಾಂತ ಪತ್ರಿಕೆ.
———:೦:———
೧೯೦೭ ನೇ ಇಸವಿ ಸೆಪ್ಟೆಂಬರ್ ತಾ|| ೨೬ ನೇ ಗುರುವಾರ.

ಕೈಗಾರಿಕೆಗಳ ಪ್ರದರ್ಶನವು.

ಈ ಸಲ ನವರಾತ್ರಿ ಉತ್ಸವಕ್ಕೆ ಸಂಬಂಧಪಟ್ಟಂತೆ ರಾಜಧಾನಿಯಲ್ಲಿ ಸರ್ಕಾರದವರು ಕೈಗಾರಿಕೆಯ ವಸ್ತುಗಳನ್ನೂ ವ್ಯವಸಾಯ ಪದಾರ್ಥಗಳನ್ನೂ ಇಡಿಸಿ ಪ್ರದರ್ಶನ ಮಾಡಿಸುತ್ತಾರೆಂಬುವುದು ನಮ್ಮ ವಾಚಕರಿಗೆ ತಿಳಿದಿರುವುದು. ಇದಕ್ಕಾಗಿ ಪ್ರದರ್ಶನದ ಕಮಿಟಿಯವರು ತುಂಬಾ ಸಾಹಸಪಟ್ಟು ಪ್ರದರ್ಶನ ಶಾಲೆಯನ್ನು ಸಿದ್ಧಪಡಿಸಿ, ವಸ್ತು ವಿಶೇಷಗಳನ್ನು ತರಿಸಿಡುತ್ತಲಿದ್ದಾರೆ. ಈ ಪ್ರದರ್ಶನದ ಪ್ರಾರಂಭ, ಗಂಡಸರ ಹೆಂಗಸರನ್ನು ನೋಡುವುದಕ್ಕೆ ಬಿಡುವುದು, ಪ್ರೀಜ್ ಕ್ರಮ, ಕಸಬುದಾರರಿಗೂ ವ್ಯವಸಾಯಗಾರರಿಗೂ ಪ್ರಜಾಪ್ರತಿನಿಧಿಗಳಿಗೂ ರಿಯಾಯಿತಿಗಳು, ಈ ಮೊದಲಾದ ವಿಚಾರಗಳನ್ನು ಕುರಿತು ಗವರ್ನಮೆಂಟಿನವರು ಪ್ರಕಟಿಸಿರುವ ಹುಕುಮನ್ನು ಈ ಪತ್ರಿಕೆಯ ಇನ್ನೊಂದು ಭಾಗದಲ್ಲಿ ವಾಚಕರು ಓದಿ ತಿಳಿದುಕೊಳ್ಳಬಹುದಾಗಿದೆ

ಈಸಲ ಪ್ರದರ್ಶನವು ತೃಪ್ತಿಕರವಾಗಿ ನೆರವೇರಬಹುದೆಂದು ಕಾಣುತ್ತಿದೆ ಮತ್ತು ಮುಂದಿನ ವರುಷಗಳಲ್ಲಿ ಅವಶ್ಯವೆಂದು ಕಂಡು ಬರುವ ಬದಲಾವಣೆಗಳನ್ನು ಮಾಡಿ, ಈ ಪ್ರದರ್ಶನವನ್ನು ಇನ್ನೂ ಅಭಿವೃದ್ಧಿಗೆ ತರಬಹುದು ಇದಕ್ಕೆ ಉದ್ದೇಶಪಟ್ಟಷ್ಟು ಹೆಚ್ಚು ಪ್ರಜೆಗಳು ಹೊರಗಿನಿಂದ ಈ ಸಲ ಬರುತ್ತಾರೆನ್ನುವುದು ಸ್ವಲ್ಪ ಅನುಮಾನವಾಗಿದೆ ಯಾಕೆಂದರೆ ರಾಜಧಾನಿಯಲ್ಲಿ ಈಗ ಪ್ಲೇಗ್ ಉಪದ್ರವು ಇರೋಣದರಿಂದ ಅನೇಕರು ಹೆದರಿ ಇಲ್ಲಿಗೆ ಬರದೆಹೋಗಬಹುದು. ವ್ಯವಸಾಯದಿಂದಲೂ ಕೈಗಾರಿಕೆಗಳಿಂದಲೂ ಜೀವನ ಮಾಡತಕ್ಕವರಾದರೂ ಆಯಾ ಕಸಬುಗಳನ್ನು ಅಭಿವೃದ್ಧಿಗೆ ತಂದುಕೊಳ್ಳುವುದಕ್ಕೂ ಪ್ರದರ್ಶನವನ್ನು ಬಂದು ನೋಡುವುದಕ್ಕೂ ಚೈತನ್ಯ ಸಾಲದ ಬಡ ಪ್ರಜೆಗಳನ್ನು ಸರ್ಕಾರದವರೇ ಪ್ರಯಾಣದ ಖರ್ಚು ಕೊಟ್ಟು ಕರಸುವಂತೆ ಏರ್ಪಾಡು ಮಾಡಿರುವುದಕ್ಕಾಗಿ ಸಂತೋಷಪಡುವೆವು. ಅಮಲ್ದಾರರೂ ಡೆಪ್ಯುಟಿ ಕಮಿಷನರರೂ ಸರ್ಕಾರದವರ ಈ ಅಭಿಪ್ರಾಯವನ್ನು ಕಸಬುದಾರರಿಗೆ ತಿಳಿಯಪಡಿಸಿ, ಅನೇಕರು ಹೇಗಾದರೂ ರಾಜಧಾನಿಗೆ ಬಂದು ಈ ಪ್ರದರ್ಶನವನ್ನು ನೋಡಿ ಪ್ರಯೋಜನ ಹೊಂದಿ ಹೋಗುವಂತೆ ನೋಡಿಕೊಂಡಾರೆಂದು ನಂಬುತ್ತೇವೆ ಹ್ಯಾಗೂ ವಿವಿಧ ವಸ್ತುಗಳನ್ನು ಪ್ರದರ್ಶನ ಮಾಡತಕ್ಕವರೂ, ಗೋವುಗಳನ್ನು ಪ್ರದರ್ಶನಕ್ಕೆ ತರತಕ್ಕವರೂ, ನೋಟಕ್ಕಾಗಿ ಬರತಕ್ಕವರೂ ಈ ಸಲ ಹೇರಳವಾಗಿಯೇ ಇದ್ದಾರೆಂದು ನಿರೀಕ್ಷಿಸುವೆವು

ಒಳದೇಶದ ವರ್ತಮಾನಗಳು.

ಮ. ರಾ. ರಾ. ಸಾಹುಕಾರ್ ಚೆಟ್ಟಿ ರವರ ವರ್ತಕರಾದ ವೃಜೆಂಗ್... ಟಿ ಕಂಪನಿಯ ಬಾಬತ್ತು ಕಾರ್ಯಗಳನ್ನು ಈ ಪತ್ರಿಕೆಯ ...

♦♦♦

ಕಳೆದ ಶನಿವಾರ ರಾತ್ರಿ ದಿವಾನ್ ಮ|| ವಿ. ಪಿ. ಮಾಧವರಾಯರು ಶಿವಮೊಗ್ಗ ... ಸಂಚಾರ ಮುಗಿಸಿಕೊಂಡು ಬರುವುದಕ್ಕಾಗಿ ಬೆಂಗಳೂರಿಂದ ಪ್ರಯಾಣಮಾಡಿದರು

♦♦♦

ಕಾಂಗ್ರೆಸಿನಲ್ಲಿ ಹೊಸದಾಗಿ ಇಟ್ಟು ನಡೆಸುತ್ತಿರುವ, ... ರೋಗಿಗಳಿಗೆ ಚಿಕಿತ್ಸೆ ಮಾಡುವ ಆಸ್ಪತ್ರೆಯ ಖರ್ಚಿಗೆ ನಮ್ಮ ... ವರುಷಕ್ಕೆ ೫೦೦ ರೂಪಾಯಿನಂತೆ ಐದು ವರುಷ ... ಕೊಡುವುದಾಗಿ ವಾಗ್ದಾನಮಾಡಿರುತ್ತಾರೆಂದು ಕೇಳುತ್ತೇವೆ.

♦♦♦

ಕೇಶವ, ರಾಮಸ್ವಾಮಿ ಎಂಬ ಇಬ್ಬರು ಬ್ರಾಹ್ಮಣರು ರಾಜಧಾನಿಯ ... ಕೃಷ್ಣಪ್ಪನವರ ಮತ್ತು ರಾಮಾನುಜರವರ ... ಕಳವು ಮಾಡಿದ್ದಕ್ಕಾಗಿ ಮ್ಯಾಜಿಸ್ಟ್ರೇಟರು ಕೇಶವನಿಗೆ ೧೨ ತಿಂಗಳು, ರಾಮಸ್ವಾಮಿಗೆ ೬ ತಿಂಗಳು ಕಠಿಣ ಸಜಾ ವಿಧಿಸಿದರೆಂದು ಕೇಳುತ್ತೇವೆ

♦♦♦

... ಸಂಸ್ಥಾನದ ರೆವಿನ್ಯೂ ... ಮಂತ್ರಿಗಳಾದ ಮ|| ಆರ್. ಸಿ. ದತ್ತರವರು ಕಳೆದ ವಾರ ಬೆಂಗಳೂರಿಗೆ ಬಂದರು ಮತ್ತು ತಿರುವಾಂಕೂರು ಸಂಸ್ಥಾನದ ದಿವಾನರಾಗಿ ನೇಮಿಸಲ್ಪಟ್ಟಿರುವ ಮ|| ರಾಜಗೋಪಾಲಾಚಾರ್ಯರು ಬೆಂಗಳೂರಿಗೆ ಬಂದು ನಮ್ಮ ದಿವಾನರ ಕೂಡ ಮಾತನಾಡಿಕೊಂಡು ಹೋದರು

♦♦♦

ಮ|| ಎಚ್. ಪಿ. ಹಾಡ್ಜ್‌ಸನ್ ಎಂಬುವರು ಕೆಲವು ದಿನಗಳ ಹಿಂದೆ ಶಿವಮೊಗ್ಗ ಚಿನ್ನದ ಗಣಿಯ ಸ್ಥಿತಿಗತಿಯನ್ನು ಹೋಗಿ ನೋಡಿ ಬಂದರು ಅಲ್ಲಿ ಚಿನ್ನವನ್ನು ತೆಗೆಯುವದಕ್ಕೆ ಒಂದು ಕಂಪನಿ ಏರ್ಪಾಡಾಗುವುದಲ್ಲದೆ ಈ ಕಂಪನಿಯ ಮೂಲಧನವು ... ಲಕ್ಷ ರೂಪಾಯಿ; ಷೇರು ೧೦೦೦ ರೂಪಾಯಿನಂತೆ ಕಾಯಿಸುವರು ... ಯವರೇ ಷೇರುಗಳಲ್ಲಿ ಬಹು ಭಾಗವನ್ನು ವಹಿಸಿಕೊಳ್ಳುವರೆಂದಲೂ, ಕೆಲವು ಸಾವಿರ ಷೇರುಗಳನ್ನು ಮಾತ್ರ ಪಬ್ಲಿಕ್ ಜನರಿಗೆ ವಿಕ್ರಯ ಮಾಡುವರೆಂದಲೂ ಕೇಳುತ್ತೇವೆ.

♦♦♦

ಬೆಂಗಳೂರು ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಜಡ್ಜಿಯಾಗಿದ್ದು ಪೆನ್ಷನ್ ಪಡೆದ ಮ|| ಎಸ್. ಆರ್. ಸುಬ್ರಾಯ ಅಯ್ಯರವರು ಕಳೆದ ಶುಕ್ರವಾರ ಬೆಂಗಳೂರಿನಲ್ಲಿ ಕಾಲವಾದರೆಂದು ವಿಷಾದಿಸುತ್ತೇವೆ. ಇವರಿಗೆ ೬೩ ವರುಷ ವಯಸ್ಸಾಗಿತ್ತು. ಅವರು ಕಳೆದ ೧೮೬೫ನೆ ಇಸವಿಯಲ್ಲಿ ಮೊದಲು ಈ ಸಂಸ್ಥಾನದ ನೌಕರಿಗೆ ಬಂದು, ಹೆಡ್ ಮುನ್ಷಿ, ಶಿರಸ್ತೇದಾರಿ, ಮುನ್ಸಿಫ್, ಸಬ್ ಜಡ್ಜಿ, ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಜಡ್ಜಿಯಾಗಿ ಬಡ್ತಿ ಹೊಂದಿ, ಸುಮಾರು ... ವರುಷದ ಹಿಂದೆ ಪೆನ್ಷನ್ ಮೇಲೆ ಕೆಲಸ ಬಿಟ್ಟಿದ್ದರು.

♦♦♦

ಒಕ್ಕಲಿಗರ ಸಭೆಯ ಪ್ರೆಸಿಡೆಂಟರೇ ಮೊದಲಾದವರು ಕಳೆದ ವಾರ ರಾಜಧಾನಿಗೆ ಬಂದು ಇಲ್ಲಿನ ಕಮಿಟಿ ಮೆಂಬರುಗಳ ಕೂಡ ಕಲೆತು ಆಲೋಚನೆ ಮಾಡಿದ್ದರಲ್ಲಿ ಬೆಂಗಳೂರು ಮತ್ತು ಮೈಸೂರು ಡಿಸ್ಟ್ರಿಕ್ಟುಗಳೊಳಗೆ ಒಕ್ಕಲಿಗ ಪ್ರಜಾ ಸಂಖ್ಯೆಯು ಹೆಚ್ಚಾಗಿರೋಣದರಿಂದ ಬೆಂಗಳೂರಿನಲ್ಲೂ ಮೈಸೂರಿನಲ್ಲೂ ಒಕ್ಕಲಿಗ ಬಾಲಕರ ವಿದ್ಯಾಭಿವೃದ್ಧಿಗಾಗಿ ಏಕಕಾಲದಲ್ಲಿ ಒಂದೇ ರೀತಿಯಾಗಿ ವಿದ್ಯಾರ್ಥಿ ನಿಲಯಗಳನ್ನೂ ಪಾಠಶಾಲೆಗಳನ್ನೂ ಪ್ರಾರಂಭಿಸಿ ನಡಸುವುದು ಆವಶ್ಯಕವೆಂದು ಗೊತ್ತುಮಾಡಿ, ಈ ವಿಷಯವನ್ನು ಮಹಾ ಸಭೆಯಲ್ಲಿ ಸೂಚಿಸಿ ತೀರ್ಮಾನಮಾಡಬೇಕೆಂದು ನಿಶ್ಚಯಿಸಿರುತ್ತಾರೆಂದು ಕೇಳುತ್ತೇವೆ.

♦♦♦

ಪ್ರಜಾಪ್ರತಿನಿಧಿ ಸಭೆಗೆ ಮೆಂಬರುಗಳಾಗಬಹುದಾದವರ ಮತ್ತು ಚುನಾಯಿಸತಕ್ಕ ಓಟರುಗಳ ಹೆಸರುಗಳನ್ನು ಅಕಾರಾದಿಯಾಗಿ ... ಯೊಳಗಾಗಿ ಸರ್ಕಾರಿ ಗೆಜೆಟ್ಟಿನಲ್ಲಿ ಪ್ರಕಟಿಸಬೇಕೆಂತಲೂ, ಆ ಪಟ್ಟಿಯಲ್ಲಿ ಬಿಟ್ಟುಹೋಗಿರತಕ್ಕವರು ಹತ್ತು ದಿನಗಳೊಳಗಾಗಿ ಡೆಪ್ಯುಟಿ ಕಮಿಷನರಿಗೆ ಬರೆದು ತಿಳಿಸಿ ತಮ್ಮ ಹೆಸರುಗಳನ್ನು ದಾಖಲ್ ಮಾಡಿಸಿಕೊಳ್ಳಬಹುದೆಂತಲೂ, ತಾಲ್ಲೂಕ್ ಮೆಂಬರುಗಳು ಮೂರು ವರುಷಗಳತನಕ ಮೆಂಬರಾಗಿರತಕ್ಕದ್ದೆಂತಲೂ, ಯಾವ ಮೆಂಬರಾದರೂ ಕೋರ್ಟುಗಳಲ್ಲಿ ಬದ್ಧಚಾಲಿನವರೆಂಬ ಆಪಾದನೆಗೆ ಗುರಿಯಾಗಿದ್ದಲ್ಲಿ ಅಂಥವರ ಹೆಸರನ್ನು ಪ್ರತಿನಿಧಿಗಳ ಪಟ್ಟಿಯಿಂದ ವಜಾ ಮಾಡಬೇಕೆಂತಲೂ ಸರ್ಕಾರದವರು ಹುಕುಂ ಕೊಟ್ಟಿದ್ದಾರೆ

♦♦♦

ಒಬ್ಬ ಬಾತ್ಮೀದಾರರು ಬರೆಯುವುದು — ಈ ತಿಂಗಳು ೧೨ ನೇ ತೇದಿ ಗುರುವಾರ ಹಗಲು ಸುಮಾರು ೩ ಗಂಟೆಯ ಸಮಯದಲ್ಲಿ ಬಳ್ಳಾರಿ ಜಿಲ್ಲಾ ... ತಾಲ್ಲೂಕು ಕಂಚಿನಕೆರೆ ಕಾರುಬರ ಗಂಗಪ್ಪನೆಂಬುವಾತನ ಮನೆಗೆ ಕಳ್ಳರು ನುಗ್ಗಿ ತಿಜೋರಿಯನ್ನು ಹೊತ್ತುಕೊಂಡು ಹೋಗುತ್ತಿರಲು ಒಂದು ಮೈಲು ದೂರದಲ್ಲಿರುವ ಹಿರೆಹಡಗಲಿಯ ಸುಮಾರು ೫೦೦ ಜನರು ಬಂದು ಏನು ಪ್ರಯತ್ನ ಮಾಡಿದರೂ ಹೆದರದೆ, ಕೋವಿ ... ಮುಂದಿಗೆ ಘಾಯಮಾಡಿದ್ದಾರೆ ೩,೦೦೦ ರೂಪಾಯಿಯ ಆಸ್ತಿಯನ್ನು ಕದ್ದು ಇಲ್ಲಿಗೆ ೩ ಮೈಲು ದೂರದಲ್ಲಿರುವ ಹೊಳಲ ಅಡವಿಯಲ್ಲಿ ಅಡಗಿರುತ್ತಾರೆ ಕಳ್ಳರನ್ನು ಹಿಡಿದವರಿಗೆ ಅಪಾರವಾದ ಬಹುಮಾನವು ದೊರೆಯುವದು.

ಕೈಗಾರಿಕೆಗಳ ಪ್ರದರ್ಶನೋತ್ಸವವು

ರಾಜಧಾನಿಯಲ್ಲಿ ಪ್ರಾರಂಭವಾಗುವ ಕಾಲ ಸಮೀಪಿಸಿದ್ದು.

ಮೈಸೂರು ಪಟ್ಟಣದಲ್ಲಿ ನವರಾತ್ರಿ ಉತ್ಸವದ ಜೊತೆಗೆ ಕೈಗಾರಿಕೆಗಳ, ವ್ಯವಸಾಯೋಪಕರಣಗಳ ಮತ್ತು ಗೋವುಗಳ ಪ್ರದರ್ಶನವನ್ನು ನಡಿಸಬೇಕೆಂದು ಗವರ್ನಮೆಂಟಿನವರು ಗೊತ್ತುಮಾಡಿರುತ್ತಾರಷ್ಟೆ ಈ ಪ್ರದರ್ಶನಗಳು ಅಕ್ಟೋಬರ್ ತಿಂಗಳ ೫ನೇ ತಾ. ಶನಿವಾರ ಬೆಳಿಗ್ಗೆ ೮ ಗಂಟೆಗೆ ಪ್ರಾರಂಭವಾಗುವವು. ಆ ದಿನ ಶ್ರೀಮನ್ ಮಹಾರಾಜರವರು ದಯಮಾಡಿ ಪ್ರದರ್ಶನದ ದ್ವಾರವನ್ನು ತೆರೆಯುವುದಾಗಿ ಅನುಜ್ಞೆಯನ್ನಿತ್ತಿರುವರು ಆಹ್ವಾನ ಪತ್ರಿಕೆಗಳನ್ನು ಪಡೆದಿರತಕ್ಕವರನ್ನು ಮಾತ್ರ ಆ ದಿನ ಬೆಳಿಗ್ಗೆ ಪ್ರದರ್ಶನ ಶಾಲೆಗೆ ಬಿಡಲಾಗುವುದು ಆದರೆ ಇತರರನ್ನ ಬಿಡತಕ್ಕ ದಿನ ಮತ್ತು ಕಾಲಗಳ್ಯಾವವೆಂದರೆ -

ಗಂಡಸರಿಗೂ ಹೆಂಗಸರಿಗೂ ಸಹ — ೫ನೇ ತಾ ಶನಿವಾರ ಸಾಯಂಕಾಲ ೫ ರಿಂದ ೮ ಗಂಟೆ ತನಕ ತರುವಾಯ ೬ನೇ ತಾ ರಿಂದ ೧೩ ನೇ ತಾ ವರೆಗೆ ಪ್ರತಿ ದಿನವೂ ಬೆಳಿಗ್ಗೆ ೭|| ಯಿಂದ ೧೧|| ಗಂಟೆಯ ವರೆಗೆ ತಾ ೧೩, ೧೮, ಮತ್ತು ತಾ ೨೦ ರಿಂದ ೩೧ರ ವರೆಗೆ ದಿನವ ... ಬೆಳಿಗ್ಗೆ ೧೧ ರಿಂದ ರಾತ್ರಿ ೮ ಗಂಟೆ ತನಕ

ಹೆಂಗಸರಿಗೆ ಮಾತ್ರ — ತಾ ೬, ೧೧, ೧೯ ರಲ್ಲಿ ಸಾಯಂಕಾಲ ೩ ರಿಂದ ರಾತ್ರಿ ೮ ಗಂಟೆ ತನಕ, ಮತ್ತು ತಾ ೨೩ ರಲ್ಲಿ ಬೆಳಿಗ್ಗೆ ೩ ರಿಂದ ೧೦ ಗಂಟೆ ತನಕ ಪ್ರಜಾ ಪ್ರತಿನಿಧಿ ಸಭೆಯ ಮೆಂಬರುಗಳಿಗೆ ಮಾತ್ರ (ಫೀಜು ಇಲ್ಲ) — ತಾ ೨೦ನೆ ಭಾನುವಾರ ಮಧ್ಯಾಹ್ನ ೨ ರಿಂದ ರಾತ್ರಿ ೮ ಗಂಟೆ ತನಕ.

ಉಪನ್ಯಾಸಗಳ ಏರ್ಪಾಡು — ಅಕ್ಟೋಬರ್ ೧೨ರಿಂದ ೨೦ನೇ ತಾ. ವರೆಗೆ ನಾಲ್ಕು ದಿನಗಳೂ ಬೆಳಿಗ್ಗೆ ೮ ರಿಂದ ೯|| ಗಂಟೆ ತನಕ ಪ್ರದರ್ಶನಶಾಲೆಯೊಳಗೆ ಉಪನ್ಯಾಸಗಳು ನಡೆಯುವಂತೆ ಏರ್ಪಾಡು ಮಾಡಿದೆ. ಇವನ್ನು ಕೇಳುವದಕ್ಕೆ ಬರತಕ್ಕವರು ಫೀಜು ಕೊಡಬೇಕಾದದ್ದಿಲ್ಲ. ಉಪನ್ಯಾಸ ನಡೆಯುವಾಗ್ಗೆ ಪ್ರದರ್ಶನವಸ್ತುಗಳನ್ನು ನೋಡಲು ಯಾರನ್ನೂ ಬಿಡುವುದಿಲ್ಲ.

ಫೀಜಿನ ದರಗಳು — ಒಂದಾವರ್ತಿ ನೋಡುವುದಕ್ಕೆ ತಲೆಗೆ ೪ ಆಣೆ ಐದು ಮಂದಿ ಉಳ್ಳ ಒಂದು ಮನೆಯವರು ನೋಡುವುದಕ್ಕೆ ೧೨ ಆಣೆ ಸ್ಕೂಲ್ ಹುಡುಗರಿಗೆ ೨ ಆಣೆ, ಮೂರು ರೂಪಾಯಿ ಕೊಟ್ಟು ಒಂದು ಟಿಕೆಟ್ ಪಡೆದವರು ಪ್ರದರ್ಶನ ಶಾಲೆ ತೆರೆದಿರುವ ಎಲ್ಲಾ ದಿನಗಳಲ್ಲೂ ಹೋಗಿ ನೋಡಬಹುದು ಮೈಸೂರಿನಲ್ಲಿರುವ ಸ್ಕೂಲುಗಳ ಹೆಡ್ ಮಾಸ್ಟರುಗಳಿಗೆ ಟಿಕೆಟ್ಟುಗಳನ್ನು ಬಿಕರಿಗೆ ಕಳುಹಿಸಲಾಗುವುದು. ವಿದ್ಯಾರ್ಥಿಗಳು ಅವರಿಂದ ಪಡೆಯಬಹುದು ಇತರ ಕಡೆಗಳ ವಿದ್ಯಾರ್ಥಿಗಳೂ ಹೆಡ್ ಮಾಸ್ಟರುಗಳಿಂದಲೇ ಕೇಳಿ ಟಿಕೆಟ್ ತೆಗೆದುಕೊಳ್ಳತಕ್ಕದ್ದು

ಪ್ರದರ್ಶನ ವಸ್ತುಗಳ ಮಾಲೀಕರಿಗೆ, ಅಥವಾ ಅವರ ಏಜಂಟರಿಗೆ, ಅಥವಾ ಅವರ ಸೇವಕರಿಗೆ ಮತ್ತು ಪ್ರದರ್ಶನಶಾಲಾ ನೌಕರರಿಗೆ ಮಾಫಿ ಟಿಕೇಟುಗಳನ್ನು ಕೊಡಲಾಗುವುದು. ಡೆಪ್ಯುಟಿ ಕಮಿಷನರಿಂದ ಸರ್ಟಿಫಿಕೇಟು ಪಡೆದು ಬರತಕ್ಕ ಬಡಬಗ್ಗರಾದ ರೈತರಿಗೂ ಕಸಬುದಾರರಿಗೂ ಮಾಫಿ ಟಿಕೇಟು ಕೊಡಲ್ಪಡುತ್ತದೆ. ಮತ್ತು ಅಂಥವರು ಪರಸ್ಥಳಗಳಿಂದ ಬರಬೇಕೆಂದು ಕುತೂಹಲಪಟ್ಟರೆ ಆಯಾ ಡೆಪ್ಯುಟಿ ಕಮಿಷನರು ಅವರ ಹೋಗಿಬರ ಪ್ರಯಾಣದ ಖರ್ಚನ್ನು ಸರ್ಕಾರದಿಂದ ಕೊಡಿಸುವರು. ಅಂಥವರು ರಾಜಧಾನಿಗೆ ಬಂದರೆ ಅನ್ನೋದಕಗಳಿಗೆ ಮಾತ್ರ ಅವರೇ ಏರ್ಪಾಡು ಮಾಡಿಕೊಳ್ಳಬೇಕು. ಕಮಿಟಿಯವರು ಅಕ್ಟೋಬರ್ ತಾ ೧ ರಿಂದ ಪ್ರದರ್ಶನಶಾಲೆಯ ಬಳಿ ಒಂದು ಪ್ರೈವೇಟ್ ಹೋಟೇಲನ್ನು ಇಡಿಸುವುದಕ್ಕೆ ಏರ್ಪಾಡು ಮಾಡುವರು

ಮೈಸೂರು ಕಾಸ್ಮಾಪಾಲಿಟನ್ ಕ್ಲಬ್ಬಿನಲ್ಲಿ ನಡೆದ ಒಂದು ಸಂತೋಷಕಾರ್ಯವು.

ಕಳೆದ ಭಾನುವಾರ ರಾಜಧಾನಿಯ ಕಾಸ್ಮಾಪಾಲಿಟನ್ ಕ್ಲಬ್ಬಿನ ಮೆಂಬರುಗಳು ಅಟ್ ಹೋಂ ಮ|| ಎಂ. ಸಿ. ರಂಗಯ್ಯಂಗಾರ್ಯರಿಗೆ ಔತಣ ಮಾಡಿದರು. ಇಲ್ಲಿನ ಅಧಿಕಾರಿಗಳೂ ದೊಡ್ಡ ಮನುಷ್ಯರೂ ಸೇರಿ ಈ ಕ್ಲಬ್ಬನ್ನು ಮಾಡಿಕೊಂಡಿರುತ್ತಾರೆ. ಮೆಂಬರುಗಳ ಪೈಕಿ ಮ|| ರಂಗಯ್ಯಂಗಾರ್ಯರು ಒಬ್ಬರಾದ್ದರಿಂದಲೂ, ಅವರಿಗೆ ಮೈಸೂರು ಲೆಜಿಸ್ಲೇಟಿವ್ ಕೌನ್ಸಿಲ್ ಮೆಂಬರ ಸ್ಥಾನ ದೊರಕಿದ್ದರಿಂದಲೂ ಕ್ಲಬ್ಬಿನ ಮೆಂಬರುಗಳು ತಮ್ಮ ಸಂತೋಷವನ್ನು ಈ ಔತಣ ಮಾಡಿ ಪ್ರಕಾಶಪಡಿಸಿದರು ರಾಜಧಾನಿಯಲ್ಲಿರುವ ಕ್ಲಬ್ಬಿನ ಮೆಂಬರುಗಳಾದ ಎಲ್ಲಾ ದೊಡ್ಡ ಮನುಷ್ಯರೂ ಸೇರಿ ಸುಖ ಭೋಜನಮಾಡಿದರು ರೆವಿನ್ಯೂ ಕಮಿಷನರ್ ಮ|| ವಿ. ರಂಗಸ್ವಾಮಯ್ಯಂಗಾರ್ಯರು ಹಾಜರಾಗಿದ್ದರು. ತರುವಾಯ ಮೈಸೂರ್ ... ಮ|| ವೀಣೆ ಶೇಷಣ್ಣನವರು ವೀಣಾಗಾನವನ್ನು ಮಾಡಿ ಸಂತೋಷಪಡಿಸಿದರು ಸಾಯಂಕಾಲ ಟೆನ್ನಿಸ್ ಮೊದಲಾದ ಆಟಗಳಲ್ಲಿ ಮೆಂಬರುಗಳು ಸೇರಿ ಸ್ವಲ್ಪ ಹೊತ್ತು ವ್ಯಾಯಾಮದಲ್ಲಿ ಕಳೆದರು. ಕಡೆಯಲ್ಲಿ ಎಲ್ಲಾ ಮೆಂಬರುಗಳೂ ಕ್ಲಬ್ಬಿನೊಳಗೆ ಸಭೆ ಸೇರಿದರು. ಸಭಿಕರ ಅಭಿಪ್ರಾಯವನ್ನು ಅನುಮೋದಿಸಿ, ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಜಡ್ಜಿಗಳಾದ ಮ|| ಟಿ ಪರಮಶಿವ ಅಯ್ಯರವರು ಅಗ್ರಾಸನವನ್ನು ವಹಿಸಿ, ಮ|| ರಂಗಯ್ಯಂಗಾರ್ಯರು ಕ್ಲಬ್ಬಿನ ಸೆಕ್ರೆಟರಿಯಾಗಿದ್ದುಕೊಂಡು ಅದರ ಅಭಿವೃದ್ಧಿಗೆ ತುಂಬಾ ಸಾಹಸಪಡುತ್ತಿದ್ದಾರೆಂತಲೂ ವಿದ್ಯಾದಿ ಸಾಮರ್ಥ್ಯ ಶೀಲದಾಗರೋಣದರಿಂದ ಅವರಿಗೆ ಲೆಜಿಸ್ಲೇಟಿವ್ ಕೌನ್ಸಿಲ್ ಮೆಂಬರ ಸ್ಥಾನ ದೊರೆತದ್ದು ಮೆಂಬರುಗಳಲ್ಲೆಲ್ಲಾ ತುಂಬಾ ಸಂತೋಷವನ್ನುಂಟುಮಾಡಿದೆ ಎಂತಲೂ, ಕ್ಲಬ್ಬಿನ ಮೆಂಬರುಗಳ ಪೈಕಿ ಮ|| ವಿ. ಪಿ. ಮಾಧವರಾಯರೂ ಮ|| ಎಂ. ಕಾಂತರಾಜೇ ಅರಸಿನವರೂ, ಮ|| ವಿ. ಎನ್. ನರಸಿಂಹಯ್ಯಂಗಾರ್ಯರೂ, ಮ|| ಎಂ. ಸಿ. ರಂಗಯ್ಯಂಗಾರ್ಯರೂ ಲೆಜಿಸ್ಲೇಟಿವ್ ಕೌನ್ಸಿಲಿನಲ್ಲಿ ಮೆಂಬರುಗಳಾಗಿರುವ ವಿಚಾರವು ಮಹಾ ಸಂತೋಷಪ್ರದವಾಗಿರುತ್ತದೆಂತಲೂ ಹೇಳಿದರು. ತರುವಾಯ ಮ್ಯುನಿಸಿಪಲ್ ಕೌನ್ಸಿಲರ್ ಮ|| ಅಂಬಳೆ ಅಣ್ಣಯ್ಯ ಪಂಡಿತರು — ಮ|| ರಂಗಯ್ಯಂಗಾರ್ಯರು ಉಪಾಧ್ಯಾಯರಾಗಿದ್ದಾರಲ್ಲ ವಿಶೇಷವಾದ ಶ್ರದ್ಧೆಯನ್ನು ವಹಿಸಿ ಕಾರ್ಯ ನಡಿಸತಕ್ಕವರೆಂತಲೂ, ಮೈಸೂರು ಪಟ್ಟಣದ ಪ್ರಜೆಗಳ ಭಕ್ತಿ ವಿಶ್ವಾಸಗಳನ್ನು ಸಂಪಾದಿಸಿಕೊಂಡಿರತಕ್ಕವರಾದ್ದರಿಂದ ಇಂಥವರನ್ನು ಸರ್ಕಾರದವರು ಲೆಜಿಸ್ಲೇಟಿವ್ ಕೌನ್ಸಿಲ್ಲಿನ ಮೆಂಬರ್ ಕೆಲಸಕ್ಕೆ ನೇಮಕಮಾಡಿಕೊಂಡದ್ದು ಸಕಲ ಪ್ರಜೆಗಳಿಗೂ ಸಂತೋಷಪ್ರದವಾಗಿರುತ್ತದೆಂತಲೂ ತಿಳಿಸಿದರು. ಕಡೆಯಲ್ಲಿ ಮ|| ಎಂ. ಸಿ. ರಂಗಯ್ಯಂಗಾರ್ಯರು ಎದ್ದು ಸಭಿಕರನ್ನು ಕುರಿತು ತಿಳಿಸಿದ ಮುಖ್ಯಾಭಿಪ್ರಾಯವೇನೆಂದರೆ—

ಕ್ಲಬ್ಬಿನ ಮೆಂಬರುಗಳಾದ ತಾವುಗಳೆಲ್ಲಾ ನನಗೋಸ್ಕರ ಇಷ್ಟು ಶ್ರಮಪಟ್ಟು ಈ ದಿನದ ಸಂತೋಷ ಕಾರ್ಯಗಳನ್ನು ಏರ್ಪಾಡು ಮಾಡಿದ್ದಕ್ಕಾಗಿ ಮನಃಪೂರ್ವಕವಾಗಿ ತಮ್ಮನ್ನು ವಂದಿಸುತ್ತೇನೆ. ಶ್ರೀಮನ್ ಮಹಾರಾಜರವರು ಪ್ರಜಾವಾತ್ಸಲ್ಯಪೂರಿತರಾಗಿ ಸಂಸ್ಥಾನಾಭಿವೃದ್ಧಿಗೆ ಸಹಕಾರಿಯಾದ ಅನೇಕ ಕಾರ್ಯಗಳನ್ನು ಮಾಡುತ್ತಾ ಬಂದಿರುವರು. ಇದಕ್ಕೆ ಈಗತಾನೇ ಸ್ಥಾಪಿಸಲ್ಪಟ್ಟಿರುವ ಲೆಜಿಸ್ಲೇಟಿವ್ ಕೌನ್ಸಿಲ್ಲಿನ ನಿರ್ಮಾಣವೇ ದೃಷ್ಟಾಂತವೆಂದು ನಾನು ಹೇಳಬೇಕಾಗಿಲ್ಲ ಈ ಕೌನ್ಸಿಲಿನಲ್ಲಿ ಮೆಂಬರುಗಳು ಪ್ರಜೆಗಳ ಕ್ಷೇಮಕ್ಕಾಗಿ ಅವಶ್ಯವೆಂದು ತೋರಿಬರುವಂಥಾ ಕಾನೂನುಗಳನ್ನು ಚರ್ಚಿಸಿ ಗೊತ್ತು ಮಾಡುವುದೇ ಮುಖ್ಯವೆಂದು ಗೊತ್ತುಮಾಡಲ್ಪಟ್ಟಿರೋಣದರಿಂದ ಈ ಸಭೆಯಲ್ಲಿ ರಾಜ್ಯಭಾರಕ್ಕೆ ಸಂಬಂಧಪಡುವ ಇತರ ವಿಚಾರಗಳನ್ನು ಕುರಿತಾಗಲಿ, ಸಂಸ್ಥಾನದ ಜಮಾಖರ್ಚಿನ ವಿಚಾರವನ್ನು (ಬಜೆಟ್ ಲೆಕ್ಕಗಳನ್ನು) ಕುರಿತಾಗಲಿ ಚರ್ಚೆ ಮಾಡುವುದೂ ಸರ್ಕಾರದವರ ಲೋಪದೋಷಗಳನ್ನು ಎತ್ತಿಹಾಕಿ ಅವುಗಳನ್ನು ಸರಿಪಡಿಸುವುದೂ ಈ ಕೌನ್ಸಿಲ್ಲಿನ ಕಾರ್ಯವಾಗದಲ್ಲ. ಈ ಅಧಿಕಾರಗಳನ್ನು ಗವರ್ನಮೆಂಟಿನವರು ಪ್ರಜಾಪ್ರತಿನಿಧಿಸಭೆಗೆ ವಹಿಸಿಕೊಟ್ಟಲ್ಲಿ ಸಂಸ್ಥಾನಾಭಿವೃದ್ಧಿಗೆ ತುಂಬಾ ಸಹಾಯಕವಾದೀತು ಈಗ ಗ್ರಾಮ ಯೂನಿಯನ್‌ಗಳಿಗೂ, ತಾಲ್ಲೂಕ್ ಬೋರ್ಡುಗಳಿಗೂ, ಡಿಸ್ಟ್ರಿಕ್ಟ್ ಬೋರ್ಡುಗಳಿಗೂ ಪ್ರಜೆಗಳೇ ಮೆಂಬರುಗಳನ್ನು ಚುನಾಯಿಸುವ ಅಧಿಕಾರವನ್ನು ಪಡೆದಿರುತ್ತಾರೆ. ಆದಕಾರಣ ಯೋಗ್ಯತಾಸಿದ್ಧಿ ಸಾಮರ್ಥ್ಯಾದಿಗಳನ್ನು ಸಂಪಾದಿಸಿಕೊಂಡಿರುವಂಥಾವರು ಗ್ರಾಮ ಯೂನಿಯನ್ ಹಿಡಿದು ಡಿಸ್ಟ್ರಿಕ್ಟ್ ಬೋರ್ಡಿನ ತನಕ ಪ್ರಜೆಗಳಿಂದ ಚುನಾಯಿಸಲ್ಪಟ್ಟು ಬರುವುದಕ್ಕೆ ಅವಕಾಶವಾಗಿದೆ ಈ ಡಿಸ್ಟ್ರಿಕ್ಟ್ ಬೋರ್ಡುಗಳ ಮೆಂಬರುಗಳನ್ನೂ, ಮ್ಯುನಿಸಿಪಲ್ ಬೋರ್ಡುಗಳ ಮತ್ತು ಇತರ ಸಂಘಗಳಿಂದಲೂ ಚುನಾಯಿಸಲ್ಪಟ್ಟು ಬರುವ ಮೆಂಬರುಗಳನ್ನು, ಪ್ರಜಾಪ್ರತಿನಿಧಿ ಸಭೆಯ ಮೆಂಬರುಗಳಾಗಿ ಗೊತ್ತುಮಾಡುವುದಾದರೆ ಅವರೇ ನಿಜವಾದ ಪ್ರತಿನಿಧಿಗಳೆನಿಸಿಕೊಳ್ಳುವುದನ್ನು ಹೇಳುವದಕ್ಕೆ ಸಂದೇಹವಿಲ್ಲ ಈ ಏರ್ಪಾಡಿನಿಂದ ಪ್ರತಿನಿಧಿ ಸಭೆಯಲ್ಲಿ ಈಗಿನಷ್ಟು ಮೆಂಬರುಗಳ ಸಂಖ್ಯೆಯು ಅವಶ್ಯವಿಲ್ಲ ಸಭೆಯ ಕಾರ್ಯಗಳೆಲ್ಲಾ ಪ್ರಜೆಗಳಿಗೂ ಗವರ್ನಮೆಂಟಿನವರಿಗೂ ತೃಪ್ತಿಕರವಾಗಿ ನಡೆಯಲು ಅವಕಾಶವಾಗುವುದು. ಗವರ್ನಮೆಂಟಿನವರು ಈ ವಿಚಾರವನ್ನು ಪರ್ಯಾಲೋಚಿಸಬೇಕೆಂದು ನಿವೇದಿಸುತ್ತೇನೆ ಎಂಬುದೇ.

ಒಕ್ಕಲಿಗರ ಎರಡನೇ ಮಹಾಸಭೆ

103 2

ಒಕ್ಕಲಿಗ ಮಹಾಜನರಿಗೆಲ್ಲಾ ಪ್ರಾರ್ಥನೆ

ಈ ಸಭೆಯು ಬರುವ ಅಕ್ಟೋಬರ್ ತಿಂಗಳು ೧೭, ೧೮ ಮತ್ತು ೧೯ನೆ ತಾರೀಖುಗಳಲ್ಲಿ ಮೈಸೂರು ಟೌನ್ ಹಾಲಿನಲ್ಲಿ ನಡೆಯ ಪದು ನಮ್ಮ ಶ್ರೀಮನ್ಮಹಾರಾಜರವರು ಮೊದಲನೇ ದಿವಸ ತಾವೇ ಸಭೆಗೆ ಸ್ವತಃ ದಯಮಾಡಿಸಿ, ಸಭೆಯ ಕಾರ್ಯವನ್ನು ಪ್ರಾರಂಭಿಸುವಂತೆ ಅನುಜ್ಞೆಯನ್ನು ದಯಪಾಲಿಸಿರ ತ್ತಾರೆ ಆ ಕಾಲದಲ್ಲಿ ಒಂದು ವಿಜ್ಞಾಪನಾ ಪತ್ರಿಕೆಯು ಸುಮಾರು ೧೦೦೦ ರೂ ಬೆಲೆಯುಳ್ಳ ಸುಂದರವಾದ ಭಂಗಾರ ಮತ್ತು ಬೆಳ್ಳಿಯಿಂದ ತಯಾರಾದ ಪೆಟ್ಟಿಗೆಯಲ್ಲಿ ಇರಿಸಲ್ಪಟ್ಟು ಶ್ರೀಮನ್ಮಹಾರಾಜರವರ ಸನ್ನಿಧಿಯಲ್ಲಿ ಸಮರ್ಪಿಸಲ್ಪಡುವುದು

ನಮ್ಮ ಸಂಘದ ಪ್ರೆಸಿಡೆಂಟರ ಮತ್ತು ವೈಸ್ ಪ್ರೆಸಿಡೆಂಟರು ಸಹವಾಗ್ದಾನಮಾಡಿರುವ ಸಾವಿರಾರು ರೂಪಾಯಿಗಳನ್ನು ಸಭೆಯಲ್ಲಿ ಸಂಘ ಕ್ಕೊಪ್ಪಿಸುವರು. ಒಂದು ಸಾವಿರ ರೂಪಾಯಿಗಳಿಗೆ ಮೇಲ್ಪಟ್ಟ ದ್ರವ್ಯವನ್ನು ಸಂಘಕ್ಕೆ ಕೊಡುವವರೆಲ್ಲರೂ ಇದೇ ಮೇರೆಗೆ ಮಾಡಬಹುದು ಇಂಥಾವರ ಛಾಯಾಚಿತ್ರಗಳು (ಫೋಟೋಗಳು) "ಆಲ್ಬಂ" ಎಂಬ ಚಿತ್ರಪುಸ್ತಕದಲ್ಲಿ ಹಾಕಲ್ಪಟ್ಟು, ಆ ಪುಸ್ತಕವು ಮಹಾಸಭೆಯ ದಿನಗಳಲ್ಲಿ ಮಾಡಲ್ಪಡುವುದು ಇಷ್ಟವುಳ್ಳವರು ಈ ತಿಂಗಳು ಆಖೈರಿನೊಳಗಾಗಿ ಈ ವಿಚಾರವಾಗಿ ಸೆಕ್ರೆಟರಿಯವರಿಗೆ ಬರೆದು ಕಳುಹಿಸಬಹುದು

ಪರಸ್ಥಳದಿಂದ ದಯಮಾಡಿಸುವವರೆಲ್ಲರಿಗೂ ಸಭೆಯು ನಡೆಯುವ ಮೂರು ದಿವಸಗಳೂ ಮೈಸೂರು ಅಕ್ಕಿ ಅಂಗಡಿ ಮರಿಯಪ್ಪನವರು ಭೋಜನಾದಿ ಸೌಕರ್ಯಗಳನ್ನು ಒದಗಿಸುವರು

ಈ ಮಹಾಸಭೆಗೆ ಶ್ರೀಮನ್ಮಹಾರಾಜರವರು ದಯಮಾಡಿಸುವದರಿಂದ ಟಿಕೇಟುಗಳ ಮೂಲಕ ಜನರನ್ನು ಟೌನ್ ಹಾಲಿಗೆ ಬಿಡಬೇಕೆಂದು ನಿಶ್ಚೈಸಿದೆ ಆದಕಾರಣ ಸಭೆಯು ಪ್ರಾರಂಭವಾಗುವದಕ್ಕೆ ಮುಂಚಿತವಾಗಿ ... ದಿವಸಗಳಿಂದ ಈ ಟಿಕೇಟುಗಳು ಮೈಸೂರಲ್ಲಿ ದೇವರಾಜಮಾರ್ಕೆಟ್ಟಿನ ಮಹಡಿಯಲ್ಲಿರುವ ಒಕ್ಕಲಿಗರ ಸಂಘದ ಬ್ರಾಂಚ್ ಆಫೀಸಿನಲ್ಲಿ ಒಕ್ಕಲಿಗ ಮಹಾಜನರಿಗೆ ಉಚಿತವಾಗಿ ಕೊಡಲ್ಪಡುವವು ಸಂಘಕ್ಕೆ ಮೊದಲೇ ಚಂದಾ ಹಾಕಿರುವವರೂ ಮತ್ತು ಮುಂದೆ ಹಾಕತಕ್ಕವರೂ ಸಹ ತಮ್ಮ ತಮ್ಮ ಚಂದಾ ಮೊಬಲಗುಗಳನ್ನು ಪಾವತಿಮಾಡಿ ರಶೀತಿ ಪಡೆಯಬೇಕೆಂದು ಪ್ರಾರ್ಥಿಸುತ್ತೇನೆ

ಈ ಪ್ರಕಟನೆಯಲ್ಲಿ ಕಾಣಿಸಿರುವ ವಿಷಯಗಳನ್ನು ತಮ್ಮ ಬಂಧುಮಿತ್ರವರ್ಗದಲ್ಲಿ ಪ್ರಚುರಪಡಿಸಿ ಸಭೆಗೆ ಬರತಕ್ಕವರ ಹೆಸರುಗಳನ್ನು ಕಾಗದ ಮೂಲಕ ಮೈಸೂರು ಒಕ್ಕಲಿಗರ ಸಂಘದ ಬ್ರಾಂಚ್ ಸೆಕ್ರೆಟರಿ ಮಿ॥ ಎಂ ಪುಟ್ಟನಂಜಪ್ಪನವರಿಗೆ ತಿಳಿಸಬೇಕೆಂದು ಅತ್ಯಂತ ವಿನಯಪೂರ್ವಕವಾಗಿ ಪ್ರಾರ್ಥಿಸುವ ತಮ್ಮವಿಧೇಯ

ಕೆ ಎಚ್ ರಾಮಯ್ಯ, ಬಿ ಎ,

ಒಕ್ಕಲಿಗರ ಸಂಘದ ಜನರಲ್ ಸೆಕ್ರೆಟರಿ

೫೩, ಅರಳೇಪೇಟೆ, ಬೆಂಗಳೂರು ಸಿಟಿ

ಆರ್ಡರ್ ಬರುತ್ತಿವೆ! ಬೇಗ ನೋಡಿ!

ಪ್ರಪಂಚವೇ ಆಶ್ಚರ್ಯ ಪಡುವದು.

8೧

ದೊಡ್ಡ ಮನುಷ್ಯರೇ, ಹಿಂದುಸ್ಥಾನದಲ್ಲಿ ಪ್ರಕಟನೆಗಳ ಮುಖಾಂತರ ಕೆಲವು ಕಂಪನಿಯವರು ಮೋಸ ಮಾಡಿ (ಆದರಿಂದ ಪ್ರಕಟನೆಯನ್ನು ಕಂಡರೆ ಜನರು ಅಸಹ್ಯಪಟ್ಟು ನಂಬುತ್ತಾರೆ ಸತ್ಯವಂತರ ಪ್ರಕಟನೆಯನ್ನೂ ಕೂಡ ನಂಬುವದು ಕಷ್ಟ ಯಥಾರ್ಥವುಳ್ಳ ಕಂಪನಿಯ ನೋಟೀಸುಗಳನ್ನು ಸಹ ಸಕ್ಕರೆ ಔಷಧಿ ಕಟ್ಟಿದ ದಕ್ಕೆ ಕಿಟ್ಟಿ ಬಿಡುವರು ಆದರೆ ಸ್ವಕೀಯರೇ, ನಮ್ಮ ಕಂಪನಿಯ ಯೋಗ್ಯತೆಯನ್ನು ಒಂದಾವರ್ತಿ ಪರೀಕ್ಷಿಸಿ ನೋಡಿ ಈ ಪ್ರಕಟನೆಯು ನವೀನವಾದದ್ದು, ಆಶ್ಚರ್ಯಕರವಾದದ್ದು ನಾವು ೩೦ ಗಂಟೆ ನಡೆಯುವ ಶಾಶ್ವತವಾದ ಐದು ವರುಷದ ಗ್ಯಾರಂಟಿ ಉಳ್ಳ ಲೀವರ್ ಗಡಿಯಾರವನ್ನು ಉಚಿತ ಬೆಲೆಯನ್ನಾಗಿ ಕಳುಹಿಸುತ್ತೇವೆ ಇದರಲ್ಲಿ ಸತ್ಯವಾದ ಕಂಪನಿಯ ಕೀರ್ತಿ ಹೆಚ್ಚಬೇಕೆಂಬುದೊಂದೇ ನಮ್ಮ ಮುಖ್ಯ ಉದ್ದೇಶ ಒಂದಾವರ್ತಿ ನಮಗೆ ಬರೆದು ತರಿಸಿ ನಮ್ಮ ಸತ್ಯತೆಯನ್ನು ಪರೀಕ್ಷೆಮಾಡಿ ಗಡಿಯಾರದ ಕೂಡ ನಾವು ಕಳುಹಿಸುವ ಬಹುಮಾನಗಳೇನೆಂದರೆ—ಒಂದು ಗಡಿಯಾರ, ಬಲವಾದಸ್ಪ್ರಿಂಗು, ೩೦ ಗಂಟೆ ನಡೆಯುವದು, ಹಿಂದೆ ಎರಡು ಮುಚ್ಚಳ ಪರೀಕ್ಷೆಯಿಂದ ಸರಿ ಮಾಡಿದ್ದು, ಒಂದು ಸೊಗಸಾದ ಪೆಟ್ಟಿಗೆಯೂ, ಐದು ವರುಷದ ಜಾಮೀನು ಉಳ್ಳದ್ದು ಒಂದು ಸೊಗಸಾದ ಗಡಿಯಾರದ ಸರಪಳಿ ಅದಕ್ಕೆ ಬೇಗವ ಕ್ಲಿಪ್ಪು ಉಳ್ಳ ಬಲವಾದ ಇಂಗ್ಲಿಷ್ ಪಾದರಕ್ಷೆ ಒಂದು ಜೊತೆ ಸರಬರಾಯಿ ಒಂದು ದೊಡ್ಡ ಜುಬ್ಬ ಒಂದಾನೆಯ ಎಣ್ಣೆ ಹಾಕಿದರೆ ಒಂದು ತಿಂಗಳು ಉರಿಯುವ ಹೊಸ ತರಹ ಲಾಂಪು ಒಂದಾವರ್ತಿ ಹಾಯಿ ತುಂಬಿದರೆ ಅನೇಕ ದಿನಗಳ ತನಕ ಬರೆಯುವ ಫೌಂಟನ್ ಪೆನ್ನು ಒಂದು ಜೊತೆ ದೊಡ್ಡ ಕಾಲುಚೀಲ ಬಲವಾದ ದಂತದ ಕೈಪಿಡಿಯುಳ್ಳ ಚಾಕು ಒಂದು ದೊಡ್ಡ ಕತ್ತರಿ ಒಂದು ದೊಡ್ಡ ಚರ್ಮದ ಪುಸ್ತಕಹಾಕಿಡುವ ಚೀಲ ಒಳ್ಳೆ ಬಾಚಣಿಗೆ ಒಂದರ ಕನ್ನಡಿ ಕೂದಲು ಬಾಚಿಕೊಳ್ಳುವ ಬ್ರಷು ಸರಬರ ಒಂದು ಸೆಟ್ ಗುಂಡಿಗಳು ಒಂದು ಸೊಗಸಾದ ಕನ್ನಡಕ ಒಂದು ಸಾಬೂನುಬಿಲ್ಲೆ ಒಂದು ಸೊಬಗಿನಚಪ್ಪ ಒಂದು ಕೈವಸ್ತ್ರ ಎಂದಿಗೂ ಹೊಳಪುಕೆಡದ ಚಿನ್ನದ ಒಂದು ಉಂಗುರ ಸುಂದರವಾದ ನೆತ್ತಿ ಹಾಯುಕಡಿಕೆ ಒಂದು ಪೆರ್ಸಲ್ ಬರೆಯುವ ೬ ಲೆಟರ್ ಕಾರ್ಡುಗಳು ೬ ಕವರು ಪೆನ್ಸಿಲುಗಳು ೧೨೦ ಲಕೋಟೆಗಳು ೧೫೦ ಲೆಟರ್ ಪೇಪರುಗಳು ಪೋಸ್ಟ್ ರೂಲಿಸಿದ ಸುಂದರವಾದ ೧೦೦ ಪೋಸ್ಟ್ ಕಾರ್ಡುಗಳು ೩೩ ನೈಲ್ ಮೊಳೆಗಳು

ಇಷ್ಟಕ್ಕೆಲ್ಲಾ ಕ್ರಯ ರೂ ೩-೮-೦ ಮಾತ್ರವೇ

ಆರ್ಧ ಹಣ ಅಡ್ವಾನ್ಸ್ ಮಣಿಆರ್ಡರ್ ಬಂದಲ್ಲಿ ಉಳಿದ ಆರ್ಡರಕ್ಕೆ ವಿ ಪಿ ಮಾಡುತ್ತೇವೆ ಒಪ್ಪದಿದ್ದರೆ ಹಣ ವಾಪಸು ಕಳುಹಿಸುವೆವು

ಈ ವಿಳಾಸಕ್ಕೆ ಬೇಗ ಬರೆಯಿರಿ —

ಎಂ. ಸಿ. ಕುಟಾಲಾ ಮತ್ತು ಕಂಪನಿ,

ಚಿತ್ತೂರು. ಉತ್ತರ ಆರ್ಕಾಟು.

CHAMBERLAIN'S PAIN BALM

ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವು



41 8

ಬೆನ್ನುಉಳುಕಿನಲ್ಲಿನ ನೋವು ಪಕ್ಕಗಳಲ್ಲಿ ಆಗುವ ನೋವು, ಖಂಡಗಳಲಿ ಹುಟ್ಟುವ ನೋವು, ಚಳಿನೋವು ಜಜ್ಜಿದ ಕಡೆಗಳ ನೋವು, ವಾಯುನೋವು—ಇವುಗಳನ್ನೆಲ್ಲಾ ಸಂಪೂರ್ಣವಾಗಿ ನಾಸಿಮಾಡುವಂಥಾ ಔಷಧ ವಾಯುನೋವೆಂದರೇನು?

ಕೀಲುಗಳಲ್ಲೂ ಮಾಂಸಕಟ್ಟುಗಳಲ್ಲೂ ಗಾಯವಾಗುವುದು, ಊದಿಕೊಳ್ಳುವುದು, ಕಠಿಣವಾಗಿ ಕಳೆಯುವುದು, ಖಂಡಗಳಲ್ಲಿ ಇರಿಯುವುದು, ವಿಶ್ರಾಂತಿಕೊಡದೆ ಇರುವುದು, ನಿದ್ದೆಕತ್ತದೆ ಇರುವುದು—ಇದೇ ಇದೆಲ್ಲಾ ನಿಮಗೆ ಯಾವಾಗ ಉಂಟಾಗುವುದೋ ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯ ತಕ್ಕದ್ದು

ಆಗ ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹ ಶಾಖವು ಮೈಯಲ್ಲಿ ವ್ಯಾಪಿಸುತ್ತದೆ ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ ಮನಸ್ಸಿಗೆ ಉಲ್ಲಾಸವಾಗುತ್ತೆ ಅದನ್ನೇ ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯುವಿನ ಹುಟ್ಟನ್ನೇ ಕಿತ್ತು ಹಾಕಿಬಿಡುತ್ತದೆ

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕ್ಷೇಮಕರ ಮುಟ್ಟಿದ್ದೇನೂ ಇಲ್ಲ

ಇದು ಎಲ್ಲೆಲ್ಲೂ ವಿಕರಿಯಾಗುತ್ತದೆ ಸಣ್ಣ ಸೀಸೆಗೆ ೧ ರೂಪಾಯಿ ದೊಡ್ಡ ಸೀಸೆಗೆ ೨ ರೂಪಾಯಿ

೧೮೯೬ ರಿಂದ ೧೯೦೨ ವರೆಗೆ

ಕಾಲದ ಪರೀಕ್ಷೆ!

ಮುವತ್ತೇಳು ವರ್ಷಗಳಿಗಿಂತಲೂ ಹೆಚ್ಚಾಗಿ

SCOTT S EMULSION

31 28

(ಸ್ಕಾಟ್ಸ್ ಇಮಲ್ಶನ್)

ಎಂಬೀ ಸೇವನಾ ಔಷಧಿಯನ್ನು ಘನ ಪಂಡಿತರೆಲ್ಲಾ ಅನೇಕ ಮೇಳ ಪರಿಶೋಧನೆಮಾಡಿ ಸರ್ವೋತ್ತಮವಾದದ್ದೆಂದು ಹೇಳಿರ ತ್ತಾರೆ

ಆದದರಿಂದ ಮುಂದಿನ ರೋಗಗಳಿಗೆ ಪ್ರಪಂಚದಲ್ಲೆಲ್ಲಾ ಈಗ ಈ ಔಷಧವು ಸರ್ವ ಶ್ರೇಷ್ಠವಾದದ್ದಾಗಿ ಪರಿಣಮಿಸಿದೆ —

ಶ್ವಾಸಕೋಶದ ಅಸ್ವಸ್ಥತೆಗಳು, ನಾನಾ ತರಹ ಕೆಮ್ಮಲು,

ಸಕಲವಿಧ ಕೃಶತ್ವಗಳು, ನಾಂಸಖಂಡಗಳ ಕ್ಷೀಣತೆ

ಅಜೀರಾವಸ್ಥೆಯಲ್ಲಿ ಅರುಚಿ

ಇದಲ್ಲದೆ ತಂದೆಗೂ ಮಗನಿಗೂ ಬಲಕಾರಿಯಾದ ಮತ್ತು ಅಂಗ ಬೆಳಸುವ ಸೇವನಾ ಔಷಧವೂ ಇದೇ

ಕೈ ಸೋಕದೆ ತಯಾರಾದದ್ದು

ಔಷಧಗಳ ಅಂಗಡಿಗಳಲ್ಲೆಲ್ಲಾ ವಿಕರಿಯಾಗುವದು

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್.

ಈ ಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

7೧

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ವಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೀಳುವದು ಅವು ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು (೨) ಟೋಪಿಗಳನ್ನು ಬಿಡದ್ದಾಗಿ ನಾವೇ ನಿಂತ ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಿಳಿ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಿಳಿ ಬಣ್ಣ ಬರುವ ಟೋಪಿಗಳು ಬೇಕಾದರೆ, ನಮಗೆ ಸೀಘ್ರ ಬರೆದು ತರಿಸಿಕೊಳ್ಳಿ ಅಗ್ಗವಾದದ್ದು ಚನ್ನಾಗಿಲ್ಲದ್ದು ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ

ಸಾದಾ, ಕೆಂಪು ಕಪ್ಪು, ಬಿಳಿ, ಕಾಫಿ ಟೋಪಿಗಳು ೧ ರೂ ೮ ಆ,

೧ ರೂ ೪ ಆ, ೧ ರೂ ೬ ಆ

ರೇಷ್ಮೆ ಜುಕ್ಕಿಯುಳ್ಳ ಟೋಪಿಗಳು ೧ ರೂ ೮ ಆ ೨ ರೂ

ಜರಿದ ಟೋಪಿಗಳು - ರೂ ೧೨ ಆ, ೧ ರೂ ೮ ಆ, ೧ ರೂ ೬ ಆ

ಉಣ್ಣೆ ಟೋಪಿಗಳು ೧ ರೂ ೮ ಆ, ೧ ರೂ ೬ ಆ

ಸಗಟುಗಳ ಟೋಪಿ, ಸೂಟಿ ಮುದಿರಿಯ ಆರ್ಡರ ಮೇಲೆ ಡಜನ ಕಣ್ಣ ಪಟ್ಟಿ ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳ ವಂಥವರಿಗೆ ಕೊಟ್ಟು ಕಳಿಸುತ್ತೇವೆ

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ

ಉಪಾಧ್ಯಾಯರೆಲ್ಲರೂ

ಓದತಕ್ಕ ನೋಟೀಸ್.

29 8

ಮೈಸೂರು ಸರ್ಕಾರದ ವಿದ್ಯಾಭ್ಯಾಸದ ಇಲಾಖೆ ಇನ್ಸ್ಪೆಕ್ಟರ್ ಜನರಲ್‌ರವರು ಕೆಳಗೆ ಕಂಡ ಪುಸ್ತಕಗಳನ್ನು ಸರ್ಕಾರದ ಸ್ಕೂಲುಗಳಲ್ಲಿಯೂ, ಗ್ರಾಂಟ್ ಪಡೆಯುವ ಪಾಠಶಾಲೆಗಳಲ್ಲಿಯೂ ಮತ್ತು ಆಂಗ್ಲೋ ವರ್ನಾಕ್ಯುಲರ್ ಸ್ಕೂಲ್‌ಗಳಲ್ಲಿಯೂ ಮತ್ತೊಂದು ಹುಕುಂ ಕೊಡ ವರೆಗೂ ಉಪಯೋಗಿಸಬೇಕೆಂದು ಕಳೆದ ಜೂಲೈ ೨೯ನೆ ತಾರೀಖು ಮೈಸೂರು ಗೆಜೆಟ್ಟಿನಲ್ಲಿ ಪ್ರಾಯಿಪ್ ಮಾಡಿರುತ್ತಾರೆ

ಭೂಗೋಳ ಶಾಸ್ತ್ರದ ಮೊದಲನೆಯ ಪುಸ್ತಕ (ನೆಯ ಎರಡನೆಯ ಭಾಗ, ಒಂದೇ ಪುಸ್ತಕ ಈ ಪುಸ್ತಕದಲ್ಲಿ ನಾಲ್ಕು ಬಣ್ಣದ ನಕ್ಷೆಗಳೂ ಮಕ್ಕಳಿಗೆ ಭೂಗೋಳಶಾಸ್ತ್ರವನ್ನು ವಿಶದವಾಗಿ ಹೇಳಿಕೊಡುವುದಕ್ಕೆ ಸಾಹಿತ್ಯವಾಗಿರುವ ಟೀ ಹನ್ನೆರಡು ಚಿತ್ರಗಳೂ ಇರುತ್ತವೆ) ಎರಡನೇ ಕ್ಲಾಸಿಗೆ ಕ್ರಯ ೪ ಆಣೆ

ಭೂಗೋಳ ಸಂಗ್ರಹ (ಮಿ॥ ಟಿ ಎಂ ರಾಮಸ್ವಾಮಯ್ಯನವರು ಬರೆದುದು ಈ ಪುಸ್ತಕವು ಪ್ರಕಾರವಾದಂದಿನಿಂದ ಅನೇಕ ಸಹಸ್ರ ಪ್ರತಿಗಳು ಮಾರಾಟವಾಗಿವೆಯೆಂದು ವಾಚಕ ಮಹನೀಯರು ತಿಳಿದಿರಬಹುದು) ಮೂರನೇ ಕ್ಲಾಸಿಗೆ ಕ್ರಯ ೪ ಆಣೆ

ಮೇಲ್ಕಂಡ ಪುಸ್ತಕಗಳನ್ನು ಉಪಾಧ್ಯಾಯರೆಲ್ಲರೂ ತಡಮಾಡದೆ ಜಾಗ್ರತೆಯಲ್ಲಿ ತರಿಸಿಕೊಳ್ಳತಕ್ಕದ್ದು

ವಿಳಾಸ—ಮ್ಯಾನೇಜರ್,

ಸಿ ಎಲ್. ಎಸ್ ಬುಕ್ ಡಿಪ್ಪೋ, ಮೈಸೂರು

ನೀವೇ ಸಿವಾಸಿಸಿ ನೋಡಿರಿ

93-1

ಯಾವದು ಉತ್ತಮ ಸ್ವತಃ ಪರೀಕ್ಷಿಸಿ ನೋಡಿ ನಮಗೆ ಕಲ್ಕತ್ತೆಯ ಒಬ್ಬ ಪ್ರಸಿದ್ಧ ಡಾಕ್ಟರರ ಅನುಭವವನ್ನು ನಂಬ ಬೇಡಿ! ನೂತನವಾಗಿದ್ದರೆ ಪರೀಕ್ಷೆಯಾಗಿ ... ನಡೆಸುವಾಗ ಉಂಟೋ ಎಂಬದನ್ನು ಮಾತ್ರ ಮಾಡಿಕೊಳ್ಳಬೇಕು ... ಸಂದೇಹ ಹುಟ್ಟುವದು ... ಮಾತಾಗಿರುವದಿಲ್ಲ ಡೋಕ್ಟರ ... ಪ್ರತಿ ಒಂದು ಸೀಸೆಯೊಂದಿಗೆ ... ಕಳಿಸಿದನ್ನು ಓದಿ ನೋಡಿರಿ ಮೆಡಿಕಲ್ ಕಾಲೇಜಿನಲ್ಲಿ ... ಶಾಸ್ತ್ರದ (ಬಾಟನಿ) ... ವೈದ್ಯದ ... ಚಿಕಿತ್ಸಕರಾ ... ಡೋಕ್ಟರ (...) ... ಮೂತ್ರಕೋಶದ ಔಷಧಿ ಗುಳಿಗೆಗಳನ್ನು ... ಸಹಜವಾದ ... ಪರಿಸಿ ಹೆಚ್ಚು ಸಮಾಧಾನ ಪಟ್ಟಿದ್ದೇನೆ ... ಗಳು ಮೂತ್ರಪಿಂಡಗಳ ದೋಷದಿಂದಾಗುವ ... ಯಾವತ್ತೂ ಸಂಗತಿಗಳಲ್ಲಿ ಈ ಔಷಧದಿಂದ ತಕ್ಷಣವೇ ... ದೇಹಕ್ಕಾಗಿ ಗುಣಕಂಡ ಸಿಕ್ಕುತ್ತದೆ

ಅಪ್ಪ ಮೂತ್ರಕೋಶದ ಬಗ್ಗೆನೇ ಮುಖ್ಯವಾಗಿ ಉದ್ದೇಶಿಸಲ್ಪಟ್ಟ ಔಷಧವಾಗಿ ಮೂತ್ರಸಂಬಂಧವಾದ ವಿಷಯಾರ್ಥಗಳನ್ನು ... ಈ ರೀತಿ ... ವಾತರೋಗ ... ಪಿನ ... ಅವಸ್ಥೆ ...

ಎಲ್ಲಾ ಔಷಧ ವರ್ತಕರಿಂದ ಮಾರಲ್ಪಡುತ್ತವೆ ... ರೂ ... ಸೀಸೆಗಳಿಗೆ ... ಯುವಲ್ಲಿಯ ಡೋಕ್ಟರ ಔಷಧಗಳ ... ಕೊಳ್ಳಬಹುದು ...

ವೃತ್ತಾಂತ ಪತ್ರಿಕೆ.

---:o:---

೧೯೦೭ ನೇ ಇಸವಿ ಸೆಪ್ಟೆಂಬರ್ ತಾ॥ ೨೬ ನೇ ಗುರುವಾರ

ಕೈಗಾರಿಕೆಗಳ ಪ್ರದರ್ಶನವು.

ಈ ಸಲ ನವರಾತ್ರಿ ಉತ್ಸವಕ್ಕೆ ಸಂಬಂಧಪಟ್ಟಂತೆ ರಾಜಧಾನಿಯಲ್ಲಿ ಸರ್ಕಾರದವರು ಕೈಗಾರಿಕೆಯ ವಸ್ತುಗಳನ್ನೂ ವ್ಯವಸಾಯ ಪದಾರ್ಥಗಳನ್ನೂ ಇಡಿಸಿ ಪ್ರದರ್ಶನ ಮಾಡಿಸುತ್ತಾರೆಂಬುವುದು ನಮ್ಮ ವಾಚಕರಿಗೆ ತಿಳಿದಿರುವುದು. ದಕ್ಕಾಗಿ ಪ್ರದರ್ಶನದ ಕಮಿಟಿಯವರು ತುಂಬಾ ಸಾಹಸಪಟ್ಟು ಪ್ರದರ್ಶನ ಶಾಲೆಯನ್ನು ಸಿದ್ಧಪಡಿಸಿ, ವಸ್ತು ವಿಶೇಷಗಳನ್ನು ತರಿಸಿಡುತ್ತಲಿದ್ದಾರೆ. ಈ ಪ್ರದರ್ಶನದ ಪ್ರಾರಂಭ, ಗಂಡಸರ ಹೆಂಗಸರನ್ನು ನೋಡುವುದಕ್ಕೆ ಬಿಡುವುದು, [illegible] ಕ್ರಮ, ಕಸಬುದಾರರಿಗೂ ವ್ಯವಸಾಯಗಾರರಿಗೂ ಪ್ರಜಾಪ್ರತಿನಿಧಿಗಳಿಗೂ ರಿಯಾಯಿತಿಗಳು, ಈ ಮೊದಲಾದ ವಿಚಾರಗಳನ್ನು ಕುರಿತು ಗವರ್ನಮೆಂಟಿನವರು ಪ್ರಕಟಿಸಿದ ಹುಕುಮನ್ನು ಈ ಪತ್ರಿಕೆಯ ಇನ್ನೊಂದು ಭಾಗದಲ್ಲಿ ವಾಚಕರು ಓದಿ ತಿಳಿದುಕೊಳ್ಳಬಹುದಾಗಿದೆ.

ಈ ಸಲ ಪ್ರದರ್ಶನವು ತೃಪ್ತಿಕರವಾಗಿ ನೆರವೇರಬಹುದೆಂದು ಕಾಣುತ್ತಿದೆ ಮತ್ತು ಮುಂದಿನ ವರುಷಗಳಲ್ಲಿ ಅವಶ್ಯ[illegible] ಕಂಡು ಬರುವ ಬದಲಾವಣೆಗಳನ್ನು ಮಾಡಿ, ಈ ಪ್ರದರ್ಶನವನ್ನು ಇನ್ನೂ ಅಭಿವೃದ್ಧಿಗೆ ತರಬಹುದು. ಅದ[illegible] ಉತ್ಸಾಹಪಟ್ಟು ಹೆಚ್ಚು ಪ್ರಜೆಗಳು ಹೊರಗಿನಿಂದ ಈ [illegible] ಬರುತ್ತಾರೆನ್ನುವುದು ಸಲ್ಪ ಅನುಮಾನವಾಗಿದೆ. ಯಾ[illegible] ರಾಜಧಾನಿಯಲ್ಲಿ ಈಗ ಪ್ಲೇಗ್ ಉಪದ್ರವು ಇರೋ[illegible] ಅನೇಕರು ಹೆದರಿ ಇಲ್ಲಿಗೆ ಬರದೆಹೋಗಬಹುದು. ವ್ಯವಸಾಯದಿಂದಲೂ ಕೈಗಾರಿಕೆಗಳಿಂದಲೂ ಜೀವನ ಮಾಡತಕ್ಕವರಾದರೂ ತಮ್ಮ ಕಸಬುಗಳನ್ನು ಅಭಿವೃದ್ಧಿಗೆ ತಂದುಕೊಳ್ಳುವುದಕ್ಕೂ ಪ್ರದರ್ಶನವನ್ನು ಬಂದು ನೋಡುವುದಕ್ಕೂ ಚೈತನ್ಯ ಸಾಲದ ಬಡ ಪ್ರಜೆಗಳನ್ನು ಸರ್ಕಾರದವರೇ ಪ್ರಯಾಣದ ಖರ್ಚು ಕೊಟ್ಟು ಕರಸುವಂತೆ ಏರ್ಪಾಡು ಮಾಡಿರುವುದಕ್ಕಾಗಿ ಸಂತೋಷಪಡುವೆವು. [illegible]ರರೂ ಡೆಪ್ಯುಟಿ ಕಮಿಷನರೂ ಸರ್ಕಾರದವರ ಈ ಔದಾರ್ಯವನ್ನು ಕಸಬುದಾರರಿಗೆ ತಿಳಿಯಪಡಿಸಿ, ಅನೇಕರು ಹೇಗಾದರೂ ರಾಜಧಾನಿಗೆ ಬಂದು ಈ ಪ್ರದರ್ಶನವನ್ನು ನೋಡಿ ಪ್ರಯೋಜನ ಹೊಂದಿ ಹೋಗುವಂತೆ ನೋಡಿಕೊಂಡಾರೆಂದು ನಂಬುತ್ತೇವೆ. ಹ್ಯಾಗೂ ವಿವಿಧ ವಸ್ತುಗಳನ್ನು ಪ್ರದರ್ಶನ ಮಾಡತಕ್ಕವರೂ, ಗೋಕಾಮಿಗಳನ್ನು ಪ್ರದರ್ಶನಕ್ಕೆ ತರತಕ್ಕವರೂ, ನೋಟಕ್ಕಾಗಿ ಬರತಕ್ಕವರೂ ಈ ಸಲ ಹೆಚ್ಚಾಗಿಯೇ ಇದ್ದಾರೆಂದು ನಿರೀಕ್ಷಿಸುವೆವು.

ಸ್ವದೇಶದ ವೃತ್ತಾಂತಗಳು.

[illegible] ಸಾಂಗ್ಲಿ [illegible] ಸಾರ್ವಜನಿಕ [illegible] ಕಾರ್ಯಗಳನ್ನು ಈ ಪತ್ರಿಕೆ[illegible]

* * *

ಕಳೆದ ಶನಿವಾರ ರಾತ್ರಿ ದಿವಾನ್ ಮ॥ ವಿ. ಪಿ. ಮಾಧವರಾಯರು [illegible] ಸಂಚಾರ ಮಾಡಿಕೊಂಡು ಬರುವುದಕ್ಕಾಗಿ [illegible]ನಿಂದ ಪ್ರಯಾಣವಾಗಿದ್ದಾರೆ.

* * *

[illegible]ನಲ್ಲಿ ಹೊಸದಾಗಿ ಕಟ್ಟಿ ನಡಿಸುತ್ತಿರುವ [illegible] ಅವರಿಗೆ ಚಿಕಿತ್ಸೆ ಮಾಡುವ ಆಸ್ಪತ್ರೆಯ ಖರ್ಚಿಗೆ [illegible] ವರುಷಕ್ಕೆ ೫೦೦ ರೂಪಾಯಿನಂತೆ ಐದು [illegible] ಕೊಡುವುದಾಗಿ [illegible] ಮಾಡಿರುತ್ತಾರೆಂದು ಕೇಳುತ್ತೇವೆ.

* * *

ಶೇಷಪ್ಪ, ರಾಮಸ್ವಾಮಿ ಎಂಬ ಇಬ್ಬರು ಬ್ರಾಹ್ಮಣರು ರಾಜಧಾನಿಯ [illegible] ಕೃಷ್ಣಪ್ಪನವರ ಮತ್ತು [illegible]ಗಳ [illegible] ಕಳವು ಮಾಡಿದ್ದಕ್ಕಾಗಿ ಮ್ಯಾಜಿಸ್ಟ್ರೇಟರು ಶೇಷಪ್ಪನಿಗೆ ೧೨ ತಿಂಗಳು, ರಾಮಸ್ವಾಮಿಗೆ ೬ ತಿಂಗಳು [illegible] ಸಜಾ ವಿಧಿಸಿದರೆಂದು ಕೇಳುತ್ತೇವೆ.

* * *

[illegible] ಸಂಸ್ಥಾನದ ದಿವಾನರೂ [illegible] ಮಂತ್ರಿಗಳಾದ ಮ॥ [illegible] ದತ್ತರವರು ಕಳೆದ [illegible] ಬೆಂಗಳೂರಿಗೆ ಬಂದರು ಮತ್ತು [illegible] ಸಂಸ್ಥಾನದ ದಿವಾನರಾಗಿ ನೇಮಿಸಲ್ಪಟ್ಟಿರುವ ಮ॥ [illegible] ಬೆಂಗಳೂರಿಗೆ ಬಂದು ನಮ್ಮ ದಿವಾನರ [illegible] ಮಾತನಾಡಿಕೊಂಡು ಹೋದರು.

* * *

ಮ॥ ಎಚ್. ಪಿ. [illegible] ಅವರು ಕೆಲವು ದಿನಗಳ ಹಿಂದೆ [illegible] ಚಿನ್ನದ ಗಣಿಯ ಸ್ಥಿತಿಗತಿಯನ್ನು ಹೋಗಿ ನೋಡಿ ಬಂದರು. ಅಲ್ಲಿ ಚಿನ್ನವನ್ನು ತೆಗೆಯುವುದಕ್ಕೆ ಒಂದು ಕಂಪೆನಿ ಏರ್ಪಾಡಾಗುತ್ತಿದ್ದಲ್ಲಿ ಈ ಕಂಪೆನಿಯ ಮೂಲಧನವು ೯ ಲಕ್ಷ ರೂಪಾಯು; ಷೇರು [illegible] ರೂಪಾಯಿನಂತೆ [illegible]. ಮೈಸೂರು [illegible] ಷೇರುಗಳಲ್ಲಿ ಬಹು ಭಾಗವನ್ನು ಕೊಳ್ಳುವರೆಂತಲೂ, ಕೆಲವು ಸಾವಿರ ಷೇರುಗಳನ್ನು ಮಾತ್ರ ಪಬ್ಲಿಕ್ ಜನರಿಗೆ ವಿಕ್ರಯ ಮಾಡುವರೆಂತಲೂ ಕೇಳುತ್ತೇವೆ.

* * *

ಬೆಂಗಳೂರು ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಜಡ್ಜರಾಗಿದ್ದು ಪೆನ್ಷನ್ ಪಡೆದ ಮ॥ ಎಸ್. ಆರ್. ಸುಬ್ರಾಯ ಅಯ್ಯರವರು ಕಳೆದ ಶುಕ್ರವಾರ ಬೆಂಗಳೂರಿನಲ್ಲಿ ಕಾಲವಾದರೆಂದು ವಿಷಾದಿಸುತ್ತೇವೆ. ಇವರಿಗೆ ೬೭ ವರುಷ ವಯಸ್ಸಾಗಿತ್ತು. ಅವರು ಕಳೆದ ೧೮೬೫ನೆ ಇಸವಿಯಲ್ಲಿ ಮೊದಲು ಈ ಸಂಸ್ಥಾನದ ನೌಕರಿಗೆ ಬಂದು, ಹೆಡ್ ಮುನ್ಷಿ, ಶಿರಸ್ತೇದಾರಿ, ಮುನ್ಸಿಫ಼, ಸಬ್ ಜಡ್ಜ್, ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಜಡ್ಜರಾಗಿ ಬಡ್ತಿ ಹೊಂದಿ, ಸುಮಾರು [illegible] ವರುಷದ ಹಿಂದೆ ಪೆನ್ಷನ್ ಮೇಲೆ ಕೆಲಸ ಬಿಟ್ಟಿದ್ದರು.

* * *

ಒಕ್ಕಲಿಗರ ಸಭೆಯ ಪ್ರೆಸಿಡೆಂಟರೇ ಮೊದಲಾದವರು ಕಳೆದ ವಾರ ರಾಜಧಾನಿಗೆ ಬಂದು ಇಲ್ಲಿನ ಕಮಿಟಿ ಮೆಂಬರುಗಳ ಕೂಡ [illegible] ಆಲೋಚನೆ ಮಾಡಿದ್ದರಲ್ಲಿ ಬೆಂಗಳೂರು ಮತ್ತು ಮೈಸೂರು ಡಿಸ್ಟ್ರಿಕ್ಟುಗಳೊಳಗೆ ಒಕ್ಕಲಿಗ ಪ್ರಜಾ ಸಂಖ್ಯೆಯು ಹೆಚ್ಚಾಗಿರೋಣದರಿಂದ ಬೆಂಗಳೂರಿನಲ್ಲೂ ಮೈಸೂರಿನಲ್ಲೂ ಒಕ್ಕಲಿಗ ಬಾಲಕರ ವಿದ್ಯಾಭಿವೃದ್ಧಿಗಾಗಿ ಏಕಕಾಲದಲ್ಲಿ ಒಂದೇ ರೀತಿಯಾಗಿ ವಿದ್ಯಾರ್ಥಿ ನಿಲಯಗಳನ್ನೂ ಪಾಠಶಾಲೆಗಳನ್ನೂ ಪ್ರಾರಂಭಿಸಿ ನಡಸುವುದು ಆವಶ್ಯಕವೆಂದು ಗೊತ್ತುಮಾಡಿ, ಈ ವಿಷಯವನ್ನು ಮಹಾ ಸಭೆಯಲ್ಲಿ ಸೂಚಿಸಿ ತೀರ್ಮಾನಮಾಡಬೇಕೆಂದು ನಿಶ್ಚಯಿಸಿರುತ್ತಾರೆಂದು ಕೇಳುತ್ತೇವೆ.

* * *

ಪ್ರಜಾಪ್ರತಿನಿಧಿ ಸಭೆಗೆ ಮೆಂಬರಾಗಬಹುದಾದವರ ಮತ್ತು [illegible] ಓಟರುಗಳ ಹೆಸರುಗಳನ್ನು ಆಷಾಢಶುದ್ಧ [illegible]ಯೊಳಗಾಗಿ ಸರ್ಕಾರಿ ಗೆಜೆಟ್ಟಿನಲ್ಲಿ ಪ್ರಕಟಿಸಬೇಕೆಂತಲೂ, ಆ ಪಟ್ಟಿಯಲ್ಲಿ ಬಿಟ್ಟು ಹೋಗಿರತಕ್ಕವರು [illegible] ದಿನಗಳೊಳಗಾಗಿ ಡೆಪ್ಯುಟಿ ಕಮಿಷನರಿಗೆ ಬರೆದು ತಿಳಿಸಿ ತಮ್ಮ ಹೆಸರುಗಳನ್ನು ದಾಖಲ್ ಮಾಡಿಸಿಕೊಳ್ಳಬಹುದೆಂತಲೂ, ತಾಲ್ಲೂಕ್ ಮೆಂಬರುಗಳು ಮೂರು ವರುಷಗಳ ತನಕ ಮೆಂಬರಾಗಿರತಕ್ಕದ್ದೆಂತಲೂ, ಯಾವ ಮೆಂಬರಾದರೂ ಕೋರ್ಟುಗಳಲ್ಲಿ ಬಡ್ತಿ ಚಾಲಿಸಿದವರೆಂಬ ಅಪಾದನೆಗೆ ಗುರಿಯಾಗಿದ್ದಲ್ಲಿ ಅಂಥವರ ಹೆಸರನ್ನು ಪ್ರತಿನಿಧಿಗಳ ಪಟ್ಟಿಯಿಂದ ವಜಾ ಮಾಡಬೇಕೆಂತಲೂ ಸರ್ಕಾರದವರು ಹುಕುಂ ಕೊಟ್ಟಿದ್ದಾರೆ.

* * *

ಬಳ್ಳಾರಿ ಬಾತ್ಮೀದಾರರು ಬರೆಯುವುದು — ಈ ತಿಂಗಳು ೧೨ ನೇ ತೇದಿ ಗುರುವಾರ ಹಗಲು ಸುಮಾರು ೩ ಗಂಟೆಯ ಸಮಯದಲ್ಲಿ ಬಳ್ಳಾರಿ ಜಿಲ್ಲೆ ಹಡಗಲಿ ತಾಲ್ಲೋಕು [illegible] ಗಂಗಪ್ಪನೆಂಬುವಾತನ ಮನೆಗೆ ಕಳ್ಳರು ನುಗ್ಗಿ ತಿಜೋರಿಯನ್ನು ಹೊತ್ತುಕೊಂಡು ಹೋಗುತ್ತಿರಲಾಗಿ ಒಂದು ಮೈಲು ದೂರದಲ್ಲಿ ರುವ ಹಿರೆಹಡಗಲಿಯ ಸುಮಾರು ೫೦೦ ಜನರು ಬಂದು ಏನು ಪ್ರಯತ್ನ ಮಾಡಿದರೂ ಸಿಗದೆ, ಕೋರ್ಟ [illegible] ಹಾಯುಮಾಡಿರುತ್ತಾರೆ. ೩,೦೦೦ ರೂಪಾಯಿನ ಆಸ್ತಿಯನ್ನು ಪೈಕಿ ಇಲ್ಲಿಗೆ ೩ ಮೈಲು ದೂರದಲ್ಲಿರುವ [illegible] ಅಡವಿಯಲ್ಲಿ ಅಡಗಿರುತ್ತಾರೆ. ಕಳ್ಳರನ್ನು ಹಿಡಿದವರಿಗೆ ಅಪಾರವಾದ ಬಹುಮಾನವು ದೊರೆಯುವದು.

ಕೈಗಾರಿಕೆಗಳ ಪ್ರದರ್ಶನೋತ್ಸವವು

ರಾಜಧಾನಿಯಲ್ಲಿ ಪ್ರಾರಂಭವಾಗುವ ಕಾಲ ಮುಂತಾದ್ದು.

ಮೈಸೂರು ಪಟ್ಟಣದಲ್ಲಿ ನವರಾತ್ರಿ ಉತ್ಸವದ ಜೊತೆಗೆ ಕೈಗಾರಿಕೆಗಳ, ವ್ಯವಸಾಯೋಪಕರಣಗಳ ಮತ್ತು ಗೋಕಾಮಿಗಳ ಪ್ರದರ್ಶನವನ್ನು ನಡಿಸಬೇಕೆಂದು ಗವರ್ನಮೆಂಟಿನವರು ಗೊತ್ತುಮಾಡಿರುತ್ತಾರಷ್ಟೆ. ಈ ಪ್ರದರ್ಶನಗಳು ಅಕ್ಟೋಬರ್ ತಿಂಗಳು ೫ನೇ ತಾ. ಶನಿವಾರ ಬೆಳಿಗ್ಗೆ ೮ ಗಂಟೆಗೆ ಪ್ರಾರಂಭವಾಗುವುವು. ಆ ದಿನ ಶ್ರೀಮನ್ ಮಹಾರಾಜರವರು ದಯಮಾಡಿ ಪ್ರದರ್ಶನದ ದ್ವಾರವನ್ನು ತೆರೆಯುವುದಾಗಿ ಅನುಗ್ರಹಿಸಿರುತ್ತಾರೆ. ಆಹ್ವಾನ ಪತ್ರಿಕೆಗಳನ್ನು ಪಡೆದಿರತಕ್ಕವರನ್ನು ಮಾತ್ರ ಆ ದಿನ ಬೆಳಿಗ್ಗೆ ಪ್ರದರ್ಶನ ಶಾಲೆಗೆ ಬಿಡಲಾಗುವುದು. ಆದರೆ ಇತರರನ್ನು ಬಿಡತಕ್ಕ ದಿನ ಮುಂತಾದ ಕಾಲಗಳ್ಯಾವವೆಂದರೆ,

ಗಂಡಸರಿಗೂ ಹೆಂಗಸರಿಗೂ ಸಹ — ೫ನೇ ತಾ. ಶನಿವಾರ ಸಾಯಂಕಾಲ ೪ ರಿಂದ ೮ ಗಂಟೆ ತನಕ. ತರುವಾಯ ೬ನೇ ತಾ. ನಿಂದ ೧೬ ನೇ ತಾ. ವರೆಗೆ ಪ್ರತಿ ದಿನವೂ ಬೆಳಿಗ್ಗೆ ೭॥ ರಿಂದ ೧೧॥ ಗಂಟೆಯ ವರೆಗೆ. ತಾ. ೧೬, ೧೮, ಮತ್ತು ತಾ. ೨೧ ರಿಂದ [illegible] ವರೆಗೆ ದಿನವು ಬೆಳಿಗ್ಗೆ ೧೦ ರಿಂದ ರಾತ್ರಿ ೮ ಗಂಟೆ ತನಕ.

ಹೆಂಗಸರಿಗೆ ಮಾತ್ರ — ತಾ. ೬, ೧೧, ೧೯ ರಲ್ಲಿ ಮಧ್ಯಾಹ್ನ ೩ ರಿಂದ ರಾತ್ರಿ ೮ ಗಂಟೆ ತನಕ, ಮತ್ತು ತಾ. ೨೨ ರಲ್ಲಿ ಬೆಳಿಗ್ಗೆ ೭ ರಿಂದ ೧೦ ಗಂಟೆ ತನಕ. ಪ್ರಜಾ ಪ್ರತಿನಿಧಿ ಸಭೆಯ ಮೆಂಬರುಗಳಿಗೆ ಮಾತ್ರ (ಫೀಜು ಇಲ್ಲ) — ತಾ. ೨೦ನೆ ಭಾನುವಾರ ಮಧ್ಯಾಹ್ನ ೨ ರಿಂದ ರಾತ್ರಿ ೮ ಗಂಟೆ ತನಕ.

ಉಪನ್ಯಾಸಗಳ ಏರ್ಪಾಡು — ಅಕ್ಟೋಬರ್ ೧೬ರಿಂದ ೨೦ನೇ ತಾ. ವರೆಗೆ ನಾಲ್ಕು ದಿನಗಳೂ ಬೆಳಿಗ್ಗೆ ೯ ರಿಂದ ೧೧ ಗಂಟೆ ತನಕ ಪ್ರದರ್ಶನಶಾಲೆಯೊಳಗೆ ಉಪನ್ಯಾಸಗಳು ನಡೆಯುವಂತೆ ಏರ್ಪಾಡು ಮಾಡಿದೆ. ಇವನ್ನು ಕೇಳುವದಕ್ಕೆ ಬರತಕ್ಕವರು ಫೀಜು ಕೊಡಬೇಕಾದದ್ದಿಲ್ಲ. ಉಪನ್ಯಾಸ ನಡೆಯುವಾಗ್ಗೆ ಪ್ರದರ್ಶನವಸ್ತುಗಳನ್ನು ನೋಡಲು ಯಾರನ್ನೂ ಬಿಡುವದಿಲ್ಲ.

ಫೀಜಿನ ದರಗಳು — ಒಂದಾವರ್ತಿ ನೋಡುವುದಕ್ಕೆ ತಲೆಗೆ ೪ ಆಣೆ. ಐದು ಮಂದಿ ಉಳ್ಳ ಒಂದು ಮನೆಯವರು ನೋಡುವುದಕ್ಕೆ ೧೨ ಆಣೆ. ಸ್ಕೂಲ್ ಹುಡುಗರಿಗೆ ೨ ಆಣೆ. ಮೂರು ರೂಪಾಯಿ ಸೀಸನ್ ಟಿಕೆಟ್ ಪಡೆದವರು ಪ್ರದರ್ಶನ ಶಾಲೆ ತೆರೆದಿರುವ ಎಲ್ಲಾ ದಿನಗಳೂ [illegible] ಮೈಸೂರಿನಲ್ಲಿರುವ ಸ್ಕೂಲ್‌ಗಳ ಹೆಡ್ ಮಾಸ್ಟರುಗಳಿಗೆ ಟಿಕೆಟ್ಟುಗಳನ್ನು ಬಿಕರಿಗೆ ಕೊಡಿಸಲಾಗುವುದು. ವಿದ್ಯಾರ್ಥಿಗಳು ಅವರಿಂದ ಪಡೆಯಬಹುದು. ಇತರ ಕಡೆಗಳ ವಿದ್ಯಾರ್ಥಿಗಳೂ ತ[illegible] ಹೆಡ್ ಮಾಸ್ಟರುಗಳಿಂದಲೇ ಕೇಳಿ ಟಿಕೆಟ್ ಕೊಂಡು [illegible]

ಪ್ರದರ್ಶನ ವಸ್ತು[illegible]ರರಿಗೆ, ಅಥವಾ ಅವರ ಏಜಂಟರಿಗೆ, ಅಥವಾ ಅವರ ಸೇವಕನಿಗೆ ಮತ್ತು ಪ್ರದರ್ಶನಶಾಲಾ ನೌಕರರಿಗೆ ಮಾಫಿ ಟಿಕೇಟುಗಳನ್ನು ಕೊಡಲಾಗುವುದು. ಡೆಪ್ಯುಟಿ ಕಮಿಷನರ ರಿಂದ ಸರ್ಟಿಫಿಕೇಟು ಪಡೆದು ಬರತಕ್ಕ ಬಡಬಗ್ಗರಾದ ರೈತರಿಗೂ ಕಸಬುದಾರರಿಗೂ ಮಾಫಿ ಟಿಕೇಟು ಕೊಡಲ್ಪಡುತ್ತದೆ ಮತ್ತು ಅಂಥವರು ಪರಸ್ಥಳಗಳಿಂದ ಬರಬೇಕೆಂದು ಕಾತರಪಡುತ್ತಿದ್ದರೆ ಅಯಾ ಡೆಪ್ಯುಟಿ ಕಮಿಷನರು ಅವರ ಹೋಗಿಬರ ಪ್ರಯಾಣದ ಖರ್ಚನ್ನು ಸರ್ಕಾರದಿಂದ ಶಿಫಾರಸು ಮಾಡಿ ಕೊಡಿಸುವರು. ಅಂಥವರು ರಾಜಧಾನಿಗೆ ಬಂದರೆ ಅನ್ನೋದಕಗಳಿಗೆ ಮಾತ್ರ ಅವರೇ ಏರ್ಪಾಡು ಮಾಡಿಕೊಳ್ಳಬೇಕು. ಕಮಿಟಿಯವರು ಅಕ್ಟೋಬರ್ ತಾ. ೧ ರಿಂದ ಪ್ರದರ್ಶನಶಾಲೆಯ ಬಳಿ ಒಂದು ಪ್ರೈವೆಟ್ ಹೋಟೇಲನ್ನು ಇಡಿಸುವುದಕ್ಕೆ ಏರ್ಪಾಡು ಮಾಡುವರು.

ಮೈಸೂರು ಕಾಸ್ಮಾಪಾಲಿಟನ್ ಕ್ಲಬ್ಬಿನಲ್ಲಿ ನಡೆದ ಒಂದು ಸಂತೋಷಕಾರ್ಯವು.

ಕಳೆದ ಭಾನುವಾರ ರಾಜಧಾನಿಯ ಕಾಸ್ಮಾಪಾಲಿಟನ್ ಕ್ಲಬ್ಬಿನ ಮೆಂಬರುಗಳು ಅಡ್ವೊಕೇಟ್ ಮ॥ ಎಂ. ಸಿ. ರಂಗೈಯ್ಯಂಗಾರ್ಯರಿಗೆ ಔತನ ಮಾಡಿದರು. ಇಲ್ಲಿನ ಅಧಿಕಾರಿಗಳೂ ದೊಡ್ಡ ಮನುಷ್ಯರೂ ಸೇರಿ ಈ ಕ್ಲಬ್ಬನ್ನು ಮಾಡಿಕೊಂಡಿರುತ್ತಾರೆ. ಮೆಂಬರುಗಳ ಸ್ನೇಹಿ ಮ॥ ರಂಗೈಯ್ಯಂಗಾರರು ಒಬ್ಬರಾದ್ದರಿಂದಲೂ, ಅವರಿಗೆ ಮೈಸೂರು ಲೆಜಿಸ್ಲೆಟಿವ್ ಕೌನ್ಸಿಲ್ ಮೆಂಬರ ಸ್ಥಾನ ದೊರಕಿದ್ದರಿಂದಲೂ ಕ್ಲಬ್ಬಿನ ಮೆಂಬರುಗಳು ತಮ್ಮ ಸಂತೋಷವನ್ನು ಈ ಔತನ ಮೂಲಕ ಪ್ರಕಾಶಪಡಿಸಿದರು. ರಾಜಧಾನಿಯಲ್ಲಿರುವ ಕ್ಲಬ್ಬಿನ ಮೆಂಬರುಗಳಾದ ಎಲ್ಲಾ ದೊಡ್ಡ ಮನುಷ್ಯರೂ ಸೇರಿ ಸುಖ ಭೋಜನಮಾಡಿದರು. ರೆವಿನ್ಯೂ ಕಮಿಷನರ್ ಮ॥ ವಿ. ರಂಗಸ್ವಾಮಯ್ಯಂಗಾರ್ಯರು ಹಾಜರಾಗಿದ್ದರು. ತರುವಾಯ ಪ್ಯಾಲೇಸ್ [illegible] ಮ॥ ವೀಣೆ ಶೇಷಣ್ಣನವರು ವೀಣಾಗಾನವನ್ನು ಮಾಡಿ ಸಂತೋಷಪಡಿಸಿದರು. ಸಾಯಂಕಾಲ ಟೆನ್ನಿಸ್ ಮೊದಲಾದ ಆಟಗಳಲ್ಲಿ ಮೆಂಬರುಗಳು ಸೇರಿ ಸ್ವಲ್ಪ ಹೊತ್ತು ವ್ಯಾಯಾಮದಲ್ಲಿ ಕಳೆದರು. ಕಡೆಯಲ್ಲಿ ಎಲ್ಲಾ ಮೆಂಬರುಗಳೂ ಕ್ಲಬ್ಬಿನೊಳಗೆ ಸಭೆ ಸೇರಿದರು. ಸಭಿಕರ ಅಭಿಪ್ರಾಯವನ್ನು ಅನುಮೋದಿಸಿ, ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಜಡ್ಜಿಗಳಾದ ಮ॥ ಟಿ. ಪರಮಶಿವ ಐಯ್ಯರವರು ಅಗ್ರಾಸನವನ್ನು ವಹಿಸಿ, ಮ॥ ರಂಗೈಯ್ಯಂಗಾರ್ಯರು ಕ್ಲಬ್ಬಿನ ಸೆಕ್ರೆಟರಿಯಾಗಿದ್ದುಕೊಂಡು ಅದರ ಪುರೋಭಿವೃದ್ಧಿಗೆ ತುಂಬಾ ಸಾಹಸಪಡುತ್ತಿದ್ದಾರೆಂತಲೂ ವಿದ್ಯಾದಿ ಸಾಮರ್ಥ್ಯ ಶೀಲರಾಗಿರೋಣದರಿಂದ ಅವರಿಗೆ ಲೆಜಿಸ್ಲೇಟಿವ್ ಕೌನ್ಸಿಲ್ ಮೆಂಬರ ಸ್ಥಾನ ದೊರೆತದ್ದು ಮೆಂಬರುಗಳಲ್ಲೆಲ್ಲಾ ತುಂಬಾ ಸಂತೋಷವನ್ನುಂಟುಮಾಡಿದೆ ಎಂತಲೂ, ಕ್ಲಬ್ಬಿನ ಮೆಂಬರುಗಳ ಪೈಕಿ ಮ॥ ವಿ. ಪಿ. ಮಾಧವರಾಯರೂ, ಮ॥ ಎಂ. ಕಾಂತರಾಜ ಅರಸಿನವರೂ, ಮ॥ ವಿ. ಎನ್. ನರಸಿಂಹೈಯ್ಯಂಗಾರರೂ, ಮ॥ ಎಂ. ಸಿ. ರಂಗೈಯ್ಯಂಗಾರರೂ ಲೆಜಿಸ್ಲೆಟಿವ್ ಕೌನ್ಸಿಲಿನಲ್ಲಿ ಮೆಂಬರುಗಳಾಗಿರುವ ವಿಚಾರವು ಮಹಾ ಸಂತೋಷಪ್ರದವಾಗಿರುತ್ತದೆಂತಲೂ ಹೇಳಿದರು. ತರುವಾಯ ಮ್ಯುನಿಸಿಪಲ್ ಕೌನ್ಸಿಲರ್ ಮ॥ ಅಂಬಳೆ ಅಣ್ಣಯ್ಯ ಪಂಡಿತರು — ಮ॥ ರಂಗೈಯ್ಯಂಗಾರ್ಯರು ಉಪಾಧ್ಯಾಯರಾಗಿದ್ದಾಗಲೂ ವಿಶೇಷವಾದ ಶ್ರದ್ಧೆಯನ್ನು ವಹಿಸಿ ಕಾರ್ಯ ನಡಿಸತಕ್ಕವರೆಂತಲೂ, ಮೈಸೂರು ಪಟ್ಟಣದ ಪ್ರಜೆಗಳ ಭಕ್ತಿ ವಿಶ್ವಾಸಗಳನ್ನು ಸಂಪಾದಿಸಿಕೊಂಡಿರತಕ್ಕವರಾದ್ದರಿಂದ ಇಂಥವರನ್ನು ಸರ್ಕಾರದವರು ಲೆಜಿಸ್ಲೆಟಿವ್ ಕೌನ್ಸಿಲ್ಲಿನ ಮೆಂಬರ್ ಕೆಲಸಕ್ಕೆ ನೇಮಕಮಾಡಿಕೊಂಡದ್ದು ಸಕಲ ಪ್ರಜೆಗಳಿಗೂ ಸಂತೋಷಪ್ರದವಾಗಿರುತ್ತದೆಂತಲೂ ತಿಳಿಸಿದರು. ಕಡೆಯಲ್ಲಿ ಮ॥ ಎಂ. ಸಿ. ರಂಗೈಯ್ಯಂಗಾರ್ಯರು ಎದ್ದು ಸಭಿಕರನ್ನು ಕುರಿತು ತಿಳಿಸಿದ ಮುಖ್ಯಾಭಿಪ್ರಾಯವೇನೆಂದರೆ —

ಕ್ಲಬ್ಬಿನ ಮೆಂಬರುಗಳಾದ ತಾವುಗಳೆಲ್ಲಾ ನನಗೋಸ್ಕರ ಇಷ್ಟು ಶ್ರಮಪಟ್ಟು ಈ ದಿವಸದ ಸಂತೋಷ ಕಾರ್ಯಗಳನ್ನು ಏರ್ಪಾಡು ಮಾಡಿದ್ದಕ್ಕಾಗಿ ಮನಃಪೂರ್ವಕವಾಗಿ ತಮ್ಮನ್ನು ವಂದಿಸುತ್ತೇನೆ. ಶ್ರೀಮನ್ ಮಹಾರಾಜರವರು ಪ್ರಜಾವಾತ್ಸಲ್ಯಪೂರಿತರಾಗಿ ಸಂಸ್ಥಾನಾಭಿವೃದ್ಧಿಗೆ ಸಹಕಾರಿಯಾದ ಅನೇಕ ಕಾರ್ಯಗಳನ್ನು ಮಾಡುತ್ತಾ ಬಂದಿರುವರು. ಇದಕ್ಕೆ ಈಗತಾನೇ ಸ್ಥಾಪಿಸಲ್ಪಟ್ಟಿರುವ ಲೆಜಿಸ್ಲೆಟಿವ್ ಕೌನ್ಸಿಲ್ಲಿನ ನಿರ್ಮಾಣವೇ ದೃಷ್ಟಾಂತವೆಂದು ನಾನು ಹೇಳಬೇಕಾಗಿಲ್ಲ. ಈ ಕೌನ್ಸಿಲಿನಲ್ಲಿ ಮೆಂಬರುಗಳು ಪ್ರಜೆಗಳ ಕ್ಷೇಮಕ್ಕಾಗಿ ಅವಶ್ಯವೆಂದು ತೋರಿಬರುವಂಥಾ ಶಾಸನಗಳನ್ನು ಚರ್ಚಿಸಿ ಗೊತ್ತು ಮಾಡುವುದೇ ಮುಖ್ಯವೆಂದು ಗೊತ್ತುಮಾಡಲ್ಪಟ್ಟಿರೋಣದರಿಂದ ಈ ಸಭೆಯಲ್ಲಿ ರಾಜ್ಯಭಾರಕ್ಕೆ ಸಂಬಂಧಪಡುವ ಇತರ ವಿಚಾರಗಳನ್ನು ಕುರಿತಾಗಲಿ, ಸಂಸ್ಥಾನದ ಜಮಾಖರ್ಚಿನ ವಿಚಾರವನ್ನು (ಬಜೆಟ್ ಲೆಕ್ಕಗಳನ್ನು) ಕುರಿತಾಗಲಿ ಚರ್ಚೆ ಮಾಡುವುದೂ ಸರ್ಕಾರದವರ ಉದ್ದೇಶಗಳನ್ನು ಎತ್ತಿಹಾಕಿ ಅವುಗಳನ್ನು ನಿರೂಪಿಸುವುದೂ ಈ ಕೌನ್ಸಿಲ್ಲಿನ ಕಾರ್ಯವಾಗಿಲ್ಲ. ಈ ಅಧಿಕಾರಗಳನ್ನು ಗವರ್ನಮೆಂಟಿನವರು ಪ್ರಜಾಪ್ರತಿನಿಧಿ ಸಭೆಗೆ ವಹಿಸಿಕೊಟ್ಟಲ್ಲಿ ಸಂಸ್ಥಾನಾಭಿವೃದ್ಧಿಗೆ ತುಂಬಾ ಸಹಾಯವಾದೀತು. ಈಗ ಗ್ರಾಮ [illegible]ಗಳಿಗೂ, ತಾಲ್ಲೂಕ್ [illegible]ಗಳಿಗೂ, ಡಿಸ್ಟ್ರಿಕ್ಟ್ [illegible]ಗಳಿಗೂ ಪ್ರಜೆಗಳೇ ಮೆಂಬರುಗಳನ್ನು ಚುನಾಯಿಸುವ ಅಧಿಕಾರವನ್ನು ಪಡೆದಿರುತ್ತಾರೆ. ಆದಕಾರಣ ಯೋಗ್ಯತಾಸಿದ್ಧಿ ಸಾಮರ್ಥ್ಯಾದಿಗಳನ್ನು ಸಂಪಾದಿಸಿಕೊಂಡಿರುವಂಥವರು ಗ್ರಾಮ [illegible] ಡಿಸ್ಟ್ರಿಕ್ಟ್ ಬೋರ್ಡಿನ [illegible] ಪ್ರಜೆಗಳಿಂದ ಚುನಾಯಿಸಲ್ಪಟ್ಟು ಬರುವುದಕ್ಕೆ ಅವಕಾಶವಾಗಿದೆ. ಈ ಡಿಸ್ಟ್ರಿಕ್ಟ್ ಬೋರ್ಡುಗಳ ಮೆಂಬರುಗಳನ್ನೂ, ಮ್ಯುನಿಸಿಪಲ್ [illegible] ಇತರ ಸಂಘಗಳಿಂದಲೂ ಚುನಾಯಿಸಲ್ಪಟ್ಟು ಬರುವ ಮೆಂಬರುಗಳನ್ನು ಪ್ರಜಾಪ್ರತಿನಿಧಿ ಸಭಾ ಮೆಂಬರುಗಳಾಗಿ ಗೊತ್ತುಮಾಡುವದಾದರೆ ಅವರು ಸಾದಾಮಾಡ ಪ್ರತಿಪಕ್ಷಗಳನ್ನು [illegible] ದಾರೆನ್ನುವುದಕ್ಕೆ ಸಂದೇಹವಿಲ್ಲ. ಈ ಏರ್ಪಾಡಿನಿಂದ ಪ್ರತಿನಿಧಿ ಸಭೆಯಲ್ಲಿ ಈಗಿನಷ್ಟು ಮೆಂಬರುಗಳ ಸಂಖ್ಯೆಯೂ ಇರುವುದಿಲ್ಲ. [illegible] ಕಾರ್ಯಗಳೆಲ್ಲ, ಪ್ರಜೆಗಳಿಗೂ ಗವರ್ನಮೆಂಟಿನವರಿಗೂ ತೃಪ್ತಿಕರವಾಗಿ ನಡೆಯಲು ಅವಕಾಶವಾಗುವದು. ಗವರ್ನಮೆಂಟಿನವರು ಈ ವಿಚಾರವನ್ನು ದಯಾಳುಕ್ಷೇಚಿಸುವರೆಂದು ನಿರೀಕ್ಷಿಸುತ್ತೇನೆ ಎಂಬುದೇ.

ವೃತ್ತಾಂತ ಪತ್ರಿಕೆ.

———:೦:———

೧೯೦೭ ನೇ ಇಸವಿ ಸೆಪ್ಟಂಬರ್ ತಾ॥ ೨೬ ನೇ ಗುರುವಾರ.

ಕೈಗಾರಿಕೆಗಳ ಪ್ರದರ್ಶನವು.

ಈ ಸಲ ನವರಾತ್ರಿ ಉತ್ಸವಕ್ಕೆ ಸಂಬಂಧಪಟ್ಟಂತೆ ರಾಜಧಾನಿಯಲ್ಲಿ ಸರ್ಕಾರದವರು ಕೈಗಾರಿಕೆಯ ವಸ್ತುಗಳನ್ನೂ ವ್ಯವಸಾಯ ಪದಾರ್ಥಗಳನ್ನೂ ಇಡಿಸಿ ಪ್ರದರ್ಶನ ಮಾಡಿಸುತ್ತಾರೆಂಬುವುದು ನಮ್ಮ ವಾಚಕರಿಗೆ ತಿಳಿದಿರುವುದು. ಇದಕ್ಕಾಗಿ ಪ್ರದರ್ಶನದ ಕಮಿಟಿಯವರು ತುಂಬಾ ಸಾಹಸಪಟ್ಟು ಪ್ರದರ್ಶನ ಶಾಲೆಯನ್ನು ಸಿದ್ಧಪಡಿಸಿ, ವಸ್ತು ವಿಶೇಷಗಳನ್ನು ತರಿಸಿಡುತ್ತಲಿದ್ದಾರೆ. ಈ ಪ್ರದರ್ಶನದ ಪ್ರಾರಂಭ, ಗಂಡಸರ ಹೆಂಗಸರನ್ನು ನೋಡುವುದಕ್ಕೆ ಬಿಡುವುದು, ಬಹುಮಾನ ಕ್ರಮ, ಕಸಬುದಾರರಿಗೂ ವ್ಯವಸಾಯಗಾರರಿಗೂ ಪ್ರಜಾಪ್ರತಿನಿಧಿಗಳಿಗೂ ರಿಯಾಯಿತಿಗಳು, ಈ ಮೊದಲಾದ ವಿಚಾರಗಳನ್ನು ಕುರಿತು ಗವರ್ನಮೆಂಟಿನವರು ಪ್ರಕಟಿಸಿರುವ ಹುಕುಮನ್ನು ಈ ಪತ್ರಿಕೆಯ ಇನ್ನೊಂದು ಭಾಗದಲ್ಲಿ ವಾಚಕರು ಓದಿ ತಿಳಿದುಕೊಳ್ಳಬಹುದಾಗಿದೆ

ಈ ಸಲ ಪ್ರದರ್ಶನವು ತೃಪ್ತಿಕರವಾಗಿ ನೆರವೇರಬಹುದೆಂಬ ಕಾಣ್ಕೆ [illegible], ಮತ್ತು ಮುಂದಿನ ವರುಷಗಳಲ್ಲಿ ಅವಶ್ಯವೆಂದು ಕಂಡು ಬರುವ ಬದಲಾವಣೆಗಳನ್ನು ಮಾಡಿ, ಈ ಪ್ರದರ್ಶನವನ್ನು ಇನ್ನೂ ಅಭಿವೃದ್ಧಿಗೆ ತರಬಹುದು. ಅದರ ಉದ್ದೇಶಪಟ್ಟಷ್ಟು ಹೆಚ್ಚು ಪ್ರಜೆಗಳು ಹೊರಗಿನಿಂದ ಈ ಸಲ ಬರುತ್ತಾರೆನ್ನುವುದು ಸದ್ಯ ಅನುಮಾನವಾಗಿದೆ. ಯಾಕೆಂದರೆ ರಾಜಧಾನಿಯಲ್ಲಿ ಈಗ ಪ್ಲೇಗ್ ಉಪದ್ರವು ಇರೋಣದರಿಂದ ಅನೇಕರು ಹೆದರಿ ಇಲ್ಲಿಗೆ ಬರದೆಹೋಗಬಹುದು. ವ್ಯವಸಾಯದಿಂದಲೂ ಕೈಗಾರಿಕೆಗಳಿಂದಲೂ ಜೀವನ ಮಾಡತಕ್ಕವರಾದರೂ ಆಯಾ ಕಸಬುಗಳನ್ನು ಅಭಿವೃದ್ಧಿಗೆ ತಂದುಕೊಳ್ಳುವುದಕ್ಕೂ ಪ್ರದರ್ಶನವನ್ನು ಬಂದು ನೋಡುವುದಕ್ಕೂ ಚೈತನ್ಯ ಸಾಲದ ಬಡ ಪ್ರಜೆಗಳನ್ನು ಸರ್ಕಾರದವರೇ ಪ್ರಯಾಣದ ಖರ್ಚು ಕೊಟ್ಟು ಕರಸುವಂತೆ ಏರ್ಪಾಡು ಮಾಡಿರುವುದಕ್ಕಾಗಿ ಸಂತೋಷಪಡುವೆವು. ಅಮಲ್ದಾರರೂ ಡೆಪ್ಯುಟಿ ಕಮಿಷನರರೂ ಸರ್ಕಾರದವರ ಈ ಔದಾರ್ಯವನ್ನು ಕಸಬುದಾರರಿಗೆ ತಿಳಿಯಪಡಿಸಿ, ಅನೇಕರು ಹೇಗಾದರೂ ರಾಜಧಾನಿಗೆ ಬಂದು ಈ ಪ್ರದರ್ಶನವನ್ನು ನೋಡಿ ಪ್ರಯೋಜನ ಹೊಂದಿ ಹೋಗುವಂತೆ ನೋಡಿಕೊಂಡಾರೆಂದು ನಂಬುತ್ತೇವೆ. ಹ್ಯಾಗೂ ವಿವಿಧ ವಸ್ತುಗಳನ್ನು ಪ್ರದರ್ಶನ ಮಾಡತಕ್ಕವರೂ, ಗೋಕಾಯಿಗಳನ್ನು ಪ್ರದರ್ಶನಕ್ಕೆ ತರತಕ್ಕವರೂ, ನೋಟಕ್ಕಾಗಿ ಬರತಕ್ಕವರೂ ಈ ಸಲ ಹೆಚ್ಚಾಗಿಯೇ ಇರುವರೆಂದು ನಿರೀಕ್ಷಿಸುವೆವು

ಒಳದೇಶದ ವೃತ್ತಾಂತಗಳು.

[illegible] ಕಂಟ್ರಾಕ್ಟರ್‌ರವರ ಗರ್ವೇಶ್ವರ [illegible] ಗಳನ್ನು ಈ ಪತ್ರಿಕೆ [illegible]

❦❦❦

[illegible] ಶನಿವಾರ ರಾತ್ರಿ ದಿವಾನ್ ಮೆ॥ ವಿ. ಪಿ. ಮಾಧವರಾಯರು [illegible] ಸಂಚಾರ ಮಾಡಿಕೊಂಡು ಬರುವುದಕ್ಕಾಗಿ [illegible] ಪ್ರಯಾಣಮಾಡಿದರು.

❦❦❦

[illegible] ಹೊಸದಾಗಿ ಕಟ್ಟಿ ನಡೆಸುತ್ತಿರುವ [illegible] ಚಿಕಿತ್ಸೆ ಮಾಡುವ ಆಸ್ಪತ್ರೆಯ ಖರ್ಚಿಗೆ ನಮ್ಮ [illegible] ವರುಷಕ್ಕೆ ೬೦೦ ರೂಪಾಯಿನಂತೆ ಐದು [illegible] ಚಂದಾ ಕೊಡುವುದಾಗಿ [illegible] ಮಾಡಿರುತ್ತಾರೆಂದು ಕೇಳುತ್ತೇವೆ.

❦❦❦

[illegible] ರಾಮಸ್ವಾಮಿ ಎಂಬ ಇಬ್ಬರು ಬ್ರಾಹ್ಮಣರು ರಾಜಧಾನಿಯ [illegible] ಕೃಷ್ಣಪ್ಪನವರ ಮಾತ್ರ [illegible] ಕಳವುಮಾಡಿದ್ದಕ್ಕಾಗಿ ಮ್ಯಾಜಿಸ್ಟ್ರೇಟರು ಶೇಷಪ್ಪನಿಗೆ [illegible] ತಿಂಗಳು, ರಾಮಸ್ವಾಮಿಗೆ ೬ ತಿಂಗಳು [illegible] ವಿಧಿಸಿದರೆಂದು ಕೇಳುತ್ತೇವೆ

❦❦❦

[illegible] ಸಂಸ್ಥಾನದ ರೆವಿನ್ಯು ಇಲಾಖಾ ಮಂತ್ರಿಗಳಾದ ಮೆ॥ [illegible] ರವರು ಕಳೆದ ವಾರ ಬೆಂಗಳೂರಿಗೆ ಬಂದರು. ಮತ್ತು [illegible] ಸಂಸ್ಥಾನದ ದಿವಾನರಾಗಿ ನೇಮಿಸಲ್ಪಟ್ಟಿರುವ ಮೆ॥ [illegible] ರವರು ಬೆಂಗಳೂರಿಗೆ ಬಂದು ನಮ್ಮ ದಿವಾನರವರ ಕೂಡ ಮಾತನಾಡಿಕೊಂಡು ಹೋದರು.

❦❦❦

ಮೆ॥ ಎಚ್. ಪಿ. [illegible] ಎಂಬುವರು ಕೆಲವು ದಿನಗಳ ಹಿಂದೆ [illegible] ಚಿನ್ನದ ಗಣಿಯ ಸ್ಥಿತಿಗತಿಯನ್ನು ಹೋಗಿ ನೋಡಿ ಬಂದರು. ಅಲ್ಲಿ ಚಿನ್ನವನ್ನು ತೆಗೆಯುವುದಕ್ಕೆ ಒಂದು ಕಂಪನಿ ಏರ್ಪಾಡಾಗುತ್ತದೆ. ಈ ಕಂಪನಿಯ ಮೂಲಧನವು [illegible] ಲಕ್ಷ ರೂಪಾಯಿ; ಷೇರು [illegible] ರೂಪಾಯಿನಂತೆ ಕೊಡಿಸುವರು. ಮೈಸೂರಿನವರು [illegible] ಷೇರುಗಳಲ್ಲಿ ಬಹು ಭಾಗವನ್ನು ಪಡೆದುಕೊಳ್ಳುವರೆಂತಲೂ, ಕೆಲವು ಸಾವಿರ ಷೇರುಗಳನ್ನು ಮಾತ್ರ ಪಬ್ಲಿಕ್ ಜನರಿಗೆ ವಿಕ್ರಯ ಮಾಡುವರೆಂತಲೂ ಕೇಳುತ್ತೇವೆ

❦❦❦

ಬೆಂಗಳೂರು ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಜಡ್ಜಿರಾಗಿದ್ದು ಪೆನ್ಷನ್ ಪಡೆದ ಮೆ॥ ಎಸ್. ಆರ್. ಸುಬ್ರಾಯ ಅಯ್ಯರವರು ಕಳೆದ ಶುಕ್ರವಾರ ಬೆಂಗಳೂರಿನಲ್ಲಿ ಕಾಲವಾದರೆಂದು ವಿಷಾದಿಸುತ್ತೇವೆ. ಇವರಿಗೆ ೫೬ ವರುಷ ವಯಸ್ಸಾಗಿತ್ತು. ಅವರು ಕಳೆದ ೧೮೭೫ನೇ ಇಸವಿಯಲ್ಲಿ ಮೊದಲು ಈ ಸಂಸ್ಥಾನದ ನೌಕರಿಗೆ ಬಂದು, ಹೆಡ್ ಮುನ್ಷಿ, ಶಿರಸ್ತೇದಾರಿ, ಮುನ್ಸಿಫ, ಸಬ್ ಜಡ್ಜ್, ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಜಡ್ಜರಾಗಿ ಬಡ್ತಿ ಹೊಂದಿ, ಸುಮಾರು ವರುಷದ ಹಿಂದೆ ಪೆನ್ಷನ್ ಮೇಲೆ ಕೆಲಸ ಬಿಟ್ಟಿದ್ದರು

❦❦❦

ಒಕ್ಕಲಿಗರ ಸಭೆಯ ಪ್ರೆಸಿಡೆಂಟರೇ ಮೊದಲಾದವರು ಕಳೆದ ವಾರ ರಾಜಧಾನಿಗೆ ಬಂದು ಇಲ್ಲಿನ ಕಮಿಟಿ ಮೆಂಬರುಗಳ ಕೂಡ ಕಲೆತು ಆಲೋಚನೆ ಮಾಡಿದ್ದರಲ್ಲಿ ಬೆಂಗಳೂರು ಮತ್ತು ಮೈಸೂರು ಡಿಸ್ಟ್ರಿಕ್ಟುಗಳೊಳಗೆ ಒಕ್ಕಲಿಗ ಪ್ರಜಾ ಸಂಖ್ಯೆಯು ಹೆಚ್ಚಾಗಿರೋಣದರಿಂದ ಬೆಂಗಳೂರಿನಲ್ಲೂ ಮೈಸೂರಿನಲ್ಲೂ ಒಕ್ಕಲಿಗ ಬಾಲಕರ ವಿದ್ಯಾಭಿವೃದ್ಧಿಗಾಗಿ ಏಕಕಾಲದಲ್ಲಿ ಒಂದೇ ರೀತಿಯಾಗಿ ವಿದ್ಯಾರ್ಥಿ ನಿಲಯಗಳನ್ನೂ ಪಾಠಶಾಲೆಗಳನ್ನೂ ಪ್ರಾರಂಭಿಸಿ ನಡಸುವುದು ಆವಶ್ಯಕವೆಂದು ಗೊತ್ತುಮಾಡಿ, ಈ ವಿಷಯವನ್ನು ಮಹಾ ಸಭೆಯಲ್ಲಿ ಸೂಚಿಸಿ ತೀರ್ಮಾನಮಾಡಬೇಕೆಂದು ನಿಶ್ಚಯಿಸಿರುತ್ತಾರೆಂದು ಕೇಳುತ್ತೇವೆ.

❦❦❦

ಪ್ರಜಾಪ್ರತಿನಿಧಿ ಸಭೆಗೆ ಮೆಂಬರಾಗಬಹುದಾದವರ ಮತ್ತು ಚುನಾಯಿಸತಕ್ಕ ವೋಟರುಗಳ ಹೆಸರುಗಳನ್ನು ಆಷಾಢಶುದ್ಧ [illegible] ಯೊಳಗಾಗಿ ಸರ್ಕಾರಿ ಗೆಜೆಟ್ಟಿನಲ್ಲಿ ಪ್ರಕಟಿಸಬೇಕೆಂತಲೂ, ಆ ಪಟ್ಟಿಯಲ್ಲಿ ಬಿಟ್ಟುಹೋಗಿರತಕ್ಕವರು ಹತ್ತು ದಿನಗಳೊಳಗಾಗಿ ಡೆಪ್ಯುಟಿ ಕಮಿಷನರಿಗೆ ಬರೆದು ತಿಳಿಸಿ ತಮ್ಮ ಹೆಸರುಗಳನ್ನು ದಾಖಲ್ ಮಾಡಿಸಿಕೊಳ್ಳಬಹುದೆಂತಲೂ, ತಾಲ್ಲೂಕ್ ಮೆಂಬರುಗಳು ಮೂರು ವರುಷಗಳ ತನಕ ಮೆಂಬರಾಗಿರತಕ್ಕದ್ದೆಂತಲೂ, ಯಾವ ಮೆಂಬರಾದರೂ ಕೋರ್ಟುಗಳಲ್ಲಿ ಬದ್ಧಚಾಲಿಕವರೆಂಬ ಅಪವಾದನೆಗೆ ಗುರಿಯಾಗಿದ್ದಲ್ಲಿ ಅಂಥವರ ಹೆಸರನ್ನು ಪ್ರತಿನಿಧಿಗಳ ಪಟ್ಟಿಯಿಂದ ವಜಾ ಮಾಡಬೇಕೆಂತಲೂ ಸರ್ಕಾರದವರು ಹುಕುಂ ಕೊಟ್ಟಿದ್ದಾರೆ

❦❦❦

ಒಬ್ಬ ಬಾತ್ಮೀದಾರರು ಬರೆಯುವುದು — ಈ ತಿಂಗಳು ೧೨ ನೇ ತೇದಿ ಗುರುವಾರ ಹಗಲು ಸುಮಾರು ೩ ಗಂಟೆಯ ಸಮಯದಲ್ಲಿ ಬಳ್ಳಾರಿ ಜಿಲ್ಲೆ ಹುವ್ವಿನ ಹಡಗಲಿ ತಾಲ್ಲೂಕು ಕಂಬಿನಕೇರಿ ಕಾರುಬಾರ ಗಂಗಪ್ಪನೆಂಬುವಾತನ ಮನೆಗೆ ಕಳ್ಳರು ನುಗ್ಗಿ ತ್ರಿಜೂರಿಯನ್ನು ಹೊತ್ತುಕೊಂಡು ಹೋಗುತ್ತಿರಲು ಒಂದು ಮೈಲು ದೂರದಲ್ಲಿರುವ ಹಿರೇಹಡಗಲಿಯ ಸುಮಾರು ೫೦೦ ಜನರು ಬಂದು ಏನು ಪ್ರಯತ್ನ ಮಾಡಿದರೂ ಸಿಕ್ಕದೆ, ಕೋವಿ [illegible] ಸುತ್ತಿಗೆ [illegible] ಮಾಡಿರುತ್ತಾರೆ. ೬,೦೦೦ ರೂಪಾಯಿನ ಆಸ್ತಿಯನ್ನು ಬೈದು ಇಲ್ಲಿಗೆ ೩ ಮೈಲು ದೂರದಲ್ಲಿರುವ ಗುಲಿಕಟ್ಟೆ ಅಡವಿಯಲ್ಲಿ ಅಡಗಿರುತ್ತಾರೆ. ಕಳ್ಳರನ್ನು ಹಿಡಿದವರಿಗೆ ಅಪಾರವಾದ ಬಹುಮಾನವು ದೊರೆಯುವುದು.

ಕೈಗಾರಿಕೆಗಳ ಪ್ರದರ್ಶನೋತ್ಸವವು

ರಾಜಧಾನಿಯಲ್ಲಿ ಪ್ರಾರಂಭವಾಗುವ ಕಾಲ ಸಮೀಪಿಸಿದ್ದು.

ಮೈಸೂರು ಪಟ್ಟಣದಲ್ಲಿ ನವರಾತ್ರಿ ಉತ್ಸವದ ಜೊತೆಗೆ ಕೈಗಾರಿಕೆಗಳ, ವ್ಯವಸಾಯೋಪಕರಣಗಳ ಮತ್ತು ಗೋಕಾಯಿಗಳ ಪ್ರದರ್ಶನವನ್ನು ನಡಸಬೇಕೆಂದು ಗವರ್ನಮೆಂಟಿನವರು ಗೊತ್ತುಮಾಡಿರುತ್ತಾರಷ್ಟೆ. ಈ ಪ್ರದರ್ಶನಗಳು ಅಕ್ಟೋಬರ್ ತಿಂಗಳ ೫ನೇ ತಾ. ಶನಿವಾರ ಬೆಳಗ್ಗೆ ೮ ಗಂಟೆಗೆ ಪ್ರಾರಂಭವಾಗುವವು. ಆ ದಿನ ಶ್ರೀಮನ್ ಮಹಾರಾಜರವರು ದಯಮಾಡಿ ಪ್ರದರ್ಶನದ ದ್ವಾರವನ್ನು ತೆರೆಯುವುದಾಗಿ ಅನುಜ್ಞೆಯನ್ನಿತ್ತಿರುವರು. ಆಹ್ವಾನ ಪತ್ರಿಕೆಗಳನ್ನು ಪಡೆದಿರತಕ್ಕವರನ್ನು ಮಾತ್ರ ಆ ದಿನ ಬೆಳಿಗ್ಗೆ ಪ್ರದರ್ಶನ ಶಾಲೆಗೆ ಬಿಡಲಾಗುವುದು. ಅವರೆ ಇತರರನ್ನು ಬಿಡತಕ್ಕ ದಿನ ಮತ್ತು ಕಾಲಗಳ್ಯಾವವೆಂದರೆ.

ಗಂಡಸರಿಗೂ ಹೆಂಗಸರಿಗೂ ಸಹ — ೫ನೇ ತಾ. ಶನಿವಾರ ಸಾಯಂಕಾಲ ೫ ರಿಂದ ೮ ಗಂಟೆ ತನಕ ತರುವಾಯ ೬ನೇ ತಾ. ನಿಂದ ೧೬ ನೇ ತಾ. ವರೆಗೆ ಪ್ರತಿ ದಿವಸವೂ ಬೆಳಿಗ್ಗೆ ೭॥ ರಿಂದ ೧೧। ಗಂಟೆಯವರೆಗೆ ೮, ೧೩, ೧೪, ಮತ್ತು ತಾ. ೨೧ ರಿಂದ [illegible] ವರೆಗೆ ದಿನದ [illegible] ೧೨ ರಿಂದ ರಾತ್ರಿ ೮ ಗಂಟೆ ತನಕ

ಹೆಂಗಸರಿಗೆ ಮಾತ್ರ — ತಾ. ೩, ೧೦, ೧೯ ರಲ್ಲಿ ಮಧ್ಯಾಹ್ನ ೪ ರಿಂದ ರಾತ್ರಿ ೮ ಗಂಟೆ ತನಕ ಮತ್ತು ತಾ. ೨೩ ರಲ್ಲಿ ಬೆಳಗ್ಗೆ ೭ ರಿಂದ ೧೦ ಗಂಟೆ ತನಕ. ಪ್ರಜಾ ಪ್ರತಿನಿಧಿ ಸಭೆಯ ಮೆಂಬರುಗಳಿಗೆ ಮಾತ್ರ (ಫೀಜು ಇಲ್ಲ) — ತಾ. ೨ನೇ ಭಾನುವಾರ ಮಧ್ಯಾಹ್ನ ೨ ರಿಂದ ರಾತ್ರಿ ೮ಗಂಟೆ ತನಕ.

ಉಪನ್ಯಾಸಗಳ ಏರ್ಪಾಡು — ಅಕ್ಟೋಬರ್ ೧೩ರಿಂದ ೨೨ನೇ ತಾ. ವರೆಗೆ ನಾಲ್ಕು ದಿನಗಳೂ ಬೆಳಗ್ಗೆ ೮ ರಿಂದ ೯॥ ಗಂಟೆ ತನಕ ಪ್ರದರ್ಶನಶಾಲೆಯೊಳಗೆ ಉಪನ್ಯಾಸಗಳು ನಡೆಯುವಂತೆ ಏರ್ಪಾಡು ಮಾಡಿದೆ. ಇವನ್ನು ಕೇಳುವುದಕ್ಕೆ ಬರತಕ್ಕರು ಫೀಜು ಕೊಡಬೇಕಾದದ್ದಿಲ್ಲ. ಉಪನ್ಯಾಸ ನಡೆಯುವಾಗ್ಗೆ ಪ್ರದರ್ಶನವಸ್ತುಗಳನ್ನು ನೋಡಲು ಯಾರನ್ನೂ ಬಿಡುವುದಿಲ್ಲ

ಫೀಜಿನ ದರಗಳು. ಒಂದಾವರ್ತಿ ನೋಡುವುದಕ್ಕೆ ತಲೆಗೆ ೪ ಆಣೆ. ಐದು ವರ್ಷದ ಒಳಗಿನ ಮಕ್ಕಳು [illegible] ನೋಡುವುದಕ್ಕೆ ೧೨ ಆಣೆ. ಸ್ಕೂಲ್ ಹುಡುಗರಿಗೆ ೨ ಆಣೆ. ಮೂರು ರೂಪಾಯಿ ಕೊಟ್ಟು ಸೀಸನ್ ಟಿಕೆಟ್ ಪಡೆದವರು ಪ್ರದರ್ಶನ ಶಾಲೆ ತೆರೆದಿರುವ ಎಲ್ಲಾ ದಿನಗಳೂ [illegible] ಮೈಸೂರಿನಲ್ಲಿರುವ ಸ್ಕೂಲುಗಳ ಹೆಡ್ ಮಾಸ್ತರುಗಳಿಗೆ ಟಿಕೆಟ್ಟುಗಳನ್ನು ಬಿಕರಿಗೆ ಕಳುಹಿಸಲಾಗುವುದು. ವಿದ್ಯಾರ್ಥಿಗಳು ಅವರಿಂದ ಪಡೆಯಬಹುದು. ಇತರ ಕಡೆಗಳ ವಿದ್ಯಾರ್ಥಿಗಳೂ ತಮ್ಮ ಹೆಡ್ ಮಾಸ್ತರುಗಳಿಂದಲೇ ಕೇಳಿ ಟಿಕೆಟ್ ಕೊಂಡು [illegible]

ಪ್ರದರ್ಶನ ವಸ್ತುಗಳ [illegible] ಕರಿಗೆ, ಅಥವಾ ಅವರ ಏಜಂಟರಿಗೆ, ಅಥವಾ ಅವರ ಸೇವಕರಿಗೆ ಮತ್ತು ಪ್ರದರ್ಶನಶಾಲಾ ನೌಕರರಿಗೆ ಮಾಫಿ ಟಿಕೇಟುಗಳನ್ನು ಕೊಡಲಾಗುವುದು. ಡೆಪ್ಯುಟಿ ಕಮಿಷನರ್‌ರಿಂದ ಸರ್ಟಿಫಿಕೇಟು ಪಡೆದು ಬರತಕ್ಕ ಬಡಬಗ್ಗರಾದ ರೈತರಿಗೂ ಕಸಬುದಾರರಿಗೂ ಮಾಫಿ ಟಿಕೇಟು ಕೊಡಲ್ಪಡುತ್ತದೆ ಮತ್ತು ಅಂಥವರು ಪರಸ್ಥಳಗಳಿಂದ ಬರಬೇಕೆಂದು ಕುತೂಹಲಪಟ್ಟರೆ ಆಯಾ ಡೆಪ್ಯುಟಿ ಕಮಿಷನರು ಅವರ ಹೋಗಬರ ಪ್ರಯಾಣದ ಖರ್ಚನ್ನು ಸರ್ಕಾರದಿಂದ ಕೊಡಿಸುವರು. ಅಂಥವರು ರಾಜಧಾನಿಗೆ ಬಂದರೆ ಅನ್ಯೋದಕಗಳಿಗೆ ಮಾತ್ರ ಅವರೇ ಏರ್ಪಾಡು ಮಾಡಿಕೊಳ್ಳಬೇಕು. ಕಮಿಟಿಯವರು ಅಕ್ಟೋಬರ್ ತಾ. ೧ ರಿಂದ ಪ್ರದರ್ಶನಶಾಲೆಯ ಬಳಿ ಒಂದು ಪ್ರೈವೆಟ್ ಹೋಟೆಲನ್ನು ಇಡಿಸುವುದಕ್ಕೆ ಏರ್ಪಾಡು ಮಾಡುವರು

ಮೈಸೂರು ಕಾಸ್ಮಾಪಾಲಿಟನ್ ಕ್ಲಬ್ಬಿನಲ್ಲಿ ನಡೆದ ಒಂದು ಸಂತೋಷಕಾರ್ಯವು.

ಕಳೆದ ಭಾನುವಾರ ರಾಜಧಾನಿಯ ಕಾಸ್ಮಾಪಾಲಿಟನ್ ಕ್ಲಬ್ಬಿನ ಮೆಂಬರುಗಳು ಅಡ್ವೊಕೇಟ್ ಮೆ॥ ಎಂ. ಸಿ. ರಂಗೈಯ್ಯಂಗಾರ್ರಿಗೆ ಔತನ ಮಾಡಿದರು. ಇಲ್ಲಿನ ಅಧಿಕಾರಿಗಳೂ ದೊಡ್ಡ ಮನುಷ್ಯರೂ ಸೇರಿ ಈ ಕ್ಲಬ್ಬನ್ನು ಮಾಡಿಕೊಂಡಿರುತ್ತಾರೆ. ಮೆಂಬರುಗಳ ಪೈಕಿ ಮೆ॥ ರಂಗೈಯ್ಯಂಗಾರ್‍ರೂ ಒಬ್ಬರಾದ್ದರಿಂದಲೂ, ಅವರಿಗೆ ಮೈಸೂರು ಲೆಜಿಸ್ಲೆಟಿವ್ ಕೌನ್ಸಿಲ್ ಮೆಂಬರ ಸ್ಥಾನ ದೊರಕಿದ್ದರಿಂದಲೂ ಕ್ಲಬ್ಬಿನ ಮೆಂಬರುಗಳು ತಮ್ಮ ಸಂತೋಷವನ್ನು ಈ ಔತನ ಮೂಲಕ ಪ್ರಕಾಶಪಡಿಸಿದರು. ರಾಜಧಾನಿಯಲ್ಲಿರುವ ಕ್ಲಬ್ಬಿನ ಮೆಂಬರುಗಳಾದ ಎಲ್ಲಾ ದೊಡ್ಡ ಮನುಷ್ಯರೂ ಸೇರಿ ಸಹ ಭೋಜನಮಾಡಿದರು. ರೆವಿನ್ಯೂ ಕಮಿಷನರ್ ಮೆ॥ [illegible] ರಂಗಸ್ವಾಮಿಅಯ್ಯಂಗಾರ್‍ರು ಹಾಜರಾಗಿದ್ದರು. ತರುವಾಯ ವೈಣಿಕ ಪ್ರವೀಣ ಮೆ॥ ವೀಣೆ ಶೇಷಣ್ಣನವರು ವೀಣಾಗಾನವನ್ನು ಮಾಡಿ ಸಂತೋಷಪಡಿಸಿದರು. ಸಾಯಂಕಾಲ ಟೆನ್ನಿಸ್ ಮೊದಲಾದ ಆಟಗಳಲ್ಲಿ ಮೆಂಬರುಗಳು ಸೇರಿ ಸ್ವಲ್ಪ ಹೊತ್ತು ವ್ಯಾಯಾಮದಲ್ಲಿ ಕಳೆದರು. ಕಡೆಯಲ್ಲಿ ಎಲ್ಲಾ ಮೆಂಬರುಗಳೂ ಕ್ಲಬ್ಬಿನೊಳಗೆ ಸಭೆ ಸೇರಿದರು. ಸಭಿಕರ ಅಭಿಪ್ರಾಯವನ್ನು ಅನುಮೋದಿಸಿ, ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಜಡ್ಜಿಗಳಾದ ಮೆ॥ ಟಿ. ಪರಮಶಿವ ಅಯ್ಯರವರು ಅಗ್ರಾಸನವನ್ನು ವಹಿಸಿ, ಮೆ॥ ರಂಗೈಯ್ಯಂಗಾರ್‍ರು ಕ್ಲಬ್ಬಿನ ಸೆಕ್ರೆಟರಿಯಾಗಿದ್ದುಕೊಂಡು ಅದರ ಪುರೋಭಿವೃದ್ಧಿಗೆ ತುಂಬಾ ಸಾಹಸಪಡುತ್ತಿದ್ದಾರೆಂತಲೂ ವಿದ್ಯಾದಿ ಸಾಮರ್ಥ್ಯ ಉಳ್ಳವರಾಗಿರೋಣದರಿಂದ ಅವರಿಗೆ ಲೆಜಿಸ್ಲೇಟಿವ್ ಕೌನ್ಸಿಲ್ ಮೆಂಬರ ಸ್ಥಾನ ದೊರೆತದ್ದು ಮೆಂಬರುಗಳೆಲ್ಲರಿಗೂ ತುಂಬಾ ಸಂತೋಷವನ್ನುಂಟುಮಾಡಿದೆ ಎಂತಲೂ, ಕ್ಲಬ್ಬಿನ ಮೆಂಬರುಗಳ ಪೈಕಿ ಮೆ॥ ವಿ. ಪಿ. ಮಾಧವರಾಯರೂ ಮೆ॥ ಎಂ. ಕಾಂತರಾಜೆ ಅರಸಿನವರೂ, ಮೆ॥ ವಿ. ಎನ್. ನರಸಿಂಹೈಯ್ಯಂಗಾರ್‍ರೂ, ಮೆ॥ ಎಂ. ಸಿ. ರಂಗೈಯ್ಯಂಗಾರ್‍ರೂ ಲೆಜಿಸ್ಲೆಟಿವ್ ಕೌನ್ಸಿಲಿನಲ್ಲಿ ಮೆಂಬರುಗಳಾಗಿರುವ ವಿಚಾರವು ಮಹಾ ಸಂತೋಷಪ್ರದವಾಗಿರುತ್ತದೆಂತಲೂ ಹೇಳಿದರು. ತರುವಾಯ ಮುನ್ಸಿಪಲ್ ಕೌನ್ಸಿಲರ್ ಮೆ॥ ಅಂಬಳೆ ಅಣ್ಣಯ್ಯ ಪಂಡಿತರು— ಮೆ॥ ರಂಗೈಯ್ಯಂಗಾರ್‍ರು ಉಪಾಧ್ಯಾಯರಾಗಿದ್ದರಷ್ಟೆ ವಿಶೇಷವಾದ ಶ್ರದ್ಧೆಯನ್ನು ವಹಿಸಿ ಕಾರ್ಯ ನಡಿಸತಕ್ಕವರೆಂತಲೂ, ಮೈಸೂರು ಪಟ್ಟಣದ ಪ್ರಜೆಗಳ ಭಕ್ತಿ ವಿಶ್ವಾಸಗಳನ್ನು ಸಂಪಾದಿಸಿಕೊಂಡಿರತಕ್ಕವರಾದ್ದರಿಂದ ಇಂಥವರನ್ನು ಸರ್ಕಾರದವರು ಲೆಜಿಸ್ಲೆಟಿವ್ ಕೌನ್ಸಿಲ್ಲಿನ ಮೆಂಬರ್ ಕೆಲಸಕ್ಕೆ ನೇಮಕಮಾಡಿಕೊಂಡದ್ದು ಸಕಲ ಪ್ರಜೆಗಳಿಗೂ ಸಂತೋಷಪ್ರದವಾಗಿರುತ್ತದೆಂತಲೂ ತಿಳಿಸಿದರು. ಕಡೆಯಲ್ಲಿ ಮೆ॥ ಎಂ. ಸಿ. ರಂಗೈಯ್ಯಂಗಾರ್‍ರು ಎದ್ದು ಸಭಿಕರನ್ನು ಕುರಿತು ತಿಳಿಸಿದ ಮುಖ್ಯಾಭಿಪ್ರಾಯವೇನೆಂದರೆ—

ಕ್ಲಬ್ಬಿನ ಮೆಂಬರುಗಳಾದ ತಾವುಗಳೆಲ್ಲಾ ನನಗೋಸ್ಕರ ಇಷ್ಟು ಶ್ರಮಪಟ್ಟು ಈ ದಿನದ ಸಂತೋಷ ಕಾರ್ಯಗಳನ್ನು ಏರ್ಪಾಡು ಮಾಡಿದ್ದಕ್ಕಾಗಿ ಪೂರ್ಣಹೃದಯದಿಂದ ತಮ್ಮನ್ನು ವಂದಿಸುತ್ತೇನೆ. ಶ್ರೀಮನ್ಮಹಾರಾಜರವರು ಪ್ರಜಾವಾತ್ಸಲ್ಯಪೂರಿತರಾಗಿ ಸಂಸ್ಥಾನಾಭಿವೃದ್ಧಿಗೆ ಸಹಕಾರಿಯಾದ ಅನೇಕ ಕಾರ್ಯಗಳನ್ನು ಮಾಡುತ್ತಾ ಬಂದಿರುವರು. ಇದಕ್ಕೆ ಈಗತಾನೇ ಸ್ಥಾಪಿಸಲ್ಪಟ್ಟಿರುವ ಲೆಜಿಸ್ಲೆಟಿವ್ ಕೌನ್ಸಿಲ್ಲಿನ ನಿರ್ಮಾಣವೇ ದೃಷ್ಟಾಂತವೆಂದು. ನಾನು ಹೇಳಬೇಕಾಗಿಲ್ಲ. ಈ ಕೌನ್ಸಿಲಿನಲ್ಲಿ ಮೆಂಬರುಗಳು ಪ್ರಜೆಗಳ ಕ್ಷೇಮಕ್ಕಾಗಿ ಅವಶ್ಯವೆಂದು ತೋರಿಬರುವಂಥಾ ಶಾಸನಗಳನ್ನು ಚರ್ಚಿಸಿ ಗೊತ್ತುಮಾಡುವುದೇ ಮುಖ್ಯವೆಂದು ಗೊತ್ತುಮಾಡಲ್ಪಟ್ಟಿರೋಣದರಿಂದ ಈ ಸಭೆಯಲ್ಲಿ ರಾಜ್ಯಭಾರಕ್ಕೆ ಸಂಬಂಧಪಡುವ ಇತರ ವಿಚಾರಗಳನ್ನು ಕುರಿತಾಗಲಿ, ಸಂಸ್ಥಾನದ ಜಮಾಖರ್ಚಿನ ವಿಚಾರವನ್ನು (ಬಡ್ಜೆಟ್ ಲೆಕ್ಕಗಳನ್ನು) ಕುರಿತಾಗಲಿ ಚರ್ಚೆ ಮಾಡುವುದೂ ಸರ್ಕಾರದವರ ಲೋಪದೋಷಗಳನ್ನು ಎತ್ತಿಹಾಕಿ ಅವುಗಳನ್ನು ಸರಿಪಡಿಸ ಪ್ರಯತ್ನಿಸುವುದೂ ಈ ಕೌನ್ಸಿಲ್ಲಿನ ಕಾರ್ಯವಾಗಿರುವುದಿಲ್ಲ. ಈ ಅಧಿಕಾರಗಳನ್ನು ಗವರ್ನಮೆಂಟಿನವರು ಪ್ರಜಾಪ್ರತಿನಿಧಿಸಭೆಗೆ ವಹಿಸಿಕೊಟ್ಟಲ್ಲಿ ಸಂಸ್ಥಾನಾಭಿವೃದ್ಧಿಗೆ ತುಂಬಾ ಸಹಾಯವಾದೀತು. ಈಗ ಗ್ರಾಮ ಯೂನಿಯನ್‌ಗಳಿಗೂ ತಾಲ್ಲೂಕ್ ಬೋರ್ಡುಗಳಿಗೂ, ಡಿಸ್ಟ್ರಿಕ್ಟ್ ಬೋರ್ಡುಗಳಿಗೂ ಪ್ರಜೆಗಳೇ ಮೆಂಬರುಗಳನ್ನು ಚುನಾಯಿಸುವ ಅಧಿಕಾರವನ್ನು ಪಡೆದಿರುತ್ತಾರೆ. ಆದಕಾರಣ ಯೋಗ್ಯತಾಸಿದ್ಧರಾದ ಮನುಷ್ಯರು ಗ್ರಾಮ ಯೂನಿಯನ್‌ ಹಿಡಿದು ಡಿಸ್ಟ್ರಿಕ್ಟ್ ಬೋರ್ಡಿನ ತನಕ ಪ್ರಜೆಗಳಿಂದ ಚುನಾಯಿಸಲ್ಪಟ್ಟು ಬರುವುದಕ್ಕೆ ಅವಕಾಶವಾಗಿದೆ. ಈ ಡಿಸ್ಟ್ರಿಕ್ಟ್ ಬೋರ್ಡುಗಳ ಮೆಂಬರುಗಳನ್ನೂ, ಮ್ಯುನಿಸಿಪಲ್ ಬೋರ್ಡುಗಳು ಮೊದಲಾದ ಇತರ ಸಂಘಗಳಿಂದಲೂ ಚುನಾಯಿಸಲ್ಪಟ್ಟು ಬರುವ ಮೆಂಬರುಗಳನ್ನು ಪ್ರಜಾಪ್ರತಿನಿಧಿ ಸಭೆಯ ಮೆಂಬರುಗಳಾಗಿ ಗೊತ್ತುಮಾಡುವುದಾದರೆ ಅವರು ನಿಜವಾದ ಪ್ರತಿನಿಧಿಗಳೆನಿಸಿಕೊಂಡಾರೆನ್ನುವುದಕ್ಕೆ ಸಂದೇಹವಿಲ್ಲ. ಈ ಏರ್ಪಾಡಿನಿಂದ ಪ್ರತಿನಿಧಿ ಸಭೆಯಲ್ಲಿ ಈಗಿರುವಷ್ಟು ಮೆಂಬರುಗಳ ಸಂಖ್ಯೆಯೂ ಇರುವುದಿಲ್ಲ. ನಡೆಯುವ ಕಾರ್ಯಗಳೆಲ್ಲಾ ಪ್ರಜೆಗಳಿಗೂ ಗವರ್ನಮೆಂಟಿನವರಿಗೂ ತೃಪ್ತಿಕರವಾಗಿ ನಡೆಯಲು ಅವಕಾಶವಾಗುವುದು. ಗವರ್ನಮೆಂಟಿನವರು ಈ ವಿಚಾರವನ್ನು ಪರ್ಯಾಲೋಚಿಸುವರೆಂದು ನಿರೀಕ್ಷಿಸುತ್ತೇನೆ ಎಂಬುದೇ.

ಜರ್ಮನ್ ದೇಶವೂ ಕ್ರೈಸ್ತಮತವೂ.

ಹಿಂದೂ ದೇಶೀಯರಲ್ಲಿ ಕೆಲವರು ಕ್ರೈಸ್ತಮತ ಸಂಪರ್ಕದಿಂದ ಹಿಂದೂ ಜನಾಂಗವು ಕೆಡುತ್ತಿದೆಯೆಂದು ಅಭಿಪ್ರಾಯಪಡುತ್ತಾರೆ. ಹಿಂದೂದೇಶವನ್ನಾಳುವವರು ಇಂಗ್ಲಿಷಿನವರಾಗಿರುತ್ತಾರೆ ಇವರು ಪರಕೀಯರು. ಆದರೆ ಇವರು ಐಶ್ವರ್ಯಪದದಲ್ಲಿ ಪ್ರಾರಂಭಿಸಿ ಲೋಕವೆಲ್ಲಾ ಹರಡಿಕೊಳ್ಳುವ ಕ್ರೈಸ್ತಮತಕ್ಕೆ ಸೇರಿದವರಾಗಿರುತ್ತಾರೆ. ವಿದೇಶಿಯರು ಅವಲಂಬಿಸುವ ಮತವನ್ನು ತಾವೂ ಅವಲಂಬಿಸುವುದು ಕೇವಲ ಅನುಚಿತವೆಂದು ಈ ದೇಶದಲ್ಲಿ ಕೆಲವರು ನಂಬುತ್ತಾರೆ. ಆದರೆ ಇಂಥಾ ಅಭಿಪ್ರಾಯವು ತಪ್ಪೆಂದು ಜರ್ಮನ್ ದೇಶದ ಉದಾಹರಣೆಯಿಂದ ಸರಿಸ್ಪಷ್ಟವಾಗಿ ತಿಳಿದುಕೊಳ್ಳಬಹುದು. ಜರ್ಮನ್ ದೇಶವು ಪೂರ್ವ ದೇಶಗಳ ಸಮುದಾಯಕ್ಕೆ ಸೇರಿರುತ್ತದೆ. ಹಿಂದೂ ದೇಶವೂ ಕೂಡ ಪೂರ್ವದಿಕ್ಕಿನಲ್ಲಿರುತ್ತದೆ. ಜರ್ಮನ್ ದೇಶದ ಏಳಿಗೆಗೆ ಕಾರಣಭೂತರಾದ ದೊಡ್ಡ ಮನುಷ್ಯರು ಕ್ರೈಸ್ತಮತವೇ ಜನಾಂಗದವರನ್ನು ಅಭಿವೃದ್ಧಿಯ ಸ್ಥಿತಿಗೆ ತಂದಿತೆಂದು ಒಪ್ಪಿಕೊಳ್ಳುತ್ತಾರೆ. ಅವರು ತಿಳಿಸತಕ್ಕ ಮಾತುಗಳನ್ನು ನಾವು ಗಮನಕೊಟ್ಟು ಕೇಳುವುದು ನ್ಯಾಯವಾಗಿದೆಯಲ್ಲವೆ? ಅವರನ್ನು ಅಭಿವೃದ್ಧಿ ಸ್ಥಿತಿಗೆ ತಂದ ಕ್ರೈಸ್ತ ಮತವನ್ನು ಧಿಕ್ಕರಿಸಬೇಕೆಂದು ಅವರು ಹೇಳುತ್ತಾರೆಯೋ? ಎಂದಿಗೂ ಇಲ್ಲ. ಅವರು ಹೇಳುವುದೇನಂದರೆ ಕ್ರೈಸ್ತಮತ ಪ್ರಚಾರಕರಾದ ಪಾದ್ರಿಗಳು ದೇಶದವರಿಗೆ ಉಪಯುಕ್ತವಾದ ಸಲಹೆಗಳನ್ನು ಕೊಡುವುದರಲ್ಲಿ ಅಸಾಧಾರಣವಾದ ಸಹಾಯವನ್ನು ಮಾಡಿರುವರೆಂತಲೂ ಕ್ರೈಸ್ತಮತವು ಜರ್ಮನ್ ದೇಶದಲ್ಲಿ ದಿನೇ ದಿನೇ ಅಭಿವೃದ್ಧಿಯನ್ನೊಂದುತ್ತಿದೆಯೆಂತಲೂ ಬೌದ್ಧಮತವು ಕ್ರಮೇಣ ಕ್ಷೀಣಗತಿಗೆ ಬರುತ್ತಿದೆಯೆಂತಲೂ, ಮುಂದೆ ಜರ್ಮನ್ ದೇಶವು ಉಚ್ಚ ಸ್ಥಿತಿಗೆ ಬರಬೇಕಾದರೆ ಕ್ರೈಸ್ತಮತವೇ ಆಧಾರಭೂತವಾಗಿರಬೇಕೆಂತಲೂ ಅಭಿಪ್ರಾಯಪಡುತ್ತಾರೆ. ವಾಚಕ ಮಹಾಶಯರು ಈ ಸಂಗತಿಯು ತಿಳಿಯುವುದಕ್ಕೋಸ್ಕರ ಜರ್ಮನ್ ದೇಶದ ಪ್ರಮುಖರ ಅಭಿಪ್ರಾಯಗಳನ್ನು ಇಲ್ಲಿ ಸೂಚಿಸುತ್ತೇವೆ.

ಕೌಂಟ್ ಒಕೂಮ ಎಂಬ ಪ್ರಸಿದ್ಧರಾದ ಜರ್ಮನ್ ಮಂತ್ರಿ ಶ್ರೇಷ್ಠರು ತಿಳಿಸುವುದೇನಂದರೆ —ಜರ್ಮನ್ ದೇಶದಲ್ಲೆಲ್ಲಾ ಪ್ರಖ್ಯಾತಿಯನ್ನು ಪಡೆದಿರುವ ಟೋಕಿಯೊ ಪಟ್ಟಣದ ಸಕಲಕಲಾಶಾಲೆಯು ಏರ್ಪಾಡಾದಾಗ್ಗೆ ಪಾದ್ರಿಗಳಾದ ಡಾಕ್ಟರ್ ವರ್ಬೆಕ್‌ರವರು ಸರ್ಕಾರಕ್ಕೆ ಉಪಯೋಗವಾದ ಸಲಹೆಗಳನ್ನು ಕೊಡುವುದರಲ್ಲಿ ಅಸಾಧಾರಣವಾದ ಸಹಾಯವನ್ನು ಮಾಡಿರುವರು. ಇದಲ್ಲದೆ ಜರ್ಮನ್ ದೇಶದಿಂದ ಯುರೋಪ್ ಮತ್ತು ಅಮೇರಿಕಾ ದೇಶಗಳಿಗೆ ಹೋಗಿದ್ದ ವಿದ್ಯಾಭಿವೃದ್ಧಿಯ ಕಮಿಟಿಯವರು ಮೇಲ್ಕಂಡ ಪಾದ್ರಿಗಳ ಸ್ನೇಹದಿಂದಲೇ ಹೋದರೆಂದು ತಿಳಿಸುತ್ತಾರೆ. ಜರ್ಮನ್ ದೇಶದಲ್ಲಿ ಕ್ರೈಸ್ತ ಮತಾಭಿವೃದ್ಧಿಯ ವಿಷಯ ಪ್ರೆಸಿಡೆಂಟ್ ಸ್ಕೋ ಯವರು ತಿಳಿಸುವುದೇನಂದರೆ —ಕ್ರೈಸ್ತ ಮತವು ಜರ್ಮನ್ ದೇಶದಲ್ಲಿ ಹರಡಿಕೊಳ್ಳುತ್ತಾ ಜನರನ್ನು ಲೌಕಿಕ ವಿಷಯಗಳಲ್ಲಿ ಮಾತ್ರವಲ್ಲದೆ ಪಾರಮಾರ್ಥಿಕ ಕಾರ್ಯಗಳಲ್ಲಿಯೂ ಅಭಿವೃದ್ಧಿಯ ಸ್ಥಿತಿಗೆ ತರುತ್ತದೆ. ಜರ್ಮನ್ ದೇಶದ ಮಹಾಜನಗಳು ನವೀನಾಭಿವೃದ್ಧಿಗನುಸಾರವಾಗಿ ತಮ್ಮನ್ನು ಸ್ಥಿರಪಡಿಸಿಕೊಂಡರೂ ಕ್ರೈಸ್ತ ಮತದ ಪ್ರಾಬಲ್ಯವನ್ನು ಕಡಿಮೆಮಾಡಲಾರರೆಂದು ಈ ಜನಾಂಗದ ಮುಖಂಡರು ಅಭಿಪ್ರಾಯಪಡುತ್ತಾರೆ. ಸಮಾಜನಾಗಿ ಎಂಬೊಬ್ಬ ಮುಖ್ಯೋಪಾಧ್ಯಾಯರು ತಿಳಿಸುವದೇನಂದರೆ ಬೌದ್ಧಮತದ ಸ್ಥಿತಿಯನ್ನು ನಾನು ಹ್ಯಾಗೆ ತಿಳಿಸಲಿ? ಅದನ್ನು ನೆನಸಿಕೊಂಡರೆ ತುಂಬಾ ವಿಷಾದಿಸಬೇಕಾಗುತ್ತದೆ. ಅದು ನಮ್ಮ ದೇಶವನ್ನು ಉನ್ನತಸ್ಥಿತಿಗೆ ತರುವದೆಂಬ ನಂಬಿಕೆಯು ನನ್ನಲ್ಲಿ ಕೊಂಚವೂ ಇಲ್ಲ. ಅದು ಪುನಃ ಜೀವಕ್ಕೆ ಬರುವದೆಂಬ ಯೋಚನೆಯನ್ನೇ ನಾವು ಮರೆಯಬೇಕಾಗಿದೆ. ಹೀಗಿದ್ದರೂ ಜನಾಂಗದವರಂತೆ ಮತದ ಅವಶ್ಯಕತೆಯಿಂದ ತವಕಪಡುತ್ತಾರೆ. ಬೌದ್ಧಮತವು ಕೆಲಸಕ್ಕೆ ಬಾರದೆಹೋದರೆ ಕ್ರೈಸ್ತ ಮತದಲ್ಲಿ ನಾವು ಆಶ್ರಯವನ್ನು ಪಡೆಯಬೇಕು. ಜರ್ಮನ್ ದೇಶಿಯರು ಯಾವ ಮತವನ್ನೂ ಅವಲಂಬಿಸದೆ ನಾಸ್ತಿಕರಾಗಿರುವುದಕ್ಕೆ ಬದಲಾಗಿ ಕ್ರೈಸ್ತಮತವನ್ನವಲಂಬಿಸಿದರೆ ಎಷ್ಟೋ ಮೇಲಾಗುವುದು.

ಹಿಂದೂ ದೇಶದಲ್ಲಿ ಕ್ರೈಸ್ತಮತವು ಹರಡಿಕೊಳ್ಳುತ್ತಿರುವುದು ಸಹ ಜನಗಳ ಸ್ಥಿತಿಗತಿಗಳಲ್ಲಿ ಅದು ತಂದಿರುವ ಅಭಿವೃದ್ಧಿಯು ನಿಷ್ಪಕ್ಷಪಾತಿಗಳ ಮನಸ್ಸುಗಳಿಗೆ ಗೋಚರವಾಗುತ್ತಿದೆ. ಹಿಂದೂ ದೇಶವೆಲ್ಲಾ ಒಂದು ಜನಾಂಗವಾಗಬೇಕಾದರೆ ಕ್ರೈಸ್ತಮತವೇ ಆಶ್ರಯವಾಗಿರಬೇಕು. ಕ್ರೈಸ್ತಮತವು ದೇಶದಲ್ಲಿರುವ ಅನೇಕ ಒಳ್ಳೆಯ ಪದ್ಧತಿಗಳನ್ನು ಹಾಳುಮಾಡುತ್ತಿದೆಯೆಂದು ಕೆಲವರು ನಂಬುತ್ತಾರೆ. ಆದರೆ ಹಾಗೆ ನಂಬುವುದು ತಪ್ಪು. ದೇಶಿಯ ಕ್ರೈಸ್ತರಲ್ಲಿ ಮಹಾಪ್ರಸಿದ್ಧರಾಗಿದ್ದ ಕಾಳೀಚರಣಬಾನರ್ಜಿಯವರು ಘನ ವಿದ್ವಾಂಸರಾಗಿಯೂ ಮೈಸೂರಿನ ಮಂತ್ರಾಲೋಚನಾ ಸಭಾಸದರಾಗಿಯೂ ರಾಷ್ಟ್ರೀಯ ಕಾಂಗ್ರೆಸ್ ಸಭೆಯಲ್ಲಿ ಪ್ರಮುಖರಾಗಿಯೂ ಇದ್ದುಕೊಂಡು ಹಿಂದೂ ದೇಶದೇಳಿಗೆಗೆ ತಮ್ಮ ಜೀವಮಾನವನ್ನೇ ವಿನಿಯೋಗಿಸಿರುತ್ತಾರೆ.

ಪ್ಲೇಗ್ ಉಪದ್ರವ ವಿಚಾರವು.

ರಾಜಧಾನಿಯ ಸೆಲ್ಟ್ ಅಸಿಸ್ಟೆಂಟ್ ಮಿ॥ ಬಿ ಕೃಷ್ಣರಾಯರು ಮೈಸೂರು ಪಟ್ಟಣದಲ್ಲಿ ಪ್ಲೇಗ್ ಉಪದ್ರವನ್ನು ತಪ್ಪುದಂತೆ ಮಾಡಬೇಕೆಂದು ಸೂಚಿಸುತ್ತಿದ್ದಾರೆ. ಆ ಭಾಗದಲ್ಲಿ ಅವರು ಪ್ರಜೆಗಳ ಅನುಕೂಲಕ್ಕೆ ಪ್ರಕಟಿಸಿರುವ ವಿಷಯಗಳನ್ನು ರಾಜಧಾನಿಯವರು ಮಾತ್ರವೇ ಅಲ್ಲದೆ ಇತರ ಗ್ರಾಮ ಊರುಗಳವರೂ ತಿಳಿದುಕೊಳ್ಳುವವರಾಗಲೆಂದು ಹಾರೈಸುತ್ತೇವೆ.

ಪ್ಲೇಗ್ ರೋಗವು ಉತ್ಪತ್ತಿಯಾಗದಂತೆಯೂ, ಉತ್ಪತ್ತಿಯಾದಲ್ಲಿ ವೃದ್ಧಿಯಾಗದಂತೆಯೂ ಮಾಡುವ ತಕ್ಕ ಉಪಾಯಗಳು —ಪ್ಲೇಗೆಂಬುವದು ಆದಿಯಲ್ಲಿ ಇಲಿಯಿಂದಲೇ ಪ್ರಾರಂಭಿಸುವ ಜಾಡ್ಯವಾಗಿರುವುದು. ಪ್ಲೇಗ್ ಪ್ರಾರಂಭಿಸುವದಕ್ಕೆ ಅನುಚಿತವಾಗಿ ಇಲಿಗಳು ಅಪರಿಮಿತವಾಗಿ ಸಾಯುತ್ತಿರುವುದು ವ್ಯಕ್ತವಾಗಿದೆ. ಹೀಗೆ ಇಲಿಗಳು ಸಾಯುವುದಕ್ಕೆ ಮನುಷ್ಯರಿಗೆ ಮರಣವನ್ನುಂಟುಮಾಡುವ ಪ್ಲೇಗ್ ಜಾಡ್ಯವೇ ಕಾರಣವಾಗಿರುವುದು. ಮನುಷ್ಯರಿಗೆ ಇಲಿಗಳ ಕೂಡನೆ ಅತಿ ಸಮೀಪ ಸಹವಾಸದೋಷವಿರುವುದರಿಂದ, ಮನುಷ್ಯನು ಇಲಿಗಳ ಮೈಯಲ್ಲಿರುವ ಅತಿ ಸೂಕ್ಷ್ಮವಾದ ಚಿಗಟಗಳ ದ್ವಾರ ಆಕಸ್ಮಿಕವಾಗಿ ಪ್ಲೇಗ್ ಜಾಡ್ಯವನ್ನು ಹೊಂದುವನು. ಚಿಗಟವೆಂಬುವದು ಸ್ವಾಭಾವಿಕವಾಗಿ ರಕ್ತವನ್ನು ಹೀರುವ ಅತಿ ಚಟುವಟಿಕೆಯುಳ್ಳ ಪ್ರಾಣಿಯಾಗಿದೆ. ಇದಲ್ಲದೆ ಈ ಚಿಗಟವು ತಾನಿರುವ ಒಂದು ಪ್ರಾಣಿಯ ಮೈಯ್ಯಿಂದ ಇತರ ಪ್ರಾಣಿಯ ಮೈಯ್ಯಲ್ಲಿ ಹೋಗಿ ಸೇರುವುದು. ಪ್ಲೇಗ್ ತಗಲಿದಾಗ ಇಲಿಗಳು ತಮ್ಮ ಬಿಲಗಳನ್ನು ಬಿಟ್ಟು ಹೊರಗೆ ಬಂದು ಅತ್ತಿತ್ತ ಓಡಾಡುತ್ತಾ ಸಾಯುವವು. ಹೀಗೆ ಪ್ಲೇಗಿನಿಂದ ಸಾಯುವ ಇಲಿಗಳ ಮೈಮೇಲೆ ಆ ಚಿಗಟಗಳು ಅಧಿಕವಾಗಿ ಕೂಡಿರುವವು. ಇಲಿಗಳು ಪ್ಲೇಗಿನಿಂದ ಸತ್ತಾಗ ಅವುಗಳ ಮೈಮೇಲಿರುವ ಈ ಸೂಕ್ಷ್ಮವಾದ ಚಿಗಟಗಳು ಆ ಸತ್ತ ಇಲಿಗಳ ಮೈಯನ್ನು ಬಿಟ್ಟು ಇತರ ಸಜೀವಪ್ರಾಣಿಗಳ ಮೈಯ್ಯನ್ನು ಆಶ್ರಯಿಸಲು ಪ್ರಯತ್ನಿಸುವವು. ಇಂಥಾ ಸಂದರ್ಭಗಳಲ್ಲಿ ಮನುಷ್ಯನು ಪಕ್ಕದಲ್ಲಿದ್ದಲ್ಲಿ ಆ ಚಿಗಟಗಳು ಮನುಷ್ಯನ ಮೈಗೆ ತಗಲಿಕೊಂಡು ಜಾಡ್ಯವನ್ನುಂಟುಮಾಡುತ್ತವೆ. ಪ್ಲೇಗಿಗೆ ಮೂಲಕಾರಣವಾದ ಅಣುರೂಪವಾದ ಕ್ರಿಮಿಗಳು ಪ್ಲೇಗಿನಿಂದ ಸತ್ತ ಇಲಿಗಳ ರಕ್ತದಿಂದ, ಇಲಿಗಳನ್ನು ತಗಲಿರುವ ಚಿಗಟಗಳ ಶರೀರದಲ್ಲಿ ವ್ಯಾಪಿಸಿ, ಮನುಷ್ಯನ ದೇಹದಲ್ಲಿ ಹೊಕ್ಕು, ಅಲ್ಲಿ ಪ್ರಬಲಿಸಿ, ಮನುಷ್ಯನ ದೇಹದಲ್ಲಿ ಯಾವ ಭಾಗದಲ್ಲಿ ಅವುಗಳು ಎಷ್ಟು ಮಟ್ಟಿಗೆ ವೃದ್ಧಿಯಾಗುತ್ತವೋ, ತದನುಗುಣವಾಗಿ ನಾನಾ ವಿಧವಾದ ಪ್ಲೇಗ್ ಜಾಡ್ಯವನ್ನುಂಟುಮಾಡುವವು.

ಈ ಜಾಡ್ಯಕ್ಕೆ ತಕ್ಕ ಪ್ರತಿಕ್ರಿಯೆಗಳು —ಹೀಗೆ ಪ್ಲೇಗ್ ವೃದ್ಧಿಯಾಗಲು ಇಲಿಗಳು ಮತ್ತು ಇಲಿಗಳ ಮೈಮೇಲಿರುವ ಚಿಗಟಗಳು ಮುಖ್ಯ ಸಾಧಕಾರಣಗಳಾಗಿರುವುದರಿಂದ, ಪ್ಲೇಗನ್ನು ತಪ್ಪಿಸಿ ಆ ರೋಗವನ್ನು ನಿಶ್ಶೇಷವಾಗಿ ನಿಲ್ಲಿಸಬೇಕಾದಲ್ಲಿ, ಪ್ಲೇಗಿಗೆ ಕಾರಣವಾದ ಈ ಇಲಿಗಳನ್ನೂ, ಅವುಗಳ ಮೈಮೇಲಿರುವ ಚಿಗಟಗಳನ್ನೂ ನಾಶಮಾಡಲು ನಾವುಗಳು ಮೊದಲು ಪ್ರಯತ್ನವನ್ನು ಮಾಡಬೇಕು. ಬೋನುಗಳಿಂದಲೂ, ವಿಷದಿಂದಲೂ ಇಲಿಗಳನ್ನು ಕೊಲ್ಲುವುದಕ್ಕಾಗಿ ನಿರಂತರವಾಗಿಯೂ, ನಿಯತವಾಗಿಯೂ ಪ್ರಯತ್ನಗಳನ್ನು ಮಾಡಬೇಕು. ಬೋನುಗಳನ್ನೂ ಮತ್ತು ಇಲಿ ವಿಷವನ್ನೂ ಹೆಲ್ತ್ ಡಿಪಾರ್ಟ್‌ಮೆಂಟಿನವರು ಜನರಿಗೆಲ್ಲಾ ದುಡ್ಡು ಖರ್ಚಿಲ್ಲದಂತೆ ಒದಗಿಸಿ ಕೊಡಲು ಸಿದ್ಧರಾಗಿರುವರು. ಮನೆಗಳಿಗೆ ಇಲಿಗಳು ಬಾರದಂತೆಯೂ, ದವಸಧಾನ್ಯಗಳಿರುವ ಉಗ್ರಾಣಗಳಲ್ಲಿ ಅವುಗಳು ಸೇರದಂತೆಯೂ ತಕ್ಕ ಬಂದೋಬಸ್ತನ್ನು ಮಾಡಬೇಕು. ಇಲಿಗಳೂ ಮತ್ತು ಅವುಗಳ ಮೈಮೇಲಿರುವ ಚಿಗಟಗಳೂ ವೃದ್ಧಿಯಾಗಲು ಅವಕಾಶವು ಸಿಕ್ಕದಂತೆ ಮನೆಗಳನ್ನು ಕಟ್ಟಿಕೊಳ್ಳಬೇಕು. ಆದ್ದರಿಂದ ಮೈಸೂರಿನಲ್ಲಿ ಹೆಂಚಿನಿಂದ ಹೊದ್ದಿಸಲ್ಪಟ್ಟ ಛಾವಣಿಗಳುಳ್ಳ ಮನೆಗಳು ಪ್ರಶಸ್ತವಾಗಿರುವುದಿಲ್ಲ. ನೆಲದಲ್ಲಿ ಮೋಳೆಲ್ಲದಂತೆಯೂ, ಗೋಡೆಗಳಲ್ಲಿ ಬಿಲಗಳು ಮತ್ತು ಬಿರುಕುಗಳು ಇಲ್ಲದಂತೆಯೂ ಮಾಡಿಕೊಳ್ಳಬೇಕು. ಉಗ್ರಾಣಗಳಲ್ಲಿಯೂ, ಬಚ್ಚಲು ಮನೆಗಳಲ್ಲಿಯೂ, ಛಾವಣಿಗಳಲ್ಲಿಯೂ, ಸತ್ತ ಇಲಿಗಳು ಇರುವುದನ್ನು ಪದೇಪದೇ ಪರೀಕ್ಷಿಸಿ ನೋಡಬೇಕು. ಮನೆಯಲ್ಲಿಯಾಗಲೀ ನೆರೆಹೊರೆಯಲ್ಲಾಗಲೀ ಅಸಾಧಾರಣವಾಗಿ ಇಲಿಗಳು ಸತ್ತಲ್ಲಿ ಆ ವಿಷಯವನ್ನು ಒಡನೆಯೇ ಹೆಲ್ತ್ ಡಿಪಾರ್ಟ್‌ಮೆಂಟಿನವರಿಗೆ ತಿಳಿಸಬೇಕು. ಮನೆಯಲ್ಲಾಗಲೀ ಮನೆಯ ನೆರೆಹೊರೆಯಲ್ಲಾಗಲೀ ಇಲಿಗಳು ಸತ್ತಲ್ಲಿ ಒಡನೆಯೇ ಕೆಲವು ದಿನಗಳವರೆಗೂ ಮನೆಯನ್ನು ಖಾಲಿ ಮಾಡಬೇಕು. ಹೀಗೆ ಕೂಡಲೆ ಮನೆಗಳನ್ನು ಖಾಲಿ ಮಾಡುವುದರಿಂದ ಇಲಿಗಳ ಮೈಮೇಲಿದ್ದ ಚಿಗಟಗಳು ಅನ್ಯದೇಹವನ್ನು ಆಶ್ರಯಿಸಲಾರದೆ ಆಹಾರವಿಲ್ಲದೆ ಸಾಯುವವು. ಆದುದರಿಂದ ಮನೆಯನ್ನು ಬಿಡುವುದರಿಂದ ಬಹು ಗುಣವುಂಟು. ಇದರಂತೆಯೇ ಯಾವ ಮನೆಯಲ್ಲಾಗಲೀ ಅಥವ ನೆರೆಹೊರೆಯಲ್ಲಾಗಲೀ ಪ್ಲೇಗ್ ಕಾಯಿಲೆಗಳು ಆಗುತ್ತವೋ ಅಂಥಾ ಸ್ಥಳವನ್ನು ಕೆಲವು ದಿನಗಳ ಮಟ್ಟಿಗೆ ಬಿಡುವುದು ಒಳ್ಳೇದು. ಮನೆಯನ್ನು ಕೂಡಲೆ ಬಿಟ್ಟಲ್ಲಿ ಉಳಿದವರಲ್ಲಿ ಖಾಯಿಲೆಯು ಪ್ರಾಯೇಣ ಅಂಕುರಿಸುವುದಿಲ್ಲ. ಜಾಡ್ಯಕ್ಕೆ ಗುರಿಯಾದ ಸ್ಥಳವನ್ನು ಬಿಟ್ಟು, ಜಾಡ್ಯವಿಲ್ಲದಿರುವ ಸ್ಥಳಕ್ಕೆ ಹೋಗಿ ವಾಸಿಸುವುದೇ ಅತಿ ಉತ್ತಮವಾದ ಪ್ರತಿಕ್ರಿಯೆಯಾಗಿರುವುದು.

ಇಂಡಿಯಾ ದೇಶದ ವೃತ್ತಾಂತಗಳು.

ಕೊಯಮುತ್ತೂರಿನ ಬಳಿ ಪಳ್ಳೂರಿನಲ್ಲಿ ಮೂರು ಜನರು ಸೇರಿ ಒಬ್ಬನನ್ನು ಕೊಂದುಹಾಕಿದರೆಂಬ ಮೊಕದ್ದಮೆ ಆಯಿತು. ಸೆಷನ್ಸ್ ಜಡ್ಜರು ಆ ಮೂವರಿಗೂ ಜೀವಾಂತ ಶಿಕ್ಷೆಯನ್ನು ವಿಧಿಸಿರುತ್ತಾರೆ.

* * *

ಟುಟುಕೂರಿ (ತಟ್ಟುಗುಡಿ) ಪಟ್ಟಣದಲ್ಲಿ ಫರ್ನಾಂಡಿಸ್ ಎಂಬುವರ ದೊಡ್ಡ ಷಾಪಿಗೆ ಬೆಂಕಿ ಬಿದ್ದು ಸುಮಾರು ೨೦,೦೦೦ ರೂಪಾಯಿನ ಸರಕುಗಳು ಸುಟ್ಟುಹೋದವು. ಅಂಗಡಿಗೆ ಯಾರೋ ಬೇಕೆಂದು ಬೆಂಕಿಹಾಕಿದರೆಂದು ಊಹಿಸಲ್ಪಟ್ಟಿದೆ.

* * *

ಕಳೆದ ಭಾನುವಾರರಾತ್ರಿ ಸುಮಾರು ೧೦॥ ಗಂಟೆ ಹೊತ್ತಿನಲ್ಲಿ ಕಲ್ಕತ್ತಾ ಪಟ್ಟಣದ ಪ್ರಜೆಗಳು ಅಪಾರವಾಗಿ ನಕ್ಷತ್ರಗಳು ಆಕಾಶದಿಂದ ಬಿದ್ದದ್ದನ್ನು ಕಂಡು ಬೆರಗಾದರು. ಆಕಾಶವೆಲ್ಲಾ ಜ್ಯೋತಿಗಳು ಉರಿದಂತೆ ಪ್ರಕಾಶಮಾನವಾಗಿತ್ತು. ಸುಮಾರು ಅರ್ಧಗಂಟೆಯವರೆಗೆ ನಕ್ಷತ್ರಗಳ ಮಳೆಗರೆಯಿತೆಂದು ತಂತಿವರ್ತಮಾನ ಬಂದಿರುತ್ತದೆ.

* * *

ಆಸ್ಟ್ರೇಲಿಯಾ ದ್ವೀಪದ ವರ್ತಕರು ಅಲ್ಲಿನ ಮಾಂಸವನ್ನು ಮುಂಜುಗಡ್ಡೆಗಳಸಹಿತವಾಗಿ ಓಡಗಳಲ್ಲಿ ಭರ್ತಿಮಾಡಿ ಕೆಡದಂತೆ ಕಲ್ಕತ್ತೆಗೆ ಕಳುಹಿಸಿ, ಅಲ್ಲಿ ವಿಕ್ರಯಿಮಾಡಿಸಬೇಕೆಂದು ಪ್ರಯತ್ನಪಟ್ಟಿದ್ದಾರೆ. ಇದಕ್ಕಾಗಿ ಕಲ್ಕತ್ತೆಯಲ್ಲಿ ಒಂದು ಕಾರ್ಖಾನೆಯೂ ಉಗ್ರಾಣವೂ ಅಂಗಡಿಗಳೂ ಇನ್ನು ಆರು ತಿಂಗಳುಗಳೊಳಗಾಗಿ ಸಿದ್ಧವಾಗುವವು.

* * *

ಮಧುರೆಯಲ್ಲಿ ಒಬ್ಬ ಪೋಲೀಸ್ ಇನ್ಸ್‌ಪೆಕ್ಟರೂ ನಾಲ್ಕು ಮಂದಿ ಪೋಲೀಸಿನವರೂ ಸೇರಿ ಇಬ್ಬರನ್ನು ಹಿಡಿದು ಲಾಕಪ್ಪಿನಲ್ಲಿಟ್ಟು ಅಕ್ರಮ ಪ್ರಬಂಧ ಮಾಡಿದರೆಂದು ಮೊಕದ್ದಮೆ ಆಯಿತು. ಸೆಷನ್ಸ್ ಜಡ್ಜರು ಆ ಮೊಕದ್ದಮೆಯನ್ನು ಮೂರು ದಿನ ದರ್ಯಾಪ್ತು ಮಾಡಿ, ರುಜುವಾತಾಗಲಿಲ್ಲವೆಂದು ಹೇಳಿ ಅಪರಾಧಿಗಳನ್ನೆಲ್ಲಾ ಬಿಡುಗಡೆ ಮಾಡಿರುತ್ತಾರೆ.

* * *

ಲಾಹೋರ್ ಪಟ್ಟಣದಲ್ಲಿ ದೊಂಬಿ ಎಬ್ಬಿಸಿದವರ ಪೈಕಿ ಅಜಿತ್‌ಸಿಂಗ್ ಎಂಬುವರೂ ಒಬ್ಬನೆಂದೂ ಅವನು ಅಲ್ಲಿಂದ ತಪ್ಪಿಸಿಕೊಂಡು ಹೋದನೆಂತಲೂ ಪ್ರಕಟವಾಗಿತ್ತು. ಈಗ ಅಜಿತ್‌ಸಿಂಗು ನೇಪಾಳ ಸಂಸ್ಥಾನದ ರಾಜಧಾನಿಯಲಿ ಒಬ್ಬ ದೊಡ್ಡಮನುಷ್ಯನ ಮನೆಯೊಳಗೆ ಸೇರಿಕೊಂಡಿದ್ದನೆಂತಲೂ, ಅವನನ್ನು ಹಿಡಿದುಕೊಂಡು ಬಂದಿದಾರೆಂತಲೂ ತಿಳಿದುಬಂದಿದೆ.

* * *

ಮದರಾಸ್ ಪಟ್ಟಣದ ಮ್ಯುನಿಸಿಪಾಲಿಟಿಯಲ್ಲಿ ನೌಕರನಾಗಿದ್ದ ಸ್ಮೈಲ್ಸ್ ಎಂಬಾತನ ಹೆಂಡತಿಯು ಸುಮಾರು ತಿಂಗಳ ಕೆಳಗೆ ತೀರಿಹೋದಳು. ಆ ಲಾಗಾಯತು ಆತನ ಮನಸ್ಸು ಕೆಟ್ಟುಹೋಗಿತ್ತು. ಆತನು ಕಳೆದ ಸೋಮವಾರ ಬೆಳಗ್ಗೆ ತನ್ನ ೧೦ ವರುಷದ ಹೆಣ್ಣುಮಗುವನ್ನೂ ಒಂದು ವರುಷದ ಗಂಡು ಮಗುವನ್ನೂ ಗುಂಡಿನಿಂದ ಹೊಡೆದು ಕೊಂದುಹಾಕಿ, ತಾನೂ ಆತ್ಮಹತ್ಯಮಾಡಿಕೊಂಡನು. ಅವನಿಗೆ ಸುಮಾರು ೪೭ ವರುಷವಾಗಿತ್ತು.

* * *

ಮದ್ರಾಸ್ ಪ್ರಾಂತ್ಯಗಳಿಗೆ ಸೇರಿದ ರಾಯಪುರಕ್ಕೆ ಕಳೆದ ಹತ್ತು ವರುಷಗಳಿಂದಲೂ ಪ್ಲೇಗ್ ಉಪದ್ರವು ಪ್ರವೇಶಿಸಿರಲಿಲ್ಲ. ಈಗ ಪ್ಲೇಗ್ ಪ್ರಾರಂಭವಾಗಿದೆ. ಸರ್ಕಾರದವರು ಅದನ್ನು ಬೇಗನೆ ಅಡಗಿಸಬೇಕೆಂದು ಪ್ರಯತ್ನಪಡುತ್ತಿದ್ದಾರೆ. ಇದಲ್ಲದೆ ಜನರೆಲ್ಲಾ ಇನಾಕ್ಯುಲೇಷನ್ ಮಾಡಿಸಿಕೊಳ್ಳಬೇಕೆಂದು ಸಾರಿಸಿದ್ದಲ್ಲದೆ ಬಹಿರಂಗವಾಗಿ ಸಾವಿರಾರು ಜನರ ಎದುರಿಗೆ ಕಮಿಷನರವರೂ, ಡೆಪ್ಟಿ ಕಮಿಷನರವರೂ ಇನಾಕ್ಯುಲೇಷನ್ ಮಾಡಿಸಿಕೊಂಡರು.

* * *

ಅಸ್ಸಾಂ ಡಿವಿಜನಿಗೆ ಸೇರಿದ ಮೈಮನ್‌ಸಿಂಗ್ ಸರ್ಕಾರಿ ಖಜಾನೆಗೆ ಸಾಗಿಸುವುದಕ್ಕೆ ೧,೦೦೦ ಸವರಿನ್ ನಾಣ್ಯಗಳನ್ನು ತೆಗೆದುಕೊಂಡು ಹೋದ ಅಲಿಪುರದ ರಿಜರ್ವ್ ಪೋಲೀಸ್ ಹೆಡ್ ಕಾನ್ಸ್‌ಟೇಬಲ್ ಸುರೇಂದ್ರನಾಥಗುಹಾ ಎಂಬುವನು ಅದನ್ನೆಲ್ಲಾ ತಾನೇ ಬಚ್ಚಿಟ್ಟುಕೊಂಡು ಕಳ್ಳರು ಎತ್ತಿಕೊಂಡುಹೋದರೆಂದು ವರ್ತಮಾನ ಹುಟ್ಟಿಸಿದ್ದದ್ದು ಪತ್ತೆ ಆಯಿತು. ಈ ಅಪರಾಧಿಗೆ ಅಲಿಪುರದ ಮ್ಯಾಜಿಸ್ಟ್ರೇಟರು ಒಂದು ವರುಷದ ಕಠಿನಸಜಾ ವಿಧಿಸಿರುತ್ತಾರೆ.

* * *

ಕಾಕಿನಾಡಾ ಪಟ್ಟಣದಲ್ಲಿ ಗಲಭೆ ನಡೆಯಿತೆಂಬ ಮೊಕದ್ದಮೆಯಲ್ಲಿ ನಾಲ್ಕನೇ ಗುಂಪಿನ ಅಪರಾಧಿಗಳ ಪೈಕಿ ಇಬ್ಬರನ್ನು ಬಿಡುಗಡೆ ಮಾಡಿ, ಉಳಿದವರಿಗೆ ಮ್ಯಾಜಿಸ್ಟ್ರೇಟರು ಶಿಕ್ಷೆ ವಿಧಿಸಿದರು. ಸೀಗರದಿ ಸನ್ಯಾಸಿ ಎಂಬುವನಿಗೂ, ನಗಿರೆಡ್ಡಿ ಅಪ್ಪಾಡು ಎಂಬುವನಿಗೂ ತಲಾ ೧೮ ತಿಂಗಳ ಕಠಿಣಸಜಾ, ೫೦ ರೂಪಾಯಿ ಜುಲ್ಮಾನೆಯೂ, ಕೌಜಾ ರಾಮಕೃಷ್ಣಯ್ಯನಿಗೆ ೧೮ ತಿಂಗಳ ಕಠಿಣ ಸಜಾ ೧೫೦ ರೂಪಾಯಿ ಜುಲ್ಮಾನೆಯೂ ಆಗಿದೆ. ಇನ್ನಿಬ್ಬರು ಅಪರಾಧಿಗಳು ಇದುವರೆಗೂ ಸಿಕ್ಕಿ ಇಲ್ಲ.

* * *

ಒರಿಸ್ಸಾ ಪ್ರಾಂತ್ಯದಲ್ಲಿ ನದಿಗಳ ಪ್ರವಾಹದ ದೆಸೆಯಿಂದ ನೂರು ಮೈಲಿ ಘಾಸಲಿಯ ಗ್ರಾಮಗಳೂ ಜಮೀನುಗಳೂ ನೀರಿನಲ್ಲಿ ಮುಳುಗಿಹೋಗಿ ಪ್ರಜೆಗಳಿಗೆ ತುಂಬಾ ಕಷ್ಟಪ್ರಾಪ್ತವಾಗಿದೆ ಎಂದು ತಿಳಿಸಿದ್ದಾರೆ. ನದಿಯಲ್ಲಿ ಕೆಲವು ಹೆಣಗಳು ತೇಲಿಕೊಂಡು ಬರುತ್ತಿರುವವು. ಗವರ್ನಮೆಂಟಿನವರು ಆ ಜನರ ಕಷ್ಟನಿವಾರಣೆಗೆ ೩,೫೦೦ ರೂಪಾಯಿ ಕಳುಹಿಸಿದರು. ಇದು ಸಾಲದೆ ಹೋಗಿರುವುದರಿಂದ ದರ್ಮಾಕಿ ಮೂಲಕ ಚಂದಾ ಕೂಡಿಸಿ ಕಳುಹಬೇಕೆಂದು ಪ್ರಯತ್ನ ನಡೆದಿದೆ.

* * *

ಪಂಜಾಬ್ ಆಧಿಪತ್ಯದಲ್ಲಿ ಹೊಸ ನಾಲೆಗಳ ಕೆಳಗಣ ಜಮೀನುಗಳ ವ್ಯವಸಾಯದ ವಿಷಯದಲ್ಲಿ ಸರ್ಕಾರದವರು ಮಾಡಿದ ರೂಲುಗಳು ಪ್ರಜೆಗಳಿಗೆ ಹಿತಕರವಾಗಿಲ್ಲವೆಂದು ತಿಳಿದು, ವೈಸ್‌ರಾಯಿಯವರು ಆ ರೂಲುಗಳನ್ನು ವಜಾ ಮಾಡಿಬಿಟ್ಟಿರುವರು. ಈಗ ಆ ನಾಲೆ ಕೆಳಗಣ ಜಮೀನುಗಳನ್ನು ಆಬಾದಿಗೆ ತರುವುದಕ್ಕೆ ಯಾವ ತರಹ ರೂಲು ಮಾಡಬೇಕೆಂದು ತನಿಖೆಯಿಂದ ಆಲೋಚನೆ ಮಾಡಿ ತೀರ್ಮಾನ ಮಾಡುವುದಕ್ಕೆ ಗವರ್ನಮೆಂಟಿನವರು ಒಂದು ಕಮಿಟಿಯನ್ನು ನೇಮಕ ಮಾಡಿದಾರೆ. ಮಿ॥ ಗಾರ್ಡನ್ ವಾಕರ್‌ಯವರು ಈ ಕಮಿಟಿಯ ಪ್ರೆಸಿಡೆಂಟರಾಗಿರುವರು.

* * *

ಕಲ್ಕತ್ತಾ ಪಟ್ಟಣದ ಪೋಲೀಸಿನವರು ಒಬ್ಬ ಕಳ್ಳನನ್ನು ದಸ್ತಗಿರಿ ಮಾಡಿದರು. ಅವನು ನಾರಿನ ವ್ಯಾಪಾರ ಮಾಡುತ್ತೇನೆಂದು ಹೇಳಿ ಅಲ್ಲಿಗೆ ಹೋಗಿದ್ದನು. ಅವನ ಮನೆಯನ್ನು ಶೋಧನೆ ಮಾಡುವಾಗ್ಗೆ ೪೦೦ ರೂಪಾಯಿಯೂ ಕೆಲವು ಸವರಿನ್ ನಾಣ್ಯಗಳೂ ಸಿಕ್ಕಿದವು. ಇಲ್ಲದೆ ಅವನು ಪೋಲೀಸಿನವರನ್ನು ಕಂಡ ಒಡನೆಯೇ ಕೈಲಿದ್ದ ಪದಾರ್ಥವನ್ನು ಬಾಯಿಗೆ ಹಾಕಿಕೊಂಡು ನುಂಗಿಬಿಟ್ಟನು. ಅವನನ್ನು ಆಸ್ಪತ್ರೆಗೆ ಕಳುಹಿಸಿ ಭೇದಿ ಮಾಡಿಸಿದಾಗ ಹೊಟ್ಟೆಯಿಂದ ನಾಲ್ಕಾರು ಸರಿಗೆಗಳು ಹೊರಕ್ಕೆ ಬಿದ್ದವು. ಇವನು ಕಳ್ಳನೇ ಆಗಿರಬೇಕೆಂದು ಲಾಕಪ್ಪಿನಲ್ಲಿ ಹಾಕಿಕೊಂಡು, ಪತ್ತೆ ತರಬೂದು ನಡೆಸುತಿದ್ದಾರೆ.

(ಅನಂತಶಯನ ತಿರುವಾಂಕೂರು) ಸಂಸ್ಥಾನದ ಆಕ್ಟಿಂಗ್ ದಿವಾನ್ ಶ್ರೀ ವಿ. ನಾಗಮ್ಮಯ್ಯನವರು ಅಲ್ಲಿನ "ಶ್ರೀಮೂಲವೆಂಬ ನಾಟ್ಯ(?) ಪ್ರಜಾಪ್ರತಿನಿಧಿ ಸಮಾಜವನ್ನು ಎಂದಿನಂತೆ ಈ ವರುಷವೂ ವಿಕ್ಟೋರಿಯಾ ಜೂಬಿಲಿ ಟೌನ್ ಹಾಲ್ ಎಂಬ ಬಂಗಲೆಯಲ್ಲಿ ನಡಿಸುವರಾಗಿ, ಈ ಸಭೆಗೆ ಮೆಂಬರುಗಳನ್ನು ಪ್ರಜೆಗಳು ಚುನಾಯಿಸಬೇಕೆಂತ ಪ್ರಕಟಿಸಿದಾರೆ. ಪ್ರಜೆಗಳು ಖಾಯಂ ದಿವಾನರವರು ಬಂದಿಲ್ಲವಾದ ಈ ವರುಷದ ಈ ಸಭೆಯು ನಡೆಯುವುದಿಲ್ಲವೆಂದು ಊಹಿಸಿದ್ದರು. ಆಕ್ಟಿಂಗ್ ದಿವಾನರವರೇ ಸಭೆಯನ್ನು ಈ ಸಲ ನಡಿಸುವರಾಗಿದ್ದಾರೆಂದು ಕೇಳಿ ಬಹಳ ಸಂತೋಷಪಡುತ್ತಿದಾರೆ.

❖❖❖

ಪೂನೆಯಿಂದ ಬೊಂಬಾಯಿಗೆ ಹೋಗಿ ವಿದ್ಯಾಭ್ಯಾಸ ಮಾಡುವಾಗ ಆರೋಗ್ಯ ತಪ್ಪಿ, ಅಲ್ಲಿಂದ ಮದರಾಸಿಗೆ ಬಂದು ಮೆಟ್ರಿಕ್ಯುಲೇಷನ್ನು ಎಫ್. ಎ. ಪರೀಕ್ಷೆಗಳಲ್ಲಿ ತೇರ್ಗಡೆಹೊಂದಿ, ತರುವಾಯ (?) ಪರೀಕ್ಷೆ ಕೊಟ್ಟು, ಅಲ್ಲಿಂದ ವೈದ್ಯವನ್ನು ಇನ್ನೂ ಹೆಚ್ಚಾಗಿ ಕಲಿಯುವುದಕ್ಕಾಗಿ ಮದರಾಸ್ ಗವರ್ನಮೆಂಟಿನವರಿಂದ ವೇತನ ಪಡೆದು ಸೀಮೆಗೆ ಪ್ರಯಾಣಮಾಡಿರುವ ಕಮಲಾಕರಮ್ಮನು (?) ಸಹಿತ ಸುಖವಾಗಿ ಲಂಡನ್ ಪಟ್ಟಣವನ್ನು ತಲಪಿದಳೆಂದು ವರ್ತಮಾನ ಬಂದಿದೆ. ಈಕೆ ವೈದ್ಯ ವಿದ್ಯಾಪಾರಂಗತಳಾಗಿ ಬೇಗನೆ ಹಿಂದುಸ್ಥಾನಕ್ಕೆ ವಾಪಸು ಬರುವಳೆಂದು ಅನೇಕಾನೇಕರು ಕುತೂಹಲದಿಂದ ಎದುರುನೋಡುತ್ತಿದಾರೆ.

❖❖❖

ಆಫ್ರಿಕದಲ್ಲಿ ಗಯಾನಾ ಎಂಬೊಂದು ಇಂಗ್ಲಿಷ್ ಸ್ವಾಸ್ಥ್ಯವಿರುತ್ತೆ. ಹಿಂದುಸ್ಥಾನದ ಜನರು ಅಲ್ಲಿಗೆ ದ್ರವ್ಯಾರ್ಜನೆಗಾಗಿ ಹೋಗಿಬರುವುದುಂಟು. ಹೀಗೆ ಹೋಗಿದ್ದವರ ಪೈಕಿ ಸುಮಾರು ೬೭ ಮಂದಿ ಕಳೆದ (?) ಕಲ್ಕತ್ತೆಗೆ ವಾಪಸುಬಂದು ಇಳಿದರು. ಇಳಿದರು ಡಾಕ್ಟರ ಪರೀಕ್ಷೆಯಲ್ಲಿ ಒಬ್ಬರಾದರೂ ರೋಗಿಷ್ಠರಾಗಿರಲಿಲ್ಲ. ಎಲ್ಲರೂ ದೃಢಾಂಗಿಗಳೂ ಆರೋಗ್ಯಶಾಲಿಗಳಾಗಿಯೂ ಇದ್ದರು. ಅವರು ಗಯಾನಾದಲ್ಲಿ ಸಂಪಾದಿಸಿದ ಒಂದೂವರೆಲಕ್ಷ ರೂಪಾಯಿ ಆಸ್ತಿಯನ್ನು ತಂದಿರುತ್ತಾರೆ. ಪೈಕಿ ಇಬ್ಬರ ಬಳಿಯಲ್ಲೇ ಎಂಟೆಂಟು ಸಾವಿರ ರೂಪಾಯಿ ಇತ್ತು. (?)ದವರು ಪರದೇಶಗಳಿಗೆ ಹೋದಲ್ಲಿ ದ್ರವ್ಯಾರ್ಜನೆಮಾಡುವುದಕ್ಕೆ ಇದು ದೃಷ್ಟಾಂತವಾಗಿದೆ.

❖❖❖

ಕಲ್ಕತ್ತಾ ಪಟ್ಟಣದ ವೈದ್ಯವಿದ್ಯಾಶಾಲೆಯ ಆಸ್ಪತ್ರೆಯಲ್ಲಿ ಒಬ್ಬ ಸ್ತ್ರೀಯು (?)ರೋಗದಿಂದ ಕಳೆದ ಮಾರ್ಚಿ ತಿಂಗಳಿಂದಲೂ ಇದ್ದುಕೊಂಡು ಚಿಕಿತ್ಸೆ ಹೊಂದುತ್ತಿರುವಳು. ಈಕೆ ಮದರಾಸಿನಿಂದ ಹೋದವಳು. ಈಕೆಗೆ ವಿಷಪ್ರಯೋಗ ಪ್ರಾಪ್ತವಾಗಿದೆ ಎಂತಲೂ, (?)ವನ್ನು ಆಕೆಯ ದೇಹಕ್ಕೆ ಪ್ರಯೋಗಮಾಡಿ ಎಬ್ಬಿಸಬೇಕೆಂದು ಯತ್ನಪಟ್ಟಾಗ್ಯೂ ಆಕೆಗೆ ಎಚ್ಚರಿಕೆಯುಂಟಾಗಲಿಲ್ಲವೆಂತಲೂ, ಅಂದಿನಿಂದಲೂ ಕೇವಲ (?) ಮೂಲಕ ಅನ್ನ ಕೊಡಲಿಕ್ಕೆ ಅವಳನ್ನು ಸಾಗಿಸಿಕೊಂಡು ಬಂದಿದಾರೆಂತಲೂ, ಇನ್ನು ಕೆಲವು ಕಾಲದೊಳಗಾಗಿ ಆಕೆ ತೀರಿಹೋಗುವಳೆಂತಲೂ ಡಾಕ್ಟರವರು ತಿಳಿಸುತ್ತಾರೆ. ಇದು ಹಿಂದುಸ್ಥಾನದಲ್ಲಿ ಯಾರೂ ಕಂಡುಕೇಳದ ಹೊಸ ಚೋದ್ಯವು.

❖❖❖

ತಿರುಚಿನಾಪಲ್ಲಿಯಲ್ಲಿ ಜಾತಿಗಳ ಕಟ್ಟುಪಾಡನ್ನು ಮುರಿಯುವುದಕ್ಕೆಂದು ಒಂದು ಸಭೆ ಏರ್ಪಾಡಾಗಿದೆ. ಇದಕ್ಕೆ ದ್ರಾವಿಡಸಭಾ ಎಂದು ಹೆಸರು. ಶ್ರೀ ಸಿ. ನಾರಾಯಣಸ್ವಾಮಿರೆಡ್ಡಿಯಾರವರು, ಬಿ ಎ, ಬಿ ಎಲ್ ಇವರು ಈ ಸಭೆಯ ಅಧ್ಯಕ್ಷರಾಗಿರುತ್ತಾರೆ. ಜಾತಿಕುಲಗೋತ್ರಭೇದವಿಲ್ಲದೆ ಎಲ್ಲರೂ ಈ ಸಭೆಗೆ ಮೆಂಬರುಗಳಾಗಬಹುದು. ಈ ಸಭೆಯಲ್ಲಿ ಕೆಲವು ಬ್ರಾಹ್ಮಣರೂ, ಬ್ರಾಹ್ಮಣೇತರರೂ, ಕ್ರೈಸ್ತರೂ ಸುಮಾರು ೫೦ ಜನರು ಮೆಂಬರುಗಳಾಗಿ ಸೇರಿಕೊಂಡಿದಾರೆ. ಈ ಸಭೆಯಲ್ಲಿ ನಡೆಯುವ ಒಂದು ವಿಶೇಷವೇನೆಂದರೆ— ಮೆಂಬರುಗಳೆಲ್ಲಾ ಕೂಡಿ ಸಹಪಂಕ್ತಿಭೋಜನಮಾಡುವರು. ಹಿಂದುಸ್ಥಾನವನ್ನು ಕ್ಷುದ್ರಮಾಡಿರುವ ಜಾತಿಯನ್ನು ನಿರ್ಮೂಲನಮಾಡಬೇಕೆಂಬುವುದೇ ಈ ಸಭೆಯ ಉದ್ದೇಶವಾಗಿದೆ.

❖❖❖

ಸಂಯುಕ್ತ ಆಧಿಪತ್ಯಗಳ ಲೆಫ್ಟಿನೆಂಟ್ ಗವರ್ನರವರು (?) ಪಟ್ಟಣದ ಬಳಿ ರಾಜಪುರದಲ್ಲಿ ಸ್ಥಾಪಿಸಿರುವ (?) ಗ್ಲಾಸ್ ವರ್ಕ್ಸ್ ಎಂಬ ಗಾಜಿನ ಸಾಮಾನು ತಯಾರಾಗುವ ಕಾರ್ಖಾನೆಗೆ ದಯಮಾಡಿ, ಎಲ್ಲಾ ಭಾಗಗಳನ್ನು ಪರಾಂಬರಿಸಿ ತುಂಬಾ ಸಂತೋಷಪಟ್ಟು ಬಂದರು. ಲಾಲಾ ಶಿವಪ್ರಸಾದರವರು ಈ ಕಾರ್ಖಾನೆಯ ಸೆಕ್ರೆಟರಿಯಾಗಿರುತ್ತಾರೆ. ಲಾಲಾ ನರಿದಯಾಳ್‌ಸಿಂಗ್ ಸಕ್ಸೇನಾ ಎಂಬಾತನು ಮುಂದಾಳಾಗಿ ನಿಂತು, ಆ ಕಾರ್ಖಾನೆಯಲ್ಲಿ ಗಾಜಿನ ಸಾಮಾನನ್ನು ತಯಾರುಮಾಡಿಸುತ್ತಿದಾನೆ. ಈತನ ಕೈಕೆಳಗೆ ಇದ್ದುಕೊಂಡು ಆ ಕಸಬನ್ನು ಅನೇಕರು ಕಲಿತಿರುವರು. ಲೆಫ್ಟಿನೆಂಟ್ ಗವರ್ನರವರು ಇಂಥಾ ಕಾರ್ಖಾನೆಗೆ ವಿದ್ಯಾರ್ಥಿಗಳನ್ನು ಕಳುಹಿಸಿದರೆ ಆ ಕಸಬನ್ನು ಕಲಿತುಕೊಳ್ಳುವುದಕ್ಕೆ ಅನುಕೂಲವಾಗುವುದೆಂದು ಗೊತ್ತುಮಾಡಿಕೊಂಡು ದಯಮಾಡಿದರು.

❖❖❖

(?)ಪುರದ ವಿದ್ಯಾಶಾಲೆಯ ಹುಡುಗರು ತಮ್ಮ ಪೈಕಿ ಒಬ್ಬ ಹುಡುಗನನ್ನು ಹೆಡ್ ಮಾಸ್ಟರು (?) ಬಿಟ್ಟು ಕೊಂಡಿಗೆ(?) ಬರುವಂತೆ ಹೇಳಿದ್ದಕ್ಕೆ ಎಲ್ಲರೂ ವಿದ್ಯಾಶಾಲೆಗೆ ಹೋಗದೆ ನಿಂತುಬಿಟ್ಟು, ಹೆಡ್ ಮಾಸ್ಟರು ಹುಡುಗರ ಕ್ಷಮಾಪಣೆಯನ್ನು ಕೇಳಬೇಕೆಂದು ಹಟ ಹಿಡಿದರು. ಹೆಡ್ ಮಾಸ್ಟರಾದರೋ ಹುಡುಗರೆಲ್ಲಾ ವಿಧೇಯತೆಯನ್ನು ತೋರಿ ಕ್ಷಮಾಪಣೆ ಬೇಡಿದಲ್ಲದೆ ಅವರನ್ನು ಸ್ಕೂಲಿಗೆ ಸೇರಿಸಿಕೊಳ್ಳುವುದಿಲ್ಲವೆಂದು ಹೇಳಿರುವರು. ಹುಡುಗರು ಹೆಡ್ ಮಾಸ್ಟರ ಮೇಲೆ ದೋಷಾರೋಪಣೆ ಮಾಡಿ ಡಿವಿಜನ್ ಕಮಿಷನರಿಗೆ ಅರ್ಜಿ ಬರೆದುಕೊಂಡಿದ್ದರು. ಅವರು ಆ ಹುಡುಗರನ್ನು ದಂಡಿಸಿ ಅವರು ಹೆಡ್ ಮಾಸ್ಟರ ಅಪ್ಪಣೆಯಂತೆ ನಡೆದುಕೊಳ್ಳಬೇಕೆಂದು ಜವಾಬು ಕೊಟ್ಟಿರುತ್ತಾರೆ. ಈಗ ಆ ಹುಡುಗರು ಆ ರೀತಿ ನಡೆದುಕೊಳ್ಳದೆ, ಮಧ್ಯಪ್ರಾಂತ್ಯಗಳ ಚೀಫ್ ಕಮಿಷನರವರಿಗೆ ತನಿಖೆ ಮಾಡಬೇಕೆಂದು ಅರ್ಜಿ ಬರೆದಿರುತ್ತಾರೆ.

❖❖❖

ಕಳೆದವಾರ ಕಲ್ಕತ್ತಾ ಪಟ್ಟಣದಲ್ಲಿ ನಾಲ್ಕಾರುಮಂದಿ ದೇಶೀಯ ಮುಖಂಡರು ಕೈಗಾರಿಕೆ ಕಸಬುಗಳನ್ನು ನಡಿಸುವಂಥಾ ಬಂಗಾಳಿಗಳನ್ನು ಕೂಡಿಸಿ ಉಪನ್ಯಾಸಮಾಡಿದರು. ಮೇಲ್ಕಂಡ ಸುರೇಂದ್ರನಾಥಬಾನರ್ಜಿ, ಬ್ಯಾರಿಸ್ಟರ್ ಎ. ಚೌಧರಿ, ಪ್ರೇಮತೋಷಬಾಸ್, ಮೊದಲಾದವರು ಸಭಿಕರನ್ನು ಕುರಿತು ಉಪನ್ಯಾಸಮಾಡಿ—ಸ್ವದೇಶಿ ಏರ್ಪಾಡನ್ನು ಎಂದಿಗೂ ತ್ಯಜಿಸಬೇಡಿ; ಬೇಡಿಹಾಕಿದರೂ, ಗಡೀಪಾರುಮಾಡಿದರೂ, ಗಲ್ಲಿಗೆ ಎತ್ತಿದರೂ ಹಿಂತೆಗೆಯಬೇಡಿ. ಪರದೇಶಗಳಿಂದ ಬರತಕ್ಕ ಸರಕುಗಳನ್ನು ಕೊಂಡುಕೊಳ್ಳುವವರೆಲ್ಲಾ ಮಾತೃಭೂಮಿಗೆ ದ್ರೋಹಿಗಳೇ ಸರಿ. ಆದಕಾರಣ ಸಕಲಪ್ರಜೆಗಳೂ ಈ ದೇಶದಲ್ಲಿ ತಯಾರಾಗತಕ್ಕ ಸರಕುಗಳನ್ನೇ ಕೊಂಡು ಉಪಯೋಗಿಸಬೇಕು. ಇದರಿಂದ ನಮ್ಮ ಕಸಬುಗಳು ಅಭಿವೃದ್ಧಿಯಾಗುವವು. ಅದರ ಮೂಲಕ ನಮ್ಮ ದೇಶವು ಐಶ್ವರ್ಯಯುಕ್ತವಾಗುವದು ಎಂಬೀ ರೀತಿಯಾಗಿ ಉಪನ್ಯಾಸಮಾಡಿದರು.

❖❖❖

ಮಧ್ಯಪ್ರಾಂತ್ಯಗಳಿಗೆ ಸೇರಿದ ಅಮರಾವತಿ ಡಿಸ್ಟ್ರಿಕ್ಟಿನಲ್ಲಿ ಲೆಫ್ಟಿನೆಂಟ್ ಕರ್ನಲ್ ಬುಕನನ್ ಎಂಬ ಸಿವಿಲ್ ಸರ್ಜನರವರು ಆ ಡಿಸ್ಟ್ರಿಕ್ಟಿನಲ್ಲಿರುವ ಬೆಕ್ಕುಗಳ ಸಂಖ್ಯೆಯನ್ನು ಎಣಿಕೆ ಮಾಡಿಸಿದರು. ಬೆಕ್ಕುಗಳ ಮೂಲಕ ಪ್ಲೇಗ್ ಉಪದ್ರವನ್ನು ಶಮನ ಮಾಡುವುದು ಎಷ್ಟು ಮಟ್ಟಿಗೆ ಸಾಧ್ಯವೆಂಬುದೇ ಅವರ ಉದ್ದೇಶವು. ಅವರು ತಿಳಿಸಿರುವುದೇನೆಂದರೆ—ಆ ಡಿಸ್ಟ್ರಿಕ್ಟಿನಲ್ಲಿ ೧,೦೨೬ ಗ್ರಾಮಗಳಿರುತ್ತವೆ. ಆ ಪೈಕಿ ೩೫೭ ಗ್ರಾಮಗಳಲ್ಲಿ ೧೦೦ ಮನೆಗಳಿಗೆ ೨೦ ರಂತೆ ಬೆಕ್ಕುಗಳಿದ್ದವು. ಈ ಗ್ರಾಮಗಳಲ್ಲಿ ೩೫೦ ಪ್ಲೇಗ್ ಕಾಯಿಲೆಗಳಾದವು. ೧೯೯ ಗ್ರಾಮಗಳಲ್ಲಿ ೧೦೦ ಮನೆಗಳಿಗೆ ೫೦ ರಂತೆ ಬೆಕ್ಕುಗಳಿದ್ದವು. ಈ ಗ್ರಾಮಗಳಲ್ಲಿ ೧೯ ಜನರಿಗೆ ಮಾತ್ರ ಪ್ಲೇಗ್ ತಗಲಿತು. ಈ ಪೈಕಿ ೧೩ ಕಾಯಿಲೆಗಳು ಒಂದೇ ಗ್ರಾಮದಲ್ಲಿ ಆದವು. ಅಲ್ಲಿಗೂ ಪ್ಲೇಗ್ ಕಾಣಿಸಿಕೊಂಡ ಮೇಲೆ ಬೆಕ್ಕುಗಳನ್ನು ತಂದುಬಿಟ್ಟರು. ಇದರಿಂದ ಯಾವ ಊರಿನಲ್ಲಾಗಲಿ ಕಡೇ ಪಕ್ಷ ಎರಡು ಮನೆಗಳಿಗೆ ಒಂದು ಬೆಕ್ಕಿನಂತೆ ಬೆಕ್ಕುಗಳಿದ್ದಲ್ಲಿ ಅಂಥಾ ಊರು ಪ್ಲೇಗಿಗೆ ಆಕರವಾಗುವುದಿಲ್ಲವೆಂಬುದೇ. ಇದಲ್ಲದೆ ಬೆಕ್ಕುಗಳ ಮೂಲಕ ಪ್ಲೇಗ್ ಉಪದ್ರವು ಶಮನವಾದೀತಲ್ಲದೆ ಎಷ್ಟು ಮಾತ್ರವೂ ಹೆಚ್ಚುವುದಿಲ್ಲವೆಂದೂ ಆ ಡಾಕ್ಟರು ಅಭಿಪ್ರಾಯ ಪಡುತ್ತಾರೆ.

❖❖❖

ದಿವಾನ್ ಬಹದೂರ್ ಆರ್. ರಘುನಾಥರಾಯರು ಈ ದೇಶದ ವ್ಯವಸಾಯಾಭಿವೃದ್ಧಿಯನ್ನು ಕುರಿತು ಬರೆದಿರುವುದೇನೆಂದರೆ —ಹಿಂದುಸ್ಥಾನದಲ್ಲಿ ವ್ಯವಸಾಯ ಮಾಡತಕ್ಕವರು ಸಾಲಗಾರರಾಗಿ ನರಳುತ್ತಿದಾರೆ. ಪ್ರತಿ ಒಂದು ಡಿಸ್ಟ್ರಿಕ್ಟಿನಲ್ಲೂ ಒಂದೊಂದು ಪರಸ್ಪರ ಸಹಾಯಕ ಸಂಘವು ಏರ್ಪಾಡಾಗಬೇಕು. ಈ ಸಂಘದವರು ಮಾಡಬೇಕಾದ ಕಾರ್ಯಗಳೇನೆಂದರೆ—(೧) ನ್ಯಾಯವಾದ ಬಡ್ಡಿಗೆ ಸಾಲ ಕೊಡಬೇಕು. (೨) ಬಂದಿತವಾಗಿ ಬೆಳೆಯಾಗುವಂಥಾ ಫಸಲುಗಳನ್ನಿಟ್ಟು ವ್ಯವಸಾಯ ಮಾಡುವಂತೆ ಪ್ರೋತ್ಸಾಹಪಡಿಸಬೇಕು. (೩) ರೈತರು ಬೆಳೆದಂಥಾ ಫಸಲಿಗೆ ಒಳ್ಳೇ ಗಿರಾಕಿಗಳನ್ನು ತಂದು ಒದಗಿಸಬೇಕು. (೪) ಒಗ್ಗಟ್ಟಾಗಿ ಪರಸ್ಪರ ಸಹಾಯ ಮಾಡಿ ಅಭಿವೃದ್ಧಿಗೆ ಬರುವಂತೆ ಕಸಬುದಾರರಿಗೆ ಪ್ರೋತ್ಸಾಹವನ್ನೂ ಸಹಾಯವನ್ನೂ ಮಾಡಬೇಕು. (೫) ಪ್ರದರ್ಶನಗಳನ್ನೂ ಸಂತೆಗಳನ್ನೂ ಜಾತ್ರೆ ಮೊದಲಾದ ಕೂಟಗಳನ್ನೂ ನಡಿಸಬೇಕು. (೬) ಸ್ಕೂಲುಗಳಿಗೆ ಸಂಬಂಧಪಟ್ಟಂತೆ ತೋಟ ತುಡಿಕೆಗಳನ್ನು ಪ್ರಾರಂಭಿಸಬೇಕೆಂದು ವಿದ್ಯಾಭ್ಯಾಸದ ಇಲಾಖೆಯವರನ್ನು ಕೇಳಿಕೊಳ್ಳಬೇಕು. ಈ ವಿಷಯಗಳಿಗೆ ಡಿಸ್ಟ್ರಿಕ್ಟ್ ಸಂಘಗಳವರು ಗಮನ ಕೊಟ್ಟು ಉತ್ಸಾಹದಿಂದ ಕಾರ್ಯಗಳನ್ನು ನಡಿಸುತ್ತಾ ಬಂದಲ್ಲಿ ರೈತರೂ ಕಸಬುದಾರರೂ ಸಾಲಗಾರರ ಹಿಂಸೆಯನ್ನು ತಪ್ಪಿಸಿಕೊಂಡು, ವ್ಯವಸಾಯ ಕೈಗಾರಿಕೆಗಳನ್ನು ಅಭಿವೃದ್ಧಿಗೆ ತರಲು ಸಹಾಯವಾಗುವುದು.

❖❖❖

ಬಂಗಾಳಾ ಆಧಿಪತ್ಯಕ್ಕೆ ಸೇರಿದ ಮೋರ್ಭಂಜ ಸಂಸ್ಥಾನದ ಮಹಾರಾಜರವರ ಚಿಕ್ಕಪ್ಪನಾದ ರಾಯ (?) ಸಿಂಗ್‌ರವರ ಮೇಲೂ "ಹಿಂದೂ ಪೇಟ್ರಿಯಟ್" ಎಂಬ ಪತ್ರಿಕೆಯ ಎಡಿಟರಾದ ಶಿರೀಶಚಂದ್ರ ಸರ್ವಾಧಿಕಾರಿಯವರ ಮೇಲೂ ಕಲ್ಕತ್ತಾ ಪೋಲೀಸ್ ಕೋರ್ಟಿನಲ್ಲಿ ಒಂದು ಮೋಸಕೃತ್ಯದ ಮೊಕದ್ದಮೆ ಬಂದಿದೆ. ಮಹಾರಾಜರ ಚಿಕ್ಕಪ್ಪನು ಎರಡೂವರೆ ಲಕ್ಷ ರೂಪಾಯಿನ ಒಂದು ಪತ್ರದ ನಕಲನ್ನು ತಂದು (?) ಮೋಹನ (?) ಎಂಬ ಸಾಹುಕಾರನಿಗೆ ತೋರಿಸಿ, ಅವನಿಂದ ೧,೫೦೦ ರೂಪಾಯಿ ಸಾಲ ಪಡೆದುಕೊಂಡರು. ಆ ನಕಲ್ ಪತ್ರವು ಅಸಲ್ ಪತ್ರದಂತೆಯೇ ಬರೆಯಲ್ಪಟ್ಟದ್ದೆಂದು ಎರಡನೇ ಆಪಾದಿತರು ಸಾಹುಕಾರನಿಗೆ ಹೇಳಿ ನಂಬಿಕೆ ಹುಟ್ಟಿಸಿ, ಸಾಲ ಕೊಡಿಸಿದರು. ಆ ಅಸಲ್ ಪತ್ರ ಹ್ಯಾಗೆ ಹುಟ್ಟಿತೆಂದು ಕೇಳಿದಾಗ ಮೊದಲನೇ ಆಪಾದಿತರು ಹೇಳಿದ್ದೇನೆಂದರೆ—ಮೋರ್ಭಂಜ ಸಂಸ್ಥಾನದ ಮಹಾರಾಜರು ಲೇಟ್ ಕೇಶವಚಂದ್ರಸೇನರ ಮಗಳನ್ನು ವಿವಾಹಮಾಡಿಕೊಂಡು, ಹಿಂದೂಮತವನ್ನು ತ್ಯಾಗಮಾಡಿದ್ದರಿಂದ ಅರಮನೆಯ (?) ಈ ಚಿಕ್ಕಪ್ಪನೂ ಸೇರಿ, ಅವರಿಗೆ ಸಿಂಹಾಸನದ ಪದವಿಯನ್ನು ತಪ್ಪಿಸಬೇಕೆಂದು ಪ್ರಯತ್ನಪಟ್ಟರು. ಆಗ ಮಹಾರಾಜರು ಈ ಚಿಕ್ಕಪ್ಪನಿಗೆ ಎರಡೂವರೆ ಲಕ್ಷ ರೂಪಾಯಿ ಕೊಡುವುದಾಗಿ ಪತ್ರ ಬರೆದು ಕೊಟ್ಟರು. ಆ ಪತ್ರದ ನಕಲೇ ಇದು ಎಂದು ಆ ಚಿಕ್ಕಪ್ಪನು ಹೇಳಿ, ಮೋಸಮಾಡಿರುತ್ತಾರೆಂದು ಮೊಕದ್ದಮೆ ಆಗಿದೆ. ಈ ವಿಷಯವು ಕಲ್ಕತ್ತಾ ಪಟ್ಟಣದಲ್ಲಿ ತುಂಬಾ ಗಲಭೆಯನ್ನು ಉಂಟುಮಾಡಿರುವುದು.

ವಿದೇಶ ವರ್ತಮಾನಗಳು.

ದಕ್ಷಿಣ ಆಫ್ರಿಕಾ ಗಣಿಗಳಲ್ಲಿ ಕೆಲಸ ಮಾಡುತ್ತಿದ್ದ ಚೀನಾ ಜನರ ಪೈಕಿ ೨,೫೮೭ ಮಂದಿ ಕಳೆದ ವಾರ ಡರ್ಬನ್ ಪಟ್ಟಣದಲ್ಲಿ ಹಡಗು ಹತ್ತಿ ವಾಪಸು ಚೀನಕ್ಕೆ ಪ್ರಯಾಣ ಮಾಡಿರುತ್ತಾರೆ.

❖❖❖

ಜರ್ಮನ್ ರಾಜ್ಯದ ಯುದ್ಧದ ಹಡಗುಗಳ ಪೈಕಿ (?) ಎಂಬ ಹಡಗಿನಲ್ಲಿ ಯಂತ್ರಗಳು ಅಕಸ್ಮಾತ್ತಾಗಿ ಒಡೆದು ಹಾರಿದ್ದರಿಂದ ೨೩ ಮಂದಿ ಮೃತಪಟ್ಟರೆಂತಲೂ ೧೬ ಜನರಿಗೆ ಜಖಂ ಆಯಿತೆಂತಲೂ ತಂತೀವರ್ತಮಾನ ಬಂದಿದೆ.

❖❖❖

ಅಮೇರಿಕದಲ್ಲಿ ಕ್ವಿಬೆಕ್ಕಿನಿಂದ ಬೋಸ್ಟನ್ ಪಟ್ಟಣಕ್ಕೆ ಅತಿ ವೇಗವಾಗಿ ಹೋಗುತ್ತಿದ್ದ ಒಂದು ರೈಲುಗಾಡಿಯು ಒಂದು ಸಾಮಾನುಗಾಡಿಗೆ ಬಡಿದು ಅನಾಹುತವಾಯಿತು. ಪ್ರಯಾಣಿಕರಲ್ಲಿ ೧೯ ಮಂದಿ ಮೃತಪಟ್ಟರು. ೪೦ ಜನರಿಗೆ ಜಖಂ ಆಗಿದೆ.

❖❖❖

ಜಪಾನ್ ವರ್ತಕರ (?)ಮಾರು ಎಂಬೊಂದು ಹಡಗು ಚೀನಾ ರಾಜ್ಯದಲ್ಲಿ ಚಿಂಕಿಯಾಂಗ್ ಪಟ್ಟಣದ ಸಮುದ್ರದ ತೀರದ ಬಳಿ ಬೆಂಕಿ ಬಿದ್ದು ಉರಿದುಹೋಯಿತೆಂತಲೂ ಅದರಲ್ಲಿದ್ದ ನೂರಾರು ಮಂದಿ ಪ್ರಾಣ ಕಳೆದುಕೊಂಡರೆಂತಲೂ ತಂತೀ ವರ್ತಮಾನ ಬಂದಿದೆ.

❖❖❖

ರಷ್ಯಾ ಚಕ್ರಾಧಿಪತ್ಯಕ್ಕೆ ಸೇರಿದ ಸಮಾರಾ, (?), ಮೊದಲಾದ ಪಟ್ಟಣಗಳಲ್ಲಿ ವಾಂತಿಭೇದಿ ಉಪದ್ರವ ಬಹಳ ಉಗ್ರ ಸ್ಥಿತಿಯಲ್ಲಿರುವುದಾಗಿಯೂ, ಅಸ್ಟ್ರಾಖಾನ್ ಪಟ್ಟಣದಲ್ಲಿ ಇದುವರೆಗೆ ೧,೬೬೩ ಜನರಿಗೆ ಆ ರೋಗ ತಗಲಿ ೪೯೯ ಮಂದಿ ಸತ್ತುಹೋದರೆಂತಲೂ ತಂತೀವರ್ತಮಾನ ಬಂದಿದೆ.

❖❖❖

ಕಾನಡಾ ಎಂಬ ಇಂಗ್ಲಿಷ್ ಸ್ವಾಸ್ಥ್ಯದಲ್ಲಿ ಸ್ವದೇಶಿಗಳು ಏಷ್ಯಾಖಂಡದ ಜನರನ್ನು ಅಲ್ಲಿಗೆ ಸೇರಿಸಕೂಡದೆಂದು ಗಲಭೆ ಮಾಡುತ್ತಿದಾರೆ. ಜಪಾನವರು ತಮ್ಮ ನಷ್ಟವನ್ನು ಕೊಡಿಸಿಕೊಡಬೇಕೆಂದು ಅಲ್ಲಿನ ಗವರ್ನಮೆಂಟಿಗೆ ಅರ್ಜಿ ಹಾಕಿದಾರೆ. ಅಲ್ಲಿನ ಜನರು ಏಷ್ಯಾಖಂಡದ ಜನರನ್ನು ತಮ್ಮ ದೇಶದೊಳಕ್ಕೆ ಬಿಡದಂತೆ ಕಾನೂನ್ ಮಾಡಬೇಕೆಂದು ಸರ್ಕಾರದವರನ್ನು ಕೇಳುತ್ತಿರುವರು.

❖❖❖

ಜಪಾನ್ ರಾಜ್ಯದಲ್ಲಿ ವಿಶೇಷ ವ್ಯಾಪಾರ ನಡೆಯುವ ಹಾಕೋಡೇಟ್ ಎಂಬ ಸಮುದ್ರತೀರಪಟ್ಟಣದಲ್ಲಿ ಬೆಂಕಿ ಬಿದ್ದು ಸುಮಾರು ಮುಕ್ಕಾಲುಪಾಲು ಪಟ್ಟಣವೆಲ್ಲಾ ಸುಟ್ಟುಹೋಯಿತಷ್ಟೆ. ಈ ಬೆಂಕಿಯ ದೆಸೆಯಿಂದ ೭೫ ಕೋಟಿ ರೂಪಾಯಿನ ಆಸ್ತಿಪಾಸ್ತಿಗಳು ನಾಶವಾದವೆಂತಲೂ, ೬,೦೦,೦೦೦ ಪ್ರಜೆಗಳು ಮನೆಮಾರುಗಳನ್ನು ಕಳೆದುಕೊಂಡು ಅಲೆಯುತ್ತಿದಾರೆಂತಲೂ ತಿಳಿದು ಬಂದಿದೆ.

❖❖❖

ಅಮೇರಿಕಕ್ಕೆ ಸೇರಿದ ಪಿಟ್ಸ್‌ಬರ್ಗ್ ಪಟ್ಟಣದಲ್ಲಿ (?) ಎಂಬ ಹೆಂಗಸು ರೈಲ್ ಗಾಡಿಯೊಳಗೆ ಕುಳಿತು ಪ್ರಯಾಣ ಮಾಡುತ್ತಿರುವಲ್ಲಿ ಇನ್ನೊಬ್ಬ ಪ್ರಯಾಣಿಕನನ್ನು ನೋಡಿ ಮೋಹಿಸಿ, ಅವನನ್ನು ತಬ್ಬಿಕೊಂಡು ಮುದ್ದಿಟ್ಟುಕೊಂಡಳು. ಅವನು ಆಗ್ರಹಪಟ್ಟು ಅವಳ ಮೇಲೆ ಫಿರ್ಯಾದು ಮಾಡಿದನು. ಮ್ಯಾಜಿಸ್ಟ್ರೇಟರು (?), ಅವಳಿಂದ ಅವನಿಗೆ (?) ರೂಪಾಯಿ ಮಾನನಷ್ಟವನ್ನೂ ಅವನ ಕೋರ್ಟಿನ ಖರ್ಚನ್ನೂ ಕೊಡಿಸಿದರು.

❖❖❖

ರಷ್ಯಾರಾಜ್ಯದಲ್ಲಿ ರಾಜದ್ರೋಹದ ಅಪರಾಧಕ್ಕೆ ಗುರಿಯಾದ ದೊಡ್ಡ ಮನುಷ್ಯರನ್ನು ಸರ್ಕಾರದವರು ಸೈಬೀರಿಯಾ ದೇಶದ ಬಂದೀಖಾನೆಗೆ ಸಾಗಿಸಿಬಿಡುತ್ತಾರಷ್ಟೆ. ಆ ಬಂದೀಖಾನೆಯ ಗವರ್ನರು ಅಂಥಾ ದೊಡ್ಡಮನುಷ್ಯರನ್ನು ಜೈಲಿನಲ್ಲಿ ಬಹಳ ಕಷ್ಟಪಡಿಸುತ್ತಾನೆಂದು ಡೂಮಾ ಪಾರ್ಲಿಮೆಂಟಿನಲ್ಲಿ ಚರ್ಚೆನಡೆಯುತ್ತಿತ್ತು. ಆ ಗವರ್ನರು ರಜಾಪಡೆದು ಸೈಬೀರಿಯಾದಿಂದ ರಷ್ಯಾಕ್ಕೆ ವಾಪಸು ಬಂದಿದ್ದಾಗ್ಗೆ ಕಳೆದವಾರ ಯಾರೋ ಅವನನ್ನು ಕೊಂದುಹಾಕಿಬಿಟ್ಟರು.

❖❖❖

ಪರರಾಜ್ಯಗಳವರ್ಯಾರೂ ಟಿಬೆಟ್ಟಿಗೆ ಹೋಗಕೂಡದೆಂತಲೂ, ಟಿಬೆಟ್ಟಿನ ಒಳಭೇದದ ಸ್ಥಿತಿಯು ಪ್ರಕಟಪಟ್ಟಿಲ್ಲವೆಂತಲೂ, ಹಾಗೆ ಹೋಗತಕ್ಕವರಿಗೆ ನಷ್ಟಕಷ್ಟಗಳೇನಾದರೂ ಪ್ರಾಪ್ತವಾದರೆ ತಾವು ಜವಾಬ್ದಾರರಾಗುವುದಿಲ್ಲವೆಂತಲೂ ಚೀನಾ ರಾಜ್ಯಾಧಿಕಾರಿಗಳು ಪರರಾಜ್ಯಗಳ ರಾಯಭಾರಿಗಳಿಗೆಲ್ಲಾ ತಿಳಿಸಿರುವರು. ಮತ್ತು ಚೀನೇರು ಟಿಬೆಟ್ಟಿನಲ್ಲಿ ಪಾಠಶಾಲೆ ಮುಂತಾದವುಗಳನ್ನು ಇಡಿಸುತ್ತಲೂ, ಅಲ್ಲಿನ ಜನರಿಗೆ ನಾಗರಿಕತೆಯನ್ನು ಕಲಿಸಲಾರಂಭಿಸಿ ಅವರಲ್ಲಿ ಒಳ್ಳೇ ಅಭಿಪ್ರಾಯಗಳನ್ನು ಹುಟ್ಟಿಸುತ್ತಲೂ ಬಂದಿದಾರೆ.

❖❖❖

ಜರ್ಮನಿ ರಾಜ್ಯಕ್ಕೆ ಸೇರಿದ (?) ಎಂಬ ಪಟ್ಟಣದಲ್ಲಿ ಆಕಾಶಬುಟ್ಟಿಗಳ ಪಂದ್ಯ ನಡೆಯಿತು. ಬೇರೆ ಬೇರೆ ರಾಜ್ಯಗಳಲ್ಲಿ ಆಕಾಶಬುಟ್ಟಿಗಳನ್ನು ತಯಾರುಮಾಡುವಂಥಾ ಕಾರೀಗಾರರು ತಮ್ಮ ಆಕಾಶಬುಟ್ಟಿಗಳನ್ನು ತೆಗೆದುಕೊಂಡುಹೋಗಿ ಹಾರಿಬಿಟ್ಟರು. ಇಪ್ಪತ್ತೊಂಬತ್ತು ವಿಮಾನಗಳ ಪೈಕಿ ಜರ್ಮನಿ ರಾಜ್ಯದ ಕಾರೀಗಾರನ ವಿಮಾನವೇ ೬೩೩ ಮೈಲಿ ದೂರ (?). ಮೊದಲನೇ ಬಹುಮಾನವನ್ನು ಪಡೆಯಿತು. (?) ದೇಶದ ಕಾರೀಗಾರನ ವಿಮಾನವು ೫೭೩ ಮೈಲಿ ಸುತ್ತಿ ಬಂದು ಎರಡನೇ ಬಹುಮಾನವನ್ನು ಸಂಪಾದಿಸಿತು. ವಿಲಾಯಿತಿಯ ಇಬ್ಬರು ಕಾರೀಗಾರರ ಎರಡು ಆಕಾಶಬುಟ್ಟಿಗಳು ೫೫೬, ೫೩೩ ಮೈಲಿಗಳವರೆಗೆ ಸಂಚರಿಸಿಕೊಂಡು ೩ನೇ, ೪ನೇ ಬಹುಮಾನಗಳನ್ನು ಪಡೆದವು. ಇದನ್ನು ನೋಡಲು ಲಕ್ಷೋಪಲಕ್ಷ ಜನರು ಅಲ್ಲಿ ಸೇರಿದ್ದರೆಂದು ತಿಳಿದುಬಂದಿದೆ.

ಬಾತ್ಮೀದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸ್ಥಳ ಕೊಡಲಾರೆವು ಆದಕಾರಣ ಬಾತ್ಮೀದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ಕಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ಸ್ಥಳ ಕೊಡಲಾರೆವು

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು —ಎಡಿಟರ್

ಕರೆಸ್ಪಾಂಡೆನ್ಸ್

ಒಬ್ಬ ಉಪಾಧ್ಯಾಯರ ಸಾಹಸಕಾರ್ಯಗಳು

ಅಯ್ಯಾ,

ದಾವಣಗೆರೆ ತಾಲ್ಲೂಕು ಕಂಡಿಗಲ್ಲು ಗ್ರಾಮವು ದೊಡ್ಡದಾಗಿಯೂ ಜನಭರಿತವಾದದ್ದಾಗಿಯೂ ಇರುತ್ತೆ. ಈ ಗ್ರಾಮದಲ್ಲಿ ಗವರ್ನಮೆಂಟ್ ಸ್ಕೂಲ್ ಇರುತ್ತೆ. ಈ ಸ್ಕೂಲ್ ಮಾಸ್ಟರು ಕೆ ಮಹಲಿಂಗಸ್ವಾಮ್ಯನವರು ಶಂಕರ ಗ್ರಾಮದಿಂದ ವರ್ಗವಾಗಿ ಬಂದು ಒಂದು ವರ್ಷವಾಯಿತು ಇವರು ಶ್ರದ್ಧೆಯಿಂದ ಕೆಲಸಮಾಡುತ್ತಾರಲ್ಲದೆ, ವ್ಯವಸಾಯಗಾರರನ್ನು ಅಕ್ಷರಸ್ಥರನ್ನಾಗಿ ಮಾಡಬೇಕೆಂದು ರಾತ್ರಿಕಾಲಗಳಲ್ಲಿ ಅವರಿಗೆ ಲೌಕಿಕ ವಿದ್ಯೆಯನ್ನು ಬೋಧಿಸುತ್ತಾ, ಗ್ರಾಮಸ್ಥರಲ್ಲಿ ಅನುರಾಗವುಳ್ಳವರಾಗಿರುತ್ತಾರೆ ಮತ್ತು ಸ್ತ್ರೀ ವಿದ್ಯಾಭ್ಯಾಸದ ವಿಷಯದಲ್ಲಿಯೂ, ಸಂತೆ ವಿಷಯದಲ್ಲಿಯೂ ಉಪನ್ಯಾಸ ಮಾಡಿದರು. ಈ ಗ್ರಾಮದಲ್ಲಿ ಸಹ ಒಂದು ಗರ್ಲ್ಸ್ ಸ್ಕೂಲನ್ನು ಪ್ರೈವೇಟಾಗಿ ಏರ್ಪಡಿಸಬೇಕೆಂದು ಕುತೂಹಲವುಳ್ಳವರಾಗಿರುವರು ಇದಕ್ಕೆಲ್ಲ ಗ್ರಾಮದ ಮುಖಂಡರಾದ ಪಟೇಲ್ ಹನುಮಪ್ಪನವರೂ, ಗೌಡ ಈಶ್ವರಪ್ಪನವರೂ, ಶಾನುಭೋಗ್ ಮಲ್ಲಪ್ಪನವರೂ ಮನಸ್ಸಿಗೆ ತಂದುಕೊಂಡರೆ ಕ್ಷಿಪ್ರದಲ್ಲಿಯೇ ನೆರವೇರುವುದಾಗಿ ನಂಬಿದ್ದೇನೆ ಸದರಿ ಮಾಸ್ತರು ವಿದ್ಯಾವಂತರಾದ ಜನಗಳಿಗೆ ಪ್ರೋತ್ಸಾಹಪಡಿಸಿ ಮೈಸೂರು ಸ್ಟಾರ್ ಪತ್ರಿಕೆ, ವೃತ್ತಾಂತ ಪತ್ರಿಕೆ ಸೂರ್ಯೋದಯಪ್ರಕಾಶಿಕೆ, ಮೈಸೂರ್ ಗಜೆಟ್, ಲಾಗಜೆಟ್, ವೀರಶೈವಪ್ರಭಾಕರ, ವೈದ್ಯಸಿಂಧು, ಎಗ್ಜಾಮಿನರ್ ಮಾಸಪತ್ರಿಕೆಗಳನ್ನು ಹಾಲಿ ತರಿಸುವಹಾಗೆ ಸಹಾಯಮಾಡಿದ್ದರಿಂದ ಸದರಿ ಕಂಡಿಗಲ್ಲ ಗ್ರಾಮದ ಮುಖಂಡರು ಒಂದು ಸಂತೆ ಸೇರಿ ಪತ್ರಿಕೆಗಳ ವಿಷಯ ಗ್ರಹಿಸುವುದರಿಂದ ಎಷ್ಟೋ ತಿಳುವಳಿಕೆ ಉಂಟಾಗುತ್ತೆ ಈ ಗ್ರಾಮದಲ್ಲಿ ಕೆಲವರು ತಿಳುವಳಿಕೆ ಇಲ್ಲದೆ ಬರುಡಿಗೆ ಗೋವುಗಳನ್ನು ಕಟುಕರಾದವರಿಗೆ ಕೊಡುತ್ತಿದ್ದರು ಈ ವಿಷಯದಲ್ಲಿ ಸಹಾ ಸ್ಕೂಲ್ ಮಾಸ್ಟರು ಗೋವುಗಳಿಂದಾಗತಕ್ಕ ಪ್ರಯೋಜನಗಳನ್ನು ನೀತಿ ಕಥೆಗಳಿಂದ ಬೋಧಿಸಿ, ಈ ದುಷ್ಟ ಪದ್ಧತಿಯನ್ನು ತಪ್ಪಿಸುವುದಕ್ಕೆ ಬಹಳ ಪ್ರಯತ್ನಪಡುತ್ತಿರುವುದನ್ನು ನೋಡಿ ಸಂತೋಷಿಸುತ್ತೇನೆ

ಪತ್ರಿಕಾ ವಾಚಕ

ಮೃಗಗಳ ಕಾಟವೂ ರಸ್ತೆಗಳ ಅಭಾವವೂ

ಅಯ್ಯಾ,

ತೀರ್ಥಹಳ್ಳಿ ತಾಲ್ಲೂಕು ಹಲ್ಸುಕೊಡಿ ಮಾಗಣಿ ಕವಲೆದುರ್ಗದ ಗ್ರಾಮದಲ್ಲಿ ಹುಲಿ ಇರುವ ಒಂದು ಕಾಟವನ್ನು ಕೇಳತೀರದು ಇಲ್ಲಿನ ಪಟೇಲ್ ಸೇವಪ್ಪನಾಯ್ಕರ ಬೆಲೆಯುಳ್ಳ ಜಾನುವಾರುಗಳು ಈ ದುಷ್ಟ ಜಂತುವಿಗೆ ತುತ್ತಾದವು ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಇದು ದೊಡ್ಡ ಮಲೆನಾಡು ಪ್ರದೇಶವು ವಿಶೇಷವಾಗಿ ಸುತ್ತಲೂ ಗುಡ್ಡಗಾಡುಗಳು ತುಂಬಿಕೊಂಡಿವೆ ಇದರಿಂದ ಜನಗಳ ಸ್ತೋಮವೂ ಕೃಶವಾಗಿಯೂ ಈ ದುಷ್ಟ ಮೃಗಗಳ ಸ್ತೋಮವೇ ಅಧಿಕವಾಗಿದೆ. ಸಂಚಾರ ಮಾಡುವದಕ್ಕೆ ಸರಿಯಾದ ರಸ್ತೆ ಇಲ್ಲದೆ ಜನಗಳಿಗೂ ಗಾಡಿಗಳಿಗೂ ತುಂಬಾ ಆಟಂಕವಾಗಿದೆ ಊರು ಹುಲಿ ಕಲ್ಲುಘಾಟಿಯಿಂದ ತೀರ್ಥಹಳ್ಳಿ ಮುಂತಾದ ಕಡೆಗೆ ತಿರುಗುವುದಕ್ಕೆ ಮಧ್ಯಪ್ರದೇಶವಾಗಿದೆ. ಜನಗಳು ಪದೇಪದೇ ಇಲ್ಲಿಗೆ ಆಮದುರಪ್ತು ಮಾಡುತ್ತಿರುವರು ಮತ್ತು ಇದು ಪ್ರಸಿದ್ಧವಾದ ಸ್ಥಳವಾದುದರಿಂದ ಸರ್ಕಾರಿ ನೌಕರರೂ ದೊಡ್ಡಮನುಷ್ಯರೇ ನೋಡಲಾಗಿ ಇಲ್ಲಿಗೆ ಬರುವರು ಈ ವಿಷಯವಾಗಿ ಈ ತಾಲ್ಲೂಕಿನಲ್ಲಿ ಅಮಲ್ದಾರರಾಗಿದ್ದ ಮಿ ಎಸ್ ವೆಂಕಟರಮಣಶಾಸ್ತ್ರಿಗಳ ಕಾಲದಲ್ಲಿ ರಿಕಾರ್ಡ್ ನಡೆದಿತ್ತು. ಏನಾಯಿತೋ ಇದುವರಿಗೂ ವ್ಯಕ್ತವಾಗಲಿಲ್ಲ. ಸರ್ಕಾರದವರು ಈಚೆಗೆ ದಯವಿಟ್ಟು ಹೋಬಳಿ ಸ್ಕೂಲನ್ನು ದಯಪಾಲಿಸಿರುವರು. ಈ ಊರಿನ ಅಕ್ಕಪಕ್ಕಗಳಿಂದ ಸ್ಕೂಲಿಗೆ ಬರತಕ್ಕ ಬಾಲಕರು ಈ ದುಷ್ಟ ಮೃಗಗಳಿಂದ ತುಂಬಿರುವ ಗುಡ್ಡಗಾಡುಗಳ ಕರಡು ಮುರುಡಾದ ದಾರಿಯಲ್ಲೇ ಅನೇಕ ಪ್ರಯಾಸದಿಂದ ಸಂಚರಿಸುವರು. ಸರಿಯಾದ ರಸ್ತೆಗಳು ಇಲ್ಲದುದರಿಂದಲೂ ದುಷ್ಟ ಮೃಗಗಳ ಹಾವಳಿಯಿಂದಲೂ ಜನಗಳಿಗೂ ಸ್ಕೂಲ್ ಬಾಲಕರಿಗೂ ಜಾನುವಾರುಗಳಿಗೂ ಪೂರ್ವದಿಂದಲೂ ಪ್ರಖ್ಯಾತಿ ಹೊಂದಿದ್ದ ಈ ಊರಿಗೂ ಉಂಟಾಗಿರುವ ಕೊರತೆಯು ಇಷ್ಟಿಷ್ಟೆಂದು ಹೇಳಲಸಾಧ್ಯವಾಗಿದೆ. ಆದ್ದರಿಂದ ಇನ್ನು ಮುಂದಾದರೂ ಸರ್ಕಾರದವರು ದಯವಿಟ್ಟು ಸದರಿ ದುಷ್ಟ ಮೃಗಗಳನ್ನು ನಾಶಪಡಿಸಿಕೊಟ್ಟು ಈ ಊರಿನಿಂದ ತೀರ್ಥಹಳ್ಳಿ ಹುಲಿಕಲ್ಲು ಘಾಟಿ ಮುಂತಾದ ಕಡೆಗೂ ಜನಗಳ ಆಮದುರಪ್ತಿಗೆ ಅನುಕೂಲವಾಗಿ ರಸ್ತೆಯನ್ನು ಮಾಡಿಸಿಕೊಟ್ಟು ಈಗಿನ ತೊಂದರೆಗಳನ್ನು ನಿವಾರಣೆ ಮಾಡಿಕೊಡಬೇಕಾಗಿದೆ.

ಪುರಾಭಿಮಾನಿ.

ಮೈಸೂರು ಪೋಲೀಸು ಇಲಾಖಾ ಕಾನ್ಸ್ಟೇಬಲ್‌ರುಗಳ ಕಷ್ಟ ತಪ್ಪಲಿಲ್ಲ.

ಅಯ್ಯಾ,

ಮೈಸೂರು ಪೋಲೀಸ್ ಇಲಾಖೆಯಲ್ಲಿ ಬಡ ನೌಕರರಿಗೆ ಈಗ ಬರುವ ೬—೮ ರೂಪಾಯಿನಿಂದ ಕಾಲಕ್ಷೇಪ ಮಾಡುವುದು ಮತ್ತು ರೂಪಾಯಿಗೆ ೬—೮ ಸೇರು ಅಕ್ಕಿ ಆಗಿರುವುದರಿಂದಲೂ ಜಿನಸು ಧಾರಣೆಗಳು ಜಾಸ್ತಿಯಾಗಿರುವದರಿಂದಲೂ ಜೀವನ ಮಾರ್ಗಕ್ಕೆ ಬಹಳ ಕಷ್ಟಪಡುವದು ದೇವರೇ ಬಲ್ಲ. ಪೋಲೀಸಿನವರು ಹಗಲು ರಾತ್ರಿ ಅನ್ನ ನೀರು ಇಲ್ಲದೆಯೂ ಎಷ್ಟಾದರೂ ಸುಖವಿಲ್ಲದೆಯೂ ಕಷ್ಟಪಟ್ಟು ಮಾಡುವ ಸಂಗತಿಗಳು ಎಲ್ಲಾ ವಾಚಕರಿಗೆ ಗೊತ್ತಿರುತ್ತವೆ ಈಚೆಗೆ ಕೆಲವು ತಿಂಗಳ ಲಾಗಾಯತು ಪೋಲೀಸ್ ಕಾನ್ಸ್ಟೇಬಲ್‌ರಿಗೆ ಸಂಬಳ ಜಾಸ್ತಿ ಆಗುತ್ತೆಂಬ ವರ್ತಮಾನ ಕೇಳಿ ಬಹಳ ಸಂತೋಷಯುಕ್ತರಾಗಿದ್ದರು ಈಚೆಗೆ ಇದರ ಅನುಗುಣವಾಗಿ ನೋಡುವಲ್ಲಿ ನೌಕರರಿಗೆ ಮಾತ್ರ ಇವರ ಮಕ್ಕಳುಮರಿಗಳಿಗೆ ಪ್ರಯೋಜನವಿಲ್ಲವೆಂತ ಕಾಣುತ್ತೆ ಆದರೆ ಈ ಮೊದಲು ಈ ಇಲಾಖೆಯಲ್ಲಿ ಸುಪೀರಿಯರ್ರಾಗಿ ಕೆಲಸ ನೋಡುತ್ತಿದ್ದ ಮೆ॥ ವಿ ಪಿ ಮಾಧವರಾಯರು ಈ ಜಿಲ್ಲಾ ದಿವಾನರ ಪದವಿಗೆ ಬಂದಿರುವದರಿಂದ ನೌಕರರು ಪಡುವ ಸುಖ ದುಃಖಗಳು ಅವರ ದಿವ್ಯಚಿತ್ತಕ್ಕೆ ಗೋಚರವಿರುವದರಿಂದಲೂ, ನೌಕರರಿಗೆ ಬಡ್ತಿ ಆಗುತ್ತೆಂಬ ವದಂತಿಯೂ ನಿಜವೆಂಬ ಕುತೂಹಲವೂ ಬಹು ಜನ ಬಡ ನೌಕರರಲ್ಲಿಯೂ ಇತ್ತು. ಅದು ನಿಜವೋ ಅಲ್ಲವೋ ತಿಳಿಯಲಿಲ್ಲ ಆದರೂ ನಮಗೆ ಪೂರ ಹುಟ್ಟಿದ್ದು ಲಕ್ಷವಲ್ಲ. ಫಲಬಂದು ತಿಂದದ್ದೇ ನಮ್ಮಗಳಿಗೆ ಸಂತೋಷವಾಗಿದೆ ಈ ಬಡ ನೌಕರರ ಕಷ್ಟ ದುಃಖಗಳನ್ನೆಲ್ಲಾ ನಮ್ಮ ಪ್ರಿಯ ... ಸರ್ಕಾರದ ಜಾಹಿರಾತಿಗೆ ತಂದು, ಬಡ ನೌಕರರನ್ನು ಬ್ರಿಟಿಷ್ ದೇಶದಲ್ಲಿರುವಂತೆ ಬಡ್ತಿ ಕೊಟ್ಟು ಕಾಪಾಡುವ ಭಾರ ನಮ್ಮ ದಿವಾನ್ ಬಹದ್ದೂರ್ ಮೆ॥ ವಿ ಪಿ ಮಾಧವರಾಯರ ಸನ್ನಿಧಾನಕ್ಕೂ, ಈ ಇಲಾಖೆ ನೌಕರರನ್ನು ಮಕ್ಕಳೋಪಾದಿಯಲ್ಲಿ ಕಾಪಾಡತಕ್ಕ ಪೋಲೀಸ್ ಇನ್ಸ್ಪೆಕ್ಟರ್ ಜನರಲ್ ಸಾಹೇಬರವರು ಸಹಾ ಈ ಸಂಗತಿಯನ್ನು ದಿವ್ಯ ಚಿತ್ತಕ್ಕೆ ತಂದು ಬಡ ನೌಕರರನ್ನು ಬಡ್ತಿ ಕೊಟ್ಟು ಕಾಪಾಡಬಹುದೆಂದು ಬಲ್ಲವನಾಗಿ ಬೇಡುತ್ತೇನೆ

ಒಬ್ಬ ಜಮಾದಾರ

ಕೆಲವು ಗ್ರಾಮ ವಿಚಾರಗಳು.

ಅಯ್ಯಾ,

ಚಿತ್ರದುರ್ಗದ ತಾಲ್ಲೂಕು ... ಹೋಬಳಿ ಮಜರೆ ಬಂಗಾರಕ್ಕನಹಳ್ಳಿ ಗ್ರಾಮದಲ್ಲಿ ಪುರಾತನವಾದ ಬಾವಿ ಬಿದ್ದು ನಾಶನವಾಗಿತ್ತು ಕೆಲವೆ ಮಾತ್ರ ಆಧಾರವಾಗಿತ್ತು ನಮ್ಮ ಗ್ರಾಮಕ್ಕೆ ಯಾರೇ ಆಗಲಿ ಪರಸ್ಥಳೀಕರು ನೌಕರಿ ಜನಗಳೂ ಬಂದಾಗ್ಯೂ ವಾಸ ಮಾಡಲು ಅನುಕೂಲವಿಲ್ಲದೆ ಚಳಿ ಗಾಳಿ ಮಳೆ ಸಿಕ್ಕೆ ಬೈಲು ಪ್ರದೇಶದಲ್ಲಿ ವಾಸಮಾಡಿ ಬಹಳವಾಗಿ ಕಷ್ಟ ನಷ್ಟಗಳಿಗೆ ಗುರಿಯಾಗಬೇಕಾಗಿತ್ತು ಇಂಥಾ ಕಷ್ಟ ನೋಡಲಾರದೆ ರಾ॥ ಇಂಟೂರು ರಂಗಪ್ಪ ಜಿ. ತಿಮ್ಮಯ್ಯ, ವೆ ತಿಪ್ಪಯ್ಯ ಈ ಜನರ ಪ್ರೋತ್ಸಾಹದಿಂದ ಬೇವಿನ ಮಟ್ಟಿಯಿಂದ ಧರ್ಮಾರ್ಥವಾಗಿ ಪರಸ್ಥಳೀಕರಿಗೂ ನೌಕರಿ ಜನರಿಗೂ ಅನುಕೂಲಿಸುವಂತೆ ಒಂದು ಚಾವಡಿ ಕಟ್ಟುವದಕ್ಕೆ ಏರ್ಪಾಡು ಮಾಡಿ, ಸುತ್ತ ಗೋಡೆ ಪೂರೈಸಿದೆ ಇನ್ನು ೮—೧೦ ದಿನಸದೊಳಗಾಗಿ ಚಾವಡಿ ಪೂರೈಸುತ್ತೆ. ಮೆ॥ ರಂಗಪ್ಪನವರಿಂದ ಬಹಳ ಮಟ್ಟಿಗೆ ಅನುಕೂಲವಾಯಿತು ಇನ್ನು ಬೇಗನೆ ಒಂದು ದೇವಸ್ಥಾನ ಕಟ್ಟುವದಕ್ಕೆ ಕಂಟ್ರಾಕ್ಟು ವಹಿಸಿಕೊಂಡು ಇರುತ್ತಾರೆ —ಈ ಪ್ಲವಂಗ ನಾಮ ಸಂವತ್ಸರದ ಭಾದ್ರಪದ ಶು ... ವರಿಗೂ ನೋಡಿದಾಗ್ಯೂ ಈ ಪ್ರಾಂತ್ಯಕ್ಕೆ ಮಳೆ ಬರಲಿಲ್ಲ ಇಲ್ಲಿಗೆ ಹತ್ತು ನಕ್ಷತ್ರಗಳು ಕಳೆದುಹೋದ್ದರಿಂದ ಮುಂಗಾರು ಫಸಲು ಬೀಜ ಫೇರಾವು ಮಾಡಿ ಇಲ್ಲ ಭೂಮಿಯಾವತ್ತೂ ವ್ಯವಸಾಯ ಮಾಡಿ ಸಿದ್ಧಪಡಿಸಿಕೊಂಡು ಪ್ರಜೆಗಳು ಆಕಾಶವನ್ನೇ ನೋಡಿ ಕಣ್ಣು ಕೆಂಪಗಾಗುತ್ತಾ ಬಂದವು ನಮ್ಮ ಗ್ರಾಮಕ್ಕೆ ೧೦ ಮೈಲಿ ದೂರವುಳ್ಳ ಚಿತ್ರದುರ್ಗದ ಪೂರ್ವ ಪಶ್ಚಿಮ ದಕ್ಷಿಣಭಾಗಗಳಲ್ಲಿ ಸ್ವಲ್ಪ ಪುಷ್ಕಳವಾಗಿರುತ್ತೆ ಉತ್ತರಭಾಗಕ್ಕೆ ಮಾತ್ರ ಭಗವಂತನ ಕರುಣ ತಪ್ಪಿದ್ದರ ಮೇಲೆ ಜನರು ಬಹಳವಾಗಿ ತಾಪಪಡುತ್ತಾರೆ. ಮುಂದಾದರೂ ಮಳೆ ಬರುತ್ತೋ ಇಲ್ಲವೋ ಎಂದು ದಿಃಖಪಡುತ್ತಾರೆ.—ಇಂಥಾ ಕಷ್ಟ ಸಂಭವಿಸಿದರೂ ಚಿತ್ರದುರ್ಗದ ಡಿಸ್ಟ್ರಿಕ್ಟು ೬—೭ ಮೈಲಿ ಫಾಸಲೆ ಇರುವ ಬೆಳಗಟ್ಟ ಗ್ರಾಮವೆಂಬ ಸ್ಥಳದಲ್ಲಿ ಇಸ್ಪೀಟು, ಪರೇಲು, ವಿಸ್ಟು, ಬುರುಜು ಎಂಬೀ ಜೂಜನ್ನು ಆಡುವದಕ್ಕೋಸ್ಕರ ೮—೧೦ ಗ್ರಾಮದಿಂದ ಬಂದು ಮೇಲ್ಕಂಡ ಗ್ರಾಮದಲ್ಲಿ ವಾಸ ಮಾಡಿಕೊಂಡು ೬೦೦—೮೦೦ ರೂಪಾಯಿ ವರಿವಿಗೂ ಆಟ ಆಡುತ್ತಾರೆ ಮತ್ತು ಆ ಗ್ರಾಮದಲ್ಲಿ ಮುಖಂಡರುಗಳು ಮೇಖ್ತಾ ನಿಂತುಕೊಂಡು ಹಣ ಕೊಟ್ಟು ಆಡಿಸುತ್ತಾರೆ. ಇಂಥಾ ಜೂಜುಗಾರರನ್ನು ನಿಲ್ಲಿಸಿ ಶಿಕ್ಷೆ ಮಾಡುವದಕ್ಕೆ ಧರ್ಮಪ್ರಭುಗಳಾದ ಸರ್ಕಾರದವರಾದರು ಮನಸ್ಸು ಕೊಟ್ಟಾರೆಂದು ಬೇಡುವ

ಪ್ರಜಾರಂಜಕ.

ತಾಲ್ಲೂಕು ವರ್ತಮಾನಗಳು.

ಕೋಲಾರ —ಈಗ ಸುಮಾರು ೨ ತಿಂಗಳಿಂದಲೂ ಮಳೆ ಇಲ್ಲದೆ, ತಹಲು ವರಿಗೂ ರಾಗಿ, ಅವರೆ ವಗೈರೆ ಪೈರುಗಳು ಬಾಡುತ್ತಾ ಇದೆ. ಅಲ್ಲದೆ ಈ ಪ್ರಾಂತ್ಯದ ಜನಗಳು ಆಕಾಶದಲ್ಲಿ ಪೂರ್ವದಿಕ್ಕಿನಲ್ಲಿ ಒಂದು ನಕ್ಷತ್ರ ಹುಟ್ಟಿ ಅದು ಸುಮಾರು ಮೇಲಕ್ಕೆ ೩ ಬಾರು ತೋಕೆ ಹುಟ್ಟಿ ಇರುತ್ತೆ. ಇದು ಧಾತು ಈಶ್ವರ ಸಂವತ್ಸರದಲ್ಲಿ ಹುಟ್ಟಿ ಇತ್ತು. ಆಗ ಕ್ಷಾಮ ಪ್ರಾಪ್ತವಾಗಿ ಅನೇಕ ಪ್ರಾಣಿ ನಷ್ಟವಾಯಿತೆಂದೂ, ಈಗ ಸದರಿ ಚುಕ್ಕೆಯು ಹುಟ್ಟಿದ್ದರಿಂದ ಕ್ಷಾಮ ಬರುತ್ತೆಂದೂ ಘಾಬರಿಯಾಗಿದ್ದಾರೆ ವೈದೀಕ ಮಹನೀಯರನ್ನು ಕೇಳಲು ಮುಂದಿನ ಕೀಲಕ ಸಂವತ್ಸರ ಪಂಚಾಂಗದಲ್ಲಿ ಶನಿಯು ಮೀನರಾಶಿಗೆ ಬರುತ್ತಾನೆ ಆದ್ದರಿಂದ ಪ್ರಜೆಗಳಿಗೆ ಬಹಳ ಕೇಡುಂಟೆಂದು ಈ ನಕ್ಷತ್ರವು ಸೂಚಿಸುತ್ತೆ ಎಂದು ಹೇಳುತ್ತಾರೆ. ಕಾರ್ ಸಮುದ್ರ ಹೋಬಳಿಯಲ್ಲಿ ತಹಲುವರಿಗೂ ಪೈರುಗಳು ಪ್ರಾಣದಿಂದ ಇತ್ತು. ಈಗ ಒಣಗಿಹೋಗಿದೆ, ದೇವಾದೇವಿ ಸಹಾ ನಿಂತು ಇದೆ. ಡಿಟೋ ಚುಕ್ಕೆ ಕೋಳಿ ಕೂಗುವ ಝಾಮದಲ್ಲಿ ಹುಟ್ಟಿದ್ದುದನ್ನು ಅನೇಕರು ನೋಡಿದಾರೆ. ಇದರಿಂದ ಇಷ್ಟು ಘಾಬರಿ ಹುಟ್ಟಿದೆ.

ನಂಜನಗೂಡು.—ಈ ಊರಿನಲ್ಲಿ ಪ್ಲೇಗಿನ ಗಲಾಟೆಯು ೨ ತಿಂಗಳಾದಾಗ್ಯೂ ಇನ್ನೂ ನಿಂತಿಲ್ಲ ಜನಗಳೆಲ್ಲರೂ ಊರು ಗುಡಿಸಲುಗಳಲ್ಲಿ ವಾಸಮಾಡುತ್ತಿದ್ದಾರೆ. ತಾಲ್ಲೋಕು ಅಮಲ್ದಾರರು ಬಹಳ ಮುತುವರ್ಜಿಯಿಂದ ಊರಿನ ಗಲ್ಲಿಗಳಲ್ಲೆಲ್ಲಾ ತಿರುಗಿ ಗ್ರಾಮವನ್ನು ಶುಚಿಮಾಡಿಸುತ್ತಿದ್ದಾರೆ ಇಲ್ಲಿಗೆ ಬಂದಿರತಕ್ಕ ಡಾಕ್ಟರು ಸಹಾ. ಇವರೂ ಕೂಡ ಮುತುವರ್ಜಿ ಮಾಡದಿದ್ದರೆ ಜನಗಳಿಗೆ ತುಂಬಾ ಒಳ್ಳೇದು. ಊರಿನಲ್ಲಿ ಜನಗಳಿಲ್ಲದ್ದರಿಂದ ಹಗಲುಹೊತ್ತಿನಲ್ಲೇ ಕಳವು ನಡೆಯುತ್ತದೆ ಈಗಾಗಲೇ ೩೦—೪೦ ಕಳವುಗಳು ನಡೆದಿವೆ ಪ್ಲೇಗು ಪೋಲೀಸ್ ಅಧಿಕಾರಿಗಳನ್ನೇ ಈ ಗ್ರಾಮ ಬಿಟ್ಟು ಪರಸ್ಥಳಕ್ಕೆ ಓಡಿಸಿದೆ ಹಗಲುಹೊತ್ತಿನಲ್ಲಾದರೂ ಒಬ್ಬ ಪೋಲೀಸ್ ನೌಕರನನ್ನು ನೋಡುವುದು ಪ್ರಯಾಸವಾಗಿದೆ ಕೆಲವು ಜನರು ಮಾಡಿರುವ ಕಳ್ಳತನದ್ದವೊಂದರಲ್ಲಿ ಪೋಲೀಸಿನವರು ಜನಗಳ ಸುಮಾರು ೪೦—೫೦ ಮಂದಿಯನ್ನು ಪತ್ತೆ ಮಾಡಿದರೂ ಅವರಿಗೆ ಯಾವ ಪ್ರಯೋಜನವೂ ಆಗಲಿಲ್ಲ. ಈ ಕಳ್ಳತನದ್ದವೊಂದು ನಡೆದು ಸುಮಾರು ೨ ತಿಂಗಳಾದಾಗ್ಯೂ ಮ್ಯಾಜಿಸ್ಟ್ರೇಟರ ನೋಟೀಸಿಗೆ ಬಿಳಸದೆ ಇರುತ್ತಾರೆಂದು ಕೇಳುತ್ತೇನೆ. ಇದನ್ನು ಸ್ಥಳದ ಆಫೀಸರವರು ಗಮನಕೊಟ್ಟು ವಿಚಾರಣೆ ಮಾಡುತ್ತಾರೆಂದು ಪ್ರಾರ್ಥಿಸುತ್ತೇವೆ

ಮೂಡಿಗೆರೆ ತಾ ಬಾಳೂರು.—ಸುಮಾರು ೮—೧೦ ದಿವಸಗಳಿಂದ ಮಳೆ ನಿಂತಿದ್ದು ಈಗ ಚೆನ್ನಾಗಿ ಬಿಸಿಲು ಬರುತ್ತೆ. ಒಳ್ಳೇ ಮಳೆ ಬಂತು ರೈತರೆಲ್ಲರೂ ಮಳೆ ಇಲ್ಲವೆಂದು ಆಕಾಶ ನೋಡುತ್ತಿದ್ದವರು ಈಗ ಬಹಳ ಆನಂದ ಪರವಶರಾದರು.—ಕೊಟಿಗೆಹಾರದಿಂದ ಕಳಸಕ್ಕೆ ಹೋಗುವ ಸರ್ಕಾರಿ ರಸ್ತೆ ಬಹಳ ತಿರುವುಗಳುಳ್ಳದ್ದಾಗಿಯೂ ಮತ್ತು ಮಳೆಗಾಲದಲ್ಲಿ ಬಹಳ ಕೆಸರುಳ್ಳದ್ದಾಗಿಯೂ ಬಹು ಕಠಿಣವಾಗಿದ್ದರೂ ಇರುವುದು ಪ್ರಯುಕ್ತ ಅನೇಕರಿಗೆ ಗೊತ್ತಿರಬಹುದು ಆದರೆ ಇದೇ ರಸ್ತೆಯಲ್ಲಿ ತಾ ೧೬ನೇ ಸೋಮವಾರ ಬೆಳಿಗ್ಗೆ ಸೂಪರಿಂಟೆಂಡಿಂಗ್ ಇಂಜನಿಯರ್ ಸಾಹೇಬರು ತಮ್ಮ ಮೋಟಾರ್ ಕಾರ್ ಎಂಬ ಹೊಗೆಯಿಂದ ನಡೆಯುವ ನಾಲ್ಕು ಚಕ್ರದ ಗಾಡಿಯಲ್ಲಿ ಕುಳಿತು ನಡಿಸಿಕೊಂಡು ೨೨ನೇ ಸೋಮವಾರ ಕೊಟಿಗೆಹಾರದ ಕಡೆ ದಯಮಾಡಿದರು ಇದನ್ನು ಈ ಗ್ರಾಮಸ್ಥರು ನೋಡಿ ಅವರ ಬುದ್ಧಿ ಚಮತ್ಕಾರಗಳನ್ನು ಕೊಂಡಾಡಿದರು ಈ ಊರಿಗೆ ಮೋಟಾರ್ ಕಾರ್ ಎಂಬ ಗಾಡಿಯು ಬಂದದ್ದು ಇದೇ ಮೊದಲು ಇಲ್ಲಿಗೆ ಸುಮಾರು ೧ ಮೈಲಿ ದೂರದಲ್ಲಿರುವ ಜಾವಳಿ ಎಂಬಲ್ಲಿ ತಾ ೧೭ನೇ ಮಂಗಳವಾರ ವಿಘ್ನೇಶ್ವರ ದೇವರನ್ನು ವಿಸರ್ಜನೆ ಮಾಡುವ ಉದ್ದೇಶ ಹೇಮಾವತಿ ನದೀ ಮೂಲಸ್ಥಾನಕ್ಕೆ ಬಿಜಯಮಾಡಿಸಿಕೊಂಡು ಹೋಗುವಾಗ್ಗೆ ದಾರಿಯಲ್ಲಿ ಒಬ್ರಿಕಟ್ಟೆ ಎಂಬ ಸ್ಥಳದಲ್ಲಿ ೧ ಘಂಟೆ ಹೊತ್ತು ಇಳಿಸಿ ಉರುಡಿಗಾನ, ಮಲೆನಾಡು ನಮೂನೆಯ ಕುಣಿತ ವಗೈರ ತಮಾಷೆಗಳನ್ನು ಮಾಡಿಸಿ, ಹೇಮಾವತಿಯಲ್ಲಿ ತೇಲ್ಪುತ್ತಿದ್ದ ಸಹಿತ ಬಿಟ್ಟು ಬಂದರು.

ಚಿತ್ರದುರ್ಗ.—ಈಚೆಗೆ ಗಾಳಿ, ಸೋನೆ ದಪ್ಪನಾದ ಮೋಡಗಳು ಕವಿಯುವದು ನಿಂತು ಬಿಸಿಲು ಕಾಯುತ್ತಿದೆ ... ಮೋಡಗಳು ಆಡುತ್ತಿದೆ ಒಳ್ಳೇ ಮಳೆ ಬರುವ ಲಕ್ಷಣವಿದೆ ... ತಿರುವದರಿಂದ ರೈತರು ಮಳೆಗೋಸ್ಕರ ಹಾರೈಸುತ್ತಿದ್ದಾರೆ ... ಈಗ ತಕ್ಕಮಟ್ಟಿಗೆ ಚೆನ್ನಾಗಿರುವದರಿಂದ ಜನಗಳು ತಕ್ಕಮಟ್ಟಿಗೆ ಆರೋಗ್ಯವಾಗಿದ್ದಾರೆ —ಸರಕಾರದವರು ಹೋಗಿವರ್ಷ ಹೋಗುವ ದಾರಿಯಲ್ಲಿರುವ ಗೋವಿನ ... ಕಟ್ಟಿಸಿದರೆ ಜಾನುವಾರುಗಳಿಗೆ ಬಹಳ ಅನುಕೂಲವಾಗುವದೆಂದು ಕೆಲವು ಜನಗಳು ಸೂಚಿಸಿತ್ತಷ್ಟೆ ಈಗ ಅವರು ಈ ಸೂಚನೆಯನ್ನು ಅನುಮೋದಿಸಿ ... ದನ್ನು ಕಟ್ಟಿಸಲಿಕ್ಕೆ ಆರಂಭಿಸಿರುವದು ಪ್ರಜೆಗಳಿಗೆಲ್ಲಾ ಸಂತೋಷವಾಗಿದೆ —ಶ್ರೀಮದ್ಘನರಾಜೇಂದ್ರಸ್ವಾಮಿಗಳವರು ... ಪ್ರವೇಶವಾಗಿದ್ದು ಬ್ರಾಹ್ಮಣರಿಗೂ ವೀರಶೈವರಿಗೂ ಪರಸ್ಪರ ... ಮನಸ್ತಾಪಕ್ಕೆ ಕಾರಣವಾಯಿತಲ್ಲ ಎಂದು ಬಿಂಬಿಸಲಾಗಿದೆ ಸ್ವಾಮಿಗಳ ಪುರಪ್ರವೇಶವು ಯಾವ ಗಲಾಟೆಯೂ ಇಲ್ಲದೆ, ಮತ್ತ್ಯಾವ ಮಸ್ತರಿಗೂ ಅವಮಾನವುಂಟುಮಾಡತಕ್ಕ ಬಾಗಿಲಿಲ್ಲದೆ ... ಸದಿಂದ ಜರುಗಿತು ಈಚೆಗೆ ನಿಜ ವೀರಶೈವರು ಈ ಸಭೆಗೆ ಸಮಾಧಾನವಿಂದಲೇ ಇದ್ದಾರೆ ಇವರ ವಿಷಯದಲ್ಲಿ ಯಾರಿಗಾದರೂ ... ಅಸೂಯೆ ಮಾತ್ಸರ್ಯಗಳು ಇರಬೇಕೋ ತಿಳಿಯುವದಿಲ್ಲ ಇನ್ನು ಮುಂದೆಯಾದರೂ ಒಬ್ಬರಿಗೊಬ್ಬರು ಮಿತ್ರಭಾವದಿಂದ ಅನ್ಯೋನ್ಯವಾಗಿರುವರೆಂದು ನಿರೀಕ್ಷಿಸಲ್ಪಟ್ಟಿದೆ —ಸೆಷನ್ ಜಡ್ಜಿರವರು ... ಗಳು ಇಲ್ಲಿನ ಸೆಷನ್ ಕೇಸುಗಳನ್ನು ವಿಚಾರಣೆ ಮಾಡುತ್ತಿದ್ದಾರೆ ಕೆಲವು ಮೊಕದ್ದಮೆಗಳು ತೀರ್ಮಾನವಾಗಿಯೂ, ಇನ್ನು ಕೆಲವು ವಿಚಾರಣೆ ನಡೆಯುತ್ತಲೂ ಇವೆ

ಕುಣಿಗಲು.—ಬಿಸಲಿನ ಝಳ ಅಧಿಕವಾಗಿ ... ಹೋಗಿವೆ. ಎರಡು ವಾರಗಳಿಂದಲೂ ಈ ಪ್ರಾಂತ್ಯದಲ್ಲಿ ... ದ ರಾತ್ರಿಯಿಂದ ಕೊಂಚ ಅನುಮಾನದ ... ಗಿವೆ ರಾಗಿ ಹುಲ್ಲು ... ಇಂದ ೬ ರೂಪಾಯಿ ... ಯಿತು ೧೬ ಪಟಿಗಿದೆ ತುಮಕೂರಿಂದಲೂ ... ಈಗ ಪ್ಲೇಗ್ ಬರುವದೇ ಎಂಬ ಭಯವಾಗಿದೆ ... ಲ್ಲಿನ ಅಧಿಕಾರಿಗಳು ಪ್ರಯಾಣಿಕರ ಕ್ಷೇಮವನ್ನು ... ಚಿಕ್ಕಕೆರೆ ನೀರು ತೀರಾ ಕೊಳೆತು ನಾರುತ್ತಿದ್ದಾಗ್ಯೂ ... ಕುಡಿಯುತ್ತಾ ಅನೇಕರು ಜ್ವರ ಭೇದಿ ಮುಂತಾದ ... ತ್ತಾರೆ ಸವಿನಾಡದಲ್ಲೇ ಸಿಹಿನೀರಿನ ಭಾವಿ ಇದೆ ... ಜನಗಳು ಆದದ್ದು ಚಿಕ್ಕಕೆರೆ ನೀರನ್ನು ಕುಡಿಯುವ ... ಕಾರಣಗಳು ಆಸ್ಪತ್ರೆ ಕಡುಮಂದು ಉತ್ತಮವಾದದೆ ... ರು ೯ ಮೈಲಿ ದೂರವಾಗಿರುವ ರಂಗನಾಥಪುರ ಗ್ರಾಮದ ... ರಾತ್ರಿಯಲ್ಲಿ ಕೆರೆಯಲ್ಲಿ ... ನೀರಿನಜಾಗ ಇಟ್ಟಿದ್ದರೂ ಅಕಾಲ ಮರಣವನ್ನು ಹೊಂದಿ ...

...ನ ಕೆರೆಯ ಸಾಗಿಸಲಿಕ್ಕೆ ಕೆಲವು ಅಳ್ಳಿಯವರು ಬಂದು ಅವ್ಯ ೧... ಸನ್ನು ಬಾಡಿಗೆ ಇಲ್ಲದೆ ಉಪಯೋಗಿಸುತ್ತಾರೆ. ಇದರಿಂದ ಸರ್ಕಾರಕ್ಕೆ ... ಬಾಡಿಗೆ ಖರ್ಚಿಲ್ಲ. ಸುತ್ತ ರೈತರಿಗೆ ಗ್ರಾಮದ ಎಲ್ಲಾ ವಿಧ... ಗಾಡಿಗಳ ಸಂಚಾರ ಸುಲಭವಾಗಿ ಸಿಕ್ಕುವದು.—ಕೊಳಗಲು ಕೊಳೆ ತುಂಬಿದ ... ಪುರಾತನ ಗ್ರಾಮವಾಗಿರುವದರಿಂದ ಇಲ್ಲಿ ಮನೆಗಳಾಗಲೀ ರಸ್ತೆಗಳಾಗಲೀ ಆರೋಗ್ಯಕ್ಕೆ ಅನುಕೂಲವಾಗಿಲ್ಲ. ಆದಾಗ್ಯೂ ಕೋಟೆಯ ... ಪಟ್ಟಣ ಆಗಾಗ್ಗೆ ನಮ್ಮ ಅಮಲ್ದಾರರು ಎಲ್ಲಾ ಗಲ್ಲಿಗಳನ್ನೂ ಮೋ... ನೋಡುವದಾದರೆ ಕೊಳೆತು ನಾರುವ ದುರ್ವಾಸನೆ ತಪ್ಪುವದು.

ಹೊಳೇನರಸೀಪುರ.—ಈಗ ಬಹಳ ಆರೋಗ್ಯವಾಗಿದೆ. ಇಲ್ಲಿ ... ಸಲ ಗಿಡದಾಗ ಪೈರು ಬಹಳ ಚೆನ್ನಾಗಿ ಆಗಿರುತ್ತದೆ. ದೊಡ್ಡ ರಾಗಿ, ಜೋಳ, ವಗೈರೆ ಹಾಕಿರುತ್ತಾರೆ. ಮಳೆ ಬೇಕಾಗಿದೆ. ಮಳೆ ... ವಿಶುಂಪ್ರತಿಯಲ್ಲೂ ೨—೩ ದಿವಸದಿಂದ ಸಹ ಗಟ್ಟಿಲಿ ಆಗು... ೧೯೦೬ ನೆ ಇಸವಿ ಡಿಸೆಂಬರು ತಿಂಗಳಲ್ಲಿ ಈ ಊರಿಗೆ ... ಪ್ಲೇಗ್ ಪ್ರಾಪ್ತವಾಗಿ ಅರ್ಧಮಕ್ಕಳುಪಾಲು ಜನರೆಲ್ಲಾ ಊರುಬಿಟ್ಟು ... ಜೊತೆ ಇದ್ದರು. ಬಾಕಿ ಜನ ಕೋಟೇ ಪೇಟೇಲಿ ವಾಸವಾಗಿದ್ದರು. ... ಊರಿಗೆ ಏಪ್ರಿಲ್ ತಿಂಗಳಲ್ಲಿ ಜನಗಳು ಬಂದ ಸ್ವಲ್ಪ ದಿವಸದಲ್ಲೇ ... ವಾಂತಿಭೇದಿ ಪ್ರಾಪ್ತವಾಗಿ ೫ ವರುಷದ ಪ್ಲೇಗಿನಲ್ಲಿ ಸತ್ತದ್ದಕ್ಕಿಂತ ... ಮೇ, ಜೂನ್ ತಿಂಗಳಲ್ಲಿ ಹೆಚ್ಚಾಗಿ ಕಾಲವಾದರು. ಈಗ ... ತಿಂಗಳಿಂದ ಜನಗಳು ಸ್ವಲ್ಪ ಸಂತೋಷದಿಂದಲೂ ಹರುಷದಿಂದಲೂ ... ಹಾಸನದಲ್ಲಿ ಪ್ಲೇಗು ಪ್ರಾಪ್ತವಾಗಿದೆ ಎಂಬ ವರ್ತಮಾನವನ್ನು ಕೇಳಿ ಜನಗಳು ಆಗಲೇ ಬಹಳ ಭೀತಿಪಡುತ್ತಾ ಇದ್ದಾರೆ. ಹಾಸನದಿಂದ ಈ ಊರಿಗೆ ಬಂದು ರಾತ್ರಿ ವೇಳೆ ಪೇಟೇಲಿ ಮನೆಗಳನ್ನು ಸೇರುತ್ತಾರೆ. ಇಂಥಾದ್ದಕ್ಕೆ ಪ್ರತಿಯೊಬ್ಬರೂ ಮನಸ್ಸು ಕೊಡದೆ ಇದ್ದರೆ ಊರು ಆರೋಗ್ಯಸ್ಥಿತಿಯಲ್ಲಿರುತ್ತೆ. ನಮ್ಮ ಅಮಲ್ದಾರರು ಮತ್ತು ಡಾಕ್ಟರು ಯಾರ ಮನೇಲಿ ಪ್ಲೇಗಿನಿಂದ ಇಲಿಯಾಗಲಿ ಜನವಾಗಲಿ ಸತ್ತರೆ ಆ ಸ್ಥಳವನ್ನು ಜಾಗ್ರತೆ ಡಿಸಿನ್ಫೆಕ್ಟ್ ಮಾಡಿಸಿ, ಇರತಕ್ಕವರನ್ನು ಕಾಪಾಡುತ್ತಾರೆಂದು ನಂಬುತ್ತೇನೆ.—ಈ ಊರಿಗೆ ಈ ತಿಂಗಳು ೧೯ ನೇ ತಾ ಅರಕಲಗೂಡಿನಿಂದ ಹಾಸನದ ಡೆಪ್ಟಿ ಕಮಿಷನರವರೂ, ಎಗ್ಜಿಕ್ಯುಟಿವ್ ಇಂಜನಿಯರೂ, ಕಮೀಷನರೂ ದಯಮಾಡಿ ... ಊರನ್ನೆಲ್ಲಾ ನೋಡಿಕೊಂಡು ಸಾಯಂಕಾಲ ಕೋಟೆ ಒಳಗಿನಿಂದ ಹೊರಕೋಟೆಗೆ ಬರುವಾಗ್ಗೆ ಕೋಟೆ ಬಾಗಿಲಿನಲ್ಲಿ ಮಂಗಳಾರ್ತಿ ... ವಿನಾಯಕನ ಪ್ರಸಾದವನ್ನು ಸ್ವೀಕರಿಸಿ ತೆರಳಿದರು.

ಚಿಕ್ಕಬಳ್ಳಾಪುರ.—ಇಲ್ಲಿ ಮಳೆ ಇಲ್ಲದೆ ಪೈರು ಸಂತರಾಂ ಒಣಗಿ ಹೋಯಿತು. ಅಕ್ಕಿ ರೂ ೧ ಗೆ ೮ ಸೇರು, ರಾಗಿ ಖಂಡಿ ೧ ಕ್ಕೆ ೫೧ ... ಪೇಟೆಯಲ್ಲಿ ರಾಗಿ ಬಂಡಿಗಳು ಬಂದರೆ ಒಬ್ಬಗನೋಲೊಬ್ಬರು ... ದಿಂದ ಕೊಳ್ಳುತ್ತಾರೆ. ಮುಂದಾದರೂ ಸಾಲಕೊಡ... ಭಯಪಡುವರು. ಇಷ್ಟು ಬ್ರಯವಾಗಿ ಮಾರುತ್ತಿದ್ದರೆ ಬಡವರ ... ೪ ನೆ ಬುಧವಾರ ನಮ್ಮ ಮೈಸೂರು ಶ್ರೀಮನ್ಮಹಾರಾಜರವರು ಏವಿ ೨ ಘಂಟೆಗೆ ಸಿದ್ಧಘಟ್ಟದ ಮಾರ್ಗವಾಗಿ ಇಲ್ಲಿಗೆ ದಯಮಾಡಿಸಿದರು. ಈ. ಕಛೇರಿ ಮುಂದುಗಡೆ ಹಾಕಿದ್ದ ಪೆಂಡಾಲಿನಲ್ಲಿ ಇಲ್ಲಿನ ಆಫೀಸರವರು, ಲಾಯರುಗಳು, ಉಪಾಧ್ಯಾಯರು, ಬಾಲಕರು ಬಾಲಕಿಯರೊಂದಿಗೆ ಎದುರುಗೊಂಡು ಅವರಿಗೆ ಹಾರತುರಾಯಿಗಳನ್ನು ಒಪ್ಪಿಸಿದನಂತರ ಒಂದು ಅಡ್ರಸ್ ಓದಿ ಗಂಧದ ಪೆಟ್ಟಿಗೆಯಲ್ಲಿಟ್ಟು ಒಪ್ಪಿಸಿದರು. ನಂತರ ಮಹಾರಾಜರು ಸದರುತ್ತರವನ್ನು ಕೊಟ್ಟು ಟೌನ್‌ಹಾಲಿನ ... ಹೋಗಿ, ಅಲ್ಲಿ ಮ್ಯುನಿಸಿಪಲ್ ಮೆಂಬರುಗಳು, ವರ್ತಕರೊಂದಿಗೆ ಕೊಟ್ಟ ಹಾರತುರಾಯಿಗಳನ್ನು ಸ್ವೀಕರಿಸಿ, ಅಲ್ಲಿಂದ ನಂದಿಮಾರ್ಗವಾಗಿ ಬೆಟ್ಟಕ್ಕೆ ಹೊರಟುಹೋದರು. ಮಾರನೆ ದಿವಸ ಮಹಾರಾಜರವರು ಬೇಟೆಯಾಡುತ್ತಾರೆಂದು ತಿಳಿದು ಸಾವಿರಾರು ಜನರು ನೋಡಲು ಬಂದಿದ್ದರು. ಆ ದಿನ ಮಹಾರಾಜರವರಿಗೆ ಮೈಶೌಲ್ಯ ... ವಾಗಿದ್ದದ್ದರಿಂದ ಬೇಟೆಯಾಡಲು ಇತ್ತ ... ಶುಕ್ರವಾರ ಬೆಳಿಗ್ಗೆ ೧೦ ಘಂಟೆಗೆ ಬೆಟ್ಟದಿಂದ ... ಬೆಂಗಳೂರಿಗೆ ಪ್ರಯಾಣ ಬೆಳೆಸಿದರು.—ಇಲ್ಲಿನ ಹೈಸ್ಕೂಲ್ ಮೆ. ಶ್ರೀನಿವಾಸ್ಯಂಗಾರು ಬೆಂಗಳೂರಿಗೆ ಮೊನ್ನೆ ಶನಿವಾರ ಹೊರಟು ಹೋದರು. ಇವರಿಗೆ ಇಲ್ಲಿನ ಹೈಸ್ಕೂಲ್ ಹುಡುಗರು ಫೋಟೋ ತೆಗಿಸಿ ಮಾಲೆ ... ದೊಂದಿಗೆ ಸಾಗ ಕಳುಹಿಸಿದರು. ಇವರು ... ಇವರನ್ನು ಕಳಕೊಂಡ ಹೈಸ್ಕೂಲ್ ಹುಡುಗರು ವ್ಯಸನಪಡುತ್ತಾರೆ. ಮೆಟ್ರಿಕ್ಯುಲೇಷನ್‌ಗೆ ಸ್ಕೂಲ್ ಮೂಲಕ ೧೬, ಪ್ರೈವೇಟ್ ೩, ಟೀಚರ್ ಸೆಕೆಂಡರಿಗೆ ೧೧ ಜನ ಕಟ್ಟಿದಾರೆ. ಸ್ಟೂಡೆಂಟ್ಸ್ ಹೋಂ ಮ್ಯಾನೇಜ್‌ಮೆಂಟನ್ನು ಇನ್ನೂ ಚೆನ್ನಾಗಿ ನಡಿಸಿದರೆ ಉತ್ತಮ.—ಇಲ್ಲಿ ಆಡುವ ಬೆಂಗಳೂರು ಸಿಟಿ ಸ್ಟಾರ್ ... ನಾಟಕದ ಚಪ್ಪರಕ್ಕೆ ೨—೩ ದಿವಸದ ಕೆಳಗೆ ಯಾರೋ ಬೆಂಕಿ ಇಟ್ಟಿದ್ದರು. ಅದರಿಂದ ಸ್ವಲ್ಪ ಏಳುವಷ್ಟರಲ್ಲೇ ಪಕ್ಕದಲ್ಲಿರುವ ಮಂದೀವಾರರು ಆರಿಸಿದರು.

ತುಂಕೂರು.—ಈಗ ೨೫ ದಿನಗಳಿಂದ ಮಳೆ ಇಲ್ಲದೆ ಬಿಸಲು ಬಹಳ ... ಕಾಯುತ್ತಿದೆ. ಕೊನೆಗೆ ಬಂದಿರುವ ಖುಷ್ಕಿ ಫಸಲಿಗೆ ತುಂಬಾ ತೊಂದರೆಯಾಗಿ ಒಣಗಿ ಹೋಗುತ್ತಿವೆ. ಗತ ಸಾಲಿಗೂ ... ತುಂಬಾ ವ್ಯತ್ಯಾಸವಾಗಿ ಜನರಿಗೆ ಕ್ಷಾಮಸೂಚನೆ ಹಿಡಿದಿದೆ. ಪ್ಲೇಗ್ ಕೇಸಿಂದ ನಂಬಿಗಳು ಮುಚ್ಚಲ್ಪಟ್ಟಿರುವದರಿಂದ ದಿನಸಿ ಗಾಡಿಗಳು ಸಾಲಿನಲ್ಲಿ ... ಹಾಲೀ ಕೋರಪೇಟೆಯಲ್ಲಿ ಪ್ಲೇಗ್ ಮರಣಗಳಾಗುತ್ತಿರುವದರಿಂದಲೂ ಕೆ... ಪೇಟೆಯಲ್ಲಿ ಇಲಿಗಳು ಸಾಯುವದು ಹೆಚ್ಚಾಗಿರುವದರಿಂದಲೂ ಸುಮಾರಾಗಿ ಮುಕ್ಕಾಲು ಭಾಗ ಜನ ಊರು ಬಿಟ್ಟು ಹೋಗಿರುತ್ತಾರೆ. ಈ ಸಾರಿ ಕೋರೆಕ್ಕೆ ಹೋಗಿರುವ ಜನರು ಚಳ್ಳೆಪಲ್ಲಿಗಳಿಗೆ ಸೇರಲಿಲ್ಲ. ಹಿಂದಿನ ಸಾರಿ ನೋಡಿದ ಶಾನೆಗ ಪ್ಲೇಗು ಅದು ವ್ಯಾಪಿಸಿ ಅಲ್ಲಿಯೂ ತೊಂದರೆಗೆ ಒಳಗಾದ್ದರಿಂದಲೂ, ಗ್ರಾಮಾಂತರದವರು ಇಲ್ಲಿಂದ ಹೋದವರನ್ನು ಬಿಡದ್ದರಿಂದಲೂ ಈ ಊರಿನ ಚತುರ್ದಿಕ್ಕಿನಲ್ಲೂ ಷೆಡ್ಡುಗಳನ್ನು ಹಾಕಿಕೊಂಡು ವಾಸಿಸುತ್ತಿದ್ದಾರೆ. ಹೋದ ಸಾರಿಗಿಂತಲೂ ಈ ಸಾರಿ ಜನರು ಭೀತರಾಗಿ ಜಾಗ್ರತೆ ಊರು ಬಿಡುತ್ತಿರುವದರಿಂದ ಜಾಡ್ಯದ ಪ್ರಾಬಲ್ಯವು ಬಹು ನಷ್ಟಿಗೂ ಕಡಮೆಯಾಗುವ ಸಂಭವವಿದೆ.—ಇಲ್ಲಿನ ಮಿಷನ್ ಪಾಠಶಾಲೆಗಳಲ್ಲಿ ಮುಚ್ಚಲ್ಪಟ್ಟವೆ. ಕ್ರಿಸ್ತನ ಬೀದಿಯಲ್ಲಿ ಇಲಿ ಸಾಯುತ್ತಲೇ ಪಾದ್ರಿ ಸಾಹೇಬರು ಕೂಡಲೇ ಕ್ರೈಸ್ತರೆಲ್ಲರಿಗೂ ಟವರ್‌ಗೆ ಒಂದೊಂದರೆ ಮೈಲಿ ಘಾಸಲೆ ದೇವರೂರು ಹತ್ತಿರ ಜೋಪಡಿಗಳನ್ನು ಹಾಕಿಸಿ ಅದಕ್ಕಾಗಿ ಅವರಿಗೆ ತುಂಬಾ ಸಹಾಯಮಾಡಿ ವಾಸಿಸುವಂತೆ ಏರ್ಪಾಡು ಮಾಡಿಸಿರುತ್ತಾರೆ. ಇತ್ತಲಾಗಿ ನಮ್ಮ ಸರ್ಕಾರದವರು ಹೇರಳವಾಗಿ ಷೆಡ್ಡಿನ ಸಾಮಾನುಗಳನ್ನು ತರಿಸಿ ಪ್ರಜೆಗಳಿಗೆ ಸುಲಭ ಬೆಲೆಗೆ ವಿಕರಿ ಮಾಡುತ್ತಾ ಇದ್ದು ರೂಪಾಯಿಗಿಂತ ಕಡಮೆ ಸಂಬಳದ ನೌಕರರಿಗೆಲ್ಲಾ ಮುಫತ್ತಾಗಿ ಅಮಲ್ದಾರ್ ಶಿಫಾರಿಸಿನಂತೆ ಕೊಡುತ್ತಿದ್ದಾರೆ. ತಾ ೨೦ ರ ವರೆಗೆ ಪ್ಲೇಗಿನಿಂದ ೭೦ ಪ್ಲೇಗ್ ಕಾಯಿಲೆ ಆಗಿರುತ್ತೆ. ಹೊರಗಡೆ ಷೆಡ್ಡುಗಳಲ್ಲಿ ವಾಸಿಸುವವರ ಕಷ್ಟವು ಹೆಚ್ಚಾಗಿದೆ.—ನೆನ್ನೆ ೨೦ ನೇ ತಾ ಶುಕ್ರವಾರ ಮಧ್ಯಾಹ್ನ ೧೧ ಗಂಟೆಗೆ ಬೆಂಗಳೂರಿಂದ ನಮ್ಮ ಶ್ರೀಜವಾರ್ ಯುವರಾಜರವರು ಮಿತಪರಿವಾರದೊಡನೆ ಮೋಟಾರ್ ಕಾರಿನಲ್ಲಿ ಇಲ್ಲಿಗೆ ದಯಮಾಡಿಸಿದರು. ಟ್ರಾವೆಲರ್ಸ್ ಬಂಗಲೆಯನ್ನು ನಮ್ಮ ಡೆಪ್ಟಿ ಕಮಿಷನರೇ ಮೊದಲಾದ ಉದ್ಯೋಗಸ್ಥರು ಕಾದಿದ್ದು, ಅವರಿಗೆ ಸುಸ್ವಾಗತವನ್ನು ಬಯಸಿದರು. ಅನಂತರ ಯುವರಾಜರವರು ವಿಶ್ರಾಂತಿ ತೆಗೆದು ಪುನಃ ಮಧ್ಯಾಹ್ನ ೧ ಗಂಟೆಗೆ ಮೂರು ಕಣಿವೆಯನ್ನು ಪರೀಕ್ಷಿಸಲು ದಯಮಾಡಿಸಿದರು. ತಾ. ೨೩ ಕ್ಕೆ ದೇವರಾಯನದುರ್ಗಕ್ಕೆ ದಯಮಾಡಿಸಿ, ಅಲ್ಲಿಂದ ಈ ಮಾರ್ಗವಾಗಿಯೇ ಬೆಂಗಳೂರಿಗೆ ದಯಮಾಡಿಸುತ್ತಾರೆ. ನಮ್ಮ ಊರಿನ ಪ್ರಜೆಗಳು ಈಗ ಕಷ್ಟದಲ್ಲಿದ್ದಾಗ್ಯೂ ಶ್ರೀಮನ್ ಯುವರಾಜರವರ ಆಗಮನವನ್ನು ಬಹು ಕಾತುರದಿಂದ ನಿರೀಕ್ಷಿಸುತ್ತಾ ಅವರ ದರ್ಶನ ಮಾತ್ರದಿಂದಲೇ ತಮ್ಮ ಕಷ್ಟಗಳನ್ನು ಮರೆತು ಸಂತೋಷವುಳ್ಳವರಾಗಿದ್ದರು.—ಈಗ ಒಂದೂವರೆ ವರುಷದಿಂದಲೂ ಪ್ರಜೆಗಳ ಕಷ್ಟಸುಖಗಳಲ್ಲಿ ಸಮಭಾಗಿಗಳಾಗಿದ್ದ ನಮ್ಮ ಡಾಕ್ಟರಾದ ಮೆ॥ ಮುತ್ತುಸ್ವಾಮಿನಾಯಡು ರವರಿಗೆ ಬೆಂಗಳೂರಿಗೆ ವರ್ಗವಾಗಿ ಹೋದದ್ದು ಇಲ್ಲಿನ ಜನರಿಗೆ ತುಂಬಾ ವ್ಯಸನ ಉಂಟಾಗಿದೆ. ಈ ಕಷ್ಟಕಾಲ ಕಳೆಯುವ ವರಿಗೂ ಇವರನ್ನು ಇಲ್ಲೇ ಇರಿಸುವಂತೆ ಸೀನಿಯರ್ ಸರ್ಜನರವರಿಗೆ ಇಲ್ಲಿನವರು ಮನವಿ ಅರ್ಜಿ ಬರೆದುಕೊಂಡಿದ್ದಾಗ್ಯೂ ಪ್ರಯೋಜನವಾಗಲಿಲ್ಲ. ಡಾಕ್ಟರ್ ಮೆ॥ ಅಪ್ಪಾಜಿರಾವ್ ಮೊದಲಿಯಾರ್ ಬಂದಿರುತ್ತಾರೆ.—ತಾ. ೨೧ ನೇ ಶನಿವಾರ ಈ ಊರಿನಲ್ಲಿ ಒಂದು ಹುಚ್ಚು ನಾಯಿಯು ಹತ್ತು ಜನಗಳವರೆಗೂ ಕಡಿದದ್ದಲ್ಲದೆ ಊರಿನಲ್ಲಿ ಅನೇಕ ನಾಯಿಗಳನ್ನು ಕಡಿದು ತುಂಬಾ ಅನಂತ್ರ ಮಾಡಿತು. ಕಸಗ ತಿಗಳರ ತೋಟಕ್ಕೆ ಹೋದಾಗ ಅಲ್ಲಿನವರು ಅದನ್ನು ಹೊಡೆದು ಸಾಯಿಸಿದರು. ಆದರಿಂದ ಕಡಿಸಿಕೊಂಡಿರುವವರ ಕಷ್ಟ ಹೇಳತೀರದು. ಅವರೆಲ್ಲರೂ ಪ್ರಸಿದ್ಧ ಚಿಕಿತ್ಸಾಸ್ಥಳವಾದ ಕೂನೂರಿಗೆ ಹೋಗುವದು ಅನುಕೂಲವೆಂಬುದಾಗಿಯೂ, ಅಂಥವರು ನಮ್ಮ ಡಾಕ್ಟರಿಗೆ ತಿಳಿಸಿದರೆ ಅವರಿಗೆ ಸರ್ಕಾರಿ ರೂಲ್ಸಿನಂತೆ ತಾವು ಸಹಾಯ ಮಾಡುತ್ತೇನೆಂತಲೂ ಅಪ್ಪಣೆ ಕೊಡಿಸಿರುತ್ತಾರೆ. ಈಗ ಕಡಿದಿರುವ ನಾಯಿಗಳು ಕೂಡಾ ಕೆಲವು ಕಾಲದಲ್ಲಿ ಹುಚ್ಚುನಾಯಿಗಳಾಗುವದರಿಂದ ಮ್ಯುನಿಸಿಪಾಲಿಟಿಯವರು ತಕ್ಕ ಏರ್ಪಾಡು ಮಾಡುವದು ಪ್ರಾಮುಖ್ಯವಾಗಿದೆ.

ಪ್ರಕಟನೆಗಳು.

ಶೀಘ್ರ ಮಾಡಿ! ಆಲಸ್ಯಮಾಡಿದರೆ ದೊರೆಯುವದಿಲ್ಲ !!

ಬಿಡಬೇಡಿ !!!

101-1

ಅಮೇರಿಕನ್ ಲೀವರ್ ವಾಚ್.



ಈ ಗಡಿಯಾರದ ಲಕ್ಷಣವನ್ನು ಎಷ್ಟು ಕೊಗಳಿದರೂ ಸಾಲದು ನಮ್ಮ ಅಮೇರಿಕನ್ ಲೀವರ್ ವಾಚುಗಳು ಕಾಲವನ್ನು ಸರಿಯಾಗಿ ತೋರಿಸುವದರಲ್ಲಿ ಬಹು ಪ್ರಬಲವಾದದ್ದು. ಈ ಗಡಿಯಾರಕ್ಕೆ ಸಮಾನವಾದದ್ದು ಇಲ್ಲವೆಂದು ವಿಧಿಯರಿ. ಬಡಜನಗಳಿಗೋಸ್ಕರವೇ ತಯಾರ್ಮಾಡಿಸಿ ತರಿಸಿದ್ದೇವೆ. ಇದರ ಹೆಸರು "ಅಮೇರಿಕನ್ ಲೀವರ್ ವಾಚ್" ಎನ್ನುವರು. ಇಂಥಾ ಲೀವರ್‌ವಾಚ್ ಇಷ್ಟು ಕಡಿಮೆ ಬೆಲೆಗೆ ಇದಿನ ವರ್ಯಂತ ಬಂದಿರಲಿಲ್ಲ. ಮುಚ್ಚಳ ತೆಗೆಯಬೇಕಾದ ಆವಶ್ಯಕವೇ ಇಲ್ಲ. ಬೇರೆ ಬೀಗದಕೈ ಇಲ್ಲ. ಪೇಟೆಂಟಾಗಿದೆ. ವಿಶಾಯಿತ್ತು ಸೈಜು (ಮಧ್ಯಮ ಅಳತೆ) ನಿಕ್ಕಲ್ ಬೆಳ್ಳಿಯಿಂದ ಮಾಡಿದ್ದು. ಕೆಳಗೆ ಬಿದ್ದಾಗ್ಯೂ ಕೆಡುವದಿಲ್ಲ. ೧ ವರ್ಷ ಗ್ಯಾರಂಟಿ ಕೊಡುವದು. ವ್ಯಾಪಾರಸ್ಥರಿಗೂ ಇದು ಯೋಗ್ಯವಾದದ್ದು. ಇದರ ಕ್ರಯ ಬಹು ಸ್ವಲ್ಪ.

ವಿ ಪಿ ಪಿ ಚಾರ್ಜು ಸೇರಿ ರೂ. ೨—೦—೦ ಮಾತ್ರವೇ.

ಸೂಚನೆ.—ಅಕ್ಟೋಬರ್ ತಿಂಗಳು ಅಖೈರಿನೊಳಗೆ ಮುಂಚಿತವಾಗಿ ತರಿಸಿಕೊಳ್ಳತಕ್ಕವರಿಗೆ ಮಾತ್ರ ಸಿಕ್ಕುವದು. ಆವಶ್ಯಕವಾದತಕ್ಕವರಿಗೆ ಬೇಗನೆ ಸಿಕ್ಕುವಲಾರದು. ನಮ್ಮ ಮೇಲೆ ಆಪಾದನೆಮಾಡಬೇಡಿ. ಅವರವರ ವಿಳಾಸವನ್ನು ನಿರಭ್ಯಂತರವಾಗಿ ಬರೆಯಬೇಕು.

ವಿಳಾಸ:—ಟಿ. ಸಿ. ಕನ್ನಯ್ಯಶೆಟ್ಟಿ ಅಂಡ್ ಸನ್, ನಂಬರು ೨೦, ಸಿಂಗಣ್ಣ ನಾಯಿಡು ಸ್ಟ್ರೀಟ್, ಸಾಹುಕಾರ್‌ಪೇಟೆ, ಮದರಾಸು.

"ಸಾಧ್ವಿ"

86 6

ಇದು ಮಿ॥ ವೆಂಕಟಕೃಷ್ಣಯ್ಯನವರಿಂದ ಮುದ್ರಿಸಲ್ಪಡುತ್ತಿರುವ ಮಾಸಪತ್ರಿಕೆ. ಭಾರತಮಹಿಳೆಯರ ವಿದ್ಯಾಭ್ಯಾಸವಿಷಯಗಳನ್ನೂ, ಅವರ ಇಹ ಪರ ಸೌಖ್ಯಗಳಿಗೆ ಸಾಧಕವಾದ ವಿಷಯಗಳನ್ನೂ ಒಳಗೊಂಡಿರುತ್ತದೆ. ಈ ಪತ್ರಿಕೆಯು ಅಪ್ಪಟ್ಟಾಲ್ಯು ಛಟಗಳುಳ್ಳದ್ದು. ಇದಕ್ಕೆ ಚಂದಾ ವರುಷಕ್ಕೆ ಒಂದು ರೂಪಾಯಿ ಎಂಟಾಣೆ. ವಿದ್ಯಾರ್ಥಿನಿಯರಿಗೆ ಒಂದು ರೂಪಾಯಿ ಮಾತ್ರ. ಟಪಾಲ್ ಹಾಸಲು ಮಾಫಿ. ಬೇಕಾದವರು ಕೆಳಗಿನ ವಿಳಾಸದಾರರಿಂದ ತರಿಸಿಕೊಳ್ಳಬಹುದು.

ವಿಳಾಸ:—ಮ್ಯಾನೇಜರ್, "ಸಾಧ್ವಿ," ಮೈಸೂರು.

ಇಲ್ಲಿ ನೋಡಿ!

65 12

ತುಮಕೂರು ವಿಕ್ಷರ್ ಇಲಾಖೆಯಲ್ಲಿ ಯುರೋಪಿಯನ್ ಮೇಲ್ವಿಚಾರಣೆಯಿಂದ ಉತ್ತಮ ತರಹದ ಹಾಸನದ ಟೋಪಿಗಳು ಅತಿ ಶ್ರೇಷ್ಠವಾದ ಉಲ್ ದಾರದಿಂದ ತಯಾರಾಗುತ್ತವೆ.

ಕ್ರಯ.—೧೨ ಆಣೆ ಮೊದಲ್ಗೊಂಡು ೧ ರೂ ೨೦ ಆಣೆಯ ವರಿಗೆ

೧ ಡಜನ್ ಟೋಪಿಗಳನ್ನು ತೆಗೆದುಕೊಳ್ಳುವವರಿಗೆ ಶೇಕಡ ೫ ರಂತೆ ಡಿಸ್ಕೌಂಟ್ ಕೊಡಲ್ಪಡುವದು.

ನಮ್ಮ ವಿಳಾಸ:—ಮ್ಯಾನೇಜರ್,

ಹಾಸನದ ಟೋಪಿ ಕಾರ್ಖಾನೆ, ವಿಕ್ಷರ್ ಇಲಾಖೆ, ತುಮಕೂರು.

ಎಲ್ಲರೂ ಚಂದಾದಾರರಾಗಲು ಇದೇ ಸಮಯ.

ಚಾತುರ್ಯ.

106 1

ಈ ಮಾಸಪತ್ರಿಕೆಯು ಸ್ತ್ರೀಪುರುಷರಿಗೆ ಜ್ಞಾನಮಾರ್ಗವನ್ನು ಬೋಧಿಸುವದಕ್ಕಾಗಿಯೇ ಹೊರಟಿರುತ್ತದೆ. ಇದರಲ್ಲಿ ಹಾಸ್ಯರಸವುಳ್ಳ ಸಂಭಾಷಣೆಗಳೂ, ನಕಲಿಗಳೂ, ವಿನೋದಕಥೆಗಳೂ, ಚಮತ್ಕಾರವುಳ್ಳ ಮಾತುಗಳೂ, ಮತ್ತು ಇವುಗಳಿಗೆಲ್ಲಾ ಅನುಗುಣವಾದ ಚಿತ್ರಗಳೂ ಇರುತ್ತವೆ. ಹಾಸ್ಯರಸಯುಕ್ತವಾಗಿ ನೀತಿಗಳನ್ನು ಬೋಧಿಸುವ ಇಂಥಾ ಪತ್ರಿಕೆಯನ್ನು ಹಿಂದೆ ಯಾರೂ ಪ್ರಕಟಿಸಿರುವದಿಲ್ಲ. ಇದರಲ್ಲಿ ಪ್ರತಿ ತಿಂಗಳಲ್ಲಿಯೂ ೬—೫ ಹೊಸ ಚಿತ್ರಗಳು ಪ್ರಕಟಿಸಲ್ಪಡುತ್ತವೆ. ಈ ದುರ್ಲಭವಾದ ಮನುಷ್ಯಜನ್ಮದಲ್ಲಿಯೇ ಜ್ಞಾನವನ್ನು ಸಂಪಾದಿಸಬೇಕು. ಆದ್ದರಿಂದ ಆಲಸ್ಯಮಾಡದೆ ಚಂದಾದಾರರಾಗಲು ಸಿದ್ಧರಾಗಿ, ಮಾದರಿ ಪತ್ರಿಕೆಯು ಸಿಗಲಾರದು. ಇದರ ವಾರ್ಷಿಕ ಚಂದಾ ಸ್ಥಳದವರಿಗೆ ೮ ಆಣೆ, ಪರಸ್ಥಳದವರಿಗೆ ಅಂಚೆ ವೆಚ್ಚ ಸೇರಿ ೧೧ ಆಣೆ ಮಾತ್ರ.

ವಿಳಾಸ:— ಎಡಿಟರ್, "ಚಾತುರ್ಯ"

ಚಾಮರಾಜಪೇಟೆ, ಬೆಂಗಳೂರು ಸಿಟಿ.

ಸಿವಿಲ್‌ಕೋರ್ಟ್ ನೋಟೀಸು.

105-1

ಸಿವಿಲ್ ಪ್ರಿಸೀಜರ್ ಕೋಡು ೩೦ ನೆ ಸೆಕ್ಷನ್ ಮೇರೆಗೆ ಮೈಸೂರು ಅಡಿಷನಲ್ ಮುನ್ಸಿಫರ ಕೋರ್ಟಿನಲ್ಲಿ ೧೯೦೬—೧೯೦೭ ನೇ ಇಸವಿ ಸಿವಿಲ್ ನಂಬರು ೯೬. ೧೯೦೬—೧೯೦೭ ನೆ ಇಸವಿ ಸಿವಿಲ್ ಅಮಲ್‌ಜಾರಿ ನಂಬರು ೪೯೩.

ವಾದಿ:—ನರಸಿಂಹಾಚಾರ್ಯ.

ಪ್ರತಿವಾದಿಗಳು:—ಅಯ್ಯನಯ್ಯಂಗಾರ್ಯ ವಗೈರೆಯರು.

ಇದರಿಂದ ಸಮಸ್ತ ವೃತ್ತಿವಂತರಿಗೂ ಜನಗಳಿಗೂ ತಿಳಿಯಪಡಿಸುವದೇನೆಂದರೆ:—

ಮೇಲ್ಕಂಡ ಸಿವಿಲ್ ನಂಬರಿನಲ್ಲಿ ಹೊಸೂರು, ಹಳಿಯೂರು ಗ್ರಾಮಗಳ ವಸೂಲಾತಿಗೋಸ್ಕರ ಕೋರ್ಟಿನಿಂದ ಮೈಸೂರಲ್ಲಿರುವ ಅಡ್ವೊಕೇಟ್ ಮೆ॥ ಎಸ್ ರಂಗಸ್ವಾಮಿ ಅಯ್ಯಂಗಾರ್ಯನ್ನು ರಿಸೀವರನ್ನಾಗಿ ನೇಮಕರೂರು ಮಾಡಿ ಇರುವದು. ಸರಿಯಷ್ಟೆ. ಸದರಿಯವರ ಬಾಬತು ಲೆಕ್ಕಗಳನ್ನು ತಸ್ಸಿಯ ಮಾಡುವದಕ್ಕೂ, ಮೇಲ್ಕಂಡ ಗ್ರಾಮಗಳಲ್ಲಿ ವಸೂಲಾದ ಮೊಬಲಗಿನಲ್ಲಿ ಜಮಾಖರ್ಚು ಲೆಕ್ಕಾಚಾರದ ಪ್ರಕಾರ ಬಾಕಿ ಉಳಿದ ಮೊಬಲಗನ್ನು ವೃತ್ತಿವಂತರಿಗೆ ದಾನಮಾಡುವ ಮೇರೆ ಹಂಚಲೂ ೧೯೦೭ ನೇ ಇಸವಿ ನವಂಬರು ೩ ನೇ ಭಾನುವಾರ ಹಿಯರಿಂಗು ಇಟ್ಟಿರುತ್ತೆ. ಸದರಿ ಹಿಯರಿಂಗಿನ ದಿವಸ ಏವಿ ೧೧ ಗಂಟೆಗೆ ಸರಿಯಾಗಿ ಪಕ್ಕಾ ಬಾಬ್ತಕೆ ಇರತಕ್ಕ ಮೇಲ್ಕಂಡ ಗ್ರಾಮಗಳ ಎಲ್ಲಾ ವೃತ್ತಿವಂತರೇ ಆಗಲಿ, ಯಾ ಅವರ ಕಡೆ ಲಾಯರೇ ಆಗಲಿ ಕೋರ್ಟು ರೂಬರೂಬು ಹಾಜರಾಗಿ ತಿಳಿಯಪಡಿಸತಕ್ಕದ್ದು.

(ಬೈ ಆರ್ಡರ.)

ಎಸ್ ಓ ನಾಯುಡು

ಹೆಡ್ ಮುನ್ಷಿ.

ನೆತ್ತಿಹತ್ತಿದ ಶೀತದಿಂದ ಮೂಗಿನಲ್ಲಿ ಹರಿಯುವದು. ಇದೇ ಪ್ರಪಂಚದಲ್ಲೆಲ್ಲಾ ರೋಗಕ್ಕೆ ಮೂಲಕಾರಣವು. ಇದಕ್ಕೆ ಪೆ-ರೂ-ನಾ ಸರ್ವಶ್ರೇಷ್ಠವಾದ ಪರಿಹಾರ.

38-25

ಉಷ್ಣದ ನೀರು ಹರಿಯುವ ನೆತ್ತಿ ಹತ್ತಿದ ಶೀತ ನೆಗಡಿ.

ಇದು ಅನ್ನಕೋಶ, ಮಲಕೋಶ, ದೊಡ್ಡ ಸಣ್ಣ ಕರುಳುಗಳು, ಕುಂಡಿಯ ಕೋಶಗಳು, ಇವೆಲ್ಲಾ ವ್ಯಾಪಿಸಿಯಾಗುತ್ತದೆ.

ಶೀತದ ನೀರು ಹರಿಯುವ ನೆತ್ತಿಹತ್ತಿದ್ದ ಶೀತ ನೆಗಡಿ.

ಇದು ನೆತ್ತಿ, ಗಂಟಲು, ಶ್ವಾಸಕೋಶ, ಶ್ವಾಸನಾಳಗಳು, ಇವಕ್ಕೆಲ್ಲಾ ವ್ಯಾಪಿಸಿಕೊಳ್ಳುತ್ತದೆ.

ನೆತ್ತಿ ಹತ್ತಿದ ಶೀತ ಅಥವಾ ಉಷ್ಣದ ನೆಗಡಿಯಿಂದ ಮೂಗಿನಲ್ಲಿ ನೀರು ಹರಿಯುವುದು ಮಹಾ ಕಠಿಣತರವಾದ ಬಾಧ್ಯವೆಂದು ಪ್ರಪಂಚದಲ್ಲಿ ಸಮಸ್ತ ಜನರಿಗೂ ತಿಳಿದೇ ಇರುತ್ತದೆ. ಅಮೇರಿಕ ಖಂಡಕ್ಕೆ ಸೇರಿದ ಸಂಯುಕ್ತ ಸಂಸ್ಥಾನಗಳೆಂಬ ಒಂದು ರಾಜ್ಯದೊಳಗೇನೇ ಪ್ರತಿ ವರುಷವೂ ಎರಡು ಲಕ್ಷ ಪ್ರಜೆಗಳು ಈ ರೋಗಕ್ಕೆ ಸಿಕ್ಕಿ ಸರಳುತ್ತಾ ಇದ್ದಾರೆ. ಹೀಗಿರುವಲ್ಲಿ ಇತರ ದೇಶಗಳೊಳಗೆ ಈ ರೋಗದಲ್ಲಿ ಬಿದ್ದು ಕಷ್ಟಪಡುವಂಥಾವರ ಸಂಖ್ಯೆಯು ಸರಾಸರಿ ನೋಡಿದರೆ ಅಷ್ಟು ಹೆಚ್ಚಾಗಿಯೇ ಇರಬೇಕೆಂದು ಹೇಳಲು ಸಂದೇಹವಿಲ್ಲ.

ಈ ನೆತ್ತಿ ಹಿಡಿದ ಶೀತ ಅಥವಾ ಉಷ್ಣದ ನೀರು ಸುರಿಯುವಂಥಾ ರೋಗಕ್ಕೆ ಪೆ-ರೂ-ನಾ ಎಂಬೀ ಔಷಧವೇ ಸರ್ವಶ್ರೇಷ್ಠವಾದ್ದೆಂದೂ ಇತರ ಔಷಧಗಳಿಗಿಂತ ಮೊದಲನೆಯ ಸ್ಥಾನವನ್ನು ಪಡೆದಿರುವಂಥಾದ್ದೆಂದೂ ಅನೇಕ ವರುಷಗಳಿಂದಲೂ ಅನುಭವಕ್ಕೆ ಬಂದಿರುತ್ತದೆ.

ಪೆ-ರೂ-ನಾ ಎಂಬೀ ಔಷಧವು ಪ್ರಪಂಚದ ಪಶ್ಚಿಮಾರ್ಧ ಮತ್ತು ಪೂರ್ವಾರ್ಧಗೋಳಗಳಲ್ಲೆಲ್ಲಾ ಬಹು ಉತ್ತಮವಾದದ್ದೆಂದು ಪ್ರಖ್ಯಾತಿಯನ್ನು ಪಡೆದಿರುತ್ತದೆ.

ಈ ಔಷಧ ಸಿಕ್ಕುವ ಸ್ಥಳಗಳು:—

(೧) ಹಿಚ್‌ಕಾಕ್ ಅಂಡ್ ಸನ್ಸ್, ಬೆಂಗಳೂರು.

(೨) ಇಂಗ್ಲಿಷ್ ಡ್ರಗ್ ಕಂಪನಿ, ೯ನೆ ಮಿಂಟ್ ಬೀದಿ, ಮದರಾಸ್.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

೬—೯—೧೯೦೭ ರಿಂದ ೧೩—೯—೧೯೦೭ ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	43	31	0	0
ಮೈಸೂರು ,,	85	37	0	0
ಬೆಂಗಳೂರು ಡಿಸ್ಟ್ರಿಕ್ಟ್	278	189	0	0
ಮೈಸೂರು ,,	200	161	3	1
ಕೋಲಾರ್ ,,	17	17	0	0
ಕೋಲಾರ್ ಚಿನ್ನದ ಗಣಿಗಳು	21	14	0	0
ತುಮಕೂರು ಡಿಸ್ಟ್ರಿಕ್ಟ್	6	4	58	31
ಹಾಸನ ,,	12	6	0	0
ಚಿತ್ರದುರ್ಗ ,,	0	0	0	0
ಕಡೂರ್ ,,	64	47	0	0
ಶಿವಮೊಗ್ಗ ,,	[illegible]	71	0	0
ಜುಮ್ಲಾ	817	578	61	31

ಶಾಲಿವಾಹನ ಶಕ ವರುಷ ೧೮೨೯ ನೇ ಪ್ಲವಂಗನಾಮ ಸಂವತ್ಸರದ ಭಾದ್ರಪದ ಬಹುಳ ಪಂಚಮಿ ಗುರುವಾರದಿಂದ ಭಾದ್ರಪದ ಬಹುಳ ದಶಮಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೭ ನೇ ಇಸವಿ ಸೆಪ್ಟಂಬರ್ ಮತ್ತು ಅಕ್ಟೋಬರ್

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಕನ್ಯಾ ಮಾಸ
26	ಗುರು	ಪಂಚಮಿ	47 6	ಕೃ	45 38	10
27	ಶುಕ್ರ ¶	ಷಷ್ಠಿ	50 0	ರೋ	53 3	11
28	ಶನಿ ,,	ಸಪ್ತಮಿ	53 50	ಮೃ	55 28	12
29	ರವಿ †	ಅಷ್ಟಮಿ	55 28	ಆ	60 0	13
30	ಚಂದ್ರ ,,	ನವಮಿ	60-0	ಆ	1-26	14
1	ಕುಜ ,,	ನವಮಿ	3-33	ಪು	10-46	15
2	ಬುಧ	ದಶಮಿ	8-41	ಪು	17-17	16

¶ ಗಜಗೌರೀವ್ರತ, ಬ್ರಹ್ಮಚಾರಿಣಾಂ ಮಹಾಲಯ
,, ಮಹಾವ್ಯತೀಪಾತ
† ಮಧ್ಯಾಷ್ಟಮಿ
ಅವಿಧವಾನವಮಿ, ಹರಿಹರವ್ರತ
,, ಧರ್ಮದಾಹಾಲಯ

ಪೇಟೇ ಧಾರಣೆ.

ದಿನಸಿ.		ಮೈಸೂರು.	ಬೆಂಗಳೂರು
ಕಪ್ಪು ಅಕ್ಕಿ, ಪಲ್ಲಾ ೧ಕ್ಕೆ	ರೂ	೧೭-೪-೦	೧೭-೮-೦
ಕಂಬಾರಿ ಅಕ್ಕಿ ಅವಲ್	..	೧೭-೨-೦	೧೭-೭-೦
,, ದಪ್ಪಂ	..	೧೨-೮-೦	೧೨-೮-೦
ಜಾಪಾನ್ಯ ಅಕ್ಕಿ	..	೧೨-೦-೦	೧೪-೦-೦
ಸಣ್ಣಕ್ಕಿ ಅವಲ್	..	೧೫-೮-೦	೧೫-೮-೦
,, ದಪ್ಪಂ	..	೧೪-೮-೦	೧೪-೭-೦
ತೊಗರೀ ಬೇಳೆ ಪಲ್ಲಾ ೧ಕ್ಕೆ	..	೧೪-೦-೦	೧೪-೦-೦
,, ದುಬ್ಬಂ	..	೧೭-೦-೦	೧೭-೦-೦
ಕಡ್ಲೆ ಬೇಳೆ ಪಲ್ಲಾ ೧ಕ್ಕೆ	..	೬-೮-೦	೬-೮-೦
ಕಾರಾಗಿ	..	೩-೨-೦	೩-೩-೦
ಜೋಳ	..	೩-೪-೦	೩-೪-೦
ಹುಲಸಂದೆ ಪಲ್ಲಾ ೧ಕ್ಕೆ	..	೧೨-೮-೦	೯-೮-೦
ಬಿಳೀ ಅವರೆ	..	೮-೧೪-೦	೯-೬-೦
ಹೆಸರು	..	೧೨-೧-೦	೧೧-೮-೦
ಉದ್ದು	..	೧೨-೮-೧	೧೦-೦-೦
ಕಡಲೆ	..	೧೨-೮-೦	೧೧-೮-೦
ಎಳ್ಳು ಸೆ ೧೨ಕ್ಕೆ	..	೧೯-೮-೦	೧೯-೦-೦
ಹುರುಳಿ	..	೬-೧೨-೦	೬-೦-೦
ಹರಳು ೧೬೭ ಸೇರಿಗೆ	..	೧೪-೦-೦	೧೨-೦-೦
ಸೀಗೇಕಾಯಿ ಮಣ ೧ಕ್ಕೆ	..	೨-೬-೦	೨-೦-೦
ಮೆಣಸಿನಕಾಯಿ	..	೨-೮-೦	೨-೪-೦
,, ದುಬ್ಬಂ	..	೨-೪-೦	೨-೦-೦
ಬೆಲ್ಲ ದೊಡ್ಡ ಅಚ್ಚು	..	೪-೮-೦	೫೧-೦-೦
ಒಳ್ಳೆಣ್ಣೆ ಮಣ ೧ಕ್ಕೆ	..	೬-೦-೦	೫-೦-೦
ಹರಳೆಣ್ಣೆ ,,	..	೫-೧೨-೦	೫-೦-೦
ಕೊತ್ತುಂಬರಿ ಪಲ್ಲಾ ೧ಕ್ಕೆ	..	೫-೧೨-೦	೬-೮-೦
ಉಪ್ಪು ,,	..	೫-೮-೦	೫-೦-೦
ಹುಣಸೇ ಹಣ್ಣು	..	೧-೬-೦	೧-೬-೦
,, ಹಳೇದು	..	೦-೧೪-೦	೧-೪-೦
ತುಪ್ಪ ಮಣ ೧ಕ್ಕೆ	..	೧೬-೮-೦	೧೫-೦-೦
ಸೀಮೆಯೆಣ್ಣೆ ಪೆಟ್ಟಿಗೆ ೧ಕ್ಕೆ	..	೪-೧೫-೦	೪-೦-೦
ತೆಂಗಿನಕಾಯಿ ೧೦೦ಕ್ಕೆ	..	೬-೮-೦	೬-೮
ಅಳಲೇಕಾಯಿ ಮಣ ೧ಕ್ಕೆ	..	೧-೦-೦	೧-೬-೦
ಅಂಟ್ವಾಳದ ಕಾಯಿ ಮಣ ೧ಕ್ಕೆ	..	೦-೧೨-೦	೦-೧೦-೦
ಚಿನ್ನ (ಪೌನ್) ಕೆಂಪು	..	೧೫-೬-೦	೧೫-೬-೦
,, ,, ಹಸಿಮೆ	..	೧೫-೧೦-೦	೧೫-೧೦-೦
,, ,, ಗಟ್ಟಿ ತೊಲ ೧ಕ್ಕೆ	..	೨೭-೧೨-೦	೨೪-೭-೦
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ	..	೮೫-೦-೦	೮೪-೦-೦

Printed and Published by the Rev E W THOMPSON, M A, Proprietor and Manager, Wesleyan Mission Press, Mysore 26/9/1907.

REGISTERED
M. 20

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೧. ಮೈಸೂರು—ಸನ್ ೧೯೦೭ ನೇ ಇಸವಿ ಅಕ್ಟೋಬರ್ ತಾರೀಖು ೩ ನೇ ಗುರುವಾರ. ಸಂಚಿಕೆ ೧೮

WILLIAM & CO., BOMBAY.

ವಿಲಿಯಂ ಮತ್ತು ಕಂಪನಿ, ಫೋರ್ಟು, ಮುಂಬಯಿ.

ಗಜಕರ್ಣದ ಮುಲಾಮು.

27 82

ಇದನ್ನು ಹಾಗಿಸುವದರಿಂದ ಎಲ್ಲಾ ತರದ ಕಜ್ಜಿಯೂ ವಾಸಿಯಾಗುತ್ತದೆ. ಮೂರು ಸಾರಿ ಹಾಗಿಸುವದರೊಳಗೆ ಗಜಕರ್ಣವು ಹೋಗುವದು. ಇದನ್ನು ಹಚ್ಚಿದಲ್ಲಿ ಉರಿಯು ಬರುವದಿಲ್ಲ. ಮತ್ತು ಚರ್ಮ ಕಪ್ಪಾಗುವದಿಲ್ಲ. ಒಂದು ಸಾರಿ ಪರೀಕ್ಷಿಸಿ ನೋಡಿರಿ. ಗುಣ ಕಂಡುಬರುವದಿಲ್ಲವಾದರೆ ಹಣ ಹಿಂತಿರುಗಿ ಕೊಡಲ್ಪಡುವದು ಡಬ್ಬಿ ೧ಕ್ಕೆ ಕಿಮ್ಮತ್ತು ೦-೬-೦. ವಿ. ಪಿ. ೦-೧೦-೦ ತರಿಸಿಕೊಳ್ಳಿರಿ! ತ್ವರೆಮಾಡಿರಿ!!

ವಜ್ರಗುಟಿಕ ೧-೦-೦. ಸುಂದರೀ ತೈಲ ೦-೮-೦ ದಂತಮಂಜನ ೦ ೩-೦ ಶಕ್ತಿಹಾರಿ ೦-೪-೦ ಕೇಶವರ್ಧಿನೀ ತೈಲ ೧-೦-೦ ಜೀರ್ಣರಸಾಯನ ೦ ೬-೦. ಬಜ್ಜಿ ಮುಲಾಮು ೦-೩-೦ ಈ ಕಂಪನಿಯ ಎಲ್ಲ ಸಮಾನೆಯ ಔಷಧಗಳನ್ನು ಸ್ವತಃ ತಯಾರಿಸುವದರಿಂದ ಕ್ಯಾಟಲಾಗು ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು.

ಅಮೃತಾಂಜನ

ಬಾಟ್ಲಿ ಒಂದಕ್ಕೆ ಕಿಮ್ಮತು ೮ ಆಣೆ. ವಿ. ಪಿ. ೧೨ ಆಣೆ.

ಅಮೃತಾಂಜನ—ಸುಖಾಂಜನ.
ಅಮೃತಾಂಜನ—ದಿವ್ಯಾಂಜನ.
ಅಮೃತಾಂಜನ—ಸಂಜೀವನ.
ಅಮೃತಾಂಜನ—ಪರಮಾಂಜನ

ವಾತ, ಎದೆನೋವು, ಗಂಟುನೋವು, ಸಂಧಿವಾತ ತಲೆನೋವು, ಮೂಲವ್ಯಾಧಿ, ಈ ಎಲ್ಲಾ ತರದ ರೋಗಕ್ಕೆ ಈ ಅಮೃತಾಂಜನವು ದಿವ್ಯ ಔಷಧವಾಗಿರುತ್ತದೆ.

ಅಮೃತಾಂಜನ ೧೬ ವರ್ಷಗಳಿಂದ ಪ್ರಸಿದ್ಧಿ

ಅಮೃತಾಂಜನ—ಶೀತಭಂಜನಿ.
ಅಮೃತಾಂಜನ—ತಕ್ಷಣಸಹಾರಿಣಿ.
ಅಮೃತಾಂಜನ—ಅಪೂರ್ವದರ್ಜನಿ.
ಅಮೃತಾಂಜನ—ಭಂಜನವಿಮರ್ಧಿನಿ

ಇದರಿಂದ ಗುಣ ಕಂಡುಬರುವದಿಲ್ಲವಾದರೆ ಹಣ ಹಿಂತಿರಿಗಿ ಕೊಡಲ್ಪಡುವದು ಜಳಂ ಮತ್ತು ಘಾಯ, ಅರ್ಧಾಂಗವಾಯು, ಈ ರೋಗಕ್ಕೆ ಇದು ಸಂಜೀವನವಾಗಿರುತ್ತದೆ. ತರಿಸಿಕೊಳ್ಳಿರಿ! ಪರೀಕ್ಷಿಸಿರಿ!!

ವಿಲಿಯಂ ಮತ್ತು ಕಂಪನಿ, ೧೬ ಓಕ್ ಲೇನ್, ಫೋರ್ಟು, ಮುಂಬಯಿ.
ಟೆಲಿಗ್ರಾಫು ಅಡ್ರೆಸು; "ಅಮೃತಾಂಜನ," ಮುಂಬಯಿ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು

20-31

೧. ಲೋಕಾಮಯಹರ ಕಸ್ತೂರೀ ಮಾತ್ರೆ.—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ.

ಚಳಿಜ್ವರ, ಜ್ವರ, ಹೊಟ್ಟೆಶೂಲೆ, ಸಂದುಗಳ ನೋವು, ಮೈ ಕೈಕಾಲು ಕೊಡತ (ಭಾರ), ಮೈನವೆ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅಸೋಚಕ, ಇನ್ನೂ ಅನೇಕರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ.

ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿದ್ದು ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಬಾಯಿಗೂ ದಾರಿಕೊಡದೆ, ನೀರು ಹವಾಗಳ ಬದಲಾವಣೆಯನ್ನು ಸಹಿಸಿ, ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಸುಸ್ತು, ಜ್ವರ, ಸನ್ನಿಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ.

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ರೋಗಕ್ಕೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.

ಅನುಪಾನಪತ್ರ ಔಷಧದ ಸಂಗಡಲೇ ಇರುತ್ತದೆ

೨೦ ಮಾತ್ರೆಯುಳ್ಳ ಕಾಪ್ಪಿಗೆ ೪ ಆಣೆ; ೫ ಕಾಪ್ಪಿಗೆ ೧ ರೂಪಾಯಿ. ೧ ರಿಂದ ೧೨ ಕಾಪ್ಪಿ ವರೆಗೆ ಪೋಸ್ಟೇಜು ೪ ಆಣೆ

ವಿಳಾಸ:—ಪಾಳ್ಯದ ವೆಂಕಟಾಚಲ ಪಂಡಿತ,
ಎಸ್. ಎಸ್. ಆರ್. ವೈದ್ಯಶಾಲಾ,
ಲಕ್ಷ್ಮೀವಿಲಾಸ ರೋಡ್, ಮೈಸೂರು

"ಲಾಗೆಜೆಟ್" ಎಂಬ ಮಾಸಪತ್ರಿಕೆಯು.

H.1.3

ಸಿವಿಲ್, ಕ್ರಿಮಿನಲ್, ರೆವಿನ್ಯೂ, ಲಾಪಾಯಿಂಟುಗಳನ್ನು ತಿಳಿಯಬೇಕಾದರೆ "ಲಾಗೆಜೆಟ್" ಮಾಸಪತ್ರಿಕೆಯನ್ನು ಕೂಡಲೇ ತರಿಸಿಕೊಳ್ಳಿ. ವಾರ್ಷಿಕ ಚಂದಾ ಟಪ್ಪಾಲ್ ಹಾಸಲು ಸಹಿತ ರೂ ೧-೮-೦ ವಿಳಾಸ —
ಬಿ. ನರಸಿಂಗರಾವ್, ಎಡಿಟರ್, ಲಾಗೆಜೆಟ್, ಬೆಂಗಳೂರು

ಕಾರ್ಡು ಸೈಜು ೪¼ × ೩¼.

ಫೋಟೋ ತೆಗೆಯುವ

ಫೋಟೋ ಕ್ಯಾಮೆರಾ.

84 7

ಬೆಲೆ ಫಕ್ತ ಮೂರು ರೂಪಾಯಿ.

ಇದರಿಂದ ಬೇಕಾದ ಮನುಷ್ಯನ ಫೋಟೋ ಅವನಿಗೆ ತಿಳಿಯದಂತೆ ತೆಗೆಯಲಿಕ್ಕೆ ಬರುತ್ತದೆ ವೇಗದಿಂದ ಓಡುವ ಗಾಡಿಯು ಮತ್ತು ಹಾರುವ ಪಕ್ಷಿಯ ಫೋಟೋ ಸಹ ತೆಗೆಯಬಹುದು. ಇದರಲ್ಲಿ ಕಲಿಯತಕ್ಕದ್ದೇನೂ ಇಲ್ಲ. ಈ ಕ್ಯಾಮರಾದ ಮಾಹಿತಿಯನ್ನು ಕೊಳ್ಳುವವರಿಗೆ ನಾವು ಕಾಗದಲ್ಲಿಯೇ ಮಾಡಿಕೊಡುವೆವು. ಎಷ್ಟೋ ಕಡೆಗೆ ಇದಕ್ಕೆ ೧೦ ರಿಂದ ೧೫ ರೂ. ಬೆಲೆ ಬೀಳುತ್ತದೆ. ಆದರೆ ಇದರ ಖರೇ ಕಿಮ್ಮತು ೩ ರೂಪಾಯಿ ಮಾತ್ರ ಇರುವದು. ಟಪ್ಪಾಲ್ ಖರ್ಚು ೯ ಆಣೆ.

ಭೋಟಾಲಾಲ ಛಗನಲಾಲ ಮಹಾಜನ, ಠಾಕೂರದ್ವಾರ ರೋಡ, ಪೋಸ್ಟ್ ಕಾಲಬಾದೇವಿ, ಮುಂಬಯಿ.

ನಿಮಗೆ ನೋವು ಇದೆಯೋ?

58-19

ಹಾಗಾದರೆ "ಕ್ಲೆಮೆಂಟ್ ಯವರ ಮ್ಯಾಜಿಕ್ ಬಾಂ" ನ್ನು ಏಕೆ ಉಪಯೋಗಿಸಬಾರದು? ಆಶ್ಚರ್ಯಕರವಾದ ಬಾಧಾಶಮನಕಾರಿಯು! ಈಗಿನ ಕಾಲಮಾನದಲ್ಲಿ ಕಂಡು ಹಿಡಿದ ದೊಡ್ಡ ನೂತನವು!

ಈ ಬಾಹ್ಯ ಔಷಧವನ್ನು ಮೆಟ್ಟಮೊದಲು ತೊಡೆಯುತ್ತಲೇ ಕೆಲವು ನಿಮಿಷಗಳೊಳಗಾಗಿ ನರ ಮತ್ತು ಮಾಂಸ ಸಂಬಂಧವಾದ ಚಳುಕು ನೋವು, ಕೀಲುಗಳ ಬಾಧೆ, ಕಿಬ್ಬೊಟ್ಟೆ ನೋವು, ಬೆನ್ನು ಳಿಯುವದು, ತಲೆನೋವು, ಕೆಮ್ಮು, ಕೀಲುಗಳು ಕತ್ತರಿಸುವದು, ಕೊರಳು ಊತ, ಕೈಕಾಲು ಒಡೆತ ಇವುಗಳನ್ನೆಲ್ಲಾ ವಿದ್ಯುಚ್ಛಕ್ತಿಯಂತೆ ಗುಣಪಡಿಸುವದು. ಈ ಔಷಧವು ಆಶ್ಚರ್ಯಕರವಾಗಿ ಗುಣಪಡಿಸುವದರಿಂದ ಎಲ್ಲರಲ್ಲಿಯೂ ಪ್ರಸರಿಸುತ್ತಾ ಬರುವದು ಇತರ ಔಷಧಿಗಳು ಗುಣಪಡಿಸದೆ ಹೋದಾಗ ಡಾಕ್ಟರ್ ಫೀಜನ್ನು ಕಡಿಮೆಮಾಡಿ. ಇದು ನಿಸ್ಸಂದೇಹವಾಗಿಯೂ ಗುಣಪಡಿಸುವದು.

ಕ್ರಯ:—೧ ಬಾಟ್ಲಿಗೆ ೧೨ ಆಣೆ, ಪೋಸ್ಟೇಜ್ ೪ ಆಣೆ ೩ ಬಾಟ್ಲಿಗೆ ಅಂಚೆವೆಚ್ಚ ಸೇರಿ ರೂ. ೨—೪ ಆಣೆ. ಎಲ್ಲಾ ಕೆಮಿಸ್ಟ್ ಷಾಪುಗಳಲ್ಲಿ ದೊರೆಯುವದು.

ನಮ್ಮ ವಿಳಾಸ:—ಎಫ್. ಡಬ್ಲಿಯು. ಆರ್ಕ್,
ಸಿಮೆಟ್ರಿ ರೋಡ್, ವೇಪೇರಿ, ಮದರಾಸ್.

ಜ್ವರಹರಿ.

74-10



ಇದು ಸಾಧಾರಣ ಜ್ವರ, ಹಳೇಜ್ವರ, ಮರುಜ್ವರ, ಪಿತ್ಥಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್ ಟಿ. ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಔನ್ಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವ ದರಿಂದ ದಯವಿಟ್ಟು ಇನ್ನೊಂದು ೨೦ ಔನ್ಸಿನ ಸೀಸೆಯನ್ನು ವಿ. ಪಿ. ಪಿ ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದಾರೆ

ಕ್ರಯ:—ಸೀಸೆ ೧ ಕ್ಕೆ ೮ ಆಣೆ, ೧ ರೂ.; ೧—೮ ರೂ., ರೂ. ೨—೧೨ ಆ.; ೧೧ ರೂ.; ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು

****

ಓಮಂಕರ್ಪೂರ.

Omum Carpoor

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು— ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಗೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಪೆಪ್ಪರ್ಮಿಂಟ್ ಕರ್ಪೂರವನ್ನು ನಾನೂ ನನ್ನ ಹಜಾರದವರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣಭೇದಿ, ಅಜೀರ್ಣ ರೋಗಿಷ್ಠರಿಗೆ ಕೊಡುತ್ತೇವೆ ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂತ ಬರೆದಾರೆ

ಈ ಎರಡು ಔಷಧಗಳೂ ಊರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರ್ರಲ್ಲಿ ವಿಶೇಷ:—
ಹೆನ್ರಿಯವರ ಗ್ರೇಟ್ ಇಂಡಿಯಾ ಔಷಧಗಳ ಕಂಪೆನಿ,
ಸೆಕೆಂಡ್ ಬೀಚ್ ಲೈನ್, ಮದರಾಸ್.

ಇಲ್ಲಿ ನೋಡಿ!

65 18

ಅನುಕೂಲರು ವಿ ಷರ್ ಇಲಾಖೆಯಲ್ಲಿ ಯೂರೋಪಿಯರ್ ವ್ಯಾಪಾರಸ್ಥರಿಂದ ಉತ್ತಮ ತರದ ಹಾಸನದ ಟೋಪಿಗಳು ಅತಿ ಶ್ರೇಷ್ಠವಾದ ಉಲ್ ದಾರದಿಂದ ತಯಾರಾಗುತ್ತವೆ.

ಕ್ರಯ ೧೨ ಆಣೆ ಮೊದಲ್ಗೊಂಡು ೧ ರೂ ೧೨ ಆಣೆಯವರೆಗೆ

೧ ಡಜನ್ ಟೋಪಿಗಳನ್ನು ತೆಗೆದುಕೊಳ್ಳುವವರಿಗೆ ಶೇಕಡ ೫ ರಂತೆ ಡಿಸ್‌ಕೌಂಟ್ ಕೊಡಲ್ಪಡುವದು.

ನಮ್ಮ ವಿಳಾಸ — ಮ್ಯಾನೇಜರ್,

ಹಾಸನದ ಟೋಪಿ ಕಾರ್ಖಾನೆ ಪಿಂಚಣಿ ಇಲಾಖೆ, ಅನುಕೂಲರು.

ಶೀಘ್ರ ನಾಡಿ ' ತಿಲಸ್ಥಮಾಡಿದರೆ ದೊರೆಯುವದಿಲ್ಲ !!

ಬೆಲೆ ಜಾಣ '''

101 2

ಅಮೇರಿಕನ್ ಲೀವರ್ ವಾಚ್.



ಈ ಗಡಿಯಾರದ ಲಕ್ಷಣವನ್ನು ಎಷ್ಟು ಹೊಗಳಿದರೂ ಸಾಲದು ನಮ್ಮ ಅಮೇರಿಕನ್ ಲೀವರ್ ವಾಚುಗಳು ಕಾಲವನ್ನು ಸರಿಯಾಗಿ ತೋರಿಸುವದರಲ್ಲಿ ಬಹು ಪ್ರಬಲವಾದದ್ದು. ಈ ಗಡಿಯಾರಕ್ಕೆ ಸಮಾನವಾದದ್ದು ಇಲ್ಲವೆಂದು ತಿಳಿಯಿರಿ. ಬಡಜನಗಳಿಗೋಸ್ಕರವೇ ತಯಾರಾಗಿ ಹರಿಸಿದ್ದೇವೆ ಇದರ ಹೆಸರು "ಅಮೇರಿಕನ್ ಲೀವರ್ ವಾಚ್" ಅನ್ನುವರು ಇಂಥಾ ಲೀವರ್‌ವಾಚ್ ಇಷ್ಟು ಕಡಿಮೆ ಬೆಲೆಗೆ ಇಂದಿನ ವರೆಗೂ ಎಂದಿಗೂ ಯಾರೂ ಕೊಡಲಿಲ್ಲ. ರಿಪೇರಿ ತೆಗೆಯಬೇಕಾದ ಅವಶ್ಯಕತೆ ಇಲ್ಲ. ಬೇರೆ ಬೇಗನೆ ಕೆಡುವ ಹಾಗಿಲ್ಲ. ಬಹು ಬಲವಾಗಿದೆ ವಿನಾಯಿತಿ ಸ್ಫಟಿಕ (ಮೇಲಿನ ಗಾಜು) ನಿಕ್ಕಲ್ ಕೇಸಿನಿಂದ ಮಾಡಿದ್ದು ಕೆಳಗೆ ಬಿದ್ದರೂ ಕೆಡುವದಿಲ್ಲ ೧ ವರ್ಷ ಗ್ಯಾರಂಟಿ ಕೊಡುವೆವು ವ್ಯಾಪಾರಸ್ಥರಿಗೆ ಇದ ಯೋಗ್ಯವಾದದ್ದು ಇದರ ಕ್ರಯ ಬಹು ಸ್ವಲ್ಪ

ವಿ. ಪಿ. ಚಾರ್ಜ್ ಸೇರಿ ರೂ ೨—೧೨—೦ ಮಾತ್ರವೇ

ಸೂಚನೆ.—ಅಕ್ಟೋಬರ್ ತಿಂಗಳು ಆಖ್ಯರಿನೊಳಗೆ ಮುಂಚಿತವಾಗಿ ಬರೆದು ತರಿಸಿಕೊಳ್ಳಬೇಕು. ಆಲಸ್ಯಮಾಡತಕ್ಕವರಿಗೆ ಸಿಕ್ಕಲಾರದು ನನ್ನ ಮೇಲೆ ಅಪವಾದ ಹೊರಿಸಬಾರದು. ನಮ್ಮ ವಿಳಾಸವನ್ನು ವಿಶದವಾಗಿ ಬರೆಯಬೇಕು.

ಪಿ. ಸಾ—ಟಿ ಸಿ ಕನ್ನಯ್ಯಶೆಟ್ಟಿ ಅಂಡ್ ಸನ್ಸ್, ನಂಬರು ೨೦,

ಸಿಂಗಣ್ಣ ನಬೀದಿ, ಸಾಹುಕಾರ್‌ಪೇಟೆ, ಮದರಾಸು

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ!

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

75 10

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇಳಾದದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯಿತಿಯಿಂದಲೇ ಬರುವದು. (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಸೀದಾ ಬರೆದು ತರಿಸಿಕೊಳ್ಳಿ. ಅಗ್ಗವಾದ ಮತ್ತು ಚನ್ನಾಗಿಲ್ಲದ್ದು ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ.

ಸಾದ, ಕೆಂಪು, ಕಪ್ಪು, ಬಿಳಿ, ಕಾಫಿ ಟೋಪಿಗಳು ೧ ರೂ ೮ ಆ.; ೧ ರೂ ೪ ಆ, ೧ ರೂ ೬ ಆ

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳ್ ೧ ರೂ. ೮ ಆ; ೨ ರೂ.

ದಾರದ ಟೋಪಿಗಳು ೧ ರೂ. ೧೨ ಆ, ೧ ರೂ. ೮ ಆ; ೧ ರೂ. ೬ ಆ.

ಉಣ್ಣೆ ಟೋಪಿಗಳು ೧ ರೂ. ೮ ಆ, ೧ ರೂ. ೬ ಆ.

ಕೂಸುಗಳ ಟೋಪಿ, ಸೂರ್ಯ ಮೇಜೋಡು, ಅರ್ಧ ಮೇಜೋಡು ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ.

CHAMBERLAIN'S COLIC, CHOLERA AND DIARRHOEA REMEDY.

ಚೇಂಬರ್ಲೇನ್ ರವರು ಹೊಟ್ಟೆಶೂಲೆ, ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು.

4 11



ಕೆಳ ಹೊಟ್ಟೆಯ ನೋವು, ಬರೀ ಭೇದಿಯಾಗುವುದು, ಆಮಶಂಕೆ, ವಾಂತಿಭೇದಿ ಉಪದ್ರ, ಕೀಲಿನ ನೋವು, ಹೊಟ್ಟೆಯ ನಾನಾ ತರದ ಶೂಲೆಗಳು—ಈ ರೋಗಗಳನ್ನೆಲ್ಲಾ ನಾಶಮಾಡುತ್ತದೆ ಈ ಪರಮಾಶ್ಚರ್ಯಯುಕ್ತವಾದ ಔಷಧವು ಜನರನ್ನು ಬದುಕಿಸಿರುವಷ್ಟು ಇತರ ನೋವನ್ನೂ ಬಾಧೆಯನ್ನೂ ನಿವಾರಣೆ ಮಾಡಿರುವಷ್ಟು ಪ್ರಪಂಚದಲ್ಲೇ ಇನ್ನಾವ ಔಷಧವೂ ಮಾಡಿರುವದಿಲ್ಲ.

ಜ್ಞಾಪಕದಲ್ಲಿಟ್ಟುಕೊಳ್ಳಿ—ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯೊಳಗಿರುವ ಎಲ್ಲಾ ತರದ ನೋವನ್ನೂ ನಿಲ್ಲಿಸಿಬಿಡುತ್ತದೆ. ಬಹಳ ಕಠಿಣವಾದ ಭೇದಿಯೂ ಕೂಡ ಮೂರೇ ಹೊತ್ತಿನ ಈ ಔಷಧದಿಂದ ನಿಮಿಷ ಬಿಡದೆ ನಿಲ್ಲಿಸುತ್ತದೆ ಖಂಡಿತವಾಗಿ ನಾಶಮಾಡುವುದೇ ಇದರ ಗುಣ.

ಇದು ಮಕ್ಕಳಿಗೆ ಹಿರಿಯರಿಗೂ ತಯಾರಾದ ಔಷಧ

ಇದರಿಂದ ಸ್ವಲ್ಪವೂ ಹಾನಿ ಹುಟ್ಟುವದಿಲ್ಲ.

ಇದು ಎಲ್ಲೆಲ್ಲೂ ಬಿಕರಿಯಾಗುವುದು ಸಣ್ಣ ಸೀಸೆಗೆ ೧ ರೂಪಾಯಿ. ದೊಡ್ಡ ಸೀಸೆಗೆ ೨ ರೂಪಾಯಿ

ಮಕ್ಕಳ ಹಿತಕಾರಿ

ಎಂದು

SCOTT'S EMULSION 31-29

(ಸ್ಕಾಟ್ಸ್ ಇಮಲ್‌ಷನ್)

ಎಂಟೀ ಸೇವನಾ ಔಷಧಕ್ಕೆ ಕೋಟ್ಯಂತರ ತಂದೆತಾಯಿಗಳು ಹೆಸರಿಟ್ಟಿದ್ದಾರೆ. ಯಾಕೆಂದರೆ ಇದು ಮಕ್ಕಳ ಆರೋಗ್ಯವನ್ನು ವೃದ್ಧಿಪಡಿಸಿ ದೇಹವನ್ನು ಪುಷ್ಟಿಯಾಗಿ ಬೆಳೆಸಿರುತ್ತದೆ

ಇದು ತುಂಬಾ ರುಚಿಯಾಗಿರುವುದರಿಂದ ಮಕ್ಕಳು ಬಹು ಸಂತೋಷವಾಗಿ ಸೇವನೆಮಾಡುತ್ತಾರೆ.

ಇದು ಕಾಯಿಲೆ ಮಕ್ಕಳನ್ನು ಆರೋಗ್ಯಮಾಡುವುದು, ಆರೋಗ್ಯವಾದ ಮಕ್ಕಳನ್ನು ಬಲಿಷ್ಟರನ್ನಾಗಿ ಮಾಡುವುದು

ಕೈ ಸೋಕದೆ ತಯಾರಾದದ್ದು.

ಎಲ್ಲಾ ಔಷಧ ವ್ಯಾಪಾರಸ್ಥರಲ್ಲೂ ಬಿಕರಿಯಾಗುತ್ತೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್,

ಈ ಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ.

ಉಪಾಧ್ಯಾಯರೆಲ್ಲರೂ

ಓದತಕ್ಕ ನೋಟೀಸ್.

29 8

ಮೈಸೂರು ಸರ್ಕಾರದ ವಿದ್ಯಾಭ್ಯಾಸದ ಇಲಾಖೆ ಇನ್ಸ್‌ಪೆಕ್ಟರ್ ಜನರಲ್‌ರವರು ಕೆಳಗೆ ಕಂಡ ಪುಸ್ತಕಗಳನ್ನು ಸರ್ಕಾರದ ಸ್ಕೂಲುಗಳಲ್ಲಿಯೂ, ಗ್ರ್ಯಾಂಟ್ ಪಡೆಯತಕ್ಕ ಪಾಠಶಾಲೆಗಳಲ್ಲಿಯೂ ಮತ್ತು ಆಂಗ್ಲೋ ವರ್ನಾಕ್ಯುಲರ್ ಸ್ಕೂಲ್‌ಗಳಲ್ಲಿಯೂ ಮತ್ತೊಂದು ಹುಕುಂ ಕೊಡುವತನಕ ಉಪಯೋಗಿಸಬೇಕೆಂದು ಕಳೆದ ಜೂಲೈ ೨೫ ನೆ ತಾರೀಖಿನ ಮೈಸೂರು ಗೆಜೆಟ್ಟಿನಲ್ಲಿ ಪ್ರಾಯಿಷ್ ಮಾಡಿರುತ್ತಾರೆ.

ಭೂಗೋಳ ಶಾಸ್ತ್ರದ ಮೊದಲನೆಯ ಪುಸ್ತಕ (೧ನೆಯ ೨ನೆಯ ಭಾಗ, ಒಂದೇ ಪುಸ್ತಕ. ಈ ಪುಸ್ತಕದಲ್ಲಿ ನಾಲ್ಕು ಬಣ್ಣದ ನಕ್ಷೆಗಳೂ ಮಕ್ಕಳಿಗೆ ಭೂಗೋಳಶಾಸ್ತ್ರವನ್ನು ವಿಶದವಾಗಿ ಹೇಳಿಕೊಡುವುದಕ್ಕೆ ಸಾಹಿತ್ಯವಾಗಿರುವ ಬೇರೆ ಹನ್ನೆರಡು ಚಿತ್ರಗಳೂ ಇರುತ್ತವೆ). ಎರಡನೇ ಕ್ಲಾಸಿಗೆ ಕ್ರಯ ೪ ಆಣೆ.

ಭೂಗೋಳ ಸಂಗ್ರಹ (ಮ॥ ಟಿ. ಎಂ. ರಾಮಸ್ವಾಮಯ್ಯನವರು ಬರೆದುದು. ಈ ಪುಸ್ತಕವು ಪ್ರಕಟವಾದಂದಿನಿಂದ ಅನೇಕ ಸಹಸ್ರ ಪ್ರತಿಗಳು ಮಾರಾಟವಾಗಿವೆಯೆಂದು ವಾಚಕ ಮಹನೀಯರು ತಿಳಿದಿರಬಹುದು) ಮೂರನೇ ಕ್ಲಾಸಿಗೆ ಕ್ರಯ ೪ ಆಣೆ.

ಮೇಲ್ಕಂಡ ಪುಸ್ತಕಗಳನ್ನು ಉಪಾಧ್ಯಾಯರೆಲ್ಲರೂ ತಡಮಾಡದೆ ಜಾಗ್ರತೆಯಲ್ಲಿ ತರಿಸಿಕೊಳ್ಳತಕ್ಕದ್ದು

ವಿಳಾಸ—ಮ್ಯಾನೇಜರ್,

ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

ವಿಕಟಪ್ರತಾಪ.

ಸಚಿತ್ರವೂ ವಿಚಿತ್ರವೂ ಆದ ಮಾಸಪತ್ರಿಕೆ.

109-1

"ವಿಕಟನ ನಗೆ —ಅಧಿಕಾರಿಗಳ ಚುನ್ನಾಟ, ಚಿಲ್ಲರೆ ನೌಕರರ ಒದ್ದಾಟ, ನಾಟಕ ರಂಗಗಳ ಗಲಾಟೆ, ದಿವಾಳಿ ಕಂಪನಿಗಳ ಪಿಟ್ಟೆಯಾಟ, ಬೋಧಕರ ಬೇಟೆ ಕ್ವಿಂಕೇಟಗಳ ಕಾಟ, ಲಂಚಪ್ರಿಯರ ಮಾಟ,

ಕಳಕ ಪ್ರಿಯರ ಗುದ್ದಾಟ, ಪ್ರತ್ಯರ್ಥಿಗಳ ಕೂಗಾಟ, ಸಮುದ್ಧಾರಿಗಳ ಕೆತ್ತಾಟ, ವಿದ್ಯಾರ್ಥಿಗಳ ನುಗ್ಗಾಟ, ಇವನ್ನು ಕೇಳಿದರೆ— ಬಂಟರ ಲಟ್ಟಾ, ತುಂಟರ ಝೂಟ, ಕಂಟರ ಲಪಟ, ನಂಟರ ಪಸಾಟ"— ಈ ಪರಿ ಕೌಟಗಳಿಂದ ಕೂಡಿರ್ಪುದೇ ನಮ್ಮ ವಿಕಟನ ಆಟ, ಇದೇ ಹೊಸಟಪ್ರಾಯ ಸೊಗಸಿನ ಸಾಸ, ವಿಕಟನನ್ಯಾಸ. ಈ ವಿಕಟಪ್ರತಾಪ ಪತ್ರಿಕೆಯಲ್ಲಿ ನಗದವರನ್ನು ನಗಿಸುವ ಬಹು ವಿನೋದವಾದ ಹಾಸ ಲೇಖನಗಳೂ, ಚಿತ್ರವಿಚಿತ್ರವಾದ ಒಗಟುಗಳೂ, ಲೆಕ್ಕಗಳೂ, ಮಾರ್ಗದಿಂದಲೂ ವಿಶೇಷದಿಂದಲೂ ಕೂಡಿರತಕ್ಕ ಹಾಸ್ಯಭಾವಗರ್ಭಿತ ಚಿತ್ರಗಳೂ ಪ್ರಕಟಿಸಲ್ಪಡುತ್ತವೆ. ಈ ಪತ್ರಿಕೆಯನ್ನು ನೋಡಿ ನಗದವರೇ ಇಲ್ಲ.

ಮಾದರಿ ಪತ್ರಿಕೆಯನ್ನು ಅಪೇಕ್ಷಿಸುವವರು ೨ ಆಣೆಯ ಸ್ಟಾಂಪನ್ನು ರವಾನಿಸಬೇಕು

ವಿಕಟಪ್ರತಾಪದ ಚಂದಾವಿವರ.

ಸ್ಥಳದವರಿಗೆ ವರ್ಷವೊಂದಕ್ಕೆ ರೂ ೦—೧೨—೦

ಮಫಸ್ಸಲ್‌ದವರಿಗೆ . ರೂ ೧—೦—೦

ನಮ್ಮ ವಿಳಾಸ —ಮ್ಯಾನೇಜರ್ ವಿಕಟಪ್ರತಾಪ ಆಫೀಸ್,

೧೭೪, ಅರಳೆಪೇಟೆ, ಬೆಂಗಳೂರು ಸಿಟಿ

ಕಲ್ಕತ್ತೆಯ ಡಾಕ್ಟರುಗಳ ಅಭಿಪ್ರಾಯಗಳು.

93 5

ನಾವು ಸ್ವಾಸ್ಥ್ಯ ಕಾರ್ಯವನ್ನು ನೋಡಲಿಕ್ಕಾಗುವಾಗ, ನಮ್ಮ ಕಿವಿಗಳಿಂದ ಕೇಳುವಾಗ ನಮ್ಮ ಸ್ನೇಹಿತರು ರುಜುಪಡಿಸುವಾಗ ಇದಕ್ಕಿಂತ ಮೇಲಾದ ಸಾಕ್ಷಿ ಯಾವದು?

ಮುಂಬಾಯಿ ಜನರು ಏನು ಹೇಳುತ್ತಾರೆಂಬುದಾಗಲೀ, ಕೊಲಂಬೋ ಜನರ ಅಭಿಪ್ರಾಯವೇನೆಂಬುದಾಗಲೀ ಹೇಳ ಪ್ರಯೋಜನವಿಲ್ಲ. ಕಲ್ಕತ್ತೆಯವರಿಗೆ ಈ ಔಷಧವಿಷಯವಾಗಿ ನಿಜವಾಗಿ ಗೊತ್ತಿರುವಂಥಾ ಸಂಗತಿಯನ್ನೇ ತಿಳಿಸುತ್ತೇವೆ. ನೀವು ನಿಮ್ಮ ನೆರೆಹೊರೆಯವರ ಮಾತನ್ನು ನಂಬುವಿರೋ ಹಾಗಾದ ಪಕ್ಷದಲ್ಲಿ ಬೋಸ್ ಮತ್ತು ಕಂಪನಿ ಔಷಧ ಶಾಲೆಯ ವೈದ್ಯ ಚಿಕಿತ್ಸಕರಾದ ಡಾಕ್ಟರ್ ಪರೇಶನಾಥ ದತ್ತರವರ ಅಭಿಪ್ರಾಯವನ್ನು ಓದಿ ನೋಡಿರಿ.

ಡೋನ್ಸರ ಬ್ಯಾಕ್ ಏಕ್ ಕಿಡ್ನಿ ಪಿಲ್ಸ್) ಬೆನ್ನು ನೋವಿನ ಮೂತ್ರಬಾಧೆಯ ರೋಗಗಳು ಮೂತ್ರಕೋಶದ ಬಾಧೆಗಳಲ್ಲಿ ಮುಖ್ಯವಾಗಿ ಕಲ್ಲು ಬೀಳುವಲ್ಲಿ ಉಪಯೋಗಕರವಾಗಿದೆ.

ಬೆನ್ನುನೋವು ಮೂತ್ರೋದ್ರೇಕ ಮೂತ್ರ ಸಂಬಂಧವಾದ ಇತರ ಬಾಧೆಗಳ ರಾಗೆಂಪೇ ಕಲ್ಲು ಬೀಳುವದು ಸ್ಪಷ್ಟವಾಗಿ ಮೂತ್ರಪಿಂಡಗಳ ಬಲಹೀನತೆಯಿಂದ ಯಾ ಕೆಟ್ಟುಹೋಗುವಿಕೆಯಿಂದ ಆಗಿರುವದು

ಈ ಮಾತ್ರೆಗಳಲ್ಲಿ ಸಸ್ಯದ ಮೂಲ ಪದಾರ್ಥಗಳು ಮಾತ್ರ ಇರುತ್ತವೆ. ಅವು ಬೇಗನೆ ಉಪಶಮನವಾಗುವ ಹಾಗೆ ಸಿಕ್ಕುವಂತೆ ವಿಂಗಡಿಸಿರುವವು, ಅತಿ ಸೂಕ್ಷ್ಮವಾದ ದೇಹಪ್ರಕೃತಿಯುಳ್ಳವರು ಸಹ ಉಪಯೋಗಿಸಬಹುದು. ಇವುಗಳ ಕ್ರಮಬದ್ಧವಾದ ಗುಣದ ಸಿದ್ಧಿಯಲ್ಲಿ ಸಂದೇಹವಿಲ್ಲ ನಂತರ ಇದರಿಂದ ಯಾವ ಬಾಧಕವೂ ಇರದು.

ಎಲ್ಲಾ ಔಷಧ ವರ್ತಕರಿಂದ ಮಾರಲ್ಪಡುತ್ತದೆ ಸೀಸೆ ಒಂದಕ್ಕೆ ರೂ ೨ ಅಥವಾ ೬ ಸೀಸೆಗಳಿಗೆ ರೂ ೧೦—೮—೦ ಅಥವಾ ಮುಂಬಾಯಿಯಲ್ಲಿಯ ಡೋನ್ಸ್ ಔಷಧಗಳ ಕೋಠಿಯಿಂದಾ ಸೀದಾ ತರಿಸಿಕೊಳ್ಳಬಹುದು ಪಿ. ಓ. ಬಾಕ್ಸ್ ನಂ ೨೦, ಮುಂಬಾಯಿ

ವೃತ್ತಾಂತ ಪತ್ರಿಕೆ.

—:o:—

೧೯೦೭ ನೇ ಇಸವಿ ಅಕ್ಟೋಬರ್ ತಾ|| ೩ ನೇ ಗುರುವಾರ

ಇಂಗ್ಲಿಷರಿಗೂ ರಷ್ಯಾದವರಿಗೂ ಕರಾರು ಆಗಿದೆ.

ವಿಲಾಯತಿ ಗವರ್ನಮೆಂಟಿನವರೂ ರಷ್ಯಾ ಗವರ್ನಮೆಂಟಿನವರೂ ಸುಮಾರು ಎರಡು ವಾರಗಳ ಹಿಂದೆ ಒಂದು ಕರಾರನ್ನು ಮಾಡಿಕೊಂಡಿದ್ದಾರೆ. ಇದು ಹಿಂದುಸ್ಥಾನಕ್ಕೆ ತುಂಬಾ ಪ್ರಯೋಜನಕರವಾಗಿರೋಣದರಿಂದ ಈ ರಾಷ್ಟ್ರದವರು ಇದರ ವಿಚಾರವನ್ನು ತಿಳಿದುಕೊಳ್ಳಬೇಕಾಗಿರುವುದು. ಸುಮಾರು ಐವತ್ತು ವರುಷಗಳಿಂದಲೂ ರಷ್ಯಾದವರು ಹಿಂದುಸ್ಥಾನದ ಮೇಲೆ ದಂಡೆತ್ತಿ ಬರುತ್ತಾರೆಂತಲೂ, ಅವರಿಗೂ ಇಂಗ್ಲಿಷರಿಗೂ ಯುದ್ಧಗಳು ನಡೆಯುವುವೆಂತಲೂ ವರ್ತಮಾನವಿದ್ದೇ ಇತ್ತು. ಅವರ ದಂಡನ್ನು ತಡೆಯುವುದಕ್ಕಾಗಿ ಇಂಡಿಯಾ ಗವರ್ನಮೆಂಟಿನವರು ವಿಶೇಷ ದ್ರವ್ಯವನ್ನು ಖರ್ಚುಮಾಡಿ ಸೈನ್ಯದ ಇಲಾಖೆಯನ್ನು ಬಲಪಡಿಸಿಕೊಳ್ಳುತ್ತಾ ಬಂದರು. ಹಿಂದುಸ್ಥಾನದ ವಾಯುವ್ಯ ಪ್ರಾಂತ್ಯದ ಸರಹದ್ದಿನಲ್ಲಿ ಉದ್ದಕ್ಕೂ ಅಡ್ಡಲಾಗಿ ಕೋಟೆ ಕೊತ್ತಲಗಳನ್ನು ಕಟ್ಟಿದ್ದಲ್ಲದೆ ಸೈನ್ಯದ ವಿಶೇಷ ಭಾಗವನ್ನು ಪಂಜಾಬಿನ ಮತ್ತು ಸಿಂಧುದೇಶದ ಠಾಣ್ಯಗಳಲ್ಲಿ ಇಟ್ಟರು.

ಅತ್ತಲಾಗಿ ರಷ್ಯಾದವರು ಪರ್ಷಿಯಾ ಮತ್ತು ಅಫ್ಘಾನಿಸ್ಥಾನಗಳ ಉತ್ತರ ಭಾಗಗಳಿಗೆ ಬಂದು ಕ್ರಮೇಣ ಆ ಭಾಗಗಳನ್ನು ಆಕ್ರಮಿಸಿಕೊಂಡಿದ್ದಾರೆ. ಈಗ ಆ ಎರಡು ರಾಜ್ಯಗಳ ಉತ್ತರ ಗಡಿಗಳ ತನಕ ರಷ್ಯಾ ರಾಜ್ಯವು ವಿಸ್ತರಿಸಿಕೊಂಡಿರುವುದು. ಆದಕಾರಣ ರಷ್ಯಾಕ್ಕೂ ಹಿಂದುಸ್ಥಾನಕ್ಕೂ ನಡುವೆ ಪರ್ಷಿಯಾ ಅಫ್ಘಾನಿಸ್ಥಾನ ಎಂಬೀ ಎರಡು ಪ್ರಭುತ್ವಗಳು ಮಾತ್ರ ಉಳಿಕೊಂಡಂತಾಯಿತು.

ಈಗ ನಡೆದಿರುವ ಕರಾರು ಪರ್ಷಿಯಾ, ಅಫ್ಘಾನಿಸ್ಥಾನ, ಟಿಬೆಟ್ ಎಂಬೀ ಮೂರು ರಾಜ್ಯಗಳಿಗೇನೇ ಸಂಬಂಧಪಟ್ಟದ್ದಾಗಿದೆ. ಮೊದಲನೆಯದಾಗಿ ಪರ್ಷಿಯಾ ರಾಜ್ಯದ ಸ್ವತಂತ್ರಾಧಿಕಾರಕ್ಕೆ ಯಾವ ಲೋಪವೂ ಉಂಟಾಗಕೂಡದೆಂದು ಇಂಗ್ಲಿಷ ಮತ್ತು ರಷ್ಯಾ ಗವರ್ನಮೆಂಟಿನವರು ಒಪ್ಪಿಕೊಂಡಿದ್ದಾರೆ. ಪರ್ಷಿಯಾ ರಾಜ್ಯದ ಉತ್ತರ ಭಾಗದಲ್ಲಿ ರಷ್ಯಾದವರು ಬ್ಯಾಂಕುಗಳನ್ನಿಡುವುದು, ರೈಲ್ ಹಾಕುವುದು, ಗಣಿಗಳನ್ನು ತೋಡಿಸುವುದು, ಈ ಮೊದಲಾದ ಕಾರ್ಯಗಳನ್ನು ಮಾಡಿಕೊಳ್ಳುವುದಕ್ಕೆ ಇಂಗ್ಲಿಷ್ ಗವರ್ನಮೆಂಟಿನವರು ಅಡ್ಡಿ ಮಾಡಕೂಡದು. ಆ ರಾಜ್ಯದ ದಕ್ಷಿಣ ಭಾಗಗಳಲ್ಲಿ ಇಂಗ್ಲಿಷರು ಅಂಥಾ ರಿಯಾಯತಿಗಳನ್ನು ಪಡೆದುಕೊಳ್ಳುವ ವಿಷಯದಲ್ಲಿ ರಷ್ಯಾದವರು ಆಕ್ಷೇಪಣೆ ಮಾಡುವುದಿಲ್ಲ. ಎರಡನೆಯದಾಗಿ, ಅಫ್ಘಾನಿಸ್ಥಾನದ ಸ್ವತಂತ್ರಾಧಿಕಾರವನ್ನು ಇಂಗ್ಲಿಷ್ ಮತ್ತು ರಷ್ಯಾ ಗವರ್ನಮೆಂಟಿನವರು ಕಾಪಾಡಬೇಕು. ಇಂಗ್ಲಿಷ್ ಗವರ್ನಮೆಂಟಿನ ರಾಯಭಾರಿ ಮಾತ್ರ ಅಮೀರರ ಆಸ್ಥಾನದಲ್ಲಿ ಇದ್ದುಕೊಂಡು, ರಷ್ಯಾದವರಿಗೆ ವಿರೋಧವಾದಂಥಾ ಯಾವ ಕಾರ್ಯಗಳನ್ನೂ ಅಮೀರರು ನಡಿಸದಂತೆ ನೋಡಿಕೊಳ್ಳುವರು. ರಷ್ಯಾ ವರ್ತಕರು ಇಂಗ್ಲಿಷರ ಸಮ್ಮತಿಯನ್ನು ಪಡೆಯದೆ ಅಫ್ಘಾನಿಸ್ಥಾನದಲ್ಲಿ ಇರಕೂಡದು. ಮೂರನೆಯದಾಗಿ, ಟಿಬೆಟ್ ದೇಶವು ಚೀನಾ ರಾಜ್ಯಕ್ಕೆ ಸೇರಿದ್ದೆಂದು ಇಂಗ್ಲಿಷರೂ ರಷ್ಯಾದವರೂ ಒಪ್ಪಿಕೊಂಡಿದ್ದಾರೆ. ಇವರಲ್ಲಿ ಯಾರೂ ಚೀನಾ ಗವರ್ನಮೆಂಟಿನವರ ಅನುಮತಿ ಇಲ್ಲದೆ ಟಿಬೆಟ್ಟಿನಲ್ಲಿ ಯಾವ ಕಾರ್ಯಗಳನ್ನೂ ನಡಸಕೂಡದು. ರಷ್ಯಾ ಪ್ರಜೆಯಾಗಲಿ, ಇಂಗ್ಲಿಷ್ ಪ್ರಜೆಯಾಗಲಿ ಆ ದೇಶದಲ್ಲಿ ಭೂಸ್ಥಿತಿಯನ್ನು ಸಂಪಾದಿಸಕೂಡದು. ಇಂಗ್ಲಿಷ್ ವರ್ತಕರು ಟಿಬೆಟ್ಟಿನ ಅಧಿಕಾರಿಗಳ ಕೂಡ ವ್ಯವಹರಿಸುವುದಕ್ಕೆ ಅಧಿಕಾರ ಪಡೆದಿದ್ದಾರೆ. ಟಿಬೆಟ್ಟಿನಿಂದ ಇಂಡಿಯಾ ಗವರ್ನಮೆಂಟಿಗೆ ಅವರ ದಂಡಯಾತ್ರೆಯ ಖರ್ಚ ಪಾವತಿ ಆದ ಕೂಡಲೇ ಇಂಗ್ಲಿಷರು ಚುಂಬಿ ಕಣಿವೆಯನ್ನು ಬಿಟ್ಟುಕೊಡುವರು.

ಈ ರೀತಿಯಾದ ಕರಾರಿನಿಂದ ಹಿಂದುಸ್ಥಾನಕ್ಕೆ ಯುದ್ಧ ಸಂಭವವು ತಪ್ಪಿ, ಇಲ್ಲಿನ ಸೈನ್ಯದ ಇಲಾಖೆಯ ಖರ್ಚು ತಕ್ಕಮಟ್ಟಿಗೆ ಕಡಿಮೆಯಾಗಲು ಅವಕಾಶವಾಗಿದೆ.

ಇಂಡಿಯಾದೇಶದ ಮುಂದಿನಸ್ಥಿತಿ.

ಒಂದೆರಡು ವರುಷಗಳಿಂದೀಚೆಗೆ ಹಿಂದೂದೇಶದಲ್ಲಿ ಬಹಳ ಬದಲಾವಣೆಗಳಾಗುತ್ತಿವೆಯೆಂದು ವಾಚಕರಲ್ಲನೇಕರು ತಿಳಿದಿರಬಹುದು. ವಂಗದೇಶದ ವಿಭಜನೆಯಿಂದಾದ ಗಲಾಟೆಗಳೂ ಸ್ವದೇಶೀ ಕಾರ್ಯಗಳಲ್ಲಿ ಜನರು ಉತ್ಸಾಹಿಗಳಾಗಿರುವುದೂ ಸ್ವದೇಶಮತಗಳ ಉಪನ್ಯಾಸ ಸಭೆಗಳೂ ನಮಗೆ ಹೊಸ ಸಂಗತಿಗಳಲ್ಲ. ಆದರೆ ಮತ ವಿಷಯಗಳಲ್ಲಿ ಸ್ವದೇಶಾಭಿಮಾನವನ್ನು ತೋರಿಸುವುದು ಅಪಾಯಕರವೆಂದು ಎಲ್ಲರೂ ತಿಳಿದುಕೊಳ್ಳುವರು. ಯಾಕೆಂದರೆ ಲೋಕದಲ್ಲಿ ಯಾವ ಕಡೆ ಹೋದರೂ ಸತ್ಯವು ಸತ್ಯವೆಂದೇ ಕರೆಯಲ್ಪಡುವದು. ಅಸತ್ಯವು ಅಸತ್ಯವಾಗಿಯೇ ಇರುವದು. ಯಾರಾದರೂ ಯೂರೋಪ್ ದೇಶಕ್ಕೆ ಒಂದು ಸತ್ಯ, ಇಂಡಿಯಾ ದೇಶಕ್ಕೆ ಒಂದು ಸತ್ಯ, ಅಮೇರಿಕಾ ದೇಶಕ್ಕೆ ಮತ್ತೊಂದು ಸತ್ಯ ಹೀಗೆ ಅನೇಕ ತರವಾದ ಸತ್ಯಗಳಿವೆ ಎಂದು ಹೇಳಿದ್ದಿಲ್ಲ. ಸತ್ಯಕ್ಕೆ ಜಗತ್ತೇ ಸ್ವದೇಶವಾಗಿರುವುದು. ಸತ್ಯದ ನೇತ್ರಗಳಿಗೆ ಬಣ್ಣ ಭಾಷೆಗಳ ವ್ಯತ್ಯಾಸ ಕಾಣುವದಿಲ್ಲ. ಎಲ್ಲರೂ ಸಹೋದರರೆಂಬುವದೇ ಸತ್ಯದ ತತ್ವವಾಗಿರುವುದು. ಸತ್ಯವನ್ನನುಸರಿಸಿ ನಡಿಯುವವನೇ ದೇವರಿಗೆ ಪ್ರಿಯನಾಗಿರುವನು. ಇದೂ ಅಲ್ಲದೆ " ಸತ್ಯಂ ಜಯತಿ " ಎಂಬ ಮಾತೆಯು ನಂಬತಕ್ಕದ್ದಾಗಿರುತ್ತದೆ. ಸತ್ಯಕ್ಕೆ ಎಂದಿಗೂ ಸೋಲುಂಟಾಗುವುದಿಲ್ಲ. ಈ ದೇಶದಲ್ಲಿ ಒಂದಕ್ಕೊಂದು ವಿರುದ್ಧವಾಗಿರುವ ಅನೇಕ ಮತತತ್ವಗಳಿವೆ ಎಂದು ಜನರು ಮಾತನಾಡಿಕೊಳ್ಳುತ್ತಾರೆ. ಎಲ್ಲವುಗಳಲ್ಲಿ ಸತ್ಯವಡಗಿದೆ ಎಂದು ಆ ಮತಗಳ ತತ್ವವನ್ನನುಸರಿಸುವರು ಅಭಿಪ್ರಾಯಪಡುವರು. ಎಲ್ಲಾ ಮತಗಳೂ ದೇವರ ಕಡೆಗೇ ತಮ್ಮ ದೃಷ್ಟಿಗಳನ್ನಿಟ್ಟಿವೆಯೆಂತಲೂ, ಅವುಗಳನ್ನು ನಂಬುವವರೆಲ್ಲರೂ ಒಬ್ಬನೇ ದೇವರ ಬಳಿಗೆ ಹೋಗುವರೆಂತಲೂ ಜನರು ಮಾತನಾಡಿಕೊಳ್ಳುವರು.

ಜನರ ಗುರಿಯು ಘನವಾದದ್ದಾಗಿಯೇ ಇರಬಹುದು. ಎಲ್ಲರಲ್ಲಿಯೂ ದೇವರೊಬ್ಬನನ್ನೇ ಕಂಡುಕೊಳ್ಳಬೇಕೆಂಬುವ ಅಭಿಲಾಷೆಯು ಇರಬಹುದು. ಆದರೆ ಅಂಥಾ ಶ್ರೇಷ್ಠವಾದ ಅಭಿಲಾಷೆಯನ್ನು ಹೊಂದುವದಕ್ಕೆ ತಪ್ಪಾದ ಮಾರ್ಗವನ್ನನುಸರಿಸಿದರೆ ಆ ಅಭಿಲಾಷೆಯಿಂದ ಪ್ರಯೋಜನವೇನು. ಶೃಂಗೇರಿಗೆ ಹೋಗಬೇಕೆಂದು ಅಪೇಕ್ಷೆಪಟ್ಟು ನಂಜನಗೂಡು ನೀಲಗಿರಿ ಮಾರ್ಗವನ್ನು ಹಿಡಿದು ಪ್ರಯಾಣ ಮಾಡಿದರೆ ಪ್ರಯೋಜನವೇನು ? ಶೃಂಗೇರಿಗೆ ಹೋಗುವ ಮಾರ್ಗವನ್ನು ಹಿಡಿದು ಹೋದರೆ ಶೃಂಗೇರಿಯನ್ನು ತಲಪಬಹುದು. ಇದೇ ಸೂತ್ರವು ಮತವಿಷಯಗಳಲ್ಲಿ ಕೂಡ ಅನುಸರಣೆಗೆ ಬರುತ್ತದೆ. ದೇವರನ್ನು ಸೇರಬೇಕಾದ ಮಾರ್ಗವು ಪ್ರತ್ಯೇಕವಾಗಿರುತ್ತದೆ. ಆ ಮಾರ್ಗದಿಂದ ಹೋದರೆ ಹೊರತು ಬೇರೆ ಯಾವ ಮಾರ್ಗದಿಂದಲಾದರೂ ಹೋಗುವುದಕ್ಕೆ ಅಸಾಧ್ಯವಾಗುವುದು. ದೇವರ ಗುಣಲಕ್ಷಣಗಳನ್ನು ಆತನ ಮಾರ್ಗವು ತೋರುವಂಥಾದ್ದಾಗಿದೆ. ಆತನು ಪವಿತ್ರನೂ ಪ್ರೀತಿಸ್ವರೂಪನೂ ಎಲ್ಲಾ ತರವಾದ ಪಾಪಗಳಿಗೆ ದೂರವಾಗಿರುವವನೂ ಆಗಿರುತ್ತಾನೆ. ಇಂಥಾ ದೇವರನ್ನು ಆರಾಧಿಸಬೇಕೆಂದು ಅಪೇಕ್ಷಿಸತಕ್ಕ ಮನುಷ್ಯರು ಪವಿತ್ರರಾಗಿಯೂ ಪ್ರೀತಿಯ ಸಾಧಕರಾಗಿಯೂ ಎಲ್ಲಾ ತರವಾದ ಪಾಪಗಳನ್ನು ಹಗೆಮಾಡುವವರಾಗಿಯೂ ಇರಬೇಕಾಗಿದೆ.

ಮನುಷ್ಯನು ಪೂರ್ಣ ಶುದ್ಧನಾದ ನಂತರ ದೇವರನ್ನು ಕಾಣಬೇಕೆಂಬುವ ವಿಧಿಯು ಕಠಿಣವಾಗಿದೆ ಎಂದು ಜನರು ಅಭಿಪ್ರಾಯಪಡಬಹುದು. ಆದರೆ ಹೀಗೆ ಯೋಚಿಸುವದಕ್ಕೆ ಮುಂಚೆ ದೇವರು ನಮ್ಮ ತಂದೆಯಾಗಿದ್ದಾನೆಂಬುವ ಭಾವನೆಯನ್ನು ಎಲ್ಲರೂ ಗ್ರಹಿಸಿಕೊಳ್ಳತಕ್ಕದ್ದಾಗಿದೆ. ಮಗುವು ಸಣ್ಣದಾಗಿರುವಾಗ ಅದು ಮಾಡುವ ತಪ್ಪುಗಳನ್ನು ಅದರ ತಂದೆತಾಯಿಗಳು ನೋಡಿ ಅಲ್ಪ ಶಿಕ್ಷೆಯನ್ನು ಕೊಟ್ಟು ಸರಿಯಾದ ಮಾರ್ಗದಲ್ಲಿ ನಡಿಸುವುದಕ್ಕೆ ಪ್ರಯತ್ನಪಡುವರು. ಅದು ತೊದಲು ನುಡಿಯಿಂದ ಅರ್ಥವಿಲ್ಲದ ಮಾತುಗಳನ್ನಾಡಿದರೆ ಅದರ ಮಾತುಗಳನ್ನು ಕೇಳುವವರೆಲ್ಲರೂ ನಗುವರು. ಅದು ಶಕ್ತಿಯಿಲ್ಲದೆ ಕಷ್ಟಪಡುವ ಸಮಯದಲ್ಲಿ ಅದರ ತಂದೆತಾಯಿಗಳು ಅದರ ಸಹಾಯಕ್ಕೆ ಬೇಗನೆ ಬರುವರು. ಆದರೆ ಅದೇ ಮಗುವು ಬೆಳೆದು ದೊಡ್ಡವನಾದಾಗ ಅವನು ತನ್ನ ವಿಷಯ ಬಹು ಎಚ್ಚರಿಕೆಯಾಗಿರಬೇಕಲ್ಲವೇ ? ಮನೆಯಲ್ಲಿ ಮಾಡುತ್ತಿದ್ದ ತಪ್ಪುಗಳನ್ನು ಹೊರಗೆ ಮಾಡಿದರೆ ಸರ್ಕಾರದವರು ಸಾಧಾರಣವಾಗಿಯೋ ಅಥವಾ ಕಠಿಣವಾಗಿಯೋ ಶಿಕ್ಷಿಸುವರು. ಅರ್ಥವಿಲ್ಲದ ಮಾತುಗಳನ್ನು ಬೇಕಾಬಿಟ್ಟಿಯಾಗಿ ಆಡಿದರೆ ಜನರು ಅವನನ್ನು ಹುಚ್ಚನೆಂದು ಕರೆಯುವರು. ಅವನು ತನ್ನ ಬಾಲ್ಯದಲ್ಲಿ ಧರಿಸಿಕೊಂಡಿದ್ದ ಉಡುಪನ್ನು ತನ್ನ ಯೌವನ ಪ್ರಾಯದಲ್ಲಿ ಧರಿಸಿಕೊಂಡರೆ ಅವನನ್ನು ನೋಡುವವರೆಲ್ಲರೂ ಅಪಹಾಸ್ಯಮಾಡಿ ನಗುವರು. ಆತ್ಮಿಕ ವಿಷಯಗಳಲ್ಲಿಯೂ ಮನುಷ್ಯನು ಅಭಿವೃದ್ಧಿಯನ್ನು ಹೊಂದಬೇಕಾಗಿರುತ್ತದೆ. ಠಕ್ಕರು ಕಾಳಿಕಾದೇವತೆಯ ಹೆಸರಿನ ಮೇಲೆ ಕೊಲೆಯನ್ನೂ ದರೋಡೆಯನ್ನೂ ನಡಿಸಿದರೆ ಅಂಥಾ ಜನರನ್ನು ದೇವಭಕ್ತರೆಂದು ಕರೆಯಬಹುದೋ ? ದೇವರ ಹೆಸರಿನಲ್ಲಿ ಹರಿಕೆಗಳನ್ನು ಕಟ್ಟಿಕೊಂಡು ದೊಡ್ಡದೊಡ್ಡ ತೇರುಗಳ ಚಕ್ರಕ್ಕೆ ಸಿಕ್ಕಿ ಮೃತಪಟ್ಟರೆ ಅಂಥಾ ಜನಗಳ ಹರಿಕೆಗಳನ್ನು ದೇವರು ಮೆಚ್ಚುವನೋ ? ಎಂದಿಗೂ ಮೆಚ್ಚಲಾರನು. ಬುದ್ಧಿಯಿಲ್ಲದೆ ಕೊಲೆಯನ್ನು ನಡಿಸಿದ ಅಪರಾಧಿಯನ್ನು ನ್ಯಾಯಾಧಿಪತಿಯು ನೋಡಿ ಮರುಕಪಡಬಹುದು. ಆದರೆ ಅವನು ಮಾಡಿದ ತಪ್ಪಿಗೆ ಶಿಕ್ಷೆಯನ್ನು ವಿಧಿಸೇ ವಿಧಿಸುವನು. ಪೂರ್ವ ಹಿಂದೂಸ್ಥಾನದ ಕೆಲವು ಭಾಗಗಳಲ್ಲಿ ಒಂದೆರಡು ಪಂಗಡದ ಜನರು ವ್ಯಭಿಚಾರದ ಮೂಲಕ ದೇವರಿಗೆ ಪ್ರಾರ್ಥನೆಗಳನ್ನು ಅರ್ಪಿಸುವರು. ಇಂಥಾ ಪದ್ಧತಿಗಳೆಲ್ಲಾ ಪವಿತ್ರನಾದ ದೇವರಿಗೆ ಅಸಹ್ಯವಾಗಿವೆಯೆಂದು ತಿಳಿಸುವದರಲ್ಲಿ ಅಡ್ಡಿಯೇನಿದೆ.

ವಿದ್ಯಾವಂತರಾದ ಹಿಂದೂ ಜನರು ಇವುಗಳನ್ನೆಲ್ಲಾ ಚೆನ್ನಾಗಿ ತಿಳಿದಿರುವರು. ಕೆಲವರು ತಮ್ಮ ಪೂರ್ವದ ಪದ್ಧತಿಗಳನ್ನು ಜ್ಞಾಪಿಸಿಕೊಂಡು ನಾಚಿಕೊಳ್ಳುವರು. ಮತ್ತೆ ಕೆಲವರು ನವೀನ ಕ್ರೈಸ್ತ ನಾಗರೀಕತೆಗನುಸಾರವಾಗಿ ಆಯಾ ಪದ್ಧತಿಗಳ ಅರ್ಥವನ್ನು ಬದಲಾಯಿಸಿರುವರು. ಆದರೆ ಕ್ಷಯರೋಗದಿಂದ ಪೀಡಿತವಾಗಿರುವ ದೇಹಕ್ಕೆ ಎಂಥಾ ಸೊಗಸಾದ ವಸ್ತ್ರಗಳನ್ನು ಹಾಕಿದರೂ ರೋಗವು ಇದ್ದೇ ಇದ್ದು ಪ್ರಾಣವನ್ನೇ ತೆಗೆದು ಬಿಡುವುದು. ಆಲ್ಮವು ಕಂಡಕೂಡಲೇ ಅದನ್ನು ಸಂಪೂರ್ಣವಾಗಿ ತೊಲಗಿಸುವದೇ ಮನುಷ್ಯನ ಮೊದಲನೆ ಕರ್ತವ್ಯವಾಗಿರಬೇಕು. ಕ್ರೈಸ್ತ ಮತವು ಹಿಂದೂದೇಶಕ್ಕೆ ಬಂದಿರುತ್ತದೆ. ಅದು ಏಷ್ಯಾಖಂಡದಲ್ಲಿಯೇ ಹುಟ್ಟಿತು. ಅದು ಈ ದೇಶಕ್ಕೆ ತಂದಿರುವ ಬದಲಾವಣೆಗಳು ಅನೇಕವಾಗಿವೆ. ಜಾತಿಯ ದೆಸೆಯಿಂದ ಅನೇಕ ಭಾಗವಾಗಿ ಒಡೆದುಹೋಗಿದ್ದ ಹಿಂದೂ ಜನಾಂಗವು ಕ್ರೈಸ್ತ ಮತದ ನಾಗರೀಕತೆಯಿಂದ ಒಂದಾಗಿ ಸೇರುವದಕ್ಕೆ ಪ್ರಯತ್ನಪಡುತ್ತಲಿದೆ. ಎಲ್ಲರು ಸಹೋದರರ ಭಾವವನ್ನು ಕುರಿತು ಮಾತನಾಡಿಕೊಳ್ಳುತ್ತಲಿರುವರು. ಲೇಟ್ ಅರಮನೆ ಕಂಟ್ರೋಲರ್ ಪಿ ಎನ್ ನರಸಿಂಹಯ್ಯಂಗಾರರು ತಿಳಿಸಿದ ಪ್ರಕಾರ ಕ್ರೈಸ್ತ ಮತದ ಸಹಾಯದಿಂದ ಕೀಳು ಜಾತಿಯವರು ಉತ್ತಮ ಸ್ಥಿತಿಗೆ ಬರುತ್ತಲಿದ್ದಾರೆ. ಕ್ರೈಸ್ತಮತವು ಹಬ್ಬುತ್ತಿರುವುದರಿಂದಲೇ ಅದರ ಶಕ್ತಿಯನ್ನು ಹಾಳುಮಾಡುವುದಕ್ಕೆ ಅಸಾಧಾರಣವಾದ ಪ್ರಯತ್ನಗಳು ಈ ದೇಶದಲ್ಲಿ ನಡೆಯುತ್ತಲಿವೆ. ಆದರೆ ಸತ್ಯವೇ ಜಯ ಹೊಂದುವದು.

ಒಳದೇಶದ ವೃತ್ತಾಂತಗಳು.

ಈ ಸಲ ನವರಾತ್ರಿ ಉತ್ಸವಕಾಲದಲ್ಲಿ ರಾಜಧಾನಿಯಲ್ಲಿ ನಡೆಯಬೇಕೆಂದು ಗೊತ್ತಾಗಿದ್ದ ವೈಶ್ಯ ಮಹಾ ಸಭೆಯು ಪ್ಲೇಗಿನ ಭೀತಿಗಾಗಿ ನಿಲ್ಲಿಸಲ್ಪಟ್ಟಿತೆಂದು ಕೇಳುತ್ತೇವೆ.

***

ಬೋಧಾನಂದ ಸರಸ್ವತಿ ಎಂಬೊಬ್ಬ ಸ್ವಾಮಿಗಳು ರಾಜಧಾನಿಗೆ ಬಂದು, ಇಲ್ಲಿನ ಸಂಸ್ಕೃತ ಪಾಠಶಾಲೆಯಲ್ಲಿ ಸನಾತನ ಧರ್ಮವಿಚಾರವನ್ನು ಕುರಿತು ಉಪನ್ಯಾಸಮಾಡುತ್ತಿದ್ದಾರೆ.

***

ದೊಡ್ಡಬಳ್ಳಾಪುರದಲ್ಲಿ ಒಂದು ಹುಲಿಯು ಸೇರಿಕೊಂಡು ಗೋವುಗಳನ್ನು ಹೊಡೆದು ತಿನ್ನುತ್ತಲೂ ಪ್ರಜೆಗಳನ್ನು ಗಾಬರಿಪಡಿಸುತ್ತಲೂ ಇದೆ ಎಂದು ಒಬ್ಬ ಬಾತ್ಮೀದಾರರು ಬರೆದಿದ್ದಾರೆ.

***

ದಿವಾನ್ ಮೇ|| ಮಾಧವರಾಯರು ಶಿವಮೊಗ್ಗೆಯ ಕಡೆ ಸರ್ಕೀಟು ಮುಗಿಸಿಕೊಂಡು, ಕಳೆದ ಶನಿವಾರ ಹಿಂತಿರುಗಿ ಬೆಂಗಳೂರಿಗೆ ದಯಮಾಡಿದರು. ಅವರು ಈ ದಿನ ರಾಜಧಾನಿಗೆ ಬರುವವರಾಗಿದ್ದಾರೆಂದು ಕೇಳುತ್ತೇವೆ.

***

ರಾಜಧಾನಿಯಲ್ಲಿರುವ ಮುನ್ಸಿಫ್ ಮೇ|| ಎಸ್ ಟಿ. ಗೋಪಾಲಯ್ಯಂಗಾರ್ರು ಕಳೆದ ೧೬ ನೆ ತಾರೀಖಿನಿಂದ ರಜ ಪಡೆದುಕೊಂಡಿದ್ದಾರೆ. ಅಡ್ವೋಕೇಟ್ ಮೇ|| ಬಿ ರಂಗಯ್ಯಂಗಾರ್ರು ಅವರ ಕೆಲಸವನ್ನು ಬದಲಿ ನೋಡುತ್ತಿರುವರು.

***

ಬೆಂಗಳೂರು ದಂಡಿಗೆ ಸೇರಿದ ಹೂಳೆಯಲ್ಲಿ ಮದ್ದಿನಿಂದ ಬಾಣಬಿರುಸುಗಳನ್ನು ಮಾಡುವಾಗ್ಗೆ ಆಕಸ್ಮಿಕವಾಗಿ ಒಬ್ಬ ಮುಸಲ್ಮಾನರವನೂ ಅವನ ಇಬ್ಬರು ಮಕ್ಕಳೂ ಗಾಯಪಟ್ಟರು. ಇವರು ಕಳೆದ ಶುಕ್ರವಾರ ತೀರಿಹೋದರೆಂದು ತಿಳಿದು ಬಂದಿದೆ.

***

ರಾಜಧಾನಿಯಲ್ಲಿ ಕಳೆದ ವಾರವೆಲ್ಲಾ ಸುಮಾರಾಗಿ ದಿನವಹಿ ರಾತ್ರಿಹೊತ್ತು ಚೆನ್ನಾಗಿ ಮಳೆ ಸುರಿಯುತ್ತಿತ್ತು. ಹಗಲಹೊತ್ತು ಬಿಸಿಲು ತೀಕ್ಷ್ಣವಾಗಿ ಕಾಯುತ್ತಿತ್ತು. ಪ್ಲೇಗ್ ಉಪದ್ರವು ಇನ್ನೂ ಇಳಿಮುಖಕ್ಕೆ ಬಂದಂತೆ ಕಾಣುವುದಿಲ್ಲ. ಧಾರಣೆವಾಸಿಗಳು ಹೆಚ್ಚಾಗಿಯೇ ಇರುತ್ತವೆ.

***

ಬರೋಡಾ ಸಂಸ್ಥಾನದ ಮೇ|| ಆರ್ ಸಿ ದತ್ತರವರು ಕಳೆದ ವಾರ ಶಿವಮೊಗ್ಗ ಕಡೆ ಸಂಚಾರ ಹೋಗಿ ಗಿರಸೊಪ್ಪೆ ಜಲಪಾತವನ್ನು ನೋಡಿಕೊಂಡು ಬೆಂಗಳೂರಿಗೆ ಬಂದರು. ಶಿವಮೊಗ್ಗೆಯ ಕೆಲವು ಜನರು ಮೇ|| ದತ್ತರವರನ್ನು ಮರ್ಯಾದೆಗಳೊಡನೆ ಎದುರುಗೊಂಡು ಅವರಿಗೆ ಒಂದು ಅಡ್ರಸ್ಸನ್ನು ಕೊಟ್ಟರು.

***

ಮೈಸೂರು ದಸರಾ ಪ್ರದರ್ಶನಶಾಲೆಯನ್ನು ತಾ ೫ ನೆ ಶನಿವಾರ ಬೆಳಿಗ್ಗೆ ಶ್ರೀಮನ್ಮಹಾರಾಜರವರು ಪ್ರಾರಂಭ ಮಾಡುವರು. ಪ್ರದರ್ಶನವಸ್ತುಗಳನ್ನು ನೋಡಲಪೇಕ್ಷಿಸುವವರು ಆ ದಿನ ಸಾಯಂಕಾಲ ೬ ಗಂಟೆಯಿಂದ ೮ ಗಂಟೆ ತನಕ ಬಿಡುವಂತೆ ಏರ್ಪಾಡು ಮಾಡಿದೆ ಎಂಬದಾಗಿ ಪ್ರದರ್ಶನದ ಕಮಿಟಿ ಸೆಕ್ರೆಟರಿಯವರು ತಿಳಿಸುತ್ತಾರೆ.

***

ಚನ್ನಪಟ್ಟಣ ತಾಲೂಕಿಗೆ ಸೇರಿದ ಒಂದು ಬಂಗಲಿನಲ್ಲಿ ಕಳೆದ ವಾರ ಒಬ್ಬ ಗಂಡಸಿನ ಹೆಣ ಸಿಕ್ಕಿತು. ಯಾರೋ ಅವನನ್ನು ಕೊಂದು ಕಂಬಳಿಯಲ್ಲಿ ಸುತ್ತಿಟ್ಟು ಮೇಲೆ ಕಲ್ಲುಗಳನ್ನು ಹೊದಿಸಿದ್ದರು. ಬೆಂಗಳೂರು ಪೊಲೀಸ್ ಸೂಪರಿಂಟೆಂಡೆಂಟರು ಅಲ್ಲಿಗೆ ಬಂದು ಅದರ ಮಾಯಿಷಿ ಮಾಡಿದಾಗ ಹೆಣವು ಕೊಳೆತ ಹೋಗಿದ್ದದ್ದರಿಂದ ಗುರುತುಹಿಡಿಯಲು ಅಸಾಧ್ಯವಾಯಿತು. ಅಪರಾಧಿಗಳನ್ನು ತಲಾಷ್ ಮಾಡುತ್ತಿದ್ದಾರೆ.

***

ಸರ್ಕಾರದವರು ಮುಂದೆ ಹೇಳುವ ಸಬ್ ರಜಿಸ್ಟ್ರಾರುಗಳ ವರ್ಗವನ್ನು ಹುಕುಂ ಮಾಡಿದರೆಂದು ತಿಳಿದುಬಂದಿದೆ — ಮೇ|| ರಾಮಸ್ವಾಮಯ್ಯಂಗಾರ್ರು ಮಂಜರಾಬಾದಿನಿಂದ ಚನ್ನರಾಯಪಟ್ಟಣಕ್ಕೆ, ಮೇ|| ದಯಾರಾಯರು ಚನ್ನರಾಯಪಟ್ಟಣದಿಂದ ಮಂಜರಾಬಾದಿಗೆ, ಮೇ|| ನರಸಿಂಹಯ್ಯಂಗಾರ್ರು ಕೋಲಾರಿನಿಂದ ತುಂಕೂರಿಗೆ, ಮೇ|| ರಂಗಣ್ಣಯ್ಯನವರು ತಿಪಟೂರಿನಿಂದ ಬೇಲೂರಿಗೆ, ಮೇ|| ಗೋವಿಂದರಾಯರು ಚಿಕ್ಕಮಗಳೂರಿಂದ ಮುಳಬಾಗಲಿಗೆ, ಮೇ|| ರಾಮಸ್ವಾಮಯ್ಯನವರು ಮುಳಬಾಗಲಿನಿಂದ ಚಿಕ್ಕಮಗಳೂರಿಗೆ.

***

ರಾಜಧಾನಿಯಲ್ಲಿ ಲೇಟ್ ತುರುವೇಕೆರೆ ಅರಸಿನವರ ಎರಡನೆಯ ಕುಮಾರರೂ ಮೇ|| ಎಚ್. ನಂಜುಂಡರಾಜೇ ಅರಸಿನವರ ಅಳಿಯಂದಿರೂ ಆಗಿದ್ದ ಮೇ|| ಟಿ. ಸುಬ್ಬರಾಜೇ ಅರಸಿನವರು ನೆನ್ನೆ ಬೆಳಗಿನ ಝಾಮದಲ್ಲಿ ಚಾಮರಾಜ ಪೇಟೆಯಲ್ಲಿರುವ ಸ್ವಂತ ಬಂಗಲೆಯಲ್ಲಿ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರಿಗೆ ಇನ್ನೂ ೩೩ನೆ ವರುಷ ನಡೆಯುತ್ತಲಿತ್ತು. ತುಂಬಾ ಖಂಡಿತಗಾರರಾಗಿಯೂ ಸ್ನೇಹಪರರಾಗಿಯೂ ಪರೋಪಕಾರಿಗಳಾಗಿಯೂ ಇದ್ದರು. ಅವರಿಗೆ ಚಿಕ್ಕ ವಯಸ್ಸಿನ ಪತ್ನಿಯೂ, ಇಬ್ಬರು ಸಣ್ಣ ಮಕ್ಕಳೂ, ವೃದ್ಧರಾದ ತಾಯಿಯೂ, ಜ್ಯೇಷ್ಠ ಸಹೋದರರೂ ಇರುತ್ತಾರೆ. ಬಹು ಮಂದಿ ಬಂಧುಮಿತ್ರಾದಿಗಳೂ ವಿಯೋಗ ದುಃಖಭಾಗಿಗಳಾಗಿರುವರು. ಅರಮನೆಯ ಮರ್ಯಾದೆಗಳೊಡನೆ ಶವವನ್ನು ನೆನ್ನೆ ಬೆಳಿಗ್ಗೆ ಸಾಗಿಸಿ ಯಥಾವಿಧಿಯಾಗಿ ದಹನ ಕಾರ್ಯಗಳನ್ನು ನಡಿಸಿದರು. ಬಹು ಜನ ಅರಸುಗಳೂ ಇತರರೂ ಹೋಗಿಬಂದರು.

ರಾಜಧಾನಿಯ ಮ್ಯುನಿಸಿಪಲ್ ಮೀಟಿಂಗು.

ಮೈಸೂರು ಪಟ್ಟಣದ ಮ್ಯುನಿಸಿಪಲ್ ಕೌನ್ಸಿಲರುಗಳು ಕಳೆದ ಶನಿವಾರ ಬೆಳಗ್ಗೆ ಇಲ್ಲಿನ ಟೌನ್‌ಹಾಲ್ ಬಂಗಲೆಯಲ್ಲಿ ತಿಂಗಳ ಕಟ್ಟಲೆಯ ಮೀಟಿಂಗ್ ನಡಿಸಿದರು. ಮೊದಲು ಆಗಸ್ಟ್ ತಿಂಗಳ ಜಮಾಖರ್ಚು ಮುಂತಾದ ಲೆಕ್ಕಗಳನ್ನು ಓದಿಸಿ ಪ್ಯಾಸ್ ಮಾಡಿದರು. ಆ ತಿಂಗಳಲ್ಲಿ ಎಲ್ಲಾ ಬಾಬುಗಳಿಂದಲೂ ಮ್ಯುನಿಸಿಪಾಲಿಟಿಗೆ ರೂ. ೧೩,೭೧೯—೧—೩ ಪೈ ಜಮಾ ಆಯಿತು. ರೂ. ೪,೦೬೩—೧೦—೧೧ ಪೈ ಖರ್ಚಾಗಿದೆ. ಜನನ ೧೬೭; ಮರಣ—ಪ್ಲೇಗ್ ೯೯, ಸಿಡುಬು ೧, ಜ್ವರ ೧೩, ಇತರ ಕಾರಣಗಳು ೯೭೬, ಒಟ್ಟು ೨೯೩. ಆಸ್ಪತ್ರೆಯ ಮೆಲ್ವಿಚಾರಣೆಯ ಲೆಕ್ಕಗಳು ಮಾತ್ರ ಚೆನ್ನಾಗಿವೆ ಎಂಬ ಆಡಿಟರ ರಿಪೋರ್ಟನ್ನು ಓದಿದರು.

ಟ್ರಸ್ಟ್ ಬೋರ್ಡಿನವರು ಹಳೇ ದೊಡ್ಡ ಹೊಲಗೇರಿಯಲ್ಲಿರುವ ಮ್ಯುನಿಸಿಪಲ್ ಪಟಖಾನೆ ಕಟ್ಟಡವನ್ನು ತೆಗೆದುಕೊಂಡು ಸುಮಾರಿಗೆ ೪೦೦ ಚಿಲ್ಲರೆ ರೂಪಾಯನ್ನೂ ಸ್ಥಳಕ್ಕೆ ೧೩೦ ಚಿಲ್ಲರೆ ರೂಪಾಯನ್ನೂ ಪ್ರತಿಫಲ ಕೊಡುವುದಾಗಿ ತಿಳಿಸಿದರು. ಕೌನ್ಸಿಲರುಗಳು—ಸಾಮಾನಿನ ಪ್ರತಿಫಲವನ್ನು ತೆಗೆದುಕೊಳ್ಳತಕ್ಕದ್ದೆಂತಲೂ ಟ್ರಸ್ಟ್ ಬೋರ್ಡಿನವರು ಮ್ಯುನಿಸಿಪಾಲಿಟಿಗೆ ಬೇಕಾಗುವಷ್ಟು ಸ್ಥಳವನ್ನು ಕೊಡಬೇಕೆಂತಲೂ ತಿಳಿಸುವಂತೆ ತೀರ್ಮಾನಿಸಿದರು.

ವೀರಣ್ಣನ ಕೆರೆ ಬಳಿ ಕೃಷ್ಣರಾಜ ರಸ್ತೆಗೂ ರೈಲ್ವೆ ಲೈನಿಗೂ ನಡುವೆ ಇರುವ ಖಾಲಿ ಜಮೀನನ್ನು ಮೆ॥ ಅಶ್ವತ್ಥನಾರಾಯಣರಾಯರಿಗೆ ಕೊಡದೆ ಪಬ್ಲಿಕ್ ಉಪಯೋಗಕ್ಕೆ ಇಡಬೇಕೆಂದು ಟ್ರಸ್ಟ್ ಬೋರ್ಡಿನವರು ಬರೆದ ಅಭಿಪ್ರಾಯವನ್ನು ಮೆ॥ ಅಶ್ವತ್ಥನಾರಾಯಣರಾಯರಿಗೆ ತಿಳಿಸಬೇಕೆಂದು ಗೊತ್ತಾಯಿತು.

ಹೊಗೆಸೊಪ್ಪಿನ (ಹೊಗೇಸೊಪ್ಪಿನ) ಮೇಲೆ ಸುಂಕ ವಸೂಲ್ಮಾಡುವ ವಿಚಾರದಲ್ಲಿ ಪೂರ್ವದಲ್ಲಿ ಆಚರಣೆಯಲ್ಲಿದ್ದ ಪದ್ಧತಿಯನ್ನೇ ಜಾರಿ ಮಾಡಬೇಕೆಂದು ಗವರ್ನಮೆಂಟಿನಿಂದ ಬಂದಿದ್ದ ಹುಕುಮನ್ನು ರಿಕಾರ್ಡು ಮಾಡಿದರು.

ಮ್ಯುನಿಸಿಪಾಲಿಟಿಯವರು ಮುಚ್ಚಿಸಿರುವ ಮೆ॥ ಸುಬ್ಬುಕೃಷ್ಣರಾಯರ ಬಾಬತು ಒಂದು ಬಾವಿಗೆ ಪ್ರತಿಫಲವನ್ನು ಕೊಡುವ ವಿಚಾರದಲ್ಲಿ ಅವರು ಮೊದಲೇ "ಧರ್ಮಾರ್ಥವಾಗಿ ಬಿಟ್ಟುಕೊಟ್ಟಿರುತ್ತೇನೆ" ಎಂದು ಬರೆದು ಕೊಟ್ಟಿರುವ ಮುಚ್ಚಳಿಕೆಯನ್ನು ಗವರ್ನಮೆಂಟಿಗೆ ಕಳುಹಿಸಿಕೊಡಬೇಕೆಂದು ತೀರ್ಮಾನ ಮಾಡಿದರು.

ರೆಸಿಡೆನ್ಸಿ ಬಂಗಲೆಯ ಬಳಿ ಇರುವ ಪೀಪಲ್ಸ್ ಪಾರ್ಕ್ ಎಂಬ ಉದ್ಯಾನವನದಲ್ಲಿ ಗಿಡಗಳಿಗೆ ನೀರು ಸಮೃದ್ಧವಾಗಿ ಹಾಕುವುದಕ್ಕೆ ೫ ರೂಪಾಯಿ ಸಂಬಳದ ಮೂರು ಮಂದಿ ಕಾವಲುಗಾರರನ್ನು ನೇಮಿಸಿಕೊಳ್ಳುವುದಕ್ಕಿಂತಲೂ ೧೫ ರೂಪಾಯಿ ಖರ್ಚಿನಲ್ಲಿ ಒಂದು ನೀರಿನ ಗಾಡಿಯನ್ನು ಇಟ್ಟುಕೊಳ್ಳುವುದು ಅನುಕೂಲವೆಂದು ಕೌನ್ಸಿಲರುಗಳು ಅಭಿಪ್ರಾಯಪಟ್ಟರು.

ಪ್ರೈಮರಿ ವಿದ್ಯಾಭಿವೃದ್ಧಿಗೋಸ್ಕರ ರಾಜಧಾನಿಯಲ್ಲಿ ಮ್ಯುನಿಸಿಪಾಲಿಟಿಯವರು ವರುಷಕ್ಕೆ ೨,೪೨೦ ರೂಪಾಯಿ ಖರ್ಚುಮಾಡುತ್ತಿದ್ದಾರೆ. ಇದು ಸಾಲದೆಂತಲೂ ಇನ್ನೂ ಹೆಚ್ಚಾಗಿ ಪ್ರೈಮರಿ ಪಾಠಶಾಲೆಗಳನ್ನು ಇಡಿಸಿ ಬಾಲಕರಿಗೆ ವಿದ್ಯೆ ಕಲಿಸಲೋಸುಗ ಬೇರೆ ೨,೫೦೦ ರೂಪಾಯಿ ವಿನಿಯೋಗಿಸಬೇಕೆಂತಲೂ ಕೌನ್ಸಿಲರುಗಳು ತೀರ್ಮಾನಮಾಡಿದರು.

ಬೆಳಗೊಳದಿಂದ ರಾಜಧಾನಿಗೆ ಕುಡಿಯುವ ನೀರನ್ನು ಸರಬರಾಯಿ ಮಾಡುವ ವಿಷಯದಲ್ಲಿ ವಾರದಲ್ಲಿ ಮೂರುವರೆ ದಿನಗಳ ವರೆಗೆ ನಾಲೆಯಿಂದ ನೀರು ಎತ್ತಿ ರಾಜಧಾನಿಗೆ ಕಳುಹಿಸುವಂತೆಯೂ, ಉಳಿದ ಮೂರುವರೆ ದಿನ ನಾಲೆ ಕೆಳಗಣ ಜಮೀನುಗಳಿಗೆ ನೀರು ಕೊಡಬೇಕೆಂತಲೂ ಗವರ್ನಮೆಂಟಿನವರು ಮಾಡಿರುವ ಏರ್ಪಾಡನ್ನು ಕೌನ್ಸಿಲರುಗಳು ಒಪ್ಪಿಕೊಂಡರು.

ರಾಜಧಾನಿಯಲ್ಲಿರುವ ಪ್ಲೇಗ್ ಕ್ಯಾಂಪಿನಲ್ಲಿ ರೋಗಿಗಳ ಉಪಚಾರಾದಿಗಳನ್ನು ನೋಡಿಕೊಳ್ಳುವುದಕ್ಕೆ ಹಂಗಾಮಿಯಾಗಿ ೧೩೦ ರೂಪಾಯಿ ತಲಬಿನ ಸೇವಕರನ್ನು ನೇಮಿಸಿಕೊಳ್ಳತಕ್ಕದ್ದೆಂದೂ, ಈ ಖರ್ಚನ್ನು ಮ್ಯುನಿಸಿಪಾಲಿಟಿಯವರು ವಹಿಸಿಕೊಳ್ಳಬೇಕೆಂತಲೂ ಗವರ್ನಮೆಂಟಿನವರು ಅಪ್ಪಣೆ ಕೊಡಿಸಿದ ಹುಕುಮನ್ನು ಕೌನ್ಸಿಲರುಗಳು ರಿಕಾರ್ಡು ಮಾಡಿಕೊಂಡರು.

ಮೋಟಾರ್‌ಕಾರ್, ಬೈಸಿಕಲ್, ಟ್ರೈಸಿಕಲ್ ಎಂಬೀ ಗಾಡಿಗಳಿಗೆ ಮ್ಯುನಿಸಿಪಲ್ ಕಂದಾಯ ಹಾಕುವ ವಿಚಾರದಲ್ಲಿ ಕೌನ್ಸಿಲರುಗಳು ಚರ್ಚೆ ಮಾಡಿ, ಬೆಂಗಳೂರು ಮ್ಯುನಿಸಿಪಾಲಿಟಿಯಲ್ಲಿ ಜಾರಿಯಲ್ಲಿರತಕ್ಕ ದರಗಳನ್ನೇ ರಾಜಧಾನಿಯಲ್ಲೂ ಜಾರಿಗೆ ತರಬೇಕೆಂದು ತೀರ್ಮಾನ ಮಾಡಿದರು.

ರಾಜಧಾನಿಯಲ್ಲಿ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಪ್ರಜೆಗಳಿಗೆ ಲೈಸೆನ್ಸು ಕೊಡುವ ಅಧಿಕಾರವನ್ನು ಮ್ಯುನಿಸಿಪಲ್ ಕಮಿಟಿಯವರೇ ವಹಿಸಿಕೊಂಡು, ಅವಶ್ಯಬೀಳುವ ಸಂದರ್ಭಗಳಲ್ಲಿ ಮಾತ್ರ ಟ್ರಸ್ಟ್ ಬೋರ್ಡಿನವರ ಅಭಿಪ್ರಾಯಗಳನ್ನು ಪಡೆದು, ಲೈಸೆನ್ಸ್ ಕೊಡತಕ್ಕದ್ದೆಂದು ಕೌನ್ಸಿಲರುಗಳು ತೀರ್ಮಾನ ಮಾಡಿದರು.

ಕುರುಬಾರಹಳ್ಳಿ ಕೆರೆ ಏರಿಯ ಮೇಲೂ, ಕಾರಂಜಿಕೆರೆ ಏರಿಯ ಮೇಲೂ ಉಭಯಪಾರ್ಶ್ವಗಳಲ್ಲೂ ಕಟಕಟೆಗಳನ್ನು ಹಾಕಿಸುವುದಕ್ಕೆ ತಯಾರಾಗಿದ್ದ ಸುಮಾರು ೫,೫೦೦ ರೂಪಾಯಿನ ಅಂದಾಜು ಪಟ್ಟಿಗಳನ್ನು ಎಗ್ಸಿಕ್ಯೂಟಿವ್ ಇಂಜನಿಯರವರು ಶೋಧನೆ ಮಾಡಿ ಕೊಡುವಂತೆ ಅವರಿಗೆ ಕಳುಹಿಸತಕ್ಕದ್ದೆಂದು ತೀರ್ಮಾನ ಮಾಡಿದರು.

ಕಳೆದ ಸಾಲಿನ ಮ್ಯುನಿಸಿಪಲ್ ಕಾರ್ಯಗಳ ಮತ್ತು ಜಮಾಖರ್ಚು ಮುಂತಾದವುಗಳ ವಿಷಯದಲ್ಲಿ ತಯಾರುಮಾಡಿಸಿದ್ದ ವಾರ್ಷಿಕ ರಿಪೋರ್ಟನ್ನು ಕೌನ್ಸಿಲರುಗಳು ಓದಿಸಿ ಕೇಳಿ, ಗವರ್ನಮೆಂಟಿಗೆ ಕಳುಹಿಸತಕ್ಕದ್ದೆಂದು ಒಪ್ಪಿಕೊಂಡರು.

ಮ್ಯುನಿಸಿಪಾಲಿಟಿಯಲ್ಲಿ ನಡಿಯತಕ್ಕ ಕೆಲಸ ಕಾರ್ಯಗಳ ವಿಷಯದಲ್ಲಿ ಆಗಾಗ ಮೆಂಬರುಗಳು ಕೌನ್ಸಿಲರುಗಳಿಗೆ ಮೊದಲೇ ಮ್ಯುನಿಸಿಪಾಲಿಟಿಯವರು ತಿಳಿಸುವುದೂ, ಅಂಥಾ ಕೆಲಸಗಳನ್ನೂ ಲೆಕ್ಕಗಳನ್ನೂ ಅವರು ತನಿಖೆ ಮಾಡುವುದೂ ಆಚರಣೆಯಲ್ಲಿತ್ತು. ಈಚೆಗೆ ಇದು ತಪ್ಪಿಹೋಗಿದ್ದದ್ದನ್ನು ಕೌನ್ಸಿಲರುಗಳು ಮೀಟಿಂಗಿನಲ್ಲಿ ಸೂಚಿಸಿ, ಗವರ್ನಮೆಂಟಿಗೆ ತಿಳಿಸಿದ್ದರು. ಮ್ಯುನಿಸಿಪಾಲಿಟಿಯವರು ಪೂರ್ವದಲ್ಲಿದ್ದಂತೆಯೇ ಎಲ್ಲಾ ವಿಷಯಗಳನ್ನೂ ಆಚರಣೆಗೆ ತರುತ್ತೇವೆಂದು ಸೂಚಿಸಿಪಟ್ಟದ್ದರಿಂದ ಅದೇ ರೀತಿ ಗವರ್ನಮೆಂಟಿಗೆ ರಿಪೋರ್ಟು ಮಾಡಬಹುದೆಂದು ಕೌನ್ಸಿಲರುಗಳು ತೀರ್ಮಾನ ಮಾಡಿರುತ್ತಾರೆ.

ಇಂಡಿಯಾ ದೇಶದ ವೃತ್ತಾಂತಗಳು.

ಈ ತಿಂಗಳ ೧೩ ನೆ ತಾ॥ ಭಾವನಗರ ಸಂಸ್ಥಾನದ ಮಹಾರಾಜರವರಿಗೆ ಐವತ್ತನೆ ವರುಷದ ವರ್ಧಂತಿ ಉತ್ಸವವು ವಿಶೇಷ ಆಟ್ಟಹಾಸದಿಂದ ನಡಸಲ್ಪಡುವುದು.

❧❧❧

ಗಡೀಪಾರಾಗಿರುವ ಲಾಲಾ ಅಜಿತಸಿಂಗ್ ಎಂಬಾತನ ಪತ್ನಿಗೆ ಜೀವನಕ್ಕಾಗಿ ಸರಕಾರದವರು ಹತ್ತು ರೂಪಾಯಿ ಮಾಸಾಶನ ಕೊಡುತ್ತಿದ್ದಾರೆಂದು ಜಾಂಗ್ ಪಟ್ಟಣದ ಒಂದು ಉರ್ದು ಪತ್ರಿಕೆಯು ತಿಳಿಸುತ್ತದೆ.

❧❧❧

ಬಾರಕ್ಪೂರದಲ್ಲಿ ಮಿಸ್ ಸ್ಟೀರ್ ಎಂಬಾಕೆಯು ಈಗತಾನೇ ಕಾಲವಾದಳು. ಈಕೆಗೆ ೧೧೫ ವರುಷ ವಯಸ್ಸಾಗಿದ್ದರೂ ಇಂದ್ರಿಯ ಪಾಟವಗಳೆಲ್ಲಾ ಆಕೆ ಸಾಯುವ ತನಕ ಚೆನ್ನಾಗಿದ್ದವೆಂದು ತಂತೀ ವರ್ತಮಾನ ಬಂದಿದೆ.

❧❧❧

ಕಳೆದ ವಾರ ಮದರಾಸ್ ಪಟ್ಟಣದಲ್ಲಿ ಒಂದು ಭಾರೀ ಬಂಗಲೆಯು ಅಕಸ್ಮಾತ್ತಾಗಿ ಕಳಚಿ ಬಿದ್ದು, ಎಂಟು ಜನರು ಪ್ರಾಣ ಕಳೆದುಕೊಂಡರು. ಗಾಯಪಟ್ಟ ನಾಲ್ಕಾರು ಮಂದಿ ಇನ್ನೂ ಆಸ್ಪತ್ರೆಯಲ್ಲಿ ಇರುತ್ತಾರೆ.

❧❧❧

ಮೆ॥ ದಾದಾಭಾಯಿ ನವರೋಜಿ ಯವರು ವಿಲಾಯಿತಿಯಿಂದ ಬೊಂಬಾಯಿಯನ್ನು ಕುರಿತು ಪ್ರಯಾಣ ಮಾಡಬೇಕಾಗಿತ್ತು. ಆದರೆ ಕಳೆದವಾರ ಅವರಿಗೆ ಕಾಯಿಲೆ ಸ್ವಲ್ಪ ಉಲ್ಬಣಿಸಿದ್ದರಿಂದ ಅವರು ಹೊರಡಲಿಲ್ಲವೆಂದು ತಂತೀ ವರ್ತಮಾನ ಬಂದಿದೆ.

❧❧❧

ಉತ್ತರ ದೇಶಕ್ಕೆ ಸೇರಿದ ಹೈದರಾಬಾದ್ ಪಟ್ಟಣದಲ್ಲಿ ಹಿಂದೂ ಅನಾಥಾಲಯವನ್ನು ಸ್ಥಾಪಿಸಿ ನಡಸಬೇಕೆಂದು ಸೇಠ್ ಲಾಲಾ ಲಕ್ಷ್ಮೀಚಂದ್ ಎಂಬೊಬ್ಬ ಭಾರೀ ಜಮೀನ್ದಾರನು ತನ್ನ ಆಸ್ತಿಯಿಂದ ಒಂದು ಲಕ್ಷ ರೂಪಾಯಿ ಧರ್ಮಮಾಡಿರುತ್ತಾನೆ.

❧❧❧

ತಿರುವಾಂಕೂರು ಸಂಸ್ಥಾನದ ಮಹಾರಾಜರವರು ನೊವೆಂಬರ್ ಅಥವಾ ಡಿಸೆಂಬರ್ ತಿಂಗಳಲ್ಲಿ ವೈಸ್‌ರಾಯಿ ಲಾರ್ಡ್ ಮಿಂಟೋರವರ ಭೇಟಿಗಾಗಿ ಕಲ್ಕತ್ತೆಗೆ ಪ್ರಯಾಣ ಮಾಡಬಹುದೆಂದೂ ವೈಸ್‌ರಾಯಿಯವರಿಂದ ಅವರಿಗೆ ಆಹ್ವಾನ ಪತ್ರಿಕೆ ಬಂದಿರುವದೆಂದೂ ವರ್ತಮಾನವಿದೆ.

❧❧❧

ಕೂಚ್‌ಬೀಹಾರ್ ಸಂಸ್ಥಾನದ ಮಹಾರಾಜ ಕುಮಾರ ವಿಕ್ಟರ್ ಯವರು ವ್ಯವಸಾಯ ಶಾಸ್ತ್ರವನ್ನು ಕಲಿತು ಬರುವುದಕ್ಕೆ ಇನ್ನತ್ತರಲ್ಲೇ ಅಮೇರಿಕಕ್ಕೆ ಪ್ರಯಾಣ ಮಾಡುವವರಾಗಿದ್ದಾರೆ. ಅವರ ವಿದ್ಯಾಬೋಧಕರಾದ ಮೆ॥ ಜೆ ಬಿ ಡಿ ಮೊಜುಂದಾರ್ ಯವರೂ ಅವರ ಸಂಗಡ ಹೋಗುವರು.

❧❧❧

ಜಾಮನಗರ ಸಂಸ್ಥಾನದಲ್ಲಿ ಜಮೀನ್ ಕಂದಾಯದ ಕಿಸ್ತನ್ನು ಮಾಡುವುದಕ್ಕೆ ಮಹಾರಾಜರವರು ಮೆ॥ ಲಾಲೂಭಾಯಿ ಸಮಾಲ್‌ದಾಸ್ ಎಂಬ ದೊಡ್ಡ ಮನುಷ್ಯರನ್ನು ನೇಮಿಸಿರುತ್ತಾರೆ. ಇವರು ಭಾವನಗರ, ಕಚ್ಛವಾಡ ಸಂಸ್ಥಾನಗಳಲ್ಲಿ ರೆವಿನ್ಯೂ ವಿಚಾರಗಳನ್ನು ಕ್ರಮಪಡಿಸಿ ಒಳ್ಳೇ ಹೆಸರುವಾಸಿಯನ್ನು ಪಡೆದಿರುವರು.

❧❧❧

ನೀಲಗಿರಿ ಬೆಟ್ಟದ ಮೇಲೆ ಬಳೀ ಕಲ್ಲಟ್ಟಿದೊಳಗಿರುವ ಸಕ್ಸಸ್ ಎಸ್ಟೇಟ್ ಎಂಬ ತೋಟದಲ್ಲಿ ಹದಿಮೂರು ಜನರಿಗೆ ಪ್ಲೇಗ್ ತಗಲಿ ಏಳು ಮಂದಿ ಕಾಲವಾದರೆಂತಲೂ, ಸಬ್ ಮ್ಯಾಜಿಸ್ಟ್ರೇಟ್ ಮೆ॥ ದೇಶಿಕಾಚಾರ್ರು ಉಪದ್ರ ಹರಡದಂತೆ ಸಾಧ್ಯವಾದಷ್ಟು ಏರ್ಪಾಡನ್ನು ಮಾಡುತ್ತಿದ್ದಾರೆಂತಲೂ ತಂತೀ ವರ್ತಮಾನ ಬಂದಿದೆ.

❧❧❧

ವಿಲಾಯಿತಿಯ ಹೌಸ್ ಆಫ್ ಕಾಮನ್ಸ್ ಎಂಬ ಪಾರ್ಲಿಮೆಂಟಿನಲ್ಲಿ ಮೆಂಬರಾಗಿರುವ ಮೆ॥ ಜೆ. ಕೇರ್ ಹಾರ್ಡಿ ಎಂಬಾತನು ಹಿಂದುಸ್ಥಾನಕ್ಕೆ ಬಂದು ಇರುತ್ತಾನೆ. ಈತನು ಹಿಂದುಸ್ಥಾನದ ಸ್ಥಿತಿಗತಿಯನ್ನು ಕಣ್ಣಾರ ನೋಡಿಕೊಂಡು ಹೋಗುವ ಉದ್ದೇಶದಿಂದ ಉತ್ತರದೇಶದಲ್ಲಿ ಮುಖ್ಯ ಮುಖ್ಯವಾದ ಪಟ್ಟಣಗಳಲ್ಲಿ ಸಂಚಾರಮಾಡುತ್ತಿರುವನು.

❧❧❧

ಪೂರ್ವ ಬಂಗಾಳಾ ಅಧಿಪತ್ಯಕ್ಕೆ ಸೇರಿದ ಸಿಲ್ಹಟ್ ಜಿಲ್ಲೆಯ ಸ್ಕೂಲ್ ಹುಡುಗರ ಪೈಕಿ ಕೆಲವರು ರಾಜಕೀಯ ವಿಷಯವನ್ನು ಚರ್ಚಿಸುವ ಸಭೆಗೆ ಹೋಗಿದ್ದರೆಂದು ತಿಳಿದುಬಂದದ್ದರಿಂದ ವಿದ್ಯಾಭ್ಯಾಸ ಇಲಾಖಾ ಡೈರೆಕ್ಟರವರು ೩೯ ಮಂದಿ ಹುಡುಗರನ್ನು ಸ್ಕೂಲಿನಿಂದ ವಜಾ ಮಾಡಿರುತ್ತಾರೆ. ಇದು ಅಲ್ಲಿನ ಜನಗಳಲ್ಲಿ ಗಲಭೆಯನ್ನೂ ಅಸಮಾಧಾನವನ್ನೂ ಉಂಟುಮಾಡಿದೆ.

ಕಳೆದ ಎರಡು ವಾರಗಳಲ್ಲೂ ಪ್ರಕಟವಾದ ಲೆಕ್ಕಗಳನ್ನು ನೋಡಿದರೆ ಪ್ಲೇಗ್ ಉಪದ್ರವು ಬೊಂಬಾಯಿ, ಮಧ್ಯ ಪ್ರಾಂತ್ಯಗಳು, ಬಿಹಾರ್, ಮೈಸೂರು, ಈ ನಾಲ್ಕು ಪ್ರದೇಶಗಳಲ್ಲಿ ಹೆಚ್ಚುತ್ತಿದೆ ಎಂದು ಗೊತ್ತಾಗುವುದು. ಈ ನಾಲ್ಕು ಕಡೆಗಳಲ್ಲೂ ಒಟ್ಟು ೧೬,೨೨೩ ಜನರು ಈ ಉಪದ್ರದಲ್ಲಿ ಕಾಲವಾದರು. ಈ ರಾಷ್ಟ್ರದ ಇತರ ಕಡೆಗಳಲ್ಲೆಲ್ಲಾ ೩,೪೯೩ ಜನರು ತೀರಿಹೋದರು.

❧❧❧

ಕೊಚ್ಚಿ ಸಂಸ್ಥಾನದ ಅಂಚೆ ಇಲಾಖೆಯನ್ನು ಕುಂಫಣಿ ಪೋಸ್ಟ್ ಇಲಾಖೆಗೆ ಸೇರಿಸಿಕೊಳ್ಳುವ ಭಾಗದಲ್ಲಿ ಕಾಗದ ಪತ್ರಗಳು ನಡಿಯುತ್ತಲಿವೆ. ಇದಕ್ಕಾಗಿಯೇ ಮದರಾಸ್ ಅಧಿಪತ್ಯದ ಪೋಸ್ಟ್ ಮಾಸ್ಟರ್ ಜನರಲ್‌ರವರು ಕಳೆದ ವಾರ ಕೊಚ್ಚಿ ಸಂಸ್ಥಾನಕ್ಕೆ ಹೋಗಿ ಕೆಲವು ದಿನ ಇದ್ದು ಅಲ್ಲಿನ ಪೋಸ್ಟ್ ಆಫೀಸನ್ನು ನೋಡಿಕೊಂಡು, ದಿವಾನರವರ ಕೂಡ ಆಲೋಚನೆ ಮಾಡಿಕೊಂಡು ಬಂದರು.

❧❧❧

ಡಿಸೆಂಬರ್ ತಿಂಗಳ ಕಡೇ ವಾರದಲ್ಲಿ ಈ ಸಲ ನಾಗಪುರದಲ್ಲಿ ನಡೆಯತಕ್ಕ ಹಿಂದುಸ್ಥಾನದ ನ್ಯಾಷನಲ್ ಕಾಂಗ್ರೆಸ್ (ರಾಷ್ಟ್ರೀಯಸಭೆ) ಎಂಬ ಮಹಾಸಭೆಗೆ ಘನವನ್ನೈದಿದ ಡಾಕ್ಟರ್ ರಾಷ್ ಬಿಹಾರಿ ಘೋಷ್, ಸಿ ಐ ಇ. ಯವರನ್ನಾಗಲಿ ಅವರು ಒಪ್ಪದಿದ್ದರೆ ಘನವನ್ನೈದಿದ ನವಾಬ್ ಸೈಯ್ಯದ್ ಮಹಮದ್ ಯವರನ್ನಾಗಲಿ ಅಧ್ಯಕ್ಷರನ್ನಾಗಿ ನೇಮಿಸಬೇಕೆಂದು ಮದರಾಸ್ ಮಹಾಜನಸಭೆಯವರು ಸೂಚಿಸುತ್ತಾರೆ.

❧❧❧

ಕಲ್ಕತ್ತಾ ಪಟ್ಟಣದ ಮಲ್ಲಿಕ್ ಘಾಟಿನಲ್ಲಿ ನದಿಯೊಳಗೆ ಒಂದು ಗೋಣಿ ಚೀಲ ಸಿಕ್ಕಿತು. ಅದನ್ನು ಸರ್ಕಾರದವರು ಎತ್ತಿ ಹೊರಗೆ ಬಿಚ್ಚಿಸಿ ನೋಡುವಾಗ್ಗೆ ಅದರಲ್ಲಿ ಒಂದು ಹೆಣವಿತ್ತು. ಸುಮಾರು ೨೦-೨೫ ವರುಷದ ಮುಸಲ್ಮಾನ ಹೆಂಗಸನ್ನು ಕೊಂದು ಪಗ್ಗದಲ್ಲಿ ಬಿಗಿದು ಚೀಲದಲ್ಲಿ ಹಾಕಿ ಹೊಲಿದು ನದಿಯಲ್ಲಿ ಬಿಸಾಡಿದ್ದರೆಂದು ಗೊತ್ತಾಯಿತು. ಪೊಲೀಸಿನವರು ಅಪರಾಧಿಗಳನ್ನು ತಲಾಷ್ ಮಾಡುತ್ತಿದ್ದಾರೆ.

❧❧❧

ರಂಗೂನ್ ಪಟ್ಟಣದಲ್ಲಿ ನಾಯಿ ನರಿಗಳಿಂದ ಕಡಿಸಿಕೊಂಡ ರೋಗಿಗಳಿಗೆ ಚಿಕಿತ್ಸೆ ಮಾಡುವಂಥಾ ಒಂದು ಆಸ್ಪತ್ರೆಯನ್ನು ಸ್ಥಾಪಿಸಬೇಕೆಂದು ತೀರ್ಮಾನವಾಗಿದೆ. ಅದಕ್ಕಾಗಿ ದೊಡ್ಡ ಮನುಷ್ಯರೆಲ್ಲಾ ಒಂದು ಸಭೆಯನ್ನು ನಡಿಸಿ, ೪೦,೫೦೦ ರೂಪಾಯಿ ಚಂದಾ ಕೊಡಿಸಿದ್ದಲ್ಲದೆ ಇನ್ನೂ ಅನೇಕರು ಹೆಚ್ಚಾಗಿ ಚಂದಾ ಕೊಡುವಂತೆ ವಾಗ್ದಾನ ಮಾಡಿದರು. ಈ ಆಸ್ಪತ್ರೆಯು ಆ ಪಟ್ಟಣದಲ್ಲೇ ಸ್ಥಾಪಿಸಲ್ಪಡಬಹುದೆಂಬುವುದಕ್ಕೆ ಸಂಶಯವಿಲ್ಲ.

❧❧❧

ಕಳೆದ ೧೭ನೆ ತಾರೀಖಿನ ದಿನ ಕಲ್ಕತ್ತಾ ಪಟ್ಟಣದಲ್ಲಿ ಬಾಬು ಅಶ್ವಿನೀಕುಮಾರದತ್ತರೆಂಬ ವಕೀಲಿನ ಮನೆಯಲ್ಲಿ ಸುಮಾರು ೧೦ ಮಂದಿ ತಂಗಳನ್ನವನ್ನೇ ತಿಂದರು. ಆಹಾರದೋಷದ ದೆಸೆಯಿಂದ ಎಲ್ಲರಿಗೂ ವಾಂತಿಭೇದಿ ಹಿಡಿಯಿತು. ಆ ಪೈಕಿ ಬಾಬು ಅನುಕೂಲಚಂದ್ರಧರನೆಂಬ ವಕೀಲನೂ, ಇನ್ನಿಬ್ಬರೂ ಸತ್ತುಹೋದರು. ಇನ್ನಿಬ್ಬರು ಬದುಕುವ ಹಾಗಿಲ್ಲವೆಂತಲೂ, ಉಳಿದ ಐದು ಮಂದಿಯೂ ರೋಗದಲ್ಲಿ ನರಳುತ್ತಿದ್ದಾರೆಂತಲೂ ವರ್ತಮಾನ ಬಂದಿದೆ.

❧❧❧

ಕಲ್ಕತ್ತಾ ಪಟ್ಟಣದಿಂದ ಸುಮಾರು ೩೫ ಮೈಲಿ ದೂರದಲ್ಲಿರುವ ಜಯಪುರವೆಂಬ ಭಾರೀ ಗ್ರಾಮದಲ್ಲಿ ಪ್ರವಾಹ ಬಂದು ಗ್ರಾಮಕ್ಕೆ ಗ್ರಾಮವೇ ಕೊಚ್ಚಿಹೋಗಿದೆ. ೩೦೦ ಮನೆಗಳು ಹಾಳಾದವು. ಆ ಪ್ರಜೆಗಳು ಇರುವುದಕ್ಕೆ ಮನೆಯಾಗಲಿ ತಿನ್ನುವುದಕ್ಕೆ ಆಹಾರವಾಗಲಿ ಇಲ್ಲದೆ ಬಹಳ ಕಷ್ಟಪಡುತ್ತಿದ್ದಾರೆ. ಹೌರಾ ಪಟ್ಟಣದಿಂದ ಮ್ಯಾಜಿಸ್ಟ್ರೇಟರು ಅಲ್ಲಿಗೆ ಹೋಗಿ ತನಿಖೆಮಾಡಿಕೊಂಡು ಬಂದು, ಪ್ರಜೆಗಳ ಕಷ್ಟನಿವಾರಣೆಗೆ ಏರ್ಪಾಡು ಮಾಡುತ್ತಿದ್ದಾರೆ.

❧❧❧

ಪುದುಕೋಟೆಯಿಂದ ತಿರುಚನಾಪಲ್ಲಿಗೆ ಮೋಟಾರ್ ಗಾಡಿಗಳ ಟಪ್ಪಾಲನ್ನು ಇಡಬೇಕೆಂದು ತಿರುಚನಾಪಲ್ಲಿಯ ಕೆಲವು ಭಾರೀ ಶಾಹುಕಾರರು ಪ್ರಯತ್ನಪಡುತ್ತಿದ್ದಾರೆ. ಪುದುಕೋಟೆ ಸಂಸ್ಥಾನದವರು ಅವರಿಗೆ ಕೆಲವು ರಿಯಾಯಿತಿಗಳನ್ನು ತೋರಿಸುವುದಾಗಿ ಮಾತುಕೊಟ್ಟಿರುವರು. ಸೀಮೆಯಿಂದ ಮೋಟಾರ್ ಗಾಡಿಗಳನ್ನು ತರಿಸುವ ವಿಷಯದಲ್ಲಿ ಮದರಾಸ್ ಪಟ್ಟಣದ ಸಿಂಸನ್ ಕಂಪನಿಯವರೂ ಆ ಶಾಹುಕಾರರೂ ಕಾಗದಪತ್ರಗಳನ್ನು ನಡಿಸುತ್ತಿದ್ದಾರೆ.

❧❧❧

ಕಲ್ಕತ್ತೆಯಲ್ಲಿ ಪ್ರಕಟವಾಗುವ "ವಂದೇ ಮಾತರಂ" ಎಂಬ ವರ್ತಮಾನ ಪತ್ರಿಕೆಯಲ್ಲಿ ರಾಜದ್ರೋಹಕರವಾದ ವಾಕ್ಯಗಳನ್ನು ಪ್ರಕಟಿಸಿ ಪ್ರಜೆಗಳ ಮನಸ್ಸನ್ನು ಕೆಡಿಸುವುದಕ್ಕೆ ಪ್ರಯತ್ನಪಟ್ಟರೆಂಬ ಮೊಕದ್ದಮೆ ಆಗಿ ಚೀಫ್ ಮ್ಯಾಜಿಸ್ಟ್ರೇಟರು ಆ ಪತ್ರಿಕೆಯ ಎಡಿಟರ್ ಅರವಿಂದಘೋಷ್ ಎಂಬಾತನನ್ನೂ, ಮ್ಯಾನೇಜರ್ ಹೇಮೇಂದ್ರನಾಥ ಬಾಗ್ಚಿ ಎಂಬಾತನನ್ನೂ ಖುಲಾಸ್ ಮಾಡಿ, ಆ ಪತ್ರಿಕೆಯನ್ನು ಅಚ್ಚುಹಾಕಿದ ಅಪೂರ್ಬ ಕೃಷ್ಣಬೋಸ್ ಎಂಬಾತನಿಗೆ ಮೂರು ತಿಂಗಳ ಸಜಾ ವಿಧಿಸಿದರು.

❧❧❧

ಪೂರ್ವ ಬಂಗಾಳಾ ಅಧಿಪತ್ಯಕ್ಕೆ ಸೇರಿದ ಬ್ಯಾರಿಸಾಲಿನಲ್ಲಿ ಮಹಮದ್ ಅಬ್ದುಲ್ ಗನಿ ಎಂಬವನು ತನ್ನ ಮಾವನನ್ನೂ ಭಾವಮೈದುನನ್ನೂ ಹೊಡೆದು ಕೊಂದುಹಾಕಿದ್ದರಿಂದ ಅವನಿಗೆ ಫಾಸೀ ಸಜಾ ಆಯಿತು. ಕಳೆದ ವಾರ ಅವನನ್ನು ಗಲ್ಲಿಗೆ ಎತ್ತುವ ಸಮಯದಲ್ಲಿ ಅವನು ಅಲ್ಲಿ ಸೇರಿದ್ದ ಜನರನ್ನು ನೋಡಿ—ನನ್ನ ಶತ್ರುಗಳು ಇನ್ನೂ ಇದ್ದಾರೆ. ಅವರನ್ನೆಲ್ಲಾ ಕೊಲ್ಲದೆ ಹೋದೆನಲ್ಲಾ ಎಂದುಕೊಂಡ

ನನ್ನ ಮನಸ್ಸನ್ನು ಕೊರೆಯುತ್ತಿದೆ ಎಂದು ತನ್ನ ಮನಸ್ಸಿನಲ್ಲಿದ್ದದ್ದನ್ನು ಹೇಳಿದನು.

❖❖❖

ಒಂದಾಣೆಯ ನಿಕ್ಕಲ್ ಹೊಸ ನಾಣ್ಯಗಳು ಬೊಂಬಾಯಿನ ಟಂಕಸಾಲೆಯಲ್ಲಿ ಛಾಪು ಆಗುವವು. ಮೊದಲು ದಿನಕ್ಕೆ ಅರ್ಧ ಲಕ್ಷ ನಾಣ್ಯಗಳನ್ನು ತಯಾರ್ಮಾಡುತ್ತಿದ್ದರು. ಅದು ಸಾಲದೆಬಂದದ್ದರಿಂದ ಈಗ ದಿನ ಒಂದಕ್ಕೆ ಮೂರು ಲಕ್ಷ ನಾಣ್ಯಗಳಂತೆ ಛಾಪು ಆಗುತ್ತವೆ. ಆದರೂ ಇದು ಸಾಲದೆಬಂದಿದೆ. ಪ್ರಾರಂಭದಿಂದ ಕಳೆದ ತಿಂಗಳ ೨೦ನೇ ತಾ. ವರೆಗೆ ೯೯ ಲಕ್ಷ ನಾಣ್ಯಗಳನ್ನು ತಯಾರ್ಮಾಡಿ ಚಲಾವಣೆಗೆ ತಂದಿರುವಂತೆ ಪ್ರಕಟವಾಗಿದೆ. ಆದರೆ ಅನೇಕ ಪಟ್ಟಣಗಳಲ್ಲಿ ಆಗಲೇ ಕೆಲವರು ಸೀಸದಲ್ಲಿ ಈ ಒಂದಾಣೆ ನಾಣ್ಯಗಳಂತೆಯೇ ಖೋಟಾ ನಾಣ್ಯಗಳನ್ನು ತಯಾರ್ಮಾಡಿ, ಚಲಾವಣೆಗೆ ತಂದಿರುತ್ತಾರೆ ಈ ನಾಣ್ಯವನ್ನು ಕಾಣದವರು ಮೋಸ ಹೋಗಲು ಅನುಮಾನವಿಲ್ಲ.

❖❖❖

ರಂಗೂನ್ ಪಟ್ಟಣದಲ್ಲಿರುವ ಸೆಂಟ್ ಜಾನ್ ಎಂಬ ವಿದ್ಯಾಶಾಲೆಯಲ್ಲಿ ಸುಮಾರು ೬೦೦ ಮಂದಿ ಬಾಲಕರು ವಿದ್ಯಾಭ್ಯಾಸ ಮಾಡುತ್ತಾರೆ. ಕಳೆದ ವಾರ ಒಂದು ದಿನ ಆ ಸ್ಕೂಲಿಗೆ ೪೧ ಹುಡುಗರು ಮಾತ್ರ ಸ್ಕೂಲಿಗೆ ಹಾಜರಾದರು. ಉಳಿದವರೆಲ್ಲಾ ಹೋಗಲೇ ಇಲ್ಲ. ಹೆಡ್ ಮಾಸ್ಟರು ಈ ಹುಡುಗರಿಂದ ಗಲಭೆಯೇನಾದರೂ ಆದೀತೆಂದು ಯೋಚಿಸಿ ಪೋಲೀಸಿನವರನ್ನು ಕರೆಸಿಕೊಂಡರು. ಉಪಾಧ್ಯಾಯರುಗಳ ಪೈಕಿ ಯೂರೋಪ್ಯರುಗಳು ಹುಡುಗರನ್ನು ಏನೋ ಅನುಮಾನಪಡಿಸಿದರೆಂತಲೂ, ಅದಕ್ಕಾಗಿ ಹುಡುಗರು ವಿದ್ಯಾಶಾಲೆಗೆ ಹೋಗದೆ ನಿಂತುಬಿಟ್ಟರೆಂತಲೂ, ಈಗ ಆ ಹುಡುಗರು ವಕೀಲರನ್ನಿಟ್ಟು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಗೆ ಅರ್ಜಿ ಬರೆಸಿರುತ್ತಾರೆಂತಲೂ ತಿಳಿದುಬಂದಿದೆ.

❖❖❖

ಮದರಾಸ್ ಅಧಿಪತ್ಯದಲ್ಲಿರುವ ಪೋಸ್ಟ್ ಮಾಸ್ಟರುಗಳಿಗೆಲ್ಲಾ ಕೆಳಗೆ ಕಂಡಂತೆ ಸಂಬಳಗಳನ್ನು ಈ ತಿಂಗಳ ಪ್ರಾರಂಭದಿಂದ ಏರ್ಪಡಿಸಿರುತ್ತಾರೆ ಬೆಂಗಳೂರು ಪೋಸ್ಟ್ ಮಾಸ್ಟರಿಗೆ ೫೦೦ ರೂ ; ಟ್ಯುಟಿಕೊರಿನ್, ಹೈದರಾಬಾದ್, ಊಟಕಮಂಡ್, ಕ್ಯಾಲಿಕಟ್, ತಿರುಚನಾಪಳ್ಳಿ, ಮಧುರೆ, ಈ ಸ್ಥಳಗಳ ಪೋಸ್ಟ್ ಮಾಸ್ಟರುಗಳಿಗೆ ೩೦೦ ರೂ , ಬಳ್ಳಾರಿ, ಕಾಕಿನಾಡು, ಕೊಯಮುತ್ತೂರು, ಕುಂಭಕೋಣ, ಮೈಸೂರು, ನೆಲ್ಲೂರು, ಸೆಂಟ್ ಥಾಮಸ್ ಮೌಂಟ್ (ಮದರಾಸ್ ಪಟ್ಟಣದಲ್ಲಿ), ಸೇಲಂ, ರಾಜಮಂಧರಿ, ನಾಗಪಟ್ಟಣ, ಪಾಲಂಕೋಟೆ, ತಂಜಾವೂರು, ಈ ಪಟ್ಟಣಗಳ ಪೋಸ್ಟ್ ಮಾಸ್ಟರುಗಳಿಗೆ ೨೦೦ ರೂ ; ಬೇರೆ ೨೦ ಹೆಡ್ ಪೋಸ್ಟ್ ಮಾಸ್ಟರುಗಳಿಗೆ ೧೫೦ ರೂ , ಈ ರೀತಿ ಸ್ಯಾಂಕ್ಷನ್ ಮಾಡಿದಾರೆ.

❖❖❖

ಪಂಜಾಬಿ ಸಿಪಾಯಿಗಳಲ್ಲಿ ಒಬ್ಬನಾದ ಪ್ರೇಮಸಿಂಗ್ ಎಂಬುವನು ಕಲ್ಕತ್ತೆಯಲ್ಲಿ ನಡೆದ ಒಂದು ಸಭೆಗೆ ಹೋಗಿ ಇಂಗ್ಲಿಷ್ ರಾಜ್ಯಭಾರವನ್ನು ಕುರಿತು ಅಕ್ಷೇಪಕರವಾದ ಉಪನ್ಯಾಸಮಾಡಿದನು ಈಗ ಅವನನ್ನು ಹಿಡಿದು ಸೈನ್ಯದ ಕೋರ್ಟಿನವರು ದರ್ಯಾಫ್ತು ಮಾಡಿ, ತೀರ್ಮಾನ ಹೇಳುವುದಕ್ಕಾಗಿ ಕಟ್ಟನ್ನು ಸೈನ್ಯಾಧಿಪತಿಯ ಬಳಿಗೆ ಕಳುಹಿಸಿದಾರೆ ಅಪರಾಧಿಯಾದವನು ತಾನು ವ್ಯಾಖ್ಯಾನ ಮಾಡಿದ್ದ ವೇಳೆ ತನ್ನ ಸ್ನೇಹಿತರು ತನ್ನನ್ನು ಆ ಸಭೆಗೆ ಕರೆದುಕೊಂಡು ಹೋದರೆಂತಲೂ, ತಾನು ಪ್ರಜ್ಞೆಯಿಲ್ಲದೆ ಆ ಸಭೆಯಲ್ಲಿ ನಿಂತು ಮಾತನಾಡಿದೆನೆಂತಲೂ, ತಾನು ಮದ್ಯಪಾನ ಮಾಡದೆ ಸರಿಯಾಗಿ ಇದ್ದಿದ್ದರೆ ಎಂದಿಗೂ ಅಂಥಾ ಕೂಟಕ್ಕೆ ಹೋಗುತ್ತಿರಲಿಲ್ಲವೆಂತಲೂ, ಆ ರೀತಿ ಉಪನ್ಯಾಸ ಮಾಡುತ್ತಲೂ ಇರಲಿಲ್ಲವೆಂತಲೂ ವಾಜಿಮ್ಲ ಕೊಟ್ಟಿದಾನೆ.

❖❖❖

ವಾಂತಿಭೇದಿ ಉಪದ್ರಕ್ಕೆ ಈರುಳ್ಳಿಯು ಒಳ್ಳೇ ಪರಿಹಾರವೆಂದು ಕಾಣುತ್ತದೆ. ಸುಮಾರು ನಾಲ್ವತ್ತು ವರುಷಗಳ ಹಿಂದೆ ಲಂಡನ್ ಪಟ್ಟಣದಲ್ಲಿ ವಾಂತಿಭೇದಿ ರೋಗ ಕಾಣಿಸಿಕೊಂಡು ತುಂಬಾ ಜನರು ಕಾಲವಾದರು ಒಂದು ಮೊಹಲ್ಲೆಯು ಬಹಳ ಕೊಳಕಾಗಿದ್ದರೂ ಅಲ್ಲಿ ಯಾರಿಗೂ ಆ ರೋಗ ತಗಲಲಿಲ್ಲ. ಇದಕ್ಕೇನುಕಾರಣವೆಂದು ವಿಚಾರಿಸುವಾಗ್ಗೆ ಆ ಮೊಹಲೆಯಲ್ಲಿ ವಾಸಮಾಡತಕ್ಕವರು ಇಟಲಿ ದೇಶದವರೆಂತಲೂ, ಇವರೆಲ್ಲಾ ಈರುಳ್ಳಿಯನ್ನು ವಿಶೇಷವಾಗಿ ತಿನ್ನತಕ್ಕವರೆಂತಲೂ, ಅವರ ಮನೆಗಳೊಳಗೆಲ್ಲಾ ಈರುಳ್ಳಿಯ ಗಿಡಗಳನ್ನು ಕಟ್ಟಿ ಇಳಿಬಿಟ್ಟುಕೊಂಡಿದ್ದರೆಂತಲೂ ತಿಳಿದುಬಂತು. ಆಗ ಡಾಕ್ಟರುಗಳು ಈರುಳ್ಳಿಯು ವಾಂತಿಭೇದಿ ಉಪದ್ರಕ್ಕೆ ಪರಿಹಾರವೆಂದು ಅಭಿಪ್ರಾಯಪಟ್ಟರು. ಬಹುಶಃ ಈ ತರಕಾರಿಯು ಇತರ ಅಂಟು ಜಾಡ್ಯಗಳಿಗೂ ಪರಿಹಾರವಾಗಿದ್ದರೂ ಇರಬಹುದು.

❖❖❖

ರಾಜಪುಟಾನಾದಲ್ಲಿರುವ ರಜಪುತ್ರರಲ್ಲೂ ಚರಣರಲ್ಲೂ ಶುಭಾಶುಭ ಕಾಲಗಳಲ್ಲಿ ಬಹಳ ಸಾಲಸೋಲಗಳನ್ನು ಮಾಡಿ ಖರ್ಚುಮಾಡುತ್ತಾ ದಿನೇದಿನೇ ಅನೇಕ ಸಂಸಾರಗಳು ನಿರ್ಗತಿಕರಾಗುತ್ತಾ ಇದ್ದದ್ದನ್ನು ತಪ್ಪಿಸಬೇಕೆಂದು ಇಪ್ಪತ್ತು ವರುಷಗಳ ಕೆಳಗೆ ಒಂದು ಹಿತಕಾರಿಣಿ ಸಭೆಯು ಸ್ಥಾಪನೆಯಾಯಿತು. ಈ ಸಭೆಯವರು ಜನಗಳಿಗೆ ದುಂದು ಖರ್ಚಿನ ಪರಿಣಾಮಗಳನ್ನು ಕುರಿತು ವಿವೇಕ ಹೇಳುತ್ತಾ ಬಂದದ್ದರಿಂದ ಆ ಜನಗಳಲ್ಲಿ ವಿವೇಕ ಉಂಟಾಗಿ ಅನೇಕಾನೇಕರು ಶುಭಾಶುಭ ಕಾರ್ಯಗಳನ್ನು ವಿಶೇಷ ಖರ್ಚಿಲ್ಲದೆ ಮಾಡಿಕೊಳ್ಳುತ್ತಿದಾರೆ ಆದರೆ ಒಂದು ಬಾಬಿನಲ್ಲಿ ಖರ್ಚು ಕಡಮೆಯಾಗುತ್ತಾ ಬಂದಿದ್ದಾಗ್ಯೂ ವಿವಾಹಕಾಲದಲ್ಲಿ ವರದಕ್ಷಿಣೆಗಳೂ ಕನ್ಯಾದಕ್ಷಿಣೆಗಳೂ ಕೇಳುವುದು ಹೆಚ್ಚಾಗುತ್ತಿರುವುದನ್ನು ಅಲ್ಲಿನ ಬ್ರಿಟಿಷ್ ರೆಸಿಡೆಂಟರು ನೋಡಿ, ಆ ಸಭಿಕರಿಗೆ ತಿಳಿಸಿದರು. ಈ ಹಿತಕಾರಿಣಿ ಸಭೆಯವರು ಈ ಭಾಗವನ್ನು ಕಮ್ಮಿಮಾಡಬೇಕೆಂದು ಈಗೀಗ ಪ್ರಯತ್ನ ಪಡುತ್ತಿದಾರೆ.

❖❖❖

ಬಂಗಾಳದಲ್ಲಿ ಮೆ|| ಬಿಪಿನಚಂದ್ರಪಾಲ್‌ರವರು ಕೋರ್ಟಿನಲ್ಲಿ ಸಾಕ್ಷಿ ನುಡಿಯುವದಿಲ್ಲವೆಂದು ಹೇಳಿದ್ದಕ್ಕಾಗಿ ಮ್ಯಾಜಿಸ್ಟ್ರೇಟರು ಅವರಿಗೆ ಆರು ತಿಂಗಳ ಸಾಧಾರಣ ಸಜೆಯನ್ನು ವಿಧಿಸಿದರಷ್ಟೆ. ಕಳೆದ ಬುಧವಾರ ಸಾಯಂಕಾಲ ಕಲ್ಕತ್ತೆಯಲ್ಲಿ ಬಹುಮಂದಿ ವಿದ್ಯಾವಂತರಾದ ಬಂಗಾಳಿಗಳು ಸೇರಿ ಒಂದು ಸಭೆಯನ್ನು ನಡಿಸಿದರು ಮೆ|| ಸುರೇಂದ್ರನಾಥ ಬಾನರ್ಜಿಯವರು ಸಭಾಧ್ಯಕ್ಷತೆಯನ್ನು ವಹಿಸಿ, ಅವರೂ ಇನ್ನು ಕೆಲವರೂ ಉಪನ್ಯಾಸಗಳನ್ನು ಮಾಡಿದರು ಮ್ಯಾಜಿಸ್ಟ್ರೇಟರು ಮೆ|| ಬಿಪಿನ ಚಂದ್ರಪಾಲ್‌ರವರಿಗೆ ವಿಧಿಸಿದ ಶಿಕ್ಷೆಯು ಬಹಳ ಹೆಚ್ಚಾದದ್ದೆಂತಲೂ, ಅವರಿಗೆ ಉಂಟಾಗಿರುವ ಕಷ್ಟದ ವಿಷಯದಲ್ಲಿ ಎಲ್ಲರೂ ವ್ಯಸನಪಡುತ್ತೇವೆಂತಲೂ, ವಿಲಾಯಿತಿಯ ಸರಕುಗಳನ್ನು ಕೊಂಡುಕೊಳ್ಳುವುದಿಲ್ಲವೆಂದು ಸಕಲರೂ ಭಾಷೆಕೊಟ್ಟುಕೊಳ್ಳಬೇಕೆಂತಲೂ ತೀರ್ಮಾನಮಾಡಿದರು. ಈ ಸಭೆಯು ಮುಕ್ತಾಯವಾದಕೂಡಲೇ ಪೋಲೀಸಿನವರು ಮೆ|| ಎ. ಸಿ. ಬ್ಯಾನರ್ಜಿ ಎಂಬೊಬ್ಬ ಬ್ಯಾರಿಸ್ಟರನ್ನು ದಸ್ತಗಿರಿಮಾಡಿದರು ಅವರು ಆ ಸಭೆಯಲ್ಲಿ ರಾಜದ್ರೋಹಕರವಾದ ಸಂಗತಿಗಳನ್ನು ಕುರಿತು ಉಪನ್ಯಾಸ ಮಾಡಿದರೆಂಬುದೇ ಅವರ ಮೇಲೆ ಬಂದಿರುವ ಅಪವಾದವು ಈಗ ಅವರನ್ನು ೨ ೫೦೦ ರೂಪಾಯಿ ಜಾಮೀನು ತೆಗದುಕೊಂಡು ಬಿಟ್ಟಿದಾರೆ ಈ ಮೊಕದ್ದಮೆಯು ಈ ತಿಂಗಳ ೨೩ ಕ್ಕೆ ವಿಚಾರಣೆಯಾಗುವುದು.

ವಿದೇಶ ವರ್ತಮಾನಗಳು.

ಅಮೇರಿಕಕ್ಕೆ ಸೇರಿದ ಸ್ಯಾನ್‌ಫ್ರಾನ್ಸಿಸ್ಕೋ ಪಟ್ಟಣದಲ್ಲಿ ಪ್ಲೇಗ್ ಉಪದ್ರ ಕಾಣಿಸಿಕೊಂಡು ೩೫ ಜನರಿಗೆ ಖಾಯಲೆ ಆಯಿತು ಆ ಪೈಕಿ ೨೦ ಮಂದಿ ಕಾಲವಾದರು

❖❖❖

ಚೀನಾ ರಾಜ್ಯಕ್ಕೆ ಸೇರಿದ ಫೂಚು ಪಟ್ಟಣದಲ್ಲಿ ದೊಡ್ಡ ಬೆಂಕಿಯು ಅನಾಹುತ ಪ್ರಾಪ್ತವಾಗಿ ೧೦೦ ಜನರು ಮೃತಪಟ್ಟರು ಸುಮಾರು ೬೫ ಲಕ್ಷ ರೂಪಾಯಿನ ಆಸ್ತಿಪಾಸ್ತಿಗಳು ನಾಶವಾದವು.

❖❖❖

ಚೀನಾ ರಾಜ್ಯದಲ್ಲಿ ಪಾರ್ಲಿಮೆಂಟಿನ ಮಾದಿರಿಯಲ್ಲಿ ಒಂದು ಲೆಜಿಸ್ಲೆಟಿವ್ ಕೌನ್ಸಿಲ್ ಎಂಬ ಸಭೆಯನ್ನು ಸ್ಥಾಪಿಸಬೇಕೆಂದು ಚಕ್ರವರ್ತಿ ನಿಯವರು ತೀರ್ಮಾನ ಮಾಡಿ, ಹುಕುಂ ಪ್ರಕಟಿಸಿದಾರೆಂದು ತಿಳಿದುಬಂದಿದೆ

❖❖❖

ಮಧ್ಯ ಅಮೇರಿಕಕ್ಕೆ ಸೇರಿದ ಮೆಕ್ಸಿಕೋ ರಾಜ್ಯದಲ್ಲಿ ಎರ್ಕಾ ನೇರ್ಷಿಯಾ ಎಂಬ ಸ್ಟೇಷನ್ ಬಳಿ ಎರಡು ರೈಲ್ ಗಾಡಿಗಳು ಎದುರು ಬದುರಾಗಿ ಬಂದು ಢಿಕ್ಕಿ ಹೊಡೆದು ಅನಾಹುತವಾದದ್ದರಲ್ಲಿ ೪೦ ಜನರು ಪ್ರಾಣ ಕಳೆದುಕೊಂಡರು, ೩೪ ಜನರಿಗೆ ಜಖಂ ಆಗಿದೆ.

❖❖❖

ಫ್ರಾನ್ಸ್ ರಾಜ್ಯಕ್ಕೆ ಸೇರಿದ ದಕ್ಷಿಣ ಪ್ರಾಂತ್ಯಗಳಲ್ಲಿ ಮಾಂಟ್ ಪೆಲಿಯರಿನ ಸುತ್ತುಮುತ್ತಲೂ ಅಪಾರವಾದ ಮಳೆಗಳು ಸುರಿದು ಬಹಳ ನಷ್ಟ ಉಂಟಾಗಿದೆ ಅನೇಕಾನೇಕ ದ್ರಾಕ್ಷಿ ತೋಟಗಳು ನಾಶವಾದವು ಹಲವರು ಪ್ರಾಣಕಳೆದುಕೊಂಡರು. ನೂರಾರು ಕೆರೆಗಳು ಏರಿನಷ್ಟವಾದವು ಅನೇಕ ಗ್ರಾಮಗಳಲ್ಲಿ ನೀರು ನಿಂತು ತುಂಬಾ ಕಷ್ಟನಷ್ಟಗಳನ್ನುಂಟುಮಾಡಿದೆ

❖❖❖

ರಷ್ಯಾ ರಾಜ್ಯಕ್ಕೆ ಸೇರಿದ ಲಾಡ್ಸ್ ಎಂಬ ಪಟ್ಟಣದಲ್ಲಿ ಕೆಲವು ದಿನಗಳ ಹಿಂದೆ ಒಂದು ಕಾರ್ಖಾನೆಯ ಯಜಮಾನನನ್ನು ಯಾರೋ ಕೊಂದುಬಿಟ್ಟಿದ್ದರು ಸರ್ಕಾರದವರು ಈಚೆಗೆ ಪತ್ತೆ ತರದೂದು ನಡಿಸಿ ಕೆಲವರನ್ನು ಹಿಡಿದು, ದರ್ಯಾಫ್ತು ಮಾಡಿಸದೇನೇ ಕಳೆದ ವಾರ ಏಳು ಮಂದಿ ಕೂಲಿಯವರನ್ನೂ ಒಬ್ಬ ಹುಡುಗನನ್ನೂ ಗುಂಡಿನ ಬಾಯಿಗೆ ಕಟ್ಟಿ ಕೊಂದುಹಾಕಿಸಿದರು.

❖❖❖

ವಿಲಾಯತಿಯಲ್ಲಿ ಕಾಲವಾದ ಮೆ|| ಡಾನಿಯಲ್ ಮಲಿಯಾ ಎಂಬಾತನು ೩೫,೦೦೦ ರೂಪಾಯನ್ನು, ಮಿಸ್ ಮೇರಿ ಎಲಿಸಬೆತ್ ಹಾರ್ಟನ್‌ರೋ ಎಂಬಾಕೆಯು ೧೯೦,೦೦೦ ರೂಪಾಯನ್ನೂ, ಮಿಸೆಸ್ ಸಾರಾ ಗ್ರೇಸ್ ಗುಡ್ವಿಯರ್ ಎಂಬಾಕೆಯು ೧೫೦,೦೦೦ ರೂಪಾಯನ್ನೂ ತಮ್ಮ ತಮ್ಮ ಆಸ್ತಿಯಿಂದ ಧರ್ಮಕಾರ್ಯಗಳಿಗೆ ವಿನಿಯೋಗಿಸಬೇಕೆಂದು ಮರಣಶಾಸನವನ್ನು ಬರೆದಿಟ್ಟು ಇರುತ್ತಾರೆ

❖❖❖

ವಿಲಾಯಿತಿಗೆ ಸೇರಿದ ಲಿಡ್ಸ್ ಪಟ್ಟಣದಲ್ಲಿ ವಾಲ್ಟರ್ ಕ್ಲಾಫಂ ಹಸ್ಟರ್ ಎಂಬೊಬ್ಬ ಡಾಕ್ಟರನ್ನು ಅತನಿಂದ ಚಿಕಿತ್ಸೆ ಮಾಡಿಸಿಕೊಳ್ಳುತ್ತಿದ್ದ ಜಾನ್ ಏಲ್ಲಿಯಂ ಹಾರಿಸ್ ಎಂಬ ರೋಗಿಯು ಗುಂಡಿನಿಂದ ಹೊಡೆದು ಕೊಂದುಹಾಕಿದ್ದಲ್ಲದೆ ಅದೇ ಗುಂಡಿನಿಂದ ತಾನೂ ಹೊಡೆದುಕೊಂಡು ಮೃತಪಟ್ಟನು ತನಿಖೆಯಾಗುವಲ್ಲಿ ಆ ರೋಗಿಗೆ ಸ್ಥಿರಚಿತ್ತವಿಲ್ಲದೆ ಈ ಕೃತ್ಯಗಳನ್ನು ನಡಿಸಿದನೆಂದು ತಿಳಿದು ಬಂತು.

❖❖❖

ಚೀನಾ ರಾಜ್ಯದಲ್ಲಿ ಹಿಂದೆ ಪ್ರಾಪ್ತವಾಗಿದ್ದ ಬಾಕ್ಸರ್ ಎಂಬ ಗುಂಪಿನವರ ದಂಗೆಯು ಕಳೆದ ವಾರ ಮತ್ತೆ ತಲೆದೋರುತ್ತಿದೆ ದಕ್ಷಿಣ ಕಾಯಾಂಗಿಯಲ್ಲಿ ಒಬ್ಬ ಇಟಲಿ ಪಾದ್ರಿಯನ್ನೂ ಕೆಲವು ದೇಶೀಯ ಕ್ರೈಸ್ತರನ್ನೂ ಕೊಂದುಹಾಕಿದಾರೆ. ಕಾಂಗ್ ಚೌಫು ಎಂಬಲ್ಲಿದ್ದ ಮಿಷನ್ ಬಂಗಲೆಯನ್ನು ಸುಟ್ಟುಬಿಟ್ಟರು ಪಾದ್ರಿಗಳು ಅಲ್ಲಿಂದ ತಪ್ಪಿಸಿಕೊಂಡು ಕಯಾಕ್ಸಾಗೆ ಹೋಗಿ ತಂತೀವರ್ತಮಾನ ಕೊಟ್ಟಿದಾರೆ.

❖❖❖

ಕೊಲಂಬಿಯಾದಲ್ಲಿ ಅಟ್ಲಿನ್ ಎಂಬ ಪಟ್ಟಣದೊಳಗೆ ೩೦೦ ಬಿಳೀ ಜನರು ಗಣಿಗಳಲ್ಲಿ ಕೆಲಸಮಾಡತಕ್ಕ ೬೩ ಮಂದಿ ಜಪಾನವರನ್ನು ಹಿಡಿದು ಬಲಾತ್ಕಾರದಿಂದ ಅಮೇರಿಕಕ್ಕೆ ಕಳುಹಿಸಬೇಕೆಂದು ಹಡಗಿನೊಳಕ್ಕೆ ಕೂಡಬಿಟ್ಟರು ಅಷ್ಟರಲ್ಲೇ ಸರ್ಕಾರದವರು ಹೋಗಿ ದೊಂಬಿಯನ್ನು ಅಣಗಿಸಿರುತ್ತಾರೆ ಆ ದೇಶದಲ್ಲಿ ಏಷ್ಯಾ ಖಂಡದ ಜನರ ಮೇಲೆ ಅನ್ಯಾಯಗಳು ಹೆಚ್ಚುತ್ತಿರುವವು ಇವರು ಹೋಗಿ ಅಲ್ಲಿನ ಸ್ವದೇಶಿಗಳಿಗೆ ಜೀವನ ತಪ್ಪಿಸುತ್ತಾರೆಂಬುದೇ ಈ ಗಲಭೆಗೆ ಕಾರಣವೆಂದು ತಿಳಿಯುವುದು

❖❖❖

ಸಯ್ಯಾಂ ರಾಜ್ಯದ ದೊರೆಯವರು ಕಳೆದ ವಾರ ಜರ್ಮನಿ ರಾಜ್ಯಕ್ಕೆ ಸೇರಿದ ಹಾಂಬರ್ಗ್ ಪಟ್ಟಣದಲ್ಲಿ ತಮ್ಮ ಹುಟ್ಟಿದ ಹಬ್ಬವನ್ನು ಮಾಡಿಕೊಂಡರು. ಆ ದಿನ ಅವರು ನೂರಾರು ಪುರನಿವಾಸಿಗಳಿಗೆ ಭೋಜನ ಮಾಡಿಸಿದರು. ಅನೇಕರನ್ನು ತಮ್ಮ ಬಳಿಗೆ ಕರೆಸಿಕೊಂಡು ಅವರಿಗೆಲ್ಲಾ ಬಹುಮಾನಗಳನ್ನು ಕೊಡಿಸಿದರು. ಕೆಲವರಿಗೆ ಮೆಡಲ್ ಎಂಬ ಬಿರುದಿನ ಬಿಲ್ಲೆಗಳನ್ನೂ ಕೆಲವರಿಗೆ ಗೌರವವುಳ್ಳ ಅಂಕಿತಗಳನ್ನೂ ದಯಪಾಲಿಸಿದರು ರಾತ್ರಿ ದೊಡ್ಡ ಮನುಷ್ಯರನ್ನು ಕರೆಸಿ ಔತನ ಮಾಡಿಸಿದರು. ದಿವ್ಯವಾದ ಬಾಣಬಿರುಸುಗಳು ಹಾರಿಸಲ್ಪಟ್ಟವು. ದೊರೆಯವರು ಮರುದಿನ ಅಲ್ಲಿಂದ ಫ್ರಾನ್ಸಿಗೆ ಪ್ರಯಾಣ ಮಾಡಿದರು.

❖❖❖

ಸ್ಪೇಯಿನ್ ರಾಜ್ಯಕ್ಕೆ ಸೇರಿದ ಮಲಗಾ ಪ್ರಾಂತ್ಯದಲ್ಲಿ ಪ್ರವಾಹಗಳ ದೆಸೆಯಿಂದ ಅನೇಕ ಗ್ರಾಮಗಳು ನಾಶವಾದವೆಂತಲೂ, ತೊಂಬತ್ತೈದು ಜನರು ಮೃತಪಟ್ಟದ್ದು ಇದುವರೆಗೆ ಗೊತ್ತಾಗಿದೆ ಎಂತಲೂ ತಂತೀ ವರ್ತಮಾನ ಬಂದಿದೆ. ಈಚೆಗೆ ಬಂದಿರುವ ತಂತೀ ವರ್ತಮಾನವೇನೆಂದರೆ—ಮಲಗಾ ಪ್ರಾಂತ್ಯದ ಗವರ್ನರವರು ಕಳುಹಿಸಿರುವ ರಿಪೋರ್ಟಿನ ಪ್ರಕಾರ, ಈ ಪ್ರವಾಹಗಳ ದೆಸೆಯಿಂದ ೬೨ ಜನರು ಮೃತಪಟ್ಟರು; ೬೮ ಜನರಿಗೆ ಜಖಂ ಆಗಿದೆ. ಅನೇಕ ಫಲಭರಿತವಾದ ವಿಸ್ತಾರವಾದ ದ್ರಾಕ್ಷಿ ತೋಟಗಳು ಮಣ್ಣುಮುಚ್ಚಿಹೋದವು ಮಳೆಯು ಬಿಡದೆ ಸುರಿಯುತ್ತಲೇ ಇದೆ. ಪ್ರವಾಹವು ಇನ್ನೂ ಹೆಚ್ಚಿದ ಪಕ್ಷದಲ್ಲಿ ಅಪಾರ ನಷ್ಟವಾದೀತೆಂಬುದೇ

❖❖❖

ಫಿಲಿಪ್ಪೈನ್ ದ್ವೀಪಸಮುದಾಯವನ್ನು ಅಮೇರಿಕದವರು ಸ್ಪೇಯಿನ್ ರಾಜ್ಯದವರಿಂದ ಪಡೆದುಕೊಂಡಾರಭ್ಯ ಅಲ್ಲಿ ಪ್ರಜಾ ನೆಮ್ಮದಿಯನ್ನು ಕಾಪಾಡುವುದೇ ಮೊದಲಾದ ಕಾರ್ಯಗಳಿಗೆ ೧೨೦ ಕೋಟಿ ರೂಪಾಯನ್ನು ಖರ್ಚು ಮಾಡಿರುತ್ತಾರೆ. ಆದರೂ ಆ ದ್ವೀಪಗಳ ಸ್ಥಿತಿಯು ತೃಪ್ತಿಕರವಾಗಿಲ್ಲವೆಂತಲೂ ಆದಕಾರಣ ಆ ದ್ವೀಪಸಮುದಾಯವನ್ನೆಲ್ಲಾ ಜಪಾನವರಿಗೆ ವಿಕ್ರಯಮಾಡುವುದೇ ಕ್ಷೇಮಕರವೆಂತಲೂ ಕೆಲವರು ಚರ್ಚೆಮಾಡುತ್ತಿದಾರೆ ಆದರೆ ಅಮೇರಿಕದ ಕೆಲವು ದೊಡ್ಡ ಮನುಷ್ಯರು ಜಪಾನವರಿಗೆ ಈ ದ್ವೀಪಸಮುದಾಯವು ಸೇರಿಹೋದರೆ ಪೂರ್ವ ಸಮುದ್ರದಲ್ಲಿ ಅವರ ಅಧಿಕಾರವೇ ಹೆಚ್ಚಿಬಿಡುವುದಾದ್ದರಿಂದ ಅವರಿಗೆ ಅದನ್ನು ವಹಿಸಕೂಡದೆಂದು ಹೇಳುವರು ಹ್ಯಾಗೂ ಈ ದ್ವೀಪಗಳಲ್ಲಿ ಕ್ರಮವಾಗಿ ಪ್ರಜಾ ನೆಮ್ಮದಿಯೂ ನೆಲೆಗೊಳ್ಳುವಂತೆ ಮಾಡಬೇಕಾದದ್ದು ಅವಶ್ಯವಾಗಿರುವುದು.

❖❖❖

ಕಾನಡಾ ಎಂಬ ಇಂಗ್ಲೀಷ್ ಸ್ವಾಸ್ಥ್ಯದ ಮಾಸ್ಟರ್ ಎಂಬ ವಿದ್ಯಾನಿಲಯದಲ್ಲಿ ಇಬ್ಬರು ವಿದ್ಯಾರ್ಥಿಗಳು ಶಾಸ್ತ್ರ ವಿದ್ಯಾ ಪರಿಶೋಧನೆಯನ್ನು ಪ್ರಾರಂಭಿಸಿ, ಕೆಲವು ದಿನಗಳಿಂದಲೂ ಹೊಸ ಸಂಗತಿಯನ್ನು ಕಂಡುಹಿಡಿಯಬೇಕೆಂದು ಪರೀಕ್ಷೆಗಳನ್ನು ಮಾಡುತ್ತಾ ಬಂದರು ಈಗ ಅವರ ಪರೀಕ್ಷೆಗಳೂ ಶ್ರಮವೂ ಸಾರ್ಥಕವಾದಂತೆ ಕಾಣುತ್ತಿದೆ. ಕಲ್ಲಿದ್ದಲಿಗೆ ಪ್ರತಿಯಾಗಿ ಧಾನ್ಯದ ಹಾಳಿನಿಂದ, ವಿಶೇಷವಾಗಿ ಭತ್ತದ ಹುಲ್ಲಿನಿಂದ, ಒಂದು ವಿಧವಾದ ಹೊಗೆಯನ್ನು ತೆಗೆದು ಘನೀಭೂತ ಪದಾರ್ಥವಾಗಿ ಮಾಡಿ, ಉರಿಸುವುದಕ್ಕೆ ಸಿದ್ಧಪಡಿಸಿರುತ್ತಾರೆ. ಇದನ್ನು ಸುಲಭವಾಗಿಯೂ ಕೆಚ್ಚಾಗಿಯೂ ತಯಾರ್ಮಾಡುವದು ಸಾಧ್ಯವಾದ ಪಕ್ಷದಲ್ಲಿ ಗಣಿಗಳಿಂದ ಕಲ್ಲಿದ್ದಲನ್ನು ಅಗೆದು ತೆಗೆಯುವ ಶ್ರಮವೆಲ್ಲಾ ತಪ್ಪಿಹೋಗುವದು. ನಮ್ಮ ಹಿಂದೂಸ್ಥಾನದಲ್ಲಿ ಭತ್ತದ ಹುಲ್ಲು ಅಪಾರವಾಗಿ ದೊರಕುವುದಾದ್ದರಿಂದ ಈ ಯತ್ನದಲ್ಲೂ ಅದರಿಂದ ಕಲ್ಲಿದ್ದಲ ಪ್ರತಿನಿಧಿಯನ್ನು ತಯಾರ್ಮಾಡ ಬಹುದಾಗಿದೆ

ತಾಲ್ಲೋಕು ವರ್ತಮಾನಗಳು.

ನೆಲಮಂಗಲ.—ಇಲ್ಲಿ ೨-೩ ತಿಂಗಳಿಂದ ಮಳೆಯು ಮುಚ್ಚರಾಂ ಇಲ್ಲದೆ ಪೈರೆಲ್ಲಾ ಸುಟ್ಟು ನಾಶವಾಗುತ್ತಾ ಬಂದದ್ದರಿಂದ ಜನಗಳ ಗೋಳಾಟವು ಹೇಳ ತೀರದು. ಜಾನುವಾರುಗಳಿಗೆ ಕುಡಿಯುವದಕ್ಕೆ ಕೆರೆಯಲ್ಲಿ ಒಂದು ತೊಟ್ಟು ನೀರಿಲ್ಲ ಮೇಯುವದಕ್ಕೆ ಹುಲ್ಲು ಇಲ್ಲದೆ ಸೊಪ್ಪು ಸೋದೆಗಳನ್ನು ಹಾಕುತ್ತಿದಾರೆ. ಬಡಬಗ್ಗರಿಗೆ ಜೀವನ ನಡೆಯುವದು ತುಂಬಾ ಕಷ್ಟವಾಗಿ, ಮೂರುವರೆ ದುಡ್ಡು ಕೊಟ್ಟರೂ ಒಂದು ಸೇರು ರಾಗಿ ಸಿಕ್ಕುವದು ಕಷ್ಟ. ರೈತಾಪಿ ಜನಗಳೆಲ್ಲಾ ಪ್ರತಿದಿವಸದಲ್ಲೂ ಮುಗಿಲು ನೋಡುತ್ತಿದಾರೆ.—ಈಗ್ಗೆ ೧೦-೧೨ ದಿವಸಗಳ ಹಿಂದೆ ನೆಲಮಂಗಲದಲ್ಲಿರುವ ಸೆರಿಶ್ತೆದಾರ್ ಮೊಹಿದೀನ್ ಹುಸೇನ್ ಸಾಹೇಬರ ತೋಟದಲ್ಲಿ ಕಟ್ಟಿದ್ದ ಸ್ವಂತ ಭಾರಿ ಹಸುವಿನ ೨ ಮೊಲೆಗಳನ್ನು ಯಾರೋ ಕತ್ತರಿಸಿಬಿಟ್ಟಿದ್ದರು. ಮಾಲೀಕರು ನೋಡುವಾಗ ಹಸು ಹೊಕ್ಕಿದಂತೆ ಬಿದ್ದು ರಕ್ತ ಸುರಿಯುತ್ತಿದ್ದದ್ದನ್ನು ಅನೇಕರು ನೋಡಿ ಬಹಳ ಸಂಕಟಪಟ್ಟರು ಅಲ್ಲದೆ ಕೂಡ್ಲೆ ತಕ್ಕ ಚಿಕಿತ್ಸೆ ಮಾಡಿದರು ಹಸು ಜೀವದಿಂದ ಇದೆ.

ಹೊಳೆಹೊನ್ನೂರು.—ಈಗ ೧೦—೧೫ ದಿನಗಳಿಂದಲೂ ಕೋಟೆ ಪೇಟೆಗಳಲ್ಲಿ ಆಗಾಗ್ಗೆ ಇಲಿ ಬೀಳುತ್ತಲೇ ಇವೆ. ಈ ಮಧ್ಯೆ ೩—೪ ದಿನಗಳಿಂದ ಹಗಲೆಲ್ಲಾ ಅತಿಶಯವಾದ ಬಿಸಿಲು ಕಾದು ರಾತ್ರಿಯೆಲ್ಲಾ ಮಳೆಯೂ ಆಗುತ್ತಾ ಜನರಿಗೆ ಇನ್ನೂ ಗಾಬರಿಯನ್ನು ಉಂಟು ಮಾಡುತ್ತಿದೆ. ಪ್ರಾಣ ರಕ್ಷಣೆಗೆ ಮನೆ ಬಿಡೋಣವೆಂದರೆ ಹೊರಗೆ ಮಳೆಯ ಕಾಟ ಒಳಗೆ ಪ್ಲೇಗ್ ಮಾರಿಯ ಕಾಟ. ಹ್ಯಾಗೆ ಮಾಡಬೇಕೆಂಬ ಚಿಂತಾಮನಸ್ಕರಾಗಿ ಅಲ್ಲಲ್ಲಿ ಜನರು ಷೆಡ್ಡು ಹಾಕಲು ಯಾವ ಅನುಕೂಲವೂ ಇಲ್ಲದೆ ಸುತ್ತುಮುತ್ತಲಿನ ಹಳ್ಳಿಗಳಲ್ಲಿ ಸ್ಥಳವನ್ನು ನಿರ್ದೇಶಿಸಿಕೊಂಡಿರುವಲ್ಲಿ ಪುನಃ ಅಲ್ಲಿಯ ಕೆಲವು ಪ್ರದೇಶಗಳಲ್ಲಿ ಇಲಿಗಳು ಬೀಳುತ್ತಿರುವ ವರ್ತಮಾನಕೇಳಿ ದಿಗ್ಭ್ರಾಂತರಾಗಿ ಸುಮ್ಮನೆ ಮೇಟಾ

ದಾತ್ತಿದ್ದಾರೆ. ನೆರೆಯ ಗ್ರಾಮವಾದ ಕಿಬ್ಬೀಪುರದಲ್ಲಿ ಒಬ್ಬ ಹೆಂಗಸಿಗೆ ಪ್ಲೇಗಾಗಿ ಈಗ ಚೇತರಿಸಿಕೊಳ್ಳುತ್ತಿದ್ದಾಳೆ. ಸರ್ಕಾರ ನೌಕರರಿಗೆ ಯಾವ ಅನುಕೂಲವೂ ಇಲ್ಲದೆ ಸರ್ಕಾರದ ಸಹಾಯದ ನಿರೀಕ್ಷಣೆಯಲ್ಲಿದ್ದಾರೆ. ಗ್ರಾಮಸ್ಥರು ಅವ್ಯವಸ್ಥೆಯಾಗಿ ಮೇಲಿನವರ ದೃಷ್ಟಿಗೆ ಬೀಳದೆ ಸಧ್ಯದಲ್ಲಿಯೇ ಕೋಟೆಯು ಕಾಡುಗಿಡಗಳಿಂದಲೂ ಎಂಟಲೆಗಳಿಂದಲೂ ನಾಲಮೂತ್ರಾದಿಗಳಿಂದಲೂ ಭರಿತವಾಗಿ ನಿಶ್ಚಯವಾದ ಅನಾರೋಗ್ಯ ಪ್ರದೇಶವಾಗುವುದರಲ್ಲಿ ಅನುಮಾನವಿಲ್ಲ. ಸ್ಯಾನಿಟೇಷನ್ ರೂಲ್ಸನ್ನು ಯಾಕೆ ಜಾರಿಗೆ ತರಬಾರದೋ ತಿಳಿಯದು.—ಗ್ರಾಮಾಭಿವೃದ್ಧಿಯ ವಿಷಯದಲ್ಲಿ ಬಂದ ಬಂದ ಆಫೀಸರರುಗಳಿಗೆಲ್ಲಾ ರೈತರು ಕಷ್ಟಗಳನ್ನು ಅರಿಕೆಮಾಡಿಕೊಂಡರೂ ಫಲಿಸಲಿಲ್ಲ. ಅಭಿವೃದ್ಧಿಗೆ ಬರಲು ರಸ್ತೆ ಇರಬೇಕು. ಬೆಂಕಿಪುರ, ಶಿವಮೊಗ್ಗ, ಇವೆರಡೇ ರೈತರಿಗೂ ವರ್ತಕರಿಗೂ ಅನುಕೂಲವಾದ ದಾರಿಗಳು. ಈಚೆಗೆ ಅನುಕೂಲವಾಗುತ್ತಿರುವ ೫೦ ನೇ ದಾರಿಯು ತುಂಬಾ ಅಪಾಯಕರವಾದದ್ದಾಗಿ ಮಳೆಗಾಲದಲ್ಲಿ ಮನುಷ್ಯರ ಪ್ರಾಣ ಉಳಿಯುವುದೇ ದುರ್ಲಭ. ಮೊದಲನೆಯದಕ್ಕೆ ಹೋಗುವ ಮಧ್ಯೆ ಕಾನೇಸರವೆಸ್ಸುವ ಅಗಾಧವಾದ ಬಯಲಿದೆ. ಯು ಪ್ರದೇಶವು ಮಳೆ ಬೇಸಿಗೆ ಕಾಲಗಳಲ್ಲಿ ತುಂಬಾ ಮೋಸಪಡಿಸತಕ್ಕದ್ದಾಗಿ ಎಷ್ಟೋ ಜನರು ತಮ್ಮ ಎತ್ತುಗಳನ್ನು ಅಲ್ಲಿಯೇ ಬಿಟ್ಟುಬಂದಿದ್ದಾರೆ. ಭದ್ರಾನದಿಯು ಕಾಲುವೆಯಾಗುವುದೆಂಬ ವರ್ತಮಾನವು ಹರಡಿಕೊಂಡು, ಅನೇಕರು ಮುಗಿಲನ್ನೇ ಎದುರು ನೋಡುತ್ತಿರುವರು.

ಹೊಳೆನರಸೀಪುರ.—ಗಿದ್ದರಾಗಿ ಆಟವು ತೀರಿತು. ಈಚೆಗೆ ೧೫ ದಿನಗಳಿಂದ ಮಳೆ ಬಾರದೆ ಕಿರಾಣಿ ಫಸಲು ನಾಶವಾಗುವದಕ್ಕಿತ್ತು. ಈಗ್ಗೆ ೫—೬ ದಿನಗಳಿಂದ ಪ್ರತಿ ನಿತ್ಯವೂ ಮಳೆ ಹೊಯ್ಯುತ್ತಿರುವದರಿಂದ ಅನುಕೂಲವಾಗಿದೆ.—ಹಾಸನದಲ್ಲಿ ಪ್ಲೇಗ್ ಗಲಾಟೆಯಿಂದ ಈ ಊರಿನ ಜನಗಳು ತುಂಬಾ ಭಯಸ್ಥರಾಗಿರುವದು ಆಶ್ಚರ್ಯವಲ್ಲ. ಆದರೂ ಈ ಊರಿನಲ್ಲಿ ಯಾವ ಗಲಾಟೆಯೂ ಇಲ್ಲದಿರುವದನ್ನು ನೋಡಿ ಸಂತೋಷಪಡಬೇಕಾಗಿದೆ. ಮ್ಯುನಿಸಿಪಾಲಿಟಿ ಕಾರ್ಯಗಳು ತೃಪ್ತಿಕರವಾಗಿವೆ. ಈ ಕಾಲದಲ್ಲಿ ಹೆಚ್ಚು ಮುತುವರ್ಜಿ ವಹಿಸುವದು ಉತ್ತಮವಾಗಿದೆ. ಸಂತೆಯಲ್ಲಿ ಧಾರಣೆವಾಸಿಗಳು ಸ್ವಲ್ಪ ಅನುಕೂಲವಾಗಿವೆ. ರಾಗಿ ರೂಪಾಯಿಗೆ ೨೨—೨೩ ಸೇರು, ಅಕ್ಕಿ ೯—೧೦ ಸೇರು ನಡೆಯುತ್ತಾ ಇದೆ.

ಮಾಯಕೊಂಡ (ಚಿತ್ರದುರ್ಗ).—ಇಲ್ಲಿ ತಾ ೨೨ ರಲ್ಲಿ ಮಳೆ ಆಯಿತು. ಫಸಲುಗಳು ಚೆನ್ನಾಗಿ ಇವೆ. ಜೋಳದ ಪೈರುಗಳಿಗೆ ಕಾಡುಹಂದಿಗಳು ಬಿದ್ದು ನಾಶಮಾಡಿ ಬಡವರಿಗೆ ಬಹಳ ತೊಂದರೆ ಕೊಟ್ಟವು. ಇವು ಹಾದಿಗಳ ಮುಂದೆಯಂತೆ ಒಂದೆರಡು ಹೊಲದಲ್ಲಿ ನೋಡಿದರೆ ಇನ್ನು ಎಷ್ಟರಮಟ್ಟಿಗೆ ಇರಬಹುದು ವಾಚಕರೇ ಊಹಿಸಬಹುದು. ಈಗಲು ೧೦ ದಿನಗಳ ಮುಂಚೆ ಬೆಳ್ಳ, ಸೋಮಲಾಪುರ, ನಲ್ಲಕುಂದುರೆ, ಹಿರೇಕೋಗಲೂರು ಜನಗಳು ಷಿಕಾರಿ ಮಾಡಲಿಕ್ಕೆ ಬಂದಿದ್ದರು. ಅವರು ೬ ಹಂದಿಗಳನ್ನು ಮಾತ್ರ ಕೊಂದರು. ಈ ವರುಷ ಯಾವ ಫಸಲೇ ಆಗಲಿ ಬಹಳ ನುಕ್ಸಾನು ಮಾಡಿರುತ್ತವೆ.—ಇಲ್ಲಿನ ಸ್ಕೂಲ್ ಕಟ್ಟಡವು ಇನ್ನೂ ಇದುವರೆಗೂ ಶುರು ಮಾಡಿಲ್ಲ. ಇನ್ನು ನೋಡೆ ಮಾಡ್ಯವೆಂದು ಕಾಣುತ್ತದೆ.—ಮೈಸೂರಿನಲ್ಲಿ ನಡೆಯುವ ವಸ್ತುಪ್ರದರ್ಶನಕ್ಕೆ ಇಲ್ಲಿ ಕೊಲಿಯುವ ಕೈ ಯಂತ್ರವನ್ನು ಮರದಿಂದಲೇ ಮಾಡಿರುತ್ತಾರೆ.

ಚೆನ್ನರಾಯಪಟ್ಟಣ.—ಈ ಊರಿನಲ್ಲಿ ಮಳೆ ಇಲ್ಲದೆ ಹೊಲಗಳಲ್ಲಿ ಹಾಕಿದ ಪೈರುಗಳೆಲ್ಲಾ ಒಣಗಿಹೋಗುತ್ತಾ ಇತ್ತು. ಜನಗಳಲ್ಲರೂ ಪಶುಗಳಿಗೂ ಸಹಾ ನೀರಿಲ್ಲದೆ ತುಂಬಾ ತೊಂದರೆಪಡುತ್ತಿದ್ದರು. ಆದರೆ ಈ ಮಾಹೆ ೨೬ನೆ ತಾ ಗುರುವಾರ ರಾತ್ರಿ ಪೂರಾ ಒಂದು ಹದ ಮಳೆಯಾಯಿತು. ಕೆರೆ ಕಟ್ಟೆಗಳಿಗೂ ಕೊಂಚ ನೀರು ಬಂದದ್ದರಿಂದ ದನಕರುಗಳಿಗೆ ಕುಡಿಯುವುದಕ್ಕೆ ನೀರೂ ಸ್ವಲ್ಪ ಹಸರು ಹುಲ್ಲೂ ಸಹಾ ಬಂದಿರುತ್ತೆ.—ಇದೇ ತಾಲ್ಲೋಕು ಕಸಬಾ ಹೋಬಳಿ ಅಡಗೂರು ಗ್ರಾಮದಲ್ಲಿ ಒಂದು ಶವವು ನಾರಿಯಲ್ಲಿ ತೇಲಿಕೊಂಡು ಬಂದದ್ದನ್ನು ಊರಿನವರು ಕೂಡಲೇ ಪೋಲೀಸಿಗೆ ತಿಳಿಸಿರುತ್ತಾರೆ. ಈ ಊರಿನಲ್ಲಿ ಆಲೆಮನೆ ಹತ್ತಿರ ಕಬ್ಬಿನ ಗಾಣಕ್ಕೆ ಕಬ್ಬು ಕೊಡುತ್ತಾ ಇದ್ದವನು ಅವನ ಕೈ ಕತ್ತರಿಸಿದ್ದರಿಂದ ರಾತ್ರಿ ತೂಕಡಿಸುತ್ತಾ ಕೂತು ಇದ್ದಹಾಗೆ ತಿರುಗುತ್ತಾ ಇದ್ದ ಗಾಣಕ್ಕೆ ಕಸಿಗೂ ಮಧ್ಯೆ ಸಿಕ್ಕಿ ಹಾಕಿಕೊಂಡನು. ದೈವವಶಾತ್ ರಾತ್ರಿವೇಳೆ ಎಚ್ಚರಿಕೆಯಿಂದ ಇರುವುದು ಒಳ್ಳೆಯದು. ನೀವು ಇದನ್ನು ಕಂಡು ನಮ್ಮ ಅಮಲ್ದಾರರು ಮೈಸೂರು ರಸ್ತೆಯಲ್ಲಿ ತೆಗೆಯುತ್ತಿದ್ದ ಬಾವಿಯ ಕೆಲಸವು ಪೂರೈಸಿ, ಕೆಳಗಿನಿಂದಲೂ ಕಲ್ಲು ಕಟ್ಟಿಸಿ ಮೇಲ್ಭಾಗದಲ್ಲೂ ಇಟ್ಟಿಗೆ ಗಾರೆಯಿಂದ ಜಗಲಿಯನ್ನು ಕಟ್ಟಿಸಿ ರಾಟೆ ವಗೈರೆ ಹಾಕಿಸಿರುತ್ತಾರೆ. ಇದರಲ್ಲಿ ಶುದ್ಧವಾದ ಸಿಹಿ ನೀರು ಬಂದು ಜನಗಳಿಗೆ ತುಂಬಾ ಉತ್ಸಾಹವನ್ನುಂಟುಮಾಡಿರುತ್ತೆ.

ಕುಲೀನ್ ಪೇಟೆ.—ಕ್ಲೋಸ್ ಪೇಟೆಯ ಮುಸಲ್ಮಾನ ಜನರು ಸುಮಾರು ಎರಡು ತಿಂಗಳಿಂದಲೂ ಬಾಜಾರಿನ ಮೊದಲಾದ ಮಧ್ಯದ ಸಾರಾಂಶ ಕೆಲಸಗಳನ್ನು ತಯಾರುಮಾಡಿ ಕಳೆದ ತಿಂಗಳು ೨೩ನೇ ತಾ ಸೋಮವಾರ ಷಾಬುರ್ ಎಂಬ ಹಬ್ಬವನ್ನು ಬಹಳ ವಿನೋದದಿಂದ ನಡೆಸಿ, ಆ ರಾತ್ರಿ ೪ ಘಂಟೆ ಆಗುವ ಸಮಯದಿಂದ ಮಾರನೆ ದಿನ ಬೆಳಗ್ಗೆ ೪ ಘಂಟೆಯ ವರಿವಿಗೂ ಮದ್ದು ಸುಡುತ್ತಾ ತುಂಬಾ ವಿನೋದ ಮಾಡಿದರು. ಈ ತಮಾಷೆಗಳನ್ನು ನೋಡುವುದಕ್ಕಾಗಿ ಚನ್ನಪಟ್ಟಣ ಬೆಂಗಳೂರು ಕಾಳೇನಹಳ್ಳಿ ಮೊದಲಾದ ಪ್ರಾಂತ್ಯಗಳಿಂದಲೂ, ಸುತ್ತಮುತ್ತಲೂ ಇರುವ ಹಳ್ಳಿಯ ಜನಗಳೂ, ದೊಡ್ಡ ಮನುಷ್ಯರುಗಳೂ ಬಂದಿದ್ದರು. ಮದ್ದು ಸುಡುವುದರಲ್ಲಿ ಲಾಲ್‌ಬಂದುಮಾಡಿಯುವರೂ, ಕುಮಾರದಾರ್ ಮೊದಲಾದವರೂ, ತೋಫ್‌ಖಾನೆ ಮೊದಲಾದವರೂ ಒಂದು ಕಡೆಯೂ ಮಬಾರಿಸ್ ಸುಬೇದಾರ್ ಮೊದಲಾದವರು ಒಬ್ಬರೇ ಒಂದು ಕಡೆಯೂ ನಿಂತು ನಾನು ಹಾವೆಂದು ಮದ್ದಿನಿಂದ ತಮಾಷೆಯಾಗಿ ಕರತ್ತುಗಳೂ, ಮೊಹಾಬಿಲೆಗಳೂ ಮಾಡಿ ಆಡಿದ್ದರಲ್ಲಿ, ಮದಾರ್‌ಖಾನ್ ಸುಬೇದಾರ್ ಮೊದಲಾದವರೇ ಕರತ್ತಿನಲ್ಲಿಯೂ, ಮೊಹಾಬಿಲ್ಲಿಯಲ್ಲಿಯೂ ಗೆದ್ದು ಬೆಳಗ್ಗೆ ೯ ಘಂಟೆಯ ಮೇಲೆ ಪೇಟೆಯಲ್ಲಿ ಬ್ಯಾಂಡ್ ಮೊದಲಾದ ವಾದ್ಯಘೋಷಗಳೊಡನೆ ಜನರೆಲ್ಲಾ ಹೊರಟು ತುಂಬಾ ವಿಜೃಂಭಣೆ ಮಾಡಿದರು. ಈ ವರಿವಿಗೂ ಷಾಬುರ್ ಹಬ್ಬದಲ್ಲಿ ಇಷ್ಟು ವಿಜೃಂಭಣೆ ಮೊದಲಾದದ್ದು ನಡೆಯಲಿಲ್ಲ.

ಚಿಕ್ಕಮಗಳೂರು.—ಈಗ್ಗೆ ಒಂದು ವಾರದಿಂದಲೂ ಸಾಧಾರಣವಾಗಿ ಮಳೆಯು ಬೀಳುತ್ತಲೇ ಇದ್ದು ನೆನ್ನೆ ೨೬ ನೆ ತಾ ಸುಮಾರು ಎರಡು ಅಂಗುಲ ಮಳೆಯಾಯಿತು. ಪ್ಲೇಗ್ ರೋಗವು ಹೆಚ್ಚುತ್ತಾ ಪ್ರತಿ ದಿವಸವೂ ಎಂಟು ಹತ್ತು ಜನರು ಸಾಯುತ್ತಾ ಇದ್ದಾರೆ. ಇಲ್ಲಿನ ನಾಯಕರ ಬೀದಿಯಲ್ಲಿದ್ದ ಪ್ಲೀಡರ್ ಮೆ॥ ಶ್ರೀನಿವಾಸರಾಯರೂ ಅವರ ಮೂರುವರು ಮಕ್ಕಳೂ ಪ್ಲೇಗಿನಿಂದ ತೀರಿಹೋದರು. ಷೆಡ್ಡುಗಳಲ್ಲಿಯೇ ಜನರು ಸಾಯುತ್ತಿರುವದರಿಂದ ಕೆಲವರು ಊರಿಗೆ ಬರುವ ಪ್ರಯತ್ನವನ್ನೇ ಮಾಡುತ್ತಿರುವದಾಗಿ ವರ್ತಮಾನ. ರೋಗಕ್ಕೆ ಭಯಪಟ್ಟು ಷೆಡ್ಡುಗಳಿಗೆ ಹೋದರೂ ಅಲ್ಲಿಯು ರೋಗ ವ್ಯಾಪಿಸಿದರೆ, ಬೇರೆ ಎಲ್ಲಿಗೆ ತಾನೇ ಹೋಗುವದು? ತಿರಿಗಿ ಇರುವ ಪಟ್ಟಣಕ್ಕೆ ಹಿತ್ತು ಕಟ್ಟುವದು ಹ್ಯಾಗೆ? ಎಂದು ಪ್ರಲಾಪಿಸುತ್ತಿದ್ದಾರೆ. ಸುತ್ತಲಿರುವ ಗ್ರಾಮಗಳಲ್ಲಿಯೂ ಇಲಿಗಳು ಬೀಳುತ್ತಾ ಕೆಲವು ಗ್ರಾಮಗಳಲ್ಲಿ ಕೆಲವರು ಸತ್ತ ಕಾರಣ ಈಗಾಗಲೇ ಗುಡಿಸಲುಗಳನ್ನು ಕಟ್ಟಿಕೊಂಡು ವಾಸಮಾಡುತ್ತಿದ್ದಾರೆ. ಈ ಊರಿನಲ್ಲಿ ೭ ೮ ತಿಂಗಳಿಂದೀಚೆಗೆ ಸುಮಾರು ನೂರು ಜನರಿಗೆ ಕಮ್ಮಿ ಇಲ್ಲದಂತೆ ಸತ್ತಿರಬಹುದಾಗಿ ಕಾಣುತ್ತದೆ. ಹಿರೇಮಗಳೂರಿನಲ್ಲಿ ಇಪ್ಪತ್ತೈದಕ್ಕೆ ಕಮ್ಮಿ ಇಲ್ಲದೆ ಸತ್ತಿದ್ದಾರೆಂದು ಹೇಳುತ್ತಾರೆ. ಪೋಸ್ಟ್ ಆಫೀಸಿನಲ್ಲಿ ಕೆಲಸ ಮಾಡುತ್ತಿದ್ದವರ ಪೈಕಿ ಕೆಲವರಿಗೆ ರೋಗ ತಗಲಿದ್ದರಿಂದಲೂ ಇಬ್ಬರು ಸತ್ತದ್ದರಿಂದಲೂ ಪೋಸ್ಟ್ ಆಫೀಸಿನ ಸೂಪರಿಂಟೆಂಡೆಂಟರು ಬಂದು ಆಫೀಸನ್ನು ಅಲ್ಲಿಂದ ತಪ್ಪಿಸಿ ಮೈದಾನಿನಲ್ಲಿ ಡೇರಾ ಹೊಡಿಸಿಕೊಂಡು ಆಫೀಸ್ ಮಾಡುವಂತೆ ಏರ್ಪಾಡು ಮಾಡುತ್ತಿದ್ದಾರೆ. ಮುನ್ಸಿಫ್ ಕೋರ್ಟಿನಲ್ಲಿ ಇಲಿ ಬಿದ್ದ ಕಾರಣ ಮುನ್ಸಿಫರು ಸಹ ತಮ್ಮ ಕೋರ್ಟನ್ನು ಡಿಸ್ಟ್ರಿಕ್ಟ್ ಆಫೀಸಿನಲ್ಲಿಯೋ ಇಲ್ಲವೆ ಡೇರದಲ್ಲಿಯೋ ನಡಿಸುತ್ತಿರುವದಾಗಿ ವರ್ತಮಾನ. ಇಲ್ಲಿನ ಕೆಲವು ಸ್ಕೂಲುಗಳನ್ನು ಮುಚ್ಚಿದ್ದಾರೆ. ಇಂಗ್ಲಿಷ್ ಸ್ಕೂಲೂ ಗೌ॥ ಕನ್ನಡಾ ಸ್ಕೂಲೂ ತೆರೆದಿದ್ದರೂ ಹುಡುಗರ್‍ಯಾರೂ ಬರುವಂತೆ ಕಾಣಲಿಲ್ಲವು. ಮಿಡ್ಲ್ ಗರ್ಲ್ಸ್ ಸ್ಕೂಲಿಗೆ ಮಾತ್ರ ಎರಡು ಮೂರು ಹುಡುಗರು ಬರುತ್ತಿದ್ದ ಹುಡುಗರೂ ನಿಂತುಹೋದರು.—ಸಾಧು ಜನಗಳಂತೆ ವೇಷ ಹಾಕಿಕೊಂಡು ಇಲ್ಲಿಗೆ ಬಂದ ಇಬ್ಬರನ್ನು ಇಲ್ಲಿನ ಪೋಲೀಸಿನವರು ಹಿಡಿದು ಝಡ್ತಿಮಾಡಿ ನೋಡಿದ್ದರಲ್ಲಿ ಸುಮಾರು ಇನ್ನೂರು ರೂಪಾಯಿನ ಮಾಲು ಅವರಲ್ಲಿ ಸಿಕ್ಕಿರುವದಾಗಿ ವರ್ತಮಾನ.

ಷಿಕಾರಿಪುರ.—ಈ ವರ್ಷದ ಪೈರುಗಳು ತಕ್ಕಮಟ್ಟಿಗಿವೆ. ಮಳೆಯು ಇಲ್ಲಿ ತಕ್ಕಷ್ಟು ಆಗಿ ಕೆಲವು ಕೆರೆಕಟ್ಟೆಗಳು ತುಂಬಿವೆ. ಆದರೆ ಅಲ್ಲಲ್ಲಿ ಇಲಿಗಳು ಬೀಳುತ್ತವೆ ಎಂಬ ವದಂತಿಯು ಊರಲ್ಲೆಲ್ಲಾ ಹಬ್ಬಿರುವದು.—ತಾ. ೨೩ ರಲ್ಲಿ ನಮ್ಮ ಮೈಸೂರು ಸಂಸ್ಥಾನದ ದಿವಾನ್ ಸಾಹೇಬರವರು ದಯಮಾಡಿಸಿದ್ದರು. ಆಗ ಟ್ರಾವೆಲರ್ಸ್ ಬಂಗ್ಲೆ ಎದುರಿಗೆ ಚಪ್ಪರವು ಹಾಕಲ್ಪಟ್ಟು ಬಹಳ ಅಲಂಕಾರ ಮಾಡಲ್ಪಟ್ಟಿತ್ತು. ೧೧ ಗಂಟೆಗೆ ಚಿತ್ತೈಸಿದರು. ತರುವಾಯ ಮಧ್ಯಾಹ್ನ ಕಚೇರಿಯನ್ನು ಮಾಡಿ ಜನಗಳ ಅಹವಾಲನ್ನು ಕೇಳಿ ಬಹು ಯುಕ್ತವಾದ ಹುಕುಮನ್ನು ದಯಪಾಲಿಸಿದರು. ತರುವಾಯ ೩ ಗಂಟೆ ಸಮಯದಲ್ಲಿ ಊರನ್ನು ಪರಾಂಬರಿಸುವದಕ್ಕೆ ದಯಮಾಡಿಸಿದರು. ಅವರ ಸಂಗಡ ಸೆಕ್ರೆಟರಿಯವರೂ, ನಮ್ಮ ಡೆಪ್ಯುಟಿ ಕಮಿಷನರ್ ಸಾಹೇಬರವರು, ಸಿವಿಲ್ ಸರ್ಜನ್ ಸಾಹೇಬರವರು, ಪೋಲೀಸ್ ಸೂಪರಿಂಟೆಂಡೆಂಟ್ ಸಾಹೇಬರವರೂ, ಫಾರೆಸ್ಟ್ ಕನ್ಸರ್ವೇಟರ್ ಸಾಹೇಬರವರು, ತಾಲ್ಲೋಕ್ ಆಫೀಸರರವರು ಮತ್ತು ಮೆಂಬರುಗಳೇ ಮೊದಲಾದವರು ಬಂದಿದ್ದರು. ಮೊದಲು ದಿವಾನ್ ಸಾಹೇಬರವರು ಮಿಡ್ಲ್ ಗರ್ಲ್ಸ್ ಸ್ಕೂಲಿಗೆ ದಯಮಾಡಿಸಿದರು. ಬಾಲಕಿಯರು ಮೆ॥ ಎಸ್. ಗು ಚ್ಛರಾಯರಿಂದ ಮಾಡಲ್ಪಟ್ಟ ಸಂದರ್ಶನದ ಪದ್ಯವನ್ನು ಪಿಟೀಲಿನೊಂದಿಗೆ ಬಹಳ ಚೆನ್ನಾಗಿ ಹಾಡಿದರು. ತರುವಾಯ ಸೊಕಿಯಮ್ಮ, ತಿಪ್ಪಮ್ಮ, ಸಣ್ಣಮ್ಮ ಎಂಬೀ ಮೂವರು ಬಹು ಚಿಕ್ಕ ಬಾಲಕಿಯರು ಸ್ತ್ರೀ ವಿದ್ಯಾಭ್ಯಾಸದ ವಿಷಯದಲ್ಲಿ ಒಂದು ಸಂಭಾಷಣೆಯನ್ನು ಪದ ಪದ್ಯಗಳೊಡನೆ ಬಹಳ ಚೆನ್ನಾಗಿ ಮಾಡಿದರು. ತರುವಾಯ ದಿವಾನ್ ಸಾಹೇಬರವರಿಗೆ ಹಾರ ತುರಾಯಿಗಳನ್ನು ಕೊಟ್ಟು ಪುಷ್ಪವೃಷ್ಟಿಯನ್ನು ಕರೆದರು. ದಿವಾನ್ ಸಾಹೇಬರವರು ಬಹಳ ತೃಪ್ತಿಪಟ್ಟು ಬಾಲಕಿಯರಿಗೆ ಸಂತೋಷಾರ್ಥವಾಗಿ ಕೆಲವು ರೂಪಾಯಿಗಳನ್ನು ಬಹುಮಾನವಾಗಿ ದಯಪಾಲಿಸಿದರು. ಅಲ್ಲಿಂದ ದಿವಾನರವರು ಆಸ್ಪತ್ರೆಗೆ ಹೋಗಿ ಆಸ್ಪತ್ರೆಯನ್ನೆಲ್ಲಾ ಪರಾಂಬರಿಸಿಕೊಂಡು ಹಳೆಯೂರಿಗೆ ದಯಮಾಡಿಸಿದರು. ಅಲ್ಲಿ ಹುಚ್ಚರಾಯ ದೇವಸ್ಥಾನವನ್ನು ನೋಡಿ, ಬಿದ್ದು ಹೋದ ಭಾಗಕ್ಕೆ ಕೆಲವು ಯೋಚನೆಯನ್ನು ಮಾಡಿದರು. ಹಾಗೆಯೇ ಕಚೇರಿಗೆ ಹೋಗಿ ಎಲ್ಲಾ ಪರಾಂಬರಿಸಿಕೊಂಡು, ಎ. ವಿ. ಸ್ಕೂಲಿಗೆ ಬಂದರು. ಅಲ್ಲಿ ಬಾಲಕರು ಇವರಿಗೋಸ್ಕರವಾಗಿ ಮಾಡಿದ ಇಂಥಾದ ಸಂಗೀತವನ್ನು ಹಾಡಿದರು. ಅಲ್ಲಿ ಎಲ್ಲಾ ಸಂಗತಿಯನ್ನೂ ವಿಚಾರಿಸಿ, ಬಾಲಕರ ಸಂತೋಷಾರ್ಥವಾಗಿ ಕೆಲವು ರೂಪಾಯಿಗಳನ್ನು ಬಹುಮಾನವಾಗಿ ದಯಪಾಲಿಸಿದರು. ಸಾಯಂಕಾಲ ೪ ಗಂಟೆ ಸಮಯದಲ್ಲಿ ಶ್ರೀ ಕುಮುದ್ವತೀ ನದಿಯ ಸ್ವಾಮಿಗಳವರನ್ನು ಕಂಡು ಮಂತ್ರಾಕ್ಷತೆಯನ್ನು ಹೊಂದಿ, ತಾ ೨೬ನೇ ಬೆಳಗ್ಗೆ ಸೊರಬದ ಮಾರ್ಗವಾಗಿ ಸಾಗರಕ್ಕೆ ಪ್ರಯಾಣ ಬೆಳಸಿದರು.

ಚನ್ನಪಟ್ಟಣ.—ಕಳೆದ ವಾರ ಇಲ್ಲಿ ಎರಡು ಹದ ಮಳೆಯಾಗಿ, ಇನ್ನೂ ಮಳೆ ಬರುತ್ತಲೇ ಇದೆ. ಈ ಸಲ ಆಗಿರುವ ೩೦ ಪ್ಲೇಗ್ ಕೇಸುಗಳಲ್ಲಿ ೨೩ ಮರಣಗಳಾಗಿವೆ. ಈಗಲೂ ದಿನಕ್ಕೆ ೩—೪ ಜನರು ಸಾಯುತ್ತಲೇ ಇರುವರು. ಮತ್ತು ನಿರಾಶ್ರಯವಾಗುವವರಿಗೂ ಜನರು ತಂತಮ್ಮ ಕಾಯಿಲೆಯವರನ್ನು ಬಹಿರಂಗ ಮಾಡು[...] ಇಲ್ಲ. ಗವರ್ನಮೆಂಟಿನವರು ನೂರಾರು ರೂಪಾಯಿ ಖರ್ಚು[...] ವೈದ್ಯಶಾಲೆಯನ್ನಿಡಿಸಿದ್ದರೂ ಜನರು ನಂಬಿಕೆ ಇಲ್ಲದೆ ಔಷಧ [...] ಗಾಣಹೋದರೊಳ್ಳದವರಾಗಿರುವದು ತುಂಬಾ ವ್ಯಸನಕರ[...] ಪ್ಲೇಗಿನ ದೆಸೆಯಿಂದ ಊರಿನ ಮುಕ್ಕಾಲುಪಾಲು ಜನರು ಗುಡಿ[...] ಳಲ್ಲಿದ್ದಾರೆ. ಇನ್ನೂ ಕೆಲವರು ಬಿಡುವ ಪ್ರಯತ್ನದಲ್ಲಿರುವರು. [...] ಗಳು ಸಾಯುವದು ಅಧಿಕ.—ಈ ಕಾಲದಲ್ಲಿ ಪೋಲೀಸ್ ಸಿಬ್ಬಂದಿ[...] ಹೆಚ್ಚಾಗಿ ಬೇಕಾಗಿದೆ. ಈಗಿರುವ ಕೆಲವು ಪೋಲೀಸಿನವರಂತೂ [...] ನಲ್ಲಿದ್ದಾರೋ ಏನೋ ಗೊತ್ತೇ ಆಗುವದಿಲ್ಲ. ನಮ್ಮ ಅಮಲ್ದಾ[...] ಇದನ್ನು ಚಿತ್ತಕ್ಕೆ ತಂದು ಗ್ರಾಮಾಂತರಗಳಲ್ಲಿ ಇಟ್ಟಿರುವ ಪೋಲೀ[...] ವರನ್ನೂ ಕೊಂಚ ಕಾಲದ ವರಿಗೂ ಟವನ್ ಉಸ್ತುವಾರಿಗೆ ಹಾಕಿ[...] ದರೆ ಒಳ್ಳೇದಾಗಿ ತೋರುತ್ತೆ.—ಇದೇ ತಿಂಗಳ ತಾ ೨೩ ರಲ್ಲಿ [...] ಫಕಾರ್ ಮಹಮದ್ ಮಸ್ತಾನ್ ಸಾಹೇಬರು ತಮ್ಮ ದಿವಾನಖಾನೆಯ[...] ಹಜರತ್ ಮೌಲ್ವಿ ಹಕೀಂ ಸೈಯದ್ ಮಹಮದ್ ಷಾಹಾದ್ರಿಯ[...] ಸಾ॥ ಬಿಸ್ಮಿಲ್ಲಾಯಾ ಸಾಹೇಬರೂ, ಸಾ॥ ಗುಲಾಮ್‌ಖಾನ್ ಸಾಹೇ[...] ಪಾಪು ಅಂ॥ ಅಬ್ದುಲ್ಲಾಖಾನ್ ಸಾಹೇಬರೂ, ಜವಳಿ ಅಂ॥ ಮಹಮ್ಮದ್[...] ಸಾಹೇಬರೂ, ಮೆ॥ ದವಲತ್‌ಖಾನ್ ಸಾಹೇಬರೂ, ಸೈಯದ್ ಮಸ್ತಾನ[...] ಸೈಯದ್ ಹುಸೇನಿ ಪೀರಾಖಾದ್ರಿ, ಸೈಯದ್ ಅಬ್ದುಲ್ಲಾಯ್ಯ ವ[...] ಸುಮಾರು ೭೦೦ ಜನ ಮುಸಲ್ಮಾನರು ಸಭೆ ಸೇರಿ, ಸಾ॥ ಮಸ್ತಾ[...] ಬರನ್ನೇ ಪ್ರಸಿಡೆಂಟರನ್ನಾಗಿ ನೇಮಿಸಿಕೊಂಡರು. ಮೊದಲು ತಾಲ್ಲೂ[...]ಕ್ ಅಮಲ್ದಾರರ ಕಾಗದವನ್ನು ಓದಿ, ಮೆ॥ ಅಮಲ್ದಾರರು ಈ [...]ಯನ್ನು ಅಲಂಕರಿಸಲು ಇದ್ದ ಅನಾನುಕೂಲಗಳನ್ನು ಸಭಿಕ[...] ತಿಳಿಸಿದರು. ನಂತರ ಚನ್ನಪಟ್ಟಣದಲ್ಲಿ ನಡೆಯುತ್ತಲಿದ್ದ ಹೋ[...]ಬ್ಬದ ಮೊಕದ್ದಮೆಯಲ್ಲಿ ಹಿಂದೆ ಬೆಂಗಳೂರು ಡೆಪ್ಯುಟಿ ಕಮಿಷನ[...] ಕೊಟ್ಟಿದ್ದ ಆರ್ಡರು ರದ್ದಾಗಿ ಗವರ್ನಮೆಂಟಿನಿಂದ ಮೆ॥ ಎಚ್ [...] ಬೆಕ್ ಎಂಬ ಬ್ಯಾರಿಸ್ಟರ ಸಹಾಯದಿಂದ ಕೋರ್ಟ್ ಫೀಸ್ ಸಾಹೇ[...]ತ್ತು ಇತರ ಮುಸಲ್ಮಾನರ ಪರವಾಗಿ ಬಂದ ಹುಕುಮಿನಲ್ಲಿ, ಗೋ[...] ಡುವಿನ ಕಾಮನು ರೈಲ್ವೆ ರಸ್ತೆಯ ಕಡೆಯಿಂದ ಈಚೆಗೆ ಬರ[...]ದೆಂತಲೂ, ಕೋರ್ಟ್ ಫೀಟ ಕಾಮನು ಪ್ರೇರ್ವದ ಹಳೇ ಮಾಮೂಲಿ[...]ತೆ ಉತ್ಸವ ನಡಿಸಬಹುದೆಂತಲೂ ಹುಕುಂ ಆಗಿರುವದಕ್ಕೆ ಮುಸಲ್ಮಾ[...]ಯರು ಸಂತೋಷಪಟ್ಟು, ಮೈಸೂರು ಗವರ್ನಮೆಂಟು ನ್ಯಾಯಮಾ[...] ಫೈಸಲ್ ಮಾಡಿರುವದಕ್ಕಾಗಿ ಶ್ರೀಮನ್ಮಹಾರಾಜರವರಿಗೂ, ದಿವಾ[...] ಸಾಹೇಬರಿಗೂ, ಕೌನ್ಸಲರ್ ಮೆ॥ ವೃಟ್ಟಣ್ಣಶೆಟ್ಟಿಯವರಿಗೂ ಸಭೆ[...]ಮ ಸೂಚಕವಾದ ಟೆಲಿಗ್ರಾಮನ್ನು ಕೊಡುವದಲ್ಲದೆ, ಶ್ರೀಮನ್ಮಹಾ[...]ರಾಜರವರ ಘನತೆಯು ಚಿರಕಾಲ ಸ್ಥಿರವಾಗಿರಲೆಂಬ ಉದ್ದೇಶಕ್ಕೆ [...]ಳಿಯ ದಿನ ಜುಮ್ಮಾ ಮಸೀದಿಯಲ್ಲಿ ರೋಷಣಿ ವಗೈರೆ ಮಾಡಿ, [...]ವರಿಗೆ ಆಶೀರ್ವಾದಗಳನ್ನು ಕೊಟ್ಟು, ನಮಾಜ್ ವಗೈರೆ ಮಾ[...] ಶ್ರೀಮನ್ಮಹಾರಾಜರವರ ಶ್ರೇಯಸ್ಸು ಪ್ರಾರ್ಥನೆ ಮಾಡಬೇಕೆಂಬ[...] ತೀರ್ಮಾನ ಮಾಡಿದರು. ಸಾ॥ ಅಬ್ದುಲ್ ಬುದೂಷ್ ಸಾಹೇಬ್, ಮು[...]ವಾ॥ ಸಾ॥ ಬುರ್ಹಾನ್‌ಸಾಹೇಬ್, ಸೈಯದ್ ಮೊಹಿದೀನ್‌ಸಾಹೇಬ್, ಅ[...]ಲ್ ಸುಭಾನ್‌ಖಾನ್ ಸಾಹೇಬರು ಈ ಮೊಕದ್ದಮೆಯ ಬಾಬತ್ತಿನಲ್ಲಿ ಮುಸಲ್ಮಾನರ ಪರವಾಗಿ ಶ್ರಮಪಟ್ಟದ್ದನ್ನು ಸೈಯದ್ ಮೌ[...] ಮಹಮದ್ ಷಾಹಾದ್ರಿಯವರು ತಿಳಿಸಿ ಸಾ॥ ಅಬ್ದುಲ್ ಬುದೂ[...] ಸಾಹೇಬರಿಗೆ ಗೌರವಾರ್ಥಕವಾದ ಪುಷ್ಪ ಹಾರ ಹಾಕಿ, ಸಭಿಕರಿಗೆ [...] ಸುಪಾರಿ ವಗೈರೆ ಕೊಟ್ಟು ಸಭೆ ಬರಖಾಸ್ತು ಮಾಡಿದರು. ಅನಂತರ ಅ[...]ಲ್ದಾರರು ಸಭಾ ಬರಖಾಸ್ತಾದ ಸ್ಥಳಕ್ಕೆ ಬಂದು ನಡೆದ ಸಂಗತಿಗಳನ್ನು ತಿಳಿದುಕೊಂಡರು.

ದಸರಾ ಮಹೋತ್ಸವವು

ಸನ್ ೧೯೦೭ ನೇ ಅಕ್ಟೋಬರ್ ೮ ನೆ ಮಂಗಳವಾರ ಪ್ರಾತಃಕಾ[ಲ] ೧೧ ಘಂಟೆಗೆ ದಸರಾಲಗ್ನದಲ್ಲಿ ಸಿಂಹಾಸನಾರೋಹಣ ಮತ್ತು ನಜರ್, ಸಾಯಂಕಾಲ ೬ ಘಂಟೆಗೆ ದರ್ಬಾರ್ ಮತ್ತು ನಜರ್.

ತಾ ೯ ನೇ ಬುಧವಾರದಿಂದ ತಾ ೧೪ ನೆ ಸೋಮವಾರದ ವರೆಗೆ ಉಭಯ ದಿನಗಳನ್ನು ಸೇರಿ ಪ್ರತಿ ದಿನವೂ ಬೆಳಗ್ಗೆ ೮ ಘಂಟೆಗೆ ಆ[ನೆ] ಕುದುರೆ ಹಸು ಬಳಗ ಬಿಜಮಾಡುವುದು. ಸಾಯಂಕಾಲ ೬ ಘಂಟೆ[ಗೆ] ದರ್ಬಾರ್.

ತಾ ೧೫ ನೆ ಮಂಗಳವಾರ ಪ್ರಾತಃಕಾಲ ೮॥ ಘಂಟೆಗೆ ವೃಶ್ಚಿಕ ಲಗ್ನದಲ್ಲಿ ಆನೆ ಕುದುರೆ ಮತ್ತು ಆಯುಧ ಹಸು ಬಳಗ ಬಿಜಮಾಡು[ವ]ದು. ಅನಂತರ ಆಯುಧಗಜಾಶ್ವಾದಿಗಳ ಪೂಜೆ. ಸಾಯಂಕಾಲ [...] ಘಂಟೆಗೆ ಇಂಗ್ಲಿಷ್ ದರ್ಬಾರ್.

ತಾ. ೧೬ ನೇ ಬುಧವಾರ ಪ್ರಾತಃಕಾಲ ೬॥ ಘಂಟೆಗೆ ತುಲಾಲ[ಗ್ನ]ದಲ್ಲಿ ಆಯುಧಗಜಾಶ್ವ ಬನ್ನೀಮಂಟಪಕ್ಕೆ ಬಿಜಮಾಡುವುದು. ಅನಂ[ತ]ರ ಪಟ್ಟದ ಕಾಳಗ. ಸಾಯಂಕಾಲ ೪ ಘಂಟೆಗೆ ಜಂಬೂಸವಾರಿ. ಅನಂತರ ದರ್ಬಾರ್.

ತಾ. ೧೭ ನೇ ಗುರುವಾರ ಸಾಯಂಕಾಲ ೬॥ ಗಂಟೆಗೆ [...] ಮೋಹನ ಮಹಲ್‌ನಲ್ಲಿ ದರ್ಬಾರ್, ಮತ್ತು ನಜರ್.

ತಾ ೧೮ ನೇ ಶುಕ್ರವಾರ ಸಾಯಂಕಾಲ ೬॥ ಗಂಟೆಗೆ ದ[...] ಮೋಹನ ಮಹಲ್‌ನಲ್ಲಿ ದರ್ಬಾರ್. ಮಿಲಿಟರಿಯವರಿಗೂ ಪ್ರಜಾಪ್ರ[...]ನಿಧಿಗಳಿಗೂ ನಜರ್.

ಮೈಸೂರು ಗೆಜೆಟ್ ಸಂಗ್ರಹ.

ಸೀನಿಯರ್ ಅ॥ ಕಮಿಷನರ್ ಮೆ॥ ಎ. ಆರ್. ಕೃಷ್ಣ[...] ಐಯ್ಯರವರಿಗೆ ಕೊಟ್ಟಿರುವ ಏಳು ತಿಂಗಳ ರಜವನ್ನು ಇನ್ನೊ[ಂದು] ತಿಂಗಳು ಜಾಸ್ತಿ ಮಾಡಿದೆ.

ಮೆ॥ ಪಿ. ಬಿ. ಥಾಮಸ್ ಯವರು ಮದರಾಸ್ ಸರ್ವಿಸಿಗೆ [...]ಸು ಹೋದದ್ದರಿಂದ ಮೆ॥ ಎಸ್. ಎಂ. ಪ್ರಿಚರ್ಡ್ ಯವರನ್ನು [...] ಲಾರ್ ಚಿನ್ನದ ಗಣಿಗಳ ಪೋಲೀಸ್ ಸೂಪರಿಂಟೆಂಡೆಂಟರಾಗಿ [...] ಬರ್ ೧ ರಿಂದ ನೇಮಕಮಾಡಿದೆ.

ಮುಂದೆ ಹೇಳುವ ಅ॥ ಕವಿಸಾರ್ಧರ ಗಳ ವರ್ಗಾವರ್ಗಿ ಮಾಡಲ್ಪಟ್ಟಿದೆ—ಮೊ॥ ಮಳವ ಪ ರಜ ಯವರ ಶಿವಮೊಗ್ಗೆಯಿಂದ ಚಿತ್ರ ದುರ್ಗ (ಡಿ॥ ಖಜಾನೆ ಛಾರ್ಜಿನಲ್ಲಿ ರತಕ್ಕದ್ದು), ಮೊ॥ ಬಿ ಬೀಮ ರು ಚಿತ್ರದುರ್ಗದಿಂದ ಶಿವಮೊಗ್ಗೆಗೆ (ಎಕ್ಸೈಸ್ ಇಲಾಖೆಯಲ್ಲಿ ಮಾಡತಕ್ಕದ್ದು) ವೆ॥ ಆರ್ ಟಿ ಎಂಜಿನಿಯರು ಶಿವ ಮೊಗ್ಗದಲ್ಲಿ ಎಕ್ಸೈಸ್ ಇಲಾಖೆಯಿಂದ ಜನರಲ್ ಡ್ಯೂಟಿಗೆ

ಫಾರೆಸ್ಟ್ ಅ॥ ಕನ್ಸರ್ವೇಟರ್ ಮೆ॥ ಬಿ ರಾಮಯ್ಯನವರಿಗೆ ಆ ಉದ್ಯೋಗಕ್ಕೆ ಸೇರುವ ತಾರೀಖಿನಿಂದ ಎರಡು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಮುಂದೆ ಹೇಳುವ ಆ ಸರ್ಜನರುಗಳ ವರ್ಗಾವರ್ಗಿ ಮಾಡಲ್ಪಟ್ಟಿದೆ—ಮೆ॥ ವಿ ಜಿ ಪದ್ಮನಾಭಸಿಂಗರು ಕೋಲಾರಕ್ಕೆ, ಕೆ ಅಪ್ಪಾದುರೆ ಮೊದಲಿಯಾರ್ ಕೆ ಕೋಲಾರದಿಂದ ತುಮಕೂರಿಗೆ ವಿ ಮುತ್ತುಸ್ವಾಮಿ ದಾಸ್‌ಯವರು ತುಮಕೂರಿನಿಂದ ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಗೆ

ನಾಲೆಗಳ ಡಿವಿಜನ ಆ ಆ ಇಂಜನಿಯರ್ ಮೆ॥ ಎ ನಲ್ಲಸಾಮಿ ಮೊದಲಿಯಾರ್ ಆಗಸ್ಟ್ ೧೯ರಿಂದ ಎರಡು ವರುಷಗಳ ರಜಾ ಕೊಟ್ಟಿದೆ

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂತವುಗಳಿಗೆ ನಾವು ನಿಗಾ ಕೊಡಲಾರೆವು

ಬಾತ್ಮಿದಾರರು ಒದಗಿಸ ಅಭಿಪ್ರಾಯಗಳಿಗೆ ನಾವು ಜವಾಬುದಾರರಲ್ಲವೆಂಬುದನ್ನು ಸಕಲರೂ ತಿಳಿಯತಕ್ಕದ್ದು —ಎಡಿಟರ್

ಕರೆಸ್‌ಪಾಂಡೆನ್ಸ್.

ಹಂದಕಡಗಳ ಲೈಸೆನ್ಸು

ಸ್ವಾಮಿ,

ಈಗ್ಗೆ ೩-೪ ವರುಷಗಳಿಂದ ಬಂದೂಕಗಳ ಲೈಸೆನ್ಸು ಕ್ರಮವಾಗಿ ಲೈಸನ್ಸ ದಾರರಿಗೆ ಸಿಗದೆ ಆಗದೆ ನಿಂತಿರುವದು ಅನೇಕ ಕಷ್ಟಗಳಾಗಿರುವದು. ಪತ್ರಿಕೆಯ ಮೂಲಕ ಅನೇಕರು ಪ್ರಕಟಿಸಿರುತ್ತಾರೆ ಈ ವಿಷಯಕ್ಕೆ ಸರ್ಕಾರದವರು ವರ್ಷದ ಹೊಸ ಕೈ ಸ ರ ಇಲಸನ್ನು ಕಳ್ಳಿಸುವದೂ ಷ್ಟೋಮಕರವೇ ಆದರೆ ಬಾತ್ಮಿದಾರರಿಗೆ ಲೈಸನ್ಸು ಕೊಡದೆಯೂ, ಅವರು ಈ ವಿಷಯಕ್ಕೆ ಕಾಲ ಸ್ಪ ರಿಗೆ ಡಿಸ್ಟ್ರಿಕ್ಟಿಗೆ ಹಾಕುವ ಅರ್ಜಿಗಳಿಗೆ ಜವಾಬಿಲ್ಲದೆಯೂ ಇರುವದಕ್ಕೆ ಕಾರಣವೇನೋ ತಿಳಿಯಲಿಲ್ಲ ಅಲ್ಲದೆ ಡಿಸ್ಟ್ರಿಕ್ಟು ತಾಲೂಕುಗಳಿಂದ ಪ್ರಜಾಪ್ರತಿನಿಧಿ ಸಭೆಗೆ ಹೋಗುವ ಸ್ತಾನಿಕರು ಯಾಸ ನಾಕನೆಯ ದಿವಸವೂ ಈ ವಿಷಯವನ್ನು ಗಣನೆಗೆ ತರುವರೋ ಇಲ್ಲ ಈ ಸುರಿಯಾದರೆ ವೆಚ್ಚದ ಮೇಲೆ ಪ್ರಜಾಪ್ರತಿನಿಧಿ ಸಭೆಯಲ್ಲಿ ಇತ್ಯರ್ಥವಾಯಿತೆಂದು ನಂಬಿ ದ್ದೇನೆ

ಹೊಳಲ್ಕೆರೆ ನೈ ದಾಸಪ್ಪ

ಕೃಷ್ಣರಾಜಸಾಗರದ ದಕ್ಷಿಣನಾಲೆ

ಸ್ವಾಮಿ

ವೇಲ್ಸಿಂದ ನಾಲೆ ಊರಿನ ಪೂರ್ವಭಾಗದಲ್ಲಿ ಹರಿಯುವ ಕಾಲುವೆಯು ಒಂದು ಹಾವಿಯಾಗಿದೆ ಇದರಿಂದ ಸುಮಾರು ಇನ್ನೂರು ಮುನ್ನೂರು ಎಕರೆಗಿಂತಲೂ ಹೆಚ್ಚಾಗಿಯೇ ನೀರು ಸರಭರಾಯಿ ಆಗ ತಕ್ಕ ಅಂಥಾ ಶಕ್ತಿಯು ಸದರಿ ಕಾಲುವೆ ನಾಲೆಗೆ ಉಂಟು ಆದರೆ ಈ ನಾಲೆಯಿಂದ ಗದ್ದೆಗಳಿಗೆ ನೀರು ಹೋಗುವ ಸ್ಥಳಗಳಲ್ಲಿ ಸಣ್ಣಗಳು ಇಲ್ಲ ಇದರ ಪ್ರಥಮ ಹತ್ತಿರದಲ್ಲಿರುವ ಗದ್ದೆಯವರು ಮನಸ್ಸು ಬಂದಂತೆ ನೀರ ಬಿಟ್ಟುಕೊಳ್ಳುವರು ಅಲ್ಲಿಂದ ಮುಂದಕ್ಕೆ ನೀರ ಕಡಿಮೆಯಾಗಿ ಹೋಗುವದರಿಂದ ಪ ಸ್ವಭಾಗದವರು ನಾಲೆಗೆ ಅಡ್ಡಕಟ್ಟನ್ನು ಹಾಕಿ ನೀರನ್ನೆಲ್ಲಾ ತಮ್ಮ ಗದ್ದೆಗಳ ಕಡೆಗೆ ಬಿಟ್ಟುಕೊಳ್ಳುವರು ಅಲ್ಲಿಂದ ಮುಂದಕ್ಕೆ ಇರುವ ಗದ್ದೆಗಳಿಗೆ ನೀರಿಲ್ಲದೆ ಪೈರುಗಳು ಒಣಗುತ್ತಿರುವದನ್ನೇ ಎವರು ನೋಡುತ್ತಿದ್ದೇವೆ ನಾಲಾ ನ ಗಾರರು ಪ್ರತಿ ದಿನ ಬಂದು ಎಲ್ಲಾ ಗದ್ದೆಗಳಿಗೂ ಸರಿಯಾಗಿ ನೀರು ಬಿಡುವಹಾಗೆ ಪ್ರಯತ್ನ ಮಾಡಿದರೂ ಪ್ರಯೋಜನಕ್ಕೆ ಬರಲಿಲ್ಲ ಯಾಕಂದರೆ ರೈತರು ಬಲಶಾಲಿಗಳೂ, ಸಾಹುಕಾರರುಗಳೂ ಆದ್ದರಿಂದ ನಮ್ಮ ಇಲಾಖಾ ಇಂಜನಿಯರ್ ಸಾಹೇಬರು ಈ ಸಂಗತಿಯನ್ನು ಲಕ್ಷ್ಯಕ್ಕೆ ತಂದುಕೊಂಡು ಈ ಬಡ ರೈತರ ಕಷ್ಟವನ್ನು ನೀಗಿಸುವರೆಂದು ನಂಬಿದ್ದೇನೆ

ಡಿ ಆರ್ ವೈ

ದಾವಣಗೆರೆ ಪ್ಲೇಗಿನ ವಿಚಾರವ

ಸ್ವಾಮಿ

ಈಗ್ಗೆ ೧೦—೧೨ ದಿವಸಗಳಿಂದ ಪ್ಲೇಗಿನ ಗಲಾಟೆ ಪ್ರಾರಂಭವಾಗಿ ಜನಗಳಲ್ಲಿ ತುಂಬಾ ಭೀತಿಯನ್ನು ಉಂಟುಮಾಡಿದೆ ನಾಲ್ಕೈದು ದಿನ ಹಿಂದೆ ಕೋರವರ ಬೀದಿಯಲ್ಲಿ ಒಬ್ಬರಿಗೆ ಪ್ಲೇಗೆಂದು ಪಾಕ್ಟು ಶೀವಾರ್ಕನಮೂ, ಅವಳನ್ನು ಕ್ಯಾಂಪಿಗೆ ಸಾಗಿಸಿ, ಆ ಬೀದಿಯಲ್ಲಿರತಕ್ಕ ಬಡಸರಾದ ಆ ಕೋರಮರನ್ನೆಲ್ಲಾ ಕೂಡ್ಲೆ ಕ್ಯಾಂಪಿಗೆ ಹೋಗುವದಕ್ಕೆ ಪೊರಸತ್ತ ಸಕ ಕೊಡದೆ ಪೋಲೀಸಿನವರನ್ನು ಬಿಟ್ಟು ಬೆದರಿಕೆಯಿಂದ ಬಲಾತ್ಕಾರವಾಗಿ ತಳ್ಳಿಸಿಬಿಟ್ಟರು ಆಗ ಸಾಯಂಕಾಲ ಜೋರಾಗಿ ಮಳೆ ಬಂದು ಆ ಬಡ ಜನರು ತುಂಬಾ ಕಷ್ಟಕ್ಕೆ ಗುರಿಯಾದದ್ದಲ್ಲದೆ ಕೆಲವರು ಒಡವೆವಸ್ತುಗಳು ಸಹ ಕಷ್ಟಪಟ್ಟದ್ದನ್ನು ಅರಿವಿಲ್ಲದೆ ಬಿಟ್ಟು ಹೋಗುವಂತೆಯಾಗಿದೆ ಅವರ ಗೋಳು ಬರೆಯಲು ಅಸಾಧ್ಯ ಹೀಗೆ ಬಲಾತ್ಕಾರವಾಗಿ ಜನಗಳನ್ನು ಮನೆಯಿಂದ ಹೊರಡಿಸಬೇಕೆಂದು ಗೌವರ್ನಮೆಂಟ್ ರೂಲ್ಸು ಏನಾದರೂ ಉಂಟೋ? ಮತ್ತು ಸರ್ಕಾರದ ಕ್ಯಾಂಪಿಗೆ ರೋಗಿಗಳನ್ನು ತೆಗೆದುಕೊಂಡು ಹೋಗತಕ್ಕಂಥಾ ಪದ್ಧತಿ ಇದೆಯೋ? ಈ ಸಮಯದಲ್ಲಿ ಈ ಊರಿನಲ್ಲಿರತಕ್ಕ ನೈಕಾರರೇ ಮೊದಲಾದ ಕೈ ಕೆಲಸದವರೂ ಮತ್ತು ಕೂಲಿ ಜನಗಳೂ ಗುಡಿಸಲನ್ನು ಕಟ್ಟಿಕೊಳ್ಳುವುದಕ್ಕೆ ತಕ್ಕ ಚೈತನ್ಯವಿಲ್ಲದೆಯೂ, ಈ ಕಷ್ಟಕಾಲದಲ್ಲಿ ಹೊಟ್ಟೆಗೆ ಸರಿಯಾಗಿ ಅನ್ನವಿಲ್ಲದೆಯೂ, ಮಳೆಯ ತೊಂದರೆಯಿಂದಲೂ ಅತಿ ಕಷ್ಟಪಟ್ಟು ಸಾಯುವುದಕ್ಕಿಂತಲೂ ಊರಿನಲ್ಲೇ ಪ್ಲೇಗಿನಿಂದ ಸಾಯುವುದು ಎಷ್ಟೋ ಉತ್ತಮವೆಂದು ಆಡಿಕೊಳ್ಳುವರು ಈ ಕಾಲದಲ್ಲಿ ಇಲ್ಲಿನ ಅಧಿಕಾರಿಗಳು ತಾವೇ ಸಿದ್ಧರಾಗಿ ಜನಗಳಿಗೆ ಬುದ್ಧಿಯನ್ನು ಹೇಳಿ, ಅವರ ಅನುಕೂಲವರಿತು ನಿದಾನವಾಗಿ ಮನೆ ಬಿಡಿಸಬೇಕಲ್ಲದೆ, ಸಣ್ಣ ನೌಕರರಿಗೆ ಈ ವಿಷಯದಲ್ಲಿ ಹೆಚ್ಚು ಅಧಿಕಾರ ಕೊಡದಂತೆ ಮಾಡುವುದು ಜನಗಳಿಗೆ ಬಹಳ ಸಹಾಯ ಮಾಡಿದಂತೆ ಆಗುತ್ತದೆ ಇಲ್ಲಿರತಕ್ಕ ಸಾಹುಕಾರರು ಮತ್ತು ಪ್ರಾಮ್ಯವಂತರು ಬಡ ಜನರಿಗೆ ಕಷ್ಟಕಾಲದಲ್ಲಿ ಸಹಾಯ ಮಾಡಲು ಕೈಯಿಲ್ಲದವರಾಗಿದ್ದಾರೆ ಸುಮಾರು ೬ ವರ್ಷಗಳ ಕೆಳಗೆ ಈ ಟೌನ್ ಮ್ಯೂನಿಸಿಪಲ್ ಮೆಂಬರುಗಳ ಪೈಕಿ ಮ॥ ಮಗಾನಹಳ್ಳಿ ಗುರುಬಸಪ್ಪನೆಂಬ ವರು ಇಂಥ ಕಷ್ಟಕಾಲದಲ್ಲಿ ಬಡ ಜನಗಳಿಗೆ ತುಂಬಾ ಸಹಾಯ ಮಾಡುತಾ ಪರೋಪಕಾರಿಗಳಾಗಿದ್ದರು ಇಂಥವರನ್ನು ಕಳೆದುಕೊಂಡದ್ದು ಇಲ್ಲಿನ ಜನಗಳ ದುರದೃಷ್ಟವೆಂತಲೇ ಹೇಳಬೇಕಾಗಿದೆ ಅಂಥಾವ ಹನೀಯರ ಮೇಲ್ಪಂಕ್ತಿಯನ್ನು ಅನುಸರಿಸುವರೊಬ್ಬರನ್ನೂ ಕಾಣೆ

[ಇದಕ್ಕೆ ನಾಲ್ಕಾರು ಮಂದಿ ರುಜು ಹಾಕಿದ್ದಾರೆ]

ತೀರ್ಥಹಳ್ಳಿ ತಾ॥ ಮಲ್ಲಾಪುರದ ಸ್ಕೂಲು ಮತ್ತು ರೀಡಿಂಗ್ ರೂಂ

ಅಯ್ಯಾ,

ಈ ಊರಲ್ಲಿದ್ದ ಸರ್ಕಾರಿ ಸ್ಕೂಲಿನಲ್ಲಿ ಹುಡುಗರ ಹಾಜರಿ ಕಡಮೆಯಾದ್ದರಿಂದಲೂ ಸ್ಕೂಲ್ ಮಾಡಲು ಸರಿಯಾದ ಕಟ್ಟಡ ಇಲ್ಲದೇ ಇದ್ದದ್ದರಿಂದಲೂ ನಮ್ಮ ಡೆಪ್ಯುಟೀ ಇನಸ್ಪೆಕ್ಟರು ಸ್ಕೂಲನ್ನು ಬೇರೆ ಕಡೆಗೆ ವರ್ಗಾಯಿಸಿ, ಸುಮಾರು ಒಂದುವರೆ ತಿಂಗಳಾಯಿತು. ಇದರಿಂದ ಈ ಊರಿನ ಮತ್ತು ಇದರ ಸುತ್ತುಮುತ್ತಲಿರುವ ಸಣ್ಣ ಸಣ್ಣ ಗ್ರಾಮಗಳ ಸುಮಾರು ೪೦—೫೦ ಹುಡುಗರು ಕೆಟ್ಟುಹೋಗುವಹಾಗಾಯಿತು ಶೃಂಗೇರಿ ಮಠದವರು ಇಡಿಸಿದ ಗ್ರಾಂಟ್ ಸಂಸ್ಕೃತ ಸ್ಕೂಲೂ ಬಹಳ ಹೀನಸ್ಥಿತಿಯಲ್ಲಿದೆ ಮಾಸ್ಟರೇ ಸರಿಯಾಗಿ ಸ್ಕೂಲಿಗೆ ಬರುವಂತೆ ತೋರುವದಿಲ್ಲ ಸ್ಕೂಲ್ ಪಾಲಿ ನಡೆಯುವದೇ ಇಲ್ಲ ಇಲ್ಲಿನ ಹುಡುಗರಿಗೆ ವಿದ್ಯಾಭ್ಯಾಸವೇ ಇಲ್ಲದಂತೆ ಆಗಿದೆ ಮೊನ್ನೆ ತಾ ೨೬ ರಲ್ಲಿ ಶಿವಮೊಗ್ಗದ ವ್ಯಾಸೇದಾರ್ ಸೀತಾರಾಮಶಾಸ್ತ್ರಿಗಳು, ತೀರ್ಥಹಳ್ಳಿ ಮಹಾ ರಾಮಪ್ಪನವರು, ಸೋಗರವಳ್ಳಿ ಶ್ಯಾನಭೋಗ ಚಂದ್ರಶೇಖರಯ್ಯನವರು ಚಿತನಕವಿಗೆ ರಾಮಪ್ಪನವರ ಇನ್ನೂ ಕೆಲವರು ಸೇರಿ ಒಂದು ಸಭೆಯನ್ನು ಮಾಡಿ ಆದರಲ್ಲಿ ಅಲ್ಲಿನ ಜನಗಳ ಹೀನಸ್ಥಿತಿಯನ್ನು ಕುರಿತು ಮ॥ ಸೀತಾರಾಮಶಾಸ್ತ್ರಿಗಳು ಒಂದು ಸಣ್ಣ ಉಪನ್ಯಾಸವನ್ನು ಮಾಡಿದರು ಆದರ ಸಾರಾಂಶವೇನೆಂದರೆ, ಇಲ್ಲಿನ ಜನಗಳು ಯಾವ ಕೆಲಸವೂ ಇಲ್ಲದೆ ಸೋಮಾರಿಗಳಾಗಿ, ಯಾವ ರಾಜಕೀಯವಿಷಯಗಳನ್ನೂ ತಿಳಿಯದೆ ಹೀನಸ್ಥಿತಿಯಲ್ಲಿರುವರು ಇವರುಗಳು ಉತ್ತಮಸ್ಥಿತಿಗೆ ಬರಬೇಕಾದರೆ ಅನೇಕ ವರ್ತಮಾನ ಪತ್ರಿಕೆಗಳನ್ನು ತರಿಸಿ ಓದುವದರಿಂದ ಜನಗಳ ಬುದ್ಧಿ ಕುಶಲತೆ, ವಾಣಿಜ್ಯ ಕೈಗಾರಿಕೆ ಮೊದಲಾದ ಭಾಗಗಳನ್ನು ತಿಳಿದುಕೊಂಡು ಉತ್ತಮ ಸ್ಥಿತಿಗೆ ಬರುವದರಲ್ಲಿ ಯಾವ ಸಂದೇಹವೂ ಇರುವದಿಲ್ಲ ಆದ್ದರಿಂದ ನಾವುಗಳೆಲ್ಲರೂ ಸೇರಿ ಒಂದು ರೀಡಿಂಗ್‌ರೂಂ ಸ್ಥಾಪಿಸಿ ಅನೇಕ ವರ್ತಮಾನ ಪತ್ರಿಕೆಗಳನ್ನು ತರಿಸಬೇಕೆಂದು ತಿಳಿಸಿದರು ಇದಕ್ಕೆ ಎಲ್ಲರೂ ಸಮ್ಮತಿಸಿದರು ಸೋಗರವಳ್ಳಿ ಚಂದ್ರಶೇಖರಯ್ಯನವರು ವೃತ್ತಾಂತ ಪತ್ರಿಕೆಯನ್ನು ತರಿಸಿ ಕಳುಹಿಸುವದಾಗಿ ಹೇಳಿದರು ರಾಮಪ್ಪನವರು ಸೂರ್ಯೋದಯ, ಗಜೆಟ್, ಮೊದಲಾದ್ದನ್ನು ತರಿಸುವಂತೆ ಒಪ್ಪಿಕೊಂಡರು ಸೀತಾರಾಮಶಾಸ್ತ್ರಿಗಳು ಕಾಳ, ಕೇಸರಿ ಸ್ವರಾಜ್ಯ, ಅನಕಾಪತೋಷಿಣಿ ವೃತ್ತಾಂತ ಚಿಂತಾಮಣಿ ಮೊದಲಾದ್ದನ್ನು ಒಪ್ಪಿದರು ರಾಮಪ್ಪನವರು ನಡೆಸುವುದಕ್ಕೆ ಒಪ್ಪಿದರು ಸಭೆಯು ಬಿರಬಾಸ್ತವ್ಯ ಮತ್ತು ಸೀತಾರಾಮಶಾಸ್ತ್ರಿಗಳನ್ನು ವ್ಯಾಸೇದಾರರನ್ನಾಗಿ ನೇಮಿಸಿದರು ಇವರುಗಳು ಏರ್ಪಡಿಸಿದ ಈ ರೀಡಿಂಗ್ ರೂಂ ಶಾಶ್ವತವಾಗಿ ನಡೆಯಲೆಂದು ಹಾರೈಸುತ್ತೇವೆ

ಯಂ ಸುಬ್ರಹ್ಮಣ್ಯಭಟ್ಟ

ಪ್ರಕಟನೆಗಳು

ಒಕ್ಕಲಿಗರ ಎರಡನೇ ಮಹಾಸಭೆ.

103 1

ಒಕ್ಕಲಿಗ ಮಹಾಜನರಿಗೆಲ್ಲಾ ಪ್ರಾರ್ಥನೆ

ಈ ಸಭೆಯು ಬರುವ ಅಕ್ಟೋಬರ್ ತಿಂಗಳು ೧೭, ೧೮ ಮತ್ತು ೧೯ನೆ ತಾರೀಖುಗಳಲ್ಲಿ ಮೈಸೂರು ಟೌನ್ ಹಾಲಿನಲ್ಲಿ ನಡೆಯುವದು

ನಮ್ಮ ಶ್ರೀಮನ್ಮಹಾರಾಜರವರು ಮೊದಲನೇ ದಿವಸ ತಾವೇ ಸಭೆಗೆ ಸ್ವತಃ ದಯಮಾಡಿಸಿ, ಸಭಾ ಕಾರ್ಯವನ್ನು ಪ್ರಾರಂಭಿಸುವಂತೆ ಅನುಜ್ಞೆಯನ್ನು ದಯ ಪಾಲಿಸಿರುತ್ತಾರೆ ಆ ಕಾಲದಲ್ಲಿ ಒಂದು ವಿಜ್ಞಾಪನಾ ಪತ್ರಿಕೆಯು ಸುಮಾರು ೧,೦೦೦ ರೂ ಬೆಲೆಯುಳ್ಳ ಸುಂದರವಾದ ಬಂಗಾರ ಮತ್ತು ಬೆಳ್ಳಿಯಿಂದ ತಯಾರಾದ ಪೆಟ್ಟಿಗೆಯಲ್ಲಿ ಇರಿಸಲ್ಪಟ್ಟು ಶ್ರೀಮನ್ಮಹಾರಾಜರವರ ಸನ್ನಿಧಿಯಲ್ಲಿ ಸಮರ್ಪಿಸಲ್ಪಡುವುದು

ನಮ್ಮ ಸಂಘದ ಪ್ರಸಿಡೆಂಟರು ಮತ್ತು ವೈಸ್ ಪ್ರಸಿಡೆಂಟರು ಸಹ ಸಾಗ್ವಾನವಾಡಿರುವ ಸಾವಿರಾರು ರೂಪಾಯಿಗಳನ್ನು ಸಭೆಯಲ್ಲಿ ಸಂಘಕ್ಕೆ ಸಮರ್ಪಿಸುವರು ಒಂದು ಸಾವಿರ ರೂಪಾಯಿಗಳಿಗೆ ಮೇಲ್ಪಟ್ಟ ದ್ರವ್ಯವನ್ನು ಸಂಘಕ್ಕೆ ಕೊಡಲುಳ್ಳವರೆಲ್ಲರೂ ಇದೇ ಮೇರೆಗೆ ಮಾಡಬಹುದು ಇಂಥಾವರ ಭಾವಚಿತ್ರಗಳು (ಫೋಟೋಗಳು) "ಆಲ್ಬಂ" ಎಂಬ ಚಿತ್ರಪುಸ್ತಕದಲ್ಲಿ ಹಾಕಿಸಲ್ಪಟ್ಟು, ಆ ಪುಸ್ತಕವು ಸಭಾಸಭೆಯ ದಿನಗಳಲ್ಲಿ ಮಾರಲ್ಪಡುತ್ತದೆ ಇಷ್ಟವುಳ್ಳವರು ಈ ತಿಂಗಳು ಅಖೈರಿನೊಳಗಾಗಿ ಈ ವಿಚಾರವಾಗಿ ಸೆಕ್ರೆಟರಿಯವರಿಗೆ ಬರೆದುಕೊಳ್ಳಬಹುದು

ಪರಸ್ಥಳದಿಂದ ದಯಮಾಡಿಸುವವರೆಲ್ಲರಿಗೂ ಸಭೆಯು ನಡೆಯುವ ವ ೩ ದಿವಸಗಳೂ ಮ॥ ರಾ॥ ಅಕ್ಕಿ ಅಂಗಡಿ ಮರಿಯಣ್ಣನವರು ಭೋಜನಾದಿ ಸೌಕರ್ಯಗಳನ್ನು ಒದಗಿಸುವರು

ಮ ರಾ॥ ಸಭೆಯ ಪ್ರೀಮರ್ಣವ ಹಾರುಜರವರು ದಯಮಾಡಿಸುವದರಿಂದ ಟಿಕೇಟುಗಳ ಮೂಲಕ ಜನರನ್ನು ಟೌನ್ ಹಾಲಿಗೆ ಬಿಡಬೇಕೆಂದು ನಿಶ್ಚೈಸಿದೆ ಆದಕಾರಣ ಸಭೆಯು ಪ್ರಾರಂಭವಾಗುವದಕ್ಕೆ ಮುಂಚಿತವಾಗಿ ೯ ದಿವಸಗಳಿಂದ ಈ ಟಿಕೇಟುಗಳು ಮೈಸೂರಲ್ಲಿ ದೇವರಾಜಮಾರ್ಕೆಟ್ಟಿನ ಮಹಡಿಯಲ್ಲಿರುವ ಒಕ್ಕಲಿಗರ ಸಂಘದ ಬ್ರಾಂಚ್ ಆಫೀಸಿನಲ್ಲಿ ಒಕ್ಕಲಿಗ ಮಹಾಜನರಿಗೆ ಉಚಿತವಾಗಿ ಕೊಡಲ್ಪಡುವವು ಸಂಘಕ್ಕೆ ಮೊದಲೇ ಚಂದಾ ಹಾಕಿರುವವರೂ ಮತ್ತು ಮುಂದೆ ಹಾಕತಕ್ಕವರೂ ಸಹ ತಮ್ಮ ತಮ್ಮ ಚಂದಾ ಮೊಬಲಗುಗಳನ್ನು ದಯವಿಟ್ಟು ಈ ಕಾಲದಲ್ಲಿ ಪಾವತಿಮಾಡಿ ರಶೀತಿ ಪಡೆಯಬೇಕೆಂದು ಪ್ರಾರ್ಥಿಸುತ್ತೇವೆ

ಈ ಪ್ರಕಟನೆಯಲ್ಲಿ ಕಾಣಿಸಿರುವ ವಿಷಯಗಳನ್ನು ತಮ್ಮ ತಮ್ಮ ಮಿತ್ರವರ್ಗದಲ್ಲಿ ಪ್ರಚುರಪಡಿಸಿ ಸಭೆಗೆ ಬರತಕ್ಕವರ ಹೆಸರುಗಳನ್ನು ಕಾಗದ ಮೂಲಕ ಮೈಸೂರು ಒಕ್ಕಲಿಗರ ಸಂಘದ ಬ್ರಾಂಚ್ ಸೆಕ್ರೆಟರಿ ಮ॥ ಎಂ ಪುಟ್ಟಸಂಜಪ್ಪನವರಿಗೆ ತಿಳಿಯಪಡಿಸಬೇಕೆಂದು ಅತ್ಯಂತ ವಿನಯ ಪೂರ್ವಕವಾಗಿ ಪ್ರಾರ್ಥಿಸುವ ತಮ್ಮ ವಿಧೇಯ.

ಕೆ ಎಚ್ ರಾಮಯ್ಯ, ಬಿ ಎ,

ಒಕ್ಕಲಿಗರ ಸಂಘದ ಜನರಲ್ ಸೆಕ್ರೆಟರಿ

೫೭, ಅರಳೇಪೇಟೆ, ಬೆಂಗಳೂರು ಸಿಟಿ

"ಬ್ರಹ್ಮಾನಂದ" ಮಾಸಪತ್ರಿಕೆ.

110 1

ಈ ವೈದಿಕ ಮಾಸಪತ್ರಿಕೆಯು ಮೈಸೂರಿನ ಶಂಕರಾನಂದ ಸಭೆಯವರಿಂದ ಪ್ರಕಟಿಸಲ್ಪಡುತ್ತಿದೆ ಪ್ರಥಮ ಸಂಪುಟವು ಪೂರ್ಣವಾಗಿ ಸಿದ್ಧವಾಗಿದೆ ದ್ವಿತೀಯ ಸಂಪುಟವು ನವಂಬರ ತಿಂಗಳಿಂದ ಪ್ರಾರಂಭಿಸಲ್ಪಡುವುದು ಅದರಲ್ಲಿ ವೇದಾರ್ಥವೂ, ಭಗವದ್ಗೀತಾ, ಬ್ರಹ್ಮಸೂತ್ರ, ದಶೋಪನಿಷತ್ತುಗಳ ಭಾಷ್ಯಾರ್ಥಗಳೂ, ಶ್ರೀಮಚ್ಛಂಕರಾಚಾರ್ಯರಿಂದ ರಚಿಸಲ್ಪಟ್ಟ ಅದ್ವೈತಗ್ರಂಥಗಳೂ, ಶೃಂಗೇರಿ ಗುರುವಂಶಕಾವ್ಯವೂ, ಧರ್ಮಶಾಸ್ತ್ರ ವಿಷಯಗಳೂ, ಶ್ರುತ್ಯರ್ಥಬೋಧಕಗಳಾದ ಇತಿಹಾಸಗಳೂ, ಆತ್ಮಪುರಾಣವೂ, ಷಡ್ದರ್ಶನಗಳೂ ವಾರ್ತಾಕ್ರಮಾದಿಮಾರ್ಗಗಳೂ, ಕನ್ನಡ ತಾತ್ಪರ್ಯಸಹಿತ ಪ್ರಕಟಿಸಲ್ಪಡುವುವು. ಪ್ರತಿಗ್ರಂಥಕ್ಕೂ ಪ್ರತ್ಯೇಕ ಪುಟಸಂಖ್ಯೆ ಕೊಡಲ್ಪಟ್ಟಿರುವ ನಮ್ಮ ೪೦ ಪುಟಗಳುಳ್ಳ ಸಂಚಿಕೆಯು ಪ್ರತಿ ತಿಂಗಳಲ್ಲಿಯೂ ಕೊಡಲ್ಪಡುವುದು ಷರಾ—ಈ ಅಕ್ಟೋಬರ್ ೧೫ ರ ಒಳಗಾಗಿ ಬರತಕ್ಕ ಆರ್ಡರುಗಳಿಗೆ ಮಾತ್ರ ಈಗಿನ ಶೃಂಗಗಿರಿಸ್ವಾಮಿಗಳ ೧೦×೧೨ ಸೈಜಿನ ೧ ರೂಪಾಯಿ ಕ್ರಯವುಳ್ಳ ಫೋಟೋ ಉಚಿತವಾಗಿ ಕೊಡಲ್ಪಡುವುದು

ಚಂದಾ—ವರುಷ ೧ಕ್ಕೆ ೩ ರೂಪಾಯಿ. ಸಾಸಲು ವಾ

ಶ್ರೀಮಚ್ಛಂಕರಾಚಾರ್ಯರ ಚಿತ್ರ ಪಟ ಶಂಕರಾಚಾರ್ಯರ ದೊಡ್ಡ ಸೈಜು ಫೋಟೋ ಈಗಿನ ಶೃಂಗೇರಿ ಸ್ವಾಮಿಗಳ ವನದಲ್ಲಿ ಉಪದೇಶಮಾಡುತ್ತಾ ಕೂತಿರುವ ಫೋಟೋ ೧ಕ್ಕೆ ೧ ಆಣೆ ಒಟ್ಟಿಗೆ ಯೋಗಪಟ್ಟದ ಫೋ ೧ಕ್ಕೆ ೬ ಪೈ

ವಿಳಾಸ—ಸುಬ್ಬನರಸಿಂಹಯ್ಯ,

ದಿವಾನ್ ವೆಂಕಟೋ ಅರಸಿನವರ ಲೇನು,

ಚಾಮರಾಜಪೇಟೆ ಮೈಸೂರು

ಮದರಾಸು ಶೀರಗಳು.

111 1

ವಿ ಪಿ ಖರ್ಚು ಬಿಟ್ಟು ಮಂಗಳೂರು ವರೆಗೆ ಮಾ

ಈ ಶೀರೆಗಳು ನವರಿಗೆ ಆಶ್ಚರ್ಯಕರವಾದ ಹೊಸ ನಮೂನೆಯು ಬಹು ಸೊಗಸಾದವು ನಮ್ಮ ಸ್ವಂತ ಸಾಲೆಯಲ್ಲಿ ಅತ್ಯುತ್ತಮವಾದ ನೂಲಿನಿಂದ ನೇಯಲ್ಪಟ್ಟು ಸರಿಗೆಯಿಂದ ಸ್ವಚ್ಛಬಿಳುಪಿನ ಅನೇಕ ರೇಸ್ಮೆಯ ಅಂಚುಗಳುಳ್ಳ ನಗಳು ಎರಡು ಕಡೆಯಲ್ಲಿಯೂ ಒಂದೊಂದು ಗಜವುದ್ದವಿರುವದು ಇವು ಬಿಳಿ ಮತ್ತು ಹಳದಿ ರೇಷ್ಮೆಗಳಿಂದ ತಯಾರಿಸಿದೆ ನೋಡಲ್ಕೆ ಅತಿ ಸುಂದರವಾಗಿಯೂ, ಉಪಯೋಗದಲ್ಲಿಯೂ ಬಣ್ಣದಲ್ಲಿಯೂ ಅತಿ ಗಟ್ಟಿಯಾಗಿಯೂ ಕೆಡದಂತೆ ಇರುವದು ಸೀರೆಗಳು ವಿಧವಿಧವಾದ ಗಜದ ಗಲವೂ ಇರುತ್ತದೆ ಒಂದನ್ನು ತರಿಸಿ ಉಪಯೋಗಿಸಿದರೆ ಇದರ ಉತ್ಕೃಷ್ಟತೆಯು ತಿಳಿಯುವದು ಇಂತಹ ಸೀರೆಗಳ ನಿಜವಾದ ಬೆಲೆಯು ಬಹಳ ಸೊಗಸಾಗಿಯೂ ತಯಾರಿಸಿದವು ಎಲ್ಲಿಯೂ ಸಿಗುವದಿಲ್ಲ ಬೋರ್ಡರು ೨ ಅಂಗುಲ ಅಂಚಿನ ಶೀರೆ ೧ ಕ್ಕೆ ರೂ ೯—೮—೦ ೩ ಅಂಗುಲ ಅಂಚಿನದಕ್ಕೆ ರೂ ೧೧—೮—೦ ಬಿಳಿಯ ರೇಷ್ಮೆ ಚೌಕಳಿಯದಕ್ಕೆ ರೂ ೨—೮—೦ ಜಾಸ್ತಿ

ವಿಳಾಸ—ರಾವ್ ಎಂಡ್ ಕೋಯ

ಪೈಕ್ರಾಫ್ಟ್ಸ್ ರೋಡ್ ಟ್ರಿಪ್ಲಿಕೇನ್ ಮದರಾಸು

ಎಲ್ಲಾ ಬಗ್ಗ ಗಳಿಗೂ ಗುಣಕಾರಿಯಾದ ದಿವ್ಯ ಔಷಧಿಗಳು ಕಳುಹಿಸುವೆವು ರೋಗಗಳಿಗೆ ಗುಣವಾಗ ದ್ದರಲ್ಲಿ ಸಂದೇಹವಿಲ್ಲ ನಮ್ಮ ಔಷಧಗಳನ್ನು ಮಾರಲು ಎಲ್ಲಾ ಕಡೆಗಳಲ್ಲಿಯೂ ಏಜಂಟರು ಬೇಕು.

ವಿ ಕೆ ಎನ್ ಆರ್ ರಾವ್

ಸ್ಪೆಷಲಿಸ್ಟ್ ಮೆಡಿಕಲ್ ಹಾಲ್ ಮದರಾಸು,

ಕಾಯಿಲೆ ಅನುಭವಿಸುವಂಥಾ ಹೆಂಗಸರೆಲ್ಲಾ ಪೆರೂನಾವನ್ನು ಸೇವಿಸಿ ಗುಣಹೊಂದಲಿ.

ಮಿಸೆಸ್ ಜೆಯಿಸ್ ಸಿ. ವೊರ್ಸ್ಟೆಲ್, ೧೧ ನೇ ರಸ್ತೆ, ಕ್ಲಿಂಟನ್‌ಬರ್ಗ್, ನ್ಯೂಯಾರ್ಕ್, ಈಕೆ ಬರೆಯುವುದು: ' ನನ್ನ ಹೆಸರನ್ನು ಪ್ರಸಿದ್ಧಪಡಿಸಿಕೊಳ್ಳುವುದಕ್ಕೆ ನಾನು ಅಪೇಕ್ಷೆ ಪಡತಕ್ಕವಳಲ್ಲ. ಈ ನನ್ನ ಜೀವಿತದಿಂದ ಅನೇಕ ಕಾಯಿಲೆಗಳನ್ನು ಅನುಭವಿಸುವ ಸ್ತ್ರೀಯರು ರೋಗ ಪರಿಹಾರವಾಗುವುದಕ್ಕೆ ನನ್ನ ಅನುಭವವನ್ನು ತಿಳಿದುಕೊಂಡರೆ ಸಾಕಾಗಿದೆ. ಪೆರೂನಾ ಉಪಯೋಗಿಸಿದ್ದರಿಂದ ನನಗೆ ಬಹಳ ಸಹಾಯವಾಗಿದೆ ಎಂದು ನಿಜವಾಗಿ ಹೇಳಬಲ್ಲೆನು. ಎರಡು ವರುಷದ ಹಿಂದೆ ಇದ್ದದ್ದಕ್ಕಿಂತಲೂ ಈಗ ನನ್ನ ದೇಹಸ್ಥಿತಿ ಎಷ್ಟೋ ಉತ್ತಮವಾಗಿದೆ. ಹೆಂಗಸರ ಬಾಧೆಗಳಿಗೆ ನನಗೆ ತಿಳಿದ ಮಟ್ಟಿಗೆ ಇದೇ ಸರ್ವೋತ್ತಮವಾದ ಔಷಧವು. ವೈದ್ಯರು ಹೇಳಿದ ಔಷಧಗಳನ್ನು ಸೇವಿಸಿದರೂ ನನಗೆ ಪ್ರಯೋಜನವಾಗಲಿಲ್ಲ. ಆದರೆ ಪೆರೂನಾ ಸೇವಿಸುವುದನ್ನು ಪ್ರಾರಂಭಿಸಿದಾಗ ಒಂದು ವಾರದ ಒಳಗಾಗಿ ಉಪಯೋಗಿಸುವದರೊಳಗೇನೇ ನನಗೆ ಅತಿ ಗುಣ ಕಂಡುಬಂತು.,,

MISS NETTIE E. BOGARDUS

MRS. GEO. C. WORSTELL

MRS O. D. ROBINSON

ನೆಗಡಿಯಿಂದ ರೋಗ ಬೆಳೆಯುವದು.

ಮಿಸೆಸ್ ಎಸ್ ಪಿ. ಟಾಲರ್ ೬೦೩ ಎಸ್. ಬ್ರಾಡ್ವೆ, ಪಿಟ್ಸ್ ಬರ್ಗ್, ಕಾನ್ಸ್, ಈಕೆ ಬರೆಯುವುದು.

" ನೆಗಡಿ ಪರಿಹಾರಕ್ಕೆ ಪೆರೂನಾ ರಾಜ ಮದ್ದು. ಹೋದ ವರುಷ ನನಗೆ ಕಠಿಣವಾದ ಶೀತ ಹಿಡಿದು, ಬಹಳ ವೇದನೆ ಪಡಿಸಿತು. ನನಗೆ ನಿಶ್ಶಕ್ತಿ ಯುಂಟಾಗಿ ವಾಂತಿಗೆ ಬರುವಹಾಗಾಗಿ ನಿದ್ದೆ ಬಾರದೆ ಆಹಾರ ಸೇರದೆ ತುಂಬಾ ಕಷ್ಟಪಟ್ಟೆನು.

" ಅದೇ ರೋಗಕ್ಕೆ ಪೆರೂನಾ ಸೇವಿಸಿ ಸ್ವಸ್ಥಳಾದ ಒಬ್ಬ ಸ್ನೇಹಿತನು ನನಗೆ ಅದನ್ನು ಸೇವಿಸುವಂತೆ ಹೇಳಿದನು. ಕೂಡಲೇ ನಾನು ಆ ರೀತಿ ಮಾಡಿದೆನು. ಆದರೆ ಅದನ್ನು ತೆಗೆದುಕೊಳ್ಳುವುದಕ್ಕೆ ಆರಂಭಿಸಿದ ಲಾಗಾಯ್ತು ಅದು ನನಗೆ ಆಶ್ಚರ್ಯಕರವಾಗಿ ಗುಣ ಕೊಡುತ್ತಾ ಬಂತು.

" ಮೂರು ದಿನಗಳಲ್ಲಿ ನನಗೆ ಗುಣವಾಯಿತು. ಒಂದು ವಾರದೊಳಗಾಗಿ ಯಥಾಪ್ರಕಾರ ನಾನು ಸ್ವಸ್ಥಳಾದೆನು. ಆದರೂ ಕೇನೆ ಬರದಾಗುವ ತನಕ ಔಷಧವನ್ನು ಬಿಡಲಿಲ್ಲ. ಎರಡು ವಾರಗಳಲ್ಲಿ ನನ್ನ ದೇಹಸ್ಥಿತಿಯು ಪುಷ್ಟಿಯಾಯಿತು. ಪೆರೂನಾ ಅದ್ಭುತವಾದ ಔಷಧವೇ ಸರಿ.

ಕರಳುಗಳಲ್ಲಿ ಅಕ್ರಮ.

ಮಿಸೆಸ್ ಮಾಗ್ಗೀ ಡರ್ಬಿ, ೧೩೩೦ ಉತ್ತರ ಬೀದಿ, ಲಿಟಲ್‌ರಾಕ್, ಆರ್ಕ್, ಈಕೆ ಬರೆಯುವುದು.

" ನಾನು ಐದು ವರುಷ ಕಾಲ ಕೆಟ್ಟ ಬಾಧೆಯನ್ನು ಅನುಭವಿಸಿದೆನು. ಕಂಡು ಕೇಳಿದ ಔಷಧವನ್ನೆಲ್ಲಾ ಮಾಡಿದೆನು. ಯಾವುದರಿಂದಲೂ ನನಗೆ ಪರಿಹಾರವಾಗಲಿಲ್ಲ. ಕೆಲವು ಡಾಕ್ಟರುಗಳು ನನಗೆ ಕರುಳುಗಳ ಅಕ್ರಮ ಎಂಬ ರೋಗವೆಂದರು; ಕೆಲವರು ಕರುಳುಗಳ ಕ್ಷಯವೆಂದರು. ಒಬ್ಬ ವೈದ್ಯನು ನನ್ನ ರೋಗವನ್ನು ವಾಸಿಮಾಡುತ್ತೇನೆಂದು ಹೇಳಿದ್ದರ ಮೇಲೆ ನಾನು ಎರಡು ತಿಂಗಳು ಅವನ ಔಷಧ ಸೇವಿಸಿದಾಗ್ಯೂ ನನಗೆ ಸ್ವಲ್ಪವೂ ಗುಣ ತೋರಲಿಲ್ಲ.

" ಪೆರೂನಾ ಉಪಯೋಗಿಸಿ ನೋಡು ಎಂದು ಒಬ್ಬ ಸ್ನೇಹಿತಳು ಹೇಳಿದ್ದರ ಮೇಲೆ ನಾನು ಅದನ್ನು ಸೇವಿಸುತ್ತಾ ಬಂದೆನು. ನಾನು ಎರಡು ಬಾಟ್ಲುಗಳಷ್ಟು ಸೇವಿಸಿದ ಮೇಲೆ ಅದರಿಂದ ನನಗೆ ಗುಣ ಕಾಣುತ್ತಾ ಬಂತು. ಅದರ ಮೇಲೆ ಬಿಡದೆ ನಾನು ಅದನ್ನೇ ಸೇವಿಸುತ್ತಾ ಬಂದೆನು. ನನ್ನ ರೋಗವು ನಿವಾರಣೆಯಾಯಿತು. ನನ್ನ ದೇಹವು ಗಟ್ಟಿಯಾಯಿತು.

" ಅಪೇಕ್ಷೆಯುಳ್ಳವರು ನನಗೆ ಬರೆದು ಕೇಳಿದಲ್ಲಿ ಪೆರೂನಾದಿಂದ ನನಗುಂಟಾದ ಪ್ರಯೋಜನವನ್ನೆಲ್ಲಾ ನಾನು ವಿವರಿಸಿ ತಿಳಿಸಬಲ್ಲೆನು."

ಪಕ್ಕಗಳಲ್ಲಿ ಬಾಧೆಯಾಗುವುದು.

ಮಿಸೆಸ್. ಜೂಲಿಯಾ ಬ್ರಾಕ್‌ಸ್ಟನ್, ಜಫೋರ್ಲ, ಲಾ, ಬರೆಯುವುದು.

" ಪೆರೂನಾ ಸೇವಿಸಿದ್ದರಿಂದ ನನ್ನ ಹೃದಯದ ಮತ್ತು ಪಕ್ಕಗಳ ನೋವುಗಳು ವಾಸಿಯಾಗಿವೆ.

" ಒಂದು ವರುಷದ ಹಿಂದೆ ನಾನು ಯಾವಾಗ ಸಾಯುವೆನೋ ಎಂಬ ಸ್ಥಿತಿಯಲ್ಲಿದ್ದೆನು. ಕೆಲವು ವೇಳೆ ರಾತ್ರಿ ೨ ಗಂಟೆ ಸಮಯದಲ್ಲಿ ಡಾಕ್ಟರು ಬರಬೇಕಾಯಿತು. ಆದರೆ ಈಗ ಡಾಕ್ಟರನ್ನು ಕರೆಸಬೇಕಾದ ಅಗತ್ಯವೇ ಇಲ್ಲವೆಂದು ನಾನು ಸಂತೋಷದಿಂದ ಹೇಳುತ್ತೇನೆ.

" ನೀವು ಹೇಳಿದಂತೆ ನಾನು ಪೆರೂನಾವನ್ನು ಉಪಯೋಗಿಸಿದ್ದರಿಂದ ನಾನು ಆರೋಗ್ಯವಾಗಿದೇನೆ. ಮತ್ತು ನನ್ನ ಮನೆ ಕೆಲಸಗಳನ್ನೆಲ್ಲಾ ಮಾಡಿಕೊಳ್ಳಬಲ್ಲೆನು.

" ನನಗೆ ಪೆರೂನಾವಲ್ಲದೆ ಮತ್ತೊಂದು ಔಷಧ ಪ್ರಪಂಚದಲ್ಲಿ ಇನ್ನಾವುದರ ಮೇಲೂ ಇಷ್ಟವಿಲ್ಲ. ಯಾಕಂದರೆ ಅದು ನನ್ನ ರೋಗವನ್ನು ವಾಸಿಮಾಡಿದೆ. ಇತರ ರೋಗಿಗಳಿಗೂ ಅದು ಗುಣಪಡಿಸಬಲ್ಲದೆಂದು ನಾನು ತಿಳಿದಿದೇನೆ.

" ಪೆರೂನಾದಿಂದ ನನಗೆ ಆಗಿರುವ ಉಪಕಾರವನ್ನು ಅಷ್ಟಿಷ್ಟೆಂದು ಹೇಳಲಾರೆನು. ಅದರ ಗುಣವನ್ನು ಎಷ್ಟು ಹೊಗಳಿದರೂ ಸ್ವಲ್ಪವೇ ಆಗಿದೆ."

ಅನ್ನಕೋಶದಲ್ಲಿ ಬಾಧೆಯು.

ಮಿಸ್ ಅನ್ನಾ ಕಾಸ್ಲರ್, ಕ್ಲೇಟನ್ ಇಲ್ ಬರೆಯುವುದು.

" ನಿಮ್ಮ ಪೆರೂನಾದಿಂದ ನನಗೆ ಬಹಳ ಗುಣಕೊಟ್ಟಿದೆ. ಈಗ ನಾನು ಆರೋಗ್ಯವಾಗಿದೇನೆ. ನನ್ನ ಅನ್ನಕೋಶದ ಬಾಧೆಯೆಲ್ಲಾ ನಿವಾರಣೆಯಾಗಿದೆ."

ಅಂಗಾಂಗಗಳಲ್ಲೆಲ್ಲಾ ಬಾಧೆಯು.

ಮಿಸೆಸ್ ನಾಪರ್, ೪೯೨೦ ಪ್ರಿನ್ಸ್‌ಟನ್ ಅವ್, ಸೆಂಟ್ ಲೂಯಿಸ್, ಮೋ, ಬರೆಯುವುದು.

" ಪೆರೂನಾ ಸೇವಿಸುವುದಕ್ಕೆ ಮೊದಲು ನನ್ನ ದೇಹಸ್ಥಿತಿಯು ಬಹಳ ಕೆಟ್ಟುಹೋಗಿತ್ತು. ನನ್ನ ದೇಹದ ಅಂಗಾಂಗಗಳೆಲ್ಲಾ ಶೀತಹಿಡಿದು ಬಾಧೆಯುಂಟಾಗಿತ್ತು. ದೇವರ ದಯದಿಂದ ನಿಮ್ಮ ಔಷಧವು ನನ್ನನ್ನು ಆರೋಗ್ಯ ಸ್ಥಿತಿಗೆ ತಂದಿರುತ್ತದೆ. ನನಗೆ ಅನ್ಯವಾದ ಔಷಧದ ಮೇಲೂ ಅಭಿಲಾಷೆ ಇಲ್ಲ."

ಮಿಸ್ ನೆಟ್ಟಿ ಇ. ಬೋಗಾರ್ಡಸ್, ಆರ್ ಎಫ್ ಡಿ ೨, ವೆಸ್ಟ್ ಫೀಲ್ಡ್, ಎನ್ ವೈ, ಬರೆಯುವದು ಏ

" ನನಗೆ ಬಹುಕಾಲ ವಾಂತಿಯಾಗುತ್ತಲೂ ತುಂಬಾ ತಲೆ ನೋಯುತ್ತಲೂ ಇತ್ತು. ಆದುದರಿಂದ ನಾನು ಬಹಳ ಅನುಭವಿಸಿರುತ್ತೇನೆ. ಆದರೆ ಈಗ ಆ ಬಾಧೆಯೆಲ್ಲಾ ಸಂಪೂರ್ಣವಾಗಿ ನಿವಾರಣೆಯಾಗಿದೆ. ಹತ್ತು ವರುಷಗಳಿಂದ ನಾನು ಅನುಭವಿಸಿದ ರೋಗವೆಲ್ಲಾ ನಿವಾರಣೆಯಾಗಿ ಈಗ ಆರೋಗ್ಯವಾಗಿದೇನೆ. ರೋಗವನ್ನನುಭವಿಸುವವರಿಗೆಲ್ಲಾ ಪೆರೂನಾವನ್ನು ಮಾನಾಲಿನನ್ನೂ ಸೇವಿಸುವಂತೆ ಶಿಫಾರಸು ಮಾಡುವೆನು. ದೇವರು ಡಾಕ್ಟರ್ ಹಾರ್ಟ್‌ಮನ್‌ರನ್ನು ಅವರ ಅದ್ಭುತ ಔಷಧವನ್ನು ಆಶೀರ್ವಾದ ಮಾಡಲಿ ಎಂಬುದೇ ನನ್ನ ಕೋರಿಕೆಯಾಗಿದೆ."

ಹೊಟ್ಟೆಯೊಳಗಣ ಶೀತವು.

ಮಿಸ್ ಜೂಲಿಯಾ ಬಟ್ಲರ್, ಆರ್ ಆರ್ ೪, ಆಪಲ್ಟನ್, ವಿಸ್, ಬರೆಯುವದು:

" ಆರು ವರುಷಗಳ ವರೆಗೆ ನನಗೆ ಹೊಟ್ಟೆಯೊಳಗಣ ಶೀತವು ತುಂಬಾ ಬಾಧೆಪಡಿಸುತ್ತಿತ್ತು. ಅದರಿಂದ ನನಗೆ ನಿಶ್ಶಕ್ತಿ ಹೆಚ್ಚಿಹೋಗಿತ್ತು. ಆಹಾರ ಜೀರ್ಣಿಸುತ್ತಿರಲಿಲ್ಲ. ಮತ್ತು ಊಟವಾದ ಮೇಲೆ ಹೊಟ್ಟೆಯೊಳಗೆ ಬಹಳ ನೋವು ಉಂಟಾಗುತ್ತಿತ್ತು.

" ನನ್ನ ಸಹೋದರಿಯು ನನಗೆ ಪೆರೂನಾ ಸೇವಿಸುವಂತೆ ಹೇಳಿದಳು."

" ನಿಮ್ಮ ಔಷಧವನ್ನು ತೆಗೆದುಕೊಳ್ಳುತ್ತಾ ಬಂದೆನು. ಬೇಗ ಆಹಾರದಲ್ಲಿ ರುಚಿಯುಂಟಾಯಿತು."

" ನನಗೆ ಶಕ್ತಿಯುಂಟಾಯಿತು, ಮಾಂಸಖಂಡಗಳು ಬೆಳೆದವು, ಈಗ ಸಂಪೂರ್ಣ ಸೌಖ್ಯವನ್ನು ಪಡೆದಿರುತ್ತೇನೆ."

" ನಿಮ್ಮ ಔಷಧವು ನನಗೆ ತುಂಬಾ ಪ್ರಯೋಜನವನ್ನುಂಟುಮಾಡಿದೆ. ಅದಕ್ಕಾಗಿ ನಿಮ್ಮನ್ನು ಬಹಳ ವಂದಿಸುತ್ತೇನೆ."

ಮಿಸೆಸ್ ಓ. ಡಿ ರಾಬಿನ್‌ಸನ್, ೩೩ ಸೆಂಟ್ ಫೆಲಿಕ್ಸ್ ಬೀದಿ, ಬ್ರೂಕ್ಲಿನ್, ಎನ್. ವೈ, ಬರೆಯುವುದು:

" ನಾನು ಪೆರೂನಾವನ್ನು ಸೇವಿಸಿದೇನೆ. ಹೆಸರುವಾಸಿಯಾದ ವೈದ್ಯರು ಎರಡು ವರುಷದ ತನಕ ಹೇಳಿದ ಔಷಧಗಳನ್ನು ತೆಗೆದುಕೊಂಡಾಗ್ಯೂ ನನಗೆ ಪ್ರಯೋಜನವಾಗದೆ ಇದ್ದು, ನಿಮ್ಮ ಔಷಧವೇ ಫಲದಾಯಕವಾಯಿತು. ಈಗ ನಾನು ಆರೋಗ್ಯಭಾಗ್ಯವನ್ನು ಪಡೆದಿರುತ್ತೇನೆ. ಈಗ ನನ್ನ ಕೈ ಕಾಲುಗಳು ಊದುವುದು ನಿಂತುಹೋಗಿದೆ. ಹೊಟ್ಟೆಬ್ಬರ ತಪ್ಪದೆ ದೀರ್ಘವಾಗಿ ಉಸುರುಹೊಯ್ಯುತ್ತೇನೆ. ಕೈ ಕಾಲುಗಳ ಕೀಲುಗಳ ಊದ ನೋವೂ ಈಗ ಬರುವುದೇ ಇಲ್ಲ. ನಿಮ್ಮ ಔಷದದಿಂದ ನನಗೆ ಎಷ್ಟು ಮಟ್ಟಿಗೆ ಪ್ರಯೋಜನವಾಗಿದೆ ಎಂಬುವುದು ನಿಮಗೆ ತಿಳಿಯದು. ಅದು ಖಂಡಿತವಾಗಿ ನನ್ನ ಆಯುಸ್ಸನ್ನು ಹೆಚ್ಚುಮಾಡಿದೆ. ಅದರಿಂದ ನಾನು ನೂತನವಾದ ಸ್ತ್ರೀಯಾಗಿರುವೆನು.

" ಓ ಡಾಕ್ಟರೇ, ನಿಮ್ಮ ಕರುಣೆಯಿಂದ ನನಗೆ ದೊಡ್ಡ ಆಶೀರ್ವಾದ ದೊರಕಿರುತ್ತದೆ. ನೀವು ಹೇಳಿದ ಔಷಧದಿಂದ ನನಗೆ ಅಪಾರವಾದ ಸುಖ ಲಭ್ಯವಾಗಿದೆ. ನಿಮ್ಮ ಔಷದಿ ಸೇವಿಸಿದಾರಭ್ಯ ನಾನು ಕೆಲಸಕಾರ್ಯಗಳನ್ನು ಮಾಡಬಲ್ಲೆನು. ಆದರೆ ಮೊದಲು ನಾನು ನನ್ನ ಕೆಲಸವನ್ನೇ ಮಾಡಿಕೊಳ್ಳಲಾರದಂತೆ ದುರ್ಬಲಳಾಗಿದ್ದೆನು. ಡಾಕ್ಟರ್ ಹಾರ್ಟ್‌ಮನ್‌ರವರಿಗೂ ಅವರ ಔಷಧಕ್ಕೂ ಅನೇಕ ವಂದನೆಗಳನ್ನು ಸಮರ್ಪಿಸುತ್ತೇನೆ."

ವಿಳಾಸ.—ಈ ಔಷಧ ಸಿಕ್ಕುವ ಸ್ಥಳಗಳು:—

(೧) ಹಿಚ್‌ಕಾಕ್ ಅಂಡ್ ಸನ್ಸ್, ಬೆಂಗಳೂರು

(೨) ಇಂಗ್ಲಿಷ್ ಡ್ರಗ್ ಕಂಪನಿ, ೩೯೪ ಮಿಂಟ್ ಬೀದಿ, ಮದರಾಸ್.

38-26

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

೬—೯—1907 ರಿಂದ 13—9—1907 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು.	ಸತ್ತದ್ದು.	ಕಾಲರಾ ತಗಲಿದ್ದು.	ಸತ್ತದ್ದು.
ಬೆಂಗಳೂರು ಪಟ್ಟಣ	43	31	0	0
ಮೈಸೂರು ,,	65	37	0	0
ಬೆಂಗಳೂರು ಡಿಸ್ಟ್ರಿಕ್ಟು	976	189	0	0
ಮೈಸೂರು ,,	200	160	3	1
ಕೋಲಾರ್ ,,	17	17	0	0
ಕೋಲಾರ್ ಚಿನ್ನದ ಗಣಿಗಳು	31	14	0	0
ತುಂಕೂರು ಡಿಸ್ಟ್ರಿಕ್ಟು	8	4	58	38
ಹಾಸನ ,,	12	6	0	0
ಚಿತ್ರದುರ್ಗ ,,	0	0	0	0
ಕಡೂರ್ ,,	64	47	0	0
ಶಿವಮೊಗ್ಗ ,,	13	7[illegible]	0	0
ಜುಮ್ಲಾ	[illegible]	578	61	31

ಶಾಲಿವಾಹನ ಶಕ ವರುಷಂಗಳು ೧೮೨೯ ನೇ ಪ್ಲವಂಗನಾಮ ಸಂವತ್ಸರದ ಭಾದ್ರಪದ ಬಹುಳ ಏಕಾದಶಿ ಗುರುವಾರದಿಂದ ಆಶ್ವೀಜ ಶುದ್ಧ ಬಿದಿಗೆ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ.

೧೯೦೭ ನೇ ಇಸವಿ ಅಕ್ಟೋಬರ್.

ತಾ.	ವಾರ.		ತಿಥಿ	ಘಳಿಗೆ.	ನಕ್ಷತ್ರ	ಘಳಿಗೆ	ಶ್ರಾದ್ಧ ತಿಥಿ
3	ಗುರು	*	ಏಕಾದಶಿ	13-23	ಪ್ಲು	23 16	17
4	ಶುಕ್ರ	¶	ದ್ವಾದಶಿ	17-30	ಮ	27-32	18
5	ಶನಿ	,,	ತ್ರಯೋದಶಿ	20-21	ಪೂ	32-40	19
6	ರವಿ	‡	ಚತುರ್ದಶಿ	22-5	ಉ	35 40	20
7	ಚಂದ್ರ	∴	ಅಮಾ	22-32	ಹ	37-17	21
8	ಕುಜ	,,	ಪಾಡ್ಯ	21-35	ಚಿ	37-30	22
9	ಬುಧ	⊤	ಬಿದಿಗೆ	19-46	ಸ್ವಾ	37-14	23

* ಯತೀನಾಂ ಮಹಾಲಯ ¶ ತ್ರಯೋದಶೀತಿಥಿ, ಪ್ರದೋಷ ,, ಶೂನ್ಯತಿಥಿ. ‡ ಮಹಾವ್ಯತೀಪಾತ ∴ ಅಮಾಸೋಮವ್ರತ, ಸರ್ವಪಿತೃ ಮಹಾಲಯ ಅಮಾವಾಸ್ಯೆ, ಕಪಿಲ ಷಷ್ಠಿ ,, ಶರನ್ನವರಾತ್ರಾರಂಭ, ಚಂದ್ರೋದಯ, ಜಯಲಕ್ಷ್ಮೀವ್ರತ ⊤ ತಿಥಿದ್ವಯಂ, ರಂಜಾನ್ ಚಂದ್ರ ೧

ಪೇಟೇ ಧಾರಣೆ.

ವಿನಸಿ	ಮೈಸೂರು.	ಬೆಂಗಳೂರು
ಕಸ್ತೂರಿ ಅಕ್ಕಿ ಪಲ್ಲ ೧ಕ್ಕೆ ರೂ	೧೩-೬-೦	೧೬-[illegible]
ಕಂಬಳಿಕ ಅಕ್ಕಿ ಅಲ್ಲ	೧೩-೩-೦	೧೩-[illegible]
,, ದುಯ್ಯಂ	೧೨-೮-೦	೧೨-೮[illegible]
ಜಾವಾಳ ಅಕ್ಕಿ	೧೨-೦-೦	೧೬-[illegible]
ಸಣ್ಣಕ್ಕಿ ಅವಲ್	೧೫-೮-೦	೧೫-[illegible]
,, ದುಯ್ಯಂ ..	೧೬-೮-೦	೧೬-[illegible]
ತೊಗರಿ ಬೇಳೆ ಪಲ್ಲ ೧ಕ್ಕೆ	೧೬-೦-೦	೧೬-[illegible]
,, ದುಯ್ಯಂ ..	೧೩-೦-೦	೧೩-[illegible]
ಹೈ ರಾಗಿ ಪಲ್ಲ ೧ಕ್ಕೆ	೯-೧೨-೦	[illegible]
ಕಾರಾಗಿ	೫-೮-೦	[illegible]
ಜೋಳ	೫-೧೨-೦	[illegible]
ಹಲಸಂದೆ ಪಲ್ಲ ೧ಕ್ಕೆ ..	೧೩-೮-೦	೯-೮[illegible]
ಬಿಳಿ ಅವರೆ	೮-೧೬-೦	೮-[illegible]
ಹೆಸರು	೧೨-೮-೦	೧೨-[illegible]
ಉದ್ದು	೧೨-೮-೦	೧೧-[illegible]
ಕಡಲೆ	೧೨-೮-೦	೧೨-[illegible]
ಎಳ್ಳು ಸೆ ೧೨೩ಕ್ಕೆ ..	೧೯-೮-೦	೧೯-[illegible]
ಹುರುಳಿ	೭-೧೨-೦	[illegible]
ಹರಳು ೭ ೧೩ ಸೇರಿಗೆ	೧೬-೦-೦	೧೨-[illegible]
ಸೀಗೇಕಾಯಿ ಮಣ ೧ಕ್ಕೆ ..	೨-೬-೦	೨-[illegible]
ಮೆಣಸಿನಕಾಯಿ ..	೨-೮-೦	೨-[illegible]
,, ದುಯ್ಯಂ ..	೨-೬-೦	೨-[illegible]
ಬೆಲ್ಲ ದೊಡ್ಡ ಅಚ್ಚು ..	೬-೮-೦	೩-೧-[illegible]
ಒಳ್ಳೆಣ್ಣೆ ಮಣ ೧ಕ್ಕೆ ..	೭-೦-೦	೫-[illegible]
ಹರಳೆಣ್ಣೆ ,, ..	೫-೧೨-೦	೫-[illegible]
ಕೊತ್ತುಂಬರಿ ಪಲ್ಲ ೧ಕ್ಕೆ ..	೫-೧೨-೦	೭-೮[illegible]
ಉಪ್ಪು ,, ..	೫-೧೨-೦	೫-[illegible]
ಹುಣಸೇ ಹಣ್ಣು ..	೧-೭-೦	[illegible]
,, ಹಳೇದು ..	೦-೧೬-೦	೧-[illegible]
ತುಪ್ಪ ಮಣ ೧ಕ್ಕೆ ..	೧೩-೮-೦	೧೫-[illegible]
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ ..	೬-೧೫-೦	[illegible]
ತೆಂಗಿನಕಾಯಿ ೧೦೦ಕ್ಕೆ ..	೭-೮-೦	೭-೮[illegible]
ಅಳಲೇಕಾಯಿ ಮಣ ೧ಕ್ಕೆ ..	೧-೦-೦	೧-[illegible]
ಅಂಟುವಾಳದ ಕಾಯಿ ಮಣ ೧ಕ್ಕೆ	೪-೧೨-೦	೬-೧[illegible]
ಚಿನ್ನ (ಪವನ್) ಕೆಂಪು ..	೧೫-೭-೦	೧೫-[illegible]
,, ,, ಬಿಳುಪು ..	೧೫-೧೦-೦	೧೫-[illegible]
,, ,, ಗಟ್ಟಿ ತೊಲ ೧ಕ್ಕೆ	೨೩-೧೨-೦	೨೧-[illegible]
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	೮೫-೦-೦	೮೬-[illegible]

Printed and Published by the Rev. E [illegible] THOMPSON, M A, Proprietor and Manager, Wesleyan Mission Press, Mysore. 3/10/1907.

REGISTERED
M 20

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೧ ಮೈಸೂರು—ಸನ್ ೧೯೦೨ ನೇ ಇಸವಿ ಅಕ್ಟೋಬರ್ ತಾರೀಖು ೧೦ ನೇ ಗುರುವಾರ. ಸಂಚಿಕೆ ೧೯

BASEL MISSION WEAVING ESTABLISHMENT, 59-8

MANGALORE, SOUTH CANARA.

ದಕ್ಷಿಣ ಕನ್ನಡ ಜಿಲ್ಲಾ ಮಂಗಳೂರು ಬಾಸೆಲ್ ಮಿಶ್ಯನ್ (ಬಟ್ಟೆ) ನೆಯ್ಯುವ ಕಾರಖಾನೆಯಲ್ಲಿ

ನಾನಾ ವಿಧದ (ಮಿಕ್ಸ್ಚರ್) ಟ್ವೀಡ್ ನಮೂನೆಯು ಕೋಟು ಇಜಾರುಗಳ ಚೆಕ್ಸ್ ಬಟ್ಟೆಗಳೂ, ಪಂಚಿಂಗ್ ಎಂಬ ಕಿಸಾರಿ ಬಟ್ಟೆಗಳೂ, ಶರ್ಟಿಂಗ್ ಎಂಬ ಕಮೀಜಿನ ಬಟ್ಟೆಗಳೂ, ಬೇರೆ ಇತರ ಬಟ್ಟೆಗಳೂ ಟೇಬಲ್ ಕ್ಲೋತ್ ಎಂಬ ಮೇಜುವಸ್ತ್ರಗಳೂ, ಟುವಾಲು ವಗೈರೆಗಳೂ ಸಾಬೂನಾಗಿ ತಯಾರಿಸಲ್ಪಟ್ಟು ಮಾರಾಟಕ್ಕೂ ಬಿಳುಪಾಗಿಯಾಗಲೀ ರಂಗು ಆಗಿಯಾಗಲೀ ಮಾರಾಟಕ್ಕೆ ತಯಾರಿರುತ್ತವೆ.

ಒಳ್ಳೇ ಕಮಿಷ್ಯನ್.—ರೂಪಾಯಿ ೧೦೦ ರ ಮೇಲೆ ವಸ್ತ್ರಗಳನ್ನು ತೆಗದುಕೊಳ್ಳುವ ಗಿರಾಕಿಗಳಿಗೆ ಯಾ ಸಾಹುಕಾರರಿಗೆ ಕೊಡಲಾದೀತು ಹೆಚ್ಚಿನ ವಿವರ ಖುದ್ದಾಗಿ ಯಾ ಕಾಗದ ಮೂಲಕ ತಿಳಿಕೊಳ್ಳಬಹುದು

ನಮೂನೆ ಯಾ ಮಾದರಿಗಳು :—ಪರವೂರಿನ ಸಾಹುಕಾರರು ಈ ಕೆಳಗಿನ ವಿಳಾಸಕ್ಕೆ ಬರಕೊಂಡಲ್ಲಿ ಕಳುಹಿಸಲ್ಪಡುವವು

ವಿಶೇಷ ಲಕ್ಷಿಸತಕ್ಕದ್ದು :—ಈ ನಮ್ಮ ವಸ್ತ್ರಗಳಿಗೆ ಇಲ್ಲಿ ಕಾಣಿಸಿರುವ "ಟ್ರೇಡ್ ಮಾರ್ಕ್" ಎಂಬ ವ್ಯಾಪಾರಗುರ್ತು ಇರುವ ಲೇಬಿಲ್ ಯಾನೆ ಚೀಟು ಹಚ್ಚಿರುತ್ತದೆ. ಈ ಗುರ್ತಿನ ಚೀಟುಗಳು ಇಲ್ಲದವುಗಳೆಲ್ಲಾ ತಾಜಾ ಮಿಕ್ಸ್ಚರ್ ವಸ್ತ್ರಗಳಲ್ಲವೆಂದು ತಿಳಿಯತಕ್ಕದ್ದು.

ಶರ್ತ :—ನಗದಾಗಿ ಇಲ್ಲವೆ ವಸ್ತ್ರಗಳು ವ್ಹಿ. ಪಿ. ಟಪ್ಪಾಲ ಮೂಲಕ ಕಳುಹಿಸಲ್ಪಡಬೇಕಾದ್ದಲ್ಲಿ ಕಾಲುಪಾಲು ಮೌಲ್ಯವನ್ನು ಮುಂಗಡವಾಗಿ ರವಾನಿಸತಕ್ಕದ್ದು.

ಪತ್ರಗಳನ್ನು ಇಂಗ್ಲೀಷಿನಲ್ಲಿ ಯಾ ಕನ್ನಡದಲ್ಲಿ ಸ್ಪಷ್ಟವಾಗಿ ಬರಿಯತಕ್ಕದ್ದು.—

☞ ಈ "ಟ್ರೇಡ್ ಮಾರ್ಕ"ನ್ನಾಗಲೀ ನಾವು "ಕೋಪಿರೈಟ್" ಪಡದಿರುವ ಲೇಬಿಲುಗಳನ್ನಾಗಲೀ ಇಲ್ಲವೆ ಆ ನಮೂನೆಯ ಬೇರೆ ಲೇಬಿಲುಗಳನ್ನಾಗಲೀ ಯಾರಾದರೂ ಇತರ ವಸ್ತ್ರಗಳ ಮೇಲೆ ಪ್ರಯೋಗಿಸಲೂ ಮಾಡಲೂ ಕೂಡದು.

ವಿಳಾಸ.—BASEL MISSION WEAVING ESTABLISHMENT,
MANGALORE, S CANARA

WILLIAM & CO., BOMBAY.

ವಿಲಿಯಂ ಮತ್ತು ಕಂಪೆನಿ, ಫೋರ್ಟ್, ಮುಂಬಯಿ.

ಗಜಕರ್ಣದ ಮುಲಾಮು.

27 33

ಇದನ್ನು ಹಾಗಿಸುವದರಿಂದ ಎಲ್ಲಾ ತರದ ಕಜ್ಜಿಯೂ ನಾಶವಾಗುತ್ತವೆ. ಮೂರು ಸಾರಿ ಹಾಗಿಸುವದರೊಳಗೆ ಗಜಕರ್ಣವು ಹೋಗುವದು. ಇದನ್ನು ಹಚ್ಚಿದಲ್ಲಿ ಉರಿಯು ಬರುವದಿಲ್ಲ. ಮತ್ತು ಚರ್ಮ ಕಪ್ಪಾಗುವದಿಲ್ಲ. ಒಂದು ಸಾರಿ ಪರೀಕ್ಷಿಸಿ ನೋಡಿರಿ ಗುಣ ಕಂಡುಬರುವದಿಲ್ಲವಾದರೆ ಹಣ ಹಿಂತಿರುಗಿ ಕೊಡಲ್ಪಡುವದು ಡಬ್ಬಿ ೧ಕ್ಕೆ ಕಿಮ್ಮತ್ತು ೦-೬-೦. ವಿ ಪಿ. ೦-೧೦-೨ ತರಿಸಿಕೊಳ್ಳಿರಿ! ತ್ವರೆಮಾಡಿರಿ"



ವಜ್ರಗುಟಿಕ ೧-೦-೦. ಸುಂದರೀ ತೈಲ ೦-೮-೦ ದಂತಮಂಜನ ೦-೨-೦ ಕಫಹಾರಿ ೧ ೪-೦ ಕೇಶವರ್ಧಿನೀ ತೈಲ ೧-೦-೦ ಜೀರ್ಣರಸಾಯನ ೧-೬-೦. ಬಿಜ್ಜೆ ಮುಲಾಮು ೧-೩-೦ ಈ ಕಂಪನಿಯವರು ಹೆಚ್ಚು ನಮೂನೆಯ ಔಷಧಗಳನ್ನು ಸ್ವತಹಾ ತಯಾರಿಸುವದರಿಂದ ಸ್ಟಾಕುಗಳು ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು.

ಅಮೃತಾಂಜನ

ಒಂದು ಬುಡ್ಡಿ ಒಂದಕ್ಕೆ ಕಿಮ್ಮತ್ತು ೮ ಆಣೆ. ವಿ ಪಿ. ೧೨ ಆಣೆ.

ಅಮೃತಾಂಜನ—ಸುಖಾಂಜನ.
ಅಮೃತಾಂಜನ—ದಿವ್ಯಾಂಜನ.
ಅಮೃತಾಂಜನ—ಸಂಜೀವನ
ಅಮೃತಾಂಜನ—ಪರಮಾಂಜನ

ವಾತ, ಎದೆನೋವು ಗಂಟುನೋವು, ಸಂಧಿವಾತ ತಲೆನೋವು, ಮೂಲವ್ಯಾಧಿ, ಈ ಎಲ್ಲಾ ತರದ ರೋಗಕ್ಕೆ ಈ ಅಮೃತಾಂಜನವು ದಿವ್ಯ ಔಷಧವಾಗಿರುತ್ತದೆ.

ಅಮೃತಾಂಜನ ಜೈಲಿಪ್ಪ, ೧೯ ಸಂಪಾದಕರು

ಅಮೃತಾಂಜನ—ಶೀತಭಂಜನಿ.
ಅಮೃತಾಂಜನ—ತಕ್ಷಣಪಹಾರಿಣಿ.
ಅಮೃತಾಂಜನ—ಅಪೂರ್ವದರ್ಶನಿ.
ಅಮೃತಾಂಜನ—ಭಂಜನವಿಮುಧಿನಿ.

ಇದರಿಂದ ಗುಣ ಕಂಡುಬರುವದಿಲ್ಲವಾದರೆ ಹಣ ಹಿಂತಿರಿಗಿ ಕೊಡಲ್ಪಡುವದು ಜಕಂ ಮತ್ತು ಘಾಯ, ಅರ್ಧಾಂಗವಾಯು, ಈ ರೋಗಕ್ಕೆ ಇದು ಸಂಜೀವನವಾಗಿರುತ್ತದೆ. ತರಿಸಿಕೊಳ್ಳಿರಿ! ಪರೀಕ್ಷಿಸಿರಿ!!

ವಿಲಿಯಂ ಮತ್ತು ಕಂಪೆನಿ, ೧೬ ಶಿಕ್ ಲೇನ್, ಫೋರ್ಟ್, ಮುಂಬಯಿ.
ಟೆಲಿಗ್ರಾಫು ಅಡ್ರೆಸು; "ಅಮೃತಾಂಜನ," ಮುಂಬಯಿ.

ನಿಮಗೆ ನೋವು ಇದೆಯೋ?

58-20

ಹಾಗಾದರೆ "ಕ್ಲೆಮೆಂಟ್ ಯವರ ಮ್ಯಾಜಿಕ್ ಬಾಂ" ನ್ನು ಏಕೆ ಉಪಯೋಗಿಸಬಾರದು? ಆಶ್ಚರ್ಯಕರವಾದ ಬಾಧಾಪಹಾರಿಣಿಯು! ಈಗಿನ ಶತಮಾನದಲ್ಲಿ ಕಂಡು ಹಿಡಿದ ದೊಡ್ಡ ಸೂಚನವು!

ಈ ರಾಜ ಔಷಧವನ್ನು ಹೊಟ್ಟೆಮೊದಲು ಕೊಡಬೇಕು ಶರೀರದ ಕೆಲವು ವಿಭಾಗಗಳೊಳಗಾಗಿ ನರ ಮತ್ತು ಮಾಂಸ ಸಂಬಂಧವಾದ ವಾತ್ಯ ನೋವು, ಕೀಲುಗಳ ಬಾಧೆ, ಕಿಬ್ಬೊಟ್ಟೆ ನೋವು, ಬೆನ್ನೆಳೆಯುವದು, ತಲೆನೋವು, ಳಿವಾತ, ಕೀಲುಗಳು ಉತ್ತರಿಸುವದು, ಕೊರಳು ಊತ, ಕೈಕಾಲು ಬಿರುಕು ಇವುಗಳನ್ನೆಲ್ಲಾ ವಿದ್ಯುಚ್ಛಕ್ತಿಯಂತೆ ಗುಣಪಡಿಸುವದು ಈ ಔಷಧವು ಆಶ್ಚರ್ಯಕರವಾಗಿ ಗುಣಪಡಿಸುವದರಿಂದ ಎಲ್ಲರಲ್ಲಿಯೂ ಪ್ರಸರಿಸುತ್ತಾ ಬರುವದು ಇತರ ಔಷಧಿಗಳು ಗುಣಪಡಿಸದೆ ಹೋದಾಗ ಡಾಕ್ಟರ್ ಫೀಜನ್ನು ಕಡಿಮೆಮಾಡಿ ಇದು ನಿಸ್ಸಂದೇಹವಾಗಿಯೂ ಗುಣಪಡಿಸುವದು.

ಕ್ರಯ.—೧ ಬಾಟ್ಲಿಗೆ ೧೨ ಆಣೆ, ಪೋಸ್ಟೇಜ್ ೪ ಆಣೆ ೭ ಬಾಟ್ಲಿಗೆ ಅಂಚೆವೆಚ್ಚ ಸೇರಿ ರೂ. ೨—೪ ಆಣೆ ಎಲ್ಲಾ ಕೆಮಿಸ್ಟ್ ಷಾಪುಗಳಲ್ಲಿ ದೊರೆಯುವದು.

ನಮ್ಮ ವಿಳಾಸ:—ಎಫ್. ಡಬ್ಲಿಯು. ಆರ್ಥರ್,
ಸಿಮೆಟ್ರಿ ರೋಡ್, ವೇಪೇರಿ, ಮದರಾಸ್.

ಜ್ವರಹರಿ.

71 11



ಇದು ಸಾಧಾರಣ ಜ್ವರ, ಚಳಿಜ್ವರ, ಮೊರೇಜ್ವರ, ಪಿತ್ಥಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲ ವಿಧವಾದ ಜ್ವರಗಳನ್ನು ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟು ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಓವರ್‌ಸಿಯರ್ ಆಫೀಸರ್ ಎಸ್ ಟಿ ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೩೦ ಡೋಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವದರಿಂದ ದಯವಿಟ್ಟು ಇನ್ನೊಂದು ೩೦ ಡೋಸಿನ ಸೀಸೆಯನ್ನು ವಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿರುವದು—ಎಂದು ಬರೆದಿದಾರೆ.

ಕ್ರಯ:—ಸೀಸೆ ೧ ಕ್ಕೆ ೮ ಆಣೆ, ೩ ರೂ., ೩—೮ ರೂ., ೪ ರೂ. ೨—೧೨ ಆ.; ೧೦ ರೂ.; ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

****

ಓಮಂಕರ್ಪೂರ

ಈ ಔಷಧವು ಅಜೀರ್ಣ, ಶೀತಬೇಧಿ, ಸಾಧಾರಣ ಹೊಟ್ಟೆ ಕಳೆಯುವದು, ವಾಂತಿಬೇಧಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು ಇದು ಚಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಗೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು

ಕಾಶಿಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆನ್ರಿಯವರ ಓಮಂಕರ್ಪೂರವನ್ನು ನಾನೂ ನನ್ನ ತಾಬೇದಾರರೂ ಮ್ಯಾನೇಜು ಮಾಡುವ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧವೆಂತ ಬರೆದಾರೆ

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಚಾರಿ —
ಹೆನ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,
ಸೆಕೆಂಡ್ ಬೀಚ್ ಲೈನ್, ಮದರಾಸ್.

ಇಲ್ಲಿ ನೋಡಿ!

65 14

ತುಮುಕೂರು ಡಿಸ್ಟ್ರಿಕ್ಟ್ ಇಲಾಖೆಯಲ್ಲಿ ಯೂರೋಪಿಯನ್ ಮೇಸ್ತ್ರಿ ಯಾಕಣೆಯಿಂದ ಉತ್ತಮ ತರಹದ ಹಾಸನದ ಟೋಪಿಗಳು ಅತಿ ಶ್ರೇಷ್ಠವಾದ ಉಲ್ ನಾರಿನಿಂದ ತಯಾರಾಗುತ್ತವೆ.

ಕ್ರಯ —೬ ಆಣೆ ಮೊದಲ್ಗೊಂಡು ೧ ರೂ ೧೨ ಆಣೆಯ ವರೆಗೆ

೧ ಡಜನ್ ಟೋಪಿಗಳನ್ನು ತೆಗೆದುಕೊಳ್ಳುವವರಿಗೆ ಶೇಕಡ ೫ ರಂತೆ ಡಿಸ್‌ಕೌಂಟ್ ಕೊಡಲ್ಪಡುವದು

ನಮ್ಮ ವಿಳಾಸ:—ಮೇನೇಜರ್,

ಹಾಸನದ ಟೋಪಿ ಕಾರ್ಖಾನೆ, ಡಿಸ್ಟ್ರಿಕ್ಟ್ ಇಲಾಖೆ, ತುಮುಕೂರು.

ಶೀಘ್ರವಾಗಿ! ಆಲಸ್ಯಮಾಡಿದರೆ ದೊರೆಯುವದಿಲ್ಲ!!

ಬಿಡಬೇಡಿ!!!

104 8

ಅಮೇರಿಕನ್ ಲೀವರ್ ವಾಚ್.



ಈ ಗಡಿಯಾರದ ಲಕ್ಷಣ ವನ್ನು ಎಷ್ಟು ಹೊಗಳಿದರೂ ಸಾಲದು ನಮ್ಮ ಅಮೇರಿಕನ್ ಲೀವರ್ ವಾಚುಗಳು ಕಾಲವನ್ನು ಸರಿಯಾಗಿ ತೋರಿಸುವದರಲ್ಲಿ ಬಹು ಪ್ರಬಲವಾದದ್ದು ಈ ಗಡಿಯಾರಕ್ಕೆ ಸಮಾನವಾದದ್ದು ಇಲ್ಲವೆಂದು ತಿಳಿಯಿರಿ ಬಹಜನಗಳಿಗೋಸ್ಕರವೇ ತಯಾರಿಸಿ ತರಿಸಿದ್ದೇವೆ ಇದರ ಹೆಸರು "ಅಮೇರಿಕನ್ ಲೀವರ್ ವಾಚ್" ಅನ್ನುವರು ಇಂಥಾ ಲೀವರ್‌ವಾಚ್ ಇಷ್ಟು ಕಡಿಮೆ ಬೆಲೆಗೆ ಇಂದಿನ ವರ್ಗಂತ ಬಂದಿರಲಿಲ್ಲ ಮುಚ್ಚಳ ತೆರೆಯಬೇಕಾದ ಅವಶ್ಯಕವೇ ಇಲ್ಲ. ಬೇರೆ ಬೀಗವಕ್ಕೆ ಇಲ್ಲ ಪೇಸಂಟಾಗಿದೆ ವಿಶಾದಿಯೂ ಸ್ಟೈಮ (ಮದ್ಯಮ ಅಳತೆ) ನಿಕ್ಕಲ್ ಬೆಳ್ಳಿಯಿಂದ ಮಾಡಿದ್ದು ಕೆಳಗೆ ಬಿದ್ದಾಗ್ಯೂ ಕೆಡುವದಿಲ್ಲ ೧ ವರ್ಷ ಗ್ಯಾರಂಟಿ ಕೊಡುವೆವು ವ್ಯಾಪಾರಸ್ಥರಿಗೂ ಇದು ಯೋಗ್ಯವಾದದ್ದು. ಇದರ ಕ್ರಯ ಬಹು ಸ್ವಲ್ಪ

ವಿ. ಪಿ. ಪಿ. ಚಾರ್ಜು ಸೇರಿ ರೂ ೨—೧೨—೦ ಮಾತ್ರ ವೇ.

ಸೂಚನೆ.—ಅಕ್ಟೋಬರ್ ತಿಂಗಳು ಆಖೈರಿನೊಳಗೆ ಮುಂಚಿತವಾಗಿ ತರಿಸಿಕೊಳ್ಳತಕ್ಕವರಿಗೆ ಮಾತ್ರ ಸಿಕ್ಕುವದು. ಆಲಸ್ಯಮಾಡತಕ್ಕವರಿಗೆ ಬಹುಶ ಸಿಕ್ಕಲಾರದು ನಮ್ಮ ಮೇಲಿ ಆಯಾಸಪಡಬೇಡಿ ಅವರವರ ವಿಳಾಸವನ್ನು ವಿಶದವಾಗಿ ಇಂಗ್ಲೀಷಿನಲ್ಲಿ ಬರೆಯಬೇಕು.

ವಿಳಾಸ:—ಟಿ ಸಿ ಕನ್ನಯ್ಯಶೆಟ್ಟಿ ಅಂಡ್ ಸನ್, ನಂಬರು ೬೦,

ಸಿಂಗಣ್ಣ ನಾಯಿಕ್ ಬೀದಿ, ಸಾಹುಕಾರ್‌ಪೇಟೆ, ಮದರಾಸು

THE PLACE FOR HASSAN CAPS IS

HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

75 11

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆ ಬರತೊಡಗಿದವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ವಿಕರಿಯಾಗುತ್ತಿರುವ ಟೋಪಿಗಳ ಪಾಡವೆಲ್ಲ ನಿಳ್ಳಾದದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ಪಾಡವೆಲ್ಲ ನೆಟ್ಟಗೆ ವಿಲಾಯಿತಿಯಿಂದಲೇ ಬರುವದು (೨) ಟೋಪಿಗಳನ್ನು ಬಹು ಚೊಕ್ಕವಾಗಿ ನಾವೇ ನಿಂತು ಚನ್ನಾಗಿ ಹೊಲಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕ ಪ್ಯಾಟರ್ನುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನನಗೆ ನೇರಾ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದು ಚನ್ನಾಗಿಲ್ಲದ್ದು ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ.

ಸಾದ, ಕೆಂಪು, ಕಪ್ಪು, ಬಿಳಿಕೆ, ಕಾಫಿ ಟೋಪಿಗಳು ೧ ರೂ ೪ ಆ;

೧ ರೂ ೩ ಆ., ೧ ರೂ ೬ ಆ.

ರೇಷ್ಮೆ ಚುಕ್ಕೆಯುಳ್ಳ ಟೋಪಿಗಳು ೧ ರೂ. ೪ ಆ.; ೨ ರೂ.

ಪಾರದ ಟೋಪಿಗಳು ೧ ರೂ. ೧೨ ಆ , ೧ ರೂ. ೪ ಆ , ೧ ರೂ. ೩ ಆ.

ಉಣ್ಣೆಯ ಟೋಪಿಗಳು ೧ ರೂ. ೪ ಆ ; ೦ ರೂ. ೩ ಆ.

ಹೊಸಗಳ ಟೋಪಿ, ಸೂರ್ತಿ ಮೇಜೋಡು, ಅರ್ಜಿ ಮೇಜೋಡು ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು.

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ.

CHAMBERLAIN'S COUGH REMEDY.

ಚೇಂಬರ್ಲೈನ್‌ರವರು ಕಂಡು ಹಿಡಿದ ಕೆಮ್ಮಿನ ಔಷಧವು.



4-15

ಶೀತದ ಕೆಮ್ಮು, ಗಂಟಲು ಗೂರಲು ಪಟ್ಟು, ಹುಡಿಗೆಮ್ಮು, ನಾಯಿಗೆಮ್ಮು, ಎಲ್ಲಾ ತರದ ಶೀತ, ಗಂಟಲು ನೋವು ಎದೆಯಲ್ಲಿ ಹುಟ್ಟುವ ಸಮಸ್ತ ವ್ಯಾಧಿಗಳು—ಇವಕ್ಕೆಲ್ಲಾ ಈ ಔಷಧವು ಬಹಳ ಉಪಯೋಗವಾಗಿದೆ.

ಆ ಕೆಮ್ಮನ್ನು ಅಲಕ್ಷ್ಯಮಾಡಬೇಡಿ ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ ಅದರ ಜೊತೆ ನ್ಯುಮೋನಿಯಾ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವುದು. ತರುವಾಯ ಉಗುಳಿನಲ್ಲಿ ರಕ್ತ ಬೀಳುವುದು, ಹಾಗೆಯೇ ಕ್ಷಯರೋಗಕ್ಕೆ ಆಸ್ಪದವಾಗುವುದು

ಚೇಂಬರ್ಲೈನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟಲಿನಲ್ಲಿ ಶ್ಲೇಷ್ಮ ಕಟ್ಟುವುದನ್ನೂ ಶ್ಲೇಷ್ಮ ಬೀಳುವುದನ್ನೂ ಉಚಿತವಾಗಿ ನಿವಾರಣೆಮಾಡುತ್ತದೆ. ಉಸುರು ಹೋಯ್ಯುವುದು ಕಷ್ಟವಾಗಿದ್ದರೆ ಅದನ್ನು ಕೂಡಲೇ ಪರಿಹರಿಸುತ್ತದೆ ಅಪಾಯಕರವಾದ ಕೆಮ್ಮಿನ ಕಬ್ಬವನ್ನು ನಿಲ್ಲಿಸಿಬಿಡುತ್ತದೆ ಎದೆ ಬಿಗಿಯುವಂಥಾ ಕಟ್ಟನ್ನು ಕೊಯ್ದು ಸಂಪೂರ್ಣವಾಗಿ ವಾಸಿಮಾಡಬಲ್ಲದು. ಕೆಮ್ಮನ್ನು ಶಮನಮಾಡಿ, ನೀವು ಸುಖವಾಗಿ ನಿದ್ರೆಮಾಡುವಂತೆ ಮನಸ್ಸಿಗೆ ಉಲ್ಲಾಸಕೊಡುತ್ತದೆ

ಚೇಂಬರ್ಲೈನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇರಿಸುವುದಿಲ್ಲ

ಈ ಔಷಧವು ಸಸ್ಯಾದಿಗಳ ತಯಾರಿ

ಕೈಯಿಂದಮುಟ್ಟದೆ ತಯಾರಾಗಿದೆ.

ಎಲ್ಲೆಲ್ಲೂ ವಿಕರಿಯಾಗುವುದು ಸಣ್ಣಸೀಸೆಗೆ ೧ ರೂಪಾಯಿ ದೊಡ್ಡಸೀಸೆಗೆ ೨ ರೂಪಾಯಿ

"ಲಾಗೆಜೆಟ್" ಎಂಬ ಮಾಸಪತ್ರಿಕೆಯು.

101 4

ಕ್ರಿಮಿನಲ್, ರೆವಿನ್ಯೂ, ಲಾಪಾಯಿಂಟುಗಳನ್ನು ತಿಳಿಸತಕ್ಕ ಲಾಗೆಜೆಟ್ ಮಾಸಪತ್ರಿಕೆಯನ್ನು ಈ ಬಡೆಲೇ ತರಿಸಿಕೊಳ್ಳಿ, ವಾರ್ಷಿಕ ಚಂದಾ ಟಪ್ಪಾಲ್ ಹಾಸಲು ಸಹಿತ ರೂ ೧—೮—೦ ವಿಳಾಸ—

ಟಿ. ನರಸಿಂಗರಾವ್, ಎಡಿಟರ್, ಲಾಗೆಜೆಟ್ ಬೆಂಗಳೂರು

ಔಷಧಿ ತಕ್ಕೊಂಡು ಗುಣವಾಗುವದಕ್ಕಿಂತಲೂ ತಕ್ಕ ಕ್ರಮದಲ್ಲಿರುವದು ಉತ್ತಮ.

SCOTT'S EMULSION.

(ಸ್ಕಾಟ್ಸ್ ಇಮಲ್‌ಶನ್)

31-30

ಭಟ್ಟ ಶರೀರವುಳ್ಳವರಿಗೆ ಪ್ಲೇಗ್, ಮಲೇರಿಯಾ, ವಾಂತಿಭೇದಿ ಅಥವಾ ಶ್ವಾಸಕೋಶದ ರೋಗಗಳ ಭಯಕ್ಕೆ ಒಳಪಡುವ ಅಗತ್ಯವಿಲ್ಲ

ರೋಗವು ಬಲಹೀನರನ್ನೂ ದುರ್ಬಲರನ್ನೂ ಬೇಗನೆ ತಗಲಿ ಹಿಡಿಯುತ್ತದೆ

ಅಸ್ವಸ್ಥವನ್ನು ದೂರ ಹೋಗಲಾಡಿಸಿ, ಶರೀರದಲ್ಲಿರುವ ಬಲಹೀನ ಭಾಗಗಳನ್ನು ಬಲಪಡಿಸಿಕೊಳ್ಳಿ, ಸಂಪೂರ್ಣ ಸೌಖ್ಯವನ್ನು ಉಂಟುಮಾಡುತ್ತದೆ

ಕೈಸೋಕದೆ ತಯಾರಾದದ್ದು

ಎಲ್ಲಾ ಔಷಧ ವ್ಯಾಪಾರಗಾರರಲ್ಲೂ ಮಾರಲ್ಪಡುತ್ತದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್

ಈ ವಿಶಾನ ಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು

26-31

೧. ಲೋಕಾಮಯಹರ ಕಸ್ತೂರಿ ಮಾತ್ರೆ.—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಶೇಷ್ಠಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ



ಚಳಿಜ್ವರ, ಜ್ವರ, ಹೊಟ್ಟೆ ನೋವು, ಸಂದುಗಳ ನೋವು, ಮೈ ಕೈಕಾಲು ಕೊಡೆತ (ಬಾವು), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿಮಾಂದ್ಯ, ತಲೆನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕರೋಗಗಳಿಗೆ ಕೆಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ

ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಬಾಯಿಬೇಗೂ ಪಾಲಿಕೆ ಇದರ, ನೀರು ಹವಾಗಳ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳೆವು, ಜ್ವರ, ನಿತ್ಯಜ್ವರ ಕೃಶತ್ವಗಳನ್ನು ಗುಣಪಡಿಸುತ್ತದೆ.

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ ಒಳ್ಳೇ ಶಕ್ತಿ ವರ್ಧಕವಾಗಿದೆ.

ಅನುಪಾನಸಹ ಔಷಧದ ಸಂಗಡಲೇ ಇರುತ್ತದೆ

೨೦೦ ಮಾತ್ರೆಯುಳ್ಳ ಕುಪ್ಪಿಗೆ ೬ ಆಣೆ, ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು. ೧ ರಿಂದ ೧೨ ಕುಪ್ಪಿ ವರೆಗೆ ಪೋಸ್ಟೇಜು ೬ ಆಣೆ.

ವಿಳಾಸ:—ಪಾಳ್ಯದ ವೆಂಕಟಾಚಲ ಪಂಡಿತ,

ಎಸ್. ಎಸ್. ಆರ್. ವೈದ್ಯಶಾಲಾ,

ಲಕ್ಷ್ಮೀವಿಲಾಸ ರೋಡ್, ಮೈಸೂರು

ಮದರಾಸು ಶೀರಗಳು.

111-3

ವಿ ಪಿ ಚಾರ್ಜ್ ೪ ಆಣೆ ೧೨ ನಂಬರದ ಶೀರೆಯವರಿಗೆ ಮಾಫಿ

ಈ ಶೀರೆಗಳು ಸರ್ವರಿಗೂ ಅವಶ್ಯಕವಾದವು. ಹೊಸ ಮಾದರಿಯ ಬಹು ಸೊಗಸಾದವು. ನಮ್ಮ ಸ್ವಂತ ನಿಗಾಮಟ್ಟದಲ್ಲಿ ಅತ್ಯುತ್ತಮವಾದ ನೂಲಿನಿಂದ ನೇಯಲ್ಪಟ್ಟು ಜರಿಯಿಂದ ಸ್ವಚ್ಛ ಬಣ್ಣದ ಆಸ್ಪ್ರಾಂ ರೇಷ್ಮೆಯ ಅಂಚುಗಳುಳ್ಳವು ಸೆರಗುಗಳು ಎಂದು ಕರೆಯಲ್ಪಡುವ ಒಂದೊಂದು ಗಜದಷ್ಟು ವಿರುವುದು ಇವು ಬಿಳಿ ಗೆಲ್ಲು ಕಲರ ರೇಷ್ಮೆಗಳಿಂದ ತಯಾರಿಸಿದೆ ನೋಟಕ್ಕೆ ಅತಿ ಸುಂದರವಾಗಿಯೂ, ಉಪಯೋಗದಲ್ಲಿ ಬಹು ಬಾಳ್ವಿಕೆಯಾಗಿಯೂ ಅತಿ ಗಟ್ಟಿಯಾಗಿಯೂ ಕೆಡದಂತೆ ಇರುವುದು. ಶೀರೆಯು ೯ ಗಜದುದ್ದವೂ ೫೦ ಗಜಗಲವೂ ಇರುತ್ತದೆ ಒಂದನ್ನು ತರಿಸಿ ಉಪಯೋಗಿಸಿದರೆ ಇದರ ಉತ್ತಮೋತ್ತಮತೆಯು ತಿಳಿಯುವುದು. ಇಂಥಹ ನೂಲಿನಿಂದಲೂ ಇಷ್ಟು ಸೊಗಸಾಗಿಯೂ ತಯಾರಿಸಿದವು ಎಲ್ಲಿಯೂ ಬಂದಿತ ದೊರೆಯವು ೨ ಅಂಗುಲ ಅಂಚಿನ ಶೀರೆಗೆ ರೂ ೯—೪—೦ ೩ ಅಂಗುಲ ಅಂಚಿನದಕ್ಕೆ ರೂ ೧೦—೪—೦ ಬಿಳಿಯ ರೇಷ್ಮೆಯ ಚೌಕಳಿಯ ದಕ್ಕೆ ರೂ ೭—೪—೦ ಜಾಸ್ತಿ

ವಿಳಾಸ —ದಿ ಸ್ವಾಮಿ ಎಂಪೋರಿಯಂ,

ಸ್ವರ್ಣಸ್ವಾಮಿ ರೋಡ್, ವೇಪೇರಿ, ಮದರಾಸು.

ಎಲ್ಲಾ ವ್ಯಾಧಿಗಳಿಗೂ ಗುಣಕಾರಿಯಾದ ಔಷದಗಳು ಕಳಿಸುವವು ರೋಗಗಳಿಗೆ ಗುಣವಾಗುವುದರಲ್ಲಿ ಸಂದೇಹವಿಲ್ಲ ನಮ್ಮ ಔಷಧಗಳನ್ನು ಮಾರಲು ಎಲ್ಲಾ ಕಡೆಗಳಲ್ಲಿಯೂ ಏಜಂಟರು ಬೇಕು.

ವಿಳಾಸ —ಎಸ್ ಆರ್ ರಾವ್,

ಸ್ವರ್ಣಸ್ವಾಮಿ ರೋಡ್, ವೇಪೇರಿ ಮದರಾಸು

ತರುಣರುಗಳ ಅನುಭವ.

93 6

ಅಸ್ವಸ್ಥರ ಕಾಲದಲ್ಲಿ ನಮ್ಮ ತರುಣರುಗಳಲ್ಲಿ ಎಷ್ಟೋ ಮಂದಿ ತಮ್ಮ ದೇಹದಲ್ಲಿ ಹುಟ್ಟಿದ ರೋಗಗಳೆಂಬುದನ್ನು ತಿಳಿದುಕೊಳ್ಳದೆ ಅತ್ಯಂತ ಹಾಗೆಯೇ ಅವರು ತಮ್ಮ ಸಂಕಟಗಳನ್ನು ಹ್ಯಾಗೆ ನಿವಾರಣೆಮಾಡಿಕೊಳ್ಳಬೇಕು ಎಂಬುದನ್ನು ಸಹಾ ಅರಿತುಕೊಂಡ ಪಕ್ಷದಲ್ಲಿ ಅವರು ಸಫಲವಾಗಿ ಅನುಸರಿಸಿದ ವಿಧಾನವನ್ನು ಕೈಕೊಳ್ಳಲು ನಾವು ನಿಶ್ಚಯಿಸುತ್ತೇವೆ ಹೀಗಿರುವಲ್ಲಿ ಕಲ್ಕತ್ತೆಯ ಒಬ್ಬ ಪ್ರಸಿದ್ಧ ಡಾಕ್ಟರು ನಮಗೆ ಉಪಕಾರವನ್ನು ಕೊಡುವದಾಗಿ ತಿಳಿಸುವ ಔಷಧ ಕಂಪನಿಗಳು ಕೇಳಿರುವುದು ಉತ್ತಮ ಮುಖರ್ಜಿ ಕಂಪನಿಯ ವೈದ್ಯ ಶಾಸ್ತ್ರೋದ್ಯೋಗದ ರಾಜ ಡಾಕ್ಟರ್ ಕೆ ಸಿ ಮಿತ್ತ್ರರವರು ಹೇಳುವದೇನೆಂದರೆ—"ನಾನು ಕೇಸ್ಪರ ಟೇಬ್ಲೆಟ್ ಸಕ್ ಕಿಟ್ಟಿ ಪಿಲ್ಸ್ ಎಂಬ ನೋವಿನ ಮ. ಕ ಶೋಧ ಔಷಧ ಮಾತ್ರೆಗಳನ್ನು ನನ್ನ ವೀಡಿಯಿಂದ ಮ. ದೇಶೀಯ ರೋಗಿಗಳಿಗೆ ಕಳೆದ ೩ ವರುಷಗಳಿಂದ ಕೊಟ್ಟು ಬರುತ್ತೇನೆ ಅವುಗಳು ಪ್ರಯಿವೇಟ್ ಡಿಸೀಜ್ ಎಂಬ ಒಳ್ಳೆ ವ್ಯಾಧಿ, ಕಟಿವಾತ ಮುಂತಾದ್ದಕ್ಕೆ ಅತ್ಯಂತ ಉಪಯೋಗಕರವಾದ್ದೆಂದು ಕಂಡುಬಂದಿವೆ ಮತ್ತು ಅಂಥಾ ವ್ಯಾಧಿಗ್ರಸ್ತರಿಗೆ ಈ ಔಷಧವನ್ನು ಶಿಫಾರಸು ಮಾಡಲಿಕ್ಕೆ ಅಡ್ಡಿ ಇಲ್ಲ.

ಮೂತ್ರನಾಡಿಗಳ ವ್ಯಾಧಿಯು ಅನೇಕಾವರ್ತಿ ತಿಳಿಯದೆ ಘಟ್ಟಿಸಿ ಬರುತ್ತದೆ ಅದು ನೆತ್ತಿ ಪದೆದು ತಿಳಿಯುವದಿಲ್ಲ ರೋಗಿಗೆ ತಲೆನೋವು, ಮಾನಸಿಕ ದುರ್ಬಲತೆ, ಎದೆಗುಂದಿಕೆಯೂ, ನಿದ್ರಾಭಂಗ, ತಲೆ ತಿರುಗುವಿಕೆ, ಅನುತ್ಸಾಹ ಮುಂತಾದ್ದು ಸಂಭವಿಸುತ್ತದೆ ಇದೆ ಬೆನ್ನು ನೋವು, ಜಲೋದರ, ವಾತ ಯಾ ವಾತರೋಗವುಗಳಿಗೆ ಪ್ರೈವೇಟ್ ಡಿಸೀಜ್ ಇವುಗಳ ಹಾಗೆಯೇ ಮೂತ್ರನಾಡಿಯಿಂದ ಉಂಟಾದವು ಎನ್ನಬಹುದು

ಈ ಮಾತ್ರೆಗಳು ಅದರ ಮೂಲ ಕಾರಣವನ್ನು ನಾಶ ಗೊಳಿಸುತ್ತವೆ

ಎಲ್ಲಾ ಔಷಧ ವರ್ತಕರಿಂದ ದೊರೆಯಲ್ಪಡುತ್ತವೆ. ಸೀಸೆ ಒಂದಕ್ಕೆ ರೂ ೨, ಅಥವಾ ೩ ಸೀಸೆಗಳಿಗೆ ರೂ ೫—೪—೦, ಅಥವಾ ಮುಂಬಾಯಿಯಲ್ಲಿಯ ಹೋಪ್ಸನ್ಸ ಔಷಧಗಳ ಕಾರ್ಖಾನೆಯಿಂದ ನೇರಾ ತರಿಸಿಕೊಳ್ಳಬಹುದು ಪಿ ಬಿ. ಬಾಕ್ಸ್ ನಂ ೨೦, ಮುಂಬಾಯಿ

ವೃತ್ತಾಂತ ಪತ್ರಿಕೆ.

೧೯೦೭ ನೇ ಇಸವಿ ಅಕ್ಟೋಬರ್ ತಾ|| ೧೦ ನೇ ಗುರುವಾರ

ಸಾಗರವನ್ನು ದಾಟುವುದು.

ನಾನೂರು ವರುಷಗಳ ಕೆಳಗೆ ಕೊಲಂಬಸನೆಂಬ ಪುರುಷನು ಮರದಲ್ಲಿ ಮಾಡಿದ ಸಣ್ಣ ಹಡಗಿನಲ್ಲಿ ಕುಳಿತು ಯೂರೋಪ್ ಖಂಡದಿಂದ ಹೊರಟು, ಅಟಲಾಂಟಿಕ್ ಸಾಗರದ ಆಚೆ ದಡದಲ್ಲಿ ಇರತಕ್ಕ ಹೊಸ ದೇಶವನ್ನು ನೋಡಿಬಂದ. ಅಮೇರಿಕ ಖಂಡವು ಭೂಭಾಗವೆಂಬುದನ್ನು ಕಂಡು ಹಿಡಿದ ಮಹಾ ಪುರುಷನು ಈತನೇ. ಈತನು ಪ್ರಯಾಣ ಮಾಡಿದಾಗ ಅನೇಕರು ಅವನಿಗೆ ಬುದ್ಧಿ ವಿಕಲ್ಪವಾಗಿದೆ ಎಂದೂ ಸಾಗರಕ್ಕೆ ಆಚೇ ದಡವಾಗಲಿ ಭೂಮಿಯಾಗಲೀ ಇಲ್ಲವೆಂದೂ ತಿಳಿದಿದ್ದರು. ಆದರೆ ಕೊಲಂಬಸನಿಗೆ ಅಂಥಾ ಅನುಮಾನವೇನೂ ಬಾಧಿಸುತ್ತಿರಲಿಲ್ಲ. ಸಮುದ್ರದಲ್ಲಿ ಈತನ ಹಡಗು ಎರಡು ತಿಂಗಳ ಕಾಲ ಪಶ್ಚಿಮದಿಕ್ಕಿಗೆ ಹೋಗುತ್ತಾ ಇತ್ತು. ಹಡಗಿನಲ್ಲಿದ್ದ ಕೂಲಿಕಾರರು ಆತನ ಮೇಲೆ ರೇಗಿಬಿದ್ದು, ಮುಂದಕ್ಕೆ ಬರುವುದಿಲ್ಲವೆಂದು ಹಟಹಿಡಿದರು. ಆದರೂ ಕೊಲಂಬಸನು ಅಧೈರ್ಯಪಡಲಿಲ್ಲ. ತಾಳ್ಮೆಯಿಂದ ಮುಂಮುಂದಕ್ಕೆ ಸಾಗರಪ್ರಯಾಣ ಮಾಡುತ್ತಾ ಹೋಗಿ, ಕಡೆಗೆ ಅಮೇರಿಕ ಎಂದು ನಾವೀಗ ಕರೆಯುವ ಭೂಖಂಡವನ್ನು ಕಂಡುಹಿಡಿದನು.

ಕೊಲಂಬಸನಿಗೆ ಎರಡು ತಿಂಗಳು ಹಿಡಿದ ಪ್ರಯಾಣವನ್ನು ಹೋದ ತಿಂಗಳು ಲೂಸಿಟೇನಿಯಾ ಎಂಬ ಇಂಗ್ಲಿಷ್ ಜಹಜು ಐದು ದಿನಗಳಲ್ಲಿ ಮುಗಿಸಿರುತ್ತದೆ. ಇದು ಹೊಸ ಜಹಜು. ವಿದ್ಯೆ, ಬುದ್ಧಿಕುಶಲತೆ, ಸಾಹಸಾದಿಗಳು ಎಷ್ಟು ಶ್ರೇಷ್ಟವೆಂದು ಇವರಿಂದ ತಿಳಿಯಬಹುದು. ಪ್ರಪಂಚದಲ್ಲೆಲ್ಲಾ ಲೂಸಿಟೇನಿಯಾ ಎಂಬದೇ ಭಾರೀ ಜಹಜಾಗಿದೆ ಅದರ ಉದ್ದ ೭೮೦ ಅಡಿ, ಅಂದರೆ ಒಂದು ಫರ್ಲಾಂಗು ದೂರಕ್ಕಿಂತ ಉದ್ದವಾಗುವುದು; ಅಗಲ ೮೮ ಅಡಿ. ಅದರಲ್ಲಿ ಇಂಜನುಗಳಿಂದ ಹೊಗೆ ಹೋಗುವ ಕೊಳವೆಗಳ ಬಾಯಿ ೨೪ ಅಡಿ ಅಗಲವಾಗಿದೆ. ಸುಮಾರು ೩,೦೦೦ ಜನರು ಅದರಲ್ಲಿ ಕುಳಿತು ಏಕಕಾಲದಲ್ಲಿ ಪ್ರಯಾಣ ಮಾಡಬಹುದು. ಇಂಥಾ ಅದ್ಭುತವಾದ ಜಹಜನ್ನು ಬಹಳ ವೇಗವಾಗಿ ಬಿಟ್ಟರೆ ಗಂಟೆಗೆ ೩೦ ಮೈಲಿಯಂತೆ ನೀರಿನ ಮೇಲೆ ಹೋಗುತ್ತದೆ.

ಈಗ ಯೂರೋಪ್ಪಿನಿಂದ ಅಮೇರಿಕಕ್ಕೆ ಬಹಳ ಬೇಗ ಹೋಗಿ ಬರತಕ್ಕದ್ದು ಡಾಯಿಚ್‌ಲೆಂಡ್ ಎಂಬದು. ಇದು ಜರ್ಮನಿಯವರಿಗೆ ಸೇರಿದ್ದು. ಮೊದಲೆ ಇಂಗ್ಲಿಷ್ ಜಹಜು ಇದರಷ್ಟು ವೇಗವಾಗಿ ಸಮುದ್ರದಲ್ಲಿ ಹೋಗಲಿಲ್ಲ. ಆದರೂ ಕೆಲವು ಕಾಲದೊಳಗಾಗಿ ಅದು ಜರ್ಮನಿ ಜಹಜನ್ನು ಹಿಂದೆ ಹಾಕುವುದೆಂದು ನಿರೀಕ್ಷಿಸಬಹುದು. ಅಂತು ಈಗ ಜರ್ಮನಿಯಲ್ಲಿಯೂ ಇಂಗ್ಲಾಂಡಿನಲ್ಲಿಯೂ ಈ ಲೂಸಿಟೇನಿಯಾ ಎಂಬ ಜಹಜಿನ ವಿಷಯದಲ್ಲಿ ತುಂಬಾ ಉತ್ಸಾಹ ಉಂಟಾಗಿದೆ

ಹಗೆ ತೀರಿಸಿಕೊಳ್ಳುವವನು ದೇವರಿಗೆ ಅಪ್ರಿಯನು.

ಲೋಕದ ಎಲ್ಲಾ ತರವಾದ ದುರಾಶೆಗಳಲ್ಲಿ ಹಗೆ ತೀರಿಸಿಕೊಳ್ಳುವುದು ಮಹಾ ಹೇಯವಾದ ದೋಷವಾಗಿರುತ್ತದೆ. ಹಗೆಗೆ ಹಗೆಯನ್ನು ತೀರಿಸಿಕೊಂಡು ಮನಸ್ಸಿನಲ್ಲಿ ತೃಪ್ತಿಯನ್ನು ಪಡೆಯಬೇಕೆಂದು ಜನರು ಆಶಿಸುವುದು ಸಾಧಾರಣವಾಗಿರುತ್ತದೆ "ನಿಮ್ಮ ವೈರಿಗಳನ್ನು ಪ್ರೀತಿಸಿ ನಿಮ್ಮನ್ನು ಶಪಿಸುವವರನ್ನು ಆಶೀರ್ವದಿಸಿರಿ ನಿಮ್ಮನ್ನು ಹಿಂಸೆಪಡಿಸುವವರಿಗೋಸ್ಕರ ಪ್ರಾರ್ಥನೆ ಮಾಡಿರಿ, ಎಂಬದಾಗಿ ಯೇಸು ಕ್ರಿಸ್ತನು ತನ್ನನ್ನು ಹಿಂಬಾಲಿಸುವವರಿಗೆ ತಿಳಿಸಿರುತ್ತಾನೆ ಆದರೆ ಇದು ಬಹು ಕಠಿಣತರವಾದ ಕಟ್ಟಳೆಯೆಂತಲೂ ಇದನ್ನು ಕೈಕೊಳ್ಳಬೇಕೆಂದು ಪ್ರಯತ್ನಿಸುವವನು ಅಸಾಧಾರಣವಾದ ಪ್ರಯತ್ನಗಳನ್ನು ಮಾಡಬೇಕೆಂತಲೂ ಜನರು ಯೋಚಿಸಬಹುದು. ಆದರೆ ಯೇಸುಕ್ರಿಸ್ತನು ಕೊಟ್ಟಿರತಕ್ಕ ಕಟ್ಟಳೆಗಳಲ್ಲಿ ಮನ್ನಣೆಯೇ ಪ್ರಾಮುಖ್ಯವೆಂದು ಪದೇ ಪದೇ ತಿಳಿಸುವವನಾಗಿರುತ್ತಾನೆ. ಒಬ್ಬರನ್ನೊಬ್ಬರು ಮನ್ನಿಸುವುದು ಮನುಷ್ಯನ ಕರ್ತವ್ಯವಾಗಿದೆಯೆಂದು ನಾವು ತಿಳಿಯತಕ್ಕದ್ದು. "ನೀವು ಜನರ ತಪ್ಪುಗಳನ್ನು ಕ್ಷಮಿಸದೆಹೋದರೆ ಪರಲೋಕದಲ್ಲಿರುವ ನಿಮ್ಮ ತಂದೆಯು ನಿಮ್ಮ ತಪ್ಪುಗಳನ್ನು ಕ್ಷಮಿಸುವದಿಲ್ಲ" ಎಂಬ ಉತ್ಕೃಷ್ಟವಾದ ವಾಕ್ಯಗಳನ್ನು ಯೇಸುಕ್ರಿಸ್ತನು ತನ್ನ ಶಿಷ್ಯರಿಗೆ ತಿಳಿಸಿದನು

ನಮಗೆ ಅನ್ಯಾಯವನ್ನು ಮಾಡಿದ ನಮ್ಮ ಶತ್ರುಗಳನ್ನು ನಾವು ಪ್ರೀತಿಸದೇಹೋದರೆ ನಾವು ಗಮನದಲ್ಲಿಡತಕ್ಕ ಎರಡು ಪ್ರಾಮುಖ್ಯವಾದ ಸಂಗತಿಗಳುಂಟು ಮೊದಲನೇದು ನಾವೆಲ್ಲರೂ ದೇವರಿಗೆ ವಿರೋಧವಾಗಿ ಪ್ರತಿ ದಿನದಲ್ಲೂ ಅನೇಕ ತರವಾದ ಪಾಪಗಳನ್ನು ಮಾಡುವವರಾಗಿರುತ್ತೇವೆ. ದೇವರು ನಮ್ಮನ್ನು ತನ್ನ ಶತ್ರುವೆಂದು ಭಾವಿಸಿ ಆತನು ನಮ್ಮ ಮೇಲೆ ತನ್ನ ಹಗೆಯನ್ನು ತೀರಿಸುವವನಾದರೆ ಲೋಕದಲ್ಲಿ ಬದುಕುವುದುಂಟೇ? ದೇವರು ನಮ್ಮ ಪಾಪಗಳನ್ನು ಕ್ಷಮಿಸುತ್ತಾ ಬಂದರೆ ನಾವು ಸಹ ನಮಗೆ ವಿರೋಧವಾಗಿ ಪಾಪ ಮಾಡುವವರನ್ನು ಕ್ಷಮಿಸುವುದು ನಮ್ಮ ಕರ್ತವ್ಯವಾಗಿರುತ್ತದೆ ಎರಡನೇದು ನಾವು ನಮ್ಮ ಶತ್ರುಗಳನ್ನು ಮನ್ನಿಸಿದರೆ ನಾವು ದೇವರಂತಾಗುವೆವು. ಯೇಸುಕ್ರಿಸ್ತನು ತಾನು ಶಿಲುಬೆಯ ಮೇಲೆ ಕ್ರೂರ ಮರಣವನ್ನು ಹೊಂದುತ್ತಿರುವಾಗಲೂಕೂಡ ತನ್ನ ಶತ್ರುಗಳನ್ನು ಕುರಿತು "ತಂದೆಯೇ ಇವರನ್ನು ಕ್ಷಮಿಸು" ಎಂಬದಾಗಿ ದೇವರಿಗೆ ಪ್ರಾರ್ಥಿಸಿದನು ಮತ್ಸರ ಗುಣವನ್ನು ಸಂಪೂರ್ಣವಾಗಿ ನಾಶಮಾಡಿ ಎಲ್ಲರಲ್ಲಿ ಏಕರೀತಿಯಾದ ಕ್ಷಮೆಯನ್ನೂ ಪ್ರೀತಿಯನ್ನೂ ತೋರಿಸುವ ಮನುಷ್ಯನೇ ಸಿದ್ಧಪುರುಷನೆನ್ನಿಸಿಕೊಳ್ಳುವನು.

ಒಳದೇಶದ ವೃತ್ತಾಂತಗಳು.

ಮೈಸೂರು ಅಬಕಾರಿ ಇಲಾಖೆಗೆ ಸೇರತಕ್ಕ ನೌಕರರನ್ನು ತರಪೇತುಮಾಡುವುದಕ್ಕಾಗಿ ಬೆಂಗಳೂರಿನಲ್ಲಿ ಸರ್ಕಾರದವರು ಒಂದು ಟ್ರೇನಿಂಗ್ ಸ್ಕೂಲನ್ನು ಇಡುತ್ತಾರೆಂದು ಪ್ರಕಟವಾಗಿದೆ.

❦❦❦

ಬರೋಡಾ ಸಂಸ್ಥಾನದ ರೆವಿನ್ಯೂ ಇಲಾಖಾ ಅಧ್ಯಕ್ಷರಾದ ಮೆ|| ರಮೇಶಚಂದ್ರದತ್ತರವರೂ, ಮೆ|| ಬಿ. ಎಲ್. ಗುಪ್ತರವರೂ ಮೊನ್ನೆ ಮಂಗಳವಾರ ಮಧ್ಯಾಹ್ನ ಪರಿವಾರಸಹಿತ ರಾಜಧಾನಿಗೆ ಬಂದಿರುವರು

❦❦❦

ಮೈಸೂರು ಲೆಜಿಸ್ಲೆಟಿವ್ ಕೌನ್ಸಿಲ್ ಮೆಂಬರುಗಳ ಸ್ಪೆಶಲ್ ಕಮಿಟಿಯವರು ಇಲ್ಲಿನ ದಿವಾನರವರ ಬಂಗಲೆಯಲ್ಲಿ ನೆನ್ನೆ ಸಭೆ ಸೇರಿ, ಕಾನೂನು ಬದಲಾವಣೆ ವಿಚಾರವನ್ನು ಕುರಿತು ಚರ್ಚೆ ನಡಿಸಿದರು.

❦❦❦

ನವರಾತ್ರಿ ಉತ್ಸವದ ನಿಮಿತ್ತ ಬ್ರಿಟಿಷ್ ರೆಸಿಡೆಂಟರವರು ಪತ್ನಿ ಸಹಿತ ಮುಂದಿನ ಸೋಮವಾರವೂ, ಇತರ ಯೂರೋಪ್ಯರ ಅತಿಥಿಗಳು ಮಂಗಳವಾರವೂ ರಾಜಧಾನಿಗೆ ಬಂದು, ತಾ|| ೨೨ನೇ ಮಂಗಳವಾರ ವಾಪಸು ಹೋಗುವವರಾಗಿದ್ದಾರೆ

❦❦❦

ತಾ|| ೧೯ನೇ ಶನಿವಾರ ಮಧ್ಯಾಹ್ನ ೧೨ ಘಂಟೆಗೆ ರಾಜಧಾನಿಯ ಪಬ್ಲಿಕ್ ಆಫೀಸ್ ಕಟ್ಟಡದಲ್ಲಿ ಮೈಸೂರು ಪ್ರಜಾಪ್ರತಿನಿಧಿ ಸಮಾಜವು ಪ್ರಾರಂಭವಾಗುವುದು ಆ ದಿನ ರಾತ್ರಿ ಗವರ್ನಮೆಂಟ್ ಹೌಸ್ ಎಂಬ ಬಂಗಲೆಯಲ್ಲಿ ಯೂರೋಪ್ಯರ ಅತಿಥಿಗಳಿಗೆ ಔತನವೂ ತರುವಾಯ ಬಾಣಬಿರುಸುಗಳೂ ನಡಿಯುವವು

❦❦❦

ಪ್ರಜಾಪ್ರತಿನಿಧಿಗಳು ಈ ಸಲ ರಾಜಧಾನಿಗೆ ಬಂದಾಗ್ಗೆ ಅವರು ಇಳುಕೊಳ್ಳುವದಕ್ಕೆ ಅನುಕೂಲವಾದಂಥಾ ಪ್ರತ್ಯೇಕ ಸ್ಥಳಗಳನ್ನು ಸರ್ಕಾರದವರು ಏರ್ಪಾಡು ಮಾಡಿರುತ್ತಾರೆ ಕೆಲವರೆಲ್ಲಾ ಇಲ್ಲಿನ ಸದ್ವಿದ್ಯಾ ಪಾಠಶಾಲೆಯಲ್ಲಿರುವುದಕ್ಕೂ ಅವರ ಊಟ ಉಪಚಾರಗಳಿಗೂ ಅನುಕೂಲ ಮಾಡಿರುವರು

❦❦❦

ಮದರಾಸ್ ಗವರ್ನಮೆಂಟಿನವರು ಕಳುಹಿಸಿಕೊಟ್ಟಿರುವ ಮೆ|| ಸಿ. ಕೆ ಸುಬ್ಬರಾವ್ ಎಂಬ ಉದ್ಯೋಗಸ್ಥರು ಕಳೆದ ಸೋಮವಾರ ಇಲ್ಲಿನ ಪ್ರದರ್ಶನಾಲಯದಲ್ಲಿ ವ್ಯವಸಾಯ ವಿಷಯವನ್ನು ಕುರಿತು ಉಪನ್ಯಾಸ ಮಾಡಿದರು. ನಮ್ಮ ದಿವಾನರವರು ಆ ದಿನ ಅಗ್ರಾಸನವನ್ನು ವಹಿಸಿದ್ದರು.

❦❦❦

ಪೋಲೀಸಿನವರು ಕೇಸುಗಳನ್ನು ಕೋರ್ಟಿಗೆ ಚಲಾವಣೆ ಮಾಡುವುದಕ್ಕೆ ಡಾಕ್ಟರ ಬಳಿಗೆ ಕಳುಹಿಸುತ್ತಾರಷ್ಟೆ ಅಂಥಾ ಚಲಾವಣೆ ಕಾಲದಲ್ಲಿ ಪೋಲೀಸಿನವರು ಎದುರಿಗೆ ಇರಕೂಡದೆಂದು ಸೀನಿಯರ್ ಸರ್ಜನರವರು ಹೇಳುತ್ತಾರೆ. ಪೋಲೀಸ್ ಇಲಾಖೆಯ ಇನ್ಸ್‌ಪೆಕ್ಟರ್ ಜನರಲ್‌ರವರು ಪೋಲೀಸಿನವರು ಅಂಥಾ ಸಮಯದಲ್ಲಿ ಹಾಜರಿರ್ಬೇಕೆಂದು ಪೋಲೀಸ್ ಕಾನೂನಿನಲ್ಲಿ ವಿಧಿಸಲ್ಪಟ್ಟಿದೆ ಯಾದ್ದರಿಂದ ಪೋಲೀಸಿನವರನ್ನು ಎದುರಿಗಿರಕೂಡದೆಂಬ ಅಡ್ಡಿಮಾಡಬಾರದೆಂದು ಹೇಳುತ್ತಾರೆ. ಈ ವಿಚಾರವನ್ನು ಗವರ್ನಮೆಂಟಿನವರು ತೀರ್ಮಾನ ಮಾಡುವವರಾಗಿದ್ದಾರೆ.

❦❦❦

ಮೈಸೂರು ಸಂಸ್ಥಾನದಲ್ಲಿರುವ ತಾಲ್ಲೂಕ್ ಮತ್ತು ಹೋಬಳಿ ಸ್ಕೂಲ್ ಮಾಸ್ತರುಗಳ ಸಂಬಳವನ್ನು ಸರ್ಕಾರದವರು ಈನೇ ಅಕ್ಟೋಬರ್ ೧ನೇ ತಾರೀಖಿನಿಂದ ಒಂದು ರೂಪಾಯಿ ಬಡ್ತಿ ಮಾಡಿರುತ್ತಾರೆಂದು ತಿಳಿಸಲು ಸಂತೋಷಪಡುತ್ತೇವೆ ಈಗ ಅಂಥಾ ಉಪಾಧ್ಯಾಯರು ಒಟ್ಟು ೧,೯೮೩ ಮಂದಿ ಇರುವರು ಈ ಸ್ಕೇಲ್ ೧,೯೦೩ ಮಂದಿ ಉಪಾಧ್ಯಾಯರಿಗೆ ೭ ರೂಪಾಯಿ, ೮೦ ಮಂದಿಗೆ ೮ ರೂ ೩ ಮಂದಿಗೆ ೯ ರೂಪಾಯಿ ಈ ಪ್ರಕಾರ ಸಂಬಳ ಸಲ್ಲುತ್ತಿದೆ ಇಂಥವರಿಗೆಲ್ಲಾ ಒಂದೊಂದು ರೂಪಾಯಿ ಬಡ್ತಿ ಕೊಡತಕ್ಕದ್ದೆಂದು ೧೯,೮೯೮ ರೂಪಾಯಿ ಗವರ್ನಮೆಂಟಿನಿಂದ ಸ್ಯಾಂಕ್ಷನ್ ಆಗಿರುವುದು

❦❦❦

ಕೋಲಾರದ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಒಂದು ಮೊಕದ್ದಮೆ ವಿಚಾರಣೆ ಆಗುವಲ್ಲಿ ಒಬ್ಬ ಸಾಕ್ಷಿಯು ಸಾಕ್ಷಿಯಾಗಿ ಬಂದು ತಮಗೆ ಫೀಜು ಕೊಡಿಸಿದ್ದಲ್ಲದೆ ತಮ್ಮ ಅಭಿಪ್ರಾಯವನ್ನು ಕೇಳುವುದಿಲ್ಲವೆಂದು ತಿರಸ್ಕರಿಸಿದರು ಮ್ಯಾಜಿಸ್ಟ್ರೇಟರು ಆ ಸಾಕ್ಷಿಗೆ ೫೦ ರೂಪಾಯಿ ಜುಲ್ಮಾನೆ ಹಾಕಿದರು. ಇದು ಚೀಫ್ ಕೋರ್ಟಿನಲ್ಲಿ ಅಪೀಲ್ ಆಯಿತು ಇಬ್ಬರು ಜಡ್ಜಿಗಳು ವಾದಿ ಪ್ರತಿವಾದಿಗಳನ್ನು ಕೇಳಿ, ಮ್ಯಾಜಿಸ್ಟ್ರೇಟರ ಹುಕುಂ ಪ್ರಕಾರ ಆ ಸಾಕ್ಷಿಯು ತಮ್ಮ ಅಭಿಪ್ರಾಯವನ್ನು ಹೇಳಬೇಕಾಗಿತ್ತೆಂತಲೂ, ಹಾಗೆ ಹೇಳದೆ ಹೋದದ್ದು ತಪ್ಪಿತವಾಯಿತೆಂತಲೂ ತೀರ್ಮಾನಿಸಿ, ಜುಲ್ಮಾನೆಯ ಮೊತ್ತವನ್ನು ೫೦ ರಿಂದ ೫ ರೂಪಾಯಿಗೆ ಕಡಿಮೆ ಮಾಡಿದರು

ನವರಾತ್ರಿಯ ಉತ್ಸವಗಳು.

ಮೊನ್ನೆ ಮಂಗಳವಾರ ಬೆಳಿಗ್ಗೆ ರಾಜಧಾನಿಯ ಜಗನ್ಮೋಹನ ಬಂಗಲೆಯಲ್ಲಿ ನವರಾತ್ರಿ ಹಬ್ಬದ ಉತ್ಸವಗಳು ಪ್ರಾರಂಭವಾದವು. ಆ ದಿನ ಪ್ರಾತಃಕಾಲ ಶ್ರೀಮನ್ಮಹಾರಾಜರವರು ಅರಮನೆಯಲ್ಲಿ ಮಂಗಳಸ್ನಾನ ಅಹ್ನಿಕಗಳನ್ನೂ ಪೂಜಾದಿಗಳನ್ನೂ ನೆರವೇರಿಸಿ, ಮಹಾ ಮಾತೃಶ್ರೀಯವರ ಮತ್ತು ಅರಮನೆ ಗುರುಗಳ ಆಶೀರ್ವಾದಗಳನ್ನು ಸ್ವೀಕರಿಸಿ, ದರ್ಬಾರ್ ಪೋಷಾಕನ್ನು ಧರಿಸಿಕೊಂಡು, ಪಾಲಕಿಯಲ್ಲಿ ಕುಳಿತು ಸಮಸ್ತ ಬಿರುದುಗಳ ಮತ್ತು ವಾದ್ಯ ಓಲಗ ತಾಳ ಮೇಳಗಳ ಸಮೇತ ಸುಮಾರು ೧೦½ ಘಂಟೆಗೆ ಕರೀಕಲ್ಲು ತೊಟ್ಟಿಯಿಂದ ಜಗನ್ಮೋಹನ ಬಂಗಲೆಗೆ ಚಿತ್ತೈಸಿದರು. ದರ್ಬಾರ್ ಮಂದಿರದಲ್ಲಿ ಋತ್ವಿಕ್ಕರು, ಶಾಸ್ತ್ರಿಗಳು, ಜೋಯಿಸರು, ಪಂಡಿತರು, ಪುರೋಹಿತರೇ ಮೊದಲಾದ ವೈದಿಕ ಮಂಡಲಿಯವರೂ, ರಾಜವಂಶೆಯವರು, ದಿವಾನರು, ಕೌನ್ಸಿಲ್ ಮೆಂಬರುಗಳು, ಸೆಕ್ರೆಟರಿಗಳು, ಜಡ್ಜಿಗಳು, ಛೀಫ್ ಆಫೀಸರುಗಳು, ಮುನಿಸಿಪಲ್ ಕೌನ್ಸೆಲರುಗಳು, ಎಲ್ಲಾ ಕೋಮುಗಳ ಮತ್ತು ಕಸುಬುಗಳ ಪ್ರತಿನಿಧಿಗಳು ಮೊದಲಾದ ಲೌಕಿಕ ಮಂಡಲಿಯವರೂ ಹಾಜರಾಗಿದ್ದರು. ಶ್ರೀಮನ್ಮಹಾರಾಜರವರು ಶ್ರೀಮದ್ರಾಜರಾಜೇಶ್ವರಿಯವರ ಸಮೇತ ೧೧ ಘಂಟೆಯ ಹೊತ್ತಿಗೆ ದರ್ಬಾರ್ ಮಂದಿರಕ್ಕೆ ದಯಮಾಡಿ, ವೈದಿಕರ ಮುಖೇನ ಶಾಸ್ತ್ರೋಕ್ತವಾದ ಪೂಜೆ ಮಂಗಳಾದಿಗಳನ್ನೂ, ಮಹಾದಿಗಳನ್ನೂ ಮಾಡಿ, ಸಿಂಹಾಸನದ ಬಳಿಯಲ್ಲೂ ಅರ್ಚನೆ ನೈವೇದ್ಯ ದಾನಾದಿಗಳನ್ನು ನೆರವೇರಿಸಿ, ಸಿಂಹಾಸನಕ್ಕೆ ಪ್ರದಕ್ಷಿಣೆಮಾಡಿ, ಸಿಂಹಾಸನವನ್ನು ಹತ್ತಿ ನಿಂತು ಸಮಸ್ತ ದರ್ಬಾರಿಗಳೂ ಸೈನಿಕರೂ ಮಾಡಿದ ಮುಜರೆಗೆ ಪ್ರತಿಯಾಗಿತ್ತು ಕುಳಿತುಕೊಂಡರು. ಕೂಡಲೇ ಕಹಳೆಗಳೂ ವಾದ್ಯಗಳೂ ಓಲಗ ತಾಳ ಮೇಳಗಳೂ ಘೋರ್ಗರೆದವು ಗೌರವಾರ್ಥವಾದ ೨೧ ತೋಪುಗಳು ಹಾರಿಸಲ್ಪಟ್ಟವು. ತರುವಾಯ ಪಟ್ಟದಾನೆ ಕುದುರೆಗಳು ಮೆರವಣಿಗೆ ಹೊರಟವು. ಗುರುಪೀಠಗಳಿಂದ ಕಳುಹಲ್ಪಟ್ಟ ಆಶೀರ್ವಾದಪೂರ್ವಕವಾದ ಪತ್ರಿಕೆಗಳೂ ಫಲಮಂತ್ರಾಕ್ಷತೆಗಳೂ ಶ್ರೀಮನ್ಮಹಾರಾಜರವರಿಗೆ ಒಪ್ಪಿಸಲ್ಪಟ್ಟ ತರುವಾಯ ವೈದಿಕ ಮಂಡಲಿಯವರು ಫಲವನ್ನೊಪ್ಪಿಸಿ ಮಂತ್ರಾಕ್ಷತೆಯನ್ನು ಅವರ ಶಿರಸ್ಸಿನ ಮೇಲೆ ಹಾಕಿದರು ಅರಸುಗಳೂ ಲೌಕಿಕ ಮಂಡಲಿಯವರೂ ಸಾಲುಸಾಲಾಗಿ ನಿಂತು ಮುಜರೆ ಮಾಡಿ ಸಿಂಹಾಸನದ ಬಳಿಗೆ ಹೋಗಿ ಶ್ರೀಮನ್ಮಹಾರಾಜರವರಿಗೆ ನಜರುಗಳನ್ನೊಪ್ಪಿಸಿದರು. ಮಹಾರಾಜರವರು ನಜರುಗಳನ್ನು ಮುಟ್ಟಿ ವಾಪಸು ದಯಪಾಲಿಸಿದರು. ತರುವಾಯ ಸಂತೋಷಸೂಚಕವಾದ ಸರಟುಗಳು ವೈದಾನಿನಲ್ಲಿ ಸಿಪಾಯಿಗಳಿಂದ ಮೂರಾವರ್ತಿ ಹಾರಿಸಲ್ಪಟ್ಟವು. ಆನೆಗಳು, ಸವಾರರು, ಸಿಪಾಯಿಗಳೇ ಮೊದಲಾದ ಸೈನಿಕರು ಮೈದಾನಿನಲ್ಲಿ ಶ್ರೀಮನ್ಮಹಾರಾಜರವರ ಎದುರುಪಾರ್ಶ್ವಕ್ಕೆ ಬಂದು ಮುಜರೇ ಮಾಡಿ ತೆರಳಿದರು ಕಡೆಯಲ್ಲಿ ಸೈನಿಕರೆಲ್ಲಾ "ಶ್ರೀಮನ್ಮಹಾರಾಜಾ ಶ್ರೀ ಕೃಷ್ಣರಾಜ ಒಡೆಯರ್ ಬಹದೂರ್ ಜೈ" ಎಂಬ ಧ್ವನಿಯಿಂದ ಜಯಘೋಷ ಮಾಡಿದರು. ಪಟ್ಟದಾನೆ ಕುದುರೆಗಳು ಮೆರವಣಿಗೆಯಲ್ಲಿ ತೆರೆ ಕಡೆಯಿಂದ ಬಂದು ಶ್ರೀಮನ್ಮಹಾರಾಜರವರಿಗೆ ಮುಜರೆ ಮಾಡಿದ ಮೇಲೆ ದರ್ಬಾರ್ ಮಂದಿರದಲ್ಲಿ ವೈದಿಕ ಲೌಕಿಕರುಗಳಿಗೆ ಪುಷ್ಪದ ಹಾರ ಹಾಕಿ ಅಡಿಕೆಲೆಯನ್ನು ವಿನಿಯೋಗ ಮಾಡಿದರು. ದರ್ಬಾರಿಗಳೆಲ್ಲಾ ಎದ್ದು ಮುಜರೆ ಮಾಡಿ, ತೆರಳಿದರು ಶ್ರೀಮನ್ಮಹಾರಾಜರವರು ಮುಖ್ಯ ಮುಖ್ಯರಾದ ಅರಸುಮಕ್ಕಳಿಗೂ ದಿವಾನ್ ಮುಂತಾದ ಹುದ್ದೇದಾರರಿಗೂ ಪ್ರಸಾದವನ್ನು ಕೊಟ್ಟರು ಇಲ್ಲಿಗೆ ನವರಾತ್ರಿಯ ಪ್ರಾರಂಭದ ದರ್ಬಾರು ಮುಕ್ತಾಯವಾಯಿತು.

ಆ ದಿನ ಸಾಯಂಕಾಲವೂ ಈವರೆಗೂ ಪ್ರತಿದಿನವೂ ಸಾಯಂಕಾಲಗಳಲ್ಲಿ ಪದ್ಧತಿಯ ಪ್ರಕಾರ ಶ್ರೀಮನ್ಮಹಾರಾಜರವರು ದರ್ಬಾರ್ ನಡಿಸಿದರು. ಜಟ್ಟಿ ಕಾಳಗ, ಸೈನಿಕರ ಕವಾತು, ಬಾಣಬಿರಸು, ಆನೆ ಕುದುರೆಗಳ ಮೆರವಣಿಗೆ ಮೊದಲಾದವು ನಡೆದವು

ಮೈಸೂರು ಗೆಜೆಟ್ ಸಂಗ್ರಹ.

ಬೆಂಗಳೂರು ಸಬ್ ಜಡ್ಜಿ ಮೆ|| ಜೆ. ಎಚ್. ಭಾಭಾಯವರಿಗೆ ಸೆಪ್ಟೆಂಬರ್ ೨೮ ರಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಬೆಂಗಳೂರು ಪ್ರಿನ್ಸಿಪಲ್ ಮುನ್ಸಿಫ್ ಮೆ|| ಟಿ ಆ. ಪಯ್ಯರಾಮ ಐಯ್ಯರನ್ನು ೨ನೆ ಕ್ಲಾಸ್ ಆಕ್ಟಿಂಗ್ ಅ|| ಕಮಿಷನರಾಗಿ ನೇಮಿಸಿ, ಬೆಂಗಳೂರು ಸಬ್ ಜಡ್ಜರಾಗಿ ಕೆಲಸ ನೋಡುವಂತೆ ಹರ್ಗಮಾಡಿದೆ.

ಜುಡಿಷಲ್ ಪ್ರೊಬೇಷನರ್ ಮೆ|| ಎಂ. ಶ್ರೀನಿವಾಸ ರಾಘವಾಚಾರ್ರು ಬೆಂಗಳೂರು ಪ್ರಿನ್ಸಿಪಲ್ ಮುನ್ಸಿಫರಾಗಿ ಬದಲಿ ನೇಮಿಸಲ್ಪಟ್ಟಿದ್ದಾರೆ

ಕಂಟ್ರೋಲರವರ ಆಫೀಸಿನಲ್ಲಿರುವ ಪ್ರೊ|| ಅ|| ಕಮಿಷನರ್ ಮೆ|| ಜೆ. ಬಿ. ಕಟ್ಲಿಕರ್‌ಯವರಿಗೆ ನವರಾತ್ರಿ ಹಬ್ಬದ ರಜಕ್ಕೆ ಸೇರಿದಂತೆ ಒಂದು ತಿಂಗಳು ಹದಿನಾರುದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಬಾಗೇಪಲ್ಲಿ ತಾಲ್ಲೂಕ್ ಅಮಲ್ದಾರ್ ಮೆ|| ವಿ. ಗೋಪಾಲರಾಯರಿಗೆ ೨ನೆ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ಕೊಟ್ಟಿದೆ

ಸಬ್ ಅ|| ಸರ್ಜನ್ ಮೆ|| ಎನ್. ಎಸ್. ನಂಜುಂಡೈಯ್ಯನವರನ್ನು ಚಿಕ್ಕಮಗಳೂರು ಆಸ್ಪತ್ರೆಯಿಂದ ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಗೂ ಸಬ್ ಅ|| ಸರ್ಜನ್ ಮೆ|| ಸಿ ರಾಜಗೋಪಾಲನಾಯ್ಡುರವರನ್ನು ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯಿಂದ ಚಿಕ್ಕಮಗಳೂರು ಆಸ್ಪತ್ರೆಗೂ ವರ್ಗಮಾಡಿದೆ.

ಶಿವಮೊಗ್ಗಾ ಡಿವಿಜನ್ ಸಬ್ ಅ|| ಇಂಜನಿಯರ್ ಮೆ|| ಟಿ. ಕೆ ಅರುಣಾಚಲ ಐಯ್ಯರಿಗೆ ಎರಡು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಸಬ್ ಅ|| ಇಂಜನಿಯರ್ ಮೆ|| ಎಂ. ಜೆ ವೆಂಕೈಯ್ಯನವರನ್ನು ಬೆಂಗಳೂರಿನಿಂದ ಶಿವಮೊಗ್ಗಾ ಡಿವಿಜನಿಗೆ ವರ್ಗ ಮಾಡಿದೆ.

ಅ|| ಇಂಜನಿಯರ್ ಮೆ|| ಕೆ. ಅನಂತಾಚಾರ್ರನ್ನು ಪ್ರಾವಿನ್ಸಿಯಲ್ ಸರ್ಕಲಿನಿಂದ ಪಶ್ಚಿಮ ಸರ್ಕಲ್ ನಾಲಾ ಡಿವಿಜನಿಗೆ ವರ್ಗಮಾಡಿದೆ.

ಮೈಸೂರು ದಸರಾ ವ್ಯವಸಾಯದ ಮತ್ತು ಕೈಗಾರಿಕೆಗಳ ಪ್ರದರ್ಶನೋತ್ಸವವು.

ಪ್ರದರ್ಶನಶಾಲೆಯ ಅಲಂಕಾರ ಮತ್ತು ಏರ್ಪಾಡುಗಳು

ಈ ತಿಂಗಳಲ್ಲಿ ಪ್ರತಿ ವರುಷವೂ ರಾಜಧಾನಿಯಲ್ಲಿ ನಾನಾ ಉತ್ಸವಗಳು ನಡೆಯುವುದು ನಮ್ಮ ವಾಚಕರಿಗೆ ತಿಳಿದಿರುವುದಷ್ಟೆ. ಈ ವರುಷ ಈ ಉತ್ಸವಗಳಲ್ಲಿ ಬಹು ಸ್ವಾರಸ್ಯವೂ ಉತ್ಸಾಹಕರವೂ ವಿಶೇಷ ಫಲಕಾರಿಯೂ ಆದ ಮೊದಲನೇ ಸಂಭ್ರಮಕಾರ್ಯವು ಕಳೆದ ಶನಿವಾರ ಬೆಳಿಗ್ಗೆ ನೆರವೇರಿತು. ಶ್ರೀಮನ್ಮಹಾರಾಜರವರು ಕೈಗಾರಿಕೆ ಮತ್ತು ವ್ಯವಸಾಯದ ಪ್ರದರ್ಶನಶಾಲೆಯನ್ನು ಯಥಾವಿಧಿಯಾಗಿ ಪ್ರಾರಂಭಮಾಡಿದರು. ಕುಕ್ಕರಹಳ್ಳಿಕೆರೆ ಕೆಳಗೆ ಸರ್ಕಾರದವರು ರಿಸರ್ವ್ ಪೋಲೀಸಿನವರಿಗಾಗಿ ಕಟ್ಟಿಸಿದ್ದ ಪ್ರತ್ಯೇಕವಾದ ಲೈನ್ ಮನೆಗಳನ್ನೇ ಅವಶ್ಯವಾದ ರೀತಿಯಲ್ಲಿ ಬದಲಾಯಿಸಿ ಅಲ್ಪಸ್ವಲ್ಪ ಕಾಮಗಾರಿ ಮಾಡಿಸಿ, ಅದರಲ್ಲಿ ಪ್ರದರ್ಶನ ವಸ್ತುಗಳನ್ನು ಇರಿಸಿಡಿಸಿರುತ್ತಾರೆ ಮುಂಭಾಗವು ಎರಡು ಅಂತಸ್ತಿನ ಕಟ್ಟಡವಾಗಿಯೂ, ಉಳಿದ ಮೂರು ಕಡೆಗಳಲ್ಲೂ ಅಂದವಾದ ಸಾಲು ಕೋಣೆಗಳೂ, ಮೊದಲನೆಯ ಕೊಠಡಿಯೊಳಗೆ ಹೋದರೆ ಒಳಗಿನಿಂದಲೇ ಉದ್ದಕ್ಕೂ ಎಲ್ಲಾ ಕೊಠಡಿಗಳಿಗೂ ಹೋಗಿ ಬರುವಂತೆಯೂ ಮತ್ತು ಪ್ರತಿಯೊಂದು ಕೊಠಡಿಗೂ ಹೊರಗಿನಿಂದಲೂ ಹೋಗಿ ಬರುವಂತೆಯೂ ಏರ್ಪಾಡಾಗಿದೆ. ಈ ರೀತಿ ಸುತ್ತಲೂ ಇರುವ ಕೊಠಡಿಸಾಲಿನ ಮಧ್ಯೆ ವಿಸ್ತಾರವಾದ ಅಂಗಳವಿರುವುದು. ಈ ಅಂಗಳದಲ್ಲಿ ನಡುಚಪ್ಪರವನ್ನು ಹಾಕಿ ಅದರಲ್ಲಿ ಎದುರುಭಾಗದಲ್ಲಿ ಶ್ರೀಮನ್ಮಹಾರಾಜರವರಿಗಾಗಿ ಸಿಂಹಾಸನವನ್ನೂ ಉದ್ದಕ್ಕೂ ಸಾಲಾಗಿ ದೊಡ್ಡ ಮನುಷ್ಯರು ಕುಳಿತುಕೊಳ್ಳುವುದಕ್ಕೆ ಕುರ್ಚಿ ಬೆಂಚುಗಳನ್ನೂ ಹಾಕಿಸಿದ್ದರು. ಪ್ರದರ್ಶನಶಾಲೆಯ ಹೊರಭಾಗದಲ್ಲಿ ರಸ್ತೆಗೆ ಅಡ್ಡಲಾಗಿ ಎರಡು ಸುಂದರವಾದ ಕಮಾನುಗಳನ್ನು ಕಟ್ಟಿದ್ದರು. ಪ್ರದರ್ಶನಶಾಲೆಯ ಒಳಭಾಗವನ್ನೆಲ್ಲಾ ಬಾವುಟ ತೋರಣ ಪತಾಕೆಗಳು ಈ ಮೊದಲಾದವುಗಳಿಂದ ಶೃಂಗಾರ ಮಾಡಿದ್ದರು.

ಆಹ್ವಾನ ಪತ್ರಿಕೆಗಳನ್ನು ಪಡೆದ ಅರಸುಗಳು, ದಿವಾನರು, ಕೌನ್ಸಿಲರುಗಳು, ಇಲಾಖಾ ಉದ್ಯೋಗಸ್ಥರು, ಮ್ಯುನಿಸಿಪಲ್ ಕೌನ್ಸಿಲರುಗಳು, ಎಲ್ಲಾ ಕೋಮು ಜನಗಳ ಪ್ರತಿನಿಧಿಗಳು ಈ ಮೊದಲಾದವರೆಲ್ಲಾ ಹಾಜರಾಗಿದ್ದರು. ಶ್ರೀಮನ್ಮಹಾರಾಜರವರು ಶ್ರೀಮದ್ಯುವರಾಜರವರ ಸಮೇತ ದಿವ್ಯವಾದ ಸಾರೋಟಿನಲ್ಲಿ ಕುಳಿತು ಸಿಲ್ಲೇದಾರ್ ಮತ್ತು ಬಾಡಿಗಾರ್ಡ್ ಸವಾರರನ್ನು ಬಿಟ್ಟುಕೊಂಡು ಪ್ರದರ್ಶನಾಲಯದ ಕಡೆಗೆ ದಯಮಾಡಿದರು. ಬ್ಯಾಂಡ್ ವಾದ್ಯಗಾರರೂ ಒಳಗಿದ್ದವರ ಹರ್ಷಧ್ವನಿಗಳನ್ನೆತ್ತಿ ವಾದ್ಯ ಮಾಡಿದರು. ದಿವಾನರು, ಕೌನ್ಸಿಲರುಗಳು, ಕಮಿಟಿ ಮೆಂಬರುಗಳು ಮುಂದೆ ಬಂದು ಶ್ರೀಮನ್ಮಹಾರಾಜರವರ ಸುಸ್ವಾಗತವನ್ನು ಬಯಸಿ, ಸಾರೋಟಿನಿಂದ ಇಳಿಸಿ ಪ್ರದರ್ಶನಾಲಯದೊಳಗಿರುವ ಮಂಟಪಕ್ಕೆ ಕರೆದುಕೊಂಡು ಹೋಗಿ ಆಸನ ಸ್ಥಾನವನ್ನು ತೋರಿಸಿದರು. ಶ್ರೀಮದ್ಯುವರಾಜರವರು ಅವರ ಬಲಪಾರ್ಶ್ವದಲ್ಲಿಯೇ ಕುಳಿತುಕೊಂಡರು. ನಿಂತಿದ್ದ ಸಭಾಸದರೆಲ್ಲಾ ತಮ್ಮ ತಮ್ಮ ಸ್ಥಾನಗಳಲ್ಲಿ ಕುಳಿತರು.

ಪ್ರದರ್ಶನದ ಕಮಿಟಿ ಪ್ರೆಸಿಡೆಂಟರಾದ ರವಿನ್ಯೂ ಕಮಿಷನರ್ ಮೆ|| ರಂಗನಾಥಯ್ಯಂಗಾರ್ಯ ಅನುಮತಿಯನ್ನು ಪಡೆದು ಮುಂದೆ ಬಂದು ಶ್ರೀಮನ್ಮಹಾರಾಜರವರನ್ನು ಕುರಿತು ಆ ಪ್ರದರ್ಶನದ ವಿಷಯವಾಗಿ ಒಂದು ಅಡ್ರೆಸ್ಸನ್ನು ಓದಿ ಒಪ್ಪಿಸಿದರು. ಆ ಅಡ್ರೆಸ್ಸಿನಲ್ಲಿ ಕಂಡ ಮುಖ್ಯ ವಾಕ್ಯಗಳೇನೆಂದರೆ —

ಪ್ರಥಮ ಪ್ರದರ್ಶನೋತ್ಸವವು

ಮಹಾಸ್ವಾಮಿ,

ಈ ಮೈಸೂರು ಸಂಸ್ಥಾನದಲ್ಲೂ ಈ ನಗರದಲ್ಲೂ ಪ್ರದರ್ಶನ ನಡೆದದ್ದು ಇದೇನೂ ಮೊದಲನೆಯದಲ್ಲ. ಹತ್ತೊಂಭತ್ತು ವರುಷಗಳ ಕೆಳಗೆ ಇದೇ ಪಟ್ಟಣದಲ್ಲಿ ಇದೇ ತಿಂಗಳಲ್ಲಿ ಗಾರ್ಡನ್ ಪಾರ್ಕ್ ಎಂಬ ಉದ್ಯಾನವನದಲ್ಲಿ ಲೇಟ್ ಮಹಾರಾಜ ಚಾಮರಾಜೇಂದ್ರ ಒಡೆಯರವರು ಮೊದಲನೇ ಪ್ರದರ್ಶನವನ್ನು ಪ್ರಾರಂಭಿಸಿ ಅದರ ವಿಷಯದಲ್ಲಿ ತುಂಬಾ ಉತ್ಸಾಹಪಟ್ಟಿರುತ್ತಾರೆ. ಆ ದಿನ ಸಭೆಯಲ್ಲಿ ಹಾಜರಾಗಿದ್ದ ಕೆಲವು ಮುಖಂಡರುಗಳು ಈಗ ನಮ್ಮ ಮಧ್ಯೆ ಇಲ್ಲವೆಂದು ವಿಷಾದಪಡುತ್ತೇವಾದರೂ ಆ ಕಮಿಟಿಯಲ್ಲಿದ್ದ ಹಲವು ಮೆಂಬರುಗಳು ತಮ್ಮ ಗವರ್ನಮೆಂಟಿನಲ್ಲಿ ಘನತರವಾದ ಸ್ಥಾನಗಳಿಗೆ ಏರಿರುತ್ತಾರೆನ್ನುವುದು ಹರ್ಷಪ್ರದವಾಗಿರುತ್ತದೆ. ೧೮೮೮ನೆ ಇಸವಿಯ ಪ್ರದರ್ಶನದ ಕಮಿಟಿಯಲ್ಲಿದ್ದ ನಾಲ್ವರು ಈ ಪ್ರದರ್ಶನದ ಕಮಿಟಿಯಲ್ಲೂ ಮೆಂಬರುಗಳಾಗಿರುವರು. ಈ ಸ್ಥಳ ಇಷ್ಟರಲ್ಲೇ ಕೆಲಸ ಬಿಡುವವರಾಗಿರುವ ಮೆ|| ಜೆ ಕ್ಯಾಮರಾನ್ ಅವರು ಈ ಪ್ರದರ್ಶನಕ್ಕಾಗಿ ಬಹಳ ಶ್ರಮಪಟ್ಟಿರುತ್ತಾರೆಂದು ಇಲ್ಲಿ ಸೂಚಿಸುವುದು ಸಹಜವೆಂದು ಕಾಣುತ್ತಿದೆ. ಆ ಮೊದಲನೇ ಪ್ರದರ್ಶನವನ್ನು ನಡಸಿದ ಕಮಿಟಿಯವರು ಪ್ರತಿ ವರುಷವೂ ರಾಜಧಾನಿಯಲ್ಲಿ ಒಂದು ಪ್ರದರ್ಶನವನ್ನು ನಡಸುತ್ತಾ ಬರಬೇಕೆಂತಲೇ ಉದ್ದೇಶಪಟ್ಟಿದ್ದರು. ಆದರೂ ಅವರ ಉದ್ದೇಶವು ಮಹಾಸ್ವಾಮಿಯವರ ಕೃಪಾ ಪೋಷಣೆಯಲ್ಲಿ ಈಗ ನೆರವೇರುವಂತಾಗಿದೆ.

ಪ್ರದರ್ಶನದ ಪೂರ್ವವೃತ್ತಾಂತ

ಕಳೆದ ಐವತ್ತು ವರುಷಗಳಲ್ಲಿ ಹಿಂದೂಸ್ಥಾನದ ನಾನಾ ಭಾಗಗಳಲ್ಲಿ ಅನೇಕ ಪ್ರದರ್ಶನಗಳು ನಡೆದಿದ್ದಾಗ್ಯೂ ಅವುಗಳ ದೆಸೆಯಿಂದ ಈ ರಾಷ್ಟ್ರದ ವ್ಯವಸಾಯವಾಗಲಿ, ಕಸಬುಗಳಾಗಲಿ ಉದ್ದೇಶಪಟ್ಟಷ್ಟು ಮಟ್ಟಿಗೆ ಅಭಿವೃದ್ಧಿ ಹೊಂದಲಿಲ್ಲವೆಂತಲೂ, ಆದಕಾರಣ ಪ್ರತಿ ವರುಷವೂ ಪ್ರದರ್ಶನಗಳನ್ನು ನಡಸುವುದು ಪ್ರಯೋಜನಕರವಾದದ್ದಲ್ಲವೆಂತಲೂ ಅಭಿಪ್ರಾಯ ಉಂಟಾಗಿತ್ತು. ಆದರೆ ಈ ರಾಷ್ಟ್ರದ ಸ್ಥಿತಿಗತಿಯು ಬಗ್ಗೆ ಇಂಥಾ ಪ್ರದರ್ಶನಗಳಿಂದ ಪ್ರಯೋಜನಕೊಂದುವಷ್ಟು ಮಟ್ಟಿಗೆ ಯೋಗ್ಯತೆ ಸಾಮರ್ಥ್ಯಾದಿಗಳನ್ನು ಹೊಂದಿರಲಿಲ್ಲ, ಮತ್ತು ಈ ಪ್ರದರ್ಶನಗಳನ್ನು ನವೀನವೆಂದ ಪರದೇಶಗಳಲ್ಲಿ ತಯಾರಾಗುವ ಸರಕುಗಳು ಪ್ರೋತ್ಸಾಹಕ್ಕೆಗೆ ತುಂಬಾ ವಿಶೇಷವಾಗಿ ಪ್ರಚಾರಕ್ಕೆ ಬರುವುದಕ್ಕೂ ದೇಶೀಯ ಕೈಗಾರಿಕೆಗಳೆಲ್ಲಾ ಇನ್ನೂ ಕ್ಷೀಣಗತಿಗೆ ಬರುವುದಕ್ಕೂ ಅವಕಾಶ ಹೆಚ್ಚುವುದೆಂತಲೂ ಅಭಿಪ್ರಾಯವಿತ್ತು. ಇದಲ್ಲದೆ ಇದುವರೆಗೆ ಬೇರೆ ಬೇರೆ ಆಧಿಪತ್ಯದ ಗವರ್ನಮೆಂಟಿನವರು ಜನರಿಗೆ ವ್ಯವಸಾಯಶಾಸ್ತ್ರವನ್ನು ಚನ್ನಾಗಿ ಕಲಿಸಿ, ಈಗಿನ ತರಹಾ ಬೆಳೆಯುತ್ತಿನ ಕ್ರಮಗಳನ್ನು ರೂಢಿಗೆ ತರಬೇಕೆಂದು ಪ್ರಯತ್ನಪಟ್ಟದ್ದು ಸಾರ್ಥಕವಾಗಲಿಲ್ಲ. ಯಾಕೆಂದರೆ ಹಾಗೆ ವ್ಯವಸಾಯಶಾಸ್ತ್ರವನ್ನು ಕಲಿತು ಬಂದವರು ವ್ಯವಸಾಯಗಾರರಲ್ಲವಾದದ್ದರಿಂದಲೂ ಅವರಿಗೆ ತಕ್ಕ ಪ್ರೋತ್ಸಾಹ ದೊರಕದೆಹೋದದ್ದರಿಂದಲೂ ಅವರೆಲ್ಲಾ ಇತರ ವಿಧವಾದ ಜೀವನೋಪಾಯವನ್ನು ಹುಡುಕಿಕೊಂಡರು. ಹೀಗೆಲ್ಲಾ ನಾನಾ ಕಾರಣಗಳು ಹುಟ್ಟಿ, ಪ್ರದರ್ಶನದ ಫಲವೂ ಅದರ ಉದ್ದೇಶವೂ ಕೈಗೂಡದೆ ಅವರಲ್ಲಿ ಅಭಿರುಚಿ ಕಡಿಮೆಯಾಗಿತ್ತು. ಈಗ ಬದಲಾಯಿಸುವ ಅಂಥಾ ಕಾಲಹೋಯಿತು. ಕೆಲವು ಜನರ ಅಭಿಪ್ರಾಯಗಳೂ ಬಹಳವಾಗಿ ಬದಲಾವಣೆ ಹೊಂದಿರುತ್ತವೆ. ವಿದ್ಯಾವಂತರಾದವರು — ಬರೀ ವಿದ್ಯೆಯಿಂದಲೇ ಜೀವನೋಪಾಯವಾಗತಕ್ಕ ಮಾರ್ಗಗಳೆಲ್ಲಾ ತುಂಬಿ ತುಳುಕುತ್ತಿವೆ ಎಂತಲೂ, ಬರೀ ಪುಸ್ತಕದ ವಿದ್ಯೆಯೇ ಎಲ್ಲೆಲ್ಲೂ ಹೆಚ್ಚುತ್ತಿದೆ ಎಂತಲೂ, ಕಸಬುಗಳ ವಿಷಯವಾದ ಮತ್ತು ಶಾಸ್ತ್ರಶೋಧನೆಗೆ ಸಂಬಂಧಪಟ್ಟ ವಿದ್ಯಾಭ್ಯಾಸವು ನಿರ್ಲಕ್ಷ್ಯಮಾಡಲ್ಪಟ್ಟದೆ ಎಂತಲೂ ಈಗೀಗ ಚನ್ನಾಗಿ ತಿಳಿದುಕೊಂಡಿದ್ದಾರೆ. ಈ ರಾಷ್ಟ್ರದಲ್ಲಿ ವ್ಯವಸಾಯವು ಇನ್ನೂ ಅನೇಕ ಭಾಗಗಳಲ್ಲಿ ತುಂಬಾ ಅನಾಗರಿಕವಾದ ಸ್ಥಿತಿಯಲ್ಲಿದೆ ಎಂತಲೂ, ನಮ್ಮ ದೇಶದ ಕಸಬುದಾರರು ಇತರ ದೇಶಗಳ ಕಸಬುದಾರರಿಗಿಂತ ಬಹಳ ಹಿಂದೆಬಿದ್ದಿದ್ದಾರೆಂತಲೂ, ನಮ್ಮ ಉಪಾಯಗಳು ಪೂರ್ವದಷ್ಟು ಫಲಪ್ರದವಾಗಿಲ್ಲವೆಂತಲೂ, ಜೀವನೋಪಾಯ ನಡೆಯುವುದು ತುಂಬಾ ಕಷ್ಟವಾಗಿರುತ್ತದೆಂತಲೂ ನಮ್ಮ ದೇಶದ ಸಾಮಾನ್ಯ ಪ್ರಜೆಗಳೂ ಕೂಡ ಈಗೀಗ ತಿಳಿದುಕೊಂಡಿದ್ದಾರೆ. ಈಗ ಇಪ್ಪತ್ತು ವರುಷಗಳಿಂದೀಚೆಗೆ ಸಾಮಾನ್ಯವಾದ ಸಂಸಾರವನ್ನು ನಡಸುವುದಕ್ಕೂ ಮೊದಲಿಗಿಂತಲೂ ಹೆಚ್ಚು ದ್ರವ್ಯ ಬೇಕಾಗಿರುವುದು. ಎಲ್ಲೆಲ್ಲೂ ವಿದ್ಯೆ ಹೆಚ್ಚಿದಹಾಗೆಲ್ಲಾ ಜನರು ಹೊಸ ಹೊಸ ಜೀವನೋಪಾಯವನ್ನು ಹುಡುಕಿಕೊಳ್ಳಬೇಕೆಂದು ಕುತೂಹಲಪಡುತ್ತಿದ್ದಾರೆ. ವ್ಯವಸಾಯವನ್ನು ಅಭಿವೃದ್ಧಿಗೆ ತರುವುದಕ್ಕೂ, ಕೈಗಾರಿಕೆಗಳನ್ನು ಲಾಭಕರವಾಗುವಂತೆ ನೆಟ್ಟುಸುವುದಕ್ಕೂ ಸೂಚನೆ ಸಮಾಚಾರಗಳೇನಾದರೂ ಕೇಳಿದಲ್ಲಿ ಕೇಳಿ, ಅದರಂತೆ ಮಾಡಲು ಪ್ರಯತ್ನಪಡುವ ಭಾಗದಲ್ಲಿ ಅನೇಕಾನೇಕರು ಕುತೂಹಲವನ್ನು ತೋರಿಸುತ್ತಲಿದ್ದಾರೆ. ಜನರು ಒಬ್ಬರನ್ನೊಬ್ಬರು ನಂಬುವುದೂ, ಒಟ್ಟುಗೂಡಿ ಪರಸ್ಪರ ಸಹಾಯಮಾಡುವುದೂ ಹೆಚ್ಚುತ್ತಾ ಬಂದಿದೆ. ಆದಕಾರಣ ಮಹಾಸ್ವಾಮಿಯವರು ಒಂದು ಸಂದರ್ಭದಲ್ಲಿ ಅಪ್ಪಣೆ ಕೊಡಿಸಿರುವಂತೆ ದೇಶೀಯ ಕಸಬುವಾರೀ ಪದಾರ್ಥಗಳನ್ನು ಇಟ್ಟು ಪ್ರದರ್ಶನ ಮಾಡೋಣದರಿಂದ ಅವುಗಳ ಈಗಿನ ಸ್ಥಿತಿಗತಿಯು ಕಸಬುದಾರರಿಗೆಲ್ಲಾ ಗೊತ್ತಾಗುವುದು, ಮತ್ತು ಅವುಗಳನ್ನು ಅಭಿವೃದ್ಧಿ ಮಾಡುವುದಕ್ಕೆ ಯಾವ ಸಲಕರಣೆಗಳನ್ನು ಒದಗಿಸಿಕೊಳ್ಳಬೇಕೋ ಅಂಥಾ ಮಾರ್ಗಗಳನ್ನು ಹುಡುಕಲೂ ಅನುಕೂಲಿಸುತ್ತದೆ.

ಜನರಲ್ಲಿ ಹೊಸ ಅಭಿಪ್ರಾಯವು

ಈ ಪ್ರದರ್ಶನಗಳು ನೋಟನೋಡಿ ಬರೀ ನೇತ್ರಾನಂದವನ್ನು ಹೊಂದುವುದಕ್ಕಲ್ಲವೆಂತಲೂ, ಆ ಸರಕುಗಳು ಬಿಕರಿಯಾಗುವುದಕ್ಕೆ ಒಳ್ಳೇ ಮಾರ್ಗಗಳಾಗಿರುತ್ತವೆಂತಲೂ, ಪ್ರದರ್ಶನಮಾಡಲ್ಪಟ್ಟ ಆಯಾ ವಸ್ತುವನ್ನು ಕಾರೇಗಾರರು ಬುದ್ಧಿಯನ್ನು ಉಪಯೋಗಿಸಿ ನೋಡಿ, ತಮ್ಮ ಕುಶಲಬುದ್ಧಿಯನ್ನು ಹೆಚ್ಚಿಸಿಕೊಂಡು, ಒಳ್ಳೊಳ್ಳೇ ಸರಕುಗಳನ್ನು ಹೆಚ್ಚಾದ ಸೌಲಭ್ಯದಿಂದ ತಯಾರುಮಾಡಲು ಕಲಿತುಕೊಳ್ಳತಕ್ಕ ಸ್ಥಳಗಳೆಂತಲೂ ಜನರು ತಿಳಿದುಕೊಂಡಿರುವಂತೆ ಧಾರಾಳವಾಗಿ ನಿರೀಕ್ಷಿಸಬಹುದಾಗಿದೆ. ಹಿಂದೂಸ್ಥಾನದ ಸಾರ್ವಜನಿಕ ಸಭೆ (ನ್ಯಾಷನಲ್ ಕಾಂಗ್ರೆಸ್) ಯವರು ನಡಸಿರುವ ಅನೇಕ ಪ್ರದರ್ಶನಗಳಿಂದ ಉಂಟಾಗಿರುವ ಪ್ರಯೋಜನವು ಅಪಾರವಾಗಿರುತ್ತದೆ. ಮದರಾಸ್ ಆಧಿಪತ್ಯದ ಅನೇಕ ಕಡೆಗಳಲ್ಲಿ ಪ್ರಜೆಗಳೇ ಸಾಹಸಪಟ್ಟು ಹಲವು ಪ್ರದರ್ಶನಗಳನ್ನು ನಡಸಿರುತ್ತಾರೆ. ಭಾಗ್ಯವಂತರಾದ ಜಮೀನ್‍ದಾರರು ವ್ಯವಸಾಯವನ್ನು ಅಭಿವೃದ್ಧಿಗೆ ತರಬೇಕೆಂದು ಅನೇಕ ಕಡೆ ಯಂತ್ರ ಮೊದಲಾದ ಹೊಸ ತರಹಾ ವ್ಯವಸಾಯೋಪಕರಣಗಳನ್ನು ಪ್ರಯೋಗ ಮಾಡಿಕೊಂಡು ಹೊಸತರಹಾ ಧಾನ್ಯಗಳನ್ನಿಟ್ಟು ಬೇರೆ ಬೇರೆ ತರದ ಗೊಬ್ಬರಗಳನ್ನು ಹಾಕಿ ವ್ಯವಸಾಯಮಾಡುತ್ತಲೂ ಬಂದಿರುವುದನ್ನು ನೋಡಿದರೆ ಈ ಪ್ರದರ್ಶನಗಳಿಂದ ಅನೇಕ ವಿಧವಾದ ಪ್ರಯೋಜನವಿರುತ್ತದೆಂಬುವುದು ದೃಷ್ಟಾಂತಕ್ಕೆ ಬಂದಿದೆ. ಇದರಿಂದ ಇನ್ನು ಮುಂದೆ ಜನರು ಅಭಿವೃದ್ಧಿಗೆ ಬರಬೇಕೆಂಬ ಕುತೂಹಲವನ್ನು ತೋರಿಸುತ್ತಿರುವುದು ಪ್ರಕಾಶವಾಗಿದೆ.

ಪ್ರದರ್ಶನದ ಸಲಹೆ.

ಮೈಸೂರು ಪ್ರಜಾಪ್ರತಿನಿಧಿ ಸಮಾಜದ ಮೆಂಬರುಗಳು ಸೂಚಿಸಿದ ಅಭಿಪ್ರಾಯವನ್ನು ಮಹಾಸ್ವಾಮಿಯವರು ಪ್ರೋತ್ಸಾಹಕೊಟ್ಟು ಪುಷ್ಟೀಕರಿಸಿ, ಇನ್ನುಮೇಲೆ ರಾಜಧಾನಿಯಲ್ಲಿ ಪ್ರತಿ ವರುಷವೂ ದಸರಾ ಮಹೋತ್ಸವಕಾಲದಲ್ಲಿ ಪ್ರದರ್ಶನವನ್ನು ನಡಸಬೇಕೆಂತಲೂ ಅದರಲ್ಲಿ ಕೈಗಾರಿಕೆಗಳನ್ನೂ ವ್ಯವಸಾಯವಸ್ತುಗಳನ್ನೂ ಉಪಕರಣಗಳನ್ನೂ ಯಂತ್ರಸಾಧನಗಳನ್ನೂ ಇಟ್ಟು ಪ್ರದರ್ಶನಮಾಡಬೇಕೆಂತಲೂ ಆ ಯಂತ್ರಸಾಧನಗಳ ತಯಾರಿ, ರಿಪೇರಿ, ಉಪಯೋಗಾದಿಗಳನ್ನು ರೈತರಿಗೂ ಕಸಬುದಾರರಿಗೂ ತೋರಿಸಿಕೊಡಬೇಕೆಂತಲೂ ಅಪ್ಪಣೆಕೊಡಿಸೋಣವಾಗಿದೆ. ಮತ್ತು ಈ ಕಾರ್ಯವನ್ನು ಸಾಂಗವಾಗಿಯೂ ಸಾರ್ಥಕವಾಗುವಂತೆಯೂ ನೆರವೇರಿಸುವುದಕ್ಕೋಸ್ಕರ ಈ ಸಂಸ್ಥಾನದ ಅನೇಕ ಇಲಾಖೆಗಳ ಮುಖ್ಯಸ್ಥರುಗಳನ್ನು ಆರಿಸಿ ಒಂದು ಸಂಘ (ಕಮಿಟಿ) ವನ್ನು ನಿರ್ಮಾಣಮಾಡೋಣವಾಗಿರುತ್ತದೆ.

ಕಟ್ಟಡದ ಕೆಲಸ ಮುಗಿದದ್ದು

ಈ ಕಮಿಟಿಯವರು ಪ್ರದರ್ಶನದ ಕಾರ್ಯಾರಂಭಮಾಡಿದ್ದು ಕಳೆದ ಆಗೀಸ್ಟು ೧ ರಿಂದ ಅಂದರೆ, ಎಲ್ಲಾ ಸಿದ್ಧಪಡಿಸುವುದಕ್ಕೆ ಅವರಿಗೆ ಎರಡು ತಿಂಗಳ ಕಾಲ ಮಾತ್ರ ಇತ್ತು. ಪ್ರದರ್ಶನಕ್ಕೆ ಸರಿಯಾದ ಸ್ಥಳವನ್ನು ಗೊತ್ತುಮಾಡುವುದೇ ಬಹಳ ಕಷ್ಟವಾಯಿತು. ದಾಕ್ಷಿಣ್ಯವಾಗಿ ಹೊಸ ಕಟ್ಟಡವನ್ನು ಕಟ್ಟುವುದೆಂದರೆ ತುಂಬಾ ಹಣ ಬೇಕಾಗುವುದು. ಪ್ರತಿ ವರುಷವೂ ಒಂದು ತಿಂಗಳ ವರೆಗೆ ಇಟ್ಟು ನಡಸಬೇಕಾದ ಪ್ರದರ್ಶನಶಾಲೆಯನ್ನು ಹಂಗಾಮಿಯಾಗಿ ಕಟ್ಟುವುದು ಯೋಗ್ಯವಾಗಿ ಕಾಣಲಿಲ್ಲ. ಕಮಿಟಿಯವರು ಕಡೆಗೆ ಸ್ಪೆಷಲ್ ರಿಸರ್ವ್ ಪೋಲೀಸ್ ಲೈನ್ ಎಂಬೀ ಕಟ್ಟಡವನ್ನೇ ಪ್ರದರ್ಶನಶಾಲೆಯಾಗಿ ಉಪಯೋಗಿಸಿಕೊಳ್ಳಬೇಕೆಂತಲೂ, ಅವಶ್ಯವಾದ ರೀತಿಯಲ್ಲಿ ಅದರೊಳಗೆ ಕಾಮಗಾರಿ ಮಾಡಿಸಬೇಕೆಂತಲೂ ಗೊತ್ತುಮಾಡಿದರು.

ಉಪನ್ಯಾಸಗಳು.

ಇಲ್ಲಿ ಪ್ರದರ್ಶನ ಮಾಡಲ್ಪಡುವ ವಸ್ತುಗಳ ವಿಷಯದಲ್ಲಿ ರೈತರಿಗೂ ಕಸಬುದಾರರಿಗೂ ವಿವೇಕವೂ ಬುದ್ಧಿಕೌಶಲತೆಯೂ ಹುಟ್ಟಿ ಅಭಿವೃದ್ಧಿಯಾಗುವಂತೆ ಈ ಪ್ರದರ್ಶನಾಲಯದೊಳಗೆ ಉಪನ್ಯಾಸಗಳನ್ನು ಮಾಡಿಸುವುದಕ್ಕೆ ಏರ್ಪಾಡು ಮಾಡಲಾಗಿದೆ.

ವಿದ್ಯಾಭ್ಯಾಸದ ಪ್ರದರ್ಶನ

ವಿದ್ಯಾಭ್ಯಾಸ ಮಾಡಿಸುವುದರಲ್ಲಿ ಸಹಕಾರಿಗಳಾದ ನವೀನ ಉಪಕರಣಗಳನ್ನು ಮೆ|| ಭಾಟಿಯವರು ಮದರಾಸಿನಿಂದ ಅನೇಕವಾಗಿ ತರಿಸಿರುತ್ತಾರೆ. ಇಲ್ಲಿ ಸ್ಥಳಸಂಕೋಚವಾದ್ದರಿಂದ ಅವುಗಳ ಸ್ವಾಕಿ ಅನೇಕ ವಸ್ತುಗಳನ್ನು ಈ ಸಲ ಜೂಬಿಲಿ ಹಾಲ್ ಎಂಬ ಕಟ್ಟಡದಲ್ಲಿ ಇಟ್ಟು ಪ್ರದರ್ಶನಮಾಡಬೇಕಾಯಿತು. ಅಲ್ಲಿಯೂ ಕೂಡ ಹಿಂದಿನಂತೆ ಕೆಲವು ಉಪನ್ಯಾಸಗಳನ್ನು ನಡಸಲು ಏರ್ಪಾಡು ಮಾಡಿದೆ.

ಇಲಾಖಾ ಪ್ರದರ್ಶನವಸ್ತುಗಳು

ನಮ್ಮ ಕೋರಿಕೆಯ ಪ್ರಕಾರ ದಿಗರುಸರ್ಕಾರಿ ಇಲಾಖೆಗಳಿಂದಲೂ ಪ್ರದರ್ಶನಕ್ಕೆ ವಸ್ತುಗಳು ಬಂದಿರುತ್ತವೆ. ಮದರಾಸ್ ಆಧಿಪತ್ಯದ ಮತ್ತು ಮಧ್ಯಪ್ರಾಂತಗಳ ವ್ಯವಸಾಯ ಇಲಾಖೆಯವರೂ ಫಾರೆಸ್ಟ್ ಇಲಾಖೆಯವರೂ ಹಲವು ವಿಶೇಷವಸ್ತುಗಳನ್ನು ಕಳುಹಿಸಿರುತ್ತಾರೆ. ಮದರಾಸ್ ಗವರ್ನಮೆಂಟಿನವರು ಮೆ|| ಸಿ ಕೆ ಸುಬ್ಬರಾಯರನ್ನು ಸರ್ಕಾರಿಯಾಗಿ ಈ ಪ್ರದರ್ಶನಶಾಲೆಗೆ ಕಳುಹಿಸಿರುವರು. ಅಲ್ಲದೆ ಅವರು ಸಹಾಯಮಾಡಿದ್ದಕ್ಕಾಗಿ ಅವರನ್ನು ಕಮಿಟಿಯವರು ಕೃತಜ್ಞತಾಪೂರ್ವಕವಾಗಿ ವಂದಿಸುತ್ತಾರೆ.

ಪರದೇಶದ ಕಸಬುದಾರರೂ

ಕಂಪನಿ ಹೌಸುಗಳೂ, ದೇಶೀಯ ಸಂಸ್ಥಾನಗಳೂ, ಸಿಲೋನ್ (ಲಂಕಾ) ದ್ವೀಪದಲ್ಲೂ ಎಲ್ಲಾ ಕಡೆಗಳಿಂದ ಪ್ರದರ್ಶನವಸ್ತುಗಳು ಇಲ್ಲಿಗೆ ಕಳುಹಿಸಲ್ಪಟ್ಟಿವೆ. ಅಮೃತಸಾರ, ಬೊಂಬಾಯಿ, ಕಲ್ಕತ್ತಾ, ಕೊಚ್ಚಿ, ಮಧ್ಯಪ್ರಾಂತ್ಯಗಳು, ಢಕಲಿಯ, ಕೊಲ್ಲಾಪುರ, ಲಾಹೋರ್, ಮಂಗಳೂರು, ಮುರ್ಷಿದಾಬಾದ್, ರಾಜಪುಟಾನಾ, ತಿರುವಾಂಕೂರು, ಉತ್ತರಾದ ... ಈ ಮೊದಲಾದ ಸ್ಥಳಗಳಿಂದ ನಾನಾ ತರದ ವಸ್ತುಗಳು ಬಂದು ಪ್ರದರ್ಶನವಾಗಿರುತ್ತವೆ.

ರೈಲ್ವೆ ಕಂಪನಿಗಳು ಮತ್ತು ಪ್ರದರ್ಶನವಸ್ತುಗಳು

ಹಿಂದೂಸ್ಥಾನದ ರೈಲ್ವೆ ಕಂಪನಿಯವರೆಲ್ಲಾ ಈ ಪ್ರದರ್ಶನಕ್ಕೆ ಬರತಕ್ಕ ವಸ್ತುಗಳ ರೈಲ್ ಚಾರ್ಜನ್ನು ಕಡಿಮೆಮಾಡಿಕೊಟ್ಟು ರಿಯಾಯಿತಿ ತೋರಿಸಿದ್ದಕ್ಕಾಗಿ ಅವರ ಸಹಾಯವನ್ನು ನಾವು ಸ್ಮರಿಸುತ್ತೇವೆ. ಈ ವರುಷ ಅನೇಕರಿಗೆ ಈ ರಿಯಾಯಿತಿ ದರಗಳು ತಿಳಿಯುವುದಕ್ಕೆ ಸಮಯಸಾಲದ್ದರಿಂದ ಸಾಧ್ಯವಾಗದೆ ಹೋದಾಗ್ಯೂ ಮುಂದಿನ ವರುಷಗಳಲ್ಲಿ ಜನರು ಈ ರಿಯಾಯಿತಿ ದರಗಳ ಸಹಾಯವನ್ನು ವಿಶೇಷವಾಗಿ ಪಡೆಯುವರೆಂದು ಕಮಿಟಿಯವರು ನಂಬುತ್ತಾರೆ.

ಲೋಪದೋಷಗಳು

ಈ ವರುಷದ ಪ್ರದರ್ಶನದ ವಿಷಯದಲ್ಲಿ ಅನೇಕ ನ್ಯೂನತೆಗಳಿರಬಹುದೆಂದು ಕಮಿಟಿಯವರು ಒಪ್ಪಿಕೊಳ್ಳುತ್ತಾರೆ. ಇವೇ ಅಂಥಾ ಲೋಪದೋಷಗಳನ್ನೆಲ್ಲಾ ಕಮಿಟಿಯವರಿಗೆ ತಿಳಿಸಬೇಕೆಂತಲೂ, ಈ ಪ್ರದರ್ಶನವನ್ನು ಸರ್ವಜನೋಪಯೋಗವಾಗುವಂತೆ ಮಾಡಲು ಸಲಹೆಗಳನ್ನು ಕೊಟ್ಟಲ್ಲಿ ಕಮಿಟಿಯವರು ಸರಿಪಡಿಸಿಕೊಳ್ಳುವರೆಂತಲೂ ಸೂಚಿಸುವೆವು.

ಅಂತ್ಯೋಕ್ತಿಗಳು.

ಈ ದಿನ ಮಹಾಸ್ವಾಮಿಯವರು ಕರುಣವಿಟ್ಟು ಈ ಪ್ರದರ್ಶನವನ್ನು ಪ್ರತಿಷ್ಠೆ ಮಾಡಬೇಕೆಂದು ಕಮಿಟಿಯವರು ಬೇಡಿಕೊಳ್ಳುತ್ತಾರೆ. ಈ ಕಾರ್ಯವನ್ನು ನಡಸುವುದಾಗಿ ಅಪ್ಪಣೆಯನ್ನು ದಯಪಾಲಿಸಿದ್ದಕ್ಕಾಗಿಯೂ, ಕಮಿಟಿಯವರಿಗೆ ಅವಶ್ಯವಾದ ಬಂದೋಬಸ್ತನ್ನು ಅಪ್ಪಣೆಕೊಡಿಸಿ ಮಂಜೂರು ಮಾಡಿದ್ದಕ್ಕಾಗಿಯೂ ಕಮಿಟಿಯವರು ಮಹಾಸ್ವಾಮಿಯವರಿಗೆ ರಾಜಭಕ್ತಿಪೂರ್ವಕವಾದ ವಂದನೆಗಳನ್ನು ಒಪ್ಪಿಸುವರು.

ಈ ರೀತಿ ಓದಿದ ಅಡ್ರೆಸ್ಸನ್ನು ಮೆ|| ರಂಗಸ್ವಾಮಯ್ಯಂಗಾರ್ಯರು ಸಾಗರದಲ್ಲಿ ತಯಾರಾದ ಗಂಧದ ಸುಂದರವಾದ ಪೆಟ್ಟಿಗೆಯಲ್ಲಿಟ್ಟು ಶ್ರೀಮನ್ಮಹಾರಾಜರವರಿಗೆ ಒಪ್ಪಿಸಿದರು. ಮಹಾರಾಜರವರು ಆದರಾತಿಶಯದಿಂದ ಅದನ್ನು ಮುಟ್ಟಿ ಮೇಜಿನ ಮೇಲೆ ಇರಿಸಿಕೊಂಡು ಪ್ರತ್ಯುತ್ತರವನ್ನು ದಯಪಾಲಿಸುವ ಉದ್ದಿಶ್ಯ ಆಕ್ಷಣದಲ್ಲೇ ಎದ್ದು ನಿಂತರು. ಸಭಿಕರೆಲ್ಲಾ ಒಡನೆಯೇ ತಮ್ಮ ಸ್ಥಾನಗಳಿಂದ ಎದ್ದು ನಿಂತುಕೊಂಡರು. ಶ್ರೀಮನ್ಮಹಾರಾಜರವರು ಸಭಿಕರನ್ನು ಕುರಿತು ಸ್ಫುಟವಾಗಿಯೂ ಮನೋಹರವಾದ ಧ್ವನಿಯಿಂದಲೂ ಘಂಟಾಘೋಷವಾಗಿಯೂ ಅಪ್ಪಣೆಕೊಡಿಸಿದ ಪ್ರತ್ಯುತ್ತರದ ಮುಖ್ಯಾಭಿಪ್ರಾಯಗಳೇನೆಂದರೆ—

ಶ್ರೀಮನ್ಮಹಾರಾಜರವರ ಪ್ರತ್ಯುತ್ತರವು

ಮೆ|| ಪ್ರೆಸಿಡೆಂಟರೇ ಮತ್ತು ದೊಡ್ಡಮನುಷ್ಯರೇ,

ಈ ದಿನ ನಾವು ಪ್ರದರ್ಶನವನ್ನು ಪ್ರಾರಂಭಿಸುವಭಾಗದಲ್ಲಿ ನಮಗೆ ಪರಮ ಸಂತೋಷವಾಗಿದೆ. ಚಿರಸ್ಮರಣೀಯರಾದ ನಮ್ಮ ತಂದೆಯ

೧೯ ಸಂವತ್ಸರಗಳ ಹಿಂದೆ ಈ ನಗರದಲ್ಲಿ ಇಂಥಾ ಪ್ರದರ್ಶನಶಾಲೆಯನ್ನು ಪ್ರಾರಂಭಿಸಿದ್ದನ್ನೂ ಅವರು ಈ ಭಾಗದಲ್ಲಿ ಮಾರ್ಗದರ್ಶಿಯಾಗಿ ಉತ್ಸಾಹಶೀಲರಾಗಿದ್ದುದನ್ನೂ ಪ್ರೆಸಿಡೆಂಟರು ಈಗ ತಾನೇ ನಮಗೆಲ್ಲಾ ತಿಳಿಸಿರುತ್ತಾರೆ. ನವರಾತ್ರಿಕಾಲದಲ್ಲಿ ಪ್ರದರ್ಶನವನ್ನು ಇತ್ತೆ ಪ್ರಾರಂಭಿಸಿ ನಡಸುತ್ತಾ ಬರಬೇಕೆಂತಲೂ, ಅದನ್ನು ಶಾಶ್ವತವಾಗಿ ನಡೆಯುವಂತೆ ಮಾಡಬೇಕೆಂತಲೂ ಕೆಲವು ವರುಷಗಳಿಂದಲೂ ನಾವು ಅಭಿಲಾಷಿಸುತ್ತಿದ್ದೆವು. ಈ ವರುಷ ಅದು ಸಾಧ್ಯವಾಗುವಂತೆ ಸ್ವಾಂತ ಮಾಡಲಾಯಿತು. ಇದರ ಫಲಿತಾಂಶವನ್ನು ಈಗ ನಾವುಗಳೆಲ್ಲಾ ಪ್ರತ್ಯಕ್ಷವಾಗಿ ನೋಡುತ್ತಿದ್ದೇವೆ.

ಈ ಪ್ರದರ್ಶನವನ್ನು ನಡಸುವುದರಲ್ಲಿ ನಮ್ಮ ಉದ್ದೇಶಗಳೂ ಆಶಯಗಳೂ ಏನೆಂಬುದನ್ನು ಪ್ರೆಸಿಡೆಂಟರು ಅವರ ಅಡ್ರೆಸ್ಸಿನಲ್ಲೇ ಸ್ಪಷ್ಟವಾಗಿ ವಿವರಿಸಿರುತ್ತಾರೆ. ಇಂಥಾ ಪ್ರದರ್ಶನಗಳನ್ನು ನಡಿಸಿದ ಪಕ್ಷದಲ್ಲಿ ಬಹಳೇ ದೇಶೀಯ ವ್ಯವಸಾಯವೂ ಕೈಗಾರಿಕೆಗಳೂ ಉತ್ತಮಸ್ಥಿತಿಗೆ ಬರುವವೆಂದು ನಾವು ನಿರೀಕ್ಷಿಸುವುದಕ್ಕಾಗದು. ಆದರೆ ಈ ಪ್ರದರ್ಶನಗಳನ್ನು ನೋಡತಕ್ಕವರಿಗೆ ತಮ್ಮ ನೆರೆಹೊರೆಗಳಲ್ಲಿ ಯಾವ ಯಾವ ವಸ್ತುಗಳೂ ಬೆಳೆಗಳೂ ದೊರಕುವವೋ, ಯಾವ ಯಾವ ಸ್ಥಳದಿಂದ ಯಾವ ಯಾವ ಪದಾರ್ಥಗಳನ್ನು ಇತರ ಕಡೆಗಳಿಗೆ ಕಳುಹಿಸಬಹುದೋ ಸ್ಪಷ್ಟವಾಗಿ ಕಂಡು ಬರುತ್ತದೆ. ಆದರಿಂದ ಜನಗಳ ಬುದ್ಧಿಯು ಕುಶಲತೆಯನ್ನು ಹೊಂದುವುದು ಮತ್ತು ಜನಗಳು ಅಭಿವೃದ್ಧಿಗೆ ಬರಲು ಮಾರ್ಗವಾಗುವುದು. ಈ ಭಾಗದಲ್ಲಿ ಸಂಶಯವೇನೂ ತೋರುವುದಿಲ್ಲ. ಪ್ರತಿವರುಷವೂ ಈ ಪ್ರದರ್ಶನವನ್ನು ನಡಸುವುದರಲ್ಲಿ ವಿಶೇಷ ಪ್ರಯೋಜನ ಉಂಟೆಂದು ನಾವು ನಂಬುತ್ತೇವೆ. ಅನೇಕ ವರುಷಗಳಿಗೆ ಒಂದುಸಲ ಪ್ರದರ್ಶನ ನಡೆದರೆ ಅದರಿಂದುಂಟಾಗುವ ಫಲಾಫಲಗಳು ಇನ್ನೊಂದು ಪ್ರದರ್ಶನ ನಡೆಯುವ ಕಾಲದೊಳಗಾಗಿ ಮರೆತುಹೋಗುವವು. ಆದರಿಂದ ಪ್ರಯೋಜನವಾದೆಂಬುದು ಅನುಭವಕ್ಕೆ ಬರುವುದಿಲ್ಲ. ವಸ್ತುವಿಶೇಷಗಳನ್ನು ತಂದಿಟ್ಟು ಪ್ರದರ್ಶನ ಮಾಡತಕ್ಕವರಿಗೆ ತಮ್ಮ ಶ್ರಮವೂ ದ್ರವ್ಯವ್ಯಯವೂ ನಿರಾಶೆಯೂ ಪ್ರಕಾರದಲ್ಲಿ ನಿಲ್ಲುವವೇ ಹೊರತಾಗಿ ಪ್ರಯೋಜನ ಹೊಂದಿದ ಭಾಗಗಳನ್ನು ಮರೆತುಹೋಗುವರು. ಇದರಿಂದೇನಾಗುತ್ತದೆಂದರೆ, ಪ್ರದರ್ಶನವನ್ನು ಪ್ರಕಟಿಸಿದಂದಿನಿಂದ ಅದರಲ್ಲಿ ಅನುಭವ ಉಂಟಾಗುವುದಿಲ್ಲ, ಪ್ರದರ್ಶನಕ್ಕೆ ವಸ್ತುಗಳನ್ನು ತರತಕ್ಕವರಿಗೆ ವೃಥಾ ಶ್ರಮವೂ ನಿರಾಶೆಯೂ ಉಂಟಾಗುವವು. ಆದರೆ ಪ್ರತಿವರುಷವೂ ಪ್ರದರ್ಶನ ನಡಸೋಣವಾದರಿಂದ ಇಂಥಾ ತೊಂದರೆಗಳೆಲ್ಲಾ ನಿವಾರಣೆಯಾದಾವೆಂದು ನಿರೀಕ್ಷಿಸುತ್ತೇವೆ. ಪ್ರದರ್ಶನ ನಡಸುವವರಿಗೆ ಅವರ ಅನುಭವ ಹೆಚ್ಚುತ್ತಾ ಬಂದೀತು. ವಸ್ತುಗಳನ್ನು ತಂದಿಟ್ಟು ಪ್ರದರ್ಶನ ಮಾಡತಕ್ಕವರಿಗೆ ಕಾರ್ಯಸಾಧನೆಯಲ್ಲಿ ಉತ್ಸಾಹವು ಸ್ಥಿರಪಟ್ಟು ಪ್ರಬಲವಾಗುತ್ತಾ ಬಂದೀತು. ಕಮಿಟಿ ಪ್ರೆಸಿಡೆಂಟರು ಆಯಾ ವರುಷ ನಡಸುವ ಪ್ರದರ್ಶನದ ಫಲಿತಾಂಶವನ್ನು ಅಂಥಾ ಪ್ರದರ್ಶನಗಾರರಿಗೆ (ಕಾರೀಗಾರರಿಗೆ) ಆಯಾ ವರುಷದೊಳಗೇ ತಿಳಿಸುವಂತೆ ಮಾಡಿಯಾರೆಂದು ನಂಬುತ್ತೇವೆ. ಇವರು ವ್ಯವಸಾಯದ ಗಜೆಟನ್ನು ನಡಿಸುವುದಕ್ಕಾರಂಭಿಸಿ, ಈ ಸಂಸ್ಥಾನದ ವ್ಯವಸಾಯಗಾರರಿಗೆ ಉಪಯೋಗಕರವಾಗುವಂಥಾ ಪ್ರತಿ ಒಂದು ವಿಷಯವನ್ನೂ ತಿಳಿಯಪಡಿಸುತ್ತಾ ಬಂದಿದ್ದುದರಿಂದ ಅದೇ ರೀತಿಯಾಗಿ ಈ ಪ್ರದರ್ಶನಗಳ ವಿಷಯದಲ್ಲೂ ಅನುಭವಕ್ಕೆ ಬಂದಂಥಾ ಸಂಗತಿಗಳನ್ನು ಆಗಿಂದಾಗ್ಗೆ ಪ್ರಕಟಪಡಿಸುತ್ತಾ ಬರುವರೆಂದು ನಿರೀಕ್ಷಿಸುತ್ತೇವೆ.

ಈ ಪ್ರದರ್ಶನಗಳಿಂದ ಪ್ರಯೋಜನ ಉಂಟೆಂದು ನಾವೂ ನಮ್ಮ ಗವರ್ನಮೆಂಟಿನವರೂ ನಂಬಿಕೊಂಡಿದ್ದೇವೆ. ಇದಲ್ಲದೆ, ಬೇರೆ ಮಾರ್ಗಗಳಲ್ಲೂ ಹಿತಕರವಾದ ಕಾರ್ಯಸಾಧನೆ ಮಾಡಬೇಕಾಗಿರುವುದು. ಇಂಥಾ ಉದ್ದೇಶದಿಂದಲೇ ನಾವು ವ್ಯವಸಾಯ ಶೋಧನಾ ಇಲಾಖೆಯನ್ನೂ, ಅನುಕೂಲವಾದ ಸ್ಥಳಗಳಲ್ಲಿ ಕಸಬುಗಳ ಶಾಲೆಗಳನ್ನೂ ಸರ್ಕಾರದ ಮಾಡಿರುವೆವು. ಮತ್ತು ಪಶುವೈದ್ಯಚಿಕಿತ್ಸಾ ಇಲಾಖೆಯೊಂದನ್ನು ಪ್ರಾರಂಭಿಸಬೇಕೆಂದು ಸಾಹಸಪಡುತ್ತಿದ್ದೇವೆ. ಇಷ್ಟೇ ಅಲ್ಲ. ಕೆಲವು ವರುಷಗಳಿಂದಲೂ ಭೂಗರ್ಭಶೋಧನಾ ಇಲಾಖೆಯವರೂ ವಾಣಿಜ್ಯ ಇಲಾಖೆಯವರೂ ಈ ಸಂಸ್ಥಾನದ ಗುಪ್ತಧನಗಳ್ಯಾವುವೆಂಬುವುದನ್ನು ಗೊತ್ತುಮಾಡುತ್ತಾ ಬಂದಿರುವರು. ಇದಲ್ಲದೆ ಕಸಬುದಾರರೂ ವ್ಯವಸಾಯಗಾರರೂ ತಾವೇ ತಾವೇ ಪರೀಕ್ಷಿಸಿ ಕಸಬುಗಳನ್ನೂ ವ್ಯವಸಾಯವನ್ನು ಅಭಿವೃದ್ಧಿಗೆ ತರುವುದಕ್ಕೆ ಸ್ಥಿರ ಸಾಹಸವಾದ ತ್ರಾಣ ಬರಲಾಗಿದೆ. ಜನರು ಪರಸ್ಪರ ಸಹಾಯಕ ಸಂಘಗಳನ್ನು ಮಾಡಿಕೊಂಡು ಕಾರ್ಯಗಳನ್ನು ನಡಿಸಲೆಂದು ಒಂದು ಕಾನೂನು ಮಾಡಿರುವೆವು. ಅಂಥಾ ಸಂಘಗಳನ್ನು ಪ್ರೋತ್ಸಾಹಿಸಿ ಅಭಿವೃದ್ಧಿಗೆ ತರುವಂತೆ ಅದಕ್ಕಾಗಿಯೇ ಅನುಭವಸ್ಥರಾದ ಒಬ್ಬ ಅಧಿಕಾರಿಯನ್ನು ನೇಮಕ ಮಾಡಿರುವುದೂ ನಿಮಗೆ ತಿಳಿದಿರುತ್ತದೆ. ನಮ್ಮ ದೇಶದಲ್ಲಿ ಕಸಬುಗಳು ಅಭಿವೃದ್ಧಿಗೆ ಬಾರದಿರುವುದಕ್ಕೆ ಪರಸ್ಪರಸಹಾಯಪೂರ್ವಕವಾದ ಮೂಲಧನವಿಲ್ಲದಿರುವುದೂ, ಒಬ್ಬರಲ್ಲಿ ಒಬ್ಬರಿಗೆ ನಂಬಿಕೆ ಬರತಕ್ಕ ಸಾಧನಗಳು ಇಲ್ಲದೆ ಇರುವುದೂ ಮುಖ್ಯಕಾರಣವೆಂದು ನಾವು ತಿಳಿದುಕೊಂಡಿದ್ದೇವೆ. ಪರಸ್ಪರ ಸಹಾಯಕಸಂಘಗಳು ಚಿಕ್ಕದಲ್ಲಿ ಅಂದರೆ, ಒಂದು ಕಡೆ ಇರುವ ಕಸಬುಗಾರರಾಗಲಿ, ವ್ಯವಸಾಯಗಾರರಾಗಲಿ ಎಷ್ಟೇ ಬಡಸ್ಥಿತಿಯವರಾಗಿದ್ದರೂ ತಮ್ಮತಮ್ಮಲ್ಲೇ ಒಂದೊಂದು ಸಂಘವನ್ನು ಮಾಡಿಕೊಂಡು ಪರಸ್ಪರ ಸಹಾಯ ಮಾಡುತ್ತಲೂ ಪಡೆಯುತ್ತಲೂ ಬಂದಲ್ಲಿ, ಮೊದಲು ಸ್ವಲ್ಪವಾಗಿದ್ದದ್ದು ಕ್ರಮೇಣ ಅಭಿವೃದ್ಧಿಯಾಗುತ್ತಾ ಬಂದು, ಅವರಿಗೆ ಬೇಕಾದ ಮೂಲಧನವೂ ಸಹಾಯವೂ ಪ್ರೋತ್ಸಾಹವೂ ದೊರಕುವವು. ಆ ಕಾರಣ ನಮ್ಮ ವಿದ್ಯಾವಂತರೂ ನಾಗರಿಕರೂ ತಮ್ಮ ಕೈಲಾಗುವ ಮಟ್ಟಿಗೂ ಪ್ರೋತ್ಸಾಹ ಕೊಟ್ಟು, ಅಂಥಾ ಪರಸ್ಪರಸಹಾಯಕ ಸಂಘಗಳನ್ನು ಜನರು ಮಾಡಿಕೊಳ್ಳುವಂತೆ ಸಾಹಸಪಡಬೇಕೆಂದು ಮನಃಪೂರ್ವಕವಾಗಿ ಕೇಳುತ್ತೇವೆ. ಈ ಸಂಘಗಳ ಬೆಳೆಯಿಂದ ಐಶ್ವರ್ಯಾಭಿವೃದ್ಧಿಯಾಗುವುದು ಮಾತ್ರವೇ ಅಲ್ಲ. ಇವು ಮೊದಲು ಮೊದಲು ಸ್ಥಾಪಿಸಲ್ಪಟ್ಟಿರುವ ಪ್ರತಿ ಒಂದು ದೇಶದಲ್ಲೂ ಜನರು ಸದ್ಗುಣವಂತರಾಗಿದ್ದಾರೆ, ಜನರಲ್ಲಿ ಪರಸ್ಪರವಾದ ನಂಬಿಕೆ ಭರವಸೆಗಳೂ ಹೆಚ್ಚುತ್ತಾ ಬಂದಿವೆ. ಮತ್ತು ಜನರಲ್ಲಿ ಪರಸಹಾಯಾಪೇಕ್ಷೆಯು ಕಡಮೆಯಾಗುತ್ತಲೂ ತಾವು ತಾವೇ ಸ್ವತಂತ್ರಿಸಿ ಸ್ವತಃ ಕಾರ್ಯಗಳನ್ನು ಮಾಡಿಕೊಳ್ಳುವಂತೆಯೂ, ಯೋಗ್ಯವಾದ ಕೆಲಸಕಾರ್ಯಗಳಲ್ಲಿ ಆಸಕ್ತರಾಗುವಂತೆಯೂ ಪ್ರೋತ್ಸಾಹ ಉಂಟಾಗಿರುವುದು. ನಮ್ಮ ದೇಶದಲ್ಲೂ ಪ್ರಜೆಗಳು ಇಂಥಾ ಸಂಘಗಳನ್ನು ಮಾಡಿಕೊಂಡು ಅಭಿವೃದ್ಧಿಗೆ ಬರಲೆಂಬ ಉದ್ದೇಶದಿಂದ ಗವರ್ನಮೆಂಟಿನವರು ಅವಶ್ಯವಾದ ಸೌಕರ್ಯಗಳನ್ನೆಲ್ಲಾ ಕಲ್ಪಿಸಿಕೊಟ್ಟಿದ್ದಾರೆ. ಈಗ ಅವುಗಳಿಂದ ಪ್ರಯೋಜನಹೊಂದತಕ್ಕ ಭಾರವು ನಿಮ್ಮದಾಗಿರುವುದು.

ನಾವು ಕುಳಿತುಕೊಳ್ಳುವುದಕ್ಕಿಂತ ಮುಂಚೆ ಇನ್ನೊಂದು ವಿಷಯವನ್ನು ಇಲ್ಲಿ ಸೂಚಿಸಬೇಕೆಂದು ಕುತೂಹಲಪಡುವೆವು. ಅದೇನೆಂದರೆ, ಈ ಪ್ರದರ್ಶನವು ಇಷ್ಟುಮಟ್ಟಿಗೆ ನಡೆಯುವ ಭಾಗದಲ್ಲಿ ಸಾರ್ವಭೌಮರವರ ಆಳ್ವಿಕೆಗೆ ಒಳಪಟ್ಟ ಬೇರೆ ಬೇರೆ ಗವರ್ನಮೆಂಟಿನವರು ನಮಗೆ ತುಂಬಾ ಸಹಾಯಮಾಡಿರುತ್ತಾರೆ. ಮತ್ತು ಮದರಾಸ್ ರೈಲ್ವೆಯವರೂ ದಕ್ಷಿಣಮರಾಟಾರೈಲ್ವೆಯವರೂ ಈ ಪ್ರದರ್ಶನದ ವಸ್ತುಗಳನ್ನು ಜಾಗ್ರತೆಯಾಗಿಯೂ ರಿಯಾಯತಿ ಛಾರ್ಜಿನಿಂದಲೂ ಸಾಗಿಸಿಕೊಟ್ಟಿದ್ದಾರೆ. ಇವರುಗಳ ಸಹಾಯವನ್ನು ನಾವು ಈಗ ಸ್ಮರಿಸುವುದೂ ಅವರನ್ನು ಅದಕ್ಕಾಗಿ ವಂದಿಸುವುದೂ ಅವಶ್ಯವಾಗಿದೆ. ಸಾರ್ವಭೌಮ ಸರ್ಕಾರದವರು ಇಂಥಾ ದೇಶೀಯ ಅಭ್ಯುದಯಾರ್ಥವಾದ ಕಾರ್ಯಗಳನ್ನು ಪ್ರೋತ್ಸಾಹಪಡಿಸುತ್ತಾ ಬಂದಿರುವುದು ಶುಭಸೂಚನೆಯಾಗಿರುವದೆಂದು ನಾವು ಹೇಳಬೇಕಾದದ್ದಿಲ್ಲ. ಈ ಅಭಿಪ್ರಾಯವೇ ನಮ್ಮ ಸಕಲ ಪ್ರಜೆಗಳಲ್ಲೂ ನೆಲೆಗೊಂಡಿರುತ್ತದೆಂತಲೂ, ಎಲ್ಲರೂ ಅದನ್ನು ಸೌಹಾರ್ದ್ದ್ಯದಿಂದ ಒಪ್ಪಿಕೊಳ್ಳುವರೆಂತಲೂ ಹೇಳಲು ನಾವು ಅನುಮಾನಪಡುವುದಿಲ್ಲ.

ಇತ್ಯಾದಿ ಅಭಿಪ್ರಾಯಗಳೊಡನೆ ಈ ದಿನ ಈ ಪ್ರದರ್ಶನವನ್ನು ಪ್ರಾರಂಭಿಸಿರುವೆವು. ಇದು ಪ್ರತಿ ವರುಷವೂ ಬೆಳವಣಿಗೆಯನ್ನು ಹೊಂದಿ ನಮ್ಮ ಪ್ರಜೆಗಳಿಗೆ ಹೆಚ್ಚು ಹೆಚ್ಚಾದ ಪ್ರಯೋಜನಗಳನ್ನು ಕೊಡುತ್ತಾ ಬರಲಿ. ಇದರಿಂದ ನಮ್ಮ ಪ್ರಜೆಗಳು ಯಥಾರ್ಥವಾದ ಮತ್ತು ಸುಖಕರವಾದ ಅಭ್ಯುದಯವನ್ನು ಪಡೆಯುತ್ತಾ ಬರಲಿ. ಇದೇ ನಮ್ಮ ಪರಮಾಪೇಕ್ಷೆಯಾಗಿದೆ.

ಇತರ ವಿಚಾರಗಳು:

ಈ ಪ್ರಕಾರ ಶ್ರೀಮನ್ಮಹಾರಾಜರವರು ಪ್ರತ್ಯುತ್ತರವನ್ನು ದಯಪಾಲಿಸಿ, ಸಿಂಹಾಸನವನ್ನು ಅಲಂಕರಿಸಿದರು. ಕಮಿಟಿ ಪ್ರೆಸಿಡೆಂಟರವರು ದರ್ಬಾರ್ ಬಕ್ಷಿ ಪಿ. ಎಸ್. ಲಿಂಗರಾಜೇ ಅರಸಿನವರ ಕಡೆ, ಶ್ರೀಮನ್ಮಹಾರಾಜರವರಿಗೂ ತರುವಾಯ ಶ್ರೀಮಾನ್ ಯುವರಾಜರವರಿಗೆ ಹಾರ ತುರಾಯಿಗಳನ್ನೂ ಅತ್ತರ್ ಪಾನ್ ಮುಂತಾದವುಗಳನ್ನೂ ಒಪ್ಪಿಸಿದರು. ಅನಂತರ ಶ್ರೀಮನ್ಮಹಾರಾಜರವರು ಪ್ರದರ್ಶನಾಲಯದ ಪ್ರತಿ ಒಂದು ಕೋಣೆಗೂ ದಯಮಾಡಿ ಅವುಗಳಲ್ಲಿ ಅಂದವಾಗಿಯೂ ಸಾಲುಸಾಲಾಗಿಯೂ ಇಟ್ಟಿದ್ದ ವಸ್ತು ವಿಶೇಷಗಳನ್ನೆಲ್ಲಾ ತುಂಬಾ ಕುತೂಹಲದಿಂದ ಸುಮಾರು ಎರಡು ಘಂಟೆಗಳ ಹೊತ್ತು ಪರಾಂಬರಿಸಿ, ಸಂತೋಷಪಟ್ಟುಕೊಂಡು ಸಾಯಂಕಾಲ ಮಹಾರಾಣಿಯವರೊಡನೆ ಅರಮನೆಗೆ ಚಿತ್ತೈಸಿದರು. ಮಂಗಳವಾರ ಮಧ್ಯಾಹ್ನ ಮಹಾರಾಣಿಯವರೂ ಅರಮನೆಯ ಜನಾನಾ ಸಹಿತ ದಯಮಾಡಿ ಸುಮಾರು ೩ ಗಂಟೆ ಹೊತ್ತು ಪ್ರದರ್ಶನ ವಸ್ತುಗಳನ್ನು ಪರಾಂಬರಿಸಿ ಚಿತ್ತೈಸಿದರು. ಈವರೆಗೆ ಪ್ರತಿ ದಿನವೂ ಪ್ರಜೆಗಳು ತಂಡತಂಡವಾಗಿ ಬೆಳಗಿನ ಹೊತ್ತು ಹೋಗಿ ಪ್ರದರ್ಶನ ವಸ್ತುಗಳನ್ನು ನೋಡಿಕೊಂಡು ಬರುತ್ತಾರೆ.

ಈ ಪ್ರದರ್ಶನವಸ್ತುಗಳ ವಿವರಣೆಯನ್ನು ಇನ್ನೊಂದು ವೇಳೆ ಪ್ರಕಟಿಸಬೇಕೆಂದಿರುವೆವು.

ಇಂಡಿಯಾ ದೇಶದ ವೃತ್ತಾಂತಗಳು.

ಜರ್ಮನಿ ರಾಜ್ಯದ ಚಕ್ರವರ್ತಿಯವರೂ ಚಕ್ರವರ್ತಿನಿಯವರೂ ವಿಲಾಯಿತಿಗೆ ಮುಂದಿನ ತಿಂಗಳು ೧೩ ನೆ ತಾ. ವಿಹಾರಾರ್ಥವಾಗಿ ದಯಮಾಡುತ್ತಾರೆಂದು ಸಮ್ಮತಿಸಿರುತ್ತಾರೆ.

***

ಕಳೆದ ವಾರ ಕಲ್ಕತ್ತಾ ಪಟ್ಟಣದಲ್ಲಿ ನಾರಿನ ಗಟ್ಟುಗಳು ಭರ್ತಿಯಾಗಿದ್ದ ಒಂದು ಭಾರೀ ಮನೆಗೆ ಬೆಂಕಿ ಬಿದ್ದು ೩,೦೦೦ ಮಣಗಳಷ್ಟು ನಾರಿನ ಗಟ್ಟುಗಳು ಸುಟ್ಟು ಹೋದವೆಂತಲೂ ತಂತೀ ವರ್ತಮಾನ ಬಂದಿದೆ.

***

ಹಿಂದೂಸ್ಥಾನದಲ್ಲೆಲ್ಲಾ ಆಚೆವಾರ ೯,೫೧೭ ಜನರು ಪ್ಲೇಗ್ ಉಪದ್ರದಲ್ಲಿ ಕಾಲವಾದರು. ಈ ಪೈಕಿ ೩,೧೧೩ ಜನ ಬೊಂಬಾಯಿ ಅಧಿಪತ್ಯದವರು, ೪೬೦ ಜನ ಮಧ್ಯಪ್ರದೇಶದವರು, ೩೪೮ ಜನರು ಮೈಸೂರು ಸಂಸ್ಥಾನದವರು.

***

ಚೀನ ರಾಜ್ಯದ ಚಕ್ರವರ್ತಿಯವರ ಸಹೋದರರಾದ ಪ್ರಿನ್ಸ್ ... ರಾಜಕುಮಾರರು ಯುರೋಪ್ ಖಂಡದ ಬೇರೆ ಬೇರೆ ರಾಜ್ಯಗಳಲ್ಲಿ ರಾಜ್ಯಭಾರ ಕ್ರಮಗಳು ಯಾವರೀತಿ ಇರುವವೆಂದು ತಿಳಿದು ಬರಬೇಕೆಂದು ಆ ಪ್ರಾಂತ್ಯ ಸಂಚಾರ ಹೋಗಿದ್ದಾರೆ.

***

ಮದರಾಸ್ ಗವರ್ನಮೆಂಟಿನವರು ರೈತರಿಗೆ ಪಟ್ಟಾ ಬುಕ್ ಎಂಬ ಸಣ್ಣ ರೀತಿ ಪುಸ್ತಕ, ಈ ಮೊದಲಾದ ಕೆಲವು ಫಾರಂಗಳನ್ನು ಕೊಡಬೇಕೆಂದು ಈಗ ಏರ್ಪಾಟುಮಾಡಿದ್ದಾರೆ. ಇದರಿಂದ ರೈತರಿಗೆ ಬಹಳ ಉಪಯೋಗವಾಗಿದೆ.

***

ಹಿಂದೂಸ್ಥಾನದಲ್ಲಿರುವ ದೇಶೀಯ ಕ್ರೈಸ್ತರು ತಮ್ಮ ಪ್ರತಿನಿಧಿಗಳನ್ನು ವೈಸ್‌ರಾಯಿಯವರ ಮತ್ತು ಗವರ್ನರುಗಳ ಮಂತ್ರಾಲೋಚನಾ ಸಭೆಗಳಲ್ಲಿ ನೇಮಿಸಿಕೊಳ್ಳಬೇಕಾದದ್ದು ತುಂಬಾ ಅವಶ್ಯವಾಗಿದೆ ಎಂದು ವೈಸ್‌ರಾಯಿಯವರಿಗೆ ಒಂದು ವಿಜ್ಞಾಪನಾ ಪತ್ರಿಕೆಯನ್ನು ಬರೆದುಕೊಂಡಿದ್ದಾರೆ.

***

ಉತ್ತರ ದೇಶದಲ್ಲಿ ಕೆಲವು ಕಡೆ ಮಳೆ ಬೆಳೆ ಆಗದೆ ದುಷ್ಕಾಲ ಪ್ರಾಪ್ತವಾದೀತೆಂಬ ಸೂಚನೆಯುಂಟಾಗಿರುವಂತೆ ಕಾಣುವುದು. ಸಂಯುಕ್ತ ಅಧಿಪತ್ಯಗಳಲ್ಲಿ ರೈತಪ್ರಜೆಗಳ ಕಷ್ಟಪರಿಹಾರಕ್ಕಾಗಿ ಅವರಿಗೆ ತಕಾವಿ ಅಡ್ವಾನ್ಸು ಕೊಡಬೇಕೆಂದು ಗವರ್ನಮೆಂಟಿನವರು ೫೦ ಲಕ್ಷ ರೂಪಾಯಿ ಸ್ಯಾಂಕ್ಷನ್ ಮಾಡಿದ್ದಾರೆ.

***

ಕಲ್ಕತ್ತಾ ಪಟ್ಟಣಕ್ಕೆ ಸೇರಿದ ಎಂಟಾಲಿ ಎಂಬ ಪೇಟೆಯಲ್ಲಿರುವ ಒಂದು ನಾರಿನ ಭಾರಿ ಕಾರ್ಖಾನೆಯಲ್ಲಿ ಯಜಮಾನರು ಕೂಲಿಯನ್ನು ಮೊದಲಿನಂತೆ ಕೊಡುವುದಿಲ್ಲವೆಂದು ಹೇಳಿ ಸುಮಾರು ೫೦೦ ಮಂದಿ ಆಳುಗಳು ಕೆಲಸಕ್ಕೆ ಹೋಗದೆ ನಿಂತುಬಿಟ್ಟಿರುವುದರಿಂದ ಆ ಕಾರ್ಖಾನೆಯೇ ನಿಂತು ಹೋಗಿದೆ ಎಂದು ತಂತೀ ವರ್ತಮಾನ ಬಂದಿದೆ.

***

ಕಲ್ಕತ್ತಾ ಪಟ್ಟಣದಲ್ಲಿ ೫೦ ಲಕ್ಷ ರೂಪಾಯಿನ ಸ್ವದೇಶೀ ಬಂಗಾಳಾ ಬ್ಯಾಂಕು ಎಂಬ ಒಂದು ಲೇವಾದೇವಿ ಬ್ಯಾಂಕನ್ನು ಕಳೆದ ವಾರ ಸ್ಥಾಪಿಸಿದ್ದಾರೆ. ಇದರ ಡೈರಕ್ಟರುಗಳೆಲ್ಲಾ ಸಾಹುಕಾರರಾದ ಭಾರೀ ವರ್ತಕರೇ ಇಲ್ಲ. ೧೦೦ ರೂಪಾಯಿನ ಪ್ರತಿ ಒಂದು ಷೇರಿಗೂ ಸದ್ಯ ೨೫ ರೂಪಾಯಿ ಮಾತ್ರ ಷೇರುದಾರರಿಂದ ಕೊಡಿಸುವರೆಂತಲೂ ಪ್ರಕಟವಾಗಿದೆ.

***

ಕಲ್ಕತ್ತಾ ಪಟ್ಟಣದಲ್ಲಿ ಒಂದು ವಿದ್ಯಾಶಾಲೆಯಲ್ಲಿ ವಿದ್ಯಾಭ್ಯಾಸ ಮಾಡತಕ್ಕ ಸುಮಾರು ೬೦ ಹುಡುಗರಿಗೆ ಇದ್ದಕ್ಕಿದ್ದಹಾಗೆ ಕಷ್ಟರೋಗ ಪ್ರಾಪ್ತವಾಗಿ ಆ ಪೈಕಿ ಒಬ್ಬನು ತೀರಿಹೋದನು. ಆ ಸ್ಕೂಲಿನ ಭೋಜನಶಾಲೆಯಲ್ಲಿ ಉಪಯೋಗಿಸತಕ್ಕ ಅಕ್ಕಿ ಬೇಳೆ ಮೊದಲಾದ ಆಹಾರ ಪದಾರ್ಥಗಳನ್ನು ಡಾಕ್ಟರುಗಳು ತರಿಸಿ ಪರಿಶೋಧನೆ ಮಾಡುತ್ತಿದ್ದಾರೆ. ಈ ರೋಗವು ಆಹಾರ ದೋಷದಿಂದ ಬಂದದ್ದೆಂದು ಹೇಳುವರು.

***

ಹಿಂದೂಸ್ಥಾನದಲ್ಲಿ ಇಂಗ್ಲಿಷ್ ಪ್ರಭುತ್ವವನ್ನು ಮೊದಲು ಸ್ಥಾಪನೆ ಮಾಡುವುದರಲ್ಲಿ ಬಹಳ ಸಾಹಸಪಟ್ಟಂಥಾ ಲಾರ್ಡ್ ಕ್ಲೈವ್ ಎಂಬುವನ ಹೆಸರನ್ನು ಯೋಗ್ಯವಾದ ರೀತಿಯಲ್ಲಿ ಖ್ಯಾತಿಪಡಿಸಬೇಕೆಂದು ಲಾರ್ಡ್ ಕರ್ಜನ್ ಪ್ರಭುಗಳು ಪ್ರಯತ್ನಪಟ್ಟು ಒಂದು ಫಂಡನ್ನು ಕೂಡಿಸುತ್ತಿದ್ದಾರಷ್ಟೆ. ಈ ಫಂಡಿಗೆ ವಿಲಾಯತಿಯಲ್ಲಿ ೪೫ ಲಕ್ಷ ರೂಪಾಯಿಯೂ, ಹಿಂದೂಸ್ಥಾನದಲ್ಲಿ ೬೧ ಸಾವಿರ ರೂಪಾಯಿಯೂ ಇದುವರೆಗೆ ಚಂದಾ ವಸೂಲಾಗಿದೆ.

***

ಬೊಂಬಾಯಿ ಪಟ್ಟಣದ ಮಿಸೆಸ್ ದಾಸಿಬಾಯಿ ಎಂಬ ಒಬ್ಬ ಪಾರ್ಸಿ ಐಶ್ವರ್ಯವತಿಯು ತನ್ನ ಇಬ್ಬರು ಗಂಡು ಮಕ್ಕಳ ಸಮೇತ ಅಮೇರಿಕದ ಮುಖ್ಯ ಪಟ್ಟಣವಾದ ನ್ಯೂಯಾರ್ಕ್ ನಗರಕ್ಕೆ ಹೋಗಿ ಅಲ್ಲಿ ಕೆಲವು ಕಾಲ ಇದ್ದು, ಅಲ್ಲಿಂದ ವಿಲಾಯತಿಗೆ ಪ್ರಯಾಣಮಾಡಿದ್ದಾಳೆ. ಈಕೆ ಸರ್ವರತ್ನಖಚಿತವಾದ ಒಂದು ಟೋಪಿಯನ್ನು ತಯಾರುಮಾಡಿಸಿ ತೆಗೆದುಕೊಂಡು ಹೋಗಿರುವುದಾಗಿಯೂ, ಅದನ್ನು ವಿಲಾಯತಿಯ ಮಹಾರಾಜ್ಞಿ ಅಲೆಕ್ಸಾಂಡ್ರಾ ರಾಣಿಯವರಿಗೆ ಒಪ್ಪಿಸುವಳೆಂತಲೂ ತಿಳಿದುಬಂದಿದೆ.

***

ಕಲ್ಕತ್ತಾ ಪಟ್ಟಣದ ಮೈದಾನಿನಲ್ಲಿ ಕಳೆದ ವಾರ ಒಂದು ದೊಡ್ಡ ಸಭೆಯು ನಡೆಯಿತು. ಸುಮಾರು ೧೦೦ ಜನ ಪೋಲೀಸಿನವರು ಅಲ್ಲಿಗೆ ಹೋಗಿದ್ದರು. ಸುತ್ತಮುತ್ತಲೂ ಮನೆಗಳ ಮೇಲಿನಿಂದ ಪೋಲೀಸಿನವರಿಗೆ ಕಲ್ಲಿನ ಪೆಟ್ಟುಗಳು ಬಿದ್ದವು. ಆಗ ಅವರು ಆ ಸಭೆಯನ್ನು ನಡೆಯಕೂಡದೆಂದು ತಡೆದು ಗಲಭೆಮಾಡುವಾಗ್ಗೆ ಸಭಿಕರಿಗೂ ಅವರಿಗೂ ಜಗಳವಾಯಿತು. ಸುಮಾರು ಆರು ಮಂದಿ ಪೋಲೀಸಿನವರಿಗೆ ಪೆಟ್ಟು ಆಗಿರುತ್ತದೆ. ಈಗ ಆ ಪುಂಡು ಮಾಡಿದವರನ್ನು ದಸ್ತಗಿರಿ ಮಾಡಬೇಕೆಂದು ವಿಚಾರಣೆ ನಡೆದಿರುವುದು.

***

ಗಡೀಪಾರಾಗಿ ಬರ್ಮಾದಲ್ಲಿರುವ ಲಾಲಾ ಲಾಜಪತ್ ರಾಯರವರು ವಾರಕ್ಕೆ ಎರಡಾವರ್ತಿಯಾದರೂ ಕ್ಷೌರ ಮಾಡಿಸಿಕೊಳ್ಳಬೇಕೆಂದು ಅಪೇಕ್ಷಿಸಿದರೆ ಅವರ ಮೇಲೆ ಉಸ್ತುವಾರಿ ಇರತಕ್ಕವರು ಅದಕ್ಕೆ ಅವಕಾಶ ಕೊಡುವುದಿಲ್ಲವೆಂತಲೂ, ತಮಗೆ ಬರುವ ವರ್ತಮಾನ ಪತ್ರಿಕೆಗಳಲ್ಲಿ ತಮ್ಮ ವಿಷಯವಾದ ಬರವಣಿಗೆಗಳೇನಾದರೂ ಇದ್ದರೆ ಅವುಗಳನ್ನೆಲ್ಲಾ ಕತ್ತರಿಸಿಹಾಕಿ ಉಳಿದ ಭಾಗಗಳನ್ನು ಮಾತ್ರ ಕೊಡುತ್ತಾರೆಂತಲೂ ತಮ್ಮ ಒಬ್ಬ ಸ್ನೇಹಿತರಿಗೆ ಕಾಗದ ಬರೆದಿದ್ದಾರೆಂದು ಗುರುಕುಲ ಆರ್ಯ ಸಮಾಜವೆಂಬ ಸಭೆಯವರು ನಡಿಸುವ "ಪ್ರಕಾಶ" ವೆಂಬ ವರ್ತಮಾನ ಪತ್ರಿಕೆಯು ತಿಳಿಸುತ್ತದೆ.

***

ದಕ್ಷಿಣ ಆಫ್ರಿಕದಲ್ಲಿ ಹಿಂದೂಸ್ಥಾನದವರು ಸುಮಾರು ೩೦,೦೦೦ ಜನರಿದ್ದಾರೆ. ಈ ಪೈಕಿ ಕೆಲವು ನೂರು ಜನರ ಮಟ್ಟಿಗೆ ಅಲ್ಲಿನ ಗವರ್ನಮೆಂಟ್ ರೂಲಿಸಿನ ಪ್ರಕಾರ ತಮ್ಮ ಹೆಸರು ವಿಳಾಸ ಮುಂತಾದ್ದನ್ನು ಬರೆಸಿ ತಮ್ಮ ಹೆಬ್ಬೆಟ್ಟಿನ ಗುರುತನ್ನು ಹಾಕಿಕೊಟ್ಟಿದ್ದಾರೆ. ಉಳಿದವರು ಇನ್ನೂ ಈ ರೀತಿ ರಿಜಿಸ್ಟರ್ ಮಾಡಿಸಿಕೊಂಡಿಲ್ಲವಾದ್ದರಿಂದ ಸರ್ಕಾರದವರು ನೊವೆಂಬರ್ ೩೦ ನೆ ತಾರೀಖು ವರೆಗೆ ಅವರಿಗೆಲ್ಲಾ ವಾಯಿದೆ ಕೊಟ್ಟು, ಅಷ್ಟರೊಳಗಾಗಿ ಮೇಲ್ಕಂಡ ರೀತಿ ರಿಜಿಸ್ಟರ್ ಮಾಡಿಸಿಕೊಳ್ಳದೆ ಹೋಗುವವರನ್ನೆಲ್ಲಾ ಹಿಡಿದು ಪದಗಳನ್ನು ಗುತ್ತಿಸಿ ಆ ದೇಶದಿಂದ ಹೊರಡಿಸಿಬಿಡುವುದಾಗಿ ನೋಟೀಸ್ ಕೊಟ್ಟಿರುತ್ತಾರೆ.

***

ಪಂಜಾಬ್ ಅಧಿಪತ್ಯಕ್ಕೆ ಸೇರಿದ ಜೀಲಂ ಮತ್ತು ಅಟ್ಟಾಕ್ ಡಿಸ್ಟ್ರಿಕ್ಟುಗಳಲ್ಲಿ ಹಿಂದುಗಳ ಗುರುದ್ವಾರ (ದೇವಸ್ಥಾನ) ಗಳನ್ನು

ಲೂಟಿಮಾಡಿ ಸುಟ್ಟುಬಿಟ್ಟಿದ್ದಾರೆಂಬ ಒಂದು ವರ್ತಮಾನ ಹುಟ್ಟಿ ಪ್ರಜೆಗಳಲ್ಲೆಲ್ಲಾ ತುಂಬಾ ಗಲಭೆಯನ್ನುಂಟುಮಾಡಿತು. ಗವರ್ನಮೆಂಟಿನವರು ಕೆಲವು ಅಧಿಕಾರಿಗಳನ್ನು ಆ ಪ್ರಾಂತ್ಯಗಳಿಗೆ ಕಳುಹಿಸಿ, ಅದರ ನಿಜಸ್ಥಿತಿಯನ್ನೆಲ್ಲಾ ತನಿಖೆ ಮಾಡಿಸಿದ್ದರಲ್ಲಿ ಈ ವರ್ತಮಾನಕ್ಕೆ ಯಾವ ಆಧಾರವೂ ಇಲ್ಲವೆಂದು ತಿಳಿದುಬಂದಿದೆ ಎಂಬಢಾಗಿ ಸೆಕ್ರೆಟರಿಯವರು ಪ್ರಕಟಿಸಿದಾರೆ ಆ ಪ್ರಾಂತ್ಯಗಳಲ್ಲಿ ಠಕ್ಕು ಹಿಂದುಗಳೆಲ್ಲಾ ಆ ಸುದ್ದಿಯು ನಿಜವಾದದ್ದಲ್ಲವೆಂದು ಮುಚ್ಚಳಿಕೆಯನ್ನು ಬರೆದು ಕೊಟ್ಟಿರುವರು.

❦❦❦

ಈ ನವರಾತ್ರಿ ಹಬ್ಬಕ್ಕಾಗಿ ಬಂಗಾಳದಲ್ಲಿರುವ ಪ್ರಜೆಗಳ್ಯಾರೂ ಪರದೇಶಗಳಿಂದ ತಯಾರಾಗಿ ಬರತಕ್ಕ ಬಟ್ಟೆಗಳನ್ನಾಗಲಿ ಇತರ ಪದಾರ್ಥಗಳನ್ನಾಗಲಿ ಕೊಂಡುಕೊಳ್ಳಕೂಡದೆಂತಲೂ, ಸ್ವದೇಶೀ ಪದಾರ್ಥಗಳನ್ನೇ ಕೊಂಡು ಉಪಯೋಗಿಸಬೇಕೆಂತಲೂ ಕಲ್ಕತ್ತೆಯ ಕೆಲವು ಮುಖಂಡರು ದುಮುಕಾತಿ ಒಂದು ಇಸ್ತಿಹಾರನ್ನು ಪ್ರಕಟಿಸಿರುತ್ತಾರೆ

❦❦❦

ವಿಶಾಖಪಟ್ಟಣದ ಜಿಲ್ಲೆಗೆ ಸೇರಿದ ಕೋರಕತ್ತು ಎಂಬ ಊರಿನಲ್ಲಿ ಕಳೆದ ೨೮ ನೆ ತಾ. ಬೆಳಗ್ಗೆ ೮ ಘಂಟೆ ಹೊತ್ತಿನಲ್ಲಿ ಎರಡಾವರ್ತಿ ಭೂಮಿಯು ಗುಡುಗಿ ಅಲ್ಲಾಡಿತೆಂತಲೂ, ದೂರದಲ್ಲಿ ಫಿರಂಗಿಗಳು ಹಾರಿದಂತೆ ಶಬ್ದವಾಯಿತೆಂತಲೂ, ಭೂಮಿ ನಡುಗಿದ್ದರಿಂದ ಕೆಲವು ಮನೆಗಳ ತೊಲೆಗಳೂ ಗೋಡೆಗಳೂ ಬಿಳಿದ್ದಲ್ಲದೆ, ಹೆಂಚುಗಳು ಗಲಗಲನೆ ಅಲುಗಿದವೆಂತಲೂ, ಆಗ ಆಕಾಶವು ನಿರ್ಮಲವಾಗಿತ್ತೆಂತಲೂ ಒಬ್ಬ ಬಾತ್ಮಿದಾರನು ಬರೆದಿರುತ್ತಾನೆ.

❦❦❦

ತಿರುವಾಂಕೂರು ಸಂಸ್ಥಾನದ ದಕ್ಷಿಣಭಾಗದಲ್ಲಿರುವ ಕೊಲಚಲ್ ಎಂಬ ತೀರಪಟ್ಟಣದಲ್ಲಿ ಸಮುದ್ರವು ಉಕ್ಕಿ ಬಂದದ್ದರಿಂದ ಅನೇಕರಿಗೆ ಲಾಭವಾದಂತೆ ತಿಳಿಯುವದು. ಪ್ರಪಂಚದ ಯಾವದೋ ಒಂದು ಭಾಗದಲ್ಲಿ ಭೂಕಂಪ ಉಂಟಾಗಿ ಭೂಮಿಯೊಳಗೆ ಹೂತುಹೋಗಿದ್ದ ಹಲವು ನಗನಾಣ್ಯ ರತ್ನಪಡಿಗಳು ಹೊರಕ್ಕೆ ಚಿಗಿದು ನೀರಿನಲ್ಲಿ ತೊಡೆದು ಕೊಂಡು ಬಂದು ಆ ಊರಿನಲ್ಲಿ ಬಿಟ್ಟವೆಂತಲೂ, ಅವನ್ನೆಲ್ಲಾ ಕೊಂಡುಕೊಳ್ಳುವುದಕ್ಕಾಗಿ ಅನೇಕಾನೇಕರು ಅಲ್ಲಿಗೆ ಬರುತ್ತಲಿದ್ದಾರೆಂತಲೂ ಒಬ್ಬ ಬಾತ್ಮಿದಾರರು ಬರೆದಿದಾರೆ.

❦❦❦

ಪೂರ್ವ ಬಂಗಾಳಾ ಆಧಿಪತ್ಯಕ್ಕೆ ಸೇರಿದ ರಂಗಪುರದಲ್ಲಿ "ಭರತಮಿಹಿರ" ವೆಂಬ ವರ್ತಮಾನ ಪತ್ರಿಕೆಯು ಪ್ರಕಟವಾಗುತ್ತಿದೆ ಕಳೆದ ೬ನೆ ಸೆಪ್ಟಂಬರಿನಲ್ಲಿ ಅಚ್ಚಾದ ಈ ಪತ್ರಿಕೆಯೊಳಗೆ ರಾಜದ್ರೋಹಕರವಾದ ಸಂಗತಿಯೇನೋ ಪ್ರಕಟವಾಯಿತೆಂದು ಸರ್ಕಾರದವರಿಗೆ ತಿಳಿದದ್ದರಿಂದ ಆ ಪತ್ರಿಕೆಯ ಆಫೀಸನ್ನು ಜಪ್ತಿಮಾಡಬೇಕೆಂದು ಅಪ್ಪಣೆ ಕೊಟ್ಟರು. ಡಿಸ್ಟ್ರಿಕ್ಟ್ ಸೂಪರಿಂಟೆಂಡೆಂಟರು ಆಯುಧಪಾಣಿಗಳಾದ ಸಾವತ್ತು ಮಂದಿ ಮಿಲಿಟರಿ ಪೊಲೀಸಿನವರನ್ನು ಆ ಆಫೀಸಿನ ಸುತ್ತಲೂ ಕಾವಲಿರಿಸಿ, ತಾನು ಒಳಕ್ಕೆ ಹೋಗಿ ಜಪ್ತಿಮಾಡಿದ್ದಲ್ಲದೆ ಆ ಪತ್ರಿಕೆಯ ಎಡಿಟರಾದ ಜಯಚಂದ್ರಶಂಕರನನ್ನೂ, ಅಚ್ಚುಹಾಕುವ ಪ್ರಾಣಶಂಭು ಮುಜುಂದಾರನನ್ನೂ ದಸ್ತಗಿರಿಮಾಡಿದರು. ಈಚೆಗೆ ಅವರಿಬ್ಬರನ್ನೂ ಜಾಮೀನಿನ ಮೇಲೆ ಬಿಟ್ಟಿರುವಂತೆ ತಿಳಿಯುವುದು.

❦❦❦

೨ಂದಾಣೆಯ ಹೊಸ ನಾಣ್ಯಗಳನ್ನು ಗವರ್ನಮೆಂಟಿನವರು ಎರಡು ತಿಂಗಳ ವರೆಗ ಅದಮಾಯಿಷಿಗಾಗಿ ಚಲಾವಣೆಗೆ ತಂದಿದ್ದರೆಂತಲೂ, ಈ ತಿಂಗಳ ಪ್ರಾರಂಭದಿಂದ ಅದನ್ನು ರದ್ದು ಮಾಡಿರುತ್ತಾರೆಂತಲೂ ಕಳೆದ ವಾರ ಮದರಾಸ್ ಪಟ್ಟಣದಲ್ಲಿ ಬಜಾರಿ ವರ್ತಮಾನ ಹುಟ್ಟಿತು. ಅನೇಕಾನೇಕ ವರ್ತಕರ ಚಿಲ್ಲರೆ ಅಂಗಡಿಯವರಂತೆ ಆ ಮಾತನ್ನು ನಂಬಿ, ಆ ನಾಣ್ಯವನ್ನು ತೆಗೆದುಕೊಳ್ಳದೆ ೩—೪ ದಿನ ತುಂಬಾ ಗಲಾಟೆಯಾಯಿತು. ಮದರಾಸ್ ಗವರ್ನಮೆಂಟಿನ ನಾಣ್ಯಗಳ ಇಲಾಖಾ ಸೂಪರಿಂಟೆಂಡೆಂಟರು ಈ ಸುದ್ದಿಯನ್ನು ಕೇಳಿ ಕೂಡಲೇ ಎಲ್ಲಾ ಪತ್ರಿಕೆಗಳ ಮೂಲಕವೂ ಜನರಿಗೆ ವಿವೇಕ ಹೇಳಿ, ಆ ನಾಣ್ಯಗಳನ್ನು ಚಲಾವಣೆಯಿಂದ ತೆಗೆದಿಲ್ಲವೆಂತಲೂ, ಎಲ್ಲರೂ ಉಪಯೋಗಿಸಬೇಕೆಂತಲೂ ತಿಳಿಸಿದ್ದರಿಂದ ಈಗೀಗ ಆ ಗಾಬರಿಯು ಜನರನ್ನು ಬಿಟ್ಟು ಹೋಗುತ್ತಿದೆ.

❦❦❦

ಮದರಾಸ್ ಪಟ್ಟಣದಲ್ಲಿ ದಿವಾಳಿಯಾದ ಪ್ರಸಿದ್ಧ ಅರ್ಬತ್ನಾಟ್ ಕಂಪನಿಯ ಮುಖಂಡರಾಗಿದ್ದ ಸರ್ ಜಾರ್ಜ್ ಅರ್ಬತ್ನಾಟ್ ಯವರ ಮೇಲೆ ಮೂರು ಕ್ರಿಮಿನಲ್ ಮೊಕದ್ದಮೆಗಳು ಆಗಿದ್ದು ಆ ಪೈಕಿ ಮೊದಲನೇ ಮೊಕದ್ದಮೆಯಲ್ಲಿ ಅಪರಾಧ ರುಜುವಾತಾಗಿ ಅವರಿಗೆ ಹದಿನೆಂಟು ತಿಂಗಳ ಕೈದು ಸಜಾ ಆಗಿರುವುದು ನಮ್ಮ ವಾಚಕರಿಗೆ ತಿಳಿದಿದೆಯಷ್ಟೆ ಇನ್ನೆರಡು ಮೊಕದ್ದಮೆಗಳನ್ನು ಈಚೆಗೆ ಹಿಡಿದು ಫಯಿಸಲ್ ಮಾಡಬೇಕೆಂದು ಮದರಾಸ್ ಹೈಕೋರ್ಟಿನಲ್ಲಿ ಚರ್ಚೆಯಾಯಿತು ಅಪರಾಧಿ ಕಡೆಯ ವಕೀಲರು—ಈಗ ಅಪರಾಧಿಗೆ ಆಗಿರುವ ಶಿಕ್ಷೆಯ ಮೇಲೆ ಅವರು ಅಪೀಲ್ ಹೋಗುವುದಿಲ್ಲವೆಂದು ಹೇಳಿ ಒಪ್ಪಿಕೊಂಡರು ಫಿರ್ಯಾದಿ (ಗವರ್ನಮೆಂಟ್) ಕಡೆಯ ವಕೀಲರು—ಈ ಪಕ್ಷಕ್ಕೆ ಈಗ ಅಪರಾಧಿಗೆ ಆಗಿರುವ ಶಿಕ್ಷೆಯೇ ಸಾಕಾಗಿದೆ ಎಂತಲೂ ಉಳಿದ ಮೊಕದ್ದಮೆಗಳನ್ನು ನಡಿಸಬೇಕಾದದ್ದಿಲ್ಲವೆಂತಲೂ ತಿಳಿಸಿದ್ದರಿಂದ ಜಡ್ಜಿಯವರು ಆ ಮೊಕದ್ದಮೆಗಳನ್ನು ವಾಪಸು ತೆಗೆದುಕೊಳ್ಳಬಹುದೆಂದು ತೀರ್ಮಾನ ಮಾಡಿದರು ಸರ್ ಜಾರ್ಜ್ ಅರ್ಬತ್ನಾಟ್ಯವರು ಮೋಸಮಾಡಿದರೆಂಬುವುದು ಸಿದ್ಧಾಂತವೇನೋ ಆಗಿ ಅದಕ್ಕೆ ಶಿಕ್ಷೆಯೂ ಆಯಿತು ಆದರೆ ಅವರಿಗೆ ಸರ್ ಎಂಬ ಘನತರವಾದ ಬಿರುದು ಬಂದಿರುವುದನ್ನು ನೋಡಿದರೇನೇ ಅವರು ಎಷ್ಟು ಗೌರವಸ್ಥರಾಗಿದ್ದರೆಂಬುವುದು ಗೊತ್ತಾಗುತ್ತದೆ. ಇಂಥವರಿಗೆ ಶಿಕ್ಷೆಯು ಎಷ್ಟು ಸ್ವಲ್ಪಮಾತ್ರವಾಗಿದ್ದರೂ ಅಸಹ್ಯವಾಗಿರುವುದು ಅನೇಕ ಸಂಸಾರಗಳಿಗೆ ಪರೋಪಕಾರವಾದ ಸಂಘಗಳೂ ಇವರ ದೆಸೆಯಿಂದ ಕೆಟ್ಟುಹೋದವೆಂದು ಹೇಳಬೇಕಾದದ್ದಿಲ್ಲ. ಆದರೂ ಅವರು ಸಂಪಾದಿಸಿಕೊಂಡಿದ್ದ ಗೌರವಕ್ಕೂ ಹೆಸರಿಗೂ ಹೋಲಿಸಿದರೆ ಈಗ ಅವರಿಗಾಗಿರುವ ಶಿಕ್ಷೆಯೇ ಸಾಕೆನ್ನುವುದರಲ್ಲಿ ಸಂಶಯವಿರಲಾರದು.

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ನಿಗಾ ಕೊಡಲಾರೆವು

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿಟರ್

ಕರೆಸ್ಪಾಂಡೆನ್ಸ್.

ಗ್ರಾಮನೌಕರರ ಹಕ್ಕುದಾರಿ ಮಸೂದೆ ಕಾನೂನು.

ಅಯ್ಯಾ,

ಇದೇ ಇಸವಿ ಆಗಸ್ಟ್ ೧ ನೇ ತಾ. ಮೈಸೂರು ಗೆಜೆಟ್ಟಿನಲ್ಲಿ ಛಾಪಾಗಿರತಕ್ಕ "ಗ್ರಾಮ ಉದ್ಯೋಗಿಗಳ ಬಿಲ್ಲು" ಎಂಬುದರ ಮಸೂದೆಯು ಎಲ್ಲರ ಸಮ್ಮತಿಯನ್ನೂ ಪಡೆದು, ನಾಳಿನ ನವಂಬರು ತಾ ೨೮ ನೆ ಸುಮಾರಿನಲ್ಲಿ ಮಂಜೂರಾಗುವ ಸಂದರ್ಭ ಪ್ರಾಪ್ತವಾಗಿದೆ ಈ ಬಿಲ್ಲಿನ ೫ ನೆ ಸೆಕ್ಷನಿಂದ ಡೆಪ್ಯುಟಿ ಕಮಿಷನರ್ ಸಾಹೇಬರವರು ಈ ವಂಶಪಾರಂಪರ್ಯವಾದ ನವಕರಿಯಿಂದ ತಪ್ಪಿಸಲಿಕ್ಕೂ, ೬ ನೇ ಸೆಕ್ಷನಿಂದ ವಂಶದವರಿಗೆ ತಪ್ಪಿಸಿ ಇತರರಿಗೆ ಸೇರಿಸಲಿಕ್ಕೂ ಈ ಮುಂತಾದ ಅನೇಕ ಬದಲಾವಣೆಗಳಿಂದ ವಂಶಪಾರಂಪರ್ಯವಾಗಿ ಬರುವ ಗ್ರಾಮನವುಕರರ ಹಕ್ಕನ್ನು ತಳಕೆಳಗುಮಾಡಲು ಅವಕಾಶ ಉಂಟಾಗಿದೆ ಇದು ತಾ. ೯-೧-೧೮೭೬ ನೆ ಇಸವಿಯ ಚೀಫ್ ಕಮಿಷನರ್ ಸಾಹೇಬರವರ ಸರ್ಕ್ಯುಲರ್ ಹುಕುಂಗಳಿಗೂ ಮತ್ತು ತಾ ೯-೫-೧೮೮೮ ನೇ ಮರ್ಹೂಂ ದಿವಾನ್ ಸಾಹೇಬರವರ ಪ್ರೊಸೀಡಿಂಗ್ಸುಗಳಿಗೂ ಭಿನ್ನೈಸಿದಹಾಗೆ ಕಾಣುತ್ತದೆ ಇಂಥಾ ಬಿಲ್ಲನ್ನು ಮಂಜೂರು ಮಾಡುವದರಿಂದ ಬಹುಕಾಲದಿಂದಲೂ ಅನುಸರಿಸುತ್ತಿದ್ದ ನಿಯಮವನ್ನು ಎಷ್ಟು ಮಾತ್ರವೂ ಬಿಟ್ಟುಹೋಗುವದಿಲ್ಲವೆಂದು ದಿವಾನ್ ಸಾಹೇಬರವರು ಅಪ್ಪಣೆಕೊಡಿಸಿರುವದೂ, ನಿಯುಕ್ತ ಕಮಿಟಿಗೆ ಕಳುಹಿಸಿರುವದೂ ಸಹ ನೋಡಿದರೆ ಇಂಥಾ ದೊಡ್ಡ ವಂಶಪಾರಂಪರ್ಯವಾದ ಹಕ್ಕುದಾರರಿಗೆ ಬಾಧಕಬಾರದಂತೆ ಕಾಪಾಡುವ ಬಗ್ಗೆ ಗಿಯೇ ಆಗಿರಬಹುದಲ್ಲವೇ ?

ಈ ಬಿಲ್ಲನ್ನು ಎಲ್ಲಾ ಪ್ರಜೆಗಳ ತಿಳುವಳಿಕೆಗಾಗಿ ಗೆಜೆಟ್ಟಿನಲ್ಲಿ ಛಾಪಿಸಿ ಪ್ರಜೆಗಳ ಸಮ್ಮತಿಯನ್ನು ಪಡೆದನಂತರ ಮಂಜೂರುಮಾಡುವದಕ್ಕಾಗಿ ಕೇವಲ ಸ್ವಲ್ಪಕಾಲವನ್ನೇ ಅವಕಾಶವಾಗಿ ಏರ್ಪಡಿಸಿರುವಥಂತೂ ಮತ್ತೂ ಆಶ್ಚರ್ಯಕರವಾಗಿದೆ ಅಲ್ಲದೆ ಗ್ರಾಮಾಧಿಕಾರಿಗಳಾದ ಪಟೇಲ್ ಶಾನುಭೋಗರುಗಳನ್ನೂ ಗ್ರಾಮನವುಕರರಾದ ತೋಟಿ, ತಳವಾರುಗಳನ್ನೂ ಸಹ ಒಂದೇ ತರಗತಿಯವರಾಗಿ ಗಣಿಸಿರುವದು ಹೆಚ್ಚಾದ ಆಶ್ಚರ್ಯವಾಗಿದೆ ಯಾಕೆಂದರೆ ನಮ್ಮ ದೇಶದ ೭೦ ತಾಲ್ಲೂಕುಗಳಿಗೂ ತಾಲ್ಲೂಕು ಒಂದರ ೩೦೦ ಗ್ರಾಮಗಳಂತೆ ಸುಮಾರು ೨೦ ಸಾವಿರ ಗ್ರಾಮಗಳಾಗಬಹುದು. ಪ್ರತಿ ಗ್ರಾಮಕ್ಕೂ ಪಟೇಲ, ತಳವಾರು, ಕುಳವಾಡಿ, ನೀರಗಂಟಿ, ಮೊದಲಾದ ಗ್ರಾಮನವುಕರರು ೧ ಲಕ್ಷ ಜನರಾಗುವದಲ್ಲದೆ, ೩—೪ ಸಾವಿರ ಜನ ಶ್ಯಾನುಭೋಗರು ಇರುತ್ತಾರೆ. ಇಷ್ಟು ಜನರಲ್ಲಿ ಈ ಮೈಸೂರು ಗೆಜೆಟ್ಟಿಗೆ ಚಂದಾದಾರರಾಗಿ ಪಡೆಯುತ್ತಾ ಇರುವವರು ಸುಮಾರು ೨೦೦ ೩೦೦ ಜನರು ಮಾತ್ರ ಇರಬಹುದು ಗೆಜೆಟ್ಟಿನಲ್ಲಿ ಛಾಪಿಸಿದ ಈ ಬಿಲ್ಲು ಎಲ್ಲಾ ಗ್ರಾಮ ನವುಕರರಿಗೂ ತಿಳುವಳಿಕೆಗೆ ಬಂದು ಅವರೆಲ್ಲರೂ ಒಟ್ಟು ಸಭೆ ಕೂಡಿ, ಆಲೋಚಿಸಿ ತಮ್ಮ ತಮ್ಮ ತಾತ್ಪರ್ಯಗಳನ್ನು ಗವರ್ನಮೆಂಟಿಗೆ ಮನವಿ ಮಾಡಿಕೊಳ್ಳುವದಕ್ಕೆ ಈ ಸ್ವಲ್ಪ ವ್ಯವಧಾನವು ಎಂದೆಂದಿಗೂ ಸಾಕಾಗಲಾರದು ಈ ವಂಶಪಾರಂಪರ್ಯವಾದ ಗ್ರಾಮ ನವುಕರರ ಹಕ್ಕು ತಪ್ಪಿರಿಯು ಸಾಮಾನ್ಯವಾದದ್ದಲ್ಲ ಇದನ್ನು ಸುಲಭವಾಗಿ ಬದಲಾಯಿಸುವದರಿಂದ ಬಹು ಜನರಿಗೆ ದುಃಖಾಸ್ಪದವಾದೀತು. ಇದಕ್ಕಾಗಿ ನಮ್ಮ ಸರ್ಕಾರದವರು ಈ ಬಿಲ್ಲಿನ ಮಸೂದೆಯನ್ನು ಅನೇಕ ಪ್ರತಿಗಳಾಗಿ ಛಾಪಿಸಿ ಅನೇಕ ತಾಲ್ಲೂಕು, ಅಮಲ್ದಾರ್ರುಗಳ ಮೂಲಕ ಇದನ್ನು ಎಲ್ಲಾ ಗ್ರಾಮ ನವುಕರರಿಗೂ ಅದ ತೀವ್ರವಾಗಿ ಖಾತ್ರಿಯಾಗುವಂತೆ ಮಾಡಿ. ಒಂದು ವರುಷ ವಾಯಿದೆ ಕೊಟ್ಟು, ಪ್ರಚುರವಾದನಂತರ ಬರುವ ಎಲ್ಲಾ ಗ್ರಾಮನವುಕರರ ತಾತ್ಪರ್ಯವನ್ನೂ ತಿಳಿದುಕೊಂಡು, ಅಂದರೆ ಒಂದು ವರುಷದನಂತರ ಈ ಬಿಲ್ಲಿನ ಮಸೂದೆಯನ್ನು ಎಲ್ಲರ ಸಪ್ರಕರ್ಯಕ್ಕಾಗಿ ತಿದ್ದುಪಡಿಮಾಡಿ, ಮಂಜೂರು ಮಾಡುವದು ತುಂಬಾ ಯುಕ್ತವಾಗಿ ಕಾಣಿಸುವದರಿಂದ ಇದನ್ನು ನಮ್ಮ ಮಹಾಸ್ವಾಮಿಯವರಾದ ಶ್ರೀಮನ್ಮಹಾರಾಜರವರೂ, ಖಾಸ್ ದಿವಾನ್ ಸಾಹೇಬರವರೂ, ಮತ್ತು ಕೌನ್ಸಿಲರುಗಳವರೂ ದಯವಿಟ್ಟು ಅವಲೋಕನವರೂ ಸಹ ಅನುಮೋದಿಸಿ ಈ ವಂಶಪಾರಂಪರ್ಯವಾದ ಹಕ್ಕುದಾರರಿಗೆ ಕುಂದಕಬಾರದಂತೆ ಕಾಪಾಡುತ್ತಾರೆಂದು ನಂಬಿ ಪ್ರಾರ್ಥಿಸುವ

ತಮ್ಮ ವಿಧೇಯ

ಲೋಕೋಪಕಾರಿ

ತಾಲ್ಲೂಕು ವರ್ತಮಾನಗಳು

ಚಿತ್ರದುರ್ಗ —ಆಚೆ ವಾರ ಇಲ್ಲಿ ತಕ್ಕಷ್ಟುಗೆ ಒಳ್ಳೆ ಮಳೆಯಾಯಿತು. ಆದರೂ ಕೆರೆಕುಂಟೆಗಳಿಗೆ ವಿಶೇಷ ನೀರು ಬಂದಿಲ್ಲವಾಗಿ ನವಣೆ ಮುಂತಾದ ಫಸಲಿಗೂ ಇನ್ನೂ ಮಳೆ ಬೇಕಾಗಿದೆ ಬಿಸಿಲಿನ ಝಳವು ಬಹಳ ಮಟ್ಟಿಗೆ ಹೆಚ್ಚಿರೋಣದರಿಂದಲೂ ಮಳೆ ಮೋಡಗಳು ಆವುತ್ತಿರುವದರಿಂದಲೂ ಇನ್ನೂ ಮಳೆ ಬರುವ ಸಂಭವ ಉಂಟು ಹವಸ ಧಾನ್ಯಗಳು ಅಕ್ಕಿ ೮—೮॥ ಸೇರು, ರಾಗಿ ೧೯—೨೦ ಸೇರು. ಈ ಪ್ರಕಾರ ಸಿಕ್ಕುತ್ತಿ ದಾವಣಗೆರೆಯ ಪ್ಲೇಗ್ ಪ್ರಾಂತ್ಯದವರು ಆಗಿ ಕೆಲವರು ಸತ್ತು ಹೋದರು ಇನ್ನು ಕೆಲವರಿಗೆ ಕಾಯಿಲೆ ಆಗಿ ಇದೆ ನಮ್ಮ ಮೆ॥ ರ॥ ಸಾಹೇಬರೂ ಸಿವಿಲ್ ಸರ್ಜನರೂ ಆ ಪ್ರಾಂತ್ಯಕ್ಕೆ ಹೋಗಿ ತಕ್ಕ ಏರ್ಪಾಡುಗಳನ್ನು ಮಾಡಿ ಬಂದರೆಂದು ಕೇಳುತ್ತೇವೆ

ದಾವಣಗೆರೆಗೂ ಇಲ್ಲಿಗೂ ಬಹಳ ಸಮೀಪ ಕೋರ್ಟು ಕಚೇರಿ ಕೆಲಸಗಳಿಗೆ ಅಲ್ಲಿನವರು ಇಲ್ಲಿಗೆ ಬರುತ್ತಲೇ ಇರುತ್ತಾರೆ. ಇದರಿಂದ ಈ ಊರಿನಲ್ಲಿ ಪ್ಲೇಗ್ ಎಲ್ಲಿ ತಲೆ ಹಾಕುವದೋ ಎಂದು ಜನಗಳು ಗಾಬರಿಯಾಗಿದಾರೆ ಮ್ಯುನಿಸಿಪಲ್ ವೈಸ್ ಪ್ರೆಸಿಡೆಂಟ್ ... ರು ಶಿವಮೊಗ್ಗೆಗೆ ವರ್ಗವಾಗಿ ಅಲ್ಲಿಂದ ಮೆ॥ ಮಹಮದ್ ರಜಾಯವರು ಇಲ್ಲಿಗೆ ಆಗಿರುವದು ಸರಿಯಷ್ಟೆ. ಇವರು ಬಹಳ ಮುತುವರ್ಜಿಯುಳ್ಳವರೂ ಚಟುವಟಿಕೆಯಾಗಿಯೂ ಬೀದಿಬೀದಿಯಲ್ಲಿ ತಿರುಗುತ್ತಾ ಗಲ್ಲಿಗಳನ್ನು ನೋಡುತ್ತಾ ಕಸರು ಸಾಗಿಸುವ ಏರ್ಪಾಡು ಮಾಡುತ್ತಿದಾರೆ ಇವರು ಹೀಗೆಯೇ ನಡಿಸುತ್ತಿದ್ದರೆ ಪ್ರಜಾನುರಂಜಕರಾಗಿರುವದರಲ್ಲಿ ಸಂದೇಹವಿಲ್ಲ. ಇಲ್ಲಿನ ಸೆಷನ್ ಕೋರ್ಟಿಗೆ ಅಸೆಸರಾಗಿದ್ದ ಮ॥ ರಾ॥ ಮಲ್ಲನವರು ಆ ಕೋರ್ಟಿನ ಜಡ್ಜಿಗಳಾದ ಮೆ॥ ಸ್ಟಾಂಡರ್ಡ್‌ಯವರನ್ನು ಕುರಿತು ವಿಚಾರಣೆಯಲ್ಲಿ ಬೇಸರಪಡದೆ ನ್ಯಾಯವಾಗಿಯೂ ಸಹ್ಯವಾಗಿಯೂ ಅಪರಾಧಿಗಳಿಗೆ ಸಹಾಯಕರಾಗಿ ಒಂದೊಂದಾಗಿ ವಿಂಗಡಿಸಿ ಎಲ್ಲಾ ವಿಷಯಗಳೂ ಚೆನ್ನಾಗಿ ಛೇದಿಸಿ ಸ್ವಲ್ಪವಾದರೂ ಪಕ್ಷಪಾತವಿಲ್ಲದೆ ಫೈಸಲ್ ಮಾಡುವರೇ ಹೊರತು ನಿಜಾರ್ಥವನ್ನು ತಿಳಿಯುವವರೆಗೂ ತೃಪ್ತಿಪಡುವದಿಲ್ಲವೆಂದು ಹೇಳುತ್ತಾರೆ ಊರಿನಲ್ಲಿ ಎಲ್ಲಿ ನೋಡಿದರೂ ಇವರವಿಷಯ ಎಲ್ಲಾ ಜನಗಳೂ ಇದೇ ಅಭಿಪ್ರಾಯ ಉಳ್ಳವರಾಗಿರುವದು ಸಂತೋಷಕರವಾಗಿದೆ.

ತುಂಕೂರು.—ಹೋದ ವಾರ ಮೂರು ದಿನ ಒಳ್ಳೆ ಮಳೆಯಾಗಿ ಈ ಊರು ಕೆರೆಗೆ ಅರ್ಧಭಾಗದಷ್ಟು ನೀರು ಬಂದಿದೆ ಮುಂದೆಯೂ ಭಾರೀ ಮಳೆಗಳಾಗುವ ಸಂಭವವಿದೆ ಬಹಳ ಫಸಲು ಚೆನ್ನಾಗಿದೆ ಪ್ಲೇಗ್ ದೆಸೆಯಿಂದ ಸಂತೆ ಕೂಡುವದು ಕೂಡಾ ಕಡಿಮೆಯಾಗಿ ಹಳ್ಳಿಯ ಜನರ ಸುಳಿವೇ ಇಲ್ಲ ನಮ್ಮ ಟವುನಿನಲ್ಲಿರುವ ಐದು ಸಾವಿರ ಜನಗಳಲ್ಲಿ ಈಗ ೬೦೦ ಮನೆಗಳಷ್ಟು ಕೂಡಾ ನಿವಾಸಿಗಳಿಲ್ಲ ಇಷ್ಟು ಬರೀದಾಗಿರುವ ಪಟ್ಟಣದಲ್ಲಿ ದಿನಕ್ಕೆ ನಾಲ್ಕೈದು ಮರಣಗಳಾಗುತ್ತಿವೆ. ಇದುವರಿಗೆ ೯೦ ಕ್ಕೆ ಮೇಲ್ಪಟ್ಟು ಮರಣಗಳಾಗಿವೆ. ಜನರು ಉದಾಸೀನತೆಯಿಂದ ಇಲ್ಲಿ ವಾಸ ಮಾಡುತ್ತಿದ್ದರೆ, ದಿನಕ್ಕೆ ಹತ್ತು ಮರಣಕ್ಕೆ ಕಡಮೆಯಾಗಿ ಸಾಯುತ್ತಿರಲಿಲ್ಲ. ಈ ಸಾರಿ ಕೋಟೆಯಲ್ಲಿ ರೋಗವು ವ್ಯಾಪಿಸದಿರುವದಕ್ಕೆ ಜನರ್ಯಾರೂ ಇಲ್ಲದಿರುವದೇ ಕಾರಣವಾಗಿದೆ. ಹೊರಗಡೆ ವಾಸಿಸುವ ಪೆಟ್ಟುಗಳವರ ಪಾಡು ಮೊನ್ನೆ ಭಾರೀ ಮಳೆ ಬಂದಾಗ ನೋಡಿದವರೆಲ್ಲಾ ವ್ಯಸನಪಡುವಂತಿತ್ತು ಕಳ್ಳತನಗಳು ಊರಿನಲ್ಲೂ ಹೊರಗಡೆಯಲ್ಲೂ ಪ್ರಾರಂಭವಾಗುವತಿದೆ. ಇದಕ್ಕಾಗಿ ಅಧಿಕಾರಿಗಳು ನಡುವ ಕ್ರಮವು ಸಾರ್ಥಕವಾಗುತೆಂಬ ನಿರೀಕ್ಷೆಯಿದೆ —ಹೋದವಾರ ಇಲ್ಲಿ ಕ್ರೈಸ್ತರ ಉಪದೇಶಕರಾಗಿರುವ ಮೆ॥ ಸಂಜೀವಯ್ಯನವರು ಡಾಬಸ್ ಸಾಹೇಬರವರ ಬಂಗಲೆಗೆ ಭಾರಿಯಾಗಿ ಪದ್ಮ ಹಾಕಿಕೊಂಡಿದ್ದರು ದುಷ್ಟನ್ಯಾರೋ ರಾತ್ರಿ ಬೆಂಕಿ ಹಾಕಿದ್ದರಿಂದ ಷೆಡ್ಡು ಎಲ್ಲವೂ ಸುಟ್ಟುಹೋಗಿ ಅವರಿಗೆ ತುಂಬಾ ಲುಕ್ಸಾನ್ ಆಯಿತೆಂದು ತಿಳಿಸಲು ವ್ಯಸನಪಡುತ್ತೇನೆ ಕಷ್ಟಕಾಲದಲ್ಲಿ ಅಮಲ್ದಾರ್ ಮೆ॥ ಜೆ ಬಾಲ್‌ಯವರು ಪ್ರಜೆ ಕಷ್ಟನಿವಾರಣೆಗಾಗಿ ಪಡುತ್ತಿರುವ ಶ್ರಮವು ತುಂಬಾ ಸ್ತೋತ್ರಾರ್ಹವಾಗಿದೆ —ಈಗ ಮೂರು ನಾಲ್ಕು ತಿಂಗಳ ಕೆಳಗೆ ಕುಂಪಣಿಯಲ್ಲಿ ಅಪರಾಧ ಮಾಡಿ ಸೆಷನ್ ವಿಚಾರಣೆಗೆ ಗುರಿಯಾಗಿದ್ದ ಪೊಲೀಸಿನವರ ವಶದಿಂದ ತಪ್ಪಿಸಿಕೊಂಡು ಈ ಮೈಸೂರುಸೀಮೆಯ ಸಂಚಾರ ಮಾಡುತ್ತಾ ಇಲ್ಲಿಗೆ ಒಂದು ಮೈಲಿ ದೂರದಲ್ಲಿರುವ ಒಂದು ಹಳ್ಳಿಯ ಸಮೀಪದಲ್ಲಿ ಸಂಚಾರ ಮಾಡುತ್ತಿದ್ದರು ಅವರನ್ನು ಹಳ್ಳಿಯ ವಾಸಸ್ಥ ನಗಸಂಕ್ರೈಯನೆಂಬುವನು ಅವರ ವೇಷ ಭೂಷಣದಿಂದ ಅನುಮಾನಪಟ್ಟು ವಿಚಾರಿಸುವಾಗ ಸಾನಾತರವಾಗಿ ಮಾತಾಡಿದ್ದರಿಂದ ಅವರು ಕಳ್ಳರೆಂದು ಊಹಿಸಿ ಹಿಡಿಯಲು ಪ್ರಯತ್ನಿಸಿ ಅವರು ಫಲಾಯನಮಾಡಿದರು ಸಹಾಯಕ್ಕೆ ತಿಪ್ಪೋ ಗ್ರಾಮದ ಇಬ್ಬರು ಮನುಷ್ಯರು ಒಡ್ಡರನ್ನು ಕರೆದುಕೊಂಡು ಹೋಗಿ ಸಾಯಂಕಾಲ ಪೊದೆಯನ್ನು ಸೇರಿದ್ದ ಅವರನ್ನು ಈಚೆಗೆ ತಂದು ಪೊಲೀಸಿನವರ ಮಾಡಿ ಶಿಕ್ಷೆಗೆ ಗುರಿಪಡಿಸಿದನು ಈಗ ಸರ್ಕಾರದವರು ಈ ನರಸಯ್ಯನೂ ಅವನ ಸಹಾಯಕರು ಇಬ್ಬರೂ ಮಾಡಿರುವ ಮೆಚ್ಚಿ ಅವರಿಗೆ ಬೆಳ್ಳಿಯ ಕೋಡಾ ಕೊಡುವಂತೆ ನೇಮಕ ಮಾಡಿರುತ್ತಾರೆಂದು ವರ್ತಮಾನ ಕೇಳುತ್ತೇನೆ —ನಮ್ಮ ಪ್ರೆಸಿಡೆಂಟರವರ ಮನೆಯ ಸಮೀಪದಲ್ಲಿ "ಈ ಪ್ರಾಂತ್ಯಗಳ ಮಾಡಿದರೆ ಶಿಕ್ಷೆ ಮಾಡಲ್ಪಡುತ್ತೆ" ಎಂಬ ಬೋರ್ಡು ಹಾಕಿರುವರೆ ಅದರಂತೆಯೇ ಟವುನಿನಲ್ಲಿ ಅನೇಕ ಸ್ಥಳದಲ್ಲಿ ಈ ರೀತಿ ಬೋರ್ಡುಗಳನ್ನು ಹಾಕಿಸಿ ಜನರ ಆರೋಗ್ಯಕ್ಕೆ ಅನುಕೂಲಪಡಿಸಿಗಿದೆ ಈ ವಿಷಯದಲ್ಲಿ ಅವರ ತಕ್ಕ ಏರ್ಪಾಡು ಮಾಡಬೇಕೆಂದು ಅಪೇಕ್ಷಿಸುತ್ತೇವೆ

ಪ್ರಕಟನೆಗಳು.

ಪ್ರಸಿದ್ಧಪತ್ರಿಕೆ.

1

ಅಮೃತಮಹಲ್ ಇಲಾಖೆ ಕೆಲವು ಗಂಡುರಾಸುಗಳನ್ನು ನಾಡು ಮುಚಕೂರು ೧೨ ನೇ ತಾರೀಖು, ಬಾಗಾ ಮೈಸೂರು ಮುಕ್ಕಾಂನಲ್ಲಿ ಹರಾಜು ಮಾಡಿಸುವ ಮೈಸೂರು ಸೀಮೆಯ ಗೆಜೆಟ್ಟಿನಲ್ಲಿ ಕಳೆದ ಸೆಪ್ಟ ಮಾಡೆಯಲ್ಲಿ ಪ್ರಕಟಿಸಿ ಮಾಡಿಸಿರುವದು ಸರಿಯಷ್ಟೆ, ಮೇಲ್ಕಂಡ ತಾರೀಖಿನಲ್ಲಿ ಹರಾಜು ಮಾಡಿಸಲು ಅನುಕೂಲವಿಲ್ಲದ ಪ್ರಯುಕ್ತ ಬಾಕಿ ಮಾಹೆ ೧೯ ನೆ ತ ಶನಿವಾರದ ಬಾಗಾಯಿತು ಮೈಸೂರು ಮುಕ್ಕಾಂನಲ್ಲಿ ಕಾಸಲಾಲ್ ಬಳಿ ಮಧ್ಯಾಹ್ನ ೧ ಘಂಟೆ ಬಾಗಾಯಿ ಘಂಟೆ ವರೆವಿಗೆ ಹರಾಜು ಮಾಡಿಸಲ್ಪಡುತ್ತೆ.

ಮುಕ್ಕಾಂ ಮೈಸೂರು, ಎಚ್ ನಂಜುಂಡರಾಜೇ

ತಾ ೯ನೆ ಅಕ್ಟೋಬರು, ೧೯೦೭ ಸೂಪರಿಂಟೆಂಡೆ

ಅಮೃತಮಹಲ್ ಇಲಾ

ಬಹುಮಾನ.

112-1

...ಚಿತ್ರವನ್ನು ಕಳುಹಿಸಿಕೊಟ್ಟವರ್ಲ್ಲಿ 1 ಭಾರಂವುಳ್ಳ ಶ್ರೀ ಶಂಕರರಿಂದ ರಚಿಸಿದ ಕನ್ನಡ ತಾತ್ಪರ್ಯದೊಡನೆ ಕೂಡಿದ "...ರತ್ನಮಾಲಿಕೆ" ಒಂದನ್ನು, ೯ × 10 ರ ಸೈಜಿನ ಕಂ... ಶರಿಂದ ಕೂಡಿದ "ಶ್ರೀಮನ್ಮಹಾರಾಜರವರ ಫೋಟೋ ಆಗಲಿ, ...ಜಿನ ಕಿರೀಟವನ್ನು ಧರಿಸಿಕೊಂಡಿರುವ ಈಗಿನ ಶೃಂಗೇರಿ ...ಗಳ ಫೋಟೋವನ್ನಾಗಲಿ ಉಚಿತವಾಗಿ ಕೊಡಲ್ಪಡುವದು. ...ಸ್ಪಷ್ಟವಾಗಿರಬೇಕು. ಸ್ವಲ್ಪ ಪ್ರತಿಗಳು ಮಾತ್ರ ಇವೆ.

...ಸ—ವೈ. ನಾಗಪ್ಪ, ಷಾಪ್‌ಕೀಪರ್, ಕೋಟೆ, ಮೈಸೂರು

ಕಾರ್ಡು ಸೈಜು ೪| × ೩.

ಫೋಟೋ ತೆಗೆಯುವ

ಫ್ರಾ ಹಾ ಕ್ಯಾ ಮೆ ರಾ.

ಬೆಲೆ ಫಕ್ತ ಮೂರು ರೂಪಾಯಿ.

ಇದರಿಂದ ಬೇಕಾದ ಮನುಷ್ಯನ ಫೋಟೋ ಅವನಿಗೆ ...ದಂತೆ ತೆಗೆಯುವಿಕೆ ಬರುತ್ತದೆ ವೇಗದಿಂದ ಓಡುವ ...ಯು ಮತ್ತು ಹಾರುವ ಪಕ್ಷಿಯು ಫೋಟೋ ಸಹ ತೆಗೆ ...ಬಹುದು. ಇದರಲ್ಲಿ ಕಲಿಯತಕ್ಕದ್ದೇನೂ ಇಲ್ಲ. ಈ ...ಮರಾದ ಮಾಹಿತಿಯನ್ನು ಕೊಳ್ಳುವವರಿಗೆ ನಾವು ಕೂಡ ...ಮೇ ಮಾಡಿಕೊಡುವೆವು. ಎಷ್ಟೋ ಕಡೆಗೆ ಇದಕ್ಕೆ ೧೦ ...ರ ೧೫ ರೂ. ಬೆಲೆ ಹೇಳುತ್ತದೆ. ಆದರೆ ಇದರ ಖರೇ ...ತು ೩ ರೂಪಾಯಿ ಮಾತ್ರ ಇರುವದು. ಟಪ್ಪಾಲ್ ...ರ್ಚ ೯ ಆಣೆ. ...ದು ಸಿಕ್ಕತಕ್ಕ ವಿಳಾಸ —

ಫೋಟೋಲಾಲ ಭಗನಲಾಲ ಮಹಾಜನ, ಠಾಕೂರದ್ವಾರ ...ಡ, ಪೋಸ್ಟ್ ಕಾಲಬಾದೇವಿ, ಮುಂಬಯಿ.

...ರ್ ಬರುತ್ತಿವೆ' ಬೇಗ ನೋಡಿ!

ಪ್ರಪಂಚವೇ ಆಶ್ಚರ್ಯ ಪಡುವದು.

ದೊಡ್ಡ ...ದಲ್ಲಿ ೫ ಕಟಿನಗಳ ಮಾಡು... ಕೆಲವು ಕಂಪನಿಯವರು ನೆ... ಸಾಹಸೋಣದರಿಂದ ಪ್ರಕ... ಸತ್ಯ... ಪ್ರಕಟನೆಯನ್ನು ... ಕಸ್ಟ. ... ಸ್ವ ಕಂಪನಿ... ಸಕ್ಕಾರ ಬಿಷಯ ಕಟ್ಟ... ...ಚಿತ್ತು ... ನಮ್ಮ ಕಂಪನಿ ...ಯೋಗ್ಯತೆಯನ್ನು ಒಂದಾವರ್ತಿ ಪರೀಕ್ಷಿಸಿ ನೋಡಿ ಈ ಪ್ರಕ... ...ನ ಕಳಿಸುತ್ತೇವೆ. ...ದಲ್ಲಿ ... ಒಂದಾವರ್ತಿ ನಮಗೆ ... ತರಿಸಿ ನಮ್ಮ ... ಪರೀಕ್ಷಿಸಿದರೆ ... ಕಳುಹಿಸುವ ...ಮಾನಗಳೇನೆಂದರೆ—ಒಂದು ಗಡಿಯಾರ, ಬಿಲವಾದದ್ದು, ೩೦ ... ವರ್ಷ ಮಾಣಿಕ್ಯ. ಪರೀಕ್ಷೆಯಿಂದ ಸರಿ ...ದ್ದು, ಒಂದು ಸೊಗಸಾದ ಸಿಟಿ...ಯಲ್ಲಿ. ಇದು ಪರಿಸದ ಜಾ... ...ಉಳ್ಳದ್ದು. ಒಂದು ಸೊಗಸಾದ ಗಡಿಯಾರದ ಸರಪಳಿ. ಅದ... ...ಉಳ್ಳ ಬಿಲವಾದ ಇಂಗ್ಲಿಷ್ ... ಒಂದು ದೊಡ್ಡ ...ಯು ಒಂದು. ದಿಕ್ಸೂಚಿ ... ಒಂದಾನೊಂದು ... ಹಾಕಿದರೆ ... ತಿಂಗಳು ... ಒಂದಾವರ್ತಿ ... ಅನೇಕ ದಿನಗಳ ತನಕ ... ಪೋರ್ಟೆ ಲೇ... ಒಂದು ... ಬಲವಾದ ದಂತದ ಕೈಪಿ... ಒಂದು ದೊಡ್ಡ ಚರ್ಮ... ...ದ ಕನ್ನಡಿ ... ಒಂದು ಸೆಟ್ ಗುಂಡಿ ... ಒಂದು ಸೊಗಸಾದ ಕನ್ನಡಕ ಒಂದು ... ...ದ ... ಕೆಳೆಫ್ರಕೆಡ ... ಒಂದು ... ದೊಡ್ಡ ... ... ಪೆನ್ಸಲ್ ... ಕಟ್ಟುಗಳು ೬ ಕಪ್ಪು ... ೧೫೦ ... ...ಟ್ಟ ... ೧೦೦ ಫೋಟೋ ... ಕಾರ್ಡುಗಳು ... ಸ್ಟೀಲ್ ...ಳು.

ಇಷ್ಟಕ್ಕೆಲ್ಲಾ ಕ್ರಯ ರೂ. ೭—೮—೦ ಮಾತ್ರವೇ.

ಅರ್ಧ ಹಣ ಅಡ್ವಾನ್ಸ್ ಮನೀಆರ್ಡರ್ ಬಂದಲ್ಲಿ ಉಳಿದ ಅರ್ಧಕ್ಕೆ ವಿ. ಪಿ. ಮಾಡುತ್ತೇವೆ ಒಪ್ಪದಿದ್ದರೆ ಹಣ ...ಸು ಕಳುಹಿಸುವೆವು.

...ವಿಳಾಸಕ್ಕೆ ಬೇಗ ಬರೆಯಿರಿ :—

ಎಂ. ... ಘಟೋಲಾಲ ಮತ್ತು ಕಂಪನಿ.

ಚಿತ್ತೂರು, ಉತ್ತರ ಅರ್ಕಾಡು.

ಒಕ್ಕಲಿಗರ ಎರಡನೇ ಮಹಾಸಭೆ.

108-4

ಒಕ್ಕಲಿಗ ಮಹಾಜನರಿಗೆಲ್ಲಾ ಪ್ರಾರ್ಥನೆ.

ಈ ಸಭೆಯು ಬರುವ ಅಕ್ಟೋಬರ್ ತಿಂಗಳು ೧೭, ೧೮ ಮತ್ತು ೧೯ನೆ ತಾರೀಖುಗಳಲ್ಲಿ ಮೈಸೂರು ಟೌನ್ ಹಾಲಿನಲ್ಲಿ ನಡೆಯುವದು.

ನಮ್ಮ ಶ್ರೀಮನ್ಮಹಾರಾಜರವರು ಮೊದಲನೇ ದಿವಸ ತಾವೇ ಸಭೆಗೆ ಸ್ವತಃ ದಯಮಾಡಿಸಿ, ಸಭೆಯ ಕಾರ್ಯವನ್ನು ಪ್ರಾರಂಭಿಸುವಂತೆ ಅನುಜ್ಞೆಯನ್ನು ದಯಪಾಲಿಸಿರುತ್ತಾರೆ. ಆ ಕಾಲದಲ್ಲಿ ಒಂದು ವಿಜ್ಞಾಪನಾ ಪತ್ರಿಕೆಯು ಸುಮಾರು ೧,೦೦೦ ರೂ ಬೆಲೆಯುಳ್ಳ ಸುಂದರವಾದ ಬಂಗಾರ ಮತ್ತು ಬೆಳ್ಳಿಯಿಂದ ತಯಾರಾದ ಪೆಟ್ಟಿಗೆಯಲ್ಲಿ ಇರಿಸಲ್ಪಟ್ಟು ಶ್ರೀಮನ್ಮಹಾರಾಜರವರ ಸನ್ನಿಧಿಯಲ್ಲಿ ಸಮರ್ಪಿಸಲ್ಪಡುವುದು.

ನಮ್ಮ ಸಂಘದ ಪ್ರೆಸಿಡೆಂಟರು ಮತ್ತು ವೈಸ್ ಪ್ರೆಸಿಡೆಂಟರು ಸಹ ವಾಗ್ದಾನಮಾಡಿರುವ ಸಾವಿರಾರು ರೂಪಾಯಿಗಳನ್ನು ಸಭೆಯಲ್ಲಿ ಸಂಘ ಕ್ಕೋಸ್ಕರ ಒಪ್ಪಿಸುವರು ಒಂದು ಸಾವಿರ ರೂಪಾಯಿಗಳಿಗೆ ಮೇಲ್ಪಟ್ಟ ದ್ರವ್ಯವನ್ನು ಸಂಘಕ್ಕೆ ಕೊಡಲುಳ್ಳವರೆಲ್ಲರೂ ಇದೇ ಮೇರೆಗೆ ಮಾಡಬಹುದು. ಇಂಥಾವರ ಛಾಯಾಚಿತ್ರಗಳು (ಫೋಟೋಗಳು) "ಆಲ್ಬಂ" ಎಂಬ ಚಿತ್ರಪುಸ್ತಕದಲ್ಲಿ ಹಾಕಿಸಲ್ಪಟ್ಟು, ಆ ಪುಸ್ತಕವು ಮಹಾಸಭೆಯ ದಿನಗಳಲ್ಲಿ ತೋರಲ್ಪಡುವುದು. ಇಷ್ಟವುಳ್ಳವರು ಈ ತಿಂಗಳು ಆಖೈರಿನೊಳಗಾಗಿ ಈ ವಿಚಾರವಾಗಿ ಸೆಕ್ರೆಟರಿಯವರಿಗೆ ಬರೆದುಕೊಳ್ಳಬಹುದು.

ಪರಸ್ಥಳದಿಂದ ದಯಮಾಡಿಸುವವರೆಲ್ಲರಿಗೂ ಸಭೆಯು ನಡೆಯುವ ಮೂರು ದಿವಸಗಳೂ ಮಾ॥ ರಾ॥ ಅಕ್ಕ ಅಂಗಡಿ ಮರಿಯಣ್ಣನವರು ಭೋಜನಾದಿ ಸೌಕರ್ಯಗಳನ್ನು ಒದಗಿಸುವರು.

ಮಹಾಸಭೆಗೆ ಶ್ರೀಮನ್ಮಹಾರಾಜರವರು ದಯಮಾಡಿಸುವದರಿಂದ ಟಿಕೇಟುಗಳ ಮೂಲಕ ಜನರನ್ನು ಟೌನ್ ಹಾಲಿಗೆ ಬಿಡಬೇಕೆಂದು ನಿಶ್ಚೈಸಿದೆ. ಆದಕಾರಣ ಸಭೆಯು ಪ್ರಾರಂಭವಾಗುವುದಕ್ಕೆ ಮುಂಚಿತವಾಗಿ ೯ ದಿವಸಗಳಿಂದ ಈ ಟಿಕೇಟುಗಳು ಮೈಸೂರಲ್ಲಿ ದೇವರಾಜಮಾರ್ಕೆಟ್ಟಿನ ಮಹಡಿಯಲ್ಲಿರುವ ಒಕ್ಕಲಿಗರ ಸಂಘದ ಬ್ರಾಂಚ್ ಆಫೀಸಿನಲ್ಲಿ ಒಕ್ಕಲಿಗ ಮಹಾಜನರಿಗೆ ಉಚಿತವಾಗಿ ಕೊಡಲ್ಪಡುವವು. ಸಂಘಕ್ಕೆ ಮೊದಲೇ ಚಂದಾ ಹಾಕಿರುವವರೂ ಮತ್ತು ಮುಂದೆ ಹಾಕತಕ್ಕವರೂ ಸಹ ತಮ್ಮ ತಮ್ಮ ಚಂದಾ ಮೊಬಲಗುಗಳನ್ನು ದಯವಿಟ್ಟು ಈ ಕಾಲದಲ್ಲಿ ಪಾವತಿಮಾಡಿ ರಶೀತಿ ಪಡೆಯಬೇಕೆಂದು ಪ್ರಾರ್ಥಿಸುತ್ತೇನೆ.

ಈ ಪ್ರಕಟನೆಯಲ್ಲಿ ಕಾಣಿಸಿರುವ ವಿಷಯಗಳನ್ನು ತಮ್ಮ ಬಂಧುಮಿತ್ರವರ್ಗದಲ್ಲಿ ಪ್ರಚುರಪಡಿಸಿ ಸಭೆಗೆ ಬರತಕ್ಕವರ ಹೆಸರುಗಳನ್ನು ಕಾಗದ ಮೂಲಕ ಮೈಸೂರು ಒಕ್ಕಲಿಗರ ಸಂಘದ ಬ್ರಾಂಚ್ ಸೆಕ್ರೆಟರಿ ಮಾ॥ ಎಂ. ಪುಟ್ಟನಂಜಪ್ಪನವರಿಗೆ ತಿಳಿಯಪಡಿಸಬೇಕೆಂದು ಅತ್ಯಂತ ವಿನಯಪೂರ್ವಕವಾಗಿ ಪ್ರಾರ್ಥಿಸುವ ತಮ್ಮ ವಿಧೇಯ

ಕೆ. ಎಚ್. ರಾಮಯ್ಯ, ಬಿ. ಎ.,

ಒಕ್ಕಲಿಗರ ಸಂಘದ ಜನರಲ್ ಸೆಕ್ರೆಟರಿ

೫೩, ಅರಳೇಪೇಟೆ, ಬೆಂಗಳೂರು ಸಿಟಿ

ಒಕ್ಕಲಿಗರ ಮಹಾಸಭೆಗೆ

ವಿಜ್ಞಾಪನೆ

113-1

ಮಹಾಶಯರುಗಳಿರಾ

ತಾವು ಇದೇ ತಿಂಗಳು ಮೈಸೂರಿನಲ್ಲಿ ಜರಗುವ ಒಕ್ಕಲಿಗ ಮಹಾಸಭೆಗೆ ದಯಮಾಡಿಸುವಾಗ್ಗೆ ರಾಜಧಾನಿಯಲ್ಲಿ ಪ್ರಸಿದ್ಧವಾಗಿರುವ ಸಿ. ಎಲ್. ಎಸ್. ಪುಸ್ತಕಾಲಯಕ್ಕೆ ದಯಮಾಡಿಸಬೇಕೆಂದು ಕೇಳಿಕೊಳ್ಳುತ್ತೇವೆ ಈ ಪುಸ್ತಕದ ಅಂಗಡಿಯು ಟೌನ್ ಹಾಲಿನ ಎದುರಿನಲ್ಲಿರುತ್ತದೆ. ಇದರಲ್ಲಿ ವಿವಿಧ ಕನ್ನಡ, ಇಂಗ್ಲಿಷ್ ಪುಸ್ತಕಗಳೂ, ಚಿತ್ರಪಟಗಳೂ, ... ಸಾಮಾನುಗಳೂ ಸುಲಭ ಕ್ರಯಕ್ಕೆ ದೊರೆಯುತ್ತವೆ ಇಲ್ಲಿ ಸೂಚಿಸಿರುವ ಕೆಲವು ಪುಸ್ತಕಗಳನ್ನು ನೋಡಿರಿ.

ಮುದ್ರಾಮಂಜೂಷ	೧—೮—೦
ಕಥಾಸಂಗ್ರಹ I—III ಭಾಗಗಳು	೦—೦—೦
ಕಥಾಸಂಗ್ರಹ I.—VI ಭಾಗಗಳು	೯—೦—೦
ಅನುಭವಸಾರ	೦—೧೨—೦
ಬಸವರಾಜ ವಿಜಯಂ	೯—೦—೦
ಚನ್ನಬಸವೇಶವಿಜಯಂ	...—೮—೦
ಆರೇಬಿಯನ್ ನೈಟ್ಸ್	...—೯—೦
ಜಂಬೂದ್ವೀಪ ಪ್ರದಕ್ಷಿಣ	೦—...—೦
ಸ್ವಪ್ನ ಯಾಸ ಸಲಧಿಪಿಕೆ	೦—೧—೦
ಶ್ರೀ ಚಾಮರಾಜೇಂದ್ರ ಒಡೆಯರವರ ಚರಿತ್ರೆ	೧—೮—೦
ಎಡ್ವರ್ಡ್ ಚಕ್ರವರ್ತಿಯವರ ಮತ್ತು ಅಲೆಕ್ಸಾಂಡ್ರ ಚಕ್ರವರ್ತಿನಿಯವರ ಚರಿತ್ರೆ	೦—೬—೦
ಎಡ್ವರ್ಡ್ ಸಾರ್ವಭೌಮರ ಕಿರೀಟಧಾರಣೆ	೦—೭—೬
ಘನತೆಯುಳ್ಳ ಸ್ತ್ರೀಯರ ಚರಿತ್ರೆ	೦—೨—೬
ದಕ್ಷಿಣ ಆಫ್ರಿಕವೂ ಅದರ ನಿವಾಸಿಗಳೂ	೦—೭—೬
ಚೀನಾ ಚಕ್ರಾಧಿಪತ್ಯವೂ ಅದರ ನಿವಾಸಿಗಳೂ	೦—೭—೬
ಬರ್ಮಾ ದೇಶವೂ ಬರ್ಮೀಯರೂ	೦—೭—೬
ಪುರಾತನ ಗ್ರೀಕರ ಕಥೆಗಳು	೦—೭—೦
ಪುರಾತನ ರೋಮನರ ಕಥೆಗಳು	೦—೭—೦
ಪಕ್ಷಿಗಳ ಚಿತ್ರಗಳೂ ಕಥೆಗಳೂ	೦—೯—೦
ತ್ರಿವಿಂವರ್ಗ ವರ್ಣನೆ	೦—೯—೦
ದೇಶಮೆಂಬ ವಿಚಿತ್ರವಾದ ಸಣ್ಣ ಮನೆ	೦—೯—೦
ಚಿಕ್ಕವರಿಗೆ ಹೇಳಿದ ಕಥೆಗಳು	೦—೯—೦
ಪ್ರಾಚೀನಕಾಲದ ವಿಲಕ್ಷಣ ಜೀವರಾಶಿಗಳ ವರ್ಣನೆ	೦—೯—೦
ಹೊಗೆ ಗಾಡಿಗಳನ್ನು ಕಲ್ಪಿಸಿದ ಜಾರ್ಜ್ ಸ್ಟೀವೆನ್ಸನ ಜೀವನ ಚರಿತ್ರೆ	೦—೧—೦
ಮೈಸೂರು ಮಗ್ಗಾಲಯದ ನೋಟಗಳು (ವಿಚಿತ್ರವಾಗಿಯೂ ಉಲ್ಲಾಸಕರವಾಗಿಯೂ ಇರುವ ಪ್ರಸಿದ್ಧವಾದ ಚಿತ್ರಗಳೊಡನೆ ಮಾಡಿಸಿರುತ್ತೇವೆ)	೦—೧—೧
ಶ್ರೀಮನ್ಮಹಾರಾಜರವರ ಫೋಟೋ (ಸುಂದರವಾದ ... ಹಾಕಿ ಪ್ರಿಂಟ್ ಮಾಡಿರುವದು. ಸೈಜು ...×11)	೦—೯—೬

ವಿಳಾಸ:—ಮ್ಯಾನೇಜರ್,

ಸಿ. ಎಲ್. ಎಸ್. ಬುಕ್ ಡಿಪೋ,

ಮೈಸೂರು.

"ಬ್ರಹ್ಮಾನಂದ" ಮಾಸಪತ್ರಿಕೆ.

110-2

ಈ ವೈದಿಕ ಮಾಸಪತ್ರಿಕೆಯು ಮೈಸೂರು ಶಂಕರಾನಂದ ಸಭೆಯವರಿಂದ ಪ್ರಕಟಿಸಲ್ಪಡುತ್ತಿದೆ. ಪ್ರಥಮ ಸಂಪುಟವು ಬೈಂಡಾಗಿ ಸಿದ್ಧವಾಗಿದೆ. ದ್ವಿತೀಯ ಸಂಪುಟವು ನವಂಬರು ತಿಂಗಳಿಂದ ಪ್ರಾರಂಭಿಸಲ್ಪಡುವುದು. ಅದರಲ್ಲಿ ವೇದಾರ್ಥವೂ, ಭಗವದ್ಗೀತಾ, ಬ್ರಹ್ಮಸೂತ್ರ, ಪಕೋಪನಿಷತ್ತುಗಳ ಭಾಷ್ಯಾರ್ಥಗಳೂ, ಶ್ರೀಮಚ್ಛಂಕರಾಚಾರ್ಯರಿಂದ ರಚಿಸಲ್ಪಟ್ಟ ಅದ್ವೈತಗ್ರಂಥಗಳೂ, ಶೃಂಗಗಿರಿ ಗುರುವಂಶಕಾವ್ಯವೂ, ಧರ್ಮಶಾಸ್ತ್ರವಿಷಯಗಳೂ, ಶ್ರುತ್ಯರ್ಥಬೋಧಕಗಳಾದ ಇತಿಹಾಸಗಳೂ, ಅಷ್ಟಪುರಾಣವೂ, ಷಡ್ದರ್ಶನಗಳೂ, ವರ್ಣಾಶ್ರಮಧರ್ಮಾಚಾರಗಳೂ, ಕನ್ನಡ ತಾತ್ಪರ್ಯಸಹಿತ ಪ್ರಕಟಿಸಲ್ಪಡುವುವು. ಪ್ರತಿಗ್ರಂಥಕ್ಕೂ ಪ್ರತ್ಯೇಕ ಪುಟಸಂಖ್ಯೆ ಕೊಡಲ್ಪಟ್ಟಿರುವ ಡೆಮ್ಮಿ ೪೦ ಪುಟಗಳುಳ್ಳ ಸಂಚಿಕೆಯು ಪ್ರತಿ ತಿಂಗಳಲ್ಲಿಯೂ ಕೊಡಲ್ಪಡುವುದು.

ಷರಾ—ಈ ಅಕ್ಟೋಬರ್ ೩೧ ರ ಒಳಗಾಗಿ ಬರತಕ್ಕ ಆರ್ಡರುಗಳಿಗೆ ಮಾತ್ರ ಈಗಿನ ಶೃಂಗಗಿರಿಸ್ವಾಮಿಗಳ ೧೦ × ೧೨ ಸೈಜಿನ ೧ ರೂಪಾಯಿ ಕ್ರಯವುಳ್ಳ ಫೋಟೋ ಉಚಿತವಾಗಿ ಕೊಡಲ್ಪಡುವುದು.

ಚಂದಾ.—ವರುಷ ೧ ಕ್ಕೆ ೨ ರೂಪಾಯಿ. ಅಂಚೆ ಸಾಫ.

ಶ್ರೀಮಚ್ಛಂಕರಾಚಾರ್ಯರ ಚರಿತ್ರೆ, ಹಾ. ಸ. ೧೨ ಆಣೆ. ಶ್ರೀಶಂಕರಾಚಾರ್ಯರ ದೊಡ್ಡ ಸೈಜು ಫೋಟೋ ೧ ಕ್ಕೆ ೭ ಆ ಈಗಿನ ಶೃಂಗಗಿರಿ ಸ್ವಾಮಿಗಳು ಪದದಲ್ಲಿ ಶಿಷ್ಯೋಪದೇಶಾರ್ಥವಾಗಿ ಕುಳಿತಿರುವ ಫೋಟೋ ೧ ಕ್ಕೆ ೧ ಆಣೆ. ಒಬ್ಬರೇ ಯೋಗದಲ್ಲಿರುವುದು ೧ ಕ್ಕೆ ೬ ಪೈ.

ವಿಳಾಸ:—ಬುಟು ನರಸಿಂಹಯ್ಯ,

ದಿವಾನ್ ವೆಂಕಟ ಅರಸಿನವರ ಛಾಯ,

ಚಾಮರಾಜರೋಡ್, ಮೈಸೂರು.

ರಬ್ಬರ್ ಹ್ಯಾಂಡ್ ಪ್ರೆಸ್.

114 1

ಕಲಾಕೌಶಲ್ಯದಿಂದ ಮತ್ತು ಉದ್ಯೋಗದಿಂದ ಊರ್ಜಿತಸ್ಥಿತಿ ಹೊಂದುವ ಈ ಭಾರತ ಭೂಮಿಯೊಳಗೆ ಈ ಪ್ರೆಸ್ ತಯಾರಾಗುತ್ತದೆ ಇದುವರೆಗೆ ಈ ಪ್ರೆಸ್ಸು ಪರದೇಶದಿಂದ ಬರುತ್ತಿರುವಾಗ ಅದಕ್ಕೆ ೧೭ ರಿಂದ ೧೮ ರೂಪಾಯಿಗಳ ವರೆಗೆ ಬೆಲೆ ಬೀಳುತ್ತಿತ್ತು. ಈ ಪ್ರೆಸ್ಸಿನೊಳಗೆ ಕನ್ನಡ, ತಮಿಳು, ತೆಲುಗು, ಉರ್ದು, ಪರ್ಷಿಯನ್, ಅರಬಿಕ್, ಇಂಗ್ಲೀಷ್ ಮತ್ತು ಬೇಕಾದ ಭಾಷೆಯಲ್ಲಿ ಒಂದು ಪ್ರತಿ ... ಮಾಡಿ, ಮಾಡಿಸಿದ ಮೇಲೆ ಬಹು ಸ್ವಲ್ಪ ಕಾಲದೊಳಗಾಗಿಯೇ ಇದರಿಂದ ೧೫೦ ಪ್ರತಿಗಳನ್ನು ತಯಾರು ಮಾಡಬಹುದು ಆದ್ದರಿಂದ ಈ ಪ್ರೆಸ್ಸು ಸಾರ್ವಜನಿಕ ಕಛೇರಿ ಮ್ಯುನಿಸಿಪಾಲಿಟಿ ಪೋಲೀಸ್ ಆಫೀಸರರು, ವಕೀಲರು, ವರ್ತಕರು ಇನಾಮದಾರರೂ ಮತ್ತು ಪರೀಕ್ಷಕರೂ ತಮ್ಮ ಸಂಗ್ರಹದಲ್ಲಿ ಅವಶ್ಯ ಇಡಬೇಕು. ಎಷ್ಟೋ ಕಾರಕೂನರ ಸಹಾಯದಿಂದ ಒಂದು ಕೆಲಸಕ್ಕೆ ಬಹಳ ಕಾಲ ಹಿಡಿಯುವದು. ಆದರೆ ಈ ನಮ್ಮ ಪ್ರೆಸ್ಸಿನಿಂದ ಅಂಥಾ ಕೆಲಸವನ್ನಾದರೂ ಸ್ವಲ್ಪ ಕಾಲದಲ್ಲಿಯೇ ಮಾಡುವದಕ್ಕೆ ಸಾಧ್ಯ ಇದರ ದೆಸೆಯಿಂದ ಈ ಪ್ರೆಸ್ ಜನಗಳ ಪ್ರೀತಿಗೆ ಪಾತ್ರವಾಗಿರುವದು ಈ ಕಾರಣದಿಂದ ಪ್ರತಿ ಒಬ್ಬರೂ ತಮ್ಮ ... ಈ ಪ್ರೆಸ್ಸನ್ನು ಅವಶ್ಯಕವಾಗಿ ಇಡುವದರಲ್ಲಿ ಏನೂ ಸಂದೇಹವಿಲ್ಲ.

ನೋಟ್ ಪೇಪರ್ ಸೈಜು ರೂಪಾಯಿ ೪—೦—೦.

ಹಾಫ್ ಫುಲ್‌ಸ್ಕ್ಯಾಪ್ ಸೈಜು, ೬—೧—೧.

ಪೋಸ್ಟೇಜು ಬೇರೆ ...

ವಿಳಾಸ — ವರ್ಧಮಾನ ಏಜನ್ಸಿ.

ಪೋಸ್ಟ್ ಕಾಲಬಾದೇವಿ,

ಮುಂಬಯಿ.

ವಿಕಟಪ್ರತಾಪ.

ಸಚಿತ್ರವೂ, ವಿಚಿತ್ರವೂ ಆದ ಮಾಸಪತ್ರಿಕೆ.

100 2

...ಕಟನ ನಡೆ —ಅಧಿಕಾರಿಗಳ ಚಮತ್ಕಾರ, ಚಲ್ಲರೆ ನೌಕರರ ಒದ್ದಾಟ, ಬಡ ಮಾಸ್ತರುಗಳ ಗೋಳಾಟ, ದಿವಾಳಿ ಕಂಪನಿಗಳ ನಿಟ್ಟುಸಿರು, ...ಜಗರ ಬೇಟೆ, ಕ್ಯಾಪಿಕೇಟಗಳ ಕಾಟ ಲಂಚಪ್ರಿಯರ ಮಾಟ, ಕಲಹಪ್ರಿಯರ ಗುದ್ದಾಟ, ಛತ್ರಧಾರಿಗಳ ಕೂಗಾಟ, ಸಭಾಧ್ಯಕ್ಷರಿಗಳ ತಿಪ್ಪಾಟ, ಸಿಪಾಯಿಗಳ ಸಗ್ಗಾಟ ಇನ್ನೂ ಕೇಳಿದರೆ—ಬೀಚರ ಲಟ್ಟ ತಂಬಿರ ...ರ, ...ರ ಒದರಾಟ, ನಂಬರ ಪರಾಟ—ಈ ಎಲ್ಲ ಕೂಟಗಳಿಂದ ಕೂಡಿರುವದೇ ನಮ್ಮ ವಿಕಟನ ಆಟ. ಇದೇ ಹೊಸಬಟಪ್ರಾಸ, ಬೊಗಸಿನ ಸಾಸ, ವಿಕಟನವ್ಯಾಸ. ಈ ವಿಕಟಪ್ರತಾಪ ಪತ್ರಿಕೆಯಲ್ಲಿ ನಗದವರನ್ನೂ ನಗಿಸುವ ಬಹು ವಿನೋದವಾದ ಹಾಸ್ಯ ಲೇಖನಗಳೂ, ಚಿತ್ರವಿಚಿತ್ರವಾದ ಒಗಟುಗಳೂ ಲೇಖಗಳೂ, ಮರ್ಮದಿಂದಲೂ ವಿನೋದದಿಂದಲೂ ಕೂಡಿರತಕ್ಕ ಬಹುಭಾವಗರ್ಭಿತ ಚಿತ್ರಗಳೂ ಪ್ರಕಟಿಸಲ್ಪಡುತ್ತವೆ. ಈ ಪತ್ರಿಕೆಯನ್ನು ಮೆಚ್ಚದವರೇ ಇಲ್ಲ.

ಮಾದರಿ ಪತ್ರಿಕೆಯನ್ನು ಅಪೇಕ್ಷಿಸುವವರು ೭ ... ಸ್ಟಾಂಪನ್ನು ರವಾನಿಸಬೇಕು

ವಿಕಟಪ್ರತಾಪದ ಚಂದಾ ವಿವರ.

ಸ್ಥಳದವರಿಗೆ ವರ್ಷವೊಂದಕ್ಕೆ ರೂ ೦—೧೭—೦

ಪರಸ್ಥಳದವರಿಗೆ . . ರೂ ೦—೯—೦

ನಮ್ಮ ವಿಳಾಸ —ಮ್ಯಾನೇಜರ್ ವಿಕಟಪ್ರತಾಪ ಆಫೀಸ್

—೩೪, ಅರಳೇಪೇಟೆ, ಬೆಂಗಳೂರು ಸಿಟಿ.

ಕಾಯಿಲೆ ಅನುಭವಿಸುವಂಥಾ ಹೆಂಗಸರೆಲ್ಲಾ ಪೆರೂನಾವನ್ನು ಸೇವಿಸಿ ಗುಣಹೊಂದಲಿ.

ಮಿಸೆಸ್ ಜಿಯೊ ಸಿ ವರ್ಸ್ಟೆಲ್, ೧೧ನೆ ರಸ್ತೆ, ಕ್ಲಾರ್ಕ್ಸ್‌ಬರ್ಗ್, ... ತಾವು ಬರೆಯುತ್ತಾರೆ "ನನ್ನ ಹೆಸರನ್ನು ಪ್ರಸಿದ್ಧಪಡಿಸಿಕೊಳ್ಳುವದಕ್ಕೆ ನಾನು ಅಪೇಕ್ಷೆ ಪಡುತ್ತೇನೆ... ನನ್ನ ಅನುಭವವನ್ನು ತಿಳಿದುಕೊಂಡರೆ ಸರಿ ... ಈಗ ನನ್ನ ದೇಹಸ್ಥಿತಿ ಎಷ್ಟೋ ಉತ್ತಮವಾಗಿದೆ ... ಔಷಧಗಳನ್ನು ಸೇವಿಸಿದರೂ ನನಗೆ ಪ್ರಯೋಜನವಾಗಲಿಲ್ಲ. ಆದರೆ ಪೆರೂನಾ ಸೇವನೆಯನ್ನು ಪ್ರಾರಂಭಿಸಿದಾಗ ಒಂದು ... ನೋಡಿದ ಗುಣ ಕಂಡುಬಂತು."

MISS NETTIE E BOGARDUS

MRS GEO C WORSTELL

MRS O D ROBINSON

ನೆಗಡಿಯಿಂದ ರೋಗ ಬೆಳೆಯುವದು

ಮಿಸೆಸ್ ಎ ಸಿ ಬಾಲರ್ ... ಎಂ ಬ್ರಾಡ್ವೆ, ಪಿಟ್ಸ್‌ಬರ್ಗ್, ಕಾನ್, ಈ ರೀತಿ ಬರೆಯುವುದು

"ನೆಗಡಿ ಪರಿಹಾರಕ್ಕೆ ಪೆರೂನಾ ರಾಜ ಮದ್ದು. ಹೋದ ವರುಷ ನನಗೆ ಕೆಟ್ಟ ವಾದ ಶೀತ ಹಿಡಿದು, ಬಹಳ ವೇದನೆ ಪಡಿಸಿತು. ನನಗೆ ನಿಶ್ಶಕ್ತಿಯುಂಟಾಗಿ ವಾಂತಿಗೆ ಬರುವಹಾಗಾಗಿ ಹಿಡಿದ ಆಹಾರ ಸೇರದೆ ತುಂಬಾ ಕಷ್ಟಪಟ್ಟೆನು.

"ಅನೇಕ ರೋಗಗಳಿಗೆ ಪೆರೂನಾ ಸೇವಿಸಿದ್ದಂಥಾ ಒಬ್ಬ ಸ್ನೇಹಿತನು ನನಗೆ ಅದನ್ನು ಸೇವಿಸುವಂತೆ ಹೇಳಿದನು. ಕೂಡಲೇ ನಾನು ಆ ರೀತಿ ಮಾಡಿದೆನು. ಆದರೆ ಅದನ್ನು ತೆಗೆದುಕೊಳ್ಳುವದಕ್ಕೆ ಆರಂಭಿಸಿದ ಬಳಿಕ ಆ ಅದು ನನಗೆ ಆಶ್ಚರ್ಯಕರವಾಗಿ ಗುಣ ಕೊಡುತ್ತಾ ಬಂತು.

"ಮೂರು ದಿನಗಳಲ್ಲಿ ನನಗೆ ಗುಣವಾಯಿತು. ಒಂದು ವಾರದೊಳಗಾಗಿ ಆ ಕ್ಷಾಮಾಶಾ ನಾನು ಸ್ವಸ್ಥನಾದೆನು. ಆದರೂ ಕ್ಷೇಮ ಬರಿದಾಗುವ ತನಕ ಔಷಧವನ್ನು ಬಿಡಲಿಲ್ಲ. ಎರಡು ವಾರಗಳಲ್ಲಿ ನನ್ನ ದೇಹಸ್ಥಿತಿಯು ಪುಷ್ಟಿಯಾಯಿತು. ಪೆರೂನಾ ಅದ್ಭುತವಾದ ಔಷಧವೇ ಸರಿ

ಕರುಳುಗಳಲ್ಲಿ ಅಕ್ರಮ

ಮಿಸೆಸ್ ಮ್ಯಾಗ್ಗೀ ಡರ್ಬಿನ್, ೧೩೨೩ ಉತ್ತರ ಬೀದಿ, ಲಿಟಲ್‌ರಾಕ್, ಆರ್ಕ್, ಈ ರೀತಿ ಬರೆಯುವುದು

"ನಾನು ಐದು ವರುಷ ಕಾಲ ಕೆಟ್ಟ ಬಾಧೆಯನ್ನು ಅನುಭವಿಸಿದೆನು. ಕಂಡು ಕೇಳಿದ ಔಷಧವನ್ನೆಲ್ಲಾ ಮಾಡಿದೆನು. ಯಾವುದರಿಂದಲೂ ನನಗೆ ಪರಿಹಾರವಾಗಲಿಲ್ಲ. ಆ ಎಷ್ಟೋ ವೈದ್ಯರುಗಳು ನನಗೆ ಕರುಳುಗಳ ಅಕ್ರಮ ಎಂಬ ರೋಗವೆಂದರು. ಕೆಲವರು ಕರುಳುಗಳ ಕ್ಷಯವೆಂದರು. ಒಬ್ಬ ವೈದ್ಯನು ನನ್ನ ರೋಗವನ್ನು ವಾಸಿಮಾಡುತ್ತೇನೆಂದು ಹೇಳಿದ್ದರ ಮೇಲೆ ನಾನು ಎರಡು ತಿಂಗಳು ಅವನ ಔಷಧ ಸೇವಿಸಿದಾಗ್ಯೂ ನನಗೆ ಸ್ವಲ್ಪವೂ ಗುಣ ತೋರಲಿಲ್ಲ.

"ಪೆರೂನಾ ಉಪಯೋಗಿಸಿ ನೋಡು ಎಂದು ಒಬ್ಬ ಸ್ನೇಹಿತಳು ಹೇಳಿದ್ದರ ಮೇಲೆ ನಾನು ಅದನ್ನು ಸೇವಿಸುತ್ತಾ ಬಂದೆನು. ನಾನು ಎರಡು ಬಾಟ್ಲಿಯಷ್ಟು ಸೇವಿಸಿದ ಮೇಲೆ ಅದರಿಂದ ನನಗೆ ಗುಣ ಕಾಣುತ್ತಾ ಬಂತು. ಅದರ ಮೇಲೆ ಬಿಡದೆ ನಾನು ಅದನ್ನೇ ಸೇವಿಸುತ್ತಾ ಬಂದೆನು. ನನ್ನ ರೋಗವು ನಿವಾರಣೆಯಾಯಿತು. ನನ್ನ ದೇಹವು ಗಟ್ಟಿಯಾಯಿತು.

"ಅಪೇಕ್ಷೆಯುಳ್ಳವರು ನನಗೆ ಬರೆದು ಕೇಳಿದಲ್ಲಿ ಪೆರೂನಾದಿಂದ ನನಗೆ ಆದ ಪ್ರಯೋಜನವನ್ನೆಲ್ಲಾ ನಾನು ವಿವರಿಸಿ ತಿಳಿಸಬಲ್ಲೆನು."

ಪಕ್ಕೆಗಳಲ್ಲಿ ಬಾಧೆಯಾಗುವುದು

ಮಿಸೆಸ್ ಬೀಲಿಯನ್ ಬ್ರಾಕ್‌ಸ್ಟನ್, ಆಪ್ಲೇಟನ್, ಮಾ, ಬರೆಯುವುದು.

"ಪೆರೂನಾ ಸೇವಿಸಿದ್ದರಿಂದ ನನ್ನ ಹೃದಯದ ಮತ್ತು ಪಕ್ಕೆಗಳ ನೋವುಗಳು ವಾಸಿಯಾಗಿವೆ.

ಒಂದು ವರುಷದ ಹಿಂದೆ ನಾನು ಯಾವಾಗ ಸಾಯುವೆನೋ ಎಂಬ ಸ್ಥಿತಿಯಲ್ಲಿದ್ದೆನು. ಒಂದು ವೇಳೆ ರಾತ್ರಿ ಒಂದು ಗಂಟೆ ಸಮಯದಲ್ಲಿ ವೈದ್ಯರು ಬರಬೇಕಾಯಿತು. ಆದರೆ ಈಗ ವೈದ್ಯರನ್ನು ಕರೆಸಬೇಕಾದ ಅಗತ್ಯವಿಲ್ಲವೆಂದು ನಾನು ಸಂತೋಷ ಪಡುತ್ತ ಹೇಳುತ್ತೇನೆ.

"ನೀವು ಹೇಳಿದಂತೆ ನಾನು ಪೆರೂನಾವನ್ನು ಉಪಯೋಗಿಸಿದ್ದರಿಂದ ನಾನು ಆರೋಗ್ಯವಾಗಿದ್ದೇನೆ ಮತ್ತು ನನ್ನ ಮನೆ ಕೆಲಸಗಳನ್ನೆಲ್ಲಾ ಮಾಡಿಕೊಳ್ಳಬಲ್ಲೆನು

"ನನಗೆ ಪೆರೂನಾದಿಂದ ಆದ ಪ್ರಯೋಜನವು ಅತ್ಯಧಿಕ. ... ನನ್ನ ರೋಗವನ್ನು ವಾಸಿಮಾಡಿದ ಇತರ ರೋಗಿಗಳಿಗೆ ಅದು ಗುಣಮಾಡಬಲ್ಲದೆಂದು ನಾನು ತಿಳಿದಿದ್ದೇನೆ

"ಪೆರೂನಾದಿಂದ ನನಗೆ ಆಗಿರುವ ಉಪಕಾರವನ್ನು ಎಷ್ಟೆಂದು ಹೇಳಲಾರೆನು. ಅದರ ಗುಣವನ್ನು ಎಷ್ಟು ಹೊಗಳಿದರೂ ಸ್ವಲ್ಪವೇ ಆಗಿದೆ"

ಅನ್ನಕೋಶದಲ್ಲಿ ಬಾಧೆಯು

ಮಿಸ್ ಅನ್ನಾ ಕಾರ್ಗ್ನರ್ ಸ್ಟೇಟ್ ಆಫ್ ಬರೆಯುವುದು

"ನಿಮ್ಮ ಪೆರೂನಾದಿಂದ ನನಗೆ ಬಹಳ ಗುಣಕೊಟ್ಟಿದೆ. ಈಗ ನಾನು ಆರೋಗ್ಯವಾಗಿದ್ದೇನೆ. ನನ್ನ ಅನ್ನಕೋಶದ ಬಾಧೆಯಿಲ್ಲ. ನಿವಾರಣೆಯಾಗಿದೆ"

ಅಂಗಾಂಗಗಳಲ್ಲೆಲ್ಲಾ ಬಾಧೆಯು

ಮಿಸೆಸ್ ... ೫೧೮ ... ಆವ್, ಸಂಟ್ ಲೂಯಿ, ಮೊ. ಬರೆಯುವದು

"ಪೆರೂನಾ ಸೇವಿಸುವುದಕ್ಕೆ ಮುಂದೆ ನನ್ನ ದೇಹಸ್ಥಿತಿಯು ಬಹಳ ಕೆಟ್ಟುಹೋಗಿತ್ತು. ನನ್ನ ದೇಹದ ಅಂಗಾಂಗಗಳಲ್ಲಾ ಶೀತದಿಂದ ಬಾಧೆಯುಂಟಾಗಿತ್ತು. ದೇವರ ದಯೆಯಿಂದ ನಿಮ್ಮ ಔಷಧವು ನನ್ನ ಆರೋಗ್ಯ ಸ್ಥಿತಿಗೆ ತಂದಿರುತ್ತದೆ. ನನಗೆ ಅನ್ಯಾವ ಔಷಧದ ಮೇಲೂ ಅಭಿಲಾಷೆ ಇಲ್ಲ"

ಮಿಸ್ ನೆಟ್ಟಿ ಇ ಬೊಗಾರ್ಡಸ್, ... ಬರೆಯುವುದು

"ನನಗೆ ಬಾಲ್ಯಕಾಲ ಮೊದಲುಗೊಂಡು ತಲೆನೋವಿನಿಂದ ಬಾಧೆ ಇತ್ತು. ಅದರಿಂದ ನಾನು ಬಹಳ ಅನುಭವಿಸಿದೆನು. ಆದರೆ ಈಗ ಆ ಬಾಧೆಯಿಲ್ಲ. ... ರೋಗ ನಿವಾರಣೆಯಾಗಿ ಈಗ ಆರೋಗ್ಯವಾಗಿದ್ದೇನೆ. ... ಪೆರೂನಾವನ್ನು ... ಸೇವಿಸುವಂತೆ ಶಿಫಾರಸು ಮಾಡುತ್ತೇನೆ. ... ಡಾಕ್ಟರ್ ಹಾರ್ಟ್‌ಮನ್‌ರವರ ಔಷಧವನ್ನು ... ನನ್ನ ಕೃತಜ್ಞತೆಯಾಗಿದೆ"

ಹೊಟ್ಟೆಯೊಳಗಣ ಶೀತವು

ಮಿಸ್ ಜೂಲಿಯಾ ಬಟ್ಲರ್, ಆರ್ ಆರ್ ೩, ಅಟ್ವುಡ್ ಮಿಷ್, ಬರೆಯುವುದು

"... ವರ್ಷ ನನಗೆ ಹೊಟ್ಟೆ ಹೊಕ್ಕಳಗಳ ಶೀತವು ತುಂಬ ಬಾಧಿಸುತ್ತಿತ್ತು. ಅದರಿಂದ ನನಗೆ ನಿದ್ದೆ ತಪ್ಪಿಹೋಗಿತ್ತು. ಆಹಾರ ರುಚಿಸುತ್ತಿರಲಿಲ್ಲ. ... ಊಟವಾದ ಮೇಲೆ ಹೊಟ್ಟೆಯೊಳಗೆ ಬಹಳ ನೋವಾಗುತ್ತಿತ್ತು.

"ನನ್ನ ಸ್ನೇಹಿತರಿಯೊಬ್ಬಳು ನನಗೆ ಪೆರೂನಾ ಸೇವಿಸುವಂತೆ ಹೇಳಿದಳು."

"ನಿಮ್ಮ ಔಷಧವನ್ನು ತೆಗೆದುಕೊಂಡ ಬಳಿಕ ... ಅಲ್ಪಕಾಲದಲ್ಲಿ ರುಚಿ ಉಂಟಾಯಿತು.

"ನನಗೆ ಶಕ್ತಿಯುಂಟಾಯಿತು, ಮಾಂಸಖಂಡಗಳು ಬೆಳೆದವು. ಈಗ ಸಂಪೂರ್ಣ ಶಕ್ತಿ ನನ್ನ ದೇಹದಲ್ಲಿದೆ"

"ನಿಮ್ಮ ಔಷಧವು ನನಗೆ ತುಂಬಾ ಪ್ರಯೋಜನವನ್ನುಂಟುಮಾಡಿದೆ. ಅದಕ್ಕಾಗಿ ನಿಮ್ಮನ್ನು ಬಹಳ ವಂದಿಸುತ್ತೇನೆ"

ಮಿಸೆಸ್ ಓ ಡಿ ರಾಬಿನ್ಸನ್, ೬೩, ಸಂಟ್ ಪ್ಯಾಟ್ರಿಕ್ ಬೀದಿ, ಟೊರಾಂಟೊ, ಕೆನಡಾ, ಬರೆಯುವುದು

"ನಾನು ಪೆರೂನಾವನ್ನು ಸೇವಿಸಿದೆನು. ... ಎರಡು ವರುಷದ ತನಕ ಹೇಳಿದ ಔಷಧಗಳನ್ನು ತೆಗೆದುಕೊಂಡಾಗ್ಯೂ ನನಗೆ ಪ್ರಯೋಜನವಾಗದೆ ಇದ್ದು, ನಿಮ್ಮ ಔಷಧವೇ ಫಲದಾಯಕವಾಯಿತು. ಈಗ ನಾನು ಆರೋಗ್ಯಭಾಗ್ಯವನ್ನು ಪಡೆದಿರುತ್ತೇನೆ. ... ಕೆಲಸಗಳನ್ನು ಮಾಡುವುದು ... ನನಗೆ ಎಷ್ಟು ಪ್ರಯೋಜನವಾಗಿದೆ ಎಂಬುದು ... ನನ್ನ ಆಯುಷ್ಯವು ಹೆಚ್ಚಾಗಿದೆ. ... ನಾನು ಸಂತುಷ್ಟಳಾಗಿರುವೆನು

"ಡಾಕ್ಟರ್ ನಿಮ್ಮ ಕರುಣೆಯಿಂದ ನನಗೆ ಹೆಚ್ಚು ... ನಿಮ್ಮ ಔಷಧದಿಂದ ನನಗೆ ಅಪಾರವಾದ ... ನಾನು ಕೆಲಸಕಾರ್ಯಗಳನ್ನು ಮಾಡಬಲ್ಲೆನು. ... ಡಾಕ್ಟರ್ ಹಾರ್ಟ್‌ಮನ್‌ರವರಿಗೂ ಅವರ ಔಷಧಕ್ಕೂ ಅನೇಕ ವಂದನೆಗಳನ್ನು ಅರ್ಪಿಸುತ್ತೇನೆ"

ವಿಳಾಸ — ಈ ಔಷಧ ಸಿಕ್ಕುವ ಸ್ಥಳಗಳು.—

(೧) ಹಿಚ್‌ಕಾಕ್ ಅಂಡ್ ಸನ್ಸ್, ಬೆಂಗಳೂರು

(೨) ಇಂಗ್ಲಿಷ್ ಡ್ರಗ್ ಕಂಪನಿ, ೩೬ ಮಿಂಟ್ ಬೀದಿ, ಮದರಾಸ್.

38 27

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

21—9—1907 ರಿಂದ 27—9—1907 ರವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	48	38	0	0
ಮೈಸೂರು ,,	90	59	0	0
ಬೆಂಗಳೂರು ಡಿಸ್ಟ್ರಿಕ್ಟು	208	142	0	0
ಮೈಸೂರು ,,	157	111	0	0
ಕೋಲಾರ್ ,,	30	27	0	0
ಕೋಲಾರ್ ಚಿನ್ನದ ಗಣಿಗಳು	20	32	0	0
ತುಮಕೂರು ಡಿಸ್ಟ್ರಿಕ್ಟು	29	22	0	0
ಹಾಸನ ,,	33	19	0	0
ಚಿತ್ರದುರ್ಗ ,,	1	0	0	0
ಕಡೂರ್ ,,	77	53	0	0
ಶಿವಮೊಗ್ಗ ,,	99	70	0	0
ಮೊತ್ತ	788	583	0	0

ಶಾಲಿವಾಹನ ಶಕ ವರುಷಂಗಳು ೧೮೨೯ ನೇ ಪ್ಲವಂಗನಾಮ ಸಂವತ್ಸರದ ಆಶ್ವೀಜ ಶುದ್ಧ ತದಿಗೆ ಗುರುವಾರದಿಂದ ಆಶ್ವೀಜ ಶುದ್ಧ ದಶಮಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೭ ನೇ ಇಸವಿ ಅಕ್ಟೋಬರ್

ತಾ	ವಾರ		ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ತಾರೀಖು ಮಾಸ
10	ಗುರು	*	ತದಿಗೆ	16 36	ವಿ	35 15	24
11	ಶುಕ್ರ		ಚೌತಿ	12 33	ಜ್ಯೇ	33 3	25
12	ಶನಿವಾ	,,	ಪಂಚಮಿ	7 50	ಮೂ	29 36	26
13	ರವಿವಾ	‡	ಷಷ್ಠಿ	2 30	ಉಷಾ	31 16	27
14	ಚಂದ್ರ		ಅಷ್ಟಮಿ	50 38	ಶ್ರೋವಾ	21 06	28
15	ಕುಜ	,,	ನವಮಿ	44 40	ಧನಿ	17 10	29
16	ಬುಧ	†	ದಶಮಿ	38 48	ಶ	13-43	30

* ಚತುರ್ಥೀ ವ್ರತ ... ಉಪಾಂಗಲಲಿತಾವ್ರತಂ ‡ ಶ್ರೀಪಂಚಮಿ ... ಸರಸ್ವತೀ ... ಕಾಳೀಕಾಷ್ಟಮಿ, ದುರ್ಗಾಷ್ಟಮಿ. ... ಮಹಾನವಮಿ, ಆಯುಧ ಗಜಾಶ್ವ ಪೂಜಾ. ... ಪೂಜಾ, ... ಪೂಜಾ † ವಿಜಯ ೧೦, ಶಮೀಪೂಜಾ

ಪೇಟೇ ಧಾರಣೆ.

ದಿನಸು		ಮೈಸೂರು	ಬೆಂಗಳೂರು
ಕಣ್ಣೆ ಅಕ್ಕಿ ಪಲ್ಲ ೧ಕ್ಕೆ	ರೂ	[illegible]	[illegible]
ಸಣ್ಣ ಅಕ್ಕಿ ,,		[illegible]	[illegible]
,, ದ್ವಿಯಂ		[illegible]	[illegible]
ಜೀರಿಗೆಸಾಲ ಅಕ್ಕಿ		[illegible]	[illegible]
ಸಣ್ಣಕ್ಕಿ ಅವಲ		[illegible]	[illegible]
,, ದ್ವಿಯಂ		[illegible]	[illegible]
ತೊಗರಿ ಬೇಳೆ ಪಲ್ಲ ೧ಕ್ಕೆ		[illegible]	[illegible]
,, ದ್ವಿಯಂ		[illegible]	[illegible]
ರಾಗಿ ಪಲ್ಲ ೧ಕ್ಕೆ		[illegible]	[illegible]
ಕಾಳ್ಳು		[illegible]	[illegible]
ಜೋಳ		[illegible]	[illegible]
ಹುರುಳಿ		[illegible]	[illegible]
ಕಡಲೆ		[illegible]	[illegible]
ಹೆಸರು		[illegible]	[illegible]
ಉದ್ದು		[illegible]	[illegible]
ಕಡಲೆ		[illegible]	[illegible]
ಎಳ್ಳು		[illegible]	[illegible]
ಹುರುಳಿ		[illegible]	[illegible]
ಹರಳು ... ಸೇರಿಗೆ		[illegible]	[illegible]
ಸೀಮೆಕ ...		[illegible]	[illegible]
ಮೆಣಸಿನಕಾಯಿ		[illegible]	[illegible]
,, ದ್ವಿಯಂ		[illegible]	[illegible]
ಬೆಲ್ಲ ಡೊಡ್ಡ ಅಚ್ಚು		[illegible]	[illegible]
ಒಳ್ಳೆಣ್ಣೆ ಮಣ ೧ಕ್ಕೆ		[illegible]	[illegible]
ಹರಳೆಣ್ಣೆ ,,		[illegible]	[illegible]
ಕೊತ್ತುಂಬರಿ ಪಲ್ಲ ೧ಕ್ಕೆ		[illegible]	[illegible]
ಉಪ್ಪು		[illegible]	[illegible]
ಹುಣಿಸೆ ಹಣ್ಣು		[illegible]	[illegible]
,, ಹಳೇದು		[illegible]	[illegible]
ತುಪ್ಪ ಮಣ ೧ಕ್ಕೆ		[illegible]	[illegible]
ಸೀಮೆಯೆಣ್ಣೆ ಪೆಟ್ಟಿಗೆ ೧ಕ್ಕೆ		[illegible]	[illegible]
ತೆಂಗಿನಕಾಯಿ ೧೦೦ಕ್ಕೆ		[illegible]	[illegible]
ಒಣ ಕೊಬ್ಬರಿ ಮಣ ೧ಕ್ಕೆ		[illegible]	[illegible]
ಅಂಟ್ವಾಳದ ಕಾಯಿ ಮಣ ೧ಕ್ಕೆ		[illegible]	[illegible]
ಚಿನ್ನ (ಪವನ್) ಕೆಂಪು		[illegible]	[illegible]
,, ,, ಬಿಳುಪು		[illegible]	[illegible]
,, ,, ಗಟ್ಟಿ ತೊಲ ೧ಕ್ಕೆ		[illegible]	[illegible]
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ		[illegible]	[illegible]

Printed and Published by the Rev E Thompson, M A, Proprietor and Manager, Wesley Mission Press, Mysore 10/10/1907

REGISTERED
M. 20

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೧ ಮೈಸೂರು—ಸರ್ ೧೯೦೭ ನೇ ಇಸವಿ ಆಕ್ಟೋಬರ್ ತಾರೀಖು ೧೭ ನೇ ಗುರುವಾರ. ಸಂಚಿಕೆ ೨೦

WILLIAM & CO., BOMBAY.

ವಿಲಿಯಂ ಮತ್ತು ಕಂಪನಿ, ಫೋರ್ಟು, ಮುಂಬಯಿ.

ಗಜಕರ್ಣದ ಮುಲಾಮು.

27 31

ಇದನ್ನು ಹಾಗಿಸುವದರಿಂದ ಎಲ್ಲಾ ತರದ ಗಜಕರ್ಣವೂ ನಾಶವಾಗುತ್ತದೆ. ಮೂರು ಸಾರಿ ಹಾಗಿಸುವದರೊಳಗೆ ಗಜಕರ್ಣವು ಹೋಗುವದು. ಇದನ್ನು ಹಚ್ಚಿದಲ್ಲಿ ಉರಿಯು ಬರುವದಿಲ್ಲ. ಮತ್ತು ಚರ್ಮ ಕಪ್ಪಾಗುವದಿಲ್ಲ. ಒಂದು ಸಾರಿ ಪರೀಕ್ಷಿಸಿ ನೋಡಿರಿ. ಗುಣ ಕಂಡುಬರುವದಿಲ್ಲವಾದರೆ ಹಣ ಹಿಂತಿರುಗಿ ಕೊಡಲ್ಪಡುವದು ಡಬ್ಬಿ ಒಕ್ಕೆ ಕಿಮ್ಮತ್ತು ೦-೩-೦. ವಿ. ಪಿ. ೦-೧೦-೭ ತರಿಸಿಕೊಳ್ಳಿರಿ! ತ್ವರೆಮಾಡಿರಿ!'

ಪಶ್ಚಾಟಕ ... ಸುಂದರಿ(ಕ್ಸೈಲ ...) ... ಕಂಪನಿಯ ... ಔಷಧಗಳನ್ನು ... ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು.

ಅಮೃತಾಂಜನ

ಒಟ್ಟಿ ಒಂದಕ್ಕೆ ಕಿಮ್ಮತು ೮ ಆಣೆ. ವಿ. ಪಿ. ೧೨ ಆಣೆ.

ಅಮೃತಾಂಜನ—ಸುಖಾಂಜನ.
ಅಮೃತಾಂಜನ—ದಿವ್ಯಾಂಜನ
ಅಮೃತಾಂಜನ—ಸಂಜೀವನ.
ಅಮೃತಾಂಜನ—ಪರಮಾಂಜನ.

ವಾತ, ಎದೆನೋವು, ಗಂಟಲುನೋವು, ಸಂಧಿವಾತ ತಲೆನೋವು, ಮೂಲವ್ಯಾಧಿ, ಈ ಎಲ್ಲಾ ತರದ ರೋಗಕ್ಕೆ ಈ ಅಮೃತಾಂಜನವು ದಿವ್ಯ ಔಷಧವಾಗಿರುತ್ತದೆ.

ಅಮೃತಾಂಜನ—ಶೀತಭಂಜನ.
ಅಮೃತಾಂಜನ—ತಕ್ಷಣಾಪಹಾರಿಣಿ
ಅಮೃತಾಂಜನ—ಅಪೂರ್ವದರ್ಶನ.
ಅಮೃತಾಂಜನ—ಭಂಜನವಿಮರ್ದಿನಿ.

ಇದರಿಂದ ಗುಣ ಕಂಡುಬರುವದಿಲ್ಲವಾದರೆ ಹಣ ಹಿಂತಿರಿಗಿ ಕೊಡಲ್ಪಡುವದು. ಜಕಂ ಮತ್ತು ಘಾಯ, ಅರ್ಧಾಂಗವಾಯು, ಈ ರೋಗಕ್ಕೆ ಇದು ಸಂಜೀವನವಾಗಿರುತ್ತದೆ. ತರಿಸಿಕೊಳ್ಳಿರಿ! ಪರೀಕ್ಷಿಸಿರಿ!!

ವಿಲಿಯಂ ಮತ್ತು ಕಂಪನಿ, ೧೬ ಓಕ್ ಲೇನ್, ಫೋರ್ಟು, ಮುಂಬಯಿ.
ತೆಲಿಗ್ರಾಫು ಅಡ್ರೆಸು; "ಅಮೃತಾಂಜನ," ಮುಂಬಯಿ.

ನಿಮಗೆ ನೋವು ಇದೆಯೋ?

68-21

ಹಾಗಾದರೆ "ಫ್ಲೆವೆಂಟ್ ಯೂನಿ ವ್ಯಾಚಿಸ್ ಬಾಂ" ನ್ನು ಏಕೆ ಉಪಯೋಗಿಸಬಾರದು? ಆಶ್ಚರ್ಯಕರವಾದ ಬಾಧಾಪಹಾರಿ ಔಷಧಿಯು! ಈಗಿನ ಕಾಲದಲ್ಲಿ ಕಂಡು ಹಿಡಿದ ದೊಡ್ಡ ನೂತನವು!

ಈ ದಿವ್ಯ ಔಷಧವನ್ನು ಹೊಟ್ಟೆ ಮೊದಲು ತೊಡೆಯುತ್ತಲೆ ಕೆಲವು ನಿಮಿಷಗಳೊಳಗಾಗಿ ನರ ಮತ್ತು ಮಾಂಸ ಸಂಬಂಧವಾದ ದುಸ್ಸಹ ನೋವು, ಕೀಲುಗಳ ಬಾವು, ಹೊಟ್ಟೆಕಟ್ಟಿ ನೋವು, ಬೆನ್ನೆ ಛಳಿಯುವದು, ತಲೆನೋವು, ಕೆಮ್ಮು, ಕೀಲುಗಳು ಶಕ್ತಿರದ ನವು, ಕೊರಳು ಊತ, ಕೈಕಾಲು ಒಡೆತ ಇವುಗಳನ್ನೆಲ್ಲಾ ವಿದ್ಯುಚ್ಛಕ್ತಿಯಂತೆ ಗುಣಪಡಿಸುವದು. ಈ ಔಷಧವು ಆಶ್ಚರ್ಯಕರವಾಗಿ ಗುಣಪಡಿಸುವದರಿಂದ ಎಲ್ಲಾ ರಲ್ಲಿಯೂ ಪ್ರಸರಿಸುತ್ತಾ ಬರುವದು. ಇತರ ಔಷಧಿಗಳು ಗುಣಪಡಿಸದೆ ಹೋದಾಗ ಡಾಕ್ಟರ್ ಫೀಜನ್ನು ಉಳಿಸುವಾಗಿ. ಇದು ನಿಸ್ಸಂದೇಹವಾಗಿಯೂ ಗುಣಪಡಿಸುವದು.

ಕ್ರಯ:—೧ ಬಾಟ್ಲಿಗೆ ೧೭ ಆಣೆ, ಪೋಸ್ಟೇಜ್ ೬ ಆಣೆ ೩ ಬಾಟ್ಲಿಗೆ ಅಂಚೆವೆಚ್ಚ ಸೇರಿ ರೂ. ೨—೩ ಆಣೆ, ಎಲ್ಲಾ ಕೆಮಿಸ್ಟ್ ಷಾಪುಗಳಲ್ಲಿ ದೊರೆಯುವದು.

ನಮ್ಮ ವಿಳಾಸ:—ಎಫ್. ಡಬ್ಲ್ಯು. ಆರ್ಸ್,
ಸಿಮೆಟ್ರಿ ರೋಡ್, ವೇಪೇರಿ, ಮದರಾಸ್.

ಜ್ವರಹರಿ. 71 12



ಇದು ಸಾಧಾರಣ ಜ್ವರ, ಚಳೀಜ್ವರ, ಮೋಹೇಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ... ಬಹಾದೂರ್ ... ಡಿವಿಜನ್ ಆಫೀಸರ್ ಎಸ್. ಟಿ. ವೆಂಕಟಪತಿ ಅಯ್ಯರವರು—ನನ್ನ ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ... ಬಾಟಿಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು. ಇನ್ನು ದಿನಗಳ ... ದರಿಂದ ದಯವಿಟ್ಟು ಇನ್ನೊಂದು ... ಸೀಸೆಯನ್ನು ವಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗುವದು—ಎಂದು ಬರೆದಿರುತ್ತಾರೆ.

ಕ್ರಯ.—ಸೀಸೆ ೧ಕ್ಕೆ ೯ ಆಣೆ, ೧ ರೂ; ೦—೯ ರೂ., ರೂ. ೨—೧೩ ಆ; ೧೧ ರೂ. ... ಸೀಸೆ ತರಿಸಿದರೆ ... ಪೋಸ್ಟೇಜು ಮಾಫಿ ಬಿಡಲಾಗುವದು.

ಕಿ ... ರಿ ... ರ.

... ಔಷಧವು ಅಜೀರ್ಣ, ಶೀತವಾತ, ... ಹೊಟ್ಟೆ ... ಯುವದು, ವಾಂತಿಭೇದಿ, ... ವ್ಯಾಧಿಗಳನ್ನು ... ವಾದ ಪರಿಣಮಿಸಿ, ... ಗುಣಪಡಿಸುವದು. ಇದು ಸೆಂಗರು. ... ಕೊಟ್ಟರೆ ... ವ್ಯಾಧಿಗಳನ್ನು ... ಗುಣಪಡಿಸುತ್ತದೆ ... ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು.

ಕಡಲೂರ ಅಸಿಸ್ಟೆಂಟ್ ಸರ್ಜನ ... ಕರ್ತವ್ಯವನ್ನು ... ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ಪರಿಣಾಮಗಳಿಂದಲೂ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಷ್ಠರಿಗೆ ಕೊಡುತ್ತೇನೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂತ ಬರೆದಾರೆ.

ಈ ಎರಡು ಔಷಧಗಳೂ ಊರ್ಪುರಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಲ್ಲಿ ವಿಚಾರ:—
ಚೆಲ್ಲಿಯವರ ಗ್ರೇಟ್ ಇಂಡಿಯ ಔಷಧಗಳ ಕಂಪನಿ,
ಸೆಕೆಂಡ್ ಬೀಚ್ ಲೈನ್, ಮದರಾಸ್.

ಮೈಸೂರ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು

26 ...

೧. ಲೋಕಾಮಯಹರ ಕಸ್ತೂರೀ ಮಾತ್ರೆ.—ಈ ಮಾತ್ರೆಗಳನ್ನು ಇವಳಿದ ಭಸ್ಮ, ಚಿನ್ನದರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ.



ಚಳಿಜ್ವರ, ಜ್ವರ, ಹೊಟ್ಟೆಶೂಲ, ಸಂಧಿಗಳ ನೋವು, ಮೈ ಕೈಕಾಲು ಸೆಳೆತ (ಭಾರ), ಮೈ ನಡುಕ, ಆಶಾಪಾತಗಳ ಬಾಧೆ, ಅಜೀರ್ಣ, ಅಗ್ನಿಮಾಂದ್ಯ, ಹಲ್ಲು ನೋವು, ಕೆಮ್ಮುಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ.

ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತೆ. ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಬಾಯಿರೋಗ ದಾರಿಕೊಡದೆ, ನೀರು ಹಸಿವಿಗೆ ಬಲಪಡಿಸಿಯನ್ನು ಸರಿಪಡಿಸಿ, ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಮಹಶೂಲೆ, ಮಕ್ಕಳ ಕೆಮ್ಮು, ಜ್ವರ, ಸಚ್ಚಜ್ವರ, ಕ್ಷಯೆಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ದ್ವೇಗಿನ ಸೊಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.

ಅನುಪಾನಸಹಿತ ಔಷಧದ ಸಂಗಡಲೇ ಇರುತ್ತದೆ.

೨೦ ಮಾತ್ರೆಯುಳ್ಳ ಕಾಪ್ಸುಗೆ ೪ ಆಣೆ; ೫ ಕಾಪ್ಸಿಗೆ ೧ ಕಾಪ್ಸಿ ಕೆಪ್ಪು. ೧ ರಿಂದ ೧೨ ಕಾಪ್ಸಿ ವರೆಗೆ ಪೋಸ್ಟೇಜು ೪ ಆಣೆ.

ವಿಳಾಸ:—ಮೈಸೂರ ವೆಂಕಟಾಚಲ ಪಂಡಿತ,
ಎಸ್. ಎಸ್. ಆರ್. ವೈದ್ಯಶಾಲಾ,
ಲಕ್ಷ್ಮೀವಿಲಾಸ ರೋಡ್, ಮೈಸೂರು

ಮದರಾಸು ಸೀರೆಗಳು.

111 3

ವಿ. ಪಿ. ಖರ್ಚು ೯ ಆಣೆ ... ಯ ಮುಂಗಡ ಕಳಿಸುವವರಿಗೆ ಮಾಫಿ.

ಈ ಸೀರೆಗಳು ಸರ್ವರಿಗೂ ಅವಶ್ಯಕವಾದುವು. ಹೊಸ ನಮೂನೆಯು ಬಹು ಸೊಗಸಾದವು. ನಮ್ಮ ಸ್ವಂತ ಸಿಗವಟ್ಟದಲ್ಲಿ ಅತ್ಯುತ್ತಮವಾದ ನೂಲಿನಿಂದ ನೇಯಲ್ಪಟ್ಟು ಜೆನರುಗೂಂಡ ಸ್ವಚ್ಛಬಿಳುಪಿನ ಆಸ್ಪಾಂ ರೇಷ್ಮೆಯ ಅಂಚುಗಳುಳ್ಳವು. ಸೆರಗುಗಳು ಎಂತು ಕತೆಯಲ್ಲಿಯೂ ಒಂದೊಂದು ಗಜವಷ್ಟು ವಿರುತ್ತವೆ. ಇವು ಬಿಳಿ ಮತ್ತು ಹಳದಿ ರೇಷ್ಮೆಗಳಿಂದ ತಯಾರಿಸಿದೆ. ನೋಟಕ್ಕೆ ಅತಿ ಸುಂದರವಾಗಿಯೂ, ಉಪಯೋಗದಲ್ಲಿಯೂ ಬಣ್ಣದಲ್ಲಿಯೂ ಅತಿ ಗಟ್ಟಿಯಾಗಿಯೂ ಕೆಡದಂತೆ ಇರುವುದು. ಸೀರೆಯು ೯ ಗಜವಷ್ಟೂ ೧೧ ಗಜದ ಗಲವೂ ಇರುತ್ತದೆ. ಒಂದನ್ನು ತರಿಸಿ ಉಪಯೋಗಿಸಿದರೆ ಇದರ ಉತ್ಕೃಷ್ಟತೆಯು ತಿಳಿಯುವುದು. ಇಂತಹ ನೂಲಿನಿಂದಲೂ, ಇಷ್ಟು ಸೊಗಸಾಗಿಯೂ ತಯಾರಿಸಿದುವು ಎಲ್ಲಿಯೂ ಖಂಡಿತ ದೊರೆಯವು. ೨ ಅಂಗುಲ ಅಂಚಿನ ಸೀರೆ ೧ ಕ್ಕೆ ರೂ. ೯—೮—೦. ೩ ಅಂಗುಲ ಅಂಚಿನದಕ್ಕೆ ರೂ. ೧೧—೮—೦. ಬಿಳಿಯ ರೇಷ್ಮೆಯ ಚೌಕಳಿಯುಳ್ಳದ್ದಕ್ಕೆ ರೂ. ೨—೮—೦ ಜಾಸ್ತಿ.

ವಿಳಾಸ:—ರಾವ್ ಎಂಪೋರಿಯಂ,
ಸ್ಪರ್ಟಾಂ ರೋಡ್, ವೇಪೇರಿ, ಮದರಾಸು.

ಎಲ್ಲಾ ವ್ಯಾಧಿಗಳಿಗೂ ಗುಣಕಾರಿಯಾದ ಔಷಧಗಳು ಕಳಿಸುವವು. ರೋಗಿಗಳಿಗೆ ಗುಣವಾಗುವದರಲ್ಲಿ ಸಂದೇಹವಿಲ್ಲ. ನಮ್ಮ ಔಷಧಗಳನ್ನು ಮಾರಲು ಎಲ್ಲಾ ಕಡೆಗಳಲ್ಲಿಯೂ ಏಜಂಟರು ಬೇಕು.

ವಿಳಾಸ:—ಎಸ್. ಆರ್. ರಾವ್,
ಸ್ಪರ್ಟಾಂ ರೋಡ್, ವೇಪೇರಿ, ಮದರಾಸು.

ಇಲ್ಲಿ ನೋಡಿ!

65 10

ತುಮಕೂರು ವಿ ಷರ್ ಇಲಾಖೆಯಲ್ಲಿ ಯಾರೋಪಿಯನ್ ಮೇಲ್ವಿಚಾರಣೆಯಿಂದ ಉತ್ತಮ ತರದ ಹಾಸನದ ಟೋಪಿಗಳು ಅತಿ ಶ್ರೇಷ್ಠವಾದ ಫೆಲ್ಟ್‌ನಿಂದ ತಯಾರಾಗುತ್ತವೆ.

ಕ್ರಯ — ೧೨ ಆಣೆ ಮೊದಲ್ಗೊಂಡು ೧ ರೂ ೧೨ ಆಣೆಯ ವರೆಗೆ

೯ ಡಜನ್ ಟೋಪಿಗಳನ್ನು ತೆಗೆದುಕೊಳ್ಳುವವರಿಗೆ ಶೇಕಡ ೫ ರಂತೆ ಡಿಸ್ಕೌಂಟ್ ಕೊಡಲ್ಪಡುವದು.

ನಮ್ಮ ವಿಳಾಸ — ಮ್ಯಾನೇಜರ್

ಹಾಸನದ ಟೋಪಿ ಕಾರ್ಖಾನೆ, ವಿಂಷರ್ ಇಲಾಖೆ, ತುಮಕೂರು

ಶೀಘ್ರವಾಗಿ ಅಲಕ್ಷ್ಯಮಾಡಿದರೆ ದೊರೆಯುವದಿಲ್ಲ!! ಬಿಡಬೇಡಿ!!!

1014

... ಲೀವರ್ ವಾಚ್.



ಈ ಗಡಿಯಾರದ ಲಕ್ಷಣವನ್ನು ಎಷ್ಟು ಹೊಗಳಿದರೂ ಸಾಲದು. ನಮ್ಮ ಅಮೇರಿಕನ್ ಲೀವರ್ ವಾಚುಗಳು ಕಾಲವನ್ನು ಸರಿಯಾಗಿ ತೋರಿಸುವದರಲ್ಲಿ ಬಹು ಪ್ರಬಲವಾದದ್ದು. ಈ ಗಡಿಯಾರಕ್ಕೆ ಸಮಾನವಾದದ್ದು ಇಲ್ಲವೆಂದು ... ಬಿಡಬಹುದು ... ಇದರ ಹೆಸರು "ಅಮೇರಿಕನ್ ಲೀವರ್ ವಾಚ್" ಅನ್ನು ... ಇವುಗಳು ಬೆಲೆ ...

... ಕಾರ್ಖಾನೆಗಳಿಂದ ತರಿಸಲ್ಪಡುವದು.

ವಿಳಾಸ — ... ಕನ್ನಯ್ಯಶೆಟ್ಟಿ ಅಂಡ್ ಕೋ, ನಂಬರು ...

... ನರಸಿಂಗರಾಜಪೇಟೆ, ಮದರಾಸು

THE PLACE FOR HASSAN CAPS IS

HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿರಿ.

1512

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೆಳ್ಳಾಗಿದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲ ನೆಟ್ಟಗೆ ವಿಲಾಯಿತಿಯಿಂದಲೇ ಬರುವದು (೨) ಟೋಪಿಗಳನ್ನು ಒಪ್ಪಾಗಿ ಹಾಗೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಗೆ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ನೇರ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದು ಚನ್ನಾಗಿಲ್ಲದ್ದು ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ.

ಸಾದಾ, ಕೆಂಪು, ಕಪ್ಪು, ಬಿಳಿಕ ಕಾಪಿ ಟೋಪಿಗಳು ೧ ರೂ ೪ ಆ;

೧ ರೂ ೬ ಆ, ೧ ರೂ ೮ ಆ

ರೇಷ್ಮೆ ಜುಚ್ಚಿಯುಳ್ಳ ಟೋಪಿಗಳು ೧ ರೂ ೪ ಆ, ೨ ರೂ

ಜರದ ಟೋಪಿಗಳು ೧ ರೂ ೧೨ ಆ, ೧ ರೂ ೪ ಆ, ೧ ರೂ ೬ ಆ.

ಉಣ್ಣೆಯ ಟೋಪಿಗಳು ೧ ರೂ ೪ ಆ, ೧ ರೂ ೬ ಆ.

ಕಾಗದಗಳ ಟೋಪಿ, ಸೂರ್ಥಿ ಮೇಜೋಡು, ಅರ್ಧ ಮೇಜೋಡು ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವವರಿಗೆ ಕಳುಹಿಸುವೆವು

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ

CHAMBERLAIN'S PAIN BALM

ಚೇಂಬರ್ಲೆನ್ ಯವರು ಮಾಡಿದ ನೋವುಹರ ಔಷಧವು



4 15

ಮೈನ್ನು ... ಆಗುವ ನೋವು, ಬಂದುಗಳಲ್ಲಿ ... ನೋವು, ತರಚಿದ ... ಚಳುಕು ... ಇವುಗಳನ್ನೆಲ್ಲಾ ಸಂಪೂರ್ಣವಾಗಿ ವಾಸಿಮಾಡುವಂಥಾ ಔಷಧ ... ನಾಯುನೋವೆಂದರೇನು?

... ಯಾವಾಗುವುದು, ಊದಿಕೊಳ್ಳುವುದು ... ಕೀಲುಗಳು ... ಇದೇ ಇದೆಲ್ಲಾ ನಿಮಗೆ ... ಬಂದಿದೆ ಎಂದು ತಿಳಿಯತಕ್ಕದ್ದು

ಈಗ ಚೇಂಬರ್ಲೆನ್ ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ

ಮೊದಲನೇ ಸಾರಿ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹ ಕಾವು ... ವ್ಯಾಪಿಸುತ್ತದೆ ... ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ ... ಇದನ್ನೇ ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವ್ಯಾಧಿಯಿನ ... ಹಾಕಿಬಿಡುವುದು

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ.

ಕೈಯಿಂದ ಮುಟ್ಟಿದ್ದೇನೂ ಅಲ್ಲ

ಇದು ಎಲ್ಲೆಲ್ಲೂ ಬಿಕರಿಯಾಗುವುದು. ಸಣ್ಣ ಸೀಸೆಗೆ ೧ ರೂಪಾಯಿ. ದೊಡ್ಡ ಸೀಸೆಗೆ ೨ ರೂಪಾಯಿ

ಕಾರ್ಡ ಸೈಜು ...

ಫೋಟೋ ತೆಗೆಯುವ

ಫೋಟೋ ಕ್ಯಾಮರಾ.

ಬೆಲೆ ಫಕ್ತ ಮೂರು ರೂಪಾಯಿ

ಇದರಿಂದ ಬೇಕಾದ ಮನುಷ್ಯನ ಫೋಟೋ ಅವನಿಗೆ ತಿಳಿಯದಂತೆ ತೆಗೆಯಲಿಕ್ಕೆ ಬರುತ್ತದೆ ವೇಗದಿಂದ ಓಡುವ ಗಾಡಿಯು ಮತ್ತು ಹಾರುವ ಪಕ್ಷಿಯ ಫೋಟೋ ಸಹ ತೆಗೆಯಬಹುದು ಇದರಲ್ಲಿ ಕಲಿಯತಕ್ಕದ್ದೇನೂ ಇಲ್ಲ ಈ ಕ್ಯಾಮರಾದ ಮಾಹಿತಿಯನ್ನು ಕೇಳುವವರಿಗೆ ನಾವು ಕೂಡಲೇ ಮಾಡಿಕೊಡುವೆವು ಎಷ್ಟೋ ಕಡೆಗೆ ಇದಕ್ಕೆ ೧೦ರಿಂದ ೧೫ ರೂ ಬೆಲೆ ಬೀಳುತ್ತದೆ ಆದರೆ ಇವರ ಖರೇ ಕಿಮ್ಮತ್ತು ೩ ರೂಪಾಯಿ ಮಾತ್ರ ಇರುವದು ಟಪಾಲ್ ಖರ್ಚು ೯ ಆಣೆ ಇದು ಸಿಕ್ಕತಕ್ಕ ವಿಳಾಸ —

ಛೋಟಾಲಾಲ ಛಗನಲಾಲ ಮಹಾಜನ, ಠಾಕೂರದ್ವಾರ ರೋಡ, ಪೋಸ್ಟ್ ಕಾಲಬಾದೇವಿ, ಮುಂಬಯಿ.

ಆರ್ಡರ್ ಬರುತ್ತಿವೆ! ಬೇಗ ನೋಡಿ!

ಪ್ರಸಂಶೆಯ ... ನಡುವದು.

ದೊಡ್ಡ ಮನುಷ್ಯರೇ, ಹಿಂದುಸ್ಥಾನದಲ್ಲಿ ದ ... ಕೆಲವು ... ಗಡಿಯಾರ ... ಒಂದು ... ಕಂಪನಿ ... ಗಡಿಯಾರ, ಎಲವಾದದ್ದು ... ಉಳ್ಳಿದ್ದು ... ಇಂಗ್ಲಿಷ್ ... ಪೆಟ್ಟಿಗೆ ... ಒಂದು ದೊಡ್ಡ ... ಕನ್ನಡಿ ... ಚಾಕು ... ಫೌಂಟನ್ ಪೆನ್ ... ಕಾರ್ಡುಗಳು ...

ಇಷ್ಟಕ್ಕೆಲ್ಲಾ ಕ್ರಯ ರೂ. ೭—೮—೦ ಮಾತ್ರವೇ

ಅರ್ಧ ಹಣ ಅಡ್ವಾನ್ಸ್ ಮನಿಆರ್ಡರ್ ಬಂದಲ್ಲಿ ಉಳಿದ ಅರ್ಧಕ್ಕೆ ವಿ. ಪಿ. ಮಾಡುತ್ತೇವೆ ಒಪ್ಪದಿದ್ದರೆ ಹಣ ವಾಪಸು ಕಳುಹಿಸುವೆವು

ಈ ವಿಳಾಸಕ್ಕೆ ಬೇಗ ಬರೆಯಿರಿ --

ಎಂ. ... ಘಟಾಲಾ ಮತ್ತು ಕಂಪನಿ,

ಚಿತ್ಪೂರು, ಉತ್ತರ ಅರ್ಕಾಟು.

ಮಕ್ಕಳ ಆರೋಗ್ಯವನ್ನು

... ಕಾಪಾಡ ... ಬಿದ್ದ ... ಕೇಳಿದಂತೆ ... ಬಹಳ ... ದಿನ ...

SCOTT'S EMULSION.

31-3

(ಸ್ಕಾಟ್ಸ್ ಇಮಲ್ಷನ್)

... ಔಷಧವನ್ನು ಕೊಡಬೇಕು

... ಕೆಲವು ... ದೇಹಕ್ಕೆ ಪುಷ್ಟಿ ... ಅಹಾರದ ರುಚಿ ...

... ದಿಂದ ಮುಟ್ಟ ತಯಾರಿಸ್ಪ ...

... ಔಷಧವಾರಾಟಗಾರರಲ್ಲಿ ಸಿಕ್ಕುತ್ತದೆ.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್

ಈ ... ಇರುವ ... ವನ್ನೇ ... ಕೊಳ್ಳಿ.

ಅಶಕ್ತಿಯನ್ನು.

917

... ಆರ್ಥರ್ ... ಬಿಂದ ... ತಿಳಿ ... ಕಲ್ಕತ್ತೆ ... ಡಾಕ್ಟರ್ ... ಡಾಕ್ಟರ್ ವಿಲಿಯಮ್ಸ್ ಪಿಂಕ್ ಪಿಲ್ಸ್ ... ಔಷಧದಿಂದ ... ಗುಣವಾಯಿತು ... ನೋವು ... ರೋಗಿಗೆ ... ದಿನ ... ಪಿಲ್ಸ್ ... ಇವುಗಳನ್ನು ... ಆರೋಗ್ಯಸ್ಥಿತಿಗೆ ... ಔಷಧದಿಂದ ... ಔಷಧವಾಗಿರುವುದು.

... ಔಷಧ ವರ್ತಕರಿಂದ ಮಾರಲ್ಪಡುತ್ತದೆ ... ರೂ ೨ ... ರೂ ೧೧—೮—೦. ... ಡಾಕ್ಟರ್ ವಿಲಿಯಮ್ಸ್ ಔಷಧಗಳ ಕಾರ್ಖಾನೆಯಿಂದ ... ಕೊಳ್ಳಬಹುದು. ಪಿ. ಬಿ. ಬಾಕ್ಸ್ ನಂ. ೨೦, ಮುಂಬಯಿ

ವೃತ್ತಾಂತ ಪತ್ರಿಕೆ.

೧೯೩೩ ನೇ ಇಸವಿ ಅಕ್ಟೋಬರ್ ತಾ॥ ೧೨ ನೇ ಗುರುವಾರ

ಪ್ರಜಾಪ್ರತಿನಿಧಿ ಸಭೆಯ ಹೊಸ ಕ್ರಮಗಳು

ಮೈಸೂರು ಪ್ರಜಾಪ್ರತಿನಿಧಿ ಸಭೆಯಲ್ಲಿ ಚರ್ಚೆ ನಡೆಸುವ ಕ್ರಮವನ್ನು ಕ್ರಮಪಡಿಸಬೇಕೆಂದು ಗವರ್ನಮೆಂಟಿನವರು ಈ ವರುಷ ಕೆಲವು ರೂಲುಗಳನ್ನು ಮಾಡಿ ಪ್ರಕಟಿಸಿದರು. ಕೆಲವರು ಈ ರೂಲುಗಳು ತೃಪ್ತಿಕರವಾಗಿಲ್ಲವೆಂದು ಆಕ್ಷೇಪಣೆ ಮಾಡಿದರು. ನಾವಾದರೋ ಈ ಸಭೆಯ ಕಾರ್ಯಗಳನ್ನು ಕ್ರಮಪಡಿಸಿದ್ದು ಬಹಳ ಒಳ್ಳೆಯದಾಯಿತೆಂದು ಅಭಿಪ್ರಾಯಪಟ್ಟಿದ್ದೆವು. ಸಭೆಯಲ್ಲಿ ನಡೆಯುವಂಥಾ ಚರ್ಚೆಗಳಿಂದ ಪ್ರಯೋಜನವಾಗಬೇಕಾದಲ್ಲಿ ಹಾಗೆ ಚರ್ಚಿಸುವ ವಿಷಯಗಳು ಕೂಡಿದ ಮಟ್ಟಿಗೂ ಕಡಮೆಯಾಗಿರಬೇಕೆಂದು ಹೇಳುತ್ತೇವೆ.

ಈ ಸಲ ಮೈಸೂರು ಡಿಸ್ಟ್ರಿಕ್ಟಿನ ಪ್ರತಿನಿಧಿಗಳು [illegible] ಮಂದಿ ಸಭೆ ಸೇರಿ ಮೊದಲನೇ ಮೀಟಿಂಗ್ [illegible]. ಡೆಪ್ಯುಟಿ ಕಮಿಷನರರೂ ಇತರ ಅಧಿಕಾರಿಗಳೂ ಹಾಜರಾಗಿದ್ದರು. ಪ್ರತಿನಿಧಿ ಸಭೆಯಲ್ಲಿ ಚರ್ಚಿಸುವ [illegible] ಮೆಂಬರುಗಳು [illegible] ವಿಷಯಗಳುಂಟೆಂದು ಹೇಳಿ ಒಂದೊಂದಾಗಿ ಚರ್ಚೆ ಮಾಡುವಲ್ಲಿ [illegible] ಸಂಗತಿಗಳು ಮೆಂಬರುಗಳೇ ಅವಶ್ಯವಿಲ್ಲವೆಂದು ವಜಾ ಮಾಡಿದ [illegible] ಸರ್ಕಾರದವರು ತೀರ್ಮಾನ ಮಾಡಿ [illegible] ವಿಷಯವನ್ನು ತೆಗೆದುಬಿಟ್ಟರು. [illegible] ವಿಷಯಗಳನ್ನು ಡೆಪ್ಯುಟಿ ಕಮಿಷನರ್ ಇತ್ಯರ್ಥದ ಬಗ್ಗೆ ಇಲಾಖೆಗಳಿಗೆ ಕಳುಹಿಸಬಹುದು ಒಪ್ಪಿಕೊಂಡರು. ಕಡೆಗೆ ಉಳಿದ [illegible] ವಿಷಯಗಳನ್ನು ಮಾತ್ರ ಪ್ರತಿನಿಧಿ ಸಭೆಯಲ್ಲಿ ಚರ್ಚಿಸತಕ್ಕದ್ದೆಂದು ಗವರ್ನಮೆಂಟಿಗೆ ಕಳುಹಿಸಿದರು. ಈ ಮೊದಲನೇ ಸಭೆಯ ಕಡೆಗೆ ಮಿ. ಎ. ಸಿ. ರಂಗಯ್ಯಂಗಾರ್ಯರು ಹೇಳಿದ ಕೆಲವು ಸಂಗತಿಗಳನ್ನು ವಾಚಕರು ಗ್ರಹಿಸಬೇಕಾಗಿದೆ. ಅದು ಏನೆ—

'ಹೋದ ವರುಷ ಈ ರೂಲುಗಳನ್ನು ಸರ್ಕಾರದವರು ಮಾಡಿದಾಗ್ಗೆ ಪ್ರತಿನಿಧಿಗಳ ಸ್ವಾತಂತ್ರ್ಯವು ಕಡಿಮೆಯಾಯಿತೆಂದು ನಾವು ನಂಬಿದ್ದೆವು. ಈ ರೂಲಿನ ಪ್ರಕಾರ ಅನಾವಶ್ಯಕವಾದ ಮತ್ತು ಸಹಜವಲ್ಲದ ವಿಷಯಗಳೆಂದು ಅಧಿಕಾರಿಗಳಿಗೆ ತೋರಿದವುಗಳನ್ನು ಮೊದಲನೇ ಮೀಟಿಂಗಿನಲ್ಲೇ ವಜಾ ಮಾಡಿಬಿಡುತ್ತಾರೆಂಬ ಹೆದರಿಕೆಯು ವಿಶೇಷವಾಗಿತ್ತು. ಆದರೆ ಈಗ ಎರಡು ದಿನಗಳಲ್ಲಿ ನಡೆದ ಸಭೆಯ ಮೀಟಿಂಗುಗಳನ್ನು ನೋಡಿದಾಗ ನಮ್ಮ ಅನುಮಾನವು ಪೂರ್ತಿಯಾಗಿ ನಿವಾರಣೆಯಾಗಿದೆ. ನಾವು ಸೂಚಿಸಿದ ವಿಷಯಗಳಿಗೆಲ್ಲಾ ಪ್ರೆಸಿಡೆಂಟರು ಮನಸ್ಸು ಕೊಟ್ಟು ಬಹಳ ತಾಳ್ಮೆಯಿಂದ ನಮಗೆ ಸಮಾಧಾನಗಳನ್ನು ಹೇಳಿ, ಪ್ರತಿ ವಿಷಯದಲ್ಲಿ ದಾಖಲೆಗಳನ್ನು ತರಿಸಿ ನೋಡಿ, ತುಂಬಾ [illegible] ಚರ್ಚೆ ಮಾಡಿದಾರೆ. [illegible] ಕಮಿಷನರು ಅಮಲ್ದಾರರೂ ಸ್ಥಳೀಯ [illegible]ಗಳನ್ನೂ ಇತರ ಸಂಗತಿಗಳನ್ನೂ ಬಹು ಸುಲಭವಾಗಿ ನಮಗೆ ತಿಳಿಸಿ, ನಾವು ಸೂಚಿಸಿದ್ದ ವಿಷಯಗಳ ಪ್ರಶ್ನೋತ್ತರವನ್ನು [illegible]ದಿಂದಲೂ ಪ್ರೀತಿಪೂರ್ವಕವಾಗಿಯೂ ನಮ್ಮಿಂದ ತಿಳಿದುಕೊಂಡಿರುವರು. ಸರ್ಕಾರದ ಗವರ್ನಮೆಂಟಿನವರು ಪ್ರತಿನಿಧಿ ಸಭೆಯ ಕಾರ್ಯಗಳನ್ನು ಕ್ರಮಪಡಿಸುವುದಕ್ಕೆ ಮಾಡಿಟ್ಟಿರುವ ಈ ನಿಬಂಧನೆಗಳು ಬಹಳ ಅವಶ್ಯವಾದವುಗಳೆಂತಲೂ ತುಂಬಾ ಪ್ರಯೋಜನಕರವಾದವುಗಳೆಂತಲೂ ನಾವು ಒಪ್ಪಿಕೊಂಡು, ಈ ರೀತಿ ಕ್ರಮಪಡಿಸಿದ್ದಕ್ಕಾಗಿ ಅವರನ್ನು ಮನಃಪೂರ್ವಕವಾಗಿ ವಂದಿಸುತ್ತೇವೆ. ಪ್ರತಿನಿಧಿಗಳನ್ನು ಈ ರೀತಿ ಮೊದಲೇ ಸಭೆ ಸೇರಿಸೋಣವರಲ್ಲಿ ಅವರು [illegible] ಕೊರತೆಗಳನ್ನೂ ಕಷ್ಟಗಳನ್ನೂ ಡಿಸ್ಟ್ರಿಕ್ಟಿನ ಮುಖ್ಯಾಧಿಕಾರಿಯು ಕೂಡ ಧಾರಾಳವಾಗಿ ಅರಿಕೆಮಾಡಿಕೊಳ್ಳುವುದಕ್ಕೆ ವಿಶೇಷ ಪ್ರೋತ್ಸಾಹವಾಗುತ್ತದೆ. ಆದರೆ ಡೆಪ್ಯುಟಿ ಕಮಿಷನರರು ಇಂಥಾ ಮೀಟಿಂಗನ್ನು ಒಂದು ಸಲಕ್ಕೆ ಬದಲಾಗಿ ವರುಷಕ್ಕೆ ಎರಡು ಸಲ ನಡೆಸುವಂತಾದರೆ ಇನ್ನೂ ವಿಶೇಷ ಪ್ರಯೋಜನವಾದೀತೆನ್ನುವುದಕ್ಕೆ ಸಂಶಯವಿರಲಾರದು. ಇದರಿಂದ ಅವರು ಪ್ರಜೆಗಳ ಕಷ್ಟ ಕೊರತೆಗಳನ್ನು ಬೇಗ ತಿಳಿದು ಆಗಿಂದಾಗ್ಗೆ ಪರಿಹರಿಸಿ ಕೊಡಲು ತುಂಬಾ ಸಹಾಯವಾಗುವುದು" ಎಂಬುದೇ.

ಅಭಿವೃದ್ಧಿಗೆ ನಿಜವಾದ ಕಾರಣವು ಯಾವುದು.

ನವರಾತ್ರಿ ಕಾಲದಲ್ಲಿ ಜನರ ಅಭಿವೃದ್ಧಿಯ ವಿಷಯವಾದ ಅನೇಕ ಏರ್ಪಾಡುಗಳು ಮಾಡಲ್ಪಟ್ಟಿವೆ ಎಂದು ವಾಚಕರಿಗೆ ಗೊತ್ತಿರಬಹುದು. ಪ್ರಜಾಪ್ರತಿನಿಧಿಸಭೆ, ವ್ಯವಸಾಯ ಮತ್ತು ಕೈಗಾರಿಕೆ ಪ್ರದರ್ಶನ, ಒಕ್ಕಲಿಗರ ಮಹಾಸಭೆ, ಮುಂತಾದವುಗಳು ಏರ್ಪಾಡಾಗಿರುವುದು ಜನರ ಅಭಿವೃದ್ಧಿಗೆಂದೇ ಎಲ್ಲರೂ ತಿಳಿದಿರುವರು. ಆದರೆ ಎಲ್ಲಾ ತರವಾದ ಅಭಿವೃದ್ಧಿಗೆ ಸತ್ಯವನ್ನೂ ಆತ್ಮಶುದ್ಧತ್ವವನ್ನೂ ತೋರಿಸುವ ಮತವೇ ಮೂಲಾಧಾರವಾಗಿರಬೇಕು. ಯೇಸುಕ್ರಿಸ್ತನು "ನಿನ್ನ ದೇವರಾದ ಕರ್ತನನ್ನು ನಿನ್ನ ಪೂರ್ಣಮನಸ್ಸಿನಿಂದಲೂ ನಿನ್ನ ಪೂರ್ಣ ಪ್ರಾಣದಿಂದಲೂ ನಿನ್ನ ಪೂರ್ಣ ಬುದ್ಧಿಯಿಂದಲೂ ಪ್ರೀತಿಸಬೇಕು." ಎಂಬದಾಗಿ ಬೋಧಿಸಿರುತ್ತಾನೆ. ಆಯಾ ಮತಗಳಿಗೆ ಸೇರಿರುವ ಜನರು ನೇಳ್ಳಂಡ ಕಟ್ಟಳೆಗನುಸಾರವಾಗಿ ನಡೆದುಕೊಳ್ಳುತ್ತಾರೆಯೇ ಎಂಬುದನ್ನು ನಾವು ಯೋಚಿಸಬೇಕಾಗಿದೆ. ಅಸಂಖ್ಯಾತವಾದ ದೇವತೆಗಳ ವಿಷಯ ಇರತಕ್ಕ ಎಲ್ಲಾ ಅಬದ್ಧವಾದ ಕಥೆಗಳನ್ನು ನಾವು ತ್ಯಜಿಸಬೇಕು. ದೇವಸ್ಥಾನಗಳಲ್ಲಿರುವ ಕೆಟ್ಟ ಸ್ತ್ರೀಯರನ್ನು ಹೊರಡಿಸುವುದಲ್ಲದೆ, ಅವುಗಳಲ್ಲಿರುವ ಎಲ್ಲಾ ತರವಾದ ಅಶ್ಲೀಲತೆಯನ್ನುಂಟುಮಾಡುವ ವಿಗ್ರಹಗಳನ್ನು ತೆಗೆದು ಹಾಕಬೇಕಾಗಿರುತ್ತದೆ. ಏಕದೇವರನ್ನೇ ಆರಾಧಿಸುವುದಕ್ಕೂ ಆತನು ಕೊಟ್ಟಿರುವ ಕಟ್ಟಳೆಗಳನ್ನು ಕೈಕೊಳ್ಳುವುದಕ್ಕೂ ಮನಃಪೂರ್ವಕವಾದ ಪ್ರಯತ್ನಗಳನ್ನು ಮಾಡಬೇಕು. ಹೀಗೆ ಮಾಡುವುದರಿಂದ ನಮ್ಮ ದೇಶವು ಜ್ಞಾನ ಸಮಾಧಾನ ಮತ್ತು ಐಶ್ವರ್ಯ ಮುಂತಾದವುಗಳಲ್ಲಿ ಅಭಿವೃದ್ಧಿಸ್ಥಿತಿಯನ್ನು ಪಡೆಯುವುದರಲ್ಲಿ ಸಂಶಯವಿಲ್ಲ. "ನೀತಿಯು ಜನಾಂಗವನ್ನು ಉನ್ನತಸ್ಥಿತಿಗೆ ತರುತ್ತದೆ" ಎಂಬದಾಗಿ ಸತ್ಯವೇದವು ಹೇಳುತ್ತದೆ.

ಒಳದೇಶದ ವೃತ್ತಾಂತಗಳು.

[illegible] ದಸರಾ ಡಿವಿ [illegible] ಅತಿಥಿಗಳಿಗೆಲ್ಲಾ ಇಲ್ಲಿನ [illegible] ಎಂಬ [illegible] ನವರಾತ್ರಿ ಹಬ್ಬ [illegible].

❦❦❦

[illegible] ನ [illegible] ಮುನಿಸಿಪಾಲಿಟಿಯವರು ಒಂದು ಹೊಸ ಮಾರ್ಕೆಟ್ಟು ಕಟ್ಟುವುದಕ್ಕೆ ೧೫,೦೦೦ ರೂಪಾಯಿ ಸಾಲಬೇಕೆಂದು ಗವರ್ನಮೆಂಟಿನವರನ್ನು ಕೇಳಿದ್ದಾರೆ.

❦❦❦

ಕೊಡಗು ಫ್ರಾನ್ಸಿನಲ್ಲಿ [illegible] ಗಂಡು ಎರಡು ಹೆಣ್ಣು ಆನೆಗಳನ್ನು ಮುಂದಿನ ಬುಧವಾರ [illegible] ಸರ್ಕಾರದವರು [illegible] ಮೂಲಕ [illegible] ಮಾಡುತ್ತಾರೆ.

❦❦❦

[illegible] ನೇ ತಾರೀಖು ದತ್ತ [illegible] ಬೆಂಗಳೂರಿಗೆ [illegible] ಅಲ್ಲಿಂದ ಕಳೆದ ಭಾನುವಾರ [illegible] ಅನಂತಶಯನ [illegible] ತೆರಳಿದರೆಂದು ತಿಳಿಯುತ್ತದೆ.

❦❦❦

[illegible] ಬೆಳಿಗ್ಗೆ [illegible] ಗಂಟೆಗೆ ಇಲ್ಲಿನ ಪಬ್ಲಿಕ್ ಹಾಲ್ ಎಂಬ ಕಟ್ಟಡದಲ್ಲಿ [illegible] ವಿದ್ಯಾಭ್ಯಾಸದ ಉಪಕರಣಗಳ ಪ್ರದರ್ಶನವನ್ನು [illegible] ಈ ವಿಷಯ ಸಲ್ಲ ಹೆಚ್ಚು ಸಂಗತಿಗಳನ್ನು ಇನ್ನೊಂದು ಕಡೆ ಪ್ರಕಟಿಸಿರುತ್ತೇವೆ.

❦❦❦

ಈ ದಿನ ಸಾಯಂಕಾಲ [illegible] ಗಂಟೆಗೆ ರಾಜಧಾನಿಯ ಟೌನ್ ಹಾಲ್ ಬಂಗಲೆಯಲ್ಲಿ ಒಕ್ಕಲಿಗರ ಮಂಡಲಿಯ ಎರಡನೇ ಮಹಾಸಭೆಯು ಪ್ರಾರಂಭವಾಗಿ ಮೂರು ದಿನ ನಡೆಯುವುದು. ಶ್ರೀಮನ್ಮಹಾರಾಜರವರು ಈ ದಿನ [illegible] ಪ್ರಾರಂಭಿಸುವರು. ಈ ಸಭೆಗೆ [illegible] ಪ್ರತಿನಿಧಿಗಳ ಭೋಜನಾದಿಗಳನ್ನೆಲ್ಲಾ ಇಲ್ಲಿನ [illegible] ನಡೆಸುವುದಕ್ಕೆ ಏರ್ಪಾಡು ಮಾಡಿದಾರೆ.

❦❦❦

ಕಳೆದ ಸೋಮವಾರ [illegible] ರೈಲಿನಲ್ಲಿ ಬ್ರಿಟಿಷ್ ರೆಸಿಡೆಂಟರು ಪತ್ನಿ ಪರಿವಾರ ಸಹಿತ ನವರಾತ್ರಿ ಹಬ್ಬದ ಉದ್ದೇಶ್ಯ ಬೆಂಗಳೂರಿಂದ ರಾಜಧಾನಿಗೆ ದಯಮಾಡಿದರು. [illegible] ತೋಪುಗಳು ಹಾರಿಸಲ್ಪಟ್ಟವು. ಇತರ ಯುರೋಪಿಯನ್ ಅತಿಥಿಗಳೆಲ್ಲಾ ಮಂಗಳವಾರ ಮಧ್ಯಾಹ್ನ ೩ ಘಂಟೆಗೆ ಸ್ಪೆಷಲ್ ರೈಲಿನಲ್ಲಿ ಬಂದು ಇಳಿದರು. ಇವರೆಲ್ಲಾ ಮುಂದಿನ ಮಂಗಳವಾರದ ತನಕ ಇಲ್ಲೇ ಇದ್ದು ಆ ದಿನ ಭೋಜನ ಮಾಡಿಕೊಂಡು, ಸ್ಪೆಷಲ್ ರೈಲಿನಲ್ಲಿ ವಾಪಸು ಹೋಗುವವರಾಗಿದಾರೆ.

❦❦❦

ಈ ನವರಾತ್ರಿ ಹಬ್ಬಕಾಲದಲ್ಲಿ ಈಚೆಗೆ ಕೆಲವು ವರುಷಗಳಿಂದಲೂ ರಾಜಧಾನಿಯಲ್ಲಿ ಜೂಜಾಟಗಳು ಬಹಿರಂಗವಾಗಿ ನಡೆಯುತ್ತಿರಲಿಲ್ಲ. ಈ ವರುಷ ಜಗನ್ಮೋಹನ ಬಂಗಲೆಯ ಬಳಿಯಲ್ಲೂ ಲ್ಯಾನ್ಸ್‌ಡೌನ್ ಬಜಾರುಗಳಲ್ಲೂ ಕೆಲವರು ಜೂಜಾಟಗಳನ್ನು ಪ್ರಾರಂಭಿಸಿ ನಡೆಸುತ್ತಿದಾರೆ. ಬಹುಜನರು ಅಲ್ಲಿ ಹಣಕಾಸು ಕಳೆದುಕೊಂಡು ವ್ಯಸನಪಡುವರು. ಪೋಲೀಸ್ ಇನ್ಸ್‌ಪೆಕ್ಟರೂ ಮ್ಯುನಿಸಿಪಲ್ ಅಧಿಕಾರಿಗಳೂ ಈ ವಿಷಯಕ್ಕೆ ಕೂಡಲೆ ಗಮನ ಕೊಟ್ಟು ಈ ಜೂಜನ್ನು ನಿಲ್ಲಿಸಬೇಕೆಂದು ಸೂಚಿಸುತ್ತೇವೆ.

❦❦❦

ಮೈಸೂರು ಸಂಸ್ಥಾನದ ಪೆನ್ಷನ್ ಛೀಫ್ ಜಡ್ಜ್ ಮೆ॥ ಎ. ರಾಮಚಂದ್ರ ಐಯ್ಯರವರು ಅನಂತಶಯನ ಸಂಸ್ಥಾನದಲ್ಲಿ ಕಾಲಡಿ ಎಂಬ ಗ್ರಾಮದಲ್ಲಿ ಶ್ರೀಶಂಕರಾಚಾರ್ಯರ ಜನನಸ್ಥಾನವನ್ನು ಆ ಸರ್ಕಾರದ ಮೂಲಕ ಪಡೆದುಕೊಂಡಿದಾರೆ. ಆ ಸ್ಥಳದಲ್ಲಿ ಮೆ॥ ರಾಮಚಂದ್ರ ಐಯ್ಯರವರು ಒಂದು ಸಂಸ್ಕೃತ ಪಾಠಶಾಲೆಯನ್ನಿಟ್ಟು ಶ್ರೀ ಶಂಕರಾಚಾರ್ಯರ ಹೆಸರನ್ನು ಶಾಶ್ವತಪಡಿಸಬೇಕೆಂದು ಪ್ರಯತ್ನಪಡುತ್ತಿದಾರೆ. ಶ್ರೀ ಶೃಂಗೇರಿಸ್ವಾಮಿಗಳು ಈ ಸಲ ಆ ಪ್ರಾಂತ್ಯ ಸಂಚಾರದ ದಯಮಾಡಿದಾಗ್ಗೆ ಆ ಸ್ಥಳಕ್ಕೆ ಹೋಗಿ ಬರುವೆಂದು ಪ್ರಕಟವಾಗಿದೆ.

❦❦❦

ಮೊನ್ನೆ ಮಂಗಳವಾರ ನವರಾತ್ರಿ [illegible] ರಿಂದ ಆ ದಿನ ಸಾಯಂಕಾಲ ಇಂಗ್ಲಿಷ್ ದರ್ಬಾರು ನಡೆಯಿತು. ಬ್ರಿಟಿಷ್ ರೆಸಿಡೆಂಟರೇ ಮೊದಲಾಗಿ ಯುರೋಪ್ಯನ್ ಸರ್ದಾರರೂ ಗೌರವಸ್ಥಾನಿಗಳೂ ಸುಮಾರು [illegible] ಮಂದಿಯವರಿಗೆ ಜಗನ್ಮೋಹನ ಬಂಗಲೆಗೆ ದಯಮಾಡಿದರು. ಶ್ರೀಮನ್ಮಹಾರಾಜರವರು ಸಿಂಹಾಸನದ ಮೇಲೆ ಕುಳಿತು ದರ್ಬಾರ್ ನಡೆಸಿದರು. ಬ್ಯಾಂಡ್ ವಾದ್ಯ, ಕುಸ್ತಿಗಳು, ಸೈನಿಕರ ಕವಾತು, ಬಾಣ ಬಿರುಸುಗಳು ಮೊದಲಾದವು ಬಹು ಸಂಭ್ರಮವಾಗಿ ನಡೆದವು. ರಾಜಧಾನಿಯಲ್ಲಿ ಪ್ಲೇಗ್ ಉಪದ್ರವಿರುವುದರ ದೆಸೆಯಿಂದ ಈ ವರುಷ ಸರ್ದಾರರುಗಳು ಎಂದಿನಂತೆ ವಿಶೇಷವಾಗಿ ಬಂದಿಲ್ಲ.

❦❦❦

ಮಧುಗಿರಿ ತಾಲ್ಲೂಕು ಕೊಡಿಗೇನಹಳ್ಳಿ ಸಮ್ಮತು ಕಲಿದ್ಯಾಪುರ ಗ್ರಾಮದಲ್ಲಿ ಇದೇ ತಿಂಗಳು [illegible] ತಾ. ಶುಕ್ರವಾರ ಮಧ್ಯಾಹ್ನ [illegible] ಘಂಟೆಗೆಯಲ್ಲಿ ಭೀಮಣ್ಣನೆಂಬ ಬ್ರಾಂಹ್ಮಣನು ಎತ್ತುಗಳನ್ನು ಹೊಡೆದುಕೊಂಡು ಹೊಲಕ್ಕೆ ಹೋಗುವ ನೆಪದಿಂದ ಹೊಲಕ್ಕೆ ಹೋಗಿ, ಅಲ್ಲಿ ಎತ್ತುಗಳನ್ನು ಕಟ್ಟಿಹಾಕಿ, ಅಲ್ಲಿದ್ದ ಒಂದು ಮರದ ಕೊಂಬೆಗೆ ನೇಣು ಹಾಕಿಕೊಂಡು ಪ್ರಾಣವನ್ನು ಬಿಟ್ಟನು. ಬಾಳಿಅಕ್ಕ [illegible] ಈ ರೀತಿ ದುರ್ವಿನಿಯೋಗ ಮಾಡಿದ್ದು ಆಶ್ಚರ್ಯವೇ ಸರಿ. ಆತನಿಗೆ ಚಿಕ್ಕವಯಸ್ಸು. ಒಂದು ಹೆಣ್ಣು ಮಗುವೂ ಗರ್ಭಿಣಿಯಾದ ಹೆಂಡತಿಯೂ ಇದಾರೆ. ಇದರ ಕಾರಣವೇನೋ ತಿಳಿಯದು [illegible] ಒಬ್ಬ ಬಾತ್ಮೀದಾರರು ಬರೆಯುತ್ತಾರೆ.

❦❦❦

ವಿದ್ಯಾಭ್ಯಾಸದ ಉಪಕರಣಗಳ ಪ್ರದರ್ಶನದ ವಿಷಯವಾಗಿ ಒಬ್ಬ ಬಾತ್ಮೀದಾರರು ಬರೆಯುವುದೇನೆಂದರೆ — ಈ ವರ್ಷದ ದಸರಾ ಎಜುಕೇಷನಲ್ ಎಗ್ಜಿಬಿಷನಿಗೆ ಅಷ್ಟಗ್ರಾಮದ ಟಿ. ಬಿ. ಸ್ಕೂಲಿನ ವಿದ್ಯಾರ್ಥಿಗಳು ಮತ್ತು ಮಾಸ್ತರುಗಳು ಬಹಳ ಉತ್ಸಾಹದಿಂದಲೂ, ಶ್ರದ್ಧೆಯಿಂದಲೂ ಅನೇಕ ವಿಚಿತ್ರ ಕೆಲಸಗಳನ್ನು ಮಾಡಿ, ಈ ಸ್ಥಳದ ಅಧಿಕಾರಿಗಳಿಗೂ, ಇತರ ದೊಡ್ಡ ಮನುಷ್ಯರುಗಳಿಗೂ, ಬಾಲಕಬಾಲಿಕೆಯರಿಗೂ, ಸ್ತ್ರೀಯರಿಗೂ ಇಲ್ಲಿನ ಸ್ಕೂಲ್ ಕಟ್ಟಡದಲ್ಲಿ ಪ್ರದರ್ಶನ ಮಾಡಿ ಮೈಸೂರಿಗೆ ರವಾನಿಸಿದರು. ಈ ರೀತಿಯಾದ ಪ್ರದರ್ಶನೋತ್ಸವವು ಈ ಸ್ಥಳದಲ್ಲಿ ಈ ಹಿಂದೆ ಯಾವಾಗಲೂ ನಡೆದಿರಲಿಲ್ಲ. ವಿದ್ಯಾರ್ಥಿಗಳಿಂದ ಮತ್ತು ಉಪಾಧ್ಯಾಯರುಗಳಿಂದ ತಯಾರಿಸಿದ ಮೂವತ್ತೇಳು ವಿಧಗಳಾದ ಸಾಮಾನುಗಳಲ್ಲಿ [illegible] ಆಶ್ಚರ್ಯವನ್ನುಂಟುಮಾಡಿ ಈ ಪದಾರ್ಥಗಳನ್ನು ನೋಡಿದವರೆಲ್ಲರ ಸಂತೋಷದಿಂದ ಬರೆದ ಮೂಲಕ ಪ್ರದರ್ಶನವಾಗಿರುತ್ತದೆ. ಈ ಉತ್ಸಾಹಕ್ಕೆ ಹೆಡ್ ಮಾಸ್ಟರ್ ಮ॥ ಕೆ. ಶಂಕರಪ್ಪನವರ ಮತ್ತು ಸಹಾಯೋಪಾಧ್ಯಾಯರುಗಳ ಏಕಮತ್ಯವೂ, ಪ್ರಯತ್ನವೂ ಕಾರಣಭೂತವಾಗಿದೆ.

ಮೈಸೂರು ಗೆಜೆಟ್ ಸಂಗ್ರಹ.

ನವರಾತ್ರಿ ಹಬ್ಬದ ನಿಮಿತ್ತ ೧೬ ನೇ ತಾರೀಖಿನ ಮೈಸೂರು ಗೆಜೆಟ್ ಪ್ರಕಟಿಸಲ್ಪಡುವುದಿಲ್ಲ.

ಬೌರಿಂಗ್ ಇನ್ಸ್‌ಟಿಟ್ಯೂಟಿನಲ್ಲಿ ಪ್ರಯೋಗಸ್ಥಳ ದೇಹಸ್ಥಿತಿಯನ್ನು ಪರೀಕ್ಷೆ ಮಾಡಬೇಕೆಂಬ [illegible], ಆಗಸ್ಟ್ [illegible] ರಿಂದ ವಜಾ ಮಾಡಿದೆ.

ಗವರ್ನಮೆಂಟ್ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಅ॥ ಸೆಕ್ರೆಟರಿ ಮಿ॥ ಎಂ. ಎನ್. ಕೃಷ್ಣರಾಯರಿಗೆ ನವರಾತ್ರಿ ಹಬ್ಬಕ್ಕೆ ಸೇರಿದಂತೆ ಮೂರು ತಿಂಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ರಿಟ್ರೆಂಚ್‌ಮೆಂಟ್ ಕಮಿಟಿ ಸೆಕ್ರೆಟರಿ ಮೆ॥ ಬಿ. ಶ್ರೀನಿವಾಸಯ್ಯಂಗಾರ್ಯರು ಮತ್ತೊಂದು ಹುಕುಂ ಕೊಡಲ್ಪಡುವ ತನಕ ಅವರ ಇತರ ಕೆಲಸಗಳೊಂದಿಗೆ ಅ॥ ಸೆಕ್ರೆಟರಿಯಾಗಿಯೂ ಕೆಲಸ ನೋಡತಕ್ಕದ್ದು.

ಮೆ॥ ವಿ. ಎಲ್. ಮಾರ್ಕರ್‌ಯವರನ್ನು ಕಡೂರು, ಶಿವಮೊಗ್ಗ, ಚಿತ್ರದುರ್ಗ ಡಿಸ್ಟ್ರಿಕ್ಟುಗಳು ಸೇರಿದ ಡಿವಿಷನಿಗೆ ಒಂದು ವರುಷದ ಮಟ್ಟಿಗೆ ಮಿಯಾದಾಗಿ ಸ್ಯಾನಿಟರಿ ಆಫೀಸರಾಗಿ ನೇಮಿಸಿದೆ.

ಡಿಪ್ಯುಟಿ ಸ್ಯಾನಿಟರಿ ಕಮಿಷನರಾಗಿದ್ದ ಮೆ॥ [illegible] ನಲ್ಲಯ್ಯನವರನ್ನು ಹಿಂದಿನ ಇನ್ಸ್‌ಪೆಕ್ಟರಾಗಿಯೇ ನೇಮಿಸಿದೆ.

ಶಿವಮೊಗ್ಗ ಅ॥ ಕಮಿಷನರ್ ಮೆ॥ ಆರ್. ಟಿ. [illegible] ರವರಿಗೆ ೩ ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ಕೊಟ್ಟಿದೆ.

ಅ॥ ಕಮಿಷನರಾಗಿ ಬದಲಿ ನೇಮಿಸಲ್ಪಟ್ಟಿದ್ದ ಮೆ॥ ಜೆ. ಆರ್. ಶ್ರೀನಿವಾಸಯ್ಯಂಗಾರ್ಯರನ್ನೂ ಮೆ॥ ಎಂ. ರಂಗರಾಯರನ್ನೂ [illegible] ವಾಪಸ್ ಮಾಡಿದೆ. ಇವರು ಆಮಲ್ದಾರರು ಮತ್ತು [illegible] ಎಕ್ಸೈಸ್ ಆಫೀಸರಾಗಿ ನೇಮಿಸಲ್ಪಟ್ಟಿದಾರೆ.

ಅ॥ ಕಮಿಷನರ್ ಮೆ॥ ಟಿ. ಜಿ. ಕೃಷ್ಣನವರನ್ನು ಪ್ರೊಬೇಷನರ [illegible] ರಿಂದ [illegible] ನೆ ಕ್ಲಾಸಿಗೆ ಬಡ್ತಿ ಮಾಡಿದೆ.

ಮೆ॥ ಡಿ. ಶಾಮರಾಯರನ್ನು ಜುಲೈ [illegible] ರಿಂದ ರೆವಿನ್ಯೂ ಸರ್ವೆ ಮತ್ತು ಸೆಟಲ್‌ಮೆಂಟ್ ಸೂಪರಿಂಟೆಂಡೆಂಟರಾಗಿ [illegible] ಮಾಡಿದೆ.

ಮೆ॥ ಎಂ. ಎ. ಆನಂದಾಳ್ವಾರ್ ಯವರನ್ನು ಚನ್ನಪಟ್ಟಣದ ಸಬ್ ಡಿವಿಜನ್ನಿಂದ ನಾಗಮಂಗಲ ಡಿವಿಜನಿಗೆ ವರ್ಗಮಾಡಿದೆ.

ಕಡೂರ್ ಡಿವಿಜನ್ ಎಗ್ಜಿಕ್ಯೂಟಿವ್ ಇಂಜನಿಯರ್ ಮೆ॥ ಎಚ್. ಜಿ. ಮೋಲ್ಲಾಯಿಂಘನವರಿಗೆ ಆಗೀಷ್ಟು [illegible] ರಿಂದ ಮೂರು ತಿಂಗಳ ಪ್ರಿವಿಲೇಜ್ ರಜವನ್ನೂ ತರುವಾಯ ಒಂದು ವರ್ಷದ ಫರ್ಲೋ ರಜವನ್ನೂ ಕೊಟ್ಟಿದೆ.

ಅ॥ ಇಂಜನಿಯರ್ ಮೆ॥ ಆರ್. ಎಸ್. ನವರತ್ನರಾಯರನ್ನು ಕಡೂರ್ ಡಿವಿಜನ್ ಅ॥ ಎಗ್ಜಿಕ್ಯೂಟಿವ್ ಇಂಜನಿಯರಾಗಿ ನೇಮಿಸಿದೆ.

ಬಾಗೇಪಲ್ಲಿ ತಾಲ್ಲೂಕ್ ಅಮಲ್ದಾರ್ ಮೆ॥ ವಿ. ಗೋಪಾಲರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹತ್ತು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ಗುಡಿಬಂಡಾ ಸಬ್ ತಾಲ್ಲೂಕಿನ ಡೆಪ್ಯುಟಿ ಅಮಲ್ದಾರ್ ಎಸ್. ಅನಂತರಾಮಯ್ಯಂಗಾರ್ಯರು ತಮ್ಮ ಇತರ ಕೆಲಸಗಳೊಂದಿಗೆ ಬಾಗೇಪಲ್ಲಿ ತಾಲ್ಲೂಕ್ ಛಾರ್ಜನ್ನೂ ವಹಿಸಿರತಕ್ಕದ್ದು.

ವಿದ್ಯಾವರ್ಧಕ ಪ್ರದರ್ಶನವು.

ಮೈಸೂರು ಪಟ್ಟಣದಲ್ಲಿ ದಸರಾ ಪ್ರದರ್ಶನದ ಅಂಗವಾಗಿ ವಿದ್ಯಾಭ್ಯಾಸದ ಇಲಾಖಾ ಇನ್ಸ್ಪೆಕ್ಟರ್ ಜನರಲ್‌ರವರು ವಿಕ್ಟೋರಿಯಾ ಜೂಬಿಲಿ ಹಾಲ್ ಎಂಬ ಬಂಗಲೆಯಲ್ಲಿ ವಿದ್ಯಾವರ್ಧಕವಾದ ವಸ್ತುಗಳ ಪ್ರದರ್ಶನವನ್ನು ನಡಿಸುವುದಕ್ಕೆ ಏರ್ಪಾಡು ಮಾಡಿರುತ್ತಾರೆ. ಈ ಪ್ರದರ್ಶನಶಾಲೆಯನ್ನು ಶ್ರೀಮನ್ಮಹಾರಾಜರವರು ನಾಳೆ ಬೆಳಗ್ಗೆ ೮ ಗಂಟೆಗೆ ತೆರೆದು ಪ್ರತಿಷ್ಠೆ ಮಾಡುವರೆಂದು ತಿಳಿದುಬಂದಿದೆ. ಆಹ್ವಾನ ಪತ್ರಿಕೆಗಳನ್ನು ಪಡೆದವರು ವಿನಾ ಇತರರನ್ನು ನಾಳೆ ಪ್ರದರ್ಶನವಾಂಗದಿರಕ್ಕೆ ಬಿಡುವುದಿಲ್ಲ. ಈ ಪ್ರದರ್ಶನವನ್ನು ನೋಡಬೇಕೆಂದು ಕಾತೂಹಲವುಳ್ಳವರನ್ನು ಕೆಳಗೆ ಕಂಡ ದಿನಗಳಲ್ಲಿ ಬಿಡಲಾಗುವುದು.

ತಾರೀಖು ೧೮ರಲ್ಲಿ ಮಧ್ಯಾಹ್ನ ೩ ರಿಂದ ಸಾಯಂಕಾಲ ೬ ಗಂಟೆ ವರೆಗೆ ಗಂಡಸರನ್ನೂ ಹೆಂಗಸರನ್ನೂ ಬಿಡಲಾಗುವುದು. ತಾ. ೧೯, ೨೦, ೨೧, ಮತ್ತು ೨೩ರಲ್ಲಿ ದಿನವೂ ಬೆಳಗ್ಗೆ ೮ ರಿಂದ ೧೧ ಗಂಟೆ ತನಕ, ಮತ್ತು ಮಧ್ಯಾಹ್ನ ೩ ರಿಂದ ಸಾಯಂಕಾಲ ೬ ಗಂಟೆ ತನಕ ಗಂಡಸರನ್ನೂ ಹೆಂಗಸರನ್ನೂ ಸಹಾ ಬಿಡಲಾಗುವುದು. ಹೆಂಗಸರಿಗೆ ಮಾತ್ರ—ತಾ ೨೧ ರಲ್ಲಿ ಬೆಳಗ್ಗೆ ೮ ರಿಂದ ೧೧ ಗಂಟೆ ತನಕ, ಮತ್ತು ಮಧ್ಯಾಹ್ನ ೩ ರಿಂದ ಸಾಯಂಕಾಲ ೬ ಗಂಟೆ ತನಕ

ಪ್ರದರ್ಶನವು ಒಂದು ವಾರ ನಡೆಯುವುದು ಪ್ರತಿಸಲ ನೋಡುವುದಕ್ಕೂ ತಲೆಗೆ ಒಂದಾಣೆಯಂತೆಯೂ, ಪ್ರದರ್ಶನ ನಡಿಯುವ ವಾರಕ್ಕೆಲ್ಲಾ ೪ ಆಣೆಯಂತೆಯೂ ಫೀಜು ಕೊಡಬೇಕು.

ವಿದ್ಯಾಭ್ಯಾಸ ನಡಿಯುವ ವಾರದೊಳಗೆ ಮಹಾರಾಜಾ ಕಾಲೇಜಿನಲ್ಲಿ ಸಾಯಂಕಾಲ ೫ ರಿಂದ ೬॥ ಗಂಟೆಯ ತನಕ ಉಪನ್ಯಾಸಗಳು ನಡೆಸಲ್ಪಡುವುವು ಉಪನ್ಯಾಸಗಳನ್ನು ಕೇಳುವುದಕ್ಕೆ ಫೀಜೇನೂ ಕೊಡಬೇಕಾದದ್ದಿಲ್ಲ. ತಾ ೧೯, ೨೦ ೨೧ ಈ ಮೂರು ದಿನವೂ ರಾತ್ರಿ ಹೊತ್ತಿನಲ್ಲಿ ಅದೇ ಕಾಲೇಜಿನಲ್ಲಿ ಮ್ಯಾಜಿಕ್ ಲಾಂಟರ್ನ್ ಪ್ರದರ್ಶನ ಮಾಡಲಾಗುತ್ತದೆ ಇದಕ್ಕೆ ಪ್ರತಿ ರಾತ್ರಿಯ ನೋಟಕ್ಕೂ ಒಂದಾಣೆಯಂತೆ ಫೀಜು ಕೊಡತಕ್ಕದ್ದು

ತಾ ೧೯ ಮತ್ತು ೨೦ ರಲ್ಲಿ ಅದೇ ಕಾಲೇಜಿನೊಳಗೆ ಸಾಯಂಕಾಲ ೩ ರಿಂದ ೬ ಗಂಟೆ ತನಕ ಕಿವುಡ ಮೂಕರಿಗೂ ಕುರುಡರಿಗೂ ವಿದ್ಯೆ ಕಲಿಸತಕ್ಕ ವಿಧಾನವನ್ನು ಪ್ರತ್ಯಕ್ಷವಾಗಿ ತೋರಿಸಲಾಗುವುದು

ವಿದ್ಯಾಭ್ಯಾಸದ ಇಲಾಖಾ ಅಧಿಕಾರಿಗಳೂ, ಉಪಾಧ್ಯಾಯರುಗಳೂ, ನಾರ್ಮಲ್ ವಿದ್ಯಾರ್ಥಿಗಳೂ, ಮತ್ತು ಇಲಾಖೆಯ ಗುಮಾಸ್ತರೂ, ಪ್ರದರ್ಶನಕ್ಕೆ ವಸ್ತುಗಳನ್ನು ಕಳುಹಿಸಿದವರೂ, ಕೆಲಸದ ಮೇಲೆ ಹಾಜರಾಗಿರತಕ್ಕವರೂ ಫೀಜೇನೂ ಕೊಡಬೇಕಾದದ್ದಿಲ್ಲವು

ವ್ಯವಸಾಯ ಮತ್ತು ವಾಣಿಜ್ಯ—ಉಪನ್ಯಾಸವು.

ತಾ. ೪ರಲ್ಲಿ ಶ್ರೀಮಾನ್ ಕೃಷ್ಣಯ್ಯನವರ ಪಾಠಶಾಲೆಯಲ್ಲಿ ಮೈಸೂರು ಸಹಿತ ಪಟ್ಟಣದ ವಿದ್ಯಾರ್ಥಿಗಳು ಸೇರಿರಲು, ಮೇಲಿನ ರಾಮಚಂದ್ರ ಪತ್ತರವರು ಸಭಾಪತಿಯಾಗಿದ್ದರು ನ. ವರದಾಚಾರ್ಯರವರು ವ್ಯವಸಾಯ ಮತ್ತು ವಾಣಿಜ್ಯ ಎಂಬುದನ್ನು ಕುರಿತು ಒಂದು ಸಣ್ಣ ಉಪನ್ಯಾಸವನ್ನು ಓದಿದರು ಅದರ ಇತ್ಯರ್ಥವಾವುದೆಂದರೆ—

ಕೈಗಾರಿಕೆ ವಿಷಯದಲ್ಲಿ ಹಿಂದೆ ನಮ್ಮವರು ಬಹುಕಾಲದಿಂದಲೂ ಕುಂಭಕರ್ಣನಂತೆ ನಿದ್ರಿಸುತ್ತಿದ್ದು, ಈಗೀಗ ಎಚ್ಚೆತ್ತು ಆಂಗ್ಲೇಯರು ಬಂದ ನಾಗರೀಕತೆಯನ್ನು ಕಂಡು ಇತರ ದೇಶಗಳಿಗೆ ಹೋಗಿ ಕಸಬುದಾರಿ ವಿದ್ಯೆಗಳನ್ನು ಕಲಿತು ಸ್ವದೇಶಾಭಿಮಾನದಿಂದ ಉತ್ತೇಜಿತರಾಗಿ ಹಿಂದೂರಾಷ್ಟ್ರದಲ್ಲಿ ಉತ್ಪತ್ತಿಯಾಗುವ ಸಕಲ ವಸ್ತುಗಳನ್ನು ತಾವೇ ಉಪಯೋಗಿಸುವುದಕ್ಕೆ ಪಡುವ ಕಷ್ಟ ಸಹಿಷ್ಣುತೆಗಳನ್ನು ನೋಡಿದರೆ ಯಾರಿಗೂ ಆ ಮೋದವು ಉಂಟುಮಾಡದಿರಲಾರದು

ಈ ಸ್ವದೇಶದ ಕಾಂಕ್ಷೆಯು ನಮ್ಮವರ ಅಮೇರಿಕಾ ದೇಶದವರೂ ಕಾದ ಹೀಗೆಯೇ ತಮ್ಮ ಸ್ವದೇಶದ ಗೌರವವನ್ನು ಕಾಪಾಡಲು ಪ್ರಯತ್ನಪಟ್ಟು ತಾವು ಸ್ವತಂತ್ರ ಜನವೆನಿಸಿಕೊಂಡವರು. ಮೈಸೂರು ರಾಷ್ಟ್ರದಲ್ಲಾದರೋ ಗವರ್ನಮೆಂಟಿನವರ ಸಹಾಯದಿಂದ ಮಾನನೀಯರಾದ ದಿವಾನರವರು ಬಿಟ್ಟ ಅವರ ದಯದಿಂದಲೂ, ಕಾವೇರಿ ಜಲಪಾತದಿಂದ ಉದ್ಭವಿಸುವ ವಿದ್ಯುಚ್ಛಕ್ತಿಯ ಸಹಾಯದಿಂದಲೂ, ಮಾರಿಕಣಿವೆ ಕಾಮಗಾರಿ ಮತ್ತು ಆಗಾಗ್ಗೆ ನಡಿಸುವ ವಸ್ತುಪ್ರದರ್ಶನಗಳಿಂದಲೂ ಪ್ರೋತ್ಸಾಹಪಡಿಸುತ್ತಿರುವ ನಮ್ಮ ರಾಜ್ಯದ ಪ್ರಜಾನಮ್ಮದಿಗೆ ಭಂಗ ಬಾರದೆ ಸಕಲ ವಿಷಯಗಳಲ್ಲಿಯೂ ಅಭಿವೃದ್ಧಿಯು ಹೊಂದಲು ಯಾವ ಚ್ಯುತಿಯೂ ಇಲ್ಲವು

ತದನಂತರ ಪೀ ರಮೇಶಚಂದ್ರ ದತ್ತರವರು ಉತ್ತರವು ಕೊಟ್ಟದ್ದೇನೆಂದರೆ—ಆಂಗ್ಲೇಯರು ಹಿಂದೂದೇಶಕ್ಕೆ ಪಾದಾರ್ಪಣವು ಮಾಡುವುದಕ್ಕೆ ಮುಂಚೆಯೇ ಫಿನೀಷಿಯನ್ನರು, ವೆನಿಸ್, ಅಲೆಕ್ಸಾಂಡ್ರಿಯಾಗಳವರು, ಫ್ರೆಂಚರು, ಡಚ್ಚರು, ಪೋರ್ಚುಗೀಸರು ವರ್ತಕರಂತೆ ಬಂದು ವರ್ತಕತನವು ಮಾಡುತ್ತಾ, ಆರ್ಯಾವರ್ತದ ಅಮೂಲ್ಯವಾದ ವಸ್ತುಭಂಡಾರಗಳನ್ನು ಸೂರೆಗೊಂಡರು ಅನಂತರ ಆಂಗ್ಲೇಯರು ತಲೆಹಾಕಿದರು ಹಿಂದೂಸ್ಥಾನದ ಪ್ರಾಚೀನ ಚರಿತ್ರೆಯನ್ನು ಇಟ್ಟು ನೋಡಿದ್ದೇ ಆದರೆ ಅಂದರೆ, ೨,೦೦೦ ಅಥವಾ ೩,೦೦೦ ವರ್ಷಗಳ ಹಿಂದೆ ಬರ್ಮಾ, ಚೀನಾ, ಸಿಂಗಪೂರ್, ಲಂಕಾದ್ವೀಪ ಮೊದಲಾದ ಪರದೇಶಗಳೊಡನೆ ತಮ್ಮಲ್ಲಿನ ಸರಕುಗಳನ್ನು ಇತರರಿಗೆ ಕೊಡುತ್ತಲೂ, ತಾವು ಅವರಿಂದ ಲಾಭವು ಹೊಂದುತ್ತಲೂ ಇದ್ದರೆಂದು ಕಂಡು ಬರುತ್ತದೆ. ಇಂತಹ ಕೌಶಲ ಉತ್ಕರ್ಷ ದೆಸೆಯಿಂದ ಅಧೋಗತಿಗಿಳಿಯಲಾ ಇವರಲ್ಲಿ ಹುಟ್ಟಿದ ಅಂತಃಕಲಹಗಳೇ ಸಕಾರಣವು ಬರುಬರುತ ಅಂಥಾ ಅಂತಃಕಲಹಗಳು ಆರ್ಯರನ್ನು ನಾಗರಿಕತೆಯು ದೆಸೆಯಿಂದ ಇಳಿಸಿ, ಈ ದುರ್ದೆಶೆಗೆ ಈಡಾಗಿ ಇರಳುತ್ತಿರುವಂತೆ ಮಾಡಿತು ಆದರೂ ತತ್ಕಾಲದಲ್ಲಿ ೩೦ ವರ್ಷಗಳಿಂದಲೂ ಆರ್ಯಾವರ್ತದ ಒಂದು ಕೊನೆಯಿಂದ ಮತ್ತೊಂದು ಕೊನೆಯ ವರಿವಿಗೂ ಸ್ವದೇಶದ ಅಭಿಮಾನವು ಪ್ರಬಲಿಸಿ ಭಾರತೀಯರು ಸ್ವದೇಶಹಿತಚಿಂತನೆಯಿಂದ ಉದ್ವಿಗ್ನರಾಗಿ ಸರ್ವಸಾಧನೆಯಿಂದಲೂ ತಮ್ಮ ಆರ್ಯಭೂಮಿಯ ಉನ್ನತಪದವನ್ನೇರಲು ಸರ್ವರೂ ಕಾತುರರಾಗಿ ಅನ್ಯದೇಶಗಳಿಗೆ—ಜಪಾನ್, ಅಮೇರಿಕ ಮತ್ತು ಇಂಗ್ಲೆಂಡ್ ದೇಶಗಳಿಗೆ ಹೋಗುತ್ತಾ ನಾನಾ ತರಹದ ಕಸಬುಗಳನ್ನು ಕಲಿತುಬರುತ್ತಾ ವಿಶೇಷವಾಗಿ ಮೂರು ವರ್ಷಗಳಿಂದಲೂ ಬಹು ವಿಜೃಂಭಣೆಯಿಂದ ಕೆಲಸಗಳನ್ನು ನಡಿಸುತ್ತಿರುವರು ಮೂರು ನಾಲ್ಕು ವರ್ಷಗಳಲ್ಲಿಯೇ ಯಾವ ಹಿಂದೂ ರಾಷ್ಟ್ರದಲ್ಲಿ ಪ್ರಥಮದಲ್ಲಿ ೮—೧೦ ಕಾರ್ಖಾನೆಗಳಿದ್ದುವೋ ಈಗ ನೂರಾರು ನೂರು ಪ್ರಥಮಗಳ ಕಾರ್ಖಾನೆಗಳೂ ಉತ್ಪನ್ನವಾದವು ಅಹಮದಾಬಾದ್ ದೇಶದಲ್ಲೇ ಹದಿನೈದು ಕಾರ್ಖಾನೆಗಳಿರುವವು ಎಲ್ಲಿ ನೋಡಿದರೂ ಅಲ್ಲಿ ರಾಷ್ಟ್ರೀಯ ಚಿನ್ನತ್ವವೇ ಪ್ರಬಲವಾಗಿರುವದು. ಆರ್ಯಾವರ್ತವು ರಾಜನೀತಿಯಲ್ಲಿಯೂ, ಮತದಲ್ಲಿಯೂ, ಕೈಗಾರಿಕೆ ಕಸಬುಗಳಲ್ಲಿಯೂ ತೋರಿಸುತ್ತಿರುವ ಸಾಹಸವು ನಾನು ಗರ್ವದಿಂದ ಅಂಗೀಕರಿಸುವೆನು ಸರ್ವರೂ ಗರ್ವಪಡಬೇಕಾದುದೇ

ಭಗವದ್ಗೀತೆಯಲ್ಲಿ ಅರುಹಿದಂತೆ "ಕರ್ಮಣ್ಯೇವಾಧಿಕಾರಸ್ತೇ ಮಾಫಲೇಷು ಕದಾಚನ" ಕಾರ್ಯವನ್ನು ಮಾಡುವುದಕ್ಕೆ ಮಾತ್ರ ನಿನಗೆ ಅಧಿಕಾರವು ಫಲಾಪೇಕ್ಷೆಯನ್ನು ಮಾಡಲು ಅಧಿಕಾರವಿಲ್ಲವು ಆದುದರಿಂದ ಆರ್ಯರಾದ ನಾವುಗಳೆಲ್ಲರೂ ಲಾಭ ನಷ್ಟಗಳ ಮೇಲೆ ಕಾಂಕ್ಷೆ ಇಲ್ಲದೆ ನಮ್ಮ ದೇಶವನ್ನುದ್ಧರಿಸಲು ಸಿದ್ಧರಾಗಿ ಆಂಗ್ಲೇಯರ ಸಹಾಯದಿಂದಲೂ, ಅವರ ಸ್ವದೇಶ ಧನದಿಂದಲೂ ಕಾರ್ಯವು ಸಾಧಿಸೋಣ ಇದರಲ್ಲಿ ಜಿತರಾದರೂ ಸರಿಯೇ, ವಿಜಿತರಾದರೂ ಸರಿಯೇ ಏಕವ್ರತದಿಂದಲೂ ದೃಢಚಿತ್ತದಿಂದಲೂ ಬಂಗಾಳಾ ರಾಜ್ಯದ ಮಹನೀಯರು ಮತ್ತು ಆರ್ಯಮಹಿಳೆಯರು ಹಾಕಿರುವ ಸ್ವದೇಶೀ ಎಂಬ ಮೇಲ್ಪಂಕ್ತಿಯನ್ನನುಸರಿಸಿ ನಮ್ಮ ದೇಶವನ್ನು ಉದ್ಧಾರವು ಮಾಡಲು ಕಂಕಣಬದ್ಧರಾಗೋಣ.

ಬೆಂಗಳೂರು ಸಿಟಿ ಮಾರ್ಕೆಟ್ಟು ಯಂ ಯರ್ ಸಿಂಗ್

ಒಂದು ಹೊಸ ಕಾನೂನು

ರಾಜದ್ರೋಹಕರವಾದ ಸಭೆಗಳನ್ನು ತಡೆಯುವ್ರದು.

ಇಂಡಿಯಾ ಗವರ್ನಮೆಂಟಿನವರು ಈ ರಾಷ್ಟ್ರದಲ್ಲಿ ಪ್ರಜಾ ನೆಮ್ಮದಿಗೂ ಭಂಗ ಬಾರದಿರುವಿಕೆಗೋಸ್ಕರವಾಗಿ ಪಬ್ಲಿಕ್ ಸಭೆಗಳಾಗಲಿ ಕೂಟಗಳಾಗಲಿ ನಡೆಯದಂತೆ ನಿಲ್ಲಿಸಬೇಕೆಂದು ಉದ್ದೇಶಪಟ್ಟು ಒಂದು ಕಾನೂನು ಮಾಡಿ ಜಾರಿಗೆ ತರಬೇಕೆಂದು ಪ್ರಯತ್ನಪಟ್ಟಿದ್ದಾರೆ ಈ ಕಾನೂನಿನ ಮಸೂದೆಯು ಕಳೆದ ಶುಕ್ರವಾರ ಇಂಡಿಯಾ ಗವರ್ನಮೆಂಟ್ ಗಜೆಟ್ಟಿನಲ್ಲಿ ಪ್ರಕಟವಾಗಿದೆ ನಾಳೆಯ ದಿನ ಸಿಂಲಾ ಪಟ್ಟಣದಲ್ಲಿ ವೈಸ್‌ರಾಯಿಯವರು ಮಂತ್ರಾಲೋಚನಾ ಸಭೆಯಲ್ಲಿ ಈ ಮಸೂದೆಯನ್ನು ಚರ್ಚೆಗೆ ತಂದು, ಅದನ್ನು ಜಾರಿಗೆ ತರುವ ಬಾಗದಲ್ಲಿ ಸಭಿಕರ ಸಮ್ಮತಿಯನ್ನು ಪಡೆಯುವವರಾಗಿದ್ದಾರೆ ಈ ಕಾನೂನಿನ ಉದ್ದೇಶವನ್ನು ಕುರಿತು ಗವರ್ನಮೆಂಟಿನವರು ತಿಳಿಸುವುದೇನೆಂದರೆ—

ಪಂಜಾಬ್ ಅಧಿಪತ್ಯದಲ್ಲೂ ಪೂರ್ವ ಬಂಗಾಳಾ ಮತ್ತು ಅಸ್ಸಾಂ ಎಂಬ ಹೊಸ ಅಧಿಪತ್ಯದಲ್ಲೂ ಪಬ್ಲಿಕ್ ಮೀಟಿಂಗುಗಳು ನಡಿಯುವುದೂ, ಅವುಗಳಲ್ಲಿ ರಾಜದ್ರೋಹಕರವಾದ ಉಪನ್ಯಾಸಗಳು ಜರುಗುವುದೂ ಬಹಳವಾಗಿ ಹೆಚ್ಚುತ್ತಾ ಬಂದು, ಪ್ರಜಾ ನೆಮ್ಮದಿಗೆ ಭಂಗಬಂದೀತೆಂಬ ಶಂಕೆಯುಂಟಾದದ್ದರಿಂದ ಇಂಡಿಯಾ ಗವರ್ನಮೆಂಟಿನವರು ಕಳೆದ ಮೇ ತಿಂಗಳಲ್ಲಿ ಒಂದು ವಿಶೇಷವಾದ ಕಾನೂನು ಮಾಡಿ ಜಾರಿಗೆ ತಂದು, ಅಂಥಾ ಪಬ್ಲಿಕ್ ಮೀಟಿಂಗುಗಳು ನಡೆಯದಂತೆ ತಡೆದಿರುತ್ತಾರೆ ಆದರೆ ಆ ವಿಶೇಷವಾದ ಕಾನೂನು ಆರು ತಿಂಗಳ ಮೇಲೆ ಅಂದರೆ ನವಂಬರ್ ೧೦ ನೇ ದಿವಸಕ್ಕೆ ರದ್ದಾಗಿ ಹೋಗುವುದು ಈಗ ಕಳೆದ ಆರು ತಿಂಗಳಲ್ಲೂ ಸಂಭವಿಸಿರುವ ವಿದ್ಯಮಾನಗಳನ್ನು ನೋಡುವಲ್ಲಿ ಈ ರಾಷ್ಟ್ರದ ಪ್ರಜಾ ನೆಮ್ಮದಿಗೆ ಅಂಥಾ ನಿರ್ಬಂಧದ ಕಾನೂನೊಂದು ಶಾಶ್ವತವಾಗಿ ಇದ್ದೇ ತೀರಬೇಕೆಂದು ಗೊತ್ತಾಗಿದೆ ಆದ್ದರಿಂದ ಈ ರಾಷ್ಟ್ರದ ಯಾವಕಡೆಯಲ್ಲಿ ಅವಶ್ಯವೆಂದು ಕಂಡು ಬಂದರೆ ಅಂಥಾ ಕಡೆಯಲ್ಲೆಲ್ಲಾ ರಾಜದ್ರೋಹಕರವಾದಂಥಾ ಮೀಟಿಂಗುಗಳನ್ನು ನಡೆಯದಂತೆ ತಡೆಯುವುದಕ್ಕೋಸ್ಕರ ಒಂದು ಕಾನೂನ್ ಮಾಡಬೇಕಾಗಿರುವುದು ಈ ಕಾನೂನಿನ ಮಸೂದೆಯನ್ನು ಸಕಲರ ತಿಳುವಳಿಕೆ ಬಗ್ಗೆ ಪ್ರಕಟಮಾಡಿದೆ

ಕಾನೂನಿನ ಮಸೂದೆಯು

ಆಯಾ ಗವರ್ನಮೆಂಟಿನವರು ಈ ಕಾನೂನನ್ನು ಅವಶ್ಯವಿದ್ದಾಗ ಇಂಥಿಂಥಾ ಪಟ್ಟಣ ಊರು ಗ್ರಾಮಗಳಿಗೆ ಜಾರಿಯಲ್ಲಿ ತಂದಿದೆ ಎಂದು ತಮ್ಮ ಗೆಜೆಟ್ಟಿನಲ್ಲಿ ಪ್ರಕಟಿಸು ಮಾಡಿಕೊಂಡು, ರಾಜದ್ರೋಹಕರವಾದ ಮೀಟಿಂಗುಗಳು ನಡಿಯದಂತೆ ತಡೆಯಲು ಈ ಕಾನೂನು ಅಧಿಕಾರ ಕೊಡುತ್ತದೆ

ಜನರು ಪಬ್ಲಿಕ್ಕಾಗಿ ಸಭೆ ಸೇರಿಯಾಗಲಿ, ಅಂತರಂಗದಲ್ಲಿ ಕೂಟ ಕೂಡಿಯಾಗಲಿ ರಾಜದ್ರೋಹಕರವಾದ ಅಥವಾ ಪ್ರಜೆಗಳಲ್ಲಿ ಸರ್ಕಾರದವರ ಮೇಲೆ ಅಪ್ರೀತಿ ಅಸಮಾಧಾನಗಳನ್ನು ಹುಟ್ಟಿಸಿ ಪ್ರಜಾ ನೆಮ್ಮದಿಗೆ ಭಂಗ ಬರುವಂಥಾ ಉಪನ್ಯಾಸಗಳನ್ನು ಮಾಡಿದರೂ, ಅಂಥಾ ವಿಷಯವನ್ನು ನೋಟೀಸುಗಳ ಮೂಲಕ ಪ್ರಕಟಪಡಿಸಿದರೂ, ಇಪ್ಪತ್ತು ಜನರಿಗಿಂತ ಹೆಚ್ಚಾಗಿ ಕೂಟ ಕೂಡಿದರೂ ಅಂಥಾ ಮೀಟಿಂಗು ಪಬ್ಲಿಕ್ ಮೀಟಿಂಗ್ ಎನ್ನಿಸಿಕೊಳ್ಳುತ್ತದೆ.

ಯಾವ ಪಬ್ಲಿಕ್ ಮೀಟಿಂಗ್ ನಡಿಸಬೇಕಾದರೂ ಮೊದಲು ಆ ವಿಷಯವನ್ನು ಪೋಲೀಸ್ ಸೂಪರಿಂಟೆಂಡೆಂಟರಿಗೆ ಒಂದು ವಾರಕ್ಕೆ ಮುಂಚೆ ತಿಳಿಸಿ, ಅವರ ಅನುಮತಿಯನ್ನು ಪಡೆದುಕೊಳ್ಳಬೇಕು. ಪೋಲೀಸ್ ಇನ್ಸ್ಪೆಕ್ಟರು ತಮ್ಮ ಕಡೆಯವರನ್ನು ಅಂಥಾ ಮೀಟಿಂಗುಗಳಿಗೆ ಕಳುಹಿಸಿ ನಡಿಯತಕ್ಕ ವಿಚಾರಗಳನ್ನು ತಿಳಿದುಕೊಳ್ಳಬೇಕು

ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಾಗಲಿ, ಪೋಲೀಸ್ ಕಮಿಷನರಾಗಲಿ ಇಂಥಿಂಥಾ ಕಡೆ ಪಬ್ಲಿಕ್ ಮೀಟಿಂಗ್ ನಡಿಯಕೂಡದೆಂದು ಹುಕುಂ ಕೊಟ್ಟು ತಡೆಯಲು ಅಧಿಕಾರ ಉಳ್ಳವರಾಗಿದ್ದಾರೆ.

ಹೀಗೆ ಮೇಲಧಿಕಾರಿಗಳ ನೋಟೀಸ್ ಕೊಡದೇ ಆಗಲಿ, ಕೊಡದೇ ಅಪ್ಪಣೆ ಪಡೆಯದೇ ಆಗಲಿ ಯಾರಾದರೂ ಅಂಥಾ ಪಬ್ಲಿಕ್ ಮೀಟಿಂಗುಗಳನ್ನು ನಡಿಸಿದರೂ, ಅಥವಾ ನೋಟೀಸುಗಳನ್ನು ಹಂಚಿಸಿದರೂ ಅಂಥವರನ್ನು ವಾರಂಟಿಲ್ಲದೆ ಪೋಲೀಸಿನವರು ಹಿಡಿಯುವುದಲ್ಲದೆ, ಮ್ಯಾಜಿಸ್ಟ್ರೇಟರು ಅಂಥವರಿಗೆ ಆರು ತಿಂಗಳ ವರೆಗೆ ಸಜಾ ಜುಲ್ಮಾನೆಗಳನ್ನು ವಿಧಿಸುವುದಕ್ಕೂ ಅಧಿಕಾರ ಕೊಟ್ಟಿದೆ

ಕಲ್ಕತ್ತಾ ಪಟ್ಟಣದ ಇಪ್ಪತ್ತನಾಲ್ಕು ಚೌಕಗಳಲ್ಲಿ ಪಬ್ಲಿಕ್ ಮೀಟಿಂಗುಗಳು ನಡಿಯಕೂಡದೆಂದು ಸರ್ಕಾರದವರು ಪ್ರಕಟನೆ ಮಾಡಿದರು ಆದರೂ ಕಳೆದ ಗುರುವಾರ ಸಾಯಂಕಾಲ ಕಾಳೀಘಾಟಿನಲ್ಲಿ ಒಂದು ಮೀಟಿಂಗ್ ನಡೆದು, ಮೌಲ್ವಿ ಲಿಯಾಖತ್ ಹುಸೇನ್, ಬಾಬು ಲಲಿತಮೋಹನ ಘೋಷಾಲ್ ಎಂಬುವರು ಉಪನ್ಯಾಸ ಮಾಡಿದರೆಂತಲೂ, ಉಸ್ತುವಾರಿಗಾಗಿ ಹೋಗಿದ್ದ ಪೋಲೀಸಿನವರನ್ನು ಬೈದು ಕಲ್ಲುಗಳಿಂದ ಹೊಡೆದರೆಂತಲೂ, ಆದರೆ ಅವರು ಯಾರನ್ನೂ ದಸ್ತಗಿರಿ ಮಾಡಲಿಲ್ಲವೆಂತಲೂ ತಂತೀ ವರ್ತಮಾನ ಬಂದಿದೆ.

ಮೀಟಿಂಗ್ ನಡಿಸಕೂಡದೆಂಬ ಹುಕುಮನ್ನು ಕಲ್ಕತ್ತೆಯವರು ಲಕ್ಷ್ಯಕ್ಕೆ ತಂದಿಲ್ಲ ಈ ನವರಾತ್ರಿ ಹಬ್ಬಕಾಲದಲ್ಲಿ ಬಜಾರು ಬೀದಿ ಮೊದಲಾದ ಸ್ಥಳಗಳಿಗೆ ಜನರು ಹೋಗಿ ಸಭೆ ನಡಿಸಬೇಕೆಂದು ಗೊತ್ತು ಮಾಡಿಕೊಂಡಿದಾರೆ ಗ್ರೀರಾರ್ ಎಂಬ ಉದ್ಯಾನವನದಲ್ಲಿ ಮೀಟಿಂಗು ನಡೆಯಬಹುದು. ಇದಲ್ಲದೆ ವಿಸ್ತಾರವಾದ ಕಾಂಪೌಂಡುಗಳನ್ನು ಪಡೆದಿರುವ ಭಾರಿ ಭಾರಿ ಜಮೀನ್ದಾರರೇ ಮುಂತಾದವರು ಪಬ್ಲಿಕ್ ಮೀಟಿಂಗ್ ನಡೆಯುವುದಕ್ಕೆ ತಮ್ಮ ಅಂಗಳಗಳನ್ನು ಬಿಟ್ಟುಕೊಡುವುದಾಗಿ ಒಪ್ಪಿಕೊಂಡಿದಾರೆ ಎಂಬುದಾಗಿ ಇನ್ನೊಂದು ತಂತೀ ವರ್ತಮಾನ ಬಂದಿದೆ

ಮೈಸೂರು ದಸರಾ ವ್ಯವಸಾಯದ ಮತ್ತು ಕೈಗಾರಿಕೆಗಳ ಪ್ರದರ್ಶನವು.

ಪ್ರದರ್ಶನವಸ್ತುಗಳ ವಿವರಣೆಯು

ಕಳೆದ ವಾರ ಸೂಚಿಸಿದಂತೆ ಮೇಲ್ಕಂಡ ಪ್ರದರ್ಶನದಲ್ಲಿ ಇಡಲ್ಪಡುವ ಪದಾರ್ಥಗಳ ವಿವರವನ್ನು ಈಗ ಕೂಡಿದ ಮಟ್ಟಿಗೆ ಬರೆಯಲು ಪ್ರಯತ್ನಪಡುವೆವು

ಅರಮನೆಯ ಪ್ರದರ್ಶನವಸ್ತುಗಳು.

ಪ್ರದರ್ಶನಶಾಲೆಯ ಒಂದು ಕೊಠಡಿಯಲ್ಲಿ ಅರಮನೆಯ ಕೆಲವು ಮನೋಹರವೂ ಅಪೂರ್ವವೂ ಆದ ಚಿತ್ರವಸ್ತುಗಳನ್ನು ತಂದಿಟ್ಟು ಪ್ರದರ್ಶನ ಮಾಡಿದಾರೆ ಮುಂದ ಮೇಲಿನ ಕಲಿಗಳ ಮೇಲೂ ಮಾಡಿರುವ ಕೆತ್ತನೆಯ ಸಣ್ಣ ಕೆಲಸಗಳೂ, ಗಂಧದ ಮರದಲ್ಲಿ ಮಾಡಿದ ಒಡವೆಗಳ ಪೆಟ್ಟಿಗೆಗಳೂ, ಕಲ್ಲುಗಳಲ್ಲೂ ಮರದಲ್ಲೂ ಕೆತ್ತಿ ಮಾಡಿರುವ ಅಮೂಲ್ಯ ವಿಗ್ರಹಗಳೂ, ಬೆಣಚುಕಲ್ಲಿನ ಆಕೃತಿಗಳೂ ಬಹು ಸುಂದರವಾಗಿವೆ ಆ ವಿಗ್ರಹಗಳಲ್ಲಿ ಚಾಮುಂಡಿಯು ಸಿಂಹವಾಹನರೂಢಳಾಗಿ ಮಹಿಷಾಸುರನನ್ನು ವಧೆಮಾಡುವಂತೆ ಕೆತ್ತಿ ಬರೆದಿರುವುದು ವಿಶೇಷ ನೇತ್ರಾನಂದಕರವಾಗಿರುವುದು ಇದರಲ್ಲಿ ಕಾರೇಗಾರನು ಮಾಡಿರತಕ್ಕ ಸಣ್ಣ ಕೆಲಸಗಳನ್ನು ಎಲ್ಲರೂ ಶ್ಲಾಘನೆಮಾಡತಕ್ಕದ್ದು ಗೋಪೀ ವಸ್ತ್ರಾಪಹಾರವು ಮರದ ಮೇಲೆ ಕುಳಿತಿರುವ ಕೃಷ್ಣನೂ ಗೋಪಿಕಾ ಸ್ತ್ರೀಯರು ಕೊಳದಲ್ಲಿ ನಿಂತು ತಮ್ಮ ವಸ್ತ್ರಗಳನ್ನು ಕೇಳುತ್ತಿರುವಂತೆಯೂ ಗಂಧದ ಹಲಗೆಯೊಳಗೆ ಬರೆದು ಕೆತ್ತಿ ಮಾಡಿರತಕ್ಕದ್ದು ಬಹಳ ಚನ್ನಾಗಿದೆ ವಿದ್ಯುತ್ ಲಾಂಪ್ಸ್ ಸ್ಟ್ಯಾಂಡು ಅದರಲ್ಲಿ ಕಾರೇಗಾರನ ಬುದ್ಧಿಕುಶಲತೆಯು ವಿಶೇಷವಾಗಿ ಕಾಣಬರುವುದು ಬಹು ಅಪರೂಪವಾದ ಚದರಂಗದ ಹಲಗೆಯೂ ಅದರ ಕಾಯಿಗಳೂ ಪ್ರದರ್ಶನವಾದಲ್ಪಟ್ಟಿವೆ ಇದರಲ್ಲೂ ಕೆಲಸಗಾರನ ಸೂಕ್ಷ್ಮಬುದ್ಧಿಯೂ ಅವನ ಕೈಚಳಕವೂ ವಿಶೇಷವಾಗಿ ಕಾಣುತ್ತೆ ಹೀಗೆಯೇ ಇನ್ನೂ ಕೆಲವು ಚಿತ್ರವಸ್ತುಗಳು ಪ್ರದರ್ಶನವಾಗಲ್ಪಟ್ಟಿವೆ

ವ್ಯವಸಾಯ ಇಲಾಖಾ ಪ್ರದರ್ಶನವಸ್ತುಗಳು

ಮೈಸೂರು ಸಂಸ್ಥಾನದ ವ್ಯವಸಾಯಶಾಸ್ತ್ರ ಪರೀಕ್ಷೆ ಇಲಾಖೆಯಲ್ಲಿ ನಡಿಯತಕ್ಕ ಕೆಲವು ಮುಖ್ಯ ಕೆಲಸಗಳನ್ನು ಪ್ರದರ್ಶನದ ಒಂದು ಕೊಠಡಿಯಲ್ಲಿ ನೋಡಬಹುದು ಈ ಕೊಠಡಿಯಲ್ಲಿ ಬೇರೆ ಬೇರೆ ಮಾದರಿಗಳ ಬೆಲ್ಲಗಳು, ಕಾಕಂಬಿಗಳು, ಸಕ್ಕರೆಗಳು, ಹತ್ತು ಜಾತಿಗಳ ರಾಗಿ, ನೆಲಗಡಲೆಕಾಯಿಗಳು, ಕಾಳು ಬೀಜಗಳು, ಇಂಜಿನ್ ಯಂತ್ರದಿಂದ ಕುಟ್ಟಿದ ಅಕ್ಕಿ, ರೂಢಿಯಾಗಿ ಭತ್ತ ಕುಟ್ಟಿ ಮಾಡಿದ ಅಕ್ಕಿ; ಮಣ್ಣಿನ ಗುಣವನ್ನು ಶೋಧನೆ ಮಾಡತಕ್ಕ ಯಂತ್ರಸಾಧನಗಳು ಮತ್ತು ಶೋಧನೆ ಮಾಡಿದ ಮಣ್ಣುಗಳು ಆಯಾ ಜಾತಿಯ ಮಣ್ಣಿನಲ್ಲಿರತಕ್ಕ ನೀರು, ಶಕ್ತಿ, ಗುಣ, ನೈಟ್ರೋಜನ್ ಗಂಧಕದ ದ್ರಾವಕ, ಪೊಟಾಷ್, ಮೊದಲಾದವು ಈ ಮುಂತಾದ್ದೆಲ್ಲ ನೋಟಕರಿಗೆ ತೋರಿಸುತ್ತಲೂ, ಅವುಗಳ ವಿಷಯವನ್ನು ವಿವರಿಸಿ ಹೇಳುತ್ತಲೂ ಇದ್ದಾರೆ ಇನ್ನೊಂದು ವಿಶೇಷ ಅವಶ್ಯವಾದ ಸಂಗತಿಯು ಈ ಕೊಠಡಿಯಲ್ಲಿ ತೋರಿಸಲ್ಪಡುವುದು ಅದೇನೆಂದರೆ ನಮ್ಮ ದೇಶದಲ್ಲಿ ಜನರು ಭೋಜನಕ್ಕೆ ವಿಶೇಷವಾಗಿ ಉಪಯೋಗಿಸುವಂಥಾ ಅಕ್ಕಿ, ರಾಗಿ, ಕಡಲೆ ಎಂಬೀ ಧಾನ್ಯಗಳನ್ನೂ, ಆಲೂಗಡ್ಡೆ ಕೋಸುಕಾಯಿ, ಈ ತರಕಾರಿಗಳನ್ನೂ ಈ ಇಲಾಖೆಯವರು ಪರಿಶೋಧನೆ ಮಾಡಿ, ಪ್ರತಿ ಒಂದರಲ್ಲೂ ಮನುಷ್ಯನ ದೇಹದಲ್ಲಿ ಮಾಂಸವು ಮಾಡುವ ಭಾಗವೂ, ನೀರಾಗಿ ಹೋಗುವ ಭಾಗವೂ, ದೇಹದಲ್ಲಿ ಅಂದೆ ಹಾಗೇ ಮಲದಲ್ಲಿ ವಿಸರ್ಜನೆಯಾಗುವ ಭಾಗವೂ, ಶೀಘ್ರ ಜೀರ್ಣನಭಾಗವೂ, ಲೋಹಭಾಗವೂ ಎಷ್ಟೆಷ್ಟು ಮಟ್ಟಿಗೆ ಇರುತ್ತವೆಯೋ ಅದನ್ನೆಲ್ಲಾ ವಿಂಗಡಿಸಿ ಬೇರೆ ಬೇರೆ ಶೀಸೆಗಳಲ್ಲಿಟ್ಟು ತೋರಿಸುತ್ತಾರೆ ಪ್ರದರ್ಶನಕ್ಕೆ ಹೋಗತಕ್ಕವರು ಈ ಭಾಗವನ್ನು ಚನ್ನಾಗಿ ನೋಡಿ ತಿಳಿದುಕೊಳ್ಳಬೇಕಾಗಿರುತ್ತದೆ. ಇದರಿಂದ ಯಾವ ಆಹಾರವನ್ನು ಸೇವಿಸಬೇಕೋ ಯಾವುದನ್ನು ಬಿಡಬೇಕೋ ಅಥವಾ ವಿ

...ಷ್ಟವೇಕೋ ತಿಳಿಯಬಾರದು. ಮತ್ತು ಬೆಲ್ಲಕ್ಕೆ ಹೆಚ್ಚಾಗಿ ಸುಣ್ಣ ಹಾಕಿ ಚೆನ್ನಾಗಿ ಕಡೆದು ತೆಗೆದಿರುವ ಬಿಳಿ ಸಕ್ಕರೆಯನ್ನು, [illegible] ವೇಯಾದದ್ದರಿಂದ ಬರೀ ಕಟ್ಟು ಕರೀ ಬೆಲ್ಲವನ್ನು ಇಟ್ಟಿ[illegible]ದಾರೆ. ಇದಲ್ಲದೆ ಮೂಳೆ ಇದ್ದಲಿನಿಂದಲೂ ಅಗ್ಗವಾದ ಯಂ[illegible]ಸಾಧನದಿಂದಲೂ ತಯಾರಾದ ಸಕ್ಕರೆಯೂ, ಉತ್ತರದೇಶದಲ್ಲಿ [illegible]ರುವ ಖಾದಿ ಎಂಬ ವಿಧಾನದಿಂದ ತಯಾರಾದ ಸಕ್ಕರೆಯೂ ಪ್ರದರ್ಶನಮಾಡಲ್ಪಟ್ಟಿವೆ. ಈ ವಿಧಾನಗಳನ್ನೆಲ್ಲಾ ವ್ಯವಸಾಯ ಇಲಾಖೆಯವರು ಪ್ರದರ್ಶನಶಾಲೆ ಮಂದಿರದಲ್ಲಿ ವಿವರಣೆಯ ಮೂಲಕ [illegible] ತೋರಿಸುವವರಾಗಿದ್ದಾರೆಂದು ಕೇಳುತ್ತೇವೆ. ಇದಲ್ಲದೆ ಮಡಕೆ[illegible] ಬೇರೆ ಬೇರೆ ತರಹ ಗೊಬ್ಬರಗಳನ್ನು ಹಾಕಿ ಪೈರು ಬೆಳೆ ಮಾಡಿ[illegible] ಫೋಟೋ ತೆಗೆದು ತೋರಿಸಿದ್ದಾರೆ ಮತ್ತು ರಾಗಿಯ ಬೆಳೆಯ[illegible] ಕೆಲವು ಮಡಕೆಗಳಲ್ಲಿ ಪ್ರದರ್ಶನ ಮಾಡಿರುವರು.

ಗುಪ್ತಧನಗಳ ಪ್ರದರ್ಶನವು

ಮೈಸೂರು ಸಂಸ್ಥಾನದ ಭೂಗರ್ಭಶೋಧನಾ ಇಲಾಖೆಯವರು ಈ ಸಂಸ್ಥಾನದ ಬೇರೆ ಬೇರೆ ಕಡೆಗಳಲ್ಲಿ ಸಂಚಾರಮಾಡಿ ಕಂಡುಹಿಡಿದಿರುವ ಗುಪ್ತಧನವನ್ನು ಒಂದು ಕೊಠಡಿಯಲ್ಲಿ ತಂದಿಟ್ಟು ಪ್ರದರ್ಶನ ಮಾಡಿರುವರು. ಈ ಪೈಕಿ ಮುಖ್ಯವಾದವುಗಳ್ಯಾವವೆಂದರೆ—ಚಿನ್ನ ಬೆರೆತ ಕಲ್ಲು, ಸ್ಪಂಜ್ ಚಿನ್ನ, ಬೇರೆ ಬೇರೆ ತರದ ಕಾಗೆಬಂಗಾರಗಳು, ಅವು ದೊರೆಯುವ ಗನಿಗಳು, ಮೆಲ್ಲಂಕನ್ನಡ (ಉಪನಯಂಗ)ಳನ್ನು ತಯಾರುಮಾಡುವ ವಿಧಾನಗಳು, ದಕ್ಷಿಣ ಆಫ್ರಿಕದ ಕಿಂಬರ್ಲಿಯ ಗಣಿಗಳಲ್ಲಿ ಸಿಕ್ಕುವ ವಜ್ರಗಳುಳ್ಳ ಕಲ್ಲುಗಳು, ಕಟ್ಟಡಗಳಿಗೆ ಉಪಯೋಗಿಸುವ ಬೇರೆಬೇರೆ ಜಾತಿಯ ಕಲ್ಲುಗಳು, ಕಡಕೊಳ (ಮೈಸೂರು)ದಲ್ಲೂ [illegible]ರಿನಲ್ಲೂ (ಚನ್ನರಾಯಪಟ್ಟಣ) ಸಿಕ್ಕುವ ಕೊರಂಡಮ್ ಎಂಬ ಕಲ್ಲು, ಕನಕಪುರದಲ್ಲೂ ತಗಡೂರಿನಲ್ಲೂ ದೊರಕುವ ನಾನಾ ತರದ ಕಬ್ಬಿಣ ತುಕ್ಕುಗಳು, ಕಾಂಸ (ಶಿವಮೊಗ್ಗ)ಯಲ್ಲೂ ಚಿತ್ರದುರ್ಗದಲ್ಲೂ ಇರುವ ನಾನಾ ರೂಪಗಳ ಮ್ಯಾಂಗನೀಸ್ ಲೋಹದ ತುಕ್ಕುಗಳು, ಬೆಂಗಳೂರಿನಲ್ಲಿ ವಿದ್ಯುಚ್ಛಕ್ತಿಯನ್ನು ಪ್ರಯೋಗಿಸಿ ಕರಗಿಸಿ ತಯಾರಾದ ಫರೋ ಮ್ಯಾಂಗನೀಸ್ ಲೋಹ, ಚಿತ್ರದುರ್ಗ [illegible] ಗಟ್ಟಿ ಹೊಸಳ್ಳಿಯಲ್ಲಿ ತಯಾರಾಗುವ ಉಕ್ಕು, ಮೊಳಕಾಲ್ಮುರುವಿನಲ್ಲಿ ತಯಾರಾಗುವ ಗಾಜು, ಇನ್ನೂ ಅನೇಕ ತರದ ಲೋಹಗಳು, ಇವೆಲ್ಲಾ ಪ್ರದರ್ಶನಮಾಡಲ್ಪಟ್ಟಿವೆ.

ಯಂತ್ರ ಸಾಧನಗಳು

ಈ ಪ್ರದರ್ಶನಶಾಲೆಯಲ್ಲಿ ಯಂತ್ರಸಾಧನಗಳನ್ನಿಟ್ಟಿರುವ ಭಾಗ [illegible] ಬಹು ಮುಖ್ಯವಾದದ್ದು. [illegible] ಈ ಭಾಗವನ್ನೇ [illegible] ಕೊಟ್ಟು ವಿಶೇಷ ಕುತೂಹಲದಿಂದ ನೋಡಿ, ಅವುಗಳ ಸ್ಥಿತಿಗತಿ [illegible] ಮುಂತಾದ ಸಂಗತಿಗಳನ್ನು ತಿಳಿದುಕೊಳ್ಳುತ್ತಿರುವರು. [illegible] ಮೊದಲು [illegible]ಯಲ್ಲಿ [illegible] ತಯಾರಿಗಾಗಿ ಉಪಯೋಗವಾಗತಕ್ಕ ಸಪ್ಪನವೂ ಸುಲಭಸಾಧ್ಯವೂ ಆದಂಥಾ ಸಾಧನಯಂತ್ರಗಳನ್ನು ಇಟ್ಟು, ಅವುಗಳಲ್ಲಿ ನಡೆಯತಕ್ಕ ಕೆಲಸಗಳನ್ನು ಚೆನ್ನಾಗಿ ವಿವರಿಸಿ ಹೇಳುತ್ತಾರೆ. ಈ ಯಂತ್ರಸಾಧನಗಳು ಈಗ [illegible]ನಲ್ಲಿರತಕ್ಕ [illegible] ಕೆಲಸ [illegible] ಸತಕ್ಕವಾಗಿರುವವು. [illegible] ಪ್ರಯೋಜನವಾದೀತೆನ್ನುವುದಕ್ಕೆ ಸಂಶಯವಿಲ್ಲ. [illegible] ಸುಲಭವಾದ ಯಂತ್ರಗಳು ಈ ದೇಶದವು, [illegible] ಕಂಪನಿಯವರು ಪ್ರದರ್ಶನಮಾಡಲ್ಪಟ್ಟಿವೆ. ಸರ್ಕಾರಿ ವ್ಯವಸಾಯದ ಫಾರಮಿನಿಂದ [illegible] ತರದ ಯಂತ್ರಗಳು, [illegible] ಮಾಡಿದ ಬೀಜ [illegible] ಬಿತ್ತುವ ಯಂತ್ರ, [illegible] ಬಿತ್ತುವುದು, [illegible] ಹೊಡೆಯುವುದು, [illegible] ಈ ಮೊದಲಾದ ವ್ಯವಸಾಯಕೆಲಸಗಳಲ್ಲಿ ರೈತರು ಉಪಯೋಗಿಸಬಹುದಾದ ದಿನಸಾಸರಿ ಯಂತ್ರಗಳು, ಇವೆಲ್ಲಾ ಪ್ರದರ್ಶನಮಾಡಿರುತ್ತಾರೆ. ಇವನ್ನು ಸರ್ಕಾರಿ ವ್ಯವಸಾಯದ ಫಾರಂ, ಕೋಲಾರ, [illegible]ನಗೂಡು, [illegible], ಚಿಕ್ಕಮಗಳೂರು, ಮದರಾಸ್ ಗವರ್ನಮೆಂಟ್ ವ್ಯವಸಾಯದ ಫಾರಂ, ಶಿವಮೊಗ್ಗ, ನಾಗಪುರದ ಗವರ್ನಮೆಂಟ್ ವ್ಯವಸಾಯದ ಫಾರಂ, ಈ ಮೊದಲಾದ ಸ್ಥಳಗಳಿಂದ ಬಂದಿರುತ್ತವೆ. ಮೈಸೂರು ಎಂ. [illegible] ಶ್ರೀನಿವಾಸಯ್ಯಂಗಾರ್ರು ಹೊಸದಾಗಿ ರಚಿಸಿರುವ ಭತ್ತ ಮತ್ತು ಇತರ ಧಾನ್ಯಾದಿಗಳನ್ನು ಕುಟ್ಟುವ ಯಂತ್ರವು ಬಹಳ ಉಪಯೋಗಕರವಾಗಿರುತ್ತದೆ. ಇದರಲ್ಲಿ ಧಾನ್ಯವಲ್ಲದೆ ರಸ್ತೆಗಳ ಜಲ್ಲಿ ಕಲ್ಲು, ಸೀಗೇಕಾಯಿ, ನಸ್ಯ, ಅವಲಕ್ಕಿ, ಮೆಣಸಿನಪುಡಿ, ಈ ಮೊದಲಾದವುಗಳನ್ನೂ ಕುಟ್ಟಬಹುದು. ಇದಲ್ಲದೆ ನಾಲ್ಕು ಒನಕೆಗಳು [illegible] ಭತ್ತ ಕುಟ್ಟುವ ಯಂತ್ರದ ನಮೂನೆಯೊಂದೂ, ಹುಲ್ಲು, ಸೊಪ್ಪು, [illegible] ನಾರು, ಈ ಮೊದಲಾದವನ್ನು [illegible] ಗಟ್ಟಿ (ಪಿಂಡಿ)ಗಳಾಗಿ ಕಟ್ಟುವುದಕ್ಕೆ ಉಪಯೋಗಿಸತಕ್ಕ ಯಂತ್ರದ ನಮೂನೆಯೊಂದೂ ತೋರಿಸಲ್ಪಟ್ಟಿವೆ. ಕಾಫಿ, ಟೀ, ರಾಗಿ, ಭತ್ತ, ಹೊಗೆಸೊಪ್ಪು, ಕಬ್ಬು, [illegible] ಈ ಮುಂತಾದ ಪೈರುಗಳನ್ನು ಹುಲುಸಾಗಿ ಬೆಳೆಯುವುದಕ್ಕೆ ಉಪಯೋಗಿಸಬಹುದಾದ ಬೇರೆ ಬೇರೆ ಜಾತಿಯ ಗೊಬ್ಬರಗಳನ್ನು [illegible] ಪಟ್ಟಣದ ಪ್ಯಾರಿ ಕಂಪನಿಯವರು ತಂದಿಟ್ಟು ಪ್ರದರ್ಶನ ಮಾಡಿರುತ್ತಾರೆ. ಇತ್ತಲಾಗಿ ನೇಯಿಗೆ ಶಾಲೆಯನ್ನು ನೋಡಿದರೆ ಈಗಿನ ಕಾಲದಲ್ಲಿ ನಮ್ಮ ದೇಶದ ನೇಯಿಗೆ ಕಸಬಿನವರು ಉಪಯೋಗಿಸಿ [illegible] ಸಂಪಾದಿಸಬಹುದಾದ ಕೆಲವು ಜಾತಿಯ ಲಾಳಿ ಮಗ್ಗಗಳು ಇಡಲ್ಪಟ್ಟು ಅವುಗಳಿಂದ ಆಗತಕ್ಕ ಕೆಲಸವನ್ನು ಸಾಕ್ಷಾತ್ತಾಗಿ ಮಾಡಿ ತೋರಿಸುತ್ತಿದ್ದಾರೆ. ಊಳೆ ಮಾಡುವ ಮತ್ತು [illegible] ಸಾಧನಗಳೂ ಉಂಟು. [illegible] ರೂಪಾಯಿ [illegible] ಮಗ್ಗವನ್ನು ಸಾಲಿಗ್ರಾಮದ ಸಂಘದವರು ಪ್ರದರ್ಶನ ಮಾಡಿದ್ದಾರೆ. ಲಾಳಿ ಎಸೆಯುವುದೂ, ಹಲಗೆ ಹೊಡೆಯುವುದೂ ಎರಡೂ ಇದರಲ್ಲಿ ನಡೆಯುತ್ತದೆ. ಹೊಳೆನರಸೀಪುರದಲ್ಲಿ ಉಪಯೋಗಿಸುವಂಥಾ ಮಗ್ಗಗಳು ಬಹಳ ತೃಪ್ತಿಕರವಾಗಿ ಕೆಲಸವನ್ನು ಮಾಡುತ್ತವೆ. ಇವನ್ನು ಪ್ರದರ್ಶನ[illegible] ತೋರಿಸುತ್ತಿದ್ದಾರೆ. [illegible] ರೂಪಾಯಿನಲ್ಲಿ ಇಂಥಾ ಒಂದು ಮಗ್ಗವನ್ನು ಮಾಡಿಕೊಳ್ಳಬಹುದು. ಎಷ್ಟೇ ಅಗಲವಾದ ಬಟ್ಟೆಯನ್ನು ನೇಯಬಹುದು. ಇದನ್ನು ಕಂಡುಹಿಡಿದ ಸಂಪತ್ತಯ್ಯಂಗಾರ್ರು ಇದನ್ನು ನೋಟಕರಿಗೆ ತೋರಿಸಿ ವಿವರಿಸುತ್ತಿದ್ದಾರೆ. ಇದಲ್ಲದೆ [illegible] ತಯಾರಾದ ಒಂದು ನಾರಿನ ಯಂತ್ರವು ಪ್ರದರ್ಶನಮಾಡಲ್ಪಟ್ಟಿದೆ. ಇದರಲ್ಲಿ ಕತ್ತಾಳೇ ನಾರನ್ನು ಬಹಳ ಸುಲಭವಾಗಿಯೂ ಜಾಗ್ರತೆಯಿಂದಲೂ [illegible]ವಾಗಿಯೂ ತೆಗೆಯಬಹುದು. ಹೀಗೆ ತೆಗೆದ ನಾರಿನಿಂದ ಅವರು ಹಗ್ಗ, ಹುರಿ, ಬ್ರಷ್, ಚೀಲ ಮೊದಲಾದದನ್ನು ತಯಾರುಮಾಡಿಸಿ, ತೋರಿಸಿರುವರು. ಇತ್ತಲಾಗಿ ಸರ್ಕಾರದವರು ಬೆಂಗಳೂರಿನಲ್ಲಿ ವರ್ಕ್ ಷಾಪ್ ಎಂಬ ಒಂದು ಕಾರ್ಖಾನೆಯನ್ನಿಟ್ಟು, ಅಲ್ಲಿ ತಮಗೆ ಬೇಕಾಗುವ ಯಂತ್ರಗಳನ್ನೆಲ್ಲಾ ಮಾಡಿಸುತ್ತಿದ್ದಾರಷ್ಟೆ. ಈ ಕಾರ್ಖಾನೆಯಿಂದಲೂ ಅನೇಕ ಜಾತಿಯ ಯಂತ್ರಸಾಧನಗಳನ್ನು ತರಿಸಿಟ್ಟು ಪ್ರದರ್ಶನಮಾಡಿದ್ದಾರೆ. ನೀರು ಎತ್ತುವುದು, ಸ್ಕ್ರೂ ಮೊಳೆಗಳನ್ನು ಮಾಡುವುದು, ಮುಂತಾದ ಕಾರ್ಯಗಳಿಗೂ ಅನುಕೂಲಿಸುವ ಯಂತ್ರಗಳಿರುತ್ತವೆ.

ಫಾರೆಸ್ಟ್ ಬಾಬಿನ ಪ್ರದರ್ಶನ

ಮೈಸೂರು ಸಂಸ್ಥಾನದ ಫಾರೆಸ್ಟ್ (ಜಂಗಲ್) ಗಳಲ್ಲಿ ಉತ್ಪತ್ತಿಯಾಗತಕ್ಕ ಗುಪ್ತಧನಗಳನ್ನು ಒಂದು ಕಡೆ ಇಟ್ಟು ಪ್ರದರ್ಶನ ಮಾಡಿರುವರು. ನಮ್ಮ ಫಾರೆಸ್ಟುಗಳಲ್ಲಿ ಎಂಥಾ ಲಾಭಕರವಾದ ಬೆಳೆಗಳು ಆಗುತ್ತವೆ ಎಂಬುವುದು ಅನೇಕಾನೇಕರಿಗೆ ತಿಳಿದಿಲ್ಲ. [illegible]ರೂ ವರ್ತಕರೂ ಇವನ್ನು ಪರಿಶೋಧನೆ ಮಾಡಿ, ಸಾಹಸಪಟ್ಟಲ್ಲಿ ಬರೀ ಜಂಗಲಿನ ಉತ್ಪತ್ತಿಯಿಂದಲೇ ಐಶ್ವರ್ಯವನ್ನು ಸಂಪಾದಿಸಬಹುದಾಗಿದೆ. ಇಂಥಾ ವಸ್ತುಗಳನ್ನು ಇಲ್ಲಿ ಪ್ರದರ್ಶನ ಮಾಡಿದ್ದಾರೆ. ಮೊದಲನೆಯದಾಗಿ ಈ ಸಂಸ್ಥಾನದ ಕಾಡುಗಳನ್ನೂ ಅವುಗಳ ವಿಸ್ತೀರ್ಣವನ್ನೂ ತೋರಿಸುವಂಥಾ ಒಂದು ಮ್ಯಾಪ್ (ನಕ್ಷೆ) ಇಡಲ್ಪಟ್ಟಿದೆ. ಇದರಿಂದ ನಮ್ಮ ರಾಜ್ಯದಲ್ಲಿ ಒಟ್ಟು ೨,೦೦೦ ಚದರ ಮೈಲಿ ಕಾಡುಗಳಿರುತ್ತವೆಂದು, ಅಂದರೆ ಈ ಸಂಸ್ಥಾನದ ಒಟ್ಟು ವಿಸ್ತೀರ್ಣದಲ್ಲಿ ಜಂಗಲುಗಳು ಏಳನೇ ಒಂದು ಭಾಗವೆಂದು ತಿಳಿಯುವುದು. ಮುಂದಕ್ಕೆ ಹೋದರೆ ಒಂದು ಆನೆಯ ತಲೆಯೂ ಅದರ ಅಗಾಧವಾದ ಕೋರೆದಂತಗಳೂ ಕಾಣಬರುವುವು. ಇದೇ ಪ್ರಸಿದ್ಧವಾದ "ನಂಜುಂಡೇಶ್ವರ" ಎಂಬ [illegible]ಗರಾಜನು. ಲೇಟ್ ಚಾಮರಾಜೇಂದ್ರ ಒಡೆಯರವರು ಡಿಲ್ಲಿ ದರ್ಬಾರಿಗೆ ದಯಮಾಡಿದ್ದಾಗಲೂ, ನಮ್ಮ ಸ್ವಾಮಿಯವರಾದ ಶ್ರೀ [illegible]ಜರವರು ಡಿಲ್ಲಿ ಪಟ್ಟಣದಲ್ಲಿ ನಡೆದ ಕಿರೀಟಧಾರಣೆಯ ದರ್ಬಾರಿಗೆ ದಯಮಾಡಿದ್ದಾಗಲೂ ಈ ಆನೆಯ ಮೇಲೆ ಅಂಬಾರಿಯಲ್ಲಿ ಕುಳಿತು ಮೆರವಣಿಗೆ ಹೊರಟಿದ್ದರೆಂದು ತಿಳಿಯುವುದು. ಈ ಪ್ರದರ್ಶನದಲ್ಲಿಟ್ಟಿರುವ ಜಂಗಲ್ ಉತ್ಪತ್ತಿಗಳು ಅಮೂಲ್ಯವಾಗಿರುತ್ತವೆ. ಜೇನುಮೇಣ, ಜೇನುತುಪ್ಪ, ಕಟ್ಟಡಗಳಿಗೆ ಉಪಯೋಗಿಸತಕ್ಕ ಬೇರೆ ಬೇರೆ ಜಾತಿಯ ಮರಗಳು, ವಿಚಿತ್ರವಾದ ಹಣ್ಣುಗಳು, ಔಷಧಿಗಳಿಗೆ ಉಪಯೋಗಿಸುವ ದಿನಸಾಸರಿ ಮೂಲಿಕೆಗಳು, ಬೇರೆ ಬೇರೆ ತರದ ಚಕ್ಕೆಗಳು, ತೊಗಟೆಗಳು, ಅರಗು, ಈ ಮೊದಲಾದ ನಾನಾ ವಸ್ತುಗಳನ್ನು ತಂದಿಟ್ಟಿದ್ದಾರೆ. ಇದಲ್ಲದೆ ಸುಮಾರು ೧೦ ವಿಧವಾದ ನಾರುಗಳೂ ಇಡಲ್ಪಟ್ಟಿವೆ. ಮತ್ತು ಸುಮಾರು ೬೦ ಜಾತಿಯ ಮರಗಳನ್ನು ಚಚ್ಚೌಕವಾದ ಇಟ್ಟಿಗೆಗಳಂತೆ ಕೊಯ್ದು ಪಾಲಿಷ್ ಹಾಕಿ ಒಂದರ ಮೇಲೊಂದು ಪೇರಿಸಿ ಅಲಂಕಾರವಾಗಿ ಇಟ್ಟಿದ್ದಾರೆ. ಪ್ರತಿ ಒಂದರ ಮೇಲೂ ಅದರ ಉಪಯೋಗವೇ ಮುಂತಾದ ವಿವರವು ಬರೆಯಲ್ಪಟ್ಟಿದೆ. ಇದಲ್ಲದೆ ಗೋಡೆಗಳ ಮೇಲೆ [illegible] ಅನೇಕ [illegible] ಹುಲ್ಲುಗಳೂ, ಕಾಡುಪ್ರಾಣಿಗಳ ತಲೆಗಳೂ, ಶ್ರೀಗಂಧದ ಮರಕ್ಕೆ ಈಗ ಹಿಡಿದಿರುವ ಸ್ಪೈಕ್ ಎಂಬ ರೋಗ [illegible]ಗಳೂ ಪ್ರದರ್ಶನ ಮಾಡಲ್ಪಟ್ಟಿರುತ್ತವೆ.

ವೈದ್ಯ ಮತ್ತು ಆರೋಗ್ಯಭಾಗ

ಇನ್ನೊಂದು ಕೊಠಡಿಗೆ ಹೋಗಿ ನಿಂತು ನೋಡಿದರೆ ನಾಲ್ಕು [illegible] ಮನುಷ್ಯನ [illegible] ಉಂಟುಮಾಡುವ ವಿಚಾರಗಳು ನಮ್ಮ ಕಣ್ಣಿಗೆ ಬೀಳುವವು. ಪ್ಲೇಗ್, [illegible], [illegible], ಇವೇ ಮೊದಲಾದ ರೋಗಗಳಿಂದ ಈ ಸಂಸ್ಥಾನದ ಒಳಗೂ ಹೊರಗೂ ಆಗುತ್ತಿರುವ ಮರಣಗಳ ಸಂಖ್ಯೆಗಳು ತುಖ್ತೆಗಳಲ್ಲಿ ಬರೆದು ವಿವರಿಸಲ್ಪಟ್ಟಿವೆ. ಈ ರೋಗಗಳನ್ನು ಹುಟ್ಟಿಸುವ ಕ್ರಿಮಿಕೀಟಗಳ ಆಕೃತಿಗಳನ್ನೂ ನೋಡಬಹುದು. ಕೆಲವು ಕ್ರಿಮಿಗಳನ್ನೂ ಮತ್ತು ಸೊಳ್ಳೆಗಳನ್ನೂ ಸಜೀವವಾಗಿ ಸೀಸೆಗಳಲ್ಲಿಟ್ಟು ತೋರಿಸಿದ್ದಾರೆ. ಆ ಕ್ರಿಮಿಕೀಟಗಳನ್ನು ಪರೀಕ್ಷೆ ಮಾಡತಕ್ಕ ವಿಧಾನಗಳನ್ನು ಅದಕ್ಕಾಗಿ ಉಪಯೋಗಿಸುವಂಥಾ ಅಮೂಲ್ಯವಾದ ಯಂತ್ರಸಾಧನಗಳನ್ನು ಅಲ್ಲಿ ನೋಡಬಹುದು. ಮೇಲ್ಕಂಡ ಮರಣಕರವಾದ ಕ್ರಿಮಿಕೀಟಗಳು ಮನುಷ್ಯನ ರಕ್ತವನ್ನು ಹಿಡಿದು ದೇಹದಲ್ಲಿ ಯಾವ ಯಾವ ರೀತಿ ಕೆಲಸಮಾಡಿ ಮರಣವನ್ನುಂಟುಮಾಡುವುದೋ ಇದನ್ನೂ ತೋರಿಸಿದ್ದಾರೆ. ಇದಲ್ಲದೆ ಬೆಂಡಿನಲ್ಲೂ ಇತರ ಪದಾರ್ಥಗಳಿಂದಲೂ ಮನುಷ್ಯನ ಅಂಗಾಂಗಗಳನ್ನೂ ಅವುಗಳ ಸ್ಥಾನ, ಆಕೃತಿ, ರೂಪ ಇವೇ ಮೊದಲಾದವುಗಳನ್ನೂ [illegible], ಪ್ರತ್ಯೇಕ ಪ್ರತ್ಯೇಕವಾಗಿಯೂ ಇಲ್ಲಿ ನೋಡಿ ತಿಳಿದುಕೊಳ್ಳಬಹುದು. ಮತ್ತು ಮೇಲ್ಕಂಡ ರೋಗಗಳನ್ನು ಹಬ್ಬದಂತೆ ತಡೆಯುವದಕ್ಕೆ ನಾನಾ ತರದ ಔಷಧಿಗಳನ್ನು ಹಾಕುತ್ತಾರಷ್ಟೆ. ಇವುಗಳಿಗೆ ಉಪಯೋಗಿಸತಕ್ಕ [illegible] ಮೊದಲಾದ ಯಂತ್ರಗಳೂ, ಶಿಶುಗಳು ಬೆಳೆದಂತೆ ಹಾಕತಕ್ಕ ಹಾಲಿನ ತಯಾರಿಯನ್ನು ಅಲ್ಲಿ ನೋಡಬಹುದು. ಮೈಸೂರು ಸಂಸ್ಥಾನದಲ್ಲಿ ಗವರ್ನಮೆಂಟಿನವರು ತಯಾರುಮಾಡಿಸುವ ಸಿಡುಬಿನ ಹಾಲು ಹಿಂದುಸ್ಥಾನದ ಯಾವ ಯಾವ ಪಟ್ಟಣಗಳಿಗೆ ಹೋಗಿ ಬಿಕರಿಯಾಗುವವೋ ಇದನ್ನು ಅಲ್ಲಿ ತಗಲಿಹಾಕಿರುವ ಒಂದು ಭೂಪಟದಿಂದ ತಿಳಿಯಬಹುದು.

ಈ ಕೊಠಡಿಯಲ್ಲಿ ಒಂದು ವಸ್ತುಮಾತ್ರ ನೇತ್ರಾನಂದಕರವಾಗಿರುತ್ತದೆ. ಕಳೆದ ೧೮೦೦ನೆ ಇಸವಿಯಲ್ಲಿ ಶ್ರೀರಂಗಪಟ್ಟಣವೂ ಅದರೊಳಗಣ ಕಟ್ಟಡಗಳೂ, ಟಿಪ್ಪುಸುಲ್ತಾನರ ಅರಮನೆಯೂ, ಕೋಟೆ ಕೊತ್ತಲಗಳೂ, ಇಂಗ್ಲೀಷರು ದಾಳಿ ಹತ್ತಿದ ಸ್ಥಳವೇ ಮುಂತಾದವೂ ಹೇಗಿದ್ದವೋ ಹಾಗೆಯೇ ಅರಮನೆ ಡಿವಿಜನ್ ಇಂಜನಿಯರ್ ಇಲಾಖೆಯವರು [illegible]ಯಲ್ಲಿ ತಯಾರುಮಾಡಿಟ್ಟು ಪ್ರದರ್ಶನ ಮಾಡಿರುವರು. ಇದರ ರಚನೆಯು ಬಹಳ ಶ್ರೇಷ್ಠವಾಗಿರುವುದು.

ಚರ್ಮದ ವಸ್ತುಗಳು

ಇನ್ನೊಂದು ಕೊಠಡಿಯಲ್ಲಿ ಬೆಂಗಳೂರಿನ ಸ್ಪೆನ್ಸರ್ ಕಂಪನಿಯವರೂ ಬಟ್ಲರ್ ಕಂಪನಿಯವರೂ ಜೀನು, ಲಗಾಮು ಮುಂತಾದ್ದನ್ನು ಜೋಡು, ಮೋಜಾ, [illegible] ಮೊದಲಾದ್ದನ್ನೂ ನೋಟಕರಿಗಾಗಿ ಇಟ್ಟು ಇರುತ್ತಾರೆ.

ಧಾನ್ಯಾದಿ ವಸ್ತುಗಳು.

ಪ್ರದರ್ಶನಶಾಲೆಯ ಮೂರು ನಾಲ್ಕು ಕೊಠಡಿಗಳಲ್ಲಿ ಈ ಸಂಸ್ಥಾನದ ನಾನಾ ಭಾಗಗಳ ದವಸಧಾನ್ಯಗಳನ್ನು ಇಟ್ಟು ತೋರಿಸಿದ್ದಾರೆ. ಹತ್ತಿ, ಬತ್ತ, ರಾಗಿ, ಜೋಳ, ನವಣೆ, ಹುರಳಿ, ಕಡಲೆ, ಅವರೆ, ಜೇನುತುಪ್ಪ, ಜೇನುಮೇಣ, ಕಬ್ಬು, ಬೆಲ್ಲ, ಸಕ್ಕರೆ, ಗೋಧಿ, ಮೂಲಿಕೆಗಳು, ಇವೇ ಮೊದಲಾದ ನಾನಾ ಪದಾರ್ಥಗಳೂ, ಪ್ರತಿ ಒಂದರಲ್ಲೂ ನಾನಾ ಜಾತಿಗಳೂ ಪ್ರದರ್ಶನ ಮಾಡಲ್ಪಟ್ಟಿವೆ. ಯಾವ ಧಾನ್ಯ ಎಲ್ಲಿ ಸಿಕ್ಕುತ್ತೆಂಬುದನ್ನು ಬಹಳ ಸುಲಭವಾಗಿ ತಿಳಿಯಬಹುದು. ಬೇರೆ ಬೇರೆ ದಿನಸಿನ [illegible]ಗಳನ್ನೂ ಈ ಕೊಠಡಿಗಳಲ್ಲಿ ನೋಡಬಹುದು.

ಒಂದು ಕೊಠಡಿಯಲ್ಲಿ ಶ್ರೇಷ್ಠವಾದ ಚಿತ್ರಕೆಲಸಗಳನ್ನು ಪ್ರದರ್ಶನ ಮಾಡಿದ್ದಾರೆ. ಲೋಕವಿಖ್ಯಾತರಾಗಿದ್ದು ಗತಿಸಿದ ರಾಜಾ ರವಿವರ್ಮರವರಿಂದಲೂ, ಮೈಸೂರಿನ ಚಿತ್ರಗಾರ ಕೃಷ್ಣಯ್ಯನವರಿಂದಲೂ ಬರೆಯಲ್ಪಟ್ಟಿರುವ ಚಿತ್ರಗಳೂ ತಸ್ವೀರುಗಳೂ ಕಣ್ಣಿಗೆ ತೋರಿಸುವಂತೆ ಸುಂದರವಾಗಿರುವವು. ಅವುಗಳಲ್ಲೆಲ್ಲಾ ಒಬ್ಬ ಹಿಂದೂ ಸ್ತ್ರೀಯು ದೇವಸ್ಥಾನದ ಬಾಗಿಲ ಹೊಸಲಿನಲ್ಲಿ ನಿಂತು ಬಡಬಗ್ಗರಿಗೆ ದಾನಧರ್ಮಗಳನ್ನು ಮಾಡುತ್ತಿರುವಂತೆ ರಾಜಾ ರವಿವರ್ಮರವರು ಚಿತ್ರಿಸಿರುವ ತಸ್ವೀರು ಬಹು ನೇತ್ರಾನಂದಕರವಾಗಿಯೂ ಮನೋಹರವಾಗಿಯೂ ಇರುವುದು. ಮತ್ತೊಂದು ಕೊಠಡಿಯೊಳಗೆ ಆಗಿಂದಾಗ್ಗೆ ಶ್ರೀಮನ್ಮಹಾರಾಜರವರಿಗೆ ಪ್ರಜೆಗಳಿಂದ ಒಪ್ಪಿಸಲ್ಪಟ್ಟಿರುವಂಥಾ ಬಗೆಬಗೆಯ ಚಿತ್ರಕೆಲಸ ಮಾಡಿದ ಸುಂದರವಾದ ನಾನಾ ತರದ ಕ್ಯಾಸ್ಕೆಟ್ಟುಗಳೂ ಅರಮನೆಯಲ್ಲಿರುವ ಇತರ ಕೆಲವು ಅಪೂರ್ವವಸ್ತುಗಳೂ ಪ್ರದರ್ಶನಮಾಡಲ್ಪಟ್ಟಿರುತ್ತವೆ.

ಇಂಡಿಯಾ ದೇಶದ ವೃತ್ತಾಂತಗಳು.

ಬೀಕಾನೀರ್ ಮಹಾರಾಜರವರು ನಾಳೆಯ ದಿನ ಸೀಮೆಯಿಂದ ವಾಪಸು ಹಿಂದುಸ್ಥಾನಕ್ಕೆ ಬರುವವರಾಗಿದ್ದಾರೆ.

***

ಆಸ್ಟ್ರೇಲಿಯಾ ದ್ವೀಪಕ್ಕೆ ಸೇರಿದ ಮೆಲ್‍ಬೋರ್ನ್ ಎಂಬ ನಗರದಲ್ಲಿ ಒಂದು ಆಸ್ಪತ್ರೆಯನ್ನು ಕಟ್ಟ ನಡಿಸಬೇಕೆಂದು ಮಿ॥ ಎಡ್ವರ್ಡ್ [illegible] ಎಂಬುವನು ೧೫ ಲಕ್ಷ ರೂಪಾಯಿ ದಾನ ಕೊಟ್ಟಿರುತ್ತಾನೆ.

***

ಫ್ರಾನ್ಸಿಗೆ ಸೇರಿದ [illegible]ದಲ್ಲಿ [illegible] ಪ್ರಾಣ ಕಳೆದುಕೊಂಡವರು ೧೯೩ ಜನರೆಂತಲೂ, ೧೩,೦೦೦ ಜನರು ಮನೆಮಠಗಳನ್ನು ಕಳೆಕೊಂಡರೆಂತಲೂ ಅಧಿಪತಿಗಳು ಆ ಪ್ರಾಂತ್ಯ ಹೋಗಿ ಕಷ್ಟಪಡುತ್ತಿರುವ ಜನರಿಗೆ ಸಹಾಯ ಸಂಪತ್ತನ್ನು ಒದಗಿಸಿಕೊಟ್ಟು ಬಂದರೆಂತಲೂ ತಂತೀವರ್ತಮಾನ ಬಂದಿದೆ.

***

ಪಂಜಾಬ್ ಅಧಿಪತ್ಯದಲ್ಲೆಲ್ಲಾ ಪ್ಲೇಗ್ ವ್ಯಾಧಿಯು ತುಂಬಾ ಪ್ರಬಲವಾಗಿದ್ದಾಗ್ಯೂ ಅಲ್ಲೀ ಇರುವ ಕಾಂಗ್ರಾ ಕಣಿವೆಯೊಳಗಾಗಲಿ [illegible] ಡಿಸ್ಟ್ರಿಕ್ಟಿನೊಳಗಾಗಲಿ, ಇನ್ನು ಕೆಲವು ಡಿಸ್ಟ್ರಿಕ್ಟುಗಳೊಳಗಾಗಲಿ ಅದು ಇದುವರೆಗೂ ಕಾಣಿಸಿಕೊಳ್ಳದೆ ಇರುವುದು ಬಹಳ ಆಶ್ಚರ್ಯಕರವಾಗಿರುತ್ತದೆ. [illegible] ಈಗ ಆ ಪ್ರಾಂತ್ಯದಲ್ಲಿ ಸಂಚಾರ ಮಾಡುತ್ತಲೂ ಅಲ್ಲಿನ ಜನಗಳ [illegible] ಮೊದಲಾದವುಗಳನ್ನು [illegible] ತಿಳಿಯುವುದು.

***

ರಾವಲ್ ಪಿಂಡಿ ಮೊಕದ್ದಮೆಯಲ್ಲಿ ಪೋಲೀಸಿನವರು ಮೂರು ಗುಂಪಿನ ಅಪರಾಧಿಗಳನ್ನು ಹಿಡಿದು ಅವರ ಮೇಲೆ ಮೊಕದ್ದಮೆ ತಂದಿದ್ದರು. ಮೊದಲನೆ ಗುಂಪಿನವರೆಲ್ಲಾ [illegible]ಗಿದ್ದರು. ಮ್ಯಾಜಿಸ್ಟ್ರೇಟರು ಅವರನ್ನೆಲ್ಲಾ ಖುಲಾಸ್ ಮಾಡಿ, ಪೋಲೀಸಿನವರು ಅವರ ಮೇಲೆ ತಂದ [illegible] ಸುಳ್ಳೆಂದು ಹೇಳಿದನು. ಎರಡನೇ ಗುಂಪಿನಲ್ಲಿ ೩೧ ಜನರಿದ್ದರು. ಇವರ ಮೇಲೂ ಯಾವ ಅಪರಾಧವೂ ರುಜುವಾತಾಗಲಿಲ್ಲವೆಂದು ಹೇಳಿ ಈಗ ಅವರನ್ನು ಸೆರೆಯಿಂದ ಬಿಡುಗಡೆ ಮಾಡಿದ್ದಾನೆ. ಮೂರನೇ ಗುಂಪಿನ ಅಪರಾಧಿಗಳನ್ನು ದರ್ಯಾಪ್ತು ಮಾಡುತ್ತಿದ್ದಾರೆ. ಇದರಲ್ಲಿ ಹನ್ನೊಂದು ಜನ ಅಪರಾಧಿಗಳಿರುತ್ತಾರೆ. ಮ್ಯಾಜಿಸ್ಟ್ರೇಟರು ಈ ಮೊಕದ್ದಮೆಯಲ್ಲಿ ಯಾವ ತೀರ್ಮಾನ ಹೇಳುವರೋ ಎಂದು ಅನೇಕರು ಕುತೂಹಲದಿಂದ ಎದುರುನೋಡುತ್ತಿರುವರು.

***

[illegible]ನಲ್ಲಿ ಆಯುರ್ವೈದ್ಯಸಂಘವೊಂದು ಸ್ಥಾಪಿತವಾಗಿರುತ್ತದೆ. ಈ ಸಮಾಜದವರು ದೇಶೀಯ ಮೂಲಿಕೆಗಳ ಮತ್ತು ಔಷಧಿಗಳ ಪ್ರದರ್ಶನವನ್ನು ಮುಂದಿನ ಜನವರಿ ೧೮ ನೆ ತಾರೀಖಿನಿಂದ ಒಂದು ವಾರದತನಕ ನಡಿಸಬೇಕೆಂದು ಗೊತ್ತುಮಾಡಿದ್ದಾರೆ. ಉತ್ಕೃಷ್ಟವಾದ ಔಷಧಗಳನ್ನೂ ಮೂಲಿಕೆಗಳನ್ನೂ ಪ್ರದರ್ಶನ ಮಾಡತಕ್ಕವರಿಗೆ ಬಹುಮಾನ ಮತ್ತು ಸರ್ಟಿಫಿಕೇಟು ಕೊಡುವಂತೆ ನಿಷ್ಕರ್ಷೆಯಾಗಿರುತ್ತದೆ. ಈ ಸಂಘದವರ ಉದ್ದೇಶವೇನೆಂದರೆ—ಆಯುರ್ವೇದ ವಿದ್ಯೆಯನ್ನು ಕಲಿತವರನ್ನು ಪರೀಕ್ಷಿಸಿ ಯೋಗ್ಯತಾಪತ್ರಗಳನ್ನು ಕೊಡುವುದು, ಆಯುರ್ವೇದವನ್ನು ಕಲಿಸುವುದಕ್ಕೆ ಪಾಠಶಾಲೆಗಳನ್ನಿಟ್ಟು ನಡಿಸುವುದು, ಅಂಥಾ ಪಾಠಶಾಲೆಗಳಿಗೆ ವಿದ್ಯಾರ್ಥಿಗಳನ್ನು ಕಳುಹಿಸಿ ವೇತನಕೊಟ್ಟು ವೈದ್ಯವನ್ನು ಕಲಿಸುವುದು, ಆಸ್ಪತ್ರೆ ಔಷಧಾಲಯಾದಿ

ಗಳನ್ನು ಕಲ್ಪಿಸುವುದು, ಪಂಡಿತರಲ್ಲಿ ಶಿಸ್ತು ವೈದ್ಯವನ್ನು ಕಲಿಯುವ ದಕ್ಕೆ ಸ್ಕಾಲರ್‌ಷಿಪ್‌ಗಳನ್ನು ಏರ್ಪಾಡುಮಾಡಿ ಪ್ರೋತ್ಸಾಹಪಡಿಸುವುದು, ಪ್ರಸಿದ್ಧ ನಗರಗಳಲ್ಲಿ ಉಪನ್ಯಾಸಗಳನ್ನು ಮಾಡಿಸುವುದು. ಸಾಮಾನ್ಯವಾಗಿ ಆಯುರ್ವೇದವಿದ್ಯೆಯ ವಿಶೇಷ ಪ್ರಚಾರಕ್ಕೆ ಬೇಕಾದ ಸಾಧನಪಡುವುದು, ಇವೇ.

* * *

ಬಾರಕ್‌ಪುರದಲ್ಲಿ ರಾತ್ರಿ ವಿದ್ಯುಚ್ಛಕ್ತಿಯ ದೀಪಗಳನ್ನು ಹಚ್ಚು ಉರಿಸುವಂತೆ ಬಂಗಾಳಾ ಗವರ್ನಮೆಂಟಿನವರು ಒಂದು ಕಂಪನಿಗೆ ಲೈಸೆನ್ಸು ಕೊಟ್ಟಿದ್ದಾರೆ.

* * *

ಬೊಂಬಾಯಿ ಪಟ್ಟಣದ ಕಾಲಾದೇವಿ ಬೀದಿಯಲ್ಲಿ ಅಲ್ಕ್ಸಾಂಡರ್ ಎಂಬ ಭಾರೀ ಪತ್ತೀ ಕಾರ್ಖಾನೆಗೆ ಕಳೆದ ಮಂಗಳವಾರ ರಾತ್ರಿ ಬೆಂಕಿ ಬಿದ್ದು ೪ ಲಕ್ಷ ರೂಪಾಯಿನ ಮಾಲುಗಳು ನಷ್ಟವಾದವು.

* * *

ಬೊಂಬಾಯಿ ಪಟ್ಟಣದಲ್ಲಿ ಪಾರ್ಸಿ ಜನರು ಒಂದು ಜನರಲ್ ಆಸ್ಪತ್ರೆಯನ್ನು ಕಟ್ಟಿಸಿಕೊಳ್ಳಬೇಕೆಂದು ಗೊತ್ತುಮಾಡಿ ತಮ್ಮ ತಮ್ಮಲ್ಲೇ ಚಂದಾ ಹಾಕಿ ಹತ್ತು ಲಕ್ಷ ರೂಪಾಯಿ ಕೂಡಿಸಿರುತ್ತಾರೆ.

* * *

ಆಗ್ರಾ ಪಟ್ಟಣದ ಪರಮೇಶ್ವರ ಲಾಲನೆಂಬೊಬ್ಬ ಕಾಯಸ್ಥ ಬ್ರಾಹ್ಮಣನು ವಿಲಾಯಿತಿಯಲ್ಲಿ ಬ್ಯಾರಿಸ್ಟರ್ ಪರೀಕ್ಷೆಯನ್ನು ಕೊಟ್ಟು ಕಳೆದ ವಾರ ವಾಪಸು ಬಂದನು. ಬ್ರಾಹ್ಮಣರು ಆತನನ್ನು ಪ್ರಾಯಶ್ಚಿತ್ತ ಪೂರ್ವಕವಾಗಿ ಸವ್ಯವಹಾರಕ್ಕೆ ಸೇರಿಸಿಕೊಂಡಿರುತ್ತಾರೆ.

* * *

ಗ್ವಾಲಿಯರ್ ಸಂಸ್ಥಾನದ ಸಿಂಧಿಯಾ ಮಹಾರಾಜರವರು ಲಶ್ಕರ್, ಮೊರಾರ್ ಮತ್ತು ಹಳೇ ಗ್ವಾಲಿಯರ್ ಎಂಬೀ ಭಾಗಗಳಲ್ಲಿ ವಿದ್ಯುಚ್ಛಕ್ತಿಯ ದೀಪಗಳನ್ನು ಹಚ್ಚುವುದಕ್ಕೂ ಆ ಶಕ್ತಿಯಿಂದ ಟ್ರಾಂಗಾಡಿಗಳನ್ನು ಓಡಿಸುವುದಕ್ಕೂ ಒಂದು ಕಂಪನಿಗೆ ಕಂಟ್ರಾಕ್ಟು ಕೊಟ್ಟಿದ್ದಾರೆ.

* * *

ನವಾನಗರ ಸಂಸ್ಥಾನದ ಜಾಂಸಾಹೇಬರಿಗೆ (ರಂಜಿತ್‌ಸಿಂಗ್‌ಜಿಯವರು) ಬೊಂಬಾಯಿ ಪಟ್ಟಣದಲ್ಲಿ ಕಾಯಿಲೆಯಾಗಿದೆ ಎಂದು ತಿಳಿಸಿದ್ದೆವಷ್ಟೆ. ಡಾಕ್ಟರುಗಳು ಅವರ ಶರೀರ ಸ್ಥಿತಿಯನ್ನು ಪರೀಕ್ಷೆ ಮಾಡಿ ಅವರು ಕೆಲವು ಕಾಲ ವಿಲಾಯಿತಿಯಲ್ಲಿದ್ದು ಬರಬೇಕೆಂದು ಅಭಿಪ್ರಾಯಪಟ್ಟಿದ್ದಾರೆ.

* * *

ಮುಂದಿನ ತಿಂಗಳ ಎರಡನೇ ವಾರ ಅನಂತಪುರ ಜಿಲ್ಲೆ ಸಂಸ್ಥಾನದ ಶ್ರೀಮಾಲನೆಂಬ ಪ್ರಜಾಪ್ರತಿನಿಧಿ ಸಭೆಯು ಸೇರುವುದಾಗಿತ್ತಷ್ಟೆ. ದಿವಾನ್ ಬಹದ್ದೂರ್ ಪಿ. ರಾಜಗೋಪಾಲಾಚಾರ್ಯರು ಮುಂದಿನ ಗುರುವಾರದ್ದೇ ಮೈಸೂರಿಗೆ ಹೋಗಿ ಆ ಸಂಸ್ಥಾನದ ದಿವಾನ್ ಗಿರಿಯ ಅಧಿಕಾರವನ್ನು ವಹಿಸಿಕೊಳ್ಳುವರು.

* * *

ಬರ್ದಾನ್ ಅಧಿಪತ್ಯಕ್ಕೆ ಸೇರಿದ ಘಾಟಲ್ ಎಂಬ ಊರಿನಲ್ಲಿ ಒಬ್ಬ ಬಂಗಾಳೀ ನ್ಯಾಯಾಧಿಕಾರಿಯಾಗಿರುತ್ತಾನೆ. ಆತನ ಬಳಿ ನ್ಯಾಯದಿಂದ ಕಳ್ಳರನ್ನು ಹಿಡಿದದ್ದಕ್ಕಾಗಿ ಅವರು ಎತ್ತಿಕೊಂಡು ಹೋಗಿ [illegible] ಕಾಯಿಗಳನ್ನು ಬಿಚ್ಚಿಸಿ ಬಂದರು. ಸರ್ಕಾರದವರು ಆತನ ಸ್ವಂತ ನಾಗರಿಕರಿಗೆ ವರ್ತಿಸಿ, ಬಂದು ಸಭೆ ನಡಿಸಿ ಆತನಿಗೆ ಬಹುಮಾನವನ್ನು ಕೊಡಿಸಿರುತ್ತಾರೆ.

* * *

ಮದರಾಸ್ ಮುನಿಸಿಪಾಲಿಟಿಯವರು ಅಲ್ಲಿನ ಪೀಪಲ್ಸ್ ಪಾರ್ಕ್ ಎಂಬ ಉದ್ಯಾನವನದಲ್ಲಿ ವಿಕ್ಟೋರಿಯಾ ಪಬ್ಲಿಕ್ ಹಾಲ್ ಬಂಗಲೆಯ ಸಮೀಪದಲ್ಲಿ ಒಂದು ಭಾರೀ ಮ್ಯುನಿಸಿಪಲ್ ಆಫೀಸನ್ನು ಕಟ್ಟಬೇಕೆಂದು ೭ ಲಕ್ಷ ರೂಪಾಯಿ ಸ್ಯಾಂಕ್ಷನ್ ಮಾಡಿದ್ದಾರೆ. ಈ ಕಟ್ಟಡದ ಪ್ಲಾನ್ (ನಕ್ಷೆ) ತಯಾರುಮಾಡಿ ಕೊಟ್ಟ ಇಂಜಿನಿಯರಿಗೆ ೫೦೦ ರೂಪಾಯಿ ಬಹುಮಾನಕೊಟ್ಟರು.

* * *

ಸಾವಾರ್‌ದಲ್ಲಿ ಪ್ರಕಟಿಸಲ್ಪಡುವ "ಕರ್ನಾಟಕಪತ್ರ" ವೆಂಬ ವರ್ತಮಾನಪತ್ರಿಕೆಯು, ಇಂಗ್ಲೀಷಿನವರ ಪ್ರಭುತ್ವವನ್ನು ಕುರಿತು ದೂಷಿಸಿ ಒಂದು ಲೇಖನವನ್ನು ಬರೆದಿರುವುದಕ್ಕಾಗಿ, ಅಲ್ಲಿನ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು, ಸದರಿ ಪತ್ರಿಕೆಯ ಪತ್ರಿಕಾಕರ್ತರಿಗೆ ಇನ್ನು ಮುಂದೆ ಅಂಥಾ ಲೇಖನಗಳನ್ನು ಬರೆಯಕೂಡದೆಂದು ಎಚ್ಚರಿಕೆ ಕೊಟ್ಟಿರುತ್ತಾರೆಂದು ತಿಳಿಯುವದು.

* * *

ಆರ್ವೇ ವಾರ ಹಿಂದುಸ್ಥಾನದಲ್ಲಿ ಒಟ್ಟು ೯,೫೨೭ ಮಂದಿ ಪ್ಲೇಗ್ ಜಾಡ್ಯದಿಂದ ಮರಣಹೊಂದಿದರು. ಈ ಪೈಕಿ ಬೊಂಬಾಯಿ ಅಧಿಪತ್ಯ ೩,೩೩೦ ಮರಣಗಳು, ಮಧ್ಯಪ್ರಾಂತ್ಯಗಳು ೬೮೦; ಮೈಸೂರು ಸಂಸ್ಥಾನ ೫೭೩, ಪಂಜಾಬ್, ೬೧೧; ಮಧ್ಯ ಇಂಡಿಯಾ ೮೯೦, ಹೈದರಾಬಾದ್ ಸಂಸ್ಥಾನ ೬೦೧, ಸಂಯುಕ್ತ ಆಧಿಪತ್ಯಗಳು ೧೧೯೯, ಮದರಾಸ್ ಅಧಿಪತ್ಯ ೧೬೪೯, ಬಂಗಾಳಾ ಅಧಿಪತ್ಯ ೪೮೯ ಬರ್ಮಾ ೩೨, ರಾಜಪುಟಾನಾ ೩೪, ಈ ರೀತಿ ಮರಣಗಳಾಗಿರುತ್ತವೆ.

* * *

ವಸ್ತ್ರಗಳು ಸಿಕ್ಕುವುದು ಅಪರೂಪವಾಯಿತ್ತು. ಜನರು ವಸ್ತ್ರಬೇಕೆಂದು ಆತುರಪಟ್ಟು ಕೇಳುತ್ತಿದ್ದಾರೆ. ಆದಕಾರಣ ಈ ವರುಷ ವಸ್ತ್ರದ ಬೆಲೆಯು ಶೇಕಡಾ ೨೦ ರಷ್ಟು ಹೆಚ್ಚಿರುತ್ತದೆ. ಈಚೀಚೆಗೆ ಪಬ್ಲಿಕ್ ನಾಣ್ಯದವರು ಬೇರೆ ಹೆಚ್ಚಾಗಿ ವಸ್ತ್ರಗಳನ್ನು ಕೊಳ್ಳುತ್ತಿರುವುದೂ ಅದರ ಬೆಲೆ ಹೆಚ್ಚಿರುವುದಕ್ಕೆ ಕಾರಣವಾಗಿದೆ. ಇಷ್ಟತ್ತು ವರುಷಗಳ ಕೆಳಗೆ ಒಂದು ಕ್ವಾರ್ಟರಿಗೆ ೧೪೦ ರೂಪಾಯಿಯಂತೆ ವಸ್ತ್ರಸಿಕ್ಕುತ್ತಿದ್ದದ್ದು ಈಗ ೧೮೦ ರೂಪಾಯಿವರೆಗೆ ಕ್ರಯ ಹೆಚ್ಚಿರುತ್ತದೆ.

* * *

ಬರೋಡಾ ಸಂಸ್ಥಾನದಲ್ಲಿ ಗಾಯಕವಾಡ ಮಹಾರಾಜರವರು ತಮ್ಮ ಸರ್ಕಾರಿ ನೌಕರರ ಮೇಲೆ ಪ್ರಜೆಗಳ್ಯಾರಾದರೂ ದೂರು ಕೊಡುವುದಕ್ಕೆ ಅವಕಾಶವಿರಬೇಕೆಂದು. ರಿಯಾಯತಿಯನ್ನು ತೋರಿಸಿದ್ದಾರೆ. ಇದಲ್ಲದೆ ಮಹಾರಾಜರವರು ಏಳು ಮಂದಿ ದೊಡ್ಡ ಮನುಷ್ಯರುಳ್ಳ ಒಂದು ಸಭೆಯನ್ನು ಕಲ್ಪಿಸಿ, ಈ ಸಭಿಕರು ತಮಗೆ ರಾಜ್ಯಭಾರ ನಡಿಸುವುದರಲ್ಲಿ ಸಲಹೆಗಳನ್ನು ಕೊಡುವಂತೆ ಏರ್ಪಾಡು ಮಾಡಿರುವರು. ಈ ಸಭೆಯಲ್ಲಿ ದಿವಾನರೂ ಇಲಾಖಾ ಮುಖ್ಯಾಧಿಕಾರಿಗಳೂ ಮೂವರು ಸರ್ಕಾರಿ ಮೆಂಬರುಗಳಾಗಿರತಕ್ಕದ್ದು. ಉಳಿದ ಮೆಂಬರುಗಳ ಪೈಕಿ ಮಹಾರಾಜರವರೇ ಕೆಲವು ಪ್ರಜಾಪಕ್ಷಪಾತಿಗಳನ್ನು ಚುನಾಯಿಸುವರು. ಉಳಿದವರನ್ನು ಡಿಸ್ಟ್ರಿಕ್ಟ್ ಪಂಚಾಯತಿ ಸಭೆಗಳವರು ಚುನಾಯಿಸಿ ಕಳುಹಿಸುವರು.

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸ್ಥಳ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ಕಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ಸ್ಥಳ ಕೊಡಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿಟರ್.

ಕರೆಸ್‌ಪಾಂಡೆನ್ಸ್.

ಉಪಾಧ್ಯಾಯರ ಸಂಬಳ ವಿಚಾರವು.

ಅಯ್ಯಾ!

ದೇಶದ ಅಭಿವೃದ್ಧಿಗೂ ನಾಗರೀಕತೆಗೂ ವಿದ್ಯಾಭ್ಯಾಸವೇ ಮುಖ್ಯಾಂಶವೆಂಬುವದು ಸರ್ವರಿಗೂ ವಿದಿತವಾಗಿರುವದಷ್ಟೆ. ಯಾವ ಯಾವ ದೇಶದಲ್ಲಿ ವಿದ್ಯಾಭ್ಯಾಸವು ಕ್ರಮವಾಗಿ ನಡಿಸಲ್ಪಡುತ್ತಿದೆಯೋ ಆಯಾ ದೇಶವು, ಅಂದರೆ ದೃಷ್ಟಾಂತವಾಗಿ ಐರೋಪ ದೇಶವು, ಅಭಿವೃದ್ಧಿಗೆ ಬಂದಿರುವ ಸಂಗತಿಯು ತಮ್ಮೆಲ್ಲರಿಗೂ ವೇದ್ಯವಾಗಿರಬಹುದು. ದೇಶವನ್ನು ಅಭಿವೃದ್ಧಿಗೆ ತರುವದಕ್ಕಾಗಿಯೇ ನಮ್ಮ ಶ್ರೀಮನ್ಮಹಾರಾಜಾ ಸರ್ಕಾರದವರು ವಿದ್ಯಾಭ್ಯಾಸಕ್ಕೆ ವಿಶೇಷ ದ್ರವ್ಯವನ್ನು ವ್ಯಯ ಮಾಡುತ್ತಿರುವರು. ಇವರ ಆಜ್ಞೆಯಂತೆ ಅನುಸಾರವಾಗಿ ತಾಲ್ಲೂಕು, ಡಿಸ್ಟ್ರಿಕ್ಟು ಮೊದಲಾದ ದೊಡ್ಡ ದೊಡ್ಡ ಸ್ಥಳಗಳಲ್ಲಿ ವಿದ್ಯಾಭ್ಯಾಸವು ಸರಿಯಾಗಿ ನಡೆದು, ಜನರು ವಿವೇಕಸ್ಥರಾಗುತ್ತಿರುವರು. ಆದರೆ ಹಳ್ಳಿಗಳಲ್ಲಿ ರತಕ್ಕ ಹೋಬಳಿ ಸ್ಕೂಲ್ಮಾಸ್ಟರುಗಳಿಗೆ ಹೊಟ್ಟೆತುಂಬಾ ಅನ್ನ ದಕ್ಕುವಷ್ಟು ಸಂಬಳವನ್ನಾದರೂ ನಮ್ಮ ಸರ್ಕಾರದವರು ದಯಪಾಲಿಸದಿರುವದರಿಂದಲೂ ತಮ್ಮ ಮಕ್ಕಳಿಗೆ ವಿದ್ಯೆಯನ್ನು ಹೇಳಿಸತಕ್ಕ ಹಳ್ಳಿಯ ಜನರಾದರೂ ಈ ಬಡಮಾಸ್ಟರುಗಳಿಗೆ ಅಲ್ಪಸ್ವಲ್ಪ ಸಹಾಯ ಮಾಡದಿರುವದರಿಂದಲೂ ಅವರ ಮಕ್ಕಳಿಗೆ ಪ್ರೈಮರಿ ವಿದ್ಯಾಭ್ಯಾಸವಾದರೂ ಕ್ರಮವಾಗಿ ನಡಿಯದೆ ಬಾಲಕರು ಮೂಢರಾಗುತ್ತಿದ್ದಾರೆ. ಹೊಟ್ಟೆತುಂಬಾ ಆಹಾರಕೊಡದಿದ್ದರೆ ಯಾವ ಪ್ರಾಣಿತಾನೇ ಸರಿಯಾಗಿ ಕೆಲಸ ಮಾಡಬಲ್ಲದು? ಈ ಬಡಮಾಸ್ಟರುಗಳು ಅರೆ ಹೊಟ್ಟೆಯಾಗಿ ತಿಂದು ಸಂಕಟಪಡುತ್ತಾ ತಮ್ಮ ಕೆಲಸ ಮಾಡುವದನ್ನು ನಾನು ನೋಡಿದ್ದೇನೆ. ತಾವೂ ನೋಡಿರಬಹುದು. ಇವರು ಸಂಕಟಪಡುತ್ತಿರುವ ವಿಷಯವು ವಿದ್ಯಾವಿಶಾರದರೂ ದಯಾರ್ದ್ರಸ್ವಭಾವರೂ ಆದ ನಮ್ಮ ದಿವಾನ್ ಸಾಹೇಬರವರ ಸೌಜನ್ಯಾದ ಚಿತ್ತಕ್ಕೆ ಒಂದು ಕಳೆದ ದಸರಾ ವಿಷಯದಲ್ಲಿ ಹೋಬಳಿ ಸ್ಕೂಲು ಮಾಸ್ಟರುಗಳಿಗೆ ೭ ರೂಪಾಯಿಯಿಂದ ೧೦ ರೂಪಾಯಿವರೆಗೆ ಬಡ್ತಿ ಕೊಡತಕ್ಕವರಾಗಿ ಅಪ್ಪಣೆ ಕೊಡಿಸಿದ್ದು ಎಲ್ಲರಿಗೂ ಜ್ಞಾಪಕವಿರಬಹುದು. ಹೀಗೆ ಅಪ್ಪಣೆ ಕೊಡಿಸಿದ ಸಂಗತಿಯನ್ನು ಮಾಸ್ಟರುಗಳು ತಿಳಿದು ಬಹಳ ಆನಂದದಿಂದ ಆಗ ಪಟ್ಟ ಸಂತೋಷಕ್ಕೆ ಮಿತಿಯಿಲ್ಲ. ಆದರೆ ಇವರಿಗೆ ಬಡ್ತಿಯಾಗಲಿಲ್ಲ. ಅವರು ನಿರಾಶರಾಗಿ ಯೋಚನೆಯಿಂದ ದಿನಗಳನ್ನು ಸರಿಯಾಗಿ ಬೋಧಿಸದೆ ಕಾಲ ಕಳೆಯುತ್ತಿರುವರು. ಪ್ರತಿನಿಧಿಗಳು ಸರ್ವಾಂಗ ಪ್ರತಿಯಲ್ಲಿಯೂ ವಿಷಯವಾಗಿ ಪ್ರಜೆಗಳ ಅನುಕೂಲವನ್ನು ಸರ್ಕಾರಕ್ಕೆ ತಿಳಿಸಿ ಪ್ರಜೆಗಳಿಗೆ ಅನುಕೂಲವನ್ನು ಮಾಡಿಸುತ್ತಲೂ ಇರುವುದರಿಂದ ಈ ಮಾಸ್ಟರುಗಳು ಪಡುವ ಕಷ್ಟವನ್ನು ನಮ್ಮ ದಿವಾನ್ ಸಾಹೇಬರವರ ಮೂಲಕ ನಮ್ಮ ಶ್ರೀಮನ್ಮಹಾರಾಜರವರ ಸನ್ನಿಧಾನದಲ್ಲಿ ವಿಜ್ಞಾಪಿಸಿ, ಈ ವರುಷವೇ ತಲಪು ಬಡ್ತಿ ಮಾಡಿಸಿ ಕೊಟ್ಟು ಅವರ ಜೀವನೋದ್ಧಾರವನ್ನು ಮಾಡಿದ ಪಕ್ಷದಲ್ಲಿ ಪ್ರಜೆಗಳ ಮಕ್ಕಳಿಗೆ ಪ್ರೈಮರಿ ವಿದ್ಯಾಭ್ಯಾಸವು ಕ್ರಮವಾಗಿ ನಡಿಯುವಂತೆ ಮಾಡಿಕೊಟ್ಟ ಧರ್ಮಕ್ಕೆ ಭಾಗಿಗಳಾಗುವಿರೆಂದು ಸಂಬಿ ಅರಿಕೆ ಮಾಡಿಕೊಂಡಿದ್ದೇನೆ.

ವಿದ್ಯಾಭಿಮಾನಿ.

ಕಳೆದ ವಾರ ನಾವು ಪ್ರಕಟಿಸಿದಂತೆ ಸರ್ಕಾರದವರು ತಾಲ್ಲೂಕಿನ ಮತ್ತು ಹೋಬಳಿಯ ಸ್ಕೂಲ್ ಮಾಸ್ಟರುಗಳ ಸಂಬಳವನ್ನು ಇದೇ ಅಕ್ಟೋಬರ್ ಗಾರಭ್ಯವಾಗಿ ಒಂದೊಂದು ರೂಪಾಯಿನ ಪ್ರಕಾರ ಬಡ್ತಿ ಮಾಡಿ ಹುಕುಂ ಕೊಟ್ಟಿದ್ದಾರೆ. ಇದರಿಂದ ಕಡೇ ದರ್ಜೆಯ ಸ್ಕೂಲ್ ಮಾಸ್ಟರ ಸಂಬಳವು ೭ ರಿಂದ ೮ ರೂಪಾಯಿ ಆಯಿತು. ಇದನ್ನು ೧೦ ರೂಪಾಯಿಗೆ ಬಡ್ತಿ ಮಾಡಬೇಕೆಂದು ಅಭಿಲಾಷೆಪಡುತ್ತೇವೆಂತಲೂ, ಆದರೆ ಸದ್ಯ ಹಣ ಒದಗದೆ ಇರೋಣದರಿಂದ ಆ ರೀತಿ ಮಾಡಲು ಸಾಧ್ಯವಾಗದೆ ಹೋಯಿತೆಂತಲೂ, ಮುಂದೆ ದ್ರವ್ಯಾನುಕೂಲವಾದಾಗ್ಗೆ ೧೦ ರೂಪಾಯಿ ಮಾಡಲಾಗುವುದೆಂತಲೂ ಗವರ್ನಮೆಂಟಿನವರು ಈ ಹುಕುಮಿನಲ್ಲಿ ತಿಳಿಸಿರುತ್ತಾರೆ.—ಎಡಿ.]

ತಾಲ್ಲೋಕು ವರ್ತಮಾನಗಳು.

ಕೋಲಾರ್‌ಗೋಲ್ಡ್‌ಫೀಲ್ಡ್ಸ್.—ಮ್ಯುನಿಸಿಪಾಲಿಟಿಯು ಅನೇಕ ನೌಕರರನ್ನು ಬದಲಾವಣೆ ಮಾಡಿದ್ದಾರೆ.—ಮಳೇ ಮಳೇ ಎಂಗಳೆಲ್ಲಾ ಬಿಸಲು ಕಾದು ರಾತ್ರಿ ಎಲ್ಲಾ ಮಳೆ ಬಿದ್ದು ನಿಂತರೆ ಸಾಕಪ್ಪಾ ಎಂಬಂತೆ ಮಾಡಿತು. ಸುಮಾರು ೩ ಅಂಗುಲ ಮಳೆ ಬಿದ್ದು ಈಗ ನಿಂತಿದೆ.—ಈ ಊರಿನ ಯಜಮಾನತನದಲ್ಲಿ ಜೀವಿಸುವ ಸುಬ್ಬುಭಟ್ಟರೆಂಬುವವರು ಧರ್ಮಾರ್ಥ ಹಣವನ್ನು ಎತ್ತಿ ಯಡತೊರೆ ಹತ್ತಿರ ಕಾವೇರಿಗೆ ಸೋಪಾನ ಕಟ್ಟಿ ಜನರು ಕಾವೇರಿಗೆ ಇಳಿಯಲು ಅನುಕೂಲ ಮಾಡಬೇಕೆಂಬುವ ಪ್ರಯತ್ನ ಮಾಡುತ್ತಾ ಇದ್ದಾರೆ.—ಈ ಊರಿಗೆ ಅಕ್ಕಪಕ್ಕದಲ್ಲಿರುವ ಹಳ್ಳಿಗಳಲ್ಲಿ ಪ್ಲೇಗ್ ಇದೆಯಾದ್ದರಿಂದ ಅಲ್ಲಿನ ಅನೇಕರು ಇಲ್ಲಿಗೆ ಬಂದು ಆಶ್ರಯಿಸಿರುವದರಿಂದ ಅಲ್ಲಲ್ಲಿ ಇಲಿಗಳು ಸಾಯುತ್ತ ಬೀಳುತ್ತವೆ. ಜನರು ಭಯಪಟ್ಟು ಹೋಗದೆ ಸಾಮಾನುಗಳನ್ನು ಬಿಡಿಸಿಕೊಳ್ಳುವ ಪ್ರಯತ್ನದಲ್ಲಿದ್ದಾರೆ. ಯಾರಿಗಾದರೂ ಒಬ್ಬರಿಗೆ ರೋಗವೇನಾದರೂ ಕಾಣಿಸಿಕೊಂಡಲ್ಲಿ ಕೂಡಲೆ ಸುದ್ದಿ ಹೇಳಬೇಕೆಂಬುವ ಯೋಚನೆಯಲ್ಲಿದ್ದಾರೆ.

ಹರಿಹರ.—ಈ ನಮ್ಮ ಗ್ರಾಮಕ್ಕೆ ಇದುವರೆಗೂ ಮಳೆ ಇಲ್ಲದೆ ಪೈರುಗಳೆಲ್ಲಾ ಒಣಗಿ ಬಹಳ ಹೀನಸ್ಥಿತಿಯಲ್ಲಿದ್ದವು. ದೇವಾನುಗ್ರಹದಿಂದ ಈಗ ೮—೧೦ ದಿವಸದ ಕೆಳಗೆ ಮಳೆಯು ಸಂಪೂರ್ಣವಾಗಿ ಪೈರುಗಳೆಲ್ಲಾ ಬಹಳ ಚೆನ್ನಾಗಿರುವದಲ್ಲದೆ ಇದನ್ನು ನೋಡಿ ನಾವುಗಳು ಬಹಳ ಸಂತೋಷಭರಿತರಾಗಿರುತ್ತೇವೆ. ಆದರೆ ಹೊಲ ತೆನೆಗಳಿಗೆ ಚಿಲ್ಲಿಹುಳಗಳು ಹತ್ತಿ ನಷ್ಟಮಾಡುವಂತೆ ತೋರುತ್ತದೆ. ಇದಕ್ಕೆ ಯಾವ ಔಷಧಿಯಾದರೂ ತಕ್ಕ ಔಷಧ ಇದ್ದರೆ ದಯವಿಟ್ಟು ಹೆಸರು ವಿಳಾಸ ತಿಳಿಸಬೇಕು. ನಮ್ಮ ಅಸ್‌ಪಾಸ್ ಗ್ರಾಮಗಳಲ್ಲಿ ಇಲಿಗಳು ಬೀಳಲು ಶುರು ಆಗಿರುತ್ತದೆ. ಮುಂದೆ ಪ್ಲೇಗಾದೀತೋ ಹೇಳಲು ಅಸಾಧ್ಯ. [ಹುಳು ಹಿಡಿದಂಥ ಕೆಲವು ಜೋಳದ ತೆನೆಗಳನ್ನು ಭಾಗಿಮಾಡಿ ಬೆಂಗಳೂರಿನಲ್ಲಿರುವ ಮೈಸೂರು ಗವರ್ನಮೆಂಟ್ ವ್ಯವಸಾಯದ ಇಲಾಖಾ ಮುಖ್ಯಾಧಿಕಾರಿಗಳಾದ ಡಾಕ್ಟರ್ ಲೆಹ್ಮನ್‌ರವರಿಗೆ ಕಳುಹಿಸಿದಲ್ಲಿ ಅವರು ಆ ಹುಳುಗಳನ್ನು ಪರೀಕ್ಷೆ ಮಾಡಿ ನೋಡಿ ತಕ್ಕ ಪರಿಹಾರವನ್ನು ತಿಳಿಸುವರೆಂದು ಸೂಚಿಸುತ್ತೇವೆ.—ಎಡಿ.]

ಮಂಜರಾಬಾದು.—ಈ ಪ್ರಾಂತ್ಯದಲ್ಲಿ ೧೫ ದಿವಸದಿಂದಲೂ ಮಳೆಯೇನೂ ಹೆಚ್ಚಾಗಿ ಬರಲಿಲ್ಲ. ಇದು ಯಾವುದಕ್ಕೂ ಕೆಟ್ಟುವಿನ ಹಾಗಿದ್ದುದರಿಂದ ಈ ಪ್ರಾಂತ್ಯದ ಎಲ್ಲಾ ತೋಟಗಳಲ್ಲಿ ಬಹಳ ಕ್ರಿಮಿಯನ್ನು ಕಾಣುತ್ತ ಒಣಗುತ್ತಾ ಇದೆ. ಕಾಫೀ ಫಸಲಿಗೆ ಮಾತ್ರ ಬಹಳ ನಷ್ಟವಾಗಿ ಹೆಚ್ಚು ಮಳೆಯಾದ ಕೆಲಸದ ಗಸಲು ನಷ್ಟವಾಯಿತೆಂದು ಹೇಳುತ್ತಾರೆ.—ಕಳೆದ ವಾರ ಸಕಲೇಶಪುರದಲ್ಲಿ ಮಾಲಂಟಿಯರುಗಳ ವಿನೋದಗಳು ನಡೆದುವು. ಇದಕ್ಕೆ ಮಂಜರಾಬಾದ್ ತಾಲ್ಲೂಕಿನ ಮತ್ತು ಮೂಡಿಗೆರೆ ತಾಲ್ಲೂಕಿನ ಕೆಲವು ಪ್ಲಾಂಟರುಗಳು ಅವರ ಹೆಂಡತಿಗಳ ಸಮೇತ ಬಂದಿದ್ದರು. ಆ ಪ್ರಸಂಗದಲ್ಲಿ ಮಾಲಂಟಿಯರುಗಳು ಕವಾಯತು ಗುರಿ ಹೊಡೆಯುವದೂ ನಡೆದವು. ಅದನ್ನು ಪರೀಕ್ಷಿಸುವುದಕ್ಕೆ ಮಡಿಕೇರಿಯಿಂದ ಕ್ಯಾಪ್ಟನ್ ಸೆಂಟ್ರಲ್ ಸಾಹೇಬರು ಬಂದಿದ್ದರು. ಎಲ್ಲಾ ಹೆಂಗಸರೊಟ್ಟಿಗೆ ಗಂಡಸರೂ ಆ ವಿನೋದಗಳ ಕಾಲದಲ್ಲಿ ಸಂಗೀತ ಬ್ಯಾಂಡುಗಳಿಂದ ಆಟ ಪಾಟಗಳಲ್ಲಿಯೂ ಬಹಳ ವಿನೋದವಾಗಿ ಕಾಲವನ್ನು ಕಳೆಯುತ್ತಿದ್ದರು. ಸರ ವಿನ್ಸೆಂಟ್ ಗ್ರೌನ್ಡ್ರಯವರು ಈ ಪ್ರಾಂತ್ಯ ತಮ್ಮ ಕೆಲಸವನ್ನು ನಡೆಸುತ್ತಾ ಇದ್ದಾರೆ. ಬಾಬು ಸಕಲೇಶಪುರದಲ್ಲಿ ದೇವಾಲಯದ ನವೀಕರಣ ನಡೆಸಿದರು. ಅಗ್ಗೆ ಸುಮಾರು ವರ್ಷದಿಂದ ಮುಂದೆ ಸ್ಥಳಗಳು ಬಂದು ಆರುವವರು ನಡಿಸಿದರು.

ಚನ್ನಪಟ್ಣ.—ಸುಮಾರು ೧೦—೧೫ ದಿನಗಳಿಂದಲೂ ಈ ಪ್ರಾಂತ ಮಳೆ ನಿಂತು ಹೋಗಿದೆ. ಪೈರುಗಳೆಲ್ಲಾ ಹೊಡೆಯಾಗಿ ಕಾಲದಲ್ಲಿ ಕಾಳುಗಳಿಂದ ತುಂಬಿರುವ ಹಾಗೆ ಕಾಣುವ ಪೈರುಗಳು ನಾಳೆಗಾಗಿ ಮಳೆಗಳನ್ನೇ ನೋಡುತ್ತಾರೆ. ಪ್ಲೇಗ್ ರೋಗವು ದಿನೇ ದಿನೇ ಹೆಚ್ಚುತ್ತಾ ಬಂದಿದೆ. ಊರಿನಲ್ಲಿ ಕ್ಯಾಂಪುಗಳೆಲ್ಲೂ ದಿನಕ್ಕೆ ೩—೪ ಜನಗಳ ಮರಣ ಕಾಲವಾಗುತ್ತಿದ್ದಾರೆ. ಸರಿಯಾದ ಗ್ರಾಮ ಮುಂಗಳವಾರ ಪ್ರತಿಯೊಬ್ಬರೂ ಇಲಿಗಳು ಬೀಳುತ್ತಿವೆ. ನಡಂತೆ ಹುಟ್ಟಿದೆ.—ಇಲ್ಲಿನ ಸಾಹುಕಾರ್ ಪೇಟೆ ಸಾಹುಕಾರರು ಸುಮಾರು ೩೦ ಸಾವಿರ ರೂಪಾಯಿ ಖರ್ಚುಮಾಡಿ ಅಂತಸ್ತಿನ ಒಂದು ಭಾರಿ ಮನೆಯನ್ನು ಚಿತ್ರಪಟಗಳಿಂದ ಕಟ್ಟಿಸಿ, ಒಳಗೆ ಬಹು ಬೆಲೆಯುಳ್ಳ ನಾನಾವಿಧ ದೀಪಗಳಿಂದ ಅಲಂಕರಿಸಿದ್ದಾರೆ. ಈ ಶೃಂಗಾರ ಭವನ ನೋಡತಕ್ಕ ಕಲ್ಯಾಣಗಳನ್ನು ಕಾಣುವುದಕ್ಕೆ ಪ್ರತಿ ದಿನವೂ ಅನೇಕ ಜನರು ಹೋಗಿ ನೋಡಲು ಅನುಕೂಲವಾಗಿದೆ.—ಈ ಪ್ಲೇಗ್ ದಾಳಿಯಲ್ಲಿ ವರ್ತಕರು ಪಟ್ಟಣದ ನಳವನ್ನು ಊರಿನಲ್ಲಿಯೇ ಇಟ್ಟು ಮನೆ ಮಠವಿರುವ ಕ್ಯಾಂಪಿನ ಜನರೆಲ್ಲರ ಅನುಕೂಲಕ್ಕೋಸ್ಕರ ಬರಬೇಕಾಗಿ ಬರುವದು ಹೀಗೆ ಕೊಂಡು ಹೋಗುವ ದಿವಸಗಳಿಂದಲೇ ಸುಂಕ ಬರಲಾಗಿ ಸುದ್ದಿ ಅನೇಕರಿಂದ ತಿಳಿದು ಬಂದಿದೆ. ಅದ್ದರಿಂದ ಸರ್ಕಾರಿ ದಿವಾನರನ್ನು ಕ್ಯಾಂಪುಗಳಲ್ಲಿ ಬೇಕಾದ ಪದಾರ್ಥವಂತೆ ಮಾಡಬೇಡವೆಂದು ಒಳ್ಳೆಯ ವರ್ತಕರು ತಮ್ಮ ದಿನಸಿಗಳನ್ನು ಕ್ಯಾಂಪಿನಲ್ಲಿಟ್ಟು ಕೊಳ್ಳುವ ವಿಷಯದಲ್ಲಿ ಕಳ್ಳರ ಭಯವಿರಬಹುದು. ಈ ವಿಷಯಕ್ಕೆ ಸರ್ಕಾರದವರು ಸೈರ್ಯದ ಕೊಟ್ಟು ಪೊಲೀಸು ಪಹರೆಯಿದ್ದರೆ ತುಂಬಾ ಪ್ರಯೋಜನವಾಗುತ್ತದೆ.

ಹೊಸದುರ್ಗ.—ಈ ತಾಲ್ಲೂಕ್ ಕಚೇರಿಯು ಸಮೀಪದಲ್ಲಿ ದೇವಪುರದ ಕಾವಲಿನಲ್ಲಿ ಒಬ್ಬ ನಾಯಕರವನಿಗೂ ಕುರಿಗರವನಿಗೂ ಕೆಲವು ದಿನದಿಂದ ಮನಸ್ತಾಪವಿದ್ದದ್ದರಿಂದ ಕುರುಕಾಲಿಗರವನು ನಾಲ್ಕು ಜನರ ಸಹಾಯದಿಂದ ನಾಯಕರ ಕರಿಯಂಬುವವನನ್ನು ಕಾಡುಗೋಲು, ಕೊಡಲಿ, ಇವುಗಳಿಂದ ಮೊಲ, ತೊಡೆ, ಮುಂಗೈ, ಭುಜ, ಕೆನ್ನೆ, ನೆತ್ತಿ, ಮುಂತಾದ ಸ್ಥಳ ಹೊಡೆದಿರುತ್ತಾರೆ. ನೆತ್ತಿಯಲ್ಲಿ ನೆ. ಮಾಳು ಕಾಣಿಸುತ್ತಾ ಇದೆ.

[illegible]

ದ ಮೇಲೆ ಕಲ್ಲು ಬಿದ್ದುದರಿಂದ ಸತ್ತುಹೋಯಿತೆಂದು ವರ್ತಮಾನವನ್ನು ಪಡೆದರು. ಅವರ ಜೊತೆಯಲ್ಲಿ ನೋಡುವುದಕ್ಕೆ ಹೋಗಿದ್ದ ಅನೇಕ ಜನರಲ್ಲಿ ಈ ಊರ ಪೋಲೀಸ್ ಸೂಪರಿಂಟೆಂಡೆಂಟರೂ ... ಜೊತೆಯಲ್ಲಿ ... ಜನರು ನಿಶ್ಶಬ್ದವಾದ ನಂತರ ಸತ್ತು ಹೋಗಿದೆಯೆಂದು ತಿಳಿದು ಗುಂಡಿನ ಪೆಟ್ಟು ಬಿದ್ದಿದ್ದ ಜಾಗದ ಬಳಿಗೆ ಹೋಗಿ ನೋಡಿ ಒಂದು ಕಾಲು ಹಿಡಿದು ಹೊರಗೆ ಎಳೆದರು. ಕಾಲನ್ನು ಹಿಡಿದುಕೊಂಡ ... ಗ ಕಚ್ಚುತ್ತಿರುವಾಗ್ಗೆ ಅವನು ಧೈರ್ಯಮಾಡಿ ತನ್ನ ಕತ್ತಿಯಿಂದ ಕಾಲಿನಿಂದ ಆ ಕಿರುಬನನ್ನು ಜೋರಾಗಿ ಒದ್ದನು. ... ಕಾಲನ್ನು ಬಿಟ್ಟು ಕೆಳಕ್ಕೆ ಬಿದ್ದಿತು. ಆಗ ... ಗುಂಡು ಹೊಡೆದನು ... ಜನರೆಲ್ಲರೂ ಗುಂಡಿನಿಂದಲೂ, ದೊಣ್ಣೆಯಿಂದಲೂ ಹೊಡೆದು ಆ ಮೃಗವನ್ನು ಕೊಂದು ಗಾಡಿಯ ಮೇಲೆ ನಿಲ್ಲಿಸಿ ಊರಿಗೆ ತಂದು ಪೇಟೆ ಬೀದಿಯಲ್ಲೆಲ್ಲಾ ಮೆರವಣಿಗೆ ಮಾಡಿ ... ಕಾಲು ಕಚ್ಚಲ್ಪಟ್ಟ ... ಸಾಹೇಬರ ಬಳಿಗೆ ಕಳುಹಿಸಿದ್ದಾರೆ. ಆ ಕಿರುಬನು ೬ ಅಡಿ ೪ ಅಂಗುಲ ಉದ್ದವೂ, ೨ ಅಡಿ ೯ ಅಂಗುಲ ಎತ್ತರವೂ, ... ಅಂಗುಲ ... ಉಳ್ಳದ್ದಾಗಿತ್ತು. ಕಚ್ಚಿಸಿಕೊಂಡ ಮನುಷ್ಯನು ಈ ಊರು ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತ ಇದ್ದಾನೆ. ...

[illegible]

ಇದೆ.

ಪ್ರಕಟನೆಗಳು

ಬಹುಮಾನ.

112-2

೨೧ ಆಣೆ ಸ್ಟಾಂಪನ್ನು ಕಳುಹಿಸಿಕೊಟ್ಟವರಿಗೆ 4 ಧಾರಂವುಳ್ಳ ಶ್ರೀ ಸುಬ್ರಹ್ಮಣ್ಯರಿಂದ ರಚಿಸಿದ ಕನ್ನಡ ಶಾಸ್ತ್ರದೊಡನೆ ಕೂಡಿದ ... "... ಒಂದನ್ನು, ೫ . 10ರ ಸೈಜಿನ ... ಬಾರ್ಡರಿಂದ ಕೂಡಿದ ... ಸ್ವಾಮಿಗಳವರ ಫೋಟೋ ಆಗಲಿ. ... ಸೈಜಿನ ಕಿರೀಟವನ್ನು ಧರಿಸಿಕೊಂಡಿರುವ ಈಗಿನ ಶೃಂಗೇರಿ ಸ್ವಾಮಿಗಳ ಫೋಟೋವನ್ನಾಗಲಿ ಉಚಿತವಾಗಿ ಕೊಡಲ್ಪಡುವದು. ಕೇಸರು ... ಸ್ವಲ್ಪ ಪ್ರತಿಗಳು ಮಾತ್ರ ಇವೆ.

ವಿಳಾಸ — ಪೈ ನಾಗಪ್ಪ, ... ಪೇಟೆ, ಕೋಟೆ ಮೈಸೂರು

ಕೊಂಚ ಗಮನಿಸಿ.

110-3

ಚಿತ್ರದುರ್ಗದ ಶ್ರೀಮನ್ನಿ ... ಭಾವಚಿತ್ರವು ೧ ಆಣೆ ಸ್ಟಾಂಪು ಕಳುಹಿಸಿಕೊಟ್ಟಲ್ಲಿ ... ಸೈಜಿನದು ... ಆಣೆ ಸ್ಟಾಂಪು ಕಳುಹಿಸಿಕೊಟ್ಟಲ್ಲಿ ... ಸೈಜಿನದು ರವಾನಿಸಲ್ಪಡುತ್ತದೆ. ಒಟ್ಟಾಗಿ ತರಿಸಿಕೊಂಡವರಿಗೆ ... ರಂತ ಕಮಿಷನ್ ದೊರೆಯುತ್ತದೆ.

ವಿಳಾಸ — ... ಫ್ಯಾನ್ಸಿ ಬಜಾರ್, ಕೋಟೆ, ಮೈಸೂರು

ರಬ್ಬರ್ ಹ್ಯಾಂಡ್ ಪ್ರೆಸ್.

114-

ಕಲಾಕೌಶಲ್ಯದಿಂದ ಮತ್ತು ಉದ್ಯೋಗದಿಂದ ಅಭಿವೃದ್ಧಿ ಹೊಂದುವ ಈ ಭಾರತ ಭೂಮಿಯೊಳಗೆ ಈ ಪ್ರೆಸ್ ತಯಾರಾಗುತ್ತದೆ. ಇದುವರೆಗೆ ಈ ಪ್ರೆಸ್ಸು ಪರದೇಶದಿಂದ ಬರುತ್ತಿರುವಾಗ ಅದಕ್ಕೆ ... ರೂಪಾಯಿಗಳ ವರೆಗೆ ಬೆಲೆ ಬೀಳುತ್ತಿತ್ತು. ಈ ಪ್ರೆಸ್ಸಿನೊಳಗೆ ಕನ್ನಡ, ತಮಿಳು, ತೆಲುಗು, ಉರ್ದು, ಮರಾಠಿ, ... ಇಂಗ್ಲಿಷ್ ಮತ್ತು ಬೇಕಾದ ಭಾಷೆಯಲ್ಲಿ ಒಂದು ಪ್ರತಿ ತಯಾರು ಮಾಡಿ, ಮಾಡಿಸಿದ ಮೇಲೆ ಬಹು ಸ್ವಲ್ಪ ಕಾಲದೊಳಗಾಗಿಯೇ ಅದರಿಂದ ... ಪ್ರತಿಗಳನ್ನು ತಯಾರು ಮಾಡಬಹುದು. ಅದ್ದರಿಂದ ಈ ಪ್ರೆಸ್ಸು ಸಾರ್ವಜನಿಕ ಕಚೇರಿ ಮ್ಯುನಿಸಿಪಾಲಿಟಿ ಪೋಲೀಸ್ ಆಫೀಸರರೂ, ವರ್ತಕರೂ ಸರ್ಕಾರದ ... ಮತ್ತು ಪರೀಕ್ಷೆ ... ಎಲ್ಲಾ ... ಕೆಲಸಕ್ಕೆ ಬಹಳ ಕಾಲ ಹಿಡಿಯುವದು. ಆದರೆ ಈ ನಮ್ಮ ಪ್ರೆಸ್ಸಿನಿಂದ ಅಂತಹ ಕೆಲಸವನ್ನು ಸ್ವಲ್ಪ ಕಾಲದಲ್ಲಿಯೇ ಮಾಡುವದಕ್ಕೆ ಸಾಧ್ಯ. ಇದರ ದೆಸೆಯಿಂದ ಈ ಪ್ರೆಸ್ ಜನಗಳ ಪ್ರೀತಿಗೆ ಪಾತ್ರವಾಗಿರುವದು. ಈ ಕಾರಣದಿಂದ ಪ್ರತಿ ಒಬ್ಬರೂ ತಮ್ಮ ಹತ್ತಿರ ಈ ಪ್ರೆಸ್ಸನ್ನು ಅವಶ್ಯಕವಾಗಿ ಇಡುವದರಲ್ಲಿ ಏನೂ ಸಂದೇಹವಿಲ್ಲ.

ನೋಟ್ ಪೇಪರ್ ಸೈಜು. ರೂಪಾಯಿ ೪—೦—೦.
ಹಾಪ್ ಪುಲ್‌ಸ್ಕ್ಯಾಪ್ ಸೈಜು, ೭—೦—೦.
ಪೋಸ್ಟೇಜು ಬೇರೆ, ...
ವಿಳಾಸ - ವರ್ಧಮಾನ ಪಿಡಗೆ.
ಪೋಸ್ಟ್ ಕಾಲಬಾದೇವಿ,
ಮುಂಬಯಿ.

ವಿಕಟಪ್ರತಾಪ

ನೂತನವೂ, ವಿಚಿತ್ರವೂ ಆದ ಮಾಸಪತ್ರಿಕೆ.

109-3

"... —ಅಧಿಕಾರಿಗಳ ... ಚಿಕ್ಕ ನೌಕರರ ... ಗೋಳಾಟ. ದಿವಾಳಿ ಕಂಪನಿಗಳ ... ಸ್ವಾಮಿಕೋಟಿಗಳ ಕಾಟ ... ಕಳ್ಳ ಪ್ರಿಯರ ಗುದ್ದಾಟ, ... ಗಳ ಕೂಗಾಟ. ಸದಾಧಾರಿಗಳ ಕಿತ್ತಾಟ, ... ಗಳ ನುಗ್ಗಾಟ, ... ಉಪ್ಪು ತಂಟರ ... ಸಂಟರ ... — ಈ ಪರಿ ಕಾಟಗಳಿಂದ ಕೂಡಿರುವುದೇ ನಮ್ಮ ವಿಕಟನ ಆಟ. ಇದೇ ... ಸೊಗಸಿನ ಸಾಸ್, ವಿಕಟಪ್ರತಾಪ. ಈ ವಿಕಟಪ್ರತಾಪ ಪತ್ರಿಕೆಯಲ್ಲಿ ನಗದವರನ್ನು ನಗಿಸುವ ಬಹು ವಿನೋದವಾದ ಹಾಸ್ಯ ... ಚಿತ್ರ ವಿಚಿತ್ರವಾದ ಒಗಟುಗಳೂ, ... ಗಳೂ, ... ದಿಂದಲೂ ವಿನೋದದಿಂದಲೂ ಕೂಡಿರತಕ್ಕ ಬಹು ಭಾವಗರ್ಭಿತ ಚಿತ್ರಗಳೂ ಪ್ರಕಟಿಸಲ್ಪಡುತ್ತವೆ. ಈ ಪತ್ರಿಕೆಯನ್ನು ಪ್ರೋತ್ಸಾಹಿಸದವರೇ ಇಲ್ಲ.

... ಪತ್ರಿಕೆಯನ್ನು ಅಪೇಕ್ಷಿಸುವವರು ... ರವಾನಿಸಬೇಕು.

ವಿಕಟಪ್ರತಾಪದ ಚಂದಾಹಣ

... ವರ್ಷಕ್ಕೆ ರೂ ೦—೧೨—೦
... ರೂ ...

ನಮ್ಮ ವಿಳಾಸ — ಮ್ಯಾನೇಜರ್ ವಿಕಟಪ್ರತಾಪ ಆಫೀಸ್,
... ಅರಳೇಪೇಟೆ ಬೆಂಗಳೂರು ಸಿಟಿ

ಒಕ್ಕಲಿಗರ ಮಹಾಸಭೆಗೆ

ವಿಜ್ಞಾಪನೆ

113-3

ಮಹಾಶಯರುಗಳಿರಾ

ತಾವು ಇದೇ ತಿಂಗಳು ಮೈಸೂರಿನಲ್ಲಿ ನಡೆಯುವ ಒಕ್ಕಲಿಗ ಮಹಾಸಭೆಗೆ ದಯಮಾಡಿಸುವಾಗ್ಗೆ ... ಪ್ರಸಿದ್ಧವಾಗಿರುವ ಸಿ. ಎಲ್. ಎಸ್. ಪುಸ್ತಕಾಲಯಕ್ಕೆ ದಯಮಾಡಿಸಬೇಕೆಂದು ಕೇಳಿಕೊಳ್ಳುತ್ತೇವೆ. ಈ ಪುಸ್ತಕದ ಅಂಗಡಿಯು ... ಬಹು ಸಮೀಪದಲ್ಲಿರುತ್ತದೆ. ಇದರಲ್ಲಿ ವಿವಿಧ ಕನ್ನಡ, ಇಂಗ್ಲಿಷ್ ಪುಸ್ತಕಗಳೂ, ಚಿತ್ರಪಟಗಳೂ, ಪೆನ್ಸಿಲ್ ವಗೈರೆ ಸಾಮಾನುಗಳೂ ... ದೊರೆಯುತ್ತವೆ. ಇಲ್ಲಿ ... ಕೆಲವು ಪುಸ್ತಕಗಳನ್ನು ನೋಡಿರಿ.

ಮುದ್ರಾಮಂಜೂಷ	೧—೪—೦
ಕಥಾಸಂಗ್ರಹ I—III ಭಾಗಗಳು	೧—೦—೦
ಕಥಾಸಂಗ್ರಹ IV—VI ಭಾಗಗಳು	೧—೦—೦
ಅನುಭವಸಾರ	೧—೧೨—೦
ಬಸವರಾಜ ವಿಜಯಂ	೦—೦—೦
ಚೆನ್ನಬಸವೇಶವಿಜಯಂ	೧—೮—೦
ಅರೇಬಿಯನ್ ನೈಟ್ಸು	೨—೦—೦
ಹಿಂದೂದೇಶ ಪ್ರದಕ್ಷಿಣ	೦—೪—೦
ಸ್ವಪ್ನ ಯಾಸ ಫಲವಿವೇಕ	೦—೮—೦
ಶ್ರೀ ಚಾಮರಾಜೇಂದ್ರ ಒಡೆಯರವರ ಚರಿತ್ರೆ	೧—೪—೦
ಎಡ್ವರ್ಡ್ ಚಕ್ರವರ್ತಿಯವರ ಮತ್ತು ಅಲೆಕ್ಸಾಂಡ್ರಾ ಚಕ್ರವರ್ತಿನಿಯವರ ಚರಿತ್ರೆ	೦—೮—೦
ಎಡ್ವರ್ಡ್ ಸಾರ್ವಭೌಮರ ಕಿರೀಟಧಾರಣ	೦—೨—೬
ಘನತೆಯುಳ್ಳ ಸ್ತ್ರೀಯರ ಚರಿತ್ರೆ	೦—೨—೬
ದಕ್ಷಿಣ ಆಫ್ರಿಕವೂ ಅದರ ನಿವಾಸಿಗಳೂ	೦—೨—೬
ಚೀನಾ ಚಕ್ರಾಧಿಪತ್ಯವೂ ಅದರ ನಿವಾಸಿಗಳೂ	೦—೨—೬
ಬರ್ಮಾ ದೇಶವೂ ಬರ್ಮೀಯರೂ	೦—೨—೬
ಪುರಾತನ ಗ್ರೀಕರ ಕಥೆಗಳು	೦—೨—೦
ಪುರಾತನ ರೋಮನರ ಕಥೆಗಳು	೦—೨—೦
ಪಕ್ಷಿಗಳ ಚಿತ್ರಗಳೂ ಕಥೆಗಳೂ	೦—೧—೦
ಕ್ರಿಮಿಗಳ ವರ್ಣನೆ	೦—೧—೦
ದೇಶವೆಂಬ ವಿಚಿತ್ರವಾದ ನನ್ನ ಮನೆ	೦—೧—೦
ಚಿಕ್ಕವರಿಗೆ ಹೇಳಿದ ಕಥೆಗಳು	೦—೧—೦
ಪ್ರಾಚೀನಕಾಲದ ವಿಲಕ್ಷಣ ಜೀವರಾಶಿಗಳ ವರ್ಣನೆ	೦—೧—೦
ಹೊಗೆ ಗಾಡಿಗಳನ್ನು ಕಲ್ಪಿಸಿದ ಜಾರ್ಜ್ ಸ್ಟೀವಿನ್ಸನ್ ಎಂಬಾತನ ಚರಿತ್ರೆ	೦—೧—೦
ಮೈಸೂರು ಮೃಗಾಲಯದ ನೋಟಗಳು (ವಿಚಿತ್ರವಾಗಿಯೂ ಉಲ್ಲಾಸಕರವಾಗಿಯೂ ಇರುವ ಪ್ರಸಿದ್ಧವಾದ ಚಿತ್ರಗಳೊಡನೆ ಮಾಡಿಸಿರುತ್ತೇವೆ)	೦—೧—೦
ಶ್ರೀಮನ್ಮಹಾರಾಜರವರ ಫೋಟೋ (ಸುಂದರವಾದ ರೆಡ್ ... ಕಾರ್ಡು ... ಪ್ರಿಂಟ್ ಮಾಡಿರುವದು ಸೈಜ್ ...)	೦—೦—೬

ವಿಳಾಸ—ಮ್ಯಾನೇಜರ್,
ಸಿ. ಎಲ್. ಎಸ್. ಬುಕ್ ಡಿಪೋ,
ಮೈಸೂರು.

ಕಾಯಿಲೆ ಅನುಭವಿಸುವಂಥಾ ಹೆಂಗಸರೆಲ್ಲಾ ಪೆರೂನಾವನ್ನು ಸೇವಿಸಿ ಗುಣಹೊಂದಲಿ.

ಮಿಸೆಸ್ ಸಿ. ವರ್ಸ್ಟೆಲ್, ೧೧ನೇ ರಸ್ತೆ, ಕ್ಲಾರ್ಕ್ಸ್‌ಬರ್ಗ್, ... ಇವರು ಬರೆಯುವುದು. "ನನ್ನ ಹೆಸರನ್ನು ಪ್ರಸಿದ್ಧಪಡಿಸಿಕೊಳ್ಳುವುದಕ್ಕೆ ನಾನು ಆಕ್ಷೇಪ ಮಾಡತಕ್ಕವಳಲ್ಲ ... ನನ್ನ ಹಾಗೆಯೇ ಅನೇಕ ಕಾಯಿಲೆಗಳನ್ನು ಅನುಭವಿಸುವ ... ಗುಣಹೊಂದುವುದಕ್ಕೆ ನನ್ನ ಅನುಭವವನ್ನು ತಿಳಿಸುವುದರಿಂದ ಸಹಾಯವಾಗುವುದಾದರೆ ... ಪೆರೂನಾ ಉಪಯೋಗಿಸಿದ್ದರಿಂದ ನನಗೆ ಬಹಳ ಸಹಾಯವಾಗಿದೆ ಎಂದು ... ಹೇಳಬಲ್ಲೆನು. ಎರಡು ವರುಷದ ಹಿಂದೆ ಇದ್ದದ್ದಕ್ಕಿಂತಲೂ ಈಗ ನನ್ನ ದೇಹಸ್ಥಿತಿ ಎಷ್ಟೋ ಉತ್ತಮವಾಗಿದೆ. ಕೆಳಹೊಟ್ಟೆಯ ಬಾಧೆಗಳಿಗೆ ನನಗೆ ತೀವ್ರ ಸ್ಥಿತಿ ... ವೈದ್ಯರು ಹೇಳಿದ ಔಷಧಗಳನ್ನು ಸೇವಿಸಿದರೂ ನನಗೆ ಪ್ರಯೋಜನವಾಗಲಿಲ್ಲ. ಅವರ ಪೆರೂನಾ ಸೇವನೆಯನ್ನು ಪ್ರಾರಂಭಿಸಿದಾಗ ಒಂದು ... ತೊಳಗಾಗಲೇ ನನಗೆ ಅದರ ಗುಣ ಕಂಡುಬಂತು."

ನೆಗಡಿಯಿಂದ ರೋಗ ಬೆಳೆಯುವದು.

ಮಿಸೆಸ್ ಎಲ್ ಪಿ ... ಎನ್. ಟ್ರೆಂಟ್, ಪಿಟ್ಸ್‌ಬರ್ಗ್, ಕಾನ್., ಇವರು ಬರೆಯುವುದು.

"ನೆಗಡಿ ಪರಿಹಾರಕ್ಕೆ ಪೆರೂನಾ ರಾಜ ಮದ್ದು. ಹೋದ ವರುಷ ನನಗೆ ಕಠಿಣವಾದ ಶೀತ ಹಿಡಿದು, ಬಹಳ ವೇದನೆ ಪಡಿಸಿತು. ನನಗೆ ನಿಶ್ಶಕ್ತಿ ಯುಂಟಾಗಿ ವಾಂತಿಗೆ ಬರುವಹಾಗಾಗಿ ನಿದ್ರೆ ಬಾರದೆ ಆಹಾರ ಸೇರದೆ ತುಂಬಾ ಕಷ್ಟಪಟ್ಟೆನು.

"ಅದೇ ರೋಗಕ್ಕೆ ಪೆರೂನಾ ಸೇವಿಸಿದ್ದಂಥಾ ಒಬ್ಬ ಸ್ನೇಹಿತನು ನನಗೆ ಅದನ್ನು ಸೇವಿಸುವಂತೆ ಹೇಳಿದನು. ಕೂಡಲೇ ನಾನು ಆ ರೀತಿ ಮಾಡಿದೆನು. ಅವರ ಅದನ್ನು ತೆಗೆದುಕೊಳ್ಳುವುದಕ್ಕೆ ಆರಂಭಿಸಿದ ಬಳಿಕ ಅದು ನನಗೆ ಆಶ್ಚರ್ಯಕರವಾಗಿ ಗುಣ ಕೊಡುತ್ತಾ ಬಂತು.

"ಮೂರು ದಿನಗಳಲ್ಲಿ ನನಗೆ ಗುಣವಾಯಿತು. ಒಂದು ವಾರದೊಳಗಾಗಿ ಯಥಾಪ್ರಕಾರ ನಾನು ಸ್ವಸ್ಥಳಾದೆನು. ಅದರೂ ... ಔಷಧವನ್ನು ಬಿಡಲಿಲ್ಲ. ಎರಡು ವಾರಗಳಲ್ಲಿ ನನ್ನ ದೇಹಸ್ಥಿತಿಯು ಪುಷ್ಟಿಯಾಯಿತು. ಪೆರೂನಾ ಅತ್ಯುತ್ತಮವಾದ ಔಷಧವೇ ಸರಿ.

ಕರಳುಗಳಲ್ಲಿ ಅಕ್ರಮ.

ಮಿಸೆಸ್ ... , ೧೩೩೨ ಉತ್ತರ ಬೀದಿ, ... , ಇವರು ಬರೆಯುವುದು.

"ನಾನು ಐದು ವರುಷ ಕಾಲ ಕೆಟ್ಟ ಬಾಧೆಯನ್ನು ಅನುಭವಿಸಿದೆನು. ಅಂತು ಕೇಳಿದ ಔಷಧವನ್ನೆಲ್ಲಾ ಮಾಡಿದೆನು. ಯಾವುದರಿಂದಲೂ ನನಗೆ ಪರಿಹಾರವಾಗಲಿಲ್ಲ. ಕೆಲವು ಡಾಕ್ಟರುಗಳು ನನಗೆ ಕರುಳುಗಳ ಅಕ್ರಮ ಎಂಬ ರೋಗವೆಂದರು. ಕೆಲವರು ಕರುಳುಗಳ ಕ್ಷಯವೆಂದರು. ಒಬ್ಬ ವೈದ್ಯನು ನನ್ನ ರೋಗವನ್ನು ವಾಸಿಮಾಡುತ್ತೇನೆಂದು ಹೇಳಿದ್ದರ ಮೇಲೆ ನಾನು ಎರಡು ತಿಂಗಳು ಅವನ ಔಷಧ ಸೇವಿಸಿದಾಗ್ಯೂ ನನಗೆ ಸ್ವಲ್ಪವೂ ಗುಣ ತೋರಲಿಲ್ಲ.

"ಪೆರೂನಾ ಉಪಯೋಗಿಸಿ ನೋಡು ಎಂದು ಒಬ್ಬ ಸ್ನೇಹಿತಳು ಹೇಳಿದ್ದರ ಮೇಲೆ ನಾನು ಅದನ್ನು ಸೇವಿಸುತ್ತಾ ಬಂದೆನು. ನಾನು ಎರಡು ಬಾಟ್ಲುಗಳನ್ನು ಸೇವಿಸಿದ ಮೇಲೆ ಅದರಿಂದ ನನಗೆ ಗುಣ ಕಾಣಿಸಿತು. ಅವರ ಮೇರೆ ಬಿಡದೆ ನಾನು ಅದನ್ನೇ ಸೇವಿಸುತ್ತಾ ಬಂದೆನು. ನನ್ನ ರೋಗವು ನಿವಾರಣೆಯಾಯಿತು. ನನ್ನ ದೇಹವು ಗಟ್ಟಿಯಾಯಿತು.

"ಅಪೇಕ್ಷೆಯುಳ್ಳವರು ನನಗೆ ಬರೆದು ಕೇಳಿದಲ್ಲಿ ಪೆರೂನಾದಿಂದ ನನಗುಂಟಾದ ಪ್ರಯೋಜನವನ್ನೆಲ್ಲಾ ನಾನು ವಿವರಿಸಿ ತಿಳಿಸಬಲ್ಲೆನು."

ಪಕ್ಕೆಗಳಲ್ಲಿ ಬಾಧೆಯಾಗುವುದು.

ಮಿಸೆಸ್. ... , ... , ಬರೆಯುವುದು.

"ಪೆರೂನಾ ಸೇವಿಸಿದ್ದರಿಂದ ನನ್ನ ಹೃದಯದ ಮತ್ತು ಪಕ್ಕೆಗಳ ನೋವುಗಳು ವಾಸಿಯಾಗಿದೆ.

"ಒಂದು ವರುಷದ ಹಿಂದೆ ನಾನು ಬಹಳ ... ಸ್ಥಿತಿಯಲ್ಲಿದ್ದೆನು. ... ಡಾಕ್ಟರು ... ಈಗ ಡಾಕ್ಟರನ್ನು ಕರೆಸಬೇಕಾದ ಅಗತ್ಯವೇ ಇಲ್ಲವೆಂದು ನಾನು ಸಂತೋಷದಿಂದ ಹೇಳುತ್ತೇನೆ.

"ನೀವು ಹೇಳಿದಂತೆ ನಾನು ಪೆರೂನಾವನ್ನು ಉಪಯೋಗಿಸಿದ್ದರಿಂದ ನಾನು ಆರೋಗ್ಯವಾಗಿದ್ದೇನೆ. ಮತ್ತು ನನ್ನ ಮನೆಯವರಿಗೆಲ್ಲಾ ಹೇಳುತ್ತಿದ್ದೇನೆ.

MISS NETTIE E BOGARDUS

C WORSTELL

MRS. O.D ROBINSON

"ನನಗೆ ಪೆರೂನಾದಲ್ಲಿ ಪೂರ್ಣ ನಂಬಿಕೆ. ಪ್ರಪಂಚದಲ್ಲಿ ಇನ್ನಾವುದರ ಮೇಲೂ ಇಲ್ಲ. ... ಕಂಡರೆ ಅದು ನನ್ನ ರೋಗವನ್ನು ವಾಸಿಮಾಡಿದೆ. ಇತರ ರೋಗಿಗಳನ್ನೂ ಅದು ಗುಣಪಡಿಸಬಲ್ಲುದೆಂದು ನಾನು ತಿಳಿದಿದ್ದೇನೆ.

"ಪೆರೂನಾದಿಂದ ನನಗೆ ಆಗಿರುವ ಉಪಕಾರವನ್ನು ಎಷ್ಟೆಂದು ಹೇಳಲಾರೆನು. ಅದರ ಗುಣವನ್ನು ಎಷ್ಟು ಹೊಗಳಿದರೂ ಸ್ವಲ್ಪವೇ ಆಗಿದೆ."

ಅನ್ನಕೋಶದಲ್ಲಿ ಬಾಧೆಯು.

ಮಿಸ್ ಅನ್ನಾ ... , ... ಇವರು ಬರೆಯುವುದು.

"ನಿಮ್ಮ ಪೆರೂನಾದಿಂದ ನನಗೆ ಬಹಳ ಗುಣಕೊಟ್ಟಿದೆ. ಈಗ ನಾನು ಆರೋಗ್ಯವಾಗಿದ್ದೇನೆ. ನನ್ನ ಅನ್ನಕೋಶದ ಬಾಧೆಯೆಲ್ಲಾ ನಿವಾರಣೆಯಾಗಿದೆ."

ಅಂಗಾಂಗಗಳಲ್ಲೆಲ್ಲಾ ಬಾಧೆಯು.

ಮಿಸೆಸ್. ... , ... ಇವರು ... ಬರೆಯುವುದು:

"ಪೆರೂನಾ ಸೇವಿಸುವುದಕ್ಕೆ ಮೊದಲು ನನ್ನ ದೇಹಸ್ಥಿತಿಯು ಬಹಳ ಕೆಟ್ಟುಹೋಗಿತ್ತು. ನನ್ನ ದೇಹದ ಅಂಗಾಂಗಗಳಲ್ಲೆಲ್ಲಾ ಶೀತಹಿಡಿದು ಬಾಧೆಯುಂಟಾಗಿತ್ತು. ದೇವರ ದಯೆಯಿಂದ ನಿಮ್ಮ ಔಷಧವು ನನ್ನನ್ನು ಆರೋಗ್ಯ ಸ್ಥಿತಿಗೆ ತಂದಿರುತ್ತದೆ. ನನಗೆ ಇನ್ನಾವ ಔಷಧದ ಮೇಲೂ ಅಭಿಲಾಷೆ ಇಲ್ಲ."

ಮಿಸ್ ನೆಟ್ಟಿ ಇ ಬೊಗಾರ್ಡಸ್, ... ಇವರು ಬರೆಯುವುದು:

"ನನಗೆ ಬಹುಕಾಲ ವಾಂತಿಯಾಗುತ್ತಲೂ ತುಂಬಾ ತಲೆನೋಯುತ್ತಲೂ ಇತ್ತು. ಅದರಿಂದ ನಾನು ಬಹಳ ಆನ ಭವಿಸಿದೆನು. ಅದರ ಈಗ ಆ ಬಾಧೆಯೆಲ್ಲಾ ಸಂಪೂರ್ಣವಾಗಿ ನಿವಾರಣೆಯಾಗಿದೆ. ಹತ್ತು ವರ್ಷಗಳಿಂದ ನಾನು ಅನುಭವಿಸಿದ ರೋಗವೆಲ್ಲಾ ನಿವಾರಣೆಯಾಗಿ ಈಗ ಆರೋಗ್ಯವಾಗಿದ್ದೇನೆ. ... ರೋಗವನ್ನು ಅನುಭವಿಸುವವರೆಲ್ಲಾ ... ನಿಮ್ಮ ಪೆರೂನಾವನ್ನು ಸೇವಿಸಬೇಕೆಂದು ನನ್ನ ಅಪೇಕ್ಷೆಯಾಗಿದೆ."

ಹೊಟ್ಟೆಯೊಳಗಣ ಶೀತವು.

ಮಿಸ್ ಜೂಲಿಯಾ ... , ಆರ್ ... ಇವರು ಬರೆಯುವುದು.

"ಮೂರು ವರ್ಷಗಳ ವರೆಗೆ ನನಗೆ ಹೊಟ್ಟೆಯೊಳಗಣ ಶೀತದ ತುಂಬಾ ಬಾಧೆಯಿರುತ್ತಿತ್ತು. ಅದರಿಂದ ನನಗೆ ನಿದ್ರೆ ತಪ್ಪಿಹೋಗಿತ್ತು. ಆಹಾರ ರುಚಿಸುತ್ತಿರಲಿಲ್ಲ. ಮತ್ತು ಊಟವಾದ ಮೇಲೆ ಹೊಟ್ಟೆಯೊಳಗೆ ಬಹಳ ನೋವುಂಟಾಗುತ್ತಿತ್ತು.

"ನನ್ನ ಸಹೋದರಿಯು ನನಗೆ ಪೆರೂನಾ ಸೇವಿಸುವಂತೆ ಹೇಳಿದಳು."

"ನಿಮ್ಮ ಔಷಧವನ್ನು ತೆಗೆದುಕೊಳ್ಳುತ್ತಾ ಬಂದೆನು. ... ಆಹಾರದಲ್ಲಿ ರುಚಿ ಯುಂಟಾಯಿತು."

"ನನಗೆ ಶಕ್ತಿಯುಂಟಾಯಿತು, ಮಾಂಸಖಂಡಗಳು ಬೆಳೆದವು. ಈಗ ಸಂಪೂರ್ಣ ಸೌಖ್ಯವನ್ನು ಪಡೆದಿರುತ್ತೇನೆ."

"ನಿಮ್ಮ ಔಷಧವು ನನಗೆ ತುಂಬಾ ಪ್ರಯೋಜನವನ್ನುಂಟುಮಾಡಿದೆ. ಅದಕ್ಕಾಗಿ ನಿಮ್ಮನ್ನು ಬಹಳ ವಂದಿಸುತ್ತೇನೆ."

ಮಿಸೆಸ್. ಓ ಡಿ ರಾಬಿನ್ಸನ್, ೩೩ ಸೆಂಟ್ ಫೆಲಿಕ್ಸ್ ಬೀದಿ, ಬ್ರೂಕ್ಲಿನ್, ಎನ್. ವೈ., ಬರೆಯುವುದು:

"ನಾನು ಪೆರೂನಾವನ್ನು ಸೇವಿಸಿದೇನೆ. ಹೆಸರುವಾಸಿಯಾದ ವೈದ್ಯರು ಎರಡು ವರುಷದ ತನಕ ಹೇಳಿದ ಔಷಧಗಳನ್ನು ತೆಗೆದುಕೊಂಡಾಗ್ಯೂ ನನಗೆ ಪ್ರಯೋಜನವಾಗದೆ ಇದ್ದುದು ನಿಮ್ಮ ಔಷಧವೇ ಫಲದಾಯಕವಾಯಿತು. ಈಗ ನಾನು ಆರೋಗ್ಯಭಾಗ್ಯವನ್ನು ಪಡೆದಿರುತ್ತೇನೆ. ಈಗ ನನ್ನ ಕೈ ಕಾಲುಗಳು ಊದುವುದು ನಿಂತುಹೋಗಿದೆ. ಹೊಟ್ಟೆಯುಬ್ಬರ ತಪ್ಪಿದೆ. ದೀರ್ಘವಾಗಿ ಉಸುರುಹೊಯ್ಯುತ್ತೇನೆ. ಕೈ ಕಾಲುಗಳ ಕೀಲುಗಳ ಊತ ನೋವು ಈಗ ಬರುವುದೇ ಇಲ್ಲ. ನಿಮ್ಮ ಔಷಧದಿಂದ ನನಗೆ ಎಷ್ಟು ಮಟ್ಟಿಗೆ ಪ್ರಯೋಜನವಾಗಿದೆ ಎಂಬುದು ನಿಮಗೆ ತಿಳಿಯದು. ಅದು ಖಂಡಿತವಾಗಿ ನನ್ನ ಆಯುಸ್ಸನ್ನು ಹೆಚ್ಚುಮಾಡಿದೆ. ಅದರಿಂದ ನಾನು ನೂತನವಾದ ಸ್ತ್ರೀಯಾಗಿರುವೆನು.

"ಓ ಡಾಕ್ಟರೇ, ನಿಮ್ಮ ಕರುಣೆಯಿಂದ ನನಗೆ ದೊಡ್ಡ ಆಶೀರ್ವಾದ ದೊರಕಿರುತ್ತದೆ. ನೀವು ಹೇಳಿದ ಔಷಧದಿಂದ ನನಗೆ ಆಹಾರದ ರುಚಿ ಲಭ್ಯವಾಗಿದೆ. ನಿಮ್ಮ ಔಷಧಿ ಸೇವಿಸಿದಾದಷ್ಟು ನಾನು ಕೆಲಸಕಾರ್ಯಗಳನ್ನು ಮಾಡಬಲ್ಲೆನು. ಅದರ ಮೊದಲು ನಾನು ನನ್ನ ಕೆಲಸವನ್ನೇ ಮಾಡಿಕೊಳ್ಳಲಾರದಂತೆ ದುರ್ಬಲಳಾಗಿದ್ದೆನು. ಡಾಕ್ಟರ್ ಹಾರ್ಟ್‌ಮನ್‌ರವರಿಗೂ ಅವರ ಔಷಧಕ್ಕೂ ಅನೇಕ ವಂದನೆಗಳನ್ನು ಸಮರ್ಪಿಸುತ್ತೇನೆ."

ವಿಳಾಸ:—ಈ ಔಷಧ ಸಿಕ್ಕುವ ಸ್ಥಳಗಳು:—

(೧) ಕೋಲ್‌ಸನ್ ಅಂಡ್ ಸನ್ಸ್, ಬೆಂಗಳೂರು

(೨) ಇಂಗ್ಲಿಷ್ ಡ್ರಗ್ ಕಂಪನಿ, ೩೬೯ ಮಿಂಟ್ ಬೀದಿ, ಮದರಾಸ್.

38-28

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

೨೭—೯—೧೯೦೭ ರಿಂದ ೪—೧೦—೧೯೦೭ ವರೆಗೆ.

ಸ್ಥಳ		ಪ್ಲೇಗ್ ಬಿಗಿದವು	ಪ್ಲೇಗ್ ಸತ್ತವು	ಕಾಲರಾ ಬಿಗಿದವು	ಕಾಲರಾ ಸತ್ತವು
ಬೆಂಗಳೂರು ಪಟ್ಟಣ		54	36	0	0
ಮೈಸೂರು	,,	108	68	0	0
ಬೆಂಗಳೂರು ಡಿಸ್ಟ್ರಿಕ್ಟ್		238	178	0	0
ಮೈಸೂರು	,,	149	97	0	0
ಕೋಲಾರ್	,,	38	11	0	0
ಕೋಲಾರ್ ಚಿನ್ನದ ಗಣಿಗಳು		16	6	0	0
ತುಮಕೂರು ಡಿಸ್ಟ್ರಿಕ್ಟ್		19	13	0	0
ಹಾಸನ	,,	28	19	0	0
ಚಿತ್ರದುರ್ಗ	,,	8	3	0	0
ಕಡೂರ್	,,	49	34	0	0
ಶಿವಮೊಗ್ಗ	,,	0	0	0	0
	ಜುಮ್ಲಾ	694	488	0	0

ಶಾಲಿವಾಹನ ಶಕ ವರುಷಂಗಳು ೧೮೨೯ ನೇ ಪ್ಲವಂಗನಾಮ ಸಂವತ್ಸರದ ಆಶ್ವೀಜ ಶುದ್ಧ ಏಕಾದಶಿ ಗುರುವಾರದಿಂದ ಆಶ್ವೀಜ ಬಹುಳ ಬಿದಿಗೆ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ.

೧೯೦೭ ನೇ ಇಸವಿ ಅಕ್ಟೋಬರ್.

ತಾ.	ವಾರ		ತಿಥಿ	ಘಳಿಗೆ.	ನಕ್ಷತ್ರ	ಘಳಿಗೆ	ಶುದ್ಧ ಬಹುಳ ದಿನ
17	ಗುರು	*	ಏಕಾದಶಿ	33 22	ಧ	9 39	1
18	ಶುಕ್ರ	,,	ದ್ವಾದಶಿ	28-29	ಶ	6 36	2
19	ಶನಿ		ತ್ರಯೋದಶಿ	24 34	ಪೂಭಾ	3 56	3
20	ರವಿ	‡	ಚತುರ್ದಶಿ	21 30	ಉಭಾ	2-22	4
21	ಚಂದ್ರ	,	ಪೌರ್ಣಮಿ	19-19	ರೇ	1-44	5
22	ಕುಜ	,,	ಪಾಡ್ಯ	15-36	ಅ	2-2	6
23	ಬುಧ	,	ಬಿದಿಗೆ	19.?	ಭ	3-33	7

* ಸರ್ವತ್ರ ಏಕಾದಶಿ. ವಿಷ್ಣು ಪಂಚಕ ವ್ರತ ... ,, ... ವ್ಯತೀಪಾತ, ... ಪ್ರದೋಷ. ‡ ... ಪ್ರತಿಪತ್ತಿಥಿ. , ದ್ವಿತೀಯಾ ತಿಥಿ, ... ತೃತೀಯಾ ತಿಥಿ

ಪೇಟೇ ಧಾರಣೆ.

ಏನಸು		ಮೈಸೂರು.	ಬೆಂಗಳೂರು
ಕಾಳ್ನೇ ಅಕ್ಕಿ ಪಲ್ಲ ೧ಕ್ಕೆ	ರೂ	೧೩-೪-೦	೧೩-[illegible]
ಕಂಬಾರ ಅಕ್ಕಿ ...		೧೩-೪-೦	೧೩-[illegible]
,, ...		೧೧-೯-೦	೧೨-[illegible]
... ಅಕ್ಕಿ		೧೨-೦-೦	೧೪-[illegible]
...		೧೫-೮-೦	೧೫-[illegible]
...		೧೪-೮-೦	೧೪-[illegible]
... ಪಲ್ಲ ೧ಕ್ಕೆ		೧೪-೦-೦	೧೪-[illegible]
,, ...		೧೩-೦-೦	೧೩-[illegible]
... ಪಲ್ಲ ೧ಕ್ಕೆ		೫-೧೨-೦	[illegible]
ಕಾರಾಗಿ		೫-೮-೦	[illegible]
ಜೋಳ		೫-೦-೦	[illegible]
ಕಲಸಂದೆ ಪಲ್ಲ ೧ಕ್ಕೆ		೧೩-೮-೦	[illegible]
ಬಿಳೀ ಅವರೆ		೮-೧೪-೦	[illegible]
ಹೆಸರು		೧೭-೯-೦	[illegible]
ಉದ್ದು		೧೨-೮-೦	[illegible]
ಕಡಲೆ		೧೨-೮-೦	[illegible]
ಎಳ್ಳು ... ಕ್ಕೆ		೧೯-೮-೦	[illegible]
ಹುರುಳಿ		೬-೧೨-೦	[illegible]
ಹರಳು ... ಸೇರಿಗೆ		೧೪-೦-೦	[illegible]
ಸೀಗೇಕಾಯಿ ಮಣ ೧ಕ್ಕೆ		೨-೪-೦	[illegible]
ಮೆಣಸಿನಕಾಯಿ		೨-೮-೦	[illegible]
ದುಂಡು		೨-೪-೦	[illegible]
ಬೆಲ್ಲ ... ಅಚ್ಚು		೪-೮-೦	[illegible]
ಒಳ್ಳೆಣ್ಣೆ ಮಣ ೧ಕ್ಕೆ		೬-೦-೦	[illegible]
ಹರಳೆಣ್ಣೆ ,,		೫-೦-೦-೦	[illegible]
ಕೊತ್ತುಂಬರಿ ಪಲ್ಲ ೧ಕ್ಕೆ		೫-೧-೦-೦	[illegible]
ಉಪ್ಪು ,,		೫-೦-೦-೦	[illegible]
ಹುಣಸೇ ಹಣ್ಣು		೦-೬-೦	[illegible]
,, ಹಳೇದು		೦-೧೪-೦	[illegible]
ತುಪ್ಪ ಮಣ ೧ಕ್ಕೆ		೧೬-೮-೦	[illegible]
ಸೀಮೆಯೆಂಣೆ ಡಬ್ಬ ೧ಕ್ಕೆ		೪-೧೫-೦	[illegible]
ತೆಂಗಿನಕಾಯಿ ೧೦೦ಕ್ಕೆ		೬-೮-೦	[illegible]
ಅಡಕೇಕಾಯಿ ಮಣ ೧ಕ್ಕೆ		೧-೦-೦	[illegible]
ಅರಿಶಿನದ ಕಾಯಿ ಮಣ ೧ಕ್ಕೆ		೬-೧೨-೦	[illegible]
ಹತ್ತಿ (ಬೀಜ) ಕೆಂಪು		೧೫-೬-೦	[illegible]
,, ,, ಬಿಳುಪು		೧೫-೧೦-೦	[illegible]
,, ,, ... ಹೊಲ ೧ಕ್ಕೆ		೨೩-೧೨-೦	[illegible]
... ಹೊಲ ... ಕ್ಕೆ		೮೫-೬-೦	[illegible]

Printed and Published by the Rev. E. Thompson, M. A., Proprietor and Manager, Wesleyan Mission Press, Mysore. 17/10/1907.

REGISTERED
M. 20

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಬೆಲೆ ೧ ದುಡ್ಡು. | ಕ್ರಯ ೧ ದುಡ್ಡು.

ಸಂಪುಟ ೨೧ | ಮೈಸೂರು—೧೯೦೭ ನೇ ಇಸವಿ ಅಕ್ಟೋಬರ್ ತಾರೀಖು ೨೪ ನೇ ಗುರುವಾರ. | ಸಂಚಿಕೆ ೨೧

WILLIAM & CO., BOMBAY.

ವಿಲಿಯಂ ಮತ್ತು ಕಂಪೆನಿ, ಫೋರ್ಟು, ಮುಂಬಯಿ.

ಗಜಕರ್ಣದ ಮುಲಾಮು.

27 85

ಇದನ್ನು ಹಾಗಿಸುವದರಿಂದ ಎಲ್ಲಾ ತರ ಕಜ್ಜಿಯು ನಾಶವಾಗುತ್ತದೆ. ಮೂರು ಬಾ ಹಾಗಿಸುವದರೊಳಗೆ ಗಜಕರ್ಣವು ಹೋಗುವದು. ಇದನ್ನು ಹಚ್ಚುವದರಲ್ಲಿ ಉರಿ ಯು ಬರುವದಿಲ್ಲ ಮತ್ತು ಚರ್ಮ ಕಪ್ಪಾ ಗುವದಿಲ್ಲ. ಒಂದು ಸಾರಿ ಪರೀಕ್ಷಿಸಿ ನೋಡಿರಿ. ಗುಣ ಕಂಡುಬರುವದಿಲ್ಲವಾದರೆ ಹಣ ಹಿಂತಿರುಗಿ ಕೊಡಲ್ಪಡುವದು. ಡಬ್ಬಿ ೧ಕ್ಕೆ ಕಿಮ್ಮತ್ತು ೦-೩-೦. ಪಿ. ಪಿ. ೦-೧೦-೦ ತರಿಸಿಕೊಳ್ಳಿರಿ! ತ್ವರೆಮಾಡಿರಿ!

ಪಲ್ಪುಪುಟಿಕ ೧-೦-೦. ಸುಂದರೀ ತೈಲ ೦-೮-೦ ದಂತಮಂಜನ ೦-೨-೦ ಕಫಹಾರಿ ೧-೪-೦ ಕೇ[illegible] ನೀ ತೈಲ ೧-೦-೦. ಜೀರ್ಣ ಸಾಯನ ೧-೩-೦. ಬಿಜ್ಜಿ ಮುಲಾಮು ೦-೩-೦ ಈ ಕಂಪನಿಯ ವರ[illegible] ನಾನಾವಿಧ [illegible] ತಯಾರಿಸುವದರಿಂದ [illegible] ಬೇಕಾದರೂ ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು.

ಅಮೃತಾಂಜನ

ಬಾಟ್ಲಿ ಒಂದಕ್ಕೆ ಕಿಮ್ಮತು ೮ ಆಣೆ. ವಿ. [illegible] ಆಣೆ.

ಅಮೃತಾಂಜನ—ಸುಖಾಂಜನ.
ಅಮೃತಾಂಜನ—ದಿವ್ಯಾಂಜನ.
ಅಮೃತಾಂಜನ—ಸಂಜೀವನ.
ಅಮೃತಾಂಜನ—ಪರಮಾಂಜನ
ವಾತ, ಎದೆನೋವು, ಗಂಟುನೋವು, [illegible] ನೋವು, ಮೂಲವ್ಯಾಧಿ, ಈ ಎಲ್ಲಾ [illegible] ಈ ಅಮೃತಾಂಜನವು ದಿವ್ಯ ಔಷಧ[illegible]

[illegible]

ಅಮೃತಾಂಜನ—ಶೀತಘ್ನನಿ
ಅಮೃತಾಂಜನ—ತಕ್ಷಣಶಮನಕಾರಿ
ಅಮೃತಾಂಜನ—ಅಪ್ರತಿಮ[illegible]
ಅಮೃತಾಂಜನ—ಭಂಜನವಿಮರ್ದಿನಿ.

ಇದರಿಂದ ಗುಣ ಕಂಡುಬರುವದಿಲ್ಲವಾದರೆ ಹಣ ಹಿಂತಿರುಗಿ ಕೊಡಲ್ಪಡುವದು. ಜಕಂ ಮತ್ತು ಘಾಯ, ಅರ್ಧಾಂಗವಾಯು, ಈ ರೋಗಕ್ಕೆ ಇದು ಸಂಜೀವನವಾಗಿರುತ್ತದೆ. ತರಿಸಿಕೊಳ್ಳಿರಿ! ಪರೀಕ್ಷಿಸಿರಿ!!

[illegible]ಯಂ ಮತ್ತು ಕಂಪೆನಿ, ೧೬ ಓಕ್ ಲೇನ್, ಫೋರ್ಟು, ಮುಂಬಯಿ.
ಟೆಲಿಗ್ರಾಫು ಅಡ್ರೆಸು; "ಅಮೃತಾಂಜನ," ಮುಂಬಯಿ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

26 56

೧ ಲೋಕೋಪಮಯಹರ ಕಸ್ತೂರೀ ಮಾತ್ರೆ.—ಈ ಔಷ[illegible] ಚಿನ್ನ ಹವಳದ ಭಸ್ಮ, ಚಿನ್ನದ ವೇಳ್ಯ, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ

ಚಳಿಜ್ವರ, ಜ್ವರ, ಹೊಟ್ಟೆಶೂಲೆ, ಸಂದುಗಳ ನೋವು, ಮೈ ಕೈಕಾಲು ಸೆಳತ (ಭಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲು ನೋವು, ಕೆಮ್ಮು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ.

ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಬಾಧೆಯೂ ಬಾರಿಕೊಡದೆ, ನೀರು ಹವಾಗಳ [illegible]ವನ್ನು ಸರಿಪಡಿಸಿ, ರಕ್ತದಲ್ಲಿ ದೋಷವನ್ನು ತೆಗೆದು [illegible] ವೃದ್ಧಿಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ [illegible], ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ [illegible]ಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.

ಅನುಪಾನಪತ್ರ ಔಷಧದ ಸಂಗಡಲೇ ಇರುತ್ತದೆ
೨೦ ಮಾತ್ರೆಯುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿಗೆ ೧ ರೂಪಾಯಿ. ೧ ರಿಂದ ೧೨ ಕುಪ್ಪಿ ವರೆಗೆ ಪೋಸ್ಟೇಜು ೪ ಆಣೆ.
ವಿಳಾಸ:—ಪಾಳ್ಯದ ವೆಂಕಟಾಚಲ ಪಂಡಿತ,
ಎಸ್. ಎಸ್. ಆರ್. ವೈದ್ಯಶಾಲಾ,
ಲಕ್ಷ್ಮೀವಿಲಾಸ ರೋಡ್, ಮೈಸೂರು

ರಬ್ಬರ್ ಹ್ಯಾಂಡ್ ಪ್ರೆಸ್.

111

ಕಲಾಕೌಶಲ್ಯದಿಂದ ಮತ್ತು ಉದ್ಯೋಗದಿಂದ ಊರ್ಜಿತಸ್ಥಿತಿ ಹೊಂದುವ ಈ ಭಾರತ ಭೂಮಿಯೊಳಗೆ ಈ ಪ್ರೆಸ್ ತಯಾರಾಗುತ್ತದೆ. ಇದುವರೆಗೆ ಈ ಪ್ರೆಸ್ಸು ಪರದೇಶದಿಂದ ಬರುತ್ತಿರುವಾಗ ಅದಕ್ಕೆ ೧೨ ರಿಂದ ೧೮ ರೂಪಾಯಿಗಳ ವರೆಗೆ ಬೆಲೆ ಬೀಳುತ್ತಿತ್ತು. ಈ ಪ್ರೆಸ್ಸಿನೊಳಗೆ ಕನ್ನಡ, ತಮಿಳು, ತೆಲಗು, ಉರ್ದು, ಪರ್ಷಿಯನ್, ಅರಾಬಿಕ್, ಇಂಗ್ಲೀಷ್ ಮತ್ತು ಬೇಕಾದ ಭಾಷೆಯಲ್ಲಿ ಒಂದು ಪ್ರತಿ ತಯಾರು ಮಾಡಿ, ಮಾಡಿಸಿದ ಮೇಲೆ ಬಹು ಸ್ವಲ್ಪ ಕಾಲದೊಳಗಾಗಿಯೇ ಇದರಿಂದ ೧೫೦ ಪ್ರತಿಗಳನ್ನು ತಯಾರು ಮಾಡಬಹುದು ಆದ್ದರಿಂದ ಈ ಪ್ರೆಸ್ಸು ಸಾರ್ವಜನಿಕ ಕಚೇರಿ ಮ್ಯುನಿಸಿಪಾಲಿಟಿ ಪೋಲೀಸ್ ಆಫೀಸರರೂ, ವಕೀಲರೂ, ವರ್ತಕರೂ, ಇನಾಮುದಾರರೂ ಮತ್ತು ಪರೀಕ್ಷಕರೂ ತಮ್ಮ ಸಂಗ್ರಹದಲ್ಲಿ ಅವಶ್ಯ ಇಡಬೇಕು. ಎಷ್ಟೋ ಕಾರಕೂನರ ಸಹಾಯದಿಂದ ಒಂದು ಕೆಲಸಕ್ಕೆ ಬಹಳಕಾಲ ಹಿಡಿಯುವದು ಆದರೆ ಈ ನಮ್ಮ ಪ್ರೆಸ್ಸಿನಿಂದ ಅಂಥಾ ಕೆಲಸವನ್ನಾದರೂ ಸ್ವಲ್ಪ ಕಾಲದಲ್ಲಿಯೇ ಮಾಡುವದಕ್ಕೆ ಸಾಧ್ಯ. ಇದರ ದೆಸೆಯಿಂದ ಈ ಪ್ರೆಸ್ ಜನಗಳ ಪ್ರೀತಿಗೆ ಪಾತ್ರವಾಗಿರುವದು. ಈ ಕಾರಣದಿಂದ ಪ್ರತಿ ಒಬ್ಬರೂ ತಮ್ಮ ಹತ್ತಿರ ಈ ಪ್ರೆಸ್ಸನ್ನು ಅವಶ್ಯಕವಾಗಿ ಇಡುವದರಲ್ಲಿ ಏನೂ ಸಂಶೇಹವಿಲ್ಲ.

ನೋಟ್ ಪೇಪರ್ ಸೈಜು, ರೂಪಾಯಿ ೪—೦—೦.
ಹಾಫ್ ಫುಲ್‌ಸ್ಕ್ಯಾಪ್ ಸೈಜು, ೬—೦—೦.
ಪೋಸ್ಟೇಜು ಬೇರೆ (extra).

ವಿಳಾಸ:— ವರ್ಧಮಾನ ಏಜನ್ಸಿ,
ಪೋಸ್ಟ್ ಕಾಲಬಾದೇವಿ,
ಮುಂಬಯಿ.

ನಿಮಗೆ ನೋವು ಇದೆಯೋ?

58 22

ಹಾಗಾದರೆ "ಕ್ಲೆಮೆಂಟ್ ಯವರ ಮ್ಯಾಜಿಕ್ ಬಾಂ" ನ್ನು ಏಕೆ ಉಪಯೋಗಿಸಬಾರದು? ಅತ್ಯಾಶ್ಚರ್ಯಕರವಾದ ಬಾಧಾಪಹಾರಿ ಲೇಪ! ಈಗಿನ ಶತಮಾನದಲ್ಲಿ ಕಂಡು ಹಿಡಿದ ದೊಡ್ಡ ನೂತನವು!

ಈ ರಾಜ ಔಷಧವನ್ನು ಹೊಟ್ಟಮೊದಲು ತೊಡೆಯುತ್ತಲೆ ಕೆಲವು ನಿಮಿಷಗಳೊಳಗಾಗಿ ನರ ಮತ್ತು ಮಾಂಸ ಸಂಬಂಧವಾದ ಬಾಕ್ಸ ನೋವು, ಕೀಲುಗಳ ಬಾಧೆ, ಕಿಬ್ಬೊಟ್ಟೆ ನೋವು, ಬೆನ್ನೆಳೆಯುವದು, ತಲೆನೋವು, ಕೆಮ್ಮು, ಕೀಲುಗಳು ಕತ್ತರಿಸುವದು, ಕೊರಳು ಊತ, ಕೈಕಾಲು ಒಡೆತ ಇವುಗಳನ್ನೆಲ್ಲಾ ವಿದ್ಯುಚ್ಛಕ್ತಿಯಂತೆ ಗುಣಪಡಿಸುವದು. ಈ ಔಷಧವು ಆಶ್ಚರ್ಯಕರವಾಗಿ ಗುಣಪಡಿಸುವದರಿಂದ ಎಲ್ಲರಲ್ಲಿಯೂ ಪ್ರಸರಿಸುತ್ತಾ ಬರುವದು. ಇತರ ಔಷಧಿಗಳು ಗುಣಪಡಿಸದೆ ಹೋದಾಗ ಡಾಕ್ಟರ್ ಫೀಜನ್ನು ಕಡಿಮೆಮಾಡಿ. ಇದು ನಿಸ್ಸಂದೇಹವಾಗಿಯೂ ಗುಣಪಡಿಸುವದು.

ಕ್ರಯ —೧ ಬಾಟ್ಲಿಗೆ ೧೨ ಆಣೆ, ಪೋಸ್ಟೇಜ್ ೪ ಆಣೆ. ೩ ಬಾಟ್ಲಿಗೆ ಅಂಚೆವೆಚ್ಚ ಸೇರಿ ರೂ. ೨—೪ ಆಣೆ. ಎಲ್ಲಾ ಕೆಮಿಸ್ಟ್ ಷಾಪುಗಳಲ್ಲಿ ದೊರೆಯುವದು

ನಮ್ಮ ವಿಳಾಸ:—ಎಫ್. ಡಬ್ಲಿಯು. ಆರ್ನ,
ಸಿಮೆಟ್ರಿ ರೋಡ್, ವೇಪೇರಿ, ಮದರಾಸ್.

ಜ್ವರಹರಿ.

71 13

ಇದು ಸಾಧಾರಣ ಜ್ವರ, ಚಳೀಜ್ವರ, ಮೋದೇಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮುಜರಾಯಿ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್. ಟಿ. ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಔನ್ಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಂಲೇ ಬೀಳುತ್ತಿರುವ ಹಂಗದ ದಯವಿಟ್ಟು ಇನ್ನೊಂದು ೨೦ ಔನ್ಸಿನ ಸೀಸೆಯನ್ನು ವಿ. ಪಿ. ಪಾರ್ಸಲ್ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದಾರೆ

ಕ್ರಯ:—ಸೀಸೆ ೧ ಕ್ಕೆ ೮ ಆಣೆ, ೧ ರೂ.; ೧—೮ ರೂ., ರೂ. ೨—೧೨ ಆ.; ೧೧ ರೂ., ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

✱✱✱✱✱✱✱✱✱

ಓಮಂ ಕರ್ಪೂರ.

Omum Carpoor

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಗೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯವು ಬರವು ದ್ವಾರಕಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಕೆಪ್ರಿಯಮ್ ಓಮಂ ಕರ್ಪೂರವನ್ನು ನಾನೂ ನನ್ನ ಸಹೋದಾರರೂ ಮ್ಯುನಿಸಿಪಲ್ ಅಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಷ್ಠರಿಗೆ ಕೊಡುತ್ತೇವೆ ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧವೆಂತ ಬರೆದಾರೆ.

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದ್ವಾರಾ ವಿಶೇಷ:—
ಕೆಪ್ರಿಯುವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,
ಸೆಕೆಂಡ್ ಬೀಚ್ ಲೈನ್, ಮದರಾಸ್.

ಇಲ್ಲಿ ನೋಡಿ!

85-16

ತುಮಕೂರು ವಿರ್ಜ ಇಲಾಖೆಯಲ್ಲಿ ಯೂರೋಪಿಯನ್ ಪೇಟ್ರಿ ಚಾರಿಕೆಯಿಂದ ಉತ್ತಮ ತರಹದ ಹಾಸನದ ಟೋಪಿಗಳು ಅತಿ ಶ್ರೇಷ್ಠವಾದ ಉಲ್ ದಾರದಿಂದ ತಯಾರಾಗುತ್ತವೆ.

ಕ್ರಯ.—೧॥ ಆಣೆ ಮೊದಲ್ಗೊಂಡು ೧ ರೂ ೧॥ ಆಣೆಯ ವರಿಗೆ.

೧ ಡಜನ್ ಟೋಪಿಗಳನ್ನು ತೆಗೆದುಕೊಳ್ಳುವವರಿಗೆ ಶೇಕಡ ೫ ರಂತೆ ಡಿಸ್‌ಕೌಂಟ್ ಕೊಡಲ್ಪಡುವದು.

ನಮ್ಮ ವಿಳಾಸ:—ಮ್ಯಾನೇಜರ್,

ಹಾಸನದ ಟೋಪಿ ಕಾರ್ಖಾನೆ, ವಿರ್ಜ ಇಲಾಖೆ, ತುಮಕೂರು.

ಕಾರ್ಡು ಸೈಜು ೪¼×೩¼.

ಫೋಟೋ ತೆಗೆಯುವ

ಫೊಟೊ ಕ್ಯಾಮೆರಾ.

84-10

ಬೆಲೆ ಫಕ್ತ ಮೂರು ರೂಪಾಯಿ.

ಇದರಿಂದ ಬೇಕಾದ ಮನುಷ್ಯನ ಫೋಟೋ ಆವನಿಗೆ ತಿಳಿಯದಂತೆ ತೆಗೆಯಲಿಕ್ಕೆ ಬರುತ್ತದೆ. ವೇಗದಿಂದ ಓಡುವ ಗಾಡಿಯ ಮತ್ತು ಹಾರುವ ಪಕ್ಷಿಯ ಫೋಟೋ ಸಹ ತೆಗೆಯಬಹುದು. ಇದರಲ್ಲಿ ಕಲಿಯತಕ್ಕದ್ದೇನೂ ಇಲ್ಲ. ಈ ಕ್ಯಾಮರಾದ ಮಾಹಿತಿಯನ್ನು ಕೊಳ್ಳುವವರಿಗೆ ನಾವು ಕೂಡಲೇ ಮಾಡಿಕೊಡುವೆವು. ಎಷ್ಟೋ ಕಡೆಗೆ ಇದಕ್ಕೆ ೧೦ ರಿಂದ ೧೫ ರೂ. ಬೆಲೆ ಬೀಳುತ್ತದೆ. ಆದರೆ ಇದರ ಚಲೇ ರಿಂದ ೧೫ ರೂ. ಬೆಲೆ ಬೀಳುತ್ತದೆ. ಆದರೆ ಇದರ ಕಿಮ್ಮತ್ತು ೩ ರೂಪಾಯಿ ಮಾತ್ರ ಇರುವದು. ಟಪ್ಪಾಲ್ ಖರ್ಚು ೯ ಆಣೆ. ಇದು ಸಿಕ್ಕತಕ್ಕ ವಿಳಾಸ:—

ಛೋಟಾಲಾಲ ಛಗನಲಾಲ ಮಹಾಜನ, ಠಾಕೂರದ್ವಾರ ರೋಡ, ಪೋಸ್ಟ್ ಕಾಲಬಾದೇವಿ, ಮುಂಬಯಿ.

ಆರ್ಡರ್ ಬರುತ್ತಿವೆ! ಬೇಗ ನೋಡಿ!

ಪ್ರಪಂಚವೇ ಆಶ್ಚರ್ಯ ಪಡುವದು.

87-8

ದೊಡ್ಡ ಮನುಷ್ಯರೇ, ಹಿಂದುಸ್ಥಾನದಲ್ಲಿ ಪ್ರಕಟನೆಗಳ ಮಯವಾಗಿದೆ. ಕೆಲವು ಕಂಪನಿಯವರು ಮೋಸ ಮಾಡೋಣವೆಂದು ಪ್ರಕಟನೆಯನ್ನು ಕಂಡರೆ ಜನರು ಅಸಹ್ಯಪಟ್ಟು ಏಸೆಯುತ್ತಾರೆ. ಸತ್ಯವಂತರ ಪ್ರಕಟನೆಯನ್ನೂ ಕೂಡ ನಂಬುವದು ಕಷ್ಟ. ಯಥಾರ್ಥವುಳ್ಳ ಕಂಪನಿಯ ನೋಟೀಸುಗಳನ್ನು ಸಹ ಸಕ್ಕರೆ ಔಷಧಿ ಕಟ್ಟುವದಕ್ಕೆ ಕಟ್ಟಿ ಬಿಡುವರು. ಆದರೆ ಮಹನೀಯರೇ, ನಮ್ಮ ಕಂಪನಿಯ ಯೋಗ್ಯತೆಯನ್ನು ಒಂದಾವರ್ತಿ ಪರೀಕ್ಷಿಸಿ ನೋಡಿ. ಈ ಪ್ರಕಟನೆಯು ನವೀನವಾದದ್ದು, ಆಶ್ಚರ್ಯಕರವಾದದ್ದು. ನಾವು ೩೦ ಗಂಟೆ ನಡೆಯುವ ಶಾಶ್ವತವಾದ ಐದು ವರುಷದ ಗ್ಯಾರಂಟಿ ಉಳ್ಳ ಲೀವರ್ ಗಡಿಯಾರವನ್ನು ೫೧ಕ್ಕೆ ಬಹುಮಾನವನ್ನಾಗಿ ಕೊಡುವೆವು. ಕಳುಹಿಸುತ್ತೇವೆ. ಇದರಲ್ಲಿ ಸತ್ಯವಾದ ಕಂಪನಿಯ ಕೀರ್ತಿ ಹೆಚ್ಚಬೇಕೆಂಬುವದೊಂದೇ ನಮ್ಮ ಮುಖ್ಯ ಉದ್ದೇಶ. ಒಂದಾವರ್ತಿ ನಮಗೆ ಬರೆದು ತರಿಸಿ ನಮ್ಮ ಸತ್ಯತೆಯನ್ನು ಪರೀಕ್ಷೆಮಾಡಿ. ಗಡಿಯಾರದ ಕೂಡ ನಾವು ಕಳುಹಿಸುವ ಬಹುಮಾನಗಳೇನೆಂದರೆ—ಒಂದು ಗಡಿಯಾರ, ಬಲವಾದದ್ದು, ೩೦ ಗಂಟೆ ನಡೆಯುವದು, ಒಂದೆ ಎರಡು ಮುಚ್ಚಳ, ಪರೀಕ್ಷೆಯಿಂದ ಸರಿ ಮಾಡಿದ್ದು, ಒಂದು ಸೊಗಸಾದ ಪಟ್ಟಿಗೆಯಲ್ಲಿ, ಐದು ವರುಷದ ಗ್ಯಾರಂಟಿ ಉಳ್ಳದ್ದು. ಒಂದು ಸೊಗಸಾದ ಗಡಿಯಾರದ ಸರಪಳಿ, ಆರೆ ಬೇಗದ ಕೈ ಉಳ್ಳ ಬಲವಾದ ಇಂಗ್ಲಿಷ್ ಖಜಾನೆ ಪೆಟ್ಟಿಗೆ, ಒಂದು ದೊಡ್ಡ ಸರಾಯಿ. ಒಂದು ದೊಡ್ಡ ಜುಬ್ಬ. ಒಂದಾವೇಳೆಯ ಎಣ್ಣೆ ಹಾಕಿದರೆ ಒಂದು ತಿಂಗಳು ಉರಿಯುವ ಹೊಸ ತರಹ ಲಾಂಪು. ಒಂದಾವರ್ತಿ ಬಾಯಿ ತುಂಬಿದರೆ ಅನೇಕ ದಿನಗಳ ತನಕ ಬರೆಯುವ ಫೌಂಟನ್ ಪೆನ್. ಒಂದು ಜೊತೆ ದೊಡ್ಡ ಕಾಲುಚೀಲ. ಬಲವಾದ ದಂತದ ಕೈಪಿಡಿಯುಳ್ಳ ಚಾಕು ಒಂದು ದೊಡ್ಡ ಕತ್ತರಿ. ಒಂದು ದೊಡ್ಡ ಚರ್ಮದ ಮದ್ದು ಹಾಕಿಡುವ ಚೀಲ ಒಳ್ಳೇ ಬಾಚಣಿಗೆ. ದಂತದ ಕನ್ನಡಿ. ಕೊರಳು ಬಾಚಿಕೊಳ್ಳುವ ಬ್ರಶು. ಸರಟಿನ ಒಂದು ಸೆಟ್ ಗುಂಡಿಗಳು. ಒಂದು ಸೊಗಸಾದ ಕನ್ನಡಕ. ಒಂದು ಸಾಬೂನುಬಿಲ್ಲೆ, ಒಂದು ಸೌಬೂಡಬ್ಬ. ಒಂದು ಕೈಪಟ್ಟಿ. ಎಂದಿಗೂ ಹೊಳೆಯುವ ಚಿನ್ನದ ಉಂಗುರ. ಒಂದು ರಬ್ಬರು ಸುಂದರವಾದ ದೊಡ್ಡ ಕಾಯಕೆಂಡಿಕೆ. ಒಂದು ಪೆನ್ಸಲ್ ಬರೆಯುವದು. ೧॥ ಲೇಖಣಿ ಕಡ್ಡಿಗಳು. ೬ ಕಪ್ಪು ಪೆನ್ಸಿಲುಗಳು. ೧೫೦ ಲಕೋಟೆಗಳು ೧೫೦ ಲೆಟರ್ ಪೇಪರುಗಳು. ಪೋಸ್ಟ್ ರವಾನಿಸಲು ಸಾಧ್ಯವಾದ ೧೦೦ ಪೋಸ್ಟ್ ಕಾರ್ಡುಗಳು. ೬ ಸ್ಟೀಲ್ ಮುಳ್ಳುಗಳು.

ಇಷ್ಟಕ್ಕೆಲ್ಲಾ ಕ್ರಯ ರೂ. ೩—೮—೦ ಮಾತ್ರವೇ.

ಆರ್ಡರ್ ಹಣ ಅಡ್ವಾನ್ಸ್ ಮನೀಆರ್ಡರ್ ಬಂದಲ್ಲಿ ಉಳಿದ ಆರ್ಡರಕ್ಕೆ ವಿ. ಪಿ. ಮಾಡುತ್ತೇವೆ. ಒಪ್ಪದಿದ್ದರೆ ಹಣ ವಾಪಸು ಕಳುಹಿಸುವೆವು.

ಈ ವಿಳಾಸಕ್ಕೆ ಬೇಗ ಬರೆಯಿರಿ:—

ಎಂ. ಎ. ಘಟಾಲಾ ಮತ್ತು ಕಂಪನಿ,

ಚಿತ್ತೂರು, ಉತ್ತರ ಆರ್ಕಾಟು.

CHAMBERLAIN'S COLIC, CHOLERA AND DIARRHOEA REMEDY.

ಚೇಂಬರ್ಲೀನ್ ಯವರು ಹೊಟ್ಟೆಕೂಳೆ, ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು.

4-17



ಈ ಹೊಟ್ಟೆಯ ನೋವು, ಬರೀ ಭೇದಿಯಾಗುವುದು, ಆಮಶಂಕೆ, ವಾಂತಿಭೇದಿ ಉಪದ್ರ, ಕೀಲುನೋವು, ಹೊಟ್ಟೆಯ ನಾನಾ ತರದ ಶೂಲೆಗಳು—ಈ ರೋಗಗಳನ್ನೆಲ್ಲಾ ವಾಸಿಮಾಡುತ್ತದೆ. ಈ ಪರಮಾಶ್ಚರ್ಯಯುಕ್ತವಾದ ಔಷಧವು ಜನರನ್ನು ಬದುಕಿಸಿರುವಷ್ಟು ಮತ್ತು ನೋವನ್ನೂ ಬಾಧೆಯನ್ನೂ ನಿವಾರಣೆ ಮಾಡಿರುವಷ್ಟು ಪ್ರಪಂಚದಲ್ಲೇ ಇನ್ನಾವ ಔಷಧವೂ ಮಾಡಿರುವುದಿಲ್ಲ.

ಜ್ಞಾಪಕದಲ್ಲಿಟ್ಟುಕೊಳ್ಳಿ—ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯೊಳಗಿನ ಎಲ್ಲಾ ತರದ ನೋವನ್ನೂ ನಿಲ್ಲಿಸಿಬಿಡುತ್ತದೆ. ಬಹಳ ಕಠಿಣವಾದ ಭೇದಿಯೂ ಕೂಡ ಮೂರೇ ಹೊತ್ತಿನ ಈ ಔಷಧದಿಂದ ನಿರ್ಮೂಲವಾಗಿ ನಿಲ್ಲುತ್ತದೆ. ಖಂಡಿತವಾಗಿ ವಾಸಿಮಾಡುವುದೇ ಇದರ ಗುಣ.

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ.

ಕೈಯಿಂದ ಸ್ವಲ್ಪವೂ ಮುಟ್ಟಿಲ್ಲ.

ಇದು ಎಲ್ಲೆಲ್ಲೂ ಬಿಕರಿಯಾಗುತ್ತದೆ. ಸಣ್ಣ ಸೀಸೆಗೆ ೧ ರೂಪಾಯಿ. ದೊಡ್ಡ ಸೀಸೆಗೆ ೨ ರೂಪಾಯಿ.

ಅಪಾಯದ ಗುರುತುಗಳು.

ಸ್ವಾಭಾವಿಕವಾಗಿ ಅಪಾಯ ಬರಬಹುದಾದ ಕಾರಣಗಳನ್ನು ಕಂಡುಹಿಡಿಯಬಹುದು.

ಕೆಮ್ಮು ಅಪಾಯದ ಕಾರಣ!

ಶ್ವಾಸಕೋಶಗಳು ಬಲಹೀನವಾಗಿವೆಯೆಂದು ಇದರಿಂದ ತೋರಿ ಬರುತ್ತದೆ. ಅವನ್ನು ಬೇಗನೇ ಬಲಪಡಿಸತಕ್ಕದ್ದು ಬಹು ಅವಶ್ಯಕ.

SCOTT'S EMULSION. 31-32

(ಸ್ಕಾಟ್ಸ್ ಇಮಲ್ಷನ್.)

ಎಂಬೀ ಔಷಧವು ಈ ಕಾರಣಗಳನ್ನು ಹೋಗಲಾಡಿಸುವದು.

ಬಲಹೀನವಾದ ಶ್ವಾಸಕೋಶಗಳನ್ನು ಬಲಪಡಿಸಿ, ಕೆಮ್ಮನ್ನು ನಿಲ್ಲಿಸುತ್ತದೆ.

ಕೈಯಿಂದ ಮುಟ್ಟದೆ ತಯಾರಿಸಿದ್ದು.

ಎಲ್ಲಾ ಔಷಧ ವ್ಯಾಪಾರಿಗಳಲ್ಲೂ ದೊರಕುತ್ತದೆ.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್.

ಈ ವಿಧಾನ ಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು? ಹಾಸನದ ಟೋಪಿ ಅಲ್ಲವೋ? ಹಾಗಾದರೆ ಬೇಗ ಬರೆದು ತರಿಸಿಕೊಳಿ.

75-13

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ಹಾರವೆಲ್ಲಾ ಬೀಳಾದದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ:—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು. (೨) ಟೋಪಿಗಳನ್ನು ಮುದ್ದಾಗಿ ನಾವೇ ನಿಂತು ಚೆನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚೆನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ, ಚೆನ್ನಾಗಿ ಹಸಿದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಶೀಘ್ರ ಬರೆದು ತರಿಸಿಕೊಳ್ಳಿ. ಅಗ್ಗವಾದ ಹ್ಯಾ ಚೆನ್ನಾಗಿಲ್ಲದ್ದು ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ.

ಸಾದ, ಕೆಂಪು, ಕಪ್ಪು, ಬಿಳಿ, ಕಾಫಿ ಟೋಪಿಗಳು ೧ ರೂ. ೮ ಆ.; ೧ ರೂ. ೬ ಆ.; ೧ ರೂ. ೪ ಆ.

ರೇಷ್ಮೆ ಚುಕ್ಕೆಯುಳ್ಳ ಟೋಪಿಗಳು ೧ ರೂ. ೮ ಆ.; ೨ ರೂ.

ದಾರದ ಟೋಪಿಗಳು ೧ ರೂ. ೧೨ ಆ.; ೧ ರೂ. ೮ ಆ.; ೧ ರೂ. ೪ ಆ.

ಉಸುಕಿನ ಟೋಪಿಗಳು ೧ ರೂ. ೮ ಆ.; ೧ ರೂ. ೬ ಆ.

ಕೂಸುಗಳ ಟೋಪಿ, ಸ್ಕಾರ್ಫ ಮೇಜು ಡು, ಆರ್ಡರ್ ಮೇರೆಗೂ ಹು ಕಡ್ಡಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು.

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ.

ವಿಕಟಪ್ರತಾಪ.

ಸುಚಿತ್ರವೂ, ವಿಚಿತ್ರವೂ ಆದ ಮಾಸಪತ್ರಿಕೆ.

1094

"ವಿಕಟನ ನಡೆ.—ಅಧಿಕಾರಿಗಳ ಚುನ್ನಾಟ, ಚಿಲ್ಲರ ನೌಕರರ ಒದ್ದಾಟ, ಬಡ ವಿದ್ಯಾರ್ಥಿಗಳ ಗೋಳಾಟ, ದಿವಾಳಿ ಕಂಪನಿಗಳ ಸಿಟ್ಟಾಟ, ಬೊಂಬಗರ ಬೇಟ, ಕ್ರಿಮಿಕೇಟಗಳ ಕಾಟ, ಲಂಚಪ್ರಿಯರ ಮಾಟ, ಕಳಪೆ ಪ್ರಿಯರ ಗುದ್ದಾಟ, ಪ್ರೇಷ್ಠಧಾರಿಗಳ ಕೂಗಾಟ, ಸದಾಚಾರಿಗಳ ಕಿತ್ತಾಟ, ವಿರಾಧಾರಿಗಳ ಸುಗ್ಗಾಟ, ಇನ್ನೂ ಕೆಲವರೆ—ಬಂಟರ ಒಟ್ಟು ತಂಟೆಯಾಟ, ಕಂಟರ ಲಟಾಟ, ಸಂಟ ಪಟಾಟ"—ಈ ಪರಿ ಕೂಟಗಳೆಂದ ಕೊಡಿರ್ಪುದೇ ನಮ್ಮ ವಿಕಟನ ಆಟ. ಇದೇ ಹೊಸಟಪ್ಪನ್ನು, ಸೊಗಸಿನ ಸಸ, ವಿಕಟನನ್ನಾಸ್ಯ. ಈ ವಿಕಟಪ್ರತಾಪ ಪತ್ರಿಕೆಯಲ್ಲಿ ನಡೆವದರನ್ನು ನಗಿಸುವ ಬಹು ವಿನೋದವಾದ ಹಾಸ್ಯ ಲೇಖನಗಳೂ, ಚಿತ್ರವಿಚಿತ್ರವಾದ ಒಗಟುಗಳೂ ಲೆಕ್ಕಗಳೂ, ಮರ್ಮದಿಂದಲೂ ವಿನೋದದಿಂದಲೂ ಕೂಡಿರತಕ್ಕ ಬಹುಟಾ ಗರ್ಭಿತ ಚಿತ್ರಗಳೂ ಪ್ರಕಟಿಸಲ್ಪಡುವೆ ಈ ಪತ್ರಿಕೆಯನ್ನು ಮೋಹಿಸದವರೇ ಇಲ್ಲ.

ನೂರಾರು ಪತ್ರಿಕೆಯನ್ನು ಅಪೇಕ್ಷಿಸುವವರು ೨ ಆಣೆ ಸ್ಟಾಂಪನ್ನು ರವಾನಿಸಬೇಕು.

ವಿಕಟಪ್ರತಾಪದ ಚಂದಾವಿವರ.

ಸ್ಥಳದವರಿಗೆ ವರ್ಷವೊಂದಕ್ಕೆ ರೂ. ೦—೧೨—೦

ಪರಸ್ಥಳದವರಿಗೆ .... ರೂ. ೧—೦—೦

ನಮ್ಮ ವಿಳಾಸ:—ಮ್ಯಾನೇಜರ್ ವಿಕಟಪ್ರತಾಪ ಆಫೀಸ್,

೧೩೪, ಅರಳೆಪೇಟೆ, ಬೆಂಗಳೂರು ಸಿಟಿ.

ಊರಜನರ ಹೇಳಿಕೆಮೇಲಿನ ನಂಬಿಕೆ.

938

ಕಲ್ಕತ್ತೆಯ ಇನ್ನೊಬ್ಬ ಡಾಕ್ಟರರು ಕೊಟ್ಟ ಅಭಿಪ್ರಾಯವನ್ನು ಇದರಡಿ ತೋರಿಸಿರುತ್ತದೆ. ಇದರಿಂದ ಈ ಪತ್ರಿಕೆಯಲ್ಲಿ ಸದಾ ಪ್ರಚುರವಾಗುವ ಅನೇಕ ಸ್ಥಳೀಯ ದೃಷ್ಟಾಂತಗಳಿಗೆ ಇನ್ನೊಂದು ಸೇರಿದಂತಾಗುವದು.

ಇಂಥಾ ಸ್ಥಳೀಯ ಸಾಕ್ಷ್ಯದ ಯಥಾರ್ಥತ್ವವನ್ನು ನಾವು ಪರೀಕ್ಷೆ ಸಬಹುದಾದ್ದರಿಂದ ಸಾವಿರಾರು ಮೈಲು ದೂರದಲ್ಲಿರುವವರಿಂದ ಕೊಡಲ್ಪಡುವ ಸಾಕ್ಷ್ಯಕ್ಕಿಂತಲೂ ಇದು ಹೆಚ್ಚು ಪ್ರಯೋಜನಕರವಾದದು. ಕಲ್ಕತ್ತೆಯ ಜನರಿಗೆ ಕಲ್ಕತ್ತೆಯ ಜನರ ಮಾತೇ ಶ್ರೇಷ್ಠವು. ಕಾರ್ನ್‌ರ್ ರೋಡ್ ನಂ ೬೩ ನೇ ದಿಸ್‌ಪನ್ಸರಿ ಡಾಕ್ಟರ್ ಎಸ್. ಸಿ. ಸೇನ್, ಎಲ್. ಎಂ. ಎಸ್. ಇವರ ಹೇಳಿಕೆಗೆ ವಿಲುವಿದ್ದು ತೋರಿ ಇರಲಾರದು. ಅವರು ಗವರ್ನಮೆಂಟ್ ಮೆಡಿಕಲ್ ಆಸ್ಪತ್ರೆಗಳಲ್ಲಿ ಅನೇಕ ವರುಷ ಇದ್ದು ಅನುಭವವುಳ್ಳವರು. ಪ್ರಕೃತ ಕಲ್ಕತ್ತೆಯ ಟ್ರಾಮ್ವೇ ಕಂಪನಿಯ ವೈದ್ಯಚಿಕಿತ್ಸಕರಾಗಿರುತ್ತಾರೆ. ಅವರು ಹೇಳುವುದೇನೆಂದರೆ—ಡೋನ್ನ್‌ರ (ಬ್ಯಾಕ್ ಏಕ್ ಕಿಡ್ನಿ ಪಿಲ್ಸ್) ಬೆನ್ನುನೋವಿನ ಮೂತ್ರಕೋಶದ ಔಷಧ ಗುಳಿಗೆಗಳನ್ನು ಮೂತ್ರಕೋಶ ಸಂಬಂಧವಾದ ಬಾಧೆಗಳಲ್ಲಿ ಕೊಟ್ಟು ನೋಡಿದ್ದೇನೆ. ಅಂಥಾ ಸಂಗತಿಗಳಲ್ಲಿ ತಕ್ಷಣವೇ ಉಪಶಮನ ಸಿಕ್ಕುವ ಬಗ್ಗೆ ಇವು ಅತ್ಯಂತ ಉಪಯೋಗಕರವಾಗಿವೆ.

ಬೆನ್ನು ನೋವು ಮೂತ್ರನಾಡಿಗಳು ದುರ್ಬಲವಾಗಿಯೂ ಆರೋಗ್ಯ ಸ್ಥಿತಿಯಲ್ಲಿ ರಕ್ತ ಇಲ್ಲದಿರುವದಕ್ಕೆ ಒಂದು ಲಕ್ಷಣವಾಗಿರುವದು. ಸಮಯದಲ್ಲಿ ಅವುಗಳಿಂದ ಪಡೆಸಕೊಡುವದಕ್ಕಿಂತ ಹೆಚ್ಚು ಮತ್ತು ಅವುಗಳ ಮೇಲೆ ಹೊರಿಸಿದರೆ ತಲೆನೋವು, ಆಯಾಸ, ಸರಸ ಅರಿವಿಲ್ಲದಿರುವಿಕೆ, ಮಂಕು, ಅಂಜಿಕೆ ಮುಂತಾದದ್ದು ಉಂಟಾಗುವದು. ಇವನ್ನು ಅಲಕ್ಷಿಸಿದರೆ ಜಲೋದರವ್ಯಾಧಿ, ವಾತಶೂಲೆ, ಮೂತ್ರಪಿಂಡಗಳ ಮತ್ತು ಪ್ರಾಣಾಪಾಯಕರವಾದ ಇತರ ಜಾಡ್ಯಗಳು ಸಂಭವಿಸುವವು. ಈ ಮಾತ್ರೆಗಳು ಮೂತ್ರಕೋಶ, ಮುಂತಾದ್ದಕ್ಕೆ ಸಂಬಂಧಪಡುವ ವಿಶಿಷ್ಟಬಾಧೆಗಳಿಗೆ ಮುದ್ದಾದರೂ, ಯಾವನಸ್ಥರಿಗೂ ನಿರ್ದುಷ್ಟವಾದ ಔಷಧವಾಗಿರುವದು. ಇದನ್ನು ಸೇವಿಸಿದ್ದರಿಂದ ಮುಂದೆ ಯಾವ ಬಾಧಕವೂ ಇರಲಾರದು.

ಎಲ್ಲಾ ಔಷಧ ವರ್ತಕರಿಂದ ಮಾರಲ್ಪಡುತ್ತದೆ. ಸೀಸೆ ಒಂದಕ್ಕೆ ರೂ. ೨. ಅಥವಾ ೬ ಸೀಸೆಗಳಿಗೆ ರೂ ೧೦—೮—೦. ಅಥವಾ ಮುಂಬಯಿಯಲ್ಲಿಯ ಡೋನ್ನರ ಔಷಧಗಳ ಕೋಠಿಯಿಂದ ಶೀಘ್ರ ತರಿಸಿಕೊಳ್ಳಬಹುದು. ಬಿ. ಓ. ಬಾಕ್ಸ್. ನಂ. ೫೦, ಮುಂಬಯಿ.

ವೃತ್ತಾಂತ ಪತ್ರಿಕೆ.

೧೯೦೩ ನೇ ಇಸವಿ ಅಕ್ಟೋಬರ್ ತಾ|| ೨೯ ನೇ ಗುರುವಾರ.

ಮೈಸೂರು ಸಂಸ್ಥಾನದ ಸ್ಥಿತಿಗತಿಯು.

ಕಳೆದ ಶನಿವಾರ ದಿವಾನರವರು ಪ್ರತಿನಿಧಿಗಳಿಗೆ ಓದಿದ ಅಡ್ರೆಸ್ಸಿನಲ್ಲಿ ಮುಖ್ಯವಾದ ಭಾಗಗಳನ್ನು ಇನ್ನೊಂದೆಡೆ ಪ್ರಕಟಿಸಿರುವೆವು. ಇದುವರೆಗೆ ಗವರ್ನಮೆಂಟಿನವರು ಶ್ರೀಮಾನ್ ಮಾಡಿರುವಂಥಾ ವಿಚಾರಗಳನ್ನು ಮಾತ್ರ ತಿಳಿಸುತ್ತೇವೆ. ದಿವಾನರವರ ಈ ವರುಷದ ಅಡ್ರೆಸ್ಸಿನಲ್ಲಿ ಯಾವ ವಿಶೇಷವಾದ ಸಂಗತಿಗಳೇನೂ ಕಾಣಬರುವುದಿಲ್ಲವಾದ್ದರಿಂದ ಪ್ರತಿ ಇಲಾಖೆಯಲ್ಲೂ ಅವಶ್ಯವಾದಂಥಾ ಪ್ರಯೋಜನಕರವಾದಂಥಾ ಹೊಸ ಏರ್ಪಾಡುಗಳನ್ನು ನಡೆಸುತ್ತಿರುವರೆಂದು ಗೊತ್ತಾಗುವುದು.

ಎಲ್ಲಾ ಬಾಬುಗಳಲ್ಲೂ ಈಚೆಗೆ ಖರ್ಚು ದುಬಾರಿಯಾಗುತ್ತಿದೆ ಎಂತಲೂ ರಿಜರ್ವು ಉಳಿದಿದ್ದ ೧೭೦ ಲಕ್ಷ ರೂಪಾಯಿ ಈ ಬಜೆಟಿನ ದೆಸೆಯಿಂದ ಮೂರು ವರ್ಷಗಳ ಕೆಳಗೆ ಕರಗಿಹೋಯಿತೆಂತಲೂ ತಿಳಿದು ದಿವಾನರವರು ಖರ್ಚನ್ನು ಕಡಿಮೆಮಾಡುವುದರಲ್ಲೂ ಆದಾಯವನ್ನು ಹೆಚ್ಚಿಸಿ ಶೇಖರ ಮಾಡುವುದರಲ್ಲೂ ಉದ್ಯುಕ್ತರಾಗಿದ್ದಾರೆ. ಜುಡಿಷಲ್, ಎಕ್ಸೈಸ್, ರೆಜಿಸ್ಟ್ರೇಷನ್ ಇಲಾಖೆಗಳ ಖರ್ಚನ್ನು ಕಡಿಮೆ ಮಾಡಿದ್ದಾಯಿತು. ಇನ್ನು ಮುಂದೆ ಪಿ. ಡಬ್ಲ್ಯು. ಇಂಜನಿಯರ್ ಮೊದಲಾದ ಇಲಾಖೆಗಳ ಖರ್ಚನ್ನು ಕಡಿಮೆಮಾಡಲು ಪ್ರಾರಂಭಿಸುವುದರಲ್ಲಿದ್ದಾರೆ. ಫಲದಾಯಕವಾದ ಕೆರೆ ಮೊದಲಾದ ಸಿಂಗಾಪುರಿ ಕಾಮಗಾರಿಗಳನ್ನು ಗವರ್ನಮೆಂಟಿನವರು ನಿಲ್ಲಿಸಿಬಿಡುವುದಾದರೆ ಅದರಿಂದ ಸಂಸ್ಥಾನಕ್ಕೆ ಕೆಡಕೇ ಉಂಟಾದೀತು. ಆದರೆ ಈ ಸಾಲಿನ ಬಜೆಟ್ಟನ್ನು ನೋಡುವುದರಲ್ಲಿ ಸಂಸ್ಥಾನದ ಚೈತನ್ಯವು ಎಂದಿನಂತೆ ಕೂಡಿಕೊಳ್ಳುವುದೆಂತಲೂ, ಮತ್ತೆ ಗವರ್ನಮೆಂಟಿನವರು ದೊಡ್ಡ ಕೆಲಸಗಳನ್ನು ಪ್ರಾರಂಭಿಸಲಾಗುವುದೆಂತಲೂ ತಿಳಿಯಬರುವುದಾಗಿದೆ.

ಸಂಸ್ಥಾನದಲ್ಲಿ ಸರ್ವೇಯಿಂದ ಹಿಡಿದು ಈ ಕಮಿಷನರವರೆಗೆ ಸಂಬಂಧಿಸಿದ ಕೆಲಸಕಾರ್ಯಗಳನ್ನು ಚಟುವಟಿಕೆಯಾಗಿ ನಡೆಯುವಂತೆ ಮಾಡಬೇಕೆಂದು ಪ್ರಯತ್ನಪಡುತ್ತಿದ್ದಾರೆ ಇದು ಬಹಳ ಅವಶ್ಯಕವಾದ್ದನ್ನು ಮಾಡುವುದಕ್ಕೆ ಸಂಶಯವಿಲ್ಲ. ಸಾನಿಟರಿ ಕಮಿಷನರಿಗೆ ಒಂದು ಇಲಾಖೆಯನ್ನೂ ಪ್ರಜಾ ಆರೋಗ್ಯವನ್ನು ಕ್ರಮಪಡಿಸುವುದಕ್ಕೆ ಒಂದು ಇಲಾಖೆಯನ್ನೂ ಏರ್ಪಾಟುಮಾಡಿದ್ದು ಬಹಳ ಪ್ರಯೋಜನಕರವಾಗಿದೆ. ಇದಲ್ಲದೆ ಕೆರೆಗಳ ಕಾಮಗಾರಿ ಮೊದಲಾದ ಚಿಲ್ಲರೆ ಬಾಬುಗಳನ್ನು ಸುಲಭವಾಗಿ ನೋಡಿಕೊಳ್ಳುವುದಕ್ಕೋಸ್ಕರ ಗ್ರಾಮ ಪಂಚಾಯತಿಗಳೆಂಬ ಪ್ರಾಚೀನಕಾಲದ ಸಂಘಗಳನ್ನು ಮಾಡಿದುತ್ತೇವೆಂದು ದಿವಾನರವರು ಸೂಚಿಸಿರುತ್ತಾರೆ. ಈ ಸಂದರ್ಭದಲ್ಲಿ ಈ ಪಂಚಾಯತರು ಚಿಲ್ಲರೆ ಮೊಕದ್ದಮೆಗಳನ್ನು ಹಿಡಿದು ಇತ್ಯರ್ಥಪಡಿಸುವ ಏರ್ಪಾಟಾದರೆ ಎಷ್ಟೋ ಪ್ರಯೋಜನವಾದೀತೆಂದು ಗವರ್ನಮೆಂಟಿನವರಿಗೆ ನಾವು ಸೂಚಿಸುತ್ತೇವೆ. ಯಾಕಂದರೆ ಹಳ್ಳಿಗಾಡಿನ ಜನರು ಪ್ರಯಾಣಕ್ಕೂ, ಕೋರ್ಟು ಕಚೇರಿಗಳಿಗೂ, ವಕೀಲರು ಮುಂತಾದವರಿಗೂ ವ್ಯರ್ಥವಾಗಿ ಬಹಳ ಹಣವನ್ನು ವಿನಿಯೋಗಿಸಿ ಹೀನಸ್ಥಿತಿಗೆ ಬರುತ್ತಿರುವರು. ಆದಕಾರಣ ಗವರ್ನಮೆಂಟಿನವರು ಸುಲಭವಾದ ಮಾರ್ಗವನ್ನು ಕಂಡುಹಿಡಿದು ಗ್ರಾಮ ಪಂಚಾಯತರಿಗೆ ಸಣ್ಣ ಪುಟ್ಟ ವ್ಯಾಜ್ಯಗಳನ್ನು ಫೈಸಲ್ ಮಾಡುವ ಅಧಿಕಾರವನ್ನು ವಹಿಸಿದರೆ ಪ್ರಜೆಗಳೆಲ್ಲಾ ಕೃತಜ್ಞತಾಪೂರ್ವಕವಾಗಿ ವಂದಿಸುವರು. ಇದರಿಂದ ಜನಗಳಲ್ಲಿ ಸ್ವಾಭಿಮಾನವು ಹುಟ್ಟಿ ಹೆಚ್ಚುವುದು; ಅವರು ಸಣ್ಣಪುಟ್ಟ ವಿವಾದಗಳನ್ನು ತಾವೇ ನೋಡಿಕೊಳ್ಳುವುದಕ್ಕೂ, ಕ್ರಮಪಡಿಸಿಕೊಳ್ಳುವುದಕ್ಕೂ ಪ್ರೋತ್ಸಾಹವಾಗುವುದು.

ಈ ಸಂಸ್ಥಾನದ ಸಕಲ ಪ್ರಜೆಗಳೂ ವಿದ್ಯಾವಂತರಾಗುವುದಕ್ಕೆ ಸರ್ಕಾರದವರು ಸಾಹಸಪಡಬೇಕಾಗಿದೆ. ಈ ಬಾಬಿಗೆ ಸದ್ಯ ವಿನಿಯೋಗಿಸುವ ೧೦ ಲಕ್ಷ ರೂಪಾಯಿ ಏನೇನೂ ಸಾಲದು. ಕ್ರಮೇಣ ವಿದ್ಯಾಭ್ಯಾಸದ ಗ್ರಾಂಟನ್ನು ಹೆಚ್ಚು ಮಾಡುತ್ತಾ ಬರಬೇಕಾದದ್ದು ಅತ್ಯವಶ್ಯವು. ಏಕಕಾಲದಲ್ಲೇ ಈ ಸಂಸ್ಥಾನದ ಸಕಲ ಪ್ರಜೆಗಳನ್ನೂ ಅಕ್ಷರಸ್ಥರನ್ನಾಗಿ ಮಾಡುವುದು ಅಸಾಧ್ಯವಾಗಿದ್ದಾಗ್ಯೂ, ಗವರ್ನಮೆಂಟಿನವರು ಈ ಉದ್ದೇಶವನ್ನು ಮುಂದಿಟ್ಟುಕೊಂಡು ಸಾಹಸಪಡುತ್ತಾ ಬರಬೇಕಾಗಿದೆ.

ಕರೆಸ್ಪಾಂಡೆನ್ಸ್.

ಮುಯ್ಯಿಗೆ ಮುಯ್ಯಿ ಮಾಡುವದು

ಅಯ್ಯಾ,

ನಿಮ್ಮ ಅಮೂಲ್ಯವಾದ ಪತ್ರದಲ್ಲಿ ಆಗಾಗ್ಗೆ ಕ್ರೈಸ್ತಮತದ ಕಷ್ಟಗಳನ್ನೂ ಸಾಧನೆಗಳನ್ನೂ ನಮ್ಮ ಬ್ರಾಹ್ಮಣರು ಬರೆಯುತ್ತಿದ್ದಾರೆ. ಕಷ್ಟಶೋಧಪಾರದ ಪತ್ರದಲ್ಲಿ ತಪ್ಪುಮನ್ನಿಸುವದನ್ನು ಕುರಿತು ಬರೆದಿರುವದನ್ನು ನೋಡಿ ಬಹಳ ಸಂತೋಷಪಟ್ಟೆನು. ಅದೇ ಸಾಧನೆಯನ್ನನುಸರಿಸುವ ಮತ್ತೊಂದು ಸಾಧನೆಯನ್ನು ನಿಮ್ಮ ವಾಚಕರ ತಿಳುವಳಿಕೆಗಾಗಿ ಬರೆಯಲುದ್ದೇಶವುಳ್ಳವನಾಗಿರುವದರಿಂದ ಸ್ವಲ್ಪ ಅವಕಾಶ ಕೊಡಬೇಕೆಂದು ಪ್ರಾರ್ಥಿಸುತ್ತೇನೆ. ಅದ್ಯಾವದಂದರೆ, ಮುಯ್ಯಿಗೆ ಮುಯ್ಯಿ ಮಾಡುವದು ಅಥವ ಸೇಡಿಗೆ ಸೇಡು ಮಾಡುವದು. 'ಇದರ ವಿಷಯವಾಗಿ ಯೇಸುಸ್ವಾಮಿಯವರು ಬೋಧಿಸಿರುವದೇನಂದರೆ—ನಿಮ್ಮ ಶತ್ರುಗಳನ್ನು ಪ್ರೀತಿಮಾಡಿರಿ, ನಿಮ್ಮನ್ನು ಶಪಿಸುವವರನ್ನು ಆಶೀರ್ವದಿಸಿರಿ, ನಿಮ್ಮನ್ನು ಹಗೆಮಾಡುವವರಿಗೆ ಒಳ್ಳೇದನ್ನೇ ಮಾಡಿರಿ. ನಿಮ್ಮನ್ನು ನಿಂದಿಸುವವರಿಗೋಸ್ಕರವಾಗಿಯೂ ಹಿಂಸಿಸುವವರಿಗೋಸ್ಕರವಾಗಿಯೂ ಪ್ರಾರ್ಥನೆಮಾಡಿರಿ ಹೀಗೆ ನೀವು ಮಾಡಿದರೆ ಪರಲೋಕದಲ್ಲಿರುವ ತಂದೆಯ ಮಕ್ಕಳಾಗಿರುವಿರಿ. ಮತ್ತೊಂದು ಸ್ಥಳದಲ್ಲಿ—ನೀವು ಮುಯ್ಯಿಗೆ ಮುಯ್ಯಿಮಾಡಲೇ ಬಾರದು, ಅದಕ್ಕೆ ಬದಲಾಗಿ ನಿಮ್ಮ ಶತ್ರುಗಳಿಗೆ ಉಪಕಾರ ಮಾಡುವುದಕ್ಕೆ ಯಾವಾಗಲೂ ಸಿದ್ಧರಾಗಿರಬೇಕು. ಅದು, ಹ್ಯಾಗಂದರೆ ನಿಮ್ಮ ಶತ್ರುಗಳಿಗೆ ಹಸಿವೆಯಾದರೆ ಅವರಿಗೆ ಉಣ್ಣಕೊಡಿ ದಾಹವಾದರೆ ಕುಡಿಯಕೊಡಿ. ಇದನ್ನು ಮಾಡಿದರೆ ಶತ್ರುವಿನ ತಲೆಯ ಮೇಲೆ ಉರಿಕೆಂಡಗಳನ್ನು ಕುಪ್ಪೆ ಹಾಕಿದಹಾಗೆ ಆಗುತ್ತದೆ. ಶತ್ರುವಿಗೆ ಕೆಟ್ಟದ್ದನ್ನುಮಾಡಿ ಅವನನ್ನು ಜೈಸದೆ ಒಳ್ಳೇದನ್ನು ಮಾಡಿ ಕೆಟ್ಟದ್ದನ್ನು ಜಯಿಸಿರಿ ಎಂಬುವದೇ.

ಅಯ್ಯಾ ಎಡಿಟರವರೇ, ಮೇಲ್ಕಂಡ ಸಾಧನೆಯೇ ಕ್ರಿಸ್ತಭಕ್ತನ ಆಯುಧ ಈ ಆಯುಧವನ್ನೇ ಕ್ರೈಸ್ತಭಕ್ತರು ತಮಗೆ ವಿರೋಧವಾಗಿ ಹಗೆಯವರ ಮೇಲೆ ಪ್ರಯೋಗಿಸುತ್ತಾ ಶತ್ರುರಹಿತರಾಗಿಯೂ ಸರ್ವರ ಮಿತ್ರರಾಗಿಯೂ ಇದ್ದುಕೊಂಡು ಈ ಪ್ರಪಂಚದಲ್ಲಿ ಜೀವನಮಾಡುತ್ತಾ ಇದ್ದಾರೆ. ಆದ್ದರಿಂದ ಅವರ ಈಗಿನ ಸ್ಥಿತಿಯೂ ಮುಂದಿನ ಸ್ಥಿತಿಯೂ ನಿರ್ಭಯವಾದವುಗಳಾಗಿಯೂ ಭದ್ರವಾದವುಗಳಾಗಿಯೂ ಇವೆ ಎಂಬುವದಕ್ಕೆ ಸಂಶಯ ಉಂಟೇ ?

ಸತ್ಯವಾದಿ.

ಒಳದೇಶದ ವೃತ್ತಾಂತಗಳು.

ಮುಂದಿನ ವರುಷ ಒಕ್ಕಲಿಗರ ಮೂರನೆಯ ಮಹಾ ಸಭೆಯು ಹಾಸನದಲ್ಲಿ ನಡೆಯಬೇಕೆಂದು ತೀರ್ಮಾನವಾಗಿರುವಂತೆ ಕೇಳುತ್ತೇವೆ.

❦❦❦

ಬೊಂಬಾಯಿ ಪಟ್ಟಣದಲ್ಲಿರುವ ಮೇ|| ನರೋತ್ತಮ ಮೊರಾರ್ಜಿ ಗೋಕುಲದಾಸ್ ಎಂಬ ಪ್ರಸಿದ್ಧ ಸಾಹುಕಾರರು ನಾಳೆ ಮಧ್ಯಾಹ್ನ ರಾಜಧಾನಿಗೆ ಬಂದು ಜಗನ್ಮೋಹನಬಂಗಲೆಯಲ್ಲಿ ಇಳಿಯುವವರಾಗಿದ್ದಾರೆ.

❦❦❦

ಲಂಕಾ ದ್ವೀಪದ ವ್ಯವಸಾಯದ ಬೋರ್ಡಿನ ಸೆಕ್ರೆಟರಿ ಮೇ|| ಡ್ರೀಬರ್ಗ್‌ಯವರು ಮೈಸೂರು ಪಟ್ಟಣದ ಪ್ರದರ್ಶನಶಾಲೆಗೆ ಬಂದು, ವಸ್ತುಗಳನ್ನೆಲ್ಲಾ ನೋಡಿಕೊಂಡು ಹೋಗಬೇಕೆಂದು ಅಲ್ಲಿಂದ ಪ್ರಯಾಣಮಾಡಿರುತ್ತಾರೆ.

❦❦❦

ನವರಾತ್ರಿ ಉತ್ಸವಕ್ಕಾಗಿ ದಯಮಾಡಿದ್ದ ಬ್ರಿಟಿಷ್ ರೆಸಿಡೆಂಟ್ ಮೇ|| ಎ. ವಿಲ್ಲಿಯಂಸ್‌ಯವರು ಪತ್ನಿ ಪರಿವಾರಸಹಿತ ಮೊನ್ನೆ ಮಂಗಳವಾರ ಬೆಳಿಗ್ಗೆ ರಾಜಧಾನಿಯಿಂದ ಬೆಂಗಳೂರಿಗೆ ಪ್ರಯಾಣ ಮಾಡಿದರು. ಗೌರವಾರ್ಥವಾದ ೧೩ ತೋಪುಗಳು ಹಾರಿಸಲ್ಪಟ್ಟವು.

❦❦❦

ಕಳೆದ ಭಾನುವಾರ ಪ್ರಜಾಪ್ರತಿನಿಧಿಗಳಿಗೆಲ್ಲಾ ರಾಜಧಾನಿಯ ಸಂಸ್ಕೃತಪಾಠಶಾಲಾ ಮಂದಿರದಲ್ಲಿ ಪದ್ಧತಿಯ ಪ್ರಕಾರ ಔತಣ ಜರುಗಿತು. ದಿವಾನರು, ಕೌನ್ಸಿಲರುಗಳು, ಮುಖ್ಯ ಅಧಿಕಾರಿಗಳು, ದೊಡ್ಡ ಮನುಷ್ಯರು, ಪ್ರಜಾಪ್ರತಿನಿಧಿಗಳು ಮೊದಲಾದವರೆಲ್ಲಾ ಸೇರಿ ಸುಖಭೋಜನವನ್ನು ಮಾಡಿದರು ತರುವಾಯ ಸ್ವಲ್ಪ ಹೊತ್ತು ಅಲ್ಲೇ ಸಂಗೀತವೂ ಆಯಿತು.

❦❦❦

ನೆನ್ನೆ ದಿನ ಚಾಮುಂಡೇಶ್ವರಿ ಜಾತ್ರೆಯ ಉದ್ದಿಶ್ಯ ಶ್ರೀಮನ್ಮಹಾರಾಜರವರೂ, ಮಹಾಮಾತೃಶ್ರೀಯವರೇ ಮೊದಲಾದ ಅರಮನೆ ಮಹನೀಯರೂ ಬೆಟ್ಟದ ಮೇಲಕ್ಕೆ ದಯಮಾಡಿದ್ದರು ಚಾಮುಂಡೇಶ್ವರಿ ದೇವಸ್ಥಾನಕ್ಕೆ ಮಹಾ ಮಾತೃಶ್ರೀಯವರು ಸುಮಾರು ೩,೦೦೦ ರೂಪಾಯಿನ ಭಂಗಾರದಲ್ಲಿ ಐದು ಭಾರೀ ತೀರ್ಥದ ಬಟ್ಟಲುಗಳನ್ನು ಸೇವಾರ್ಥವಾಗಿ ಕೊಟ್ಟಿರುತ್ತಾರೆ

❦❦❦

ಕಳೆದ ಶುಕ್ರವಾರ ಬೆಳಿಗ್ಗೆ ರಾಜಧಾನಿಯ ಪಶ್ಚಿಮಭಾಗದಲ್ಲಿರುವ ವಿಕ್ಟೋರಿಯಾ ಜೂಬಿಲಿ ಹಾಲ್ ಎಂಬ ಕಟ್ಟಡದಲ್ಲಿ ವಿದ್ಯಾಪ್ರೋತ್ಸಾಹಕ ವಸ್ತುಪ್ರದರ್ಶನವು ಪ್ರಾರಂಭವಾಯಿತು ಶ್ರೀಮನ್ಮಹಾರಾಜರವರು ದಯಮಾಡಿ ಪ್ರದರ್ಶನವನ್ನು ಪ್ರತಿಷ್ಠೆಮಾಡಿ, ಒಳಗೆ ಇಟ್ಟಿರುವ ವಿದ್ಯಾವಸ್ತು ವಿಶೇಷಗಳನ್ನು ಪರಾಂಬರಿಸಿದರು ಜೊತೆಗೆ ವಿದ್ಯಾವಿಷಯಕವಾದ ಉಪನ್ಯಾಸಗಳನ್ನು ಮಹಾರಾಜರವರ ಕಾಲೇಜಿನಲ್ಲಿ ನಡಿಸುತ್ತಿದ್ದಾರೆ.

❦❦❦

ರಾಜಧಾನಿಗೆ ಬಂದಿದ್ದ ಪ್ರಜಾ ಪ್ರತಿನಿಧಿಗಳನ್ನೆಲ್ಲಾ ಸರ್ಕಾರದವರು ಮಾಮೂಲಿಯಾಗಿ ಕಳೆದ ಭಾನುವಾರ ಮಧ್ಯಾಹ್ನ ಇಲ್ಲಿನ ಕೈಗಾರಿಕೆ ಮತ್ತು ವ್ಯವಸಾಯೋಪಕರಣಗಳ ಪ್ರದರ್ಶನಶಾಲೆಗೆ ಕರೆದುಕೊಂಡು ಹೋಗಿ, ಅಲ್ಲಿ ಇಡಲ್ಪಟ್ಟಿರುವ ವಸ್ತು ವಿಶೇಷಗಳನ್ನೆಲ್ಲಾ ಅವರಿಗೆ ವಿವರಿಸಿ ತಿಳಿಯಪಡಿಸಿದರು. ಇದರಿಂದ ಅವರಿಗೂ, ಅವರ ಮೂಲಕ ಆಯಾ ಸ್ಥಳಗಳ ಕಸಬುದಾರರಿಗೂ ರೈತರಿಗೂ ಪ್ರಯೋಜನವಾದೀತೆಂದು ಊಹಿಸಲ್ಪಟ್ಟಿದೆ.

❦❦❦

ನಂಜನಗೂಡಿನಲ್ಲಿ ಈಗ ಪ್ಲೇಗ್ ಉಪದ್ರವು ಬಹಳ ಮಟ್ಟಿಗೆ ಕಮ್ಮಿಯಾಗಿರುವದೆಂದು ತಿಳಿದುಬಂದಿರುವದರಿಂದ ನಾಳೆ ನೋವೆಂಬರ್ ಮೊದಲನೇ ತಾರೀಖು ಲಾಗಾಯ್ತು ವೆಸ್ಲಿಯನ್ ಇಂಗ್ಲಿಷ್ ಸ್ಕೂಲು ತೆರೆಯಲ್ಪಡುವದು. ವಿದ್ಯಾರ್ಥಿಗಳು ಪಾಠಗಳ ವಿಷಯದಲ್ಲಿ ತುಂಬಾ ನಷ್ಟ ಹೊಂದಿರುವದರಿಂದ ಈ ವರುಷ ಕ್ರಿಸ್‌ಮಸ್ ರಜಾ ಒಂದು ವಾರ ಮಾತ್ರವೇ ಕೊಡಲ್ಪಡುವುದು ಎಂದು ಮಿಷನ್ ಸ್ಕೂಲುಗಳ ಸೂಪರಿಂಟೆಂಡೆಂಟರು ಈ ಮೂಲಕ ತಿಳಿಸುತ್ತಾರೆ

❦❦❦

ಗಾಯಕ ವಿದ್ವಾನ್ ಮೇ|| ಬಿಡಾರದ ಕೃಷ್ಣಪ್ಪನವರಿಗೆ ಬೆಂಗಳೂರಿನ ಪ್ರಜೆಗಳು ಒಂದು ಸಭೆಯನ್ನು ನಡಿಸಿ ಚಿನ್ನದ ಮೆಡಲ್ ಎಂಬ ಬಿಲ್ಲೆಯನ್ನು ಬಹುಮಾನ ಮಾಡಿರುತ್ತಾರೆ ಇವರಿಗೆ ಶೃಂಗೇರಿ ಗುರುಗಳು ಕೂಡಾ ರಾಜಧಾನಿಗೆ ಬಂದಿದ್ದಾಗ್ಗೆ ಒಂದು ಭಂಗಾರದ ಮೆಡಲನ್ನು ದಯಪಾಲಿಸಿದರು. ಒಂದೆರಡು ವರುಷಗಳ ಹಿಂದೆ ಮೈಸೂರು ಟೌನ್ ಹಾಲ್ ಬಂಗಲೆಯಲ್ಲಿ ಪ್ರಜೆಗಳು ಅವರನ್ನು ಕರೆಸಿಕೊಂಡು ಅವರಿಗೆ ಒಂದು ಜವಾಹಿರಿ ತೋಡಾವನ್ನು ಬಹುಮಾನ ಮಾಡಿ, ಅವರು ಸಂಪಾದಿಸಿರುವ ಗಾನವಿದ್ಯೆಯನ್ನು ಪುರಸ್ಕಾರ ಮಾಡಿರುತ್ತಾರೆ.

❦❦❦

ವಿಜಯದಶಮಿ ದಿನ (ಬುಧವಾರ) ಸಾಯಂಕಾಲ ರಾಜಧಾನಿಯ ಸರಸ್ವತೀಪುರದ ಬಳಿ ಇಬ್ಬರು ಪಂಜಾಬಿ ಪೈಲ್ವಾನರು ಸ್ನೇಹಭಾವದಿಂದ ಮಾತನಾಡಿಕೊಂಡು ಬರುತ್ತಿರುವಲ್ಲಿ ಅಕಸ್ಮಾತ್ತಾಗಿ ಒಬ್ಬನು ಇನ್ನೊಬ್ಬನನ್ನು ಚಾಕುವಿನಿಂದ ಬೆನ್ನಿನ ಮೇಲೆ ಮೂರು ಕಡೆ ತಿವಿದು ಗಾಯಮಾಡಿದನು. ಕೂಡಲೇ ಪೋಲೀಸಿನವರು ಏಟು ತಿಂದವನನ್ನು ಆಸ್ಪತ್ರೆಗೆ ಕಳುಹಿಸಿದರು. ಹೊಡೆದವನನ್ನು ಹಿಡಿದು ಲಾಕಪ್ಪಿನಲ್ಲಿ ಹಾಕಿದರು. ಆಸ್ಪತ್ರೆಯಲ್ಲಿ ಅವನಿಗೆ ವಾಸಿಯಾಗುತ್ತಿದೆ ಎಂದೂ, ಹೊಡೆದವನ ಮೇಲೆ ಪೋಲೀಸಿನವರು ಮೊಕದ್ದಮೆ ಮಾಡುವವರಾಗಿದ್ದಾರೆಂದೂ ಕೇಳುತ್ತೇವೆ.

❦❦❦

ಕಳೆದ ಶನಿವಾರರಾತ್ರಿ ಇಲ್ಲಿನ ಗವರ್ನಮೆಂಟ್ ಹೌಸ್ ಬಂಗಲೆಯಲ್ಲಿ ಬ್ರಿಟಿಷ್ ರೆಸಿಡೆಂಟರೇ ಮೊದಲಾದ ಯೂರೋಪ್ಪಿಯನ್ ಅತಿಥಿಗಳಿಗೆಲ್ಲಾ ನವರಾತ್ರಿ ಕಟ್ಟಲೆಯ ಔತಣ ಜರುಗಿತು. ಭೋಜನಾನಂತರ ಅಲ್ಲಿಗೆ ಶ್ರೀಮನ್ಮಹಾರಾಜರವರು, ಶ್ರೀಮನ್ ಯುವರಾಜರವರು, ಕರ್ನಲ್ ದೇಶರಾಜೇ ಅರಸಿನವರು, ಮೇ|| ಲಕ್ಷ್ಮೀಕಾಂತರಾಜೇ ಅರಸಿನವರು, ಸರ್ದಾರ್ ಗೋಪಾಲರಾಜೇ ಅರಸಿನವರು, ದಿವಾನರವರು, ಕೌನ್ಸಿಲ್ ಮೆಂಬರುಗಳು ದಯಮಾಡಿದರು ಬ್ರಿಟಿಷ್ ರೆಸಿಡೆಂಟರು ಶ್ರೀಮನ್ಮಹಾರಾಜರವರ ಉದಾರಾತಿಥ್ಯವನ್ನು ಕುರಿತು ಪ್ರಸ್ತಾಪ ಮಾಡಿ, ಅವರಿಗೂ ರಾಜವರ್ಗದವರಿಗೂ ಕ್ಷೇಮಾಭ್ಯುದಯಗಳನ್ನು ಬಯಸಿದರು. ಶ್ರೀಮನ್ಮಹಾರಾಜರವರು ಎದ್ದು ಬ್ರಿಟಿಷ್ ರೆಸಿಡೆಂಟರಾದ ಮೇ|| ಎಂ ವಿಲ್ಲಿಯಂಸ್‌ಯವರನ್ನೂ ಉಳಿದ ಅತಿಥಿಗಳನ್ನೂ ವಂದಿಸಿ, ಇಷ್ಟರಲ್ಲಿಯೇ ಮೇ|| ವಿಲ್ಲಿಯಂಸ್‌ಯವರು ಪತ್ನಿಸಹಿತ ಈ ಸಂಸ್ಥಾನವನ್ನು ಬಿಟ್ಟು ತೆರಳುವವರಾಗಿದ್ದಾರೆಂತಲೂ, ಅವರಿಗೂ ಅವರ ಪತ್ನೀರಿಗೂ ಸುಖಸಂತೋಷಾದಿಗಳು ಲಭ್ಯವಾಗಲೆಂದು ಹಾರೈಸುತ್ತೇವೆಂತಲೂ ತಿಳಿಸಿದರು ತರುವಾಯ ಯೂರೋಪ್ಪಿಯನ್ ಸರ್ದಾರರೆಲ್ಲಾ ಜಗನ್ಮೋಹನ ಬಂಗಲೆಗೆ ಹೋಗಿ ಅಲ್ಲಿ ನಡೆದ ಸಿನಮೆಟೊಗ್ರಾಫ್ ಎಂಬುದರ ಪ್ರದರ್ಶನವನ್ನು ಪರಾಂಬರಿಸಿ ಬಂದರು. ಮೊನ್ನೆ ಸೋಮವಾರ ಸಾಯಂಕಾಲ ಇಲ್ಲಿನ ಪ್ಯಾಲೇಸ್ ಬಂಗಲೆಯಲ್ಲಿ ಯೂರೋಪ್ಪಿಯನ್ ಸರ್ದಾರರಿಗೆಲ್ಲಾ ಶ್ರೀಮನ್ಮಹಾರಾಜರವರು ಟೀಪಾರ್ಟಿ ಎಂಬ ಸಂತೋಷಕೂಟವನ್ನು ಜರುಗಿಸಿದರು ಈ ಅತಿಥಿಗಳೆಲ್ಲಾ ಮೊನ್ನೆ ಮಂಗಳವಾರ ಬೆಳಿಗ್ಗೆ ಸ್ಪೆಷಲ್ ರೈಲಿನಲ್ಲಿ ರಾಜಧಾನಿಯಿಂದ ವಾಪಸು ಪ್ರಯಾಣಮಾಡಿದರು.

❦❦❦

ಸಾಗರದ ಪ್ಲೀಡರ್ ಮೇ|| ಕಾಮರಾಯರು ಪ್ರತಿನಿಧಿಯಾಗಿ ರಾಜಧಾನಿಗೆ ಬಂದಿದ್ದು ಪ್ರತಿನಿಧಿ ಸಭೆಯಲ್ಲಿ ದಿವಾನರವರು ಅಪ್ಪಣೆ ಪಡೆದು ಪ್ರಯಾಣ ಮಾಡಿದರು ಆಗ್ಗೆ ದಿವಾನರವರು ಅವರಿಗೂ ಇತರ ಪ್ರಜಾಪ್ರತಿನಿಧಿಗಳಿಗೂ ತಿಳಿಸಿದ್ದೇನಂದರೆ —ಪ್ಲೇಗ್ ಉಪದ್ರವ ಭೀತಿಯನ್ನು ತಪ್ಪಿಸಿಕೊಳ್ಳುವುದಕ್ಕೆ ಇದುವರೆಗೆ ಜನರು ಮನೆ ಬಿಡುವುದೂ, ಗುಡಿಸಲಲ್ಲಿ ವಾಸ ಮಾಡುವುದೂ, ಮನೆಗಳಲ್ಲೂ ಗುಡಿಸಲಲ್ಲೂ ಪದಾರ್ಥಗಳನ್ನು ಕಳೆದುಕೊಂಡು ಕಷ್ಟಪಟ್ಟು ಪೇಚಾಡುವುದೂ ಜನಜನಿತವಾಗಿದೆಯಷ್ಟೆ ಈಗ ಈ ಭೀತಿಯನ್ನು ಕಷ್ಟನಷ್ಟಗಳನ್ನೂ ಹೋಗಲಾಡಿಸುವುದಕ್ಕೆ ಪ್ಲೇಗ್ ಟಿಡುಬು ಹಾಕಲಾರಂಭಿಸಿದ್ದಾರೆ. ಟಿಡುಬು ಹಾಕಿಸಿಕೊಳ್ಳುವುದು ಬಹು ಕ್ಷೇಮಕರವೆಂತಲೂ ಮೊದಲಿಗಿಂತಲೂ ಉತ್ಕೃಷ್ಟವಾದ ಟಿಡುಬಿನ ಹಾಲನ್ನು ತಯಾರ್ಮಾಡಿದ್ದಾರೆಂತಲೂ ತಿಳಿದು ಬಂದಿದೆ. ಅನೇಕಾನೇಕರು ಟಿಡುಬು ಹಾಕಿಸಿಕೊಳ್ಳುತ್ತಿದ್ದಾರೆ. ನಿಮ್ಮ ಊರಿನವರಿಗೆಲ್ಲಾ ಇದರ ವಿಚಾರವನ್ನು ತಿಳಿಸಿ ಎಲ್ಲರೂ ಟಿಡುಬು ಹಾಕಿಸಿಕೊಂಡು ಪ್ಲೇಗಿನ ಭೀತಿಯನ್ನು ತಪ್ಪಿಸಿಕೊಳ್ಳುವಂತೆ ನೀವು ಪ್ರೋತ್ಸಾಹಪಡಿಸಬೇಕು. ಚನ್ನಪಟ್ಟಣದಲ್ಲಿ ಆಗಲೇ ೪೦೦—೫೦೦ ಜನರು ಟಿಡುಬು ಹಾಕಿಸಿಕೊಂಡಿದ್ದಾರೆಂದು ಡೆಪ್ಯುಟಿ ಕಮಿಷನರ್ ಮೇ|| ದೇವರಾಜೇ ಅರಸಿನವರೂ, ತಮ್ಮ ಮನೆಯವರೆಲ್ಲಾ ಅಂದರೆ ಸುಮಾರು ೧೪ ಮಂದಿ ಬೆಂಗಳೂರಿನಲ್ಲಿ ಟಿಡುಬು ಹಾಕಿಸಿಕೊಂಡರೆಂದು ಸರ್ವೆ ಸೂಪರಿಂಟೆಂಡೆಂಟ್ ಮೇ|| ಬಿ. ರಾಮರಾಯರೂ ನಿಮ್ಮೊಡನೆ ಹೇಳುತ್ತಾರೆ. ಒಂದಾವರ್ತಿ ಟಿಡುಬು ಹಾಕಿಸಿಕೊಂಡರೆ ಅದರ ಚೈತನ್ಯವು ಎರಡು ವರುಷಗಳ ತನಕ ಮನುಷ್ಯನನ್ನು ಕಾಪಾಡುತ್ತದೆ. ಆದಕಾರಣ ಈ ಕಾರ್ಯವನ್ನು ನೀವುಗಳೆಲ್ಲಾ ಪ್ರೋತ್ಸಾಹಪಡಿಸಬೇಕಾಗಿ ಕೋರುತ್ತೇನೆ ಎಂಬುದೇ.

ಕಡೇ ದಿನದ ದರ್ಬಾರು.

ವಿಜಯದಶಮಿ

ಕಳೆದ ಬುಧವಾರ ವಿಜಯ ದಶಮಿ ಉತ್ಸವವು ರಾಜಧಾನಿಯಲ್ಲಿ ಎಂದಿನಂತೆ ಅತ್ಯಾಡಂಬರದಿಂದಲೂ ಸಾಂಗವಾಗಿಯೂ ನೆರವೇರಿತು. ಬೆಳಿಗ್ಗೆ ಶ್ರೀಮನ್ಮಹಾರಾಜರವರು ಸ್ನಾನ ಆಹ್ನಿಕಾದಿಗಳನ್ನು ತೀರಿಸಿಕೊಂಡು ಪಟ್ಟದ ಕುದುರೆಯಮೇಲೆ ಕುಳಿತು ಜಗನ್ಮೋಹನ ಬಂಗಲೆಯ ಮುಂಭಾಗದ ಮೈದಾನಿನತನಕ ದಯಮಾಡಿ, ಅಲ್ಲಿ ಕುದುರೆಯಿಂದಿಳಿದು ಒಳಕ್ಕೆ ಬಿಜಮಾಡಿದರು. ಪಟ್ಟದ ಆನೆ ಕುದುರೆಗಳು ಸಕಲ ಮರ್ಯಾದೆಗಳೊಡನೆ ಮೆರವಣಿಗೆಯಲ್ಲಿ ಜಗನ್ಮೋಹನ ಬಂಗಲೆಯಿಂದ ಹೊರಟು ಬನ್ನೀ ಮಂಟಪಕ್ಕೆ ಹೋದವು. ತರುವಾಯ ಜಗನ್ಮೋಹನ ಬಂಗಲೆಯ ಮೈದಾನಿನಲ್ಲಿ ಶ್ರೀಮನ್ಮಹಾರಾಜರವರು ಜಟ್ಟಿಗಳ ಕಾಳಗ, ಪೈಲ್ವಾನರ ಮತ್ತು ಕರ್ನಾಟಕ ಕುಸ್ತಿಗಳು ನಡೆಸಿದ್ದನ್ನು ಪರಾಂಬರಿಸಿದರು. ಸಾಯಂಕಾಲ ಶ್ರೀಮನ್ಮಹಾರಾಜರವರು ಸಮಸ್ತ ಬಿರುದುಗಳೊಡನೆ ಚತುರಂಗ ಬಲಸಮೇತರಾಗಿ ಆನೆಯ ಮೇಲೆ ಅಂಬಾರಿಯಲ್ಲಿ ಕುಳಿತು ಜಗನ್ಮೋಹನ ಬಂಗಲೆಯಿಂದ ವಿಜಯಯಾತ್ರೆಯ ಮೆರವಣಿಗೆಯಲ್ಲಿ ದಯಮಾಡಿ, ಬನ್ನಿಮಂಟಪವನ್ನು ತಲುಪಿ, ಪ್ರಸಿದ್ಧವಾದ ಪೂಜೆ ಮೊದಲಾದ ಕಾರ್ಯಗಳನ್ನು ನೆರವೇರಿಸಿ, ಸೈನ್ಯದ ಕವಾತು ಪರಾಂಬರಿಸಿದರು. ಆ ರಾತ್ರಿ ಶ್ರೀಮನ್ಮಹಾರಾಜರವರು ಮೆರವಣಿಗೆಯಲ್ಲಿ ವಾಪಸು ಜಗನ್ಮೋಹನ ಬಂಗಲೆಯನ್ನು ತಲುಪುವದಕ್ಕೆ ಸುಮಾರು ೧೧ ಗಂಟೆಯಾಯಿತು.

ದರ್ಬಾರಿನಲ್ಲಿ ವಿಶೇಷ ಸಂಗತಿ

ಕಳೆದ ಶುಕ್ರವಾರ ರಾತ್ರಿ ಜಗನ್ಮೋಹನ ಬಂಗಲೆಯಲ್ಲಿ ಶ್ರೀಮನ್ಮಹಾರಾಜರವರು ದರ್ಬಾರ್ ನಡಿಸಿದರು. ಪ್ರಜಾಪ್ರತಿನಿಧಿಗಳ ನಜರು ಮುಗಿದ ಮೇಲೆ ಶಿವಮೊಗ್ಗಾ ಮತ್ತು ಕಡೂರು ಡಿಸ್ಟ್ರಿಕ್ಟುಗಳ ಮಲೆನಾಡು ರೈತರುಗಳ ಪರವಾಗಿ ಸಾಗರದ ಮೆಂಬರ್ ಮಿ॥ ನರಸಿಂಹ ಅಯ್ಯಂಗಾರರು ಮುಂದೆ ಬಂದು ಶ್ರೀಮನ್ಮಹಾರಾಜರವರಿಗೆ ಒಂದು ಅಡ್ರೆಸ್ಸನ್ನು ಓದಿ ಅರಿಕೆ ಮಾಡಿದರು. ಸಾಗರದ ಮೆಂಬರು ಮಿ॥ ವಾಸುದೇವರು ಆ ಅಡ್ರೆಸ್ಸನ್ನು ಸುಂದರವಾದ ಒಂದು ಬೆಳ್ಳಿಯ ಕೈಪೆಟ್ಟಿಗೆಯಲ್ಲಿಟ್ಟು ಒಪ್ಪಿಸಿದರು. ಆ ಅಡ್ರೆಸ್ಸಿನ ವಿವರವೇನೆಂದರೆ—

ಮಹಾಸ್ವಾಮಿ,

ಮಲೆನಾಡು ಪ್ರಾಂತ್ಯವಾದ ಶಿವಮೊಗ್ಗಾ ಮತ್ತು ಕಡೂರು ಡಿಸ್ಟ್ರಿಕ್ಟುಗಳ ಪ್ರಜಾಪ್ರತಿನಿಧಿಗಳು ವಿಶೇಷ ಭಕ್ತಿಪುರಸ್ಸರವಾಗಿ ಅರಿಕೆ ಮಾಡಿಕೊಳ್ಳುವ ವಿಜ್ಞಾಪನೆಗಳು —

ಈ ಮಲೆನಾಡು ಪ್ರಜೆಗಳು ತಮಗೆ ವಿಶೇಷ ತೊಂದರೆಯನ್ನುಂಟುಮಾಡುತ್ತಿದ್ದ ಅಡಿಕೆ ಕಸಲಿನ ನಿವೃತ್ತಿ ವಿಷಯದಲ್ಲಿ ಆಳಿದ ಮಹಾಸ್ವಾಮಿಯವರಾದ ಶ್ರೀಚಾಮರಾಜೇಂದ್ರ ಒಡೆಯರ್ ಬಹದ್ದೂರ್ ಜಿ ಸಿ ಎಸ್ ಐ ರವರು ಈ ಸಂಸ್ಥಾನದ ರಾಜ್ಯಭಾರವನ್ನು ವಹಿಸಿದಾರಭ್ಯ ಪ್ರತಿ ಸಂವತ್ಸರದಲೂ ಅರಿಕೆಮಾಡಿಕೊಳ್ಳುತ್ತಾ ಬಂದದ್ದರ ಮೇಲೆ ೧೮೯೩ ನೇ ಇಸವಿಯಲ್ಲಿ ಬಾಗಾಯತು ಕಂದಾಯವು ಸ್ವಲ್ಪ ಮಟ್ಟಿಗೆ ಕಮ್ಮಿ ಮಾಡಲ್ಪಟ್ಟಿತು. ಆದರೆ ಧರ್ಮೈಕಪರಾಯಣರಾದ ಮಹಾಸ್ವಾಮಿಯವರ ರಾಜ್ಯಭಾರದಲ್ಲಿ ಸಂಸ್ಥಾನಕ್ಕೆ ಪ್ರತಿ ವರುಷವೂ ಶಾಶ್ವತವಾಗಿ ಬರುತ್ತಿದ್ದ ನಾಲ್ಕು ಲಕ್ಷ ರೂಪಾಯಿಯ ಆದಾಯವು ನಷ್ಟವಾಗುವದನ್ನು ಕಡೆಗೆ ಲಕ್ಷ್ಯಕ್ಕೆ ತಾರದೆ ಪ್ರಜೆಗಳ ಕಷ್ಟನಿವಾರಣೆಯೇ ಮುಖ್ಯ ಧರ್ಮವೆಂದೆಣಿಸಿ ಕಸಲಿನ ಸುಂಕವನ್ನು ಸಂಪೂರ್ಣವಾಗಿ ನಿವೃತ್ತಿ ಮಾಡಿದ್ದರಿಂದ ನಮ್ಮ ಪುರಾಣ ಪ್ರಸಿದ್ಧವಾದ ಶ್ರೀರಾಮರಾಜ್ಯಭಾರವೇ ನಮಗೆ ಪ್ರಾಪ್ತವಾಗಿದೆಯೆಂದು ಭಾವಿಸಿರುವ ನಾವು ಈ ಮಹೋಪಕಾರಕ್ಕಾಗಿ ನಮ್ಮ ವಂಶಪಾರಂಪರ್ಯವಾಗಿ ಕೃತಜ್ಞರಾಗಿರುತ್ತೇವೆ.

ಹಾಲತ್ತಿನ ನಿಮಾವಣೆಯಿಂದ ಸಂಸ್ಥಾನದ ಆದಾಯದಲ್ಲಿ ನಷ್ಟಾಂಶವು ರಿವಿಜನ್ ಸೆಟ್ಲ್‌ಮೆಂಟು ಕಾಲದಲ್ಲಿ ಬಾಗಾಯತು ಕಂದಾಯವನ್ನು ಜಾಸ್ತಿ ಮಾಡೋಣದರ ಮೂಲಕ ಭರ್ತಿ ಮಾಡಲ್ಪಡಬಹುದೆಂಬ ಶಂಕೆಯು ಬಾಧಿಸುತ್ತಲೇ ಇತ್ತು. ಆದರೆ ಶಿವಮೊಗ್ಗಾ ಡಿಸ್ಟ್ರಿಕ್ಟು ಸಾಗರ ತಾಲ್ಲೂಕಿನ ರಿವಿಜನ್ ಸೆಟ್ಲ್‌ಮೆಂಟು ಮಂಜೂರಾಗಿರುವದರಲ್ಲಿ ಷರು ಸೆಟ್ಲ್‌ಮೆಂಟಿನಲ್ಲಿ ಹಾಲತ್ ಗೆಂಕವೂ ಸೇರಿ ಬಾಗಾಯತ್ ಯಾಕರೆ ಒಂದಕ್ಕೆ ಐವತ್ತು ರೂಪಾಯಿಗೆ ಮೇಲ್ಪಟ್ಟಿದ್ದ ಕಂದಾಯವನ್ನು ಸರಾಸರಿ ಹತ್ತು ರೂಪಾಯಿ ಹನ್ನೆರಡು ಆಣೆಗೆ ತಗ್ಗಿಸಿ ಇರೋಣದರಿಂದ ಮಲೆನಾಡಿನ ಅಭ್ಯುದಯದ ವಿಷಯದಲ್ಲಿ ಮಹಾಸ್ವಾಮಿಯವರಿಗೆ ಇರುವ ಆಸಕ್ತಿಯೂ ಮತ್ತು ಪ್ರಜಾಕ್ಷೇಮವೇ ರಾಜಕ್ಷೇಮವೆಂಬ ರಾಜನೀತಿಯೂ ಸಹಾ ನಿದರ್ಶನಪಡಿಸಲ್ಪಟ್ಟಿರುತ್ತೆ. ಈ ಔದಾರ್ಯವೇ ಮುಂದೆ ಎಲ್ಲಾ ಮಲೆನಾಡು ಪ್ರಾಂತ್ಯಗಳಲ್ಲೂ ಅನುಸರಿಸಲ್ಪಡಬಹುದೆಂದು ಸಂಪೂರ್ಣವಾಗಿ ನಂಬಿರುತ್ತೇವೆ.

ನಮ್ಮ ಧರ್ಮಪ್ರಭುಗಳಾದ ಶ್ರೀಮನ್ ಮಹಾಸ್ವಾಮಿಗಳವರಿಗೂ ಮತ್ತು ರಾಜವರ್ಗ ಕುಟುಂಬದವರಿಗೂ ಶ್ರೀ ಭಗವಂತನು ದೀರ್ಘಾಯುರಾರೋಗ್ಯೈಶ್ವರ್ಯಾಭಿವೃದ್ಧಿಯನ್ನು ದಯಪಾಲಿಸಿ ಕಾಪಾಡಲಿ ಎಂದು ನಿರಂತರದಲ್ಲೂ ಭಕ್ತಿಪೂರ್ವಕವಾಗಿ ಪ್ರಾರ್ಥಿಸುತ್ತೇವೆ.

ವಿದ್ವತ್ ಪರೀಕ್ಷೆಗಳು

ಮುಜರಾಯಿ ಸೆಕ್ರೆಟರಿ ಮಿ॥ ಎಲ್ ಅನಂತಸ್ವಾಮಿ ರಾಯರು ಪಂಡಿತ ಪರೀಕ್ಷೆಯ ಫಲಿತಾಂಶಗಳ ರಿಪೋರ್ಟನ್ನು ಸಭೆಯಲ್ಲಿ ಶ್ರೀಮನ್ಮಹಾರಾಜರವರ ಸಮ್ಮುಖದಲ್ಲಿ ಅರಿಕೆ ಮಾಡಿದರು. ಅದರ ಮುಖ್ಯಾಭಿಪ್ರಾಯವೇನೆಂದರೆ—ಈ ಸಲ ಸಂಸ್ಕೃತ ಪಂಡಿತಪರೀಕ್ಷೆಗಳಿಗೆ ೩೦ ಮಂದಿ ಪಂಡಿತರು ಬರುವಂತೆ ಅರ್ಜಿ ಬರೆದಿದ್ದರು. ಆ ಪೈಕಿ ೨೩ ಮಂದಿ ಪರೀಕ್ಷೆಗೆ ಹಾಜರಾದರು. ಇವರಲ್ಲಿ ೧೪ ಮಂದಿ ತೇರ್ಗಡೆಯಾಗಿರುತ್ತಾರೆ. ಈ ಪೈಕಿ ಮೈಸೂರಿನವರು ೯ ಮಂದಿ, ಒಬ್ಬರು ಬೆಂಗಳೂರಿನವರು, ಒಬ್ಬರು ಮೇಲುಕೋಟೆಯವರು. ಈ ರೀತಿ ತೇರ್ಗಡೆ ಹೊಂದಿದ ೧೪ ಮಂದಿಗೂ ಸರ್ಟಿಫಿಕೇಟು, ಶಾಲು, ದ್ರವ್ಯಬಹುಮಾನಗಳು ಶ್ರೀಮನ್ಮಹಾರಾಜರವರಿಂದ ಕೊಡಲ್ಪಟ್ಟವು. ಇದಲ್ಲದೆ ಪೈಠಣದಿಂದ ಬಂದಿದ್ದ ತರ್ಕ ವೇದಾಂತ ಶಾಸ್ತ್ರಗಳಲ್ಲಿ ಪಂಡಿತರಾದ ಒಬ್ಬ ಆಚಾರ್ಯರಿಗೆ ಶಾಲುಗಳನ್ನೂ ದ್ರವ್ಯವನ್ನೂ ಬಹುಮಾನವಾಗಿ ಕೊಡಿಸಿದರು.

ವಿಶೇಷ ಬಿರುದುಗಳು

ಅನಂತರ ಗವರ್ನಮೆಂಟ್ ಚೀಫ್ ಸೆಕ್ರೆಟರಿ ಮಿ॥ ಬಾಲಸುಂದರಂ ಅಯ್ಯರವರು ಸಿಂಹಾಸನದ ಬಳಿ ನಿಂತು, ಶ್ರೀಮನ್ಮಹಾರಾಜರವರ ವಿಶೇಷ ಹುಕುಮನ್ನು ಓದಿ ದರ್ಬಾರಿಗಳಿಗೆಲ್ಲಾ ತಿಳಿಯಪಡಿಸಿದರು. ಮೈಸೂರು ಸಂಸ್ಥಾನದಲ್ಲಿ ಬಹು ಕಾಲದಿಂದಲೂ ಅತ್ಯಂತ ಚಟುವಟಿಕೆಯಾಗಿಯೂ ತುಂಬಾ ಮುತುವರ್ಜಿಯಿಂದಲೂ ಸರ್ಕಾರಿ ಕೆಲಸಗಳನ್ನು ನಡಿಸುತ್ತಿರುವಂಥಾ ರೆವಿನ್ಯೂ ಕಮಿಷನರ್ ಮಿ॥ ಎ ರಂಗಸ್ವಾಮಿ ಅಯ್ಯಂಗಾರ್ರಿಗೆ "ರಾಜಕಾರ್ಯ ಪ್ರವೀಣ" ಎಂಬ ಬಿರುದನ್ನು, ಬೆಂಗಳೂರು ಸಿಟಿಯಲ್ಲಿ ಧರ್ಮದ ವಿದ್ಯಾಶಾಲೆಯನ್ನು ಕಟ್ಟಿಸಿ ತಮ್ಮ ಆಸ್ತಿಯನ್ನು ಧರ್ಮಕಾರ್ಯಗಳಿಗೆ ವಿನಿಯೋಗಿಸಿರುವ ಮೆ॥ ಜ್ಯೋತಿನಗರಂ ಯಜಮಾನ್ ದೊಡ್ಡಣ್ಣನವರಿಗೆ "ಜನೋಪಕಾರಿ" ಎಂಬ ಬಿರುದನ್ನೂ ದಯಪಾಲಿಸಿರುತ್ತಾರೆ.

ಪ್ರಜಾಪ್ರತಿನಿಧಿಗಳ ಸಭೆಯಲ್ಲಿ ಮೈಸೂರು ಸಂಸ್ಥಾನದ ದಿವಾನರವರು ಮಾಡಿದ ಉಪನ್ಯಾಸ

ತಾರೀಖು ೧೯ನೇ ಅಕ್ಟೋಬರ್ ೧೯೦೭ನೇ ಇಸವಿ

ಸಭಿಕರಿರಾ,

ಶ್ರೀಮನ್ಮಹಾರಾಜರವರ ಅಜ್ಞಾನುಸಾರವಾಗಿ ನಾವು ಈ ಪ್ರಜಾಪ್ರತಿನಿಧಿಸಭೆಗೆ ತಮ್ಮ ಸುಸ್ವಾಗತವನ್ನು ಹಾರೈಸುತ್ತ ಕಳೆದ ವರ್ಷದಲ್ಲಿ ನಡೆದ ಸಂಸ್ಥಾನದ ಆಡಳಿತವನ್ನೂ, ಈ ವರ್ಷದಲ್ಲಿ ಮಾಡಬೇಕೆಂದು ಯೋಚಿಸಿರುವ ಏರ್ಪಾಡುಗಳಲ್ಲಿ ಮುಖ್ಯವಾದವುಗಳನ್ನೂ ಸಂಕ್ಷೇಪವಾಗಿ ತಿಳಿಸುವದಕ್ಕೆ ನಮಗೆ ಅತ್ಯಂತ ಸಂತೋಷವಾಗಿದೆ.

ರಾಜ್ಯಾಡಳಿತಕ್ಕೆ ಸಂಬಂಧಪಟ್ಟ ಹೊಸ ಏರ್ಪಾಡುಗಳು.

ರಾಜ್ಯಾಡಳಿತದ ಕೆಲಸಗಳು ಚೆನ್ನಾಗಿ ನಡೆಯುವುದಕ್ಕೋಸ್ಕರ ೧೯೦೬–೭ ನೇ ಇಸವಿಯ ಆದಿಭಾಗದಲ್ಲಿ ಮಾಡಿದ ಕೆಲವು ಏರ್ಪಾಡುಗಳನ್ನು ನಮ್ಮ ಕಳೆದ ವರ್ಷದ ಉಪನ್ಯಾಸದಲ್ಲಿ ಸೂಚಿಸಿದೆವು. ಅವು ಯಾವುವೆಂದರೆ—(೧) ಸಿವಿಲ್ ಸರ್ವಿಸ್ ಪರೀಕ್ಷೆಯನ್ನು ಪುನಃ ನಡೆಸುವುದು, (೨) ಅಮಲ್ದಾರರಾಗಿಯೂ ಡೆಪ್ಯುಟಿ ಅಮಲ್ದಾರರಾಗಿಯೂ ನೇಮಿಸಲು ಜನಗಳನ್ನು ಆರಿಸುವುದಕ್ಕೆ ನಿಬಂಧನೆಗಳನ್ನು ಏರ್ಪಡಿಸುವುದು, (೩) ಶೇಕದಾರರ ಅಥವಾ ರೆವಿನ್ಯೂ ಇನ್ಸ್‌ಪೆಕ್ಟರುಗಳ ಕೆಲಸಕ್ಕೆ ಜನಗಳನ್ನು ಹೊಸದಾಗಿ ಸೇರಿಸುವುದಕ್ಕೆ ಸಂಬಂಧಪಟ್ಟ ನಿಬಂಧನೆಗಳ ಬದಲಾವಣೆಗಳು, (೪) ರೆವಿನ್ಯೂ ಇಲಾಖೆಯಲ್ಲಿ ಕೆಳಗಿನ ಉದ್ಯೋಗಸ್ಥರ ಯೋಗ್ಯತೆಯನ್ನೂ ಬಡತಿಯನ್ನೂ ಕ್ರಮಪಡಿಸುವುದಕ್ಕೆ ನಿಬಂಧನೆಗಳನ್ನು ಸಿದ್ಧಪಡಿಸುವುದು ಮತ್ತು (೫) ರೆವಿನ್ಯೂ ಕಮಿಷನರಿಗೆ ಹೆಚ್ಚು ಅಧಿಕಾರಗಳನ್ನು ಕೊಡುವುದು.

ಕಾನೂನು ಯೋಜನೆ ನ್ಯಾಯವಿಧಾಯಕ ಸಭೆ

ಹೋದವರ್ಷದಲ್ಲಿ ಜಾರಿಗೆ ತಂದ ಮುಖ್ಯವಾದ ಒಂದು ಏರ್ಪಾಡು ಕಾನೂನು ಏರ್ಪಡಿಸುವುದಕ್ಕೆ ಸ್ಥಾಪಿತವಾದ ಸಭೆಯ ವಿಷಯವನ್ನು ಇಲ್ಲಿ ಈಗ ನಾವು ತಿಳಿಸುತ್ತೇವೆ. ಇದು ಈ ಸಂಸ್ಥಾನದ ಆಡಳಿತಕ್ರಮಕ್ಕೆ ಸಂಬಂಧಪಟ್ಟಿರುವುದೇ ಅಲ್ಲದೆ ಪದೇ ಪದೇ ಈ ಪ್ರಜಾಪ್ರತಿನಿಧಿಸಭೆಯ ಮೆಂಬರುಗಳು ಪ್ರಸ್ತಾಪಿಸಿದ ವಿಷಯವಾಗಿದೆ. ಇದುವರೆಗೂ ಕಾನೂನುಗಳನ್ನು ಪರಿಷ್ಕರಿಸಿ ಏರ್ಪಡಿಸುವುದನ್ನೆಲ್ಲಾ ಶ್ರೀಮನ್ಮಹಾರಾಜರವರ ಮಂತ್ರಾಲೋಚನಾ ಸಭೆಯವರೇ, ಅಂದರೆ ದಿವಾನರೂ ಮತ್ತು ಇಬ್ಬರು ಮೆಂಬರುಗಳೇ ಮಾಡುತ್ತಿದ್ದರು. ಇದನ್ನು ಹಿಂದಿನ ದಿವಾನರುಗಳು ಮತ್ತು ಕೌನ್ಸಿಲರುಗಳು ಸಕಲ ಪೂರಾ ನಿಗಾವಾನಿ ಮತ್ತು ಮುತುವರ್ಜಿಯಿಂದ ನಿರ್ವಹಿಸಿದರು. ಆದರೂ ಸ್ವಭಾವತಃ ಒಟ್ಟು ಎಲ್ಲ ರಾಜ್ಯವಿಚಾರವನ್ನು ಪರ್ಯಾಲೋಚಿಸಲು ನಿಯಾಮಕವಾದ ಈ ಮಂತ್ರಾಲೋಚನಾ ಸಭೆಗೆ ಮೆಂಬರುಗಳ ಸಂಖ್ಯೆಯು ಕಡಮೆಯಾದ್ದರಿಂದಲೂ ಇದರ ನಡವಳಿಕೆಗಳು ಅಷ್ಟು ಪ್ರಚಾರವಾಗತಕ್ಕದ್ದಲ್ಲವಾದ ಕಾರಣದಿಂದಲೂ ಕಾನೂನು ವಿಧಿಸತಕ್ಕದ್ದಕ್ಕೆ ಸಂಬಂಧಪಟ್ಟ ಅಂಶಗಳನ್ನು ಅವಶ್ಯಕ ತೋರುವಂತೆ ನಾನಾ ಮುಖವಾಗಿ ಚರ್ಚಿಸಿ ಪರ್ಯಾಲೋಚಿಸಲು ಅವಕಾಶವಿಲ್ಲವಾಗಿತ್ತು. ಆದಕಾರಣ ಕಾನೂನುಗಳನ್ನು ಏರ್ಪಡಿಸಲು ಸ್ಥಾಪಿತವಾದ ಈ ಸಭೆಗೆ ಇದರಲ್ಲಿ ಚರ್ಚೆಗೆ ಬರುವ ಬಾಬಿಗೆ ಸಂಬಂಧಿಸಿದ ಸ್ಥಳ ಲೋಕಲ್ ಜ್ಞಾನ ವಿದ್ಯಮಾನಗಳನ್ನು ಅರಿತವರಾಗಿಯೂ ಅನುಭವಶಾಲಿಗಳಾಗಿಯೂ ಇರುವ ಸರ್ಕಾರಿ ಉದ್ಯೋಗಸ್ಥರೇ ಅಲ್ಲದೆ ಸರ್ಕಾರಿ ಉದ್ಯೋಗವಿಲ್ಲದ ಖುಷ್‌ಬಾಷ್ ಜನರ ಪೈಕಿ ಕೆಲವರನ್ನು ದೊಡ್ಡಮನುಷ್ಯರನ್ನು ಸಹ ಚುನಾಯಿಸುವದರ ದ್ವಾರಾ ಸದರಿ ಸಭೆಯನ್ನು ಏರ್ಪಡಿಸಲು ಶ್ರೀಮನ್ಮಹಾರಾಜರವರು ಅಪ್ಪಣೆ ದಯಪಾಲಿಸಿರುತ್ತಾರೆ. ಈ ಕಾನೂನು ಯೋಜನೆ ನ್ಯಾಯವಿಧಾಯಕ ಸಭೆಗೆ ಸರ್ಕಾರಿ ಉದ್ಯೋಗಸ್ಥರಲ್ಲದ ಮೆಂಬರುಗಳನ್ನು ಜನಗಳೇ ಚುನಾಯಿಸಲು ಅವಕಾಶ ಕೊಡಬೇಕಾಗಿತ್ತೆಂದೂ, ಇದಕ್ಕೆ ಈಗ ಇಪ್ಪತ್ತೈದು ವರ್ಷಗಳಿಂದಲೂ ನಡೆಯುತ್ತಿರುವ ಪ್ರಜಾಪ್ರತಿನಿಧಿ ಸಭೆಯವರು ತಮ್ಮ ಕಡೆಯವರನ್ನು ಚುನಾಯಿಸಿ ಮೆಂಬರಾಗಿ ಕಳುಹಿಸಲು ಅವಕಾಶ ಕೊಡಬೇಕಾಗಿತ್ತೆಂದೂ ಜನರಿಗಿರುವ ಮನೋಗತವು ನಮ್ಮ ಜ್ಞಾಪಕಕ್ಕೆ ಬಂದಿರುತ್ತದೆ. ಪರಂತು ಈ ರೀತಿ ನಡೆಸಲು ಕಾಲವಿಳಂಬವೇನೂ ಆಗಲಾರದು, ಹಾಗಾಗಿ ಕಾನೂನು ಯೋಜನೆ ನ್ಯಾಯ ವಿಧಾಯಕ ಸಭೆಯನ್ನು ಸ್ಥಾಪಿಸಿದ ಶ್ರೀಮನ್ಮಹಾರಾಜರವರ ಔದಾರ್ಯಸ್ವಭಾವವೇ ಸಕಾಲದಲ್ಲಿ ನಮಗೆ ಈ ವಿಷಯದಲ್ಲಿರುವ ಕೋರಿಕೆಯು ನೆರವೇರುವಂತೆ ಮಾಡುವುದೆಂದು ಧಾರಾಳವಾಗಿ ಹೇಳಬಹುದಾಗಿದೆ. ೧೯೦೭ನೇ ಜನವರಿ ೨ನೇ ತಾರೀಖಿನಲ್ಲಿ ಮೇಲ್ಕಂಡ ಸಭೆಯು ಪ್ರಾರಂಭವಾಯಿತು. ಈ ಸರ್ಕಾರಿ ವರ್ಷದ ಮೊದಲಿನಿಂದ ಈಚೆಗೆ ಸಭೆಯು ಎಂಟಾವರ್ತಿ ಸೇರಿತು ಮತ್ತು ಪ್ರಕಟವಾಗಿರುವ ಅದರ ನಡವಳಿಕೆಗಳಿಂದ ಅನೇಕ ಮುಖ್ಯವಾದ ಬಿಲ್ಲುಗಳು ಅದರ ಆಲೋಚನೆಯಲ್ಲಿರುವುದು ವಿಶದವಾಗಿ ತಿಳಿಸುತ್ತದೆ.

ಗ್ರಾಮ ಪಂಚಾಯತರು

ಶ್ರೀಮನ್ಮಹಾರಾಜರವರ ಅಪ್ಪಣೆ ಪ್ರಕಾರ ಸರ್ಕಾರದಿಂದ ಒಂದು ಅಂಶವು ಆಲೋಚನೆಯಲ್ಲಿರುತ್ತದೆ. ಇದು ಸಫಲವಾಗುವುದರ ಮೂಲಕ ಕ್ಷೀಣತೆಯನ್ನು ಹೊಂದಿ ನಷ್ಟವಾಗುತ್ತಲಿರುವ ಪುರಾತನ ಪದ್ಧತಿಯಾದ ಗ್ರಾಮ ಪಂಚಾಯತಿ ಏರ್ಪಾಟು ಉಜ್ಜೀವಿಸುವಂತಾಗುವುದು, ಈ ರೀತಿಯಾಗ ಗ್ರಾಮ ಧರ್ಮವನ್ನು ಪುನಃ ಜಾರಿಗೆ ತರುವ ಉದ್ದೇಶದಿಂದ ಪ್ರಜಾಕೆಲಸಗಳನ್ನು ದುರಸ್ತುಮಾಡಿ ಅಬಾದು ಸ್ಥಿತಿಯಲ್ಲಿ ಇಟ್ಟುಕೊಳ್ಳುವುದನ್ನು ಗ್ರಾಮ ಪಂಚಾಯಿತರು, ಅಂದರೆ, ಸಮುದಾಯವಾಗಿ ಗ್ರಾಮಸ್ಥರು ಚುನಾಯಿಸಿದ ಗ್ರಾಮ ನೌಕರರೂ ಮತ್ತು ಮೆಂಬರುಗಳೂ ಇವರುಗಳಿಗೆ ವಹಿಸಿಕೊಟ್ಟು ಆಬಾದಿಗೆ ವಿಯೋಗವಾಗುವ ಮೊಬಲಗನ್ನು ವಿನಿಯೋಗಪಡಿಸುವ ಭಾಗದಲ್ಲಿ ಮೇಲ್ವಿಚಾರಣೆಯು ಅವರಿಗೇನೇ ಇರುವಂತೆ ಮಾಡಬೇಕೆಂಬ ಅಭಿಪ್ರಾಯವಿರುತ್ತದೆ.

ಖರ್ಚು ಕಡಮೆ ಮಾಡುವ ವಿಷಯ

ಈ ಮೇಲ್ಕಂಡ ಬಾಬುಗಳಿಂದ ಖರ್ಚು ಸ್ವಲ್ಪ ಹೆಚ್ಚಿತು. ಮತ್ತು ಅಡಿಕೆ ಹಾಸಲನ್ನು ಮಾಫ್ ಮಾಡಿದ್ದರಿಂದ ೩॥ ಲಕ್ಷ ರೂಪಾಯಿ ಕಡಮೆಯಾಯಿತು, ಆದರೂ ಇಲ್ಲಾ ಈಗ ಆಯಾ ಇಲಾಖೆಗಳಲ್ಲಿ ಖರ್ಚು ತಗ್ಗಿಸಲು ನಡೆದಿರುವ ಮತ್ತು ನಡೆಸುತ್ತಿರುವ ಏರ್ಪಾಟುಗಳಿಂದ ಸಾಧ್ಯವಾಯಿತು. ನಾನಾ ಇಲಾಖೆಗಳಲ್ಲಿ ಎಷ್ಟು ಮಟ್ಟಿಗೆ ಖರ್ಚನ್ನು ಕಡಮೆ ಮಾಡುವುದು ಸಾಧ್ಯವೋ ಅದನ್ನು ಆಲೋಚಿಸಿ ಸರ್ಕಾರದ ಕೆಲಸವು ಸರಿಯಾಗಿ ನಡೆಯುವುದಕ್ಕೆ ಕುಂದಕವಿಲ್ಲದ ರೀತಿಯಲ್ಲಿ ಖರ್ಚನ್ನು ಕಡಮೆ ಮಾಡುವುದಕ್ಕಾಗಿ ಸಲಹೆ ಕೊಡುವುದಕ್ಕೋಸ್ಕರ ಒಂದು ಕಮಿಟಿಯನ್ನು ನೇಮಕ ಮಾಡಿರುವುದನ್ನು ಕುರಿತು ಕಳೆದ ವರ್ಷದ ಉಪನ್ಯಾಸದಲ್ಲಿ ನಾವು ಸೂಚಿಸಿದೆವು. ಈ ಕಮಿಟಿಯವರ ಕರ್ತವ್ಯವು ಇಲಾಖಾ ದಿನಗಳಿಗೆ ಹಿತಕರವಲ್ಲವಾದಾದರೂ ಅವರು ಸಂಸ್ಥಾನದ ಮಹತ್ತರ ಪ್ರಯೋಜನಗಳನ್ನು ಮಾತ್ರವೇ ದೃಷ್ಟಿಯಲ್ಲಿಟ್ಟು ತಮ್ಮ ಕೆಲಸವನ್ನು ಧೈರ್ಯವಾಗಿ ಮಾಡಿರುತ್ತಾರೆ. ದಾಖಲ್ ರಿಜಿಸ್ಟ್ರೇಷನ್ ಮತ್ತು ಅಬ್ಕಾರಿ ಇಲಾಖೆಗಳ ಸಂಬಂಧವಾಗಿ ಈ ಕಮಿಟಿಯವರು ಕೊಟ್ಟ ಸಲಹೆಗೆ ಮೇರೆ ಆಗಲೇ ಹುಕುಂ ಕೊಟ್ಟಿರುತ್ತದೆ. ಈ ಇಲಾಖೆಗಳಲ್ಲಿ ಒಂದು ಲಕ್ಷ ರೂಪಾಯಿಗಿಂತ ಹೆಚ್ಚಾಗಿ ಖರ್ಚು ಕಡಮೆ ಮಾಡಿದೆ. ಜುಡಿಷಿಯಲ್, ಮರಾಮತ್ತು ಮೊದಲಾದ ಇತರ ಇಲಾಖೆಗಳಿಗೆ ಸಂಬಂಧಪಟ್ಟ ಅವರ ಸಲಹೆಗಳು ಈಗ ಸರ್ಕಾರದವರ ಪರ್ಯಾಲೋಚನೆಯಲ್ಲಿವೆ. ರೆವಿನ್ಯೂ ಇಲಾಖೆಯಲ್ಲಿ ಖರ್ಚು ಕಡಮೆ ಮಾಡುವ ಕೆಲಸವನ್ನು ಈ ಕಮಿಟಿಯವರು ಇನ್ನೂ ಉಪಕ್ರಮಿಸಿ ಇಲ್ಲ. ಆದರೂ ಸಬ್ ಡಿವಿಜನ್ ಯಾ ಅಸಿಸ್ಟೆಂಟ್ ಕಮಿಷನರುಗಳ ಚಾರ್ಜುಗಳನ್ನು ೨೦ ರಿಂದ ೧೭ ಕ್ಕೆ ಕಡಮೆ ಮಾಡಬಹುದು ಸಾಧ್ಯವೆಂದು ಹುಕುಂ ಆಗಿಯೂ ಬಂದಿರುವುದರಿಂದ ಸಾಲಿಯಾನಾ ೧೦,೦೦೦ ರೂಪಾಯಿ ಮಿಗತೆಯಾಗುತ್ತದೆ. ಪ್ರಾಚೀನ ಲೇಖನಸ್ವೀಕರಣದ ಇಲಾಖೆಯಲ್ಲಿ ಖರ್ಚು ಕಡಮೆ ಮಾಡಿದುದನ್ನು ಕುರಿತು ಕಳೆದ ವರ್ಷ ತಿಳಿಸಿತ್ತಷ್ಟೆ. ಇದರಲ್ಲಿ ಈಚೆಗೆ ಸಾಲ್ ಒಂದಕ್ಕೆ ಇನ್ನೂ ೩,೫೦೦ ರೂಪಾಯಿ ಕಡಮೆ ಮಾಡಿತು. ಆಯಾ ಇಲಾಖೆಗಳಲ್ಲಿ ಹುಟ್ಟುವಳಿಯನ್ನು ಅಭಿವೃದ್ಧಿಪಡಿಸುವುದರ ಸಾಧ್ಯತೆಯನ್ನು ವಿಚಾರಮಾಡಿ ರಿಪೋರ್ಟು ಮಾಡುವಂತೆಯೂ ಕೂಡ ಮೇಲ್ಕಂಡ ಕಮಿಟಿಯವರಿಂದ ಸೂಚಿಸಲ್ಪಟ್ಟ ಸರ್ಕಾರದವರಿಂದ ಅಂಗೀಕರಿಸಲ್ಪಟ್ಟಿರುವ ಏರ್ಪಾಟುಗಳಿಂದ ವರ್ಷಕ್ಕೆ ೨೫,೦೦೦ ರೂಪಾಯಿ ಹೆಚ್ಚು ಹುಟ್ಟುವಳಿಯಾಗುವಂತೆ ನಿರೀಕ್ಷಿಸಿ ಇದೆ.

೧೯೦೬–೦೭ ನೆ ಇಸವಿಯ ಆದಾಯವ್ಯಯಗಳು.

ನಾವು ಈಗ ಸಂಸ್ಥಾನದ ಸಾಮಾನ್ಯ ಆದಾಯವ್ಯಯಗಳ ವಿಷಯವನ್ನು ಪ್ರಸ್ತಾಪಿಸುವೆವು. ಗತವರ್ಷದ ಜಮಾಖರ್ಚು ಅಂದಾಜುಪಟ್ಟಿಯಲ್ಲಿ ೨,೩೭,೯೨,೦೦೦ ರೂಪಾಯಿನ ಒಟ್ಟು ಹುಟ್ಟುವಳಿಗೂ ೨,೩೭,೭೨,೦೦೦ ರೂಪಾಯಿನ ಒಟ್ಟು ಖರ್ಚಿಗೂ ೨೦,೦೦೦ ರೂಪಾಯಿನ ಮಿಗತೆಗೂ ಏರ್ಪಾಡು ಮಾಡಿತ್ತು. ಈಗ ತಯಾರಾಗಿರುವ ಪ್ರಾಥಮಿಕ ಲೆಕ್ಕಗಳಲ್ಲಿ ಮೊದಲು ನಿರೀಕ್ಷಿಸಿದ್ದದಕ್ಕಿಂತ ಹುಟ್ಟುವಳಿಯಲ್ಲಿ ೨,೮೩,೮೦೦ ರೂಪಾಯಿ ಹೆಚ್ಚು, ಖರ್ಚಿನಲ್ಲಿ ೮೦,೩೦೦ ರೂಪಾಯಿ ಕಡಮೆಯೂ ಕಾಣಬರುವುದರಿಂದ ೩,೮೩,೪೦೦ ರೂಪಾಯಿ ಶಿಲ್ಕು ಉಳಿಯುತ್ತದೆ. ಈ ಹೆಚ್ಚಿಗೆ ಕಾರಣವಾದ ಮುಖ್ಯ ಬಾಬುಗಳು ಯಾವುವೆಂದರೆ—(೧) ಸರ್ಕಾರಿ ರೇಲ್ವೆಗಳು ೧,೨೦,೦೦೦ ರೂಪಾಯಿ (೨) ಚಿನ್ನದ ಗಣಿಗಳಿಗೆ ಸರಬರಾಯಿ ಮಾಡಿದ ನೀರಿನ ಕಿಮ್ಮತ್ತು ೬೦,೦೦೦ ರೂ., (೩) ಜಮೀನ್ ಹುಟ್ಟುವಳಿ ೧,೧೧,೦೦೦ ರೂ., (೪) ಅಬ್ಕಾರಿ ೩೩,೦೦೦ ರೂ., (೫) ನಾಯದೆ ಗತಿ ಖರ್ಚು ಗ್ರಾಂಟಿನ ವಾಪಸು ಜಮೆಗಳು ೨,೫೬,೦೦೦ ರೂಪಾಯಿ. ಸ್ವಲ್ಪ ಮಟ್ಟಿಗೆ ಇದಕ್ಕೆ ಪ್ರತಿಯಾಗಿ ಫಾರೆಸ್ಟು ಬಾಬಿನಲ್ಲಿ ೧೫,೦೦೦ ರೂ., ಸ್ಟಾಂಪಿನಲ್ಲಿ ೪೨,೦೦೦ ರೂ., ಗಣಿಯ ಹುಟ್ಟುವಳಿಯಲ್ಲಿ ೧,೬೯,೦೦೦ ರೂಪಾಯಿ ಕಡಮೆಯಾಯಿತು.

ಹುಟ್ಟುವಳಿ ಶಿಲ್ಕು ೩,೮೩,೪೦೦ ರೂಪಾಯಿ ಎಂದು ನಾವು ಹೇಳಿದೆವಷ್ಟೆ. ಗತವರ್ಷದ ನಿಜವಾದ ಶಿಲ್ಕು ಇನ್ನೂ ಬಹಳ ಹೆಚ್ಚಾಗಿತ್ತು. ಆದರೆ ಒಂದು ಭಾಗವನ್ನು ಒಂದು ವಿಶೇಷಕೆಲಸಕ್ಕಾಗಿ ಪ್ರತ್ಯೇಕವಾಗಿ ಇಟ್ಟಿತ್ತು. ಅದು ನಿಜವಾಗಿ ಮಿಗಿಸಿಟ್ಟ ಹಣವಾಗಿದ್ದರೂ ಲೆಕ್ಕಗಳಲ್ಲಿ ಅದನ್ನು ಖರ್ಚುಬಾಬಿನಲ್ಲಿ ತೋರಿಸಿ ಇದೆ. ಅದು ಏನೆಂದರೆ—ಕ್ಯಾಷ್ ರಿಸರ್ವ್ ಯಾ ನಗದಿ ಶಿಲ್ಕನ್ನು ಬಲಪಡಿಸುವುದಕ್ಕಾಗಿ ಪ್ರತ್ಯೇಕವಾಗಿ ಇಟ್ಟಿರುವ ಕಾವೇರಿ ವೈದ್ಯುತಶಕ್ತಿ ಏರ್ಪಾಡಿನ ನಿವ್ವಳ ಹುಟ್ಟುವಳಿಯಾದ ೧೫,೫೩,೦೦೦ ರೂಪಾಯಿ ಮತ್ತು ಕ್ಷಾಮದ ಖರ್ಚಿಗಾಗಿ ಉಳಿಸಿ ಪ್ರತ್ಯೇಕವಾಗಿ ಇಟ್ಟಿರುವ ೪ ಲಕ್ಷ ರೂಪಾಯಿ. ಈ ಮೊಬಲಗುಗಳೂ ಸೇರಿ ನಿಜವಾದ ಶಿಲ್ಕು ೨೩,೩೧,೦೦೦ ರೂಪಾಯಿಯಾಗಿತ್ತು. ಹಿಂದಿನ ವರ್ಷ ೧೦,೯೫,೦ ರೂಪಾಯಿ ಇತ್ತು.

೧೯೦೬—೦೭ನೆಯ ವರ್ಷದ ಲೆಕ್ಕಗಳನ್ನು ೧೯೦೫—೦೬ನೆ ವರ್ಷದ ಲೆಕ್ಕಗಳೊಂದಿಗೆ ಮುಕಾಬಿಲೆ ನೋಡಲಾಗಿ ೧೯೦೬—೦೭ ಒಟ್ಟು ಜಮೆಯು ೨,೫೦,೩೯,೦೦೦ ರೂಪಾಯಿ ಆಗಿತ್ತು. ೧೯೦೫—೦೬ರ ಒಟ್ಟು ಜಮೆಯು ೨,೪೧,೯೫,೦೦೦ ರೂಪಾಯಿ ಇತ್ತೆಂದೂ ಮತ್ತು, ಪ್ರತ್ಯೇಕವಾಗಿ ತೆಗೆದಿಟ್ಟಿರುವ ಕಾವೇರಿ ವೈದ್ಯುತಶಕ್ತಿಯ ಏರ್ಪಾಡಿನ ನಿವ್ವಳ ಹುಟ್ಟುವಳಿ ಮೊಬಲಗನ್ನು ಜ್ಞಾಪ

...ಡಿಸಿಟ್ಟಿರುವ ಮೊಬಲಗನ್ನು ಸೇರಿಸದೆ, ೧೯೦೬—೦೭ರ ಒಟ್ಟು ... ೨,೯೯,೩೩,೦೦೦ ರೂಪಾಯಿ ಎಂದೂ ಇದಕ್ಕೆ ಪ್ರತಿಯಾಗಿ ...೦೭ರ ಒಟ್ಟು ಖರ್ಚು ೨,೩೧,೪೦,೭೦೦ ರೂಪಾಯಿ ಎಂದೂ ...ಗುವುದು. ಈ ಪ್ರಕಾರವಾಗಿ ೧೯೦೫—೦೬ ರಲ್ಲಿ ಇದ್ದುದ... ೧೯೦೬—೦೭ರಲ್ಲಿ ಜಮೆಯು ೯,೯೩,೦೦೦ ರೂಪಾಯಿ ...ಯೂ ಖರ್ಚು ೨,೮೩,೦೦೦ ರೂಪಾಯಿ ಕಡಮೆಯಾಗಿಯೂ ಇತ್ತು.

ಗತವರ್ಷದಲ್ಲಿ ವಸೂಲಾಗಬೇಕಾದ ಮೊಬಲಗಿನ ಜತೆಗೆ ...೦೫ನೆಯ ವರ್ಷದಲ್ಲಿ ವಸೂಲ್ಮಾಡದೆ ನಿಲ್ಲಿಸಿಟ್ಟಿದ್ದ ... ಒಂದು ಭಾಗವನ್ನೂ ಇತರ ಬಾಕಿಗಳನ್ನೂ ವಸೂಲ್ಮಾಡಿ... ಲ್ಯಾಂಡ್ ರೆವಿನ್ಯೂ ಯಾ ಜಮೀನ್ ಹುಟ್ಟುವಳಿಯ ಬಾಬಿ... ೯,೯೯,೦೦೦ ರೂಪಾಯಿ ಹೆಚ್ಚು ಹುಟ್ಟುವಳಿಯಾಯಿತು. ...ಯಲ್ಲಿ ೧,೩೩,೭೦೦ ರೂಪಾಯಿಯೂ, ಸಾಯರಿನಲ್ಲಿ ೪೨,೦೦೦ ...ಯೂ, ಬೇತಮಂಗಲದ ಜಲಪಸತಿಯ ಕಾಮಗಾರಿಗಳಲ್ಲಿ ...೦೦ ರೂಪಾಯಿಯೂ, ಸ್ಟೇಟು ರೈಲ್ವೆಗಳಲ್ಲಿ ೬೧,೦೦೦ ರೂಪಾ... ಗತವರ್ಷದ ೯ ತಿಂಗಳುಗಳಲ್ಲಿ ಪ್ರಥಮಶಕ್ತಿಸ್ಥಾಪನೆಯಿಂದ ...ಗಿಸಿಕೊಟ್ಟ ಶಕ್ತಿಯಲ್ಲಿ ಪ್ರತಿ ಅಶ್ವಶಕ್ತಿಗೂ ೨೪ ಪೌಂಡಿನಂತೆ ...ದರವನ್ನು ವಸೂಲ್ಮಾಡಿರುವದರಿಂದ ಕಾವೇರೀ ವೈದ್ಯುತಶಕ್ತಿಯ ...ದಲ್ಲಿ ೧,೦೨,೦೦೦ ರೂಪಾಯಿಯೂ ಹೆಚ್ಚು ಹುಟ್ಟುವಳಿಯಾ... ...ಇವುಗಳಿಗೆ ಪ್ರತಿಯಾಗಿ ಸ್ಟೇಂಪು ಹುಟ್ಟುವಳಿಯಲ್ಲಿ ೩೦,೦೦೦ ...ಯೂ, ಕೆಲವು ಗಣಿಗಳಲ್ಲಿ ಚಿನ್ನದ ಉತ್ಪತ್ತಿಯು ಕಡಮೆ ...ವದರಿಂದ ಗಣಿಯ ಉತ್ಪತ್ತಿಯಲ್ಲಿ ೧,೪೫,೦೦೦ ರೂಪಾಯಿಯೂ, ...ರೆಸ್ಟು ಹುಟ್ಟುವಳಿಯಲ್ಲಿ ೨,೬೬,೦೦೦ ರೂಪಾಯಿಯೂ ಕಡಮೆಯಾ... ...ಮ್ಯಾಂಗನೀಸ್ ಪ್ರದೇಶಗಳಲ್ಲಿ ಕಾಲಿಯಾನರು ಸಿಕ್ಕುವುದು ...ವಾದುದರಿಂದ ನಾಟಗಳನ್ನು ಕಡಿದು ತರುವ ಕೆಲಸವು ಪೂರ್ವ... ...ಹುಡ ಫಾರೆಸ್ಟು ಹುಟ್ಟುವಳಿ ಪೈಕಿ ಚೌಬೀನೆಯ ಬಾಬಿನಲ್ಲಿ ...೦೦೦ ರೂಪಾಯಿ ಕಡಮೆಯಾಯಿತು. ಲೆಕ್ಕಗಳು ಆಖೈರಾಗಿ ... ...ಯಾದಾಗ ಫಾರೆಸ್ಟು ಹುಟ್ಟುವಳಿಯಲ್ಲಿ ಸ್ವಲ್ಪ ಅಭಿವೃದ್ಧಿಯು ...ಬಹುದೆಂದು ನಿರೀಕ್ಷಿಸಿ ಇದೆ.

ಹಿಂದಿನ ವರ್ಷಕ್ಕಿಂತ ೧೯೦೬—೦೭ ರಲ್ಲಿ ಸಾರ್ವಜನಿಕ ಕಾಮ... ...ಗಳಿಗೆ ಕಡಮೆಯಾಗಿ ಹಣ ಕೊಟ್ಟದರಿಂದಲೂ ಕೊಟ್ಟ ಹಣ... ...ಲ್ಲಿ ಉಳಿಸಿದುದರಿಂದಲೂ ಖರ್ಚುಬಾಬಿನಲ್ಲಿ ೨,೦೩,೦೦೦ ...ಪಾಯಿ ಕಡಮೆಯಾಯಿತು. ಇತರ ಮುಖ್ಯವಾದ ವ್ಯತ್ಯಾಸಗಳು ...ವುವೆಂದರೆ—ಬಾಕಿಯುಳಿದ್ದ ವೆಂಟಿಗೆಯನ್ನು ... ...ಕ್ಕ ಹೆಚ್ಚು ಖರ್ಚುಗಳನ್ನು ದಾಖಲುಮಾಡಿದುದರಿಂದ ಲ್ಯಾಂಡು ರೆವಿನ್ಯೂ ಅಥವಾ ಜಮೀನ್ ಹುಟ್ಟುವಳಿಯ ಬಾಬಿನಲ್ಲಿ ೧,೩೩,೦೦೦ ...ಪಾಯಿ ಹೆಚ್ಚು, ೧೯೦೬—೦೭ ರಲ್ಲಿ ಪೆಷ್ಕಾ ಖರ್ಚುಗಳು ಯಾ... ...ಇಲ್ಲದೆ ಇದ್ದುದರಿಂದಲೂ ನಾಟಗಳನ್ನು ಕಡಿದು ಜಮಾಯಿ... ...ಕೆಲಸಗಳನ್ನು ನಿಂತುಬಿಡಿಸಿದುದರಿಂದಲೂ ಜಂಗಲಿ ಬಾಬಿನಲ್ಲಿ ...೦೦೦ ರೂಪಾಯಿ ಕಡಮೆ; ಪ್ರಿನ್ಸ್ ಪ್ರಿನ್ಸ್ ಮತ್ತು ಪ್ರಿನ್... ...ಆಫ್ ವೇಲ್ಸ್‌ರವರ ಆಗಮನ ಪ್ರಯುಕ್ತವಾಗಿ ೧೯೦೫—೦೬ ...ದ ವಿಶೇಷ ಖರ್ಚು ಗತವರ್ಷದಲ್ಲಿ ಇಲ್ಲದೆ ಇದ್ದುದರಿಂದ ...ರಿ ಬಂಗಲೆಗಳ ಬಾಬಿನಲ್ಲಿ ೧,೩೩,೦೦೦ ರೂಪಾಯಿ ಕಡಮೆ ...ವಾರ್ಷಿಕ ಬಾಬಿನಲ್ಲಿ ೭೦,೦೦೦ ರೂಪಾಯಿ ಹೆಚ್ಚು ಖರ್ಚು.

ಸರ್ಕಾರಿ ಶಿಲ್ಕು.

ಗತವರ್ಷದ ನಮ್ಮ ಉಪನ್ಯಾಸದಲ್ಲಿ, ಸರ್ಕಾರಿ ಶಿಲ್ಕಿನ ಸ್ವಭಾವ... ...ಚಿನ ವರ್ಷಗಳಲ್ಲಿ ವಿಶೇಷ ಏರ್ಪಡುವದಕ್ಕೆ ಕಾರಣಗಳ... ...ಸಂಪೂರ್ಣವಾಗಿ ವಿವರಿಸಿತ್ತು. ಸಂಕ್ಷೇಪವಾಗಿ ಈ ಶಿಲ್ಕು ಏನೆಂ... ...ಮರಾಮತ್ತು ಅಥವಾ ಇತರ ಉತ್ಪತ್ತಿಕರವಾದ ಕಾಮಗಾರಿಗ... ...ವಿಶೇಷ ಖರ್ಚನ್ನು ಸಂಸ್ಥಾನದ ಆದಾಯದ ಮೊಬಲಗಿಗೆ ಸೇ... ...ಅಥವಾ ಮೊಬಲಗಿನಿಂದ ಸಾಲಗಳನ್ನು ಕಳೆದರೆ ಉಳಿಯುವ ...ಬಲಗು. ೧೯೦೫—೦೬ ರ ಆಖೈರಿನಲ್ಲಿ ೪೩,೪೯,೦೦೦ ರೂಪಾಯಿ ...ಇತ್ತು. ಇದು ಆ ವರ್ಷದ ಕೊನೆಯಲ್ಲಿ ೫೪,೦೪,೦೦೦ ರೂ... ...ಗೆ ಹೆಚ್ಚಿತು ಪ್ರಾಥಮಿಕ ಲೆಕ್ಕಗಳ ಮೇಲೆ ೧೯೦೬—೦೭ ರ ...ನಲ್ಲಿ ೩೫,೪೭,೦೦೦ ರೂಪಾಯಿ ಶಿಲ್ಕು ಇತ್ತು. ಇದರಿಂದ ...ಎರಡು ವರ್ಷಗಳಲ್ಲಿ ೩೨ ಲಕ್ಷ ರೂಪಾಯಿ ನಿಂಗಿಸಿದಂತಾಯಿತು.

೧೯೦೬—೦೮ ರ ಜಮಾಖರ್ಚಿನ ಅಂದಾಜುಪಟ್ಟಿ (ಬಜೆಟ್).

೧೯೦೭—೦೮ರ ಜಮಾಖರ್ಚಿನ ಅಂದಾಜುಪಟ್ಟಿಯಲ್ಲಿ ...೫೪,೦೦೦ ರೂಪಾಯಿ ಒಟ್ಟು ಹುಟ್ಟುವಳಿಗೂ, ಸ್ಥಾನದ ಖರ್ಚ... ...ಸಿರುವ ೭ ಲಕ್ಷ ರೂಪಾಯಿಯೂ ಕಾವೇರೀ ವೈದ್ಯುತಶಕ್ತಿಯ ...ಯ ಶಿಲ್ಕಿನ ವಿನಿಯೋಗವೂ ಸೇರಿ ೨೮೩ ಲಕ್ಷ ರೂಪಾಯಿನ ...ಖರ್ಚುಗೂ ಏರ್ಪಾಡುಮಾಡಿ ಇದೆ. ಇದರಿಂದ ೬೦,೦೦೦ ರೂ... ...ನಷ್ಟು ಶಿಲ್ಕು ಸಾಕ್ಷ ಉಳಿಯುವುದು. ಗತವರ್ಷದ ಒಟ್ಟು ...ಟ್ಟುವಳಿಯು ಹಿಂದಿನ ಎರಡು ವರ್ಷಗಳ ಹುಟ್ಟುವಳಿಗಿಂತ ೮ ಲಕ್ಷ ...ಕಡಮೆಯಾಗಿರುವಂತೆ ಕಾಣಬರುವುದು. ಸಾಧಾರಣ ಹುಟ್ಟು... ...ಬಾಬಿನಲ್ಲಿ ೧,೩೪,೦೦೦ ರೂಪಾಯಿಯಷ್ಟು ಕಡಮೆಯಾಗಿದೆ. ...೧೯೦೬—೦೭ರಲ್ಲಿ ೩,೬೮,೦೦೦ ರೂಪಾಯಿ ಹುಟ್ಟುವಳಿಯಾಗು... ...ಸೂಚಿ ಕಾಳೆತವನ್ನು ೧೯೦೭—೦೮ರ ಆಖೈರಿಂದ ಸರ್ಕಾರದವ... ...ಆಫ್ ಮಾಡಿ ಇದಾರೆ ಎಂಬುದನ್ನು ಜ್ಞಾಪಕದಲ್ಲಿಟ್ಟುಕೊಂ... ...ಇನ್ನು ಹೆಚ್ಚು ಮೊಬಲಗು ಕಡಮೆಯಾಗಲಿಲ್ಲವಲ್ಲಾ ಎಂದು ...ವಿಷಯವಾಗಿ ಸಂತೋಷಪಡಬೇಕಾಗಿದೆ. ಈ ಅನನುಕೂಲವಾದ ಫ... ...ತಾತ್ಕಾಲಿಕ ಕಾರಣಗಳಿಂದ ಸ್ವಲ್ಪಮಟ್ಟಿಗೆ ಉಂಟಾಗಿದೆ ...ಕಾಲಸ್ಥಿತಿಯು ಚೆನ್ನಾಗಿದ್ದರೆ ೧೯೦೫—೦೬ರಲ್ಲಿ ವ... ...ನಿಲ್ಲಿಸಿದ್ದ ಮೊಬಲಗಿನಲ್ಲಿ ಒಂದು ಭಾಗವನ್ನೂ, ಸಾಧಾ... ...ಬಾಕಿಗಳನ್ನೂ, ಗತವರ್ಷದಲ್ಲಿ ಬರಬೇಕಾಗಿದ್ದ ಕೆಲವು ಬ... ...ಮೊಬಲಗುಗಳನ್ನು ಈ ವರ್ಷ ವಸೂಲ್ಮಾಡುವುದಾಗಿ ನಿರೀ... ...ದೆ. ಈ ತಾತ್ಕಾಲಿಕ ಕಾರಣಗಳನ್ನು ಬಿಟ್ಟುಬಿಟ್ಟರೆ ಸಾಧಾ... ...ಹುಟ್ಟುವಳಿಯಲ್ಲಿ ೩,೩೦,೦೦೦ ರೂಪಾಯಿ ಕಡಮೆಯಾಗು... ...ಇದರಿಂದ ಸಾಯರು ಹುಟ್ಟುವಳಿಯಲ್ಲದ ಇತರ ಹುಟ್ಟುವಳಿ... ...ಯ ಬಾಬಿನಲ್ಲಿ ೬೩,೦೦೦ ರೂಪಾಯಿಯಷ್ಟು ಹೆಚ್ಚು ತೋರುತ್ತದೆ ಕಾವೇರಿ ವೈದ್ಯುತಶಕ್ತಿಯ ಸರಬರಾಯಿಗೆ ಕಾಂಟ್ರಾಕ್ಟಿನ ಹೆಚ್ಚು ದರದ ಕಾಲವು ೧೯೦೬—೦೭ ರೊಂದಿಗೆ ಮುಗಿಯುವುದರಿಂದ ಪದರಿ ಶಕ್ತಿಸ್ಥಾಪನೆಗಳ ನಿವ್ವಳ ಹುಟ್ಟುವಳಿಯಲ್ಲಿ ೫,೩೦,೦೦೦ ರೂಪಾಯಿಯಷ್ಟು ಭಾರಿ ಮೊಬಲಗು ಕಡಮೆಯಾಗುತ್ತದೆ. ಆದರೂ ಈಗ ಕಾಮಗಾರಿ ನಡೆಯುತ್ತಿರುವ ಎರಡನೆಯ ಶಕ್ತಿಸ್ಥಾಪನೆಯು ಪೂರಯಿಸಿದಾಗ ಈ ಬಾಬಿನ ಹುಟ್ಟುವಳಿಯು ಸ್ವಲ್ಪಮಟ್ಟಿಗೆ ಅಭಿವೃದ್ಧಿಯಾಗುವುದಾಗಿ ನಿರೀಕ್ಷಿಸಿ ಇದೆ. ೧೯೦೫—೦೬ರಿಂದ ಈಚೆಗೆ ಗಣಿಯ ಹುಟ್ಟುವಳಿಯು ಕ್ರಮವಾಗಿ ಕಡಮೆಯಾಗುತ್ತಿದೆ. ಮ್ಯುನಿಸಿಪಾಲಿಟಿಗಳಿಗೆ ಕಾರ್ ಟ್ರಿಬ್ಯೂಷನ್ ಯಾಥನಸಹಾಯ, ರೈಲ್ವೆಗಳು ಮತ್ತು ಇತರ ಉಪಯೋಗಕರ ಮರಾಮತ್ತು ಕಾಮಗಾರಿಗಳ ಮೇಲೆ ಸಾಕವ ಬಂಡವಾಳ, ಇವೇ ಮೊದಲಾದ ವಿಶೇಷ ಖರ್ಚುಬಾಬುಗಳಿಗೆ ಗಣಿಯ ಹುಟ್ಟುವಳಿಯಿಂದ ಈಗ ಹಣ ಮೀಟ್ಟಸುವುದರಿಂದ ಗಣಿಯ ಹುಟ್ಟುವಳಿಯು ಕಡಿಮೆಯಾಗಿ ಹೋದುದು ಸ್ವಲ್ಪ ಚಿಂತೆಗೆ ಕಾರಣವಾಗಿದೆ. ಆದರೂ ಖರ್ಚನ್ನು ಇನ್ನೂ ಕಡಮೆಮಾಡುವುದಕ್ಕೆ ಅವಕಾಶವಿದೆ; ಅಲ್ಲದೆ ಸಂಸ್ಥಾನದಲ್ಲಿ ಖನಿಜ ಮೊದಲಾದುವುಗಳ ಹುಟ್ಟುವಳಿಯು ಏಕ ರೀತಿಯಾಗಿ ಹೆಚ್ಚುವುದರಿಂದ ಮೇಲ್ಕಂಡ ತಾತ್ಕಾಲಿಕವಾದ ಕಡಮೆಯು ಭರ್ತಿಯಾಗುವುದಕ್ಕೂ ವಿಶಾರಿ ಹುಟ್ಟುವಳಿಯಾಗಬಹುದು.

ಖರ್ಚುಬಾಬಿನಲ್ಲಿ, ಈ ಕೆಳಗಿನ ವಿಶೇಷಬಾಬುಗಳು ಸೇರಿ ಇವೆ ಯಾವುವೆಂದರೆ—ತಾತಾರವರ ರಿಸರ್ಚ್ ಇನ್‌ಸ್ಟಿಟ್ಯೂಟ್ ಎಂಬ ಶಾಸ್ತ್ರ ಸ್ವೇಷಾಲಯಕ್ಕೆ ಕೊಡುವುದಾಗಿ ವಾಗ್ದಾನ ಮಾಡಿರುವ ೫ ಲಕ್ಷದ ಪೈಕಿ ೨ ಲಕ್ಷ ರೂಪಾಯಿ ಸೇರಿರುವ ೩,೯೯,೦೦೦ ರೂಪಾಯಿನ ಒಂದು ವಿಶೇಷವಾದ ಬಾಬು; ಶ್ರೀಮನ್ಮಹಾರಾಜ ಚಾಮರಾಜೇಂದ್ರ ಒಡೆಯರ್ ಬಹದೂರರವರ ಪ್ರತಿಮೆಗಳನ್ನು ಪೂರಯಿಸುವುದಕ್ಕಾಗಿ ಒಂದು ಲಕ್ಷ ರೂಪಾಯಿ, ಮತ್ತು ಸಂಸ್ಥಾನದಲ್ಲಿ ಕಿಂಡರ್‌ಗಾರ್ಟನ್ ಮತ್ತು ಹಸ್ತಕೌಶಲದ ತರಬೇತನ್ನು ಪ್ರಾರಂಭಿಸುವದಕ್ಕಾಗಿ ೪೦,೦೦೦ ರೂಪಾಯಿ. ಸಂಸ್ಥಾನದ ರೈಲ್ವೆಗಳಿಗಾಗಿ ಮೂರುವರೆ ಲಕ್ಷ ರೂಪಾಯಿನ ಹೆಚ್ಚು ಹಣವನ್ನು ಕೊಡಬೇಕಾಯಿತು. ಆಚಿನ ವರ್ಷದಲ್ಲಿ ಕ್ರಮೇಣ ಭಾರಿ ಮರಾಮತ್ತು ಕಾಮಗಾರಿಗಳಲ್ಲಿ ಬಹಳವಾದುವುಗಳು ಈಗ ಪ್ರಾರಂಭ ಪೂರೈಸಿರುವುದರಿಂದ ಮರಾಮತ್ತು ಕಾಮಗಾರಿಗಳಿಗಾಗಿ ಕೊಡುವ ಹಣದಲ್ಲಿ ಮೂರು ಲಕ್ಷ ರೂಪಾಯಿನಷ್ಟು ಕಡಮೆ ಮಾಡಲು ಸಾಧ್ಯವಾಯಿತು. ಒಟ್ಟು ಮಿಲಿಟ್ರಿ ಖರ್ಚಿನಲ್ಲಿ ಹಿಂದಿನ ವರ್ಷಕ್ಕಿಂತ ೭೩,೦೦೦ ರೂಪಾಯಿನಷ್ಟು ಹೆಚ್ಚಾಯಿತು. ಆದರೂ ಹೊಸ ಏರ್ಪಾಡುಗಳನ್ನು ಉಪಕ್ರಮಿಸುವುದಕ್ಕೆ ಹಣವನ್ನು ಒದಗಿಸುವುದೇ ಈ ವರ್ಷದ ಜಮಾಖರ್ಚಿನ ಅಂದಾಜುಪಟ್ಟಿಯ ವಿಶೇಷ ಲಕ್ಷಣವಾಗಿದೆ. ಈ ಹೊಸ ಏರ್ಪಾಡುಗಳು ಯಾವುವೆಂದರೆ—ಆರೋಗ್ಯದ ಮತ್ತು ಪಶುವೈದ್ಯದ ಇಲಾಖೆಗಳ ವಿಸ್ತಾರ, ಪ್ರಾಥಮಿಕ ಯಾ ಬಾಲಶಿಕ್ಷೆಯ ಉಪಾಧ್ಯಾಯರ ಸಂಬಳದ ಏರಿಕೆ; ಮತ್ತು ಗ್ರಾಮ ಪಾಠಶಾಲೆಗಳ ಪ್ರಾಥಮಿಕ ಬಾಲಶಿಕ್ಷೆಯ ತರಗತಿಗಳ... ಏರ್ಪಡಿಸುವುದು. ಈ ವರ್ಷದಲ್ಲಿ ಈ ಏರ್ಪಾಡುಗಳಿಗಾಗಿ ಒಟ್ಟು ೬೦,೦೦೦ ರೂಪಾಯಿಗಳನ್ನು ಇಟ್ಟಿದೆ.

ಸಗಟು ಶಿಲ್ಕು.

ಗತವರ್ಷದ ಮುರುವಿನಲ್ಲಿ ಸಗಟು ಶಿಲ್ಕು ೯೯,೦೬,೦೦೦ ರೂಪಾಯಿ ಆಗಿತ್ತು. ಈ ಪೈಕಿ ೧೬,೭೪,೦೦೦ ರೂಪಾಯಿಯನ್ನು ೧೫ ಲಕ್ಷ ರೂಪಾಯಿನ ಬೆಲೆಯುಳ್ಳ ಇಂಡಿಯಾ ಸರ್ಕಾರಿ ಪತ್ರಗಳ ಮೇಲೆ ಗತವರ್ಷದ ಆಖೈರಿನಲ್ಲಿ ಬಡ್ಡಿಗೆ ಹಾಕಲಾಯಿತು. ಮ್ಯುನಿಸಿಪಾಲಿಟಿಗಳಿಗೆ ಕೊಡುವ ಸಾಲಗಳೂ ಸೇರಿ ಸಾಮಾನ್ಯವಾದ ಸಾಲಗಳನ್ನೂ ಮುಂಗಡಗಳನ್ನೂ ಕೊಡುವುದಕ್ಕೆ ಏರ್ಪಾಡುಮಾಡಲಾಯಿತು. ಆರೋಗ್ಯಾಭಿವೃದ್ಧಿಯ ಏರ್ಪಾಡುಗಳನ್ನೂ ಮತ್ತು ಇತರ ಉಪಯೋಗವಾದ ಕಾಮಗಾರಿಗಳನ್ನೂ ಮಾಡಲು ಸ್ಥಳೀಯ ಸಂಘಗಳಿಗೆ ಸಹಾಯ ಮಾಡುವುದಕ್ಕೋಸ್ಕರ ಸರ್ಕಾರದವರು ಕೊಡುವುದಕ್ಕಾಗುವ ಮೊಬಲಗು ಮಿತವಾಗಿರಬೇಕಾಗಿರುವುದಲ್ಲದೆ ಅದು ಒಂದು ಕಡಿಮೆಯ ಬಡ್ಡಿಯ ದರಕ್ಕೆ ಕೊಡುವ ಪ್ರಕಾರದಲ್ಲಿ ... ... ಸ್ಥಳೀಯ ಸಂಘಗಳು ತಮ್ಮ ಈಗಿನ ಸಾಲಗಳನ್ನು ಏನು ಕ್ರಮವಾಗಿ ತೀರಿಸುತ್ತಾರೋ ಅದಕ್ಕೆ ಅನುಸಾರವಾಗಿರುವುದು. ಮತ್ತು ಸರ್ಕಾರದಿಂದ ಸಾಲಪಡೆದವರು ಕಾಲಕ್ಕೆ ಸರಿಯಾಗಿ ಸಾಲವನ್ನು ವಾಪಸು ಕೊಟ್ಟುಬಿಡಬೇಕೆಂಬ ನಿಯಮವನ್ನು ಸಂಪೂರ್ಣವಾಗಿ ಅನುಸರಿಸದೆ ಸಾಲದ ವಾಪಸು ಪಾವತಿಯನ್ನು ಮುಂದಿಸಬೇಕೆಂದು ಸೇಳಿ ಸರ್ಕಾರದವರು ಸಹಜವಾಗಿ ಅಂಗೀಕರಿಸುವುದಕ್ಕಾಗದ ಅರ್ಜಿಗಳನ್ನು ಕೆಲವು ವೇಳೆಗಳಲ್ಲಿ ಕಳುಹಿಸುವುದನ್ನು ಕುರಿತು ವಿಷಾದಿಸಬೇಕಾಗಿದೆ. ೧೯೦೬—೦೭ರಲ್ಲಿ ತೆಗೆದ ರೈಲ್ವೆ ಲೋನ್ ಸಾಲದಲ್ಲಿ ಉಳಿದಿರುವ ಮೊಬಲಗಿನಿಂದ ಕಾವೇರಿ ವೈದ್ಯುತಶಕ್ತಿಯ ಎರಡನೆಯ ಸ್ಥಾಪನೆಯು ಈ ವರ್ಷ ಪೂರಯಿಸುವುದು. ಈ ವರ್ಷಾಂತ್ಯದಲ್ಲಿ ೯೩,೫೦,೦೦೦ ರೂಪಾಯಿ ಶಿಲ್ಕು ಉಳಿಯುವಂತೆ ನಿರೀಕ್ಷಿಸಿದೆ.

ಆದಾಯ ವ್ಯಯಗಳ ಸ್ಥಿತಿ.

ಗತವರ್ಷದಲ್ಲಿ ಸೇವಿಂಗ್ಸ್ ಬ್ಯಾಂಕ್ಸ್ ನಿಬಂಧನೆಗಳಲ್ಲಿ ಮಾಡಿದ ಬದಲಾವಣೆಗಳಿಂದ ಸೇವಿಂಗ್ಸ್ ಬ್ಯಾಂಕು ಡಿಪಾಜಿಟ್ಟು ರೂಪವಾದ ಸಂಸ್ಥಾನದ ಸಾಲವು ೧೯೦೬ನೆಯ ಜುಲೈ ೧ನೆಯ ತಾರೀಖಿನಲ್ಲಿ ೯೫,೩೪,೦೦೦ ರೂಪಾಯಿ ಇದ್ದುದು ೧೯೦೭ನೆಯ ಜುಲೈ ೧ನೆಯ ತಾರೀಖಿನಲ್ಲಿ ೭೦,೧೪,೦೦೦ ರೂಪಾಯಿಗೆ ಇಳಿಯಿತು. ಸರ್ಕಾರಿ ಬಿಮಾ ಫಂಡು ರೂಪವಾದ ಸಂಸ್ಥಾನದ ಸಾಲವು ೧೩,೭೦,೦೦೦ ರೂಪಾಯಿಯಿಂದ ೧೪,೭೧,೦೦೦ ರೂಪಾಯಿಗೆ ಸ್ವಲ್ಪಮಟ್ಟಿಗೆ ಹೆಚ್ಚಿತು. ೧೯೦೫—೦೬ನೆಯ ವರ್ಷಕ್ಕೆ ಹಿಂದಿನ ೭ ವರ್ಷಗಳಲ್ಲಿ ಸೇವಿಂಗ್ ಬ್ಯಾಂಕು ಡಿಪಾಜಿಟ್ಟುಗಳನ್ನು ಯಾವ ಪದ್ದತಿ ಇಲ್ಲದೆ ಅಂಗೀಕರಿಸಿದುದರಿಂದಲೂ, ಸರ್ಕಾರಿ ಬಿಮಾ ಕೆಲಸವು ಹೆಚ್ಚಿದುದರಿಂದಲೂ ಈ ಬಾಬುಗಳಲ್ಲಿ ಸರ್ಕಾರದ ಸಾಲವು ೩೭ ಲಕ್ಷದಿಂದ ೧ ಕೋಟಿಗೂ ಮೀರಿ ಹೋಗೆ ಹೆಚ್ಚಿತೋ ಅದನ್ನು, ಮತ್ತು ಕಾವೇರಿ ವೈದ್ಯುತಶಕ್ತಿಯ ವಿಸ್ತಾರವು, ಬೇತಮಂಗಲದ ನೀರು ಸರಬರಾಯಿ ಕಾಮಗಾರಿ, ಮಾರ್ ಕಣಿವೆಯ ಕೆರೆ ಕಾಮಗಾರಿ, ಮೈಸೂರು ಅರಮನೆಯನ್ನು ಕಟ್ಟುವುದು, ಇವೇ ಮೊದಲಾದ ಕಾಮಗಾರಿಗಳಿಗೆ ಬಹಳ ಹಣವನ್ನು ಹಾಕಿದುದರಿಂದ ಸರ್ಕಾರಿ ಶಿಲ್ಕು ೧೮೯೮ನೆಯ ಜುಲೈ ೧ನೆಯ ತಾರೀಖಿನಲ್ಲಿ ೧,೩೯.೫೩,೦೦೦ ರೂಪಾಯಿ ಇದ್ದುದು ೧೯೦೫ನೆಯ ಜುಲೈ ೧ನೆಯ ತಾರೀಖಿನಲ್ಲಿ ೪೩,೪೯,೦೦೦ ರೂಪಾಯಿಗೆ ಹೇಗೆ ಇಳಿದು ಹೋಯಿತೋ ಅದನ್ನೂ ಕಳೆದ ವರ್ಷ ನಮ್ಮ ಉಪನ್ಯಾಸದಲ್ಲಿ ವಿವರಿಸಿದೆವು. ೧೯೦೬ನೆಯ ಜುಲೈ ೧ನೆಯ ತಾರೀಖಿನಲ್ಲಿ ಸರ್ಕಾರಕ್ಕೆ ಸಾಧಾರಣವಾದ ಖಜಾನೆಯ ಆವಶ್ಯಕತೆಗಳನ್ನು ನಡೆಸುವುದಕ್ಕೆ ಸಾಕಾಗುವಷ್ಟು ಮಾತ್ರ ಸ್ವಂತ ಹಣವಿತ್ತು. ಮತ್ತು ಕ್ಷಾಮಪರಿಹಾರವೇ ಮುಂತಾದ ಅವಸರದ ಕೆಲಸ ಅಥವಾ ಸರ್ಕಾರದವರು ಆಗಾಗ್ಗೆ ಮಾಡಬೇಕಾಗಿರುವ ಇತರ ಭಾರಿ ಖರ್ಚುಗಳಿಗೆ ಶಿಲ್ಕು ಉಳಿಯುವುದೇ ದುಸ್ತರವಾಗಿತ್ತು. ಸೇವಿಂಗ್ಸ್ ಬ್ಯಾಂಕು ಡಿಪಾಜಿಟ್ಟುಗಳ ರೂಪವಾದ ಸಾಲವನ್ನು ನಿಂತಪಡಿಸಿದುದರಿಂದಲೂ; ಕಳೆದ ಎರಡು ವರ್ಷಗಳಲ್ಲಿ ರಿಜರ್ವ್ ಫಂಡಿಗೆ ೩೨ ಲಕ್ಷವನ್ನು ಸೇರಿಸಿದುದರಿಂದಲೂ ಆದಾಯವ್ಯಯವು ಈಗತಾನೆ ಒಂದು ಸ್ಥಿತಿಗೆ ಬಂದಿದೆ. ಮುಂದೆ ಕ್ಷಾಮಪರಿಹಾರಕ್ಕಾಗಿಯೇ ಆಗಲೀ, ಉತ್ಪತ್ತಿಕರವಾದ ರೈಲ್ವೆಗಳನ್ನು ಹಾಕುವ ಖರ್ಚಿಗಾಗಿಯೇ ಆಗಲಿ ಸರ್ಕಾರದವರು ಭಾರಿ ಮೊಬಲಗನ್ನು ಮುಟ್ಟಬೇಕಾಗಿ ಬಂದಾಗ ಸಾಲಮಾಡುವ ಅವಶ್ಯವಿಲ್ಲದಹಾಗೆ ಇನ್ನು ಕೆಲವು ವರ್ಷಗಳವರೆಗೆ ಕ್ಷಾಮಪರಿಹಾರಕ್ಕಾಗಿ ವರ್ಷಗಟ್ಟಲೆ ಎರಡು ಲಕ್ಷ ರೂಪಾಯಿಯನ್ನೂ, ಸರ್ಕಾರಿ ಶಿಲ್ಕನ್ನು ಭರ್ತಿಮಾಡುವುದಕ್ಕಾಗಿ ಕಾವೇರೀ ವೈದ್ಯುತ ಶಕ್ತಿಸ್ಥಾಪನೆಗಳ ನಿವ್ವಳ ಹುಟ್ಟುವಳಿ ಸುಮಾರು ೧೦ ಲಕ್ಷವನ್ನೂ ಪ್ರತ್ಯೇಕವಾಗಿ ತೆಗೆದಿಡುವಂತೆ ಸರ್ಕಾರದವರು ತೀರ್ಮಾನಿಸಿರುತ್ತಾರೆ.

ವ್ಯವಸಾಯ, ಋತುಧರ್ಮ ಮತ್ತು ಮಳೆ.

ನಾವು ಈಗ ವ್ಯವಸಾಯ, ಋತುಧರ್ಮ ಮತ್ತು ಮಳೆಯ ವಿಷಯವನ್ನು ಪ್ರಸ್ತಾಪಿಸುವೆವು. ೧೯೦೫—೦೬ನೆಯ ವರ್ಷದಲ್ಲಿ ಮಳೆಯು ಬಹಳ ಅಲ್ಪವಾಗಿ ಬಿತ್ತು. ೧೯೦೬—೦೭ರ ಆದಿಯಲ್ಲಿಯೂ ಕೂಡ ಕೆಲವು ಕಾಲದ ವರೆಗೆ ಮಳೆ ಬಾರದೆ ಇದ್ದುದರಿಂದ ಬಹಳ ಚಿಂತೆಗೆ ಕಾರಣವಾಗಿತ್ತು. ಆದರೆ ಆಗಸ್ಟು, ಸೆಪ್ಟಂಬರ್ ತಿಂಗಳುಗಳಲ್ಲಿ ಹಿಂದಿನ ಕೊರತೆಯನ್ನು ಭರ್ತಿ ಮಾಡುವಷ್ಟು ಮತ್ತು ಮೀರುವಷ್ಟು ವಿಶೇಷ ಭಾರಿ ಮಳೆಗಳು ಆದುವು. ಮಳೆಗಳು ಕಾಲಕ್ಕೆ ಸರಿಯಾಗಿ ಬಾರದೆ ಹೋದರೂ ವ್ಯವಸಾಯದ ಆಯತಿಯು ಹಿಂದಿನ ಎರಡು ವರ್ಷಗಳಲ್ಲಿದ್ದುದಕ್ಕಿಂತ ಬಹಳ ಒಳ್ಳೆಯದಾಗಿತ್ತು. ಮತ್ತು ಬೆಳೆಯ ಉತ್ಪತ್ತಿಯು ತದನುಗುಣವಾಗಿ ಅಭಿವೃದ್ಧಿಹೊಂದಿತು. ಆದರೂ ಜಿನಸಿ ಬೆಲೆಗಳು ಇಳಿಯದೆ ಏಕರೀತಿಯಾಗಿವೆ. ಈ ವಿಚಿತ್ರವಾದ ವಿದ್ಯಮಾನವು ಈ ಸಂಸ್ಥಾನಕ್ಕೆ ಮಾತ್ರವೇ ಸೇರಿದುದಲ್ಲ. ಎಲ್ಲಾ ಕಡೆಗಳಲ್ಲೂ ಉಂಟಾಗಿರಬಹುದು. ಆದರೂ ಇದು ವ್ಯವಸಾಯಗಾರನಿಗೆ ಲಾಭಕರವಾಗಿರುವದಲ್ಲದೆ ಹಿಂದಿನ ವರ್ಷಗಳಲ್ಲಿ ಬೆಳೆ ಕಡಮೆಯಾದುದರಿಂದ ಅವನಿಗೆ ಉಂಟಾದ ನಷ್ಟವು ಸ್ವಲ್ಪಮಟ್ಟಿಗೆ ಕೂಡಿಬರುವಂತೆ ಮಾಡಿದೆ. ಕಾಲಸ್ಥಿತಿಗಳು ಅನುಕೂಲವಾಗಿದ್ದುದರಿಂದ ಹಿಂದಿನ ವರ್ಷದಲ್ಲಿ ೩೭,೫೯೭ ಎಕರೆಯಷ್ಟು ಕಡಮೆಯಾಗಿ ಹೋಗಿದ್ದ ಹಿಡುವಳಿಯ ಜಮೀನಿನ ವಿಸ್ತೀರ್ಣವು ೬೩,೩೫,೧೧೫ ಎಕರೆಗಳಿಂದ ೬೩,೭೪,೭೬೪ ಎಕರೆಗಳಿಗೆ ಹೆಚ್ಚಿತು, ಅಂದರೆ, ೩೯,೬೪೯ ಎಕರೆಯಷ್ಟು ಹೆಚ್ಚಿಯಿತು.

ಈ ವರ್ಷ ಮುಂಗಾರು ಮಳೆಯು ಹಿಂದಿನ ಸರಾಸರಿಗಿಂತ ಹೆಚ್ಚಾಗಿ ಆಗಿದ್ದರೂ ಎಲ್ಲಾ ಕಡೆಯಲ್ಲಿಯೂ ಒಂದೇ ಸಮನಾಗಿ ಆಗಲಿಲ್ಲ. ಮಳೆಗಾಲದ ಮೊದಲಿನಲ್ಲಿ ಭಾರೀ ಮಳೆಗಳಾದುವು. ತರುವಾಯ ಬಹಳ ಕಡಮೆಯಾಗಿ ಮಳೆ ಬಿದ್ದುದರಿಂದ ಚಿಂತೆಗೆ ಕಾರಣವಾಗಿತ್ತು. ಆದರೆ ಕಳೆದ ಕೆಲವು ವಾರಗಳಲ್ಲಿ ಹೆಚ್ಚು ಮಳೆಯಾಗಿ ಭಯವು ನಷ್ಟ ಹೋಗಲಾಡಿಸಿತು.

ಮಾರೀಕಣಿವೆ ಕಾಮಗಾರಿಗಳು ಕಾರ್ಯತಃ ಮುಗಿದಿವೆ. ಆ ಕೆರೆಯ ಕೆಳಗಿರುವ ಎಲ್ಲಾ ಜಮೀನುಗಳಿಗೂ ಈಗ ನೀರು ಸರಬರಾಯಿ ಮಾಡಬಹುದು. ಹಿಡುವಳಿದಾರರು ಬೆಳೆಯಲಪೇಕ್ಷಿಸುವ ಪೈರಿನ ಸ್ವಭಾವಕ್ಕೂ ಅಂಥಾ ಬೆಳೆಗಳಿಗೆ ಬೇಕಾಗುವ ನೀರಿನ ಪರಿಮಾಣಕ್ಕೂ ಅನುಸಾರವಾಗಿ ವ್ಯತ್ಯಾಸವಾಗುವ ನೀರಿನ ದರಗಳನ್ನು ವಸೂಲ್ಮಾಡುವ ಕ್ರಮವನ್ನು ಸರ್ಕಾರದವರು ಈ ಪ್ರದೇಶಕ್ಕೆ ಅಜಮಾಯಿಷಿ ತೋರು ಮಂಜೂರ್ಮಾಡಿರುತ್ತಾರೆ. ಈ ಪ್ರದೇಶದ ಭೂಗುಣದಿಂದಲೂ ಇಲ್ಲಿನ ರೈತರಿಗೆ ತರೀ ಸಾಗುವಳಿ ಮಾಡುವ ಅಭ್ಯಾಸವಿಲ್ಲದೆ ಇರುವುದರಿಂದಲೂ ಇಲ್ಲಿ ನೀರು ಸರಬರಾಯಿ ಆಗಬಹುದಾದ ಪ್ರದೇಶದಲ್ಲೆಲ್ಲಾ ತರೀ ಸಾಗುವಳಿಯು ನೆಲೆಗೊಳ್ಳುವುದಕ್ಕೆ ಕೆಲವು ಕಾಲ ಹಿಡಿಯುವುದು.

ಹಣ್ಣಿನ ವ್ಯವಸಾಯ.

ಆಸ್ಟ್ರೇಲಿಯಾ ಖಂಡದ ವಿಕ್ಟೋರಿಯಾ ಪ್ರಾಂತ್ಯದಿಂದ ಬಂದಿರುವ ಹಣ್ಣಿನ ವ್ಯವಸಾಯಗಾರರಾದ ಮಿ॥ ಎಂ ಜೆ ಪಾಲ್‌ಯವರಿಗೆ ಹಣ್ಣಿನ ವ್ಯವಸಾಯಕ್ಕಾಗಿ ಬೆಂಗಳೂರಿನ ಹತ್ತಿರ ಒಟ್ಟಿನಲ್ಲಿ ಸುಮಾರು ೩೪ ಎಕರೆ ವಿಸ್ತೀರ್ಣವುಳ್ಳ ಎರಡು ತುಂಡು ಭೂಮಿಯನ್ನು ಕೊಟ್ಟಿರುವುದನ್ನು ಕೇಳಲು ನೀವು ಆಸಕ್ತರಾಗಿರಬಹುದು. ಈ ಪ್ರದೇಶದಲ್ಲೆಲ್ಲಾ ಒಳ್ಳೆಯ ತರದ ದ್ರಾಕ್ಷಿ, ಕಿತ್ತಳೆ, ಬಿಚ್ಚೇಸು, ಅಪ್ರಿಕಾಟು ಅಥವಾ ಸಕ್ಕರೆಬಾದಾಮಿ, ಅಂಜೂರ, ಚೆರ್ರಿ, ಪ್ಲಂ, ಮೊದಲಾದ ಹಣ್ಣಿನ ಗಿಡಗಳನ್ನು ಹಾಕಿದೆ. ಈ ವ್ಯವಸಾಯದ ಆಯತಿಗಳು ಬಹಳ ಪ್ರೋತ್ಸಾಹಕರವಾಗಿರುವುದರಿಂದ ಮಿ॥ ಪಾಲ್‌ರವರ ಪ್ರೇರಣೆಯ ಮೇಲೆ ಬಹಳ ಮಂದಿ ಇಂಡಿಯಾ ದೇಶೀಯರಾದ ದೊಡ್ಡಮನುಷ್ಯರು ಸೇರಿರುವ ಒಂದು ಸಂಘದವರು ಈ ವ್ಯವಸಾಯವನ್ನು ಕೈಕೊಳ್ಳುವುದಕ್ಕೆ ಒಪ್ಪಿರುತ್ತಾರೆ. ಈಗ ತೋರುವ ಹಾಗೆ ಆ ವ್ಯವಸಾಯವು ಕೂಡಿ ಬಂದರೆ ಅನ್ಯದೇಶದ ನಾನಾ ತರದ ಹಣ್ಣಿನ ಗಿಡಗಳನ್ನು ಇಲ್ಲಿಗೆ ತಂದು ಹಣ್ಣಿನ ವ್ಯವಸಾಯದ ಉತ್ಕೃಷ್ಟವಾದ ವಿಧಾನಗಳನ್ನು ಕಾರ್ಯತಃ ಮಾಡಿ ತೋರಿಸುವುದರ ಮೂಲಕ ಬೆಂಗಳೂರಿಗೆ ವಿಶೇಷ ಲಕ್ಷಣವಾಗಿರುವ ಹಣ್ಣಿನ ವ್ಯವಸಾಯಕ್ಕೆ ಬಹಳ ಪ್ರಯೋಜನವಾಗುವುದು. ಇದೇ ಕೆಲಸಕ್ಕಾಗಿ ಮೇಲ್ಕಂಡ ಸಂಘದವರಿಗೆ ಮಾರೀಕಣಿವೆ ಕೆರೆಯ ಕೆಳಗೆ ೭೦೦ ಎಕರೆಯ ಜಮೀನನ್ನು ಕೊಟ್ಟಿದೆ.

(ಸಶೇಷ)

ಮೈಸೂರು ಸರ್ಕಾರಿ ಹುಕುಮು.

ಜಮೀನುಗಳ ಹದ್ದುಬಸ್ತುಗಳ ತನಿಖೆ.

ಗ್ರಾಮಾಂತರಗಳಲ್ಲಿ ಸರ್ಕಾರಿಂದಾ ಹಿಡುವಳಿ ಜಮೀನುಗಳ ಬಾಂದುಗಳ ತನಿಖೆ ವಿಚಾರವಾಗಿ ಹಾಲಿ ಜಾರಿಯಲ್ಲಿರುವ ರೆವಿನ್ಯೂ ರೂಲ್ಸು ಅನುಸರಿಸಿ ಸಾಲೇಸಾಲ್ ಸರಿಯಾಗಿ ತನಿಖೆ ಕೆಲಸವನ್ನು ಮಾಡುವ ಭಾಗದಲ್ಲಿ ಗ್ರಾಮ ನೌಕರರು ಮತ್ತು ಶೇಕದಾರರುಗಳು ಜವಾಬ್ದಾರರಾಗಿದ್ದಾಗ್ಯೂ ಇವರು ಸಮರ್ಪಕವಾಗಿ ಕೆಲಸ ಮಾಡದೇಲು ಮತ್ತು ಮೇಲ್ಪಟ್ಟ ರೆವಿನ್ಯೂ ಅಧಿಕಾರಿಗಳ ಈ ಲೋಪಗಳಿಗೆ ಇವರುಗಳನ್ನು ತಕ್ಕ ಹಾಗೆ ಶಿಕ್ಷಿಸದೇಲೂ ಇರುವ ಅಂಶ ರೆವಿನ್ಯೂ ಕಮಿಷನರವರ ತಿಳುವಳಿಕೆಗೆ ಬಂದು ಈ ಸಭಾಗದಲ್ಲಿ ಕೊಟ್ಟಿರುವ ದಸ್ತಾವಿಸ್ಮೃತ ಕೆಲವು ಅಂಶಗಳೇನಂದರೆ.—

ಜಮೀನು ಹಿಡುವಳಿದಾರರು ಅವರ ಹಕ್ಕುಗಳನ್ನು ಸರಿಯಾಗಿ ಕಾಪಾಡಿಕೊಳ್ಳಬೇಕಾದರೆ ಅವರ ಜಮೀನುಗಳ ಮೇಲೆ ಇರುವ ಸರ್ವೆ ಗುರ್ತುಗಳನ್ನು ಸರಿಯಾದ ಸ್ಥಿತಿಯಲ್ಲಿ ಇಟ್ಟುಕೊಳ್ಳಬೇಕಾದದ್ದು ಅತ್ಯವಶ್ಯಕ. ಆದಕಾರಣ ಬಾಂದು ರಿಪೇರಿ ಕೆಲಸವು ಸಲೀಸು ನಡೆಯುವ ಬಗ್ಗೆ ಇದರಡಿ ಸೂಚಿಸಿರುವ ಮೇರೆಗೆ ಆಚರಣೆಯಲ್ಲಿ ತರಬೇಕು.

೧. ಪ್ರತಿಸಾಲಿನಲ್ಲಿಯೂ ಗ್ರಾಮನೌಕರರು ಬಾಣೆ ಕೆಲಸವನ್ನು ಸಾಧ್ಯವಾದ ಮಟ್ಟಿಗೂ ತ್ವರೆಯಾಗಿ ಆರಂಭಿಸಬೇಕು. ಯಾರಾದರೂ ಹೋದ ದುರಸ್ತು ಕೆಲಸವನ್ನು ಬಾಕಿ ಇಟ್ಟುಕೊಂಡಿರುವ ರೈತರುಗಳು ತಮ್ಮ ತಮ್ಮ ಲೋಪಗಳನ್ನು ಎರಡನೇ ಇನ್ಸ್ಪೆಕ್ಷನ್ ಶುರು ಆಗುವದಕ್ಕೆ ಪೂರ್ವದಲ್ಲೇ ಸರಿಪಡಿಸಿಕೊಳ್ಳಲಿಕ್ಕೆ ಅವಕಾಶ ಕೊಟ್ಟಂತಾಗುತ್ತೆ.

೨. ಕೊಯಕಾಲ ಮುಗಿದು ಆಗುವದಕ್ಕೆ ಪೂರ್ವ ಮುಂಗಾರು ಮಳೆ ಪೂರೈಸುವದಕ್ಕೆ ಮುಂಚೆಯೇ ರೈತರಿಗೆ ಈ ಕೆಲಸಗಳಿಗೆ ಪುರಸತ್ತು ಇರುತ್ತೆ ಮತ್ತು ಆಗ್ಗೆ ಅವರು ದುರಸ್ತು ಕೆಲಸವನ್ನು ಸುಲಭವಾಗಿ ಮಾಡಬಹುದು ರಿಪೇರಿ ಕೆಲಸವು ತಾತ್ಕಾಲಿಕವಾಗಿ ಇಲ್ಲದೆ ಬಂದೋಬಸ್ತಾಗಿ ನಡೆಯುವ ಭಾಗದಲ್ಲಿ ನೌಕರಮಾರೇರು ತಕ್ಕ ಉಸ್ತುವಾರಿಯಿಂದ ನೋಡಿಕೊಳ್ಳಬೇಕು. ಅಂದರೆ, ಬಾಂದುಗಳು ಪದೇ ಪದೇ ಅಳಿಸಿಹೋಗದೆ ಕೆಲವು ವರ್ಷಗಳ ತನಕ ಸರಿಯಾಗಿ ನಿಲ್ಲುವ ರೀತಿ ರಿಪೇರಿ ನಡೆಯಬೇಕು

೩. ಸಾಮಾನ್ಯವಾಗಿ ಎಲ್ಲಾ ಜಮೀನುಗಳಲ್ಲಿಯೂ ತಕ್ರಾರು ತಟಸ್ಥವಾಯಿತು ಜಮೀನುಗಳಲ್ಲಿ ಸರ್ವೆ ಗುರ್ತುಗಳನ್ನು ಅಳಿಸಿಕೋಗದಂತೆ ಕಾಪಾಡುವದು ಮುಖ್ಯವಾದ್ದರಿಂದ ಬಾಂದುಗಳ ಮತ್ತು ಸರ್ವೆ ನಂಬರುಗಳ ಅಂಚುಗಳಲ್ಲಿ ಸಾಗುವಳಿ ಮಾಡಕೂಡದೆಂದು ನಿರ್ಬಂಧಿಸುವ ರೂಲುಗಳನ್ನು ಸಖ್ತಿ ಜಾರಿಯಲ್ಲಿ ತರುವದು ಅತ್ಯವಶ್ಯಕ.

೪. ಸರ್ವೆಗುರ್ತುಗಳ ಮೇಲೆಯೂ ಮತ್ತು ಇವುಗಳ ಸಮೀಪದಲ್ಲಿಯೂ ಗಿಡ ಮರಗಳು ಇರವಿಕೊಳ್ಳುವ ಪೊದೆ ಮುಂತಾದವುಗಳು ಬೆಳೆಯಲಿಕ್ಕೆ ಅವಕಾಶಕೊಡಬಾರದು ಇದರಿಂದ ಸರ್ವೆ ಗುರ್ತುಗಳು ಮುಚ್ಚಿಹೋಗುವದಲ್ಲದೆ ಅವು ಶಿಥಿಲವಾಗುವುದಕ್ಕೂ ಕಾರಣವಾಗುವುದು

೫. ಹಿಡುವಳಿ ಜಮೀನುಗಳ ಸರ್ವೆ ಗುರ್ತುಗಳನ್ನು ಯಾವ ರೀತಿ ರಿಪೇರಿಮಾಡಿಸುತ್ತಿದೆಯೋ ಅದರಂತೆಯೇ ಗ್ರಾಮಸ್ಥರ ಉಪಯೋಗಕ್ಕೆ ಬಿಟ್ಟಿರುವ ಜಮೀನುಗಳ ಗುರ್ತುಗಳನ್ನು ಆಯಾಯ ಗ್ರಾಮಸ್ಥರಿಂದ ರಿಪೇರಿಮಾಡಿಸಬೇಕು

೬. ಬರಾಬರು ಜಮೀನುಗಳ ಬಾಂದುಗಳ ರಿಪೇರಿ ವಿಷಯದಲ್ಲಿ ಪ್ರತಿ ಸಾಲಿನಲ್ಲಿಯೂ ಶೇಕದಾರ್ ಮತ್ತು ಪಟೇಲ್ ಸಹಾ ನಾಲ್ಕರಲ್ಲಿ ಒಂದು ಭಾಗ ರಿಪೇರಿ ಮಾಡಿಸತಕ್ಕದ್ದು ಈ ರಿಪೇರಿ ಕೆಲಸದಲ್ಲಿ ಸಾಧ್ಯವಾದ ಮಟ್ಟಿಗೂ ಗ್ರಾಮದ ಕೂಲಿನಾಳಿ ತಳವಾರರನ್ನು ನೇಮಕ ಮಾಡಿಕೊಂಡು ಕೆಲಸ ಜಲಾಯಿಸತಕ್ಕದ್ದು.

೨೪ನೆಯ ಪ್ರಜಾಪ್ರತಿನಿಧಿ ಸಮಾಜವು.

ರಾಜಧಾನಿಯ ಪಶ್ಚಿಮಾಭಿವೃದ್ಧಿಯಲ್ಲಿ ಕಟ್ಟಿರುವ ಪಬ್ಲಿಕ್ ಆಫೀಸ್ ಕಟ್ಟಡದ ಎರಡನೇ ಅಂತಸ್ತಿನ ದರ್ಬಾರ್ ಮಂದಿರದಲ್ಲಿ ಕಳೆದ ಶನಿವಾರ ಮಧ್ಯಾಹ್ನ ೧೨ ಗಂಟೆಗೆ ಪ್ರಜಾಪ್ರತಿನಿಧಿ ಸಮಾಜವು ಪ್ರಾರಂಭವಾಯಿತು ಸಭಾ ಮಂದಿರವನ್ನು ನೇತ್ರಾನಂದಕರವಾಗಿ ಅಲಂಕಾರ ಮಾಡಿದ್ದರು ದಿವಾನರು, ಕೌನ್ಸಿಲರುಗಳು, ಇಲಾಖೆಗಳ ಮತ್ತು ಡಿಸ್ಟ್ರಿಕ್ಟುಗಳ ಮುಖ್ಯ ಉದ್ಯೋಗಸ್ಥರುಗಳು, ಬ್ರಿಟಿಷ್ ರೆಸಿಡೆಂಟರೇ ಮೊದಲಾದ ಯೂರೋಪ್ಯನ್ ಸರ್ದಾರರು, ನಾಗರಿಕರುಗಳು, ಇವರೆಲ್ಲಾ ಎತ್ತರವಾದ ಸ್ಥಾನದಲ್ಲಿ ಕುಳಿತಿದ್ದರು. ಅವರ ಎಡಪಾರ್ಶ್ವದಲ್ಲಿ ಬೇರೆ ಬೇರೆ ವರ್ತಮಾನ ಪತ್ರಿಕೆಗಳ ಪ್ರತಿನಿಧಿಗಳೂ, ಬಲಪಾರ್ಶ್ವದಲ್ಲಿ ಗವರ್ನಮೆಂಟ್ ಸೆಕ್ರೆಟರಿಗಳೂ, ಎದುರುಪಾರ್ಶ್ವದಲ್ಲಿ ಇಳಿಜಾರಾದ ಗ್ಯಾಲರಿಗಳ ಮೇಲೆ ಸಾಲುಸಾಲಾಗಿ ಹಾಕಿದ್ದ ಕುರ್ಚಿಗಳಲ್ಲಿ ಪ್ರಜಾಪ್ರತಿನಿಧಿಗಳೂ ಕೂತಿದ್ದರು ೧೨ ಗಂಟೆಗೆ ಸರಿಯಾಗಿ ದಿವಾನರಾದ ಮೆ॥ ವಿ. ಪಿ. ಮಾಧವರಾವ್ ಸಿ. ಐ. ಇ. ಯವರು ತಮ್ಮ ಸ್ಥಾನದಿಂದೆದ್ದು, ಸಂಸ್ಥಾನದ ರಾಜ್ಯಭಾರವಿಚಾರಗಳನ್ನೂ ಜಮಾಖರ್ಚುಗಳನ್ನೂ ಕುರಿತ ಒಂದು ಅಡ್ರೆಸ್ಸನ್ನು ಇಂಗ್ಲೀಷಿನಲ್ಲಿ ಓದಿ ಹೇಳಿದರು. [ಈ ಅಡ್ರೆಸ್ಸಿನ ಕೆಲವು ಭಾಗಗಳನ್ನು ಇನ್ನೊಂದು ಕಡೆ ಪ್ರಕಟಿಸಿದೇವೆ.] ತರುವಾಯ ಕೋಲಾರದ ಚಿನ್ನದಗಣಿ ಕಂಪನಿಗಳ ಪ್ರತಿನಿಧಿಯಾದ ಮೆ॥ ಸಿ. ಎಚ್. ರಿಚರ್ಡ್ಸ್‌ಯವರೂ, ಉತ್ತರ ಮತ್ತು ದಕ್ಷಿಣ ಮೈಸೂರು ಪ್ಲಾಂಟರ್ ಸಂಘಗಳ ಪ್ರತಿನಿಧಿಗಳೂ, ಚಿಕ್ಕಮಗಳೂರು ಮಹಮದೀಯ ಸಂಘದ ಪ್ರತಿನಿಧಿಗಳೂ ಒಬ್ಬರಾದ ಮೇಲೊಬ್ಬರು ಮುಂದೆ ಬಂದು ಒಂದೊಂದು ಅಡ್ರೆಸ್ಸನ್ನು ಓದಿಕೇಳಿ ದಿವಾನರವರಿಗೆ ಒಪ್ಪಿಸಿದರು ಅನಂತರ ದಿವಾನರವರು ಅವರಿಗೆಲ್ಲಾ "ನೀವು ಕೇಳಿದ ವಿಷಯಗಳನ್ನು ಗವರ್ನಮೆಂಟಿನವರು ಪರ್ಯಾಲೋಚನೆಮಾಡಿ ಸಾಧ್ಯವಾದಷ್ಟು ಮಟ್ಟಿಗೂ ನೆರವೇರಿಸಲಾಗುವುದು" ಎಂಬ ಅಭಿಪ್ರಾಯವುಳ್ಳ ಪ್ರತ್ಯುತ್ತರವನ್ನು ಕೊಟ್ಟರು ಅಲ್ಲಿಗೆ ಬ್ರಿಟಿಷ್ ರೆಸಿಡೆಂಟರೂ ಯೂರೋಪ್ಯನ್ ಅತಿಥಿಗಳೂ ದಿವಾನರವರಿಂದ ಬೀಳ್ಕೊಂಡು ಸಭೆಯನ್ನು ಬಿಟ್ಟು ತೆರಳಿದರು ತರುವಾಯ ಗವರ್ನಮೆಂಟ್ ಚೀಫ್ ಸೆಕ್ರೆಟರಿ ಮೆ॥ ಸಿ. ಎಸ್. ಬಾಲಸುಂದರಂ ಐಯ್ಯರವರು ಎದ್ದು ದಿವಾನರವರು ಓದಿದ ಇಂಗ್ಲಿಷ್ ಅಡ್ರೆಸ್ಸಿನ ಕನ್ನಡ ತರ್ಜುಮೆಯನ್ನು ಓದಿ ಸಭಿಕರಿಗೆಲ್ಲಾ ತಿಳಿಸಿದರು. ಆ ಮೇಲೆ ತಿರುಮಕೂಡ್ಲು ನರಸೀಪುರದ ತಾಲ್ಲೂಕು ಪ್ರತಿನಿಧಿಗಳಾದ ಮೆ॥ ರಂಗಾಚಾರ್ಯರು ಮುಂದೆ ಕೇಳುವ ಅಡ್ರೆಸ್ಸನ್ನು ಓದಿ ದಿವಾನರವರಿಗೆ ಒಪ್ಪಿಸಿದರು. ಅದೇನೆಂದರೆ.—

ಸ್ವಾಮಿ,

ಕಳೆದ ವರ್ಷದಲ್ಲಿ ಈ ಸಭೆಯ ಉಪನ್ಯಾಸದಲ್ಲಿ ಅಪ್ಪಣೆ ಕೊಡಿಸಿದಂತೆ ಆಡಳಿತದ ಬದಲಾವಣೆ ಮತ್ತು ಮಿತವ್ಯಯ ಮುಂತಾದ್ದು ಸಂಸ್ಥಾನಕ್ಕೆ ಮುಖ್ಯಕರ್ತವ್ಯವೆಂದು ಭಾವಿಸಿ ಆಗಲೆ ಆಚರಣೆಗೆ ತಂದು ತನ್ಮೂಲಕವಾಗಿ ಸಂಸ್ಥಾನಕ್ಕೆ ಉಂಟಾಗಿರುವ ಆದಾಯವನ್ನು ಕೇಳಿ ಸಂತೋಷಿಸುವದಕ್ಕೆ ಜನತಾ ಪ್ರತಿನಿಧಿಗಳೆಲ್ಲರಿಗೂ ಈ ಒಳ್ಳೇ ಸಮಯ ದೊರಕಿದ್ದಕ್ಕಾಗಿ ತುಂಬಾ ಸಂತೋಷಪಡುತ್ತೇವೆ.

ಕಳೆದ ವರ್ಷದಲ್ಲಿ ಪ್ರತಿನಿಧಿಗಳು ಕೇಳಿದ ಅನೇಕ ವಿಷಯಗಳ ಅನುಕೂಲ ಪ್ರತಿಕೂಲಗಳ ಪರಿಶೀಲನೆಯಿಂದ ಒಡನೆ ಜವಾಬ್ ಅಪ್ಪಣೆಕೊಡಿಸಿ ಆ ಪೈಕಿ ಕೆಲವು ಆಯಾಯ ಇಲಾಖೆ ಅಧಿಪತಿಗಳ ದ್ವಾರಾ ಕ್ರಮಪಡಿಸಿದ್ದಕ್ಕಾಗಿ ಎಲ್ಲರೂ ಕೃತಜ್ಞತೆಯೊಡನೆ ಇರುವೆವಲ್ಲದೆ, ವ್ಯವಸ್ಥೆಯಾಗದೆ ಇರತಕ್ಕವುಗಳನ್ನು ಸಹಾ ಆಯಾಯ ಸಬ್ಜೆಕ್ಟಿನಲ್ಲಿ ಅಪ್ಪಣೆಕೊಡಿಸಿರುವ ಮೇರೆಗೆ ಕೂಡಿದಷ್ಟು ತ್ವರೆಯಲ್ಲಿ ವ್ಯವಸ್ಥೆಮಾಡಿಸಿಕೊಡತಕ್ಕದ್ದರಲ್ಲಿ ಯಾವ ಸಂಶಯವೂ ಇಲ್ಲವೆಂತ ದೃಢವಾಗಿ ನಂಬಿದ್ದೇವೆ.

ಈಚೆಗೆ ಸ್ಕೂಲ್ ಮಾಸ್ಟರ ತಲಬು ೧ ರೂಪಾಯಿ ಹೆಚ್ಚಿಸಿದ್ದರಿಂದ ಸ್ವಲ್ಪಮಟ್ಟಿಗಾದರೂ ಪ್ರೋತ್ಸಾಹ ಉಂಟಾದದ್ದಕ್ಕೆ ಎಲ್ಲರೂ ಕೃತಜ್ಞರಾಗಿರುತ್ತಾರೆ. ಅಲ್ಲದೆ ಗತಕಾಲಿನಲ್ಲಿ ೨೫೧ ನೇ ಸಬ್ಜೆಕ್ಟಿನಲ್ಲಿ ಪ್ರತಿನಿಧಿಗಳು ಕೇಳಿಕೊಂಡಂತೆ ಅವರವರ ಯೋಗ್ಯತಾನುಸಾರ ಅಂದರೆ ಲೋವರ್, ಅಪ್ಪರ್ ಸೆಕೆಂಡರಿ ಮತ್ತು ಪಂಡಿತ ಪರೀಕ್ಷೆಗಳನ್ನು ಕೊಟ್ಟವರಿಗೆ ದರ್ಜಾವಾರ್ ಸಂಬಳವೂ ಹೆಚ್ಚು ಮಾಡಿಸಿಕೊಡಬೇಕೆಂಬ ಅಂಶವನ್ನು ಈ ಸಾರಿಯೂ ಸೂಚಿಸಬೇಕೆಂತ ತಮ್ಮ ಅಮೋಘವಾದ ಉದಾರಭಾವವು ಪ್ರೇರೇಪಿಸುತ್ತದೆ.

ಮೈಸೂರು ಸೀಮೇ ಪ್ರಜೆಗಳು ತಮ್ಮ ವೃದ್ಧಿಗೆ ಸಾಧಕವಾದ ಕೃಷಿ ವಾಣಿಜ್ಯ ಶಿಲ್ಪ ಮೊದಲಾದವುಗಳಲ್ಲಿ ಮುಂದಕ್ಕೆ ಬಂದರೆ ಅದು ತಮಗೆ ಪರಮಲಾಭವೆಂದು ಭಾವಿಸಿ, ನಮ್ಮ ಶ್ರೀಮನ್ ಮಹಾರಾಜರವರ ಮತ್ತು ಅವರ ಗೌರ್ನಮೆಂಟಿನವರ ಉದ್ದೇಶವನ್ನು ಸಫಲಗೊಳಿಸಿದ ಉದ್ಯೋಗಸ್ಥರ ಪರಿಶ್ರಮದಿಂದ ಸಿದ್ಧಮಾಡಲ್ಪಟ್ಟ ಮೈಸೂರು ದಸರಾ ಕೈಗಾರಿಕೆ ಮತ್ತು ವ್ಯವಸಾಯವಸ್ತುಪ್ರದರ್ಶನ ಮಹೋತ್ಸವವನ್ನು ನಮ್ಮ ಶ್ರೀಮನ್ಮಹಾರಾಜರವರಿಂದ ಈ ವರ್ಷ ಪ್ರಥಮವಿಶೇಷವಾಗಿ ಆರಂಭಿಸಲ್ಪಟ್ಟದ್ದು ಎಲ್ಲರಿಗೂ ಅತ್ಯಂತ ಸಂತೋಷಕರವಾಗಿಯೂ, ಈ ಮೂಲಕ ಉತ್ತರೋತ್ತರವೂ ಇತರ ಕಡೆಯಂತೆ ಪ್ರಜೆಗಳೇ ತಾವಾಗಿಯೇ ಇಂಥಾ ಪ್ರದರ್ಶನವು ಮಾಡುವದಕ್ಕೆ ಒಳ್ಳೆ ಪ್ರೋತ್ಸಾಹವಾದಂತೆಯೂ ಆದ ಇಂಥಾ ಏರ್ಪಾಡನ್ನು ಉಂಟುಮಾಡಿಕೊಟ್ಟ ನಮ್ಮ ಗವರ್ನಮೆಂಟಿನವರಿಗೆ ಪುನಃ ವಂದನೆಯನ್ನು ಅರ್ಪಿಸುತ್ತೇವೆ

ಶ್ರೀಮನ್ಮಹಾರಾಜರವರ ಸವಾರಿಯು ತಿರುಮಕೂಡ್ಲು ನರಸೀಪುರಕ್ಕೆ ದಯಮಾಡಿಸಿರುವಾಗ ಕಾವೇರಿ ಕಪಿಲಾ ನದಿಗೆ ಸೇತುವೆ ಇಲ್ಲದೆ ಇರುವದರಿಂದ ತುಂಬಾ ಅನಾನುಕೂಲಗಳನ್ನು ಪ್ರತ್ಯಕ್ಷವಾಗಿ ಕಂಡಿದ್ದಕ್ಕೆ ಪ್ರತ್ಯಕ್ಷ ಬಂದಾಗ ಇದು ಮುಖ್ಯವಿಷಯವಾಗಿ ವಿಶೇಷವಾಗಿ ಅಪ್ಪಣೆಯಾಗಿತ್ತು ಈ ಅಂಶವನ್ನು ಶ್ರೀಮನ್ಮಹಾರಾಜರವರಲ್ಲಿ ಅರಿಕೆಮಾಡಿ ಈ ಕಾರ್ಯವನ್ನು ನೆರವೇರಿಸಿ ತನ್ಮೂಲಕವಾದ ಯಶಸ್ಸನ್ನು ಆಚಂದ್ರಾರ್ಕವಾಗಿ ಹೊಂದಬೇಕೆಂತ ಪ್ರಾರ್ಥಿಸುತ್ತೇವೆ ಪ್ರಸ್ತುತದಲ್ಲಿ ಭಾರೀ ಖರ್ಚಾಬಾಬಾಗಿ ತೋರಬಹುದಾದರೂ ಒಂದು ವಿಧವಾದ ಸುಂಕ ಏರ್ಪಾಡು ಮಾಡುವದರ ಮೂಲಕ ಸಂಸ್ಥಾನಕ್ಕೆ ಬಾಬೇ ಆದಾಯದ ಬಾಬಾಗಿ ಪರಿಣಮಿಸುವದರಲ್ಲಿ ಯಾವ ಕ್ಷಂದೇಹವೂ ಇಲ್ಲವೆಂಬಂಶವನ್ನು ಅರಿಕೆಮಾಡುತ್ತೇವೆ

ಈಚೆಗೆ ಸರ್ವೆಮಾಡಲ್ಪಟ್ಟಿರುವ ಚಿಕ್ಕದೇವರಾಜಸಾಗರದ ನಾಲೆಯ ಬಯಲಿನಿಂದ ಶಿವಸಮುದ್ರದ ಜಲಪಾತಕ್ಕೆ ನೀರು ಸರಬರಾಯಿ ಮಾಡುವದನ್ನು ಬಾಯಿ ಮಾಡಿಸುವ ಸರ್ಕಾರಕ್ಕೆ ತುಂಬಾ ಆದಾಯಕರವೆಂತಲೂ ... ಸಬ್‌ತಾಲ್ಲೂಕನ್ನು ಪಟ್ಟಣವಾದ ಹಾಲಿ ಶ್ರೀರಂಗಪಟ್ಟಣದ ಬಾಜಿನಲ್ಲಿ ಇರುವದನ್ನು ಅಲ್ಲೇ ಕಾಯಂ ಮಾಡಿಸಿ ಕೊಡಬೇಕೆಂತಲೂ ಸಹಾ ವಿನಯ ಪೂರ್ವಕವಾಗಿ ಪ್ರಾರ್ಥಿಸುತ್ತೇವೆ.

ತರುವಾಯ ದಿವಾನರವರು ಮೊದಲನೇ ದಿನದ ಸಭೆಯನ್ನು ಬರಖಾಸ್ತು ಮಾಡಿದರು. ಅಲ್ಲಿಂದೀಚೆಗೆ ಸೋಮವಾರ ಮಧ್ಯಾಹ್ನದಿಂದ ಪ್ರತಿದಿನವೂ ಸಭೆಯು ಸೇರುತ್ತಲೂ, ಸಂಸ್ಥಾನದ ವಿಚಾರಗಳನ್ನು ಕುರಿತು ಚರ್ಚೆ ನಡೆಸುತ್ತಲೂ ಬಂದಿದಾರೆ ಈ ವಿಚಾರಗಳನ್ನು ಮುಂದಿನವಾರ ಪ್ರಕಟಿಸಬೇಕೆಂದಿದ್ದೇವೆ ಒಟ್ಟು ೨೯೦ ಮಂದಿ ಪ್ರತಿನಿಧಿಗಳ ಪೈಕಿ ಈ ಸಲ ೧೪೦ ಜನರು ಮಾತ್ರ ರಾಜಧಾನಿಗೆ ಬಂದಿದ್ದರು ಇಲ್ಲಿ ಪ್ಲೇಗ್ ಉಪದ್ರವಿರೋಣದರಿಂದ ಅನೇಕರು ಈ ಸಲ ಬಂದಿರಲಿಲ್ಲ, ಮತ್ತು ಬಂದವರ ಪೈಕಿ ಹಲವರು ಆಗಲೇ ವಾಪಸು ಹೊರಟು ಹೋಗಿರುತ್ತಾರೆ

ಒಕ್ಕಲಿಗರ ಎರಡನೆಯ ಮಹಾಸಭೆಯು.

ಕಳೆದ ಗುರುವಾರ ಮಧ್ಯಾಹ್ನ ರಾಜಧಾನಿಯ ಟೌನ್ ಹಾಲ್ ಬಂಗಲೆಯಲ್ಲಿ ಒಕ್ಕಲಿಗರ ಎರಡನೇ ಮಹಾಸಭೆಯು ಪ್ರಾರಂಭವಾಯಿತು. ಬ್ರಿಟಿಷ್ ರೆಸಿಡೆಂಟರೇ ಮೊದಲಾದ ಯೂರೋಪ್ಯನ್ ಸರ್ದಾರರೂ ದೊರೆಸಾನಿಗಳೂ; ದಿವಾನರು, ಕೌನ್ಸಿಲ್ ಮೆಂಬರುಗಳು, ಡೆಪ್ಯುಟಿ ಕಮಿಷನರುಗಳು, ಸೆಕ್ರೆಟರಿಗಳೇ ಮೊದಲಾದ ಸರ್ಕಾರಿ ಉದ್ಯೋಗಸ್ಥರೂ, ಕೆಲವು ರಾಜಬಂಧುಗಳವರೂ, ರಾಜಧಾನಿಯಲ್ಲಿರುವ ಎಲ್ಲಾ ಕೋಮುಗಳ ಬಹು ಮಂದಿ ದೊಡ್ಡ ಮನುಷ್ಯರೂ ಸಭೆಯನ್ನಲಂಕರಿಸಿದ್ದರು ಈ ಸಂಸ್ಥಾನದ ಒಕ್ಕಲಿಗರ ಪ್ರತಿನಿಧಿಗಳು ಸುಮಾರು ಆರುನೂರು ಮಂದಿ ಸಭೆಯನ್ನು ಜರುಗಿಸುವುದಕ್ಕಾಗಿ ಬಂದಿದ್ದರು ಮಹಾರಾಜರವರ ಇಂಗ್ಲಿಷ್ ಬ್ಯಾಂಡ್ ವಾದ್ಯಗಾರರು ಹಾಜರಾಗಿದ್ದರು

ಸುಮಾರು ೪॥ ಗಂಟೆಗೆ ಶ್ರೀಮನ್ಮಹಾರಾಜರವರು ಸರ್ದಾರ್ ಗೋಪಾಲರಾಜೇ ಅರಸಿನವರನ್ನು ಸಂಗಡ ಕರೆದುಕೊಂಡು ತಮ್ಮ ಸವಾರರನ್ನು ಬಿಟ್ಟುಕೊಂಡು ದಿವ್ಯವಾದ ಸಾರೋಟಿನಲ್ಲಿ ದಯಮಾಡಿದರು ಟೌನ್ ಹಾಲ್ ಬಂಗಲೆಯ ಬಾಗಿಲ ಬಳಿ ಬ್ಯಾಂಡ್ ವಾದ್ಯವಾಗುತ್ತಿರುವಲ್ಲಿ ಒಕ್ಕಲಿಗರ ಸಂಘದ ಮುಖ್ಯ ಪ್ರತಿನಿಧಿಗಳು ಕಾದಿದ್ದು ಶ್ರೀಮನ್ಮಹಾರಾಜರವರಿಗೆ ಸುಖಾಗಮನವನ್ನು ಬಯಸಿ ಸಭೆಗೆ ಬಿಜಮಾಡಿಸಿದರು ಬಹು ಸುಂದರವಾದ ಕೆತ್ತನೆ ಕೆಲಸವುಳ್ಳ ದಿವ್ಯವಾದ ಕುರ್ಚಿಯನ್ನು ಶ್ರೀಮನ್ಮಹಾರಾಜರವರು ಅಲಂಕರಿಸಿದ ಮೇಲೆ ದಿವಾನರವರು ಎದ್ದು ಶ್ರೀಮನ್ಮಹಾರಾಜರವರಿಗೆ ಒಕ್ಕಲಿಗರ ಸಂಘದ ಕಮಿಟಿಯ ಕಾರ್ಯದರ್ಶಿಗಳಾದ ದೊಡ್ಡ ಮನುಷ್ಯರನ್ನು ಪರಿಚಯಮಾಡಿಸಿದರು. ತರುವಾಯ ಮೆ॥ ಪುಟ್ಟಸ್ವಾಮಿಯವರು ಗವೆತ್ತಿ ೮—೧೦ ಪದ್ಯಗಳನ್ನು ಹೇಳಿ ಭಗವದನುಗ್ರಹವನ್ನು ಬಯಸಿದರು ಸಂಘದ ಜನರಲ್ ಸೆಕ್ರೆಟರಿ ಮೆ॥ ಕೆ. ಎಚ್. ರಾಮಯ್ಯನವರು ಮುಂದೆ ಬಂದು ಅನುಜ್ಞೆಯನ್ನು ಪಡೆದು ಶ್ರೀಮನ್ಮಹಾರಾಜರವರಿಗೆ ಒಂದು ಅಡ್ರೆಸ್ಸನ್ನು ಬಹು ಸ್ಫುಟವಾಗಿಯೂ ಘಂಟಾಘೋಷವಾಗಿಯೂ ಓದಿ ಹೇಳಿದರು ಮಹಾ ನೇತ್ರಾನಂದಕರವಾದ ಬಣ್ಣಗಳಲ್ಲಿ ಅಚ್ಚು ಹಾಕಿದ್ದ ಅಡ್ರೆಸ್ಸಿನ ಪ್ರತಿಯನ್ನು ಸಂಘದ ಕಮಿಟಿ ಪ್ರೆಸಿಡೆಂಟ್ ಮೆ॥ ಬಯ್ಯಣ್ಣನವರು ಒಂದು ಸುಂದರವಾದ ಕೈಪೆಟ್ಟಿಗೆಯಲ್ಲಿಟ್ಟು ಶ್ರೀಮನ್ಮಹಾರಾಜರವರಿಗೆ ಒಪ್ಪಿಸಿದರು. ಈ ಕೈಪೆಟ್ಟಿಗೆಯ ಮೇಲೆ ಕೆತ್ತಿರುವ ಮಾತುಗಳೇನೆಂದರೆ —

ಕೈ ಪೆಟ್ಟಿಗೆಯ ಮೇಲಣ ಬರಹವು

ಶ್ರೀಮನ್ ಮಹೀಶೂರ ಮಹಾರಾಜಾಧಿರಾಜ ಶ್ರೀ ಕೃಷ್ಣರಾಜೇಂದ್ರ ಒಡೆಯರ್ ಬಹಾದ್ದೂರ್ ಜಿ. ಸಿ. ಎಸ್. ಐ. ಯವರ ದಿವ್ಯಸನ್ನಿಧಾನಂಗಳಲ್ಲಿ ಆ ಮಹಾಸ್ವಾಮಿಯವರ ರಾಜಭಕ್ತಿ ವಿಶ್ವಾಸಯುಕ್ತರಾದ ಒಕ್ಕಲಿಗಮಂಡಲಿಯ ಪ್ರಜೆಗಳಿಂದ ಒಕ್ಕಲಿಗರ ಎರಡನೇ ಮಹಾಸಭೆಯು ಉಪಕ್ರಮಿಸಲ್ಪಟ್ಟ ಸಂದರ್ಭದಲ್ಲಿ ಸಮರ್ಪಿಸಲ್ಪಟ್ಟುದು ೧೯೦೭ನೆ ಇಸ್ವಿ ಅಕ್ಟೋಬರ್ ಮಾಹೆ ೧೭ ನೆ ತಾರೀಖು.

ಮೇಲ್ಕಂಡ ಅಡ್ರೆಸ್ಸಿನಲ್ಲಿ ಸಂಘದವರು ಶ್ರೀಮನ್ಮಹಾರಾಜರವರ ಸನ್ನಿಧಿಯಲ್ಲಿ ಅರಿಕೆ ಮಾಡಿಕೊಂಡ ವಿವರವೇನೆಂದರೆ —

ಒಕ್ಕಲಿಗರ ಸಭೆಯ ಅಡ್ರೆಸ್ಸು.

ಮಹಾಸ್ವಾಮಿ,

ಈ ದಿವಸ ಮಹಾಸ್ವಾಮಿಯವರು ಇಲ್ಲಿಗೆ ಚಿತ್ತೈಸಿ ದಿವ್ಯ ದರ್ಶನವನ್ನು ಕೊಟ್ಟು, ನಮಗೆ ಮಹದುಪಕಾರವನ್ನು ಮಾಡಿಯೂ, ಮತ್ತು ನಮ್ಮ ಮಹಾಸಭೆಯನ್ನು ಸ್ವತಃ ಉಪಕ್ರಮಿಸಲು ಕೃಪೆಯಿಟ್ಟು ಅನುಗ್ರಹಿಸಿಯೂ ನಮಗೆ ಅಸದೃಶವಾದ ಗೌರವವನ್ನು ದಯಪಾಲಿಸಿರುವುದಕ್ಕೋಸ್ಕರ ನಮ್ಮ ಅಪಾರವಾದ ಕೃತಜ್ಞತೆಯನ್ನು ಸನ್ನಿಧಾನದಲ್ಲಿ ಅರಿಕೆಮಾಡಲು ಅಪ್ಪಣೆಯನ್ನು ಬೇಡಿಕೊಳ್ಳುತ್ತೇವೆ.

ದೈವಾನುಗ್ರಹದಿಂದ ಹಿಂದೂಸ್ಥಾನದಲ್ಲಿ ಸ್ಥಾಪಿಸಲ್ಪಟ್ಟಿರುವ ಬ್ರಿಟಿಷರ ಆಳ್ವಿಕೆಯು ಪ್ರಜೆಗಳಲ್ಲಿ ಸಮಾಧಾನ, ಜ್ಞಾನ, ಸೌಜನ್ಯಾದಿಗಳು ಬೆಳೆಯುವಂತೆ ಮಾಡಿದೆ ಮತ್ತು ಮಹಾನುಭಾವರಾದ ನಮ್ಮ ಚಕ್ರವರ್ತಿಯವರ ಕ್ಷೇಮಕರವಾದ ಈಗಿನ ಪ್ರಭುತ್ವದಲ್ಲಿ ಎಲ್ಲರ ಐಕ್ಯಮತ್ಯವೇ ಸರ್ವದೇಶಪರವಾದುದೆಂದು ತಿಳಿದುಕೊಂಡು ಅದರ ಮಹತ್ವವನ್ನು ಅಂಗೀಕರಿಸುತ್ತಿರುವುದಕ್ಕಿಂತಲೂ ಹೆಚ್ಚು ಸಂತೋಷಕರವಾದ ಸೂಚನೆಯು ಬೇರೊಂದು ಇರುವುದಿಲ್ಲ.

ಉದಾರಮನಸ್ಕರೂ, ಪ್ರಜ್ಞಾಶಾಲಿಗಳೂ ಆದ ಮಹಾರಾಜರುಗಳ ಆಳ್ವಿಕೆಯಲ್ಲಿಯೂ, ರಾಜಭಕ್ತಿಯುಳ್ಳವರಾದ ಅವರ ದಿವಾನರುಗಳ ಸಾಮರ್ಥ್ಯವೂ ದೂರದೃಷ್ಟಿಯೂ ಕಂಗೊಳಿಸುವ ಮಂತ್ರಿತ್ವದಲ್ಲಿಯೂ ಪ್ರಜಾರಂಜಕವಾಗಿ ನಡೆಸಲ್ಪಟ್ಟ ರಾಜ್ಯಭಾರದ ದೆಸೆಯಿಂದ ಅಭಿವೃದ್ಧಿಯಲ್ಲಿ ಮುಂದಾಗಿ ನಿಂತಿರುವ ಈ ನಮ್ಮ ಮೈಸೂರು ಸಂಸ್ಥಾನದಲ್ಲಿ ಸಂಸ್ಥಾನದ ಸಂಪತ್ತಿಗೆ ನೆಲೆಯಾಗಿಯೂ, ವಿದ್ಯಾಭ್ಯಾಸದಲ್ಲಿ ಹಿಂದಾಗಿದ್ದರೂ ರಾಜಭಕ್ತಿಯಲ್ಲಿ ಯಾರಿಗೂ ಕಡಿಮೆಯಿಲ್ಲದವರಾಗಿಯೂ, ಸಂಸ್ಥಾನದಲ್ಲಿ ಕೃಷಿ ಕಸಬು ಮಾಡುವವರಲ್ಲಿ ಮುಖ್ಯರಾಗಿಯೂ ಇರುವ ಒಕ್ಕಲಿಗಮಂಡಲಿಯ ಜನರಿಗೆ ಸುವಿದ್ಯಾಭ್ಯಾಸದ ಪ್ರಯೋಜನಗಳನ್ನು ಒದಗಿಸುವ ಉದ್ದೇಶದಿಂದ ನಮ್ಮ ಒಕ್ಕಲಿಗರ ಸಂಘವು ಉದ್ಭವಿಸಿದೆ.

ನಾವು ಏರ್ಪಡಿಸಿರುವಂಥಾ ದೊಡ್ಡ ಕಾರ್ಯಗಳನ್ನು ಜಾಗ್ರತೆಯಾಗಿ ಅಭಿವೃದ್ಧಿಗೆ ತರುವ ಉದ್ದೇಶದಿಂದ ಅವುಗಳಿಗೆ ಉದಾರವಾದ ಸಹಾಯವನ್ನು ಮಾಡಬೇಕೆಂಬುದು ಯಾವಾಗಲೂ ಮಹಾಸ್ವಾಮಿಯವರ ಸರ್ಕಾರದವರ ಅಭಿಮತವಾಗಿರುತ್ತದೆ. ಆದುದರಿಂದ ನಮ್ಮ ಸಂಘಕ್ಕೂ ಅದೇ ರೀತಿಯಾಗಿ ಪ್ರೋತ್ಸಾಹಮಾಡಿಯೂ, ನಾವು ಕಟ್ಟುವ ಕಟ್ಟಡಗಳಿಗೂ ನಾವು ವ್ಯವಸಾಯಕ್ರಮವನ್ನು ಬೋಧಿಸುವುದಕ್ಕೋಸ್ಕರ ಏರ್ಪಡಿಸುವ ಹೊಲಗಳಿಗೂ ಬೇಕಾದ ಭೂಮಿಯನ್ನು ಉಚಿತವಾಗಿ ಕೊಟ್ಟೂ, ನಮ್ಮ ಸಂಘಕ್ಕಾಗಿ ಬರುವ ಎಲ್ಲಾ ಹಣಗಳನ್ನು ಸಂಸ್ಥಾನದ ಖಜಾನೆಗಳಲ್ಲಿ ತೆಗದುಕೊಂಡು ರೆಮಿಟೆನ್ಸ್ ಟ್ರಾನ್ಸ್‌ಫರ್ ರಸೀತಿಗಳ ಮೂಲಕ ಬೆಂಗಳೂರಲ್ಲಿರುವ ನಮ್ಮ ಮುಖ್ಯ ಸಂಘಕ್ಕೆ ಕಳುಹಿಸುವಂತೆಯೂ, ಅಪ್ಪಣೆ ದಯಪಾಲಿಸಬೇಕೆಂದು ಪ್ರಾರ್ಥಿಸುತ್ತೇವೆ.

ಮಹಾಸ್ವಾಮಿಯವರ ಪ್ರಜಾರಂಜಕವಾದ ಆಳ್ವಿಕೆಯಲ್ಲಿ ಈ ಸಂಘವು ಸ್ಥಾಪಿಸಲ್ಪಟ್ಟು, ಅದು ಉದ್ಭವಿಸಿದ ಸ್ವಲ್ಪಕಾಲದಲ್ಲಿಯೇ ಮಹಾಸ್ವಾಮಿಯವರ ಉದಾರವಾದ ಸಹಾಯವನ್ನು ಪಡೆದು ಸನ್ನಿಧಾನದ ಅನುಗ್ರಹಕ್ಕೆ ಪಾತ್ರವಾಗಿರುವುದು ಅದರ ಮುಂದಿನ ಏಳಿಗೆಗೆ ಸಂಪೂರ್ಣವಾದ ಶುಭಸೂಚನೆಯಾಗಿರುತ್ತದೆ. ಆದಕಾರಣ ಮಹಾಸ್ವಾಮಿಯವರು ಈ ಸಂಘಕ್ಕೆ ಪೋಷಕರಾಗಿ, ಅದರ ಪುರೋಭಿವೃದ್ಧಿಯ,

...ಸ್ಥಾನದ ಪುರೋಭಿವೃದ್ಧಿಯೂ ಒಂದೇ ಆಗಿರುವುದರಿಂದ, ಇದು ಸ್ಥಿರವಾಗಿ ನಿಲ್ಲುವಂತೆ ದಿವ್ಯಚಿತ್ತಕ್ಕೆ ತಂದು ನಡೆಸಿಕೊಡಬೇಕೆಂದು ...ಕ ಆಸಕ್ತಚಿತ್ತರಾಗಿ ಬೇಡಿಕೊಳ್ಳುತ್ತೇವೆ.

ಮಹಾಸ್ವಾಮಿಯವರ ಕೃಪಾಕಟಾಕ್ಷಕ್ಕೆ ನಾವು ಪಾತ್ರರಾಗಿರುವ ...ಸುಮುಹೂರ್ತದಲ್ಲಿ, ಮಹಾಸ್ವಾಮಿಯವರ ಪ್ರಜೆಗಳಿಗೆ ಉಚಿತ ...ಗಿಯೂ ಬಲಾತ್ಕಾರದಿಂದಲೂ ಬಾಲವಿದ್ಯಾಭ್ಯಾಸವನ್ನು ಮಾಡಿಸು...ತೆ ಅಪ್ಪಣೆ ಆಗಬೇಕೆಂದು ಬೇಡುವುದಕ್ಕಿಂತಲೂ ಅತಿಶಯವಾದ ...ವನ್ನು ಕೇಳಿಕೊಳ್ಳಲಾರೆವು ಮತ್ತು ಕಾಲಾನಂತರದಲ್ಲಿ ಈ ಉತ್ತ...ವಾದ ಏರ್ಪಾಡಿನ ದೆಸೆಯಿಂದ ತಂದೆ ತಾಯಿಗಳು ತಮ್ಮ ಮಕ್ಕಳಿಗೆ ...ವಸ್ತ್ರಗಳು ಎಷ್ಟು ಅವಶ್ಯವೋ ವಿದ್ಯೆಯೂ ಅಷ್ಟೇ ಅವಶ್ಯವೆಂದು ...ದುಕೊಂಡಾಗ, ಈ ಅಮೋಘವಾದ ವರದ ಫಲಗಳನ್ನು ಸುಖವಾಗಿ ಅನುಭವಿಸಿ ಸಂತುಷ್ಟರಾಗುವ ಪ್ರಜೆಗಳ ಶಾಶ್ವತವಾದ ಕೃತಜ್ಞತೆಗೆ ...ಹಾಸ್ವಾಮಿಯವರು ಪಾತ್ರರಾಗುವಿರಿ ಎಂದು ತಿಳಿಯುತ್ತೇವೆ.

ಮಹಾಸ್ವಾಮಿಯವರ ವಿಶ್ವಾಸಪಾತ್ರರಾಗಿರುವ ದಿವಾನರವರಾದ ...ರಾ॥ ಶ್ರೀ ವಿ. ಪಿ. ಮಾಧವರಾವ್, ಸಿ. ಐ. ಇ. ಯವರು ಈ ವ...ಗೆ ಸಂಘದ ಪೋಷಕರಾಗಿ ನಮಗೆ ತಮ್ಮ ಅಮೂಲ್ಯವಾದ ಬುದ್ಧಿವಾ...ವನ್ನು ಯಾವಾಗಲೂ ಉಲ್ಲಾಸದಿಂದ ಅನುಗ್ರಹಿಸಿರುತ್ತಾರೆ, ಮತ್ತು ...ಸಂಘವು ಈಗ ಏನು ಅಭಿವೃದ್ಧಿಯನ್ನು ಪಡೆದಿದ್ದರೂ ಅದೆಲ್ಲವೂ ...ವಾಗಿ ಅವರಿಂದ ನಿರಂತರದಲ್ಲಿಯೂ ದಯಪಾಲಿಸಲ್ಪಟ್ಟ ಪ್ರೋತ್ಸಾ...ಹಿಸಿದ ಮತ್ತು ಸಹಾಯಗಳಿಂದಲೇ ಉಂಟಾಗಿರುತ್ತವೆ. ಮಹಾಸ್ವಾ...ಮಿಯವರ ಕೃಪಾಪೂರ್ವಕವಾದ ಸಹಾಯಸಂಪತ್ತಿಯನ್ನೂ ಮತ್ತು ...ದಿವಾನರವರ ಬುದ್ಧಿವಾದವನ್ನೂ ಪಡೆದ ಈ ಸಂಘವು ಮಹಾಸ್ವಾಮಿ...ಯವರ ಆಳ್ವಿಕೆಗೆ ಕೀರ್ತಿಯನ್ನೂ ರಾಜಭಕ್ತಿಯುಕ್ತರಾದ ಮಹಾಸ್ವಾ...ಮಿಯವರ ಪ್ರಜೆಗಳಿಗೆ ಸುಖಸಂತೋಷಗಳನ್ನೂ ಉಂಟುಮಾಡಿ ಒಳ್ಳೇ ...ಭಿವೃದ್ಧಿಗೆ ಬರುವುದರಲ್ಲಿ ಸಂದೇಹವಿರುವುದಿಲ್ಲ.

ಸಮಸ್ತ ಸನ್ಮಂಗಳಪ್ರದನಾದ ಭಗವಂತನು ಮಹಾಸ್ವಾಮಿಯವ...ರಿಗೂ ಮತ್ತು ಮಹಾಸ್ವಾಮಿಯವರ ರಾಜವಂಶದ ಕುಟುಂಬದವರಿಗೂ ಸರ್ವೋತ್ತಮವಾದ ಸುಖಗಳನ್ನು ದಯಪಾಲಿಸಲಿ ಎಂದು ಶ್ರದ್ಧಾಭಕ್ತಿ...ಯಿಂದ ಪ್ರಾರ್ಥಿಸುತ್ತೇವೆ.

ತರುವಾಯ ಶ್ರೀಮನ್ಮಹಾರಾಜರವರು ಎದ್ದು ಒಕ್ಕಲಿಗರ ಮ...ಹಾಸಭೆಯನ್ನು ಪ್ರಾರಂಭ ಮಾಡುವುದಕ್ಕಿಂತ ಮುಂಚೆ ಮಹಾಸಭೆ...ಯನ್ನು ಕುರಿತು ಅಪ್ಪಣೆ ಕೊಡಿಸಿದ ಪ್ರತ್ಯುತ್ತರವೇನೆಂದರೆ:—

ಶ್ರೀಮನ್ಮಹಾರಾಜರವರ ಉತ್ತರವು.

ಸಭಾಸದರೇ,

ಈ ದಿವಸ ನಾವುಗಳು ಇಲ್ಲಿ ಸೇರುವುದಕ್ಕೆ ಉಂಟಾದ ಕಾರಣವು ...ಸಾಧಾರಣವಾದದ್ದಲ್ಲ. ವ್ಯವಸಾಯದಿಂದ ಜೀವಿಸತಕ್ಕವರಲ್ಲಿ ಬಹು ...ಭಾಗವಾಗಿರುವ ಒಕ್ಕಲಿಗರ ಸಮಾಜವು ಬಹಳ ಗೌರವಾರ್ಹವಾದದ್ದೆಂ...ಬುದು ಮೈಸೂರಿಗೆ ಸ್ವಲ್ಪಕಾಲ ವಾಸಮಾಡಿದವರಿಗೂ ಕೂಡ ತಿಳಿ...ಯದೆ ಇರಲಾರದು. ಇವರು ವಿದ್ಯಾಪ್ರಸಂಗದಲ್ಲಿ ಹಿಂದಾಗಿರುತ್ತಾರ...ಲ್ಲದೆ ಸಾಕ್ಷಾತ್ತಾಗಿ ತಮ್ಮ ಜೀವನೋಪಾಯವನ್ನು ಸಂಪಾದಿಸಿಕೊಳ್ಳು...ವುದರಲ್ಲಿ ತೃಪ್ತರಾಗಿರುತ್ತಾರೆ. ಇದು ಕೊರತೆ. ಇತರ ಪ್ರಾಪಂಚಿಕ ...ವಿಷಯಗಳಲ್ಲಿ ವಿಶೇಷ ಗಮನವನ್ನು ಕೊಡದವರಾಗಿದ್ದಾರೆ; ತಮ್ಮ ...ಪೇಕ್ಷೆಗಳನ್ನು ಮತ್ತು ಕ್ಲೇಶಗಳನ್ನು ಇತರರ ಮುಖದಿಂದ ...ಳಿಯಪಡಿಸುತ್ತಿದ್ದಾರೆಯೇ ಹೊರತು ತಾವುಗಳಲ್ಲರೂ ಸಮುದಾಯ...ವಾಗಿ ಏಕೀಭವಿಸಿ ತಮ್ಮ ಇಷ್ಟಸಿದ್ಧಿಗಳನ್ನು ಐಕ್ಯಮತ್ಯದಿಂದ ...ಇದುವರೆಗೂ ವಿಶದಪಡಿಸಿಕೊಳ್ಳುತ್ತಾ ಇರಲಿಲ್ಲ. ಒಕ್ಕಲಿಗರು ...ಈಗಿನ ಸ್ಥಿತಿಗೆ ಇಂದು ವೃದ್ಧಿಹೊಂದಬೇಕಾದರೆ ಕ್ರಮವಾಗಿ ವ್ಯವಸ್ಥಿತ...ವಾದ ಪ್ರಯತ್ನವು ನಡೆಯಬೇಕಾದ್ದು ಅವಶ್ಯಕವು. ಈ ಸಮಾಜದ ...ಲ್ಲಿ ವೃದ್ಧಿಹೊಂದಿದ ಕೆಲವರು ಈಗ ಒಂದೆರಡು ವರುಷಗಳಲ್ಲಿ ನಿಶ್ಚ...ಯಿಸಿರುತ್ತಾರೆ, ಮತ್ತು ಇವರ ಅಭಿವೃದ್ಧಿಗೆ ಸಹಕಾರಿಗಳಾದ ಇತರ ...ಸಮಾಜದವರಲ್ಲಿ ಪ್ರಮುಖರಾದ ನಮ್ಮ ದಿವಾನರು ಮಿ॥ ಮಾಧವರಾ...ಯರು ಮಾಡಿದ ಸಹಾಯದಿಂದಲೂ ಅವರು ತೋರಿಸಿದ ಮಾರ್ಗದಿಂದ ...ಲೂ ಒಕ್ಕಲಿಗರ ಸಂಘವೆಂಬುವುದು ಈಗ ಉತ್ಪನ್ನವಾಗಿದೆ. ನಮ್ಮ ...ಪ್ರಜೆಗಳಿಗೆ ಇದುವರೆಗೂ ಬಂದಿರುವ ಮಟ್ಟಿಗೆ ಈ ಸಂಘದವರ ...ಉದ್ದೇಶಗಳು ಸರ್ವವಿಧ ಪ್ರೋತ್ಸಾಹಕ್ಕೆ ಅರ್ಹವಾದವುಗಳಾಗಿವೆ. ಈ ನಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವದಕ್ಕಾಗಿಯೇ ಈ ದಿವಸ ಈ ಸಮಾಜದ ಉತ್ಪತ್ತಿಯನ್ನು ಪ್ರಕಟಪಡಿಸುವದಕ್ಕೆ ನಾವು ಅವರ ಪ್ರಾರ್ಥನೆಯನ್ನು ಅಂಗೀಕರಿಸಿದ್ದಲ್ಲದೆ ಈ ಸಂಘಕ್ಕೆ ಪೋಷಕರಾಗಿರು...ವದಕ್ಕೂ ಸಂತೋಷದಿಂದ ಸಮ್ಮತಿಸಿದ್ದೇವೆ.

ವಿದ್ಯಾಪ್ರಸಂಗವನ್ನು ನಮ್ಮ ಜನಗಳಲ್ಲಿ ವೃದ್ಧಿಪಡಿಸುವದಕ್ಕೂ ಮೈಸೂರು ದೇಶದಲ್ಲಿ ವ್ಯವಸಾಯ ಕಾರ್ಯವನ್ನು ಉತ್ತಮಸ್ಥಿತಿಗೆ ತರುವದಕ್ಕೂ ಈ ಸಂಘದ ಪ್ರಯತ್ನಗಳು ಉಪಯೋಗಿಸಲ್ಪಡುತ್ತ...ವೆಂದು ಮತ್ತು ಈ ಉದ್ದೇಶಗಳಿಗಾಗಿಯೇ ನೀವುಗಳು ನಮ್ಮ ಸರ್ಕಾ...ರದ ಸಹಾಯವನ್ನು ಅಪೇಕ್ಷಿಸುವಿರೆಂದು ನಾವು ತಿಳಿಯುತ್ತೇವೆ.

ಈ ಉಭಯ ವಿಧೋದ್ದೇಶಗಳಲ್ಲಿಯೂ ಈ ಸಂಘದವರಿಗೆ ಸಹ...ಕಾರಿಗಳಾಗಿ ಸಹಾಯವನ್ನು ಮಾಡುವದಕ್ಕೆ ಬಹಳ ಉಲ್ಲಾಸವುಳ್ಳವ...ರಾಗಿರುತ್ತೇವೆಂದು ನಿಮಗೆ ದೃಢವಾಗಿ ಹೇಳುತ್ತೇವೆ. ಸರ್ಕಾರದವರು ...ಸ್ಕೂಲುಗಳನ್ನು ಏರ್ಪಡಿಸಿದ್ದಾರೆ, ಮತ್ತು ಕೆಳಗಿನ ಕ್ಲಾಸುಗಳಲ್ಲಿ ...ಓದತಕ್ಕವರಿಗೆ ಫೀ ಇಲ್ಲದೆ ವಿದ್ಯೆ ಕಲಿಸುತ್ತಾರೆ. ಅಲ್ಲದೆ ದ್ರವ್ಯವನ್ನು ...ಕಾಲ ಒದಗಿದಹಾಗೆ ಈ ವಿಧವಾದ ಕಾರ್ಯವನ್ನು ವೃದ್ಧಿಪಡಿಸಬೇಕೆಂ...ಬ ಕೋರಿಕೆಯೂ ಇದೆ. ಮತ್ತು ಸರ್ಕಾರದವರು ಭೂವ್ಯವಸಾಯ...ಕ್ಕೆ ಸಂಬಂಧಪಟ್ಟ ವಿಷಯಗಳಲ್ಲಿ ಕೃಷಿಶಾಸ್ತ್ರಾನುಸಾರವಾಗಿ ಕೆಲ...ವು ವಿಮರ್ಶೆಯನ್ನು ಮಾಡಿದ್ದಾರೆ. ಈ ಸಂಘದವರು ಮಾಡತಕ್ಕ ...ಕೆಲಸವೇನೆಂದರೆ:—ತಮ್ಮ ಹುಡುಗರನ್ನು ಸ್ಕೂಲಿಗೆ ಕಳುಹಿಸುವದು, ವ್ಯವಸಾಯ ಮಾಡತಕ್ಕ ಜನಗಳಿಗೆ ನಮ್ಮ ಕೃಷಿಶಾಸ್ತ್ರಜ್ಞರಾದ ಅಧಿಕಾರಿಗಳು ಮತ್ತು ಇತರ ರಾಜ್ಯದ ಅಧಿಕಾರಿಗಳು ಶ್ರಮಪಟ್ಟು ಕಂಡುಹಿಡಿದಿರುವ ವ್ಯವಸಾಯ ರೀತಿಗಳನ್ನು ತಿಳಿದುಕೊಂಡು ಅದರಂತೆ ಪ್ರವರ್ತಿಸುವ ಹಾಗೆ ಮಾಡತಕ್ಕದ್ದು, ಮತ್ತು ನಮ್ಮ ಅಧಿಕಾರಿಗಳು ಮಾಡುವ ಕೃಷಿಶಾಸ್ತ್ರವಿಮರ್ಶೆಯಲ್ಲಿ ತಾವೂ ಸಹಕಾರಿಗಳಾಗಿರತಕ್ಕದ್ದು. ಇವರು ವಹಿಸತಕ್ಕಭಾಗವಾಗಿರುತ್ತೆ. ನಿಮ್ಮ ಪ್ರಮಾಣವನ್ನು ವಿನಿಯೋಗಿಸುವದಕ್ಕೆ ಅವಕಾಶಗಳು ಅನೇಕವಾಗಿ ನಿಮ್ಮ ಹತ್ತಿರದಲ್ಲಿಯೇ ಇರುತ್ತವೆ. ನಿಮ್ಮ ಸಮಾಜದವರು ಬರೀಮಾತಿನವರಲ್ಲವೆಂತಲೂ ಕಾರ್ಯಾನುವರ್ತಿಗಳೆಂತಲೂ ಇದುವರೆಗೆ ಪ್ರಸಿದ್ಧವಾಗಿರುತ್ತೆ. ಈ ಪುರಾತನ ಖ್ಯಾತಿಯನ್ನು ಕಾಪಾಡಿಕೊಂಡು ಶ್ರಮಪಟ್ಟು ಕೆಲಸ ಮಾಡುತ್ತಾ ಬರೀ ಮೋಕಾಟುವ ಯಂತ್ರದಂತಾಗಲಿ, ಸ್ವಕಾರ್ಯ ಪ್ರಕಟನೆಯಲ್ಲಿ ಆಸಕ್ತರಂತಾಗಲಿ ಈ ಸಂಘದವರು ಇರಲಾರರೆಂದು ನಂಬುತ್ತೇವೆ. ಸಂಘದವರು ತಮ್ಮ ತಮ್ಮ ಕೆಲಸದಲ್ಲಿಯೇ ಆಸಕ್ತರಾಗಿರುವ ವರೆಗೂ ತಮ್ಮ ಸಮಾಜದವರ ಪ್ರಯೋಜನಕ್ಕಾಗಿ ಯಾವ ವಿಷ ವಿಷಯಗಳಲ್ಲಿ ನಮಗೆ ವಿಜ್ಞಾಪನೆ ಮಾಡಿಕೊಳ್ಳಬೇಕಾದರೂ, ಅಂಥಾವುಗಳನ್ನು ನಾವು ಆದರದಿಂದ ಕೇಳುತ್ತೇವೆ. ಸರ್ಕಾರದವರು ಈ ವಿಷಯದಲ್ಲಿ ಯುಕ್ತವಾದ ಮತ್ತು ಶಕ್ಯವಾದ ಸಹಾಯವನ್ನು ಮಾಡುವರೆಂದು ದೃಢವಾಗಿ ಹೇಳುತ್ತೇವೆ.

ರಾಜ್ಯದ ಸಮೃದ್ಧಸ್ಥಿತಿಗೆ ಭೂವ್ಯವಸಾಯ ಮಾಡತಕ್ಕ ಜನಗಳೇ ಮೂಲಾಧಾರವಾಗಿರುತ್ತಾರೆ. ದೈವೀಕವಾಗಿ ಬರುವ ಕಷ್ಟಕಾಲಗಳಲ್ಲಿಯೂ ಅವರುಗಳೇ ಮುಖ್ಯವಾಗಿ ಶ್ರಮಪಡತಕ್ಕವರಾಗಿರುವರು. ಅವರ ಕ್ಷೇಮಾಭ್ಯುದಯೋತ್ಕರ್ಷಕ್ಕಾಗಿ ನಡೆಯತಕ್ಕ ಪ್ರಯತ್ನಗಳೆಲ್ಲವೂ ನಮ್ಮ ಅತ್ಯಂತ ಉತ್ಸಾಹ ಪೂರ್ವಕವಾದ ಪೋಷಣೆಗೆ ಪಾತ್ರರಾಗಿರುವವು. ಇಂಥಾ ಪ್ರಯತ್ನಗಳನ್ನು ನಡೆಸಬೇಕೆಂಬುದೇ ಈ ಸಂಘದ ಆಶಯವೆಂದು ನಾವು ನಂಬಿ ಈ ಸಂಘದವರಿಗೆ ಉತ್ತರೋತ್ತರದಲ್ಲಿ ಶ್ರೇಯೋಭಿವೃದ್ಧಿ ಉಂಟಾಗಲೆಂದು ಕೋರುತ್ತೇವೆ

ಅನಂತರ ದಿವಾನರವರು ಸಭೆಯ ಮೂಲಧನಕ್ಕೆ ಇದುವರೆಗೆ ದೊಡ್ಡ ಮನುಷ್ಯರಿಂದ ಕೊಡಲ್ಪಟ್ಟಿರುವ ಚಂದಾ ಹಣಗಳನ್ನು ಓದಿ ಶ್ರೀಮನ್ಮಹಾರಾಜರವರಿಗೆ ಅರಿಕೆ ಮಾಡಿದರು. ಇದರಿಂದ ಈ ಸಭೆಯ ಫಂಡಿಗೆ ಸುಮಾರು ೧೮,೦೦೦ ರೂಪಾಯಿ ಕೂಡಿದೆ ಎಂತಲೂ, ೩,೦೦೦ ರೂಪಾಯಿನ ವರೆಗೆ ಕೊಡುವುದಾಗಿ ಮಹನೀಯರು ವಾಗ್ದಾನ ಮಾಡಿದಾರೆಂತಲೂ ತಿಳಿದು ಬಂದಿದೆ.

ಶ್ರೀಮನ್ಮಹಾರಾಜರವರಿಗೆ ಹಾರ ತುರಾಯಿ ಅತ್ತರ್ ಪಾನಸು ಪಾರಿಗಳನ್ನು ಒಪ್ಪಿಸಿದರು. ತರುವಾಯ ಯೂರೋಪಿಯನ್ ಸರ್ದಾರರಿಗೂ ಇತರ ಸಭಾಸದರಿಗೂ ಹೂವಿನ ಹಾರ ಹಾಕಿ ಎಲೆ ಅಡಿಕೆ ಕೊಟ್ಟು ಸಭೆಯನ್ನು ಬರಖಾಸ್ತು ಮಾಡಿದರು.

ಎರಡನೇ ದಿನದ ಸಭೆಯು.

ಮಾರುದಿನ ಅಂದರೆ ಶುಕ್ರವಾರ ಮಧ್ಯಾಹ್ನ ಸುಮಾರು ೩ ಗಂಟೆಗೆ ಮಹಾಸಭೆಯು ಪ್ರಾರಂಭವಾಯಿತು. ಜನರಲ್ ಸೆಕ್ರೆಟರಿ ಮಿ॥ ರಾಮೈಯ್ಯನವರು ದೇವರ ಪ್ರಾರ್ಥನೆ ಮಾಡಿ, ಸಭಾಕಾರ್ಯಗಳು ಶ್ರೇಯಸ್ಕರವಾಗಿಯೂ ಸಾಂಗವಾಗಿಯೂ ನೆರವೇರಿ, ಸಾರ್ಥಕವಾಗಬೇಕೆಂದು ಬೇಡಿಕೊಂಡರು. ಸಭಿಕರ ಏಕಮತ್ಯವಾದ ಅಭಿಪ್ರಾಯಾನುಸಾರವಾಗಿ ಬ್ಯಾರಿಸ್ಟರ್ ಮಿ॥ ಬಿ. ನಾಗಪ್ಪನವರು ಸಭಾ ಪ್ರೆಸಿಡೆಂಟರ ಸ್ಥಾನವನ್ನು ವಹಿಸಿಕೊಂಡರು. ರಿಸೆಪ್ಷನ್ ಕಮಿಟಿಯ ಛೇರ್ಮನ್ನರಾದ ಮಿ॥ ಮರಿಯಣ್ಣನವರು ಉಪನ್ಯಾಸಮಾಡಿ, ರಾಜಧಾನಿಯಲ್ಲಿ ಪ್ಲೇಗ್ ಉಪದ್ರವಿರುವದರಿಂದ ಬಹು ಮಂದಿ ಪ್ರತಿನಿಧಿಗಳು ಸಾಧ್ಯವಾಗಲಿಲ್ಲವೆಂತಲೂ, ಆದಾಗ್ಯೂ ಸಕಲರ ಮನಸ್ಸೂ ಈ ಸಂಘದ ಪುರೋಭಿವೃದ್ಧಿಯಲ್ಲೂ ಆ ಸಭಾಕಾರ್ಯಗಳ ಮೇಲೂ ನೆಲಸಿರುತ್ತೆನ್ನುವುದರಲ್ಲಿ ಸಂಶಯವಿಲ್ಲವೆಂತಲೂ ಹೇಳಿದರು. ಮಿ॥ ಕೆ. ಎಚ್. ರಾಮೈಯ್ಯನವರು ಸಂಘದವರು ಕಳೆದ ವರುಷದಲ್ಲಿ ನಡಿಸಿರುವ ಕಾರ್ಯಗಳನ್ನೆಲ್ಲಾ ಬಹು ಸ್ಪಷ್ಟವಾಗಿ ವಿವರಿಸಿ ಒಂದು ರಿಪೋರ್ಟನ್ನು ಓದಿ ಹೇಳಿದರು. ಕಡೆಯಲ್ಲಿ ಪ್ರೆಸಿಡೆಂಟರು ವಿದ್ಯಾಭ್ಯಾಸವು ಬಹು ಆವಶ್ಯವಾದದ್ದೆಂತಲೂ ಸಕಲರೂ ತಮ್ಮ ಮಕ್ಕಳಿಗೆ ವಿದ್ಯೆ ಕಲಿಸುವುದರಲ್ಲಿ ವಿಶೇಷ ಆಸಕ್ತಿಯನ್ನು ತೋರಿಸಬೇಕೆಂತಲೂ ಬಹು ಸ್ವಾರಸ್ಯವಾದ ಉಪನ್ಯಾಸವನ್ನು ಮಾಡಿ, ಆ ದಿನದ ಸಭೆಯನ್ನು ಮುಕ್ತಾಯಕ್ಕೆ ತಂದರು.

ಮೂರನೇ ದಿನದ ಸಭೆಯು.

ಆ ದಿನ ಸಾಯಂಕಾಲ ೪ ಗಂಟೆಯಿಂದ ಸಭೆಯು ಪ್ರಾರಂಭವಾಯಿತು. ಮೈಸೂರಿನ ಮಿ॥ ಪುಟ್ಟಸಂಜಪ್ಪನವರು ಬಹುಸ್ವಾರಸ್ಯವಾದ ಒಂದು ಉಪನ್ಯಾಸವನ್ನು ಮಾಡಿ ಸಕಲರೂ ಸಂತೋಷಪಟ್ಟು ಸಭೆಯ ಫಂಡಿಗೂ ಅದರ ಪುರೋಭಿವೃದ್ಧಿಗೂ ಸಹಾಯ ಮಾಡಬೇಕೆಂದು ಸೂಚಿಸಿದರು. ಸಭಾನಾಯಕರು ಪ್ರಜಾಪ್ರತಿನಿಧಿ ಸಭೆಯಲ್ಲಿ ದಿವಾನರವರು ಓದಿದ ಅಡ್ರೆಸ್ಸನ್ನು ತೆಗೆದು ಅದರಲ್ಲಿ ಅವರು ಒಕ್ಕಲಿಗರ ಸಭೆಯ ವಿಚಾರವಾಗಿ ಬರೆದಿರುವ ವಿಚಾರಗಳನ್ನು ಓದಿ, ಅದಕ್ಕಾಗಿ ಸಂತೋಷಪಟ್ಟು ಸಭಿಕರ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ದಿವಾನರವರಿಗೆ ಸಮರ್ಪಿಸುವುದಾಗಿ ತಿಳಿಸಿದರು.

ಸಭೆಯಲ್ಲಿ ತೀರ್ಮಾನವಾದ ವಿಷಯಗಳು.

(೧) ಮೈಸೂರು ಸಂಸ್ಥಾನದ ಸಿಂಹಾಸನಾರೂಢರಾದ ಶ್ರೀಮನ್ಮಹಾರಾಜ ಶ್ರೀಕೃಷ್ಣರಾಜ ಒಡೆಯರ್ ಬಹದ್ದೂರ್ ಜಿ. ಸಿ. ಎಸ್. ಐ. ಯವರ ದಿವ್ಯಸನ್ನಿಧಾನಗಳಲ್ಲಿ ಈ ಮಹಾಸಭೆಯು ಅಪಾರವಾದ ರಾಜಭಕ್ತಿವಿಶ್ವಾಸಗಳನ್ನು ಅತ್ಯಂತ ನಮ್ರತೆಯಿಂದ ಸಮರ್ಪಿಸತಕ್ಕದ್ದು ಮತ್ತು ಮಹಾಸ್ವಾಮಿಯವರು ಒಕ್ಕಲಿಗರ ಸಂಘದ ಪೋಷಕರಾಗಿ ಒಕ್ಕಲಿಗರೆಲ್ಲರನ್ನೂ ಅನುಗ್ರಹಿಸಿದುದಕ್ಕಾಗಿ ಮಹಾಸ್ವಾಮಿಯವರಿಗೆ ಅವರೆಲ್ಲರೂ ನಿರಂತರದಲ್ಲಿಯೂ ಕೃತಜ್ಞರಾಗಿದ್ದಾರೆಂದು ಸೂಚಿಸತಕ್ಕದ್ದು.

(೨) ಮೈಸೂರು ಪಟ್ಟಣದಲ್ಲಿ ಒಂದು ವಿದ್ಯಾರ್ಥಿನಿಲಯವನ್ನು ೫,೦೦೦ ರೂಪಾಯಿಗೆ ಕಡಿಮೆ ಇಲ್ಲದಂತೆ ಖರ್ಚಿಟ್ಟು ಕಟ್ಟಿಸತಕ್ಕದ್ದು

(೩) ಉಚಿತವಾಗಿಯೂ ಮತ್ತು ಬಲಾತ್ಕಾರದಿಂದಲೂ ಕಲಿಸತಕ್ಕ ಮೂಲವಿದ್ಯಾಭ್ಯಾಸವನ್ನು ಮಾಡಿಸುವುದು ಯುಕ್ತವಾಗಿರುವುದರಿಂದ ಅದರಂತೆ ಮಾಡಿಸಿಕೊಡಬೇಕೆಂದು ಸರ್ಕಾರದವರನ್ನು ಕೇಳಿಕೊಳ್ಳತಕ್ಕದ್ದು.

(೪) ಗ್ರಾಮ ಮತ್ತು ಹೋಬಳಿಗಳಲ್ಲಿ ಹಗಲುವೇಳೆ ಬದುಕು ಮಾಡತಕ್ಕವರ ಉಪಯೋಗಾರ್ಥವಾಗಿ ರಾತ್ರಿ ಸ್ಕೂಲುಗಳನ್ನೂ ಮತ್ತು ಡಿಸ್ಟ್ರಿಕ್ಟುಗಳಲ್ಲಿ ಆಸಬುಕಾಲೆಗಳನ್ನೂ ಏರ್ಪಾಡು ಮಾಡುವಂತೆ ಸರ್ಕಾರದವರನ್ನು ಕೇಳಿಕೊಳ್ಳತಕ್ಕದ್ದು.

(೫) ಸಂಸ್ಥಾನದ ಹೋಬಳಿಗಳಲ್ಲಿ ಸೇವಿಂಗ್ಸ್ ಬ್ಯಾಂಕುಗಳನ್ನು ಸ್ಥಾಪಿಸಿ, ಬಡರೈತರು ಉಳಿಸುವ ದ್ರವ್ಯವನ್ನು ಒಂದುಕಡೆ ಕೂಡಿಡುವುದಕ್ಕೋಸ್ಕರ ಸೌಕರ್ಯವನ್ನು ಒದಗಿಸಿಕೊಡಬೇಕೆಂದು ಸರ್ಕಾರದವರನ್ನು ಕೇಳಿಕೊಳ್ಳತಕ್ಕದ್ದು.

(೬) ಸಮಸ್ತ ಒಕ್ಕಲಿಗರೂ ಶುಭಕಾರ್ಯಗಳಲ್ಲಿ ದ್ರವ್ಯವನ್ನೂ ಸುಗ್ಗಿಕಾಲದಲ್ಲಿ ಧಾನ್ಯವನ್ನೂ ಮುಖ್ಯ ಸಂಘಕ್ಕೆ ಶಕ್ತ್ಯನುಸಾರ ಸಹಾಯ ಮಾಡತಕ್ಕದ್ದು.

(೭) ಬೆಂಗಳೂರಿನ ಮಿ॥ ತಾತಪ್ಪಮೇಸ್ತ್ರಿಗಳೂ ಮತ್ತು ಶಿವಮೊಗ್ಗ ಡಿ॥ ತೀರ್ಥಹಳ್ಳಿ ತಾಲ್ಲೂಕು ನಾಲೂರುಮಾಸಸ್ಥರಾಗಿದ್ದ ಮಿ॥ ಗಿರಿಯಪ್ಪಗೌಡರೂ ಕಾಲವಾದುದರಿಂದ ಒಕ್ಕಲಿಗರ ಸಂಘಕ್ಕೆ ಅನೇಕ ವಿಧವಾಗಿ ಸಹಾಯ ಮಾಡತಕ್ಕವರಾಗಿಯೂ ಸುಗುಣಶಾಲಿಗಳಾಗಿಯೂ ಇದ್ದ ಮಹನೀಯರನ್ನು ಸಂಘವು ಕಳೆದುಕೊಂಡಹಾಗಾಯಿತು. ಇದುದರಿಂದ ಅವರವರ ಕುಟುಂಬದವರಿಗೆ ಮಹಾಸಭೆಯು ಅನುತಾಪವನ್ನು ಸೂಚಿಸತಕ್ಕದ್ದು.

ಮುಂದೆ ಹೇಳುವ ದೊಡ್ಡಮನುಷ್ಯರು ಸಂಘದ ಕಾರ್ಯಗಳಿಗಾಗಿ ಜಮೀನು ಮುಂತಾದವುಗಳನ್ನು ಧರ್ಮ ಮಾಡಿರುತ್ತೇವೆಂದು ಬರೆದು ತಿಳಿಸಿದಾರೆ. ಪಟ್ಟಹುಂಡಿ ಪಟೇಲ್ ಸಿದ್ದೇಗೌಡರು—೧,೦೦೦ ರೂಪಾಯಿನ ಜಮೀನು ಕೊಟ್ಟಿದಿರಾರೆ, ಪಟೇಲ್ ನಂಜಪ್ಪನವರ ಪತ್ನಿ ದೇವಮ್ಮನವರು—೩,೦೦೦ ರೂಪಾಯಿನ ಜಮೀನು; ವರ್ತಕ ಮಾದಪ್ಪನವರು—೧,೫೦೦ ರೂಪಾಯಿನ ಜಮೀನು; ಸಾಹುಕಾರ್ ಗುರುಮೂರ್ತಪ್ಪನವರು—೩,೦೦೦ ರೂಪಾಯಿನ ಜಮೀನು, ಮರಿಸಿದ್ದಯ್ಯನವರು ಮೈಸೂರಿನಲ್ಲಿ ಒಕ್ಕಲಿಗರ ಬಾಲಕರ ವಿದ್ಯಾರ್ಥಿನಿಲಯವನ್ನು ಕಟ್ಟುವುದಕ್ಕೆ ೫೦೦ ರೂಪಾಯಿ ಕ್ರಯವಾಗುವ ಒಂದು ಲಕ್ಷ ಇಟ್ಟಿಗೆಗಳನ್ನು ಕೊಡುವುದಾಗಿ ವಾಗ್ದಾನ ಮಾಡಿದಾರೆ.

ಬೆಂಗಳೂರು ಕಂಟ್ರಾಕ್ಟರ್ ಪುಟ್ಟಸ್ವಾಮಿ ತಯಾರುಮಾಡಿಸಿ ಕೊಟ್ಟ ಸುಮಾರು ೬೦೦ ರೂಪಾಯಿ ಬೆಲೆ ಬಾಳುವ ಬಹು ಸುಂದರವಾದ ರಾಜಯೋಗ್ಯವಾದ ಕುರ್ಚಿಯನ್ನು ಸಂಘದವರು ತಮ್ಮ ಜ್ಞಾಪಕಾರ್ಥವಾಗಿ ಶ್ರೀಮನ್ಮಹಾರಾಜರವರಿಗೆ ಒಪ್ಪಿಸಿರುತ್ತಾರೆ.

ಮಹಾಸಭೆ ನಡೆದ ಮೂರು ದಿನಗಳಲ್ಲೂ ಈ ಸಂಘದ ಫಂಡಿಗೆ ಸುಮಾರು ೦,೦೦೦ ರೂಪಾಯಿ ಚಂದಾ ವಸೂಲಾಗಿದೆ, ಸುಮಾರು ೮,೭೦೦ ರೂಪಾಯಿ ಕೊಡುವುದಾಗಿ ಕಲವರು ವಾಗ್ದಾನ ಮಾಡಿದಾರೆ. ಸುಮಾರು ೯,೦೦೦ ಸಾವಿರ ರೂಪಾಯಿನ ಜಮೀನುಗಳು ದೊರಕಿರುವವು.

ಕಡೆಯಲ್ಲಿ ಕರಿಕಥೆಯನ್ನು ಮಾಡಿಸಿ, ಸಭಿಕರೆಲ್ಲಾ ಕೂಡಿ ಕೇಳಿ, ಶ್ರೀಮನ್ಮಹಾರಾಜರವರ ಹೆಸರನ್ನೆತ್ತಿ ಜಯಘೋಷ ಮಾಡಿ ಸಭೆಯನ್ನು ಬರಖಾಸ್ತು ಮಾಡಿದರು.

ಈ ಸಂಘವು ಸ್ಥಾಪನೆಯಾಗುವುದಕ್ಕೆ ಮೂಲಕಾರಣವಾದ ದೊಡ್ಡ ಮನುಷ್ಯರ್ಯಾರೆಂದರೆ.—ಮಿ॥ ಗಳಾದ ಟಿ. ಬಯ್ಯಣ್ಣನವರು, ಬ್ಯಾರಿಸ್ಟರ್ ಬಿ. ನಾಗಪ್ಪನವರು, ಎಂ. ಎಲ್. ಕ್ಯಾಮಗೌಡರು, ಕೆಂಪಣ್ಣನವರು, ಎಂ. ಸುಬ್ಬಯ್ಯನವರು, ಅಮಲ್ದಾರ್ ಬಿ. ಎಸ್. ಚನ್ನಿಗಪ್ಪನವರು, ಕೆ. ಎಚ್. ರಾಮೈಯ್ಯನವರು.

ಕಳೆದ ವಾರ ಈ ಮಹಾಸಭೆಯ ಪ್ರೆಸಿಡೆಂಟರಾದ ಮಿ॥ ಬಿ. ನಾಗಪ್ಪನವರಿಗೆ ಮೈಸೂರು ಸಂಘದ ಮೆಂಬರುಗಳು ಭಾರಿ ಔತನವನ್ನು ಮಾಡಿದರೆಂದು ತಿಳಿದುಬಂದಿದೆ.

ಪ್ರಕಟನೆಗಳು.

ಬಹುಮಾನ.

112-2

2½ ಆಣೆ ಸ್ಟಾಂಪನ್ನು ಕಳುಹಿಸಿಕೊಟ್ಟಲ್ಲಿ 4 ಫಾರಂವುಳ್ಳ ಶ್ರೀ ಮುಚ್ಚಂಕರರಿಂದ ರಚಿಸಿದ ಕನ್ನಡ ಠೀಕಾ ದೋಡನೆ ಕೂಡಿದ "ಪ್ರಶ್ನೋತ್ತರ ರತ್ನಮಾಲಿಕೆ" ಒಂದನ್ನೂ, 8×10 ರ ಸೈಜಿನ ಕೆಂಪು ಬಾರ್ಡರಿಂದ ಕೂಡಿದ ಶ್ರೀಮನ್ಮಹಾರಾಜರವರ ಫೋಟೋ ಆಗಲಿ, 6×8 ಸೈಜಿನ ಕಿರೀಟವನ್ನು ಧರಿಸಿಕೊಂಡಿರುವ ಈಗಿನ ಶೃಂಗೇರಿ ಸ್ವಾಮಿಗಳ ಫೋಟೋವನ್ನಾಗಲಿ ಉಚಿತವಾಗಿ ಕೊಡಲ್ಪಡುವದು. ಹೆಸರು ವಿಳಾಸ ಸ್ಪಷ್ಟವಾಗಿರಬೇಕು. ಸ್ವಲ್ಪ ಪ್ರತಿಗಳು ಮಾತ್ರ ಇದೆ.

ವಿಳಾಸ.—ವೈ. ನಾಗಪ್ಪ, ಶಾಪ್ ಕೀಪರ್, ಕೋಟೆ, ಮೈಸೂರು.

ಕೊಂಚ ಗಮನಿಸಿ.

116 2

ಚಿತ್ರದುರ್ಗದ ಶ್ರೀಮನ್ನಿರಂಜನ ಜಗದ್ಗುರು ಮುರುಘರಾಜೇಂದ್ರ ಸ್ವಾಮಿಗಳ ಛಾಯಾಚಿತ್ರವು ೧ ಆಣೆ ಸ್ಟಾಂಪು ಕಳುಹಿಸಿಕೊಟ್ಟಲ್ಲಿ ೬×೮ ಸೈಜಿನದೂ ೫ ಆಣೆ ಸ್ಟಾಂಪು ಕಳುಹಿಸಿಕೊಟ್ಟಲ್ಲಿ ೮×೧೦ ಸೈಜಿನದೂ ರವಾನಿಸಲ್ಪಡುತ್ತೆ. ಒಟ್ಟಾಗಿ ತರಿಸಿಕೊಂಡರೆ ೮ಕ್ಕೆ ೧. ೨೦ಕ್ಕೆ ೩. ೫೦ಕ್ಕೆ ೭, ೧೦೦ಕ್ಕೆ ೨೦ ರಂತೆ ಕಮಿಷನ್ ದೊರೆಯುತ್ತೆ.

ವಿಳಾಸ—ವಿ. ಪಿ. ಪುಟ್ಟಣ್ಣ, ಫ್ಯಾನ್ಸಿಬಜಾರ್, ಕೋಟೆ, ಮೈಸೂರು.

ಕಾಯಿಲೆ ಅನುಭವಿಸುವಂಥಾ ಹೆಂಗಸರೆಲ್ಲಾ ಪೆರೂನಾವನ್ನು ಸೇವಿಸಿ ಗುಣಹೊಂದಲಿ.

ಮಿಸೆಸ್. ಜಿ. ಸಿ. ವೊರ್ಸ್ಟೆಲ್, ೧೧೧ ನಂ ರಸ್ತೆ, ಬ್ರೂಕ್ಲಿನ್, ನ್ಯೂ ಯಾರ್ಕ್, ಈಕೆ ಬರೆಯುವುದು: "ನನ್ನ ಹೆಸರನ್ನು ಪ್ರಸಿದ್ಧಪಡಿಸುವುದಕ್ಕೆ ನಾನು ಅಪೇಕ್ಷೆ ಪಡುವದಿಲ್ಲ. ಈ ನನ್ನ ಹೇಳಿಕೆಯಿಂದ ಅನೇಕ ಕಾಯಿಲೆಯವರು ಅನುಭವಿಸುವ ... ರೋಗ ಪರಿಹಾರವಾಗುವದಕ್ಕೆ ನನ್ನ ಅನುಭವವನ್ನು ತಿಳಿದುಕೊಂಡರೆ ... ಪೆರೂನಾ ಉಪಯೋಗಿಸಿದ್ದರಿಂದ ನನಗೆ ಬಹಳ ಸಹಾಯವಾಗಿದೆ ಎಂದು ನಿಜವಾಗಿ ಹೇಳಬಲ್ಲೆನು. ... ಈಗ ನನ್ನ ದೇಹಸ್ಥಿತಿ ಎಷ್ಟೋ ಉತ್ತಮವಾಗಿದೆ. ... ಇದೇ ಸರ್ವೋತ್ತಮವಾದ ಔಷಧವು. ವೈದ್ಯರು ಹೇಳಿದ ಔಷಧಗಳನ್ನು ಸೇವಿಸಿದರೂ ನನಗೆ ಪ್ರಯೋಜನವಾಗಲಿಲ್ಲ. ಆದರೆ ಪೆರೂನಾ ಸೇವಿಸುವದನ್ನು ಪ್ರಾರಂಭಿಸಿದಾಗ ಒಂದು ಬಾಟ್ಲಿ ಮುಗಿಯುವದರೊಳಗೇನೇ ನನಗೆ ಅದರ ಗುಣ ಕಂಡುಬಂತು."

MISS NETTIE E. BOGARDUS

MRS. GEO. C. WORSTELL

MRS. O.D. ROBINSON

ನೆಗಡಿಯಿಂದ ರೋಗ ಬೆಳೆಯುವದು.

ಮಿಸೆಸ್. ಎಸ್. ಪಿ. ಲಾಲರ್ ೪೦೩ ಎಸ್. ಬ್ರಾಡ್ವೆ, ಪಿಟ್ಸ್ ಬರ್ಗ್, ಕಾನ್, ಈಕೆ ಬರೆಯುವುದು:

"ನೆಗಡಿ ಪರಿಹಾರಕ್ಕೆ ಪೆರೂನಾ ರಾಜಮದ್ದು. ಹೋದ ವರುಷ ನನಗೆ ಕಠಿಣವಾದ ಶೀತ ಹಿಡಿದು, ಬಹಳ ವೇದನೆ ಪಡಿಸಿತು. ನನಗೆ ನಿಶ್ಶಕ್ತಿಯುಂಟಾಗಿ ವಾಂತಿಗೆ ಬರುವಹಾಗಾಗಿ ನಿದ್ದೆ ಬಾರದೆ ಆಹಾರ ಸೇರದೆ ತುಂಬಾ ಕಷ್ಟಪಟ್ಟೆನು.

"ಅದೇ ರೋಗಕ್ಕೆ ಪೆರೂನಾ ಸೇವಿಸಿದ್ದಂಥಾ ಒಬ್ಬ ಸ್ನೇಹಿತನು ನನಗೆ ಅದನ್ನು ಸೇವಿಸುವಂತೆ ಹೇಳಿದನು. ಕೂಡಲೇ ನಾನು ಆ ರೀತಿ ಮಾಡಿದೆನು. ಅಪರೆ ಅದನ್ನು ತೆಗೆದುಕೊಳ್ಳುವುದಕ್ಕೆ ಆರಂಭಿಸಿದ ಕೂಡಲೇ ಅದು ನನಗೆ ಆಶ್ಚರ್ಯಕರವಾಗಿ ಗುಣ ಕೊಡುತ್ತಾ ಬಂತು.

"ಮೂರು ದಿನಗಳಲ್ಲಿ ನನಗೆ ಗುಣವಾಯಿತು. ಒಂದು ವಾರದೊಳಗಾಗಿ ಯಥಾಪ್ರಕಾರ ನಾನು ಸ್ವಸ್ಥವಾದೆನು. ಆದರೂ ಶೀಸೆ ಬರಿದಾಗುವ ತನಕ ಔಷಧವನ್ನು ಬಿಡಲಿಲ್ಲ. ಎರಡು ವಾರಗಳಲ್ಲಿ ನನ್ನ ದೇಹಸ್ಥಿತಿಯು ಪುಷ್ಟಿಯಾಯಿತು. ಪೆರೂನಾ ಅದ್ಭುತವಾದ ಔಷಧವೇ ಸರಿ.

ಕರುಳುಗಳಲ್ಲಿ ಅಕ್ರಮ.

ಮಿಸೆಸ್. ಮಾಗ್ಗೀ ಡರ್ಬಿನ್, ೧೩೩೨ ಉತ್ತರ ಬೀದಿ, ಲಿಟಲ್‌ರಾಕ್, ಆರ್ಕ್, ಈಕೆ ಬರೆಯುವುದು:

"ನಾನು ಐದು ವರುಷ ಕಾಲ ಕೆಟ್ಟ ಬಾಧೆಯನ್ನು ಅನುಭವಿಸಿದೆನು. ಕಂಡು ಕೇಳಿದ ಔಷಧವನ್ನೆಲ್ಲಾ ಮಾಡಿದೆನು. ಯಾವುದರಿಂದಲೂ ನನಗೆ ಪರಿಹಾರವಾಗಲಿಲ್ಲ. ಕೆಲವು ಡಾಕ್ಟರುಗಳು ನನಗೆ ಕರುಳುಗಳ ಅಕ್ರಮ ಎಂಬ ರೋಗವೆಂದರು; ಕೆಲವರು ಕರುಳುಗಳ ಕ್ಷಯವೆಂದರು. ಒಬ್ಬ ವೈದ್ಯನು ನನ್ನ ರೋಗವನ್ನು ವಾಸಿಮಾಡುತ್ತೇನೆಂದು ಹೇಳಿದ್ದರ ಮೇಲೆ ನಾನು ಎರಡು ತಿಂಗಳು ಅವನ ಔಷಧ ಸೇವಿಸಿದಾಗ್ಯೂ ನನಗೆ ಸ್ವಲ್ಪವೂ ಗುಣ ತೋರಲಿಲ್ಲ.

"ಪೆರೂನಾ ಉಪಯೋಗಿಸಿ ನೋಡು ಎಂದು ಒಬ್ಬ ಸ್ನೇಹಿತಳು ಹೇಳಿದ್ದರ ಮೇಲೆ ನಾನು ಅದನ್ನು ಸೇವಿಸುತ್ತಾ ಬಂದೆನು. ನಾನು ಎರಡು ಬಾಟ್ಲಿಯಷ್ಟು ಸೇವಿಸಿದ ಮೇಲೆ ಅದರಿಂದ ನನಗೆ ಗುಣ ಕಾಣುತ್ತಾ ಬಂತು. ಅದರ ಮೇಲೆ ಬಿಡದೆ ನಾನು ಅದನ್ನೇ ಸೇವಿಸುತ್ತಾ ಬಂದೆನು. ನನ್ನ ರೋಗವು ನಿವಾರಣೆಯಾಯಿತು. ನನ್ನ ದೇಹವು ಗಟ್ಟಿಯಾಯಿತು.

"ಅಪೇಕ್ಷೆಯುಳ್ಳವರು ನನಗೆ ಬರೆದು ಕೇಳಿದಲ್ಲಿ ಪೆರೂನಾದಿಂದ ನನಗುಂಟಾದ ಪ್ರಯೋಜನವನ್ನೆಲ್ಲಾ ನಾನು ವಿವರಿಸಿ ತಿಳಿಸಬಲ್ಲೆನು."

ಪಕ್ಕಗಳಲ್ಲಿ ಬಾಧೆಯಾಗುವುದು.

ಮಿಸೆಸ್. ಜೂಲಿಯಾ ಬ್ರಾಕ್‌ಸ್ಟನ್, ಅಪ್ಪೋಲೊ, ಪಾ., ಬರೆಯುವುದು:

"ಪೆರೂನಾ ಸೇವಿಸಿದ್ದರಿಂದ ನನ್ನ ಹೃದಯದ ಮತ್ತು ಪಕ್ಕಗಳ ನೋವುಗಳು ವಾಸಿಯಾಗಿವೆ.

"ಒಂದು ವರುಷದ ಹಿಂದೆ ನಾನು ಯಾವಾಗ ಸಾಯುವೆನೋ ಎಂಬ ಸ್ಥಿತಿಯಲ್ಲಿದ್ದೆನು. ಕೆಲವು ವೇಳೆ ರಾತ್ರಿ ೨ ಗಂಟೆ ಸಮಯದಲ್ಲಿ ಡಾಕ್ಟರು ಬರಬೇಕಾಯಿತು. ಆದರೆ ಈಗ ಡಾಕ್ಟರನ್ನು ಕರೆಸಬೇಕಾದ ಅಗತ್ಯವೇ ಇಲ್ಲವೆಂದು ನಾನು ಸಂತೋಷದಿಂದ ಹೇಳುತ್ತೇನೆ.

"ನೀವು ಹೇಳಿದಂತೆ ನಾನು ಪೆರೂನಾವನ್ನು ಉಪಯೋಗಿಸಿದ್ದರಿಂದ ನಾನು ಆರೋಗ್ಯವಾಗಿದ್ದೇನೆ. ಮತ್ತು ನನ್ನ ಮನೆ ಕೆಲಸಗಳನ್ನೆಲ್ಲಾ ಮಾಡಿಕೊಳ್ಳಬಲ್ಲೆನು.

"ನನಗೆ ಪೆರೂನಾದಲ್ಲಿರುವಷ್ಟು ನಂಬಿಕೆ ಪ್ರಪಂಚದಲ್ಲಿ ಇನ್ಯಾವುದರ ಮೇಲೂ ಇಲ್ಲ. ಯಾಕಂದರೆ ಅದು ನನ್ನ ರೋಗವನ್ನು ವಾಸಿಮಾಡಿದೆ ಇತರ ರೋಗಿಗಳನ್ನೂ ಅದು ಗುಣಮಾಡಿಸಿತ್ತೆಂದು ನಾನು ತಿಳಿದಿದ್ದೇನೆ.

"ಪೆರೂನಾದಿಂದ ನನಗೆ ಆಗಿರುವ ಉಪಕಾರವನ್ನು ಇಷ್ಟೆಂದು ಹೇಳಲಾರೆನು. ಅದರ ಗುಣವನ್ನು ಎಷ್ಟು ಹೊಗಳಿದರೂ ಸ್ವಲ್ಪವೇ ಆಗಿದೆ."

ಅನ್ನಕೋಶದಲ್ಲಿ ಬಾಧೆಯು.

ಮಿಸ್ ಅನ್ನಾ ಕಾಸ್ಟರ್, ಕ್ವೀಟ, ಇಲ್ ಬರೆಯುವುದು:

"ನಿಮ್ಮ ಪೆರೂನಾದಿಂದ ನನಗೆ ಬಹಳ ಗುಣಕೊಟ್ಟಿದೆ. ಈಗ ನಾನು ಆರೋಗ್ಯವಾಗಿದ್ದೇನೆ ನನ್ನ ಅನ್ನಕೋಶದ ಬಾಧೆಯೆಲ್ಲಾ ನಿವಾರಣೆಯಾಗಿದೆ."

ಅಂಗಾಂಗಗಳಲ್ಲೆಲ್ಲಾ ಬಾಧೆಯು.

ಮಿಸೆಸ್. ಪಾಫರ್, ೪೯೨೦ ಪ್ರಿನ್ಸ್‌ಟನ್ ಅವ್, ಸೆಂಟ್ ಲೂಯಿಸ್, ಮೋ., ಬರೆಯುವುದು:

"ಪೆರೂನಾ ಸೇವಿಸುವುದಕ್ಕೆ ಮೊದಲು ನನ್ನ ದೇಹಸ್ಥಿತಿಯು ಬಹಳ ಕೆಟ್ಟುಹೋಗಿತ್ತು. ನನ್ನ ದೇಹದ ಅಂಗಾಂಗಗಳೆಲ್ಲಾ ಶೀತದಿಂದ ಬಾಧೆಯಾಗುತ್ತಿತ್ತು. ದೇವರ ದಯೆಯಿಂದ ನಿಮ್ಮ ಔಷಧವು ನನ್ನನ್ನು ಆರೋಗ್ಯಸ್ಥಿತಿಗೆ ತಂದಿರುತ್ತದೆ. ನನಗೆ ಅನ್ಯಾವ ಔಷಧದ ಮೇಲೂ ಅಭಿಲಾಷೆ ಇಲ್ಲ."

ಮಿಸ್ ನೆಟ್ಟಿ ಇ. ಬೋಗಾರ್ಡಸ್, ಆರ್. ಎಫ್. ಡಿ ೨೧, ವೆಸ್ಟ್‌ಫೀಲ್ಡ್, ಎನ್. ವೈ ಬರೆಯುವುದು.

"ನನಗೆ ಬಹುಕಾಲ ವಾಂತಿಯಾಗುತ್ತಲೂ ತುಂಬಾ ತಲೆನೋಯುತ್ತಲೂ ಇತ್ತು. ಆದುದರಿಂದ ನಾನು ಬಹಳ ಅನುಭವಿಸಿರುತ್ತೇನೆ. ಆದರೆ ಈಗ ಆ ಬಾಧೆಯೆಲ್ಲಾ ಸಂಪೂರ್ಣವಾಗಿ ನಿವಾರಣೆಯಾಗಿದೆ. ಕಳೆದ ವರುಷಗಳಿಂದ ನಾನು ಅನುಭವಿಸಿದ ರೋಗವೆಲ್ಲಾ ನಿವಾರಣೆಯಾಗಿ ಈಗ ಆರೋಗ್ಯವಾಗಿದ್ದೇನೆ. ರೋಗವನ್ನನುಭವಿಸುವವರೆಲ್ಲಾ ಪೆರೂನಾವನ್ನು ಮನಾಲಿನನ್ನು ಸೇವಿಸುವಂತೆ ಪ್ರಾರ್ಥಿಸುತ್ತೇನೆ. ಡಾಕ್ಟರ್ ಹಾರ್ಟ್‌ಮನ್‌ರವರನ್ನು ಅವರ ಆ ಅದ್ಭುತ ಔಷಧವನ್ನು ಆಶೀರ್ವಾದ ಮಾಡಲಿ ಎಂಬುದೇ ನನ್ನ ಕೋರಿಕೆಯಾಗಿದೆ."

ಹೊಟ್ಟೆಯೊಳಗಣ ಶೀತವು.

ಮಿಸ್, ಜೂಲಿಯಾ ಬಟ್ಲರ್, ಆರ್. ಆರ್. ೩. ಆಬರ್ನ್, ಮಿಚ್, ಬರೆಯುವುದು:

"ಆರು ವರುಷಗಳ ವರೆಗೆ ನನಗೆ ಹೊಟ್ಟೆಯೊಳಗಣ ಶೀತವು ತುಂಬಾ ಬಾಧೆಪಡಿಸುತ್ತಿತ್ತು. ಅದರಿಂದ ನನಗೆ ನಿದ್ದೆ ತಪ್ಪಿಹೋಗಿತ್ತು. ಆಹಾರ ರುಚಿಸುತ್ತಿರಲಿಲ್ಲ. ಮತ್ತು ಊಟವಾದ ಮೇಲೆ ಹೊಟ್ಟೆಯೊಳಗೆ ಬಹಳ ನೋವು ಉಂಟಾಗುತ್ತಿತ್ತು.

"ನನ್ನ ಸಹೋದರಿಯು ನನಗೆ ಪೆರೂನಾ ಸೇವಿಸುವಂತೆ ಹೇಳಿದಳು."

"ನಿಮ್ಮ ಔಷಧವನ್ನು ತೆಗೆದುಕೊಳ್ಳುತ್ತಾ ಬಂದೆನು. ಬೇಗ ಆಹಾರದಲ್ಲಿ ರುಚಿಯುಂಟಾಯಿತು."

"ನನಗೆ ಶಕ್ತಿಯುಂಟಾಯಿತು, ಮಾಂಸಖಂಡಗಳು ಬೆಳೆದವು, ಈಗ ಸಂಪೂರ್ಣ ಸೌಖ್ಯವನ್ನು ಪಡೆದಿರುತ್ತೇನೆ."

"ನಿಮ್ಮ ಔಷಧವು ನನಗೆ ತುಂಬಾ ಪ್ರಯೋಜನವನ್ನುಂಟುಮಾಡಿದೆ. ಆದಕಾರಣ ನಿಮ್ಮನ್ನು ಬಹಳ ವಂದಿಸುತ್ತೇನೆ."

ಮಿಸೆಸ್. ಓ. ಡಿ ರಾಬಿನ್ಸನ್, ೪೩ ಸೆಂಟ್ ಫೇಲಿಕ್ಸ್ ಬೀದಿ, ಬ್ರೂಕ್ಲಿನ್, ಎನ್. ವೈ, ಬರೆಯುವುದು:

"ನಾನು ಪೆರೂನಾವನ್ನು ಸೇವಿಸಿದ್ದೇನೆ. ಹೆಸರುವಾಸಿಯಾದ ವೈದ್ಯರು ಎರಡು ವರುಷದ ತನಕ ಹೇಳಿದ ಔಷಧಗಳನ್ನು ತೆಗೆದುಕೊಂಡಾಗ್ಯೂ ನನಗೆ ಪ್ರಯೋಜನವಾಗದೆ ಇದ್ದು, ನಿಮ್ಮ ಔಷಧವೇ ಫಲದಾಯಕವಾಯಿತು. ಈಗ ನಾನು ಆರೋಗ್ಯಭಾಗ್ಯವನ್ನು ಪಡೆದಿರುತ್ತೇನೆ. ಈಗ ನನ್ನ ಕೈಕಾಲುಗಳು ಊದುವುದು ನಿಂತುಹೋಗಿದೆ. ಹೊಟ್ಟೆಯುಬ್ಬರ ತಪ್ಪಿದೆ. ದೀರ್ಘವಾಗಿ ಉಸಿರು ತೆಗೆದುಕೊಳ್ಳುತ್ತೇನೆ. ಕೈಕಾಲುಗಳ ಕೀಲುಗಳ ಊದೂ ನೋವೂ ಈಗ ಬರುವುದೇ ಇಲ್ಲ. ನಿಮ್ಮ ಔಷಧದಿಂದ ನನಗೆ ಎಷ್ಟು ಮಟ್ಟಿಗೆ ಪ್ರಯೋಜನವಾಗಿದೆ ಎಂಬುದು ನಿಮಗೆ ತಿಳಿಯದು. ಅದು ಖಂಡಿತವಾಗಿ ನನ್ನ ಆಯುಸ್ಸನ್ನು ಹೆಚ್ಚು ಮಾಡಿದೆ. ಅದರಿಂದ ನಾನು ನೂತನವಾದ ಸ್ತ್ರೀಯಾಗಿರುವೆನು.

"ಓ ಡಾಕ್ಟರೇ, ನಿಮ್ಮ ಕರುಣೆಯಿಂದ ನನಗೆ ದೊಡ್ಡ ಆಶೀರ್ವಾದ ದೊರಕಿರುತ್ತದೆ. ನೀವು ಹೇಳಿದ ಔಷಧದಿಂದ ನನಗೆ ಅಪಾರವಾದ ಸುಖ ಲಭ್ಯವಾಗಿದೆ. ನಿಮ್ಮ ಔಷಧಿ ಸೇವಿಸಿದ ದಾರಭ್ಯ ನಾನು ಕೆಲಸಕಾರ್ಯಗಳನ್ನು ಮಾಡಬಲ್ಲೆನು. ಆದರೆ ಮೊದಲು ನಾನು ನನ್ನ ಕೆಲಸವನ್ನೇ ಮಾಡಿಕೊಳ್ಳಲಾರದಂತೆ ದುರ್ಬಲಳಾಗಿದ್ದೆನು. ಡಾಕ್ಟರ್ ಹಾರ್ಟ್‌ಮನ್‌ರವರಿಗೂ ಅವರ ಔಷಧಕ್ಕೂ ಅನೇಕ ವಂದನೆಗಳನ್ನು ಸಮರ್ಪಿಸುತ್ತೇನೆ."

ವಿಳಾಸ:—ಈ ಔಷಧ ಸಿಕ್ಕುವ ಸ್ಥಳಗಳು:—

(೧) ಹಿಗ್‌ಬಾಥ್ ಅಂಡ್ ಸನ್ಸ್, ಬೆಂಗಳೂರು.

(೨) ಇಂಗ್ಲಿಷ್ ಡ್ರಗ್ ಕಂಪನಿ, ೩೯೪ ಮಿಂಟ್ ಬೀದಿ, ಮದರಾಸ್.

38-29

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

೨೭-೯-೧೯೦೭ ರಿಂದ ೩-೧೦-೧೯೦೭ ರ ವರೆಗೆ

ಸ್ಥಳ.	ಪ್ಲೇಗ್ ತಗಲಿದ್ದು.	ಪ್ಲೇಗ್ ಸತ್ತದ್ದು.	ಕಾಲರಾ ತಗಲಿದ್ದು.	ಕಾಲರಾ ಸತ್ತದ್ದು.
ಬೆಂಗಳೂರು ಪಟ್ಟಣ	54	38	0	[illegible]
ಮೈಸೂರು ,,	108	82	9	[illegible]
ಬೆಂಗಳೂರು ಡಿಸ್ಟ್ರಿಕ್ಟು	236	118	0	[illegible]
ಮೈಸೂರು ,,	138	97	0	[illegible]
ಕೋಲಾರ್ ,,	38	11	0	0
ಕೋಲಾರ್ ಚಿನ್ನದ ಗಣಿಗಳು	16	8	0	0
ತುಮಕೂರು ಡಿಸ್ಟ್ರಿಕ್ಟು	19	13	0	0
ಹಾಸನ ,,	28	19	0	[illegible]
ಚಿತ್ರದುರ್ಗ ,,	8	3	0	0
ಕಡೂರ್ ,,	49	39	0	0
ಶಿವಮೊಗ್ಗ ,,	0	0	0	0
ಜುಮ್ಲಾ.	693	488	0	0

ಶಾಲಿವಾಹನ ಶಕ ವರುಷಗಳು ೧೮೨೯ನೇ ಪ್ಲವಂಗನಾಮ ಸಂವತ್ಸರದ ಆಶ್ವೀಜ ಬಹುಳ ತದಿಗೆ ಗುರುವಾರದಿಂದ ಆಶ್ವೀಜ ಬಹುಳ ನೌಮಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ.

೧೯೦೭ ನೇ ಇಸವಿ ಅಕ್ಟೋಬರ್.

ತಾ.	ವಾರ.		ತಿಥಿ.	ಘಳಿಗೆ.	ನಕ್ಷತ್ರ.	ಘಳಿಗೆ.	ಶುದ್ಧ ದಿನ
24	ಗುರು	*	ತದಿಗೆ	20-48	ಕೃ	6 30	8
25	ಶುಕ್ರ		ಚೌತಿ	33-50	ರ	10-38	9
26	ಶನಿವಾ	‡	ಪಂಚಮಿ	27-56	ಮೃ	15-49	10
27	ರವಿವಾ		ಷಷ್ಠಿ	32-32	ಆ	21-50	11
28	ಚಂದ್ರ		ಸಪ್ತಮಿ	37-50	ಪು	28-8	12
29	ಕುಜ		ಅಷ್ಟಮಿ	42-32	ಪು	34-34	13
30	ಬುಧ		ನೌಮಿ	47-58	ಶ್ಲೆ	40-18	13

* ಶೂನ್ಯತಿಥಿ.

‡ ವೃಶ್ಚಿಕಾಂ ಸಗತೋ ರವಿ.

ಪೇಟೇ ಧಾರಣೆ.

ದಿನಸು.		ಮೈಸೂರು.	ಬೆಂಗಳೂರು
ಸಣ್ಣ ಅಕ್ಕಿ ಪಲ್ಲ ೧ಕ್ಕೆ	ರೂ	೧೩-೪-೦	೧೪-೦-೦
ಕಂಬಾತಿ ಅಕ್ಕಿ ಉತ್ತಮ	..	೧೩-೪-೦	೧೩-೦-೦
,, ಮಧ್ಯಮ	..	೧೨-೮-೦	೧೨-೮-೦
ಜಾವಾಣ ಅಕ್ಕಿ	..	೧೨-೦-೦	೧೩-೩-೦
ಸಣ್ಣಕ್ಕಿ ಅವಲ್	..	೧೫-೮-೦	೧೫-೮-೦
,, ದಪ್ಪ	..	೧೪-೮-೦	೧೪-೪-೦
ತೊಗರೀ ಬೇಳೆ ಪಲ್ಲ ೧ಕ್ಕೆ	..	೧೪-೦-೦	೧೪-೦-೦
,, ಮಧ್ಯಮ	..	೧೩-೦-೦	೧೩-೦-೦
ಕೈರಾಗಿ ಪಲ್ಲ ೧ಕ್ಕೆ	..	೫-೧೨-೦	೬-೦-೦
ಕಾಯಿರಾಗಿ	..	೫-೮-೦	೬-೮-೦
ಜೋಳ	..	೫-೧೨-೦	೬-೪-೦
ಕಲಸಂದೆ ಪಲ್ಲ ೧ಕ್ಕೆ	..	೧೩-೮-೦	೧೦-೦-೦
ಬಿಳೀ ಅವರೆ	..	೮-೧೪-೦	೮-೪-೦
ಹೆಸರು	..	೧೨-೮-೦	೧೨-೮-೦
ಉದ್ದು	..	೧೨-೮-೦	೧೧-೮-೦
ಕಡಲೆ	..	೧೨-೮-೦	೧೧ ೧೨-೦
ಎಳ್ಳು ಸೆ. ೧೨೩ ಕ್ಕೆ	..	೧೯-೮-೦	೧೯-೦-೦
ಹುರುಳಿ	..	೬-೧೨-೦	೭-೦-೦
ಹರಳು ೧.೦೭ ಸೇರಿಗೆ	..	೧೪-೦-೦	೧೨-೮-೦
ಸೀಗೇಕಾಯಿ ಮಣ ೧ಕ್ಕೆ	..	೨-೪-೦	೨-೦-೦
ಮೆಣಸಿನಕಾಯಿ	..	೨-೮-೦	೨-೬-೦
,, ಮಧ್ಯಮ	..	೨-೪-೦	೨-೨-೦
ಬೆಲ್ಲ ಡೊಂಕು ಅಚ್ಚು	..	೪-೮-೦	೫-೧-೧೨-೦
ಒಳ್ಳೆಣ್ಣೆ ಮಣ ೧ಕ್ಕೆ	..	೬-೦-೦	೫-೮-[illegible]
ಹರಳೆಣ್ಣೆ ,,	..	೫-೧೨-೦	೫-[illegible]
ಕೊತ್ತುಂಬರಿ ಪಲ್ಲ ೧ಕ್ಕೆ	..	೫-೧೨-೦	[illegible]
ಉಪ್ಪು ,,	..	೫-೧೨-೦	[illegible]
ಹುಣಸೇ ಹಣ್ಣು	..	೧-೬-೧	[illegible]
,, ಹಳೇದು	..	೦-೧೪	[illegible]
ತುಪ್ಪ ಮಣ ೧ಕ್ಕೆ	..	೧೬-೮-೦	[illegible]
ಸೀಮೆಯೆಣ್ಣೆ ಪೆಟ್ಟಿಗೆ ೧ಕ್ಕೆ	..	೪-೧೫-೦	೬-೦-೦
ತೆಂಗಿನಕಾಯಿ ೧೦೦ಕ್ಕೆ	..	೬-೮-೦	೬-೮-೦
ಅಳಲೇಕಾಯಿ ಮಣ ೧ಕ್ಕೆ	..	೧-೦-೦	೧-೬-೦
ಅಂತ್ವಾಳದ ಕಾಯಿ ಮಣ ೧ಕ್ಕೆ	..	೦-೧೨-೦	೦-೧೨-೦
ಚಿನ್ನ (ಪೌನ್) ಕೆಂಪು	..	೧೫-೬-೦	೧೫-೪-೦
,, ,, ಹಸಿರು	..	೧೫-೧೦-೦	೧೫-೮-೦
,, ,, ಗಟ್ಟಿ ತೊಲ ೧ಕ್ಕೆ	..	೨೩-೧೨-೦	೨೪-೨-೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	..	೮೫-೦-೦	೮೦-೨-೦

Printed and Published by the Rev. E. W. Thompson, M. A., Proprietor and Manager, Wesleyan Mission Press, Mysore. 24/10/1907.

REGISTERED
M. 20

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಕ್ರಯ ೧ ದುಡ್ಡು. | ಕ್ರಯ ೧ ದುಡ್ಡು.

ಸಂಪುಟ ೨೧ | ಮೈಸೂರು—ಸರ್ ೧೯೦೭ ನೇ ಇಸವಿ ಅಕ್ಟೋಬರ್ ತಾರೀಖು ೩೧ ನೇ ಗುರುವಾರ. | ಸಂಚಿಕೆ ೨೨

WILLIAM & CO., BOMBAY.

ವಿಲಿಯಂ ಮತ್ತು ಕಂಪನಿ, ಫೋರ್ಟ್, ಮುಂಬಯಿ.

ಗಜಕರ್ಣದ ಮುಲಾಮು.

27 36

ಇದನ್ನು ಹಾಗಿಸುವದರಿಂದ ಎಲ್ಲಾ ತರ ದ ಕಜ್ಜಿಯೂ ನಾಶವಾಗುತ್ತದೆ. ಮೂರು ಸಾರಿ ಹಾಗಿಸುವದರೊಳಗೆ ಗಜಕರ್ಣವು ಹೋಗುವದು. ಇದನ್ನು ಹಚ್ಚಿದಲ್ಲಿ ಉರಿಯು ಬರುವದಿಲ್ಲ. ಮತ್ತು ಚರ್ಮ ಕಪ್ಪಾಗುವದಿಲ್ಲ. ಒಂದು ಸಾರಿ ಪರೀಕ್ಷಿಸಿ ನೋಡಿರಿ ಗುಣ ಕಂಡುಬರುವದಿಲ್ಲವಾದರೆ ಹಣ ಹಿಂತಿರುಗಿ ಕೊಡಲ್ಪಡುವದು. ಡಬ್ಬಿ ೧ಕ್ಕೆ ಕಿಮ್ಮತ್ತು ೦-೬-೦. ಹಿ. ಪಿ. ೦-೧೧-೦ ತರಿಸಿಕೊಳ್ಳಿರಿ! ತ್ವರೆಮಾಡಿರಿ!!

ಪಪ್ರಗುಟಿಕ ೧ ೦-೦ ಸಂಜೀವಿನೀ ತೈಲ ೦-೮ ೦ ದಂತಮಂಜನ ೦ ೩-೦ ಕಫಪಾರಿ ೧-೬-೦ ಕೇಶವರ್ಧನೀ ತೈಲ ೧-೦-೦ ಜೀರ್ಣ ರಸಾಯನ ೦-೬-೦ ಜಿಹ್ವೆ ಪಾಲಮಾ ೦-೩ ೦ ಈ ಕಂಪನಿಯ ನರು ಚಿಹ್ನೆ ನಮೂನೆಯ ಔಷಧಗಳು ಸ್ವತಃ ತಯಾರಿಸುವದರಿಂದ ಸ್ವಲ್ಪಬೆಲೆಗೆ ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು

ಅಮೃತಾಂಜನ

ಬಾಟ್ಲಿ ಒಂದಕ್ಕೆ ಕಿಮ್ಮತ್ತು ೮ ಆಣೆ. ವಿ. ಪಿ. ೧೨ ಆಣೆ.

ಅಮೃತಾಂಜನ—ಸುಖಾಂಜನ

ಅಮೃತಾಂಜನ—ದಿವ್ಯಾಂಜನ.

ಅಮೃತಾಂಜನ—ರಂಜನ

ಅಮೃತಾಂಜನ—ಪರಮಾಂಜನ.

ವಾತ, ಮೈನೋವು, ಗಂಟುನೋವು, ಸಂಧಿವಾತ, ತಲೆನೋವು, ಸೂಲವ್ಯಾಧಿ, ಈ ಎಲ್ಲಾ ರೋಗಗಳಿಗೆ ಈ ಅಮೃತಾಂಜನವು ದಿವ್ಯ ಔಷಧವಾಗಿರುತ್ತದೆ.

ವಿಲ್ಯಾಸೀಮಾಡಲ್ ೧೯೦೫ ನೇ ಸಾಲು

ಅಮೃತಾಂಜನ—ಶೀತಭಂಜನಿ

ಅಮೃತಾಂಜನ—ತಕ್ಷಣಸುಖಕಾರಿಣಿ.

ಅಮೃತಾಂಜನ—ಪ್ರೂವ ದಜಾನಿ.

ಅಮೃತಾಂಜನ—ಭಂಜನವಿಮರ್ದಿನಿ

ಇದರಿಂದ ಗುಣ ಕಂಡುಬರುವದಿಲ್ಲವಾದರೆ ಹಣ ಹಿಂತಿರಿಗಿ ಕೊಡಲ್ಪಡುವದು ಚಕಂ ಮತ್ತು ಘಾಯ, ಅರ್ಧಾಂಗವಾಯು, ಈ ರೋಗಕ್ಕೆ ಇದು ಸಂಜೀವನವಾಗಿರುತ್ತದೆ ತರಿಸಿಕೊಳ್ಳಿರಿ! ಪರೀಕ್ಷಿಸಿರಿ!!

ವಿಲಿಯಂ ಮತ್ತು ಕಂಪನಿ, ೧೬ ಓಕ್ ಲೇನ್. ಫೋರ್ಟ್, ಮುಂಬಯಿ.

ತಂತಿಗಾಗಿ ಅಡ್ರೆಸು; "ಅಮೃತಾಂಜನ," ಮುಂಬಯಿ.

ನಿಮಗೆ ನೋವು ಇದೆಯೋ?

58 23

ಹಾಗಾದರೆ "ಕ್ಲೆಮೆಂಟ್ ಯವರ ಮ್ಯಾಜಿಕ್ ಬಾಂ" ನ್ನು ಏಕೆ ಉಪಯೋಗಿಸಬಾರದು? ಅತ್ಯಾಶ್ಚರ್ಯಕರವಾದ ಬಾಧಾಪಹಾರಿ ಇದು! ಈಗಿನ ಕಾಲದಲ್ಲಿ ಕಂಡು ಹಿಡಿದ ದೊಡ್ಡ ನೂತನವು!

ಈ ರಾಜ ಔಷಧವನ್ನು ಹೊಟ್ಟೆಯೊಳಗೆ ತೆಗೆದುಕೊಳ್ಳದೆ ಕೆಲವು ನಿಮಿಷಗಳೊಳಗಾಗಿ ನರ ಮತ್ತು ಮಾಂಸ ಸಂಬಂಧವಾದ ಬಾಕ್ಸ ನೋವು, ಕೀಲುಗಳ ಬಾಧೆ, ಕಿಬ್ಬೊಟ್ಟೆ ನೋವು, ಬೆನ್ನು ಳೆಯುವದು, ತಲೆನೋವು, ಕೆಮ್ಮು, ಕೀಲುಗಳು ಕತ್ತರಿಸುವದು, ಕೊರಳು ಊತ, ಕೈಕಾಲು ಒಡೆತ ಇವುಗಳನ್ನೆಲ್ಲಾ ವಿದ್ಯುಚ್ಛಕ್ತಿಯಂತೆ ಗುಣಪಡಿಸುವದು. ಈ ಔಷಧವು ಆಶ್ಚರ್ಯಕರವಾಗಿ ಗುಣಪಡಿಸುವದರಿಂದ ಎಲ್ಲಾ ಕಡೆಗಳಲ್ಲಿಯೂ ಪ್ರಸರಿಸುತ್ತಾ ಬರುವದು. ಇತರ ಔಷಧಿಗಳು ಗುಣಪಡಿಸದೆ ಹೋದಾಗ ಡಾಕ್ಟರ್ ಫೀಜನ್ನು ಕಡಿಮೆಮಾಡಿ ಇದು ನಿಸ್ಸಂದೇಹವಾಗಿಯೂ ಗುಣಪಡಿಸುವದು.

ಕ್ರಯ —೦ ಬಾಟ್ಲಿಗೆ ೧೨ ಆಣೆ, ಪೋಸ್ಟೇಜ್ ೪ ಆಣೆ ೩ ಬಾಟ್ಲಿಗೆ ಅಂಚೆವೆಚ್ಚ ಸೇರಿ ರೂ. ೨—೪ ಆಣೆ. ಎಲ್ಲಾ ಕೆಮಿಸ್ಟ್ ಷಾಪುಗಳಲ್ಲಿ ದೊರೆಯುವದು.

ನಮ್ಮ ವಿಳಾಸ:—ಎಫ್. ಡಬ್ಲ್ಯು. ಆರ್ಡ,
ಸಿಮೆಟ್ರಿ ರೋಡ್, ವೇಪೇರಿ, ಮದರಾಸ್.

ಜ್ವರಹರಿ.

74.14



ಇದು ಸಾಧಾರಣ ಜ್ವರ, ಚಳಿಜ್ವರ ಮರೆಜ್ವರ, ಪಿತ್ಥಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲ ವಿಧವಾದ ಜ್ವರಗಳನ್ನು ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಕ್ಕರೆಯಲ್ಲಿರುವ ಮುರಾರಾವ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್. ಬಿ. ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಔನ್ಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು. ಅವರು ಜನಗಳು ಹಾಗಲೇ ಬೀಳುತ್ತಿರುವದರಿಂದ ದಯವಿಟ್ಟು ಇನ್ನೊಂದು ೨೦ ಔನ್ಸಿನ ಸೀಸೆಯನ್ನು ವಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದಾರೆ

ಕ್ರಯ:—ಸೀಸೆ ೧ಕ್ಕೆ ೮ ಆಣೆ, ೯ ರೂ., ೧—೮ ರೂ., ರೂ. ೨—೧೨ ಆ, ೧೧ ರೂ. ಸ್ವಲ್ಪ ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

●●●●●●●●●

ಓಮಂಕಪ್ರಕಾರ.



ಈ ಔಷಧವು ಅಜೀರ್ಣ, ಶೀತಬೇದಿ, ಸಾಧಾರಣ ಹೊಟ್ಟೆ ಕಳೆಯುವದು, ವಾಂತಿಬೇಧಿ, ನಾನಾತರದ ಹೊಟ್ಟೆ ನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಸ್ನಾನಕ್ಕೆ ಆಗುವಾಗ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ನಿಮ್ಮ ಓಮಂ ಕರ್ಪೂರವನ್ನು ನಾನೂ ನನ್ನ ತಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರ ಷಗಳಿಂದಲೂ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಸ್ತರಿಗೆ ಕೊಡುತ್ತೇವೆ ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೆ ಔಷಧವೆಂತ ಬರೆದಾರೆ

ಈ ಎರಡು ಔಷಧಗಳೂ ಊರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ:—
ಚೆನ್ನಯುವರ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,
ಸಕಿಂತ್ ಬಜಾರ್ ರ್ಟ್ರೀಟ್, ಮದರಾಸ್.

ಶಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು

26 17

೧ ಲೋಕಾಮಯಹರ ಕಸ್ತೂರೀ ಮಾತ್ರೆ.—ಈ ಮಾತ್ರೆಗಳನ್ನು ಜವಳಿ ಬತ್ತ, ಚಿನ್ನ ಬಳ್ಳಿ, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚುಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ



ಚಳಿಜ್ವರ, ಜ್ವರ ಹೊಟ್ಟೆಶೂಲೆ, ಗಂಡುಗಳ ನೋವು, ಮೈ ಕೈಕಾಲು ಸೆಳೆತ (ಭಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿಮಾಂದ್ಯ, ಸಲ್ಲ ನೋವು, ಕೆಮ್ಮು, ನೆಗಡಿ, ಸನ್ನಿ, ಅತಿಸಾರ ಇವನ್ನು ಅನೇಕರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ.

ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತೆ ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ ಯಾವ ಬಾಯಿಬೆಗೂ ದಾರಿಕೊಡದೆ, ನೀರು ಮೊದಲಾದ ಕಟುವಕ್ಕೋಸ್ಕ್ಕನ್ನು ಸರಿಪಡಿಸಿ, ರಕ್ತದಲ್ಲಿ ದೋಷವನ್ನು ತೆಗೆದು ಬುದ್ಧಿಮಾಡಿ ವೃದ್ಧಿಪಡಿಸುತ್ತದೆ ಸ್ತ್ರೀಯರ ಋತುಶೂಲೆ, ಬಾಣಂತಿ ಜ್ವರ, ಸಚ್ಚುಜ್ವರ, ಕೃಕತ್ವಗಳನ್ನು ಗುಣಪಡಿಸುತ್ತದೆ.

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಹಿಂತಿಗೆ ಗುರಿಯಾಗುವುದಿಲ್ಲ ಒಳ್ಳೇ ಶಕ್ತಿವರ್ಧಕವಾಗಿದೆ

ಅನುಪಾನಪತ್ರ ಔಷಧದ ಸಂಗಡಲೇ ಇರುತ್ತದೆ

೨೦ ಮಾತ್ರೆಯುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿಗೆ ೧ ರೂಪಾಯಿ. ೧ ರಿಂದ ೧೨ ಕುಪ್ಪಿ ವರಗೆ ಪೋಸ್ಟೇಜು ೪ ಆಣೆ.

ವಿಳಾಸ ಶಾಳ್ಯದ ವೆಂಕಟಾಚಲ ಪಂಡಿತ,
ಎಸ್. ಆರ್. ವೈದ್ಯಶಾಲಾ,
ಲಕ್ಷ್ಮೀವಿಲಾಸ ರೋಡ್, ಮೈಸೂರು

ರಬ್ಬರ್ ಹ್ಯಾಂಡ್ ಪ್ರೆಸ್.

114 4

ಕಲಾಕೌಶಲ್ಯದಿಂದ ಮತ್ತು ಉದ್ಯೋಗದಿಂದ ಊರ್ಜಿತಸ್ಥಿತಿಗೆ ಬರುವ ಈ ಭಾರತ ಭೂಮಿಯೊಳಗೆ ಈ ಪ್ರೆಸ್ ತಯಾರಾಗುತ್ತದೆ ಇದುವರೆಗೆ ಈ ಪ್ರೆಸ್ಸು ಪರದೇಶದಿಂದ ಬರುತ್ತಿರುವಾಗ ಅದಕ್ಕೆ ೧೬ ರಿಂದ ೧೮ ರೂಪಾಯಿಗಳ ವರಗೆ ಬೆಲೆ ಬೀಳುತ್ತಿತ್ತು ಈ ಪ್ರೆಸ್ಸಿನೊಳಗೆ ಕನ್ನಡ, ತಮಿಳು, ತೆಲುಗು ಉರ್ದು, ಮಹಾರಾಷ್ಟ್ರ, ಅರಬಿಕ್, ಇಂಗ್ಲೀಷ್ ಮತ್ತು ಬೇಕಾದ ಭಾಷೆಯಲ್ಲಿ ಒಂದು ಪ್ರತಿ ತಯಾರು ಮಾಡಿ, ಮಾಡಿದ ಮೇಲೆ ಬಹು ಸ್ವಲ್ಪ ಕಾಲದೊಳಗಾಗಿಯೇ ಇದರಿಂದ ೧೫೦ ಪ್ರತಿಗಳನ್ನು ತಯಾರು ಮಾಡಬಹುದು ಆದ್ದರಿಂದ ಈ ಪ್ರೆಸ್ಸು ಸಾರ್ವಜನಿಕ ಕಚೇರಿ ಮ್ಯುನಿಸಿಪಾಲಿಟಿ ಪೋಲೀಸ್ ಆಫೀಸರರು, ವಕೀಲರು, ವರ್ತಕರು, ಇನಾಮುದಾರರು ಮತ್ತು ಪರೀಕ್ಷಕರೂ ತಮ್ಮ ಸಂಗ್ರಹದಲ್ಲಿ ಅವಶ್ಯ ಇಡಬೇಕು ಎಷ್ಟೋ ಕಾರಕೂನರ ಸಹಾಯದಿಂದ ಒಂದು ಕೆಲಸಕ್ಕೆ ಬಹಳಕಾಲ ಹಿಡಿಯುವದು ಆದರೆ ಈ ನಮ್ಮ ಪ್ರೆಸ್ಸಿನಿಂದ ಅಂಥಾ ಕೆಲಸವನ್ನಾದರೂ ಸ್ವಲ್ಪ ಕಾಲದಲ್ಲಿಯೇ ಮಾಡುವದಕ್ಕೆ ಸಾಧ್ಯ ಇದರ ದೆಸೆಯಿಂದ ಈ ಪ್ರೆಸ್ ಜನಗಳ ಪ್ರೀತಿಗೆ ಪಾತ್ರವಾಗಿರುವದು ಈ ಕಾರಣದಿಂದ ಪ್ರತಿ ಒಬ್ಬರೂ ತಮ್ಮ ಹತ್ತರ ಈ ಪ್ರೆಸ್ಸನ್ನು ಅವಶ್ಯಕವಾಗಿ ಇಡುವದರಲ್ಲಿ ಏನೂ ಸಂದೇಹವಿಲ್ಲ

ನೋಟ್ ಪೇಪರ್ ಸೈಜು, ರೂಪಾಯಿ ೪—೦—೦.
ಹಾಫ್ ಫುಲ್‌ಸ್ಕ್ಯಾಪ್ ಸೈಜು, ೬—೦—೦.
ಪೋಸ್ಟೇಜು ಬೇರೆ (ಅಗಲ)

ವಿಳಾಸ:— ವರ್ಧಮಾನ ಏಜೆನ್ಸಿ,
ಪೋಸ್ಟ್ ಕಾಲಬಾದೇವಿ,
ಮುಂಬಯಿ.

ಇಲ್ಲಿ ನೋಡಿ!

65 17

ತುಮಕೂರು ವಿಂಶ್‌ ಇಲಾಖೆಯಲ್ಲಿ ಯೂರೋಪಿಯನ್ ಮೇಸ್ತ್ರಿಯಾಣೆಯಿಂದ ಉತ್ತಮ ತರವಾದ ಹಾಸನದ ಟೋಪಿಗಳು ಅತಿ ಶ್ರೇಷ್ಠವಾದ ಉಲ್ ಬಟ್ಟೆಯಿಂದ ತಯಾರಾಗುತ್ತವೆ.

ಕ್ರಯ:—೧೨ ಆಣೆ ಮೊದಲ್ಗೊಂಡು ೧ ರೂ ೦೨ ಆಣೆಯ ವರಿಗೆ

೧ ಡಜನ್ ಟೋಪಿಗಳನ್ನು ತೆಗೆದುಕೊಳ್ಳುವವರಿಗೆ ಕೆಳಕಂಡ ಹ ರಂತೆ ಡಿಸ್‌ಕೌಂಟ್ ಕೊಡಲ್ಪಡುವದು

ನಮ್ಮ ವಿಳಾಸ:—ಮ್ಯಾನೇಜರ್

ಹಾಸನದ ಟೋಪಿ ಕಾರ್ಖಾನೆ, ವಿಂಶ್‌ ಇಲಾಖೆ, ತುಮಕೂರು

ಕಾರ್ಡು ಸೈಜು ೪¼×೩ .

ಫೋಟೋ ತೆಗೆಯುವ

ಛಾ ಪಾ ಕ್ಯಾ ಮೆ ರಾ.

34 11

ಬೆಲೆ ಫಕ್ತ ಮೂರು ರೂಪಾಯಿ.

ಇದರಿಂದ ಬೇಕಾದ ಮನುಷ್ಯನ ಫೋಟೋ ಅವನಿಗೆ ತಿಳಿಯದಂತೆ ತೆಗೆಯಲಿಕ್ಕೆ ಬರುತ್ತದೆ ವೇಗದಿಂದ ಓಡುವ ಗಾಡಿಯು ಮತ್ತು ಹಾರುವ ಪಕ್ಷಿಯ ಫೋಟೋ ಸಹ ತೆಗೆಯಬಹುದು. ಇದರಲ್ಲಿ ಕಲಿಯತಕ್ಕದ್ದೇನೂ ಇಲ್ಲ. ಈ ಕ್ಯಾಮರಾದ ಮಾಹಿತಿಯನ್ನು ಕೊಳ್ಳುವವರಿಗೆ ನಾವು ಕೂಡಲ್ಲಿಯೇ ಮಾಡಿಕೊಡುವೆವು. ಎಷ್ಟೋ ಕಡೆಗೆ ಇದಕ್ಕೆ ೧೦ ರಿಂದ ೧೫ ರೂ. ಬೆಲೆ ಬೀಳುತ್ತದೆ. ಆದರೆ ಇದರ ಖರೀ ಕಿಮ್ಮತು ೩ ರೂಪಾಯಿ ಮಾತ್ರ ಇರುವದು. ಟಪಾಲ್ ಖರ್ಚು ೯ ಆಣೆ. ಇದು ಸಿಕ್ಕತಕ್ಕ ವಿಳಾಸ:—

ಫೋಟಾಲಾಲ ಭಗನಲಾಲ ಮಹಾಜನ, ಠಾಕೂರದ್ವಾರ ರೋಡ, ಪೋಸ್ಟ್ ಕಾಲಬಾದೇವಿ. ಮುಂಬಯಿ.

ಆರ್ಡರ್ ಬರುತ್ತಿವೆ! ಬೇಗ ನೋಡಿ!

ಪ್ರಸಂಚವೇ ಆಶ್ಚರ್ಯ ಪಡುವದು.

87 9

ದೊಡ್ಡ ಪಟ್ಟಣ್ಣದ, ಒಂದುಸ್ಥಾನದಲ್ಲಿ ಪ್ರಕಟನೆಗಳ ಮಯವಾಗಿದೆ ಕೆಲವು ಕಂಪನಿಯವರು ಮೋಸ ಮಾಡೋಣದರಿಂದ ಪ್ರಕಟನೆಯನ್ನು ಕಂಡರೆ ಜನರು ಆಸಹ್ಯಪಟ್ಟು ಎಸೆಯುತ್ತಾರೆ, ಸತ್ಯವಂತರ ಪ್ರಕಟನೆಯನ್ನೂ ಕೂಡ ನಂಬದಿರುವದು ಕಷ್ಟ ಯಥಾರ್ಥವುಳ್ಳ ಕಂಪನಿಯು ನೋಟೀಸುಗಳನ್ನು ಸಹ ಸಕ್ಕರೆ ಔಷಧಿ ಕಟ್ಟಿದ್ದ ವಕ್ಕೆ ಕೊಟ್ಟು ಬಿಡುವರು ಆದರೆ ಸಜ್ಜನರೇ, ನಮ್ಮ ಕಂಪನಿಯ ಯೋಗ್ಯತೆಯನ್ನು ಒಂದಾವರ್ತಿ ಪರೀಕ್ಷಿಸಿ ನೋಡಿ ಈ ಪ್ರಕಟನೆಯು ನವೀನವಾದದ್ದು, ಆಶ್ಚರ್ಯಕರವಾದದ್ದು. ನಾವು ೩೦ ಗಂಟೆ ನಡಿಯುವ ಸ್ವಚ್ಛವಾದ ಐದು ವರುಷದ ಗ್ಯಾರಂಟಿ ಉಳ್ಳ ಲೀವರ್ ಗಡಿಯಾರವನ್ನು ಇಂಗೆ ಬಗೆಯಾದವಸ್ತುಗಳೊಡನೆ ಕಳಿಸುತ್ತೇವೆ. ಇದರಲ್ಲಿ ಸತ್ಯವಾದ ಕಂಪನಿಯು ಕೀರ್ತಿ ಹೆಚ್ಚಬೇಕೆಂಬುವದೊಂದೇ ನಮ್ಮ ಮುಖ್ಯ ಉದ್ದೇಶ ಒಂದಾವರ್ತಿ ನನಗೆ ಬರೆದು ತರಿಸಿ ನಮ್ಮ ಸತ್ಯತೆಯನ್ನು ಪರೀಕ್ಷೆಮಾಡಿ ಗಡಿಯಾರದ ಕೂಡ ನಾವು ಕಳಿಸುವ ವಸ್ತುಗಳಾವವೆಂದರೆ—ಒಂದು ಗಡಿಯಾರ, ಬಲವಾದದ್ದು, ೩೦ ಗಂಟೆ ನಡಿಯುವದು, ಹಿಂದೆ ಎರಡು ಮುಚ್ಚಳ, ಪರೀಕ್ಷೆಯಿಂದ ಸರಿಮಾಡಿದ್ದು, ಒಂದು ಸೊಗಸಾದ ಪಟ್ಟಿಗಯಲ್ಲಿ, ಐದು ವರುಷದ ಜಾಮೀನು ಉಳ್ಳದ್ದು, ಒಂದು ಸೊಗಸಾದ ಗಡಿಯಾರದ ಸರಪಣಿ. ಆರ ಬೇಗದ ಕೈ ಉಳ್ಳ ಬಲವಾದ ಇಂಗ್ಲಿಷ್ ಬಜಾನ ಪಟ್ಟಿಗೆ. ಒಂದು ದೊಡ್ಡ ಪಡಾಯ ಒಂದು ದೊಡ್ಡ ಬುಟ್ಟಿ. ಒಂದಾಕೆಯ ಎಣ್ಣೆ ಹಾಕಿದರೆ ಒಂದು ತಿಂಗಳು ಉರಿಯುವ ಹೊಸ ತರಹಾ ಲಾಂದ್ರು. ಒಂದಾವರ್ತಿ ಶಾಯಿ ತುಂಬಿದರೆ ಅನೇಕ ದಿನಗಳ ತನಕ ಬರೆಯುವ ಫೌಂಟೇನ್ ಪೆನ್. ಒಂದು ಜೋತೆ ದೊಡ್ಡ ಕಾಲುಚೀಲ ಬಲವಾದ ದಂತದ ಕೈಪಿಡಿಯುಳ್ಳ ಚಾಕು ಒಂದು ದೊಡ್ಡ ಕತ್ತರಿ ಒಂದು ದೊಡ್ಡ ಚರ್ಮದ ಮುಚ್ಚುಹಾಕುವ ಚೀಲ ಒಳ್ಳೆ ಬಾಚಣಿಗೆ ದಂತದ ಕನ್ನಡಿ ಕೂದಲು ಬಾಚಿಕೊಳ್ಳುವ ಬುರುಸು ವರವನ ಒಂದು ಸೆಟ್ ಗುಂಡಿಗಳು. ಒಂದು ಸೊಗಸಾದ ಕನ್ನಡಕ ಒಂದು ಸಾಬೂನುಬಿಲ್ಲೆ ಒಂದು ಸೆಬರ್‌ಚಪ್ಪು. ಒಂದು ಕೈವಸ್ತ್ರ ಎಂದಿಗೂ ಹೊಳೆಯುತ್ತದ ಚಮಚ್ಚು. ಒಂದು ರಬ್ಬರು. ಸುಂದರವಾದ ದೊಡ್ಡ ಕಾಯಿಕೊಂಡಿ. ಒಂದು ಪೆನಸಲ್ ಒರೆಯುವದು ೧೨ ಲೇಖಣಿಕಡ್ಡಿಗಳು. ೬ ಕಪ್ಪು ಪೆನಸಿಲುಗಳು. ೧೫೦ ಲಕೋಟಿಗಳು ೧೫೦ ಲೆಟರ್ ಪೇಪರುಗಳು. ಪೋಸ್ಟ್ ರೂಲಸಿಗನುಸಾರವಾದ ೧೦೦ ಪೋಸ್ಟ್ ಕಾರ್ಡುಗಳು. ೩೩ ಸ್ಟೀಲ್ ಮುಳ್ಳುಗಳು.

ಇಷ್ಟಕ್ಕೆಲ್ಲಾ ಕ್ರಯ ರೂ. ೩-೧೪-೦ ಮಾತ್ರವೇ.

ಅರ್ಧ ಹಣ ಅಡ್ವಾನ್ಸ್ ಮನಿಆರ್ಡರ್ ಬಂದಲ್ಲಿ ಉಳಿದ ಅರ್ಧಕ್ಕೆ ವಿ. ಪಿ. ಮಾಡುತ್ತೇವೆ. ಒಪ್ಪದಿದ್ದರೆ ಹಣ ವಾಪಸು ಕಳಿಸುವೆವು.

ಈ ವಿಳಾಸಕ್ಕೆ ಬೇಗ ಬರೆಯಿರಿ.—

ಎಂ. ಎ. ಘಟಾಲಾ ಮತ್ತು ಕಂಪನಿ,

ಚಿತ್ತೂರು, ಉತ್ತರ ಆರ್ಕಾಟು.

CHAMBERLAIN'S COUGH REMEDY.

ಚೇಂಬರ್ಲೇನ್‌ರವರು ಕಂಡು ಹಿಡಿದ ಕೆಮ್ಮಿನ ಔಷಧವು.

4-16



ಶೀತದ ಕೆಮ್ಮು, ಗಂಟಲು ಗೂರಲು, ಉಬ್ಬಸ, ಜಡಿಗೆಮ್ಮು, ನಾಯಿಕೆಮ್ಮು, ಎಲ್ಲಾ ತರದ ಶೀತ, ಗಂಟಲು ಎದೆಯಲ್ಲಿ ಹುಟ್ಟುವ ಸಮಸ್ತ ವ್ಯಾಧಿಗಳಿಗೂ—ಇವಕ್ಕೆಲ್ಲಾ ಈ ಔಷಧವು ಬಹಳ ಉಪಯೋಗವಾಗಿದೆ.

ಆ ಕೆಮ್ಮನ್ನು ಅಲಕ್ಷ್ಯಮಾಡಬೇಡಿ ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ ಅದರ ಮೇಲೆ ನ್ಯುಮೋನಿಯಾ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವುದು. ತರುವಾಯ ಉಗುಳಿನಲ್ಲಿ ರಕ್ತಬೀಳುವ ಹಾಗೆಯೇ ಕ್ಷಯರೋಗಕ್ಕೆ ಆಸ್ಪದವಾಗುವುದು.

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟಲಿನಲ್ಲಿ ಶ್ಲೇಷ್ಮ ಕಟ್ಟುವುದನ್ನು ಶ್ಲೇಷ್ಮ ಬೀಳುವುದನ್ನೂ ಖಂಡಿತವಾಗಿ ನಿವಾರಣೆಮಾಡುತ್ತದೆ ಉಸುರು ಹೋಯ್ಯುವುದು ಕಷ್ಟವಾಗಿದ್ದರೆ ಅದನ್ನು ಕೂಡಲೆ ಪರಿಸುತ್ತದೆ ಅಪಾಯಕರವಾದ ಕೆಮ್ಮಿನ ಹಬ್ಬನನ್ನು ನಿಲ್ಲಿಸಬಿಡುತ್ತದೆ ಎದೆ ಒಣಗುವಂಥಾ ಕೆಟ್ಟಸ್ಥಿತಿಯನ್ನು ಸಂಪೂರ್ಣವಾಗಿ ವಾಸಿಮಾಡಬಲ್ಲದು. ಕೆಮ್ಮನ್ನು ಶಮನಮಾಡಿ, ನೀವು ಸುಖವಾಗಿ ನಿದ್ರೆಮಾಡುವಂತೆ ಮನಸ್ಸಿಗೆ ಉಲ್ಲಾಸಕೊಡುತ್ತದೆ.

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇರಿಸುವುದಿಲ್ಲ.

ಈ ಔಷಧವು ಎರಡು ಸೈಜುಗಳಲ್ಲಿ ತಯಾರು

ಕೈಯಿಂದಮುಟ್ಟದೆ ತಯಾರಾಗಿದೆ

ಎಲ್ಲಾ ಕಡೆ ವಿಕ್ರಯವಾಗುವುದು. ಸಣ್ಣಸೀಸೆಗೆ ೧ ರೂಪಾಯಿ. ದೊಡ್ಡಸೀಸೆಗೆ ೨ ರೂಪಾಯಿ

ಹಿಂದುಸ್ಥಾನದಲ್ಲಿ ಮಕ್ಕಳು

ಬಹಳ ಉಷ್ಣರಾಜ್ಯವಾದದ್ದರಿಂದ ನಾನಾ ರೋಗಾದಿಗಳಿಗೆ ಈಡಾಗಿ ಸೊರಗಿಹೋಗುವ ಅಧಿಕವಾಗಿದೆ ಎಳೆಯ ಮಕ್ಕಳೂ ಬೆಳೆಯುವ ಸ್ಥಿತಿಯಲ್ಲಿ ಬಲಹೀನವಾಗಿ ನಿಲ್ಲುತ್ತವೆ ಅವರ ಸಣ್ಣ ಸಣ್ಣ ಮೂಳೆಗಳೂ ಮಾಂಸಖಂಡಗಳೂ ಸರಿಯಾಗಿ ಬಲಗೊಂಡು ಬೆಳೆಯುವದಕ್ಕೆ ಅವರಿಗೆ ಚಿಕ್ಕಂದಿನಿಂದಲೂ ಒಂದಾವರ್ತಿ ಯಾದ ಸೇವನಾ ಔಷಧವನ್ನು ಕೊಡುವುದು ಅವಶ್ಯಕ

SCOTT'S EMULSION

31-33

(ಸ್ಕಾಟ್ಸ್ ಇ ಮ ಲ್ ಷ ನ್).

ಎಂಬೀ ಸೇವನಾ ಔಷಧದಲ್ಲಿ ಶರೀರ ಸಮಸ್ತ ಅಂಗಗಳಿಗೆ ಬಲ ಪಡಿಸಿ ಬೆಳೆಸುವಂಥಾ ಬಹು ಉತ್ಕೃಷ್ಟವಾದ ಗುಣಗಳಿರುತ್ತವೆ.

ಇದಕ್ಕೆ ಸಮಾನವಾದದ್ದು ಮತ್ತಾವುದೂ ಇಲ್ಲ.

ಈ ಔಷಧವನ್ನು ಸೇವನೆ ಮಾಡುತ್ತಾ ಬಂದ ಒಡನೆಯೇ ಅದರ ಗುಣಗಳು ಕಂಡು ಬರುವವು

ಕೈಯಿಂದ ಮುಟ್ಟದೇನೇ ತಯಾರಾಗಿದೆ.

ಎಲ್ಲಾ ಔಷಧ ವ್ಯಾಪಾರಸ್ಥರಲ್ಲಿ ವಿಕ್ರಯವಾಗುತ್ತಿದೆ

ಮೀನಾನ್ನುಮಾನ್ಯ ಇರುವ ಈ ಔಷಧದ ಗುರುತು

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್, ಔಷಧಗಳ ಕಾರ್ಖಾನೆ ಲಂಡನ್, ಇಂಗ್ಲೆಂಡ್

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾ ಸ ನ ದ ಟೋ ಪಿ ಅ ಲ್ಲ ವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

75 14

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನ ದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ವಿಕ್ರಯವಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೀಳಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯಿತಿಯಿಂದಲೇ ಬರುವದು (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕ ನ್ಯಾಗಳನ್ನೇ ಆರಿಸಿ ಕಳಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹಣಿದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಸೀದಾ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದು ಚನ್ನಾಗಿಲ್ಲದ್ದು ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ.

ಸಾದಾ, ಕೆಂಪು, ಕಪ್ಪು, ಬಿಳಿ, ಕಾಫಿ ಟೋಪಿಗಳು ೧ ರೂ. ೪ ಆ; ೧ ರೂ ೬ ಆ; ೧ ರೂ ೮ ಆ.

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ೧ ರೂ. ೪ ಆ.; ೨ ರೂ ದಾರದ ಟೋಪಿಗಳು ೧ ರೂ. ೧೨ ಆ, ೧ ರೂ ೪ ಆ., ೧ ರೂ. ೬ ಆ. ಉಣ್ಣೆಯ ಟೋಪಿಗಳು ೧ ರೂ. ೪ ಆ, ೧ ರೂ. ೬ ಆ.

ಕೂಸುಗಳ ಟೋಪಿ, ಸೂಫಿ ಮಫ್ಲರು, ಆರ್ಡರ್ ಕೊಟ್ಟು ಹಾಕಿಸಿದ ಪಟ್ಟಿ ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವವರಿಗೆ ಕೊಟ್ಟು ಕಳಿಸುವೆವು.

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ.

ಸೀರಶ್ರವರೇ. ಕೊಂಚ ಗಮನಿಸಿ.

1181

ಚಿತ್ರದುರ್ಗದ ಶ್ರೀಮನ್ನಿರಂಜನ ಜಗದ್ಗುರು ಮುರುಘರಾಜೇಂದ್ರಸ್ವಾಮಿಗಳ ಛಾಯಾಚಿತ್ರವು ೧೧ ಆಣೆ ಸ್ಟಾಂಪು ಕಳಿಸಿಕೊಟ್ಟಲ್ಲಿ ೬×೪ ಸೈಜಿನದು ೩೦ ಆಣೆ ಸ್ಟಾಂಪು ಕಳಿಸಿಕೊಟ್ಟಲ್ಲಿ ೪×೧೦ ಸೈಜಿನದು ೧ ರವಾನಿಸಲ್ಪಡುತ್ತೆ ಒಟ್ಟಿಗೆ ತರಿಸಿಕೊಂಡರೆ ೪ಕ್ಕೆ ೧ ಕ್ಕೆ ೩ ಕಡಿಮೆ ೧೦ಕ್ಕೆ ೩ ಪ್ರತಿಗಳ ಕಮೀಷನ್ ದೊರೆಯುತ್ತೆ ವಿಳಾಸ—ಬಿ. ಎ. ಫುಟ್ಟಣ್ಣ, ಫೋಟೊಗ್ರಾಫರ್, ಕೆ. ಆರ್. ಮೈಸೂರು.

ಈಗಲೇ ೭ ಮೈಯಿಂದ ೨೫ ಕ್ರಾಸ್ಪಿಪೆಲ್ಲ ಸ್ಟೀಮರಿನಲ್ಲಿ ಬಂದಿದೆ.

1171

ಎಣ್ಣೆಕೆಂಪು, ಕೆಂಪು, ಮತ್ತು ತಾಜಾ ಕಲ್ಲು ಸಪ್ತಿರಿಯಾ ನಾಸ ಉಲ್ಲನ ಬ್ಲಾಂಡು ೧ ಕ್ಕೆ	ರು. ೩—೦—೦
೧೦ ಟೋಪಿಯಾಗುವ ಬಂಡಲ್ ೧ ಕ್ಕೆ	೩—೭—೦
೧ ಟೋಪಿಯಾಗುವ ಉಲ್ಲನ ದಾರಕ್ಕೆ	೦—೪—೦
ಕೊಕ್ಕೆ ಸೂಜಿ ಡಜನ್ ೧ ಕ್ಕೆ	೦—೬—೦
೧ ಕೊಕ್ಕೆ ಸೂಜಿಗೆ	೦—೦—೬
೩೦ ಇಂಚಿನ ಬನೀಯನ್ ೧ ಕ್ಕೆ	೦—೯—೦
ಬೆಸ್ಟ್ ಪೋಸ್ಟ್ ಕಾರ್ಡ ೧೦೦ ಕ್ಕೆ	೦—೭—೦

ವಿ ಪಿ ಇಂದಲೂ ರವಾನಿಸುತ್ತೇವೆ ವಿಳಾಸ —

ದಿ ಉಲ್ಲನ ಮಾರ್ಟ ಮಂಗಳೂರು, ದ ಕ.

ಬಹುಮಾನ.

1194

21 ಆಣೆ ಸ್ಟಾಂಪನ್ನು ಕಳುಹಿಸಿಕೊಟ್ಟಲ್ಲಿ 1 ಫಾರಿನ್ವಳ್ಳಿ ವಾಚ್ಚೆಂಕರಿಂದ ರಚಿಸಿದ ಕನ್ನಡ ತಾತ್ಪರ್ಯದೊಡನೆ ಕೂಡಿದ "ಪ್ರಶ್ನೋತ್ತರರತ್ನ ಮಾಲಿಕೆ" ಒಂದನ್ನು, 8×10 ರ ಸೈಜಿನ ಕಾರ್ಡಬೋರ್ಡಿನಿಂದ ಕೂಡಿದ ಶ್ರೀಮನ್ಮಹಾರಾಜರವರ ಫೋಟೋ ಆಗಲಿ, 6×8 ಸೈಜಿನ ಕಿರೀಟವನ್ನು ಧರಿಸಿಕೊಂಡಿರುವ ಈಗಿನ ಶೃಂಗೇರಿ ಸ್ವಾಮಿಗಳ ಫೋಟೋವನ್ನಾಗಲಿ ಉಚಿತವಾಗಿ ಕೊಡಲ್ಪಡುವದು. ಕರ ಮಾರು ವಿಳಾಸ ಸ್ಪಷ್ಟವಾಗಿರಬೇಕು ಸ್ವಲ್ಪ ಪ್ರತಿಗಳು ಮಾತ್ರ ಇದೆ.

ವಿಳಾಸ.—ವೈ. ನಾಗಪ್ಪ, ಷಾಪ್ ಕೀಪರ್, ಕೋಟೆ, ಮೈಸೂರು.

ಡಾಕ್ಟರು ಏನು ಹೇಳುತ್ತಾರೆ?

95 9

ಇವರು ಪತ್ರಿಕರನೆಲ್ಲಾ ಚಕ್ಕಮಟ್ಟಿಗೆ ತಿಳಿದವರಾಗಿರುತ್ತಾರೆ ಮತ್ತು ಅವರು ಬಹಿರಂಗವಾಗಿ ಹೇಳುವ ಮಾತು ಕತ್ತೆಯ ಪಟ್ಟದವರಿಗೆ ಪೂಜ್ಯವಾಗಿರುವದು ಇಂಡಿಯಾವಿನ ಮೆಡಿಕಲ್ ಕಾಲೇಜಿನ ಎಕ್ಸ್‌ಟರ್ನಲ್ ಲೆಕ್ಚರರಾದ ಡಾಕ್ಟರ್ ಎ ಕೆ ಮುಖರ್ಜಿಯವರು ತಮ್ಮ ಸ್ವಂತ ಅನುಭವದ ಮೇಲೆ ಖಂಡಿತವಾಗಿ ಹೇಳುವದೇನೆಂದರೆ —ಕಿಡ್ನಿ ರೋಗ, ಬ್ಲಾಡರ್-ಯೂ-ಮೂತ್ರ ಸಂಬಂಧವಾದ ಇತರ ಬಾಧೆಗಳಿಂದ ಪೀಡಿತರಾಗಿ ಬೇರೆ ಔಷಧಗಳಿಂದ ಉಪಶಮನ ಸಿಕ್ಕದಂಥ ಹೋಗಿದ್ದ ಬೆನ್ನುನೋವಿನ-ಮೂತ್ರಕೋಶ ಬಾಧೆಯ ಔಷಧ ಗುಳಿಗೆ (ಫೋಸ್ಟ್ಸ್ ಬ್ಯಾಕ್ ಏಕ್-ಕಿಡ್ನಿ ಪಿಲ್ಸ್) ಗಳನ್ನು ಸೇವಿಸುವ ಮೊದಲ ಆಶ್ಚರ್ಯಪಡಬೇಕಾದ ಪರಿಣಾಮಕರ.—ಇತರ ಔಷಧಗಳಿಂದ ಗುಣಸಿಕ್ಕದೆ ಇದ್ದವರಿಗೆ ಇದರಿಂದ ಗುಣವಾಗಿಯದೆ.

ಬೆನ್ನೆಲುಬಿನಲ್ಲಿಯ ನೋವು ಮೂತ್ರಪಿಂಡದ ಉಪದ್ರವಿರುವದಾಗಿ ಸೂಚಿಸುತ್ತದೆ ಕಿಡ್ನಿಯಲ್ಲಿಯೂ ನೋವು ಇರುವದು. ಇತರ ಚಿನ್ಹೆಗಳು ಯಾವವೆಂದರೆ:—ತಲೆ ತಿರುಗುವಿಕೆ, ತಲೆ ನೋವು, ನೀರು ತುಂಬಿದ ಬೇಗು, ದೃಷ್ಟಿ ಮಾಂದ್ಯ ಮುಂತಾದ್ದು ಈ ಗುಳಿಗೆ ಮೂತ್ರಕೋಶಗಳನ್ನು ಸರಿಪಡಿಸಿ ಬೆನ್ನುನೋವಿನ, ಗಾತನೋವಿನ ಮೂತ್ರಬಾಧೆಗಳ ಮತ್ತು ಮೂತ್ರಸಂಬಂಧವಾದ ಇತರ ವ್ಯಾಧಿಗಳ ಹೇತುವನ್ನು ಪರಿಹರಿಸುತ್ತವೆ.

ಎಲ್ಲಾ ಔಷಧ ವರ್ತಕರಿಂದ ಮಾರಲ್ಪಡುತ್ತದೆ. ಸೀಸೆ ಒಂದಕ್ಕೆ ರೂ. ೨, ಅಥವಾ ೬ ಸೀಸೆಗಳಿಗೆ ರೂ. ೧೦-೪-೦, ಅಥವಾ ಮುಂಬಯಿಯಲ್ಲಿಯ ಫೋಸ್ಟರ ಔಷಧಗಳ ಕಛೇರಿಯಿಂದ ಕೇಳಿ ತರಿಸಿಕೊಳ್ಳಬಹುದು. ಪಿ. ಬಿ. ಬಾಕ್ಸ್ ನಂ. ೨೦, ಮುಂಬಯಿ.

ವೃತ್ತಾಂತ ಪತ್ರಿಕೆ.

—:೦:—

ಸ|| ೧೯೦೭ ನೇ ಇಸವಿ ಅಕ್ಟೋಬರ್ ತಾ|| ೩೧ ನೇ ಗುರುವಾರ

ಮೈಸೂರು ಪ್ರಜಾ ಪ್ರತಿನಿಧಿಸಭೆಯು

ಮೈಸೂರು ಗವರ್ನಮೆಂಟಿನವರು ಹೋದ ವರುಷ ಪ್ರಜಾ ಪ್ರತಿನಿಧಿಸಭೆಯಲ್ಲಿ ಚರ್ಚೆ ಮೊದಲಾದದ್ದು ನಡಿಯುವುದನ್ನು ಕ್ರಮಕ್ಕೆ ತಂದಿಡಬೇಕೆಂದು ಕೆಲವು ರೂಲು ಗಳನ್ನು ಮಾಡಿ ಪ್ರಕಟಿಸಿದರು. ಈ ಹೊಸ ರೂಲುಗಳ ಪ್ರಕಾರ ಈ ವರುಷದ ಸಭೆಯು ನಡಿಸಲ್ಪಟ್ಟಿರುತ್ತದೆ. ಆ ರೂಲುಗಳ ಉದ್ದೇಶಗಳೇನೆಂದರೆ—(೧) ಮೆಂಬರುಗಳನ್ನು ಚುನಾಯಿಸತಕ್ಕ ಹಕ್ಕುಳ್ಳಂಥಾ ಓಟರುಗಳ ಪಟ್ಟಿಯನ್ನು ಕ್ರಮವಾಗಿ ಮೊದಲೇ ಪ್ರಕಟಿಸಿ, ಅವರನ್ನೆಲ್ಲಾ ಮಧ್ಯಸ್ಥವಾದ ಒಂದು ಸ್ಥಳಕ್ಕೆ ಸಕಾಲದಲ್ಲಿ ಕರಿಸಿಕೊಂಡು, ಚುನಾವಣೆ ಕಾರ್ಯವನ್ನು ತೃಪ್ತಿಕರವಾಗಿ ನಡಿಸುವುದು; (೨) ಸಭೆಯಲ್ಲಿ ಹಿಂದೆಯೇ ಚರ್ಚೆಯಾಗಿ ತೀರ್ಮಾನವಾಗಿರುವಂಥಾ ವಿಷಯಗಳನ್ನೂ ಅಲ್ಪ ವಿಷಯಗಳನ್ನೂ ವಜಾ ಮಾಡಿ, ಮುಖ್ಯ ಮುಖ್ಯವಾದ ವಿಚಾರಗಳನ್ನು ಮಾತ್ರ ಗೊತ್ತುಮಾಡುವುದು: ಅಂದರೆ, ಸಭೆಯಲ್ಲಿ ಚರ್ಚಿಸತಕ್ಕ ವಿಷಯಗಳ ಸಂಖ್ಯೆಯನ್ನು ಕಡಿಮೆಮಾಡುವುದು; (೩) ಸಭೆಯಲ್ಲಿ ಮೆಂಬರುಗಳು ವಿಷಯವನ್ನು ಕುರಿತು ಯಾವ ರೀತಿ ಚರ್ಚೆಮಾಡಬೇಕು, ಎಷ್ಟು ಸಲ ಮಾತನಾಡಬೇಕು ಈ ವಿಚಾರದಲ್ಲಿ ಒಂದು ಕ್ರಮವನ್ನನುಸರಿಸುವುದು.

ಮೇಲ್ಕಂಡ ಮೊದಲನೇ ಉದ್ದೇಶವು ಈ ಸಲ ಎಷ್ಟು ಮಟ್ಟಿಗೆ ಸಾರ್ಥಕವಾಗಿಯೂ ತೃಪ್ತಿಕರವಾಗಿಯೂ ನೆರವೇರಿತೋ ನಾವು ಕಾಣೆವು. ಡೆಪ್ಯುಟಿ ಕಮಿಷನರುಗಳು ಸಕಾಲದಲ್ಲಿ ಪ್ರಜಾ ಪ್ರತಿನಿಧಿಗಳನ್ನು ಕರಿಸಿಕೊಂಡು, ದೊಡ್ಡ ಸಭೆಯಲ್ಲಿ ಚರ್ಚೆಗೆ ಬರತಕ್ಕ ವಿಚಾರಗಳನ್ನು ಮಾತ್ರ ಗೊತ್ತುಮಾಡಿ, ಅನುಪಯೋಗವೂ ಅಲ್ಪವೂ ಇತ್ಯರ್ಥಪಟ್ಟವೂ ಆದ ವಿಷಯಗಳನ್ನು ಮೆಂಬರುಗಳ ಸಮ್ಮತಿಯನ್ನು ಪಡೆದು ವಜಾಮಾಡಿದ್ದರಿಂದ ಗವರ್ನಮೆಂಟಿನವರ ಎರಡನೇ ಉದ್ದೇಶವು ತಕ್ಕಮಟ್ಟಿಗೆ ಸಾರ್ಥಕವಾಯಿತೆಂದು ಹೇಳಬಹುದಾದರೂ ಕೆಲವು ಸಂದರ್ಭಗಳಲ್ಲಿ ಇದು ತೃಪ್ತಿಕರವಾದಷ್ಟು ಮಟ್ಟಿಗೆ ನಡಿಯಲಿಲ್ಲವೆಂದು ಕಾಣುತ್ತದೆ. ಯಾಕಂದರೆ ಈ ವರುಷ ಸಭೆಯಲ್ಲಿ ಚರ್ಚೆಗೆ ತರಲ್ಪಟ್ಟದ್ದ ವಿಷಯಗಳ ಸಂಖ್ಯೆಯು ಬಹಳ ಹೆಚ್ಚಾಗಿತ್ತು. ಆ ಪೈಕಿ ಅನೇಕ ವಿಷಯಗಳನ್ನು ಡಿಸ್ಟ್ರಿಕ್ಟ್ ಅಧಿಕಾರಿಗಳೇ ಇತ್ಯರ್ಥಪಡಿಸಬಹುದಾಗಿತ್ತು. ಮೂರನೇ ಉದ್ದೇಶವು ಬಹು ಮಟ್ಟಿಗೆ ನೆರವೇರಲಿಲ್ಲವೆಂದೇ ಹೇಳಬಹುದು. ಚರ್ಚೆ ನಡಿಯುವ ವಿಷಯದಲ್ಲಿ ಮಾಡಿದ ಕ್ರಮಗಳು ಸರಿಯಾಗಿ ಆಚರಣೆಗೆ ಬರಲಿಲ್ಲ. ಅದರೆ ಮೆಂಬರುಗಳು ತಮ್ಮ ತಮ್ಮ ಸ್ಥಾನಗಳಲ್ಲೇ ನಿಂತು ಮಾತಾಡುವುದೊಂದು ಮಾತ್ರ ತಪ್ಪಿಹೋಯಿತು. ಒಂದೇ ಸಲ ನಾಲ್ಕಾರು ಮಂದಿ ಮೇಜಿನ ಮುಂದೆ ಬಂದು ಹಿಂದಿರುವವರಿಗೆ ಮರೆಯಾಗುವಂತೆ ನಿಂತು ಮಾತನಾಡುವುದಾಗಲಿ, ಒಬ್ಬ ಮೆಂಬರು ತಡೆಯಿಲ್ಲದೆ ಎಷ್ಟು ಸಲವಾದರೂ ಮಾತನಾಡುವುದಾಗಲಿ ಕ್ರಮಪಡಲಿಲ್ಲ.

ಪ್ರಜಾ ಪ್ರತಿನಿಧಿ ಸಮಾಜದಿಂದ ಹೊಸ ಲೆಜಿಸ್ಲೆಟಿವ್ ಕೌನ್ಸಿಲಿಗೆ ಮೆಂಬರುಗಳನ್ನು ಚುನಾಯಿಸಿ ಕಳುಹಿಸಬೇಕೇ ಬೇಡವೇ ಎಂಬೀ ವಿಷಯವು ಈ ವರುಷದ ಸಭೆಯಲ್ಲಿ ಚರ್ಚೆಯಾದ ಎಲ್ಲಾ ವಿಷಯಗಳಿಗಿಂತಲೂ ವಿಶೇಷವಾದ್ದೆಂದು ನಮಗೆ ಕಾಣಬರುತ್ತದೆ. ದಿವಾನರವರು ಪ್ರತಿನಿಧಿಗಳ ಅಭಿಪ್ರಾಯವನ್ನು ತಿಳಿಯಬೇಕೆಂದು ಈ ವಿಷಯವನ್ನು ಪ್ರಾಯಶಃ ಪ್ರತಿ ದಿನದ ಸಭೆಯಲ್ಲೂ ಸೂಚಿಸುತ್ತಲೇ ಇದ್ದರು. ಮೆಂಬರುಗಳು ನಾನಾ ರೀತಿ ಮಾತನಾಡುತ್ತಾ ಬಂದು ಕಡೆಗೆ ಹೇಳಿದ್ದೇನೆಂದರೆ—ಪ್ರಜಾ ಪ್ರತಿನಿಧಿ ಸಭೆಯಿಂದ ಹೊಸ ಲೆಜಿಸ್ಲೆಟಿವ್ ಕೌನ್ಸಿಲಿಗೆ ಮೆಂಬರುಗಳನ್ನು ಚುನಾಯಿಸಿ ಕಳುಹಿಸಬೇಕಾದದ್ದಿಲ್ಲ. ಆದರೆ ಯಾವ ಕಾನೂನಾದರೂ ಲೆಜಿಸ್ಲೆಟಿವ್ ಕೌನ್ಸಿಲಿನಲ್ಲಿ ಚರ್ಚೆಯಾಗಿ ಗೊತ್ತಾದ ಮೇಲೆ ಅದನ್ನು ಗವರ್ನಮೆಂಟಿನವರು ಪ್ರತಿನಿಧಿ ಸಭೆಯಲ್ಲಿ ತಂದಿಟ್ಟು, ಅದರ ವಿಷಯದಲ್ಲಿ ಪ್ರತಿನಿಧಿಗಳ ಅಭಿಪ್ರಾಯವನ್ನು ತೆಗೆದುಕೊಂಡು, ತರುವಾಯ ಶ್ರೀಮನ್ಮಹಾರಾಜರವರ ಅನುಮತಿ ಪಡೆಯುವುದಕ್ಕಾಗಿ ಕಳುಹಿಸಬೇಕು. ಪ್ರತಿನಿಧಿಗಳ ಅಭಿಪ್ರಾಯದಂತೆ ಕಾನೂನನ್ನು ಬದಲಾಯಿಸಿಕೊಡಬೇಕು. ಇಲ್ಲವಾದರೆ ಯಾವ ಕಾನೂನನ್ನೂ ಜಾರಿಗೆ ತರಕೂಡದು ಎಂಬೀ ರೀತಿಯಾಗಿ ದಿವಾನರವರಿಗೆ ಅರಿಕೆಮಾಡಿದರು. ದಿವಾನರವರು ಪ್ರತಿನಿಧಿಗಳ ಅಭಿಪ್ರಾಯದಂತೆ ನಡಿಸಿಕೊಡುವುದು ಸಾಧ್ಯವಲ್ಲವೆಂತಲೂ, ಅಂಥಾ ಸಲಹೆಯನ್ನು ಗವರ್ನಮೆಂಟಿನವರು ಪರ್ಯಾಲೋಚಿಸಲಾರರೆಂತಲೂ ಅಪ್ಪಣೆಕೊಡಿಸಿರುತ್ತಾರೆ.

ದಿವಾನರವರು ಪ್ರತಿನಿಧಿಗಳಿಗೆ ಕೊಟ್ಟ ಜವಾಬು ನ್ಯಾಯವಾದದ್ದೆಂದು ವಿವೇಕಶಾಲಿಗಳೆಲ್ಲಾ ಒಪ್ಪಿಕೊಂಡಾರೆನ್ನುವುದಕ್ಕೆ ಸಂಶಯವಿಲ್ಲ. ಸಂಸ್ಥಾನದ ಅಭಿವೃದ್ಧಿಗೂ ಪ್ರಜಾ ಸೌಕರ್ಯಕ್ಕೂ ಆಗಿಂದಾಗ್ಗೆ ಅವಶ್ಯವೆಂದು ಗವರ್ನಮೆಂಟಿನವರಿಗೆ ಕಂಡುಬರುವಂಥಾ ಕಾನೂನುಗಳನ್ನು ವರುಷಕ್ಕೊಂದಾವರ್ತಿ ಆದರಲ್ಲೂ ಒಂದುವಾರದ ಮಟ್ಟಿಗೆ ಕೂಡತಕ್ಕ ಈ ಪ್ರತಿನಿಧಿ ಸಭೆಯಲ್ಲಿಟ್ಟು, ಪ್ರತಿನಿಧಿಗಳ ಅಭಿಪ್ರಾಯವನ್ನು ತೆಗೆದುಕೊಳ್ಳಬೇಕೆಂಬುವುದು ಎಷ್ಟು ಮಾತ್ರಕ್ಕೂ ಸಾಧ್ಯವಲ್ಲ. ಇದೂ ಅಲ್ಲದೆ ಈ ಪ್ರತಿನಿಧಿ ಸಭೆಯ ಈಗಿನ ಸ್ಥಿತಿಗತಿಯನ್ನು ನೋಡಲಾಗಿ ಅದರಲ್ಲಿರತಕ್ಕ ಮೆಂಬರುಗಳಿಗೆ ಸಾಮಾನ್ಯವಾಗಿ ಕಾನೂನುಗಳನ್ನು ಹಿಡಿದು ಚರ್ಚಿಸಿ ನಿರ್ಧರಿಸುವಷ್ಟು ವಿವೇಕಜ್ಞಾನವಾಗಲಿ, ಅನುಭವವಾಗಲಿ, ವಿದ್ಯಾಪ್ರೌಢಿಮೆಯಾಗಲಿ ಇರುವುದಿಲ್ಲವೆಂದು ಧಾರಾಳವಾಗಿ ಹೇಳಬಹುದು.

ಈ ಸಭೆಯಿಂದ ಇಬ್ಬರು ಮೆಂಬರುಗಳನ್ನು ಲೆಜಿಸ್ಲೆಟಿವ್ ಕೌನ್ಸಿಲಿಗೆ ಚುನಾಯಿಸಿ ಕಳುಹಿಸುವಂತಾಗಬೇಕೆಂದು ಕೆಲವು ಪ್ರತಿನಿಧಿಗಳು ಅಪೇಕ್ಷಿಸುವುದು ಸಹಜವಾದದ್ದೆಂದು ಹೇಳಬಹುದು. ಗವರ್ನಮೆಂಟಿನವರು ಲೆಜಿಸ್ಲೆಟಿವ್ ಕೌನ್ಸಿಲಿನಲ್ಲಿ ಪ್ರಜಾಪಕ್ಷದ ಮೆಂಬರುಗಳ ಸಂಖ್ಯೆಯನ್ನು ಹೆಚ್ಚಿಸುವುದಾದರೆ ಪ್ರತಿನಿಧಿಗಳ ಈ ಸಲಹೆಯನ್ನು ನೆರವೇರಿಸಿಕೊಡಬೇಕೆಂದು ಅಪೇಕ್ಷಿಸುತ್ತೇವೆ.

ಒಳದೇಶದ ವೃತ್ತಾಂತಗಳು.

ಶ್ರೀಮನ್ಮಹಾರಾಜರವರು ಇಷ್ಟರಲ್ಲೇ ಕೆಲವು ಡಿಸ್ಟ್ರಿಕ್ಟುಗಳ ಮೇಲೆ ಸರ್ಕೀಟು ದಯಮಾಡುವವರಾಗಿದಾರೆಂದು ವರ್ತಮಾನವಿದೆ.

❖❖❖

ಕೋಲಾರ್ ಚಿನ್ನದ ಗಣಿಗಳಿಗೆ ಸೇರಿದ ಅಜ್ಜಿಪಲ್ಲಿಯ ಹತ್ತಿರ ಸೋಮಪುರವೆಂಬಲ್ಲಿ ಒಬ್ಬನು ಖೋಟಾ ನಾಣ್ಯಗಳನ್ನು ತಯಾರುಮಾಡುತ್ತಿದ್ದನೆಂದು ಪೋಲೀಸಿನವರು ಅವನನ್ನು ದಸ್ತಗಿರಿ ಮಾಡಿರುತ್ತಾರೆ.

❖❖❖

ಮುಂದಿನ ಗುರುವಾರ ಶ್ರೀಮದ್ಯುವರಾಜರು ಕಾಕನಕೋಟೆ, ಗುಂಡ್ಲುಪೇಟೆ ಪ್ರಾಂತ್ಯದ ಕಾಡುಗಳಲ್ಲಿ ಶಿಕಾರಿಯ ಉದ್ದಿಶ್ಯ ದಯಮಾಡುವವರಾಗಿದಾರೆ. ಅವರ ಕೂಡ ಕೆಲವು ಸರದಾರರೂ ಹೋಗಿ ಬರುವಂತೆ ಕೇಳುತ್ತೇವೆ.

❖❖❖

ಕೊಡಗಿನ ಕಡೆ ಪ್ರಯಾಣಮಾಡಿದ್ದ ಬ್ರಿಟಿಷ್ ರೆಸಿಡೆಂಟರು ಮೊನ್ನೆ ಮಂಗಳವಾರ ಮಧ್ಯಾಹ್ನ ಸ್ಪೆಷಲ್ ಗಾಡಿಯಲ್ಲಿ ರಾಜಧಾನಿಗೆ ಬಂದು, ಆ ರಾತ್ರಿಯೇ ಬೆಂಗಳೂರಿಗೆ ತೆರಳಿದರು. ಗೌರವಾರ್ಥವಾದ ತೋಪುಗಳು ಎರಡು ವೇಳೆಯೂ ಹಾರಿಸಲ್ಪಟ್ಟವು.

❖❖❖

ಜನಗಳ ರೋಗ ಚಿಕಿತ್ಸೆಗೆ ಸರ್ಕಾರದವರು ಮುಂದಿನ ತಿಂಗಳಲ್ಲಿ ಏಳು ಆಸ್ಪತ್ರೆಗಳನ್ನು ಇಡುವವರಾಗಿದಾರೆ. ಚಿಕ್ಕಮಗಳೂರು, ಮೈಸೂರು, ಹೊಳಲ್ಕೆರೆ, ಗುಬ್ಬಿ, ಕೋಲಾರ, ಸಾಗರ, ಹಾಸನ, ಈ ಏಳು ಸ್ಥಳಗಳಲ್ಲೂ ಸದ್ಯ ಒಂದೊಂದು ಆಸ್ಪತ್ರೆ ಏರ್ಪಾಡಾಗುವುದು.

❖❖❖

ಮೈಸೂರು ಡಿಸ್ಟ್ರಿಕ್ಟಿನಲ್ಲಿ ವ್ಯವಸಾಯಗಾರರಿಗೆ ಪ್ರೋತ್ಸಾಹಪಡಿಸಿ, ವ್ಯವಸಾಯವೇ ಮೊದಲಾದ ಕಸುಬುಗಳನ್ನು ಅಭಿವೃದ್ಧಿಗೆ ತರಬೇಕೆಂದು ರಾಜಧಾನಿಯಲ್ಲಿ ಒಂದು ಸಂಘವನ್ನು ಕಳೆದ ವಾರ ಪ್ರಾರಂಭಿಸಿದರು. ರೆವಿನ್ಯೂ ಕಮಿಷನರವರ ಪ್ರೋತ್ಸಾಹವೂ ಇದಕ್ಕೆ ವಿಶೇಷವಾಗಿದೆ.

❖❖❖

ಬೆಂಗಳೂರು ವೈದ್ಯ ಪರಿಷ್ಶಾಲೆಯಲ್ಲಿ ಸುಮಾರು ಒಂದೆರಡು ತಿಂಗಳಿಂದ ಅಸಿಸ್ಟೆಂಟರಾಗಿ ಕೆಲಸ ಮಾಡುತ್ತಿದ್ದ ಮಿ|| ಪರಮಾಳು ನಾಯುಡು, ಬಿ. ಎ., ಎಂ. ಬಿ. ಸಿ. ಎಂ., ಎಂಬುವರು ವಾಂತಿಭೇದಿ ತಗಲಿ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರಿಗೆ ಇನ್ನೂ ೩೩ ವರುಷ ವಯಸ್ಸಾಗಿತ್ತು.

❖❖❖

ಬೊಂಬಾಯಿ ಪಟ್ಟಣದ ಸಾಹುಕಾರ್ ನರೋತ್ತಮ ಮಾರಾರ್ಜಿ ಗೋಕುಲದಾಸ್‌ಯವರು ಕಳೆದ ವಾರ ರಾಜಧಾನಿಗೆ ಬಂದು ಆನೆ ಶಿಕಾರಿಗೋಸ್ಕರ ಕಾಕನಕೋಟೆ ಜಂಗಲಿಗೆ ಹೋಗಿದ್ದರು. ಇವರು ಇನ್ನು ೨–೩ ದಿನಗಳೊಳಗಾಗಿ ವಾಪಸು ಬೊಂಬಾಯಿಗೆ ಪ್ರಯಾಣ ಮಾಡುವರೆಂದು ಕೇಳುತ್ತೇವೆ.

❖❖❖

ಕಳೆದ ವಾರ ರಾಜಧಾನಿಯಲ್ಲಿ ಚಾಮುಂಡಿಬೆಟ್ಟದ ಜಾತ್ರೆಯು ಗುಮಾಗ್ಗೆ ಪೋಲೀಸಿನವರೂ ಅರಮನೆಯ ಸಿಪಾಯಿಗಳೇ ಮುಂತಾದವರೂ ಬಹಳ ಎಚ್ಚರಿಕೆಯಿಂದಲೂ ಮುತುವರ್ಜಿಯಾಗಿಯೂ ಕೆಲಸ ಮಾಡಿದರೆಂದು ಸಂತೋಷಪಟ್ಟು ಮಹಾಮಾತೃಶ್ರೀಯವರು ಅವರಿಗೆಲ್ಲಾ ಇನಾಮು ಕೊಡಬೇಕೆಂದು ೫೦೦ ರೂಪಾಯಿ ದಯಪಾಲಿಸಿದರು.

ಹಿಂದಿನ ಭಾನುವಾರ ಆರ್ಯ ಧರ್ಮೋಜ್ಜೀವಿನೀ ಸಭೆಯ ಮೂರನೇ ವಾರ್ಷಿಕೋತ್ಸವವು ರಾಜಧಾನಿಯ ಟೌನ್ ಹಾಲ್ ಮಂದಿರದಲ್ಲಿ ನಡಿಯಿತು. ಮಿ|| ಎ. ಮಹದೇವ ಶಾಸ್ತ್ರಿಗಳು ಬಾಲ್ಯವಿವಾಹಗಳ ದುಷ್ಪರಿಣಾಮವನ್ನು ಕುರಿತು ಒಂದು ಶ್ರೇಷ್ಠವಾದ ಉಪನ್ಯಾಸವನ್ನು ಮಾಡಿದರು. ತರುವಾಯ ಸಭಾ ಪ್ರೆಸಿಡೆಂಟ್ ಮಿ|| ಎಚ್. ವಿ. ನಂಜುಂಡೈಯ್ಯನವರು ಬಹು ಸ್ವಾರಸ್ಯವಾದ ಉಪನ್ಯಾಸ ಮಾಡಿ ಸಭೆಯನ್ನು ಮುಕ್ತಾಯಕ್ಕೆ ತಂದರು.

❖❖❖

ಕಳೆದ ೨೬ ನೇ ತಾ. ಶನಿವಾರ ಚಿತ್ರದುರ್ಗದ ಟವುನಿಗೆ ಸೇರಿದ ಕೆಳಕೋಟೆ ಎಂಬ ಗ್ರಾಮದಲ್ಲಿ ಸುಮಾರು ೧೨ ಗಂಟೆ ಸಮಯದಲ್ಲಿ ಕಲ್ಲು ಒಡ್ಡರ ಜಾತಿ ಹನುಮ ಎಂಬುವನು ತನ್ನ ಮಕ್ಕಳಾದ ೧೪, ೧೦, ೫ ವರುಷಗಳ ಒಂದು ಹೆಣ್ಣು ಮಗು, ಎರಡು ಗಂಡು ಮಕ್ಕಳನ್ನು ತನ್ನ ಹುಲ್ಲಿನ ಗುಡಿಸಲಿನಲ್ಲಿ ಮಲಗಿಸಿ, ತಂದೆತಾಯಿಗಳು ಅಕ್ಕಸಾಲೆಯರ ಮನೆಗೆ ಹೋಗಿಬರೋಣವೆಂದು ಹೊರಟು ೫–೬ ಫರ್ಲಾಂಗ್ ದೂರ ಹೋಗುವಷ್ಟರಲ್ಲಿ ಹ್ಯಾಗೋ ಆಕಸ್ಮಾತ್ ಮೇಲೆ ಕಂಡ ಗುಡಿಸಲಿಗೆ ಬೆಂಕಿಬಿದ್ದು ಸುತ್ತಲೂ ಇದ್ದ ೩–೪ ಗುಡಿಸಲಿಗೆ ಹತ್ತಿಕೊಂಡು, ಗಾಳಿಯೂ ಜೋರಾದ್ದರಿಂದ ಎಷ್ಟು ಜನರು ಸಾಹಸಪಟ್ಟರೂ ಬೆಂಕಿಯ ಜ್ವಾಲೆಯು ಕಮ್ಮಿ ಆಗದೆ, ಒಳಗೆ ಮಲಗಿದ್ದ ಮಕ್ಕಳು, ಕಾಲು ಕಾಲು ಸುಟ್ಟುಹೋದಾಗ ಹೊರಗಡೆ ಓಡಿಬರಬೇಕೆಂಬ ಆಸೆಯಿಂದ ಓಡಿಬರಲಿಕ್ಕೆ ಹೊಗೆಯಿಂದ ದಿಕ್ಕು ತೋಚದೆ ಒಂದರ ಮೇಲೊಂದು ಸಾಲಾಗಿ ಮೂರು ಮಕ್ಕಳೂ ಮಲಗಿ ಬೆಂಕಿಯ ಪಾಲಾದವು. ಇವರ ಸಂಗಡ ಒಂದು ನಾಗರ ಹಾವು, ಒಂದು ಹೆಗ್ಗಣ ಸಹ ಸುಟ್ಟುಹೋದವು. ಅಷ್ಟರಲ್ಲಿ ಮೇಲೆ ಕಂಡ ಮಕ್ಕಳ ತಾಯಿತಂದೆ ಓಡಿಬಂದು, ಮಕ್ಕಳನ್ನು ಹುಡುಕಲಿಕ್ಕೆ ಪ್ರಾರಂಭಿಸಿ, ಕೊನೆಗೆ ಬೆಂಕಿಯು ಶಮನವಾದ ನಂತರ ನೋಡುವಲ್ಲಿ ಮೂರು ಶವಗಳೂ ಗುರ್ತಿಸಲಿಕ್ಕೆ ಆಗದ ಹಾಗೆ ಸತ್ತು ಬಿದ್ದಿದ್ದವು. ಆಗ ಆ ತಂದೆತಾಯಿಗಳಿಗುಂಟಾದ ದುಃಖವನ್ನು ವಿವರಿಸಲಾಗದು. ಅವರಿಗೆ ಆ ಮೂರು ಮಕ್ಕಳು ವಿನಹ ಬೇರೆ ಮಕ್ಕಳೇ ಇಲ್ಲ. ಹೀಗೆ ಆ ಬಡ ಕೂಲಿಯವರು ಇಟ್ಟ ಅಲ್ಪಸ್ವಲ್ಪ ಧಾನ್ಯವೂ ಸಹ ಅಗ್ನಿಯ ಪಾಲಾಯಿತು. ಬಡವರ ರಕ್ಷಕರಾದ ಸರ್ಕಾರದವರು ಅನಂತರ ಬಂದು ಶವಗಳನ್ನು ಪರಾಂಬರಿಸಿ ದಫನ ಮಾಡಿಸಿದರು ಎಂದು ಒಬ್ಬ ಬಾತ್ಮಿದಾರರು ಬರೆಯುತ್ತಾರೆ.

ಮೈಸೂರ್ ಗೆಜೆಟ್ ಸಂಗ್ರಹ

ತಾಲ್ಲೂಕ್ ಬ್ರಾಂಚ್ ಮತ್ತು ಹೋಬಳಿ ಸ್ಕೂಲುಗಳನ್ನು ಇನ್ನು ಮೇಲೆ ಗ್ರಾಮ ಎಲಿಮೆಂಟರಿ ಪಾಠಶಾಲೆಗಳೆಂದು ಕರೆಯತಕ್ಕದ್ದು. ಮತ್ತು ಇಂಥಾ ಗ್ರಾಮ ಎಲಿಮೆಂಟರಿ ಪಾಠಶಾಲೆಗಳ ಅಪ್ಪರ್ ಮತ್ತು ಲೋಯರ್ ಪ್ರೈಮರಿ (ಮಕ್ಕಳ ೧, ೨, ೩ ನೆ) ತರಗತಿಗಳಲ್ಲಿ ಇದೇ ಅಕ್ಟೋಬರ್ ೧ರ ಆರಭ್ಯ ಫೀಜೇನೂ ವಸೂಲ್ಮಾಡ ಕೂಡದು, ಫ್ರೀ ಆಗಿ ವಿದ್ಯೆ ಕಲಿಸತಕ್ಕದ್ದು.

ದಾವಣಗೆರೆ ಆಸ್ಪತ್ರೆಯ ಸಬ್ ಅ|| ಸರ್ಜನ್ ಮಿ|| ಕೆ. ಅನಂತರಾಮೈಯ್ಯಂಗಾರ್ರಿಗೆ ದಸರಾ ರಜಾಕ್ಕೆ ಸೇರಿದಂತೆ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮೈಸೂರು ಜನರಲ್ ಆಸ್ಪತ್ರೆಯಲ್ಲಿರುವ ಹಂಗಾಮಿ ಸಬ್ ಅ|| ಸರ್ಜನ್ ಮಿ|| ಎಸ್. ನಾರಾಯಣರಾಯರು ಮತ್ತೊಂದು ಹುಕುಂ ಕೊಡಲ್ಪಡುವ ತನಕ ದಾವಣಗೆರೆ ಆಸ್ಪತ್ರೆಯ ಚಾರ್ಜನ್ನು ವಹಿಸತಕ್ಕದ್ದು.

ಮಿ|| ಜಿ. ಎಸ್. ರಾಮಸ್ವಾಮೈಯ್ಯಂಗಾರ್ರು ಅರಸೀಕೆರೆ ತಾಲ್ಲೂಕ್ ಛಾರ್ಜನ್ನು ವಹಿಸಿರುವ ತನಕ ೩ ನೆ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರಗಳನ್ನು ಚಲಾಯಿಸತಕ್ಕದ್ದು.

ತುಂಕೂರು ಡಿಸ್ಟ್ರಿಕ್ಟ್ ಪೋಲೀಸ್ ಸೂಪರಿಂಟೆಂಡೆಂಟ್ ಮಿ|| ವೈ. ವಿ. ಕೃಷ್ಣಮೂರ್ತಿಯವರಿಗೆ ಅಕ್ಟೋಬರ್ ೨೫ ರಿಂದ ಎರಡು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಬೆಂಗಳೂರ್ ಡಿಸ್ಟ್ರಿಕ್ಟ್ ಪೋಲೀಸ್ ಸೂಪರಿಂಟೆಂಡೆಂಟ್ ಮಿ|| ಎಲ್. ಕೃಷ್ಣರಾಯರಿಗೆ ಅಕ್ಟೋಬರ್ ೨೫ ರಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮಿ|| ಪಿ. ಜಿ. ಡಿಸೋಜಾಯವರನ್ನು ಅ|| ಕಮಿಷನರ ದರ್ಜೆಯಲ್ಲಿ ಸೆಪ್ಟಂಬರ್ ೨೯ ರಿಂದ ೧ ನೆ ಕ್ಲಾಸಿಗೆ ಬಡ್ತಿಮಾಡಿದೆ.

ಮತ್ತೊಂದು ಹುಕುಂ ಕೊಡಲ್ಪಡುವ ತನಕ ಮಿ|| ಎಫ್. ಎ. ಸ್ಟೀಲ್‌ಯವರು ಅ|| ಎಕ್ಸಿಕ್ಯೂಟಿವ್ ಇಂಜಿನಿಯರಾಗಿ ಕೆಲಸ ಮಾಡತಕ್ಕದ್ದು.

ಮೈಸೂರು ಇಂಪೀರಿಯಲ್ ಸರ್ವಿಸ್ ರೆಜಿಮೆಂಟಿನಲ್ಲಿ ಅಸಿಸ್ಟೆಂಟ್ ರಾವ್ ನಿಸ್ಸೋಯವರನ್ನು ರೆಜಿಮೆಂಟಲ್ ದಫೇದಾರ್ ಮೇಜರ್ ರ್‍ಯಾಂಕಿಯಿಂದ ೫ ನೆ ಗ್ರೇಡ್ ಜಮೇದಾರಿಗೆ ಅಕ್ಟೋಬರ್ ೨ರ ಆರಭ್ಯ ಬಡ್ತಿಮಾಡಿದೆ.

ಮುಂದೆ ಹೇಳುವ ಅಮಲ್ದಾರರುಗಳ ವರ್ಗಾವರ್ಗಿ ಹುಕುಂ ಮಾಡಲ್ಪಟ್ಟಿದೆ:—ಮಿ|| ಬಿ. ಸುಬ್ರಹ್ಮಣ್ಯ ನಾಯುಡು ಯವರು ಮಾಳವಳ್ಳಿಗೆ, ಮಿ|| ವಿ. ಎನ್. ಗುರುರಾಯರು ಹೊಸಕೋಟೆಗೆ, ಮಿ|| ಎನ್. ಶ್ರೀನಿವಾಸರಾಯರು ಹೊಸಕೋಟೆಯಿಂದ ಯಳಂದೂರಿಗೆ; ಮಿ|| ಎನ್. ರಾಮರಾಯರು ಯಳಂದೂರಿನಿಂದ ಟಿ. ನರಸೀಪುರಕ್ಕೆ.

ಸೀನಿಯರ್ ಅ|| ಕಮಿಷನರ್ ಮಿ|| ವಿ. ಆರ್. ತ್ಯಾಗರಾಜ ಐಯ್ಯರವರಿಗೆ ಕೊಟ್ಟಿರುವ ಎರಡು ತಿಂಗಳ ರಜವನ್ನು ಇನ್ನೊಂದು ತಿಂಗಳು ಜಾಸ್ತಿ ಮಾಡಿದೆ.

ರಾಜಧಾನಿಯಲ್ಲಿ ನಡೆದ ಗೋಕಾಯಿಗಳ ಪ್ರದರ್ಶನವು.

ಈ ಸಲ ನವರಾತ್ರಿ ಉತ್ಸವಗಳ ಕಾಲದಲ್ಲಿ ಮೈಸೂರು ಪಟ್ಟಣದಲ್ಲಿ ವ್ಯಾಪಾರಿಕೆಗಳ ಮತ್ತು ವ್ಯವಸಾಯೋಪಕರಣಗಳ ಪ್ರದರ್ಶನಗಳ ಜೊತೆಗೆ ಗೋಕಾಯಿಗಳ ಪ್ರದರ್ಶನವನ್ನೂ ನಡೆಸಬೇಕೆಂದು ಸರ್ಕಾರದವರು ಗೊತ್ತುಮಾಡಿದ್ದರಷ್ಟೆ. ಈ ಪ್ರದರ್ಶನವು ಕಳೆದ ೧೭ನೇ ತಾರೀಖು ಪ್ರಾರಂಭವಾಗಿ ನಾಲ್ಕು ದಿನಗಳು ನಡೆಯಿತು. ಪ್ರದರ್ಶನಕ್ಕಾಗಿ ಸುಮಾರು ೧,೧೦೦ ದನಗಳು ಬಂದಿದ್ದವು. ೬೦೦ ದನಗಳ ವರೆಗೂ ಡಿಸ್ಟ್ರಿಕ್ಟುಗಳಿಂದಲೂ, ಉಳಿದವು ಅರಮನೆ ಮತ್ತು ಗವರ್ನಮೆಂಟ್ ಅಮೃತಮಹಲ್ ಇಲಾಖೆಗಳಿಂದಲೂ ಬಂದಿದ್ದವು. ಮೈಸೂರು ಡಿಸ್ಟ್ರಿಕ್ಟಿನ ದನಗಳೇ ಬಹಳವಾಗಿದ್ದವು. ಇದರಲ್ಲೂ ಮಂಡ್ಯ, ನಾಗಮಂಗಲ, ಯಡತೊರೆಗಳಿಂದ ಬಂದಿದ್ದ ದನಗಳ ಸಂಖ್ಯೆಯು ಅರ್ಧಕ್ಕಿಂತಲೂ ಹೆಚ್ಚಾಗಿತ್ತು.

ಪ್ರದರ್ಶನಕ್ಕಾಗಿ ಬಂದ ಮೇಲ್ಕಂಡ ೧,೧೦೦ ಗೋಕಾಯಿಗಳಲ್ಲಿ ಸುಮಾರು ೩೫೪ ರಾಸುಗಳನ್ನು ಜಾತಿವಾರಾಗಿ ಆರಿಸಿ ಪ್ರದರ್ಶನಶಾಲೆಯೊಳಕ್ಕೆ ಬಿಟ್ಟುಕೊಂಡರು. ಅರಮನೆಯ ಮತ್ತು ಅಮೃತಮಹಲ್ ಇಲಾಖೆಯ ದನಗಳು ಉತ್ಕೃಷ್ಟವಾದವುಗಳೆಂದು ಸರ್ಟಿಫಿಕೇಟುಗಳನ್ನು ಕೊಟ್ಟರು. ಪ್ರಜೆಗಳು ಪ್ರದರ್ಶನ ಮಾಡಿದ ಚನ್ನಾಗಿ ಬೆಳೆಸಿದ್ದ ರಾಸುಗಳ ಪೈಕಿ ಉತ್ತಮವಾಗಿ ಕಂಡುಬಂದ ೧೭ ಹೋರಿಗಳಿಗೂ, ೧೧ ಎತ್ತುಗಳಿಗೂ, ೭ ಕಡಸು ಮತ್ತು ಹಸುಗಳಿಗೂ ೪೦೦ ರೂಪಾಯಿ ಬಹುಮಾನಗಳನ್ನು ಕೊಡಿಸಿದರು. ಅಮೃತಮಹಲ್ ಇಲಾಖೆಯ ದನಗಳ ಪೈಕಿ ಸುಮಾರು ನೂರು ರಾಸುಗಳು ಜೊತೆಗೆ ಸರಾಸರಿ ೧೪೦ ರೂ ಮಾರುವಂತೆ ಬಿಕರಿಯೂ ಆದವು. ಈ ಪ್ರದರ್ಶನ ನಡೆದ ನಾಲ್ಕು ದಿನದವರೆಗೂ ಪ್ರದರ್ಶನಶಾಲೆಯೊಳಕ್ಕೆ ತೆಗೆದುಕೊಂಡ ರಾಸುಗಳಿಗೆ ತಲಾ ದಿನಕ್ಕೆ ನಾಲ್ಕಾಣೆಯಂತೆಯೂ, ಹಾಗೆ ಆರಿಸಿಕೊಳ್ಳದೆ ಇದ್ದ ದನಗಳಿಗೆ ತಲಾ ದಿನಕ್ಕೆ ಎರಡಾಣೆಯಂತೆಯೂ ಸರ್ಕಾರದವರು ಚಾರಾ ಖರ್ಚನ್ನು ಕೊಡಿಸಿದರು.

ಈ ಪ್ರದರ್ಶನವನ್ನು ಸಾವಿರಾರು ಜನರು ಹೋಗಿ ನೋಡಿದರು. ದನಗಳ ಜಾತಿ ಭೇದವುದನ್ನೂ ಅವುಗಳ ಸಾಕಾಣಿಕೆಯನ್ನೂ ಚನ್ನಾಗಿ ಬಲ್ಲ ನಿಪುಣರು ಈ ಪ್ರದರ್ಶನವನ್ನು ನೋಡಿ ಇಷ್ಟು ಹೆಚ್ಚು ರಾಸುಗಳಾಗಲಿ ಇಷ್ಟು ಉತ್ಕೃಷ್ಟವಾದ ಜಾತಿಯ ದನಗಳಾಗಲಿ ತಾವು ಇದುವರೆಗೆ ನೋಡಿರಲಿಲ್ಲವೆಂತಲೂ ಪ್ರದರ್ಶನವು ಬಹಳ ಚನ್ನಾಗಿ ನಡೆಯಿತೆಂತಲೂ ಅಭಿಪ್ರಾಯಪಟ್ಟಿರುತ್ತಾರೆ. ಶ್ರೀಮನ್ಮಹಾರಾಜರವರೂ, ಮಹಾಮಾತೃಶ್ರೀಯವರೂ, ಬಳಮಂದಿ ಸುಂದ್ರೇಡರೂ ದಯಮಾಡಿ ದನಗಳನ್ನು ನೋಡಿ ತುಂಬಾ ಸಂತೋಷಪಟ್ಟುಕೊಂಡರು. ಶ್ರೀಮನ್ಮಹಾರಾಜರವರೇ ಖುದ್ದಾಗಿ ನಿಂತು ಬಹುಮಾನಗಳನ್ನು ಪ್ರದರ್ಶಕರಿಗೆ ದಯಪಾಲಿಸಿದರು.

ದನಗಳನ್ನು ಪರೀಕ್ಷಿಸಿ ಅವುಗಳ ಯೋಗ್ಯತೆ ಮುಂತಾದದ್ದನ್ನು ಗೊತ್ತುಮಾಡಿ ಬಹುಮಾನಕ್ಕೆ ಅರ್ಹವಾದವುಗಳೆಂದು ನಿಷ್ಕರ್ಷೆ ಮಾಡಿದವರ್ಯಾರೆಂದರೆ—ಎಕ್ಸ್ಟ್ರಾ ಕಮಿಷನರ್ ಮೆ|| ಎಚ್. ಎಚ್. ಸ್ಪ್ರಾಕ್ಸ್‌ಯವರು, ದರ್ಬಾರ್ ಬಕ್ಷಿ ಮೆ|| ಎಚ್. ಲಿಂಗರಾಜೇ ಅರಸಿನವರು, ಅಮೃತಮಹಲ್ ಸೂಪರಿಂಟೆಂಡೆಂಟ್ ಮೆ|| ಎಚ್. ನಂಜುಂಡರಾಜೇ ಅರಸಿನವರು, ಅ|| ಕಮಿಷನರ್ ಮೆ|| ಎ. ಸುಬ್ರಹ್ಮಣ್ಯಯ್ಯನವರು, ಅ|| ಕಮಿಷನರ್ ಮೆ|| ಟಿ. ಕೆ. ಸುಂದರರಾಜಯ್ಯಂಗಾರರು, ಹುಣಸೂರು ದನಗಳ ಡಿಪೋ ಸೂಪರಿಂಟೆಂಡೆಂಟ್ ಮೆ|| ದಾಸೂರಾಯರು. ದನಗಳ ರೋಗಚಿಕಿತ್ಸೆಯ ಇನ್ಸ್‌ಪೆಕ್ಟರ್ ಮೆ|| ಎಸ್. ನರಸಿಂಹಯ್ಯಂಗಾರರು, ಮೆ|| ಗಳಾಡ ಕರಡಿಹಳ್ಳಿ ಮರಿಗೌಡರು, ಬೆಳಗುಂದ ತಿಮ್ಮೇಗೌಡರು, ಯಡತೊರೆ ಚಿಕ್ಕಲಿಂಗರಾಜೇ ಅರಸಿನವರು, ಮಂಡ್ಯದ ಜನರೇಗೌಡರು, ಅಮೃತಮಹಲ್ ಶೇರೆಗಾರ್ ಚಿಕ್ಕೇಗೌಡರು, ಅರಮನೆ ಕರೋಹಟ್ಟಿ ಶೇರೆಗಾರ್ ರಾಮೇಗೌಡರು.

ಮೈಸೂರು ಸೀಮೆಯ ಕಬ್ಬಿನ ವ್ಯವಸಾಯ.

[ಮೈಸೂರು ಪಟ್ಟಣದ ಪ್ರದರ್ಶನ ಕಾಲದಲ್ಲಿ ಸರ್ಕಾರಿ ವ್ಯವಸಾಯದ ಇಲಾಖೆಯವರು ಮೇಲ್ಕಂಡ ವಿಷಯವನ್ನು ಕುರಿತು ಒಂದು ಉಪನ್ಯಾಸ ಮಾಡಿದರು. ಅದರ ಮುಖ್ಯಾಭಿಪ್ರಾಯಗಳನ್ನೆಲ್ಲಾ ವಾಚಕರ ತಿಳಿವಳಿಕೆಗಾಗಿ ಇಲ್ಲಿ ಪ್ರಕಟಿಸಿರುತ್ತೇನೆ.]

ಕಬ್ಬು ಬಹಳ ಲಾಭಕರವಾದ ಫಸಲು. ಮೈಸೂರು ಸೀಮೆಯಲ್ಲಿ ಬೆಳೆಯುವ ಇತರ ಬೆಳೆಗಳಿಗಿಂತಲೂ ಸ್ವಾಭಾವಿಕವಾಗಿ ಇದರಲ್ಲೇ ಹೆಚ್ಚು ಆದಾಯ. ನಿಮ್ಮಲ್ಲನೇಕರು ಚಿಕ್ಕ ಚಿಕ್ಕ ತಾಕುಗಳಲ್ಲೂ ಈ ಬೆಳೆಯನ್ನಿಟ್ಟು ಅದರ ಹಾಲಿನಿಂದ ಬೆಲ್ಲವನ್ನು ಮಾಡಿ ಒಳ್ಳೆಯ ಲಾಭವನ್ನು ಹೊಂದುತ್ತಿದ್ದೀರಷ್ಟೆ. ಆದರೆ ಕಬ್ಬನ್ನು ಬೆಳೆಯುವುದು, ಅದರಿಂದ ಬೆಲ್ಲ ಅಥವಾ ಸಕ್ಕರೆಯನ್ನು ಮಾಡುವುದು, ಈ ವಿಷಯಗಳನ್ನು ವಿಮರ್ಶೆಮಾಡಿ ತಿಳಿದುಕೊಂಡು, ಕೂಡಿದ ಮಟ್ಟಿಗೂ ಅನುಕೂಲಗಳಾದ ನೂತನ ಉಪಾಯಗಳನ್ನು ಬಳಕೆಗೆ ತಂದರೆ ಈಗ ನಿಮಗೆ ಬರುತ್ತಿರುವ ಲಾಭಕ್ಕಿಂತಲೂ ಹೆಚ್ಚಾದ ಆದಾಯ ಬರುವುದೆಂದು ನಿಮಗೇ ತಿಳಿದುಬರುತ್ತದೆ. ಈಗ ನಮಗೆ ಬರುತ್ತಿರುವ ಆದಾಯಕ್ಕಿಂತ ಹೆಚ್ಚಾದ ಆದಾಯವನ್ನು ಸಂಪಾದಿಸಬೇಕೆಂಬ ಕುತೂಹಲವು ಸರ್ವತ್ರ ಇದೆಯಷ್ಟೆ. ಹೀಗೆ ಹೆಚ್ಚಾದ ಲಾಭವನ್ನು ಸಂಪಾದಿಸುವುದರಿಂದ ನಮ್ಮ ನೆರೆಯವರಿಗೂ ಲಾಭಸಂಪಾದಿಸುವ ಉಪಾಯಗಳನ್ನು ತೋರಿಸುವುದಲ್ಲದೆ, ನಮ್ಮ ದೇಶದ ಶ್ರೇಯೋಭಿವೃದ್ಧಿಯನ್ನೂ ತನ್ಮೂಲಕ ಕಲಾಕೌಶಲ್ಯಾಭಿವೃದ್ಧಿಯನ್ನೂ ಉಂಟುಮಾಡುತ್ತೇವೆಂಬ ಸಂಗತಿಯನ್ನು ಮನಸಿಗೆ ತಂದುಕೊಂಡರೆ ಮತ್ತಷ್ಟು ಧನಾರ್ಜನೆಯಲ್ಲಿ ನಾವು ಆಸಕ್ತಿಯುಳ್ಳವರಾಗುತ್ತೇವೆ. ಈ ಸಂಸ್ಥಾನದ ಏಳಿಗೆಯನ್ನುಂಟುಮಾಡಿ ಅದು ಹೆಸರುವಾಸಿಯುಳ್ಳದ್ದನ್ನಾಗಿ ಮಾಡಬೇಕೆಂಬ ಕುತೂಹಲವು ನಿಮಗೆ ಇದ್ದಲ್ಲಿ ಅದಕ್ಕೆಂದು ಸುಲಭೋಪಾಯವಿರುವುದು.

ನಿಮ್ಮ ಜಮೀನುಗಳನ್ನೂ ಬೆಳೆಗಳನ್ನೂ ಅಭಿವೃದ್ಧಿಗೆ ತರುವುದಕ್ಕೆ ಅನುಕೂಲಗಳಾದ ಯಾವ ಸಂದರ್ಭಗಳನ್ನೂ ಮಾನಸಿಕವಾದದೆ, ನೀವೂ ನಿಮ್ಮ ನೆರೆಯವರೂ ಪ್ರೋತ್ಸಾಹಕರಾಗಲು ಪ್ರಯತ್ನಪಟ್ಟರೆ ಆ ಕೆಲಸವು ಸುಲಭವಾಗಿಯೇ ನೆರವೇರಿದಂತಾಯಿತಲ್ಲವೇ? ಈ ವಿಷಯದಲ್ಲಿ ನನ್ನ ಕೈಲಾದ ಸಹಾಯವನ್ನು ಮಾಡಲು ನಾನು ಯಾವಾಗಲೂ ಸಿದ್ಧನಾಗಿದ್ದೇನೆ. ಅದೇ ಉದ್ದೇಶದಿಂದಲೇ ನಾನಿಲ್ಲಿಗೆ ಈ ದಿನ ಬಂದಿರುವುದು. ನಮ್ಮ ಇಲಾಖೆಯಲ್ಲಿ ಕಬ್ಬನ್ನು ಬೆಳೆಯುವುದು, ಸಕ್ಕರೆ ಮಾಡುವುದು, ಈ ವಿಷಯಗಳಲ್ಲಿ ಯಾವ ಯಾವ ಕೆಲಸಗಳು ನಡೆದಿರುತ್ತವೆಯೋ ಅವುಗಳನ್ನು ಸೂಕ್ಷ್ಮವಾಗಿ ನಿಮಗೆ ತೋರಿಸಿ ತಿಳಿಸಬೇಕೆಂದು ಎಣಿಸಿದ್ದೇನೆ. ಕಬ್ಬಿನ ವಿಷಯವಾಗಿ ನಾನು ಓದಿರುವುದನ್ನಾಗಲಿ, ಅಥವಾ ಇತರ ದೇಶಗಳಲ್ಲಿ ನಾನಾಗಲಿ ಇತರರಾಗಲಿ ಮಾಡಿರುವ ಕೆಲಸದ ವಿಷಯವನ್ನಾಗಲಿ ನಿಮಗೆ ತಿಳಿಸಬೇಕೆಂಬ ಉದ್ದೇಶವು ನನಗಿರುವುದಿಲ್ಲ. ಯಾತಕ್ಕೆಂದರೆ, ಇತರ ದೇಶಗಳ ಸ್ಥಿತಿಯೇ ಬೇರೆ, ನಮ್ಮ ದೇಶದ ಸ್ಥಿತಿಯೇ ಬೇರೆ. ಆದಕಾರಣ ಆ ಅನುಭವದಿಂದ ನಮಗೇನೂ ನೇರವಾದ ಉಪಯೋಗವಿಲ್ಲ. ನಾನು ಮುಂದೆ ಹೇಳುವ ಸಂಗತಿಗಳು ನಮ್ಮ ದೇಶದಲ್ಲೇ ನಡೆಸಿದ್ದಾಗಿರುವುದರಿಂದ ಅವುಗಳನ್ನೇ ನೀವೂ ಕೂಡ ಆಚರಣೆಗೆ ತರಬಹುದು.

ಈಗ ಮೂರು ನಾಲ್ಕು ವರ್ಷಗಳಿಂದ ಬೆಂಗಳೂರಿನಲ್ಲಿರುವ ನಮ್ಮ ಉದ್ಯೋಗಾಲಯದ ತೋಟದಲ್ಲಿ ಕಬ್ಬನ್ನು ಬೆಳೆಯುತ್ತಿದ್ದೇವೆ. ಈ ಜಮೀನು ಬಹಳ ನಿಕೃಷ್ಟವಾದ ಬಿಳೀ ಜಮೀನು. ಗೊಬ್ಬರವಿಲ್ಲದೆ ರಾಗಿ ಕೂಡ ಬೆಳೆಯುವುದಿಲ್ಲ. ಹೀಗಿದ್ದರೂ ಎಕರೆಗೆ ೨,೪೦೦ ಮಣ ಕಬ್ಬಿನ ಜಲ್ಲೆಯನ್ನು ಬೆಳೆಸಿರುತ್ತೇವೆ. ಇದರಿಂದ ೩೦೦ ಮಣ ಬೆಲ್ಲವಾಗಿರುತ್ತೆ. ಈ ಬೆಳೆಗೆ ಎಕರೆ ಒಂದಕ್ಕೆ ೧೫೦ ಮಣ ಬೀಜದ ಹಿಂಡಿಯನ್ನೂ, ೪೦ ಮಣ ಮೂಳೆ ಪುಡಿಯನ್ನೂ ಕೊಟ್ಟಿತ್ತು. ಆದರೆ ಇದು ಸಾಮಾನ್ಯವಾದ ಪಸಲಲ್ಲ. ಈ ಮೂರು ನಾಲ್ಕು ವರ್ಷಗಳ ಸರಾಸರಿಯನ್ನು ನೋಡಿದರೆ ಎಕರೆ ಒಂದಕ್ಕೆ ೧,೬೩೦ ಮಣ ಜಲ್ಲೆಯನ್ನು ೧೯೦ ಮಣ ಬೆಲ್ಲವನ್ನೂ ಬೆಳೆದಂತಾಗುತ್ತದೆ. ಜಮೀನು ನಿಕೃಷ್ಟವಾದುದು ಒಂದೇ ಅಲ್ಲದೆ ಗುದ್ದಲಿ ಸೋತೆತನ ವಿಶೇಷವಾಗಿ ಇದ್ದುದರಿಂದ ಈ ಬೆಳೆಯನ್ನು ಒಳ್ಳೆಯ ಬೆಳೆಯೆಂದೇ ಹೇಳಬೇಕಲ್ಲವೇ? ಏನೆಂದರೆ, ಒಳ್ಳೆಯ ಭೂಮಿಯಾದರೂ ಭತ್ತದ ಗದ್ದೆಗಳ ಹಾಗೆ ನೀರು ಜೌಗಾದ ಪ್ರದೇಶದಲ್ಲಿ ಬೆಳೆಯುವ ಕಬ್ಬಿನ ಪಸಲಿಗಿಂತ ಇದು ಉತ್ತಮವಾದದ್ದೇ.

ಹೋದ ವರ್ಷ ಸಾಮಾನ್ಯವಾದ ತರೀಜಮೀನಿನಲ್ಲಿ ಕಬ್ಬಿನ ಬೆಳೆಯನ್ನಿಟ್ಟೆವು. ಅದಕ್ಕೆ ೮೦ ಮಣ ಕಪ್ಪು ಎಳ್ಳು ಹಿಂಡಿಯನ್ನು ಕೊಟ್ಟಿತ್ತು. ಆ ಪೈಕಿ ಸ್ವಲ್ಪಭಾಗ ಜೌಗು ಹಿಡಿದು ಕೆಟ್ಟುಹೋಯಿತು. ಜೌಗು ಹಿಡಿದ ಭಾಗದಲ್ಲಿ ಎಕರೆಗೆ ೪೦ ಮಣ ಬೆಲ್ಲದಂತೆಯೂ, ಜೌಗಿಲ್ಲದ ಪ್ರದೇಶದಲ್ಲಿ ೨೪೦ ಮಣದ ಮೇಲೂ ಬೆಳೆಯಿತು. ಇದು ಜೌಗಾದ ಪ್ರದೇಶದಲ್ಲಿ ಆದಬೆಳೆಗಿಂತ ಐದರಷ್ಟು ಹೆಚ್ಚಾಗಿರುತ್ತದೆ. ಇದರಿಂದ ಕಬ್ಬಿನ ಬೆಳೆಗೆ ಸುತ್ತಲಿರುವ ಭತ್ತದ ಗದ್ದೆಗಳಿಂದ ಉಂಟಾಗುವ ಹಾನಿಯು ವಿಶೇಷವಾಗಿ ತೋರಬರುತ್ತದೆ. ಕಬ್ಬಿನ ಗದ್ದೆಯ ಸುತ್ತಲೂ ಮೂರು ಅಡಿ ಆಳವಾದ ಕಡಗಿದ್ದು ಸುತ್ತಲ ಭತ್ತದ ಗದ್ದೆಯ ಜೌಗುನೀರು ಸಲೀಸಾಗಿ ಹೋಗುವುದಕ್ಕೆ ಮಾರ್ಗವಿದ್ದಲ್ಲಿ ಈ ಹಾನಿಯುಂಟಾಗಲಾರದು. ಕಬ್ಬಿಗೆ ಜೌಗಿಲ್ಲದ ಭೂಮಿಯು ಅತ್ಯವಶ್ಯಕವಾದದ್ದು. ಭತ್ತದ ಬೆಳೆಯಂತೆ ಇದಕ್ಕೆ ನೀರು ನಿಲ್ಲಕೂಡದು. ನಿಂತಪಕ್ಷದಲ್ಲಿ ಬೆಳವಳಿಗೆ ಕಡಿಮೆಯಾಗುತ್ತದೆ. ಭತ್ತದ ಬೆಳೆಯ ನಡುವೆ ಕಬ್ಬಿದ್ದಪಕ್ಷದಲ್ಲಿ ಜೌಗನ್ನು ಅವಶ್ಯವಾಗಿ ತಪ್ಪಿಸಬೇಕು. ಕಬ್ಬಿನ ಗದ್ದೆಯ ಅಕ್ಕಪಕ್ಕಗಳಲ್ಲಿ ಭತ್ತದ ಗದ್ದೆಗಳಿಲ್ಲದೆ ಭೂಮಿಯು ಒಣಗಲಾಗಿ ಕಂಡುಬಂದಾಗ್ಯೂ ಕಡಗನ್ನು ತೆಗೆದು ಜೌಗಿಲ್ಲದಂತೆ ಕೆಲವು ವೇಳೆ ಮಾಡಬೇಕಾಗುತ್ತದೆ. ಇದನ್ನು ಪರೀಕ್ಷಿಸಬೇಕಾದರೆ ಗದ್ದೆಯಲ್ಲಿ ಒಂದು ಗಜ ಆಳದ ಗುಳಿಯನ್ನು ತೆಗೆದು ಅದರಲ್ಲಿ ನೀರೂರಿ ಕೆಲದಿವಸಗಳ ವರೆಗೂ ನಿಂತದ್ದೇ ಆದರೆ ಆ ಜಮೀನು ಜೌಗಾದದ್ದೆಂದು ತಿಳಿಯತಕ್ಕದ್ದು. ಗದ್ದೆಯ ಜೌಗನ್ನು ಸರಿಯಾಗಿ ತಪ್ಪಿಸಬೇಕಾದರೆ ಆ ಕೆಲಸದಲ್ಲಿ ಸ್ವಲ್ಪ ಅನುಭವವಿರಬೇಕು. ತಕ್ಕ ಸ್ಥಳದಲ್ಲಿ ಒಂದೇ ಕಡಗನ್ನು ತೆಗೆದರೂ ಅಲ್ಲದ ಸ್ಥಳದಲ್ಲಿ ೫—೬ ಕಡಗುಗಳನ್ನು ತೆಗೆಯುವುದಕ್ಕಿಂತ ಉಪಯೋಗವಾಗಿರುತ್ತದೆ. ಸಾಮಾನ್ಯವಾಗಿ ಕಬ್ಬಿನ ಗದ್ದೆಗಳು ಕೆರೆ ನಾಲೆಗಳ ಕೆಳಗಾಗಲಿ, ಅಥವಾ ತಗ್ಗಾದ ಪ್ರದೇಶಗಳಲ್ಲಾಗಲಿ ಇರುತ್ತವೆ. ಗದ್ದೆಯ ಪಕ್ಕದಲ್ಲಿರುವ ಕೆರೆ, ನಾಲೆ ಮತ್ತು ಮೇಡು ಭೂಮಿಗಳಿಂದ ಕಬ್ಬಿನ ಗದ್ದೆಗೆ ನೀರೂರಿ ಬೀಳುತ್ತಿದ್ದಲ್ಲಿ ಕಡಗುಗಳನ್ನು ತೆಗೆದು ಅಂಥಾ ನೀರನ್ನು ತಪ್ಪಿಸುವುದು ಅತ್ಯವಶ್ಯಕವಾಗಿರುತ್ತದೆ. ಕಬ್ಬಿನ ಗದ್ದೆಯು ತಗ್ಗು ಪ್ರದೇಶಗಳಲ್ಲಿದ್ದು ಮಟ್ಟವಾಗಿದ್ದರೆ ಅಂಥಾದ್ದರಲ್ಲಿ ಮೂವತ್ತು ಅಡಿ ಅಥವಾ ಅರವತ್ತು ಅಡಿಗೆ ಒಂದೊಂದು ಗಜ ಆಳದ ಕಡಗನ್ನು ತೆಗೆಯಬೇಕಾದೀತು. ಕಬ್ಬಿನ ಗದ್ದೆಗೆ ಸೇರಿದಂತೆ ಭತ್ತದ ಗದ್ದೆ ಇದ್ದರೆ ಎರಡಕ್ಕೂ ನಡುವೆ ಮೂರಡಿ ಆಳದ ಒಂದು ಕಡಗನ್ನು ತೆಗೆದ ಮಾತ್ರಕ್ಕೆ ಸಾಕಾದೀತು. ಜೌಗನ್ನು ಅನಾನುಕೂಲವಿಲ್ಲದೆ ಹೋಗಲಾಡಿಸಲು ನಾನು ಹೇಳುವ ಉಪಾಯವೇನೆಂದರೆ—ಜೌಗು ಯಾವ ಕಡೆಯಿಂದ ಬರುತ್ತದೆ ಎಂಬುವುದನ್ನು ಮೊದಲು ಸಾಧ್ಯವಾದ ಮಟ್ಟಿಗೂ ತಿಳಿದುಕೊಂಡು, ಆ ನೀರು ಕಬ್ಬಿನ ಗದ್ದೆಗೆ ಬಾರದಂತೆ ಅಡ್ಡಲಾಗಿ ಒಂದು ಕಡಗನ್ನು ತೆಗೆಯಬೇಕು. ಇದರಿಂದ ನೆರೆಯವರಿಗೆ ಏನೂ ಅನಾನುಕೂಲವಿಲ್ಲದಂತೆ ನೋಡಿಕೊಳ್ಳುವುದಲ್ಲದೆ ಕಡಗಿನಲ್ಲಿ ನೀರು ನಿಲ್ಲದೆ ಸಲೀಸಾಗಿ ಹೊರಕ್ಕೆ ಹೋಗುವ ಏರ್ಪಾಡನ್ನು ಮಾಡಬೇಕು.

ಕಬ್ಬನ್ನು ಆಲೆ ಮಾಡಿ ಬೆಲ್ಲ ಬೇಯಿಸುವ ವಿಷಯವನ್ನು ನಮ್ಮ ಇಲಾಖೆಯ ರಿಪೋರ್ಟುಗಳಲ್ಲಿ ವಿಶೇಷವಾಗಿ ಹೇಳಿರುತ್ತೇನೆ. ಈ ರಿಪೋರ್ಟುಗಳನ್ನು ಅಪೇಕ್ಷಿಸುವ ರೈತಾಪಿ ಜನಗಳಿಗೆ ನಮ್ಮಲ್ಲಿ ಅಚ್ಚು ಹಾಕಿದ ಪ್ರತಿಗಳು ಇರುವ ತನಕ ಉಚಿತವಾಗಿಯೇ ಕೊಡಲಾಗುತ್ತದೆ. ಈ ರಿಪೋರ್ಟುಗಳಲ್ಲಿ ಇರುವ ಸಂಗತಿಗಳಲ್ಲದೆ ಹೆಚ್ಚಾಗಿ ಹೇಳುವುದು ಸ್ವಲ್ಪವೇ ಇರುತ್ತದೆ. ಅವುಗಳನ್ನು ಸಂಕ್ಷೇಪವಾಗಿ ಈಗ ತಿಳಿಸುತ್ತೇನೆ.

[ಸಶೇಷ]

ಮೈಸೂರು ಪ್ರಜಾ ಪ್ರತಿನಿಧಿಸಭೆಯು.

ಈ ಸಲ ಮೈಸೂರು ಪಟ್ಟಣದಲ್ಲಿ ನಡೆದ ಪ್ರಜಾಪ್ರತಿನಿಧಿ ಸಭೆಯಲ್ಲಿ ಮೆಂಬರುಗಳು ಸಂಸ್ಥಾನದ ಮೇಲೆ ಸಂಬಂಧಪಡುವಂಥಾ ಅನೇಕ ವಿಷಯಗಳನ್ನು ಚರ್ಚಿಸಬೇಕೆಂದು ಸೂಚಿಸಿದರು. ಈ ಪೈಕಿ ಅನೇಕ ಸಂಗತಿಗಳನ್ನು ಹಿಡಿದು ಚರ್ಚೆಯಾಗಲೆಂದು ಗವರ್ನಮೆಂಟು ಅಪೇಕ್ಷಿಸಿದಾಗ ಆ ಸಂಗತಿಗಳನ್ನು ಸೂಚಿಸಿದ್ದ ಮೆಂಬರುಗಳೇ ಇಲ್ಲವಾದ್ದರಿಂದ ಚರ್ಚಿಸದೆ ಬಿಡಬೇಕಾಯಿತು. ಕೆಲವು ವಿಷಯಗಳನ್ನು ಮೆಂಬರುಗಳು ಸಭೆಯಲ್ಲಿ ವಾಪಸು ತೆಗೆದುಕೊಂಡರು. ಚರ್ಚೆಗೆ ಬಂದು ಇತ್ಯರ್ಥವಾದ ವಿಚಾರಗಳು ಈ ಸಲ ಅನೇಕವಾಗಿರುತ್ತವೆ. ಈ ಪೈಕಿ ಬಹಳ ಹೊತ್ತು ಮೆಂಬರುಗಳೂ ಗವರ್ನಮೆಂಟು ಅಧಿಕಾರಿಗಳೂ ವಿಶೇಷ ಉತ್ಸಾಹದಿಂದ ಚರ್ಚೆಮಾಡಿದ ಕೆಲವು ಸ್ವಾರಸ್ಯವಾದ ಮುಖ್ಯ ವಿಷಯಗಳನ್ನು ಇಲ್ಲಿ ಸ್ವಲ್ಪಮಟ್ಟಿಗೆ ವಿವರಿಸುತ್ತೇವೆ.

ಕೆಟ್ಟುಹೋದ ಪದಾರ್ಥಗಳನ್ನು ಮಾರುವುದು

ಮೆ|| ಮಾಗಡಿ ಕೃಷ್ಣಮೂರ್ತಿರಾಯರು—ಸರ್ಕಾರದವರು ಪಟ್ಟಣಗಳಲ್ಲೂ ಊರುಗಳಲ್ಲೂ ಪ್ರಜಾ ಆರೋಗ್ಯವನ್ನು ಕಾಯ್ದು ಅಭಿವೃದ್ಧಿಪಡಿಸುವುದಕ್ಕೆ ಬೇರೆ ಅಧಿಕಾರಿಗಳನ್ನು ನೇಮಿಸುತ್ತಲೂ ನಾನಾ ಏರ್ಪಾಡುಗಳನ್ನು ಮಾಡುತ್ತಲೂ ಬಂದಿರುತ್ತಾರೆ. ಆದರೆ ಪ್ರಜೆಗಳು ಕೊಂಡು ಅನ್ನವಂಥಾ ಧಾನ್ಯಾದಿಗಳನ್ನೂ ಹಣ್ಣುಹಂಪಲುಗಳನ್ನು ಹಾಲು ತುಪ್ಪಗಳನ್ನು ತಿಂಡಿ ಪದಾರ್ಥಗಳನ್ನು ಅವು ಆರೋಗ್ಯಕರವೇ ಅಲ್ಲವೇ ಎಂಬುದನ್ನು ಆಗಾಗ್ಗೆ ಅಧಿಕಾರಿಗಳ ಮೂಲಕ ಪರೀಕ್ಷೆ ಮಾಡಿಸತಕ್ಕ ಏರ್ಪಾಡೇ ಇರುವುದಿಲ್ಲ. ಆದ್ದರಿಂದ ಸರ್ಕಾರದವರು ಇದಕ್ಕೆ ತಕ್ಕ ಏರ್ಪಾಡು ಮಾಡದಿದ್ದರೆ ಪ್ರಜೆಗಳ ಆರೋಗ್ಯವೃದ್ಧಿ ಉಂಟಾಗಲಾರದು. ವರ್ತಕರು ಲಾಭದ ಆಸೆಗೆ ಕೆಟ್ಟ ಪದಾರ್ಥಗಳನ್ನು ಮಾರಿಕೊಳ್ಳುತ್ತಾರೆ. ಹೋಟೆಲುಗಳಲ್ಲಿ ಏನು ಅಸಹ್ಯವಾದ ಸಾಮಾನುಗಳನ್ನು ಸೇರಿಸಿ ತಿಂಡಿಗಳನ್ನು ಮಾಡಿ ಮಾರುತ್ತಾರೆ. ಕೊಳೆತ ಹಣ್ಣುಹಂಪಲುಗಳ ವಿಚಾರವನ್ನಂತೂ ಹೇಳಲೇ ಕೆಲಸವಿಲ್ಲ.

ದಿವಾನರವರು—ಇಂಥಾ ಅಕೃತ್ಯಗಳನ್ನೆಲ್ಲಾ ತಡೆಯ ಮಾಡತಕ್ಕ ಕೆಲವು ಅಂಶಗಳು ಮ್ಯುನಿಸಿಪಲ್ ಕಾನೂನಿನಲ್ಲಿ ಅವಕಾಶವಾಗಿದೆ. ಹೆಲ್ತ್ ಇಲಾಖೆಯ ನೌಕರರಿಗೆ ಜಪ್ತಿಮಾಡತಕ್ಕ ಅಧಿಕಾರವನ್ನು ವಹಿಸಿದೆ. ಇದಲ್ಲದೆ ವಿಲಾಯಿತಿ ಮೊದಲಾದ ಕಡೆಗಳಲ್ಲಿ ಈ ವಿಷಯಕ್ಕೆ ಎಂಥಾ ಕಾನೂನು ಮಾಡಿರುತ್ತಾರೆಯೋ ಅದನ್ನು ತಿಳಿದು ಇಲ್ಲಿ ಆದೇ ರೀತಿ ಪ್ರತ್ಯೇಕವಾದ ಒಂದು ಕಾನೂನ್ ಮಾಡಬೇಕಾದದ್ದು ಆವಶ್ಯಕವೆಂದು ನನಗೆ ತೋರಿದೆ. ಇದನ್ನು ಮುಂದೆ ಮಾಡುವೆವು.

ಕ್ರಿಮಿನಲ್ ಕೋರ್ಟುಗಳಲ್ಲಿ ಕೈಫಿಯತ್ತುಗಳು.

ಮೆ|| ಅಂಬಳೆ ಪಂಡಿತರು, ಮೆ|| ರಾಘವಾಚಾರ್ಯ, ಇನ್ನು ಕೆಲವು ಮೆಂಬರುಗಳು—ಕ್ರಿಮಿನಲ್ ಕೋರ್ಟುಗಳಲ್ಲಿ ಮ್ಯಾಜಿಸ್ಟ್ರೇಟರು ಕನ್ನಡದಲ್ಲೇ ಎಲ್ಲಾ ಕೈಫಿಯತ್ತುಗಳನ್ನೂ ಬರೆಯಬೇಕೆಂದು, ಅವುಗಳಿಗೆ ಕಕ್ಷಿಗಾರರಿಂದಲೂ ಸಾಕ್ಷಿಗಳಿಂದಲೂ ರುಜು ಹಾಕಿಸಿಕೊಳ್ಳುವಂತೆ ವಿಧಾಯಕವಾಗಬೇಕು. ಕೆಲವು ಮ್ಯಾಜಿಸ್ಟ್ರೇಟರು ಕೈಫಿಯತ್ತನ್ನು ತಮಗೆ ತೋರಿದಂತೆ ಬರೆದುಕೊಳ್ಳುತ್ತಾರೆಂತಲೂ, ಅದನ್ನು ಬದಲಾಯಿಸುತ್ತಾರೆಂತಲೂ ಪ್ರಮಾದವಿದೆ. ಸಿವಿಲ್ ಕೋರ್ಟುಗಳಲ್ಲಿ ಹ್ಯಾಗೋ ಹಾಗೆ ಕ್ರಿಮಿನಲ್ ಕೋರ್ಟುಗಳಲ್ಲೂ ಕಾನೂನುಮೂಲಕ ರುಜು ತೆಗೆದುಕೊಳ್ಳಬೇಕು. ಕ್ರಿಮಿನಲ್ ಕೋರ್ಟುಗಳಲ್ಲಿ ಜನ ಮಾನ, ಗೌರವಾದಿಗಳಿಗೆ ಹಾನಿಯಾಗತಕ್ಕ ಮೊಕದ್ದಮೆಗಳೇ ವಿಚಾರಣೆಯಾಗುವವು. ಆದ್ದರಿಂದ ಸರ್ಕಾರದವರು ಪ್ರಜೆಗಳ ಮಾನಕ್ಕೂ ಗೌರವಕ್ಕೂ ಲೋಪ ಬಾರದಂತೆ ಕಾಪಾಡಬೇಕು. ಮತ್ತು ಇದು ಕನ್ನಡ ದೇಶವಾದ್ದರಿಂದ ರಿಕಾರ್ಡೆಲ್ಲಾ ಕನ್ನಡದಲ್ಲೇ ಬರೆಯುವಂತೆ ಮ್ಯಾಜಿಸ್ಟ್ರೇಟರಿಗೆ ಹುಕುಂ ಕೊಡಬೇಕು.

ದಿವಾನರವರು—ಕ್ರಿಮಿನಲ್ ಕೋರ್ಟಿನಲ್ಲಿ ಸಾಕ್ಷಿಗಳ ಕೈಫಿಯತ್ತಿಗೆ ಅವರ ರುಜು ತೆಗೆದುಕೊಳ್ಳಬೇಕೆಂಬ ವಿಷಯವನ್ನು ಕಾನೂನು ಬದಲಾವಣೆ ಮಾಡುವಾಗ್ಗೆ ಪರ್ಯಾಲೋಚಿಸಬೇಕಾಗಿದೆ. ಕಕ್ಷಿಗಾರರೂ ಸಾಕ್ಷಿಗಳೂ ಹೇಳಿದ್ದನ್ನು ಮಾತ್ರ ಬರೆದುಕೊಳ್ಳುವುದಕ್ಕೆ ಯೋಗ್ಯರಾದವರಿಗೆ ಮ್ಯಾಜಿಸ್ಟ್ರೇಟ್ ಅಧಿಕಾರ ವಹಿಸಿದೆ. ಹೇಳಿದ್ದನ್ನು ಬಿಟ್ಟು ತಮಗೆ ತೋರಿದ್ದನ್ನು ರಿಕಾರ್ಡಿನಲ್ಲಿ ಬರೆದುಕೊಳ್ಳುವಂಥ ಅಯೋಗ್ಯರಾದ ಮ್ಯಾಜಿಸ್ಟ್ರೇಟರ್ಯಾರೂ ಇಲ್ಲವೆಂದು ನಂಬುತ್ತೇವೆ. ಎಲ್ಲಾ ಮ್ಯಾಜಿಸ್ಟ್ರೇಟರೂ ಸಾಮಾನ್ಯವಾಗಿ ಕನ್ನಡದಲ್ಲೇ ಕೈಫಿಯತ್ತು ಬರೆದುಕೊಳ್ಳುವರು. ಎಲ್ಲೋ ೪—೬ ಮಂದಿಗೆ ಮಾತ್ರ ಇಂಗ್ಲೀಷಿನಲ್ಲಿ ಕೈಫಿಯತ್ತು ಬರೆದುಕೊಳ್ಳುವ ಅಧಿಕಾರ ವಹಿಸಿದೆ.

ಶಿಕಾರಿ ಲೈಸೆನ್ಸಿನ ಫೀಜು

ಚಿಕ್ಕಮಗಳೂರು ಮೆ|| ಶ್ರೀನಿವಾಸರಾಯರೇ ಮೊದಲಾದ ಮೆಂಬರುಗಳು—ಮಲೆನಾಡು ಪ್ರಾಂತ್ಯಗಳಲ್ಲಿ ನರಿ, ಹುಲಿ, ಹಂದಿ, ಈ ಮೊದಲಾದ ದುಷ್ಟ ಮೃಗಗಳು ತೋಟ ಹೊಲ ಗದ್ದೆಗಳಿಗೆ ಬಂದು ಫಸಲುಗಳನ್ನು ನಾಶಮಾಡುತ್ತವೆ. ಅವುಗಳನ್ನು ಓಡಿಸುವುದಕ್ಕೆ ರೈತರು ರಾತ್ರಿಯೆಲ್ಲಾ ಹೊಲಗಳಲ್ಲಿ ಕಾಯಬೇಕು. ಅವನ್ನು ಹೊಡೆಯಬೇಕಾದರೆ ಸರ್ಕಾರದವರು ಜನರಿಗೆ ರಿಯಾಯತಿ ತೋರಿಸಿದ್ದಾಗ್ಯೂ ಬಂದೂಕಿನ ಶಬ್ದ ಕೇಳಿದ ಒಡನೆಯೇ ಪೋಲೀಸಿನವರು ಬಂದು ಬಂದೂಕಿನ ಲೈಸೆನ್ಸ್ ಎಲ್ಲಿ ಎಂದು ಹಿಡಿದು ದಂಡ ತೆರಿಸುತ್ತಾರೆ. ಈ ಹಿಂಸೆಯನ್ನು ತಡೆಯುವುದಕ್ಕಾಗದು. ಲೈಸೆನ್ಸ್ ತೆಗೆದುಕೊಳ್ಳೋಣವೆಂದರೆ ಅದಕ್ಕೆ ೫ ರೂಪಾಯಿ ಕೊಡಬೇಕು. ಈ ಕಷ್ಟವನ್ನು ಪರಿಹರಿಸುವುದಕ್ಕೆ ಸರ್ಕಾರದವರೇ ಶಿಕಾರಿದಾರರನ್ನು ಕಳುಹಿಸಿ ರೈತರ ಫಸಲನ್ನು ಕಾಪಾಡಬೇಕೆಂತಲೂ ಈ ದುಷ್ಟ ಮೃಗಗಳನ್ನು ಕೊಂದು ಅವುಗಳ ಸಂಖ್ಯೆಯನ್ನು ಕಡಿಮೆಮಾಡಬೇಕೆಂತಲೂ ಬೇಡುತ್ತೇವೆ.

ಫಾರೆಸ್ಟ್ ಕನ್ಸರ್ವೇಟರವರು—ಶಿಕಾರಿ ಮಾಡುವುದು ಶೋಕಿ ಕೆಲಸ. ಅದು ಅನುಕೂಲಸ್ಥರಿಗೇ ಹೊರತು ಇತರರಿಗಲ್ಲ. ರೈತರೆಲ್ಲಾ ಲೈಸೆನ್ಸು ಕೊಟ್ಟುಬಿಟ್ಟರೆ ಕಾಡುಗಳಲ್ಲಿರುವ ಸುಂದರವಾದ ಮೃಗಗಳು ವಿನಾಶವಾಗುವವು.

ರೆವಿನ್ಯೂ ಕಮಿಷನರವರು—ರೈತರಿಗೆ ಷಿಕಾರಿ ಲೈಸೆನ್ಸನ್ನು ಸುಲಭ ದರದಲ್ಲಿ ಕೊಡದಿದ್ದರೆ ಅವರ ಫಸಲುಗಳನ್ನೆಲ್ಲಾ ಕಾಡು ಮೃಗಗಳು ನಾಶಮಾಡುತ್ತವೆ. ಇದೂ ಅಲ್ಲದೆ ಲೈಸೆನ್ಸಿನ ಫೀಜನ್ನು ಇಳಿಸೋಣದರಿಂದ ಅನೇಕರು ಲೈಸೆನ್ಸು ತೆಗೆದುಕೊಳ್ಳುವುದಕ್ಕೂ ಈ ಮೂಲಕ ಸರ್ಕಾರದ ಉತ್ಪತ್ತಿ ಜಾಸ್ತಿಯಾಗುವುದಕ್ಕೂ ಅನುಕೂಲವಾಗುವುದು.

ದಿವಾನರವರು (ಕೌನ್ಸಿಲರುಗಳ ಅಭಿಪ್ರಾಯವನ್ನು ತೆಗೆದುಕೊಂಡು)—ಒಳ್ಳೇದು. ಷಿಕಾರಿ ಲೈಸೆನ್ಸಿನ ಫೀಜನ್ನು ೫ ರೂಪಾಯಿನಿಂದ ೨ ರೂಪಾಯಿಗೆ ಇಳಿಸಿರುತ್ತೇವೆ.

ಗ್ರಾಮದಲ್ಲಿ ರಾತ್ರಿಹೊತ್ತು ಗಸ್ತು ಮಾಡುವುದು.

ಮ॥ ವೆಂಕಟಕೃಷ್ಣಯ್ಯನವರು—ಗ್ರಾಮಾಂತರಗಳಲ್ಲಿ ಎಲ್ಲರೂ ಸರದಿಯ ಪ್ರಕಾರ ಗ್ರಾಮಗಸ್ತು ಮಾಡಬೇಕಾಗಿದೆ. ಇದು ಮಹಾ ಕಷ್ಟ, ಪ್ರಜೆಗಳಿಗೆ ಹಿಂಸೆಯಾಗಿರುವುದು. ಇದನ್ನು ತಪ್ಪಿಸಿ, ಪೋಲೀಸ್ ಪ್ಯಾದೆಯನ್ನು ಗ್ರಾಮಗಳಿಗೂ ನೇಮಕ ಮಾಡಬೇಕು.

ಮ॥ ಗಳಾದ ವಾಸುದೇವರಾಯರು, ರಾಘವಾಚಾರ್ರು, ಕೃಷ್ಣರಾಯರೇ ಮುಂತಾದವರು—ಈ ಏರ್ಪಾಡೇನೂ ಅನುಕೂಲವಾದದ್ದಲ್ಲ. ಗ್ರಾಮಗಳಲ್ಲಿ ಈಗಿರುವ ಪದ್ಧತಿಯೇ ಸುಲಭವಾಗಿದೆ. ಪೋಲೀಸಿನವರನ್ನು ನೇಮಿಸಿದಲ್ಲಿ ಅವರು ಅಷ್ಟು ಮುತುವರ್ಜಿಯಿಂದ ಕೆಲಸಮಾಡುವುದಿಲ್ಲ. ಗ್ರಾಮಸ್ಥರಾದರೋ ಯೋಗ್ಯರು, ಪ್ರೀತಿಪೂರ್ವಕವಾಗಿ ಗಸ್ತು ವಾರಿ ಮಾಡುವರು.

ದಿವಾನರವರು—ಈಗ ಸಾಲಿಯಾನಾ ಪೋಲೀಸ್ ಡಿಪಾರ್ಟ್‌ಮೆಂಟಿಗೆ ೯ ಲಕ್ಷ ರೂಪಾಯಿ ಖರ್ಚಾಗುತ್ತಿದೆ. ಗ್ರಾಮಗಳಿಗೂ ಪೋಲೀಸಿನವರನ್ನು ನೇಮಿಸಬೇಕಾದರೆ ಇನ್ನೂ ೯ ಲಕ್ಷವಾದರೂ ಕಡೇ ಪಕ್ಷ ಬೇಕಾದೀತು. ಅಲ್ಲದೆ ಈಗ ಗ್ರಾಮಾಂತರಗಳಲ್ಲಿ ರೈತರೇ ಗಸ್ತುಮಾಡುವ ಪದ್ಧತಿ ಇರೋಣದರಿಂದ ಹೊರಗೆ ಇತರ ಕಡೆಗಳಿಗಿಂತಲೂ ನಮ್ಮ ಸಂಸ್ಥಾನದಲ್ಲಿ ಕೆಟ್ಟ ಕೃತ್ಯಗಳು ಬಹಳ ಮಟ್ಟಿಗೆ ಕಡಿಮೆಯಾಗಿರುತ್ತವೆ. ಮತ್ತು ಈ ಪದ್ಧತಿಯು ಭಾಗಾಯತಿನಿಂದ ನಡೆದು ಬಂದಿರುವುದು. ಇದರ ದೆಸೆಯಿಂದ ಗ್ರಾಮಾಂತರಗಳಲ್ಲಿ ಕಟ್ಟುಪಾಡೂ ಪರಸ್ಪರವಾದ ಪ್ರೀತಿ ಅಭಿಮಾನಗಳೂ ಹೆಚ್ಚಾಗಿರುತ್ತವೆ. ಇಂಥಾದ್ದನ್ನು ನಾವು ಅಭಿವೃದ್ಧಿಪಡಿಸಬೇಕಲ್ಲದೆ ಅವುಗಳಿಗೆ ಲೋಪಬರುವಂಥಾ ಕಾರ್ಯಗಳನ್ನು ಮಾಡುವುದು ತರವಲ್ಲ.

ಖೈದಿಗಳೂ ಪೋಲೀಸಿನವರೂ.

ಮ॥ ಗಳಾದ ಪಿ. ಟಿ. ಗೋಪಾಲರಾಯರು, ಟಿ. ನರಸಿಂಗರಾಯರು, ಎಂ. ಎಸ್. ರಾಮಾಚಾರ್ರು, ವಿ. ರಾಘವಾಚಾರ್ರು ಮೊದಲಾದವರು—ಪೋಲೀಸಿನವರು ಜನಗಳನ್ನು ಅಪರಾಧಿಗಳೆಂಬ ಗುಮಾನಿಯ ಮೇಲೆ ಹಿಡಿದು ಲಾಕಪ್ಪಿನಲ್ಲಿ ಹಾಕಿಕೊಳ್ಳುತ್ತಾರೆ. ಲಾಕಪ್ಪಿನ ಉಸ್ತುವಾರಿಯು ಪೋಲೀಸಿನವರಿಗೇ ವಹಿಸಿರೋಣದರಿಂದ ಅವರು ಅವೇಳೆಗಳಲ್ಲಿ ಅಂಥಾ ಜನರನ್ನು ಬೇರೆ ಕಡೆಗಳಿಗೆ ಕರೆದುಕೊಂಡು ಹೋಗಿ ಅಪರಾಧ ಮಾಡಿದ್ದುಂಟೆಂದು ಒಪ್ಪಿಕೊಳ್ಳುವುದಕ್ಕಾಗಿ ಅವರನ್ನು ನಾನಾ ಬಗೆ ಹಿಂಸೆಗಳಿಗೆ ಗುರಿಪಡಿಸುತ್ತಾರೆಂಬ ಪ್ರಚಾರವು ಬಹಳವಾಗಿದೆ. ಆದಕಾರಣ ಅಂಥಾ ಲಾಕಪ್ಪುಗಳ ಉಸ್ತುವಾರಿಯನ್ನು ಪೋಲೀಸಿನವರಿಗೆ ಸಂಪೂರ್ಣವಾಗಿ ತಪ್ಪಿಸಬೇಕು. ಬೇರೆ ಡಿಪಾರ್ಟ್‌ಮೆಂಟಿಯನ್ನು ನೇಮಿಸಿ ಮ್ಯಾಜಿಸ್ಟ್ರೇಟ್ ಮುಖಾಂತರವಾದೀತು. ಪೋಲೀಸಿನವರ ವಶದಲ್ಲಿ ಖೈದಿಗಳನ್ನು ಇಡೋಣದರಿಂದ ನಾನಾ ಕಷ್ಟ ನಷ್ಟಗಳುಂಟು. ಇದನ್ನೆಲ್ಲಾ ತಪ್ಪಿಸಿಕೊಡಬೇಕು.

ದಿವಾನರವರು—ಪೋಲೀಸ್ ಕಾನೂನು ಈಗ ಕೌನ್ಸಿಲ್ಲಿನಲ್ಲಿ ಚರ್ಚೆಯಾಗುತ್ತಿದೆ. ಅದನ್ನು ಪಾಸುಮಾಡುವಾಗ್ಗೆ ನೀವು ಹೇಳುವುದನ್ನು ಯೋಚಿಸುತ್ತೇವೆ. ಲಾಕಪ್ಪುಗಳ ಮೇಲೆ ಪಹರೆ ಇರುವಂತೆ ಬಹುಶಃ ತಾಲ್ಲೂಕ್ ಖಜಾನೆ ಕಾವಲಿನವರಾದ ಬಾರ್ ಶಿಪಾಯಿಗಳನ್ನು ನೇಮಿಸಬಹುದೆಂದು ತೋರುತ್ತೆ. ಈ ವಿಷಯವನ್ನು ಜ್ಞಾಪಕದಲ್ಲಿಟ್ಟುಕೊಂಡಿರುವೆವು. ಇದಲ್ಲದೆ, ತಾಲ್ಲೂಕುಗಳಲ್ಲಿ ಮಾನಸ್ಥರಾಗಿಯೂ ದೊಡ್ಡ ಮನುಷ್ಯರಾಗಿಯೂ ಇರತಕ್ಕಂಥಾ ಕೆಲವು ಗೌರವಸ್ಥರನ್ನು ಅಲ್ಲಲ್ಲಿ ಲಾಕಪ್ಪುಗಳ ತನಿಖೆ ಮತ್ತು ಜವಾಬ್ದಾರರನ್ನಾಗಿ ನೇಮಿಸುವ ಭಾಗದಲ್ಲೂ ಆಲೋಚನೆಮಾಡುತ್ತೇವೆ.

ರೆಜಿಸ್ಟ್ರೇಷನ್ ಫೀಜು.

ಬಹು ಮಂದಿ ಮೆಂಬರುಗಳು—ಸಬ್ ರೆಜಿಸ್ಟ್ರಾರ್ ಆಫೀಸುಗಳಿಂದ ಕೋರ್ಟಿನ ಕೆಲಸಕ್ಕೆ ರೆಜಿಸ್ಟ್ರೇಷನ್ ಸರ್ಟಿಫಿಕೇಟನ್ನು ತಂದು ಹಾಜರು ಮಾಡಬೇಕಾದರೆ ಈಚಿಗೆ ಹೊಸ ರೂಲ್ಸು ಜಾರಿಗೆ ಬಂದಲಾಗಾಯಿತು ಬಹಳ ಕಷ್ಟವಾಗಿದೆ. ಮತ್ತು ಹೆಚ್ಚು ದುಡ್ಡು ನಷ್ಟವಾಗುವುದು. ಹನ್ನೆರಡು ವರುಷದ ದಾಖಲೆ ತರಬೇಕು. ಇದಕ್ಕೆ ಸುಮಾರು ೫ ರೂಪಾಯಿ ಖರ್ಚಾಗುತ್ತದೆ. ಅದರೂ ಸಬ್ ರೆಜಿಸ್ಟ್ರಾರುಗಳೇ ಪುಸ್ತಕಗಳನ್ನು ಹುಡುಕಬೇಕಾಗಿರೋಣದರಿಂದ ಅವರು ಇತರ ಕೆಲಸದ ಸಬಬಿನಿಂದ ಸಾವಕಾಶ ಮಾಡುತ್ತಾರೆ. ಇದನ್ನು ತಪ್ಪಿಸಿ ಪೂರ್ವದಲ್ಲಿದ್ದಂತೆಯೇ ಮಾಡಿಕೊಡಬೇಕು.

ದಿವಾನರವರು—ನೀವು ಈ ಭಾಗದಲ್ಲಿ ಏನಾಗಬೇಕೆಂದು ಕೇಳುತ್ತೀರೋ ಅದನ್ನು ವಿಶದವಾಗಿ ಬರೆದು ಹಾಜರುಪಡಿಸಿದರೆ ಗವರ್ನಮೆಂಟಿನವರು ಆಲೋಚನೆ ಮಾಡುತ್ತಾರೆ. [ಈ ಅಪ್ಪಣೆಯಾದಂತೆ ಮ॥ ಬಾಲಕೃಷ್ಣರಾಯರು ಒಂದು ಪತ್ರಿಕೆಯನ್ನು ಬರೆದು ಒಪ್ಪಿಸಿದರು. ಅದರಲ್ಲಿ ಬರೆದಿರುವ ಅಭಿಪ್ರಾಯವೇನೆಂದರೆ—ಕಕ್ಷಿಗಾರರು ಅಕ್ಷರಸ್ಥರಾಗಿದ್ದು ತಾವೇ ದಾಖಲೆ ನೋಡಿಕೊಳ್ಳುವುದಾದರೆ ಎಷ್ಟು ವರುಷಗಳ ರೆಕಾರ್ಡನ್ನಾದರೂ ಸಬ್ ರೆಜಿಸ್ಟ್ರಾರು ಅವರಿಗೆ ವಹಿಸಬೇಕು. ಇದಕ್ಕೆ ಮೊದಲಿದ್ದಂತೆ ಒಂದೇ ರೂಪಾಯಿ ರುಸುಂ ತೆಗೆದುಕೊಳ್ಳಬೇಕು. ಅಕ್ಷರಸ್ಥರಲ್ಲದವರು ದಾಖಲೆ ನೋಡಬೇಕೆಂದಪೇಕ್ಷಿಸಿದರೆ ಸಬ್ ರೆಜಿಸ್ಟ್ರಾರೇ ಸ್ವತಃ ದಾಖಲೆ ನೋಡಿ ಅವರಿಗೆ ಸರ್ಟಿಫಿಕೇಟ್ ಕೊಡಬೇಕು. ಇದಕ್ಕಾಗಿ ಎರಡು ರೂಪಾಯಿ ರುಸುಂ ಇಡಬೇಕು.]

ನೇಗಿಲು ಮುಂತಾದ್ದಕ್ಕೆ ಸಾಲಕೊಡುವುದು

ಗುಬ್ಬಿಯ ಮ॥ ಕೆ. ರಾಮಾನುಜಯ್ಯಂಗಾರ್ರು—ವ್ಯವಸಾಯವನ್ನು ಅಭಿವೃದ್ಧಿಗೆ ತರುವುದಕ್ಕೆ ಗವರ್ನಮೆಂಟಿನವರು ಅನೇಕ ಹೊಸ ತರಹಾ ನೇಗಿಲು ಮುಂತಾದ ಸಾಧನಗಳನ್ನು ರೈತರು ಉಪಯೋಗಿಸಬೇಕೆಂದು ಪ್ರೋತ್ಸಾಹಪಡಿಸುತ್ತಿದಾರೆ. ಹಾಗೆ ಕೊಂಡು ಉಪಯೋಗಿಸಬೇಕೆಂದು ಕೊಂಡುಕೊಳ್ಳಲಪೇಕ್ಷಿಸುವಂಥಾ ರೈತರಿಗೆ ದ್ರವ್ಯ ಸಹಾಯವಿಲ್ಲ. ಗವರ್ನಮೆಂಟಿನವರು ಅದಕ್ಕಾಗಿ ಅವರಿಗೆ ಸಾಲಕೊಟ್ಟು ಚಿಲ್ಲರೆಯಾಗಿ ವಸೂಲ್ಮಾಡಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಬೇಕು. ಮತ್ತು ಒಳ್ಳೇ ಬಿತ್ತನೆ ಬೀಜಗಳೂ ಸಿಕ್ಕುವಂತೆ ಮಾಡಿಕೊಡಬೇಕು.

ದಿವಾನರವರು—ಈ ವಿಷಯದಲ್ಲೇ ರೆವಿನ್ಯೂ ಕಮಿಷನರು ಕೆಲವು ರೂಲ್ಸನ್ನು ಮಾಡಿ ಗವರ್ನಮೆಂಟಿಗೆ ಕಳುಹಿಸಿದಾರೆ. ಅದನ್ನು ಅವರು ನೋಡಿ ಕ್ಷಿಪ್ರದಲ್ಲೇ ಹುಕುಂ ಕೊಡುವರು. ಇದಲ್ಲದೆ ಒಳ್ಳೇ ಬಿತ್ತನೇ ಬೀಜಗಳನ್ನು ಕೊಂಡು ಹಂಚುವುದಕ್ಕೆ ಸರ್ಕಾರದವರು ೫೦೦ ರೂಪಾಯಿ ತೆಗೆದಿಟ್ಟಿದಾರೆ. ಬೀಜ ಬಂದ ಕೂಡಲೇ ಡೆಪ್ಯುಟಿ ಕಮಿಷನರುಗಳ ಮೂಲಕ ರೈತರಿಗೆ ಕೊಡಿಸಿಕೊಡುತ್ತೇವೆ.

ಪಟೇಲ್, ಶಾನುಭೋಗರ ಪೋಟಿಗೆ ರುಸುಂ

ಹರಿಹರದ ಮ॥ ಶ್ರೀನಿವಾಸ ಸೀತಾರಾಮ ಕುಲಕರ್ಣಿಯವರು—ಪಟೇಲ್ ಶಾನುಭೋಗರ ರುಸುಮು ಬಹಳ ಅಲ್ಪವಾಗಿರುತ್ತಾದ್ದರಿಂದ ಅವರು ಜೀವನಕ್ಕೆ ಕಷ್ಟಪಡುತ್ತಾರೆ. ಸರ್ಕಾರದವರು ಇತರ ಇಲಾಖಾ ನೌಕರರ ಸಂಬಳವನ್ನು ಹೆಚ್ಚು ಮಾಡಿ ಕೊಟ್ಟಿರುವಂತೆ ಅವರ ಪೋಟಿಗೆ ರುಸುಮನ್ನೂ ಜಾಸ್ತಿಮಾಡಿ ಕೊಡಬೇಕು ಎಂಬರ್ಥಕ್ಕೆ ಒಂದು ಪತ್ರಿಕೆಯನ್ನು ಸಭೆಯಲ್ಲಿ ಓದಿದರು.

ದಿವಾನರವರು—ಈಗ ಇದು ಸಾಧ್ಯವೆಂದು ಹೇಳಲಾಗುವುದಿಲ್ಲ. ಈಗ ಒಟ್ಟು ೮ ಲಕ್ಷ ರೂಪಾಯಿ ಪೋಟಿಗೆ ಸಲ್ಲುವುದು. ಅಂದರೆ, ಒಟ್ಟು ರೆವಿನ್ಯೂ ವಸೂಲಾತಿಯಲ್ಲಿ ಶೇಕಡ ೭ ರಂತೆ ಕೊಡುತ್ತಿದೇವೆ. ಆದ್ದರಿಂದ ಸದ್ಯ ಈಗಿರುವ ದರವನ್ನು ಹೆಚ್ಚಿಸುವುದು ಸಾಧ್ಯವೆಂದು ಕಾಣುವುದಿಲ್ಲ.

ಕಡೇ ದಿನದ ಸಭೆಯು.

ಕಳೆದ ಶನಿವಾರ ಮಧ್ಯಾಹ್ನ ೩ ಘಂಟೆಗೆ ಪ್ರಜಾಪ್ರತಿನಿಧಿ ಸಮಾಜದ ಕಾರ್ಯಗಳೆಲ್ಲಾ ಪೂರೈಸಿದವು. ದಿವಾನರವರು ತಿಳಿಸಿದ್ದೇನೆಂದರೆ—ಪ್ರಜಾಪ್ರತಿನಿಧಿಸಭೆಯಿಂದ ಲೆಜಿಸ್ಲೆಟಿವ್ ಕೌನ್ಸಿಲಿಗೆ ಮೆಂಬರುಗಳನ್ನು ಚುನಾಯಿಸಬೇಕೇ ಬೇಡವೇ ಎಂಬೀ ವಿಚಾರವನ್ನು ಚರ್ಚಿಸಿ ಇತ್ಯರ್ಥವನ್ನು ಗವರ್ನಮೆಂಟಿಗೆ ತಿಳಿಸಬೇಕೆಂದು ಈ ಸಭೆ ಆರಂಭವಾದ ದಿನವೇ ನಾವು ತಿಳಿಸಿದೆವು. ಇದುವರೆಗೆ ನೀವು ನಿಮ್ಮ ಅಭಿಪ್ರಾಯವನ್ನು ತಿಳಿಸಲಿಲ್ಲ. ಈಗಲಾದರೂ ತಿಳಿಸುತ್ತೀರಾ ಎಂದು ಪ್ರಶ್ನೆ ಮಾಡಿದರು. ಅದಕ್ಕೆ ಮೆಂಬರುಗಳಲ್ಲಿ ಅನೇಕರು ಮುಂದೆ ಬಂದು ದಿವಾನರವರನ್ನು ಕುರಿತು—ಲೆಜಿಸ್ಲೆಟಿವ್ ಕೌನ್ಸಿಲಿಗೆ ನಮ್ಮ ಸಭೆಯಿಂದ ಮೆಂಬರುಗಳನ್ನು ಚುನಾಯಿಸಿ ಕಳುಹಿಸುವುದರಲ್ಲಿ ನಮಗೆ ತಾತ್ಪರ್ಯವಿಲ್ಲ. ಲೆಜಿಸ್ಲೆಟಿವ್ ಕೌನ್ಸಿಲಿನಲ್ಲಿ ಚರ್ಚೆಯಾಗಿ ತೀರ್ಮಾನವಾದ ಕಾನೂನುಗಳನ್ನು ನಮ್ಮ ಸಭೆಗೆ ತಿಳಿಸಿ, ಆ ಕಾನೂನುಗಳ ವಿಷಯದಲ್ಲಿ ಗವರ್ನಮೆಂಟಿನವರು ನಮ್ಮ ಅಭಿಪ್ರಾಯವನ್ನು ತಿಳಿದು, ಒಂದು ವೇಳೆ ಅದು ಭಿನ್ನವಾಗಿದ್ದರೆ ನಮ್ಮ ಅಭಿಪ್ರಾಯಾನುಸಾರವಾಗಿ ತಿದ್ದುಪಡಿ ಮಾಡಿಸಿ ಅನಂತರ ಶ್ರೀಮನ್ಮಹಾರಾಜರವರ ಬಳಿಗೆ ಸ್ಯಾಂಕ್ಷನ್ನಿಗೆ ಕಳುಹಿಸಬೇಕು. ಇಷ್ಟಾದರೆ ಸಾಕಾಗಿದೆ ಎಂದು ತಿಳಿಸಿದರು. ಇನ್ನು ಕೆಲವು ಮೆಂಬರುಗಳು—ಪ್ರಜಾಪ್ರತಿನಿಧಿಸಭೆಯಿಂದ ಲೆಜಿಸ್ಲೆಟಿವ್ ಕೌನ್ಸಿಲಿಗೆ ಮೆಂಬರುಗಳನ್ನು ಚುನಾಯಿಸಿ ಕಳುಹಿಸಬೇಕಾದದ್ದಿಲ್ಲ. ಡಿಸ್ಟ್ರಿಕ್ಟ್ ಬೋರ್ಡುಗಳಿಗೂ ಮ್ಯುನಿಸಿಪಾಲಿಟಿಗಳಿಗೂ ಒಬ್ಬೊಬ್ಬ ಮೆಂಬರನ್ನು ಚುನಾಯಿಸಿ ಆ ಕೌನ್ಸಿಲ್ಲಿಗೆ ಕಳುಹಿಸುವ ಹಕ್ಕನ್ನು ವಹಿಸಿದರೆ ಸಾಕಾಗಿದೆ ಎಂದು ಅರಿಕೆ ಮಾಡಿದರು. ಮತ್ತೆ ಕೆಲವು ಮೆಂಬರುಗಳು—ಕೆಲವು ಮೆಂಬರುಗಳನ್ನು ಪ್ರಜಾಪ್ರತಿನಿಧಿಸಭೆಯಿಂದ ಚುನಾಯಿಸಿ ಲೆಜಿಸ್ಲೆಟಿವ್ ಕೌನ್ಸಿಲಿಗೆ ಕಳುಹಿಸುವಂತೆ ಈ ಸಭೆಗೆ ಅಧಿಕಾರ ಕೊಡಬೇಕು ಎಂದು ತಿಳಿಸಿದರು. ಇದನ್ನೆಲ್ಲಾ ಕೇಳಿ ದಿವಾನರವರು ಪ್ರತಿನಿಧಿಗಳನ್ನು ಕುರಿತು—ನಿಮ್ಮಲ್ಲಿ ಲೆಜಿಸ್ಲೆಟಿವ್ ಕೌನ್ಸಿಲಿಗೆ ಮೆಂಬರುಗಳನ್ನು ಚುನಾಯಿಸುವ ಹಕ್ಕು ಈ ಸಭೆಗೆ ವಹಿಸಬೇಕೆನ್ನುವವರೆಷ್ಟು ಮಂದಿ ಇರುತ್ತೀರಿ? ಮತ್ತು ಅಂಥಾ ಚುನಾವಣೆಯ ಹಕ್ಕು ಬೇಡವೆನ್ನುವವರು ನಿಮ್ಮಲ್ಲಿ ಎಷ್ಟು ಮಂದಿ ಇರುತ್ತೀರಿ? ಎಂಬುದನ್ನು ಈಗ ಗವರ್ನಮೆಂಟಿನವರು ತಿಳಿಯಬೇಕೆಂದಪೇಕ್ಷಿಸುತ್ತಾರೆ ಎಂಬುದಾಗಿ ಅಪ್ಪಣೆ ಕೊಡಿಸಿದರು. ಗಣತಿ ಮಾಡಿದಾಗ ಸಭೆಯಲ್ಲಿ ಹಾಜರಿದ್ದ ಮೆಂಬರುಗಳ ಪೈಕಿ ೩೧ ಮಂದಿ ಈ ಸಭೆಗೆ ಆ ಅಧಿಕಾರ ಬೇಡವೆಂತಲೂ, ೧೮ ಮಂದಿ ಆ ಅಧಿಕಾರ ಬೇಕೆಂತಲೂ ಅಭಿಪ್ರಾಯಪಟ್ಟರು.

ಆಗ ದಿವಾನರವರು ಪ್ರತಿನಿಧಿಗಳನ್ನು ಕುರಿತು—ಲೆಜಿಸ್ಲೆಟಿವ್ ಕೌನ್ಸಿಲಿಗೆ ಈ ಸಭೆಯಿಂದ ಕೆಲವು ಮೆಂಬರುಗಳನ್ನು ಚುನಾಯಿಸಿ ಕಳುಹಿಸಬೇಕಾದದ್ದಿಲ್ಲವೆಂದು ಈಗ ತಿಳಿದುಬಂತು. ಆ ಕೌನ್ಸಿಲಿನಲ್ಲಿ ವಿಚಾರವಾದಂಥಾ ಕಾನೂನನ್ನು ನಿಮ್ಮ ಸಭೆಯಲ್ಲಿಟ್ಟು, ನಿಮ್ಮ ಅಭಿಪ್ರಾಯವನ್ನು ತೆಗೆದುಕೊಂಡು, ನೀವು ಹೇಳುವಂತೆ ಕಾನೂನು ತಿದ್ದುಪಡಿ ಮಾಡಬೇಕೆನ್ನುತ್ತೀರಿ. ಈ ರೀತಿ ನೀವು ಕೇಳುವುದರ ಅಭಿಪ್ರಾಯವೂ, ಅದರ ಪರಿಣಾಮವೂ ಏನೆಂದು ನಿಮಗೆ ತಿಳಿದಿಲ್ಲ. ನಿಮ್ಮ ಕೋರಿಕೆಯಂತೆ ನಡಿಸುವುದು ಅಸಾಧ್ಯ. ಇದಲ್ಲದೆ, ಗವರ್ನಮೆಂಟಿನ ಮನು ಜಮಾಖರ್ಚಿನ ಅಂದಾಜುಪಟ್ಟಿಗಳನ್ನು ತಯಾರುಮಾಡುವುದಕ್ಕಿಂತ ಮೊದಲು ಬಾಬುವಾರು ನಿಮ್ಮ ಸಭೆಯಲ್ಲಿ ವಿವರಿಸಿ ಹೇಳಿ, ಅದರ ಮೇಲೆ ನೀವು ಹೇಳುವಂತೆ ಕಮ್ಮಿ ಜಾಸ್ತಿ ಮಾಡಿ, ಬಜೆಟ್ಟನ್ನು ತಯಾರ್ ಮಾಡಬೇಕೆಂದೂ ಕೇಳುತ್ತೀರಿ. ಇದೂ ಅಸಾಧ್ಯವಾದ ವಿಚಾರವಾಗಿದೆ. ಸರ್ಕಾರಿ ಕೆಲಸಕಾರ್ಯಗಳ ತನಿಖೆ ವಿಚಾರದಲ್ಲಿ ನೀವು ಇತರ ದೇಶಗಳಲ್ಲೆಲ್ಲೂ ಇಲ್ಲದಂಥಾ ಸ್ವಾತಂತ್ರ್ಯವನ್ನು ಪಡೆದಿರುತ್ತೀರಿ. ಮೆಂಬರುಗಳು ಈ ಸಭೆಯಲ್ಲಿ ಅಧಿಕಾರಿಗಳ ಕೂಡ ಚರ್ಚೆ ನಡಿಸುವುದು ಎಷ್ಟು ವಿಶೇಷವಾಗಿದೆ ಎಂಬುವುದು ನಿಮಗೆಲ್ಲಾ ಅನುಭವಸಿದ್ಧವೇ ಆಗಿದೆ. ಈ ಸಭೆಯು ಗವರ್ನಮೆಂಟಿನವರ ಹುಕುಂ ಪ್ರಕಾರ ನಿರ್ಮಾಣವಾದದ್ದಾಗಿದೆ. ನಿಮಗೆ ಓಟು (ಸಮ್ಮತಿ) ಕೊಡುವ ಸ್ವಾತಂತ್ರ್ಯವೇನೂ ಇರುವುದಿಲ್ಲ. ಲೆಜಿಸ್ಲೆಟಿವ್ ಕೌನ್ಸಿಲ್ಲಾದರೋ ಕಾನೂನುಪ್ರಕಾರ ನಿರ್ಮಾಣವಾದದ್ದು. ಅದರಲ್ಲಿರುವ ಮೆಂಬರುಗಳಿಗೆ ಓಟ್ ಕೊಡುವ ಸ್ವಾತಂತ್ರ್ಯ ಉಂಟು. ಆದಕಾರಣ ನೀವು ಕೇಳುವ ಮೇಲ್ಕಂಡ ಎರಡು ವಿಷಯಗಳನ್ನು ಗವರ್ನಮೆಂಟಿನವರು ಈ ಸಭೆಗೆ ವಹಿಸುವುದು ಸಾಧ್ಯವಲ್ಲ ಎಂಬುದಾಗಿ ತಿಳಿಸಿ, ಈ ವರುಷದ ಪ್ರತಿನಿಧಿ ಸಭೆಯನ್ನು ಬರಖಾಸ್ತು ಮಾಡಿದರು.

ತರುವಾಯ ಮ॥ ಬಿ. ನರಸಿಂಗರಾಯರು ಪ್ರಜಾಪ್ರತಿನಿಧಿಗಳ ಪರವಾಗಿ ಇಂಗ್ಲೀಷಿನಲ್ಲಿ ಒಂದು ಅಡ್ರೆಸ್ಸನ್ನು ಓದಿ ದಿವಾನರವರಿಗೆ ಒಪ್ಪಿಸಿದರು.

ಅನಂತರ ಶಿವಮೊಗ್ಗಾ ಡಿಸ್ಟ್ರಿಕ್ಟಿನ ಪ್ರಜಾಪ್ರತಿನಿಧಿಸಭೆಯ ಮೆಂಬರುಗಳ ಪರವಾಗಿ ಮ॥ ಬಾಲಕೃಷ್ಣರಾಯರು ಓದಿ ಒಪ್ಪಿಸಿದ ಅಡ್ರೆಸ್ಸಿನ ವಿವರವೇನೆಂದರೆ—

"ಈ ಸಭಾಸದರುಗಳಿಗೆಲ್ಲ ಚರ್ಚಾಕಾಲದಲ್ಲಿ ಸಾವಕಾಶವನ್ನು ವ್ಯವಧಾನವನ್ನು ಕೊಟ್ಟು ಅವರು ಅರ್ಜಿಸುವ ಅಂಶಗಳನ್ನು ವಿಶ್ವಾಸದಿಂದಲೂ ಸಮಾಧಾನಚಿತ್ತದಿಂದಲೂ ಕೇಳಿದುದಕ್ಕೆಲ್ಲ ನಾವು ಬಹಳ ಕೃತಜ್ಞರಾಗಿರುತ್ತೇವೆ.

ಈ ಪ್ರಸಿದ್ಧವಾದ ಸಂಸ್ಥಾನದ ದಿವಾನ್ ಪದವಿಯನ್ನು ಹೊಂದಿದ ನಂತರ ನಮ್ಮಗಳಿಗಾದ ಪ್ರಜಾಪ್ರಯೋಜನಾರ್ಥಕ ಕಾರ್ಯಗಳಲ್ಲಿ ಮುಖ್ಯವಾದುದು ಅಡಿಕೆ ಹಾಸಲು ನಿವೃತ್ತಿ ಆದುದೆಂಬುವದನ್ನು ಹೇಳಲು ಅವಶ್ಯಕವಿಲ್ಲ. ಇದರಿಂದ ಅಡಿಕೆ ಬೆಳೆಯುವವರಿಗೆ ನಮ್ಮ ಸರ್ಕಾರದವರು ಉದಾರವಾಗಿ ಪ್ರತಿವರುಷವು ೩॥ ಲಕ್ಷ ರೂಪಾಯಿ ಕೊಟ್ಟಂತೆ ಆಯಿತು. ಈ ಉಪಕಾರವನ್ನು ಪ್ರಜೆಗಳು ಶಾಶ್ವತವಾಗಿ ಸ್ಮರಿಸುತ್ತಲಿರುವೆವು.

ಶಿವಮೊಗ್ಗಾ ಪಟ್ಟಣವು ವರುಷೇ ವರುಷ ಪ್ಲೇಗ್ ಮಾರಿ ಉಪದ್ರವದಿಂದ ಬಹಳ ಪೀಡಿತವಾಗಿ ಜನಗಳು ಲಯವಾಗುತ್ತಿರುವುದು ಸನ್ನಿಧಾನಕ್ಕೆ ವೇದ್ಯವೇ ಇದೆ. ಇದರ ಹಿಂಸೆಯನ್ನು ಹೋಗಲಾಡಿಸಲು ಸರ್ಕಾರದವರು ಡ್ರೇನೇಜ್, ನೀರಿನ ಸರಬರಾಯಿ, ಗ್ರಾಮ ಬಡಾವಣೆ ಮಾಡುವದು, ಹಳೇ ಗ್ರಾಮದಲ್ಲಿ ನಿಬಿಡವಾಗಿರುವ ಸ್ಥಳಗಳನ್ನು ವಿಶಾಲವಾಗುವಂತೆ ಏರ್ಪಡಿಸುವ ಕಾರ್ಯಭಾಗಗಳನ್ನು ಮಾಡುವ ತರದೂದಿನಲ್ಲಿರುವದನ್ನು ಕೇಳಿ ಬಹಳ ಸಂತೋಷಪಡುತ್ತೇವೆ. ಈ ಏರ್ಪಾಟುಗಳನ್ನು ಕ್ಷಿಪ್ರದಲ್ಲಿ ನೆರವೇರಿಸಿ ಅನುಕೂಲಕ ನಮ್ಮ ಪಟ್ಟಣದ ಆರೋಗ್ಯಸ್ಥಿತಿಯನ್ನೂ ಮತ್ತು ವೃದ್ಧಿಯನ್ನು ಶಾಶ್ವತಗೊಳಿಸಿ ಕೀರ್ತಿಯನ್ನು ಪಡೆಯಬೇಕೆಂದು ಅತ್ಯಂತ ವಿನಯಪೂರ್ವಕವಾಗಿ ಬೇಡುತ್ತೇವೆ.

ಸರ್ವಚೈತನ್ಯ ಸ್ವರೂಪನಾದ ಶ್ರೀ ದೇವರು ತಮಗೆ ಆಯುರಾರೋಗ್ಯಗಳನ್ನು ಕೊಟ್ಟು, ಐಶ್ವರ್ಯವನ್ನು ವೃದ್ಧಿಪಡಿಸಿ ಕಾಪಾಡಲೆಂದು ಸರ್ವದಾ ಪ್ರಾರ್ಥಿಸುತ್ತೇವೆ."

ಅನಂತರ ಹರಿಹರದ ಮ॥ ಕುಲಕರ್ಣಿಯವರು ಅಲ್ಲಿನ ಪ್ರಜೆಗಳ ವಂದನೆಗಳನ್ನು ಗವರ್ನಮೆಂಟಿಗೆ ಸಮರ್ಪಿಸಿ, ಅಲ್ಲಿಗೆ ಒಂದು ಸಬ್ ಟ್ರೆಜರಿಯನ್ನೂ ನೆಯ್ಗೆ ಕೈಗಾರಿಕೆ ಸ್ಕೂಲನ್ನೂ ಇಡಿಸಿಕೊಡಬೇಕೆಂಬ ಅರ್ಥಕ್ಕೆ ಒಂದು ಪತ್ರಿಕೆ ಓದಿದರು.

ಮ॥ ಮಾಗಡಿ ಕೃಷ್ಣಮೂರ್ತಿ ರಾಯರು ದಿವಾನರವರನ್ನು ಕುರಿತು—ನಮ್ಮಲ್ಲಿ ಅನೇಕರು ವಿಷಯಗಳನ್ನು ಸೂಚಿಸಿ, ಸಭೆಗೆ ಬಾರದೆ ನಿಂತುಬಿಟ್ಟರು. ಅಂಥಾ ವಿಷಯಗಳನ್ನು ಇಲ್ಲಿ ಚರ್ಚೆಯಾಗದಿದ್ದರೂ ಗವರ್ನಮೆಂಟಿನವರೇ ಪರ್ಯಾಲೋಚನೆ ಮಾಡಿ ಅವುಗಳ ವಿಷಯದಲ್ಲಿ ಮಾಡಿದ ತೀರ್ಮಾನಗಳನ್ನು ಮೆಂಬರುಗಳಿಗೆಲ್ಲಾ ಅಪ್ಪಣೆ ಕೊಡಿಸಿದಲ್ಲಿ ಮತ್ತೆ ಅಂಥಾ ವಿಷಯಗಳನ್ನೇ ಇತರ ಮೆಂಬರುಗಳು ಇಲ್ಲಿ ಚರ್ಚೆಗೆ ತಾರದಂತೆಯೂ, ಈ ಸಭೆಯ ಕಾಲವನ್ನು ವ್ಯರ್ಥ ಕಳೆಯದಂತೆಯೂ ಆಗುವುದು ಎಂದು ಅರಿಕೆಮಾಡಿದರು.

ಕಡೆಯಲ್ಲಿ ದಿವಾನರವರು ಪ್ರಜಾಪ್ರತಿನಿಧಿಗಳ ಅಭಿಪ್ರಾಯಗಳನ್ನೆಲ್ಲಾ ಶ್ರೀಮನ್ಮಹಾರಾಜರವರಲ್ಲಿ ಅರಿಕೆಮಾಡುತ್ತೇವೆಂದು ಅಪ್ಪಣೆ ಕೊಟ್ಟು, ಪ್ರತಿನಿಧಿಗಳಿಗೆಲ್ಲಾ ಅವರವರ ಸ್ಥಳಗಳಿಗೆ ತೆರಳುವಂತೆ ಅನುಜ್ಞೆಯನ್ನು ದಯಪಾಲಿಸಿದರು.

ಪ್ರಜಾಪ್ರತಿನಿಧಿಗಳ ಸಭೆಯಲ್ಲಿ ಮೈಸೂರು ಸಂಸ್ಥಾನದ ದಿವಾನರವರು ಮಾಡಿದ ಉಪನ್ಯಾಸ.

ತಾರೀಖು ೧೯ನೆ ಅಕ್ಟೋಬರ್ ೧೯೦೭ನೆ ಇಸವಿ.

[ಕಳೆದ ವಾರದ ಶೇಷ]

ರೇಷ್ಮೆ ವ್ಯವಸಾಯ.

ಈ ಸಂಸ್ಥಾನದಲ್ಲಿ ಮುಂದೆ ಬಹಳ ಅಭಿವೃದ್ಧಿಗೆ ಬರಬಹುದಾದ ರೇಷ್ಮೆಯ ವ್ಯವಸಾಯಕ್ಕೆ ವಿಶೇಷ ಗಮನವನ್ನು ಕೊಡುತ್ತಿದೆ. ರೇಷ್ಮೆ ಸಾಗುವಳಿಯ ಇನ್ಸ್‌ಪೆಕ್ಟರುಗಳು ಟಾಟಾಯವರ ರೇಷ್ಮೆಯ ತೋಟದಲ್ಲಿ ತರಬೇತಾದ ತರುವಾಯ ರೇಷ್ಮೆ ಬೆಳೆಯುವ ಅನೇಕ ಸ್ಥಳಗಳಿಗೆ ಹೋಗಿ ರೇಷ್ಮೆಯ ಹುಳುಗಳನ್ನು ಪೈರುಮಾಡುವ ಉತ್ಕೃಷ್ಟವಾದ ವಿಧಾನಗಳನ್ನು ಪೈರುಗಾರರಿಗೆ ಕಲಿಸಬೇಕೆಂದು ಹುಕುಂ ಮಾಡಿತ್ತು. ಈ ಕ್ರಮವು ನಿರೀಕ್ಷಿಸಿದಷ್ಟು ಫಲಕಾರಿಯಾಗದೆ ಹೋದುದರಿಂದ ಇದನ್ನು ಬಿಟ್ಟುಬಿಡಲಾಯಿತು. ಹೀಗೆ ಮಾಡುವುದಕ್ಕಿಂತ ಹಿತವಾಗಿ ರೇಷ್ಮೆಯ ವ್ಯವಸಾಯದ ಕೆಲಸದಲ್ಲಿರುವ ಮನುಷ್ಯರನ್ನು ಟಾಟಾಯವರ ತೋಟಕ್ಕೇ ಕಳುಹಿಸಿ ಅಲ್ಲಿ ಅವರನ್ನು ತರಬೇತು ಮಾಡುವುದು ಒಳ್ಳೆಯದಾಗಿ ತೋರಿತು. ಆದುದರಿಂದ ಆ ತೋಟಕ್ಕೆ ಸಂಬಂಧಪಟ್ಟ ರೇಷ್ಮೆಯ ವ್ಯವಸಾಯವನ್ನು ಬೋಧಿಸಿ ಕಾರ್ಯತಃ ಮಾಡಿ ತೋರಿಸುವುದಕ್ಕೆ ಒಂದು ಕಟ್ಟಡವನ್ನು ಕಟ್ಟುವುದಕ್ಕೂ ಅಲ್ಲಿನ ವಿದ್ಯಾರ್ಥಿಗಳಿಗೆ ಸ್ಥಳವಸತಿಗಳನ್ನು ಮಾಡುವುದಕ್ಕೂ ರೇಷ್ಮೆಯ ವ್ಯವಸಾಯವನ್ನು ಕಲಿಯುವುದಕ್ಕೆ ತಕ್ಕವರಾದವರಿಗೆ ವಿದ್ಯಾರ್ಥಿವೇತನಗಳನ್ನು ಕೊಡುವುದಕ್ಕೂ ಏರ್ಪಾಡು ಮಾಡಲಾಗುತ್ತದೆ. ರೇಷ್ಮೆ ಸಾಗುವಳಿಯ ಇನ್ಸ್‌ಪೆಕ್ಟರುಗಳನ್ನು ವಿದ್ಯಾಭ್ಯಾಸದ ಇಲಾಖೆಗೆ ವಾಪಸು ಕಳುಹಿಸಿ ಸ್ಕೂಲುಗಳಲ್ಲಿ ಪಾಠಹೇಳತಕ್ಕ ಕಾಲ ಹೊರತು ಬಾಕಿ ಕಾಲಗಳಲ್ಲಿ ಆಯಾ ಸ್ಥಳದಲ್ಲಿರುವ ರೇಷ್ಮೆ ಹುಳದ ಪೈರುಗಾರರನ್ನು ತರಬೇತುಮಾಡುವಂತೆ ಹುಕುಂ ಕೊಟ್ಟಿದೆ.

ಕಲ್ಕತ್ತಾ ಪಟ್ಟಣದಲ್ಲಿ ನಡೆದ ಪ್ರದರ್ಶನಕ್ಕೆ ಹೋಗಿ ನೋಡಿ ಅಲ್ಲಿಗೆ ತಂದಿಟ್ಟಿದ್ದ ವ್ಯವಸಾಯದ ಮತ್ತು ಇತರ ಶೋಧನೆಗಳಿಂದ ನಡಿಯುವ ಕೆಲಸವನ್ನು ನೋಡಿ ತಿಳಿದುಕೊಂಡು ಬರುವುದಕ್ಕೂ, ಈ ಸಂಸ್ಥಾನಕ್ಕೆ ಉಪಯೋಗವಾಗಬಹುದಾದ ಬೆಳೆಗಳನ್ನೂ ಸಸ್ಯಪದಾರ್ಥಗಳನ್ನೂ ಕುರಿತು ವರ್ತಮಾನವನ್ನು ಸಂಗ್ರಹಿಸಿಕೊಂಡು ಬರುವುದಕ್ಕಾಗಿಯೂ, ರೆವಿನ್ಯೂ ಕಮಿಷನರನ್ನು ಕಳೆದ ದಿಸೆಂಬರಿನಲ್ಲಿ ಕಳುಹಿಸಿತ್ತು. ಮೈಸೂರಿನಲ್ಲಿ ಪ್ರಯೋಗಮಾಡಿ ನೋಡುವುದಕ್ಕಾಗಿ ಅನೇಕ ತರದ ಭತ್ತವನ್ನೂ ಇತರ ಪದಾರ್ಥಗಳನ್ನೂ ಅವರು ತೆಗೆದುಕೊಂಡು ಬಂದಿರುತ್ತಾರೆ

ಅಗ್ರಿಕಲ್ಚರಲ್ ಕೆಮಿಸ್ಟರವರು.

ಅಗ್ರಿಕಲ್ಚರಲ್ ಕೆಮಿಸ್ಟರವರು ಬೆಲ್ಲ ಅಥವಾ ಸಕ್ಕರೆಯ ಉತ್ಪತ್ತಿಯನ್ನು ಅಭಿವೃದ್ಧಿಪಡಿಸುವುದಕ್ಕಾಗಿ ಗತವರ್ಷದಲ್ಲಿ ಪರೀಕ್ಷೆಗಳನ್ನು ಮಾಡುತ್ತಿದ್ದರು. ಇಂಡಿಯಾ ದೇಶದ ಸಕ್ಕರೆಯು ಅನ್ಯದೇಶದ ಸಕ್ಕರೆಯೊಂದಿಗೆ ಬಜಾರಿನಲ್ಲಿ ಸಫಲವಾಗಿ ಪೋಟಾಪೋಟಿ ಮಾಡುವುದಕ್ಕಾಗುವ ಹಾಗೆ, ಇಲ್ಲಿ ತಯಾರಾಗುವ ಸಕ್ಕರೆ ಅಥವಾ ಬೆಲ್ಲದ ಗುಣವನ್ನೂ ಉತ್ಪತ್ತಿಯನ್ನೂ ಬಹಳವಾಗಿ ಹೆಚ್ಚಿಸಬಹುದೆಂದು ಅವರ ಪರೀಕ್ಷೆಗಳಿಂದ ಕಂಡುಬರುವುದಾಗಿ ಅವರು ಅಭಿಪ್ರಾಯಪಡುತ್ತಾರೆ. ಡಾಕ್ಟರ್ ಲೇಮನ್‌ರವರ ಪರೀಕ್ಷೆಗಳ ಫಲಿತಾಂಶಗಳನ್ನು ಒಂದು ಪತ್ರಿಕಾರೂಪವಾಗಿ ಶೀಘ್ರದಲ್ಲಿ ಪ್ರಕಟಿಸಲಾಗುವುದು. ಅವರು ಹೇಳಿರುವಂತೆ ವ್ಯವಸಾಯವನ್ನು ಕಾರ್ಯತಃ ಮಾಡಿನೋಡಿ ಈ ಫಲಿತಾಂಶಗಳ ಪ್ರಯೋಜನವನ್ನು ಪಡೆಯುವುದು ವಿಶೇಷವಾಗಿ ಸ್ವಂತ ವ್ಯವಸಾಯದಲ್ಲಿ ಉದ್ಯುಕ್ತರಾಗಿರುವವರ ಕೆಲಸವಾಗಿದೆ. ಆದರೂ ಈ ಕೆಲಸವನ್ನು ಮಾಡಿ ನೋಡಲು ಇಷ್ಟವಿರುವ ಯಾವ ಜನರಿಗಾದರೂ ಸಾಧ್ಯವಾದ ಎಲ್ಲಾ ಸಹಾಯವನ್ನೂ ಮಾಡುವುದಕ್ಕೂ, ನಿಪುಣರಾದವರ ಕೈಯಿಂದ ಬುದ್ಧಿವಾದವನ್ನು ಹೇಳಿಸುವುದಕ್ಕೂ ಸರ್ಕಾರದವರು ಸಿದ್ಧವಾಗಿರುವರು.

ರೆವಿನ್ಯೂ ಸರ್ವೇ ಮತ್ತು ಸೆಟ್ಲ್‌ಮೆಂಟ್

ರಿವಿಜನ್ ಸೆಟ್ಲ್‌ಮೆಂಟಿನಿಂದ ಕಂದಾಯವು ಈ ಕೆಳಗಿನಂತೆ ಹೆಚ್ಚಾಯಿತು — ಮೊಳಕಾಲ್ಮೂರು ತಾಲ್ಲೂಕಿನಲ್ಲಿ ಶೇಕಡಾ ೫, ಚನ್ನಗಿರಿ ತಾಲ್ಲೂಕಿನಲ್ಲಿ ಶೇಕಡಾ ೨೦, ಸೊರಬ ತಾಲ್ಲೂಕಿನಲ್ಲಿ ಶೇಕಡಾ ೧೪, ಮತ್ತು ಬೆಂಗಳೂರು ತಾಲ್ಲೂಕಿನಲ್ಲಿ ಶೇಕಡಾ ೧೭. ಈ ಪ್ರದೇಶಗಳ ಸಂಪತ್ತು ಬಹಳವಾಗಿ ಅಭಿವೃದ್ಧಿಹೊಂದಿರುವುದರಿಂದ ಮೇಲ್ಕಂಡ ಕಂದಾಯದ ಹೆಚ್ಚುಗೆಯು ಬಹಳ ಮಿತವಾಗಿದೆ. ಈ ದರಗಳನ್ನು ಇನ್ನೂ ಹೆಚ್ಚಿಸಬಹುದಾಗಿದ್ದರೂ ೧೮೯೦ನೆ ಇಸವಿಯ ನಿಬಂಧನೆಗಳಲ್ಲಿ ವಿಧಿಸಿರುವ ನಿಯಮಗಳ ಮೇರೆ ಬಾಗಾಯತು ಕಂದಾಯವನ್ನು ಇಳಿಸಿ ದರಗಳನ್ನು ಕಡಮೆಯಾಗಿ ಇಡಲಾಯಿತು. ಈ ರಿವಿಜನ್ ಸೆಟ್ಲ್‌ಮೆಂಟಿನಿಂದ ಸಾಗರ ತಾಲ್ಲೂಕಿನ ಒಟ್ಟು ಕಂದಾಯದಲ್ಲಿ ನಿಜವಾಗಿ ಶೇಕಡಾ ೫ ರಷ್ಟು ಕಡಿಮೆಯೂ, ತರೀ ಮತ್ತು ಬಾಗಾಯತು ಸರಾಸರಿ ದರಗಳಲ್ಲಿ ಬಹಳ ಕಡಮೆಯೂ ಆದವು. ಸಾಗರ ಮತ್ತು ಸೊರಬ ತಾಲ್ಲೂಕುಗಳ ತೋಟಗಳಿಗೆ ಸುಲಭವಾದ ಕಂದಾಯದಿಂದ ಆಗಬಹುದಾದ ಸರ್ವಪ್ರಯೋಜನಗಳೂ ಉಂಟಾಗುವಹಾಗೆ ಅವುಗಳಿಗೆ ವಿಶೇಷ ಉದಾರವಾದ ದರಗಳನ್ನು ಹಾಕಿದೆ. ಹೀಗೆ ಉದಾರವಾಗಿ ನಡಿಸಿರುವುದರಿಂದಲೂ, ಹಾಳತವನ್ನೂ ಅದರಿಂದ ಉಂಟಾಗಿದ್ದ ತೊಂದರೆಗಳನ್ನೂ ಹೋಗಲಾಡಿಸಿರುವುದರಿಂದಲೂ ಈ ಪ್ರದೇಶದ ಸುಪಾರಿ ವ್ಯವಸಾಯವು ಹಿಂದಿನ ಅಭಿವೃದ್ಧಿಸ್ಥಿತಿಗೆ ಬರುವುದೆಂದು ಸರ್ಕಾರದವರು ನಂಬುತ್ತಾರೆ

ಫಾರೆಸ್ಟುಗಳು.

ಒಟ್ಟು ೮೬ ಚದರಮೈಲಿಯುಳ್ಳ ೩೩ ಹೊಸ ತಾಕುಗಳನ್ನು ಸೇರಿಸಿ ಗತವರ್ಷದಲ್ಲಿ ಸಂಸ್ಥಾನದ ಫಾರೆಸ್ಟ್ ವಿಸ್ತೀರ್ಣವನ್ನು ಹೆಚ್ಚಿಸಲಾಯಿತು. ಮೈಸೂರು ಫಾರೆಸ್ಟ್ ಇಲಾಖೆಯವರು ಇಂಡಿಯಾ ದೇಶದ ಹೊರಗಿರುವ ಬಜಾರುಗಳಿಗೆ ಮೈಸೂರು ಟಿಂಬರನ್ನು ಕಳುಹಿಸುವ ಪ್ರಯತ್ನವನ್ನು ಮಾಡುತ್ತಿದ್ದಾರೆ. ಈಚೆಗೆ ಈಜಿಪ್ಟ್ ಯಾ ಐಗುಪ್ತ ದೇಶಕ್ಕೆ ಕಳುಹಿಸಿದ ನಮೂನೆಗೆ ಬಹಳ ಒಳ್ಳೆಯ ಬೆಲೆಗಳು ಸಿಕ್ಕಿದುದರಿಂದ ಈಜಿಪ್ಟ್ ದೇಶಕ್ಕೆ ಮರವನ್ನು ಕ್ರಮವಾಗಿ ರಫ್ತುಮಾಡುವುದಕ್ಕಾಗಿ ಏರ್ಪಾಡುಗಳು ಆಲೋಚನೆಯಲ್ಲಿವೆ. ಗಂಧದ ಬಾಬಿನಿಂದ ಗತವರ್ಷದಲ್ಲಿ ೧೨,೩೭,೨೧೯ ರೂಪಾಯಿ ಹುಟ್ಟುವಳಿಯಾಯಿತು; ಹಿಂದಿನ ವರ್ಷ ೧೭,೪೭,೬೬೩ ರೂಪಾಯಿ ಹುಟ್ಟುವಳಿಯಾಯಿತು. ಫಾರೆಸ್ಟ್ ಇಲಾಖೆಯ ನಿವ್ವಳ ಹುಟ್ಟುವಳಿಯು ೧೯೦೧-೦೨ ರಲ್ಲಿ ೧೩,೦೧,೬೩೬ ರೂಪಾಯಿ ಆದುದಕ್ಕೆ ಗತವರ್ಷದಲ್ಲಿ ೧೨,೨೩,೩೩೦ ರೂಪಾಯಿ ಹುಟ್ಟುವಳಿಯಾಯಿತು

ಬೊಂಬುಗಳು ಮತ್ತು ಇತರ ಫಸಲುಗಳಿಗೆ ವಲ್ಲಾಳಿಗಳ ಮೂಲಕ ಲೈಸೆನ್ಸುಗಳನ್ನು ಕೊಡುವುದರಿಂದ ಮೈಸೂರು ಡಿಸ್ಟ್ರಿಕ್ಟಿನಲ್ಲಿ ಬಹಳ ತೃಪ್ತಿಕರವಾದ ಹುಟ್ಟುವಳಿಯು ಆದುದರಿಂದ ಅದೇ ಕ್ರಮವನ್ನು ಆಜಮಾಯಿಷಿ ತರೀಖು ಎರಡು ವರ್ಷಗಳ ವರೆಗೆ ಸಂಸ್ಥಾನದಲ್ಲೆಲ್ಲಾ ಆಚರಣೆಯಲ್ಲಿ ತಂದಿದೆ. ಈ ಕ್ರಮದಿಂದ ಜನಗಳು ಸುಲಭವಾಗಿ ಲೈಸೆನ್ಸುಗಳನ್ನು ಪಡೆಯುವಂತೆ ಆಗಿ ಅವರಿಗೆ ಅನುಕೂಲಗಳು ಬಹಳ ಹೆಚ್ಚಾಗುವಂತೆ ನಿರೀಕ್ಷಿಸುವುದಲ್ಲದೆ ಫಾರೆಸ್ಟ್ ಉದ್ಯೋಗಸ್ಥರು ಅವರ ನ್ಯಾಯವಾದ ಕೆಲಸವಾದ ಫಾರೆಸ್ಟುಗಳ ರಕ್ಷಣೆಗೆ ವಿಶೇಷ ಕಾಲವನ್ನು ವಿನಿಯೋಗಿಸುವುದಕ್ಕೆ ಅವಕಾಶ ಉಂಟಾಗಿದೆ

ಜಮೀನು ಹಿಡುವಳಿದಾರರಿಗೆ ಅವರ ಹಿಡುವಳಿ ಜಮೀನುಗಳಲ್ಲಿರುವ ಗಂಧದ ಮರಗಳಿಂದ ಫಾಯಿದೆ ಬರುವಂತೆ ಮಾಡಿ ಆ ಮರಗಳ ಬೆಳವಳಿಗೆ ಮತ್ತು ಸಂರಕ್ಷಣೆ ವಿಷಯಗಳಲ್ಲಿ ಅವರ ಸಹಾಯವನ್ನು ಸಂಪಾದಿಸುವ ಮತ್ತು ವ್ಯವಸಾಯದ ಅಥವಾ ಇತರ ಕೆಲಸಗಳಿಗೆ ಅಡಚಣೆಯಾಗಿರುವ ಗಂಧದ ಮರಗಳನ್ನು ಅವರು ತೆಗೆದುಹಾಕಲು ನ್ಯಾಯವಾದ ಅನುಕೂಲಗಳನ್ನು ಉಂಟುಮಾಡಿಕೊಡುವ ವಿಷಯವು ಸರ್ಕಾರದವರ ಪರ್ಯಾಲೋಚನೆಯಲ್ಲಿದೆ

ವ್ಯವಸಾಯದ ಬ್ಯಾಂಕುಗಳು.

ವ್ಯವಸಾಯದ ಬ್ಯಾಂಕುಗಳು ಅಭಿವೃದ್ಧಿಗೆ ಬರುವ ಯಾವ ಚಿಹ್ನೆಗಳನ್ನೂ ತೋರ್ಪಡಿಸದೆ ಇರುವುದು ಶೋಚನೀಯವಾಗಿದೆ; ಗತವರ್ಷದಲ್ಲಿ ಬ್ಯಾಂಕುಗಳಿಂದ ಸುಮಾರು ೯೦ ಸಾವಿರ ರೂಪಾಯಿ ವಾಪಸು ಬಂತು. ಇನ್ನೂ ಸುಮಾರು ೧೨ ಲಕ್ಷ ರೂಪಾಯಿ ವಸೂಲಾಗಬೇಕಾಗಿದೆ. ತಾಳ್ಯದ ಮತ್ತು ತಾವರೆಕೆರೆಯ ಬ್ಯಾಂಕುಗಳು ವಾಪಸು ಮಾಡಬೇಕಾದ ಮೊಬಲಗುಗಳನ್ನು ಕೊಡದ ಪಟ್ಟಾಗಿ ತಪ್ಪಿದುದರಿಂದ ಅವುಗಳಿಗೆ ಸರ್ಕಾರದವರು ಕೊಟ್ಟ ಸಾಲಗಳನ್ನು ವಾಪಸು ತೆಗೆದುಕೊಳ್ಳುವಂತೆ ಹುಕುಂ ಮಾಡಲಾಯಿತು. ಸರ್ಕಾರದವರ ಸಾಲಗಳ ವಸೂಲಾತಿಯು ಸುಲಭವಾಗುವಂತೆ ಅಂಥಾ ವಸೂಲಾತಿಯ ಕೆಲಸಗಳಿಗೆ ಅವಶ್ಯಕವಾಗಿರಬಹುದಾದಷ್ಟರಮಟ್ಟಿಗೆ ಲ್ಯಾಂಡ್ ರೆವಿನ್ಯೂ ಕೋಡಿನ ೧೧ನೆ ಅಧ್ಯಾಯದ ಮೇರೆ ಡೆಪ್ಯುಟಿ ಕಮಿಷನರಿಗಿರುವ ಅಧಿಕಾರಗಳನ್ನು ನಡಿಸಲು ವ್ಯವಸಾಯದ ಬ್ಯಾಂಕುಗಳ ಇನ್ಸ್‌ಪೆಕ್ಟರಿಗೆ ಅಧಿಕಾರವನ್ನು ಕೊಟ್ಟಿತು

ಅನ್ಯೋನ್ಯಸಹಾಯಕ ಸಂಘಗಳು

ವ್ಯವಸಾಯದ ಬ್ಯಾಂಕುಗಳನ್ನು ಬಿಟ್ಟು ಅನ್ಯೋನ್ಯ ಸಹಾಯಕ ಸಂಘಗಳ ಕಡೆಗೆ ತಿರುಗಿ ನೋಡಿದರೆ ಅವುಗಳ ಅಭಿವೃದ್ಧಿಯು ಪ್ರೋತ್ಸಾಹಕರವಾಗಿರುವಂತೆ ಕಾಣುವುದು. ಶ್ರೀಮನ್ಮಹಾರಾಜರವರು ಈ ಸಂಘಗಳ ವಿಷಯದಲ್ಲಿ ಅನುರಾಗವುಳ್ಳವರಾಗಿ ತಮ್ಮ ಸ್ವಂತ ಹಣದಿಂದ ದ್ರವ್ಯಸಹಾಯಮಾಡಬೇಕೆಂದು ಅಪ್ಪಣೆ ದಯಪಾಲಿಸಿರುತ್ತಾರೆ. ಸರ್ಕಾರದವರು ಈ ಸಂಘಗಳನ್ನು ಸ್ಟಾಂಪು ಮತ್ತು ರೆಜಿಸ್ಟ್ರೇಷನ್ ರುಸುಂಗಳಿಂದ ವಿನಾಯಿತಿಸಿರುವುದಲ್ಲದೆ ಅವುಗಳ ಕೆಲಸದ ವಿಷಯದಲ್ಲಿ ಹುಟ್ಟುವ ವಿವಾದಗಳು ಪಂಚಾಯಿತರ ಮೂಲಕ ಸುಲಭವಾಗಿ ವ್ಯವಸ್ಥೆಯಾಗಲು ನಿಬಂಧನೆಗಳನ್ನು ಮಾಡಿರುತ್ತಾರೆ. ಮತ್ತು ಈ ಸಂಘಗಳಿಗೆ ಮುಂಗಡವಾಗಿ ಕೊಡುವುದಕ್ಕಾಗಿ ಸುಮಾರು ೧೦ ಸಾವಿರ ರೂಪಾಯಿಯನ್ನು ಪ್ರತ್ಯೇಕವಾಗಿಡುವಂತೆಯೂ ಕೂಡ ಈಚೆಗೆ ನಿಶ್ಚಯಿಸಿರುತ್ತಾರೆ. ಗತವರ್ಷದಲ್ಲಿ ಇದ್ದ ೩ ಸಂಘಗಳಿಗೆ ಪ್ರತಿಯಾಗಿ ಈಗ ಸಂಸ್ಥಾನದಲ್ಲಿ ೧೫ ಸಂಘಗಳು ಕೆಲಸ ನಡಿಸುತ್ತಿವೆ. ಈ ಸಂಘಗಳ ಪೈಕಿ ಎರಡು ಧಾನ್ಯದ ಬ್ಯಾಂಕುಗಳಾಗಿವೆ. ಎರಡು ಸಂಘಗಳು ನೇಯ್ಗೆಯವರ ಪ್ರಯೋಜನಕ್ಕಾಗಿ ಕೆಲಸ ನಡಿಸುತ್ತವೆ. ಅವುಗಳ ಪೈಕಿ ಸಾಲಿಗ್ರಾಮದಲ್ಲಿರುವ ಸಂಘವು ಬರೋಡಾವಿನಲ್ಲಿರುವ ನೇಯ್ಗೆಯ ಪಾಠಶಾಲೆಯಲ್ಲಿ ಉಪಯೋಗಕ್ಕೆ ತಂದಿರುವ ನೇಯ್ಗೆಯ ಉತ್ಕೃಷ್ಟವಾದ ವಿಧಾನಗಳನ್ನು ಕಲಿತುಕೊಂಡು ಬರುವುದಕ್ಕಾಗಿ ಅದರ ಮೆಂಬರುಗಳ ಪೈಕಿ ಒಬ್ಬರನ್ನು ಬರೋಡಾವಿಗೆ ಕಳುಹಿಸಿತು

ಮರಾಮತ್ತು ಕಾಮಗಾರಿಗಳು

ಗತವರ್ಷದಲ್ಲಿ ಮರಾಮತ್ತು ಕಾಮಗಾರಿಗಳಿಗಾಗಿ ಒಟ್ಟು ೩೭,೨೭,೭೨೭ ರೂಪಾಯಿ ಖರ್ಚಾಯಿತು. ಈ ಪೈಕಿ ನೀರಾವರಿ ಕಾಮಗಾರಿಗಳಿಗೆ ೧೩,೧೨,೨೦೨ ರೂಪಾಯಿಯೂ, ಸಿವಿಲ್ ಯಾ ಮುಲ್ಕಿ ಕಾಮಗಾರಿಗಳಿಗೆ ೨೩,೯೨,೯೩೦ ರೂಪಾಯಿಯೂ, ಮಿಲಿಟರಿ ಕಾಮಗಾರಿಗಳಿಗೆ ೨೯,೯೩೧ ರೂಪಾಯಿಯೂ, ಕಾವೇರೀ ವೈದ್ಯುತಶಕ್ತಿ ಕಾಮಗಾರಿಗಳಿಗೆ ೫,೯೫,೩೦೫ ರೂಪಾಯಿಯೂ ಖರ್ಚಾದುವು

ನೀರಾವರಿ ಕಾಮಗಾರಿಗಳು.

ಮಾರಿಕಣಿವೆಯ ಕೆರೆಯಲ್ಲಿ ತೃಪ್ತಿಕರವಾದ ಕೆಲಸವು ನಡೆದಿದೆ. ಇದಕ್ಕಾಗಿ ಗತವರ್ಷದಲ್ಲಿ ೨,೩೩,೦೦೦ ರೂಪಾಯಿ ಖರ್ಚಾಯಿತು. ಆಣೆಯು ಕಾರ್ಯತಃ ಮುಗಿದಿದೆ. ನೀರು ಸರಬರಾಯಿ ನಾಲೆಗಳನ್ನು ಸ್ವಲ್ಪ ಹೆಚ್ಚು ಕಡಮೆ ಮಂಜೂರಾಗಿರುವ ಪ್ರಾರಂಭ ದೂರದವರೆಗೆ ಅಗೆದಾಗಿದೆ. ಅವುಗಳಿಗೆ ಸಂಬಂಧಪಟ್ಟ ಕಲ್ಲು ಗಾರೆ ವಗೈರೆ ಕೆಲಸಗಳು ನಡಿಯುತ್ತಿವೆ. ಈಗ ಎಡಪಾರ್ಶ್ವದ ನಾಲೆಯ ಮೊದಲ ಹದಿನಾಲ್ಕನೇ ಮೈಲಿಯ ವರೆಗೂ, ಬಲಪಾರ್ಶ್ವದ ನಾಲೆಯ ೧೩ ನೆಯ ಮೈಲಿಯ ವರೆಗೂ ಸಾಗುವಳಿಗಾಗಿ ರೈತರಿಗೆ ನೀರು ಸರಬರಾಯಿ ಆಗುತ್ತಿದೆ. ಇತರ ನೀರಾವರಿ ಕಾಮಗಾರಿಗಳಲ್ಲಿಯೂ ತೃಪ್ತಿಕರವಾದ ಕೆಲಸವು ನಡಿಯಿತು. ಸಣ್ಣ ಕೆರೆಗಳ ದುರಸ್ತಿಗಾಗಿ ಎಂದಿನಂತೆ ಒಂದು ಲಕ್ಷ ರೂಪಾಯನ್ನು ಪ್ರತ್ಯೇಕವಾಗಿ ಇಡಲಾಯಿತು. ಈ ಪೈಕಿ ಆಗಲೇ ನಡೆದಿರುವ ಕಾಮಗಾರಿಗಾಗಿ ೬೯,೦೦೦ ರೂಪಾಯಿ ಖರ್ಚಾಗಿದೆ. ರೈತರು ಅವರ ಹಿಸ್ಸೆಯ ಮಟ್ಟಿಕಾಮಗಾರಿಯನ್ನು ಮಾಡುವುದಕ್ಕಾಗಿ ೧೨,೬೦೦ ರೂಪಾಯನ್ನು ಮುಂಗಡವಾಗಿ ಕೊಟ್ಟಿದೆ. ೩,೩೩,೪೯೨ ರೂಪಾಯಿ ಮುಟ್ಟುವುದಾಗಿ ಅಂದಾಜಾಗಿರುವ ಎರಡು ಕ್ಷಾಮಪರಿಹಾರಕ ಕಾಮಗಾರಿಗಳನ್ನು ಗತವರ್ಷದಲ್ಲಿ ಮಂಜೂರ್ ಮಾಡಲಾಯಿತು. ಅವು ಯಾವುವೆಂದರೆ— ತರೀಕೆರೆಯ ಬಳಿ ಇರುವ ಕೆರೆಗಳಿಗೆ ನೀರು ಒದಗಿಸುವುದಕ್ಕಾಗಿ ಸಾಗ್ಗಾನ ಅಣೆಕಟ್ಟಿನಿಂದ ಒಂದು ನಾಲೆಯನ್ನು ತರುವುದು ಮತ್ತು ಮೈಸೂರು ಡಿಸ್ಟ್ರಿಕ್ಟಿನಲ್ಲಿ ಬೀರವಳ್ಳಿಯ ಹತ್ತಿರ ನುಗು ನದಿಗೆ ಅಡ್ಡಲಾಗಿ ಒಂದು ಕೆರೆಯನ್ನು ಕಟ್ಟುವುದು. ಚನ್ನಪಟ್ಟಣದ ಬಳಿಯೂ ಮೈಸೂರು ಡಿಸ್ಟ್ರಿಕ್ಟಿನಲ್ಲಿ ಸುವರ್ಣಾವತಿಗೆ ಅಡ್ಡಲಾಗಿಯೂ ಕೆರೆ ಕಟ್ಟುವ ಕಾಮಗಾರಿಗಳನ್ನು ಅಲಾಭಕರವಾದವುಗಳೆಂದು ಅಥವಾ ಅನ್ಯಥಾ ಅನವಶ್ಯವಾದವುಗಳೆಂದು ಬಿಟ್ಟುಬಿಡಲಾಯಿತು

ಕಾವೇರೀ ವೈದ್ಯುತಶಕ್ತಿಯ ಏರ್ಪಾಡು

ಕಾವೇರೀ ವೈದ್ಯುತಶಕ್ತಿಯ ಏರ್ಪಾಡಿಗಾಗಿ ಒಟ್ಟು ೫,೯೫,೩೦೫ ರೂಪಾಯಿ ಖರ್ಚಾಯಿತು. ಈ ಪೈಕಿ ಮೂರನೆಯ ಶಕ್ತಿಸ್ಥಾಪನೆಗಾಗಿ ೨,೭೩,೩೭೨ ರೂಪಾಯಿ ಖರ್ಚಾಯಿತು. ಗತವರ್ಷದಲ್ಲಿ ಒಟ್ಟು ೨೦,೧೧,೫೫೨ ರೂಪಾಯಿ ಹುಟ್ಟುವಳಿಯಾಯಿತು. ಕೆಲಸ ನಡೆಸುವ ಖರ್ಚು ಹೋಗಲಾಗಿ ೧೩,೫೧,೭೯೩ ರೂಪಾಯಿ ನಿವ್ವಳ ಹುಟ್ಟುವಳಿಯಾಯಿತು. ಇದು ಜಮಾಖರ್ಚು ಅಂದಾಜುಪಟ್ಟಿಯಲ್ಲಿ ಹಾಕಿದ್ದ ಮೊಬಲಗಿಗಿಂತ ೧,೯೭,೦೦೦ ರೂಪಾಯಿನಷ್ಟು ಹೆಚ್ಚಾಯಿತು

ರೈಲ್ವೆಗಳು

ಈಗ ನಡೆಯುವ ಸಂಸ್ಥಾನದ ಸ್ವಂತ ರೈಲ್ವೆಗಳಲ್ಲಿ ೧೦,೬೨,೬೩೩ ರೂಪಾಯಿ ನಿವ್ವಳ ಹುಟ್ಟುವಳಿಯಾಯಿತು. ೧೯೦೧—೦೨ ರಲ್ಲಿ ೧೦,೯೯,೧೬೩ ರೂಪಾಯಿ ಹುಟ್ಟುವಳಿಯಾಯಿತು. ಒಟ್ಟು ಹುಟ್ಟುವಳಿಯು ೨೩,೩೦,೬೬೫ ರೂಪಾಯಿನಿಂದ ೨೩,೬೯,೨೭೨ ರೂಪಾಯಿಗೆ ಹೆಚ್ಚಿದರೂ ಕೆಲಸ ನಡಿಸುವ ಖರ್ಚು ಹಿಂದಿನ ವರ್ಷದ ಖರ್ಚಿಗಿಂತ ೭೦,೦೧೬ ರೂಪಾಯಿನಷ್ಟು ಹೆಚ್ಚಾಯಿತು. ೧೯೦೩ ನೆಯ ಜೂನ್ ಆಖೈರ್ ವರೆಗೆ ಬಂಡವಾಳದ ಖರ್ಚು ೨,೬೬,೭೧,೩೩೦ ರೂಪಾಯಿ ಆಯಿತು. ಹಿಂದಿನ ವರ್ಷದಲ್ಲಿ ಬಂಡವಾಳದ ಮೇಲೆ ನಿವ್ವಳ ಹುಟ್ಟುವಳಿಯು ಶೇಕಡಾ ೪.೩೩ ಇದ್ದುದಕ್ಕೆ ಗತವರ್ಷದಲ್ಲಿ ಶೇಕಡಾ ೩.೫೦ರಷ್ಟು ಆಯಿತು. ಒಟ್ಟು ಹುಟ್ಟುವಳಿಗೆ ಕೆಲಸ ನಡಿಸುವ ಖ… ಹಿಂದಿನ ವರ್ಷದಲ್ಲಿ ಶೇಕಡಾ ೫೭.೨೨ ಇದ್ದುದಕ್ಕೆ ಗತವರ್ಷ… ಶೇಕಡಾ ೬೦.೧೫ರಷ್ಟು ಆಯಿತು

ಹರಿಹರಕ್ಕೆ ನೀರು ಸರಬರಾಯಿ ಮಾಡುವುದಕ್ಕಾಗಿ ೧೩,… ರೂಪಾಯಿ ಮುಟ್ಟುವ ಒಂದು ಅಂದಾಜನ್ನು ಗತವರ್ಷದಲ್ಲಿ ಮಂಜೂರ್ ಮಾಡಲಾಯಿತು. ಮೇಲ್ಕೋಟೆಯ ಅಭಿವೃದ್ಧಿಗಾಗಿ ಒಂದು ಅಂದಾಜು ಈಗ ಸಿದ್ಧವಾಗಿದೆ. ಹೊಸ ಮ್ಯುನಿಸಿಪಲ್ ರೆಗ್ಯುಲೇಷನ್ ಮೇರೆಗೆ ಈ ಊರನ್ನು ಒಂದು ಮ್ಯುನಿಸಿಪಾಲಿಟಿಯಾಗಿ ಮಾಡಿದ್ದೂ, ಅಲ್ಲಿ ಬರುವ ಯಾತ್ರಿಕರ ಮೇಲೆ ಒಂದು ಸಣ್ಣ ಪರಿ… ಹಾಕಿ ಅಭಿವೃದ್ಧಿಗಾಗಿ ಮುಟ್ಟಿಸಿದ ಖರ್ಚಿಗೋಸ್ಕರ ಕಾಟ್ರಿಬ್ಯೂ… ನನ್ನು ಕೊಡುವಂತೆ ಆ ಊರಿನ ಮ್ಯುನಿಸಿಪಲ್ ಸಭೆಯನ್ನು ಕೇಳ… ಕೆಂದೂ ಯೋಚಿಸಿ ಇದೆ. ಚಿಕ್ಕಮಗಳೂರು ಹರಿಹರ ಮತ್ತು … ಸರಬರಾಯಿಗಳ ಅಂದಾಜುಗಳೂ ಕೂಡ ತಯಾರಾಗುತ್ತಿವೆ

ಪ್ಲೇಗು

ಗತವರ್ಷದಲ್ಲಿ ೫,೯೬೯ ಜನಗಳಿಗೆ ಪ್ಲೇಗು ತಗುಲಿ ೪,… ಮಂದಿ ಸತ್ತರು. ಇದಕ್ಕೆ ಪ್ರತಿಯಾಗಿ ಹಿಂದಣ ವರ್ಷದಲ್ಲಿ ೩,೪… ಜನಗಳಿಗೆ ಪ್ಲೇಗು ತಗುಲಿ ೨,೧೩೬ ಮಂದಿ ಸತ್ತರು. ಬೆಂಗಳೂ… ಡಿಸ್ಟ್ರಿಕ್ಟಿನಲ್ಲಿ ಪ್ಲೇಗಿನ ಬಾಧೆಯು ಅತ್ಯಧಿಕವಾಗಿಯೂ ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿ ಬಹಳ ಕಡಮೆಯಾಗಿಯೂ ಇತ್ತು. ಬೆಂಗಳೂ… ಡಿಸ್ಟ್ರಿಕ್ಟಿನಲ್ಲಿ ೧,೬೩೦ ಜನಗಳಿಗೆ ಪ್ಲೇಗು ತಗುಲಿ ೧,೧೬೫ ಮಂ… ಸತ್ತುದಾಗಿಯೂ, ಪ್ಲೇಗು ತಗುಲಿದ ಮೂರು ಮಂದಿಗಳು ಮಾ… ಚಿತ್ರದುರ್ಗ ಡಿಸ್ಟ್ರಿಕ್ಟಿಗೆ ಹೊರಗಿನಿಂದ ಬಂದ ಹಾಗೂ, ಅಲ್ಲಿ ಪ್ಲೇ… ನಿಂದ ಮೂರು ಮಂದಿಗಳು ಸತ್ತ ಹಾಗೂ ತಿಳಿಯಬಂದಿದೆ. ಅಕ್ಟೋ… ಬರ್ ತಿಂಗಳಲ್ಲಿ ಪ್ಲೇಗಿನ ಹಾವಳಿಯು ಅತ್ಯಧಿಕವಾಗಿಯೂ, ಜೂ… …ಗಳಲ್ಲಿ ಅತ್ಯಲ್ಪವಾಗಿಯೂ ಇದ್ದವು. ಹಿಂದಿನ ವರ್ಷಗಳಲ್ಲಿ ಮಾ… ದ ಪ್ಲೇಗುನಿವಾರಕೋಪಾಯಗಳನ್ನೇ ಗತವರ್ಷದಲ್ಲಿಯೂ ಮಾ… ಲಾಯಿತು. ಅವು ಯಾವುವೆಂದರೆ—(೧) ರೋಗ ತಗುಲಿದ ಸ್ಥ… ನ್ನು ಬಿಟ್ಟು ಹೋಗುವುದು; (೨) ರೋಗದ ಸೋಂಕನ್ನು ಹೋಗ… ಡಿಸುವುದು; (೩) ಇಲಿಗಳನ್ನು ನಾಶಪಡಿಸುವುದು. ರೋಗ ತಗು… ಮನೆಗಳನ್ನು ಒಡನೆಯೇ ಬಿಟ್ಟುಹೋಗುವುದರಿಂದಲೂ … ಮುಂತಾದುದನ್ನು ಹಾಕಿ ನೆಲ ಮೊದಲಾದುದನ್ನು ಸುಡುವುದರಿಂದ… ಅನೇಕ ಸಂದರ್ಭಗಳಲ್ಲಿ ರೋಗವು ನಿರ್ಮೂಲವಾಗಿ ಹೋಗುತ್ತ… ದು ತಿಳಿಯಬಂದಿವೆ. ಸಂಸ್ಥಾನದಲ್ಲಿ ಮೊದಲು ಪ್ಲೇಗು ಕಾಣಿಸಿ… ದ ಕಾಲದಿಂದ ಅನುಸರಿಸಲ್ಪಡುತ್ತಿರುವ ಕ್ರಮದಲ್ಲಿಯೇ ಗುಡಿ… ಸಾಮಾನುಗಳನ್ನು ಬಡಜನಗಳಿಗೆ ಉಚಿತವಾಗಿಯೂ ಇತರರಿಗೆ … ಲ್ ಬೆಲೆಗೂ ಕೊಡುವುದರಿಂದಲೂ, ಜನಗಳು ಬಿಟ್ಟುಹೋದ ಮ… ಳ್ಳಿನ ಸ್ವತ್ತಿನ ಕಾವಲಿಗಾಗಿ ಏರ್ಪಾಡು ಮಾಡುವುದರಿಂದಲೂ ರೋ… ತಗುಲಿದ ಪ್ರದೇಶವನ್ನು ಸುಲಭವಾಗಿ ಬಿಟ್ಟುಹೋಗುವುದಕ್ಕೆ … ಸಹಾಯವನ್ನು ಮಾಡಲಾಯಿತು. ಇಲಿಯಿಂದ ಇಲಿಗಳಿಗೂ, ಇ… ಯಿಂದ ಮನುಷ್ಯರಿಗೂ ಇಲಿಯ ಮೈಮೇಲಿರುವ ಚಿಗಟದ ಮೂಲಕ ಪ್ಲೇಗು ವ್ಯಾಪಿಸುವುದಾಗಿ ಈಚೆಗೆ ನಡಿಸಿದ ಶೋಧನೆಗಳಿಂದ ತಿಳಿ… ಬಂದಿದೆ. ಬೆಂಗಳೂರು ಮೈಸೂರು ನಗರಗಳಲ್ಲಿ ೧೯೦೧—೦೨ ರಲ್ಲಿ ಪ್ರಾರಂಭಿಸಿದ ಇಲಿಯನ್ನು ನಾಶಪಡಿಸುವ ಕ್ರಮವನ್ನು ೧೯೦೨—೦೩ ರಲ್ಲಿಯೂ ಪ್ರಬಲವಾಗಿ ನಡಿಸಲಾಯಿತು. ಮತ್ತು ಶಿವಮೊಗ್ಗ ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟುಗಳಲ್ಲಿರುವ ಕೆಲವು ಸ್ಥಳಗಳಲ್ಲಿಯೂ ಇದೇ ಕ್ರಮವನ್ನು ಅನುಸರಿಸಲಾಯಿತು. ಸಂಸ್ಥಾನದಲ್ಲಿ ನಡಿಸಿದ ಪ್ಲೇಗು ನಿವಾರಣೋಪಾಯಗಳಿಗೋಸ್ಕರ ಗತವರ್ಷದಲ್ಲಿ ಒಟ್ಟು ೬೩,೦೦೦ ರೂಪಾಯಿ ಖರ್ಚಾಯಿತು

ಆರೋಗ್ಯದ ಇಲಾಖೆ

ಮೊದಲು ಪ್ಲೇಗು ಕಾಣಿಸಿಕೊಂಡ ಕಾಲದಿಂದ ಪ್ಲೇಗಿನ ನಿವಾರಣೆಗಾಗಿ ಈ ಸಂಸ್ಥಾನದಲ್ಲಿ ಬಹಳ ಹಣ ಖರ್ಚಾಗಿರುವುದು ತಮ್ಮೆಲ್ಲರಿಗೆಲ್ಲಾ ತಿಳಿದೇ ಇದೆ. ಪ್ಲೇಗು, ಕಾಲರಾ ಮತ್ತು ಇತರ ಸಂಕ್ರಾಮಿಕ ಜಾಡ್ಯಗಳ ಸಂಪೂರ್ಣವಾದ ನಿವಾರಣೆಗೆ ಕ್ರಮವಾಗಿ ಏರ್ಪಡಿಸಲ್ಪಟ್ಟ ಆರೋಗ್ಯದ ಇಲಾಖೆಯನ್ನು ನಿರ್ಮಾಣಮಾಡುವುದು ಅವಶ್ಯಕವೆಂದು ಬಹುಕಾಲದಿಂದ ಸರ್ಕಾರದವರ ಮನಸ್ಸಿನಲ್ಲಿತ್ತು. ಆದುದರಿಂದ ಈ ಸಂಸ್ಥಾನಕ್ಕೆ ಕ್ರಮವಾಗಿ ಯೋಗ್ಯತೆಯನ್ನು ಹೊಂದಿದ ಸಿಬ್ಬಂದಿಯುಳ್ಳ ಆರೋಗ್ಯದ ಇಲಾಖೆ (ಹೆಲ್ತ್ ಡಿಪಾರ್ಟ್‌ಮೆಂಟ್) ಏರ್ಪಾಟನ್ನು ಸರ್ಕಾರದವರು ಮಂಜೂರ್ ಮಾಡಿದರು. ಕಳೆದ ಆಗಸ್ಟ್ ೧ನೆ ತಾರೀಖಿನಲ್ಲಿ ಹುಟ್ಟಿದ ಹುಕುಮಿನ ಮೇರೆ ಏರ್ಪಟ್ಟ ಈ ಇಲಾಖೆಯಲ್ಲಿ ೧ ಸ್ಯಾನಿಟರಿ ಕಮಿಷನರೂ, ೧ ಡೆಪ್ಯುಟಿ ಸ್ಯಾನಿಟರಿ ಕಮಿಷನರೂ, ೩ ಡಿವಿಜನ್ ಸ್ಯಾನಿಟರಿ ಆಫೀಸರುಗಳೂ, ೩ ಹೆಲ್ತ್ ಆಫೀಸರುಗಳೂ, ೮ ಡಿಸ್ಟ್ರಿಕ್ಟ್ ಸ್ಯಾನಿಟರಿ ಆಫೀಸರುಗಳೂ, ಸ್ಯಾನಿಟರಿ ಇನ್ಸ್‌ಪೆಕ್ಟರುಗಳೂ, ಮತ್ತು ಲಸಿಕೆ ಹಾಕುವವರೂ ಸೇರಿರುತ್ತಾರೆ

ಈಗಿನ ಸಿಡುಬು ಹಾಕುವವರ ಕೆಲಸವು ಒಟ್ಟಿನಲ್ಲಿ ತೃಪ್ತಿಕರವಾಗಿಲ್ಲದೆ ಇರುವುದರಿಂದ ಅವರಿಗೆ ಬದಲಾಗಿ ಇನ್ನೂ ಹೆಚ್ಚಾದ ಯೋಗ್ಯತೆಯನ್ನು ಹೊಂದಿರುವ ಕೆಲವರನ್ನು ಮಟ್ಟಿಗೆ ಇಟ್ಟುಕೊಳ್ಳುತ್ತದೆ. ಇವರಿಗೆ ಹೆಚ್ಚು ಸಂಬಳವನ್ನು ಕೊಡುವುದರಿಂದಲೂ ಕುದುರೆಯನ್ನು ಇಟ್ಟುಕೊಂಡು ಕೆಲಸಮಾಡಬೇಕೆಂದು ವಿಧಿಸುವುದರಿಂದಲೂ ಒಬ್ಬೊಬ್ಬರು ಈಗಿನ ಜನಗಳಲ್ಲಿ ಇಬ್ಬರು ಅಥವಾ ಮೂವರು ಮಾಡುವಷ್ಟು ಕೆಲಸವನ್ನು ಮಾಡುವುದಕ್ಕೆ ಆಗುವುದು. ಸಿಡುಬು ಹಾಕುವವರನ್ನು ಡಿಸ್ಟ್ರಿಕ್ಟ್ ಸ್ಯಾನಿಟರಿ ಆಫೀಸರುಗಳ ಕೈಕೆಳಗೆ ಇಡಲಾಗುವದು.

ಜನನ ಮರಣಗಳು

ಗತವರ್ಷದಲ್ಲಿ ೭೭,೨೯೫ ಜನನಗಳೂ, ೧,೧೩,೭೩೯ ಮರಣಗಳೂ ಆದವು. ಹಿಂದಿನ ವರ್ಷ ೯೫,೬೬೩ ಜನನಗಳೂ, ೭೧,೬೯೫ ಮರಣಗಳೂ ಆಗಿದ್ದವು. ಮೈಸೂರು ಮತ್ತು ಶಿವಮೊಗ್ಗ ಡಿಸ್ಟ್ರಿಕ್ಟುಗಳಲ್ಲಿ ಕಾಲರಾ ಉಪದ್ರವವು ಪ್ರಬಲವಾಗಿದ್ದುದರಿಂದ ಆ ಕಾರಣದಿಂದ ಸಂಭವಿಸಿದ ಮರಣಸಂಖ್ಯೆಯು ಒಟ್ಟು ಮರಣಸಂಖ್ಯೆಯಲ್ಲಿ ೧೦ರಲ್ಲಿ ಒಂದು ಭಾಗದಷ್ಟು ಆಗಿತ್ತು.

ಚಿನ್ನ

ಗತವರ್ಷದಲ್ಲಿ ೨೦,೬೯,೯೩೦ ಪೌಂಡು ಬೆಲೆಬಾಳುವ ೫,೩೫,೩೩೦ ಔನ್ಸು ತೂಕ ಚಿನ್ನವು ಉತ್ಪತ್ತಿಯಾಯಿತು. ೧೯೦೫ರಲ್ಲಿ ೨,೨೫,೭೯೩ ಪೌಂಡು ಬೆಲೆಬಾಳುವ ೫,೫೫,೫೯೦ ಔನ್ಸು ತೂಕ ಚಿನ್ನವು ಉತ್ಪತ್ತಿಯಾಗಿತ್ತು. ಗತವರ್ಷದಲ್ಲಿ ಉತ್ಪತ್ತಿಯಾದ ಚಿನ್ನದ ಮೇಲೆ ಸರ್ಕಾರಕ್ಕೆ ಬರಬೇಕಾಗಿದ್ದ ರಾಯಲ್ಟಿಯು ೧,೫೩,೫೫೫ ರೂಪಾಯಿ ಆಯಿತು. ಹಿಂದಿನ ವರ್ಷ ೧೭,೧೭,೫೧೩ ರೂಪಾಯಿ ಆಗಿತ್ತು. ಚಾಂಪಿಯನ್ ರೀಫ್ ಗಣಿಯಲ್ಲಿ ಉತ್ಪತ್ತಿಯು ಕಡಿಮೆಯಾದುದರಿಂದಲೇ ಈ ಪ್ರಕಾರ ಕಡಿಮೆ ಉತ್ಪತ್ತಿಯಾಯಿತು. ಈ ಗಣಿಯಲ್ಲಿ ೩೦೦೦ ಅಡಿ ಆಳದವರೆಗೆ ಕೋಲಾರದ ಚಿನ್ನದ ಗಣಿಯ ಪ್ರದೇಶದಲ್ಲಿರುವ ಇತರ ಗಣಿಗಳಿಗಿಂತ ಹೆಚ್ಚು ಚಿನ್ನವು ಉತ್ಪತ್ತಿಯಾಗುತ್ತಿದ್ದರೂ ಕಳೆದ ೧೮ ತಿಂಗಳಲ್ಲಿ ಅದರ ಉತ್ಪತ್ತಿಯನ್ನು ಸುಮಾರು ಶೇಕಡ ೩೦ ರಷ್ಟು ಕಡಿಮೆಯಾದುದಕ್ಕಾಗಿ ಬಂತು. ಇದು ವಿಷಾದಿಸಬೇಕಾದ ವಿಷಯವಾಗಿದ್ದರೂ ವಿಶೇಷ ಭಯಕ್ಕೆ ಕಾರಣವಾಗಿಲ್ಲ. ಲಾಭಕರವಾಗಿ ಚಿನ್ನದ ಅದುರು ಸಿಕ್ಕುವ ಪ್ರದೇಶವು ಮುಗಿಯಿತು ಎಂದಾಗಲಿ, ಅಥವಾ ಇನ್ನೂ ಆಳದಲ್ಲಿ ಹೆಚ್ಚು ಬೆಲೆಬಾಳುವ ಅದುರು ಸಿಕ್ಕುವುದಿಲ್ಲವೆಂದಾಗಲಿ ಊಹಿಸುವುದಕ್ಕೆ ಯಾವ ಕಾರಣವೂ ಇಲ್ಲ. ಇದಕ್ಕೆ ದೃಷ್ಟಾಂತವಾಗಿ ಚಾಂಪಿಯನ್ ರೀಫಿಗೆ ಪಕ್ಕದಲ್ಲಿರುವ ಮೈಸೂರು ಗಣಿಯಲ್ಲಿ ಸ್ವಲ್ಪ ಬೆಲೆಯಾಗಿಯೇ ಅದುರು ಸಿಕ್ಕುವ ವಿಸ್ತಾರವಾದ ಪ್ರದೇಶವು ಕಳೆದು ಹೋದ ಬಳಿಕ ಈಗ ಬಹಳ ಬೆಲೆಬಾಳುವ ಅದುರು ಸಿಕ್ಕಿ ಕೆಲಸವು ಬಹಳ ತೃಪ್ತಿಕರವಾಗಿ ನಡೆಯುತ್ತಿದೆ. ಸಣ್ಣ ಗಣಿಗಳ ಪೈಕಿ ಕೋರಮಾಂಡಲ್ ಗಣಿಯಲ್ಲಿ ಉದ್ಯೋಗವಾಗಿ ಕೆಲಸ ನಿಂತುಹೋಯಿತು. ಬ್ಯಾಂಕುಗಳ ಪ್ಲಾಂಟು ಹಾಗೆ ಆಗವ ಮಾಗಿದೆ. ಕೋಲಾರದ ಚಿನ್ನದ ಗಣಿಗಳಲ್ಲದೆ ಇಂಜನಗಳು ಬಳಿ ಇರುವ ಬಲಗೆರೆ ಯಲ್ಲಿ ಪರಿಶೋಧನೆಯ ಕೆಲಸವನ್ನು ನಡಸುತ್ತಿರುವಾಗ ಪರೀಕ್ಷೆಗಾಗಿ ಶುದ್ಧಿಮಾಡಿದ ಅದುರುಗಳಿಂದ ೧೭೮ ಔನ್ಸು ತೂಕ ಚಿನ್ನವು ಉತ್ಪತ್ತಿಯಾಯಿತು. ಅನೇಕ ಇತರ ಸ್ಥಳಗಳಲ್ಲಿ ಚಿನ್ನದ ಪ್ರಾಸ್ಪೆಕ್ಟಿಂಗ್ ಯಾ ಪರಿಶೋಧನೆಯ ಕೆಲಸವು ಪ್ರಬಲವಾಗಿ ನಡೆಯುತ್ತಿದೆ. ಇವು ಲಾಭಕರವಾದರೆ ಈಗ ಚಿನ್ನವು ಉತ್ಪತ್ತಿಯಾಗುವ ಸ್ಥಳಗಳಲ್ಲದೆ ಇದ್ದಾಗ್ಯೂ ಅವುಗಳಲ್ಲಿ ಮುಂದೆ ಲಾಭಕರವಾಗಿ ...

ಆಪ ಲ್ಲಾರಿಗೆ ಮಾಜಿಸ್ಟ್ರೇಟ್ ಅಧಿಕಾರಗಳನ್ನು ತಪ್ಪಿಸುವುದು

ಶ್ರೀಮನ್ಮಹಾರಾಜರವರು ಈಚೆಗೆ ಮಂಜೂರುಮಾಡಿದ ಮತ್ತೊಂದು ಮಿಸಲೇನಿಯಸ್ ರೂಲಿನ ಪ್ರಕಾರ ಕೋಲಾರ, ಹಾಸನ, ಚಿಕ್ಕಮಗಳೂರು, ದೊಡ್ಡಬಳ್ಳಾಪುರ, ಮತ್ತು ಶಿವಗಂಗೆ ಅಮಲ್ದಾರರುಗಳಿಗೆ ಮ್ಯಾಜಿಸ್ಟ್ರೇಟ್ ಕೆಲಸಗಳನ್ನು ತಪ್ಪಿಸಿ, ಈ ಸ್ಥಳಗಳ ಮುನಿಸೀಫರಿಗೆ ಎರಡನೆಯ ತರಗತಿಯ ಮ್ಯಾಜಿಸ್ಟ್ರೇಟರ ಅಧಿಕಾರಗಳನ್ನು ಕೊಟ್ಟಿದೆ. ಹಾಗೆಯೇ ಬೆಂಗಳೂರು, ಮೈಸೂರು ಅಮಲ್ದಾರರು ಮ್ಯಾಜಿಸ್ಟ್ರೇಟ್ ಅಧಿಕಾರಗಳನ್ನು ನಡಿಸುವಂತೆ ಹುಕುಂ ಆಗಿ, ಅವರ ... ಸ್ಪೆಷಲ್ ಮ್ಯಾಜಿಸ್ಟ್ರೇಟ್ ಕೆಲಸಗಳನ್ನು ಸಿಟಿ ಮ್ಯಾಜಿಸ್ಟ್ರೇಟ್‍ರಿಗೆ ಕೊಟ್ಟಿದೆ.

ವಿದ್ಯಾಭ್ಯಾಸ

ಸಂಸ್ಥಾನದಲ್ಲಿ ವಿದ್ಯಾಶಾಲೆಗಳ ಸಂಖ್ಯೆಯು ೬,೦೯೭ ರಿಂದ ೬,೯೩೩ಕ್ಕೆ ಇಳಿಯಿತು. ಈ ಪ್ರಕಾರ ಕಡಿಮೆಯಾದುದು ಸರ್ಕಾರದ ಶಾಲೆಗಳಲ್ಲಿ ಅಲ್ಲ.

ಹೈಸ್ಕೂಲಿನಲ್ಲಿರುವ ವಿದ್ಯಾರ್ಥಿವೇತನಗಳು

ಹೈಸ್ಕೂಲಿನಲ್ಲಿ ಓದುವ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚುತ್ತಿರುವುದನ್ನು ಮನಸ್ಸಿನಲ್ಲಿಟ್ಟು ಅದರಲ್ಲಿ ಮುಖ್ಯವಾಗಿ ಬಡವರಾದ ಬೇಗಾರಿ ವಿದ್ಯಾರ್ಥಿಗಳಿಗಾಗಿ ತಿಂಗಳಿಗೆ ಎರಡೆರಡು ರೂಪಾಯಿಯಂತೆ ೪೮ ವಿದ್ಯಾರ್ಥಿವೇತನಗಳನ್ನು ಮಂಜೂರುಮಾಡಲಾಯಿತು. ಸೆಂಟ್ರಲ್ ಕಾಲೇಜಿನಲ್ಲಿಯೂ ಮಹಾರಾಜರ ಕಾಲೇಜಿನಲ್ಲಿಯೂ ಓದುವ ಶಿವಮೊಗ್ಗ ವಿದ್ಯಾರ್ಥಿಗಳಿಗೆ ಕೊಡಲ್ಪಡುತ್ತಿದ್ದ ೫ ರೂಪಾಯಿಯ ಡಿಸ್ಟ್ರಿಕ್ಟ್ ವಿದ್ಯಾರ್ಥಿವೇತನಗಳ ಸಂಖ್ಯೆಯನ್ನು ೧೦ ರಿಂದ ೧೨ಕ್ಕೆ ಹೆಚ್ಚಿಸಿತು. ಇಂಜನಿಯರಿಂಗ್ ಮತ್ತು ಮೆಡಿಕಲ್ ವಿದ್ಯಾರ್ಥಿವೇತನಗಳ ಸಂಗಡ ೧೦ ಟೆಕ್ನಿಕಲ್ ಯಾ ಶಿಲ್ಪವಿದ್ಯಾರ್ಥಿವೇತನಗಳನ್ನೂ ಕೊಡಲಾಯಿತು.

ಗ್ರಾಮಸ್ಕೂಲ್‍ಮಾಸ್ಟರುಗಳ ಸಂಬಳ ಹೆಚ್ಚಿಸುವುದು

ಗ್ರಾಮ ಸ್ಕೂಲು ಮಾಸ್ಟರುಗಳ ಸಂಬಳವನ್ನು ಕನಿಷ್ಠಪಕ್ಷ ೧೦ ರೂಪಾಯಿಗೆ ಹೆಚ್ಚಿಸುವುದರ ಆವಶ್ಯಕತೆಯು ಬಹುಕಾಲದಿಂದ ಸರ್ಕಾರದವರಿಗೆ ಗೊತ್ತಾಗಿತ್ತು. ಗತವರ್ಷದಲ್ಲಿ ಸರ್ಕಾರದವರು ಈ ವಿಷಯವನ್ನು ಚೆನ್ನಾಗಿ ಯೋಚಿಸಿ ೧೦ ರೂಪಾಯಿಗೆ ಕಡಮೆಯಾಗಿ ಸಂಬಳವಿರುವ ಎಲ್ಲಾ ಸ್ಕೂಲು ಮಾಸ್ಟರುಗಳಿಗೂ ಪ್ರಥಮತಃ ಒಂದು ರೂಪಾಯಿ ಸಂಬಳವನ್ನು ಹೆಚ್ಚಿಸಿ ಒಂದೆರಡು ವರ್ಷದೊಳಗೆ ಅವರ ಸಂಬಳವನ್ನು ೧೦ ರೂಪಾಯಿವರೆಗೆ ಹೆಚ್ಚಿಸುವಂತೆ ಈಗ ಹುಕುಂ ಕೊಟ್ಟಿರುತ್ತಾರೆ.

ದೇಶಭಾಷಾ ಪ್ರೈಮರಿ ತರಗತಿಗಳಲ್ಲಿ ಫೀಜನ್ನು ತೆಗೆದುಹಾಕುವುದು

ಗ್ರಾಮ ಸ್ಕೂಲುಗಳಲ್ಲಿ ಫೀಜು ತೆಗೆದುಹಾಕುವುದು ಸರ್ಕಾರದವರ ಆಲೋಚನೆಯಲ್ಲಿದ್ದ ಮತ್ತೊಂದು ಮುಖ್ಯ ವಿಷಯವಾಗಿತ್ತು. ಬಾಲವಿದ್ಯಾಭ್ಯಾಸದ ಪ್ರಯೋಜನವು ಹಳ್ಳಿಗಾಡಿನಲ್ಲಿರುವ ಕೇವಲ ಬಡಜನಗಳಿಗೂ ಉಂಟಾಗುವಂತೆ ಗ್ರಾಮದ ಶಿಕ್ಷೆಯ ಸ್ಕೂಲುಗಳ ಲೋವರ್ ಮತ್ತು ಅಪ್ಪರ್ ಪ್ರೈಮರಿ ಯಾ ಮೊದಲಿನ ತರಗತಿಗಳಲ್ಲಿ ಸ್ಕೂಲುಫೀಜು ವಸೂಲಾತಿಯನ್ನು ತೆಗೆದುಹಾಕಬೇಕೆಂದು ನಿಶ್ಚಯಿಸಲಾಯಿತು.

ಕಿಂಡರ್‍ಗಾರ್ಟನ್ ಮತ್ತು ಹಸ್ತಕೌಶಲ

ಕಿಂಡರ್‍ಗಾರ್ಟನ್ ಮತ್ತು ಹಸ್ತಕೌಶಲದ ಉಪದೇಶಕ್ಕೆ ಸಂಬಂಧಪಟ್ಟು ಸರ್ಕಾರದವರು ಈಚೆಗೆ ಮತ್ತೊಂದು ಬಹಳ ವಿಶೇಷವಾದ ಏರ್ಪಾಡನ್ನು ಮಂಜೂರುಮಾಡಿರುತ್ತಾರೆ. ಬಾಲಕರ ವಿದ್ಯಾಭ್ಯಾಸಕ್ರಮದಲ್ಲಿ ನೋಡಿ ತಿಳಿದುಕೊಳ್ಳುವ ಶಕ್ತಿಯನ್ನೂ, ನೋಡಿದುದನ್ನು ಸರಿಯಾಗಿ ವಿವರಿಸುವ ಶಕ್ತಿಯನ್ನೂ ಪ್ರಬಲಿಸಿ ತರಪೇತುಮಾಡುವುದೇ ವಿದ್ಯಾಭ್ಯಾಸಕ್ರಮದ ಮುಖ್ಯ ಉದ್ದೇಶವಾಗಿರತಕ್ಕದ್ದು. ಈಗಿನ ವಿದ್ಯಾಭ್ಯಾಸಕ್ರಮದಲ್ಲಿ ಈ ಉದ್ದೇಶವು ನೆರವೇರದೆ ಇರುವುದರಿಂದ ಈ ಕೊರತೆಯನ್ನು ನಿವಾರಿಸಿ ನವೀನಶಾಸ್ತ್ರದ ಎಲ್ಲಾ ಶಾಖೆಗಳ ಅಭ್ಯಾಸಕ್ಕೆ ಅತ್ಯವಶ್ಯಕವಾಗಿರುವ ನೋಡುವ ಶಕ್ತಿಗಳನ್ನು ಅಭಿವೃದ್ಧಿಪಡಿಸುವುದೇ ಈಚೆಗೆ ಸರ್ಕಾರದವರು ಮಂಜೂರುಮಾಡಿದ ಏರ್ಪಾಡಿನ ಉದ್ದೇಶವಾಗಿದೆ. ಕಿಂಡರ್‍ಗಾರ್ಟನ್‍ನಲ್ಲಿ ನಿಪುಣೆಯಾದ ಒಬ್ಬ ಇಂಗ್ಲಿಷ್ ಲೇಡಿಯವರನ್ನೂ ಹಸ್ತಕೌಶಲದ ತರಬೇತಿನಲ್ಲಿ ನಿಪುಣರಾದ ಒಬ್ಬ ಅಮೇರಿಕಾ ದೇಶೀಯರನ್ನೂ ಆರು ತಿಂಗಳ ವರೆಗೆ ಇಲ್ಲಿ ಕೆಲಸ ಮಾಡುವುದಕ್ಕಾಗಿ ಸಂಪಾದಿಸಲಾಯಿತು. ಇವರು ಕಿಂಡರ್‍ಗಾರ್ಟನ್ನಿನ ವಿಧಾನಗಳಲ್ಲಿಯೂ, ಸೃಷ್ಟಿಯಲ್ಲಿರುವ ವಸ್ತುಗಳ ಸ್ವಭಾವವನ್ನು ತಿಳಿದುಕೊಳ್ಳುವುದರಲ್ಲಿಯೂ, ಶಾಲೆಗಳಿಗೆ ಸಂಬಂಧಪಟ್ಟ ತೋಟಗಳನ್ನು ಮಾಡುವುದರಲ್ಲಿಯೂ, ನಾನಾತರದ ಹಸ್ತಕೌಶಲದ ಕೆಲಸಗಳನ್ನು ಮಾಡುವುದರಲ್ಲಿಯೂ ಇಲ್ಲಿನ ಉಪಾಧ್ಯಾಯರನ್ನು ತರಬೇತು ಮಾಡುವುದಲ್ಲದೆ ಈ ವಿಷಯಗಳಲ್ಲಿಯೂ, ನಕ್ಷೆ ಬರೆಯುವುದರಲ್ಲಿಯೂ, ಚಿತ್ರ ಬರೆಯುವದರಲ್ಲಿಯೂ, ಜೇಡಿಮಣ್ಣಿನಲ್ಲಿ ಮಾದರಿಗಳನ್ನು ಮಾಡುವುದರಲ್ಲಿಯೂ, ಉಪದೇಶಕ್ರಮವನ್ನು ಏರ್ಪಡಿಸುವರು. ಆರು ಮಂದಿ ಮ್ಯಾನುಯಲ್ ಟ್ರೇನಿಂಗ್ ಯಾ ಹಸ್ತಕೌಶಲದ ತರಬೇತಿನ ಮತ್ತು ಆರ್ಟ್ ಯಾ ಕಲೆಯ ಇನ್ಸ್‌ಪೆಕ್ಟರುಗಳನ್ನು ಕೂಡ ಸಂಗಾತಿಯಾಗಿ ಇಡಲಾಗುವುದು. ಈ ಏರ್ಪಾಡಿಗೆಲ್ಲಾ ಸುಮಾರು ೨೫,೦೦೦ ರೂಪಾಯಿ ಖರ್ಚಾಗುವುದು.

ಸ್ತ್ರೀ ವಿದ್ಯಾಭ್ಯಾಸ

ಸ್ತ್ರೀವಿದ್ಯಾಭ್ಯಾಸವು ಏಕರೀತಿಯಾಗಿ ವೃದ್ಧಿಹೊಂದುತ್ತಿದೆ. ಗತ ವರ್ಷದಲ್ಲಿ ಮಹಾರಾಣೀ ಕಾಲೇಜಿನ ಒಬ್ಬ ಬ್ರಾಹ್ಮಣ ಉಪಾಧ್ಯಾಯಿನಿಯು ಬಿ ಎ ಡಿಗ್ರಿ ಪರೀಕ್ಷೆಯ ಚರಿತ್ರಶಾಖೆಯಲ್ಲಿಯೂ, ಒಬ್ಬ ಯೂರೇಷಿಯನ್ ಸ್ತ್ರೀಯು ಎಫ್ ಎ ಪರೀಕ್ಷೆಯಲ್ಲಿಯೂ, ಮತ್ತು ಒಬ್ಬ ಬ್ರಾಹ್ಮಣಸ್ತ್ರೀಯು ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿಯೂ ತೇರ್ಗಡೆಯಾದರು.

ಕಸಬುದಾರಿ ಶಾಲೆಗಳು

ಸಂಸ್ಥಾನದಲ್ಲಿನ ಕೈಗಾರಿಕೆಯ ಮತ್ತು ವ್ಯಾಪಾರದ ಪಾಠಶಾಲೆಗಳಲ್ಲಿ ಒಳ್ಳೇ ಕೆಲಸವು ನಡೆಯಿತು. ಅವುಗಳ ಪೈಕಿ ಕೆಲವುಗಳ ಸಾಮಾನುಗಳು ... ಕಲ್ಕತ್ತಾದಲ್ಲಿ ... ಕೈಗಾರಿಕೆಯ ಪ್ರದರ್ಶನವನ್ನು ನೋಡಲು ಕಳುಹಿಸಿ ಇತ್ತು.

ಬೆಂಗಳೂರಿನಲ್ಲಿ ಇಂಪೀರಿಯಲ್ ಇನ್ಸ್ಟಿಟ್ಯೂಟ್ ಆಫ್ ಸಯನ್ಸ್ ಎಂಬ ಶಾಸ್ತ್ರ ಪಾಠಶಾಲೆಯ ಕಟ್ಟಡಗಳನ್ನು ಕಟ್ಟುವ ಕೆಲಸವನ್ನು ಬೇಗ ಕೈಯಾಗಿ ಪ್ರಾರಂಭಿಸುತ್ತದೆ ಎಂಬ ಸಮಾಚಾರವನ್ನು ಕೇಳಲು ನಿಮಗೆ ಸಂತೋಷವಾಗಬಹುದು. ಮತ್ತು ಈ ಕೆಲಸಕ್ಕಾಗಿ ಸರ್ಕಾರದವರು ದಾನಮಾಡಿರುವಂಥಾ ೫ ಲಕ್ಷ ರೂಪಾಯಿನ ಪೈಕಿ ೨ ಲಕ್ಷ ರೂಪಾಯಿಗೆ ಜವಾ ಖರ್ಚ ಅಂದಾಜು ಪಟ್ಟಿಯಲ್ಲಿ ಏರ್ಪಾಡು ಮಾಡಿ ಇದೆ.

ಮಹಾಶಯರುಗಳೆ, ವೈಸರಾಯರವರ ಆಹ್ವಾನವನ್ನು ಅಂಗೀಕರಿಸಿ ಕಳೆದ ವರ್ಷ ಡಿಸೆಂಬರಿನಲ್ಲಿ ಶ್ರೀಮನ್ಮಹಾರಾಜರವರು ಕಲ್ಕತ್ತಾ ನಗರಕ್ಕೆ ಸವಾರಿ ಚಿತ್ತೈಸಿದರು. ಆ ರಾಜಧಾನಿಯಲ್ಲಿ ವೈಸರಾಯಿಯವರ ಅತಿಥಿಗಳಾಗಿರುವಾಗ್ಗೆ ಅಲ್ಲಿ ನ್ಯಾಷನಲ್ ಕಾಂಗ್ರೆಸ್ ಯಾನೆ ಇಂಡಿಯಾದೇಶೀಯರ ಸಭಾಜನರ ಸಭೆಯ ಮೂಲಕ ಏರ್ಪಾಡಾಗಿದ್ದ ವ್ಯವಸಾಯ, ಕೈಗಾರಿಕೆ ಮುಂತಾದ ಪದಾರ್ಥ ಪ್ರದರ್ಶನವನ್ನು ಪ್ರಾರಂಭಿಸಿದರು. ಅಲ್ಲಿರುವಾಗ ಚಕ್ರವರ್ತಿಯವರಿಗೆ ಶ್ರೀಮನ್ ಇಂಡಿಯಾದೇಶದ ಚಕ್ರವರ್ತಿಯವರು ವಿಶ್ವಾಸಾತಿಶಯದಿಂದ ಜಿ ಸಿ ಎಸ್ ಐ ಎಂಬ ಬಿರುದನ್ನು ದಯಪಾಲಿಸಿದ ನಿರ್ವಾಹದಲ್ಲಿ ಕಾರ್ಯಸ್ಥಾನಾಯಿತು. ತರುವಾಯ ಅಫ್‍ಘಾನಿಸ್ಥಾನದ ಅಮೀರರವರು ಅಗ್ರಪಟ್ಟಕ್ಕೆ ಬಿಜಮಾಡಿಸಿದ್ದ ಮಹೋತ್ಸವ ಕಾಲದಲ್ಲಿ ಈ ಬಿರುದಿನ ಆಭರಣಾದಿಗಳಿಂದ ಶ್ರೀಮನ್ ಮಹಾರಾಜರವರು ಅಲಂಕೃತರಾದರು. ಈ ಶುಭವಾರ್ತೆಯನ್ನು ಕೇಳಿ ಈ ದೇಶದ ಸಮಸ್ತ ಪ್ರಜೆಗಳೂ ಸಂತೋಷಾತಿಶಯದಿಂದ ನಡಿಸಿದ ಕಾರ್ತನಗಳ ವಿಷಯವು ನಿಮ್ಮೆಲ್ಲರಿಗೂ ಜ್ಞಾಪಕವಾಗಿದೆಯಷ್ಟೆ, ಮತ್ತು ಈಚೆಗೆ ಶ್ರೀಮನ್ಮಹಾರಾಜರವರು ಮೈಸೂರು, ಬೆಂಗಳೂರು, ಕೋಲಾರ, ಈ ಡಿಸ್ಟ್ರಿಕ್ಟುಗಳ ಪ್ರಾಂತ್ಯ ಸವಾರಿ ಚಿತ್ತೈಸಿದ ಕಾಲದಲ್ಲಿ ಜನರೆಲ್ಲರೂ ನಡಿಸಿದ ಮಹೋತ್ಸವಾದಿಗಳ ಪ್ರಜೆಗಳಿಗೆ ತಮ್ಮ ಸ್ವಾಮಿಗಳಲ್ಲಿರುವ ಪರಮ ರಾಜಭಕ್ತಿ ವಿಶ್ವಾಸಾತಿಶಯಗಳಿಗೆ ಅತ್ಯಧಿಕವಾದ ನಿದರ್ಶನವಾಗಿರುತ್ತವೆ.

ವಿ ಪಿ ಮಾಧವರಾವ್,

ಮೈಸೂರು ಸಂಸ್ಥಾನದ ದಿವಾನರವರು

ಚಂದಾದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಚೀಟಿಗಳಿಗೆ ನಾವು ನಿಗಾ ಕೊಡಲಾರೆವು. ಆದಕಾರಣ ಚಂದಾದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಚೀಟಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ನಿಗಾ ಕೊಡಲಾರೆವು.

ಚಂದಾದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು —ಎಡಿಟರ್]

ಕರೆಸ್‍ಪಾಂಡೆನ್ಸ್.

ಜೈನಮಂಡಲಿಯ ಉಪಸಭೆಯು

ಅಯ್ಯಾ,

ಶ್ರವಣಬೆಳಗುಳದಲ್ಲಿ ಸ್ಥಾಪಿಸಲ್ಪಟ್ಟಿರುವ "ಶ್ರೀದಿಗಂಬರ ಜೈನ ಹಿತೈಷಿಣೀ ಕರ್ನಾಟಕ ಪ್ರಾಂತಿಕ ಸಭಾ" ಸೆಕ್ರೆಟರಿಗಳಾದ ಮೆ॥ ದೊಮ್ಮಯ್ಯನವರು ಇದೇ ಅಕ್ಟೋಬರ್ ಮಾಹೆ ೧೯ ನೇ ತಾ॥ ಶನಿವಾರ ಮಧ್ಯಾಹ್ನ ೩ ಗಂಟೆಗೆ ನೆಲಮಂಗಲದ ತಾಲ್ಲೂಕು ಮಳೇಕ್ಯಾತನಹಳ್ಳಿ ಗವರ್ನಮೆಂಟ್ ಸ್ಕೂಲ್ ಕಟ್ಟಡದಲ್ಲಿ ಒಂದು ಜೈನ ಸಭೆಯನ್ನು ಸೇರಿಸಿದರು. ಸಭಿಕರ ಪ್ರಾರ್ಥನೆಯಂತೆ ಸದರಿ ಸಭೆಯ ಅಗ್ರಾಸನವನ್ನು ಮೆ॥ ಸಾಹುಕಾರ್ ದೇ ಶಾ ಆದಿರಾಜಯ್ಯನವರು ವಹಿಸಿದರು. ಅನಂತರ ಮೇಲ್ಕಂಡ ಸಭೆಯ ಸೆಕ್ರೆಟರಿಗಳಾದ ಮೆ॥ ದೊಮ್ಮಯ್ಯನವರು ಮೇಲ್ಕಂಡ ಸಭೆಯವರು ಮಾಡಬೇಕೆಂದಿರುವ ಕಾರ್ಯಗಳನ್ನೂ ಮತ್ತು ಹೊಸದಾಗಿ ಸದರಿ ಸಂಘದವರಿಂದ ಪ್ರಕಟಿಸಲ್ಪಡುವ ಮಾಸಪತ್ರಿಕೆಯ ಉದ್ದೇಶಗಳನ್ನೂ ಸಹಾ ಕುರಿತು ಸುಮಾರು ಒಂದು ಗಂಟೆಯು ಕಾಲ ಬಹು ಸರಸವಾಗಿಯೂ ಸ್ವಾರಸ್ಯವಾಗಿಯೂ ಉಪನ್ಯಾಸಮಾಡಿದರು.

ತರುವಾಯ ಒಕ್ಕಲಿಗರ ಸಂಘದ ವಿಚಾರದಲ್ಲಿ ತುಂಬಾ ಅಭಿಮಾನಶಾಲಿಗಳಾಗಿಯೂ ಮತ್ತು ಸದರಿ ಸಂಘಕ್ಕೆ ಪ್ರೋತ್ಸಾಹಕರವಾದ ಸಲಹೆಗಳನ್ನು ದಯಪಾಲಿಸುತ್ತಲೂ ಇರುವ ಅದೇ ಸ್ಕೂಲ್ ಮಾಸ್ಟರ್ ಮೆ॥ ಕೆ ರಂಗಪ್ಪನವರು ಬಾಲಕರ ಮತ್ತು ಬಾಲಕಿಯರ ವಿದ್ಯಾಭ್ಯಾಸದ ವಿಷಯವಾಗಿಯೂ, ಮತ್ತು ಪೂರ್ವದಲ್ಲಿ ಜೈನರು ವಿದ್ಯಾಪಾರಂಗತರಾಗಿ ಅನೇಕ ಸ್ತೋತ್ರಾರ್ಹವಾದ ಗ್ರಂಥಗಳನ್ನು ರಚಿಸಿರುವುದನ್ನೂ, ಈಗಿನವರು ವಿದ್ಯಾವಿಹೀನತೆಯಿಂದ ಇಷ್ಟು ನಶಿಸುತ್ತಿರುವುದನ್ನೂ, ಮೇಲ್ಕಂಡ ಸಂಘದವರು ಜೈನರ ಅಭಿವೃದ್ಧಿಗೆ ಮಾಡಬೇಕೆಂದಿರುವ ಉದ್ದೇಶಕಾರ್ಯಗಳನ್ನೂ ಸಹಾ ಕುರಿತು ಒಂದು ಮನೋಹರವಾದ ಉಪನ್ಯಾಸವನ್ನು ಮಾಡಿ ಸಭಿಕರನ್ನು ತುಂಬಾ ಆನಂದಪಡಿಸಿದರು. ಈ ಮಹನೀಯರು ಅನ್ಯಮತಸ್ಥರಾಗಿದ್ದಾಗ್ಯೂ ಮೇಲ್ಕಂಡ ಜೈನಸಂಘವೇ ಮೊದಲಾದ ಸಂಘಗಳ ವಿಷಯದಲ್ಲಿಯೂ ಮತ್ತು ಬಾಲಕ ಬಾಲಕಿಯರ ವಿದ್ಯಾಭಿವೃದ್ಧಿಯ ವಿಷಯದಲ್ಲಿಯೂ ತೋರಿಸುತ್ತಿರುವ ಮೆಹನತ್ತಿಗಾಗಿ ಎಲ್ಲರೂ ಸಂತೋಷಭರಿತರಾದರು.

ಅನಂತರ ಜೈನಸ್ತ್ರೀಸಮೂಹದಲ್ಲಿ ಕೆಲವರು ಸದರಿ ಸಂಘಕ್ಕೆ ಮೆಂಬರುಗಳಾಗಿಯೂ, ನೂತನ ಮಾಸಪತ್ರಿಕೆಯ ಚಂದಾದಾರರಾಗಿಯೂ ಸೇರಿದರು. ತರುವಾಯ ಸಭಾಧ್ಯಕ್ಷರ ಅಪ್ಪಣೆಯಂತೆ ಸೆಕ್ರೆಟರಿಯವರು ಸಭಿಕರನ್ನು ವಂದಿಸಿ, ಮೇಲ್ಕಂಡ ಮೆ॥ ಕೆ ರಂಗಪ್ಪನವರು ಮಾಡಿದ ಉಪನ್ಯಾಸಗಳಿಗಾಗಿ ತಮಗೆ ಉಂಟಾಗಿರತಕ್ಕ ಸಂತೋಷವನ್ನು ಪ್ರಕಾಶಪಡಿಸಿ ಸಭೆಯನ್ನು ಬರಖಾಸ್ತುಮಾಡಿದರು.

ಪ್ರಜಾಹಿತೈಷಿ

ಪ್ರಕಟನೆ

ವಿಕಟಪ್ರತಾಪ.

ಸಚಿತ್ರವೂ, ವಿಚಿತ್ರವೂ ಆದ ಮಾಸಪತ್ರಿಕೆ.

109 5

☞ ಕಿವಿಯುಳ್ಳವರು ನೋಡಿ! ಕಣ್ಣುಳ್ಳವರು ಕೇಳಿ!! ☜

ಕಿವಿಗಣ್ಣುಗಳುಳ್ಳವರು ಕೇಳಿನೋಡಿ!!!

ಸುಮಾರು ಒಂದು ಕೋಟಿ ಪ್ರಜೆಗಳನ್ನು ತನ್ನ ಉದರದಲ್ಲಿಟ್ಟುಕೊಂಡು ಅತ್ಯುತ್ಸಾಹದಿಂದ ತುಂಬಿ ತುಳುಕುವ ಈ ಕರ್ನಾಟಕ ಮಹಾರಾಷ್ಟ್ರದ ವಾಚಕರಲೋಕದಲ್ಲಿ ನನ್ನ ಮಾಸಪತ್ರಿಕೆಗೂ ಆಶ್ರಯವಿಲ್ಲವೆಂದರೆ ನಾಚಿಕೆಯಲ್ಲವೇ! ಚಿಲ್ಲರೆ ಪಲ್ಲರಗಳಲ್ಲಿಯೇ ನಮ್ಮ ಮನೆಗಳಲ್ಲಿ ಸಿಕ್ಕಿ ಕೈಕಟ್ಟು ನಮ್ಮನ್ನು ಮರುಳಾದಂತೆ ಸದಾ ಸುದಂಡಿಸುವ ಉಪಾಯಗಳು ಎಷ್ಟಿಲ್ಲ?

"ತಿಂಗಳೊಂದಕ್ಕೆ ಮೂರು ಕ್ಷೌರವನ್ನು ಮಾಡಿಸಿಕೊಳ್ಳುವವರು ನನ್ನಿಂದಲೇ ಸ್ವಲ್ಪ ಸುಖಕ್ಷೌರವನ್ನು ಮಾಡಿಸಿಕೊಳ್ಳಲಿ. ದಿನಕ್ಕೆ ಎಂಟು ಹತ್ತು ಸಲ ವೀಳ್ಯಾದಿಗಳನ್ನು ಹಾಕಿಕೊಳ್ಳುವವರು ಈಗ ನನ್ನ ಬೆಳೆಸುವ ನನ್ನ ರಂಜಕವಾದ ಸಂಚಿಕೆಯ ಕಥೆಯನ್ನು (ಅಂದರೆ, ಅಮೃತ ಸುಣ್ಣವನ್ನು) ಸ್ವೀಕರಿಸಲಿ. ನಿರಂತರದಲ್ಲಿಯೂ ವಿಧವಿಧವಾದ ಸುಗಂಧಗಳನ್ನು ಸೇವಿಸುವ ಭೋಗಿಗಾರರು ನೀತಿಬೋಧೆಯಿಂದ ತೇಜಸ್ಸನ್ನುಂಟುಮಾಡುವ ನನ್ನ ಸಂಚಿಕೆಯನ್ನು ಬೆಂಕಿಪೆಟ್ಟಿಗೆಯನ್ನಾಗಿ ಎಣಿಸಲಿ. ಚೀಟಾಟಗಳಲ್ಲಿ ಬೇಸ್ತುಗಳನ್ನು ಹಂಚುವ ಮಹನೀಯರು ನನಗೂ ಸ್ವಲ್ಪ ಪಂಡಿತರುವಂತೆ ಭಾವಿಸಲಿ. ಗೊಬ್ಬರದಂತೆ ಇರುವ ದೃಶ್ಯದಲ್ಲಿ ಲಂಪಟರಾದವರು ಭಾಷಾಂತರವುಳ್ಳ ನನ್ನ ಸಂಚಿಕೆ ಸಂಪುಟದ ಸುಗಂಧದ ಕಡೆ ಸ್ವಲ್ಪ ಚಿತ್ತವನ್ನು ಹಾರಿಸಲಿ. ಸುವರ್ಣ ಪರೀಕ್ಷಕರು ನನ್ನಲ್ಲಿರುವ ಸುವರ್ಣಗಳನ್ನು ಬೇಕಾದರೆ ತಮ್ಮ ಮನದ ದೂಲದಲ್ಲಿ ಸುಲೋಚನವನ್ನಿಟ್ಟು ತಿರುವಿ ತಿರುವಿ ನೋಡಲಿ.

ನನ್ನ ಒಗ್ಗಿನ —ಅಧರದಿಂದ ಉತ್ತಮರಿಗೆ ಉಂಟಾಗುವ ತಾಪ, ಸಜ್ಜನರಲ್ಲಿ ವಿಪ್ರಲಾಪ, ಅನಾದರ ವಿಲಾಪ, ಸೋಮಾರಿಗಳ ಪ್ರಲಾಪ, ರಸಿಕರ ಆಲಾಪ, ಮಾನಿಗಳ ಕೋಪ, ಈ ಕಲಾಪಗಳಿಂದ ಕೂಡಿರುವುದು ನನ್ನ ವಿಕಟಪ್ರತಾಪ. ಪ್ರತಿ ತಿಂಗಳಲ್ಲಿಯೂ ಈ ವೇಷವನ್ನೇ ಧರಿಸಿ ನನ್ನ ಉದರದಲ್ಲಿ ಇನ್ನೆರಡು ಘಟಗಳಿಗೆ ಅವಕಾಶವಿಲ್ಲದೆ ನಿಮ್ಮ ಹಸ್ತವನ್ನು ಅಲಂಕರಿಸಿ ಚಿತ್ತದಲ್ಲಿ ಮೂರುವೆನು. ಹಸ್ತಚಿತ್ತದಲ್ಲಿ ಹುಟ್ಟುವವನೇ ವಿಕಟ! ನನ್ನ ಘಟಗಳನ್ನು ಪ್ರತಿಸತ್ತಪೂರ್ವಕವಾಗಿ ನಿಮ್ಮ ಕರಪುಟದಿಂದ ಸ್ವೀಕರಿಸಿದರೆ ನಿಮ್ಮ ಸಂಕಟಸರಗಳು ಎಷ್ಟಿದ್ದಾಗ್ಯೂ ತಕ್ಷಣವೇ ತ್ರುಟಿತವಾಗುವವು.

ಈ ಪತ್ರಿಕೆಯಲ್ಲಿ ಪ್ರತಿ ತಿಂಗಳಲ್ಲಿಯೂ ೩-೪ ಚಿತ್ರಗಳನ್ನು ಪ್ರಕಟಿಸಲ್ಪಡುತ್ತೆ. ಮಾದರಿ ಪತ್ರಿಕೆಯನ್ನು ಅಪೇಕ್ಷಿಸುವವರು ೨ ಆಣೆಯ ಸ್ಟಾಂಪನ್ನು ರವಾನಿಸಬೇಕು. ವಿಕಟಪ್ರತಾಪದ ಚಂದಾ ವಿವರ.—

ಸ್ಥಳದವರಿಗೆ ವರ್ಷವೊಂದಕ್ಕೆ ರೂ ೧—೧೨—೦

ಪರಸ್ಥಳದವರಿಗೆ . ರೂ ೧—೮—೦

ನಮ್ಮ ವಿಳಾಸ:—ಮ್ಯಾನೇಜರ್, ವಿಕಟಪ್ರತಾಪ ಆಫೀಸ್,

೧೩೪, ಅರಳೇ ಪೇಟೆ, ಬೆಂಗಳೂರು ಸಿಟಿ.

ಕಾಯಿಲೆ ಅನುಭವಿಸುವಂಥಾ ಹೆಂಗಸರೆಲ್ಲಾ ಪೆರೂನಾವನ್ನು ಸೇವಿಸಿ ಗುಣಹೊಂದಲಿ

ಮಿಸೆಸ್ ಜಿ. ಸಿ. ವೋರ್ಸ್ಟೆಲ್, ೧೧ನೇ ರಸ್ತೆ, [illegible], ಬರೆಯುವುದು "ನನ್ನ ಶರೀರವನ್ನು ಪ್ರತಿಷ್ಠಿತ ಆರೋಗ್ಯದಲ್ಲಿಡಲು ನಾನು ಪೆರೂನಾ ವಾರಕ್ಕೆ [illegible] ನನ್ನ ಹೆಂಗಸರು ಅನೇಕ ಕಾಯಿಲೆಗಳನ್ನು ಅನುಭವಿಸುವ [illegible] ಆಗುವುದಕ್ಕೆ ನನ್ನ ಅನುಭವವನ್ನು ತಿಳಿದುಕೊಂಡರೆ ಸಾಕು? ಪೆರೂನಾ ಉಪಯೋಗಿಸಿದ್ದರಿಂದ ನನಗೆ ಬಹಳ ಸಹಾಯವಾಗಿದೆ ಎಂದು ನಿಜವಾಗಿ ಹೇಳಬಲ್ಲೆನು. ಎರಡು ವರುಷದ ಹಿಂದೆ [illegible] ಈಗ ನನ್ನ ದೇಹಸ್ಥಿತಿ ಎಷ್ಟೋ ಉತ್ತಮವಾಗಿದೆ. ಕೀಳ್ಪಟ್ಟು ಬಾಧೆಗಳಿಗೆ ನನಗೆ ತಿಳಿದ ವೈದ್ಯರು ಹೇಳಿದ ಔಷಧಗಳನ್ನು ಸೇವಿಸಿದ [illegible] ಜನವಾಗಲಿಲ್ಲ. ಆದರೆ ಪೆರೂನಾ ಸೇವನೆಯನ್ನು ಪ್ರಾರಂಭಿಸಿದಾಗ ಒಂದು ಬಾಟ್ಲಿ ಮುಗಿಯುವದರೊಳಗೇನೇ ನನಗೆ ಅದರ ಗುಣ ಕಂಡುಬಂತು."

MRS GEO C WORSTELL



MISS NETTIE E BOGARDUS

MRS O D ROBINSON

[illegible]ಗಡಿಯಿಂದ ರೋಗ ಬೆಳೆಯುವದು

ಮಿಸೆಸ್ ಎಫ್. ಬಿ. ಟಾಲರ್ [illegible] ಬ್ರಾನ್ಸ್ವಿಕ್, [illegible], ಕಾನ್, ಈ ರೀತಿ ಬರೆಯುತ್ತಾಳೆ.

"ನೆಗಡಿ ಪರಿಹಾರಕ್ಕೆ ಪೆರೂನಾ ರಾಜ ಮದ್ದು. ಹೋದ ವರುಷ ನನಗೆ ಕಠಿಣವಾದ ಶೀತ ಹಿಡಿದು, ಬಹಳ ವೇದನೆ ಪಡಿಸಿತು. ನನಗೆ ನಿಶ್ಶಕ್ತಿಯುಂಟಾಗಿ ವಾಂತಿಗೆ ಸುರುವಹಾಗಾಗಿ ನಿದ್ದೆ ಬಾರದೆ ಆಹಾರ ಸೇರದೆ ತುಂಬಾ ಕಷ್ಟಪಟ್ಟೆನು.

"ಆದೇ ರೋಗಕ್ಕೆ ಪೆರೂನಾ ಸೇವಿಸಿದ್ದಂಥಾ ಒಬ್ಬ ಸ್ನೇಹಿತನು ನನಗೆ ಅದನ್ನು ಸೇವಿಸುವಂತೆ ಹೇಳಿದನು. ಕೂಡಲೇ ನಾನು ಆ ರೀತಿ ಮಾಡಿದೆನು. ಆದರೆ ಅದನ್ನು ತೆಗೆದುಕೊಳ್ಳುವದಕ್ಕೆ ಆರಂಭಿಸಿದ ಲಾಗಾಯ್ತು ಅದು ನನಗೆ ಆಶ್ಚರ್ಯಕರವಾಗಿ ಗುಣ ಕೊಡುತ್ತಾ ಬಂತು.

"ಮೂರು ದಿನಗಳಲ್ಲಿ ನನಗೆ ಗುಣವಾಯಿತು. ಒಂದು ವಾರದೊಳಗಾಗಿ ಯಥಾಪ್ರಕಾರ ನಾನು ಸ್ವಸ್ಥಳಾದೆನು. ಆದರೂ ಶೀತ ಬಿಡುವವರೆಗೂ ಆ ಔಷಧವನ್ನು ಬಿಡಲಿಲ್ಲ. ಎರಡು ವಾರಗಳಲ್ಲಿ ನನ್ನ ದೇಹಸ್ಥಿತಿಯು ತೃಪ್ತಿಕರವಾಯಿತು. ಪೆರೂನಾ ಅದ್ಭುತವಾದ ಔಷಧವೇ ಸರಿ.

ಕರಳುಗಳಲ್ಲಿ ಅಕ್ರಮ

ಮಿಸೆಸ್ ಮ್ಯಾಗ್ಗೀ ಡರ್ಬಿನ್, ೧೩೩೨ ಉತ್ತರ ಬೀದಿ, ಲಿಟಲ್‌ರಾಕ್ ಆರ್ಕ್, ಈ ರೀತಿ ಬರೆಯುತ್ತಾಳೆ.

"ನಾನು ಐದು ವರುಷ ಕಾಲ ಕರುಳಿನ ಬಾಧೆಯನ್ನು ಅನುಭವಿಸಿದೆನು. ಕಂಡು ಕೇಳಿದ ಔಷಧವನ್ನೆಲ್ಲಾ ಮಾಡಿದೆನು. ಯಾವುದರಿಂದಲೂ ನನಗೆ ಪರಿಹಾರವಾಗಲಿಲ್ಲ. ಕೆಲವು ಡಾಕ್ಟರುಗಳು ನನಗೆ ಕರುಳುಗಳ ಅಕ್ರಮ ಎಂಬ ರೋಗವೆಂದರು. ಕೆಲವರು ಕರುಳುಗಳ ಕ್ಷಯವೆಂದರು. ಒಬ್ಬ ವೈದ್ಯನು ನನ್ನ ರೋಗವನ್ನು ವಾಸಿಮಾಡುತ್ತೇನೆಂದು ಹೇಳಿದ್ದರ ಮೇಲೆ ನಾನು ಎರಡು ತಿಂಗಳು ಅವನ ಔಷಧ ಸೇವಿಸಿದಾಗ್ಯೂ ನನಗೆ ಸ್ವಲ್ಪವೂ ಗುಣ ತೋರಲಿಲ್ಲ.

"ಪೆರೂನಾ ಉಪಯೋಗಿಸಿ ನೋಡು ಎಂದು ಒಬ್ಬ ಸ್ನೇಹಿತಳು ಹೇಳಿದ್ದರ ಮೇಲೆ ನಾನು ಅದನ್ನು ಸೇವಿಸುತ್ತಾ ಬಂದೆನು. ನಾನು ಎರಡು ಬಾಟ್ಲಿಯಷ್ಟು ಸೇವಿಸಿದ ಮೇಲೆ ಅದರಿಂದ ನನಗೆ ಗುಣ ಕಾಣುತ್ತಾ ಬಂತು. ಅದರ ಮೇಲೆ ಬಿಡದೆ ನಾನು ಅದನ್ನೇ ಸೇವಿಸುತ್ತಾ ಬಂದೆನು. ನನ್ನ ರೋಗವು ನಿವಾರಣೆಯಾಯಿತು. ನನ್ನ ದೇಹವು ಗಟ್ಟಿಯಾಯಿತು.

"ಅಪೇಕ್ಷೆಯುಳ್ಳವರು ನನಗೆ ಬರೆದು ಕೇಳಿದಲ್ಲಿ ಪೆರೂನಾದಿಂದ ನನಗುಂಟಾದ ಪ್ರಯೋಜನವನ್ನೆಲ್ಲಾ ನಾನು ವಿವರಿಸಿ ತಿಳಿಸಬಲ್ಲೆನು."

ಪಕ್ಕೆಗಳಲ್ಲಿ ಬಾಧೆಯಾಗುವುದು

ಮಿಸೆಸ್ ಜೂಲಿಯಾ ಬಾ[illegible], ಆರ್ಟೋಲೋ ಮೊ, ಬರೆಯುತ್ತಾಳೆ.

"ಪೆರೂನಾ ಸೇವಿಸಿದ್ದರಿಂದ ನನ್ನ ಹೃದಯದ ಮತ್ತು ಪಕ್ಕೆಗಳ ನೋವುಗಳು ವಾಸಿಯಾಗಿವೆ.

"ಒಂದು ವರುಷದ ಹಿಂದೆ ನಾನು ಯಾವಾಗ ಸಾಯುತ್ತೇನೋ ಎಂಬ ಸ್ಥಿತಿಯಲ್ಲಿದ್ದೆನು. ಕೆಲವು ವೇಳೆ ರಾತ್ರಿ ೨ ಗಂಟೆ ಸಮಯದಲ್ಲಿ ಡಾಕ್ಟರು ಬರಬೇಕಾಯಿತು. ಆದರೆ ಈಗ ಡಾಕ್ಟರನ್ನು ಕರೆಸಬೇಕಾದ ಅಗತ್ಯವೇ ಇಲ್ಲವೆಂದು ನಾನು ಸಂತೋಷಪಡುತ್ತಾ ಹೇಳುತ್ತೇನೆ.

"ನೀವು ಹೇಳಿದಂತೆ ನಾನು ಪೆರೂನಾವನ್ನು ಉಪಯೋಗಿಸಿದ್ದರಿಂದ ನಾನು ಆರೋಗ್ಯವಾಗಿದ್ದೇನೆ ಮತ್ತು ನನ್ನ ಮನೆ ಕೆಲಸಗಳನ್ನೆಲ್ಲಾ ಮಾಡಿಕೊಳ್ಳಬಲ್ಲೆನು."

"ನನಗೆ ಪೆರೂನಾವಲ್ಲಿರ[illegible] ಪ್ರಪಂಚದಲ್ಲಿ ಇನ್ನು ಯಾವ [illegible] ಕಂಡರೆ ಅದು ನನ್ನ ರೋಗವನ್ನು [illegible] ಇತರ ರೋಗಿಗಳಿಗೂ ಅದು [illegible] ದು ನಾನು ತಿಳಿಸಿದೆನು.

"ಪೆರೂನಾದಿಂದ ನನಗೆ ಆದ [illegible] ವನ್ನು ಆಶ್ಚರ್ಯದಿಂದ ಹೇಳಬೇಕು. ಅದರ ಗುಣವನ್ನು ಎಷ್ಟು ಕೊಂಡಾಡಿದರೂ ಸಾಲದು."

ಅನ್ನಕೋಶದಲ್ಲಿ ಬಾಧೆಯು

ಮಿಸ್ ಅನ್ನಾ [illegible] ಇಲ್ ಬರೆಯುತ್ತಾಳೆ.

"ನಿಮ್ಮ ಪೆರೂನಾದಿಂದ ನನಗೆ ಬಹಳ ಗುಣಕೊಟ್ಟಿದೆ. ಈಗ ನಾನು ಆರೋಗ್ಯವಾಗಿದ್ದೇನೆ. ನನ್ನ ಅನ್ನಕೋಶದ ಬಾಧೆಯೆಲ್ಲಾ ನಿವಾರಣೆಯಾಗಿದೆ."

ಅಂಗಾಂಗಗಳಲ್ಲೆಲ್ಲಾ ಬಾಧೆಯು

ಮಿಸೆಸ್ [illegible], [illegible] ಅವ್, ಸೇಂಟ್ ಲೂಯಿಸ್ ಮೋ, ಬರೆಯುತ್ತಾಳೆ.

"ಪೆರೂನಾ ಸೇವಿಸುವದಕ್ಕೆ ಮೊದಲು ನನ್ನ ದೇಹಸ್ಥಿತಿಯು ಬಹಳ ಕೆಟ್ಟುಹೋಗಿತ್ತು. ನನ್ನ ದೇಹದ ಅಂಗಾಂಗಗಳೆಲ್ಲಾ [illegible] ಯುಂಟಾಗಿತ್ತು. [illegible] ದಯದಿಂದ ನಿಮ್ಮ ಔಷಧವು ನನ್ನನ್ನು ಆರೋಗ್ಯಸ್ಥಿತಿಗೆ ತಂದಿರುತ್ತದೆ. ನನಗೆ ಇನ್ನು ಔಷಧದ ಅವಶ್ಯಕತೆ ಇಲ್ಲ."

[illegible] ಗಾರ್ಡಸ್ [illegible] ಫೀಲ್ಡ್ [illegible] ಬರೆ[illegible].

"ನನಗೆ [illegible] ತಲೆನೋವು [illegible] ಇತ್ತು. ಅದುವರೆಗೂ ನಾನು [illegible] ಅನುಭವಿಸಿರುತ್ತೇನೆ. ಆದರೆ ಈಗ ಆ ಬಾಧೆಯೆಲ್ಲಾ ಸಂಪೂರ್ಣವಾಗಿ ನಿವಾರಣೆಯಾಗಿದೆ. [illegible] ದಿಂದ ನಾನು ಅನುಭವಿಸಿದ ರೋಗವೆಲ್ಲಾ ಸಮೂಲವಾಗಿ ಈಗ ಆದೆ [illegible] ರೋಗವನ್ನನುಭವಿಸುವವರೆಲ್ಲಾ [illegible] ನಂತೆ [illegible] ನೆನು. [illegible] ಡಾಕ್ಟರ್ ಹಾರ್ಟ್‌ಮನ್ [illegible] ಅದ್ಭುತ [illegible] ವನ್ನು [illegible] ನನ್ನ ಕೃತಜ್ಞತೆ[illegible]."

ಹೊಟ್ಟೆಯೊಳಗಣ ಶೀತವು

[illegible] ಬಾರ್ಟೆಲ್, [illegible] ವಿಸ್, [illegible] ಬರೆ[illegible].

[illegible] ಹೊಟ್ಟೆ [illegible] ಶೀತವು [illegible] ಬಾಧಿಸುತ್ತಿತ್ತು. [illegible] ನನಗೆ [illegible] ಆಹಾರ [illegible] ಮೇಲೆ [illegible]

"ನನ್ನ [illegible] ನನಗೆ [illegible] ಹೇಳಿದಳು."

"ನಿಮ್ಮ ಔಷಧವನ್ನು ತೆಗೆದುಕೊಂಡ [illegible] ಈಗ ಆರೋಗ್ಯ [illegible] ನನಗೆ ಶಕ್ತಿಯುಂಟಾಯಿತು, ಮಾಂಸಖಂಡಗಳು ಬೆಳೆದವು, [illegible] ಪೂರ್ಣ [illegible] ನನ್ನ 'ಕರವನ್ನು [illegible]' ಅದಕ್ಕಾಗಿ ನಿಮ್ಮನ್ನು ಬಹಳ ವಂದಿಸುತ್ತೇನೆ."

ಮಿಸೆಸ್ ಓ. ಡಿ. ರಾಬಿನ್ಸನ್, ೬೩ ಸೆಂಟ್ ಪೀಟರ್ಸ್ ಬೀದಿ [illegible], [illegible] ಬರೆಯುತ್ತಾಳೆ:

"ನಾನು ಪೆರೂನಾವನ್ನು ಸೇವಿಸಿದೆನು. ಕೆಲವು ಪ್ರಸಿದ್ಧರಾದ ವೈದ್ಯರು ಎರಡು ವರುಷದ ತನಕ ಹೇಳಿದ ಔಷಧಗಳನ್ನು ತೆಗೆದುಕೊಂಡಾಗ್ಯೂ ನನಗೆ ಪ್ರಯೋಜನವಾಗದೆ ಇದ್ದು ನಿಮ್ಮ ಔಷಧವೇ ಫಲಕಾರಿಯಾಯಿತು. ಈಗ ನಾನು ಆರೋಗ್ಯಭಾಗ್ಯವನ್ನು ಪಡೆದಿರುತ್ತೇನೆ. ಈಗ ನನ್ನ ಕೈಕಾಲುಗಳು ಊದುವದು ನಿಂತುಹೋಗಿದೆ. ಹೊಟ್ಟೆಬ್ಬರ ತಪ್ಪಿದೆ. ದೀರ್ಘವಾಗಿ ಉಸುರಾಡುತ್ತೇನೆ. ಕೈಕಾಲುಗಳ ಕೀಲುಗಳ ಊದೂ ನೋವೂ ಈಗ ಬರುವದೇ ಇಲ್ಲ. ನಿಮ್ಮ ಔಷಧದಿಂದ ನನಗೆ ಎಷ್ಟು ಪ್ರಯೋಜನವಾಗಿದೆ ಎಂಬುದು ನಿಮಗೆ ತಿಳಿಯದು. ಅದು ಖಂಡಿತವಾಗಿ ನನ್ನ ಆಯುಸ್ಸನ್ನು ಹೆಚ್ಚುಮಾಡಿದೆ. ಆದರಿಂದ ನಾನು ನೂತನವಾದ ಸ್ತ್ರೀಯಾಗಿರುವೆನು.

"ಓ ಡಾಕ್ಟರೇ, ನಿಮ್ಮ ಕರುಣೆಯಿಂದ ನನಗೆ ದೊಡ್ಡ ಆಶೀರ್ವಾದ ದೊರಕಿರುತ್ತದೆ. ನೀವು ಹೇಳಿದ ಔಷಧದಿಂದ ನನಗೆ ಅಪಾರವಾದ ಸುಖ ಲಭ್ಯವಾಗಿದೆ. ನಿಮ್ಮ ಔಷಧಿ ಸೇವಿಸಿದಾರಭ್ಯ ನಾನು ಕೆಲಸಕಾರ್ಯಗಳನ್ನು ಮಾಡಬಲ್ಲೆನು. ಆದರೆ ಮೊದಲು ನಾನು ನನ್ನ ಕೆಲಸವನ್ನೇ ಮಾಡಿಕೊಳ್ಳಲಾರದಂತೆ ದುರ್ಬಲಳಾಗಿದ್ದೆನು. ಡಾಕ್ಟರ್ ಹಾರ್ಟ್‌ಮನ್ ರವರಿಗೂ ಅವರ ಔಷಧಕ್ಕೂ ಅನೇಕ ವಂದನೆಗಳನ್ನು ಸಮರ್ಪಿಸುತ್ತೇನೆ."

ವಿಳಾಸ:—ಈ ಔಷಧ ಸಿಕ್ಕುವ ಸ್ಥಳಗಳು:—

(೧) ಹಿಗಿನ್‌ಬಾಥಮ್ ಅಂಡ್ ಸನ್ಸ್, ಬೆಂಗಳೂರು

38-30

೪ ಮಿಂಟ್ ಬೀದಿ, ಮದರಾಸ್.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ

18—[illegible]0—1907 ರಿಂದ 11—10—1907 ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	64	44	0	0
ಮೈಸೂರು "	139	86	0	0
ಬೆಂಗಳೂರು ಡಿಸ್ಟ್ರಿಕ್ಟ್	174	132	0	0
ಮೈಸೂರು "	80	58	0	0
ಕೋಲಾರ್ "	46	22	0	0
ಕೋಲಾರ್ ಚಿನ್ನದ ಗಣಿಗಳು	36	28	0	0
ತುಂಕೂರು ಡಿಸ್ಟ್ರಿಕ್ಟ್	53	42	0	0
ಹಾಸನ "	22	11	0	0
ಚಿತ್ರದುರ್ಗ "	23	14	0	0
ಕಡೂರ್ "	11	12	0	0
ಶಿವಮೊಗ್ಗ "	91	70	0	0
ಜುಮ್ಲಾ	740	50[illegible]	0	0

ಶಾಲಿವಾಹನ ಶಕ ವರುಷಂಗಳು ೧೮೨೯ನೇ ಪ್ಲವಂಗನಾಮ ಸಂವತ್ಸರದ ಆಶ್ವೀಜ ಬಹುಳ ದಶಮಿ ಗುರುವಾರದಿಂದ ಕಾರ್ತೀಕ ಶುದ್ಧ ಪಾಡ್ಯವು ಬುಧವಾರದ ವರೆಗಿನ ಒಂದು ವಾರದ ಪಂಚಾಂಗ ೧೯೦೭ ನೇ ಇಸವಿ ಅಕ್ಟೋಬರ್ ಮತ್ತು ನವಂಬರ್.

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ತೇದಿ ಸೌರ ಮಾಸ
31	ಗುರು *	ದಶಮಿ	51 45	ಮ	16 6	15
1	ಶುಕ್ರ	ಏಕಾದಶಿ	[illegible]1 50	ಪು	[illegible]0 38	16
2	ಶನಿ ‡	ದ್ವಾದಶಿ	56 10	ಉ	53 58	17
3	ರವಿ	ತ್ರಯೋದಶಿ	[illegible]7 7	ಹ	55 56	18
4	ಚಂದ್ರ "	ಚತುರ್ದಶಿ	56 26	ಚಿ	56 35	19
5	ಕುಜ	ಅಮಾವಾಸ್ಯೆ	[illegible]1 21	ಸ್ವಾ	56 36	20
6	ಬುಧ ■	ಪಾಡ್ಯ	[illegible]1 18	ವಿ	[illegible]1 49	21

ಪುಣ್ಯಕಾಲ [illegible] ಅಷ್ಟಮೀ [illegible], [illegible] ತಪ್ಪಿದ [illegible], ವೈಷ್ಣವ ಏಕಾದಶಿ, ಪ್ರದೋಷ, ನರಕಚತುರ್ದಶೀ [illegible] ನೀರುತುಂಬೋ ಹಬ್ಬ, ಸರ್ವತ್ರ ಅಭ್ಯಂಗ, ಕೇದಾರೇಶ್ವರ ವ್ರತ ■ ದೀಪಾವಳಿ, ಬಲೀಂದ್ರಪೂಜೆ, ಕಾಮಧೇನು ಪೂಜೆ, ಚಂದ್ರ ದರ್ಶನ.

ಪೇಟೆ ಧಾರಣೆ

ವಿವರ	ಮೈಸೂರು	ಬೆಂಗಳೂರು
ಕಿಟ್ಟೇ ಅಕ್ಕಿ ಪಲ್ಲ ೧ಕ್ಕೆ ರೂ	[illegible]	[illegible]
ಕಂಬಳಿ ಅಕ್ಕಿ ಅಸಲ್	[illegible]	[illegible]
" [illegible]	[illegible]	[illegible]
ಜಾವಾಸ್ ಅಕ್ಕಿ	[illegible]	[illegible]
ಸಣ್ಣಕ್ಕಿ ಅಸಲ್	[illegible]	[illegible]
" ದುಯಂ	[illegible]	[illegible]
ತೊಗರೀ ಬೇಳೆ ಪಲ್ಲ ೧ಕ್ಕೆ	[illegible]	[illegible]
ದುಯಂ	[illegible]	[illegible]
[illegible] ರಾಗಿ ಪಲ್ಲ ೧ಕ್ಕೆ	[illegible]	[illegible]
ಕಾರ್ರಾಗಿ	[illegible]	[illegible]
ಜೋಳ	[illegible]	[illegible]
ಹಲಸಂದೆ ಪಲ್ಲ ೧ಕ್ಕೆ	[illegible]	[illegible]
ಬಿಳೇ ಅವರೆ	[illegible]	[illegible]
ಹೆಸರು	[illegible]	[illegible]
ಉದ್ದು	[illegible]	[illegible]
ಕಡಲೆ	[illegible]	[illegible]
ಎಳ್ಳು [illegible]	[illegible]	[illegible]
ಹುರುಳಿ	[illegible]	[illegible]
ಹರಳು [illegible] ಸೇರಿಗೆ	[illegible]	[illegible]
ಸೀಗೇಕಾಯಿ ಮಣ ೧ಕ್ಕೆ	[illegible]	[illegible]
ಮೆಣಸಿನಕಾಯಿ	[illegible]	[illegible]
ದುಯಂ	[illegible]	[illegible]
ಬೆಲ್ಲ ದೊಡ್ಡ ಅಚ್ಚು	[illegible]	[illegible]
ಒಳ್ಳೆಣ್ಣೆ ಮಣ ೧ಕ್ಕೆ	[illegible]	[illegible]
ಹರಳೆಣ್ಣೆ "	[illegible]	[illegible]
ಕೊತ್ತುಂಬರಿ ಪಲ್ಲ ೧ಕ್ಕೆ	[illegible]	[illegible]
ಉಪ್ಪು "	[illegible]	[illegible]
ಹುಣಸೇ ಹಣ್ಣು	[illegible]	[illegible]
" ಹಳೇದ	[illegible]	[illegible]
ತುಪ್ಪ ಮಣ ೧ಕ್ಕೆ	[illegible]	[illegible]
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ	[illegible]	[illegible]
ತೆಂಗಿನಕಾಯಿ ೧೦೦ ಕ್ಕೆ	[illegible]	[illegible]
ಅಳಲೇಕಾಯಿ ಮಣ ೧ಕ್ಕೆ	[illegible]	[illegible]
ಅಂಟುವಾಳದ ಕಾಯಿ ಮಣ ೧ಕ್ಕೆ	[illegible]	[illegible]
ಚಿನ್ನ (ಬಾರ್) ತೊಲ	[illegible]	[illegible]
" " ಪವನು	[illegible]	[illegible]
" " ಗಟ್ಟಿ ತೊಲ ೧ಕ್ಕೆ	[illegible]	[illegible]
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	[illegible]	[illegible]

Printed and Published by the Rev E W THOMPSON, M A, Proprietor and Manager, Wesleyan Mission Press Mysore 31/10/1907

REGISTERED
M. 20

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು. ಕ್ರಯ ೧ ದುಡ್ಡು.

ಸಂಪುಟ ೨೦ ಮೈಸೂರು—ಸನ್ ೧೯೦೭ ನೇ ಇಸವಿ ನವಂಬರ್ ತಾರೀಖು ೭ ನೇ ಗುರುವಾರ. ಸಂಚಿಕೆ ೨೩

BASEL MISSION WEAVING ESTABLISHMENT, 59-9

MANGALORE, SOUTH CANARA.

ದಕ್ಷಿಣ ಕನ್ನಡ ಜಿಲ್ಲಾ ಮಂಗಳೂರು ಬಾಸೆಲ್ ಮಿಶ್ಯನ್ (ಬಸ್ತಿ) ನೆಯ್ಯುವ ಕಾರಖಾನೆಯಲ್ಲಿ

ನಾನಾ ವಿಧದ (ವಿಸ್ಕ್) ಟ್ವೀಡ್ ನಮೂನೆಯ ಉಣ್ಣೆ ಬಟ್ಟೆಗಳೂ, ಕೋಟು ಬಟ್ಟೆಗಳೂ, ಷರ್ಟಿಂಗ್ ಮತ್ತು ಇತರ ಬಟ್ಟೆಗಳೂ, ಟೇಬಲ್ ಕ್ಲಾತ್ ಮುಂತಾದವುಗಳೂ, ಟವೆಲುಗಳೂ ನಾನಾ ತರದ ಉಪಯೋಗಕ್ಕಾಗಿ ತಯಾರಿಸಲ್ಪಟ್ಟು ಯಾವಾಗಲೂ ಸಿದ್ಧವಾಗಿರುವವು. ರಂಗು ಬಿಡದೆ ಬಾಳಿಕೆ ಬರುವಂತೆ ತಯಾರಿಸಲಾಗುತ್ತದೆ.

ಒಳ್ಳೇ ಕಮಿಶ್ಯನ್:—ರೂಪಾಯಿ ೧೦೦ ರ ಮೇಲೆ ವಸ್ತ್ರಗಳನ್ನು ತೆಗೆದುಕೊಳ್ಳುವ ಗಿರಾಕಿಗಳಿಗೆ ಯಾ ಸಾಹುಕಾರರಿಗೆ ಕೊಡಲಾಗುವದು. ಹೆಚ್ಚಿನ ವಿವರ ಬೇಕಾದರೆ ಯಾ ಕಾಗದ ಮೂಲಕ ತಿಳಿಸಲ್ಪಡುವದು.

ನಮೂನೆ ಯಾ ಮಾದರಿಗಳು:—ಪರ ಊರಿನ ಸಾಹುಕಾರರು ಈ ಕೆಳಗಿನ ವಿಳಾಸಕ್ಕೆ ಬರ ಕೊಂಡಲ್ಲಿ ಕಳುಹಿಸಲ್ಪಡುವವು.

ವಿಶೇಷ ಲಕ್ಷ್ಯಸತಕ್ಕದ್ದು:—ಈ ನಮ್ಮ ವಸ್ತ್ರಗಳಿಗೆ ಇಟ್ಟಿರುವ "ಟ್ರೇಡ್ ಮಾರ್ಕ್" ಎಂಬ ಗುರುತಿನ ಲೇಬಲ್ ಮತ್ತು ಚೀಟಿ ಹಚ್ಚಿರುತ್ತದೆ. ಈ ಗುರುತಿನ ಚೀಟಿ ಇಲ್ಲದವು ನಮ್ಮ ತಾಜಾ ವಸ್ತ್ರಗಳಲ್ಲವೆಂದು ತಿಳಿಯತಕ್ಕದ್ದು.

ಶರ್ತು:—ನಗದಾಗಿ ಇಲ್ಲವೆ ವಸ್ತ್ರಗಳು ವಿ. ಪಿ. ಟಪ್ಪಾಲ ಮೂಲಕ ಕಳುಹಿಸಲ್ಪಡುವಲ್ಲಿ ಕಾಲದಲ್ಲಿ ಹಣವನ್ನು ಮುಂಗಡವಾಗಿ ರವಾನಿಸತಕ್ಕದ್ದು.

ಪತ್ರಗಳನ್ನು ಇಂಗ್ಲೀಷಿನಲ್ಲಿ ಯಾ ಕನ್ನಡದಲ್ಲಿ ಸ್ಪಷ್ಟವಾಗಿ ಬರೆಯತಕ್ಕದ್ದು.

ಈ "ಟ್ರೇಡ್ ಮಾರ್ಕ"ನ್ನಾಗಲೀ ನಾವು "ಕಾಪಿರೈಟ್" ಪಡೆದಿರುವ ಲೇಬಲುಗಳನ್ನಾಗಲೀ ಇಲ್ಲವೆ ಆ ಮಾದರಿಯ ಬೇರೆ ಲೇಬಲುಗಳನ್ನಾಗಲೀ ಯಾರಾದರೂ ಇತರ ವಸ್ತ್ರಗಳ ಮೇಲೆ ಪ್ರಯೋಗಿಸಲೂ ಮಾಡಲೂ ಕೂಡದು.

ವಿಳಾಸ:—BASEL MISSION WEAVING ESTABLISHMENT,
MANGALORE S CANARA

WILLIAM & CO., BOMBAY.

ವಿಲಿಯಂ ಮತ್ತು ಕಂಪನಿ, ಫೋರ್ಟು, ಮುಂಬಯಿ.

ಗಜಕರ್ಣಾದ ಮುಲಾಮು.

27 47

ಇದನ್ನು ಹಾಕುವವರಿಂದ ಎಲ್ಲಾ ತರದ ಕಜ್ಜಿಯೂ ನಾಶವಾಗುತ್ತದೆ. ಮೂರು ದಿನ ಹಾಕಿಸುವದರೊಳಗೆ ಗಜಕರ್ಣವು ಹೋಗುವದು. ಇದನ್ನು ಹಚ್ಚಿದಲ್ಲಿ ಉರಿ ಯು ಬರುವದಿಲ್ಲ. ಮತ್ತು ಚರ್ಮ ಕಪ್ಪಾಗುವದಿಲ್ಲ. ಒಂದು ಸಾರಿ ಪರೀಕ್ಷಿಸಿ ನೋಡಿರಿ. ಗುಣ ಕಂಡುಬರುವದಿಲ್ಲವಾದರೆ ಹಣ ಹಿಂತಿರುಗಿ ಕೊಡಲ್ಪಡುವದು. ಡಬ್ಬಿ ೧ಕ್ಕೆ ಕಿಮ್ಮತ್ತು ೦-೩-೦. ವಿ. ಪಿ. ೦-೧೦-೦. ತರಿಸಿಕೊಳ್ಳಿರಿ! ತ್ವರೆಮಾಡಿರಿ!!

ವಿಲಿಯಂ ಕಂಪನಿಯ ಇತರ ಔಷಧಗಳು: ಸುಂದರೀ ತೈಲ, ಭಾಸ್ಕರ ಲವಣ, ಕೇಶವರ್ಧಿನೀ ತೈಲ ಮುಂತಾದವುಗಳ ಕ್ರಯಪಟ್ಟಿ ಮುಕ್ತವಾಗಿ ಕಳುಹಿಸಲ್ಪಡುವದು. ಈ ಕಂಪನಿಯ ನರದೌರ್ಬಲ್ಯ ನಿವಾರಕ ಔಷಧ ಸ್ವತಹಾ ತಯಾರಿಸುವದರಿಂದ ಕ್ಯಾಟಲಾಗು ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬೇಕು.

ಅಮೃತಾಂಜನ

ಬಾಟ್ಲಿ ಒಂದಕ್ಕೆ ಕಿಮ್ಮತ್ತು ೮ ಆಣೆ. ವಿ. ಪಿ. ೧೨ ಆಣೆ.

ಅಮೃತಾಂಜನ—ಸುಖಾಂಜನ.
ಅಮೃತಾಂಜನ—ದಿವ್ಯಾಂಜನ.
ಅಮೃತಾಂಜನ—ಸಂಜೀವನ.
ಅಮೃತಾಂಜನ—ಪರಮೌಷಧ.
ವಾತ, ಎದೆನೋವು, ಗಂಟುನೋವು, ಸಂಧಿವಾತ, ತಲೆನೋವು, ಮೂಲವ್ಯಾಧಿ, ಈ ಎಲ್ಲಾ ರೋಗಗಳಿಗೂ ಅಮೃತಾಂಜನವು ದಿವ್ಯ ಔಷಧವಾಗಿರುತ್ತದೆ.

ಅಮೃತಾಂಜನ—ಶೀತಭಂಜನಿ.
ಅಮೃತಾಂಜನ—ತಕ್ಷಣಪರಿಹಾರಿಣಿ.
ಅಮೃತಾಂಜನ—ಅಪೂರ್ವದರ್ಶನಿ.
ಅಮೃತಾಂಜನ—ಭಂಜನವಿಮರ್ಧಿನಿ.
ಇದರಿಂದ ಗುಣ ಕಂಡುಬರುವದಿಲ್ಲವಾದರೆ ಹಣ ಹಿಂತಿರುಗಿ ಕೊಡಲ್ಪಡುವದು. ಜಕಂ ಮತ್ತು ಘಾಯ, ಅರ್ಧಾಂಗವಾಯು, ಈ ರೋಗಕ್ಕೆ ಇದು ಸಂಜೀವನವಾಗಿರುತ್ತದೆ. ತರಿಸಿಕೊಳ್ಳಿರಿ! ಪರೀಕ್ಷಿಸಿರಿ!!

ವಿಲಿಯಂ ಮತ್ತು ಕಂಪನಿ, ೧೬, ಓಕ್ ಲೇನ್, ಫೋರ್ಟು, ಮುಂಬಯಿ.
ಟೆಲಿಗ್ರಾಫು ಅಡ್ರೆಸು: "ಅಮೃತಾಂಜನ," ಮುಂಬಯಿ.

ನಿಮಗೆ ನೋವು ಇದೆಯೋ?

58-24

ಹಾಗಾದರೆ "ಕ್ರೆಸೆಂಟ್ ಯೂನಿವರ್ಸಲ್ ಬಾಮ್" ನ್ನು ಏಕೆ ಉಪಯೋಗಿಸಬಾರದು? ಆಶ್ಚರ್ಯಕರವಾದ ಬಾಧಾನಿವಾರಕ! ಈಗಿನ ಶತಮಾನದಲ್ಲಿ ಕಂಡು ಹಿಡಿದ ದೊಡ್ಡ ನೂತನವು!

ಈ ರಾಜ ಔಷಧವನ್ನು ನೋವುಗಳಿಗೂ ತಲೆಯುತ್ತಿಗೆ ಹಚ್ಚುವದಲ್ಲದೆ ನರ ಮತ್ತು ಮಾಂಸ ಸಂಬಂಧವಾದ ಪಾರ್ಶ್ವನೋವು, ಕೀಲುಗಳ ಬಾಧೆ, ಕಿಬ್ಬೊಟ್ಟೆ ನೋವು, ಬೆನ್ನುಳಿಯುವದು, ತಲೆನೋವು, ಕೆಮ್ಮು, ಕೀಲುಗಳ ಊತ, ಕೈಕಾಲು ಒಡೆತ ಇವುಗಳನ್ನೆಲ್ಲಾ ವಿದ್ಯುಚ್ಛಕ್ತಿಯಂತೆ ಗುಣಪಡಿಸುವದು. ಈ ಔಷಧವು ಆಶ್ಚರ್ಯಕರವಾಗಿ ಗುಣಪಡಿಸುವದರಿಂದ ಎಲ್ಲಾ ಕಡೆಗಳಲ್ಲಿಯೂ ಪ್ರಸರಿಸುತ್ತಾ ಬರುವದು. ಇತರ ಔಷಧಗಳು ಗುಣಪಡಿಸದೆ ಹೋದಾಗ ಡಾಕ್ಟರ್ ಫೀಜನ್ನು ಕಡಿಮೆಮಾಡಿ ಇದು ನಿಸ್ಸಂದೇಹವಾಗಿಯೂ ಗುಣಪಡಿಸುವದು.

ಕ್ರಯ:—೧ ಬಾಟ್ಲಿಗೆ ೧೦ ಆಣೆ, ಪೋಸ್ಟೇಜ್ ೪ ಆಣೆ. ೩ ಬಾಟ್ಲಿಗೆ ಅಂಚೆವೆಚ್ಚ ಸೇರಿ ರೂ. ೨—೪ ಆಣೆ. ಎಲ್ಲಾ ಕೆಮಿಸ್ಟ್ ಷಾಪುಗಳಲ್ಲಿ ದೊರೆಯುವದು.

ನಮ್ಮ ವಿಳಾಸ:—ಎಫ್. ಡಬ್ಲಿಯು. ಆರ್ಲ,
ಸಿಮೆಟ್ರಿ ರೋಡ್, ವೇಪೇರಿ, ಮದರಾಸ್.

ಜ್ವರಹರಿ.

118 1

ಇದು ಸಾಧಾರಣ ಜ್ವರ, ಚಳಿಜ್ವರ, ದೋಷಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲ ವಿಧವಾದ ಜ್ವರಗಳನ್ನು ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚೀಫ್ ಆಫೀಸರು ಮುಂತಾದವರು ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್. ಟಿ. ವೆಂಕಟಪತಿ ಅಯ್ಯರವರು—ನೀವು ಕೆಲವು ದಿನಗಳ ಹಿಂದೆ ಕಳುಹಿಸಿಕೊಟ್ಟ ೧ ಸೀಸೆಯ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು. ಇನ್ನೂ ಜನರಿಗೆ ಕೊಡಲು ಬೇಕಾಗುತ್ತದೆ. ದರಿಂದ ದಯವಿಟ್ಟು ಇನ್ನೊಂದು ೧ ಡಜನ್ ಸೀಸೆಯನ್ನು ವಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ:—ಸೀಸೆ ೧ಕ್ಕೆ ೧೨ ಆಣೆ, ೬ ರೂ., ೧೨—೮ ರೂ., ರೂ. ೨—೧೨ ಆ, ೧೧ ರೂ. ಪ್ಯಾಕಿಂಗ್ ಸೀಸೆ ತರಿಸಿಕೊಂಡರೆ ಪೋಸ್ಟೇಜ್ ಮಾಫಿ ಬಿಡಲಾಗುವದು.

****

ಓಮಂ ಕರ್ಪೂರ.

Omum Carpoor

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಶೂಲೆ ಯುವದು, ವಾಂತಿಭೇದಿ, ಮಾಸಾಂತರದ ಹೊಟ್ಟೆ ನೋವುಗಳು—ಮುಂತಾದ ದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಶೀಘ್ರದಲ್ಲೇ ಗುಣಕೊಡುವದು. ಇದು ಕೆಂಗರವು ತೀರಗಳಿಗೆ ಒಂದುವರ್ಷ ಹೊರಗೆ ಆಗುವಷ್ಟು ಹೊಟ್ಟೆನೋವಿಗೆ ಮುಂತಾದ ವ್ಯಾಧಿಗಳಿಗ್ಯೂ ಕೂಡ ಗುಣಪಡಿಸುತ್ತದೆ. ಕ್ರಯದ ಪಟ್ಟಿ ದ್ವಾರಾ ಎಲ್ಲಾ ದಿವಾನಂಗಡಿಯ ಸೀಸೆಗಳಲ್ಲಿ ದೊರೆಯುವದು.

ಅಡವದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಚೆನ್ನಪಟ್ಟಣದ ಒಂದು ಕರ್ಪೂರವನ್ನು ನಾನೂ ನನ್ನ ಆ ಡಿಸ್ಪೆನ್ಸರಿಯೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ರೋಗಿಗಳಿಗಿಂದಲೂ ಕಾಲರಾ, ಅಜೀರ್ಣ ಭೇದಿ ಅಜೀರ್ಣ ರೋಗಿಗಳಿಗೆ ಕೊಡುತ್ತೇನೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಿದೆ. ಇದು ಬಹು ಒಳ್ಳೇ ಔಷಧ ವೆಂತ ಬರೆದಾರೆ.

ಈ ಎರಡು ಔಷಧಗಳೂ ಊರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಚಾರಿಸಿ:—
ಹೆಪ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,
ಸೆಕೆಂಡ್ ಬೀಚ್ ಲೈನ್, ಮದರಾಸ್.

ವೀರಶೈವರೇ, ಕೊಂಚ ಗಮನಿಸಿ.

116 1

ಚಿತ್ರದುರ್ಗದ ಶ್ರೀಮನ್ಮಹಾರಾಜನ ಜಗದ್ಗುರು ಮುರುಘರಾಜೇಂದ್ರ ಸ್ವಾಮಿಗಳ ಭಾವಚಿತ್ರವು ೧೧ ಅಂಗುಲ ಸ್ಟಾಂಪು ಕಾಗದದಲ್ಲಿ ಮುದ್ರಿಸಲ್ಪಟ್ಟಿದೆ. ೫×೪ ಸೈಜಿನದೂ ೬೧ ಅಂಗುಲ ಸ್ಟಾಂಪು ಕಾಗದದಲ್ಲಿ ೪×೧೦ ಸೈಜಿನದೂ ರವಾನಿಸಲ್ಪಡುತ್ತೆ. ಒಟ್ಟಾಗಿ ತರಿಸಿಕೊಂಡರೆ ೪ ಕ್ಕೆ ೧ ೧೦ ಕ್ಕೆ ೩. ೫೦ ಕ್ಕೆ ೩,೦೦೦ಕ್ಕೆ ೬೦ ರಂತೆ ಕಮಿಷನ್ ದೊರೆಯುತ್ತೆ.

ವಿಳಾಸ:—ಡಿ ಪಿ ಭಟ್ಟಣ್ಣ, ಫ್ಯಾನ್ಸಿಬಜಾರ್, ಕೋಟೆ, ಮೈಸೂರು

ಈಗಲೇ ಶೀಮೆಯಿಂದ S. S ಕ್ರೊಸ್ಟಬೆಲ್ ಸ್ಟೀಮರಿನಲ್ಲಿ ಬಂದಿದೆ.

117-2

ಸ್ಟೀಲ್ ಪೆನ್ನು ಬಾರ್ ಉರ್. ಗೌಂಡು ೧ ಕ್ಕೆ	ರೂ. ೩—೦—೦
೧೦ ಜೋಡಿಯಾಗುವ ಬಂಡಲ್ ೧ ಕ್ಕೆ	೩—೯—೦
೧ ಜೋಡಿಯಾಗುವ ಉರ್ ಪಾರಕ್ಕೆ	೦—೪—೦
ಕೊಕ್ಕೆ ಸೂಜಿ ಪರ್ ೧ ಕ್ಕೆ	೦—೧೭—೦
೧ ಕೊಕ್ಕೆ ಸೂಜಿಗೆ	೦—೧—೬
೩೦ ಇಂಚಿನ ಬನಿಯನ್ ೧ ಕ್ಕೆ	೦—೯—೦
ಪೆನ್ನು ಪೋಸ್ಟ್ ಕಾರ್ಡು ೧೦೦ ಕ್ಕೆ	೦—೭—೦

ವಿ. ಪಿ ಇಂದಲೂ ರವಾನಿಸುತ್ತೇವೆ ವಿಳಾಸ:—

ದಿ ಉರ್ ಮಾರ್ಟ್, ಮಂಗಳೂರು, ದ. ಕ.

೧೯೦೬ ರಿಂದ ೧೯೦೭ ವರೆಗೆ.

ಕಾಲದ ಪರೀಕ್ಷೆ!

ಮೂವತ್ತೇಳು ವರ್ಷಗಳಿಗಿಂತಲೂ ಹೆಚ್ಚಾಗಿ

SCOTT'S EMULSION 31-34

(ಸ್ಕಾಟ್ಸ್ ಇಮಲ್ಷನ್)

ಎಂಬೀ ಸೇವನಾ ಔಷಧಿಯನ್ನು ಘನ ವಂಶೀಯರೆಲ್ಲಾ ಅನೇಕ ವೇಳೆ ಪರೀಕ್ಷೆಯಿಂದ ನೋಡಿ, ಸರ್ವೋತ್ತಮವಾದದ್ದೆಂದು ಹೇಳಿರುತ್ತಾರೆ.

ಆದುದರಿಂದ ನಾನಾವಿಧ ರೋಗಗಳಿಗೆ ಪ್ರಪಂಚದಲ್ಲೆಲ್ಲಾ ಈ ಔಷಧವು ಸರ್ವ ಶ್ರೇಷ್ಠವಾದದ್ದಾಗಿ ಪರಿಗಣಿಸಿದೆ:—

ಕ್ಷಯರೋಗದ ಆಕ್ರಮಣಗಳು, ನಾನಾ ತರದ ಕೆಮ್ಮಲು, ನಾನಾವಿಧ ಜ್ವರಗಳು, ಮಾಂಸಖಂಡಗಳ ಕ್ಷೀಣತೆ,

ಆಹಾರದಲ್ಲಿ ಅರುಚಿ ಇವಲ್ಲದೆ ಚಂಡಿಗೂ ನಂಗನಿಗೂ ಬಲಕಾರಿಯಾದ ಮತ್ತು ಅಂಗ ಬೆಳೆಸುವ ಸೇವನಾ ಔಷಧವೂ ಇದೇ.

ಕೈ ನೋಕದೆ ತಯಾರಾದದ್ದು.

ಔಷಧಗಳ ಅಂಗಡಿಗಳಲ್ಲೆಲ್ಲಾ ವಿಕರಿಯಾಗುವದು

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್, ಔಷಧಗಳ ಕಾರ್ಖಾನೆ, ಲಂಡನ್, ಇಂಗ್ಲೆಂಡ್.

ಈ ಮನುಷ್ಯ ಇರುವ ಔಷಧವನ್ನೇ ಕೇಳಿ ಕೊಳ್ಳಿರಿ

ವೈದ್ಯ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

26-38

೧ ಲೋಕಾಮಯಹರ ಕಸ್ತೂರೀ ಮಾತ್ರೆ.—ಈ ಮಾತ್ರೆಗಳನ್ನು ಜವಳಿ ಬ್ರಹ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ರಚಿಸಿರುವರು.

ಸನ್ನಿಜ್ವರ, ಜ್ವರ, ಹೊಟ್ಟೆಶೂಲೆ, ಸಂಧುಗಳ ನೋವು, ಮೈ ಕೈಕಾಲು ಸೆಳೆತ (ವಾತ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿಮಾಂದ್ಯ, ಹಲ್ಲು ನೋವು, ಕೆಮ್ಮಲು, ನೆಗಡಿ, ವಿಕ್ಕಳಿಕೆ, ಆರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ, ಖಂಡಿತವಾಗಿ ಗುಣವಾಗುತ್ತದೆ.

ಶಾಸ್ತ್ರೋಕ್ತ ಪ್ರಕಾರ ತಯಾರಾದವು ಯಾವಾಗಲೂ ಉಪಯೋಗಿಸುತ್ತಿದ್ದರೆ ಬಳಿ ಕೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಬಾಧೆಗೂ ದಾರಿಕೊಡದೆ, ವೀರ್ಯ ಹವಾಗಳ ಬಲಾವಸ್ಥೆಯನ್ನು ಸರಿಪಡಿಸಿ, ರಕ್ತದಲ್ಲಿ ದೋಷವನ್ನು ತೆಗೆದು ವೃದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಸೆಳವು, ಜ್ವರ, ನಾಡ್ಯಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ.

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ರೋಗಕ್ಕೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.

ಅನುಪಾನವು ಔಷಧದ ಸಂಗಡಲೇ ಇರುತ್ತದೆ

೨೦ ಮಾತ್ರೆಯುಳ್ಳ ಡಬ್ಬಿಗೆ ೬ ಆಣೆ; ೫ ಡಬ್ಬಿಗೆ ೧ ಡಬ್ಬಿ ಹೆಚ್ಚು. ೧ ರಿಂದ ೧೨ ಡಬ್ಬಿ ವರೆಗೆ ಪೋಸ್ಟೇಜು ೬ ಆಣೆ.

ವಿಳಾಸ:—ವೈದ್ಯ ವೆಂಕಟಾಚಲ ಪಂಡಿತ, ಎಸ್. ಎಸ್. ಆರ್. ವೈದ್ಯಶಾಲಾ, ಲಕ್ಷ್ಮೀವಿಲಾಸ ರೋಡ್, ಮೈಸೂರು

CHAMBERLAIN'S PAIN BALM

ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವು

4-19



ಬೆನ್ನು ಬಿಗಿತದಲ್ಲಿನ ನೋವು, ಸೊಂಟಗಳಲ್ಲಿ ಆಗುವ ನೋವು, ಬಂಧಗಳಲ್ಲಿ ಗಂಟುಗಟ್ಟುವ ನೋವು, ತಲೆನೋವು, ಚಳ್ಳುವ ಕಣೆಗಳ ನೋವು, ವಾಯುನೋವು—ಇವುಗಳನ್ನೆಲ್ಲಾ ಸಂಪೂರ್ಣವಾಗಿ ವಾಸಿಮಾಡುವಂಥಾ ಔಷಧ.

ವಾಯುನೋವೆಂದರೇನು?

ಕೀಲುಗಳಲ್ಲೂ ಮಾಂಸಖಂಡಗಳಲ್ಲೂ ಗಾಯವಾಗುವುದು, ಊದಿಕೊಳ್ಳುವುದು, ಕಠಿಣವಾಗಿ ಸೆಳೆಯುವ ಬಾಧೆ, ಬಂಧಗಳಲ್ಲಿ ಇರಿಯುವುದು, ವಿಶ್ರಾಂತಿಕೊಡದೆ ಇರುವುದು, ನಿದ್ದೆಹತ್ತದೆ ಇರುವುದು—ಇವೇ ಇದೆಲ್ಲಾ ನಿಮಗೆ ಯಾವಾಗ ಉಂಟಾಗುವುದೋ ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು.

ಆಗ ಚೇಂಬರ್ಲೇನ್‌ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ.

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹಾ ಶಾಖವು ಮೈಗೆಲ್ಲಾ ವ್ಯಾಪಿಸುತ್ತದೆ. ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ. ಮನಸ್ಸಿಗೆ ಉಲ್ಲಾಸವಾಗುತ್ತದೆ. ಅದನ್ನೇ ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯುವಿನ ಕಾಟವೇ ಕಿತ್ತು ಹಾಕಿಬಿಡುವುದು.

ಇದು ಪನಸ್ಪತಿಗಳಿಂದಲೇ ತಯಾರಾದ ಔಷಧ.

ಕೈಯಿಂದ ಮುಟ್ಟಿದ್ದೇನೂ ಅಲ್ಲ.

ಇದು ಎಲ್ಲೆಲ್ಲೂ ವಿಕರಿಯಾಗುವುದು ಸಣ್ಣ ಶೀಸೆಗೆ ೧ ರೂಪಾಯಿ ದೊಡ್ಡ ಶೀಸೆಗೆ ೨ ರೂಪಾಯಿ

ಕಾರ್ಡು ಸೈಜು ೪½×೩½.

ಫೋಟೋ ತೆಗೆಯುವ

ಫೊ ಟೊ ಕ್ಯಾ ಮೆ ರಾ.

81 12

ಬೆಲೆ ಫಕ್ತ ಮೂರು ರೂಪಾಯಿ.

ಇದರಿಂದ ಬೇಕಾದ ಮನುಷ್ಯನ ಫೋಟೋ ಅನವನಿಗೆ ತಿಳಿಯದಂತೆ ತೆಗೆಯಲಿಕ್ಕೆ ಬರುತ್ತದೆ. ವೇಗದಿಂದ ಓಡುವ ಗಾಡಿಯು ಮತ್ತು ಹಾರುವ ಪಕ್ಷಿಯು ಫೋಟೋ ಸಹ ತೆಗೆಯಬಹುದು. ಇದರಲ್ಲಿ ಕಲಿಯತಕ್ಕದ್ದೇನೂ ಇಲ್ಲ. ಈ ಕ್ಯಾಮರಾದ ಮಾಹಿತಿಯನ್ನು ಕೊಳ್ಳುವವರಿಗೆ ನಾವು ಕೂಡಲೆ ಕಲಿಯೇ ಮಾಡಿಕೊಡುವೆವು ಎಷ್ಟೋ ಕಡೆಗೆ ಇದಕ್ಕೆ ೧೦ ರಿಂದ ೧೨ ರೂ. ಬೆಲೆ ಬೀಳುತ್ತದೆ. ಆದರೆ ಇದರ ಖರೀ ಕಿಮ್ಮತ್ತು ೩ ರೂಪಾಯಿ ಮಾತ್ರ ಇರುವನು. ಟಪ್ಪಾಲ್ ಖರ್ಚು ೯ ಆಣೆ. ಇದು ಸಿಕ್ಕತಕ್ಕ ವಿಳಾಸ:—

ಭೊಲಾನಾಥ ಭಗನಲಾಲ ಮಹಾಜನ, ರಾಕೂರದ್ವಾರ ರೋಡ್, ಪೋಸ್ಟ್ ಕಾಲಬಾದೇವಿ, ಮುಂಬಯಿ.

ವಿಕಟಪ್ರತಾಪ.

ಸಚಿತ್ರವೂ, ವಿಚಿತ್ರವೂ ಆದ ಮಾಸಪತ್ರಿಕೆ.

109-6

ನನ್ನ ಕಥೆ ನೋಡಿ ನಾನು ಹೇಳುವದು ಕೇಳಿ.

ಅಯ್ಯಾ ಸ್ನೇಹಿತರೇ! ನನ್ನ ಚಹರೆಯನ್ನು ಸ್ವಲ್ಪ ಗಮನಿಸಿರಿ! ಬನ್ನಿರಿ!! ಬೇಗನೆ!!!

ಅದರಿಂದ ಉತ್ತಮರಿಗೆ ಉಂಟಾಗುವ ಹಾಸ್ಯ ಸಜ್ಜನರಲ್ಲಿ ವಿನೋದ, ಅನಾಚಾರ ನಿಂದೆ, ಸೋಮಾರಿಗಳ ಪ್ರಹಾಸ, ದುಸಿಕರ ಅಭಾವ, ದುರ್ಜನರ ಶೋಧ, ಇವುಗಳನ್ನೆಲ್ಲಾ ಪಟ್ಟಹಾಕಿ ತೋರಿಸಿ ಕೊಡುವಂತಹುದು ವಿಕಟಪ್ರತಾಪವೇ ಆಗಿರುವ ನನ್ನ ಪ್ರತಾಪ. ನನ್ನ ನೋಡ

ಬಲ್ಲರು ಕೇಳಬಯಸುವಿರೆಂದು ತಿಳಿದುಕೊಂಡೆ ಕೆಲ ಸಮಯ ನವರಸ ಬರಹವಾಗಿರುತ್ತ ಇರುತ್ತದೆ. ನಾನು ಯಾವ ಬೋಧೆಯನ್ನು ಪ್ರಾರಂಭಿಸಿದಾಗ್ಯೂ ತಟಕ್ಕನೆ ನಿಮಗೆ ಸುಚಿತ ನೆಯನ್ನು ಮಾಡದೆ ಇರುವದಿಲ್ಲ. ಒಬ್ಬ ಸ್ವಾಧ್ಯದಲ್ಲಿ ನನಗೂ ನಿಮಗೂ ತಿಳಿದ ಮಟ್ಟಿಗೂ ಲೀಲೆ ಮಾಡುವೆನು. ನನ್ನ ಬೋಧೆಯು ಪಂಡಿತರಿಗೆ ಆನಂದ ಆನಂದ ಮನೋರಂಜಿತವಾಗಿರುವುದು. ಮೂಢರೇ ನನ್ನ ಅರ್ಥ ನನ್ನ ಗ್ರಹಿಸಿ ಹಾ! ಹಾ! ಎನ್ನುವಲ್ಲಿ ಪಂಡಿತರನು ಕೇಳಿಕೇಳಿ ಪ್ರತಿ ಒಂದು ಅಕ್ಷರಕ್ಕೂ ಕುಣಿದಾಡುತ್ತ ಇರುವರು. "ಕೌತುಕವಯ್ಯಾ, ಈ ಕಾರಣ ಕ್ಯಾಗಿಯೇ ಇದಕ್ಕೆ ವಿಕಟಪ್ರತಾಪ ಎಂದು ಹೆಸರು" ಎನ್ನುವರು. ಆಗ್ಗೆ ತಾನೇ ಶಿವನು ನಟನ ಮಾಡುವಲ್ಲಿ ನೀಳಗಳು ಘರ್ಜಿಸುತ್ತಾ ಭೂಮಿಯು ಅದರುವ ಹಾಗೆ ನನ್ನ ಪ್ರತಾಪವು ಎಲ್ಲಿ ನೋಡಿದಾಗ್ಯೂ ಕಾಣಿಸಿಕೊಳ್ಳುವದು.

ಏನು ಕಾಣ! ಇಷ್ಟು ಗುಣವುಳ್ಳ ಮಾಣಿಬರವಣಿಗೆಗೆ ಈ ಹಾಸ್ಯದಲ್ಲಿರುವವರು ವರುಷಕ್ಕೆ ನನ್ನ ಬಹುಮಾನ ಕೊಡುವದು ಶಸ್ತ್ರವೇ! ಏಳಿ! ಹಾಳಿ ಅನ್ನಬೇಡಿ! ನಿಮ್ಮ ಕಷ್ಟಾ ದಾಯಿಗಳಿಗೆ ತಿವಿಕೊಡದೆ ಇರುವ ಮನುಷ್ಯಾಧಿಕಾರಿಗಳನ್ನು ಈ ನನ್ನ ಲೇಖಣಿಯಿಂದ ಚುಚ್ಚಿ! ಕಷ್ಟ ಬಂದಾಗ ಗಂಟು ಬಿಚ್ಚಿ! ಕಂಡಂತೆಲ್ಲಾ ಅತಿವಿನರ ಬಾಯನ್ನುಚ್ಚಿ!

ಈ ಪತ್ರಿಕೆಯಲ್ಲಿ ಪ್ರತಿ ತಿಂಗಳಲ್ಲಿಯೂ ೭-೮ ಚಿತ್ರಗಳನ್ನು ಪ್ರಕಟಿಸಲ್ಪಡುತ್ತೆ. ಮಾದರಿ ಪತ್ರಿಕೆಯನ್ನು ಅಪೇಕ್ಷಿಸುವವರು ೨ ಆಣೆ ಯ ಸ್ಟಾಂಪನ್ನು ರವಾನಿಸಬೇಕು. ವಿಕಟಪ್ರತಾಪದ ಚಂದಾ ವಿವರ:—

ಸ್ಥಳೀಯವರಿಗೆ ವರ್ಷವೊಂದಕ್ಕೆ ರೂ. ೦—೧೨—೦

ಪರಸ್ಥಳದವರಿಗೆ . . . . . ರೂ. ೧—೦—೦

ನಮ್ಮ ವಿಳಾಸ:—ಮ್ಯಾನೇಜರ್, ವಿಕಟಪ್ರತಾಪ ಆಫೀಸ್, ೧೬೪, ಅರಳೇ ಪೇಟೆ, ಬೆಂಗಳೂರು ಸಿಟಿ

೧೯೦೪ ನೇ ಇಸವಿಯ ಇಂಗ್ಲೀಷು-ಕನ್ನಡ

119 1

ಪಾಕೆಟ್ ಡೈರಿ

ಎ. ನಂ ೫. ನಂ॥ ಸಿ. ನಂ ಡಿ. ನಂ।

ಕ್ರಯ ೩ ಆಣೆ. ೫ ಆಣೆ. ೭ ಆಣೆ. ೪ ಆಣೆ.

ಈ ಡೈರಿಗಳು—ವರ್ತಕರು, ಉದ್ಯೋಗಸ್ಥರು, ಕಂಟ್ರಾಕ್ಟರು ಮೊದಲಾದ ಮನುಷ್ಯರು, ಮುಖ್ಯವಾಗಿ ಸರ್ವರಿಗೂ ಉಪಯೋಗವಾಗಿರುತ್ತವೆ. ಇವುಗಳಲ್ಲಿ ಅವಶ್ಯವಾಗಿರುವ ವಿಷಯಗಳು—ಶೀಘ್ರ ಲೆಕ್ಕ ಟೇಬಲ್, ಗ್ರಹ ಕಾಲಂಶ ಸಹಿತ, ಕ್ಯಾಲೆಂಡರು, ಹಬ್ಬಗಳು, ರಜಾ ದಿನಗಳು, ರೈಲ್ ಚಾರ್ಜು, ಕೋರ್ಟ್ ಫೀಜು, ಪೋಸ್ಟ್ ದರ, ಸ್ಟ್ಯಾಂಪ್ ರಿಜಿಸ್ಟರ್ ಫೀಜುಗಳು, ಪೋಸ್ಟಾಫೀಸಿನ ಎಲ್ಲಾ ನಿಯಮಗಳು, ಪಂಚಾಂಗಗಳ ಅಳತೆ, ಗಡಿ ಪಂಚಾಂಗ ಪ್ರಶ್ನಗಳು, ದಿನಚರಿ, ಗುಣಕ ಕೋಷ್ಟಕ, ಪಾರಿ ಪಟ್ಟಿ, ಮಾಸಪಟ್ಟಿಗಳು, ದಿನ ಸೇರಿದ ಪಟ್ಟಿ, ಧೋಬಿ ಲೆಕ್ಕ, ಜಮಾ ಖರ್ಚಿನ ಪಟ್ಟಿ. ಇನ್ನೂ ಅನೇಕ ವಿಷಯಗಳೂ ಇವೆ. ಉತ್ಕೃಷ್ಟವಾದ ಕಾಗದ ರೂಲು ಹಾಕಿ ಸೀಮೆ ಸಾಮಾನು ಸ್ಟೈಲಿನಿಂದ, ಚಿನ್ನದ ಛಾಯೆಯಿಂದ ರಕ್ಷಿಸಿ ತಯಾರು ಮಾಡಲ್ಪಟ್ಟಿದೆ.

ಎ ನಂಬರ್ ಚಿಕ್ಕ ಸೈಜು	೩ ಆಣೆ
ಬಿ. ನಂಬರ್ ಮಧ್ಯಸ್ಥದ್ದು	೫ ಆಣೆ
ಸಿ. ನಂಬರ್ ದೊಡ್ಡ ಸೈಜು	೭ ಆಣೆ
ಡಿ ನಂಬರ್ ಮಧ್ಯಸ್ಥದ್ದು	೪ ಆಣೆ

ಪೋಸ್ಟ್ ಖರ್ಚು ಬೇರೆ ಒಂದೇ ಸಮಯದಲ್ಲಿ ೧೦ ಡೈರಿ ತರಿಸಿಕೊಂಡರೆ ೧ ಡೈರಿ ಉಚಿತವಾಗಿ ಕೊಡುವೆವು. ವಿ. ಪಿ ಮೂಲಕವೂ ತರಿಸಿಕೊಳ್ಳಬಹುದು.

ನಮ್ಮ ವಿಳಾಸ:—ಶ್ರೀ. ಶಿವಲಿಂಗಂ ಶೆಟ್ಟಿ ಕಂಪನಿ, ಕರ್ನಾಟಕ ಬುಕ್ ಡಿಪ್ಪೋ ಪ್ರೆಸ್, ಬಳ್ಳಾರಿ.

ಶ್ರೀಘ್ರ ವಿಮರ್ಶಿಸಿ ನೋಡಿರಿ.

98-10

ಯಾವದು ಉತ್ತಮ? ಸ್ವತಃ ಪರೀಕ್ಷಿಸಿ ನೋಡುವುದೇ ಅಥವಾ ಕಲ್ಕತ್ತೆಯ ಒಬ್ಬ ಪ್ರಸಿದ್ಧ ಡಾಕ್ಟರರ ಅನುಭವವನ್ನು ನಂಬುವುದೇ? ನೂತನವಾಗಿದ್ದರೆ ಪರೀಕ್ಷಿಸದೆ ವಿನಾ ಒಳಿತು ಉಂಟೋ ಎಂಬದನ್ನು ಮಾತ್ರ ನಾವು ತಿಳಿಸಬೇಕು. ಕಲ್ಲವದ ಸಂದೇಹ ಹುಟ್ಟುವದು ಪರೀಕ್ಷೆಯವರ ಮಾತು ಪರಿಷ್ಕಾರವಾದ ರೀತಿ ವಾಕಾಗಿರುವದಿಲ್ಲ. ಡಾಕ್ಟರ್ ಬ್ಲ್ಯಾಕ್ ವಿಕ್ ಎಂಬ ಪಿಲ್ಸ್‌ಗಳು ವ ಪ್ರತಿ ಒಂದು ಶೀಸೆಯೊಂದಿಗೆ ಸ್ವದೇಶಿಯ ಸಾಕ್ಷ್ಯವೇ ಇರುತ್ತದೆ. ಈ ಕೆಳಗಿನದನ್ನು ಓದಿ ನೋಡಿರಿ. "ಮೆಡಿಕಲ್ ಕಾಲೇಜಿನಲ್ಲಿ ವಿದ್ಯಾಶಾಸ್ತ್ರದ (ಚಾಟಿವಿ)-ಮೂತ್ರಕೋಶದ ವೈದ್ಯದ ಉಪಾಧ್ಯಾಯರಾದ ಯೂ. ಈಸ್ಟ್ ಎಂಡ್ ಮೆಡಿಕಲ್ ಹಾಲಿನಲ್ಲಿ ವೈದ್ಯ ಚಿಕಿತ್ಸಕರಾದ ಯೂ. ಇರುವ ಡಾಕ್ಟರ್ ಎ ಟಿ ರೇ ಯವರು ಹೇಳುವದೇನೆಂದರೆ— ಡೋಸ್ಸರ (ಬ್ಲ್ಯಾಕ್ ಎಕ್ ಕಿಡ್ನಿ ಪಿಲ್ಸ್)ಗಳು ಬೆನ್ನುನೋವಿನ ಮೂತ್ರಕೋಶದ ಔಷಧಿ ಗುಳಿಗೆಗಳನ್ನು ಮುಖ್ಯವಾಗಿ ಬೆನ್ನು ನೋವು ಸಹಜವಾದ ಬಾಧೆಯಾಗಿರುವಲ್ಲಿ ಸ್ತ್ರೀಯರಿಗೆ ಮುಖ್ಯವಾಗಿ ಚಿಕಿತ್ಸೆ ನಡಿಸಿ ಹೆಚ್ಚು ಸಮಾಧಾನ ಪಟ್ಟಿದ್ದೇನೆ. ಸ್ತ್ರೀಯರ ಅನೇಕ ಆಸ್ಪತ್ರೆಗಳ ಮೂತ್ರಪಿಂಡಗಳ ದೋಷದಿಂದಾಗುವಂಥಾದ್ದಾಗಿವೆ ಮತ್ತು ಅಂಥ ಯಾವತ್ತು ಸಂಗತಿಗಳಲ್ಲಿ ಈ ಔಷಧದಿಂದ ತಕ್ಷಣವೇ ಮತ್ತು ನಿಶ್ಚಯವಾಗಿ ಗುಣಾಂಶ ಸಿಕ್ಕುತ್ತದೆ.

ಅವು ಮೂತ್ರಕೋಶದ ಬಗ್ಗೆನೇ ಮುಖ್ಯವಾಗಿ ಉದ್ದೇಶಿಸಲ್ಪಟ್ಟ ಔಷಧವಾಗಿ ಮೂತ್ರಸಂಬಂಧವಾದ ವಿಷಪದಾರ್ಥಗಳನ್ನು ಬಯಲಿಗೆ ಸುಲಭದಲ್ಲಿ ಸಹಕಾರಿಯಾಗಿದೆ. ಈ ರೀತಿ ನಿದ್ರೆಗೇಡು, ಬೆನ್ನುನೋವು ವಾತರೋಗ, ಮೂತ್ರಬಾಧೆ ಇವುಗಳಿಗೆ ಹೇತುವಾಗಿರುವ ರಕ್ತದಲ್ಲಿನ ವಿಷವನ್ನು ಶುದ್ಧಿ ಮಾಡುತ್ತದೆ.

ಎಲ್ಲಾ ಔಷಧ ವರ್ತಕರಿಂದ ಮಾರಲ್ಪಡುತ್ತದೆ ಶೀಸೆ ಒಂದಕ್ಕೆ ರೂ. ೨, ಅಥವಾ ೬ ಶೀಸೆಗಳಿಗೆ ರೂ. ೧೦-೧೦, ಅಥವಾ ಮುಂಬಯಿಯಲ್ಲಿರುವ ಡೋಸ್ಸರ ಔಷಧಗಳ ಕಾರ್ಯಾಲಯದಿಂದ ಕೊಳ್ಳಬಹುದು. ಪಿ. ಬಿ. ಬಾಕ್ಸ್. ನಂ. ೨೦, ಮುಂಬಯಿ.

ವೃತ್ತಾಂತ ಪತ್ರಿಕೆ.

ಸ ೧೯೦೭ ನೇ ಇಸವಿ ನವಂಬರ್ ತಾ॥ ೭ ನೇ ಗುರುವಾರ.

ರಾಜದ್ರೋಹಕರವಾದ ಮೀಟಿಂಗುಗಳ ಕಾನೂನು.

ಈ ರಾಷ್ಟ್ರದಲ್ಲಿ ರಾಜದ್ರೋಹಕರವಾದ ಮೀಟಿಂಗುಗಳು ನಡೆಯದಂತೆ ನಿರೋಧಿಸುವುದಕ್ಕಾಗಿ ಇಂಡಿಯಾ ಗವರ್ನಮೆಂಟಿನವರು ಕಳೆದ ವಾರ ಒಂದು ಹೊಸ ಕಾನೂನನ್ನು ಪ್ಯಾಸ್‌ಮಾಡಿರುತ್ತಾರೆ. ಈ ಕಾನೂನನ್ನು ಗವರ್ನಮೆಂಟಿನವರು ಈ ರಾಷ್ಟ್ರದ ಯಾವ ಭಾಗದಲ್ಲಿ ಬೇಕಾದರೂ ಜಾರಿಗೆ ತರಬಹುದಾಗಿದೆ. ಅದು ಜಾರಿಯಲ್ಲಿರುವ ಸ್ಥಳಗಳಲ್ಲಿ ಮೊದಲು ಡಿಸ್ಟ್ರಿಕ್ಟ್ ಸೂಪರಿಂಟೆಂಡೆಂಟರ ಅಥವಾ ಪೋಲೀಸ್ ಕಮಿಷನರವರ ಅಪ್ಪಣೆಯನ್ನು ಪಡೆದುಕೊಳ್ಳದೆ ಯಾರೇ ಆಗಲಿ ಬಹಿರಂಗವಾದ ಅಥವಾ ಅಂತರಂಗವಾದ ಸ್ಥಳದಲ್ಲಿ ಮೀಟಿಂಗು(ಸಭೆ)ಗಳನ್ನು ನಡಿಸಬೇಕೂಡದು. ಹಾಗೆ ಅವರ ಅಪ್ಪಣೆ ಪಡೆದು ಮೀಟಿಂಗು ನಡೆಯುವುದಾದರೂ ಅಂಥಾ ಸ್ಥಳದಲ್ಲಿ ಪೋಲೀಸ್ ಅಧಿಕಾರಿಗಳು ಹಾಜರಿದ್ದು ನಡೆಯತಕ್ಕ ವಿದ್ಯಮಾನಗಳನ್ನೆಲ್ಲಾ ಬರೆದುಕೊಂಡು ಹೋಗುತ್ತಾರೆ. ಹಾಗೆ ಮೊದಲೇ ಅಪ್ಪಣೆ ಪಡೆಯದೆ ಮೀಟಿಂಗ್ ನಡಿಸುವಂಥಾ ಜನರಿಗೆ ಸರ್ಕಾರದವರು ಜುಲ್ಮಾನೆಯನ್ನೂ, ಆರು ತಿಂಗಳಿಗೆ ಮೀರದಷ್ಟು ಸಜೆಯನ್ನೂ, ವಿಧಿಸುವರು. ಇಂಥಾ ಕಾನೂನು ಸದ್ಯ ಹಿಂದುಸ್ಥಾನದೊಳಗೆ ಗಲಭೆಯುಂಟಾಗಿರುವ ಕೆಲವು ಡಿಸ್ಟ್ರಿಕ್ಟುಗಳಲ್ಲಿ ಮಾತ್ರವೇ ಜಾರಿಯಲ್ಲಿ ತರಲ್ಪಟ್ಟಿದೆ. ಬಂಗಾಳಾ ಅಧಿಪತ್ಯಕ್ಕೆ ಸೇರಿದ ಬಾಕರ್‌ಗಂಜ್ ಎಂಬೊಂದು ಡಿಸ್ಟ್ರಿಕ್ಟಿನಲ್ಲಿ ಯಾವ ವಿಧವಾದ ಸಭೆಗಳೂ ನಡಿಯಕೂಡದೆಂದು ಗವರ್ನಮೆಂಟಿನವರು ನಿರ್ಧಾರಕವಾಗಿ ಸಾರಿಸಿರುತ್ತಾರೆ.

ಇಂಥಾ ಕಾನೂನು ಆಗಿ ಜಾರಿಗೆ ಬರಬೇಕಾಯಿತಲ್ಲಾ ಎಂದು ಯಾರಿಗೂ ವ್ಯಸನವುಂಟಾಗದಿರಲಾರದು. ಆದರೆ ಒಂದು ವಿಷಯವನ್ನು ಎಲ್ಲರೂ ಚನ್ನಾಗಿ ತಿಳಿದಿರಬೇಕು. ರಾಜ್ಯದಲ್ಲಿ ಸೌಖ್ಯವಿಗೂ ಸಮಾಧಾನಕ್ಕೂ ಪ್ರಜಾಕೋಟಿಗಳಲ್ಲಿ ರಾಜಭಕ್ತಿ ಪ್ರೀತಿ ಮೊದಲಾದವುಗಳಿಗೂ ಏನಾದರೂ ಕುಂದು ಕೊರತೆಗಳುಂಟಾಗದಂತೆ ಪ್ರಭುತ್ವದ ದರ್ಜೆಯನ್ನು ಬಿಗಿಯನ್ನು ಕಾಪಾಡಿಕೊಂಡು ಬರುವುದೇ ಸಾರ್ವಭೌಮ ಸರ್ಕಾರದವರ ಮೊದಲನೆಯ ಕರ್ತವ್ಯವಾಗಿರುತ್ತದೆ. ಮೇಲ್ಕಂಡ ಕಾನೂನನ್ನು ಪ್ಯಾಸ್ ಮಾಡುವಾಗ್ಗೆ ಮಂತ್ರಾಲೋಚನಾ ಸಭೆಯಲ್ಲಿ ವೈಸ್‌ರಾಯಿಯವರು—ಪ್ರಜೆಗಳಲ್ಲಿ ಅಳತೆಕ್ಕವರ ಮೇಲೆ ದ್ವೇಷವನ್ನು ರಾಜದ್ರೋಹ ಚಿಂತನೆಯನ್ನು ಹುಟ್ಟಿಸಿ ಹಬ್ಬಿಸುವುದಕ್ಕೆ ಗವರ್ನಮೆಂಟಿನವರು ಎಷ್ಟುಮಾತ್ರಕೂ ಅವಕಾಶ ಕೊಡಲಾರರು. ಅದರೆ ಹಿಂದುಸ್ಥಾನದ ಪ್ರಜೆಗಳಿಗೆ ಹೆಚ್ಚು ಹೆಚ್ಚಾದ ಸ್ವರಾಜ್ಯಾಧಿಕಾರ ಸ್ವಾತಂತ್ರ್ಯಾದಿಗಳನ್ನು ಕೊಟ್ಟು, ಈ ರಾಷ್ಟ್ರವನ್ನು ಅಭಿವೃದ್ಧಿಗೆ ತಲುಪಿಸಬೇಕೆಂದು ಗವರ್ನಮೆಂಟಿನವರು ಕಾತುರರಾಗಿರುತ್ತಾರೆಂದು ಸಭೆಯಲ್ಲಿ ತಿಳಿಸಿದರು. ಈ ರಾಷ್ಟ್ರಕ್ಕೆ ಒಳ್ಳೆಯದು ಮಾಡಬೇಕೆಂಬುವುದೇ ಈಗಿನ ಸರ್ಕಾರದವರ ಮುಖ್ಯ ಅಭಿಮತವಾಗಿರುತ್ತದೆ. ಉಪಕಾರೋಪಕೃತಿ ಸಾರ್ವಭೌಮರವರ ಒಳ್ಳೆಗೆ ಸೇರಿದ ಹಿಂದುಸ್ಥಾನದ ಪ್ರಜೆಗಳೂ ಮುಂದೊಪ್ಪಿ ಯಾರೂ ಪರಸ್ಪರ ಪ್ರೀತಿ ಗೌರವಪೂರ್ವಕವಾಗಿ ನಡೆದುಕೊಂಡು ಕಾರ್ಯಗಳನ್ನು ನಡಿಸುತ್ತಾ ಬಂದದ್ದಲ್ಲಿ ಈ ರಾಷ್ಟ್ರದ ಅಭಿವೃದ್ಧಿಯೂ ಸ್ವರಾಜ್ಯಾಕಾಂಕ್ಷೆಯೂ ಕಾಲಕ್ರಮದಲ್ಲಿ ಕೈಗೂಡುವವೆಂಬ ಸತ್ಯವಂತರೂ ಆಲೋಚನಾಪರರೂ ಆದ ಮಹಾಶಯರೆಲ್ಲಾ ಗ್ರಹಿಸದಿರಲಾರರೆಂದು ನಿರೀಕ್ಷಿಸುತ್ತೇವೆ.

ಸತ್ಯವನ್ನಾಡುವುದೇ ದೇಶಾಭ್ಯುದಯಕ್ಕೆ ಮುಖ್ಯ ಕಾರಣವು.

ಹಿಂದೂ ದೇಶವನ್ನು ಅಭಿವೃದ್ಧಿಸ್ಥಿತಿಗೆ ತರಬೇಕೆಂದು ಅನೇಕರು ಯೋಚಿಸುತ್ತಿರುವರೆಂದು ನಾವೆಲ್ಲರೂ ತಿಳಿದಿರಬಹುದು. ಕೆಲವರು ಬ್ರಿಟಿಷ್ ಚಕ್ರಾಧಿಪತ್ಯದ ಆಡಳಿತಗಳನ್ನು ನೋಡಿಕೊಳ್ಳುವ ಪಾರ್ಲಿಮೆಂಟ್ ಎಂಬ ಪ್ರತಿನಿಧಿಗಳಿಂದ ಕೂಡಿದ ಸಭೆಯಂತೆ ಈ ದೇಶದಲ್ಲಿ ಒಂದು ಪ್ರಜಾಪ್ರತಿನಿಧಿ ಸಭೆಯು ಏರ್ಪಾಡಾಗಿ ಈ ದೇಶದ ರಾಜ್ಯಾಡಳಿತಗಳನ್ನು ಇಲ್ಲಿನವರೇ ನಡಿಸುವುದು ಸರ್ವೋತ್ತಮವೆಂದು ಯೋಚಿಸುವರು. ಮತ್ತೆ ಕೆಲವರು ಪರದೇಶಗಳಿಂದ ಇಲ್ಲಿಗೆ ಬರುವ ಸಾಮಾನುಗಳನ್ನು ಉಪಯೋಗಿಸದೆಯೂ, ಸ್ವದೇಶದಲ್ಲೇ ತಯಾರಾಗುವ ವಸ್ತುಗಳನ್ನೇ ಉಪಯೋಗಿಸುತ್ತಲೂ ಬಂದರೆ ಹಿಂದೂ ದೇಶವು ಉನ್ನತ ಪದವಿಗೆ ಬರುವುದೆಂದು ಅಭಿಪ್ರಾಯಪಡುತ್ತಾರೆ. ಆದರೆ ಇವೆಲ್ಲವುಗಳನ್ನು ಯೋಚಿಸುವುದಕ್ಕೆ ಮೊದಲು ಜನರು ಸುಶೀಲರಾಗಿಯೂ, ಸೌಜನ್ಯಶಾಲಿಗಳಾಗಿಯೂ, ಸತ್ಯವನ್ನಾಡುವವರಾಗಿಯೂ, ಎಲ್ಲರಲ್ಲಿಯೂ ಭೇದವಿಲ್ಲದೆ ಸಹೋದರ ಭಾವಪೂರ್ವಕವಾಗಿಯೂ ಇರುತ್ತಾರೆಯೋ ಅಥವಾ ಇಲ್ಲವೋ ಎಂಬೀ ಪ್ರಾಮುಖ್ಯವಾದ ಸಂಗತಿಗಳನ್ನು ನಾವು ಯೋಚಿಸಬೇಕಾಗಿದೆ. ದೇಶಾಭ್ಯುದಯಕ್ಕೆ ಸುಗುಣಗಳೇ ಮೂಲಾಧಾರವಾಗಿರಬೇಕು.

ಸತ್ಯವನ್ನಾಡುವುದರ ವಿಷಯ ಇಲ್ಲಿ ಯೋಚಿಸೋಣ. ದೇಶೀಯರಿಂದ ಕೂಡಿದ ನ್ಯಾಯವಿಧಾಯಕ ಸಭೆಯಲ್ಲಿ ಈ ಹಿಂದೂ ದೇಶದ ಸರ್ಕಾರವನ್ನು ನಡಿಸಬೇಕೆಂದು ಜನರು ಅಪೇಕ್ಷಿಸುತ್ತಾರಲ್ಲವೇ? ಆದರೆ ಅಂಥಾ ಸಭೆಯ ಪ್ರತಿನಿಧಿಗಳಲ್ಲಿಯೂ ಅವರನ್ನು ಚುನಾಯಿಸತಕ್ಕ ಜನಗಳಲ್ಲಿಯೂ ಸತ್ಯತೆಯು ಇಲ್ಲದೆಹೋದರೆ ಆ ಪ್ರತಿನಿಧಿಸಭೆಯಿಂದ ದೇಶಕ್ಕೆ ಹಾನಿಯೇ ಹೊರತು ಮತ್ತಾವ ಪ್ರಯೋಜನವೂ ಆಗಲಾರದು. ಇದರಿಂದ ದೇಶವು ಕ್ಷಯಿಸಿ ಹೋಗುವುದು. ಹಿಂದೂ ಶಾಸ್ತ್ರಗಳು ಕೆಲವು ಸಂದರ್ಭಗಳಲ್ಲಿ ಅಬದ್ಧವನ್ನು ನುಡಿಯಬಹುದೆಂದು ಜನರಿಗೆ ಬೋಧಿಸುತ್ತವೆ. ಹಿಂದೂ ದೇಶದ ಚರಿತ್ರೆಯನ್ನು ನಾವು ಓದುವಲ್ಲಿ ಅಲ್ಲಿಯೂ ಕೂಡ ಅರಸರು ಮತ್ತು ರಾಯಭಾರಿಗಳು ಒಬ್ಬರ ಸಂಗಡಲೊಬ್ಬರು ಸುಳ್ಳುಗಳನ್ನು ಹೇಳಿಕೊಂಡು ತಮ್ಮ ತಮ್ಮ ಕಾರ್ಯಗಳನ್ನು ಸಾಧಿಸುತ್ತಿದ್ದರು. ಹೀಗೆ ಮಾಡಿದ್ದರಿಂದಾದ ಪರಿಣಾಮವೇನು ಜನರು ಒಬ್ಬರನ್ನೊಬ್ಬರು ನಂಬದೇ ಹೋದರು. ಪ್ರತಿಯೊಬ್ಬನ ವಿಷಯದಲ್ಲೂ ಜನರು ಸಂಶಯಪಡುವುದಕ್ಕೆ ತೊಡಗಿದರು. ಇಂಥಾದುಗುಣದಿಂದ ಎಲ್ಲರೂ ಒಟ್ಟಾಗಿ ಸೇರಿ ಕಾರ್ಯ ಸಾಧನೆ ಮಾಡುವುದು ಅಸಾಧ್ಯವಾಯಿತು.

ದೇಶದ ಸ್ಥಿತಿಯು ಹೀಗಿರುವಲ್ಲಿ ಅದನ್ನು ಅಭಿವೃದ್ಧಿಸ್ಥಿತಿಗೆ ತರಬೇಕೆಂದಿರುವವರು ಮಾಡತಕ್ಕ ಕರ್ತವ್ಯವೇನು? ಈ ಸಂಗತಿಯನ್ನು ಎಲ್ಲರೂ ಯೋಚಿಸತಕ್ಕದ್ದಾಗಿರುತ್ತದೆ. ಮೊದಲನೇದಾಗಿ ನಾವೆಲ್ಲರೂ ಸತ್ಯವನ್ನಾಡುವುದಕ್ಕೆ ದೃಢ ಮಾಡಿಕೊಳ್ಳಬೇಕು. ಸತ್ಯವನ್ನಾಡುವದೆಂದರೆ, ಅದರಿಂದ ನಮಗೆ ನೋಉಂಟಾದರೂ ಸರಿ, ಕೇಡುಂಟಾದರೂ ಸರಿ, ಯಾವದು ಸಂಭವಿಸಿದರೂ ಸರಿ, ನಾವು ಸತ್ಯವಂತರಾಗಿಯೇ ಇರಬೇಕೆಂಬುದು ವಿವಿಧ ಕಂಪನಿಗಳನ್ನು ಮಾಡಿಕೊಂಡು ಸ್ವದೇಶದ ಕೈಗಾರಿಕೆಗಳನ್ನು ಅಭಿವೃದ್ಧಿಸ್ಥಿತಿಗೆ ತರಬೇಕೆಂಬುವವರು ಸತ್ಯವಂತರಾಗಿಲ್ಲದೆ ಹೋದರೆ ಅವರಿಗೆ ಜನರು ಯಾವರೀತಿಯಲ್ಲಿ ಬಂಡವಾಳವನ್ನು ಕಳುಹಿಸಿ ಕೊಡುವರು? ಜನರು ಸ್ವದೇಶೀಯರನ್ನು ನಂಬದೇ ಇರುವುದರಿಂದಲೇ ತಮ್ಮ ಹಣಕಾಸುಗಳನ್ನು ವಿದೇಶೀಯರಿಂದ ಸ್ಥಾಪಿಸಲ್ಪಟ್ಟ ಬ್ಯಾಂಕುಗಳಲ್ಲಿ ಧೈರ್ಯದಿಂದ ಹಾಕುವುದಲ್ಲದೆ ಅವರು ಸ್ಥಾಪಿಸುವ ವಿವಿಧ ಕಂಪನಿಗಳಲ್ಲಿ ಷೇರುಗಳನ್ನು ತೆಗೆದುಕೊಳ್ಳುತ್ತಾರೆ. ಇದನ್ನೆಲ್ಲಾ ನಾವು ಯೋಚಿಸಿದರೆ, ಸ್ವದೇಶೀಯರು ಸತ್ಯವನ್ನಾಡುವವರಾಗಿರಬೇಕೆಂಬುದು ಪರಿಷ್ಕಾರವಾಗಿ ಕಂಡು ಬರುತ್ತದೆ. ಹಿಂದೂ ದೇಶದ ಪ್ರಸಿದ್ಧ ವೈಸರಾಯರಾಗಿದ್ದ ಲಾರ್ಡ್ ಕರ್ಜನ್ ಪ್ರಭುಗಳು ಇದನ್ನು ಚನ್ನಾಗಿ ತಿಳಿದಿದ್ದರಿಂದ ಅವರು ದೇಶೀಯ ವಿದ್ಯಾರ್ಥಿಗಳಿಗೆ ಸತ್ಯವನ್ನಾಡುವುದರ ವಿಷಯ ಬಹು ಉತ್ಕೃಷ್ಟವಾದ ಬುದ್ಧಿವಾದಗಳನ್ನು ಹೇಳಿದರು. ಎರಡನೇದಾಗಿ ನಾವು ಯೋಚಿಸತಕ್ಕದ್ದೇನಂದರೆ ನಮ್ಮ ದೇಶದ ತಂದೆತಾಯಿಗಳು ತಮ್ಮ ಮಕ್ಕಳಿಗೆ ಬಾಲ್ಯದಿಂದಲೂ ಸತ್ಯವನ್ನಾಡುವುದನ್ನು ಕಲಿಸುತ್ತಿರಬೇಕು. ಕೆಲವು ಅವಿವೇಕಿಗಳಾದ ತಂದೆತಾಯಿಗಳು ತಮ್ಮ ಮಕ್ಕಳು ಚಮತ್ಕಾರವಾಗಿ ಒಂದು ಸುಳ್ಳನ್ನು ಹೇಳಿದರೆ ಅಂಥಾ ಕೆಟ್ಟ ಕಾರ್ಯಕ್ಕೆ ನಕ್ಕು ಆ ಮಗುವನ್ನು ಮತ್ತಷ್ಟು ಪ್ರೋತ್ಸಾಹಿಸುವರು. ಇಂಥಾ ಅವಿವೇಕವಾದ ರೀತಿಯಲ್ಲಿ ಬೆಳೆಸಲ್ಪಟ್ಟ ಮಗುವು ದೊಡ್ಡವನಾದಾಗ ಸುಳ್ಳುಗಾರನೂ ಮೋಸಗಾರನೂ ಆದರೆ ಅದೇನೂ ಆಶ್ಚರ್ಯವಲ್ಲ. ಒಬ್ಬ ತಂದೆಗೆ ಒಬ್ಬ ಮಗನಿದ್ದನು. ಆ ಮಗನು ಕತ್ತಿಗೆ ಆಕಸ್ಮಾತ್ತಾಗಿ ಮನೆಯಲ್ಲಿದ್ದ ಕೆಲವು ಬೆಲೆಯುಳ್ಳ ಗಾಜಿನ ಸಾಮಾನುಗಳನ್ನು ಒಡೆದು ಹಾಕಿದನು. ತಾನು ಮಾಡಿದ್ದನ್ನು ತಂದೆಗೆ ತಿಳಿಸುವುದಕ್ಕೆ ಆತನಿಗೆ ಬಹಳ ಭಯವಾಯಿತು. ಆದರೂ ಸತ್ಯವನ್ನೇ ಹೇಳಿದನು. ತಂದೆಯು ಮಗನನ್ನು ನೋಡಿ ಮಗನೆ ನೀನು ಈ ಮನೆಯನ್ನೇ ಸುಟ್ಟು ಹಾಕಿದ್ದರೂ ನಾನು ಚಿಂತಿಸುತ್ತಿರಲಿಲ್ಲ. ಆದರೆ ನೀನು ಒಂದು ಸಣ್ಣ ಸುಳ್ಳನ್ನು ಆಡಿರುವೆಯಾದರೆ ನಾನು ಬಹಳವಾಗಿ ಚಿಂತಿಸುತ್ತಿದ್ದೆನು ಎಂಬದಾಗಿ ತಿಳಿಸಿದನು. ನಾವು ಮೇಲ್ಕಂಡ ಪದ್ಧತಿಗಳನ್ನು ಸಂಪೂರ್ಣವಾಗಿ ಈಗ ಮಾಡ ಸತ್ಯವನ್ನೇ ಆಡುವುದಕ್ಕೆ ಪ್ರಯತ್ನಿಸಿಕೊಳ್ಳಬೇಕು.

ಒಳದೇಶದ ವೃತ್ತಾಂತಗಳು.

ಕಳೆದ ಭಾನುವಾರ ಬೆಳಿಗ್ಗೆ ದಿವಾನರವರು ಪತ್ನಿ ಪರಿವಾರ ಸಹಿತ ಮೋಟಾರ್ ಗಾಡಿಯಲ್ಲಿ ಬೆಂಗಳೂರಿಗೆ ಪ್ರಯಾಣಮಾಡಿದರು.

***

ನಮ್ಮಲ್ಲಿಗೆ ಬಂದಿರುವ ಚಾಪ್ಟರಗಳಿಗೆ ಈ ದಿನದ ಪತ್ರಿಕೆಯಲ್ಲಿ ಅವಕಾಶ ಸಿಕ್ಕದೆ ಹೋದುದಕ್ಕೆ ವಿಷಾದಿಸುತ್ತೇವೆ.

***

[illegible] ಪ್ಲೇಗು ಉಪದ್ರವು ನಾಶ್ಟ ಮುಗ್ಗಿ ಸುಮಾರು [illegible] ಜನಗಳನ್ನು ಅಪಹರಿಸಿದನೆಂದು ತಿಳಿಯುವುದು.

***

ಕಳೆದ ವಾರ [illegible] ಬಾಪುರಾ ಸವೇರಿಗಾಗಿ ಕನ್ನಂಬಾಡಿ ಅಸ್ಟ್ರೇಲಿಯಾ ಕಡೆಯ ಕುದುರೆಗಳನ್ನು ಮದರಾಸಿನಲ್ಲಿ ಕೊಂಡುಕೊಂಡಿರುತ್ತಾರೆ.

***

ಕಳೆದ ವಾರ ಅರಮನೆ ಗಜಶಾಲೆಗೆ ಸೇರಿದ ಒಂದಾನೆಯು ಪ್ಲೇಗ್ ಉಪದ್ರವದಲ್ಲಿ ನಾಲ್ಕೆ ಮೃತಪಟ್ಟಿತೆಂತಲೂ, ಅದರ ಕಿವಿಯ ಬಳಿ ಒಂದು ಗಡ್ಡೆಯಾಗಿತ್ತೆಂತಲೂ ಕೇಳುತ್ತೇವೆ.

***

ಕೋಲಾರ್ ಚಿನ್ನದ ಗಣಿಗಳ ಪೈಕಿ ಒಂದು ಗ್ರಾಮದಲ್ಲಿ ಒಬ್ಬನಿಗೆ ಗುಪ್ತಧನವು ಒಂದು ಮಡಕೆಯ ತುಂಬ ಇದ್ದದ್ದು ಸಿಕ್ಕಿ ಈಗ ಪೋಲೀಸಿನವರ ವಶಕ್ಕೆ ಬಂದಿರುವಂತೆ ಪ್ರಕಟವಾಗಿದೆ.

ರಾಜಧಾನಿಯ ಭಕ್ಷಿನರಸಪ್ಪನವರ ಸತ್ರದ ಮಳಿಗೆಗಳ ಪೈಕಿ ಕೃಷ್ಣೋಜಿರಾಯರ ಜವಳಿ ಅಂಗಡಿಗೆ ಕಳ್ಳರು ಬಿದ್ದು ಸುಮಾರು ೩—೪ ಸಾವಿರ ರೂಪಾಯಿನ ಸನಗಾಗಳನ್ನು ಅಪಹರಿಸಿದರೆಂದು ಕೇಳುತ್ತೇವೆ.

***

ಶ್ರೀಮಾನ್ ಯುವರಾಜರವರು ಈ ದಿನ ಪರಿವಾರ ಸಹಿತ ಷಿಕಾರಿ ಮಾಡುವ ಉದ್ದೇಶ್ಯ ರಾಜಧಾನಿಯಿಂದ ಕಾಕನಕೋಟೆ ಕಡೆ ದಯಮಾಡಿ, ಸುಮಾರು ೧೮ ನೆ ತಾರೀಖಿಗೆ ವಾಪಸು ಬರುವವರಾಗಿದ್ದಾರೆ.

***

ರಾಜಧಾನಿಯಲ್ಲಿ ಮೊನ್ನೆ ಮಂಗಳವಾರ ಮಧ್ಯಾಹ್ನ ಒಂದು ಜಡಮಳೆ ಸುರಿಯಿತು. ಪ್ಲೇಗು ಉಪದ್ರವು ಇನ್ನೂ ಶಮನವಾಗಲಿಲ್ಲ. ದಿನವಹಿ ಮರಣ ಸಂಖ್ಯೆಯು ಹೆಚ್ಚಾಗಿಯೇ ಇದೆ. ಧಾರಣೆವಾಸಿಗಳು ಇಳಿಯಲಿಲ್ಲ.

***

ಕಳೆದ ಮಂಗಳವಾರ ಸಾಯಂಕಾಲ ದೀಪಾವಳಿ ಹಬ್ಬದ ಪ್ರಯುಕ್ತ ರಾಜಧಾನಿಯಲ್ಲಿರುವ ಉತ್ತರ ದೇಶದ ಮಾರ್ವಾಡಿಗಳೂ ವರ್ತಕರೂ ಗೋಸಾಯಿಗಳೂ ತಮ್ಮ ತಮ್ಮ ಮನೆ ಅಂಗಡಿಗಳನ್ನು ಅಲಂಕಾರ ಮಾಡಿ ಧನಲಕ್ಷ್ಮಿ ಪೂಜೆಯನ್ನು ಮಾಡಿದರು.

***

ಕಳೆದ ವಾರ ರಾಜಧಾನಿಯಲ್ಲಿ ವ್ಯವಸಾಯ ಮತ್ತು ಕೈಗಾರಿಕೆಗಳ ಪ್ರೋತ್ಸಾಹಕ್ಕಾಗಿ ಒಂದು ಪರಸ್ಪರ ಸಹಾಯಕ ಸಂಘವು ಸ್ಥಾಪನೆಯಾಯಿತು. ರೆವಿನ್ಯೂ ಕಮಿಷನರ್ ಮೊದಲಾದ ಅಧಿಕಾರಿಗಳೂ ಪ್ರಜೆಗಳ ಮುಖಂಡರೂ ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರುಗಳೂ ಸೇರಿ ಆ ಸಂಘವನ್ನು ಏರ್ಪಡಿಸಿರುತ್ತಾರೆ.

***

ವೀರರಾಜೇಂದ್ರ ಪೇಟೆಯಲ್ಲಿ ಏಳು ಆನೆಗಳನ್ನು ಕಳೆದ ವಾರ ಹರಾಜು ಹಾಕಿದ್ದರಲ್ಲಿ ೯೦೦೦ ರೂಪಾಯಿಗೆ ಅವು ವಿಕ್ರಯವಾದವೆಂದು ತಿಳಿಯುವುದು. ಇತ್ತಲಾಗೆ ಅಲ್ಲಿನ ಮೆ॥ ಮುದ್ದಯ್ಯನವರ ಮನೆಗೆ ತಾ॥ ೨೮ ರಲ್ಲಿ ಕಳ್ಳರು ಬಿದ್ದು, ಮನೆಯವರನ್ನು ಚನ್ನಾಗಿ ಹೊಡೆದು, ಆಸ್ತಿಯನ್ನು ಎತ್ತಿಕೊಂಡು ಹೋದರೆಂದು ಕೇಳುತ್ತೇವೆ.

***

ಪೋಲೀಸ್ ಇನ್ಸ್‌ಪೆಕ್ಟರ್ ಶ್ರೀನಿವಾಸ ಅಯ್ಯಂಗಾರವರೂ ಒಬ್ಬ ಪೋಲೀಸಿನವನೂ ೨—೩ ಮಂದಿ ಹುಡುಗರನ್ನು ಹಿಂಸೆಮಾಡಿದರೆಂದು ಮೊಕದ್ದಮೆ ಆಗಿ ಇಲ್ಲಿನ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ ಅವರಿಗೆ ಬಿಡುಗಡೆ ಆಗಿತ್ತು. ಚೀಫ್ ಕೋರ್ಟಿನವರು ಈ ಮೊಕದ್ದಮೆಯ ಕಟ್ಟನ್ನು ತರಿಸಿ ನೋಡಿ ಅವರಿಬ್ಬರಿಗೂ ನೋಟೀಸ್ ಕೊಟ್ಟಿರುತ್ತಾರೆಂದು ಪ್ರಕಟವಾಗಿದೆ.

***

ನಮ್ಮ ಸಂಸ್ಥಾನದ ಬ್ರಿಟಿಷ್ ರೆಸಿಡೆಂಟರಾದ ಮಿ. ಎಸ್ ಎಂ ಫ್ರೇಸರ್‌ಯವರು ಪತ್ನಿ ಸಹಿತ ಈ ತಿಂಗಳು ೨೫ನೆ ತಾರೀಖಿಗೆ ಸೀಮೆಯಿಂದ ಬಂದು ಕೆಲಸದ ಭಾರವನ್ನು ವಹಿಸಿಕೊಳ್ಳುತ್ತಾರೆಂದು ಕೇಳುತ್ತೇವೆ. ಈಗ ಆಕ್ಟಿಂಗ್ ರೆಸಿಡೆಂಟಾಗಿರುವ ಮೆ॥ ವಿಲ್ಲಿಯಂಸ್‌ಯವರು ವೈಸ್‌ರಾಯಿ ಪ್ರಭುಗಳನ್ನು ಕಾಣುವ ಉದ್ದೇಶ್ಯ ನಾಡಿದ್ದು ಬೆಂಗಳೂರಿಂದ ಹೈದರಾಬಾದಿಗೆ ಪ್ರಯಾಣಮಾಡಿ ೧೩ನೆ ತಾ॥ ವರೆಗೆ ಅಲ್ಲೇ ಇದ್ದು ಬರುವವರಾಗಿದ್ದಾರೆ.

***

ಪೋಲೀಸ್ ಫ್ರೆ॥ ಅ॥ ಸೂಪರಿಂಟೆಂಡೆಂಟ್ ಮ್ಯಾ॥ ಟಿಪ್ಪೂ ಸುಲ್ತಾನ್ ಅಲ್ಲಿ ಖಾನ್‌ರವರಿಗೆ ಒಂದು ತಿಂಗಳ ರಜವು, ಮೈಸೂರು ಸಿಟಿ ಮ್ಯಾಜಿಸ್ಟ್ರೇಟ್ ಮಿ॥ ಎಂ. ವೆಂಕಟರಾಮಯ್ಯನವರಿಗೆ ೧೯೦೮ ನೆ ಇಸವಿ ಮೇ ೧ ನೆ ತಾರೀಖು ವರೆಗೆ ರಜವು ಸ್ಯಾಂಕ್ಷನ್ ಆಗಿದೆ ಮತ್ತು ತುಂಕೂರು ಪೋಲೀಸ್ ಹೆಡ್ ಕ್ವಾರ್ಟರ್ ಇನ್ಸ್‌ಪೆಕ್ಟರ್ ಮೆ॥ ಕಲ್ಯಾಣಸುಂದರ ಮೊದಲಿಯಾರ್‌ನ್ನು ತಾತ್ಕಾಲಿಕ ಪೋಲೀಸ್ ಸೂಪರಿಂಟೆಂಡೆಂಟರಾಗಿ ಕೆಲಸಮಾಡುವಂತೆ ಏರ್ಪಡಿಸಿದೆ.

***

ವಿಲಾಯತಿಯ ಲಂಡನ್ ಕಿಂಡರ್‌ಗಾರ್ಟನ್ ವಿದ್ಯೆಯನ್ನು ನಮ್ಮ ದೇಶದ ಮಕ್ಕಳಿಗೆ ಕಲಿಸುವುದಕ್ಕಾಗಿ ಕರಸಲ್ಪಟ್ಟಿರುವ ಮಿಸ್ ಲ್ಯಾಟರ್ ಎಂಬಾಕೆಯು ಈ ತಿಂಗಳ ತಾ॥ ೧೧ನೆ ಮಂಗಳವಾರದಿಂದ ರಾಜಧಾನಿಯಲ್ಲಿ ಬೋಧನೆಯನ್ನು ಪ್ರಾರಂಭಿಸುವರು. ಇಂಗ್ಲೀಷಿನಲ್ಲೂ ಕನ್ನಡದಲ್ಲೂ ಉಪನ್ಯಾಸಗಳು ನಡಿಯುವವು. ಮಹಾರಾಣಿ ಹೈಸ್ಕೂಲ್ ಕಾಲೇಜಿನಲ್ಲಿ ಬಹುಶಃ ಬೆಳಿಗ್ಗೆ ೮ ರಿಂದ ೯ ಗಂಟೆಯ ತನಕ ಇಂಗ್ಲೀಷ್ ಭಾಷೆಯಲ್ಲೂ ಗವರ್ನಮೆಂಟ್ ನಾರ್ಮಲ್ ಸ್ಕೂಲಿನಲ್ಲಿ ಮಧ್ಯಾಹ್ನ ೧ ರಿಂದ ೨ ಗಂಟೆ ತನಕ ಕನ್ನಡದಲ್ಲೂ ಉಪಾಧ್ಯಾಯಿನಿಗೂ ಉಪಾಧ್ಯಾಯಿನಿಯರಿಗೂ ಕಿಂಡರ್‌ಗಾರ್ಟನ್ ನ ಕ್ರಮಗಳನ್ನು ಕುರಿತ ಉಪನ್ಯಾಸಗಳನ್ನು ನಡಿಸುವರು.

***

"ನಿರುಪಮಾ" ಎಂಬ ಗ್ರಂಥದಲ್ಲಿ ನ ಮುಖ್ಯ ಎಷ್ಟು ಸಾಹಸಿಯಾಗಿದ್ದರೂ ದುರ್ಮಾರ್ಗಪ್ರವರ್ತಕರಾದರೆ ಅವರಿಗೆ ಕಡೆಯಲ್ಲಿ ವಿಪತ್ಪರಂಪರೆಗಳೇ ಸಂಭವಿಸುವವೆಂಬುವ ವಿಷಯ ತು ಹೇಳಲ್ಪಟ್ಟಿದೆ ಮತ್ತು ವಿದ್ಯಾವತಿಯಾದ ಸ್ತ್ರೀಯರಿಗೂ ಅವಿದ್ಯಾವತಿಯರಾದ ಸ್ತ್ರೀಯರಿಗೂ ಇರುವ ತಾರತಮ್ಯವು, ವೇಶ್ಯಾ ಗೃಹಗಳಲ್ಲಿ ಸಂಭವಿಸಬಹುದಾದ ಅನಾಗತಗಳೂ, ಮತ್ತು ವೇಶ್ಯೆಯರ ಸ್ವಭಾವವೂ, ಮದ್ಯಪಾಯಿಗಳ ಅವ್ಯವಸ್ಥೆಯೂ ಚಮತ್ಕಾರವಾದ ಕಥಾಸಂವಿಧಾನದಿಂದ ಓದುವುದಕ್ಕೂ ಅಭಿನಯಿಸುವುದಕ್ಕೂ ಅನುಕೂಲವಾಗಿರುವಂತೆ ಹೊಸಕನ್ನಡದಲ್ಲಿಯೇ ಬರೆಯಲ್ಪಟ್ಟಿದೆ. ಪ್ರಿಯದರ್ಶಿಕಾ, ಕೃಷ್ಣವಿಜಯಾ, ಕನಕಲತಾ, ಮುಂತಾದ ಇತರ ಗ್ರಂಥಗಳನ್ನು ಪರೀಲಿಸಿರುವ ವಾಚಕಮಹಾಶಯರಿಗೆ ಈ ಕವಿಯ ಪರಿಚಯವನ್ನು ಹೊಸದಾಗಿ ಹೇಳಬೇಕಾಗಿಲ್ಲ. ಇವುಗಳಲ್ಲಿ 'ಕನಕಲತಾಪರಿಣಯ' ವೆಂಬುದನ್ನು ಸಕಲಕಲಾ ಶಾಲೆಯವರು ಎಫ್ ಎ ಪರೀಕ್ಷೆಯ ಪರೀಕ್ಷಾಗ್ರಂಥವನ್ನಾಗಿ ಪರಿಗ್ರಹಿಸಿರುವುದು ಗ್ರಂಥದ ಉತ್ಕೃಷ್ಟತೆಯನ್ನು ವ್ಯಕ್ತಪಡಿಸುವುದು. ಇದರ ಬೆಲೆ ಪತ್ತೆ ಕರಾಣೆ ಮೈಸೂರು ಶ್ರೀಕೃಷ್ಣಾದವೆ [illegible] ಅರಮನೆಯ ವಿದ್ವಾಂಸರು ಶ್ರೀ[illegible] ಗ್ರಂಥಕರ್ತರು.

ಕೈಗಾರಿಕೆಯನ್ನು ಅಭಿವೃದ್ಧಿ ಮಾಡುವುದು.

ಬೆಂಗಳೂರಿನಲ್ಲಿ ಮಾಡಿರುವ ಏರ್ಪಾಡು:

ಬೆಂಗಳೂರು ಶಹರಿನಲ್ಲಿ "ದಿ ಕರ್ನಾಟಕ್ ವೀವಿಂಗ್ ಎಸ್ಟಾಬ್ಲಿಷ್ಮೆಂಟ್, ಲಿಮಿಟೆಡ್" ಎಂಬ ಒಂದು ಹೊಸ ನೇಗೆ ಕಾರ್ಖಾನೆಯು ಏರ್ಪಟ್ಟಿದೆ. ಇದಕ್ಕೆ ಸ್ಥಳೀಯ ಭಾರಿ ಬಂಡವಾಳಸ್ಥರು ಮತ್ತು ಇತರರು ಸೇರಿರುತ್ತಾರೆ. ಕಂಪೆನಿಯವರ ಮುಖ್ಯ ಉದ್ದೇಶಗಳು ಯಾವುವೆಂದರೆ—

'ಇಂಡಿಯಾ ದೇಶದಲ್ಲಿ ತಮ್ಮ ದೇಶದಲ್ಲೇ ತಯಾರಾಗುವ ಬಟ್ಟೆಬರೆಗಳನ್ನು ಉಪಯೋಗಿಸಲು ಅಭಿರುಚಿಯನ್ನು ಹುಟ್ಟಿಸಿ, ಇವರಿಗೆ ಬೇಕಾಗುವಷ್ಟು ಉಡಿಗೆತೊಡಿಗೆಗಳನ್ನು ಒದಗಿಸಿಕೊಡಲು ಬಡಬಗ್ಗರೂ ಮತ್ತು ಐಶ್ವರ್ಯವಂತರೂ ಸಹಾ ತೆಗೆದುಕೊಳ್ಳಲು ಅನುಕೂಲಿಸುವಂತೆ ಕಮ್ಮಿ ಖರೀದಿ ಆಗುವ ಮತ್ತು ಬಾಳಿಕೆಯಾಗಿ ಬಿಳರಿ ಆಗತಕ್ಕ ರಕಂ ಬಟ್ಟೆಗಳನ್ನು ತಯಾರುಮಾಡುವುದು. ಅನುಕೂಲವಾದ ಸ್ಥಳಗಳಲ್ಲಿ ಕೈಮಗ್ಗಗಳ ಉಪಯೋಗದಿಂದ ಬಟ್ಟೆ ತಯಾರಾಗುವ ಕಾರ್ಖಾನೆಗಳನ್ನು ಸ್ಥಾಪಿಸಿ, ಪ್ರತಿ ಒಬ್ಬರಿಗೂ ಅವಶ್ಯಕವಾಗಿ ಬೇಕಾಗುವ ವಸ್ತ್ರಗಳನ್ನು ಕಸಬಾಗಿಯೂ ಮತ್ತು ಬಾಳಿಕೆ ಬರುವಂತೆಯೂ ನೇಯುದು, ಸುಲಭ ಕ್ರಯಕ್ಕೆ ದೊರಕುವಂತೆ ತಯಾರು ಮಾಡುವವರ ಮೂಲಕ ದೇಶೀಯ ಕೈಗಾರಿಕೆಗಳನ್ನು ಉಜ್ಜೀವಿಸುವುದಕ್ಕೆ ಪ್ರೋತ್ಸಾಹಪಡಿಸುವುದು ಮತ್ತು ಕೂಡಿದ ಮಟ್ಟಿಗೂ ದೇಶೀಯ ಕೆಲಸಗಾರರು, ಶಿಲ್ಪಿಗಳು ಮತ್ತು ಇತರ ಕಾರ್ಯಗಾರರಿಗೆ ಪ್ರೋತ್ಸಾಹ ಕೊಟ್ಟು, ನಮ್ಮ ದೇಶದಲ್ಲೇ ಒದಗಬಹುದಾದ ಸಲಕರಣೆಗಳಿಂದ ಜನಗಳಿಗೆ ಬೇಕಾಗುವ ಪದಾರ್ಥಗಳನ್ನು ಕ್ರಮೇಣ ತಯಾರು ಮಾಡುವುದೇ ಮೊದಲಾದ ಉದ್ದೇಶವಾಗಿರುತ್ತದೆ. ಸದ್ಯದಲ್ಲಿ ಇಂಥಾ ಒಂದು ಕಾರ್ಖಾನೆಯು ಬೆಂಗಳೂರಿನಲ್ಲಿ ಹೊಸ ತರಹಾ ೨೦ ಕೈಮಗ್ಗಗಳಿಂದ ಕೆಲಸ ನಡಿಸಲು ಏರ್ಪಡುತ್ತಾಗಿದೆ. ಕೇವಲ ಅನುಭವಶಾಲಿಗಳಾಗಿಯೂ, ಬುದ್ಧಿವಂತರಾಗಿಯೂ ಮತ್ತು ನೇಗೆ ಕೆಲಸದಲ್ಲಿ ಸಮರ್ಥರಾಗಿಯೂ ಇರತಕ್ಕವರನ್ನೇ ಕಂಪೆನಿಯವರು ನೇಮಕಮಾಡಿಕೊಳ್ಳುವರು. ಇಂಥಾ ಸರ್ವೋಪಯುಕ್ತವಾದ ಕೆಲಸದಲ್ಲಿ ಎಲ್ಲರ ಬೆಂಬಲವೂ ಉಂಟಾಗುವುದೆಂದು ಕಂಪೆನಿಯವರು ನಂಬಿರುತ್ತಾರೆ. ಮೂಲಧನವಾದ ೫೦,೦೦೦ ರೂಪಾಯಿಯನ್ನು ಷೇರು ಒಂದಕ್ಕೆ ೨೫ ರೂಪಾಯಿಯಂತೆ ೨,೦೦೦ ಷೇರುಗಳಾಗಿ ವಿಂಗಡಿಸಿರುತ್ತಾರೆ. ಕಂಪೆನಿಯ ಖರ್ಚು ಕಳೆದು ಶೇಕಡ ... ರೂಪಾಯಿ ನಿವ್ವಳ ಆದಾಯ ಬರುವುದಾಗಿ ಕಂಪೆನಿಯವರು ಅಂದಾಜು ಮಾಡಿರುತ್ತಾರೆ.

ಗಿಡಕಾಡಿನಿಂದ ವ್ಯವಸಾಯಕ್ಕೆ ಆಗುವ ಪ್ರಯೋಜನ

ಕೆಳಗಿನದು ಮೈಸೂರು ದಸರಾ ಕೈಗಾರಿಕೆ ಮತ್ತು ವ್ಯವಸಾಯ ಪ್ರದರ್ಶನ ಕಾಲದಲ್ಲಿ ಮೈಸೂರು ... ಫಾರೆಸ್ಟ್ ಆಫೀಸರ್ ಮಿ॥ ಎಂ. ಜಿ. ರಾಮರಾಯರು ಮಾಡಿದ ಉಪನ್ಯಾಸವು—

ಅರಣ್ಯಕ ಶಾಸ್ತ್ರದಿಂದ ವ್ಯವಸಾಯಕ್ಕೆ ಉಂಟಾಗುವ ಪ್ರಯೋಜನವನ್ನು ಕುರಿತು ಕೆಲವು ವಿಷಯಗಳನ್ನು ತಮಗೆ ತಿಳಿಸಲು ನನಗೆ ಅವಕಾಶ ದೊರೆತದ್ದು ತುಂಬಾ ಸಂತೋಷ. ಗಿಡಗಳ ವಿಚಾರವಾದ ಈ ಅರಣ್ಯಕ ಶಾಸ್ತ್ರವು ವ್ಯವಸಾಯಕ್ಕೆ ಬಹಳ ಪ್ರಯೋಜನಕಾರಿಯೆಂದು ಜನರು ತಿಳಿದಿರುತ್ತಾರೆ. ನನ್ನ ಈ ಸಂತೋಷಕ್ಕೆ ಕಾರಣವು ಮುಖ್ಯವಾಗಿ ಭೂಮಿಯನ್ನು ಯಾವುದಾದರೂ ಒಂದು ಗೊತ್ತಾದ ಉದ್ದೇಶಕ್ಕಾಗಿ ಉಪಯೋಗಿಸುವ ರೀತಿಯನ್ನು ತಿಳಿಸುವುದೇ. ಅರಣ್ಯಕ ಶಾಸ್ತ್ರವು ಅದರಿಂದ ಎದುರು ಸಾಮಾನ್ಯವಾಗಿ ವ್ಯವಸಾಯ ಶಾಸ್ತ್ರದ ಒಂದು ಅಂಗವೆಂದು ಹೇಳಬಹುದು. ಯಾವ ಬೆಳೆಯನ್ನೇ ಆಗಲಿ ಚೆನ್ನಾಗಿ ಬೆಳೆಯಬೇಕಾದರೆ ಈ ಶಾಸ್ತ್ರಜ್ಞಾನವು ಆವಶ್ಯಕ. ಇದರಿಂದ ಜಮೀನಿನ ಅಭಿವೃದ್ಧಿಯೂ ತನ್ಮೂಲಕ ಜಮೀನ್ದಾರರ ಏಳಿಗೆಯೂ ಆಗುವುದು.

ಗಿಡಕಾಡು ನಾವು ರಕ್ಷಿಸಬೇಕಾದ ಅನುಕೂಲವಾಗಿ ಬಂದ ಒಂದು ದೊಡ್ಡ ಆಸ್ತಿಯೆಂದು ತಿಳಿಯಬೇಕು. ಇದು ರಾಜ್ಯಕ್ಕೆ ಆದಾಯರೂಪ ಮಾತ್ರವೇ ಅಲ್ಲ; ವ್ಯವಸಾಯದ ಅಭಿವೃದ್ಧಿಗೂ ಇದು ಸಹಕಾರಿಯಾಗಿರುವುದು. "ಕಾಡು" ಇದರಿಂದ ಬರಬಹುದಾದ ಸೌಕರ್ಯವು ಹೀಗಿರುವಲ್ಲಿ ಹಾಗುವಳಿ ಜಮೀನಿನ ಸುತ್ತಲೂ ಹೇರಳವಾಗಿ ಬೆಳೆದ ಕಾಡುಗಳಿಂದ ಎಷ್ಟು ಪ್ರಯೋಜನವೆಂಬುದನ್ನು ನಾವು ಅಗತ್ಯವಾಗಿ ತಿಳಿಯಬೇಕು. ಒತ್ತಾಗಿಯೂ ಎತ್ತರವಾಗಿಯೂ ಬೆಳೆದ ಮರಗಳು ಬಿರುಗಾಳಿಗೆ ಮರೆಯಾಗಿರುವವು; ಭೂಮಿಯಲ್ಲಿ ತನಿವು ಬೇಗ ಆರದಂತೆ ಕಾಪಾಡುವವು. ಆದಕಾರಣವೇ ಸರಕಾರದವರು ಮತ್ತು ಪ್ರಜೆಗಳು ಕಾಡುಗಳನ್ನು ಒಳ್ಳೇ ಸ್ಥಿತಿಯಲ್ಲಿಟ್ಟುಕೊಳ್ಳುವುದಕ್ಕೆ ಪ್ರಯತ್ನಪಡಬೇಕು.

ಸರಕಾರಕ್ಕೆ ಸೇರಿದ ನಾಲೆ, ರಸ್ತೆ, ಜಮೀನುಗಳನ್ನು ಉಪಯೋಗಿಸುವುದಕ್ಕೆ ಜನರಿಗೆ ಹಕ್ಕಿದ್ದಾಗ್ಯೂ ಅವನ್ನು ಪ್ರಜಾ ಸಮಸ್ತರಿಗೆ ಕುಂದಕ ಬಾರದಂತೆ ಉಪಯೋಗಪಡಿಸುವ ಹಾಗೆ ಸರಕಾರದವರು ಕಟ್ಟುಮಾಡುವುದು ನ್ಯಾಯಸಮ್ಮತವಾದದ್ದು. ಹೀಗಿರುವಲ್ಲಿ ಏಕಪ್ರಕಾರವಾಗಿ ಉಪಯೋಗಿಸುವುದರಿಂದ ಕ್ಷೀಣಗತಿಯನ್ನು ಹೊಂದುವ, ಕ್ಷೀಣವಾದ ಅನಂತರ ಪೂರ್ವಸ್ಥಿತಿಗೆ ತರಲು ಅಸಾಧ್ಯವಾದ ಗಿಡಕಾಡುಗಳ ವಿಷಯದಲ್ಲಿ ಸರಕಾರದವರ ಕಟ್ಟು ಎಷ್ಟು ಹೆಚ್ಚಾಗಿದ್ದರೂ ಆಕ್ಷೇಪಣೆಗೆ ಆಸ್ಪದವಿರಲಾರದು. ನೂರಾರು ವರ್ಷಗಳ ಕಾಲ ನಿರುಪಾಧಿಕವಾಗಿ ಕಾಡಿನಲ್ಲಿ ಬೆಳೆದ ಮರಗಳನ್ನು ಕತ್ತರಿಸಿ ಉಪಯೋಗಿಸುತ್ತಿದ್ದರಲ್ಲಿ ಜನರಿಗೆ ಉರುವಲು ವಿನಾ ಇತರ ಪ್ರಯೋಜನ ಯಾವುದೂ ತೋರಿಬರುವುದಿಲ್ಲ. ರಾಜ್ಯಕ್ಕಾದರೋ ಹಾಗಲ್ಲ. ಕಾಡಿನಿಂದ ಬಹು ತೆರನಾದ ಪ್ರಯೋಜನ ಉಂಟು. ಗಿಡಕಾಡೇ ಭೂಮಿಗೆ ಹೊದ್ದಿಕೆ. ಇದು ಇದ್ದ ಕಡೆಯಲ್ಲಿ ಭೂಮಿಯು ಕೊರಕಲು ಬೀಳದು. ಇದರಿಂದ ನೀರು ಹರಿಯುವ ಮಾರ್ಗವು ಕ್ರಮವಾಗುವುದು. ಇದರ ಒಳಗಿರುವ ಪ್ರದೇಶದ ವಾಯುಗುಣವು ಇದರಿಂದ ವ್ಯತ್ಯಾಸ ಹೊಂದುವುದು. ಆದುದರಿಂದಲೇ ಜನರು ಸ್ವಪ್ರಯೋಜನಕ್ಕಾಗಿ ಕಾಡನ್ನು ಕಡಿದು ನಾಶಪಡಿಸದಂತೆ ಕಾಪಾಡುವ ಭಾರವನ್ನು ವಹಿಸುವುದು ಸರಕಾರದವರ ಮುಖ್ಯೋದ್ದೇಶವಾಗಿದೆ.

ಕಾಡಿನಲ್ಲಿ ಬೆಳೆದು ಬರುವ ಫಸಲಿಗೂ ವ್ಯವಸಾಯದಿಂದ ಬರುವ ಫಸಲಿಗೂ ಕಾಲನಿಯಮದಲ್ಲಿ ಭೇದವಿರುವುದು. ಕೃಷಿಮಾಡಿ ಬೆಳೆದ ಪೈರು ಒಂದು ವರ್ಷದಲ್ಲಿಯೇ ಫಲವನ್ನು ಕೊಡುವುದು. ಆದರೆ ಕಾಡಿನಿಂದ ಅನುಕೂಲವಾದ ಬೆಳೆಯು ಒದಗಬೇಕಾದರೆ ಅನೇಕ ವರ್ಷಗಳು ಬೇಕು. ಅಲ್ಲದೆ, ಅನೇಕ ಮರಜಾತಿಗಳು ನೂರು ಇನ್ನೂರು ವರುಷಗಳ ವರೆಗೂ ಬೆಳೆದ ಹೊರತು ಕೆಲಸಕ್ಕೆ ಅನುಕೂಲವಾದ ಪರಿಮಾಣಗಳನ್ನು ಹೊಂದಲಾರವು. ಅರಣ್ಯಕಶಾಸ್ತ್ರದಿಂದ ವ್ಯವಸಾಯಕ್ಕೆ ಪ್ರಯೋಜನ ಉಂಟೆಂಬ ವಿಷಯದಲ್ಲಿ ಇಲ್ಲಿಯವರು ಇದುವರೆಗೂ ಸಾಕಾದಷ್ಟು ಗಮನಕೊಟ್ಟಿಲ್ಲ. ಕಾಡಿನಲ್ಲಿ ಒಂದು ಎಲೆಯನ್ನು ಕಿತ್ತರೂ, ಒಂದು ಟೊಂಗೆಯನ್ನು ಮುರಿದರೂ ಕಾಡು ಹೀನಸ್ಥಿತಿಗೆ ಬರುವುದು. ಇಂಬನ್ನು ಮುರಿದು, ಹಸಿರನ್ನು ಕಿತ್ತು, ಕಾಡನ್ನು ಕಡಿದು ವ್ಯವಸಾಯಾಭಿವೃದ್ಧಿಯನ್ನು ಮಾಡುತ್ತೇವೆಂಬುದು ಕೇವಲ ಅವಿವೇಕ. ಕಾಡಿನಿಂದ ತಮಗುಂಟಾಗುವ ನಿಜವಾದ ಪ್ರಯೋಜನವನ್ನು ತಿಳಿದೊಡನೆಯೇ ಜನರು ತಾವಾಗಿಯೇ ಈಗಿರುವ ಲೋಪಗಳನ್ನು ಸರಿಪಡಿಸಲು ಮುಂದಾಗಿ ಬರುವರು.

ಹಿಂದಣಕಾಲದಲ್ಲಿ ನಮ್ಮ ದೇಶದ ಅನೇಕ ಭಾಗಗಳಲ್ಲಿ ನಿಬಿಡವಾಗಿಯೂ ಉನ್ನತವಾಗಿಯೂ [illegible]ಗಳಿಂದ ಕೂಡಿದ ಅರಣ್ಯಗಳಿದ್ದುವೆಂತಲೂ, ಅಲ್ಲಿ ದಟ್ಟವಾಗಿ ಬೆಳೆದ ಗಿಡಗಳ ನೆರಳಿನಿಂದ ಬಿಸಿಲಿನ ತಾಪವು ಕಮ್ಮಿಯಾಗಿ ಆ ದೇಶದ ಜನಾ ಆರೋಗ್ಯವಾಗಿತ್ತೆಂತಲೂ, ಆ ಗಿಡಗಳ ಗುಂಪೇ ಹಿತವಾದ ತಂಗಾಳಿಗೆ ಮನೆಯಾಗಿತ್ತೆಂತಲೂ, ದಟ್ಟವಾದ ಆ ಕಾಡಿನಿಂದ ನೀರಿನ ವಸತಿಯು ಬೇಕಾದ ಹಾಗೆ ಇತ್ತೆಂತಲೂ ಚರಿತ್ರೆಯಿಂದ ತಿಳಿದುಬರುವುದು. ಈಗಿನ ಸ್ಥಿತಿ ನೋಡಿದರೆ, ಕಾಡು ಪ್ರದೇಶವು ಹಿಂದಿನ ಕಾಲಕ್ಕಿಂತ ಈಗ ಬಹು ಮಟ್ಟಿಗೆ ಕಡಿಮೆಯಾಗಿದೆ. ಹೊಸಹೊಸದಾಗಿ ಜಮೀನನ್ನು ಸಾಗುವಳಿಗೆ ತರುತ್ತಲೂ, ಮುಂದಾಲೋಚನೆ ಸ್ವಲ್ಪವೂ ಇಲ್ಲದೆ ಸ್ವೇಚ್ಛೆಯಾಗಿ ಕಾಡನ್ನು ದುರುಪಯೋಗಪಡಿಸುತ್ತಲೂ ಬಂದುದರಿಂದ "ಜನಾ" ಕೆಡಲು ಅವಕಾಶವಾಯಿತು. ರಾಜಪುತ್ರ ಸಂಸ್ಥಾನ, ಮಧ್ಯಹಿಂದೂಸ್ಥಾನ, ಈಜಿಪ್ಟು ಈ ದೇಶಗಳಲ್ಲಿ ಹಿಂದೆ ಜನಸಮೃದ್ಧಿಯಾಗಿದ್ದ ಪಟ್ಟಣಗಳ ಸುತ್ತುಮುತ್ತಲಿದ್ದ ಕಾಡುಗಳನ್ನು ಕಡಿದು ಬಯಲುಮಾಡಿದ್ದರಿಂದ ಆ ಪಟ್ಟಣಗಳೇ ಬಯಲಾಗಿ, ಮರಳುಕಾಡಾಗಿರುವ ಅನೇಕ ಪ್ರದೇಶಗಳು ಈಗಲೂ ಸಾಕ್ಷ್ಯವಾಗಿರುವುವು. ನಮ್ಮ ದೇಶದಲ್ಲಿಯೇ ಮರಳಿನಿಂದ ಮುಚ್ಚಿ ಹೋಗಿದ್ದ ತಲಕಾಡು ಪಟ್ಟಣವನ್ನು ... ಮರಳುದಿಣ್ಣೆಗಳ ಮೇಲೆ ಗಿಡಗಳನ್ನು ಬೆಳೆಸಿ ಉಳಿಸಿರುವರು. ಸರ್ಕಾರದವರು ಬೆಳೆಸುವ ದಟ್ಟ ಕಾಡುಗಳು ಮುಂದೆ ದಿನಗಳಲ್ಲಿ ನಾಶವಾಗದಂತೆ ಕಾಪಾಡಲ್ಪಡುವುವು. ಬಿಸಿಲಿನಿಂದಲೂ, ಸಿಕ್ಕಿದ ಹಾಗೆ ದನಗಳನ್ನು ಮೇಯಿಸಿ ಬಿಟ್ಟುದರಿಂದಲೂ, ಜನರು ಬಂದ ಹಾಗೆ ಗಿಡಗಳನ್ನು ಕಡಿಯುವುದರಿಂದಲೂ ಕಾಲಕ್ರಮೇಣ ಕಾಡು ಬಯಲಾಗಬಹುದು. ಕಾಡು ಬಯಲಾಗುವುದು ಬೇಗ ನಿದಾನವೂ ಆಗಬಹುದು. ಹಾಗೆಯೇ ಬಯಲಾದ ಕಾಡಿನಿಂದ ಕೇಡು ಕಾಣಬರುವುದೂ ನಿದಾನ. ಮಳೆಯು ಒಡನೆಯೇ ಕಡಿಮೆಯಾಗುವುದಿಲ್ಲ. ಉತ್ಪನ್ನಗಳೂ ಒಂದು ಸಾರಿ ರದ್ದಿಯೇ ನಷ್ಟವಾಗುವುದಿಲ್ಲ.

ಸಾಂಕ್ರಾಮಿಕರೋಗವಾದ ಕಾಲರಾ ಆಗಲಿ, ಪ್ಲೇಗ್ ಆಗಲಿ ತಲೆದೋರಿ ಕಾಣಿಸಿದ್ದಾರೆ ಅದು ಕೆಟ್ಟದ್ದ ಹಾಗೆ ಹೇಗಾದರೂ ಅದನ್ನು ಅಟ್ಟಿಸಲು ಜನರು ಎಷ್ಟು ಪ್ರಯತ್ನವನ್ನು ಮಾಡುವರು! ಯಾವ ಕೆಲಸವಿದ್ದರೂ ಅಲ್ಲಿಯೇ ಬಿಟ್ಟು, ಬೆನ್ನಟ್ಟುತ್ತಿರುವ ಮೃತ್ಯುವಿನಿಂದ ತಪ್ಪಿಸಿಕೊಳ್ಳಲು ಪ್ರಯತ್ನಪಡುವರಲ್ಲವೇ? ಏಕೆಂದರೆ ವಿಪತ್ತನ್ನು ಹಿತವಾದುದರಿಂದ ಪ್ರತೀಕಾರವನ್ನು ಬೇಗಾದರೂ ಮಾಡಬೇಕಾಗಿರುವುದು. ಆದರೆ ಕಾಡನ್ನು ನಾಶಮಾಡುವುದರಿಂದ ಸಂಭವಿಸುವ ವಿಪತ್ತು ಬಹುಕಾಲದ ಮೇಲೆ ಗೊತ್ತಾಗತಕ್ಕದ್ದೇ ಹೊರತು ತಕ್ಷಣವೇ ಗೊತ್ತಾಗತಕ್ಕದ್ದಲ್ಲ. ಅದರ ಅನರ್ಥಗಳು ಕೂಡಲೇ ಅನುಭವಕ್ಕೆ ಬರುವುವುಗಳಲ್ಲ. ಆದರೆ ಕಾಲರಾ, ಪ್ಲೇಗ್, ಇವುಗಳಿಂದ ಎಷ್ಟು ಅನಾಹುತವಾಗುವುದೋ ಅಷ್ಟು ಅನಾಹುತವು ಕಾಡನ್ನು ನಾಶಮಾಡುವುದರಿಂದಲೂ ಉಂಟಾಗುತ್ತದೆ. ಆದುದರಿಂದ ಕಾಡುಗಳನ್ನು ಸರ್ವಥಾ ನಾಶಮಾಡದಂತೆಯೂ, ಜನರ ಸೌಕರ್ಯಕ್ಕೆ ಅನನುಕೂಲ ಉಂಟಾಗದಂತೆಯೂ ಸರಿಯಾದ ಏರ್ಪಾಟನ್ನು ಮಾಡಿ ಕಾಡುಗಳನ್ನು ಸಂರಕ್ಷಣೆಮಾಡುವುದು ಆವಶ್ಯಕ.

ಕಾಡಿನಿಂದ ಉಂಟಾಗುವ ಪ್ರಯೋಜನವನ್ನು ಕುರಿತು ಚರ್ಚಿಸುವಲ್ಲಿ, ಮಳೆಬೀಳುವುದಕ್ಕೆ ಗಿಡಕಾಡು ಸಹಕಾರಿಯೇ? ಎಂಬುದರ ವಿಚಾರವು ಮುಖ್ಯವಾದದ್ದು. ಜರ್ಮನೀ ದೇಶದಲ್ಲಿ ಶಾಸ್ತ್ರಜ್ಞರು ಈ ವಿಷಯವನ್ನು ಪರೀಕ್ಷಿಸಿ, ಗಿಡಕಾಡಿನ ಮೇಲೆ ಬೀಸುವ ಗಾಳಿಯಲ್ಲಿ ಕೃತ್ಯವು(?) ಬಯಲು ಮೇಲೆ ಬೀಸುವ ಗಾಳಿಯಲ್ಲಿರುವ ಶೈತ್ಯಕ್ಕಿಂತ ಸರಾಸರಿ ಒಂದು ವರ್ಷದಲ್ಲಿ ಶೇಕಡ ೩ರಿಂದ ೧೦ ರಷ್ಟು ಹೆಚ್ಚಾಗಿದೆಯೆಂದೂ, ಕಾಡಿನಲ್ಲಿ ಆವರಿಸಿರುವ ವಾಯುವು ಬಯಲ ಮೇಲೆ ಬೀಸುವ ವಾಯುವಿಗಿಂತಲೂ ಹೆಚ್ಚಾಗಿ ತಂಪಾಗಿರುವುದೆಂದೂ ನಿಷ್ಕರ್ಷಿಸಿರುತ್ತಾರೆ. ಆದುದರಿಂದ ಬಯಲ ಗಾಳಿಯು ಕಾಡಿನೊಳಕ್ಕೆ ನುಗ್ಗಿ ಶೈತ್ಯವುಳ್ಳ ಮರಗಳನ್ನು ಸೋಂಕಲು, ಅದರಲ್ಲಿ ಅಡಗಿರುವ ಆವಿಯು ಕ್ರಮೇಣ ತನ್ನ ಉಷ್ಣವನ್ನು ಕಳೆದುಕೊಂಡು ಪ್ರವರ್ಷವನ್ನುಂಟುಮಾಡುತ್ತ ಬರುವುದು. ಬಯಲ ಗಾಳಿಯಲ್ಲಿಯೇ ಶೈತ್ಯವು ಹೆಚ್ಚಾಗಿದ್ದಲ್ಲಿ ಅದು ಕಾಡಿನ ಮೇಲೆ ಬೀಸಿದಾಗ ಥಂಡಿಯು ಮತ್ತಷ್ಟು ಹೆಚ್ಚಿ, ಹಿಮವಾಗಿಯಾಗಲಿ ಮಳೆಯಾಗಿಯಾಗಲಿ ಬೀಳುವುದರಲ್ಲಿ ಪರಿಣಮಿಸುವುದು. ಕಾಡುಪ್ರದೇಶವು ತಂಪಾಗಿರುವುದರಿಂದಲೂ ಕಾಡಿನ ಗಾಳಿಯಲ್ಲಿ ಶೈತ್ಯವು ಹೆಚ್ಚಾಗಿರುವುದರಿಂದಲೂ, ಗಾಳಿಯ ಚಲನೆಗೆ ಕಾಡು ಅಡಚಣೆಯಾಗಿರುವುದರಿಂದಲೂ ವಿಸ್ತಾರವಾದ ಕಾಡುಪ್ರದೇಶಗಳು ಆಕಾಶದಲ್ಲಿರುವ ಆವಿಯನ್ನು ದ್ರವರೂಪವಾಗಿ ಇಳಿಸಲು ಕೇವಲ ಸಹಕಾರಿಗಳಾಗಿರುವವು. ಆದುದರಿಂದಲೇ ಕಾಡು ಹೆಚ್ಚಾಗಿರುವ ದೇಶ, ವ್ಯವಸಾಯಕ್ಕೆ ವಿಶೇಷ ಸಹಾಯಸಂಪತ್ತನ್ನು ಹೊಂದಿರುವುದು. ಕಾಡಿಲ್ಲದ ದೇಶವಾದರೋ ಕ್ರಮೇಣ ಕ್ಷೀಣಗತಿಯನ್ನು ಹೊಂದುವುದರಲ್ಲಿ ಸಂದೇಹವಿಲ್ಲ.

[ಸಶೇಷ]

ಮೈಸೂರು ಸೀಮೆಯ ಕಬ್ಬಿನ ವ್ಯವಸಾಯ

[ಮೈಸೂರು ಪಟ್ಟಣದ ಪ್ರದರ್ಶನ ಕಾಲದಲ್ಲಿ ಸರ್ಕಾರಿ ವ್ಯವಸಾಯದ ಇಲಾಖೆಯವರು ಮೇಲ್ಕಂಡ ವಿಷಯವನ್ನು ಕುರಿತು ಒಂದು ಉಪನ್ಯಾಸ ಮಾಡಿದರು. ಅದರ ಮುಖ್ಯಾಭಿಪ್ರಾಯಗಳನ್ನೆಲ್ಲಾ ವಾಚಕರ ತಿಳುವಳಿಕೆಗಾಗಿ ಇಲ್ಲಿ ಪ್ರಕಟಿಸುತ್ತೇವೆ.]

[ಹಿಂದಿನ ವಾರದ ಶೇಷ]

ಕಬ್ಬನ್ನು ಆಲೆ ಮಾಡುವುದು

ನಿಮ್ಮಲ್ಲಿ ಸಾಧಾರಣವಾಗಿ ಬಳಕೆಯಲ್ಲಿರುವ ಆಲೆಗಳಿಗಿಂತ ಕ್ರಮವಾಗಿ ಮಾಡಿರುವ ದೊಡ್ಡ ಆಲೆಗಳನ್ನು ಉಪಯೋಗಿಸಿದರೆ ಕಬ್ಬಿನಿಂದ ಹಾಲನ್ನು ಹೆಚ್ಚಾಗಿ ತೆಗೆಯಬಹುದು. ದಿನ ಒಂದಕ್ಕೆ ಅರ್ಧ ಎಕರೆ ಕಬ್ಬನ್ನು ಅಂದರೆ ಸುಮಾರು ೧,೫೦೦ ಅಥವಾ ೨,೦೦೦ ರಾತಲು ಬಾಳುವ ಗಾಣವಿದ್ದಲ್ಲಿ ಅದರಿಂದ ಹೆಚ್ಚಾಗಿ ಹಾಲನ್ನು ತೆಗೆಯಬಹುದಾದ ಕಾರಣ ಸರಾಸರಿ ಎಕರೆ ೧ ಕ್ಕೆ ೫೦ ರೂಪಾಯಿಗೆ ಕಡಮೆ ಇಲ್ಲದೆ ನಿಮಗೆ ಉಳಿತಾಯವಾಗುವುದಲ್ಲದೆ ೩೦ ಅಥವಾ ೪೦ ಎಕರೆಯ ಒಳ್ಳೆಯ ಬೆಳೆ ಇದ್ದಲ್ಲಿ ಒಂದು ವರ್ಷದಲ್ಲಿಯೇ ಆದರ ಬಾಬತನ್ನು ಕೂಡ ತೆಗೆಯಬಹುದು. ಪೂರ್ವದಲ್ಲಿ ಉಪಯೋಗದಲ್ಲಿದ್ದ ಮರದ ಆಲೆಗಳಿಗಿಂತ ಈಗ ಬಳಕೆಯಲ್ಲಿರುವ ಆಲೆಗಳು ಎಷ್ಟು ಉತ್ಕೃಷ್ಟವಾದವುಗಳೆಂಬುದು ನಿಮ್ಮ ಅನುಭವಕ್ಕೆ ಬಂದೇ ಇರುತ್ತದೆ. ಈ ರೀತಿಯಲ್ಲಿಯೇ ಈ ಗಾಣಗಳಿಗಿಂತಲೂ ಮೇಲೆ ಹೇಳಿದ ಗಾಣಗಳು ಉತ್ಕೃಷ್ಟವಾದವುಗಳು. ಸದ್ಯಕ್ಕೆ ನಮ್ಮ ಸಂಸ್ಥಾನದಲ್ಲಿ ಇಂತಹ ಆಲೆಯೊಂದನ್ನು ಬಿಡದಿಯ ಸ್ಟೇಷನ್ನಿನ ಬಳಿಯಲ್ಲಿರುವ ಹುರುಗ(?) ಹಳ್ಳಿಯ ಇನಾಂದಾರರು ಇಟ್ಟುಕೊಂಡಿರುತ್ತಾರೆ. ಇಂತಹ ಆಲೆಯನ್ನು ನಿಮ್ಮಲ್ಲಿ ಯಾರಾದರೂ ಇಟ್ಟುಕೊಳ್ಳಬೇಕೆಂದಿದ್ದರೆ ಅಂಥವರ ಮನೆಯ ಬಾಗಿಲಿಗೆ ಬರುವುದಕ್ಕೆ ೯ ತಿಂಗಳು ಮುಂದಾಗಿಯೇ ನನಗೆ ತಿಳಿಸಿದಲ್ಲಿ ಅದನ್ನು ತರಿಸಿಕೊಡಲು ನಾನು ಸಿದ್ಧನಾಗಿರುತ್ತೇನೆ. ನಿಮ್ಮ ಗಮನಕ್ಕೆ ತರಬೇಕೆಂದಿರುವ ಮತ್ತೊಂದು ವಿಷಯವೇನೆಂದರೆ—ಪ್ರತಿವರ್ಷವೂ ಹಾಲು ಹುಳಿಬರುವುದರಿಂದ ಬಹಳ ನಷ್ಟ ನಷ್ಟವಾಗಿ ಹೋಗುತ್ತದೆ. ಅದು ಹೇಗೆಂದರೆ, ಸೂಕ್ಷ್ಮ ಜಂತುಗಳನ್ನು ಹೊಂದಿರುವುದರಿಂದ ಅವುಗಳ ಮಾಂಸವು ಹೇಗೆ ಕೊಳೆತು ಹೋಗುತ್ತದೆಯೋ, ಅಥವಾ ಎಲೆ ಕೊಳೆತು ಗೊಬ್ಬರವಾಗುತ್ತದೆಯೋ, ಅದೇ ರೀತಿಯಲ್ಲಿ ಹಾಲು ಇರುವ ಪಾತ್ರೆಯಲ್ಲಿರುವ ಸಕ್ಕರೆಯು ರೂಪಾಂತರವನ್ನು ಹೊಂದಿ ನಷ್ಟವಾಗಿ ಹೋಗುತ್ತದೆ. ಆದಕಾರಣ ತಿಳಿವಳಿಕೆಯಿರುವವರು ಹಾಲು ತೆಗೆಯುವ ಕಡಾಯ ಪಾತ್ರೆಗಳನ್ನು ಶುದ್ಧವಾಗಿಟ್ಟಿರದೇ ಇಲ್ಲದೆ ಹಾಲನ್ನು ಮಣ್ಣಿನ ಪಾತ್ರೆಗಳಲ್ಲಿ ಹುಳಿ ಬರುವ ಮೊದಲೇ ಕಡಾಯಕ್ಕೆ ಹಾಕಬೇಕು. ಹಾಗೆ ತಕ್ಕಷ್ಟು ಸುಣ್ಣವನ್ನು ಕೊಡದಿದ್ದ ಪಕ್ಷದಲ್ಲಿ ಮೇಲೆ ಸೂಚಿಸಿದ ಪ್ರಕಾರ ಸಕ್ಕರೆಯ ನಷ್ಟವು ಉಂಟಾಗುತ್ತದೆ. ನೀವು ಸಾಮಾನ್ಯವಾಗಿ ಹಾಕುವ ಸುಣ್ಣವು ಸಕ್ಕರೆಯು ನಷ್ಟವಾಗದಿರುವುದಕ್ಕೆ ಬೇಕಾದ ಸುಣ್ಣಕ್ಕಿಂತ ಅರ್ಧಪಾಲು ಕಡಮೆಯಾಗಿರುತ್ತದೆ. ಈ ಸುಣ್ಣ ಹಾಕುವ ವಿಷಯದಲ್ಲಿ ನಿಮಗೆ ಸಂಪೂರ್ಣವಾದ ಜ್ಞಾನ ಉಂಟಾಗುವವರೆಗೂ ತಕ್ಕಷ್ಟು ಸುಣ್ಣವನ್ನು ಹಾಕಿದ್ದೇವೆಂದು ಕಂಡುಹಿಡಿಯಲು ಅವಕಾಶವಾಗಲೆಂದು ತಯಾರುಮಾಡಿರುವ ಒಂದು ತರಹ ಕಾಗದವನ್ನು ನೀವು ಉಪಯೋಗಿಸಿದರೆ ಒಳ್ಳೆಯದು. ಈ ಕಾಗದಕ್ಕೆ ಲಿಟ್ಮಸ್ ಕಾಗದವೆಂದು ಹೆಸರು. ಇದನ್ನು ತಕ್ಕಷ್ಟು ಸುಣ್ಣ ಬೆರಸಿದ ಹಾಲಿನಲ್ಲಿ ಅದ್ದಿದರೆ ಅದರ ಬಣ್ಣವು ಕೆಂಪಾಗಿಯೇ ಇರುತ್ತದೆ. ಹಾಲಿಗೆ ಸ್ವಲ್ಪ ಸುಣ್ಣದ ತಿಳಿಯನ್ನು ಹಾಕಿದನಂತರ ಅದನ್ನು ಚೆನ್ನಾಗಿ ಕಲಕಿ ಅದರಲ್ಲಿ ಲಿಟ್ಮಸ್ ಕಾಗದವನ್ನು ಅದ್ದಬೇಕು. ಅದರ ಬಣ್ಣವು ನೀಲಿಯಾದರೆ ತಕ್ಕಷ್ಟು ಸುಣ್ಣವನ್ನು ಹಾಕಿದೆ ಎಂದು ತಿಳಿಯತಕ್ಕದ್ದು. ಹಾಲಿಗೆ ಸುಣ್ಣವನ್ನು ಬೆರೆಸಿದ ಹಾಗೆಲ್ಲಾ ಬೆಲ್ಲದ ಕಪ್ಪಾಗುತ್ತದೆ ಎಂಬುದು ನಿಮ್ಮ ಅನುಭವದಲ್ಲಿರಬಹುದು. ಆದರೆ ತಕ್ಕಷ್ಟು ಸುಣ್ಣವನ್ನು ಹಾಕಿದ ಹಾಲು ತಿರುಗಿ ತಿಳಿಯಾಗುತ್ತ ಬರುತ್ತದೆ. ನಾವು ತಕ್ಕಷ್ಟು ಸುಣ್ಣ ಹಾಕಿ ಬೆಲ್ಲವನ್ನು ಮಾಡಿದ್ದರಲ್ಲಿ ಅದರ ಬಣ್ಣವು ಮಾಮೂಲು ಸುಣ್ಣ ಕೊಟ್ಟು ಮಾಡಿದ ಬೆಲ್ಲಕ್ಕಿಂತಲೂ ಬಿಳುಪಾಗಿಯೇ ಇತ್ತು. ಇದು ಅರ್ಧಪಾಲು ಸುಣ್ಣ ಕೊಟ್ಟು ಮಾಡಿದ ಬೆಲ್ಲದ ಬಣ್ಣಕ್ಕಿಂತ ಬಿಳುಪು. ಆದರೆ ಒಂದು ವೇಳೆ ಹಾಲಿನ ಗುಣ ವ್ಯತ್ಯಾಸದಿಂದ ಈ ರೀತಿಯಾಗದೆ ಇರಲೂ ಇರಬಹುದು. ಮಡಕೆ ಹಾಲು ಕುದಿಯುತ್ತಿರುವಾಗ ಸ್ವಲ್ಪ ಸುಣ್ಣದಾಗಿರಲು, ಅನೇಕ ಮೇಲೆ ತೇಲಿಬರುವ ಮಡ್ಡಿಯನ್ನು ಚೆನ್ನಾಗಿ ತೆಗೆದುಹಾಕಿದ ಪಕ್ಷದಲ್ಲಿ ಬಿಳುಪಾದ ಬೆಲ್ಲವನ್ನು ಸುಲಭವಾಗಿಯೇ ಮಾಡಬಹುದು. ಈ ಎರಡು ಮಾದರಿ ಬೆಲ್ಲಗಳನ್ನೂ ಸ್ವಲ್ಪ ನೋಡಿ. ಇವೆರಡನ್ನೂ ಒಂದೇ ರೀತಿಯಲ್ಲಿಯೇ ತಯಾರು ಮಾಡಿದೆ. ಆದರೆ ಒಂದು ಮಾದರಿಯ ಕಬ್ಬಿನ ಹಾಲಿನ ಕಟ್ಟೆಯಿಂದ ಚೆನ್ನಾಗಿ ಮಡ್ಡಿ ತೆಗೆದು ಹಾಕಿದ್ದು, ಮತ್ತೊಂದು ಮಡ್ಡಿಯನ್ನು ಸ್ವಲ್ಪವೂ ತೆಗೆದು ಹಾಕದೇನೇ ಮಾಡಿದ್ದು. ಈ ಎರಡನೇ ಮಾದರಿ ಬೆಲ್ಲವನ್ನು ನಿಮ್ಮಲ್ಲಿ ವಾಡಿಕೆ ಇರುವ ಬಿಡದಿ ತಟ್ಟೆಯಿಂದ ಮಡ್ಡಿಯನ್ನು ಪೂರ್ತಿಯಾಗಿ ತೆಗೆದು ಹಾಕಿ ಮಾಡಿದ್ದು. ಈ ಬೆಲ್ಲವು ಕಬ್ಬಿಣದ ತಟ್ಟೆಯಿಂದ ಮಡ್ಡಿ ತೆಗೆದ ಬೆಲ್ಲಕ್ಕಿಂತ ಕಪ್ಪಾಗಿಯೇ ಕಾಣುತ್ತದೆಯಷ್ಟೆ. ಆದರೂ ಮಡ್ಡಿಯನ್ನು ತೆಗೆಯದೆ ಮಾಡಿದ ಬೆಲ್ಲಕ್ಕಿಂತಲೂ ಬಿಳುಪಾಗಿಯೇ ಇದೆ. ಈ ಬೆಲ್ಲದ ರಬಮುಗಳನ್ನು ನೋಡಿದ ಮಾತ್ರದಿಂದಲೇ ಈ ಸಂಗತಿಗಳೆಲ್ಲವೂ ಸ್ಪಷ್ಟವಾಗಿ ನಿಮ್ಮ ತಿಳುವಳಿಕೆಗೆ ಬರುತ್ತವೆ. ಇದರಿಂದ ನೀವೆಲ್ಲರೂ ಮುಂದೆ ಬೆಲ್ಲ ಮಾಡುವಾಗ ಹಾಲಿನ ಮಡ್ಡಿಯನ್ನು ಚೆನ್ನಾಗಿ ತೆಗೆದು ಹಾಕಿ ಮಾಡುವಿರೆಂದು ನಂಬುತ್ತೇನೆ.

ಹಾಲನ್ನು ಕಾಯಿಸುವುದಕ್ಕೆ ಮುಂಚೆ ಅದಕ್ಕೆ ತಕ್ಕಷ್ಟು ಸುಣ್ಣವನ್ನು ಕೊಡದಿದ್ದರೆ ಅದರಲ್ಲಿರುವ ಶರ್ಕರವು ಅಂದರೆ ಸಕ್ಕರೆಯಾಗುವ ಪದಾರ್ಥವು ರೂಪಾಂತರವನ್ನು ಹೊಂದಿ, ಕೆಟ್ಟು ಹೋಗುತ್ತದೆ ಎಂದು ಮೇಲೆ ತಿಳಿಸಿದ್ದೇವೆಯಷ್ಟೆ. ಹೀಗೆ ಕಡೋಣವರಿಂದ ಉಂಟಾಗುವ ಪದಾರ್ಥಗಳು ಸಿಹಿಯಾಗಿದ್ದರೂ ಸಕ್ಕರೆಯಷ್ಟು ಸಿಹಿಯಾಗಿ

...ಇಲ್ಲ. ಇವುಗಳಿಗೆ ಗ್ಲೂಕೋಜ್ ಎಂದರೆ ಶರ್ಕರ ವಿದ್ಯಾವ್ಯಗಳೆಂದು ಹೆಸರು. ಈ ಶರ್ಕರ ವಿದ್ಯಾವ್ಯಕದಿಂದ ಬೆಲ್ಲಕ್ಕೆ ಬಹುಕಾಲ ಒಳ್ಳೆಯ ಸ್ಥಿತಿಯಲ್ಲಿರುವದಕ್ಕೆ ಕುಂದಕ ಉಂಟು. ಆದರಿಂದ ಬೆಲ್ಲವು ಮಳೆಗಾಲದಲ್ಲಿ ಹೋ(ನಿಯಾಗಿ ಕರಿದು ಹೋಗುತ್ತದೆ. ಈ ರಬವಿಂದ ಬೆಲ್ಲವನ್ನು ಸ್ವಲ್ಪ ನೋಟ ಇದಕ್ಕೆ ಅರ್ಥವಾಲು ಸುಣ್ಣವನ್ನು ಕೊಟ್ಟು ಹೊತರ ವಿಶ್ವ ವಿಷಯಗಳಲ್ಲೆಲ್ಲಾ ಪ್ರಾರಿ ಸುಣ್ಣ ಕೊಟ್ಟು ಬಹು ಸಂತೆಯೇ ತಯಾರು ಮಾಡಿದೆ. ಇದೆಷ್ಟು ಮೋಸವಾಗಿದೆ? ಇಲ್ಲಿಗೆ ಇದನ್ನು ತರುವದಕ್ಕೆ ಮುಂಚೆ ಎರಡನೆಯಾವರ್ತಿ ಕಾಯಿಸಿ ಈ ತೊಟ್ಟಿಯಲ್ಲಿ ಹಾಕದೆ ಇದ್ದಪಕ್ಷ ಇಲ್ಲಿಗೆ ತರಲು ಆಗುತ್ತಲೇ ಇಲ್ಲ. ಗುಳಿಯಲ್ಲಿರುವ ಕ್ಷೇನುವನ್ನು ಇದು ಬಹು ಜಾಗ್ರತೆಯಾಗಿ ಹೀರಿಕೊಂಡು, ನೀರಾಗಿ ಕರಿಯುವುದರಿಂದ ಇದನ್ನು ಪಾತ್ರೆಗಳಲ್ಲಿ ತುಂಬಿಡಬೇಕಾಗಿದೆ. ಹೀಗೆ ತುಂಬಿಟ್ಟರೂ ಕೂಡ ಇದು ಕ್ರಮೇಣ ಹಾಳಾಗಿ ಹೋ(ನಿಯಾಗುತ್ತದೆ. ಆದುದರಿಂದ ಇದರಲ್ಲಿ ಮೊಲಾಸಸ್ಸಿಗಿಂತ ಹೆಚ್ಚಾದ ಗುಣವೇನೂ ಇರುವುದಿಲ್ಲ. ನಿಮ್ಮಲ್ಲಿನವರು ಮೊಲಾಸಸ್ಸನ್ನು ನೋಡಿರಲಾರರು. ಇದು ಸಕ್ಕರೆಯ ಕಾರ್ಖಾನೆಗಳಲ್ಲಿ ಸಕ್ಕರೆಯನ್ನು ಶೋಧಿಸಿದನಂತರ ಉಳಿದ ಪದಾರ್ಥವು. ಇದು ಪ್ರಪಂಚದಲ್ಲಿ ಸಾಧಾರಣವಾಗಿ ಬಿಕರಿಯಾಗದ ಪದಾರ್ಥವಾದುದರಿಂದ ಇದನ್ನು ದನಗಳಿಗೆ ಕುಡಿಸಿ ಬಿಡುತ್ತಾರೆ, ಇಲ್ಲದಿದ್ದರೆ ಚೆಲ್ಲಿಬಿಡುತ್ತಾರೆ.

ಕಾಲನ್ನು ಕಾಯಿಸುವುದಕ್ಕೆ ಮುಂಚೆ ಕುಳಿ ಹಿಡಿಯಲು ಅವಕಾಶ ಕೊಟ್ಟರೆ ಕಾಲಿಗೆ ತಕ್ಕಷ್ಟು ಸುಣ್ಣ ಕೊಡದಿರುವುದರಿಂದ ಕಾಣುವ ಕೆಡುಕುಗಳೇ ಉಂಟಾಗುತ್ತದೆ.

ನಾವು ಕೈಲಾದಮಟ್ಟಿಗೂ ಒಳ್ಳೆಯ ರಬವಿನ ಬೆಲ್ಲವನ್ನೇ ತಯಾರು ಮಾಡಲು ಪ್ರಯತ್ನ ಮಾಡಬೇಕು. ಈ ಅಪೇಕ್ಷೆಯು ನಮಗೆ ಇದ್ದಲ್ಲಿ ಕಾಲಿಗೆ ತಕ್ಕಷ್ಟು ಸುಣ್ಣವನ್ನು ಬೆರಸುವುದಲ್ಲದೆ ಅದರ ಮಡ್ಡಿಯನ್ನು ಚೆನ್ನಾಗಿ ತೆಗೆದು ಹಾಕುವುದು ಅತ್ಯವಶ್ಯಕ. ಮತ್ತು ಕಾಲನ್ನು ಹಿಂಡುವುದಕ್ಕಾಗಲಿ, ತುಂಬಿಡುವುದಕ್ಕಾಗಲಿ ಮಣ್ಣಿನ ಪಾತ್ರೆಗಳನ್ನು ಉಪಯೋಗಿಸದಿರುವುದು ಒಳ್ಳೆಯದು.

ಒಂದು ಗದ್ದೆಯ ಬೆಲ್ಲದ ಕಟ್ಟುವಳಿಯನ್ನು ಜಾಸ್ತಿ ಮಾಡಬೇಕಾದಕ್ಷದಲ್ಲಿ ಗದ್ದೆಗಳು ಚೆನ್ನಾಗಿರಬೇಕಲ್ಲದೆ ನೀರಿನಿಂದ ಯಾವಾಗಲೂ ಒಣಗಿ ಉದುರದೆ ಕಳೆ ಇಲ್ಲದೆ ಇರಬೇಕು. ಕಬ್ಬಿನ ಪೈರಿಗೆ ಚೆನ್ನಾಗಿ ಗೊಬ್ಬರ ಕೊಡಬೇಕು. ಆದರೆ ಪಂಚಿನಾರಿ ಕೊಡುವಾರದ ಕೊಡಿದನಂತರ ಹೊಸದಾಗಿ ಮಾಡಿದ ಬೆಲ್ಲ ಕೊಡಸ ಮಹಾ ಗುಣವನ್ನು ಕಾಣಬೇಕು. ಇನ್ನೂ ಅಲ್ಲ ಕಬ್ಬಿನ್ನು ಬಲಿತಮೇಲೆ ಕಡಿಯಬೇಕು. ಹದಕ್ಕೆ ಬಂದಮೇಲೆ ಅದಬೇಕು. ಕಬ್ಬು ಬಲಿಯುವುದಕ್ಕೆ ಮುಂಚೆ ಕಡಿದರೂ ಅದು ಬಲಿತಮೇಲೆ ಕಡಿಯದೆ ಬಿಟ್ಟರೂ ಬೆಲ್ಲದ ಕಟ್ಟುವಳಿ ತಗ್ಗುವುದಲ್ಲದೆ ಅದರ ಗುಣವೂ ಕೂಡ ಕಡಮೆಯಾಗುತ್ತದೆ.

ಈ ಉಪನ್ಯಾಸಕ್ಕೆ ಹೇಳಿದ ಕೆಲವು ವಿಷಯಗಳು ಪಿಂಡದಿಂದ ಇದನ್ನು ಇಷ್ಟಕ್ಕೇ ನಿಲ್ಲಿಸಬೇಕಾಗಿದೆ. ನಮ್ಮ ಇಲಾಖೆಯ ರಿಪೋರ್ಟುಗಳನ್ನು ಓದಿ ಕಂಡ ಮೇಲೆ ಹೇಳಿದುದನ್ನೆಲ್ಲಾ ನೀವೇ ಸ್ವತಃ ಮಾಡುವುದಲ್ಲದೆ ಬೇರೆಯವರಿಗೂ ತಿಳಿಯಪಡಿಸುವುದರಲ್ಲಿ ನನಗೆ ಒದಗುವ ಸಂತೋಷವು ... ಈ ವಿಚಾರದ ಸಂತೋಷದಿಂದ ಉಪನ್ಯಾಸವನ್ನು ಮಾಡಬೇಕೆಂದು ಯೋಚಿಸಿದೆ. ಆದರ ವಿಷಯವು ಈ ದಿನದ ಉಪನ್ಯಾಸದ ವಿಷಯಕ್ಕಿಂತಲೂ ಮುಖ್ಯವಾದದ್ದು. ಅದೇನೆಂದರೆ, ಸಕ್ಕರೆಯ ವಿಷಯ. ಸಕ್ಕರೆಯನ್ನು ತಯಾರು ಮಾಡುವುದೂ ಬಹು ಮುಖ್ಯವಾದ ಕಸಬು. ಅದಕ್ಕೆ ತಕ್ಕ ಪ್ರಯೋಜನವನ್ನುಂಟು ಮಾಡಬೇಕು. ಹಾಗೆ ಮಾಡಬೇಕಾದರೆ ಬೆಂಗಳೂರಿನ ಸಮೀಪದ ಹಿಲ್ಲದ ಪರೀಕ್ಷಾಮಂಟಪದಲ್ಲಿ ತಯಾರಾದ ಸಕ್ಕರೆಯಂತಿರುವ ಸಕ್ಕರೆಯನ್ನು ಕಬ್ಬಿನ ಕಾಲಿನಿಂದಲೇ ತಯಾರು ಮಾಡುವುದಕ್ಕೆ ಉಪಯೋಗಿಸಿದ ಒಂದು ಚಿಕ್ಕ ಚರಕಿಯನ್ನು ಇಲ್ಲಿನ ಪ್ರದರ್ಶನದಲ್ಲಿ ಇಟ್ಟಿರುತ್ತದೆ. ಇದರಿಂದ ಈ ಸಕ್ಕರೆಯನ್ನು ಮಾಡುವ ವಿಧಾನವನ್ನೇನೋ ತಿಳಿದುಕೊಳ್ಳಬಹುದು. ಆದರೆ ಅದು ಬಹು ಚಿಕ್ಕದಾದುದರಿಂದ ವ್ಯಾಪಾರಕ್ಕೆ ಒದಗುವಂತೆ ಸಕ್ಕರೆಯನ್ನು ಮಾಡಲು ಅನುಕೂಲಿಸುವದಿಲ್ಲ. ಆ ಕೆಲಸಕ್ಕೆ ದೊಡ್ಡದಾದ ಯಂತ್ರಗಳನ್ನು ಉಪಯೋಗಿಸಬೇಕು. ಆ ತತ್ವಗಳನ್ನು ತಿಳಿಸುವುದಕ್ಕೆ ಪ್ರಯತ್ನಪಡಬೇಕು. ಅದುವರೆಗೂ ಕೂಡಿದಮಟ್ಟಿಗೂ ಒಳ್ಳೆಯ ಬೆಲ್ಲವನ್ನು ಸತ್ಪ್ರಯತ್ನದಿಂದಲೇ ತಯಾರುಮಾಡಬೇಕು.

ಮೈಸೂರು ಪ್ರಜಾಪ್ರತಿನಿಧಿ ಸಭೆಯು.

ಚರ್ಚೆಯಾಗಿ ಇತ್ಯರ್ಥವಾದ ವಿಷಯಗಳು.

ತೋಟ ತಳಾರಿಗಳ ವಿಚಾರ.

ಹರಿಹರದ ಮೆ॥ ಶ್ರೀನಿವಾಸ ಸೀತಾರಾಮ ಕುಲಕರ್ಣಿಯವರೇ ಮೊದಲಾದ ಮೆಂಬರುಗಳು—ದವಿನಿರ್ವ ಪಡೆದಿರತಕ್ಕವರು, ಗ್ರಾಮಾಂತರಗಳಲ್ಲಿ ತೋಟ, ತಳವಾರಿಗಳಿಗೆ ಎಕರೆಗೆ ಇಷ್ಟೆಂದು ನಿರಖಿನ ಪ್ರಕಾರ ದವಸವನ್ನು ಮಿರಾಸ್ ಕೊಡಬೇಕು. ಇದಕ್ಕೆ ಲೆಕ್ಕವೇನೂ ಇರುತ್ತಿಲ್ಲ. ಆದ್ದರಿಂದ ಅವರಿಗೂ ರೈತರಿಗೂ ಜಗಳವಿದ್ದೇ ಇರುತ್ತೆ. ಇವರ ದೆಸೆಯಿಂದ ಸರ್ಕಾರಿ ಕೆಲಸಕಾರ್ಯಗಳಿಗೆ ತೊಂದರೆ. ಸರ್ಕಾರದವರು ಈ ಮಿರಾಸನ್ನು ತಪ್ಪಿಸಿ, ಅವಶ್ಯವಿದ್ದರೆ ರೈತರಿಂದ ಕಂದಾಯದ ಜೊತೆಗೆ ಎಕರೆಗೆ ಒಂದಾಣೆಯಂತೆ ಒಂದು ಸರಿಯನ್ನು ಹಾಕಿ ವಸೂಲ್ಮಾಡಿ, ತೋಟಿ ತಳವಾರಿಗಳಿಗೆ ಸಂಬಳ ಗೊತ್ತುಮಾಡಬೇಕು. ಇವರು ಸರ್ಕಾರಿ ಕೆಲಸಮಾಡತಕ್ಕವರಾದ್ದರಿಂದ ಅವರ ಸಂಬಳವನ್ನೂ ಸರ್ಕಾರದವರೇ ಪಾವತಿಮಾಡಬೇಕಾದದ್ದು ಧರ್ಮ. ಇದಲ್ಲದೆ ಅವರಿಗೆ ಮಾನ್ಯಗಳು ಬೇರೆ ಇರುತ್ತವೆ. ಅವರು ಮಾಡತಕ್ಕ ಕೆಲಸ ಬಹಳ ಸ್ವಲ್ಪ.

ದಿವಾನರವರು—ಈ ವಿಷಯದಲ್ಲಿ ಗವರ್ನಮೆಂಟಿನವರು ಪ್ರತ್ಯೇಕ ಒಂದು ಕಮಿಟಿಯನ್ನು ನೇಮಕಮಾಡಿ, ಅವರಿಂದ ಈ ವಿಚಾರಕ್ಕೆ ಸಂಬಂಧಿಸಿದ ಪ್ರಶ್ನೋತ್ತರಗಳನ್ನೆಲ್ಲಾ ತನಿಖೆಮಾಡಿಸಿ ರಿಪೋರ್ಟು ತರಿಸಿಕೊಂಡು ಇತ್ಯರ್ಥಮಾಡಬೇಕೆಂದು ಯೋಚಿಸಿದಾರೆ. ಈ ಕಮಿಟಿಗೆ ನಿಮ್ಮ ಇಷ್ಟಪ್ರಕಾರ ಪ್ರಜಾಪಕ್ಷದ ಒಬ್ಬ ಮೆಂಬರನ್ನೂ ಕೂಡ ನೇಮಕಮಾಡಿಕೊಡುವೆವು.

ಗ್ರಾಮಗಳಲ್ಲಿ ಮೊಹತರ್ಫಾ.

ಮೆ॥ ಚಿಕ್ಕರಾಮಣ್ಣನವರು ಮುಂತಾದವರು—ಗ್ರಾಮಾಂತರಗಳಲ್ಲಿ ಬಡಬಗ್ಗರ ಮನೆಗಳಿಗೆ ಮೊಹತರ್ಫಾ ಕಂದಾಯವನ್ನು ವಜಾ ಮಾಡಿಕೊಡಬೇಕೆಂದು ವರುಷ ವರುಷ ಕೇಳಿಕೊಳ್ಳುತ್ತಿದ್ದೇವೆ. ಇದನ್ನು ಕೂಡಲೇ ಮಾಡಿಕೊಟ್ಟು ಕಾಪಾಡಬೇಕು.

ದಿವಾನರವರು—ಹತ್ತು ರೂಪಾಯಿಗಿಂತ ಕಡಮೆ ಬೆಲೆ ಬಾಳುವ ಬಡವರ ಮನೆಗಳಿಗೆ ಮೊಹತರ್ಫಾ ಹಾಕಕೂಡದೆಂದು ನಿಷ್ಕರ್ಷೆ ಮಾಡಿದೆ. ಅದಕ್ಕಿಂತಲೂ ಹೆಚ್ಚು ಕ್ರಯದ ಮನೆಗಳಿಗೂ ಮಾಫಿ ಮಾಡಬೇಕಾದಲ್ಲಿ ಮೊಹತರ್ಫಾ ರೂಲನ್ನು ಬದಲಾಯಿಸುವಾಗ್ಗೆ ಆಲೋಚನೆಮಾಡುವೆವು. ಇದು ಸದ್ಯ ಆಗಲಾರದು.

ಹೆಬ್ಬಿದರಿಗೆ ರಹದಾರಿ ರುಸುಂ

ಕೆಲವು ಮೆಂಬರುಗಳು—ಮಲೆನಾಡಿನಲ್ಲಿ ೧೦೦ ಬೊಂಬನ್ನು ರೈತರು ಕಾಡಿನಿಂದ ತರಬೇಕಾದರೆ ಸರ್ಕಾರಕ್ಕೆ ೨ ರೂಪಾಯಿ ರಹದಾರಿ ರುಸುಂ ಕೊಡಬೇಕು. ಕೊಡಗಿನ ಕಡೆಯಾದರೋ ೧.೨ ಆಣೆ ಇಟ್ಟಿದಾರೆ. ಆದ್ದರಿಂದ ನಮ್ಮ ಕಾಡುಗಳಲ್ಲಿ ಬೊಂಬಿಗೆ ರಹದಾರಿ ಕೇಳುವುದು ಕಡಮೆ. ಇದಲ್ಲದೆ ಈಗ ಬಿದಿರುಮೆಳೆಗಳು ಹೂವಿಡುವುದಕ್ಕೆ ಆರಂಭಿಸಿದೆ. ಇನ್ನು ೧೦—೧೨ ವರುಷಗಳ ತನಕ ನಮ್ಮ ಸೀಮೆಯಲ್ಲಿ ಬೊಂಬಿಗೆ ಪ್ರಾಮಬಂದೀತು. ಈಗ ಕಾಡುಗಳಲ್ಲಿ ಬಿದ್ದು ಒಣಗುತ್ತಿರುವ ಬೊಂಬುಗಳನ್ನು ಅವು ನಿಷ್ಪ್ರಯೋಜನವಾಗುವುದಕ್ಕೆ ಮೊದಲೇ ಜನರು ತಂದು ಉಪಯೋಗಪಡಿಸಿಕೊಳ್ಳುವಂತೆ ಮಾಫಿ ರಹದಾರಿ ಕೊಡಿಸಬೇಕು.

ದಿವಾನರವರು (ಫಾರೆಸ್ಟ್ ಕನ್ಸರ್ವೇಟರ ಕೂಡ ಆಲೋಚಿಸಿ)—ಈ ವಿಷಯದಲ್ಲಿ ಕೂಡಲೇ ಹುಕುಂ ಕೊಡುತ್ತೇವೆ

ನೇಗಿಲಿಗೆ ಹೊನ್ನೇ ಮರ ಬೇಕು.

ಶಿಕಾರಿಪುರದ ಮೆ॥ ಭವಾನಿರಾಯರೇ ಮುಂತಾದವರು—ನಮ್ಮ ಪ್ರಾಂತ್ಯದಲ್ಲಿ ರೈತರಿಗೆ ನೇಗಿಲು ಮುಂತಾದ ವ್ಯವಸಾಯೋಪಕರಣಗಳನ್ನು ಮಾಡಿಕೊಳ್ಳುವುದಕ್ಕೆ ಹೊನ್ನೇ ಮರ ಬಿಟ್ಟರೆ ಬೇರೊಂದಿಲ್ಲ. ಆದ್ದರಿಂದ ಆ ಮರವನ್ನು ಕೊಡಿಸುವಂತೆ ಅಪ್ಪಣೆ ಆಗಬೇಕು.

ಫಾರೆಸ್ಟ್ ಕನ್ಸರ್ವೇಟರು—ಹೊನ್ನೆಯನ್ನು ಕೊಡುವ ಪದ್ಧತಿ ಒಂದು ವರುಷದೊಳಗಾಗಿ ಕಾಡಿನಲ್ಲಿರತಕ್ಕ ಆ ಜಾತಿಯ ಮರಗಳೆಲ್ಲಾ ನಿರ್ನಾಮವಾಗುವವು. ಆ ದೇಶದ ಪಾಡು ಏನಾದೀತು? ಅದಿಲ್ಲದೇನೇ ನೀವು ಇದುವರೆಗೆ ಬೇರೆ ಜಾತಿಯ ಮರಗಳನ್ನು ನಿಮ್ಮ ಕೆಲಸಕ್ಕೆ ಉಪಯೋಗಿಸುತ್ತಾ ಇಲ್ಲವೇ? ಮುಂದೆಯೂ ಹಾಗೇ ಮಾಡಬೇಕು.

ರೆವಿನ್ಯೂ ಕಮಿಷನರು—ಆ ಪ್ರಾಂತ್ಯದಲ್ಲಿ ರೈತರಿಗೆ ಹೊನ್ನೇ ಮರ ಬಿಟ್ಟರೆ ಬೇರೇ ಮರ ಸಿಕ್ಕುವುದಿಲ್ಲವೆಂದು ಕಾಣುತ್ತಾದ್ದರಿಂದ ಫಾರೆಸ್ಟಿನವರು ವರುಷಕ್ಕೊಂದು ಸಲ ಹೊನ್ನೆಯ ರೆಂಬೆಗಳನ್ನು ಕತ್ತರಿಸಿಟ್ಟು ರೈತರು ಕೇಳಿದ ಹಾಗೆ ಕೊಡುತ್ತಾ ಬರಬಹುದು.

ದಿವಾನರವರು—ಗವರ್ನಮೆಂಟು ಪರ್ವಾನಾದ ಅಗಾಯಿತು ಹೊನ್ನೆಯನ್ನು ಮಾತ್ರ ರಕ್ಷಿಸಿ ಮರವಾಗಿರುತ್ತದೆ. ಅದನ್ನು ರೈತರಿಗೆ ಬಿಟ್ಟುಕೊಡುವುದು ಅಸಾಧ್ಯ. ಡೆಪ್ಯುಟಿ ಕಮಿಷನರ ಕೂಡ ಯೋಚನೆ ಮಾಡಿ, ಇತರ ಜಾತಿಯ ಯಾವದಾದರೂ ಮರವನ್ನು ತೆಗೆದುಕೊಳ್ಳಿ.

ಸ್ಟಾಂಪ್ ರೆಂಡರುಗಳು

ಚಳ್ಳಕೆರೆ ಮೆ॥ ಅಜ್ಜಪ್ಪನವರು, ಮೈಸೂರು ಮೆ॥ ಅಂಬಳೆ ಅಣ್ಣಯ್ಯ ಪಂಡಿತರು ಮುಂತಾದವರು—ಜನರು ದಾಖಲೆಕಾಗದಗಳನ್ನು ಕೊಂಡುಕೊಳ್ಳುವಾಗ್ಗೆ ಸ್ಟಾಂಪ್ ವೆಂಡರುಗಳು ಇಂಥಾ ಕೆಲಸಕ್ಕೆ ಎಂಬ ಕಾರಣವನ್ನು ಆ ಕಾಗದದ ಹಿಂದೆ ಬರೆದುಕೊಡುವಂತೆಯೂ, ಕೊಂಡುಕೊಳ್ಳತಕ್ಕವರ ಹೆಸ್ರರಳನ ಗುರುತನ್ನು ಒತ್ತಿಸಿ ರಿಜಿಸ್ಟರ್ ಇಟ್ಟುಕೊಳ್ಳುವಂತೆಯೂ ಹುಕುಂ ಆದರೆ ಮೋಸಗಾರರು ತಿಳಿಯದವರ ಹೆಸರಿನಲ್ಲಿ ಸುಳ್ಳು ಪತ್ರಗಳನ್ನು ಸೃಷ್ಟಿಸಿಮಾಡುವುದೂ ಸುಳ್ಳು ಸಾಕ್ಷಿ ತಯಾರುಮಾಡುವುದೂ ತಪ್ಪೀತು. ಗ್ರಾಮಾಂತರಗಳಲ್ಲಿ ಹೆಂಗಸರನ್ನೂ ಅಕ್ಷರಸ್ಥರಲ್ಲದವರನ್ನೂ ಮೋಸಪಡಿಸುವುದು ಹೆಚ್ಚು. ಇದನ್ನು ನಿಲ್ಲಿಸಿಕೊಡಬೇಕು.

ಕೋಲಾರದ ಮೆ॥ ರಾಮಾಚಾರ್ಯರು—ಕಾರಣ ಮುಂತಾದದ್ದನ್ನು ಪತ್ರದ ಹಿಂದೆ ಸ್ಟಾಂಪ್ ವೆಂಡರಿಂದ ಬರೆಸುವುದು ಉಚಿತವಾದದ್ದಲ್ಲ.

ದಿವಾನರವರು—ಇದು ಸಾಧ್ಯವಲ್ಲ. ಇಂಥಾ ವಿಷಯಗಳನ್ನು ಚರ್ಚೆಮಾಡೋಣದರಿಂದ ಸಭೆಯ ಕಾಲ ವ್ಯರ್ಥವಾಗುವುದು

ಪ್ರಜಾಪ್ರತಿನಿಧಿಗಳಿಗೆ ಅಲೋವೆನ್ಸು.

ಹರಿಹರದ ಮೆ॥ ಶ್ರೀನಿವಾಸ ಸೀತಾರಾಮ ಕುಲಕರ್ಣಿಯವರು—ಈ ಸಭೆಗೆ ಬಹಳ ದೂರದಿಂದ ಬರತಕ್ಕ ಪ್ರತಿನಿಧಿಗಳಿಗೆ ಅನುಕೂಲಿಸುವಂತೆ ಸರ್ಕಾರದಿಂದ ಎರಡನೇ ಕ್ಲಾಸ್ ರೈಲ್ ಛಾರ್ಜನ್ನಾದರೂ ಅಲೋವೆನ್ಸಾಗಿ ಕೊಡಿಸಬೇಕು.

ಇತರ ನಾಲ್ಕಾರು ಮೆಂಬರುಗಳು—ಪ್ರಾರಂಭದಲ್ಲಿ ಮೆಂಬರುಗಳಿಗೆ ತಲಾ ೨೫ ರೂಪಾಯಿನಂತೆ ಸರ್ಕಾರದಿಂದ ಅಲೋವೆನ್ಸು ಸಲ್ಲುತ್ತಿತ್ತು. ಮೆಂಬರುಗಳು ಹೀಗೆ ಅಲೋವೆನ್ಸು ತೆಗೆದುಕೊಳ್ಳುವುದು ಗೌರವವಾದದ್ದಲ್ಲವೆಂದು ಊಹಿಸಿ, ಅದನ್ನು ಬೇಡವೆಂದು ತಾವೇ ಒಪ್ಪಿಕೊಂಡರು. ಈಚೆಗೆ ಅಲೋವೆನ್ಸು ಕೊಡಬೇಕೆಂಬ ವಿಚಾರ ೫—೬ ವರುಷ ಚರ್ಚೆಗೆ ಬಂದಿತ್ತು. ಆಗಲೂ ಅನೇಕ ರೀತಿ ಸಭೆಯವರು ಗೋತ್ತುಮಾಡಿ ಬಿಟ್ಟುಬಿಟ್ಟರು. ಇದಕ್ಕೆ ಬದಲಾಗಿ ರಾಜಧಾನಿಯಲ್ಲಿ ಮೆಂಬರುಗಳೆಲ್ಲಾ ಒಂದೇ ಕಡೆ ಇಳಿದುಕೊಳ್ಳುವುದಕ್ಕೆ ಅರ್ಹವಾದ ಆರೋಗ್ಯಕರವಾದ ಪ್ರತ್ಯೇಕವಾದ ಕಟ್ಟಡವನ್ನು ಮಾಡಿಕೊಟ್ಟರೆ ಸಭಿಕರೆಲ್ಲಾ ತುಂಬಾ ಕೃತಜ್ಞರಾಗಿರುತ್ತಾರೆ. ಗವರ್ನಮೆಂಟಿನವರು ಈ ವಿಚಾರವನ್ನು ಯೋಚಿಸಬೇಕಾಗಿದೆ.

ದಿವಾನರವರು—ಮುಂದಿನ ವರುಷದಿಂದ ನೀವು ಕೇಳುವಂಥಾ ಪ್ರತ್ಯೇಕವಾದ ಕಟ್ಟಡವನ್ನು ಸಮರ್ಪಿಸುವುದಕ್ಕೆ ಪ್ರಯತ್ನಪಡುವೆವು. ಬಹುಶಾ ಅಗ್ಗ ಸಿದ್ಧವಾದೀತು. ಈ ವರುಷವೂ ಬೇರೆ ಬೇರೆ ಕಡೆಗಳಲ್ಲಿ ಸ್ಥಳವಸತಿಯನ್ನು ಕಲ್ಪಿಸಿದ್ದೆವು. ಆದರೆ ಅನೇಕ ಮೆಂಬರುಗಳು ಅಲ್ಲಿಗೆ ಹೋಗದೆ ಇತರರ ಮನೆಗಳಲ್ಲೇ ಇಳಿದುಕೊಂಡರು.

ಬಡ ನೌಕರರಿಗೆ ಸರ್ಕಾರದ ಪೋಷಣೆ.

ಕೆಲವು ಮೆಂಬರುಗಳು—ಹತ್ತು ರೂಪಾಯಿನೊಳಗೆ ತಲಬುಳ್ಳ ಸರ್ಕಾರಿ ನೌಕರರು ತಮ್ಮ ಸಂಬಳವನ್ನೆಲ್ಲಾ ಜೀವನಕ್ಕೆ ಖರ್ಚು ಮಾಡಿಬಿಡುತ್ತಾರೆ. ಮುಪ್ಪಿನಲ್ಲಾಗಲಿ ಅಥವಾ ಅವರ ಕಾಲಾನಂತರದಲ್ಲಿ ಅವರ ಸಂಸಾರಕ್ಕಾಗಲಿ ಜೀವನಕ್ಕೆ ಏನೇನೂ ಮಾರ್ಗವಿಲ್ಲದೆ ಕಷ್ಟದುಃಖಗಳಿಗೆ ಗುರಿಯಾಗುವರು. ಆದ್ದರಿಂದ ಅಂಥಾ ನೌಕರರ ಸಂಬಳದಿಂದಲೂ ತಿಂಗಳು ತಿಂಗಳಿಗೆ ಸ್ವಲ್ಪವನ್ನು ಸರ್ಕಾರದವರು ಹಿಡಿದು ಇಡುತ್ತಾ ಬಂದರೆ ಉಪಕಾರವಾದೀತು. ಸರ್ಕಾರದವರು ಮಾಡಿರುವ ಇನ್ಷೂರೆನ್ಸ್ ಕಂಪನಿಗೆ ಇಂಥಾ ಸಣ್ಣ ತಲಬುದಾರರನ್ನೂ ಸೇರಿಸಿಕೊಳ್ಳಬೇಕು. ಈಗ ೧೦ ರೂಪಾಯಿ ತಲಬಿಗೆ ಮೇಲ್ಪಟ್ಟವರನ್ನು ಮಾತ್ರ ಸೇರಿಸಿಕೊಳ್ಳುತ್ತಾರೆ.

ದಿವಾನರವರು—ಹಾಗೆ ಮಾಡೋಣದರಿಂದ ಇನ್ಷೂರೆನ್ಸ್ ಇಲಾಖೆಯ ಕಿಟ್ಟಂದಿಯನ್ನು ಬಹಳವಾಗಿ ಹೆಚ್ಚಿಸಬೇಕಾದೀತು. ಆದರೂ ಈ ಸಲಹೆಯನ್ನು ಆ ಇಲಾಖೆಯ ಕಮಿಟಿಗೆ ಕಳುಹಿಸಿ ಅವರ ಅಭಿಪ್ರಾಯವನ್ನು ತಿಳಿಯುತ್ತೇವೆ.

ಬಗನೀ ಕೇಂದಿ

ಕೆಲವು ಮಲನಾಡು ಮೆಂಬರುಗಳು—ಹಿಡುವಳಿ ಜಮೀನುಗಳಲ್ಲಿ ಇರತಕ್ಕ ಬಗನಿ ಕೇಂದಿಯನ್ನು ಹಿಡುವಳೀದಾರನು ತನ್ನ ಸ್ವಂತ ಉಪಯೋಗಕ್ಕೆ ಮಾತ್ರ ಉಪಯೋಗಿಸಿಕೊಳ್ಳಬಹುದೆಂದು ರೂಲಸು ಮಾಡಲಾಗಿದೆ. ರೈತರೂ ಉಪಯೋಗಿಸಿಕೊಳ್ಳುವಂತೆ ರೂಲಸು ಬದಲಾಯಿಸಿಕೊಡಬೇಕು.

ದಿವಾನರವರು—ಬಿಕರಿಗಲ್ಲದೆ ಸ್ವಂತ ಉಪಯೋಗಕ್ಕಾಗಿ ಮಾತ್ರವೇ ರೈತರು ಉಪಯೋಗಿಸುಕೊಳ್ಳುವುದಾದರೆ ರೈತರೇ ಇಳಿಸಿಕೊಳ್ಳುವಂತೆ ಮೊದಲನೇ ಕೌನ್ಸಿಲರವರು ಹುಕುಂ ಕೊಡುತ್ತಾರೆ.

ತಾಲ್ಲೋಕುಗಳಲ್ಲೆಲ್ಲಾ ಮ್ಯುನಿಸಿಪಾಲಿಟಿಗಳಾಗಬೇಕು

ಮೆ॥ ಬೆಂಗಳೂರು ದಾಸಪ್ಪನವರು—೫,೦೦೦ ಪ್ರಜಾಸಂಖ್ಯೆಗಿಂತ ಹೆಚ್ಚಾಗಿ ಊರನ್ನು ಮ್ಯುನಿಸಿಪಾಲಿಟಿ ಮಾಡಬೇಕೆಂದು ರೂಲಸು ಇದೆ. ತಾಲ್ಲೂಕ್ ಹೆಡ್ ಕ್ವಾರ್ಟರುಗಳಲ್ಲಿ ಇಷ್ಟು ಪ್ರಜಾಸಂಖ್ಯೆ ಇದ್ದರೂ ಇಲ್ಲದಿದ್ದರೂ ಮ್ಯುನಿಸಿಪಾಲಿಟಿ ಇದ್ದೇ ಇರುವಂತಾದರೆ ಪ್ರಜಾ ಆರೋಗ್ಯಕ್ಕೂ ಇತರ ಸೌಕರ್ಯಗಳಿಗೂ ತಾಲ್ಲೋಕಿರುವ ಊರುಗಳು ಚೆನ್ನಾಗುವುದಕ್ಕೂ ಸಹಾಯವಾಗುವುದು

ದಿವಾನರವರು—ಇದು ಒಳ್ಳೆ ಸಲಹೆ, ಈ ವಿಚಾರವನ್ನು ಗವರ್ನಮೆಂಟಿನವರು ಆಲೋಚನೆಮಾಡಿ ಹುಕುಂ ಕೊಡುತ್ತಾರೆ

ಮುನಸಿಪಲ್ ಮೆಂಬರುಗಳು

ಚಿಕ್ಕಮಗಳೂರು ಮೆ॥ ರಸೂಲ್ ಖಾನ್ ಸಾಹೇಬರು—ಮುನಸಿಪಲ್ ಜನರು ತಮ್ಮ ಪ್ರತಿನಿಧಿಗಳನ್ನು ಮ್ಯುನಿಸಿಪಾಲಿಟಿಗಳಿಗೆ ಚುನಾಯಿಸಿ ಕಳುಹಿಸುವಂತೆ ರಿಯಾಯತಿ ತೋರಿಸಬೇಕು

ದಿವಾನರವರು—ಮ್ಯುನಿಸಿಪಲ್ ಕಮಿಷನರುಗಳನ್ನು ಚುನಾವಣೆ ಮಾಡತಕ್ಕ ವಿಚಾರದಲ್ಲೂ ಬೇರೆ ಬೇರೆ ಕೋಮುಗಳ ಪ್ರತಿನಿಧಿಗಳನ್ನು ಸರ್ಕಾರದವರೇ ನೇಮಿಸತಕ್ಕ ವಿಚಾರದಲ್ಲೂ ಕ್ರಮವಾಗಿ ರೂಲಸು ಮಾಡಿದೆ. ಡೆಪ್ಯುಟಿ ಕಮಿಷನರು ಈ ವಿಚಾರದಲ್ಲಿ ತಕ್ಕ ನಿರ್ಣಯ ಕೊಡುತ್ತಾರೆ.

ಆಕ್ಟ್ರಾಯ್ ಸುಂಕಗಳು

ಹೊಳೆನರಸೀಪುರದ ಮೆ॥ ವೆಂಕೋಬರಾಯರು—ಮ್ಯುನಿಸಿಪಾಲಿಟಿಗಳಲ್ಲಿ ಹೊರಗಿನಿಂದ, ಅಂದರೆ ಈ ಸಂಸ್ಥಾನದ ಇತರ ಕಡೆಗಳಿಂದ, ಬರತಕ್ಕ ನಮ್ಮ ಕಾರ್ಖಾನೆಗಳಿಂದ ಮಾಡಿದ ಬಟ್ಟೆಬರೆಗಳಿಗೆ ಆಕ್ಟ್ರಾಯ್ ಸುಂಕವನ್ನು ಹಾಕಿ ವಸೂಲ್ಮಾಡುತ್ತಾರೆ. ಆಯಾ ಸ್ಥಳದಲ್ಲೇ ತಯಾರಾಗುವ ಸಾಮಾನುಗಳಿಗೆ ಈ ಸುಂಕವಿಲ್ಲ. ಇನ್ನೊಂದೂರಿಗೆ ತೆಗೆದುಕೊಂಡು ಹೋದರೆ ಸುಂಕ ಕೊಡಬೇಕು. ಇದರಿಂದ ಸ್ವದೇಶೀ ಕಸಬಿಗೆ ಪ್ರೋತ್ಸಾಹವಿಲ್ಲದೆ ಕ್ಷೀಣಗತಿಗೆ ಬರುತ್ತಿದೆ

ದಿವಾನರವರು—ಈ ಸುಂಕವು ಆಯಾ ಮ್ಯುನಿಸಿಪಾಲಿಟಿಯವರು ಅವರ ಉಪಯೋಗಕ್ಕಾಗಿ ಹಾಕತಕ್ಕದ್ದು. ಇದನ್ನು ಹಾಕುವ ವಿಚಾರದಲ್ಲಿ ಗವರ್ನಮೆಂಟಿನವರು ಪ್ರವೇಶಿಸುವುದಿಲ್ಲ. ಈ ಸುಂಕದ ವಿಷಯ ಮತ್ತೆ ಈ ಸಭೆಯಲ್ಲಿ ಯಾರೂ ಚರ್ಚೆಗೆ ತರಕೂಡದು

ಆರೋಗ್ಯಕರವಾದ ಮನೆಮಾಡುಗಳು

ಮೈಸೂರು ಮೆ॥ ವೆಂಕಟಕೃಷ್ಣಯ್ಯನವರು—ಪಟ್ಟಣ, ಊರು, ಗ್ರಾಮಗಳಲ್ಲಿರತಕ್ಕ ಪ್ರಜೆಗಳೆಲ್ಲಾ ಅವರ ಮನೆಗಳಿಗೆ ಬೆಳಕು ಗಾಳಿ ಧಾರಾಳವಾಗಿ ಬರುವಂತೆ ಮಾಡಿಕೊಳ್ಳುವುದಕ್ಕೆ ಗವರ್ನಮೆಂಟಿನವರು ಪ್ರೋತ್ಸಾಹಕರವಾದ ಏರ್ಪಾಡುಗಳನ್ನು ಮಾಡಿಕೊಡಬೇಕು

ದಿವಾನರವರು—ಸರ್ಕಾರಿ ಅಧಿಕಾರಿಗಳು ಈ ಭಾಗದಲ್ಲಿ ಮಾತಬಿಡುವದನ್ನು ಮಾಡಲು ಪ್ರಯತ್ನಪಡುತ್ತಿದ್ದಾರೆ. ಆದರೆ ಪ್ರಜೆಗಳ ಮುಖಂಡರಾದ ವಿದ್ಯಾವಂತರು ಪ್ರತಿ ಒಂದು ಸ್ಥಳದಲ್ಲೂ ಒಂದೊಂದು ಸಂಘವನ್ನು ಮಾಡಿಕೊಂಡು ಪ್ರಜೆಗಳಿಗೆ ಆಗಾಗ್ಗೆ ಇಂಥಾ ಆರೋಗ್ಯಜನಕವಾದ ಕೆಲಸಗಳು ಮಾಡಿಕೊಳ್ಳುವಂತೆ ಕಲಿಸಿಕೊಡುತ್ತಾ, ಅವರಿಗೆ ಪ್ರೋತ್ಸಾಹಪಡಿಸುತ್ತಾ ಬರಬೇಕಾಗಿದೆ

ಲಾಂಟಾನಾ ಪೊದೆಗಳ ಬೆಳವಳಿಗೆ

ಅನೇಕ ಮೆಂಬರುಗಳು—ಲಾಂಟಾನಾ ಗಿಡಗಳು ಅನೇಕ ಕಡೆ ಹಬ್ಬಿ ಜಮೀನುಗಳನ್ನೂ ಗ್ರಾಮಗಳನ್ನೂ ನಾಶಪಡಿಸುತ್ತಲಿವೆ. ಈ ಗಿಡಗಳನ್ನು ನಾಶಮಾಡುವುದಕ್ಕೆ ಸರ್ಕಾರದವರು ಏನಾದರೂ ಏರ್ಪಾಡು ಮಾಡಿಕೊಡಬೇಕೆಂದು ಹೋದ ವರುಷದ ಸಭೆಯಲ್ಲಿ ಕೇಳಿಕೊಂಡಾಗ ಕೊಡಗಿನಲ್ಲಿ ಜಾರಿಯಲ್ಲಿರತಕ್ಕ ಕ್ರಮಗಳನ್ನು ಇಲ್ಲಿಗೂ ಜಾರಿಗೆ ತಂದು, ಆ ಗಿಡಗಳ ಹಬ್ಬುವಿಕೆಯನ್ನು ತಡೆಯುವುದಾಗಿ ಅಪ್ಪಣೆಯಾಗಿತ್ತು. ಇದು ವರೆಗೂ ಈ ಭಾಗದಲ್ಲಿ ಸರ್ಕಾರದವರು ಯಾವ ಏರ್ಪಾಡನ್ನೂ ಜಾರಿಗೆ ತರಲಿಲ್ಲ. ಇದು ಬಹು ಅವಶ್ಯವಾದದ್ದು. ಬೇಗನೆ ಹುಕುಂ ದಯಪಾಲಿಸಬೇಕು

ಪುರಸ್ಕ ಕೌನ್ಸಲರವರು—ಕೊಡಗಿನಲ್ಲಿ ಆಯಾ ಜಮೀನುದಾರರೇ ತಮ್ಮ ಜಮೀನಲ್ಲಿರುವ ಗಿಡಗಳನ್ನು ನಾಶಮಾಡಬೇಕೆಂತಲೂ ಇಲ್ಲದಿದ್ದರೆ ಶಿಕ್ಷಿಸುವುದಾಗಿಯೂ ರೂಲುಸು ಮಾಡಿದಾರೆ

ದಿವಾನರವರು—ನಮ್ಮ ಸಂಸ್ಥಾನದಲ್ಲೂ ಅಂಥಾ ರೂಲಸನ್ನೇ ಮಾಡಿ ಜಾರೀಲಿ ತರುತ್ತೇವೆ

ಪ್ಲೇಗ್ ನಿರೋಧಕ ಕಾರ್ಯಗಳು

ಚಿಕ್ಕಮಗಳೂರು ಮೆ॥ ಶ್ರೀನಿವಾಸರಾಯರು—ಗ್ರಾಮಾಂತರಗಳಲ್ಲಿ ಪ್ಲೇಗ್ ಬಂದಾಗ್ಗೆ ಅದರ ಬಾವಿಗೆ ಸಿಕ್ಕಿ ಅನೇಕರು ಅಕಾಲ ಮರಣವನ್ನು ಹೊಂದುತ್ತಾರೆ ಪ್ರತಿ ಹಳ್ಳಿಗೂ ಒಂದೊಂದು ಆರೋಗ್ಯಕರವಾದ ಪ್ರದೇಶವನ್ನು ಗೊತ್ತುಮಾಡಿ, ಬೇಸಿಗೆಯಲ್ಲೇ ಜನರಿಗೆ ಗುಡಿಸಲು ಸಾಮಾನು ಕೊಡಿಸಿಕೊಟ್ಟರೆ ಸರ್ಕಾರದವರ ಸಾಹಸವು ಸಾರ್ಥಕವಾಗುವುದು ಮಳೆಗಾಲದಲ್ಲಿ ಸಾಮಾನನ್ನು ಜನರಿಗೆ ಕೊಡಿಸಿದರೂ ಪ್ರಯೋಜನವಿಲ್ಲ.

ದಿವಾನರವರು—ಪ್ರತಿ ವರುಷವೂ ಪ್ಲೇಗ್ ಬರತಕ್ಕ ಊರುಗಳ ಬಳಿ ಆರೋಗ್ಯಕರವಾದ ಬೈಲು ಪ್ರದೇಶಗಳನ್ನು ಗೊತ್ತುಮಾಡಬೇಕೆಂತಲೂ, ಖಾಯಮಾದ ಕೆಲವು ಬಳ್ಳೇ ಜೋಪಡಿಗಳನ್ನು ಕಟ್ಟಿಸಿ ಇಡಿಸಬೇಕೆಂತಲೂ, ಸಕಾಲದಲ್ಲೇ ಜನರಿಗೆ ಜೋಪಡಿ ಹಾಕಿಕೊಳ್ಳುವುದಕ್ಕೆ ಸಾಮಾನು ಕೊಡಿಸಬೇಕೆಂತಲೂ ಕೆಲವು ರೂಲಸು ಮಾಡಿ ಬೇಗ ಜಾರೀಗೆ ತರುತ್ತೇವೆ

ವೀರಶೈವರೂ ಸಂಸ್ಕೃತ ವಿದ್ಯಾಭ್ಯಾಸವೂ

ಚಾಮರಾಜನಗರದ ಮೆ॥ ಸಿದ್ಧಗಂಗಪ್ಪನವರು—ಮೈಸೂರಿನಲ್ಲೂ ಬೆಂಗಳೂರಿನಲ್ಲೂ ಇರುವ ಸರ್ಕಾರಿ ಸಂಸ್ಕೃತ ಕಾಲೇಜುಗಳಿಗೆ ವೀರಶೈವ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುವುದಿಲ್ಲ ಅದ್ದರಿಂದ ಆ ಹುಡುಗರಿಗೆ ಸಂಸ್ಕೃತ ಕಲಿಯಬೇಕೆಂಬ ಕುತೂಹಲವಿದ್ದರೂ ಅವಕಾಶವಿಲ್ಲವಾಗಿದೆ. ಗವರ್ನಮೆಂಟಿನವರು ಅವರಿಗಾಗಿಯೇ ಒಂದೆರಡು ಕಡೆ ಸಂಸ್ಕೃತ ವಿದ್ಯಾಶಾಲೆಯನ್ನು ಕಲ್ಪಿಸಿಕೊಡಬೇಕು

ದಿವಾನರವರು—ಇದು ಅವಶ್ಯವಾದ ವಿಷಯ. ಇದಕ್ಕೆ ಪರಿಹಾರ ಮಾಡಿಕೊಡುವ ಭಾಗದಲ್ಲಿ ಗವರ್ನಮೆಂಟಿನವರು ಆಲೋಚನೆಮಾಡುವರು.

ಅಮರವನ್ನು ಸರ್ಕಾರಿ ಸ್ಕೂಲುಗಳಲ್ಲಿ ಹೇಳಿಕೊಡುವುದು

ಅನೇಕ ಮೆಂಬರುಗಳು—ಅಮರಕೋಶವನ್ನು ಸರ್ಕಾರಿ ಸ್ಕೂಲುಗಳಲ್ಲಿ ಮಕ್ಕಳಿಗೆ ಕಲಿಸಬೇಕೆಂಬದಾಗಿ ಅನೇಕ ವರುಷಗಳಿಂದ ಈ ಸಭೆಯಲ್ಲಿ ಅರಿಕೆಮಾಡಿಕೊಳ್ಳುತ್ತಿದ್ದೇವೆ ಹೋದ ವರುಷ ಈ ವಿಷಯದಲ್ಲಿ ಕೂಡ್ಲೆ ಹುಕುಂ ಕೊಡುವುದಾಗಿ ಅಪ್ಪಣೆಯಾಗಿತ್ತು

ಮೆ॥ ಭಾಭಾಸಾಹೇಬರು—ಅಮರವನ್ನು ಚಿಕ್ಕ ಮಕ್ಕಳಿಗೆ ಹೇಳಿಕೊಡುವುದು ತುಂಬಾ ಅನುಚಿತವೆಂಯೆ ತೆಗೆದುಹಾಕಿದೆ ಮಕ್ಕಳು ಶಬ್ದಗಳನ್ನು ಉಚ್ಚರಿಸಲಾರರು. ಅನೇಕ ಉಪಾಧ್ಯಾಯರೂ ಅಮರವನ್ನು ಸ್ವಚ್ಛವಾಗಿ ಬೋಧಿಸಲಾರರು. ಮಕ್ಕಳಿಗೆ ಬರೀ ಕಂಠಪಾಠ ಮಾಡಿಸೋಣವೆಂದ ಅವರು ಗಿಳಿಗಳ ಹಾಗಾಗುತ್ತಾರೆ ಅವರ ಬುದ್ಧಿಶಕ್ತಿಯು ಕೆಡುವುದು ಇನ್ಸ್ಪೆಕ್ಟರ್ ಮೆ॥ ರಂಗಾಚಾರ್ಯರೂ, ಬೊಂಬಾಯಿನಲ್ಲಿರುವ ಡಾ॥ ಬಂಡಾರ್ಕರವರೂ ಮಕ್ಕಳಿಗೆ ಅಮರವನ್ನು ಕಂಠಪಾಠ ಮಾಡಿಸುವುದು ಒಳ್ಳೇದಲ್ಲವೆಂದು ಅಭಿಪ್ರಾಯಪಡುತ್ತಾರೆ

ಎರಡನೆ ಕೌನ್ಸಲರವರು—ಅಮರ ಹೇಳಿಕೊಡುವುದು ಮಕ್ಕಳಿಗೆ ಬಹಳ ಒಳ್ಳೇದು ಅದರಿಂದ ಅವರ ಉಚ್ಚಾರಣೆಯ ಶಕ್ತಿ ಚನ್ನಾಗುವುದು ಬರವಣಿಗೆಯಲ್ಲೂ ತಪ್ಪುಗಳು ಬರುವುದಿಲ್ಲ. ನಾವೆಲ್ಲಾ ಚಿಕ್ಕಂದಿನಲ್ಲಿ ಅಮರವನ್ನು ಕಲಿತಿರುತ್ತೇವೆ

ಅಂಡರ್ ಸೆಕ್ರಟರಿ ಮೆ॥ ಕೆ ಮತ್ತೂರವರು—ನಮಗೆ ಬಾಯಿ ತಿರುಗುವುದಕ್ಕೂ ಬರವಣಿಗೆ ಚನ್ನಾಗುವುದಕ್ಕೂ ಚಿಕ್ಕಂದಿನಲ್ಲಿ ಅಮರವನ್ನು ಕಲಿಸಿದರು. ಆದರಿಂದ ತುಂಬಾ ಪ್ರಯೋಜನ ಉಂಟು

ಕ್ಯೂರೇಟರ್ ಮೆ॥ ನಂಜದೇವಶಾಸ್ತ್ರಿಗಳು—ಅಮರವನ್ನು ಮಕ್ಕಳಿಗೆ ಹೇಳಿಕೊಡುವುದು ಅವರ ಭಾಷಾಭಿವೃದ್ಧಿಗೂ ಶಬ್ದೋಚ್ಚಾರಣೆಗೂ ಅದು ತುಂಬಾ ಸಹಾಯವಾಗಿದೆ ಅದನ್ನು ಕಲಿಸದೆ ಬಿಟ್ಟಿರುವುದು ಭಾಷಾಭಿವೃದ್ಧಿಗೆ ತುಂಬಾ ಕೊರತೆಯಾಗಿದೆ.

ದಿವಾನರವರು—ಪ್ರಜಾಪ್ರತಿನಿಧಿಗಳ ಪೈಕಿ ಬ್ರಾಹ್ಮಣೇತರರಾದ ಮೆಂಬರುಗಳಿಷ್ಟು ಮಂದಿ ಅಮರ ಕಲಿಕೊಡಬೇಕೆನ್ನುತ್ತಾರೆ?

ಬ್ರಾಹ್ಮಣೇತರರಾದ ಮೆಂಬರುಗಳೆಲ್ಲಾ ಎದ್ದುನಿಂತು—ಅಮರವನ್ನು ನಮ್ಮ ಮಕ್ಕಳಿಗೆ ಅಗತ್ಯವಾಗಿ ಕಲಿಸುವಂತೆ ಸ್ಕೂಲುಗಳಿಗೆ ಅಪ್ಪಣೆ ಕೊಡಬೇಕು

ದಿವಾನರವರು—ಹಾಗಾದರೆ ಅಮರವನ್ನು ಈ ಸಂಸ್ಥಾನದ ಸಮಸ್ತ ಸ್ಕೂಲುಗಳಲ್ಲೂ ಮೂರನೇ ತರಗತಿಯಿಂದ ಪ್ರಾರಂಭಿಸಿ ಮಕ್ಕಳಿಗೆ ಅಗತ್ಯವಾಗಿ ಕಲಿಸುವಂತೆ ಹುಕುಂ ಕೊಡುತ್ತೇವೆ ಅದನ್ನು ಕಲಿಸುವುದು ಅವಶ್ಯವೆಂದು ಗವರ್ನಮೆಂಟಿನವರಿಗೂ ಗೊತ್ತಾಗಿದೆ

ಪಾರ್ಲಿಮೆಂಟ್ ಮೆಂಬರು ಮೈಸೂರಿಗೆ ಬಂದಿದ್ದದ್ದು.

ವಿಲಾಯತಿ ಪಾರ್ಲಿಮೆಂಟಿನಲ್ಲಿ ಒಬ್ಬ ಮೆಂಬರಾಗಿರುವ ಮೆ॥ ಕೀರ್ ಹಾರ್ಡಿ ಎಂಬವರು ಕಳೆದ ಗುರುವಾರ ಬೆಳಿಗ್ಗೆ ರಾಜಧಾನಿಯಾದ ಮೈಸೂರು ಪಟ್ಟಣಕ್ಕೆ ಬಂದಿಳಿದರು ರೈಲ್ ಸ್ಟೇಷನ್ನಲ್ಲಿ ಇಲ್ಲಿನ ಅನೇಕ ದೊಡ್ಡ ಮನುಷ್ಯರೂ ಸಾಹುಕಾರರೂ ವಿದ್ಯಾರ್ಥಿಗಳೂ ಕಾದಿದ್ದು ಅವರನ್ನು ಮರ್ಯಾದೆಯಿಂದ ಎದುರುಗೊಂಡರು ಶ್ರೀಮನ್ಮಹಾರಾಜರವರ ಆತಿಥ್ಯವನ್ನು ಸ್ವೀಕರಿಸಿ ಮೆ॥ ಕೀರ್ ಹಾರ್ಡಿಯವರು ಸರ್ಕಾರಿ ಗಾಡಿಯಲ್ಲಿ ಕುಳಿತು ರೆಸಿಡೆನ್ಸಿ ಬಂಗಲೆಗೆ ಬಂದಿಳಿದರು ಸ್ವಲ್ಪ ಹೊತ್ತಿನೊಳಗಾಗಿ ಮೆ॥ ಕೀರ್ ಹಾರ್ಡಿಯವರು ಗಾಡಿಯಲ್ಲಿ ಹೊರಟು ಪ್ರದರ್ಶನಶಾಲೆಯನ್ನು ನೋಡಿಕೊಂಡು ಬಂದದ್ದಲ್ಲದೆ ದಿವಾನರೇ ಮೊದಲಾದವರೆಲ್ಲ ಕಂಡು ಮಾತನಾಡಿಕೊಂಡು ಬಂದರು ಭೋಜನಾನಂತರ ಮೋಟಾರ್ ಗಾಡಿಯಲ್ಲಿ ಕುಳಿತು ಗ್ರಾಮಾಂತರಗಳ ಮೇಲೆ ಸಾಯಂಕಾಲದ ತನಕ ಸಂಚಾರ ಮಾಡಿಕೊಂಡು, ಗ್ರಾಮಗಳ, ಹೊಲ ಗದ್ದೆಗಳ, ಮತ್ತು ರೈತ ಪ್ರಜೆಗಳ ಸ್ಥಿತಿಗತಿಗಳನ್ನು ಕಣ್ಣಾರ ನೋಡಿಕೊಂಡು ಬಂದರು ರಾತ್ರಿಯೂ ಮತ್ತೆ ಪ್ರದರ್ಶನಶಾಲೆಗೆ ಹೋಗಿದ್ದು ಅಲ್ಲಿನ ವಸ್ತು ವಿಶೇಷಗಳನ್ನು ಪರೀಕ್ಷಿಸಿ ತುಂಬಾ ಸಂತೋಷಪಟ್ಟವರಾಗಿ ವಾಪಸು ಬಂದು, ಬಂಗಲೆಯಲ್ಲಿ ಕೆಲವು ದೇಶೀಯ ದೊಡ್ಡ ಮನುಷ್ಯರ ಕೂಡ ಸ್ವಲ್ಪ ಹೊತ್ತು ಮಾತನಾಡುತ್ತಿದ್ದರು. ಮರುದಿವಸ ಬೆಳಿಗ್ಗೆ ಮೆ॥ ಕೀರ್ ಹಾರ್ಡಿಯವರು ಬಂಗಲೆಯಲ್ಲೇ ಇದ್ದು ಬೇರೆ ಬೇರೆ ಕೋಮುಗಳ ದೊಡ್ಡ ಮನುಷ್ಯರಿಗೆ ಭೇಟಿ ಕೊಟ್ಟ ಹಾಗೆ ಕೇಳುತ್ತೇನೆ ಮಧ್ಯಾಹ್ನ ಹೊಸ ಅರಮನೆಯನ್ನೂ, ಮಹಾರಾಜರವರ ಕಾಲೇಜನ್ನೂ, ಮಹಾರಾಣಿಯವರ ಕಾಲೇಜನ್ನೂ ನೋಡಿದ್ದಲ್ಲದೆ ಶ್ರೀಮನ್ಮಹಾರಾಜರವರ ಭೇಟಿಮಾಡಿ, ಅವರ ಕೂಡ ಸುಮಾರು ಮುಕ್ಕಾಲು ಗಂಟೆಯ ಹೊತ್ತು ಸಂಭಾಷಣೆ ಮಾಡಿಕೊಂಡು ಬಂದು, ಮೋಟಾರ್ ಗಾಡಿಯಲ್ಲಿ ರಾಜಧಾನಿಯಿಂದ ಹೊರಟು ಶ್ರೀರಂಗಪಟ್ಟಣಕ್ಕೆ ಹೋಗಿ ಅಲ್ಲಿರತಕ್ಕ ಚರಿತ್ರಾರ್ಹವಾದ ಸಂಗತಿಗಳನ್ನೆಲ್ಲಾ ನೋಡಿ, ಸುಮಾರು ೫॥ ಗಂಟೆಗೆ ವಾಪಸು ಬಂದರು ಇಲ್ಲಿನ ದೊಡ್ಡ ಮನುಷ್ಯರೆಲ್ಲಾ ಕಾಸ್ಮಾಪಾಲಿಟನ್ ಕ್ಲಬ್ ಎಂಬ ಮಂದಿರದಲ್ಲಿ ಮೆ॥ ಕೀರ್ ಹಾರ್ಡಿಯವರಿಗೋಸ್ಕರ ಒಂದು ಸಂತೋಷ ಸಭೆಯನ್ನು ಕಲ್ಪಿಸಿದ್ದರು. ದಿವಾನರು, ಮೊದಲನೇ ಕೌನ್ಸಲರು, ರೆವಿನ್ಯೂ ಕಮಿಷನರು, ಈ ಮೊದಲಾದ ಅಧಿಕಾರಿಗಳೂ ಎಲ್ಲಾ ಕೋಮುಗಳ ದೊಡ್ಡ ಮನುಷ್ಯರೂ ನೂರಾರು ಮಂದಿಯ ತನಕ ಅಲ್ಲಿ ಸೇರಿದ್ದರು ವೈಣಿಕ ಶಿಖಾಮಣಿ ಮೆ॥ ಶೇಷಣ್ಣನವರ ವೀಣಾ ಗಾನವೂ, ಹಾರ್ಮೋನಿಯಂ ವಾದ್ಯ ಗಾನವೂ, ಬರೋಡಾ ಸಂಸ್ಥಾನದ ಸಂಗೀತ ವಿದ್ವಾಂಸರ ಜಾಮಗಾರರವರೂ ಅವರ ಜಲತರಂಗ ವಾದ್ಯ ಗಾನವೂ ನಡೆದ ಮೇಲೆ ಫಲಾಹಾರಗಳು ಕೊಡಲ್ಪಟ್ಟವು. ತರುವಾಯ ಮೆ॥ ವಿ ಪಿ ನರಸಿಂಹಯ್ಯಂಗಾರ್ಯ ಸಂಘದ ಪರವಾಗಿ ಮೆ॥ ಕೀರ್ ಹಾರ್ಡಿಯವರಿಗೆ ಹಾರ ಹಾಕಿ ತಾರೀಫು ಕೊಟ್ಟು, ಅವರು ಹಿಂದುಸ್ಥಾನದ ವಿದ್ಯಮಾನಗಳನ್ನು ಸಾಕ್ಷಾತ್ತಾಗಿ ತಿಳಿದುಕೊಂಡು ಹೋಗುವುದಕ್ಕಾಗಿ ವಿಲಾಯತಿಯಿಂದ ಇಷ್ಟು ದೂರ ಬಂದಿರುವುದಕ್ಕಾಗಿ ಅವರನ್ನು ವಂದಿಸಿ, ಹಿಂದುಸ್ಥಾನದ ಪ್ರಜೆಗಳು ಕಾಡುಜನರಲ್ಲವೆಂತಲೂ, ಅವರಲ್ಲೂ ನಾಗರಿಕತೆಯು ತಕ್ಕಮಟ್ಟಿಗೆ ಇದ್ದೇ ಇದೆಯಾದ್ದರಿಂದ ಇಂಗ್ಲಿಷ್ ಗವರ್ನಮೆಂಟಿನವರು ಅವರನ್ನು ಯೋಗ್ಯವಾದ ರೀತಿಯಲ್ಲಿ ಆಳುವುದು ಧರ್ಮವಾಗಿದೆ ಎಂತಲೂ, ಅವರಲ್ಲಿ ರಾಜದ್ರೋಹದ ಕಲ್ಪನೆಯೇ ಇರುವುದಿಲ್ಲವೆಂತಲೂ, ಇಂಗ್ಲಿಷ್ ಗವರ್ನಮೆಂಟಿನವರು ಅವರ ಯೋಗ್ಯತಾನುಸಾರ ಅವರಿಗೆ ಹೆಚ್ಚು ಹೆಚ್ಚಾಗಿ ಸ್ವರಾಜ್ಯಾಧಿಕಾರಗಳನ್ನು ಕೊಡುತ್ತಾ ಬರಬೇಕೆಂತಲೂ, ಹಿಂದುಸ್ಥಾನದಲ್ಲಿರತಕ್ಕ ಬೇರೆ ಬೇರೆ ಪಂಗಡಗಳ ಜನರಲ್ಲಿ ಪರಸ್ಪರ ವೈಷಮ್ಯವಾಗಲಿ ಮನಸ್ತಾಪವಾಗಲಿ ಲವಲೇಶವೂ ಇರುವುದಿಲ್ಲವೆಂತಲೂ, ಈ ಸಂಗತಿಗಳನ್ನೆಲ್ಲಾ ಪ್ರತ್ಯಕ್ಷವಾಗಿ ವಿಲಾಯತಿಯ ಪ್ರಜಾ ಕೋಟಿಗಳಿಗೆ ತಿಳಿಸಿ ಹಿಂದುಸ್ಥಾನದ ಶ್ರೇಯೋಭಿವೃದ್ಧಿಗೆ ಸಹಾಯಕರಾಗಬೇಕೆಂತಲೂ ಮೆ॥ ಕೀರ್ ಹಾರ್ಡಿಯವರಿಗೆ ಹೇಳಿದರು. ಮೆ॥ ಕೀರ್ ಹಾರ್ಡಿಯವರು ಎದ್ದು ಸಂಘದವರು ತಮಗೆ ಮಾಡಿದ ಸನ್ಮಾನಕ್ಕಾಗಿ ಅವರನ್ನು ಮನಃಪೂರ್ವಕವಾಗಿ ವಂದಿಸಿ, ಪ್ರತ್ಯುತ್ತರವಾಗಿ ಹೇಳಿದ್ದೇನೆಂದರೆ—

"ನಾನು ಆಳುವ ಜನಾಂಗದವನಾಗಿ ಆಳಲ್ಪಡತಕ್ಕವರನ್ನು ನೋಡುವ ಉದ್ದೇಶ್ಯ ಈ ರಾಷ್ಟ್ರಕ್ಕೆ ಬಂದವನಲ್ಲ ಸಾಮಾನ್ಯ ಮನುಷ್ಯನಾಗಿ ಮನುಷ್ಯನನ್ನೂ ಅವನ ಸ್ಥಿತಿಗತಿಯನ್ನೂ ಕಣ್ಣಾರ ನೋಡಿಕೊಂಡು ಹೋಗುವ ಉದ್ದೇಶ್ಯ ಬಂದಿರುತ್ತೇನೆ ಈ ರಾಷ್ಟ್ರದಲ್ಲಿ ಇದುವರೆಗೂ ಅನೇಕ ದೇಶಗಳನ್ನು ಸುತ್ತಿ ಬಂದಿರುವೆನು. ಬೇರೆ ಬೇರೆ ಪಂಗಡಗಳ ಜನರು ಪರಸ್ಪರ ದ್ವೇಷಿಸುತ್ತಾರೆಂಬುವುದು ನಿಜವಲ್ಲ ರಾಜದ್ರೋಹಿಗಳೆಂದು ನಿರ್ಧರಿಸಲ್ಪಟ್ಟು ಜೈಲನ್ನು ಅನುಭವಿಸುತ್ತಿರುವಂಥಾ ಜನಗಳನ್ನು ಕೂಡ ನೋಡಿ ಅವರ ಕೂಡ ಮಾತನಾಡಿದೇನೆ ಅವರು ಕೂಡ ಇಂಗ್ಲಿಷ್ ರಾಜ್ಯಭಾರವು ಹೋಗಿ ಈ ರಾಷ್ಟ್ರದವರಿಗೇನೇ ಸರ್ವಸ್ವಾತಂತ್ರ್ಯವೂ ಲಭ್ಯವಾಗಬೇಕೆನ್ನುವವರಾಗಿಲ್ಲ, ಇಂಗ್ಲಿಷ್ ಪ್ರಭುತ್ವವು ಈ ರಾಷ್ಟ್ರದಲ್ಲಿ ಇದ್ದೇ ತೀರಬೇಕು, ಆದರೆ ಹಿಂದುಸ್ಥಾನದ ಪ್ರಜೆಗಳಿಗೆ ಯೋಗ್ಯತಾನುಸಾರ ಹೆಚ್ಚು ಹೆಚ್ಚಾದ ಸ್ವರಾಜ್ಯಾಧಿಕಾರಗಳನ್ನು ಕೊಡುತ್ತಾ ಬರಬೇಕೆಂದು ಅಪೇಕ್ಷಿಸುವವರಾಗಿದ್ದಾರೆ ಹೀಗಿರುವಲ್ಲಿ ಈ ರಾಷ್ಟ್ರದೊಳಗೆ ರಾಜದ್ರೋಹವೇನೂ ಕಾಣುವುದಿಲ್ಲ ಎಲ್ಲಾ ಕೋಮಿನವರೂ ಏಕೀಭವಿಸಿ ಕಾರ್ಯಗಳನ್ನು ನಡಿಸುತ್ತಿದ್ದಾರೆ ಇದು ಶ್ರೇಯಸ್ಕರವಾದದ್ದೆಂತಲೂ, ಕಾಲಾನುಗುಣ್ಯವಾಗಿ ವಿಲಾಯತಿ ಗವರ್ನಮೆಂಟಿನವರು ಇಲ್ಲಿನವರಿಗೆ ಸ್ವತಂತ್ರಾಧಿಕಾರಗಳನ್ನು ಕೊಡುತ್ತಾ ಬಂದಾರೆಂತಲೂ, ಇಲ್ಲಿ ನಾನು ನೋಡಿದ ಸಕಲ ವಿದ್ಯಮಾನಗಳನ್ನೂ ವಿಲಾಯತಿಯ ಪ್ರಜೆಗಳಿಗೆ ತಿಳಿಯಪಡಿಸಿ, ನಿಮ್ಮ ನ್ಯಾಯವಾದ ಅಭಿಲಾಷೆಗಳೆಲ್ಲಾ ನೆರವೇರುವಂತೆ ಪ್ರಯತ್ನ ಪಡುತ್ತೇನೆಂತಲೂ ಕೇಳುವೆನು ಮೈಸೂರು ಸಂಸ್ಥಾನದ ರೈತ ಪ್ರಜೆಗಳು ಇತರ ಕಡೆಗಳ ರೈತರಿಗಿಂತ ಚನ್ನಾಗಿದ್ದಾರೆ ಇಲ್ಲಿ ಆಳುವವರಿಗೂ ಪ್ರಜೆಗಳಿಗೂ ಬಹು ವಿಶೇಷವಾದ ಅನುರಾಗವಿರುತ್ತದೆ ಶ್ರೀಮನ್ಮಹಾರಾಜರವರು ತುಂಬಾ ಸೌಹಾರ್ದ್ರಹೃದಯರಾಗಿಯೂ, ಪ್ರಜಾವಾತ್ಸಲ್ಯಶೀಲರಾಗಿಯೂ ಇರುತ್ತಾರೆನ್ನುವುದರಲ್ಲಿ ನಾನು ಸಂಶಯಪಡುವುದಿಲ್ಲ" ಎಂಬೀ ರೀತಿಯಾಗಿ ಹೇಳಿ, ಸಭಿಕರನ್ನು ವಂದಿಸಿ, ಬಂಗಲೆಗೆ ದಯಮಾಡಿದರು.

ಶನಿವಾರ ಬೆಳಿಗ್ಗೆ ಮೆ॥ ಕೀರ್ ಹಾರ್ಡಿಯವರು ಇಲ್ಲಿನ ಮಿಷನ್ ಪ್ರೆಸ್, ಮಿಷನ್ ಆಸ್ಪತ್ರೆ, ಈ ಮೊದಲಾದವುಗಳನ್ನು ನೋಡಿ ಅಲ್ಲಿ ನಡಿಯುವ ಕೆಲಸಕಾರ್ಯಗಳ ವಿಷಯದಲ್ಲಿ ತುಂಬಾ ಸಂತೋಷಪಟ್ಟವರಾಗಿ ವಾಪಸು ಬಂಗಲೆಗೆ ಹೋಗಿ ಭೋಜನವನ್ನು ತೀರಿಸಿಕೊಂಡು, ಮೆಯಿಲ್ ಗಾಡಿ ಹತ್ತಿ ಕೋಲಾರ್ ಚಿನ್ನದ ಗಣಿಗಳನ್ನು ನೋಡುವ ಉದ್ದೇಶ್ಯ ಬೆಂಗಳೂರಿಗೆ ಪ್ರಯಾಣಮಾಡಿದರು

ಜನೋಪಕಾರಿ ಮೆ॥ ಸಾಹುಕಾರ್ ದೊಡ್ಡಣ್ಣಶೆಟ್ಟರಿಗೆ ಮಾಡಿದ ಸತ್ಕಾರವು.

ಬೆಂಗಳೂರಿನಲ್ಲಿ ನಡೆದ ಸಭೆ

ಕಳೆದ ಭಾನುವಾರ ಸಾಯಂಕಾಲ ೬ ಘಂಟೆಗೆ ಬೆಂಗಳೂರು ಕೋಟೆ ಬಳಿ ಇರುವ ಮೆ॥ ದೊಡ್ಡಣ್ಣನವರ ಛತ್ರಶಾಲೆಯಲ್ಲಿ ಆ ಊರು ನಿವಾಸಿಗಳೂ ಮತ್ತು ಮೆ॥ ದೊಡ್ಡಣ್ಣನವರ ಮತಸ್ಥರಾದ ಜ್ಯೋತಿನಗರದ ವೈಶ್ಯಮಂಡಲಿಯವರೂ ಸೇರಿ ಶ್ರೀಮನ್ಮಹಾರಾಜರವರು ಮೆ॥ ದೊಡ್ಡಣ್ಣಶೆಟ್ಟರಿಗೆ "ಜನೋಪಕಾರಿ" ಎಂಬ ಬಿರುದನ್ನು ದಯಪಾಲಿಸಿದ್ದಕ್ಕಾಗಿ ಅವರಿಗೆ ತಮ್ಮ ಉತ್ಸಾಹವನ್ನು ಅತ್ಯಂತ ವಿಜೃಂಭಣೆಯಿಂದ ತೋರ್ಪಡಿಸಿದರು. ಸಂಸ್ಥಾನದ ಎರಡನೇ ಕೌನ್ಸಲರಾದ ಮೆ॥ ಕೆ ಪಿ. ಪುಟ್ಟಣ್ಣಶೆಟ್ಟರವರು ಅಗ್ರಾಸನವನ್ನು ವಹಿಸಿ ಸುಭಾಷಣವನ್ನು ಮಾಡಿ ಸಭಿಕರನ್ನೆಲ್ಲಾ ಹರ್ಷಗೊಳಿಸಿದರು

ಕಾಲಕ್ಕೆ ಸರಿಯಾಗಿ ಮೆ॥ ದೊಡ್ಡಣ್ಣಶೆಟ್ಟರು ದಿವ್ಯವಸ್ತ್ರಾಲಂಕೃತರಾಗಿ ಬಿರುದಿನ ಪದಕವನ್ನು ಧರಿಸಿಕೊಂಡು ಮಹಾದ್ವಾರದ ಬಾಗಿಲಲ್ಲಿ ಗಾಡಿಯನ್ನು ಇಳಿಯುತ್ತಲೇ ಜ್ಯೋತಿನಗರದ ವೈಶ್ಯಮಂಡಲಿಯವರು ಅವರನ್ನು ಎದುರುಗೊಂಡು ವಾದ್ಯಸಮೇತ ಮೆರವಣಿಗೆಯಿಂದ ಹಾಲಿನ ಬಾಗಿಲಬಳಿಗೆ ಕರೆದುಕೊಂಡು ಹೋದರು ಅಲ್ಲಿ ಮೆ॥ ಪುಟ್ಟಣ್ಣಶೆಟ್ಟರೂ, ಇತರ ಅನೇಕ ದೊಡ್ಡಮನುಷ್ಯರೂ ಮೆ॥ ಶೆಟ್ಟರವರನ್ನು ಎದುರುಗೊಂಡು ಒಳಕ್ಕೆ ಕರೆದುಕೊಂಡು ಹೋಗುತ್ತಲೇ ಅಲ್ಲಿ ತಂಡೋಪತಂಡವಾಗಿ ಸೇರಿದ್ದ ಸಭಿಕರು ಜಯಘೋಷವನ್ನು ಮಾಡಿದರು ಸರ್ವರೂ ಅವರವರ ಆಸನಗಳಲ್ಲಿ ಕುಳಿತುಕೊಂಡ ನಂತರ ಮೆ॥ ಪುಟ್ಟಣ್ಣಶೆಟ್ಟರು ಎದ್ದು ಆ ದಿನದ ಸಭೆಯು ಸೇರುವುದಕ್ಕೆ ಉಂಟಾದ ಕಾರಣವನ್ನು ಸೂಚಿಸಿದರು.

ಅನಂತರ ಮೆ॥ ಶಂಕರಶಾಸ್ತ್ರಿಗಳು ಎದ್ದು ಭಗವಂತನ ಸ್ತೋತ್ರರೂಪವಾದ ಕೆಲವು ಸಂಸ್ಕೃತ ಶ್ಲೋಕಗಳನ್ನು ಬಹಳ ಸ್ಪಷ್ಟವಾಗಿ ಹೇಳಿದರು. ತರುವಾಯ, ಗ್ರಾಮೋಫೋನ್ ಎಂಬ ಯಂತ್ರದ ಮೂಲಕ ಮಧುರವಾದ ನಾಲ್ಕು ಹಾಡುಗಳು ಹಾಡಿಸಲ್ಪಟ್ಟ ಮೇಲೆ ಮೆ॥ ದೊಡ್ಡಣ್ಣಶೆಟ್ಟರ ಮತಸ್ಥರು ಅವರಿಗೆ ಬಿರುದು ಲಭಿಸಿದ್ದಕ್ಕೋಸ್ಕರ ತಮಗುಂಟಾದ ಸಂತೋಷವನ್ನು ತೋರ್ಪಡಿಸಿ ಒಂದು ವಿಜ್ಞಾಪನಾ ಪತ್ರಿಕೆಯನ್ನು ಒಪ್ಪಿಸಿದರು ಇದನ್ನು ಮೆ॥ ಜ್ಯೋತಿನಗರದ ಸಿದ್ದಪ್ಪನವರು ಓದಿದರು ಆ ಮೇಲೆ ಊರಿಗೆ ಕಂಡಂತೆ ಆಯಾ ಪಂಗಡಗಳ ಪ್ರತಿನಿಧಿಗಳು ಎದ್ದುನಿಂತು ತಮ್ಮ ಮಂಡಲಿಯವರಿಗೆ ಉಂಟಾಗಿರುವ ಆನಂದವನ್ನು ತೋರ್ಪಡಿಸಿ ವಿಜ್ಞಾಪನಾ ಪತ್ರಿಕೆಗಳನ್ನು ಓದಿ ಉಪನ್ಯಾಸಮಾಡಿದರು

ಬ್ರಾಹ್ಮಣಮಂಡಲಿಯ ಪರವಾಗಿ ಸೂಪರಿಂಟೆಂಡಿಂಗ್ ಇಂಜಿನಿಯರ್ ಮೆ॥ ಕೈ ಶ್ರೀನಿವಾಸರಾಯರು, ಸೆಷನ್ಸ್ ಜಡ್ಜ್ ಮೆ॥ ವರದರಾಜಯ್ಯಂಗಾರ್ಯ ಮಾತನಾಡಿದರು. ಲಿಂಗಾಯತ ಜನರ ಪರವಾಗಿ ಮೆ॥ ವೀರಭದ್ರಪ್ಪನವರು, ಮಹಮ್ಮದೀಯರ ಪರವಾಗಿ ಮೆ॥ ಮಹಮ್ಮದ್ ಉಸ್ಮಾನ್ ಸಾಹೇಬರು, ಮೆ॥ ಅಬ್ದುಲ್ ಸಲಾಂ ಸಾಹೇಬರೂ, ಮೌಲ್ವಿ ಉಸ್ಮಾನ್ ಸಾಹೇಬರೂ, ಒಕ್ಕಲಿಗರ ಸಂಘದ ಪರವಾಗಿ ಮೆ॥ ಕೆ. ಎಚ್ ರಾಮಯ್ಯನವರೂ ಅತ್ಯಂತ ಉತ್ಸಾಹದಿಂದ ಮಾತನಾಡಿದರು. ದೊಡ್ಡಣ್ಣನವರ ಸ್ಕೂಲಿನಲ್ಲಿ ಉಪಾಧ್ಯಾಯರಾದ ಮೆ॥ ರಾಜಪ್ಪನವರು ತೆಲುಗು ಭಾಷೆಯಲ್ಲಿ ಒಂದು ವಿಜ್ಞಾಪನಾ ಪತ್ರಿಕೆಯನ್ನೂ, ಮೆ॥ ಶ್ರೀನಿವಾಸ ದೇಶಿಕಾಚಾರ್ಯರೇ ಮೊದಲಾದವರು ಕೆಲವು ಸಂಸ್ಕೃತ ಶ್ಲೋಕಗಳನ್ನೂ ಓದಿದರು ಪತ್ರಸ್ವಾಮಿ ರಾಮಲಿಂಗಮೊದಲಿಯಾರವರು ಇಂಗ್ಲೀಷಿನಲ್ಲಿ ಉಪನ್ಯಾಸಮಾಡಿದರು

ಈ ಪ್ರಕಾರ ಒಪ್ಪಿಸಲ್ಪಟ್ಟ ವಿಜ್ಞಾಪನೆಗಳಿಗೆ ಮೆ॥ ದೊಡ್ಡಣ್ಣಶೆಟ್ಟರು ಕೊಟ್ಟ ಪ್ರತ್ಯುತ್ತರವೇನೆಂದರೆ —"ಈ ದಿವಸ ತಾವುಗಳೆಲ್ಲರೂ ನನ್ನ ಮೇಲೆ ಪೂರ್ಣ ಅಭಿಮಾನವಿಟ್ಟು ಇಲ್ಲಿ ಸೇರಿ ನನ್ನನ್ನು ತಮ್ಮ ಅನುಗ್ರಹಕ್ಕೆ ಪಾತ್ರನನ್ನಾಗಿ ಮಾಡಿರುವುದಕ್ಕೆ ತಮಗೆ ನನ್ನ ವಂದನೆಗಳನ್ನು ಸಮರ್ಪಿಸುತ್ತೇನೆ ನಾನು ದೇವರ ಪ್ರೇರಣೆಯಿಂದ ನೆರವೇರಿಸಿದ ಕಾರ್ಯಕ್ಕೆ ಶ್ರೀಮನ್ಮಹಾರಾಜರವರ ಕೃಪಾಕಟಾಕ್ಷವೂ ತಮ್ಮೆಲ್ಲರ ವಿಶ್ವಾಸವೂ ದೊರಕಿರುವುದು ಈ ಶಾಲೆಯ ಮುಂದಿನ ಅಭಿವೃದ್ಧಿಗೆ ಒಳ್ಳೇ ಶುಭಸೂಚನೆಯಾಗಿರುತ್ತದೆಂದು ಭಾವಿಸುತ್ತೇನೆ ಆದ್ದರಿಂದ ಈ ಧರ್ಮಶಾಲೆಯಲ್ಲಿ ತಾವೆಲ್ಲರೂ ಪೂರ್ಣಾನುಗ್ರಹವಿಟ್ಟು ಅದನ್ನು ಉನ್ನತಸ್ಥಿತಿಗೆ ತರುವುದಕ್ಕೆ ಸಹಕಾರಿಗಳಾಗುವಿರೆಂದು ದೃಢವಾಗಿ ನಂಬಿರುತ್ತೇನೆ ಈ ಶಾಲೆಯನ್ನು ಸ್ಥಾಪಿಸಿದ್ದು ಸ್ವಲ್ಪ ಕಾರ್ಯವಾಗಿದೆ ಅದರಿಂದ ಉಂಟಾಗಿರುವ ಮಹತ್ವವೆಲ್ಲವೂ ದಯಾಳುಗಳಾದ ಶ್ರೀಮನ್ಮಹಾರಾಜರವರ ಸರ್ಕಾರದವರಿಂದ ದಯಪಾಲಿಸಲ್ಪಟ್ಟ ಸಹಾಯದಿಂದಲೇ ಉಂಟಾಗಿರುವುದು ನಮ್ಮ ಪ್ರಿಯ ಮಹಾರಾಜರವರೇ ಸ್ವತಃ ದಯಮಾಡಿ ಈ ಪಾಠಶಾಲೆಯ ಶಂಕುಸ್ಥಾಪನವನ್ನು ನೆರವೇರಿಸಿ ಅನುಗ್ರಹಿಸಿದರು ಮತ್ತು ಪ್ರಜಾಪ್ರತಿನಿಧಿಗಳಾದ ದಿವಾನರವರಾದ ಮೆ॥ ವಿ ಪಿ ಮಾಧವರಾವ್, ಸಿ. ಐ. ಇ ಯವರು ಈ ಪಾಠಶಾಲೆಯ ಬಾಲಕರಿಗೆ ಆರೋಗ್ಯಭಾಗ್ಯದ ಲಭ್ಯವಂತೆ ಅವರ ಆಟಪಾಟಗಳಿಗೆ ಸ್ಥಳವನ್ನು ಅನುಕೂಲಪಡಿಸಿ ಉಪಕಾರಮಾಡಿದರು ಇವೆಲ್ಲಾ ಅವರಿಂದಲೇ ಉಂಟಾದದ್ದು ನಾನು ಗೌರವಕ್ಕೆ ಯೋಗ್ಯ ಪಾತ್ರನಾದೆನೆಂದೇ ತಿಳಿಯುತ್ತೇನೆ ಆದರೆ ಸ್ವಾಮಿಯವರ ಕೃಪೆಯು ನನಗೆ ಲಭಿಸಿದ್ದಕ್ಕಾಗಿ ನಾನು ಅತ್ಯಂತ ರಾಜಭಕ್ತಿವಿಶ್ವಾಸಗಳಿಂದ ಮಹಾಸ್ವಾಮಿಯವರಿಗೆ ಕೃತಜ್ಞನಾಗಿರುವೆನು ನಮ್ಮ ಅಗ್ರಾಸನಾಧಿಪತಿಗಳು ತಮ್ಮ ಘನವಾದ ಕಾರ್ಯಗಳಿಗೆ ಸ್ವಲ್ಪ ವಿರಾಮವನ್ನು ಕೊಟ್ಟು ನನಗೋಸ್ಕರ ಇಲ್ಲಿ ದಯಮಾಡಿಸಿದ್ದರಿಂದ ಅವರಿಗೂ, ನಮ್ಮ ಮಾರ್ಗದರ್ಶಕರಾದ ಸಭಿಕರುಗಳೆಲ್ಲರೂ ನನ್ನನ್ನು ಈ ರೀತಿ ಸತ್ಕರಿಸಿದ್ದಕ್ಕಾಗಿ ತಮಗೆಲ್ಲರಿಗೂ ಮತ್ತೊಂದಾವರ್ತಿ ನನ್ನ ಅಂತಃಕರಣದ ವಂದನೆಗಳನ್ನು ಸಮರ್ಪಿಸುತ್ತೇನೆ"

ಈ ರೀತಿ ಮೆ|| ದೊಡ್ಡಣ್ಣ ಶೆಟ್ಟರು ಭಾಷಣವನ್ನು ಮಾಡಿ ಕುಳಿತುಕೊಂಡ ನಂತರ ಮೇಲೆ ಉದಹರಿಸಿದ ಆರ್ಯ ಸಂಘದ ಪ್ರತಿನಿಧಿಗಳು ಅವರಿಗೂ ಸಭಾಧ್ಯಕ್ಷರಿಗೂ ಹೂವಿನಹಾರಗಳನ್ನು ಹಾಕಿ ತಾಂಬೂಲವನ್ನು ಕೊಟ್ಟರು. ಆಗ ಮೆ|| ಪುಟ್ಟಣ್ಣ ಶೆಟ್ಟರವರು ಎದ್ದು ಈ ಪ್ರಕಾರವಾಗಿ ಅಪ್ಪಣೆಕೊಡಿಸಿದರು. —

“ಮೆ|| ದೊಡ್ಡಣ್ಣ ಶೆಟ್ಟರಿಗೆ ‘ಜನೋಪಕಾರಿ’ ಎಂಬ ಬಿರುದು ಲಭಿಸಿದ್ದಕ್ಕಾಗಿ ನಮಗೆಲ್ಲರಿಗೂ ಆನಂದ ಉಂಟಾಗಿರುತ್ತದೆಂಬುದಕ್ಕೆ ಈ ಸ್ಥಳದ ವಿಜೃಂಭಣೆಯೇ ನಿದರ್ಶನವಾಗಿರುತ್ತದೆ. ಮೆ|| ದೊಡ್ಡಣ್ಣ ಶೆಟ್ಟರು ಗೌರವವನ್ನು ಪಡೆಯಬೇಕೆಂಬ ಉದ್ದೇಶದಿಂದ ಈ ಧರ್ಮಶಾಲೆಯನ್ನು ಸ್ಥಾಪಿಸಲಿಲ್ಲ. ಗೌರವಕ್ಕೆ ಅರ್ಹತೆಯನ್ನು ಸಂಪಾದಿಸಿಕೊಂಡರೆ ಗೌರವವು ತಾನಾಗಿಯೇ ದೊರೆಯುತ್ತದಲ್ಲದೆ ಅದಕ್ಕೋಸ್ಕರ ಪ್ರಯತ್ನಪಟ್ಟರೆ ದೊರೆಯುವುದಿಲ್ಲ. ಆದುದರಿಂದ ಬಡವರಿಗೆ ಮಹದುಪಕಾರವನ್ನುಂಟುಮಾಡುವ ಈ ಶಾಲೆಯನ್ನು ಸ್ಥಾಪಿಸಿ ಮೆ|| ಶೆಟ್ಟರವರು ನಮ್ಮೆಲ್ಲರ ಸನ್ಮಾನಕ್ಕೆ ಪಾತ್ರರಾಗಿರುವರು. ಅವರಿಗೆ ಉಂಟಾಗಿರುವ ಸನ್ಮಾನವು ನಮ್ಮೆಲ್ಲರಿಗೂ ಉಂಟಾದಂತೆ ನಾವು ಭಾವಿಸಬೇಕಾಗಿದೆ. ಮತ್ತು ಅವರು ಹಾಕಿಕೊಟ್ಟಿರುವ ಮೇಲ್ಪಂಕ್ತಿಯನ್ನು ಇತರ ದೊಡ್ಡ ಮನುಷ್ಯರೂ ಅನುಸರಿಸತಕ್ಕದ್ದಾಗಿದೆ. ಶ್ರೀಮನ್ಮಹಾರಾಜರವರು ಮೆ|| ಶೆಟ್ಟರಿಗೆ ಬಿರುದನ್ನು ದಯಪಾಲಿಸುವ ವಿಷಯವು ಮೆ|| ಶೆಟ್ಟರಿಗೆ ಪಡೆಯುವ ವರೆಗೂ ತಿಳಿದಿರಲಿಲ್ಲ. ಶ್ರೀಮನ್ಮಹಾರಾಜರವರೇ ಮೆ|| ಶೆಟ್ಟರ ಅರ್ಹತೆಯನ್ನು ನೋಡಿ ಮನಃಪೂರ್ವಕವಾಗಿ ಈ ಘನವಾದ ಬಿರುದನ್ನು ಅವರಿಗೆ ದಯಪಾಲಿಸಿರುವರು. ಮೆ|| ಶೆಟ್ಟರು ಆಯುರಾರೋಗ್ಯಾದಿಗಳನ್ನು ಪಡೆದು ಚಿರಕಾಲ ಸುಖವಾಗಿ ಇರಲೆಂದು ನಾ ಪ್ರಾರ್ಥಿಸುತ್ತೇನೆ.”

ಈ ಭಾಷಣವಾದ ಮೇಲೆ ಮೆ|| ಸೋಬಾ ಯಜಮಾನರ ಸಂಗೀತ ಕಚೇರಿ ನಡೆಯಿತು. ಸಭಿಕರೆಲ್ಲರಿಗೂ ಪುಷ್ಪ ತಾಂಬೂಲಾದಿಗಳು ಕೊಡಲ್ಪಟ್ಟವು. ಅನಂತರ ಮೆ|| [illegible] ರಾಯರು ಶ್ರೀಮನ್ಮಹಾರಾಜರವರಿಗೂ ಮೆ|| ಪುಟ್ಟಣ್ಣ ಶೆಟ್ಟರಿಗೂ, ಮೆ|| ದೊಡ್ಡಣ್ಣ ಶೆಟ್ಟರಿಗೂ ಶ್ರೇಯಸ್ಸನ್ನು ಕೋರಲು ಸಭಿಕರ ಸಮ್ಮತಿಯ [illegible] ನಿರ್ಣಯವನ್ನು ಮಾಡಿದರು. ಆ ಮೇಲೆ ಧರ್ಮಶಾಲೆಯ ಬಾಲಕರು [illegible] ಸಭಾಧ್ಯಕ್ಷರನ್ನು [illegible] ಶೆಟ್ಟರವರನ್ನು [illegible] ಕೊಂಡಾಡಿ [illegible] ಹಾಡಿದರು. [illegible] ಮಾನಪತ್ರದಲ್ಲಿ [illegible] ಅತಿ ಸಂತೋಷವಾಯಿತು. [illegible] ಶೆಟ್ಟರವರು ಶ್ರೀಮನ್ಮಹಾರಾಜರವರಿಗೆ ಈ ರೀತಿ ಕೃತಜ್ಞತೆಯನ್ನು [illegible] ಅರ್ಪಿಸಿದರು.— “ಶ್ರೀಮನ್ಮಹಾರಾಜರವರು ಮೆ|| ದೊಡ್ಡಣ್ಣ ಶೆಟ್ಟರವರಿಗೆ ‘ಜನೋಪಕಾರಿ’ ಎಂಬ ಬಿರುದನ್ನು ದಯಪಾಲಿಸಿ ಅವರ ಧರ್ಮಕಾರ್ಯವನ್ನು [illegible] ಇಂದಿನ ದಿವಸ [illegible] ಅವರಿಗೆ ತಮ್ಮ ಉತ್ಸಾಹವನ್ನು [illegible] ಶ್ರೀಮನ್ಮಹಾರಾಜರವರಿಗೆ ತಮ್ಮ [illegible] ಸಮರ್ಪಿಸುತ್ತಾರೆ. ಈ [illegible] ಶ್ರೀಮನ್ಮಹಾರಾಜರವರಿಗೆ [illegible] ದೀರ್ಘಾಯುಸ್ಸನ್ನು [illegible] ಪ್ರಾರ್ಥಿಸುತ್ತೇನೆ.”

ಮೈಸೂರು ಸಂಸ್ಥಾನದ ಜಮಾ ಖರ್ಚು.

೧೯೦೬-೦೭ನೇ ಸಾಲಿನ ಜಮಾ ಬಾಬುಗಳು.

	1905-06 ನಿಶ್ಚಿತ	1906-07 ಪ್ರಥಮ
ಭೂಕಂದಾಯ ರೂ.	91 02 031	ರೂ. 1 00 51 205
ಉಪ್ಪು	11 111	18,058
ಸ್ಟಾಂಪುಗಳು	7 88 152	7 56 263
ಅಬ್ಕಾರಿ—(ಎ) ಸಾರಾಯಿ	18 78 1[illegible]1	20 01 512
(ಬಿ) ಹೆಂಡ	18 19 471	18,06 900
(ಸಿ) ಚಿಲ್ಲರೆ ಬಾಬುಗಳು	1 15 798	1 08 110
ಸಾಯರು	1 23 [illegible] 0	17 677
ಮೊಹತರ್ಫ	3 24 112	1 29 670
ಅರಣ್ಯ—(ಎ) ಗಂಧದ ಮರ	12 52 [illegible]	12 58 219
(ಬಿ) [illegible]	1 [illegible] 078	1,50 610
(ಸಿ) ಇತರ ಅರಣ್ಯ ಬಾಬುಗಳು	7 16 883	2 9[illegible] 680
(ಡಿ) ಆನೆ ಹಿಡಿಯುವಿಕೆ	8 0[illegible]9	
ಚಿನ್ನದಗಣಿ—(ಎ) ಶೇಕಡಾ 5 ರಂತೆ ರಾಯಲ್ಟಿ	17 71 [illegible]63	16 01 40[illegible]
(ಬಿ) ಎಕ್ಸ್‌ಪ್ಲೋರಿಂಗ್ ಲೈಸೆನ್ಸುಗಳ ರುಸುಂ, ಹೊಸ ಗುತ್ತಿಗೆಗಳ ಮೇಲಿನ ರುಸುಂ	16 881	43,422
ಟಪ್ಪಾಲು	1 57 832	1,41,040
ಟೆಲಿಗ್ರಾಫ್	18 123	54 450
ಬಡ್ಡಿಗೆ ಹಾಕಿರುವ ಸರ್ಕಾರಿ ಹಣ ಮತ್ತು ಬ್ಯಾಂಕಿನಲ್ಲಿ ಠೇವಣಿ ಇಟ್ಟಿರುವ ಹಣ—		
(ಎ) ಸರ್ಕಾರಿ ಪತ್ರಗಳ ಮೇಲಿನ ಬಡ್ಡಿ	2,30 060	2,21,559
(ಬಿ) ಮದರಾಸ್ ಬ್ಯಾಂಕಿನಲ್ಲಿ ಠೇವಣಿ ಇಟ್ಟಿರುವ ಹಣದ ಮೇಲಿನ ಬಡ್ಡಿ	62,290	37,475
(ಸಿ) ಸಾಲಗಳ ಮತ್ತು ಕಂದಾಯದ ಬಾಕಿಗಳ ಮೇಲಿನ ಬಡ್ಡಿ	95,570	72,567
ನ್ಯಾಯವಿಚಾರ—(ಎ) ಕೋರ್ಟು	52,798	53 880
(ಬಿ) ಬಂದೀಖಾನೆ	21,766	23,923
ಪೋಲೀಸ್ ರೂ.	1,430	35,613
ವಿದ್ಯಾಭ್ಯಾಸ	1,21 135	1,20,840
ವೈದ್ಯ	1,02 600	79,269
ಶಾಸ್ತ್ರೀಯ ಮತ್ತು ಇತರ ಸಣ್ಣ ಇಲಾಖೆಗಳು	15,113	20,731
ಲೇಖನಸಾಮಗ್ರಿ ಮತ್ತು ಅಚ್ಚು ಹಾಕುವುದು	7,291	8,245
ಮರಾಮತ್ತು ಕೆಲಸಗಳು	2,10,618	3,15 000
ಇತರ ಬಾಬುಗಳು	2,09,141	1,78 361
ಸರ್ಕಾರಿ ರೈಲ್ವೆ ಹುಟ್ಟುವಳಿ	26,18,748	26,70,620
ಕಾವೇರೀ ವೈದ್ಯುತಶಕ್ತಿಯ ಸರಬರಾಜು	19,09,154	20,11,551
ಒಟ್ಟು ಜಮಾ	2,41,95,148	2,60,78,887

ಖರ್ಚು ಬಾಬುಗಳು.

	1905-06. ನಿಶ್ಚಿತ	1906-07 ಪ್ರಥಮ
ಪೊಗದಿ ರೂ.	35,00,000	35,00 000
ಅರಮನೆಯ ಖರ್ಚು	16,00,000	16,00,000
ರಾಜವಂಶೀಯರ ಪೋಷಣೆಗಳು	3,10,000	3 10 000
ರಾಜಕೀಯ ಪೆನ್ಶನ್ ವೇತನಗಳು, ಜಹಗೀರುಗಳಿಗೆ ಬದಲಾಗಿ ಕೊಟ್ಟವುಗಳು ಸೇರಿ	86,436	83 812
ವಾಪಸ್ ಜಮಾ ವಗೈರೆ—ಜಮೀನು ಕಂದಾಯದಲ್ಲಿ ಸೇರಿಸಲ್ಪಡುವ ಇರಿಗೇಷನ್ ಸೆಸ್	1,56,111	1 56 411
ಇತರ ಬಾಬುಗಳು	78,008	57 830
ಜಮೀನು ಕಂದಾಯದ ಖರ್ಚುಗಳು—		
ರೆವಿನ್ಯೂ ಕಮಿಷನರ್	10,213	54 470
ಡೆಪ್ಯುಟಿ ಕಮಿಷನರುಗಳೂ ಅವರ ಸಿಬ್ಬಂದಿಗಳೂ	1 89 972	1,87 [illegible]
ಅಸಿಸ್ಟೆಂಟ್ ಕಮಿಷನರುಗಳೂ ಅವರ ಸಿಬ್ಬಂದಿಗಳೂ	1 11 925	1,13 216
ತಾಲ್ಲೂಕು ಸಿಬ್ಬಂದಿಗಳು	1 1[illegible] 555	[illegible],25 562
[illegible] ವಗೈರೆ	15,[illegible]18	20 11[illegible]
ನಾನಾ ಚಿಲ್ಲರೆ ಬಾಬುಗಳು	20 659	31 771
ಪಟೇಲ ಶ್ಯಾನುಭೋಗರುಗಳಿಗೆ ಪೋಟಗಿ	7 06 901	9,11,778
ಸರ್ವೆ ಮತ್ತು ಸೆಟ್ಲ್‌ಮೆಂಟ್	1 8[illegible] 069	1 60 686
ಇನಾಮು	7 [illegible] 73	8 193
ಸ್ಟಾಂಪುಗಳು	[illegible] 468	[illegible]5 6[illegible]7
ಅಬ್ಕಾರಿ	1 [illegible] 41	[illegible] 105
ಸಾಯರು	1[illegible] 685	11 0[illegible]
ಅರಣ್ಯ [illegible]	7 88 877	[illegible] 77 075
ಚಿನ್ನದಗಣಿ	14,101	14 975
ರಿಜಿಸ್ಟ್ರೇಷನ್	87 [illegible]6	[illegible]5 5[illegible]2
ಟಪ್ಪಾಲ್	73 8[illegible]5	[illegible]9 827
ಬಡ್ಡಿ—ಮೈಸೂರು ಸಂಸ್ಥಾನದ 1906-7 ರ ಶೇಕಡಾ 4 ರ ಸಾಲದ ಬಡ್ಡಿ		8 722
[illegible] ಡಿಸೆಂಬರ್ 20 ಲಕ್ಷದ ಸಾಲದ ಮೇಲಿನ ಬಡ್ಡಿ	[illegible]0	6[illegible]
ಸೇವಿಂಗ್ಸ್ ಬ್ಯಾಂಕಿನಲ್ಲಿ ಸ್ಥಿರವಾದ ಠೇವಣಿಗಳ ಮೇಲಿನ ಬಡ್ಡಿ	[illegible],827	2 50 000
ಪೆನ್ಶನ್ ಫಂಡಿನ ಬಡ್ಡಿ	16 175	16 167
ಇನ್ಶೂರೆನ್ಸ್ ಫಂಡಿನ ಬಡ್ಡಿ	7 268	7 [illegible]00
ವಾಪಸ್ ಜಮಾ	1 113	[illegible]00
ಮೇಲು ಖಾತೆಯ ಸಿಬ್ಬಂದಿ	[illegible] 396	5 11 266
ನ್ಯಾಯವಿಚಾರ—ಕೋರ್ಟುಗಳು	9 17 019	9 3[illegible] [illegible]79
ನ್ಯಾಯವಿಚಾರ—ಬಂದೀಖಾನೆಗಳು	1 21 881	1 27 [illegible]0
ಪೋಲೀಸು	9 9[illegible] 467	9 9[illegible] [illegible]80
ವಿದ್ಯಾಭ್ಯಾಸ	7 7[illegible] 549	8 02 10[illegible]
ಮುಜರಾಯಿ	3 47 [illegible]09	3 31 016
ವೈದ್ಯ	5 12 411	6 [illegible]7 04[illegible]
ಗವರ್ನಮೆಂಟ್ ಮನೆಗಳು	3 05 516	1 71 451
ಶಾಸ್ತ್ರೀಯ ಇತರ ಸಣ್ಣ ಇಲಾಖೆಗಳು	3[illegible] 572	[illegible] 17
ನಾನಾ ವಿಧವಾದ ಚಿಲ್ಲರೆ ಖರ್ಚುಗಳು—		
[illegible]ಗಾಗಿ ಕೊಟ್ಟ ಸರ್ಟುಗಳೂ ಗ್ರಾಂಟುಗಳೂ	1 5[illegible] 763	5 82 [illegible]35
ಲೇಖನ ಸಾಧನಗಳು ಮತ್ತು ಅಚ್ಚು	1 82 158	1 91 107
ಕೊಂಡುಕೊಂಡ ಸರ್ಕಾರಿ ಪತ್ರಗಳಿಗಾಗಿ ಕೊಟ್ಟ ಸಫೆ	1 [illegible]3	1 [illegible]16
ಇತರ ಬಾಬುಗಳು	[illegible]91	[illegible] 860
ಪ್ಲೇಗು	1 10 171	71 958
ಕ್ಷಾಮ ಪರಿಹಾರ	[illegible]000	2 00 000
ಮರಾಮತ್ತು ಕಾಮಗಾರಿಗಳು	[illegible] 136	21 06 15[illegible]
ಸೈನ್ಯ	13 51 [illegible]00	13 [illegible]3 187
ಸರ್ಕಾರಿ ರೈಲ್ವೆಗಳು—ಮೈಸೂರು ಹರಿಹರ ಮಾರ್ಗದ ಬಂಡವಾಳದಲ್ಲಿ ಖರ್ಚಾದ ಭಾಗದ ಮೇಲಿನ ಬಡ್ಡಿ	7 12 729	7 19 000
ಹುಟ್ಟುವಳಿ ಲೆಕ್ಕ	17,03,195	17,88,934
ರೈಲ್ವೆಗಳ ಬಂಡವಾಳದ ಲೆಕ್ಕ	3,30,593	2 60 004
ಕಾವೇರೀ ವೈದ್ಯುತಶಕ್ತಿಯ ಸರಬರಾಜು— ಹುಟ್ಟುವಳಿ ಲೆಕ್ಕ—ಕೆಲಸ ನಡೆಸುವ ಖರ್ಚು	2 41,411	2,59,691
ಸಾಲದ ಮೇಲಿನ ಬಡ್ಡಿ	..	11,444
ಸಾಲದ ವಾಪಸು ಖರ್ಚು	..	1,33,333
ಬಂಡವಾಳದ ಖರ್ಚು	1 02 961	52 682
ಒಟ್ಟು ಜಮಾ	2 31,[illegible] 643	2 31,96 663
ರೆವಿನ್ಯೂ ಹುಟ್ಟುವಳಿಗೆ ಖರ್ಚು ಬೀಳದ ಬಂಡವಾಳದ ಖರ್ಚು—ಕಾವೇರೀ ವೈದ್ಯುತಶಕ್ತಿಯ ಮಾರ್ಗದ ಸ್ಥಾಪನೆ	228	2,83,362

ಪ್ರಕಟನೆಗಳು

ಇಲ್ಲಿ ನೋಡಿ!

65-18

ತುಮಕೂರು [illegible] ಇಲಾಖೆಯಲ್ಲಿ ಯೂರೋಪಿಯನ್ ಮೋಲ್ಡಿಂಗಿನಿಂದ ಉತ್ತಮ ತರಹದ ಹಾಸನದ ಟೋಪಿಗಳು ಅತಿ ಶ್ರೇಷ್ಠವಾದ ಉಲ್ ನಾರಿನಿಂದ ತಯಾರಾಗುತ್ತವೆ

ಕ್ರಯ.—೧॥ ಆಣೆ ಮೊದಲ್ಗೊಂಡು ೧ ರೂ ೧॥ ಆಣೆಯ ವರಿಗೆ

೧ ಡಜನ್ ಟೋಪಿಗಳನ್ನು ತೆಗೆದುಕೊಳ್ಳುವವರಿಗೆ ಶೇಕಡ ೫ ರಂತೆ ಡಿಸ್ಕೌಂಟ್ ಕೊಡಲ್ಪಡುವದು.

ನಮ್ಮ ವಿಳಾಸ:—ಮ್ಯಾನೇಜರ್.

ಹಾಸನದ ಟೋಪಿ ಕಾರ್ಖಾನೆ, [illegible] ಇಲಾಖೆ, ತುಮಕೂರು.

ರಬ್ಬರ್ ಹ್ಯಾಂಡ್ ಪ್ರೆಸ್.

114 5

ಕಲಾಕೌಶಲ್ಯದಿಂದ ಮತ್ತು ಉದ್ಯೋಗದಿಂದ ಉತ್ಕರ್ಷಸ್ಥಿತಿ ಹೊಂದುವ ಈ ಭಾರತ ಭೂಮಿಯೊಳಗೆ ಈ ಪ್ರೆಸ್ ತಯಾರಾಗುತ್ತದೆ. ಇದುವರೆಗೆ ಈ ಪ್ರೆಸ್ಸು ಪರದೇಶದಿಂದ ಬರುತ್ತಿರುವಾಗ ಅದಕ್ಕೆ ೧೬ ರಿಂದ ೧೮ ರೂಪಾಯಿಗಳ ವರೆಗೆ ಬೆಲೆ ಬೀಳುತ್ತಿತ್ತು. ಈ ಪ್ರೆಸ್ಸಿನೊಳಗೆ ಕನ್ನಡ, ತಮಿಳು, ತೆಲುಗು, ಉರ್ದು, ಪರ್ಷಿಯನ್, ಅರಾಬಿಕ್, ಇಂಗ್ಲೀಷ್ ಮತ್ತು ಬೇಕಾದ ಭಾಷೆಯಲ್ಲಿ ಒಂದು ಪ್ರತಿ ತಯಾರು ಮಾಡಿ, ಮಾಡಿಸಿದ ಮೇಲೆ ಬಹು ಸ್ವಲ್ಪ ಕಾಲದೊಳಗಾಗಿಯೇ ಇದರಿಂದ ೧೫೦ ಪ್ರತಿಗಳನ್ನು ತಯಾರು ಮಾಡಬಹುದು. ಆದ್ದರಿಂದ ಈ ಪ್ರೆಸ್ಸು ಸಾರ್ವಜನಿಕ ಕಚೇರಿ ಮ್ಯುನಿಸಿಪಾಲಿಟಿ ಪೋಲೀಸ್ ಆಫೀಸರರೂ, ವಕೀಲರೂ, ವರ್ತಕರೂ, ಇನಾಮುದಾರರೂ ಮತ್ತು ಪರೀಕ್ಷಕರೂ ತಮ್ಮ ಸಂಗ್ರಹದಲ್ಲಿ ಅವಶ್ಯ ಇಡಬೇಕು. ಎಷ್ಟೋ ಕಾರಕೂನರ ಸಹಾಯದಿಂದ ಒಂದು ಕೆಲಸಕ್ಕೆ ಬಹಳ ಕಾಲ ಹಿಡಿಯುವದು. ಆದರೆ ಈ ನಮ್ಮ ಪ್ರೆಸ್ಸಿನಿಂದ ಅಂಥಾ ಕೆಲಸವನ್ನಾದರೂ ಸ್ವಲ್ಪ ಕಾಲದಲ್ಲಿಯೇ ಮಾಡುವುದು ಶಕ್ಯ. ಇದರ ಬೆಲೆಯಿಂದ ಈ ಪ್ರೆಸ್ ಜನಗಳ ಪ್ರೀತಿಗೆ ಪಾತ್ರವಾದೀತು. ಈ ಕಾರಣದಿಂದ ಪ್ರತಿ ಒಬ್ಬರೂ ತಮ್ಮ ಹತ್ತಿರ ಈ ಪ್ರೆಸ್ಸನ್ನು ಅವಶ್ಯಕವಾಗಿ ಇಡುವದರಲ್ಲಿ ಏನೂ ಸಂದೇಹವಿಲ್ಲ.

ನೋಟ್ ಪೇಪರ್ ಸೈಜು, ರೂಪಾಯಿ ೪—೦—೦.
ಹಾಫ್ ಫುಲ್‌ಸ್ಕ್ಯಾಪ್ ಸೈಜು, ೬—೦—೦.
ಪೋಸ್ಟೇಜು ಬೇರೆ (extra)

ವಿಳಾಸ:— ವರ್ಧಮಾನ ಏಜನ್ಸಿ,
ಪೋಸ್ಟ್ ಕಾಲಬಾದೇವಿ,
ಮುಂಬಯಿ.

THE PLACE FOR HASSAN CAPS IS
HASSAN.

ನಿಮ್ಮ ತಲೆಯ ಮೇಲಿರುವದೇನು?
ಹಾಸನದ ಟೋಪಿ ಅಲ್ಲವೋ?
ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

75 15

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?
ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಚಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇಳಾದದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ.—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯಿತಿಯಿಂದಲೇ ಬರುವದು. (೨) ಟೋಪಿಗಳನ್ನು ಖುದ್ದಾಗಿ ನಾನೇ ನಿಂತು ಚನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ನೇರಾ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದು ಚನ್ನಾಗಿಲ್ಲದ್ದು ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ. ಸಾದ, ಕೆಂಪು ಕಪ್ಪು, ಬಿಳಿ, ಕಾಫಿ ಟೋಪಿಗಳು ೧ ರೂ ೪ ಆ; ೧ ರೂ ೬ ಆ; ೧ ರೂ ೯ ಆ.

ರೇಷ್ಮೆ ಚುಕ್ಕೆಯುಳ್ಳ ಟೋಪಿಗಳು ೧ ರೂ. ೪ ಆ; ೨ ರೂ. ಜಾರದ ಟೋಪಿಗಳು ೧ ರೂ. ೧೨ ಆ; ೧ ರೂ. ೪ ಆ; ೧ ರೂ. ೬ ಆ. [illegible] ಟೋಪಿಗಳು ೧ ರೂ. ೪ ಆ; ೧ ರೂ ೬ ಆ.

ಹುಡುಗರ ಟೋಪಿ, [illegible] ಮೋಜೋಡು, ಅರ್ಧ ಮೋಜೋಡು, ಹತ್ತಿಯ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವವರಿಗೆ ಕೊಟ್ಟು ಕಳುಹಿಸುವೆವು.

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ.

ಸುಖಪಟ್ಟ ಸ್ತ್ರೀಯರು ಪೆರೂನಾವನ್ನು ಹೊಗಳುತ್ತಾರೆ.

ಪೆರೂನಾ ಪ್ರಖ್ಯಾತಿ ಹೊಂದಿರುವುದು ಅದರ ಗುಣದಿಂದ, ಬರೀ ಮಾತಿನಿಂದಲ್ಲವು.

ಪೆರೂನಾ ಪ್ರಖ್ಯಾತಿ ಹೊಂದಿರುವುದು ಅದರ ಗುಣದಿಂದ, ಬರೀ ಮಾತಿನಿಂದಲ್ಲವು [illegible] ಪೆರೂನಾವನ್ನು ಹೊಗಳುತ್ತಾರೆ [illegible] ಪೆರೂನಾವಿನ ಗುಣವನ್ನು [illegible] ಪೆರೂನಾ ಸೇವನೆಯಿಂದ ಸ್ವಾಸ್ಥ್ಯ ಹೊಂದಿರುತ್ತಾರೆ.

ಲಕ್ಷಣವಾಗಿರುವ ಹೆಣ್ಣು ಮಕ್ಕಳೂ, ಸುಂದರಿಯರಾದ ಸ್ತ್ರೀಯರೂ, ಬಲಹೀನರಾದ ಹೆಣ್ಣು ಮಕ್ಕಳೂ, ರೋಗಪೀಡಿತರಾದ ತಾಯಂದಿರೂ ಎಲ್ಲಾ ಪ್ರದೇಶಗಳಲ್ಲೂ ಪೆರೂನಾ ಸೇವಿಸಿ, ತಮ್ಮ ಸ್ವಭಾವಕ್ಕೆ ಅನುಗುಣವಾದ [illegible] ಅದರ ಗುಣವನ್ನು ತಿಳಿಸಿರುತ್ತಾರೆ [illegible] ಅನೇಕ ವಿಧಗಳಲ್ಲಿ ಪೆರೂನಾವಿಗೆ ಕೃತಜ್ಞರಾಗಿರುವರು.

ಇದೆಲ್ಲಾ ಯಥಾರ್ಥವಾಗಿರುತ್ತವೆ ಗುಣ ಹೊಂದಿದ [illegible]

[illegible] ಆದನ್ನು ಕೇಳುವುದಕ್ಕೆ ಹಿಂತೆಗೆಯುವಳು [illegible] ಪೆರೂನಾವಿನ [illegible] ಪೆರೂನಾವ ಪ್ರೀತಿಪೂರ್ವಕವಾದಂಥಾ ನಂಬಿಕೆಗೆ ಅರ್ಹವಾದಂಥಾ ಮನೇ ಔಷಧವೆಂದು ಒಪ್ಪಿಕೊಳ್ಳುತ್ತಾರೆ.

ಅನೇಕ ಸಣ್ಣ ಸಣ್ಣ ಕಾಯಿಲೆಗಳಿಗೆ ಪೆರೂನಾ ಒಳ್ಳೆಯದಾಗಿದೆ [illegible] ಪೆರೂನಾ ಗುಣದಿಂದ ವಾಸಿಮಾಡಿಕೊಳ್ಳಬಹುದು.

ಮಿಸೆಸ್ ವ್ಯಾಲೀಸ್ [illegible] ಈ ಕೆಳಗೆ ಬರೆಯುತ್ತಾರೆ —

"ನಾನು ನಿಮ್ಮ ಪೆರೂನಾವನ್ನು ಸೇವಿಸುತ್ತಾ ಇದ್ದೇನೆ ನನ್ನ [illegible] ರೋಗವೆಲ್ಲಾ ವಾಸಿಯಾಯಿತೆಂದು ಹೇಳಬಲ್ಲೆನು. ನೀವು [illegible] ನನಗೆ ಅದನ್ನು ಕೊಟ್ಟಿದ್ದಕ್ಕಾಗಿ ನಿಮ್ಮನ್ನು ವಂದಿಸುತ್ತೇನೆ."

ಮಿಸ್ ಅನ್ನಿ ಹೆಂಡ್ರನ [illegible] ಈ ಕೆಳಗೆ ಬರೆಯುತ್ತಾಳೆ —

'[illegible] ವರುಷಗಳ ಹಿಂದೆ [illegible] ನಾನು ಅನೇಕ [illegible] ಔಷಧವನ್ನು [illegible] ಈಗ ನಾನು ನನ್ನ ಎಲ್ಲಾ ಕೆಲಸಗಳನ್ನೂ ಮಾಡಿಕೊಳ್ಳಬಲ್ಲೆನು.'

[illegible] ಪೆರೂನಾವನ್ನು ಎಷ್ಟು ಹೊಗಳಿದರೂ ಸಾಲದು.

ಅನ್ನಾ ವಂದೇ [illegible] ಈ ಕೆಳಗೆ ಬರೆಯುತ್ತಾಳೆ —

"ನಾನು ಸ್ತ್ರೀ [illegible] ಕಾಯಿಲೆಯನ್ನು ಹದಿಮೂರು ವರುಷಗಳ ತನಕ ಅನುಭವಿಸಿದೆನು [illegible] ಪ್ರಸಿದ್ಧ ವೈದ್ಯರುಗಳು [illegible] ಎಲ್ಲಾ [illegible] ನಾನು [illegible] ಡಾಕ್ಟರುಗಳು ನನ್ನ [illegible] ತೆಗೆದು ಬಿಡಬೇಕೆಂದು [illegible] ಆದರೆ ನಾನು ಅದಕ್ಕೆ ಸಮ್ಮತಿಸಲಿಲ್ಲ. ಪೆರೂನಾ ಎಂಬೀ ಔಷಧದ ಪ್ರಕಟನೆಯನ್ನು ಓದಿ ಒಂದು ಬಾಟ್ಲಿಯನ್ನು [illegible] ಒಂದು ಬಾಟ್ಲಿ [illegible] ನನಗೆ [illegible] ಬಾಟ್ಲಿ ಔಷಧ [illegible] ವೇಳೆ ನಾನು ಯಾವ ಪ್ರಕಾರ ಸುಖವಾದೆನು [illegible] ನಿಮ್ಮ ಔಷಧ [illegible] ರೋಗ ಪೀಡಿತರಾದ ಸ್ತ್ರೀಯರಿಗೆಲ್ಲಾ ಇದನ್ನೇ ಉಪಯೋಗಿಸಬೇಕೆಂದು ತಿಳಿಸುತ್ತೇನೆ [illegible] ನಾನು ಅದನ್ನು ಬಿಟ್ಟಿರಲಾರೆನು."

[illegible] ಈ ಕೆಳಗೆ ಬರೆಯುವರು —

'[illegible] ಔಷಧ [illegible] ಎಲ್ಲಾ ಹೊಗಳಿಕೆಯೂ ಸನ್ಮಾನವೂ ಪೆರೂನಾವಿಗೇ ಸಲ್ಲತಕ್ಕದ್ದು [illegible]

ಮಿಸೆಸ್ ಎಂ [illegible] ಈ ಕೆಳಗೆ ಬರೆಯುತ್ತಾರೆ — "[illegible] ನಾನು [illegible] ಆದರಿಂದ ನನ್ನ ಶಕ್ತಿಯೆಲ್ಲಾ ಕುಗ್ಗಿ [illegible] ಪೆರೂನಾ ಈ ನನ್ನ ಕಾಯಿಲೆಯನ್ನು ವಾಸಿಮಾಡಿತು [illegible] ಈ ಔಷಧ [illegible] ನನ್ನ [illegible] ಅನುಭವಿಸಿ [illegible]

ಮಿಸೆಸ್ [illegible] ಈ ಕೆಳಗೆ ಬರೆಯುತ್ತಾರೆ —

ಪೆರೂನಾದಿಂದ ನನಗೆ ಎಷ್ಟು ಉಪಕಾರವಾಗಿದೆ [illegible] ಆರು ವರುಷಗಳ ತನಕ [illegible] ಅನೇಕ ವೈದ್ಯರುಗಳಲ್ಲಿ [illegible] ನನ್ನ ಗಂಡನು ಔಷಧಕ್ಕಾಗಿ [illegible]

"[illegible] ಪೆರೂನಾವನ್ನು [illegible] ನನಗೆ [illegible] ಈಗ ನಮ್ಮ ಮನೆಗೆ ಡಾಕ್ಟರ ಪ್ರವೇಶವೇ ಅಗತ್ಯವಿಲ್ಲವಾಯಿತು.

ವಿಳಾಸ — ಈ ಔಷಧ ಸಿಕ್ಕುವ ಸ್ಥಳಗಳು —

(೧) [illegible] ಅಂಡ್ ಸನ್ಸ್, ಬೆಂಗಳೂರು

(೨) ಇಂಗ್ಲಿಷ್ ಡ್ರಗ್ ಕಂಪನಿ, [illegible] ಮಿಂಟ್ ಬೀದಿ, ಮದರಾಸ್

38-31

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ

18—[illegible]—907 ರಿಂದ 25—[illegible]—1907 ರ ವರೆಗೆ

ಸ್ಥಳ	ಪ್ಲೇಗ್ ಆಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ಆಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರ ಪಟ್ಟಣ	[illegible]	41	0	0
ಮೈಸೂರು ,,	118	93	0	0
ಬೆಂಗಳೂರು ಡಿಸ್ಟ್ರಿಕ್ಟು	951	161	0	0
ಮೈಸೂರು ,,	100	69	0	0
ಕೋಲಾರ್ ,,	72	36	0	0
ಕೋಲಾರ್ ಚಿನ್ನದ ಗಣಿಗಳು	43	32	0	0
ತುಮಕೂರು ಡಿಸ್ಟ್ರಿಕ್ಟು	27	23	0	0
ಹಾಸನ ,,	16	12	0	0
ಚಿತ್ರದುರ್ಗ ,,	15	14	0	0
ಕಡೂರ್ ,,	37	24	0	0
ಶಿವಮೊಗ್ಗ ,,	0	0	0	0
ಜುಮ್ಲಾ	[illegible]	[illegible]	0	0

ಶಾಲಿವಾಹನ ಶಕ ವರುಷಂಗಳು ೧೮೩೦ ನೇ ಪ್ಲವಂಗನಾಮ ಸಂವತ್ಸರದ ಕಾರ್ತೀಕ ಶುದ್ಧ [illegible] ಕಾರ್ತೀಕ ಶುದ್ಧ ಅಷ್ಟಮಿ [illegible] ವರೆಗಿನ ಒಂದು ವಾರದ ಪಂಚಾಂಗ

೧೯೦೭ ನೇ ಇಸವಿ ನವಂಬರ್

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ತೇದಿ ತುಲಾ ಮಾಸ
7	ಗುರು *	ಬಿದಿಗೆ	47 17	[illegible]	53 22	22
8	ಶುಕ್ರ ,,	ತದಿಗೆ	12 20	[illegible]	49 20	23
9	ಶನಿ ‡	ಚೌತಿ	37 10	ಮೂಲ	15 18	24
10	ರವಿವಾರ	ಪಂಚಮಿ	31 31	ಪೂರ್ವಾ	11 14	25
11	ಚಂದ್ರ ,,	ಷಷ್ಟಿ	25 45	ಉತ್ತರಾ	37 37	26
12	ಕುಜ	ಸಪ್ತಮಿ	19 39	ಶ್ರ	33 13	27
13	ಬುಧ	ಅಷ್ಟಮಿ	1[illegible] 2	ಧ	29 39	28

* ಉಪವ್ಯಾಪ್ತಿಯ ಚಂದ್ರೋದಯ. ,, [illegible]

‡ [illegible] ವ್ಯತ್ಯಯ [illegible], ಕಾರ್ತೀಕ ಸೋಮವಾರ ತಿಥಿದ್ವಯಂ

ಪೇಟೇ ಧಾರಣೆ.

ದಿನಸಿ		ಮೈಸೂರು	ಬೆಂಗಳೂರು
[illegible] ಅಕ್ಕಿ ಪಲ್ಲ ೧ಕ್ಕೆ	ರೂ	[illegible]	[illegible]
[illegible] ಅಕ್ಕಿ [illegible]		[illegible]	[illegible]
,, [illegible]		[illegible]	[illegible]
[illegible] ಅಕ್ಕಿ	..	[illegible]	[illegible]
ಸಣ್ಣಕ್ಕಿ [illegible]		[illegible]	[illegible]
,, [illegible]	..	[illegible]	[illegible]
ತೊಗರೀ ಬೇಳೆ ಪಲ್ಲ ೧ಕ್ಕೆ		[illegible]	[illegible]
[illegible]		[illegible]	[illegible]
[illegible] ರಾಗಿ ಪಲ್ಲ ೧ಕ್ಕೆ		[illegible]	[illegible]
[illegible]		[illegible]	[illegible]
ಜೋಳ		[illegible]	[illegible]
ಹಲಸಂದೆ ಪಲ್ಲ ೧ಕ್ಕೆ		[illegible]	[illegible]
ಬೀಳೆ ಅವರೆ		[illegible]	[illegible]
ಹೆಸರು		[illegible]	[illegible]
ಹುರುಳಿ		[illegible]	[illegible]
ಕಡಲೆ		[illegible]	[illegible]
ಎಳ್ಳು [illegible]		[illegible]	[illegible]
ಮೆಣಸು		[illegible]	[illegible]
[illegible]		[illegible]	[illegible]
[illegible] ಮಣ ೧ಕ್ಕೆ		[illegible]	[illegible]
ಮೆಣಸಿನಕಾಯಿ		[illegible]	[illegible]
[illegible]		[illegible]	[illegible]
[illegible]		[illegible]	[illegible]
[illegible] ಮಣ ೧ಕ್ಕೆ		[illegible]	[illegible]
[illegible] ,,		[illegible]	[illegible]
[illegible] ಪಲ್ಲ ೧ಕ್ಕೆ		[illegible]	[illegible]
ಉಪ್ಪು ,,		[illegible]	[illegible]
[illegible]		[illegible]	[illegible]
[illegible]		[illegible]	[illegible]
ತುಪ್ಪ ಮಣ ೧ಕ್ಕೆ		[illegible]	[illegible]
[illegible] ೧ಕ್ಕೆ		[illegible]	[illegible]
ತೆಂಗಿನಕಾಯಿ ೧೦೦ಕ್ಕೆ		[illegible]	[illegible]
[illegible] ಮಣ ೧ಕ್ಕೆ		[illegible]	[illegible]
[illegible] ಮಣ ೧ಕ್ಕೆ		[illegible]	[illegible]
ಚಿನ್ನ (ದೊರೆ) ತೊಂಡು		[illegible]	[illegible]
,, ,, ಪವನು		[illegible]	[illegible]
,, ,, [illegible] ತೊಲ ೧ಕ್ಕೆ		[illegible]	[illegible]
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ	..	[illegible]	[illegible]

Printed and Published by the Rev E W Thomson M A, Proprietor and Manager, Wesleyan Mission Press, Mysore 7/11/1907

REGISTERED
M. 20

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೧ — ಮೈಸೂರು—ಸನ್ ೧೯೦೭ ನೇ ಇಸವಿ ನವಂಬರ್ ತಾರೀಖು ೧೪ ನೇ ಗುರುವಾರ. — ಸಂಚಿಕೆ ೨೪

WILLIAM & CO., BOMBAY.

ವಿಲಿಯಂ ಮತ್ತು ಕಂಪನಿ, ಫೋರ್ಟು, ಮುಂಬಯಿ.

ಗಜಕರ್ಣದ ಮುಲಾಮು.

27 58

ಇದನ್ನು ಹಾಗಿಸುವದರಿಂದ ಎಲ್ಲಾ ತರ ದ ಕಜ್ಜಿಯೂ ನಾಶವಾಗುತ್ತದೆ. ಮೂರು ಸಾರಿ ಹಾಗಿಸುವದರೊಳಗೆ ಗಜಕರ್ಣವು ಹೋಗುವದು. ಇದನ್ನು ಹಚ್ಚಿದಲ್ಲಿ ಉರಿಯು ಬರುವದಿಲ್ಲ. ಮತ್ತು ಚರ್ಮ ಕಪ್ಪಾಗುವದಿಲ್ಲ. ಒಂದು ಸಾರಿ ಪರೀಕ್ಷಿಸಿ ನೋಡಿರಿ. ಗುಣ ಕಂಡುಬರುವದಿಲ್ಲವಾದರೆ ಹಣ ಹಿಂತಿರುಗಿ ಕೊಡಲ್ಪಡುವದು. ಡಬ್ಬಿ ೧ಕ್ಕೆ ಕಿಮ್ಮತ್ತು ೦-೬-೦. ವಿ. ಪಿ. ೦-೧೦-೦. ತರಿಸಿಕೊಳ್ಳಿರಿ! ತ್ವರೆಮಾಡಿರಿ!!

ಪ್ಲೇಗ್ ಪಿಲ್ಸ್ ೧-೦-೦ ಸುಂದರೀ ತೈಲ ೦-೪-೦ ದಂತಮಂಜನ ೦-೨-೦. ಕಫಹಾರಿ ೦-೪-೦ ಕೇಶವರ್ಧಿನೀ ತೈಲ ೧-೦-೦ ಜೀರ್ಣ ಕಾರಕ ೦-೬-೦ ಬಜ್ಜೆ ಮುಲಾಮು ೦-೩-೦ ಈ ಕಂಪನಿಯವರು ಇಚ್ಛಾನುಸಾರ ಔಷಧಗಳನ್ನು ಸ್ವತಃ ತಯಾರಿಸುವದರಿಂದ ಕ್ಯಾಟಲಾಗು ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು

ಅಮೃತಾಂಜನ

ಬಾಟ್ಲಿ ಒಂದಕ್ಕೆ ಕಿಮ್ಮತ್ತು ೮ ಆಣೆ ವಿ. ಪಿ. ೧೨ ಆಣೆ.

ಅಮೃತಾಂಜನ—ಸುಖಾಂಜನ.
ಅಮೃತಾಂಜನ—ದಿವ್ಯಾಂಜನ.
ಅಮೃತಾಂಜನ—ಸಂಜೀವನ.
ಅಮೃತಾಂಜನ—ಪರಮಾಂಜನ.

ವಾತ, ಎದೆನೋವು, ಗಂಟಲುನೋವು, ಸಂಧಿವಾತ ತಲೆನೋವು, ಮೂಲವ್ಯಾಧಿ, ಈ ಎಲ್ಲಾ ತರದ ರೋಗಕ್ಕೆ ಈ ಅಮೃತಾಂಜನವು ದಿವ್ಯ ಔಷಧವಾಗಿರುತ್ತದೆ.

ಅಮೃತಾಂಜನ ಡಬ್ಬಿ ೧ಕ್ಕೆ ೫ ಆಣೆ

ಅಮೃತಾಂಜನ—ಶೀತಭಂಜನಿ.
ಅಮೃತಾಂಜನ—ತಕ್ಷಣಪಹಾರಿಣಿ.
ಅಮೃತಾಂಜನ—ಅಪೂರ್ವದರ್ಶನಿ.
ಅಮೃತಾಂಜನ—ಭಂಜನವಿಮರ್ಧಿನಿ.

ಇದರಿಂದ ಗುಣ ಕಂಡುಬರುವದಿಲ್ಲವಾದರೆ ಹಣ ಹಿಂತಿರಿಗಿ ಕೊಡಲ್ಪಡುವದು ಜಕಾಮು ಮತ್ತು ಘಾಯ, ಅರ್ಧಾಂಗವಾಯು, ಈ ರೋಗಕ್ಕೆ ಇದು ಸಂಜೀವನವಾಗಿರುತ್ತದೆ. ತರಿಸಿಕೊಳ್ಳಿರಿ! ಪರೀಕ್ಷಿಸಿರಿ!!

ವಿಲಿಯಂ ಮತ್ತು ಕಂಪನಿ, ೧೬ ಓಕ್ ಲೇನ್, ಫೋರ್ಟು, ಮುಂಬಯಿ.
ಟೆಲಿಗ್ರಾಫು ಅಡ್ರೆಸು; "ಅಮೃತಾಂಜನ," ಮುಂಬಯಿ.

ರಬ್ಬರ್ ಹ್ಯಾಂಡ್ ಪ್ರೆಸ್.

1116

ಕಲಾಕೌಶಲ್ಯದಿಂದ ಮತ್ತು ಉದ್ಯೋಗದಿಂದ ಊರ್ಜಿತಸ್ಥಿತಿ ಹೊಂದುವ ಈ ಭಾರತ ಭೂಮಿಯೊಳಗೆ ಈ ಪ್ರೆಸ್ ತಯಾರಾಗುತ್ತದೆ. ಇದುವರಿಗೆ ಈ ಪ್ರೆಸ್ಸು ಪರದೇಶದಿಂದ ಬರುತ್ತಿರುವಾಗ ಅವಕ್ಕೆ ೧೨ ರಿಂದ ೧೪ ರೂಪಾಯಿಗಳ ವರೆಗೆ ಬೆಲೆ ಬೀಳುತ್ತಿತ್ತು. ಈ ಪ್ರೆಸ್ಸಿನೊಳಗೆ ಕನ್ನಡ ತಮಿಳು, ತೆಲಗು, ಉರ್ದು, ಪರ್ಷಿಯನ್, ಅರಬಿಕ್, ಇಂಗ್ಲೀಷ್ ಮತ್ತು ಬೇಕಾದ ಭಾಷೆಯಲ್ಲಿ ಒಂದು ಪ್ರತಿ ತಯಾರು ಮಾಡಿ, ಮಾಡಿಸಿದ ಮೇಲೆ ಬಹು ಸ್ವಲ್ಪ ಕಾಲದೊಳಗಾಗಿಯೇ ಇದರಿಂದ ೧೫೦ ಪ್ರತಿಗಳನ್ನು ತಯಾರು ಮಾಡಬಹುದು. ಆದ್ದರಿಂದ ಈ ಪ್ರೆಸ್ಸು ಸಾರ್ವಜನಿಕ ಕಚೇರಿ ಮ್ಯುನಿಸಿಪಾಲಿಟಿ ಪೊಲೀಸ್ ಆಫೀಸುಗಳು, ವಕೀಲರು, ವರ್ತಕರು, ಇನಾಮದಾರರು ಮತ್ತು ಪಾಠಶಾಲೆ ಇವುಗಳ ಸಂಗ್ರಹದಲ್ಲಿ ಅವಶ್ಯ ಇರಬೇಕು. ಎಷ್ಟೋ ಕಾರಕೂನರ ಸಹಾಯದಿಂದ ಒಂದು ಕೆಲಸಕ್ಕೆ ಬಹಳ ಕಾಲ ಹಿಡಿಯುವದು ಆದರೆ ಈ ಸಣ್ಣ ಪ್ರೆಸ್ಸಿನಿಂದ ಅಂಥಾ ಕೆಲಸವನ್ನಾದರೂ ಸ್ವಲ್ಪ ಕಾಲದಲ್ಲಿಯೇ ಮಾಡುವದಕ್ಕೆ ಸಾಧ್ಯ. ಇದರ ದೆಸೆಯಿಂದ ಈ ಪ್ರೆಸ್ ಜನರ ಪ್ರೀತಿಗೆ ಪಾತ್ರವಾಗಿರುವದು. ಈ ಕಾರಣದಿಂದ ಪ್ರತಿ ಒಬ್ಬರು ತಮ್ಮ ಹತ್ತಿರ ಈ ಪ್ರೆಸ್ಸನ್ನು ಅವಶ್ಯಕವಾಗಿ ಇಡುವದರಲ್ಲಿ ಏನೂ ಸಂದೇಹವಿಲ್ಲ.

ನೋಟ್ ಪೇಪರ್ ಸೈಜು, ರೂಪಾಯಿ ೪—೦—೦.
ಹಾಫ್ ಫುಲ್‌ಸ್ಕ್ಯಾಫ್ ಸೈಜು, ೬—೦—೦.
ಪೋಸ್ಟೇಜು ಬೇರೆ (extra)

ವಿಳಾಸ.— ವರ್ಧಮಾನ ಏಜನ್ಸಿ.
ಪೋಸ್ಟ್ ಕಾಲಬಾದೇವಿ.
ಮುಂಬಯಿ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು

26 39



೧ ಲೋಕಾಮಯಹರ ಕಸ್ತೂರೀ ಮಾತ್ರೆ.—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ.

ಚಳಿಜ್ವರ, ಜ್ವರ, ಹೊಟ್ಟೆಶೂಲೆ, ಕಂದುಗಳ ನೋವು, ಮೈ ಕೈಕಾಲು ಸೋಡತ (ಭಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿಮಾಂದ್ಯ, ಹಲ್ಲು ನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ.

ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತೆ. ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಖಾಯಿಲೆಯೂ ದಾರಿಕೊಡದೆ, ನೀರು ಹವಾಗಳ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ ಸ್ತ್ರೀಯರ ಋತುಶೂಲೆ, ಮಕ್ಕಳ ಕೆಮ್ಮು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ.

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.

ಅನುಪಾನಪತ್ರ ಔಷಧದ ಸಂಗಡಲೇ ಇರುತ್ತದೆ.

೨೦ ಮಾತ್ರೆಯುಳ್ಳ ಕುಪ್ಪಿಗೆ ೪ ಆಣೆ, ೫ ಕುಪ್ಪಿಗೆ ೧ ರೂಪಾಯಿ ಕೆಚ್ಚ ೧ ರಿಂದ ೧೨ ಕುಪ್ಪಿ ವರೆಗೆ ಪೋಸ್ಟೇಜು ೪ ಆಣೆ.

ವಿಳಾಸ:—ಪಾಳ್ಯದ ವೆಂಕಟಾಚಲ ಪಂಡಿತ,
ಎಸ್. ಎಸ್. ಆರ್. ವೈದ್ಯಶಾಲಾ,
ಲಕ್ಷ್ಮೀವಿಲಾಸ ರೋಡ್, ಮೈಸೂರು

ನಿಮಗೆ ನೋವು ಇದೆಯೋ?

58-25

ಹಾಗಾದರೆ "ಕ್ಲೆಮೆಂಟ್ ಯವರ ನ್ಯೂರಿಟಿಕ್ ಟಾನಿಕ್" ನ್ನು ಯಾಕೆ ಉಪಯೋಗಿಸಬಾರದು? ಆಶ್ಚರ್ಯಕರವಾದ ಬಾಧಾಪರಿಹಾರಕೆಯು! ಈಗಿನ ಶತಮಾನದಲ್ಲಿ ಕಂಡು ಹಿಡಿದ ದೊಡ್ಡ ನೂತನವು!

ಈ ರಾಜ ಔಷಧವನ್ನು ಮೊಟ್ಟಮೊದಲು ತೊಡೆಯುತ್ತಲೆ ಕೆಲವು ನಿಮಿಷಗಳೊಳಗಾಗಿ ನರ ಮತ್ತು ಮಾಂಸ ಸಂಬಂಧವಾದ ಬಾಕ್ಸರ ನೋವು, ಕೀಲುಗಳ ಬಾಧೆ, ಕಿಬ್ಬೊಟ್ಟೆ ನೋವು, ಬೆನ್ನು ಳುಕುವದು, ತಲೆನೋವು, ಕೆಮ್ಮು, ಕೀಲುಗಳು ಕತ್ತರಿಸುವದು, ಕೊರಳು ಊತ, ಕೈಕಾಲು ಒಡೆತ ಇವುಗಳನ್ನೆಲ್ಲಾ ವಿದ್ಯುಚ್ಛಕ್ತಿಯಂತೆ ಗುಣಪಡಿಸುವದು. ಈ ಔಷಧವು ಆಶ್ಚರ್ಯಕರವಾಗಿ ಗುಣಪಡಿಸುವದರಿಂದ ಎಲ್ಲರಲ್ಲಿಯೂ ಪ್ರಸರಿಸುತ್ತಾ ಬರುವದು. ಇತರ ಔಷಧಿಗಳು ಗುಣಪಡಿಸದೆ ಹೋದಾಗ ಡಾಕ್ಟರ್ ಫೀಜನ್ನು ಕಡಿಮೆಮಾಡಿ. ಇದು ನಿಸ್ಸಂದೇಹವಾಗಿಯೂ ಗುಣಪಡಿಸುವದು.

ಕ್ರಯ—೧ ಬಾಟ್ಲಿಗೆ ೧೨ ಆಣೆ, ಪೋಸ್ಟೇಜ್ ೪ ಆಣೆ ೩ ಬಾಟ್ಲಿಗೆ ಅಂಚೆವೆಚ್ಚ ಸೇರಿ ರೂ. ೨—೪ ಆಣೆ. ಎಲ್ಲಾ ಕೆಮಿಸ್ಟು ಷಾಪುಗಳಲ್ಲಿ ದೊರೆಯುವದು

ನಮ್ಮ ವಿಳಾಸ:—ಎಫ್. ಡಬ್ಲ್ಯು. ಲರ್ಕ,
ಸಿಮೆಟ್ರಿ ರೋಡ್, ವೇಪೇರಿ, ಮದರಾಸ್.

ಜ್ವರಹರಿ.

1182



ಇದು ಸಾಧಾರಣ ಜ್ವರ, ಚಳೀಜ್ವರ, ಮೋರೇಜ್ವರ, ಪಿತ್ಥಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎನ್. ಟಿ. ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಔನ್ಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೆ ಬೀಳುತ್ತಿರುವದರಿಂದ ದಯವಿಟ್ಟು ಇನ್ನೊಂದು ೨೦ ಔನ್ಸಿನ ಸೀಸೆಯನ್ನು ವಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದಾರೆ

ಕ್ರಯ:—ಸೀಸೆ ೧ ಕ್ಕೆ ೮ ಆಣೆ, ೧ ರೂ.; ೧—೮ ರೂ., ರೂ ೨—೧೨ ಆ., ೧೧ ರೂ, ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

****

ಓಮಂ ಕರ್ಪೂರ.

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದು ಸಾರೆ ಸ್ನಾನಕ್ಕೆ ಆಗುವಾಗ್ಗೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಕೆನ್ರಿಯವರ ಓಮಂ ಕರ್ಪೂರವನ್ನು ನಾನೂ ನನ್ನ ಈ ಹೆಡ್‌ಕ್ವಾರ್ಟರ್ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಷ್ಟರಿಗೆ ಉಪಯೋಗಿಸಿ ಕೊಟ್ಟು ಕೊಂಡಿರೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂತ ಬರೆದಿದಾರೆ

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರನ್ನು ವಿಚಾರಿಸಿ:—
ಕೆನ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,
ನೆಲ್ಲೂರ್ ಬ್ಲಾಕ್ ಟೌನ್, ಮದರಾಸ್

೧೯೦೮ ನೇ ಇಸವಿಯ ಇಂಗ್ಲೀಷು-ಕನ್ನಡ

1192

ಪಾಕೆಟ್ ಡೈರಿ

ಎ ನಂ॥ ಬಿ. ನಂ॥ ಸಿ. ನಂ ಡಿ. ನಂ॥

ಕ್ರಯ ೩ ಆಣೆ ೫ ಆಣೆ. ೬ ಆಣೆ ೮ ಆಣೆ

ಈ ಡೈರಿಗಳು—ವರ್ತಕರು, ಲಾಯರುಗಳು, ಕಂಟ್ರಾಕ್ಟರರು, ದೊಡ್ಡ ಮನುಷ್ಯರು ಮತ್ತು ಎಲ್ಲರಿಗೂ ಉಪಯೋಗವಾಗಿರುತ್ತವೆ. ಇವುಗಳಲ್ಲಿ ಅಡಕವಾಗಿರುವ ವಿಷಯಗಳು—ಶೀಲಕ ಸಂ॥ ಪಂಚಾಂಗ, ಗ್ರಹ ಕುಂಡಲಿ ಸಹಿತ, ಕ್ಯಾಲೆಂಡರು ಹಬ್ಬಗಳು, ರಜಾ ದಿನಗಳ, ರೈಲ್ ಛಾರ್ಜು, ಟೆಲಿಗ್ರಾಫ್ ಫೀಜು, ಪೋಸ್ಟ್ ರೂಲ್ಸು, ಸ್ಟಾಂಪು ರಿಜಿಸ್ಟರ್ ಫೀಜುಗಳು, ಪೋಸ್ಟಾಫೀಸಿನ ಎಲ್ಲಾ ವಿಷಯಗಳು, ಜವಿಾನುಗಳ ಅಳತೆ, ಗೌರಿ ಪಂಚಾಂಗ ವೃಕ್ಷ ಶಾಸ್ತ್ರ ರಾಹುಕಾಲ, ಗುಳಿಕಕಾಲ, ಮಾಘಫಲ, ಮಾಸಫಲಗಳು, ದಿನ ಸಂಬಳದ ಪಟ್ಟಿ, ಧೋಬಿ ಲೆಕ್ಕ, ಜಮಾ ಖರ್ಚುಪಟ್ಟಿ, ಇನ್ನೂ ಅನೇಕ ವಿಷಯಗಳು ಇವೆ. ಉತ್ಕೃಷ್ಟವಾದ ಕಾಗದ ರುಲು ಹಾಕಿಸಿ ಸೀಮೆ ಕಾಮುಸು ಬೈಂಡು, ಚಿನ್ನದ ಭಂಗಾರದ ರೇಖೆಯಿಂದ ಕಾಂದಾ ಮಾಡಲ್ಪಟ್ಟಿದೆ.

ಎ ನಂಬರ್ ಚಿಕ್ಕ ಸೈಜು	೩ ಆಣೆ
ಬಿ ನಂಬರ್ ಮಧ್ಯಮದ್ದು	೫ ಆಣೆ
ಸಿ ನಂಬರ್ ಗೆಡ್ಡ ಸೈಜು	೬ ಆಣೆ
ಡಿ ನಂಬರ್ ಮಹತ್ವದ್ದು	೮ ಆಣೆ

ಪೋಸ್ಟ್ ಛಾರ್ಜು ಬೇರೆ. ಒಂದೇ ಸಮಾನೆಯಲ್ಲಿ ೧೨ ಡೈರಿ ತರಿಸಿಕೊಂಡರೆ ೧ ಡೈರಿ ಉಚಿತವಾಗಿ ಕೊಡುವೆವು. ವಿ. ಪಿ. ಮೂಲಕವೂ ತರಿಸಿಕೊಳ್ಳಬಹುದು.

ನಮ್ಮ ವಿಳಾಸ —ಶ್ರೀ. ಶಿವಲಿಂಗಂ ಶೆಟ್ಟಿ ಕಂಪನಿ,

ಕರ್ನಾಟಕ ಬುಕ್ ಡಿಪ್ಪೋ ಪ್ರೆಸ್, ಬಳ್ಳಾರಿ

ವಿಕಟಪ್ರತಾಪ.

ಸಚಿತ್ರವೂ, ವಿಚಿತ್ರವೂ ಆದ ಮಾಸಪತ್ರಿಕೆ

1097

ನನ್ನ ಹೆಸರೇನು ! ನಾನು ಯಾವ ವೃತ್ತಿಯವನು !

ನನ್ನ ಪ್ರತಾಪವೇನು !!!

ನನ್ನ ಹೆಸರು ಹೇಳಿದರೆ ಎಲ್ಲರೂ ಬಲ್ಲರು. ನಾನು ದೇಶದೇಶಗಳಲ್ಲೆಲ್ಲಾ ಸುತ್ತಿ ಸುತ್ತಿ ಮಾರ್ಗದಲ್ಲಿ ಪ್ರವರ್ತಿಸಿ ರಾಜ್ಯರಂಗದಲ್ಲಿ ಲೋಕೈಕ ವೀರರುಗಳೆಂದೆನಿಸಿಕೊಂಡು ಸ್ವೇಚ್ಛೆಯಾಗಿ ಮೆರೆಯುತ್ತಿದ್ದ ಮಲ್ಲರನ್ನೆಲ್ಲಾ ಕಲ್ಪನ ಬಲ್ಲವಿಂದಲೇ ಸಲ್ಲದವರೆಂತೆ ಮಾಡಿ ತಮ್ಮ ತಮ್ಮ ಸಂಕಲ್ಪದಲ್ಲಿಯೇ ನಿಲ್ಲಿಸಿರುವೆನು.

[illegible]

ಈ ಪತ್ರಿಕೆಯಲ್ಲಿ ಪ್ರತಿ ತಿಂಗಳಲ್ಲಿಯೂ ೩ ೪ ಚಿತ್ರಗಳನ್ನು ಪ್ರಕಟಿಸಲ್ಪಡುತ್ತ ಮುದ್ರಿತ ಪತ್ರಿಕೆಯನ್ನು ಅಪೇಕ್ಷಿಸುವವರು ೨ ಆಣೆ ಯ ಸ್ಟಾಂಪನ್ನು ರವಾನಿಸಬೇಕು. ವಿಕಟಪ್ರತಾಪದ ಚಂದಾ ವಿವರ —

ಸ್ಥಳದವರಿಗೆ ವರ್ಷವೊಂದಕ್ಕೆ ರೂ ೧—೦—೦

ಪರಸ್ಥಳದವರಿಗೆ ರೂ ೧—೦—೦

ನಮ್ಮ ವಿಳಾಸ.—ಮ್ಯಾನೇಜರ್, ವಿಕಟಪ್ರತಾಪ ಆಫೀಸ್,

೧೩೯ ಆನೀಲೆ ಪೇಟೆ, ಬೆಂಗಳೂರು ಸಿಟಿ

CHAMBERLAIN'S COLIC, CHOLERA AND DIARRHOEA REMEDY.

ಚೇಂಬರ್ಲೆನ್ ಯವರು ಹೊಟ್ಟೆಕೂಳೆ, ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧ

420



ಈ ಔಷಧ ಹೊಟ್ಟೆಯ ನೋವು, ಬೇದಿ, ಭೇದಿಯಾಗುವುದು, ಅನ್ನ ಅಜೀರ್ಣ, ವಾಂತಿಭೇದಿ ಮುಂತಾದ ರೋಗಗಳು, ಹೊಟ್ಟೆಯ ನಾನಾ ತರದ ರೋಗಗಳು—ಈ ರೋಗಗಳನ್ನೆಲ್ಲಾ ವಾಸಿಮಾಡುತ್ತದೆ. ಈ ಪರಮ ಯುಕ್ತವಾದ ಔಷಧವು ಜನರನ್ನು ಬದುಕಿಸಿರುವಷ್ಟು ಮತ್ತು ನೋವನ್ನೂ ಬಾಧೆಯನ್ನೂ ನಿವಾರಣೆ ಮಾಡುವಷ್ಟು ಪ್ರಪಂಚದಲ್ಲೇ ಇನ್ಯಾವ ಔಷಧವೂ ಮಾಡಿರುವುದಿಲ್ಲ.

ಜ್ವಾಪಕದಲ್ಲಿಟ್ಟುಕೊಳ್ಳಿ—ಒಂದು ಸರ್ತಿ ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯೊಳಗಿನ ಎಲ್ಲಾ ತರದ ನೋವನ್ನೂ ನಿಲ್ಲಿಸಿಬಿಡುತ್ತದೆ. ಬೇರೆ ಕಾರಣವಾದ ಭೇದಿಯೂ ಕೂಡ ಮೂರೇ ಹೊತ್ತಿನಲ್ಲಿ ಈ ಔಷಧದಿಂದ ನಿರ್ಮೂಲವಾಗಿ ನಿಲ್ಲಿಸುತ್ತದೆ. ಖಂಡಿತವಾಗಿ ವಾಸಿಮಾಡುವುದೇ ಇದರ ಗುಣ.

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕ್ರಯಂದ ಸ್ವಲ್ಪವೂ ಮುಟ್ಟದಲ್ಲ.

ಇದು ಎಲ್ಲೆಲ್ಲೂ ಬಿಕರಿಯಾಗುವುದು | ಸಣ್ಣ ಸೀಸೆಗೆ ೧ ರೂಪಾಯಿ | ದೊಡ್ಡ ಸೀಸೆಗೆ ೨ ರೂಪಾಯಿ.

ವೀರಶೈವರೇ, ಕೊಂಚ ಗಮನಿಸಿ.

1181

ಚಿತ್ರದುರ್ಗದ ಶ್ರೀಮನ್ನಿರಂಜನ ಜಗದ್ಗುರು ಮುರುಘರಾಜೇಂದ್ರ ಸ್ವಾಮಿಗಳ ಪಾವಟೀಕ ವೃ[illegible] ಸ್ವಾಮಿ ಕಳುಹಿಸಿಕೊಟ್ಟಲ್ಲಿ ೬×೮ ಸೈಜಿನದು ೨ ಆಣೆ ಸ್ಟಾಂಪು ಕಳುಹಿಸಿಕೊಟ್ಟಲ್ಲಿ ಪ್ರಭಾವ ಳಿಯಲ್ಲರಾಕ್ಕೆ ೮×೧೦ ಸೈಜಿನದು ರವಾನಿಸಲ್ಪಡುತ್ತ. ಒಟ್ಟಿಗೆ ತರಿಸಿಕೊಂಡರೆ ೮ [illegible] ೧೦೦ಕ್ಕೆ ೨,೦೦೦ಕ್ಕೆ ೨೦ ರಂತೆ ಕಮಿಷನ್ ದೊರೆಯುತ್ತೆ.

ಸ್ವಾಮಿಗಳ ಅಸಲ್ ಫೋಟೋ ೧ ಕ್ಕೆ ಕ್ರಯ ೮ ಆಣೆ

ವಿಳಾಸ — ಡಿ. ಎ. ಪುಟ್ಟಣ್ಣ, ಟ್ರಾವೆಲಿಂಗ್ ಏಜೆಂಟ್, ಕ[illegible]ಟೆ, ಮೈಸೂರು.

ದಕ್ಷಿಣ ಮಹಾರಾಷ್ಟ್ರ ರೈಲ್ವೆ ಕಂಪನಿ, ಲಿಮಿಟೆಡ್

ನೋಟೀಸು.

1201

ಮಾರಿಬಂದರ್ ಸ್ಟೇಷನಿಂದ ಮೈಸೂರು ಸ್ಟೇಷನ್ ಗೆ ಬಂದಿರುವ ೧೫ ಮೂಟೆಗಳ ಕಾಡಲೆಬೀಜ ಮತ್ತು ೧೫ ಮೂಟೆಗಳ ಗೋಧುವೆ —ಮಾರ್ಕ್ ೯೩, ಇನ್‌ವಾಯಿಸ್ ನಂ ೧೧೩

ತಾ ॥ ೯ ೮—೧೯೦೭

ಮೇಲ್ಕಂಡ ಮೂಟೆಗಳನ್ನು ರೈಲ್ವೆ ಕಂಪೆನಿಯಿಂದ ವಿಳಾಸದಾರನು ಸಾಗಿಸಿಕೊಂಡು ಹೋಗಿಲ್ಲವಾದಕಾರಣ ರೈಲ್ವೆ ಆಕ್ಟಿನ ೫೬ ನೇ ಸೆಕ್ಷನ್ ಪ್ರಕಾರ ಅವುಗಳನ್ನು ೧೯೦೭ ನೇ ಇಸವಿ ನವಂಬರ್ ೧೮ ನೇ ತಾರೀಖು ಬೆಳಿಗ್ಗೆ ಕಂಪನಿಯವರು ರೈಲ್ವೆ ಸ್ಟೇಷನ್ನಲ್ಲಿ ಪಬ್ಲಿಕ್ ಹರಾಜಿನ ಮೂಲಕ ವಿಕ್ರಯಿಸುತ್ತಾರೆ

ಡಿ ಟ್ರಾಫಿಕ್ ಸೂ ಆಫೀಸ್	ಎಸ್ ತಿ ಮರ್ಸರ್,
ಬೆಂಗಳೂರು ಸಿಟಿ,	ಡಿ ಟ್ರಾಫಿಕ್ ಸೂ
೧—೧೧—೧೯೦೭	

ಮಕ್ಕಳ ಹಿತಕಾರಿ

೬ ದು

SCOTT'S EMULSION 3135

(ಸ್ಕಾಟ್ಸ್ ಇಮಲ್ಷನ್)

ಎಳೆ ಮಕ್ಕಳು ಬಡಕಲಾಗಿ ಕ್ಷಯರೋಗಾಂತರ ತಂದೆತಾಯಿಗಳಿಗೆ ಚಿಂತೆಯುಂಟುಮಾಡುವಾಗ ಈ ಔಷಧ ಮಕ್ಕಳ ಆರೋಗ್ಯವನ್ನು ವೃದ್ಧಿ ಪಡಿಸಿ ದೇಹವನ್ನು ಪುಷ್ಟಿ ಪಡಿಸಿ ಬೆಳೆಸುತ್ತದೆ.

ಇದು ತಿನ್ನಲು ರುಚಿಯಾಗಿರುವುದರಿಂದ ಮಕ್ಕಳು ಬಹು ಸಂತೋಷವಾಗಿ ಸೇವಿಸುತ್ತಾರೆ.

ಇದು ಕಾಯಿಲೆ ಮಕ್ಕಳನ್ನು ಆರೋಗ್ಯವಾಗಿ ಮಾಡುವುದು, ಅಶಕ್ತರಾದ ಮಕ್ಕಳನ್ನು ಬಲಿಷ್ಟರನ್ನಾಗಿ ಮಾಡುವುದು

ಕ್ರೆಸೋಟದಿಂದ ತಯಾರಾದದ್ದು

ಈ ಮನುಷ್ಯ ಇರುವ ಔಷಧವನ್ನೇ ಕೇಳಬೇಕು.

ಎಲ್ಲಾ ಔಷಧ ವ್ಯಾಪಾರಸ್ಥರಲ್ಲೂ ಬಿಕರಿಯಾಗುತ್ತೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್

ಈಗಲೇ ಸೀಮೆಯಿಂದ ಹೊಸ ಕ್ರಾಸ್ಟ್ರೆಪಲ್ ಸ್ಟೀಮರಿನಲ್ಲಿ ಬಂದಿದೆ

1171

ಎಗ್ಲೆಸೆಂಟು, ಕೇಸು, ಮತ್ತು ತಾಜಾ ಕಲ್ಪ ಸಾಮಗ್ರಿಯವು

ಹೊಸ ಉಲನ್ ದಿಂಬು ೧ ಕ್ಕೆ	ರೂ.	೩—೦—೦
೧೦ ಟೇಪೆಯಾಗುವ ಬಂಡಲ್ ೧ ಕ್ಕೆ		೩—೯—೦
೧ ಟೇಪೆಯಾಗುವ ಉಲನ್ ದಾರಕ್ಕೆ		೦—೮—೦
ಕೊಕ್ಕೆ ಸೂಜಿ ಡಜನ್ ೧ ಕ್ಕೆ		೦—೪—೦
೧ ಕೊಕ್ಕೆ ಸೂಜಿಗೆ		೦—೦—೩
೩೦ ಇಂಚಿನ ಬನಿಯ ೯ ೧ ಕ್ಕೆ		೦—೯—೦
ಪಿಸ್ತ ಪೋಸ್ಟ್ ಕಾರ್ಡು ೧೦೦ ಕ್ಕೆ		೦—೬—೦

ವಿ ಪಿ ಇಂದಲೂ ರವಾನಿಸುತ್ತೇವೆ ವಿಳಾಸ

ದಿ ಉಲನ್ ಮಾರ್ಟ್, ಬೆಂಗಳೂರು, ದ ಕ

ಇಗೋ ! ಕನ್ನಡ "ಮಾಡಲ್ " ಪಾಕೆಟ್ ಡೈರಿ

1221

ಸೊಗಸಾದ ಡೈರಿಗಳು ! ಉತ್ತಮವಾದ ಡೈರಿಗಳು !!

ಉತ್ಕೃಷ್ಟವಾದ ಡೈರಿಗಳು !!!



೧೯೦೮ ನೇ ಇಸವಿ ಕನ್ನಡ ಡೈರಿಗಳ ಸೊಗಸಾದ ಉತ್ತಮ ಕಾಗದದ ಮೇಲೆ ಅಚ್ಚು ಸಂಸ್ಥೆಯಿಂದ ಒಳ್ಳೆ ರುಗಳಿಂದ ಹೊಂದಿ ವ ಸ್ಥಿಗೆ ಅತೀವಾನಂದವನ್ನು ಉಂಟುಮಾಡತಕ್ಕವುಗಳಾಗಿರುತ್ತವೆ. ಇವುಗಳಲ್ಲಿ ಅಡಕವಾಗಿರುವ ವಿಷಯಗಳು — ಜವಾಬ್ದಾರಿಕೆ ಪಟ್ಟಿ, ಸ್ಕೀಮ ಲೆಕ್ಕ, ದಿನ ಸಂಬಳದ ಪಟ್ಟಿ, ಎನ್ಚಾಯರ್ ಗಳ ಕಾಲ ರಾಹು ಕಾಲ ಗುಳಿಕಕಾಲ, ವೃಕ್ಷ ಶಾಸ್ತ್ರ, ಗೌರಿ ಪಂಚಾಂಗ ಶಕುನ, ಜವಿಾನುಗಳ ಅಳತೆ, ಪೋಸ್ಟಾಫೀಸಿನ ಎಲ್ಲಾ ವಿಷಯಗಳು, ರಿಜಿಸ್ಟರ್ ಫೀಜುಗಳು, ಸ್ಟಾಂಪು, ಪೋಸ್ಟ್ ರೂಲ್ಸು, ಟೆಲಿಗ್ರಾಫ್ ಫೀಜು, ರೈಲ್ ಛಾರ್ಜು, ರಜಾ ದಿನಗಳು, ಹಬ್ಬಗಳು, ಕ್ಯಾಲೆಂಡರು, (ಗ್ರಹ ಕುಂಡಲಿ ಸಹಿತ) ಶೀಲಕ ಸಂ॥ ಪಂಚಾಂಗ, ಇನ್ನೂ ಇಂಥಾದ ಅನೇಕ ವಿಷಯಗಳು ಅಡಗಿರುತ್ತವೆ. ಡೈರಿಗಳ ಕ್ರಯ —

ನಂ॥ ೧ ಸಣ್ಣ ಸೈಜು ಪೆನ್ಸಿಲ್ ಇಡತಕ್ಕ ಡೈರಿ ೦—೩— ನನ್ನೆರಡು ಡೈರಿಗಳಿಗೆ ೧ ಇನಾಮು

ನಂ॥ ೨ ಸಣ್ಣ ಸೈಜು ಪೆನ್ಸಿಲ್ ಇಟ್ಟ ಮಧ್ಯಮ ಸೈಜು ಡೈರಿ ೦—೪—೦ ಹನ್ನೆರಡು ಡೈರಿಗಳಿಗೆ ೧ ಇನಾಮು

ನಂ॥ ೩ ದೊಡ್ಡ ಸೈಜು ಪೆನ್ಸಿಲ್ ಇಡತಕ್ಕ ಡೈರಿ ೦—೬—೦ ಹತ್ತು ಡೈರಿಗಳಿಗೆ ೧ ಇನಾಮು

ನಂ॥ ೪ ದೊಡ್ಡ ಸೈಜು ಪೆನ್ಸಿಲ್ ಇಟ್ಟ ಮಧ್ಯಮ ಕಾಲಿಕೊ ಡೈರಿ ೦—೮—೦ ಹನ್ನೆರಡು ಡೈರಿಗಳಿಗೆ ೧ ಇನಾಮು

ಡೈರಿಗಳ ಗಲಾಟೆಯಲ್ಲಿ ಭ್ರಾಂತಿಗೊಂಡು ಗೋಳಿದ ಉತ್ತಮವಾದವು ಗಳಿಗೆ ಗ್ರಾಹಕರು ವಿಚಾರಿಸಿ ನಮ್ಮ ಡೈರಿಗಳನ್ನು ಕೊಂಡುಕೊಳ್ಳಬೇಕು. ಇವುಗಳು ಗೌರ್ನಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿವೆ ನಮ್ಮ ವಿಳಾಸ —

ಮ್ಯಾನೇಜರ್ ಸಿ. ಎಲ್ ಎಸ್ ಬುಕ್ ಡಿಪ್ಪೋ, ಮೈಸೂರು.

ಅಥವಾ,

ಎಸ್ ಡಿ ನರಸಿಮಲ್ ಕಂಪನಿ, ದೊಡ್ಡಪೇಟೆ, ಮೈಸೂರು

ಅಥವಾ,

ಎಲ್ ಬಿ ಪ್ರೋವಾಲ್—ಬೆಂಗಳೂರು ಸಿಟಿ

ವೃತ್ತಾಂತ ಪತ್ರಿಕೆ.

———:೦:———

೧೯೦೭ ನೇ ಇಸವಿ ನವಂಬರ್ ತಾ॥ ೧೪ ನೇ ಗುರುವಾರ

ಕೈಗಾರಿಕೆ ಮತ್ತು ವ್ಯವಸಾಯ ಸಂಘವು

ಈ ತಿಂಗಳ ಮೊದಲನೇ ವಾರ ರಾಜಧಾನಿಯಲ್ಲಿ ರೆವಿನ್ಯೂ ಕಮಿಷನರರೂ ಕೆಲವು ಪ್ರಜಾ ಪ್ರತಿನಿಧಿಗಳೂ ಜಹಗೀರ್‌ದಾರರಾದ ದೊಡ್ಡ ಮನುಷ್ಯರೂ ಸಭೆ ಸೇರಿ, ಮೇಲ್ಕಂಡ ಸಂಘವನ್ನು ಸ್ಥಾಪನೆ ಮಾಡಿದರು. ವ್ಯವಸಾಯವನ್ನೂ ನೇಯ್ಗೆ ಮೊದಲಾದ ಕೈಗಾರಿಕೆಗಳನ್ನೂ ಅಭಿವೃದ್ಧಿಗೆ ತರುವುದೇ ಈ ಸಂಘದ ಉದ್ದೇಶವಾಗಿದೆ. ವ್ಯವಸಾಯ ವಿಷಯದಲ್ಲಿ ಹೊಸ ಕ್ರಮಗಳನ್ನೂ ಲಾಭಕರವಾದ ಬೆಳೆಗಳನ್ನೂ ಬೆಳೆಯತಕ್ಕ ವಿಧಾನಗಳನ್ನೂ ಮೈಸೂರು ಡಿಸ್ಟ್ರಿಕ್ಟಿನಲ್ಲಿರುವ ರೈತಪ್ರಜೆಗಳಿಗೆ ತೋರಿಸಿ ಕಲಿಸುವರು. ಒಳ್ಳೇ ಬೀಜಗಳನ್ನೂ ನೂತನವಾದ ನೇಗಿಲು ಮೊದಲಾದ ವ್ಯವಸಾಯ ಸಾಧನಗಳನ್ನೂ ತರಿಸಿಟ್ಟು ಮಾರಾಟವಾಗಿ ಬಿಕರಿ ಮಾಡುವರು. ನೆಯ್ಗೆ ಕಸಬಿನವರಿಗೆ ಉಪಯುಕ್ತವಾದ ಹೊಸ ತರಹ ಕೈಮಗ್ಗಗಳನ್ನೂ ನೂಲು ಮೊದಲಾದವುಗಳನ್ನೂ ತರಿಸಿ ಕೊಡುವುದಲ್ಲದೆ ಅವರು ತಯಾರು ಮಾಡತಕ್ಕ ಸರಕುಗಳಿಗೆ ಗಿರಾಕಿಗಳನ್ನು ಒದಗಿಸುವ ಭಾಗದಲ್ಲೂ ಈ ಸಂಘದವರು ಪ್ರೋತ್ಸಾಹಪಡಿಸುವರು. ಇದಲ್ಲದೆ ಸುಲಭವಲ್ಲೇ ತಯಾರುಮಾಡಿ ಹೆಚ್ಚು ಲಾಭವನ್ನು ಪಡೆಯಬಹುದಾದ ಕೈಗಾರಿಕೆಗಳನ್ನು ಗೊತ್ತು ಮಾಡಿ ಕಸಬುದಾರರಿಗೆ ಹೇಳಿಕೊಡುವುದಕ್ಕೂ ಪ್ರಯತ್ನಪಡುವರು.

ಇಂಥಾ ಸಂಘವು ಏರ್ಪಾಡಾದದ್ದನ್ನು ನೋಡಿ ನಾವು ಸಂತೋಷಪಡುತ್ತೇವೆ. ಗ್ರಾಮಾಂತರಗಳಲ್ಲಿ ಅದರ ಮೂಲಕ ರೈತರೇ ಮೊದಲಾದ ಸಕಲ ಪ್ರಜೆಗಳೂ ಆರೋಗ್ಯ, ವ್ಯವಸಾಯ, ಕೈಗಾರಿಕೆಗಳ ವಿಷಯವಾಗಿ ಅನೇಕ ಸಂಗತಿಗಳನ್ನು ಕಲಿತುಕೊಳ್ಳುವುದಕ್ಕೂ, ಆ ಪ್ರಕಾರ ಆಚರಣೆಯಲ್ಲಿ ತಂದು ಅಭಿವೃದ್ಧಿಗೆ ಬರುವುದಕ್ಕೂ ತುಂಬಾ ಸಹಾಯವಾಗುತ್ತದೆ. ಈಗ ಈ ಮೂರು ವಿಷಯಗಳಲ್ಲೂ ಜನರು ಪೂರ್ವಪದ್ಧತಿಗಳನ್ನೇ ಅನುಸರಿಸುತ್ತಾ ಬಂದು, ಇತರರಿಂದಲೂ ಈಗಿನ ಕಾಲಕ್ಕೆ ತಕ್ಕಂಥಾ ಹೊಸ ಹೊಸ ಸಾಧನ ಸಂಪತ್ತುಗಳನ್ನು ಒದಗಿಸಿಕೊಳ್ಳದೆ ಇರೋಣದರಿಂದಲೂ ಬಹಳ ಹೀನಸ್ಥಿತಿಗೆ ಬಂದಿರುವರು. ಇಂಥಾ ಲೋಪವನ್ನು ಮೇಲ್ಕಂಡ ಸಂಘವು ಪರಿಹಾರ ಮಾಡುವುದಾಗಿದೆ. ಮೈಸೂರು ಡಿಸ್ಟ್ರಿಕ್ಟಿನಲ್ಲಿರುವ ರೈತರೂ ಕಸಬುದಾರರೂ ಈ ಸಂಘಕ್ಕೆ ಮೆಂಬರುಗಳಾಗಿ ಸೇರಿ ಪರಿಶ್ರಮಿಸಿ ಏಕಮನಸ್ಸಿನಿಂದಲೂ ಉತ್ಸಾಹಪೂರ್ವಕವಾಗಿಯೂ ಕಾರ್ಯಸಾಧನೆ ಮಾಡಿಯಾರೆಂದು ನಿರೀಕ್ಷಿಸುತ್ತೇವೆ.

ಅಸ್ವಾರ್ಥತೆ

ಹೋದವಾರದ ಸಂಚಿಕೆಯಲ್ಲಿ ಸತ್ಯವನ್ನಾಡುವುದು ಗೆ [illegible] ಬೇಕಾದ ಅತ್ಯವಶ್ಯಕವಾದ ಗುಣವೆಂದು ತಿಳಿಸಿದೆವಷ್ಟೆ. ಯಾವದೇಶವು ಉನ್ನತಸ್ಥಿತಿಗೆ ಬರಬೇಕಾದರೆ ಅದರಲ್ಲಿರುವ ಜನರ ಅಂತಃಕರಣವು ಪರಿಣಮಿಸಿದರೆ ದೇಶವು ಅಗ್ರದಿಂದ ಬಿಗಿಯಲ್ಪಡದೆ ಇರುವ ಕಂತೆಯ ಹಾಗೆ ಬಿಂಗಡ ಬಿಂಗಡವಾಗಿ ಬಿದ್ದುಹೋಗುವುದು. ಅಸತ್ಯವನ್ನಾಡುವವರು ಒಟ್ಟಾಗಿ ಸೇರಿ ಕಾರ್ಯ ಸಾಧನೆ ಮಾಡಲಾರರು. ಒಬ್ಬರನ್ನೊಬ್ಬರು ನಂಬುವುದೇ ದುರ್ಲಭವಾಗುತ್ತದೆ. ಅಸತ್ಯತೆಯು ಜನಸಮುದಾಯದೊಳಗೆ [illegible] ಪ್ರಮಾಣವಾಗಿಯೇ ಪರಿಣಮಿಸಿರುವುದು. ಈ ಸಂಚಿಕೆಯಲ್ಲಿ ಅಸ್ವಾರ್ಥತೆಯ ವಿಷಯ ಯೋಚಿಸೋಣ. ದೇಶವು ಅಭಿವೃದ್ಧಿಯನ್ನು ಹೊಂದಬೇಕಾದರೆ ಈ ಗುಣವು ಎಲ್ಲರಲ್ಲಿಯೂ ಅವಶ್ಯಕವಾಗಿರಬೇಕು. ದೇಶಾಭ್ಯುದಯವನ್ನು ಕೋರುವ ದೇಶಾಭಿಮಾನಿಯು ತನ್ನ ಸ್ವಂತ ಸುಖ, ಸಂತೋಷ, ಅಭಿವೃದ್ಧಿ ಇವುಗಳನ್ನು ಪ್ರಧಾನ ಲಕ್ಷಿಸದೆ ತನ್ನ ಜನರ ಶ್ರೇಯೋಭಿವೃದ್ಧಿ ಸುಖಾನುಕೂಲಗಳನ್ನು ಚಿಂತಿಸುವನು. ಹಿಂದೂ ದೇಶದ ಚರಿತ್ರೆಯನ್ನು ನಾವು ಓದುವಾಗ್ಗೆ ಅಲ್ಲಿ ಅನೇಕರು ಸ್ವಾರ್ಥಪರರಾಗಿದ್ದು ದೇಶವನ್ನು ನಾಶಮಾಡಿದ್ದು ಕಂಡುಬರುತ್ತದೆ. ತಮ್ಮ ಸ್ವಂತ ಗೌರವ ಐಶ್ವರ್ಯ, ಕೀರ್ತಿ, ಅಧಿಕಾರ ಇವುಗಳನ್ನು ಸಂಪಾದಿಸುವುದರಲ್ಲಿ ಮಗ್ನರಾಗಿ ಹೋಗಿದ್ದರು. ಅಂತವರಿದ್ದ ದೇಶವು ಹ್ಯಾಗೆ ತಾನೇ ಅಭಿವೃದ್ಧಿಯನ್ನು ಹೊಂದುವುದು! ಮರಾಟೆಯವರ ಚರಿತ್ರೆಯನ್ನು ನೋಡಿದರೆ ಅಲ್ಲಿಯೂ ಕೂಡ ಸ್ವಾರ್ಥಕ್ಕಾಗಿ ಕೆಲವರು ಅಧಿಕಾರಿಗಳು ಮಹಾರಾಷ್ಟ್ರಾಧಿಪತ್ಯವನ್ನು ಅಧೋಗತಿಗೆ ತಂದರೆಂದು ತಿಳಿಯಬಹುದು. ಬ್ರಾಹ್ಮಣನೂ ಮಂತ್ರಿಯೂ ಆಗಿದ್ದ [illegible] ಮರಾಠಿ ಚಕ್ರವರ್ತಿಯನ್ನು ಉಪಾಯಾಂತರದಿಂದ ಕೊಲೆಗೆ ಗುರಿಪಡಿಸಿ ತಾನು ಸಿಂಹಾಸನಕ್ಕೆ ಬಂದನೆಂಬುದು [illegible] ತಿಳಿದ ಸಂಗತಿಯಾಗಿದೆ. ಇದಾದಮೇಲೆ ಪೇಶ್ವೆಗಳ ಬಂಧುಗಳಲ್ಲಿಯೂ ಕೂಡ ವೈಷಮ್ಯಗಳು ಹೆಚ್ಚಿ ಒಬ್ಬರ ಸಂಗಡಲೊಬ್ಬರು ಕಾದಾಡುವುದಕ್ಕೆ ಪ್ರಾರಂಭಮಾಡಿದರು. ರಘುನಾಥರಾಯನು ತನ್ನ ಸಮೀಪಬಂಧುವಾದ ನಾರಾಯಣರಾಯನನ್ನು ಕೊಲ್ಲಿಸಿದ್ದಾನೆ. ಇನ್ನೂ ಕೆಲವು ಯುದ್ಧಗಳು ಕಳೆದನಂತರ ಪಶ್ವಿಯಂದ ಭಾಜೀರಾಯ, ಹೋಳ್ಕಾರ್, ಸಿಂಧಿಯಾ, ನಾಗಪುರದ ಅರಸನು ಇವರು ತಮ್ಮ ಸ್ವಪ್ರಯೋಜನಗಳನ್ನು ಮುಂದಿಟ್ಟು ಒಬ್ಬರಿಗೊಬ್ಬರು ಬಿದ್ದು ಕಾದಾಡಿದರು. ಸ್ವಾರ್ಥತೆಯೇ ಮಹಾರಾಷ್ಟ್ರಚಕ್ರಾಧಿಪತ್ಯಕ್ಕೆ ಮೃತ್ಯುದೇವತೆಯಾಗಿ ಪರಿಣಮಿಸಿತು. ಇದರಿಂದಲೇ ಮರಾಟೆಯವರು ಕ್ಷೀಣಗತಿಗೆ ಬಂದರು.

ಸ್ವಾರ್ಥತೆಯೆಂಬ ದುರ್ಗುಣವು ಒಂದೇ ರೀತಿಯಾಗಿಲ್ಲ. ಅದರಲ್ಲಿ ಅನೇಕ ವಿಧಗಳುಂಟು. ದೇಶವನ್ನಾಳುವ ಧೊರೆಯು ಸ್ವಾರ್ಥಪರನಾಗಿ ಸರ್ಕಾರದ ಕೆಲಸಗಳನ್ನು ತನ್ನ ಬಂಧುಮಿತ್ರಾದಿಗಳಿಗೆ ಕೊಡಬಹುದು. ತನ್ನ ಮತ್ತು ತನ್ನವರ ಅನುಕೂಲಗಳನ್ನು ನೋಡಿಕೊಳ್ಳುವಲ್ಲಿ ತನ್ನ ವಶಕ್ಕೆ ಒಪ್ಪಿಸಲ್ಪಟ್ಟಿರುವ ಅನೇಕ ಲಕ್ಷ ಪ್ರಜೆಗಳ ಕ್ಷೇಮಚಿಂತನೆಗಳ ವಿಷಯ ಕೇವಲ ಅಲಕ್ಷ್ಯವುಳ್ಳವನಾಗಿರಬಹುದು. ಒಂದು ವೇಳೆ ತನ್ನ ಸ್ವಪ್ರಯೋಜನಕ್ಕಾಗಿ ಪ್ರಜೆಗಳನ್ನು ಹಿಂಸಿಸಬಹುದು. ಇವೇ ಮೊದಲಾದ ದುರ್ಗುಣಗಳು ಸ್ವಾರ್ಥತೆಯ ವಿವಿಧ ರೂಪಗಳೆಂದು ವಾಚಕರು ಗ್ರಹಿಸತಕ್ಕದ್ದು. ಬ್ರಾಹ್ಮಣರು ಏರ್ಪಡಿಸಿದ ನ್ಯಾಯನಿಬಂಧನೆಗಳಲ್ಲಿ ತೋರಿಬರುವ ಮುಖ್ಯವಾದ ಕಳಂಕವೇನೆಂದರೆ, ಎಲ್ಲಾ ಅನುಕೂಲಗಳು ಬ್ರಾಹ್ಮಣರಿಗೇನೇ ಏರ್ಪಾಡಾಗಿರುವುದು. ಇದು ನ್ಯಾಯವೆಂದು ಯಾರು ತಾನೇ ಒಪ್ಪುವರು? ನ್ಯಾಯನಿಬಂಧನೆಗಳೆಂದ ಮೇಲೆ ಅವು ಎಲ್ಲರಿಗೂ ಏಕರೀತಿಯಲ್ಲಿರಬೇಕು. ಈಸ್ಟ್ ಇಂಡಿಯಾ ಕಂಪನಿಯವರು ಹಿಂದೂ ದೇಶವನ್ನು ಆಳುತ್ತಿದ್ದ ಕಾಲದಲ್ಲಿ ಒಂದು ಸಂಗತಿಯು ನಡೆಯಿತು. ವಾರನ್‌ಹೇಸ್ಟಿಂಗ್ಸ್ ಎಂಬ ಪ್ರಸಿದ್ಧ ಪುರುಷನು ಗವರ್ನರ್ ಜನರಲ್ ಪದವಿಗೆ ನೇಮಿಸಲ್ಪಟ್ಟಿದ್ದನು. ಈತನ ಹತ್ತಿರಕ್ಕೆ ಒಬ್ಬ ಸ್ನೇಹಿತನು ಬಂದು ತನ್ನ ಇಬ್ಬರು ಸಮೀಪ ಬಂಧುಗಳನ್ನು ಸರ್ಕಾರದ ಉದ್ಯೋಗದಲ್ಲಿ ಸೇರಿಸಿದರೆ ಅರವತ್ತು ಸಹಸ್ರ ರೂಪಾಯಿಗಳ ಲಂಚವನ್ನು ಕೊಡುವುದಾಗಿ ಪ್ರೇರಿಸಿದನು. ಆದರೆ ವಾರನ್‌ಹೇಸ್ಟಿಂಗ್ಸ್ ಶ್ರೇಷ್ಠ ಪದವಿಯಲ್ಲಿದ್ದುದಲ್ಲದೆ ಮಹಾ ಗುಣಾಢ್ಯನೂ ಆಗಿದ್ದನು. ಆ ಲಂಚದ ಮಾತೆಯು ಅವನಿಗೆ ಬಹಳ ಅವಮಾನಕರವಾಗಿದ್ದಿತು. ಅವನು ಆ ಲಂಚವನ್ನು ತಿರಸ್ಕರಿಸಿ ಅದನ್ನು ಕೊಡುವ ಆ ಮನುಷ್ಯನು ತನ್ನ ಸ್ನೇಹಿತನಾಗಿರುವುದಕ್ಕೆ ಕೇವಲ ಅಯೋಗ್ಯನೆಂದು ಹೇಳಿ ಅವನನ್ನು ಕಳುಹಿಸಿಬಿಟ್ಟನು.

ನಿಜವಾದ ದೇಶಾಭಿಮಾನಿಯು ಜಾತಿ, ಕುಲ, ಒಣ್ಣ ಭೇದಗಳಿಲ್ಲದೆ ಎಲ್ಲರನ್ನೂ ಏಕರೀತಿಯಲ್ಲಿ ಪ್ರೀತಿಸುವನು ಮತ್ತು ತನ್ನನ್ನೂ ತನ್ನ ಬಂಧು ಬಾಂಧವರನ್ನೂ ಸ್ವಂತಜಾತಿಗೆ ಸೇರಿದವರೆಲ್ಲರನ್ನೂ ಪ್ರೀತಿಸುವುದಕ್ಕಿಂತ ಹೆಚ್ಚಾಗಿಯೇ ಅನ್ಯರನ್ನು ಪ್ರೀತಿಸುವನು. ನಾವೆಲ್ಲರೂ ಸ್ವಾರ್ಥತೆಯನ್ನು ಅಭ್ಯಾಸಿಸುತ್ತಿದ್ದೇವೆಯೋ ಇಲ್ಲವೆ ಪರೋಪಕಾರಿಗಳಾಗಿದ್ದೇವೆಯೋ, ಸ್ವಂತಜಾತಿಗೆ ಸೇರಿದ ಜನರ ಅಭಿವೃದ್ಧಿಯನ್ನು ಚಿಂತಿಸುತ್ತೇವೋ, ಇಲ್ಲವೆ ಕನಿಷ್ಠಜಾತಿಯವರೆಂದೆನ್ನಿಸಿಕೊಂಡಿರುವವರನ್ನು ಉತ್ತಮಸ್ಥಿತಿಗೆ ತರುವುದಕ್ಕೆ ಪ್ರಯತ್ನಪಡುತ್ತೇವೋ ಎಂಬೀ ಸಂಗತಿಗಳನ್ನು ಮೊದಲು ಯೋಚಿಸತಕ್ಕದ್ದಾಗಿರುತ್ತದೆ. ದೇಶಸೇವೆಗೆ ಅಸ್ವಾರ್ಥತೆಯೇ ಮೂಲಾಧಾರವು.

ಒಳದೇಶದ ವೃತ್ತಾಂತಗಳು.

ಮೈಸೂರು ಗವರ್ನಮೆಂಟಿನವರು ಮೆ॥ ಎಂ. ಓ. ಪಾರ್ಥಸಾರಥಿ ಐಯ್ಯಂಗಾರ್ರವರನ್ನು ಈ ಸಂಸ್ಥಾನದ ಛೀಫ್ ಜಡ್ಜರನ್ನಾಗಿ ನೇಮಕಮಾಡಿಕೊಳ್ಳುವವರಾಗಿದಾರೆಂದು ಪ್ರಕಟವಾಗಿದೆ.

❖❖❖

ರಾಜಧಾನಿಯಲ್ಲಿ ಜವಳಿ ಕೃಷ್ಣೋಜಿರಾಯರ ಅಂಗಡಿಯಲ್ಲಿ ಹಿಂದಿನ ವಾರ ನಡೆದ ಕಳುವನ್ನು ಪೋಲೀಸಿನವರು ಆಗಲೇ ಪತ್ತೆಮಾಡಿರುತ್ತಾರೆಂದೂ, ಕೆಲವು ಸಾಮಾನುಗಳು ನರಸೀಪುರದಲ್ಲೂ ಇತರ ಕಡೆಗಳಲ್ಲೂ ಸಿಕ್ಕಿರುತ್ತವೆಂದೂ ಕೇಳಿ ಸಂತೋಷಪಡುವೆವು.

❖❖❖

ಹೈದರಾಬಾದಿನಲ್ಲಿ ಮೈಸೂರಾಯರವರು ಪರಾಂಬರಿಸುವುದಕ್ಕಾಗಿ ಒಂದು ಪ್ರದರ್ಶನವನ್ನು ಏರ್ಪಡಿಸಿದಾರೆ. ಈ ಪ್ರದರ್ಶನಕಾಲಕ್ಕೆ ಮೈಸೂರು ಅರಮನೆಯಲ್ಲಿ ತಯಾರಾಗಿರುವ ಹಲವು ಚಿತ್ರ ಕೆಲಸಗಳನ್ನೂ ಚನ್ನಪಟ್ಟಣದ ಬೊಂಬೆ ಬಣ್ಣ ಸಾಮಾನುಗಳನ್ನೂ ಕಳುಹಿಸಿರುತ್ತಾರೆ.

❖❖❖

ಈ ವರುಷ ವೀರಶೈವರ ವಾರ್ಷಿಕ ಮಹಾಸಭೆಯು ಬೊಂಬಾಯಿ ಆಧಿಪತ್ಯಕ್ಕೆ ಸೇರಿದ ಸೋಲಾಪುರದಲ್ಲಿ ಜರುಗುವುದೆಂತಲೂ, ಮೈಸೂರು ಕೌನ್ಸಿಲ್ ಮೆಂಬರಾದ ಮೆ॥ ಕೆ. ಪಿ. ಪುಟ್ಟಣ್ಣಚೆಟ್ಟಿಯವರು ಸಭಾನಾಯಕರಾಗಿ ದಯಮಾಡಿ, ಮಹಾ ಸಭೆಯನ್ನು ಜರುಗಿಸುವುದಾಗಿ ಸಮ್ಮತಿಪಟ್ಟಿದಾರೆಂತಲೂ ತಿಳಿದುಬಂದಿದೆ.

❖❖❖

ಈ ತಿಂಗಳ ಕಡೇ ವಾರದಲ್ಲಿ ಶ್ರೀಮನ್ಮಹಾರಾಜರವರೂ ಮಹಾಮಾತೃಶ್ರೀಯವರೇ ಮೊದಲಾದ ಜನಾನಾದವರೂ ಪರಿವಾರ ಸಹಿತ ಬೆಂಗಳೂರಿಗೆ ದಯಮಾಡುವವರಾಗಿದಾರೆಂತಲೂ, ಕೆಲವು ಕಾಲದ ಮೇಲೆ ಮಹಾಮಾತೃಶ್ರೀಯವರೇ ಮುಂತಾದವರು ಚಳಿಗಾಲವನ್ನು ಕಳೆಯುವುದಕ್ಕೋಸ್ಕರ ಮದರಾಸಿಗೆ ಪ್ರಯಾಣ ಮಾಡಬಹುದೆಂತಲೂ ವರ್ತಮಾನವಿದೆ.

❖❖❖

ಮೈಸೂರು ಗವರ್ನಮೆಂಟ್ ಉದ್ಯಾನವನಗಳ ಸೂಪರಿಂಟೆಂಡೆಂಟರಾಗಿರುವ ಮೆ॥ ಜೆ. ಕ್ಯಾಮಿರಾನ್‌ರವರು ಮುಂದಿನ ವರುಷ ಪ್ರಾರಂಭದಲ್ಲಿ ಕೆಲಸಬಿಟ್ಟು ಹೋಗುವವರಾಗಿದಾರೆ. ಅವರ ಸ್ಥಾನಕ್ಕೆ ಮೆ॥ ಹೆ. ಕ್ರುಂಬೀಗಲ್ ಎಂಬುವರು ನೇಮಿಸಲ್ಪಡುವುದಾಗಿ ವರ್ತಮಾನವಿದೆ. ಇವರು ಈಗ ಬರೋಡಾ ಸಂಸ್ಥಾನದ ಸರ್ಕಾರಿ ಉದ್ಯಾನವನಗಳ ಸೂಪರಿಂಟೆಂಡೆಂಟರಾಗಿದಾರೆ.

❖❖❖

ಕಬ್ಬಿನ ವ್ಯವಸಾಯದ ವಿಷಯವಾಗಿ ರಸಾಯನ ಶಾಸ್ತ್ರಜ್ಞರಾದ ಡಾ॥ ಲೆಮನ್‌ರವರು ರಾಜಧಾನಿಯ ಟೌನ್ ಹಾಲಿನಲ್ಲಿ ಹೇಳಿದ ಉಪನ್ಯಾಸವನ್ನು ಕಳೆದ ಎರಡು ವಾರಗಳ ಪತ್ರಿಕೆಗಳಲ್ಲಿ ಪ್ರಕಟಿಸಿರುತ್ತೇವಷ್ಟೆ. ಅದನ್ನು ಬಹಳ ಸ್ಪಷ್ಟವಾಗಿ ಇರುವ ಉದಾಹರಣೆಗಳಲ್ಲಿ ಅಸಿಸ್ಟೆಂಟ್ ಕಮಿಷನರ್ ಮೆ॥ ಎಂ. ಕೃಷ್ಣಯ್ಯಂಗಾರ್ರವರು ಕನ್ನಡಕ್ಕೆ ಭಾಷಾಂತರ ಮಾಡಿ ಕಳುಹಿಸಿದರು. ಇದಕ್ಕಾಗಿ ನಾವು ಅವರನ್ನು ವಾಚಕರ ಪರವಾಗಿ ವಂದಿಸುತ್ತೇವೆ.

❖❖❖

ಕ್ರಿಮಿನಲ್ ಮೊಕದ್ದಮೆಗಳಲ್ಲಿ ಕೋರ್ಟಿನವರ ಇಷ್ಟಪ್ರಕಾರ ಡಾಕ್ಟರು ಬಂದು ತಮ್ಮ ಅಭಿಪ್ರಾಯವನ್ನು ತಿಳಿಸಬೇಕಾದರೆ ಅವರಿಗೆ ಯಾವ ರುಸುಮೂ ಸಲ್ಲತಕ್ಕದ್ದಿಲ್ಲವೆಂದು ಛೀಫ್ ಕೋರ್ಟಿನವರು ಕೋಲಾರದಲ್ಲಿ ನಡೆದ ಒಂದು ಮೊಕದ್ದಮೆಯಲ್ಲಿ ತೀರ್ಮಾನ ಮಾಡಿದರು. ಈಗ ದಿವಾನರವರು ಆ ಮೊಕದ್ದಮೆಯ ಕಾಗದಗಳನ್ನೆಲ್ಲಾ ತರಿಸಿಕೊಂಡಿದಾರೆಂದು ತಿಳಿದುಬಂದಿದೆ. ಗವರ್ನಮೆಂಟಿನವರ ತೀರ್ಮಾನವು ಮುಂದೆ ಗೊತ್ತಾದೀತು.

❖❖❖

ಮೈಸೂರು ಸಂಸ್ಥಾನದ ಖಜಾನಾ ಛೀಫ್ಯನರಾದ (ಕಂಟ್ರೋಲರ್) ಮೆ॥ ಯು. ಎಲ್. ಮುಬಂಗಾರ್‌ರವರಿಗೆ ಗವರ್ನಮೆಂಟಿನವರು ನವಂಬರ್ ೧೫ ರಿಂದ ಆರು ವಾರಗಳ ಪ್ರಿವಿಲೆಜ್ ರಜಾ ಕೊಟ್ಟು, ಅನಂತರ ಕ್ರಿಸ್‌ಮಸ್ ಹಬ್ಬದ ರಜವನ್ನೂ ಉಪಯೋಗಿಸಿಕೊಳ್ಳುವಂತೆ ಅವಕಾಶ ಕೊಟ್ಟಿದಾರೆ. ಅವರು ವಾಪಸು ಬರುವ ತನಕ ಅ॥ ಕಂಟ್ರೋಲರ್ ಮೆ॥ ಟಿ. ಸತ್ಯರಾಜ ಚೆಟ್ಟಿಯವರೇ ಕಂಟ್ರೋಲರ್ ಕೆಲಸದ ಭಾರವನ್ನೂ ವಹಿಸಿರಬೇಕೆಂದು ಹುಕುಂ ಆಗಿದೆ.

❖❖❖

ಹಾಸನದ ತಾಲ್ಲೂಕ್ ಅಮಲ್ದಾರರಾಗಿದ್ದ ಮೆ॥ ಚನ್ನರಾಜೇಅರಸಿನವರು ಕಳೆದ ವಾರ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರು ಸಣ್ಣ ಕೆಲಸದಿಂದ ಅಮಲ್ದಾರಿಗೆ ಏರಿದವರು. ಅವರ ಯೋಗ್ಯತೆ ಸಾಮರ್ಥ್ಯಾದಿಗಳನ್ನೂ ಅವರ ಪ್ರೀತಿ ವಿಶ್ವಾಸಗಳನ್ನೂ ಅವರ ಸದ್ಗುಣಗಳನ್ನೂ ಕಂಡು ಕೇಳಿದವರೆಲ್ಲಾ ಅವರ ಈ ಅಕಾಲಮರಣಕ್ಕಾಗಿ ತುಂಬಾ ಮರುಗುವರು. ಈ ದುಃಖಕರವಾದ ಸಮಾಚಾರವು ರಾಜಧಾನಿಯ ಅರಸುಗಳಲ್ಲೂ ಪ್ರಜೆಗಳಲ್ಲೂ ವಿಶೇಷ ವ್ಯಸನವನ್ನು ಉಂಟುಮಾಡಿದೆ.

❖❖

ರಾಜಧಾನಿಯಲ್ಲಿ ಪ್ಲೇಗ್ ಉಪದ್ರವೇ ಮೊದಲಾದ ಅನಿಷ್ಟನಿವಾರಣೆಗೋಸ್ಕರಲೂ ಗ್ರಾಮಕ್ಷೇತ್ಯರ್ಥವಾಗಿಯೂ ಇಲ್ಲಿನ ದಿವಾನ್ ಹರ್ಕಾರರಾದ ಮೆ॥ ಸಿದ್ದೋಜಿರಾಯರೇ ಮೊದಲಾದ ಕೆಲವರು ಸೇರಿ ಸುಮಾರು ೫೦೦ ರೂಪಾಯಿನ ತನಕ ಖರ್ಚು ಮಾಡಿ ಹತ್ತು ದಿನಗಳ ತನಕ ವೈದಿಕಶ್ರೇಷ್ಠರುಗಳಿಂದ ಅರ್ಚನೆ, ಪಾರಾಯಣ, ಶತಚಂಡಿ ಹೋಮ, ಪೂರ್ಣಾಹುತಿ, ಅನ್ನದಾನ, ಈ ಮೊದಲಾದ ಶಾಸ್ತ್ರೋಕ್ತ ಕಾರ್ಯಗಳನ್ನು ನಡಿಸಿದರು. ಇದೆಲ್ಲಾ ಕಳೆದ ವಾರ ಮುಕ್ತಾಯವಾದವು.

❖❖❖

ಮೈಸೂರು ಪಟ್ಟಣದಿಂದ ಪದ್ಧತಿಯ ಪ್ರಕಾರ ತಿರುಮಕೂಡ್ಲು ನರಸೀಪುರಕ್ಕೆ ಜವಾನನು ಅಂಚೆ ಬಸ್ತುಗಳನ್ನು ತೆಗೆದುಕೊಂಡು ಹೋಗುವಾಗ್ಗೆ ಹಿಂದಿನ ವಾರ ಚಿಕ್ಕಹಳ್ಳಿ ಎಂಬ ಗ್ರಾಮದ ಬಳಿ ಕಳ್ಳರು ಅವನನ್ನು ತಡೆದು ಹೊಡೆದು ಅಂಚೆ ಬಸ್ತುಗಳನ್ನು ಕಿತ್ತುಕೊಂಡು ಹೋಗಿದ್ದರು. ಪೋಲೀಸಿನವರು ಆ ಬಾಗಾಯಿತು ಸಾಹಸಪಟ್ಟು ಆ ಕಳ್ಳರನ್ನೆಲ್ಲಾ ಪತ್ತೆಮಾಡಿರುತ್ತಾರೆ. ಕೆಲವು ಗಂಡಸರೂ, ಹೆಂಗಸರೂ ಸಿಕ್ಕಿರುತ್ತಾರೆಂತಲೂ, ಇಷ್ಟರಲ್ಲೇ ಮೊಕದ್ದಮೆಯು ವಿಚಾರಣೆಯಾಗುವುದೆಂತಲೂ ಕೇಳುತ್ತೇವೆ.

❖❖❖

ಕಳೆದ ವಾರ ಪ್ರಕಟವಾದ ಗವರ್ನಮೆಂಟ್ ವಿಶೇಷ ಪತ್ರಿಕೆ ಏನೆಂದರೆ— "ಶ್ರೀಮತ್ಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರ್, ಜಿ. ಸಿ. ಎಸ್. ಐ. ಯವರು ಶಾಲೀವಾಹನ ಶಕ ೧೮೨೯ನೆ ಪ್ಲವಂಗ ಸಂವತ್ಸರದ ಅಶ್ವಯುಜ ಶುದ್ಧ ೧೦ ಶುಕ್ರವಾರದಲು ನವರಾತ್ರಿ ಮಹೋತ್ಸವ ಪ್ರಯುಕ್ತವಾದ ದರ್ಬಾರಿನಲ್ಲಿ ನಮ್ಮ ಅನುಗ್ರಹಕ್ಕೆ ಪಾತ್ರರಾದ ಆಸೂರ್ ರಂಗಸ್ವಾಮಿ ಅಯ್ಯಂಗಾರ್ರಿಗೆ 'ರಾಜಕಾರ್ಯಪ್ರವೀಣ' ಎಂಬ ಬಿರುದನ್ನೂ, ಚೋಳಿನಗರದ ಯದುವೀರ ದೊಡ್ಡಣ್ಣಶೆಟ್ರಿಗೆ 'ಜನೋಪಕಾರಿ' ಎಂಬ ಬಿರುದನ್ನೂ ತಕ್ಕ ಮರ್ಯಾದೆಗಳೊಡನೆ ದಯಪಾಲಿಸಿರುತ್ತೇವೆ" ಎಂಬುದೇ.

❖❖❖

ಧಾರವಾಡ ಪ್ರಾಂತ್ಯದಿಂದ ಒಬ್ಬ ಮಾಧ್ವಬ್ರಾಹ್ಮಣರು ರಾಜಧಾನಿಗೆ ಬಂದು, ಕೆಲವು ದಿನಗಳಿಂದ ಇಲ್ಲಿನ ಮಹಾರಾಜಾ ಕಾಲೇಜ್ ಕಟ್ಟಡದ ಬಳಿ ಪ್ರತಿನಿತ್ಯವೂ ವಿದ್ಯಾರ್ಥಿಗಳೇ ಮುಂತಾದವರನ್ನು ಕೂಡಿಹಾಕಿಕೊಂಡು, ಸ್ವದೇಶಿ, ವಿದೇಶಿ, ಸ್ವಾರಾಜ್ಯ, ಇವೇ ಮೊದಲಾದ ವಿಚಾರಗಳನ್ನು ಕುರಿತು ಕನ್ನಡದಲ್ಲಿ ಉಪನ್ಯಾಸ ಮಾಡುತ್ತಿದಾರೆ. ಕೆಲವು ಹುಡುಗರು ಅವರ ಮಾತಿಗೆ ಬೆರಗಾಗಿ ವಿದೇಶೀ ಬಟ್ಟೆಗಳಿಂದ ಮಾಡಿದ ತಮ್ಮ ಬಿರಸುಗಳನ್ನು ಕಳಚಿಟ್ಟು ಆ ಸ್ಥಳದಲ್ಲೇ ಬೆಂಕಿ ಹಾಕಿ ಸುಟ್ಟು, ಸ್ವದೇಶೀ ವಸ್ತುಗಳನ್ನೇ ಉಪಯೋಗಿಸುತ್ತೇವೆಂದು ಭಾಷೆಕೊಟ್ಟರೆಂದು ಕೇಳುತ್ತೇವೆ. ಇದಲ್ಲದೆ ಆ ಉಪನ್ಯಾಸ ನಡೆಯುವ ಕಾಲದಲ್ಲಿ ಆ ಕಡೆ ಯಾರೊಬ್ಬ ಯುರೋಪ್ಯರಾದರೂ ಹೋಗುತ್ತಿದ್ದ ಪಕ್ಷದಲ್ಲಿ ಹುಡುಗರು ಅವರನ್ನು ನೋಡಿ "ವಂದೇ ಮಾತರಂ" ಎಂಬದಾಗಿ ಕೂಗಿಕೊಳ್ಳುವರೆಂದೂ ತಿಳಿಯುವುದು. ಸ್ವದೇಶವಾತ್ಸಲ್ಯವೇನೋ ಇರಬೇಕಾದದ್ದು ಸಹಜವೇ. ಆದರೆ ಇಂಥಾ ನಡವಳಿಕೆಗಳು ದೇಶಾಭ್ಯುದಯಕ್ಕೆ ಸಹಕಾರಿಗಳಾಗಲಾರವೆಂದು ಹೇಳಬಲ್ಲೆವು.

ಗಿಡಕಾಡಿನಿಂದ ವ್ಯವಸಾಯಕ್ಕೆ ಲಗುವ ಪ್ರಯೋಜನ.

ಕಳೆದ ಸಾರ ಮೈಸೂರು ದಸರಾ ಕೈಗಾರಿಕೆ ಮತ್ತು ವ್ಯವಸಾಯ ಪ್ರದರ್ಶನ ಕಾಲದಲ್ಲಿ ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರ್ ಮಿ॥ ಎಂ ಜಿ ರಾಮರಾಯರು ಮಾಡಿದ ಉಪನ್ಯಾಸವು :—

[ಕಳೆದ ವಾರದ ಶೇಷ]

ನಮ್ಮ ಸಂಸ್ಥಾನದಲ್ಲಿ ಈಗ ಆರಂಭಿಸಿರುವಂತೆ ಕಾಡುಗಳನ್ನು ಕಾಪಾಡಿಕೊಳ್ಳುತಲೂ, ವೃದ್ಧಿಪಡಿಸುತ್ತಲೂ ಬಂದಲ್ಲಿ ಒದಗಾಲದಲ್ಲಿ ರೈತರ ಕಷ್ಟವು ಬಹು ಮಟ್ಟಿಗೆ ಕಡಮೆಯಾಗದಿರದು. ಮಳೆ ಬೀಳ ಬೇಕಾದದ್ದು ಕಾಡಿನ ಏಳಿಗೆಗೆ ಮಾತ್ರವೇ ಅಲ್ಲ ; ಭೂಮಿಗೂ, ಪೈರಿಗೂ ಅತ್ಯಾವಶ್ಯ. ಪ್ರಾಯಶಃ ಬಯಲು ಸೀಮೆಯಲ್ಲಿ ಕಾಲಕಾಲಕ್ಕೆ ಮಳೆ ಬೀಳದೆ ನಷ್ಟಪಡುವುದೇ ಹೆಚ್ಚು. ಸ್ವಲ್ಪಮಟ್ಟಿಗಾದರೂ ಇರುವ ಕಾಡನ್ನು ಉಳಿಸಿಕೊಂಡು, ಹೊಸದಾಗಿ ಕಾಡುಗಳನ್ನು ಬೆಳಸಿದರೆ ದುರ್ಭಿಕ್ಷಕಾಲದಲ್ಲಿ ಒಂದೆರಡು ಹದ ಮಳೆಯಾದರೂ ಬಿದ್ದು ಭೂಮಿಗೂ ಜನರಿಗೂ ವಿಶೇಷ ಉಪಕಾರವನ್ನು ಉಂಟುಮಾಡದಿರದು

ನೀರನ್ನು ತಡೆದು ಒದಗಿಸುವುದರಲ್ಲಿ ಕಾಡು ಬಹು ಮಟ್ಟಿಗೆ ಸಹಕಾರಿಯಾಗುವುದೆಂಬ ವಿಷಯವು ಸಾಮಾನ್ಯವಾಗಿ ಎಲ್ಲರಿಗೂ ತಿಳಿದಿರುವುದು ದಿವಿನಿಗೆ ಆಶ್ರಯಭೂತವಾದ ಗಿಡಕಾಡು ಇಲ್ಲದೆ ಡೆಯಲ್ಲಿ ದೊಡ್ಡ ಮಳೆ ಬಿದ್ದರೆ ಮೇಲ್ಮಣ್ಣು ಕೊಚ್ಚಿಹೋಗುವುದು. ಆಕಸ್ಮಿಕದಿಂದ ಕೂಡಿದ ಬಗ್ಗಡವಾದ ನೀರು ನುಗ್ಗಿ ಬಹು ವೇಗವಾಗಿ ಪ್ರವಾಹದಂತೆ ಕೊರಕಲಲ್ಲೂ, ಹಳ್ಳಗಳಲ್ಲೂ ತುಂಬಿ ಹರಿಯುವುದು. ಕಾಲುವೆಗಳೂ ನದಿಗಳೂ ತುಂಬಿ ದಡದ ಮೇಲೆ ಹರಿದು ತಗ್ಗಿನಲ್ಲಿರುವ ಸಾಗುವಳಿ ಜಮೀನುಗಳನ್ನು ನಾಶಪಡಿಸುವುವು. ಮರಕಾಡಾದರೋ ಭಾರಿ ಮಳೆಯ ರಭಸವನ್ನು ತಡೆದು, ಬಿದ್ದ ಮಳೆಯಲ್ಲಿ ಕಾಲು ಭಾಗವನ್ನು ಎಲೆಗಳಲ್ಲಿಯೂ, ರೆಂಬೆಗಳಲ್ಲಿಯೂ, ನೆಲದ ಮೇಲೆ ಯಥೇಷ್ಟವಾಗಿ ಬೆಳೆದಿರುವ ಸಸ್ಯಾದಿಗಳಲ್ಲಿಯೂ ತತ್ಕಾಲದಲ್ಲಿ ನಿಲ್ಲಿಸಿಕೊಳ್ಳುವುದು. ಹೀಗೆ ನಿಂತ ನೀರು ಕಾಲಕ್ರಮೇಣ ಭೂಮಿಯಲ್ಲಿ ಇಳಿದು ಕೊನೆಗೆ ನಿಮ್ನ ಪ್ರದೇಶಗಳಲ್ಲಿ ಆರೋಗ್ಯವಾದ ಬುಗ್ಗೆಗಳೂ ನದಿಗಳೂ ಆಗಿ ಪರಿಣಮಿಸುವುದು.

ಪೈರಿಗೆ ಸ್ವಲ್ಪಮಟ್ಟಿಗಾಗಲಿ ಸಂಪೂರ್ಣವಾಗಾಗಲಿ ನೀರ ಹಾಯಿಸಿ ಸಾಗುವಳಿ ಮಾಡುವುದೇ ಹಿಂದೂದೇಶದ ಅನೇಕ ಭಾಗಗಳಲ್ಲಿ ವಾಡಿಕೆಯು ಈ ನೀರು ದೊಡ್ಡ ದೊಡ್ಡ ಕೆರೆ, ಬಾವಿ, ನದಿಗಳಿಂದಲೇ ಬರಬೇಕು ನದಿಗಳಿಗೆ ಅಡ್ಡಕಟ್ಟಿ ದೊಡ್ಡ ದೊಡ್ಡ ಕೆರೆಯನ್ನು ಮಾಡುವರು ಕೆರೆಯು ತುಂಬುವುದಕ್ಕೆ ಮೇಲಿನ ಅಂಚುಗಳಿಂದ ಉರುಳುವ ನೀರೇ ಆಧಾರ ನೀರಿಗೆ ಅವಲಂಬನವಾದ ಈ ಪ್ರದೇಶದಲ್ಲಿ ಮರ ಕಾಡುಗಳಿದ್ದರೆ ನದಿಗೆ ಯಥೇಷ್ಟವಾಗಿ ನೀರು ಬರುವುದು. ಅಂತಹ ಕಾಡನ್ನು ಕಡಿದುಹಾಕಿದ್ದರಿಂದ ಅನೇಕ ಸಣ್ಣ ನದಿಗಳು ಬತ್ತಿಹೋಗಿರುವುವು

ಗಿಡಕಾಡಿನಿಂದ ವಿಶೇಷ ಪ್ರಯೋಜನವನ್ನು ಪಡೆಯಬೇಕಾದರೆ ದೇಶದ ಮೇಲೆ ಅಲ್ಲಲ್ಲಿಯೇ ಕಾಡುಗಳನ್ನು ಅವಕಾಶವಿದ್ದಂತೆ ಉಳಿಸಿಕೊಂಡಿರಬೇಕು ಕಾಲಾನುಕೂಲವಿದ್ದೆಡೆಯಲ್ಲಿ ವೃದ್ಧಿಗೊಳಿಸಬೇಕು ಮುಂದಕ್ಕಾದರೂ ಜನರಿಗೂ ಪಶುಗಳಿಗೂ ಗಾಳಿಮಳೆಗೆ ಅನುಕೂಲವಾಗುವಂತೆ ಸುಲಭವಾಗಿ ಅಲ್ಲಲ್ಲಿರುವ ಬಂಜರುಭೂಮಿಯಲ್ಲಿ ಗಿಡಗಳನ್ನು ಬೆಳೆದು, ಅವನ್ನು ಕಾಡುಮಾಡಬಹುದೆಂಬುವುದು ಅವಶ್ಯ ಆಲೋಚಿಸತಕ್ಕ ವಿಷಯವಾಗಿದೆ

ನಿಶ್ಶೇಷವಾಗಿ ಕಾಡುಗಳನ್ನು ಬಯಲುಮಾಡಿ, ಮೇಲೆಮೇಲೆ ಗಿಡಗಳನ್ನು ಕಡಿಯುವುದರಿಂದ ಅಲ್ಲಿನ ಮೇವು ಕಡಮೆಯಾಗಿ, ದನಕರುಗಳ ಆರೋಗ್ಯಸ್ಥಿತಿಯು ಕೆಟ್ಟು, ಕೇವಲ ಅನರ್ಥ ಸಂಭವಿಸುವುದು ಮುಂಗಾರುಮಳೆಗೆ ಮುಂಚೆ ದನಕ್ಕೆ ಮೇಯಲು ಹಸಿರಿಲ್ಲದೆ, ನಿಲ್ಲಲು ನೆರಳಿಲ್ಲದೆ, ಗಿಡವಿಲ್ಲದ ಬಟ್ಟಬಯಲಲ್ಲಿ ದನಗಳು ಅಲೆಯುವುದರಿಂದಲೇ ಅವಕ್ಕೆ ಕೆಲವು ತೆರನಾದ ರೋಗಗಳು ಸಂಭವಿಸುವವೆಂದು ಸ್ಪಷ್ಟವಾಗಿ ಕಾಣಬರುತ್ತಿದೆ

ಸರಕಾರೀ ಕಾವಲೆಂದು ನಿರ್ಧರಿಸಿರುವ ಪ್ರದೇಶಗಳನ್ನು ಸರಿಯಾಗಿ ನೋಡಿಕೊಂಡಲ್ಲಿ ಬರಗಾಲದಲ್ಲೂ ಸಾಕಾದಷ್ಟು ಮೇವು ಸಿಕ್ಕುವ ಸಂಭವವುಂಟು. ಇದನ್ನು ಬಿಟ್ಟು, ಇರತಕ್ಕ ಹುಲ್ಲುಗಾವಲುಗಳನ್ನೆಲ್ಲಾ ಸರಕಾರೀ ಕಾಡುಗಳೆಂದು ಪ್ರತ್ಯೇಕಿಸಿದಲ್ಲಿ ದನಗಳ ಮೇವು ಪರಿಮಿತವಾಗಿಯೂ ಕಡಮೆಯಾಗುವುದು ಸಾಕಾದಷ್ಟು ಮಳೆ ಬೀಳದೆಹೋದಾಗ ಈ ಕಾಡುಗಳಲ್ಲಿ ಉತ್ತಮವಾದ ಮೇವು ಸುತ್ತುಮುತ್ತಲ ಹಳ್ಳಿಯ ದನಗಳಿಗೆ ಬೇಕಾದಷ್ಟು ದೊರೆಯುವುದು.

ಅಲ್ಲದೆ ದೂರಗ್ರಾಮಗಳಲ್ಲಿ ಮೇವಿಲ್ಲದೆ ಸಾಯುವ ದನಕರುಗಳಿಗೂ ಯಂತ್ರಸಹಾಯದಿಂದಲಾದರೂ ಸಾವಿರಾರು ಕಂತೆಗಳ ಹುಲ್ಲನ್ನು ಅಗ್ಗವಾಗಿ ಕಟ್ಟಿ ಸಾಗಿಸುವುದರಿಂದ ಮೇವನ್ನು ಒದಗಿಸಿ ಅವುಗಳನ್ನು ಉಳಿಸಿಕೊಳ್ಳಬಹುದು.

ಸಾಗುವಳಿಯಲ್ಲಿರುವ ವಿಸ್ತಾರವಾದ ಜಮೀನುಗಳಿಗೆ ಸಮೀಪದಲ್ಲಿ ಕಾಡು ಇರುವುದು ಅತ್ಯಾವಶ್ಯಕ. ಸಣ್ಣ ಸಣ್ಣ ಹುಳುಗಳನ್ನು ತಿಂದು ಜೀವಿಸುವ ಪಕ್ಷಿಗಳಿಗೆ ಕಾಡು ಆಶ್ರಯವಾಗಿರುವುದು ಹತ್ತಿರದಲ್ಲಿ ಕಾಡಿಲ್ಲದಿದ್ದರೆ ಪೈರುಗಳಿಗೆ ಕ್ರಿಮಿಕೀಟಗಳ ಬಾಧೆಯು ಹೆಚ್ಚು. ಇವು ಕ್ಷಾಮಗಾಲದಲ್ಲಿ ರೈತರಿಗೆ ಬಹು ನಷ್ಟವನ್ನುಂಟುಮಾಡುವುವು

ಆಮ್ಲಜನಕವು (ಪ್ರಾಣವಾಯುವು) ವಿಶೇಷವಾಗುಳ್ಳ ಉತ್ತೇಜನವಾದ "ಓಜೋನ್" ಎಂಬ ವಾಯುವಿಶೇಷವು ಬಯಲುಸ್ಥಳದಲ್ಲಿರುವುದಕ್ಕಿಂತ ಕಾಡಿನಲ್ಲಿ ಹೆಚ್ಚಾಗಿರೋಣದರಿಂದ ಕಾಲರಾ, ಪ್ಲೇಗ್, ಈ ಬಗೆಯಾದ ಅಂಟುರೋಗಗಳು ಹುಟ್ಟುವುದಕ್ಕೆ ಅವಕಾಶ ಕೊಡುವುದಿಲ್ಲವೆಂದು ಶಾಸ್ತ್ರಜ್ಞರು ಹೇಳುವರು ಫಾರೆಸ್ಟ್ ಇಲಾಖೆಯವರ ಕರ್ತವ್ಯವೇನೆಂದರೆ, ಈಗಿರುವ ಕಾಡುಗಳನ್ನು ಜನಗಳ ನಿರಂತರವಾದ ಸೌಖ್ಯಕ್ಕಾಗಿ ಚ್ಯುತಿಯಿಲ್ಲದೆ ಕಾಪಾಡಿಕೊಂಡು ಬರತಕ್ಕದ್ದು, ಮತ್ತು ಜನರಿಗೆ ವಿಶೇಷ ನಷ್ಟವಾಗದಂತೆ ತಮ್ಮ ಇಲಾಖೆಯ ಕೆಲಸವನ್ನು ನಿರ್ವಹಿಸತಕ್ಕದ್ದು.

ಕಾಡು, ಸುತ್ತಲೂ ಸಾಗುವಳಿ ಜಮೀನು ಉಳ್ಳದ್ದಾಗಿಯೂ, ಗ್ರಾಮಕ್ಕೆ ಉಪಯುಕ್ತವಾದ ಸೌದೆ ಕಟ್ಟಿಗೆಯನ್ನು ಬೆಳೆಯತಕ್ಕದ್ದಾಗಿಯೂ ಇರಬಹುದು. ಅಥವಾ, ಅದು ಜನರು ವಾಸವಾಗಿರುವ ಪ್ರದೇಶಕ್ಕಿಂತಲೂ ದೂರವಾಗಿದ್ದು, ಕಟ್ಟಡಗಳಿಗೆ ಉಪಯುಕ್ತವಾದ ಮರವನ್ನು ಒದಗಿಸಿಕೊಡುವುದಾಗಿಯಾದರೂ ಇರಬಹುದು ಯಾವ ತೆರನಾದ ಕಾಡೇ ಆಗಲಿ, ಅದನ್ನು ವಿನಿಯೋಗಿಸಲಂತೆ ಕಾಪಾಡುವುದು ಹೇಗೆ ಸರ್ಕಾರದವರ ಕರ್ತವ್ಯವೋ ಹಾಗೆಯೇ ಅದು ರೈತನ ಕರ್ತವ್ಯವೂ ಆಗಿದೆ "ಕಾಡು ಅಪರಿಮಿತವಾದದ್ದು ಎಷ್ಟು ಕಡಿದರೂ ಅದು ಬರಿದಾಗದು" ಎಂದು ಸಾಮಾನ್ಯವಾಗಿ ಜನರು ತಿಳಿದಿರುವಂತಿದೆ ಕಾಡು ಪರಿಮಿತವಾದದ್ದೆಂತಲೂ, ರೈತನ ಸದ್ಯಃಪ್ರಯೋಜನಕ್ಕಾಗಿ ಕಾಡನ್ನು ಬಿಟ್ಟುಕೊಡುವುದು ಅನುಚಿತವೆಂತಲೂ ನಾನು ಇದುವರೆಗೆ ಸ್ಪಷ್ಟಗೊಳಿಸಿರುವೆನೆಂದು ನಂಬಿದ್ದೇನೆ. ಜನರ ತಾತ್ಕಾಲಿಕ ಸೌಕರ್ಯಕ್ಕಾಗಿ ಮಾಡಿದ ಧಾರಾಳವಾದ ಏರ್ಪಾಟುಗಳು, ಐವತ್ತು ವರ್ಷ ಕಳೆದ ನಂತರ ಮುಂದಾಲೋಚನೆಯಿಲ್ಲದ ಅಸಂಗತವಾದ ಏರ್ಪಾಟುಗಳೆಂದು ವ್ಯಕ್ತವಾಗುವುದು ಮೂಢರಾದ, ಸದ್ಯಃಪ್ರಯೋಜನವನ್ನು ಮಾತ್ರ ಬಯಸಿ ಕೇಳುವ ಜನರನ್ನು ಸಮಾಧಾನಪಡಿಸುವುದಕ್ಕಾಗಿ ಪರ್ಯಾಲೋಚನೆಯಿಲ್ಲದೆ ಮಾಡಿದ ಉಪಕಾರವು ಮುಂದೆ ಬರತಕ್ಕವರಿಗೆ ಅಪಕಾರವಾಗದಿರದು.

ನಮ್ಮ ದೇಶದ ವ್ಯವಸಾಯವು ಅಭಿವೃದ್ಧಿಯಾಗಲು ರೈತರಿಗೆ ಆವರ ಕಟ್ಟಡ, ಬೇಸಾಯದ ಸಾಮಾನು, ಒಲೆಗೆ ಬೇಕಾದ ಕಟ್ಟಿಗೆ, ಇವುಗಳನ್ನು ಸಾಕಾದಷ್ಟು ಒದಗಿಸಿಕೊಡುವುದು ಅತ್ಯವಶ್ಯವು ಇವುಗಳನ್ನು ಸರಕಾರಿ (ಸ್ಟೇಟ್ ಫಾರೆಸ್ಟು) ಕಾಡಿನಿಂದಲೇ ಈಗ ನಡೆಯುತ್ತಿರುವಂತೆ ಕ್ರಮವರಿತು ಒದಗಿಸಿಕೊಡುತ್ತಾ ಬರಬಹುದು ಇಲ್ಲದ ಪಕ್ಷದಲ್ಲಿ ಗ್ರಾಮಕ್ಕೆ ಸೇರಿದಂತೆ ಸಣ್ಣ ಸಣ್ಣ ಕಾಡುಗಳನ್ನು ನಿರ್ಮಿಸಿ, ಹತ್ತಿರ ಜನರಿಗೆ ಉಪಯೋಗವಾಗುವಂತೆ ಮಾಡಬಹುದು. ಸರಕಾರಿ ಕಾಡಿನ ವಿಸ್ತೀರ್ಣವು ಮಿತಿಯುಳ್ಳದ್ದು ಆದುದರಿಂದಲೇ ನಿರಂತರವೂ ಜನರಿಗೆ ಅನೇಕ ಕೆಲಸಗಳಿಗೆ ಬೇಕಾಗುವ ಸಾಮಾನುಗಳನ್ನು ವಿಕ್ರಯಿಸುವುದಾಗಲಿ, ರೈತನಿಗೆ ಬೇಕಾದ ಮರಮುಟ್ಟನ್ನು ಒದಗಿಸಿಕೊಡುವುದಾಗಲಿ ಸಾಧ್ಯವಲ್ಲ ರೈತನಿಗೆ ಬೇಕಾದ ಕಟ್ಟಡದ ಮರಮುಟ್ಟನ್ನು, ಬೇಸಾಯದ ಸಾಮಾನನ್ನು, ಅವನ ದನಕ್ಕೆ ಮೇವನ್ನು ಗ್ರಾಮದ ಕಾಡುಗಳಿಂದ ಒದಗಿಸಿಕೊಡುವಂತೆ ಮಾಡಬೇಕೆಂಬುದೇ ನನ್ನ ಅಭಿಪ್ರಾಯ ಈ ಗ್ರಾಮಕಾಡನ್ನು ದುರುಪಯೋಗಪಡಿಸದಂತೆ ಕಾಪಾಡಿಕೊಳ್ಳುವುದಕ್ಕೂ ಅಲ್ಲಿ ಗಿಡಗಳನ್ನು ಬೆಳಸಿ ಅಭಿವೃದ್ಧಿ ಮಾಡುವುದಕ್ಕೂ ತಕ್ಕ ಕಾನೂನುಗಳನ್ನು ಸರಕಾರದವರು ಮಾಡಿ ಮೇಲ್ವಿಚಾರಣೆಯನ್ನು ಗ್ರಾಮಸ್ಥರಿಗೆ ವಹಿಸಬೇಕಾದುದು ಆ ಕಾಡಿನಲ್ಲಿ ಮರವನ್ನು ಕಡಿಯುವುದಕ್ಕೂ, ಅಲ್ಲಿಯ ಉತ್ಪತ್ತಿಯನ್ನು ಗ್ರಾಮಸ್ಥರಿಗೇ ಹಂಚುವುದಕ್ಕೂ ಯಾವುದಾದರೂ ಒಂದು ರೀತಿಯಾದ ಕಟ್ಟುಪಾಡನ್ನು ಮಾಡಬೇಕು ಹಾಗೆ ಮಾಡದಿದ್ದಲ್ಲಿ ಭ್ರಷ್ಟನಾದ ರೈತನಾಗಲಿ, ಅನುಕೂಲಸ್ಥನಾದ ದನಸಾಕೆಮಾರುವವನಾಗಲಿ ತನ್ನ ಮಂದೆಯಿಂದ ಆ ಗ್ರಾಮದ ಕಾಡಿನಲ್ಲಿರುವ ಗೋಮಾಳವನ್ನು ತುಂಬಿಸಿ, ಆರಂಭಕ್ಕೆ ಬೇಕಾದಷ್ಟು ಮಾತ್ರ ದನವನ್ನು ಇಟ್ಟುಕೊಂಡಿರುವ ಬಡರೈತನನ್ನು ಅಟ್ಟಿಬಿಡಬಹುದು ಇಷ್ಟೇ ಅಲ್ಲ ಶಕ್ತನಾದ ರೈತನು ತನಗೆ ಬೇಕಾದಷ್ಟು ಮರಗಳನ್ನು ಕಡಿದು ಸಾಗಿಸಿಕೊಂಡು ಹೋದ ಮೇಲೆ ಅವನು ಬಿಟ್ಟ ಕಸಕಡ್ಡಿಯನ್ನು ಬಡರೈತನು ಆಯ್ದುಕೊಳ್ಳಬೇಕಾಗುವುದು ಈ ರೀತಿಯಲ್ಲಿ ರೈತರಿಗಾಗಿ ಬಿಟ್ಟ ಕಾಡುಗಳಲ್ಲಿ ಈಗಲೂ ನಡೆಯುತ್ತಿದೆ ಗ್ರಾಮದಲ್ಲಿ ಜನರು ಹೆಚ್ಚಿದ ಹಾಗೆಲ್ಲಾ ಗ್ರಾಮಕಾಡಿನಲ್ಲಿ ಗ್ರಾಮಸ್ಥರಿಗೆ ಇರುವ ಹಕ್ಕನ್ನು ಹೆಚ್ಚಿಸಕೂಡದು ಹಾಗೆ ಹೆಚ್ಚಿಸುತ್ತಾ ಬಂದಲ್ಲಿ ಗ್ರಾಮಸ್ಥರಿಗಲ್ಲಾ ಬೇಕಾದ ಸಾಮಾನನ್ನು ಒದಗಿಸಲು ಸಾಧ್ಯವಲ್ಲ ಸಾಧ್ಯವಾಗದೆಹೋಗುವುದರಿಂದ ಸರಕಾರದವರು ಗ್ರಾಮಸ್ಥರಿಗೆ ಆ ಕಾಡನ್ನು ಸ್ವೇಚ್ಛೆಯಾಗಿ ಉಪಯೋಗಿಸಿ ನಾಶಪಡಿಸಲು ಅವಕಾಶಕೊಡಬೇಕಾಗುವುದು, ಅಥವಾ, ಕಾಡು ಪ್ರದೇಶವನ್ನು ಹೆಚ್ಚಿಸಬೇಕಾಗುವುದು ಈ ಅನಾನುಕೂಲವನ್ನು ತಪ್ಪಿಸುವುದಕ್ಕಾಗಿ ಗ್ರಾಮದಲ್ಲಿರುವ ಮನೆಗಳ ಸಂಖ್ಯೆಯನ್ನು ನಿಶ್ಚಯಿಸಿ, ಪ್ರತಿ ಒಂದು ಮನೆಗೂ ಇಷ್ಟು ಮರಮುಟ್ಟು, ಇಷ್ಟು ಕಟ್ಟಿಗೆಯನ್ನು ಗ್ರಾಮದ ಕಾಡಿನಿಂದ ಕೊಡಬಹುದೆಂದು ನಿರ್ಧರಿಸಬೇಕು. ಹಾಗೆಯೇ ಗ್ರಾಮದ ಕಾಡಿನಲ್ಲಿ ಇಷ್ಟೇ ದನಗಳು ಮೇಯಬೇಕೆಂದೂ ವಿಧಿಸಬೇಕು ಹೀಗೆ ಆ ಕಾಡಿನ ಉತ್ಪತ್ತಿಯನ್ನು ಮಿತಿ ನಿಷ್ಕರ್ಷಿಸುವುದರಿಂದ ಒಂದು ವೇಳೆ ಗ್ರಾಮವು ಅಭಿವೃದ್ಧಿಯಾಗಿ ಹೆಚ್ಚಿದರೂ ಆ ಗ್ರಾಮಕ್ಕೆ ಎಷ್ಟು ಆ ಕಾಡಿನ ಉತ್ಪತ್ತಿಯನ್ನು ಕೊಡಬೇಕೆಂದೂ ಎಷ್ಟು ದನಗಳು ಅಲ್ಲಿ ಮೇಯಬೇಕೆಂದೂ ಪೂರ್ವದಲ್ಲಿ ನಿಶ್ಚಯವಾಗಿರುವುದರಿಂದ ಅನ್ಯಾಯಕ್ಕೆ ಅವಕಾಶವಿರದು.

ಕಾಡಿಲ್ಲದ ಪ್ರದೇಶದ ಗ್ರಾಮಗಳ ಸುತ್ತಲೂ ಬಂಜರು ಇರುವುದು ಅಂಥಾ ಜಾಗ ನಲ್ಲಿ ಅದನ್ನು ಇಲ್ಲೊಂದು ಅಲ್ಲೊಂದು ಗುಂಡುತೋಪುಗಳನ್ನು ಕಿತ್ತು ತಿಂದು ಹೀಗೆ ಕೆರೆಯನ್ನು ಕಾಪಾಡಿಕೊಂಡು ಅಲ್ಲಿಯ ದನಕರುಗಳನ್ನು ಸಾಕಲು ಸಾಧ್ಯವೇ ಇರುವವು ಇಂಥಾ ಬೆಂಗಾಡಂಥ ಸೀಮೆಯಲ್ಲಿ ವಿಶೇಷ ಖರ್ಚಿಲ್ಲದುದರಿಂದ, ದೇಶ ಕ್ರಮವಿಲ್ಲದಂತೆ ಸಸಿಗಳನ್ನು ಬೀಜವನ್ನು ನೆಟ್ಟು ಗಿಡಗಳನ್ನು ಬೆಳೆಯಬಹುದು ಇದರಿಂದ ಬಂಜರುಭೂಮಿಯಲ್ಲಿ ಕೆಲವು ಕಾಲದಲ್ಲಿಯೇ ಗಿಡಗಳು ಬೆಳೆದು, ದೊಡ್ಡವು ಆದಹಾಗೆಲ್ಲಾ ಆಯಾ ಗ್ರಾಮಸ್ಥರಿಗೆ ಬೇಕಾದ ಮರಮುಟ್ಟನ್ನು, ದನಕರುಗಳಿಗೆ ಮೇವನ್ನು ಒದಗಿಸಿಕೊಡಬಹುದು

ಗಿಡಕಾಡಿನಿಂದ ಮಳೆ ಹೇಗೆ ಸಹಾಯವಾಗುವುದು ? ಭೂಮಿಯಲ್ಲಿ ಹೇಗೆ ತೇವವು ಹೆಚ್ಚಾಗುವುದು ? ಹೇಗೆ ನೆರಳಾಗುವುದು ? ಪ್ರವಾಹಕರಣೆಯು ಹೇಗೆ ತಪ್ಪುವುದು ? ವ್ಯವಸಾಯಕ್ಕೂ ಕೈಗಾರಿಕೆಗೂ ಹೇಗೆ ಸಾಮಗ್ರಿಗಳು ಒದಗುವುವು ? ಎಂಬೀ ವಿಚಾರಗಳನ್ನೆಲ್ಲಾ ಮತ್ತೆ ನಾನು ಹೇಳಬೇಕಾದದ್ದಿಲ್ಲ ಗಿಡಕಾಡುಗಳು ಇರುವುದರಿಂದ ಅತಿಶಯವಾದ ಪ್ರಯೋಜನಗಳುಂಟೆಂಬುವುದು ಇದುವರೆಗೆ ವ್ಯಕ್ತವಾಗಿರಬಹುದು. ಪೂರ್ವಕ್ಕೆ ಒಳ್ಳೆ ವಸತಿಯಾಗಿದ್ದ ಅನೇಕ ಪಟ್ಟಣಗಳು ಈಗ ಹಾಳಾಗುವುದಕ್ಕೆ ಅವುಗಳ ಸುತ್ತುಮುತ್ತಲಿದ್ದ ಕಾಡನ್ನು ವಿವೇಕವಿಲ್ಲದೆ ಕಡಿದದ್ದೇ ನಿಜವಾದ ಕಾರಣವೆಂದು ಹೇಳಬಹುದು

ಅರಣ್ಯವನ್ನು ಬಹು ಎಚ್ಚರಿಕೆಯಿಂದ ಕಾಪಾಡಿಕೊಂಡು, ವಿಶೇಷವಾಗಿ ಉಪಯೋಗಿಸಿ, ಅನೇಕ ಸುಖಗಳನ್ನು ಅನುಭವಿಸುವವರು ಅನುಭವಿಸುತ್ತಾ ಬರಲಿ ಎಂದು ದೇವರು ಸೃಷ್ಟಿಸಿಕೊಟ್ಟಿರುತ್ತಾನೆ ಇದು ಅತಿಶಯವಾದ ಸಂಪತ್ತೆಂದು ನಾನು ಭಾವಿಸುವೆನು ಇದು ನಮ್ಮ ಕಾಲದಲ್ಲಿ ನಾವು ಅನುಭವಿಸಿ, ನಮ್ಮ ಅನಂತರ ಬರುವವರಿಗೆ ಉತ್ತಮಸ್ಥಿತಿಯಲ್ಲಿ ಬಿಟ್ಟುಕೊಡಬೇಕಾದದ್ದು ನಮ್ಮ ಕರ್ತವ್ಯವೆಂದು ತಿಳಿದಿರುವೆನು ತಾವೂ ಈ ಅಭಿಪ್ರಾಯವನ್ನು ಅನುಮೋದಿಸದೆ ಇರಲಾರರಿ.

ಮೈಸೂರು ಪ್ರಜಾಪ್ರತಿನಿಧಿ ಸಭೆಯು.

ಮುಜರಾಯಿ ಹಣವನ್ನು ವಿದ್ಯಾಭಿವೃದ್ಧಿಗೆ ಹಾಕುವುದು

ಮೈಸೂರು ಮಿ॥ ರಾಘವಾಚಾರ್ರು—ಪೂರ್ವಿಕರು ನಾನಾ ಧರ್ಮಗಳನ್ನು ಮಾಡಿಟ್ಟಿದ್ದಾರೆ. ಈಗಿನ ಕಾಲದಲ್ಲಿ ವಿದ್ಯಾದಾನಕ್ಕಿಂತಲೂ ಅತಿಶಯವಾದ ಧರ್ಮವೇ ಇಲ್ಲವೆಂದು ಸನಾತನರೂ ಒಪ್ಪಿಕೊಳ್ಳಬೇಕಾಗಿದೆ ಮುಜರಾಯಿ ಇಲಾಖೆ ಎಂಬುವುದು ಪೂರ್ವಿಕರ ಧರ್ಮವನ್ನು ಸಾರ್ಥಕಪಡಿಸುವುದಕ್ಕಾಗಿ ಏರ್ಪಟ್ಟಿದ್ದೇ ಹೊರತು ಮತ್ತೆ ಬೇರೆ ಅಲ್ಲ ಆದ್ದರಿಂದ ನಮ್ಮ ಸಂಸ್ಥಾನದಲ್ಲಿ ವಿದ್ಯಾಭಿವೃದ್ಧಿ ಮಾಡುವುದಕ್ಕೆ ಗವರ್ನ್ಮೆಂಟಿನವರ ದ್ರವ್ಯಸಹಾಯ ಸಾಲದೆ ಇರುವ ಪಕ್ಷದಲ್ಲಿ ಮುಜರಾಯಿ ಫಂಡಿನಿಂದಲೂ ಕೆಲವು ಹಣವನ್ನು ಅದಕ್ಕಾಗಿ ಉಪಯೋಗಿಸಿಕೊಳ್ಳಬೇಕೆಂದು ಬೇಡುತ್ತೇವೆ

ದಿವಾನರವರು (ಇತರ ಮೆಂಬರುಗಳ ಅಭಿಪ್ರಾಯವನ್ನು ಕೇಳಿ)— ಸತ್ರ, ದೇವಸ್ಥಾನಗಳಿಗೆ ವಿನಿಯೋಗವಾಗತಕ್ಕ ಮುಜರಾಯಿ ಹಣವನ್ನು ನೀವು ಅಪೇಕ್ಷಿಸುವಪ್ರಕಾರ ಬೇರೊಂದು ಇಲಾಖೆಯ ಖರ್ಚಿಗೆ ತೆಗೆದುಕೊಳ್ಳುವುದು ಸರ್ವಸಮ್ಮತವಾದದ್ದೆಂದಾಗಲೀ ಸಾಧುವಾದದ್ದೆಂದಾಗಲೀ ತೋರಲಿಲ್ಲ ಆದ್ದರಿಂದ ಈ ವಿಷಯವನ್ನು ಚರ್ಚಿಸಬೇಕಾದದ್ದಿಲ್ಲ.

ಶಿಸ್ತಿಂದಿಲು ಚರ್ಚೆ ಕಡಮೆಮಾಡುವುದು.

ಶಿವಮೊಗ್ಗೆಯ ಮಿ॥ ಬಾಲಕೃಷ್ಣರಾಯರೇ ಮಂತಾದವರು— ಸಬ್ರಿಜಿಸ್ಟ್ರಾರ್‌ಗಳ ದರ್ಜೆಯನ್ನು ಸರ್ಕಲ್ ಇನ್‌ಸ್ಪೆಕ್ಟರ ದರ್ಜೆಯನ್ನು ವಜಾಮಾಡಿದಲ್ಲಿ ಸರ್ಕಾರದ ಇತರ ಕೆಲಸಗಳಿಗೆ ಹಣ ಸಿಕ್ಕುವುದು ಈ ಅಧಿಕಾರಿಗಳಿಗೆ ಅಷ್ಟೊಂದು ಹೆಚ್ಚಾದ ಕೆಲಸಗಳೇನೂ ಇರುವುದಿಲ್ಲ

ದಿವಾನರವರು—ಗವರ್ನ್ಮೆಂಟಿನವರು ಬೇರೆ ಬೇರೆ ಇಲಾಖೆಗಳಲ್ಲಿ ಖರ್ಚುವೆಚ್ಚವನ್ನು ಕಡಮೆಮಾಡಬೇಕೆಂಬ ಉದ್ದೇಶದಿಂದಲೇ ಒಂದು ಕಮಿಟಿಯನ್ನು ನೇಮಕ ಮಾಡಿರುವುದೂ, ಈ ಕಮಿಟಿಯವರು ಕಾರ್ಯನಡೆಸುತ್ತಿರುವುದೂ ನಿಮಗೆ ತಿಳಿದೇ ಇದೆ. ಈಗ ನೀವು ಸೂಚಿಸಿರುವ ವಿಷಯವನ್ನು ಕೂಡ ಆ ಕಮಿಟಿಯವರ ಪರ್ಯಾಲೋಚನೆಗೆ ತರುತ್ತೇವೆ ಆದ್ದರಿಂದ ಈ ವಿಚಾರವಾಗಿ ನೀವು ಇಲ್ಲಿ ಚರ್ಚೆ ಮಾಡಬೇಕಾದದ್ದಿಲ್ಲ

ನೀರಾವರಿ ಕಾಮಗಾರಿಗಳು

ಕೆಲವು ಮೆಂಬರುಗಳು—ಕೃಷ್ಣರಾಜಪೇಟೆ ತಾಲ್ಲೂಕಿನಲ್ಲಿ ಮಂದಗೆರೆ ಮತ್ತು ಹೇಮಗಿರಿ ನಾಲೆಗಳನ್ನು ಬಿಡಾವಣೆ ಮಾಡಿದರೆ ಸರ್ಕಾರಕ್ಕೆ ಆದಾಯವುಂಟು, ಪ್ರಜೆಗಳಿಗೂ ತುಂಬಾ ಉಪಕಾರವಾದೀತು

ದಿವಾನರವರು—ಮಂದಗೆರೆ ನಾಲೆ ಕಾಮಗಾರಿಯು ತುಂಬಾ ಲಾಭಕರವಾದದ್ದೆಂತಲೂ, ಅದಕ್ಕೆ ಸುಮಾರು ೪ ಲಕ್ಷ ರೂಪಾಯಿ ಖರ್ಚಾಗುವುದೆಂತಲೂ ತಿಳಿದು ಬಂದಿದೆ ಕಾಮಗಾರಿ ಪ್ರಾರಂಭಿಸುವ ವಿಷಯದಲ್ಲಿ ಯೋಚನೆ ಮಾಡುತ್ತಿದ್ದೇವೆ

ಮಿ॥ ವೆಂಕಟಕೃಷ್ಣಯ್ಯನವರು—ಗವರ್ನ್ಮೆಂಟ್ ಸೇವಿಂಗ್ಸ್ ಬ್ಯಾಂಕಿನಲ್ಲೂ ಸರ್ಕಾರಿ ಇನ್ಷೂರೆನ್ಸ್ ಫಂಡಿನಲ್ಲೂ ಬಹಳ ಹಣವಿದೆ ಅದಕ್ಕೆ ಗವರ್ನ್ಮೆಂಟಿನವರು ವೃಥಾ ಬಡ್ಡಿ ಕೊಡಬೇಕು. ಇದರಿಂದ ಆ ಹಣವನ್ನು ವಿನಿಯೋಗಿಸಿ, ಸಂಸ್ಥಾನವೊಳಗೆ ಲಾಭಕರವಾದ ನೀರಾವರಿ ಕಾಮಗಾರಿಗಳನ್ನು ಮಾಡಿಸಿದರೆ ಎಷ್ಟೋ ಉಪಕಾರವಾಗುವುದು

ದಿವಾನರವರು—ಮೈಸೂರು ಸಂಸ್ಥಾನದಲ್ಲಿ ಸದ್ಯ ಯಾವ ನೀರಾವರಿ ಕೆರೆ ನಾಲೆಗಳೂ ಅವುಗಳಿಗೆ ಖರ್ಚಾದ ಮೂಲಧನಕ್ಕೆ ತಕ್ಕಷ್ಟು ಬಡ್ಡಿಯನ್ನು ಕುಟ್ಟುವಳಿ ಮಾಡಿಕೊಡುವುದಿಲ್ಲ ತುಂಬಾ ನಷ್ಟವೇ ಆಗುತ್ತಿದೆ ಇಂಥಾದ್ದರಲ್ಲಿ ಮೇಲ್ಕಂಡ ಫಂಡುಗಳಲ್ಲಿರತಕ್ಕ ಪ್ರಜೆಗಳ ಹಣವನ್ನು ಎತ್ತಿ ಕಾಮಗಾರಿಗಳಿಗೆ ಹಾಕುವುದು ತುಂಬಾ ಅಪಾಯಕ್ಕೆ ಗುರಿಯಾದೀತು. ಇದು ಮಾಡಲಾಗುವುದಿಲ್ಲ

ರೈಲ್ ರಸ್ತೆಗಳ ಬಿಡಾವಣೆಯು.

ಮಿ॥ ಎಂ ವೆಂಕಟಕೃಷ್ಣಯ್ಯನವರು—ಪ್ರತಿ ವರುಷದ ಹಣದ ಉಳಿತಾಯದಲ್ಲೂ ಒಂದೆರಡು ಮೈಲಿಯ ಪ್ರಕಾರ ರೈಲ್ವೆ ಕಾಮಗಾರಿಯನ್ನು ಮಾಡಿಸುತ್ತಾ ಬರುವುದು ಬಹಳ ಅನುಕೂಲ. ಒಟ್ಟಿಗೆ ಹಣ ಒದಗಿಸುವುದು ಕಷ್ಟವಾಗಬಹುದು ಗವರ್ನ್ಮೆಂಟಿನವರು ಈ ವಿಚಾರವನ್ನು ಗಮನಕ್ಕೆ ತಂದುಕೊಳ್ಳಬೇಕಾಗಿದೆ.

ದಿವಾನರವರು—ರೈಲ್ ರಸ್ತೆಗಳನ್ನು ಬಿಡಾವಣೆ ಮಾಡುವುದೇನೋ ಬಹಳ ಅವಶ್ಯವೆಂದು ಗವರ್ನ್ಮೆಂಟಿನವರಿಗೆ ಗೊತ್ತಾಗಿದೆ ಅದಕ್ಕಾಗಿ ವಿಲಾಯಿತಿಯಲ್ಲಿ ಕೆಲವು ಹಣ ಸಾಲಮಾಡಬೇಕೆಂದು ಯೋಚಿಸಿ ಅದಕ್ಕೆ ಇಂಡಿಯಾ ಗವರ್ನ್ಮೆಂಟಿನವರ ಅನುಮತಿಯನ್ನು ಕೇಳಲಾಗಿದೆ ಅದು ಹೇಗೆ ಇತ್ಯರ್ಥವಾಗುವುದೋ ನೋಡಿಕೊಂಡು ಮುಂದಿನ ಕೆಲಸ ಮಾಡುವರು.

ಅನೇಕ ಮೆಂಬರುಗಳು—ಅರಸೀಕೆರೆಯಿಂದ ಮಂಗಳೂರಿಗೆ ರೈಲು ಹಾಕಿಕೊಡಬೇಕೆಂದು ಬಹುಕಾಲದಿಂದಲೂ ಬೇಡಿಕೊಳ್ಳುತ್ತಿದ್ದೇವೆ

...ರ್ಥವನ್ನು ಹಾಕಲು ಈಗಲೇ ಆಗದಿದ್ದರೂ ಶಾಸನದ ಅನಕ ... ಸಭ್ಯಕ್ಕೆ ಹಾಕಿಕೊಡಬೇಕು.

ದಿವಾನರವರು—ಈ ವಿಷಯದಲ್ಲಿ ಶೀಘ್ರದಲ್ಲೆ ಏನಾದರೂ ಆರ್ಡರ್ ಮಾಡುತ್ತೇವೆ.

ಹಾಸನದ ಮಿ॥ ವೆಂಕಟರಾಮಯ್ಯನವರೇ ಮುಂತಾದವರು—ಅರಸೀಕೆರೆಯಿಂದ ಹಾಸನ ಸಕಲೇಶಪುರದ ಮೇಲೆ ಮಂಗಳೂರಿಗೆ ರೈಲು ರಸ್ತೆ ಹಾಕುತ್ತಾರೆಂದು ತಿಳಿದಿದೆ. ಮೈಸೂರಿನಿಂದ ಯಡೆತೊರೆ ಹೊಳೆನರಸೀಪುರದ ಮೇಲೆ ಹಾಸನಕ್ಕೆ ರೈಲು ಹಾಕಿದರೆ ಸರ್ಕಾರದವರಿಗೂ ವರ್ತಕರಿಗೂ ಪ್ರಜೆಗಳಿಗೂ ಎಷ್ಟೋ ಅನುಕೂಲವಾದೀತು.

ದಿವಾನರವರು—ಇದು ಉತ್ತಮವಾದ ಯೋಚನೆಂತಲೂ, ಇದನ್ನು ... ವಿಷಯದಲ್ಲಿ ಗವರ್ನಮೆಂಟಿನವರು ಆಲೋಚನೆ ಮಾಡಬೇಕಾಗಿದೆ ಎಂತಲೂ ಇಲಾಖಾ ಸೆಕ್ರೆಟರಿಯವರು ಹೇಳಿದಾರೆ. ಆಲೋಚನೆ ಮಾಡುತ್ತೇವೆ.

ಶಿವಮೊಗ್ಗೆಯ ಮಿ॥ ರಾಮಪ್ಪನವರು—ರೈಲು ರಸ್ತೆಗಳ ಉಭಯ ಪಾರ್ಶ್ವಗಳಲ್ಲೂ ಸರಿಯಾದ ಬೇಲಿ ಹಾಕದೆ ಇರೋಣದರಿಂದ ರೈತರ ಜಾನುವಾರುಗಳು ಆಗಾಗ್ಗೆ ರೈಲಿಗೆ ಸಿಕ್ಕಿ ಸತ್ತುಹೋಗಿ ತುಂಬಾ ನಷ್ಟವಾಗುತ್ತದೆ. ರೈಲ್ ಕಂಪನಿಯವರು ಸರಿಯಾದ ಬೇಲಿ ಹಾಕಿಕೊಳ್ಳುವಂತೆ ಅವರಿಗೆ ತಿಳಿಸಬೇಕೆಂದು ಪ್ರಾರ್ಥಿಸುತ್ತೇವೆ.

ದಿವಾನರವರು—ಬೇಲಿ ಹಾಕಿಸುವುದು ರೈಲ್ ಕಂಪನಿಯವರ ಕೆಲಸವಲ್ಲ. ಅದನ್ನು ಮೈಸೂರು ಸರ್ಕಾರದವರೇ ಮಾಡಿಸಬೇಕಾಗಿದೆ. ಅನುಕೂಲವೊದಗಿದ ಹಾಗೆ ನಿಮ್ಮ ಪ್ರಾರ್ಥನೆಯನ್ನು ನಡಿಸಿಕೊಡುತ್ತೇವೆ.

ಸಾಗರದ ಮಿ॥ ನರಸಿಂಹಯ್ಯಂಗಾರು)—ದಕ್ಷಿಣ ಮರಾಠಾ ರೈಲ್ವೆ ಕಂಪನಿಯ ನೌಕರರು ಪ್ರಯಾಣಿಕರಿಗೆ ಪಕ್ಷಪಾತ ಮಾಡುತ್ತಾರೆ. ಯೂರೋಪಿಯನ್ನರಾಗಲಿ ಚಟ್ಟೀಗಾರರಾಗಲಿ ೨ನೆ ಕ್ಲಾಸ್ ಗಾಡಿಗೆ ಟಿಕೆಟ್ ಪಡೆದು ಸ್ಥಳವಿಲ್ಲದಿದ್ದರೆ ೧ನೆ ಕ್ಲಾಸ್ ಗಾಡಿಯಲ್ಲಿ ಕುಳಿತುಕೊಳ್ಳುವರು. ಅದಕ್ಕಾಗಿ ಅವರಿಂದ ಹೆಚ್ಚು ಛಾರ್ಜು ವಸೂಲ್ ಮಾಡುವುದಿಲ್ಲ. ದೇಶೀಯ ಜನರೇನಾದರೂ ಅದೇ ರೀತಿ ಕೇಳಿದರೆ ಅವರನ್ನು ೩ನೆ ಕ್ಲಾಸಿಗೆ ಕಳಿಸುತ್ತಾರೆ. ೧ನೆ ಕ್ಲಾಸಿಗೆ ಹೆಚ್ಚು ಛಾರ್ಜನ್ನು ವಸೂಲ್ಮಾಡುವರು. ಕಂಪನಿಯವರು ಈ ಪ್ರಕಾರ ಪಕ್ಷಪಾತ ಮಾಡದಂತೆ ಗವರ್ನಮೆಂಟಿನವರು ಕ್ರಮಪಡಿಸಬೇಕು.

ದಿವಾನರವರು—ಈ ವಿಷಯವನ್ನು ಕ್ರಮಪಡಿಸಬೇಕೆಂದು ರೈಲ್ ಕಂಪನಿಯ ಏಜಂಟರಿಗೆ ಬರೆಯುತ್ತೇವೆ.

ಮಠಗಳ ಮೇಲ್ವಿಚಾರಣೆಯು

ಮೈಸೂರು ಮಿ॥ ...ಪ್ಪನವರೂ, ಮಿ॥ ವೆಂಕಟಕೃಷ್ಣಯ್ಯನವರೂ—ಸಂಸ್ಥಾನದ ದೇವಸ್ಥಾನಗಳ ಕಾರುಬಾರಿಗಳನ್ನು ಮೇಲ್ವಿಚಾರಣೆ ನೋಡಿಕೊಳ್ಳುವುದಕ್ಕೆ ಸರ್ಕಾರದವರು ಧರ್ಮದರ್ಶಿಗಳನ್ನು ನೇಮಕಮಾಡಿದಾರೆ. ಇವರಿಗೆ ಯಾವ ಸ್ವಾತಂತ್ರ್ಯವನ್ನೂ ಕೊಟ್ಟಿಲ್ಲ. ಇದರಿಂದ ಅವರ ಮೇಲ್ವಿಚಾರಣೆಯು ಅಸಾರ್ಥಕವಾಗುತ್ತಿದೆ. ಆದ್ದರಿಂದ ಧರ್ಮದರ್ಶಿಗಳ ಅಧಿಕಾರ ಎಂಥಾದ್ದೆಂದು ವಿಧಿಸಿಕೊಡಬೇಕು. ಇದಲ್ಲದೆ ಈ ಸಂಸ್ಥಾನದಲ್ಲಿರತಕ್ಕ ಬೇರೆ ಬೇರೆ ಮಠಗಳಲ್ಲಿ ಹಣ ಹರವಾಗಿ ಬಹಳ ದುರ್ವಿನಿಯೋಗವಾಗುತ್ತಿದೆ. ಇದನ್ನೆಲ್ಲಾ ... ಮಠಗಳಲ್ಲಿ ಯೋಗ್ಯವಾದ ಕೆಲಸಕಾರ್ಯಗಳು ತೃಪ್ತಿಕರವಾಗಿ ನಡೆಯುವಂತೆಯೂ ಮೇಲ್ವಿಚಾರಣೆಮಾಡುವುದಕ್ಕೆ ಸ್ಥಳವಂದಿಗರಾದ ಧರ್ಮದರ್ಶಿಗಳನ್ನು ಸರ್ಕಾರದವರು ನೇಮಕ ಮಾಡಿಕೊಡಬೇಕು.

ದಿವಾನರವರು—ದೇವಸ್ಥಾನಗಳಲ್ಲಿ ಕೆಲಸಗಳು ಸರಿಯಾಗಿ ನಡೆಯುವಂತೆ ಧರ್ಮದರ್ಶಿಗಳು ನೋಡಿಕೊಳ್ಳುವುದಕ್ಕೋಸ್ಕರವೇ ಅವರನ್ನು ಗೊತ್ತುಮಾಡಿದೆ. ಅಲ್ಲಿ ಲೋಪದೋಷಗಳೇನ ನಡೆದರೂ ಧರ್ಮದರ್ಶಿಗಳು ಅಮಲ್ದಾರರಿಗೆ ಕೂಡಲೆ ತಿಳಿಸಿದಲ್ಲಿ ಅಮಲ್ದಾರರು ಅವರ ಮುಖಾಂತರ ಕ್ರಮಪಡಿಸಬೇಕೆಂದು ನಿಯಮಮಾಡಿದೆ. ಧರ್ಮದರ್ಶಿಗಳು ತಮ್ಮ ಕರ್ತವ್ಯವನ್ನು ಸರಿಯಾಗಿ ನಡಸಬೇಕಾದದ್ದೊಂದೇ ಅವಶ್ಯ. ಇತ್ತಲಾಗಿ ಮಠಗಳ ಮೇಲ್ವಿಚಾರಣೆ ಮಾಡುವುದಕ್ಕೆ ಮಠಾಧಿಪತಿಗಳು ಒಪ್ಪಿದರೆ ಸರ್ಕಾರದವರು ಧರ್ಮದರ್ಶಿಗಳನ್ನು ನೇಮಕ ಮಾಡಬಹುದು. ದೇವರು ಮಾತನಾಡುವುದಿಲ್ಲವಾದ್ದರಿಂದ ದೇವಸ್ಥಾನಗಳಿಗೆ ಧರ್ಮದರ್ಶಿಗಳನ್ನು ಸರ್ಕಾರದವರು ಪ್ರವೇಶಿಸಿ ನೇಮಿಸಬಹುದು. ಹಾಗೆಯೇ ಸರ್ಕಾರದವರು ಮಠಗಳ ಕಾರುಬಾರಿಗೆ ತಲೆಹಾಕಿ ಧರ್ಮದರ್ಶಿಗಳನ್ನು ನೇಮಿಸುವುದು ಸುಲಭವಾಗಿಲ್ಲ. ಆದರೂ ಸಂದರ್ಭಾನುಸಾರ ಗವರ್ನಮೆಂಟಿನವರು ನಿಗಾ ಇಟ್ಟು ಮಠಗಳ ವಿಚಾರವನ್ನು ಕ್ರಮಪಡಿಸುತ್ತಾ ಬಂದಿದಾರೆಂದು ಹೇಳುತ್ತೇವೆ.

ಮೈಸೂರು ಸಿವಿಲ್ ಸರ್ವಿಸ್ ಪರೀಕ್ಷೆಯು

ಕೆಲವು ಮೆಂಬರುಗಳು—ಅಸಿಸ್ಟೆಂಟ್ ಕಮಿಷನರ ದರ್ಜೆಗೆ ಸರ್ಕಾರದವರು ಜನಗಳನ್ನು ನೇಮಿಸುವುದಕ್ಕೆ ಇಟ್ಟಿರುವ ಸಿವಿಲ್ ಸರ್ವಿಸ್ ಪರೀಕ್ಷೆಗಳ ಮೂಲಕ ತೃಪ್ತಿಕರವಾಗಿಲ್ಲವಾದ್ದರಿಂದ ಆ ಪರೀಕ್ಷೆಯನ್ನು ವಜಾಮಾಡಬೇಕು. ಅದನ್ನು ನಡಿಸುವುದು ಅವಶ್ಯವಾದಲ್ಲಿ ಮೈಸೂರಿನ ಪ್ರಜೆಗಳು ಮಾತ್ರ, ಅಂದರೆ ಕನ್ನಡಭಾಷೆಯನ್ನು ಚೆನ್ನಾಗಿ ಬಲ್ಲವರು ಮಾತ್ರ ಆ ಪರೀಕ್ಷೆಗೆ ಬರುವಂತಾಗಬೇಕು. ಹೋದ ದಸರಾ ಸಭೆಯಲ್ಲಿ ಈ ಪರೀಕ್ಷೆಯ ವಿಚಾರವನ್ನು ಕುರಿತು ನಾವು ಒಂದು ವಿಜ್ಞಾಪನಾ ಪತ್ರಿಕೆಯನ್ನು ಒಪ್ಪಿಸಿದ್ದೆವು. ಶ್ರೀಮನ್ಮಹಾರಾಜರವರು ಅದರ ಮೇಲೆ ಯಾವ ಉತ್ತರವನ್ನು ದಯಪಾಲಿಸಿದರೋ ತಿಳಿಯಲಪೇಕ್ಷಿಸುತ್ತೇವೆ.

ದಿವಾನರವರು—ನೀವು ವಿಜ್ಞಾಪನಾ ಪತ್ರಿಕೆಯನ್ನು ಒಪ್ಪಿಸಿದ ಮೇಲೆ ಗವರ್ನಮೆಂಟಿನವರು ಈ ಪರೀಕ್ಷೆಯ ರೂಲನ್ನು ಎಷ್ಟುಮಟ್ಟಿಗೆ ಬದಲಾಯಿಸಬಹುದಾಗಿ ಕಂಡಿತೋ ಅಷ್ಟು ಮಟ್ಟಿಗೆ ಬದಲಾಯಿಸಿರುತ್ತಾರೆ. ಇನ್ನು ಮುಂದೆ ಈ ವಿಷಯವನ್ನು ಈ ಸಭೆಯಲ್ಲಿ ಚರ್ಚೆಗೆ ತರಕೂಡದು.

ಪ್ರತಿನಿಧಿಗಳ ಚುನಾವಣೆಯು

ಕೆಲವು ಮೆಂಬರುಗಳು—ಈ ಪ್ರತಿನಿಧಿ ಸಭೆಗೆ ಮೆಂಬರುಗಳನ್ನು ಚುನಾಯಿಸುವುದಕ್ಕೆ ಮಾಡಿರುವ ರೂಲನ್ನು ಬದಲಾಯಿಸಿ ಮಾಡಿ ವಿದ್ಯಾವಂತರೂ ಮೆಂಬರುಗಳಾಗಿ ಈ ಸಭೆಗೆ ಬರುವಂತೆ ಮಾಡಿಕೊಡಬೇಕು.

ದಿವಾನರವರು—ಈ ರೂಲನ್ನು ಬದಲಾಯಿಸುವುದು ಸಾಧ್ಯವಲ್ಲವೆಂದು ಗವರ್ನಮೆಂಟಿನವರು ತೀರ್ಮಾನಮಾಡಿದಾರೆ.

ಕನ್ನಡದಲ್ಲಿ ಹುಕುಂ ಬರೆಯುವುದು

ಕೆಲವು ಮೆಂಬರುಗಳು—ಗ್ರಾಮಾಂತರಗಳಲ್ಲಿ ರೈತರ ತಕರಾರ್ ಮತ್ತು ಕಂಪ್ಲೇಂಟ್ ತಖ್ತೆಗಳ ಮೇಲೂ ಅರ್ಜಿಗಳೇ ಮುಂತಾದವುಗಳ ಮೇಲೂ ಅಧಿಕಾರಿಗಳು ಇಂಗ್ಲಿಷಿನಲ್ಲಿ ತಮ್ಮ ತೀರ್ಮಾನಗಳನ್ನು ಬರೆದಿಡುತ್ತಾರೆ. ಕಾಪಿ ಕೇಳಿದರೆ ಇಂಗ್ಲಿಷಿನ ಹುಕುಮನ್ನೇ ಬರೆಸಿ ಕೊಡುವರು. ರೈತರುಗಳಿಗೆ ಇಂಗ್ಲಿಷ್ ಹುಕುಮನ್ನು ಅರ್ಥಮಾಡಿಕೊಳ್ಳುವುದು ಬಹಳ ಕಷ್ಟ. ಆದ್ದರಿಂದ ಎಲ್ಲಾ ಸರ್ಕಾರಿ ಅಧಿಕಾರಿಗಳೂ ಹುಕುಮುಗಳನ್ನು ಕನ್ನಡದಲ್ಲೇ ಬರೆಯಬೇಕೆಂತಲೂ, ಅಥವಾ ಕನ್ನಡದ ತರ್ಜುಮೆಯನ್ನು ಅರ್ಜಿದಾರರಿಗೆ ಕೊಡಿಸುವಂತೆಯೂ ಹುಕುಂ ಆಗಬೇಕು.

ದಿವಾನರವರು—ಇದು ಬಹಳ ಅವಶ್ಯವಾದದ್ದು. ಎಲ್ಲಾ ಅಧಿಕಾರಿಗಳಿಗೂ ಆ ರೀತಿ ಮಾಡುವಂತೆ ಹುಕುಂ ಕೊಡಲಾಗುವುದು.

ಮಲೆನಾಡಿನಲ್ಲಿ ಗ್ರಾಮಗಳ ಕ್ಷೀಣಗತಿಯು

ಚಿಕ್ಕಮಗಳೂರು ಮಿ॥ ಶ್ರೀನಿವಾಸರಾಯರು—ಮಲೆನಾಡಿನಲ್ಲಿ ಈಚೆಗೆ ಅನೇಕ ಗ್ರಾಮಗಳು ನಾಶವಾಗುತ್ತಾ ಬಂದಿವೆ. ನಮಗೆ ತಿಳಿದಂತೆ ೮—೧೦ ಗ್ರಾಮಗಳು ಹಾಳುಬಿದ್ದವು. ಪ್ರಜೆಗಳು ಕ್ರಮೇಣ ನಿರ್ನಾಮವಾಗುತ್ತಿದಾರೆ. ಹೀಗಾಗಲು ಕಾರಣವೇನೆಂದು ಸರ್ಕಾರದವರು ವಿಚಾರಣೆಮಾಡಿ ತಕ್ಕ ಪ್ರತೀಕಾರವನ್ನು ಮಾಡಬೇಕು. ಕೆಲವು ದೊಡ್ಡ ಮನುಷ್ಯರನ್ನು ಒಂದು ಪಂಚಾಯತಿಯಾಗಿ ನೇಮಿಸಿ, ಅವರನ್ನು ಆ ಪ್ರಾಂತ್ಯಕ್ಕೆ ಕಳುಹಿಸಿಕೊಟ್ಟು, ಅವರಿಂದ ತನಿಖೆ ಮಾಡಿಸಬೇಕು.

ದಿವಾನರವರು—ಈ ವಿಷಯವನ್ನು ತನಿಖೆಮಾಡಿ ಗವರ್ನಮೆಂಟಿಗೆ ತಿಳಿಸಬೇಕೆಂದು ಸೀನಿಯರ್ ಸರ್ಜನರವರಿಗೆ ಬರೆಯುತ್ತೇವೆ. ಇದಕ್ಕಾಗಿ ಒಂದು ಪಂಚಾಯತಿಯನ್ನು ನೇಮಕಮಾಡುವುದು ಅಷ್ಟು ಫಲಕಾರಿಯಾದದ್ದವೆಂದು ತೋರುವುದು.

ಸರ್ಕೀಟಿನ ಸಾಮಾನು ಸರಬರಾಜು

ಅನೇಕ ಮೆಂಬರುಗಳು—ಸರ್ಕಾರಿ ಅಧಿಕಾರಿಗಳೂ ಮುಖ್ಯ ಮುಖ್ಯರಾದ ಇತರ ಜನಗಳೂ ಊರಿಂದೂರಿಗೂ ಗ್ರಾಮಾಂತರಗಳಲ್ಲೂ ಸರ್ಕೀಟು ದಯಮಾಡುವಾಗ್ಗೆ ಅವರಿಗೆ ಬೇಕಾಗುವ ಪದಾರ್ಥಗಳನ್ನು ಚಿಲ್ಲರೆ ನೌಕರರು ಬಡ ರೈತರಿಂದ ತೆಗೆದುಕೊಂಡುಹೋಗುತ್ತಾರೆ. ಆ ಬಡ ರೈತರಿಗೆ ಸಾಮಾನಿನ ಕ್ರಯ ಪಾವತಿ ಆಗುವುದಿಲ್ಲ. ಅಧಿಕಾರಿಗಳೇನೋ ಕೊಟ್ಟುಬಿಡಬಹುದು. ಪಟೇಲ್ ಶಾನುಭೋಗರೇ ಮುಂತಾದ ನೌಕರರು ಈ ಸರಬರಾಜಿನ ವಿಷಯದಲ್ಲಿ ಮುಂದಾಳಾಗಿ ನಿಲ್ಲುತ್ತಾರೆ. ಅವರು ಈ ಸರಬರಾಜಿಗೆ ತಲೆಹಾಕದಂತೆ ಮಾಡಿದರೆ ಅನುಕೂಲ. ಅಧಿಕಾರಿಗಳು ಕಂಟ್ರಾಕ್ಟರುಗಳ ಮೂಲಕ ಬೇಕಾದ ಸಾಮಾನು ತರಿಸಿಕೊಳ್ಳುವಂತೆ ಏರ್ಪಾಡಾಗಬೇಕು. ಕೊತ್ವಾಲನೂ, ದಫೇದಾರನೂ, ಪಟೇಲ್ ಶಾನುಭೋಗರೂ ತಮ್ಮ ನ್ಯಾಯವಾದ ಕೆಲಸವನ್ನು ಬಿಟ್ಟು ಸರಬರಾಜಿಗೆ ಬಂದು ನಿಲ್ಲುತ್ತಾರೆ. ಅಧಿಕಾರಿಗಳೂ ಇತರ ಜನರಂತೆಯೇ ಇರೋಣದರಿಂದ ಅವರು ಎಲ್ಲಿ ಹೋದರೂ ತಮಗೆ ಬೇಕಾಗುವ ಸಾಮಾನುಗಳನ್ನು ತಾವೇ ಸ್ವತಃ ತರಿಸಿಕೊಳ್ಳಬಹುದಾಗಿದೆ. ಗ್ರಾಮನೌಕರರ ಸಹಾಯವನ್ನು ಗೃಹಕೃತ್ಯ ವಿಚಾರಕ್ಕೆ ಪಡೆಯುವುದ ತಪ್ಪಬೇಕು. ಇದರಲ್ಲಿ ಮುಖ್ಯ ಉದ್ದೇಶವೇನೆಂದರೆ, ರೈತ ಪ್ರಜೆಗಳಿಗೆ ಚಿಲ್ಲರೆ ನೌಕರರಿಂದಾಗುವ ಕಷ್ಟನಷ್ಟಗಳು ತಪ್ಪಬೇಕು. ಅವರು ಕೊಟ್ಟ ಸಾಮಾನುಗಳಿಗೆ ಸರಿಯಾದ ಮತ್ತು ಪೂರ್ಣ ಕ್ರಯದ ಮೊಬಲಗು ಪಾವತಿ ಆಗಬೇಕು. ಈಗಿರುವ ಏರ್ಪಾಡಿನಲ್ಲಿ ಇವೆರಡೂ ದೊಡ್ಡ ಕೊರತೆಗಳಾಗಿರುತ್ತವೆ.

ದಿವಾನರವರು (ಪಟೇಲ್ ಶ್ಯಾನುಭೋಗರಾಗಿದ್ದ ಮೆಂಬರುಗಳನ್ನು ಕೇಳಿ ಅವರ ಅಭಿಪ್ರಾಯವನ್ನೂ ತೆಗೆದುಕೊಂಡು)—ಕಂಟ್ರಾಕ್ಟುದಾರರನ್ನು ಗ್ರಾಮಾಂತರಗಳಲ್ಲಿ ಅಧಿಕಾರಿಗಳು ನೇಮಿಸಿಕೊಳ್ಳುವುದಾಗಲಿ ಅವರಿಂದ ತಮಗೆ ಬೇಕಾಗುವ ಸಾಮಗ್ರಿಗಳನ್ನು ತರಿಸಿಕೊಳ್ಳುವುದಾಗಲಿ ಸಾಧ್ಯವಲ್ಲ. ಯಾಕೆಂದರೆ ಇಂಥಾ ದಿನವೇ ಇಂಥಾ ಊರಿಗಾಗಲಿ ಗ್ರಾಮಕ್ಕಾಗಲಿ ಸರ್ಕೀಟು ಹೋಗುತ್ತೇವೆಂಬುವುದು ಅಧಿಕಾರಿಗಳಿಗೇನೇ ತಿಳಿದಿರುವುದಿಲ್ಲ. ಬಹಳ ತರಾತುರಿಯಿಂದ ಅವರು ಸಂಚಾರಮಾಡಬೇಕಾಗಿಬರುತ್ತದೆ. ಅವರು ಕಂಟ್ರಾಕ್ಟರುಗಳಿಗೆ ಮೊದಲೇ ತಿಳಿಸಿದ ಹೊತ್ತಿಗೆ ಕಂಟ್ರಾಕ್ಟರು ಸಾಮಾನುಗಳನ್ನು ಒದಗಿಸಲಾರರು. ಹೀಗೆ ಕಂಟ್ರಾಕ್ಟರುಗಳನ್ನು ನೇಮಿಸುವುದರಲ್ಲಿ ನಾನಾ ಅನಾನುಕೂಲಗಳುಂಟು. ಇದಲ್ಲದೆ ಈ ಸಭೆಯ ಮೆಂಬರುಗಳ ಸ್ವಕೀ ಟೀಕೆ ಇದು—ಈಗಿನ ಏರ್ಪಾಡೇ ಅನುಕೂಲವಾಗಿದೆ ಎಂತಲೂ, ರೈತರಿಂದ ಪಡೆಯುವ ಸಾಮಗ್ರಿಗಳಿಗೆ ಅಧಿಕಾರಿಗಳು ಪೂರ್ಣ ಕ್ರಯವನ್ನು ಪಾವತಿ ಮಾಡುತ್ತಾರೆಂತಲೂ ರೈತರುಗಳಿಗೆ ಹಿಂಸೆಯಾಗಲಿ ನಷ್ಟವಾಗಲಿ ಆಗುವುದಿಲ್ಲವೆಂತಲೂ ಹೇಳುತ್ತಾರೆ. ಆದಕಾರಣ ಈಗಿರುವ ಪದ್ಧತಿಯನ್ನು ಬದಲಾಯಿಸಬೇಕಾದ ಅಗತ್ಯವಿಲ್ಲ. ಮತ್ತು ಈ ಸರಬರಾಜಿನ ವಿಚಾರವನ್ನು ಮತ್ತೆ ಈ ಸಭೆಯಲ್ಲಿ ಚರ್ಚೆಗೆ ತರಕೂಡದೆಂದು ಗವರ್ನಮೆಂಟಿನವರು ತೀರ್ಮಾನ ಮಾಡುತ್ತಾರೆ.

ತಾಲ್ಲೂಕುಗಳಿಗೆ ತಂತೀ ಆಫೀಸುಗಳೂ

ಹಾಸನದ ಮೆಂಬರುಗಳೂ ಇನ್ನು ಕೆಲವರೂ—ಸಂಸ್ಥಾನದೊಳಗೆ ತಾಲ್ಲೂಕ್ ಇರುವ ಊರುಗಳಿಗೆಲ್ಲಾ ತಂತೀ ವರ್ತಮಾನದ (ಟೆಲಿಗ್ರಾಫ್) ಆಫೀಸನ್ನು ಇಡಿಸಿಕೊಡಬೇಕು. ಇದಿಲ್ಲದೆ ಇರೋಣದರಿಂದ ವ್ಯಾಪಾರ ವೃದ್ಧಿಗೂ ಜನಗಳ ಸೌಕರ್ಯಕ್ಕೂ ತುಂಬಾ ಕೊರತೆಯುಂಟಾಗಿದೆ.

ದಿವಾನರವರು—ಈ ವಿಷಯವನ್ನು ಟೆಲಿಗ್ರಾಫ್ ಇಲಾಖೆಗೆ ಬರೆದು ಅವರ ಅಭಿಪ್ರಾಯವನ್ನು ತಿಳಿದು, ಒಂದೊಂದು ಆಫೀಸನ್ನು ನೀವು ಸೂಚಿಸುವಂತೆ ಏರ್ಪಡಿಸುವ ಭಾಗದಲ್ಲಿ ಪ್ರಯತ್ನಪಡುವೆವು. ಇದರಿಂದ ಸರ್ಕಾರಿ ಕೆಲಸಕಾರ್ಯಗಳಿಗೂ ತುಂಬಾ ಪ್ರಯೋಜನವಿದೆ.

ಕಂಟ್ರಾಕ್ಟು ಕೊಡುವ ಕ್ರಮಗಳು

ಮಾಗಡಿ ಮಿ॥ ಕೃಷ್ಣಮೂರ್ತಿರಾಯರೇ ಮುಂತಾದವರು—ಇಲಾಖಾ ಅಧಿಕಾರಿಗಳು ಅನೇಕರಿಂದ ಟೆಂಡರುಗಳನ್ನು ತರಿಸಿಕೊಂಡು, ತಮಗೆ ಬೇಕಾದವರಿಗೆ ಕಂಟ್ರಾಕ್ಟು ಕೊಟ್ಟು ಉಳಿದವರ ಟೆಂಡರುಗಳನ್ನು ನಿಷ್ಕಾರಣವಾಗಿ ನಿರಾಕರಿಸುತ್ತಾರೆ. ಟೆಂಡರ್ ಅಂಗೀಕರಿಸುವುದಕ್ಕೂ ಬಿಡುವುದಕ್ಕೂ ಅವರಿಗೆ ಸ್ವಾತಂತ್ರ್ಯವಿರುವುದನ್ನು ತೆಗೆದು ಹಾಕಬೇಕು.

ಇನ್ನೊಬ್ಬ ಮೆಂಬರು—ಹಾಗೆ ನಿರಾಕರಿಸಿದ್ದಕ್ಕೆ ಕಾರಣವನ್ನು ಟೆಂಡರ ಮೇಲೆ ಬರೆಯುವಂತಾದರೆ ಟೆಂಡರ್‌ದಾರನಿಗೆ ಮುಂದೆಲ್ಲೂ ಕಂಟ್ರಾಕ್ಟು ಸಿಕ್ಕುವುದಿಲ್ಲ. ಅವರ ಹೆಸರು ಕೆಟ್ಟು ಹೋಗಬಹುದು. ಆದ್ದರಿಂದ ಅದು ಕೂಡದು.

ದಿವಾನರವರು—ಈಗಿರುವ ರೂಲನ್ನು ಆಚರಣೆಯನ್ನೂ ಬದಲಾಯಿಸಬೇಕಾದ ಅಗತ್ಯಕಾಣುವುದಿಲ್ಲ. ಯಾವ ಅಧಿಕಾರಿಯಾಗಲಿ ಪಕ್ಷಪಾತ ಮಾಡಿದನೆಂಬುವುದು ಗೊತ್ತಾದರೆ ಗವರ್ನಮೆಂಟಿನವರು ಸರಿಯಾಗಿ ನಿಗಾಕ್ಕೆ ತೆಗೆದುಕೊಂಡಾರು.

ಹುಡುಗರೂ ಚುಟ್ಟಾ ಸೇದುವುದೂ

ಕೆಲವು ಮೆಂಬರುಗಳು—ಸಣ್ಣ ಸಣ್ಣ ವಯಸ್ಸಿನ ಬಾಲಕರು ಈಚೆಗೆ ಬೀಡಿ ಸಿಗರೆಟ್ಟುಗಳನ್ನು ಸೇದುವ ಅಭ್ಯಾಸ ಹೆಚ್ಚುತ್ತಾ ಇದೆ. ಇದರಿಂದ ಅವರ ಶರೀರಸ್ಥಿತಿಯು ಬೇಗ ಕೆಡುವುದಕ್ಕೆ ಅಡ್ಡಿ ಇಲ್ಲ. ನಮ್ಮ ಸಂಸ್ಥಾನದಲ್ಲಿ ೧೮ ವಯಸ್ಸಿನೊಳಗಿರತಕ್ಕ ಹುಡುಗರ್ಯಾರೂ ಚುಟ್ಟಾ, ಸಿಗರೆಟ್, ಬೀಡಿ ಸೇದದಂತೆ ತಡೆಯುವುದಕ್ಕೋಸ್ಕರ ಗವರ್ನಮೆಂಟಿನವರು ಒಂದು ಕಾನೂನುಮಾಡಿ ಜಾರೀಗೆ ತರಬೇಕು.

ದಿವಾನರವರು—ಹೌದು, ಇದು ತುಂಬಾ ಅವಶ್ಯವಾದ ವಿಷಯ. ಗವರ್ನಮೆಂಟಿನವರು ಈ ದುರಭ್ಯಾಸವನ್ನು ತಡೆಯುವುದಕ್ಕೆ ಏನಾದರೂ ಒಂದು ಏರ್ಪಾಡು ಮಾಡಿಯಾರು.

ಇಂಡಿಯಾ ದೇಶದ ವೃತ್ತಾಂತಗಳು

ಅಯೋಧ್ಯಾ ತಾಲ್ಲೂಕುದಾರ್ (ಜಮೀನ್ದಾರ್) ಸಂಘದ ವೈಸ್ ಪ್ರಸಿಡೆಂಟ್ ಜಹಂಗೀರಾಬಾದ್ ರಾಜರು ... ಎಂಬ ಪಟ್ಟಣದಲ್ಲಿರುವ ... ವಿದ್ಯಾಶಾಲೆಗೆ ೧೦,೦೦೦ ರೂಪಾಯಿ ಕೊಟ್ಟಿದಾರೆ.

***

ರಂಗೂನ್ ಪಟ್ಟಣದಲ್ಲಿ ಕೆಲವು ಯೂರೋಪಿಯನ್ ದೊಡ್ಡ ಮನುಷ್ಯರು ಸೇರಿ ಅಲ್ಲಿ ಒಂದು ಸ್ನಾನಘಟ್ಟವನ್ನೂ ಅದರ ಬಳಿ ಕೊಠಡಿಗಳನ್ನೂ ಕಟ್ಟಿಸಬೇಕೆಂದು ೫೦,೦೦೦ ಸಾವಿರ ರೂಪಾಯಿ ಕೂಡಿಸಿದಾರೆ.

***

ಅಫ್ಘಾನಿಸ್ಥಾನದ ಅಮೀರರು ತಮ್ಮ ಸಂಸ್ಥಾನದಿಂದ ಹೊರಕ್ಕೆ ಯಾವ ಧಾನ್ಯಗಳಾಗಲಿ ಪದಾರ್ಥಗಳಾಗಲಿ ತುಪ್ಪವಾಗಲಿ ಕುದುರೆಗಳಾಗಲಿ ರಫ್ತಾಗಿ ಹೋಗಲೇ ಕೂಡದೆಂದು ಗಡಿಗಳ ಅಧಿಕಾರಿಗಳಿಗೆಲ್ಲಾ ಹುಕುಂ ಕೊಟ್ಟಿದಾರೆ.

***

ಹಿಂದಿನ ಮಂಗಳವಾರ ಬೆಳಿಗ್ಗೆ ಷಹರಾನಪುರಕ್ಕೂ ಅಂಬಾಲಕ್ಕೂ ನಡುವೆ ಜಗಾದ್ರಿ ಎಂಬ ಸ್ಟೇಷನ್ ಬಳಿ ಎರಡು ರೈಲ್ ಗಾಡಿಗಳು ಎದುರುಬದರಾಗಿ ಬಂದು ಬಡಿದಾಡಿದ್ದರಿಂದ ನಾಲ್ವರು ಮೃತಪಟ್ಟರು. ಕೆಲವರಿಗೆ ಗಾಯಗಳಾದವು.

***

ಬಂಗಾಳಾ ಆಧಿಪತ್ಯಕ್ಕೆ ಸೇರಿದ ಬ್ಯಾಂಕುರಾ ಡಿಸ್ಟ್ರಿಕ್ಟಿನಲ್ಲಿ ೬೪೪ ಗ್ರಾಮಗಳ ಪ್ರಜೆಗಳು ತಮ್ಮ ಗ್ರಾಮಗಳ ಮೇಲೆ ಒಂದು ನಾಲೆಯನ್ನು ತರಬೇಕೆಂತಲೂ, ಇದರಿಂದ ಅಲ್ಲಿನ ಕ್ಷಾಮದ ಭೀತಿಯು ಎಂದೆಂದಿಗೂ ತಪ್ಪಿಹೋಗುವುದೆಂತಲೂ ಒಂದು ಅರ್ಜಿಯನ್ನು ಬರೆದು ಲೆಫ್ಟಿನೆಂಟ್ ಗವರ್ನರವರಿಗೆ ಒಪ್ಪಿಸಿರುತ್ತಾರೆ.

***

ಹಿಂದುಸ್ಥಾನದ ನ್ಯಾಷನಲ್ ಕಾಂಗ್ರೆಸ್ (ಮಹಾಜನಸಭೆಯು) ನಾಗಪುರದಲ್ಲಿ ನಾಳೆ ಡಿಸೆಂಬರ್ ತಿಂಗಳಲ್ಲಿ ನಡೆಯುವ ವಿಷಯದಲ್ಲಿ ಪಕ್ಷಪಕ್ಷಗಳುಂಟಾಗಿ ಬಹಳ ವಾಗ್ವಾದಗಳು ನಡೆಯುತ್ತಿದ್ದುವು. ಆದರೆ ಕಳೆದ ವಾರ ಅಲ್ಲಿ ಒಂದು ಮಹಾ ಸಭೆ ಕೂಡಿ, ಈ ಸಲ ಆ ಪಟ್ಟಣದಲ್ಲೇ ಕಾಂಗ್ರೆಸ್ ಸಮಾಜವನ್ನು ಜರುಗಿಸಬೇಕೆಂದು ತೀರ್ಮಾನವಾಗಿರುವುದು.

***

ಬರಹಾಂಪುರದಲ್ಲಿ ಒಂದು ಕೋತಿಯು ಕಳೆದ ವಾರ ನಾಲ್ಕು ತಿಂಗಳ ಮಗುವನ್ನು ಒಂದು ಮನೆಯಿಂದ ಎತ್ತಿಕೊಂಡು ಮನೆಯ ಮೇಲೆ ಹೋಗಿ ಅನೇಕ ಮನೆಗಳನ್ನು ದಾಟಿಕೊಂಡು ಹೋಯಿತು. ತಂದೆ ತಾಯಿಗಳೂ ಇತರರೂ ಆ ಮಗುವಿನ ರೋದನವನ್ನು ಕೇಳಿ, ಕೋತಿಯನ್ನು ನಾನಾ ಬಗೆಯಾಗಿ ಹೆದರಿಸಿ, ಬಹಳ ಹೊತ್ತಿನ ಮೇಲೆ ಮಗುವನ್ನು ಬಿಡಿಸಿಕೊಂಡು ಬಂದರು.

***

ವೈಸ್‌ರಾಯ್ ಲಾರ್ಡ್ ಮಿಂಟೋರವರು ಕಳೆದ ವಾರ ಪತ್ನಿ ಪರಿವಾರ ಸಹಿತ ಸಿಮ್ಲಾಪಟ್ಟಣದಿಂದ ಹೊರಟು ಹೈದರಾಬಾದ್ ಸಂಸ್ಥಾನಕ್ಕೆ ದಯಮಾಡಿದರು. ನೈಜಾಮರವರು ಅವರನ್ನು ಬಹು ವಿಶೇಷವಾದ ಉಚಿತ ಉತ್ಸವಗಳಿಂದ ಸತ್ಕಾರ ಮಾಡುತ್ತಿದಾರೆ. ವೈಸ್‌ರಾಯವರು ಈ ವಾರ ಅಲ್ಲಿಂದ [illegible] ಪಟ್ಟಣಕ್ಕೆ ಹೋಗಿ ... ಬರ್ಮಾ ಆಧಿಪತ್ಯವನ್ನು ಕುರಿತು ತೆರಳುವವರಾಗಿದಾರೆ.

***

ಮದರಾಸ್ ಪಟ್ಟಣದ ರಾಯಪೇಟೆ ಸಬ್ ಪೋಸ್ಟ್ ಮಾಸ್ಟರ್ ಮಿ॥ ನರಸಿಂಹಾಚಾರ್ಯ ೩೫ ವಯಸ್ಸಿನ ವೈಷ್ಣವ ಬ್ರಾಹ್ಮಣ ಜಾತಿಯವರು ... ನಿಲಯದಲ್ಲಿದ್ದ ಕಾವೇರಮ್ಮನೆಂಬ ೨೦ ವಯಸ್ಸಿನ ವಿಧವೆ ವಿತಂತುವನ್ನು ಮರು ವಿವಾಹ ಮಾಡಿಕೊಂಡ

ರು ಆಕೆ ಟೀಚರ್ ಸೆಕಂಡರಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುತ್ತಾಳೆ ವಿಸಾಖಪಟ್ಟಣದಲ್ಲಿ ಸುಮಾರು ೧೦೦ ಜನ ದೊಡ್ಡ ಮನುಷ್ಯರು ಹಾಜರಾಗಿದ್ದರೆಂದು ತಿಳಿಯುವದು

❦❦❦

ಆಫ್ರಿಕಾಖಂಡದಲ್ಲಿ ಇಂಗ್ಲಿಷರ ಸ್ವಾಸ್ಥ್ಯವಾದ ಗಯಾನಾ ಎಂಬ ಪ್ರಾಂತ್ಯಕ್ಕೆ ಹಿಂದುಸ್ಥಾನದ ನಾನಾ ಬಗೆಯ ಜನರು ಜೀವನಾರ್ಥವಾಗಿ ಹೋಗುವರಷ್ಟೆ ಹೀಗೆ ಹೋದವರ ಪೈಕಿ ೫೧೯ ಜನರು ಕಳೆದ ವಾರ ಅಲ್ಲಿಂದ ಕಲ್ಕತ್ತೆಗೆ ಬಂದಿರುತ್ತಾರೆ ಅವರು ಅಲ್ಲಿ ಸಂಪಾದನೆ ಮಾಡಿದ ೯,೦೦೦ ರೂಪಾಯನ್ನು ನಗ ನಾಣ್ಯಗಳಾಗಿ ತಂದರು ಕಳೆದ ೧೮೯೪ ರಲ್ಲಿ ಹಿಂದುಸ್ಥಾನದಿಂದ ಅಲ್ಲಿಗೆ ಹೋಗಿದ್ದ ಗಂಡ ಹೆಂಡರಿಬ್ಬರು ಈಗ ೪,೦೦೦ ರೂಪಾಯಿ ಆಸ್ತಿಯನ್ನು ಕೈಲಿ ತಂದಿರುತ್ತಾರೆ

❦❦❦

ಕಲ್ಕತ್ತಾ ಪಟ್ಟಣದಲ್ಲಿ ರುವ ಬಾಬು ಹರಿದಾಸ್ ಎಂಬಾತನು ಕಲ್ಕತ್ತಾ ಪಟ್ಟಣದ ಆಸ್ಪತ್ರೆಯಲ್ಲಿ ವೈದಿಕ ಬ್ರಾಹ್ಮಣರೋಗಿಗಳಿಗೋಸ್ಕರ ಒಂದು ಚಿಕಿತ್ಸಾಲಯವನ್ನು ಕಟ್ಟುವದಕ್ಕೆಂದು ೩೦,೦೦೦ ರೂಪಾಯನ್ನೂ, ಅದೇ ಪಟ್ಟಣದ ಬಾಬು ನಂದಲಾಲ್ ಎಂಬ ಭಾರೀ ಸಾಹುಕಾರನು ಜಗನ್ನಾಥದಲ್ಲಿ ಯಾತ್ರಾರ್ಥಿಗಳಾದ ರೋಗಿಗಳಿಗೆ ಚಿಕಿತ್ಸೆ ಮಾಡುವುದಕ್ಕೆ ಒಂದು ಆಸ್ಪತ್ರೆಯನ್ನು ಕಟ್ಟಿಸುವದಕೋಸ್ಕರ ಅರ್ಧ ಹಣವನ್ನು ಅಂದರೆ ೧೩,೦೦೦ ರೂಪಾಯನ್ನೂ ಬಂಗಾಳಾ ಗವರ್ನಮೆಂಟಿಗೆ ಧರ್ಮಾರ್ಥವಾಗಿ ಒಪ್ಪಿಸಿದರು

❦❦❦

ಟ್ರಾನ್ಸ್‌ವಾಲಿನಲ್ಲಿ ಒಬ್ಬ ಹಿಂದುವು ಪುರೋಹಿತ ಕೆಲಸವನ್ನು ಮಾಡಿಕೊಂಡು ಜೀವಿಸುತ್ತಿದ್ದಾನೆ ಅಲ್ಲಿನ ಸರ್ಕಾರದವರು ಅವನನ್ನು ಆ ದೇಶದಿಂದ ಹೊರಟ ಹೋಗಬೇಕೆಂದು ಬಲತ್ಕಾರ ಮಾಡಿದರು. ಅವನು ಸರ್ಕಾರದವರಿಗೆ—ನಾನು ಹೋಗುವುದಿಲ್ಲ ಇಲ್ಲಿ ನಾನು ಮಾಡತಕ್ಕ ಕೆಲಸವು ಸರ್ಕಾರಕ್ಕೆ ವಿರೋಧವಾದದ್ದಲ್ಲ ಎಂಬದಾಗಿ ಉತ್ತರಕೊಟ್ಟನು ಈಗ ಸರ್ಕಾರದವರು ಅವನನ್ನು ದಸ್ತಗಿರಿ ಮಾಡಿ, ಲೈಸೆನ್ಸ್ ಇಲ್ಲದೆ ಆ ದೇಶದಲ್ಲಿ ವಾಸಮಾಡುತ್ತಾನೆಂದು ಹೇಳಿ ಅವನ ಮೇಲೆ ಫಿರ್ಯಾದು ತಂದಿದ್ದಾರೆ

❦❦❦

ಜರ್ಮನಿ ರಾಜ್ಯದಲ್ಲಿ ಪ್ರಸಿದ್ಧವಾದ ಹ್ಯಾಂಬರ್ಗ್ ಎಂಬ ಸ್ವತಂತ್ರ ಪಟ್ಟಣದಲ್ಲಿ ಒಂದು ಭಾರೀ ಮೃಗಾಲಯವಿರುತ್ತದೆ. ಅಲ್ಲಿಗೆ ಹಿಂದುಸ್ಥಾನದಲ್ಲಿ ಸಿಕ್ಕತಕ್ಕ ಕೆಲವು ಮುಖ್ಯವಾದ ಮೃಗಗಳನ್ನೂ ಸಾಧು ಪ್ರಾಣಿಗಳನ್ನೂ ಕೊಂಡು ತೆಗೆದುಕೊಂಡು ಹೋಗುವುದಕ್ಕಾಗಿ ಒಬ್ಬ ವರ್ತಕನು ಕಲ್ಕತ್ತೆಗೆ ಬಂದಿರುತ್ತಾನೆ ಈತನು ಆಗಲೇ ಒಂದು ಜತೆ ಚಿನಲ್ಲಿ ಕೆಲವು ಭಾರೀ ಹುಲಿಗಳನ್ನೂ, ಬಹು ಸುಂದರಗಳಾದ ಅನೇಕ ಸಾರಂಗ ಜಿಂಕೆಗಳನ್ನೂ ಭಯಂಕರವಾದ ಕರಡಿ ಘೇಂಡಾ ಮೃಗಗಳನ್ನೂ ಖರೀದಿಸಿ ಒಂದು ಜಹಜಿನಲ್ಲಿ ಯುರೋಪಿಗೆ ರವಾನೆಮಾಡಿದನು

❦❦❦

ಅಲಹಾಬಾದ್ ಡಿಸ್ಟ್ರಿಕ್ಟಿಗೆ ಸೇರಿದ ಪರ್ತಾಪುರಿ ಎಂಬ ಊರಿನಲ್ಲಿ ಸೆಷನ್ಸ್ ಕೋರ್ಟಿನಲ್ಲಿ ಜಡ್ಜಿಯವರು ಒಂದು ಮೊಕದ್ದಮೆಯನ್ನು ದಯಾಫ್ತು ಮಾಡುತ್ತಿದ್ದು ೪—೬ ನಿಮಿಷದ ವರೆಗೆ ಎದ್ದು ಕೊಠಡಿಯೊಳಕ್ಕೆ ಹೋದರು ಅವರು ವಾಪಸು ಬರುವಷ್ಟರೊಳಗಾಗಿಯೇ ಅಸೆಸರುಗಳ ಪೈಕಿ ಠಾಕೂರ್ ದಾಸ್ ಎಂಬಾತನು ಫಿರ್ಯಾದಿಯಾಗಿದ್ದ ಒಬ್ಬ ಹುಡುಗಿಗೆ ಕೆಲವು ಸಂಗತಿಗಳನ್ನು ಹೇಳಿಕೊಟ್ಟನು ಇದು ಜಡ್ಜಿಯವರಿಗೆ ತಿಳಿದ ಕೂಡಲೆ ಅವರು ಆ ಅಸೆಸರ ಮೇಲೆ ಕೋಪಿಸಿಕೊಂಡು, ಕಾನೂನು ಪ್ರಕಾರ ಆತನನ್ನು ದಯಾಫ್ತಿಗೆ ಗುರಿ ಮಾಡಿರುತ್ತಾರೆ

❦❦❦

ಕಳೆದ ವಾರ ಕಾಸಿಂಬಜಾರಿನಲ್ಲಿ ಸುಮಾರು ೨,೦೦೦ ಬಂಗಾಳಿ ಪ್ರತಿನಿಧಿಗಳು ಸೇರಿ ಒಂದು ವಿದ್ಯಾಪರಿಷತ್ತನ್ನು ಜರುಗಿಸಿದರು. ಬಾಬು ರವೀಂದ್ರನಾಥ ಟಾಗೋರ್ ರಾಯರು, ಕಾಸಿಂಬಜಾರ್ ಮಹಾರಾಜರವರು, ಮಣೀಂದ್ರ ಚಂದ್ರನಂದಿಯವರು, ಈ ಮೊದಲಾದವರೆಲ್ಲಾ ಉಪನ್ಯಾಸಗಳನ್ನು ಮಾಡಿ, ಬಂಗಾಳಿ ಭಾಷೆಯನ್ನು ಅಭಿವೃದ್ಧಿಗೆ ತರಬೇಕೆಂತಲೂ, ಪಾಶ್ಚಾತ್ಯ ಶಾಸ್ತ್ರಗಳನ್ನು ವಂಗ ಭಾಷೆಯಲ್ಲಿ ಬರೆಯಬೇಕೆಂತಲೂ, ಇದರಿಂದ ಆ ಶಾಸ್ತ್ರ ವಿಚಾರಗಳೆಲ್ಲಾ ಬಂಗಾಳಿಗಳಿಗೆ ತಿಳಿದು ದೇಶೋನ್ನತಿಗೆ ಕಾರಣವಾಗುವುದೆಂತಲೂ ಗೊತ್ತು ಮಾಡಿದರು

❦❦❦

ಪೋಲೀಸಿನವರು ಡಾರ್ಜಿಲಿಂಗಿನಿಂದ ಕಲ್ಕತ್ತೆಗೆ ಮೂರು ಮಂದಿ ಗಂಡಸರನ್ನೂ ಒಬ್ಬ ಹುಡುಗನನ್ನೂ ಹಿಡಿದುತಂದಿದ್ದಾರೆ ಅವರ ಭಾಷೆ ಯಾವುದೋ ತಿಳಿಯುವುದೇ ಕಷ್ಟವಾಯಿತು ಕಡೆಗೆ ಪೋಲೀಸಿನವರು ಅವರ ಭಾಷೆ ತಿಳಿದ ಒಬ್ಬನನ್ನು ಕರೆದುತಂದು ಅವನ ಮೂಲಕ ಆ ನಾಲ್ವರ ವೃತ್ತಾಂತವೇನೆಂದು ಕೇಳಲಾಗಿ ಅವರು ಹೇಳಿದ್ದೇನೆಂದರೆ—ನಾವು ತುರ್ಕಿಸ್ಥಾನದವರು ಎಂಟು ಮಂದಿ ಅಲ್ಲಿಂದ ಟಿಬೆಟ್ಟಿನ ಮಾರ್ಗವಾಗಿ ಹಿಂದುಸ್ಥಾನಕ್ಕೆ ಬಂದು ಇಲ್ಲಿಂದ ಮಕ್ಕೆಗೆ ಯಾತ್ರೆ ಹೋಗಬೇಕೆಂದು ಹೊರಟೆವು ಟಿಬೆಟ್ಟಿನಲ್ಲಿ ಕಳ್ಳರುಬಿದ್ದು ನಮ್ಮ ಕುದುರೆಗಳನ್ನೂ ಯಾತ್ರೆಯ ಹಣವನ್ನೂ ಕಿತ್ತುಕೊಂಡರು ನಮ್ಮ ಜೊತೆಯಲ್ಲಿ ಬಂದ ನಾಲ್ವರು ಹೆಂಗಸರು ದಾರಿಯಲ್ಲಿ ಸತ್ತರು ಎಂಬುದೇ ಈಗ ಅವರು ನಿರ್ಗತಿಕರಾಗಿರುತ್ತಾರೆ

❦❦❦

ಪಂಜಾಬಿನಲ್ಲೂ ರಾಜಪುಟಾನಾ ಮತ್ತು ಮಧ್ಯ ಇಂಡಿಯಾಗಳಲ್ಲೂ ಇರತಕ್ಕ ದೇಶೀಯ ಸಂಸ್ಥಾನಗಳೊಳಗೆ ಕ್ಷಾಮಪ್ರಾಪ್ತವಾದೀತೆಂಬ ಭೀತಿಯುಂಟಾಗಿರುವುದನ್ನು ನೋಡಿ ಇಂಡಿಯಾ ಗವರ್ನಮೆಂಟಿನವರು ಆಯಾ ದೇಶೀಯ ಸಂಸ್ಥಾನಾಧಿಪತಿಗಳಿಗೆ ಕಾಗದ ಬರೆದು ಕ್ಷಾಮನಿವಾರಣೆಗೆ ಅವರಿಗೇನಾದರೂ ಗವರ್ನಮೆಂಟಿನಿಂದ ದ್ರವ್ಯಸಹಾಯವಾಗಬೇಕಾಗುವುದೇ ತಿಳಿಸಬೇಕೆಂದು ಕೇಳಿದ್ದಾರೆ ಸಂಯುಕ್ತ ಆಧಿಪತ್ಯಗಳಲ್ಲಿ ಕ್ಷಾಮ ಬರಬಹುದೆಂದು ನಿರೀಕ್ಷಿಸಿ ಅಲ್ಲಿನ ಸರ್ಕಾರದವರು ಅದನ್ನು ತಡೆಯುವುದಕ್ಕೆ ಏರ್ಪಾಡು ಮಾಡಿರುತ್ತಾರೆ ಮಿ॥ ಜೆ ಎಸ್. ಕ್ಯಾಂಬೆಲ್‌ಯವರು ಕ್ಷಾಮದ ಇಲಾಖಾ ಕಮಿಷನರಾಗಿ ನೇಮಕವಾದರು. ಬಾರಾಬಂಕಿ, ಹಾರ್ದೋಯಿ, ಬಾಂಡಾ, ಅಲಹಾಬಾದ್, ಕಾನ್ಪುರ, ಈ ಮೊದಲಾದ ಡಿಸ್ಟ್ರಿಕ್ಟುಗಳಲ್ಲಿ ಕ್ಷಾಮನಿವಾರಣೆಯ ಕಾರ್ಯಗಳ ಏರ್ಪಾಡುವುದರಲ್ಲಿವೆ ದಕ್ಷಿಣ ದೇಶಕ್ಕೆ ಸೇರಿದ ಬೊಂಬಾಯಿ ಆಧಿಪತ್ಯದೊಳಗೆ ಕೆಲವು ಕಡೆ ಕ್ಷಾಮದ ಭೀತಿಯುಂಟಾಗಿರುವುದು

❦❦❦

ಹೋದ ತಿಂಗಳು ೨೬ ನೆ ತಾ ರಾತ್ರಿ ಗ್ವಾಲಿಯರ್ ಮಹಾರಾಜರವರು ಗ್ವಾಲಿಯರ್ ಪಟ್ಟಣದಿಂದ ಸ್ಪೆಷಲ್ ರೈಲಿನಲ್ಲಿ ಹೊರಟು ಅಂತ್ರಿ ಎಂಬ ಸ್ಟೇಷನಿಗೆ ಸುಮಾರು ಮಧ್ಯರಾತ್ರಿಗೆ ಹೋಗಿ ತಲಪಿ ೪ ಗಾಡಿಯ ರೈಲು ಮೇಲಿಗೆ ನಿಷ್ಕ್ರಿಯಲಾಗಿರುವಲ್ಲಿ ಸುಮಾರು ೧೨॥ ಗಂಟೆ ರಾತ್ರಿಯಲ್ಲಿ ಎದುರಾಗಿ ಒಂದು ಗಾಡಿಯು ಬಂದು ಅದಕ್ಕೆ ಢಿಕ್ಕಿ ಬಿದ್ದು ಗಾಡಿಯೆಲ್ಲಾ ತಲೆಕೆಳಗಾಗಿ ಮಗುಚಿಕೊಂಡು ಮುರಿದುಹೋಯಿತು ದೇವರ ದಯದಿಂದ ಮಹಾರಾಜರವರು ಆಗ್ಗೆ ಎಚ್ಚರವಾಗಿದ್ದು ಹೊರಗೆ ಧುಮುಕಿದ್ದರು ಇಲ್ಲದೆ ಹೋಗಿದರೆ ಒಂದೇ ಕ್ಷಣದೊಳಗಾಗಿ ಅವರ ಪ್ರಾಣವು ಉಳಿಯುತ್ತಿರಲಿಲ್ಲ ಅವರ ಗಾಡಿ ಮುರಿದು ಹೋದರೂ ಅವರು ಆದಮೇಲೆ ಬಾರದೆ ಬೆಳಗಿನ ಝಾಮದ ೪॥ ಗಂಟೆಯ ತನಕ ಸ್ಟೇಷನಿನಲ್ಲೇ ಇದ್ದು, ಆ ಅನಾಹುತಕ್ಕೆ ಸಿಕ್ಕಿದ ಜನರನ್ನು ನಾನಾ ಬಗೆಯಾಗಿ ಉಪಚರಿಸುವುದರಲ್ಲಿ ತುಂಬಾ ಸಾಹಸಪಟ್ಟರು ಎಲ್ಲಾ ಸಮಾಧಾನಕ್ಕೆ ಬಂದ ಮೇಲೆ ಗಾಯಪಟ್ಟವರನ್ನು ಆಸ್ಪತ್ರೆಗೆ ಕಳುಹಿಸಿ, ಮಹಾರಾಜರವರು ಮೋಟಾರ್ ಗಾಡಿಯಲ್ಲಿ ಕುಳಿತು ೧೨ ಮೈಲಿ ದೂರ ಪ್ರಯಾಣ ಮಾಡಿಕೊಂಡು ಬೆಳಗ್ಗೆ ೬ ಗಂಟೆ ಹೊತ್ತಿಗೆ ತಮ್ಮ ರಾಜಧಾನಿಯಾದ ಗ್ವಾಲಿಯರ್ ಪಟ್ಟಣವನ್ನು ತಲಪಿದರು

ತಾಲ್ಲೋಕು ವರ್ತಮಾನಗಳು

ದೊಡ್ಡಬಳ್ಳಾಪುರ — ಇಲ್ಲಿ ಬಹಳ ದಿನಗಳಿಂದ ಮಳೆ ಇಲ್ಲದೆ ಹಿಂದಿನ ಬಿತ್ತನೆಗಳು ಕೆಟ್ಟುಹೋದವೆಂದು ಹೇಳುತ್ತಾರೆ ಇಲ್ಲಿ ಬಹು ದಿನಗಳಿಂದಲೂ ಕಾಡುತ್ತಿದ್ದ ಹುಲಿಯು ಮಾಕಳ್ಳಿ ಕಡೆಗೆ ಹೋಯಿತೆಂದು ಹೇಳುತ್ತಾರೆ ಡೆಪ್ಯುಟಿ ಇನ್ಸ್‌ಪೆಕ್ಟರೂ ಸರ್ಕಲ್ ಇನ್ಸ್‌ಪೆಕ್ಟರೂ ಇಲ್ಲಿಗೆ ದಯಮಾಡಿಸಿ ಸ್ಕೂಲ್‌ಗಳನ್ನು ಪರೀಕ್ಷೆ ಮಾಡಿಕೊಂಡು ಹೋದರು. ಇಲ್ಲಿ ಮೊದಲಿದ್ದ ಡಾಕ್ಟರ್ ಮಿ॥ ರಂಗರಾಮಾನುಜಲು ನಾಯುಡುರವರು ರಜಾ ತೆಗೆದುಕೊಂಡು ಬಂದರು ಅಕ್ಟೋಬರ್ ೪ ನೇ ತಾ ಪಂಚಾಳದ ಕನ್ನಪ್ಪನವರ ಮನೆಯಲ್ಲಿ ಸುಮಾರು ೬೦೦—೫೦೦ ರೂಪಾಯಿನ ಒಡವೆಗಳು ಕಳುವಾದವು ಪತ್ತೆ ಮಾಡಿಕೊಟ್ಟವರಿಗೆ ನೂರು ರೂಪಾಯಿ ಬಹುಮಾನ ಕೊಡುತ್ತೇವೆಂದು ಬಿರುದುಕೊಟ್ಟಿದ್ದಾರೆ ಪೋಲೀಸಿನವರು ಇದುವರಿಗೂ ಪತ್ತೆ ಮಾಡಲಿಲ್ಲ ಹಿಂದೂಪುರದ ಹೈದರಗ ಎಂಬುವನನ್ನು ಅವನು ಪಶುಗಳನ್ನು ಕದ್ದು ಮಾರುತ್ತಿದ್ದನೆಂದು ಹಿಡಿದು ಪೋಲೀಸ್ ಲಾಕಪ್ಪಿನಲ್ಲಿ ಹಾಕಿದ್ದರು ಸದರಿಯವನು ೩೦ ನೇ ತಾ ರಾತ್ರಿ ಆ ಕೊಠಡಿಯ ಮೇಲಿನ ಮಂಗಳೂರು ಹೆಂಚು ತೆಗೆದು ಪರಾರಿಯಾದನು ಕೈ ಕೋಳ ಹಾಕಿಸಿಕೊಂಡಿದ್ದವನು ಮೇಲಕ್ಕೆ ಹತ್ತಿಹೋದದ್ದು ಆಶ್ಚರ್ಯವಾಗಿದೆ

ತಿಪಟೂರು.—ಮಳೆ ಇಲ್ಲದೆ ಕೆಲವು ಕಡೆ ಪೈರುಗಳೆಲ್ಲಾ ಒಣಗುತ್ತಲಿವೆ ಇಂಥಾ ದುರ್ಭಿಕ್ಷದಲ್ಲಿ ಸಂತೆಯಲ್ಲಿ ಅಳೆಯುವ ಸೇರು ಒಂದು ತರಹ ಇಲ್ಲ ಅವರವರ ಅಂಗಡಿಗಳಲ್ಲಿ ಒಂದು, ಕೈಯಲ್ಲಿ ಮತ್ತೊಂದು ಇರುತ್ತವೆ ಇವುಗಳಲ್ಲಿ ಪ್ರಜೆಗಳು ಯಾವದನ್ನು ನಂಬಬೇಕೋ ತಿಳಿಯದು ಸರ್ಕಾರದವರು ಒಂದು ನಿಬಂಧನೆ ಮಾಡಿಕೊಟ್ಟರೆ ಸುಖಕರ —ಪ್ರಜೆಗಳು ಹಿತ್ತಲುಗಳಲ್ಲಿಯೇ ದೊಡ್ಡ ದೊಡ್ಡ ಕಕ್ಕಸು ಗುಂಡಿಗಳನ್ನು ತೋಡಿಕೊಂಡಿರುವದು ಅನಾರೋಗ್ಯವಾಗಿರುತ್ತದೆ ಆದ ಪ್ರಯುಕ್ತ ಮುನಿಸಿಪಾಲಿಟಿಯವರು ತೋಟಿಗಳನ್ನು ನೇಮಿಸಿ, ಪ್ರತಿ ಮನೆಗೂ ಯೋಗ್ಯತಾನುಸಾರ ಫೀಜು ದಾಖಲ್‌ಮಾಡಿ, ಮುನಿಸಿಪಲ್ ಓವರ್‌ಸಿಯರ ಮೂಲಕವೋ, ಮೆಂಬರ ಮೂಲಕವೋ ಪ್ರತಿ ತಿಂಗಳಲ್ಲಿಯೂ ಸದರಿ ಮೇಬಲಗನ್ನು ವಸೂಲ್‌ಮಾಡಿಸಿ ತೋಟಿಗಳಿಗೆ ಸಂಬಳ ರೀತಿಯಾಗಿ ಕೊಡುತ್ತಿದ್ದರೆ ಸಕಲರಿಗೂ ಕ್ಷೇಮವಾಗಿರುತ್ತದೆಂದು ನೆನಸುತ್ತೇನೆ. ಹೊರಗಡೆ ಕಕ್ಕಸು ಮನೆಗಳನ್ನು ಕಟ್ಟಿಸುತ್ತಾರಂತೆ ಎಂದು ಜನರು ಮಾತಾಡುವದರಲ್ಲಿಯೇ ಸಂತೋಷಪಡುತ್ತಿದ್ದಾರೆ —ಶುದ್ಧ ಅಂಧರಾದ ದಾಸರೊಬ್ಬರು ಮೆ॥ ಎಂ ರಾಮಯ್ಯ ಚಟ್ಟಿಯವರ ಮಹಡಿಯ ಮೇಲೆ ಕಥೆ ಮಾಡಿದರು ಅನೇಕ ದೊಡ್ಡ ಮನುಷ್ಯರಾದಿಯಾಗಿ ಬಿಜಮಾಡಿದ್ದರು ಸಾಹುಕಾರರು ಆ ಬಡ ದಾಸರಿಗೆ ದ್ರವ್ಯಸಹಾಯ ಮಾಡಿದರೆಂದು ತಿಳಿಯಿತು

ಫ್ರೆಂಚ್‌ರಾಕ್.—ಈ ಪ್ರಾಂತ್ಯ ಮಳೆ ಚನ್ನಾಗಿದೆ ಸುಮಾರು ೧ ತಿಂಗಳಿಂದಲೂ ರೋಗ ನಿಂತು ಜನರಿಗೆ ಕ್ಷೇಮ ಉಂಟು ಹೊರಗೆ ಷೆಡ್ಡುಗಳಲ್ಲಿರುವ ಬಡ ಜನರಿಗೆ ಮಳೆ, ಚಳಿ, ಗಾಳಿಯಿಂದ ಬಹಳ ಬಾಧೆ ಉಂಟು. ಜನರು ಊರು ಸೇರುವದಕ್ಕೆ ಸರಕಾರದವರ ಅಡ್ಡಿಯಾಗಿದೆ ಜನರು ಹೊರಗೆ ಹೋದಾಗ ಸರಕಾರದವರ ನಿರ್ಬಂಧದಿಂದ ಹೋಗಲಿಲ್ಲ ಬೇಗನೆ ಸರಕಾರದವರು ಹುಕುಮು ಕೊಟ್ಟರೆ ಸಂತೋಷದಿಂದ ಜನರು ಊರು ಸೇರುತ್ತಾರೆ —ತಾ ೪ ನೇ ಶುಕ್ರವಾರ ಹೊತ್ತಾರೆ ೯॥ ಘಂಟೆಗೆ ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್ ಮಿ॥ ಕಾರ್ ಸಾಹೇಬರು ಪತ್ನಿ ಸಮೇತ ದಯಮಾಡಿದರು ಇವರ ಬರುವಿಕೆಗೆ ಮುಂಚೆ ಪೋಲೀಸ್ ಆಫೀಸಿನ ಮುಂದೆಯೂ ಸ್ಟೇಷನ್ ಮುಂದೆಯೂ ೨ ಚಪ್ಪರಗಳನ್ನು ಹಾಕಿಸಿ ಬಹಳ ಅಲಂಕಾರ ಮಾಡಿಸಿದ್ದರು ಇವರು ಪೋಲೀಸ್ ಆಫೀಸ್, ಆಸ್ಪತ್ರೆ ಮುಂತಾದವುಗಳನ್ನು ಇನ್ಸ್‌ಪೆಕ್ಷನ್ ಮಾಡಿಕೊಂಡು ಮಧ್ಯಾಹ್ನ ೧ ಘಂಟೆಗೆ ಚೆನ್ನಪಟ್ಟಣ ಕಡೆ ದಯಮಾಡಿದರು —ಊರು ಹಾಳುಬಿದ್ದಂತೆಯಾಗಿದೆ ೩ ತಿಂಗಳಿಂದಲೂ ಊರಿಗೆ ಅಮಲ್ದಾರರಿಲ್ಲ ಪೆಟ್ಟಿನಲ್ಲಿ ಮುನಿಸಿಪಲ್ ಲಾಂದ್ರಗಳು ರಾತ್ರಿಯಲ್ಲಿ ಸರಿಯಾಗಿ ಉರಿಯುವದಿಲ್ಲ ಇದನ್ನು ಕಂಟ್ರಾಕ್ಟು ಮೂಲಕ ಸರಿಮಾಡಿದರೆ ಅನುಕೂಲ. ಸಂತೆಯಲ್ಲಿ ಜನರು ತಿರುಗಾಡುವದಕ್ಕೆ ಆಗದಂತೆ ವ್ಯಾಪಾರಿಗಳು ಬಹು ಇಕ್ಕಟ್ಟಾಗಿ ಅಂಗಡಿಗಳನ್ನು ಇಡುತ್ತಾರೆ ಇದರಿಂದ ತಿರುಗುವ ಹೆಂಗಸರು ಗಂಡಸರು ದಾರಿ ಇಲ್ಲದೆ ಬಹಳ ಕಷ್ಟಪಡುತ್ತಾರೆ. ಈ ಅನಾನುಕೂಲವನ್ನು ನಮ್ಮ ಪೋಲೀಸ್ ಜಮಾದಾರರು ಸರಿಮಾಡಿದರೆ ಜನರಿಗೆ ಬಹಳ ಸಂತೋಷ —ಪೋಲೀಸು ಬೀಟು ಚನ್ನಾಗಿದೆ —ಇವಿನಾಲ್ಕು ವರುಷಗಳಿಂದಲೂ ಜನರ ಪ್ರೀತಿ ಗೌರವಗಳಿಗೆ ಪಾತ್ರರಾಗಿ ಕೆಲಸಗಳನ್ನು ಕ್ರಮವಾಗಿ ನಡೆಸುತ್ತಬಂದ ಪೋಸ್ಟ್ ಮಾಸ್ಟರಾದ ಮೆ॥ ಅಬ್ರಹಾಮೈಯ್ಯನವರಿಗೆ ತಿರುಕೋಯ್ಲೂರಿಗೆ ವರ್ಗವಾಯಿತು ಇಲ್ಲಿನ ಜನರು ಬಹಳ ವ್ಯಸನಪಡುತ್ತಾರೆ

ಚಿಕ್ಕಮಗಳೂರು —ಇಲ್ಲಿ ಪ್ಲೇಗ್ ರೋಗವು ದೇವರ ದಯದಿಂದ ನಿಂತು ಹೋದ ಹಾಗಿದೆ ಸುಮಾರು ಎಂಟು ಹತ್ತು ದಿನಗಳಿಂದ ಏನೂ ಕಾಣುವದಿಲ್ಲ ಈಗಾಗಲೇ ಊರನ್ನು ಬಿಟ್ಟು ಹೋಗಿದ್ದ ಜನರು ಮುನಿಸಿಪಾಲಿಟಿಯವರ ಅಪ್ಪಣೆ ಪಡೆದು ಮನೆಗಳನ್ನು ತೊಳಸಿಕೊಂಡು ಬರುವಂತೆ ಅಪ್ಪಣೆಯಾಗಿರುವ ಹಾಗೂ, ಜನರು ಅವಸರವಾಗಿ ಮನೆಗಳನ್ನು ತೊಳಸಿಕೊಂಡು ಛಳಿಗಾಲವು ಬರುವದರೊಳಗಾಗಿ ಮನೆಗಳನ್ನು ಸೇರಿಕೊಳ್ಳುವಂತೆ ಪ್ರಯತ್ನಿಸುತ್ತಿರುವ ಹಾಗೂ ಕೇಳುತ್ತೇನೆ —ಈಗ್ಗೆ ಒಂದು ವಾರದಿಂದಲೂ ಮಳೆ ಸುರಿಯುತ್ತಾ ಸುಮಾರು ಐದು ಇಂಚಿಗೆ ಕಮ್ಮಿ ಇಲ್ಲದಂತೆ ಮಳೆಯಾಗಿರುವದರಿಂದ ಹೋದ ಬೇಳಲು ಕಮ್ಮಿಯಾಗಿದ್ದ ಕೆರೆಕಟ್ಟೆಗಳೆಲ್ಲಾ ತುಂಬಿ ತುಳುಕುತ್ತಿವೆ ಭತ್ತ ಮೊದಲಾದ ಪೈರುಗಳಿಗೆಲ್ಲಾ ಬಹಳ ಅನುಕೂಲವಾಯಿತೆಂದು ರೈತರು ಹೇಳುತ್ತಿದ್ದಾರೆ —ಊರಿನ ಕೆಲವು ಕಡೆ ಮುನಿಸಿಪಾಲಿಟಿಯವರು ಚರಂಡಿಗಳನ್ನು ಸರಿ ಮಾಡದೆ ಇರೋಣದರಿಂದ ಮಳೆಯ ನೀರು ಸಲೀಸಾಗಿ ಹೋಗುವದಕ್ಕೆ ಬದಲಾಗಿ ಅಲ್ಲಲ್ಲೇ ನಿಂತು ಸಾಧ್ಯವಾದ ಮಟ್ಟಿಗೂ ಕೊಳೆತು ಪಕ್ಕದ ವಾಸಸ್ಥರಿಗೆ ಮಲೇರಿಯಾ ಜ್ವರವನ್ನುಂಟುಮಾಡಬಹುದಾಗಿ ತೋರುತ್ತಿದೆ —ಇಲ್ಲಿನ ಸಿವಿಲ್ ಆಸ್ಪತ್ರೆಯಲ್ಲಿ ಸಬ್ ಅ॥ ಸರ್ಜನರಾಗಿದ್ದ ಮೆ॥ ಎಂಜುಂಡಯ್ಯನವರು ಬೆಂಗಳೂರಿಗೆ ವರ್ಗವಾದ್ದರಿಂದ ಇಲ್ಲಿನ ಡಿಸ್ಟ್ರಿಕ್ಟ್ ನೌಕರರುಗಳೆಲ್ಲ ಸೇರಿ ಅವರಿಗಾಗಿ ಪಾರ್ಕಿನಲ್ಲಿ ಟೀಪಾರ್ಟಿಯನ್ನು ಏರ್ಪಡಿಸಿದ್ದರು ಅಲ್ಲಿ ಊರಿನ ಅಧಿಕಾರಿಗಳು ದೊಡ್ಡ ಮನುಷ್ಯರೆಲ್ಲರೂ ಸೇರಿ, ಅವರು ಸ್ನೇಹಪರರೂ ಉಪಕಾರಿಗಳೂ, ಇದ್ದ ಒಂದು ವರುಷದೊಳಗಾಗಿ ಯೂರೋಪಿಯನ್ನರಲ್ಲಿಯೂ ದೇಶೀಯ ಜನಗಳಲ್ಲಿಯೂ ಸ್ನೇಹ ಬೆಳಸಿದ್ದರೆಂಬುವದನ್ನು ಸೂಚಿಸಿದರು. ಅವರ ಬದಲಿಗೆ ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯಿಂದ ಮೆ॥ ಸಿ ರಂಗನಾಥ ಮೊದಲಿಯಾರ್ ಬಂದಿದ್ದಾರೆ ಇವರೂ ಸಹ ನಿಧಾನಿಗಳೂ ಸ್ನೇಹಪರರೂ ಆಗಿರುವಂತೆ ತೋರುತ್ತದೆ

ಚಿತ್ರದುರ್ಗ —ಈಗ ಬಿಸಲಿನ ತಾಪ ಬಹು ಬಲವಾಗಿದೆ ರಾಗಿ, ನವಣೆ, ಜೋಳ ಮುಂತಾದವುಗಳಿಗೆ ಒಂದು ಹದ ಮಳೆ ಅವಶ್ಯವಾಗಿ ಬೇಕಾಗಿತ್ತು ಆದರೆ ತಕ್ಕ ಕಾಲದಲ್ಲಿ ಮಳೆ ಬಾರದೆ ಹೋದದ್ದರಿಂದ ಅರ್ಧಪಾಲು ಬೆಳೆ ಸಹ ಆಗುವದು ಕಷ್ಟವಾಗಿದೆ ಧಾನ್ಯಗಳು ಇಳಿಯುತ್ತಲಿವೆ ರಾಗಿ ೧೦—೧೪ ಸೇರು ಸಿಕ್ಕುತ್ತಿದ್ದ ಕಡೆ ಅಕ್ಕಿ ೪॥ ೯ ಸೇರು ಇದ್ದದ್ದು ಈಗ ೬—೬॥ ಸೇರು ಆಗಿದೆ ಈ ಡಿಸ್ಟ್ರಿಕ್ಟಿನ ಕೆಲವು ಭಾಗಗಳಲ್ಲಿ ಅಂದರೆ ಮುಖ್ಯವಾಗಿ ನಾಯಕನಹಟ್ಟಿಗೂ ಜಗಳೂರಿಗೂ ಮಧ್ಯೆ ಇರುವ ಮುಷ್ಟೂರು ಮುಂತಾದ ಗ್ರಾಮಗಳಲ್ಲಿ ನೀರಿನ ಕ್ಷಾಮ ಉಂಟಾಗಿದೆ ಊರಿನ ಬಾವಿಗಳಲ್ಲಿ ಜನರು ರಾತ್ರಿಯೆಲ್ಲಾ ಚೊಂಬುಗಳನ್ನು ಗೋಚುತ್ತಿದ್ದಾರೆ ಸಕಾಲದಲ್ಲಿ ಮಳೆ ಬಾರದೆ ಹೋದದ್ದರಿಂದ ಪೈರುಪಚ್ಚೆಗಳು ಸಂಪೂರ್ಣವಾಗಿ ಒಣಗಿಹೋದವು. ಕಬ್ಬು, ಅಕ್ಕಿಯ ಎಲೆ, ಬಳ್ಳಿ, ಅಡಿಕೆ ಮುಂತಾದ ಧವಸಗಳು ಸಹ ಕೈಬಿಡತಕ್ಕಾಗಿ ಬಂದಿದೆ ದನಕರುಗಳ ಮೇವು ಬಹಳ ಕಷ್ಟವಾಗಿದೆ —ಚಿತ್ರದುರ್ಗದ ಟವರ್ನಲ್ಲಿರುವ ಅಡ್ವೋಕೇಟ್ ಮೆ॥ ಅನಂತಶೆಟ್ಟರ ಮನೆಯ ವಿಶಾಲವಾದ ಮಹಡಿಯ ಮೇಲೆ ಕಳೆದ ಶುಕ್ರವಾರ ಸಾಯಂಕಾಲ ವೈಶ್ಯಸಭೆ ಸೇರಿತ್ತು ನಮ್ಮ ಡಿ॥ ಕಮಿಷನರ್ ಮೆ॥ ಚಂಗೈಯಶೆಟ್ಟರವರು, ಅಮಲ್ದಾರ್ ಮೆ॥ ಸಿ ಮಾಚಯ್ಯನವರು, ಅನೇಕ ವೈಶ್ಯನಾಯಕರು ಯವರು ಸೇರಿದ್ದಾಗ್ಗೆ ಬೆಂಗಳೂರು ತುಳಸೀದಾಸ್ ಎಂಬುವರು ವೈಶ್ಯಕುಲದ ಉತ್ಪತ್ತಿ, ಅದರ ಪ್ರಾಶಸ್ತ್ಯ, ಅದರ ಈಗಿನ ಸ್ಥಿತಿ ವಗೈರೆ ವಿಷಯ ಉಪನ್ಯಾಸ ಮಾಡಿದರು ಅನಂತರ ಇದೇ ವಿಷಯವನ್ನು ಕುರಿತು ಪೊಲೀಸ್ ಹೆಡ್ ಕ್ವಾರ್ಟರು ಇನ್ಸ್‌ಪೆಕ್ಟರ್ ಮೆ॥ ಸಿ ಕೃಷ್ಣರಾಯರು ಅನುಮೋದಿಸಿದ್ದಲ್ಲದೆ ಇಂಥಾ ಪ್ರಜಾಭಿವೃದ್ಧಿಗೆ ಸಹಕಾರಿಯಾದ ಸಭೆಗಳು ನಡೆಯುವುದಕ್ಕೆ ಅನುಕೂಲತೆಯನ್ನೂ ಪ್ರೋತ್ಸಾಹವನ್ನೂ ಕೊಡುತ್ತಲಿರುವ ಇಂಗ್ಲಿಷ್ ಪ್ರಭುಗಳನ್ನು ವಂದಿಸಿ ಈ ಪ್ರಯತ್ನವು ಫಲಕಾರಿಯಾಗುವಂತೆ ಆ ದೇಶದ ಜನಗಳ ನಡತೆಯನ್ನೇ ಅನುಸರಿಸಬೇಕೆಂದು ಹೇಳಿದರು ರಾತ್ರಿ ಸುಮಾರು ೯ ಘಂಟೆ ಸಭೆಯು ಬರಖಾಸ್ತಾಯಿತು

ಹೊಸೂರು —ಇಲ್ಲಿ ಪ್ಲೇಗ್ ಪ್ರಾರಂಭಿಸಿ ಎರಡು ತಿಂಗಳಾಯಿತು ಈಗ್ಗೆ ನೂರಾರು ಮಂದಿ ಇದಕ್ಕೆ ಆಹುತಿಯಾದರು. ಮೊದಲನೆಯಾಗಿಯವರ ಪೇಟೆಯಲ್ಲಿ ಎರಡು ಮೂರು ಕೇಸುಗಳಾಗುತ್ತಲೆ ಒಬ್ಬ ಅಗಸಗಿತ್ತಿಗೂ ಒಬ್ಬ ದರ್ಜಿಯವಳಿಗೂ ಪಿಲ್ಲಕ್ಕಮ್ಮ ಮೈದುಂಬಿ (ಹಳ್ಳಿಯವರು ಪ್ಲೇಗಿಗೆ ಈ ಶಬ್ದ ಹೇಳುತ್ತಾರೆ) ನಮಗೆ ಶಾಂತಿಮಾಡಿ ಸಾಗಕಳುಹಿಸಿದರೆ ನಿಮ್ಮನ್ನು ಕಾಪಾಡುತ್ತೇನೆಂದು ಹೇಳಿದರು ಅದಕ್ಕೆ ಜನರು ಬೀದಿಯಲ್ಲಿ ಚಪ್ಪರಹಾಕಿ ಅಂಬಲಿ, ತೆಂಗಿನಕಾಯಿ, ಅಡಿಕೆಲೆ, ಬಾಳೆಹಣ್ಣು, ಸಾಂಬ್ರಾಣಿ, ಕರ್ಪೂರ, ಕೋಳಿ ಕುರಿ ಮುಂತಾದವುಗಳನ್ನು ತೆಗೆದುಕೊಂಡು ಹೋಗಿ ಊರಹೊರಗೆ ಅಮ್ಮನಿಗೆ ಸಮರ್ಪಿಸಿ ಬಿಟ್ಟು, ತಿರಿಗಿ ನೋಡದೆ ಬಂದರು. ಆ ದಿನಕ್ಕೆ ೪—೧೦ ಸಾಯುವದೇನೋ ತಪ್ಪಲಿಲ್ಲ ಹೀಗಿರಲು ಮೇಲ್ಕಂಡ ಸ್ತ್ರೀಯರಿಬ್ಬರೂ ಮತ್ತೆ ಆವೇಶಬಂದವರ ಹಾಗೆ ನಟಿಸಿ, ತಿರಿ ಸಾಗಕಳುಹಿಸಿದರೆ ಹೋಗುತ್ತೇವೆಂದು ಹೇಳಲು, ಜನರು ಮೊದಲಿಗಿಂತಲೂ ಹೆಚ್ಚಾಗಿ ಕುರಿ, ಕೋಳಿಗಳನ್ನು ಕಾಣಿಕೆ ಮಾಡಿ ಪರು ಮತ್ತೆ ಕೋಟೆ ಮಾರಮ್ಮನನ್ನು ೨—೩ ಸಾರಿ ಮೆರವಣಿಗೆ ಮಾಡಿಸಿದರು ಆ ವೇಳೆ ೪—೧೦ ದಿನದವರಿಗೆ ಬೇರೆ ಬೇರೆ ಜನ ಮೈದುಂಬಿ ನೀವು ಊರು ಬಿಡಬೇಡಿರಿ, ಕಾಪಾಡುತ್ತೇವೆಂದು ಧೈರ್ಯ ಕೊಟ್ಟಾಗ್ಯೂ ಸಾಯುವದೇನೋ ತಪ್ಪಲಿಲ್ಲ ಆ ಮೇಲೆ ಜನರಿಗೆ ಅಮ್ಮನ ಮೇಲೆ ನಂಬಿಕೆ ಇಲ್ಲದೆ ಪಲಾಯನ ಮಾಡಲಾರಂಭಿಸಿದರು ಕೆಲವರು ಗುಡಿಸಲು ಕಟ್ಟುತ್ತಿರಲು ಮತ್ತೆ ಕೆಲವರು ಪರ ಊ

ಳಿದರು. ಒಂದುವರೆ ತಿಂಗಳಿಂದ ರೋಗವು ಜೋರಾಗಿತ್ತು. ಈಚೆಗೆ ಸು ವಾರಗಳಿಂದ ಸ್ವಲ್ಪ ಶಾಂತವಾಗಿದೆ. ಆದರೂ ದಿನಕ್ಕೆ ಒಂದೆರಡು ಪ್ರಸಂಗಳಾಗುತ್ತವೆ. ಸುತ್ತ ಪ್ರಾಂತ್ಯದಲ್ಲಿರುವ ಕೆಲವು ಹಳ್ಳಿಗಳಲ್ಲಿಯೂ ವ್ಯಾಧಿ ಹಬ್ಬಿಕೊಂಡಿರುತ್ತದೆ.—ಬೀಜ ಹಾಕಿದ ಮೇಲೆ ಮಳೆ ಬಾರದ ಕಾರಣ ಕೆಲವು ಕಡೆಯಲ್ಲಿ ರಾಗಿ ಪೈರು ಒಣಗಿ ರಾಜೀನಾಮೆ ಕೊಟ್ಟು ಮುಂದಿನ ವರುಷದ ತನಕ ನಮ್ಮ ನೋಡುವನಿಲ್ಲವೆಂದು ಹೋಗಿಬಿಟ್ಟನು. ಈ ಕಡೆ ನೆಲ್ಲಿನ ಬೆಳೆ ನಾಮವೇ ನಾಸ್ತಿ. ದನಕರುಗಳಿಗೆ ಹುಲ್ಲು ನೀರು ಅಪರೂಪ. ಕೆರೆ ಭಾವಿಗಳಲ್ಲಿ ಜಲ ಲೋಪವಾದದ್ದರಿಂದ ಬೇಸಿಗೆ ಕಾಲಕ್ಕೆ ಗುವದೋ ಎಂದು ಜನರಿಗೆ ಭೀತಿ ಹಿಡಿದಿದೆ. ಧಾರಣೆಯಾಸಿ ಹೆಚ್ಚು ಇದೆ. ಪ್ಲೇಗಿನ ದೆಸೆಯಿಂದ ಹೊರಗಿನಿಂದ ಬರುವವರು ನಿಂತು ಹೋದರು. ಆದ್ದರಿಂದ ಕಾಯಿಪಲ್ಯ, ಕಟ್ಟಿಗೆ ಬೆರಣಿ, ಮೊಸರು ಮುಂತಾದವುಗಳು ಸಿಕ್ಕುವದೇ ದುರ್ಲಭ. ಮತ್ತು ವರ್ತಕರು ಅನೇಕರು ಬೇರೆ ಸ್ಥಳಕ್ಕೆ ಹೋಗಿರುವ ಕಾರಣ ಅಂಗಡಿಗಳು ಕಡಮೆಯಾಗಿ, ಬೇಕಾದ ಪದಾರ್ಥಗಳು ದೊರೆಯುವದು ಕಷ್ಟವಾಗಿದೆ. ಈ ಮಧ್ಯದಲ್ಲಿ ಕಳ್ಳರ ಉಪಾಂಡ್ರ ಹೆಚ್ಚಾಗಿ ಕೆಲವು ಗುಡಿಸಲುಗಳಲ್ಲಿ ಕಳುವಾಯಿತು. ಪೋಲೀಸಿನವರು ಎಚ್ಚರಿಕೆಯಾಗಿದ್ದು ಕಳ್ಳರನ್ನು ಹಿಡಿದು ಶಿಕ್ಷೆಗೆ ಗುರಿಮಾಡಿದರು. ಮತ್ತು ಇದ್ದ ಪೋಲೀಸ್ ಸ್ಟ್ರೆಂಥ್ ಸಾಲದ್ದರಿಂದ ಸರ್ಕಾರದವರು ಬೇರೆ ಕಡೆಯಿಂದ ಪೋಲೀಸಿನವರನ್ನು ಕರೆಯಿಸಿ ಉಸ್ತುವಾರಿಗೆ ನೇಮಿಸಿದ್ದರಿಂದ ಬಹಳ ಮಟ್ಟಿಗೆ ಕಳ್ಳರ ಭಯ ಜನರಿಗೆ ತಪ್ಪಿದ ಹಾಗಾಯಿತು.—ಇದೇ ತಾಲ್ಲೂಕ್ ಚಿಕ್ಕಗಿರಿ ತರಫ್ ಮದಗರಹಳ್ಳಿಯಲ್ಲಿ ಕಳ್ಳರು ಪಟೇಲ್ ವಿರೂಪಾಕ್ಷಪ್ಪನವರ ಹೊಲದಲ್ಲಿ ಕಾಯಿಬಿಟ್ಟಿದ್ದ ಮೆಣಸಿನ ಗಿಡಗಳನ್ನು ಕಿತ್ತುಕೊಂಡು ಹೋದರು.

ಮೈಸೂರು ಸಂಸ್ಥಾನವು.

1907-8 ನೆಯ ವರ್ಷದ ಜಮಾಖರ್ಚು ಅಂದಾಜುಪಟ್ಟಿ (ಬಜೆಟ್)

ಜಮಾ ಬಾಬುಗಳು

ಜಮೀನ್ ಕಂದಾಯ	ರೂಪಾಯಿ	99 50,000
ಜಂಗಲುಗಳು		20 50,000
ಅಬ್ಕಾರಿ		39 00 000
ಕಟಗಳು		3 30 000
ಉಪ್ಪು		16 000
ಸ್ಟಾಂಪುಗಳು		7,85 000
ರಿಜಿಸ್ಟ್ರೇಷನ್		1 37 000
ಗಣಿಗಳ ರಾಜ್ಯ ಮತ್ತು ಗುತ್ತಿಗೆಗಳು		15,50 000
ಬಡ್ಡಿ		1,16,000
ಇಥ ಅಕ್ಷಮ ನಷ್ಟ		4 36,000
ನ್ಯಾಯವಿಚಾರ—ಕೋರ್ಟುಗಳು		52 000
ನ್ಯಾಯವಿಚಾರ—ಬಂದೀಖಾನೆಗಳು		35 000
ಪೋಲೀಸು		25,000
ವಿದ್ಯಾಭ್ಯಾಸ		1 26 000
ವೈದ್ಯ		1 03 000
ಶಿಕ್ಷ್ರೀಯ ಮತ್ತು ಇತರ ಸಣ್ಣ ಇಲಾಖೆಗಳು		72 000
ಪಯೋಧಿಕಕ್ಕಾಗಿ ಕೊಡುವ ಪೆನ್ಷನ್ನುಗಾಗಿ ಜಮೆ		2 000
ಸ್ಟೇಷನರಿ ಮತ್ತು ಛಾಪಖಾನೆ		8,000
ಇತರ ಚಿಲ್ಲರೆ ಬಾಬುಗಳು		1 37,000
ಸೈನ್ಯ		30 000
ಸಂಸ್ಥಾನದ ರೈಲ್ವೆಗಳ—ಹುಟ್ಟುವಳಿಯ ಲೆಕ್ಕ		26 25 000
ಸಿವಿಲ್ ಕಾಮಗಾರಿಗಳು		3 71 000
ಕಾವೇರೀ ವೈದ್ಯುತಶಕ್ತಿಯ ಏರ್ಪಾಡು		16 00 000
ಜುಮ್ಲಾ ಹುಟ್ಟುವಳಿ ಮತ್ತು ಜಮೆಗಳು		2 11 40 000
ಕಾವೇರಿ ವೈದ್ಯುತಶಕ್ತಿಯ ಮೂರನೆ ಸ್ಥಾಪನೆಗಾಗಿ ತೆಗೆದುಕೊಂಡ ಸಾಲದಲ್ಲಿ ಉಳಿದಿರುವ ಶಿಲ್ಕು		13 94 000

ಖರ್ಚು ಬಾಬುಗಳು

ಪಬ್ಲಿಕ್ ಜಮಾ	ರೂಪಾಯಿ	2,22,000
ಭೂ ಕಂದಾಯ		17 95,000
ಜಂಗಲು		7 33,000
ಅಬ್ಕಾರಿ		3 18,000
ಸಾಯರು		1,000
ಸ್ಟಾಂಪು		20 000
ರಿಜಿಸ್ಟ್ರೇಷನ್		85,000
ಇತರ ಹುಟ್ಟುವಳಿಗೆ ಆದ ಖರ್ಚು		18 000
ದುಮಾಲಾ ಸಾಲದ ಬಡ್ಡಿ		11,000
ಇತರ ಸಾಲದ ಬಡ್ಡಿ		2 93 000
ಇಥ ಅಕ್ಷಮ ನಷ್ಟ		11 000
ಅಡ್ಮಿನ		19,10,000
ಸೆಕ್ರೆಟೇರಿಯೆಟ್ ಸಿಬ್ಬಂದಿ		6,72 000
ನ್ಯಾಯವಿಚಾರ—ಕೋರ್ಟುಗಳು		8,80,000
ನ್ಯಾಯವಿಚಾರ—ಬಂದೀಖಾನೆಗಳು		1,25 000
ಪೋಲೀಸು		9,92,000
ವಿದ್ಯಾಭ್ಯಾಸ		10,83,000
ಮುಜರಾಯಿ ಸತ್ರ ದೇವಾಲಯಗಳು		*3,35,000
ವೈದ್ಯ		6,70,000
ಶಿಕ್ಷ್ರೀಯವಾದ ಮತ್ತು ಇತರ ಚಿಲ್ಲರೆ ಇಲಾಖೆಗಳು		3,37,000
ಅರಸುಗಳ ಮೇಲೆ ಕೊಡುವ ವೇತನಗಳು		35 87,000
ಪಯೋಧಿಕಕ್ಕಾಗಿ ಕೊಡುವ ಪೆನ್ಷನುಗಳು ಮತ್ತು ವೇತನಗಳು		5,82 000
ಸ್ಟೇಷನರಿ ಮತ್ತು ಛಾಪಖಾನೆ		2,20 000
ಇತರ		5,13,000
ಸೈನ್ಯ		13,76,000
ಕ್ಷಾಮದ ಸಹಾಯ		2,00,000
ಸಂಸ್ಥಾನದ ರೈಲ್ವೆಗಳ ಹುಟ್ಟುವಳಿ ಲೆಕ್ಕ		25,52,000
ಸಿವಿಲ್ ಭಾರೀ ಕಾಮಗಾರಿಗಳು		6,12,000
ಸಣ್ಣ		2,01,000
ಸಿವಿಲ್ ಕಾಮಗಾರಿಗಳು	ರೂಪಾಯಿ	20,24,000
ಸೈನ್ಯಕ್ಕೆ ಸಂಬಂಧಪಟ್ಟ ಕಾಮಗಾರಿಗಳು		27,000
ರೈಲ್ವೆಯ ಕಟ್ಟಡ		3,50,000
ಕಾವೇರೀ ವೈದ್ಯುತಶಕ್ತಿಯ ಕೆಲಸ ನಡಿಸುವ ಖರ್ಚು		3,21,000
,, ಸಾಲದ ಮೇಲಿನ ಬಡ್ಡಿ		70,000
,, ಸಾಲ ತೀರಿಸಿದ್ದು		1,33,000
,, ಅಸಲು ಪಾವತಿ ಬಗ್ಗೆ ಉಪಯೋಗಿಸಿದ ಮೊಬಲಗು		10,34,000
,, ಬಂತವಾಳದ ಖರ್ಚು—ಬೆಂಗಳೂರಿನಲ್ಲಿ ದೀಪ ಮತ್ತು ಶಕ್ತಿಯ ಸರಬರಾಯಿ		42,000
ಒಟ್ಟು ಖರ್ಚು		2,44,00,000
ಶಿಲ್ಕು		40,000
ಒಟ್ಟು ಜುಮ್ಲಾ		2,44,40,000
ಮೂರನೆಯ ಸ್ಥಾಪನೆ ಬಂಡವಾಳ		13,94,000

ಪ್ರಕಟನೆಗಳು.

ಕಲ್ಕತ್ತೆಯ ಡಾಕ್ಟರುಗಳ ಅಭಿಪ್ರಾಯಗಳು.

93-11

ನಾವು ಸ್ವತಃ ಕಾರ್ಣ್ಯ ನೋಡಲಿಕ್ಕಾಗುವಾಗ, ನಮ್ಮ ಕಿವಿಗಳಿಂದ ಕೇಳುವಾಗ, ನಮ್ಮ ಸ್ನೇಹಿತರು ರುಜುಪಡಿಸುವಾಗ ಇದಕ್ಕಿಂತ ಮೇಲಾದ ಸಾಕ್ಷ್ಯ ಯಾವದು?

ಮುಂಬಾಯಿ ಜನರು ಏನು ಹೇಳುತ್ತಾರೆಂಬುದಾಗಲೀ, ಕೊಲಂಬೋ ಜನರ ಅಭಿಪ್ರಾಯವೇನೆಂಬುದಾಗಲೀ ಹೇಳಿ ಪ್ರಯೋಜನವಿಲ್ಲ. ಕಲ್ಕತ್ತೆಯವರಿಗೆ ಈ ಔಷಧವಿಷಯವಾಗಿ ನಿಜವಾಗಿ ಗೊತ್ತಿರುವಂಥಾ ಸಂಗತಿಯನ್ನೇ ತಿಳಿಸುತ್ತೇವೆ. ನೀವು ನಿಮ್ಮ ನೆರೆಕರೆಯವರ ಮಾತನ್ನು ನಂಬುವಿರೋ? ಹಾಗಾದ ಪಕ್ಷದಲ್ಲಿ ಬೋಸ್ ಮತ್ತು ಕಂಪನಿ ಔಷಧ ಕಾಲೇಜು ವೈದ್ಯ ಚಿಕಿತ್ಸಕರಾದ ಡಾಕ್ಟರ್ ಏರೇಕನಾಥ ಸತ್ತರವರ ಅಭಿಪ್ರಾಯವನ್ನು ಓದಿ ನೋಡಿರಿ.

ಡೋನ್ಸರ (ಬ್ಯಾಕ್ ಏಕ್ ಕಿಡ್ನಿ ಪಿಲ್ಸ್) ಬೆನ್ನು ನೋವಿನ ಮೂತ್ರಪಿಂಡದ ಗುಳಿಗೆಗಳು ಮೂತ್ರಕೋಶದ ಬಾಧೆಗಳಲ್ಲಿ ಮುಖ್ಯವಾಗಿ ಕಲ್ಲು ಬೀಳುವಲ್ಲಿ ಉಪಯೋಗಕರವಾಗಿದೆ.

ಬೆನ್ನುನೋವು ಮೂತ್ರೋಪದ್ರವ ಮುಂತಾದ ಸಂಬಂಧವಾದ ಇತರ ಬಾಧೆಗಳ ಹಾಗೆಯೇ ಕಲ್ಲು ಬೀಳುವದು ನಿಶ್ಚಯವಾಗಿ ಮೂತ್ರಪಿಂಡಗಳ ಬಲಹೀನತೆಯಿಂದ ಯಾ ಕೆಟ್ಟುಹೋಗುವಿಕೆಯಿಂದ ಆಗಿರುವದು.

ಈ ಮಾತ್ರೆಗಳಲ್ಲಿ ಸಸ್ಯಾದಿ ಮೂಲ ಪದಾರ್ಥಗಳು ಮಾತ್ರ ಇರುತ್ತವೆ. ಅವು ಬೇಗನೆ ಉಪಶಮನ ಗುಣ ಸಿಕ್ಕುವಂತೆ ಮಿಶ್ರಮಾಡಿಸಿರುವದು, ಅತ್ಯಂತ ಸೂಕ್ಷ್ಮವಾದ ದೇಹಪ್ರಕೃತಿಯವರು ಸಹಾ ಉಪಯೋಗಿಸಬಹುದು. ಪೂರ್ಣ ಗುಣಾಂಶ ಸಿಕ್ಕುವಲ್ಲಿ ಸಂದೇಹವಿಲ್ಲ. ಮುಂದೆ ಇದರಿಂದ ಯಾವ ಬಾಧೆಯೂ ಇರಲಾರದು.

ಎಲ್ಲಾ ಔಷಧ ವರ್ತಕರಿಂದ ಮಾರಲ್ಪಡುತ್ತದೆ. ಸೀಸೆ ಒಂದಕ್ಕೆ ರೂ ೨ ಅಥವಾ ೬ ಸೀಸೆಗಳಿಗೆ ರೂ ೧೦—೮—೦ ಅಥವಾ ಮುಂಬಾಯಿಯಲ್ಲಿಯ ಡೋನ್ಸ್ ಔಷಧಗಳ ಕಂಪೆನಿಯಿಂದ ನೇರಾ ತರಿಸಿಕೊಳ್ಳಬಹುದು. ಪಿ ಒ ಬಾಕ್ಸ್ ನಂ ೨೦, ಮುಂಬಾಯಿ.

THE PLACE FOR HASSAN CAPS IS

HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

75 10

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ವಿಕರಿಯಾಗುತ್ತಿರುವ ಟೋಪಿಗಳ ಧಾರವೆಲ್ಲಾ ಬೀಳಾದದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ.—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ಧಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು. (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ, ಚನ್ನಾಗಿ ಹೊಸೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ನೇರಾ ಬರೆದು ತರಿಸಿಕೊಳ್ಳಿ. ಅಗ್ಗವಾದ ಮಟ್ಟ ಚನ್ನಾಗಿಲ್ಲದ್ದು ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ.

ನಾವ, ಕೆಂಪು, ಕಪ್ಪು, ಬಿಳಿ, ಕಾಫಿ ಟೋಪಿಗಳು. ೧ ರೂ ೪ ಆ.; ೧ ರೂ ೬ ಆ; ೧ ರೂ ೮ ಆ.

ರೇಶ್ಮೆ ಚುಕ್ಕಿಯುಳ್ಳ ಟೋಪಿಗಳು ೧ ರೂ. ೪ ಆ, ೨ ರೂ

ಧಾರದ ಟೋಪಿಗಳು ೧ ರೂ. ೧೨ ಆ, ೧ ರೂ. ೪ ಆ; ೧ ರೂ. ೬ ಆ.

ಉಣ್ಣೆಯ ಟೋಪಿಗಳು ೧ ರೂ. ೪ ಆ., ೧ ರೂ. ೬ ಆ.

ಹೂಸುಗಳ ಟೋಪಿ, ಸೂಥಿ ಮೇಜೋಡು, ಅರ್ಥ ಮೇಜೋಡು ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಿಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು.

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ.

ಇಲ್ಲಿ ನೋಡಿ!

65-19

ತುಮಕೂರು ಮಿಷನ್ ಇಲಾಖೆಯಲ್ಲಿ ಸೂಪರಿಂಟೆಂಡೆಂಟ್ ಮೇಲ್ವಿಚಾರಣೆಯಿಂದ ಉತ್ತಮ ತರಹದ ಹಾಸನದ ಟೋಪಿಗಳು ಅತಿ ಶ್ರೇಷ್ಠವಾದ ಉಲ್ ಧಾರದಿಂದ ತಯಾರಾಗುತ್ತವೆ.

ಕ್ರಯ.—೧೨ ಆಣೆ ಮೊದಲ್ಗೊಂಡು ೧ ರೂ ೧೨ ಆಣೆಯವರಿಗೆ.

೧ ಡಜನ್ ಟೋಪಿಗಳನ್ನು ತೆಗೆದುಕೊಳ್ಳುವವರಿಗೆ ಶೇಕಡ ೫ ರಂತೆ ಡಿಸ್‌ಕೌಂಟ್ ಕೊಡಲ್ಪಡುವದು.

ನಮ್ಮ ವಿಳಾಸ:—ಮೇನೇಜರ್,

ಹಾಸನದ ಟೋಪಿ ಕಾರ್ಖಾನೆ, ಮಿಷನ್ ಇಲಾಖೆ, ತುಮಕೂರು.

ಕಾರ್ಡು ಸೈಜು ೪|×೩.

ಫೋಟೋ ತೆಗೆಯುವ

ಫು ಪಾ ಕ್ಯಾ ಮೆ ರಾ.

84 13

ಬೆಲೆ ಫಕ್ತ ಮೂರು ರೂಪಾಯಿ.

ಇದರಿಂದ ಬೇಕಾದ ಮನುಷ್ಯನ ಫೋಟೋ ಅವನಿಗೆ ತಿಳಿಯದಂತೆ ತೆಗೆಯಲಿಕ್ಕೆ ಬರುತ್ತದೆ. ವೇಗದಿಂದ ಓಡುವ ಗಾಡಿಯು ಮತ್ತು ಹಾರುವ ಪಕ್ಷಿಯ ಫೋಟೋ ಸಹ ತೆಗೆಯಬಹುದು. ಇದರಲ್ಲಿ ಕಲಿಯತಕ್ಕದ್ದೇನೂ ಇಲ್ಲ. ಈ ಕ್ಯಾಮರಾದ ಮಾಹಿತಿಯನ್ನು ಕೊಳ್ಳುವವರಿಗೆ ನಾವು ಕಾಗದಲ್ಲಿಯೇ ಮಾಡಿಕೊಡುವೆವು. ಎಷ್ಟೋ ಕಡೆಗೆ ಇದಕ್ಕೆ ೧೦ ರಿಂದ ೧೫ ರೂ. ಬೆಲೆ ಬೀಳುತ್ತದೆ. ಆದರೆ ಇದರ ಖರೇ ಕಿಮ್ಮತ್ತು ೩ ರೂಪಾಯಿ ಮಾತ್ರ ಇರುವದು. ಟಪ್ಪಾಲ್ ಖರ್ಚು ೯ ಆಣೆ. ಇದು ಸಿಕ್ಕತಕ್ಕ ವಿಳಾಸ:—

ಛೋಟಾಲಾಲ ಛಗನಲಾಲ ಮಹಾಜನ, ಠಾಕೂರದ್ವಾರ ರೋಡ, ಪೋಸ್ಟ್ ಕಾಲಬಾದೇವಿ, ಮುಂಬಯಿ.

ಚಿಕ್ಕಬಳ್ಳಿಯ ೭॥ ರೂಪಾಯಿ ಕ್ರಯದ ಗಂಡಸರೂ ಹೆಂಗಸರೂ ಉಪಯೋಗಿಸಬಹುದಾದ ಕೈಗಡಿಯಾರವು ಬಹುಮಾನವಾಗಿ ಕೊಡಲ್ಪಡುವದು.

121-1

ಕೆಳಗೆ ವಿವರಿಸುವ ರಾಗಮಾಲನ್ನು (ಹಾರ್ಮೋನಿಯಂ) ಕೊಂಡುಕೊಳ್ಳುವವರಿಗೆ ಮಾತ್ರ

ಮೈನೋಲಿಯಾ ಫ್ಲೂಟ್ ಹಾರ್ಮೋನಿಯಂ.

ಈ ಹಾರ್ಮೋನಿಯಂ ಇಡಲ್ಪಟ್ಟಿರುವ ಪೆಟ್ಟಿಗೆಗಳು ಹೊಸ ತರಹಾ ಗಟ್ಟಿಯಾದವು, ಬಹು ಸೊಗಸಾಗಿ ಪಾಲಿಶ್ ಮಾಡಿವೆ. ಅವುಗಳನ್ನು ನುಡಿಸುವ ಬಗೆಯ ಸೌಲಭ್ಯವು ತುಂಬಾ ಸರಾಗವಾಗಿದೆ. ರಾಗಗಳು ಬಹು ಮನೋಹರವಾದವು. ಹಿಂದೂಸ್ಥಾನ ಸಂಗೀತಕ್ಕೆ ಅನುಸಾರವಾದ ನಾಟಕಗಳೂ ಪದಗಳೂ ಈ ರಾಗಮಾಲಿನಲ್ಲಿ ಅಡಗಿಸಲ್ಪಟ್ಟವೆ. ಕೇಳುವವರೆಲ್ಲಾ ಬಹಳವಾಗಿ ಹೊಗಳುತ್ತಾರೆ. ಈ ಪೆಟ್ಟಿಗೆಯಾಗಲಿ ಅದರಲ್ಲಿರುವ ರಾಗಮಾಲಿನ ಅಂಗಗಳಾಗಲಿ ಬಹು ಕಾಲದ ತನಕ ಸ್ವಲ್ಪವೂ ಕೆಡದಂತೆಯೂ, ಸಡಿಲವಾಗದಂತೆಯೂ ತುಂಬಾ ಬಿಗಿಯಾಗಿ ಜೋಡಿಸಿದೆ.

ಮೊದಲನೇ ರಕಂ ಪೆಟ್ಟಿಗೆ ರಾಗಮಾಲಿಗೆ ರೂ ೩೦.

ಎರಡನೇ ,, ,, ,, ರೂ ೩೫.

ಈ ರಾಗಮಾಲ್ ಪೆಟ್ಟಿಗೆಗಳನ್ನು ತ್ಯಾಗದ ಮರದ ಪೆಟ್ಟಿಗೆಯೊಳಗೆ ಬಹು ನಾಜೂಕಾಗಿ ಮುಚ್ಚಲ್ಪಟ್ಟಿದೆ. ಮತ್ತು ಅದರ ಸಂಗಡಲೇ ಮೂರು ವರುಷಗಳ ಜಾಮೀನ (ಗ್ಯಾರಂಟಿ) ಸರ್ಟಿಫಿಕೇಟನ್ನು ಕಂಪನಿಯವರು ಕಳುಹಿಸುವರು. ಈ ಹಾರ್ಮೋನಿಯಂ ಕೊಂಡುಕೊಳ್ಳಬೇಕೆನ್ನುವವರು ಕೆಳಗಿನ ವಿಳಾಸದಾರರಿಗೆ ಅಡ್ವಾನ್ಸಾಗಿ ಅರ್ಧ ಹಣವನ್ನಾದರೂ ಕಳುಹಿಸಿದಲ್ಲಿ ಉಳಿದ ಅರ್ಧ ಹಣಕ್ಕೆ ಕಂಪನಿಯವರು ಹಾರ್ಮೋನಿಯಂ ಪೆಟ್ಟಿಗೆಯನ್ನು ವಿ. ಪಿ. ಪಿ. ಮೂಲಕ ಕಳುಹಿಸುತ್ತಾರೆ.

ಗಂಡಸರ ಹೆಂಗಸರ ಬಹುಮತಿ ಗಡಿಯಾರ.

ಬಹು ಅಗ್ಗ, ಸರಿಯಾದ ಟೈಂ ತೋರಿಸುತ್ತೆ.

ಈ ಸುಂದರವಾಗಿ ಕಾಣುವಂಥಾ ಕಿಸೆ ಗಡಿಯಾರವನ್ನು ಬಹು ಅಂದವಾದ ಪೆಟ್ಟಿಗೆಯಲ್ಲಿಟ್ಟಿದೆ. ಮಿನಿಟ್ ಕೈ ರತ್ನಗಳುಳ್ಳದ್ದು. ೩೦ ಗಂಟೆಗಳ ತನಕ ನಡೆಯುವದು. ಸೊಗಸಾದ ಬೆಳ್ಳಿ ನಕಾಸ್ ಕೆಲಸದ ಮುಚ್ಚಳ.

ಕ್ರಯ ರೂ. ೬—೪—೦; ಪೋಸ್ಟೇಜು ಸಹಿತ ರೂ ೬—೧೨—೦

ನಿಕ್ಕಲ್ ಲೋಹದ ಮುಚ್ಚಳ ಉಳ್ಳದ್ದಕ್ಕೆ

ಕ್ರಯ ರೂ ೩—೪—೦, ಪೋಸ್ಟೇಜು ಸಹಿತ ರೂ. ೩—೧೩—೦

ಗಡಿಯಾರಗಳೆಲ್ಲಾ ಸ್ವಿಸ್ ತಯಾರಿ, ಅದರ ಜೊತೆಗೆ ಸುಂದರವಾದ ಛಂಗಾರದ ಸರಪಳಿ, ಒಂದು ಪೆಟ್ಟಿಗೆ, ೪ ವರುಷಗಳ ಜವಾಬ್ದಾರಿಯುಳ್ಳ ಕೈ ಬರಹ, ಇವುಗಳ ಸಹಿತ ಕಳುಹಿಸಲ್ಪಡುವುದು. ವಿ. ಪಿ. ಮೂಲಕವಾದರೂ ತರಿಸಿಕೊಳ್ಳಬಹುದು. ವಿಳಾಸ.—

ಈ. ಕ—ನಿಮ್ಮೂರಿಗೆ ಸಮೀಪವಾದ ರೈಲ್ವೆ ಸ್ಟೇಷನ್ ಯಾವುದೋ ಬರೆದು ತಿಳಿಸಬೇಕು.

ಎಂ. ಎ. ಛಟಾಲಾ ಮತ್ತು ಕಂಪನಿ,

ಬಿತ್ತೂರು, ಉತ್ತರ ಅರ್ಕಾಟು.

ಸುಖಪಟ್ಟ ಸ್ತ್ರೀಯರು ಪೆರೂನಾವನ್ನು ಹೊಗಳುತ್ತಾರೆ.

ಪೆರೂನಾ ಪ್ರಖ್ಯಾತಿ ಹೊಂದಿರುವುದು ಅದರ ಗುಣದಿಂದ, ಬರೀ ಮಾತಿನಿಂದಲ್ಲವು.

ಪೆರೂನಾ ಪ್ರಖ್ಯಾತಿ ಹೊಂದಿರುವುದು ಅದರ ಗುಣದಿಂದ, ಬರೀ ಮಾತಿನಿಂದಲ್ಲವು ಚಿಕ್ಕವರು ದೊಡ್ಡವರು ಒಂದೇ ರೀತಿ ಪೆರೂನಾವನ್ನು ಹೊಗಳುತ್ತಾರೆ ಹೆಣ್ಣು ಮಕ್ಕಳೂ ಹೆಂಗಸರೂ ಪೆರೂನಾವಿನ ಗುಣವನ್ನು ಕಂಡುಕೊಂಡಿದ್ದಾರೆ ಹೆಣ್ಣು ಮಕ್ಕಳೂ ಹೆಂಗಸರೂ ತಮ್ಮ ತಮ್ಮ ದೇಹಾನುಗುಣ್ಯವಾದ ಕಾಯಿಲೆಗಳಲ್ಲಿ ಬಿದ್ದು, ಪೆರೂನಾ ಸೇವನೆಯಿಂದ ಸೌಖ್ಯ ಹೊಂದುತ್ತಾರೆ

ಲಕ್ಷಣವಾಗಿರುವ ಹೆಣ್ಣು ಮಕ್ಕಳೂ, ಸುಂದರಿಯರಾದ ಸ್ತ್ರೀಯರೂ, ಬಲಹೀನರಾದ ಹೆಣ್ಣು ಮಕ್ಕಳೂ, ರೋಗಪೀಡಿತರಾದ ತಾಯಂದಿರೂ ಎಲ್ಲಾ ಪ್ರದೇಶಗಳಲ್ಲೂ ಪೆರೂನಾ ಸೇವಿಸಿ, ತಮ್ಮ ಸ್ವಭಾವಕ್ಕೆ ಅನುಗುಣವಾದ ಕಾಯಿಲೆಗಳನ್ನೆಲ್ಲಾ ನಿವಾರಣೆ ಮಾಡಿಕೊಂಡು, ಅದರ ಗುಣವನ್ನು ತಿಳಿದಿರುತ್ತಾರೆ ಮುದಿ ಅಜ್ಜಿಯಿಂದ ಮೊದಲುಗೊಂಡು ಎಳೇ ಹೆಣ್ಣು ಮಗುವಿನ ತನಕ ಅಬಲೆಯರೆಲ್ಲ ಅನೇಕ ವಿಧಗಳಲ್ಲಿ ಪೆರೂನಾವಿಗೆ ಕೃತಜ್ಞರಾಗಿರುವರು

ಇದೆಲ್ಲಾ ಯಥಾರ್ಥವಾಗಿರುತ್ತದೆ ಗುಣ ಹೊಂದಿದ ಹೆಂಗ

MRS SOPHIA CALDWELL

MISS ANNIE HENDREN

ಸು ಅದನ್ನು ಹೇಳುವದಕ್ಕೆ ಹಿಂತೆಗೆಯಳು ಅವಳ ಮಾತು ಕೇಳಿ ಇತರ ಹೆಂಗಸರ ನಂಬುತ್ತಾರೆ ಈ [illegible] ಪೆರೂನಾವಿನ ಹೆಸರುವಾಸಿಯು ಮನೆಯಿಂದ ಮನೆಗೆ ಹಬ್ಬುತ್ತದೆ ಹೀಗೆ ಲಕ್ಷಾಂತರ ಮನೆಗಳವರು ಪೆರೂನಾವು ಪ್ರೀತಿಪೂರ್ವಕವಾದಂಥ ನಂಬಿಕೆಗೆ ಅರ್ಹವಾದಂಥಾ ಮನೇ ಔಷಧವೆಂದು ಒಪ್ಪಿಕೊಳ್ಳುತ್ತಾರೆ

ಅನೇಕ ಸಣ್ಣ ಸಣ್ಣ ಕಾಯಿಲೆಗಳಿಗೆ ಪೆರೂನಾ ಒಳ್ಳೆಯದಾಗಿದೆ ಇದರಿಂದ ಹುಟ್ಟುವ ಅನೇಕ ಕೆಟ್ಟ ಕಾಯಿಲೆಗಳನ್ನೂ ಹೆಂಗಸರಿಗೆ ಸಾಮಾನ್ಯವಾಗಿ ಉಂಟಾಗುವ ಶರೀರದ ಅಕ್ರಮಗಳನ್ನೂ ಪೆರೂನಾ ಕಡಿಮೆ ಮಾಡಬಲ್ಲದೆಂದು ನಂಬತಕ್ಕದ್ದಾಗಿದೆ ಕೃತ್ಯದಿಂದ ಒರವ ಸಮಸ್ತವಾದ ರೋಗಗಳನ್ನೂ ಪೆರೂನಾ ಗುಣದಿಂದ ವಾಸಿಮಾಡಿಕೊಳ್ಳಬಹುದು

ಮಿಸ್ ನ್ಯಾಲೀಸಾ ಜಾಲಿ, ಸಾಮರ್ವಿಲೆ, ಎನ್ ಸಿ ಈಕೆ ಬರೆಯುವುದು — "ನಾನು ನಿಮ್ಮ ಪೆರೂನಾವನ್ನು ಸೇವಿಸುತ್ತಾ ಇದ್ದೇನೆ ನನ್ನ ರೀತ ರೋಗವೆಲ್ಲಾ ವಾಸಿಯಾಯಿತೆಂದು ಹೇಳಬಲ್ಲೆನು ನೀವು ಕರುಣದಿಂದ ನನಗೆ ಅದನ್ನು ತೋರಿಸಿದ್ದಕ್ಕಾಗಿ ನಿಮ್ಮನ್ನು ವಂದಿಸುತ್ತೇನೆ"

ಮಿಸ್ ಅನ್ನಿ ಹೆಂಡ್ರನ್ [illegible] ಈಕೆ ಬರೆಯುವುದು — ನಾನ್ನು ವರುಷಗಳ ಹಿಂದೆ ಇದ್ದ [illegible] ಆರೋಗ್ಯವಾ [illegible] ನಾನು ಅನೇಕ ಬಾಟ್ಲುಗಳ ಪೆರೂನ ಔಷಧವನ್ನು ಹಿಂದು [illegible] ನಾನು ಮನೆಯಲ್ಲಿ ದಾಲು [illegible] ಅದನ್ನು ಸರಿಯಾಗಿ [illegible] ಇವೇ ವೇದ [illegible] ನನ್ನ ಎಲ್ಲಾ ಕೆಲಸಗಳನ್ನೂ ಮಾಡಿಕೊಳ್ಳಬಲ್ಲೆನು'

ಪೆರೂನಾವು ಮಹಾ [illegible] ಔಷಧವೆಂದು [illegible] ಬರೆದು ನಿಮ್ಮ ಮಾತನ್ನು ಕೇಳದ [illegible] ಈ ದಿನ [illegible] ಮೇಲೆ ಇರುತ್ತಿದ್ದೆನೆಂದು ನಂಬುತ್ತೇನೆ ನಾನು ಅನೇಕ ತರದ ಔಷಧಗಳನ್ನು ತೆಗೆದುಕೊಂಡರೂ ಒಂದರಿಂದಲೂ ನನಗೆ ಸ್ವಲ್ಪವೂ ಗುಣವಾಗಲಿಲ್ಲ ಪೆರೂನಾ ನನ್ನನ್ನು ಆರೋಗ್ಯವಂತಳನ್ನಾಗಿ ಮಾಡಿದೆ [illegible] ಪೆರೂನಾವನ್ನು ಎಷ್ಟು ಹೊಗಳಿದರೂ ನಾಲದು."

ಮಿಸೆಸ್ ಸೋಫಿಯಾ ಕಾಲ್ಡ್‌ವೆಲ್ [illegible] ವೆಸ್ಟ್ ಜೆಫ್, ವಾಷಿಂಗ್ಟನ್, ಈಕೆ ಬರೆಯುವದು —

"ನನ್ನ ಗರ್ಭಕೋಶವು ಕೆಟ್ಟು ಹೋಗಿ ನರಳುತ್ತಾ ಇದ್ದೆನು. [illegible] ನಾನಾ ತರದ ಔಷಧವನ್ನು ಒಂದು ವರುಷ ತೆಗೆದುಕೊಂಡರೂ [illegible] ನನಗೆ ಗುಣವಾಗಲಿಲ್ಲ [illegible] ಕಡೆಗೆ ನಾನು ಪೆರೂನಾವನ್ನು ಸೇವಿಸಲಾರಂಭಿಸಿದೆನು ಅದರಿಂದ ನನಗೆ [illegible] ಗುಣವಾಗಿ ಬಂದು ಈಗ [illegible] ವಾಸಿಯಾಗಿದ್ದೇನೆ

'ಆದರಿಂದ ನನ್ನ ರೋಗ ನಿವಾರಣೆಯಾಯಿತು [illegible] ಬಹಳ [illegible] ನಾನು ಸಂಪೂರ್ಣವಾಗಿ [illegible] ನನಗೆ ಶಕ್ತಿಯುಂಟಾಗಿ ಬಂದಿರುವುದು ಸ್ಪಷ್ಟ. ಇಲ್ಲಿ ಎಲ್ಲಾ ಹೊಗಳಿಕೆಯೂ ಸನ್ಮಾನವೂ ಪೆರೂನಾವಿಗೇ ಸೇರಿದ್ದೆಂದು ನಾನು [illegible] ಹೇಳುತ್ತೇನೆ'

ಮಿಸೆಸ್ ಎಂ ಹೆಂಡರ್ಸನ್, ಕ್ಲರ್ಕ್, ಎನ್ ಡಬ್ಲ್ಯು ಟಿ, ಕ್ಯಾನ್, ಈಕೆ ಬರೆಯುವುದು — "ಕೆಳ ಹೊಟ್ಟೆಯ ನಿಶ್ಶಕ್ತಿಯಿಂದ ನಾನು ತುಂಬಾ ಬಾಧೆಪಟ್ಟೆನು. ಅದರಿಂದ ನನ್ನ ಶಕ್ತಿಯೆಲ್ಲಾ ಕುಗ್ಗಿ ನನ್ನ ಬುದ್ಧಿಯೂ ಕೆಟ್ಟುಹೋದೀತೆಂದು ಹೆದರಿದೆನು ನನ್ನ ಬೆನ್ನು ಬುಡ ಎಡಗಾಲಿನ ತನಕ ಬಹಳವಾಗಿ ಬಾಧೆಪಡುತ್ತಿತ್ತು ಈ ಬಾಧೆಯನ್ನನುಭವಿಸುವದಕ್ಕಿಂತ ಸಾಯುತ್ತೇನೇ ಉತ್ತಮವೆನ್ನಿಸುತ್ತಿತ್ತು ಪೆರೂನಾ ಈ ನನ್ನ ಕಾಯಿಲೆಯನ್ನು ವಾಸಿಮಾಡಿತು ಆದ್ದರಿಂದ ಅದು ಉತ್ಕೃಷ್ಟವಾದದ್ದೆಂದು ನಾನು ಹೇಳುತ್ತೇನೆ ಅತಿಶಯವಲ್ಲ ಈ ನನ್ನ ರೋಗ ಸಂಹಾರಣೆಯಾಗಿ ಈಗ ಎರಡು ವರುಷ ತುಂಬುತ್ತದಲ್ಲದೆ ಮತ್ತೆ ಆ ರೋಗವು ಕಾಣಲಿಲ್ಲ [illegible] ನಾನು ಈ ರೀತಿ ಹೇಳುವ ಹಾಗೆ ಈ ಔಷಧ ಮಾಡಿತಲ್ಲಾ ಎಂದು ಸಂತೋಷಪಡುತ್ತೇನೆ ನನ್ನ ಹಾಗೆ ಅನೇಕ ಕಾಯಿಲೆ ಅನುಭವಿಸುವವರ ಈ ನನ್ನ ಮಾತನ್ನು ಓದಿ ನಂಬತಕ್ಕದ್ದಾಗಿದೆ'

ಮಿಸೆಸ್ ಮಾರ್ಗರೆಟ್ ಪ್ಯಾಟ್ರಿಕ್, ಸೆಂಟ್ರಲ್ ಪಾರ್ಕ್, ಎಲ್ ಐ, ಎನ್ ವೈ, ಈಕೆ ಬರೆಯುವುದು — "ಪೆರೂನಾದಿಂದ ನನಗೆ ಎಷ್ಟು ಉಪಕಾರವಾಗಿದೆಯೋ ಅದನ್ನು ಬರೆದು ತಿಳಿಸುವುದು ನನ್ನ ಕರ್ತವ್ಯವೆಂದು ತಿಳಿಯುತ್ತೇನೆ ಸ್ವಲ್ಪ ಹೆಚ್ಚು ಕಡಿಮೆ ಆರು ವರುಷಗಳ ತನಕ ನಾನು ನರಳಿದೆನು ಅನೇಕ ಡಾಕ್ಟರುಗಳಲ್ಲಿ ಪರೀಕ್ಷೆ ಮಾಡಿಸಿದ್ದಾಯಿತು ಅವರು ಸ್ವಲ್ಪ ಪರಿಹಾರ ಕೊಟ್ಟರಲ್ಲದೆ ಅವರ ಔಷಧಿಯು ವಾಸಿಮಾಡಲಿಲ್ಲ ನಾನು ಬಹಳ ಬಾಧೆಯನ್ನನುಭವಿಸಿದ್ದೇನೆ ನನ್ನ ಗಂಡನು ಔಷಧಕ್ಕಾಗಿ ಬಹಳ ಹಣ ಖರ್ಚು ಮಾಡಿದನು

'ನಿರಾಶೆಯಾಗಿ ಕಡೆಯಲ್ಲಿ ಪೆರೂನಾವನ್ನು ಪರೀಕ್ಷೆ ಮಾಡೋಣವೆಂದು ಸೇವನೆ ಮಾಡಲಾರಂಭಿಸಿದೆನು ನಿಮ್ಮ ಹೇಳಿಕೆಯ ಪ್ರಕಾರ ಮೊದಲನೇ ಬಾಟ್ಲಿ ಮುಗಿಯುವಷ್ಟರಲ್ಲಿ ಸ್ವಲ್ಪ ಉಪಶಮನವಾಯಿತು ಆಗಿನಿಂದ ನನಗೆ ಬೆನ್ನಿನ ನೋವು ಇಲ್ಲವೇ ಇಲ್ಲ ಈಚೆಗೂ ಪೆರೂನಾವನ್ನು ಸೇವಿಸಿದೆವೆ ಈಗ ನಮ್ಮ ಮನೆಗೆ ಡಾಕ್ಟರ ಪ್ರವೇಶವೇ ಅಗತ್ಯವಿಲ್ಲವಾಯಿತು

ಅನ್ನಾ ವಂಡರ್, ಕೋಲಿಗ್ರೋವ್, ಆರ್ಕ್, ಈಕೆ ಬರೆಯುವುದು — "ನಾನು ಸ್ತ್ರೀ ಧರ್ಮದ ಕಾಯಿಲೆಯನ್ನು ಹದಿಮೂರು ವರುಷಗಳ ತನಕ ಅನುಭವಿಸಿದೆನು ಊರಿನಲ್ಲಿಯ ಪ್ರಸಿದ್ಧ ಡಾಕ್ಟರುಗಳು ಹೇಳಿದ್ದನ್ನೆಲ್ಲಾ ಮಾಡಿದೆನು ಎಲ್ಲಾ ನಿಷ್ಫಲ ಯೋಜನವಾಯಿತು ಸ್ಪ್ರಿಂಗ್ಸ್ ಎಂಬಲ್ಲಿ ನಾನು ಸಾವಿರಾರು ರೂಪಾಯಿ ಖರ್ಚು ಮಾಡಿದೆನು ಡಾಕ್ಟರುಗಳು ನನ್ನ ಗರ್ಭಕೋಶವನ್ನು ಶಸ್ತ್ರದಿಂದ ತೆಗೆದು ಬಿಡಬೇಕೆಂದು ತೀರ್ಮಾನ ಮಾಡಿದರು ಆದರೆ ನಾನು ಅದಕ್ಕೆ ಸಮ್ಮತಿಸಲಿಲ್ಲ ಪೆರೂನಾ ಎಂಬೀ ಔಷಧದ ಪ್ರಕಟನೆಯನ್ನು ಓದಿ ಒಂದು ಬಾಟ್ಲಿಯನ್ನು ಕೊಂಡು ತೆಗೆದುಕೊಳ್ಳುತ್ತಾ ಬಂದೆನು ಒಂದು ಬಾಟ್ಲಿ ಮುಗಿಯುವಷ್ಟರೊಳಗೆ ನನಗೆ ಹಾಸಿಗೆಬಿಟ್ಟೆದ್ದು ತಿರುಗಾಡುವಂತಾಯಿತು ಮೂರು ಬಾಟ್ಲಿ ಔಷಧ ಸೇವನೆಮಾಡಿದ ವೇಳೆ ನಾನು ಯಥಾಪ್ರಕಾರ ಸುಖವಾದೆನು ನನ್ನ ಮಾಂಸಖಂಡಗಳು ಕೂಡಿಕೊಂಡವು ನನ್ನ ಹದಿನೆಂಟು ಪೌಂಡು ತೂಗುತ್ತಿದ್ದವಳು ನೂರ ಎಂಬತ್ತಾರು ಪೌಂಡು ಹೆಚ್ಚಾದೆನು ನಿಮ್ಮ ಔಷಧವು ಮಹತ್ತರವಾದದ್ದು ಮತ್ತು ಅದ್ಭುತವಾದದ್ದು ಅದಿಲ್ಲದೇಹೋಗಿದ್ದರೆ ನಾನು ಈ ವರೆಗೆ ಗೋರಿಯಲ್ಲಿರುತ್ತಿದ್ದೆನು ರೋಗ ಪೀಡಿತರಾದ ಸ್ತ್ರೀಯರಿಗೆಲ್ಲಾ ಇದನ್ನೇ ಉಪಯೋಗಿಸಬೇಕೆಂದು ತಿಳಿಸುತ್ತೇನೆ ಪ್ರಪಂಚವನ್ನು ಕೊಟ್ಟರೂ ನಾನು ಅದನ್ನು ಬಿಟ್ಟಿರಲಾರೆನು"

ವಿಳಾಸ — ಈ ಔಷಧ ಸಿಕ್ಕುವ ಸ್ಥಳಗಳು.—

(೧) ಹಿಗ್‌ಬಾಥಮ್ ಅಂಡ್ ಸನ್ಸ್, ಬೆಂಗಳೂರು

(೨) ಇಂಗ್ಲಿಷ್ ಡ್ರಗ್ ಕಂಪನಿ, ಓಲ್ಡ್ ಮಿಂಟ್ ಬೀದಿ, ಮದರಾಸ್.

38 32

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

18—10—1907 ರಿಂದ 25—10—1907 ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	49	41	0	0
ಮೈಸೂರು ,,	119	94	0	0
ಬೆಂಗಳೂರು ಡಿಸ್ಟ್ರಿಕ್ಟು	251	161	0	0
ಮೈಸೂರು ,,	100	69	0	0
ಕೋಲಾರ್ ,,	72	36	0	0
ಕೋಲಾರ್ ಚಿನ್ನದ ಗಣಿಗಳು	33	22	0	0
ತುಮಕೂರು ಡಿಸ್ಟ್ರಿಕ್ಟು	27	23	0	0
ಹಾಸನ ,,	16	19	0	0
ಚಿತ್ರದುರ್ಗ ,,	15	11	0	0
ಕಡೂರ್ ,,	37	26	0	0
ಶಿವಮೊಗ್ಗ ,,	0	0	0	0
ಜುಮ್ಲಾ	718	499	0	0

ಶಾಲಿವಾಹನ ಶಕ ವರುಷಂಗಳು ೧೮೨೯ ನೇ ಪ್ಲವಂಗನಾಮ ಸಂವತ್ಸರದ ಕಾರ್ತೀಕ ಶುದ್ಧ ನವಮಿ ಗುರುವಾರದಿಂದ ಕಾರ್ತೀಕ ಬಹುಳ ಪಾಡ್ಯಮಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೭ ನೇ ಇಸವಿ ನವಂಬರು

ತಾ	ವಾರ		ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಶಿರಶ್ಶುಕ್ಲ ಮಾಸ
14	ಗುರು	*	ನವಮಿ	8 40	ಶ್ರ	26 16	29
15	ಶುಕ್ರ	,,	ದಶಮಿ	3 02	ಪೂಭಾ	23 33	30
16	ಶನಿ	‡	ಏಕಾದಶಿ	0 2	ಉಭಾ	6 32	1
17	ರವಿ	,	ತ್ರಯೋದ	59 25	ರೆ	20 40	2
18	ಚಂದ್ರ	,,	ಚತುರ್ದಶಿ	54 44	ಅ	30 16	3
19	ಕುಜ		ಪೌರ್ಣಮಿ	55 ?	ಭ	32 12	4
20	ಬುಧ	◐	ಪಾಡ್ಯ	56 06	ಕೃ	21 18	5

* ಮಹಾಪ್ರದೋಷ, ಸ್ಮಾರ್ತ ಏಕಾದಶಿ ‡ ವೈಷ್ಣವ ಏಕಾದಶಿ ಚತುರ್ದಶಿ ವ್ರತ, ಉತ್ಥಾನದ್ವಾದಶಿ ಪ್ರದೋಷ ,, ವೈಕುಂಠ ಚತುರ್ದಶಿ, ಕಾರ್ತೀಕ ಸೋಮವಾರ ವ್ಯಾಸಪೂರ್ಣಿಮಾ ರಾತ್ರಿಪೂಜಾ, ಶಿವದೀಪೋತ್ಸವ ◐ ವಿಷ್ಣುದೀಪ

ಪೇಟೆ ಧಾರಣೆ.

ದಿನಸಿ	ಮೈಸೂರು	ಬೆಂಗಳೂರು
ಕನ್ನಡ ಅಕ್ಕಿ ಪಲ್ಲ ೧ಕ್ಕೆ ರೂ	[illegible]	[illegible]
ಕೆಂಬುಂತಿ ಅಕ್ಕಿ ಅವಲ್	[illegible]	[illegible]
,, ಮಧ್ಯಮ	[illegible]	[illegible]
ಜೀರಾಪಕ ಅಕ್ಕಿ	[illegible]	[illegible]
ಸಣ್ಣಕ್ಕಿ ಅವಲ್	[illegible]	[illegible]
,, ಮಧ್ಯಮ	[illegible]	[illegible]
ತೊಗರಿ ಬೇಳೆ ಪಲ್ಲ ೧ಕ್ಕೆ	[illegible]	[illegible]
,, ಮಧ್ಯಮ	[illegible]	[illegible]
ಸೈರ ರಾಗಿ ಪಲ್ಲ ೧ಕ್ಕೆ	[illegible]	[illegible]
ಕಾಗ್ರಿ	[illegible]	[illegible]
ಜೋಳ	[illegible]	[illegible]
ಹಲಸಂದೆ ಪಲ್ಲ ೧ಕ್ಕೆ	[illegible]	[illegible]
ಬಿಳೀ ಅವರೆ	[illegible]	[illegible]
ಹೆಸರು	[illegible]	[illegible]
ಉದ್ದು	[illegible]	[illegible]
ಕಡಲೆ	[illegible]	[illegible]
ಎಳ್ಳು ಸೆ ೧ಕ್ಕೆ	[illegible]	[illegible]
ಹುರುಳಿ	[illegible]	[illegible]
ಹರಳು ೧ ೦೦ ಸೇರಿಗೆ	[illegible]	[illegible]
ಸೀಗೇಕಾಯಿ ಮಣ ೧ಕ್ಕೆ	[illegible]	[illegible]
ಮೆಣಸಿನಕಾಯಿ	[illegible]	[illegible]
,, ಮಧ್ಯಮ	[illegible]	[illegible]
ಬೆಲ್ಲ ದೊಡ್ಡ ಅಚ್ಚು	[illegible]	[illegible]
ಒಳ್ಳೆಣ್ಣೆ ಮಣ ೧ಕ್ಕೆ	[illegible]	[illegible]
ಹರಳೆಣ್ಣೆ ,,	[illegible]	[illegible]
ಕೊತ್ತುಂಬರಿ ಪಲ್ಲ ೧ಕ್ಕೆ	[illegible]	[illegible]
ಉಪ್ಪು ,,	[illegible]	[illegible]
ಹುಣಸೇ ಹಣ್ಣು	[illegible]	[illegible]
,, ಹಳೇದು	[illegible]	[illegible]
ತುಪ್ಪ ಮಣ ೧ಕ್ಕೆ	[illegible]	[illegible]
ಸೀಮೆಯೆಣ್ಣೆ ಪೆಟ್ಟಿಗೆ ೧ಕ್ಕೆ	[illegible]	[illegible]
ತೆಂಗಿನಕಾಯಿ ೧೦೦ಕ್ಕೆ	[illegible]	[illegible]
ಅಡಿಕೇಕಾಯಿ ಮಣ ೧ಕ್ಕೆ	[illegible]	[illegible]
ಅಂಟ್ವಾಳದ ಕಾಯಿ ಮಣ ೧ಕ್ಕೆ	[illegible]	[illegible]
ಚಿನ್ನ (ಪವನ್) ಕೆಂಪು	[illegible]	[illegible]
,, ,, ಪಸುಮೆ	[illegible]	[illegible]
,, ,, ಗಟ್ಟಿ ತೊಲ ೧ಕ್ಕೆ	[illegible]	[illegible]
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ	[illegible]	[illegible]

Printed and Published by the Rev E Thompson, M A, Proprietor and Manager, Wesleyan Mission Press, Mysore. 14/11/1907

REGISTERED
M. 20

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು. ಕ್ರಯ ೧ ದುಡ್ಡು.

ಸಂಪುಟ ೨೧ ಮೈಸೂರು—ಸರ್ ೧೯೦೭ ನೇ ಇಸವಿ ನವಂಬರ್ ತಾರೀಖು ೨೧ ನೇ ಗುರುವಾರ. ಸಂಚಿಕೆ ೪೫

ಕಾರ್ಡು ಸೈಜು ೪|×೩.

ಫೋಟೋ ತೆಗೆಯುವ

ಫೊ ಟೊ ಕ್ಯಾ ಮೆ ರಾ.

8111

ಬೆಲೆ ಪಕ್ಕಾ ಮೂರು ರೂಪಾಯಿ.

ಇದರಿಂದ ಬೇಕಾದ ಮನುಷ್ಯನ ಫೋಟೋ ಅವನಿಗೆ ತಿಳಿಯದಂತೆ ತೆಗೆಯಲಿಕ್ಕೆ ಬರುತ್ತದೆ. ವೇಗದಿಂದ ಓಡುವ ಗಾಡಿಯು ಮತ್ತು ಹಾರುವ ಪಕ್ಷಿಯ ಫೋಟೋ ಸಹ ತೆಗೆಯಬಹುದು. ಇದರಲ್ಲಿ ಕಲಿಯತಕ್ಕದ್ದೇನೂ ಇಲ್ಲ. ಈ ಕ್ಯಾಮರಾದ ನಿಗಿಷಿಕೆಯನ್ನು ಕೊಳ್ಳುವವರಿಗೆ ನಾವು ಉಚಿತ ಶಿಕ್ಷಣ ಮಾಡಿಕೊಡುವೆವು. ಎಷ್ಟೋ ಕಡೆಗೆ ಇಂಥದ್ದು ೧೦ ರಿಂದ ೧೫ ರೂ. ಬೆಲೆ ಬೀಳುತ್ತದೆ. ಆದರೆ ಇದರ ಬರೇ ಕಿಮ್ಮತು ೩ ರೂಪಾಯಿ ಮಾತ್ರ ಇರುವದು. ಟಪ್ಪಾಲ್ ಖರ್ಚು ೯ ಆಣೆ. ಇದು ಸಿಕ್ಕತಕ್ಕ ವಿಳಾಸ — ಭೋಟಾಲಾಲ ಭಗನಲಾಲ ಮಹಾಜನ, ರಾಜದ್ವಾರ ರೋಡ, ಪೋಸ್ಟ್ ಕಾಲಬಾದೇವಿ, ಮುಂಬಯಿ

ಜ್ವ ರ ಹ ರಿ. 11ನ೨

ಇದು ಸಾಧಾರಣ ಜ್ವರ, ಚಳಿಜ್ವರ, ಮೋಲೇಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ ಚಳಿ ಹಿಡಿಯುವದು, ಎಂಬ ಸಕಲ ವಿಧವಾದ ಜ್ವರಗಳನ್ನು ಬಹು ಬೇಗನೆ ಗುಣಪಡಿಸುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಿಕೆರೆಯಲ್ಲಿರುವ ಮರಾಮತ್ ಖಾತಾ ಸಬ್ ಡಿವಿಜನ್ ಆಫೀಸರ್ ಎಸ್. ಟಿ. ವೆಂಕಟಪತಿ ಅಯ್ಯನವರು—ನೀವು ಕಳುಹಿಸಿದ ಸೀಸೆಯು ತಲಪಿದೆ ... ಇದು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚನ್ನಾಗಿ ಗುಣಹೊಂದಿರುವರು. ಇನ್ನೂ ಜನಗಳು ಕಾಹಿಲೆ ಬಿದ್ದಿರುವ ಕಾರಣ ದಯವಿಟ್ಟು ಇನ್ನೊಂದು ೨೦ ಔನ್ಸಿನ ಸೀಸೆಯನ್ನು ವಿ. ಪಿ. ಮೂಲಕ ಕಳುಹಿಸಿರಿ ಎಂದು ಬರೆದಿರುವರು.

ಕ್ರಯ — ಸೀಸೆ ೧ ಕ್ಕೆ ೮ ಆಣೆ, ೧ ಡಜ ... ೮ ರೂ., ೫ ... ೧೧ ರೂ., ಹನ್ನೆರಡು ಸೀಸೆ ಸರಿಸಿಕೊಂಡರೆ ಪೋಸ್ಟೇಜು ಮಾಫಿ ಮಾಡಲಾಗುವದು

✱✱✱✱✱✱✱✱✱

ಪಿ. ಮೃ ತಾ ಂ ಕ ರ್ಪೂ ರ.

Amrutam Carpoor

✱ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಚಳಿ ಜ್ವರ, ಕೆಮ್ಮು, ವಾಂತಿಭೇದಿ, ನಾನಾತರದ ಹೊಟ್ಟೆ ನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕಾಲರಾ ಗುಣಕೊಡುವದು. ಇದು ಹಲಗಸರು ತಿಂಗಳಿಗೆ ಒಂದಾವರ್ತಿ ಹೊಸರಿಗೆ ಆಗುವದಕ್ಕೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ಯಾಂಪ ದರವು ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರೆಯುವದು.

ಕೆಂಟಿನ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಚೆನ್ನಿಯ ರಿಂದ ಕರ್ಪೂರವನ್ನು ನಾನೂ ನನ್ನ ಕಾಚೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವಿಷಯಗಳಿಂದಲೂ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ. ಕೆಟ್ಟ ಹೂಡಲ ಹಳ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧ ವೆಂದು ಬರೆದಾರೆ

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಸಾಹುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದವರಲ್ಲಿ ವಿಚಾರಿ.— ಚೆನ್ನೈಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ, ಸೆಕೆಂಡ್ ಬೀಚ್ ಲೈನ್, ಮದರಾಸ್

WILLIAM & CO., BOMBAY.

ವಿಲಿಯಂ ಮತ್ತು ಕಂಪನಿ, ಫೋರ್ಟು, ಮುಂಬಯಿ.

ಗಜಕರ್ಣದ ಮುಲಾಮು.

27 39

ಇದನ್ನು ಹಾಗಿಸುವದರಿಂದ ಎಲ್ಲಾ ತರದ ಕಜ್ಜಿಯು ನಾಶವಾಗುತ್ತದೆ. ಮೂರು ಸಾರಿ ಹಾಗಿಸುವದರೊಳಗೆ ಗಜಕರ್ಣವು ಹೋಗುವದು. ಇದನ್ನು ಹಚ್ಚಿದಲ್ಲಿ ಉರಿಯು ಬರುವದಿಲ್ಲ. ಮತ್ತು ಚರ್ಮ ಕಪ್ಪಾ

ಗುವದಿಲ್ಲ. ಒಂದು ಸಾರಿ ಪರೀಕ್ಷಿಸಿ ನೋಡಿರಿ ಗುಣ ಕಂಡುಬರುವದಿಲ್ಲವಾದರೆ ಹಣ ಹಿಂತಿರುಗಿ ಕೊಡಲ್ಪಡುವದು. ಡಬ್ಬಿ ೧ಕ್ಕೆ ಕಿಮ್ಮತ್ತು ೦-೩-೦ ವಿ. ಪಿ. ೦-೧೧-೦. ತರಿಸಿಕೊಳ್ಳಿರಿ ತಪ್ಪಬೇಡಿರಿ!!

ಪಿಪ್ಪುಗುಟಿಕ ೧-೦-೦ ಸುಂದರೀ ತೈಲ ೦-೮-೦ ದಂತಮಂಜನ ೦-೨-೦ ಕಫಹಾರಿ ೦-೪-೦ ಕೇಶವರ್ಧನ ತೈಲ ೧-೦-೦ ಜೀರ್ಣ ರಸಾಯನ ೦-೬-೦ ಬಚ್ಚೆ ಪಾಲಾನು ೦-೩-೦ ಈ ಕಂಪನಿಯವರು ಕಜ್ಜಿ ನಮೂನೆಯ ಔಷಧಗಳನ್ನು ಸ್ವಹಸ್ತ ತಯಾರಿಸುವದರಿಂದ ಕ್ಯಾಟಲಾಗು ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು

ಅ ಮೃ ತಾ ಂ ಜ ನ್

ಬಾಟ್ಲಿ ಒಂದಕ್ಕೆ ಕಿಮ್ಮತ್ತು ೮ ಆಣೆ. ವಿ. ಪಿ. ೧೨ ಆಣೆ.

ಅಮೃತಾಂಜನ—ಸುಖಾಂಜನ.
ಅಮೃತಾಂಜನ—ದಿವ್ಯಾಂಜನ.
ಅಮೃತಾಂಜನ—ಸಂಜೀವನ
ಅಮೃತಾಂಜನ—ಪರಮಾಂಜನ
ವಾತ, ಎದೆನೋವು, ಗಂಟುನೋವು, ಸಂಧಿವಾತ ತಲೆನೋವು, ಮೂಲವ್ಯಾಧಿ, ಈ ಎಲ್ಲಾ ತರದ ರೋಗಕ್ಕೆ ಈ ಅಮೃತಾಂಜನವು ದಿವ್ಯ ಔಷಧವಾಗಿರುತ್ತದೆ.

ಅಮೃತಾಂಜನ ಡಬ್ಬಿ ೧ಕ್ಕೆ ೮ ಆಣೆ

ಅಮೃತಾಂಜನ—ಶೀತಭಂಜನಿ
ಅಮೃತಾಂಜನ—ತಕ್ಷಣಸಹಾರಿಣಿ.
ಅಮೃತಾಂಜನ—ಅಪೂರ್ವದರ್ಶನಿ.
ಅಮೃತಾಂಜನ—ಭಂಜನವಿಮರ್ಧಿನಿ
ಇದರಿಂದ ಗುಣ ಕಂಡುಬರುವದಿಲ್ಲವಾದರೆ ಹಣ ಹಿಂತಿರಿಗಿ ಕೊಡಲ್ಪಡುವದು. ಪಕ್ಷ ಮತ್ತು ಘಾಯ, ಅರ್ಧಾಂಗವಾಯು, ಈ ರೋಗಕ್ಕೆ ಇದು ಸಂಜೀವನವಾಗಿರುತ್ತದೆ. ತರಿಸಿಕೊಳ್ಳಿರಿ! ಪರೀಕ್ಷಿಸಿರಿ!

ವಿಲಿಯಂ ಮತ್ತು ಕಂಪನಿ, ೧೯ ಓಕ್ ಲೇನ್, ಫೋರ್ಟ್, ಮುಂಬಯಿ.
ಟೆಲಿಗ್ರಾಫು ಅಡ್ರೆಸು; "ಅಮೃತಾಂಜನ,"ಮುಂಬಯಿ.

ರಬ್ಬರ್ ಹ್ಯಾಂಡ್ ಪ್ರೆಸ್.

1147

ಕಲಾಕೌಶಲ್ಯದಿಂದ ಮತ್ತು ಉದ್ಯೋಗದಿಂದ ಊರ್ಜಿತಸ್ಥಿತಿ ಹೊಂದುವ ಈ ಭಾರತ ಭೂಮಿಯೊಳಗೆ ಈ ಪ್ರೆಸ್ ತಯಾರಾಗುತ್ತದೆ. ಇದುವರೆಗೆ ಈ ಪ್ರೆಸ್ಸು ಪರದೇಶದಿಂದ ಬರುತ್ತಿರುವಾಗ ಅದಕ್ಕೆ ೧೫ ರಿಂದ ೨೫ ರೂಪಾಯಿಗಳ ವರೆಗೆ ಬೆಲೆ ಬೀಳುತ್ತಿತ್ತು. ಈ ಪ್ರೆಸ್ಸಿನೊಳಗೆ ಕನ್ನಡ, ತಮಿಳು, ತೆಲುಗು, ಉರ್ದು, ಮರಾಠಿ, ಗುಜರಾಥಿ, ಇಂಗ್ಲೀಷ್ ಮತ್ತು ಬೇಕಾದ ಭಾಷೆಯಲ್ಲಿ ಒಂದು ಪುಟ ತಯಾರು ಮಾಡಿ, ಮಾಡಿದ ಮೇಲೆ ಬಹು ಸ್ವಲ್ಪ ಕಾಲದೊಳಗಾಗಿಯೇ ಇದರಿಂದ ೧೦೦ ಪ್ರತಿಗಳನ್ನು ತಯಾರು ಮಾಡಬಹುದು. ಅದ್ದರಿಂದ ಈ ಪ್ರೆಸ್ಸು ಸಾರ್ವಜನಿಕ ಕಚೇರಿ ಮ್ಯುನಿಸಿಪಾಲಿಟಿ ಪೋಲೀಸ್ ಆಫೀಸರರೂ, ವಕೀಲರು, ವರ್ತಕರು, ಇನಾಮುದಾರರೂ ಮತ್ತು ಪರೀಕ್ಷಕರೂ ತಮ್ಮ ಸಂಗ್ರಹದಲ್ಲಿ ಅವಶ್ಯ ಇಡಬೇಕು. ಎಷ್ಟೋ ಕಾರಕೂನರ ಸಹಾಯದಿಂದ ಒಂದು ಕೆಲಸಕ್ಕೆ ಬಹಳ ಕಾಲ ಹಿಡಿಯುವದು ಅದರ ಈ ನಮ್ಮ ಪ್ರೆಸ್ಸಿನಿಂದ ಅಂಥಾ ಕೆಲಸವನ್ನಾದರೂ ಸ್ವಲ್ಪ ಕಾಲದಲ್ಲಿಯೇ ಮಾಡುವದಕ್ಕೆ ಸಾಧ್ಯ. ಇದರ ಬೆಲೆಯಿಂದ ಈ ಪ್ರೆಸ್ ಜನಗಳ ಪ್ರೀತಿಗೆ ಪಾತ್ರವಾಗಿರುವದು. ಈ ಕಾರಣದಿಂದ ಪ್ರತಿ ಒಬ್ಬರೂ ತಮ್ಮ ಹತ್ತಿರ ಈ ಪ್ರೆಸ್ಸನ್ನು ಅವಶ್ಯಕವಾಗಿ ಇಡುವದರಲ್ಲಿ ಏನೂ ಸಂದೇಹವಿಲ್ಲ.

ನೋಟ್ ಪೇಪರ್ ಸೈಜು, ರೂಪಾಯಿ ೪—೦—೦.
ಹಾಫ್ ಫುಲ್‌ಸ್ಕ್ಯಾಪ್ ಸೈಜು, ೬—೦—೦.
ಪೋಸ್ಟೇಜು ಬೇರೆ (extra)

ವಿಳಾಸ:— ವರ್ಧಮಾನ ಏಜನ್ಸಿ,
ಪೋಸ್ಟ್ ಕಾಲಬಾದೇವಿ,
ಮುಂಬಯಿ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು

26 10

೧ ಲೋಕಾಮಯಹರ ಕಸ್ತೂರೀ ಮಾತ್ರೆ.—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಬೆಲೆಬಾಳುವ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ.

ಚಳಿಜ್ವರ, ಜ್ವರ ಹೊಟ್ಟೆಶೂಲೆ, ಸಂದುಗಳ ನೋವು, ಮೈ ಸೈತಾಲು ಕೊಡತ (ಭಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿಮಾಂದ್ಯ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕರೋಗಗಳಿಗೆ ಹೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ.

ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಲದಲ್ಲಿಯೂ ದಾರಿಕೊಡದೆ, ನೀರು ಹವಾಗಳ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧಿ ಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಸೂತ್ಕಾರ ಎಳವು, ಜ್ವರ, ಸನ್ನಿಜ್ವರ ಕೈಕಾಲುಗಳನ್ನು ಗುಣಪಡಿಸುತ್ತದೆ.

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ರೋಗಕ್ಕೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ. ಅನುಪಾನಪತ್ರ ಔಷಧದ ಸಂಗಡಲೇ ಇರುತ್ತದೆ.

೨೦ ಮಾತ್ರೆಯುಳ್ಳ ಕುಪ್ಪಿಗೆ ೪ ಆಣೆ, ೫ ಕುಪ್ಪಿಗೆ ೧ ರೂಪಾಯಿ. ೧ ರಿಂದ ೨೦ ಕುಪ್ಪಿ ವರೆಗೆ ಪೋಸ್ಟೇಜು ೪ ಆಣೆ.

ವಿಳಾಸ:—ಪಾಳ್ಯದ ವೆಂಕಟಾಚಲ ಪಂಡಿತ,
ಎಸ್. ಎಸ್. ಆರ್. ವೈದ್ಯಶಾಲಾ,
ಲಕ್ಷ್ಮೀವಿಲಾಸ ರೋಡ್, ಮೈಸೂರು

೧೯೦೭ ನೇ ಇಸವಿಯ ಇಂಗ್ಲೀಷು-ಕನ್ನಡ

119 3

ಪಾಕೆಟ್ ಡೈರಿ

ಎ. ನಂ॥ ಬಿ. ನಂ॥ ಸಿ. ನಂ॥ ಡಿ. ನಂ॥

ಕ್ರಯ ೩ ಆಣೆ ೪ ಆಣೆ. ೬ ಆಣೆ. ೮ ಆಣೆ

ಈ ಡೈರಿಗಳು—ವರ್ತಕರು, ಲಾಯರುಗಳು, ಕಂಟ್ರಾಕ್ಟರು, ದೊಡ್ಡ ಮನುಷ್ಯರು, ಬುಕ್‌ಕೀಪರ್ ಸನಾಯಸ್ತರಿಗೂ ಉಪಯೋಗವಾಗಿರುತ್ತವೆ. ಇವುಗಳಲ್ಲಿ ಅಡಕವಾಗಿರುವ ವಿಷಯಗಳು—ಕೀಲಕ ಸಂ॥ ಪಂಚಾಂಗ, ಗ್ರಹ ಕುಂಡಲಿ ಸಹಿತ, ಕ್ಯಾಲೆಂಡರು, ಹಬ್ಬಗಳು, ರಜಾ ದಿನಗಳು, ರೈಲ್ ಛಾರ್ಜು, ಕೋರ್ಟ್ ಫೀಜು, ಪೋಸ್ಟಲ್ ರುಸುಂ, ಸ್ಟಾಂಪು ರಿಜಿಸ್ಟರ್ ಫೀಜುಗಳು, ಪೋಸ್ಟಾಫೀಸಿನ ಎಲ್ಲಾ ವಿಷಯಗಳು, ಐವಿರಾಗಳ ಅಳತೆ, ಗೌರಿ ಪಂಚಾಂಗ, ಪುಷ್ಪಶಾಸ್ತ್ರ, ರಾಹುಕಾಲ, ಗುಳಿಕಕಾಲ, ವಾರಶೂಲೆ, ಮಾಸಫಲಗಳು, ದಿನ ಸಂಬಳದ ಪಟ್ಟಿ, ಧೋಬಿ ಲೆಕ್ಕ, ಜಮಾ ಖರ್ಚು ಪಟ್ಟಿ, ಇನ್ನೂ ಅನೇಕ ವಿಷಯಗಳು ಇವೆ. ಉತ್ಕೃಷ್ಟವಾದ ಕಾಗದ, ರೂಲು ಹಾಕಿದೆ. ಸೀಮೆ ಸಾಮಾನು ಬೈಂಡು, ಚಿನ್ನದ ಬಂಗಾರದ ರೇಖೆನಿಂದ ಕಾಂದಣ ಮಾಡಲ್ಪಟ್ಟಿದೆ.

ಎ ನಂಬರ್ ಚಿಕ್ಕ ಸೈಜು	.	೩ ಆಣೆ.
ಬಿ. ನಂಬರ್ ಮುಚ್ಚಳದ್ದು		೪ ಆಣೆ
ಸಿ ನಂಬರ್ ದೊಡ್ಡ ಸೈಜು	.	೬ ಆಣೆ
ಡಿ ನಂಬರ್ ಮುಚ್ಚಳದ್ದು .		೮ ಆಣೆ

ಪೋಸ್ಟು ಛಾರ್ಜು ಬೇರೆ. ಒಂದೇ ಸಮಾನೆಯಲ್ಲಿ ೧೨ ಡೈರಿ ತರಿಸಿಕೊಂಡರೆ ೧ ಡೈರಿ ಉಚಿತವಾಗಿ ಕೊಡುವೆವು. ವಿ ಪಿ ಮೂಲಕವೂ ತರಿಸಿಕೊಳ್ಳಬಹುದು.

ನಮ್ಮ ವಿಳಾಸ—ಶ್ರೀ. ಶಿವಲಿಂಗಂ ಶೆಟ್ಟಿ ಕಂಪನಿ,

ಕರ್ನಾಟಕ ಬುಕ್ ಡಿಪೋ ಪ್ರೆಸ್, ಬಳ್ಳಾರಿ.

ಇಗೋ! ಕನ್ನಡ "ಮೋಡಲ್" ಪಾಕೆಟ್ ಡೈರಿ!

122 3

ಸೊಗಸಾದ ಡೈರಿಗಳು !! ಉತ್ತಮವಾದ ಡೈರಿಗಳು !!

ಉತ್ಕೃಷ್ಟವಾದ ಡೈರಿಗಳು !!



೧೯೦೭ ನೇ ವರುಷದ ಕನ್ನಡ ಡೈರಿಗಳು ಸೊಗಸಾಗಿ ರೂಲ್ ಹಾಕಿದ ಕಾಗದದ ಮೇಲೆ ಮುತ್ತಿನಂಥಾ ಅಕ್ಷರಗಳಿಂದ ಪ್ರಿಂಟಾಗಿ ಮನಸ್ಸಿಗೆ ಆಹ್ಲಾದವನ್ನುಂಟುಮಾಡತಕ್ಕವುಗಳಾಗಿರುತ್ತವೆ. ಇವುಗಳಲ್ಲಿ ಅಡಕವಾಗಿರುವ ವಿಷಯಗಳು—ಜಮಾಖರ್ಚಿನ ಪಟ್ಟಿ, ಧೋಬಿ ಲೆಕ್ಕ, ದಿನ ಸಂಬಳದ ಪಟ್ಟಿ, ವಾರಶೂಲೆ, ಗುಳಿಕ ಕಾಲ, ರಾಹು ಕಾಲ, ಹಲ್ಲಿ ಬಿದ್ದ ಫಲ, ಪುಷ್ಪಶಾಸ್ತ್ರ). ಗೌರಿ ಪಂಚಾಂಗ, ತೂಕಗಳು, ಐವಿರಾಗಳ ಅಳತೆ, ಪೋಸ್ಟಾಫೀಸಿನ ಎಲ್ಲಾ ವಿಷಯಗಳು, ರಿಜಿಸ್ಟರ್ ಫೀಜುಗಳು, ಸ್ಟಾಂಪು, ಪ್ರೋಸೆಸ್ ರುಸುಂ, ಕೋರ್ಟ್ ಫೀಜು, ರೈಲ್ ಛಾರ್ಜು, ರಜಾ ದಿನಗಳು, ಹಬ್ಬಗಳು, ಕ್ಯಾಲೆಂಡರು, (ಗ್ರಹಕುಂಡಲಿ ಸಹಿತ) ಪ್ಲವಂಗ ಸಂ॥ ಪಂಚಾಂಗ, ಇವೇ ಮುಂತಾದ ಅನೇಕ ವಿಷಯಗಳು ಅಡಗಿರುತ್ತವೆ. ಡೈರಿಗಳ ಕ್ರಯ—

ನಂ॥ ೧ ಸಣ್ಣ ಸೈಜು ಪೆನ್ಸಿಲ್ ಇಡತಕ್ಕ ಡೈರಿ ೦—೪—೦, ಹನ್ನೆರಡು ಡೈರಿಗಳಿಗೆ ೧ ಇನಾಮು.

ನಂ॥ ೨ ಸಣ್ಣ ಸೈಜು ಪೆನ್ಸಿಲ್ ಇಟ್ಟು ಮುಚ್ಚಳ ಹಾಕಿರುವ ಫ್ಲಾಪ್ ಡೈರಿ ೦—೬—೦, ಹನ್ನೆರಡು ಡೈರಿಗಳಿಗೆ ೧ ಇನಾಮು.

ನಂ॥ ೩ ದೊಡ್ಡ ಸೈಜು ಪೆನ್ಸಿಲ್ ಇಡತಕ್ಕ ಡೈರಿ ೦—೬—೦; ಹನ್ನೆರಡು ಡೈರಿಗಳಿಗೆ ೧ ಇನಾಮು

ನಂ॥ ೪ ದೊಡ್ಡ ಸೈಜು ಪೆನ್ಸಿಲ್ ಇಟ್ಟು ಮುಚ್ಚಳ ಹಾಕಿರುವ ಡೈರಿ ೦—೮—೦, ಹನ್ನೆರಡು ಡೈರಿಗಳಿಗೆ ೧ ಇನಾಮು

ಡೈರಿಗಳ ಗಲಾಟೆಯಲ್ಲಿ ಭ್ರಾಂತಿಗೊಂಡಬೇಡಿ. ಉತ್ತಮವಾದವುಗಳಿಗೆ ಹಣವನ್ನು ವ್ಯಯಮಾಡಿರಿ. ನಮ್ಮ ಡೈರಿಗಳು ಬಹು ಸುಲಭ ಕ್ರಯವುಳ್ಳವುಗಳು. ಇವುಗಳು ಗೌರ್ನಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿವೆ. ನಮ್ಮ ವಿಳಾಸ—

ಎಸ್. ಡಿ. ನಥ್‌ಮಲ್ ಕಂಪನಿ, ದೊಡ್ಡಪೇಟೆ, ಮೈಸೂರು.

ಅಥವಾ,

ಎಲ್. ಎ. ಪೋರವಾಲ್—ಬೆಂಗಳೂರು ಸಿಟಿ.

ಅಥವಾ,

ಮ್ಯಾನೇಜರ್. ಸಿ. ಎಲ್. ಎಸ್ ಬುಕ್ ಡಿಪೋ, ಮೈಸೂರು.

CHAMBERLAIN'S COUGH REMEDY.

ಚೇಂಬರ್ಲೇನಯವರು ಕಂಡು ಹಿಡಿದ ಕೆಮ್ಮಿನ ಔಷಧವು.

4-21

ಶೀತದ ಕೆಮ್ಮು, ಗಂಟಲು ಗೊರೆಯುವುದು, ಮಂದಿಗೆಮ್ಮು, ನಾಯಿಗೆಮ್ಮು, ಎಲ್ಲಾ ತರದ ಶೀತ, ಗಂಟಲು ಎದೆಯಲ್ಲಿ ಹುಟ್ಟುವ ಸಮಸ್ತ ವ್ಯಾಧಿಗಳು—ಇವಕ್ಕೆಲ್ಲಾ ಈ ಔಷಧವು ಬಹಳ ಪ್ರಯೋಜನವಾಗಿದೆ.

ಆ ಕೆಮ್ಮನ್ನು ಅಲಕ್ಷ್ಯಮಾಡಬೇಡಿ. ಅದು ಬಹಳ ಅಪಾಯವನ್ನುಂಟುಮಾಡತಕ್ಕದ್ದಾಗಿದೆ. ಅದರ ಮೇಲೆ ನ್ಯುಮೋನಿಯಾ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವುದು. ತರುವಾಯ ಉಗುಳಿನಲ್ಲಿ ರಕ್ತ ಬೀಳುವುದು, ಹಾಗೆಯೇ ಕ್ಷಯರೋಗಗಳಿಗೆ ಆಸ್ಪದವಾಗುವುದು.

ಚೇಂಬರ್ಲೇನರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟಲಿನಲ್ಲಿ ಶ್ಲೇಷ್ಮ ಕಟ್ಟುವುದನ್ನೂ, ಶ್ಲೇಷ್ಮ ಬೀಳುವುದನ್ನೂ ಉಚಿತವಾಗಿ ನಿವಾರಣೆ ಮಾಡುತ್ತದೆ. ಉಸುರು ಕೊಯ್ಯುವುದು ಕಷ್ಟವಾಗಿದ್ದರೆ ಅದನ್ನು ಕೂಡಲೇ ಸರಿಪಡಿಸುತ್ತದೆ. ಅಪಾಯಕರವಾದ ಕೆಮ್ಮಿನ ಶಬ್ದವನ್ನು ನಿಲ್ಲಿಸಿಬಿಡುತ್ತದೆ. ಎದೆ ಒಣಗುವಂಥಾ ಕೆಟ್ಟಸ್ಥಿತಿಯನ್ನು ಸಂಪೂರ್ಣವಾಗಿ ನಾಶಮಾಡಬಲ್ಲದು. ಕೆಮ್ಮನ್ನು ಶಮನಮಾಡಿ, ನೀವು ಸುಖವಾಗಿ ನಿದ್ರೆಮಾಡುವಂತೆ ಮನಸ್ಸಿಗೆ ಉಲ್ಲಾಸಕೊಡುತ್ತದೆ.

ಚೇಂಬರ್ಲೇನರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇರಿಸಿರುವುದಿಲ್ಲ.

ಈ ಔಷಧವು ಐನಸ್ಪತಿಗಳ ತಯಾರಿ

ಸ್ವಯಂಪದಮುಟ್ಟದೆ ತಯಾರಾಗಿದೆ

ಎಲ್ಲೆಲ್ಲೂ ಬಿಕರಿಯಾಗುವುದು. ಸಣ್ಣ ಶೀಸೆಗೆ ೧ ರೂಪಾಯಿ ದೊಡ್ಡ ಶೀಸೆಗೆ ೨ ರೂಪಾಯಿ

ಇಲ್ಲಿ ನೋಡಿ!

65 20

ತುಮಕೂರು ವಿಲ್ಸನ್ ಅಲಾವಿಯಲ್ಲಿ ಯೂರೋಪಿಯನ್ ಮೇಲ್ವಿಚಾರಣೆಯಿಂದ ಉತ್ತಮ ತರಹದ ಹಾಸನದ ಟೋಪಿಗಳು ಅತಿ ಶ್ರೇಷ್ಠವಾದ ಉಲ್ ದಾರದಿಂದ ತಯಾರಾಗುತ್ತವೆ.

ಕ್ರಯ ೨೦ ಆಣೆ ಮೊದಲು ೧ ರೂ ೧೨ ಆಣೆಯವರಿಗೆ.

೧ ಡಜನ್ ಟೋಪಿಗಳನ್ನು ತೆಗೆದುಕೊಳ್ಳುವವರಿಗೆ ಶೇಕಡ ೫ ರಂತೆ ಡಿಸ್‌ಕೌಂಟ್ ಕೊಡಲ್ಪಡುವದು.

ನಮ್ಮ ವಿಳಾಸ:—ಸೋನೇಜಿ

ಹಾಸನದ ಟೋಪಿ ಕಾರ್ಖಾನೆ, ವಿಲ್ಸನ್ ಅಲಾವಿ, ತುಮಕೂರು.

ವೀರಶೈವರೇ, ಕೊಂಚ ಗಮನಿಸಿ.

110 6

ಚಿತ್ರದುರ್ಗದ ಶ್ರೀಮನ್ನಿರಂಜನ ಜಗದ್ಗುರು ಮುರುಘರಾಜೇಂದ್ರ ಸ್ವಾಮಿಗಳ ಭಾವಚಿತ್ರವು ೧। ಆಣೆ ಸ್ಟಾಂಪು ಕಳುಹಿಸಿಕೊಟ್ಟಲ್ಲಿ ೬ × ೮ ಸೈಜಿನದು ೨। ಆಣೆ ಸ್ಟಾಂಪು ಕಳುಹಿಸಿಕೊಟ್ಟಲ್ಲಿ ಪ್ರಖ್ಯಾತ ಫಯಲ್ಲಿರಂತೆ ೮ × ೧೦ ಸೈಜಿನದೂ ರವಾನಿಸಲ್ಪಡತ್ತೆ. ಒಟ್ಟಾಗಿ ತರಿಸಿಕೊಂಡರೆ ೮ ಕ್ಕೆ ೧ ೨೦ ಕ್ಕೆ ೩. ೫೦ ಕ್ಕೆ ೬, ೧೦೦ ಕ್ಕೆ ೨೦ ರಂತೆ ಕಮಿಷನ್ ದೊರೆಯುತ್ತೆ.

ಸ್ವಾಮಿಗಳ ಅಸಲ್ ಫೋಟೋ ೧ ಕ್ಕೆ ಕ್ರಯ ೮ ಆಣೆ

ವಿಳಾಸ—ಬಿ ಪಿ ಪುಟ್ಟಣ್ಣ, ಫ್ಯಾನ್ಸಿಬಜಾರ್, ಕೋಟೆ, ಮೈಸೂರು

ನಿಮಗೆ ನೋವು ಇದೆಯೋ?

58 26

ಹಾಗಾದರೆ "ಕ್ಲಮೆಂಟ್ ಯಹೂದ ಮ್ಯಾಜಿಕ್ ಬಾಮ್" ನ್ನು ಏಕೆ ಉಪಯೋಗಿಸಬಾರದು? ಆಶ್ಚರ್ಯಕರವಾದ ಬಾಮ ಔಷಧಿ ನೋಡು! ಈಗಿನ ಶತಮಾನದಲ್ಲಿ ಕಂಡುಹಿಡಿದ ದೊಡ್ಡ ನೂತನವು!

ಈ ರಾಜ ಔಷಧವನ್ನು ನೇಟಿವ್ ಜನರು ತೊಡೆಯುತ್ತಲೇ ಕೆಲವು ನಿಮಿಷಗಳೊಳಗಾಗಿ ನರ ಮತ್ತು ನರ ಸಂಬಂಧವಾದ ಪಾರ್ಶ್ವ ನೋವು, ಕೀಲುಗಳ ಬಾಧೆ, ಕಿಬ್ಬೊಟ್ಟೆ ನೋವು, ಬೆನ್ನೆ ಉಳುಕುವದು, ತಲೆನೋವು, ಕೆಮ್ಮು, ಕೀಲುಗಳು ಕತ್ತರಿಸುವದು, ಕೊರಳು ಊತ, ಕೈಕಾಲು ಬಿಗಿತ ಇವುಗಳನ್ನೆಲ್ಲಾ ವಿದ್ಯುಚ್ಛಕ್ತಿಯಂತೆ ಗುಣಪಡಿಸುವದು. ಈ ಔಷಧವು ಆಶ್ಚರ್ಯಕರವಾಗಿ ಗುಣಪಡಿಸುವದರಿಂದ ಎಲ್ಲರಲ್ಲಿಯೂ ಪ್ರಸರಿಸುತ್ತಾ ಬರುವದು. ಇತರ ಔಷಧಿಗಳು ಗುಣಪಡಿಸದೆ ಹೋದಾಗ ಡಾಕ್ಟರ್ ಫೀಜನ್ನು ಉಳಿಸಿರಿ. ಇದು ನಿಸ್ಸಂದೇಹವಾಗಿಯೂ ಗುಣಪಡಿಸುವದು.

ಕ್ರಯ ೨೦ ಬಾಟ್ಲಿಗೆ ೧೨ ಆಣೆ, ಪೋಸ್ಟೇಜ್ ೭ ಆಣೆ ೩ ಬಾಟ್ಲಿಗೆ ಅಂಚೆವೆಚ್ಚ ಸೇರಿ ೧ ರೂ ೭ ಆಣೆ. ಎಲ್ಲಾ ಕೆಮಿಸ್ಟ್ ಷಾಪುಗಳಲ್ಲಿ ದೊರೆಯುವದು

ನಮ್ಮ ವಿಳಾಸ:—ಎಫ್. ಡಬ್ಲ್ಯು. ಆರ್ನ,

ಸಿಮೆಟ್ರಿ ರೋಡ್, ವೇಪೇರಿ, ಮದರಾಸ್.

ಔಷಧಿ ತಕ್ಕೊಂಡು ಗುಣವಾಗುವದಕ್ಕಿಂತಲೂ

ತಕ್ಕ ಕ್ರಮದಲ್ಲಿರುವದು ಉತ್ತಮ.

SCOTT'S EMULSION. 31-36

(ಸ್ಕಾಟ್ಸ್ ಇಮಲ್‌ಷನ್)

ಥಟ್ಟನೆ ರೋಗವುಳ್ಳವರಿಗೆ ಪ್ಲೇಗ್, ಮಲೇರಿಯಾ ರೋಗ, ವಾಂತಿಭೇದಿ ಅಥವಾ ಶ್ವಾಸಕೋಶದ ರೋಗಗಳ ಭಯಕ್ಕೆ ಒಳಪಡುವ ಅಗತ್ಯವಿಲ್ಲ.

ರೋಗವು ಬಲಹೀನರನ್ನೂ ದುರ್ಬಲರನ್ನೂ ಬೇಗನೆ ತಗಲಿ ಹಿಡಿಯುತ್ತದೆ.



ಅಸ್ವಾಸ್ಥ್ಯವನ್ನು ದೂರ ಹೋಗಲಾಡಿಸಿ, ಶರೀರದಲ್ಲಿರುವ ಬಲಹೀನ ಭಾಗಗಳನ್ನು ಬಲಪಡಿಸಿ, ಸಂಪೂರ್ಣ ಸೌಖ್ಯವನ್ನು ಉಂಟುಮಾಡುತ್ತದೆ.

ಕೈಸೋಕದೆ ತಯಾರಾದದ್ದು.

ಎಲ್ಲಾ ಔಷಧ ವ್ಯಾಪಾರಗಾರರಲ್ಲೂ ಮಾರಾಟವಾಗುತ್ತದೆ.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್.

ಈ ವಿಹಾನಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ

ಈಗಲೇ ಸೀಮೆಯಿಂದ S S ಕ್ರಾಸ್ಟಲ್ಸ್ ಸ್ಟೀಮರಿನಲ್ಲಿ ಬಂದಿದೆ.

117 4

ಎಣ್ಣೆಕೆಂಪು, ಕೆಂಪು, ಮತ್ತು ರಾಜಾ ಕಪ್ಪು ಸುಪೀರಿಯರ್

ಹಾಸನ್ ಉಲನ್. ಪೌಂಡು ೧ ಕ್ಕೆ	ರೂ.	೩—೦—೦
೧೦ ಟೋಪಿಯಾಗುವ ಬಂಡಲ್ ೧ ಕ್ಕೆ		೩—೯—೦
೧ ಟೋಪಿಯಾಗುವ ಉಲನ್ ದಾರಕ್ಕೆ		೦—೮—೦
ಕೊಕ್ಕೆ ಸೂಜಿ ಡಜನ್ ೧ ಕ್ಕೆ		೦—೪—೦
೧ ಕೊಕ್ಕೆ ಸೂಜಿಗೆ		೦—೧—೬
೩೦ ಇಂಚಿನ ಟನಿಯನ್ ೧ ಕ್ಕೆ		೦—೯—೦
ಪಿಕ್ಚರ್ ಪೋಸ್ಟ್ ಕಾರ್ಡ್ ೧೦೦ ಕ್ಕೆ		೦—೬—೦

ವಿ ಪಿ ಇಂದಲೂ ರವಾನಿಸುತ್ತೇವೆ. ವಿಳಾಸ—

ದಿ ಉಲನ್ ಮಾರ್ಟ್, ಮಂಗಳೂರು, ದ. ಕ.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ!

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

75 17

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೀಳಾದದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು. (೨) ಟೋಪಿಗಳನ್ನು ಖುದ್ದಾಗಿ ನಾನೇ ನಿಂತು ಚನ್ನಾಗಿ ಹಾಕಿಸುತ್ತೇನೆ. ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಸೀದಾ ಬರೆದು ತರಿಸಿಕೊಳ್ಳಿ. ಅಗ್ಗವಾದವೂ ಚನ್ನಾಗಿಲ್ಲದ್ದೂ ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ. ಸಾದ, ಕೆಂಪು, ಕಪ್ಪು, ಬಿಳಿ, ಕಾಫಿ ಟೋಪಿಗಳು ೧ ರೂ ೮ ಆ,

೧ ರೂ ೬ ಆ, ೧ ರೂ ೪ ಆ.

ರೇಷ್ಮೆ ಚುಕ್ಕೆಯುಳ್ಳ ಟೋಪಿಗಳು ೧ ರೂ ೮ ಆ, ೨ ರೂ

ದಾರದ ಟೋಪಿಗಳು ೧ ರೂ. ೧೨ ಆ, ೧ ರೂ. ೮ ಆ, ೧ ರೂ. ೪ ಆ.

ಉಸುಕಿನ ಟೋಪಿಗಳು ೧ ರೂ. ೮ ಆ., ೧ ರೂ ೬ ಆ

ಕೂಸುಗಳ ಟೋಪಿ, ಸೂಥಿನ್ ಮೇಜೋಡು, ಅರ್ಧ ಮೇಜೋಡು, ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು.

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ

ವೃತ್ತಾಂತ ಪತ್ರಿಕೆ.

೧೯೦೭ ನೇ ಇಸವಿ ನವಂಬರ್ ತಾ|| ೨೧ ನೇ ಗುರುವಾರ

ಇನಾಕ್ಯುಲೇಷನ್ ಯಾನೆ ಪ್ಲೇಗಿನ ಸಿಡುಬು.

ಮೈಸೂರು ಸಂಸ್ಥಾನದಲ್ಲಿ ವರ್ಷೇ ವರ್ಷ ಪ್ಲೇಗ್ ಉಪದ್ರ ಬರುತ್ತಲೇ ಇದೆ. ಕೆಲವು ಸ್ಥಳಗಳಲ್ಲಾದರೋ ಅದು ಬರುವುದು ತಪ್ಪುವುದೇ ಇಲ್ಲ. ಬೇಡವೆಂದರೂ ಬರಲೇ ಬರುವುದಾದ್ದರಿಂದ ಅದರಿಂದುಂಟಾಗುವ ಕಷ್ಟ ನಷ್ಟ ದುಃಖಾದಿಗಳನ್ನು ಅನುಭವಿಸಿಯೇ ತೀರಬೇಕಾಗಿದೆ. ಗವರ್ನ್‌ಮೆಂಟಿನವರೂ ವೈದ್ಯ ಇಲಾಖೆಯವರೂ ಅದನ್ನು ತಡೆಯುವುದಕ್ಕೆ ಸಾಹಸಪಟ್ಟು ಪಟ್ಟು ಸಾಕಾಗಿ ನಿರಾಶೆಯಿಂದ ಸುಮ್ಮನಾದರೆಂತಲೇ ಹೇಳಬೇಕಾಗಿದೆ. ಮನೆಮಠಗಳನ್ನು ಶುದ್ಧಿಮಾಡುವುದೂ, ಕಾಯಿಲೆಯವರನ್ನೂ ಅವರ ಸಂಪರ್ಕದಲ್ಲಿರತಕ್ಕವರನ್ನೂ ಪ್ರತ್ಯೇಕ ಮಾಡುವುದೂ, ಸ್ಪೆಷಲ್ಲಾಗಿ ಈ ರೋಗಪೀಡಿತರಿಗಾಗಿಯೇ ಬೇರೆ ವೈದ್ಯರನ್ನು ನೇಮಕ ಮಾಡುವುದೂ, ಇದೆಲ್ಲಾ ನಿಂತುಹೋಯಿತೆಂಬ್ ಕಾಣುತ್ತದೆ. ಈ ನಡವಳಿಕೆಯನ್ನು ರಾಜಧಾನಿಯಾದ ಮೈಸೂರು ಪಟ್ಟಣದಲ್ಲಿ ನಾವು ಸ್ಪಷ್ಟವಾಗಿ ನೋಡುತ್ತೇವೆ. ಹಿಂದಿನ ವರುಷಗಳಲ್ಲಿ ಈ ಉಪದ್ರವನ್ನು ತಡೆಯುವುದಕ್ಕೆ ಬಹಳ ಹಣ ಖರ್ಚುಮಾಡಿ ನಡಿಸಿದ ಸಾಹಸಕಾರ್ಯಗಳ್ಯಾವೂ ಫಲಕಾರಿಯಾಗದೆ ಹೋದವಾದ್ದರಿಂದ ಏನುಮಾಡಿದರೂ ಪ್ರಯೋಜನವಾಗಲಾರದೆಂಬ ಅಭಿಪ್ರಾಯವು ನೆಲೆಗೊಂಡ ಹಾಗಾಗಿದೆ.

ಇಷ್ಟಾದರೂ ಗವರ್ನ್‌ಮೆಂಟಿನವರಾಗಲಿ ಪ್ರಜೆಗಳಾಗಲಿ ಈ ಉಪದ್ರವನ್ನು ತಡೆಯುವುದಕ್ಕೆ ಪ್ರಯತ್ನಪಡುವುದನ್ನು ಬಿಡದೆ ನಡಿಸುತ್ತಲೇ ಬರಬೇಕೆಂದು ಅಪೇಕ್ಷಿಸುತ್ತೇವೆ. ಮೈಸೂರು ಗವರ್ನ್‌ಮೆಂಟಿನವರು ಮತ್ತೆ ಪ್ಲೇಗ್ ಸಿಡುಬು ಹಾಕಿಸುವುದನ್ನು ಪ್ರಾರಂಭಿಸಿದಾರೆಂದು ಸಂತೋಷಪಡುವೆವು. ಎರಡು ಮೂರು ವರ್ಷಗಳಿಂದ ಇದರ ಪ್ರಸ್ತಾಪವೇ ಇರಲಿಲ್ಲ; ಅದರಲ್ಲೂ ಪಂಜಾಬಿಗೆ ಸೇರಿದ ಮುಲ್ಕೋವಾಳ್ ಎಂಬ ಊರಿನಲ್ಲಿ ಪ್ಲೇಗ್ ಸಿಡುಬು ಹಾಕಿಸಿಕೊಂಡವರ ಪೈಕಿ ಕೆಲವರು ಮೃತಪಟ್ಟಾರಭ್ಯ ಪ್ಲೇಗ್ ಸಿಡುಬು ಹಾಕಿಸಿಕೊಳ್ಳುವುದಕ್ಕೆ ಜನರ ಮನಸ್ಸು ಹಿಂತೆಗೆಯುತ್ತಿತ್ತು. ಆಗ ಇಂಡಿಯಾ ಗವರ್ನ್‌ಮೆಂಟಿನವರು ಆ ಮರಣಗಳಿಗೆ ಕಾರಣವನ್ನು ಚೆನ್ನಾಗಿ ವಿಚಾರಣೆ ಮಾಡಿಸಿದ್ದಲ್ಲದೆ, ಆ ಸಿಡುಬಿನ ಹಾಲು ತಯಾರಾಗತಕ್ಕ ಕಾರ್ಖಾನೆಯನ್ನೂ, ಅದು ಹ್ಯಾಗೆ ತಯಾರ್ಮಾಡಲ್ಪಟ್ಟಿತೆಂಬುವುದನ್ನೂ ತನಿಖೆ ಮಾಡಿಸಿ, ಆ ಕಾರ್ಖಾನೆಯ ಕೆಲಸಗಾರರ ಅಜಾಗರೂಕತೆಯಿಂದ ವಿಷಪದಾರ್ಥವು ಆ ಹಾಲಿಗೆ ಸೇರಿ ಮೇಲ್ಕಂಡ ಅಚಾತುರ್ಯವನ್ನು ನಡಿಸಿತೆಂದು ತಿಳಿದುಬಂದದ್ದರಿಂದ ಆಗ ತಯಾರಾಗಿದ್ದ ಸಿಡುಬಿನ ಹಾಲನ್ನೆಲ್ಲಾ ತರಿಸಿ ಚೆಲ್ಲಿಸಿಬಿಟ್ಟರು.

ಮೈಸೂರು ಸಂಸ್ಥಾನದಲ್ಲಿ ಪ್ರಜೆಗಳಿಗೆ ಪ್ಲೇಗ್ ಸಿಡುಬನ್ನು ಹಾಕಿಸಿ ಅವರಿಗೆ ಕೇಡುಕು ಅಪಾಯಾದಿಗಳನ್ನುಂಟುಮಾಡಬೇಕೆಂಬ ಅಭಿಪ್ರಾಯವು ಲೇಶಮಾತ್ರವೂ ಇರುವುದಿಲ್ಲವೆಂದು ಪ್ರಜೆಗಳಿಗೆ ಈಗ ಸಿದ್ಧಾಂತಪಡಿಸಿ ತಿಳಿಸಬೇಕಾದ ಅಗತ್ಯವಿಲ್ಲವೆಂಬದಾಗಿ ನಂಬುತ್ತೇವೆ. ಅದರ ವಿಷಯದಲ್ಲಿ ಕೆಲವು ವರ್ಷಗಳ ಹಿಂದೆ ಜನರಿಗಿದ್ದ ಭೀತಿಯೂ ಗಾಬರಿಯೂ ತೊಲಗಿಹೋಗಿವೆ. ಜನಗಳು ಸಿಡುಬು ಬರದಂತೆ ಅಮ್ಮ ಹಾಕಿಸಿಕೊಳ್ಳುವುದರಲ್ಲಿ ಹ್ಯಾಗೆ ಅಪಾಯವಾಗಲಿ ಕೇಡಾಗಲಿ ಉಂಟಾಗುವುದಿಲ್ಲವೆಂದು ನಂಬಿಕೊಂಡಿರುವರೋ ಹಾಗೆಯೇ ಪ್ಲೇಗಿಗೆ ತಡೆಯಾಗಿ ಸಿಡುಬುಹಾಕಿಸಿಕೊಳ್ಳುವವರಲ್ಲೂ ಕೆಡುಕೇನೂ ಆಗುವುದಿಲ್ಲವೆಂದು ಖಚಿತವಾಗಿ ತಿಳಿದಿರುತ್ತಾರೆ. ಹಾಗಾದಮೇಲೆ ಪ್ಲೇಗ್ ಸಿಡುಬು ಹಾಕುವದು ಯಾಕೆ ನಿಂತುಹೋಯಿತು" ಇದಕ್ಕೆ ನಮಗೆ ತೋರಿದ ಕಾರಣವೇನೆಂದರೆ, ಆ ಸಿಡುಬು ಹಾಕಿಸಿಕೊಂಡರೆ ಒಂದೆರಡು ದಿನ ಶರೀರ ಸೌಖ್ಯವು ಕೆಡುವುದು. ಇಷ್ಟುಮಾತ್ರ ಸಹಿಸಿಕೊಳ್ಳುವುದಕ್ಕೆ ಜನರು ಒಪ್ಪುವುದಿಲ್ಲ. "ನನಗೆ ಪ್ಲೇಗ್ ಬಂದರೂ ಬರಲಿ; ಆ ಸಿಡುಬು ಹಾಕಿಸಿಕೊಳ್ಳುವುದೂ ಅದರ ಕಷ್ಟಬಾಧೆಗಳನ್ನು ಅನುಭವಿಸುವುದೂ ನನಗೆ ಬೇಡ" ಎಂದು ಹೇಳುತ್ತಾರೆ.

ಈ ಸಿಡುಬು ಹಾಕಿಸಿಕೊಂಡವರಿಗೆ ಪ್ಲೇಗ್ ತಗಲುವುದಿಲ್ಲವೆಂಬುವುದು ನಿಸ್ಸಂದೇಹವಾಗಿ ಸಿದ್ಧಾಂತಪಡಿಸಲ್ಪಟ್ಟಿದೆಯೆಂದು ನಮಗೆ ತೋರುವುದು. ಸಿಡುಬು ಹಾಕಿಸಿಕೊಂಡವರಿಗೆ ಪ್ಲೇಗ್ ತಗಲುವುದು ಅಪರೂಪ; ಒಂದುವೇಳೆ ತಗಲಿದಾಗ್ಯೂ ಮುಕ್ಕಾಲು ಪಾಲು ಬದುಕಿಕೊಳ್ಳುವರೆಂದೇ ಹೇಳಬಹುದು. ಅತ್ತಲಾಗಿ ಈಗ ತಯಾರಾಗಿ ಬರತಕ್ಕ ಪ್ಲೇಗ್ ಸಿಡುಬಿನ ಹಾಲು ಬಹು ಶ್ರೇಷ್ಠವಾಗಿರುತ್ತದೆ. ಅದರಿಂದ ಶರೀರಕ್ಕೆ ಅಷ್ಟೇನೂ ಬಾಧೆಯುಂಟಾಗುವುದಿಲ್ಲ. ಒಂದೆರಡು ದಿನಗಳಲ್ಲೇ ಅದರ ನೋವೂ, ತೋಳು ಬಗಿಯುವುದೂ ಸಂಪೂರ್ಣವಾಗಿ ವಾಸಿಯಾಗುತ್ತವೆ. ಒಂದು ವೇಳೆ ಜ್ವರಬಂದರೂ ಬಹಳ ಸ್ವಲ್ಪವಾಗಿಯೇ ಕಾಣಿಸಿಕೊಂಡು, ಬೇಗ ನಿವಾರಣೆಯಾಗುವುದು.

ಹೀಗಿರುವಲ್ಲಿ ನಮ್ಮ ಸರ್ಕಾರದವರು ಪ್ರಜೆಗಳಿಗೆ ಪ್ಲೇಗ್ ಸಿಡುಬು ಹಾಕಿಸಬೇಕೆಂದು ಮತ್ತೆ ಪ್ರಯತ್ನಪಟ್ಟಿರುವುದನ್ನು ನೋಡಿ ನಾವು ಸಂತೋಷಪಡುತ್ತೇವೆ. ಡಿಸ್ಟ್ರಿಕ್ಟುಗಳಲ್ಲಿ ಪ್ಲೇಗ್ ಕಾಣಿಸಿಕೊಂಡ ಒಡನೆಯೇ ಜನರನ್ನು ಸದ್ಯ ಮನೇ ಬಿಡಿಸಿ ಬೈಲು ಪ್ರದೇಶಗಳಲ್ಲಿ ಜೋಪಡಿಗಳೊಳಗೆ ವಾಸಮಾಡುವಂತೆ ಪ್ರೋತ್ಸಾಹಪಡಿಸುವುದೇ ಹೆಚ್ಚು. ಒಂದೆರಡಾವರ್ತಿ ಊರು ಮನೆ ಮಠಗಳನ್ನು ಬಿಟ್ಟು ಜೋಪಡಿಗಳಲ್ಲಿ ವಾಸಿಸುವುದೇನೋ ಅಷ್ಟು ಅನಾನುಕೂಲವಾಗಿ ಕಾಣುವುದಿಲ್ಲ. ವರ್ಷೇ ವರ್ಷ ಮನೆಬಿಟ್ಟು ಹೋಗಬೇಕೆಂದರೆ ಬಹಳ ಕಷ್ಟವೂ ಅಪಾರ ನಷ್ಟವೂ ಉಂಟು. ಅದರಲ್ಲೂ ಚಳಿ ಮತ್ತು ಮಳೆಗಾಲದಲ್ಲಿ ಮನೆಬಿಟ್ಟು ಹೋಗುವುದರಲ್ಲಿ ಬಡಬಗ್ಗರು ಜೋಪಡಿಗಳಲ್ಲಿ ಶೀತಕ್ಕೂ ಜ್ವರಕ್ಕೂ ಸಿಕ್ಕಿ ನರಳುವರು. ಇಷ್ಟೇ ಅಲ್ಲ; ಅನೇಕ ಸಂದರ್ಭಗಳಲ್ಲಿ ಪ್ಲೇಗ್ ಸೊಂಕು ಕ್ಯಾಂಪುಗಳಿಗೂ ವ್ಯಾಪಿಸುತ್ತದೆ. ವಿಶೇಷ ಹಣ ಖರ್ಚಾಗುವುದು. ವ್ಯಾಪಾರಾದಿಗಳು ಸಂಪೂರ್ಣವಾಗಿ ನಿಂತುಹೋಗುವವು. ಹಿಂದೆ ಮನೆಗಳಲ್ಲಿ ಬಿಟ್ಟಂಥಾ ಆಸ್ತಿಪಾಸ್ತಿಗಳು ಕಳ್ಳತನವಾಗುತ್ತವೆ. ಹಂಗಾಮಿಯಾಗಿ ಜೋಪಡಿಗಳನ್ನು ಕಟ್ಟಿಕೊಳ್ಳುವುದಕ್ಕೆ ಸರ್ಕಾರದವರ ಹಣವೂ ಪ್ರಜೆಗಳ ಕಷ್ಟಾರ್ಜಿತವೂ ವ್ಯಯವಾಗುವವು. ಪಾಠಶಾಲೆಗಳು ಮುಚ್ಚಿಹೋಗಿ ಮಕ್ಕಳ ವಿದ್ಯಾಭ್ಯಾಸಕ್ಕೆ ಲೋಪ ಬರುವುದು. ಹೀಗೆಲ್ಲಾ ನಾನಾ ರೀತಿ ಕಷ್ಟನಷ್ಟಗಳುಂಟಾಗುತ್ತವೆ.

ಆದರೆ ನಾವು ಈ ಏರ್ಪಾಡು ಕೆಟ್ಟದ್ದೆಂದು ಹೇಳುವುದಿಲ್ಲ. ಜೋಪಡಿಗಳಲ್ಲಿ ವಾಸಮಾಡಬೇಕೆಂಬ ಏರ್ಪಾಡಿನಿಂದ ಸಾವಿರಾರು ಪ್ರಜೆಗಳ ಪ್ರಾಣ ಉಳಿದಿರುತ್ತದೆಂದು ನಂಬಿದೇವೆ. ಮತ್ತು ಪ್ಲೇಗ್ ಕಾಣಿಸಿಕೊಂಡ ಒಡನೆಯೇ ಅಮಲ್ದಾರರೂ ಇತರ ಸ್ಥಳಾಧಿಕಾರಿಗಳೂ ಪ್ರಜೆಗಳಿಗೆ ಪ್ರೋತ್ಸಾಹಪಡಿಸಿ, ಅವರನ್ನು ಜೋಪಡಿಗಳಲ್ಲಿ ವಾಸಮಾಡುವಂತೆ ಪ್ರಯತ್ನಪಟ್ಟದ್ದಕ್ಕಾಗಿಯೂ, ಈಗಲೂ ಸಾಹಸಪಡುತ್ತಿರುವುದಕ್ಕಾಗಿಯೂ ಅವರುಗಳನ್ನು ಸಂತೋಷದಿಂದ ವಂದಿಸುತ್ತೇವೆ. ಆದರೆ ಈ ಏರ್ಪಾಡು ವರ್ಷವರ್ಷವೂ ನಡೆಯುವುದರಿಂದ ಅಪಾರವಾದ ದ್ರವ್ಯನಷ್ಟಕ್ಕೂ ವಿಶೇಷ ಅನಾನುಕೂಲಗಳಿಗೂ ಕಾರಣವಾಗುವುದೆಂಬ ಅಂಶವನ್ನು ಸೂಚಿಸಲಪೇಕ್ಷಿಸುವೆವು. ಇದಕ್ಕಿಂತಲೂ ಸುಲಭಸಾಧ್ಯವಾದ ಮಾರ್ಗವೇನೂ ಇಲ್ಲವೇ? ಪ್ಲೇಗ್ ಸಿಡುಬು ಹಾಕುವುದನ್ನು ವಿಶೇಷ ರೂಢಿಗೂ ಪ್ರಚಾರಕ್ಕೂ ತಂದು ಪರೀಕ್ಷಿಸಬೇಕೆಂದು ಕುತೂಹಲಪೂರ್ವಕವಾಗಿ ಸೂಚಿಸುವೆವು. ಯಾಕೆಂದರೆ ಪ್ಲೇಗಿನ ಸುಳಿವು ಕಂಡ ಕೂಡಲೇ ಊರಿನ ಅಥವಾ ಗ್ರಾಮದ ಸಮಸ್ತ ಪ್ರಜೆಗಳಿಗೂ ಸಿಡುಬು ಹಾಕಿಸಿಬಿಟ್ಟಲ್ಲಿ ಆ ಉಪದ್ರವು ತಲೆಯೆತ್ತುವುದೇ ಇಲ್ಲವೆಂದು ನಾವು ನಂಬುತ್ತೇವೆ.

ಇದರಿಂದುಂಟಾಗುವ ಪ್ರಯೋಜನಾಂಶಗಳು ಎಲ್ಲರಿಗೂ ಗೊತ್ತೇ ಇರುವುದರಿಂದ ಅವನ್ನು ಇಲ್ಲಿ ವಿವರಿಸಬೇಕಾದ ಅಗತ್ಯ ಕಾಣುವುದಿಲ್ಲ. ಜನರು ಮನೆಗಳನ್ನು ಬಿಟ್ಟು ಹೋಗಬೇಕಾದ ಕಷ್ಟ ತಪ್ಪುವುದು; ವ್ಯಾಪಾರಸಾಪಾರಕ್ಕೂ ವಿದ್ಯಾಭ್ಯಾಸಕ್ಕೂ ಯಾವ ಅಡಚಣೆಯೂ ಉಂಟಾಗದು. ಪ್ರಜೆಗಳ ಪ್ರೀತಿ ಗೌರವಗಳನ್ನು ಸಂಪಾದಿಸಿಕೊಂಡಿರುವಂಥಾ ಸ್ಥಳಾಧಿಕಾರಿಯೇ ಮುಂದಾಗಿ ಸಿಡುಬು ಹಾಕಿಸಿಕೊಂಡು ಪ್ರಜೆಗಳನ್ನೂ ಹಾಕಿಸಿಕೊಳ್ಳುವಂತೆ ಪ್ರೋತ್ಸಾಹಪಡಿಸಿದಲ್ಲಿ ಸಕಲರೂ ಹಾಕಿಸಿಕೊಳ್ಳಾರೆನ್ನುವುದಕ್ಕೆ ಸಂಶಯವಿಲ್ಲವೆಂದು ನಂಬುತ್ತೇವೆ. ಬಹಳ ಸ್ವಲ್ಪ ಕಾಲದಲ್ಲೇ ಎಲ್ಲರಿಗೂ ಸಿಡುಬು ಹಾಕಿ ಪೂರೈಸುವುದಕ್ಕೆ ಸರ್ಕಾರದವರು ತಕ್ಕಷ್ಟು ಸಿಬ್ಬಂದಿಯನ್ನು ಒದಗಿಸಬೇಕಾಗುವುದು.

ಪ್ಲೇಗ್ ಉಪದ್ರದ ಹಾವಳಿಯನ್ನು ತಡೆಯುವುದಕ್ಕೆ ಇದು ಬಹು ಸುಲಭವಾದ ಮಾರ್ಗವು. ಇದರಿಂದ ಪ್ರಜೆಗಳಿಗೆ ವಿಶೇಷ ಅನಾನುಕೂಲವಾಗದು. ಮೈಸೂರು ಗವರ್ನ್‌ಮೆಂಟಿನವರು ಈ ಪ್ರಯತ್ನವನ್ನೇ ಪ್ರಾರಂಭಿಸುವವರಾಗಿದ್ದಾರೆಂದು ಸಂತೋಷಪಡುತ್ತೇವೆ. ಆದರೆ ಗ್ರಾಮ ಅಥವಾ ಊರಿನ ಸಮಸ್ತ ಪ್ರಜೆಗಳೂ ಪ್ಲೇಗ್ ಸಿಡುಬನ್ನು ಹಾಕಿಸಿಕೊಳ್ಳಬೇಕೆಂಬ ಸಂಗತಿಯನ್ನು ಮೊದಲೇ ಎಲ್ಲರಿಗೂ ಸ್ಪಷ್ಟವಾಗಿ ಒತ್ತಿ ಹೇಳಬೇಕು. ಈ ರೀತಿ ಮಾಡೋಣದರಿಂದಲೇ ಆ ಭಯಂಕರವಾದ ಉಪದ್ರದ ಹಾವಳಿಯನ್ನು ತಡೆಯಬಹುದಾದ ಮಾರ್ಗವು ಚೆನ್ನಾಗಿ ಗೊತ್ತಿಗೆ ಬಂದೀತು. ಈಗ ನಮ್ಮ ಶ್ರೀಮನ್ಮಹಾರಾಜಾ ಗವರ್ನ್‌ಮೆಂಟಿನವರು ಉದ್ದೇಶಪಟ್ಟಿರುವ ಕಾರ್ಯವನ್ನು ಈ ಸಂಸ್ಥಾನದ ಸಕಲ ಪ್ರಜೆಗಳೂ ಭಕ್ತಿಪೂರ್ವಕವಾಗಿಯೂ ಉತ್ಸಾಹದೊಡನೆಯೂ ಅಂಗೀಕರಿಸಿ ನೆರವೇರಿಸುವುದರ ಮೂಲಕ ಸಾರ್ಥಕಪಡಿಸಿಯಾರೆಂದು ಹಾರೈಸುತ್ತೇವೆ.

ಒಳದೇಶದ ವೃತ್ತಾಂತಗಳು.

ಕೌನ್ಸಲರುಗಳು ಇನ್ನೂ ರಾಜಧಾನಿಯಲ್ಲೇ ಇರುತ್ತಾರೆ. ದಿವಾನರವರು ಕಳೆದ ಭಾನುವಾರ ಬೆಂಗಳೂರಿಗೆ ದಯಮಾಡಿದ್ದು ನೆನ್ನೆ ವಾಪಸು ರಾಜಧಾನಿಗೆ ಬರುವವರಾಗಿದ್ದರು.

***

ಈ ದಿನ ಶ್ರೀಮನ್ಮಹಾರಾಜರವರ ನಿಶ್ಚಯಪ್ರಸ್ತದ ಉತ್ಸವ ಕಾರ್ಯಗಳೂ ಅದಕ್ಕೆ ಸಂಬಂಧಪಟ್ಟ ಅಕ್ಷತೆ ದರ್ಬಾರು ಮೊದಲಾದವೂ ಅರಮನೆ ಅಂಬಾವಿಲಾಸದ ತೊಟ್ಟಿಯಲ್ಲಿ ಜರುಗುವಂತೆ ಗೊತ್ತಾಗಿದೆ.

***

ಕಳೆದ ಭಾನುವಾರ ಶ್ರೀಮನ್ ಯುವರಾಜರವರು ಪರಿವಾರ ಸಹಿತ ಷಿಕಾರಿ ಕ್ಯಾಂಪಿನಿಂದ ರಾಜಧಾನಿಗೆ ದಯಮಾಡಿದರು. ಅವರೂ ಅವರ ಸಂಗಡಿದ್ದ ಸರ್ದಾರರೂ ಒಂದು ಹುಲಿ, ಒಂದು ಕಾಡುಕೋಣ, ಜಿಂಕೆ ಮೊದಲಾದವುಗಳನ್ನು ಷಿಕಾರಿಮಾಡಿದರೆಂದು ಕೇಳುತ್ತೇವೆ.

***

ಮೈಸೂರು ತಾಲ್ಲೂಕು ಮುಳ್ಳೂರು ಗ್ರಾಮದಲ್ಲಿ ಜನರು ಪ್ಲೇಗಿಗಾಗಿ ಜೋಪಡಿಗಳಲ್ಲಿ ವಾಸಮಾಡುತ್ತಿದ್ದಾಗ ಆ ಪೈಕಿ ಲಕ್ಷ್ಮಣರಾಯರೆಂಬುವ ವಾಸವಾಗಿದ್ದ ಜೋಪಡಿಗೆ ಕಳ್ಳರು ಬಿದ್ದು, ಆಸ್ತಿಯನ್ನು ದೋಚಿಕೊಂಡು ಹೋದರು. ಪೋಲೀಸಿನವರು ಪತ್ತೆ ತಲಾಷು ನಡಿಸಿ ಒಬ್ಬನನ್ನು ಕೆಲವು ಮಾಲುಗಳ ಸಹಿತ ಹಿಡಿದಿರುತ್ತಾರೆಂದು ಕೇಳುತ್ತೇವೆ.

***

ಕಳೆದ ವಾರ ಉತ್ತರ ದೇಶದಲ್ಲಿ ಲಾಲಾ ಲಜಪತ್ ರಾಯರವರನ್ನೂ ಅಜಿತ್ ಸಿಂಗ್‌ರವರನ್ನೂ ಇಂಡಿಯಾ ಗವರ್ನ್‌ಮೆಂಟಿನವರು ಸೆರೆಯಿಂದ ಬಿಡುಗಡೆಮಾಡಿದ್ದಕ್ಕೆ ರಾಜಧಾನಿಯ ಪ್ರಜೆಗಳು ಸಭೆಸೇರಿ ತಮ್ಮ ಸಂತೋಷವನ್ನು ಆವಿಷ್ಕರಿಸಿ, ಮತ್ತು ತಮ್ಮ ಕೃತಜ್ಞತೆ ರಾಜಭಕ್ತಿಗಳನ್ನು ವೈಸ್‌ರಾಯರವರಿಗೂ ತಂತೀವರ್ತಮಾನಗಳನ್ನು ಕೊಟ್ಟು ತಿಳಿಸಿದರು.

***

ಬೆಂಗಳೂರು ದಂಡಿನ ಜನರ ಉಪಯೋಗಾರ್ಥವಾಗಿ ಆರೋಗ್ಯಕರವಾಗಿಯೂ ಸನ್ನಿಹಿತವಾಗಿಯೂ ಇರುವ ಮನೆಗಳನ್ನು ಕೆಲವರು ಧರ್ಮಿಷ್ಠರು ಕಟ್ಟಿಸಿ ಸುಲಭ ಬಾಡಿಗೆಗೆ ಕೊಟ್ಟಿರುತ್ತಾರೆ. ದಂಡಿನ ಸಾಹುಕಾರರಾದ ಮಿ|| ರಾವ್ ಬಹದ್ದೂರ್ ಅಣ್ಣಾಸ್ವಾಮಿ ಮೊದಲಿಯಾರ್ ಮನೋರಮ ಎಂಬ ಸಂಘದಿಂದ ಅಂಥಾ ೧೪ ಮನೆಗಳನ್ನು ಕಟ್ಟಿಸಬೇಕೆಂದು ಉದ್ದೇಶಿಸಿ ಅವುಗಳಿಗೆ ಕಳೆದ ಗುರುವಾರ ಬ್ರಿಟಿಷ್ ರೆಸಿಡೆಂಟರಿಂದ ಅಸ್ತಿಭಾರ ಹಾಕಿಸಿದರು.

***

ದಿವಾನರವರೂ ಕೌನ್ಸಿಲ್ ಮೆಂಬರುಗಳೂ ಕಳೆದ ಗುರುವಾರ ರಾಜಧಾನಿಗೆ ಬಂದರು. ವಿದ್ಯಾ ಇಲಾಖೆಯ ಮುಖ್ಯಾಧಿಕಾರಿಗಳೊಡನೆ ಕಲೆತು, ರಾಜಧಾನಿಯ ಮಹಾರಾಜಾ ಕಾಲೇಜಿನಲ್ಲಿ ಬಿ.ಏ. ಪರೀಕ್ಷೆಗಳಿಗೆ ವಿದ್ಯಾರ್ಥಿಗಳನ್ನು ತಯಾರು ಮಾಡತಕ್ಕ ತರಗತಿಗಳನ್ನೂ ಸಿಬ್ಬಂದಿಯನ್ನೂ ಕಡಿಮೆ ಮಾಡತಕ್ಕ ವಿಷಯವನ್ನು ಚರ್ಚಿಸಿ, ಈಗಿರುವಂತೆಯೇ ನಡಿಯಬೇಕೆಂದು ತೀರ್ಮಾನಿಸಿದಂತೆ ಕೇಳುತ್ತೇವೆ. ಈಗಿರುವ ಕ್ಲಾಸುಗಳನ್ನು ತೆಗೆದುಹಾಕಕೂಡದೆಂದು ಮೊನ್ನೆ ಸೋಮವಾರ ರಾಜಧಾನಿಯ ಪ್ರಜೆಗಳು ಒಂದು ಸಭೆಯನ್ನು ಮಾಡಿ ತೀರ್ಮಾನಿಸಿ, ಶ್ರೀಮನ್ಮಹಾರಾಜರವರಿಗೆ ಅರಿಕೆ ಮಾಡಿಕೊಂಡಿದ್ದಾರೆ.

***

ರಾಜಸೇವಾ ಭೂಷಣ ಮಿ|| ಏ. ಬಸಪ್ಪಾಜಿ ಅರಸಿನವರು ಕಳೆದ ಶನಿವಾರ ಸಾಯಂಕಾಲ ರಾಜಧಾನಿಯ ಕೋಟೆಯಲ್ಲಿ ತಮ್ಮ ಗೃಹದಲ್ಲಿ ಕುಳಿತು ತಮ್ಮ ಮೊಮ್ಮಕ್ಕಳ ಕೂಡ ಮಾತನಾಡುತ್ತಿರುವಾಗ ಅಕಸ್ಮಾತ್ತಾಗಿ ಹಾಗೇ ಸ್ವರ್ಗಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರಿಗೆ ೭೩ ವರುಷವಾಗಿತ್ತು. ಕಳೆದ ೧೮೮೧ನೆ ಇಸವಿ [illegible] ಶ್ರೀಮನ್ಮಹಾರಾಜರವರ ಮಿಲಿಟರಿ ಭಕ್ಷೀರಾಗಿದ್ದರು. ಸಂಸ್ಥಾನದ ಅರಸುಗಳ ಪೈಕಿ ಇವರು ಹಿರಿಯರಾಗಿಯೂ ಸಕಲರ ಗೌರವಕ್ಕೆ ಪಾತ್ರರಾಗಿಯೂ ತುಂಬಾ ದಯಾಳುಗಳಾಗಿಯೂ ಇದ್ದರು. ಇವರು ಶ್ರೀಮನ್ಮಹಾರಾಜರವರ ಕೂಡ ಉತ್ತರ ದೇಶಕ್ಕೆ ಅನೇಕ ವೇಳೆ ಸಂಚಾರ ಹೋಗಿದ್ದರು. ಅರಮನೆಯಲ್ಲಿ ನಡೆಯತಕ್ಕ ಸಕಲ ದರ್ಬಾರುಗಳಲ್ಲೂ ಮಿ|| ಬಸಪ್ಪಾಜಿ ಅರಸಿನವರು ವಿಶೇಷ ಪ್ರಮುಖವಾದ ಸ್ಥಾನವನ್ನು ಪಡೆದಿದ್ದರು. ಸ್ನಾನ ಆಹ್ನಿಕಾದಿ ಕರ್ಮಗಳನ್ನು ಅವರು ಬಹು ಕಟ್ಟುನಿಟ್ಟಾಗಿ ಆಚರಿಸಿಕೊಂಡು, ದಾನಧರ್ಮಗಳನ್ನು ವಿಶೇಷವಾಗಿ ಮಾಡುತ್ತಾ ಬಡಬಗ್ಗರ ಕೃಪಾಪೋಷಕರಾಗಿದ್ದರು. ಷಿಕಾರಿ ಮಾಡುವುದರಲ್ಲಿ ಅವರು ಬಹು ನಿಪುಣರೆಂಬ ಹೆಸರು ಪಡೆದು, ಅನೇಕ ಯೂರೋಪ್ಯನ್ ದೊಡ್ಡಮನುಷ್ಯರಿಂದಲೂ ದೇಶೀಯ ರಾಜರುಗಳಿಂದಲೂ ಹೊಗಳಿಸಿಕೊಂಡಿದ್ದಾರೆ. ಮಾರನೇ ದಿನ ಬೆಳಿಗ್ಗೆ ಶವವನ್ನು ಪದ್ಧತಿಯ ಪ್ರಕಾರ ಮಿಲಿಟರಿ ಸನ್ಮಾನದೊಡನೆ ಮೆರವಣಿಗೆ ಮಾಡಿ, ದಕ್ಷಿಣಭಾಗದಲ್ಲಿರುವ ಬೃಂದಾವನದ ಆವರಣದಲ್ಲಿ ಯಥಾವಿಧಿಯಾಗಿ ದಹನಾದಿಗಳನ್ನು ಮಾಡಿದರು. ಅನೇಕ ಅರಸುಗಳೂ, ಅನೇಕ ಉದ್ಯೋಗಸ್ಥರೂ, ಸಾವಿರಾರು ಪ್ರಜೆಗಳೂ ಆ ಮೆರವಣಿಗೆಯಲ್ಲಿ ಹಾಜರಾಗಿದ್ದು ತಮ್ಮ ದುಃಖವನ್ನು ಪ್ರಕಾಶಪಡಿಸಿದರು. ಈ ಮಹನೀಯರಿಗೆ ಇಂಥಾ ಅಕಸ್ಮಾತ್ತಾದ ಮರಣ ಪ್ರಾಪ್ತವಾಯಿತಲ್ಲಾ ಎಂದು ಅನೇಕಾನೇಕರು ತುಂಬಾ ಖೇದಪಡುತ್ತಾರೆ. ಇವರ ಪತ್ನೀರವರು ಕಾಲವಾಗಿ ಏಳು ವರುಷಗಳಾದವು. ಇವರಿಗೆ ಒಬ್ಬ ಕುಮಾರರೂ ಒಬ್ಬ ಕುಮಾರ್ತೆಯೂ ಮೊಮ್ಮಕ್ಕಳೂ ಇರುತ್ತಾರೆ.

ಕೈಗಾರಿಕೆ ಮತ್ತು ವ್ಯವಸಾಯ ಸಂಘವು

ಪ್ರಾರಂಭದ ವೃತ್ತಾಂತವು

ರಾಜಧಾನಿಯಲ್ಲಿ ಈ ಸಲ ಪ್ರಜಾಪ್ರತಿನಿಧಿ ಸಭೆಯು ಕೂಡಿದ್ದಾಗ ರೆವಿನ್ಯೂ ಕಮೀಷನರು ಎಲ್ಲಾ ಡಿಸ್ಟ್ರಿಕ್ಟುಗಳ ಡೆಪ್ಯುಟಿ ಕಮೀಷನರುಗಳನ್ನೂ ಪ್ರಜಾಪ್ರತಿನಿಧಿಗಳನ್ನೂ ಅದೇ ಪಬ್ಲಿಕ್ ಆಫೀಸ್ ಕಟ್ಟಡದಲ್ಲಿ ಸಭೆ ಸೇರಿಸಿ, ಮೈಸೂರು ಡಿಸ್ಟ್ರಿಕ್ಟಿನ ರೈತ ಪ್ರಜೆಗಳಿಗೆ ಅನ್ವಯಿಸುವಂಥಾ ಒಂದು ವ್ಯವಸಾಯದ ಮತ್ತು ಕೈಗಾರಿಕೆಯ ಸಂಘವನ್ನು ಪ್ರಾರಂಭಿಸಬೇಕೆಂತಲೂ, ಅದರಂತೆಯೇ ಇತರ ಡಿಸ್ಟ್ರಿಕ್ಟುಗಳ ಜಮೀನ್ದಾರರೂ ವರ್ತಕರೂ ಸರ್ಕಾರಿ ಅಧಿಕಾರಿಗಳ ಪ್ರೋತ್ಸಾಹವನ್ನೂ ಸಹಾಯವನ್ನೂ ಪಡೆದು ಅಂಥಾ ಸಂಘಗಳನ್ನು ಸ್ಥಾಪಿಸಿಕೊಂಡು ನಡಿಸುತ್ತಾ ಬರಬೇಕೆಂತಲೂ ಸೂಚಿಸಿದರು. ಇಂಥಾ ಸಂಘಗಳನ್ನು ಏರ್ಪಾಡು ಮಾಡಿಕೊಳ್ಳುವುದು ತುಂಬಾ ಅವಶ್ಯವೆಂಬುದಾಗಿಯೂ, ಇದಕ್ಕಾಗಿ ಸರ್ಕಾರಿ ಅಧಿಕಾರಿಗಳ ಪ್ರೋತ್ಸಾಹ ಸಹಾಯಾದಿಗಳು ದೊರಕುವ ಭಾಗದಲ್ಲಿ ರೆವಿನ್ಯೂ ಕಮೀಷನರು ತಿಳಿಸಿದ ವಿಷಯಕ್ಕಾಗಿ ಎಲ್ಲರೂ ಅವರಿಗೆ ಕೃತಜ್ಞರಾಗಿದೇವೆಂಬುದಾಗಿಯೂ ಕೆಲವು ಮೆಂಬರುಗಳು ಆ ದಿನ ಹೇಳಿ ಸಭೆಯನ್ನು ಮುಕ್ತಾಯ ಮಾಡಿದರು

ಆ ಮೊದಲನೇ ಸಭೆಯಲ್ಲಿ ತೀರ್ಮಾನವಾಗಿದ್ದಂತೆ ಈ ತಿಂಗಳ ೩ನೇ ತಾರೀಖು ಭಾನುವಾರ ಬೆಳಿಗ್ಗೆ ಮೈಸೂರು ಪಬ್ಲಿಕ್ ಆಫೀಸ್ ಕಟ್ಟಡದಲ್ಲಿ ಕ್ರಮವಾದ ಸಭೆಯು ಕೂಡಿಸಲ್ಪಟ್ಟಿತು. ಮೈಸೂರು ಡಿಸ್ಟ್ರಿಕ್ಟಿನ ಅನೇಕ ಜಮೀನ್ದಾರರೂ ಮೆಂಬರುಗಳೂ ರಾಜಧಾನಿಯ ವಿದ್ಯಾವಂತರೂ ಜಮೀನ್ದಾರರೂ ಸುಮಾರು ೧೫೦ ಜನಗಳು ಆ ಸಭೆಯಲ್ಲಿ ಹಾಜರಾಗಿದ್ದರು. ಈ ಸಭೆಯಲ್ಲಿ ಮ॥ ಎಂ ಕಾಂತರಾಜೇ ಅರಸಿನವರ ಅಗ್ರಾಸನವನ್ನು ವಹಿಸಬೇಕೆಂದು ಮ॥ ಮಹಮದ್ ಜಾಫರ್ ಸಾಹೇಬರು ಸೂಚಿಸಿದ್ದನ್ನು ಮ॥ ಬಿ ನರಸಿಂಗರಾಯರು ಅನುಮೋದಿಸಿದರು. ಸಭಿಕರೆಲ್ಲರ ಒಪ್ಪಿಗೆಯಂತೆ ಪ್ರೆಸಿಡೆಂಟರು ಸಂಘದ ಉದ್ದೇಶವನ್ನು ಅಂದರೆ ವ್ಯವಸಾಯ ಮತ್ತು ಕೈಗಾರಿಕೆಯನ್ನು ಉನ್ನತ ಸ್ಥಿತಿಗೆ ತರಬೇಕಾದ ಆವಶ್ಯಕತೆಯನ್ನು ಸಭಿಕರಿಗೆ ತಿಳಿವಳಿಕೆಯಾಗಿ ತಿಳಿಸಿದರು. ನಂತರ ಚರ್ಚಿಸಿ ತೀರ್ಮಾನವಾಗಿದ್ದ ಸಂಘದ ರೂಲುಸನ್ನು ಒಂದೊಂದಾಗಿ ಓದಿ ಹೇಳಿದರು. ಮೆಂಬರುಗಳು ಚರ್ಚೆ ಮಾಡಿ ಕಡೆಗೆ ಒಪ್ಪಿಕೊಂಡದ್ದೇನೆಂದರೆ

(೧) ಈ ಸಂಘಕ್ಕೆ ಶ್ರೀ ಕೃಷ್ಣರಾಜ ಕೃಷಿ ಶಿಲ್ಪ ಅಭಿವರ್ಧಕ ಸಮಾಜ, ಮೈಸೂರು ಲಿಮಿಟೆಡ್ ಎಂದು ಹೆಸರಿರಬೇಕು. ಈ ಸಂಘದ ಉದ್ದೇಶಗಳೇನೆಂದರೆ (೨) ವ್ಯವಸಾಯ ವಿಷಯವಾಗಿ ಜನಗಳ ತಿಳುವಳಿಕೆಯನ್ನು ಅಭಿವೃದ್ಧಿ ಪಡಿಸುವುದು, ಉತ್ತಮವಾದ ವ್ಯವಸಾಯವನ್ನು ದೃಷ್ಟಾಂತವಾಗಿ ತೋರಿಸುವುದು, ಉತ್ತಮವಾದ ಬೀಜಗಳನ್ನು ತರಿಸಿ ಒದಗಿಸಿ ಕೊಡುವುದು (೩) ವ್ಯವಸಾಯಕ್ಕೆ ಸಂಬಂಧಪಟ್ಟ ಹೊಸತರಹ ನೇಗಿಲು ಮೊದಲಾದ ಉಪಕರಣಗಳು ಮತ್ತು ಗೊಬ್ಬರಗಳನ್ನು ರೈತರುಗಳಿಗೆ ಒದಗಿಸಿಕೊಡುವುದು (೪) ಕೈಗಾರಿಕೆ ಅಂದರೆ ನೆಯ್ಗೆ ಕೆಲಸಗಳನ್ನು ಒಳ್ಳೆ ಮಗ್ಗಗಳ ಮೂಲಕ ಮತ್ತು ಇತರ ಸಲಕರಣೆಗಳಿಂದಲೂ ಅಭಿವೃದ್ಧಿ ಪಡಿಸುವುದು. ಇದಕ್ಕೆ ಬೇಕಾದ ದಳ್ಳಾಳಿ ಕೆಲಸ ಮಾಡುವುದು. ಮತ್ತು ಕೈಗಾರಿಕೆ ಕೆಲಸದಲ್ಲಿ ತಯಾರಾಗುವ ವಸ್ತುಗಳ ಬಿಕರಿಗೆ ಅನುಕೂಲಗಳನ್ನು ಕಲ್ಪಿಸುವುದು ಮತ್ತು ಯೋಗ್ಯವಾದ ಹೊಸ ಕೈಗಾರಿಕೆ ಕೆಲಸದಲ್ಲಿ ತಯಾರಾಗುವ ವಸ್ತುಗಳ ಬಿಕರಿಗೆ ಅನುಕೂಲಗಳನ್ನು ಕಲ್ಪಿಸುವುದು ಮತ್ತು ಯೋಗ್ಯವಾದ ಹೊಸ ಕೈಗಾರಿಕೆ ಕೆಲಸಗಳನ್ನು ಕಲ್ಪಿಸುವುದೇ ಮೊದಲಾದ ವಿಚಾರಗಳು. (೫) ಈ ಸಮಾಜದ ಆಡಳಿತವು ಪ್ರಕೃತದಲ್ಲಿ ಮೈಸೂರು ಡಿಸ್ಟ್ರಿಕ್ಟಿಗೆ ಮಾತ್ರ ಜಾರಿಯಲ್ಲಿ ತರತಕ್ಕದ್ದು (೬) ಈ ಸಮಾಜವನ್ನು ಈ ದೇಶದಲ್ಲಿ ಜಾರಿಯಲ್ಲಿರುವ ೧೯೦೫ನೆ ಇಸವಿ ೩ನೆ ನಂಬರಿನ ಪರಸ್ಪರ ಸಹಾಯಕ ಸಂಘಗಳ ಕಾನೂನಿಗೆ ಅನುಸಾರವಾಗಿ ರಿಜಿಸ್ಟರು ಮಾಡಿಸತಕ್ಕದ್ದು (೭) ಈ ಸಮಾಜದ ಮೂಲ ಧನವ್ಯವದೆಂದರೆ—ಮೆಂಬರುಗಳು ಕೊಡುವ ಚಂದಾ ಹಣ, ಇನಾಂ ಯಾನೆ ಡೊನೇಷನ್ ರೂಪವಾಗಿ ಬರುವ ಸಹಾಯದ್ರವ್ಯ, ಸರ್ಕಾರದವರು ಕೊಡಬಹುದಾದ ಸಹಾಯ ದ್ರವ್ಯವೂ ಮತ್ತು ಷೇರುಗಳ ಮೂಲಕ ಕೂಡಿಸತಕ್ಕ ದ್ರವ್ಯ (೮) ಈ ಸಮಾಜದ ಮೆಂಬರುಗಳ ಜವಾಬ್ದಾರಿಯು ಅವರವರು ಹಾಕುವ ಷೇರುಗಳ ಮತ್ತು ಚಂದಾ ಮೂಲಕ ಕೊಡುವ ದ್ರವ್ಯ, ಇಷ್ಟೇ ಆಗಿರತಕ್ಕದ್ದು (೯) ಮೆಂಬರುಗಳಲ್ಲಿ ಪ್ರತಿ ಒಬ್ಬರೂ ಒಂದು ರೂಪಾಯಿಗೆ ಕಡಮೆ ಇಲ್ಲದೆ ವಾರ್ಷಿಕ ಚಂದಾ ಸಹ ಕೊಡತಕ್ಕದ್ದು (೧೦) ಈ ಸಂಘದ ಷೇರುಗಳ ಬಂಡವಾಳವು ಪ್ರಕೃತದಲ್ಲಿ ೨೦,೦೦೦ ರೂಪಾಯಿಗಳಾಗಿರತಕ್ಕದ್ದು. ಷೇರು ೧ಕ್ಕೆ ೧೦ ರೂಪಾಯಿಗಳಂತೆ ೨೦೦೦ ಷೇರುಗಳನ್ನು ಮಾಡಿ, ಬಂಡವಾಳವನ್ನು ಶೇಖರ ಮಾಡಬೇಕು (೧೧) ಈ ಸಮಾಜದ ಕಾರ್ಯನಿರ್ವಾಹಕ್ಕಾಗಿ ಈ ಸಮಾಜದ ಒಟ್ಟು ಮೆಂಬರುಗಳ ಪೈಕಿ ೧೦ ಜನಕ್ಕೆ ಕಡಮೆ ಇಲ್ಲದೆ ೩೮ ಜನಗಳಿಗೆ ಹೆಚ್ಚಿಲ್ಲದೆ ಒಂದು ಮ್ಯಾನೇಜಿಂಗ್ ಕಮಿಟಿ ಇರತಕ್ಕದ್ದು, ಆದರೆ ಇವರ ಪೈಕಿ ಮುಕ್ಕಾಲು ಭಾಗಕ್ಕೆ ಕಡಮೆ ಇಲ್ಲದೆ ಷೇರುದಾರರುಗಳು ಇರತಕ್ಕದ್ದು. ಈ ಪೈಕಿ ಒಬ್ಬರು ಪ್ರೆಸಿಡೆಂಟರಾಗಿಯೂ, ಇಬ್ಬರು ಸೆಕ್ರೆಟರಿಗಳಾಗಿಯೂ, ಒಬ್ಬರು ಟ್ರೆಷರರ್ ಆಗಿಯೂ, ಒಬ್ಬರು ಲೀಗಲ್ ಅಡ್ವೈಸರ್ ಯಾನೆ ಕಾನೂನು ವಿಚಾರವನ್ನು ತಿಳಿಸತಕ್ಕವರಾಗಿಯೂ ಇರತಕ್ಕದ್ದು (೧೨) ಈ ಸಂಘದಲ್ಲಿ ಉತ್ಪತ್ತಿ ಆಗುವ ನಿವ್ವಳ ನಫೆಯನ್ನು ಪರಸ್ಪರ ಸಹಾಯಕ ಸಂಘಗಳ ರೆಗ್ಯುಲೇಷನ್ ೪ನೇ ಸೆಕ್ಷನ್ನಿಗೆ ಅನುಸಾರವಾಗಿ ಜನರಲ್ ಮೀಟಿಂಗಿನಲ್ಲಿ ತೀರ್ಮಾನ ಮಾಡುವಂತೆ ಷೇರುದಾರರುಗಳಿಗೆ ಮಾತ್ರ ವಿಭಾಗಿಸಲ್ಪಡತಕ್ಕದ್ದು. ಇತರ ಮೆಂಬರುಗಳಿಗೆ ಈ ನಫೆಯಾಗಲಿ ಬಂಡವಾಳವಾಗಲಿ ಸೇರತಕ್ಕದ್ದಿಲ್ಲ (೧೩) ಈ ಸಮಾಜದ ಜನರಲ್ ಮೀಟಿಂಗಿನಲ್ಲಿ ಮಾಡಬಹುದಾದ ಬದಲಾವಣೆಗಳಿಗೂ ಮತ್ತು ಬೈಲಾಗಳಿಗೂ ಒಳಪಟ್ಟು ಈ ದೇಶದಲ್ಲಿ ಜಾರಿಯಲ್ಲಿರುವ ಪರಸ್ಪರ ಸಹಾಯಕ ಸಂಘಗಳ ರೆಗ್ಯುಲೇಷನ್ ಅನುಸರಿಸಿ ಜಾರಿಯಲ್ಲಿರುವ ರೂಲುಸುಗಳೇ ಈ ಸಂಘದ ರೂಲುಸುಗಳಾಗಿ ಇರತಕ್ಕದ್ದು

ಬೊಂಬಾಯಿನಿಂದ ದಯಮಾಡಿಸಿದ್ದ ಮ॥ ಎಚ್ ಎಸ್ ಸೇಟ್ಲೂರ್‌ರವರು ತಮ್ಮ ಅನುಭವವನ್ನು ಸಭಿಕರಿಗೆ ತಿಳಿಸಬೇಕೆಂದು ಅಪೇಕ್ಷಿಸಲ್ಪಟ್ಟ ಮೇರೆ ಅವರು ಇಂಥಾ ಸಂಘದ ಪ್ರಯೋಜನವನ್ನು ವಿಶದವಾಗಿ ಸಭೆಯವರಿಗೆ ತಿಳಿಯಪಡಿಸಿದರು. ರೆವರೆಂಡ್ ಫಾದರ್ ಟೋರ್ನೇಯವರು ಈ ಸಂಘದ ಪ್ರಯೋಜನವನ್ನು ಉಪನ್ಯಾಸದ ಮೂಲಕ ಸಭಿಕರಿಗೆ ತಿಳಿಸಿದರು

ಕಡೆಯಲ್ಲಿ ಸಭಾ ಮೆಂಬರುಗಳ ಸಮ್ಮತಿಯನ್ನು ಪಡೆದು ಮುಂದೆ ಹೇಳುವವರುಗಳು ಸಂಘದ ಆಯಾ ಅಧಿಕಾರಿಗಳಾಗಿ ಚುನಾಯಿಸಲ್ಪಟ್ಟರು. ಹುಜೂರ್ ಅರಮನೆ ಕಂಟ್ರೋಲರ್ ಮ॥ ವಿ ಪಿ ನರಸಿಂಹಯ್ಯಂಗಾರ್ಯರು ಪ್ರೆಸಿಡೆಂಟರಾಗಿಯೂ, ಸರ್ದಾರ್ ಎಂ ಲಕ್ಷ್ಮೀಕಾಂತರಾಜೇ ಅರಸಿನವರು ವೈಸ್ ಪ್ರೆಸಿಡೆಂಟರಾಗಿಯೂ, ಅಡ್ವೊಕೇಟ್ ಮ॥ ಎಚ್ ನರಸಿಂಗರಾಯರೂ ಗವರ್ನಮೆಂಟ್ ಇಂಡಸ್ಟ್ರಿಯಲ್ ಸ್ಕೂಲುಗಳ ಸೂಪರಿಂಟೆಂಡೆಂಟ್ ಮ॥ ಜಿ ಸುಬ್ಬಸ್ವಾಮಿ ಅಯ್ಯರ್‌ರವರೂ ಸೆಕ್ರೆಟರಿಗಳಾಗಿಯೂ ಇರಬೇಕೆಂದು ಮ॥ ಎಚ್ ನಂಜುಂಡರಾಜೇ ಅರಸಿನವರು ಸೂಚಿಸಿದ್ದನ್ನು ಮ॥ ಬಿ ನರಸಿಂಗರಾಯರು ಸೆಕೆಂಡ್ ಮಾಡಿದರು. ಸಭಿಕರೆಲ್ಲರೂ ಅದರಂತೆ ಒಪ್ಪಿಕೊಂಡರು

ಮ॥ ಎಂ ಕಾಂತರಾಜೇ ಅರಸಿನವರು ಅಗ್ರಾಸನವನ್ನು ವಹಿಸಿ ಆ ದಿನ ಸಭೆಯ ಕಾರ್ಯವನ್ನು ನಿರ್ವಹಿಸಿದ್ದಕ್ಕಾಗಿ ಮ॥ ಕೃಷ್ಣಶಾಸ್ತ್ರಿಯವರು ಉಪನ್ಯಾಸಮಾಡಿ ಅವರಿಗೆ ಸಭಾಸದರ ವಂದನೆಯನ್ನು ಅರ್ಪಿಸಿದ ಮೇಲೆ ಸಭೆಯು ಮುಕ್ತಾಯವಾಯಿತು.

ವೈಸ್‌ರಾಯಿಯವರ ದೇಶಸಂಚಾರವು

ಹೈದರಾಬಾದ್ ಸಂಸ್ಥಾನದಲ್ಲಿ ನಡೆದ ಆತಿಥ್ಯಗಳು

ಮೊದಲನೆಯ ದಿನ

ಕಳೆದ ೧೧ನೆ ತಾರೀಖು ಸೋಮವಾರ ಬೆಳಿಗ್ಗೆ ವೈಸ್‌ರಾಯಿ ಲಾರ್ಡ್ ಮಿಂಟೋ ಪ್ರಭುಗಳು ಪತ್ನಿ ಪರಿವಾರ ಸಹಿತ ಹೈದರಾಬಾದ್ ಸಂಸ್ಥಾನಕ್ಕೆ ಸೇರಿದ ಸಿಕಂದರಾಬಾದ್ ಪಟ್ಟಣದಲ್ಲಿ ರೈಲು ಇಳಿದರು. ಸ್ಟೇಷನನ್ನು ನೇತ್ರಾನಂದಕರವಾಗಿ ಅಲಂಕರಿಸಿದ್ದರು. ನೈಜಾಮರವರೂ, ಬ್ರಿಟಿಷ್ ರೆಸಿಡೆಂಟರೂ, ಮಂತ್ರಿಗಳೂ, ನೂರಾರು ಮಂದಿ ದೊಡ್ಡ ಮನುಷ್ಯರೂ ಅಧಿಕಾರಿಗಳೂ, ಯೂರೋಪಿಯನ್ ಸರದಾರರೂ ಕಾದಿದ್ದು ವೈಸ್‌ರಾಯಿಯವರನ್ನು ಸಕಲ ಮರ್ಯಾದೆಗಳೊಡನೆ ಎದುರುಗೊಂಡರು. ಸೈನಿಕರ ಮಾನ ಮರ್ಯಾದೆಗಳು ನಡೆದವು. ಗಂಭೀರವಾದ ತೋಪುಗಳು ಹಾರಿಸಲ್ಪಟ್ಟವು. ನೈಜಾಮರವರು ವೈಸ್‌ರಾಯಿಯವರನ್ನು ದಿವ್ಯವಾದ ಸಾರೋಟಿನಲ್ಲಿ ಕೂರಿಸಿಕೊಂಡು ಬಹು ಅಪೂರ್ವವಾಗಿ ಅಲಂಕರಿಸಲ್ಪಟ್ಟಿದ್ದ ಪಟ್ಟಣದ ರಾಜಬೀದಿಗಳಲ್ಲಿ ಸೈನ್ಯಗಳನ್ನು ಬಿಟ್ಟುಕೊಂಡು, ಮೆರವಣಿಗೆಯಲ್ಲಿ ದಯಮಾಡಿ ಫಾಲಕ್‌ನಾಮಾ ಎಂಬ ಅರಮನೆಗೆ ಕರೆದುಕೊಂಡು ಹೋಗಿ ಬಿಟ್ಟರು. ಇಲ್ಲಿಯೂ ಯೂರೋಪಿಯನ್ ಮತ್ತು ಹೈದರಾಬಾದ್ ಸೈನ್ಯಗಳು ಕಾದಿದ್ದು ವೈಸ್‌ರಾಯಿಯವರಿಗೆ ಮರ್ಯಾದೆಗಳನ್ನು ಸಲ್ಲಿಸಿದರು. ಲಕ್ಷಾಂತರ ಪ್ರಜೆಗಳು ಪಟ್ಟಣದ ಬೀದಿಗಳಲ್ಲಿ ಕಿಕ್ಕಿರಿದು ನಿಂತು, ಉತ್ಸಾಹಪಟ್ಟು ವೈಸ್‌ರಾಯಿಯವರ ದರ್ಶನಮಾಡಿ, ಸಂತೋಷಪಟ್ಟರು. ಮಧ್ಯಾಹ್ನ ೧೨ ಗಂಟೆಗೆ ನೈಜಾಮರವರು ಸಲ್ತನತ್ ಸಮೇತರಾಗಿ ಅರಮನೆಯಿಂದ ಹೊರಟು, ಫಾಲಕ್‌ನಾಮಾ ಅರಮನೆಯನ್ನು ತಲುಪಿ ವೈಸ್‌ರಾಯಿಯವರ ಭೇಟಿಮಾಡಿ, ಸ್ವಲ್ಪಹೊತ್ತು ಅವರ ಯೋಗಕ್ಷೇಮವನ್ನು ವಿಚಾರಿಸಿಕೊಂಡು ವಾಪಸು ದಯಮಾಡಿದರು. ಸಾಯಂಕಾಲ ೪ ಗಂಟೆಗೆ ವೈಸ್‌ರಾಯಿಯವರು ಮರ್ಯಾದೆಗಳೊಡನೆ ಅರಮನೆಗೆ ದಯಮಾಡಿ, ನೈಜಾಮರವರಿಗೆ ಮರುಭೇಟಿ ಕೊಟ್ಟು, ಸ್ವಲ್ಪಹೊತ್ತು ಅವರ ಕೂಡ ಸಂಭಾಷಣೆ ಬೆಳಸಿ ಅವರಿಂದ ಮರ್ಯಾದೆಗಳನ್ನು ಹೊಂದಿ ವಾಪಸು ತಮ್ಮ ಬಿಡಾರಕ್ಕೆ ಚಿತ್ತೈಸಿದರು. ಸಾಯಂಕಾಲ ಹೈದರಾಬಾದಿನಲ್ಲಿರುವ ಯೂರೋಪಿಯನ್ ಮತ್ತು ದೇಶೀಯ ಸೈನಿಕರ ಉದ್ಯೋಗದಾರರುಗಳಿಗೆ ವೈಸ್‌ರಾಯಿಯವರು ತಮ್ಮ ಬಿಡಾರದಲ್ಲಿ [illegible] ಪಾಲಿಸಿ, ಅವರೊಡನೆ ಸ್ವಲ್ಪಹೊತ್ತು ಸಂಭಾಷಣೆ ಬೆಳಸಿದರು. ಆ ರಾತ್ರಿ ಅವರ ಬಿಡಾರದಲ್ಲೂ ಪಟ್ಟಣದ ಎಲ್ಲಾ ಭಾಗಗಳಲ್ಲೂ ನೇತ್ರಾನಂದಕರವಾದ ದೀಪೋತ್ಸವ ಮಾಡಲ್ಪಟ್ಟಿತು

ಎರಡನೆಯ ದಿನ

ತಾರೀಖು ೧೨ನೇ ಮಂಗಳವಾರ ಬೆಳಿಗ್ಗೆ ವೈಸ್‌ರಾಯಿಯವರ ಪತ್ನಿಯವರು ಪರಿವಾರ ಸಹಿತ ಮೋಟಾರ್ ಗಾಡಿಗಳಲ್ಲಿ ಕುಳಿತು ಹೈದರಾಬಾದ್ ಪಟ್ಟಣದ ಆವಿನಾಸಾ ಬಾಗ್ ಎಂಬ ಉದ್ಯಾನವನದಲ್ಲಿರುವ ವಿಕ್ಟೋರಿಯಾ ಮೆಮೋರಿಯಲ್ ಜನಾನಾ ಆಸ್ಪತ್ರೆಗೆ ದಯಮಾಡಿ, ಎಲ್ಲಾ ಭಾಗಗಳನ್ನೂ ಪರಾಂಬರಿಸಿ ಸಂತೋಷಪಟ್ಟುಕೊಂಡು ವಾಪಸು ಚಿತ್ತೈಸಿದರು. ಭೋಜನಾನಂತರ ವೈಸ್‌ರಾಯಿ ಪ್ರಭುಗಳು ೧೧ರಿಂದ ೧೨॥ ಗಂಟೆಯ ತನಕ ಹೈದರಾಬಾದ್ ಸಂಸ್ಥಾನದ ಮುಖ್ಯ ಸರ್ದಾರರುಗಳಿಗೆ ಬಂಗಲೆಯಲ್ಲಿ ಭೇಟಿ ಕೊಟ್ಟರು. ಮಂತ್ರಿಗಳಾದ ಮಹಾರಾಜಾ ಸರ್ ಕಿಷನ್ ಪರ್ಷಾದ್ ಬಹದೂರ್, ಕೆ ಸಿ ಐ ಇ ಯವರೂ, ನವಾಬ್ ಖುರ್ಷೀದ್ ಜಂಗ್‌ರವರೂ, ನವಾಬ್ ಫಕ್ರುಲ್ ಮುಲ್ಕ್ ಯವರೂ, ನವಾಬ್ ಖಾನೇ ಖಾನ್‌ರವರೂ ಅರಮನೆಗೆ ಒಬ್ಬರಾದಮೇಲೊಬ್ಬರು ಹೋಗಿ ವೈಸ್‌ರಾಯಿಯವರ ಭೇಟಿಮಾಡಿ, ಪ್ರತಿ ಒಬ್ಬರೂ ಅವರ ಸಂಗಡ ೧೫ ನಿಮಿಷಗಳ ತನಕ ಸಂಭಾಷಣೆ ಮಾಡಿಕೊಂಡು ಬಂದರು. ಸಾಯಂಕಾಲ ಫೋಟೋಗಳನ್ನು ತೆಗೆದಮೇಲೆ ವೈಸ್‌ರಾಯಿಯವರು ಪತ್ನಿ ಸಹಿತ ಮೋಟಾರ್ ಗಾಡಿಗಳಲ್ಲಿ ಕುಳಿತು ಮೀರ್ ಆಲಂ ಕೆರೆಗೂ, ಅಲ್ಲಿಂದ ಚರಿತ್ರಾರ್ಹವಾದ ಗೋಲ್ಕೊಂಡಾ ಕೋಟೆ ಕೊತ್ತಲಗಳಿಗೂ ದಯಮಾಡಿ ನೋಡಿಕೊಂಡು ಬಂದರು. ಅಲ್ಲೀ ನೈಜಾಮರವರು ಕಾದಿದ್ದು ಆ ಪುರಾತನ ಕಟ್ಟಗಳನ್ನೆಲ್ಲಾ ತೋರಿಸಿದರು. ವೈಸ್‌ರಾಯಿಯವರು ವಾಪಸು ದಯಮಾಡುವಾಗ್ಗೆ ಬೀದಿಗಳ ಉದ್ದಕ್ಕೂ ದಿವ್ಯವಾದ ದೀಪೋತ್ಸವವನ್ನು ಪರಾಂಬರಿಸಿಕೊಂಡು ತಮ್ಮ ಬಿಡಾರವನ್ನು ತಲುಪಿಸಿದರು. ನೈಜಾಮರವರು ತಮ್ಮ ಸ್ವಂತ ಖರ್ಚಿನಿಂದ ಕಟ್ಟಿಸುತ್ತಿರುವ ಅಫ್ಜಲ್‌ಗಂಜ್ ಆಸ್ಪತ್ರೆಯನ್ನು ವೈಸ್‌ರಾಯಿಯವರ ಪತ್ನಿಯವರು ಪರಾಂಬರಿಸಿದ್ದಲ್ಲದೆ, ಅಗ್ಗಲ್ಲಿ ಸೇರಿದ್ದ ಸುಮಾರು ೫೦ ಮಂದಿ ಬೇಗಂ ಜನಾನಾ ಸ್ತ್ರೀಯರಿಗೆ ಭೇಟಿಕೊಟ್ಟು ಅವರ ಕೂಡ ಮಾತನಾಡಿ ಅವರೆಲ್ಲರ ಪರಿಚಯವನ್ನು ಮಾಡಿಕೊಂಡು ಬಂದರು

ವೈಸ್‌ರಾಯಿಯವರಿಗೆ ಔತಣವು

ನೈಜಾಮರವರ ಭಾಷಣವು

ಆ ರಾತ್ರಿ ಚೌಮಹಲ್ಲಾ ಅರಮನೆಯಲ್ಲಿ ವೈಸ್‌ರಾಯಿಯವರಿಗೂ ಅವರ ಪತ್ನಿಯವರಿಗೂ ನೈಜಾಮರವರು ದಿವ್ಯತರವಾದ ಭಕ್ಷ್ಯ ಭೋಜ್ಯಾದಿಗಳನ್ನು ಮಾಡಿಸಿ ಔತಣ ಮಾಡಿದರು. ನೂರಾರು ಮಂದಿ ಯೂರೋಪಿಯನ್ ಸರದಾರರೂ ದೊರೆಸಾನಿಯವರೂ ವೈಸ್‌ರಾಯಿ ದಂಪತಿಗಳ ಪಂಕ್ತಿಯಲ್ಲಿ ಕುಳಿತು ಭೋಜನ ಮಾಡಿದರು. ಭೋಜನಾನಂತರ ನೈಜಾಮರವರು ಎದ್ದು ಚಕ್ರವರ್ತಿ ಸಾರ್ವಭೌಮರಿಗೆ ದೀರ್ಘಾಯುಸ್ಸನ್ನೂ ಅವಿಚ್ಛಿನ್ನವಾದ ಸುಖ ಸಂತೋಷಗಳನ್ನೂ ಬಯಸಿ, ವೈಸ್‌ರಾಯಿ ದಂಪತಿಗಳಿಗೆ ಚಿರಾಯುರಾರೋಗ್ಯಾದಿಗಳುಂಟಾಗಲೆಂದು ಹೇಳುತ್ತಾ, ಒಂದು ಭಾಷಣವನ್ನು ಮಾಡಿದರು. ಅದರ ಮುಖ್ಯಾಭಿಪ್ರಾಯಗಳೇನೆಂದರೆ—

ನಮಗೆ ಪಟ್ಟಾಭಿಷೇಕವಾದಾರಭ್ಯ ಇದುವರೆಗೂ ಹಿಂದುಸ್ಥಾನದ ವೈಸ್‌ರಾಯ್ ಪದವಿಯನ್ನಲಂಕರಿಸಿರುವಂಥಾ ಪ್ರತಿ ಒಬ್ಬ ಪ್ರಭುಗಳನ್ನೂ ಹೈದರಾಬಾದ್ ಸಂಸ್ಥಾನಕ್ಕೆ ಕರೆಸಿಕೊಂಡು ಸತ್ಕರಿಸಿರುತ್ತೇವೆ. ಈ ಭಾಗದಲ್ಲಿ ನಾವು ತುಂಬಾ ಅದೃಷ್ಟಶಾಲಿಗಳೆಂದು ಭಾವಿಸುತ್ತೇವೆ. ಇಂಥಾ ಸನ್ಮಾನಗಳಿಂದ ನಮ್ಮಂಥಾ ದೇಶೀಯ ಸಂಸ್ಥಾನದ ರಾಜರಿಗೂ ಚಕ್ರವರ್ತಿ ಸಾರ್ವಭೌಮರ ಪ್ರತಿನಿಧಿಗಳಾಗಿ ಬಂದು ಈ ರಾಷ್ಟ್ರವನ್ನು ಪರಿಪಾಲಿಸುವ ತಮ್ಮಂಥಾವರಿಗೂ ಪರಸ್ಪರವಾಗಿ ಅನೇಕ ಬಗೆಗಳಲ್ಲಿ ಪ್ರಯೋಜನಗಳುಂಟೆಂಬುವದನ್ನು ನಾವು ಈಗ ವಿವರಿಸಬೇಕಾದ ಅಗತ್ಯವಿಲ್ಲ. ಆದಕಾರಣ ತಾವುಗಳು ಈ ದಿನ ನಮ್ಮ ಆಹ್ವಾನವನ್ನು ಸ್ವೀಕರಿಸಿ ನಮ್ಮ ಸಂಸ್ಥಾನಕ್ಕೆ ದಯಮಾಡಿಸಿದ್ದಕ್ಕಾಗಿ ನಮ್ಮ ಪ್ರಜೆಗಳ ಪರವಾಗಿ ತಮ್ಮನ್ನು ವಿನಯಪೂರ್ವಕವಾಗಿ ಮನಸ್ಕರಿಸಿ ವಂದಿಸುತ್ತೇವೆ. ನಮ್ಮ ರಾಜಮನೆತನವು ಸರ್ಕಾರಕ್ಕೆ ಬಹಳ ಕಾಲದಿಂದ ಚಕ್ರಾಧಿಪತ್ಯದ ಮೇಲೆ ಸಂಪೂರ್ಣವಾದ ಭಕ್ತಿ ಪ್ರೀತಿಗಳನ್ನು ತೋರಿಸುತ್ತಾ ಬಂದಿದೆ ಎಂದು ಧೈರ್ಯವಾಗಿ ಹೇಳುತ್ತೇವೆ. ಇದೇ ಆದರ್ಶವನ್ನು ಸ್ವಾಮಿಭಕ್ತಿ ಪರರಾದ ನಮ್ಮ ಪ್ರಜೆಗಳು ತಮ್ಮ ನಡವಳಿಕೆಯಲ್ಲಿ ಎಷ್ಟೋ ಸ್ವಾಮಿಭಕ್ತಿ ಕಾರ್ಯಗಳನ್ನು ತೋರಿಸಿರುತ್ತಾರೆ. ಅದೆಲ್ಲಾ ನಮಗೇ ವೇದ್ಯವಾಗಿದೆ. ನಮ್ಮ ಪ್ರಜೆಗಳು ನಮ್ಮ ವಿಷಯದಲ್ಲಿ ಭಯಭಕ್ತಿಯುಳ್ಳವರಾಗಿರುವುದು ಮಾತ್ರವೇ ಅಲ್ಲ, ಅವರು ನಮ್ಮಂತೆಯೇ ಬ್ರಿಟಿಷ್ ರಾಜಚಕ್ರಾಧಿಪತ್ಯಕ್ಕೂ ವಿಧೇಯರಾಗಿರುವರು. ಬ್ರಿಟಿಷ್ ಗವರ್ನಮೆಂಟಿನವರ ಮೇಲೆ ದ್ವೇಷವಾದರೂ ಅಸಂತುಷ್ಟಿ, ಅಸಮಾಧಾನ ಅಥವಾ ಅಪ್ರೀತಿಯನ್ನು ಮನಸ್ಸಿನಲ್ಲಿಟ್ಟುಕೊಂಡಿರುವಂಥಾ ಮನುಷ್ಯನೊಬ್ಬನಾದರೂ ನಮ್ಮ ಸಂಸ್ಥಾನದ ಯಾವ ಭಾಗದಲ್ಲಿ ಹುಡುಕಿದಾಗ್ಯೂ ಸಿಕ್ಕಲಾರನು. ಇದು ಹಾಗಿರಲಿ. ಈ ಹಿಂದುಸ್ಥಾನದೊಳಗೆಲ್ಲಾ ವಿವೇಕಿಯಾದ ಯಾವ ಮನುಷ್ಯನೂ ಪರಮ ದಯಾಳುಗಳಾದ ಚಕ್ರವರ್ತಿ ಸಾರ್ವಭೌಮರವರ ವಿಷಯದಲ್ಲಾಗಲಿ ಅವರ ಪ್ರತಿನಿಧಿಯಾದ ಗವರ್ನಮೆಂಟಿನ ವಿಷಯದಲ್ಲಾಗಲಿ ಸಾರ್ವತ್ರಿಕವಾಗಿ ದ್ರೋಹ ಚಿಂತನೆಯನ್ನು ಮಾಡುತ್ತಾನೆಂದು ನಾವು ನಂಬುವದಿಲ್ಲ. ಅಂಥ ಮನುಷ್ಯನು ಈ ರಾಷ್ಟ್ರದಲ್ಲೇ ಇರಲಾರನೆಂದು ಸ್ಥೈರ್ಯವಾಗಿ ಹೇಳುವೆವು. ಈಗಿನ ಸಾರ್ವಭೌಮರ ಆಳ್ವಿಕೆಯಲ್ಲಿಯೂ, ಸ್ವರ್ಗಸ್ಥರಾಗಿದ್ದ ಲೇಟ್ ಚಕ್ರವರ್ತಿನಿಯವರ ಆಳ್ವಿಕೆಯಲ್ಲಿಯೂ ಹಿಂದೆ ಸ್ಥಾನದಲ್ಲಿ ಪ್ರಜೆಗಳು ನೆಮ್ಮದಿಯನ್ನೂ ಸುಖಸಂತೋಷಗಳನ್ನೂ ಪಡೆದಿರುವಹಾಗೆ ಹಿಂದೆ ಯಾವಾಗಲೂ ಪಡೆದಿರಲಿಲ್ಲ. ಇಂಥಾ ಆಳ್ವಿಕೆಯು ತಪ್ಪಿಹೋಗುವದಾದರೆ ಅಥವಾ ಅದರ ಬಿಗಿಯು ಸಡಲಿಸಲ್ಪಟ್ಟರೂ ಈಗಿರತಕ್ಕ ನೆಮ್ಮದಿಯೂ ವೃದ್ಧಿಸ್ಥಿತಿಯೂ ನಿರ್ನಾಮವಾಗುವದೇ ಖಂಡಿತವೆಂದು ಈ ರಾಷ್ಟ್ರದಲ್ಲಿರತಕ್ಕ ಪ್ರತಿ ಒಬ್ಬ ವಿವೇಕಿಯೂ ಚೆನ್ನಾಗಿ ತಿಳಿದಿರುತ್ತಾನೆ. ಆದಕಾರಣ ಹಿಂದಿನ ವೈಸ್‌ರಾಯಿಯವರು ಅಭಿಪ್ರಾಯಪಟ್ಟ ಹಾಗೆಯೇ ನಾವೂ ಕೂಡ ಈ ರಾಷ್ಟ್ರದಲ್ಲಿ ಕಾಣಬರುವ ರಾಜದ್ರೋಹವು ರಾಜದ್ರೋಹವೆನಿಸಿಕೊಳ್ಳತಕ್ಕದಲ್ಲವೆಂತಲೂ ಪ್ರಜೆಗಳು ರಾಜ್ಯಭಾರ ಕ್ರಮದಲ್ಲಿ ಈಗಿನ ಕಾಲಕ್ಕೆ ಅನುಗುಣ್ಯವಾದ ಬದಲಾವಣೆಗಳು ಆಗಬೇಕೆಂದು ಬಹಿರಂಗವಾಗಿ ತಿಳಿಸತಕ್ಕ ಆಕಾಂಕ್ಷೆಯಾಗಿರುತ್ತದೆಂತಲೂ ತಿಳಿದುಕೊಂಡಿರುತ್ತೇವೆ. ಯಥಾರ್ಥವಾದ ರಾಜದ್ರೋಹ ಚಿಂತನೆಯು ಈ ರಾಷ್ಟ್ರದಲ್ಲಿರುವುದಿಲ್ಲ. ಪ್ರಜೆಗಳಲ್ಲಿ ಈಚೆಗೆ ಚಲವಲಿಕೆಯುಂಟಾಗಿದೆ. ಗವರ್ನಮೆಂಟ್ ಈ ರೀತಿ ಕ್ರಮಪಡಬೇಕು, ಇಂತಿಂಥಾದ್ದು ಸರಿಯಾಗಿಲ್ಲ ಎಂದು ರೀತಿಯಾಗಿ ಬಹಿರಂಗವಾಗಿಯೂ ಸ್ವಲ್ಪ ಕಠಿಣವಾದ ವಾಗ್ವೈಖರಿಯಿಂದಲೂ ಉಪನ್ಯಾಸ ಮಾಡುತ್ತಾರೆ. ನಾವು ಈ ಸಂಸ್ಥಾನವನ್ನು ೪೩ ವರುಷಗಳಿಂದಲೂ ಪರಿಪಾಲನೆ ಮಾಡುತ್ತಾ ಬಂದಿದೇವೆ. ನಮ್ಮ ಅನುಭವವನ್ನು ಕೇಳಿದ ಪಕ್ಷದಲ್ಲಿ ನಾವು ಹೇಳತಕ್ಕದ್ದೇನೆಂದರೆ— ಗವರ್ನಮೆಂಟು ಯಾವ ಗುಣಲಕ್ಷಣಗಳನ್ನು ಪಡೆದಿದ್ದರೂ ಬಾಧಕವಾಗುವದಿಲ್ಲ, ಅದರ ಉದ್ದೇಶವೇ ಪ್ರಧಾನವಾದದ್ದು. ಅದರಲ್ಲೂ ಗವರ್ನಮೆಂಟೆಂಬುವುದು ಪ್ರಜೆಗಳ ಇಂಗಿತವನ್ನು ಅರಿತು ಅವರ ಕೂಡ ಸಹತಾಪ ಪಡುವುದಾಗಿರಬೇಕು, ಮತ್ತು ಪ್ರೀತಿ ವಾತ್ಸಲ್ಯಯುಕ್ತವಾದದ್ದಾಗಿಯೂ ಇರಬೇಕು. ಈ ವಿಷಯವನ್ನೇ ವಿಲಾಯತಿ ಪ್ರಿನ್ಸ್ ಆಫ್ ವೇಲ್ಸ್‌ರವರು ಬಹು ವಿಶೇಷವಾಗಿ ಒತ್ತಿ ಅಪ್ಪಣೆ ಕೊಡಿಸಿರುತ್ತಾರೆ. ಆಳುವವರು ಪ್ರಜೆಗಳ ಮೇಲೆ ಪ್ರೀತಿ ವಿಶ್ವಾಸಗಳನ್ನು ಇಟ್ಟವರಾಗಿರುವುದೊಂದೇ ಸಾಲದು, ಪ್ರೀತಿ ವಿಶ್ವಾಸಗಳು ಅವರಲ್ಲಿ ಉಂಟೆಂಬುವುದು ಅವರ ಪ್ರಜೆಗಳಿಗೆ ಖಚಿತವಾಗಿ ಅನುಭವ

...ಕಾದಷ್ಟು ಪರಮಾವಶ್ಯಕ ಇಲ್ಲಿನ ಪ್ರಜೆಗಳ ವಿಷಯದಲ್ಲಿ ...ಯಾ ಗವರ್ನಮೆಂಟಿನವರು ವಿಶ್ವಾಸಪೂರಿತರಾಗಿದಾರೆಂಬುವುದು ...ವಾಗಿರುವುದು ಇದಕ್ಕೆ ನಿಮ್ಮ ಗವರ್ನಮೆಂಟಿನವರು ಪ್ರಜೆಗ ...ಕೊಟ್ಟ ದ ಸ್ವಾತಂತ್ರ್ಯಗಳನ್ನು ದಯಪಾಲಿಸಬೇಕೆಂಬ ಅಭಿಲಾಷೆ ...ಸಲಹೆಗಳನ್ನು ಕೇಳುತ್ತಿರುವುದೇ ನಿದರ್ಶನವಾಗಿದೆ ಆ ಸಲಹೆ ...ವಿಷಯದಲ್ಲಿ ಬೇರೆ ಬೇರೆ ಬಿನ್ನಾಭಿಪ್ರಾಯಗಳಿರಬಹುದಾದರೂ ...ವೆಂಟಿನವರ ಘನವಾದ ಉದ್ದೇಶವು ಅವರಿಗೆ ಪ್ರಜೆಗಳ ಮೇಲಿ ...ವಿಶ್ವಾಸಾತಿಶಯವನ್ನು ನಿಸ್ಸಂಶಯವಾಗಿ ಪ್ರಕಾಶಪಡಿಸುತ್ತದೆ ...ಮೆಂಟಿನವರ ಇಂಥಾ ವಿಶ್ವಾಸವನ್ನು ನೋಡಿ ಈ ರಾಷ್ಟ್ರದ ...ಗಳೂ ದೇಶೀಯ ರಾಜರುಗಳೂ ತುಂಬಾ ಕೃತಜ್ಞತೆಯುಳ್ಳವರಾಗಿ ಸಭಿಕರಿರಾ, ನಿಮ್ಮ ಸಮ್ಮತಿಯನ್ನು ಪಡೆದು ನಾವು ವೈಸ್‌ರಾ ...ದಂಪತಿಗಳಿಗೆ ಈ ದಿನ ಆಯುರಾರೋಗ್ಯಾದಿಗಳನ್ನು ಬಯಸು ...ತ್ತೇವೆ ಎಂಬುದೇ

ವೈಸ್‌ರಾಯಿಯವರ ಪ್ರತ್ಯುತ್ತರವು

ವೈಸ್‌ರಾಯಿ ಲಾರ್ಡ್ ಮಿಂಟೋರವರು ಹರ್ಷಯುಕ್ತರಾಗಿ ...ನಿಂತು, ಸಭಿಕರ ಪರವಾಗಿ ನೈಜಾಮರವರ ಆಯುರಾರೋಗ್ಯ ...ವನ್ನು ಬಯಸಿ, ಅವರಿಗೆ ಪ್ರತ್ಯುತ್ತರವನ್ನು ದಯಪಾಲಿಸಿದರು ...ದ ಮುಖ್ಯಾಭಿಪ್ರಾಯವೇನೆಂದರೆ—

ನಾವು ನಿಮ್ಮ ಸಂಸ್ಥಾನಕ್ಕೆ ಬಂದು ನಿಮ್ಮ ಸಮಾಗಮವನ್ನು ...ಪಡೆಯಬೇಕೆಂದು ತುಂಬಾ ಕುತೂಹಲ ಪಡುತ್ತಿದ್ದೆವು ಅದು ಈಗ ನೆರವೇರಿದ್ದಕ್ಕಾಗಿ ನಿಮ್ಮನ್ನು ಬಹಳ ಸಂತೋಷದೊಡನೆ ವಂದಿಸುತ್ತೇ... ನಿಮಗೂ ಚಕ್ರವರ್ತಿಯ ವರ ಪ್ರತಿನಿಧಿಗಳಿಗೂ ಪರಸ್ಪರ ಸ್ನೇಹ ...ವಾತ್ಸಲ್ಯಾದಿಗಳು ಬೆಳೆಯುತ್ತಲಿರುವುದಕ್ಕಾಗಿ ಉಭಯರೂ ಸಂತೋಷಪಡತಕ್ಕದ್ದಾಗಿದೆ ತಾವು ೧೮೮೪ನೆ ಇಸವಿಯಲ್ಲಿ ಸಂಸ್ಥಾ... ...ನ್ನಾಳುವುದಕ್ಕೆ ಪ್ರಾರಂಭಿಸಿದ ಲಾಗಾಯತು ಅನೇಕ ಬದಲಾವ... ...ಗಳು ನಡೆದಿವೆ ಎಂಬುದು ವೈಸ್‌ರಾಯಿ ಲಾರ್ಡ್ ರಿಪ್ಪನ್ ಪ್ರಭು... ...ದಯಮಾಡಿ ಇದೇ ಅರಮನೆಯಲ್ಲಿ ತಮಗೆ ಪಟ್ಟಾಭಿಷೇಕವನ್ನು ...ಮಾಡಿದರೆಂಬುವುದು ಆ ಲಾಗಾಯತು ಈ ರಾಷ್ಟ್ರಕ್ಕೆ ಬಂದಿರುವಂ... ...ಪ್ರತಿಒಬ್ಬ ವೈಸ್‌ರಾಯಿಯವರನ್ನೂ ತಾವು ಇಲ್ಲಿಗೆ ಕರೆಸಿಕೊಂಡು ...ಸತ್ಕಾರ ಪೂರ್ವಕವಾಗಿ ಎಲ್ಲರ ಪ್ರೀತಿ ವಾತ್ಸಲ್ಯಗಳನ್ನೂ ಸಂ... ...ಪಾದಿಸಿಕೊಂಡಿರುತ್ತೀರೆಂಬುವುದೂ, ನಿಮ್ಮ ಪ್ರಜಾ ಕ್ಷೋಭೆಗಳು ...ಪಡಲು ಸಹಾಯವಾಗಿದ್ದುವೆಂಬುವುದೂ ನಾವು ಇಲ್ಲಿ ವಿವರಿಸಬೇ... ...ಕಿಲ್ಲ ನೀವು ಈವರೆಗೆ ಈ ಸಂಸ್ಥಾನದ ಕಾರುಬಾರುಗಳಲ್ಲಿ ಪ್ರ... ...ಯೋಜನಕಾರಿ ಅನೇಕ ಹೊಸ ಬದಲಾವಣೆಗಳನ್ನು ನಡಿಸಿ, ಆದಾ... ...ಯಗಳನ್ನು ಒಳ್ಳೆ ಕ್ರಮಕ್ಕೆ ತಂದ ಕೊಂಡಿರುತ್ತೀರಿ ಇದಲ್ಲ... ...ಇಂಡಿಯಾ ಗವರ್ನಮೆಂಟಿನವರ ಸಹಾಯಾರ್ಥವಾಗಿ ಕಳೆದ ೧೮೮೫ ...ಇಸವಿ ಲಾಗಾಯತು ಇಂಪೀರಿಯಲ್ ಸರ್ವಿಸ್ ಸೈನ್ಯವನ್ನು ಇಟ್ಟು ...ಮ ಉತ್ಕೃಷ್ಟವಾದ ಸ್ಥಿತಿಯಲ್ಲಿ ನಡಿಸುತ್ತಾ ಬಂದಿರುವಿರಿ ಇದ... ...ಹಿಂದುಸ್ಥಾನದ ವಾಯವ್ಯ ಸರಹದ್ದಿನ ಯುದ್ಧಗಳ ಸಮಯಗಳಲ್ಲಿ ...ವಾಗಿದೆಯೆಂದು ನಾವು ಹೇಳಬೇಕಾದದ್ದಿಲ್ಲ ಇಷ್ಟೇ ಅಲ್ಲ ನಿಮ್ಮ ...ಸಂಸ್ಥಾನದಿಂದ ಇಂಪೀರಿಯಲ್ ಕ್ಯಾಡೆಟ್ ಕೋರ್ ಎಂಬ ರಾಜಕು... ...ಮಾರರ ಸೈನ್ಯಕ್ಕೆ ಯೋಗ್ಯರಾದ ದೊಡ್ಡ ಮಂದಿಯನ್ನು ಒದಗಿಸಿ ...ಕೊಟ್ಟಿರುತ್ತೀರಿ ಇಂಥ ಸೈನಿಕರನ್ನು ತರಪೇತು ಮಾಡುವುದರಲ್ಲಿ ಇಂಡಿಯಾ ಗವರ್ನಮೆಂಟಿನವರ ವಿಶೇಷ ಕುತೂಹಲವುಳ್ಳವರಾಗಿರು... ...ವುದರಿಂದ ತಾವು ಇನ್ನು ಮುಂದೆಯೂ ಅಂಥಾ ಯೌವನಸ್ಥರನ್ನು ...ಕಳುಹಿಸಿಕೊಡುವಿರೆಂದು ನಂಬಿದ್ದೇವೆ ಈ ರಾಷ್ಟ್ರದ ...ಅಭಿವೃದ್ಧಿಗೆ ಇಲ್ಲಿನ ಉಪರಾಜರುಗಳನ್ನು ಆಹ್ವಾನಿಸಿ ಅವರದೇ ...ಕೌನ್ಸಿಲ್ ಏರ್ಪಡಿಸ ಮಾಡಬೇಕೆಂತಲೂ, ಗವರ್ನಮೆಂಟಿನ ...ವರಿಗಿಂದಾಗ್ಯೂ ಈ ಕೌನ್ಸಿಲ್ ಮೆಂಬರುಗಳ ಕೂಡ ಆಲೋಚನೆ ...ಮಾಡಿ ಅವರ ಅಭಿಪ್ರಾಯಗಳನ್ನು ಸಂಗ್ರಹ ಮಾಡಬೇಕೆಂತಲೂ ತೀ... ...ರ್ಮಾನಿಸಿರುತ್ತೇವೆ ಈ ಸಭೆಯ ದೆಸೆಯಿಂದ ಈ ರಾಷ್ಟ್ರದ ಒಟ್ಟು ...ನಡೆಯಬೇಕಾದ ಕಾರ್ಯಗಳಿಗೆ ತುಂಬಾ ಸಹಾಯವಾಗುವುದು ...ದ್ದರಿಂದ ರಾಜ್ಯಪರಿಪಾಲನಾ ಕಾರ್ಯಭಾರವು ಪ್ರಜಾಪ್ರೀತಿ ಪೂರ್ವಕ ...ವಾಗಿ ನಡೆಸಲ್ಪಡಬೇಕಾದ್ದೇ ಪರಮ ಧರ್ಮವೆಂಬುವುದನ್ನು ನಿಮ್ಮಂತೆ ...ಯೇ ನಾವೂ ನಂಬಿರುತ್ತೇವೆ ಮತ್ತು ಪ್ರಜೆಗಳ ಇಷ್ಟಾರ್ಥಗಳನ್ನು ...ಮತ್ತು ಇಂಗಿತ ಅಭಿಪ್ರಾಯಾದಿಗಳನ್ನೂ ಅರಿತು ರಾಜ್ಯಭಾರ ನಡಿಸಬೇ... ...ಕಾದ್ದೇ ಮುಖ್ಯ ಕರ್ತವ್ಯವು ಈ ಭಾಗದಲ್ಲಿ ಇನ್ನು ಮುಂದೆಯೂ ...ಈ ರಾಷ್ಟ್ರದ ಸರ್ವ ಪ್ರಜೆಗಳ ಅಭಿಪ್ರಾಯ ಉದ್ದೇಶಾದಿಗಳೂ ಪರಿ... ...ಪಾಲಕರ ಅಭಿಪ್ರಾಯ ಉದ್ದೇಶಗಳೂ ಏಕವೆನಿಸಿ, ಈ ಖಂಡದ ಕೀರ್ತಿ ...ಯನ್ನು ಸುಖಸಂತೋಷಗಳನ್ನೂ ಇನ್ನೂ ಅತಿಶಯವಾಗಿ ಅಭಿವೃದ್ಧಿ ...ಪಡಿಸುವವರಾಗಲೆಂದು ಕುತೂಹಲಪಟ್ಟು ಕೋರುತ್ತೇವೆ ತಾವು ...ಮಗಾಗಿ ಮಾಡಿದ ಸಕಲವಾದ ಮರ್ಯಾದೆ ಸತ್ಕಾರಾದಿಗಳಿಗೆ ...ನಿಮ್ಮನ್ನು ಮನಃಪೂರ್ವಕವಾಗಿ ವಂದಿಸುವೆವು ಎಂಬುದೇ

ಮೂರನೆಯ ದಿನ

ತಾರೀಖು ೧೩ನೆ ಬುಧವಾರ ಬೆಳಿಗ್ಗೆ ವೈಸರಾಯಿಯವರು ಸವಾ... ...ರ್ ಹುದ್ದೆದಾರರುಗಳ ಸಮೇತ ಪರೇಡ್ ಮೈದಾನಿಗೆ ಚಿತ್ತೈಸಿ, ...ನೈಜಾಮರವರ ಮತ್ತು ಅವರ ಆಸ್ಥಾನಕ್ಕೆ ಸೇರಿದ ಸಮಸ್ತ ಅಧಿಕಾರಿಗ... ...ಳೊಡನೆ ಕೂಡಿ, ಆ ಸಂಸ್ಥಾನದಲ್ಲಿರುವ ಇಂಗ್ಲಿಷ್ ಮತ್ತು ದೇಶೀಯ ...ಸೋಲ್ಜರುಗಳ ಸವಾರ್ ಸೈನ್ಯಗಳ ಕವಾತನ್ನು ಪರಾಂಬರಿಸಿ ...ದರು ಇದು ಬಹು ವಿಜೃಂಭಣೆಯಿಂದಲೂ ವಿಶೇಷ ಸಂತೋಷಕರ ...ವಾಗಿಯೂ ನೆರವೇರಿತು ಮಧ್ಯಾಹ್ನದ ಮೇಲೆ ವೈಸ್‌ರಾಯಿಯವರೂ ...ನೈಜಾಮರವರ ಮಂತ್ರಿಗಳೇ ಮೊದಲಾದವರೂ ಫತ್ತೆ ಮೈದಾನ್ ಎಂ... ...ಬಲ್ಲಿಗೆ ದಯಮಾಡಿ, ಅಲ್ಲಿ ನಡಿಸಲ್ಪಟ್ಟ ನಾನಾ ಆಟಪಾಟಗಳನ್ನು ...ನೋಡಿ, ಜಯಶಾಲಿಗಳಾದವರಿಗೆಲ್ಲಾ ಬಹುಮಾನಗಳನ್ನು ಕೊಡಿಸಿ ...ದರು. ಬಹುಮಾನ ಪಡೆದವರ ಪೈಕಿ ಏಕ್ ಬಾಲ್ ಅಲೀಬೇಗ್ ಎಂಬ ೧೧ ...ವರುಷದ ಬಾಲಕನು ತುಂಬಾ ಸಾಹಸಕಾರ್ಯಗಳನ್ನು ಮಾಡಿದ್ದನ್ನು ...ವೈಸ್‌ರಾಯಿಯವರೂ ಅವರ ಪತ್ನೀರವರೂ ಪರಾಂಬರಿಸಿ, ಅವನನ್ನು ತಮ್ಮ ಬಳಿಗೆ ಕರಿಸಿಕೊಂಡು, ಅವನ ಯೋಗಕ್ಷೇಮವನ್ನು ವಿಚಾರಿಸಿ, ತಮ್ಮ ಮೆಚ್ಚಿಕೆಯನ್ನು ಅವನಿಗೆ ತಿಳಿಯಪಡಿಸಿದರು ಆ ರಾತ್ರಿ ಭೋಜನಾನಂತರ ವೈಸ್‌ರಾಯಿ ಲಾರ್ಡ್ ಮಿಂಟೋರವರು ಒಂದು ದರ್ಬಾರನ್ನು ನಡಿಸಿ, ಹೈದರಾಬಾದ್, ಸಿಕಂದರಾಬಾದ್, ಬೊಲಾರಾಂ, ಈ ಪಟ್ಟಣಗಳಲ್ಲಿರುವ ಮುಖ್ಯರಾದ ಪ್ರಜಾಪ್ರತಿನಿಧಿಗಳನ್ನು ಕರೆಸಿಕೊಂಡು, ಅವರಿಗೆಲ್ಲಾ ಭೇಟಿ ದಯಪಾಲಿಸಿದರು ಬೇರೆ ಬೇರೆ ರಾಜ್ಯಗಳ ಸೈನ್ಯಾಧಿಪತಿಗಳೆಲ್ಲಾ ದರ್ಬಾರಿಗೆ ಹೋಗಿ ವೈಸ್‌ರಾಯಿಯವರಿಗೆ ನಮಸ್ಕಾರಗಳನ್ನು ಸಲ್ಲಿಸಿ ಬಂದರು ಹೈದರಾಬಾದಿನ ನೈಜಾಮರವರೂ ಈ ದಿನ ಮಧ್ಯಾಹ್ನವೇ ಅಂತರಂಗವಾಗಿ ದಯಮಾಡಿ ವೈಸ್‌ರಾಯಿಯವರ ಕೂಡ ಕಲೆತು ಸ್ವಲ್ಪ ಹೊತ್ತು ಸಂಭಾಷಣೆ ಮಾಡಿಕೊಂಡು ಬಂದರು ಸಾಯಂಕಾಲ ಬ್ರಿಟಿಷ್ ರೆಸಿಡೆಂಟರವರ ಬಂಗಲೆಯ ಮೈದಾನಿನಲ್ಲಿ ಗಾರ್ಡನ್ ಪಾರ್ಟಿ ಎಂಬ ಸಂಭ್ರಮ ಕೂಟವು ಜರುಗಿತು ಸುಮಾರು ೫೦೦ ಮಂದಿ ದೊಡ್ಡ ಮನುಷ್ಯರೂ ಸರ್ದಾರರೂ ದೊರೆಸಾನಿಗಳೂ ಹೋಗಿದ್ದರು ವೈಸ್‌ರಾಯಿಯವರೂ ಅವರ ಪತ್ನೀರವರೂ ನೈಜಾಮರವರೂ ದಯಮಾಡಿ, ಎಲ್ಲರೊಡನೆಯೂ ಕಲೆತು ಕತ್ತಲಾಗುವ ತನಕ ವಿಹರಿಸುತ್ತಿದ್ದರು

ತಾರೀಖು ೧೫ನೇ ಶುಕ್ರವಾರ ವೈಸ್‌ರಾಯಿಯವರು ಪತ್ನಿ ಪರಿವಾರ ಸಹಿತ ಟ್ರಿಮಲ್‌ಘೆರಿಯಲ್ಲಿ ರುವ ಸೋಲ್ಜರುಗಳ ಮನೆಗಳನ್ನೂ, ೩೫೦ ಮಂದಿ ಏಕಕಾಲದಲ್ಲಿ ಕುಳಿತು ಭೋಜನ ಮಾಡತಕ್ಕ ವಿಸ್ತಾರವಾದ ಮಂದಿರವನ್ನೂ, ಸೋಲ್ಜರುಗಳ ರೀಡಿಂಗ್ ರೂಮು, ಅವರ ಆಟಗಳ ಬಂಗಲೆ ಆ ರಾಮಾದಿಗಳನ್ನೂ ಪರಾಂಬರಿಸಿ ತುಂಬಾ ಸಂತೋಷಪಟ್ಟು ಅಲ್ಲಿಂದ ಹೊರಟು ಸೋಲ್ಜರುಗಳಿಗಾಗಿ ಇಟ್ಟು ನಡಿಸುತ್ತಿರುವ ಭಾರೀ ಆಸ್ಪತ್ರೆಗೆ ದಯಮಾಡಿ, ಅದರ ಒಳಭಾಗಗಳೆಲ್ಲವನ್ನು ಸುತ್ತ ಪರಾಂಬರಿಸಿದ್ದಲ್ಲದೆ, ರೋಗಿಗಳಾಗಿ ಮಲಗಿದ್ದ ಸಿಪಾಯಿಗಳ ಯೋಗಕ್ಷೇಮವನ್ನು ತನಿಖೆಮಾಡಿ, ತಮ್ಮ ಬಿಡಾರವಾದ ಫಾಲಕ್‌ನಾಮಾ ಎಂಬ ರಾಜಭವನಕ್ಕೆ ಚಿತ್ತೈಸಿದರು ಆ ದಿನ ಮಧ್ಯಾಹ್ನದ ಮೇಲೆ ವೈಸ್‌ರಾಯಿಯವರ ಪತ್ನೀರವರು ಸಿವಿಲ್ ಆಸ್ಪತ್ರೆಗೆ ದಯಮಾಡಿ ಎಲ್ಲಾ ಭಾಗಗಳನ್ನು ಪರಾಂಬರಿಸಿ, ಅದನ್ನು ಬಿಡಾವಣೆ ಮಾಡುವುದಕ್ಕೆ ಹೊಸ ಕಟ್ಟಡಗಳನ್ನು ಕಟ್ಟತಕ್ಕದ್ದಕ್ಕೆ ಮೂರು ಸ್ಥಳಗಳಲ್ಲಿ ಅಸ್ತಿಬಾರದ ಶಿಲೆಗಳನ್ನು ಸ್ವಹಸ್ತದಿಂದ ಹಾಕಿ ಅಲ್ಲಿ ಸೇರಿದ್ದ ದೊಡ್ಡ ಮನುಷ್ಯರಿಂದ ಸನ್ಮಾನವನ್ನು ಹೊಂದಿ ಅಲ್ಲಿಂದ ಸರ್ದಾರ್ ಬಾಗ್ ಎಂಬ ಉದ್ಯಾನವನದಲ್ಲಿ ನೇತ್ರಾನಂದಕರವಾಗಿ ಇಟ್ಟು ತೋರಿಸಿದ್ದ ಚಿತ್ರಕೆಲಸಗಳ ಕೈಗಾರಿಕೆ ಪ್ರದರ್ಶನ ಶಾಲಾ ವಸ್ತುಗಳನ್ನು ಪರಾಂಬರಿಸಿ, ಕೆಲವು ಚಿತ್ರ ವಸ್ತುಗಳನ್ನು ತಮ್ಮ ಸ್ವಂತಕ್ಕೆ ಕೊಂಡು ತೆಗೆದುಕೊಂಡು ವಾಪಸು ದಯಮಾಡಿದರು ನೈಜಾಮರವರೂ ಯುವರಾಜರವರೂ ಮಂತ್ರಿಶ್ರೇಷ್ಠರೂ ಆ ಪ್ರದರ್ಶನ ಶಾಲೆಗೆ ಹೋಗಿ ಬಹಳ ಹೊತ್ತು ಎಲ್ಲಾ ವಸ್ತುಗಳನ್ನೂ, ಅಲ್ಲಿ ನಡೆದ ಆಟಪಾಟ ವಿನೋದಾದಿಗಳನ್ನೂ ಪರಾಂಬರಿಸಿ ಬಂದರು

ವೈಸ್‌ರಾಯಿಯವರ ಮುಂದಿನ ಪ್ರಯಾಣ

ವೈಸ್‌ರಾಯಿಯವರು ಮೊದಲು ಏರ್ಪಾಟಾಗಿದ್ದಂತೆ ಕಾಕಿನಾಡಾಕ್ಕೆ ದಯಮಾಡಿ ಅಲ್ಲಿ ನೊರ್ತ್‌ಬ್ರೂಕ್ ಎಂಬ ಹಡಗನ್ನು ಹತ್ತಿ ನೆಟ್ಟಗೆ ಬರ್ಮಾ ಅಧಿಪತ್ಯವನ್ನು ಕುರಿತು ಸಮುದ್ರಯಾನ ಮಾಡಬೇಕಾಗಿದ್ದಿತು ಆದರೆ ಕಾಕಿನಾಡಾದಲ್ಲಿ ಸಮುದ್ರವು ಅಲೆಗಳಿಂದ ಬಹು ಭಯಂಕರವಾಗಿದೆ ಎಂದೂ ಅಲ್ಲಿ ಹಡಗು ಹತ್ತುವುದು ಸಾಧ್ಯವಲ್ಲವೆಂದೂ ತಿಳಿದ ಒಂದೇ ಕಾರಣ ವೈಸ್‌ರಾಯಿಯವರು ಪರಿವಾರ ಸಹಿತ ಆ ಕಡೆ ಪ್ರಯಾಣವನ್ನು ನಿಲ್ಲಿಸಿ, ಕಳೆದ ಭಾನುವಾರ ಹೈದರಾಬಾದಿನಿಂದ ರೈಲಿನ ಮೇಲೆ ಹೊರಟು ಮದರಾಸಿಗೆ ಸಾಯಂಕಾಲ ೮ ಗಂಟೆಗೆ ದಯಮಾಡಿ, ಸ್ಟೇಷನ್ನಿಂದ ಸೀದಾ ಸಮುದ್ರತೀರವನ್ನು ತಲಪಿ, ಅಲ್ಲಿ ಹಡಗು ಹತ್ತಿ ಬರ್ಮಾ ಅಧಿಪತ್ಯಕ್ಕೆ ಸೇರಿದ ರಂಗೂನ್ ಪಟ್ಟಣಕ್ಕೆ ಪ್ರಯಾಣಮಾಡಿದರು

ಇಂಡಿಯಾ ದೇಶದ ವೃತ್ತಾಂತಗಳು

ದಕ್ಷಿಣ ಆಫ್ರಿಕದಿಂದ ಹಿಂದುಸ್ಥಾನಕ್ಕೆ ವಾಪಸು ಹೋಗುವುದಿಲ್ಲವೆಂದು ಹಟಹಿಡಿದಿದ್ದ ಹಿಂದೂ ಪುರೋಹಿತನಿಗೆ ಅಲ್ಲಿನ ಸರ್ಕಾರದವರು ಒಂದು ತಿಂಗಳ ಸಜಾ ವಿಧಿಸಿದರೆಂದು ತಂತೀ ವರ್ತಮಾನ ಬಂದಿದೆ.

❖❖❖

ಹಿಂದುಸ್ಥಾನದ ಕೋರ್ಟುಗಳಲ್ಲಿ ಮ್ಯಾಜಿಸ್ಟ್ರೇಟರು ಬಾಲಕರ ಅಪರಾಧಿಗಳನ್ನು ಛಡಿ ಶಿಕ್ಷೆಗೆ ಗುರಿಮಾಡತಕ್ಕ ವಿಚಾರದಲ್ಲಿ ಇಂಡಿಯಾ ಗವರ್ನಮೆಂಟಿನವರಿಗೂ ವಿಲಾಯತಿಯಲ್ಲಿರುವ ಸ್ಟೇಟ್ ಸೆಕ್ರೆಟರಿಯವರಿಗೂ ಕಾಗದಪತ್ರಗಳು ನಡೆಯುತ್ತಲಿವೆ

❖❖❖

ಪಂಜಾಬು ಅಧಿಪತ್ಯದಲ್ಲಿ ಪ್ರಕಟವಾಗುತ್ತಿರುವ ದೇಶಭಾಷೆಯ ವರ್ತಮಾನ ಪತ್ರಿಕಾ ಕರ್ತರುಗಳಿಗೆ ಗವರ್ನರವರು ಕಾಗದ ಬರೆದು ಎಲ್ಲಾ ಪತ್ರಿಕಾಕರ್ತರೂ ಪ್ರಜೆಗಳಿಗೆ ಪ್ರೋತ್ಸಾಹಪಡಿಸಿ ಪ್ಲೇಗ್ ಔಷಧಿಯನ್ನು ಹಾಕಿಸಿಕೊಳ್ಳುವಂತೆ ಮಾಡಬೇಕೆಂದು ಕೇಳಿದಾರೆ

❖❖❖

ಕ್ಷಾಮನಿವಾರಣೆಗೋಸ್ಕರ ದ್ರವ್ಯಸಹಾಯ ಬೇಕೆಂದು ಅಪೇಕ್ಷಿಸಿದ ದೇಶೀಯ ಸಂಸ್ಥಾನಗಳಿಗೆ ಇಂಡಿಯಾ ಗವರ್ನಮೆಂಟಿನವರು ಅಲ್ಪಸ್ವಲ್ಪ ಹಣವನ್ನು ಆಗಲೇ ಸಾಲಕೊಡುತ್ತಾ ಬಂದಿದಾರೆ ಇದುವರೆಗೆ ಸಾಲ ಪಡೆದುಕೊಂಡಿರುವವರ ಪೈಕಿ ದಾತಿಯಾ ಸಂಸ್ಥಾನದವರೇ ಹೆಚ್ಚು ಹಣವನ್ನು ತರಿಸಿಕೊಂಡಿದಾರೆ

❖❖❖

ಬಾಕರ್‌ಗಂಜ್ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಂದಾಗಲಿ ಪೋಲೀಸ್ ಅಧಿಕಾರಿಗಳಿಂದಾಗಲಿ ಮೊದಲೇ ಲೈಸೆನ್ಸು ಪಡೆದುಕೊಳ್ಳದೆ ಇಪ್ಪತ್ತು ಜನಗಳಿಗಿಂತಲೂ ಹೆಚ್ಚು ಜನರನ್ನು ಅಂತರಂಗದಲ್ಲಾಗಲಿ ಬಹಿರಂಗದಲ್ಲಾಗಲಿ ಸೇರಿಸಿ ಯಾವತರಹಾ ಸಭೆಯನ್ನೂ ನಡಿಸಕೂಡದೆಂದು ಗವರ್ನಮೆಂಟಿನವರು ಸೂಚಿಸಿರುತ್ತಾರೆ.

ಬಂಗಾಳೆಯ ಕೆಲವು ಜಮೀನ್ದಾರರು ತಮ್ಮ ಗ್ರಾಮಗಳೊಳಗೆ ಸಂತೆಕಟ್ಟುವ ಸ್ಥಳಗಳಲ್ಲಿ ವರ್ತಕರು ಸ್ವದೇಶೀ ಪದಾರ್ಥಗಳನ್ನು ತಂದಿಟ್ಟು ಬಿಕರಿಮಾಡುವುದಾದರೆ ತಮಗೆ ಸ್ಥಳಬಾಡಿಗೆ ಕೊಡಬೇಕಾ ದದ್ದಿಲ್ಲವೆಂತಲೂ ವಿದೇಶೀ ಸರಕುಗಳನ್ನು ತಂದಿಟ್ಟು ಬಿಕರಿಮಾಡುವ ವರ್ತಕರು ಸ್ಥಳ ಬಾಡಿಗೆ ಕೊಟ್ಟೇತೀರಬೇಕೆಂತಲೂ ನೋಟೀಸುಗಳನ್ನು ಪ್ರಕಟಿಸಿರುತ್ತಾರೆ

❖❖❖

ಪೂರ್ವಬಂಗಾಳಾ ಅಧಿಪತ್ಯಕ್ಕೆ ಸೇರಿದ ದಿನಾಜ್‌ಗಂಜ್ ಎಂಬ ಊರಿನಲ್ಲಿ ದವಸ ಧಾನ್ಯಗಳು ತುಂಬಾ ತಗ್ಗಿದ್ದರಿಂದ ಪ್ರಜೆಗಳು ದಂಗೆ ಕಲಹಗಳನ್ನು ನಡಿಸಿದರು ಆದಕಾರಣ ಸರ್ಕಾರದವರು ಆ ಊರಿನಲ್ಲೂ ಭಕ್ಷಿಗಂಜ್ ಎಂಬ ಊರಿನಲ್ಲೂ ಪ್ರಜೆಗಳಿಗೆ ಪ್ರೋತ್ಸಾಹಪಡಿಸಿ ಪರಸ್ಪರ ಸಹಾಯಕ ಸಂಘಗಳನ್ನು ಸ್ಥಾಪಿಸಿಕೊಳ್ಳುವಂತೆ ಮಾಡಿ, ಆ ಎರಡು ಬ್ಯಾಂಕುಗಳಿಗೂ ಸರ್ಕಾರದಿಂದ ೪೦,೬೦೦ ರೂಪಾಯಿ ಮೂಲಧನವನ್ನು ಕೊಡಿಸಿರುತ್ತಾರೆ

❖❖❖

ಬಂಗಾಳಾ ವಿಭಜನೆ ಮಾಡಲ್ಪಟ್ಟ ದಿವಸವನ್ನು ಈ ವರುಷ ದುಃಖಸೂಚಕವಾದದ್ದಾಗಿ ಆಚರಣೆ ಮಾಡಿದ್ದಕ್ಕೆ ಬಂಗಾಳಾ ಗವರ್ನಮೆಂಟಿನವರು ಭೋಳಾ ಸಬ್ ಡಿವಿಜನ್ ಸರ್ಕಾರಿ ಪ್ಲೀಡರನ್ನು ಆ ಕೆಲಸದಿಂದ ವಜಾ ಮಾಡಿದರು ಸರ್ಕಾರದವರು ಆತನನ್ನು ಪ್ರಶ್ನೆ ಮಾಡಿದ್ದಕ್ಕೆ ಆತನು ಪ್ರತಿಯಾಗಿ—ನಾನೇನೂ ಸರ್ಕಾರದ ನೌಕರನಲ್ಲ, ಹಾಗೆ ನಾನು ಸರ್ಕಾರದ ಹುದ್ದೇದಾರನಾಗಿರುವದೇ ನಿಜವಾದ ಪಕ್ಷಕ್ಕೆ ನಾನು ಯಾವ ಸಮಾಧಾನವನ್ನೂ ಹೇಳಲಾರೆನು ಎಂದು ಜವಾಬು ಕೊಟ್ಟನು

❖❖❖

ಅಸಾಂ, ಕೊಡಗು, ಮಧ್ಯ ಇಂಡಿಯಾ, ಕಾಶ್ಮೀರ, ಬೆಲೂಚಿಸ್ಥಾನ, ಈ ಪ್ರಾಂತ್ಯಗಳು ಪ್ಲೇಗಿನ ಬಾಧೆಗೆ ಇನ್ನೂ ಸಿಕ್ಕಿ ಇಲ್ಲ ಹಿಂದಿನ ವಾರ ಬೊಂಬಾಯಿ ಅಧಿಪತ್ಯದಲ್ಲಿ ಈ ಉಪದ್ರವ ದೆಸೆಯಿಂದ ೩,೫೫೧ ಮರಣಗಳಾದವು ಮದರಾಸ್ ಅಧಿಪತ್ಯ ೧೨೦, ಬಂಗಾಳಾ ೭೯, ಸಂಯುಕ್ತ ಅಧಿಪತ್ಯಗಳು ೫೩, ಪಂಜಾಬ್ ಅಧಿಪತ್ಯ ೨೬೬ ಬರ್ಮಾ ೩೬, ಮಧ್ಯಪ್ರಾಂತ್ಯಗಳು ೭೦೭ ಮೈಸೂರು ಸಂಸ್ಥಾನ ೫೯೦, ಹೈದರಾಬಾದ್ ಸಂಸ್ಥಾನ ೭೩೫ ರಾಜಪುಟಾನಾ ೧೧೮ ವಾಯವ್ಯ ಸರಹದ್ದು ಪ್ರಾಂತ್ಯ ೯೫, ಈ ರೀತಿ ಹೋದ ವಾರ ಹಿಂದುಸ್ಥಾನದಲ್ಲಿ ಪ್ರಜೆಗಳು ಪ್ಲೇಗಿನಲ್ಲಿ ಕಾಲವಾಗಿದಾರೆ

❖❖❖

ಸಂಯುಕ್ತ ಅಧಿಪತ್ಯಗಳ ಲೆಫ್ಟಿನೆಂಟ್ ಗವರ್ನರವರು ಅಲಹಾಬಾದ್ ಗವರ್ನಮೆಂಟ್ ಬಂಗಲೆಯಲ್ಲಿ ಮುಖ್ಯ ಮುಖ್ಯ ಅಧಿಕಾರಿಗಳನ್ನೆಲ್ಲಾ ಕರೆಸಿಕೊಂಡು ಕ್ಷಾಮನಿವಾರಣೆಯ ಏರ್ಪಾಡುಗಳನ್ನು ನಡಿಸುವ ಭಾಗದಲ್ಲಿ ಆಲೋಚನೆಮಾಡಿದರು ಇದುವರೆಗೆ ಸೀತಾಪುರವೆಂಬ ಡಿಸ್ಟ್ರಿಕ್ಟಿನಲ್ಲಿ ರೈತರಿಗೆ ತಕಾವಿ ಅಡ್ವಾನ್ಸಿಗಾಗಿ ೫ ಲಕ್ಷ ರೂಪಾಯಿ ಹಂಚಿ ಕೊಡಿಸಿದ್ದಾಯಿತು ಈಗ ಕ್ಷಾಮ ನಿವಾರಣೆಗೋಸ್ಕರ ೬ ಲಕ್ಷ ರೂಪಾಯಿ ಖರ್ಚು ಮಾಡಬೇಕೆಂದು ಸ್ಯಾಂಕ್ಷನ್ ಮಾಡಿದಾರೆ ಘಾರೆಸ್ಟ್ ಇಲಾಖೆಯವರು ಒಂದು ರೂಪಾಯಿಗೆ ೧೦ ಆಣೆಯಂತೆ ಕ್ರಯ ಕೊಟ್ಟು ಆಹಾರವಾದ ಕಲ್ಲನ್ನು ತೆಗೆದುಕೊಂಡು ಹೋಗಿ ಗೋವುಗಳಿಗೆ ಹಂಚಿಕೊಡುತ್ತಿದಾರೆ

❖❖❖

ಜೇಲಂ ಡಿಸ್ಟ್ರಿಕ್ಟಿಗೆ ಸೇರಿದ ಪಿಂಡದಾದನ್ ಖಾನ್ ಎಂಬ ಊರಿನಲ್ಲಿ ಒಬ್ಬ ಸಾಹುಕಾರನು ಒಬ್ಬ ರೈತನ ಮೇಲೆ ಅವನಿಗೆ ಕೊಟ್ಟಿದ್ದ ಸಾಲದ ಹಣಕ್ಕೆ ದಾವಾ ಮಾಡಿ ಡಿಕ್ರಿ ಪಡೆದುಕೊಂಡನು ಪ್ರತಿವಾದಿಯು ಸಾಹುಕಾರನ ಬಳಿಗೆ ಹೋಗಿ—ನನ್ನ ಜಮೀನನ್ನೇ ಡಿಕ್ರಿ ಹಣಕ್ಕೆ ನಿನಗೆ ವಹಿಸಿಕೊಡುತ್ತೇನೆ ನೀನು ಗ್ರಾಮಕ್ಕೆ ಬಂದು ಆ ಜಮೀನನ್ನು ನೋಡು ಎಂದು ಹೇಳಿ ಆ ಜಮೀನಿನ ಬಳಿಗೆ ಕರೆದುಕೊಂಡು ಹೋದನು ಅಲ್ಲಿ ಅವನೂ ಇನ್ನೂ ಏಳು ಮಂದಿಯೂ ಸೇರಿ ಆ ಸಾಹುಕಾರನನ್ನು ಕತ್ತು ಹಿಸುಕಿ ಕೊಂದು ಅದೇ ಜಮೀನಿನ ಬಳಿ ಭೂಗತ ಮಾಡಿಬಿಟ್ಟರು ಈಗ ಆ ಶವವೂ, ಆ ಎಂಟು ಮಂದಿ ಅಪರಾಧಿಗಳೂ ಪೋಲೀಸಿನವರಿಗೆ ಸಿಕ್ಕಿಬಿದ್ದಿದಾರೆ

❖❖❖

ಹಿಂದುಸ್ಥಾನದ ವಾಯವ್ಯ ಸರಹದ್ದಿನ ಆಚೆ ಇರುವ ಕೋಹಾಟ್ ಎಂಬ ಡಿಸ್ಟ್ರಿಕ್ಟಿನೊಳಗೆ ಕೆಲವು ತಂಟೆಗಾರರು ಇಂಗ್ಲಿಷ್ ಪ್ರಜೆಗಳನ್ನು ಹಿಂಸೆಮಾಡುತ್ತಲೂ ಅವರ ಗೋವುಗಳನ್ನೂ ಆಸ್ತಿಪಾಸ್ತಿಗಳನ್ನೂ ಎತ್ತಿಕೊಂಡು ಹೋಗುತ್ತಲೂ ಪೋಸ್ಟ್ ಆಫೀಸುಗಳನ್ನೂ ನುಗ್ಗಿ ಕೊಳ್ಳೆಹೊಡೆಯುತ್ತಲೂ ಬಂದಿದಾರೆ ಇದಲ್ಲದೆ ಇದುವರೆಗೆ ಅವರು ನಾಲ್ಕಾರು ಜನರನ್ನು ಕೊಂದು ಗಾಯಮಾಡಿ ಕೆಲವರನ್ನು ಅನಾಮತ್ತು ಎತ್ತಿಕೊಂಡು ಹೋದರು ಕೆಲವು ಬಂದೂಕುಗಳನ್ನೂ ಮದ್ದುಗುಂಡು ತೋಟಾಗಳನ್ನೂ ಅವರು ಅಪಹರಿಸಿಕೊಂಡು ಹೋಗಿದಾರೆ ಇಂಡಿಯಾ ಗವರ್ನಮೆಂಟಿನವರು ಆ ತಂಟೆರ ಹಾವಳಿಯನ್ನು ತಡೆಯುವ ಭಾಗದಲ್ಲಿ ವಿಶೇಷ ಯೋಚನೆ ಮಾಡುತ್ತಿರುವರು

❖❖❖

ಹಿಂದುಸ್ಥಾನ ರಾಷ್ಟ್ರೀಯ ಸಭೆಯು (ನ್ಯಾಷನಲ್ ಕಾಂಗ್ರೆಸ್) ಮುಂದಿನ ದಿಸೆಂಬರ್ ತಿಂಗಳ ಕಡೇ ವಾರದಲ್ಲಿ ಸೂರತ್ ನಗರದಲ್ಲಿ ನಡಿಯತಕ್ಕದ್ದೆಂದು ತೀರ್ಮಾನವಾಗಿ, ಅದಕ್ಕಾಗಿ ಅಲ್ಲಿನ ದೊಡ್ಡಮನುಷ್ಯರು ಕಟ್ಟಡ ಮೊದಲಾದ ಏರ್ಪಾಡುಗಳನ್ನು ಮಾಡುತ್ತಿದಾರೆ ಟ್ರಾನ್ಸ್‌ವಾಲಿನಲ್ಲೂ ನೆಟಾಲಿನಲ್ಲೂ ಇರುವ ಅನೇಕ ಹಿಂದುಸ್ಥಾನದ ಪ್ರಜೆಗಳನ್ನು ದಕ್ಷಿಣ ಆಫ್ರಿಕಾ ಸರ್ಕಾರದವರು ನಾನಾ ನಿರ್ಬಂಧಗಳಿಗೆ ಗುರಿಮಾಡಿ ಕಷ್ಟಪಡಿಸುತ್ತಿರುವುದರಿಂದ ಅವರ ಕಷ್ಟ ಕೊರತೆಗಳನ್ನು ಈ ರಾಷ್ಟ್ರೀಯ ಸಭೆಯಲ್ಲಿ ವಿವರಿಸಬೇಕೆಂದು ಅಲ್ಲಿನ ಜನರು ಆರು ಮಂದಿಯನ್ನು ಪ್ರತಿನಿಧಿಗಳಾಗಿ ಚುನಾಯಿಸಿರುತ್ತಾರೆಂತಲೂ, ಇವರು ಮೇಲ್ಕಂಡ ರಾಷ್ಟ್ರೀಯ ಸಭೆಗೆ ಬರುವವರಾಗಿದಾರೆಂತಲೂ ತಂತೀವರ್ತಮಾನ ಬಂದಿದೆ

ಪೂರ್ವ ಬಂಗಾಳ ಎಂಬ ಹೊಸ ಆಧಿಪತ್ಯದ ಮುಖ್ಯ ಪಟ್ಟಣವಾದ ಬಾರಿಸಾಲ್ ನಗರದಲ್ಲಿ ವೈಕುಂಠ ಚಂದ್ರಬೋಸ್ ಎಂಬೊಬ್ಬ ಸರ್ಕಾರಿ ಗುಮಾಸ್ತನು ತನ್ನ ಮಗನ ಮೂಲಕ ಲಾಲಾ ಲಾಜಪತ್ ರಾಯ್, ಬಿಪಿನ ಚಂದ್ರಪಾಲ್ ಎಂಬೀ ಜನರ ಭಾವಚಿತ್ರಗಳನ್ನು ನವರಾತ್ರಿ ಹಬ್ಬ ಕಾಲದಲ್ಲಿ ಬಿಕರಿ ಮಾಡಿಸುತ್ತಿದ್ದನೆಂದು ಗೊತ್ತಾಯಿತು ಡಿಸ್ಟ್ರಿಕ್ಟ್ ಜಡ್ಜ್ ಮೆ॥ ಕಾರ್ಗಿಲ್‌ಯವರು ಅವನನ್ನು ಕರೆದು ಕೇಳಿದಾಗ ಅವನು—ನನಗೆ ಬರುವ ಸಂಬಳ ಜೀವನಕ್ಕೆ ಸಾಲದು, ಆದ್ದರಿಂದ ಈ ಚಿತ್ರಗಳನ್ನು ಬಿಕರಿಮಾಡಿ ಜೀವನಕ್ಕೆ ಮಾರ್ಗ ಮಾಡಿಕೊಂಡೆನು ಎಂದು ಉತ್ತರಕೊಟ್ಟನು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಅಂಥವನ ವಿಷಯದಲ್ಲಿ ಕಠಿಣ ತೋರಿಸಕೂಡದೆಂದು ಹೇಳಿ, ಅವನನ್ನು ಅವನ ನೌಕರಿಯಿಂದ ವಜಾಮಾಡಿಬಿಟ್ಟರು

❖❖❖

ಪಂಜಾಬಿನಲ್ಲಿ ದಂಗೆಯನ್ನೆಬ್ಬಿಸುವುದಕ್ಕೆ ಪ್ರಯತ್ನಪಟ್ಟರೆಂದು ಇಂಡಿಯಾ ಗವರ್ನಮೆಂಟಿನವರು ಲಾಲಾ ಲಾಜಪತ್‌ರಾಯಿಯವರನ್ನೂ ಅಜಿತ್‌ಸಿಂಗರನ್ನೂ ಇದ್ದಕ್ಕಿದ್ದಹಾಗೇ ದಸ್ತಗಿರಿ ಮಾಡಿಸಿ, ಬರ್ಮಾ ಆಧಿಪತ್ಯಕ್ಕೆ ಸೇರಿದ ಮಾಂಡಲೇ ಪಟ್ಟಣದಲ್ಲಿ ಒಂದು ಅರಮನೆಯಲ್ಲಿ ಕೈಸೆರೆಯಾಗಿ ಇಡಿ' ಕಳೆದ ಆರು ತಿಂಗಳಿಂದಲೂ ಕಾಪಾಡುತ್ತಿದ್ದರಷ್ಟೆ ವಿಲಾಯತಿಯ ಮಹಾರಾಜಾ ಚಕ್ರವರ್ತಿಯವರು ಈ ಸಲ ತಮ್ಮ ವರುಷ ವರ್ಧಂತಿಯ ಸಂತೋಷಕಾಲದಲ್ಲಿ ಅಂದರೆ ಈ ತಿಂಗಳ ೯ ನೆ ತಾರೀಖಿನಲ್ಲಿ ಆ ಇಬ್ಬರನ್ನೂ ಬಂಧನದಿಂದ ಬಿಟ್ಟುಬಿಡಬೇಕೆಂತಲೂ, ಅವರನ್ನು ವಾಪಸು ಅವರವರ ಸ್ಥಳಗಳಿಗೆ ಕಳುಹಿಸಿಕೊಡಬೇಕೆಂತಲೂ ಅಪ್ಪಣೆ ದಯಪಾಲಿಸಿದರು ಅದೇ ಪ್ರಕಾರ ಇಂಡಿಯಾ ಗವರ್ನಮೆಂಟಿನವರು ಅವರನ್ನು ಸೆರೆಯಿಂದ ಬಿಡುಗಡೆ ಮಾಡಿರುತ್ತಾರೆ.

❖❖❖

ಕಟಾಕ್ ಡಿಸ್ಟ್ರಿಕ್ಟಿಗೆ ಸೇರಿದ ಜಯಪುರ ಪ್ರಾಂತ್ಯದಲ್ಲಿ ಕ್ಷಾಮದ ಭಯಂಕರವಾದ ಸ್ಥಿತಿಯನ್ನು ಒಬ್ಬ ಬಾತ್ಮಿದಾರರು ಹ್ಯಾಗೆ ವಿವರಿಸುತ್ತಾರೆಂದರೆ—ಈ ಕಡೆ ನದಿಯಲ್ಲಿ ಬಂದ ಪ್ರವಾಹಗಳು ಅಪಾರವಾದ ಮರಳನ್ನು ತಂದು ವಿಸ್ತಾರವಾದ ಜಮೀನುಗಳನ್ನೆಲ್ಲಾ ಬೆಳೆ ಸಹಿತ ಹೂತುಬಿಟ್ಟವು ರೈತರು ಕೆಲವು ವರುಷಗಳ ತನಕ ಕಷ್ಟಪಟ್ಟರೂ ಆ ಜಮೀನುಗಳು ಹಸನಾಗುವುದಿಲ್ಲ ಫಸಲೆಲ್ಲಾ ಸಂಪೂರ್ಣವಾಗಿ ನಾಶವಾಗಲ್ಪಟ್ಟದೆ ಮರಳು ಬೀಳದ ಜಮೀನುಗಳನ್ನು ರೈತರು ಉತ್ತು ಬಿತ್ತಿದರು ಇದಕ್ಕೆ ಮಳೆ ಬಾರದೆ ಹೋದದ್ದರಿಂದ ಎಲ್ಲಾ ಒಣಗಿ ಹೋಯಿತು ಈ ಪ್ರಾಂತ್ಯದ ಪ್ರಜೆಗಳೆಲ್ಲಾ ಮಹಾಘೋರವಾದ ಕ್ಷಾಮದಲ್ಲಿ ಸಿಕ್ಕಿಕೊಂಡಿದಾರೆ ಸಾವಿರಾರು ಪ್ರಜೆಗಳು ಸತ್ತುಹೋದರು ಸಾವಿರಾರು ಮನೆಗಳು ನಾಶವಾದವು ನೂರಾರು ಜನರಿಗೆ ಮನೆ ಮಠಗಳೇ ಇಲ್ಲ ಈ ಪ್ರವಾಹದ ದೆಸೆಯಿಂದ ಒಬ್ಬನ್ನದಲ್ಲಿ ಸುಮಾರು ೩೦೦ ಚದರ ಮೈಲಿಯಷ್ಟು ವಿಸ್ತಾರವಾದ ಜಮೀನು ಗ್ರಾಮಭೂಮಿಗಳೆಲ್ಲಾ ಕೊಚ್ಚಿಹೋದವು ಬ್ರಾಹ್ಮಣಿ ನದಿಯ ಉತ್ತರಕ್ಕೆ ನಾನು ಇಪ್ಪತ್ತೆರಡು ಗ್ರಾಮಗಳಲ್ಲಿ ಸಂಚಾರ ಮಾಡಿ ನನ್ನ ಕಣ್ಣಾರ ನೋಡಿದ ಸಂಗತಿಗಳನ್ನು ಬರೆದಿದೇನೆ ಕ್ಷಾಮಪೀಡಿತರಾದ ನೂರಾರುಮಂದಿ ನನ್ನನ್ನು ನೋಡಿ ನನ್ನ ಬೆನ್ನು ಹಿಡಿದು ಅನ್ನ ಕೊಡಿ ಎಂದು ನನ್ನನ್ನು ಬೇಡಿದರು ಜನರು ಆಹಾರಕ್ಕಾಗಿ ಬೇರು, ಚಕ್ಕೆ, ಎಲೆ ಮೊದಲಾದವುಗಳನ್ನು ಬೇಯಿಸುತ್ತಿದ್ದದ್ದನ್ನು ನಾನು ನೋಡಿದೆನು ಒಂದು ಗಿಡವನ್ನು ನನಗೆ ತನಗೆ ಎಂದು ಮೂರು ಮಂದಿ ಬಡಿದಾಡುತ್ತಿದ್ದರು. ಕೆಲವು ಜನರು ಜೀವನಕ್ಕೋಸ್ಕರ ತಮ್ಮ ಸರ್ವಸ್ವವನ್ನೂ ಅತ್ಯಲ್ಪ ಬೆಲೆಗೆ ಬಿಕರಿ ಮಾಡಿಬಿಟ್ಟರು, ಇನ್ನೂ ಮಾಡುತ್ತಲಿದಾರೆ ಇಷ್ಟಾದರೂ ಗವರ್ನಮೆಂಟಿನವರು ಚೌಕಿದಾರಿ ಎಂಬ ತೆರಿಗೆಯನ್ನು ಆ ಜನರಿಂದ ವಸೂಲ್ಮಾಡುತ್ತಿದಾರೆ ಎಂಬುದೇ

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಜಾಗ ಕೊಡಲಾರೆವು ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ಜಾಗ ಕೊಡಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು — ಎಡಿಟರ್

ಕರೆಸ್‌ಪಾಂಡೆನ್ಸ್.

ಮಲೆನಾಡಿನಲ್ಲಿ ವಿವಾಹ ವಿಚಾರವು

ಅಯ್ಯಾ,

ಈ ಮಲೆನಾಡಿನಲ್ಲಿರತಕ್ಕ ಸಾಮಾನ್ಯ ಜನಗಳಲ್ಲಿ ವಿವಾಹ ಪದ್ಧತಿಯು ವಿಶೇಷ ಆಶ್ಚರ್ಯವನ್ನು ಉಂಟುಮಾಡುತ್ತದೆ ಏಕೆಂದರೆ, ಶಾಸ್ತ್ರತಃ ಕನ್ಯಾದಾನ ಮಾಡಿದರೆ ಇಹಪರ ಸಾಧನೆಯು ಉತ್ತರೋತ್ತರ ಆಗುವುದೆಂದು ಇದ್ದಾಗ್ಯೂ ವಿದ್ಯೆ ಮತ್ತು ನಾಗರೀಕತೆಗಳಲ್ಲಿ ಹಿಂದಾಗಿರುವ ಈ ಜನಗಳು ಈ ಸಂಗತಿಯ ಸ್ಮರಣೆ ಇಲ್ಲದೆ ಒಂದು ಹೆಣ್ಣನ್ನು ಇನ್ನೊಬ್ಬನಿಗೆ ವಿವಾಹ ಮಾಡಿಕೊಡುವಾಗ ವರನ ಯೋಗ್ಯತೆ ಆಸ್ತಿಯ ಮೇಲೆ ಸುಮಾರು ಐವತ್ತರಿಂದ ನೂರರ ವರೆಗೆ ತೆಗೆದುಕೊಳ್ಳುತ್ತಾ ಬರುತ್ತಾರೆ ಇಂಥಾ ದುಷ್ಟ ಪದ್ಧತಿಗೆ ಈ ಮಲೆನಾಡಿನಲ್ಲಿ "ತೆರ" ಎಂದು ಹೆಸರು ಈ ಪದ್ಧತಿ ಜಾರಿಯಲ್ಲಿರುವುದರಿಂದಲೇ ಕೇವಲ ಬಡಬಗ್ಗರಾದ ಜನರು ವಿವಾಹ ಮಾಡಿಕೊಳ್ಳಬೇಕೆಂಬ ಆಸೆಯಿಂದ, ಇದ್ದ ಅಲ್ಪಸ್ವಲ್ಪ ಆಸ್ತಿಯನ್ನು ಸಾಹುಕಾರರ ಪಾಲು ಮಾಡಿ ಸಂಸಾರಿಕರಾಗಿ ಆ ಮೇಲೆ ಜೀವನಕ್ಕಿಲ್ಲದೆ ತುಂಬಾ ಹೀನಸ್ಥಿತಿಗೆ ಬರುತ್ತಿರುವರು. ಇಂಥಾ ದುಷ್ಟ ಪದ್ಧತಿಯನ್ನು ತಪ್ಪಿಸುವುದಕ್ಕೋಸ್ಕರವೇ ಗತಿಸಿದ ನಾಲೂರು ರಾ॥ ಗಿರಿಯಪ್ಪಗೌಡರು ಎಷ್ಟೋ ಸಾಹಸವನ್ನು ಮಾಡಿ, ತಕ್ಕಷ್ಟು ಮಟ್ಟಿಗೆ ಈ ಪದ್ಧತಿಯನ್ನು ತಪ್ಪಿಸುತ್ತಾ ಜನಗಳಿಗೆ ವಿದ್ಯೆ, ನಾಗರಿಕತೆ, ಕೈಗಾರಿಕೆ, ಇವುಗಳನ್ನು ಪ್ರಚುರಪಡಿಸುತ್ತಾ ಬಂದಿದ್ದರು ನಾಮದಾರಿಜನಗಳಲ್ಲಿ ತಕ್ಕಮಟ್ಟಿಗೆ ವಿದ್ಯಾವಂತರಾಗಿಯೂ ತುಂಬಾ ಸಾಹಸಿಗಳಾಗಿಯೂ ಇದ್ದ ಇವರನ್ನು ಕಳೆದುಕೊಂಡದ್ದು ಈ ಜನಗಳ ದುರಾದೃಷ್ಟವೇ ಸರಿ ಈಗ ಈ ಸಂಘವನ್ನೇ ಮುಂದಕ್ಕೆ ತರಬೇಕೆಂದಿರುವ ಒಕ್ಕಲಿಗ ನಾಮ ಸಬೆಯವರಾದರೋ ತುಂಬಾ ಪ್ರಯತ್ನಪಟ್ಟು, ಈ ದುಷ್ಟ ಪದ್ಧತಿಯನ್ನು ತಪ್ಪಿಸುತ್ತಾ ವಿವಾಹಕಾಲಗಳಲ್ಲಿ ಇದಕ್ಕೆ ಬದಲಾಗಿ ಕೊಂಚ ಹಣವನ್ನು ಸಂಘಕ್ಕೆ ತೆಗೆದುಕೊಂಡು ಅದರಿಂದ ಉತ್ತರೋತ್ತರ ಅಭಿವೃದ್ಧಿಯಾಗುವ ಏರ್ಪಾಡು ಮಾಡಿದಪಕ್ಷದಲ್ಲಿ ಬಡಜನರು ಮೊದಲಿನಂತೆ ಉತ್ತಮಸ್ಥಿತಿಗೆ ಬರುವರೆಂದು ಹಾರೈಸುತ್ತೇನೆ

ಬಾತ್ಮಿದಾರ

ನಾಲೂರು ರೇಷ್ಮೆ ಕಾರ್ಖಾನೆಯು

ಅಯ್ಯಾ,

ಗತಿಸಿದ ಗಿರಿಯಪ್ಪಗೌಡರ ಕಾಲದಲ್ಲಿ ಏರ್ಪಡಿಸಲ್ಪಟ್ಟ ರೇಷ್ಮೆ ಕಾರ್ಖಾನೆ ಬಗ್ಗೆ ಮೆ॥ ಚಾಲ್‌ಗಾಟ್ ನವಾಬ್ ಹಕೀಮ್ ಅವಿಯಾರ್ ಷರೀಫ್ ಸಾಹೇಬರೆಂಬುವರು ಖುದ್ದು ಬೆಂಗಳೂರು ತಾತಾ ಯವರ ಸಿಲ್ಕ್ ಫಾರಮಿನಲ್ಲಿ ಕಲಿತು ಸರ್ಟಿಫಿಕೇಟ್ ಸಹಿತ ಬಂದು ಸದರಿ ಗಿರಿಯಪ್ಪಗೌಡರೂ ಇವರೂ ಸಹಾ ಕೆಲಸಕ್ಕೆ ಪ್ರಾರಂಭಮಾಡಿ ಒಂದೆರಡು ಬೆಳೆಯನ್ನು ತೆಗೆಯುವದರೊಳಗೆ ಮಳೆಗಾಲವು ಪ್ರಾರಂಭವಾದ್ದರಿಂದಲೂ ಮತ್ತು ಹಿಪ್ಪನೇರಳೇ ಗಿಡಗಳನ್ನು ಜಾಸ್ತಿಯಾಗಿ ಬೆಳೆಸುವ ಉದ್ದೇಶದಿಂದಲೂ ಮಳೆಗಾಲಕ್ಕೆ ಸರಿಯಾಗಿ ಕೆಲಸ ನಿಲ್ಲಿಸಲಾಯಿತು ಸದರಿ ಎಂ ಆರ್ ಗಿರಿಯಪ್ಪಗೌಡರು ಕಾಲವಾದ ನಂತರ ಈ ಕೆಲಸಕ್ಕೆ ಪ್ರಾರಂಭಮಾಡಲು ಯಾರ ಅನುಭವಕ್ಕೂ ಸಾಲದೇ ಹೋಯಿತು ನಂತರ ಇಲ್ಲಿಗೆ ಸೇರಿದ ದೊಡ್ಡ ಮನುಷ್ಯರುಗಳಾದ ಎಡೇಹಳ್ಳಿ ದೇವಪ್ಪನವರು, ಮೇಗರವಳ್ಳಿ ರಾಮಪ್ಪ ಹೆಗ್ಗಡೆಯವರು ಮತ್ತು ಕೊಳಿಗೆ ಶಿವಮ್ಮಪ್ಪಗೌಡರು, ಇನ್ನೂ ಕೆಲವು ದೊಡ್ಡ ಮನುಷ್ಯರುಗಳು ಸದರಿ ಕಾರ್ಖಾನೆ ನಡಿಸುವ ಬಗ್ಗೆ ಪಂಡಿತ ಅವಿಯಾರ್ ಷರೀಫ್ ಸಾಹೇಬರೇ ನಡಿಸಬೇಕೆಂತಲೂ ಗಿಡಗಳನ್ನು ಕಾಪಾಡಿಸಿದ್ದ ಸ್ಥಳಕ್ಕೆ ಸ್ವಲ್ಪ ಪ್ರತಿಫಲ ಕೊಡಬೇಕೆಂತಲೂ ಗೊತ್ತುಮಾಡಿ ನೇಮಿಸಿದ್ದರ ಮೇಲೆ ಸದರಿ ಹಕೀಮ್ ಸಾಹೇಬರು ಈಗ ಒಂದು ತಿಂಗಳ ಲಾಗಾಯಿತು ಕೆಲಸಕ್ಕೆ ಪ್ರಾರಂಭಮಾಡಿಸಿದರು ಆದರೆ ಇವರಿಗೆ ಸ್ವಲ್ಪ ಸ್ಥಿತಿ ಇದ್ದದ್ದರಿಂದ ಗಿಡಗಳ ದುರಸ್ತಿಗೇನೇ ಸುಮಾರು ೨೦೦ ರೂಪಾಯಿ ಈಗ ಖರ್ಚು ಆಯಿತು ಆದರೆ ಇನ್ನು ಮುಂದೆ ನಡಿಯುವ ಕೆಲಸಕ್ಕೆ ಹಣಸಹಾಯ ಜಾಸ್ತಿಬೇಕಾದದ್ದರಿಂದ ನಮ್ಮ ದಯಾಳುಗಳಾದ ಮೈಸೂರು ಗವರ್ನಮೆಂಟಿನವರು ಇವರಿಗೆ ಸ್ವಲ್ಪ ಗ್ರಾಂಟನ್ನು ಕೊಡಿಸಿಕೊಟ್ಟು ಈ ಕೆಲಸವು ಚಿರಕಾಲ ನಡಿಯುವಂತೆಯೂ ಮತ್ತು ಬೇರೆ ಕಡೆಯಿಂದ ಹುರುಪಂಥವರಿಗೂ ಸಹಾ ಕಲಿಸಿಕೊಡುವಂತೆಯೂ ಏರ್ಪಾಡು ಮಾಡಿಸಿಕೊಡಬೇಕಾಗಿ ಬೇಡಿಕೊಳ್ಳುತ್ತೇನೆ ಈಗಾಗಲೇ ಕಲಿಯುವದಕ್ಕೆ ನಿಂತಿರುವ ೭—೮ ಬಾಲಕರು ಇರುತ್ತಾರೆ ಈ ಕೆಲಸವೆಲ್ಲವನ್ನೂ ಸಾಂಗವಾಗಿ ನೆರವೇರಿಸಿಕೊಡಬೇಕಾಗಿ ನಮ್ಮ ಮೈಸೂರು ಸರ್ಕಾರದವರನ್ನು ಪ್ರಾರ್ಥಿಸುತ್ತೇವೆ

ಕೆ ಟಿ. ದೇವಪ್ಪಗೌಡ

ಬಸರಾಳಿನ ಸಂತೋಷ

ಅಯ್ಯಾ,

ಮಂಡ್ಯದ ತಾಲ್ಲೂಕು ಬಸರಾಳ ಗ್ರಾಮದಲ್ಲಿ ಗಣ್ಯರಾಗಿಯೂ, ಪುಣ್ಯವಂತರಾಗಿಯೂ, ಪ್ರಜಾಪ್ರತಿನಿಧಿ ಸಭಾ ಮೆಂಬರುಗಳಾಗಿಯೂ, ಇರುವ ಮೆ॥ ಕ್ಯಾತನಭಾಗ ಪರಮೇಶ್ವರಯ್ಯನವರಿಗೂ ಮೆ॥ ಕ್ಯಾತನಭಾಗ ಲಿಂಗಣ್ಣಯ್ಯನವರಿಗೂ ಸುಮಾರು ೧೫—೧೬ ವರ್ಷಗಳಿಂದ ಕಾರಣಾಂತರದಿಂದ ಪರಸ್ಪರ ವಿರೋಧವಿದ್ದು ಗ್ರಾಮದ ಏಳಿಗೆಗೆ ಬಹಳ ತೊಂದರೆ ಉಂಟುಮಾಡಿತ್ತು ತಾ ೯ ನೆ ಶನಿವಾರ ಮಂಡ್ಯದ ಅಮಲ್ದಾರ್ ಮೆ॥ ಬಿ ಟಿ ಸೀತಾರಾಮಯ್ಯನವರು ಈ ಗ್ರಾಮಕ್ಕೆ ಜಮಾಬಂದಿಗೆ ದಯಮಾಡಿಸಿ, ಮೇಲ್ಕಂಡವರಿಗೆ ಪರಸ್ಪರ ವಿರೋಧವಿರುವದ್ದರಿಂದ ಗ್ರಾಮದ ಏಳಿಗೆಗೆ ತೊಂದರೆ ಉಂಟಾಗಿರುವದನ್ನು ತಿಳಿದು, ಅವರುಗಳಿಗೆ ಐಕ್ಯಮತ್ಯವಾಗಿರಬೇಕೆಂದು ತಿಳುವಳಿಕೆ ಕೊಟ್ಟು, ಉಭಯತ್ರರನ್ನೂ ಮತ್ತು ಅವರ ಪಾರ್ಟಿಗಳನ್ನೂ ಅನ್ಯೋನ್ಯ ಮಿತ್ರರುಗಳಾಗಿ ಮಾಡಿದರು ತಾ. ೧೦ರಲ್ಲಿ ಮೆ॥ ಪರಮೇಶ್ವರಯ್ಯನವರು ಮೆ॥ ಲಿಂಗಣ್ಣಯ್ಯನವರಿಗೂ, ಅವರ ಕಡೆ ಜನಗಳಿಗೂ ಭೋಜನಾದ್ಯುಪಚಾರಗಳನ್ನು ಮಾಡಿಸಿದರು ಮಾರನೇ ದಿನ ಮೆ॥ ಲಿಂಗಣ್ಣಯ್ಯನವರು ಮೆ॥ ಪರಮೇಶ್ವರಯ್ಯನವರಿಗೂ ಅವರ ಕಡೆ ಜನಗಳಿಗೂ ಭೋಜನಾದ್ಯುಪಚಾರಗಳನ್ನು ಮಾಡಿಸಿದರು ಈ ಉಭಯತ್ರರಿಗೂ ಮಿತ್ರತ್ವ ಉಂಟಾದದ್ದಕ್ಕಾಗಿ ಗ್ರಾಮದವರೂ ಮತ್ತು ಕಂಡು ಕೇಳಿದ ಜನಗಳೂ ಬಹಳ ಸಂತೋಷವುಳ್ಳವರಾಗಿ ಈ ಮಿತ್ರತ್ವವೇ ಶಾಶ್ವತವಾಗಿ ನಿಲ್ಲಬೇಕೆಂಬುದಾಗಿ ಕೋರುತ್ತಾರೆ ಇವರಿಗೆ ಮಿತ್ರತ್ವ ಉಂಟಾದ್ದರಿಂದ ಈ ಗ್ರಾಮದ ಪ್ರಜಾ ಸೌಕರ್ಯಕ್ಕೆ ಕಾರಣವಾದ ಸಂತೆ, ಸ್ಕೂಲು, ಇವುಗಳಿಗೆ ಸ್ಥಳವಿಲ್ಲದೆ ಇರುವದನ್ನು ಎಲ್ಲರ ತಿಳಿದು ಸ್ಥಳದಾನಾವಾಣೆ ವಿಷಯವಾಗಿ ಅಮಲ್ದಾರರಲ್ಲಿ ಅರಿಕೆ ಮಾಡಿಕೊಂಡರು ಮೆ॥ ಅತೀಕರೆ ಸಿದ್ದವೀರಶೆಟ್ಟರು ತಮ್ಮ ತೋಟವನ್ನು ಸಂತೆಗೆ ಕೊಡುವದಾಗಿಯೂ ಮೆ॥ ಸಿದ್ದಲಿಂಗಶೆಟ್ಟರು ತಮ್ಮ ನಿವೇಶನವನ್ನು ಸ್ಕೂಲ್ ಕಟ್ಟಡಕ್ಕೆ ಮುಫತ್ತಾಗಿ ಕೊಡುವದಾಗಿಯೂ ಸಂತೋಷದಿಂದ ಒಪ್ಪಿಕೊಂಡರು ಏಕ ಕಾಲದಲ್ಲಿ ಗ್ರಾಮದ ಐಕಮತ್ಯವೂ, ಸಂತೆಗೆ ಜಾಗವೂ, ಸ್ಕೂಲ್ ಕಟ್ಟಡಕ್ಕೆ ನಿವೇಶನವೂ ಉಂಟಾಗುವಂತೆ ಮಾಡಿದ ನಮ್ಮ ಅಮಲ್ದಾರರನ್ನು ಈ ಗ್ರಾಮದ ಪ್ರಜೆಗಳೆಲ್ಲರೂ ಬಹಳ ಸಂತೋಷದಿಂದ ವಂದಿಸುತ್ತಲಿದಾರೆ ಮತ್ತು ಈ ಗ್ರಾಮದ ಪ್ರಜಾ ಕ್ಷೇಮಕ್ಕೆ ಕಾರಣವಾದ ಸಂತೆ, ಸ್ಕೂಲ್ ಮ), ಧಾನ್ಯದ ಬ್ಯಾಂಕು, ರೀಡಿಂಗ್ ರೂಂ, ಇವುಗಳನ್ನು ಕ್ಷಿಪ್ರದಲ್ಲಿಯೇ ಆಗಮಾಡಿಸುತ್ತಾರೆಂದು ಪ್ರಜೆಗಳೆಲ್ಲರೂ ನಂಬಿಕೊಂಡಿರುತ್ತಾರೆ

ಪ್ರತ್ಯಕ್ಷದರ್ಶಿ

ತಾಲ್ಲೂಕು ವರ್ತಮಾನಗಳು

ಶಿಕಾರಿಪುರ.—ಮಳೆಗಳ ಕಾಹಿಲೆಯು ಈಗ ೧೦—೧೨ ದಿನದ ಸ್ವಲ್ಪ ಕಡಮೆಯಾಗಿದೆ ಕೆಲವು ಕಡೆ ಭತ್ತವನ್ನು ಪಕ್ಕಿರುತ್ತಾರೆ ಮೊನ್ನೆ ತಾ ೨ರಲ್ಲಿ ಶಿವಮೊಗ್ಗಾ ಸರ್ಕಲು ವಿದ್ಯಾ ಸೂಪರಿಂಟೆಂಡೆಂಟರಾದ ರೆವರೆಂಡ್ ಎ ಇ ನೈಟಿಂಗೇಲ್ ಸಾಹೇಬರು ಇಲ್ಲಿಗೆ ದಯಮಾಡಿದ್ದರು ಮರುದಿನ ಬೆಳಿಗ್ಗೆ ಪೇಟೆ ಮತ್ತು ಹಳಿಯೂರು ಸ್ಕೂಲುಗಳ ಬಾಲಕಿಯರನ್ನು ಪೇಟೆ ಸ್ಕೂಲಿನಲ್ಲಿ ಸೇರಿಸಿ ಪರೀಕ್ಷಿಸಿದರು ಅಪರಾಹ್ನ ೩ ಘಂಟೆಗೆ ಇದೇ ಸ್ಕೂಲಿಗೆ ದಯಮಾಡಿದರು ಇಲ್ಲಿಯ ಸರ್ಕಾರಿ ನೌಕರರೂ ಪೇಟೆ ವರ್ತಕರೂ ಇತರ ದೊಡ್ಡ ಮನುಷ್ಯರೂ ಬಂದಿದ್ದರು ಅಮಲ್ದಾರ್ ಮೆ॥ ಗುಲಾಮ್ ಮಹಮದ್ ಸಾಹೇಬರು ಅಗ್ರಾಸನವನ್ನು ವಹಿಸಿದ್ದರು ಕೀರ್ತನೆ, ಪ್ರಾರ್ಥನೆ, ವಿದ್ಯಾವಂತರಿಗೂ ಅವಿದ್ಯಾವಂತರಿಗೂ ತಾರತಮ್ಯವನ್ನು ತೋರಿಸುವ ಪದ್ಯಗಳೊಡನೆ ಸಂಭಾಷಣೆ, ಇದೇ ವಿಷಯವಾದ ಉಪನ್ಯಾಸ, ಈ ಮುಂತಾದದ್ದು ನಡೆದವು ಇಲ್ಲಿನ ಉಪಾಧ್ಯಾಯರು ವಂದನಾ ಪತ್ರಿಕೆಯನ್ನು ಓದಿ ಅದನ್ನು ತನ್ನ ಜ್ಞಾಪಕಾರ್ಥವಾಗಿ ಒಂದು ಗಂಧದ ಪೆಟ್ಟಿಗೆಯಲ್ಲಿಟ್ಟು ಒಪ್ಪಿಸಿದರು ಸಾಹೇಬರು ಬಹು ಸಂತೋಷಪಟ್ಟು ಉಪಾಧ್ಯಾಯರು ಕೇಳಿಕೊಂಡ ಕೆಲವು ವಿಷಯಗಳಿಗೆ ಸದುತ್ತರವನ್ನು ಕೊಟ್ಟರು ಮತ್ತು ತಾವು ಈ ದೇಶವನ್ನು ಬಿಟ್ಟು ಇಂಗ್ಲೆಂಡಿಗೆ ಹೋದಾಗ್ಯೂ ತಮ್ಮ ಮನಸ್ಸೆಲ್ಲಾ ಇಲ್ಲೇ ಇರುತ್ತೆಂಬ ಅಭಿಪ್ರಾಯವನ್ನು ತಿಳಿಸಿದರು ನಂತರ ಅಧ್ಯಕ್ಷರು ವಿದ್ಯಾಭ್ಯಾಸದ ವಿಷಯವು ಸಭಿಕರಿಗೆ ಅಭಿರುಚಿಯಾಗುವಂತೆ ಅಲ್ಲಿ ನಡೆದ ಮಕ್ಕಳ ಸಂಭಾಷಣೆಯನ್ನೇ ಉದಾಹರಣೆಯಾಗಿ ತೆಗೆದುಕೊಂಡು ಉಪನ್ಯಾಸ ಮಾಡಿದರು ಪದ್ಧತಿಯಂತೆ ಗಂಧ ಪುಷ್ಪಾದಿಗಳು ಹಂಚಲ್ಪಟ್ಟ ಮೇಲೆ ಸಭೆಯು ಮುಕ್ತಾಯವಾಯಿತು

ತಿಪ್ಟೂರು.—ಶೀತ ಗಾಳಿಯು ಬಹಳವಾಗಿದೆ ಹಗಲೆಲ್ಲಾ ಮೋಡ ರಾತ್ರಿಯೆಲ್ಲಾ ನಕ್ಷತ್ರಗಳು ಕಾಣಿಸುವವು ಮಾಂಸದ ಅಂಗಡಿಗಳು ಮೊದಲಿದ್ದ ತಮ್ಮ ಸ್ಥಾನವನ್ನು ಬಿಟ್ಟು ಮುಂದಕ್ಕೆ ಬಂದಿರುತ್ತವೆ ಗೇರಗಾನಹಳ್ಳಿಯ ನಾಟಕದ ಕಂಪನಿಯವರು ಅನೇಕ ಕಡೆ ಬಹು ಸಂಪಾದಿಸಿ, ಈಗ ಇಲ್ಲಿ ಆಡುತ್ತಿದಾರೆ —ಆ॥ ಕವಿಯಾಗರು ದಯಮಾಡಿಸಿ ಜಮಾಬಂದಿ ನಡಸುತ್ತಿದಾರೆ ಅನೇಕರು ಜಳ ವ್ಯಾಧಿಗಳು ಪೀಡಿತರಾಗಿ ಹೊಟ್ಟೆಯಲ್ಲಿರುವ ಗಡ್ಡೆಗಳಿಂದ ಆಡ್ಡಾಡುತ್ತಿದಾರೆ ವನಾಡಿಗಿಂತ ಇದೇನೂ ಕಡಮೆಯಾಗಿರಲಾರದು ಸ್ಕೂಲ್ ಹೆಡ್ ಮಾಸ್ತರು ಕಿಂಡರ್‌ಗಾರ್ಟನ್ ಟ್ರೇನಿಂಗ್ ಸ್ಕೂಲಿಗೆ ಅಭ್ಯಾಸಕ್ಕೆ ಮೈಸೂರಿಗೆ ಪ್ರಯಾಣಮಾಡಿದರು ಲಕ್ಷಣವಾದ ಹೊಸ ಸ್ಕೂಲ್ ಕಟ್ಟಡದಲ್ಲಿ ನಮ್ಮ ಹುಡುಗರೂ ಮಾಸ್ತರುಗಳೂ ಪ್ರವೇಶಿಸುವ ಸಮಯದಲ್ಲಿ ಸಕಲ ವಿಷಯಗಳಲ್ಲೂ ನವೀನ ವಿದ್ಯಾಭಿವೃದ್ಧಿಯ ತೋರಿಸಿ, ಮಕ್ಕಳ ಪೋಷಕರನ್ನೂ ಸರ್ಕಾರದವರನ್ನೂ ಸಂತೋಷಪಡಿಸುವರೇ ಉತ್ತಮೋತ್ತಮ —ಹೊಸ ಸ್ಕೂಲ್ ಕಟ್ಟಿರುವ ಭಾಗವನ್ನೇ ಬಡಾವಣೆ ಮಾಡಿ ಮ್ಯುನಿಸಿಪಾಲಿಟಿಯವರು ಹೊಸ ಭಾವಿಗಳನ್ನು ತೆಗೆಯಿಸಿ, ಶ್ರೀ ಕೃಷ್ಣರಾಜ ಪೇಟೆ ಎಂದು ಹೆಸರಿಡುವರದೇ ? ಟವನ್ನಿಗಿಂತ ಈ ಭಾಗವು ಆರೋಗ್ಯವಾಗಿದೆ ಎಂದು ತೋರುತ್ತೆ. ಮತ್ತು ಮನೆ ಕಟ್ಟಿಕೊಳ್ಳುವದಕ್ಕೆ ಅನೇಕರು ಸಿದ್ಧರಾಗಿದ್ದಾರೆ ಈ ಕಾರ್ಯವನ್ನು ಮಾಡಿ ನಮ್ಮ ಅಮಲ್ದಾರರು ಕೀರ್ತಿ ಪಡೆದಾರೆಂದು ನೆನಸುತ್ತೇನೆ ಈ ವರ್ಷ ಕೆಲವು ಕನ್ಯಾ ಕಳ್ಳತನ ನಡೆದವು ಕೆರೆ ಮರ್ಚಿ ತಿರುಮಲಾಚಾರ್ರು ದೈವಾಧೀನರಾದ್ದರಿಂದ ಅವರ ಕುಟುಂಬದವರೆಲ್ಲ ದುಃಖಪಡುತ್ತಿದಾರೆ

ಹೊಸದುರ್ಗ—ಮಳೆಯು ಬಾರದೆ ಎಷ್ಟೋ ದಿನಗಳಾದ ರಾಗಿ ಪೈರು ಕಾಳಾಗುತ್ತಾ ಬಂತು ಮೆಣಸಿನ ಗಿಡಗಳು ವಗೈರೆ ಬೆಳೆದ ಫಸಲುಗಳೆಲ್ಲಾ ಖಂಡಿತವಾಗಿಯೂ ಒಣಗುತ್ತಾ ಬಂದಿವೆ ರೈತರೆಲ್ಲಾ ಹಗಲಿರುಳು ಮುಗಿಲು ನೋಡಿ, ಕೆಟ್ಟುಹೋಗುವ ಕಾಲ ಬಂತು, ದನಕರುಗಳಿಗೆ ಹಸೀ ಹುಲ್ಲಿಗೆ ಗತಿಯಿಲ್ಲದಹಾಗಾಯ ಯಾವ ಪ್ರಾಂತ್ಯ ಪಾಲಯು ಬಂತೋ ಏನೋ ? ವೇದಾವತಿ ನದಿ ಒಂದೂವರೆ ದಿನವೆಲ್ಲಾ ಜನರು ತಿರುಗಾಡದಂತೆ ಹರಿಯಿತು.—ಸ್ಥಳ ಅಮಲ್ದಾರ್ರು ಬೂದಿಹಾಲ್, ಬೆಲಗೂರು, ಬಾಗೂರು, ಮತಿಘಟ್ಟ ಜಮಾಬಂದಿ ತೀರಿಸಿಕೊಂಡು ಬಂದರು ಈ ತಾಲ್ಲೂಕಿನಲ್ಲಿ ಬಹು ದಿನಗಳಿಂದ ಇದ್ದ ರಿಜಿಸ್ಟ್ರೇಷನ್ ಗುಮಾಸ್ತೆ ವಗೈರೆ ಕೆಲವು ನೌಕರರು ವರ್ಗಪಟ್ಟು ಬೇರೆಯವರ ಬಂದಂತಾಯಿತು ದೇವಪುರದ ಬಳಿ ಡಿಹಳ್ಳಿಯಲ್ಲಿ ನಡೆದ ಖೂನಿ ಮೊಕದ್ದಮೆ ಇನ್ನೂ ವಿಚಾರಣೆಯಲ್ಲೇ ಇದೆ. ಗಾಯಪಟ್ಟಿದ್ದವನನ್ನು ಹೊಸದುರ್ಗದ ಆಸ್ಪತ್ರೆಯ ಚೆನ್ನಾಗಿ ಹುಷಾರು ಮಾಡಿದರು ಅಪರಾಧಿಗಳ ಕಡೆ ಶಿವಮೊಗ್ಗದ ಇಬ್ಬರು ಅಡ್ವೋಕೇಟುಗಳು ವಾದಿಸುವುದಕ್ಕಾಗಿ ನಿಂತಿ ಮೆ॥ ಸದವತ್ ಖಾಸಿಂಸಾಹೇಬರ ಮಕ್ಕಳು ಸೈದರಲ್ಲಿರುವರು ಹೊಸದುರ್ಗದ ಗುಡ್ಡಗಳಲ್ಲಿ ಶಿಕಾರಿಗಾಗಿ ಸಂಚಾರ ಹೊರಟು ಗುಡ್ಡದ ಒಂದು ಗಂಡು, ಒಂದು ಹೆಣ್ಣು ಎರಡು ಕಿರುಬನ ಮರಿಗಳ ಜೀವವಿದ್ದಹಾಗೇ ಹಿಡಿತಂದು ತಮ್ಮ ಮನೆಯಲ್ಲಿಯೇ ಇಟ್ಟುಕೊಂಡಿ ಸುತ್ತಿದಾರೆ ಇವರ ಸಾಹಸವು ಪ್ರೋತ್ಸಾಹಕರವಾಗಿದೆ ಈ ಮರಿ ತಾಯಿಕಿರುಬನನ್ನು ಹಿಡಿಯುವ ಪ್ರಯತ್ನದಲ್ಲಿದಾರೆ —ಕೋರ್ಟಿನಲ್ಲಿ ಹಾಲಿ ನಡಿಯುತ್ತಿದ್ದ ೫—೬ ಕ್ರಿಮಿನಲ್ ಮೊಕದ್ದಮೆಯು ಒಂದೇ ದಫಾ ರಾಜಿಯಾದರು ಉಭಯ ಪಾರ್ಟಿಯವರಿಗೂ ಮಾ ರೂಪಾಯಿ ನಷ್ಟವಾಯಿತೇ ಹೊರತು ಯಾವ ಸಲಿಕೆ ಬರಲಿಲ್ಲ.—ಬೆಂಗಳೂರಿಗೆ ಬಹು ದಿವಸಗಳಿಂದ ನಿರೀಕ್ಷಣೆ ಯೂನಿಫಾರಂ ಆರ್ಡರಾಗಿ ಬಂದಿದೆ ಎಂತಲೂ, ಈ ಡಿಸೆಂಬರ್ ೧ ತಾರೀಖಿನಲ್ಲಿ ತರುತ್ತಾರಾಗಿಯೂ ವರ್ತಮಾನವಿದೆ ಈ ಗ್ರಾಮದ ಗಲೀಜು ಹೋಗುವದಕ್ಕೆ ತಕ್ಕ ಏರ್ಪಾಡು ಆದ್ದಕ್ಕೆ ಸಂತೋಷಪಡಬೇಕಾಗಿದೆ —ಈ ಗ್ರಾಮದ ಕುಳವಾಡಿ ಪಟ್ಟಣದ ಕೋಟೆಗಳ ಮಧ್ಯೆ ಇದ್ದುಕೊಂಡು ದುರ್ಮಾರ್ಗನೆ ಬರುವ ಕೆ

...ಸುತ್ತಾ ನಮ್ಮ ಪಟ್ಟಣದ ಸುತ್ತಮುತ್ತಲೂ ತಂಬಾ ಗಲೀಜು ...ಕೊಂಡು ಜನರು ತಿರುಗಾಡುವದಕ್ಕೆ ಅಸಹ್ಯ ಮಾಡಿರುತ್ತಾರೆ.— ...ಪೋಲೀಸ್ ಸ್ಟೇಷನ್ನಲ್ಲಿ ಒಬ್ಬ ಕಾನ್ಸ್ಟೇಬಲನ್ನ ಮಾತ್ರ ...ರೆ. ದಫೇದಾರರು ೨–೩ ತಿಂಗಳಿಂದಲೂ ಬೇರೆ ಇಲ್ಲ ...ನಲ್ಲಿ ಹುಡುಗರಿಗೆ ಕೇಳುವವರು ವಜಾಮಾಡಿದಾಗ್ಯೂ ಗಂಡು ...ಬರುತ್ತಾ ಇಲ್ಲ.

...ಕೊರು,—ನೋಡಬಾರದಷ್ಟು ಕೀನಗಾಳಿ ಬೀಸುತ್ತಿದೆ. ಬು... ...ಗಳನ್ನು ಕಟಾವು ಮಾಡುತ್ತಿದ್ದಾರೆ ಈ ವರುಷ ಸಕಾಲದಲ್ಲಿ ...ಮಳೆಗಳೂ ಬಾರದ್ದರಿಂದ ಕದಿನಾರಲ್ಲಿ ಎರಡು ಭಾಗವೂ ...ಆಗುವದು ದುಸ್ತರ ತರೀ ಫಸಲು ಆಗುವದಕ್ಕೆ ಕೆರೆಯಲ್ಲಿ ...ಕಾಲಕ್ಕೆ ಕುಡಿಯಲು ನೀರಿರುವದು ಕಷ್ಟ ದವಸ ಧಾನ್ಯಗಳು ...ತರಲು ರೈತರು ಹಿಂದರಿಯುತ್ತಿರುವದರಿಂದ ರಾಗಿ ರೂಪಾ... ...ಸೇರು ಕೂಡ ದೊರೆಯುವದು ಪ್ರಯಾಸ —ಪ್ಲೇಗ್ ರೋ... ...ದಯು ಟವುನ ನಾಲ್ಕು ದಿಕ್ಕಿನಲ್ಲೂ ಹಬ್ಬಿ ಷೆಡ್ಡುಗಳಲ್ಲೂ ...ಗಳಾಗುತ್ತಿವೆ ಈ ಸಲ ಪ್ರಾರಂಭದಿಂದಲೂ ಇದುವರೆಗೆ ೨೦೦ ...ಪ್ಲೇಗಿನಿಂದ ಮೃತರಾದರು ಹೋದ ವಾರ ಇಲ್ಲಿನ ಮಂಟ ...ದಲ್ಲಿ ಗಣ್ಯರಾಗಿ ಛಾರೀ ಆಡಳಿತ ನಡಿಸುತ್ತಿದ್ದ ಮೆ॥ ವಿಂಧ್ಯ... ...ಯೆಂಬುವರು ಪ್ಲೇಗಿನಿಂದ ಮೃತಪಟ್ಟರೆಂದು ತಿಳಿಸಲು ವಿಷಾದಿಸು... ...—ಈ ವರುಷದ ಲೋವರ್ ಸೆಕೆಂಡರಿ ಪರೀಕ್ಷೆಗೆ ವಿದ್ಯಾರ್ಥಿಗ... ...ಜಿಲ್ಲೆಯ ನಾನಾ ಭಾಗಗಳಿಂದ ಬಂದಿರುತ್ತಾರೆ ಅವರಿಗೆ ನಮ್ಮ ...ಮೆಂಟನವರು ತಕ್ಕ ವಸತಿಯನ್ನು ಮಾಡಿಕೊಟ್ಟಿರುವರೆಂದು ನಿರೀ... ...ತ್ತೇವೆ —ಹೋದ ವಾರ ಇಲ್ಲಿನ ಕ್ರಿಸ್ತರ ಗುಡಿಸಲ ಪೈಕಿ ಒಂದ... ...ಕೆ ತಗಲಿ ಸುಟ್ಟು ಹೋಯಿತೆಂದು ಕೇಳುತ್ತೇವೆ —ಇಲ್ಲಿ... ...ದ ಸಾರಿ ಪ್ಲೇಗ್ ಗಲಾಟೆಯಲ್ಲಿ ರೋಗಿಗಳನ್ನು ನೋಡುತ್ತಿದ್ದ ...ನ್ಯನು ಈ ಸಾರಿ ರೋಗ ತಗಲಿ ಸತ್ತುಹೋದನು ಅವನ ಬಡ ...ಹೆಂಗಳೆಯರಿಂದ ಇಬ್ಬರು ಹೆಂಗಸರನ್ನು ಸರ್ಕಾರದವರು ಕರಸಿ ...ಸಿದ್ದಾರೆ ಈ ಹೆಂಗಸರು ಧೈರ್ಯದಿಂದ ರೋಗಿಗಳನ್ನು ಕ್ಯಾಂಪಿ... ...ಉಪಚರಿಸುವದು, ಸತ್ತವರನ್ನು ಸಾಗಿಸುವದೂ ಜನರಲ್ಲಿ ಆಶ್ಚ... ...ರವನ್ನುಂಟುಮಾಡಿದೆ —ಹೋದ ವಾರ ಒಬ್ಬ ಮುಸಲ್ಮಾನರ ಹೆಂಗ... ...ತನ್ನ ಎರಡು ವರುಷದ ಮಗುವನ್ನು ಭಾವಿಯಲ್ಲಿ ಹಾಕಿ ತಾನೂ ...ಸತ್ತುಹೋದಳು ಸರ್ಕಾರದವರ ಮೊಕದ್ದಮೆ ಮೇಲೆ ಪಾರ... ...ತನಿಖೆ ಮಾಡಿದರು —ನೆನ್ನೆ ೧೫ನೇ ತಾ. ಟಕ್ಕುಂ... ...ನ ವಿವರ್ಷನ್ ವರ್ಕ್ ಷಾಪಿನ ಹೊಸದಾಗಿ ಕಟ್ಟಿರುವ ಹ್ಯಾಯಿಂಗ್ ...ನಲ್ಲಿ ಕಳೆದ ವರುಷ ನವಂಬರು ತಿಂಗಳಲ್ಲಿ ನಡೆದ ಗವರ್ನಮೆಂ... ...ಟೆಕ್ನಿಕಲ್ ಎಲಿಮೆಂಟರಿ ಫ್ರೀಹ್ಯಾಂಡು ಡ್ರಾಯಿಂಗ್ ಪರೀಕ್ಷೆಗೆ ...ದ ಉಮೇದವಾರರಿಗೆ ಹೋಗಿದ್ದವರಲ್ಲಿ ಒಂದನೆ ತರಗತಿಯ... ...ಇಬ್ಬರೂ, ಎರಡನೇ ತರಗತಿಯಲ್ಲಿ ಇಪ್ಪತ್ತೂ ತೇರ್ಗಡೆಹೊಂದಿದ ...ಈ ನಾಲ್ಕು ವಿದ್ಯಾರ್ಥಿಗಳಿಗೆ ಸರ್ಟಿಫಿಕೇಟು ಮತ್ತು ಬಹುಮಾ... ...ಕೊಡಲ್ಪಟ್ಟವು ಘನ ಟಾಂಲಿಸನ್ ದೊರೆಯವರು ಅಗ್ರಾಸನ ...ವಹಿಸಿದ್ದರು ಆ ಸ್ಕೂಲಿನ ಸೂಪರಿಂಟೆಂಡೆಂಟರಾದ ಮೆ॥ ಆ... ...ದೊರೆಯವರು ಕನ್ನಡದಲ್ಲಿ ಒಂದು ರಿಪೋರ್ಟು ಓದಿ ರು... ...ಸ್ಥಿತಿಗತಿಗಳ ಉಪನ್ಯಾಸಮಾಡಿದ ವಿಂಸೆಸ್ ಸ್ಕಾಟ್ ದೊರೆ ...ಯವರು ತಮ್ಮ ಹಸ್ತದಿಂದ ಬಹುಮಾನಗಳನ್ನು ಸರ್ಟಿಫಿಕೇಟು ...ನ್ನು ವಿದ್ಯಾರ್ಥಿಗಳಿಗೆ ಕೊಟ್ಟ ಮೇಲೆ ಪುಷ್ಪ ತಾಂಬೂಲಗಳ ...ಯೋಗದಿಂದ ಸಭೆಯು ಮುಕ್ತಾಯವಾಯಿತು —ಊರಿನ ಮಧ್ಯ... ...ಪೋಸ್ಟ್ ಆಫೀಸ ಈಗ ಟವನಿಗೆ ಎರಡು ಮೈಲಿ ದೂರದಲ್ಲಿ ...ಯವರು ವಿಸ್ಲೇಯು ಮೇಲ ತೇಜಾ ಹಾಕಿಕೊಂಡು ನಡಸುತ್ತಿದ್ದಾರೆ ...ದ ಜನರಿಗೆ ಸಕಾಲಕ್ಕೆ ಟಪಾಲು ದೊರೆಯುವದಕ್ಕೆ ತಂಬಾ ...ಡಚಣೆಯಾಗಿದೆ.

ತೀರ್ಥಹಳ್ಳಿ —ಈ ಪ್ರಾಂತ್ಯ ಜಮೀನು ಜಾಸ್ತಿಯಾಗಿ ರೈತರು ...ಮಯಾಗಿರುವದರಿಂದ ಕಷ್ಟಪಟ್ಟು ಬೇಸಾಯ ಮಾಡುವವರ ...ಅಭಿವೃದ್ಧಿಗೆ ಬರುವದಕ್ಕೆ ಮಾರ್ಗವಿದ್ದಾಗ್ಯೂ ಇಲ್ಲಿನ ...ಜನಗಳು ತಮ್ಮ ಸೋಮಾರಿತನದಿಂದಲೂ ಅವಿವೇಕದಿಂದ ...ದುಂದುಗಾರಿಕೆಯಿಂದಲೂ ಹೀನಸ್ಥಿತಿಗೆ ಇಳಿಯುತ್ತಿರುವದಕ್ಕಾ ...ವಿಸನಪಡಬೇಕಾಗಿದೆ ಇಲ್ಲಿನ ಮುಖ್ಯವಾದ ಫಸಲು ಭತ್ತ ...ಅಡಿಕೆ ವ್ಯವಸಾಯಗಾರರು ಸ್ವಂತವಾಗಿ ಜಮೀನಿನಲ್ಲಿ ...ಮಾಡುವದಕ್ಕೆ ಬದಲಾಗಿ ಕನಡಾ ಜಿಲ್ಲೆಯ ಕೆಲಸಗಾರರಿಂದಲೇ ...ಮಾಡಿಸುತ್ತಾರೆ ಈ ಕೆಲಸಗಾರರಿಗೆ ತುಂಬಾ ಕೂಲಿ ಸಿಕ್ಕು... ...ಮತ್ತು ರೈತರು ಸಾಲ ಸಿಕ್ಕುತ್ತೆಂಬ ಧೈರ್ಯದ ಮೇಲೆ ಇಲ್ಲಿ ...ಕೊಂಕಣಿ ವರ್ತಕರಲ್ಲಿ ವರ್ಷಕ್ಕೆ ಬೇಕಾದದ್ದನ್ನೆಲ್ಲಾ ಒಬ್ಬ... ...ತಂದು ದುಂದಾಗಿ ಖರ್ಚುಮಾಡಿ ಅನುಗಾದ ಅಡಿಕೆ ಫಸಲನ್ನೆ ...ಈ ಕೊಂಕಣಿ ಸಾಹುಕಾರರಿಗೆ ಅವರು ಹೇಳುವ ದರದ ಮೇರೆಗೆ ...ಮಾರುತ್ತಾರೆ ಅಂತೂ ಇಂತೂ ರೈತರು ದುಡ್ಡಿನ ಸುಖವನ್ನು ...ಕಾಣಲಿಲ್ಲ. ಮತ್ತು ಇವರು ಯಾವಾಗಲೂ ಕೊಂಕಣಿ ವರ್ತ... ...ರ ಗುಲಾಮರಾಗಿರಬೇಕಾಗಿದೆ ಸರ್ಕಾರದವರು ರೈತರ ಮೇಲೆ ...ಮಿಟ್ಟು ಸುಮಾರಿ ಕಾಲತ್ತನ್ನು ವಜಾಮಾಡಿದರು ಆದರೇನಾ... ...ತು? ಇನ್ನಿಷ್ಟು ಹೆಚ್ಚಾಗಿ ವರ್ತಕರಿಂದ ತುಪ್ಪ ಏನ್ನು ಈರು... ...ಬೇಕಾದವುಗಳನ್ನು ಮಾಣಗಟ್ಟೆ ಅವರು ಬರೆದುಕೊಳ್ಳುವ ಧಾರ... ...ಯಲ್ಲಿ ತಂದು ಮನೆಯಲ್ಲಿ ಹಬ್ಬ ಮಾಡುವದಕ್ಕೆ ಅನುಕೂಲವಾ... ...ದರಿಂದ ಕೊಂಕಣಿ ವರ್ತಕರಲ್ಲಿ ಇತರ ಬಡವರು ಹೋಗಿ ...ವಹಿವಾಟ ಮಾಡಬೇಕಾದ ಅವಶ್ಯಕತೆಯೇ ಇರುವದಿಲ್ಲ ಲಾಭವೆಲ್ಲಾ ...ವರೆಗೇ ಬರುತ್ತೆ ವರ್ತಕರು ಹೇಳುವ ಧಾರಣೆಯಲ್ಲಿ ಕೊಂಡು ...ಬೇಕು; ಇಲ್ಲದಿದ್ದರೆ ಉಪವಾಸ ಸಾಯಬೇಕು. ಈಗ್ಗೆ ಎರ... ...ಮೂರು ದಿವಸಗಳಲ್ಲಿ ತೆಂಗಿನಕಾಯಿ ಒಂದಕ್ಕೆ ಮೂರು ಆಣೆ ...ದ್ದರು. ಇಲ್ಲಿನ ದಿನಸಿ ಧಾರಣೆಗಳು ಬೇರೆ ಕಡೆಗಳಲ್ಲಿ ಜ್ಞಾಪ... ...ಯಲ್ಲಿ ಇರುವದಿಲ್ಲ ಬಡವರಿಗೆ ದೇವರೇ ಗತಿ! ಹಿಂದೆ ಇದ್ದ ...ಮೂರು ಜನ ಅಮಲ್ದಾರರು ಸಂತೆ ನಡಿಯುವ ಹಾಗೆ ಮಾಡು... ...ಬಹಳ ಪ್ರಯತ್ನ ಪಟ್ಟರು ಲಕ್ಷಾಂತರ ರೂಪಾಯಿಗಳ ಸಾಹು... ...ಇಲ್ಲಿನ ಕೊಂಕಣಿ ವರ್ತಕರು ಸಂತೆಗೆ ಅವಕಾಶ ಕೊಡ...

ಲಿಲ್ಲ ಸಂತೆ ನಡೆದರೂ ಅದನ್ಯಾಯನ ಕಾಲಕ್ಷೇಪ ಮಾಡುವ ಬಡ ಜನರ ನೌಕರರೂ ಸಂತೆಯಲ್ಲಿ ಕೊಳ್ಳಬೇಕೇ ಹೊರತು ರೈತರು ಕೊಳ್ಳುವದಕ್ಕೆ ನಗದು ದುಡ್ಡಿಲ್ಲ ಕೊಂಕಣಿ ವರ್ತಕರು ಸಂತೆಯಲ್ಲಿ ಬರುವದನ್ನೆಲ್ಲಾ ತಾವೇ ಕೊಂಡು, ಯಥೋಪ್ರಕಾರ ತಮ್ಮ ಧಾರಣೆಯಲ್ಲಿಯೇ ಇತರರಿಗೆ ಮಾರುತ್ತಾರೆ ಒಂದೊಂದು ವೇಳೆ ಸಂತೆಗೆ ಇತರ ಕಡೆಯಿಂದ ದಿನಸಿಗಳು ಬರದಂತೆ ಮಾಡುವದಕ್ಕಾಗಿ ಸಂತೆಯಲ್ಲಿ ಮಾರುವದಕ್ಕಿಂತಲೂ ಕಡಮೆ ದರದಲ್ಲಿ ತಾವು ಮಾರಿ ಸಂತೆಗೆ ದಿನಸಿ ತಂದವರ ವ್ಯಾಪಾರವನ್ನು ಕೆಡಿಸುತ್ತಾರೆ ಈ ಸಂಗತಿಯನ್ನು ಡೆಪ್ಯುಟಿ ಕಮಿಷನರವರೂ ಸರ್ಕಾರದವರೂ ಪರ್ಯಾಲೋಚಿಸಿ, ಈ ತಾಲ್ಲೂಕಿನಲ್ಲಿ ಎರಡು ಮೂರು ಕಡೆ ಸಂತೆ ನಡಿಯುವ ಏರ್ಪಾಡು ಮಾಡಿಸಬೇಕು.—ಕೆಲವು ದಿವಸಗಳಿಂದ ವರ್ತಕರ ಮಳಿಗೆಗಳಲ್ಲಿಯೂ ಮನೆಗಳಲ್ಲಿಯೂ ಇಲಿಗಳು ಸಾಯುತ್ತಿದ್ದಾಗ್ಯೂ ಬಹಿರಂಗ ಮಾಡದೆ ಊರಿಗೆ ಪ್ಲೇಗನ್ನು ತಂದಿದ್ದಾರೆ ಒಬ್ಬ ಹೆಂಗಸಿಗೆ ಖಾಯಿಲೆಯಾಗಿದೆ ಹಿಂದೆ ಒಂದು ಹೋಟೆಲಿನಲ್ಲಿ ಒಂದು ಪ್ಲೇಗ್ ಮರಣವಾದಾಗ್ಗೆ ಕೂಡಲೆ ಮನೆ ಬಿಡಿಸಿ ಚನ್ನಾಗಿ ಡಿಸಿಂಫೆಕ್ಟ್ ಮಾಡಿಸಿದ್ದರಿಂದ ಉಪದ್ರ ಹರಡಲಿಕ್ಕೆ ಅವಕಾಶವಾಗಲಿಲ್ಲ. ಈಗಲೂ ಇಲಿ ಬಿದ್ದ ಮನೆಗಳನ್ನು ಖಾಲಿ ಮಾಡಿದರೆ ಒಳ್ಳೇದು ಆದರೆ ವರ್ತಕರಲ್ಲಿ ಅನೇಕ ಸಾವಿರ ರೂಪಾಯಿನ ದಿನಸಿಗಳು ದಾಸ್ತಾನು ಇರುವದರಿಂದ ಅವುಗಳಲ್ಲೆಲ್ಲಾ ಇಲಿ ಬಿದ್ದು ಕೆಟ್ಟುಹೋಗಿದ್ದಾಗ್ಯೂ ಅವುಗಳನ್ನೇ ಜನಗಳಿಗೆ ಮಾರಾಟ ಮಾಡಿ ರೋಗವನ್ನು ಹರಡುತ್ತಾರೆ. ಇಲ್ಲಿಗೆ ಶಿವಮೊಗ್ಗೆಯಿಂದ ರಾಗಿ ಮೂಟೆಗಳನ್ನು ಒಬ್ಬ ವರ್ತಕನು ತರಿಸಿದ್ದಾಗ್ಗೆ ಒಂದೆರಡು ಮೂಟೆಗಳಲ್ಲಿ ಸತ್ತ ಇಲಿಗಳು ಇದ್ದಾಗ್ಯೂ ಬಹಿರಂಗ ಮಾಡದೆ ಲೋಭದಿಂದ ಆ ರಾಗಿಯನ್ನೇ ಎಲ್ಲಾ ದಕ್ಕೂ ಬೆರಕೆಮಾಡಿದ್ದೇ ರೋಗ ಹರಡುವದಕ್ಕೆ ಕಾರಣವೆನ್ನುತ್ತಾರೆ.—ಕೆಲವು ಜಮೀನ್ದಾರರುಗಳಲ್ಲಿ ದುಡ್ಡು ಹೆಚ್ಚಾಗಿರುವದರಿಂದಲೂ ವಿವೇಕ ಕಡಮೆಯಾಗಿರುವದರಿಂದಲೂ ತಮ್ಮ ದ್ರವ್ಯವನ್ನು ದುರ್ವಿನಿಯೋಗ ಮಾಡುತ್ತಿದ್ದಾರೆ. ಕೋರ್ಟನವರಿಗೂ ಲಾಯರುಗಳಿಗೂ ಬಹಳ ಅನುಕೂಲ.

ಪ್ರಕಟನೆಗಳು

ಆರು ವರುಷಗಳ ಅನುಭವ.

98 12

ಅಸ್ವಸ್ಥರುವ ಕಾಲದಲ್ಲಿ ನಮ್ಮ ನೆರೆಕರೆಯವರಲ್ಲಿ ಎಷ್ಟುಮಂದಿ ತಮ್ಮ ರೀತಿಯಲ್ಲಿ ಪ್ರಯಾಸಪಟ್ಟರಬಹುದೆಂಬುದನ್ನು ತಿಳಿದುಕೊಳ್ಳುವದು ಆಶ್ಚರ್ಯವಲ್ಲ ಹಾಗೆಯೇ ಅವರು ತಮ್ಮ ಸಂಕಟಗಳನ್ನು ಹ್ಯಾಗೆ ನಿವಾರಣೆಮಾಡಿಕೊಂಡರು ಎಂಬುದನ್ನು ಸಹಾ ಅರಿತುಕೊಂಡ ಪಕ್ಷದಲ್ಲಿ ಅವರು ಸಫಲವಾಗಿ ಅನುಸರಿಸಿದ ವಿಧಾನವನ್ನು ಕೈಕೊಳ್ಳಲು ನಾವು ನಿಶ್ಚಯಿಸುತ್ತೇವೆ ಹೀಗಿರುವಲ್ಲಿ ಕಲ್ಕತ್ತೆಯ ಒಬ್ಬ ಪ್ರಸಿದ್ಧ ಡಾಕ್ಟರು ನಮಗೆ ಉಪಕಾರವನ್ನು ಕೊಡುವದಾಗಿ ತಿಳಿಸುವ ಔಷಧದ ಖಾರಿತು ಕೇಳಿರಿ. ಉತ್ತಮ ಮುಂಬಯಿ ಕಂಪನಿಯ ವೈದ್ಯ ಉದ್ಯೋಗಸ್ಥರಾದ ಡಾಕ್ಟರ್ ಸಿ. ಸಿ. ಮಿತ್ತಾರವರು ಹೇಳುವದೇನಂದರೆ —ನಾನು ಡೋನ್ಸ್ನ (ಬ್ಯಾಕ್ ಏಕ್ ಕಿಡ್ನಿ ಪಿಲ್ಸ್) ಎಂಬುವ ಮೂತ್ರಕೋಶದ ಔಷಧ ಮಾತ್ರೆಗಳನ್ನು, ನನ್ನ ವಿಲಾಯತಿ ... ದೇಶೀಯ ರೋಗಿಗಳಿಗೆ ಕಳೆದ ೬ ವರುಷಗಳಿಂದ ಕೊಟ್ಟು ಬರುತ್ತೇನೆ ಅವುಗಳು ಬ್ರಾಯಿಟ್ಸ್ ಡಿಸೀಜ್ ಎಂಬ ಮೂತ್ರ ವ್ಯಾಧಿ ಕಟುವಾತ ಮುಂತಾದ್ದಕ್ಕೆ ಅತ್ಯಂತ ಉಪಯೋಗಕರವಾದದ್ದೆಂದು ಕಂಡುಬಂದದೆ ಮತ್ತು ಅಂಥಾ ವ್ಯಾಧಿಗ್ರಸ್ಥರಿಗೆ ಈ ಔಷಧವನ್ನು ಧೈರ್ಯದಿಂದ ಶಿಫಾರಸು ಮಾಡಲಿಕ್ಕೆ ಅಡ್ಡಿ ಇಲ್ಲ.

ಮೂತ್ರನಾಡಿಗಳ ವ್ಯಾಧಿಯು ಅನೇಕಾವರ್ತಿ ತಿಳಿಯದೆ ಪಕ್ಕನೇ ಬರುತ್ತದೆ. ಅದರ ಕಾರಣ ಏನೆಂದು ತಿಳಿಯುವದಿಲ್ಲ ರೋಗಿಗೆ ತಲೆನೋವು, ಮಾನಸಿಕ ದುರ್ಬಲತೆ, ಎದೆಗುಂದಿಕೆ ನೋವು, ನಿದ್ರಾಭಂಗ, ತಲೆ ತಿರುಗುವಿಕೆ, ಅನುತ್ಸಾಹ ಮುಂತಾದ್ದು ಪ್ರಾರಂಭವಾಗುತ್ತದೆ ಇವು ಬೆನ್ನುನೋವು. ಜಲೋದರ, ಮೂತ್ರ ... ಮೂತ್ರೋಪದ್ರವಗಳು, ಬ್ರಾಯಿಟ್ಸ್ ಡಿಸೀಜ್ ಇವುಗಳ ಹಾಗೆಯೇ ಮೂತ್ರಪಿಂಡದ ಉಪದ್ರವದ ಚಿನ್ಹೆಗಳಾಗಿರುತ್ತವೆ

ಈ ಮಾತ್ರೆಗಳು ಅದರ ಮೂಲೋತ್ಪಾಟನೆಯನ್ನು ಮಾಡಿ ಗುಣ ಮಾಡುತ್ತವೆ

ಎಲ್ಲಾ ಔಷಧ ವರ್ತಕರಿಂದ ಮಾರಲ್ಪಡುತ್ತದೆ. ಸೀಸೆ ಒಂದಕ್ಕೆ ರೂ ೨, ಅಥವಾ ೬ ಸೀಸೆಗಳಿಗೆ ರೂ ೧೦–೮–೦, ಅಥವಾ ಮುಂಬಯಿಯಲ್ಲಿಯ ಡೋನ್ಸ್ನರ ಔಷಧಗಳ ಹೋಲ್ಸೇಲ್ ಡಿಪೋ ತರಿಸಿಕೊಳ್ಳಬಹುದು. ಪಿ ಓ ಬಾಕ್ಸ್ ನಂ ೨೮, ಮುಂಬಯಿ.

ವ್ಯವಹಾರನಿರ್ಣಯ.

ವೆಂಬ ಕನ್ನಡದ ... ಪುಸ್ತಕವು

134 1

ಈ ಪುಸ್ತಕದ ಮೊದಲನೆಯ ಮುದ್ರಣದ ಪ್ರತಿಗಳು ಈಗ್ಗೆ ಮೂರು ತಿಂಗಳ ಹಿಂದೆಯೇ ಮುಗಿದು, ಅಂದಿನಿಂದಲೂ ೨ ನೇ ಮುದ್ರಣವು ನಡಿಯುತ್ತಿದೆ ಈ ಪುಸ್ತಕವನ್ನು ಪರೀಕ್ಷಿಸುತ್ತಲೂ, ಕೊಡಲಿಕ್ಕಾಗುವ ಹಾಗೆ ನಡಿಯುತ್ತಿದೆ ಈ ಪುಸ್ತಕವನ್ನು ಪರೀಕ್ಷಿಸುತ್ತಲೂ ಇರುವ ಲೇಖಕರಿಗೆ ವಿಜ್ಞಾಪಿಸಿಕೊಳ್ಳುವದೇನೆಂದರೆ—೨ನೇ ಮುದ್ರಣದ ಪ್ರತಿಯನ್ನು ಪರೀಕ್ಷಿಸಿ ಬರೆಯುವವರ ಹೆಸರನ್ನು ರಿಜಿಸ್ಟರಲ್ಲಿ ದಾಖಲ್ಮಾಡಿಕೊಂಡಿದ್ದು, ಮುದ್ರಣವು ಪ್ರಾಯಶಃ ಪೂರಯಿಸಬಹುದಾದ ಮುಂದಣ ತಿಂಗಳು ಡಿಸೆಂಬರ್ ಮಧ್ಯದಲ್ಲಿ ಪುಸ್ತಕವನ್ನು ರವಾನಿಸುವೆವು. ಅದಕ್ಕಿಂತ ಮುಂಚೆ ಪಡೆಯುವವಿಲ್ಲ. ಪುಟಗಳು ೫೦೦ ಕ್ಕಿಂತ ಕಡಮೆಯಾಗುವದಿಲ್ಲ.

ಶ್ರೀರಾಮಪೇಟೆ, ಎಂ. ವಾಸುದೇವಯ್ಯರು,
ಮೈಸೂರು. ಫಸ್ಟ್ ಗ್ರೇಡ್ ಪ್ಲೀಡರ್.

ಮದರಾಸು ಸೀರೆಗಳು.

123-1

ಹೊಸನಮೂನೆ! ವಿ ಪಿ ಖರ್ಚು ೪ ಆಣೆ ಖಾತರಿ ಬಣ್ಣ!!

ಪ್ರೇಮವಾದ ಕಪ್ಪು ನೀಲಿಯಿಂದ ತಯಾರಿಸಿ ಪ್ರಸಿದ್ಧವಾದ ಬಿಳಿಯ ಅಸಲಿ ರೇಷ್ಮೆಯ ಅಂಚುಗಳಿಂದ ವಿಂಚುತ್ತೆ. ನೋಡಲಿಕ್ಕೆ ರಮ್ಯ ಉಡಲು ಬಹು ಬಾಳಿಕೆ ಹರಿದರೂ ಬಣ್ಣ ಕೆಡದು ಸೊಗಸಾದ ಬೆಳೆ, ಹಳದಿ ರೇಷ್ಮೆಗಳ ಸೆರಗುಗಳಿರುವ ಕಡೆಯಲ್ಲಿಯೂ ಒಂದೊಂದು ಗಜದುದ್ದವುಳ್ಳ ಈ ಸೀರೆಯು ೧೮ ಗಜದಗಲ ೯ ಗಜದುದ್ದ ದೊರಾಕವಾಗಿದೆ ಇಷ್ಟು ಉತ್ತಮ ಮಾಲು ನಂತೆಲ್ಲಿಯೂ ಸಿಕ್ಕದು ಪ್ರತ್ಯಕ್ಷ ತರಿಸಿ ಉಪಯೋಗಿಸಿದರೆ ಸೀರೆಯ ಉತ್ಕೃಷ್ಟತೆಯು ಸ್ಪಷ್ಟವಾಗುತ್ತೆ. ಕ್ರಯ ೨ ಅಂಗುಲ ರೇಷ್ಮೆಯಂಚಿನದಕ್ಕೆ ರೂ ೯—೮—೦; ೩ ಅಂಗುಲ ಅಂಚಿನದಕ್ಕೆ ರೂ ೧೧—೮—೦

ವಿಳಾಸ.—ರಾವ್ ಎಂಪೋರಿಯಂ, ಸ್ವಾಮಿಹಾಂ ರೋಡ್,
ವೇಪೇರಿ, ಮದರಾಸು.

ಗುಣಕಾರಿಯಾದ ಸಿದ್ಧೌಷಧಗಳು.

ಸರ್ವ ಜ್ವರಹಾರಿಣಿ ಎಲ್ಲ ಜ್ವರಗಳನ್ನು ೩ ದಿವಸದಲ್ಲಿ ಪರಿಹರಿಸುತ್ತೆ ರೂಪಾಯಿ ೧. ರೋಗಸಂಜೀವಿನಿ ಕೃಶರನ್ನೂ ಮಂದಕರನ್ನೂ ದೃಢಾಂಗರನ್ನಾಗಿ ಮಾಡಿಸುತ್ತೆ ರೂ ೨ ಎಲ್ಲ ರೋಗಗಳಿಗೂ ಖಾತರಿಯಾದ ಔಷಧಿಗಳು ದೊರೆಯುತ್ತೆ

ವಿಳಾಸ.— ಎಸ್ ಆರ್. ರಾವ್, ಸ್ವಾಮಿಹಾಂ ರೋಡು,
ವೇಪೇರಿ, ಮದರಾಸು.

ಸತ್ಯವಾಗಿಯೂ ಅಗ್ಗದ ಅಂಗಡಿ.

121 2

ಅಗ್ಗದ ಬಿಕರಿ ಸಮಯ ಕ್ರಯ ಮೂರರಲ್ಲಿ ಒಂದೇ ಪಾಲು.

ಗಡಿಯಾರಗಳೆಲ್ಲಾ ಅಚ್ಚ ಹೊಸದಾದವು. ಚಿನ್ನದಂಥಾ ಸಮಯ. ಇದಕ್ಕಿಂತ ಅಗ್ಗವಾಗಿ ಮತ್ತೆ ಸಿಕ್ಕಲಾರವು. ತಾವಕಾಶಮಾಡಬೇಡಿ! ಕಾಲಮೀರೀತು!

ನಂ. ೧೦೦—೧೮ ಓ. ಎಫ್. ಸುಂದರವಾದ ಟೋಪಗಡಿಯಾರ, ಸೆಕೆಂಡ್ ಹ್ಯಾಂಡ್ ಸಹಿತ, ಸಿಲಿಂಡರ್ ಚಲನೆ, ೩೬ ಗಂಟೆ ಹೊತ್ತು ನಡಿಯುವುದು ಮೊದಲಿನ ಕ್ರಯ ರೂ ೧೩—೮—೦, ಈಗಿನ ಕ್ರಯ ರೂ. ೩—೮—೦ ಐದು ವರ್ಷ ಜಾಮೀನು.

ನಂ ೧೦೧ ಎ.—ಕ್ರೋನೋಗ್ರಾಫ್ ವಾಚ್. ಸೆಕೆಂಡ್ ಹ್ಯಾಂಡ್ ಸಹಿತ. ಮೊದಲಿನ ಕ್ರಯ ರೂ. ೧೫, ಈಗ ರೂ. ೫. ಐದು ವರ್ಷ ಜಾಮೀನು.

ನಂ ೧೦೨—೧೮. ಓ. ಎಫ್ ಸಿಲಿಂಡರ್ ಚಲನೆ. ೩೬ ಗಂಟೆ ನಡಿಯುವುದು ಮೊದಲಿನ ಕ್ರಯ ರೂ. ೧೧—೪—೦; ಈಗ ರೂ. ೩—೧೨—೦. ಐದು ವರ್ಷ ಜಾಮೀನು.

ನಂ. ೧೦೪—೧೮ ಓ ಎಫ್ ರೈಲ್ವೆ ರೆಗ್ಯುಲೇಟರ್ ಲೀವರ್ ವಾಚ್ ೩೬ ಗಂಟೆ ನಡಿಯುವುದು, ಮೊದಲಿನ ಕ್ರಯ ರೂ. ೧೦—೧೪—೦ ಈಗ ರೂ. ೩—೧೦—೦ ಐದು ವರ್ಷ ಜಾಮೀನು.

೧೦೫—ರೋಸ್ಕೋಪ್ ಲೀವರ್ ವಾಚ್ ಇದು ಬಹು ಶಾಶ್ವತವಾದದ್ದು ಹತ್ತು ವರ್ಷ ಜಾಮೀನು ಮೊದಲು ರೂ ೧೮, ಈಗ ರೂ. ೫—೮—೦.

೧೦೫—ಬೆಳ್ಳಿ ರಾಸ್ಕೋಪ್ ಲೀವರ್ ವಾಚ್. ರತ್ನಗಳುಳ್ಳದ್ದು ೧೨ ವರ್ಷ ಜಾಮೀನು ಮೊದಲು ರೂ. ೩೦; ಈಗ ರೂ. ೧೦.

೧೦೬—ಬೆಳ್ಳಿ ಲೇಡಿ ಅಥವಾ ಕೈ ವಾಚ್ ಸಿಲಿಂಡರ್, ರತ್ನವುಳ್ಳದ್ದು ಗಿಲ್ಟ್ ಚಲನೆ ೬ ವರ್ಷ ಜಾಮೀನು. ಕ್ರಯ ರೂ. ೨೨–೮ ಈಗ ರೂ. ೭—೮—೦.

೧೦೭—ಬೆಳ್ಳಿ ಓ ಎಫ್ ಕೈ ಸಹಿತ ಪಾಲಿಷ್ ಚಲನೆ. ರೂ. ೨೧, ಈಗ ರೂ. ೭ ಆರು ವರ್ಷ ಜಾಮೀನು.

೧೦೮—ಬೆಳ್ಳಿ ಓ. ಎಫ್ ಗಂಡಸರ ಲೀವರ್ ವಾಚ್. ರೂ ೩೦; ಈಗ ರೂ. ೧೦. ಹತ್ತು ವರ್ಷ ಜಾಮೀನು.

೧೦೮ ಎ.—ಅದೇ ಹಂಟರ್ ರೂ. ೩೩. ಈಗ ರೂ. ೧೧.

೧೦೮ ಬಿ —ಅದೇ ಅರ್ಧ ಹಂಟರ್ ರೂ ೩೬; ಈಗ ರೂ ೧೨.

೧೦೯—ಬೆಳ್ಳಿ ೮ ದಿನ ನಡಿಯುವುದು ರೂ ೪೫; ಈಗ ರೂ. ೧೮ ವಾರಕ್ಕೊಮ್ಮೆ ಕೀಲಿ ಕೊಡುವುದು ಲೀವರ್ ಚಲನೆ. ಹತ್ತು ವರ್ಷ ಜಾಮೀನು.

೧೦೯ ಎ.—೨೬ ದಿನ ನಡಿಯುವ ಚೊಕ್ಕಬೆಳ್ಳಿ ಗಡಿಯಾರ ರತ್ನಗಳುಳ್ಳದ್ದು ಸೆಕೆಂಡ್ ಹ್ಯಾಂಡ್ ೧೫ ವರ್ಷ ಜಾಮೀನು ರೂ ೧೫೦. ಈಗ ರೂ ೫೦

೧೦೯ ಬಿ.—ಚೊಕ್ಕಬೆಳ್ಳಿ ಕ್ಯಾಲೆಂಡರ್ ಲೀವರ್ ವಾಚ್ ದಿನ, ತಾರೀಖು, ತಿಂಗಳು ಚಂದ್ರ), ಇವನ್ನು ತೋರಿಸುತ್ತೆ ೧೨ ವರ್ಷ ಜಾಮೀನು. ಕ್ರಯ ರೂ ೨೨—೮—೦, ಈಗ ರೂ ೧೭—೮—೦

೧೧೦—ಚೊಕ್ಕ ಭಂಗಾರ. ರತ್ನಗಳುಳ್ಳದ್ದು ಕ್ರಯ ರೂ. ೨೨. ರೂ. ೨೩. ಹದಿನೈದು ವರ್ಷ ಜಾಮೀನು.

೧೧೧—ಎಂಟು ದಿನಗಳ ಚಿನ್ನದ ಗಡಿಯಾರ ತುಂಬಾ ರತ್ನಗಳು. ೧೨ ವರ್ಷ ಜಾಮೀನು. ಕ್ರಯ ರೂ. ೧೫೯; ಈಗ ರೂ. ೫೩.

ಒಟ್ಟಿಗೆ ತರಿಸುವವರಿಗೆ ಸ್ಪೆಷಲ್ ದರಗಳು

೩ ಗಡಿಯಾರ ಒಂದೇಸಲ ತರಿಸುವವರಿಗೆ ಪ್ಯಾಕಿಂಗ್, ಪೋಸ್ಟೇಜ್ ಮಾಫಿ.

೬ ,, ,, ,, ಒಂದು ಗಡಿಯಾರ ಇನಾಂ

ಕ್ರಯದಲ್ಲಿ ಕಾಲುಭಾಗ ಅಡ್ವಾನ್ಸು ಬರಬೇಕು, ಉಳಿದದ್ದಕ್ಕೆ ವಿ. ಪಿ. ಪಿ. ಇಂದ ಕಳಿಸುತ್ತೇವೆ. ಗಡಿಯಾರಗಳನ್ನು ಸುಂದರವಾದ ವಂಕಮಲ್ ಪೆಟ್ಟಿಗೆಯಲ್ಲಿ ಸ್ಪ್ರಿಂಗ್, ಗ್ಲಾಸ್ ಸಹಿತ ಕಳಿಸುವೆವು. ಇದಲ್ಲದೆ ಪ್ರತಿ ವಾಚಿಗೂ ಸೊಗಸಾದ ಒಂದೊಂದು ಸರಪಣಿಯನ್ನು ನಾವು ಇನಾಮಾಗಿ ಕಳಿಸುತ್ತೇವೆ. ನಮ್ಮ ವಿಳಾಸ:—

ಸಿ. ಎ ಘುಕೀವಾಲಾ ಕಂಪನಿ,
ಚಿತ್ತೂರು, ಉತ್ತರ ಆರ್ಕಾಟ್

ಸುಖಪಟ್ಟ ಸ್ತ್ರೀಯರು ಪೆರೂನಾವನ್ನು ಹೊಗಳುತ್ತಾರೆ.

ಪೆರೂನಾ ಪ್ರಖ್ಯಾತಿ ಹೊಂದಿರುವುದು ಅದರ ಗುಣದಿಂದ, ಬರೀ [illegible] ಎಂದಲ್ಲವು.

ಪೆರೂನಾ ಪ್ರಖ್ಯಾತಿ ಹೊಂದಿರುವುದು ಅದರ ಗುಣದಿಂದ, ಬರೀ ಮಾತಿನಿಂದಲ್ಲವು ಚಿಕ್ಕವರು ದೊಡ್ಡವರು ಒಂದೇ ಸಮ ಪೆರೂನಾವನ್ನು ಹೊಗಳುತ್ತಾರೆ ಹೆಣ್ಣು ಮಕ್ಕಳೂ ಹೆಂಗಸರೂ ಪೆರೂನಾವಿನ ಗುಣವನ್ನು ಕಂಡುಕೊಂಡವರ ಹೆಣ್ಣು ಮಕ್ಕಳೂ ಹೆಂಗಸರೂ ತಮ್ಮ ತಮ್ಮ ದೇಹಾನುಗುಣ್ಯವಾದ ಕಾಯಿಲೆಗಳಲ್ಲಿ ಬಿದ್ದು, ಪೆರೂನಾ ಸೇವನೆಯಿಂದ ಆರೋಗ್ಯ ಹೊಂದಿರುತ್ತಾರೆ

ಲಕ್ಷಣವಾಗಿರುವ ಹೆಣ್ಣು ಮಕ್ಕಳೂ, ಸುಂದರಿಯರಾದ ಸ್ತ್ರೀಯರೂ, ಬಲಹೀನರಾದ ಹೆಣ್ಣು ಮಕ್ಕಳೂ, ರೋಗಪೀಡಿತರಾದ ತಾಯಂದಿರೂ ಎಲ್ಲಾ ಪ್ರದೇಶಗಳಲ್ಲೂ ಪೆರೂನಾ ಸೇವಿಸಿ, ತಮ್ಮ ಸ್ವಭಾವಕ್ಕೆ ಅನುಗುಣವಾದ ಕಾಯಿಲೆಗಳನ್ನೆಲ್ಲಾ ನಿವಾರಣೆಮಾಡಿಕೊಂಡು, ಅದರ ಗುಣವನ್ನು ತಿಳಿದಿರುತ್ತಾರೆ [illegible] ಮೊದಲುಗೊಂಡು ಎಳೇ ಹೆಣ್ಣು ಮಗುವಿನ ತನಕ ಅವರೆಲ್ಲರೂ ಅನೇಕ ವಿಧಗಳಲ್ಲಿ ಪೆರೂನಾವಿಗೆ ಕೃತಜ್ಞರಾಗಿರುವರು

ಇದೆಲ್ಲಾ ಯಥಾರ್ಥವಾಗಿರುತ್ತದೆ ಗುಣ ಹೊಂದಿದ [illegible]

MRS SOPHIA CALDWELL

MISS ANNIE HENDREN

ರು ಅದನ್ನು ಹೇಳುವುದಕ್ಕೆ ಹಿಂತೆಗೆಯರು ಅವಳ ಮಾತು ಕೇಳಿ ಇತರ ಹೆಂಗಸರು ನಂಬುತ್ತಾರೆ ಈ ಔಷಧವು [illegible] ಮನೆಯಿಂದ ಮನೆಗೆ ಹಬ್ಬುತ್ತದೆ ಹೀಗೆ ಲಕ್ಷಾಂತರ ಮನೆಗಳವರ [illegible] ಸಂಬಳಿಗೆ ಆರ್ಗವಾದಂಥಾ ಮನೇ ಔಷಧವೆಂದು ಒಪ್ಪಿಕೊಳ್ಳುತ್ತಾರೆ

ಅನೇಕ ಸಣ್ಣ ಸಣ್ಣ ಕಾಯಿಲೆಗಳಿಗೆ ಪೆರೂನಾ ಒಳ್ಳೆಯದಾಗಿದೆ ಶೀತದಿಂದ ಹುಟ್ಟುವ ಅನೇಕ ಕೆಟ್ಟ ಕಾಯಿಲೆಗಳನ್ನೂ ಹೆಂಗಸರಿಗೆ ಸಾಮಾನ್ಯವಾಗಿ [illegible] ಗುಣ ಹೇಳದ ಅಕ್ರಮಗಳನ್ನೂ ಪೆರೂನಾ ಶಮನ ಮಾಡಬಲ್ಲದೆಂದು ನಂಬತಕ್ಕದ್ದಾಗಿದೆ ಶೈತ್ಯದಿಂದ ಬರುವ ಸಮಸ್ತವಾದ ರೋಗಗಳನ್ನೂ ಪೆರೂನಾ ಗುಣದಿಂದ ವಾಸಿಮಾಡಿಕೊಳ್ಳಬಹುದು

ಮಿಸೆಸ್ ವ್ಯಾಲೀಸ್ ಜಾಲಿ, [illegible] ಈಕೆ ಬರೆಯುವುದು

"ನಾನು ನಿಮ್ಮ ಪೆರೂನಾವನ್ನು ಸೇವಿಸುತ್ತಾ ಬಂದೆನೆ ನನ್ನ ಶೀತ ರೋಗವೆಲ್ಲಾ ವಾಸಿಯಾಯಿತೆಂದು ಹೇಳಬಲ್ಲೆನು ನೀವು ಕರುಣದಿಂದ ನನಗೆ ಅದನ್ನು ಶೋಧಿಸಿದ್ದಕ್ಕಾಗಿ ನಿಮ್ಮನ್ನು ವಂದಿಸುತ್ತೇನೆ"

ಮಿಸ್ ಪಿನ್ನ [illegible] ಈಕೆ ಬರೆಯುವುದು —

ನಾನು [illegible] ಈಗ ನಾನು [illegible] ನಾನು [illegible] ನನ್ನ ಎಲ್ಲಾ ಕೆಲಸಗಳನ್ನೂ ಮಾಡಿಕೊಳ್ಳಬಲ್ಲೆನು"

[illegible] ಪೆರೂನಾವನ್ನು ಎಷ್ಟು ಹೊಗಳಿದರೂ ಸಾಲದು'

ಮಿಸೆಸ್ ಸೋಫಿಯಾ ಕಾಲ್ಡ್ವೆಲ್ [illegible] ಈಕೆ ಬರೆಯುವುದು —

'ನನ್ನ ಗರ್ಭಕೋಶವು ಕೆಟ್ಟು ಸೀಳು ಬಿಡುತ್ತಾ ಇತ್ತು, [illegible] ತೆಗೆದುಕೊಂಡೆನು ಯಾವ ಔಷಧವೂ ನನಗೆ ಗುಣಕೊಡಲಿಲ್ಲ ನನ್ನ [illegible] ಆದರೆ ನಾನು ಪೆರೂನಾವನ್ನು ಸೇವಿಸಿದೆನು [illegible] ವಾಸಿಯಾಯಿತು

'ಅದರಿಂದ ನನ್ನ ರೋಗ [illegible] ನನಗೆ ಶಕ್ತಿಯುಂಟಾಯಿತು [illegible] ಎಲ್ಲಾ ಹೊಗಳಿಕೆಯೂ ಸನ್ಮಾನವೂ ಪೆರೂನಾವಿಗೇ [illegible] ನಾನು [illegible]

ಮಿಸೆಸ್ ಎಂ ಹೆಂಡರ್ಸನ್, [illegible] ಈಕೆ ಬರೆಯುವುದು —"ಶೀತ [illegible] ದಿಂದ ನಾನು ತುಂಬಾ ಬಾಧೆಪಟ್ಟೆನು ಅದರಿಂದ ನನ್ನ ಶಕ್ತಿಯೆಲ್ಲಾ ಕುಗ್ಗಿ ನನ್ನ ಬುದ್ಧಿಯೂ ಕೆಟ್ಟುಹೋದೀತೆಂದು ಹೆದರಿದೆನು ನನ್ನ [illegible] ಬಹಳವಾಗಿ [illegible] ಈ ಬಾಧೆಯನ್ನನುಭವಿಸುವುದಕ್ಕಿಂತ ಸಾಯುವುದೇ ಉತ್ತಮವೆನ್ನುತ್ತಿತ್ತು ಪೆರೂನಾ ಈ ನನ್ನ ಕಾಯಿಲೆಯನ್ನು ವಾಸಿಮಾಡಿತು ಅಷ್ಟರಿಂದ ಅದು ಉತ್ಕೃಷ್ಟವಾದದ್ದೆಂದು ನಾನು ಹೇಳುವುದೇನ ಅತಿಶಯವಲ್ಲ ಈ ನನ್ನ ರೋಗ ನಿವಾರಣೆಯಾಗಿ ಈಗ ಎರಡು ವರುಷ ತುಂಬುವುದರಲ್ಲಿದೆ ಪುನಃ ಆ ರೋಗದ ಚಿಹ್ನೆಯನ್ನೇ ಕಾಣೆನು ನಾನು ಈ ರೀತಿ ಹೇಳುವ ಹಾಗೆ ಈ ಔಷಧದ ಮಾಟವಲ್ಲಾ ಎಂದು ಸಂತೋಷಪಡುತ್ತೇನೆ ನನ್ನ ಹಾಗೆ ಅನೇಕ ಕಾಯಿಲೆ ಅನುಭವಿಸುವವರು ಈ ನನ್ನ ಮಾತನ್ನು ಓದಿ ನಂಬತಕ್ಕದ್ದಾಗಿದೆ'

ಮಿಸೆಸ್ ಮಾರ್ಗರೆಟ್ ಪ್ರಿಂಕ್, ಸೆಂಟ್ರಲ್ [illegible], [illegible] ಈಕೆ ಬರೆಯುವುದು —

"ಪೆರೂನಾದಿಂದ ನನಗೆ ಎಷ್ಟು ಉಪಕಾರವಾಗಿದೆಯೋ ಅದನ್ನು ಬರೆದು ತಿಳಿಸುವುದು ನನ್ನ ಕರ್ತವ್ಯವೆಂದು ತಿಳಿಯುತ್ತೇನೆ ಸ್ವಲ್ಪ ಹೆಚ್ಚು ಕಡಿಮೆ ಆರು ವರುಷಗಳ ತನಕ ನಾನು ನರಳಿದೆನು ಅನೇಕ ಡಾಕ್ಟರುಗಳಲ್ಲಿ ಚಿಕಿತ್ಸೆಮಾಡಿಸಿದ್ದೆನು ಅವರು ಸ್ವಲ್ಪ ಶಮನ ಕೊಟ್ಟರಲ್ಲದೆ ಅವರ ಔಷಧಿಯು ಗುಣವಾದ [illegible] ಲಿಲ್ಲ ನಾನು ಬಹಳ ಬಾಧೆಯನ್ನನುಭವಿಸಿದೆನು ನನ್ನ ಗಂಡನು ಔಷಧಕ್ಕಾಗಿ ಬಹಳ ಹಣ ಖರ್ಚು ಮಾಡಿದನು

"ನಿಯಮವಾಗಿ ಕಡೆಯಲ್ಲಿ ಪೆರೂನಾವನ್ನು ಪರೀಕ್ಷೆ ಮಾಡೋಣವೆಂದು ಸೇವನೆ ಮಾಡಲಾರಂಭಿಸಿದೆನು ನಿಮ್ಮ ಹೇಳಿಕೆಯ ಪ್ರಕಾರ ಮೊದಲನೇ ಬಾಟ್ಲು ಮುಗಿಯುವಷ್ಟರಲ್ಲಿ ಸ್ವಲ್ಪ ಉಪಶಮನವಾಯಿತು ಆಗಿನಿಂದ ನನಗೆ ಬೆನ್ನಿನ ನೋವು ಇಲ್ಲವೇ ಇಲ್ಲ [illegible] ಗೂ ಪೆರೂನಾವನ್ನು ಸೇವಿಸಿದೆನೆ ಈಗ ನಮ್ಮ ಮನೆಗೆ ಡಾಕ್ಟರ ಪ್ರವೇಶವೇ ಅಗತ್ಯವಿಲ್ಲವಾಯಿತು

ಅನ್ನಾ ಮಂಕೇ [illegible], [illegible] ಈಕೆ ಬರೆಯುವುದು — "ನಾನು ಸ್ತ್ರೀ ಧರ್ಮದ ಕಾಯಿಲೆಯನ್ನು ಹದಿಮೂರು ವರುಷಗಳ ತನಕ ಅನುಭವಿಸಿದೆನು [illegible] ಪ್ರಸಿದ್ಧ ಡಾಕ್ಟರುಗಳು ಹೇಳಿದ್ದನ್ನೆಲ್ಲಾ ಮಾಡಿದೆನು ಎಲ್ಲಾ [illegible] ಯೋಚನೆಮಾಡಿ [illegible] ಲ್ಲಿ ನಾನು ಸಾವಿರಾರು ರೂಪಾಯಿ ಖರ್ಚುಮಾಡಿದೆನು ಡಾಕ್ಟರುಗಳು ನನ್ನ ಗರ್ಭಕೋಶವನ್ನು ಶಸ್ತ್ರಚಿಕಿತ್ಸೆ ತೆಗೆದುಬಿಡಬೇಕೆಂದು [illegible] ಆದರೆ ನಾನು ಅದಕ್ಕೆ ಸಮ್ಮತಿಸಲಿಲ್ಲ ಪೆರೂನಾ ಎಂಬೀ ಔಷಧದ ಪ್ರಕಟನೆಯನ್ನು ಓದಿ ಒಂದು ಬಾಟ್ಲಿಯನ್ನು ಕೊಂಡು ತಿನ್ನುಕೊಳ್ಳುತ್ತಾ ಬಂದೆನು ಒಂದು ಬಾಟ್ಲು ಮುಗಿಯುವಷ್ಟರೊಳಗೆ ನನಗೆ [illegible] ಮೂರು ಬಾಟ್ಲು ಔಷಧ ಸೇವಿಸಿದ ಮೇಲೆ ನಾನು ಯಥಾಪ್ರಕಾರ ಸುಖವಾದೆನು ನನ್ನ ಮೂಗಿನ ಖಂಡಗಳು [illegible] ಸೂರ [illegible] ತಗ್ಗುತ್ತಿದ್ದವು [illegible] ದೆನು ನಿಮ್ಮ ಔಷಧವು [illegible] ದದ್ದು ಮತ್ತು ಅದ್ಭುತವಾದದ್ದು ಅದಿಲ್ಲದೆ ಹೋಗಿದ್ದರೆ ನಾನು ಈ ವರೆಗೆ ಗೋರಿಯಲ್ಲಿರುತ್ತಿದ್ದೆನು ರೋಗ ಪೀಡಿತರಾದ ಸ್ತ್ರೀಯರಿಗೆಲ್ಲಾ ಇದನ್ನೇ ಉಪಯೋಗಿಸಬೇಕೆಂದು ತಿಳಿಸುತ್ತೇನೆ ಪ್ರಪಂಚವನ್ನೇ ಕೊಟ್ಟರೂ ನಾನು ಅದನ್ನು ಬಿಟ್ಟಿರಲಾರೆನು"

ವಿಳಾಸ — ಈ ಔಷಧ ಸಿಕ್ಕುವ ಸ್ಥಳಗಳು:—

(೧) [illegible] ಅಂಡ್ ಸನ್ಸ್, ಬೆಂಗಳೂರು.

(೨) ಇಂಗ್ಲಿಷ್ ಡ್ರಗ್ ಕಂಪನಿ, [illegible] ಮಿಂಟ್ ಬೀದಿ, ಮದರಾಸ್.

38-33

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

1-1-1907 ರಿಂದ 8-11-1907 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಸತ್ತದ್ದು	ಕಾಲರಾ ತಗಲಿದ್ದು	ಸತ್ತದ್ದು
ಬೆಂಗಳೂರು ಪಟ್ಟಣ	68	49	0	0
ಮೈಸೂರು ,,	100	75	0	0
ಬೆಂಗಳೂರು ಡಿಸ್ಟ್ರಿಕ್ಟ್	234	163	0	0
ಮೈಸೂರು ,,	106	76	0	0
ಕೋಲಾರ್ ,,	90	78	0	0
ಕೋಲಾರ್ ಚಿನ್ನದ ಗಣಿಗಳು	82	38	0	0
ತುಮಕೂರು ಡಿಸ್ಟ್ರಿಕ್ಟ್	44	30	0	0
ಹಾಸನ ,,	17	14	0	0
ಚಿತ್ರದುರ್ಗ ,,	5	5	0	0
ಕಡೂರ್ ,,	8	4	0	0
ಶಿವಮೊಗ್ಗ ,,	0	0	0	0
ಜುಮ್ಲಾ	730	5[illegible]	0	0

ಶಾಲಿವಾಹನ ಶಕ ವರುಷಂಗಳು ೧೮೨೯ನೇ ಪ್ಲವಂಗನಾಮ ಸಂವತ್ಸರದ ಕಾರ್ತೀಕ ಬಹುಳ ಬಿದಿಗೆ ಗುರುವಾರದಿಂದ ಕಾರ್ತೀಕ ಬಹುಳ ಸಪ್ತಮಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೭ ನೇ ಇಸವಿ ನವಂಬರ್

ತಾ	ವಾರ		ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸ್ಥಿತಿ ಮಹ ನಕ್ಷ
21	ಗುರು	*	ಬಿದಿಗೆ	60 0	ರೋ	24 38	6
22	ಶುಕ್ರ		ಬಿದಿಗೆ	1 10	ಮೃ	33 33	7
23	ಶನಿ	‡	ತದಿಗೆ	1 10	ಆ	19	8
24	ರವಿ		ಚೌತಿ	9 9	ಪು	15 15	9
25	ಚಂದ್ರ	,,	ಪಂಚಮಿ	11 52	ಪು	3 8	10
26	ಕುಜ		ಷಷ್ಠಿ	18 18	ಆ	18 19	11
27	ಬುಧ		ಸಪ್ತಮಿ	21 34	ಮ	10 0	12

* ಉತ್ಪತ್ತಿಯೋಗ, ಬಾಲಾದ್ರೋಹ [illegible] ‡ ಸಂಕಷ್ಟ ಚತುರ್ಥಿ

ಧನುರ್ಧಾಯನಗೌರಿ

,, ಷಷ್ಠಿತಿಥಿ, ಕಾರ್ತೀಕ ಸೋಮ [illegible] ಕನ್ಯಾತಿಥಿ

ಪೇಟೇ ಧಾರಣೆ

ವಿವರ		ಮೈಸೂರು	ಬೆಂಗಳೂರು
ಕಡ್ಡೀ ಅಕ್ಕಿ ಖಂಡ್ಗ ೧ಕ್ಕೆ	ರೂ	೧೩ ೦ ೦	೧೪-೦-೦
ಕಂಬಿಣಿ ಅಕ್ಕಿ ಅರ್ಗಲ್		೧೩ ೮ ೦	೧೩ ೦ ೦
,, ಮಧ್ಯಮ		೧೨ ೮ ೦	೧೨ ೧೨ ೦
ಜೀರಾಸಾಲೆ ಅಕ್ಕಿ		೧೨ ೦	೧೫ ೦ ೦
ಸಣ್ಣಕ್ಕಿ ಅವಲ್		೧೪ ೮ ೦	೧೫ ೮ ೦
,, ಮಧ್ಯಮ		೧೪ ೦	೧೪ ೪ ೦
ಕೊಗಟೀ ಬೇಳೆ ಪಲ್ಲ ೧ಕ್ಕೆ		೧೪ ೦	೧೪ ೦ ೦
,, ಮಧ್ಯಮ		೧೩ ೦ ೦	೧೩ ೦ ೦
[illegible] ರಾಗಿ ಪಲ್ಲ ೧ಕ್ಕೆ		೬ ೧೨ ೦	೬ ೮ ೦
ಕಾಪ್ರಿಗಿ		೬ ೧೨ ೦	೨ ೦ ೦
ಜೋಳ		೬ ೪ ೦	೬ ೮ ೦
ಹಲಸಂದೆ ಪಲ್ಲ ೧ಕ್ಕೆ		೯ ೮ ೦	೧೧ ೦ ೦
ಬಿಳೀ ಅವರೆ		೮ ೧೪ ೦	೯ ೦ ೦
ಹೆಸರು		೧೧ ೭ ೦	೧೨ ೪ ೦
ಉದ್ದು		೧೨ ೮ ೦	೧೨ ೬ ೦
ಕಡಲೆ		೧೩ ೮ ೦	೧೨ ೦ ೦
ಎಳ್ಳು ಸೆ ೧ಕ್ಕೆ		೨೦ ೮ ೦	೨೦ ೧೨ ೦
ಹುರುಳಿ		೫ ೮ ೦	೬ ೧೨ ೦
ಹರಳು [illegible] ಸೇರಿಗೆ		೧೪ ೦ ೦	೧೩ ೦ ೦
ಸೀಗೇ [illegible] ಮಣ ೧ಕ್ಕೆ		೨ ೬ ೦	೨ ೪ ೦
ಮೆಣಸಿನಕಾಯಿ		೨ ೮ ೦	೨ ೪ ೦
,, ಮಧ್ಯಮ		೨ ೪ ೦	೨ ೦ ೦
ಬೆಲ್ಲ ದೊಡ್ಡ ಅಚ್ಚು		೪ ೦ ೦	೩ ೪ ೦
ಒಳ್ಳೆ [illegible] ಮಣ ೧ಕ್ಕೆ		೫ ೧೨ ೦	೫ ೦
ಹರಳೆಣ್ಣೆ ,,		೫ ೧೨ ೦	೬ ೧೨ ೦
ಕೊತ್ತುಂಬರಿ ಪಲ್ಲ ೧ಕ್ಕೆ		೫ ೧೨ ೦	೫ ೧೨ ೦
ಉಪ್ಪು		೨ ೦ ೦	೦ ೮ ೦
ಹುಣಿಸೇ ಹಣ್ಣು		೧ ೮	೧ ೪ ೦
,, ಹಳೇದು		೦ ೧೨ ೦	೦ ೧೫ ೦
ತುಪ್ಪ ಮಣ ೧ಕ್ಕೆ		೪ ೧೫ ೦	೪ ೨ ೦
ಸೀಮೆಯೆಣ್ಣೆ ಪೆಟ್ಟಿಗೆ ೧ಕ್ಕೆ		೬ ೮ ೦	೬ ೧೦ ೦
ತೆಂಗಿನಕಾಯಿ ೧೦೦ ಕ್ಕೆ		೧-೦ ೦	೦ ೨ ೦
ಅಡಿಕೇಕಾಯಿ ಮಣ ೧ಕ್ಕೆ		೦ ೧೨-೦	೦ ೧೨ ೦
ಅಂಟ್ವಾಳದ ಕಾಯಿ ಮಣ ೧ಕ್ಕೆ		೦ ೫-೪-೦	೦ ೫ ೪ ೦
ಚಿನ್ನ (ಪವನ್) ಕೆಂಪು		೧೫-೧೦-೦	೧೫ ೪ ೦
,, ,, ಪಸುಮೆ		೨೩-೦-೦-೦	೨೩-೪-೦
,, ,, ಗಟ್ಟಿ ತೊಲ ೧ಕ್ಕೆ		೮೫-೦-೦	೨೫-೪-೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ			

Printed and Published by the Rev. E W THOMPSON, M A., Proprietor and Manager, Wesleyan Mission Press, Mysore. 21/11/1907

REGISTERED
M 20

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೧ ಮೈಸೂರು—ಸನ್ ೧೯೦೭ ನೇ ಇಸವಿ ನವಂಬರ್ ತಾರೀಖು ೨೮ ನೇ ಗುರುವಾರ. ಸಂಚಿಕೆ ೨೬

ಕಾರ್ಡ್ ಸೈಜು ೪|×೨|

ಫೋಟೋ ತೆಗೆಯುವ

ಫೊಟೋಗ್ರಾಫಿಕ್ ಕ್ಯಾಮೆರಾ.

811

ಬೆಲೆ ಪಕ್ತ ಮೂರು ರೂಪಾಯಿ

ಇದರಿಂದ ಬೇಕಾದ ಮನುಷ್ಯನ ಫೋಟೋ ಅವನಿಗೆ ಗೊತ್ತಾಗದಂತೆ ತೆಗೆಯಲಿಕ್ಕೆ ಬರುತ್ತದೆ ವೇಗದಿಂದ ಓಡುವ [illegible] ಮತ್ತು ಹಾರುವ ಪಕ್ಷಿಯ ಫೋಟೋ ಸಹ ತೆಗೆಯಬಹುದು ಇದರಲ್ಲಿ ಕಲಿಯತಕ್ಕದ್ದೇನೂ ಇಲ್ಲ. [illegible] ಕ್ರಮವಾದ ಮಾಹಿತಿಯನ್ನು ಕೊಳ್ಳುವವರಿಗೆ ನಾವು [illegible] ಮಾಡಿಕೊಡುವೆವು ಎಷ್ಟೋ ಕಡೆಗೆ ಇವಕ್ಕೆ ೧೯ [illegible] ರೂ. ಬೆಲೆ ಬೀಳುತ್ತದೆ ಆದರೆ ಇದರ [illegible] ಕ್ಕತು ೩ ರೂಪಾಯಿ ಮಾತ್ರ ಇರುವದು ಟಪಾಲ್ ಖರ್ಚ್ ೯ ಆಣೆ ಇದು ಸಿಕ್ಕತಕ್ಕ ವಿಳಾಸ —

ಛೋಟಾಲಾಲ ಛಗನಲಾಲ ಮಹಾಜನ, ಠಾಕೂರದ್ವಾರ [illegible] ಪೋಸ್ಟ್ ಕಾಲಬಾದೇವಿ, ಮುಂಬಯಿ.

ಜ್ವರಹರಿ. 1184

ಇದು ಸಾಧಾರಣ ಜ್ವರ, ಚಳಿಜ್ವರ, ಮರುಜ್ವರ, ಪಿತ್ತಜ್ವರ, [illegible]ಜ್ವರ, [illegible]ಜ್ವರ [illegible] ಎಂಬ ನಾನಾವಿಧವಾದ ಜ್ವರಗಳನ್ನು ಬಹು ಬೇಗನೆ ಗುಣಪಡಿಸುವದು.

[illegible] ದಿನಗಳ ಹಿಂದೆ ಕಳುಹಿಸಿಕೊಟ್ಟ [illegible] ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು ಇನ್ನು ಜನಗಳು ಕಾಯಿಲೆ ಬೀಳುತ್ತಿರುವ [illegible] ದಯಮಾಡಿ ಇನ್ನೊಂದು [illegible] ಸೀಸೆಗಳನ್ನು [illegible] ಕಳುಹಿಸಿದರೆ ಉಪಕಾರವಾಗಿರೆ—ಎಂದು ಬರೆದಿದ್ದಾರೆ

ಕ್ರಯ —ಸೀಸೆ ೧ಕ್ಕೆ ೮ ಆಣೆ, ೧ ರೂ [illegible] ಕ್ಕಿನ್ನೆರಡು ಸೀಸೆ ತರಿಸಿಕೆ ಎಂಗರ [illegible] ವೀ. ಪೀ. ಯಿಂದ ಕಳುಹಿಸಲಾಗುವದು.

****

ಜಿ ಮ ಂ ಕ ರ್ಪೂ ರ



ಈ ಔಷದವು ಅಜೀರ್ಣ, ಶೀತ ಭೇದಿ, ಸಾಧಾರಣ [illegible] ಕಳವಳ, ವಾಂತಿಭೇದಿ, ನಾನಾತರದ ಹೊಟ್ಟೆ ನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಗೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ [illegible] ದ ಪರವೂ ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರೆಯುವದು

[illegible] ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ತಮ್ಮಿಂದ [illegible] ಕರ್ಪೂರವನ್ನು ನಾನೂ ನನ್ನ ತಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ [illegible], ಅಜೀರ್ಣ ರೋಗಿಗಳಿಗೆ ಕೊಡುತ್ತೇವೆ ಕೊಟ್ಟ ಕೂಡಲೆ [illegible] ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧ [illegible] ಬರೆದಿದಾರೆ

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗ[illegible] ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯ [illegible] ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ.—

[illegible] ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,

ಸೆಕೆಂಡ್ ಬೀಚ್ ಲೈನ್, ಮದರಾಸ್

WILLIAM & CO., BOMBAY.

ಅಪೂರ್ವಲಾಭ— ಸರ್ವಾಂಗರಕ್ಷ— ಲೋಕಪ್ರಖ್ಯಾತ—

ಅಮೃತಾಂಜನ

27 10

ತರಿಸಿಕೊಳ್ಳಿರಿ — ತ್ವರೆ ಮಾಡಿರಿ.— ಅಮೃತಾಂಜನ ಸರ್ವಲೋಕರಂಜನ, ಸರ್ವವ್ಯಾಧಿಭಂಜನ, ಚಿಕಿತ್ಸಾವಳಿಯೊಳ್ [illegible] ಕಾಂಚನ, [illegible]ಗಳಿಗೆ ಸಂಜೀವನ, ವಾಸನೆಯಲಿ ಮನೋರಂಜನ, ಬೆಲೆಯಲ್ಲಿ ಅಲ್ಪ, ಯೋಗ್ಯತೆಯಲ್ಲಿ ಅದ್ಭುತ, ಔಷಧಿಯಲ್ಲಿ [illegible] ಕೊಳ್ಳುವವರಲ್ಲಿ ಮೊದಲಿಗರಾಗಿರಿ, ಇದರಿಂದ ಗುಣ ಕಾಣದೆ ಹೋದರೆ ಹಣ ಹಿಂತಿರುಗಿ ಕೊಡಲ್ಪಡುವದು ಒಂದೇ ಸಾರಿ ಆರು ಬಾಟ್ಲು ತರಿಸಿಕೊಂಡವರಿಗೆ ಒಂದು ಜರ್ಮನ್ ಬೆಳ್ಳಿಯ [illegible] ಉಚಿತವಾಗಿ ದೊರಕುವದು.

ನಿಶ್ಶಂಕೆಯಾಗಿ ಭಾರತವರ್ಷದ [illegible] ಷಧಗಳಿಂದ ತಯಾರಿಸಿದ ಹೊರುಪಯೋಗಕ್ಕೋಸುಗ ಮುಲಾಮು ಇದರಿಂದ ತಲೆನೋವು, ಶಿರೋವೇದನೆ, ವಾತ, ಸಂಧಿವಾತ ಪಕ್ಷವಾತ, ಗಂಟಲುನೋವು, ಸೊಂಟದನೋವು, ಗಂಟು ನೋವು, ಶೀತ, ಉಳುಕು, ಕೈಕಾಲುಗಳಿಗೆ ಆಗುವ ಎಲ್ಲಾ ತರದ ನೋವಿಗೆ ಇದು ಅತ್ಯುತ್ತಮ

ಈ ಕಂಪನಿಯ [illegible] ತಯಾರಿಸಿದಂಥ [illegible] ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದರೆ ರವಾನಿಸಲ್ಪಡುವದು

ಬಾಟ್ಲು ಒಂದಕ್ಕೆ ಕಿಮ್ಮತು ೦—೮—೦. ಪೋಸ್ಟು ಖರ್ಚ ೦—೪—೦

ಗಜಕರ್ಣದ ಮುಲಾಮು.

[illegible] ಇದರಿಂದ [illegible] ಡಬ್ಬಿ ಒಂದಕ್ಕೆ ಕಿಮ್ಮತು ೦—[illegible]—೦ ಪೋಸ್ಟು ಖರ್ಚ ೦—[illegible]—೦

ದಂತಮಂಜನ [illegible] ಹಲ್ಲುಗಳು ಘಟ್ಟಿಯಾಗುತ್ತವೆ ಹಲ್ಲುಗಳು [illegible] ಡಬ್ಬಿ ಒಂದಕ್ಕೆ ೦—[illegible]—೦ ಪೋಸ್ಟು ಖರ್ಚ ೦—೪—೦

ವಜ್ರಗುಟಿಕ [illegible] ಪೋಸ್ಟು ಖರ್ಚ ೦—೪—೦

ಕೇಶವರ್ಧಿನಿ — [illegible] ಕೂದಲುಗಳನ್ನು ಬೆಳೆಸುವದು, [illegible] ಬಾಟ್ಲು ಒಂದಕ್ಕೆ ೦—೦—೦ ಪೋಸ್ಟು ಖರ್ಚ ೦—೪—೦

ಪ್ರೊಪ್ರೈಟರು—[illegible] ಮತ್ತು ಕಂಪನಿ, ೧೬ ಓಕ್ ಲೇನ್, ಫೋರ್ಟ್, ಮುಂಬಯಿ.

ಟೆಲಿಗ್ರಾಫು ಅಡ್ರೆಸು—"ಅಮೃತಾಂಜನ," ಮುಂಬಯಿ.

ರಬರ್ ಸ್ಟ್ಯಾಂಡ್ ಪ್ರೆಸ್.

1144

ಕಲಾಕೌಶಲ್ಯದಿಂದ ಮತ್ತು ಉದ್ಯೋಗದಿಂದ ಊರ್ಜಿತಸ್ಥಿತಿ ಹೊಂದುವ ಈ ಭಾರತ ಭೂಮಿಯೊಳಗೆ ಈ ಪ್ರೆಸ್ ತಯಾರಾಗುತ್ತದೆ. ಇದುವರೆಗೆ ಈ ಪ್ರೆಸ್ಸು ಪರದೇಶದಿಂದ ಬರುತ್ತಿರುವಾಗ ಅದಕ್ಕೆ ೧೬ ರಿಂದ ೧೮ ರೂಪಾಯಿಗಳ ವರೆಗೆ ಬೆಲೆ ಬೀಳುತ್ತಿತ್ತು ಈ ಪ್ರೆಸ್ಸಿನೊಳಗೆ ಕನ್ನಡ, ತಮಿಳು ತೆಲುಗು, ಉರ್ದು, ಮರಾಠಿ, ಅರಬಿಕ್, ಇಂಗ್ಲೀಷ್ ಮತ್ತು ಬೇಕಾದ ಭಾಷೆಯಲ್ಲಿ ಒಂದು ಪ್ರತಿ ತಯಾರು ಮಾಡಿ, ಮಾಡಿಸಿದ ಮೇಲೆ ಬಹು ಸ್ವಲ್ಪ ಕಾಲದೊಳಗಾಗಿಯೇ ಇದರಿಂದ ೧೫೦ ಪ್ರತಿಗಳನ್ನು ತಯಾರು ಮಾಡಬಹುದು ಆದ್ದರಿಂದ ಈ ಪ್ರೆಸ್ಸು ಸಾರ್ವಜನಿಕ ಕಚೇರಿ ಮ್ಯುನಿಸಿಪಾಲಿಟಿ ಪೊಲೀಸ್ ಆಫೀಸರರೂ, ವಕೀಲರೂ, ವರ್ತಕರೂ, ಇನಾಮುದಾರರೂ ಮತ್ತು ಪರೀಕ್ಷಕರೂ ತಮ್ಮ ಸಂಗ್ರಹದಲ್ಲಿ ಅವಶ್ಯ ಇಡಬೇಕು ಎಷ್ಟೋ ಕಾರಕೂನರ ಸಹಾಯದಿಂದ ಒಂದು ಕೆಲಸಕ್ಕೆ ಬಾಳಕಾಲ ಹಿಡಿಯುವದು ಆದರೆ ಈ ನಮ್ಮ ಪ್ರೆಸ್ಸಿನಿಂದ ಅಂಥಾ ಕೆಲಸವನ್ನಾದರೂ ಸ್ವಲ್ಪ ಕಾಲದಲ್ಲಿಯೇ ಮಾಡುವದಕ್ಕೆ ಸಾಧ್ಯ ಇದರ ದೆಸೆಯಿಂದ ಈ ಪ್ರೆಸ್ ಜನಗಳ ಪ್ರೀತಿಗೆ ಪಾತ್ರವಾಗಿರುವದು ಈ ಕಾರಣದಿಂದ ಪ್ರತಿ ಒಬ್ಬರೂ ತಮ್ಮ ಹತ್ತರ ಈ ಪ್ರೆಸ್ಸನ್ನು ಅವಶ್ಯಕವಾಗಿ ಇಡುವದರಲ್ಲಿ ಏನೂ ಸಂದೇಹವಿಲ್ಲ

ನೋಟ್ ಪೇಪರ್ ಸೈಜು, ರೂಪಾಯಿ ೪—೦—೦.

ಹಾಫ್ ಫುಲ್‌ಸ್ಕ್ಯಾಪ್ ಸೈಜು, ೬—೦—೦

ಪೋಸ್ಟೇಜು ಬೇರೆ (extra)

ವಿಳಾಸ — ವರ್ಧಮಾನ ಏಜನ್ಸಿ,

ಪೋಸ್ಟ್ ಕಾಲಬಾದೇವಿ,

ಮುಂಬಯಿ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು

26 41

೧ ಲೋಕಾಮಯಹರ ಕಸ್ತೂರೀ ಮಾತ್ರೆ —



ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ

ಚಳಿಜ್ವರ, ಜ್ವರ [illegible], ಸಂದುಗಳ ನೋವು, ಮೈ ಕೈಕಾಲು [illegible] (ಭಾರ), ಮೈ ನಡುಕ, ಶೀತವಾತಗಳ ಬಾಧೆ ಅಜೀರ್ಣ, ಅಗ್ನಿಮಾಂದ್ಯ, ಗಲ್ಲ ನೋವು, ಕೆಮ್ಮಲು, [illegible], ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ

ತಾಂಬೂಲದೊಡನೆ ಅಥವಾ ಕಾಗೀ ಉಪಯೋಗಿಸುತ್ತಿದ್ದರೆ ಬಳಿ [illegible] ಸುವಾಸನೆಯಾಗಿರುತ್ತ ಎಂತಹ [illegible] ಬೇಗನೆ [illegible] ಯಾವ ಬಾಯಿಲೆಗೂ [illegible] ನೀರು [illegible] ಬಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧಮಾಡಿ ವೃದ್ಧಿಪಡಿಸುತ್ತದೆ ಸ್ತ್ರೀಯರ [illegible], ಮಕ್ಕಳ ಎಳವು, ಜ್ವರ, ಸನ್ನಿಜ್ವರ ಕೃಕಕ್ಕ[illegible] ಗುಣಪಡಿಸುತ್ತವೆ.

ಇದನ್ನು ಸೇವಿಸುತ್ತಿರುವವರು [illegible] ರೋಗಕ್ಕೆ ಗುರಿಯಾಗುವುದಿಲ್ಲ ಒಳ್ಳೇ ಶಕ್ತಿವರ್ಧಕವಾಗಿದೆ

ಅನುಪಾನಪತ್ರ ಔಷಧದ ಸಂಗಡಲೇ ಇರುತ್ತದೆ

೨೦ ಮಾತ್ರೆಯುಳ್ಳ ಕಾಪ್ಪಿಗೆ ೪ ಆಣೆ ೫ ಕಾಪ್ಪಿಗೆ ೧ ಕಾಪ್ಪಿ [illegible] ೧ ರಿಂದ ೧೨ ಕಾಪ್ಪಿ ವರೆಗೆ ಪೋಸ್ಟೇಜು ೪ ಆಣೆ

ವಿಳಾಸ —ಪಾಳ್ಯದ ವೆಂಕಟಾಚಲ ಪಂಡಿತ,

ಎಸ್ ಎಸ್. ಆರ್. ವೈದ್ಯಶಾಲಾ,

ಲಕ್ಷ್ಮೀವಿಲಾಸ ರೋಡ್, ಮೈಸೂರು

೧೯೦೮ನೇ ಇಸವಿಯ ಇಂಗ್ಲೀಷು—ಕನ್ನಡ

119-1

ಪಾಕೆಟ್ ಡೈರಿ

ಎ. ನಂ| ಬಿ. ನಂ| ಸಿ. ನಂ| ಡಿ. ನಂ||

ಕ್ರಯ ೩ ಆಣೆ. ೫ ಆಣೆ. ೬ ಆಣೆ. ೮ ಆಣೆ.

ಈ ಡೈರಿಗಳು—ವರ್ತಕರು, ಲಾಯರುಗಳು, ಕಂಟ್ರ್ಯಾಕ್ಟರು, ದೊಡ್ಡ ಮನುಷ್ಯರು, ಮುಷ್‌ಬಾಷ್ ಸಮಸ್ತರಿಗೂ ಉಪಯೋಗ ವಾಗಿರುತ್ತವೆ ಇವುಗಳಲ್ಲಿ ಅಡಕವಾಗಿರುವ ವಿಷಯಗಳು—ಶೇಲಕ ಸಂ|| ಪಂಚಾಂಗ, ಗ್ರಹ ಕುಂಡಲಿ ಸಹಿತ, ಕ್ಯಾಲೆಂಡರು, ಹಬ್ಬಗಳು, ರಜಾ ದಿನಗಳು, ರೈಲ್ ಛಾರ್ಜ್, ಕೋರ್ಟ್ ಫೀಜು, ಪ್ರೋಸೆಸ್ ರುಸುಂ, ಸ್ಟಾಂಪು ರಿಜಿಸ್ಟರ್ ಫೀಜುಗಳು, ಪೋಸ್ಟಾಫೀಸಿನ ಎಲ್ಲಾ ವಿಷಯಗಳು, ಜವಿನ್ಗಳ ಅಳತೆ, ಗೌರಿ ಪಂಚಾಂಗ, ಪ್ರಶ್ನಶಾಸ್ತ್ರ ರಾಹುಕಾಲ, ಗುಳಿಕಕಾಲ, ವಾರಶೂಲೆ, ಮಾಸಫಲಗಳು, ದಿನ ಸಂಬಳದ ಪಟ್ಟಿ, ಧೋಬಿ ಲೆಕ್ಕ, ಜಮಾ ಖರ್ಚು ಪಟ್ಟಿ, ಇನ್ನೂ ಅನೇಕ ವಿಷಯಗಳು ಇವೆ ಉತ್ಕೃಷ್ಟವಾದ ಕಾಗದ, ರೂಲು ಹಾಕಿದೆ. ಸೀವೆ ಸಾಮಾನು ಸ್ಟೈಂಡು, ಚಿನ್ನದ ಬಂಗಾರದ ರೇಖೆಯಿಂದ ಕಂಡಣಿ ಮಾಡಲ್ಪಟ್ಟಿದೆ

ಎ ನಂಬರ್ ಚಿಕ್ಕ ಸೈಜು	೩ ಆಣೆ
ಬಿ. ನಂಬರ್ ಮುಚ್ಚಳವಿದ್ದ	೫ ಆಣೆ
ಸಿ ನಂಬರ್ ದೊಡ್ಡ ಸೈಜು	೬ ಆಣೆ
ಡಿ ನಂಬರ್ ಮುಚ್ಚಳವಿದ್ದ	೮ ಆಣೆ

ಪೋಸ್ಟು ಛಾರ್ಜು ಬೇರೆ. ಒಂದೇ ಸಮಾಚಾರದಲ್ಲಿ ೧೨ ಡೈರಿ ತರಿಸಿಕೊಂಡರೆ ೧ ಡೈರಿ ಉಚಿತವಾಗಿ ಕೊಡುವೆವು. ವಿ ಪಿ ಮೂಲಕವೂ ಅರಿಸಿಕೊಳ್ಳಬಹುದು.

ನಮ್ಮ ವಿಳಾಸ:—ಶ್ರೀ. ಶಿವಲಿಂಗಂ ಶೆಟ್ಟಿ ಕಂಪನಿ,

ಕರ್ನಾಟಕ ಬುಕ್ ಡಿಪೋ ಪ್ರೆಸ್, ಬಳ್ಳಾರಿ.

CHAMBERLAIN'S PAIN BALM

ಚೇಂಬರ್ಲೆನ್ ಯವರು ಮಾಡಿದ ನೋವುಹರ ಔಷಧವು



ಬೆನ್ನುಲುಬಿನಲ್ಲಿನ ನೋವು, ಪಕ್ಕಗಳಲ್ಲಿ ಆಗುವ ನೋವು, ಖಂಡಗಳಲ್ಲಿ ಸಂಭವಿಸುವ ನೋವು, ತಲೆನೋವು, ಉಚ್ಚಿದ ಕದಗಳ ನೋವು, ವಾಯುನೋವು—ಇವುಗಳನ್ನೆಲ್ಲಾ ಸಂಪೂರ್ಣವಾಗಿ ವಾಸಿಮಾಡುವಂಥಾ ಔಷಧ.

ವಾಯುನೋವೆಂದರೇನು?

ಕೀಲುಗಳೆಲ್ಲಾ ಮಣಕಟ್ಟುಗಳೆಲ್ಲಾ ಗಾಯವಾಗುವುದು, ಊದಿಕೊಳ್ಳುವುದು, ಕಠಿಣವಾಗಿ ಸೆಳೆಯುವ ಬಾಧೆ, ಖಂಡಗಳಲ್ಲಿ ಇರಿಯುವುದು, ವಿಶ್ರಾಂತಿಕೊಡದೆ ಇರುವುದು, ಸಿದ್ಧಹಸ್ತದ ಇರುವುದು—ಇನ್ನೀ ಶ್ರಮೆಲ್ಲಾ ನಿಮಗೆ ಯಾವಾಗ ಉಂಟಾಗುವುದೋ ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು

ಆಗ ಚೇಂಬರ್ಲೆನ್ ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹಾ ಕಾವು ನಮಗಳವೂ ವ್ಯಾಪಿಸುತ್ತದೆ. ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ ಮನಸ್ಸಿಗೆ ಉಲ್ಲಾಸವಾಗುತ್ತೆ. ಅದನ್ನೇ ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯುವಿನ ಬುಟ್ಟನ್ನೇ ಕಿತ್ತು ಹಾಕಿಬಿಡುವುದು.

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ.

ಕೈಯಿಂದ ಮುಟ್ಟಿದ್ದೇನೂ ಅಲ್ಲ

ಇದು ಎಲ್ಲೆಲ್ಲೂ ಬಿಕರಿಯಾಗುವುದು. ಸಣ್ಣ ಶೀಸೆಗೆ ೧ ರೂಪಾಯಿ ದೊಡ್ಡ ಶೀಸೆಗೆ ೨ ರೂಪಾಯಿ

ಮಕ್ಕಳ ಆರೋಗ್ಯವನ್ನು

ಯಾವಾಗಲೂ ಕಾಪಾಡುವದು ನೆತ್ತಿಯ ಮೇಲೆ ಬಿದ್ದ ಭಾರವಾಗಿದೆ

ಸಣ್ಣ ಮಕ್ಕಳು ಹೇಳಿದಂತೆ ಕೇಳದೆ ಸಿಟ್ಟಿಗೆ ಬಳಲುವಂಥವರಾಗಿದ್ದು ಆಹಾರರುಚಿ ಕಡಿಮೆಯುಳ್ಳವರಾಗಿದಾರೆಂದು ಕಂಡ ಕೂಡಲೆ;

SCOTT'S EMULSION.

1-37

(ಸ್ಕಾಟ್ಸ್ ಇಮಲ್‌ಷನ್)

ಎಂಬೀ ಸೇವನಾ ಔಷಧವನ್ನು ಕೊಡಬೇಕು.

ಹಾಲಿನಲ್ಲಿ ಕಲವು ತೊಟ್ಟು ಬೆರಸಿ ಕೊಟ್ಟ ಕೂಡಲೇ ದೊಡ್ಡ ವ್ಯತ್ಯಾಸ ತೋರುವದು.

ಅವರ ಸಂತೋಷವೂ ಆನಂದವೂ ಪದುವರ ಆಹಾರದ ರುಚಿ ಕೆಡದಿರುವ ಚಿನ್ಹೆ ತೋರುವದು.

ಕೈಯಿಂದ ಮುಟ್ಟಿ ತಯಾರಿಸಿದ್ದಲ್ಲ

ಎಲ್ಲಾ ಔಷಧಮಾರಾಟಗಾರರಲ್ಲೂ ಸಿಕ್ಕುತ್ತದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್

ಈ ವಿಹಾನ ಮನುಷ್ಯ ಇರುವ ಔಷಧ ವನ್ನೇ ಕೊಂಡುಕೊಳ್ಳಿ.

ಈಗಲೇ ಶೀಮೆಯಿಂದ ಎಸ ಎಸ ಕ್ರಿಸ್ಟಪೆಲ್ಸ್ ಸ್ಟೀಮರಿನಲ್ಲಿ ಬಂದಿದೆ.

117-5

ಎಣ್ಣೆಕೆಂಪು, ಕೆಂಪು, ಮತ್ತು ಹಾಡಾ ಕಪ್ಪು ಸಹಿತೀರುವ

ಹಾಸನ ಉಲನ್. ಪೀಸು ೧ ಕ್ಕೆ	ರೂ. ೩—೦—೦
೧೦ ಟೋಪಿಯಾಗುವ ಬಿಂದ ೧ ಕ್ಕೆ	೩—೯—೦
೧ ಟೋಪಿಯಾಗುವ ಉಲನ್ ದಾರಕ್ಕೆ	೦—೮—೦
ಕೋಕ್ಕೆ ಸೂಜಿ ಡಜನ್ ೧ ಕ್ಕೆ	೦—೧೨—೦
೧ ಕೋಕ್ಕೆ ಸೂಜಿಗೆ	೦—೧—೬
೩೦ ಇಂಚಿನ ಬನಿಯನ್ ೧ ಕ್ಕೆ	೦—೯—೦
ಸಣ್ಣ ಪೋಸ್ಟ್ ಕಾರ್ಡು ೧೦೦ ಕ್ಕೆ	೦—೪—೦

ವಿ ಪಿ ಇಂದಲೂ ರವಾನಿಸುತ್ತೇವೆ ವಿಳಾಸ —

ದಿ ಉಲನ್ ಮಾರ್ಟ್, ಮಂಗಳೂರು, ದ ಕ.

ಪ್ರಕಟನೆ.

125-1

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ:—

ಅಮ್ಮ ತಮಪಲ್ ಇಲಾಖಾ ಬಾಬತು ಹೆಣ್ಣು ಮತ್ತು ಗಂಡು ದನಸುಗಳನ್ನು ಚಾಲ್ತಿ ಇಸವಿ ಡಿಸೆಂಬರ್ ಮಾಹೆ ೩೦ನೇ ತಾರೀಖು ಆಗಾಯಿತು "ಹೊಳೆನರಸೀಪುರ" ಮೊಕಾಮಿನಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ ಇಷ್ಟವುಳ್ಳವರು ಸದರಿ ಹರಾಜಾಗುವ ಸ್ಥಳಕ್ಕೆ ಹಾಜರಾಗಿ ದನಸುಗಳನ್ನು ಧಡಸವಾಲಿನಿಂದ ಪಡೆಯಬಹುದು

ಮೊಕ್ಕಾಂ ಹಾಸನ, ತಾ॥ ೨೩-೧೧—೦೭	ಎಚ್ ನಂಜುಂಡರಾಜೆ ಅರಸ್, ಸೂಪರಿಂಟೆಂಡೆಂಟ್ ಅಮೃತ ಮಹಲ್ ಇಲಾಖಾ.

ಇಗೋ! ಕನ್ನಡ "ಮಾಸಾಲ" ಪಾಕೆಟ್ ಡೈರಿ!

122-3

ಸೊಗಸಾದ ಡೈರಿಗಳು" ಉತ್ತಮವಾದ ಡೈರಿಗಳು !!

ಉತ್ತಮವಾದ ಡೈರಿಗಳು !!



೧೯೦೮ನೇ ಸಾಲಿನ ಕನ್ನಡ ಡೈರಿಗಳು ಸೊಗಸಾಗಿ ರೂಲ್ ಹಾಕಿದ ಕಾಗದದ ಮೇಲೆ ಮುದ್ರಿಸಿ ನಂಥಾ ಅಕ್ಷರಗಳಿಂದ ಪ್ರಿಂಟಾಗಿ ಮನಸ್ಸಿಗೆ ಆನಂದವನ್ನು ಉಂಟುಮಾಡತಕ್ಕವುಗಳಾಗಿರುತ್ತವೆ ಇವುಗಳಲ್ಲಿ ಅಡಕವಾಗಿರುವ ವಿಷಯಗಳು — ಜಮಾಖರ್ಚಿನ ಪಟ್ಟಿ, ಧೋಬಿ ಲೆಕ್ಕ, ದಿನ ಸಂಬಳದ ಪಟ್ಟಿ, ವಾರಶೂಲೆ, ಗುಳಿಕ ಕಾಲ, ರಾಹು ಕಾಲ, ಹಲ್ಲಿ ಬಿದ್ದ ಫಲ, ಪ್ರಶ್ನಶಾಸ್ತ್ರ, ಗೌರಿ ಪಂಚಾಂಗ, ತೂಕಗಳು, ಜವಿನ್ಗಳ ಅಳತೆ, ಪೋಸ್ಟಾಫೀಸಿನ ಎಲ್ಲಾ ವಿಷಯಗಳು, ರಿಜಿಸ್ಟರ್ ಫೀಜುಗಳು, ಸ್ಟಾಂಪು, ಪ್ರೋಸೆಸ್ ರುಸುಂ, ಕೋರ್ಟ್ ಫೀಜು, ರೈಲ್ ಛಾರ್ಜ್, ರಜಾ ದಿನಗಳು ಹಬ್ಬಗಳು, ಕ್ಯಾಲೆಂಡರು, (ಗ್ರಹ)ಕುಂಡಲಿ ಸಹಿತ ಪ್ಲವಂಗ ಸಂ|| ಪಂಚಾಂಗ, ಇವೇ ಮುಂತಾದ ಅನೇಕ ವಿಷಯಗಳು ಅಡಗಿರುತ್ತವೆ ಡೈರಿಗಳ ಕ್ರಯ —

ನಂ|| ೧ ಸಣ್ಣ ಸೈಜು ಪೆನ್ಸಿಲ್ ಇಡತಕ್ಕ ಡೈರಿ ೦—೪—೦, ಹನ್ನೆರಡು ಡೈರಿಗಳಿಗೆ ೧ ಇನಾಮು

ನಂ|| ೨ ಸಣ್ಣ ಸೈಜು ಪೆನ್ಸಿಲ್ ಇಟ್ಟು ಮುಚ್ಚಳ ಹಾಕಿರುವ ಫ್ಲಾಪ್ ಡೈರಿ ೦—೬—೦, ಹನ್ನೆರಡು ಡೈರಿಗಳಿಗೆ ೧ ಇನಾಮು.

ನಂ|| ೩ ದೊಡ್ಡ ಸೈಜು ಪೆನ್ಸಿಲ್ ಇಡತಕ್ಕ ಡೈರಿ ೦—೬—೦; ಹನ್ನೆರಡು ಡೈರಿಗಳಿಗೆ ೧ ಇನಾಮು.

ನಂ|| ೪ ದೊಡ್ಡ ಸೈಜು ಪೆನ್ಸಿಲ್ ಇಟ್ಟು ಮುಚ್ಚಳ ಹಾಕಿರುವ ಡೈರಿ ೦—೮—೦, ಹನ್ನೆರಡು ಡೈರಿಗಳಿಗೆ ೧ ಇನಾಮು

ಡೈರಿಗಳ ಗಲಾಟೆಯಲ್ಲಿ ಭ್ರಾಂತಿಹೊಂದಬೇಡಿ ಉತ್ತಮವಾದವುಗಳಿಗೆ ಹಣವನ್ನು ವ್ಯಯಮಾಡಿರಿ. ನಮ್ಮ ಡೈರಿಗಳು ಬಹು ಸುಲಭ ಕ್ರಯವುಳ್ಳವುಗಳು. ಇವುಗಳು ಗೌರ್ನಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿವೆ, ನಮ್ಮ ವಿಳಾಸ —

ಎಸ್. ಡಿ. ನಂಜುಮಲ್ ಕಂಪೆನಿ, ದೊಡ್ಡಪೇಟೆ, ಮೈಸೂರು.

ಅಥವಾ,

ಎಲ್. ಎ ಪೋರ್‌ವಾಲ್—ಬೆಂಗಳೂರು ಸಿಟಿ.

ಅಥವಾ,

ಮ್ಯಾನೇಜರ್, ಸಿ. ಎಲ್. ಎಸ್ ಬುಕ್ ಡಿಪೋ, ಮೈಸೂರು.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

75-18

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು! ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇಳಾದದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ.—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು. (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಸೀದಾ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದು ಚನ್ನಾಗಿಲ್ಲದ್ದು ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ.

ಸಾದ, ಕೆಂಪು, ಕಪ್ಪು, ಬಿಳಿಕೆ, ಕಾಫಿ ಟೋಪಿಗಳು ೧ ರೂ ೮ ಆ.; ೧ ರೂ ೬ ಆ ; ೧ ರೂ. ೪ ಆ.

ರೇಕ್ಕೆ ಚುಕ್ಕಿಯುಳ್ಳ ಟೋಪಿಗಳು ೧ ರೂ. ೮ ಆ.; ೨ ರೂ ಪಾರದ ಟೋಪಿಗಳು ೧ ರೂ. ೧೨ ಆ., ೧ ರೂ. ೮ ಆ.; ೧ ರೂ. ೬ ಆ ಉಸುಕಿನ ಟೋಪಿಗಳು ೧ ರೂ. ೮ ಆ , ೧ ರೂ. ೬ ಆ.

ಕೂಸುಗಳ ಟೋಪಿ, ಸೂಫಿನ್ ಮೇಜೋಡು, ಅರ್ಧ ಮೇಜೋಡು ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು.

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ

ಸನ್ ೧೯೦೮ನೇ ಇಸವಿಯ

127-1



ಎ ನಂ|| ಜಿನೀವಾ. ಬಿ. ನಂ|| ಸಿ ನಂ| ಜಿನೀವಾ ಡಿ ನಂ||

ಪಂಚಾಂಗ ಸಹಿತವಾದ ಇಂಗ್ಲೀಷು—ಕನ್ನಡ ಡೈರಿ

ಈ ಡೈರಿಗಳು ವರ್ತಕರು, ಲಾಯರುಗಳು, ಕಂಟ್ರಾಕ್ಟರು ದೊಡ್ಡ ಮನುಷ್ಯರು, ಖುಷ್‌ಬಾಷ್ ಸಮಸ್ತರಿಗೂ ಉಪಯೋಗವಾಗಿರುತ್ತವೆ. ಇವುಗಳಲ್ಲಿ ಅಡಕವಾಗಿರುವ ವಿಷಯಗಳ —ಶೇಲಕ ಸಂ|| ಪಂಚಾಂಗ, ಗ್ರಹ ಕುಂಡಲಿ ಸಹಿತ. ಕ್ಯಾಲೆಂಡರು, ಹಬ್ಬಗಳು, ರಜಾದಿನಗಳು, ರೈಲ್ ಛಾರ್ಜ್, ಕೋರ್ಟ್ ಫೀಜು, ಪ್ರೋಸೆಸ್ ರುಸುಂ, ಸ್ಟಾಂಪು, ರಿಜಿಸ್ಟರ್ ಫೀಜುಗಳು, ಪೋಸ್ಟಾಫೀಸಿನ ಎಲ್ಲಾ ವಿಷಯಗಳು, ಜವಿನ್ಗಳ ಅಳತೆ, ತೂಕಗಳು, ಗೌರಿ ಪಂಚಾಂಗ ಪ್ರಶ್ನಶಾಸ್ತ್ರ, ಹಲ್ಲಿ ಬಿದ್ದ ಫಲ. ರಾಹುಕಾಲ ಗುಳಿಕಕಾಲ, ವಾರಶೂಲೆ, ದಿನ ಸಂಬಳದ ಪಟ್ಟಿ, ಧೋಬಿಲೆಕ್ಕ, ಜಮಾಖರ್ಚಿನಪಟ್ಟಿ ಇನ್ನೂ ಅನೇಕ ವಿಷಯಗಳಿವೆ ಉತ್ಕೃಷ್ಟವಾದ ಕಾಗದ, ರೂಲು ಹಾಕಿದೆ, ಸೀವೆ ಸಾಮಾನು ಸ್ಟೈಂಡು, ಚಿನ್ನ ಬೆಳ್ಳಿ ಗಿಲೀಟುಮಾಡಿದೆ ಕ್ರಯ—

ಎ ನಂಬರ್ ಚಿಕ್ಕಸೈಜು ೩ ಆಣೆ	ಸಿ ನಂಬರು ದೊಡ್ಡ ಸೈಜು ೬ ಆ
ಬಿ ಮುಚ್ಚಳವಿದ್ದ ೫ ,,	ಡಿ ,, ಮುಚ್ಚಳವಿದ್ದ ೮ ,,

ಹೊಸ ನಮೂನೆ ಉತ್ಕೃಷ್ಟವಾದ 'ಜಿನೀವಾ' ಡೈರಿ ಇದು ಸರ್ಕಾರದಲ್ಲಿ ರಿಜಿಸ್ಟರಾಗಿದೆ

"ಜಿನೀವಾ" ೧ ನಂ. ೪ ಆ	"ಜಿನೀವಾ" ೨ ನಂ ೬ ಆ

ಪೋಸ್ಟು ಛಾರ್ಜು ಬೇರೆ ಒಂದೇ ಸಮಾಚಾರ ೧೨ ಡೈರಿ ತರಿಸಿಕೊಂಡರೆ ೧ ಡೈರಿ ಇನಾಂ ವಿ ಪಿ ಮೂಲಕವೂ ತರಿಸಿಕೊಳ್ಳಿ

ಟಿ. ಕೆ. ಮತ್ತು ಎಂ. ಆರ್. ಕೃಷ್ಣಸ್ವಾಮಿ ಶೆಟ್ಟಿ.

ಬಳ್ಳಾಪುರ ಪೇಟೆ, ಬೆಂಗಳೂರು ಸಿಟಿ

ವೃತ್ತಾಂತ ಪತ್ರಿಕೆ

೧೯೦೭ ನೇ ಇಸವಿ ನವಂಬರ್ ತಾ|| ೨೮ ನೇ ಗುರುವಾರ

ಸ್ವದೇಶಿ ಪ್ರಯತ್ನವು

ಒಂದೆರಡು ವರುಷಗಳಿಂದ "ಸ್ವದೇಶಿ," "ಸ್ವಾರಾಜ್ಯ," "[illegible]" "ಪಾರತಂತ್ರ್ಯ" ಇವೇ ಮೊದಲಾದ ಮಾತುಗಳು [illegible] ಜನರ ಬಾಯಿಯಲ್ಲಿ ಸಾಧಾರಣವಾಗಿ ಬರುವುಗಳಾಗಿರುತ್ತವೆ. ಆದರೆ ಅಷ್ಟಕ್ಕೆ ಮಾತುಗಳ ಅರ್ಥವನ್ನು ಆಡುವವರು ಗ್ರಹಿಸದೆ ಹೋದರೆ ಆ ಮಾತುಗಳು [illegible] ಹಾರಿಹೋಗುವ ಹೊಗೆಯಂತಿರುವವು. "ವಂದೇ ಮಾತರಂ" ಎಂದು ಕೂಗಿಕೊಳ್ಳುವ ಉತ್ಸಾಹಿಗಳು ಅದರ ನಿಜವಾದ ಅರ್ಥವನ್ನು ಕೊಂಚಮಟ್ಟಿಗಾದರೂ ಗ್ರಹಿಸಿ [illegible] ಈ ದೇಶದಲ್ಲಿ ಜಾತಿಯ ಅವಿವೇಕವಾದ ಕಟ್ಟು [illegible] ಬಹುಮಟ್ಟಿಗೆ ಸಡಿಲವಾಗುತ್ತಿತ್ತು. ಜನರಲ್ಲಿ ಸ [illegible] ಭಾವವು ವೃದ್ಧಿಹೊಂದಿ, ಅವರು ಅಂಥಾ ಭಾವನೆಯನ್ನು ತಮ್ಮ ಪ್ರತಿದಿನದ ನಡವಳಿಕೆಯಲ್ಲಿ ತೋರಿಸುತ್ತಿದ್ದರು. ಜಾತಿ ವೈಷಮ್ಯಗಳು ನಿಂತುಹೋಗುವಂತೆ ಎಲ್ಲರೂ ಒಟ್ಟಾಗಿ ಸೇರಿ ಪ್ರಯತ್ನಿಸುತ್ತಿದ್ದರು. ಕೀಳು ಜಾತಿಯವರ ಶೋಚನೀಯವಾದ ಸ್ಥಿತಿಯನ್ನು ಹೋಗಲಾಡಿಸುವುದಕ್ಕೆ ಉತ್ತಮ ಜಾತಿಯವರು ಅಸಾಧಾರಣವಾದ ಪ್ರಯತ್ನವನ್ನು ಮಾಡುತ್ತಲಿದ್ದರು. ದೇಶಾಭಿಮಾನಿಗಳು ಒಬ್ಬರನ್ನೊಬ್ಬರು ನಂಬಿ ಕ್ಷಯಿಸಿಹೋಗುತ್ತಿರುವ ದೇಶೀಯ ಕೈಗಾರಿಕೆಗಳನ್ನು ಅಭಿವೃದ್ಧಿಗೆ ತರುವುದಕ್ಕೆ ಬೇಕಾದ ಪ್ರಯತ್ನಗಳನ್ನು ಮಾಡುತ್ತಿದ್ದರು. ಆದರೆ ನಿಷ್ಪಕ್ಷಪಾತಿಗಳಾದವರು ಹಿಂದೂಸ್ಥಾನದಲ್ಲಿ ಎರಡು ವರುಷಗಳಿಂದಾದ ಅಭಿವೃದ್ಧಿಯನ್ನು ಯೋಚಿಸಿದರೆ ಪೊಳ್ಳು ಕೂಗೇ ಹೆಚ್ಚಾಗಿರುವುದೆಂತಲೂ ಕಾರ್ಯಸಾಧನೆಯು ಮಾತ್ರ ಕಡಿಮೆಯಾಗಿರುವುದೆಂತಲೂ [illegible] ಯುಪಡಬೇಕಾಗಿರುವುದು.

[illegible] "ವಂದೇಮಾತರಂ" ಎಂದು ಕೂಗಿಕೊಳ್ಳುವವರು, ಹೊಲಗೇರಿಗಳಲ್ಲಿ ವಾಸಮಾಡಿಕೊಂಡು ವಿದ್ಯಾಹೀನರಾಗಿ ಮನುಷ್ಯತ್ವದಿಂದ [illegible] ಕಷ್ಟಗಳನ್ನು ಅನುಭವಿಸುತ್ತಿರುವ ಜನರನ್ನು ಉತ್ತಮ ಸ್ಥಿತಿಗೆ ತರುವುದಕ್ಕೆ ಮಾಡಿರುವ ಪ್ರಯತ್ನಗಳೆಷ್ಟು? ಸ್ವದೇಶೀ ಕೈಗಾರಿಕೆಗಳನ್ನು ಅಭಿವೃದ್ಧಿಗೆ ತರಬೇಕೆಂದು ದೀರ್ಘವಾದ ಉಪನ್ಯಾಸಗಳನ್ನು ಮಾಡುವವರು ಆಯಾ [illegible] ಫಂಡುಗಳಿಗೆ ಉದಾರವಾಗಿ ಹಣವನ್ನು ಕೊಟ್ಟಿರುವರೇ? ಸಂಘಪರಿಷ್ಕಾರಕರು ಧೈರ್ಯವಾಗಿ ನಿಂತು ತಮಗೆ ಸರಿಯೆಂದು ಕಂಡುಬರುವ ಕುಂದುಗಳನ್ನು ಜನರಿಗೆ ತೋರಿಸಿ, ತಾವು ಅವುಗಳನ್ನು ತ್ಯಜಿಸುವ ಪ್ರಯತ್ನದಲ್ಲಿರುತ್ತಾರೆಯೇ? ಈ ಪ್ರಶ್ನೆಗಳಿಗೆಲ್ಲಾ ಸ್ವದೇಶಾಭಿಮಾನಿಗಳು ಯಾವ ಉತ್ತರವನ್ನು ಕೊಡುವರು?

ನಾವಂತೂ ದೇಶದೇಳಿಗೆಗೆ ನಿಃಸ್ವಭಾವವೇ ಕಾರಣವೆಂದು ಹೇಳುತ್ತಾ ಬಂದಿದ್ದೇವೆ. ಮುಂದೆಯೂ ಅದೇ ರೀತಿಯಾಗಿಯೇ ಹೇಳುವೆವು. ಕಾಲಿನಲ್ಲಿ ಹುಣ್ಣಿರುವಾಗ ಕಿವಿಗೆ ಶಸ್ತ್ರವನ್ನು ಹಾಕುವ ವೈದ್ಯನನ್ನು ಮೂಢನೆಂದು ಕರೆಯುವರಲ್ಲವೇ? ನಮ್ಮ ಕ್ರಿಯೆಗಳಿಗೆ ಕಾರಣಭೂತಗಳಾಗಿರುವ ನಮ್ಮ ಹೃದಯಾತ್ಮಗಳಲ್ಲಿ ಯೋಗ್ಯವಾದ ಬದಲಾವಣೆಗಳಾಗಬೇಕಾಗಿರುತ್ತದೆ. ಈ ಸಂಗತಿಯೇ ಪ್ರಮುಖವಾದದ್ದು. ಇದನ್ನು ಮರೆತರೆ ಸ್ವದೇಶೀ ಪ್ರಯತ್ನವು ಬರೀ ಕೂಗೇ ಹೊರತು ಮತ್ತೇನೂ ಅಲ್ಲವು. ಜಗದ್ಗುರುವಾದ ಯೇಸುಕ್ರಿಸ್ತನು ಚಿತ್ತಶುದ್ಧಿಯ ವಿಷಯವಾಗಿ ಜನರಿಗೆ ಹೇಗೆಂದನು – "ಮನಸ್ಸಿನೊಳಗಿನಿಂದಲೇ ಕೆಟ್ಟ ಆಲೋಚನೆ, ಕೊಲೆ, ಹಾದರ, ಸೂಳೆಗಾರಿಕೆ, ಕಳ್ಳತನ, ಸುಳ್ಳುಸಾಕ್ಷ್ಯಗಳು ಹೊರಟು ಬರುತ್ತವೆ." ಮತ್ತೊಂದು ಸಮಯದಲ್ಲಿ ಆತನು ದೇವರು ಮೆಚ್ಚತಕ್ಕ ಸದಾಚಾರಗಳನ್ನನುಸರಿಸುವಂತೆಯೂ ಹಾಗೆ ಮಾಡುವುದರಿಂದ ಲೌಕಿಕ ಪ್ರಯೋಜನಗಳು ತಾವಾಗಿಯೇ ಬರುವವೆಂತಲೂ ತಿಳಿಸಿದನು.

ಒಳದೇಶದ ವೃತ್ತಾಂತಗಳು

ಹೊಸದುರ್ಗದ ಅಮಲ್ದಾರ್ ಮ|| ಲಕ್ಷ್ಮಣ ಐಯ್ಯರನ್ನು ಸರ್ಕಾರದವರು ಯಾವ ಕಾರಣಕ್ಕಾಗಿಯೋ ಸಸ್ಪೆಂಡು ಮಾಡಿರುತ್ತಾರೆಂದು ತಿಳಿಯುತ್ತದೆ.

* * *

ಮೈಸೂರು ಪಟ್ಟಣದಲ್ಲಿ ಆರೋಗ್ಯಾಭಿವೃದ್ಧಿಯ ಕಾರ್ಯಗಳನ್ನು ಟ್ರಸ್ಟ್ ಬೋರ್ಡಿನ ಮೂಲಕ ನಡಿಸುವುದಕ್ಕೆ ೧೯೦೭—೦೮ ನೆ ಸಾಲಿಗೆ ಗವರ್ನಮೆಂಟಿನವರು ೨,೯೩,೨೯೦ ರೂಪಾಯಿ ಸ್ಯಾಂಕ್ಷನ್ ಮಾಡಿದ್ದಾರೆ.

ಕೋಲಾರ್ ಚಿನ್ನದ ಗಣಿಗಳ ಪ್ರದೇಶದಲ್ಲೆಲ್ಲಾ ಇದೇ ನವಂಬರ್ ತಿಂಗಳ ಆಖೈರಿನವರೆಗೂ ಒಂದು ವರುಷದ ತನಕ ಎಲ್ಲಾ ಮಕ್ಕಳಿಗೂ ನಿರ್ಬಂಧಪಡಿಸಿ ಸಿಡುಬು ಹಾಕಿಸಬೇಕೆಂದು ಸರ್ಕಾರದವರು ಹುಕುಂ ಕೊಟ್ಟಿದ್ದಾರೆ.

* * *

ರಾಜಧಾನಿಯಲ್ಲಿ ಪದ್ಧತಿಯ ಪ್ರಕಾರ ಅರಮನೆ ಕಚ್ಚೇರಿಯ ಧಾತ್ರೀ ಹವನದ ಸಮಾರಾಧನೆಯು ಇಲ್ಲಿನ ಚಮರಾಜ ಉದ್ಯಾನವನದಲ್ಲಿ ಡಿಸೆಂಬರ್ ತಾ. ೯ ನೇ ಸೋಮವಾರ ನಡೆಯುವುದೆಂದು ಗೊತ್ತಾಗಿರುವಂತೆ ಕೇಳುತ್ತೇವೆ.

* * *

ಚಿತ್ರದುರ್ಗದಲ್ಲಿರುವ ಶ್ರೀಮದ್ ವಿರಕ್ತ ಜಗದ್ಗುರು ಮುರುಘ ರಾಜೇಂದ್ರಸ್ವಾಮಿಗಳವರು ೨೦ ಬಂದೂಕುಗಳನ್ನೂ ೪೦ ಕತ್ತಿಗಳನ್ನೂ ತಮ್ಮಲ್ಲಿ ಇಡಿಸಿಕೊಳ್ಳಬಹುದೆಂದು ಗವರ್ನಮೆಂಟಿನವರು ಅವರಿಗೆ ಲಯಸೆನ್ಸು ಕೊಟ್ಟಿರುತ್ತಾರೆ.

* * *

ಶ್ರೀಮನ್ಮಹಾರಾಜರವರ ನಿಷ್ಕರ್ಷೆಯ ಸಂತೋಷಕಾರ್ಯಗಳನ್ನು ನೆರವೇರಿಸಲು ದಯಮಾಡಿಸಿದ್ದ ದಿವಾನರವರೂ ಕೌನ್ಸಿಲ್ ಮೆಂಬರುಗಳೂ ಕಳೆದ ಶನಿವಾರ ಭಾನುವಾರಗಳಲ್ಲಿ ವಾಪಸು ಬೆಂಗಳೂರಿಗೆ ಪ್ರಯಾಣ ಮಾಡಿದರು.

* * *

ರಾಜಧಾನಿಯ ಜನರಲ್ ಆಸ್ಪತ್ರೆಯಲ್ಲಿ ದಿನವಹಿ ಬೆಳಿಗ್ಗೆ ೯ ರಿಂದ ೧೧ ಗಂಟೆಯ ತನಕ ಪ್ಲೇಗ್ ಸಿಡುಬು (ಇನಾಕ್ಯುಲೇಷನ್) ಹಾಕುವ ಏರ್ಪಾಡುಮಾಡಿದೆ ಎಂತಲೂ, ಪ್ರಜೆಗಳು ಹೋಗಿ ಹಾಕಿಸಿಕೊಳ್ಳಬಹುದೆಂತಲೂ ಸಿವಿಲ್ ಸರ್ಜನ್‌ರವರು ತಿಳಿಸಿರುತ್ತಾರೆ.

* * *

ಪೊಲೀಸಿನವರು ಹಿಂಸೆ ಮಾಡಿದರೆಂಬ ಮೊಕದ್ದಮೆಯನ್ನು ಬೆಂಗಳೂರು [illegible] ಕೋರ್ಟಿನವರು ಮೊನ್ನೆ ಸೋಮವಾರ ಸ್ವಲ್ಪಮಟ್ಟಿಗೆ ವಿಚಾರಣೆ ಮಾಡಿ, ನಾಳೇ ಶನಿವಾರ ಬಾಕೀ ವಿಚಾರಣೆಯನ್ನು ಪೂರೈಸುವುದಾಗಿ ಗೊತ್ತು ಮಾಡಿರುವಂತೆ ಕೇಳುತ್ತೇವೆ.

* * *

ಮೈಸೂರು ಪಟ್ಟಣದಲ್ಲಿ ವಿದ್ಯಾ ಇಲಾಖಾ ಅಧ್ಯಕ್ಷರಾದ ಮ|| ಸಾಹೇಬಸಿಂಗರ ಕುಮಾರರು ವಿಲಾಯತಿಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದು ಈ ಸಲ ಇಂಡಿಯನ್ ಸಿವಿಲ್ ಸರ್ವಿಸ್ ಎಂಬ ಸರ್ಕಾರಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುತ್ತಾರೆಂದು ತಿಳಿಸಲು ಸಂತೋಷಪಡುತ್ತೇವೆ.

* * *

ರಾಜಧಾನಿಯ ಸಂಸ್ಕೃತ ಕಾಲೇಜಿನಲ್ಲಿ ವ್ಯಾಸಂಗಮಾಡುತ್ತಿದ್ದ ಪರಸ್ಥಳದ ವಿದ್ಯಾರ್ಥಿಗಳ ಪೈಕಿ ಸುಮಾರು ಮಂದಿ ಯಾತ್ರಾಸ್ಥಳಗಳಿಗೆ ಕಳೆದ ವಾರ ಪ್ಲೇಗ್ ತಗಲಿ ಕಾಲವಾದರೆಂದೂ, ಅದಕ್ಕಾಗಿ ಸಂಸ್ಕೃತ ಕಾಲೇಜನ್ನು ಕೆಲವು ದಿನಗಳ ಮಟ್ಟಿಗೆ ಮುಚ್ಚಬೇಕಾಯಿತೆಂದೂ ತಿಳಿಯುತ್ತೇವೆ.

* * *

ಸಬ್ ರಿಜಿಸ್ಟ್ರಾರುಗಳಾದ ಮ|| ಬಿ ಜಿ ಬಸವಲಿಂಗಪ್ಪನವರನ್ನು ಮೈಸೂರಿನಿಂದ ತರೀಕೆರೆಗೂ, ಮ|| ಎಲ್ ಕೃಷ್ಣರಾಯರನ್ನು ಶ್ರೀರಂಗಪಟ್ಟಣದಿಂದ ಮೈಸೂರಿಗೂ, ಮ|| ಎಸ್. ನರಸಿಂಹಯ್ಯಂಗಾರ್‌ರನ್ನು ತರೀಕೆರೆಯಿಂದ ಶ್ರೀರಂಗಪಟ್ಟಣಕ್ಕೂ ಸರ್ಕಾರದವರು ವರ್ಗ ಮಾಡಿರುತ್ತಾರೆ.

* * *

೧೯೦೮ನೇ ಜನವರಿ ೧೩ನೇ ತಾರೀಖಿನಿಂದ ಒಂದು ವಾರದ ತನಕ ದತ್ತೋರೆ ತಾಲ್ಲೂಕು ಚಂಚನಕಟ್ಟೆಯಲ್ಲಿ ಗೋವುಗಳ ಪ್ರದರ್ಶನವನ್ನು ಸರ್ಕಾರದವರು ನಡಿಸಿ, ಉತ್ಕೃಷ್ಟವಾದ ದನುಗಳಿಗೆ ೨೦೦ ರೂಪಾಯಿ ಬಹುಮಾನಗಳನ್ನೂ ಸರ್ಟಿಫಿಕೇಟುಗಳನ್ನೂ ಕೊಡುವುದಾಗಿ [illegible] ಮಾಡಿದ್ದಾರೆ. ಗೋವುಗಳನ್ನು ಪ್ರದರ್ಶನ ಮಾಡಬಿಚ್ಛೈಸುವವರು ಯಡತೊರೆಯ ಅಮಲ್ದಾರರಿಗೆ ಮೊದಲೇ ಬರೆದು ತಿಳಿಸಬೇಕಾಗಿದೆ. [illegible]

* * *

ಶ್ರೀಮನ್ಮಹಾರಾಜರವರು ಮೈಸೂರಿನ ಮಹಾರಾಜಕುಮಾರಿಯವರಿಗೋಸ್ಕರ ಪ್ರತ್ಯೇಕವಾದ ಒಂದು ಭವನವನ್ನು ಕಟ್ಟಿಸುವಂತೆ ಸ್ಯಾಂಕ್ಷನ್ ಮಾಡಿದ್ದಾರೆ. ರಾಜಧಾನಿಯ ರೈಲ್ವೆ ಸ್ಟೇಷನ್ನಿಗೆ ಸ್ವಲ್ಪ ದೂರ ಪಶ್ಚಿಮದಿಕ್ಕಿನಲ್ಲಿರುವ ಮೈದಾನಿನಲ್ಲಿ ಆ ಭವನವನ್ನು ಕಟ್ಟುವರು. ಕಳೆದ ತಾ ೨೧ನೇ ಗುರುವಾರ ಗುದ್ದಲಿ ಪೂಜೆ ಮುಂತಾದ ಪ್ರಾರಂಭಕಾರ್ಯಗಳು ನಡೆದವು. ಮಹಾಮಾತೃಶ್ರೀಯವರು ಮೊನ್ನೆ ಮಂಗಳವಾರ ಅಲ್ಲಿಗೆ ಚಿತ್ತೈಸಿ ಸ್ಥಳ ಮುಂತಾದದ್ದನ್ನು ಪರೀಕ್ಷಿಸಿಕೊಂಡು ಬಂದರು.

* * *

ರಜಾ ಪಡೆದು ವಿಲಾಯತಿಗೆ ದಯಮಾಡಿದ್ದ ಮೈಸೂರು ಸಂಸ್ಥಾನದ ಖಾಯಂ ರೆಸಿಡೆಂಟರಾದ ಮ|| ಎಸ್ ಎಂ ಫ್ರೇಸರ್‌ಯವರು ಪತ್ನಿ ಪರಿವಾರ ಸಹಿತ ಕಳೆದ ಸೋಮವಾರ ಬೆಳಿಗ್ಗೆ ಬೆಂಗಳೂರಿಗೆ ದಯಮಾಡಿದರು. ಮೈಸೂರು ಗವರ್ನಮೆಂಟಿನ ಮತ್ತು ದಂಡಿನ ಅಧಿಕಾರಿಗಳೂ ಮುದ್ದೇದಾರರೂ ಸ್ಟೇಷನಿನಲ್ಲಿ ಕಾದಿದ್ದು, ಅವರಿಗೆ ಸುಸ್ವಾಗತವನ್ನು ಒಡರಿಸಿದರು. ಆಕ್ಟಿಂಗ್ ರೆಸಿಡೆಂಟರಾಗಿದ್ದ ಮ|| ವಿಲ್ಲಿಯಂಸ್‌ಯವರು ನೆನ್ನೇ ದಿನ ಪತ್ನಿ ಸಹಿತ ವಾಪಸು ಕ್ವೆಟ್ಟಾ ನಗರದಲ್ಲಿ ತಮ್ಮ ಖಾಯಂ ಕೆಲಸದ ಮೇಲೆ ಹಾಜರಾಗಲು ಪ್ರಯಾಣಮಾಡಿದರು.

* * *

ಬೆಂಗಳೂರು ಮ|| ಓ. ಕೆ ಮತ್ತು ಎಂ ಆರ್ ಕೃಷ್ಣಸ್ವಾಮಿ ಶೆಟ್ಟಿ ಕಂಪನಿಯು ೧೯೦೮ನೇ ಇಸವಿ ಡೈರಿಗಳ ನೋಟೀಸನ್ನು ಈ ಪತ್ರಿಕೆಯೊಡನೆ ನಮ್ಮ ಚಂದಾದಾರರಿಗೆ ಕಳುಹಿಸಿರುತ್ತೇವೆ. ಇವರು ಡೈರಿಗಳನ್ನು ಪ್ರಕಟಿಸುವುದರಲ್ಲಿ ತುಂಬಾ ಹಳೆಬರಾದ್ದರಿಂದ ಅನುಭವಶಾಲಿಗಳಾಗಿರುತ್ತಾರೆಂತಲೂ, ಅವರ ಡೈರಿಗಳು ಕರ್ನಾಟಕ ಜನರಿಗೆ ತುಂಬಾ ಉಪಯೋಗವಾಗಿರುತ್ತವೆಂತಲೂ ಹೇಳಬೇಕಾದ ಅಗತ್ಯವಿಲ್ಲ. ಇದಲ್ಲದೆ ಬಳ್ಳಾರಿ ಕರ್ನಾಟಕ ಬುಕ್ ಡಿಪೋ ಏಜಂಟರಾದ ಮ|| ಕೇ ಶಿವಲಿಂಗಶೆಟ್ಟರು ಸಹಾ ಮುಂದಿನ ವರುಷದ ಡೈರಿಯನ್ನು ಪ್ರಕಟಿಸಿರುತ್ತಾರೆಂಬುವುದು ಈ ಪತ್ರಿಕೆಯಲ್ಲಿರುವ ಅವರ ಪ್ರಕಟನೆಯಿಂದ ವಾಚಕರಿಗೆ ಗೊತ್ತಾಗುವುದು. ಈ ಡೈರಿಗಳಲ್ಲಿ ಜನರಿಗೆ ತಿಳಿಯಬೇಕಾದ ಹಲವು ವಿಷಯಗಳು ಅಡಕಮಾಡಲ್ಪಟ್ಟಿವೆ.

* * *

ಮೈಸೂರು ಸಂಸ್ಥಾನದಲ್ಲಿ ಪಕ್ಕಳಿಗೆ ಕಿಂಡರ್‌ಗಾರ್ಟನ್ ಎಂಬ ಬಾಲವಿದ್ಯೆಯನ್ನು ಕಲಿಸಿಕೊಡಲು ಸರ್ಕಾರದವರು ವಿಲಾಯತಿಯಿಂದ ಕರೆಸಿಕೊಂಡಿದ್ದ ಮಿಸ್ ಲ್ಯಾಟರ್ ಎಂಬಾಕೆಯು ಕಳೆದ ವಾರ ಬೆಂಗಳೂರಿನಲ್ಲಿ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ. ಗವರ್ನಮೆಂಟಿನವರು ಆಕೆಯ ಕೆಲಸವನ್ನು ಮಿಸ್ ವಿಲ್ಲಿಯಂಸ್ ಎಂಬಾಕೆಗೆ ವಹಿಸಿರುವರು. ಈಕೆ ವಿಲಾಯತಿಯಲ್ಲಿ ಕಿಂಡರ್‌ಗಾರ್ಟನ್ ವಿದ್ಯಾಭ್ಯಾಸದಲ್ಲಿ ಪರೀಕ್ಷೆಕೊಟ್ಟು, ಬೆಂಗಳೂರಿನಲ್ಲಿ ಮೂರುವರ್ಷದಿಂದ ಒಂದು ಬಾಲಿಕಾ ಪಾಠಶಾಲೆಯನ್ನು ನಡಿಸುತ್ತಾ ಬಂದಿದ್ದಾರೆ. ಈಗ ಈಕೆಗೆ ವಹಿಸಿರುವ ಈ ವಿಶೇಷವಾದ ಜವಾಬ್ದಾರಿಯನ್ನು ಸಾರ್ಥಕಪಡಿಸುತ್ತಾರೆನ್ನುವುದಕ್ಕೆ ಸಂಶಯವಿಲ್ಲ. ಇದಕ್ಕಾಗಿಯೇ ಸರ್ಕಾರದ ಅಪ್ಪಣೆ ಪಡೆದು ನೂರಾರು ಮಂದಿ ಉಪಾಧ್ಯಾಯರು ರಾಜಧಾನಿಗೆ ಬಂದು ಕಾದಿರುತ್ತಾರೆ.

* * *

ರಾಜಧಾನಿಯ ಮ್ಯುನಿಸಿಪಾಲಿಟಿಯಲ್ಲಿ ತೆರಿಗೆ ವಸೂಲಾತಿಯು ಕಟ್ಟಾಗಿ ಆಗಲಿಲ್ಲವೆಂಬ ಕಾರಣಕ್ಕಾಗಿ ನೌಕರಿಯವರ ಪೈಕಿ ಹಲವರಿಗೆ ತಿಂಗಳ ಸಂಬಳವನ್ನೇ ಕೊಡದೆ ತಡೆದಿರುವುದಾಗಿಯೂ, ಆಫೀಸಿನಲ್ಲಿ ಕೆಲಸಗಳಿಗೆ ತಕ್ಕ ಮಟ್ಟಿಗೆ ಆಡಚಣೆಯುಂಟಾಗಿ ಅನೇಕ ವೇಳೆ ವ್ಯಾಜ್ಯಗಳು ನಡೆಯಲು ಅವಕಾಶವಾಗಿದೆ ಎಂತಲೂ ಕೇಳುತ್ತೇವೆ. ನೌಕರರ ಸಂಬಳವನ್ನು ತಡೆಯೋಣದರಿಂದ ಕೆಲಸಗಳನ್ನು ಬಹಳ ತೃಪ್ತಿಕರವಾಗಿಯೂ ತುಂಬಾ ಚಟುವಟಿಕೆಯಿಂದಲೂ ನಡಿಸಬಹುದೆಂಬ ದುರಭಿಪ್ರಾಯವು ಅಧಿಕಾರಿಗಳಲ್ಲಿ ಉಂಟಾಗುತ್ತಿರುವುದನ್ನು ನೋಡಿ ವಿಷಾದಪಡಬೇಕಾಗಿದೆ. ಇದರಿಂದ ನೌಕರರು ಗೃಹಕೃತ್ಯಕ್ಕಾಗಿ ಖರ್ಚುವೆಚ್ಚಗಳೇ ಮೊದಲಾದ ಅಕೃತ್ಯಗಳನ್ನು ನಡಿಸುವುದಕ್ಕೂ ಅಧಿಕಾರಿಗಳೇ ಅವಕಾಶ ಕೊಟ್ಟಂತಾಗುವುದು. ಈ ಭಾಗವು ಅವರಿಗೆ ಇದುವರೆಗೂ ಯಾಕೆ ತೋರಲಿಲ್ಲವೋ ಆಶ್ಚರ್ಯವಾಗಿದೆ.

* * *

ಡಿಸೆಂಬರ್ ತಾ ೧ನೆ ಭಾನುವಾರ ಬೆಳಿಗ್ಗೆ ಸುಮಾರು ೯|| ಗಂಟೆಗೆ ಸ್ಪೆಷಲ್ ರೈಲಿನಲ್ಲಿ ಮಹಾಮಾತೃಶ್ರೀ ಯುವರಾಜ ಮಹಾರಾಜರವರೂ ಪರಿವಾರ ಸಹಿತ ರಾಜಧಾನಿಯಿಂದ ಬೆಂಗಳೂರಿಗೆ ಪ್ರಯಾಣಮಾಡುವರು. ತರುವಾಯ ಸುಮಾರು ೧೦ ಗಂಟೆಗೆ ಶ್ರೀಮನ್ಮಹಾರಾಜರವರೂ ಯುವರಾಜರವರೂ ಮೋಟಾರ್ ಗಾಡಿಗಳಲ್ಲಿ ರಾಜಧಾನಿಯಿಂದ ದಯಮಾಡಿ, ಸಾಯಂಕಾಲ ಸುಮಾರು ೫ ಗಂಟೆಗೆ ಬೆಂಗಳೂರನ್ನು ತಲುಪುವವರಾಗಿದ್ದಾರೆ. ಶ್ರೀಮನ್ಮಹಾರಾಜರವರೂ ಮಹಾಮಾತೃಶ್ರೀಯವರೇ ಮೊದಲಾದವರೆಲ್ಲಾ ಸುಮಾರು ೨೦೦ ಜನ ಸೇವಕರೊಂದಿಗೆ ಸಮೇತ ಆ ರಾತ್ರಿಯೇ ಬೆಂಗಳೂರಿನಿಂದ ಸ್ಪೆಷಲ್ ರೈಲಿನಲ್ಲಿ ಹೊರಟು ಮಾರನೆಯ ಬೆಳಿಗ್ಗೆ ಮದರಾಸ್ ಪಟ್ಟಣವನ್ನು ಸೇರುವರು. ಅಲ್ಲಿನ ರಾಯಪೇಟೆಯಲ್ಲಿರುವ ಹಿಕರ್‌ಟಿನ ಉದ್ಯಾನವನವೆಂಬ ಬಂಗಲೆಯಲ್ಲಿ ಎಲ್ಲರೂ ಸುಮಾರು ಆರು ವಾರಗಳ ತನಕ ಇರುತ್ತಾರೆಂದು ವರ್ತಮಾನವಿದೆ.

ಶಿಕಾರಿ ಕ್ಯಾಂಪಿನ ಸಮಾಚಾರವು

(ಶ್ರೀಮನ್ಮಹಾರಾಜರವರ ಕ್ಯಾಂಪು)

ನವಂಬರು ತಾ ೧೩ನೇ ಬುಧವಾರ ಲೆಫ್ಟಿನೆಂಟ್ ಹಿಲ್, ಕ್ಯಾಪ್ಟನ್ ಸ್ಪಿಂಕ್ ಕ್ಯಾಪ್ಟನ್ ಮ್ಯಾಕಿಂತ್ ಸಿ. [illegible], ಮ|| ಗೋಪಾಲರಾಜೇ ಅರಸಿನವರ ಸಮೇತ ಶ್ರೀಮನ್ಮಹಾರಾಜರವರ ಸವಾರಿಯು ಶಿಕಾರಿಯ ಉದ್ದೇಶ್ಯ ಗುಂಡ್ಲುಪೇಟೆಗೆ [illegible] ಪಟ್ಟಣಗಳ ತಾಲ್ಲೂಕು ಅಟ್ಟುಗುಳೀಪುರಕ್ಕೆ ಸಾಯಂಕಾಲ ೩ ಗಂಟೆಗೆ ದಯಮಾಡಿ, ಅಗ್ರಿಕಲ್ಚರ್ ಇಂಜನಿಯರು ಮ|| ಸುಬ್ಬರಾಯರು, ಅಮಲ್ದಾರ್ ಮ|| ವೆಂಕಟರಮಣ ಶ್ರೋತ್ರಿಗಳು, ಅಮಚವಾಡಿ ಪಟೇಲ್ ಮ|| ಭಟ್ಟನಂಜರಾಜೇ ಅರಸಿನವರುಗಳು ಬೆಟ್ಟದ [illegible] ಕ್ಯಾಂಪಿಗೆ ದಯಮಾಡಿದನಂತರ ಮ|| ಗೋಪಾಲರಾಜೇ ಅರಸಿನವರು ಎಲ್ಲರನ್ನೂ ಬೀಳ್ಕೊಟ್ಟು ದಯಮಾಡಿದರು. ತಾ. ೧೭ರಲ್ಲಿ ಹುಲಿ ಶಿಕಾರಿಗೆ ಸಾಹೇಬರ ಸಮೇತ ಅಧಿಕಾರಿಗಳಿಂದ ಸಿದ್ಧಮಾಡಿದ್ದ ಬಳಿಗೆ ಹೋಗಿದ್ದರು. ಮ|| ಸ್ಪಿಂಕ್ ಸಾಹೇಬರು ಒಂದು ಹೆಣ್ಣು ಹುಲಿಯನ್ನು ಕೊಂದರು. ಬಾಕೀ ೩ ಹುಲಿಗಳು ತಪ್ಪಿಸಿಕೊಂಡು ಓಡಿದವು. ತಾ ೧೫ರಲ್ಲಿ ಪ್ರಾತಃಕಾಲ ಮ|| ಹಿಲ್ [illegible] ಮ|| ಮ್ಯಾಕಿಂತ್ ಸಾಹೇಬರು ಸಹ ಮ|| ಭಟ್ಟನಂಜರಾಜೇ ಅರಸಿನವರ ಜೊತೆಯಲ್ಲಿ ಅಮಚವಾಡಿ ಬಂಗಲೆಗೆ ಕರಡಿ ಶಿಕಾರಿಗೆ ದಯಮಾಡಿದರು. ಅಲ್ಲಿ ಕರಡಿಯು ಅವರನ್ನು ತಪ್ಪಿಸಿಕೊಂಡು ಓಡಿತು. ಮ|| ಹಿಲ್ ಸಾಹೇಬರ ಮೇಲೆ ಬೀಳಲು ಮ|| ಭಟ್ಟನಂಜರಾಜೇ ಅರಸಿನವರ ಮಂಡಿಗೂ ಪೆಟ್ಟು ತಗಲಿತು. ಅನಂತರ ಅವರು ತಮ್ಮ ಬಹು ಸಾಹಸದಿಂದ ಈ ಗುಂಡು ಹೊಡೆದು ಅದನ್ನು ಕೊಂದರು. ಅದು ಹೆಣ್ಣು ಗಂಡು ಕರಡಿಯದಾಗಿತ್ತು. ಅನಂತರ ತಾ ೧೬ನೆ ಬೆಳಿಗ್ಗೆ ಯುವರಾಜರವರ ಸವಾರಿಯು ಮೈಸೂರಿಗೆ ಚಿತ್ತೈಸಿತು. ಆ ಮೇಲೆ ಕಾಡಿನಲ್ಲಿ ೩ ಹುಲಿಗಳನ್ನು ಕೊಲ್ಲಬೇಕೆಂದು ಸಾಹೇಬರು ಮಾಡಿದ ಪ್ರಯತ್ನವೆಲ್ಲಾ ನಿಷ್ಫಲವಾಗಿ ತಾ ೨೦ನೇ ಪ್ರಾತಃಕಾಲ ಅವರು ಮ|| ಭಟ್ಟನಂಜರಾಜೇ ಅರಸಿನವರನ್ನು ಕರೆಸಿಕೊಂಡು, ಅವರಿಗೆ ಕೆಲವು ಜೀವ ತೀರ್ಮಾನಗಳನ್ನು ಕೊಟ್ಟು, ಸಾಹೇಬರುಗಳೆಲ್ಲಾ ಕ್ಯಾತೇದೇವರ ಗುಡಿ ಕ್ಯಾಂಪಿಗೆ ದಯಮಾಡಿದರು. ಉಳಿದಿರುವ ಹುಲಿಗಳನ್ನು ಯಜಮಾನರು ಶಿಕಾರಿ ಮಾಡಿ ಜನಗಳಿಗೆ ಉಪಕಾರ ಮಾಡುವರೆಂದು ನಂಬುತ್ತೇನೆ.

ಪ್ರತ್ಯಕ್ಷದರ್ಶಿ

ರಾಗಿಯನ್ನು ಲಾಭಕರವಾಗಿ ಬೆಳೆಯುವುದು.

ನಮ್ಮ ಸಂಸ್ಥಾನದಲ್ಲಿ ರೈತರು ಜಮೀನು ಉಳುವುದರಲ್ಲಾಗಲಿ, ಬೀಜ ಹಾಕುವುದರಲ್ಲಾಗಲಿ, ಗೊಬ್ಬರ ಗೋಡನ್ನು ಇಡುವುದರಲ್ಲಾಗಲಿ ಪೂರ್ವಪದ್ಧತಿಯನ್ನೇ ಅನುಸರಿಸುತ್ತಾ ಬಂಗಿರೋಣದರಿಂದ ವ್ಯವಸಾಯವು ಲಾಭಕರವಾಗಿ ಪರಿಣಮಿಸದೆ ಇದೆ. ಅನೇಕ ವಿದ್ಯಾವಂತರೂ ಸರ್ಕಾರದವರೂ ವ್ಯವಸಾಯವನ್ನು ಈಗಿನ ಕಾಲಕ್ಕೆ ತಕ್ಕಂತೆ ಅಭಿವೃದ್ಧಿಪಡಿಸುವ ಭಾಗದಲ್ಲಿ ಕುತೂಹಲಪಟ್ಟು ರೈತರಿಗೆ ನಾನಾ ಪ್ರೋತ್ಸಾಹಗಳನ್ನುಂಟುಮಾಡುತ್ತಾ ಬಂದಿರುವುದು ವಾಚಕರಿಗೆ ಗೊತ್ತಿದೆ. ಸದ್ಯ ನಿಮ್ಮ ಸಂಸ್ಥಾನದಲ್ಲಿ ರಾಗಿ ಬೆಳೆಯು ಬಹು ಸುಲಭವಾಗಿಯೂ ಲಾಭಕರವಾಗಿಯೂ ಆಗುವಂತೆ ಮೆ॥ ಬಿ. ಹನುಮಂತಯ್ಯ ಗೌಡರೆಂಬುವರು ಕೆಲವು ಸುಲಭವಾದ ಮಾರ್ಗಗಳನ್ನು ತಿಳಿಸುತ್ತಾರೆ. ಅದನ್ನು ಈ ಮೂಲಕ ಪ್ರಕಟಿಸಿ, ಅವರು ತಿಳಿಸುವಂತೆ ರೈತರು ಈ ಬೆಳೆಯನ್ನು ಮಾಡಿ ಪರೀಕ್ಷಿಸಿ ನೋಡಿಯಾರೆಂದು ಹಾರೈಸುತ್ತೇವೆ.

"ರಾಗಿಯ ಫಸಲನ್ನು ಭೂಮಿಯು ಸಕಾಲದಲ್ಲಿ ಉತ್ತಮಸ್ಥಿತಿಗೆ ತರಬೇಕಾದರೆ ಈ ಕೆಳಗೆ ಹೇಳುವಂತೆ ರಾಗಿಯನ್ನು ಬೆಳೆಯಬೇಕು. ಗೊಬ್ಬರವನ್ನು ಮೊದಲು ಜಮೀನಿನ ಮೇಲೆ ಹರಡಿ, ಮಳೆ ಬಿದ್ದಕೂಡಲೇ ಭೂಮಿಯನ್ನು ಚೆನ್ನಾಗಿ ಉತ್ತು ಹದವಾದ ನಂತರ ಒಂದು ಅಡಿ ಅಂತರದಿಂದ ಉದ್ದವಾಗಿಯೂ ನಂತರ ಅಡ್ಡವಾಗಿಯೂ ಸಾಲುಗಳನ್ನು ಮಾಡಬೇಕು. ನೇಗಿಲು ಸಾಲುಗಳು ಕೂಡುವ ಕಡೆ ಒಂದೊಂದು ಹಿಡಿ ಗೊಬ್ಬರವನ್ನು ಹಾಕತಕ್ಕದ್ದು. ಒಂದು ಸಾಲಿನಲ್ಲಿ ಗೊಬ್ಬರದ ಮೇಲೆ ದ್ವಿದಳ (ಅವರೆ, ತೊಗರಿ, ಕಡಲೆ, ಹೆಸರು, ಮುಂತಾದ) ಧಾನ್ಯವನ್ನು ಒಂದೊಂದು ಕಾಳಿನಂತೆಯೂ, ಆ ಸಾಲಿನ ಪಕ್ಕದ ನಾಲ್ಕು ಸಾಲುಗಳಲ್ಲೂ ಗೊಬ್ಬರದ ಮೇಲೆ ರಾಗಿ ಕಾಳುಗಳನ್ನು ೩—೪ ರಂತೆಯೂ, ನಂತರ ಒಂದು ಸಾಲು ದ್ವಿದಳ ಧಾನ್ಯ ಮತ್ತೆ ನಾಲ್ಕು ಸಾಲುಗಳು ರಾಗಿಯಂತೆಯೂ ಹಾಕಬೇಕು. ಹೀಗೆ ಬಿತ್ತಿದ ನಂತರ ಹಲುಬೆಯಿಂದ ನೆಲವನ್ನು ಸಮಮಾಡತಕ್ಕದ್ದು. ದ್ವಿದಳ ಧಾನ್ಯಗಳೂ ರಾಗಿಪೈರುಗಳೂ ಎರಡಂಗುಲ ಎತ್ತರವಾದ ನಂತರ ಎರಡು ಚಿಪ್ಪುಗಳಿರುವ ಕುಂಟೆಯನ್ನು ಸಾಲುಗಳ ಮಧ್ಯೆ ಉದ್ದವಾಗಿಯೂ ಅಡ್ಡಲಾಗಿಯೂ ಹೊಡೆದು, ಕಳೆಯನ್ನು ತೆಗೆಯಲುಪಡಿಸಬೇಕು. ಪೈರುಗಳ ಬೇರುಗಳಿಗೆ ಮಣ್ಣು ಬಿದ್ದಹಾಗೆಲ್ಲಾ ಪೈರುಗಳು ನೂರಾರು ಕವಲುಗಳಾಗಿ ಒಡೆದು, ಬೇಗನೆ ಬರುವವು. ಈ 'ಯೆಲ್ಲೋ' ಕುಂಟೆಯಿಂದ ನಾಟಿ ಹಾಕುವುದರಿಂದ ಇದಕ್ಕಾಗಿ ವ್ಯಯಮಾಡುವ ಕೂಲಿಯನ್ನು ಗೊಬ್ಬರವನ್ನು ಮೇಲೆ ಹೇಳಿದ ರೀತಿ ಹಾಕಲು ಕೂಲಿಗಾಗಿ ವಿನಿಯೋಗಿಸಬಹುದು. ಈ ರೀತಿಯ ವ್ಯವಸಾಯದಿಂದ ಗೊಬ್ಬರವು ಪೈರುಗಳ ಬಳಿಯಲ್ಲಿಯೇ ಇರುವುದರಿಂದ ತನ್ನ ಸಾರವನ್ನು ಕೊಟ್ಟು ಹೆಚ್ಚು ದವಸೋತ್ಪತ್ತಿಗೆ ಕಾರಣವಾಗುವುದಲ್ಲದೆ, ಮಳೆ ಬರತಕ್ಕದ್ದು ನಿಧಾನವಾದರೂ ತನ್ನಲ್ಲಿರುವ ತಂಪಿನಿಂದ ಪೈರಿನ ಪೋಷಣೆಯನ್ನು ಮಾಡುವುದು. ಗೊಬ್ಬರದ ಮೇಲೆ ಮಣ್ಣು ಬೀಳುವುದರಿಂದ ಮಳೆಯಿಂದ ಕೊಚ್ಚಿಹೋಗಲಾರದು. ಒಂದೊಂದು ರಾಗಿಯ ತೆಂಡೆಯು (ಅರ್ಥಾತ್, ಬುಡವು) ಕಾಡುಗೋಲಿನ ೩—೪ ಕೊಯ್ಲುಗಳಿಗೆ ಕೂಡ ಸಾಧ್ಯವಾಗುವದಿಲ್ಲ."

"ಈ ತರಹ ವ್ಯವಸಾಯದಿಂದ ರಾಗಿ ಪೈರಿನ ಬೇರುಗಳಿಂದ ಆವರಿಸಲ್ಪಡದೆ ಇರುವ ಜಮೀನು ಬಿಸಿಲು ಗಾಳಿ ಮಳೆಗಳಿಗೆ ಸಿಕ್ಕಿ ಸಸ್ಯಾಹಾರವನ್ನು ಕೂಡಿ ಹಾಕುತ್ತಾ ಬರುವುದು. ಹೀಗೆ ೪ ವರ್ಷಗಳು ಬೆಳೆಯುವುದರಿಂದ ಪ್ರತಿ ಬಾಗದಲ್ಲಿಯೂ ಗೊಬ್ಬರವು ಸೇರಿ, ಬಹು ಉತ್ಕೃಷ್ಟವಾದ ಜಮೀನಾಗುವುದು. ನಂತರ ಗೊಬ್ಬರ ಇಲ್ಲದಿದ್ದರೂ ೩—೪ ವರ್ಷಗಳ ವರೆಗೆ ತುಂಬಾ ಫಸಲನ್ನು ಕೊಡಬಲ್ಲದು. ನಮ್ಮ ಮೈಸೂರು ರೈತಜನರು ಈ ರೀತಿಯಾದ ಬೆಳೆಯನ್ನು ತಮ್ಮ ಜಮೀನಿನ ಕೆಲಭಾಗದಲ್ಲಿಯಾದರೂ ಮಾಡಿ ಪರೀಕ್ಷಿಸಿನೋಡಿ, ಖಂಡಿತವಾಗಿಯೂ ಪ್ರಯೋಜನಕರವಾಗಿ ಕಂಡುಬರುವುದರಿಂದ, ರಾಗಿಯನ್ನು ಈ ತರಹ ವ್ಯವಸಾಯದಿಂದ ಬೆಳೆದಾರೆಂದು ನಿರೀಕ್ಷಿಸುತ್ತೇವೆ."

ಒಕ್ಕಲಿಗರ ಸಂಘವು.

ಸಂಘದ ಶಾಖೆಯ ಏರ್ಪಾಡಿನ ವಿಚಾರವು.

ಕಳೆದ ಆಗಸ್ಟು ತಿಂಗಳಲ್ಲಿ ಮೇಲ್ಕಂಡ ಸಂಘದ ಒಂದು ಶಾಖೆ ಮೈಸೂರು ಪಟ್ಟಣದಲ್ಲಿ ಸ್ಥಾಪಿಸಲ್ಪಟ್ಟಿತಷ್ಟೆ. ಆಗ ಈ ಸಂಘದ ನಿಬಂಧನೆಗಳು ಇನ್ನೂ ಸಿದ್ಧವಾಗಿರಲಿಲ್ಲ, ಅದರೂ ಎರಡನೇ ಮಹಾಸಭೆಯ ಕಾರ್ಯಗಳು ನೆರವೇರಬೇಕಾಗಿದ್ದುದರಿಂದಲೂ ಉತ್ತರೋತ್ತರ ಗೊತ್ತುಮಾಡಲ್ಪಡುವ ನಿಬಂಧನೆಗಳಿಗನುಸಾರವಾಗಿ ಬ್ರಾಂಚ್ ಸಂಘವು ನಡೆದುಕೊಳ್ಳುತ್ತದೆಂಬ ದೃಢವಿದ್ದುದರಿಂದಲೂ ಬ್ರಾಂಚನ್ನು ಏರ್ಪಡಿಸಿ, ಮಹಾಸಭೆಯ ಕಾರ್ಯಗಳನ್ನು ನೆರವೇರಿಸಿದ್ದಾಯಿತು. ಈಗ ಸಂಘದ ನಿಬಂಧನೆಗಳು ಸಿದ್ಧವಾಗಿ ಪುಸ್ತಕರೂಪವಾಗಿ ಮುದ್ರಿಸಲ್ಪಟ್ಟಿವೆ ಮತ್ತು ಸಂಘವು ರಿಜಿಸ್ಟರಾಗಿದೆ. ಇನ್ನು ಮುಂದೆ ಕೆಲಸ ಕಾರ್ಯಗಳನ್ನು ಜಾಗ್ರತೆ ಪ್ರಾರಂಭಮಾಡುವುದು ಅವಶ್ಯಕವಾದುದರಿಂದ ಈ ಬ್ರಾಂಚ್ ಸಂಘವು ನಿಬಂಧನೆಗಳಿಗನುಸಾರವಾಗಿ ಕ್ರಮವಾಗಿ ಸ್ಥಾಪಿಸಲ್ಪಡಬೇಕಾದದ್ದು ಯುಕ್ತವಾಗಿರುವ ಕಾರಣ ಇದಕ್ಕೋಸ್ಕರ ಕಳೆದ ಭಾನುವಾರದ ದಿವಸ ಬ್ರಾಂಚು ಸಂಘದ ಮೆಂಬರುಗಳನ್ನೂ ಇತರರನ್ನೂ ಸೇರಿಸಿ, ಒಂದು ಜನರಲ್ ಮೀಟಿಂಗನ್ನು ಸೇರಿಸಲಾಯಿತು. ಜನರಲ್ ಸೆಕ್ರೆಟರಿಯವರಾದ ಮೆ॥ ಕೆ. ಎಚ್. ರಾಮಯ್ಯನವರು ದೇವರ ಪ್ರಾರ್ಥನೆಯನ್ನು ಮಾಡಿ ಸಂಘದ ನಿಬಂಧನೆಗಳನ್ನು ಒಂದೊಂದಾಗಿ ಓದಿ ಸಭಿಕರಿಗೆ ವಿವರಿಸಿ ಹೇಳಿದರು. ನಂತರ ಪ್ರೆಸಿಡೆಂಟರವರಾದ ಮೆ॥ ಟಿ. ಬಯ್ಯಣ್ಣನವರು ಒಕ್ಕಲಿಗ ಮಂಡಲಿಯ ಮಹಾಜನರೆಲ್ಲರೂ ಏಕಮತ್ಯದಿಂದ ನಡೆದುಕೊಂಡು, ನಿಬಂಧನೆಗಳಂತೆ ನಡೆದುಕೊಳ್ಳಬೇಕಾದ ಅವಶ್ಯಕತೆಯನ್ನು ಕುರಿತು ಶ್ಲಾಘ್ಯವಾದ ಒಂದು ಭಾಷಣವನ್ನು ಮಾಡಿದರು. ಅವರ ಸ್ತುತಿಗೆ ಸಭಿಕರೆಲ್ಲಾ ಸಂತುಷ್ಟರಾದರು. ಅವರು ಹೇಳಿದ್ದರಲ್ಲಿ ಮುಖ್ಯಾಭಿಪ್ರಾಯಗಳೇನೆಂದರೆ:—

ನಮ್ಮ ಶ್ರೀಮನ್ಮಹಾರಾಜರವರು ನಾವು ಕಾರ್ಯಾನುವರ್ತಿಗಳೆಂಬ ಪುರಾತನ ಖ್ಯಾತಿಯನ್ನು ಪಡೆದಿರುತ್ತೇವೆಂತಲೂ ಅದನ್ನು ಊರ್ಜಿತಪಡಿಸಿಕೊಂಡು ಮುಂದೆ ಬರೀ ಮಾತನಾಡುವ ಯಂತ್ರದಂತಾಗಲಿ, ಸ್ವಕಾರ್ಯಪ್ರವರ್ತನೆಯಲ್ಲಿ ಆಲಸ್ಯರೆಂತಾಗಲಿ ಎನ್ನಿಸಿಕೊಳ್ಳದೆ, ಕಾರ್ಯಾಸಕ್ತರಾಗಬೇಕೆಂಬುವುದನ್ನು ಅಪ್ಪಣೆ ಕೊಡಿಸಿದ್ದನ್ನು ನಾವು ಗಮನದಲ್ಲಿಟ್ಟುಕೊಂಡು, ಮಹಾಸ್ವಾಮಿಯವರು ದಯಪಾಲಿಸಿರುವ ಗೌರವವನ್ನು ಅವರು ನಮ್ಮಲ್ಲಿಟ್ಟುಕೊಂಡಿರುವ ನಂಬಿಕೆಯನ್ನು ಊರ್ಜಿತಪಡಿಸಿಕೊಳ್ಳುವುದಕ್ಕೋಸ್ಕರ ಸರ್ವರೂ ಏಕಭಾವದಿಂದ ಕೆಲಸ ಮಾಡಲು ಉದ್ಯುಕ್ತರಾಗಬೇಕಾಗಿದೆ. ಈ ಏಕಮತ್ಯವನ್ನು ಪಡೆಯಬೇಕಾದರೆ ಜಗಳಗಳನ್ನು ವರ್ಜಿಸಿಕೊಳ್ಳುವುದನ್ನು ತಪ್ಪಿಸಿ ಇವುಗಳ ಮುಖಂಡರುಗಳೆಲ್ಲರೂ ಸ್ನೇಹಭಾವದಿಂದ ಮಿಳಿತವಾಗಿ ಸಂಘದ ಉದ್ದೇಶಗಳನ್ನು ನೆರವೇರಿಸುವುದರಲ್ಲಿ ಆಸಕ್ತರಾಗಬೇಕಾಗಿದೆ. ಯಾವ ಕಾರ್ಯವನ್ನು ನೆರವೇರಿಸಬೇಕಾದರೂ ನಿಬಂಧನೆಗಳಿಗನುಸಾರವಾಗಿ ನಡೆದುಕೊಂಡರೆ ಅದು ಜಾಗ್ರತೆ ಕೈಸೇರುವುದಲ್ಲದೆ ಎಲ್ಲರೂ ತಮ್ಮ ತಮ್ಮ ಅಂತರ್ಯ ದುರಭಿಮಾನಗಳನ್ನು ಬಿಟ್ಟು ಏಕಮತ್ಯದಿಂದ ನಡೆದುಕೊಳ್ಳುವಂತೆ ಆಗುತ್ತದೆ. ಗವರ್ನಮೆಂಟೂ ಸಹ ನಿಬಂಧನೆಗಳಂತೆಯೇ ನಡೆದುಕೊಳ್ಳುತ್ತದೆ. ಎಲ್ಲರೂ ತಮ್ಮ ತಮ್ಮ ಅಭಿಪ್ರಾಯಗಳಂತೆ ನಡೆದುಕೊಂಡರೆ ಅನಾಯಕವಾಗಿ ಯಾವ ಕಾರ್ಯವೂ ನೆರವೇರುವದಿಲ್ಲ. ನಿಬಂಧನೆಗಳಲ್ಲಿ ನ್ಯೂನತೆಗಳಿದ್ದರೆ ಅವುಗಳನ್ನು ಮುಂದೆ ಅನುಭವದಿಂದ ಯೋಗ್ಯಗುಣ ರೀತಿಯಲ್ಲಿ ತಿದ್ದಪಡಿಸಲು ಅವಕಾಶವಿದೆ. ಆದುದರಿಂದ ಈ ನಿಬಂಧನೆಗಳಂತೆ ಸರ್ವರೂ ನಡೆದುಕೊಂಡು ಅನುಭವವನ್ನು ಪಡೆಯುವುದು ಯುಕ್ತವಾಗಿರುತ್ತದೆ. ನಮ್ಮ ಶ್ರೀಮನ್ಮಹಾರಾಜರವರು ನಮ್ಮ ಸಂಘಕ್ಕೆ ಪೋಷಕರಾಗಿ ನಮಗೆ ಅತ್ಯಂತ ಗೌರವವನ್ನು ದಯಪಾಲಿಸಿರುವುದರಿಂದ ಆ ಗೌರವಕ್ಕೆ ಅರ್ಹರಾಗಿ ನಾವು ಬಂಧಿತವಾಗಿ ನಡೆದುಕೊಳ್ಳಬೇಕು. ಸಂಘದ ಪ್ರಸ್ತಾಪಗಳನ್ನು ಮಾಡುತ್ತಿರುವಾಗ್ಯೂ ಇತರ ಸಂಭಾಷಣೆಗಳಿಗೆ ಅವಕಾಶವನ್ನು ಕೊಡದೆ ಗಂಭೀರವಾಗಿ ನಡೆದುಕೊಳ್ಳಬೇಕು. ಸರ್ವರೂ ಈ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು, ಸಂಘವನ್ನು ಅಭಿವೃದ್ಧಿಸ್ಥಿತಿಗೆ ತರುವದರಲ್ಲಿ ಎಲ್ಲರೂ ಏಕೀಭವಿಸಿ ಕೆಲಸ ಮಾಡುವುದು ಯುಕ್ತವಾಗಿರುತ್ತದೆ.

ಆ ಉಪನ್ಯಾಸವು ಮುಕ್ತಾಯವಾದ ಮೇಲೆ ಮೆಂಬರಾದವರೂ ಮತ್ತು ಆಗತಕ್ಕವರೆಲ್ಲರೂ ಸಹ ನಿಬಂಧನೆಗಳ ಪ್ರಕಾರ ಅಪ್ಲಿಕೇಷನ್‌ಗಳನ್ನು ಕೊಡಬೇಕಾಗಿದೆ ಎಂದು ಜನರಲ್ ಸೆಕ್ರೆಟರಿಯವರು ಸೂಚಿಸಿ ಫಾರಂಗಳನ್ನು ಕೊಟ್ಟರು. ಈ ಅಂಶಗಳೆಲ್ಲವನ್ನೂ ಪರ್ಯಾಲೋಚಿಸಿ ಮುಂದಿನ ಸಭೆಗಳನ್ನು ನಡಿಸುವುದಾಗಿ ಸರ್ವರೂ ಅಭಿಪ್ರಾಯಪಟ್ಟದ್ದರಿಂದ ಸಭೆಯು ಮುಕ್ತಾಯವಾಯಿತು.

ಈ ತೀರ್ಮಾನವನ್ನು ಜಾಗ್ರತನಾಡಿ ಪ್ರೆಸಿಡೆಂಟರವರು ತಮ್ಮ ಉಪನ್ಯಾಸದಲ್ಲಿ ಕ್ಷಿಪ್ರದಲ್ಲಿಯೇ ಬ್ರಾಂಚನ್ನು ನಿಬಂಧನೆಗಳಿಗನುಸಾರವಾಗಿ ಸ್ಥಾಪಿಸಬೇಕೆಂದು ತೋರಿಸಿದ ಮತಕಾಲವನ್ನು ನೆರವೇರಿಸಿ, ಮುಂದಿನ ಕಾರ್ಯಗಳನ್ನು ಆಲೋಚಿಸಲು ಎಲ್ಲರೂ ಉದ್ಯುಕ್ತರಾಗುವರೆಂದು ಕೇವಲ ಕಾಂಕ್ಷೆಯಿಂದ ನಿರೀಕ್ಷಿಸಲ್ಪಟ್ಟಿದೆ.

ಇನಾಕ್ಯುಲೇಷನ್ ಮಾನೆ ಪ್ಲೇಗ್ ಚಿಕಿತ್ಸೆ

ಮುಂಬಾಯಿ ಅಧಿಪತ್ಯದ ಗವರ್ನರವರ,

ಗವರ್ನಮೆಂಟ್ ಬಂಗಲೆ, ಮಹಾಬಲೇಶ್ವರ,

ತಾ ೩ನೆ ನವೆಂಬರ್ ೧೯೦೭

ಸ್ವದೇಶೀ ವರ್ತಮಾನ ಪತ್ರಿಕಾ ಎಡಿಟರುಗಳಿಗೆ

ಅಯ್ಯಾ!

ಪ್ಲೇಗ್ ಅಪಾಂತ್ರಕ್ಕೆ ಸಿಕ್ಕಿ ಕಷ್ಟನಷ್ಟಗಳನ್ನನುಭವಿಸುತ್ತಿರುವ ಹಿಂದುಸ್ಥಾನದ ಪ್ರಜೆಗಳ ಸಂಕಟಗಳನ್ನು ಕೇಳಿ ಮಹಾಘನವನ್ನೈದಿದ ಚಕ್ರವರ್ತಿ ಸಾರ್ವಭೌಮರವರು ತಮಗುಂಟಾದ ಪರಿತಾಪವನ್ನು ಈಚೆಗೆ ಪ್ರಕಟಪಡಿಸಿರುವುದು ಜನಜನಿತವಾಗಿದೆ. ವಿಲಾಯಿತಿಯಲ್ಲಿ ಇಲ್ಲಿನ ಭಯಂಕರವಾದ ಮರಣಸಂಖ್ಯೆಯನ್ನು ಕೇಳಿ ಸಕಲರೂ ಬಹಳವಾಗಿ ಮರುಗುತ್ತಿದ್ದಾರೆ. ಮತ್ತು ಇದರ ದೆಸೆಯಿಂದ ಈ ರಾಷ್ಟ್ರದ ಅಭ್ಯುದಯವು ಬಹು ಮಟ್ಟಿಗೆ ತಡೆಯಾಗಿದೆ.

ನಾನು ವಿಲಾಯಿತಿಯಲ್ಲಿದ್ದಾಗಲೂ ಹಿಂದುಸ್ಥಾನಕ್ಕೆ ಬಂದ ಮೇಲೂ ಇದುವರೆಗೆ ಈ ಪ್ಲೇಗಿನ ವಿಚಾರವನ್ನು ಚೆನ್ನಾಗಿ ಪರಿಶೀಲನೆ ಮಾಡಿರುತ್ತೇನಾದ್ದರಿಂದ ಆ ವಿಷಯದಲ್ಲಿ ನಾನು ನಿಶ್ಚಯಮಾಡಿಕೊಂಡಿರುವ ಸಂಗತಿಗಳನ್ನು ನಿಮಗೆ ತಿಳಿಸುತ್ತೇನೆ. ನೀವುಗಳು ನನ್ನ ಮಾತನಲ್ಲಿ ನಂಬಿಕೆಯಿಟ್ಟು ಲಾಲಿಸುವಿರೆಂದು ಕುತೂಹಲಪೂರ್ವಕವಾಗಿ ನಿರೀಕ್ಷಿಸುವೆನು.

ಪ್ರಜಾ ಆರೋಗ್ಯಕ್ಕೆ ಸಹಕಾರಿಗಳಾದ ಸ್ಯಾನಿಟರಿ ಏರ್ಪಾಡುಗಳನ್ನು ಹೆಚ್ಚುಹೆಚ್ಚಾಗಿ ಮಾಡುತ್ತಾ ಬಂದ ಪಕ್ಷದಲ್ಲಿ ಈ ಉಪದ್ರವದ ಹಾವಳಿಯನ್ನು ಬಹುಮಟ್ಟಿಗೆ ತಡೆಯಬಹುದೆನ್ನುವುದಕ್ಕೆ ಸಂಶಯವಿಲ್ಲ. ಇದು ಯೂರೋಪಿಯನ್ ರಾಜ್ಯಗಳಲ್ಲಿ ಫಲಕಾರಿಯಾಗಿರುವುದು. ಈಗ ಅಲ್ಲಿ ಪ್ಲೇಗು ಬೇರೂರಲಾರದು. ಆದರೆ ಈ ಏರ್ಪಾಡು ಸದ್ಯ ಇಲ್ಲಿ ನಮ್ಮ ಆತುರಕ್ಕೆ ಒದಗತಕ್ಕದ್ದಲ್ಲ, ಅದು ಕೈಗೂಡಲು ಕೆಲವು ವರ್ಷಗಳೇ ಹಿಡಿಯುವವು.

ಈ ಉಪದ್ರವವನ್ನು ತಡೆಯುವುದಕ್ಕೆ ಇನ್ನು ಮೂರು ಮಾರ್ಗಗಳಿರುವವು. ಈ ವಿಷಯದಲ್ಲಿ ನನ್ನ ಮನಸ್ಸಿಗೆ ನಿಶ್ಚಯಕಂಡುಬಂದಿರುವ ವಿಚಾರಗಳೇನೆಂದರೆ—

(೧) ಕೆಲವು ಸಂದರ್ಭಗಳಲ್ಲಿ ಮನೆಗಳನ್ನು ಬಿಟ್ಟು ಹೊರಗೆ ಹೋಗಿ ವಾಸಮಾಡಿದರೆ ಪ್ರಯೋಜನವಾಗುತ್ತದೆ. ಪುಣ್ಯವಂತರೂ ಅನುಕೂಲಸ್ಥರೂ ಹಾಗೆ ಪ್ಲೇಗ್ ಸಂಕಿರುವ ಸ್ಥಳವನ್ನು ಬಿಟ್ಟು ಬೇರೆ ಹೋಗಿದ್ದು ಬರುವುದು ಅವರಿಗೆ ಸಾಧ್ಯವು. ಅವರ ಕ್ಷೇಮವನ್ನು ಅವರೇ ನೋಡಿಕೊಳ್ಳಬಲ್ಲರು. ಆದರೆ ಬಡಬಗ್ಗರಾದ ಪ್ರಜಾಕೋಟಿಗಳ ವಿಷಯದಲ್ಲಿ ನಮ್ಮ ಕರ್ತವ್ಯವು ಅವಶ್ಯವಾಗಿರುತ್ತದೆ. ಇವರು ಮನೆ ಬಿಟ್ಟು ಹೋಗುವುದು ತುಂಬಾ ಅನಾನುಕೂಲ, ದ್ರವ್ಯನಷ್ಟ, ಮಳೆ ಚಳಿ ಶೀತಗಾಳಿಗಳಿಗೆ ಸಿಕ್ಕಿ ನರಳಬೇಕಾಗುವುದು. ಹೀಗೆ ಮನೆ ಬಿಟ್ಟುಹೋಗುವುದೇ ಒಳ್ಳೇದೆಂದು ಕಂಡು ಬಂದರ ಗವರ್ನಮೆಂಟಿನವರು ಪ್ರಜೆಗಳಿಗೆ ಜೋಪಡಿಗಳನ್ನು ಅನುಕೂಲ ಪಡಿಸಿಕೊಡತಕ್ಕದ್ದು. ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಜನರು ಸಂಪೂರ್ಣವಾಗಿ ಮನೆಗಳನ್ನು ಖಾಲಿ ಮಾಡಿ ಹೊರಗೆ ಹೋಗುವುದು ಅಸಾಧ್ಯವೆಂದೇ ಹೇಳಬೇಕು. ಆದಕಾರಣ ಈ ಉಪಾಯದಿಂದ ಪ್ಲೇಗ್ ಉಪದ್ರವನ್ನು ನಿಲ್ಲಿಸುತ್ತೇವೆಂದು ಪ್ರಯತ್ನಪಡುವುದು ಆಗತಕ್ಕದ್ದಲ್ಲ.

(೨) ಇಲಿ ಹೆಗ್ಗಣಗಳನ್ನು ಕೊಂದು ಸಂಪೂರ್ಣವಾಗಿ ನಾಶಮಾಡುವುದು ಸಾಧ್ಯವಾಗುವ ಪಕ್ಷಕ್ಕೆ ಪ್ಲೇಗ್ ಉಪದ್ರದ ವ್ಯಾಪನೆಯನ್ನು ಖಂಡಿತವಾಗಿಯೂ ನಿಲ್ಲಿಸಬಹುದಾಗಿದೆ. ಆದರೆ ಗವರ್ನಮೆಂಟಿನವರು ಪ್ರಜೆಗಳ ಮನೆಮಠಗಳನ್ನು ಪ್ರವೇಶಿಸದೆ ಈ ಕಾರ್ಯವನ್ನು ನಡೆಸಲಾರರು. ಇದನ್ನು ಪ್ರಜೆಗಳೇ ವಹಿಸಿ ನೆರವೇರಿಸಬೇಕಾಗಿರುವುದು. ಅವರು ಇಲಿ ಹೆಗ್ಗಣಗಳನ್ನು ಕೊಲ್ಲುವುದಕ್ಕೆ ಒಪ್ಪದೆ ಹೋಗುವ ಭಾಗದಲ್ಲಿ ಗವರ್ನಮೆಂಟಿನವರು ಅವರ ಮನಸ್ಸಿಗೆ ವಿರೋಧವಾಗಿ ಕಾರ್ಯ ನಡಿಸಲು ಇಷ್ಟಪಡುವವರಾಗಿಲ್ಲ.

(೩) ಇನಾಕ್ಯುಲೇಷನ್ ಎಂದರೆ ಪ್ಲೇಗ್ ಚುಚ್ಚುಮದ್ದು ಹಾಕುವುದನ್ನು ಹಿಂದುಸ್ಥಾನದ ಅನೇಕ ಭಾಗಗಳಲ್ಲೂ ಆಸ್ಟ್ರೇಲಿಯಾ ದ್ವೀಪದಲ್ಲೂ ಪ್ರಚಾರಕ್ಕೆ ತಂದಿದ್ದಾರೆ. ಇದುವರೆಗೆ ಅದು ಸಾವಿರಾರು ಜನರ ಪ್ರಾಣಗಳನ್ನು ಕಾಪಾಡಿರುತ್ತದೆ. ಈ ಪ್ಲೇಗ್ ಚುಚ್ಚುಮದ್ದಿನ ಹಾಲು ತಯಾರಾಗುವ ಸ್ಥಾನಗಳನ್ನು ನಾನು ಸ್ವತಃ ನೋಡಿರುತ್ತೇನೆ. ಅದನ್ನು ಈಗ ಒಳ್ಳೆ ಎಚ್ಚರಿಕೆಯಿಂದ ತಯಾರುಮಾಡುತ್ತಾರೆ. ಅವರಲ್ಲಿ ಕೆಡುಕುಮಾಡತಕ್ಕ ವಸ್ತುಗಳ್ಯಾವವೂ ಸೇರುವುದು ಎಷ್ಟುಮಾತ್ರಕ್ಕೂ ಅಸಾಧ್ಯ. ಪ್ಲೇಗ್ ಸೋಂಕು ತಗಲುವುದಕ್ಕಿಂತ ಮೊದಲು ಅದರಿಂದ ಚುಚ್ಚು ಹಾಕಿಸಿಕೊಂಡಲ್ಲಿ ಪ್ರಾಣ ಉಳಿಯುವುದಕ್ಕೆ ಅದು ಅತ್ಯಂತ ಬಲಕಾರಿಯಾಗಿರುತ್ತದೆ. ಇದು ಸರ್ವೋತ್ಕೃಷ್ಟವಾದ ತಜ್ಞ ವೈದ್ಯಶಾಸ್ತ್ರ ಪಂಡಿತರು ಪರೀಕ್ಷಿಸಿ ಗೊತ್ತುಮಾಡಿದ್ದಾರೆ. ಈ ಚುಚ್ಚು ಪ್ಲೇಗಿನ ಅಪಾಂತ್ರ ನಿಲ್ಲುವ ತನಕ ಕಾಪಾಡತಕ್ಕದ್ದಾಗಿದೆ. ಅನೇಕಾನೇಕರು ನಾಲ್ಕೈದು ಸಲ ಈ ಚುಚ್ಚು ಹಾಕಿಸಿಕೊಂಡಿದ್ದಾಗ್ಯೂ ಅದರಿಂದ ಅವರಿಗೆ ಯಾವ ವಿಧವಾದ ಕೆಡುಕೂ ಉಂಟಾಗಿರುವುದಿಲ್ಲ. ಹಾಕಿಸಿಕೊಂಡ ಒಂದೆರಡು ದಿನಗಳ ಮಟ್ಟಿಗೆ ಸ್ವಲ್ಪ ನೋವೂ ಜ್ವರವೂ ಇದ್ದು ವಾಸಿಯಾಗುವವು. ಯಾರೂ ಹೆದರಿ ಹಿಂತೆಗೆಯಲು ಸ್ವಲ್ಪವೂ ಕಾರಣವಿಲ್ಲ. ಪ್ಲೇಗ್ ಸೋಂಕು ಇರುವ ಪ್ರದೇಶದಲ್ಲಿರತಕ್ಕವರೆಲ್ಲಾ ಈ ಚುಚ್ಚುಮದ್ದನ್ನು ಹಾಕಿಸಿಕೊಂಡಲ್ಲಿ ಆ ಉಪದ್ರವು ಬೇಗನೆ ನಿರ್ಮೂಲವಾದೀತು. ಪ್ರಜೆಗಳು ಇದಕ್ಕೆ ಸಮ್ಮತಿಪಟ್ಟು ಪ್ಲೇಗಿನ ಪ್ರಾಣಭಯವಾಗುವುದನ್ನು ನಿಲ್ಲಿಸಬೇಕಾಗಿದೆ. ಇತರ ಎಲ್ಲಾ ಕಾರ್ಯಗಳಿಗಿಂತಲೂ ಚುಚ್ಚು ಹಾಕಿಸಿಕೊಳ್ಳುವುದೇ ಅತ್ಯಂತ ಸುಲಭವಾದ ಮಾರ್ಗ. ಇದು ಖಂಡಿತವಾದ ತತ್ವ, ಅತ್ಯಂತ ಫಲಕಾರಿಯಾದದ್ದು.

ಈ ವಿವರವನ್ನು ಎಲ್ಲಾ ಪ್ರಜೆಗಳಿಗೂ ನೀವು ತಿಳಿಯಪಡಿಸಬೇಕೆಂದು ಕೇಳುತ್ತೇನೆ. ಪ್ರಜೆಗಳ ಕಷ್ಟವನ್ನೂ ಮರಣಸಂಖ್ಯೆಯನ್ನೂ ತಡೆಯುವುದಕ್ಕೆ ನೀವು ಸರ್ಕಾರದವರಿಗೆ ಸಹಾಯಕರಾಗಿ ನಿಲ್ಲಬೇಕಾಗಿದೆ. ಇದು ಬಹು ಆತುರವಾದ ವಿಷಯ. ಇದಕ್ಕಿಂತಲೂ ನಿಮ್ಮ ಸಹಾಯ, ಪ್ರೋತ್ಸಾಹ, ಸಾಹಸಾದಿಗಳನ್ನು ಅಪೇಕ್ಷಿಸತಕ್ಕ ಶ್ರೇಷ್ಠ ಉದ್ದೇಶವ ಮತ್ತೊಂದಿರಲಾರದು.

ಜಿ. ಎಸ್. ಕ್ಲಾರ್ಕ್.

ಪ್ರೊಫೆಸರ್ ರಾಮಮೂರ್ತಿಯವರ ಉಪನ್ಯಾಸವು

ಪದಕದಾನದ ಸಂಭ್ರಮವು

ಇದೇ ವಾರದಲ್ಲಿ ಕಳೆದ ಸೋಮವಾರದ ದಿವಸ ಪ್ರೊಫೆಸರ್ ರಾಮಮೂರ್ತಿಯವರು ಧಾರ್ವಾಡದ ಜನರ ವಿನಂತಿಗೆ ಮಣಿದುಕೊಟ್ಟು ವಿಕ್ಟೋರಿಯಾ ಥಿಯೇಟರಿನಲ್ಲಿ ಶಾರೀರಿಕ ವ್ಯಾಯಾಮದ ಮೇಲೆ ಒಂದು ವ್ಯಾಖ್ಯಾನ ಕೊಟ್ಟರು. ಜನ ಸಮುದಾಯವು ಇಡೀ ಥಿಯೇಟರ ತುಂಬ ಕೂಡಿತು. ಆ ಕಾಲದಲ್ಲಿ ರಾವ ಶ್ರೀನಿವಾಸರಾವ ಕಾಮತ ಇವರು ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿದ್ದರು. ಪ್ರೊಫೆಸರ್ ರಾಮಮೂರ್ತಿಯವರು ಆ ದಿವಸ ಶಾರೀರಿಕ ವ್ಯಾಯಾಮದಿಂದ ಶಾರೀರಿಕ, ಮಾನಸಿಕ, ಮತ್ತು ನೈತಿಕ ಸುಧಾರಣೆಯಾಗುವದೆಂದು ಎಲ್ಲರ ಮನಸ್ಸಿನ ಮೇಲೆ ನೆಡುವಂತೆ ಹೇಳಿದರು. ಅವರು ಹೇಳಿದ್ದೇನೆಂದರೆ—

ನಾನು ಎರಡನೇ ವಿಷಯದಲ್ಲಿ ಪಾಂಡಿತ್ಯವನ್ನು ಪಡೆದವನಲ್ಲ. ನನಗೆ ಒಂದು ವಿಷಯ ಚೆನ್ನಾಗಿ ಗೊತ್ತಿದೆ. ವ್ಯಾಯಾಮ ಮಾಡುವ ಸಾಧನಗಳನ್ನು ದುಡ್ಡು ಖರ್ಚುಮಾಡಿ ಪರದೇಶದಿಂದ ತರಿಸಿದರೆ ಶಾರೀರಿಕ ಬಲ ಬರುವುದೆಂದು ಅನೇಕರ ಅಭಿಪ್ರಾಯವಿರುವುದು. ಆದರೆ ನನ್ನ ಅಭಿಪ್ರಾಯವು ಹಾಗಲ್ಲ. ನಮ್ಮ ಪೂರ್ವ ಜನರು ಮಾಡುತ್ತ ಬಂದ ಮತ್ತು ವಿನೂ ಖರ್ಚಿಲ್ಲದ ರೀತಿಯಿಂದ ಶಾರೀರಿಕ ಬಲವನ್ನು ಚೆನ್ನಾಗಿ ಸಂಪಾದಿಸಬಹುದು. ಕಿಮ್ಮತ್ತು ಬಿದ್ದರೆ ಅದರಲ್ಲಿ ಮಹತ್ವವಿರುತ್ತದೆ. ಪುಕ್ಕಟೆಯಾಗಿ ಮತ್ತು ಅನಾಯಾಸವಾಗಿ ದೊರಕುವ ಸಂಗತಿಗಳಿಗೆ ಮತ್ತು ಪದಾರ್ಥಗಳಿಗೆ ನಾವು ಏನೂ ಗೌರವ ಕೊಡುವುದಿಲ್ಲ. ವಿಪುಲವಾಗಿ ದೊರೆಯುವ ಪದಾರ್ಥದ ಮಹತ್ವತೆ ಯಾರಿಗೂ ಅನಿಸುವುದಿಲ್ಲ. ಅದೇ ಅಭಾವವಾದ ಮೇಲೆ ಅದನ್ನು ಪಡೆಯುವುದಕ್ಕೆ ಪ್ರಯತ್ನಮಾಡುತ್ತೇವೆ. ಅದು ಸಿಕ್ಕಿದ್ದರೆ ಅದಕ್ಕೆ ಕ್ರಯ ಕೊಡುತ್ತೇವೆ. ನಮ್ಮಲ್ಲಿ ಈಗ ಶಾರೀರಿಕ ಬಲ ಕಡಿಮೆಯಾಗಿರುತ್ತದೆ. ನಾವು ಪ್ರತಿಯೊಂದರಲ್ಲೂ ಹಿಂದೆ ಬಿದ್ದಿರುವೆವು. ನಮಗೆ ನಮ್ಮ ಜನರು ಪುಕ್ಕಟೆಯಾಗಿ ಹೇಳುವುದರಲ್ಲಿ ವಿಶ್ವಾಸ ಬೀಳುವುದಿಲ್ಲ. ಅದೇ ಎರಡನೆಯವರು ಕ್ರಯ ತೆಗೆದುಕೊಂಡು ಹೇಳಿದರೆ ಅವರ ಮೇಲೆ ವಿಶ್ವಾಸ ಹುಟ್ಟುತ್ತದೆ. ಆದರೆ ಪರದೇಶದ ಆಟನೋಟಗಳಲ್ಲಿ ಸ್ಥಿರವಾದ ಶಕ್ತಿ ಕೊಡುವ ಸಾಮರ್ಥ್ಯವಿರುವುದಿಲ್ಲ. ಟೆನಿಸ್ ಕ್ರಿಕೆಟ್ ಆಟಗಳ ಶಕ್ತಿ ಬೆಳಸುವದಕ್ಕೆ ಇರುವುದಿಲ್ಲ. ಊಟವನ್ನು ಅರಗಿಸುವ

ಸಂಗ್ಲೀಯರು ಆ ಆಟಗಳನ್ನು ಪ್ರಾತಿಕೊಂಡಿರುವರು ಅವುಗಳಿಂ ದ ಶಕ್ತಿಗೆ ಬೆಳೆಯುವೇಕೆ? ಅವರಂತೆಯೇ ಹಾರಿ, ನೆಲ ಕುಂದುರೆ, ಬಿಲ್ಲಿಯಾರ್ ಮುಂತಾದ ಸಗರತ್ತಿನ ಆಟಗಳನ್ನು ಆಡುವುದರಿಂದ ಕ್ರಿಯಾಬಾರದು ಅವುಗಳ ಸಹಾಯದಿಂದ ಶಕ್ತಿಯು ಉಪಯೋ ಚಮತ್ಕಾರ ರೀತಿಯಿಂದ ಜನರ ಮನಸ್ಸಿಗೆ ರಂಜಿಸುವುದಕ್ಕೆ ಸಲಿಕ್ಕೆ ಆಗುವುದು. ಡಂಬೆಲ್ಸ್ ವ್ಯಾಯಾಮದ ವಿಷಯವಾಗಿ ಕೇಳಿದರೆ ಅದರಿಂದ ಸ್ಥಿರವಾದ ಶಕ್ತಿ ಬರುವುದಿಲ್ಲವೆಂದು ಹೇಳ ಬು. ಕೆಲವು ದಿವಸಗಳ ವರೆಗೆ ಡಂಬೆಲ್ಸ್ ಮಾಡಿ, ಬಿಟ್ಟರೆ ಇಲ್ಲ ವೆ ತ ಬೇರೆ ಬಿದ್ದರೆ ವ್ಯಾಯಾಮದಿಂದ ಬಂದ ಶಕ್ತಿಯೆಲ್ಲಾ ಹೋ ಗುವುದು. ಆದರೆ ನಮ್ಮ ಹಳೇ ತರದ ವ್ಯಾಯಾಮದಿಂದ ಹಾಗೆ ಆಗದು. ಒಮ್ಮೆ ಬಂದ ಸ್ಥೈರ್ಯ ಎಂದೂ ಕಡಮೆಯಾಗ.

ದೇವರು ನಮ್ಮ ಶರೀರದಲ್ಲಿ ಅನೇಕ ಅವಯವಗಳನ್ನು ನಿರ್ಮಿ ಸಿ ಎಲ್ಲಕ್ಕೂ ಮೊದಲು ನಮ್ಮ ಶರೀರವು ಒಂದು ಮಾಂಸದ ಬ್ಬಿಯಂತೆ ಇರುವುದು. ಮತ್ತು ಕಾಣುವುದು. ಆದರೆ ವ್ಯಾಯಾ ಮ ಸಾಧನದಿಂದ ನಾವು ಅವುಗಳನ್ನು ಬೆಳಿಸಬಹುದು. ವ್ಯಾಯಾಮ ದಿಂದ ತನ್ನ ಶಾರೀರಕ ಸಾಮರ್ಥ್ಯವನ್ನು ಬೆಳಿಸುವುದು ಪ್ರತಿಯೊಬ್ಬನ ಕರ್ತವ್ಯವಾಗಿರುತ್ತದೆ. ಮಹಾರಾಷ್ಟ್ರದ ಶಿವಾಜಿ, ಮಹಾಭಾರತದ ಕೃಷ್ಣದೇವರು ಯಾವಾಗಲೂ ವ್ಯಾಯಾಮದ ಮಾಡಿಗಳಾಗಿದ್ದರು. ವ್ಯಾಯಾಮ ಮಾಡುವಾಗ ಉತ್ತಮ ಉಪದೇಶಕರು ಕಾರಣ ವ್ಯಾಯಾಮ ಶಾಲೆಗಳಲ್ಲಿ ಸಾಮಾನಿಕೆ ತಗಳ ಮತ್ತು ಸತ್ಪುರುಷರ ಭಾವಚಿತ್ರ ಗಳಿರಬೇಕು. ಶಾರೀರಕ ಯು ಒಂದೆರಡು ದಿವಸಗಳ ವ್ಯಾಯಾಮದಿಂದ ಬರುವದು ಅಸಾ ಧ್ಯ. ವ್ಯಾಯಾಮವ ನಮ್ಮ ಪ್ರತಿ ದಿವಸದ ಕರ್ತವ್ಯವಾಗಬೇಕು. ಶಾರೀರಕ ಶಕ್ತಿಯನ್ನು ಸಂಪಾದಿಸಬೇಕು. ತಾಲಿಮಿಗೆ ಹೋಗುವವರು ಮತ್ತೊಂದು ಭಾವನೆ ಹೊಂದಿರುವರು. ಆ ಕಲ್ಪನೆಯನ್ನು ತೆಗೆದು ಹಾಕಬೇಕು. ಸುಶಿಕ್ಷಿತರು ತಾಲಿಮುಶಾಲೆಗೆ ಹೋಗಬೇಕು ಅಂದರೆ, ಕಲ್ಪನೆಯು ದೂರವಾಗುವದು. ನಾವು ಮಾನಸಿಕ ಸಾಮರ್ಥ್ಯ ವನ್ನು ಬೆಳಿಸುವುದಕ್ಕೆ ಪ್ರಯತ್ನಪಡುತ್ತೇವೆ. ಆದರೆ ಶಾರೀರಕ ಸಾಮರ್ಥ್ಯವನ್ನು ಅದರ ಸಂಗಡ ಬೆಳೆಸದಿದ್ದರೆ ಅದರಿಂದ ಶಾರೀರಕ ಸಾಮರ್ಥ್ಯವು ಕಡಮೆಯಾಗುವದಲ್ಲದೆ ಮೇಲಿಂದ ಮೇಲಿಂದ ರೋಗ ತಗಲುವದು. ಕೇವಲ ಮಾನಸಿಕ ಶ್ರಮ ಮಾಡುವವರಂತೂ ಶಾರೀರಕ ವ್ಯಾಯಾಮ ಮಾಡಬೇಕಾದ್ದು ಎಂದೂ ಮರೆಯಬಾರದು. ಪೂರ್ವದ ಪದ್ಧತಿಯಿಂದ ವ್ಯಾಯಾಮ ತೆಗೆದುಕೊಂಡರೆ ಅದ ಪ್ರತಿಯೊಂದು ಭಾಗವೂ ಚನ್ನಾಗಿ ಬೆಳೆಯುವುದಿಲ್ಲ ವು. ಅನೇಕರ ಅಭಿಪ್ರಾಯ ಇರುತ್ತದೆ. ಆದರೆ ಈ ಪದ್ಧತಿಯಲ್ಲಿ ಪ್ರತಿಯೊಂದು ಭಾಗವೂ ಚನ್ನಾಗಿ ಬೆಳೆಯುವದೆಂದು ನಾನು ನನ್ನ ಸ್ವಂತ ಅನುಭವದಿಂದ ಹೇಳುತ್ತೇನೆ. ಆದರೆ ಅದನ್ನು ಪದ್ಧತಿಯ ಕಾರ ಮಾಡಬೇಕು. ಹೀಗೆ ಮಾಡಿದರೆ ಕೈಗಳು, ತೊಟ್ಟು ಮುಂ ತಾದ, ಬೆನ್ನು, ಗೋಣು ಮುಂತಾದ ಭಾಗಗಳು ಬೆಳೆಯುವವು. ಹುಟ್ಟಿದಂದಿನ ಕಾಲುಗಳು, ಕೈ, ಕಳಕೊಟ್ಟ ಮುಂತಾದವುಗಳು ಬೆಳೆಯುವವು. ಇದಲ್ಲದೆ ಬೇರೆ ಬೇರೆ ವ್ಯಾಯಾಮಗಳಿಂದ ಸತ್ವವು ಬರುತ್ತದೆ. ಎಲ್ಲಕ್ಕೂ ಮೊದಲು ಓಟದಿಂದ ವ್ಯಾಯಾಮ ವನ್ನು ಪ್ರಾರಂಭಿಸಬೇಕು. ಓಟವನ್ನು ಊರ ಹೊರಗೆ ಮಾಡಬೇಕು. ಪ್ರತಿ ದಿವಸ ಒಂದು ಮೈಲು ತನಕ ಮೊದಲು ಒಂದು ಫರ್ಲಾಂಗು, ಹದಿನೈದು ದಿವಸದ ನಂತರ ೨ ಫರ್ಲಾಂಗು, ಹೀಗೆ ಓಟವನ್ನು ಹೆಚ್ಚಿಸಿ ೨ ಮೈಲುಗಳ ವರೆಗೆ ಓಡುವದಕ್ಕೆ ಬಂದ ಮೇಲೆ ತಾಲೀಮು ಶಾಲೆಯಲ್ಲಿ ಸಾಮುಗಳು ಹೈಸಿಗಳನ್ನು ಮಾಡಲಿಕ್ಕೆ ಪ್ರಾರಂಭ ಮಾಡ ಬೇಕು. ತಾಲೀಮು ಶಾಲೆಯೊಳಗೆ ನಿರಾತಂಕವಾಗಿ ಎಲ್ಲ ಕಡೆಯಲ್ಲಿ ಓಡಾಡುವದಕ್ಕೆ ಸ್ಥಳ ಬೇಕು. ಅಂದರೆ ಮನುಷ್ಯನ ಮೈಯಲ್ಲಿ ಚುರುಕುತನವು ಪ್ರತ್ಯಕ್ಷ ಬರುವ ಆಟಗಳಲ್ಲಿ ಬೇಕು. ಮಾಂ ಸಖಂಡಗಳ ಬಲಕ್ಕೆ ವ್ಯಾಯಾಮವು ಎಂಟು ವರುಷದಿಂದ ಪ್ರಾ ರಂಭವಾಗಬೇಕು. ಮೊದಲು ಐದು ಸಾಮು, ಐದು ಹುಟ್ಟಿ ಊಟ ಬೈಠಕ ತೆಗೆಯಬೇಕು. ಮತ್ತು ಅವುಗಳನ್ನು ಪ್ರತಿ ೧೫ ದಿವಸಕ್ಕೆ ಒಮ್ಮೆ ಕ್ರಮವಾಗಿ ೧೦ ಈ ಪ್ರಕಾರ ಹೆಚ್ಚಿಸಿ ೧೦೦ಕ್ಕೆ ತುಪ ಕಿಸಬೇಕು ಇಷ್ಟು ೨ ವರುಷಗಳ ವರೆಗೆ ಮಾಡಬೇಕು. ತಾಲೀಮು ಮಾಡುವ ಮುಂದೆ ಏಕಾಗ್ರಚಿತ್ತವು ಬರಬೇಕೆಂದು ಹಿಂದೆ ಮುಂದಿನ ಕಲ್ಪನೆಗಳನ್ನು ಬಿಟ್ಟುಕೊಂಡು ವ್ಯಾಯಾಮ ತೆಗೆದುಕೊಳ್ಳಬೇಕು. ಪ್ರಾಯ ಬೆಳೆಯುವ ಭಾಗದ ಮೇಲೆ ಹೆಚ್ಚಿಗೆ ಲಕ್ಷ್ಯ ಕೊಡಲಿಕ್ಕೆ ಸಾಧ್ಯವು ೧೫ ವರುಷಗಳಾದ ಮೇಲೆ ಸಂಖ್ಯೆಯನ್ನು ಸುತ್ತ ಬೆಳಿಸ ಬೇಕು. ೨೦ ವರುಷಗಳ ವರೆಗೆ ೮೦೦ ಸಾಮುಗಳನ್ನು ಮಾಡು ತ್ತಿರಬೇಕು ೨೫ ವರುಷಗಳ ವರೆಗೆ ೧,೦೦೦ ಸಾಮುಗಳನ್ನು ತೆಗೆಯ ಬೇಕು. ಈ ವಯಸ್ಸಿನ ಮುಂದೆ ಸಹ ವ್ಯಾಯಾಮವನ್ನು ನಿಲ್ಲಿಸಬಾರ ದು. ೨೫ ವರುಷದಿಂದ ೪೦ ವರುಷಗಳ ವರೆಗೆ ಶಾರೀರಕ ಸಾಮರ್ಥ್ಯ ವು ಬೆಳೆಯುವದು. ೪೦ ವರುಷಗಳ ಮುಂದೆ ಶಾರೀರಕ ಸಾಮ ರ್ಥ್ಯವು ಬೆಳೆಯದಿದ್ದರೂ ವ್ಯಾಯಾಮದಿಂದ ಸಾಮರ್ಥ್ಯವು ಉಳಿದೇ ಇರುವದು. ತಾಲೀಮು ಮಾಡಬೇಕಾದರೆ ನಸುಕು ಮುಂಜಾನೆ ೫ ಗಂಟೆಗೆ ಎದ್ದು ಮಾಡಬೇಕು. ಆ ಕಾಲವು ಎಲ್ಲಕ್ಕೂ ಶಾಂತ ವಿರುವದು. ಆಗ ತಾಲೀಮು ಮಾಡಿದರೆ ಶರೀರಕ್ಕೆ ಹೆಚ್ಚಿಗೆ ಶ್ರಮವಾ ಗುವದಿಲ್ಲ. ತಾಲೀಮು ಆದ ಮೇಲೆ ಥಂಡಾಯಿ ತೆಗೆದುಕೊಳ್ಳಬೇಕು. ಥಂಡಾಯಿಯನ್ನು ಮಾಡಬೇಕಾದರೆ ಬದಾಮಿ, ಯಾಲಕ್ಕಿ, ಸಕ್ಕರೆ, ಗಸಗಸೆ ಇವುಗಳನ್ನು ತೆಗೆದುಕೊಳ್ಳಬೇಕು. ಮೊದಲು ಐದು ಬದಾಮಿ, ಆ ಮೇಲೆ ಹತ್ತು, ಈ ಪ್ರಕಾರ ತಮಗೆ ತಡೆವಷ್ಟು ಹೆಚ್ಚಿಗೆ ಮಾಡುತ್ತ ಹೋಗಬೇಕು. ತಾಲೀಮು ತೆಗೆದುಕೊಂಡ ಮೇಲೆ ಹಾಲು ತೆಗೆದುಕೊಳ್ಳಬಾರದು. ತಾಲೀಮು ಮಾಡಿದ ಮೇಲೆ ಮೈಯೊಳಗಿನ ಬೆವರನ್ನು ಆರಿಸಿಕೊಂಡು, ನಂತರ ತಣಿದ ತಣ್ಣೀರಿನಿಂದ ಸ್ನಾನ ಮಾಡಬೇಕು. ತಣ್ಣೀರಿನ ಸ್ನಾನವು ದೇಹಕ್ಕೆ ಹಿತಕರವಾಗಿರುವುದು. ನಾವು ವ್ಯಾಯಾಮವಾದರೂ ನಮ್ಮ ಪ್ರಕೃತಿಯ ಮೇಲೆಯೇ ಇರು ವುದು. ವ್ಯಾಯಾಮ ಮಾಡುವವನು ಶಕ್ತಿವರ್ಧಕ ಆಹಾರವನ್ನು ತೆಗೆ ದುಕೊಳ್ಳುವದು ಅವಶ್ಯಕವಿದೆ. ಇಲ್ಲವಿದ್ದರೆ ಅದರಿಂದ ಹೆಚ್ಚಿಗೆ ರಕ್ತ ಸುಟ್ಟು ಶರೀರ ಬಲವು ಬೆಳೆಯದೆ ಕ್ಷೀಣವಾಗುವುದೆಂದು ಕೆಲವರು ಭಯಪಡುವರು. ಆದರೆ ವಾಸ್ತವವು ಹಾಗೆ ಇರುವದಿಲ್ಲ. ನಾನು ಸ್ವತಃ ಹಾಗೆ ಏನೂ ಹೆಚ್ಚಿನ ತಿನಸು ತೆಗೆದುಕೊಳ್ಳುವದಿಲ್ಲ. ತಾಲೀ ಮು ಆದ ವೇಳೆ ಪಾತ್ರ ಥಂಡಾಯಿ ತೆಗೆದುಕೊಳ್ಳುತ್ತೇನೆ. ಇದರಿಂದ ಕಾವು ಆಗಗೊಡುವದಿಲ್ಲ. ಮಾಂಸವಲ್ಲಿ ಹೆಚ್ಚಿನ ಗುಣವಿರುವದಿಲ್ಲ. ನಮ್ಮಲ್ಲಿಯ ಉದ್ದಿನೊಳಗೆ ಮಾಂಸಕ್ಕಿಂತ ಹೆಚ್ಚಿನ ಸಾಮರ್ಥ್ಯವು ಇರುವದು ಎಂಬ ಆಶಯದ ಭಾಷಣವನ್ನು ಮಾಡಿದರು.

ಅನಂತರ ದೆ ಶಾಸ್ತ್ರಿ, ಪತ್ರಿ, ಮುದ್ರೇಪಕರ, ಜೋಶಿ ಇವರ ಭಾಷಣಗಳಾದವು ನಂತರ ಮಿ|| ಶ್ರೀನಿವಾಸರಾವ ಕಾಮಲಾಪೂರ ಇವರು ತಮ್ಮ ಕಸ್ತದಿಂದ ಧಾರವಾಡಕ್ಕರ ಕಡೆಯಿಂದ ಪ್ರೊ|| ರಾಮಮೂರ್ತಿ ಯವರಿಗೆ ಪದಕವನ್ನು ಅರ್ಪಿಸಿದರು. ಅದನ್ನು ಅವರು ಬಹಳ ಕೃತ ಜ್ಞತಾಪೂರ್ವಕವಾಗಿ ಸ್ವೀಕರಿಸಿದರು. ಪ್ರೊ|| ರಾಮಮೂರ್ತಿಯ ವರು ಈ ಪತ್ರಿನ ದಿವಸವೇ ಗದಗಿನ ಕಡೆಗೆ ಹೋದರು—ಕ. ಜ.

ಇಂಡಿಯಾ ದೇಶದ ವೃತ್ತಾಂತಗಳು.

ಬಡೋದಾ ಸಂಸ್ಥಾನದ ಗಾಯಕವಾಡಿ ಮಹಾರಾಜರವರಿಗೆ ತಾಂ ೨೩ ಕಾಲದಿಂದಲೂ ೧೦೨ ಡಿಗ್ರಿ ವರೆಗೆ ಜ್ವರವಿದೆ ಎಂತ ಲೂ ಕಳವಳವನ್ನುಂಟುಮಾಡುವ ಹಾಗೇ ವರ್ತಮಾನ ಬಂದಿರುತ್ತದೆ.

***

ಮ್ಯಾನ್ಸರ್ ಸ್ಟಿಲ್‌ಕಾಟ್ ಮತ್ತು ಭೂಲೇಕರ್ ಎಂಬುವರು ಶರದ ಎಂಬ ಸ್ಥಳದಲ್ಲಿ ಸಿಂಕಿಪಟ್ಟಿಗೆ ತಯಾರಾಗತಕ್ಕ ಒಂದು ಕಾರ್ಖಾನೆ ಯನ್ನು ಏರ್ಪಡಿಸಿದ್ದಾರೆ. ಇದರ ಮೂಲಧನಕ್ಕಾಗಿ ಒಂದು ಲಕ್ಷ ರೂ ಪಾಯಿಗಳನ್ನು ಪ್ರತಿ ಒಂದಕ್ಕೆ ೧೦೦ ರೂಪಾಯಿಯಂತೆ ವಿಂಗಡಿಸಿರು ತ್ತಾರೆ.

***

ಜವಾರ್ ಆಧಿಪತಿ ದಲಿ ರಾವ ಚೌದ ಮಾತಸ್ಸರು ಇನ್ನು ಕೆಲವು ಕಾಲದ ವರೆಗೆ ಅನುಭಾನಿಕರಾದರಿ ಮರಣಾಸನ್ನ(ಉಯಿಲು) ಗಳ ನ್ನು ಒಡೆಯಿಕೂಡದೆಂದು ಗವರ್ನಮೆಂಟಿನವರು ನಿರ್ಬಂಧಪಡಿಸಿರು ತ್ತಾರೆ.

***

ಕರಾಚಿ ಪಟ್ಟಣದ ಬಳಿ ಸಮುದ್ರದೊಳಗೆ ಒಂದು ಹಡಗು ಮು ಳುಗಿಕೊಂಡಿತು. ಅದನ್ನು ಅದರಲ್ಲಿದ್ದ ಕೀಲ ೬೦೦ ರೈಲ್ ರಸ್ತೆಯ ದಿಮ್ಮಿಗಳನ್ನೂ ತೆಗೆಯಬೇಕೆಂದು ಅಲ್ಲಿನ ಕೆಲವು ವರ್ತಕರು ಪ್ರಯ ತ್ನಪಟ್ಟಿದ್ದಾರೆ.

***

ಪೂರ್ವ ಬಂಗಾಲ ಮತ್ತು ಆಸ್ಸಾಂ ಎಂಬ ಹೊಸ ಅಧಿಪತ್ಯದಲ್ಲಿ ಹೋದ ವರುಷ ೨೯ ಪರಸ್ಪರ ಸಹಾಯಕ ಸಂಘಗಳಿದ್ದವು. ಈ ವರು ಷ ೩೦ ಸಂಘಗಳು ಏರ್ಪಡಾಗಿವೆ. ಅವುಗಳ ಮೂಲಧನವು ೩೩ ಸಾವಿರ ರೂಪಾಯಿಗಳೆಂದು ತಿಳಿಯುವುದು.

***

ಜವಾರ್ ಅಧಿಪತ್ಯದಲ್ಲಿ ತಳೀ ಫಸಲು ಆಗುವ ಕಡಿನ್ನೆದು ಪಟ್ಟಿ ಕ್ಟುಗಳಲ್ಲಿ ಈ ವರುಷ ೩,೪೯,೯೯೩ ಎಕರೆ ಜಮೀನುಗಳಲ್ಲಿ ಭತ್ತದ ಬೆಳೆಯನ್ನು ಮಾಡಿದ್ದಾರೆ. ಅಂದರೆ, ಹೋದ ವರುಷಕ್ಕಿಂತ ೩ ಲಕ್ಷ ೯೨ ಸಾವಿರ ಎಕರೆಯಷ್ಟು ಹೆಚ್ಚು.

***

ಹೋದ ವಾರ ಜವಾರ್ ಎಸ್ಟೇಟಿನ ಕಂಪನಿ ಹಡಗಿನಲ್ಲಿ ೧೯,೦೦೦ ರೂಪಾಯಿನ ಬೆಲೆಯುಳ್ಳದನ್ನು ಭರ್ತಿಮಾಡಿ ಕಲ್ಕತ್ತೆಗೆ ಸಾಗಿಸಿ ಕೊಂಡು ಒಂದು ಕಿರುವಾಗ್ನಿ ಒಬ್ಬ ಬಿದ್ದ ಎಂಬ ಸ್ಥಳದಲ್ಲಿ ಅದಕ್ಕೆ ಕಿಂಕೆ ಬಿದ್ದು ಸುಟ್ಟುಹೋಯಿತು. ಅದರಲ್ಲಿದ್ದ ಮೂರು ಮಂದಿ ಸೇ ವಕರು ವ್ಯಾಕಪಟ್ಟರು. ಮಾಲೀಕರಿಗೆ ಅಷ್ಟು ಎಷ್ಟೋಯೋ ಆ ಪಡಗೂ ನಷ್ಟವಾಯಿತು.

***

ಲಕ್ನೋ, ಮಜರ್ಘರವೆಂಬ ಪಟ್ಟಣದಲ್ಲಿ ಉದ್ಯಾನವನಗಳ ಏ ರ್ಪಾಡು, ಅವುಗಳ ಪೋಷಣೆ ಮೊದಲಾದ ಸಂಗತಿಗಳನ್ನು ಕಲಿಸಿಕೊ ಡುವುದಕ್ಕಾಗಿಯೇ ಪ್ರತ್ಯೇಕವಾದ ಶಾಲೆಗಳನ್ನು ಸರ್ಕಾರದವರು ಇಟ್ಟಿರುತ್ತಾರೆ ದಕ್ಷಿಣ ದೇಶದಲ್ಲಿ ಮದರಾಸ್ ಗವರ್ನಮೆಂಟಿನವರು ಕೊಯಮತ್ತೂರು ಪಟ್ಟಣದಲ್ಲಿ ವಿದ್ಯಾರ್ಥಿಗಳಿಗೆ ವ್ಯವಸಾಯಶಾ ಸ್ತ್ರವನ್ನು ಕಲಿಸುವುದರ ಜೊತೆಗೆ ತೋಟಗಳ ಏರ್ಪಾಡು ಸಂರಕ್ಷ ಣೆಯನ್ನು ಹೇಳಿಕೊಟ್ಟು ತರಬೇತು ಮಾಡಲಾರಂಭಿಸಿದ್ದಾರೆ.

***

ಹಿಂದುಸ್ಥಾನದ ಪೋಸ್ಟ್ ಇಲಾಖೆಯಲ್ಲಿ ಕಳೆದ ವರುಷ ನಡೆದ ಕಾರ್ಯಭಾರಗಳನ್ನೆಲ್ಲಾ ವಿವರಿಸಿ ಸರ್ಕಾರದವರು ರಿಪೋರ್ಟನ್ನು ಪ್ರಕಟಿಸಿದ್ದಾರೆ. ಕಳೆದ ೧೨ ತಿಂಗಳಲ್ಲಿ ಅಂಚೆ ಇಲಾಖೆಯವರು ೭೭ ಕೋಟಿಯೂ ೫೦ ಲಕ್ಷ ವಸ್ತುಗಳನ್ನು ಊರಿಂದೂರಿಗೆ ಸಾಗಿಸಿಕೊಂ ಡು ಹೋಗಿದ್ದಾರೆ. ಈ ಇಲಾಖೆಯ ಉತ್ಪತ್ತಿಯಲ್ಲಿ ಸರ್ಕಾರದವರಿಗೆ ಖರ್ಚು ಕಳೆದು ೧೫ ಲಕ್ಷ ರೂಪಾಯಿ ಆದಾಯ ಕಂಡುಬಂದಿದೆ. ಒಟ್ಟು ಉತ್ಪತ್ತಿಯು ಎರಡು ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚೆಂದು ತಿಳಿಯುವುದು.

***

ಮುಂಬಾಯಿ ಪಟ್ಟಣದ ಮ್ಯುನಿಸಿಪಾಲಿಟಿಯ ಚಾಲ್ತಿ ವರುಷದ ಉತ್ಪತ್ತಿಯು ಖರ್ಚಿಗಿಂತ ನಾಲ್ಕು ಲಕ್ಷ ರೂಪಾಯಿ ಜಾಸ್ತಿಯಾಗು ವುದು. ಅಂದರೆ, ಒಟ್ಟು ೯೩ ಲಕ್ಷದ ೬೦ ಸಾವಿರ ರೂಪಾಯಿ ಉತ್ಪತ್ತಿ ಯಾಗುತ್ತದೆಂದು ಅಂದಾಜು ಕಟ್ಟಿದ್ದಾರೆ. ಈಗ ಬರಗಾಲ ಬರುವ ದೆಂಬ ಭೀತಿಯುಂಟಾಗಿರುವುದರಿಂದ ಆ ಪಟ್ಟಣದಲ್ಲಿ ದಿನಸಿಗಳ ಧಾರ ಣೆಯು ಬಹಳ ಹೆಚ್ಚಾಗಿರುವುದನ್ನು ನೋಡಿ, ಧಾನ್ಯದ ಮೇಲೆ ಹಾಕಿ ದ ಸುಂಕವನ್ನು ತೆಗೆದು ಹಾಕಬೇಕೆಂದು ಕೆಲವರು ಮುನಿಸಿಪಾಲ್ ಕಮಿಷನರ ವರಿಗೆ ಸೂಚಿಸುತ್ತಿದ್ದ ಕೆಲವು ಮ್ಯುನಿಸಿಪಲ್ ಕರಿಗೆಗಳನ್ನು ವಜಾಮಾ ಡಿದರು. ಇದರಿಂದ ಉತ್ಪತ್ತಿ ವಳಿಯಲ್ಲಿ ೩ ಲಕ್ಷ ರೂಪಾಯಿ ಕಡಿಮೆ ಯಾಗುತ್ತ.

***

ಸಂಯುಕ್ತ ಅಧಿಪತ್ಯಗಳಲ್ಲಿ ಕ್ಯಾಗೋ ಹಾಗೆ ಪಂಜಾಬ್ ಅಧಿಪ ತ್ಯದಲ್ಲೂ ಪ್ರಜೆಗಳು ಕ್ಷಾಮಪೀಡೆಗೆ ಗುರಿಯಾಗಿದ್ದಾರೆ. ಧಾರಣೆಯು ಸಿಗ ಳು ಬಹಳ ಹೆಚ್ಚಿರುವವು. ಮಳೆ ಇಲ್ಲದೆ ಪೈರುಗಳೆಲ್ಲಾ ಬಾಡಿಹೋದ ವು. ಗೋಕಾಯಿಗಳಿಗೆ ಮೇವಾಗಲಿ ನೀರಾಗಲಿ ಸಿಕ್ಕುವುದು ದುರ್ಲ ಭವಾಗಿದೆ. ಸರ್ಕಾರದವರು ರೈತರಿಗೆ ತಕಾವಿ ಸಾಲವನ್ನು ಹಂಚಿಕೊ ಡಬೇಕೆಂದು ೧೫ ಲಕ್ಷ ರೂಪಾಯಿ ಸ್ಯಾಂಕ್ಷನ್ ಮಾಡಿದ್ದಾರೆ. ಕ್ಷಾಮವು ಕಾಣಿಸಿಕೊಂಡಿರುವ ಪ್ರದೇಶವು ಪಂಜಾಬಿನಲ್ಲಿ ೩೦ ಲಕ್ಷ ಪ್ರಜೆಗಳುಳ್ಳ ದ್ದೆಂತಲೂ, ಸಂಯುಕ್ತ ಅಧಿಪತ್ಯಗಳಲ್ಲಿ ೨೫೦ ಲಕ್ಷ ಪ್ರಜೆಗಳು ಕ್ಷಾಮಾ ಬಾಧೆಗೆ ಗುರಿಯಾಗಿರುವರೆಂತಲೂ ತಿಳಿದುಬಂದಿದೆ.

***

ಕಾಶೀ ಪಟ್ಟಣದಲ್ಲಿ ಗವರ್ನಮೆಂಟ್ ಸಂಸ್ಕೃತ ವಿದ್ಯಾಲಯ ವಿರುವದೂ ಅಲ್ಲಿ ಸಾವಿರಾರು ಮಂದಿ ವಿದ್ಯಾರ್ಥಿಗಳು ಶಾಸ್ತ್ರಾದಿಗ ಳನ್ನು ಕಲಿಯುತ್ತಿರುವುದೂ ಪ್ರಸಿದ್ಧವಾಗಿದೆಯಷ್ಟೆ. ಈ ವಿದ್ಯಾಲ ಯದ ಪಕ್ಕದಲ್ಲೇ ಒಂದು ಸರಸ್ವತೀ ಭವನವನ್ನು ಕಟ್ಟಿಸಿ, ಅದರಲ್ಲಿ ಸಿಗುವ ಪ್ರಾಚೀನ ಮತ್ತು ನವೀನ ಸಂಸ್ಕೃತ ಗ್ರಂಥಗಳನ್ನೂ ಇಡಬೇಕೆಂದು ಪ್ರಜೆಗಳ ಮುಖಂಡರು ಯೋಚಿಸಿ, ಸಾವಿರಾರು ರೂ ಪಾಯಿ ಚಂದಾ ಕೂಡಿಸಿ, ಸರಸ್ವತೀ ಭಂಡಾರವನ್ನು ಕಟ್ಟಿ ಪೂರೈಸಿ ದರು. ಅದಕ್ಕೆ ಪ್ರಿನ್ಸ್ ಆಫ್ ವೇಲ್ಸ್‌ರವರ ಅಂಕಿತವನ್ನು ಕೊಟ್ಟರು. ಕ್ಷ ರೆ ಕಳೆದ ವಾರ ಸಂಯುಕ್ತ ಅಧಿಪತ್ಯಗಳ ಲೆಫ್ಟಿನೆಂಟ್ ಗವರ್ನ ರಾದ ಸರ್ ಜಾನ್ ಹ್ಯುಯೆಟ್ ಯವರು ಅಲ್ಲಿಗೆ ದಯಮಾಡಿ, ಆ ಕಟ್ಟಡವನ್ನು ಪ್ರತಿಷ್ಠೆಮಾಡಿ ಬಂದರು.

***

ಉತ್ತರ ದೇಶದಲ್ಲೂ ಬೊಂಬಾಯಿನ ಕೆಲವು ಕಡೆಗಳಲ್ಲೂ ಕ್ಷಾಮ ದ ಭೀತಿ ತುಂಬಾ ಆಗಿದೆ. ಸರ್ಕಾರದವರು ಅಲಹಾಬಾದ್, ಬನಾರೇಸ್, ಮಿರ್ಜಾಪುರ, ಝಾನ್ಸಿ, ಈ ಮೊದಲಾದ ಡಿಸ್ಟ್ರಿಕ್ಟುಗಳಲ್ಲಿ ಕ್ಷಾಮ ನಿವಾರಣೆಗೋಸ್ಕರ ರಿಲೀಫ್ ಕಾಮಗಾರಿಗಳನ್ನು ಪ್ರಾರಂಭಮಾಡಿದರು. ಈಗ ೩,೯೦೦ ಜನಗಳಿಗಿಂತಲೂ ಕಡಿಮೆ ಇಲ್ಲದೆ ಅವುಗಳಲ್ಲಿ ಸೇರಿ ಕೆಲಸಕ್ಕೆ ಕೊಡಲಾಗಿಕೊಳ್ಳುತ್ತಿದ್ದಾರೆ. ರಾಜಪುಟಾನಾಕ್ಕೆ ಸೇರಿದ ಪ್ರಾಂತ ಗಳಲ್ಲೂ ಕ್ರೋನಾರಿನಲ್ಲೂ ಇಷ್ಟರೊಳಗೇ ರಿಲೀಫ್ ಕಾಮಗಾರಿಗ ಳನ್ನು ಪ್ರಾರಂಭಿಸಬೇಕಾಗಿ ಕಾಣುತ್ತದೆ. ಗುಜರಾತ್ ಪ್ರಾಂತ್ಯದಲ್ಲೂ ಕ್ಷಾಮ ಬರುವಹಾಗೆ ತೋರುತ್ತದೆ. ಇನ್ನು ಒಂದು ವಾರದೊಳಗಾಗಿ ಮಳೆ ಬರಬೇಕೆಂದು ಪ್ರಜೆಗಳು ನಿರೀಕ್ಷಿಸುತ್ತಿದ್ದಾರೆ. ಸರ್ಕಾರದವರು ಆಗಲೇ ಮುಂದಾಲೋಚನೆಯಿಂದ ಅನೇಕ ಅವಶ್ಯವಾದ ಪರಿಹಾರ ಕಾರ್ಯಗಳನ್ನು ಪ್ರಾರಂಭಿಸಿರುವರು.

***

ಘನವನ್ನು ಹೊಂದಿದ ಉದಾರವಂತನೂರಾದ ಬರೋಡಾ ಮಹಾ ರಾಜರವರ ಪ್ರೋತ್ಸಾಹದಿಂದ ಮಿ|| ಲೂಥರ್ ಎಂಬುವರು ಬರೋಡೆ ಯಲ್ಲಿ ಒಂದು ಕಾರ್ಖಾನೆಯನ್ನು ಸ್ಥಾಪಿಸಿದ್ದಾರೆ. ಈ ಕಂಪನಿಯ ಮೂಲಧನಕ್ಕಾಗಿ ೫೦,೦೦೦ ರೂಪಾಯಿಗಳನ್ನು ಷೇರು ಒಂದಕ್ಕೆ ೧೦೦ ರೂಪಾಯಿಯಂತೆ ೫೦೦ ಷೇರುಗಳಾಗಿ ವಿಂಗಡಿಸಿರುತ್ತಾರೆ. ಅಲ್ಲಿ ಯ ಮಹಾರಾಜರವರು ೪,೦೦೦ ರೂಪಾಯಿಗಳನ್ನು ಈ ಕಾರ್ಖಾನೆ ಗಾಗಿ ದಯಪಾಲಿಸಿರುತ್ತಾರೆ. ಅಲ್ಲಿ ಕಬ್ಬಿಣ, ಹಿತ್ತಾಳೆ ವಗೈರೆ ಸಾಮಾ ನುಗಳನ್ನೂ, ಛತ್ರಿಯ ಬಟ್ಟೆಗಳನ್ನೂ, ಗಡಿಯಾರದ ಸಾಮಾನುಗಳ ನ್ನೂ ತಯಾರುಮಾಡಬೇಕೆಂದು ನಿಶ್ಚೈಸಿರುತ್ತಾರೆ. ಗಾಯಕವಾಡಿ ಮಹಾರಾಜರವರು ಈ ಕಂಪೆನಿಯ ಮ್ಯಾನೇಜರಾದ ಮಿ|| ಲೂಥರ್ ಎಂಬುವರು ವಿದ್ಯಾರ್ಥಿಯಾಗಿ ೫ ವರುಷಗಳ ವರೆಗೂ ಯೂರೋಪಿ ನಲ್ಲಿ ಇರತಕ್ಕ ಕಾರ್ಖಾನೆಗಳ ವಿಷಯವನ್ನು ಮನನ ಮಾಡಿಕೊಂಡು ಬರಬೇಕೆಂದು ತೀರ್ಮಾನಿಸಿದ್ದಾರೆ.

***

ಬೊಂಬಾಯಿ ಪಟ್ಟಣದಲ್ಲಿ ಬಾಂಕರ ವಿಷ್ಣು ಪಾಧ್ಯೆ ಎಂಬಾತನು "ವಿಹಾರಿ" ಎಂಬ ವರ್ತಮಾನ ಪತ್ರಿಕೆಯನ್ನು ಮರಾಟಿ ಭಾಷೆಯಲ್ಲಿ ಬರೆದು ಪ್ರಕಟಿಸುತ್ತಿದ್ದನು. ಈತನು ರಾಜದ್ರೋಹಕರವಾದ ಬಾತ್ಮಿ ಗಳನ್ನು ಆ ಪತ್ರಿಕೆಯ ಮೂಲಕ ಪ್ರಚುರಪಡಿಸಿ, ಸರ್ಕಾರದವರ ಮೇಲೆ ಪ್ರಜೆಗಳಿಗೆ ದುರಭಿಪ್ರಾಯವನ್ನುಂಟುಮಾಡಿದನೆಂದು ಸುಮಾ ರು ಆರು ತಿಂಗಳ ಕೆಳಗೆ ಫಿರ್ಯಾದಾಯಿತು. ಆಗ್ಗೆ ಮ್ಯಾಜಿಸ್ಟ್ರೇಟ ರು ಆತನಿಗೆ ಬರೀ ಎಚ್ಚರಿಕೆಯನ್ನು ಹೇಳಿ, ಅಂಥಾ ಬಾತ್ಮಿಗಳನ್ನು ಮತ್ತೆ ಪ್ರಕಟಿಸಕೂಡದೆಂದು ತಿಳಿಸಿದ್ದರು. ಆ ತರುವಾಯ ಆತನು ಒಂದು ತಿಂಗಳ ತನಕ ಆ ಪತ್ರಿಕೆಯನ್ನು ನಿಲ್ಲಿಸಿಬಿಟ್ಟಿದ್ದನು. ಹಿಂದಿನ ತಿಂಗಳಲ್ಲಿ ಮತ್ತೆ ಅದೇ ಬಾತ್ಮಿಗಳನ್ನೇ ಆ ಪತ್ರಿಕೆಯಲ್ಲಿ ಪ್ರಕಟಿಸಿದ ನು. ಇದಕ್ಕಾಗಿ ಆತನನ್ನು ಸರ್ಕಾರದವರು ಹಿಡಿದು ಮೊಕದ್ದಮೆ ಮಾಡಿದರು. ಬೊಂಬಾಯಿ ಹೈಕೋರ್ಟ್ ಸರ್ಜ ಜಡ್ಜರು ಈ ಮೊಕ ದ್ದಮೆಯನ್ನು ವಿಚಾರಣೆ ಮಾಡಿದ್ದರಲ್ಲಿ ಜೂರಿ ಎಂಬ ಪಂಚಾಯಿತರು ಅಪರಾಧಿಯು ತಪ್ಪುಮಾಡಿರುತ್ತಾನೆಂದು ಅಭಿಪ್ರಾಯಪಟ್ಟರು. ಜಡ್ಜ ಯವರು ಅಪರಾಧಿಗೆ ಎರಡು ವರುಷ ಸಾದಾ ಸಜಾವನ್ನೂ ೩೦೦ ರೂಪಾ ಯಿ ಜುಲ್ಮಾನೆ ತಪ್ಪಿದರೆ ಇನ್ನು ಮೂರು ತಿಂಗಳ ಸಜಾವನ್ನೂ ವಿಧಿಸಿ ರುತ್ತಾರೆ.

***

ಕಳೆದ ವಾರ ಉತ್ತರ ದೇಶದ ಕೆಲವು ರೈಲ್ವೆ ಕಂಪನಿಗಳ ಯದ ಮಾನರಿಗೂ ರೈಲನ್ನು ನಡಿಸುವ ಸಿಬ್ಬಂದಿಯವರಿಗೂ ವಾಗ್ವಾದಗಳಾ ನಡೆದು, ಕಡೆಗೆ ಯಜಮಾನರು ಸಂಬಳದ ದರವನ್ನು ಹೆಚ್ಚಿಸಿಕೊಡ ಬೇಕೆಂತಲೂ ಇನ್ನು ಕೆಲವು ರಿಯಾಯಿತಿಗಳನ್ನು ತೋರಿಸಬೇಕೆಂತ ಲೂ ಸಿಬ್ಬಂದಿಯವರು ಒಂದು ಅರ್ಜಿಯನ್ನು ಬರೆದು, ೧೫ ದಿವಸ ಗಳೊಳಗೆ ಸದುತ್ತರ ಕೊಡದಿದ್ದರೆ ತಾವು ಕೆಲಸದ ಮೇಲೆ ಹಾಜರಾಗು ವುದೇ ಇಲ್ಲವೆಂದು ಹೇಳಿಕೊಂಡರು. ಕಂಪನಿಯ ಯಜಮಾನರು

ಸ್ವಲ್ಪ ಅಲಕ್ಷ್ಯದಿಂದ ಸುಮ್ಮನಿದ್ದರು ಆದರ ಮೇಲೆ ಹದಿನೈದು ದಿನಗಳು ಕಳೆದುಹೋದವು ಆ ನಂತರ ನನ್ನ ಕೆಲವು ಸಂಖ್ಯೆ ಸಟ್ಟೀಗಳಲ್ಲಿ ರೈಲ್ ನಡಿಸುವವರೂ ಗಾರ್ಡುಗಳೂ ಇತರ ನೌಕರ ಮಾನೆಯರೂ ತಮ್ಮ ಕೆಲಸಕ್ಕೆ ಬಾರದೆ ಹಟಹಿಡಿದು ನಿಂತುಬಿಟ್ಟರು ನಾಲ್ಕಾರು ದಿನಗಳ ತನಕ ಪ್ರಯಾಣಿಕರು ಊರಿಂದೂರಿಗೆ ಹೋಗುವುದಕ್ಕೂ ಸಾಮಾನುಗಳು ಸಾಗುವುದಕ್ಕೂ ಅಡಚಣೆಯಾಯಿತು ಪ್ರಯಾಣಿಕರು ಸ್ಟೇಷನುಗಳಲ್ಲೇ ನಾಲ್ಕಾರು ದಿನ ಇದ್ದು ಕಷ್ಟಪಟ್ಟರು ಸರ್ಕಾರಿ ಅಧಿಕಾರಿಗಳು ಅವರ ಭೋಜನಾದಿಗಳಿಗೂ ಮಾಕಲ್ಕು ಏರ್ಪಾಡು ಮಾಡುವುದರಲ್ಲಿ ತುಂಬಾ ಸಾಹಸಪಟ್ಟರು ಎಲ್ಲಕ್ಕಿಂತಲೂ ವಿಶೇಷವಾಗಿ ಕಾಲಕಾಲಕ್ಕೆ ಅಂಚೆ (ಪೋಸ್ಟ್) ಕಾಗದ ಪತ್ರಗಳು ಊರಿಂದೂರಿಗೆ ಹೋಗಿ ತಲುಪಲು ಅಡಚಣೆಯಾಯಿತು ಟಪ್ಪಾಲುಗಳನ್ನು ಬೇರೆ ಬೇರೆ ಮಾರ್ಗಗಳ ಮೂಲಕ ಸಾಗಿಸಿ ೨—೩ ದಿನಗಳ ಮೇಲೆ ಬಟವಡೆಮಾಡಿದರು ಆದರೆ ಹಟಹಿಡಿದಿದ್ದ ನೌಕರ ಮಾನೆಯರ ಪೈಕಿ ಕೆಲವರು ಈಚೆಗೆ ವಿವೇಕ ತಂದುಕೊಂಡು ಯಥಾಪ್ರಕಾರ ತಮ್ಮ ಕೆಲಸದ ಮೇಲೆ ಹಾಜರಾಗಿ ಕೆಲವು ಕಡೆ ರೈಲ್ ಗಾಡಿಗಳನ್ನು ನಡಿಸಲಾರಂಭಿಸಿದ್ದರಿಂದ ಸ್ವಲ್ಪ ಅನುಕೂಲವಾಗಿದೆ ಕಂಪನಿಗಳ ಅಧಿಕಾರಿಗಳು ನೌಕರಮಾನೆಯರುಗಳ ಅರ್ಜಿಯನ್ನು ಕುರಿತು ಅವರೊಡನೆ ಚರ್ಚೆ ಮಾಡಲು ಒಪ್ಪಿಕೊಂಡಿದ್ದಾರೆ

ಬಾತ್ಮಿದಾರರಿಗೆ ನೋಟೀಸು

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಎಡೆ ಕೊಡಲಾರೆವು ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ಎಡೆ ಕೊಡಲಾರೆವು

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು —ಎಡಿಟರ್

[ಬೆಂಗಳೂರಿನಲ್ಲಿರತಕ್ಕ ಎಂ ಎಸ್ ಬೀ ಆ ಇವರು ಬರೆದಿರುವ ಎರಡು ಕಾಗದಗಳಿಗೆ ಜವಾಬು —ಮಾನಸಾಂತರ ಪಟ್ಟರೇನೇ ಯೇಸುಕ್ರಿಸ್ತನು ಪಾಪಕ್ಷಮೆಯನ್ನು ದಯಪಾಲಿಸುವನು, ದೋಷ ಮಾಡಿದ್ದಕ್ಕೆ ವ್ಯಸನಪಡದೆ, ಅಂಥಾ ಕೃತ್ಯಗಳನ್ನು ಮಾಡುತ್ತಲೇ ಬರತಕ್ಕವರಿಗೆ ಯೇಸುಕ್ರಿಸ್ತನ ಕ್ಷಮೆಯು ದೊರಕಲಾರದು. ಇದೇ ಬೈಬಲಿನ ಬೋಧನೆಯಾಗಿರುತ್ತದೆ ನೀವು ಕುಡಿಯುವುದು ಪರಸ್ತ್ರೀ ಸಂಭೋಗ, ಮೋಸ, ಇವುಗಳೆಲ್ಲಾ ನಿಮಗೆ ಸಂಬಂಧಪಡುತ್ತವೆಯೋ ಇಲ್ಲವೋ ತಿಳಿಸಬೇಕು " ಎಂದು ಬರೆಯುತ್ತೀರಿ ಖಂಡಿತವಾಗಿ ಇವು ಅಕೃತ್ಯಗಳೇ ಸರಿ ಇವು ಎಷ್ಟುಮಾತ್ರಕ್ಕೂ ಸಚ್ಚರಿತ್ರೆ ಎನ್ನಿಸಿಕೊಳ್ಳಲಾರವು ಇನ್ನೊಂದು ಸಂಗತಿಯನ್ನು ನಿಮಗೆ ತಿಳಿಸಬಯಸುತ್ತೇನೆ ನೀವು ನಮಗೆ ಬರೆದ ಎರಡು ಬಾತ್ಮಿಗಳಿಗೂ ಸ್ಟಾಂಪು ಹಚ್ಚದೆ "ಮೈಸೂರು ಗವರ್ನಮೆಂಟ್ ಸರ್ವಿಸ್" ಎಂದು ಮೇಲ್ವಿಳಾಸದಲ್ಲಿ ಬರೆದು ಸರ್ಕಾರಕ್ಕೆ ಮೋಸಮಾಡಿದ್ದೀರಿ ಇದು ಸಚ್ಚರಿತ್ರೆಯೋ? ಇನ್ನು ಮುಂದೆ ನೀವು ಸ್ಟಾಂಪು ಹಚ್ಚಿ ಕ್ರಮವಾಗಿ ಬಾತ್ಮಿ ಬರೆಯದಿದ್ದರೆ ನಿಮ್ಮ ಬಾತ್ಮಿಗಳನ್ನು ನೋಡಲಾರೆವು ಮತ ವಿಷಯದಲ್ಲಿ ಅಷ್ಟು ವಿಶೇಷವಾಗಿ ಚರ್ಚೆ ಮಾಡತಕ್ಕವರಾದ ನೀವೇ ಮೊದಲು ಸತ್ಯವಂತರಾಗಿರಬೇಕಲ್ಲವೇ —ಎಡಿಟರ್

ಕರೆಸ್ಪಾಂಡೆನ್ಸ್

ವೈಶ್ಯರ ಪುರೋಭಿವೃದ್ಧಿಯ—ಸೊಳಲ್ಕೆರೆ

ಅಯ್ಯಾ,

ಕಳೆದ ೨೩ನೇ ಶನಿವಾರ ರಾತ್ರಿ ೯ ಗಂಟೆಯಲ್ಲಿ ವೈಶ್ಯರ ಕೃಷ್ಣಪ್ಪನವರ ಮನೆಯಲ್ಲಿ ವೈಶ್ಯ ಸಭೆಯು ಸೇರಿತ್ತು ಈ ಕಾಲದಲ್ಲಿ ಬೆಂಗಳೂರಿಂದ ಚಿತ್ರದುರ್ಗ ಪ್ರಾಂತ್ಯವಾಗಿ ವೈಶ್ಯ ಪವೇಶಸನ್ಯಾಸ ಮಾಡುವ ಉದ್ದೇಶವಾಗಿ ಬಂದಿದ್ದ ಕೊನ್ನಪ್ಪದಾಸರೆಂಬುವರ ವೈಶ್ಯ ಉತ್ಪತ್ತಿ, ವೇದೋಕ್ತ ಕರ್ಮ ವಿಚಾರ, ತತ್ವರಹಸ್ಯ, ವೈಶ್ಯ ರಾಜ್ಯಭಾರ ಕಥಾವಿಷಯ ವೈಶ್ಯ ಹೀನಸ್ಥಿತಿ, ವೈಶ್ಯ ವಿದ್ಯಾಭಿವೃದ್ಧಿ ಈ ಮೊದಲಾದ ವಿಷಯಗಳನ್ನು ಕುರಿತು ವೈಶ್ಯ ಮಹಾಸಭೆ ಸ್ಥಾಪಿಸಿ ಪ್ರಮುಖರು ಐಕಮತ್ಯದಿಂದ ನಡಿಸಬೇಕೆಂದು ಉಪನ್ಯಾಸವನ್ನು ಬಹು ಸರಸವಾಗಿಯೂ ವಿರಳವಾಗಿಯೂ ಸಕಲರಿಗೂ ತಿಳಿಯುವಂತೆಯೂ ಬಹು ಚನ್ನಾಗಿ ಹೇಳಿದರು ಈ ಮಾತ್ರವಲ್ಲದೆ ಚರಮೂರ್ತಿಗಳವರು ಸಹ ಮೇಲ್ಕಂಡಂತೆ ವಿದ್ಯಾ ಕೌಶಲ್ಯಕ್ಕೆ ಸರ್ವ ವೈಶ್ಯರೂ ಸಹಾಯಕರಾಗಿ ಅಭಿವೃದ್ಧಿಗೆ ಬರಬೇಕೆಂದು ಹೇಳಿದರು ನಂತರ ಮ್ಯುನಿಸಿಪಲ್ ಮೆಂಬರಾದ ಅನಂತಸಿದ್ಧರಾಮಶೆಟ್ಟರು ವೈಶ್ಯ ವೇದಕರ್ಮ ವಿಚಾರ ವಿದ್ಯಾಭಿವೃದ್ಧಿಗಳನ್ನು ನಡಿಸಲು ಸರ್ವರೂ ಐಕಮತ್ಯದಿಂದ ಸಹಾಯಕರಾಗಿ ನಡೆದುಕೊಳ್ಳಬೇಕೆಂದು ಪ್ರೋತ್ಸಾಹ ಮಾಡಿದರು ಸಭೆಯು ೧೧ ಗಂಟೆಗೆ ಬರಖಾಸ್ತು ಆಯಿತು ಬಾತ್ಮಿದಾರ್

ಉಪಕಾರಸ್ಮರಣೆ

ಅಯ್ಯಾ,

ಬೆಂಗಳೂರು ತಾಲ್ಲೂಕು ಬೇಗೂರು ಕಸಬಾದಲ್ಲಿ ಈಗ ಸುಮಾರು ೧—೨ ತಿಂಗಳಿಂದಲೂ ಪ್ಲೇಗ್ ಸಾಂಕ್ರಾಮಿಕ ರೋಗವು ತಲೆದೋರಿ ಇದುವರೆವಿಗೂ ಸುಮಾರು ೨೦—೩೦ ಜನಗಳನ್ನು ಕೊಂದು ಹಾಕಿತು ಇದನ್ನು ನೋಡಿ ಈ ಗ್ರಾಮದಲ್ಲಿನ ಧನಿಕರು ಈ ಬಾಧೆಯಿಂದ ತಪ್ಪಿಸಿಕೊಳ್ಳಲು ಊರ ಹೊರಗಡೆ ಗುಡಿಸಲುಗಳನ್ನು ಹಾಕಿಕೊಂಡು ವಾಸಮಾಡಲು ಉಪಕ್ರಮಿಸಿರುವರು ಈ ಕಾಲದಲ್ಲಿ ಕೂಲಿನಾಲಿ ವಗೈರೆಗಳಿಂದ ಅತ್ಯಲ್ಪ ಕಾಲಕ್ಷೇಪವನ್ನು ಮಾಡತಕ್ಕ ಅನೇಕ ಬಡ ಜನಗಳು ಷೆಡ್‌ಗಳನ್ನು ಹಾಕಿಕೊಳ್ಳಲು ಅನುಕೂಲವಿಲ್ಲದೆ, ಅನೇಕ ವಿಧವಾದ ಕಷ್ಟಪರಂಪರೆಗಳನ್ನು ಅನುಭವಿಸುತ್ತಿರುವುದನ್ನು ನೋಡಿ, ಇವರ ಸಂಕಟ ಪರಿಹಾರಾರ್ಥವಾಗಿ, ಉದಾರಚಿತ್ತರಾದ ಬೆಂಗಳೂರು ತಾಲ್ಲೂಕು ಬೇಗೂರು ಹೋಬಳಿಗೆ ಸೇರಿದ ದೇವರಚಿಕ್ಕನಹಳ್ಳಿ ಗ್ರಾಮದ ಪಟೇಲ್ ಮೆ। ವೀರಪ್ಪ ರೆಡ್ಡಿಯವರು ಈ ಜನಗಳಿಗೆ ಗುಡಿಸಲು ಹಾಕಿಕೊಳ್ಳಲು ಅನುಕೂಲಿಸುವಂತೆ ದ್ರವ್ಯಸಹಾಯವನ್ನೂ ಕೇವಲ ನಿರ್ಗತಿಕರಾದವರಿಗೆ ಧಾನ್ಯ ಸಹಾಯವನ್ನೂ ಮಾಡಿ ತಮ್ಮ ಔದಾರ್ಯವನ್ನು ಪ್ರಕಟಪಡಿಸಿರುವರು ಈ ರೀತಿ ಬಡಜನಗಳಿಗೆ ಸಹಾಯಮಾಡಿ ಕಾಪಾಡಿದ್ದಕ್ಕಾಗಿ, ಅವರಿಂದ ಸಹಾಯವನ್ನು ಹೊಂದಿದ ಜನಗಳೆಲ್ಲರೂ ಮೆ। ವೀರಪ್ಪ ರೆಡ್ಡಿಯವರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಅರ್ಪಿಸಲು ಅಪೇಕ್ಷಿಸುತ್ತಾರೆ

ಆರ್ ರಾಮಯ್ಯ

ಸಂತೆಯಲ್ಲಿ ಪಸಿಗೆ ಎತ್ತುವುದು

ಅಯ್ಯಾ,

ದಾವಣಗೆರೆ ತಾಲ್ಲೂಕು ಕೊಡಗನೂರು ಸಂತೆಯು ಪಸಿಗೆಯು ಕಾಟ, ಜನರ ಗೋಳಾಟ, ಮೊಂಡರ ಕಾಟ, ಯಾರ ಎದುರಿಗೆ ಹೇಳಲಿ ಪ್ರಲಾಪ' ಇದೇ ತಿಂಗಳು ತಾ ೯ ರಲ್ಲಿ ಸಂತೆಗೆ ಹೋಗಿದ್ದೆ ಈ ಸಂತೆಯ ವಿಚಾರ ನೋಡುವಲ್ಲಿ ಜನರು ತಂದಿರತಕ್ಕ ಜಿನಸಿ ಕಾಯಿಪಲ್ಯ ಮುಂತಾದವುಗಳು ತಂದದ್ದರಲ್ಲಿ ಇವರಿಗೆ ಪಸಿಗೆ ಕೊಟ್ಟು ಮಿಕ್ಕಾದ್ದನ್ನು ಸಂತೆಯಲ್ಲಿ ಖರ್ಚುಮಾಡಿಕೊಂಡು ಹೋಗಬೇಕು ಮತ್ತು ಕೆಟ್ಟ ಪಟ್ಟನಶೆಟ್ಟಿ ಇವರ ರಿವಾಜು ೧ ಪುಟ್ಟಿ ಮಾಳಿಗಾಯಿಗೆ ೫ ಕಾಯಿ, ಈ ಮೇರೆಗೆ ಕೊಡಬೇಕು ಇವರಿಗೆ ಕೊಡದಿದ್ದರೆ ಚಲುವಾದಿ ಕೂಡೆ ಪುಟ್ಟಿ ಎತ್ತಿಸುತ್ತಾರೆ ಇವರು ಅದನಂತರ ಪೋಲೀಸ್ ಕಾನ್ಸ್ಟೇಬಲ್, ತಳವಾರರು, ಚಲುವಾದಿ, ಮೊಂಡರು, ಇವರುಗಳೆಲ್ಲಾ ಸೇರಿಕೊಂಡು ಸಂತೆಯಲ್ಲಿ ಗದ್ದಗಲಿಸುತ್ತಾರೆ ಮೊಂಡರಿಗೆ ಯಾರಾದರೂ ಕೊಡದಿದ್ದರೆ ಅಂಗಡಿ ಮುಂದೆ ಕೂರಿಕೊಳ್ಳುವುದು, ತಲೆ ಬಂಡೆ ಒಡೆದುಕೊಳ್ಳುವುದು ಹೆಂಗಸರು ಅಗೋಳೇ ನಮ್ಮಪ್ಪಾ, ಮೊಂಡ ಬಂದನಲ್ಲೇ 'ಪುಟ್ಟಿಯು ಮುಟ್ಟಿದನೆ' ಇವನು ಬಂದ ಕ್ಷಣಕ್ಕೆ ದೇವರ ಮುಡುಪು ಕೊಟ್ಟಂತೆ ೧ ಪುಟ್ಟಿಗೆ ೧ ಬಿಲ್ಲೆ ಕೊಡಬೇಕು ಇಂಥಾ ದೊಡ್ಡ ಸಂತೆಯಲ್ಲಿ ಇಂಥಾ ವಿಚಾರಗಳು ನಡಿಯುತ್ತವೆ ಇದನ್ನು ಯಾವ ಮಹನೀಯರಾದರೂ ಗ್ರಾಮದ ಗೌಡ ಶಾನುಭೋಗರಾದರೂ ಜಾಗ್ರತೆಯಿಂದ ತಪ್ಪಿಸಬೇಕೆಂದು ಪ್ರಾರ್ಥಿಸುತ್ತೇನೆ

ಜೆ ಯಸ್

"ಶಿವಮೊಗ್ಗ ನೈಟ್ ಸ್ಕೂಲು"

ಅಯ್ಯಾ,

ಈ ಟವರ್‌ನಲ್ಲಿ ಹಗಲು ಕೂಲಿ ಮುಂತಾದ ಕೆಲಸಗಳನ್ನು ಮಾಡಿಕೊಂಡು ಇರತಕ್ಕ ಬಡಬಗ್ಗರಿಗೋಸ್ಕರ ಒಂದು ನೈಟ್ ಸ್ಕೂಲು ಇಲ್ಲಿನ ಹಿಂದುಸ್ಥಾನಿ ಸ್ಕೂಲು ಹೆಡ್ ಮಾಸ್ಟರ ಕುಮ್ಮಕ್ಕಿನಿಂದಲೂ ಇಲ್ಲಿ ಹಿಂದೆ ಸಬ್ ಜಡ್ಜಿಗಳಾಗಿದ್ದ ಮೆ। ವರದಾಚಾರ್ಯಂಗಾರ್ರು ಮತ್ತು ಇತರ ದೊಡ್ಡ ಮನುಷ್ಯರ ಉದಾರಾಶ್ರಯದಿಂದಲೂ ರಾತ್ರಿಯ ಹೊತ್ತು ೭ ಗಂಟೆಯಿಂದ ೮ ಗಂಟೆಯ ವರೆಗೆ ತೆರೆಯಲ್ಪಡುತ್ತಿದ್ದು, ಸುಮಾರು ಎರಡು ವರ್ಷವಾಗುತ್ತಾ ಬಂತು ಮೈಸೂರು ಗವರ್ನ್‌ಮೆಂಟಿನಿಂದಲೂ ಇದೇ ಸ್ಕೂಲಿಗೆ ಮಾಹೆಯಾನಾ ೧೫ ರೂಪಾಯಿ ಗ್ರಾಂಟು ಸಲ್ಲುತ್ತಿದೆ

ಹೀಗಿರುವಲ್ಲಿ ಈ ನೈಟ್ ಸ್ಕೂಲಿನ ಸ್ಥಿತಿಯನ್ನು ನೋಡೋಣ ಕೋರ್ಟುಗಳಲ್ಲಿ ಮಾಹೆಯಾನಾ ೧೫ ರೂಪಾಯಿಗೆ ಮೇಲ್ಪಟ್ಟು ಸಂಪಾದಿಸುವವರಿಗೆ ಜೀವನಕ್ಕೆ ಸಾಲದೇ ಇರಲೇ, ಅಥವಾ ಅವರಿಗೆ ಈ ವಿದ್ಯಾಭ್ಯಾಸದ ಇಲಾಖೆಯ ಮಾಹಿತಿಯ ಸ್ಕೂಲ್ ಮಾಸ್ಟರುಗಳಿಗಿಂತಲೂ ಅಧಿಕವಾಗಿರುತ್ತೆಂತಲೋ ಕಾಣೆ, ಹಾಲಿ ಇಲ್ಲಿನ ನೈಟ್ ಸ್ಕೂಲಿನಲ್ಲಿ ಕೋರ್ಟುಗಳಲ್ಲಿ ಕೆಲಸ ಮಾಡತಕ್ಕ ಇಬ್ಬರು ಮಾಸ್ಟರುಗಳು ಮೇಷ್ಟರುಗಳಾಗಿದ್ದಾರೆ ಇವರಿಗಿಂತಲೂ ಲಾಯಖಾದ ಮತ್ತು ಇದೇ ತಲಬಿನ ಮೇಲೆ ಕೆಲಸ ಮಾಡಿ ತಮ್ಮ ಹೆಸರನ್ನು ಪ್ರಸಿದ್ಧಿಪಡಿಸಿಕೊಳ್ಳಲಿಚ್ಛಿಸುವ ಬಡ ಸ್ಕೂಲ್ ಮಾಸ್ಟರು ಇಲ್ಲಿರುವ ೫—೬ ಸ್ಕೂಲುಗಳಲ್ಲಿ ಯಾರೂ ಇಲ್ಲವೇ ಅಂಥವರನ್ನು ನೇಮಿಸುವದು ಉತ್ತಮವಲ್ಲವೇ? ಹೀಗೆ ಮಾಡುವುದರಿಂದ ಬಡ ಮಾಸ್ಟರುಗಳಿಗೆ ತುಂಬಾ ಸಹಾಯವಾಗುವುದಿಲ್ಲವೇ ಈ ವಿಷಯವನ್ನು ನೈಟ್ ಸ್ಕೂಲಿನ ಆಶ್ರಯದಾತರೂ ಗ್ರಾಂಟ್ ದಯಪಾಲಿಸುವ ಮೈಸೂರು ಸರ್ಕಾರವೂ ಆಲೋಚಿಸಬೇಕಾಗಿ ಪ್ರಾರ್ಥನೆ

"ಶಿವಮೊಗ್ಗ ನಿವಾಸಿ."

ತಾಲ್ಲೋಕು ವರ್ತಮಾನಗಳು

ನಂಜನಗೂಡು —ಪ್ಲೇಗ್ ಗಲಾಟೆಯಿಂದ ಗುಡಿಸಲಿಗೂ ಬೇರೆ ಬೇರೆ ಗ್ರಾಮಗಳಿಗೂ ಹೋಗಿದ್ದ ಜನರು ಮನೆಗಳಿಗೆ ಬಂದು ಸೇರುತ್ತಿದ್ದಾರೆ ಸ್ಕೂಲುಗಳಿಗೆ ಹುಡುಗರು ಹೆಚ್ಚಾಗಿ ಜನಾಭ್ಯಾಸಕ್ಕೂ ಆರಂಭವಾಗಿದೆ ಪ್ಲೇಗಿನ ಭಯ ಸಂಪೂರ್ಣ ನಿಂತಿತು —ಹೋದ ಗುರುವಾರ ಚಿಕ್ಕ ಜಾತ್ರೆ ನಡೆಯಿತು ಆಗ್ಗೆ ಅನೇಕ ಜನರು ಇತರ ಕಡೆಗಳಿಂದ ಒಂದು ರಥೋತ್ಸವವನ್ನು ನೋಡಿಕೊಂಡು ಹೋದರು ಸಬ್ ಕಷ್ಣಮೂರ್ತಿಯವರು ಸಹ ದಯಮಾಡಿದ್ದರು. ಅನೇಕ ಬ್ರಾಹ್ಮಣರಿಗೆ ದೇವಸ್ಥಾನದಲ್ಲಿ ಸುಖ ಭೋಜನವಾಯಿತು ಧಾರವಾಡದ ಕಡೆಯಿಂದ ಒಬ್ಬ ಸ್ವದೇಶಾಭಿಮಾನಿಗಳು ಬಂದು ಒಂದೆರಡು ಸ್ಥಳಗಳಲ್ಲಿ ಜನರಿಗೆ ಉಪನ್ಯಾಸಮಾಡಿದರು ಅವರ ಮುಖ್ಯೋದ್ದೇಶ "ವಂದೇಮಾತರಂ" ಎಂಬ ಅಭಿಪ್ರಾಯವಾಗಿದೆ ಸ್ವದೇಶವಸ್ತುಗಳನ್ನು ಸ್ವೀಕಾರ ಮಾಡಲು ಪರದೇಶ ವಸ್ತುಗಳನ್ನು ಬಹಿಷ್ಕಾರ ಮಾಡಲು ಉಪನ್ಯಾಸ ಮಾಡಿದರು ವಸ್ತುಗಳು ಇಲ್ಲದೆ ಸ್ವೀಕಾರ ಮಾಡುವದು ಹ್ಯಾಗೋ ಗೊತ್ತಿಲ್ಲ ಪರದೇಶದ ಬಟ್ಟೆ, ಎಣ್ಣೆ, ಸಕ್ಕರೆ, ಚೀನಾ ಸಾಮಾನುಗಳು ಬಹಿಷ್ಕರಿಸಿಬಿಟ್ಟರೆ, ಸ್ವದೇಶಾಭಿಮಾನಿಗಳು ಇವುಗಳನ್ನು ಸಿದ್ಧಪಡಿಸಿ ಸುಲಭ ಬೆಲೆಗೆ ಕೊಡಬೇಕಷ್ಟೆ ಹಾಗೆ ಕೊಡಲು ಶಕ್ತಿ ಇಲ್ಲದೆ ಹೇಳಿದರೆ ಪ್ರಯೋಜನವಾದೀತೇ?

ದೊಡ್ಡಬಳ್ಳಾಪುರ.—ಈ ತಿಂಗಳ ಪ್ರಾರಂಭದಲ್ಲಿ ಒಂದೆರಡು ಹದ ಮಳೆ ಸುರಿಯಿತು. ಹೊಲಗಳು ಕೊಯ್ಯುತ್ತಾ ಇದ್ದಾರೆ ಈ ತಾಲ್ಲೋಕಿನ ಅನೇಕ ಗ್ರಾಮಗಳಲ್ಲಿ ಪ್ಲೇಗ್ ಗಲಾಟೆಯಾದ್ದರಿಂದ ಊರುಗಳನ್ನು ಬಿಟ್ಟು ಇದ್ದಾರೆ —ಮುಂದಿನ ತಿಂಗಳು ಇಲ್ಲಿಗೆ ಕ್ಯಾಂಪ್ ಬರುವದಕ್ಕೆ ಇದೆ ಈ ಸಾರಿ ೨೨ ಮಂದಿ ವಿದ್ಯಾರ್ಥಿಗಳು ಪರೀಕ್ಷೆಗಾಗಿ ಹೋಗಿದ್ದರು ಪೋಲೀಸ್ ಜಮಾದಾರ್ ಹನುಮಂತರಾಯಪ್ಪ ಇನ್ಸ್‌ಪೆಕ್ಟರ್ ಬದಲಿ ಕೆಲಸದ ಮೇಲೆ ಆನೆಕಲ್ಲಿಗೆ ಹೋದರು. ಇವರಿಗೆ ಬದಲಿಯಾಗಿ ಮುನಿಶಾಮಪ್ಪನವರು ಬಂದಿದ್ದಾರೆ —ಕೆಲವು ದಿನಗಳಿಂದ ಕೊಳ್ಳೇಗಾಲ ಕಂಪನಿ ನಾಟಕದವರು ಬಂದು ಬಹಳ ಆಟಗಳನ್ನು ಆಡಿದರು ಆಟವು ಚನ್ನಾಗಿದ್ದ ಕಾರಣ ಈ ಊರಿನವರು ಈ ಕಂಪನಿಯವರಿಗೆ ಒಂದು ಚಿನ್ನದ ಮೆಡಲನ್ನು ಬಹುಮಾನ ಕೊಟ್ಟರು ಈ ಬಳ್ಳಾಪುರಕ್ಕೆ ೩ ಮೈಲಿ ದೂರದಲ್ಲಿ ಅರಳಮಲ್ಲಿಗೆ ಕೆರೆಯು ದೊಡ್ಡದಾಗಿದೆ ಊರಿನ ಸಮೀಪದ ತೂಬಿನ ಗುಂಡಿಯು ಎರಡು ಆಳು ಪ್ರಮಾಣಕ್ಕಿಂತಲೂ ಆಳವಾಗಿರುವದನ್ನು ತಿಳಿಯದ ಜನರು ಹೋಗಿ ನೀರು ಕುಡಿಯಲಿಕ್ಕೆ ಕಾಲು ಇಟ್ಟು ಮುಣಗಿ ಹೋಗುತ್ತಾರೆ. ಹೋದ ವರ್ಷ ಒಬ್ಬ ನಗರ್ತರ ಹುಡುಗನು ಇದರಲ್ಲಿ ಸತ್ತನು ಒಂದು ವಾರದ ಹಿಂದೆ ಗೋರೀಬಿದನೂರಿನ ನಾಗ ಎಂಬುವನು ತಿಳಿಯದೆ ಕಾಲಿಟ್ಟು ಮುಣಗಿ ಸಾಯುತ್ತಿರುವಾಗ ಹತ್ತಿರ ಇದ್ದವರು ಎತ್ತಿದರಂತೆ, ಇಂಥ ಅಪಾಯ ಸಂಭವಿಸದಹಾಗೆ ಈ ತೂಬಿಗೆ ಮೆಟ್ಟಲುಗಳನ್ನು ಸರ್ಕಾರದವರು ಹಾಕಿಸಿದರೆ ತುಂಬಾ ಉಪಕಾರ

ಮಂಡ್ಯ.—ಈಚೆಗೆ ತಿಂಗಳಿಂದ ಇಲಿ ಪ್ಲೇಗ್ ವ್ಯಾಧಿಯು ಕಡಿಮೆಯಾಗುತ್ತ ಉಪಶಮನವಾಗಿರುತ್ತದೆ ಆದರೆ ಸುತ್ತುಮುತ್ತು ಗ್ರಾಮಗಳಲ್ಲಿ ಇಂಡರೆ, ಹೊಸಹಳ್ಳಿ, ಬೇಲೂರು, ಸಾತನೂರುಗಳಲ್ಲಿ ಈ ವ್ಯಾಧಿಯು ಇನ್ನೂ ಪ್ರಬಲವಾಗಿರುವದರಿಂದ ಜನರು ಊರೊಳಗೆ ಬರಲು ಹಿಂಜರಿಯುತ್ತಾರೆ ಕೆಲವರು ಅಮಾವಾಸ್ಯೆ ತೀರಿದ ಮೇಲೆ ತಮ್ಮ ಮನೆಗಳನ್ನು ಶುಚಿಮಾಡಿಕೊಂಡು ಬರಬೇಕೆಂದಿದ್ದಾರೆ —ಕ್ಯಾತನಹಳ್ಳಿ ಗ್ರಾಮದ ಪಾಠಶಾಲೆಯಲ್ಲಿ ಕಳೆದ ಇದಿನೈದು ವರುಷಗಳಿಂದ ಉಪಾಧ್ಯಾಯನಾಗಿದ್ದ ಕೆಂಪಯ್ಯನಿಗೆ ಈ ತಿಂಗಳ ಪ್ರಾರಂಭದಲ್ಲಿ ಪ್ಲೇಗ್ ವ್ಯಾಧಿಯು ತಗಲಿ ಕಾಲವಾದನು ಈತನು ಮೇಲ್ಕಂಡ ಗ್ರಾಮದ ಪಾಠಶಾಲೆಯಲ್ಲಿ ವಿದ್ಯೆ ಕಲಿತು ಅಲ್ಲೇ ಉಪಾಧ್ಯಾಯನಾಗಿ ಒಳ್ಳೆ ರೀತಿ ನತ್ತಿನಿಂದ ವಿಧೇಯನಾಗಿ ಕೆಲಸ ಮಾಡುತ್ತಿದ್ದನು ಈ ಗ್ರಾಮದ ಜನರು ಪ್ಲೇಗ್ ಗಲಾಟೆಯ ನಿಮಿತ್ತ ಗುಡಿಸಲುಗಳಲ್ಲಿ ವಾಸಮಾಡುತ್ತಿದ್ದು ಕಳ್ಳರ ಅವಾಂತ್ರ ಬಹಳವಾಗಿದೆ ಗ್ರಾಮದವರು ರಾತ್ರಿಹೊತ್ತು ನಿದ್ರೆ ಹೋಗದೆ ಕಳ್ಳರನ್ನು ಹಿಡಿಯಬೇಕೆಂದು ಪ್ರಯತ್ನಿಸ ವರು ಆದರೆ ಸಿಕ್ಕುವದಿಲ್ಲ ಇನ್ಸ್‌ಪೆಕ್ಟರು ತಕ್ಕ ಉಸ್ತುವಾರಿ ಇಟ್ಟು ಕಳ್ಳರನ್ನು ಹಿಡಿಯುವದಕ್ಕೆ ಗಮನಕೊಡಬೇಕಾಗಿದೆ —ಕೆಲಿಕೆರೆ, ಅರವಟ್ಟಿಹಳ್ಳಿ, ಕೆಸಲಿಗೆರೆ ಎಂಬೀ ಮೂರು ಗ್ರಾಮಗಳಲ್ಲಿ ಈ ತಿಂಗಳ ಪ್ರಾರಂಭದಿಂದ ಐದು ದಿನಗಳ ವರೆಗೆ ಮಹಾದೇಶ್ವರನ ಜಾತ್ರೆಯು ಬಹಳ ವಿಜೃಂಭಣೆಯಿಂದ ನಡಿಯಿತು ಒಕ್ಕಲಿಗರು, ಕುರುಬರವರು, ಲಿಂಗಾಯತರು ತಂಡೋಪತಂಡವಾಗಿ ಬಂದಿದ್ದರು ಈ ಜಾತ್ರೆಯಲ್ಲಿ ಮೇಲ್ಕಂಡ ಪಂಗಡದವರು ಮಹಾದೇಶ್ವರನಿಗೆ ಸಲ್ಲಿಸುವಂಥಾ ಕಾಣಿಕೆ ಮುಂತಾದ್ದನ್ನು ಮುಖ್ಯಸ್ಥರಾದ ಕೊಸಪ್ಪ ಸರಗೂರೈಯ್ಯನವರಿಗೆ ಸಲ್ಲಿಸಿ ಅವರಿಂದ ಆಶೀರ್ವಾದವನ್ನು ಪಡೆದುಕೊಳ್ಳುತ್ತಾ ಇದ್ದರು

ಚಿಕ್ಕಮಗಳೂರು —ಪ್ಲೇಗಿನ ಗಲಾಟೆ ಕಡಿಮೆಯಾಗಿದೆ ಕಳೆದ ವಾರ ಕಾಯಿಲೆಯಾಗಿದ್ದ ೨—೩ ಮಂದಿ ಈ ವಾರ ತೀರಿಹೋದರು ಹೊಸದಾಗಿ ಕಾಯಿಲೆ ಏನೂ ಕಾಣಲಿಲ್ಲವೆಂದು ಹೇಳುತ್ತಾರೆ ಪ್ಲೇಗಿನ ಟೀಕಾ ಹಾಕುವದಕ್ಕಾಗಿ ಮೆ। ರಾಮ ಚಂದ್ರಯ್ಯರು ಇಲ್ಲಿಗೆ ಬಂದು ಉಪನ್ಯಾಸ ಮಾಡಿದರು ಆ ಕಾಲದಲ್ಲಿ ಟೀಕಾ ಹಾಕಿಸಿಕೊಳ್ಳುವದು ಒಳ್ಳೇದೆಂದು ಶ್ರೀನಿವಾಸರಾಯರು ನಮ್ಮ ಡಾಕ್ಟರ್ ಸಾಹೇಬರು ಡೆಪ್ಯುಟಿ ಕಮಿಷನರ್ ಸಾಹೇಬರೂ ಸ್ವಲ್ಪ ಸ್ವಲ್ಪವಾಗಿ ಮಾತಾಡಿದರು ಕಡೆಯಲ್ಲಿ ಹಾಕಿಸಿಕೊಂಡವರ ಸಂಖ್ಯೆಯೇನೋ ಬಹು ಕಡಿಮೆಯೇ ಈಗ ಪ್ಲೇಗ್ ರೋಗವು ನಿಂತುಹೋಗುತ್ತಿರುವ ಪ್ರಯುಕ್ತ ಮುಂದೇನಾದರೂ ರೋಗ ತಲೆ ಹಾಕುವದಾದರೆ ಆಗ ಟೀಕಾ ಹಾಕಬಹುದೆಂದು ನಿಲ್ಲಿಸಿ ಬೇರೆ ಕಡೆ ಪ್ರಯಾಣಮಾಡುವವರಾಗಿದ್ದಾರೆಂದು ಕೇಳುತ್ತೇವೆ —ಇಲ್ಲಿ ಈ ಸಲ ಲೋಯರ್ ಸೆಕೆಂಡರಿ ಪರೀಕ್ಷೆಗಾಗಿ ಸೇರಿದ್ದ ಹುಡುಗರ ಸಂಖ್ಯೆ ೧೫೫ ಎಂದೂ, ಆ ಪೈಕಿ ಮೂರು ಹುಡುಗಿಯರೆಂದೂ ತಿಳಿಯಿತು —ನಮ್ಮ ಡೆಪ್ಯುಟಿ ಕಮಿಷನರು ಕೆಂಪ್ಪದ ಕಡೆಗೆ ಸರ್ಕೀಟು ಹೋಗಿದ್ದವರು ಮಂಗಳವಾರ ವಾಪಸ್ಸು ಬಂದರು. ಮ್ಯುನಿಸಿಪಾಲಿಟಿಯವರು ರಿಪೇರಿ ಆಗಬೇಕಾಗಿರುವ ಮೋರಿ ನಲ್ಲಿಗಳನ್ನು ಒಂದು ವರುಷವಾದರೂ ಮಾಡದೇಬಿಟ್ಟಿರುವುದು ಯಾತಕ್ಕೋ ತಿಳಿಯಲಿಲ್ಲ ಇಲ್ಲಿನ ಹೈಸ್ಕೂಲ್ ಪಕ್ಕದಲ್ಲಿರುವ ನಲ್ಲಿಯು ತಿರುಗಿ ಹೋಗಿ ಬಹು ದಿವಸಗಳಾದರೂ ಅದರ ವಿಷಯ ಯಾರೂ ಲಕ್ಷ್ಯಕೊಡುತ್ತಿಲ್ಲದಿರುವಂತೆ ತೋರುತ್ತಿದೆ ಮೂರು ಸ್ಕೂಲುಗಳ ಹುಡುಗರೂ ತಿರುಗಾಡುವ ಜನರೂ ಸಂತೇ ದಿನ ವ್ಯಾಪಾರಕ್ಕಾಗಿ ಈ ದಾರಿಯಲ್ಲಿ ಸಂಚರಿಸುವವರೂ ಅಲ್ಲಿ ನಿಂತಿರುವ ಕಲ್ಲನ್ನೂ ಒಂದು ನೀರನ್ನು ಕುಡಿಯಲು ಹೋಗಿ ನಲ್ಲಿಯು ತಿರುಗಿ ಇಲ್ಲದಿರುವದನ್ನು ನೋಡಿ ನಿರುತ್ಸಾಹಗೊಳ್ಳುವರಾಗಿ ಹೋಗುವರು ಆದ್ದರಿಂದ ಬೇಗ ಜನರಿಗೂ ಓದುವ ಬಾಲಕ ಬಾಲಕಿಯರಿಗೂ ಪ್ರಯೋಜನವಾಗಿರುವ ಈ ನಲ್ಲಿಯನ್ನು ಶೀಘ್ರವಾಗಿ ರಿಪೇರಿ ಮಾಡಿಸಿ ಕೊಡುವುದು ಉಪಕಾರವಾದೀತು

ಚಿತ್ರದುರ್ಗ —ಇಲ್ಲಿನ ಪೋಸ್ಟ್ ಆಫೀಸಿನಲ್ಲಿ ಕೆಲವು ಬದಲಾವಣೆಗಳು ನಡೆದಿವೆ ಈ ವರಿಗೂ ಹೆಡ್ ಆಫೀಸಾಗಿದ್ದ ಈಗ ಇದು ಸಬ್ ಆಫೀಸಾಯಿತು ಮತ್ತು ಊರಲ್ಲಿ ಇನ್ನೊಂದು ಬ್ರಾಂಚಾಫೀಸು ಹೊಸದಾಗಿ ಆರಂಭವಾಗಿ ನಡಿಯುತ್ತಲಿದೆ ಇವುಗಳೆಲ್ಲಕ್ಕೂ ಹೆಡ್ಡಾಫೀಸ್ ಶಿವಮೊಗ್ಗೆಯಾಗಿದೆ ಪೋಸ್ಟ್ ಮಾಸ್ಟರ್ ಮೆ। ವಿ ಎ ಭಗವಾನಯ್ಯನವರು ತಿರುಚಿನಾಪಲ್ಲಿಗೆ ವರ್ಗವಾಗಿ ಹೋದರು —ಇಲ್ಲಿ ಇನ್ನೊಂದು ವಿಶೇಷವಾದ ಕಾರ್ಯವು ಆರಂಭವಾಗಿ ನಡಿಯುತ್ತಲಿದೆ. ಈ ಡಿಸ್ಟ್ರಿಕ್ಟಿನ ಸುತ್ತಣ ಗ್ರಾಮಾಂತರಗಳಲ್ಲಿ ಕಮ್ಮನಾಯಕ, ವೇಟ ರೆಡ್ಡಿ, ಭಟ್ಟರಾಜರೆಂಬ ಮೂರು ಪಂಗಡದವರು ಸುಮಾರು ೧೦ ಸಾವಿರ ಜನಗಳ ಮೇಲ್ಪಟ್ಟು ಇದ್ದಾರೆ ಇವರಲ್ಲಿ ಕನ್ನಡ ತೆಲುಗು ಸಮಾನವಾಗಿ ರೂಢಿಯಾಗಿದೆ ಆದರೆ ರಾಜಭಾಷೆಯಾದ ಇಂಗ್ಲೀಷು ಬಲ್ಲವರು ಒಬ್ಬರೂ ಇಲ್ಲ ಇದಕ್ಕಾಗಿ ಬಹು ಮಂದಿ ಯೋಚಿಸುತ್ತಿರುವಲ್ಲಿ ಮಾರ್ಗ ಕಾಣದೆ ಇರುವಾಗ ಆರ್ಯ ಸಮಾಜಕ್ಕೆ ಸೇರಿದ ಹಿರಿಯರಾದ ಎ ವಿ ಸ್ಕೂಲ್ ಅಸಿಸ್ಟೆಂಟ್ ಹನುಮಂತರಾಯರವರು ಕೇವ

ಅಶ್ವಾರ್ಥತೆಯಿಂದ ಈ ಊರಿಗೆ ಬಂದು ಆ ಮೂರು ಜಂಗಡದ ಮೂಲಗೋಸ್ಕರ ಸ್ಟೂಡೆಂಟ್ಸ್ ಹೋಮನ್ನು ಸ್ಥಾಪಿಸುತ್ತಿದ್ದಾರೆ ಅಲ್ಪ ವೆಚ್ಚದಿಂದ ವಿದ್ಯಾರ್ಥಿಗಳಿಗೆ ಮನೆ, ಭೋಜನ, ವಿದ್ಯೆ ಸುಲಭ ಸಾಧ್ಯವಾಗಿ ದೊರಕುತ್ತಿವೆ ಈಗಾಗಲೆ ೧೦—೧೨ ಜನ ವಿದ್ಯಾರ್ಥಿಗಳು ಇವರ ಆಶ್ರಯದಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ ಇವರಿಗೆ ಸಹಾಯಕರಾಗಿ ಬಂದಿರುವ ಜನರೊಳಗೆ ಪಟೇಲ್ ತಿಮ್ಮಪ್ಪನವರು ವಿಶ್ವವಿದ್ಯಾಲಯದ ಇಂಟ್ರೆನ್ಸಿನವರು ಮುಂತಾದ ಪತ್ತು ಜನ ಮನುಷ್ಯರು ನಿಂತಿದ್ದಾರೆ ಹನುಮಂತ ರಾಯರು ಹಿರಿಯ ಸ್ಕೂಲಿನಿಂದ ಈ ಊರಿನ ಎ ವಿ ಸ್ಕೂಲಿಗೆ ತಮ್ಮನ್ನು ವರ್ಗಾಯಿಸಬೇಕೆಂದು ಸರ್ಕಲ್ ಇನ್ಸ್ಪೆಕ್ಟರಿಗೂ, ಇನ್ಸ್ಪೆಕ್ಟರ್ ಜನರಲ್‌ರವರಿಗೂ ಅರ್ಜಿ ಬರೆದುಕೊಂಡಿದ್ದಾರೆ ಈ ವಿಷಯವನ್ನು ಅಧಿಕಾರಿಗಳು ಗಮನಕೊಟ್ಟು ಅವರನ್ನು ಇಲ್ಲಿಗೆ ವರ್ಗಾಯಿಸಿಕೊಡುವರೆಂದು ನಿರೀಕ್ಷೆ ಇದೆ ಯಾಕೆಂದರೆ ಅವರು ಆರಂಭಿಸಿರುವ ಈ ಕಾರ್ಯ ಪ್ರಯೋಜನಕಾರಿಯಾದದ್ದು ಸಂದೇಹವಿಲ್ಲ ಈ ವಿಧವಾದ ಸ್ವಾರ್ಥಕ ಸಂಘವು ಎಲ್ಲೆಲ್ಲಿಯೂ ಪ್ರೋತ್ಸಾಹಕರವಾದದ್ದು ಮುಖ್ಯವಾಗಿ ವಿದ್ಯೆಯಲ್ಲಿ ಬಹಳ ಹಿಂದೆಬಿದ್ದಿರುವ ಒಕ್ಕಲಿಗರಾದ ಪ್ರಜೆಗಳಿಗೆ ಇದು ಪ್ರಯೋಜನಕಾರಿಯಾಗಿರುವದರಿಂದ ಸರ್ಕಾರದವರು ಪ್ರಕಟವಾಗಿ ಸ್ಥಾಪಿತವಾಗಿರುವ ಒಕ್ಕಲಿಗರ ಮಹಾ ಸಭೆಯು ಮುಖ್ಯವಾಗಿ ಇದಕ್ಕೆ ತಕ್ಕ ಪ್ರೋತ್ಸಾಹವನ್ನು ಕೊಡಬೇಕಾಗಿದೆ ...ಮಗಳು ದಿನಕ್ಕೊಂದು ವಿಧ ಜಾಸ್ತಿಯಾಗುತ್ತಲೆ ಇವೆ ದುಂಡಾಗಿನ ಪ್ಲೇಗಿನ ಉಪದ್ರವ ಇನ್ನು ಕಡಮೆಯಾಗಲಿಲ್ಲ ಈ ಊರಲ್ಲಿ ಈ ವರಿಗೂ ಅದರ ವ್ಯಾಧಿ ಅಸ್ಥಿರವಾಗಿರುವದು —ನೆರ್ಪ ...ಗಳು ಇಲ್ಲಿಗೆ ಪ್ರಾರಂಭವಾಗಿರುವ ವರ್ತಮಾನವಿದೆ ಅವರಿಗಾಗಿ ನಾಳ್ಕಡು ವೇಶದ್ವಾರಗಳು ಸಿದ್ಧವಾಗಿರುತ್ತವೆ

ಪ್ರಕಟನೆಗಳು

ಬಕಬಿಟ್ಟಿದ್ದು.

93 13

ಸ್ವಲ್ಪ ನಿತ್ರ, ಸ್ತ್ರೀಕ್ಷಾರವೆಂಬದರ ಅರ್ಥವು ವರಣವೆಂಬದು ... ವರ್ತಮಾನ ಪತ್ರಿಕೆಗಳಲ್ಲಿ ಆಶ್ಚರ್ಯಕರವಾದ ಬರವಣಿಗೆ ... ನಿಮ್ಮ ಎಂದು ಓದಿಲ್ಲವೆ? ... ಅದು ಬಂದು ಔಷಧ ... ಬರಲಿಲ್ಲವೆ? ಆ ಲೇಖನವನ್ನು ... ಬರ ಪಾ ಹಸಲಿನಿಂದ ನಾವು ತಿಳಿ... ನಮ್ಮ ಸಿಹಿ ... ಅನುಭವವಾಗಿದ್ದರಿಂದ ಮಾತ್ರವಾಗಿರ... ಅದರ ... ಪ್ರಸಿದ್ಧ ಡಾಕ್ಟರುಗಳಲ್ಲಿ ಒಬ್ಬರ ಹೇಳಿ... ಕಲ್ಕತ್ತೆಯ ... ಆಸ್ಪತ್ರೆಯ ... ಡಾಕ್ಟರ್ ... ಹೇಳುವದೇನೆಂದರೆ — ... ಎಂಬವರ ... ಔಷಧಗಳಿಗಿ... (ಡೋನ್ಸ್ ಓ ... ಪಿಲ್ಸ್) ... ಔಷಧಿಗಳ... ಬದಿ... ರೋಗಿ... ಔಷಧದಿಂದ ಚನ್ನಾಗಿ ... ನೀರು ... ಸಂಕಟ ಪಡುತ್ತಿದ್ದನು ... ೧೦೭ ಡಿಗ್ರೀಸ್ ... ತೆಗೆ... ಹೀಗೆಯೇ ... ಧಮಾ ... ರೋಗಿಗೆ ದಿನ ಒಂದಕ್ಕೆ ೬ ಡಿಗ್ರೀಸ್ ಮಾತ್ರ ... ಆತನಿಗೆ ... ಮಾತ್ರೆಗಳು ... ದಿನ ಒಂದಕ್ಕೆ ೩೨ ಡಿಗ್ರೀಸ್ ... ಆತನು ... ಆರೋಗ್ಯಸ್ಥಿತಿಗೆ ಬಂದ ... ಹೀಗೆಯೇ ಡೋನ್ಸ್‌ರ ಈ ಔಷಧದಿಂದ ಅನೇಕ ಜನರಿಗೆ ಗು... ಸಿಕ್ಕಿರುವದರಿಂದ ಇದು ಬಹಳ ಅಮೂಲ್ಯವಾದ ಔಷಧವಾಗಿರು... ಜಲೋಧರ ವ್ಯಾಧಿಯು ಇಷ್ಟು ಹೆಚ್ಚು ವಿಶಾರಿಸೋದರೆ ... ಈ ಸಂಗತಿಯು ... ಆಸ್ಪತ್ರೆಯಲ್ಲಿ ರಿಕಾರ್ಡು ಮಾಡಲ್ಪಟ್ಟಿರುವದರಿಂದ ಯಾರೂ ಸಂದೇಹಪಡಬೇಕಾಗಿಲ್ಲ ... ಮೂತ್ರ ಬಾಧೆ — ... ಜಲೋಧರವೆ ಮೂತ್ರಕೋಶದ ರೋಗದಿಂದ ... ಇವುಗಳಿಗೆಲ್ಲಾ ಈ ಮಾತ್ರೆಗಳು ಉತ್ತಮವಾದ ಔಷಧವಾಗಿರುವದು

ಎಲ್ಲಾ ಔಷಧ ವರ್ತಕರಿಂದ ಮಾರಲ್ಪಡುತ್ತದೆ ಸೀಸೆ ಒಂದಕ್ಕೆ ೧ ೨ ಅಥವಾ ೬ ಸೀಸೆಗಳಿಗೆ ರೂ ೧೦—೮—೦ ಅಥವಾ ಮುಂಬಾಯಿಯಲ್ಲಿಯ ಡೋನ್ಸ್‌ರ ಔಷಧಗಳ ಕೋಠಿಯಿಂದ ನೇರಾ ತರಿಸಿಕೊಳ್ಳಬಹುದು ಪಿ ಬಿ ಬಾಕ್ಸ್ ನಂ ೨೦, ಮುಂಬಾಯಿ

ವ್ಯವಹಾರನಿರ್ಣಯ.

ಹೊಸ ಕನ್ನಡ ಲಾ ಪುಸ್ತಕವು

124 2

ಈ ಪುಸ್ತಕದ ಮೊದಲನೆಯ ಮುದ್ರಣದ ಪ್ರತಿಗಳು ಶೀಘ್ರವಾಗಿ ಹಿಂದೆಯೇ ಮುಗಿದು, ಅಂದಿನಿಂದಲೂ ೨ ನೇ ಮುದ್ರಣ ನಡೆಯುತ್ತಿದೆ ಈ ಪುಸ್ತಕವನ್ನು ನಿರೀಕ್ಷಿಸುತ್ತಲೂ, ಕೂಡಲೆ ಕಳು... ಕಳುಹಬೇಕಾಗಿ ಅಪೇಕ್ಷಿಸುತ್ತಲೂ ಇರುವ ಲೇಖಕರಿಗೆ ವಿಜ್ಞಾಪಿಸಿ... ಕೊಳ್ಳುವುದೇನೆಂದರೆ— ೨ನೇ ಮುದ್ರಣದ ಪ್ರತಿಯನ್ನು ಅಪೇಕ್ಷಿಸಿ ಬರೆದವರ ಹೆಸರನ್ನು ರಿಜಿಸ್ಟರಲ್ಲಿ ಬರೆದುಕೊಂಡಿದ್ದು, ಮುದ್ರಣವು ಪೂರೈಸಿದ ಕೂಡಲೆ ಮುಂದಿನ ತಿಂಗಳು ಡಿಸೆಂಬರ್ ಮಧ್ಯದಲ್ಲಿ ಪುಸ್ತಕವನ್ನು ರವಾನಿಸುವೆವು ಇದಕ್ಕಿಂತ ಮುಂಚೆ ದೊರೆಯದು ... ಪುಟಗಳು ೫೦೦ ಕ್ಕಿಂತ ಕಡಮೆಯಾಗುವುದಿಲ್ಲ

ಶ್ರೀರಾಮಪೇಟೆ, ಮೈಸೂರು

ಎಂ ಮಲ್ಲಾರಾಧ್ಯರು, ಫಸ್ಟ್ ಗ್ರೇಡ್ ಪ್ಲೀಡರ್

ನಿಮಗೆ ನೋವು ಇದೆಯೋ?

58 27

ಹಾಗಾದರೆ "ಕ್ಲವೆಂಟ್ ಯುವರ ಮ್ಯಾಜಿಕ್ ಬಾಂ" ನ್ನು ಏಕೆ ಉಪಯೋಗಿಸಬಾರದು? ಆಶ್ಚರ್ಯಕರವಾದ ಬಾಧಾಪಹಾರಿಯು! ಈಗಿನ ಶತಮಾನದಲ್ಲಿ ಕಂಡು ಹಿಡಿದ ದೊಡ್ಡ ನೂತನವು!

ಈ ರಾಜ ಔಷಧವನ್ನು ಹೊಟ್ಟೆಗೊಡಲು ತೊಡೆಯುತ್ತಲೆ ಕೆಲವು ನಿಮಿಷಗಳೊಳಗಾಗಿ ನರ ಮತ್ತು ಮಾಂಸ ಸಂಬಂಧವಾದ ವ್ಯಾಧಿ ನೋವು, ಕೀಲುಗಳ ಬಾಧೆ, ಶಿಬ್ಲೆಟ್ಟಿ ನೋವು, ಬೆನ್ನು ಹೊಯ್ಯುವದು, ತಲೆನೋವು, ಕೆಮ್ಮು, ಕೀಲುಗಳು ಕಿತ್ತರಿಸುವದು, ಕೊರಳು ಹಿಡಿತ, ಕೈಕಾಲು ಬಿಡಿತ ಇವುಗಳನ್ನೆಲ್ಲಾ ವಿದ್ಯುಚ್ಛಕ್ತಿಯಂತೆ ಗುಣಪಡಿಸುವದು ಈ ಔಷಧವು ಆಶ್ಚರ್ಯಕರವಾಗಿ ಗುಣಪಡಿಸುವದರಿಂದ ಎಲ್ಲರಲ್ಲಿಯೂ ಪ್ರಸರಿಸುತ್ತಾ ಬರುವದು ಇತರ ಔಷಧಿಗಳು ಗುಣಪಡಿಸದೆ ಹೋದಾಗ ಡಾಕ್ಟರ್ ಫೀಜನ್ನು ಕಡಿಮೆಮಾಡಿ ಇದು ನಿಸ್ಸಂದೇಹವಾಗಿಯೂ ಗುಣಪಡಿಸುವದು

ಕ್ರಯ —೧ ಬಾಟ್ಲಿಗೆ ೧೨ ಆಣೆ, ಪೋಸ್ಟೇಜ್ ೪ ಆಣೆ ೩ ಬಾಟ್ಲಿಗೆ ಅಂಚೆವೆಚ್ಚ ಸೇರಿ ರೂ ೨—೪ ಆಣೆ ಎಲ್ಲಾ ಕೆಮಿಸ್ಟ್ ಷಾಪುಗಳಲ್ಲಿ ದೊರೆಯುವದು

ನಮ್ಮ ವಿಳಾಸ —ಎಫ್ ಡಬ್ಲಿಯು. ಆರ್ಟ,
ಸಿಮೆಟ್ರಿ ರೋಡ್, ವೇಪೇರಿ, ಮದರಾಸ್.

ನರಳುವನಮ್ಮ ಸಹೋದರರ ಮೇಲಣ ವಾತ್ಸಲ್ಯದಿಂದ ಕ್ರಯಗಳನ್ನು ಬಹುಮಟ್ಟಿಗೆ ಕಡಮೆಮಾಡಿದೆ

ಅದ್ಭುತವಾದ ಔಷಧಗಳು ನಮ್ಮ ಸತ್ಯತೆಯನ್ನು ಪರೀಕ್ಷಿಸಿ ನೋಡಿ ದಿವ್ಯತರದ ಔಷಧಗಳು

121 8

೧ ಘಟಾಲಾ ನೋವುಹರ—ಇದನ್ನು ಹಚ್ಚಿದಮಾತ್ರಕ್ಕೆ ಕೆಮ್ಮು, ತಲೆನೋವು, ವಾಯು ನೋವು, ಪಾದ ನಡ ... ಸರ್ವಾಂಗಗಳ ಬಾಧೆಗಳು ನಿವಾರಣೆಯಾಗುವವು ಕ್ರಯ ೩ ಆಣೆ

೨ ಘಟಾಲಾ ಪ್ರಖ್ಯಾತವಾದ ಸುವಾಸನೆಯುಳ್ಳ ಕೇಶತೈಲ—... ತಲೆ ನೆಗಡಿ ... ಎಲ್ಲಾ ಹೋಗಿ ತಲೆಯು ... ತಂಪಾಗಿ ... ಕೂದಲು ಅಪಾರವಾಗಿ ... ಯುವದು ಕ್ರಯ ೩ ಆಣೆ.

೩ ಘಟಾಲಾ ಹುಳುಕಡ್ಡಿ ಹರ—ಇದನ್ನು ನೋಟ ಹಚ್ಚುವದರಿಂದ ... ವಾಸಿಮಾಡುವುದು ಕ್ರ ೬ ಆ

೪ ಘಟಾಲಾ ಚೇಳು ಕಡಿದ ವಿಷಹರ—ಕಡಿದ ಸ್ಥಳಕ್ಕೆ ಒಂದೆರಡು ... ಗಳನ್ನು ಹಾಕಿದ ಬಳಿಕ ವಾಸಿಮಾಡುವುದು ೪ ಆ

೫ ಘಟಾಲಾ ಹಲ್ಲುಪುಡಿ—ಹಲ್ಲಿನ ನೋವು ವಾಸಿಮಾಡಿ ಹಲ್ಲುಗಳು ಗಟ್ಟಿಮಾಡುವದು ಕ್ರಯ ೪ ಆಣೆ.

೬ ಘಟಾಲಾ ಉಷ್ಣಹರ—ಇದು ಹರೆ ವಾಸಿಯಾಗದೆ ಇರುವ ಉಷ್ಣವನ್ನು ... ಮಾಡುವುದು ಕ್ರಯ ೨ ಆಣೆ

೭ ಘಟಾಲಾ ಕೂದಲು ಬಣ್ಣ—ಬಿಳೀ ಕೂದಲನ್ನು ಕಪ್ಪುಮಾಡುತ್ತದೆ ಸಾವಿರಾರು ಜನರು ಇದರ ಗುಣವನ್ನು ಹೊಗಳಿದಾರೆ ೮ ಆ

೮ ಘಟಾಲಾ ಮೂತ್ರರೋಗಗಳ... ಕ್ರಯ ೮ ಆಣೆ

೯ ಘಟಾಲಾ ಮುಖ ಕಾಂತಿ ವೃದ್ಧಿ—ಮುಖದ ಮೊಡವೆ ಗುಳ್ಳೆ ... ತೆಗೆದು ಚರ್ಮಕ್ಕೆ ಸೌಂದರ್ಯಕೊಡುತ್ತೆ ೬ ಆ

೧೦ ಘಟಾಲಾ ಪಿತ್ತಹರ—ಇದು ಎಲ್ಲಾ ತರದ ಪಿತ್ತಪ್ರಕೋಪವನ್ನು ವಾಸಿಮಾಡುವುದು ಕ್ರಯ ೮ ಆಣೆ

೧೧ ಘಟಾಲಾ ಪಿತ್ತ ಕಫಹಾರಿ—ಜ್ವರವನ್ನು ನಿವಾರಿಸಿ, ಆಹಾರ ರುಚಿಸಿ ಪಚನವಾಗುವಂತೆ ಮಾಡತ್ತೆ ಕ್ರಯ ೮ ಆಣೆ

೧೨ ಘಟಾಲಾ ಜ್ವರನಾಶಿನಿ—ಎಲ್ಲಾ ತರದ ಜ್ವರಗಳನ್ನೂ ನಾಶ ಮಾಡುವುದು ಕ್ರಯ ೮ ಆಣೆ

೧೩ ಘಟಾಲಾ ಕುಷ್ಠಪರಿಹಾರಿಣಿ—ಎಲ್ಲಾ ಚರ್ಮರೋಗಗಳ... ವಿಶೇಷವಾಗಿ ಕುಷ್ಠವು ಗುಣವಾಗುವುದು ಕ್ರಯ ೧೨ ಆಣೆ

೧೪ ಘಟಾಲಾ ಕಾಲರಾ ನಾಶಿನಿ—ಕ್ರಯ ೮ ಆಣೆ

೧೫ ಘಟಾಲಾ ಕಿವಿ ನೋವುಹಾರಿ—ಕಿವುಡು ವಾಸಿಯಾಗುತ್ತೆ ಕ್ರಯ ೮ ಆಣೆ

೧೬ ಘಟಾಲಾ ಕೆಮ್ಮಿನ ಔಷಧ—ಕ್ರಯ ೬ ಆಣೆ

೧೭ ಘಟಾಲಾ ಅಮಶಂಕೆ ಔಷಧ—ಕ್ರಯ ೮ ಆಣೆ

೧೮ ಘಟಾಲಾ ಬೇಕರ ನಿವಾರಣ—ಕ್ರಯ ೧೨ ಆಣೆ

೧೯ ಘಟಾಲಾ ವಾಯು ಹಾರಿಣಿ—ಕ್ರಯ ೬ ಆಣೆ

೨೦ ಆನೆಕಾಲು ರೋಗಕ್ಕೆ ಔಷಧ—ಕ್ರಯ ರೂ ೧

ಐದು ರೂಪಾಯಿಗಿಂತ ಹೆಚ್ಚು ಔಷಧ ಕೊಂಡರೆ ರೂಪಾಯಿಗೆ ೧ ಆಣೆಯಂತೆ ಡಿಸ್ಕೌಂಟು ಹತ್ತು ರೂಪಾಯಿಗಿಂತ ಹೆಚ್ಚಿನದಕ್ಕೆ ೨ ಆಣೆಯಂತೆ ಡಿಸ್ಕೌಂಟು, ಇಪ್ಪತ್ತು ರೂಪಾಯಿಗಿಂತ ಹೆಚ್ಚಿನದಕ್ಕೆ ಶೇಕಡಾ ೧೦ ರಂತೆ ಡಿಸ್ಕೌಂಟು ಈರೀತಿ ನಾವು ಕೊಡುವೆವು

ಇದಲ್ಲದೆ, ಎಲ್ಲಾ ವಿಧವಾದ ರೋಗಗಳಿಗೂ ನಮ್ಮಲ್ಲಿ ಖಾತರಿಯಾದ ಒಳ್ಳೇ ಔಷಧಗಳು ಅಪಾರವಾಗಿ ದೊರಕುವವು ಮೇಲ್ಕಂಡ ಔಷಧಗಳಿಂದ ಆಯಾ ರೋಗಗಳು ಖಂಡಿತವಾಗಿ ವಾಸಿಯಾಗುತ್ತವೆಂಬ ಭಾಗದಲ್ಲಿ ನಾವು ಜಾಮೀನುದಾರರಾಗಿದೇವೆ ವಾಸಿಯಾಗದೆಹೋದರೆ ಹಣವನ್ನು ಖಂಡಿತ ವಾಪಸು ಕೊಡುತ್ತೇವೆ ನಮ್ಮ ವಿಳಾಸ —

ಎಂ. ಎ. ಘಟಾಲಾ ಮತ್ತು ಕಂಪನಿ,
ಚಿತ್ತೂರು, ಉತ್ತರ ಆರ್ಕಾಟು.

ಇಲ್ಲಿ ನೋಡಿ!

65 21

ತುಮಕೂರು ವಿಕ್ಟರ್ ಇಲಾಖೆಯಲ್ಲಿ ಯೂರೋಪಿಯನ್ ಮೇಲ್ವಿಚಾರಣೆಯಿಂದ ಉತ್ತಮ ತರದ ಹಾಸನದ ಟೋಪಿಗಳು ಅತಿ ಶ್ರೇಷ್ಠವಾದ ಉಲ್ ದಾರದಿಂದ ತಯಾರಾಗುತ್ತವೆ

ಕ್ರಯ —೧೨ ಆಣೆ ಮೊದಲ್ಗೊಂಡು ೧ ರೂ ೧೨ ಆಣೆಯ ವರೆಗೆ

೧ ಡಜನ್ ಟೋಪಿಗಳನ್ನು ತೆಗೆದುಕೊಳ್ಳುವವರಿಗೆ ಶೇಕಡ ೫ ರಂತೆ ಡಿಸ್ಕೌಂಟ್ ಕೊಡಲ್ಪಡುವದು

ನಮ್ಮ ವಿಳಾಸ —ಮೇನೇಜರ್,
ಹಾಸನದ ಟೋಪಿ ಕಾರ್ಖಾನೆ, ವಿಕ್ಟರ್ ಇಲಾಖೆ, ತುಮಕೂರು.

ಮದರಾಸು ಸೀರೆಗಳು.

123 2

ಹೊಸನಮೂನೆ! ಎ ಬಿ ಖಚಿತ ೮ ಆಣೆ ಬಾಜಾರಿ ಬೆಲೆ!!

ಶ್ರೇಷ್ಠವಾದ ಕಪ್ಪು ನೂಲಿನಿಂದ ತಯಾರಿಸಿ ಪ್ರಸಿದ್ಧವಾದ ಬಿಳಿಯ ಅಸಲು ರೇಷ್ಮೆಯ ಅಂಚುಗಳಿಂದ ಮಿಂಚುತ್ತೆ ನೋಡಲಿಕ್ಕೆ ... ಉಡಲು ಬಹು ಒಳಿಕೆ ಹರಿದರೂ ಬಣ್ಣ ಕೆಡದು ನೋಡಲು ... ಬಿಳಿ, ಹಳದಿ ರೇಷ್ಮೆಗಳ ಸಿಂಗರಿಸಿ ... ಅಡೆಯಲ್ಲಿಯೂ ಒಂದೊಂದು ಗಜದುದ್ದವಳ್ಳ ಈ ಸೀರೆಗಳು ೧ ಗಜದಗಲ ೯ ಗಜದುದ್ದ ಧಾರಾಳವಾಗಿದೆ ಇಷ್ಟು ಉತ್ತಮ ಮಾಲು ಮತ್ತೆಲ್ಲಿಯೂ ಸಿಕ್ಕದು ಪ್ರತ್ಯಕ್ಷ ತರಿಸಿ ಉಪಯೋಗಿಸಿದರೆ ಸೀರೆಯ ಉತ್ಕೃಷ್ಟತೆಯು ಸ್ಪಷ್ಟವಾಗುತ್ತೆ ಕ್ರಯ: ೨ ಅಂಗುಲ ರೇಷ್ಮೆಯಂಚಿನವಕ್ಕೆ ರೂ ೯—೮—೦, ೩ ಅಂಗುಲ ಅಂಚಿನವಕ್ಕೆ ರೂ ೧೧—೮—೦

ವಿಳಾಸ —ದಾನ್ ಎಂಪೋರಿಯಂ, ಸ್ಮಿರ್ಣಾಮ ರೋಡ್,
ವೇಪೇರಿ, ಮದರಾಸು

ಗುಣಕಾರಿಯಾದ ಸಿದ್ಧೌಷಧಗಳು.

ಸರ್ವ ಜ್ವರಹಾರಿಣಿ ಎಲ್ಲಾ ಜ್ವರಗಳನ್ನು ೩ ದಿವಸದಲ್ಲಿ ಪರಿಹರಿಸುತ್ತೆ ರೂಪಾಯಿ ೧ ರೋಗಸಂಜೀವಿನಿ ಕೃಶರನ್ನೂ ಮುದುಕರನ್ನೂ ದೃಢಾಂಗರನ್ನಾಗಿ ಮಾಡಿಸುತ್ತೆ ರೂ ೨ ಎಲ್ಲಾ ರೋಗಗಳಿಗೂ ಖಾತರಿಯಾದ ಔಷಧಿಗಳು ದೊರೆಯುತ್ತೆ

ವಿಳಾಸ — ಎಸ್ ಆರ್ ದೇವ್, ಸ್ಮಿರ್ಣಾಮ ರೋಡು,
ವೇಪೇರಿ ಮದರಾಸು

ದೀಪಾವಳಿಗಿಯ ಬಹುಮಾನ!

ಒಳ್ಳೆಯ ಸಮಯ!! ತ್ವರೆಮಾಡಿ!!!

128 1

ನಮ್ಮಲ್ಲಿ ದೊರೆಯುವ ಈ ಕೆಳಗೆ ಕಂಡ ಕನ್ನಡದ ನವೀನ ಗ್ರಂಥಗಳನ್ನು ಭಾಷಾಭಿಮಾನಿಗಳೆಲ್ಲರೂ ತರಿಸಿಕೊಂಡು ಓದಿ ಸಂತೋಷಪಡಬೇಕೆಂಬ ಉದ್ದೇಶದಿಂದಲೂ ಕನ್ನಡಿಗರ ಪ್ರೋತ್ಸಾಹವನ್ನು ಅಪೇಕ್ಷಿಸಿ ಮಾಡಬೇಕೆಂತಲೂ ೧೯೦೮ ನೆಯ ಇಸವಿ ಫೆಬ್ರವರಿ ತಿಂಗಳ ವರೆಗೆ ಮಾತ್ರ ನಮ್ಮ ಪುಸ್ತಕಗಳಲ್ಲಿ ಒಂದು ರೂಪಾಯಿ ಬೆಲೆ ಬಾಳುವ ಪುಸ್ತಕಗಳನ್ನು ತರಿಸಿಕೊಳ್ಳುವವರಿಗೆ ಪ್ರತಿ ಒಂದು ರೂಪಾಯಿಗೂ ೩ ಆಣೆ ಕ್ರಯ ಬಾಳುವ 'ಸ್ತೋತ್ರಮಾಲಿಕೆ, ೨ ಆಣೆ ಕ್ರಯ ಬಾಳುವ ಶೃಂಗಾರಶತಕ "ಲಾಲಾ ಲಜಪತ್ ರಾಯ್‌ರವರ ಭಾವಚಿತ್ರ, ಬಿ ಸಿ ಪಾಲ್ ರವರ ಭಾವಚಿತ್ರ,' ಶ್ರೀಮನ್ಮಹಾರಾಜರವರ ಮತ್ತು ಶ್ರೀಮದ್ಯುವರಾಜರವರ ಭಾವಚಿತ್ರಗಳಿಂದ ಕೂಡಿದ ೧೯೦೮ ನೇ ಸ್ವದೇಶೀ ಬಂಗಾಲಿ ಕ್ಯಾಲೆಂಡರ್, ಈ ಇವನ್ನು ಉಚಿತವಾಗಿ ಕಳುಹುತ್ತೇವೆ ೫ ರೂಪಾಯಿ ಬೆಲೆ ಬಾಳುವ ಪುಸ್ತಕಗಳನ್ನು ತರಿಸಿಕೊಳ್ಳುವವರಿಗೆ ಮೇಲ್ಕಂಡ ಬಹುಮಾನಗಳಲ್ಲದೆ 'ಸೀತಾಚರಿತ್ರೆಯ' ಪೂರ್ವಭಾಗವನ್ನೂ, ೧೯೦೮ ನೆಯ ಇಸವಿಯ ಒಂದು ಡೈರಿಯನ್ನೂ ಉಚಿತವಾಗಿ ಕಳುಹಿಸುತ್ತೇವೆ ಅಂಚೆ ವೆಚ್ಚ ಬೇರೆ

'ನಿರುಪಮಾ'—ಇದು ಐದು ಅಂಕಗಳುಳ್ಳ ಹೊಸ ಕನ್ನಡದ ನವೀನ ನಾಟಕ ಸಂತಾನಕನೆಂಬ ದುಷ್ಟನು ಅನೇಕ ಘೋರ ಕೃತ್ಯಗಳನ್ನು ಮಾಡಿ ನಿರುಪಮೆಯನ್ನು ಅಪಹರಿಸಿಕೊಂಡು ಬಂದುದೂ, ಕಪಾಲಿಯ ಸಹಾಯತ್ವವೂ, ವೈದ್ಯಶಾಲೆಯಲ್ಲಿ ನಡೆಯುತ್ತಿದ್ದ ಕೃತ್ಯಾಕೃತ್ಯಗಳೂ, ಇವೇ ಮೊದಲಾದ ಅನೇಕ ವಿಷಯಗಳು ಅಡಕವಾಗಿವೆ ಆಡುವುದಕ್ಕೂ ಓದುವುದಕ್ಕೂ ಅನುಕೂಲಿಸುವಂತೆ ಹೊಸಗನ್ನಡದಲ್ಲಿರುವ ಈ ಗ್ರಂಥವನ್ನು ಓದುವುದಕ್ಕೆ ಪ್ರಾರಂಭಿಸಿದರೆ ಕೊನೆಮುಟ್ಟುವ ವರೆಗೂ ಬಿಡುವುದಕ್ಕೆ ಮನಸ್ಸಾಗುವುದಿಲ್ಲ ೧೨ ಆಣೆ

"ಕೃಷ್ಣವಿಜಯ"—ಇದರಲ್ಲಿ ರುಕ್ಮಿಣೀದೇವಿಯ ವಿವಾಹಮಹೋತ್ಸವವೂ, ರುಕ್ಮಿ ಶಿಶುಪಾಲಾದಿಗಳೊಡನೆ ಕೃಷ್ಣನು ಯುದ್ಧಮಾಡಿ ಗೆದ್ದುದೂ, ಯುದ್ಧರಂಗ ವರ್ಣನೆಯೂ ಲಲಿತವಾದ ಹಳಗನ್ನಡದಲ್ಲಿ ಬರೆಯಲ್ಪಟ್ಟಿದೆ ಯುದ್ಧವನ್ನು ಪ್ರತ್ಯಕ್ಷವಾಗಿ ನೋಡಬೇಕೆಂದು ಅಪೇಕ್ಷಿಸುವವರೆಲ್ಲರೂ ಇದನ್ನೋದಿ ಕೃತಸಂಕಲ್ಪರಾಗಬಹುದು ಇದರ ಬೆಲೆ ೬ ಆಣೆ

'ಪ್ರಿಯದರ್ಶಕ'—ಪ್ರಸಿದ್ಧ ಕವಿಯಾದ ಶ್ರೀಹರ್ಷನ ಗ್ರಂಥದ ಭಾಷಾಂತರ ನಾಲ್ಕು ಅಂಕಗಳುಳ್ಳ ಈ ನಾಟಕದಲ್ಲಿ ಮತ್ತೊಂದು ಗರ್ಭನಾಟಕವಿರುವುದರಿಂದ ಕಥಾಸಂವಿಧಾನವು ಸಾಮಾನ್ಯ ಜನರಿಗೆ ಕೌತುಕಾಸ್ಪದವಾಗದಿರಲಾರದು ಇದರ ಬೆಲೆ ೩ ಆಣೆ

"ಸೀತಾಚರಿತ್ರೆ"—ರಾಮಾಯಣದ ಕಥೆಯೆಲ್ಲಾ ಹೆಂಗಸರಿಗೂ ಮಕ್ಕಳಿಗೂ ಸುಲಭವಾಗಿ ಅರ್ಥವಾಗುವಂತೆ ಶ್ರೀಮನ್ಮಹಾರಾಣೀ ರೀಜೆಂಟರವರ ಆಜ್ಞಾನುಸಾರ ಷಟ್ಪದೀ ರೂಪವಾಗಿ ಬರೆಯಲ್ಪಟ್ಟಿದೆ ಹದಿನಾರು ಅಧ್ಯಾಯಗಳುಳ್ಳ ಈ ಪುಸ್ತಕದ ಬೆಲೆ ೮ ಆಣೆ

"ಉತ್ತರ ಸೀತಾಚರಿತ್ರೆ"—ಇದರಲ್ಲಿ ರಾಮಾಯಣದ ಉತ್ತರಕಾಂಡವೆಲ್ಲಾ ಸೀತಾಚರಿತ್ರೆಯಂತೆಯೇ ಬರೆಯಲ್ಪಟ್ಟಿದೆ ೨ ಆಣೆ

"ಸತ್ಯವತೀ ಚರಿತ್ರೆ"—ಇದರಲ್ಲಿ ಅತ್ತೆಸೊಸೆಯರ ಜಗಳ, ಅತ್ತಿಗೆ ನಾದಿನಿಯರ ಕಲಹ, ಅವಿದ್ಯಾವತಿಯರ ಮತ್ತು ವಿದ್ಯಾವತಿಯರ ತಾರತಮ್ಯ, ಇವೇ ಮೊದಲಾದ ಸಾಂಸಾರಿಕ ಸಂಭಾಷ್ಯ ವಿಷಯಗಳು ಕಥಾರೂಪವಾಗಿ ಹೇಳಲ್ಪಟ್ಟಿವೆ ಸಕಲರೂ ತರಿಸಿಕೊಂಡು ಓದಬೇಕಾದದ್ದು ಕೆಲವು ಪ್ರತಿಗಳು ಉಳಿದಿವೆ ಇದರ ಬೆಲೆ ೫ ಆಣೆ

ನಿಮ್ಮ ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಿರಿ ನಮ್ಮ ವಿಳಾಸ—
ಅರಮನೆಯ ವಿದ್ವಾಂಸ ನಂಜನಗೂಡು ಶ್ರೀಕಂಠಶಾಸ್ತ್ರಿ,
ಕೃಷ್ಣರಾಜ ಮೊಹಲಾ, ಮೈಸೂರು.

ಸುಖಪಟ್ಟ ಸ್ತ್ರೀಯರು ಪೆರೂನಾವನ್ನು ಹೊಗಳುತ್ತಾರೆ.

ಪೆರೂನಾ ಪ್ರಖ್ಯಾತಿ ಹೊಂದಿರುವುದು ಅದರ ಗುಣದಿಂದ, ಬರೀ ಮಾತಿನಿಂದಲ್ಲವು.

ಪೆರೂನಾ ಪ್ರಖ್ಯಾತಿ ಹೊಂದಿರುವುದು ಅದರ ಗುಣದಿಂದ ಬರೀ ಮಾತಿನಿಂದಲ್ಲವು [illegible] ಪೆರೂನಾವನ್ನು ಹೊಗಳುತ್ತಾರೆ [illegible] ಪೆರೂನಾವಿನ ಗುಣವನ್ನು [illegible] ಹೆಂಗಸರೂ ತಮ್ಮ ತಮ್ಮ ದೇಹದ ಗುಪ್ತವಾದ [illegible] ಳಲ್ಲಿ ಬಿದ್ದು, ಪೆರೂನಾ ಸೇವನೆಯಿಂದ [illegible] ತ್ತಾರೆ.

ಲಕ್ಷಣವಾಗಿರುವ ಹೆಣ್ಣು ಮಕ್ಕಳೂ, ಸುಂದರಿಯರಾದ ಸ್ತ್ರೀಯರೂ, ಬಲಹೀನರಾದ ಹೆಣ್ಣು ಮಕ್ಕಳೂ [illegible] ಎಲ್ಲಾ ಪ್ರದೇಶಗಳಲ್ಲೂ ಪೆರೂನಾ ಸೇವಿಸಿ ತಮ್ಮ ಸ್ವಭಾವಕ್ಕೆ ಅನುಗುಣವಾದ [illegible] ನಿವಾರಣೆಮಾಡಿಕೊಂಡು ಅದರ ಗುಣವನ್ನು ತಿಳಿದಿರುತ್ತಾರೆ [illegible] ಅನೇಕ ವಿಧಗಳಲ್ಲಿ ಪೆರೂನಾವಿಗೆ ಕೃತಜ್ಞರಾಗಿರುವರು.

ಇದೆಲ್ಲಾ ಯಥಾರ್ಥವಾಗಿರುತ್ತವೆ [illegible]


MRS SOPHIA CALDWELL


MISS ANNIE HENDREN

[illegible] ಅದನ್ನು ಹೇಳುವುದಕ್ಕೆ ಚಿಂತೆಗಳು [illegible] ಅವಳ ಮಾತ ಕೇಳಿ ಇತರ ಹೆಂಗಸರು ನಂಬುತ್ತಾರೆ. ಈ [illegible] ಪೆರೂನಾವಿನ ಹೆಸರ [illegible] ಹಬ್ಬುತ್ತದೆ [illegible] ಲಕ್ಷಾಂತರ ಜನಗಳವರು [illegible] ನಂಬಿಕೆಗೆ ಅರ್ಹವಾದಂಥಾ ಮನೆ ಔಷಧವೆಂದು ಒಪ್ಪಿಕೊಳ್ಳುತ್ತಾರೆ.

ಅನೇಕ ಸಣ್ಣ ಸಣ್ಣ ಕಾಯಿಲೆಗಳಿಗೆ [illegible] ಒಳ್ಳೆಯ ದಾಗಿದೆ [illegible] ಹುಟ್ಟುವ ಅನೇಕ ಗಟ್ಟಿ ಕಾಯಿಲೆಗಳನ್ನೂ ಹೆಂಗಸರಿಗೆ ಸಾಮಾನ್ಯವಾಗಿ [illegible] ಶರೀರದ ಅಕ್ರಮಗಳನ್ನೂ ಪೆರೂನಾ ಕಡಿಮೆ ಮಾಡಬಲ್ಲದೆಂದು ನಂಬತಕ್ಕದ್ದಾಗಿದೆ. [illegible] ಪೆರೂನಾ ಗುಣದಿಂದ ವಾಸಿಮಾಡಿಕೊಳ್ಳಬಹುದು.

ಮಿಸ್ [illegible] ಈಕೆ ಬರೆಯುವುದು —

"ನಾನು ನಿತ್ಯ ಪೆರೂನಾ [illegible] ಸೇವಿಸುತ್ತಾ ಇದ್ದೇನೆ ನನ್ನ [illegible] ವೆಲ್ಲಾ ವಾಸಿಯಾಯಿತೆಂದು ಹೇಳಬಲ್ಲೆನು. ನೀವು [illegible] ತೋರಿಸಿದ್ದಕ್ಕಾಗಿ ನಿಮ್ಮನ್ನು ವಂದಿಸುತ್ತೇನೆ."

ಮಿಸ್ ಆನ್ನಿ ಹೆಂಡ್ರನ [illegible] ಈಕೆ ಬರೆಯುವುದು —

"ನಾಲ್ಕು ವರುಷಗಳ ಹಿಂದೆ [illegible] ನಾನು [illegible] ಬಾಟ್ಲುಗಳ ಪೆರೂನಾ ಔಷಧವನ್ನು ಹಿಂದು [illegible] ನಾನು [illegible] ನನ್ನ ಎಲ್ಲಾ ಕೆಲಸಗಳನ್ನೂ ಮಾಡಿಕೊಳ್ಳಬಲ್ಲೆನು.

"ಪೆರೂನಾವು ಮಹಾ [illegible] ಔಷಧವೆಂದು [illegible] ನನ್ನ ಮಾತನ್ನು ಕೇಳದೆ [illegible] ನಂಬುತ್ತೇನೆ. ನಾನು ಅನೇಕ ತರದ ಔಷಧಗಳನ್ನು [illegible] ನನಗೆ ಸ್ವಲ್ಪವೂ ಗುಣವಾಗಲಿಲ್ಲ. ಪೆರೂನಾ [illegible] ಪೆರೂನಾವನ್ನು ಎಷ್ಟು ಹೊಗಳಿದರೂ ಸಾಲದು."

ಅನ್ನಾ [illegible], ಆರ್ [illegible] ಈಕೆ ಬರೆದ ವಾದ — "ನಾನು [illegible] ಧರ್ಮದ ಕಾಯಿಲೆಯನ್ನು ಹದಿಮೂರು ವರುಷಗಳ ತನಕ ಅನುಭವಿಸಿದೆನು. [illegible] ಪ್ರಸಿದ್ಧ ಡಾಕ್ಟರುಗಳು ಹೇಳಿದ್ದನ್ನೆಲ್ಲಾ ಮಾಡಿದೆನು. ಎಲ್ಲಾ [illegible] ಯೋಜನವಾಯಿತು [illegible] ನಾನು [illegible] ಡಾಕ್ಟರುಗಳು ನನ್ನ ಗರ್ಭಕೋಶವನ್ನು ಶಸ್ತ್ರ [illegible] ಬೇಕೆಂದು [illegible] ಆದರೆ ನಾನು ಅದಕ್ಕೆ ಸಮ್ಮತಿಸಲಿಲ್ಲ. ಪೆರೂನಾ ಎಂಬ ಔಷಧದ ಪ್ರಕಟನೆಯನ್ನು ಓದಿ ಒಂದು ಬಾಟ್ಲನ್ನು ಕೊಂಡು ತೆಗೆದುಕೊಳ್ಳುತ್ತಾ ಬಂದೆನು. ಒಂದು ಬಾಟ್ಲು [illegible] ನನಗೆ [illegible] ಮೂರು ಬಾಟ್ಲು ಔಷಧ ಸೇವನೆಮಾಡಿದ ವೇಳೆ ನಾನು ಯಥಾಪ್ರಕಾರ ಸುಖವಾದೆನು. ನನ್ನ [illegible] ಸಂಬಂಧಗಳು [illegible] ಹದಿನೆಂಟು [illegible] ತೂಗುತ್ತಿದ್ದವಳು ನೂರ [illegible] ದ್ದೇನು. ನಿಮ್ಮ ಔಷಧವು [illegible] ಇದ್ದು ಮಾತ್ರ ಅದ್ಭುತವಾದದ್ದು. ಅದಿಲ್ಲದೆಹೋಗಿದ್ದರೆ ನಾನು ಈ ವರೆಗೆ ಗೋರಿಯಲ್ಲಿರುತ್ತಿದ್ದೆನು. ರೋಗ ಪೀಡಿತರಾದ ಸ್ತ್ರೀಯರಿಗೆಲ್ಲಾ ಇದನ್ನೇ ಉಪಯೋಗಿಸಬೇಕೆಂದು ತಿಳಿಸುತ್ತೇನೆ. [illegible] ಕೊಟ್ಟರೂ ನಾನು ಅದನ್ನು ಬಿಟ್ಟಿರಲಾರೆನು."

[illegible] ಸ್ಥಳದ [illegible] ಮಾ [illegible] ಈಕೆ ಬರೆಯುವುದು — [illegible] ಗರ್ಭಕೋಶದ [illegible] ನಾನು [illegible] ನಾನು ಪೆರೂನಾವನ್ನು ಸೇವಿಸಿ [illegible] ಎಲ್ಲಾ ಹೊಗಳಿಕೆಯೂ ಸನ್ಮಾನವೂ ಪೆರೂನಾವಿಗೇ [illegible] ಹೇಳುತ್ತೇನೆ.

ಮಿಸಸ್ [illegible] ಬರೆಯುವುದು — [illegible] ನಿಶ್ಶಕ್ತಿಯಿಂದ [illegible] ಆದುದರಿಂದ ನನ್ನ ಶಕ್ತಿಯೆಲ್ಲಾ ಕುಗ್ಗಿ [illegible] ಪೆರೂನಾ ಈ ನನ್ನ [illegible] ವಾಸಿಮಾಡಿತು. ಆದ್ದರಿಂದ ಅದ ಉತ್ಕೃಷ್ಟವಾದ್ದೆಂದು ನಾನು ಹೇಳುವುದೇನು [illegible] ನನ್ನ ರೋಗ ನಿವಾರಣೆಗಾಗಿ ಈಗ [illegible] ಆ ರೋಗದ [illegible] ನಾನು ಈ ರೀತಿ ಹೇಳುವ [illegible] ಈ ಔಷಧ ಮಾತ್ರವಲ್ಲವೆಂದು ಸಂತೋಷಪಡುತ್ತೇನೆ. [illegible] ಅನೇಕ ಕಾಯಿಲೆ [illegible] ಈ ನನ್ನ ಮಾತನ್ನು ಓದಿ ನಂಬತಕ್ಕದ್ದಾಗಿದೆ.

ಮಿಸೆಸ್ ಮಾರ್ಥಾ [illegible] ಸೆಂಟ್ರಲ್ [illegible], ಎಲ್ [illegible] ಈಕೆ ಬರೆಯುವುದು — [illegible] ನನಗೆ ಎಷ್ಟು ಉಪಕಾರವಾಗಿದೆಯೋ ಅದನ್ನು ಬರೆದು [illegible] ನನ್ನ [illegible] ಸ್ವಲ್ಪ [illegible] ಆರು ವರುಷಗಳ ತನಕ ನಾನು ನರಳಿದೆನು. ಅನೇಕ ಡಾಕ್ಟರುಗಳಲ್ಲಿ ಚಿಕಿತ್ಸೆಮಾಡಿಸಿದ್ದಾಯಿತು. ಅವರು [illegible] ಔಷಧಿಯು ಗುಣಮಾಡಲಿಲ್ಲ. [illegible] ನನ್ನ ಗಂಡನು ಔಷಧಕ್ಕಾಗಿ ಬಹಳ ಹಣ ಖರ್ಚು ಮಾಡಿದನು.

ನಿರಾಶೆಯಾಗಿ ಕಡೆಯಲ್ಲಿ ಪೆರೂನಾವನ್ನು ಪರೀಕ್ಷೆ ಮಾಡೋಣವೆಂದು ಸೇವನೆ ಮಾಡಲಾರಂಭಿಸಿದೆನು. ನಿಮ್ಮ [illegible] ಪ್ರಕಾರ ಮೊದಲನೇ ಬಾಟ್ಲ ಮುಗಿಯುವಷ್ಟರಲ್ಲಿ ಸ್ವಲ್ಪ ಉಪಶಮನವಾಯಿತು. [illegible] ನನಗೆ ಬೆನ್ನಿನ ನೋವು ಇಲ್ಲವೇ ಇಲ್ಲ. [illegible] ಪೆರೂನಾವನ್ನು ಸೇವಿಸಿದೆನು. ಈಗ ನಮ್ಮ ಮನೆಗೆ ಡಾಕ್ಟರ ಪ್ರವೇಶವೇ ಅಗತ್ಯವಿಲ್ಲವಾಯಿತು.

ವಿಳಾಸ — ಈ ಔಷಧ ಸಿಕ್ಕುವ ಸ್ಥಳಗಳು —

(೧) [illegible] ಅಂಡ್ ಸನ್ಸ್, ಬೆಂಗಳೂರು

(೨) ಇಂಗ್ಲಿಷ್ ಡ್ರಗ್ ಕಂಪನಿ, [illegible] ಮಿಂಟ್ ಬೀದಿ, ಮದರಾಸ್

38 31

ಮೈಸೂರು ಸೀಮೆಯಲ್ಲಿ ಪ್ಲೇಗ್ ಕಾಲರಾ ಸ್ಥಿತಿ

8 – 1 – 907 ರಿಂದ 15 – 1 – 1907 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	51	40	0	0
ಮೈಸೂರು ,,	71	50	0	0
ಬೆಂಗಳೂರು ಡಿಸ್ಟ್ರಿಕ್ಟು	107	147	0	0
ಮೈಸೂರು ,,	88	70	0	0
ಕೋಲಾರ್ ,,	[illegible]2	40	0	0
ಕೋಲಾರ್ ಚಿನ್ನದ ಗಣಿಗಳು	[illegible]1	33	0	0
ತುಮಕೂರು ಡಿಸ್ಟ್ರಿಕ್ಟು	35	29	0	0
ಹಾಸನ	15	12	0	0
ಚಿತ್ರದುರ್ಗ	5	5	0	0
ಕಡೂರ್	14	13	0	0
ಶಿವಮೊಗ್ಗ	0	0	0	0
ಒಟ್ಟು	377	[illegible]39	0	0

ಕುಲಪಾಳನ ಶಕ ವರ್ಷಂಗಳು ೧೮೨೯ನೇ ಪ್ಲವಂಗನಾಮ ಸಂವತ್ಸರದ ಕಾರ್ತಿಕ ಬಹುಳ [illegible] ಗುರುವಾರದಿಂದ [illegible] ಬುಧವಾರದ ವರೆಗಿನ ಒಂದು ವಾರದ ಪಂಚಾಂಗ ೧೯೦೭ನೇ ಇಸವಿ ನವಂಬರ್ ಮತ್ತು ಡಿಸೆಂಬರ್

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	[illegible]
28	ಗುರು	ಅಷ್ಟಮಿ	24 38	[illegible]	1 46	13
29	ಶುಕ್ರ *	ನವಮಿ	31 36	[illegible]	8 38	14
30	ಶನಿ †	ದಶಮಿ	33 34	[illegible]	1[illegible] 11	3
1	ಭಾನು	ಏಕಾದಶಿ	33 03	[illegible]	11 30	16
2	ಚಂದ್ರ	ದ್ವಾದಶಿ	31 28	[illegible]	1 8	1[illegible]
3	ಕುಜ	ತ್ರಯೋದಶಿ	3 2	[illegible]	10 30	18
4	ಬುಧ	ಚತುರ್ದಶಿ	26 25	[illegible]	11 19	19

* ಅಮೃತಯೋಗ † [illegible]

ಸರ್ವತ್ರ ಏಕಾದಶಿ

ಕಾರ್ತಿಕ ಸೋಮವಾರ

ಮಾಸಶಿವರಾತ್ರಿ ಪ್ರದೋಷ

ಪೇಟೆಯ ಧಾರಣೆ

ದಿನಸಿ	ಮೈಸೂರ	ಬೆಂಗಳೂರು
ಕಲ್ಲು ಅಕ್ಕಿ [illegible]	[illegible]	[illegible]
ಕಂಬಸಾಲೆ ಅಕ್ಕಿ [illegible]	[illegible]	[illegible]
[illegible]	[illegible]	[illegible]
ರಾಗಿ [illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
ತೊಗರಿ ಬೇಳೆ ಪಲ್ಲ [illegible]	[illegible]	[illegible]
[illegible]	[illegible]	[illegible]
[illegible] ಪಲ್ಲ [illegible]	[illegible]	[illegible]
ಕಾಳು [illegible]	[illegible]	[illegible]
ಜೋಳ	[illegible]	[illegible]
ಹಲಸಂದೆ ಪಲ್ಲ [illegible]	[illegible]	[illegible]
ಬಿಳೀ ಅವರೆ	[illegible]	[illegible]
ಹೆಸರ	[illegible]	[illegible]
ಉದ್ದು	[illegible]	[illegible]
ಕಡಲೆ	[illegible]	[illegible]
ಎಳ್ಳು [illegible]	[illegible]	[illegible]
ಹುರುಳಿ	[illegible]	[illegible]
[illegible]	[illegible]	[illegible]
ಸೀಗೇಕಾಯಿ [illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
ಬೆಲ್ಲ [illegible]	[illegible]	[illegible]
ಒಳ್ಳೆ [illegible]	[illegible]	[illegible]
ಸಕ್ಕರೆ ,,	[illegible]	[illegible]
ಕೊಬ್ಬರಿ ಪಲ್ಲ [illegible]	[illegible]	[illegible]
ಉಪ್ಪು	[illegible]	[illegible]
[illegible]	[illegible]	[illegible]
[illegible]	[illegible]	[illegible]
ತುಪ್ಪ [illegible]	[illegible]	[illegible]
ಸೀಮೆಯೆಣ್ಣೆ [illegible]	[illegible]	[illegible]
ತೆಂಗಿನಕಾಯಿ ೧೦೦ಕ್ಕೆ	[illegible]	[illegible]
ಅರಳೇಕಾಯಿ ಮಣ [illegible]	[illegible]	[illegible]
[illegible] ಕಾಯಿ ಮಣ [illegible]	[illegible]	[illegible]
ಚಿನ್ನ ([illegible]) [illegible]	[illegible]	[illegible]
[illegible]	[illegible]	[illegible]
[illegible] ತೊಲ [illegible]	[illegible]	[illegible]
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ	[illegible]	[illegible]

Printed and Published by the Rev [illegible] THOMPSON, M A Proprietor and Manager, Wesleyan Mission Press Mysore 28/11/1907

REGISTERED
M. 20

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಮ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೧ ಮೈಸೂರು—ಸೆ ೧೯೦೭ ನೇ ಇಸವಿ ಡಿಸೆಂಬರ್ ತಾರೀಖು ೫ ನೇ ಗುರುವಾರ. ಸಂಚಿಕೆ ೪೯

ಕಾರ್ಡು ಸೈಜು ೪|×೩.

ಫೋಟೋ ತೆಗೆಯುವ

ಫ್ರಿ ಪಾ ಕ್ಯಾ ಮೆ ರಾ.

81 16

ಬೆಲೆ ಫಕ್ತ ಮೂರು ರೂಪಾಯಿ

ಇದರಿಂದ ಬೇಕಾದ ಮನುಷ್ಯನ ಫೋಟೋ ಆವನಿಗೆ ಇದ್ದಂತೆ ತೆಗೆಯಲಿಕ್ಕೆ ಬರುತ್ತದೆ. ವೇಗದಿಂದ ಓಡುವ ಕುದುರೆ ಮತ್ತು ಹಾರುವ ಪಕ್ಷಿಯ ಫೋಟೋ ಸಹ ತೆಗೆಯಬಹುದು. ಇದರಲ್ಲಿ ಕಲಿಯತಕ್ಕದ್ದೇನೂ ಇಲ್ಲ. ಈ ಕ್ರಮವಾದ ಮಾಹಿತಿಯನ್ನು ಕೊಳ್ಳುವವರಿಗೆ ನಾವು ಕೂಡ ಫ್ರೀ ಮಾಡಿಕೊಡುವೆವು. ಎಷ್ಟೋ ಕಡೆಗೆ ಇದಕ್ಕೆ ೧೦ ರಿಂದ ೧೫ ರೂ. ಬೆಲೆ ಬೀಳುತ್ತದೆ. ಆದರೆ ಇದರ ಖರೀದಿ ಮತ್ತು ೩ ರೂಪಾಯಿ ಮಾತ್ರ ಇರುವದು. ಟಪ್ಪಾಲ ಖರ್ಚು ಆಣೆ ... ಇದು ಸಿಕ್ಕತಕ್ಕ ವಿಳಾಸ :— ಛೋಟಾಲಾಲ ಛಗನಲಾಲ ಮಹಾಜನ, ರಾಕೂರದ್ವಾರ ರೋಡ, ಪೋಸ್ಟ್ ಕಾಲಬಾದೇವಿ, ಮುಂಬಯಿ.

ಜ್ವ ರ ಹ ರಿ.

118 5

ಇದು ಸಾಧಾರಣ ಜ್ವರ, ಛಳಿಜ್ವರ, ಮಲೇರಿಜ್ವರ, ಪಿತ್ತಜ್ವರ, ವಿಷಮಜ್ವರ, ವಾತಜ್ವರ, ... ಎಂಬ ಸಕಲ ವಿಧವಾದ ಜ್ವರಗಳನ್ನು ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಜಡ್ಜ್ ಕಛೇರಿಯಲ್ಲಿರುವ ... ಸಬ್ ಡಿವಿಜನ್ ಆಫೀಸರ್ ಎಸ್. ಟಿ. ವೆಂಕಟಪತಿ ಅಯ್ಯಂಗಾರ್ ಅವರು—ನೀವು ಕೆಲವು ದಿನಗಳ ಹಿಂದೆ ಕಳುಹಿಸಿಕೊಟ್ಟ ... ಸೀಸೆಯು ... ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಜನ ಉಗ್ರಜ್ವರ ಪೀಡಿತರು ಚನ್ನಾಗಿ ಗುಣಹೊಂದಿರುವರು. ಇನ್ನು ಜನಗಳು ಕಾಹಿಲೆ ಬೀಳುತ್ತಿರುವದರಿಂದ ದಯವಿಟ್ಟು ಇನ್ನೊಂದು ... ಸೀಸೆಯನ್ನು ವಿ. ಪಿ. ... ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿರುತ್ತಾರೆ.

ಕ್ರಯ —ಸೀಸೆ ೧ ಕ್ಕೆ ೮ ಆಣೆ, ೧ ರೂ., ೧—೮ ರೂ., ... ರೂ., ಒಮ್ಮೆಲೆ ... ಸೀಸೆ ತರಿಸಿಕೊಂಡವರಿಗೆ ಪೋಸ್ಟೇಜು ಮಾಫಿ ಬಿಡಲಾಗುವದು.

✱✱✱✱✱✱✱✱

ಅ ಮೃ ತ ಕ ರ್ಪೂ ರ.

Amrut Carpoor

ಈ ಔಷಧವು ಅಜೀರ್ಣ, ರಕ್ತಭೇದಿ, ಸಾಧಾರಣ ಹೊಟ್ಟೆ ಛಳಿ ಮಾಡುವದು, ವಾಂತಿಭೇದಿ, ನಾನಾತರದ ಹೊಟ್ಟೆ ನೋವುಗಳು— ಮುಂತಾದವುಗಳಿಗೆ ಮಹೌಷಧವಾಗಿ ಪರಿಣಮಿಸಿ, ಕೂಡಲೆ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಗೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ... ದಯವು ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು.

... ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆಸ್ರಿಯು ... ಕರ್ಪೂರವನ್ನು ನಾನು ನನ್ನ ಆಸ್ಪತ್ರೆಯಲ್ಲಿ ... ಮ್ಯುನಿಸಿಪಲ್ ... ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ ... ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ... ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧ ... ಬರೆದಿರುತ್ತಾರೆ.

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲಿಯೂ, ದೊಡ್ಡ ಅಂಗಡಿಗಳಲ್ಲಿಯೂ, ಔಷಧ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ:— ... ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ, ಸೆಕೆಂಡ್ ಬೀಚ್ ಲೈನ್, ಮದರಾಸ್.

BASEL MISSION WEAVING ESTABLISHMENT,

59-40

MANGALORE, SOUTH CANARA.

ದಕ್ಷಿಣ ಕನ್ನಡ ಜಿಲ್ಲಾ ಮಂಗಳೂರು ಬಾಸೆಲ್ ಮಿಶ್ಯನ್ (ಬಟ್ಟೆ) ನೆಯ್ಯುವ ಕಾರಖಾನೆಯಲ್ಲಿ

ನಾನಾ ವಿಧದ (ವಿಶ್ವ) ಟ್ವೀಡ್ ನಮೂನೆಯ ಕೋಟು, ಇಜಾರುಗಳ ಚೆಕ್ಕು ಬಟ್ಟೆಗಳೂ, ಷರ್ಟಿಂಗ್ ಎಂಬ ... ಬಟ್ಟೆಗಳೂ, ... ಬಟ್ಟೆಗಳೂ, ಬೇರೆ ಇತರ ಬಟ್ಟೆಗಳೂ, ಟೇಬಲ್ ... ಎಂಬ ಹೊದುವಸ್ತ್ರಗಳೂ, ಟವಾಲು ... ನಮ್ಮಲ್ಲಿ ತಯಾರಿಸಲ್ಪಟ್ಟು ... ಆಗಿಯಾಗಲೀ ... ಬಣ್ಣ ಆಗಿಯಾಗಲೀ ಮಾರಾಟಕ್ಕೆ ಇರುತ್ತವೆ.

ಒಳ್ಳೇ ಕಮಿಷನ್ :— ರೂಪಾಯಿ ೧೦೦ ರ ಮೇಲೆ ವಸ್ತ್ರಗಳನ್ನು ತೆಗೆದುಕೊಳ್ಳುವ ಗಿರಾಕಿಗಳಿಗೆ ... ಕಮಿಷನ್ ಕೊಡಲಾಗುವದು. ... ವಿವರ ... ಕೆಳಗಿನ ವಿಳಾಸಕ್ಕೆ ಬರೆಯಬೇಕು.

ನಮೂನೆ ಯಾ ಮಾದರಿಗಳು :— ... ಕೆಳಗಿನ ವಿಳಾಸಕ್ಕೆ ಬರೆದುಕೊಂಡಲ್ಲಿ ಕಳುಹಿಸಲ್ಪಡುವವು.

ವಿಶೇಷ ಲಕ್ಷ್ಯಸತಕ್ಕದ್ದು :— ಈ ನಮ್ಮ ವಸ್ತ್ರಗಳಿಗೆ ಇಲ್ಲಿ ಕಾಣಿಸಿರುವ "ಟ್ರೇಡ್ ಮಾರ್ಕ್" ಎಂಬ ... ಇರುವ ಲೇಬಿಲ್ ಎಂಬ ಚೀಟು ಹಚ್ಚಿರುತ್ತದೆ. ಈ ಗುರ್ತಿನ ಚೀಟುಗಳು ಇಲ್ಲದವುಗಳೆಲ್ಲಾ ... ವಸ್ತ್ರಗಳಲ್ಲವೆಂದು ತಿಳಿಯತಕ್ಕದ್ದು.

ಶರ್ತ :— ... ಇಲ್ಲವೆ ವಸ್ತ್ರಗಳು ... ಟಪ್ಪಾಲ ಮೂಲಕ ಕಳುಹಿಸಲ್ಪಡುವಾಗ ... ಮುಂಗಡವಾಗಿ ... ಕಳುಹಿಸತಕ್ಕದ್ದು.

ಪತ್ರಗಳನ್ನು ಇಂಗ್ಲಿಷಿನಲ್ಲಿ ಯಾ ಕನ್ನಡದಲ್ಲಿ ಸ್ಪಷ್ಟವಾಗಿ ಬರೆಯತಕ್ಕದ್ದು.—

☞ ಈ "ಟ್ರೇಡ್ ಮಾರ್ಕ"ನ್ನಾಗಲೀ ನಾವು "ಕಾಪಿರೈಟ್" ಪಡೆದಿರುವ ಲೇಬಿಲುಗಳನ್ನಾಗಲೀ ಇಲ್ಲವೆ ಆ ನಮೂನೆಯ ಬೇರೆ ಲೇಬಿಲುಗಳನ್ನಾಗಲೀ ಯಾರಾದರೂ ಇತರ ವಸ್ತ್ರಗಳ ಮೇಲೆ ಪ್ರಯೋಗಿಸಬಾರದು ಮಾಡಲೂ ಕೂಡದು.

ವಿಳಾಸ.—BASEL MISSION WEAVING ESTABLISHMENT, MANGALORE S. CANARA.

WILLIAM & CO., BOMBAY.

ಅಪೂರ್ವಲಾಭ— ಸರ್ವಾಂಗರಕ್ಷ— ಲೋಕಪ್ರಖ್ಯಾತ—

ಅ ಮೃ ತಾಂ ಜ ನ

27 41

ತಲೆಸಿಕ್ಕೊಳ್ಳಿರಿ— ತ್ವರೆಗೈಯಿರಿ.— ಅಮೃತಾಂಜನ ಸರ್ವಲೋಕರಂಜನ, ಸರ್ವ ಸರ್ವ ವ್ಯಾಧಿಭಂಜನ, ಚಿಕಿತ್ಸಾವಳಿಯೊಳ್ ಕಾಂಚನ, ದೇಹಾಂಗಗಳಿಗೆ ಸಂಜೀವನ, ವಾಸನೆಯಲ್ಲಿ ಮನೋರಂಜನ, ಬೆಲೆಯಲ್ಲಿ ಅಲ್ಪ, ಯೋಗ್ಯತೆಯಲ್ಲಿ ಅದ್ಭುತ, ಔಷಧಿಯಲ್ಲಿ ದ್ವಿರಹಿತ, ಕೊಳ್ಳುವದರಲ್ಲಿ ಮಾಡಿರಿತ್ವರ್ಯ, ಇದರಿಂದ ಗುಣ ಕಾಣಬರುವದಿಲ್ಲವಾದರೆ ಹಣ ಹಿಂತಿರುಗಿ ಕೊಡಲ್ಪಡುವದು. ಒಂದೇ ಸಾರಿ ಆರು ಬಾಟ್ಲಿ ತರಿಸಿಕೊಂಡವರಿಗೆ ಒಂದು ಜರ್ಮನ್ ಬೆಳ್ಳಿಯ ಕಪ್ ಉಚಿತವಾಗಿ ದೊರಕುವದು.

ಸಿಕ್ಕಂಕೆಯಾಗಿ ಭಾರತವರ್ಷದ ಔಷಧಿಗಳಿಂದ ತಯಾರಿಸಿದ ಹೊರುಪಯೋಗಕ್ಕೋಸುಗ ಮುಲಾಮು. ಇದರಿಂದ ತಲೆನೋವು, ಶಿರೋವೇದನೆ, ವಾತ, ಸಂಧಿವಾತ, ಪಕ್ಷವಾತ, ಗಂಟ್ಲುನೋವು, ಸೊಂಟದ ನೋವು, ಗಂಟ್ಲುನೋವು, ಶೀತ, ಜಳವು, ಉಳಕು, ಕೈಕಾಲುಗಳಿಗೆ ಆಗುವ ಎಲ್ಲಾ ತರದ ನೋವಿಗೆ ಇದು ಅತ್ಯುತ್ತಮ

ಈ ... ನಮೂನೆಯ ಔಷಧಿಗಳನ್ನು ತಯಾರಿಸುವದರಿಂದ ಕ್ಯಾಟಲಾಗು ಬೇಕಾದವರು, ಈ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ರವಾನಿಸಲ್ಪಡುವದು.

ಬಾಟ್ಲಿ ಒಂದಕ್ಕೆ ಕಿಮ್ಮತು ೦—೮—೦ ಪೋಸ್ಟು ಖರ್ಚು ೦—೪—೦.

ಗಜಕರ್ಣದ ಮುಲಾಮು.

ಮೂರು ಸಾರಿ ಹಾಕುವದರೊಳಗೆ ಗಜಕರ್ಣವು ಹೋಗುವದು. ಇದರಿಂದ ಚರ್ಮವು ಕಪ್ಪಾಗುವದಿಲ್ಲ ಮತ್ತು ಉರಿಯುವದಿಲ್ಲ. ಇದರಿಂದ ಗುಣ ಕಾಣಬರುವದಿಲ್ಲವಾದರೆ ಹಣ ಹಿಂತಿರುಗಿ ಕೊಡಲ್ಪಡುವದು. ಡಬ್ಬಿ ಒಂದಕ್ಕೆ ಕಿಮ್ಮತು ೦—೬—೦ ಪೋಸ್ಟು ಖರ್ಚು ೦—೩—೦

ದಂತಮಂಜನ.—ಹಲ್ಲುಗಳಿಂದ ಬರುವ ರಕ್ತ ನಿಲ್ಲಿಸುತ್ತದೆ. ಹಲ್ಲುಗಳು ಘಟ್ಟಿಯಾಗುತ್ತವೆ. ಹಲ್ಲುಗಳು ಬೆಳ್ಳಗಾಗುತ್ತವೆ. ಹಲ್ಲುಗಳ ನೋವನ್ನು ತೆಗೆಯುತ್ತದೆ. ಡಬ್ಬಿ ಒಂದಕ್ಕೆ ೦—೬—೦ ಪೋಸ್ಟು ಖರ್ಚು ೦—೩—೦

ವಜ್ರಗುಟಿಕೆ.—ಧಾತುಪುಷ್ಟಿ ನಿರ್ಬಲವಂತರಿಗೆ ಶಕ್ತಿ ಕೊಡುತ್ತದೆ, ಸ್ವಪ್ನದೋಷ ಆಗುವದು ನಿಲ್ಲಿಸುತ್ತದೆ. ರಕ್ತ ವೃದ್ಧಿಮಾಡಿ ದೇಹದಲ್ಲಿ ಆರೋಗ್ಯಕೊಡುತ್ತದೆ. ಡಬ್ಬಿ ಒಂದಕ್ಕೆ ೧—೦—೦ ಪೋಸ್ಟು ಖರ್ಚು ೦—೩—೦.

ಕೇಶವರ್ಧಿನಿ.—ತಲೆ ಮೆದುಳು ತಂಪುಮಾಡುವದು, ಕೂದಲುಗಳನ್ನು ಬೆಳೆಸುವದು, ಕೂದಲುಗಳನ್ನು ಕಪ್ಪುಮಾಡುವದು, ಮನಶ್ಶುದ್ಧಿ ಮಾಡುವದು, ಚಲೋ ಪರಿಮಳ ಉಳ್ಳದ್ದು. ೩ ಔನ್ಸು ಬಾಟ್ಲಿ ಒಂದಕ್ಕೆ ೧—೦—೦. ಪೋಸ್ಟು ಖರ್ಚು ೦—೪—೦

ವಿಳಾಸ:—ವಿಲಿಯಂ ಮತ್ತು ಕಂಪನಿ, ೧೬ ಓಕ್ ಲೇನ್, ಫೋರ್ಟ್, ಮುಂಬಯಿ.

ಟೆಲಿಗ್ರಾಫು ಅಡ್ರೆಸು—"ಅಮೃತಾಂಜನ," ಮುಂಬಯಿ.

ಶ್ರೀಸೀತಾರಾಮ ಪ್ರಸನ್ನ.

1271

ಈ ಕೆಳಗೆ ರುಜು ಮಾಡಿದ ತೀರ್ಥಹಳ್ಳಿ ಜವಳಿ ರಘುಪತಯ್ಯನವರ ಮಗ ಹನುಮಂತರಾಯನು ಇದರಿಂದ ಸಮಸ್ತ ಜನಗಳಿಗೂ ಕೃತಪಡಿಸುವದೇನೆಂದರೆ —

೧ ತೀರ್ಥಹಳ್ಳಿ ಜವಳಿ ಕೃಷ್ಣಯ್ಯನವರ ಮಕ್ಕಳು ವಿಠಲಯ್ಯನವರು ಮತ್ತು ಜವಳಿ ಸುಬ್ಬರಾಯರ ಮಕ್ಕಳು ಮಂಜಪ್ಪನವರು ಸಹಾ ನನ್ನ ಮೈನಾರಿಟಿ ಕಾಲದಲ್ಲಿ ನನ್ನ ಜನಕ ತಂದೆ ರಘುಪತಯ್ಯನವರಿಗೆ ಸ್ವಾರ್ಜಿತವಾಗಿಯೂ, ನಮಗೆ ಪಿತರಾರ್ಜಿತವಾಗಿಯೂ ಇರುವ ವೈವಾಟಿನ ಆಡಳಿತ ನೋಡುತ್ತಾ ಇದ್ದರು ಈ ಪೈಕಿ ವಿಠಲಯ್ಯನವರು ಈಚೆಗೆ ಮೃತಪಟ್ಟಿದ್ದಾರೆ

೨ ಈ ವಿಠಲಯ್ಯನವರು ಮತ್ತು ಈ ಮಂಜಪ್ಪನವರು ಇವರುಗಳ ಒಟ್ಟಿನ ಅಥವಾ ಇವರುಗಳ ಪೈಕಿ ಯಾರೊಬ್ಬರ ಹೆಸರಿಗೆ ಆಗುವ ಜವಳಿ ಶೇಷಗಿರಿಯಪ್ಪನವರು ಬಿನ್ ರಘುಪತಯ್ಯನವರು ಮತ್ತು ಈ ಶೇಷಗಿರಿಯಪ್ಪನವರ ತಮ್ಮ ಹನುಮಂತರಾಯನಾದ ನಾನು ಈ ರೀತಿ ಇರುವ ನನ್ನ ಒಟ್ಟಿನ ಅಥವಾ ನನ್ನ ಪೈಕಿ ಯಾರೊಬ್ಬರ ಹೆಸರಿಗೆ ಆಗಲಿ, ಕ್ರಯವಾಗಿರತಕ್ಕ ಆಸ್ತಿಗಳು ಮತ್ತು ಇವುಗಳಿಂದ ಸಾಲ ಬರತಕ್ಕ ಗುತ್ತಿಗೆ ಅಡಿಕೆ, ಗಡಿಭತ್ತ, ನಗದು ಗೇಣಿ ವ ಕಿಸ್ತು ವಗೈರೆಯೂ ಮತ್ತು ಭೋಗ್ಯಾಧಾರ – ದೃಶ್ಯಾಧಾರ ವ ಸಾಲಪತ್ರ ಅಥವಾ ಪತ್ರಗಳು ಮತ್ತು ಪ್ರೋನೋಟು ವ ಪ್ರೋನೋಟುಗಳ ವಗೈರೆ ಡಾಕ್ಯುಮೆಂಟುಗಳ ಬಾಬತು ಅಸಲು ಹಣ, ಇದರ ಬಡ್ಡಿ ವ ಬಡ್ಡಿಯ ಬಡ್ಡಿಯೂ ಮತ್ತು ಗವರ್ನಮೆಂಟ್ ಸೇವಿಂಗ್ಸ್ ಬ್ಯಾಂಕಿನಲ್ಲಿ ಮತ್ತು ಸನ್ ೧೯೦೭—೦೮ ನೇ ಸಾಲಿಗೆ ಮೈಸೂರು ಸ್ಟೇಟ್ ಲೋನ್ ಪ್ರೋನೋಟುಗಳ ಬಾಬತು ಇವರುಗಳ ಮತ್ತು ನನ್ನ ಮತ್ತು ನನ್ನ ಮಕ್ಕಳು ವೈನರು ಗಾರ್ಡಿಯನ್ ನಾವು ಈ ರೀತಿ ಇರತಕ್ಕ ಅಸಲು ಹಣ ಮತ್ತು ಇದರ ಬಡ್ಡಿಯು ಸಹಾ ಮೇಲ್ಕಂಡ ನಮ್ಮ ವೈವಾಟಿಗೆ ಸಂಬಂಧಪಟ್ಟದ್ದಾಗಿ ನಮಗೆ ಬರತಕ್ಕದ್ದಾಗಿರುತ್ತದೆ

೩ ಇದರಲ್ಲಿ ಈ ವಿಠಲಯ್ಯನವರಿಗಾಗಲಿ, ಈ ಮಂಜಪ್ಪನವರಿಗಾಗಲಿ, ಅಥವಾ ಈ ವಿಠಲಯ್ಯನವರ ತಮ್ಮ ಪ್ರತಿನಿಧಿಗಳಾದ ಮಕ್ಕಳು ೧ ನೆ ನರಸಿಂಗರಾವ್, ೨ ನೆ ಬಾಲಕೃಷ್ಣರಾವ್, ೩ ನೆ ಆನಂದರಾವ್, ೪ ನೆ ವಾಮನರಾವ್ ೩—೪ ನೆಯವರು ಗಾರ್ಡಿಯನ್ ೧ ನೆ ರಂಗರಾವ್, ಮತ್ತು ಈ ಮಂಜಪ್ಪನವರ ತಮ್ಮಂದಿರು ೫ ನೆ ... ೬ ನೆ ... ೭ ನೆ ನಾಗೇಶರಾವ್ ಭವಾನಿ ಮಗ ಭಾಸ್ಕರರಾವ್ ವೈನರ ಗಾರ್ಡಿಯನ್ ಮಂಜಪ್ಪನವರು, ೮ ನೆ ಗೋಪಾಲರಾವ್ ಬಿನ್ ಪಾಂಡುರಂಗಪ್ಪನವರು, ೯ ನೆ ಇವರ ತಮ್ಮ ಮೂಡಲಗಿರಿಯಪ್ಪನವರು, ೧೦ ನೆ ಮಾಧವರಾವ್ ಬಿನ್ ರಾಮರಾಯರು, ಇವರ ಗಳಿಗಾಗಲಿ ಹಕ್ಕು ಬಾಧ್ಯತೆ ಇರುವದಿಲ್ಲ

೪ ಈ ವಿಠಲಯ್ಯನವರು ಮತ್ತು ಈ ಮಂಜಪ್ಪನವರು ಈಚೆಗೆ ಈ ಮಂಜಪ್ಪನವರು ಮೇಲ್ಕಂಡ ಇವರ ತಮ್ಮಂದಿರ ಮಕ್ಕಳ ಮತ್ತು ತಮ್ಮಂದಿರ ಸಾಲಗಳಿಗೆ ಈ ನಮ್ಮ ವೈವಾಟಿನ ಆಸ್ತಿಯನ್ನು ಗುರಿಪಡಿಸಿದ್ದು ಇದರ ಆಸ್ತಿಗಳಿಗೆ ಲೋಪಪಡಿಸಿದ್ದು ಮತ್ತು ಇನ್ನೂ ಲೋಪ ವಗೈರೆ ಪಡಿಸುವದಕ್ಕೆ ಪ್ರಯತ್ನಿಸುವದು, ಇನ್ನು ಕೆಲವು ಸಂಗತಿಗಳಲ್ಲಿ ನಮಗೆ ಮೋಸ ವ ನಿರ್ಬಂಧಪಡಿಸಿದ್ದು ಮತ್ತು ಇನ್ನೂ ಮೋಸ ವಗೈರೆ ಪಡಿಸುವದಕ್ಕೆ ಪ್ರಯತ್ನಿಸುವದು ವಗೈರೆ ಅನೇಕ ವಿಧವಾದ ಈ ವೈವಾಟಿಗೂ ಇದರ ಹಕ್ಕುದಾರರಾದ ನಮಗೂ ಮತ್ತು ನಮ್ಮ ಪ್ರತಿನಿಧಿಯವರಿಗೂ ವಿರೋಧವಾದ ವಿದ್ಯಮಾನಗಳನ್ನು ನಡಿಸಿದ್ದು ಮತ್ತು ಇನ್ನು ನಡಿಸುವದಕ್ಕೆ ಪ್ರಯತ್ನಪಡುವದು ವಗೈರೆ ನನ್ನ ನೋಟೀಸಿಗೆ ಬಂದಿರುವದರಿಂದ ನಾನು ಇವರ ಆಡಳಿತವನ್ನು ವಜಾಮಾಡಿ ಇದ್ದೇನೆ

೫ ಮೇಲೆ ೩ ನೆ ಕಲಮಿನಲ್ಲಿ ಕಂಡ ಹೆಸರುಗಳಿಗೆ ಕ್ರಯವಾಗಿರತಕ್ಕ ಆಸ್ತಿಗಳ ಬಾಬತು ಗುತ್ತಿಗೆ ಅಡಿಕೆ, ಗಡಿಭತ್ತ, ನಗದು ಗೇಣಿ ವ ಕಿಸ್ತು ವಗೈರೆಯನ್ನು ಮತ್ತು ಭೋಗ್ಯಾಧಾರ ವಗೈರೆ ಡಾಕ್ಯುಮೆಂಟುಗಳ ಸಂಬಂಧ ಅಸಲು ಹಣ, ಇದರ ಬಡ್ಡಿ ವ ಬಡ್ಡಿಯ ಬಡ್ಡಿಯನ್ನು ಈ ಮುಂತಾದ್ದು ವಗೈರೆ ಎಷ್ಟನ್ನಾದರೂ ಮೇಲೆ ೩ ನೆ ಕಲಮಿನಲ್ಲಿ ನಮೂದಿಸಿದ ಈ ವೈವಾಟಿಗೆ ಹಕ್ಕುದಾರರಲ್ಲದವರ ಕಡೆಗೆ ವಸೂಲು ಕೊಡಕೂಡದು ಕೊಟ್ಟರೆ ನಮ್ಮ ವೈವಾಟಿಗೆ ವ ನನಗೆ ಬಂದಂತೆ ನಾನು ಒಪ್ಪಿಕೊಳ್ಳುವದಿಲ್ಲ ಮೇಲ್ಕಂಡ ಪತ್ರಗಳು ವಗೈರೆ ಇವರು ಇದರ ಆಡಳಿತ ನೋಡುತ್ತಾ ಇರುವಾಗ್ಗೆ ಇವರ ಹೆಸರಿಗೆ ನಾಮಧೋರ್ತ ಹುಟ್ಟಿದ್ದಾಗಿ ಇರುತ್ತೆ ಈ ಮೇಲೆ ಕಂಡ ಆಸ್ತಿಗಳ ಪೈಕಿ ಅಥವಾ ಡಾಕ್ಯುಮೆಂಟುಗಳ ಪೈಕಿ ಎಷ್ಟನ್ನಾದರೂ ಈ ವೈವಾಟಿಗೆ ಹಕ್ಕುದಾರರಲ್ಲದ ಮೇಲೆ ವಿವರಿಸಿದ ಈ ಮಂಜಪ್ಪನವರು ವಗೈರೆಯರ ಪೈಕಿ ಯಾರಿಂದಲೇ ಆಗಲಿ, ಕ್ರಯಪರಿವರ್ತನೆಯ ಮೂಲಕ ಯಾರಾದರೂ ಪಡಕೊಂಡರೆ ಆಗಲಿ, ಮೇಡೂರು ವಗೈರೆ ವ ಮೂಲಕ ಪರಭಾರೆ ಪಡಕೊಂಡರೆ ಆಗಲಿ, ಅದಕ್ಕೆ ನಾನು ಒಪ್ಪಿಕೊಳ್ಳುವದಿಲ್ಲ ಮತ್ತು ಹಾಗೆ ಪಡಕೊಂಡವರ ಕಡೆಗೆ ಎಷ್ಟನ್ನಾದರೂ ವಸೂಲಿ ಕೊಟ್ಟಾಗ್ಯೂ ಅದನ್ನು ನಾನು ಒಪ್ಪಿಕೊಳ್ಳುವದಿಲ್ಲ ಎಂಬದನ್ನು ತಿಳಿದಿರತಕ್ಕದ್ದು ಇವರುಗಳು ಮತ್ತು ನಾವು ಸಹಾ ಒಂದೇ ಮನೆಯಲ್ಲಿ ವಾಸವಾಗಿದ್ದಾಗ್ಯೂ ಈ ವೈವಾಟಿನಲ್ಲಿ ಇವರುಗಳಿಗೆ ಏನೂ ಹಕ್ಕು ಇರುವದಿಲ್ಲ ಎಂಬುವದನ್ನು ಸಹಾ ತಿಳಿದಿರತಕ್ಕದ್ದು

೬ ಈ ನೋಟೀಸನ್ನು ಸನ್ ೧೯೦೭ ನೆ ಇಸವಿ ನವಂಬರ್ ತಾ ೨೧ ನೆ ಗುರುವಾರದ ಲಾಗಾಯತು ಮೈಸೂರು ಗವರ್ನಮೆಂಟು ಕನ್ನಡ ಗೆಜೆಟ್ಟಿನ ಮೂಲಕ ಪ್ರಕಟಿಸಿ ಇದೆ ಎಂಬದನ್ನು ಸರ್ವರಿಗೂ ಸೂಚಿಸಿದೆ

ತಾ ೨೦-೧೧-೦೭, ಮೊಕ್ಕಾಂ, ತೀರ್ಥಹಳ್ಳಿ.

ತೀರ್ಥಹಳ್ಳಿ ಜವಳಿ ಹನುಮಂತರಾಯ.

CHAMBERLAIN'S COLIC, CHOLERA AND DIARRHOEA REMEDY.

ಚೇಂಬರ್ಲೇನ್ ಯವರು ಹೊಟ್ಟೆಶೂಲೆ, ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು.

4 23



ಕೆಳ ಹೊಟ್ಟೆಯ ನೋವು ಎಲ್ಲ ಭೇದಿಯಾಗ ವುದು, ಆಮಶಂಕೆ, ವಾಂತಿಭೇದಿ ಉಪದ್ರ, ಶೀತದ ನೋವು, ಹೊಟ್ಟೆಯ ನಾನಾ ತರದ ಕಾಯಿಲೆಗಳು—ಈ ರೋಗಗಳನ್ನೆಲ್ಲಾ ವಾಸಿಮಾಡುತ್ತದೆ ಈ ಪರಮಾಶ್ಚರ್ಯಕರವಾದ ಔಷಧವು ಜನರನ್ನು ಬದುಕಿಸಿರುವಷ್ಟು ಮತ್ತು ನೋವನ್ನೂ ಬಾಧೆಯನ್ನೂ ನಿವಾರಣೆ ಮಾಡಿರುವಷ್ಟು ಪ್ರಪಂಚದಲ್ಲೇ ಇನ್ನಾವ ಔಷಧವೂ ಮಾಡಿರುವದಿಲ್ಲ.

ಜ್ಞಾಪಕದಲ್ಲಿಟ್ಟುಕೊಳ್ಳಿ—ಒಂದು ಚೊಟ್ಟು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯ ಎಲ್ಲಾ ತರದ ನೋವನ್ನೂ ನಿಲ್ಲಿಸಿಬಿಡುತ್ತದೆ, ಬಹಳ ಕಠಿಣವಾದ ಭೇದಿಯನ್ನು ಕೂಡ ಮೂರೇ ಚೊಟ್ಟು ಈ ಔಷಧದಿಂದ ನಿರ್ಮೂಲನಮಾಡಿ ನಿಲ್ಲಿಸುತ್ತದೆ ಖಂಡಿತವಾಗಿ ವಾಸಿಮಾಡುವುದೇ ಇದರ ಗುಣ

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಸ್ವಲ್ಪವೂ ಮುಟ್ಟಿದ್ದಲ್ಲ

ಇದು ಎಲ್ಲ ಕಡೆ ವಿಕರಿಯಾಗುವದು ಸಣ್ಣ ಸೀಸೆ ೧ ರೂಪಾಯಿ ದೊಡ್ಡ ಸೀಸೆಗೆ ೨ ರೂಪಾಯಿ

ಈಗಲೇ ಸೀಮೆಯಿಂದ S S ಕ್ರೊಸ್ಟಕೆಲ್ಲ ಸ್ಟೀಮರಿನಲ್ಲಿ ಬಂದಿದೆ.

117 6

ಎಣ್ಣೆ ಕೆಂಪು ಕೆಂಪು, ಮತ್ತು ಹಾದಿ ಕಪ್ಪು ಸ ಟೀರಿಯ ರ್

ಶಾಲ್ ಉಲನ್ ಪೌಂಡು ೧ ಕ್ಕೆ	ರ	೩—೦—೦
೧೦ ಟೋಪಿಯಾಗುವ ಬಂಡಲ್ ೧ ಕ್ಕೆ		೩—೯—೦
೧ ಟೋಪಿಯಾಗುವ ಉಲನ್ ದಾರಕ್ಕೆ		೦—೮—೦
ಕೊಕ್ಕೆ ಸೂಜಿ ಜರ್ಸ ೧ ಕ್ಕೆ		೦—೧೪—೦
೧ ಕೊಕ್ಕೆ ಸೂಜಿಗೆ		೦—೧—೬
೩೦ ಇಂಚಿನ ಬನಿಯನ್ ೧ ಕ್ಕೆ		೦—೯—೦
ಪ್ಯಾಟರ್ನ್ ಕಾಪಿ ೧೦೦ ಕ್ಕೆ		೦—೮—೦

ವಿ ಪಿ ಇಂಡಲೂ ರವಾನಿಸುತ್ತೇವೆ ವಿಳಾಸ —

ದಿ ಉಲನ್ ಮಾರ್ಟ್, ಮಂಗಳೂರು, ದ ಕ

ಪ್ರಕಟನೆ.

12 2

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ —

ಅಮೃತಮಹಲ್ ಇಲಾಖಾ ಬಾಬತು ಹೆಣ್ಣು ಮತ್ತು ಗಂಡು ರಾಸುಗಳನ್ನು ಚಾಲ್ತಿ ಇಸವಿ ಡಿಸೆಂಬರ್ ಮಾಹೆ ೨೦ ನೇ ತಾರೀಖು ಲಾಗಾಯಿತು "ಹೊಳಲ್ಕೆರೆ" ಮೊಕ್ಕಾಮಿನಲ್ಲಿ ಬಹಿರಂಗವಾಗಿ ಹರ್ರಾಜು ಮಾಡಲ್ಪಡುತ್ತೆ ಇಷ್ಟವುಳ್ಳವರು ಸದರಿ ಹರ್ರಾಜಾಗುವ ಸ್ಥಳಕ್ಕೆ ಹಾಜರಾಗಿ ರಾಸುಗಳನ್ನು ಛಡಸವಾಲಿನಿಂದ ಪಡೆಯಬಹುದು

ಮೊ. ಹಾಸನ,	ಎಚ್ ಸಂಜೀವರಾವ್ ಜೇ ಆಸ್ ಸ್,
ತಾ|| ೧೭-೧೧-೧೯೦೭	ಸೂಪರಿಂಟೆಂಡೆಂಟ್ ಅಮೃತಮಹಲ್ ಇಲಾಖಾ

೧೯೦೮ ನೇ ಇಸವಿಯ ಇಂಗ್ಲೀಷು-ಕನ್ನಡ

119 ೨

ಪಾಕೆಟ್ ಡೈರಿ

ಎ ನಂ|| ಬಿ. ನಂ|| ಸಿ. ನಂ ಡಿ. ನಂ||

ಕ್ರಯ ೩ ಆಣೆ ೫ ಆಣೆ ೬ ಆಣೆ. ೮ ಆಣೆ

ಈ ಡೈರಿಗಳು—ವರ್ತಕರು, ಲಾಯರುಗಳು, ಕಂಟ್ರಾಕ್ಟರು, ದೊಡ್ಡ ಮನುಷ್ಯರು, ಪುಷ್ಪ್‌ಬಾಪ್ ಸಮಯಸ್ಥರಿಗೂ ಉಪಯೋಗವಾಗಿರುತ್ತವೆ ಇವುಗಳಲ್ಲಿ ಅಡಕವಾಗಿರುವ ವಿಷಯಗಳು—ಕೀಲಕ ಸಂ|| ಪಂಚಾಂಗ, ಗ್ರಹ ಕುಂಡಲಿ ಸಹಿತ, ಕ್ಯಾಲೆಂಡರು, ಹಬ್ಬಗಳು, ರಜಾ ದಿನಗಳು, ರೈಲ್ ಛಾರ್ಜ್, ಕೋರ್ಟ್ ಫೀಜು, ಪ್ರೋಸೆಸ್ ರುಸುಂ, ಸ್ಟಾಂಪು ರಿಜಿಷ್ಟರ್ ಫೀಜುಗಳು, ಪೋಸ್ಟಾಫೀಸಿನ ಎಲ್ಲಾ ವಿಷಯಗಳು, ಜಮೀನುಗಳ ಅಳತೆ, ಗೌರಿ ಪಂಚಾಂಗ, ಪ್ರಶ್ನಶಾಸ್ತ್ರ ರಾಹುಕಾಲ, ಗುಳಿಕಕಾಲ, ವಾರಶೂಲೆ, ಮಾಸಫಲಗಳು, ದಿನ ಸಂಬಳದ ಪಟ್ಟಿ, ಧೋಬಿ ಲೆಕ್ಕ, ಜಮಾ ಖರ್ಚು ಪಟ್ಟಿ, ಇನ್ನೂ ಅನೇಕ ವಿಷಯಗಳು ಇವೆ ಉತ್ಕೃಷ್ಟವಾದ ಕಾಗದ, ರೂಲು ಹಾಕಿದ ಸೀಮೆ ಸಾಮಾನು ಬೈಂಡು, ಚಿನ್ನದ ಭಂಗಾರದ ರೇಖೆನಿಂದ ಕಾಂದಣ ಮಾಡಲ್ಪಟ್ಟಿದೆ

ಎ ನಂಬರ್ ಚಿಕ್ಕ ಸೈಜು	೩ ಆಣೆ
ಬಿ ನಂಬರ್ ಮುಚ್ಚಳದ್ದು	೫ ಆಣೆ
ಸಿ ನಂಬರ್ ದೊಡ್ಡ ಸೈಜು	೬ ಆಣೆ.
ಡಿ ನಂಬರ್ ಮುಚ್ಚಳದ್ದು	೮ ಆಣೆ

ಪೋಸ್ಟು ಛಾರ್ಜ್ ಬೇರೆ ಒಂದೇ ನಮೂನೆಯಲ್ಲಿ ೧೨ ಡೈರಿ ತರಿಸಿಕೊಂಡರೆ ೧ ಡೈರಿ ಉಚಿತವಾಗಿ ಕೊಡುವೆವು. ವಿ ಪಿ ಮೂಲಕವೂ ತರಿಸಿಕೊಳ್ಳಬಹುದು

ನಮ್ಮ ವಿಳಾಸ —ಶ್ರೀ. ಶಿವಲಿಂಗಂ ಶೆಟ್ಟಿ ಕಂಪನಿ

ಕರ್ನಾಟಕ ಬುಕ್ ಡಿಪೋ ಪ್ರೆಸ್, ಬಳ್ಳಾರಿ

ಉಪಾಯದ ಕುರುಹುಗಳು

ಸ್ವಾಭಾವಿಕವಾಗಿ ಅಪಾಯ ಬರಬಹುದಾದ ಕಾರಣಗಳನ್ನು ಕಂಡುಹಿಡಿಯಬಹುದು

ನಿಮ್ಮ ಅಪಾಯದ ಕುರುಹು!

ಶ್ವಾಸಕೋಶಗಳು ಬಲಹೀನವುಳ್ಳವರಾದರೆ ಇದರಿಂದ ಕ್ಷಯ ಬರುತ್ತದೆ ಅದನ್ನು ಬೇಗನೇ ಬಲಪಡಿಸತಕ್ಕದ್ದು ಬಹು ಅವಶ್ಯ

SCOTT'S EMULSION. 31 38

(ಸ್ಕಾಟ್ಸ್ ಇಮಲ್ಷನ್)

ಎಂಬ ಔಷಧವು ಈ ಕುರುಹುಗಳನ್ನು ಹೋಗಲಾಡಿಸುವದು ಬಲಹೀನವಾದ ಶ್ವಾಸಕೋಶಗಳನ್ನು ಬಲಪಡಿಸಿ ಕೆಮ್ಮನ್ನು ನಿಲ್ಲಿಸುತ್ತದೆ

ಕೈಯಿಂದ ... ಮುಟ್ಟಿದ್ದಲ್ಲ

ಎಲ್ಲಾ ಔಷಧ ಮಾರಾಟಗಾರರಲ್ಲೂ ದೊರಕುತ್ತದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್
ಔಷಧಗಳ ಕಾರ್ಖಾನೆ
ಲಂಡನ್, ಇಂಗ್ಲೆಂಡ್

ಈ ಮೀನು ಮನುಷ್ಯ ಇರುವ ಔಷಧವನ್ನೇ ಕೇಳಿಕೊಳ್ಳಿ

THE PLACE FOR HASSAN CAPS IS

HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ!

ಹಾಗಾದರೆ ಬೇಗ ... ತರಿಸಿರಿ.

75 39

ಒಳ್ಳೇ ಟೋಪಿಗಳು ಯಾವವು? ... ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ವಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇಳಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಸೀದಾ ಬರೆದು ತರಿಸಿಕೊಳ್ಳಿ ಅಗ್ಗವಾದ್ದು ಚನ್ನಾಗಿಲ್ಲದ್ದೂ ಬೇಕಾದರೆ, ನಮ್ಮಲ್ಲಿ ದೊರೆಯುವವು ಸಾದಾ, ಕೆಂಪು, ಕಪ್ಪು, ಬಿಳಿ, ಕಾಫಿ ಟೋಪಿಗಳು ೧ ರೂ ೮ ಆ, ೧ ರೂ ೬ ಆ, ೧ ರೂ ೪ ಆ

ರೇಷ್ಮೆ ಅಂಚುಳ್ಳ ಟೋಪಿಗಳು ೧ ರೂ ೮ ಆ, ೨ ರೂ

ದಾರದ ಟೋಪಿಗಳು ೧ ರೂ. ೧೨ ಆ, ೧ ರೂ ೮ ಆ, ೧ ರೂ. ೪ ಆ

ಉಣ್ಣೆಯ ಟೋಪಿಗಳು ೧ ರೂ ೮ ಆ, ೧ ರೂ ೪ ಆ

ಕೂಸುಗಳ ಟೋಪಿ, ಸೂರ್ಯ ಮೋಜೋಡು, ಅಥವಾ ಮೇಜು ಕಸೂತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವವರಿಗೆ ಕೊಟ್ಟು ಕಳುಹಿಸುವೆವು

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ ಹಾಸನ.

ವೃತ್ತಾಂತ ಪತ್ರಿಕೆ.

೧೯೦೭ ನೇ ಇಸವಿ ಡಿಸೆಂಬರ್ ತಾ|| ೫ ನೇ ಗುರುವಾರ

ಮೈಸೂರು ಮಹಾರಾಜಾ ಕಾಲೇಜು.

ಮದರಾಸ್ ಯೂನಿವರ್ಸಿಟಿ ವಿದ್ಯಾಸಂಘದ ಹೊಸ ...ಪ್ರಕಾರ ಮೈಸೂರು ಕಾಲೇಜನ್ನು ನಡಿಸಬೇ... ಇನ್ನೂ ಹೆಚ್ಚಾದ ಶಿಬ್ಬಂದಿಯನ್ನು ಇಡಬೇಕಾಗಿ... ಕಾರಣ ಮೈಸೂರು ಗವರ್ನಮೆಂಟಿನವರು ಬೆಂಗ... ಒಂದು ಕಾಲೇಜನ್ನೂ ಮೈಸೂರಿನಲ್ಲೂ ಒಂದ... ಇಟ್ಟಿರುವುದು ಅನಾವಶ್ಯವೆಂತಲೂ, ಬೆಂಗಳೂರಿನಲ್ಲಿ... ಕಾಲೇಜನ್ನೇ ಇನ್ನೂ ಅಭಿವೃದ್ಧಿಪಡಿಸಿ ಹೆಚ್ಚು ಶಿಬ್ಬಂ...ನ್ನು ಇಡುವುದು ಉತ್ತಮವೆಂತಲೂ, ಮೈಸೂರಿನಲ್ಲಿ... ಕಾಲೇಜನ್ನು ವಜಾಮಾಡಿ, ಹೈಸ್ಕೂಲ್ ಮಾಡಿಬಿಡು... ಅನುಕೂಲವೆಂತಲೂ ಆಲೋಚನೆ ಮಾಡುತ್ತಿದ್ದಾರೆ... ಎಫ್. ಎ. ಬಿ. ಎ. ಪರೀಕ್ಷೆಗಳಿಗೆ ವಿದ್ಯಾರ್ಥಿಗಳ... ತಯಾರುಮಾಡತಕ್ಕ ತರಗತಿಗಳನ್ನು ತೆಗೆದುಹಾಕಿಬಿಡ...ಬುವುದೇ ಸರ್ಕಾರದವರ ಉದ್ದೇಶವಾಗಿದೆ

ಮೈಸೂರು ಗವರ್ನಮೆಂಟಿನವರು ಪ್ರಜೆಗಳಿಗೆ ವಿದ್ಯಾ...ಸಮಾಡಿಸುವುದಕ್ಕೆಂದು ವರುಷಕ್ಕೆ ಸುಮಾರು ಎಂಟು ... ರೂಪಾಯಿ ತೆಗೆದಿಡುವರು ಈ ಹಣದಲ್ಲಿ ಪ್ರೌಢ...ವ್ಯಾಭ್ಯಾಸಕ್ಕೂ ಸಾಮಾನ್ಯವಿದ್ಯಾಭ್ಯಾಸಕ್ಕೂ ಅಂದರೆ, ...ಗ್ಲಿಷ್ ಕಲಿಸುವುದಕ್ಕೂ, ದೇಶಭಾಷೆ ಕಲಿಸುವುದಕ್ಕೂ, ...ಷ್ಟು ಭಾಗವನ್ನು ಅವರು ನ್ಯಾಯವಾಗಿ ಖರ್ಚು...ಡಬಹುದಾಗಿದೆ ಎಂದು ಗೊತ್ತುಮಾಡಬೇಕಾಗಿದೆ ...ಮರಿ ವಿದ್ಯಾಭ್ಯಾಸಕ್ಕೇನೇ ಅವರು ಹೆಚ್ಚು ಹಣವನ್ನು ...ಯೋಗಿಸತಕ್ಕದ್ದು ಅವರ ಮುಖ್ಯ ಕರ್ತವ್ಯವಾಗಿರು...ನು ಕಡೇಪಕ್ಷ ಪ್ರತಿ ದೊಡ್ಡ ಗ್ರಾಮದಲ್ಲೂ ಕನ್ನಡ...ನ್ನು ಕಲಿಸುವಂಥ ಒಂದೊಂದು ಪಾಠಶಾಲೆ ಏರ್ಪಾಡಾ...ವುದೆಯೂ ಅಂಥಾ ಪಾಠಶಾಲೆಗಳಲ್ಲಿ ಒಳ್ಳೇ ಯೋಗ್ಯತೆ ...ವಿದ್ಯಾರ್ಥಿಗಳನ್ನು ಪಡೆದಿರುವವರೇ ಉಪಾಧ್ಯಾಯರಾ...ನೇಮಕವಾಗುವಂತೆಯೂ, ಅವರ ತಿಂಗಳ ಸಂಬಳಗಳನ್ನು ...ಗಿರುವುದಕ್ಕಿಂತಲೂ ಇನ್ನೂ ಹೆಚ್ಚಿಸುವಂತೆಯೂ ...ಡಬೇಕಾದದ್ದು ಗವರ್ನಮೆಂಟಿನವರಿಗೆ ತುಂಬಾ ಅವ...ಲ್ಲೂ ಅವರ ಮೊದಲನೇ ಕಾರ್ಯವೂ ಆಗಿರುತ್ತದೆ ...ಲ್ಲಿಂದ ಎರಡು ಕಾಲೇಜುಗಳ ಸಿಬ್ಬಂದಿಯನ್ನೂ ...ನ್ನೂ ಹೆಚ್ಚಿಸಿ, ಅವುಗಳಿಗೇನೇ ಬಜೆಟ್ ಹಣದಲ್ಲಿ ...ಶೇಷಭಾಗವನ್ನು ವಿನಿಯೋಗಿಸುವುದಾದರೆ ಈ ರೀತಿ ...ಪ್ರೈಮರಿ ವಿದ್ಯಾಭ್ಯಾಸವು ಅಭಿವೃದ್ಧಿಯಾಗುವ ಬಗೆ ...ಹ್ಯಾಗೆ? ಇದಕ್ಕಾಗಿ ಗವರ್ನಮೆಂಟಿನವರು ವಿದ್ಯಾಭ್ಯಾಸ...ಕ್ಕೆ ಈಗಿಂತಲೂ ಬಹಳ ಹೆಚ್ಚು ಹಣವನ್ನು ತೆಗೆದಿಡಬೇ...ಕಾಗುವುದು. ಇಲ್ಲವಾದರೆ ಇಂಗ್ಲಿಷ್ ವಿದ್ಯಾಭ್ಯಾಸಕ್ಕೇನೇ ...ಷ್ಟು ಹಣ ವಿನಿಯೋಗವಾಗಿ ತುಂಬಾ ಅವಶ್ಯವಾದ ...ಪ್ರೈಮರಿ ವಿದ್ಯೆಯು ಹಬ್ಬುವ ಅವಕಾಶವಿಲ್ಲದೆ ಹೋದೀ...ತು ಆದಕಾರಣ ಗವರ್ನಮೆಂಟಿನವರು ಎರಡು ಕಾಲೇಜು...ಗಳನ್ನೂ ಇಟ್ಟು ನಡಿಸಬೇಕಾದ ಅವಶ್ಯವಿಲ್ಲವೆಂದು ...ಆಲೋಚನೆಮಾಡುತ್ತಿರುವುದು ನ್ಯಾಯವಾಗಿದೆ ಎಂದು ...ನಾವು ನಂಬುತ್ತೇವೆ

ಮೈಸೂರು ಪಟ್ಟಣವು ಈ ಸಂಸ್ಥಾನಕ್ಕೆ ರಾಜಧಾನಿ...ಯಾಗಿರುವುದು. ಇಲ್ಲಿಂದ ಕಾಲೇಜನ್ನು ತೆಗೆದುಬಿಡುವುದಾ...ದರೆ ರಾಜಧಾನಿಯ ಪ್ರಾಶಸ್ತ್ಯವು ಇನ್ನೂ ಕಡಮೆಯಾ...ಗುತ್ತದೆ, ವ್ಯಾಪಾರಸಾಧನಗಳು ನಡೆಯುತಕ್ಕ ಭಾರಿ ...ಸ್ಥಳವಲ್ಲ; ಸರ್ಕಾರಿ ಇಲಾಖೆ ಹೆಡ್ ಆಫೀಸುಗಳೆಲ್ಲಾ ...ಬೆಂಗಳೂರಿನಲ್ಲಿರುವವು. ಇಲ್ಲಿ ಅರಮನೆಯೊಂದುಮಾತ್ರ ...ಇರುತ್ತದೆ. ಆದರಿಂದ ಸಾವಿರಾರು ಜನರ ಜೀವನ ನಡೆಯು...ತ್ತದೆ. ನವರಾತ್ರಿ ಉತ್ಸವಕಾಲವನ್ನು ಬಿಟ್ಟರೆ ಉಳಿದ ...ಹನ್ನೊಂದು ತಿಂಗಳೂ ಮೈಸೂರು ಪಟ್ಟಣವು ದೊಡ್ಡ ...ಹಳ್ಳಿಯೋಪಾದಿಯಲ್ಲಿ ಇರುತ್ತದೆಂದು ಹೇಳುವಂತಾಗುತ್ತದೆ ...ಆದಕಾರಣ ಮೈಸೂರು ಕಾಲೇಜನ್ನು ವಜಾಮಾಡುವುದ...ಕ್ಕೆ ಪ್ರತಿಯಾಗಿ ಬೆಂಗಳೂರಿನಲ್ಲಿರುವುದನ್ನೇ ತೆಗೆದುಹಾಕಿ, ...ಮೈಸೂರಿನ ಕಾಲೇಜನ್ನು ಯಾಕೆ ಅಭಿವೃದ್ಧಿಸಿ ತಿಯಲ್ಲಿಡ...ಬಾರದೆಂದು ಕೇಳುತ್ತೇವೆ ವಿದ್ಯಾಭ್ಯಾಸಕ್ಕೆ ಬೆಂಗಳೂರಿ...ಗಿಂತಲೂ ಮೈಸೂರು ಪಟ್ಟಣವು ವಿಶೇಷ ಅನುಕೂಲವಾ...ದದ್ದು. ಬೆಂಗಳೂರು ತುಂಬಾ ಗಲಾಟೆಯ ಸ್ಥಳ; ಮೈಸೂ...ರು ಗಲಭೆ ಇಲ್ಲದೆ ತುಂಬಾ ಆರೋಗ್ಯಕರವಾಗಿರುವುದು. ಕುಂಭಕೋಣ ಶೀಮೆಯ ವಿದ್ಯಾರ್ಥಿಗಳು ಮೈಸೂರಿಗೆ ಬಂದು ಓದುವುದು ಕಡಮೆಯಾದಾಗ್ಯೂ ಅದರಿಂದ ಸಂಸ್ಥಾನಕ್ಕೆ ವಿಶೇಷ ನಷ್ಟವಾಗಲಿ ಕಷ್ಟವಾಗಲಿ ಉಂಟಾಗದೆಂದು ಹೇಳುತ್ತೇವೆ.

ಬೆಂಗಳೂರೇನೂ ಮಧ್ಯರಾಷ್ಟ್ರವಾದದ್ದು; ಅಲ್ಲಿಂದ ಎಲ್ಲಾ ಕಡೆಗಳಿಗೂ ರೈಲಿರುತ್ತದೆ. ಮೈಸೂರಿಗೆ ಬಂದ ರೈಲು ಮುಂದೆ ಹೋಗುವುದಿಲ್ಲವೆಂದೂ ಇದೇ ಮೂಲೆ ಕಾಕೆಂದೂ ಹೇಳಬಹುದಾದರೂ ಕಾಲಕ್ರಮದಲ್ಲಿ ಇಲ್ಲಿಂದ ಈರೋಡು, ತಲಚೇರಿ ಕಡೆಗೆ ರೈಲು ಆದೀತೆಂಬ ಭರವಸೆ ಇರೋಣದರಿಂದ ಈ ಲೋಪವು ವಿಶೇಷವಾದದ್ದಲ್ಲ. ಗವರ್ನಮೆಂಟಿನವರು ಒಂದು ಕಾಲೇಜನ್ನು ವಜಾಮಾಡಬೇಕೆಂದು ಗೊತ್ತುಮಾಡುವ ಪಕ್ಷಕ್ಕೆ ಬೆಂಗಳೂರಿಗಿಂತಲೂ ಮೈಸೂರು ಪಟ್ಟಣವನ್ನು ವಿದ್ಯಾ ವಿಷಯದಲ್ಲಿ ಈ ಸಂಸ್ಥಾನಕ್ಕೆಲ್ಲಾ ಪ್ರಮುಖವಾದದ್ದನ್ನಾಗಿ ಮಾಡಿಯಾರೆಂದು ನಂಬುತ್ತೇವೆ. ಆದರೆ ಅವರು ಯಾವ ರೀತಿ ತೀರ್ಮಾನ ಮಾಡಿದಾಗ್ಯೂ, ಈ ಸಂಸ್ಥಾನದ ಪ್ರೈಮರಿ ವಿದ್ಯಾಭಿವೃದ್ಧಿಗೆ ಕುಂದಕವಾಗದಂತೆ ನೋಡಿಕೊಳ್ಳಬೇಕೆಂತಲೂ, ಅವಶ್ಯಬಿದ್ದರೆ ಒಂದು ಕಾಲೇಜನ್ನು ತೆಗೆದುಬಿಟ್ಟರೂ ಚಿಂತೆಯಿಲ್ಲವೆಂತಲೂ ಅಭಿಪ್ರಾಯಪಡುವೆವು.

ವೇದಗಳ ಕಾಲದ ವಿವಾಹ ಪದ್ಧತಿಗಳು.

ಆರ್ಯಧರ್ಮ ಗಂಜೀವಿನಿ ಸಭೆಯಲ್ಲಿ ಮಾ|| ರಾ|| ಮಹಾದೇವ ಶಾಸ್ತ್ರಿಗಳು ವೇದಗಳಿಗನುಸಾರವಾದ ವಿವಾಹ ಪದ್ಧತಿಗಳನ್ನು ಕುರಿತು ಒಂದು ಉಪನ್ಯಾಸವನ್ನು ಓದಿದರು ಈ ಉಪನ್ಯಾಸದಿಂದ ಮಾ|| ರಾ|| ಮಹಾದೇವ ಶಾಸ್ತ್ರಿಗಳಿಗೂ ದಕ್ಷಿಣ ಹಿಂದೂ ದೇಶದಲ್ಲಿ ಸಂಘ ಪರಿಷ್ಕಾರಕರೆಂದು ಹೆಸರುಗೊಂಡಿರುವ ಮಾ|| ರಾ|| ರಘುನಾಥರಾಯರಿಗೂ ಒಂದು ವಿಶೇಷವಾದ ಚರ್ಚೆಯು ನಡೆಯುತ್ತದೆ ಮಹಾದೇವ ಶಾಸ್ತ್ರಿಗಳು ಈ ವಿಷಯದಲ್ಲಿ ಪಡತಕ್ಕ ಅಭಿಪ್ರಾಯಗಳಾವುವೆಂದರೆ:—(೧) ವೇದಗಳ ಪ್ರಕಾರ ಹೆಂಗಸಿಗೆ ಮದುವೆ ಮಾಡಿಕೊಳ್ಳಲೇಬೇಕೆಂಬುವ ನಿರ್ಬಂಧವಿಲ್ಲ ಮದುವೆಯು ಪೂರ್ಣವಯಸ್ಕರಾದವರಿಗೆ ಮಾತ್ರ ಆಗಬೇಕೆಂಬುವ ಕಟ್ಟಳೆಯು ಇತ್ತು ವೇದಗಳ ಕಾಲದಲ್ಲಿ ಪುರುಷರೂ ಸ್ತ್ರೀಯರೂ ಸರಿಸಮಾನವಾಗಿ ವಿದ್ಯಾವಂತರಾಗಿಯೇ ಇರುತ್ತಿದ್ದರು (೨) ಕೆಲವು ಸ್ಮೃತಿಗಳು ಸ್ತ್ರೀಯರು ವಿವಾಹವಾಗಲೇಬೇಕೆಂದು ನಿರ್ಬಂಧಪಡಿಸುತ್ತವೆ ಹಾಗೆ ನಿರ್ಬಂಧ ಪಡಿಸುವದಲ್ಲದೆ ವಿವಾಹದ ಸ್ತ್ರೀಧರ್ಮವು ಅವರು ಋತುಮತಿಯರಾಗುವದಕ್ಕೆ ಮೊದಲೇ ಜರುಗಬೇಕೆಂತಲೂ ಅವರು ಪ್ರಾಯಕ್ಕೆ ಬಂದೊಡನೆಯೇ ವಿವಾಹಪ್ರಸ್ತವಾಗಬೇಕೆಂತಲೂ ತಿಳಿಸುವವು (೩) ಹೀಗಿರುವುದರಿಂದ ಶ್ರುತಿಗೂ ಸ್ಮೃತಿಗೂ ತಾರತಮ್ಯವಿರುವುದು ಗೊತ್ತಾಗುತ್ತದೆ ಈ ವ್ಯತ್ಯಾಸವು ವೇದಗಳ ಕಾಲಕ್ಕೂ ತದನಂತರ ಬಂದ ಕಾಲಕ್ಕೂ ಇರುವ ಸ್ಥಿತಿಗತಿಗಳನ್ನು ವ್ಯಕ್ತಪಡಿಸುತ್ತದೆ ಆದರೆ ಶ್ರುತಿಗಳ ಎಲ್ಲಾ ಕಾಲದಲ್ಲಿಯೂ ಅನುಸರಣೆಗೆ ಬರುವ ಹಾಗೆ ಕಟ್ಟಳೆಗಳನ್ನು ವಿಧಿಸುತ್ತವೆ (೪) ಈಗಿನ ಕಾಲದಲ್ಲಿ ಬಾಲ್ಯವಿವಾಹವು ಹಾನಿಕರವೆಂತಲೂ ಅದನ್ನು ಸಂಪೂರ್ಣವಾಗಿ ನಿಲ್ಲಿಸಿಬಿಡಬೇಕೆಂತಲೂ ಸ್ತ್ರೀಯರಿಗೆ ವಿದ್ಯಾಭ್ಯಾಸವು ಕೇವಲ ಅವಶ್ಯಕವೆಂತಲೂ, ಗಂಡಸರೂ ಹೆಂಗಸರೂ ವಿವಾಹವಾಗುವದಕ್ಕೆ ಮೊದಲು ಬ್ರಹ್ಮಚರ್ಯವನ್ನು ಚರಿಸಬೇಕೆಂತಲೂ ತಿಳಿಸುವೆವು

ನಾವಾದರೋ ಮಹಾದೇವ ಶಾಸ್ತ್ರಿಗಳ ಅಭಿಪ್ರಾಯವನ್ನೇ ಅನುಮೋದಿಸುತ್ತೇವೆ ವೇದಗಳ ವ್ಯಾಖ್ಯಾನದಲ್ಲಿ ವ್ಯತ್ಯಾಸಗಳು ಕಂಡುಬಂದರೂ ಮಾ|| ರಾ|| ಶಾಸ್ತ್ರಿಗಳು ತಿಳಿಸತಕ್ಕ ಸಂಗತಿಗಳು ಕೇವಲ ಪ್ರಯೋಜನಕಾರಿಗಳೆಂದು ಎಲ್ಲರೂ ಒಪ್ಪುವರು.

ಒಳದೇಶದ ವೃತ್ತಾಂತಗಳು.

ಈ ಸಲ ನಡೆದ ಮೈಸೂರು ಸಿವಿಲ್ ಪರೀಕ್ಷೆಯಲ್ಲಿ ಬೆಂಗಳೂರಿನ ಮಾ|| ನ್ಯಾಯಪತಿ ಮಾಧವರಾವ್, ಬಿ ಎ ಮತ್ತು ಮೈಸೂರಿನ ಎಸ್ ಶಾಮಣ್ಣ, ಬಿ ಎ ಎಂಬೀ ಇಬ್ಬರು ತೇರ್ಗಡೆಯಾಗಿರುವಂತೆ ಪ್ರಕಟವಾಗಿದೆ.

❀❀❀

ಕಳೆದ ಸೋಮವಾರ ಬೆಳಿಗ್ಗೆ ವಿಲಾಯಿತಿಯ ಮಹಾರಾಜ್ಞೀಯವರ ವರುಷ ವರ್ಧಂತಿಯ ಗೌರವಾರ್ಥವಾಗಿ ರಾಜಧಾನಿಯಲ್ಲಿ ೩೧ ತೋಪುಗಳನ್ನು ಹಾರಿಸಿದರು ದೇವಸ್ಥಾನಗಳಲ್ಲಿ ಮಹಾರಾಜ್ಞೀಯವರ ಶ್ರೇಯಃ ಪ್ರಾರ್ಥನೆಗಳು ನಡೆದವು.

❀❀❀

ರಾಜಧಾನಿಯ ರೈಲ್ವೆ ಸ್ಟೇಷನಲ್ಲೂ ಉಳಿದಕಡೆಗಳಲ್ಲೂ ಪ್ಲೇಗ್ ನಿಮಿತ್ತವಾಗಿ ಪ್ರಯಾಣಿಕರನ್ನು ಪರೀಕ್ಷೆಮಾಡಿ, ಪ್ಯಾಸುಗಳನ್ನು ಕೊಡುತ್ತಿರುವ ಪದ್ಧತಿಯನ್ನು ಈ ತಿಂಗಳ ೧೫ ನೇ ತಾರೀಖಿನಿಂದ ತಪ್ಪಿಸಬೇಕೆಂತಲೂ, ಆ ಕೆಲಸದಲ್ಲಿ ನೇಮಕವಾಗಿದ್ದವರಿಗೆಲ್ಲಾ ಈ ತಿಂಗಳು ಪೂರಾ ಸಂಬಳವನ್ನೇ ಪಾವತಿಮಾಡಬೇಕೆಂತಲೂ ಗವರ್ನಮೆಂಟಿನವರು ಹುಕುಂ ಕೊಟ್ಟಿದಾರೆ

❀❀❀

ರಾಜಧಾನಿಯಿಂದ ಅಂಚೆ ಬಸ್ತುಗಳನ್ನು ಹೊತ್ತುಕೊಂಡು ಹೋಗುತ್ತಿದ್ದವನನ್ನು ಕಳ್ಳರು ಹಿಡಿದು, ಬಸ್ತುಗಳನ್ನು ಕಿತ್ತುಕೊಂಡರೆಂದೂ ಪೋಲೀಸಿನವರು ಕೆಲವು ಒಡ್ಡರನ್ನು ಹಿಡಿದ ಮೊಕದ್ದಮೆ ಮಾಡಿದಾರೆಂದೂ ತಿಳಿಸಿದ್ದೆವಷ್ಟೆ ಈ ಮೊಕದ್ದಮೆಯಲ್ಲಿ ಮೂರು ಮಂದಿ ಅಪರಾಧಿಗಳಿಗೆ ತಲಾ ಎರಡು ವರುಷದಂತೆ ಕಠಿಣ ಸಜಾ ವಿಧಿಸಲ್ಪಟ್ಟಿತೆಂದು ತಿಳಿದು ಬಂದಿದೆ

ಶ್ರೀಮನ್ಮಹಾರಾಜರವರೂ, ಯುವರಾಜರವರೂ, ಮಹಾಮಾತೃಶ್ರೀಯವರೂ ಅರಮನೆ ಜನಾನಿಯವರ ಸಹಿತ ಕಳೆದ ಭಾನುವಾರ ಬೆಳಿಗ್ಗೆ ರಾಜಧಾನಿಯಿಂದ ಹೊರಟು ಮಧ್ಯಾಹ್ನ ಬೆಂಗಳೂರು ತಲುಪಿ, ರಾತ್ರಿಯಲ್ಲಿ ರೈಲು ಹತ್ತಿ ಪ್ರಯಾಣಮಾಡಿ, ಮರುದಿನ ಬೆಳಿಗ್ಗೆ ಮದರಾಸ್ ಪಟ್ಟಣವನ್ನು ತಲುಪಿದರು. ಮಂಗಳವಾರ ಶ್ರೀಮನ್ಮಹಾರಾಜರವರಿಗೂ ಗವರ್ನರವರಿಗೂ ಭೇಟಿ ಮರು ಭೇಟಿಗಳು ನಡೆದವು.

❀❀❀

ಬೆಂಗಳೂರಿನಲ್ಲಿ ಪ್ರಕಟವಾಗುವ ಸ್ಟ್ಯಾಂಡರ್ಡ್ ಮತ್ತು ನಡೆಗನ್ನಡಿ ಪತ್ರಿಕೆಗಳಿಗೆ ರಾಜಧಾನಿಯಲ್ಲಿ ಬಾತ್ಮೀದಾರರಾಗಿದ್ದ ಮ|| ಎಂ. ಕೃಷ್ಣಯ್ಯಂಗಾರ್ರಿಗೆ ಕಳೆದ ಗುರುವಾರ ಪ್ಲೇಗ್ ತಗಲಿ ಸೋಮವಾರ ಬೆಳಗಿನಝಾಮದಲ್ಲಿ ಕಾಲವಾದರೆಂದು ತಿಳಿಸಲು ತುಂಬಾ ವಿಷಾದಿಸುತ್ತೇವೆ. ಇನ್ನೂ ೨೯—೩೦ ವಯಸ್ಸಿನವರಾಗಿದ್ದರೂ ಮ|| ಕೃಷ್ಣಯ್ಯಂಗಾರ್ರು ತುಂಬಾ ವಿವೇಕಶಾಲಿಗಳಾಗಿಯೂ, ಪ್ರಪಂಚಜ್ಞಾನವನ್ನು ತಿಳಿದವರಾಗಿಯೂ, ಜನಾನುರಾಗಿಗಳಾಗಿಯೂ ಇದ್ದರು ಅವರಿಗೆ ಚಿಕ್ಕವಯಸ್ಸಿನ ಪತ್ನಿಯೂ, ಮಾತಾಪಿತೃಗಳೂ, ಸಹೋದರರೂ ಇರುತ್ತಾರೆ ಇಂಥಾ ದೇಶಾಭಿಮಾನಿಗೆ ಈ ಅಕಾಲಮರಣವು ಘಟಿಸಿದ್ದನ್ನು ಕೇಳಿ ಬಹುಜನರು ಮರುಗುತ್ತಾರೆ

❀❀❀

ಶಿಕಾರಿಪುರದಲ್ಲಿ ಸೊಪ್ಪಿನಕೇರಿ ಕುರುಬರ ಪೈಕಿ ಒಬ್ಬರ ಮನೆಯಲ್ಲಿ ಈ ವಾರ ಅವಳಿಜವಳಿ ಹೆಣ್ಣು ಮಕ್ಕಳು ಜನಿಸಿದವು ಅವುಗಳಿಗೆ ಪ್ರತ್ಯೇಕ ಪ್ರತ್ಯೇಕವಾದ ಒಂದೊಂದು ತಲೆಯೂ, ಸೌಂದರ್ಯವಾದ ಒಂದೊಂದು ಮುಖವೂ, ಎರಡೆರಡು ಕೈಗಳೂ, ಎರಡೆರಡು ಕಾಲುಗಳೂ ಇದ್ದವು. ಆದರೆ ಮುಂಡದಲ್ಲಿ ಹೊಟ್ಟೆಮಾತ್ರ ಎರಡು ಮಕ್ಕಳದೂ ಸಹವಾಗಿ ಸೇರಿಕೊಂಡು, ಎರಡಕ್ಕೂ ಒಂದೇ ಹೊಕ್ಕಳು ಇತ್ತು ಇಲ್ಲಿನ ಸೂಲಗಿತ್ತಿಯವರು ಸಾಹಸಪಟ್ಟು ಪ್ರಸುಮಾಡಿಸಿದರು ಆದರೆ ಕೂಸುಗಳು ಸತ್ತುಹೋಗಿದ್ದವು ಬಹು ಜನರು ಜಾತ್ರೆಯಂತೆ ಸೇರಿ ಅದನ್ನು ನೋಡಿದರು. ಬಳಿಕ ಆ ಶಿಶುಗಳನ್ನು ಶಿವಮೊಗ್ಗ ಸಿವಿಲ್ ಆಸ್ಪತ್ರೆಗೆ ರವಾನಿಸಿರುತ್ತಾರೆ ಎಂದು ತಿಳಿದು ಬಂದಿದೆ.

❀❀❀

ಮೊಳಕಾಲ್ಮೂರು ಟವ್ನಿನಲ್ಲಿ ರೇಷ್ಮೆ ಕಸಬುದಾರರು ತಮ್ಮ ಕಸಬನ್ನು ಅಭಿವೃದ್ಧಿಪಡಿಸುವುದಕ್ಕೋಸ್ಕರ 'ಜಾಹಿರುಲ್ ಇಸ್ಲಾಂ' ಎಂಬ ಹೆಸರುಳ್ಳ ಪರಸ್ಪರ ಸಹಾಯಕ ಸಂಘವನ್ನು ಸ್ಥಾಪಿಸಿಕೊಂಡು, ರಿಜಿಸ್ಟರ್ ಮಾಡಿಸಿರುತ್ತಾರೆ ರೇಷ್ಮೆ ಮೊದಲಾದ ವ್ಯಾಪಾರಿಕೆಗಳನ್ನು ನಡಿಸುವ ಮುಸಲ್ಮಾನರು ಇತರರು ಮೆಂಬರುಗಳಾಗಿ ಸೇರಿಕೊಂಡಿದಾರೆ ಮೆಂಬರುಗಳಿಗೆ ಬೇಕಾಗುವ ಕಚ್ಚಾ ಸಾಮಾನನ್ನೂ ಮುಂಗಡ ಹಣವನ್ನೂ ಒದಗಿಸಿಕೊಡಬೇಕೆಂಬುವುದೇ ಈ ಸಂಘದ ಉದ್ದೇಶವು ಕಳೆದ ಅಕ್ಟೋಬರ್ ತಿಂಗಳ ಆಖೈರುವರೆಗೆ ೩೪ ಮಂದಿ ಮೆಂಬರುಗಳಾಗಿ ಸೇರಿ, ೫೩೦ ಷೇರುಗಳನ್ನು ತೆಗೆದುಕೊಂಡು ೩,೫೦೦ ಬಿಲ್ಲೆ ರೂಪಾಯಿ ಪಾವತಿಮಾಡಿರುತ್ತಾರೆ ಈ ಸಂಘದಿಂದ ಅಲ್ಲಿನ ಕಸಬುದಾರರು ಪ್ರಯೋಜನಹೊಂದಿ, ಕಸಬನ್ನು ಅಭಿವೃದ್ಧಿಗೆ ತಂದಾರೆಂದು ನಂಬಿದ್ದೇವೆ.

ಮೈಸೂರ್ ಗೆಜೆಟ್ ಸಂಗ್ರಹ.

ಮೈಸೂರು ಸಬ್ ಡಿವಿಜನ್ ಛಾರ್ಜಿನಲ್ಲಿರುವ ಸೀನಿಯರ್ ಆ|| ಕಮೀಷನರ್ ಮ|| ಎ ಸುಬ್ರಹ್ಮಣ್ಯ ಅಯ್ಯರವರಿಗೆ ಡಿಸೆಂಬರ್ ೧ ರಿಂದ ಎರಡು ತಿಂಗಳು ಹದಿನೆಂಟು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಸೀನಿಯರ್ ಆ|| ಕಮೀಷನರ್ ಮ|| ವಿ ಆರ್ ತ್ಯಾಗರಾಜ ಅಯ್ಯರವರು ಮೈಸೂರು ಸಬ್ ಡಿವಿಜನ್ ಛಾರ್ಜನ್ನು ವಹಿಸಿರತಕ್ಕದ್ದು.

ಆ|| ಕಮೀಷನರ್ ಮ|| ಕೆ. ಶ್ರೀಕಂಠಯ್ಯನವರು ರಜದಿಂದ ವಾಪಸು ಬಂದು ತುಮಕೂರು ಡಿಸ್ಟ್ರಿಕ್ಟ್ ಟ್ರೆಷರಿ ಛಾರ್ಜನ್ನು ವಹಿಸಿರಬೇಕೆಂದು ಹುಕುಂ ಕೊಡಲಾಗಿದೆ

ಸಬ್ ರೆಜಿಸ್ಟ್ರಾರ್ ಮ|| ಸಿ ಸೂರ್ಯನಾರಾಯಣ ಶಾಸ್ತ್ರಿಯವರನ್ನು ಛೀಫ್ ಕೋರ್ಟಿನಲ್ಲಿ ಟ್ರಾನ್ಸ್ಲೇಟರಾಗಿ ನೇಮಕ ಮಾಡಿಕೊಂಡದ್ದರಿಂದ ಮ|| ಎಂ ನಾರಾಯಣರಾಯರನ್ನು ೪ ನೇ ಕ್ಲಾಸ್ ಸಬ್ ರೆಜಿಸ್ಟ್ರಾರಾಗಿ ನೇಮಿಸಿದೆ

ಮೈಸೂರು ಜನರಲ್ ಆಸ್ಪತ್ರೆಯಲ್ಲಿ ಸಬ್ ಆ|| ಸರ್ಜನರಾದ ಮ|| ಎಸ್. ನಾರಾಯಣರಾಯರನ್ನು ಸ್ವಂತ ಕೋರಿಕೆಯಂತೆ ಬೆಂಗಳೂರು ಕಣ್ಣಾಸ್ಪತ್ರೆಗೆ ವರ್ಗಮಾಡಿದೆ

ಅಮಲ್ದಾರ್ ಮ|| ಸಿ ಆರ್ ನಾರಾಯಣಸ್ವಾಮಿ ಮೊದಲಿಯಾರ್ರನ್ನು ಹುಣಸೂರಿನಿಂದ ಹೊಸದುರ್ಗದ ತಾಲ್ಲೂಕಿಗೆ ವರ್ಗಮಾಡಿದೆ

ಫ್ರೆಂಚ್‌ರಾಕ್ಸ್ ಸಬ್ ತಾಲ್ಲೂಕು ಡಿಪ್ಟಿ ಅಮಲ್ದಾರ್ ಮ|| ಎಸ್. ಶ್ರೀನಿವಾಸಯ್ಯಂಗಾರನ್ನು ಹುಣಸೂರು ತಾಲ್ಲೂಕಿನ ಅಮಲ್ದಾರ್ ಮತ್ತು ೩ ನೆ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ನೇಮಿಸಿದೆ

ಡಾಕ್ಟರ್ ಸ್ಮೀತ್‌ಯವರನ್ನು ಸರ್ಕಾರಿಯಾಗಿ ಯೂರೋಪಿಗೆ ಕಳುಹಿಸಿಕೊಡುವಂತೆ ಗೊತ್ತಾಗಿರೋಣದರಿಂದ ಅವರು ವಾಪಸು ಬರುವ ತನಕ ಮೈಸೂರು ಭೂಗರ್ಭ ಶೋಧನಾ ಇಲಾಖೆಯಲ್ಲಿ ಮುಂದೆ ಹೇಳುವ ಬದಲಾವಣೆಗಳು ಹುಕುಂ ಮಾಡಲ್ಪಟ್ಟವೆ —

ಮ|| ಎಚ್ ಕೆ ಸ್ಲೇಟರ್‌ಯವರು ಸ್ಟೇಟ್ ಜಿಯಾಲಜಿಸ್ಟ್ ಮತ್ತು ಗವರ್ನಮೆಂಟ್ ಸೆಕ್ರೇಟರಿ ಆಫೀಸ್ ಚಾಲ್ತಿ ಕೆಲಸಗಳ ಛಾರ್ಜನ್ನು ವಹಿಸತಕ್ಕದ್ದು

ಗಣಿಗಳ ಇನ್ಸ್‌ಪೆಕ್ಟರ್ ಮ|| ಆರ್ ಬೋಸೆಟ್‌ಯವರು ಛೀಫ್ ಇನ್ಸ್‌ಪೆಕ್ಟರ್ ಆಫೀಸಿನ ಚಾಲ್ತಿ ಕೆಲಸಗಳ ಛಾರ್ಜನ್ನು ವಹಿಸಿರತಕ್ಕದ್ದು.

ಎಕ್ಸ್‌ಪ್ಲೋಸಿವ್ಸ್ ಇನ್ಸ್‌ಪೆಕ್ಟರ್ ಮ|| ಎ ಟಿ ಸೇಟ್ಲೂರ್‌ಯವರು ಛೀಫ್ ಇನ್ಸ್‌ಪೆಕ್ಟರ್ ಆಫೀಸಿನ ಚಾಲ್ತಿ ಕೆಲಸದ ಛಾರ್ಜನ್ನು ವಹಿಸಿರತಕ್ಕದ್ದು

ಆ|| ಇಂಜನಿಯರ್ ಮ|| ಎಫ್. ಎ. ಸ್ಮೀಲ್‌ಯವರಿಗೆ ಕಳೆದ ಆಗಸ್ಟ್ ೧೫ ರಿಂದ ಮೂರು ತಿಂಗಳ ಪ್ರಿವಿಲೆಜ್ ರಜಾ ಮತ್ತು ಮೂರು ತಿಂಗಳ ಫರ್ಲೋ ರಜಾ ಸಹಾ ಕೊಟ್ಟಿದೆ.

ವೈಸ್‌ರಾಯಿಯವರ ದೇಶಸಂಚಾರವು

ಬರೋಡಾ ದೇಶೀಯ ರಾಜರುಗಳ ದರ್ಬಾರು

ವೈಸ್‌ರಾಯಿ ಲಾರ್ಡ್ ಮಿಂಟೋ ಪ್ರಭುಗಳು ಪತ್ನಿ ಪರಿವಾರ ಸಹಿತ ಬರೋಡಾ ಅಧಿಪತ್ಯದಲ್ಲಿ ಸಂಚಾರವಾಗಿ ಕೆಲ ದಿನ ಬರುವುದಕ್ಕಾಗಿ ದಯಮಾಡಿದಾಗ ಆ ಅಧಿಪತ್ಯಕ್ಕೆ ಸೇರಿದ ಸ್ವದೇಶೀ ರಾಜರುಗಳೆಲ್ಲಾ [illegible] ಎಂಬ ಸ್ಥಳದಲ್ಲಿ ಸೇರಿ, ಬಹು ಅಪೂರ್ವವಾದ ಏರ್ಪಾಡುಗಳನ್ನು ಮಾಡಿ, ಕಳೆದ ತಾ ೧೭ ನೆ ಬುಧವಾರ ಸಾಯಂಕಾಲ ಒಂದು ಭಾರೀ ದರ್ಬಾರ್ ಮಾಡಿದರು. ವೈಸ್‌ರಾಯಿಯವರು ಪತ್ನಿ ಪರಿವಾರ ಸಹಿತ ಗಾಯಕವಾಡರೊಡನೆ ಆ ದರ್ಬಾರಿಗೆ ದಯಮಾಡಿ, ಸಿಂಹಾಸನದಲ್ಲಿ ಕುಳಿತುಕೊಂಡ ಮೇಲೆ, ಚಿತ್ರವಿಚಿತ್ರವಾದ ದಿರಸುಗಳನ್ನು ಧರಿಸಿಕೊಂಡಿದ್ದ ನಾಟ್ಯಗಾರರು ದೇಶೀಯ ಪದ್ಧತಿಯ ಪ್ರಕಾರ ಆಟಪಾಟ, ಸವಿಕರನ್ನು ಸಂತೋಷಪಡಿಸಿದರು. ತರುವಾಯ ಸೆಕ್ರೆಟರಿಯವರು ವೈಸ್‌ರಾಯಿಯವರ ಅನುಜ್ಞೆಯನ್ನು ಪಡೆದು, ಅಲ್ಲಿ ದರ್ಬಾರಿನಲ್ಲಿ ಕುಳಿತಿದ್ದ ಸುಮಾರು ೩೯ ದೇಶೀಯ ಅರಸರನ್ನು ಒಬ್ಬೊಬ್ಬರಾಗಿ ವೈಸ್‌ರಾಯಿಯವರಿಗೆ ಭೇಟಿ ಮಾಡಿಸಿದರು. ಇವರು ತಮ್ಮ ಪದ್ಧತಿಯ ಪ್ರಕಾರ ವೈಸ್‌ರಾಯಿಯವರಿಗೆ ನಜರು ಮುಜರೆಗಳನ್ನು ಮಾಡಿ, ತಮ್ಮ ಸ್ಥಾನಗಳಲ್ಲಿ ಕುಳಿತುಕೊಂಡರು.

ಅನಂತರ ವೈಸ್‌ರಾಯಿಯವರು ಆ ದೇಶೀಯ ರಾಜರುಗಳನ್ನು ಕುರಿತು ಒಂದು ಭಾಷಣವನ್ನು ಮಾಡಿದರು. ಅದರ ಸಾರಾಂಶವು ಯಾವುದೆಂದರೆ—

ವೈಸ್‌ರಾಯಿಯವರ ಭಾಷಣವು

ಉತ್ತರ ಪ್ರಾಂತ ಸಂಸ್ಥಾನಗಳ ಅರಸರೇ, ಈ ಸಂದರ್ಭದಲ್ಲಿ ನಿಮ್ಮಗಳನ್ನೆಲ್ಲಾ ನಿಮ್ಮ ದೇಶದಲ್ಲೇ ನಾವು ಸಂಧಿಸಿದ್ದಕ್ಕಾಗಿಯೂ, ನೀವುಗಳೆಲ್ಲಾ ನಮ್ಮ ಸೌಕರ್ಯಕ್ಕಾಗಿ ಮಾಡಿರುವ ಆದರಪೂರ್ವಕವಾದ ಏರ್ಪಾಡುಗಳಿಗಾಗಿಯೂ ನಿಮ್ಮನ್ನು ಬಹು ಸಂತೋಷದಿಂದ ವಂದಿಸುತ್ತೇವೆ. ನಿಮ್ಮ ನಿಮ್ಮ ಸಂಸ್ಥಾನಗಳು ಈಚೆಗೆ ಎಷ್ಟೋ ಅಭಿವೃದ್ಧಿ ಹೊಂದುತ್ತಾ ಬಂದಿವೆ ಎಂದು ಕೇಳಿ ಸಂತೋಷಪಡುವೆವು. ನೀವುಗಳು ರಸ್ತೆಗಳ ಏರ್ಪಾಡಿಗೂ ಸೇತುವೆಗಳ ಕಟ್ಟಡಕ್ಕೂ ಬಹಳ ಸಾಲವಾಗಿ ದ್ರವ್ಯಸಹಾಯ ಮಾಡಿರುತ್ತೀರಿ. ನಿಮ್ಮ ಸಂಸ್ಥಾನಗಳಲ್ಲಿ ಪ್ರಜೆಗಳು ನೆಮ್ಮದಿಯಾಗಿ ಕಾಲಕಳೆಯಲು ಅನುಕೂಲವಾಗಿರುವಂಥ ಮುಖ್ಯ ಸರ್ಕಾರದ ಕಾರ್ಯವನ್ನು ಸ್ವಲ್ಪ ಮಟ್ಟಿಗೆ ನಡಸಿರುತ್ತೀರಿ. ಪ್ರಜೆಗಳ [illegible] ಸರ್ಕಾರದಲ್ಲಿ ಏರ್ಪಾಟು ಮಾಡಿಸುವುದು ಬಹಳ ಅಗತ್ಯವಾಗಿದೆ. ಈ ಭಾಗದಲ್ಲಿ ನೀವು ನಡಸಬೇಕಾದ ಕಾರ್ಯಗಳು ಇನ್ನೂ ಉಳಿದಿರುತ್ತವೆ. ಕೆಲವು ಕಡೆಗಳಲ್ಲಿ ಭಯಂಕರವಾದ ಕೊಲೆಗಳೂ ಲೂಟಿ ದರೋಡೆ ಮೊದಲಾದ ಅಕೃತ್ಯಗಳೂ ಇನ್ನೂ ನಡೆಯುತ್ತವೆ ಇವೆ ಎಂದು ನಾವು ಹೇಳಬೇಕಾಗಿಲ್ಲ. ನೀವುಗಳೆಲ್ಲಾ ನಿಮ್ಮ ಕೈಲಾಗುವ ಮಟ್ಟಿಗೆ ಪ್ರಯತ್ನಪಟ್ಟು ನಿಮ್ಮ ನಿಮ್ಮ ಪ್ರಜೆಗಳಿಗೆ ವಿದ್ಯೆ ಕಲಿಸಬೇಕು. ಜನರು ವಿದ್ಯಾವಂತರಾದ ಹಾಗೆಲ್ಲಾ ದೇಶದ ಐಶ್ವರ್ಯವೂ ಸುಖ ಸಂತೋಷಗಳೂ ಅಭಿವೃದ್ಧಿಗೆ ಬರುತ್ತವೆ. ನಿಮ್ಮ ಸಂಸ್ಥಾನಗಳಲ್ಲಿ ಸದ್ಯ ಪ್ಲೇಗ್ ಉಪದ್ರವಿಲ್ಲವೆಂದು ಕೇಳುತ್ತೇನೆ. ಆದರೂ ನೀವು ಅದನ್ನು ಅಡಗಿಸುವುದಕ್ಕೆ ಬಹು ಮುನ್ನೆಚ್ಚರಿಕೆಯಾಗಿ ಕಾರ್ಯಗಳನ್ನು ನಡಸಿ [illegible] ಬಂದಿದ್ದೀರಿ. ನೀವುಗಳು ನಿಮ್ಮ ಸಂಸ್ಥಾನದ ಕಾರುಬಾರುಗಳನ್ನು ಕಟ್ಟುನಿಟ್ಟಿನಿಂದಲೂ ಸಂಪೂರ್ಣ ಪ್ರಜಾವಾತ್ಸಲ್ಯದಿಂದಲೂ ನೆರವೇರಿಸಬೇಕಾಗಿದೆ. ಅಭಿವೃದ್ಧಿಯು ಅಷ್ಟೊಂದು ವಿಶೇಷವಾಗಿಲ್ಲ. ನಿಮ್ಮ ಕರ್ತವ್ಯಗಳನ್ನು ತಿಳಿದುಕೊಂಡು ನಡೆಯಬೇಕು. ನಿಮ್ಮ ಸ್ವಂತ ಖರ್ಚುಗಳನ್ನು ತಕ್ಕಮಟ್ಟಿಗೆ ಕಡಿಮೆ ಮಾಡಿ, ನಿಮ್ಮ ಸಂಸ್ಥಾನಗಳ ವ್ಯಾಪಾರಾದಿಗಳನ್ನೂ ಗುಪ್ತ ಧನಗಳನ್ನೂ ಬಡವರು ಜನರಿಗೆ ಬಿಡದಂತೆ ನಿಮ್ಮಲ್ಲೇ ಇಟ್ಟುಕೊಳ್ಳಬೇಕು. ನಿಮ್ಮ ಕಡೆಗಳಲ್ಲಿ ವ್ಯಾಪಾರವು ಅಪಾರವಾಗಿ ನಡೆಯುವುದು. ನಿಮ್ಮ ಪ್ರಜೆಗಳೇ ವಿದ್ಯಾವಂತರಾಗಿ ವ್ಯಾಪಾರವನ್ನು ನಡಸಿಕೊಂಡು ಬಂದಲ್ಲಿ ನಿಮ್ಮ ಸಂಸ್ಥಾನಗಳ ಐಶ್ವರ್ಯವು ಹೊರಕ್ಕೆ ಸಾಗಿ ಹೋಗಲು ಅವಕಾಶ ತಪ್ಪುವುದು. ನಿಮ್ಮ ಪ್ರಜೆಗಳೂ ಅಭಿವೃದ್ಧಿಗೆ ಬರುವರು. ಇನ್ನೊಂದು ಮುಖ್ಯ ವಿಷಯವನ್ನು ನಿಮಗೆಲ್ಲಾ ತಿಳಿಸಬೇಕೆಂದು ಕುತೂಹಲಪಡುತ್ತೇವೆ. ನೀವು ನಿಮ್ಮ ಪ್ರಜೆಗಳಿಗೆ ವಿವೇಕ ಕಲಿಸಿ, ಅವರಲ್ಲಿ ಈಗ ವಿಶೇಷ ಪ್ರಬಲವಾಗಿರುವಂಥಾ ಜೂಜುಕೋರತನವನ್ನು ನಿಲ್ಲಿಸಬೇಕು. ಅದರಿಂದ ಪ್ರಜೆಗಳೆಲ್ಲಾ ಬಹುಬೇಗನೆ ದರಿದ್ರರಾಗುತ್ತಾರೆ. ಅವರ ದೆಸೆಯಿಂದ ದೇಶವು ಕ್ಷೀಣಗತಿಗೆ ಬರುತ್ತದೆ. ಆದಕಾರಣ ಆ ಜೂಜಾಟಗಳನ್ನು ನಿರ್ಮೂಲ ಮಾಡುವುದಕ್ಕೆ ಪ್ರಜಾಪಾಲಕರಾದ ನೀವುಗಳು ತುಂಬಾ ಸಾಹಸಪಡಬೇಕೆಂದು ಕೋರುತ್ತೇವೆ. ನಿಮ್ಮ ಬಳಿ ಇರತಕ್ಕ ಇಂಗ್ಲಿಷ್ ಅಧಿಕಾರಿಗಳನ್ನು ನಿಮ್ಮ ಆಪ್ತ ಮಿತ್ರರೆಂದು ಪರಿಗಣಿಸಿ, ಎಲ್ಲಾ ಸಂದರ್ಭಗಳಲ್ಲೂ ಅವರ ಕೂಡ ಆಲೋಚನೆಮಾಡಿ ಕಾರ್ಯಗಳನ್ನು ನಡಸುತ್ತಾ ಬರಬೇಕೆಂದು ಸೂಚಿಸುತ್ತೇವೆ. ಕಡೆಯಲ್ಲಿ, ನೀವುಗಳೆಲ್ಲಾ ಒಂದೇ ಮನಸಿನಿಂದ ನಿಮ್ಮ ಸಂಸ್ಥಾನವನ್ನು ಪ್ರಜಾವಾತ್ಸಲ್ಯಶೀಲರಾಗಿ ಪರಿಪಾಲಿಸುತ್ತಾ, ನೆಮ್ಮದಿ ಸುಖ ಸಂತೋಷಗಳನ್ನು ದಿನೇ ದಿನೇ ವೃದ್ಧಿಹೊಂದುವಂತೆ ಮಾಡಿರೆಂದು ನಂಬಿ ನಿರೀಕ್ಷಿಸುವೆವು ಎಂಬುದೇ.

ರಾಜಧಾನಿಯ ಮ್ಯುನಿಸಿಪಲ್ ಮೀಟಿಂಗು

ಕಳೆದ ಶನಿವಾರ ಬೆಳಿಗ್ಗೆ ಮೈಸೂರು ಪಟ್ಟಣದ ಮ್ಯುನಿಸಿಪಲ್ ಕೌನ್ಸಿಲರುಗಳು ಇಲ್ಲಿನ ಟೌನ್ ಹಾಲ್ ಬಂಗಲೆಯಲ್ಲಿ ಸಭೆ ಸೇರಿ ತಿಂಗಳ ಕಟ್ಟಳೆಯ ಮೀಟಿಂಗನ್ನು ನಡಸಿದರು. ಆಕ್ಟ್ರಾಯಿ ಬಾಬಿನಲ್ಲಿ ಕಳೆದ ಅಕ್ಟೋಬರ್ ತಿಂಗಳಲ್ಲಿ ಹೋದ ವರುಷ ಆ ತಿಂಗಳಿಗಿಂತ ೧,೯೦೦ ರೂಪಾಯಿ ಜಾಸ್ತಿ ಹುಟ್ಟುವಳಿ ಆಗಿದೆ ಎಂದೂ, ಮೊಹತರ್ಫಾ ಬಾಬಿನಲ್ಲಿ ಇನ್ನೂ ೩೩,೬೦೦ ರೂಪಾಯಿ ಹನಕ ವಸೂಲಾಗದೆ ಬಾಕಿ ನಿಂತಿದೆ ಎಂದೂ ತಿಳಿಯಬಂದಿತು. ಕಳೆದ ಅಕ್ಟೋಬರ್ ತಿಂಗಳಲ್ಲಿ ಜನನ ೧೦೩, ಮರಣ ಪ್ಲೇಗ್ ೩೪೦, ಕಾಲರಾ ೯, ಜ್ವರ ೪೩, ಇತರ ಕಾರಣಗಳು ೭೧೬, ಜುಮ್ಲಾ ೨೩೭ ಎಂದು ಗೊತ್ತಾಯಿತು.

ಲಕ್ಷ್ಮೀಪುರಂ ಎಕ್ಸ್‌ಟೆನ್ಷನ್‌ನಲ್ಲಿ ಮೆ॥ ನಲ್ಲಚಾರ್ಲೇ ಅರಸಿನವರೂ ಎಂ. ಶ್ರೀನಿವಾಸೈಯ್ಯಂಗಾರ್‌ರೂ ತಮ್ಮ ಮನೆಗಳ ನಡುವೆ ಇರುವ ಪಬ್ಲಿಕ್ ನಲ್ಲಿಯನ್ನು ತಮಗೆ ಅರ್ಧ ಕ್ರಯಕ್ಕೆ ಕೊಡಿಸಬೇಕೆಂದು ಅರ್ಜಿ ಬರೆದುಕೊಂಡಿದ್ದರು. ಕೌನ್ಸಿಲರುಗಳು ಈ ವಿಷಯವನ್ನು ಚರ್ಚಿಸಿ, ಅವರು ಕೇಳಿರುವಂತೆ ನಲ್ಲಿಯನ್ನು ಅವರು ತಮ್ಮ ಮನೆ ಆವರಣದೊಳಕ್ಕೆ ಸೇರಿಸಿಕೊಳ್ಳುವುದಕ್ಕೆ ಕ್ರಯ ತೆಗೆದುಕೊಂಡು ಕೊಡಬಹುದೆಂದು ಗೊತ್ತುಮಾಡಿದರು.

ಮೈಸೂರು ರೈಲ್ವೆ ಸ್ಟೇಷನ್‌ನಲ್ಲಿರುವ ನಲ್ಲಿಗೆ ನೀರು ಅಳತೆ ಮಾಡುವ ಯಂತ್ರವನ್ನು ಇಡುವುದಕ್ಕೆ ೧೦೭ ರೂಪಾಯಿ ಸ್ಯಾಂಕ್ಷನ್ ಆಯಿತು. ಇದುವರೆಗೆ ಈ ರೈಲ್ವೆ ಸ್ಟೇಷನ್‌ನಲ್ಲಿ ರೈಲ್ವೆ ನೌಕರರು ಉಪಯೋಗಿಸಿಕೊಂಡಿರುವ ಜಾಸ್ತಿ ನೀರಿಗೆ ಅವರಿಂದ ಛಾರ್ಜ್ ವಸೂಲ್ ಮಾಡಿ ಕೊಡಬೇಕೆಂದು ಮ್ಯುನಿಸಿಪಾಲಿಟಿಯವರು ರೈಲ್ವೆ ಕಂಪನಿಯ ಅಧಿಕಾರಿಗಳಿಗೆ ಬರೆದಿದ್ದರು. ಆ ಅಧಿಕಾರಿಗಳು ಅಂಥಾ ರೈಲ್ವೆ ನೌಕರರಿಂದ ನೀರಿನ ತೆರಿಗೆಯನ್ನು ವಸೂಲ್ ಮಾಡಿಕೊಂಡು ರೈಲ್ವೆ ಕಂಪನಿ ಖಜಾನೆಗೆ ಸೇರಿಸಿಕೊಳ್ಳುತ್ತಾ ಇದ್ದೇವೆಂದು ಜವಾಬು ಕೊಟ್ಟರು. ಈ ಭಾಗದಲ್ಲಿ ಬಂದ ಹಣವು ಮ್ಯುನಿಸಿಪಾಲಿಟಿಗೆ ತರಿಸಿಕೊಳ್ಳುವುದಕ್ಕೆ ಪ್ರಯತ್ನಪಡಬೇಕೆಂದು ಕೌನ್ಸಿಲರುಗಳು ಅಭಿಪ್ರಾಯಪಟ್ಟರು.

ರಾಜಧಾನಿಯ ಕುಡಿಯುವ ನೀರಿನ ಸರಬರಾಯಿ ಇಲಾಖೆಯವರು ಈಚೆಗೆ ತಮಗೆ ತೋರಿದಂತೆ ನಲ್ಲಿಗಳನ್ನು ಕೀಳುತ್ತಲೂ ತಮಗೆ ತೋರಿದ ಕಡೆ ಹೊಸದಾಗಿ ಕಟ್ಟುತ್ತಲೂ ಬಂದದ್ದನ್ನು ಮ್ಯುನಿಸಿಪಲ್ ಕೌನ್ಸಿಲರುಗಳು ನೋಡಿ, ಈ ವಿಷಯದಲ್ಲಿ ಆಕ್ಷೇಪಣೆ ಮಾಡಿ ಗವರ್ನ್ಮೆಂಟಿಗೆ ಅರಿಕೆಮಾಡಿಕೊಂಡರು. ಗವರ್ನ್ಮೆಂಟಿನವರು ಡೆಪ್ಯುಟಿ ಕಮಿಷನರ್ ಮೊದಲಾದ ಮೂರು ಮಂದಿ ಅಧಿಕಾರಿಗಳನ್ನು ಒಂದು ಕಮಿಟಿಯಾಗಿ ನೇಮಿಸಿ, ಇವರು ಪರ್ಯಾಲೋಚನೆ ಮಾಡಿ ಗೊತ್ತುಮಾಡುವ ಸ್ಥಳಗಳಲ್ಲೆಲ್ಲಾ ಹೊಸ ನಲ್ಲಿಗಳನ್ನು ಇಡತಕ್ಕದ್ದೆಂದು ಹುಕುಂ ಕಳುಹಿಸಿದರು. ಮ್ಯುನಿಸಿಪಲ್ ಕೌನ್ಸಿಲರುಗಳ ಸ್ವಂತ ಕೆಲವರು ಪಬ್ಲಿಕ್ ನಲ್ಲಿಗಳು ಎಲ್ಲಿಗೆ ಬೇಕು, ಎಲ್ಲಿ ಅಗತ್ಯವಿಲ್ಲ ಎಂಬೀ ವಿಚಾರವನ್ನು ಖುದ್ದು ನೋಡಿಬಂದು ಒಂದು ರಿಪೋರ್ಟು ಬರೆದು ಸೆಕ್ರೆಟರಿಗೆ ಕಳುಹಿಸುವದಾಗಿಯೂ, ಅವರು ಅದರ ಮೇಲೆ ಕಾರ್ಯ ಜರುಗಿಸತಕ್ಕದ್ದೆಂತಲೂ ಗೊತ್ತುಮಾಡಿದರು.

ರಾಜಧಾನಿಯಲ್ಲಿ ಜನರು ಇಟ್ಟುಕೊಂಡಿರುವ ಮೋಟಾರ್ ಗಾಡಿಗಳಿಗೂ ಮೋಟಾರ್ ಬೈಸಿಕಲ್‌ಗಳಿಗೂ ಪ್ರತಿ ಒಂದಕ್ಕೂ ೩ ತಿಂಗಳಿಗೆ ೯ ರೂಪಾಯಿನಂತೆ ಮ್ಯುನಿಸಿಪಲ್ ತೆರಿಗೆ ವಸೂಲ್ ಮಾಡಬಹುದೆಂದು ಪ್ರೆಸಿಡೆಂಟರು ಸೂಚಿಸಿದ್ದನ್ನು ಕೌನ್ಸಿಲರುಗಳೆಲ್ಲಾ ಒಪ್ಪಿಕೊಂಡರು.

ದಳವಾಯಿಯವರ ಇಂಗ್ಲಿಷ್ ಸಂಸ್ಕೃತ ಪಾಠಶಾಲೆಯನ್ನು ಕಟ್ಟಿಸಿಕೊಳ್ಳುವುದಕ್ಕೆ ಒಂದು ಒಳ್ಳೇ ಖಾಲೀ ನಿವೇಶನವನ್ನು ಉಚಿತವಾಗಿ ಕೊಡಿಸಬೇಕೆಂದು ಸ್ಕೂಲ್ ಹೆಡ್ ಮಾಸ್ಟರು ಕೊಟ್ಟಿದ್ದ ಅರ್ಜಿಯನ್ನು ಟ್ರಸ್ಟ್ ಬೋರ್ಡಿನವರಿಗೆ ಕಳುಹಿಸಬೇಕೆಂತಲೂ, ನಾರಾಯಣ ಶಾಸ್ತ್ರಿ ರಸ್ತೆಯಲ್ಲಿ ದಿವಾಕರವರ ಛತ್ರದ ಎದುರಿಗೆ ಇರುವ ಖಾಲೀ ನಿವೇಶನವು ಈ ಸ್ಕೂಲ್ ಕಟ್ಟುವ ಸಂಬಂಧದಲ್ಲಿ ತುಂಬಾ ಅನುಕೂಲವಾಗಿದೆ ಎಂತಲೂ ಕೌನ್ಸಿಲರುಗಳು ಅಭಿಪ್ರಾಯಪಟ್ಟರು.

ಮ್ಯುನಿಸಿಪಾಲಿಟಿಗೆ ಸೇರಿರತಕ್ಕ ಮನೆಗಳನ್ನೂ ಖಾಲಿ ನಿವೇಶನಗಳನ್ನೂ ಪ್ರಜೆಗಳಿಗೆ ವಿಕ್ರಯಮಾಡಿಬಿಡುವುದೇ ಉತ್ತಮವೆಂದು ಮೆ॥ ಶ್ರೀಕಂಠಯ್ಯನವರು ಸೂಚಿಸಿದ್ದನ್ನು ಕೌನ್ಸಿಲರುಗಳು ಒಪ್ಪಿ, ಟ್ರಸ್ಟ್ ಬೋರ್ಡಿನವರ ಅಭಿಪ್ರಾಯ ತೆಗೆದುಕೊಂಡು ವಿಕ್ರಯ ಮಾಡಬೇಕೆಂದು ತೀರ್ಮಾನ ಮಾಡಿದರು.

ಹೊರಗಿನಿಂದ ಪಟ್ಟಣದೊಳಕ್ಕೆ ಅಲ್ಪ ಸ್ವಲ್ಪ ಹರಳು, ಎಳ್ಳು, ಬೆಣ್ಣೆಯನ್ನು ತಂದರೆ ಆಕ್ಟ್ರಾಯಿ ಸುಂಕ ಮಾಫಿ ಮಾಡಿದಾರೆಂತಲೂ, ಹಾಗೆಯೇ ಯಾರಾದರೂ ೫ ತೆಂಗಿನ ಕಾಯಿ ಅಥವಾ ೫ ಬೆಲ್ಲದ ಅಚ್ಚುಗಳನ್ನು ತಂದರೆ ಇವಕ್ಕೂ ಸುಂಕವನ್ನು ಮಾಫಿಮಾಡಿ ಕೊಡಬೇಕೆಂತಲೂ ಮೆ॥ ಶ್ರೀಕಂಠಯ್ಯನವರು ಸೂಚಿಸಿದರು. ಈ ವಿಷಯವು ಸ್ವಲ್ಪ ಹೊತ್ತು ಚರ್ಚೆಯಾಗಿ, ಕಡೆಗೆ ೫ ತೆಂಗಿನಕಾಯಿ ಅಥವಾ ೫ ಅಚ್ಚು ಬೆಲ್ಲವನ್ನು ತರತಕ್ಕವರಿಂದ ಸುಂಕದ ಕಟ್ಟೆಯವರು ಸುಂಕ ವಸೂಲ್ ಮಾಡಬೇಕಾದದ್ದಿಲ್ಲವೆಂದು ತೀರ್ಮಾನವಾಯಿತು.

ರೈಲ್ವೆ ಸ್ಟೇಷನ್ ಬಳಿ ಇರುವ ನಂಜರಾಜಬಹದ್ದೂರರವರ ಛತ್ರವನ್ನು ಜನರಿಗೆ ಬಾಡಿಗೆಗೆ ಕೊಡುತ್ತಾ ಬಂದಿದಾರೆ. ಇದರಿಂದ ಪರಸ್ಥಳೀಕರಿಗೆ ಇಳುಕೊಳ್ಳುವುದಕ್ಕೆ ಅನಾನುಕೂಲವಾಗಿದೆ. ಆದಕಾರಣ ಆ ಕಟ್ಟಡಕ್ಕೆ ಮ್ಯುನಿಸಿಪಲ್ ತೆರಿಗೆಯನ್ನು ಯಾಕೆ ಹಾಕಿ ವಸೂಲ್ ಮಾಡಬಾರದೆಂದು ಛತ್ರದ ಮೇಲ್ವಿಚಾರಣೆಯ ಕಮಿಟಿ ಮೆಂಬರುಗಳಿಗೆ ನೋಟೀಸ್ ಕೊಟ್ಟು ಕೇಳಬೇಕೆಂದು ಕೌನ್ಸಿಲರುಗಳು ತೀರ್ಮಾನ ಮಾಡಿದಾರೆ.

ನಜರಬಾದ್ ಮತ್ತು ಚಾಮರಾಜ ಮೊಹಲ್ಲಾಗಳಲ್ಲಿ ಗವರ್ನ್ಮೆಂಟ್ ಹುಕುಂ ಪ್ರಕಾರ ಪ್ರಜೆಗಳ ಮನೆ ಪಾಯಿಖಾನೆಯನ್ನು ಮ್ಯುನಿಸಿಪಾಲಿಟಿಯವರೇ ಶಿಬ್ಬಂದಿ ಇಟ್ಟು ಕಳೆದ ದೂಳು ಬಾಗಾಯಿತು ತೆಗಿಸುತ್ತಾ, ಅದಕ್ಕಾಗಿ ಮನೆಯವರಿಂದ ಸ್ವಲ್ಪ ತೆರಿಗೆಯನ್ನು ತಿಂಗಳು ತಿಂಗಳಿಗೆ ವಸೂಲ್ ಮಾಡುತ್ತಾ ಬಂದಿದಾರೆ. ಈಗ ನೋಡುವಲ್ಲಿ ಗೊಬ್ಬರ ಸಾಗುವುದು ತೃಪ್ತಿಕರವಾಗಿಲ್ಲ. ಮನೆಗಳವರಿಂದ ವಸೂಲಾಗುವ ತಿಂಗಳ ಕಂದಾಯವು ಸುಮಾರು ೬೦ ರೂಪಾಯಿ. ಆದರೆ ಮ್ಯುನಿಸಿಪಲ್ ಸಿಬ್ಬಂದಿಯ ಖರ್ಚು ತಿಂಗಳಿಗೆ ೧೩೦ ರೂಪಾಯಿ. ಈ ವಿಷಯಗಳನ್ನು ಕೌನ್ಸಿಲರುಗಳು ನೋಡಿ, ಈ ಏರ್ಪಾಡು ಪೂರಾ ಆರು ತಿಂಗಳ ಕಾಲ ನಡೆದ ಮೇಲೆ, ಇದು ತೃಪ್ತಿಕರವಾಗಿಲ್ಲವೆಂದೂ ಇದನ್ನು ವಜಾಮಾಡುವುದಕ್ಕೆ ಅಪ್ಪಣೆಯಾಗಬೇಕೆಂದೂ ಗವರ್ನ್ಮೆಂಟಿಗೆ ತಿಳಿಸತಕ್ಕದ್ದೆಂದು ಅಭಿಪ್ರಾಯಪಟ್ಟರು.

ರಾಜಧಾನಿಯ ಕುಡಿಯುವ ನೀರಿನ ಸಪ್ಲೈ ಇಲಾಖೆಗೆ ಮ್ಯುನಿಸಿಪಾಲಿಟಿಯವರು ವರುಷಕ್ಕೆ ೧೬,೦೦೦ ರೂಪಾಯಿಯಂತೆ ಕೊಡುವುದಾಗಿ ಗೊತ್ತಾಗಿದೆ. ಇದಲ್ಲದೆ ಆ ಇಲಾಖೆಯವರು ಹೊಸ ಯಂತ್ರಗಳನ್ನು ತರಿಸಿಟ್ಟು ನೀರು ಎತ್ತುವ ಏರ್ಪಾಡು ಮಾಡಿದ್ದಕ್ಕೆ ಸುಮಾರು ೬೪,೫೦೦ ರೂಪಾಯಿ ಖರ್ಚಾಯಿತು. ಈ ಹಣವನ್ನು ಮ್ಯುನಿಸಿಪಾಲಿಟಿಯಿಂದ ವಸೂಲ್ ಮಾಡಿಕೊಂಡರು. ಈ ಭಾಗದಲ್ಲಿ ಗವರ್ನ್ಮೆಂಟಿನಿಂದ ಬಂದ ಹುಕುಂ ವನ್ನು ಕೌನ್ಸಿಲರುಗಳು ಟಿಪ್ಪಣಿ ರಿಕಾರ್ಡು ಮಾಡಿಕೊಂಡರು.

ಸ್ತ್ರೀಯರಲ್ಲಿ ಐಕಮತ್ಯ ಹುಟ್ಟುವದು ಹ್ಯಾಗೆ?

[ಈ ವಿಷಯವಾಗಿ ಬೆಂಗಳೂರು ಶ್ರೀನಿವಾಸ ಮಂದಿರದ ಸ್ತ್ರೀ ಪಾಠಶಾಲೆಯಲ್ಲಿ ಒಕ್ಕಲಿಗರ ಸಂಘದ ಜನರಲ್ ಸೆಕ್ರೆಟರಿ ಮೆ॥ ಎಚ್. ರಾಮಯ್ಯನವರ ಪತ್ನಿಯವರಾದ ಸೌ॥ ದೇವಮ್ಮನವರಿಂದ ಕಳೆದ ನವೆಂಬರ್ ತಿಂಗಳು ೨೩ನೆ ತಾರೀಖು ಶನಿವಾರದ ದಿವಸ ಕೊಡಲ್ಪಟ್ಟ ಉಪನ್ಯಾಸವು]

ದೇವರ ಪ್ರಾರ್ಥನೆಯು — ಓ ಸತ್ಯಸ್ವರೂಪನಾದ ಜಗದೀಶನೇ! ಈ ದಿನದ ನಾವುಗಳೆಲ್ಲರೂ ನಾನಾ ವಿಪತ್ತುಗಳಿಲ್ಲದೆ ನಿನ್ನ ಆಶೀರ್ವಾದದಿಂದ ಕ್ಷೇಮವಾಗಿ ಇಲ್ಲಿ ಸೇರಿರುತ್ತೇವೆ. ಪ್ರತಿನಿತ್ಯವೂ ಹೀಗೆಯೇ ನಮ್ಮಗಳನ್ನು ನಿನ್ನ ಕೃಪಾಕಟಾಕ್ಷದಿಂದ ಕಾಪಾಡಬೇಕೆಂದು ನಾವುಗಳು ವಿನಯಪೂರ್ವಕವಾಗಿ ಬೇಡಿಕೊಳ್ಳುತ್ತೇವೆ. ನಮ್ಮನ್ನು ರಕ್ಷಿಸುವದಲ್ಲದೆ, ನಮ್ಮ ಕುಟುಂಬದವರನ್ನು ಇದೇ ರೀತಿಯಾಗಿ ಕಾಪಾಡಬೇಕೆಂದು ಪ್ರಾರ್ಥಿಸುತ್ತೇವೆ.

ಸಭಿಕರಿಗೆ ಅಡ್ರೆಸ್

ನನ್ನ ಪ್ರಿಯ ಸಹೋದರಿಗಳಿರಾ — ನಾನು ಪ್ರಾರ್ಥಿಸುವಾಗ್ಗೆ ಇಷ್ಟರ ಮಟ್ಟಿಗೆ, ನಾನು ಮಾತನಾಡಬೇಕೆಂದಿರುವ ಐಕಮತ್ಯ ಎಂಬ ವಿಷಯವು ಬಹಳ ಯೋಚನೆಯುಳ್ಳವರು ಮತ್ತು ಪೂರ್ಣ ವಿದ್ಯಾವಂತರು ಹೇಳತಕ್ಕದ್ದು. ಏನೂ ಅರಿಯದ ನಾನು ತಿಳಿದಮಟ್ಟಿಗೆ ಅರಿಕೆಮಾಡುತ್ತೇನೆ. ಇದರಲ್ಲಿ ಯಾವ ವಿಧವಾದ ತಪ್ಪುಗಳಿದ್ದರೂ ಕ್ಷಮಿಸಿ ವಿವೇಕಿಗಳು ನನಗೆ ಹೇಳುವರೆಂದು ನಂಬಿರುತ್ತೇನೆ. ನಾನು ಪೂರ್ಣ ವಿದ್ಯಾವಂತಳಲ್ಲ, ಅಲ್ಪಜ್ಞಳು. ಈ ಸಭೆಯಲ್ಲಿ ವಿದ್ಯಾವಂತರೂ, ವಿವೇಕಿಗಳೂ, ಹಿರಿಯರೂ, ಬೇಕಾದಷ್ಟು ಮಂದಿ ಇರುವರು. ಅವರುಗಳು ನನ್ನನ್ನು ಕೃತಾರ್ಥಳನ್ನಾಗಿ ಮಾಡಬೇಕೆಂದು ನನ್ನ [illegible]ನೆ.

ಐಕಮತ್ಯದ ವಿಷಯವಾಗಿ ಉಪನ್ಯಾಸ

ಪ್ರಿಯ ಸಹೋದರಿಗಳಿರಾ — ಐಕಮತ್ಯವನ್ನು ನಾವು ಪಡೆಯಬೇಕಾದರೆ ಕಾಲ ಬೇಕಾದಷ್ಟು ಸಾಲದು. ಆದರೆ ಈಗಿನಿಂದಲೂ ನಮ್ಮ ಪರಸ್ಪರ ಪ್ರೀತಿ ವಿಶ್ವಾಸಗಳನ್ನು ನಾವು ಪ್ರಬಲಪಡಿಸುತ್ತಾ ಬಂದರೆ ಕಾಲಕ್ರಮೇಣ ನಾವೆಲ್ಲರೂ ಒಟ್ಟಿಗೆ ಒಂದೇ ಸಂಸಾರದ ಜನರಂತೆ ಬಾಳಲು ಅನುಕೂಲವಾಗುತ್ತದೆ. ಆದ್ದರಿಂದ ಇಲ್ಲಿಗೆ ಬಂದಿರುವ ತಾವೆಲ್ಲರೂ ಸರ್ವಪ್ರಯತ್ನದಿಂದಲೂ ಸಹೋದರಿಯರ ಭಾವವನ್ನು ಹೆಚ್ಚಿಸಿ ಸಹಾಯಕರಾಗಬೇಕೆಂದು ಪ್ರಾರ್ಥಿಸುತ್ತೇನೆ. ನಾವು ಈ ಪ್ರಯತ್ನಕ್ಕಾಗಿ ನಮ್ಮ ಬುದ್ಧಿ ಸಾಧನಗಳನ್ನು ಉಪಯೋಗಿಸಿದಲ್ಲಿ ನಮ್ಮ ಕೆಲಸ ನೆರವೇರಲು ಯಾವ ಸಂಶಯವೂ ಇರುವದಿಲ್ಲ. ಹೀಗಿರುವಲ್ಲಿ ನಾವು ನಮ್ಮ ಕೈಲಾದಮಟ್ಟಿಗೆ ಪ್ರಯತ್ನಶೀಲರಾಗಿ ಮಾಡಿ ನಮ್ಮ ಉದ್ದೇಶ ಕೆಲಸವನ್ನು ಸಾಧಿಸಬೇಕೆಂದು ಬೇಡಿಕೊಳ್ಳುತ್ತೇನೆ.

ಪ್ರಿಯ ಸಹೋದರಿಗಳಿರಾ — ನಮ್ಮಗಳಿಗೆ ವಿದ್ಯೆಯು ಕಡಿಮೆಯಾದುದರಿಂದ ಹೀನಸ್ಥಿತಿಯಲ್ಲಿರುತ್ತೇವೆ. ಆದ್ದರಿಂದ ಮೊದಲು ವಿದ್ಯೆಯನ್ನು ಬಿಡದೆ ಸಾಧಿಸಬೇಕು. ಅದಕ್ಕೋಸ್ಕರವೇ ಈ ಸಭೆ ಪ್ರಾರಂಭವಾಗಿರುತ್ತದೆ. ಇದು ಪ್ರಾರಂಭವಾಗಿ ೩–೪ ತಿಂಗಳಾಗಿರುತ್ತದೆ. ಇದನ್ನು ಮುಂದಕ್ಕೆ ತರುವದು ನಮ್ಮ ಭಾರವಾಗಿರುತ್ತದೆ. ಇದು ಮುಂದಕ್ಕೆ ಬರಬೇಕಾದರೆ ಮೊದಲು ಐಕಮತ್ಯವಿರಬೇಕು. ಪ್ರತಿಯೊಬ್ಬರ ಮನಸ್ಸೂ ಒಂದೇ ರೀತಿಯಾಗಿ ತಾರತಮ್ಯಗಳಿಲ್ಲದೆ ಇದ್ದದ್ದೇ ಆದರೆ ಯಾವ ಕೆಲಸವಾದರೂ ಸಿದ್ಧಿಸುವದಿಲ್ಲ. ಈ ಸಭೆಗೋಸ್ಕರ ನಾವು ಮಾಡಬೇಕಾದ ಕೆಲಸಗಳು ಬೇಕಾದಷ್ಟು ಇರುವವು. ಇಂಥಾ ಕೆಲಸಗಳನ್ನು ಬಿಟ್ಟು ನಮಗೆ ಮರ್ಯಾದೆ ಬೇಕು. ಇದರಿಂದ ಧನನಷ್ಟವಾಗುವದು, ಜನರು ನಿಂದಿಸುವರು ಎಂಬ ದುರಭಿಮಾನಗಳನ್ನು ಇಟ್ಟದ್ದೇ ಆದರೆ, ನಾವು ಮುಂದಕ್ಕೆ ಬರುವದು ಹ್ಯಾಗೆ? ಪ್ರಾರಂಭಿಸಿದ್ದಕ್ಕೆ ಅದನ್ನು ಬಿಡದೆ ಯಾವ ವಿಧವಾದ ಕಷ್ಟ ಬಂದರೂ ಸಾಧಿಸಲೇಬೇಕು. ಮೊದಲು ವಿದ್ಯೆಯನ್ನು ಪ್ರಾರಂಭಿಸಬೇಕು. ಇದರಿಂದ ಸಾಮರ್ಥ್ಯವು ಮತ್ತು ವಿನಯವು ಉಂಟಾಗುತ್ತವೆ. ಈ ವಿಷಯದಲ್ಲಿ ಒಂದು ಶ್ಲೋಕವಿದೆ. ಯಾವದೆಂದರೆ—

ವಿದ್ಯಾದದಾತಿವಿನಯಂ ವಿನಯಾದ್ಯಾತಿಪಾತ್ರತಾಂ

ಪಾತ್ರತ್ವಾದ್ಧನಮಾಪ್ನೋತಿ ಧನಾದ್ಧರ್ಮಂತತಸ್ಸುಖಂ॥

ಅಂದರೆ ವಿದ್ಯೆಯು ವಿನಯವನ್ನು ಕೊಡುತ್ತದೆ, ವಿನಯದಿಂದ ಮನುಷ್ಯನು ಯೋಗ್ಯತೆಯನ್ನು ಪಡೆಯುತ್ತಾನೆ, ಯೋಗ್ಯತೆಯಿಂದ ಧನವನ್ನು ಹೊಂದುತ್ತಾನೆ, ಧನದಿಂದ ಧರ್ಮವನ್ನೂ, ನಂತರ ಸುಖವನ್ನು ಹೊಂದುತ್ತಾನೆ. ಇದರಿಂದ ವಿದ್ಯೆಯು ಮನುಷ್ಯನ ಇಹಪರ ಸುಖಗಳಿಗೆ ಕಾರಣವೆಂದು ಗೊತ್ತಾಗುವದು. ಬರೀ ಶಾಸ್ತ್ರಗಳನ್ನು ಓದಿದರೆ ಜ್ಞಾನೋತ್ಪತ್ತಿಯಾಗುವದಿಲ್ಲ. ಶಾಸ್ತ್ರಗಳನ್ನು ಶ್ರದ್ಧೆಯಿಂದ ಓದಿ ಅವುಗಳಲ್ಲಿರುವ ಅರ್ಥಗಳನ್ನು ಗ್ರಹಿಸಿ, ಅದರಂತೆ ನಡೆದರೆ ಆದರೆ ಜ್ಞಾನೋತ್ಪತ್ತಿಗೆ ಕಾರಣವಾಗುವದು. ಹೀಗೆ ವಿದ್ಯೆಯ ವಿವೇಕವನ್ನು ಪಡೆದಿರುವ ಸ್ತ್ರೀಯು ಇರಬೇಕಾದರೆ ಕೆಲವು ಲಕ್ಷಣಗಳನ್ನು ಇಲ್ಲಿ ತಿಳಿದ ಮಟ್ಟಿಗೆ ಹೇಳುತ್ತೇನೆ. ಅವೇನಂದರೆ, ವಿದ್ಯಾವಂತಳು ನಿಗರ್ವಶಿರೋಮಣಿಯಾಗಿರಬೇಕಲ್ಲದೆ ಸದಾ ಸುಸ್ವಭಾವಳ್ಳವಳಾಗಿರಬೇಕು. “ತುಂಬಿದ ಕೊಡ ತುಳುಕುವದಿಲ್ಲ” ಎಂಬಂತೆ ಪೂರ್ಣ ವಿದ್ಯಾವಂತಳು ನಮ್ರತೆಯಿಂದ ನಡೆಯುವಳೇ ಹೊರತು

ಸ್ಕಾರ ಪಡುವದಿಲ್ಲ. ವಿದ್ಯಾವಂತಳು ಸ್ವಾರ್ಥವನ್ನೇ ಸದಾ ಯೋಚಿಸುತ್ತಿರುವದಿಲ್ಲ. ಪರೋಪಕಾರ ಮಾಡುವದರಲ್ಲಿ ದಣಿವನ್ನು ಅರಿಯಳು. ಅವಳಿಗೆ ಸ್ವಾರ್ಥದಲ್ಲಿ ಆದರವಿಲ್ಲ. ನಾನು ಸುಖವಾಗಿದ್ದರೆ ಸಾಕು, ಲೋಕ ಹಾಳಾಗಿ ಹೋಗಲಿ ಎನ್ನುವವಳು ವಿದ್ಯಾವಂತಳಲ್ಲವೆಂದು ನಿಶ್ಚಿತವಾಗಿ ಹೇಳಬಹುದು. ತಾನು ಕಷ್ಟಪಟ್ಟರೂ ಲೋಕವೆಲ್ಲ ಸುಖವಾಗಿದ್ದರೆ ಸಾಕು ಎನ್ನುವವಳೇ ವಿದ್ಯಾವಂತಳು. ತನ್ನ ಶತ್ರುಗಳ ಸಹ ಇವಳು ಶ್ರೇಯಸ್ಸನ್ನು ಕೋರುವಳು. ಇದು ಸತ್ಪುರುಷರ ಲಕ್ಷಣ. ಹೀಗಿರುವಲ್ಲಿ ಯಾರಿಗೆ ಅಪಕಾರಮಾಡಲು ಇವರಿಗೆ ಮನಸ್ಸು ಒಪ್ಪುವದು? "ಅಹಿಂಸಾ ಪರಮೋಧರ್ಮಃ" ಎಂಬಂತೆ ಯಾರನ್ನೂ ಹಿಂಸಿಸದಿರುವದೇ ಇವರ ಧರ್ಮವಾಗಿರುತ್ತದೆ. ಇದಲ್ಲದೆ ಇವರು ತಂದೆ ತಾಯಿ ಅತ್ತೆ ಮಾವ ಇವರುಗಳನ್ನು ಭಕ್ತಿಯಿಂದ ಪೂಜಿಸುವರು. ಪತಿಯನ್ನು ಭಕ್ತಿಯಿಂದ ಸೇವಿಸುವರು. ಅಣ್ಣ ತಮ್ಮ ಅಕ್ಕ ತಂಗಿಯರನ್ನು ಪ್ರೀತಿಯಿಂದ ನೋಡುವರು. ಮಕ್ಕಳನ್ನು ವಿನಯದಿಂದ ಲಾಲಿಸುವರು. ಬಂಧು ಮಿತ್ರರಲ್ಲಿ ವಿಶ್ವಾಸವುಳ್ಳವರಾಗಿರುವರು ಮತ್ತು ಪರದೇಶೀಯರಲ್ಲಿಯೂ ತಮ್ಮ ದೇಶದ ಜನರ ಶ್ರೇಯಸ್ಸನ್ನು ಬಯಸುವರು. ಪರದೇಶೀಯರಲ್ಲಿಯೂ ಅಸೂಯೆಗೊಳ್ಳದೆ ಸರ್ವರನ್ನೂ ಪ್ರೀತಿಯಿಂದ ಭಾವಿಸುವರು. ಇವರು ಇಂದ್ರಿಯಗಳನ್ನು ನಿಗ್ರಹಿಸಿ ಮನಸ್ಸನ್ನು ಸ್ವಾಧೀನದಲ್ಲಿಟ್ಟುಕೊಂಡು ವಿನಯದಿಂದ ಇಷ್ಟು ಘನತೆಯನ್ನು ಪಡೆಯಬಹುದು.

ಶಿಕ್ಷಣವಿಲ್ಲದ ಅದ್ದರ ಇದೆಲ್ಲಾ ಸಾಧ್ಯಕ್ಕೆ ಬರಲಾರದು. ಈ ಸಂಘವು ಮುಂದಕ್ಕೆ ಬರಬೇಕಾದರೆ ಬುದ್ಧಿಶಾಲಿಗಳಾದ ಅನೇಕರು ನಿಸ್ಪೃಹರಾಗಿ ಕೆಲಸ ಮಾಡಬೇಕು. ಈ ಕಾರ್ಯ ಸಿದ್ಧಿಸುವದು ಬಹಳ ಕಷ್ಟ ಎಂದು ಬೇರೆ ವಿಧವಾಗಿ ಅಭಿಪ್ರಾಯಪಡಬಹುದು. ಹೀಗೆ ವೃಥಾ ಊಹೆಗಳಿಂದ ಕಾರ್ಯ ಪ್ರಯತ್ನ ಮಾಡದೆ ಇರುವದು ಬುದ್ಧಿವಂತರ ಲಕ್ಷಣವಲ್ಲವೆಂಬುವದು ಲೋಕರೂಢಿಯಾಗಿದೆ. "ಆಗೋದು ಹೋಗೋದು ದೇವರ ಇಚ್ಛೆ, ಉಳಿಯೋದು ಬಿಡೋದು ನಮ್ಮ ಇಚ್ಛೆ" ಎಂಬಂತೆ ನಮ್ಮ ನಮ್ಮ ಕೈಲಾದ ಪ್ರಯತ್ನಗಳನ್ನೆಲ್ಲಾ ಸರಿಯಾಗಿ ಮಾಡುವದು ನಮ್ಮ ಭಾರವಾಗಿರುತ್ತದೆ. ನಮ್ಮ ಪ್ರಯತ್ನ ನೆರವೇರುವದು ಈಶ್ವರಾಧೀನದಲ್ಲಿದೆ. ಈಗ ನಾವು ಪ್ರಾರಂಭಿಸಿರುವ ಪ್ರಯತ್ನವು ಬಾಯಿಮಾತಿನಿಂದ ಸಿದ್ಧಿಸುವದಲ್ಲ. ಇದಕ್ಕೆ ವ್ಯವಸಾಯ ಸಹಿತರು ಬಹು ವಗ್ಗೆರೆ ಮುಂತಾದ ವಿಚಾರಗಳಲ್ಲಿ ಅಭಿಮಾನಶಾಲಿಗಳಾದವರು ಮನಮುಟ್ಟಿ ಕೆಲಸ ಮಾಡಬೇಕಾಗಿರುತ್ತದೆ. ಕಾರ್ಯಕ್ಕೆ ವೇತನ ಎಂದು ವಿಶ್ವಾಸವಿರುವವರನ್ನು ನೇಮಿಸಿದರೆ ಅವರು ತಮ್ಮ ಕೆಲಸಗಳನ್ನು ಶ್ರದ್ಧಾಭಕ್ತಿಯಿಂದ ಮಾಡಬೇಕಲ್ಲದೆ ಸಭೆಯ ಸೆಕ್ರೆಟರಿಯವರು ಕೆಲಸದಲ್ಲಿ ಬಹಳ ನಿಪುಣರಾಗಿಯೂ ಇದಕ್ಕೆ ಸೇರುವವರ ಒಳಮರ್ಮ ತಿಳಿದವರಾಗಿಯೂ ಕೆಲಸದಲ್ಲಿ ಜಾಗರೂಕತೆಯಿಂದ ನಡೆದುಕೊಳ್ಳುವವರಾಗಿಯೂ ಪ್ರತಿಯೊಬ್ಬರ ಮನಸ್ಸನ್ನೂ ತಾರತಮ್ಯವಿಲ್ಲದೆ ವಿಚಾರಿಸುವವರಾಗಿಯೂ ಇರಬೇಕು. ಈ ಸಂಘವು ಮುಂದಕ್ಕೆ ಬರಬೇಕಾದರೆ ಸೆಕ್ರೆಟರಿಯವರು ಧೈರ್ಯ ಗಾಂಭೀರ್ಯ ಸಾಹಸವುಳ್ಳವರಾಗಿರಬೇಕೆಂದು ಎಂದು ನನಗೆ ತೋರುತ್ತದೆ. ಹೀಗೆ ಪ್ರತಿಯೊಬ್ಬರೂ ತಮ್ಮ ತಮ್ಮ ಕೆಲಸಗಳನ್ನು ಶ್ರದ್ಧೆಯಿಂದ ಮಾಡಿದ್ದೇ ಆದರೆ ಈ ಸಂಘವು ಮುಂದಕ್ಕೆ ಬರುವದಕ್ಕೆ ಯಾವ ಅಭ್ಯಂತರವೂ ಇರುವದಿಲ್ಲ. ಎಲ್ಲಕ್ಕೂ ನೋಡಲು ನಾವುಗಳು ಸ್ನೇಹಭಾವದಿಂದ ಪ್ರತಿಯೊಬ್ಬರ ಮನಸ್ಸುಗಳನ್ನೂ ತಿಳಿದು ನಡೆಯಬೇಕೆಂಬುವದೇ ನನ್ನ ಪ್ರಾರ್ಥನೆಯಾಗಿರುತ್ತದೆ. ಇದರ ಮೇಲೆ ಜಗದೀಶನು ಹ್ಯಾಗಾದರೂ ಮಾಡಲಿ ನಮ್ಮ ಕೆಲಸವನ್ನು ನಾವು ಮುಂದರಿಸುತ್ತ ಮಾಡೋಣ. ಇದಕ್ಕೆ ಸಂದೇಹವೇಕೆ?

ಸೆಕ್ರೆಟರಿಯವರ ವಿಷಯವಾಗಿ ಇನ್ನೂ ಕೊಂಚ ತಿಳಿದಮಟ್ಟಿಗೆ ವಿವರಿಸಿ ಹೇಳುತ್ತೇನೆ. ತಾವೆಲ್ಲರೂ ಸಾವಧಾನದಿಂದ ಲಾಲಿಸಬೇಕು. ರಾಜ್ಯವನ್ನು ಪರಿಪಾಲಿಸುವಾಗ ರಾಜನಿಗೆ ಯೋಗ್ಯನಾದ ಮಂತ್ರಿಯಿಂದ ಕೀರ್ತಿ ಬರುತ್ತದೆ. ಅದರಂತೆ ಮಂತ್ರಿಯಾದವನು ಜನಗಳಿಗೆ ನಾನಾವಿಧವಾದ ಕಷ್ಟವನ್ನೂ ಕೊಡದೆ, ಅವರುಗಳನ್ನು ಪ್ರೀತಿಯಿಂದ ನೋಡುತ್ತಾ ಬಂದದ್ದೇ ಆದರೆ ತನ್ನ ಯಜಮಾನನಿಗೆ ಕೀರ್ತಿಯನ್ನು ತರುವದಲ್ಲದೆ ತಾನೂ ಸಹ ಯೋಗ್ಯತೆಯನ್ನು ಪಡೆಯುತ್ತಾನೆ. ಇದೇ ರೀತಿ ಒಂದು ಗೃಹದಲ್ಲಿ ಪತ್ನಿಯು ತನ್ನ ಪತಿಗೆ ಯಾವ ವಿಷಯದ ಚಿಂತೆಗೂ ಎಡೆಗೊಡದೆ, ಸಂಸಾರದ ಭಾರವನ್ನು ತಾನು ವಹಿಸಿಕೊಂಡು, ಧರ್ಮದ ವಿಚಾರದಲ್ಲಿ ತನ್ನ ಪತಿಯನ್ನು ನೇಮಿಸಿ ಸಂಸಾರದ ಗುಟ್ಟನ್ನು ಹೊರಗೆ ಬಿಡದೆ, ಎಲ್ಲರನ್ನೂ ಒಂದೇ ಹಿತದಿಂದ ಪ್ರೀತಿಸಿಕೊಂಡರೆ ಪತಿಗೆ ಯೋಗ್ಯತೆಯು ಬರುವ ಹಾಗೆ ಮಾಡುವಳು. ಹಾಗೆಯೇ ಈ ಸಮಾಜದಲ್ಲಿ ಸೆಕ್ರೆಟರಿಯವರು ತಮ್ಮ ಸುಖವನ್ನು ಮರೆತು ತಾವು ಮಾಡುವ ಕೆಲಸ ಮುಂದಕ್ಕೆ ಬರಲಿ ಎಂಬುವದನ್ನೇ ಮುಖ್ಯೋದ್ದೇಶವಾಗಿ ಇಟ್ಟುಕೊಂಡು ಕೆಲಸ ಮಾಡಿದರೆ ಕೆಲಸ ನೆರವೇರಲು ಯಾವ ಸಂಶಯವೂ ಇರುವದಿಲ್ಲ. ಇಂಥಾ ಘನ ಪ್ರಯತ್ನವನ್ನು ಇವರು ಮಾಡುವದಕ್ಕಾಗಿ ನಾವುಗಳು ತುಂಬಾ ಸಂತೋಷಪಡಬೇಕಾಗಿದೆ. ಇದನ್ನು ಅಭಿವೃದ್ಧಿಗೆ ತರುವದು ದೊಡ್ಡವರ ಯೋಚನೆಯಾಗಿರುತ್ತದೆ. ಈ ಸಂಘವೆಂಬುದು ಇನ್ನೂ ೪—೬ ತಿಂಗಳ ಮಗುವು. ಇದಕ್ಕೆ ನಾವುಗಳು ಶ್ರದ್ಧೆಯಿಂದ ಹಾಲು ನೀರು ಹಾಕಿ ಪೋಷಿಸಿದರೆ ಇದು ಅಭಿವೃದ್ಧಿಗೆ ಬಂದನಂತರ ನಮ್ಮಗಳನ್ನು ಸಾಕುತ್ತದೆ. ಇದಕ್ಕೆ ಯಾವ ಅಭ್ಯಂತರವೂ ಇಲ್ಲ. ಈ ಸಂಘವಾದದ್ದು ನಮ್ಮಗಳಿಗೆ ಬಹಳ ಉಪಯೋಗವಾಗಿರುತ್ತದೆ. ಯಾತಕ್ಕೆಂದರೆ ನಮ್ಮ ಮನಸ್ಸುಗಳಲ್ಲಿ ಹುಟ್ಟುವ ಯೋಚನೆಗಳನ್ನು ಹೊರಪಡಿಸಿ ಸ್ನೇಹಭಾವದಿಂದ ಚರ್ಚಿಸಬಹುದು. ನಮಗೆ ತಿಳಿಯದಂಥಾವುಗಳನ್ನು ಕೇಳಿ ತಿಳಿದುಕೊಳ್ಳಬಹುದು. ಇನ್ನೂ ಅನೇಕ ಉಪಯೋಗಗಳನ್ನು ಪಡೆಯಬಹುದು. ನಾನು ಬರೆದಿರುವ ವಿಷಯಗಳಲ್ಲಿ ಬಿಟ್ಟುಹೋಗಿರುವದು ಇನ್ನೂ ಅನೇಕವಿರಬಹುದು. ಅದನ್ನು ತಿಳಿದಂಥಾ ವಿವೇಕಶಾಲಿಗಳು ಎದ್ದು ನಿಂತು ನನಗೆ ಹೇಳುತ್ತಾರೆಂದು ನಂಬಿರುತ್ತೇನೆ. ನಾನು ಏನೂ ತಿಳಿಯದವಳು, ಇದರಲ್ಲಿ ಯಾವ ವಿಧವಾದ ತಪ್ಪುಗಳಿದ್ದರೂ ದಯವಿಟ್ಟು ಕ್ಷಮಿಸಬೇಕು.

ಮಾತೃಶ್ರೀ ಶಿಂಗಮ್ಮನವರು ಈ ಘನ ಪ್ರಯತ್ನವನ್ನು ಮಾಡಿದ್ದಕ್ಕೆ ಅವರನ್ನು ಎಷ್ಟು ವಂದಿಸಿದರೂ ತೀರದು. ಜಗದೀಶನು ಇವರಿಗೆ ಇಂಥಾ ಯೋಚನೆಯನ್ನು ಕೊಟ್ಟದ್ದಕ್ಕೆ ನಾವೆಲ್ಲರೂ ಕೃತಾರ್ಥರಾದೆವು. ಇಂಥಾ ಯೋಚನೆ ಬರಬೇಕಾದರೆ ಸಾಮಾನ್ಯವಲ್ಲ. ಜ್ಞಾನದ ವಾಸನೆಯು ಇವರಲ್ಲಿ ಇದ್ದದ್ದರಿಂದಲೂ ಪರೋಪಕಾರದಲ್ಲಿ ಇವರಿಗೆ ಅಭಿರುಚಿ ಕಂಡಿದ್ದರಿಂದಲೂ ಇಂಥಾ ಘನ ಯೋಚನೆಯನ್ನು ಜಗದೀಶನು ಇವರಿಗೆ ಕೊಟ್ಟನು. ದೇವರು ಇವರಿಗೆ ಪುತ್ರಸಂತಾನವನ್ನು ಮತ್ತು ಆಯುರಾರೋಗ್ಯವನ್ನು ಚಿರಕಾಲ ಕೊಡುವದಲ್ಲದೆ ಇವರ ಕುಟುಂಬದವರನ್ನು ಕ್ಷೇಮವಾಗಿ ಇಟ್ಟಿರಲೆಂದು ನಾವುಗಳು ಮನಃಪೂರ್ವಕವಾಗಿಯೂ ಭಕ್ತಿಯಿಂದಲೂ ಪ್ರತಿನಿತ್ಯವೂ ನಮ್ಮಗಳ ಮನೆಗಳಲ್ಲಿ ಪ್ರಾರ್ಥಿಸೋಣ. ಇನ್ನು ವಿಶೇಷ ಹೇಳಲು ನಾನು ಶಕ್ತಳಲ್ಲ.

ತಾಲ್ಲೋಕು ವರ್ತಮಾನಗಳು.

ತುಂಕೂರು.—ಬಿಸಲು ಕಾಯುತ್ತಿದೆ. ಹಿಮಗಾಲವು ಪ್ರಾರಂಭವಾದ್ದರಿಂದ ರಾತ್ರಿ ಹೊತ್ತು ಬಹಳ ಛಳಿಯಾಗುವದು. ಈ ಪ್ರಾಂತ್ಯ ಖುಷ್ಕೀ ಫಸಲು ಹೋಯಿತು. ತರೀ ಫಸಲನ್ನು ಪರೂ ಮಾಡೋಣವೆಂದು ಕೆರೆಯಲ್ಲಿರುವ ನಾಲ್ಕೈದು ತಿಂಗಳ ನೀರನ್ನು ಗದ್ದೆಗಳಿಗೆ ಬಿಟ್ಟುಕೊಂಡು ಉಳುಮೆಮಾಡುತ್ತಿದ್ದಾರೆ. ಎಷ್ಟರಮಟ್ಟಿಗೆ ಫಸಲು ಆಗುತ್ತೋ ನೋಡಬೇಕು. ಬೇಸಿಗೆ ಕಾಲಕ್ಕೆ ದನಕರುಗಳಿಗೆ ಕೂಡ ಕುಡಿಯುವದಕ್ಕೆ ನೀರಿಲ್ಲದಂತೆ ಕೆರೆ ಬತ್ತಿಹೋಗಿ ನೀರಿನ ಕ್ಷಾಮವೂ ಉಂಟಾಗುವದಲ್ಲಾ ಎಂದು ಜನರು ವ್ಯಸನಪಡುತ್ತಿದ್ದಾರೆ. ಪ್ಲೇಗಿನ ಉಪಾಂತ್ರವು ಸ್ವಲ್ಪಮಟ್ಟಿಗೆ ಕಡಮೆಯಾಗುತ್ತಿರುವಂತೆ ಮರಣಗಳಿಲ್ಲದಿದ್ದಾಗ್ಯೂ ಇಲಿಗಳು ಸಾಯುವದು ನಿಂತಿಲ್ಲ. ಕಾಗೆಗಳು ಸಾಯಲಿಕ್ಕೆ ಪ್ರಾರಂಭವಾಗಿದೆ.—ಜೋಡಿದಾರ ನ್ಯೂಸರಿಂದ ಗೂಳೂರಲ್ಲಿದ್ದ ತನ್ನ ಅಣ್ಣನು ಮೃತನಾದನೆಂಬ ವರ್ತಮಾನ ತಿಳಿದು ಬಂದಿದ್ದಾತನು ಕಾರ್ಯಾಂತರದಿಂದ ಇಲ್ಲಿನ ಟವರಿಗೆ ಬಂದು ಡಿಸ್ಟ್ರಿಕ್ಟು ಆಫೀಸಿನ ಮಹಡಿಯ ಮೆಟ್ಟಲ ಮೇಲೆ ಹೋಗುತ್ತಿರುವಾಗ ಕಾಲುಜಾರಿ ಆದರಿಂದ ನೆಲಕ್ಕೆ ಬಿದ್ದು ತಲೆಯು ಎರಡಾಗಿ ಒಡೆದು ಜ್ಞಾನತಪ್ಪಿ ಬಿದ್ದಿರಲು ಈ ಸಂಗತಿ ಮಾಸ್ಟರಿಗೆ ತಿಳಿದು ಆತನನ್ನು ತೆಗೆಸಿಕೊಂಡು ಹೋಗಿ ರಾತ್ರಿ ೯ ಗಂಟೆಯ ವರೆಗೆ ಚಿಕಿತ್ಸೆ ಮಾಡಿದಾಗ್ಯೂ ಗುಣವಾಗದೆ ಮೃತನಾದನು.—ಪೋಸ್ಟ್ ಆಫೀಸು ಊರಿಗೆ ಬಹಳ ದೂರದಲ್ಲಿರುವದರಿಂದ ಜನರಿಗೆ ಬಹಳ ಅನಾನುಕೂಲ. ಇದಕ್ಕಾಗಿ ನಮ್ಮ ಸರ್ಕಾರದವರು ಯಾವ ಪ್ರಯತ್ನ ಮಾಡದಿರುವದು ಆಶ್ಚರ್ಯವಾಗಿದೆ.

ಕುಣಿಗಲು.—ಈ ತಾಲ್ಲೋಕಿನ ಸುತ್ತಮುತ್ತಲೂ ಕಾಲಕ್ಕೆ ಸರಿಯಾದ ಮಳೆ ಇಲ್ಲದೆ ರಾಗಿ ಪೈರು ಈ ವರ್ಷ ತೀರಾ ಕೆಟ್ಟುಹೋಗಿದೆ. ಕೆಲವರಿಗೆ ಮೂರು ತಿಂಗಳ ಮಟ್ಟಿಗಾದರೂ ಆಹಾರ ಸಿಕ್ಕುವಂತಿಲ್ಲವು. ಕುಣಿಗಲಿನ ಭಾರಿ ಕೆರೆ ಈ ಸಾರಿ ತುಂಬದೆ, ನೀರಾವರಿ ಪೈರುಗಳಿಗೂ ಅತಿ ತೊಂದರೆಯಾಗುವದು. ಕಳೆದ ಸೋಮವಾರ ಕೆಲವು ಕಡೆ ಒಳ್ಳೇ ಮಳೆ ಆಗಿದೆ.—ಪ್ಲೇಗ್ ಇನ್ಸ್‌ಪೆಕ್ಟರ್ ಜನರಲ್ ಸಾಹೇಬರೂ ಘನ ಟ್ರಾವೆಲ್ಲಾ ಹೋದಕರ ಕಳೆದ ೧೯ನೇ ತಾ ವರೆಗೂ ಕುಣಿಗಲಿನಲ್ಲಿದ್ದು ಅವರವರ ಇಲಾಖೆ ಕೆಲಸಗಳನ್ನು ಪರಾಂಬರಿಸಿದರು. ಯಾಚಕಟ್ಟದ ಸಮಾಚಾರ. ೪೦ ಮಂದಿ ಜನರೂ ಮೃತನಾದ ಮರಿಯನ ತಾಯಿಯೂ ಗುಂಪಾಗಿ ಗೋಳಾಡುತ್ತಾ ತಾಲ್ಲೋಕ್ ಆಫೀಸಿನ ಅಮಲ್ದಾರರಿಗೆ ಊರಿನಲ್ಲಿರುವ ತೊಂದರೆಗಳನ್ನೂ ಅನ್ಯಾಯಗಳನ್ನು ಹೇಳಿಕೊಂಡರು. ಅದ್ದರಿಂದ ಭುಸಹಾ ವಿಚಾರಣೆಯಾಗುತ್ತಿದೆ. ಮೃತನಾದ ಮರಿಯನು ಹಿಂಸೆಯಿಂದಲೇ ಪ್ರಾಣಬಿಟ್ಟನೆಂದು ಆಸ್ಪತ್ರೆ ವೈದ್ಯರೂ ಈ ಪ್ರಾಂತ್ಯದ ಜನರೆಲ್ಲರೂ ಮಾತಾಡುತ್ತಾರೆ.—ಮುನಿಸಿಪಾಲಿಟಿ ಬರಬರ ಕೆಡುತ್ತಿದೆ. ಎಲ್ಲಿ ನೋಡಿದರೂ ಎಂಪರೆಲೆ ಬಚ್ಚಲ ರೊಚ್ಚು ದುರ್ವಾಸನೆ ಬಡಿಯುತ್ತಿದೆ.—ಈ ಸಾರಿ ನಡೆದ ತಾಲ್ಲೋಕಿನ ಜಮಾಬಂದಿಯಲ್ಲಿ ಅಲ್ಲಲ್ಲಿ ಹೋಬಳಿಗೆ ಸೇರಿದ ಪ್ಯಾಸುಭೋಗರೂ ಪಟೇಲರೂ ಇಲ್ಲಿನ ಆರ್ಯ ಬಾಲಿಕಾ ಪ್ರೈವೇಟ್ ಪಾಠಶಾಲೆಗೆ ತುಂಬಾ ಧನಸಹಾಯ ಮಾಡಿರುತ್ತಾರೆಂದು ತಿಳಿಯಬಂದಿದೆ.—ರಾಗಿ ರೂಪಾಯಿಗೆ ೧೪ ಸೇರು. ಅಕ್ಕಿ ಸಣ್ಣದು ೬ ಸೇರು, ಸಾಧಾರಣವಾದದ್ದು ೭ ಸೇರು ಮಾರುತ್ತೆ. ಮಿಡ್ಲ್ ಸ್ಕೂಲಿನಿಂದ ಈ ಸಾರಿ ೫೭ ಮಂದಿ ಬಾಲಕರು ಪರೀಕ್ಷೆಗೆ ಹೋಗಿದ್ದಾರೆ. ಎಡಿಯೂರು ಮತ್ತು ಹೆಬ್ಬೂರು ಸ್ಕೂಲುಗಳು ಒಳ್ಳೇ ಸ್ಥಿತಿಯಲ್ಲಿವೆ.

ಕುಲೀಸ್‌ಪೇಟೆ.—ಈ ಪರಿಯಂತ್ರವೂ ೧೨ ಜನರಿಗೆ ಪ್ಲೇಗ್ ತಗಲಿ, ೧೦೦ ಜನರು ಸತ್ತರು. ಡಾಕ್ಟರೂ ಅಮಲ್ದಾರರೂ ಪ್ರತಿ ಮನೆಗೂ ಹೋಗಿ ಜನರಿಗೆ ಎಷ್ಟು ವಿಧವಾಗಿ ಹೇಳಿದರೂ ಅವರು ಸಕಾಲದಲ್ಲಿ ಮನೆಗಳನ್ನು ಖಾಲಿಮಾಡಲಿಲ್ಲ. ಜೋಪಡಿಗಳಲ್ಲಿಯೂ ಜನರು ಸಾಯುತ್ತಾ ಇದ್ದಾರೆ. ಜನರ ಪ್ರಾಣಗಳನ್ನು ರಕ್ಷಿಸಲು ಸಾಧ್ಯವಲ್ಲ. ಪೋಲೀಸ್ ಇನ್ಸ್‌ಪೆಕ್ಟರ ಪತ್ನಿಯು ತೀರಿಹೋದ್ದರಿಂದ ಅವರು ರಜಾದ ಮೇಲೆ ಹೋದರು. ಎಕ್ಸೈಜ್ ಇನ್ಸ್‌ಪೆಕ್ಟರೊಬ್ಬರು ಪ್ಲೇಗ್ ತಗಲಿ ಬೆಂಗಳೂರಿನಲ್ಲಿ ತೀರಿಹೋದರು. ಮತ್ತೊಬ್ಬರಿಗೆ ಪ್ಲೇಗ್ ತಗಲಿ ದಿಕ್ಕಿಲ್ಲದಂತೆ ಬಿಡದಿಯ ಒಂದು ಮರದ ಕೆಳಗೆ ಬಿದ್ದು ಪ್ರಾಣಬಿಟ್ಟರು. ಇಂಥಾ ಕಷ್ಟಕಾಲದಲ್ಲಿ ಅಮಲ್ದಾರರು ಸರ್ಕಾರಕ್ಕೆ ಬರೆದು ಹಣ ತರಿಸಿ ಬಡ ಜನರಿಗೆ ಗಳ, ಕಾವೆ ಮೊದಲಾದವುಗಳನ್ನು ಕೊಡಿಸಿದಾರೆ. ಕುಣಿಗಲ್ ಶೇಕ್‌ದಾರ್ ಪೀರ್ಖಾನ್ ಸಾಹೇಬರು ಸೈತರನ್ನು ತಮ್ಮ ಅಣ್ಣ ತಮ್ಮಂದಿರಂತೆ ನೋಡಿ ಪ್ಲೇಗ್ ಗಲಾಟೆಯ ಕಾಲಕ್ಕೆ ತಮ್ಮ ಕೈಲಾದ ಮಟ್ಟಿಗೂ ಜನರಿಗೆ ಗಳ, ಕಾವೆ, ಚಾಪ ಮೊದಲಾದವುಗಳನ್ನು ಕೊಟ್ಟು ಸಹಾಯಮಾಡಿದರು. ಈ ಸರ್ತಿ ತಕ್ಕ ಕಾಲದಲ್ಲಿ ಮಳೆಬಿದ್ದು ಪೈರು ಚನ್ನಾಗಿ ಆಗಿ ಜನರನ್ನು ಅನೇಕ ವರ್ಷಗಳಿಂದ ಇಲ್ಲದಷ್ಟು ಸಂತೋಷಭರಿತರನ್ನಾಗಿ ಮಾಡಿದೆ.—ಇಲ್ಲಿಗೆ ೧೦ ಮೈಲಿಯಲ್ಲಿ ಗುಡ್ಡಹಳ್ಳಿಯಲ್ಲಿ ಬೆಂಗಳೂರಿನಿಂದ ಬಂದು ಕುರಿ ಮಾಡುತ್ತಿರುವ ಗ್ರಾಂಟ್ ಸಾಹೇಬರೆಂಬುವವರ ಕೈ ಕೆಳಗೆ ಬರವಣಿಗೆ ಕೆಲಸ ಮಾಡುತ್ತಿದ್ದ ಸೈಯದ್ ರಹಿಮಾನ್ ಎಂಬುವನು, ತನ್ನ ಯಜಮಾನನಿಗೆ ನಂಬಿಕೆ ತೋರಿಸಿ, ಆತನಿಗೆ ಬರತಕ್ಕ ಸಾವಿರ ರೂಪಾಯಿ ವಸೂಲ್‌ಮಾಡಿ ಒಂದು ಸ್ಥಳದಲ್ಲಿ ಹೂತಿಟ್ಟು, ಪೆಟ್ಟಿಗೆಯನ್ನು ಆಸ್ಪತ್ರೆ ಕಂಪೌಂಡಿನಲ್ಲಿ ಬಿಸಾಟು ಕಳ್ಳರು ಬಂದು ಕನ್ನಾ ಹಾಕಿ ಸಾವಿರ ರೂಪಾಯಿ ತೆಗೆದುಕೊಂಡು ಹೋದರೆಂದು ಪೋಲೀಸಿಗೆ ರಿಪೋರ್ಟ್ ಮಾಡಿದ್ದರ ಮೇಲೆ ಇನ್ಸ್‌ಪೆಕ್ಟರು ಹೋಗಿ ನೋಡಿ ಅವನ ಮೇಲೆ ಅನುಮಾನಪಟ್ಟು ಲಾಕಪ್ಪಿಗೆ ಕೊಟ್ಟಾಗ ಹಣ ಹೂತಿದ್ದ ಸ್ಥಳವು ಪೋಲೀಸಿಗೆ ಗೊತ್ತಾಗಿ, ನೋಡಲು ಸಾವಿರ ರೂಪಾಯಿ ಸಿಕ್ಕಿತು.—ಸಬ್ ಡಿವಿಷನ್ ಸಾಹೇಬರೂ ಅವರ ಸಿಬ್ಬಂದಿಯೂ ಸಬ್ ರಿಜಿಸ್ಟ್ರರೂ ಎಕ್ಸೈಜ್ ಇಂಜನಿಯರ್ ಇಲಾಖೆಗಳೆಲ್ಲಾ ಬಿಡದಿಗೆ ಸೇರಿವೆ. ಪೋಸ್ಟ್ ಆಫೀಸು ಜೋಪಡಿಯಲ್ಲಿ ನಡಿಯುತ್ತಾ ಇದೆ.

ಹಾಸನ.—ಆಗಾಗ್ಗೆ ಮೋಡವಾಗುತ್ತಲೂ, ತುಂತುರು ಮಳೆ ಬರುತ್ತಲೂ ಇದೆ. ಧಾರಣೆಮಾಸಿಯು ಚಡಾವಾಗುತ್ತಲೇ ಇದೆ. ರೂಪಾಯಿಗೆ ೭ ಸೇರು ಅಕ್ಕಿ ಮಾರುತ್ತದೆ. ಇತರ ಧಾನ್ಯಗಳೂ ಹೀಗೆ ಬಹುಮಟ್ಟಿಗೆ ತುಟ್ಟಿಯಾಗಿವೆ. ಪ್ಲೇಗ್ ರೋಗವು ಇನ್ನೂ ಶಮನವಾಗಿಲ್ಲ, ಇದ್ದೇ ಇದೆ.—ಲೋವರ್ ಸೆಕಂಡರಿ ಪರೀಕ್ಷೆಗೆ ಈ ಸ್ಥಳಕ್ಕೆ ಬಂದಿದ್ದ ವಿದ್ಯಾರ್ಥಿಗಳಿಗೂ ಉಪಾಧ್ಯಾಯರಿಗೂ ಇಲ್ಲಿನ ಸ್ಟುಡೆಂಟ್ಸ್ ಹೋಮಿನಲ್ಲಿ ಆರ್ಯಸಿದ್ಧಾಂತ ಪರಿಷತ್ ಎಂಬ ಸಭೆಯವರು ಊಟ ಉಪಚಾರಗಳಿಗೆಲ್ಲಾ ಬಹು ಚನ್ನಾಗಿ ಏರ್ಪಾಡು ಮಾಡಿದ್ದರು. ಮೆ॥ ಕಸಬಾ ಅಮಲ್ದಾರ್ ಶ್ರೀನಿವಾಸರಾಯರೂ, ಸ್ಕೂಲುಗಳ ಇನ್ಸ್‌ಪೆಕ್ಟರ್ ಮೆ॥ ತಿರುಮಲಾಚಾರ್ರೂ ವಿದ್ಯಾರ್ಥಿಗಳ ಯೋಗಕ್ಷೇಮವನ್ನು ವಿಚಾರಿಸುತ್ತಿದ್ದರು.—ತಾ. ೧೯ ಮತ್ತು ೨೦ ರಲ್ಲಿ ಈ ಡಿಸ್ಟ್ರಿಕ್ಟಿಗೆ ಸೇರಿದ ತಾಲ್ಲೋಕು ಮತ್ತು ಹೋಬಳಿಗಳಲ್ಲಿನ ಕೆಲವು ಮಂದಿ ಸ್ಕೂಲ್ ಮಾಸ್ಟರುಗಳು ಸೇರಿ, ಒಂದು ಸಂಘವನ್ನು ಮಾಡಿಕೊಂಡು, ಬಹು ಪ್ರಯೋಜನಕರವಾದ ೧೭ ಸಂಗತಿಗಳನ್ನು ಕುರಿತು ಚರ್ಚಿಸಿ ತೀರ್ಮಾನಿಸಿದರು. ಈ ಸಂಘಕ್ಕೆ ಡೆ॥ ಇನ್ಸ್‌ಪೆಕ್ಟರ್ ಮೆ॥ ತಿರುಮಲಾಚಾರ್ರು ಅಧ್ಯಕ್ಷರಾಗಿದ್ದರು. ಈ ಉಪಾಧ್ಯಾಯಸಂಘದ ತೀರ್ಮಾನಗಳಲ್ಲಿ ಮುಖ್ಯವಾದುವುಗಳು.—(೧) ಪಾಠಶಾಲೆಗಳು ಇರುವ ಸ್ಥಳಗಳಲ್ಲೆಲ್ಲಾ ವಿದ್ಯಾರ್ಥಿಗಳಿಗೆ ವ್ಯಾಯಾಮಕ್ಕೋಸ್ಕರ ದಾಲಾ ಕೋಟಗಳನ್ನು ಏರ್ಪಡಿಸಬೇಕು. (೨) ವಿದ್ಯಾರ್ಥಿಗಳ ವಿಷಯದಲ್ಲಿ ಉಪಾಧ್ಯಾಯರೂ ಪೋಷಕರೂ ಚನ್ನಾಗಿ ಗಮನವಿಡುವದಕ್ಕೋಸ್ಕರ "ಚರ್ಯ ಪತ್ರಿಕೆ" ಎಂಬ ಪಟ್ಟೀ ಕ್ರಮವನ್ನು ಪ್ರತಿ ಸ್ಕೂಲಿನಲ್ಲಿಯೂ ಆಚರಣೆಯಲ್ಲಿ ತರಬೇಕು. ಈ ಪತ್ರಿಕೆಯು ಹಾಸನದ ತಾಲ್ಲೂಕು ಕನ್ನಡ ಸ್ಕೂಲ್ ಮಾಸ್ಟರ್ ಜಿ. ಅಪ್ರಮೇಯ ಐಯ್ಯಂಗಾರ್ರಲ್ಲಿ ೩ ಕಾಸಿಗೆ ಒಂದರಂತೆ ದೊರಕುವದು. (೩) ಪ್ರತಿ ವರ್ಷ ಲೋವರ್ ಸೆಕಂಡರಿ ಪರೀಕ್ಷೆಯು ನಡೆದ ತರುವಾಯ "ಆರ್ಯಸಿದ್ಧಾಂತ ಪರಿಷತ್ತಿನ ಪ್ರವೇಶಪರೀಕ್ಷೆ" ಎಂಬ ಹೆಸರಿನಿಂದ ಮತಸಂಬಂಧವಾದ ಒಂದು ಪರೀಕ್ಷೆಯನ್ನು ಏರ್ಪಡಿಸಿ, ಅದರಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳನ್ನು ಬಹುಮಾನಗಳನ್ನು ಕೊಟ್ಟು ಪ್ರೋತ್ಸಾಹಿಸಿ ಆರ್ಯಧರ್ಮವನ್ನು ಉದ್ದೀಪಿಸುವಂತೆ ಮಾಡಬೇಕು. ಈ ಮುಂತಾದ ಖರ್ಚುಗಳಿಗಾಗಿ ಪಬ್ಲಿಕ್, ಹೋಬಳಿ, ಗ್ರಾಮಗಳಲ್ಲೆಲ್ಲಾ ಧನಧಾನ್ಯರೂಪವಾಗಿಯೂ, ಶುಭಶೋಭನಾದಿ ಕಾಲಗಳಲ್ಲಿ ಸಂಭಾವನಾ ರೂಪವಾಗಿಯೂ ಹಣವನ್ನು ಸಂಪಾದಿಸಬೇಕು. (೪) ಯಾವುದಾದರೂ ಒಂದು ಗ್ರಾಮದಲ್ಲಿ ಹೊಸದಾಗಿ ಸ್ಕೂಲ್ ಅಪೇಕ್ಷಿಸಲ್ಪಟ್ಟರೆ ಅಲ್ಲಿನ ನಿವಾಸಿಗಳಿಂದ ೨೪ ಅಥವಾ ೩೦ ಮಂದಿ ಬಾಲಕರಿಗೆ ಕಡಮೆ ಇಲ್ಲದಂತೆ ೩ ವರ್ಷ ತಪ್ಪದೇ ಸ್ಕೂಲಿಗೆ ಕಳುಹಿಸುತ್ತಾ ಬರುವೆವೆಂದೂ, ತಪ್ಪಿದರೆ ಪ್ರತಿಯೊಬ್ಬ ವಿದ್ಯಾರ್ಥಿಗೂ ೩ ರೂ ನಂತೆ ಸ್ಕೂಲ್ ಫಂಡಿಗೆ ದಂಡ ಕೊಡುವೆವೆಂದೂ, ಸ್ಕೂಲಿಗೂ ಉಪಾಧ್ಯಾಯರಿಗೂ ಯೋಗ್ಯವಾದ ಕಟ್ಟಡಗಳನ್ನು ಕೊಡುವೆವೆಂದೂ, ಮುಚ್ಚಳಿಕೆಯನ್ನು ಬರೆಸಿಕೊಂಡು, ಆ ಪ್ರಕಾರ ಎಲ್ಲಾ ಸಿದ್ಧವಾಗಿರುವುದನ್ನು ನೋಡಿದ ಮೇಲೆಯೇ ಡೆ॥ ಇನ್ಸ್‌ಪೆಕ್ಟರು ಅಂತಹ ಗ್ರಾಮಕ್ಕೆ ಸ್ಕೂಲನ್ನು ಸ್ಥಾಪಿಸಿಕೊಡಬೇಕು. ಇಲ್ಲದಿದ್ದರೆ, ಗ್ರಾಮಸ್ಥರೆಲ್ಲರೂ ಸ್ಕೂಲಿನ ಉಪಯೋಗವನ್ನು ಪಡೆಯದೆ ವ್ಯರ್ಥಮಾಡಿಬಿಡುವರು. (೫) ಅಮರ ಮತ್ತು ಶಬ್ದಗಳನ್ನು ಬಾಲಬಾಲೆಯರಿಗೆ ೮ನೇ ವಯಸ್ಸು ಪ್ರಾರಂಭವಾದಾಗಲೇ ಪಾಠ ಹೇಳಲಾರಂಭಿಸಬೇಕು. (೬) ಬಾಲಕರಿಗೆ ೧೬ ವಯಸ್ಸು ತುಂಬಿದ ಮೇಲೆಯೇ ವಿವಾಹ ಮಾಡಬೇಕು. ಮತ್ತು ೨೦ ವಯಸ್ಸು ತುಂಬಿದ ಮೇಲೆಯೇ ವಿಶೇಷ ಮಾಡಬೇಕು. ಅಷ್ಟರೊಳಗೆ ಖಂಡಿತವಾಗಿ ಮಾಡದೆ ಇರುವುದೇ ಅವರ ವಿದ್ಯಾಭಿವೃದ್ಧಿಗೆ ಮುಖ್ಯ ಸಹಾಯವೆಂದು ಎಲ್ಲಾ ಜನರಿಗೂ ಸಕಾರಣವಾಗಿ ಬೋಧಿಸಬೇಕು. (೭) ಪ್ರತಿ ತರಗತಿಯಲ್ಲಿಯೂ ಗಣಿತ ಪಾಠವನ್ನು ಪ್ರತ್ಯಕ್ಷವಾದ ಉಪಕರಣಗಳ ಮೂಲಕ ಅರ್ಥಸಹಿತ ಪಾಠಮಾಡಿಸುತ್ತಾ ಬರುವುದೂ, ಮೂರನೇ ತರಗತಿಯಿಂದ ಪ್ರಾರಂಭಿಸಿ ಮುಂದೆ ಪ್ರತಿ ತಿಂಗಳಿನಲ್ಲಿಯೂ ಗಣಿತ ಪರೀಕ್ಷೆಯನ್ನು ಲೇಖನರೂಪವಾಗಿಯೇ ನಡಿಸುತ್ತಾ ಹೋಗುವುದೂ, ಆ ಭಾಗದಲ್ಲಿ ತೇರ್ಗಡೆಯಾಗದೆ ತಪ್ಪಿಹೋಗುವ ಸಂಖ್ಯೆಯನ್ನು ಕಡಿಮೆ ಮಾಡುವ ಉಪಾಯವಾಗಿರುವುದರಿಂದ ಎಲ್ಲರೂ ಈ ಕ್ರಮವನ್ನು ಆಚರಣೆಗೆ ತರಬೇಕು. (೮) ಮತ್ತು ಲೋವರ್ ಸೆಕಂಡರಿ ಪರೀಕ್ಷೆಗೆ ಪ್ರವೇಶಮಾಡಿರುವ ವಿದ್ಯಾರ್ಥಿಗಳಿಗೆ ಆಗಸ್ಟ್, ಸೆಪ್ಟಂಬರ್, ಅಕ್ಟೋಬರ್, ಈ ಮೂರು ತಿಂಗಳ ಅಂತ್ಯದಲ್ಲಿಯೂ ಆಯಾ ಡಿಸ್ಟ್ರಿಕ್ಟಿನ ಉಪಾಧ್ಯಾಯರುಗಳೇ ಸೇರಿ ಲೇಖನ ಪರೀಕ್ಷೆಯನ್ನು ನಡಿಸುತ್ತಾ ಬರಬೇಕು. ಈ ಪರೀಕ್ಷೆಯ ಖರ್ಚಿಗೋಸ್ಕರ ಪ್ರತಿಯೊಬ್ಬ ವಿದ್ಯಾರ್ಥಿಯಿಂದಲೂ ೪ ಆಣೆಯ ವೇತನವನ್ನು ತೆಗೆದುಕೊಳ್ಳಬಹುದು. ವರ್ಷದ ಅಂತ್ಯದಲ್ಲಿ ಲೋವರ್ ಸೆಕಂಡರಿ ಪರೀಕ್ಷೆಗೆ ಯೋಗ್ಯತೆಯುಳ್ಳವರನ್ನು ಚುನಾಯಿಸುವುದಕ್ಕೂ ಕೂಡ ಇದೇ ಕ್ರಮವನ್ನು ಅನುಸರಿಸುವುದು ಯುಕ್ತವಾಗಿದೆ. (೯) ಬಾಲಿಕಾ ಪಾಠಶಾಲೆಗಳಲ್ಲಿ ವಿದ್ಯಾರ್ಥಿನಿಯರು ಕ್ರಮವಾಗಿ ಬರುವುದಕ್ಕೂ ಅವರ ಸಂಖ್ಯೆಯು ಕ್ರಮೇಣ ಹೆಚ್ಚುತ್ತಾ ಬರುವುದಕ್ಕೂ ಪುಸ್ತಕ, ಸ್ಲೇಟು, ಮುಂತಾದ್ದನ್ನು ಉಚಿತವಾಗಿ ಕೊಡುತ್ತಾ ಬರುವುದೂ, ಯೋಗ್ಯರೂ ಅನುಭವಸ್ಥರೂ ಆದ ಉಪಾಧ್ಯಾಯರನ್ನು ನೇಮಿಸುವುದೂ, ಆರಂಭದಲ್ಲಿ ಸಂಗೀತ, ಚಿತ್ರ (ರಂಗೋಲಿ) ಮತ್ತು ಓದುವ ಪುಸ್ತಕಗಳನ್ನು ಪಾಠಗಳನ್ನಾಗಿ ನೇಮಿಸುವುದೂ, ಪ್ರತಿ ವರ್ಷವೂ ಬೊಂಬೆಗಳು ಮುಂತಾದ ಆಟದ ಸಾಮಾನುಗಳನ್ನು ಬಹುಮಾನವಾಗಿ

ಕೊಡುತ್ತಾ ಬರುವುದೂ, ಹೀಗೆ ಕೊಡುವುದರಲ್ಲಿ ವಿದ್ಯಾರ್ಥಿನಿಯರ ಹಾಜರಿ ದಿನಗಳ ಸಂಖ್ಯೆಯು ಅಧಿಕಾಲ್ಪ ಕ್ರಮಗಳನ್ನು ಉತ್ತಮ, ಮಧ್ಯಮ, ಅಧಮಗಳಾಗಿ ಲಕ್ಷಿಸುತ್ತಾ ಬರುವುದೂ, ಒಳ್ಳೇ ಸಾಧನಗಳಾಗಿರುತ್ತವೆ ಮತ್ತು ಮಕ್ಕಳನ್ನು ಮನೆಗಳಿಗೆ ಕರೆದುಕೊಂಡು ಬರುವ ಸ್ತ್ರೀ (ಬವಾನಿ) ಯರಿಗೆ ಪ್ರತಿ ತಿಂಗಳಿನ ಸರಾಸರಿ ಹಾಜರಿ ಸಂಖ್ಯೆಯನ್ನು ಅನುಸರಿಸಿ ಸಂಬಳ ಕೊಡುವುದೂ, ಅವರಿಗೂ ವರ್ಷಕ್ಕೊಂದಾವರ್ತಿ ಸೀರೆ ಮುಂತಾದ್ದನ್ನು ಬಹುಮಾನ ಕೊಡುವುದೂ, ವಿದ್ಯಾರ್ಥಿನಿಯರ ಸಂಖ್ಯೆಯನ್ನು ಹೆಚ್ಚು ಮಾಡುವ ಉಪಾಯಗಳಾಗಿರುತ್ತವೆ

ಚಳ್ಳಕೆರೆ—ಈ ತಾಲ್ಲೂಕಿಗೆ ಸೇರಿದ ದೊಡ್ಡ ಉಳ್ಳರ್ತಿ ಗ್ರಾಮದ ಅಮೃತಮಹಲ್ ಕಾವಲಿಗೆ ಎಲ್ಲಿಂದಲೋ ಒಂದು ಚಿರತೆಯು ಬಂದು ಸೇರಿಕೊಂಡು ಸುಮಾರು ಆರು ತಿಂಗಳು ಆಗಾಯ್ತು. ೨೫ ದನಗಳ ತನಕ ಕೊಂದು ಯಾರಿಗೂ ಕಾಣದ ಹಾಗೆ ಎಲ್ಲೋ ಅಡಗಿಕೊಂಡಿದೆ ಆದ್ದರಿಂದ ನೆರೆಹೊರೆ ಗ್ರಾಮದವರು ಕಾವಲಿನ ಆಸ್‌ಪಾಸ್ ಪ್ರದೇಶಗಳಲ್ಲಿ ದನಗಳನ್ನು ಬಿಡುವದಕ್ಕೆ ಭಯಸ್ಥರಾಗಿ ಅವರವರ ಹೊಲದ ಸರಹದ್ದಿನಲ್ಲಿ ಬಿಟ್ಟು ಮೇಯಿಸಿಕೊಂಡು ಕಾಲಕ್ಷೇಪಮಾಡುತ್ತಾರೆ ಈ ದುಷ್ಟಮೃಗವನ್ನು ಶಿಕಾರಿದಾರರು ಕೊಂದು ಪುಣ್ಯಸಂಪಾದಿಸಿಕೊಳ್ಳಬೇಕಾಗಿದೆ. ಒಂದು ತಿಂಗಳ ಮುಂಚೆ ಚಿತ್ರನಾಯ್ಕನಹಳ್ಳಿ ಈಡಿಗರ ಹುಡುಗನು ಈ ಊರಿಗೆ ಕಾಡುರೆ ಹತ್ತಿಕೊಂಡು ನಂತರ ಮನೆಗೆ ಬಂದು, ಕುದುರೆಯನ್ನು ಕಟ್ಟಿ ತಾನು ಭೋಜನಾದಿಗಳಲ್ಲಿ ನಿರತನಾಗಿದ್ದನು ಕಟ್ಟಹಾಕಿದ ಕುದುರೆಯನ್ನು ಆ ಚಿರತೆಯು ಬಂದು ಕತ್ತು ಕಡಿದು ರಕ್ತ ಕುಡಿದು ಹೋಯ್ತು. ಪ್ರಾತಃಕಾಲ ಆ ಹುಡುಗನು ಬಂದು ಕುದುರೆಯನ್ನು ನೋಡಿ ದುಃಖಪಟ್ಟನು ಆದ್ದರಿಂದ ಆ ಹಾಳು ಚಿರತೆಯನ್ನು ಶಿಕಾರಿದಾರರು ಕೊಲ್ಲತಕ್ಕದ್ದು ಅವಶ್ಯವಾಗಿರುತ್ತೆ—ಗವರ್ನಮೆಂಟಿನಿಂದ ತಯಾರಿಸಲ್ಪಟ್ಟ ನಾಲೆ ಕೆರೆಯು ಅಂದರವಾರಿಗೆ ಸೇರಿದ ಭರಮ ಸಾಗರ ಗ್ರಾಮದ ಧೃವಪ್ಪರು, ತೋಟಗಳು ತರಿಬಾಗಾಯ್ತು ವಿಶಿಷ್ಟವೂ ನೀರು ಮಾಳಿಗಿನಿಂದ ಮಜಾ ಆಗಿ ಸದರಿ ತೋಟಗಳಿಗೆ ಕಮ್ತಿ ಕಂದಾಯ ಹೆಚ್ಚು ಪಾವತಿ ಆಗಿರುತ್ತೆ ಆದರೂ ಸದರಿ ಗ್ರಾಮದವರಿಗೆ ಜೀವನಕ್ಕೆ ನಿಂಬಾದಾರವಾದ್ದರಿಂದ ಈ ಗ್ರಾಮದ ಹಳೇ ತಲಾವಿನ ಅಂಗಳವನ್ನು ಸಾಗುವಳಿಗೆ ಹುಕುಂ ದಯಪಾಲಿಸಿ, ಸದರಿ ಜಮೀನುಗಳಿಗೆ ಮೇಲ್ಗಡೆ ಕೆರೆ ಹಾಕಿಸಿ ಕೊಡತಕ್ಕವೆಂತ ಪಾಗ್ದಾನವಾಗಿ ಮಂಜೂರಾಯ್ತು. ಈಗ ರೈತರು ಆಯಾ ಜಮೀನುಗಳಲ್ಲಿ ಭಾವಿಗಳನ್ನು ತೆಗಿಸಿ, ತೋಟಗಳನ್ನು ಕಟ್ಟುತ್ತಾರೆ ಮೇಲ್ಗಡೆಯಿಂದ ಬರುವ ಹಳ್ಳಕ್ಕೆ ಅಡ್ಡಿಯಿಲ್ಲದೆ ತೆಗಿಸತಕ್ಕ ಭಾವಿಗಳ ಮತ್ತು ಕಟ್ಟತಕ್ಕ ತೋಟಗಳ ಮೇಲೆ ನೀರು ನುಗ್ಗಿ ಭಾವಿಗಳು ಹಾಳು, ರೈತರುಗಳಿಗೆ ಬಹಳ ಲುಕ್ಸಾನಾಗಿದೆ ಅವರ ತೊಂದರೆ ಎಷ್ಟೆಂತ ಹೇಳುವದು ಅಸಾಧ್ಯ ಆದ್ದರಿಂದ ಸಾಲಗಳನ್ನು ಮಾಡಿ ಕಟ್ಟತಕ್ಕ ರೈತರುಗಳ ಮೇಲೆ ದಯಾಳು ಸರ್ಕಾರದವರು ಪೂರ್ಣ ಪ್ರೀತಿಯಿಂದ ಸದ್ಯಕ್ಕೆ ಸಣ್ಣ ಕೆರೆಯನ್ನು ಮಾಡಿಸಿ ಕೊಟ್ಟರೆ ಅನ್ನ ಪ್ರದಾನಮಾಡಿದ ಹಾಗಾಗುತ್ತದೆ

ಹುಣಸೂರು.—ಅಮಲ್ದಾರ್ ಮ॥ ನಾರಾಯಣಸ್ವಾಮಿ ನಾಯುಡುರವರು ಇಲ್ಲಿಗೆ ವರ್ಗವಾಗಿ ಬಂದು ಸುಮಾರು ಎರಡು ವರ್ಷಗಳಾದವು ಈ ಕೊಂಚಕಾಲದಲ್ಲಿ ಇವರು ಅನೇಕ ಒಳ್ಳೇ ಕೆಲಸಗಳನ್ನು ಮಾಡಿದ್ದಾಗ್ಯೂ ಹುಣಸೂರಿನ ಪ್ರಜೆಗಳಲ್ಲಿ ಮುಕ್ಕಾಲು ಭಾಗ ಜನರು ಬಹು ಕಷ್ಟದಿಂದ ತಮ್ಮ ಕಾಲವನ್ನು ಕಳೆಯಬೇಕಾಯಿತು. ಇಲ್ಲಿ ಇವರ ಸ್ನೇಹಿತರು ಸೇರಿ, ಇವರಿಗೆ ೨೫ ನೇ ತಾ ಟೀಪಾರ್ಟಿ ಮಾಡಿದರು. ೨೫ ನೇ ತಾ ರಾತ್ರಿ ಇವರ ಜೊತೆಯಲ್ಲಿ ಫೋಟೋ ತೆಗೆಯಿಸಿಕೊಂಡರು ಪೋಲೀಸ್ ಇಲಾಖೆಯವರು ಇವರಿಗೆ ನಮಸ್ಕಾರ ಮಾಡಿದರು ಇನ್ಸ್‌ಪೆಕ್ಟರು ಅವಲ್ದಾರು ಪರವಾಗಿ ಒಂದು ಸಣ್ಣ ಉಪನ್ಯಾಸಮಾಡಿದರು. ಸುಮಾರು ೧೨ ಘಂಟೆಗೆ ತಾಳ, ಮೇಳಗಳ ವಾದ್ಯದೊಡನೆ ಮಾಮೂಲ್ ರಸ್ತೆ ಬಿಟ್ಟು ಬೇರೆ ರಸ್ತೆಯಲ್ಲಿ ಮೈಸೂರು ಕಡೆ ಪ್ರಯಾಣ ಬೆಳಸಿದರು. ಅಲ್ಲಿಂದ ಹೊಸದುರ್ಗಕ್ಕೆ ಹೋಗುವರು ಇಲ್ಲಿಗೆ ವರ್ಗವಾಗಿ ಬಂದಿರುವ ಮ॥ ಶ್ರೀನಿವಾಸ ಅಯ್ಯಂಗಾರ್ರು ಎಲ್ಲರಲ್ಲೂ ಏಕರೀತಿಯಾಗಿದ್ದುಕೊಂಡು, ಸರ್ವರ ಪ್ರೀತಿ ಗೌರವಗಳಿಗೆ ಪಾತ್ರರಾಗುವರೆಂದು ಕೋರುತ್ತೇನೆ—ಸದ್ಯ ಪ್ಲೇಗ್ ರೋಗವು ಸಂಪೂರ್ಣವಾಗಿ ನಿಂತುಹೋದ್ದರಿಂದ ಜನರೆಲ್ಲಾ ಊರು ಸೇರುತ್ತಿದ್ದಾರೆ ಇದು ಮಾಗೀಕಾಲವಾದ್ದರಿಂದ ಅನೇಕರು ಚಳಿಜ್ವರ, ನೆಗಡಿ, ಮುಂತಾದವುಗಳಿಂದ ನರಳುವರು. ಪ್ಲೇಗಿನ ದೆಸೆಯಿಂದ ಪೋಸ್ಟ್ ಮತ್ತು ಟೆಲಿಗ್ರಾಫ್ ಆಫೀಸುಗಳನ್ನು ಊರಿನ ಹೊರಗೆ ಇಟ್ಟಿರೋಣವು ಅನೇಕರಿಗೆ ತುಂಬಾ ಅನಾನುಕೂಲವಾಗಿದೆ ಒಂದು ಕಾರ್ಡ್ ಬೇಕಾದರೂ ಒಂದು ಮೈಲೀ ದೂರ ಹೋಗಬೇಕಾಗಿದೆ ಆದ್ದರಿಂದ ಪೋಸ್ಟ್ ಆಫೀಸು ಪುನಃ ಮಾಮೂಲ್ ಕಟ್ಟಡಕ್ಕೆ ಬರುವಹಾಗೆ ಮಾಡಿದರೆ ಪ್ರಜೆಗಳ ಕಷ್ಟ ಪರಿಹಾರವಾದೀತು—ಪ್ರಯಾಣಿಕರಿಗೆ ತಲೆಗೆ ೧೦ ಆಣೆಯಂತೆ ಅನುಕೂಲವಾಗಿ ಇಲ್ಲಿನ ವೈಶ್ಯರಲ್ಲಿ ವೆಂಕಟಪ್ಪಶೆಟ್ಟಿ ಮುಂತಾದವರು ಹುಣಸೂರಿಂದ ಮೈಸೂರಿಗೂ ಮೈಸೂರಿಂದ ಹುಣಸೂರಿಗೂ ಜಟ್ಕಾ ಗಾಡಿಗಳನ್ನು ಇಟ್ಟಿದ್ದಾರೆ—ಪ್ಲೇಗಿನ ಕಾಲದಲ್ಲಿ ಸರಾಫ್ ನರಸಿಂಹಯ್ಯನವರ ಮನೆಯಲ್ಲಿ ಕಳವು ಮಾಡಿದ ಇಬ್ಬರು ಮುಸಲ್ಮಾನರಿಗೆ ತಲಾ ೯ ತಿಂಗಳು ಸಜಾ ಆಗಿತ್ತು ಅಪೀಲಿನಲ್ಲಿ ಇವರನ್ನು ಖುಲಾಸೆ ಮಾಡಿದರೆಂದು ಕೇಳುತ್ತೇನೆ ಆದರೆ ಇವರ ಜೊತೆಗೆ ಸೇರಿದ್ದ ಇಬ್ಬರು ಸೊಂಗಸರಿಗೆ ತಲಾ ಒಂದು ವಾರ ಸಜಾ ಮತ್ತು ಒಂದು ರೂಪಾಯಿ ಜುಲ್ಮಾನೆ ವಿಧಿಸಲ್ಪಟ್ಟಿತು—ಈಗ ಸುಮಾರು ೪—೫ ತಿಂಗಳಿಂದ ಮ್ಯುನಿಸಿಪಲ್ ದೀಪ ಹಚ್ಚುವದನ್ನು ಮ॥ ತಿರುವೆಂಗಡಮೊದಲಿಯಾರ್ರಿಗೆ ಕಂಟ್ರಾಕ್ಟು ಕೊಟ್ಟಿದಾರೆ. ಮೊದಲಿನಂತೆ ಈಗಲೂ ಕೆಲವು ದೀಪಗಳನ್ನು ಹಚ್ಚುವರು, ಕೆಲವನ್ನು ಹಚ್ಚುವದೇ ಇಲ್ಲ, ಹಚ್ಚಿದಾಗ್ಯೂ ಅವು ಸರಿಯಾದ ಪ್ರಕಾಶವಿಲ್ಲ. ಈ ವಿಷಯದಲ್ಲಿ ಕಂಟ್ರಾಕ್ಟರು ನಿಗಾಕೊಡುವರೆಂದು ನಂಬುತ್ತೇನೆ.—ಕನ್ನಾನೂರಿಂದ ಬರುವ ಇಂಗ್ಲಿಷ್ ಶಿಪಾಯಿಗಳ ರಿಜಿಮೆಂಟು ಇದೇ ತಿಂಗಳು ೧೨ ನೇ ತಾ. ಈ ಊರಿನಲ್ಲಿ ಮೊಕ್ಕಾಂ ಮಾಡುವರೆಂಬ ವರ್ತಮಾನ ಇವರಿಗೆ ಬೇಕಾಗಿರುವ ಸಾಮಾನುಗಳ ಸಪ್ಲೈಗಾಗಿ ಈಗಿನಿಂದಲೂ ಅಮಲ್ದಾರರು ತರದೂದು ಮಾಡುತ್ತಿದ್ದಾರೆ.

ಚನ್ನಪಟ್ಟಣ.—೧—೨ ವಾರಗಳಿಂದ ಮಳೆ ನಿಂತಿದೆ ಶೀತದ ಘಾಳಿ ಪ್ರಾರಂಭವಾಗಿದೆ ಹಗಲು ಬಿಸಲಿನ ತಾಪವೂ, ರಾತ್ರಿ ಶೀತವೂ ಜಾಸ್ತಿ ಪ್ಲೇಗ್ ರೋಗವು ಇನ್ನೂ ಶಾಂತಿಗೆ ಬರಲಿಲ್ಲವು ಊರಿನ ನಾಲ್ಕು ಕಡೆಗಳಲ್ಲಿರುವ ಎಲ್ಲಾ ಕ್ಯಾಂಪುಗಳಲ್ಲೂ ಹೊಸ ಬಾಯಿಲೆಗಳು ಆಗುತ್ತಲೇ ಇರುವವು ಪ್ರತಿ ದಿನವೂ ನಾಲ್ಕಾರು ಮರಣಗಳಾಗುವವು ಈ ಊರಿನಲ್ಲಿ ಪಂಸ್ಥಳೀಕರಿಗೋಸ್ಕರ ಪೂರ್ಣಯ್ಯನವರ ಸತ್ರ ಒಂದೂ, ಮುಸಾಫರ ಬಂಗಲೆ ಒಂದೂ ಇವೆ ಈ ಪೈಕಿ ಈಗಿನ ಪ್ಲೇಗ್ ರೋಗದ ನಿಮಿತ್ತ ಸತ್ರದಲ್ಲಿ ಇಲ್ಲಿನ ಶಿರಸ್ತೇದಾರರು ವಾಸ ಮಾಡಿಕೊಂಡಿರುವರು. ಮುಸಾಫರು ಬಂಗಲೆಯ ಒಂದು ಭಾಗದಲ್ಲಿ ಅವಲ್ದಾರ್ರು ಇರುವರು. ಪ್ರಯಾಣಿಕರಿಗೆ ಸ್ಥಳವಿಲ್ಲದೇ ಹೋಗಿದೆ ಕಳೆದ ವಾರ ಮಾಗಡಿ ಮುಂತಾದ ಸ್ಥಳಗಳಿಂದ ಪರೀಕ್ಷಾರ್ಥವಾಗಿ ಬಂದಿದ್ದ ವಿದ್ಯಾರ್ಥಿಗಳೂ ಅವರ ಬೆಂಗಾವಲಿನವರೂ ಇಳಿದುಕೊಳ್ಳುವದಕ್ಕೆ ಸ್ಥಳವಿಲ್ಲದೆ, ಮರದ ಕೆಳಗೋ ಗೋಡೆ ಬೀದಿಗಳಲ್ಲೋ ಅಡಿಗೆ ಮಾಡಿ, ಕಾಲ ತಳ್ಳಿಕೊಂಡು ಹೋಗಬೇಕಾಯಿತು—ಒಂದುವರೆ ವರುಷದಿಂದಲೂ ಇಲ್ಲಿದ್ದ ಪೋಸ್ಟ್ ಮಾಸ್ಟರ್ ಮ॥ ಪೊನ್ನಸ್ವಾಮಿ ಪಿಳ್ಳೆಯವರನ್ನು ಬೌರಿಂಗುಪೇಟೆಗೆ ವರ್ಗಾಯಿಸಿದರು ಈಗ ೧೫ ದಿನಗಳಿಂದ ಮಿ॥ ಡಯಾಸ್ ಎಂಬ ಹೊಸ ಪೋಸ್ಟ್ ಮಾಸ್ಟರು ಬಂದು ಕೆಲಸ ನೋಡುತ್ತಿದ್ದಾರೆ—ಚಿಕ್ಕಮಗಳೂರಿನಿಂದ ಇಲ್ಲಿನ ಹೈ ಸ್ಕೂಲಿಗೆ ವರ್ಗವಾಗಿ ಬಂದಿದ್ದ ವೆಂಕೋಬರಾಯರು ಒಂದು ವಾರದ ಕೆಳಗೆ ಇಲ್ಲಿ ಪ್ಲೇಗ್ ತಗಲಿ ಕಾಲವಾದರು ಶವವನ್ನು ದಹನಮಾಡುವದಕ್ಕೆ ಸ್ವಜಾತಿಯವರ್‍ಯಾರೂ ಬರಲಿಲ್ಲವಾಗಿ, ಇತರ ಜಾತಿಯವರಿಂದ ದಹನಮಾಡಿಸಿದಂತೆಯೂ, ಮರು ದಿನ ಹೋಗಿ ನೋಡಲು ಶವವು ಚೆನ್ನಾಗಿ ದಹನವಾಗಿರಲಿಲ್ಲವೆಂದಲೂ ಕೇಳುತ್ತೇನೆ—ಇಲ್ಲಿನ ಎಲೇಕೇರಿಯ ಬಾಸೆಗೌಡರ ಹೊಲದ ಫಸಲನ್ನು ಸಮೀಪದ ಗ್ರಾಮವಾದ ರಾಂಪುರದ ಜನರು ಲೂಟಿ ಮಾಡಲು ಪ್ರಯತ್ನ ಪಡುವದು ಸೂಕ್ಷ್ಮವಾಗಿ ತಿಳಿದು ಸರ್ಕಾರದ ಕುಮ್ಮಕ್ಕಿನಿಂದ ಫಸಲನ್ನು ಉಳಿಸಿಕೊಳ್ಳಬೇಕಾಯಿತು ಇದು ನಡೆದ ಕೆಲ ದಿನಗಳಲ್ಲೇ ಅಂದರೆ, ಕಳೆದ ತಾ ೨೦ನೇ ಬುಧವಾರದ ದಿನ ಸದರಿ ರಾಂಪುರದವನ ಹೊಲದಲ್ಲಿ ಎಲೆ ಕೇರಿಯ ಒಬ್ಬ ಹುಡುಗನ ಎತ್ತು ಮೇಯುತ್ತಿತ್ತು ಅದಕ್ಕಾಗಿ ಹೊಲದವನು ದನ ಕಾಯುತ್ತಿದ್ದ ಹುಡುಗನನ್ನು ಹೊಡೆಯುತ್ತಾ ಇದ್ದುದ್ದನ್ನು ಆತನ ಅಣ್ಣನು ನೋಡಿ ಓಡಿ ಬಂದು ತಮ್ಮನಿಗೂ ಹೊಲದವನಿಗೂ ಒಂದೆರಡು ಪೆಟ್ಟು ಕೊಟ್ಟಂತೆ ಸುದ್ದಿಯು. ಸದರಿ ರಾಂಪುರದವರಿಗೆ ತಿಳಿಯಲು, ಆ ಗ್ರಾಮದಿಂದ ಸುಮಾರು ೩೦೦ ಜನರ ವರಿಗೂ ಕಲ್ಲು, ದೊಣ್ಣೆಗಳನ್ನು ಹಿಡಿದು, ದಾರಿಯಲ್ಲಿ ಸಿಕ್ಕಿದವರನ್ನು ಹೊಡೆಯುತ್ತಾ ಅನೇಕರನ್ನು ಘಾಯಮಾಡಿದ ಹಾಗೂ, ಇವರ ಅರ್ಭಟಕ್ಕೆ ಅನೇಕರು ಅಲ್ಲಿ ನಿಲ್ಲದೆ ಫಲಾಯನವಾದಂತೆಯೂ, ಹಾಗೆ ಮಾಡದೆ ಹೋಗಿದ್ದ ಪಕ್ಷದಲ್ಲಿ ಒಂದೆರಡು ಖೂನಿಗಳೂ ಆಗಬಹುದಾಗಿತ್ತೆಂತಲೂ ಗೊತ್ತಾಗುತ್ತೆ

ಪ್ರಕಟನೆಗಳು

ಊರಜನರ ಹೇಳಿಕೆಮೇಲಿನ ನಂಬಿಕೆ.

91 14

ಕಲ್ಕತ್ತೆಯ ಇನ್ನೊಬ್ಬ ದಾಕ್ತರರು ಕೊಟ್ಟ ಅಭಿಪ್ರಾಯವನ್ನು ಇದರಡಿ ತೋರಿಸಿರುತ್ತದೆ. ಇದರಿಂದ ಈ ಪತ್ರಿಕೆಯಲ್ಲಿ ಸದಾಗವಾಗಿ ಪ್ರಚುರವಾಗುವ ಅನೇಕ ಸ್ಥಳೀಯ ದೃಷ್ಟಾಂತಗಳಿಗೆ ಇನ್ನೂ ಒಂದು ಸೇರಿದಂತಾಗುವದು

ಇಂಥಾ ಸ್ಥಳೀಯ ಸಾಕ್ಷ್ಯದ ಯಥಾರ್ಥ್ಯವನ್ನು ನಾವು ಪರೀಕ್ಷಿಸಬಹುದಾದ್ದರಿಂದ ಸಾವಿರಾರು ಮೈಲು ದೂರದಲ್ಲಿರುವಂಥವರಿಂದ ಕೊಡಲ್ಪಡುವ ಸಾಕ್ಷ್ಯಕ್ಕಿಂತಲೂ ಇದು ಹೆಚ್ಚು ಪ್ರಯೋಜನಕರವಾಗಿರುವದು ಕಲ್ಕತ್ತೆಯ ಜನರಿಗೆ ಕಲ್ಕತ್ತೆಯ ಜನರ ಮಾತೇ ಶ್ರೇಷ್ಠವು ಕಾರ್ನರ್ ರೋಡ್ ನಂ ೩೪ ನೇ ಡಿಸ್‌ಪೆನ್ಸರಿ ಡಾಕ್ಟರ ಎಸ್ ಸಿ ಸೇನ್, ಎಲ್ ಎಂ ಎಸ್ ಇವರ ಹೇಳಿಕೆಗೆ ವಿರೋಧವಾದ್ದು ಬೇರೆ ಇರಲಾರದು. ಅವರು ಗವರ್ನಮೆಂಟು ಮೆಡಿಕಲ್ ಆಸ್ಪತ್ರೆಗಳಲ್ಲಿ ಅನೇಕ ವರುಷ ಇದ್ದು ಅನುಭವಶಾಲಿಗಳು. ಪ್ರಕೃತ ಕಲ್ಕತ್ತೆಯ ಟ್ರಾಂವೇ ಕಂಪನಿಯ ವೈದ್ಯಚಿಕಿತ್ಸಕರಾಗಿರುತ್ತಾರೆ ಅವರು ಹೇಳುವುದೇನೆಂದರೆ—"ಡೋನ್ಸ್‌ರ (ಬ್ಯಾಕ್ ಏಕ್ ಕಿಡ್ನಿ ಪಿಲ್ಸ್) ಬೆನ್ನುನೋವಿನ—ಮೂತ್ರಕೋಶದ ಔಷಧ ಗುಳಿಗೆಗಳು ಮೂತ್ರಕೋಶ ಸಂಬಂಧವಾದ ಬಾಧೆಗಳಲ್ಲಿ ಕೊಟ್ಟು ನೋಡಿದ್ದೇನೆ ಅಂಥಾ ಸಂಗತಿಗಳಲ್ಲಿ ತಕ್ಷಣವೇ ಉಪಶಮನ ಸಿಕ್ಕುವ ಬಗ್ಗೆ ಇವು ಅತ್ಯಂತ ಉಪಯೋಗಕರವಾಗಿವೆ

ಬೆನ್ನುನೋವು ಮೂತ್ರನಾಡಿಗಳು ದುರ್ಬಲವಾಗಿಯೂ ಅನಾರೋಗ್ಯಸ್ಥಿತಿಯಲ್ಲಿರುತ್ತವೆಂಬದಕ್ಕೆ ಒಂದು ಲಕ್ಷಣವಾಗಿರವದು ಆ ಸಮಯದಲ್ಲಿ ಅವುಗಳಿಂದ ನಡಿಸಕೂಡುವದಕ್ಕಿಂತ ಹೆಚ್ಚು ಕೆಲಸ ತಾ ಅವುಗಳ ಮೇಲೆ ಹೊರಿಸಿದರೆ ತಲೆನೋವು, ಆಯಾಸ, ಸಹನ ಇಲ್ಲದಿರುವಿಕೆ, ಮಂಗೆ ಉ, ಅಂಟಿಕೆ ಮುಂತಾದ್ದು ಉಂಟಾಗುವುದು. ಇವನ್ನು ಅಲಕ್ಷಿಸಿದರೆ ಜಲೋದರವ್ಯಾಧಿ, ವಾತನೋವು, ಮೂತ್ರಬಾಧೆಗಳು ಮತ್ತು ಪ್ರಾಣಹಾನಿಕರವಾದ ಇತರ ಜಾಡ್ಯಗಳು ಸಂಭವಿಸುವವು ಈ ಮಾತ್ರೆಗಳು ಮೂತ್ರಕೋಶ, ಮುಂತಾದ್ದಕ್ಕೆ ಸಂಬಂಧಪಡುವ ವಿಶಿಷ್ಟ ಬಾಧೆಗಳಿಗೆ ಮುದುಕರಿಗೂ, ಯೌವನಸ್ಥರಿಗೂ ನಿರ್ದಿಷ್ಟವಾದ ಔಷಧವಾಗಿರುವದು ಇದನ್ನು ಸೇವಿಸಿದ್ದರಿಂದ ಮುಂದೆ ಯಾವ ಬಾಧಕವೂ ಇರಲಾರದು

ಎಲ್ಲಾ ಔಷಧ ವರ್ತಕರಿಂದ ಮಾರಲ್ಪಡುತ್ತದೆ ಸೀಸೆ ಒಂದಕ್ಕೆ ರೂ ೨ ಅಥವಾ ೬ ಸೀಸೆಗಳಿಗೆ ರೂ ೧೦—೮—೦ ಅಥವಾ ಮುಂಬಾಯಿಯಲ್ಲಿರುವ ಡೋನ್ಸರ ಔಷಧಗಳ ಕೋಠಿಯಿಂದ ಸೀಪಾ ತರಿಸಿ ಕೊಳ್ಳಬಹುದು ಪಿ ಓ ಬಾಕ್ಸ್ ನಂ ೨೦, ಮುಂಬಾಯಿ

ಇಲ್ಲಿ ನೋಡಿ!

65 22

ತುಮಕೂರು ಮಿಷನ್ ಇಲಾಖೆಯಲ್ಲಿ ಯೂರೋಪಿಯನ್ ಮೇಲ್ವಿಚಾರಣೆಯಿಂದ ಉತ್ತಮ ತರಹದ ಹಾಸನದ ಟೋಪಿಗಳು ಅತಿ ಶ್ರೇಷ್ಠವಾದ ಉಲ್ ದಾರದಿಂದ ತಯಾರಾಗುತ್ತವೆ

ಕ್ರಯ—೧೨ ಆಣೆ ಮೊದಲ್ಗೊಂಡು ೧ ರೂ ೧೨ ಆಣೆಯವರೆಗೆ

೧ ಡಜನ್ ಟೋಪಿಗಳನ್ನು ತೆಗೆದುಕೊಳ್ಳುವವರಿಗೆ ಶೇಕಡ ೫ ರಂತೆ ಡಿಸ್‌ಕೌಂಟ್ ಕೊಡಲ್ಪಡುವದು

ನಮ್ಮ ವಿಳಾಸ.—ಮೇನೇಜರ್,

ಹಾಸನದ ಟೋಪಿ ಕಾರ್ಖಾನೆ, ಮಿಷನ್ ಇಲಾಖೆ, ತುಮಕೂರು

ಮದರಾಸು ಶೀರೆಗಳು.

123 ಹೊಸನಮೂನೆ! ವಿ ಪಿ ಖರ್ಚು ೪ ಆಣೆ ಪಾತರಿ ಬಟ್ಟೆ 11

ಶ್ರೇಷ್ಠವಾದ ಕಪ್ಪು ನೂಲಿನಿಂದ ತಯಾರಿಸಿ ಪ್ರಸಿದ್ಧವಾದ ಚಿತ್ರವುಳ್ಳ ರೇಷ್ಮೆಯ ಅಂಚುಗಳಿಂದ ಮಿಂಚುತ್ತೆ. ನೋಡಲಿಕ್ಕೆ ಮತ್ತು ಉಡಲು ಬಹು ಬಾಳಿಕೆ ಹರಿದರೂ ಬಣ್ಣ ಕೆಡದು ಸೊಗಸಾದ ಬೆಳ, ಹಳದಿ ರೇಷ್ಮೆಗಳ ಸೆರಗುಗಳೆರಡು ಕಡೆಯಲ್ಲಿಯೂ ಒಂದೊಂದು ಗಜದುದ್ದವುಳ್ಳ ಈ ಶೀರೆಯು ೧೧ ಗಜದಗಲ ೯ ಗಜದುದ್ದ ಘನವಾಗಿದೆ ಇಷ್ಟು ಉತ್ತಮ ಮಾಲು ಮತ್ತೆಲ್ಲಿಯೂ ಸಿಕ್ಕದು ಪ್ರತ್ಯಕ್ಷ ತರಿಸಿ ಉಪಯೋಗಿಸಿದರೆ ಸೀರೆಯ ಉತ್ಕೃಷ್ಟತೆಯು ಸ್ಪಷ್ಟವಾಗುತ್ತೆ. ಕ್ರಯ ೨ ಅಂಗುಲ ರೇಷ್ಮೆಯಂಚಿನದಕ್ಕೆ ರೂ ೯—೮—೦, ೩ ಅಂಗುಲ ಅಂಚಿನದಕ್ಕೆ ರೂ ೧೧—೮—೦

ವಿಳಾಸ.—ರಾವ್ ಎಂಪೋರಿಯಂ, ಸೈದಾಪೇಟ್ ರೋಡ್,
ವೇಪೇರಿ, ಮದರಾಸು.

ಗುಣಕಾರಿಯಾದ ಸಿದ್ಧೌಷಧಗಳು.

ಸರ್ವ ಜ್ವರಹಾರಿಣಿ ಎಲ್ಲ ಜ್ವರಗಳನ್ನು ೩ ದಿವಸದಲ್ಲಿ ಪರಿಹರಿಸುತ್ತೆ ರೂಪಾಯಿ ೧ ರೋಗಸಂಜೀವಿನಿ ಕೃಶರನ್ನೂ ಮುದುಕರನ್ನೂ ದೃಢಾಂಗರನ್ನಾಗಿ ಮಾಡಿಸುತ್ತೆ ರೂ ೨ ಎಲ್ಲ ರೋಗಗಳಿಗೂ ಖಾತರಿಯಾದ ಔಷಧಿಗಳು ದೊರೆಯುತ್ತೆ

ವಿಳಾಸ — ಎಸ್ ಆರ್ ರಾವ್, ಸೈದಾಪೇಟ್ ರೋಡ್,
ವೇಪೇರಿ, ಮದರಾಸು

ಸನ್ ೧೯೦೮ ನೇ ಇಸವಿಯ

127 2

ಎ ನಂ॥ ಜಿನೀವಾ ಬಿ ನಂ॥ ಸಿ ನಂ॥ ಜಿನೀವಾ ಡಿ ನಂ॥

ಪಂಚಾಂಗ ಸಹಿತವಾದ ಇಂಗ್ಲಿಷು—ಕನ್ನಡ ಡೈರಿ

ಈ ಡೈರಿಗಳು ವರ್ತಕರು ಲಾಯರುಗಳು, ಕಂಟ್ರಾಕ್ಟರು, ದೊಡ್ಡ ಮನುಷ್ಯರು, ಜಮೀನ್ದಾರ್ ಸಮಸ್ತರಿಗೂ ಉಪಯೋಗವಾಗಿರುತ್ತವೆ ಇವುಗಳಲ್ಲಿ ಅಡಕವಾಗಿರುವ ವಿಷಯಗಳು—ಶೀಲಕ ಸಂ॥ ಪಂಚಾಂಗ ಗ್ರಹ ಕುಂಡಲಿ ಸಹಿತ, ಕ್ಯಾಲೆಂಡರ, ಹಬ್ಬಗಳು, ರಜಾದಿಗಳು, ರೈಲ್ ಭಾಡಿಗೆ, ಕೋರ್ಟ್ ಫೀಜು, ಪ್ರೋಸೆಸ್ ರುಸೂಂ, ಸ್ಟಾಂಪು, ರಿಜಿಸ್ಟರ್ ಫೀಜುಗಳು, ಪೋಸ್ಟಾಫೀಸಿನ ಎಲ್ಲಾ ವಿಷಯಗಳು ಜಮೀನುಗಳ ಅಳತೆ, ತೂಕಗಳು, ಗೌರಿ ಪಂಚಾಂಗ, ಪ್ರಶ್ನಶಾಸ್ತ್ರ, ಹಲ್ಲಿ ಬಿದ್ದ ಫಲ, ರಾಹುಕಾಲ, ಗುಳಿಕಕಾಲ, ಮಾರಕಾಲ, ದಿನ ಸಂಬಳದ ಪಟ್ಟಿ, ಥೇಟಿಲೆಕ್ಕ, ಜಮಾಖರ್ಚಿನ ಪಟ್ಟಿ, ಇನ್ನೂ ಅನೇಕ ವಿಷಯಗಳನ್ನು ಉತ್ಕೃಷ್ಟವಾದ ಕಾಗದ ರೂಲು ಹಾಕಿದ ಶೀಟು ಸಾವಿರಾರು ಬರೆಯಲು ಬಿಳಿ ಹಾಳೆ ಹಾಕಿದೆ ಕ್ರಯ—

ಎ ನಂಬರ್ ಚಿಕ್ಕಸೈಜು ೩ ಆಣೆ, ಸಿ ನಂಬರು ದೊಡ್ಡ ಸೈಜು ೩ ಆ
ಬಿ ,, ಮಧ್ಯಮದ್ದು ೫ ,, ಡಿ ,, ಮಧ್ಯಮದ್ದು ೮ ,,

ಹೊಸ ನಮೂನೆ ಉತ್ಕೃಷ್ಟವಾದ 'ಜಿನೀವಾ' ಡೈರಿ ಇದು ಸರ್ಕಾರದಲ್ಲಿ ರಿಜಿಸ್ಟರಾಗಿದೆ

"ಜಿನೀವಾ" ೧ ನಂ ೪ ಆ । "ಜಿನೀವಾ" ೨ ನಂ ೬ ಆ

ಪೋಸ್ಟ್ ಚಾರ್ಜ್ ಬೇರೆ ಒಂದೇ ನಮೂನೆಯ ೧೨ ಡೈರಿ ತರಿಸಿಕೊಂಡರೆ ೧ ಡೈರಿ ಇನಾಂ ವಿ ಪಿ ಮೂಲಕವೂ ತರಿಸಿಕೊಳ್ಳಿ

ಟಿ. ಕೆ. ಮುತ್ತು ಎಂ, ಬರ್. ಕೃಷ್ಣಸ್ವಾಮಿ ಶೆಟ್ಟಿ
ಬಳ್ಳಾಪುರ ಪೇಟೆ, ಬೆಂಗಳೂರು ಸಿಟಿ

ರಬ್ಬರ್ ಹ್ಯಾಂಡ್ ಪ್ರೆಸ್.

114 9

ಕಲಾಕೌಶಲ್ಯದಿಂದ ಮತ್ತು ಉದ್ಯೋಗದಿಂದ ಊರ್ಜಿತಸ್ಥಿತಿ ಹೊಂದುವ ಈ ಭಾರತ ಭೂಮಿಯೊಳಗೆ ಈ ಪ್ರೆಸ್ ತಯಾರಾಗುತ್ತದೆ. ಇದುವರೆಗ ಈ ಪ್ರೆಸ್ಸು ಪರದೇಶದಿಂದ ಬರುತ್ತಿರುವಾಗ ಅದಕ್ಕೆ ೧೬ ರಿಂದ ೨೮ ರೂಪಾಯಿಗಳ ವರೆಗೆ ಬೆಲೆ ಬೀಳುತ್ತಿತ್ತು ಈ ಪ್ರೆಸ್ಸಿನೊಳಗೆ ಕನ್ನಡ, ತಮಿಳು, ತೆಲುಗು, ಉರ್ದು, ಪರ್ಷಿಯನ್, ಅರಬಿಕ್, ಇಂಗ್ಲೀಷ್ ಮತ್ತು ಬೇಕಾದ ಭಾಷೆಯಲ್ಲಿ ಒಂದು ಪ್ರತಿ ತಯಾರು ಮಾಡಿ, ಮಾಡಿಸಿದ ಮೇಲೆ ಬಹು ಸ್ವಲ್ಪ ಕಾಲದೊಳಗಾಗಿಯೇ ಇದರಿಂದ ೧೫೦ ಪ್ರತಿಗಳನ್ನು ತಯಾರು ಮಾಡಬಹುದು ಆದ್ದರಿಂದ ಈ ಪ್ರೆಸ್ಸು ಸಾರ್ವಜನಿಕ ಕಚೇರಿ ಮ್ಯುನಿಸಿಪಾಲಿಟಿ ಪೋಲೀಸ್ ಆಫೀಸರರೂ, ವಕೀಲರೂ, ವರ್ತಕರೂ, ಇನಾಮುದಾರರೂ ಮತ್ತು ಪರೀಕ್ಷಕರೂ ತಮ್ಮ ಸಂಗ್ರಹದಲ್ಲಿ ಅವಶ್ಯ ಇಡಬೇಕು ಎಷ್ಟೋ ಕಾರಕೂನರ ಸಹಾಯದಿಂದ ಒಂದು ಕೆಲಸಕ್ಕೆ ಬಹಳಕಾಲ ಹಿಡಿಯುವದು. ಆದರೆ ಈ ನಮ್ಮ ಪ್ರೆಸ್ಸಿನಿಂದ ಅಂಥಾ ಕೆಲಸವನ್ನಾದರೂ ಸ್ವಲ್ಪ ಕಾಲದಲ್ಲಿಯೇ ಮಾಡುವದಕ್ಕೆ ಸಾಧ್ಯ ಇವರ ದೆಸೆಯಿಂದ ಈ ಪ್ರೆಸ್ ಜನಗಳ ಪ್ರೀತಿಗೆ ಪಾತ್ರವಾಗಿರುವದು ಈ ಕಾರಣದಿಂದ ಪ್ರತಿ ಒಬ್ಬರೂ ತಮ್ಮ ಹತ್ತಿರ ಈ ಪ್ರೆಸ್ಸನ್ನು ಅವಶ್ಯಕವಾಗಿ ಇಡುವದರಲ್ಲಿ ಏನೂ ಸಂದೇಹವಿಲ್ಲ.

ನೋಟ್ ಪೇಪರ್ ಸೈಜು, ರೂಪಾಯಿ ೪—೦—೦.
ಹಾಫ್ ಫುಲ್‌ಸ್ಕ್ಯಾಫ್ ಸೈಜು, ೬—೦—೦.

ಪೋಸ್ಟೇಜು ಬೇರೆ (extra)

ವಿಳಾಸ:— ವರ್ಧಮಾನ ಏಜೆನ್ಸಿ,
ಪೋಸ್ಟ್ ಕಾಲಬಾದೇವಿ,
ಮುಂಬಯಿ.

ಪ್ರಕಟನೆ.

131-1

ಅಮೃತಮಹಲ್ ಇಲಾಖಾ ಬಾಬತು ಕೆಲವು ಗಂಡು ದನಗಳನ್ನು ಬಾಕಿ ಇಸವಿ ಡಿಸೆಂಬರು ೧೧ನೆ ತಾರೀಖು ಶನಿವಾರ ತಿಪಟೂರು ತಾಲ್ಲೋಕು ಕೋನೇಹಳ್ಳಿ ರೈಲ್ವೆ ಸ್ಟೇಷನ್ ಬಳಿಯಲ್ಲೂ, ಇದೇ ಮಾಹೆ ೧೫ನೆ ತಾರೀಖು ಬುಧವಾರ ಹಾಸನದ ತಾಲ್ಲೋಕು ದುದ್ದದ ಮೊಕ್ಕಾಂನಲ್ಲೂ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತವೆ. ಇಷ್ಟವುಳ್ಳವರು ಸದರಿ ಸ್ಥಳಗಳಿಗೆ ಹಾಜರಾಗಿ ಛಡಸವಾರಿ ಪ್ಲಿ ದನಗಳನ್ನು ಪಡೆಯಬಹುದು.

ಮೊಕ್ಕಾಂ, ಬೆಳಕೆರೆ, ಎಚ್. ನಂಜುಂಡರಾಜೇ ಅರಸ್,
ತಾ|| ೨೫, ೨೭-೧೧-೦೭ ಸೂಪರಿಂಟೆಂಡೆಂಟ್,
ಅಮೃತಮಹಲ್ ಇಲಾಖಾ

The Pourwal Cash Bazzar—Bangalore City.

ಧಾರಿವಾಲ್ (ಪಂಜಾಬ್) ಶಾಲುಗಳು.

130-1

ಕೆಂಪು, ಎಣ್ಣೆಬಣ್ಣ, ಕೆಂಪು, ಕೇಸರಿ, ಹಸರು, ನಶ್ಯದ ಬಣ್ಣ, ಬಾದಾಮಿ, ಕಪ್ಪು, ಬಿಳುಪು, ಮುಂತಾದ ಬಣ್ಣವುಳ್ಳ. ಮತ್ತು ಚಕ್ ನಮೂನೆ, ಪೂರ ಎರು ಮೊಳ ಉದ್ದ, ಮೂರು ಮೊಳ ಅಗಲವುಳ್ಳದ್ದು.

ಈಗತಾನೇ ವಿಲಾಯತಿಯಿಂದ ಬಂದಿರುವ ೫,೦೦೦ ಪೌಂಡು ಟೋಪಿಗೆ ಲಾಯಖಾದ ತರಹೆವಾರಿ ಉಲ್ ಮತ್ತು ಇವುಗಳಲ್ಲಿ ತಯಾರಾದ ತರಹೆವಾರಿ ಟೋಪಿಗಳು ನಮ್ಮಲ್ಲಿ ಸ್ಟಾಕಾಗಿರುತ್ತವೆ.

ಇವುಗಳಲ್ಲದೆ ನೀವು ಕೇಳುವ ಯಾವ ಸಾಮಾನೇ ಆಗಲಿ ನಂಬಿಕೆಯಿಂದ ಅಗ್ಗವಾಗಿ ಕಳುಹಿಸುವೆವು. ಖರೀದಿ ವ್ಯರ ತಿಳಿಯಬೇಕಾದವರು ಇವರಿಗೆ ಬರೆಯಿರಿ—

ಹೆಚ್. ಜವಾರ್ ಮಲ್ ಕಂಪೆನಿ,
ಚಿಕ್ಕಪೇಟೆ, ಬೆಂಗಳೂರು ಸಿಟಿ.

ಇಗೋ! ಕನ್ನಡ "ಮಾತಲ್" ಪಾಕೆಟ್ ಡೈರಿ!

122-4

ಸೊಗಸಾದ ಡೈರಿಗಳು !! ಉತ್ತಮವಾದ ಡೈರಿಗಳು !!

ಉತ್ಕೃಷ್ಟವಾದ ಡೈರಿಗಳು !!!



೧೯೦೮ ನೇ ವರುಷದ ಕನ್ನಡ ಡೈರಿಗಳು ಸೊಗಸಾಗಿ ರೂಲ್ ಹಾಕಿದ ಕಾಗದದ ಮೇಲೆ ಮುತ್ತಿನಂಥಾ ಅಕ್ಷರಗಳಿಂದ ಪ್ರಿಂಟಾಗಿ ಮಾನ್ಯರಿಗೆ ಆನಂದವನ್ನುಂಟುಮಾಡತಕ್ಕವುಗಳಾಗಿರುತ್ತವೆ. ಇವುಗಳಲ್ಲಿ ಅಡಕವಾಗಿರುವ ವಿಷಯಗಳು:—ಬಡ್ಡಿಕೋಷ್ಟಕ ಪಟ್ಟಿ, ಡೋಬಿ ಲೆಕ್ಕ, ದಿನ ಸಂಬಳದ ಪಟ್ಟಿ, ನಾರಕಾಲೆ ಗಳಿಕೆ ಕಾಲ, ರಾಹು ಕಾಲ, ಹಲ್ಲಿ ಬಿದ್ದ ಫಲ, ಪ್ರಶ್ನಶಾಸ್ತ್ರ), ಗೌರಿ ಪಂಚಾಂಗ, ತೂಕಗಳು, ಅಳತೆಗಳ ಅಳತೆ, ಪೋಸ್ಟಾಫೀಸಿನ ಎಲ್ಲಾ ವಿಷಯಗಳು, ರಿಜಿಸ್ಟರ್ ಫೀಜುಗಳು, ಸ್ಟಾಂಪು, ಪ್ರೋಸೆಸ್ ರುಸುಂ, ಕೋರ್ಟ್ ಫೀಜು, ರೈಲ್ ಛಾರ್ಜ್, ರಜಾ ದಿನಗಳು, ಹಬ್ಬಗಳು, ಕ್ಯಾಲೆಂಡರು, (ಗ್ರಹಕಂಡಲಿ ಸಹಿತ) ಪ್ಲವಂಗ ಸಂ|| ಪಂಚಾಂಗ, ಇವೇ ಮುಂತಾದ ಅನೇಕ ವಿಷಯಗಳು ಅಡಗಿರುತ್ತವೆ. ಡೈರಿಗಳ ಕ್ರಯ:—

ನಂ ೧ ಸಣ್ಣ ಸೈಜು ಪೆನ್ಸಿಲ್ ಇಡತಕ್ಕ ಡೈರಿ ೦—೪—೦, ಹನ್ನೆರಡು ಡೈರಿಗಳಿಗೆ ೧ ಇನಾಮು.

ನಂ|| ೨ ಸಣ್ಣ ಸೈಜು ಪೆನ್ಸಿಲ್ ಇಟ್ಟು ಮುಚ್ಚಳ ಹಾಕಿರುವ ಫ್ಲಾಪ್ ಡೈರಿ ೦—೬—೦; ಹನ್ನೆರಡು ಡೈರಿಗಳಿಗೆ ೧ ಇನಾಮು.

ನಂ ೩ ದೊಡ್ಡ ಸೈಜು ಪೆನ್ಸಿಲ್ ಇಡತಕ್ಕ ಡೈರಿ ೦—೬—೦; ಹನ್ನೆರಡು ಡೈರಿಗಳಿಗೆ ೧ ಇನಾಮು.

ನಂ ೪ ದೊಡ್ಡ ಸೈಜು ಪೆನ್ಸಿಲ್ ಇಟ್ಟು ಮುಚ್ಚಳ ಹಾಕಿರುವ ಡೈರಿ ೦—೮—೦; ಹನ್ನೆರಡು ಡೈರಿಗಳಿಗೆ ೧ ಇನಾಮು.

ಡೈರಿಗಳ ಗಲಾಟೆಯಲ್ಲಿ ಭ್ರಾಂತಿಹೊಂದದೇಪಿ ಉತ್ತಮವಾದವು ಗಳನ್ನು ವ್ಯಯಮಾಡಿರಿ. ನಮ್ಮ ಡೈರಿಗಳು ಬಹು ಸುಲಭ ಕ್ರಯವುಳ್ಳವುಗಳು. ಇವುಗಳು ಗೌರ್ನಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿವೆ. ನಮ್ಮ ವಿಳಾಸ:—

ಎಸ್. ಬಿ. ನಥ್‌ಮಲ್ ಕಂಪೆನಿ, ದೊಡ್ಡಪೇಟೆ, ಮೈಸೂರು.

ಅಥವಾ,

ಎಲ್. ಎ. ಪೌರ್‌ವಾಲ್—ಬೆಂಗಳೂರು ಸಿಟಿ.

ಅಥವಾ,

ಸೆಕ್ರೆಟರಿ, ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

ನಿಮಗೆ ನೋವು ಇದೆಯೋ?

58-28

ಹಾಗಾದರೆ "ಕ್ಲೆಮೆಂಟ್ ಯವರ ಸ್ಪ್ಯಾನಿಷ್ ಬಾಂ" ನ್ನು ಏಕೆ ಉಪಯೋಗಿಸಬಾರದು? ಆಶ್ಚರ್ಯಕರವಾದ ಬಾಧಾಪಹಾರಿ ಇದು! ಈಗಿನ ಶತಮಾನದಲ್ಲಿ ಕಂಡು ಹಿಡಿದ ದೊಡ್ಡ ನೂತನವು!

ಈ ರೀತಿ ಔಷಧವನ್ನು ಮೊಟ್ಟಮೊದಲು ತೊಡೆಯುತ್ತಲೆ ಕೆಲವು ನಿಮಿಷಗಳೊಳಗಾಗಿ ನರ ಮತ್ತು ಮಾಂಸ ಸಂಬಂಧವಾದ ಪಾರ್ಶ್ವ ನೋವು, ಕೀಲುಗಳ ಬಾಧೆ, ಕಿಬ್ಬೊಟ್ಟೆ ನೋವು, ಬೆನ್ನೆಳೆಯುವದು, ತಲೆನೋವು, ಕೆಮ್ಮು, ಕೀಲುಗಳು ಕತ್ತರಿಸುವದು, ಕೊರಳು ಊತ, ಕೈಕಾಲು ಬಿಗಿತ ಇವುಗಳನ್ನೆಲ್ಲಾ ವಿದ್ಯುಚ್ಛಕ್ತಿಯಂತೆ ಗುಣಪಡಿಸುವದು. ಈ ಔಷಧವು ಆಶ್ಚರ್ಯಕರವಾಗಿ ಗುಣಪಡಿಸುವದರಿಂದ ಎಲ್ಲರಲ್ಲಿಯೂ ಪ್ರಸರಿಸುತ್ತಾ ಬರುವದು. ಇತರ ಔಷಧಿಗಳು ಗುಣಪಡಿಸದೆ ಹೋದಾಗ ಡಾಕ್ಟರ್ ಫೀಜನ್ನು ಕಡಿಮೆಮಾಡಿ. ಇದು ನಿಸ್ಸಂದೇಹವಾಗಿಯೂ ಗುಣಪಡಿಸುವದು.

ಕ್ರಯ:—೧ ಬಾಟ್ಲಿಗೆ ೧೨ ಆಣೆ, ಪೋಸ್ಟೇಜ್ ೪ ಆಣೆ. ೩ ಬಾಟ್ಲಿಗೆ ಅಂಚೆವೆಚ್ಚ ಸೇರಿ ರೂ. ೨—೪ ಆಣೆ. ಎಲ್ಲಾ ಕೆಮಿಸ್ಟ್ ಷಾಪುಗಳಲ್ಲಿ ದೊರೆಯುವದು.

ನಮ್ಮ ವಿಳಾಸ:—ಎಫ್. ಡಬ್ಲಿಯು. ಆರ್ಣ,
ಸಿಮೆಟ್ರಿ ರೋಡ್, ವೇಪೇರಿ, ಮದರಾಸ್.

ಸತ್ಯವಾಗಿಯೂ ಅಗ್ಗದ ಅಂಗಡಿ.

121-4

ಅಗ್ಗದ ಬಿಕರಿ ಸಮಯ. ಕ್ರಯ ಮೂರರಲ್ಲಿ ಒಂದೇಪಾಲು. ಡಿಸೆಂಬರ್ ೨೦ ರ ವರೆಗೆ.

ಗಡಿಯಾರಗಳೆಲ್ಲಾ ಅಚ್ಚ ಹಸನಾದವು. ಚೆನ್ನದಂಥಾ ಸಮಯ. ಇದಕ್ಕಿಂತ ಅಗ್ಗವಾಗಿ ಮತ್ತೆ ಸಿಕ್ಕಲಾರವು. ನಾವಕಾಶಮಾಡಬೇಡಿ! ಕಾಲವಿಳಾರೀತು!

ನಂ ೧೦೦—೧೮ ಓ. ಎಫ್ ಸುಂದರವಾದ ಲೋಹಗಡಿಯಾರ, ಸೆಕೆಂಡ್ ಹ್ಯಾಂಡ್ ಸಹಿತ, ಸಿಲಿಂಡರ್ ಚಲನೆ, ೩೬ ಗಂಟೆ ಹೊತ್ತು ನಡಿಯುವುದು ಮೊದಲಿನ ಕ್ರಯ ರೂ. ೧೩—೮—೦, ಈಗಿನ ಕ್ರಯ ರೂ ೩—೮—೦ ಐದು ವರ್ಷ ಜಾಮೀನ್.

ನಂ ೧೦೧ ಎ.—ಕ್ರೊನೊಗ್ರಾಫ್ ವಾಚ್. ಸೆಕೆಂಡ್ ಹ್ಯಾಂಡ್ ಸಹಿತ ಮೊದಲಿನ ಕ್ರಯ ರೂ ೧೫, ಈಗ ರೂ. ೫. ಐದು ವರ್ಷ ಜಾಮೀನ್.

ನಂ ೧೦೨—೧೮ ಓ. ಎಫ್ ಸಿಲಿಂಡರ್ ಚಲನೆ, ೩೬ ಗಂಟೆ ನಡಿಯುವುದು. ಮೊದಲಿನ ಕ್ರಯ ರೂ ೧೧—೪—೦, ಈಗ ರೂ. ೩—೧೨—೦ ಐದು ವರ್ಷ ಜಾಮೀನ್.

ನಂ ೧೦೪—೧೮ ಓ ಎಫ್. ರೈಲ್ವೆ ರೆಗ್ಯುಲೇಟರ್ ಲೀವರ್ ವಾಚ್. ೩೬ ಗಂಟೆ ನಡಿಯುವುದು ಮೊದಲಿನ ಕ್ರಯ ರೂ. ೧೦—೧೪—೦; ಈಗ ರೂ ೩— ೦—೦. ಐದು ವರ್ಷ ಜಾಮೀನ್.

೧೦೫—ರಾಸ್ಕೋಪ್ ಲೀವರ್ ವಾಚ್ ಇದು ಬಹು ಶಾಶ್ವತವಾದದ್ದು. ಹತ್ತು ವರ್ಷ ಜಾಮೀನ್. ಮೊದಲು ರೂ. ೧೮, ಈಗ ರೂ ೫—೮—೦

೧೦೫—ಬೆಳ್ಳಿ ರಾಸ್ಕೋಪ್ ಲೀವರ್ ವಾಚ್. ರತ್ನಗಳುಳ್ಳದ್ದು. ೧೨ ವರ್ಷ ಜಾಮೀನ್ ಮೊದಲು ರೂ ೩೦; ಈಗ ರೂ ೧೧.

೧೦೬—ಬೆಳ್ಳಿ ಲೇಡಿ ಅಥವಾ ಕೈವಾಚ್. ಸಿಲಿಂಡರ್, ರತ್ನವುಳ್ಳದ್ದು. ಗಿಲ್ಟ್ ಚಲನೆ ೬ ವರ್ಷ ಜಾಮೀನ್ ಕ್ರಯ ರೂ. ೨೨.೮; ಈಗ ರೂ ೭—೮—೦.

೧೦೭—ಬೆಳ್ಳಿ ಓ. ಎಫ್. ಕೈ ಸಹಿತ. ಪಾಲಿಷ್ ಚಲನೆ. ರೂ. ೨೦; ಈಗ ರೂ ೭ ಆರು ವರ್ಷ ಜಾಮೀನ್.

೧೦೮—ಬೆಳ್ಳಿ ಓ. ಎಫ್. ಗಂಡಸರ ಲೀವರ್ ವಾಚ್. ರೂ ೩೦. ಈಗ ರೂ ೧೦ ಹತ್ತು ವರ್ಷ ಜಾಮೀನ್.

೧೦೮ ಎ.—ಅದೇ. ಹಂಟರ್, ರೂ. ೩೩; ಈಗ ರೂ. ೧೧;

೧೦೮ ಬಿ —ಅದೇ ಅರ್ಧ ಹಂಟರ್ ರೂ. ೩೬; ಈಗ ರೂ ೧೨.

೧೦೯—ಬೆಳ್ಳಿ ೮ ದಿನ ನಡಿಯುವುದು. ರೂ. ೪೫; ಈಗ ರೂ. ೧೮. ಮಾರಕ್ಕೊಮ್ಮೆ ಕೀಲಿ ಕೊಡುವುದು ಲೀವರ್ ಚಲನೆ. ಹತ್ತು ವರ್ಷ ಜಾಮೀನ್.

೧೦೯ ಎ —೨೬ ದಿನ ನಡಿಯುವ ಚೊಕ್ಕಬೆಳ್ಳಿ ಗಡಿಯಾರ. ರತ್ನಗಳುಳ್ಳದ್ದು. ಸೆಕೆಂಡ್ ಹ್ಯಾಂಡ್. ೧೫ ವರ್ಷ ಜಾಮೀನ್. ರೂ ೧೫೦ ಈಗ ರೂ. ೫೦.

೧೦೯ ಬಿ. ಚೊಕ್ಕಬೆಳ್ಳಿ ಕ್ಯಾಲೆಂಡರ್ ಲೀವರ್ ವಾಚ್. ದಿನ, ತಾರೀಖು, ತಿಂಗಳು, ಚಂದ್ರ, ಇವನ್ನು ತೋರಿಸುತ್ತೆ. ೧೨ ವರ್ಷ ಜಾಮೀನ್. ಕ್ರಯ ರೂ. ೪೨—೮—೦; ಈಗ ರೂ. ೧೩—೮—೦

೧೧೦—ಚೊಕ್ಕ ಭಂಗಾರ. ರತ್ನಗಳುಳ್ಳದ್ದು. ಕ್ರಯ ರೂ. ೩೨ ಈಗ ರೂ. ೨೪. ಹದಿನೈದು ವರ್ಷ ಜಾಮೀನ್.

೧೧೧—ಎಂಟು ದಿನಗಳ ಚಿನ್ನದ ಗಡಿಯಾರ. ತುಂಬಾ ರತ್ನಗಳು ೧೨ ವರ್ಷ ಜಾಮೀನ್. ಕ್ರಯ ರೂ. ೧೫೯; ಈಗ ರೂ. ೫೩.

ಒಟ್ಟಿಗೆ ತರಿಸುವವರಿಗೆ ಸ್ಪೆಷಲ್ ದರಗಳು.

೩ ಗಡಿಯಾರ ಒಂದೆಸಲ ತರಿಸುವವರಿಗೆ ಪ್ಯಾಕಿಂಗ್ ಪೋಸ್ಟೇಜ್ ಮಾಫಿ.

೬ " " ಒಂದು ಗಡಿಯಾರ ಇನಾಂ.

ಕ್ರಯದಲ್ಲಿ ಕಾಲುಭಾಗ ಅಡ್ವಾನ್ಸು ಬರಬೇಕು; ಉಳಿದದ್ದಕ್ಕೆ ವಿ. ಪಿ. ಪಿ. ಇಂದ ಕಳಿಸುತ್ತೇವೆ ಗಡಿಯಾರಗಳನ್ನು ಸುಂದರವಾದ ಮಕಮಲ್ ಪೆಟ್ಟಿಗೆಯಲ್ಲಿ ಸ್ಪ್ರಿಂಗ್, ಗ್ಲಾಸ್ ಸಹಿತ ಕಳಿಸುವೆವು ಇದಲ್ಲದೆ ಪ್ರತಿ ವಾಚಿಗೂ ಸೊಗಸಾದ ಒಂದೊಂದು ಸರಪಣಿಯನ್ನು ನಾವು ಇನಾಮಾಗಿ ಕಳಿಸುತ್ತೇವೆ ನಮ್ಮ ವಿಳಾಸ:—

ಎಂ. ಎ. ಘಟಾಲಾ ಮತ್ತು ಕಂಪನಿ,
ಚಿತ್ತೂರು, ಉತ್ತರ ಆರ್ಕಾಟು.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

26-42

೧. ಲೋಕೋಪಮುದುಪರ ಕಸ್ತೂರೀ ಮಾತ್ರೆ.—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ.



ಚಳಿಜ್ವರ, ಜ್ವರ, ಹೊಟ್ಟೆಶೂಲೆ, ಸಂದುಗಳ ನೋವು, ಮೈ ಕೈಕಾಲು ಕೊಡತ (ಭಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿಸಪ್ಪ, ಹಲ್ಲು ನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೇಟ್ಟರ ಖಂಡಿತವಾಗಿ ಗುಣಪಡಿಸುತ್ತದೆ.

ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ವಾಯುಲೆಗೂ ದಾರಿಕೊಡದೆ, ನೀರು ಹವಾಗಳ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಪಾರ್ಶ್ವ ಎಳವು, ಜ್ವರ, ನಚ್ಚುಜ್ವರ, ಕೃಕತ್ವಗಳನ್ನು ಗುಣಪಡಿಸುತ್ತದೆ.

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.

ಅನುಪಾನಪತ್ರ ಔಷಧದ ಸಂಗಡಲೇ ಇರುತ್ತದೆ.

೨೦ ಮಾತ್ರೆಯುಳ್ಳ ಡಪ್ಪಿಗೆ ೪ ಆಣೆ; ೫ ಡಪ್ಪಿಗೆ ೧ ಡಪ್ಪಿ ಹೆಚ್ಚು. ೧ ರಿಂದ ೧೨ ಡಪ್ಪಿ ವರೆಗೆ ಪೋಸ್ಟೇಜು ೪ ಆಣೆ.

ವಿಳಾಸ:—ಪಾಳ್ಯದ ವೆಂಕಟಾಚಲ ಪಂಡಿತ,
ಎಸ್. ಎಸ್. ಆರ್. ವೈದ್ಯಶಾಲಾ,
ಲಕ್ಷ್ಮೀವಿಲಾಸ ರೋಡ್, ಮೈಸೂರು

ದೀಪಾವಳಿಗೆಯ ಬಹುಮಾನ!

ಬಹುಮಾನದ ಮೇಲೆ ಬಹುಮಾನ !!ತ್ವರೆಮಾಡಿ !!!

128.2

ನಮ್ಮಲ್ಲಿ ದೊರೆಯುವ ಈ ಕೆಳಗೆ ಕಂಡ ಕನ್ನಡದ ನವೀನ ಗ್ರಂಥಗಳನ್ನು ಭಾಷಾಭಿಮಾನಿಗಳೆಲ್ಲರೂ ತರಿಸಿಕೊಂಡು ಓದಿ ಸಂತೋಷಪಡಬೇಕೆಂಬ ಉದ್ದೇಶದಿಂದಲೂ ಕನ್ನಡಿಗರಿಗೆ ಪ್ರೋತ್ಸಾಹವನ್ನುಂಟುಮಾಡಬೇಕೆಂತಲೂ ೧೯೦೮ ನೆಯ ಇಸವಿ ಫೆಬ್ರವರಿ ತಿಂಗಳ ವರೆಗೆ ಮಾತ್ರ ನಮ್ಮ ಪುಸ್ತಕಗಳಲ್ಲಿ ಒಂದು ರೂಪಾಯಿ ಬೆಲೆ ಬಾಳುವ ಪುಸ್ತಕಗಳನ್ನು ತರಿಸಿಕೊಳ್ಳುವವರಿಗೆ ಪ್ರತಿ ಒಂದು ರೂಪಾಯಿಗೂ ೩ ಆಣೆ ಕ್ರಯ ಬಾಳುವ 'ಸ್ತೋತ್ರಮಾಲಿಕೆ,' ೨ ಆಣೆ ಕ್ರಯ ಬಾಳುವ 'ಶೃಂಗಾರಶತಕ,' "ಲಾಲಾ ಲಜಪತ್ ರಾಯ್‌ರವರ ಭಾವಚಿತ್ರ," "ಬಿ. ಸಿ. ಪಾಲ್ ರವರ ಭಾವಚಿತ್ರ," ಶ್ರೀಮನ್ಮಹಾರಾಜರವರ ಮತ್ತು ಶ್ರೀಮದ್ಯುವರಾಜರವರ ಭಾವಚಿತ್ರಗಳಿಂದ ಕೂಡಿದ ೧೯೦೮ ನೇ ಸ್ವದೇಶೀ ಹಿಂದೂ ಕ್ಯಾಲೆಂಡರ್, 'ಸೀತಾಚರಿತ್ರೆಯ' ಪೂರ್ವ ಭಾಗ ಈ ಐದನ್ನೂ ಉಚಿತವಾಗಿ ಕೊಡುತ್ತೇವೆ. ಎರಡು ರೂಪಾಯಿ ಬೆಲೆ ಬಾಳುವ ಪುಸ್ತಕಗಳನ್ನು ತರಿಸಿಕೊಳ್ಳುವವರಿಗೆ ಮೇಲ್ಕಂಡ ಬಹುಮಾನಗಳಲ್ಲದೆ ೧೯೦೮ ನೆಯ ಇಸವಿಯ ಒಂದು ಡೈರಿಯನ್ನೂ ಉಚಿತವಾಗಿ ಕಳುಹಿಸುತ್ತೇವೆ. ಅಂಚೆ ವೆಚ್ಚ ಬೇರೆ.

"ನಿರುಪಮಾ"—ಇದು ಐದು ಅಂಕಗಳುಳ್ಳ ಹೊಸ ಕನ್ನಡದ ನವೀನ ನಾಟಕ. ಸಂತಾಪಕನೆಂಬ ದುಷ್ಟನು ಅನೇಕ ಘೋರ ಕೃತ್ಯಗಳನ್ನು ಮಾಡಿ ನಿರುಪಮೆಯನ್ನು ಅಪಹರಿಸಿಕೊಂಡು ಬಂದುದೂ, ಕಮಲೆಯ ಸತೀತ್ವವೂ, ವೇಶ್ಯೆಯರ ಮನೆಯಲ್ಲಿ ನಡೆಯಬಹುದಾದ ಕೃತ್ಯಾಕೃತ್ಯಗಳೂ, ಇವೇ ಮೊದಲಾದ ಅನೇಕ ವಿಷಯಗಳು ಅಡಕವಾಗಿವೆ. ಆಡುವುದಕ್ಕೂ ಓದುವುದಕ್ಕೂ ಅನುಕೂಲಿಸುವಂತೆ ಹೊಸಗನ್ನಡದಲ್ಲಿರುವ ಈ ಗ್ರಂಥವನ್ನು ಓದುವುದಕ್ಕೆ ಪ್ರಾರಂಭಿಸಿದರೆ ಕೊನೆಮುಟ್ಟುವ ವರೆಗೂ ಬಿಡುವುದಕ್ಕೆ ಮನಸ್ಸಾಗುವುದಿಲ್ಲ. ೧೨ ಆಣೆ.

"ಕೃಷ್ಣವಿಜಯ"—ಇದರಲ್ಲಿ ರುಕ್ಮಿಣೀದೇವಿಯ ವಿವಾಹಮಹೋತ್ಸವವೂ, ಶಿಶುಪಾಲಜರಾಸಂಧಾದಿಗಳೊಡನೆ ಕೃಷ್ಣನು ಯುದ್ಧಮಾಡಿ ಗೆದ್ದುದೂ, ಯುದ್ಧರಂಗ ವರ್ಣನೆಯೂ ಲಲಿತವಾದ ಹಳಗನ್ನಡದಲ್ಲಿ ಬರೆಯಲ್ಪಟ್ಟಿದೆ ಯುದ್ಧವನ್ನು ಪ್ರತ್ಯಕ್ಷವಾಗಿ ನೋಡಬೇಕೆಂದು ಅಪೇಕ್ಷಿಸುವವರೆಲ್ಲರೂ ಇದನ್ನೋದಿ ಕೃತಕೃತ್ಯರಾಗಬಹುದು. ಇದರ ಬೆಲೆ ೬ ಆಣೆ.

"ಪ್ರಿಯದರ್ಶಿಕೆ"—ಪ್ರಸಿದ್ಧ ಕವಿಯಾದ ಶ್ರೀಹರ್ಷನ ಗ್ರಂಥದ ಭಾಷಾಂತರ ನಾಲ್ಕು ಅಂಕಗಳುಳ್ಳ ಈ ನಾಟಕದಲ್ಲಿ ಮತ್ತೊಂದು ಗರ್ಭನಾಟಕವಿರುವುದರಿಂದ ಕಥಾಸಂವಿಧಾನವು ಪಾಠಕಮಹಾಶಯರಿಗೆ ಕೌತುಕಾಸ್ಪದವಾಗದಿರಲಾರದು ಇದರ ಬೆಲೆ ೬ ಆಣೆ

"ಸೀತಾಚರಿತ್ರೆ"—ರಾಮಾಯಣದ ಕಥೆಯೆಲ್ಲಾ ಹೆಂಗಸರಿಗೂ ಮಕ್ಕಳಿಗೂ ಸುಲಭವಾಗಿ ಅರ್ಥವಾಗುವಂತೆ ಶ್ರೀಮನ್ಮಹಾರಾಜರ ರೀಜಂಟರವರ ಅಪ್ಪಣೆಯನುಸಾರ ಷಟ್ಪದೀ ರೂಪವಾಗಿ ಬರೆಯಲ್ಪಟ್ಟಿದೆ. ಹದಿನಾರು ಅಧ್ಯಾಯಗಳುಳ್ಳ ಈ ಪುಸ್ತಕದ ಬೆಲೆ ೮ ಆಣೆ.

"ಉತ್ತರ ಸೀತಾಚರಿತ್ರೆ"—ಇದರಲ್ಲಿ ರಾಮಾಯಣದ ಉತ್ತರಕಾಂಡವೆಲ್ಲಾ ಸೀತಾಚರಿತ್ರೆಯಂತೆಯೇ ಬರೆಯಲ್ಪಟ್ಟಿದೆ ೨ ಆಣೆ.

"ಸತ್ಯವತೀ ಚರಿತ್ರೆ"—ಇದರಲ್ಲಿ ಅತ್ತೆಸೊಸೆಯರ ಜಗಳ, ಅತ್ತಿಗೆ ನಾದಿನಿಯರ ಕಲಹ, ಅವಿದ್ಯಾವತಿಯರ ಮತ್ತು ವಿದ್ಯಾವತಿಯರ ತಾರತಮ್ಯ, ಇವೇ ಮೊದಲಾದ ಸಾಂಸಾರಿಕ ಸಂಭಾವ್ಯ ವಿಷಯಗಳು ಕಥಾರೂಪವಾಗಿ ಹೇಳಲ್ಪಟ್ಟಿವೆ. ಸಕಲರೂ ತರಿಸಿಕೊಂಡು ಓದಬೇಕಾದದ್ದು. ಕೆಲವು ಪ್ರತಿಗಳು ಉಳಿದಿವೆ ಇದರ ಬೆಲೆ ೪ ಆಣೆ.

ನಿಮ್ಮ ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಿರಿ. ನಮ್ಮ ವಿಳಾಸ—
ಅರಮನೆಯ ವಿದ್ವಾಂಸ ನಂಜನಗೂಡು ಶ್ರೀಕಂಠಶಾಸ್ತ್ರಿ,
ಕೃಷ್ಣರಾಜ ಮೊಹಲ್ಲಾ, ಮೈಸೂರು

"ನಂಬಲು ಧೈರ್ಯಸಾಲದ ಪೆ-ರೂ-ನಾ ಸೇವಿಸಿದೆನು"

ಎಂದು ಆಲ್ಬನಿಯ ಮಿ ನ್ಯೂಹಾಫ್ ಬರೆಯುತ್ತಾನೆ. 38 B

ಗಂಡಸರಲ್ಲಿ ಕೆಳಹೊಟ್ಟೆಯ ರೋಗಗಳು

ಕೆಳಹೊಟ್ಟೆಯ ಮತ್ತು ಬಲಹೀನತೆಗಳ ಸಂಬಂಧವಾದ ನಾನಾ ತರದ ರೋಗಗಳನ್ನು ಅನೇಕಾನೇಕ ಜನರು ಬಹು ಕಷ್ಟದಿಂದ ಅನುಭವಿಸುತ್ತಾ ಜೀವಮಾನವನ್ನು ಕಳೆಯುತ್ತಿದಾರೆ

ಮೂತ್ರಕೋಶದ ರೋಗಗಳ ಜತೆಗೆ ಸೇರಿಕೊಳ್ಳುವ ರೋಗವು ಮಾತ್ರವಲ್ಲ, ದೇಹವು ಬಲಹೀನವಾಗುವದು, ಮುಖವು ಬಾಡಿಹೋಗುವದು, ಎಲ್ಲಾ ವಿಷಯಗಳಲ್ಲಿ ಬೇಸರವಾಗುವದು.

ಈ ತರದ ರೋಗಿಗಳ ಗುಂಪಿಗೆ ಸೇರಿದವರೆಲ್ಲರೂ ಒಟ್ಟೊಬ್ಬರಾಗಿ ಪೆರೂನಾ ಸೇವನೆಯಿಂದ ಆ ರೋಗಗಳೆಲ್ಲಾ ನಿವಾರಣೆಯಾಗುವವೆಂಬದಾಗಿ ಹೊಸ ಸಂತೋಷದಿಂದ ಕಂಡುಕೊಳ್ಳುತ್ತಾ ಬಂದಿದಾರೆ

CHARLES B. NEWHOF

H L. EMORY

ಒಬ್ಬನು ಇನ್ನೊಬ್ಬನಿಗೆ ತಿಳಿಸುವದ ಈ ರೀತಿಯಾಗಿ ದೇಶದ ಮೇರೆ ಲ್ಲಾ ಅದರ ಕೀರ್ತಿಯು ಹಬ್ಬಿ ಹರಡುತ್ತದೆ. ಪೆರೂನಾದಿಂದ ಮೂತ್ರಕೋಶದ ರೋಗಗಳು ಖಂಡಿತವಾಗಿ ಪರಿಹಾರವಾಗುವವೆಂದು ಎಲ್ಲರಿಗೂ ಪ್ರತ್ಯಕ್ಷವಾಗಿ ತಿಳಿದಿರುತ್ತದೆ

ಅನ್ನಕೋಶ, ಕೆಳಹೊಟ್ಟೆಯ ನಾನಾ ರೋಗಗಳ ಕಾಯಿಲೆಗಳೆಲ್ಲಾ ಈ ಔಷಧದಿಂದ ಗುಣವಾಗಿವೆ ಎಂದು ಅನೇಕರಿಂದ ಸಮಾಚಾರಗಳು ಬಂದಿವೆ

ಪೆರೂನಾದಿಂದ ಎಷ್ಟು ಮಂದಿಗೆ ರೋಗನಿವಾರಣೆಯಾಗಿದೆ ಎಂಬದನ್ನು ನಿದರ್ಶನಪಡಿಸುವದಕ್ಕೆ ಎರಡು ಪ್ರಾಮಾಣ್ಯವಾದ ಸರ್ಟಿಫಿಕೇಟುಗಳನ್ನು ಈ ಕೆಳಗೆ ಪ್ರಕಟಿಸಿರುತ್ತೇವೆ

ಮೂತ್ರಕೋಶದ ರೋಗವು

ಚೆ ಬಿ ನ್ಯೂಹಾಫ್ ೧೦ ಡಿಲಾವೇರ್ ಬೀದಿ ಆಲ್ಬನಿ ಎನ್ ವೈ ಮಾಂಟಿಫಿಯೋರೀ ಕ್ಲಬ್ ಪ್ರೆಸಿಡೆಂಟ್ ಇವರು ಬರೆಯುವದು:—

"ನನಗೆ ಐದು ಸಂವತ್ಸರ ಕಾಲ ನನ್ನ ಮೂತ್ರಕೋಶದಲ್ಲಿ ಆಗಾಗ್ಗೆ ಬರುವ ರೋಗ ಇತ್ತು. ಬಂದಿತ್ತು ಡಾಕ್ಟರುಗಳನ್ನು ಕೇಳಿದ್ದರಲ್ಲಿ ಸ್ವಲ್ಪದಿಂದ ನನ್ನ ಮೂತ್ರಕೋಶದ ನನಗೆ ತೊಂದರೆ ಕಠಿನವಾದದ್ದೆಂದೂ, ವಯಸ್ಸು ಬಂದುದರಿಂದ ಅದು ದೀರ್ಘವಾಗಿದೆ ಎಂತಲೂ ಹೇಳಿದರು. ನನಗೆ ಪ್ರಯೋಜನವಾದೀತೆಂಬ ಭರವಸ ನನ್ನಲ್ಲಿ ಉಳಿಯದೆ ಹೋದರೂ ನಾನು ಪೆರೂನಾವನ್ನು ಸೇವಿಸುವದಕ್ಕೆ ಪ್ರಾರಂಭಿಸಿದೆನು. ಆದರೆ ನನ್ನ ಸಂತೋಷ ನನ್ನ ಎಷ್ಟೆಂದು ಹೇಳಲಿ. ಕೂಡಲೇ ನನಗೆ ಔಷಧ ಅಡವೆಯಾಗಿ ಇತ್ತು. ಮೂತ್ರಕೋಶದಲ್ಲಿ ಉರಿಯು ಹೋದು ಕ್ರಮೇಣ ಇಳಿಯುತ್ತಾ ಬಂತು. ತರುವಾಯ ಅದಕ್ಕೆ ಸಂಬಂಧಪಟ್ಟ ಬಾಧೆಯೆಲ್ಲಾ ನಿವಾರಣೆಯಾಯಿತು. ಈಗ ಹಲವು ತಿಂಗಳಿಂದಲೂ ನಾನು ಬಹಳ ಆರೋಗ್ಯದಿಂದಲೂ ಸುಖವಾಗಿಯೂ ಇದ್ದೇನೆ. ಬಹಳ ಚನ್ನಾಗಿ ಭೋಜನ ಮಾಡುತ್ತೇನೆ. ಸುಖವಾಗಿ ನಿದ್ರೆಮಾಡುತ್ತೇನೆ. ಅಂತು ಇಪ್ಪತ್ತು ವರುಷಗಳ ಹಿಂದೆ ನನಗಿದ್ದಷ್ಟು ಶರೀರಸೌಖ್ಯವೂ ಬಲವೂ ಈಗ ನನಗೆ ಉಂಟಾಗಿರುತ್ತದೆ. ಇದಕ್ಕೆಲ್ಲಾ ಪೆರೂನಾವೇ ಕಾರಣವಾದ್ದರಿಂದ ಅದನ್ನು ಬಹಳವಾಗಿ ಹೊಗಳುವೆನು."

ಹೊಟ್ಟೆ ಕೆಳಹೊಟ್ಟೆಯ ರೋಗವು

ಪಿ ಎಚ್ ಎಲ್ ಇಮ್ರಾಯ, ವೈಸ್ ಛಾನ್ಸೆಲರ್ ಮತ್ತು ಮಾಸ್ಟರ್ ಆಫ್ ಆಂ ಸ್, ಕೆ. ಪಿ. ಆಫ್ ಎಸಾಹಾ, ನೆಬ್, ಇವರು ಉತ್ತರ ೧೬ನೇ ಬೀದಿ ೨೦೫ನೇ ಮನೆಯಿಂದ ಪೆರೂನಾವು ಬಲಕಾರಿಯಾದ ಔಷಧವೆಂದು ಅದನ್ನು ಹೊಗಳಿ ಬರೆಯುವದೇನೆಂದರೆ—

"ಪೆರೂನಾ ಅಸಾಧಾರಣವಾದ ಆರೋಗ್ಯತೆಯನ್ನು ಕೊಡುವ ಶಕ್ತಿವರ್ಧಕ ಸೇವನಾ ಔಷಧವೆಂದು ನಾನು ಬಹು ಸಂತೋಷದಿಂದ ಶಿಫಾರಸು ಮಾಡುತ್ತೇನೆ. ನಾನು ಬೆರೆಯುವ ಬೇರೆ ಬೇರೆ ಸಂಗಡದ ಅನೇಕಾನೇಕ ಜನರಿಗೆ ಇದು ಅವರ ಶರೀರದ ನಾನಾ ಅಸೌಖ್ಯಗಳನ್ನೂ ಜಾಡ್ಯಗಳನ್ನೂ ಮೂತ್ರಕೋಶದ ರೋಗಾದಿಗಳನ್ನೂ ವಾಸಿಮಾಡಿರುತ್ತದೆ"

"ಪೆರೂನಾವು ಶರೀರದ ಅಂಗಾಂಗಗಳ ಶಕ್ತಿಯನ್ನೂ ವೃದ್ಧಿಪಡಿಸುತ್ತದೆ, ಆಹಾರವನ್ನು ಜೀರ್ಣಮಾಡಿಸುತ್ತದೆ, ಸುನಿದ್ರೆಕೊಡುತ್ತದೆ, ಆದ್ದರಿಂದ ಎಲ್ಲಾ ತರದ ರೋಗಿಗಳಿಗೂ ಪೆರೂನಾವನ್ನು ಸೇವಿಸುವಂತೆ ಪ್ರೋತ್ಸಾಹಪಡಿಸುವದು."

ಮಿ ಜೆ ಎಪ್ ಎಲ್ ಜೇಕಬ್ ಚೆಸ್ಲೀ ಕ್ಲಾರೆಂಡ, ಪಿ ಓ ಜಿ ಟಿ ಮತ್ತು ಚೆಸ್ಲೀ ಜೆ ಪಿ ಆರ್ ... ಒಕ್ಲೆಂಡ್, ಕಾಲ್ ಇವರು ಬರೆಯುವದು

"ನಾನು ಪೂರ್ವದಲ್ಲಿ ಯ ವ್ಯಕ್ತಿ ಕೋಗಿದ್ದವನು ನನಗೆ ಕೆಳಹೊಟ್ಟೆಯಲ್ಲೂ ಮೂತ್ರಕೋಶದಲ್ಲೂ ಕ ... ಬಾಧೆ ಪ್ರಾರಂಭವಾಯಿತು. ನೂರಾರು ರೂಪಾಯಿ ಖರ್ಚುಮಾಡಿಕೊಂಡು ಅನೇಕ ಡಾಕ್ಟರುಗಳ ಅಭಿಪ್ರಾಯವನ್ನು ತೆಗೆದುಕೊಂಡಾಗ್ಯೂ ನನಗೆ ಸ್ವಲ್ಪವೂ ಪ್ರಯೋಜನವಾಗಲಿಲ್ಲ"

"ಕಡೆಗೆ ಪೆರೂನಾದಿಂದ ಗುಣಹೊಂದಿದ ನನ್ನ ಸ್ನೇಹಿತರಲ್ಲಿ ಕೆಲವರು ಅದನ್ನು ತೆಗೆದುಕೊಂಡು ನೋಡೆಂದು ನನಗೆ ತಿಳಿಸಿದರು. ಕೂಡಲೇ ನಾನು ಒಂದು ಬಾಟ್ಲಿಯನ್ನು ಕೊಂಡು ಉಪಯೋಗಿಸಿದಾಗ ಅದರಿಂದ ನನಗೆ ವಾಸಿಯಾಗುತ್ತಾ ಬಂದದ್ದರಿಂದ ಬಿಡದೆ ಅದನ್ನೇ ಸುಮಾರು ನಾಲ್ಕು ತಿಂಗಳ ತನಕ ಸೇವಿಸುತ್ತಾ ಬಂದೆನು. ನಾನು ಸೇವಿಸಿದ ಎಲ್ಲಾ ಔಷಧಗಳಿಗಿಂತಲೂ ಪೆರೂನಾ ಸರ್ವೋತ್ಕೃಷ್ಟವಾದದ್ದೆಂದು ಸಿದ್ಧಾಂತವಾಯಿತು. ನನ್ನ ಬಾಧೆಯು ನಿವಾರಣೆಯಾಯಿತು. ನನಗೆ ಸಂಪೂರ್ಣವಾಗಿ ರೋಗ ವಾಸಿಯಾಗಿದೆ ಎಂದು ನಂಬುತ್ತೇನೆ. ನನಗೆ ಸೌಖ್ಯವಾಗಿದೆ. ಪೆರೂನಾ ಬಾಟ್ಲಿಯು ಕ್ರಯ ಹತ್ತರಷ್ಟಾದರೂ ಅವಶ್ಯಕವಾಗ ಅದನ್ನು ಕೊಳ್ಳದೆ ಇರಲಾರೆನು. ಮಿ ರಾಬರ್ಟ್ ಇ ಹೂವ್, ಟ್ರೆಜರರ್ ಸ್ಟೇಟ್ಸ್ ಆಫ್ ಇಂಡಸ್ಟ್ರಿಯಲ್ ಫ್ರೀಡಂ, ಮತ್ತು ಪ್ರಸಿದ್ಧ ಗ್ರಂಥಕರ್ತನೂ ಉಪನ್ಯಾಸಕನೂ ಇಲ್, ಚಿಕಾಗೋ, ೧೧ ದಕ್ಷಿಣ ಸಿಕ್ಲೊಲಸ್ ಬೀದಿ ಇವರು ಬರೆಯುವದು —

"ಈಗ್ಗೆ ನಾಲ್ಕು ವರುಷಗಳ ಹಿಂದಿನ ತನಕ ನಾನು ಸೌಖ್ಯವಾಗಿದ್ದೆನು. ಆಗ ನನ್ನ ಬೆನ್ನಿನಲ್ಲಿ ಕೆಟ್ಟ ನೋವು ಪ್ರಾರಂಭವಾಯಿತು. ಅದು ದಿನೇ ದಿನೇ ಹೆಚ್ಚುತ್ತಲೇ ಬಂತು. ನೋವು ತಡೆಯಲಾರದೆ ಕ್ರಮೇಣ ನನ್ನ ಶಕ್ತಿಯು ಕುಂದಿಹೋಯಿತು. ನನ್ನ ಬಲಬಾಧೆಯು ಬಹಳ ತೀರ ಗಿತು. ಮತ್ತು ಬಲಹೀನವಾಗುವದು ಅಕಸ್ಮಾತ್ ಬಿದ್ದಿತು. ಇದರಿಂದ ನನ್ನ ಮೂತ್ರಕೋಶವು ಕೆಟ್ಟಿದೆ ಎಂದು ನಾನು ತಿಳಿದುಕೊಂಡೆನು."

"ಪೆರೂನಾ ವಿಷಯವನ್ನು ಓದಿದಾಗ ಅದನ್ನು ಸೇವಿಸಬೇಕೆಂದು ಗೊತ್ತುಮಾಡಿಕೊಂಡೆನು. ಹತ್ತು ದಿನ ಅದನ್ನು ಸೇವಿಸುವದರೊಳಗಾಗಿ ನನ್ನ ಬಾಧೆಯು ಕಡಿಮೆಯಾಯಿತು ಎಂದು ನನಗೆ ತೋರಿತು. ನೋವು ಕ್ರಮೇಣ ಇಳಿಯುತ್ತಾ ಬಂತು. ಆದರಿಂದ ನನಗೆ ಎಷ್ಟೋ ಹರ್ಷವುಂಟಾಯಿತೆಂದು ನಿಶ್ಚಯವಾಗಿ ಹೇಳುತ್ತೇನೆ. ಮೂರು ತಿಂಗಳೊಳಗಾಗಿ ನಾನು ಯಥಾಪ್ರಕಾರ ಆರೋಗ್ಯವನ್ನು ಸಂಪಾದಿಸಿಕೊಂಡೆನು. ನಾಲಿಗೆಯ ಅರುಚಿಯು ಪರಿಹಾರವಾಯಿತು. ನರಗಳ ಬಲಹೀನತೆಯೂ ಅದರಿಂದುಂಟಾಗುವ ಜುಗುಪ್ಸೆಯೂ ಸಿಟ್ಟೂ ಎಲ್ಲಾ ಹೋಗಿದವು. ಈಗ ಎರಡು ವರುಷಗಳಿಂದಲೂ ನಾನ ಸುಖವಾಗಿ ಆರೋಗ್ಯದಿಂದಿದ್ದೇನೆ. ನಿಮ್ಮ ಪೆರೂನಾವನ್ನು ನಾನು ಬಹಳವಾಗಿ ವಂದಿಸುವೆನು. ಅದು ಮನುಷ್ಯನಿಗೆ ಪರಮಶ್ರೇಷ್ಠವಾದ ಸಂಜೀವನವೆಂದು ನಾನು ನಂಬುತ್ತೇನೆ"

ವಿಳಾಸ.—ಈ ಔಷಧ ಸಿಕ್ಕುವ ಸ್ಥಳಗಳು:—

(೧) ಹಿಗಿನ್‍ಬಾಥಮ್ ಅಂಡ್ ಸನ್ಸ್, ಬೆಂಗಳೂರು, ಅಥವಾ,

(೨) ಇಂಗ್ಲಿಷ್ ಡ್ರಗ್ ಕಂಪನಿ, ೩೪೫ ಮಿಂಟ್ ಬೀದಿ, ಮದರಾಸ್.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

15—11—1907 ರಿಂದ 22—11—1907 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದ	ಪ್ಲೇಗ್ ಸತ್ತದ್ದ	ಕಾಲರಾ ತಗಲಿದ್ದ	ಕಾಲರಾ ಸತ್ತದ್ದ
ಬೆಂಗಳೂರು ಪಟ್ಟಣ	22	21	0	0
ಮೈಸೂರು ,,	56	52	0	0
ಬೆಂಗಳೂರು ಡಿಸ್ಟ್ರಿಕ್ಟು	141	110	0	0
ಮೈಸೂರು ,,	68	41	0	0
ಕೋಲಾರ್ ,,	61	49	0	0
ಕೋಲಾರ್ ಚಿನ್ನದ ಗಣಿಗಳು	59	38	0	0
ತುಂಕೂರು ಡಿಸ್ಟ್ರಿಕ್ಟು	15	13	0	0
ಹಾಸನ ,,	15	9	0	0
ಚಿತ್ರದುರ್ಗ ,,	10	9	0	0
ಕಡೂರ್ ,,	7	8	0	0
ಶಿವಮೊಗ್ಗ	61	52	0	0
ಜುಮ್ಲಾ	510	405	0	0

ಶಾಲಿವಾಹನ ಶಕ ವರುಷಂಗಳು ೧೮೨೯ ನೇ ಪ್ಲವಂಗನಾಮ ಸಂವತ್ಸರದ ಕಾರ್ತೀಕ ಬಹುಳ ಅಮಾವಾಸ್ಯ ಗುರುವಾರದಿಂದ ಮಾರ್ಗಶಿರ ಶುದ್ಧ ಸಪ್ತಮಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೭ನೇ ಇಸವಿ ಡಿಸೆಂಬರ್

ತಾ	ವಾರ		ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಶುಭ ಮುಹೂರ್ತ
5	ಗುರು	T	ಅಮಾ	24 14	ಅ	12 12	[illegible]
6	ಶುಕ್ರ	*	ಪಾಡ್ಯ	19 26	ಜ	9 20	[illegible]
7	ಶನಿ	‡	ಬಿದಿಗೆ	14 4	ಮೂ	6 2	[illegible]
8	ರವಿ		ತದಿಗೆ	8 30	ಪೂಷಾ	1 16	[illegible]
9	ಸೋಮ	,,	ಚೌತಿ	[illegible]	[illegible]	[illegible]	[illegible]
10	ಕುಜ		ಷಷ್ಠಿ	51 9	ಧ	49 38	[illegible]
11	ಬುಧ	,	ಸಪ್ತಮಿ	45 50	ಶ	46-2	26

T ಸರ್ವತ್ರ ಅಮಾವಾಸ್ಯೆ * ತಿಥಿದ್ವಯ, ಚಂದ್ರೋದಯ ‡ ಚೌಕಾಜ್ ಚಂ ೧, ಅಮೃತಸಿದ್ಧಿಯೋಗ, ಕೋಟೀಶ್ವರ ಪಂಚಮಿ ಉತ್ಪಾತಯೋಗ ಚಂಪಾಷಷ್ಠಿ, ಸುಬ್ರಹ್ಮಣ್ಯನಲ್ಲಿ ರಥೋತ್ಸವ, ನಂದಸಪ್ತಮಿ

ಪೇಟೇ ಧಾರಣೆ.

ದಿನಸಿ		ಮೈಸೂರು	ಬೆಂಗಳೂರು
ಕಡ್ಡೀ ಅಕ್ಕಿ ಪಲ್ಲಾ ೧ಕ್ಕೆ	ರೂ	೧೪-೦ ೦	[illegible]
ಕಂಬುತಿ ಅಕ್ಕಿ ಅವಲ್		೧೪ ೦ ೧	[illegible]
,, ...		೧೨ ೮ ೦	[illegible]
ಜವಾರಿ ಅಕ್ಕಿ		೧೨ ೦	[illegible]
ಸಣ್ಣಕ್ಕಿ ಅವಲ್		೧೩ ೮ ೦	[illegible]
,, ಮಧ್ಯಮ		೧೫ ೦ ೦	[illegible]
ತೊಗರೀ ಬೇಳೆ ಪಲ್ಲಾ ೧ಕ್ಕೆ		೧೫ ೮-೦	[illegible]
,, ಮಧ್ಯಮ		೧೪ ೦ ೦	[illegible]
ರಾಗಿ ಪಲ್ಲಾ ೧ಕ್ಕೆ		[illegible]	[illegible]
ಸಾಮ್ರಾಗಿ		೩ ೦ ೦	[illegible]
ಜೋಳ		೩ ೦ ೦	[illegible]
ಹುರುಳಿ ಪಲ್ಲಾ ೧ಕ್ಕೆ		೯ ೮ ೦	[illegible]
ಬಿಳೀ ಅವರೆ		೮-೧೪ ೦	[illegible]
ಹೆಸರು		೧೧ ೧ ೦	[illegible]
ಉದ್ದು		೧೩ ೦ ೦	[illegible]
ಕಡಲೆ		೧೩-೮ ೦	[illegible]
ಎಳ್ಳು ಸೇರು ೧ಕ್ಕೆ		೨೩ ೮ ೦	[illegible]
ಹುರುಳಿ		೫ ೮ ೦	[illegible]
ಹರಳು ೧ ಸೇರಿಗೆ		೧೨ ೦ ೦	[illegible]
ಸೀಗೇಕಾಯಿ ಮಣ ೧ಕ್ಕೆ		೨ ೮ ೦	[illegible]
ಮೆಣಸಿನಕಾಯಿ		೨ ೪ ೦	[illegible]
ಮಧ್ಯಮ		೨-೧-೦	[illegible]
ಬೆಲ್ಲ ಜೇಷ್ಟ ಅಚ್ಚು		೫ ೬ ೦	[illegible]
ಒಳ್ಳೆಣ್ಣೆ ಮಣ ೧ಕ್ಕೆ		೬ ೦ ೦	[illegible]
ಹರಳೆಣ್ಣೆ		೫ ೦ ೦	[illegible]
ಕೊತ್ತಂಬರಿ ಪಲ್ಲಾ ೧ಕ್ಕೆ		೫-೦ ೦	[illegible]
ಉಪ್ಪು		೫-೦-೦	[illegible]
ಹುಣಸೇ ಹಣ್ಣು		೨ ೦-೧	[illegible]
,, ಹಳೇದು		೧-೮	[illegible]
ತುಪ್ಪ ಮಣ ೧ಕ್ಕೆ		೧೬-೦ ೦	[illegible]
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ		೭ ೧೫ ೦	[illegible]
ತೆಂಗಿನಕಾಯಿ೧೦೦ಕ್ಕೆ		೬-೮ ೦	[illegible]
ಅಡಿಕೇಕಾಯಿ ಮಣ ೧ಕ್ಕೆ		೧ ೦ ೦	[illegible]
ಅಂಬೊಡೆದ ಕಾಯಿ ಮಣ ೧ಕ್ಕೆ		೦ ೧೨-೦	[illegible]
ಚಿನ್ನ (ಪೌನ್) ಕೆಂಪು		೧೫-೬-೦	[illegible]
,, ,, ಪಸಿಮ		೧೫-೧೧-೦	[illegible]
,, ,, ಗಟ್ಟಿ ತೊಲ ೧ಕ್ಕೆ		೨೩-೧೨-೦	[illegible]
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ		೩೫-೦ ೦	[illegible]

Printed and Published by the Rev E W THOMPSON, M A, Proprietor and Manager, Wesleyan Mission Press, Mysore 5/12/1907.

REGISTERED M 20

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

೩೧ ದುಡ್ಡು. ಕ್ರಯ ೧ ದುಡ್ಡು.

ಪುಸ್ತಕ ೨೧ ಮೈಸೂರು—ಸನ್ ೧೯೦೭ ನೇ ಇಸವಿ ಡಿಸೆಂಬರ್ ತಾರೀಖು ೧೨ ನೇ ಗುರುವಾರ. ಸಂಚಿಕೆ ೨೮

ಕಾರ್ಡು ಸೈಜು ೪|×೩|

ಫೋಟೋ ತೆಗೆಯುವ

ಫೋ ಟೋ ಕ್ಯಾ ಮೆ ರಾ.

81 17

ಬೆಲೆ ಪಕ್ಕಾ ಮೂರು ರೂಪಾಯಿ

ಇದರಿಂದ ಬೇಕಾದ ಮನುಷ್ಯನ ಫೋಟೋ ಅವನಿಗೆ ತಿಳಿದಂತೆ ತೆಗೆಯಲಿಕ್ಕೆ ಬರುತ್ತದೆ ವೇಗದಿಂದ ಓಡುವ ... ಯು ಮತ್ತು ಹಾರುವ ಪಕ್ಷಿಯ ಫೋಟೋ ಸಹ ತೆಗೆ ... ಇದು ಇದರಲ್ಲಿ ಕಲಿಯತಕ್ಕದ್ದೇನೂ ಇಲ್ಲ ... ಸುವಾದ ಮಾಹಿತಿಯನ್ನು ಕೊಳ್ಳುವವರಿಗೆ ನಾವು ... ಮಾಡಿಕೊಡುತ್ತೇವೆ ಎಷ್ಟೋ ಕಡೆಗೆ ಇದಕ್ಕೆ ೧೦ ... ರೂ ಬೆಲೆ ಬೀಳುತ್ತದೆ ಆದರೆ ಇವರ ... ತು ೩ ರೂಪಾಯಿ ಮಾತ್ರ ಇರುವದು ಟಪ್ಪಾಲ ... ಇದು ಸಿಕ್ಕತಕ್ಕ ವಿಳಾಸ — ... ಮಹಾಜನ, ಠಾಕೂರದ್ವಾರ ... ಪೋಸ್ಟ್ ಕಾಲಬಾದೇವಿ, ಮುಂಬಯಿ

ಜ್ವ ರ ಹ ರಿ 1186

ಇದು ಸಾಧಾರಣ ಜ್ವರ, ... ಜ್ವರ ... ಪಿತ್ತಜ್ವರ, ... ಜ್ವರ ... ಎಂಬ ... ವಿಧದ ... ಗಳನ್ನು ಬಹಳ ... ಮಾಡುವದು.

... ಇವರ ... ಕೆಲವು ದಿವಸಗಳ ಹಿಂದೆ ... ಸ್ವಲ್ಪ ಕಾಲದಲ್ಲೇ ... ಔಷಧದಿಂದ ಅನೇಕ ... ಜ್ವರ ಪೀಡಿತರು ... ಹೊಂದಿರುವರು. ... ಉಪಕಾರವಾಗಿದೆ—ಎಂದು ಬರೆ ...

ಕ್ರಯ — ... ರೂ, ... ಸೀಸೆ ತರಿಸಿಕೊಂಡರೆ ... ಬಿಡಲಾಗುವದು

♦♦♦♦♦♦♦♦

ಓ ಮಂ ಕ ರ್ಪೂ ರ

Omum Carpoor

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆ ... ವದು, ವಾಂತಿಭೇದಿ, ನಾನಾತರದ ಹೊಟ್ಟೆ ನೋವುಗಳು—ಮುಂತಾ ... ಕ್ಷಣದಲ್ಲಿ ... ಗುಣಕೊಡು ... ಇದು ... ಬಳಸಲ್ಪಟ್ಟು ... ಔಷಧವು ... ಸೀಸೆಗಳಲ್ಲಿ ... ಕೊಡುವದು

... ಅಸಿಸ್ಟೆಂಟ್ ಸರ್ಜನ ... ಮ್ಯುನಿಸಿಪಲ್ ... ಅನೇಕ ... ಕಾಲರಾ, ಅಜೀರ್ಣ ... ರೋಗಿಗಳಿಗೆ ಕೊಡುತ್ತೇವೆ ... ಇದು ಬಹು ಒಳ್ಳೇ ಔಷಧ ...

ಈ ಎರಡು ಔಷಧಗಳೂ ಊರುಗಳಲ್ಲಿರುವ ವೈದ್ಯಶಾಲೆಗ ... ದೊಡ್ಡ ಪಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯ ... ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ — ... ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ, ಸೆಕೆಂಡ್ ಬೀಚ್ ರೋಡ್, ಮದರಾಸು

WILLIAM & CO., BOMBAY.

ಅಪೂರ್ವಲಾಭ— ಸರ್ವಾಂಗರಕ್ಷ— ಲೋಕಪ್ರಖ್ಯಾತ—

ಅ ಮೃ ತಾಂ ಜ ನ್

97 42

ತರಿಸಿಕೊಳ್ಳಿರಿ — ತ್ವರೆಮಾಡಿರಿ — ಅಮೃತಾಂಜನ ಸರ್ವಲೋಕರಂಜನ, ಸರ್ವ ಸರ್ವವ್ಯಾಧಿಭಂಜನ, ಚಿಕಿತ್ಸೆಯೊಳ್ ... ಪೀಡಾಂಗಗಳಿಗೆ ಸಂಜೀವನ, ವಾಸನೆಯಲ್ಲಿ ಮನೋರಂಜನ, ಬೆಲೆಯಲ್ಲಿ ಅಲ್ಪ ಯೋಗ್ಯತೆಯಲ್ಲಿ ಅದ್ಭುತ ಔಷಧಿಯಲ್ಲಿ ... ರಹಿತ ಕೊಳ್ಳುವವರಲ್ಲಿ ಮಾಡಿರಿತ್ತಿಯರ್, ಇದರಿಂದ ಗುಣ ಕಂಡುಬರುವದಿಲ್ಲವಾದರೆ ಹಣ ಹಿಂತಿರುಗಿ ಕೊಡಲ್ಪಡುವದು ಒಂದೇ ಸಾರಿ ಆರು ಬಾಟ್ಲು ತರಿಸಿಕೊಂಡವರಿಗೆ ಒಂದು ಜರ್ಮನ್ ಬೆಳ್ಳಿಯ ಕಪ್ ಉಚಿತವಾಗಿ ದೊರಕುವದು

ನಿಶ್ಶಂಕೆಯಾಗಿ ಭಾರತವರ್ಷೀಯ ಔಷಧಿಗಳಿಂದ ತಯಾರಿಸಿದ ಹೊರುಪಯೋಗಕ್ಕೋಸುಗ ಮುಲಾಮು ಇದರಿಂದ ತಲೆನೋವು, ಶಿರೋವೇದನೆ, ವಾತ, ಸಂಧಿವಾತ ಪಕ್ಷವಾತ, ಗಂಟ್ಲುನೋವು ಸೊಂಟದ ನೋವು, ಗಂಟು ನೋವು, ಶೀತ, ಜಳಮು, ಉಳುಕು, ಕೈಕಾಲುಗಳಿಗೆ ಆಗುವ ಎಲ್ಲಾ ತರದ ನೋವಿಗೆ ಇದು ಅತ್ಯುತ್ತಮ

ಈ ಕಂಪನಿಯವರು ಬೇರೆ ... ಔಷಧಿಗಳನ್ನು ತಯಾರಿಸುವುದರಿಂದ ... ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಒಂದಲ್ಪಿ ... ರ ... ವದ

ಬಾಟ್ಲಿ ಒಂದಕ್ಕೆ ಕಿಮ್ಮತು ೦—೮—೦ ಪೋಸ್ಟು ಖರ್ಚು ೦—೪—೦

ಗಜಕರ್ಣದ ಮುಲಾಮು.

... ಗಜಕರ್ಣವು ರೋಗ ... ಇದರಿಂದ ಚರ್ಮವು ... ಹಿಂತಿರುಗಿ ಕೊಡಲ್ಪಡುವದು, ಡಬ್ಬಿ ಒಂದಕ್ಕೆ ಕಿಮ್ಮತು ೦—೪—೦ ಪೋಸ್ಟು ಖರ್ಚು ೦—೩—೦

ದಂತಮಂಜನ — ... ಬರುವ ರಕ್ತ ನಿಲ್ಲಿಸುತ್ತದೆ ಹಲ್ಲುಗಳು ... ಹಲ್ಲುಗಳು ಬೆಳ್ಳಗಾಗುತ್ತವೆ ... ಗಳ ... ತೆಗೆಯುತ್ತದೆ ಡಬ್ಬಿ ಒಂದಕ್ಕೆ ೦—೩—೦ ಪೋಸ್ಟು ಖರ್ಚು ೦—೩—೦

ವಜ್ರಗುಟಿಕ — ಧಾತು ... ಶಕ್ತಿ ... ಸ್ವಪ್ನದೋಷ ... ಆರೋಗ್ಯ ... ಬಾಟ್ಲಿ ಒಂದಕ್ಕೆ ೧—೦—೦ ಪೋಸ್ಟು ಖರ್ಚು ೦—೩—೦

ಕೇಶವರ್ಧಿನಿ — ತಲೆ ... ತಂಪುಮಾಡುವದು ಕೂದಲುಗಳನ್ನು ಬೆಳೆಸುವದು, ಕೂದಲುಗಳ ... ವನ ... ಪುಷ್ಟಿ ಮಾಡುವದು, ... ಬಾಟ್ಲಿ ಒಂದಕ್ಕೆ ೧—೦—೦ ಪೋಸ್ಟು ಖರ್ಚು ೦—೪—೦

ವಿಳಾಸ:—ವಿಲಿಯಂ ಮತ್ತು ಕಂಪೆನಿ, ೧೩ ಓಕ್ ಲೇನ್. ಪೋರ್ಟ, ಮುಂಬಯಿ.

ಟೆಲಿಗ್ರಾಫು ಅಡ್ರೆಸು—'ಅಮೃತಾಂಜನ,' ಮುಂಬಯಿ.

ರಬ್ಬರ್ ಹ್ಯಾಂಡ್ ಪ್ರೆಸ್.

114 10

ಕಲಾಕೌಶಲ್ಯದಿಂದ ಮತ್ತು ಉದ್ಯೋಗದಿಂದ ಉಚ್ಚಸ್ಥಿತಿ ... ಈ ಭಾರತ ಭೂಮಿಯೊಳಗೆ ಈ ಪ್ರೆಸ್ ತಯಾರಾಗುತ್ತದೆ ಇದುವರೆಗೆ ಈ ಪ್ರೆಸ್ಸು ಪರದೇಶದಿಂದ ಬರುತ್ತಿರುವಾಗ ಅದಕ್ಕೆ ೧೫ ರಿಂದ ೧೮ ರೂಪಾಯಿಗಳ ವರೆಗೆ ಬೆಲೆ ಬೀಳುತ್ತಿತ್ತು ಈ ಪ್ರೆಸ್ಸಿನೊಳಗೆ ಕನ್ನಡ, ತಮಿಳು, ತೆಲುಗು, ಉರ್ದು, ಮರಾಠಿ, ... ಇಂಗ್ಲೀಷ್ ಮತ್ತು ಬೇಕಾದ ಭಾಷೆಯಲ್ಲಿ ಒಂದು ಪ್ರತಿ ತಯಾರು ಮಾಡಿ, ಮಾಡಿದ ಮೇಲೆ ಬಹು ಸ್ವಲ್ಪ ಕಾಲದೊಳಗಾಗಿಯೇ ಇದರಿಂದ ೧೫೦ ಪ್ರತಿಗಳನ್ನು ತಯಾರು ಮಾಡಬಹುದು ಆದ್ದರಿಂದ ಈ ಪ್ರೆಸ್ಸು ಸಾರ್ವಜನಿಕ ಕಚೇರಿ ಮತ್ತು ವ್ಯಾಪಾರದ ... ಪೋಲೀಸ್ ಆಫೀಸರರೂ, ವಕೀಲರೂ, ವರ್ತಕರೂ, ಇನಾಮುದಾರರೂ ಮತ್ತು ... ತಮ್ಮ ಸಂಗ್ರಹದಲ್ಲಿ ಅವಶ್ಯ ಇಡಬೇಕು ಎಷ್ಟೋ ... ನರ ಸಹಾಯದಿಂದ ಒಂದು ಕೆಲಸಕ್ಕೆ ಬಹಳ ಕಾಲ ಹಿಡಿಯುವದು ಆದರೆ ಈ ನಮ್ಮ ಪ್ರೆಸ್ಸಿನಿಂದ ಅಂಥಾ ಕೆಲಸವನ್ನಾದರೂ ಸ್ವಲ್ಪ ಕಾಲದಲ್ಲಿಯೇ ಮಾಡುವದಕ್ಕೆ ಸಾಧ್ಯ ಇದರ ಸೇರಿಯಿಂದ ಈ ಪ್ರೆಸ್ ಜನಗಳ ಪ್ರೀತಿಗೆ ಪಾತ್ರವಾಗಿರುವದು ಈ ಕಾರಣದಿಂದ ಪ್ರತಿ ಒಬ್ಬರೂ ತಮ್ಮ ಹತ್ತಿರ ಈ ಪ್ರೆಸ್ಸನ್ನು ಅವಶ್ಯಕವಾಗಿ ಇಡುವದರಲ್ಲಿ ಏನೂ ಸಂದೇಹವಿಲ್ಲ

ನೋಟ್ ಪೇಪರ್ ಸೈಜು, ರೂಪಾಯಿ ೪—೦—೦.

ಹಾಫ್ ಫುಲ್‌ಸ್ಕ್ಯಾಪ್ ಸೈಜು, ೬—೦—೦

ಪೋಸ್ಟೇಜು ಬೇರೆ (extra)

ವಿಳಾಸ — ವರ್ಧಮಾನ ಏಜೆನ್ಸಿ,
ಪೋಸ್ಟ್ ಕಾಲಬಾದೇವಿ,
ಮುಂಬಯಿ.

ಸನ್ ೧೯೦೮ ನೇ ಇಸವಿಯ

127 3

ಎ ನಂ॥ ಜೆನೀವಾ ಬಿ ನಂ॥ ಸಿ ನಂ॥ ಜೆನೀವಾ ಡಿ ನಂ॥

ಪಂಚಾಂಗ ಸಹಿತವಾದ ಇಂಗ್ಲೀಷು—ಕನ್ನಡ ಡೈರಿ

ಈ ಡೈರಿಗಳು ವರ್ತಕರು, ಉದ್ಯೋಗಗಳು, ಕಂಟ್ರಾಕ್ಟರು, ದೊಡ್ಡ ಮನುಷ್ಯರು, ಮಾಮೂಲಿ ಸಮಸ್ತರಿಗೂ ಉಪಯೋಗವಾಗಿರುತ್ತವೆ ಇವುಗಳಲ್ಲಿ ಅಡಕವಾಗಿರುವ ವಿಷಯಗಳು — ಶಾಲಿವಾಹನ ಶಕ ಪಂಚಾಂಗ, ಗ್ರಹ ಕುಂಡಲಿ ಸಹಿತ, ಕ್ಯಾಲೆಂಡರು, ಹಬ್ಬಗಳು, ರಜಾದಿನಗಳು, ರೈಲ್ ಛಾರ್ಜು, ಕೋರ್ಟ್ ಫೀಜು, ಪ್ರೊಸೆಸ್ ಫೀಸು, ಸ್ಟ್ಯಾಂಪು, ರಿಜಿಸ್ಟರ್ ಫೀಜುಗಳು, ಪೋಸ್ಟಾಫೀಸಿನ ಎಲ್ಲಾ ವಿಷಯಗಳು, ಬಿಪ್ಪಿಗಳ ಅಳತೆ, ತೂಕಗಳು, ಗೌರಿ ಪಂಚಾಂಗ, ಪ್ರಶ್ನಶಾಸ್ತ್ರ, ಹಲ್ಲಿ ಬಿದ್ದ ಫಲ, ರಾಹುಕಾಲ, ಗುಳಿಕಕಾಲ, ... ದಿನ ಸಂಬಳದ ಪಟ್ಟಿ, ಧೋಬಿಲೆಕ್ಕ, ಜಮಾಖರ್ಚಿನ ಪಟ್ಟಿ ಇನ್ನೂ ಅನೇಕ ವಿಷಯಗಳಿವೆ ಉತ್ಕೃಷ್ಟವಾದ ಕಾಗದ, ರೂಲು ಹಾಕಿದೆ, ... ಬೈಂಡು, ಚಿನ್ನ ಬೆಳ್ಳಿ ಗಿಲೀಟು ಮಾಡಿದೆ ಕ್ರಯ—

ಎ ನಂಬರ್ ಚಿಕ್ಕಸೈಜು ೩ ಆಣೆ	ಸಿ ನಂಬರು ದೊಡ್ಡ ಸೈಜು ೬ ಆ
ಬಿ ಮಧ್ಯದ್ದು ೫ ,,	ಡಿ ,, ದೊಡ್ಡದು ೮ ,,

ಹೊಸ ನಮೂನೆ ಉತ್ಕೃಷ್ಟವಾದ 'ಜೆನೀವಾ' ಡೈರಿ ಇದು ಸರ್ಕಾರದಲ್ಲಿ ರಿಜಿಸ್ಟರಾಗಿದೆ

"ಜೆನೀವಾ" ೧ ನಂ ೩ ಆ | "ಜೆನೀವಾ" ೨ ನಂ ೬ ಆ.

ಪೋಸ್ಟ್ ಚಾರ್ಜು ಬೇರೆ ಒಂದೇ ನಮೂನೆಯ ... ಡೈರಿ ಗಳನ್ನು ತರಿಸಿಕೊಂಡರೆ ೧ ಡೈರಿ ಇನಾಂ ವಿ ಪಿ ಮೂಲಕವೂ ತರಿಸಬಹುದು

ಟಿ ಕೆ. ಮತ್ತು ಎಂ. ಆರ್. ಕೃಷ್ಣಸ್ವಾಮಿ ಶೆಟ್ಟಿ,
ಬಳೇಪೇಟೆ, ಬೆಂಗಳೂರು ಸಿಟಿ.

ನಿಮಗೆ ನೋವು ಇದೆಯೋ?

58 20

ಹಾಗಾದರೆ "ಕ್ಲಿಮೆಂಟ್ ಯವರ ಪ್ಯಾಬಿಕ್ ಬಾಂ" ನ್ನು ಏಕೆ ಉಪಯೋಗಿಸಬಾರದು? ಆಶ್ಚರ್ಯಕರವಾದ ಬಾಧಾಪಹಾರಿ ಔಷಧ! ಈಗಿನ ಕಾಲದಲ್ಲಿ ಕಂಡು ಹಿಡಿದ ದೊಡ್ಡ ಪುಣ್ಯವು!

ಈ ರೀತಿ ಔಷಧವನ್ನು ಬೆಟ್ಟವೇಂದು ಕರೆಯುತ್ತಲಿ ಕೆಲವು ನಿವಿ ವಗೈಳಿಗಾಗಿ ವರ ಮತ್ತು ನರಾಂಕ ಸಂಬಂಧವಾದ ಪಾರ್ಶ್ವ ನೋವು, ಕೀಲುಗಳ ಬಾಧೆ, ಕಿವೈಟ್ಟ ನೋವು, ಗೆನ್ನೆ ಲೆಯುವುದು, ತಲೆನೋವು, ಕೆವ್ವು, ಕೀಲುಗಳ ಶಕ್ತಿರಿಸ ವದು, ಹೊರಳು ಉಳುಕು, ಕೈಕಾಲು ಒಡೆತ ಇವುಗಳನ್ನೆಲ್ಲಾ ವಿದ್ಯುಚ್ಛಕ್ತಿಯಂತೆ ಗುಣಪಡಿಸುವದು ಈ ಔಷಧವು ಆಶ್ಚರ್ಯಕರವಾಗಿ ಗುಣಪಡಿಸುವದರಿಂದ ಎಲ್ಲ ಕಡೆಯಲ್ಲಿಯೂ ಪ್ರಸಿದ್ಧಿಯಾಗಿ ಬರುವದು ಇತರ ಔಷಧಿಗಳು ಗುಣಪಡಿಸದೆ ಕೈಬಿಟ್ಟಾಗ ಡಾಕ್ಟರ್ ಫೀಜನ್ನು ಕಡಿಮೆಮಾಡಿ ಇದು ನಿಸ್ಸಂದೇಹವಾಗಿಯೂ ಗುಣಪಡಿಸುವದು

ಕ್ರಯ—೧ ಬಾಟ್ಲಿಗೆ ೧೨ ಆಣೆ, ಪೋಸ್ಟೇಜ್ ೬ ಆಣೆ ೩ ಬಾಟ್ಲಿಗೆ ಅಂಚೆವೆಚ್ಚ ಸೇರಿ ರೂ ೨—೬ ಆಣೆ. ಎಲ್ಲಾ ಕೆಮಿಸ್ಟ್ ಶಾಪುಗಳಲ್ಲಿ ದೊರೆಯುವದು

ನಮ್ಮ ವಿಳಾಸ—ಎಫ್. ಡಬ್ಲಿಯು ಆರ್ಚ,

ಸಿಮೆಟ್ರಿ ರೋಡ್, ವೇಪೇರಿ, ಮದರಾಸ್.

CHAMBERLAIN'S COUGH REMEDY.

ಚೇಂಬರ್ಲೇಯವರು ಕಂಡು ಹಿಡಿದ ಕೆಮ್ಮಿನ ಔಷಧವು

4 24

ಶೀತದ ಕೆಮ್ಮು, ಗಂಟಲು ಗೊರಗುವುದು, ಕಫಗಟ್ಟುವದು, ನಾಯಿಗೆಮ್ಮು, ಎಲ್ಲಾ ತರದ ಶೀತ, ಗಂಟಲನೋವು ಎದೆಯಲ್ಲಿ ಉಂಟಾಗುವ ಸಮಸ್ತ ವ್ಯಾಧಿಗಳು—ಇವಕ್ಕೆಲ್ಲಾ ಈ ಔಷಧವು ಬಹಳ ಸಹಾಯವಾಗಿದೆ

ಆ ಕೆಮ್ಮನ್ನು ಅಲಕ್ಷ್ಯಮಾಡಬೇಡಿ ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ ಅದರ ಮೇಲೆ ನ್ಯೂಮೋನಿಯಾ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವದು ಕಡೆಯಾಗಿ ಉಗುಳಿನಲ್ಲಿ ರಕ್ತ ಬೀಳುವದು, ಹಾಗೆಯೇ ಕ್ಷಯರೋಗಕ್ಕೆ ಆಸ್ಪದವಾಗುವದು

ಚೇಂಬರ್ಲೇರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟಲಲ್ಲಿ ಶ್ಲೇಷ್ಮ ಕಟ್ಟುವುದನ್ನು ಶ್ಲೇಷ್ಮ ಬೀಳುವುದನ್ನೂ ಅತಿಶೀಘ್ರ ನಿವಾರಣೆಮಾಡುತ್ತದೆ ಉಸಿರು ಹೋಯ್ಯುವುದು ಕಷ್ಟವಾಗಿದ್ದರೆ ಅದನ್ನು ಕೂಡಲೇ ಪರಿಹರಿಸುತ್ತದೆ ಅಪಾಯಕರವಾದ ಕೆಮ್ಮಿನ ಕಟ್ಟನ್ನು ನಿಲ್ಲಿಸಿಬಿಡುತ್ತದೆ ಎದೆ ಬಿಗಿಯುವಂಥಾ ಕೆಟ್ಟಸ್ಥಿತಿಯನ್ನು ಸಂಪೂರ್ಣವಾಗಿ ವಾಸಿಮಾಡಬಲ್ಲದು. ಕೆಮ್ಮನ್ನು ಶಮನಮಾಡಿ, ನಿದ್ರೆ ಸುಖವಾಗಿ ನಿದ್ದೆಮಾಡುವಂತೆ ಮನಸ್ಸಿಗೆ ಉಲ್ಲಾಸಕೊಡುತ್ತದೆ

ಚೇಂಬರ್ಲೇರವರು ಕಂಡ ಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇರಿಸಿಲ್ಲವು

ಈ ಔಷಧವು ಮನಸ್ಸಿಗೆ ಆಯಾಸ

ಕೈಯಿಂದಮುಟ್ಟದೆ ತಯಾರಾಗಿದೆ

ಎಲ್ಲೆಲ್ಲೂ ಬಿಕರಿಯಾಗುವುದು ಸಣ್ಣ ಶೀಸೆಗೆ ೧ ರೂಪಾಯಿ ದೊಡ್ಡ ಶೀಸೆಗೆ ೨ ರೂಪಾಯಿ

ಸತ್ಯವಾಗಿಯೂ ಅಗ್ಗದ ಅಂಗಡಿ.

121 5

ಅಗ್ಗದ ಬಿಕರಿಸಮಯ. ಕ್ರಯ ಮೂರರಲ್ಲಿ ಒಂದೇಪಾಲು ಡಿಸೆಂಬರ್ ೨೦ ರ ವರೆಗೆ.

ಗಡಿಯಾರಗಳೆಲ್ಲಾ ಅಚ್ಚ ಹಸನಾದವು ಚೆನ್ನದಂಥಾ ಸಮಯ ಇದಕ್ಕಿಂತ ಅಗ್ಗವಾಗಿ ಮತ್ತೆ ಸಿಕ್ಕಲಾರವು ಸಾವಕಾಶಮಾಡಬೇಡಿ! ಕಾಲಮೀರೀತು!

ನಂ ೧೦೦—೧೯ ಬಿ ಎಫ್ ಸುಂದರವಾದ ಬೆಳ್ಳಿಗಡಿಯಾರ, ಸೆಕೆಂಡ್ ಹ್ಯಾಂಡ್ ಸಹಿತ, ಸಿಲಿಂಡರ್ ಚಲನೆ, ೩೬ ಗಂಟೆ ಹೊತ್ತು ನಡೆಯುವುದು. ಮೊದಲಿನ ಕ್ರಯ ರೂ. ೧೩—೮—೦, ಈಗಿನ ಕ್ರಯ ರೂ ೩—೮—೦ ಐದು ವರ್ಷ ಜಾಮೀನು

ನಂ ೧೦೧ ಎ—ಕೆಮಿಕಲ್ ಗೋಲ್ಡ್ ವಾಚ್ ಸೆಕೆಂಡ್ ಹ್ಯಾಂಡ್ ಸಹಿತ ಮೊದಲಿನ ಕ್ರಯ ರೂ ೧೪ ಈಗ ರೂ ೪ ಐದು ವರ್ಷ ಜಾಮೀನು

ನಂ ೧೦೨—೧೯ ಬಿ ಎಫ್ ಸಿಲಿಂಡರ್ ಚಲನೆ, ೩೬ ಗಂಟೆ ನಡೆಯುವದು ಮೊದಲಿನ ಕ್ರಯ ರೂ ೧೦—೪—೦, ಈಗ ರೂ ೩—೧೨—೦ ಐದು ವರ್ಷ ಜಾಮೀನು

ನಂ ೧೦೫—೧೯ ಬಿ ಎಫ್ ವೈಟ್ ರೆಗ್ಯುಲೇಟರ್ ಲೀವರ್ ವಾಚ್ ೩೬ ಗಂಟೆ ನಡೆಯುವದು ಮೊದಲಿನ ಕ್ರಯ ರೂ ೧೦—೧೦—೦ ಈಗ ರೂ ೩—೦—೦ ಐದು ವರ್ಷ ಜಾಮೀನು

೧೦೭—ರಾಸ್ಕೊಪ್ ಲೀವರ್ ವಾಚ್ ಇದು ಬಹು ಕಾಪ್ಯತ ನಾವದ್ದ ೧೦ ವರ್ಷ ಜಾಮೀನು ಮೊದಲು ರೂ ೧೫, ಈಗ ರೂ ೫—೮—೦

೧೦೯—ಬೆಳ್ಳಿ ರೋಸ್ಕೋಪ್ ಲೀವರ್ ವಾಚ್ ರತ್ನಗಳುಳ್ಳದ್ದು ೧೨ ವರ್ಷ ಜಾಮೀನು ಮೊದಲು ರೂ ೩೦ ಈಗ ರೂ ೧೦

೧೧೦—ಬೆಳ್ಳಿ ಲೇಡಿ ಅಥವಾ ಜೆಂಟ್ಸ್ ವಾಚ್ ಸಿಲಿಂಡರ್, ರತ್ನವುಳ್ಳದ್ದು ಗಿಲ್ಟ್ ಚಲನೆ ೩ ವರ್ಷ ಜಾಮೀನು ಕ್ರಯ ರೂ ೨—೨—೮ ಈಗ ರೂ ೩—೧—೦

೧೧೩—ಬೆಳ್ಳಿ ಬಿ ಎಫ್ ಕೈ ಸಹಿತ ಪಾಲಿಷ್ ಚಲನೆ ರೂ ೨೦, ಈಗ ರೂ ೩ ಆರು ವರ್ಷ ಜಾಮೀನು

೧೧೮—ಬೆಳ್ಳಿ ಬಿ ಎಫ್ ಗಂಡಸರ ಲಿವರ್ ವಾಚ್ ರೂ ೩೦ ಈಗ ರೂ ೧೦ ಹತ್ತು ವರ್ಷ ಜಾಮೀನು

೧೧೯ ಎ—ಅದೇ ಹಂಟರ್ ರೂ ೩೩, ಈಗ ರೂ ೧೧,

೧೧೯ ಬಿ—ಅದೇ ಅರ್ಧ ಹಂಟರ್ ರೂ ೩೩, ಈಗರೂ ೧೨

೧೨೫—ಬೆಳ್ಳಿ ೮ ದಿನ ನಡಿಯುವುದು ರೂ ೩೬, ಈಗರೂ ೧೮ ಸಾರಕ್ಕೊಮ್ಮೆ ಕೀಲಿ ಕೊಡುವುದು ಲೀವರ್ ಚಲನೆ ಹತ್ತು ವರ್ಷ ಜಾಮೀನು

೧೨೯ ಎ—೨೨ ದಿನ ನಡಿಯುವ ಹೊಳ್ಳಬೆಳ್ಳಿ ಗಡಿಯಾರ ರತ್ನಗಳುಳ್ಳದ್ದು ಸೆಕೆಂಡ್ ಹ್ಯಾಂಡ್ ೧೫ ವರ್ಷ ಜಾಮೀನು ರೂ ೧೪೦ ಈಗ ರೂ ೪೦

೧೩೯ ಬಿ ಹೊಳ್ಳಬೆಳ್ಳಿ ಕ್ಯಾಲೆಂಡರ್ ಲೀವರ್ ವಾಚ್ ದಿನ, ವಾರ, ತಿಂಗಳು, ಚಂದ್ರ, ಇವನ್ನು ತೋರಿಸುತ್ತೆ ೧೨ ವರ್ಷ ಜಾಮೀನು. ಕ್ರಯ ರೂ. ೩೬—೮—೦, ಈಗ ರೂ. ೧೨—೮—೦

೧೧೧—ಚಿನ್ನಭಂಗಾರ ರತ್ನಗಳುಳ್ಳದ್ದು ಕ್ರಯ ರೂ ೩೦ ಈಗ ರೂ ೨೫ ಹದಿನೈದು ವರ್ಷ ಜಾಮೀನು

೧ ೧—೨೦ಟು ದಿನಗಳ ಚೆನ್ನದ ಗಡಿಯಾರ ತುಂಬಾ ರತ್ನಗಳು ೧೨ ವರ್ಷ ಜಾಮೀನು ಕ್ರಯ ರೂ. ೧೪೯, ಈಗ ರೂ ೫೩

ಒಟ್ಟಿಗೆ ತರಿಸುವವರಿಗೆ ಸ್ಪೆಷಲ್ ದರಗಳು

೩ ಗಡಿಯಾರ ಒಂದಸಲ ತೆಗೆಸುವವರಿಗೆ ಪ್ಯಾಕಿಂಗ್ ಪೋಸ್ಟೇಜ್ ಮಾಫಿ

೬ " " " ಒಂದು ಗಡಿಯಾರ ಇನಾಂ

ಕ್ರಯ ಪಟ್ಟಿ ಕಾಲಾಭಾಗ ಅರ್ಜ್ಯಾಗಿ ಬರಬೇಕು, ಉಳಿದದ್ದಕ್ಕೆ ವಿ ಪಿ ಪಿ ಇಂದ ಕಳಿಸುತ್ತೇವೆ ಗಡಿಯಾರಗಳನ್ನು ಸುಂದರವಾದ ವೆಲ್ವೆಟ್ ಪೆಟ್ಟಿಗೆಯಲ್ಲಿ ಸ್ಪ್ರಿಂಗ್, ಗ್ಲಾಸ್ ಸಹಿತ ಕಳಿಸುವೆವು ಇದಲ್ಲದೆ ಪ್ರತಿ ನಾಚಿಗೂ ನೆಗಸಸಿ ಒಂದೊಂದು ಸರಪಣಿಯನ್ನು ನಾವು ಇನಾಮಾಗಿ ಕಳಿಸುತ್ತೇವೆ ನಮ್ಮ ವಿಳಾಸ—

ಎಂ. ಎ. ಘುಟಾಲಾ ಮತ್ತು ಕಂಪನಿ,

ಚಿತ್ತೂರು, ಉತ್ತರ ಆರ್ಕಾಟು.

ಹಿಂದುಸ್ಥಾನದಲ್ಲಿ ಮಕ್ಕಳು

ಬಿಸಿಲ ಉಷ್ಣದ ಉಪದ್ರವಾದದ್ದರಿಂದ ನಾನಾ ರೋಗಬಂಧಗಳನ್ನು ಸಹಿಸಿಕೊಂಡು ಬೆಳೆಯಬೇಕಾಗಿದೆ

ಅವರ ಸಣ್ಣ ಸಣ್ಣ ಮೂಳೆಗಳೂ ಮಾಂಸಖಂಡಗಳೂ ಸರಿಯಾಗಿ ಬಲಿತು ಚೆಂದ ಬೆಳೆಯುವುದಕ್ಕೆ ಅವರಿಗೆ ಚಿಕ್ಕಂದಿನಿಂದಲೇ ಬಲಕಾರಿ ಯಾದ ಸ್ಕಾಟ ಔಷಧವನ್ನು ಕೊಡುವುದು ಅವಶ್ಯಕ

SCOTT'S EMULSION 31-39

(ಸ್ಕಾಟ್ಸ್ ಇಮಲ್ ಷನ್)

ಎಂಬ ಸ್ಕಾಟ ಔಷಧದಲ್ಲಿ ಮಕ್ಕಳ ಸಮಸ್ತ ಅಂಗಗಳನ್ನೂ ಬಲಪಡಿಸಿ ಬೆಳೆಸುವಂಥಾ ಬಹು ಉತ್ಕೃಷ್ಟವಾದ ಗುಣಗಳಿರುತ್ತವೆ

ಇದಕ್ಕೆ ಸಮಾನವಾದದ್ದು ಮತ್ತಾವುದೂ ಇಲ್ಲ

ಈ ಔಷಧವನ್ನು ಸ್ಕಾಟ ಸಾಹೇಬರು ಕಂಡು ಹಿಡಿದರು ಅದರ ಗುಣಗಳು ಕಂಡು ಬಂದ ವಸ್ತು

ಕೈಯಿಂದ ಮುಟ್ಟದೇನೇ ತಯಾರಾದದ್ದು

ಎಲ್ಲಾ ಔಷಧ ವ್ಯಾಪಾರಸ್ಥರಲ್ಲಿ ಬಿಕರಿಯಾಗುತ್ತದೆ

ಸ್ಕಾಟ್ ಅಂಡ್ ಬೌನ್ ಲಿಮಿಟೆಡ್, ಔಷಧಗಳ ಕಾರ್ಖಾನೆ, ಲಂಡನ್, ಇಂಗ್ಲೆಂಡ್

ಮೀನುಹೊತ್ತಿರುವ್ಯಕ್ತಿ ಇರುವ ಈ ಔಷಧದ ಗುರುತು

ಬಹುಮಾನ.

132 1

೫ ಆಣೆ ಪೋಸ್ಟೇಜು ಸ್ಟಾಂಪು ಕಳಿಸಿದವರಿಗೆಲ್ಲಾ ಶ್ರೀಮತ್ಕಾಶೀ ರಾಜಗುರುಗಳಿಂದ ರಚಿಸಲ್ಪಟ್ಟ ೬ ಭಾರದಷ್ಟು ಪ್ರಸಿದ್ಧಿಗೆ ತ್ತಿದ ರತ್ನಮಾಲಿಕೆಯೆಂದಿಗೆ ೧೯೦೮ ನೈಜಿನ ಶ್ರೀಮಚ್ಚಾಮರಾಜೇಂದ್ರ ಫೋಟೋವನ್ನೂ, ಇದೇ ಸ್ಟಿಜಿನ ಈಗಿನ ಶೃಂಗೇರಿ ಸ್ವಾಮಿಗಳ ಫೋಟೋವನ್ನೂ ಶ್ರೀಮನ್ ಮಹಾರಾಜ ಯುವರಾಜರುಗಳ ಬಾವಚಿತ್ರಗಳೂ ದ ಕೂಡಿದ ಪ್ಲಂಬ್ ಶೀಲಿಕ ಪಂಚಾಂಗಸಹಿತ ಕೊಡುವೆವು

೧೯೦೮ ನೇ ಇಸವಿ ಹಿಂದೂ ಕ್ಯಾಲೆಂಡರನ್ನು ಮತ್ತು ಶ್ರೀ ಮನ್ಮಹಾರಾಜ ಶ್ರೀ ಕೃಷ್ಣರಾಜೇಂದ್ರಸ್ವಾಮಿಗಳ ಫೋಟೋ ಇವನ್ನು ಬಹುಮಾನವಾಗಿ ಕಳುಹಿಸುತ್ತೇವೆ ೮ ಆಣೆಗೆ ಬೇರೆ ವಿಧವಾದ ಚಿತ್ರದ ಫೋಟೋಗಳು ಚೆನ್ನಾಗಿ ಸಿಕ್ಕುವವು

ವಿಳಾಸ—ವೈ ನಾಗಪ್ಪ, ಪಾಪ್ ಕೀಪರ್, ಕೋಟೆ ಮೈಸೂರು

ಪ್ರಕಟನೆ.

19 1

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ —

ಅಮಾನತುಮಹಲ್ ಇಲಾಖಾ ಬಾಬತು ಹೆಣ್ಣು ಮತ್ತು ಗಂಡು ದನಗಳನ್ನು ಚಾಲ್ತಿ ಇಸವಿ ಡಿಸೆಂಬರ್ ಮಾಹೆ ೨೦ ನೇ ತಾರೀಖು ಸೋಮವಾರ "ಹೊಳಲ್ಕೆರೆ" ಮೊಕ್ಕಾಮಿನಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ ಇಷ್ಟವುಳ್ಳವರು ಸದರಿ ಹರಾಜಾಗುವ ಸ್ಥಳಕ್ಕೆ ಹಾಜರಾಗಿ ದನಗಳನ್ನು ಛಡಸವಾಲಿನಿಂದ ಪಡೆಯಬಹುದು

ಮೊಕ್ಕಾಂ ಹಾಸನ,	ಎಚ್ ನಂಜರಾಜೇ ಅರಸ್, ಸೂಪರಿಂಟೆಂಡೆಂಟ್
ತಾ ೧೩-೧೧-೧೯೦೭	ಅಮೃತಮಹಲ್ ಇಲಾಖಾ

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ!

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

7o 20

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾರಿ ಬಿಕರಿಯಾಗುತ್ತಿರುವ ಟೋಪಿಗಳ ಪಾರವೆಲ್ಲಾ ಬೇಳಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ಪಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚೆನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚೆನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ, ಚೆನ್ನಾಗಿ ಹೊಲೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ನೇರಾ ಬರೆದು ತರಿಸಿಕೊಳ್ಳಿ ಅಗ್ಗವಾದದ್ದು ಚೆನ್ನಾಗಿಲ್ಲದಿದ್ದ ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ.

ಕಾವಿ, ಕೆಂಪು, ಕಪ್ಪು, ಬಿಳಿ, ಕಾಫಿ ಟೋಪಿಗಳು ೧ ರೂ ೪ ಆ, ೧ ರೂ ೬ ಆ, ೧ ರೂ ೮ ಆ.

ರೇಷ್ಮೆ ಜರ್ಕಿಯುಳ್ಳ ಟೋಪಿಗಳು ೧ ರೂ ೪ ಆ, ೨ ರೂ

ಜಾರದ ಟೋಪಿಗಳು ೧ ರೂ. ೧೨ ಆ, ೧ ರೂ ೪ ಆ, ೧ ರೂ. ೩ ಆ

ಉಣ್ಣೆಯ ಟೋಪಿಗಳು ೧ ರೂ ೪ ಆ, ೧ ರೂ ೩ ಆ

ಕೋಸುಗಳ ಟೋಪಿ, ಸೂಫಿ ಮೇಜೋಡು, ಅರ್ಧ ಜೋಡು ಟೋಪಿ ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು.

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ

೧೯೦೮ ನೇ ಇಸವಿಯ ಇಂಗ್ಲೀಷು—ಕನ್ನಡ

1196

ಪಾಕೆಟ್ ಡೈರಿ

ಎ ನಂ॥ ಬಿ. ನಂ॥ ಸಿ. ನಂ ಡಿ. ನಂ॥

ಕ್ರಯ ೩ ಆಣೆ ೪ ಆಣೆ ೬ ಆಣೆ. ೮ ಆಣೆ

ಈ ಡೈರಿಗಳು—ವರ್ತಕರು, ಉದ್ಯೋಗಸ್ಥರು, ಕಂಟ್ರಾಕ್ಟರು, ದೊಡ್ಡ ಮನುಷ್ಯರು, ಎಲ್ಲಾ ಬಾಪತ್ ಜನಸಮುದಾಯಕ್ಕೂ ಉಪಯೋಗವಾಗಿರುತ್ತವೆ ಇವುಗಳಲ್ಲಿ ಅಡಕವಾಗಿರುವ ವಿಷಯಗಳು—ಶಾಲಿವಾಹನ ಶಕ ಪಂಚಾಂಗ, ಗ್ರಹ ಕುಂಡಲಿ ಸಹಿತ, ಕ್ಯಾಲೆಂಡರು, ಹಬ್ಬಗಳು ರಜಾ ದಿನಗಳ, ರೈಲ್ ಛಾರ್ಜು, ಕೋರ್ಟ್ ಫೀಜು, ಪೋಸ್ಟ್ ರೂಲು, ಸ್ಟಾಂಪು ರಿಜಿಸ್ಟರ್ ಫೀಜುಗಳು, ಪೋಸ್ಟಾಫೀಸಿನ ಎಲ್ಲಾ ವಿಷಯಗಳು, ಜಮೀನುಗಳ ಅಳತೆ, ಗೌರಿ ಪಂಚಾಂಗ ಪ್ರಶ್ನಶಾಸ್ತ್ರ, ರಾಹುಕಾಲ, ಗುಳಿಕಕಾಲ, ವಾರಶೂಲೆ, ಮಾಸಫಲಗಳು, ದಿನ ಸಂಕಲದ ಪಟ್ಟಿ, ಬಡ್ಡಿ ಲೆಕ್ಕ, ಜಮಾ ಖರ್ಚುಪಟ್ಟಿ ಇನ್ನೂ ಅನೇಕ ವಿಷಯಗಳು ಇವೆ ಉತ್ಕೃಷ್ಟವಾದ ಕಾಗದ ರೂಲು ಹಾಕಿದೆ ಸಿಲ್ಕ್ ಸಾಮಾನು ಬೈಂಡು, ಚಿನ್ನದ ಭಂಗಾರದ ರೇಖೆಯಿಂದ ಕೆಲಸ ಮಾಡಲ್ಪಟ್ಟಿದೆ

ಎ	ನಂಬರ್ ಚಿಕ್ಕ ಸೈಜು	೩ ಆಣೆ
ಬಿ	ನಂಬರ್ ಮಧ್ಯದ್ದು	೪ ಆಣೆ
ಸಿ	ನಂಬರ್ ದೊಡ್ಡ ಸೈಜು	೬ ಆಣೆ
ಡಿ	ನಂಬರ್ ಮಧ್ಯದ್ದು	೮ ಆಣೆ

ಪೋಸ್ಟ್ ಛಾರ್ಜು ಬೇರೆ ಒಂದೇ ಸಮಯದಲ್ಲಿ ೧೨ ಡೈರಿಗಳನ್ನು ತರಿಸಿಕೊಂಡರೆ ೧ ಡೈರಿ ಉಚಿತವಾಗಿ ಕೊಡುವೆವು ವಿ ಪಿ ಮೂಲಕ ಕಳಿಸಲ್ಪಡುವುದು.

ನಮ್ಮ ವಿಳಾಸ—ಶ್ರೀ. ಶಿವಲಿಂಗಂ ಶೆಟ್ಟಿ ಕಂಪನಿ,

ಕರ್ನಾಟಕ ಬುಕ್ ಡಿಪೋ ಪ್ರೆಸ್, ಬಳ್ಳಾರಿ

ವೃತ್ತಾಂತ ಪತ್ರಿಕೆ.

೧೯೧೩ ನೆ ಇಸವಿ ಡಿಸೆಂಬರ್ ತಾ॥ ೧೨ ನೇ ಗುರುವಾರ

ಪುರಾತನ ಕಟ್ಟಡಗಳು

ಮೈಸೂರು ಸಂಸ್ಥಾನದಲ್ಲಿ ಕೆಲವು ಪ್ರಸಿದ್ಧ ದೇವಸ್ಥಾನಗಳೂ ಪುರಾತನ ಕಟ್ಟಡಗಳೂ ಇರುತ್ತವೆ ಈ ಪೈಕಿ ಬೇಲೂರಿನಲ್ಲಿ ರುವುದು ತುಂಬಾ ಪ್ರಖ್ಯಾತವಾದದ್ದು ಈ ಕಟ್ಟಡವನ್ನು ಬಹುಕಾಲದಿಂದಲೂ ರಿಪೇರಿ ಮಾಡಿಸದೆ ಸರಿಯಾದ ಸ್ಥಿತಿಯಲ್ಲಿಟ್ಟುಕೊಳ್ಳದೆ ಹೋದದ್ದರಿಂದ ಅದು ತುಂಬಾ ಹಾಳು ಬಿಡಿಯುವಂತಾಗಿದೆ ಆ ಕೇದಾರೇಶ್ವರ ದೇವಾಲಯದಲ್ಲಿ ಒಂದು ಆಲದ ಮರವು ಹುಟ್ಟಿ ಕಟ್ಟಡವನ್ನು ಹಾಳುಮಾಡಿತು ಈಚೆಗೆ ಮೈಸೂರು ಗವರ್ನ್‌ಮೆಂಟಿನವರು ಈ ದೇವಸ್ಥಾನವನ್ನು ಪುನಃ ಕಟ್ಟಿಸಿರುತ್ತಾರೆ ಆದರೂ ಅವನ್ನು ಪೂರ್ವದಲ್ಲಿದ್ದಂತೆಯೇ ಕಟ್ಟಿಸುವುದು ಸಾಧ್ಯವಾಗಲಿಲ್ಲ

ಪ್ರಾಚೀನ ಕಾಲದ ಚರಿತ್ರಾರ್ಹವಾದ ಕಟ್ಟಡಗಳು ಕೆಡದಂತೆ ಕಾಪಾಡಿಕೊಂಡು ಬರುವುದು ಗವರ್ನ್‌ಮೆಂಟಿನವರ ಕರ್ತವ್ಯವಾಗಿರುತ್ತದೆ. ಕಳೆದ ಶತಮಾನದಲ್ಲಿ ಹಿಂದುಸ್ಥಾನದ ವೈಸ್‌ರಾಯಿ ಪದವಿಯಲ್ಲಿದ್ದ ಮಹನೀಯರು ಅಲ್ಲಿನ ಪುರಾತನ ಕಟ್ಟಡಗಳನ್ನೂ ಶಿಲಾಶಾಸನಾದಿಗಳನ್ನೂ ಕೆಡದಂತೆ ಕಾಪಾಡಿಕೊಂಡು ಬರುವ ಭಾಗದಲ್ಲಿ ಮುಖ್ಯ ಕೊಟ್ಟು ಅನೇಕ ಏರ್ಪಾಡುಗಳನ್ನು ಮಾಡಿರುತ್ತಾರೆ

ಸುಮಾರು ಎರಡು ವಾರಗಳ ಹಿಂದೆ ಮೆಕ್ಡೊನಲ್ ಎಂಬೊಬ್ಬ ಪಂಡಿತರು ಈ ಪ್ರಾಂತ್ಯ ಬಂದಿದ್ದರು ಇವರು ಆಕ್ಸ್‌ಫರ್ಡ್ ವಿದ್ಯಾಶಾಲೆಯಲ್ಲಿ ಸಂಸ್ಕೃತ ಬೋಧಕರಾಗಿರುತ್ತಾರೆ ಇವರು ಸೋಸಲೆ ಹತ್ತಿರ ಇರುವ ಸೋಮನಾಥಪುರಕ್ಕೆ ಹೋಗಿ ದೇವಸ್ಥಾನವನ್ನು ನೋಡಿ ಪರಮಸಂತೋಷಭರಿತರಾದರೂ ಅದನ್ನು ತಕ್ಕ ರೀತಿಯಲ್ಲಿ ದುರಸ್ತು ಮಾಡಿಸಲಿಲ್ಲವಲ್ಲಾ ಎಂದು ಮರುಗಿದರು ಅದರ ಕೆಲವು ಶಿಖರಗಳೂ ಇತರ ಭಾಗಗಳೂ ಬಿದ್ದುಕೊಂಡಿವೆ ಅದಕ್ಕೆ ಸಂಬಂಧಪಡದೆ ಇರುವಂಥಾ ಕೆಲವು ಭಾಗಗಳನ್ನು ತಂದು ಒರಟಾಗಿ ಜೋಡಿಸಿ ಕಟ್ಟಿದ್ದಾರೆ ಅದರ ಪಕ್ಕದಲ್ಲಿರುವ ಪಂಚಲಿಂಗ ದೇವಸ್ಥಾನವಾದರೋ ಬೇಗನೆ ದುರಸ್ತು ಮಾಡಿಕಾಪಾಡದೆ ಹೋದಲ್ಲಿ ಸಂಪೂರ್ಣವಾಗಿ ಬಿದ್ದುಹೋಗುವ ಸ್ಥಿತಿಯಲ್ಲಿರುತ್ತದೆ ಈ ಕಟ್ಟಡಗಳ ರಚನೆಯನ್ನು ಮಿ ಫರ್ಗುಸನ್ ಎಂಬ ಮಹಾ ಇಂಗ್ಲಿಷ್ ಶಿಲ್ಪಿಯು ಬಹು ಶ್ರೇಷ್ಠವಾದ್ದೆಂದು ವಿವರಿಸಿ ಹೊಗಳಿರುತ್ತಾನೆ ಮತ್ತು ಅಂಥಾ ಶಿಲ್ಪವು ತುಂಬಾ ಅಪೂರ್ವವಾದದ್ದೆಂತಲೂ ವಿವರಿಸುವನು

ಆದಕಾರಣ ಪೂರ್ವಿಕರ ಕಾಲಾಕೌಶಲ್ಯಗಳನ್ನು ಸಿದ್ಧಪಡಿಸುವ ಇಂಥಾ ಪುರಾತನ ಕಟ್ಟಡಗಳನ್ನು ತಕ್ಕ ರೀತಿಯಲ್ಲಿ ಗವರ್ನ್‌ಮೆಂಟಿನವರು ಕಾಪಾಡುವ ಭಾಗದಲ್ಲಿ ವಿಶೇಷ ಉತ್ಸಾಹವನ್ನು ಪ್ರಕಾಶಪಡಿಸುತ್ತಾರೆಂತಲೂ ಅವುಗಳ ರಚನಾವಿಚಾರಗಳನ್ನು ಚನ್ನಾಗಿ ತಿಳಿದಿರುವಂಥಾ ಕಾರೀಗಾರರಿಗೆ ಈ ಕೆಲಸವನ್ನು ವಹಿಸಿ ದುರಸ್ತು ಮಾಡಿಸಬೇಕಾಗಿದೆ ಎಂತಲೂ ಪ್ರಾರ್ಥಿಸುತ್ತೇವೆ

ವೈಶ್ಯಮಂಡಲಿಗೆ ಸೇರಿದ ಒಬ್ಬ ಸ್ನೇಹಿತರಿಗೆ.

ಅಯ್ಯಾ,

ನೀವು ಬರೆದ ಕಾಗದವು ತಲುಪಿ ಅಭಿಪ್ರಾಯವು ತಿಳಿಯಿತು ... ಫ್ ಕೋರ್ಟು ಜಡ್ಜಿಗಳಾದ ಮ. ರಾ. ನಂಜುಂಡಯ್ಯನವರು ಒಂದು ಸಣ್ಣ ಪುಸ್ತಕವನ್ನು ರಚಿಸಿರುವರೆಂತಲೂ ಅದರಲ್ಲಿ ವಿವೇಕವಿಲ್ಲದ ಕೆಲವು ಜನರ ಕಲಹಕ್ಕೆ ಇರುವ ವೈಶ್ಯರ ಉತ್ಪತ್ತಿಯ ವಿಷಯ ಕೆಲಸಕ್ಕೆ ಬಾರದ ಕೆಲವು ಸಂಗತಿಗಳನ್ನು ಪ್ರಕಟಿಸಿರುವರೆಂತಲೂ ಹೀಗೆ ಪ್ರಕಟಿಸಿದ್ದರಿಂದ ನಿಮ್ಮ ಜಾತಿಯವರಲ್ಲಿ ಅಸಮಾಧಾನಗಳು ಹುಟ್ಟಿ ಗಲಭೆ ಹುಟ್ಟುತ್ತದಕ್ಕಿದೆ ಎಂತಲೂ ನೀವು ನಿಮ್ಮ ಪತ್ರದಲ್ಲಿ ಸೂಚಿಸಿರುವಿರಿ ಮ. ರಾ. ನಂಜುಂಡಯ್ಯನವರು ನೀವು ಪಿಡಿವಾಗಿ ಬರ್ಹಿಸಲಾಲದಲ್ಲಿ ನೀವು ಮಿತವಾದ ವೈಶ್ಯ ಕುಲಕ್ಕೆ ಸೇರಿದವರಲ್ಲವೆಂದು ಹೇಳಿರುತ್ತಾರೆ ನಿಮ್ಮ ಪತ್ರದಿಂದ ಕಾಣಬರುತ್ತದೆ ಈ ವಿಷಯದಲ್ಲಿ ನಿಮ್ಮಲ್ಲಿ ಕಲಹವು ಉಂಟೆಂದು ನಂಬುತ್ತೇನೆ ... ಗೋಮಠೀಯರೂ ಒಬ್ಬರೇ ಎಂತಲೂ ಗೋಮಠೀಯರು ಗೋಹರಿಕರಿಗಿದ್ದರೆಂದು ವೇದಗಳ ಕಾಲದಲ್ಲಿ ವೈಶ್ಯಕುಲಕ್ಕೆ ಸೇರಿದ್ದರೆಂತಲೂ ನಿಮ್ಮಲ್ಲಿ ಕೆಲವರು ಸ್ಥಾಪಿಸುವದಕ್ಕೆ ಪ್ರಯತ್ನಪಡುತ್ತೀರಿ ಇದು ಅಲ್ಲದೆ ನಿಮ್ಮಲ್ಲಿ ಕೆಲವರು ಶೃಂಗೇರಿ ಗುರುಗಳಿಗೆ ಪಾದಪೂಜೆ ಮಾಡುವದಕ್ಕೆ ಒಪ್ಪದೇ ಹೋದರು. ಇದಕ್ಕೆ ಕಾರಣವಾವುದೆಂದರೆ, ಶೃಂಗೇರಿ ಗುರುಗಳು ನಿಮ್ಮ ಪಂಗಡದವರನ್ನು ದ್ವಿಜರೆಂದು ಒಪ್ಪದೇ ಹೋದದ್ದು ನಿಮ್ಮ ಪಂಗಡದವರು ಇನ್ನುಮುಂದೆ ಬ್ರಾಹ್ಮಣರನ್ನು ಪುರೋಹಿತರನ್ನಾಗಿ ನೇಮಿಸುವದನ್ನು ಬಿಟ್ಟು ನಿಮ್ಮ ಜಾತಿಯಲ್ಲಿ

ಯೇ ಪುರೋಹಿತರನ್ನು ನೇಮಿಸಿಕೊಳ್ಳಬೇಕೆಂತಲೂ ನಿಮ್ಮ ಮಕ್ಕಳಿಗೆಲ್ಲಾ ವಿದ್ಯಾಭ್ಯಾಸ ಮಾಡಿಸಬೇಕೆಂತಲೂ ಅಭಿಪ್ರಾಯ ಪಟ್ಟಿರುವರೆಂದು ನನಗೆ ತಿಳಿದ ಬಂತು ಈ ಸಂಗತಿಗಳ ವಿಷಯ ನೀವು ನನ್ನ ಅಭಿಪ್ರಾಯವನ್ನು ಕೇಳುತ್ತೀರಿ ನಾನು ನನ್ನ ಅಭಿಪ್ರಾಯವನ್ನು ಇಲ್ಲಿ ತಿಳಿಸುತ್ತೇನೆ ನೀವು ನನ್ನ ಸ್ನೇಹಿತರೆಂತಲೂ ಸತ್ಯವನು ಗ್ರಹಿಸುವರೆಂತಲೂ ನಾನು ತಿಳಿದಿರುವೆನು ಅದ್ದರಿಂದಲೇ ನಿನಗೆ ಸತ್ಯವಾಗಿಯೂ ಒಳ್ಳೆಯದಾಗಿಯೂ ಇರುವ ಸಂಗತಿಯನ್ನು ತಿಳಿಸಬೇಕೆಂದು ಕುತೂಹಲಪಡುತ್ತೇನೆ ನಿಮ್ಮ ಮನಸ್ಸಿಗೆ ಬೇದವನ್ನುಂಟು ಮಾಡಬೇಕೆಂಬುದಾಗಲಿ, ಅಥವಾ ನಿಮ್ಮ ಪಂಗಡದವರಿಗೆ ಅವಮಾನವನ್ನುಂಟುಮಾಡಬೇಕೆಂಬುದಾಗಲಿ ನನ್ನ ಅಭಿಪ್ರಾಯವಲ್ಲ

ಸ್ನೇಹಿತರೇ, ಕೆಲಸಕ್ಕೆ ಬಾರದ ಸಂಗತಿಗಳ ವಿಷಯದಲ್ಲಿ ಇಷ್ಟು ಗಲಾಟೆಯೇತಕ್ಕೆ? ಪುರುಷಸೂಕ್ತವೇ ಅಬದ್ಧವೆಂದು ನೀವು ಅರಿಯಿರಾ? ದೇವರು ಜಗದಾದಿಯಲ್ಲಿ ತನ್ನ ದೇಹದ ನಾಲ್ಕು ಭಾಗಗಳಿಂದ ನಾಲ್ಕು ಜಾತಿಗಳನ್ನು ಉಂಟುಮಾಡಿ ಸದರಿ ಜಾತಿಯವರು ಇನ್ನೊಂದಿಗೂ ಒಂದಾಗಬಾರದೆಂಬುವ ಸಂಗತಿಯು ಎಷ್ಟೋ ಅಸಂಬದ್ಧವೆಂದು ನೀವು ಪರಿಷ್ಕಾರವಾಗಿ ತಿಳಿದುಕೊಂಡಿರುವಿರಿ ನಾನಂತೂ ಇವುಗಳನ್ನು ಬರೀ ಕಟ್ಟುಕಥೆಗಳೆಂದೇ ಭಾವಿಸುವೆನು. ಜಾತಿಯ ಪವಿತ್ರತೆ ಕಲ್ಪನೆಯೇದ ವಿವೇಕಿಗಳು ತಿಳಿದಿರುವರು ಆಯಾ ಪಂಗಡದವರು ತಮ್ಮ ಜಾತಿಗಳ ಶ್ರೇಷ್ಠತೆಯನ್ನು ಕುರಿತು ನಾನಾ ಥಿಯರಿಗಳನ್ನು ... ಇಷ್ಟೆಂದು ದೃಢವಾಗಿ ಸ್ಥಾಪಿಸಲು ವಿದ್ಯಾವಂತರಾದವರೂ ಬ್ರಾಹ್ಮಣರ ಮತ್ತು ರಾಜವಂಶೀಕರ ಪೂರ್ವೋತ್ತರಗಳನ್ನು ಪರಿಶೀಲನೆ ಮಾಡಿದವರೂ ಅವುಗಳು ಮನುಷ್ಯ ಕಲ್ಪಿತವೆಂದು ಹೇಳುವರು. ಹೀಗಿರುವುದರಿಂದ ಬುದ್ಧಿವಂತರಾದ ನೀವು ಈ ಅಲ್ಪ ಸಂಗತಿಗಳ ವಿಷಯ ಯಾಕೆ ಚಿಂತಿಸುವಿರಿ? ನರಿಯು ಮತ್ತು ಕಾಗೆಯ ಕಥೆಯು ನಿಮಗೆ ಗೊತ್ತಿದೆಯಲ್ಲ ಕಾಗೆಯು ಬಾಯಿಯಲ್ಲಿ ತಿಂಡಿ ಇದ್ದಾಗ್ಗೆ ಬಂದುದಾಯಿತು—ಆಹಾ ಈ ನನ್ನ ಸ್ನೇಹಿತನು ಎಷ್ಟು ರೂಪವಂತ? ಇವನ ರೆಕ್ಕೆಗಳು ಎಷ್ಟು ಅಲಂಕಾರವಾಗಿವೆ? ಇವನ ಗರಿಗಳು ಎಷ್ಟು ನಯವಾಗಿವೆಯಲ್ಲಾ? ಇವನ ಕಂಠವಂತೂ ಬಹು ಮಧುರವಾಗಿರುವದು ಇವನ ಗಾನವನ್ನು ಕೇಳುವದಕ್ಕೆ ನನ್ನ ಮನವು ತವಕಪಡುತ್ತದೆ ಎಂಬದಾಗಿ ನರಿಯು ಹೊಗಳುತ್ತಿರುವಲ್ಲಿ, ವಿವೇಕವಿಲ್ಲದ ಕಾಗೆಯು ಅದರ ಹೊಗಳಿಕೆಗೆ ಮೆಚ್ಚಿ ಹಾಡುವದಕ್ಕೆ ತೊಡಗಲು ಅದರ ಬಾಯಿಯಲ್ಲಿದ್ದ ಆಹಾರವು ಕೆಳಗೆ ಬಿದ್ದಿತು ಅದು ಬಿದ್ದ ಕ್ಷಣವೇ ನರಿಯು ಅದನ್ನು ಕಚ್ಚಿಕೊಂಡು ಓಡಿ ಹೋಯಿತಲ್ಲವೇ?

ಒಂದು ವೇಳೆ ಯಾರಾದರೂ ಒಬ್ಬ ಗುರುವು ಬಂದು ನಿಮ್ಮ ಜಾತಿಯು ಶ್ರೇಷ್ಠವಾದುದೆಂತಲೂ ಅದು ಬಹು ಪುರಾತನಕಾಲದಿಂದ ಬಂದಿದೆಂತಲೂ ನಿಮ್ಮನ್ನು ಹೊಗಳಿದರೆ ನೀವು ಆ ಗುರುವಿಗೆ ಬೇಕಾದಷ್ಟು ಕಾಣಿಕೆಗಳನ್ನು ಕೊಡುವುದು ಸರಿಯೇ ಇದರ ಅವಿವೇಕತೆಯನ್ನು ನೀವು ಚನ್ನಾಗಿ ತಿಳಿದಿರುವಿರಿ ನೀವ ಪಂಗಡದವರು ನಿಮ್ಮನ್ನು ದ್ವಿಜರೆಂದು ಭಾವಿಸದೇ ಇರುವವರಿಂದ ಅವಮಾನ ಸಂಭವಿಸಿದೆ ಎಂತಲೂ ನೀವು ಪಾದಗಳಿಗನುಸಾರವಾದ ಪೂಜೆ ಪುನಸ್ಕಾರಗಳನ್ನು ನಡುವೆ ಮುಂಚಿನ ಕಾಲದಲ್ಲಿ ಆಚರಿಸುವುದಕ್ಕಾಗುವುದಿಲ್ಲವೆಂತಲೂ, ಜನಿವಾರವನ್ನು ತ್ಯಜಿಸಬೇಕೆಂತಲೂ ನಿಮ್ಮಲ್ಲಿ ಅನೇಕರು ನಂಬುತ್ತಾರೆ ಬ್ರಾಹ್ಮಣ ಸ್ನೇಹಿತರ ಯೋಗ್ಯತೆಯನ್ನು ಯೋಗ್ಯನನ್ನಾಗಿ ಮಾಡುವದು ನಿಜವೆಂದು ನೀವು ತಿಳಿದಿರುವಿರಿ ಒಂದು ನೇರವು—ನನ್ನಕ್ಕೆ ಏರಡನೇದು—ವಿದ್ಯಾರ್ಥಿ ಇದರ ವಿಷಯ ನಾನು ನಂಬಿರತಕ್ಕ ಸತ್ಯವೇನೆಂದರೆ "ಕಳ್ಳ ತಕ್ಕುದಿ ದೇವರಿಗೆ ಅನಿಷ್ಟವಾಗಿದೆ ಆದರೆ ಸರಿಯಾದ ತೂಕದ ಕಲ್ಲು ಆತನಿಗೆ ಇಷ್ಟವಾಗಿದೆ" ಎಂಬದಾಗಿ ತಿಳಿಸುತ್ತದೆ ತನ್ನ ವ್ಯಾಪಾರದಲ್ಲಿ ಮೋಸವನ್ನಭ್ಯಾಸಿಸದ ಕೋಮಟಿಯನ್ನು ಎಲ್ಲರೂ ಗೌರವದಿಂದ ಕಾಣುವರೆಂಬುವುದರಲ್ಲಿ ಯಾವ ಸಂಶಯವೂ ಇರುವುದಿಲ್ಲ

ದೇವರು ಯಾವನಿಗೆ ಐಶ್ವರ್ಯವನ್ನು ಕೊಟ್ಟರೆ ಅವನು ಅದನ್ನು ತನ್ನ ಸಹೋದರರಾದ ಅನ್ಯಜನರ ಉಪಯೋಗಾರ್ಥವಾಗಿಯೂ ದೇಶದೇಳಿಗೆಗೂ ಉಪಯೋಗಿಸುವನು ಅವನ ಬಡವರಿಗೆ ವಿದ್ಯಾದಾನವನ್ನು ಮಾಡುವನು ಕಷ್ಟದಲ್ಲಿ ಬಿದ್ದ ನರಳುತ್ತಿರುವವರನ್ನು ಸಂರಕ್ಷಿಸುವನು ಅಂಥಾ ಕೋಮಟಿಗನನ್ನೇ ಜನರು ಪ್ರಶಂಸೆ ಮರ್ಯಾದೆಯಿಂದ ಕಾಣುವರು ಮೋಸಗಾರನೂ ಲೋಭಿಯೂ ಆಗಿರುವ ಕೋಮಟಿಯು ಜನಿವಾರ ಧರಿಸಿದರೂ ವಿವಾದ ದ್ವಿಜನಲ್ಲ ಯಾರಿಗೆ ಸತ್ಯತೆಯೂ ಅಸ್ವಾರ್ಥತೆಯೂ ಆಭರಣವಾಗಿರುವವೋ ಅವನೇ ದ್ವಿಜನು

ಪ್ರತಿಯೊಬ್ಬರಿಗೂ ಮರಣವು ಸಂಭವಿಸುತ್ತದೆಂದ ನೀವು ತಿಳಿದಿರುತ್ತೀರಿ ಸತ್ಯವಂತನೂ ಎಲ್ಲಾ ಮನುಷ್ಯರನ್ನು ಸೃಷ್ಟಿಸಿದವನೂ ಆದ ದೇವರ ಇದಿರಿನಲ್ಲಿ ಒಬ್ಬ ಕೋಮಟಿಯು ನಿಂತುಕೊಳ್ಳುವಲ್ಲಿ ದೇವರು ಆತನನ್ನು ನೋಡಿ—ನೀನು ವೈಶ್ಯನೋ ವೈಶ್ಯನಲ್ಲವೋ? ನೀನು ಪೂರ್ವಿಕರನ್ನು ವೇದಕ್ಕನುಸಾರವಾಗಿ ಮಾಡಿದೆಯೋ ಇಲ್ಲವೋ? ನೀನು ಜನಿವಾರವನ್ನು ಕಟ್ಟಳೆಗನುಸಾರವಾಗಿ ಧರಿಸಿಕೊಂಡಿದ್ದೆಯಾ? ಎಂಬೀ ಪ್ರಶ್ನೆಗಳನ್ನು ಕೇಳುತ್ತಾನೋ? ಎಂದಿಗೂ ಇಲ್ಲ ಆತನು ಕೇಳುವುದೇನೆಂದರೆ—ನೀನು ಸತ್ಯವನ್ನು ನುಡಿದ್ದೆಯಾ? ನೀನು ನ್ಯಾಯವಾದ ದ್ರವ್ಯವನ್ನು ಮಾಡುತ್ತಿದ್ದೆಯಾ? ನೀನು ಬಡವರಿಗೆ ದಯಾಳುವಾಗಿದ್ದೆಯಾ? ಎಂಬದಾಗಿ ಕೇಳುವನು ಸತ್ಯವೂ ನೀತಿಯೂ ಕರುಣೆಯೂ ದೇವರು ಮೆಚ್ಚತಕ್ಕ ಗುಣಗಳಾಗಿವೆ ಆದ್ದರಿಂದ ಸ್ನೇಹಿತರೇ, ನಾನು ಮೇಲೆ ತಿಳಿಸಿದ ಸಂಗತಿಗಳು ಸತ್ಯವಾದವುಗಳೆಂದು ನೀವು ತಿಳಿದುಕೊಂಡಿರುವಿರಿ ಭಗವಂತನು ನಿಮ್ಮನ್ನು ಚನ್ನಾಗಿ ಆಶೀರ್ವದಿಸಿ ಆಯುರಾರೋಗ್ಯಭಾಗ್ಯಗಳಿಂದ ತುಂಬಿಸಲೆಂದು ಪ್ರಾರ್ಥಿಸುತ್ತೇನೆ ನಿಮ್ಮ ಪಂಗಡದವರು ಸತ್ಯತೆಯಲ್ಲಿಯೂ ಪರೋಪಕಾರದಲ್ಲಿಯೂ ವಿದ್ಯೆಯಲ್ಲಿಯೂ ದಿನೇ ದಿನೇ ಅಭಿವೃದ್ಧಿ ಹೊಂದಿ ಜನಸಮುದಾಯಕ್ಕೆ ಪ್ರಯೋಜನಕಾರಿಗಳೆಂದು ಕೋರುತ್ತೇನೆ

ಸತ್ಯವಾದಿ

ಒಳದೇಶದ ವೃತ್ತಾಂತಗಳು.

ನಂಜನಗೂಡಿನಲ್ಲಿ ಒಂದು ಪರಸ್ಪರ ಸಹಾಯ ಸಂಘವನ್ನು ಸ್ಥಾಪಿಸಬೇಕೆಂದು ಅಲ್ಲಿನ ಅಮಲ್ದಾರರು ಪ್ರಜೆಗಳಿಗೆ ಪ್ರೋತ್ಸಾಹಿಸುತ್ತಿದ್ದಾರೆಂದು ತಿಳಿಯುವುದು

❀❀❀

ರಾಜಧಾನಿಯಲ್ಲಿರುವ ವಿ॥ ಜಿ ಸುಬ್ಬಣ್ಣನವರ ಸರಸ್ವತೀಮಂದಿರ ಮೈ... ವರು ೧೦೦ ರೂಪಾಯಿನ ಬಾಬತು ಏಳು ನೋಟುಗಳನ್ನು ಕಳೆದುಕೊಂಡರು ಅವನ್ನು ಪತ್ತೆ ಮಾಡಿದವರಿಗೆ ೫೦ ರೂಪಾಯಿ ಬಹುಮಾನ ಕೊಡುವಂತೆ ತಿಳಿಸಿದ್ದಾರೆ

❀❀❀

ರಾಜಧಾನಿಯ ಬಳಿ ... ಸಾಹುಕಾರ್ ... ನಾಗಯ್ಯನವರ ಅಂಗಡಿಯಲ್ಲಿ ಕಳವಾಗಿದ್ದ ... ವಸ್ತು ... ಪ್ಯಾಕಿ ೬,೦೦೦ ರೂಪಾಯಿಯಷ್ಟು ಪತ್ತೆ ಆಗಿರುವಂತೆಯೂ, ಉಳಿದದ್ದನ್ನು ಪತ್ತೆಮಾಡುವುದರಲ್ಲಿ ಪೋಲೀಸಿನವರು ತೊಡಗಿದ್ದಾರೆಂತಲೂ ಕೇಳುತ್ತೇವೆ

❀❀❀

ಸಿವಿಲ್ ಕೋರ್ಟುಗಳಲ್ಲಿ ಪಕ್ಷಿಗಾರರು ಪತ್ರಗಳಲ್ಲಿ ಹೆಚ್ಚಿನ ಗುರುತುಗಳನ್ನು ರುಜುವಾತು ಮಾಡಬೇಕಾದಲ್ಲಿ ಪ್ರತಿ ಒಂದು ಗುರುತಿಗೂ ೫ ರೂಪಾಯಿಯಂತೆ ಫೀಜನ್ನು ಕೋರ್ಟಿಗೆ ಕಟ್ಟಬೇಕೆಂತಲೂ, ಈ ಮೊಬಲಗು ಡಿಕ್ರಿಯಲ್ಲಿ ಸೇರಿಸಲ್ಪಡುತ್ತದೆಂತಲೂ ಮೈಸೂರು ಚೀಫ್ ಕೋರ್ಟಿನವರು ಹುಕುಂ ಕೊಟ್ಟಿದ್ದಾರೆ

❀❀❀

ಕಳೆದ ಭಾನುವಾರ ಸಾಯಂಕಾಲ ರಾಜಧಾನಿಯ ಮರಿಮಲ್ಲಪ್ಪನವರ ಹೈಸ್ಕೂಲ್ ಮೈದಾನದಲ್ಲಿ ಪುರಜನರು ಬ್ರಾಹ್ಮಣ ಸ್ಟ್ಯಾಂಡರ್ಡ್ ನಂ॥ ದೊರೆಸ್ವಾಮಯ್ಯಂಗಾರ್‌ರನ್ನು ಕರೆಸಿಕೊಂಡು, ಅವರ ಕಸರತ್ತುಗಳನ್ನು ನೋಡಿ ಮೆಚ್ಚಿ, ಅವರಿಗೆ ಒಂದು ಮೆಡಲ್ ಎಂಬ ಚಿನ್ನದ ಬಿರುದನ್ನೂ ಕೆಲವು ಹಣವನ್ನೂ ಬಹುಮಾನವಾಗಿ ಕೊಟ್ಟರು.

❀❀❀

ರಾಜಧಾನಿಯ ಪಟ್ಟಣಾಭಿವೃದ್ಧಿಯಲ್ಲಿರುವ ಕೃಷ್ಣಮೂರ್ತಿಪುರದಲ್ಲಿ ಮಿ॥ ವಿಷ್ಣುದಾಸ್ ಚತುರ್ಭುಜದಾಸ್ ಎಂಬ ಗುಜರಾತಿ ಸಾಹುಕಾರರು ಒಂದು ವೇಣುಗೋಪಾಲಸ್ವಾಮಿ ದೇವಸ್ಥಾನವನ್ನು ಕಟ್ಟಿಸಿ, ಅಲ್ಲಿ ಅರ್ಚನಾದಿ ಸೇವೆಗಳನ್ನು ನಡೆಸತಕ್ಕ ಪರಿಗೋಸ್ಕರ ೫ ಮನೆಗಳನ್ನು ಕಟ್ಟಿಸಿಕೊಟ್ಟು, ಗದ್ದೆಗಳನ್ನು ಬಿಟ್ಟುಕೊಟ್ಟಿದ್ದಾರೆ ಇದಕ್ಕೆಲ್ಲಾ ಅವರು ತಮ್ಮ ಆಸ್ತಿಯಿಂದ ೧೯,೦೦೦ ರೂಪಾಯಿ ವಿನಿಯೋಗಿಸಿದರೆಂದು ತಿಳಿಯುವುದು

❀❀❀

ರಾಜಧಾನಿಯ ಹೆಲ್ತ್ ಆಫೀಸರು ಹಿಂದಿನ ವಾರ ಇಲ್ಲಿನ ಕೆಲವರಿಗೆ ಪ್ಲೇಗ್ ಇನಾಕ್ಯುಲೇಷನ್ನು ಹಾಕಿದರು ಒಂದೇ ಸೀಸೆಯಿಂದ ತೆಗೆದ ರಸವನ್ನು ಉಪಯೋಗಿಸಿ ಚುಚ್ಚುಮದ್ದು ಹಾಕಿದವರು ... ಒಬ್ಬ ಹೆಂಗಸು ೩ ದಿನಗಳ ಮೇಲೆ ಮೃತಪಟ್ಟಳು ಹೆಲ್ತ್ ಆಫೀಸರು ತನಿಖೆಮಾಡಿದ್ದರಲ್ಲಿ ಆ ಹೆಂಗಸಿಗೆ ಚುಚ್ಚುಮದ್ದು ಹಾಕುವಾಗಲೇ ಜ್ವರವಿದ್ದಿತೆಂದು ಕಂಡುಬಂದಿತು ... ಪ್ಲೇಗ್ ... ಚುಚ್ಚುಮದ್ದು ಹಾಕಿದ್ದರಿಂದ ಅಪಾಯವೇನೂ ಆಗಲಿಲ್ಲವೆಂದು ಅವರು ತಿಳಿಸುತ್ತಾರೆ

❀❀❀

ರಾಜಧಾನಿಯ ದೊಡ್ಡ ಪೇಟೆಯಲ್ಲಿ ನಗರದ ವ್ಯಾಪಾರಕ್ಕೆ ... ತುಂಬಾ ಕೆಡುವುದಕ್ಕೂ ... ನಡೆಸಿರುವ ಮಿ॥ ಕಾವೇರಿಪಟ್ಟಂ ನಸ್ಪಾಯ ಶೆಟ್ಟರು ಸುಮಾರು ೬೦ ವರುಷದ ಒಬ್ಬ ಕುಮಾರನು ಕಳೆದ ವಾರ ಕಾಣೆಯಾದನು ಮಿ॥ ಶೆಟ್ಟರು ಈ ಮಗನಿಗೆ ಬಹಳ ಅಕ್ಕರೆಯಿಂದ ... ಆ ಹುಡುಗನ ಹೆಂಡತಿಯಾದ ... ಸುಮಾರು ೩ ತಿಂಗಳಿಂದ ... ಈ ವಿಷಯವು ಅನೇಕರಲ್ಲಿ ತುಂಬಾ ವ್ಯಸನವನ್ನುಂಟುಮಾಡಿದೆ

❀❀❀

ಒಬ್ಬ ಬ್ರಾಹ್ಮಣರು ... ಸಿಲಿಗಿನ ... ಸೇರಿದ ... ನಾಗರ ... ದಕ್ಷಿಣ ... ವಿಂಗ್ ... ಗರ್ಭಿಣಿಯಾದ ಹೆಂಡತಿ ಮತ್ತು ಇಬ್ಬರು ಗಂಡುಹುಡುಗರನ್ನು ಕರೆದುಕೊಂಡು ನಂಜನಗೂಡು ರೈಲ್ವೇ ಸ್ಟೇಷನ್ನಿನಲ್ಲಿ ಟಿಕೆಟ್ ತೆಗೆದುಕೊಂಡು ... ಹೆಂಡತಿ ಮಕ್ಕಳನ್ನು ರೈಲುಗಾಡಿಯಲ್ಲಿ ಕೂರಿಸಿ, ತಾನು ... ರೈಲು ಹೊರಟುಹೋಯಿತು ಆ ಗಂಡಸು ನಂಜನಗೂಡಿನಲ್ಲಿ ಉಳಿದುಕೊಂಡರು ಹುಡುಗರು ಮೈಸೂರು ಸ್ಟೇಷನ್ನಿನಲ್ಲಿ ಇಳಿದಾಗ ಅವರು ಒಬ್ಬನನ್ನು ಯಾರೋ ಅಪಹರಿಸಿಕೊಂಡು ಹೋದರೆಂತಲೂ, ಆ ತಂದೆತಾಯಿಗಳು ಹುಡುಕಿ ಸಿಕ್ಕದೆ ಕೊರಗುತ್ತಿದ್ದಾರೆಂತಲೂ ತಿಳಿದು ಬಂದಿದೆ ಎಂಬುದೇ

❀❀❀

"ಗಂಗಾಧರ" ಎಂಬ ಒಂದು ಪ್ರಹಸನವನ್ನು ಬರೆಯುವುದು—ಬೆಂಗಳೂರು ದಂಡು ಸರ್ಕಾರ್ ಕಚೇರಿಯಲ್ಲಿರುವ ಕೆಲವು ಜನ ವೈಶ್ಯಯುವಕರು ಅಲ್ಲಿನ ದೊಡ್ಡ ಶಾನುಭೋಗರ ಪ್ರೋತ್ಸಾಹದಿಂದ "ಲೀಲಾವಿನೋದ" ಸಭೆಯನ್ನು ಸುಮಾರು ಎರಡು ವರುಷಗಳ ಕೆಳಗೆ ಸ್ಥಾಪಿಸಿದರು ಇವರ ಲೀಲೆಯು ಮತ್ತು ವಿನೋದವು ಅನಾಥರನ್ನು ಪೋಷಿಸುವುದರಲ್ಲಿಯೂ, ದೀನದಲಿತರಿಗೆ ಸಹಾಯ ಮಾಡುವುದರಲ್ಲಿಯೂ ಏರ್ಪಟ್ಟಿರುವುದು ಇಂಥಾ ಲೀಲೆಯನ್ನು ನಮ್ಮ ದೇಶದ ಯುವಕರು ಅನುಭವಿಸುವದು ಉತ್ತಮ ಕಳೆದ ೧೯ ತಾ. ರಾತ್ರಿ ಮಂಗಳವಾರ ಸಭೆಯವರು ಸರ್ ಪಿ.ಚೆಟ್ಟಿ ಪಟ್ಟಣಕರ ಸಹಾಯದಿಂದ ಸುಮಾರು ೩ ಗಂಟೆ ನಾಟಕದ ಬಡವನಿಗೆ ಭೋಜನ ಮಾಡಿಸಿದರು ನಿರ್ಗತಿಗಳಾದ ಈ ಸಂಘದ ಮೆಂಬರುಗಳು ಎಲ್ಲಾ ಕೆಲಸವನ್ನು ಮಾಡುತ್ತಿರುವುದಲ್ಲದೆ ಬಡವರನ್ನು ಬಹಳ ಆದರ ಪುರಸ್ಸರವಾಗಿ ಬರಮಾಡಿಕೊಂಡು ತೃಪ್ತಿಯಾಗುವಂತೆ ಭೋಜನ ಮಾಡಿಸಿದರು ಈ ಸಭೆಯವರು ಅನೇಕವೇಳೆ ಬಡವರಿಗೆ ಬಟ್ಟೆಗಳನ್ನೂ ಕೊಡುತ್ತಾರೆ ಬಡಜನರಿಗೆ ಅತ್ಯುತ್ತಮವಾಗಿರುವ ಈ ಸಭೆಯು ಬಹುಕಾಲ ಸ್ಥಿರವಾಗಿದ್ದು ಇನ್ನು ಹೆಚ್ಚು ಧರ್ಮ ಕೆಲಸಗಳನ್ನು ಮಾಡುತ್ತಿರಲಿ ಎಂದು ಸರ್ವ ಭಗವಂತನನ್ನು ಪ್ರಾರ್ಥಿಸುತ್ತೇನೆ ಎಂಬುದೇ

ಕಡೂರು ಉಪಾಧ್ಯಾಯರ ಸಂಘವು

ವಿದ್ಯಾಭ್ಯಾಸದ ಇಲಾಖಾ ಇನ್ಸ್‌ಪೆಕ್ಟರ್ ಜನರಲ್ ಸಾಹೇಬರವರಿಂದ ನಿಯಮಿತವಾದ ಕರಿಕ್ಯುಲಮಿನಂತೆ ಎಲ್ಲಾ ಉಪಾಧ್ಯಾಯರುಗಳೂ ಕ್ರಮವರಿತು ಪಾಠಗಳನ್ನು ಬೋಧಿಸಿ, ವಿದ್ಯಾರ್ಥಿಗಳ ನಡೆನುಡಿಗಳನ್ನು ತಿದ್ದಿ, ನಾರ್ಮಲ್ ಸ್ಕೂಲಿನಿಂದ ಕ್ರಮಾಭ್ಯಾಸಿಗಳಾಗಿ ಬಂದ ಉಪಾಧ್ಯಾಯರಂತೆ ಕೆಲಸಮಾಡುವುದು ಸುಲಭಸಾಧ್ಯವೆಂದು ತಿಳಿಯಲನುಕೂಲಿಸಬೇಕೆಂಬ ಆಶಯದಿಂದ ಕಡೂರು ಎ ವಿ ಸ್ಕೂಲ್ ಹೆಡ್ ಮಾಸ್ಟರ್ ಮಿ॥ ಚಿದಂಬರೈಯ್ಯನವರಿಂದ ಇದೇ ಡಿಸೆಂಬರ್ ತಾ ೧ ನೇ ಭಾನುವಾರ ಕಡೂರು ಎ ವಿ ಸ್ಕೂಲಿನಲ್ಲಿ ಸಕಲ ಉಪಾಧ್ಯಾಯರೂ ಸಭೆ ಸೇರಿ, ಈ ಕೆಲಸವು ಯುಕ್ತವಾದುದೇ ಹೇಗೆಂದು ನಿಶ್ಚೈಸಲು ಆ ತಾರೀಖಿಗೆ ಕಡೂರಿಗೆ ಬಂದೊದಗಲನುಕೂಲವಾದ ಸ್ಥಳಗಳಿಗೆ ಆಹ್ವಾನಪತ್ರಿಕೆಯು ಕಳುಹಿಸಲ್ಪಟ್ಟದರ ಮೇಲೆ ಆ ದಿವಸಕ್ಕೆ ಸರಿಯಾಗಿ ೪೦ ಜನ ಉಪಾಧ್ಯಾಯರುಗಳು ಸಭಾಲಂಕಾರಮಾಡಿದರು ಕಾರಣಾಂತರಗಳಿಂದ ಬಂದೊದಗಲಾರದ ಕೆಲವರು ತಮ್ಮ ತಮ್ಮ ಅಭಿಪ್ರಾಯಗಳನ್ನು ಬರೆಸಿ ಕಳುಹಿಸಿದ್ದರು. ಮಿ॥ ಚಿದಂಬರೈಯ್ಯನವರ ಪ್ರಾರ್ಥನೆಯಂತೆ ಸಭಾಧ್ಯಕ್ಷತೆಯನ್ನು ಚಿತ್ರದುರ್ಗದ ಡಿ॥ ಹೊಳಲಕೆರೆ ಎ. ವಿ ಸ್ಕೂಲ್ ಹೆಡ್ ಮಾಸ್ಟರ್ ಮಿ॥ ವೈ ಸುಬ್ಬರಾಯರು ವಹಿಸಿದರು ಮಿ॥ ಚಿದಂಬರೈಯ್ಯನವರು ಎದ್ದುನಿಂತು ದೇವತಾ ಸ್ತೋತ್ರಪುರಸ್ಸರವಾಗಿ ಸಭಾಕರ್ತವ್ಯದ ಉದ್ದೇಶವನ್ನು ಲಲಿತಭಾಷೆಯಿಂದ ಸಕಾರಣವಾಗಿ ವಿವರಿಸಿದರು ತರುವಾಯ ಚಿಕ್ಕಮಗಳೂರು, ಯಡೆಹಳ್ಳಿ, ಹೊನ್ನಾಳಿ ಮೊದಲಾದ ಕಡೆಯಿಂದ ಬಂದಿದ್ದ ಲೇಖನಗಳು ಓದಲ್ಪಟ್ಟವು ಸಭಿಕರುಗಳ ಅನುಮತಿಯಿಂದ ಸಂಘವು "ಉಪಾಧ್ಯಾಯ ಸಂಘ" ವೆಂಬಭಿಧಾನದಿಂದ ಏರ್ಪಟ್ಟಿತು ಈ ಸಂಘಕ್ಕೆ ಕಡೂರು ಎ ವಿ ಸ್ಕೂಲ್ ಹೆಡ್ ಮಾಸ್ಟರ್ ಮಿ॥ ಚಿದಂಬರೈಯ್ಯನವರು ಕಾರ್ಯದರ್ಶಿಗಳಾಗಿಯೂ, ಹೊಳಲಕೆರೆ ಎ ವಿ ಸ್ಕೂಲ್ ಹೆಡ್ ಮಾಸ್ಟರ್ ಮಿ॥ ಸುಬ್ಬರಾಯರು ಜಾಯಿಂಟ್ ಸೆಕ್ರೆಟರಿಗಳಾಗಿಯೂ ಅಜ್ಜಂಪುರದ ಟಿ ಬಿ ಸ್ಕೂಲ್ ಹೆಡ್ ಮಾಸ್ಟರ್ ಮಿ॥ ಕೆ ಶಂಕರಪ್ಪನವರು ಟ್ರೆಷರರಾಗಿಯೂ ಇರಬೇಕೆಂದೂ, ಎಕ್ಸಿಕ್ಯುಟಿವ್ ಕಮಿಟಿ ಆವಶ್ಯಕವೆಂದೂ, ಇದಕ್ಕೆ ಚಿಕ್ಕಮಗಳೂರು ಗ॥ ಕನ್ನಡ ಸ್ಕೂಲ್ ಹೆಡ್ ಮಾಸ್ಟರ್ ಮಿ॥ ಸಂಪತ್ಕುಮಾರಯ್ಯಂಗಾರ್ಯರು, ಸಖರಾಯಪಟ್ಟಣದ ಟಿ ಬಿ ಸ್ಕೂಲ್ ಹೆ ಮಾ ಮಿ॥ ರಂಗರಾಜೈಯ್ಯಂಗಾರ್ಯರು, ಸಂಗಟಿ ಸ್ಕೂಲ್ ಹೆ ಮಾ ಮಿ॥ ವೆಂಕಟರಾಮೈಯ್ಯನವರು, ಲಿಂಗದಹಳ್ಳಿ ಸ್ಕೂಲ್ ಹೆ ಮಾ ಮಿ॥ ರಾಮೈಯ್ಯನವರು, ಅಜ್ಜಂಪುರದ ಟಿ ಬಿ ಸ್ಕೂಲ್ ಅ॥ ಮಾ ಮಿ॥ ಡಿ ವೆಂಕಟರಾಯರೂ ಮೆಂಬರುಗಳಾಗಿರಬೇಕೆಂದೂ ನಿಶ್ಚಿತವಾಯಿತು ೧೦ ರೂಪಾಯಿ ಸಂಬಳದವರೆಗೆ ಮಾಹೆಯಾನಾ ೩ ಆಣೆಯಂತೆಯೂ, ಅದಕ್ಕೆ ಮೇಲ್ಪಟ್ಟವರು ೪ ಆಣೆಯಂತೆಯೂ ಸಂಘದ ಕಾರ್ಯಾನುಕೂಲತೆಗೆ ಪ್ರತಿ ತಿಂಗಳಲ್ಲಿಯೂ ಚಂದಾ ಕೊಡಬೇಕಾಗಿ ನಿಶ್ಚೈಸಲ್ಪಟ್ಟಿತು ಕೆಲವು ರೂಲುಗಳೂ ಕರ್ತವ್ಯಗಳೂ ಚರ್ಚಿತವಾಗಿ ನಿಶ್ಚಿತವಾದವು ೧೯೦೮ ನೆ ಇಸವಿ ಜನವರಿ ತಾ ೧೨ ನೆ ಭಾನುವಾರ ದ್ವಿತೀಯ ಸಭೆಯು ಕಡೂರಿನಲ್ಲಿ ಸೇರಬೇಕಾಗಿಯೂ ಆ ದಿನ ಕಡೂರು ಎ ವಿ ಸ್ಕೂಲ್ ಅ ಮಾ ಮಿ॥ ಗುಂಡಪ್ಪನವರು ಇನ್‌ಫೆಂಟ್ ಎ" ತರಗತಿಯ ಬಾಲಕರಿಗೆ ಕಲಿಸಬೇಕಾದ ಅಕ್ಷರಾಭ್ಯಾಸ ವಿಧಾನವನ್ನು ಉಪನ್ಯಾಸ ಮಾಡಿ ಪ್ರತಿದರ್ಶನ ಮಾಡಬೇಕೆಂದೂ, ಮಿ॥ ಚಿದಂಬರೈಯ್ಯನವರು ಉಪಾಧ್ಯಾಯರುಗಳಿಗಿರಬೇಕಾದ ಯೋಗ್ಯತಾ ವಿಷಯವಾಗಿ ಉಪನ್ಯಾಸ ಮಾಡಬೇಕಾಗಿಯೂ ನಿಶ್ಚಿತವಾಯಿತು ಮಿ॥ ಕೆ ಶಂಕರಪ್ಪನವರು ಸಭಾಧ್ಯಕ್ಷರಿಗೂ ಸಭಾಸದರಿಗೂ ಮಂಗಳಗಳುಂಟಾಗಲು ದೇವತಾ ಪ್ರಾರ್ಥನೆ ಮಾಡಿದರು ಮಿ॥ ಡಿ ವೆಂಕಟರಾಯರು ಸಭಿಕರ ಪರವಾದ ಕೃತಜ್ಞತಾಪೂರ್ವಕ ವಂದನೆಯನ್ನು ಸಭಾಧ್ಯಕ್ಷರಿಗೂ ಕಾರ್ಯದರ್ಶಿಗಳಿಗೂ ಸೂಚಿಸಿದರು ಜಯಘೋಷಪೂರ್ವಕ ಸಭೆಯು ಪೂರ್ಣವಾಯಿತು ಈ ಸಂಘವು ಉಚ್ಛ್ರಾಯಸ್ಥಿತಿಯನ್ನು ಹೊಂದಿ ಕಾರ್ಯಕಾರಿಯಾಗಿ, ಪ್ರಾರಂಭ ಮಾಡಿದ ಮಹನೀಯರಿಗೆ ಆನಂದವೂ, ಭಾವಿರಾಷ್ಟ್ರಕ್ಕೆ ಅನಂತಫಲವೂ ಲಾಭವಾಗಲೆಂದು ಜಗದೀಶನನ್ನು ಪ್ರಾರ್ಥಿಸುವ

ಪ್ರತ್ಯಕ್ಷದರ್ಶಿ

ತಾಲ್ಲೂಕು ವರ್ತಮಾನಗಳು

ತರೀಕೆರೆ.—ಈ ಪ್ರಾಂತ್ಯದಲ್ಲಿ ಬತ್ತದ ಬೆಳೆಯು ಚನ್ನಾಗಿ ಬೆಳೆದಿದ್ದರೂ ಧಾರಣೆಮಾಡಿ ಏನೋ ಇಳಿಯದೆ ರೂಪಾಯಿಗೆ ೬—೭ ಸೇರು ಅಕ್ಕಿಯೂ ಪಾವಲಿಗೆ ನಾಲ್ಕು ಸೇರು ರಾಗಿಯೂ ಮಾರಾಟವಾಗುತ್ತಲಿದೆ ಈ ಊರಿನಲ್ಲಿ ಪ್ಲೇಗ್ ಗಲಾಟೆ ಏನೂ ತತ್ಕಾಲದಲ್ಲಿ ಕಾಣಲಿಲ್ಲ ಅವುಲ್ಲಾರಪ್ರ ಊರಿನ ಪಾಕೀಜಾ ವಿಷಯದಲ್ಲಿ ಬಹಳ ಮುತುವರ್ಜಿಯಿಂದ ನೋಡಿಕೊಳ್ಳುತ್ತಿರುವಂತೆ ವರ್ತಮಾನ —ಈ ತಾಲ್ಲೂಕಿನ ಮತ್ತು ಶಿವಮೊಗ್ಗ ತಾಲ್ಲೂಕಿನ ರೈಲ್ವೆ ರಸ್ತೆಯ ಪ್ರತಿ ಸ್ಟೇಷನ್ ಬಳಿಯಲ್ಲಿಯೂ ಮ್ಯಾಂಗನೀಸ್ ಎಂಬ ಕಬ್ಬಿಣದ ಕಲ್ಲು ರಾಸಿ ರಾಸಿಯಾಗಿ ಬಿದ್ದಿರುವದನ್ನು ನೋಡಬಹುದು ಇದರ ದೆಸೆಯಿಂದ ಅನೇಕ ಬಡಬಗ್ಗರಿಗೆ ಜೀವನಕ್ಕೆ ಮಾರ್ಗವೂ ಕಂಪನಿಯವರಿಗೆ ಆದಾಯವೂ ಆಗುತ್ತಿರುವದು ಇನ್ನು ಕೆಲವರು ಮ್ಯಾಂಗನೀಸ್ ಕಲ್ಲಿನ ಗಣಿಗಳನ್ನು ಕಂಡು ಕಂಪನಿಯವರಿಗೆ ತೋರಿಸಿ ಅವರಿಂದ ಅಪೂರ್ವ ರೂಪವಾದ ದ್ರವ್ಯ ಸಂಪಾದನೆಗಾಗಿ ಬೆಟ್ಟ ಗುಡ್ಡಗಳನ್ನು ಹುಡುಕಿಕೊಂಡು ತಿರುಗುತ್ತಿರುವದಾಗಿ ವರ್ತಮಾನ ಘನ ರೆಸ್ಮಂಡ್ ಧೊರೆಯವರು ಈ ತಾಲ್ಲೂಕಿನ ಕಾಫೀ ತೋಟಗಳ ಕಡೆ ತಮ್ಮ ಕೆಲಸವನ್ನು ನಡಿಸುತ್ತಲಿದ್ದಾರೆ

ತೀರ್ಥಹಳ್ಳಿ —ಈ ಪ್ರಾಂತ್ಯಗಳಲ್ಲಿ ಸ್ವಲ್ಪ ಚಳಿ ಬಂದಿದೆ ಮೇಘಗಳು ಆವರಿಸಿಕೊಂಡು ಚಳಿಗೆ ಆತಂಕವಾಗಿದೆ ಇದನ್ನೆಲ್ಲಾ ನೋಡುವಲ್ಲಿ ಬಡಜನರ ಪುಣ್ಯೋದಯವೆಂತ ಭಾವಿಸಬೇಕಾಗಿದೆ ತೀರ್ಥಹಳ್ಳಿ ಆರಗ ಈ ಪ್ರಾಂತ್ಯದಲ್ಲಿ ಪ್ಲೇಗ್‌ರೋಗ ತಲೆದೋರಿದೆ ತೀರ್ಥಹಳ್ಳಿಯಲ್ಲಿ ೭—೮ ಪ್ಲೇಗ್ ಕೇಸುಗಳು ನಡೆದವು ಜನರೆಲ್ಲಾ ಊರು ಬಿಟ್ಟಿರುತ್ತಾರೆ ಆರಗದಲ್ಲಿ ಇಲಿಗಳು ಬೀಳುತ್ತವೆಂದು ವದಂತಿ ಹರಡಿದೆ ಜನರು ಅಧಿಕ ಗಾಬರಿಪಡುತ್ತಾರೆ ಈ ಪ್ರಾಂತ್ಯದಲ್ಲಿರುವವರೆಲ್ಲಾ ರೈತಾಪಿ ಜನಗಳಾಗಿದ್ದಾರೆ ಪ್ಲೇಗ್ ನಿಜವಾಗಿಯೂ ವ್ಯಾಪಿಸಿದರೆ ರೈತರ ಬೆಳೆ ವಗೈರೆ ಏನು ಅವಸ್ಥೆ ಆಗುವದೋ ಗೊತ್ತಿಲ್ಲ ಆರಗದ ಪ್ರಾಂತ್ಯದಲ್ಲಿ ಊರುಗಳು ಬಹು ಅಶುಚಿಯಾಗಿವೆ ಮುನಿಸಿಪಾಲಿಟಿಯವರು ಈ ವಿಷಯದಲ್ಲಿ ನಿಗಾ ಕೊಟ್ಟಂತೆ ಕಾಣುವದಿಲ್ಲ ಅಮಲ್ದಾರರು ಈ ಪ್ರಾಂತ್ಯ ಸಂಚಾರಮಾಡಿರುತ್ತಾರೆ ಆದರೆ ಇಲ್ಲಿ ನಿರ್ಮಲಪಡಿಸಬೇಕೆಂತ ಏರ್ಪಾಡು ಮಾಡಿದಂತೆ ತೋರುವದಿಲ್ಲ ಸರ್ಕಾರದವರು ದಯವಿಟ್ಟು ಆದಷ್ಟು ತ್ವರಿತದಿಂದ ಊರನ್ನು ನಿರ್ಮಲಪಡಿಸಿಕೊಡುವಂತೆಯೂ, ಪ್ಲೇಗ್‌ರೋಗ ವ್ಯಾಪಿಸದಂತೆ ಪ್ಲೇಗ್ ಔಷಧಿ ಹಾಕಿಸುವಂತೆಯೂ ಏರ್ಪಾಡು ಮಾಡಿದರೆ ಬಡರೈತರ ಕಷ್ಟ ಭೀತಿಗಳು ನಿವಾರಣೆಯಾಗಬಹುದೆಂತ ತೋರುತ್ತೆ

ಶ್ರೀರಂಗಪಟ್ಟಣ —ಈ ಕಡೆ ಚಳಿ ಜಾಸ್ತಿಯಾಗಿರುತ್ತದೆ ಈ ಊರಿಗೆ ಪ್ಲೇಗ್ ಬಂದು ಬಹಳ ಕಾಲವಾದರೂ ಇನ್ನೂ ಬಹು ನಿಧಾನವಾಗಿ ಆಗಾಗ್ಗೆ ಜನರನ್ನು ಕೊಲ್ಲುತ್ತಾ ಬರುತ್ತದೆ ಈ ಕಾಲದಲ್ಲಿ ಊರು ಶುಚಿಯಾಗಿರುವದು ಬಹು ಅವಶ್ಯವಾಗಿರುತ್ತದೆ ಎಲ್ಲಾ ಬೀದಿಗಳೂ ಗಲ್ಲಿಗಳೂ ಅಶುಚಿಯಾಗಿರುತ್ತವೆ ಚರಂಡಿಗಳಲ್ಲಿ ಕಕ್ಕಲರೊಚ್ಚಿನ ದುರ್ವಾಸನೆ ಜನರು ಮೂಗು ಮುಚ್ಚುತ್ತಾರೆ ಜಾಡಮಾಲಿಗಳು ಇರುತ್ತಾರೋ ಇಲ್ಲವೋ ಎನ್ನುವ ಹಾಗಿದೆ ಈ ಭಾಗವನ್ನು ಮುನಿಸಿಪಲ್ ಮೆಂಬರುಗಳೂ, ಓವರ್‌ಸಿಯರರೂ ಮನಸ್ಸಿಗೆ ತಂದುಕೊಳ್ಳಬೇಕು ಅವುಲ್ದಾರರು ಪ್ಲೇಗ್ ರೋಗಕ್ಕೋಸ್ಕರ ಊರಿನಲ್ಲಿ ವಾಸಮಾಡುವದಿಲ್ಲ ಕೆಲವರು ಹೊರತು ಬಾಕಿ ಜನರೆಲ್ಲಾ ಊರಿನಲ್ಲಿಯೇ ಇರುತ್ತಾರೆ ಸೆಕ್ಸನ್ ಕೇರಿ ಮತ್ತು ಬಂಡಿಕೇರಿಯಲ್ಲಿ ಬಹಳ ಅಶುಚಿಯಾಗಿರುತ್ತದೆ ಇದರಿಂದ ಜನರಿಗೆ ಕ್ಷೇಮವಿಲ್ಲ ಕೆಲವು ದಾರಿಗಳಲ್ಲಿ ಲಾಂದ್ರಗಳಿಲ್ಲದೆ, ರಾತ್ರಿಯಲ್ಲಿ ಜನರು ಸಂಚರಿಸುವಾಗ ಕಣ್ಣು ಕಾಣದೆ ಒಬ್ಬರಿಗೊಬ್ಬರು ಡಿಕ್ಕಿ ಹೊಡಿಯುತ್ತಾರೆ ಮುನಿಸಿಪಲ್ ಲಾಂದ್ರಗಳು ರಾತ್ರಿಯೆಲ್ಲಾ ಸರಿಯಾಗಿ ಉರಿಯುವದಿಲ್ಲ ಕೆಲವು ಲಾಂದ್ರಗಳು ಹಚ್ಚಿದ ಸ್ವಲ್ಪ ಹೊತ್ತಿಗೆ ಆರಿಹೋಗುತ್ತವೆ ಕಂಟ್ರಾಕ್ಟರಿಗೆ ಮುನಿಸಿಪಲ್‌ನವರು ಎಚ್ಚರಿಕೆ ಕೊಡಬೇಕು ಆಸ್ಪತ್ರೆಯಲ್ಲಿ ಜನರು ಯಾವಾಗಲೂ ತುಂಬಿರುತ್ತಾರೆ ಡಾಕ್ಟರು ಶ್ರಾಯಲೆಯವರಿಗೆ ತಕ್ಕ ಚಿಕಿತ್ಸೆ ಮಾಡುತ್ತಾರೆ ಮೈಸೂರಿನ ಸಿವಿಲ್ ಸರ್ಜನ್ ಮಿ॥ ಕೃಷ್ಣಸ್ವಾಮಿ ಐಯ್ಯರವರು ಬಂದು ಆಸ್ಪತ್ರೆಯನ್ನು ಇನ್ಸ್‌ಪೆಕ್ಷನ್ ಮಾಡಿ ಒಳ್ಳೆ ರಿಪೋರ್ಟ್ ಕೊಟ್ಟಿದ್ದಾರೆ ಇವರು ಒಂದು ದಿನ ಇಲ್ಲಿದ್ದು ಊರನ್ನೆಲ್ಲಾ ಗಸ್ತುಮಾಡಿಕೊಂಡುಹೋದರು.

ನಂಜನಗೂಡು —೨ ನೇ ತಾ ಇಲ್ಲಿ ಲಕ್ಷದೀಪೋತ್ಸವ ನಡಿಯಿತು ಆಗ್ಗೆ ಅನೇಕರು ಪರಸ್ಥಳಗಳಿಂದ ಬಂದಿದ್ದರು ಅವರಲ್ಲಿ ಲಿಂಗಪ್ಪಾಜಿ ಅರಸರು, ದೇವರಾಜೆ ಅರಸರು ಎಂಬುವರು ಸ್ನಾನ ಘಟ್ಟದ ಬಳಿ ಈಜಾಡುತ್ತಾ ಇರಲು ನೀರು ಆಳವಾದ ಕಡೆಗೆ ರಾಮಯ್ಯರ್ ಎಂಬುವರಿದ್ದರು ಆ ಕಡೆಗೆ ದೇವರಾಜೆ ಅರಸರು ಹೋಗಿ ಈಜಲು ಅವರ ಕೈ ಕಾಲು ಸೋತುಹೋಯಿತು ದೇವರಾಜೆ ಅರಸರು ಎರಡು ದಫೆ ಮುಳುಗಿದ್ದಲ್ಲದೆ ನೀರು ಕುಡಿದು ಕೈಕಾಲು ಸೋತುಹೋದರು ಆಗ್ಗೆ ಒಬ್ಬರಾದರೂ ಸಮೀಪ ಹೋಗಲು ಧೈರ್ಯಗೊಳ್ಳಲಿಲ್ಲ ಆದರೆ ಅಲ್ಲಿ ಸ್ನಾನಮಾಡುತ್ತಿದ್ದ ದೇವಸ್ಥಾನದ ಶೇಕ್‌ದಾರ್ ಹಿರಣ್ಯಪ್ಪನವರು ಧೈರ್ಯವಾಗಿ ಅವರ ಬಳಿಗೆ ಹೋಗಿ ಹಿಡಿದುಕೊಂಡು ಬಹಳ ಸಾಹಸದಿಂದ ಮೇಲಕ್ಕೆ ತಂದರು ಇವರು ಮಾಡಿದ ಧೈರ್ಯದ ಕೆಲಸವನ್ನು ಕಂಡು ಎಲ್ಲರೂ ಸಂತೋಷಪಟ್ಟರು ಇಂಥವರನ್ನು ಸರ್ಕಾರದವರು ಪ್ರೋತ್ಸಾಹಪಡಿಸುವದು ಧರ್ಮವಾಗಿದೆ —೩ ನೇ ತಾ ಸಾಯಂಕಾಲ ಇಲ್ಲಿನ ಅ॥ ಇಂಜಿನಿಯರ್ ಮಿ॥ ಶ್ರೀನಿವಾಸಯ್ಯಂಗಾರ್ಯರು ತಮ್ಮ ಆಫೀಸಿನಲ್ಲಿ ಕಾಗದಗಳನ್ನು ತೆಗೆಯುತ್ತಿರಲು ಒಂದು ಸಣ್ಣ ನಾಗರಹಾವು ಅವರ ಕೈಯನ್ನು ಕಚ್ಚಿತು ಅವರಿಗೆ ಹೆಚ್ಚಾದ ಅಪಾಯವಾದಹಾಗೆ ಕಾಣುವದಿಲ್ಲ ಆದರೂ ಭಯದಿಂದ ಅದೇ ದಿನ ಮೈಸೂರಿಗೆ ಹೊರಟುಹೋದರು ಮತ್ತು ಅವರ ಅಧೀನದಲ್ಲಿ ಕೆಲಸಮಾಡುತ್ತಿದ್ದ ಸಬ್ ಓವರ್‌ಸಿಯರ್ ಗೋವಿಂದನಾಯುಡುರವರು ಕೆಲಸಕ್ಕೆ ರಾಜೀನಾಮೆ ಕೊಟ್ಟು ಬೆಂಗಳೂರಿಗೆ ಹೊರಟುಹೋದರು ಇವರು ಮಿಲಿಟರಿಯಲ್ಲಿ ಜಮಾದಾರಿ ಕೆಲಸಮಾಡಿ ಅನೇಕ ಯುದ್ಧಗಳಿಗೆ ಹೋಗಿ ಶಾಬಾಷ್‌ಗಿರಿಯನ್ನು ಪಡೆದವರು ಗೋವಿಂದ ನಾಯುಡು ಎಲ್ಲರಿಗೂ ಸ್ನೇಹಿತರಾಗಿದ್ದರು ಪೊಲೀಸ್ ಇನ್ಸ್‌ಪೆಕ್ಟರು ಕೃಷ್ಣಪ್ಪನವರು ಇಲ್ಲಿ ಒಂದುವರೆ ವರ್ಷದಿಂದ ಕೆಲಸವನ್ನು ಮುತುವರ್ಜಿಯಾಗಿ ನಡಿಸಿ ಪ್ರಮೋಷನ್ ಪಡೆದುಕೊಂಡು ಇದ್ದರು ಈಗ ಬೆಂಗಳೂರು ಪೊಲೀಸ್ ಸ್ಕೂಲಿಗೆ ಹೋಗಿ ಓದಬೇಕೆಂದು ಇನ್ಸ್‌ಪೆಕ್ಟರ್ ಜನರಲ್ ಸಾಹೇಬರ ಆಜ್ಞೆ ಆಯಿತು ಅದರಂತೆ ಅವರು ಹೊರಟುಹೋದರು ಅವರ ಕೆಲಸಕ್ಕೆ ಹುಣಸೂರಿಂದ ಒಬ್ಬ ಮುಸಲ್ಮಾನರು(?) ಇನ್ಸ್‌ಪೆಕ್ಟರು ಬಂದಿರುತ್ತಾರೆ

ಹೆಗ್ಗಡದೇವನಕೋಟೆ —ಮೈಸೂರು ಪೇಟೆಯ ಬಡ ಸ್ಕೂಲ್ ಮಾಸ್ಟರುಗಳ ಅಲ್ಪ ಸಂಬಳದ ವಿಷಯದಲ್ಲಿ ನಮ್ಮ ಶ್ರೀಮನ್ಮಹಾರಾಜಾ ಸರ್ಕಾರದವರು ಗಮನಕೊಟ್ಟು ಅಂಥವರೆಲ್ಲರಿಗೂ ಒಂದು ರೂಪಾಯಿ ಬತ್ತ ಮಾಡಿದಿಯೆಂದು, ಕಳೆದ ಪ್ರಜಾಪ್ರತಿನಿಧಿಸಭೆಯಲ್ಲಿ ನಮ್ಮ ಘನವನ್ನು ಹೊಂದಿದ ದಿವಾನ್ ಮಿ॥ ವಿ ಪಿ ಮಾಧವರಾಯರವರು ಅಪ್ಪಣೆಕೊಡಿಸಿದ್ದು ಸರಿಯಷ್ಟೆ ಅದು ಇನ್ನೂ ಇದುವರಿವಿಗೆ ಜಾರೀಗೆ ಬರದೆ ಇತ್ತು ನೆನ್ನೆ ದಿನ ವಿದ್ಯಾಭ್ಯಾಸದ ಇಲಾಖೆಯಿಂದ ಸದರಿ ಸ್ಕೂಲ್ ಮಾಸ್ಟರುಗಳಿಗೆ ಬಾಕಿ ಸಂಬಳವನ್ನು ಸಲ್ಲಿಸುವಂತೆ ಆರ್ಡರ್ ಬಂದದ್ದಕ್ಕಾಗಿ ನಮ್ಮ ಎ ವಿ ಸ್ಕೂಲ್ ಪ್ರಥಮತರಗತಿ ಉಪಾಧ್ಯಾಯರಾದ ಮಿ॥ ವೆಂಕಟರಮಣೈಯ್ಯನವರು ತಮ್ಮ ಸಂಬಳ ಬತ್ತಿಯಾದ ಸಂತೋಷಾರ್ಥವಾಗಿ ತಮ್ಮ ಮಿತ್ರಮಂಡಲಿಗೂ ಮತ್ತು ಇತರ ದೊಡ್ಡವರಿಗೂ ಒಂದು ಟೀಪಾರ್ಟಿಯನ್ನು ಕೊಟ್ಟರು. ಪೋಲೀಸ್ ಇನ್ ಮಿ॥ ಸಂಪತ್ಕುಮಾರ್‌ರವರೂ, ಆಸ್ಪತ್ರೆ ಅ ಮಿ॥ ಸದಾಶಿವಂಪಿಳ್ಳೆಯವರೂ, ಪೋಸ್ಟ್ ಮಾಸ್ಟರ್ ಮಿ॥ ಅಣ್ಣಾಜಿರಾಯರೂ, ಹೆಡ್ ಮಾಸ್ಟರ್ ನೀಲಕಂಠರಾಯರೂ, ಮಿ॥ ಶಂಕರಲಿಂಗೈಯ್ಯನವರೂ ಇನ್ನೂ ಇತರ ಮೊತ್ತವಾದ ಮನುಷ್ಯರೂ ಸ್ಕೂಲ್ ಕಟ್ಟಡದಲ್ಲಿ ಸೇರಿದರು ಅಗ್ರಾಸನವನ್ನು ವಹಿಸಿದ್ದ ಮಿ॥ ಸಂಪತ್ಕುಮಾರ್‌ರವರು ಬಡ ಸ್ಕೂಲ್ ಮಾಸ್ಟರುಗಳ ವಿಷಯದಲ್ಲಿ ಒಂದು ಸಣ್ಣ ಉಪನ್ಯಾಸವನ್ನು ಮಾಡಿ ಮೈಸೂರು ಸರ್ಕಾರದವರನ್ನು ಬಹಳವಾಗಿ ವಂದಿಸಿದರು ಅನಂತರ ಮಿ॥ ಸದಾಶಿವಂಪಿಳ್ಳೆಯವರು ಎದ್ದು ಮಿ॥ ವೆಂಕಟರಮಣೈಯ್ಯನವರು ಈ ಅಲ್ಪ ಸಂಬಳದ ಬತ್ತಿಗೇನೇ ತೃಪ್ತರಾಗಿರುವ ವಿಷಯದಲ್ಲಿ ಕೆಲವು ಮಾತನ್ನಾಡಿದರು ಮಿ॥ ನೀಲಕಂಠರಾಯರೂ ಬಡ ಮಾಸ್ಟರಿಗೆ ಸಂಬಳ ಬತ್ತಿಯಾದ ವಿಷಯದಲ್ಲಿ ತಮ್ಮ ಸಂತೋಷವನ್ನು ಸೂಚಿಸಿದರು ಆ ಮೇಲೆ ಮಿ॥ ವೆಂಕಟರಮಣೈಯ್ಯನವರು ತಮ್ಮ ಮಿತ್ರರೂ ಮತ್ತು ಇತರ ದೊಡ್ಡಮನುಷ್ಯರೂ ಬಂದದ್ದಕ್ಕಾಗಿಯೂ, ತಮಗೆ ಸಂಬಳ ಬತ್ತಿಯಾದ ವಿಷಯದಲ್ಲಿಯೂ ಕೃತಜ್ಞತೆಯನ್ನು ತೋರ್ಪಡಿಸಿದರು ಫಲಾಹಾರವಾದ ನಂತರ ಎಲ್ಲರೂ ಸೇರಿ ನಮ್ಮ ಮಹಾರಾಜರವರ ಶ್ರೇಯಃಪ್ರಾರ್ಥನೆಯನ್ನು ಮಾಡಿದರು ಅನಂತರ ಸಭೆಯು ಬರಖಾಸ್ತಾಯಿತು

ಚಿತ್ರದುರ್ಗ —ಇಲ್ಲಿ ಈಗ ಬಹಳವಾಗಿ ರಾತ್ರಿ ಹೊತ್ತಿನಲ್ಲಿ ಚಳಿ ಬೀಳುತ್ತದೆ ಆದರೂ ಬೆಳಗಿನ ೮ ಗಂಟೆಯಿಂದ ಬಿಸಿಲಿನ ತಾಪವನ್ನು ಸಹಿಸಲಿಕ್ಕಾಗದು ಕಳೆದ ವರುಷ ಈ ಕಾಲದಲ್ಲಿ ದುಷ್ಟ ರೋಗಾದ್ಯುಪದ್ರಗಳು ಈ ವರುಷ ಇಲ್ಲದಿರುವದು ಬಹಳ ಸಂತೋಷಕ್ಕೆ ಕಾರಣವಾಗಿದೆ ಮುಖ್ಯ ಟೌನಿಗೆ ನೀರು ಸಪ್ಲೈ ಆಗುವ ವಿಷಯಕ್ಕೆ ಮುನಿಸಿಪಾಲಿಟಿಯವರು ನಿಗಾಕೊಟ್ಟು ಫಿಲ್ಟರಿನಿಂದ ನೀರನ್ನು ಶೋಧಿಸುವ ಏರ್ಪಾಡು ಮಾಡಿದರೆ ಪ್ರಜೆಗಳನ್ನು ಹಿಡಿಯುವ ಅನೇಕ ರೋಗಗಳು ನಿವಾರಣೆಯಾಗುವವು ನೀರು ಶೇಖರವಾಗಿರುವ ಕೆರೆಯಲ್ಲಿ ಗ್ರಾಮದ ರಾಯನ ಕಾಲದ ರೊಚ್ಚು ತುಂಬಿದೆಯೋ, ಯಾವಾಗ ಸಂಪೂರ್ಣವಾಗಿ ಶುದ್ಧಮಾಡಲ್ಪಟ್ಟಿತೋ ಯಾರಿಗೂ ಗೊತ್ತಿಲ್ಲವೆನ್ನುತ್ತಾರೆ ಈಗ ಸಪ್ಲೈ ಆಗುವ ನೀರಿನಲ್ಲಿ ಬರೀ ಕಣ್ಣಿಗೆ ಹುಳಗಳು ಕಾಣುತ್ತವೆ ಇದನ್ನು ಕೆಲವರು ಪಾವಡೆ ಹಾಕಿ ಶೋಧಿಸಿ ಬೇರೆಯವರು ಹಾಗೆ ಕುಡಿಯುತ್ತಾರೆ ಕುದಿಸಿ ಕುಡಿಯಬೇಕೆಂತ ಹೇಳುವದೂ ಸರಿಯಷ್ಟೆ ಸಂಧಾರಣವಾಗಿದೆಯೋ ಹೊರತು ಹಾಗೆ ಮಾಡುವವರು ಕೇವಲ ವಿರಳವೆಂತ ಹೇಳಬಹುದು ಫಿಲ್ಟರಿನಿಂದ ನೀರು ಶೋಧಿಸಿದ ನೀರನ್ನು ಊರಿಗೆ ಬಿಟ್ಟರೆ ಹ್ಯಾಗೂ ಉತ್ತಮ ಇದಕ್ಕೆ ಅಧಿಕಾರಿಗಳ ನಿಗಾ ಕೊಡಬೇಕು —ಈ ಊರಿಗೆ ಈ ವಾರದಲ್ಲಿ ನಮ್ಮ ದಿವಾನ್ ಸಾಹೇಬರು ಬರುವರಾಗಿದ್ದಾರೆ ಮಾಕನಹಳ್ಳಿ(?) ಮಾರ್ಗವಾಗಿ ಇಲ್ಲಿಗೆ ಬಂದು ಹೊಳಲ್ಕೆರೆ ಹಾದಿಯಾಗಿ ಹೋಗುವರೆಂದು ವರ್ತಮಾನ —ಜನಗಳ ಊರಿನ ರಸ್ತೆ ನಗರ ತಟ್ಟುವದು ಸಾಲದೆಂದು ಪಬ್ಲಿಕ್ ರೋಡುಗಳ ಕೆಸರು ತೆಗೆಯುವ ಮೇಲೆಯೂ ಪೊಲೀಸ್ ಸ್ಕೂಲಿನ ಎದುರಾಗಿಯೂ ತಟ್ಟುವದಕ್ಕೆ ಆರಂಭಿಸಿದ್ದಾರೆ ಇದರ ಸಾತ ಹೋಗುವ ಬರುವ ಜನಗಳಿಗೆ ತುಂಬಾ ಅಸಹ್ಯವಾಗಿದೆ ಇದನ್ನು ನಿಲ್ಲಿಸಿದರೆ ಉತ್ತಮ —ಒಕ್ಕಲಿಗರ ಮಕ್ಕಳ ಶ್ರೇಯೋಭಿವೃದ್ಧಿಗಾಗಿ ಇಲ್ಲಿ ಸ್ಥಾಪಿತವಾಗಿರುವ ಹನುಮಂತರಾಜು ಯವರ ಸ್ಕಾಲರ್‌ಶಿಪ್ ಫಂಡಿಗೆ ಇನ್ನೂ ಇಬ್ಬರು ವಿದ್ಯಾರ್ಥಿಗಳು ಕಳೆದ ವಾರ ದಾಖಲಾದರೆಂದು ತಿಳಿದು ಸಂತೋಷಪಡಬೇಕಾಗಿದೆ ಈಗಿನ ವಿದ್ಯಾವರ್ಧನೆಗೆ ಕಣ್ಣು ತೆರೆದಿರುವ ಇವರು ಮುಂದೆ ಜಾತಿಯ ಅಭಿವೃದ್ಧಿಯ ದೇಶೋನ್ನತಿಗೆ ಕಾರಣರಾದಾರೆಂದು ನಿರೀಕ್ಷಿಸಲ್ಪಟ್ಟಿದೆ

ಮದ್ದಗಿರಿ ಬಡಜಾಡನಹಳ್ಳಿ.—ಟಿಟ್ಸಳ್ಳಿ ಕೆರೆ ಕಲ್ಲು ಕಟ್ಟಡ ಕೆಲಸ ಕಾಮಗಾರಿ ಮಾಡಿಸಲು, ಸರ್ಕಾರದವರು ೧,೫೦೦ ರೂಪಾಯಿ ರೈತರಿಗೆ ಕೊಟ್ಟ ಕೂಡಲೆ ಕೆರೆಯ ಕೆಲಸವನ್ನು ಪ್ರಾರಂಭಿಸುವುದಾಗಿ ಒಪ್ಪಿಕೊಟ್ಟಿದ್ದಂತೆ ರೈತರು ಆ ಕಂಟ್ರಾಕ್ಟ್ ಮೊಬಲಗನ್ನೆಲ್ಲಾ ಕೆಲಸಕ್ಕಾಗಿ ಪ್ರಜೆಗಳಿಗೆ ಕೊಟ್ಟರು ಸರ್ಕಾರದವರು ಬಡ ರೈತರ ಮೇಲೆ ದಯವಿಟ್ಟು ಈ ವರ್ಷವೇ ಕೆರೆ ಕಾಮಗಾರಿ ಪ್ರಾರಂಭಿಸಿದರೆ ತುಂಬಾ ಉಪಕಾರವಾದೀತು. ಕೆರೆಯಲ್ಲಿ ನೀರು ನಿಲ್ಲುವದಕ್ಕೆ ಅವಕಾಶವಿಲ್ಲದೆ ಕಾಲುವೆ ನೀರಿನ ವಿಷಯ ೩—೪ ವರುಷಗಳಿಂದ ಕೋರ್ಟಿನಲ್ಲಿ ವ್ಯಾಜ್ಯ ನಡಿಯುತ್ತಿದೆ ನೀರಿಗೆ ಅನುಕೂಲವಿಲ್ಲದೆ ಜನರು ಪರಿಭಾವಿಸುತ್ತಿರುವರು ಸರ್ಕಾರದವರು ಈ ವ್ಯಾಜ್ಯವನ್ನು ಸಹ ಜಾಗ್ರತೆಯಾಗಿ ಬಡರೈತರ ಮೇಲೆ ಅಂತಃಕರಣವಿಟ್ಟು ಫೈಸಲ್ಮಾಡಿದರೆ ಬದುಕಿಕೊಂಡಾರು ಈ ಸಾರಿ ಖುಷ್ಕಿ ಬೆಳೆಯೆಲ್ಲಾ ಕೆಟ್ಟುಹೋಯಿತು ಹಾಗಾದಾಗ್ಯೂ, ರೈತ ಪ್ರಜೆಗಳು ಜೀವನ ಮಾಡುವದೂ ಸರ್ಕಾರದ ಕಂದಾಯ ಕೊಡುವದೂ ಹ್ಯಾಗೋ ಆದಕಾರಣ ಈ ರೈತರಿಗಿರುವ ಮೇಲ್ಕಂಡ ಎರಡು ತೊಂದರೆಗಳನ್ನೂ ಜಾಗ್ರತೆ ನಿವಾರಣೆ ಮಾಡ್ಯಾರೆಂದು ಹಾರೈಸಿಕೊಂಡಿರುವೆವು —ಕೆಲವು ತಿಂಗಳ ಕೆಳಗೆ ಈ ಪ್ರಾಂತ್ಯ ಕೆಲವು ಗ್ರಾಮಗಳಲ್ಲಿ ವಾಂತಿಭೇದಿ ಉಪದ್ರವಿತ್ತು ಆಗ ಜೀರ್ಣವಾಗಿದ್ದ ಕೆಲವು ಗುಡಿಗಳು ದುರಸ್ತಾದವು ಮತ್ತು ಮಾರಿಗಳು ರಾತ್ರಿಯೆಲ್ಲಾ ಆವೇಶ ಬಂದುಕೊಂಡೇ ಇದ್ದವು. ಬ್ಯಾಲದಲ್ಲಿ ಆವೇಶ ಬಂದವರ ಕಾಟವು ಜಾಸ್ತಿಯಾಗಲಾಗಿ ತಾಲ್ಲೂಕು ಕಛೇರಿವರಿಗೂ ಮುಟ್ಟಿ ಸಾಚಾರವಾದ ಶಿಕ್ಷೆಗಳು ಸಹ ಆದವು ಆಗಿನಿಂದ ಮಾರಿಗಳ ಆವೇಶವು ಕಡಮೆ ಆಯಿತು ಈ ಪ್ರಾಂತ್ಯ ಆ ರೋಗವು ಸಂಪೂರ್ಣವಾಗಿ ನಿಂತುಹೋಯಿತು ಅದಕ್ಕೆ ಬದಲಾಗಿ ಈಗ ಸುಮಾರು ೫—೬ ಗ್ರಾಮಗಳಲ್ಲಿ ಪ್ಲೇಗು ತಲೆಹಾಕಿ, ಅನೇಕರನ್ನು ಕೊಂದ ಬಿಟ್ಟಿದೆ ಬಂದೆರಡು ಗ್ರಾಮಗಳಲ್ಲಿ ಇಲಿಗಳು ಸಾಯುತ್ತಲಿವೆ ಪ್ರತಿ ಶನಿವಾರವೂ ಇಮ್ಮಡಿಗೋನಹಳ್ಳಿಯ ಮುತ್ತಾರಾಯನು ಆವೇಶ ಬಂದು ರೋಗ ಬಂದಿರುವ ಸ್ಥಳಗಳಲ್ಲಿ ಇನ್ನು ಮೇಲೆ ಸಾಯುವುದಿಲ್ಲವೆಂತಲೂ, ಊರುಗಳನ್ನು ಬಿಡಬೇಕಾದ ಅವಶ್ಯವಿಲ್ಲವೆಂತಲೂ ಹೇಳಿದ್ದನ್ನು ಕೇಳಿದವರಂತೆ ಇಲಿಗಳು ಸಾಯುತ್ತಿರುವ ಊರನ್ನು ಬಿಡದೆ ಹೋದರೆ ತುಂಬಾ ಕೇಡಾಗುವದು ನಿಜವೆಂದು ಇಲ್ಲಿಯ ಕೆಲವರಿಗೆ ಗೊತ್ತಾಗಿದೆ ಕೊಡಿಗೇನಹಳ್ಳಿ(?) ಗ್ರಾಮದಲ್ಲಿ ಇಲಿಗಳು ವಿಪರೀತವಾಗಿ ಸಾಯುತ್ತಿದ್ದರೂ ಊರನ್ನು ಬಿಡದ್ದರಿಂದ ಅನೇಕರು ಸತ್ತರೆಂದೂ, ಜೋಪಡಿಗಳಿಗೆ ಹೋಗಿ ವಾಸ ಮಾಡಿಕೊಂಡು ಹೋದ್ದರಿಂದ ಅಲ್ಲಿಯೂ ಮರಣಗಳುಂಟಾದುದೆಂದು ಗೊತ್ತಾಗಿದೆ ಆದ್ದರಿಂದ ಒಂದೆರಡು ಮನೆಗಳಲ್ಲಿ ಇಲಿಗಳು ಸತ್ತಕೂಡಲೇ ಊರನ್ನೆಲ್ಲಾ ಬಿಟ್ಟುಹೋಗುವದೇ ಕೇವಲ ಬುದ್ಧಿವಂತಿಕೆ ಎಂದು ಹೇಳಬೇಕು ಸರ್ಕಾರದವರು ಈ ಭಯಂಕರವಾದ ವ್ಯಾಧಿಯನ್ನು

...ಸುವರಕ್ಕೆ ೩ ಕ್ರಮಗಳನ್ನು ಆಚರಣೆಗೆ ತಂದಿರುವರು ೧ ...ಹಣ ಪ್ರತಿಮಾಡಿ ಇನಾಕ್ಯುಲೇಷನ್ ಮಾಡಿಸುವದು, ...ನೇದು—ಗ್ರಾಮವು ಖಾಲಿ ಮಾಡಿಸುವದು, ೩ ನೇದು—ಪ್ಲೇಗ್ ...ಊರು ಬಿಟ್ಟು ಹೊರಗೆ ಜೋಪಡಿಗಳಲ್ಲಿ ವಾಸ ಮಾಡುವದು. ...ಗಳಲ್ಲಿ ಸರ್ಕಾರದವರು ಪ್ರಜೆಗಳ ಮೇಲೆ ಮಮತೆಯುಳ್ಳ ...ಷ್ಟು ಹಣ ವ್ಯಯಮಾಡಿದಾರೆಂಬುವದು ಅನೇಕರ ಅನುಭವ ...ದಿದೆ. ಖಾಲೀಜಾ ವಿಷಯವು ಎಲ್ಲಾ ಕಾಲಗಳಲ್ಲಿ ಅತ್ಯಂತ ಅವ...ದು ತೋರಿಬಂದಕಾರಣ ಎಲ್ಲಾ ಸ್ಥಳಗಳಲ್ಲಿಯೂ ಸಂಬಳಗಳ ಕೊಟ್ಟು ಸ್ಯಾನಿಟರಿ ಇನ್ಸ್ಪೆಕ್ಟರನ್ನು ನೇಮಿಸಿರುವದು ಮಾತ್ರವಲ್ಲದೆ ಶೇಕದಾರ್, ಪಟೇಲ್, ಶ್ಯಾನುಭೋಗರಿಗೂ ತಾಕೀತು ಕೊಟ್ಟಿರು. ಸರ್ಕಾರದವರು ಖಾಲೀಜಾ ವಿಷಯದಲ್ಲಿ ತಕ್ಕ ಏರ್ಪಾಡುಗಳ ಮಾಡಿದ್ದರೂ ಇದನ್ನು ಜಾರಿ ಮಾಡತಕ್ಕವರು ಈ ಪ್ಲೇಗಿನ ...ರಿದ್ದರೂ ಖಾಲೀಜಾ ವಿಷಯವಾದ ಕೆಲಸ ಮಾತ್ರ ಜಾರಿಯಲ್ಲಿ ಇಲ್ಲ. ಪಟೇಲ್, ಶ್ಯಾನುಭೋಗರಿಗೆ ಮನಸ್ಸು ಬಂದರೆ ಗಲೀಜಿಲ್ಲದ ...ಕನ ಜೋಪಡಿಯನ್ನು ಕೀಳಿಸಲು ಪ್ರಯತ್ನ ಮಾಡುವರು. ...ದವರಿಗೆ ಗಲೀಜು ಪ್ರತ್ಯಕ್ಷವಾಗಿ ಕಾಣಬಂದರೂ ಅದರ ತಂಟೆಗೆ ಹೋಗುವದಿಲ್ಲ. ಅಧಿಕಾರಿಗಳೇನಾದರೂ ಬರುವರೆಂಬ ಸುದ್ದಿ ಕೇಳಿದ...ಗ ಬಿಟ್ಟು ಮಾಡಿಗರಿಂದ ಎಲ್ಲಾ ಖಾಕ್ ಮಾಡಿಸುವರು. ತಿರಿಗಿ ...ರು ಬರುವ ತನಕ ಹಾಗೆಯೇ ಬಿದ್ದಿರುವದು. ೩ ಗ್ರಾಮಗಳಿಗೆ ...ಟ್ಟ ಪಟೇಲರಿರುವದರಿಂದ ೧೫—೧೮ ದಿನಗಳಾದರೂ ಅವರ ದರುಶನವಿಲ್ಲ. ಬಂದರೂ ಮೇಲ್ಕಂಡ ಯಾವ ಬಾಬನ್ನೂ ವಿಚಾರಿಸುವರು. ರಾತ್ರಿಕಾಲದ ಕಾವಲು ಹ್ಯಾಗಿದೆ ಎಂದು ನೋಡುವದಕ್ಕಾದರೆ ...ರೆ ಬರಬೇಕಾದ ಅವಶ್ಯ ಬರುವದಿಲ್ಲ

ವಿದೇಶ ವರ್ತಮಾನಗಳು.

ಎಡಿಂಬರೋ ಪಟ್ಟಣದಲ್ಲಿ ಪೆರಿ ಬಿಲಿಂಗ್ ಎಂಬೊಬ್ಬ ಮ್ಯಾಜಿಸ್ಟ್ರೇಟ್ ಅಧಿಕಾರಿಯು ಫೋರ್ಜರಿ ಮಾಡಿದನೆಂದು ರುಜುವಾತಾದ್ದರಿಂದ ಅವನಿಗೆ ಹತ್ತು ವರುಷದ ಸಜಾ ಆಯಿತು.

❖❖❖

ಮದೀನಾ ಎಂಬ ಮಹಮ್ಮದೀಯರ ಪುಣ್ಯ ಸ್ಥಳದಲ್ಲಿ ರಾತ್ರಿ ಹೊತ್ತು ವಿದ್ಯುಚ್ಛಕ್ತಿಯ ದೀಪಗಳನ್ನು ಹಚ್ಚುವದಕ್ಕೆ ತುರ್ಕಿ ಸುಲ್ತಾನರು ಒಂದು ಇಂಗ್ಲಿಷ್ ಕಂಪನಿಗೆ ಕಂಟ್ರಾಕ್ಟು ವಹಿಸಿರುತ್ತಾರೆ.

❖❖❖

ರಷ್ಯಾ ರಾಜ್ಯದ ಡ್ಯೂಮಾ ಎಂಬ ಪಾರ್ಲಿಮೆಂಟು ಸಭೆಯು ಮೂರನೆಯಾವರ್ತಿ ಪ್ರಾರಂಭವಾಗಿದೆ. ಪ್ರತಿನಿಧಿಗಳು ಚಕ್ರವರ್ತಿಯವರಿಗೆ ರಾಜಭಕ್ತಿ ಸಹಿತವಾಗಿ ಒಂದು ಅಡ್ರೆಸ್ಸನ್ನು ಒಪ್ಪಿಸಬೇಕೆಂದು ನಿರ್ಮಾನಿಸಿದಾರೆ

❖❖❖

ಲೇಡಿ ಬ್ರಾಂಟ್ ಎಂಬೊಬ್ಬ ಇಂಗ್ಲಿಷ್ ಸ್ತ್ರೀಯು ವಿಲಾಯತಿಯಲ್ಲಿರುವ ತನ್ನ ಆಸ್ತಿಯನ್ನೆಲ್ಲಾ ಅಂದರೆ ೨೧ ಲಕ್ಷ ರೂಪಾಯಿನ ಸ್ವತ್ತನ್ನು ಧರ್ಮಕಾರ್ಯಗಳಿಗೆ ವಿನಿಯೋಗಿಸಬೇಕೆಂದು ಮರಣಶಾಸನವನ್ನು ಬರೆದಿರುತ್ತಾಳೆ

❖❖❖

ಯುರೋಪ್ ಖಂಡದಲ್ಲಿರುವ ಪಾಮರ್ ಎಂಬ ದೊಡ್ಡ ಪಟ್ಟಣದ ಮುಖ್ಯಸ್ಥರಾಗಿದ್ದ ಫ್ರೆಡ್ರಿಕ್ ರಾಬರ್ಟ್ ಎಂಬುವರು ಕಾಲವಾದರು. ಇವರು ಎರಡಾವರ್ತಿ ಮದುವೆ ಮಾಡಿಕೊಂಡರು. ಹುಟ್ಟಿದ ...ಮಂದಿ ಮಕ್ಕಳ ಪೈಕಿ ೨೬ ಮಕ್ಕಳು ಈಗ ಬದುಕಿರುತ್ತಾರೆ

❖❖❖

ಸ್ಪೇನ್ ರಾಜ್ಯಕ್ಕೆ ಸೇರಿದ ಬಾರ್ಸಿಲೋನಾ ಪಟ್ಟಣದ ಬಳಿ ಒಂದು ಎಕ್ಸ್‌ಪ್ರೆಸ್ ರೈಲ್‌ಗಾಡಿಯು ಒಂದು ಸೇತುವೆ ಮೇಲಿನಿಂದ ಮಗುಚಿಕೊಂಡು, ಅನಾಹುತವಾದದ್ದರಲ್ಲಿ ೨೦ ಮಂದಿ ಸತ್ತರೆಂತಲೂ ೬೦ ಜನಗಳಿಗೆ ಗಾಯಗಳಾದವೆಂತಲೂ ತಂತೀವರ್ತಮಾನ ಬಂದಿದೆ

❖❖❖

ಜೋಳದ ಕಡ್ಡಿಗಳಲ್ಲಿ ಒಂದು ವಿಧವಾದ ವಿಷಪದಾರ್ಥವಿದೆ ಎಂತಲೂ ಅದನ್ನು ಗೋಕಾಯುಗಳಿಗೆ ಹಾಕುವುದರಿಂದ ಅವುಗಳ ದೇಹಶಕ್ತಿ ಕೆಟ್ಟು ಬೇಗನೆ ಕಾಯಿಲೆ ಹಿಡಿದು ಸಾಯುವಹಾಗಾಗುತ್ತವೆಂತಲೂ ನೆಬ್ರಾಸ್ಕಾ ಪಟ್ಟಣದ ಡಾ॥ ಎಸ್ ಏವರಿ ಎಂಬ ಪಂಡಿತನು ಪರೀಕ್ಷೆ ಮಾಡಿ ತಿಳಿಸಿರುತ್ತಾನೆ

❖❖❖

ರಷ್ಯಾ ರಾಜ್ಯದಲ್ಲಿರುವ ಮಾಸ್ಕೋ ಪಟ್ಟಣದಿಂದ ಏಷ್ಯಾ ಮೈನರಿನಲ್ಲಿರುವ ಕರುಷ್ಕ ಎಂಬ ಊರಿನವರೆಗೂ ರಷ್ಯಾದವರು ರೈಲ್ ರಸ್ತೆ ಮಾಡಿರುತ್ತಾರೆ. ಈಗ ರಷ್ಯಾ ಇಂಜನಿಯರುಗಳು ಅಲ್ಲಿಂದ ಮುಂದಕ್ಕೂ ಹಾಗೇ ಹಿಂದುಸ್ಥಾನಕ್ಕೂ ರೈಲ್ ಹಾಕಬೇಕೆಂಬ ಉದ್ದೇಶದಿಂದ ಹೀರಾಟ್ ನಗರಕ್ಕೆ ಬಂದಿರುವುದಾಗಿ ಕೇಳುತ್ತೇವೆ.

❖❖❖

ಆಫ್ರಿಕಕ್ಕೆ ಸೇರಿದ ಆಲ್ಜೀರಿಯಾ ದೇಶದಲ್ಲಿ ಫ್ರೆಂಚ್ ಸೈನಿಕರಿಗೂ ದೇಶೀಯ ದಂಗೇಕೋರರಿಗೂ ಹಿಂದಿನ ವಾರ ಬಹು ಭಯಂಕರವಾದ ಯುದ್ಧ ನಡಿಯಿತು. ಸುಮಾರು ೧೦,೦೦೦ ಜನ ಸೈನಿಕರು ಯುದ್ಧಮಾಡಿದರು. ಫ್ರೆಂಚರ ಕಡೆ ನೂರಾರು ಮಂದಿ ಹತರಾದರು. ದಂಗೆಕೋರರ ಕಡೆಯವರೋ ೧,೨೦೦ ಜನರು ಸತ್ತರೆಂದು ತಿಳಿದು ಬಂದಿದೆ.

❖❖❖

ಅಮೇರಿಕಕ್ಕೆ ಸೇರಿದ ಪಶ್ಚಿಮ ವರ್ಜಿನಿಯಾ ಡಿಸ್ಟ್ರಿಕ್ಟಿನೊಳಗೆ ಮನೋಗಾ ಎಂಬ ಊರಿನಲ್ಲಿ ಕಳೆದ ವಾರ ಕಲ್ಲಿದ್ದಲ ಗಣಿಗಳೊಳಗೆ ಬೆಂಕಿ ಹುಟ್ಟಿ ಬಹು ದುಃಖಕರವಾದ ಅನಾಹುತವಾಯಿತು. ಬೆಂಕಿಯು ಇನ್ನೂ ಉರಿಯುತ್ತಲೇ ಇದೆ ಎಂತಲೂ, ಗಣಿಗಳೊಳಗೆ ಸಿಕ್ಕಿಕೊಂಡಿರತಕ್ಕ ಕೆಲಸಗಾರರನ್ನು ಹೊರಕ್ಕೆ ಕರೆದು ತರಲು ಅಸಾಧ್ಯವೆಂತಲೂ, ಈ ಅನಾಹುತದಿಂದ ೫೦೦ ಮಂದಿಗಿಂತ ಕಡಮೆ ಇಲ್ಲದೆ ಸಿಕ್ಕಿಕೊಂಡಿದಾರೆಂತಲೂ ತಂತೀವರ್ತಮಾನ ಬಂದಿದೆ

❖❖❖

ಮಿಸ್ ಫ್ಲಾರೆನ್ಸ್ ನೈಟಿಂಗೇಲ್ ಎಂಬ ಪ್ರಸಿದ್ಧ ಇಂಗ್ಲಿಷ್ ಸ್ತ್ರೀಯು ಮಹಾ ಪರೋಪಕಾರಿಯಾಗಿದ್ದಾಳೆಂಬುವುದು ಲೋಕಪ್ರಖ್ಯಾತವಾಗಿದೆ. ಈಕೆಗೆ ಬಹು ಜನರು ಸೇರಿ ಏಳೂವರೆಲಕ್ಷ ರೂಪಾಯನ್ನು ಕೊಡಿಸಿ ಬಹು ಮಾನ ಮಾಡಿದರು. ಆದರೆ ಆ ಪುಣ್ಯಾತ್ಮಳು ಆ ಹಣವನ್ನೆಲ್ಲಾ ಧರ್ಮಕ್ಕೆ ಕೊಟ್ಟುಬಿಟ್ಟಳು. ಕಾಯಿಲೆಯವರಿಗೆ ಉಪಚಾರ ಮಾಡುವಂಥಾ ನರ್ಸ್ ಎಂಬ ದಾದಿಯರನ್ನು ತರಪೇತು ಮಾಡುವುದಕ್ಕೆ ಒಂದು ನಿಲಯವನ್ನು ಸ್ಥಾಪಿಸುವುದಕ್ಕೋಸ್ಕರ ಆ ಹಣವನ್ನು ವಿನಿಯೋಗಿಸಿದಾಳೆ

❖❖❖

ಅಮೇರಿಕದಲ್ಲಿ ಕೆಲವು ಬ್ಯಾಂಕುಗಳು ದಿವಾಳಿಯಾದದ್ದರಿಂದ ಅನೇಕಾನೇಕ ಪ್ರಜೆಗಳು ತುಂಬಾ ಹಣವನ್ನು ಕಳೆದುಕೊಂಡು ಸರ್ಕಾರದವರ ಮೇಲೆ ಅಸಮಾಧಾನ ಪಡುತ್ತಿದಾರೆ. ಆದರೆ ಸರ್ಕಾರದವರು ಆ ಬ್ಯಾಂಕುಗಳ ಲೆಕ್ಕಪತ್ರಗಳನ್ನು ಅಜಮಾಯಿಷಿ ಮಾಡುವುದಕ್ಕೆ ಪ್ರಾರಂಭಿಸಿದಾಗ ೧೨—೧೮ ಬ್ಯಾಂಕುಗಳ ಮುಖಂಡರು ಆತ್ಮಹತ್ಯ ಮಾಡಿಕೊಂಡುಬಿಟ್ಟರು. ಇದರಿಂದ ಅವರು ಬ್ಯಾಂಕಿನ ಹಣಗಳನ್ನು ಬಹಳಮಟ್ಟಿಗೆ ತಿಂದುಹಾಕಿರಬೇಕೆಂದು ಜನರು ನಂಬಲು ಕಾರಣವಾಗಿದೆ

❖❖❖

ಚೀನಾ ರಾಜ್ಯದಲ್ಲಿ ಚಕ್ರವರ್ತಿಯವರ ಹುಕುಂ ಪ್ರಕಾರ ನಾಲ್ಕಾರು ಮಂದಿ ಭಾರೀ ಉದ್ಯೋಗಸ್ಥರನ್ನೇ ಕೆಲಸದಿಂದ ವಜಾಮಾಡಿದರು. ಯಾಕಂದರೆ ಸರ್ಕಾರದ ಹುಕುಂ ಪ್ರಕಾರ ಆ ಅಧಿಕಾರಿಗಳು ಅಫೀಮ ಸೇವನೆಯನ್ನು ಬಿಟ್ಟುಬಿಡಲಿಲ್ಲ. ಇನ್ನು ಕೆಲವರು ಇನ್ನೂ ಆ ದುರಭ್ಯಾಸದಲ್ಲಿ ಬಿದ್ದಿದ್ದರೂ ಅವರನ್ನು ಮಾತ್ರ ಯಾವ ವಿಧವಾದ ಶಿಕ್ಷೆಗೂ ಗುರಿಪಡಿಸದೆ ಇರುತ್ತಾರೆ. ಕೆಲವರು ಸೇರಿ ಸರ್ಕಾರದವರ ಈ ಪಕ್ಷಪಾತವನ್ನು ವಿವರಿಸಿ ಚಕ್ರವರ್ತಿಯವರಿಗೆ ಒಂದು ವಿಜ್ಞಾಪನೆಯನ್ನು ಒಪ್ಪಿಸಿರುತ್ತಾರೆ

❖❖❖

ರಷ್ಯಾ ರಾಜ್ಯದ ಕೆಲವು ದುಷ್ಟ ಜನರು ಜರ್ಮನಿ ರಾಜಧಾನಿಯಾದ ಬರ್ಲಿನ್ ಪಟ್ಟಣದಲ್ಲಿ ಒಂದು ಸಂಘವನ್ನು ಮಾಡಿಕೊಂಡು, ಈಗಿನ ರಷ್ಯಾ ರಾಜ್ಯಭಾರವನ್ನು ತಲೆಕೆಳಗು ಮಾಡಬೇಕೆಂದು ಪ್ರಯತ್ನಪಡುತ್ತಿದ್ದರು. ಪೋಲೀಸಿನವರು ಆ ಜನರ ಸಭಾಮಂದಿರವನ್ನು ಪತ್ತೆಮಾಡಿ ಶೋಧಿಸಿದರು. ಅವರು ನಡಿಸುತ್ತಿದ್ದ ಅನೇಕ ಕಾಗದ ಪತ್ರಗಳೂ ಮದ್ದು ಗುಂಡೂ ಸಿಕ್ಕಿದವು. ಅಲ್ಲಿದ್ದ ಅನೇಕ ಜನ ಮುಖಂಡರನ್ನು ದಸ್ತಗಿರಿ ಮಾಡಿದಾರೆ. ಈ ವಿಷಯವು ಆ ಪ್ರಾಂತ್ಯದಲ್ಲಿ ತಕ್ಕಮಟ್ಟಿಗೆ ಗಲಭೆಯನ್ನುಂಟುಮಾಡಿದೆ

❖❖❖

ಉಷ್ಣರಾಜ್ಯಗಳಲ್ಲಿ ಅನೇಕ ಕಡೆ ಟೆಲಿಗ್ರಾಫ್ ಮತ್ತು ಟೆಲಿಫೋನ್ ತಂತೀ ಕಂಭಗಳನ್ನು ಮರದಲ್ಲಿ ಮಾಡಿ ಹೂಳುವರು. ಈ ಕಂಭಗಳು ಹುಳುಹಿಡಿದು ಗೆದ್ದಲು ತಿಂದು ಬಿದ್ದು ಹೋಗುತ್ತವೆ. ಆದ್ದರಿಂದ ಜರ್ಮನಿ ರಾಜ್ಯಕ್ಕೆ ಸೇರಿದ ಕ್ಯಾಸಲ್ ಎಂಬ ಪಟ್ಟಣದಲ್ಲಿ ಒಂದು ಕಾರ್ಖಾನೆಯೊಳಗೆ ಗಾಜಿನಲ್ಲೇ ಟೆಲಿಗ್ರಾಫ್ ಮತ್ತು ಟೆಲಿಫೋನ್ ತಂತಿ ಕಂಭಗಳನ್ನು ತಯಾರುಮಾಡುತ್ತಿರುವರು. ಜರ್ಮನಿ ಸರ್ಕಾರದವರು ತಮ್ಮ ಪೋಸ್ಟ್ ಇಲಾಖೆಗೆ ಈ ಕಂಪನಿಯಿಂದ ಸಾವಿರಾರು ಕಂಭಗಳನ್ನು ಕೊಂಡುಕೊಳ್ಳುವುದಾಗಿ ಮಾತುಕೊಟ್ಟಿದಾರೆ

❖❖❖

ಹಲ್ಲುಗಳು ಬಿದ್ದುಹೋದರೆ ದಂತವೈದ್ಯರು ಹೊಸ ಹಲ್ಲುಗಳನ್ನು ಕಟ್ಟಿಕೊಡುವುದು ಅನೇಕರಿಗೆ ಅನುಭವ ಪೂರ್ವಕವಾಗಿ ತಿಳಿದಿರುವುದಷ್ಟೆ. ಈ ದಂತವೈದ್ಯವು ಈಚೆಗೆ ರೂಢಿಗೆ ಬಂದದ್ದೆಂದು ಅನೇಕಾನೇಕ ವಿದ್ವಾಂಸರು ಊಹಿಸುತ್ತಿದ್ದರು. ಆದರೆ ಕೆಲವು ದಿನಗಳ ಹಿಂದೆ ಪ್ರಾಚೀನ ವಸ್ತು ಪರಿಶೋಧಕರಿಗೆ ಗ್ರೀಸ್, ಫಿನೀಷಿಯಾ, ಎಟ್ರುಸ್ಕ್ಯ, ಮತ್ತು ಈಜಿಪ್ಟ್, ಈ ದೇಶಗಳ ಕೆಲವು ಹಳೆಯ ಸಮಾಧಿಗಳನ್ನು ಪರೀಕ್ಷಿಸಿದಾಗ ಹೆಣಗಳ ಬಾಯಿನಲ್ಲಿ ಅಂಥಾ ಕೃತಕವಾದ ಹಲ್ಲುಗಳು ದೊರಕಿದವು. ಆದ್ದರಿಂದ ಈ ದಂತ ವೈದ್ಯವು ೮—೧೦ ಸಾವಿರಗಳ ಹಿಂದೆಯೂ ಮೇಲ್ಕಂಡ ದೇಶಗಳ ಜನರಿಗೆ ತಿಳಿದಿತ್ತೆಂದು ನಿರ್ಧಾರವಾಯಿತು.

ಇಂಡಿಯಾ ದೇಶದ ವೃತ್ತಾಂತಗಳು.

ಬರೋಡಾ ಸಂಸ್ಥಾನದ ಗಾಯಕವಾಡ್ ಮಹಾರಾಜರವರಿಗೆ ಈಚೆಗೆ ಕಾಯಿಲೆಯು ಬಹಳಮಟ್ಟಿಗೆ ವಾಸಿಯಾಗಿದೆ ಎಂತಲೂ, ಅವರ ಪ್ರಜೆಗಳೆಲ್ಲಾ ಅದಕ್ಕಾಗಿ ಅನೇಕ ಸಂತೋಷೋತ್ಸವಗಳನ್ನು ನಡಿಸುತ್ತಿದಾರೆಂತಲೂ ತಿಳಿದು ಬಂದಿದೆ

❖❖❖

ಪಸ್ತಾವಾಲಾ ಎಂಬೊಬ್ಬ ಪಾರ್ಸಿ ಸ್ತ್ರೀಯು ದೇಶಾಟನೆ ಹೊರಟು, ಚೀನಾ, ಜಪಾನ್, ಸಂಯುಕ್ತ ಸಂಸ್ಥಾನಗಳು (ಅಮೇರಿಕ), ಈ ಪ್ರಾಂತ್ಯಗಳಲ್ಲಿ ಸಂಚಾರಮಾಡಿ, ಈಗ ವಿಲಾಯತಿಯನ್ನು ತಲಪಿ, ಲಂಡನ್ ಪಟ್ಟಣದಲ್ಲಿರುತ್ತಾಳೆಂದು ತಿಳಿಯುವುದು.

❖❖❖

ಮದರಾಸ್ ಗವರ್ನರವರ ಪತ್ನೀಯವರು ಮದರಾಸ್ ಪಟ್ಟಣದ ತಿರುವಲಕ್ಕೇಣಿಯಲ್ಲಿರುವ ಹಿಂದೂ ಬಾಲಿಕಾ ಪಾಠಶಾಲೆಗೆ ದಯಮಾಡಿ, ಹೆಣ್ಣುಮಕ್ಕಳಿಗೆ ಅಲ್ಲಿ ವಿದ್ಯೆ ಕಲಿಸುವ ಕ್ರಮಗಳನ್ನೂ ಏರ್ಪಾಡುಗಳನ್ನೂ ನೋಡಿ ತುಂಬಾ ಸಂತೋಷಪಟ್ಟುಕೊಂಡುಬಂದರು.

❖❖❖

ದರ್ಭಾಂಗ ಸಂಸ್ಥಾನದ ಮಹಾರಾಜರವರಿಗೆ ಪುತ್ರೋತ್ಸವವಾದ ಸುದ್ದಿಯನ್ನು ಕಲ್ಕತ್ತಾ ಪಟ್ಟಣದ ಪ್ರಜೆಗಳು ಕೇಳಿ ತುಂಬಾ ಸಂತೋಷಪಟ್ಟು ಅನೇಕ ಉತ್ಸವಗಳನ್ನು ಮಾಡಿಸಿದರು. ಸಾವಿರಾರು ಜನರು ಕಾಳೀಘಾಟಿನಲ್ಲಿ ಸೇರಿ ದೇವರ ಪ್ರಾರ್ಥನೆ ನಡಿಸಿದರು.

❖❖❖

ಬರ್ಮಾ ಆಧಿಪತ್ಯಕ್ಕೆ ಸೇರಿದ ಬೌದ್ಧ ಸನ್ಯಾಸಿಗಳು ಕೆಲವರು ವಿಲಾಯತಿಗೆ ಹೋಗಿ ಲಂಡನ್ ಪಟ್ಟಣದಲ್ಲಿ ಠಿಕಾಣಿಮಾಡಿಕೊಂಡು, ಬೌದ್ಧಮತ ತತ್ವಗಳನ್ನು ಉಪನ್ಯಾಸಗಳ ಮೂಲಕವೂ ಪುಸ್ತಕ ಪ್ರಕಟನೆಯ ಮೂಲಕವೂ ಪ್ರಚಾರಮಾಡಬೇಕೆಂದು ತೀರ್ಮಾನಮಾಡಿದರು. ಅಲ್ಲಿ ಒಬ್ಬ ಸೆಕ್ರೆಟರಿಯೂ, ಒಂದು ಸಂಘವೂ ಸ್ಥಾಪನೆಯಾಗಿವೆ.

❖❖❖

ಲಕ್ನೋ ಪಟ್ಟಣದಲ್ಲಿ ಗವರ್ನಮೆಂಟಿನವರು ೩೦ ಲಕ್ಷ ರೂಪಾಯಿ ಖರ್ಚುಮಾಡಿ ಒಂದು ಭಾರೀ ವೈದ್ಯ ವಿದ್ಯಾಶಾಲೆಯನ್ನು ಕಟ್ಟಿಸುವವರಾಗಿದಾರೆ. ಅದರೊಳಗೆ ಈಗಿನ ಕಾಲಕ್ಕೆ ತಕ್ಕಂಥಾ ಸಮಸ್ತ ವಿಧವಾದ ಚಿಕಿತ್ಸೆಗಳಿಗೂ ಅನುಕೂಲಿಸುವಂಥಾ ಯಂತ್ರೋಪಕರಣಗಳನ್ನು ಸುಮಾರು ೨೦ ಲಕ್ಷ ರೂಪಾಯಿ ಮುಟ್ಟಿಸಿ ತರಿಸಿ ಇಡಿಸುವರು. ಮುಂದಿನ ವಾರ ಕಟ್ಟಡದ ಕಾಮಗಾರಿ ಪ್ರಾರಂಭವಾಗುವುದು.

❖❖❖

ಲಾಹೋರ್ ಪಟ್ಟಣದ ಮಹಮ್ಮದೀಯ ಖಾಜಿಗಳು ಅಂಟುಜಾಡ್ಯ ಪ್ರಾಪ್ತವಾದಾಗ್ಗೆ ಜನರು ಊರುಗಳನ್ನು ಬಿಟ್ಟು ಹೋಗಬೇಕೆಂದು ತಮ್ಮ ವೇದವಾದ ಕೋರಾನಿನಲ್ಲಿ ಬರೆದಿದೆ ಎಂಬದಾಗಿ ಗವರ್ನಮೆಂಟಿನವರಿಗೆ ಅರಿಕೆಮಾಡಿದರು. ಪ್ಲೇಗ್ ಇಲಾಖೆಯವರು ಮಹಮ್ಮದೀಯ ಮತಸ್ಥರ ಈ ಅಭಿಪ್ರಾಯವನ್ನು ಕೇಳಿ, ಪ್ಲೇಗ್ ಉಪದ್ರವನ್ನು ಅಡಗಿಸುವುದಕ್ಕೆ ಅದು ತುಂಬಾ ಸಹಾಯಮಾಡುವುದೆಂದು ಹೇಳುತ್ತಿದಾರೆ.

❖❖❖

ಬಳ್ಳಾರಿ ಜಿಲ್ಲೆಗೆ ಸೇರಿದ ಸಂಡೂರು ಸಂಸ್ಥಾನದೊಳಗೆ ಪೊಲ್ಲಣ್ಣಗೌಡನೆಂಬವನು ಅಲ್ಲಿನ ದಿವಾನರನ್ನು ನೋಡಿ ಮಾತನಾಡಿಕೊಂಡು ವಾಪಸು ಬರುತ್ತಿರುವಾಗ ಶತ್ರುಗಳು ಯಾರೋ ಗುಂಡು ಹೊಡೆದು ಆತನನ್ನು ಕೊಂದುಹಾಕಿದರು. ಈತನು ಊರಿನಲ್ಲಿ ಮುಖಂಡನಾಗಿದ್ದುಕೊಂಡು ಪ್ರಜೆಗಳಿಗೆ ನಾನಾ ಕಷ್ಟಗಳನ್ನು ಕೊಡುತ್ತಿದ್ದನೆಂತಲೂ, ಶತ್ರುಗಳ್ಯಾರೋ ಆತನನ್ನು ಕೊಂದುಹಾಕಿದರೆಂತಲೂ ಪ್ರಕಟವಾಗಿದೆ. ಕೊಲೆಗಾರರು ಇನ್ನೂ ಸಿಕ್ಕಿ ಇಲ್ಲ.

❖❖❖

ಈ ತಿಂಗಳ ಕಡೇ ವಾರದಲ್ಲಿ ಸೂರತ್ ಮಹಾಪಟ್ಟಣದೊಳಗೆ ನಾಲ್ಕಾರು ರಾಷ್ಟ್ರೀಯ ಮಹಾ ಸಭೆಗಳೂ ಸಮಾಜಗಳೂ ನಡಿಯುವವು. ಡಾಕ್ಟರ್ ರಾಷ್ ಬಿಹಾರಿ ಘೋಸ್‌ಯವರು ಪ್ರೆಸಿಡೆಂಟರಾಗಿ ನಿಂತು ನ್ಯಾಷನಲ್ ಕಾಂಗ್ರೆಸ್ಸೆಂಬ ಮಹಾ ಸಭೆಯನ್ನು ಜರುಗಿಸುವರು. ರಾವ್ ಬಹದೂರ್ ಲಾಲಾ ಶಂಕರ ಉಮಾಶಂಕರ ಎಂಬ ಮಹನೀಯರು ಮುಖಂಡರಾಗಿ ನಿಂತು ಹಿಂದುಸ್ಥಾನದ ಸಂಘ ಪರಿಷ್ಕರಣ ಸಮಾಜವನ್ನು ನಡಿಸುವರು. ಹಿಂದುಸ್ಥಾನದ ಕೈಗಾರಿಕೆಗಳ ವಸ್ತು ಪ್ರದರ್ಶನೋತ್ಸವವೂ ಆ ನಗರದಲ್ಲೇ ಜರುಗುವುದು. ಇವಲ್ಲದೆ ಇನ್ನೂ ಕೆಲವು ದೇಶಾಭ್ಯುದಯ ಸಮಾಜಗಳನ್ನೂ ನಡಿಸುವುದಕ್ಕೆ ಅಲ್ಲಿನ ಮಹನೀಯರು ಏರ್ಪಾಡು ಮಾಡುತ್ತಿದಾರೆ.

❖❖❖

ಕಳೆದ ವಾರ ಅಹಮದಾಬಾದಿನಲ್ಲಿ ಒಂದು ವಿಧವಾ ಪುನರ್ವಿವಾಹವು ನಡಿಯಿತು. ೨೫ ವಯಸ್ಸಿನ ಕಾಶೀಬಾಯಿ ಎಂಬ ಬ್ರಾಹ್ಮಣ ವಿಧವೆಯು ೨೮ ವಯಸ್ಸಿನ ಧೂರಾಂಜೀವರಾಂ ಎಂಬೊಬ್ಬ ಯೌವನಸ್ಥನನ್ನು ವರಿಸಿ ಮದುವೆಮಾಡಿಕೊಂಡಳು. ಸುಮಾರು ೨೦೦ ಜನ ದೊಡ್ಡಮನುಷ್ಯರು ವಿವಾಹಮಂಟಪವನ್ನು ಅಲಂಕರಿಸಿ, ನೂತನ ವಧೂವರರನ್ನು ಆಶೀರ್ವಾದಮಾಡಿದ್ದಲ್ಲದೆ, ಅವರಿಗೆ ಅನೇಕ ಉಡಿಗೆರೆಗಳನ್ನು ಕೊಟ್ಟು ಸಂತೋಷಪಡಿಸಿದರು. ಮಾರನೇದಿನ ನಡೆದ ಸಮಾರಾಧನೆಯಲ್ಲಿ ನೂರಾರುಮಂದಿ ಬ್ರಾಹ್ಮಣ ವಿದ್ಯಾವಂತರು ಆ ದಂಪತಿಗಳ ಪಙ್ಕ್ತಿಯಲ್ಲಿ ಕುಳಿತು ಭೋಜನಮಾಡಿ, ವಿಧವಾ ಪುನರ್ವಿವಾಹದಲ್ಲಿ ತಮ್ಮ ಸಂತೋಷವನ್ನೂ ಮೆಚ್ಚಿಕೆಯನ್ನೂ ಪ್ರಕಾಶಪಡಿಸಿದರು.

❖❖❖

ಗುಜರಾತ್ ಡಿಸ್ಟ್ರಿಕ್ಟಿನಲ್ಲಿ ಒಬ್ಬ ಹುಡುಗನು ಪ್ಲೇಗ್ ಸಿಡುಬು ಹಾಕಿಸಿಕೊಂಡ ಮೇಲೆ ಸತ್ತುಹೋದನು. ಕೂಡಲೇ ಪ್ರಜೆಗಳೆಲ್ಲಾ ಗಾಬರಿಬಿದ್ದು ನಾನಾ ಪ್ರಕಾರ ಮಾತನಾಡಲಾರಂಭಿಸಿದರು. ಗವರ್ನಮೆಂಟಿನವರು ಪ್ಲೇಗ್ ಸಿಡುಬು ಹಾಕುವುದನ್ನು ತಕ್ಷಣ ನಿಲ್ಲಿಸಿಬಿಟ್ಟು, ಆ ಹುಡುಗನ ಮರಣಕ್ಕೆ ಕಾರಣವೇನೆಂದು ಚನ್ನಾಗಿ ತನಿಖೆಮಾಡಿಸಿದರು. ಒಂದೇ ಶೀಶೆಯ ಹಾಲಿನಿಂದ ಅವನ ಜೊತೆಯಲ್ಲಿ ಸಿಡುಬು ಹಾಕಿಸಿಕೊಂಡ ಆರು ಮಂದಿಯೂ ಆರೋಗ್ಯವಾಗಿದಾರೆಂತಲೂ, ಆ ಹುಡುಗನಿಗೆ ತಲೆಯಲ್ಲಿ ಏನೋ ಒಂದು ಹುಣ್ಣು ಇದ್ದದ್ದರಿಂದ ಧನುರ್ವಾಯುವೆಂಬ ಉಪದ್ರ ಹಿಡಿದು, ಸಿಡುಬು ಹಾಕಿಸಿಕೊಂಡ ೨—೩ ದಿನಗಳ ಮೇಲೆ ಸತ್ತುಹೋದನೆಂತಲೂ ಗೊತ್ತಾಯಿತು. ಆದ್ದರಿಂದ ಪ್ಲೇಗ್ ಸಿಡುಬು ಹಾಕುವುದನ್ನು ಮತ್ತೆ ಪ್ರಾರಂಭಿಸುತ್ತಾರೆ. ಮತ್ತು ಜನರಿಗೆ ಅಪನಂಬಿಕೆ ಹುಟ್ಟದಿರಲೆಂದು ಸರ್ಕಾರದವರು ಆ ಹುಡುಗನ ಮನೆಯವರಿಗೆ ಸ್ವಲ್ಪ ಹಣವನ್ನು ಪ್ರತಿಫಲವಾಗಿ ಕೊಡಿಸಿದರೆಂದು ತಿಳಿದು ಬಂದಿದೆ

❖❖❖

ಈ ತಿಂಗಳ ಕಡೇ ವಾರದಲ್ಲಿ ಸೂರತ್ ನಗರದಲ್ಲಿ ನಡೆಯತಕ್ಕ ಸಾರ್ವಜನಿಕ ಸಂಘ ಪರಿಷ್ಕರಣ ಸಮಾಜದಲ್ಲಿ ಮುಂದೆ ಹೇಳುವ ವಿಷಯಗಳು ಚರ್ಚೆಯಾಗುವವೆಂದು ಪ್ರಕಟವಾಗಿದೆ. (೧) ಸ್ತ್ರೀ ವಿದ್ಯಾಭ್ಯಾಸವನ್ನು ಅಭಿವೃದ್ಧಿಗೆ ತರುವುದೂ ಪರದಾ (ಘೋಷಾ) ಪದ್ಧತಿಯನ್ನು ತೆಗೆದುಹಾಕುವುದೂ; (೨) ಸಮುದ್ರಯಾನ ಮಾಡುವವರಿಗೂ ದೇಶಾಂತರ ಹೋಗಿ ಬರತಕ್ಕವರಿಗೂ ಸೌಲಭ್ಯಗಳನ್ನು ಕಲ್ಪಿಸಿ ಕೊಡುವುದು, (೩) ವಿವಾಹಪರಿಷ್ಕರಣ ಅಂದರೆ ವಿವಾಹವಾಗತಕ್ಕ ಗಂಡು ಹೆಣ್ಣುಗಳ ವಯಸ್ಸನ್ನು ಹೆಚ್ಚು ಮಾಡುವುದು, ಒಳಜಾತಿ ಭೇದಗಳನ್ನು ತೆಗೆದುಹಾಕಿ ಹೆಣ್ಣು ಕೊಟ್ಟು ತರುವುದನ್ನು ರೂಢಿಗೆ ತರುವುದು, ಮತ್ತು ಹೆಚ್ಚು ಮಂದಿ ಹೆಂಡಿರನ್ನು ಮಾಡಿಕೊಳ್ಳುವ ದುಷ್ಟಪದ್ಧತಿಯನ್ನು ತಪ್ಪಿಸುವುದು; (೪) ವಿಧವೆಯರಿಗೆ ಪುನರ್ವಿವಾಹ ಮಾಡಿ ಅವರ ಸ್ಥಿತಿಗತಿಯನ್ನು ಸಂತೋಷಕರವಾಗಿ ಮಾಡುವುದು, ಅವರಿಗೆ ವಿದ್ಯೆ

ಕಲಿಸುವುದು, ಮತ್ತು ಅವರಿಗೆ ಬಲಾತ್ಕಾರದಿಂದ ತಲೆ ಕೂದಲನ್ನು ತೆಗೆಯುವುದನ್ನು ತಪ್ಪಿಸುವುದು; (೪) ಮೈಸೂರ್ ಹುಡುಗಿಯರನ್ನು ದಾಕ್ಟರ್‌ಗಳಿಗೆ ದ್ರವ್ಯ ಕೊಡುವಂತೆ ಕಾದುವುದು (೬) ಮದ್ಯಪಾನವೇ ಮೊದಲಾದ ದುರಭ್ಯಾಸವನ್ನು ಕಡಿಮೆ ಮಾಡಿ ಸಂಘದ ಆಚಾರವ್ಯವಹಾರಗಳನ್ನು ಈಗಿನ ಕಾಲಕ್ಕೆ ತಕ್ಕಂತೆ ಪರಿಷ್ಕರಿಸಿಕೊಳ್ಳುವುದು; (೭) ಅನ್ಯಮತವನ್ನು ಅವಲಂಬಿಸಿದವರನ್ನು ಅಪೇಕ್ಷಿಸಿದರೆ ಪುನಃ ಹಿಂದೂ ಮತಕ್ಕೆ ತೆಗೆದುಕೊಳ್ಳುವುದು, (೮) ಹೊಲೆಯ ಮಾದಿಗರೇ ಮೊದಲಾದ ಕೀಳು ಜಾತಿಯವರಿಗೆ ವಿದ್ಯೆ ಬುದ್ಧಿಗಳನ್ನು ಕಲಿಸಿ, ಅವರ ಸ್ಥಿತಿಗತಿಯನ್ನೂ ಜೀವಮಾನವನ್ನೂ ಉತ್ತಮಪಡಿಸುವುದು, ಇವೇ

***

ಹಿಂದುಸ್ಥಾನದಲ್ಲಿ ಪ್ರಜೆಗಳು ವಿದ್ಯಾವಂತರಾದರೆ ಎಲ್ಲಾ ವಿಷಯಗಳಲ್ಲೂ ಅಭಿವೃದ್ಧಿ ಹೊಂದಬಹುದೆಂಬ ಅಂಶವನ್ನು ದೇಶೀಯ ದೊಡ್ಡ ಮನುಷ್ಯರು ಪರಿಷ್ಕಾರವಾಗಿ ತಿಳಿದುಕೊಂಡು, ಅದಕ್ಕಾಗಿ ಸಾಹಸಪಡುತ್ತಿದ್ದಾರೆ. ಈ ಭಾಗದಲ್ಲಿ ವಿದ್ಯೆ ಐಶ್ವರ್ಯಗಳನ್ನು ಪಡೆದಿರುವ ಇನ್ನೂ ಅನೇಕಾನೇಕರು ಪ್ರಯತ್ನಪಡದೆ ಹೋದರೆ ಮೇಲ್ಕಂಡ ಉದ್ದೇಶವು ನೆರವೇರಲಾರದು. ಬಹು ಮಂದಿ ಶ್ರೀಮಂತರು ವಿದ್ಯಾಪ್ರೋತ್ಸಾಹಕ್ಕೆ ತುಂಬಾ ಹಣವನ್ನು ಧರ್ಮವಾಗಿ ಕೊಟ್ಟಿರುವರು. ಬೊಂಬಾಯಿನ ಕರೀಂಭಾಯಿ ಇಬ್ರಾಹಿಂ ಎಂಬೊಬ್ಬ ಬೀರಿ ಸಾಹುಕಾರನು ತನ್ನ ಜಾತಿಯ ಬಡ ಮಕ್ಕಳಿಗೆ ವಿದ್ಯೆ ಕಲಿಸುವುದಕ್ಕೋಸ್ಕರ ಮೂರು ಲಕ್ಷ ರೂಪಾಯಿ ಕೊಟ್ಟನು. ಇನ್ನೊಬ್ಬ ವರ್ತಕನೂ ಕೂಡ ಅತನಂತೆಯೇ ಮೂರು ಲಕ್ಷ ರೂಪಾಯಿ ಧರ್ಮಮಾಡಿದನು. ಅದೇ ಪಟ್ಟಣದಲ್ಲಿ ಬಾಯಿ ಅವಾಬಾಯಿಪಟಿಟ್ ಎಂಬಾಕೆಯು ಮೂರನೇ ವರ್ಷದ ತಿಥಿಯ ದಿನ ಆಕೆಯ ವಂಶೀಕನು ಪಾರ್ಸಿ ಪ್ರಜೆಗಳ ಉಪಯೋಗಾರ್ಥವಾಗಿ ೫ ಲಕ್ಷ ರೂಪಾಯಿ ದಾನ ಮಾಡಿರುತ್ತಾನೆ. ಬಂಗಾಳದಲ್ಲಿ ಬಾಬು ಗುರುಪ್ರಸನ್ನ ಬೋಸ್ ಎಂಬ ಶ್ರೀಮಂತನ ಆಸ್ತಿಯಿಂದ ಎರಡೂವರೆ ಲಕ್ಷ ರೂಪಾಯೂ ಅದರ ಬಡ್ಡಿ ೧೨,೦೦೦ ರೂಪಾಯೂ ಧರ್ಮಮಾಡಲ್ಪಟ್ಟಿತು. ಈ ಹಣವನ್ನು ಬ್ಯಾಂಕಿನಲ್ಲಿಟ್ಟು ಅದರ ಬಡ್ಡಿಯಿಂದ ಯೋಗ್ಯರಾದ ಯೌವನಸ್ಥರನ್ನು ದೇಶಾಂತರಗಳಿಗೆ ಕಳುಹಿಸಿ, ಕಸಬುಗಳನ್ನು ಕಲಿತು ಬರುವಂತೆ ಏರ್ಪಾಡು ಮಾಡಿದ್ದಾರೆ. ಇಂಥಾ ಪ್ರಜಾವತ್ಸಲರ ಸಂಖ್ಯೆಯು ಈ ರಾಷ್ಟ್ರದಲ್ಲಿ ಅನೇಕವಾಗಿ ಹೆಚ್ಚಲೆಂದು ಹಾರೈಸುತ್ತೇವೆ.

***

ಗ್ವಾಲಿಯರ್ ಸಂಸ್ಥಾನದಲ್ಲಿ ಮಹಾರಾಜರವರು ಸ್ತ್ರೀ ವಿದ್ಯಾಭ್ಯಾಸವನ್ನು ಅಭಿವೃದ್ಧಿಗೆ ತರುವುದಕ್ಕೆ ತುಂಬಾ ಸಾಹಸಪಡುತ್ತಿದ್ದಾರೆ. ಕಳೆದ ೧೮೯೭ನೆ ಇಸವಿಯಲ್ಲಿ ಮಹಾರಾಣಿ ಸ್ಕೂಲನ್ನು ಸ್ಥಾಪಿಸಿದಾಗ ೭ ಹೆಣ್ಣುಮಕ್ಕಳು ಮಾತ್ರ ಅಲ್ಲಿ ವಿದ್ಯೆ ಕಲಿಯುತ್ತಿದ್ದರು. ಈಗಲಾದರೋ ಆ ಬಾಲಿಕಾ ಪಾಠಶಾಲೆಯಲ್ಲಿ ೫೦೦ ಮಂದಿಗಿಂತಲೂ ಹೆಚ್ಚಾಗಿ ಹೆಣ್ಣುಮಕ್ಕಳು ಹೋಗಿ ಓದುವರು. ಇಷ್ಟೇ ಅಲ್ಲ. ಮಹಾರಾಜರವರು ಕೆಲವು ದೊಡ್ಡ ಮನುಷ್ಯರನ್ನು ನೇಮಿಸಿ ಕನ್ಯಾಧರ್ಮಪ್ರವರ್ಧನೀಸಭಾ ಎಂಬ ಸಭೆಯನ್ನೂ ಮಾಡಿದ್ದಾರೆ. ಈ ಸಂಘದ ಪ್ರತಿ ಒಬ್ಬ ಮೆಂಬರೂ ಸ್ತ್ರೀ ವಿದ್ಯಾಭ್ಯಾಸವನ್ನು ಅಭಿವೃದ್ಧಿಪಡಿಸುತ್ತೇನೆಂದು ಭಾಷೆ ತಟ್ಟಿಕೊಂಡಿರುತ್ತಾನೆ. ಆದ್ದರಿಂದ ಈ ಸಭೆಯ ಪೋಷಣೆಯಲ್ಲಿ ಈಚೆಗೆ ಅನೇಕ ಬಾಲಿಕಾ ಪಾಠಶಾಲೆಗಳು ಏರ್ಪಾಡಾಗಿ ನಡೆಯುತ್ತಿರುವುದು ಸಂತೋಷಕರವಾಗಿದೆ. ಈ ಸಂಘದವರು ಸ್ತ್ರೀ ವಿದ್ಯಾಪ್ರೋತ್ಸಾಹಕ್ಕಾಗಿ ಹೆಣ್ಣು ಮಕ್ಕಳಿಗೆ ಅನೇಕ ತರದ ಬಹುಮಾನಗಳನ್ನು ಕೊಡುವರು. ಅವುಗಳ ಪೈಕಿ ಹುಡುಗಿಗೆ ಮದುವೆ ಕಾಲದಲ್ಲಿ ೫೦೦ ರೂಪಾಯಿ ಇನಾಂ ಕೊಡುವುದು ವಿಶೇಷವಾದದ್ದು. ಈ ಬಹುಮಾನವನ್ನು ಪಡೆಯುವುದಕ್ಕೆ ಹುಡುಗಿಗೆ ವಿವಾಹಕಾಲದಲ್ಲಿ ೧೨ ವರುಷ ತುಂಬಿರಬೇಕು. ಅವಳು ಕ್ರಮವಾಗಿ ಸ್ಕೂಲಿಗೆ ಹೋಗಿ ಓದುತ್ತಾ ಪರೀಕ್ಷೆ ಕೊಟ್ಟಿರಬೇಕು. ಮತ್ತು ಮೇಲ್ಕಂಡ ಸಭೆಯ ಒಬ್ಬ ಮೆಂಬರು ಅಂಥಾ ಹುಡುಗಿಯ ತಂದೆತಾಯಿಗಳು ಸಭ್ಯರೂ ಬಡವರೂ ಆಗಿರುತ್ತಾರೆಂದು ಶಿಫಾರಸು ಮಾಡಬೇಕು. ಇಂಥಾ ಪ್ರೋತ್ಸಾಹಗಳನ್ನು ಕಲ್ಪಿಸಿಯಾದರೂ ಹೆಣ್ಣುಮಕ್ಕಳಿಗೆ ವಿದ್ಯೆ ಕಲಿಸಬೇಕೆಂದು ಸಾಹಸಪಡುತ್ತಿರುವ ಆ ಮಹಾರಾಜರವರನ್ನು ಎಲ್ಲರೂ ಹೊಗಳುತ್ತಿರುವರು.

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ನಿಗಾ ಕೊಡಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿಟರ್]

ಕರೆಸ್‌ಪಾಂಡೆನ್ಸ್.

ರೈತನು ಅಭಿವೃದ್ಧಿ ಹೊಂದುವ ಬಗೆ ಹ್ಯಾಗೆ !

ಅಯ್ಯಾ,

ನಮ್ಮ ಮೈಸೂರ್ ಸಂಸ್ಥಾನದ ಪ್ರಜೆಗಳನ್ನು ಅಭಿವೃದ್ಧಿಗೆ ತರಬೇಕೆಂದು ನಮ್ಮನ್ನಾಳುವ ಪ್ರಭುಗಳೂ ಸಂಸ್ಥಾನದ ದೊಡ್ಡ ಮನುಷ್ಯರೂ ನಾನಾ ಪ್ರಯತ್ನದಿಂದ ಸಾಹಸಪಡುತ್ತಿದ್ದಾರೆ. ಈ ಪ್ರಯತ್ನಗಳನ್ನೆಲ್ಲಾ ಸಾಂಗೋಪಾಂಗವಾಗಿ ನೆರವೇರಿಸುವ ಭಾರವನ್ನು ಜಗದೀಶ್ವರನು ವಹಿಸಬೇಕಾಗಿದೆ.

ಈ ವಿಷಯದಲ್ಲಿ ಪ್ರಯತ್ನಶೀಲರಾದ ಮಹನೀಯರ ಅವಗಾಹನೆಗೆ ಬರಬೇಕಾದ ಅಂಶವೇನಂದರೆ—೧೯೦೭ ನವಂಬರ್ ೧೫ನೇ ವೃತ್ತಾಂತ ಗೆಜೆಟ್ಟಿನಲ್ಲಿ ೧೯೦೬-೦೭ ಅಪೀಲು ನಂ ೨೨೭ನೇ ರೆವಿನ್ಯೂ ಕಮಿಷನರ್ ಸಾಹೇಬರವರ ಫೈಸಲಿನಲ್ಲಿ ಅಪೀಲು ಪ್ರತಿವಾದಿ ತಮ್ಮಡಿ ಲಿಂಗಯ್ಯನು ಕಂದಾಯ ಬಾಕಿ ಮಾಡಿದ್ದಾಗ್ಯೂ ತನ್ನ ಹೊಲ ನಿರಾಜಾಗಲ್ಪಟ್ಟದ್ದನ್ನು ರದ್ದುಪಡಿಸಿಕೊಳ್ಳಬೇಕಾದರೂ ಮತ್ತು ಪರಾಧೀನದಲ್ಲಿ ಪಡೆದ ಸ್ವತ್ತುಗಳನ್ನು ವೆಂಕಟಸುಬ್ಬಯ್ಯನು ಖಾಯಂ ಮಾಡಿಸಿಕೊಳ್ಳಬೇಕಾದರೂ ಉಭಯರಿಗೆ ಎಷ್ಟು ಶ್ರಮೆಯೂ, ಎಷ್ಟು ದುಡ್ಡು ವ್ಯಯವೂ ಆಗಿರಬಹುದು ಎಂಬುವದನ್ನು ಯೋಚಿಸಬೇಕಾಗಿದೆ.

ಇಷ್ಟೆಲ್ಲಾ ಶ್ಯಾನುಭೋಗರಿಂದ ನಡೆಯಿತು ಎಂಬುವದು ಅಮಲ್ದಾರರಿಗೂ, ಡೆಪ್ಯುಟಿ ಕಮಿಷನರ್ ಸಾಹೇಬರವರಿಗೂ, ರೆವಿನ್ಯೂ ಕಮಿಷನರ್ ಸಾಹೇಬರವರಿಗೂ ಸ್ಪಷ್ಟವಾಗಿ ತಿಳಿದ ಭಾಗವಾಗಿರುತ್ತೆ. ಈ ರೀತಿಯಾಗಿ ಶ್ಯಾನುಭೋಗರಿಂದ ಅನೇಕ ಸಂದರ್ಭಗಳಲ್ಲಿ ರೈತರು ನಷ್ಟಹೊಂದುತ್ತಾರೆ. ರೈತರಾಗಿಯಬ್ಬನೇ ಶ್ಯಾನುಭೋಗರಿಂದ ತಪ್ಪಿಸಿಕೊಳ್ಳತಕ್ಕವನು. ಶ್ಯಾನುಭೋಗರಾದರೋ ಶಕ್ಯ ದಾದರು, ಸರ್ಕಾರಕ್ಕೆ ಪೂರ್ಣ ಪ್ರಿಯರು. ಆದುದರಿಂದ ರೈತರು ಅಭಿವೃದ್ಧಿ ಹೊಂದುವ ಬಗೆ ಹ್ಯಾಗೆ ?

ಚಂದಾದಾರ

ಬಾಲವಿಧವೆಯರಿಗೆ ಕೂದಲು ತೆಗೆಸುವುದು.

ಅಯ್ಯಾ,

ಈ ಕೊಡಗು ದೇಶದಲ್ಲಿ ಹವಿಕರೆಂಬ ಒಂದು ಜಾತಿಯ ಬ್ರಾಹ್ಮಣರಿದ್ದಾರೆ. ಇವರಿಗೆ ಮೈಸೂರು ದೇಶದ ನಗರದ ಶಿವಮೊಗ್ಗದಲ್ಲಿರುವ ಶ್ರೀ ರಾಮಚಂದ್ರಪುರದ ಮಠದ ಶಂಕರಾಚಾರ್ಯರೆಂಬ ಸ್ವಾಮಿಗಳು ಗುರುಗಳಾಗಿದ್ದಾರೆ. ಸದರೀ ಮಠದಿಂದ ನೇಮಕರಾದ ಮಾ॥ ಎ ಪಿ ಸುಬ್ಬಯ್ಯನವರೆಂಬುವರು ಆಚಾರವಿಚಾರದ ಅಧಿಕಾರಿಗಳು. ಇವರು ಈಗ್ಗೆ ೪-೫ ವರುಷಗಳ ಮುಂಚಿತವಾಗಿ ಈ ಪಂಗಡದ ಬ್ರಾಹ್ಮಣರಲ್ಲಿ ಯಾರಾದಾಗ್ಯೂ ಬಾಲವಿಧವೆಯರಿದ್ದರೆ ಅವರುಗಳು ತಲೆ ಬೋಳಿಸಿಕೊಂಡಹೊರತು ಅವರ ಮನೆಗಳಿಗೆ ಪುರೋಹಿತರೇ ಮೊದಲಾದವರು ಯಾವ ವಿಧವಾದ ಸತ್ಕರ್ಮಗಳಿಗೂ ಹೋಗಕೂಡದು ಎಂದು ಹೇಳುತ್ತಾ, ಉಲ್ಲಂಘನೆ ಮಾಡಿದರೆ ಅಂಥವರಿಗೆ ಬಹಿಷ್ಕಾರ ಮುಂತಾದ ಶಿಕ್ಷೆ ನಡೆಸುತ್ತಾ, ಬಲಾತ್ಕಾರದಿಂದ ತಲೆ ಬೋಳಿಸುತ್ತಾ ಇದ್ದರು. ಅವರೆ ಈ ಮಹನೀಯರ ಇಬ್ಬರು ಹೆಣ್ಣು ಮಕ್ಕಳ ಪತಿಗಳು ಈಚೆಗೆ ಕಾಲವಾದರು. ಆವಾಗಿನಿಂದ ಈ ಅಧಿಕಾರಿಗಳು ತಮ್ಮ ಅಧಿಕಾರ ಚಲಾಯಿಸುವದರಲ್ಲಿ ಮಾನಸಿಕ ಮಾಡಿದರು. ಈಗ ಪೂರ್ವದಲ್ಲಿ ಇವರಿಂದ ನಿರ್ಬಂಧಕ್ಕೆ ಒಳಗಾಗಿದ್ದ ಗೃಹಸ್ಥರು ಈ ಅಧಿಕಾರಿಗಳು ತಮ್ಮ ಹೆಣ್ಣು ಮಕ್ಕಳು ವಿಧವೆಯರಾದರೂ ತಲೆ ಯಾಕೆ ಬೋಳಿಸಲಿಲ್ಲವೆಂತಲೂ, ಇತರರಿಗೆ ಮಾತ್ರ ಬಲಾತ್ಕಾರ ಮಾಡಿದವರು ತಾವು ಯಾಕೆ ಮಾಡಲಿಲ್ಲವೆಂತಲೂ ಎಲ್ಲರೂ ಒಟ್ಟಾಗಿ ಶ್ರೀಗುರುಗಳವರಿಗೆ ವಿಜ್ಞಾಪನಾ ಪತ್ರಿಕೆಯನ್ನು ಬರೆದು ಇದ್ದಾರೆ. ಬಡ ವಿಧವೆಯರ ತಲೆ ಬೋಳಿಸಿದ ಮಹನೀಯರಿಗೆ ಇಂಥಾ ಗತಿ ಪ್ರಾಪ್ತವಾಯಿತಲ್ಲಾ ಎಂದು ಬಹಳ ಜನರು ವ್ಯಸನಪಡುತ್ತಾರೆ. ಈ ಅಧಿಕಾರಿಗಳ ಮಕ್ಕಳು ಚಿಕ್ಕವಯಸ್ಸಿನವರು, ಸುಂದರಿಯರು. ಇವರಿಗೆ ದೇವರು ಇಂಥಾ ಚಿಕ್ಕವಯಸ್ಸಿನಲ್ಲಿ ವೈಧವ್ಯವನ್ನು ತಂದ. ಈ ಮಹನೀಯರು ಇಂಥಾ ಯುವತಿಯರಿಗೆ ದ್ವಿತೀಯ ವಿವಾಹ ಮಾಡಿದಾಗ್ಯೂ ಮಾಡಬಹುದೇ ಎಂದು ಜನರು ಎದುರು ನೋಡುತ್ತಾರೆ. ನೋಡಿ, ಹಿಂದೂ ಮತದ ಕಷ್ಟವನ್ನು ದೇವರು ಎಂದಿಗೆ ಪರಿಹಾರ ಮಾಡುವನೋ ತಿಳಿಯದು.

ಜನಾಬಿಮಾನಿ

[ಈ ವಿಷಯವನ್ನು ಪ್ರಕಟಿಸಲು ತುಂಬಾ ವ್ಯಸನಪಡುವೆವು. ಬಾಲವಿಧವೆಯರಾಗುವುದಕ್ಕೆ ಬಾಲ್ಯವಿವಾಹವೇ ಮೂಲಕಾರಣವಾಗಿದೆ. ಆದ್ದರಿಂದ ಈ ಬಾಲ್ಯವಿವಾಹವನ್ನೇ ನಿಲ್ಲಿಸಿಬಿಟ್ಟರೆ ಈ ದುಃಖಕರವಾದ ಸ್ಥಿತಿಯು ನಿವಾರಣೆಯಾಗುತ್ತದೆ. ಮತ್ತು ಅಂಥಾ ವಿಧವೆಯರಿಗೆ ತಲೆ ಕೂದಲನ್ನು ತೆಗೆಸುವುದು ಬಹು ಕ್ರೂರವೂ ಪಾಪ ಮೂಲಕವೂ ಆಗಿರುತ್ತದೆಂದು ವಿವೇಕಿಗಳೆಲ್ಲಾ ಒಪ್ಪದಿರಲಾರರು.—ಎಡಿ]

ಮೈಸೂರ್ ಗೆಜೆಟ್ ಸಂಗ್ರಹ

ಕಳೆದ ನೊವೆಂಬರ್ ೧೧ ರಲ್ಲಿ ನಡೆದ ಮೈಸೂರು ಸಿವಿಲ್ ಸರ್ವಿಸ್ ಪರೀಕ್ಷೆಯಲ್ಲಿ ಮುಂದೆ ಹೇಳುವ ಇಬ್ಬರು ಉದ್ಯೋಗಿಗಳು ತೇರ್ಗಡೆ ಹೊಂದಿರುತ್ತಾರೆ—(೧) ಮೆ॥ ನ್ಯಾಯಪತಿ ಮಾಧವರಾವ್, ಬಿ ಎ (೨) ಮೆ॥ ಎಸ್ ಶಾಮಣ್ಣ, ಬಿ ಎ

ಮೈಸೂರು ಮಹಾರಾಣಿ ಕಾಲೇಜ್ ಲೇಡಿ ಸೂಪರಿಂಟೆಂಡೆಂಟಾದ ಮಿಸ್ ಜಿ ಎಲ್ ಪ್ಯಾಲಿಸಾಡ್‌ಯವರಿಗೆ ಡಿಸೆಂಬರ್ ೧ ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಮೂರು ತಿಂಗಳ ಪ್ರಿವಿಲೆಜ್ ರಜವನ್ನೂ, ಅದಕ್ಕೆ ಸೇರಿದಂತೆಯೇ ಮೂರು ತಿಂಗಳ ಕಾಯಿಲೆ ರಜವನ್ನೂ ಕೊಟ್ಟಿದೆ.

ಶಿವಮೊಗ್ಗ ಸಿವಲ್ ಆಸ್ಪತ್ರೆಯ ಸಬ್ ಅ ಸರ್ಜ ನ್ ಎಸ್ ಕೆ ಹನುಮಂತರಾಯರಿಗೆ ನೊವೆಂಬರ್ ೮ಗಾ ೨೦ರ ವರೆಗೆ ಹತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿರುವ ಟೆಂ॥ ಸಬ್ ಅ॥ ಸರ್ಜನ್ ಮೆ॥ ಎಸ್ ಎಸ್. ಸಂಜೀವಯ್ಯನವರನ್ನು ಶಿವಮೊಗ್ಗ ಸಿವಿಲ್ ಆಸ್ಪತ್ರೆಗೆ ವರ್ಗಮಾಡಿದೆ.

ಜಗಲೂರು ತಾಲ್ಲೂಕು ಅಮಲ್ದಾರ್ ಮೆ॥ ಇ ಸಿ ಸದಾಶಿವಪಿಳ್ಳೆಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳೂ ಇಪ್ಪತ್ತೊಂಬತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಜನರಲ್ ಮತ್ತು ರೆವಿನ್ಯೂ ಸೆಕ್ರೆಟೇರಿಯಟ್ಟಿನ ೩ನೇ ಗ್ರೇಡ್ ಕ್ಲಾರ್ಕ್ ಎಚ್ ವೆಂಕಟನರಸೈಯ್ಯನವರು ಜಗಲೂರು ತಾಲ್ಲೂಕಿನ ಅಮಲ್ದಾರ್ ಮತ್ತು ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೇಮಿಸಲ್ಪಟ್ಟಿದ್ದಾರೆ.

ಅರಸಿಕೆರೆ ತಾಲ್ಲೂಕು ಅಮಲ್ದಾರ್ ಮೆ॥ ಕೆ ಶ್ರೀನಿವಾಸರಾಯರಿಗೆ ಕೊಟ್ಟಿರುವ ಒಂದು ತಿಂಗಳ ಪ್ರಿವಿಲೆಜ್ ರಜವನ್ನು ಇನ್ನೂ ಒಂದು ತಿಂಗಳೂ ಇಪ್ಪತ್ತೈದು ದಿನಗಳಿಗೆ ಜಾಸ್ತಿ ಮಾಡಿದೆ.

ಮೆ॥ ಜಿ ಎಸ್ ರಾಮಸ್ವಾಮಿ ಅಯ್ಯಂಗಾರರು ಈಗಿನಂತೆ ಅರಸೀಕೆರೆ ತಾಲ್ಲೂಕ್ ಅಮಲ್ದಾರರಾಗಿ ಬದಲಿ ನೋಡತಕ್ಕದ್ದು.

ಫಾರೆಸ್ಟ್ ಅ॥ ಕನ್ಸರ್ವೇಟರ್ ಮೆ॥ ಬಿ ರಾಮಸ್ವಾಮಿ ಅಯ್ಯನವರಿಗೆ ಕೊಟ್ಟಿರುವ ಎರಡು ತಿಂಗಳ ೧೫ ದಿನಗಳ ಪ್ರಿವಿಲೆಜ್ ರಜವನ್ನು ಇನ್ನೂ ಒಂದು ವಾರ ಜಾಸ್ತಿ ಮಾಡಿದೆ.

ಕಡೂರು ಡಿಸ್ಟ್ರಿಕ್ಟ್ ಎಕ್ಸೈಸ್ ಆಫೀಸರ್ ಮೆ॥ ಜಿ. ಆರ್ ಶ್ರೀನಿವಾಸೈಯ್ಯಂಗಾರ್ರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮೆ॥ ಕೆ ಆರ್ ಶ್ರೀನಿವಾಸೈಯ್ಯಂಗಾರರು ಡೆಪ್ಯುಟಿ ಕಮಿಷನರ್ ಬದಲಿ ನೋಡುವ ಕಾಲದಲ್ಲಿ ಮುಂದೆ ಹೇಳುವ ಬದ್ಲಿಗಳನ್ನು ಹುಕುಂ ಮಾಡಿದೆ —

ಅ॥ ಕಮಿಷನರ್ ಮೆ॥ ವಿ ಆರ್. ತ್ಯಾಗರಾಜ ಅಯ್ಯರವರು ಏಪ್ರಿಲ್ ೨೯ ರಿಂದ ಮೇ ೧೫ ತನಕಲೂ, ಅ॥ ಕಮಿಷನರ್ ಕೆ ಚಾಮುಂಡಿಯವರು ಮೇ ೧೬ ರಿಂದ ಜೂನ್ ೩೦ ರ ತನಕಲೂ ಹ್ಯಾರ್ ಅ॥ ಕಮಿಷನರಾಗಿ ಇರತಕ್ಕದ್ದು.

ಮೆ॥ ಪಿ ಆರ್ ಡಬ್ಲ್ಯು. ವೆದರಾಲ್‌ಯವರು ರಜದ ಮೇಲಿರುವ ಕಾಲದಲ್ಲಿ ಮುಂದೆ ಹೇಳುವ ಬದ್ಲಿಗಳನ್ನು ಹುಕುಂ ಮಾಡಿದೆ —

(೧) ಮೆ॥ ಎಂ ಕಾಂತರಾಜೇಅರಸಿನವರು ಏಪ್ರಿಲ್ ೨೯ ರಿಂದ ಜುಲೈ ೨೮ ರ ತನಕ ೨ನೆ ಕ್ಲಾಸ್ ಡೆಪ್ಯುಟಿ ಕಮಿಷನರಾಗಿ ಬದ್ಲಿ ಕಳುಹಿಸಲ್ಪಟ್ಟಿದ್ದಾರೆ (೨) ಮೆ॥ ಸಿ ಶ್ರೀಕಂಠೇಶ್ವರ ಅಯ್ಯರವರು ಜುಲೈ ೩ ರಿಂದ ೨ನೆ ಕ್ಲಾಸ್ ಡೆಪ್ಯುಟಿ ಕಮಿಷನರಾಗಿ ಬದಲಿ ನೋಡತಕ್ಕದ್ದು.

ಮುಂದೆ ಹೇಳುವ ಹೆಲ್ತ್ ಆಫೀಸರುಗಳನ್ನು ವರ್ಗ ಮಾಡಿದೆ:—

(೧) ಮೆ॥ ಬಿ ಕೃಷ್ಣರಾಯರನ್ನು ಮೈಸೂರಿನಿಂದ ಕಡೂರು, ಶಿವಮೊಗ್ಗ, ಚಿತ್ರದುರ್ಗ ಡಿಸ್ಟ್ರಿಕ್ಟುಗಳ ಸ್ಯಾನಿಟರಿ ಆಫೀಸರಾಗಿಯೂ ಮೆ॥ ವಿ ಎಲ್ ಮಾರ್ಕಂಡೇಯವರನ್ನು ಮೈಸೂರು ಹೆಲ್ತ್ ಆಫೀಸರಾಗಿಯೂ ವರ್ಗ ಮಾಡಿದೆ.

ಅಮಲ್ದಾರ್ ಮತ್ತು ಡೆಪ್ಯುಟಿ ಅಮಲ್ದಾರರುಗಳ ಮುಂದೆ ಹೇಳುವ ನೇಮಕ ವರ್ಗಾವಣೆ ಮುಂತಾದ್ದು ಹುಕುಂ ಮಾಡಲ್ಪಟ್ಟಿದೆ —

೧ ಮೆ॥ ಬಿ ಎಸ್ ವೆಂಕಟೇಶಯ್ಯನವರು ಕೊಪ್ಪ ತಾಲ್ಲೂಕಿನಿಂದ ಕೋಲಾರ್ ತಾಲ್ಲೂಕಿಗೆ

೨ ಪೋಲೀಸ್ ಇನ್ಸ್‌ಪೆಕ್ಟರ್ ಶ್ರೀ ನರಸಿಂಹ ದಾಸ್ರು ಕೊಪ್ಪ ತಾಲ್ಲೂಕಿನ ಅಮಲ್ದಾರ್ ಮತ್ತು ೩ನೆ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೇಮಿಸಲ್ಪಟ್ಟಿದ್ದಾರೆ

೩ ಮೆ॥ ಎಸ್ ಎ ಅಪ್ಪಣ್ಣೈಯ್ಯಂಗಾರರು ಚನ್ನಪಟ್ಟಣದ ತಾಲ್ಲೂಕಿನಿಂದ ಸಾಗರ ತಾಲ್ಲೂಕಿಗೆ

೪ ಶಿವಮೊಗ್ಗ ಡಿಸ್ಟ್ರಿಕ್ಟ್ ಟ್ರೆಷರರ್ ಸಿ ಶ್ರೀನಿವಾಸರಾಯರು ಚನ್ನರಾಯಪಟ್ಟಣದ ತಾಲ್ಲೂಕ್ ಅಮಲ್ದಾರ್ ಮತ್ತು ೩ನೆ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೇಮಿಸಲ್ಪಟ್ಟಿದ್ದಾರೆ.

೫ ಗುಂಡ್ಲುಪೇಟೆ ಡೆಪ್ಯುಟಿ ಅಮಲ್ದಾರ್ ಮೆ॥ ಎಸ್ ಅನಂತಪದ್ಮನಾಭಯ್ಯನವರು ಮಾಗಡಿ ತಾಲ್ಲೂಕಿನ ಅಮಲ್ದಾರ್ ಮತ್ತು ೩ನೆ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೇಮಿಸಲ್ಪಟ್ಟಿದ್ದಾರೆ

೬ ತಾಲ್ಲೂಕ್ ಶಿರಸ್ತೇದಾರ್ ಮೆ॥ ಸಿ ಕಾಶೀನಾಥರಾಯರು ಗುಂಡ್ಲುಪೇಟೆ ಸಬ್ ತಾಲ್ಲೂಕಿನ ಡೆಪ್ಯುಟಿ ಅಮಲ್ದಾರ್ ಮತ್ತು ೩ನೆ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲೀ ನೇಮಿಸಲ್ಪಟ್ಟಿದ್ದಾರೆ

೭ ಮೆ॥ ಜಿ ನಾರಾಯಣರಾಯರು ರಜದಿಂದ ವಾಪಸು ಬಂದ ಮೇಲೆ ಮಾಗಡಿ ತಾಲ್ಲೂಕಿನ ಡೆಪ್ಯುಟಿ ಅಮಲ್ದಾರರಾಗಿರತಕ್ಕದ್ದು. ಮೆ॥ ಎ ಟಿ ಸೀತಾರಾಮಯ್ಯನವರು ಅವರ ಖಾಯಂ ಕೆಲಸಕ್ಕೆ ವಾಪಸು ಹೋಗತಕ್ಕದ್ದು

೮ ಹುಣಸೂರು ತಾಲ್ಲೂಕ್ ಶಿರಸ್ತೇದಾರ್ ಬಿ ಲಿಂಗಪ್ಪನವರು ಫ್ರೆಂಚ್ ರಾಕ್ಸ್ ಸಬ್ ತಾಲ್ಲೂಕಿನ ಡೆಪ್ಯುಟಿ ಅಮಲ್ದಾರ್ ಮತ್ತು ೩ನೆ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೇಮಿಸಲ್ಪಟ್ಟಿದ್ದಾರೆ.

ಅರಮನೆ ಡಿವಿಷನ್ ಎಗ್ಸಿಕ್ಯುಟಿವ್ ಇಂಜನಿಯರ್ ಮೆ॥ ಸಿ ಮಾಧವರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಅಮೇರಿಕದಿಂದ ವಿದ್ಯುಚ್ಛಕ್ತಿಯ ವಿಚಾರವನ್ನು ಕಲಿತುಕೊಂಡು ಬಂದಿರುವ ಮೆ॥ ಎಸ್ ಪಿ ಶೇಷಾದ್ರಿ ಅಯ್ಯಂಗಾರರನ್ನು ಸೆಪ್ಟೆಂಬರ್ ೧೨ ರಿಂದ ತಿಂಗಳಿಗೆ ೨೫೦ ರೂಪಾಯಿ ಸಂಬಳದ ಮೇಲೆ ಎಕ್ಸ್‌ಟ್ರಾ ಅಸಿಸ್ಟೆಂಟರಾಗಿ ನೇಮಕ ಮಾಡಿದೆ

ದಾವಣಗೆರೆ ಸಬ್ ಅ॥ ಸರ್ಜನ್ ಮೆ॥ ಕೆ. ಅನಂತರಾಮೈಯ್ಯಂಗಾರ್ರಿಗೆ ದಸರಾ ರಜಾಕ್ಕೆ ಸೇರಿದಂತೆ ಕೊಟ್ಟಿದ್ದ ೧೫ ದಿನಗಳ ಪ್ರಿವಿಲೆಜ್ ರಜವನ್ನು ಇನ್ನೂ ಹದಿನೈದು ದಿನಗಳಿಗೆ ಜಾಸ್ತಿಮಾಡಿದೆ

ಕಂಟಿನ್ಯೂಯರವರ ಆಫೀಸಿನಲ್ಲಿರುವ ಪ್ರೊ॥ ಅ॥ ಕಮಿಷನರ್ ಮೆ॥ ಎಚ್ ಪಿ ರಾಜಗೋಪಾಲಾಚಾರ್ರಿಗೆ ನೊವೆಂಬರ್ ೨೫ ರಿಂದ ಇಪ್ಪತ್ತೊಂಬತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಫಾರೆಸ್ಟ್ ಅ॥ ಕನ್ಸರ್ವೇಟರ್ ಮೆ॥ ಬಿ ರಾಮಸ್ವಾಮಿ ಅಯ್ಯರವರಿಗೆ ಕೊಟ್ಟಿದ್ದ ಎರಡು ತಿಂಗಳು ಹತ್ತು ದಿನಗಳ ಪ್ರಿವಿಲೆಜ್ ರಜವನ್ನು ಇನ್ನೂ ಐದು ದಿನಗಳಿಗೆ ಜಾಸ್ತಿ ಮಾಡಿದೆ

ಮೆ॥ ಸಿ ಕ್ರೈಸ್‌ಯವರು ಸರ್ಕಾರ ಮೇಲೆ ಕೆಲಸ ಬಿಟ್ಟದ್ದರಿಂದ ಮೆ॥ ಎಂ ಬಿ ಶ್ರೀನಿವಾಸೈಯ್ಯಂಗಾರರನ್ನು ಚಿಕ್ಕಮಗಳೂರು ಸ್ಕೂಲಿನಿಂದ ಹಾಸನದ ಹೈಸ್ಕೂಲಿನ ಹೆಡ್ ಮಾಸ್ಟರಾಗಿ ವರ್ಗ ಮಾಡಿದೆ

ಅಡ್ವೊಕೇಟ್ ಮೆ॥ ಎಸ್ ವೆಂಕಟರಾಯರನ್ನು ಸಾಗರ ಮ್ಯುನಿಸಿಪಲ್ ಬೋರ್ಡಿನ ಮೆಂಬರಾಗಿ ನೇಮಕ ಮಾಡಿದೆ

ಪ್ರಕಟನೆಗಳು

ಡಾಕ್ಟರು ಏನು ಹೇಳುತ್ತಾರೆ?

ಇವರು ಹಲವು ಸಂಗತಿಗಳೆಲ್ಲಾ ತಕ್ಕಮಟ್ಟಿಗೆ ತಿಳಿದವರಾಗಿರಬೇಕು ಮತ್ತು ಅವರು ಬಹಿರಂಗವಾಗಿ ಹೇಳುವ ಮಾತು ಕಲ್ಕತ್ತಾ ಪಟ್ಟದವರಿಗೆ ಪ್ರಾಜ್ಯವಾಗಿರುವುದು. ಇಂಡಿಯಾವಿನ ಮೆಡಿಕಲ್ ಕಾಲೇಜಿನ ಲೆಕ್ಚರರಾದ ಡಾಕ್ಟರ್ ಎ ಕೆ ಮುಖರ್ಜಿಯವರು ತಮ್ಮ ಸ್ವಂತ ಅನುಭವದ ಮೇಲೆ ಖಂಡಿತವಾಗಿ ಹೇಳುವುದೇನಂದರೆ -

ಟ್ರವರ್-ಯೂ-ಮೂತ್ರ, ಸಂಬಂಧವಾದ ಇತರ ಬುದ್ಧಿಗಳಿಂದ ಹಾಗೆ ಬೇರೆ ಔಷಧಗಳಿಂದ ಉಪಶಮನ ಸಿಕ್ಕದಂಥ ರೋಗಸ್ಥರ ಕೋಲಿನ-ಮೂತ್ರರೋಗ ಶಾಂತಿಯ ಔಷಧ ಗುಳಿಗೆ (ಡೋಕ್ಟರ್ ವಿಲ್-ವ-ಕಿಟ್ಸ್ ಪಿಲ್ಸ್) ಗಳನ್ನು ಸೇವಿಸುವ ಮೊದಲು ಪ್ರಯೋಜನವು ಏಕೆಂದರೆ — ಇತರ ಔಷಧಗಳಿಂದ ಗುಣಕಾಣದೆ ಇದ್ದವರಿಗೆ ಇದರಿಂದ ಗುಣವಾಗಿರುವುದು.

ಕಿಡ್ನಿ ಬೆನ್ನಿನಲ್ಲಿಯ ನೋವು ಮೂತ್ರಪಿಂಡದ ಉಪದ್ರವಿರುವುದಾಗಿ ತೋರಿಸುತ್ತದೆ. ಕಿಡ್ನಿಯಲ್ಲಿಯೂ ನೋವು ಇರುವುದು. ಇತರ ಗುಣ ಲಕ್ಷಣವೆಂದರೆ - ತಲೆ ತಿರುಗುವಿಕೆ, ತಲೆ ನೋವು, ನೀರು ಕಟ್ಟು, ದೃಷ್ಟಿ ಮಾಂದ್ಯ ಮುಂತಾದ್ದು. ಈ ಗುಳಿಗೆಗಳು ಕ್ರಿಮಿಗಳನ್ನು ಸುಧಾರಿಸಿ ಬೆನ್ನುನೋವಿನ, ಮೂತ್ರನೋವಿನ, ಮೂತ್ರಕೋಶದ ಮತ್ತು ಮೂತ್ರ ಸಂಬಂಧವಾದ ಇತರ ವ್ಯಾಧಿಗಳನ್ನು ಪರಿಹರಿಸುತ್ತವೆ.

ಎಲ್ಲಾ ಔಷಧ ವರ್ತಕರಿಂದ ದೊರೆಯುತ್ತದೆ. ಶೀಸೆ ಒಂದಕ್ಕೆ ೨, ಆಥವಾ ೬ ಶೀಸೆಗಳಿಗೆ ೧೪. ... ಅಥವಾ ಮುಂಬಯಿ ಕಿಡ್ನಿಯ ರೋಗಸ್ಥರ ಔಷಧಗಳ ಕಂಪೆನಿ ... ಬಾಕ್ಸ್ ನಂ. ೫೦, ಮುಂಬಯಿ.

ಕರೆನ್ಸಿ ನೋಟು, ಬಹುಮಾನ.

135-1

ಇದರಿಂದ ತಿಳಿಯುವುದೇನೆಂದರೆ—T A 77—91122 ನಂಬರ್ಸ 100 ರೂಪಾಯಿಗಳ ಅರ್ಧ ನೋಟನ್ನು ಬೆಂಗಳೂರು ಪೇಟೆಯಲ್ಲಿ 10-11-1907 ರಲ್ಲಿ ಕಳೆದುಕೊಂಡೆನು. ಅದ ನ್ನು ತಂದು ಕೊಟ್ಟರೆ 10 ರೂಪಾಯಿ ಬಹುಮಾನ ಕೊಡುವೆನು. ... ವೆಂಕಟನಾರಾಯಣ, ದೇವನಹಳ್ಳಿ.

ಇಲ್ಲಿ ನೋಡಿ!

65-23

ಶ್ರೀಮಂತರು ವಿಲಾಯಿತಿ ಇಟಲಿಯಲ್ಲಿ ಯಾವ ತರಹದ ವೆಲ್ವೆಟ್ ಟೋಪಿಗಳು ಆಗುತ್ತವೋ ಅದೇ ಮಾದರಿ ಉಲ್ ಟೋಪಿ ತರಿಸಿರುತ್ತೇವೆ.

ಕ್ರಯ:—೧ ಆಣೆ ಮೊದಲುಗೊಂಡು ೧ ರೂ ೧೦ ಆಣೆವರೆಗೂ.

೧ ಡಜನ್ ಟೋಪಿಗಳನ್ನು ತೆಗೆದುಕೊಳ್ಳುವವರಿಗೆ ಶೇಕಡಾ ೫ ಡಿಸ್ಕೌಂಟ್ ಕೊಡಲ್ಪಡುವುದು.

ನಮ್ಮ ವಿಳಾಸ:—ಮೇನೇಜರ್,

ಇಟಲಿ ಟೋಪಿ ಕಾರ್ಖಾನೆ, ವಿಲಾಯತ್ ಇಲಾಕಾ, ಕಾಮಾಕ್ಷೂರು.

ನೂತನ ಡೈರಿಗಳು.

133-1

ಈ ಕೆಳಗೆ ಕಾಣಿಸಿರುವಂತೆ ನಾಲ್ಕು ವಿಧವಾದ ಡೈರಿಗಳು ನಮ್ಮಲ್ಲಿ ಬಹು ಸುಲಭವಾಗಿ ದೊರೆಯುವವು.

	೧೦೦ಕ್ಕೆ	೧೨ಕ್ಕೆ	೧ಕ್ಕೆ
೧. ಸಣ್ಣ ಸೈಜು ಪ ದಾ	೧೨-೦-೦	೧-೧೯-೦	೦-೨-೯
೨. ,, ,, ಪ್ಲೈನ್	೨೦-೦-೦	೨-೧೨-೦	೦-೪-೦
೩. ದೊಡ್ಡ ಸೈಜು ಪದಾ	೩೦-೦-೦	೩-೧೨-೦	೦-೫-೬
೪. ,, ,, ಪ್ಲೈನ್	೪೦-೦-೦	೫-೧೦-೦	೦-೭-೦

ನಮ್ಮ ವಿಳಾಸ —ವಾಜೀಸೋಯಂ ಕೃಷ್ಣಯ್ಯ,

ಬುಕ್ ಡಿಪ್ಪೋ, ಬೆಂಗಳೂರು ಸಿಟಿ.

ಈಗಲೇ ಸೀಮೆಯಿಂದ ಬಂದಿದೆ.

117-7

೩೦೦೦ ನಾನಾ ಟೋಪಿ ಗಳು ... ಉಲ್ಲನ್ ಆಡ್ಡ ...

ಕ್ರಯ ನಿಷ್ಕರ್ಷೆ—ಮಾತ್ರ ... ಕ್ರಯ

ಚಿಟ್ಟಿಯಾಗುವ ಉಲ್ಲನ್ ಡಾಲಿಕ್ಕೆ	೦—೪—೦
ಚಿಟ್ಟಿಯಾಗುವ ಬಿಂಡಲಗ ...	೩—೪—೦
ಕೆಟ್ಟಿ ಸಿಟಿ ...	೦—೬—೩
ಉತ್ತಮ ಬನಿಯನ್ ...	೦—೯—೦

ಸದು ಕಡೆಯಲ್ಲಿ ಒರಿಯು ಹೊಸ್ ಹಾರ್ನ ೧೦೦ ಕ್ಕೆ ... ದವರು ಸ್ಟಾಂಪು ಕಳುಹಿಸಿ ನೋಡಿ ... ೧೯೦೮ ನೇ ಸಾಲಿನ ಕ್ಯಾಲೆಂಡರ್ ಕಳುಹಿಸುವ ... ವಿಳಾಸ —

ಪ್ರೊಪ್ರೈಟರ್, ಪಿ ಉಲ್ಲನ್ ಮಾರ್ಟ್, ಮಂಗಳೂರು.

ಹೊಸ ಜೂವೆಲರಿ ಸಾಮಗಳು.

ಸಾಟಿ ಇಲ್ಲದ ಸಾಮಾನು! ಬೇಗ ತರಿಸಿಕೊಳ್ಳಿ!!

123-4

ಧನಿಕರಿಗೆ ತಕ್ಕ ಒಂದು ಹರಳ ಉಂಗುರ ... "ಬ್ಯಾಂಗಲ್" ಹೊಸ ನಮೂನೆ ಬನಾತವು ಕಲ್ಪವಾದ ಥಳಿಯನ್ನು ಕೊಟ್ಟು ನೋಡಿರಿ. ಸುಬವಾದ ಹೊದ್ದಿಕೆ. ನೋಡಲಿಕ್ಕೆ ಅತಿ ರಮ್ಯ. ನಮ್ಮಲ್ಲಿ ವಿಶ್ವಾಸ ವೇ ಇರುತ್ತೆ. ಉದ್ದ ೮೦ ಅಂಗುಲ ಅಗಲ ೪೮ ಅಂಗುಲ. ಕ್ರಯ ರೂ. ೬. ೨ ನೆಯ ತರದ ೪×೮೦(ಅಂಗುಲ) ರೂ. ೪. ಅಂಚೆ ವೆಚ್ಚವು ಪ್ರತ್ಯೇಕ.

ಮದರಾಸು ಶೀರೆಗಳು.

ನಮೂನೆ! ವಿ ಪಿ ಖರ್ಚು ೮ ಆಣೆ ಮಾತ್ರ ಬಣ್ಣ!! ಶ್ರೇಷ್ಠವಾದ ಅಚ್ಚು ನೂಲಿನಿಂದ ತಯಾರಿಸಿ ಪ್ರಸಿದ್ಧವಾದ ಬಿಳಿ ಬಣ್ಣ ರೇಷ್ಮೆಯ ಅಂಚು ... ನೋಡಲಿಕ್ಕೆ ... ಬಹು ಬಾಳಿಕೆ ... ಬಣ್ಣ ಕೆಡದು ... ರೇಷ್ಮೆಗಳ ನೆರಿಗೆಗಳಿಗೆ ... ಹಾರ್ದಿಕ ... ಉತ್ತಮವಾದ ಅಚ್ಚು ... ಶೀರೆಯು ... ಅಂಗುಲ ರೇಷ್ಮೆಯಂಚಿನದಕ್ಕೆ ರೂ ೯—೪—೦; ... ಅಂಚಿನದಕ್ಕೆ ರೂ ೧೦—೮—೦

ವಿಳಾಸ:—ದಾಸ್ ಎಂಪೋರಿಯಂ ಸ್ವದೇಶೀ ರೋಡ್,

ಸೇಟ್, ಮದರಾಸು.

ಶ್ರೀಸೀತಾರಾಮ ಪ್ರಸನ್ನಾ.

131-1

ತೀರ್ಥಹಳ್ಳಿ ಬವಳಿ ರಘುಪತ್ಯೆಯ್ಯನವರ ಮಕ್ಕಳು ಹನುಮಂತರಾಯರು ಕಳೆದ ವಾರ ನಮ್ಮ ಪತ್ರಿಕೆಯ ಮೂಲಕ ಪ್ರಕಟಮಾಡಿದ ತಮ್ಮ ಗೃಹಕೃತ್ಯದ ನೋಟೀಸಿನಲ್ಲಿ ಕೆಲವು ಬದಲಾವಣೆಗಳನ್ನು ಮಾಡಬೇಕೆಂದು ನಮಗೆ ತಿಳಿಸಿದ್ದಾರೆ. ಅದರಂತೆ ಬದಲಾವಣೆ ಮಾಡುವ ಭಾಗಗಳ್ಯಾವುವೆಂದರೆ—

೨ನೇ ಕಲಮಿನ ೨ನೇ ಪಙ್ತಿಯಲ್ಲಿ "ಇವರುಗಳ ಪೈಕಿ ಯಾರೊಬ್ಬರ ಹೆಸರಿಗೆ ಆಗುವ" ಎನ್ನುವುದಕ್ಕೆ ಪ್ರತಿಯಾಗಿ "ಇವರುಗಳ ಪೈಕಿ ಯಾರೊಬ್ಬರ ಹೆಸರಿಗೆ ಆಗಲಿ, ನ," ಎಂದೂ, ೩ನೇ ಕಲಮಿನ ೩ನೇ ಪಙ್ತಿಯಲ್ಲಿ "೧ನೇ ನರಸಿಂಗರಾವ್" ಎನ್ನುವುದಕ್ಕೆ ಪ್ರತಿಯಾಗಿ "೧ನೇ ರಂಗರಾವ್" ಎಂದೂ, ೫ನೇ ಕಲಮಿನ ೧ನೇ ಪಙ್ತಿಯಲ್ಲಿ "ಮೇಲೆ ೩ನೆ ಕಲಮಿನಲ್ಲಿ ಕಂಡ ಹೆಸರುಗಳಿಗೆ" ಎನ್ನುವುದಕ್ಕೆ ಪ್ರತಿಯಾಗಿ "ಮೇಲೆ ೨ನೇ ಕಲಮಿನಲ್ಲಿ ಕಂಡ ಹೆಸರುಗಳಿಗೆ" ಎಂದೂ ವಾಚಕರು ತಿದ್ದಿ ಓದಿಕೊಳ್ಳಬೇಕು.

The Pourwal Cash Bazzar—Bangalore City.

ಧಾರಿವಾಲ್ (ಪಂಜಾಬ್) ಶಾಲುಗಳು.

130-2

ಕೆಂಪು, ಎಣ್ಣೆಬಣ್ಣ, ಕೆಂಪು, ಕೇಸರಿ, ಹಸರು, ನಸ್ಯದ ಬಣ್ಣ, ಬಾದಾಮಿ, ಕಪ್ಪು, ಬಿಳುಪು, ಮುಂತಾದ ಬಣ್ಣದ್ದು ಮತ್ತು ಚೆಕ್ ನಮೂನೆ, ಪೂರ ಆರು ಮೊಳ ಉದ್ದ ಮೂರು ಮೊಳ ಅಗಲವುಳ್ಳದ್ದು.

ಈಗತಾನೇ ವಿಲಾಯತಿಯಿಂದ ಬಂದಿರುವ ೫,೦೦೦ ಪೌಂಡು ಟೋಪಿಗೆ ಬಾಯಬಾದ ತರಹೆವಾರಿ ಉಲ್ ಮತ್ತು ಇವುಗಳಲ್ಲಿ ತಯಾರಾದ ತರಹೆವಾರಿ ಟೋಪಿಗಳು ನಮ್ಮಲ್ಲಿ ಸಿದ್ಧವಾಗಿರುತ್ತವೆ.

ಇವುಗಳಲ್ಲದೆ ನೀವು ಕೇಳುವ ಯಾವ ಸಾಮಾನೇ ಆಗಲಿ ನಂಬಿಕೆಯಿಂದ ಅಗ್ಗವಾಗಿ ಕಳುಹಿಸುವೆವು. ಖರೀದಿ ವಗ್ಗರೆ ತಿಳಿಯಬೇಕಾದವರು ಇವರಿಗೆ ಬರೆಯಿರಿ—

ಹೆಚ್. ಜವಾರ್ ಮಲ್ ಕಂಪೆನಿ,

ಚಿಕ್ಕಪೇಟೆ, ಬೆಂಗಳೂರು ಸಿಟಿ.

ಇಗೋ! ಕನ್ನಡ "ಮಾಡಲ್" ಪಾಕೆಟ್ ಡೈರಿ!

122-4

ಸೊಗಸಾದ ಡೈರಿಗಳು!! ಉತ್ತಮವಾದ ಡೈರಿಗಳು!!

ಉಪಯುಕ್ತವಾದ ಡೈರಿಗಳು!!!



೧೯೦೮ ನೇ ವರುಷದ ಕನ್ನಡ ಡೈರಿಗಳು ಸೊಗಸಾಗಿ ರೂಲ್ ಹಾಕಿದ ಕಾಗದದ ಮೇಲೆ ಮುದ್ದಾದಂಥಾ ಅಕ್ಷರಗಳಿಂದ ಪ್ರಿಂಟಾಗಿ ಮನಸ್ಸಿಗೆ ಆನಂದವನ್ನುಂಟುಮಾಡತಕ್ಕವುಗಳಾಗಿರುತ್ತವೆ. ಇವುಗಳಲ್ಲಿ ಅಡಕವಾಗಿರುವ ವಿಷಯಗಳು — ಪಾಸಾಚಾರಿನ ಪಟ್ಟಿ, ನೋಟಿಸ್ ... ದಿನ ಸಂಬಳದ ಪಟ್ಟಿ, ಮಾರ್ಕೆಟ್, ಗಳಿಗೆ ಕಾಲ, ರಾಹು ಕಾಲ, ಕಲ್ಲಿ ಬಿದ್ದ ಫಲ, ಪ್ರಶ್ನಶಾಸ್ತ್ರ, ಗೌರಿ ಪಂಚಾಂಗ, ತೂಕಗಳು, ದವಿಖಾನೆಗಳ ಲೆಕ್ಕ, ಪೋಸ್ಟಾಫೀಸಿನ ಎಲ್ಲಾ ವಿಷಯಗಳು, ರಿಜಿಸ್ಟರ್ ಫೀಜುಗಳು, ಸ್ಟಾಂಪು ಡ್ಯೂಟಿ, ರೆಲ್ವೆಸ್ ... ಟೆಲಿಗ್ರಾಫ್ ಫೀಜು, ರೈಲ್ವೆ ಛಾರ್ಜ್, ರಜಾ ದಿನಗಳು ಹಬ್ಬಗಳು, ಕ್ಯಾಲೆಂಡರು, (ಗ್ರಹಣಗಳಿಂದ ಸಹಿತ) ಪ್ರಸಂಗ ಸಂಕ್ಷೇಪ ಪಂಚಾಂಗ, ಇವೇ ಮುಂತಾದ ಅನೇಕ ವಿಷಯಗಳು ಅಡಗಿರುತ್ತವೆ. ಡೈರಿಗಳ ಕ್ರಯ —

ನಂ ೧ ಸಣ್ಣ ಸೈಜ. ಪೆನ್ಸಿಲ್ ಇಡತಕ್ಕ ಡೈರಿ ೦—೬—೦; ಎನ್ನರಡು ಡೈರಿಗಳಿಗೆ ೧ ಇನಾಮು.

ನಂ ೨ ಸಣ್ಣ ಸೈಜು ಪೆನ್ಸಿಲ್ ಇಟ್ಟು ಮುಚ್ಚಳ ಹಾಕಿರುವ ಫ್ಲಾಪ್ ಡೈರಿ ೦—೬—೦, ಹನ್ನೆರಡು ಡೈರಿಗಳಿಗೆ ೧ ಇನಾಮು.

ನಂ ೩ ದೊಡ್ಡ ಸೈಜು ಪೆನ್ಸಿಲ್ ಇಡತಕ್ಕ ಡೈರಿ ೦—೭—೦; ಹನ್ನೆರಡು ಡೈರಿಗಳಿಗೆ ೧ ಇನಾಮು.

ನಂ ೪ ದೊಡ್ಡ ಸೈಜು ಪೆನ್ಸಿಲ್ ಇಟ್ಟು ಮುಚ್ಚಳ ಹಾಕಿರುವ ಡೈರಿ ೦—೮—೦, ಹನ್ನೆರಡು ಡೈರಿಗಳಿಗೆ ೧ ಇನಾಮು.

ಡೈರಿಗಳ ಗಲಾಟೆಯಲ್ಲಿ ಭ್ರಾಂತಿಗೊಂಡೀರಿ. ಉತ್ತಮವಾದವುಗಳಿಗೆ ಹೆಸರನ್ನು ನಾವು ಮಾಡಿದ್ದೇವೆ. ನಮ್ಮ ಡೈರಿಗಳು ಬಹು ಸುಲಭ ಕ್ರಯವುಳ್ಳವುಗಳು. ಇವುಗಳು ಗೌರ್ನಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿವೆ. ನಮ್ಮ ವಿಳಾಸ:—

ಎಸ್. ಡಿ. ನರಸಿಮಲ್ ಕಂಪೆನಿ, ದೊಡ್ಡ ಪೇಟೆ, ಮೈಸೂರು.

ಅಥವಾ,

ಎಚ್. ಎ. ಪೋರ್‌ವಾಲ್—ಬೆಂಗಳೂರು ಸಿಟಿ.

ಅಥವಾ,

ಮ್ಯಾನೇಜರ್. ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು

26-43

೧. ಜೀರ್ಣಾಮಯಹರ ಕಸ್ತೂರೀ ಮಾತ್ರೆ.—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರ ದಿಂದ ತಯಾರಿಸಿದೆ.

ಚಳಿಜ್ವರ, ಜ್ವರ, ಹೊಟ್ಟೆಶೂಲೆ, ಸಂಧುಗಳ ನೋವು, ಮೈ ಕೈಕಾಲು ಕೊಷತ (ಭಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿಮಾಂದ್ಯ, ಹಲ್ಲು ನೋವು, ಕೆಮ್ಮು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ.

ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಬಾಯಿಬೆಗೂ ದಾರಿಕೊಡದೆ. ನೀರು ಹವಾಗಳ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಷ್ಟಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ.

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಸ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.

ಅನುಪಾನವಿಷಯ ವಿವರದ ಸಂಗಡಲೇ ಇರುತ್ತದೆ.

೨೦ ಮಾತ್ರೆಯುಳ್ಳ ಚಪ್ಪಿಗೆ ೮ ಆಣೆ; ೫ ಚಪ್ಪಿಗೆ ೧ ಚಪ್ಪಿ ಕೆಟ್ಟು. ೧ ರಿಂದ ೧೨ ಚಪ್ಪಿ ವರೆಗೆ ಪೋಸ್ಟೇಜು ೪ ಆಣೆ.

ವಿಳಾಸ:—ಪಾಳ್ಯದ ವೆಂಕಟಾಚಲ ಪಂಡಿತ,

ಎಸ್. ಎಸ್. ಆರ್. ವೈದ್ಯಶಾಲಾ,

ಲಕ್ಷ್ಮೀವಿಲಾಸ ರೋಡ್, ಮೈಸೂರು.

ದೀಪಾವಳಿಗೆಯ ಬಹುಮಾನ!

ಬಹುಮಾನದ ಮೇಲೆ ಬಹುಮಾನ!! ತ್ವರೆಮಾಡಿ!!!

128-3

ನಮ್ಮಲ್ಲಿ ದೊರೆಯುವ ಈ ಕೆಳಗೆ ಕಂಡ ಕನ್ನಡದ ನವೀನ ಗ್ರಂಥಗಳನ್ನು ಭಾಷಾಭಿಮಾನಿಗಳೆಲ್ಲರೂ ತರಿಸಿಕೊಂಡು ಓದಿ ಸಂತೋಷಪಡಬೇಕೆಂಬ ಉದ್ದೇಶದಿಂದಲೂ ಕನ್ನಡಿಗರಿಗೆ ಪ್ರೋತ್ಸಾಹವನ್ನುಂಟುಮಾಡಬೇಕೆಂತಲೂ ೧೯೦೮ ನೆಯ ಇಸವಿ ಫೆಬ್ರವರಿ ತಿಂಗಳ ವರೆಗೆ ಮಾತ್ರ ನಮ್ಮ ಪುಸ್ತಕಗಳಲ್ಲಿ ಒಂದು ರೂಪಾಯಿ ಬೆಲೆ ಬಾಳುವ ಪುಸ್ತಕಗಳನ್ನು ತರಿಸಿಕೊಳ್ಳುವವರಿಗೆ ಪ್ರತಿ ಒಂದು ರೂಪಾಯಿಗೂ ೩ ಆಣೆ ಕ್ರಯ ಬಾಳುವ 'ಸ್ತೋತ್ರಮಾಲಿಕೆ,' ೨ ಆಣೆ ಕ್ರಯ ಬಾಳುವ 'ಶೃಂಗಾರಶತಕ,' "ಲಾಲಾ ಲಜಪತ್ ರಾಯ್'ರವರ ಭಾವಚಿತ್ರ," 'ಬಿ. ಸಿ. ಪಾಲ್ ರವರ ಭಾವಚಿತ್ರ,' ಶ್ರೀಮನ್ಮಹಾರಾಜರವರ ಮತ್ತು ಶ್ರೀಮದ್ಯುವರಾಜರವರ ಭಾವಚಿತ್ರಗಳಿಂದ ಕೂಡಿದ ೧೯೦೮ ನೇ ಸ್ವದೇಶೀ ಹಿಂದೂ ಕ್ಯಾಲೆಂಡರ್, 'ಸೀತಾಚರಿತೆಯ' ಪೂರ್ವ ಭಾಗ ಈ ಆರನ್ನು ಉಚಿತವಾಗಿ ಕೊಡುತ್ತೇವೆ. ಎರಡು ರೂಪಾಯಿ ಬೆಲೆ ಬಾಳುವ ಪುಸ್ತಕಗಳನ್ನು ತರಿಸಿಕೊಳ್ಳುವವರಿಗೆ ಮೇಲ್ಕಂಡ ಬಹುಮಾನಗಳಲ್ಲದೆ ೧೯೦೮ ನೆಯ ಇಸವಿಯ ಒಂದು ಡೈರಿಯನ್ನು ಉಚಿತವಾಗಿ ಕಳುಹಿಸುತ್ತೇವೆ. ಅಂಚೆ ವೆಚ್ಚ ಬೇರೆ.

"ನಿರುಪಮಾ"—ಇದು ಐದು ಅಂಕಗಳುಳ್ಳ ಹೊಸ ಕನ್ನಡದ ನವೀನ ನಾಟಕ. ಸಂತಾಪಕನೆಂಬ ದುಷ್ಟನು ಅನೇಕ ಘೋರ ಕೃತ್ಯಗಳನ್ನು ಮಾಡಿ ನಿರುಪಮೆಯನ್ನು ಅಪಹರಿಸಿಕೊಂಡು ಬಂದುದೂ, ಕಾಮಿನಿಯ ಸತೀತ್ವವೂ, ಪಾತ್ರವ ... ಮನೆಯಲ್ಲಿ ನಡೆಯಬಹುದಾದ ಕೃತ್ಯಾಕೃತ್ಯಗಳೂ, ಇವೇ ಮೊದಲಾದ ಅನೇಕ ವಿಷಯಗಳು ಅಡಕವಾಗಿವೆ. ಆದ್ಯಂತವಾಗಿ ಓದುವುದಕ್ಕೂ ಅನುಕೂಲಿಸುವಂತೆ ಹೊಸಗನ್ನಡದಲ್ಲಿರುವ ಈ ಗ್ರಂಥವನ್ನು ಓದುವುದಕ್ಕೆ ಪ್ರಾರಂಭಿಸಿದರೆ ಕೊನೆಮುಟ್ಟುವವರೆಗೂ ಬಿಡುವುದಕ್ಕೆ ಮನಸ್ಸಾಗುವುದಿಲ್ಲ. ೨೦ ಆಣೆ.

"ಕೃಷ್ಣವಿಜಯ"—ಇದರಲ್ಲಿ ಯಕ್ಷಿಣೀದೇವಿಯ ವಿಷಾದವೂ, ಶೋಕವೂ, ಶಿರ್ಪಾಲರಾಜಸಂಗಾಡಿಗಳೊಡನೆ ಕೃಷ್ಣನು ಯುದ್ಧಮಾಡಿ ಗೆದ್ದುದೂ, ಯುದ್ಧರಂಗ ವರ್ಣನೆಯೂ ಲಲಿತವಾದ ಪಳೆಗನ್ನಡದಲ್ಲಿ ಬರೆಯಲ್ಪಟ್ಟಿದೆ. ಯುದ್ಧವನ್ನು ಪ್ರತ್ಯಕ್ಷವಾಗಿ ನೋಡಬೇಕೆಂದು ಅಪೇಕ್ಷಿಸುವವರೆಲ್ಲರೂ ಇದನ್ನೋದಿ ಕೃತಾರ್ಥರಾಗಬಹುದು. ಇದರ ಬೆಲೆ ೬ ಆಣೆ.

"ಪ್ರಿಯದರ್ಶಿಕೆ"—ಪ್ರಸಿದ್ಧ ಕವಿಯಾದ ಶ್ರೀಹರ್ಷನ ಗ್ರಂಥದ ಭಾಷಾಂತರ. ನಾಲ್ಕು ಅಂಕಗಳುಳ್ಳ ಈ ನಾಟಿಕೆಯಲ್ಲಿ ಮತ್ತೊಂದು ಗರ್ಭನಾಟಕವಿರುವುದರಿಂದ ಕಥಾಸಂವಿಧಾನವು ಪಾಠಕಮಹಾಶಯರಿಗೆ ಕೌತುಕಾಸ್ಪದವಾಗದಿರಲಾರದು. ಇದರ ಬೆಲೆ ೬ ಆಣೆ.

"ಸೀತಾಚರಿತ್ರೆ"—ರಾಮಾಯಣದ ಕಥೆಯೆಲ್ಲಾ ಹೆಂಗಸರಿಗೂ ಮಕ್ಕಳಿಗೂ ಸುಲಭವಾಗಿ ಅರ್ಥವಾಗುವಂತೆ ಶ್ರೀಮದ್ವಾಮನಾಚಾರ್ಯರ ಕಿರೀಟಿಯವರ ಆಜ್ಞಾನುಸಾರ ಷಟ್ಪದೀ ರೂಪವಾಗಿ ಬರೆಯಲ್ಪಟ್ಟಿದೆ. ಇದನ್ನಾದು ಅಧ್ಯಾಯಗಳುಳ್ಳ ಈ ಪುಸ್ತಕದ ಬೆಲೆ ೮ ಆಣೆ.

"ಉತ್ತರ ಸೀತಾಚರಿತ್ರೆ"—ಇದರಲ್ಲಿ ರಾಮಾಯಣದ ಉತ್ತರಕಾಂಡವೆಲ್ಲಾ ಸೀತಾಚರಿತ್ರೆಯಂತೆಯೇ ಬರೆಯಲ್ಪಟ್ಟಿದೆ ೨ ಆಣೆ.

"ಸತ್ಯವತೀ ಚರಿತ್ರೆ"—ಇದರಲ್ಲಿ ಅತ್ತೆಸೊಸೆಯರ ಜಗಳ, ಅತ್ತಿಗೆ ನಾದಿನಿಯರ ಕಲಹ, ಅವಿದ್ಯಾವತಿಯರ ಮತ್ತು ವಿದ್ಯಾವತಿಯರ ತಾರತಮ್ಯ, ಇವೇ ಮೊದಲಾದ ಸಾಂಸಾರಿಕ ಸಂಭಾವ್ಯ ವಿಷಯಗಳು ಕಥಾರೂಪವಾಗಿ ಹೇಳಲ್ಪಟ್ಟಿವೆ. ಸಕಲರೂ ತರಿಸಿಕೊಂಡು ಓದಬೇಕಾದದ್ದು. ಕೆಲವು ಪ್ರತಿಗಳು ಉಳಿದಿವೆ. ಇದರ ಬೆಲೆ ೪ ಆಣೆ.

ನಿಮ್ಮ ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಿರಿ ನಮ್ಮ ವಿಳಾಸ—

ಅರಮನೆಯ ವಿದ್ವಾಂಸ ನಂಜನಗೂಡು ಶ್ರೀಕಂಠಶಾಸ್ತ್ರಿ,

ಕೃಷ್ಣರಾಜ ಮೊಹಲ್ಲ, ಮೈಸೂರು.

"ನಂಬಲು ಧೈರ್ಯಸಾಲದೆ ಪೆ-ರೂ-ನಾ ಸೇವಿಸಿದೆನು"

ಎಂದು ಅಲ್ಬನಿಯ ಮಾ॥ ನ್ಯೂಹಾಫ್ ಬರೆಯುತ್ತಾರೆ. 38 30

ಗಂಡಸರಲ್ಲಿ ಕೆಳಹೊಟ್ಟೆಯ ರೋಗಗಳು

ಕೆಳಹೊಟ್ಟೆಯ ಮತ್ತು ಜಲಬಾಧಕೋಶದ ಸಂಬಂಧವಾದ ನಾನಾ ತರದ ರೋಗಗಳನ್ನು ಅನೇಕಾನೇಕ ಜನರು ಬಹು ಕಷ್ಟದಿಂದ ಅನುಭವಿಸುತ್ತಾ ಜೀವಮಾನವನ್ನು ಕಳೆಯುತ್ತಿದಾರೆ

ಮೂತ್ರಕೋಶದ ರೋಗಬಾಧೆಗೆ ಸರಿಹೋಲುವ ರೋಗವು ಮತ್ತೊಂದಿಲ್ಲ ದೇಹವು ಬಲಹೀನವಾಗುವುದು, ಮುಖವು ಬುಡಿಹೋಗುವುದು, ಎಲ್ಲಾ ವಿಷಯಗಳಲ್ಲು ಜೀವಕವಗಳಂತಾಗ ವರು

ಈ ತರಹಾ ರೋಗಿಗಳ ಗುಂಪಿಗೆ ಸೇರಿದವರೆಲ್ಲರೂ ಒಟ್ಟೊಟ್ಟಿರಾಗಿ ಪೆರುನಾ ಸೇವನೆಯಿಂದ ಆ ರೋಗಗಳೆಲ್ಲಾ ನಿವಾರಣೆಯಾಗುವವೆಂಬದಾಗಿ ಹೇಳಹೋಗದಾಗಿ ಕಂಡುಕೊಳ್ಳುತ್ತಾ ಬಂದಿದಾರೆ



CHARLES B. NEWHOF



H.L.EMORY

ಒಬ್ಬನು ಇನ್ನೊಬ್ಬನಿಗೆ ತಿಳಿಸುವನು ಈ ರೀತಿಯಾಗಿ ದೇಶದ ವೇಲೆಲ್ಲಾ ಅದರ ಕಥೆಯು ಹಬ್ಬಿ ಜರುಗುವುದು ಪೆರೂನಾದಿಂದ ಮೂತ್ರಕೋಶದ ರೋಗಗಳು ಖಂಡಿತವಾಗಿ ಪರಿಹಾರವಾಗುವವೆಂದು ಎಲ್ಲರಿಗೂ ಪುರಸ್ಕಾರವಾಗಿ ತಿಳಿದಿರುತ್ತದೆ

ಅನ್ನಕೋಶ, ಕೆಳಹೊಟ್ಟೆಯ ನಾನಾ ಕೋಶಗಳ ಕಾಯಿಲೆಗಳೆಲ್ಲಾ ಈ ಔಷಧದಿಂದ ಗುಣವಾಗಿವೆ ಎಂದು ಅನೇಕರಿಂದ ಸುವಾರ್ತೆಗಳು ಬಂದಿವೆ

ಪೆರೂನಾದಿಂದ ಎಷ್ಟು ಚಿಕ್ಕ ರೋಗನಿವಾರಣೆಯಾಗಿವೆ ಎಂಬುದನ್ನು ನಿದರ್ಶನಪಡಿಸುವುದಕ್ಕೆ ಎರಡು ಪ್ರಾಮಾಣ್ಯವಾದ ಸರ್ಟಿಫಿಕೇಟುಗಳನ್ನು ಈ ಕೆಳಗೆ ಪ್ರಕಟಿಸುತ್ತೇವೆ

ಮೂತ್ರಕೋಶದ ರೋಗವು

ನೆ ಸಿ ಬಿ ನ್ಯೂಹಾಫ್ ೧೦ ಡಿಲಾವೇರ್ ಬೀದಿ ಆಲ್ಬನಿ ಎನ್ ವೈ ಮಾ ಓಪ್ಪೆಯೋರ್ ಕ್ಲಬ್ ಪಸಿಡೆಂಟ್ ಇವರು ಬರೆದ ವಾದ—

' ನನಗೆ ವಯಸ್ಸಾದ ಬಾಗಿಯುತು ನನ್ನ ಮೂತ್ರಕೋಶದಲ್ಲಿ ಆಗಾಗ್ಗೆ ಒಂದು ವಿಧವಾಗುತ್ತಾ ಬಂದಿತ್ತು ಡಾಕ್ಟರುಗಳನ್ನು ಕೇಳಿದ್ದರಲ್ಲಿ ಕ್ಷಯದಿಂದ ನನ್ನ ಮೂತ್ರಕೋಶವು ನನಗೆ ತೊಂದರೆ ಪಡಿಸುವದೆಂತಲೂ ವಯಸ್ಸು ಮೀರುವದರಿಂದ ಅದು ದೀರ್ಘವಾಗಿದೆ ಎಂತಲೂ ಹೇಳಿದರು ನನಗೆ ಪ್ರಯೋಜನವಾದೀತೆಂಬ ಭರವಸ ನನ್ನಲ್ಲಿ ಇಲ್ಲದಿದ್ದರೂ ಕೇವಲ ಬಾಗ್ಯದಿಂದ ನಾನು ಪೆರೂನಾವನ್ನು ಸೇವಿಸುವುದಕ್ಕೆ ಪ್ರಾರಂಭಿಸಿದೆನು ಆದರೆ ನನ್ನ ಸಂತೋಷವನ್ನು ಎಷ್ಟೆಂದು ಹೇಳಲಿ ಕೂಡಲೇ ನನಗೆ ಬೇರೆ ಕಾದವು ಮೂಗತ್ತು ಬಂತು ಮೂತ್ರಕೋಶದಲ್ಲಿ ಉರಿಯುವದು ಕ್ರಮೇಣ ಇಳಿಯುತ್ತಾ ಬಂತು ತರವಾಗಿ ಅದಕ್ಕೆ ಸಂಬಂಧಪಟ್ಟ ಬಾಧೆಯೆಲ್ಲಾ ನಿವಾರಣೆಯಾಯಿತು ಈಗ ಸಳು ತಿಂಗಳಿಂದಲೂ ನಾನು ಬಹಳ ಆರೋಗ್ಯದಿಂದಲೂ ಸುಖವಾಗಿಯೂ ಇದೇನೆ ಹೊಳ್ಳಾಗಿ ಭೋಜನ ಮಾಡುತ್ತೇನೆ ಸುಖವಾಗಿ ನಿದ್ರೆಮಾಡುತ್ತೇನೆ ಹಂತ ಇಪ್ಪತ್ತು ವರುಷಗಳ ಹಿಂದೆ ನನಗಿದ್ದಷ್ಟು ಶಕ್ತಿ ಬಲವು ಈಗ ನನಗೆ ಉಂಟಾಗಿರುತ್ತದೆ ಇಷ್ಟಕ್ಕೆಲ್ಲಾ ಪೆರೂನಾವೇ ಕಾರಣವಾದ್ದರಿಂದ ಅದನ್ನು ಬಹಳವಾಗಿ ಹೊಗಳುವೆನು '

ಹೊಟ್ಟೆ ಕೆಳಹೊಟ್ಟೆಯ ರೋಗವು

ವೆ॥ ಎಚ್ ಎಲ್ ಇಮ್ಮಾರಿ, ವೈಸ್ ಬ್ಯಾಸೆಲರ್ ಮತ್ತು ಮಾಸ್ಟರ್ ಆಫ್ ಆರ್ಟ್ಸ್, ಕೆ ಪಿ ಆಫ್ ಒಮಾಹಾ, ನೆಬ್, ಇವರು ಉತ್ತರ ೧೬ ನೇ ಬೀದಿ ೨೦೫೫ ನೇ ಮನೆಯಿಂದ ಪೆರೂನಾವು ಬಲಕಾರಿಯಾದ ಔಷಧವೆಂದು ಅದನ್ನು ಹೊಗಳಿ ಬರೆಯುವುದೇನೆಂದರೆ—

" ಪೆರೂನಾ ಅಸಾಧಾರಣವಾದ ಯೋಗ್ಯತೆಯುಳ್ಳ ಶಕ್ತಿವರ್ಧಕ ಸೇವನಾ ಔಷಧವೆಂದು ನಾನು ಬಹು ಸಂತೋಷದಿಂದ ಶಿಫಾರಸು ಮಾಡುತ್ತೇನೆ ನಾನು ಬೆರೆಯುವ ಬೇರೆ ಬೇರೆ ಪಂಗಡದ ಅನೇಕಾನೇಕ ಜನರಿಗೆ ಇದು ಅವರ ಶರೀರದ ನಾನಾ ಅಸ್ವಾಸ್ಥ್ಯಗಳನ್ನೂ ಜಾಡ್ಯಗಳನ್ನೂ ಮೂತ್ರಕೋಶದ ರೋಗಾದಿಗಳನ್ನೂ ವಾಸಿಮಾಡಿರುತ್ತದೆ '

" ಪೆರೂನಾವು ಶರೀರದ ಅಂಗಾಂಗಗಳ ಶಕ್ತಿಯನ್ನು ವೃದ್ಧಿಪಡಿಸುತ್ತದೆ, ಆಹಾರವನ್ನು ಜೀರ್ಣಮಾಡಿಸುತ್ತದೆ, ಸ ಬಲಿಷ್ಠವಾಗಿಸುತ್ತದೆ, ಆದ್ದರಿಂದ ಎಲ್ಲಾ ತರದ ರೋಗಿಗಳಿಗೂ ಪೆರೂನಾವನ್ನು ಸೇವಿಸುವಂತೆ ಪ್ರೋತ್ಸಾಹಪಡಿಸುವೆನು."

ಮಾ॥ ಜೆ ಎಸ್ ಎಲ್ ಜೀನ್ಸ್ ಚರ್ಚಿನ ಕ್ಲಾರ್ಕ ಎ ಓ ಜಿ ಟಿ ಸಿಕ್ತನ ಜೆ ಎ ಕ್ಸ್ ೮೬೫ ಬ್ರಾಡ್ವೆ ಓಕ್ಲೆಂಡ್, ಕಾಲ್, ಇವರು ಬರೆಯುವದು-

" ನಾನು ಪೂರ್ವದಲ್ಲಿ ಇದ್ದು ಹೋಗಿದ್ದವತ ನನಗೆ ಕೆಳಹೊಟ್ಟೆಯ ಮೂತ್ರಕೋಶದಲ್ಲಿ ಸಂಬಂಧವಾದ ಒಂದು ವ್ಯಾಧಿ ಪ್ರಾಪ್ತವಾಯಿತು ನೂರಾರು ರೂಪಾಯಿ ಖರ್ಚು ಮಾಡಿಕೊಂಡು ಅನೇಕ ಡಾಕ್ಟರುಗಳ ಅಭಿಪ್ರಾಯವನ್ನು ತೆಗೆದುಕೊಂಡಾಗ್ಯೂ ನನಗೆ ಸ್ವಲ್ಪವೂ ಪ್ರಯೋಜನವಾಗಲಿಲ್ಲ "

" ಕಡೆಗೆ, ಪೆರೂನಾದಿಂದ ಗುಣಹೊಂದಿದ ನನ್ನ ಸ್ನೇಹಿತರಲ್ಲಿ ಕೆಲವರು ಅದನ್ನು ತೆಗೆದುಕೊಂಡು ನೋಡೆಂದು ನನಗೆ ತಿಳಿಸಿದರು ಕೂಡಲೇ ನಾನು ಒಂದು ಬುಟ್ಲಿಯನ್ನು ಕೊಂಡು ಉಪಯೋಗಿಸಿದಾಗ ಅದರಿಂದ ನನಗೆ ವಾಸಿಯಾಗುತ್ತಾ ಬಂದದ್ದರಿಂದ ಬಿಡದೆ ಅದನ್ನೇ ಸುಮಾರು ನಾಲ್ಕು ತಿಂಗಳ ತನಕ ಸೇವಿಸುತ್ತಾ ಬಂದೆನು ನಾನ ಸೇವಿಸಿದ ಎಲ್ಲಾ ಔಷಧಗಳಿಗಿಂತಲೂ ಪೆರೂನಾ ಸರ್ವೋತ್ಕೃಷ್ಟವಾದದ್ದೆಂದು ಸಿದ್ಧಾಂತವಾಯಿತು ನನ್ನ ಬಾಧೆಯು ನಿವಾರಣೆಯಾಯಿತು, ನನಗೆ ಸಂಪೂರ್ಣವಾಗಿ ರೋಗ ವಾಸಿಯಾಗಿದೆ ಎಂದು ನಂಬುತ್ತೇನೆ ನನಗೆ ಸೌಖ್ಯವಾಗಿದೆ ಪೆರೂನಾ ಬುಟ್ಲಿಯು ಕೈಯು ಹತ್ತಿರವಿದ್ದರೂ ಅವಶ್ಯವಾದಾಗ ಅದನ್ನು ಕೊಳ್ಳದೆ ಇರಲಾರೆನ ಮಾ॥ ಗಾಬರ್ಟ ಇ ಕಾರ್ನೆ, ಟ್ರಿಬಾರ್ ವೈಟ್ಸ್ ಆಫ್ ಇಂಡಸ್ಟ್ರಿಯಲ್ ಫ್ರೀಡಂ, ಮತ್ತು ಪ್ರಸಿದ್ಧ ಗ್ರಂಥಕರ್ತನೂ ಉಪನ್ಯಾಸಕನೂ ಇಲ್, ಚಿಕಾಗೋ ೧೧ ದಕ್ಷಿಣ ನಿಕೋಲಸ್ ಬೀದಿ ಈತ ಬರೆಯುವುದು —

" ಈಗ್ಗೆ ನಾಲ್ಕು ವರುಷಗಳ ಹಿಂದಿನ ತನಕ ನಾನು ಸೌಖ್ಯವಾಗಿದ್ದೆನು ಆಗ ನನ್ನ ಬೆನ್ನಿನಲ್ಲಿ ಕೆಟ್ಟ ನೋವು ಪ್ರಾರಂಭವಾಯಿತು ಅದು ದಿನೇ ದಿನೇ ಹೆಚ್ಚುತ್ತಲೇ ಬಂತು ನೋವು ತಡೆಯಲಾರದೆ ಕ್ರಮೇಣ ನನ್ನ ಶಕ್ತಿಯು ಕುಂದಿಹೋಯಿತು ನನ್ನ ಜಲಬಾಧೆಯು ಬಣ್ಣ ತಿರುಗಿತು ಮತ್ತು ಜಲಬಾಧೆಯಾಗುವುದು ಅಕ್ರಮಕ್ಕೆ ಬಿದ್ದಿತು ಇದರಿಂದ ನನ್ನ ಮೂತ್ರ ಕೋಶವು ಕೆಟ್ಟಿದೆ ಎಂದು ನಾನು ತಿಳಿದುಕೊಂಡೆನು "

" ಪೆರೂನಾ ವಿಷಯವನ್ನು ಓದಿದಾಗ ಅದನ್ನು ಸೇವಿಸಬೇಕೆಂದು ಗೊತ್ತುಮಾಡಿಕೊಂಡೆನು. ಹತ್ತು ದಿನ ಅದನ್ನು ಸೇವಿಸುವುದರೊಳಗಾಗಿ ನನ್ನ ಬಾಧೆಯು ಕಡಿಮೆಯಾಯಿತು ಎಂದು ನನಗೆ ತೋರಿತು ನೋವು ಕ್ರಮೇಣ ಇಳಿಯುತ್ತಾ ಬಂತು ಇದರಿಂದ ನನಗೆ ಎಷ್ಟೋ ಹರ್ಷವುಂಟಾಯಿತೆಂದು ನಿಶ್ಚಯವಾಗಿ ಹೇಳುತ್ತೇನೆ ಮೂರು ತಿಂಗಳೊಳಗಾಗಿ ನಾನು ಯಥಾಪ್ರಕಾರ ಆರೋಗ್ಯವನ್ನು ಸಂಪಾದಿಸಿಕೊಂಡೆನು ನಾಲಿಗೆಯ ಅರುಚಿಯು ಪರಿಹಾರವಾಯಿತು ನರಗಳ ಬಲಹೀನತೆಯೂ ಅದರಿಂದುಂಟಾಗುವ ಜುಗುಪ್ಸೆಯೂ ಸಿಟ್ಟೂ ಎಲ್ಲಾ ತೊಲಗಿದವು ಈಗ ಎರಡು ವರುಷಗಳಿಂದಲೂ ನಾನು ಸುಖವಾಗಿ ಆರೋಗ್ಯದಿಂದಿದೇನೆ ನಿಮ್ಮ ಪೆರೂನಾವನ್ನು ನಾನು ಬಹಳವಾಗಿ ವಂದಿಸುವೆನು ಅದು ಮನುಷ್ಯನಿಗೆ ಪರಮಶ್ರೇಷ್ಠವಾದ ಸಂಜೀವನವೆಂದು ನಾನು ನಂಬುತ್ತೇನೆ '

ವಿಳಾಸ—ಈ ಔಷಧ ಸಿಕ್ಕುವ ಸ್ಥಳಗಳು.—

(೧) ಹಿಗ್‌ಬಾತ್ ಅಂಡ್ ಸನ್ಸ್, ಬೆಂಗಳೂರು, ಅಥವಾ,

(೨) ಇಂಗ್ಲಿಷ್ ಡ್ರಗ್ ಕಂಪನಿ, ೯೫ ಮಿಂಟ್ ಬೀದಿ, ಮದರಾಸ್.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ

82 1—1907 ರಿಂದ 19—1—1907 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ [illegible]
ಬೆಂಗಳೂರು ಪಟ್ಟಣ	57	43	0	0
ಮೈಸೂರು ,,	81	68	0	0
ಬೆಂಗಳೂರು ಡಿಸ್ಟ್ರಿಕ್ಟ್	121	93	0	0
ಮೈಸೂರು ,,	67	41	0	0
ಕೋಲಾರ್ ,,	50	38	0	0
ಕೋಲಾರ್ ಚಿನ್ನದ ಗಣಿಗಳು	66	41	0	0
ತುಂಕೂರು ಡಿಸ್ಟ್ರಿಕ್ಟ್	17	13	0	0
ಹಾಸನ ,,	9	10	0	0
ಚಿತ್ರದುರ್ಗ ,,	82	16	0	0
ಕಡೂರ್ ,,	11	7	0	0
ಶಿವಮೊಗ್ಗ	46	29	0	0
ಜುಮ್ಲಾ	557	394	0	0

ಶಾಲಿವಾಹನ ಶಕ ವರುಷಂಗಳ ೧೮೨೯ ನೇ ಪ್ಲವಂಗನಾಮ ಸಂವತ್ಸರದ ಮಾರ್ಗಶಿರ ಶುದ್ಧ ಅಷ್ಟಮಿ ಗುರುವಾರದಿಂದ ಮಾರ್ಗಶಿರ ಶುದ್ಧ ಚತುರ್ದಶಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೭ ನೇ ಇಸವಿ ಡಿಸೆಂಬರ್

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ದಿನಮಾನ
12	ಗುರು	ಅಷ್ಟಮಿ	11 21	ಭಾದ್ರ	43 16	2[illegible]
13	ಶುಕ್ರ	ನವಮಿ	37 30	ಉತ್ತರಾಭಾ	41 6	28
14	ಶನಿ	ದಶಮಿ	31 41	ರೇ	30 58	2[illegible]
15	ರವಿ *	ಏಕಾದ	32 02	ಆ	19 56	1
16	ಚಂದ್ರ ,,	ದ್ವಾದ	32 30	ಭ	11 24	[illegible]
17	ಕುಜ	ತ್ರಯೋದ	33 3	ಕೃ	13 13	3
18	ಬುಧ	ಚತುರ್ದ	35 15	ರೋ	16 28	4

* ಸರ್ವತ್ರ ಮುಕ್ಕೋಟಿ ಏಕಾದಶಿ, ರಿಂತ್ರಿದ ಮಾರ್ಗಶಿರ, ನಕ್ಷತ್ರದ್ವಾದಶಿ, ಮುಕ್ಕೋಟಿ ದ್ವಾದಶಿ ಬಹಿರ್ಪ್ರತ್ಯಾಗ ಕನ್ಯಾಪುತ್ರಿಯ ಂತಿ ಪ್ರದೋಷ

ಪೇಟೇ ಧಾರಣೆ

ದಿನಸಿ		ಮೈಸೂರು	ಬೆಂಗಳೂರು
ಕಗ್ಗ ಅಕ್ಕಿ ಪಲ್ಲಾ ೧ಕ್ಕೆ	ರೂ	೧೭ ೦ ೦	೧೬ ೪
ಕಂಬು ಅಕ್ಕಿ ೧ಕ್ಕೆ		೧೬ ೦ ೦	೧೬ ೪
ಮಧ್ಯಮ		೧೩ ೪ ೦	೧೩ ೦
ಜಾವಾಕ ಅಕ್ಕಿ		೧೩ ೪ ೦	೧೩ ೦
ಸಣ್ಣಕ್ಕಿ ಅವಲ್		೧೬ ೪ ೦	೧೬ ೦
,, ದುಯ್ಯಂ		೧೫ ೪ ೦	೧೫ ೦
ತೊಗರೀ ಬೇಳೆ ಪಲ್ಲಾ ೧ಕ್ಕೆ		೧೫ ೪ ೦	೧೫ ೦
,, ದುಯ್ಯಂ		೧೭ ೦ ೦	೧೪ ೪
ಹೈಗ ರಾಗಿ ಪಲ್ಲಾ ೧ಕ್ಕೆ		೭ ೦	೭ ೪
ಕಾರಾಗಿ		೭ ೦ ೦	೭ ೦
ಜೋಳ		೭ ೦ ೦	೪
ಹಲಸಂದೆ ಪಲ್ಲಾ ೧ಕ್ಕೆ		೧೦ ೪ ೦	೧೦
ಬಿಳೀ ಅವರೆ		೯ ೧೭ ೦	೧೦
ಹೆಸರು		೧೧ ೮ ೦	೧೧
ಉದ್ದು		೧೩ ೦	೧೨
ಕಡಲೆ		೧೩ ೪ ೦	೧೨
ಎಳ್ಳು ಸೆ ೧೦೦ ಕ್ಕೆ		೨೩ ೪ ೦	೨೦
ಹುರುಳಿ		೫ ೪ ೦	೬
ಹರಳು ೧ ಖ ಸೇರಿಗೆ		೧೨ ೦ ೦	೧೩
ಸೀಗೇಕಾಯಿ ಮಣ ೧ಕ್ಕೆ		೨ ೪ ೦	೨
ಮೆಣಸಿನಕಾಯಿ		೨ ೪ ೦	೨
ದುಯ್ಯಂ		೨ ೭ ೦	೨
ಬೆಲ್ಲ ದೊಡ್ಡ ಅಚ್ಚು		೫ ೭ ೦ ಮ	೨
ಒಳ್ಳೆಣ್ಣೆ ಮಣ ೧ಕ್ಕೆ		೬ ೦–೦	೬
ಹರಳೆಣ್ಣೆ ,,		೫ ೭ ೦	೫
ಕೊತ್ತುಂಬರಿ ಪಲ್ಲಾ ೧ಕ್ಕೆ		೫ ೦–೦	೬
ಉಪ್ಪು ,,		೫–೦ ೦	೫
ಹುಣಸೇ ಹಣ್ಣು		೨ ೦ ೧	೦
,, ಹಳೇದು		೧–೪	೨
ತುಪ್ಪ ಮಣ ೧ಕ್ಕೆ		೧೬ ೦ ೦	೧೫ ೪
ಸೀಮೆಯೆಂಣೆ ಪೆಟ್ಟಿ ೧ಕ್ಕೆ		೭ ೧೫ ೦	೭
ತೆಂಗಿನಕಾಯಿ ೧೦೦ ಕ್ಕೆ		೨ ೪ ೦	೬
ಅಳಲೇಕಾಯಿ ಮಣ ೧ಕ್ಕೆ		೧–೦ ೦	೧
ಅಂಟ್ವಾಳದ ಕಾಯಿ ಮಣ ೧ಕ್ಕೆ		೦–೦–೦ ೦	೦
ಚಿನ್ನ (ಪೌ) ಕೆಂಪು		೧೫ ೬ ೦	೧೫
,, ,, ಪಸಿಮೆ		೧೫–೧೦–೦	೧೫
,, ,, ಗಟ್ಟಿ ತೊಲ ೧ಕೆ		೨೩–೧–೦	೨೩
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ		೭೫–೦–೦	೭೪

Printed and Published by the Rev E W THOMPSON M A, Proprietor and Manager Wesleyan Mission Press, Mysore 12/12/1907

REGISTERED
M. 20

ವೃತ್ತಾಂತ ಪತ್ರಿಕೆ.

ಮುಂ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು. ಕ್ರಯ ೧ ದುಡ್ಡು.

ಸಂಪುಟ ೨೧ ಮೈಸೂರು—ಸರ್ ೧೯೦೭ ನೇ ಇಸವಿ ಡಿಸೆಂಬರ್ ತಾರೀಖು ೧೯ ನೇ ಗುರುವಾರ. ಸಂಚಿಕೆ ೫೯

ಡೈರಿಗಳ ಬಹುಮಾನ!

136 1

ಈ ಕೆಳಗೆ ಬರೆದಿರುವ ಮಿ॥ ಬಿ. ವೆಂಕಟಾಚಾರ್ಯರ ಪುಸ್ತಕ ವ್ರಿ ಪ್ರತಿಯೊಂದು ರೂಪಾಯಿನ ಬೆಲೆಗೂ ಒಂದೊಂದು ಡೈರಿಯು ಬಹುಮಾನವು ಕೊಡಲ್ಪಡುವುದು

ಕೊಹಿನೂರು ೧೨ ಆಣೆ ಅತ್ತಿಗೆ ೩ ಆಣೆ ಮಾಲತಿ ೨॥ ಆಣೆ ... ೬ ಆಣೆ ರಾಘವೇಂದ್ರ ೩ ಆಣೆ ಬಲಿಷ್ಠ ನಾಟಕ ... ೧॥ ಆಣೆ ಟೋಪ್ ... ೧ ಆಣೆ. ಶಿವಾರ್ಜುನ ... ಚೈತ್ರಿಯಾ ... ವೆನಿಸ್ ದೇಶದ ವಣಿಕ ... ಆಣೆ ... ಉದಾರದರ್ಶನ ೬ ಕಾಸು. ಉಷ್ಣಾಕಿ ೬ ಕಾಸು ... ಮಾಡದ ನಾಟಕದ ಕಥೆ ೬ ಆಣೆ ... ಪಕ್ಕದ ಪಂಚಾಂಗ ಸಹಿತ ೧೯೦೮ನೆ ಇಸವಿ ಕ್ಯಾಲೆಂಡರು ... ಮಿ॥ ವೆಂಕಟಾಚಾರ್ಯರವರ ಸಹಾಯದಿಂದ ... ವಾರ್ತಾಪತ್ರಿಕೆಯ ಚಂದಾದಾರರಿಗೆ ಮತ್ತು ಜನರಿಗೆ ... ಹೊಸದಾಗಿ ಚಂದಾದಾರರಾಗುವವರಿಗೂ ಸಹಾ ಒಂದು ... ಯು ಬಹುಮಾನವಾಗಿ ಕೊಡಲ್ಪಡುವುದು

ನಮ್ಮ ವಿಳಾಸ—ದಿ ಜನರಲ್ ಏಜನ್ಸಿ, ಮೈಸೂರು

ಜ್ವ ರ ಹ ರಿ.

116 7



ಇದು ಸಾಧಾರಣ ಜ್ವರ, ಚಳಿಜ್ವರ, ಮೈಲೇಜ್ವರ, ಪಿತ್ಥಜ್ವರ, ... ಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲ ವಿಧವಾದ ಜ್ವರಗಳನ್ನು ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಪಾರುಪತ್ಯಗಾರ ಸಬ್ ಡಿವಿಜನ್ ಆಫೀಸರ್ ಎಸ್. ಟಿ. ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಡಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಯಿಲೆ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨೦ ಡಸಿನ ಸೀಸೆಯನ್ನು ವಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದಾರೆ

ಕ್ರಯ:—ಸೀಸೆ ೧ ಕ್ಕೆ ೮ ಆಣೆ, ೧ ರೂ., ೧—೮ ರೂ. ಡ ೨—೦—೩ ಆ, ೧೧ ರೂ., ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

****

ಓ ಮ ಂ ಕ ರ್ಪೂ ರ.



ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳ ... ವಾಂತಿಭೇದಿ, ನಾನಾತರದ ಹೊಟ್ಟೆ ನೋವುಗಳು—ಮುಂತಾ ... ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡು ... ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಗೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ... ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು

... ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆನ್ರಿಯು ... ಕರ್ಪೂರವನ್ನು ನಾನೂ ನನ್ನ ಡಾಕ್ಟರದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ ... ಅಜೀರ್ಣ ರೋಗಿಷ್ಠರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ... ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧ ... ಬರೆದಾರೆ

ಈ ಎರಡು ಔಷಧಗಳೂ ಊರೂರುಗಳಲ್ಲಿ ರುವ ವೈದ್ಯಶಾಲೆಗ ... ದೊಡ್ಡ ಶಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯ ... ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ:—

... ಗ್ರೇಟ್ ಇಂಡಿಯಾ ಔಷಧಗಳ ಕಂಪನಿ,

ಸೆಕೆಂಡ್ ಬೀಚ್ ಲೈನ್, ಮದರಾಸ್

WILLIAM & CO., BOMBAY.

ಅಪೂರ್ವಲಾಭ— ಸರ್ವಾಂಗರಕ್ಷ— ಲೋಕಪ್ರಖ್ಯಾತ—

ಅಮೃತಾಂಜನ

27 43

ಪರಿಸಿಕೊಳ್ಳಿರಿ — ತ್ವರೆಗೈಯಿರಿ:— ಅಮೃತಾಂಜನ ಸರ್ವಲೋಕರಂಜನ, ಸರ್ವ ಸರ್ವ ವ್ಯಾಧಿಭಂಜನ, ಚಿಕಿತ್ಸಾ ವೇಳೆಯೋಳ್ ಕಾಂಚನ, ನಾಹಾಂಗಗಳಿಗೆ ಸಂಜೀವನ, ವಾಸನೆಯಲ್ಲಿ ಮನೋರಂಜನ, ಬೆಲೆಯಲ್ಲಿ ಅಲ್ಪ, ಯೋಗ್ಯತೆಯಲ್ಲಿ ಅಮೃತ, ಔಷಧಿಯಲ್ಲಿ ದ್ವಿರಹಿತ, ಕೊಳ್ಳುವದರಲ್ಲಿ ಮಾಡಿರಿತ್ವರ್ಯ, ಇದರಿಂದ ಗುಣ ಕಂಡುಬರುವದಿಲ್ಲವಾದರೆ ಹಣ ಹಿಂತಿರುಗಿ ಕೊಡಲ್ಪಡುವದು. ಒಂದೇ ಸಾರಿ ಆರು ಬಾಟ್ಲಿ ತರಿಸಿಕೊಂಡವರಿಗೆ ಒಂದು ಜರ್ಮನ್ ಬೆಳ್ಳಿಯ ಕಪ್ ಉಚಿತವಾಗಿ ದೊರಕುವದು.

ಸಿಕ್ಕಾಂಕೆಯಾಗಿ ಭಾರತವರ್ಷದ ಔಷಧಿಗಳಿಂದ ತಯಾರಿಸಿದ ಹೊರುಪಯೋಗ ಕ್ಕೋಸುಗ ಮುಲಾಮು. ಇದರಿಂದ ತಲೆನೋವು, ಶಿರೋವೇದನೆ, ವಾತ, ಸಂಧಿವಾತ ಪಕ್ಷವಾತ. ಗಂಟ್ಲುನೋವು. ಸೊಂಟದ ನೋವು, ಗಂಟ್ಲು ನೋವು, ಶೀತ, ಜಳಮು, ಉಳಕು, ಕೈಕಾಲುಗಳಿಗೆ ಆಗುವ ಎಲ್ಲಾ ತರದ ನೋವಿಗೆ ಇದು ಅತ್ಯುತ್ತಮ.

ಈ ಕಂಪನಿಯವರು ಹೆಚ್ಚು ನಮೂನೆಯ ಔಷಧಿಗಳನ್ನು ತಯಾರಿಸುವದರಿಂದ ಕ್ಯಾಟಲಾಗು ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ರವಾನಿಸಲ್ಪಡುವದು

ಬಾಟ್ಲಿ ಒಂದಕ್ಕೆ ಕಿಮ್ಮತು ೦—೮—೦. ಪೋಸ್ಟು ಖರ್ಚು ೦—೪—೦.

ಗಜಕರ್ಣದ ಮುಲಾಮು.

ಮೂರು ಸಾರಿ ಹಾಗಿಸುವದರೊಳಗೆ ಗಜಕರ್ಣವು ಹೋಗುವದು. ಇದರಿಂದ ಚರ್ಮವು ಕಪ್ಪಾಗುವದಿಲ್ಲ ಮತ್ತು ಉರಿಯುವದಿಲ್ಲ. ಇದರಿಂದ ಗುಣ ಕಂಡುಬರುವದಿಲ್ಲವಾದರೆ ಹಣ ಹಿಂತಿರುಗಿ ಕೊಡಲ್ಪಡುವದು. ಡಬ್ಬಿ ಒಂದಕ್ಕೆ ಕಿಮ್ಮತು ೦—೬—೦. ಪೋಸ್ಟು ಖರ್ಚು ೦—೪—೦.

ದಂತಮಂಜನ.—ಹಲ್ಲುಗಳಿಂದ ಬರುವ ರಕ್ತ ನಿಲ್ಲಿಸುತ್ತದೆ. ಹಲ್ಲುಗಳು ಘಟ್ಟಿಯಾಗುತ್ತವೆ. ಹಲ್ಲುಗಳು ಬೆಳ್ಳಗಾಗುತ್ತವೆ. ಹಲ್ಲುಗಳ ನೋವನ್ನು ತೆಗೆಯುತ್ತದೆ. ಡಬ್ಬಿ ಒಂದಕ್ಕೆ ೦—೨—೦ ಪೋಸ್ಟು ಖರ್ಚು ೦—೪—೦

ವಜ್ರಗುಟಿಕ.—ದಾತುಪುಷ್ಟಿ, ನಿಶ್ಶಕ್ತಿವಂತರಿಗೆ ಶಕ್ತಿ ಕೊಡುತ್ತದೆ, ಸ್ವಪ್ನ(ಸ್ಖಲನ)ವು ಆಗುವದು ನಿಲ್ಲಿಸುತ್ತದೆ. ರಕ್ತ ಶುದ್ಧಿ ಮಾಡಿ ದೇಹದಲ್ಲಿ ಆರೋಗ್ಯ ಕೊಡುತ್ತದೆ. ಡಬ್ಬಿ ಒಂದಕ್ಕೆ ೧—೦—೦. ಪೋಸ್ಟು ಖರ್ಚು ೦—೪—೦

ಕೇಶವರ್ಧಿನಿ.—ತಲೆ ಹೇಡುಳು ಅಂತ್ಯಮಾಡುವದು, ಕೂದಲುಗಳನ್ನು ಬೆಳೆಸುವದು, ಕೂದಲುಗಳನ್ನು ಕಪ್ಪುಮಾಡುವದು, ಮನಸ್ತೃಪ್ತಿ ಮಾಡುವದು, ಚಲೋ ಪರಿಮಳ ಉಳ್ಳದ್ದು. ೩ ಡಿಸ್ನು ಬಾಟ್ಲಿ ಒಂದಕ್ಕೆ ೧—೦—೦. ಪೋಸ್ಟು ಖರ್ಚು ೦—೪—೦.

ವಿಳಾಸ:—ವಿಲಿಯಂ ಮತ್ತು ಕಂಪನಿ, ೧೫ ಓಕ್ ಲೇನ್. ಫೋರ್ಟ್, ಮುಂಬಯಿ.

ಟೆಲಿಗ್ರಾಫು ಅಡ್ರೆಸು—"ಅಮೃತಾಂಜನ." ಮುಂಬಯಿ.

ರಬ್ಬರ್ ಹ್ಯಾಂಡ್ ಪ್ರೆಸ್.

114 11

ಕಲಾಕೌಶಲ್ಯದಿಂದ ಮತ್ತು ಉದ್ಯೋಗದಿಂದ ಊರ್ಜಿತಸ್ಥಿತಿ ಹೊಂದುವ ಈ ಭಾರತ ಭೂಮಿಯೊಳಗೆ ಈ ಪ್ರೆಸ್ ತಯಾರಾಗುತ್ತದೆ. ಇದುವರಿಗೆ ಈ ಪ್ರೆಸ್ಸು ಪರದೇಶದಿಂದ ಬರುತ್ತಿರುವಾಗ ಅದಕ್ಕೆ ೧೬ ರಿಂದ ೧೮ ರೂಪಾಯಿಗಳ ವರೆಗೆ ಬೆಲೆ ಬೀಳುತ್ತಿತ್ತು. ಈ ಪ್ರೆಸ್ಸಿನೊಳಗೆ ಕನ್ನಡ, ತಮಿಳು, ತೆಲುಗು, ಉರ್ದು, ಪರ್ಷಿಯನ್, ಅರಾಬಿಕ್, ಇಂಗ್ಲೀಷ್ ಮುತ್ತು ಬೇಕಾದ ಭಾಷೆಯಲ್ಲಿ ಒಂದು ಪ್ರತಿ ತಯಾರು ಮಾಡಿ, ಮಾಡಿಸಿದ ಮೇಲೆ ಬಹು ಸ್ವಲ್ಪ ಕಾಲದೊಳಗಾಗಿಯೇ ಇದರಿಂದ ೧೫೦ ಪ್ರತಿಗಳನ್ನು ತಯಾರು ಮಾಡಬಹುದು. ಅದ್ದರಿಂದ ಈ ಪ್ರೆಸ್ಸು ಸಾರ್ವಜನಿಕ ಕಚೇರಿ ಮ್ಯುನಿಸಿಪಾಲಿಟಿ ಪೋಲೀಸ್ ಆಫೀಸರರೂ, ವಕೀಲರೂ, ವರ್ತಕರೂ, ಇನಾಮದಾರರೂ ಮತ್ತು ಪರೀಕ್ಷಕರ ೧ ಮ್ಮ ಸಂಗ್ರಹದಲ್ಲಿ ಅವಶ್ಯ ಇಡಬೇಕು. ಎಷ್ಟೋ ಕಾರಕೂನರ ಸಹಾಯದಿಂದ ಒಂದು ಕೆಲಸಕ್ಕೆ ಬಹಳಕಾಲ ಹಿಡಿಯುವದು. ಆದರೆ ಈ ನಮ್ಮ ಪ್ರೆಸ್ಸಿನಿಂದ ಅಂಥಾ ಕೆಲಸವನ್ನಾದರೂ ಸ್ವಲ್ಪ ಕಾಲದಲ್ಲಿಯೇ ಮಾಡುವದಕ್ಕೆ ಸಾಧ್ಯ. ಇದರ ದೆಸೆಯಿಂದ ಈ ಪ್ರೆಸ್ ಜನಗಳ ಪ್ರೀತಿಗೆ ಪಾತ್ರವಾಗಿರುವದು. ಈ ಕಾರಣದಿಂದ ಪ್ರತಿ ಒಬ್ಬರೂ ತಮ್ಮ ಹತ್ತಿರ ಈ ಪ್ರೆಸ್ಸನ್ನು ಅವಶ್ಯಕವಾಗಿ ಇಡುವದರಲ್ಲಿ ಏನೂ ಸಂದೇಹವಿಲ್ಲ

ನೋಟ್ ಪೇಪರ್ ಸೈಜು, ರೂಪಾಯಿ ೪—೦—೦.

ಹಾಫ್ ಫುಲ್ಸ್ಕ್ಯಾಫ್ ಸೈಜು, ೬—೦—೦.

ಪೋಸ್ಟೇಜು ಬೇರೆ (extra)

ವಿಳಾಸ:— ವರ್ಧಮಾನ ಏಜನ್ಸಿ,

ಪೋಸ್ಟ್ ಕಾಲಬಾದೇವಿ,

ಮುಂಬಯಿ.

ಸರ್ ೧೯೦೮ ನೇ ಇಸವಿಯ

127 4

ಎ ನಂ॥ ಜೆನೀವಾ. ಬಿ ನಂ॥ ಸಿ ನಂ॥ ಜೆನೀವಾ ಡಿ ನಂ॥

ಪಂಚಾಂಗ ಸಹಿತವಾದ ಇಂಗ್ಲೀಷು—ಕನ್ನಡ ಡೈರಿ

ಈ ಡೈರಿಗಳು ವರ್ತಕರು, ಲಾಯರುಗಳು, ಕಂಟ್ರಾಕ್ಟರು, ದೊಡ್ಡ ಮನುಷ್ಯರು, ಬುಕ್‌ಬಾಕ್ಸ್ ಸಮಸ್ತರಿಗೂ ಉಪಯೋಗವಾಗಿರುತ್ತವೆ. ಇವುಗಳಲ್ಲಿ ಅಡಕವಾಗಿರುವ ವಿಷಯಗಳು.—ಕೇಲಕ ಸರ್ ಪಂಚಾಂಗ, ಗ್ರಹ ಕುಂಡಲಿ ಸಹಿತ, ಕ್ಯಾಲೆಂಡರು, ಹಬ್ಬಗಳು, ರಜಾದಿನಗಳು, ಗ್ರೈನ್ ಛಾರ್ಜ್, ಕೋರ್ಟ್ ಫೀಜು, ಪ್ರೋಸೆಸ್ ರುಸುಂ, ಸ್ಟಾಂಪು, ರಿಜಿಸ್ಟರ್ ಫೀಜುಗಳು, ಪೋಸ್ಟ್ ಫೀಸಿನ ಎಲ್ಲಾ ವಿಷಯಗಳು, ಬಡ್ಡಿಗಳ ಲೆಕ್ಕ, ತೂಕಗಳು, ಗೌರಿ ಪಂಚಾಂಗ, ಪ್ರಶ್ನಶಾಸ್ತ್ರ, ಹಲ್ಲಿ ಬಿದ್ದ ಫಲ, ರಾಹುಕಾಲ, ಗುಳಿಕಕಾಲ, ವಾರಶೂಲೆ, ದಿನ ಸಂಬಳದ ಪಟ್ಟಿ, ಥೋಟಿಲೆಕ್ಕ, ಬಾಯುಬಟೇ ಪಟ್ಟಿ, ಇನ್ನೂ ಅನೇಕ ವಿಷಯಗಳಿವೆ. ಉತ್ಕೃಷ್ಟವಾದ ಕಾ... ದ ... ಹಾಕಿವೆ, ಶೀವ ಸಾರ್ಮಾ ಬೈಂಡು, ಚಿನ್ನ ಬೆಳ್ಳಿ ... ಟುಮಾತಿದೆ. ಕ್ರಯ—

ಎ ನಂಬರ್ ಚಿಕ್ಕಸೈಜು ೩ ಆಣೆ	ಸಿ ನಂಬರು ದೊಡ್ಡ ಸೈಜು ೬ ಆ.
ಬಿ. ಮುಚ್ಚಳದ್ದು ೫ ,,	ಡಿ ,, ಮುಚ್ಚಳದ್ದು ೮ ,,

ಹೊಸ ನಮೂನೆ ಉತ್ಕೃಷ್ಟವಾದ 'ಜೆನೀವಾ' ಡೈರಿ. ಇದು ಸರ್ಕಾರದಲ್ಲಿ ರಿಜಿಸ್ಟರಾಗಿದೆ

"ಜೆನೀವಾ" ೧ ನಂ. ೪ ಆ	"ಜೆನೀವಾ" ೨ ನಂ. ೬ ಆ.

ಪೋಸ್ಟು ಚಾರ್ಜು ಬೇರೆ. ಒಂದೇ ನಮೂನೆಯ ೧೨ ಡೈರಿ ತರಿಸಿಕೊಂಡರೆ ೧ ಡೈರಿ ಇನಾಂ. ವಿ. ಪಿ. ಮೂಲಕವೂ ತರಿಸಿಕೊಳ್ಳಿ.

ಟಿ. ಕೆ. ಮತ್ತು ಎಂ. ಆರ್. ಕೃಷ್ಣಸ್ವಾಮಿ ಶೆಟ್ಟಿ,

ಬಳ್ಳಾಪುರದ ಪೇಟೆ, ಬೆಂಗಳೂರು ಸಿಟಿ.

ನಿಮಗೆ ನೋವು ಇದೆಯೋ?

58-30

ಹಾಗಾದರೆ "ಕ್ಲೆಮೆಂಟ್ ಯವರ ಮ್ಯಾಜಿಕ್ ಬಾಂ" ನ್ನು ಏಕೆ ಉಪಯೋಗಿಸಬಾರದು? ಆಶ್ಚರ್ಯಕರವಾದ ಬಾಧಾಪಹಾರಿ ಇದು! ಈಗಿನ ಕಾಲದಲ್ಲಿ ಕಂಡು ಹಿಡಿದ ದೊಡ್ಡ ನೂತನವು!

ಈ ರಾಜ ಔಷಧವನ್ನು ಮೊಟ್ಟಮೊದಲು ಕೊಡೆಯುತ್ತಲೆ ಕೆಲವು ನಿಮಿಷಗಳೊಳಗಾಗಿ ನರ ಮತ್ತು ಮಾಂಸ ಸಂಬಂಧವಾದ ಶ್ವಾಸ್ಯ ನೋವು, ಕೀಲುಗಳ ಬಾಧೆ, ಕಿಸ್ತೊಟ್ಟಿ ನೋವು, ಬೆನ್ನು ಳಿಯುವದು, ತಲೆನೋವು, ಕೆಮ್ಮು, ಕೀಲುಗಳು ಕತ್ತರಿಸುವದು, ಕೊರಳು ಊತ, ಕೈಕಾಲು ಒಡೆತ ಇವುಗಳನ್ನೆಲ್ಲಾ ವಿದ್ಯುಚ್ಛಕ್ತಿಯಂತೆ ಗುಣಪಡಿಸುವದು ಈ ಔಷಧವು ಆಶ್ಚರ್ಯಕರವಾಗಿ ಗುಣಪಡಿಸುವದರಿಂದ ಎಲ್ಲಾ ಕಡೆಯಲ್ಲಿಯೂ ಪ್ರಸರಿಸುತ್ತಾ ಬರುವದು ಇತರ ಔಷಧಿಗಳು ಗುಣಪಡಿಸದೆ ಹೋದಾಗ ಡಾಕ್ಟರ್ ಘೀಜನ್ನು ಕಡಿಮೆಮಾಡಿ ಇದು ನಿಸ್ಸಂದೇಹವಾಗಿಯೂ ಗುಣಪಡಿಸುವದು

ಕ್ರಯ ೨—೦ ಬಾಟ್ಲಿಗೆ ೧೨ ಆಣೆ, ಪೋಸ್ಟೇಜ್ ೪ ಆಣೆ ೩ ಬಾಟ್ಲಿಗೆ ಅಂಚೆವೆಚ್ಚ ಸೇರಿ ರೂ. ೨—೪ ಆಣೆ. ಎಲ್ಲಾ ಕೆಮಿಸ್ಟ್ ಷಾಪುಗಳಲ್ಲಿ ದೊರೆಯುವದು

ನಮ್ಮ ವಿಳಾಸ—ಎಫ್. ಡಬ್ಲಿಯು. ಆರ್ಕ,

ಸಿಮೆಟ್ರಿ ರೋಡ್, ವೇಪೇರಿ, ಮದರಾಸ್.

ಸತ್ಯವಾಗಿಯೂ ಅಗ್ಗದ ಅಂಗಡಿ.

1216

ಅಗ್ಗದ ಬಿಕರಿ ಸಮಯ. ಕ್ರಯ ಮೂರರಲ್ಲಿ ಒಂದೇಪಾಲು. ಅನೇಕರ ಕೋರಿಕೆ ಮೇರೆ ೧೯೦೮ನೆ ಜನವರಿ ಗುರ್ರೆ ವರಿಗೆ

ಗಡಿಯಾರಗಳೆಲ್ಲಾ ಅಚ್ಚ ಹಸನಾದವು. ಚೆನ್ನದಂಥಾ ಸಮಯ. ಇದಕ್ಕಿಂತ ಅಗ್ಗವಾಗಿ ಮತ್ತೆ ಸಿಕ್ಕಲಾರವು. ತಾವಕಾಶಮಾಡಬೇಡಿ! ಕಾಲಮೀರೀತು!

ನಂ ೧೦೦—೧೯ ಓ ಎಫ್ ಸಂವರವಾದ ಲೋಕಗಡಿಯಾರ, ಸೆಕೆಂಡ್ ಹ್ಯಾಂಡ್ ಸಹಿತ, ಸಿಲಿಂಡರ್ ಚಲನೆ, ೩೬ ಗಂಟೆ ಹೊತ್ತು ನಡಿಯುವುದು ಮೊದಲಿನ ಕ್ರಯ ರೂ. ೧೩—೮—೦, ಈಗಿನ ಕ್ರಯ ರೂ ೩—೮—೦ ಐದು ವರ್ಷ ಜಾಮೀನು

ನಂ ೧೦೧ ಎ—ಕ್ರೊನೋಗ್ರಾಫ್ ವಾಚ್ ಸೆಕೆಂಡ್ ಹ್ಯಾಂಡ್ ಸಹಿತ ಮೊದಲಿನ ಕ್ರಯ ರೂ ೧೫, ಈಗ ರೂ ೫ ಐದು ವರ್ಷ ಜಾಮೀನು

ನಂ ೧೦೨—೧೯ ಓ ಎಫ್ ಸಿಲಿಂಡರ್ ಚಲನೆ, ೩೬ ಗಂಟೆ ನಡಿಯುವುದು ಮೊದಲಿನ ಕ್ರಯ ರೂ. ೧೧—೪—೦, ಈಗ ರೂ. ೩—೧೨—೦ ಐದು ವರ್ಷ ಜಾಮೀನು

ನಂ ೧೦೭—೧೯ ಓ ಎಫ್ ರೈಲ್ವೆ ರೆಗ್ಯುಲೇಟರ್ ಲೀವರ್ ವಾಚ್ ೩೬ ಗಂಟೆ ನಡಿಯುವುದು ಮೊದಲಿನ ಕ್ರಯ ರೂ. ೧೦—೧೪—೦, ಈಗ ರೂ ೩—೦—೦ ಐದು ವರ್ಷ ಜಾಮೀನು.

೧೦೩—ರಾಸ್ಕೋಪ್ ಲೀವರ್ ವಾಚ್ ಇದು ಬಹು ಶಾಶ್ವತವಾದದ್ದು ಹತ್ತು ವರ್ಷ ಜಾಮೀನು ಮೊದಲು ರೂ ೧೯, ಈಗ ರೂ ೫—೮—೦

೧೦೪—ಬೆಳ್ಳಿ ರಾಸ್ಕೋಪ್ ಲೀವರ್ ವಾಚ್ ರತ್ನಗಳುಳ್ಳದ್ದು ೧೨ ವರ್ಷ ಜಾಮೀನು ಮೊದಲು ರೂ ೩೦, ಈಗ ರೂ ೧೦.

೧೦೫—ಬೆಳ್ಳಿ ಲೇಡಿ ಅಥವಾ ಕ್ಯೆವಾಚ್ ಸಿಲಿಂಡರ್, ರತ್ನಗಳುಳ್ಳದ್ದು ಗಿಲ್ಟ್ ಚಲನೆ ೬ ವರ್ಷ ಜಾಮೀನು ಕ್ರಯ ರೂ ೨೫ ಈಗ ರೂ ೬—೮—೦

೧೦೬—ಬೆಳ್ಳಿ ಓ ಎಫ್, ಕೈ ಸಹಿತ ಪಾಲಿಶ್ ಚಲನೆ ರೂ ೨೯, ಈಗ ರೂ ೩ ಆರು ವರ್ಷ ಜಾಮೀನು

೧೦೮—ಬೆಳ್ಳಿ ಓ ಎಫ್ ಗಂಡಸರ ಲೀವರ್ ವಾಚ್ ರೂ ೩೦ ಈಗ ರೂ ೧೦ ಹತ್ತು ವರ್ಷ ಜಾಮೀನು

೧೦೯ ಎ—ಅದೇ ಹಂಟರ್ ರೂ ೩೩, ಈಗ ರೂ ೧೧,

೧೦೯ ಬಿ—ಅದೇ ಅರ್ಧ ಹಂಟರ್ ರೂ ೩೬, ಈಗ ರೂ ೧೨

೧೧೯—ಬೆಳ್ಳಿ ೮ ದಿನ ನಡಿಯುವುದು ರೂ. ೪೫, ಈಗ ರೂ ೧೮ ವಾರಕ್ಕೊಮ್ಮೆ ಕೀಲಿ ಕೊಡುವುದು ಲೀವರ್ ಚಲನೆ ಹತ್ತು ವರ್ಷ ಜಾಮೀನು

೧೧೯ ಎ—೩೩ ದಿನ ನಡಿಯುವ ಚೊಕ್ಕಬೆಳ್ಳಿ ಗಡಿಯಾರ ರತ್ನಗಳುಳ್ಳದ್ದು ಸೆಕೆಂಡ್ ಹ್ಯಾಂಡ್ ೧೫ ವರ್ಷ ಜಾಮೀನು ರೂ ೧೫೦ ಈಗ ರೂ ೪೦

೧೧೯ ಬಿ ಚೊಕ್ಕಬೆಳ್ಳಿ ಕ್ಯಾಲೆಂಡರ್ ಲೀವರ್ ವಾಚ್ ದಿನ, ತಾರೀಖು, ತಿಂಗಳು, ಚಂದ್ರ, ಇವನ್ನು ತೋರಿಸುತ್ತೆ. ೧೨ ವರ್ಷ ಜಾಮೀನು. ಕ್ರಯ ರೂ ೩೦—೧—೦, ಈಗ ರೂ ೧೩—೮—೦

೧೦೦—ಚೊಕ್ಕಬಂಗಾರ ರತ್ನಗಳುಳ್ಳದ್ದು ಕ್ರಯ ರೂ ೫೦ ಈಗ ರೂ. ೨೫ ಹದಿನೈದು ವರ್ಷ ಜಾಮೀನು

೧ ೧—ಎಂಟು ದಿನಗಳ ಚೆನ್ನದ ಗಡಿಯಾರ ಹಂಬಾ ರತ್ನಗಳು ೧೨ ವರ್ಷ ಜಾಮೀನು ಕ್ರಯ ರೂ ೧೫೯, ಈಗ ರೂ ೪೩

ಒಟ್ಟಿಗೆ ತರಿಸುವವರಿಗೆ ಸ್ಪೆಷಲ್ ದರಗಳು

೩ ಗಡಿಯಾರ ಒಂದೆಸಲ ತರಿಸುವವರಿಗೆ ಪ್ಯಾಕಿಂಗ್ ಪೋಸ್ಟೇಜ್ ಮಾಫಿ

೬ " " " ಒಂದು ಗಡಿಯಾರ ಇನಾಂ

ಕ್ರಯದಲ್ಲಿ ಕಾಲುಭಾಗ ಅಡ್ವಾನ್ಸು ಬರಬೇಕು, ಉಳಿದದ್ದಕ್ಕೆ ವಿ ಪಿ ಪಿ ಇಂದ ಕಳಿಸುತ್ತೇವೆ ಗಡಿಯಾರಗಳನ್ನು ಸುಂದರವಾದ ವೆಲ್ವೆಟ್ ಪೆಟ್ಟಿಗೆಯುಲ್ಲಿ ಸ್ಪ್ರಿಂಗ್, ಗ್ಲಾಸ್ ಸಹಿತ ಕಳಿಸುವೆವು ಇದಲ್ಲದೆ ಪ್ರತಿ ವಾಚಿಗೂ ಸೇಗಿಸುವ ಒಂದೊಂದು ಸರಪಣಿಯನ್ನು ಸಾಚ ಇನಾಮಾಗಿ ಕಳಿಸುತ್ತೇವೆ ನಮ್ಮ ವಿಳಾಸ—

ಎಂ. ೧. ಘಟಾಲಾ ಮತ್ತು ಕಂಪನಿ,

ಚಿಕ್ಕೋರು, ಉತ್ತರ ಅರ್ಕಾಟು.

CHAMBERLAIN'S PAIN BALM

ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವು



ಬೆನ್ನು ಅಂಟಿನಲ್ಲಿನ ನೋವು ಪಕ್ಕಗಳಲ್ಲಿ ಆಗುವ ನೋವು, ಖಂಡಗಳಲ್ಲಿ ಹುಟ್ಟುವ ನೋವು, ತಲೆನೋವು, ಜಜ್ಜಾಗ ಆದೆಗಳ ನೋವು, ವಾಯುನೋವು—ಇವುಗಳನ್ನೆಲ್ಲಾ ಸಂಪೂರ್ಣವಾಗಿ ವಾಸಿಮಾಡುವಂಥಾ ಔಷಧ ವಾಯುನೋವೆಂದರೇನು? 425

ಕೀಲುಗಳಲ್ಲಿ ವಾಚಿಕಟ್ಟಿಗಳಲ್ಲಿ ಗಾಯವಾಗುವುದು, ಊದಿಕೊಳ್ಳುವುದು, ಕಂಡಣವಾಗಿ ಕಳೆಯುವ ಚಾಳಿ, ಖಂಡಗಳಲ್ಲಿ ಇರಿಯುವುದು, ಏಪ್ರಾಂತಿಕವಾದ ಇರುವುದು, ನಿದ್ರೆ ಹತ್ತದೆ ಇರುವುದು—ಇದೇ ಇದೆಲ್ಲಾ ನಿಮಗೆ ಯಾವಾಗ ಉಂಟಾಗುವುದೋ ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು

ಆಗ ಚೇಂಬರ್ಲೇನ್‌ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹಾ ಕಾವು ಮೂಳೆಯೊಳಗೆ ವ್ಯಾಪಿಸುತ್ತದೆ ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ ಮನಸ್ಸಿಗೆ ಉಲ್ಲಾಸವಾಗುತ್ತೆ ಅದನ್ನೇ ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯುವಿನ ಹುಟ್ಟನ್ನೇ ಕಿತ್ತುಹಾಕಿಬಿಡುತ್ತದು

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ.

ಕೈಯಿಂದ ಮುಟ್ಟಿದ್ದೇನೂ ಅಲ್ಲ.

ಇದು ಎಲ್ಲೆಲ್ಲೂ ಬಿಕರಿಯಾಗುವುದು ಸಣ್ಣ ಶೀಸೆಗೆ ೧ ರೂಪಾಯಿ ದೊಡ್ಡ ಶೀಸೆಗೆ ೨ ರೂಪಾಯಿ

---

೧೦ ವರ್ಷದ ಪಂಚಾಂಗದರ್ಪಣವು

137 1

ನಮ್ಮ ಆಫೀಸಿನಲ್ಲಿ ಕೀಲಕ ಸಂವತ್ಸರದ ೧೦ ವರ ವರ ಪಂಚಾಂಗ ದರ್ಪಣವು ತಯಾರಾಗಿರುತ್ತದೆ. ಈ ದರ್ಪಣದಲ್ಲಿ ಇದುವರಿಗೂ ಯಾರೂ ಕೇಳಿದೆ ನೋಡದೆ ಇರತಕ್ಕ ಅಪೂರ್ವವಾಗಿ ಲಾಭಕರವಾಗಿ ರುವ ಸಮಸ್ತ ನೂತನ ವಿಷಯಗಳು ಬರೆಯಲ್ಪಟ್ಟಿವೆ ಇಷ್ಟೇ ಪ್ರತಿ ವರು ನಾಲ್ಕು ಪ್ರತಿಗಳಿಗಿಂತ ಹೆಚ್ಚಾಗಿ ತರಿಸಿಕೊಳ್ಳಿರಿ

ಕ್ರಯ ಪ್ರತಿ ೧ಕ್ಕೆ ೩ ಆಣೆ

ಮ್ಯಾನೇಜರ್, ಅನಾಥಾಲಯ, ಬಳ್ಳಾರಿ ಜಿಲ್ಲಾ ಗದಗಳ್ಳಿ

ದಂಡ ಕೊಡುವುದನ್ನು ತಪ್ಪಿಸಿಕೊಂಡು ದುಡ್ಡನ್ನು ಉಳಿಸಿಕೊಳ್ಳಿ

1581

ಮನುಷ್ಯ ಸಾಮಾನ್ಯರಲ್ಲಿ ಲೇವಾದೇವಿಗಳಿಂದ ಜೀವಿಸುವವರೇ ಹೆಚ್ಚು ಹೀಗಿದ್ದಾಗ್ಯೂ ಅನೇಕರಿಗೆ ಪತ್ರ ಕಲು ಬರೆಯುವರ ಲ್ಲಿಯೂ ಬಿಡಿಸ್ಟ್ರೇಷ ಆಫೀಸುಗಳಲ್ಲಿ ಕೆಲಸ ನಡಿಸಿಕೊಳ್ಳುವ ರಲ್ಲಿಯೂ ಅನೇಕ ವಿಷಯಗಳು ತಿಳಿಯದೆ, ನಾನಾ ವಿಧವಾದ ದಂಡ ಗಳಿಗೆ ಒಳಗಾಗುವರು ಈ ರೀತಿ ಜನಗಳು ತೊಂದರೆಪಡದಿರಬೇಕೆಂಬ ಅಭಿಪ್ರಾಯದಿಂದ ಬರೆದಿರುವ "ಲೇಖನ ಪ್ರಕಾಶಿಕಾ" ಎಂಬ ಪುಸ್ತಕವು, ಸ್ಟ್ಯಾಂಪು ಮತ್ತು ರಿಜಿಸ್ಟ್ರೇಷ ವಿಷಯವಾಗಿ ಪರಿಪೂರ್ಣವಾಗಿಲ್ಲದೆ ಒಡು ಬರಹ ಬಲ್ಲವರೆಲ್ಲರಿಗೂ ಸ್ವತಂತ್ರವಾಗಿ ಕೆಲಸ ನಡಿಸಿಕೊಳ್ಳ ವಷ್ಟು ಸಾಮರ್ಥ್ಯವನ್ನುಂಟುಮಾಡುತ್ತದೆ ಮತ್ತು ಇದರಲ್ಲಿ ಎಲ್ಲಾ ತರಹ ಪತ್ರಗಳ ನಮೂನೆಯೂ ಅದಕ್ಕೆ ಹಾಕಬೇಕಾದ ಸ್ಟಾಂಪು ಕ್ರಯ ಸಹಾ ಹೇಳಿದೆ ಆದಕಾರಣ, ಈ ಪುಸ್ತಕವನ್ನು ತರಿಸಿ ನೋಡಿ ದರೆ ಉಂಟಿತವಾಗಿಯೂ ಒಬ್ಬ ಒಳ್ಳೇ ಸ್ನೇಹಿತನನ್ನು ಸಂಪಾದಿಸಿಕೊಂ ಡಂತೆ ಭಾವಿಸುವಿರಿ ಇತರ ಪುಸ್ತಕಗಳೊಂದಿಗೆ ಹೋಲಿಸಿದರೆ ಇದರ ಯೋಗ್ಯತೆಯು ನಿಮಗೆ ಗೊತ್ತಾಗುವುದು.

ಕ್ರಯ ಟಪ್ಪಾಲ್ ಛಾರ್ಜು

೧—೦—೦ ೦—೧—೦

ವಿಳಾಸ —ಶ್ರೀ ಸರಸ್ವತಿ ವಿದ್ಯಾ ಮತ್ತು ಕಂಪನಿ, ವೈಸೂರು

೧೯೦೮ನೇ ಇಸವಿಯ ಇಂಗ್ಲೀಷು—ಕನ್ನಡ

1197

ಪಾಕೆಟ್ ಡೈರಿ

ಎ ನಂ! ಬಿ. ನಂ!! ಸಿ. ನಂ ಡಿ. ನಂ!!

ಕ್ರಯ ೪ ಆಣೆ. ೫ ಆಣೆ ೬ ಆಣೆ. ೮ ಆಣೆ

ಈ ಡೈರಿಗಳು—ವರ್ತಕರು, ಲಾಯರುಗಳು, ಕಂಟ್ರ್ಯಾಕ್ಟರು, ದೊಡ್ಡ ಮನುಷ್ಯರು, ಬಿಜಿನೆಸ್ ಸಮಯಸ್ಥರಿಗೂ ಉಪಯೋಗ ವಾಗಿರುತ್ತವೆ ಇವುಗಳಲ್ಲಿ ಅಡಕವಾಗಿರುವ ವಿಷಯಗಳು—ಕೀಲಕ ಸಂ ಪಂಚಾಂಗ, ಗ್ರಹ ಕುಂಡಲಿ ಸಹಿತ, ಕ್ಯಾಲೆಂಡರು, ಪಬ್ಲಿಕ್ ರಜಾ ದಿನಗಳು, ರೈಲ್ ಛಾರ್ಜು, ಕೋರ್ಟ್ ಘೀಜು, ಪೋಸ್ಟ್ ರೂಲ್ಸು, ಸ್ಟ್ಯಾಂಪು ರಿಜಿಸ್ಟರ್ ಫೀಜುಗಳು, ಪ್ರೋನ್ಸಿಸ್ಸಿಸ ಎಲ್ಲಾ ವಿವ ಯಗಳು, ಬಡ್ಡಿಗಳ ಅಳತೆ, ಗೌರಿ ಪಂಚಾಂಗ ಪ್ರಶ್ನಶಾಸ್ತ್ರ ರಾಹುಕಾಲ, ಗುಳಿಕಕಾಲ, ವಾರಶೂಲೆ, ಮಾಸಫಲಗಳು, ದಿನ ಸಂಬ ಳದ ಪಟ್ಟಿ, ಧೋಬಿ ಲೆಕ್ಕ, ಜಮಾ ಖರ್ಚು ಪಟ್ಟಿ, ಇನ್ನೂ ಅನೇಕ ವಿಷಯಗಳು ಇವೆ ಉತ್ಕೃಷ್ಟವಾದ ಕಾಗದ ರೂಲು ಹಾಕಿ ಸೀಮೆ ಸಾಮಾನು ಬೈಂಡು, ಚೆನ್ನದ ಛಗಾರದ ಲೇಖನಿಂದ ಕೂಡಿದ ಮಾಡಲ್ಪಟ್ಟಿದೆ

ಎ ನಂಬರ್ ಚಿಕ್ಕ ಸೈಜು	೩ ಆಣೆ
ಬಿ ನಂಬರ್ ಮಧ್ಯದ್ದು	೫ ಆಣೆ
ಸಿ ನಂಬರ್ ದೊಡ್ಡ ಸೈಜು	೬ ಆಣೆ
ಡಿ ನಂಬರ್ ಮಧ್ಯದ್ದು	೮ ಆಣೆ

ಪೋಸ್ಟು ಛಾರ್ಜು ಬೇರೆ ಒಂದೇ ಸಮಯದಲ್ಲಿ ೧೨ ಡೈರಿ ತರಿಸಿಕೊಂಡರೆ ೧ ಡೈರಿ ಉಚಿತವಾಗಿ ಕೊಡುವೆವು. ವಿ ಪಿ ಮೂಲಕ ವೂ ತರಿಸಿಕೊಳ್ಳಬಹುದು

ನಮ್ಮ ವಿಳಾಸ—ಶ್ರೀ. ಕಮಲಿಂಗಂ ಶೆಟ್ಟಿ ಕಂಪನಿ,

ಕರ್ನಾಟಕ ಬುಕ್ ಡಿಪೋ ಪ್ರೆಸ್, ಬಳ್ಳಾರಿ

೧೯೦೬ ರಿಂದ ೧೯೦೬ ವರೆಗೆ

ಕಾಲದ ಪರೀಕ್ಷೆ!

ಮೂವತ್ತೇಳು ವರ್ಷಗಳಿಗಿಂತಲೂ ಹೆಚ್ಚಾಗಿ

SCOTT'S EMULSION

3140

(ಸ್ಕಾಟ್ಸ್ ಇಮಲ್ಷನ್)

ಎಂಬ ಸೇವನಾ ಔಷಧಿಯನ್ನು ಘನ ಪಂಡಿತರೆಲ್ಲಾ ಅನೇಕ ಸಲ ಶೋಧನೆಮಾಡಿ, ಸರ್ವೋತ್ತಮವಾದದ್ದೆಂದು ಹೇಳಿರುತ್ತಾರೆ ಆದದರಿಂದ ಮುಂದಿನ ರೋಗಗಳಿಗೆ ಪ್ರಪಂಚದಲ್ಲೆಲ್ಲಾ ಈ ಔಷಧವು ಸರ್ವ ಶ್ರೇಷ್ಠವಾದದ್ದಾಗಿ ಪರಿಣಮಿಸಿದೆ

ಶ್ವಾಸಕೋಶದ ಅಶಕ್ತತೆಗಳು, ನಾನಾ ತರದ ಕೆಮ್ಮುಗಳು, ಸಕಲವಿಧ ದೌರ್ಬಲ್ಯಗಳು, ಮಾಂಸಖಂಡಗಳ ಕ್ಷೀಣತೆ, ಅಶಕ್ತತೆ

ಆಹಾರದಲ್ಲಿ ಅರುಚಿ ಇದಲ್ಲದೆ ಹುಡುಗರು ಮಗುಗಳಿಗ ಬಲವಾಯಿತು ಮತ್ತು ಅಂಗ ಬೆಳಸುವ ಸೇವನಾ ಔಷಧವೂ ಇದೇ

ಕೈಸೋಕಬೇ ತಯಾರಾದದ್ದು

ಔಷಧಗಳ ಅಂಗಡಿಗಳಲ್ಲೆಲ್ಲಾ ಬಿಕರಿಯಾಗುವದು

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್ ಔಷಧಗಳ ಕಾರ್ಖಾನೆ, ಲಂಡನ್, ಇಂಗ್ಲೆಂಡ್

ಈ ಮನುಷ್ಯ ಇರುವ ಚಿಹ್ನವನ್ನೇ ಕೇಳಿಕೊಳ್ಳಿ

THE PLACE FOR HASSAN CAPS IS

HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ!

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

5831

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಇಲ್ಲಿ ದೀಲದೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿ ಗಳೆಲ್ಲಾ ಬೇಳಾದದ್ದು ಅವೇ ಹಾಸನದ ಟೋಪಿಗಳೆಂದು ಹೇಳಿ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ—(೧) ನಮ್ಮಲ್ಲಿ ತಯಾರಾಗುವ ಟೋಪಿ ಗಳ ಪಾದವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು (೨) ಟೋಪಿಗಳನ್ನು ಬಿದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೊಲಿದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ಪದನ ಗ ಸೀದಾ ಬರೆದು ತರಿಸಿಕೊಳ್ಳಿ ಅಗ್ಗದ್ದು ಚನ್ನಾಗಿಲ್ಲದ್ದೂ ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ ಸಾದ, ಕೆಂಪು, ಕಪ್ಪು, ಬಿಳಿ, ಕಾಫಿ ಟೋಪಿಗಳು ೧ ರೂ ೮ ೧ ರೂ ೬ ಆ, ೧ ರೂ ೪ ಆ.

ದೊಡ್ಡ ಅಂಚಿಯುಳ್ಳ ಟೋಪಿಗಳು ೧ ರೂ ೮ ಆ, ೨ ರೂ ಜರದ ಟೋಪಿಗಳು ೧ ರೂ. ೧೨ ಆ, ೧ ರೂ ೮ ಆ, ೧ ರೂ. ಮಖಮಲಿನ ಟೋಪಿಗಳು ೧ ರೂ ೮ ಆ, ೧ ರೂ ೬ ಆ

ಕಾಸುಗಳ ಟೋಪಿ, ಸೂರ್ಯ ಮೇಜೋಡು, ಅರ್ಧ ಮೇಜೋ ಡು ಕತ್ತಿನ ಪಟ್ಟಿ ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳಿದವರಿಗೆ ಕೊಟ್ಟು ಕಳುಹಿಸುವೆವು.

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾ

ವೃತ್ತಾಂತ ಪತ್ರಿಕೆ.

ಸ್ರ ೧೯೦೭ ನೇ ಇಸವಿ ಡಿಸೆಂಬರ್ ತಾ|| ೧೯ ನೇ ಗುರುವಾರ

ಹೆಣ್ಣನ್ನು ದೇವದಾಸಿಯಾಗಿ ಬಿಡುವುದು.

ಮೈಸೂರು ಸಂಸ್ಥಾನದಲ್ಲಿ ತಾಲೂಕಾಗಿರುವಂಥಾ ಒಂದು ಊರಿನಲ್ಲಿ ಕೆಲವು ದಿನಗಳ ಹಿಂದೆ ಒಬ್ಬ ಹುಡುಗಿಯನ್ನು ಕುರಿತು ಗೆಜ್ಜೇ ಪೂಜೆಯನ್ನು ಮಾಡಿಸಿದರೆಂತಲೂ, ಆ ಊರಿನ ವಿದ್ಯಾವಂತರೂ ಗಣ್ಯರೂ ಆಗಿರುವಂಥಾ ಕೆಲವರು ಅದಕ್ಕೆ ಸೇರಿದ್ದರೆಂತಲೂ ಒಬ್ಬ ಬಾತ್ಮಿದಾರರು ನಮಗೆ ತಿಳಿಸಿರುವುದಲ್ಲದೆ, ಆ ಹುಡುಗಿಯು ೧೬ ವರುಷಕ್ಕಿಂತ ಚಿಕ್ಕ ವಯಸ್ಸಿನವಳಾಗಿದ್ದಳೆಂತಲೂ, ಅಷ್ಟು ಚಿಕ್ಕ ಹುಡುಗಿಗೆ ವಿವೇಚನಾ ಶಕ್ತಿಯುಂಟಾಗುವುದಕ್ಕೆ ಮೊದಲೇ ಗೆಜ್ಜೆ ಪೂಜೆ ಎಂಬೀ ಶಾಸ್ತ್ರವನ್ನು ಮಾಡಿಸಿದವರು ಪೀನಲ್ ಕೋಡಿನ ೩೭೨ನೇ ವಿಧಿಗನುಸಾರವಾದ ಅಪರಾಧವನ್ನು ಮಾಡಿ, ಸರ್ಕಾರದ ಶಿಕ್ಷೆಗೆ ಗುರಿಯಾಗಿರುತ್ತಾರೆಂತಲೂ ವಿವರಿಸಿ, ಇಂಥಾ ಕೃತ್ಯಗಳನ್ನು ಸರ್ಕಾರದವರು ಯಾಕೆ ಗಮನಕ್ಕೆ ತಂದುಕೊಂಡು ನಿಲ್ಲಿಸಬಾರದೆಂದು ಕೇಳುತ್ತಾರೆ.

ಇಂಥಾ ಹುಡುಗಿಯರನ್ನು ಬಹು ಲಜ್ಜಾಯುಕ್ತವಾದ ಜೀವನಕ್ಕೆ ಗುರಿಮಾಡುತ್ತಾರೆಂಬುವುದನ್ನು ಯಾರೂ ಅಲ್ಲಗಳೆಯುವುದಿಲ್ಲ. ಕಳೆದ ವಾರ ಮೈಸೂರು ಛೀಫ್ ಕೋರ್ಟಿನಲ್ಲಿ ಒಂದು ಮೊಕದ್ದಮೆ ನಡೆಯುವಾಗ್ಗೆ ಈ ಪದ್ಧತಿಯು ಪ್ರಕೃತಿಯಲ್ಲಿ ಉಂಟೆಂದು ಕಕ್ಷಿಗಾರರು ಒಪ್ಪಿಕೊಂಡ ಇರುತ್ತಾರೆ. ಆದಕಾರಣ ಈ ಪದ್ಧತಿಯು ಇರುವುದೋ ಇಲ್ಲವೋ ಎಂದು ಅನುಮಾನಪಡಬೇಕಾದ ಅಗತ್ಯವಿಲ್ಲ. ಅತ್ತ ಮದರಾಸು ಹೈಕೋರ್ಟಿನಲ್ಲಿ ಇಂಥಾ ಗೆಜ್ಜೇ ಪೂಜೆ ಸಂಬಂಧವಾದ ಮೊಕದ್ದಮೆಗಳು ಆಗಿರುವುದೂ, ಹೈ ಕೋರ್ಟಿನ ಜಡ್ಜೀರು ೧೬ ವರುಷಕ್ಕಿಂತ ಚಿಕ್ಕ ವಯಸ್ಸಿನ ಹೆಣ್ಣು ಮಕ್ಕಳಿಗೆ ಈ ಕಾರ್ಯವನ್ನು ಮಾಡುವುದು ಅಪರಾಧವೇ ಸರಿ ಎಂದು ತೀರ್ಮಾನಮಾಡಿರುವುದೂ, ಅನೇಕ ಸಂದರ್ಭಗಳಲ್ಲಿ ಅಂಥಾದ್ದನ್ನು ನಡಿಸಿದವರಿಗೆ ತಕ್ಕಹಾಗೆ ಶಿಕ್ಷೆ ವಿಧಿಸಿರುವುದೂ ಎಲ್ಲರಿಗೂ ತಿಳಿದಿರುತ್ತದೆ. ಆದಕಾರಣ ಇಂಥಾ ದುಷ್ಟ ಪದ್ಧತಿಯನ್ನು ಮತಕ್ಕೂ ಶಾಸ್ತ್ರಕ್ಕೂ ಸಮ್ಮತವಾದ ಕರ್ಮವೆಂದು ಎಂಥವರೂ ಹೇಳಲಾಗುವುದಿಲ್ಲ. ಗವರ್ನಮೆಂಟಿನವರು ಅಂಥಾ ಕರ್ಮವು ಶಾಸ್ತ್ರಸಮ್ಮತವಾಗಿದ್ದರೂ ಅಥವಾ ಪೂರ್ವಾಚಾರವೇ ಆಗಿದ್ದರೂ ಶಿಕ್ಷಾರ್ಹವಾದ ತಪ್ಪೇ ಆಗುತ್ತದೆಂದು ತೀರ್ಮಾನಮಾಡಿರುತ್ತಾರೆ. ಮತ್ತು ೧೬ ವರುಷ ತುಂಬದೇ ಇರುವ ಹೆಣ್ಣು ಮಕ್ಕಳಿಗೆ ಗೆಜ್ಜೆ ಪೂಜೆ ಮಾಡಿಸಿದವರನ್ನೂ ಅದಕ್ಕೆ ಸಂಬಂಧಪಟ್ಟವರನ್ನೂ ತಕ್ಕ ಹಾಗೆ ಶಿಕ್ಷೆ ಮಾಡುವರು.

ಆದರೆ ಇದನ್ನು ಸಿದ್ಧಾಂತಪಡಿಸುವುದರಲ್ಲಿ ಒಂದು ಕಷ್ಟವಿದೆ. ಫಿರ್ಯಾದು ತರತಕ್ಕವರು ಅಂಥಾ ಹೆಣ್ಣು ಮಕ್ಕಳ ವಯಸ್ಸು ೧೬ಕ್ಕಿಂತ ಕಡಮೆ ಎಂಬುವುದನ್ನು ರುಜುವಾತು ಮಾಡುವುದು ಅನೇಕ ವೇಳೆ ಅಸಾಧ್ಯವಾಗುತ್ತದೆ. ಯಾಕೆಂದರೆ ಅಪರಾಧಿಗಳು ಸುಳ್ಳು ಸಾಕ್ಷಿಗಳನ್ನೂ ಕಳ್ಳ ಜಾತಕಗಳನ್ನೂ ಒದಗಿಸುವುದಕ್ಕೆ ಅವಕಾಶವುಂಟು. ಇದೆಲ್ಲಾ ಜನರಿಗೆ ಅನುಭವಕ್ಕೆ ಬಾರದಂಥಾ ವಿಚಾರವಲ್ಲ. ಸರ್ಕಾರದವರು ಸರಿಯಾದ ಗುಮಾಸ್ತಿ ಇಟ್ಟು ಇಂಥಾ ದುಷ್ಟಕಾರ್ಯಾಸಕ್ತರನ್ನು ಹಿಡಿದು ಶಿಕ್ಷೆಯಾಗುವಂತೆ ಮಾಡಬೇಕಾಗಿದೆ.

ನಾವಾದರೋ ಯಾವಾಗಲೂ ಬತ್ತಿ ಹೇಳುತ್ತಾ ಬಂದಿರುತ್ತೇವೆ. ಸದ್ಗುಣ ಸದ್ಬುದ್ಧಿ ಸಚ್ಚರಿತ್ರೆಗಳ ವಿಚಾರವನ್ನು ಈಗಲೂ ಮನಃಪೂರ್ವಕವಾಗಿ ಹೇಳುವೆವು. ದೇವರು ಸತ್ಯವಂತನು; ಅತನ ಸೇವೆಯು ನಿಷ್ಕಲ್ಮಷವಾದದ್ದಾಗಿಯೂ, ನಿತ್ಯ ಶುದ್ಧವಾದದ್ದಾಗಿಯೂ ಇರಬೇಕು. ಅತನ ಗುಡಿಯಲ್ಲಿ ದುಷ್ಟ ಚಾಲಿನ ಜನರ್‍ಯಾರೂ ಇರದಂತೆ ಅಂಥವರನ್ನು ದೂರೀಕರಿಸಬೇಕಾದದ್ದು ಪರಮಾವಶ್ಯವಾಗಿದೆ. ಈ ವಿಚಾರವನ್ನು ಸಕಲ ಭಾಗಗಳಲ್ಲೂ ಇರುವಂಥಾ ಎಲ್ಲಾ ಜನರೂ ತಿಳಿದುಕೊಂಡು, ಅದರಂತೆ ಆಚರಣೆಯಲ್ಲಿ ತರುವ ವರೆಗೆ ನಾವು ಮತ್ತೆ ಮತ್ತೆ ಹೇಳುತ್ತಲೇ ಬರುವೆವು.

ನಾವು ಖಂಡಿತವಾಗಿ ಹೇಳುವ ಇನ್ನೊಂದು ವಿಷಯವೇನೆಂದರೆ, ಏನೂ ತಿಳಿಯಲಾರದಂಥಾ ಹೆಣ್ಣು ಮಗುವನ್ನು ಇಂಥಾ ಪಾಪಕರವಾದ ಜೀವನಕ್ಕೆ ಗುರಿಮಾಡುವಂಥಾ ಅವರ ಪೋಷಕರು, ಕಾಲಾನಂತರದಲ್ಲಿ ಬಹು ಭಯಂಕರವಾದ ನರಕದ ಶಿಕ್ಷೆಗೆ ಗುರಿಯಾದಾರೆನ್ನುವುದಕ್ಕೆ ಸಂಶಯವಿಲ್ಲ. ಯಾಕೆಂದರೆ ಚಿಕ್ಕ ಮಕ್ಕಳನ್ನು ಬಹಳವಾಗಿ ಪ್ರೀತಿಸಿದ ಯೇಸು ಕ್ರಿಸ್ತನು ಒಂದು ಮಗುವನ್ನು ಪಾಪಕೃತ್ಯಕ್ಕೆ ಎಳೆದಂಥಾ ಮನುಷ್ಯನ ವಿಷಯದಲ್ಲಿ ಹೇಳಿರುವುದೇನೆಂದರೆ—

"ತೊಡಕುಗಳು ಯಾವನಿಂದ ಬರುತ್ತವೆಯೋ ಅವನ ಗತಿಯನ್ನು ಏನೆಂದು ಹೇಳಲಿ! ಅವನು ಈ ಚಿಕ್ಕವರಲ್ಲಿ ಒಬ್ಬನಿಗೆ ತೊಡಕನ್ನುಂಟುಮಾಡುವುದಕ್ಕಿಂತ ಅವನ ಕುತ್ತಿಗೆಗೆ ಬೀಸುವ ಕಲ್ಲನ್ನು ಕಟ್ಟಿಸಿಕೊಂಡು ಸಮುದ್ರದಲ್ಲಿ ಹಾಕಿಸಿಕೊಳ್ಳುವುದೇ ಲೇಸು."

—ಲೂಕ ೧೭: ೨.

ಇಂಥಾ ದುಷ್ಟರಾದ ತಂದೆತಾಯಿಗಳೂ ಪೋಷಕರೂ ದೇವರ ಕೋಪಕ್ಕೂ ಶಾಪಕ್ಕೂ ಕ್ರೂರ ಶಿಕ್ಷೆಗೂ ಗುರಿಯಾಗಿರುತ್ತಾರೆ. ಅಂಥವರನ್ನು ಸಕಲರೂ ತುಚ್ಛರೆಂದು ಎಣಿಸಿ ಅವರ ಸಹವಾಸವನ್ನೇ ತ್ಯಜಿಸಲೆಂದು ಆಗ್ರಹದಿಂದ ಹೇಳಬಾರದೋ?

ಒಳದೇಶದ ವೃತ್ತಾಂತಗಳು.

ದಿವಾನರವರು ಪರಿವಾರ ಸಹಿತ ಹಿಂದಿನ ಸೋಮವಾರ ಶ್ರೀಮನ್ಮಹಾರಾಜರವರ ಭೇಟಿಗಾಗಿ ಬೆಂಗಳೂರಿನಿಂದ ಮದರಾಸ್‌ಗೆ ದಯಮಾಡಿದ್ದಾರೆ.

❦❦❦

ಈ ತಿಂಗಳ ೨೩ ನೆ ತಾ|| ಸೋಮವಾರ ಬೆಂಗಳೂರಿನಲ್ಲಿ ಲೆಜಿಸ್ಲೆಟಿವ್ ಕೌನ್ಸಿಲ್ ಎಂಬ ನ್ಯಾಯವಿಧಾಯಕ ಸಭೆಯು ನಡೆಯುವುದೆಂದು ಪ್ರಕಟವಾಗಿದೆ.

❦❦❦

ಮೈಸೂರಿನ ಮಹಾರಾಜರವರ ಬಳಿ ಸಂದರ್ಶನಾರ್ಥವಾಗಿರುವ ಲೆ. ಮೇ. ಫ್ರಾನ್ಸಿಸ್ ಸ್ಕಾಟ್‌ಯವರು ಕಳೆದ ನೊವೆಂಬರ್ ೨ ನೇ ವಾರದಿಂದ ಕಾಕನಕೋಟೆ ಜಂಗಲಿಗೆ ಬಂದು ಶಿಕಾರಿ ಮಾಡುತ್ತಿದ್ದು ಮೊನ್ನೆ ಮಂಗಳವಾರ ವಾಪಸು ರಾಜಧಾನಿಗೆ ಬಂದು ಆ ರಾತ್ರಿಯೇ ಬೆಂಗಳೂರಿಗೆ ಪ್ರಯಾಣ ಮಾಡಿದರು.

❦❦❦

ಚಿಕ್ಕಮಗಳೂರು ತಾಲ್ಲೂಕು ಅಂಬಳೆ ಹೋಬಳಿ ಕಂದೂರು ಗ್ರಾಮದಲ್ಲಿ ಜನರು ಪ್ಲೇಗಿಗೋಸ್ಕರ ಊರು ಬಿಟ್ಟು ಜೋಪಡಿಗಳಲ್ಲಿ ವಾಸವಾಗಿರುವಾಗ, ಕಳ್ಳರು ಸುಮಾರು ೨೫–೩೦ ಮನೆಗಳಿಗೆ ನುಗ್ಗಿ ನಗನಾಣ್ಯಗಳನ್ನು ಅಪಹರಿಸಿಕೊಂಡು ಹೋಗಿದ್ದಾರೆಂತಲೂ ಒಬ್ಬ ಬಾತ್ಮಿದಾರರು ಬರೆಯುತ್ತಾರೆ.

❦❦❦

ಲೆಫ್ಟ್ ಚಾಮರಾಜೇಂದ್ರ ಒಡೆಯರವರ ವರ್ಧಂತ್ಯುತ್ಸವವನ್ನು ಶ್ರೀಮನ್ಮಹಾರಾಜರವರು ಮುಂದಿನ ಜನವರಿ ೨ ನೆ ತಾ|| ಮದರಾಸಿನಲ್ಲಿ ಜರುಗಿಸುವರೆಂತಲೂ, ಅದಕ್ಕಾಗಿ ಅರಮನೆಯ ಕೆಲವು ವಿದ್ವಾಂಸರೇ ಮೊದಲಾದ ವೈದಿಕರು ಅಲ್ಲಿಗೆ ಹೋಗಿ ಬರುವವರಾಗಿದ್ದಾರೆಂತಲೂ ಕೇಳುತ್ತೇವೆ.

❦❦❦

ಬೆಂಗಳೂರು ಇಂಪೀರಿಯಲ್ ಸರ್ವಿಸ್ ರೆಜಿಮೆಂಟಿನಲ್ಲಿ ಕಮ್ಯಾಂಡೆಂಟರಾಗಿದ್ದು ನಿವೃತ್ತರಾದ ಮಿ|| ಸಯ್ಯದ್ ಹಾಫಿಜ್ ಬಹದೂರ್ ಯವರು ಕಳೆದ ವಾರ ಕಾಲವಾದರು. ಇವರಿಗೆ ೬೬ ವರುಷ ವಯಸ್ಸಾಗಿತ್ತು. ಜನರಲ್ಲಿ ಅವರು ಗಣ್ಯರಾಗಿದ್ದುದಲ್ಲದೆ ಅನೇಕರ ಪ್ರೀತಿಗೌರವಗಳನ್ನು ಸಂಪಾದಿಸಿಕೊಂಡಿದ್ದರು.

❦❦❦

ಬೆಂಗಳೂರು ದಂಡಿನಲ್ಲಿ ಪ್ಲೇಗನ್ನು ನಿಲ್ಲಿಸುವುದಕ್ಕೆ ಕಳೆದ ವಾರ ಬ್ರಿಟಿಷ್ ರೆಸಿಡೆಂಟರು ಮಾರ್ಕೆಟ್ಟಿನ ಬಳಿ ಪ್ರೋತ್ಸಾಹಕರವಾದ ಉಪನ್ಯಾಸಮಾಡಿ, ಎಲ್ಲರೂ ಸೀರಮ್ ಹಾಕಿಸಿಕೊಳ್ಳಬೇಕೆಂದು ಹೇಳಿದರು. ಅಸಿಸ್ಟೆಂಟ್ ರೆಸಿಡೆಂಟರು ಪ್ರಜೆಗಳಿಗೆಲ್ಲಾ ಗೊತ್ತಾಗುವಂತೆ ತಾವೇ ಮುಂದೆ ಬಂದು ಪ್ಲೇಗ್ ಸೀರಮನ್ನು ಹಾಕಿಸಿಕೊಂಡರು.

❦❦❦

ರಾಜಧಾನಿಯಲ್ಲಿ ಪ್ಲೇಗ್ ಉಪದ್ರವು ಸ್ವಲ್ಪಮಟ್ಟಿಗೆ ಕಡಮೆಯಾಗಿರುವಂತೆ ಕಾಣುವುದು. ಹವಾ ಬದಲಾವಣೆಯಾಗಿ ದಿನವೆಲ್ಲಾ ಮೋಡವಾದುತ್ತಾ ತುಂತುರು ಹನಿಯುತ್ತಲಿದೆ. ಕಾಲಾನುಗುಣ್ಯವಾದ ಚಳಿ ಇಲ್ಲ. ಸುಗ್ಗಿಕಾಲವಾದರೂ ದಿನಸಿಗಳ ಧಾರಣೆ ಸ್ವಲ್ಪವೂ ಇಳಿಯದೆ ಇರೋಣದರಿಂದ ಅಲ್ಪ ಸಂಬಳಗಾರರೂ ಬಡಬಗ್ಗರೂ ಜೀವನಕ್ಕೆ ಬಹಳ ಕಷ್ಟಪಡುತ್ತಿದ್ದಾರೆ.

❦❦❦

ಇಲ್ಲಿನ ರೈಲ್ವೆ ಸ್ಟೇಷನಿನಲ್ಲಿ ಪ್ರಯಾಣಿಕರ ದೇಹಸ್ಥಿತಿಯನ್ನು ಡಾಕ್ಟರು ಪರೀಕ್ಷೆ ಮಾಡುವುದೂ, ಅಲ್ಲಾ ಇತರ ಉಕ್ಕಡಗಳಲ್ಲೂ ಜಬ್ದಿಶೇರ್ಷ ಪ್ಯಾಸುಗಳನ್ನು ಕೊಡುವುದೂ ಈ ತಿಂಗಳ ೧೫ ನೆ ತಾರೀಖಿನಿಂದ ನಿಲ್ಲಿಸಲ್ಪಟ್ಟವು. ಆಯಾ ಮೊಹಲ್ಲಾಗಳಲ್ಲಿರುವ ಸಬ್‌ರಜಿಸ್ಟ್ರಾರುಗಳು ಕಾಯಿಲೆ ಸಮಾಚಾರವನ್ನು ಹೆಲ್ತ್ ಆಫೀಸರಿಗೆ ರಿಪೋರ್ಟು ಮಾಡುವಂತೆ ಏರ್ಪಾಡಾಗಿದೆ.

❦❦❦

ಮಂಗಳೂರು ಅರ್ಲ್ ಮಾರ್ಟ್ ಪ್ರೊಪ್ರೈಟರ್ ಮೆ|| ಕಾಮತ್ ಯವರೂ, ಬೆಂಗಳೂರು ಸ್ಟಾರ್ ಟ್ರೇಡಿಂಗ್ ಕಂಪನಿಯವರೂ, ಮೈಸೂರು ಸಿ ಎಲ್ ಎಸ್. ಬುಕ್ ಡಿಪೋ ಮ್ಯಾನೇಜರೂ ೧೯೦೮ ನೆ ಇಸವಿಯ ಅಂದವಾಗಿಯೂ ಸುಂದರವಾದ ಕ್ಯಾಲೆಂಡರುಗಳನ್ನು ಪ್ರಕಟಿಸಿ, ಒಂದೊಂದು ಪ್ರತಿಯನ್ನು ನಮ್ಮಲ್ಲಿಗೆ ಕಳುಹಿಸಿದ್ದಾರೆ. ಇವುಗಳ ಒಂದು ಕಡೆ ತಾರೀಖಿನ ಪಟ್ಟಿಯೂ, ಇನ್ನೊಂದು ಕಡೆ ಅವರವರ ಅಂಗಡಿಯಲ್ಲಿ ದೊರೆಯುವ ಸರಕುಗಳೂ ವಿವರಿಸಲ್ಪಟ್ಟಿವೆ.

ಕಳೆದ ಅಕ್ಟೋಬರ್ ತಿಂಗಳಲ್ಲಿ ರಾಜಧಾನಿಯಲ್ಲಿ ನಡೆದ ಪ್ರಜಾಪ್ರತಿನಿಧಿಸಭೆಯ ರಿಪೋರ್ಟನ್ನು ಸರ್ಕಾರದವರು ಪ್ರಕಟಿಸಿ ನಮ್ಮಲ್ಲಿಗೆ ಒಂದು ಪ್ರತಿಯನ್ನು ಕಳುಹಿಸಿದ್ದಾರೆ. ಈ ರಿಪೋರ್ಟಿನಲ್ಲಿ ಪ್ರತಿನಿಧಿ ಸಭೆಗೆ ಬಂದಿದ್ದ ಮೆಂಬರುಗಳ ಸಂಖ್ಯೆ, ಮೆಂಬರುಗಳು ದಿವಾನರವರಿಗೆ ಒಪ್ಪಿಸಿ ಅಡ್ರೆಸ್ಸುಗಳು, ದಿವಾನರವರು ಹೇಳಿದ ಉತ್ತರ, ಮೆಂಬರುಗಳು ಸಭೆಯಲ್ಲಿ ಚರ್ಚೆ ಮಾಡಿದ ವಿಚಾರಗಳು, ಅವುಗಳಲ್ಲಿ ಪ್ರತಿಯೊಂದಕ್ಕೂ ಗವರ್ನಮೆಂಟಿನವರು ಅಪ್ಪಣೆ ಕೊಡಿಸಿದ ಪ್ರತ್ಯುತ್ತರ ಮತ್ತು ತೀರ್ಮಾನ, ಈ ಮೊದಲಾದ ವಿಷಯಗಳನ್ನೆಲ್ಲಾ ಇಂಗ್ಲೀಷಿನಲ್ಲಿ ವಿಸ್ತಾರವಾಗಿ ತಿಳಿಸಿರುತ್ತಾರೆ.

❦❦❦

ಶ್ರೀರಂಗಪಟ್ಟಣದಲ್ಲಿ ಮ್ಯುನಿಸಿಪಾಲಿಟಿಯ ಕಾರ್ಯಗಳು ತುಂಬಾ ಅತೃಪ್ತಿಕರವಾಗಿರುತ್ತವೆ. ಈಗ ಪ್ಲೇಗ್ ಉಪದ್ರವು ಪ್ರಾರಂಭವಾಗಿ ಪ್ರಜೆಗಳಿಗೆ ನಾನಾ ಸಂಕಟಗಳನ್ನುಂಟುಮಾಡಿರುವುದು. ತಾಲ್ಲೂಕ್ ನೌಕರರಿಗೂ ಮ್ಯುನಿಸಿಪಲ್ ನೌಕರರಿಗೂ ಹಣ ವಸೂಲಾಗಲಿಲ್ಲವೆಂಬ ಕಾರಣಕ್ಕೋ ಏನೋ ಅಮಲ್ದಾರರು ೩–೪ ತಿಂಗಳ ಸಂಬಳವನ್ನೇ ಬಟವಾಡೆ ಮಾಡದೆ ತಡೆದುಬಿಟ್ಟಿದ್ದಾರೆ. ಇಂಥಾ ಕಷ್ಟಕಾಲದಲ್ಲಿ ನೌಕರರು ಹ್ಯಾಗೆ ಜೀವನಮಾಡಬೇಕೋ ಹ್ಯಾಗೆ ಸರ್ಕಾರದ ಕೆಲಸವನ್ನು ತೃಪ್ತಿಕರವಾಗಿ ನಡಿಸಬೇಕೋ ತಿಳಿಯದು ಎಂಬದಾಗಿ ಒಬ್ಬ ಬಾತ್ಮಿದಾರರು ಹೇಳುತ್ತಾರೆ. ಅಮಲ್ದಾರರು ಈ ವಿಚಾರವನ್ನು ತನಿಖೆ ಮಾಡಬೇಕೆಂತಲೂ, ಬಡನೌಕರರ ಸಂಬಳವನ್ನು ತಡೆಯೋಣದರಿಂದ ಯಾವ ಪ್ರಯೋಜನವೂ ಆಗಲಾರದೆಂತಲೂ ಸೂಚಿಸುತ್ತೇವೆ.

❦❦❦

ಪೋಲೀಸ್ ಇನ್ಸ್ಪೆಕ್ಟರ್ ಮೆ|| ದೇವರಾಜೇ ಅರಸಿನವರೂ ಒಬ್ಬ ಪೋಲೀಸಿನವನೂ ಅಮಲ್ದಾರರ ಮಕ್ಕಳನ್ನು ಕಳವು ಮಾಡಿದರೆಂದು ಹಿಡಿದು ಹೊಡೆದರೆಂಬದಾಗಿ ಮೊಕದ್ದಮೆ. ಆಗಿದ್ದದ್ದು, ಮೈಸೂರು ಡಿಸ್ಟ್ರಿಕ್ಟ್ ಜಡ್ಜರು ಅವರ ಮೇಲೆ ಅಪರಾಧ ರುಜುವಾತಾಗಲಿಲ್ಲವೆಂದು ಮೊಕದ್ದಮೆಯನ್ನು ವಜಾ ಮಾಡಿದ್ದದ್ದು, ಈಚೆಗ ಛೀಫ್ ಕೋರ್ಟಿನಲ್ಲಿ ಅಪೀಲ್ ನಡೆಯುತ್ತಿದ್ದದ್ದೂ ವಾಚಕರಿಗೆ ತಿಳಿದದೆಯಷ್ಟೆ. ಅಲ್ಲಿ ಇಬ್ಬರು ಜಡ್ಜಿಗಳು ಈ ಮೊಕದ್ದಮೆಯ ಕಟ್ಟನ್ನು ಪರಾಂಬರಿಸಿ, ಕಳೆದ ಸೋಮವಾರ ಕೆಳಕೋರ್ಟಿನ ರ ತೀರ್ಮಾನವನ್ನೇ ಖಾಯಂ ಮಾಡಿ, ಅವರಿಬ್ಬರ ಮೇಲೂ ಅಪರಾಧ ರುಜುವಾತಾಗುವುದಿಲ್ಲವೆಂದು ಇತ್ಯರ್ಥ ಮಾಡಿರುತ್ತಾರೆ. ಅವರ ಮೇಲೆ ಬಂದಿದ್ದ ಅಪವಾದವು ನಿವಾರಣೆಯಾದ ವಿಷಯದಲ್ಲಿ ನಾವು ಸಂತೋಷಪಡುವೆವು. ಆದರೆ ಆ ಹುಡುಗರನ್ನು ಹೊಡೆದು ಹಿಂಸೆಪಡಿಸಿದವರನ್ನು ಕಂಡುಹಿಡಿಯಬೇಕಾದದ್ದು ಪೋಲೀಸ್ ಅಧಿಕಾರಿಗಳ ಕರ್ತವ್ಯವಲ್ಲವೋ!

ಮೈಸೂರ್ ಗೆಜೆಟ್ ಸಂಗ್ರಹ.

ಕ್ರಿಸ್ಮಸ್ ಹಬ್ಬದ ನಿಮಿತ್ತ ಡಿಸೆಂಬರ್ ೨೪ ರಿಂದ ಜನವರಿ ೨ ರ ವರೆಗೆ (ಉಭಯ ದಿನಗಳೂ ಸೇರಿ) ಮೈಸೂರು ಸಂಸ್ಥಾನದ ಎಲ್ಲಾ ಪಬ್ಲಿಕ್ ಕಚೇರಿಗಳೂ, ಕೋರ್ಟುಗಳೂ, ವಿದ್ಯಾ ಇಲಾಖೆಗಳೂ ಮುಚ್ಚಲ್ಪಡುವವು. ಅವಶ್ಯವೂ ಜರೂರೂ ಆದ ಕೆಲಸಗಳ ನಡವಳಿಕೆ ವಿಷಯದಲ್ಲಿ ಆಫೀಸುಗಳ ಮುಖ್ಯ ಅಧಿಕಾರಿಗಳು ತಕ್ಕ ಏರ್ಪಾಡು ಮಾಡತಕ್ಕದ್ದು. ಈ ರಜಾವು ತಾಲ್ಲೂಕ್ ಕಿಟ್ಟಂದಿಗಾಗಲಿ, ಜಮಾಬಂದಿ ಮತ್ತು ಪ್ಲೇಗ್ ಕೆಲಸಗಳನ್ನು ನಡಿಸತಕ್ಕ ಅಧಿಕಾರಿಗಳಿಗಾಗಲಿ ಅನ್ವಯಿಸುವುದಿಲ್ಲ.

ಗವರ್ನಮೆಂಟ್ ನೇತ್ರವೈದ್ಯರೂ ಸೀನಿಯರ್ ಸರ್ಜನರವರ ಪರ್ಸನಲ್ ಅಸಿಸ್ಟೆಂಟರೂ ಆದ ಡಾಕ್ಟರ್ ಎಸ್ ವಿ ರಾಮಸ್ವಾಮಿ ಐಯ್ಯಂಗಾರ್ರಿಗೆ ಕ್ರಿಸ್‌ಮಸ್ ರಜಾಕ್ಕೆ ಸೇರಿದಂತೆ ಜನವರಿ ೩ ರಿಂದ ಎರಡು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಟೆಂ|| ಸಬ್ ಅ|| ಸರ್ಜನ್ ಮೆ|| ಎಸ್ ನಾರಾಯಣರಾಯರು ಮತ್ತೊಂದು ಹುಕುಂ ಕೊಡಲ್ಪಡುವ ತನಕ ಸರ್ಕಾರಿ ನೇತ್ರವೈದ್ಯಾಸ್ಪತ್ರೆಯ ಛಾರ್ಜಿನಲ್ಲಿರತಕ್ಕದ್ದು.

ಜನರಲ್ ಮತ್ತು ರೆವಿನ್ಯೂ ಸೆಕ್ರೆಟೇರಿಯಟ್ ರೆಜಿಸ್ಟ್ರಾರ್ ಮೆ|| ಸಿ. ವೆಂಕಟರಾಯರಿಗೆ ಕ್ರಿಸ್ಮಸ್ ರಜಾಕ್ಕೆ ಸೇರಿದಂತೆ ಆರು ವಾರಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ನಂಜನಗೂಡು ಮುನ್ಸಿಫ್ ಮೆ|| ಎಂ. ಎಲ್ ಶ್ರೀಕಂಠೇಶ ಗೌಡರಿಗೆ ಅರ್ಧ ಸಂಬಳದ ಮೇಲೆ ನಾಲ್ಕು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಅಮಲ್ದಾರ್ ಮೆ|| ಮಹಮದ್ ಅಬ್ದುಲ್ಲಾ ಷರೀಫ್‌ಯವರಿಗೆ ಕೊಟ್ಟಿರುವ ಏಳು ತಿಂಗಳ ರಜವನ್ನು ೧೯೦೮ ನೆ ಏಪ್ರಿಲ್ ೩೦ ರ ವರೆಗೆ ಹೆಚ್ಚಿಸಿರುತ್ತೆ.

ತಿಪ್ಟೂರು ತಾಲ್ಲೂಕ್ ಅಮಲ್ದಾರ್ ಮೆ|| ಸಿ ರಾಜಗೋಪಾಲಾಚಾರ್ರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಎರಡು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ತುಂಕೂರ್ ಡಿಸ್ಟ್ರಿಕ್ಟ್ ಸ್ಪೆಷಲ್ ಪೋಲೀಸ್ ಇನ್ಸ್ಪೆಕ್ಟರ್ ಆರ್. ಸುಂದರರಾಯರು ಮತ್ತೊಂದು ಹುಕುಂ ಕೊಡಲ್ಪಡುವ ತನಕ ತಿಪ್ಟೂರು ತಾಲ್ಲೂಕಿನ ಅಮಲ್ದಾರ್ ಮತ್ತು ೩ ನೆ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೋಡತಕ್ಕದ್ದು.

ಬೌರಿಂಗ್‌ಪೇಟೆ ತಾಲ್ಲೂಕ್ ಅಮಲ್ದಾರ್ ಮೆ|| ಮಹಮದ್ ಒಬೀದುಲ್ಲಾಯವರನ್ನು ಅಸಿಸ್ಟೆಂಟ್ ಕಮಿಷನರಾಗಿ ಬದಲೀ ನೋಡುವಂತೆ ಮೊಕರರ್ ಮಾಡಿ ಕೋಲಾರಕ್ಕೆ ಡಿಸ್ಟ್ರಿಕ್ಟ್ ಖಜಾನೆಯ ಛಾರ್ಜನ್ನು ವಹಿಸುವಂತೆ ವರ್ಗಮಾಡಿದೆ.

ಸಬ್ ಅ|| ಸರ್ಜನ್ ಮೆ|| ಕೆ ಅನಂತರಾಮೈಯ್ಯಂಗಾರರನ್ನು ದಾವಣಗೆರೆ ಆಸ್ಪತ್ರೆಯಿಂದ ನಂಜನಗೂಡು ಆಸ್ಪತ್ರೆಯ ಛಾರ್ಜಿಗೆ ವರ್ಗ ಮಾಡಿದೆ.

ಚೀಫ್ ಇಲೆಕ್ಟ್ರಿಕ್ ಇಂಜನಿಯರ್‌ಯವರ ಎಕ್‌ಸ್ಟ್ರಾ ಅಸಿಸ್ಟೆಂಟರಾದ ಮೆ|| ಎಸ್. ಡಿ. ಶೇಷಾದ್ರಿ ಐಯ್ಯಂಗಾರ್ರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಸಂಬಳವಿಲ್ಲದ ಮೂರು ವಾರಗಳ ರಜಾ ಕೊಟ್ಟಿದೆ.

ಒಕ್ಕಲಿಗರ ಸಂಘ.

ಹಿಂದಿನ ಸೋಮವಾರದ ದಿವಸ ಈ ಸಂಘದ ಜನರಲ್ ಸೆಕ್ರೆಟರಿಯವರಾದ ಮ|| ಕೆ ಎಚ್ ರಾಮಯ್ಯನವರು ತುಂಕೂರು ತಾ|| ಹೊನ್ನುಡಿಕೆಗೆ ಹೋಗಿ ಆ ಊರಿನ ಮ|| ಶಿವರಾಮೇಗೌಡರ ತಮ್ಮಂದಿರು ಮ|| ತಿಮ್ಮರಾಯಗೌಡರ ಪ್ರಸ್ತಕ್ಕೋಸ್ಕರ ಸೇರಿದ್ದ ಸಭೆಯಲ್ಲಿ ಐಕಮತ್ಯ, ಪ್ರೀತಿ, ಮುಂತಾದ ವಿಷಯಗಳನ್ನು ಕುರಿತು ಉಪನ್ಯಾಸ ಮಾಡಿ, ಒಕ್ಕಲಿಗರ ಸಂಘದ ಉದ್ದೇಶಗಳನ್ನು ವಿವರಿಸಿ, ಸಂಘದ ನಿಬಂಧನೆ ಪುಸ್ತಕಗಳನ್ನು ಮಾರಾಟ ಮಾಡಿ ಬಂದರು ಆ ಕಾಲದಲ್ಲಿ ಪಂಡಿತ ಶಿವಪ್ಪಶಾಸ್ತ್ರಿಗಳು ತಮ್ಮ ಅತ್ಯಾನಂದಕರವಾದ ಮತ್ತು ಭಕ್ತಿಪೂರಿತವಾದ ಶಿವಕಥೆಯನ್ನು ತುಂಬಾ ಶ್ಲಾಘನೀಯವಾಗಿ ಮಾಡಿ, ಸಭಿಕರನ್ನು ತಮ್ಮ ಕಲಾ ಕೌಶಲ್ಯದಿಂದ ಸಂತೋಷಪಡಿಸಿದರು ಮತ್ತು ಆ ಊರಿನ ಸ್ಕೂಲ್ ಮಾಸ್ಟರಾದ ಮ|| ವೆಂಕಟರಾಯರು ತುಂಬಾ ಅಭಿಮಾನವಿಟ್ಟು ವ್ಯವಸಾಯ ವಿಚಾರವಾಗಿ ಒಂದು ಘಂಟೆ ಕಾಲ ಸ್ಫುಟ ಭಾಷಣದಿಂದ ನಮ್ಮ ರೈತರಿಗೆ ಅನೇಕ ಉಪಯುಕ್ತವಾದ ವಿಷಯಗಳನ್ನು ತಿಳಿಸಿ ತೃಪ್ತಿಪಡಿಸಿದರು. ಈ ಪ್ರಕಾರ ಪ್ರಜಾ ಹಿತಚಿಂತನೆಯಿಂದ ಮಾಡಿದ ಉಪನ್ಯಾಸಗಳಿಂದ ಸಂತುಷ್ಟರಾದ ಸಭಿಕರ ಆನಂದಕ್ಕೆ ಮ|| ತಿಮ್ಮರಾಯಗೌಡರ ಪ್ರಸ್ತವು ಕಾರಣವಾಯಿತೆಂದು ಅವರು ಸಂತೋಷಪಟ್ಟು ಈ ಶುಭ ಸಮಯದಲ್ಲಿ ಸಂಘಕ್ಕೆ ೧೫ ರೂಪಾಯಿ ಸಹಾಯಮಾಡಿದರು.

ಕಳೆದ ಶುಕ್ರವಾರದ ದಿವಸ ಮ|| ರಾಮಯ್ಯನವರು ತುಂಕೂರು ತಾ|| ಗೂಳೂರಿಗೆ ಪ್ರಯಾಣ ಮಾಡಿ ಶನಿವಾರದ ದಿವಸ ಅಲ್ಲಿ ನಡೆದ ವಿನಾಯಕನ ಪರಿಷೆಗೋಸ್ಕರ ಸೇರಿದ್ದ ಬಹುಮಂದಿ ಜನರಿಗೆ ಮ|| ಸಾಹುಕಾರ್ ಚಿಕ್ಕ ಕೆಂಪೇಗೌಡರ ದೊಡ್ಡಮನೆಯಲ್ಲಿ ಉಪನ್ಯಾಸ ಮಾಡಿದರು. ವಿದ್ಯೆಯನ್ನು ಪಡೆದು ಪರಸ್ಪರ ವೈಷಮ್ಯಗಳನ್ನು ತೊರೆದು ಸರ್ವರೂ ಏಕಮನಸ್ಕರಾಗುವುದರಿಂದ ಲಭಿಸುವ ಕ್ಷೇಮವನ್ನು ಕುರಿತು ಬಹಳ ಸ್ವಾರಸ್ಯವುಳ್ಳ ಭಾಷಣವನ್ನು ಮಾಡಿ, ಸಂಘದ ಪುಸ್ತಕಗಳನ್ನೆಲ್ಲಾ ಸಭಿಕರಿಗೆ ವಿವರಿಸಿ ಹೇಳಿದರು.

ಮ|| ರಾಮಯ್ಯನವರು ತಾವು ಕೆಲವು ಕಾಲದ ಹಿಂದೆ ಮಾಡಿಕೊಂಡಿದ್ದ ಸಂಕಲ್ಪದ ಮೇರೆಗೆ ಈ ಊರಲ್ಲಿ ನಡೆದ ಪರಿಷೆಗೆ ಬಂದಿದ್ದ ಜನರಿಗೆ ಒಂದು ಸಂತರ್ಪಣೆಯನ್ನು ಮಾಡಿಸಿದರು ಸುಮಾರು ೫೦೦ ಜನರವರೆಗೂ ಭೋಜನವನ್ನು ಮಾಡಿ ಸಂತೋಷಪಟ್ಟರು ಇದನ್ನು ನೋಡಿದವರಿಗೆ ತುಂಬಾ ಆನಂದವಾಯಿತು ಈ ರೀತಿ ಈ ಪರಿಷೆಯಲ್ಲಿ ಸಂತರ್ಪಣೆ ನಡೆದುದು ಇದೇ ಮೊದಲನೇ ಸಾರಿಯಾದುದರಿಂದ ಜನರು ಸತ್ಕಾರವನ್ನು ಮಾಡಿದವರ ವಿಷಯದಲ್ಲಿ ಅತ್ಯಂತ ಕೃತಜ್ಞತಾ ಭಾವವನ್ನು ತೋರ್ಪಡಿಸಿದರು ಈ ಸಂದರ್ಭದಲ್ಲಿ ಈ ಊರು ಪಟೇಲರಾದ ಮ|| ಘನಗಿರಿಗೌಡರು, ಪಾಳ್ಯದಹಳ್ಳಿ ನಂಜೇಗೌಡರು ಮತ್ತು ತಿಮ್ಮಯ್ಯಗೌಡರು ಸಹ ಅತ್ಯಂತ ಶ್ಲಾಘನೀಯವಾದ ಏರ್ಪಾಡುಗಳನ್ನು ಮಾಡಿಕೊಟ್ಟ ಉಪಕಾರವನ್ನು ಸ್ಮರಿಸತಕ್ಕದ್ದಾಗಿರುತ್ತದೆ

ವಿನಾಯಕನಿಗೋಸ್ಕರವಾಗಿಯೇ ಪ್ರತ್ಯೇಕವಾಗಿ ಒಂದು ಪರಿಷೆಯು ಮತ್ತೆಲ್ಲಿಯೂ ನಡೆಯುವುದಿಲ್ಲವೆಂದು ತೋರುತ್ತದೆ ಇಲ್ಲಿನ ಪರಿಷೆಯು ಮಾತ್ರ ಬಹಳ ವಿಜೃಂಭಣೆಯಿಂದ ನಡೆಯುತ್ತದೆ ಎರಡು ಸಾವಿರಕ್ಕಿಂತ ಹೆಚ್ಚಾಗಿಯೇ ಜನರು ಸೇರಬಹುದು ಮಧ್ಯರಾತ್ರಿಯಲ್ಲಿ ಬಾಣಬಿರುಸು ಮೊದಲಾದವುಗಳೊಡನೆ ಉತ್ಸವ ನಡೆಯುವುದು ವಿಗ್ರಹವು ವಿಸ್ತೃತಿಯಿಂದ ನಿರ್ಮಿಸಿದ ದೊಡ್ಡ ಆಕೃತಿಯುಳ್ಳ ಪೃಥಿವಿಯಾಗಿರುವುದು ಇದಕ್ಕೆ ಅನೇಕ ಭಕ್ತಾದಿಗಳು ದೂರಪ್ರದೇಶಗಳಿಂದ ಬಂದು ಪೂಜೆಪುನಸ್ಕಾರಗಳನ್ನು ಮಾಡಿಸಿಕೊಂಡು ಹೋಗುವುದೂ ಅಲ್ಲದೆ ಆಭರಣಗಳನ್ನು ಮಾಡಿಸಿ ಕೊಡುವರು ಇದು ಪ್ರತಿವರ್ಷವೂ ಗಣೇಶನ ಹಬ್ಬದ ದಿವಸ ಪ್ರತಿಷ್ಠಿಸಲ್ಪಟ್ಟ ಮೂರು ತಿಂಗಳ ಪರ್ಯಂತರ ಆರಾಧಿಸಲ್ಪಡುವುದು ನಂತರ ಮೊದಲಿನಂತೆ ಉತ್ಸವ ಪೂರ್ವಕವಾಗಿ ಜಲಾಶಯಕ್ಕೆ ಸೇರಿಸಲ್ಪಡುವುದು

ಬಾತ್ಮೀದಾರ್

ಮಕ್ಕಳ ವಿದ್ಯಾಭ್ಯಾಸವು.

ಮಕ್ಕಳಿಗೆ ಚಿಕ್ಕಂದಿನಿಂದಲೇ ಇಂದ್ರಿಯ ಪಟುತ್ವವನ್ನೂ ಅಂಗಗಳ ತರಪೇತನ್ನೂ ಮಾಡುವುದು ಅವಶ್ಯವಾಗಿರುತ್ತದೆ ಈ ವಿಧವಾದ ವಿದ್ಯಾಭ್ಯಾಸಕ್ಕೆ ಕಿಂಡರ್‌ಗಾರ್ಟನ್ ವಿದ್ಯೆ ಎಂದು ಹೆಸರು. ಈ ವಿದ್ಯೆಯನ್ನು ಮಕ್ಕಳಿಗೆ ಕಲಿಸಿಕೊಡುವುದರಲ್ಲಿ ಮಿಸ್ ಲ್ಯಾಟರ್ ಎಂಬುವಳು ಪ್ರಖ್ಯಾತಳಾಗಿದ್ದಳು ಇಂಥಾ ಬೋಧಕಳನ್ನು ಲಂಡನ್ ಪಟ್ಟಣದಿಂದ ಮೈಸೂರು ಸರ್ಕಾರದವರು ಕರೆಸಿ, ಸುಮಾರು ಆರು ತಿಂಗಳವರೆಗೆ ಆ ವಿದ್ಯೆಯ ಮುಖ್ಯಾಂಶಗಳನ್ನು ಮಕ್ಕಳಿಗೂ ಉಪಾಧ್ಯಾಯರಿಗೂ ಕಲಿಸುವುದಕ್ಕೆ ಏರ್ಪಾಡು ಮಾಡಿದರು ಆಕೆ ಬೆಂಗಳೂರಿಗೆ ಬಂದು ಸುಮಾರು ಮೂರು ತಿಂಗಳ ತನಕ ಬೆಂಗಳೂರಿನಲ್ಲಿ ಕೆಲಸ ಮಾಡಿದಳು ತರುವಾಯ ಮೈಸೂರಿಗೆ ಬಂದು ಇಲ್ಲಿನ ಮಕ್ಕಳಿಗೂ ಉಪಾಧ್ಯಾಯರಿಗೂ ಕಿಂಡರ್‌ಗಾರ್ಟನ್ ವಿಚಾರವನ್ನು ಹೇಳಿ ಕಲಿಸಿಕೊಡಬೇಕೆಂದು ಗೊತ್ತಾಗಿತ್ತು ಆದರೆ ಮೈಸೂರಿಗೆ ಬರುವುದಕ್ಕಿಂತ ಒಂದೆರಡು ದಿನಗಳಿಗೆ ಮುಂಚೆ ಆಕೆಗೆ ಕಾಯಿಲೆ ಪ್ರಾಪ್ತವಾಗಿ ಬೆಂಗಳೂರಿನಲ್ಲೇ ತೀರಿಹೋದಳು ಈ ವಿಷಯವು ಮಕ್ಕಳ ವಿದ್ಯಾಭಿವೃದ್ಧಿಯಲ್ಲಿ ಆಸಕ್ತರಾದ ಮಹನೀಯರೆಲ್ಲರಲ್ಲೂ ತುಂಬಾ ವಿಷಾದವನ್ನುಂಟುಮಾಡಿರುತ್ತದೆ

ಆದರೆ ಗವರ್ನಮೆಂಟಿನವರು ತಮ್ಮ ಉದ್ದೇಶಕ್ಕೆ ಭಂಗವುಂಟಾಗಬಾರದೆಂದು ಮಿಷನ್ ಇಲಾಖೆಯಲ್ಲಿ ಕೆಲಸ ನಡೆಸುತ್ತಿದ್ದ ಮಿಸ್ ವಿಲ್ಲಿಯಂಸ್ ಎಂಬುವಳನ್ನು ಆ ಕೆಲಸಕ್ಕೆ ನೇಮಕಮಾಡಿ ರಾಜಧಾನಿಗೆ ಕಳುಹಿಸಿಕೊಟ್ಟಿದ್ದಾರೆ. ಆಕೆ ಲಂಡನ್ ಪಟ್ಟಣದಲ್ಲಿ ವಿದ್ಯಾಭ್ಯಾಸ ಮಾಡಿ, ಕಿಂಡರ್‌ಗಾರ್ಟನ್ ವಿದ್ಯೆಯಲ್ಲಿ ಬಹು ಶ್ಲಾಘನೀಯವಾದ ಯೋಗ್ಯತೆಯನ್ನು ಸಂಪಾದಿಸಿಕೊಂಡು, ತನ್ನ ಜೀವಮಾನವನ್ನು ಪರೋಪಕಾರಕ್ಕಾಗಿ ವಿನಿಯೋಗಿಸಿ, ಬೆಂಗಳೂರಿಗೆ ಬಂದು ಸುಮಾರು ನಾಲ್ಕು ವರುಷಗಳು ಲಾಗಾಯಿತು ಅಲ್ಲಿನ ವೆಸ್ಲಿಯನ್ ಮಿಷನ್ ಸಂಘದ ಒಂದು ಬಾಲಿಕಾ ಪಾಠಶಾಲೆಯಲ್ಲಿ ವಿದ್ಯಾಬೋಧಕಳಾಗಿದ್ದರು ಈಗ ಸರ್ಕಾರದವರ ಅಪೇಕ್ಷೆಯನ್ನು ಅಂಗೀಕರಿಸಿ, ಈಕೆ ರಾಜಧಾನಿಗೆ ಬಂದು ಎರಡು ಮೂರು ವಾರಗಳಿಂದಲೂ ಮಹಾರಾಣಿಯವರ ಕಾಲೇಜಿನಲ್ಲಿ ಉಪಾಧ್ಯಾಯಿನಿಯರಿಗೂ ಉಪಾಧ್ಯಾಯರಿಗೂ ಹೆಣ್ಣು ಮಕ್ಕಳಿಗೂ ಕಿಂಡರ್‌ಗಾರ್ಟನ್ ವಿದ್ಯಾವಿಷಯವನ್ನು ಬೋಧನೆ ಮಾಡುತ್ತಿದ್ದಾರೆ

ಈ ಕಿಂಡರ್‌ಗಾರ್ಟನ್ ವಿದ್ಯಾಬೋಧನೆಯ ಉದ್ದೇಶವೂ ಫಲಗಳೂ ಅಷ್ಟು ಸ್ಪಷ್ಟವಾಗಿ ವಿವರಿಸಲಾಗದು ಆದರೂ ಕೆಲವು ಮಟ್ಟಿಗೆ ಅದನ್ನು ತಿಳಿಸಲು ಕುತೂಹಲವುಳ್ಳವರಾಗಿದ್ದೇವೆ ಮಕ್ಕಳೂ ಉಪಾಧ್ಯಾಯರೂ ಉಪಾಧ್ಯಾಯಿನಿಯರೂ ಮಕ್ಕಳ ಹಿತಚಿಂತಕರೂ ಈ ವಿಷಯವನ್ನು ಉತ್ಸಾಹದಿಂದ ಓದಿ ಗ್ರಹಿಸಿಕೊಳ್ಳಬೇಕೆಂದು ಪ್ರಾರ್ಥಿಸುತ್ತೇವೆ.

ಉಪಾಧ್ಯಾಯನು ಯಥಾರ್ಥವಾದ ವಸ್ತುಗಳನ್ನೇ ತಂದಿಟ್ಟುಕೊಂಡು, ಮಕ್ಕಳಿಗೆ ಅವುಗಳ ವಿಷಯವನ್ನು ವಿವರಿಸಿ ಹೇಳಬೇಕು. ಇದರಿಂದ ಮಕ್ಕಳಲ್ಲೇ ನೇತ್ರಪಾಟವವೂ ಆಲೋಚನಾಶಕ್ತಿಯೂ ಹುಟ್ಟುವುದಕ್ಕೆ ಸಹಾಯವಾಗುತ್ತದೆ ಈ ಭಾಗದಲ್ಲಿ ಪಾಠಶಾಲೆಗೆ ಸಂಬಂಧಪಟ್ಟಂತೆ ಒಂದೊಂದು ಸಣ್ಣ ತೋಟವಿರಬೇಕಾದದ್ದು ಪರಮಾವಶ್ಯಕವು ಗ್ರಾಮಾಂತರ ಪಾಠಶಾಲೆಗೆ ಇಂಥಾ ಕೈತೋಟಗಳನ್ನು ದಾಟಿಸಿ ಏರ್ಪಾಡು ಮಾಡಿಕೊಡುವುದು ಅಷ್ಟು ಸುಲಭಸಾಧ್ಯವಲ್ಲವೆಂದು ನಾವು ಒಪ್ಪಿಕೊಳ್ಳುತ್ತೇವೆ ಆದರೂ ಸಾಧ್ಯವಾಗುವ ಮಟ್ಟಿಗೂ ಇವನ್ನು ಒದಗಿಸಿಕೊಡುತ್ತಾ ಬರಬೇಕಾಗಿದೆ. ಉದ್ದೇಶವಿದ್ದು ಸಾಹಸ ಮಾಡುವಲ್ಲಿ ಈ ಕೊರತೆಯು ಕ್ರಮೇಣ ನಿವಾರಣೆಯಾಗುತ್ತದೆ ಇದು ಸಾಧ್ಯವಲ್ಲವೆಂದು ಗೊತ್ತಾದ ಸ್ಥಳಗಳಲ್ಲಿ ಕೆಲವು ಗಿಡಗಳನ್ನು ಪೆಟ್ಟಿಗೆಗಳಲ್ಲೂ ಕುಡಿಕೆಗಳಲ್ಲೂ ಕುಂಡಗಳಲ್ಲೂ ಬೆಳೆಯುವುದಕ್ಕೆ ಪ್ರಯತ್ನಪಡಬಹುದು. ಅನೇಕ ಕಡೆ ಸ್ಕೂಲ್ ಬಳಿ ಇರತಕ್ಕ ತೋಟಗಳಿಗೆ ಜವಾನನೇ ನೀರೆರೆಯುವುದನ್ನೂ ಗೊಬ್ಬರಗೋಡು ಹಾಕುವುದನ್ನೂ ಬೇರೆ ಬೇರೆ ತರಹ ತರಕಾರಿ ಬೆಳೆಯುವುದನ್ನೂ ನಾವೆಲ್ಲಾ ನೋಡದೆ ಅಥವಾ ತಿಳಿಯದೆ ಇಲ್ಲ ಸ್ಕೂಲುಗಳಲ್ಲಿ ವಿದ್ಯಾಭ್ಯಾಸ ಮಾಡುವಂಥಾ ಬಾಲಕಬಾಲಕಿಯರುಗಳೇ ಇಂಥಾ ತೋಟಗಳನ್ನು ದೇಖರೇಖಿಯಿಟ್ಟು ಮಾಡಬೇಕಾದದ್ದು ಬಹಳ ಅವಶ್ಯ ಮಕ್ಕಳು ಹೂವು ಹಣ್ಣು ತರಕಾರಿಗಳ ಬೆಳವಳಿಗೆಯ ಕ್ರಮಗಳನ್ನು ತಾವೇ ಸ್ವತಃ ಕಷ್ಟಪಟ್ಟು ಬೆಳೆಯಿಸುವುದು ಮೂಲಕ ಕಂಡುಕೊಳ್ಳುವುದಕ್ಕೂ ಆ ವಿಚಾರದಲ್ಲಿ ಅವರ ಆಲೋಚನಾಶಕ್ತಿಯು ಅಭಿವೃದ್ಧಿಗೊಳ್ಳುವುದಕ್ಕೂ ಅವರ ಅಂಗಾಂಗಗಳ ಚಳಕವು ಫಲಕಾರಿಯಾದ ರೀತಿಯಲ್ಲಿ ಕ್ರಮಪಡುವುದಕ್ಕೂ ಅವಕಾಶವಾಗುವಂತೆ ಪ್ರೋತ್ಸಾಹವಾಗುತ್ತದೆ ಪಾಠಶಾಲೆಯಲ್ಲಿರುವ ಪ್ರತಿ ಒಬ್ಬ ಹುಡುಗ ಅಥವಾ ಹುಡುಗಿಗೂ ಪ್ರತ್ಯೇಕ ಪ್ರತ್ಯೇಕವಾದ ಕೈತೋಟವನ್ನು ಬಿಡಿಸಿಕೊಡುವುದಕ್ಕೆ ಸ್ಥಳಾಭಾವವಾಗಿದ್ದಲ್ಲಿ ಪ್ರತಿ ಒಂದು ತರಗತಿಗೆ ಒಂದು ಕೈತೋಟದ ಭಾಗವಾದರೂ ಇರುವಂತೆ ಮಾಡಿಕೊಡಬೇಕು ಆಯಾ ತರಗತಿಯವರೇ ಒಂದಾಗಿ ಸೇರಿ ತಮ್ಮ ಭಾಗದ ಕೈತೋಟದಲ್ಲಿ ಕೆಲಸ ಮಾಡುವಂತೆಯೂ, ಆ ಮೂಲಕ ಗಿಡದ ಬೆಳವಳಿಗೆಯನ್ನು ಅವರು ದೃಷ್ಟಿಯಿಟ್ಟು ನೋಡಿ ಗ್ರಹಿಸಿಕೊಳ್ಳುವಂತೆಯೂ ಅನುಕೂಲವಾಗುವುದು ಉಪಾಧ್ಯಾಯ ಅಥವಾ ಉಪಾಧ್ಯಾಯಿನಿಯು ಮಕ್ಕಳಿಗೆ ಬೀಜದ ನಾನಾ ಭಾಗಗಳನ್ನು ತೋರಿಸಿಕೊಡಬೇಕು ಅದರಲ್ಲಿ ಸಾರವಾದ ಅಂಶವನ್ನೂ, ಅದರ ಬೆಳವಳಿಗೆಗೆ ಅವಶ್ಯವಾದ ಪದಾರ್ಥವನ್ನೂ ಬೀಜವಿಕಾಸದ ವಿಧಾನವನ್ನೂ, ಮಕ್ಕಳು ನೋಡಿ ತಿಳಿದು ಮನದಟ್ಟು ಮಾಡಿಕೊಳ್ಳುವಂತೆ ಅವಕಾಶವಾಗಬೇಕು. ಕೆಲಕೆಲವು ದಿನ ಬೆಳೆದ ಮೊಳಕೆ ಗಿಡಗಳನ್ನು ಕಿತ್ತು ಅವುಗಳ ಬೇರನ್ನು ತೋರಿಸಿ, ಅದರ ಪ್ರಯೋಜನವನ್ನೂ ಅದರ ಬೆಳವಳಿಗೆಯನ್ನೂ, ಅವುಗಳ ರಚನೆಯನ್ನೂ, ರೆಂಬೆ ಎಲೆ ಹೂವು ಗೊಂಚಲು ಬೀಜ ಕಾಯಿ ದೋರಗಾಯಿ ಹಣ್ಣು ಈ ಮೊದಲಾದ ಭಾಗಗಳ ರಚನೆ ಮತ್ತು ಬೆಳವಳಿಗೆಗಳನ್ನೂ, ಅವಶ್ಯವಾದ ಗೊಬ್ಬರಗೋಡುಗಳನ್ನೂ, ಭೂಗುಣ, ಮಣ್ಣಿನ ಯೋಗ್ಯತೆ ಮುಂತಾದದ್ದನ್ನೂ ವಿವರಣೆಯ ಮೂಲಕವೂ ಮಕ್ಕಳ ಆಲೋಚನಾಶಕ್ತಿಯಿಂದಲೇ ಅವರು ಗ್ರಹಿಸಿಕೊಳ್ಳುವಂತೆ ತೋರಿಸಿಕೊಡುತ್ತಾ ಬರಬೇಕಾಗಿದೆ ಗಿಡಗಳು ಪುಷ್ಟಿಯಾಗಿ ಬೆಳೆಯುವುದನ್ನೂ, ಬೆಳೆಯದೆ ಕೃಶವಾಗಿ ಸತ್ತು ಹೋಗುವುದನ್ನೂ, ಅವುಗಳಿಗೆ ಕಾರ್ಯಕಾರಣಾದಿಗಳನ್ನೂ ಮಕ್ಕಳಿಗೆ ತಿಳಿಸಬೇಕು

ಈ ರೀತಿ ಪಾಠಶಾಲೆಗೆ ಸಂಬಂಧಪಟ್ಟಂತೆ ಮಾಡುವಂಥಾ ಕೈತೋಟಕ್ಕೆ ಬಹಳ ಹಣವನ್ನು ಖರ್ಚು ಮಾಡಬೇಕಾದ ಅಗತ್ಯವೇನೂ ಕಾಣುವುದಿಲ್ಲ ಅನೇಕ ಸ್ಥಳಗಳಲ್ಲಿ ಪಾಠಶಾಲೆಯ ಹೊರ ಆವರಣವನ್ನೇ ಸಣ್ಣ ಕೈತೋಟವಾಗಿ ಮಾಡಿಕೊಳ್ಳಬಹುದು ಬೀಜಗಳನ್ನು ದೂರ ಸ್ಥಳದಿಂದಲಾಗಲಿ ವರ್ತಕರಲ್ಲಿ ಕೊಂಡಾಗಲಿ ತರಿಸಬೇಕಾದದ್ದಿಲ್ಲ ಆಯಾ ಗ್ರಾಮಗಳಲ್ಲಿ ರೈತರು ಸುಮ್ಮನೇ ಕೊಡತಕ್ಕ ಬೀಜಗಳೇ ತುಂಬಾ ಪ್ರಯೋಜನವಾಗಿರುತ್ತವೆ. ಪೆಟ್ಟಿಗೆ, ಕುಂಡ, ಮಡಕೆಗಳಲ್ಲಿ ಗಿಡಗಳನ್ನು ಬೆಳೆಸುವುದಾದರೆ ಖರ್ಚೇನೂ ಆಗುವುದೇ ಇಲ್ಲವೆಂದೇ ಹೇಳಬಹುದು ವ್ಯವಸಾಯಗಾರನ ಜವಾನನು ಅಥವಾ ತೋಟದಿಂದ ಗಿಡಗಳನ್ನು ತಂದು ನೆಟ್ಟು ಸ್ಕೂಲ್ ತೋಟ ಮಾಡುವುದು ಎಷ್ಟು ಮಾತ್ರಕ್ಕೂ ಪ್ರಯೋಜನಕರವಾದದ್ದಲ್ಲ ಹುಡುಗ ಅಥವಾ ಹುಡುಗಿಯೇ ಸ್ವತಃ ಎಲ್ಲವನ್ನೂ ಮಾಡಬೇಕಾಗಿದೆ ಬೀಜ ಬಿತ್ತುವುದು, ಗೊಬ್ಬರ ಹಾಕುವುದು, ಗಿಡಗಳ ಬೆಳವಳಿಗೆ ಇವುಗಳನ್ನು ಕಾಯ್ದು ನೋಡುವುದು, ಇದೆಲ್ಲಾ ಮಕ್ಕಳೇ ಮಾಡಬೇಕಾಗಿದೆ

ಇಂಡಿಯಾ ದೇಶದ ವೃತ್ತಾಂತಗಳು.

ಕೊಲ್ಲಾಪುರ ಸಂಸ್ಥಾನದ ಮಹಾರಾಜರವರು ಪ್ಲೇಗ್ ಕಿಡುಬನ್ನು ಹಾಕಿಸಿಕೊಂಡು, ತಮ್ಮ ಸಕಲ ಪ್ರಜೆಗಳಿಗೂ ಮೇಲ್ಪಂಕ್ತಿ ಹಾಕಿಕೊಟ್ಟರು. ಲಕ್ಷಾಂತರ ಪ್ರಜೆಗಳು ಅವರಂತೆಯೇ ಆ ಕಿಡುಬನ್ನು ಹಾಕಿಸಿಕೊಂಡಿದ್ದಾರೆ.

ಫೆಬ್ರವರಿ ತಿಂಗಳ ಸುಮಾರು ಮೂರನೇ ವಾರದಲ್ಲಿ ಮದರಾಸ್ ಗವರ್ನರವರು ತಂಜಾವೂರಿನ ಕಡೆ ಸಂಚಾರ ದಯಮಾಡಬಹುದೆಂದು ತಿಳಿಯುವುದು

***

ಬರೋಡಾ ಸಂಸ್ಥಾನಕ್ಕೆ ಸೇರಿದ ಕೋಸಾಂಬಾ ಎಂಬ ರೈಲ್ವೆ ಸ್ಟೇಷನಿಂದ ಜಂಬೂಸಾರ ಎಂಬ ಊರಿಗೆ ಅಂದರೆ ೨೬ ಮೈಲಿ ದೂರ ರೈಲ್ ರಸ್ತೆಯನ್ನು ಬಿಡಾವಣೆ ಮಾಡಬಹುದೆಂದು ಇಂಡಿಯಾ ಸ್ಟೇಟ್ ಸೆಕ್ರೆಟರಿಯವರು ಸ್ಯಾಂಕ್ಷನ್ ಮಾಡಿದ್ದಾರೆ.

***

ಕಲ್ಕತ್ತಾ ಪಟ್ಟಣದಲ್ಲಿ "ನವಾ ಯೋಗ" ಎಂಬ ವರ್ತಮಾನ ಪತ್ರಿಕೆಯನ್ನು ನಡಿಸುತ್ತಿದ್ದ ಪೂರ್ಣಚಂದ್ರ ಗುಪ್ತನೆಂಬ ಎಡಿಟರು ಆಫೀಸಿನ ಕೆಲವು ಹಣವನ್ನು ದಸ್ತುಮಾಡಿದನೆಂದು ಮೊಕದ್ದಮೆ ಆಗಿ ಈಗ ಆತನನ್ನು ಮಾಜಿಸ್ಟ್ರೇಟರು ನಯಾರ್ಕ್ಟು ಮಾಡುತ್ತಿದ್ದಾರೆ.

***

ತಂಜಾವೂರಿನಲ್ಲಿ ಮೋಂಬತ್ತಿ (ಮೇಣದಬತ್ತಿ)ಗಳನ್ನು ತಯಾರು ಮಾಡುವುದಕ್ಕೆ ಒಂದು ಕಾರ್ಖಾನೆಯನ್ನು ಇಷ್ಟರಲ್ಲೇ ಸ್ಥಾಪಿಸುತ್ತಾರೆಂದು ಪ್ರಕಟವಾಗಿದೆ ಇದಕ್ಕೆ ಕೆಲವು ಏಜಂಟರು ದಕ್ಷಿಣದೇಶವೆಲ್ಲಾ ಸಂಚರಿಸುತ್ತಲೂ ಚಂದಾ ಹಣವನ್ನು ಕೂಡಿಸುತ್ತಲೂ ಬಂದಿದ್ದಾರೆ.

***

ಶೋಲಾಪುರದಲ್ಲಿ ಈಗ ಮೂರು ಹತ್ತಿ ಕಾರ್ಖಾನೆಗಳಿರುತ್ತವೆ ಅಲ್ಲಿನ ಸಾಹುಕಾರರಾದ ಮುರಾರ್ಜಿ ನರೋತ್ತಮ ಎಂಬುವರು ಕಳೆದ ವಾರ ನಾಲ್ಕನೇ ಕಾರ್ಖಾನೆಯನ್ನು ಕಟ್ಟುವುದಕ್ಕೆ ಕಾಮಗಾರಿ ಪ್ರಾರಂಭಿಸಿರುತ್ತಾರೆ ಈ ಕಾರ್ಖಾನೆಗೆ ಸುಮಾರು ೬ ಲಕ್ಷ ರೂಪಾಯಿ ಖರ್ಚಾಗುವುದೆಂದು ಪ್ರಕಟವಾಗಿದೆ.

***

ಬೊಂಬಾಯಿ ಪಟ್ಟಣದಲ್ಲಿ ಕಳೆದ ಹನ್ನೊಂದು ವರ್ಷಗಳಿಂದಲೂ ಪ್ಲೇಗ್ ಉಪದ್ರವು ಕಡಿಮೆಯಾಗದೆ ಇತ್ತು, ಆದರೆ ಕಳೆದ ವಾರ ಮಾತ್ರ ೮ ಪ್ಲೇಗ್ ಮರಣಗಳಾಗಿರುವುದು ಪರಮಾಶ್ಚರ್ಯವಾಗಿದೆ ಪ್ಲೇಗಿಗೆ ಜನ್ಮಭೂಮಿ ಎಂದು ಪ್ರಖ್ಯಾತವಾಗಿದ್ದ ಭಾಗಗಳು ಕೂಡ ಸಂಪೂರ್ಣ ಆರೋಗ್ಯವಾಗಿವೆ ಎಂದು ತಿಳಿಯುವುದು

***

ಕಲ್ಕತ್ತಾ ಪಟ್ಟಣದ ಮ್ಯುನಿಸಿಪಾಲಿಟಿಯವರು ರಸ್ತೆಯನ್ನು ಸರಿಯಾಗಿಡದೇ ಹೋದದ್ದರಿಂದ ತನ್ನ ಗಾಡಿಗೆ ಅಪಾಯವಾಗಿ ತನಗೆ ಗಾಯಗಳಾದುವೆಂತಲೂ ಮ್ಯುನಿಸಿಪಾಲಿಟಿಯವರಿಂದ ತನಗೆ ೫,೦೦೦ ರೂಪಾಯಿ ಪರಿಹಾರ ಕೊಡಿಸಬೇಕೆಂತಲೂ ಮನ್ಮಥನಾಥ ಬೋಸ್ ಎಂಬೊಬ್ಬ ಬಂಗಾಳಿ ದೊಡ್ಡ ಮನುಷ್ಯನು ದಾವಾ ತಂದಿದ್ದಾನೆ

***

ಬೊಂಬಾಯಿ ಪಟ್ಟಣದಲ್ಲಿರುವ ಭಾರೀ ಸಾಹುಕಾರರಾದ ಮ|| ಗೋವರ್ಧನದಾಸ್ ಗೋಪಾಲದಾಸ್ ತೇಜಪಾಲರ ಮನೆಯಲ್ಲಿ ಕಳೆದ ವಾರ ನಡೆದ ಒಂದು ವಿವಾಹಮಹೋತ್ಸವಕ್ಕೆ ಅಲ್ಲಿನ ಗವರ್ನರಾದ ಸರ್ ಜಾರ್ಜ್ ಕ್ಲಾರ್ಕ್‌ರವರು ಪತ್ನಿ ಪರಿವಾರ ಸಹಿತ ದಯಮಾಡಿ, ನೂತನ ವಧೂವರರಿಗೆ ಉಡುಗೊರೆಗಳನ್ನು ಒದಗಿಸಿದರೆಂದು ತಿಳಿದುಬಂದಿದೆ.

***

ಬೊಂಬಾಯಿ ಗವರ್ನಮೆಂಟಿನವರು ಸರ್ಕಾರಿಯಾಗಿ ಇದುವರೆಗೆ ಒಂದು ಸೆಂಟ್ರಲ್ ಬುಕ್ ಡಿಪೋ (ಪುಸ್ತಕಾಲಯ)ವನ್ನು ಇಟ್ಟುಕೊಂಡಿದ್ದರು ಆದರೆ ನಾಳೆ ಜನವರಿ ಪ್ರಾರಂಭದಿಂದ ಈ ಬುಕ್ ಡಿಪೋವನ್ನು ವಜಾ ಮಾಡಬೇಕೆಂತಲೂ, ಅದರಲ್ಲಿರತಕ್ಕ ಪುಸ್ತಕಗಳನ್ನೆಲ್ಲಾ ಸರ್ಕಾರಿ ಛಾಪಖಾನೆಗೆ ಕಳುಹಿಸಿ ಬಿಡಬೇಕೆಂತಲೂ ಹುಕುಂ ಕೊಟ್ಟಿದ್ದಾರೆ

***

ಕಳೆದುವಾರ ಮದರಾಸ್ ಅಧಿಪತ್ಯಕ್ಕೆ ಸೇರಿದ ತಂಗತ್ತೂರಿಂದ ಟೋಗೋಲ್ ಸ್ಟೇಷನವರೆಗೆ ಮಾಳೀ ನದಿಯ ಪ್ರವಾಹ ಬಂದು ರೈಲ್ ರಸ್ತೆಯನ್ನೆಲ್ಲಾ ಕೊಚ್ಚಿಬಿಟ್ಟದ್ದರಿಂದ ೨—೩ ದಿನಗಳ ತನಕ ರೈಲ್ ಗಾಡಿಗಳು ಆ ಪ್ರಾಂತ್ಯ ಹೋಗಿಬರದೆ ಪ್ರಯಾಣಿಕರಿಗೂ ಅಂಚೆಗೂ ತುಂಬಾ ತೊಂದರೆಯಾಯಿತು ಈ ವಾರದಲ್ಲಿ ರಸ್ತೆ ದುರಸ್ತಾದೀತೆಂದು ನಿರೀಕ್ಷಿಸಲ್ಪಟ್ಟಿದೆ

***

ಹೈದರಾಬಾದ್ ಸಂಸ್ಥಾನದ ನೈಜಾಮರವರು ಒಬ್ಬ ನೌಕರನ ಸಂಗಡ ಬೊಂಬಾಯಿಗೆ ಹೋಗಿ, ಅಲ್ಲಿನ ಗವರ್ನರವರ ಆತಿಥ್ಯವನ್ನು ಸ್ವೀಕರಿಸುತ್ತಾರೆಂದು ಕಳೆದ ವಾರ ವರ್ತಮಾನವಿತ್ತು ಆದರೆ ಅವರು ಹೈದರಾಬಾದನ್ನು ಬಿಟ್ಟು ಹೊರಡಲಿಲ್ಲವೆಂತಲೂ, ಅಲ್ಲಿಗೆ ಹೋಗುವ ಯೋಚನೆಯೂ ಕಾಣುವುದಿಲ್ಲವೆಂತಲೂ ಹೈದರಾಬಾದಿನ ಬಾತ್ಮೀದಾರರು ಮೊನ್ನೆ ತಿಳಿಸಿದ್ದಾರೆ

***

ನಾಗೂರು ನಾಗಪಟ್ಟಣದಲ್ಲಿ ಉತ್ತರದೇಶದ ಸುಮಾರು ೨೦ ಜನರು ಖೋಟಾ ನಾಣ್ಯ ಮಾಡತಕ್ಕವರೆಂದು ಸಿಕ್ಕಿಬಿದ್ದರು ಮ್ಯಾಜಿಸ್ಟ್ರೇಟರು ಅವರನ್ನೂ ಅವರ ಬಳಿ ಇದ್ದ ಯಂತ್ರಸಾಧನಗಳನ್ನೂ ನೋಡಿ, ದರ್ಯಾಫ್ತಿಯಿಂದ ೯ ಮಂದಿಯನ್ನು ಖುಲಾಸ್ ಮಾಡಿ, ಉಳಿದ ೧೧ ಜನರಿಗೆ ೫ ವರುಷದ ಲಾಗಾಯ್ತು ೭ ವರುಷದವರೆಗೆ ತಳಾ ಕಠಿಣ ಸಜಾ ಶಿಕ್ಷೆಯನ್ನು ವಿಧಿಸಿದರು.

***

ಹಿಂದಿನ ವಾರ ಈ ರಾಷ್ಟ್ರದಲ್ಲಿ ಒಟ್ಟು ೩,೭೩೦ ಜನರು ಪ್ಲೇಗ್ ತಗಲಿ ಮೃತಪಟ್ಟರು. ಹ್ಯಾಗೆಂದರೆ—ಬೊಂಬಾಯಿ ಅಧಿಪತ್ಯ ೧,೯೮೬ ಮೈಸೂರು ಸಂಸ್ಥಾನ ೭೩೭, ಪಂಜಾಬ್ ೨೯೦, ಸಂಯುಕ್ತ ಅಧಿಪತ್ಯಗಳು ೨೧೧, ಮಧ್ಯಪ್ರಾಂತ್ಯಗಳು ಮತ್ತು ಬೀರಾರ್ ೧೨೫, ಬಂಗಾಳಾ ೧೧೩, ಮದರಾಸ್ ಅಧಿಪತ್ಯ ೯೩, ಬಿಹಾರ್ ೫೬,

ಪ್ರಾಬಾದ್ ೩೯, ಮಧ್ಯ ಇಂಡಿಯಾ ೩೧, ಪಾಯಮ್ಯಪ್ರಾಂತ್ಯಗಳು ೧, ಪಕ್ಕಿರ ೨

***

ಅಲೀಘಡದಲ್ಲಿರುವ ಮಹಮ್ಮದೀಯ ವಿದ್ಯಾಶಾಲೆಗೆ ಸೇರಿದಂತೆ ಒಂದು ವಿದ್ಯಾರ್ಥಿ ನಿಲಯವನ್ನು (ಬೋರ್ಡಿಂಗ್ ಹೌಸ್) ಕಟ್ಟಿಸುವೇ ಕೆಂದು ನವಾಬ್ ನಾಂತಾಜುದ್ದೌಲಾ ಎಂಬ ದೊಡ್ಡಮನುಷ್ಯರು ೩,೦೦೦ ರೂಪಾಯಿ ಧರ್ಮಕ್ಕೆ ಕೊಟ್ಟರು ಕಟ್ಟಡವು ಪೂರೈಸಿತು. ಒಟ್ಟು ೩೫,೦೦೦ ರೂಪಾಯಿ ಖರ್ಚಾಯಿತು ಇದನ್ನು ಕೇ ಳಿ ಪ್ರಮುಖರು ತಾವೇ ಆ ಸಾಲವನ್ನೂ ಕೊಡುವುದಾಗಿ ಒಪ್ಪಿ ಕೊಂಡಿದಾರೆ

***

ಹಿಂದಿನ ಬುಧವಾರ ಹಿಮವತ್ಪರ್ವತದ ತಪ್ಪಲಲ್ಲಿರುವ ಧರ್ಮ ಶಾಲಾ ಮತ್ತು ಕಾಂಗ್ರಾ ಡಿಸ್ಟ್ರಿಕ್ಟುಗಳಲ್ಲಿ ಬಹು ಭಯಂಕರವಾದ ಭೂಕಂಪವು ಪ್ರಾಪ್ತವಾಯಿತು ಭೂಕಂಪಗಳು ಬಂದರೂ ಅಲ್ಲಾಡ ದಂತೆ ಕಟ್ಟಿಸಿದ್ದ ಒಂದು ಕಟ್ಟಡವು ಬಿರುಕು ಬಿಟ್ಟಿತು ಅನೇಕ ದಿ ವಸಗಳಲ್ಲಿ ಬಹಳ ಜಬ್ಬಾದ ಧಳೋ ಅಥವಾ ಹೊಗೆಯೋ ಎದ್ದು ಹರಿಸಿಕೊಂಡದ್ದರಿಂದ ಜನರು ಗಾಬರಿಬಿದ್ದು ಚಂಬಾ ಕಣಿವೆಯಲ್ಲಿ ಏನೋ ಅನಾಹುತವಾಗಿದೆ ಎಂದು ಯೋಚಿಸುತ್ತಿದಾರೆ

***

ಕಳೆದ ನೋವೆಂಬರ್ ತಿಂಗಳ ಆಖ್ಯೆರಿಗೆ ಮುಕ್ತಾಯವಾದ ಏಳು ತಿಂಗಳಲ್ಲಿ ಹಿಂದುಸ್ಥಾನಕ್ಕೆ ೧೫ ಕೋಟಿ ರೂಪಾಯಿನ ಬೆಳ್ಳಿಯೂ ೭ ಕೋಟಿ ರೂಪಾಯಿನ ಚಿನ್ನವೂ ರಫ್ತಾಗಿ ಬಂದಿದೆ ಈ ಪೈಕಿ ಸರ್ಕಾರದವರು ೧೭ ಕೋಟಿ ರೂಪಾಯಿನ ಬೆಳ್ಳಿಯನ್ನು ಟಂಕ ಸಾಲೆಗೆ ಕೊಟ್ಟು ಬೆಳ್ಳಿಯ ನಾಣ್ಯಗಳನ್ನು ತಯಾರುಮಾಡಿಸಿದರು ಈ ಏಳು ತಿಂಗಳಲ್ಲಿ ಹಿಂದುಸ್ಥಾನದ ಟಂಕಸಾಲೆಗಳಲ್ಲಿ ಒಟ್ಟು ೧೯ ಕೋಟಿ ಹೊಸ ರೂಪಾಯಿಗಳೇ ಛಾಪು ಆಗಿರುತ್ತವೆ

***

ಡಾಕ್ಟರ್ ರದರ್‌ಫರ್ಡ್ ಎಂಬೊಬ್ಬ ಪಾರ್ಲಿಮೆಂಟ್ ಮೆಂಬರು ಕಳೆದ ವಾರ ಹಿಂದುಸ್ಥಾನಕ್ಕೆ ಬಂದಿರುತ್ತಾನೆ ಆತನನ್ನು ಲಾಹೋರ್ ಪಟ್ಟಣದ ಪ್ರಜೆಗಳು ವಿಶೇಷ ಉತ್ಸಾಹದಿಂದ ಎದುರುಗೊಂಡರು ಪಂಡಿತ್ ರಾಮ್‌ಭುಜ್‌ದತ್ ಮತ್ತು ಲಾಲಾ ಲಜಪತ್ ರಾಯ್ ಎಂಬೀ ಮುಖಂಡರು ಇಂಗ್ಲಿಷ್ ಸೊಮ್ಮಿನ ಮನುಷ್ಯನಿಗೆ ಹಾರ ಹಾಕಿದರು ಆತನು ಸೂರತ್ತಿನಲ್ಲಿ ನಡೆಯುವ ನ್ಯಾಷನಲ್ ಕಾಂಗ್ರೆಸ್ ಸಭೆಗೆ ಹೋಗಿ, ಅಲ್ಲಿ ನಡೆಯುವ ವರ್ತಮಾನಗಳನ್ನೆಲ್ಲಾ ಕಣ್ಣಾರ ನೋಡಬೇಕೆಂದು ಕುತೂಹಲ ಪಡುತ್ತಿದಾನೆಂದು ಪ್ರಕಟವಾಗಿದೆ

***

ಕಲ್ಕತ್ತಾ ಪಟ್ಟಣದ ರಾಜಬೀದಿಗಳಲ್ಲಿ ಟ್ರಾಂ ಕಾರ್ ಎಂಬ ವೈರ್ ಬಂಡಿಗಳು ಓಡುವವಷ್ಟೆ. ಕಳೆದ ವಾರ ಒಬ್ಬ ಬಿಕ್ಷುಕಳು ಗಾಡಿ ಬರುತ್ತಲಿಲ್ಲ ಎಂದು ಗಾಬರಿ ಬಿದ್ದು ರಸ್ತೆ ಬಿಟ್ಟು ಹೋಗು ವಷ್ಟರಲ್ಲಿ ಆ ಗಾಡಿ ಮುಂಗಡೆ ಸಿಕ್ಕಿಕೊಂಡಳು ಗಾಡಿಯು ನಿಲ್ಲದೆ ಸ್ವಲ್ಪ ದೂರ ವೇಗವಾಗಿಯೇ ಹೋಯಿತು ಸುಮಾರು ಒಂದು ಫರ್ಲಾಂಗು ಹೋಗಿ ನಿಲ್ಲಿಸಿದಾಗ ಆ ಬಿಕ್ಷುಕಳು ಆ ಗಾಡಿಯ ಮುಂಭಾಗದ ಮೇಲೆ ಕುಳಿತಿದ್ದಳು ದೇವರ ದಯದಿಂದ ಅವಳ ಪ್ರಾಣ ಉಳಿದುಕೊಂಡದ್ದನ್ನು ನೋಡಿ ಸುತ್ತಲಿದ್ದ ಜನರು ಆಶ್ಚರ್ಯಪಟ್ಟರು

***

ಕಳೆದ ವಾರ ಬೊಂಬಾಯಿ ಪಟ್ಟಣದ ಬೈಕಲಾ ಎಂಬ ಭಾಗದಲ್ಲಿ ಸುಮಾರು ೧೫೦ ಎಮ್ಮೆಗಳನ್ನು ಕಟ್ಟಿ ಸಾಕುತ್ತಿದ್ದ ಒಬ್ಬ ಸಾಹುಕಾರನ ಹಿತ್ತಿಲು ನಷ್ಟವಾಯಿತು ಕೊಟ್ಟಿಗೆಯ ಮೇಲ್ಛಾವಣಿಯು ಇದ್ದಕ್ಕಿದ್ದ ಹಾಗೇ ಬಿದ್ದುಹೋಯಿತು ಒಳಗಿದ್ದ ೧೫೦ ಎಮ್ಮೆಗಳ ಪೈಕಿ ಎಪ್ಪತ್ತು ಸತ್ತುಹೋದವು ೮೦ ಎಮ್ಮೆಗಳಿಗೆ ಪ್ರಾಣ ಬಿಟ್ಟು ಇಗಿತೆ ಯಜಮಾನನಿಗೆ ಕಟ್ಟಡ ಹೋದದ್ದಲ್ಲದೆ ೨,೦೦೦ ರೂಪಾಯಿ ನಷ್ಟವಾ ಯಿತು. ಆ ಎಮ್ಮೆಗಳೆಲ್ಲಾ ಹಾಲುಕರೆಯುತ್ತಿದ್ದುವು ಸುಮಾರು ೩೦೦ ಜನರು ಸೇರಿ ಆ ಮೂಗು ಪ್ರಾಣಿಗಳನ್ನು ಬಿಡುಗಿಸುವುದಕ್ಕೆ ತುಂಬಾ ಶ್ರಮಪಟ್ಟರು

***

ನೌಗೂರ್ ಡಿಸ್ಟ್ರಿಕ್ಟಿಗೆ ಸೇರಿದ ಖುರ್ಬೆ ಎಂಬೂರಿನಲ್ಲಿ ವಾಸಿ ಸುತ್ತಿರುವ ಮಿ॥ ಜಿ ಲಾಲ್‌ಯವರು ತಮ್ಮ ಕಾಯಿಲೆಯಾಗಿದ್ದ ಹೆಂ ಡತಿಯನ್ನು ಚಿಕಿತ್ಸೆಗಾಗಿ ಇನ್ನೊಂದೂರ ಆಸ್ಪತ್ರೆಗೆ ಕಳುಹಿಸಬೇಕೆಂ ದು ಅವಳನ್ನು ರೈಲ್‌ವೆ ಸ್ಟೇಷನ್ನಿಗೆ ಕರೆದುಕೊಂಡು ಹೋದರು ನ್ಯಾಯವಾದ ಕಾಲಕ್ಕೆ ಸುಮಾರು ಎಂಟು ನಿಮಿಷ ಮುಂದುಗಡೆಯೇ ಗಾಡಿಯು ಸ್ಟೇಷನ್ನಿಂದ ಮುಂದಕ್ಕೆ ಹೊರಟುಹೋಯಿತು ಇದರಿಂ ದ ತಮಗೆ ಅನಾನುಕೂಲವೂ ನಷ್ಟವೂ ಆದದ್ದರಿಂದ ರೈಲ್ವೆ ಕಂಪನಿ ಯವರು ತನಗೆ ೩,೦೦೦ ರೂಪಾಯಿ ಡಾಮೇಜು ಕೊಡಬೇಕೆಂದು ಆ ಕಂಪನಿಯ ಏಜಂಟರಿಗೆ ಲಾಯರ ಮೂಲಕ ನೋಟಿಸ್ ಕೊಡಿಸಿ ದ್ದಾರೆ

***

ಬೊಂಬಾಯಿ ಪಟ್ಟಣದ ಕಂಬಾಲಾ ಗುಡ್ಡದ ಮೇಲೆ ಕಳೆದ ವಾರ ಪಾರ್ಸಿ ಜನಗಳು ಸೇರಿ ಒಂದು ಆಸ್ಪತ್ರೆಯನ್ನು ಕಟ್ಟುವುದಕ್ಕೆ ಗವ ರ್ನರವರ ಕೈಯಿಂದ ಅಸ್ತಿಭಾರ ಕಲ್ಲನ್ನು ಹಾಕಿಸಿದರು ಆಗ ಬ ರೋಡಾ ಸಂಸ್ಥಾನದ ಗಾಯಕವಾಡ ಮಹಾರಾಜರವರೇ ಮೊದಲಾದ ಅನೇಕ ಮಹನೀಯರು ಹಾಜರಾಗಿದ್ದರು ಮಿ॥ ಜಸ್ಟಿಸ್ ದಾದಾಬ್ ಜೀಮಾಂಜಿ ಪಟೇಲ್‌ಯವರು ಈ ಆಸ್ಪತ್ರೆಯ ಮೂಲಧನಕ್ಕೆ ೫ ಲಕ್ಷ ರೂಪಾಯಿ ದಾನ ಮಾಡಿದಾರೆ ಅಸ್ತಿಭಾರ ಕಲ್ಲನ್ನು ಹಾಕು ವ ಸಮಯದಲ್ಲಿ ಗವರ್ನರವರು ಪಾರ್ಸಿ ಜನರ ಔದಾರ್ಯವನ್ನೂ ಅವರ ಪ್ರಜೋಪಕಾರಕಾರ್ಯಗಳನ್ನೂ ಅವರ ಕಾರ್ಯಸಕ್ತಿಯನ್ನೂ ಕುರಿತು ತುಂಬಾ ಕೊಂಡಾಡಿದರು ಈ ಆಸ್ಪತ್ರೆಯಲ್ಲಿ ರೋಗಿ ಗಳಿಗೆ ಉಪಚಾರಾದಿಗಳನ್ನು ಮಾಡುವುದಕ್ಕೆ ಪಾರ್ಸಿ ಯುವತಿಯರ ನ್ನು ತರಬೇತು ಮಾಡಬೇಕೆಂದು ಗೊತ್ತು ಮಾಡಿರುವುದು ಸ್ತೋತ್ರಾ ರ್ಹವಾಗಿರುತ್ತದೆ

ಬೊಂಬಾಯಿ ಪಟ್ಟಣದಲ್ಲಿ ಪ್ಲೇಗ್ ಉಪದ್ರವವು ಪ್ರಾರಂಭವಾದ ಲಾಗಾಯಿತು ಅಂದರೆ ೧೮೯೬ ನೆ ಇಸವಿಯಿಂದ ೧೯೦೬ ನೆ ಇಸವಿ ಆಖೈರುವರೆಗೆ ಒಟ್ಟು ಒಂದುವರೆಲಕ್ಷ ಪ್ರಜೆಗಳು ಲಯಹೊಂದಿರುತ್ತಾರೆ ಆದರೂ ಆ ಪಟ್ಟಣದ ಪ್ರಜಾ ಸಂಖ್ಯೆಯು ೧೮೯೬ ರಲ್ಲಿ ೮,೨೧,೭೬೪ ಇದ್ದದ್ದು ೧೯೦೬ ನೆ ಇಸವಿಯಲ್ಲಿ ೯,೭೭,೮೨೨ಕ್ಕೆ ಹೆಚ್ಚಿರುವುದನ್ನು ನೋಡಿದಲ್ಲಿ ಆ ಪಟ್ಟಣದ ಪ್ರಾಶಸ್ತ್ಯವೂ ಅಲ್ಲಿನ ವ್ಯಾಪಾರಾದಿಗಳೂ ಬೇಗ ಅಭಿವೃದ್ಧಿ ಹೊಂದುತ್ತಿವೆ ಎಂಬುವುದು ಗೊತ್ತಾಗುತ್ತದೆ. ಮತ್ತು ಪ್ರಜೆಗಳು ವಾಸ ಮಾಡುವುದಕ್ಕಾಗಿ ಟ್ರಸ್ಟ್ ಬೋರ್ಡಿನವರು ಕಟ್ಟಿಸಿ ಕೊಡುತ್ತಾ ಬಂದಿರುವ ಆರೋಗ್ಯಕರವಾದ ಮನೆಗಳು ವರುಷೇ ವರು ಷ ಹೆಚ್ಚುತ್ತಿರುವವು

***

ಪೂನಾ ಪಟ್ಟಣದಲ್ಲಿ ಕಳೆದ ವಾರ ಒಂದು ಸಭೆ ನಡೆಯಿತು. ಕಾಳ್ ಎಂಬ ಪತ್ರಿಕಾ ಎಡಿಟರಾದ ಮಿ॥ ಪರಾಂಜಪೆಯವರು—ಈ ಸಲ ಸೂರತ್ತಿನಲ್ಲಿ ನಡೆಯುವ ಹಿಂದುಸ್ಥಾನದ ಸಾರ್ವಜನಿಕ ಸಭೆಯನ್ನು ಲಾಲಾ ಲಾಜಪತ್‌ರಾಯವರೇ ಅಗ್ರಾಸನವನ್ನು ವಹಿಸಿ ನಡಿಸಬೇ ಕೆಂತಲೂ, ಈಗ ಅಗ್ರಸ್ಥಾನಕ್ಕೆ ನೇಮಕವಾಗಿರತಕ್ಕ ಡಾಕ್ಟರ್ ರಾಷ್ ಬಿಹಾರಿ ಘೋಸ್‌ಯವರು ಅದನ್ನು ಅವರಿಗೆ ಬಿಟ್ಟುಕೊಡಬೇ ಕೆಂತಲೂ ಸೂಚಿಸಿದರು ಅದೇ ಸಭೆಯಲ್ಲಿ ಮಿ॥ ಬಾಲಗಂಗಾಧರತಿಲ ಕರವರು ಸ್ವದೇಶೀ ಸ್ವೀಕಾರವನ್ನೂ ಪರದೇಶೀ ಬಹಿಷ್ಕಾರವನ್ನೂ ಕುರಿತು ಉಪನ್ಯಾಸ ಮಾಡಿ, ಇವೆರಡು ವಿಷಯಗಳನ್ನೂ ಸಾರ್ವಜ ನಿಕ ಸಭೆಯಲ್ಲಿ ಚರ್ಚೆಗೆ ತರಬೇಕೆಂದು ಹೇಳಿದರು

***

ಆಫ್ಘಾನಿಸ್ಥಾನದ ಅಮೀರರವರು ನಾಲ್ಕಾರು ತಿಂಗಳಿಂದಲೂ ರಾ ಜಧಾನಿಯನ್ನು ಬಿಟ್ಟು, ತಮ್ಮ ಸಂಸ್ಥಾನದ ಕೆಲವು ಪ್ರದೇಶಗಳಲ್ಲಿ ಸಂಚಾರ ಮಾಡುತ್ತಿದ್ದು, ಹೋದ ವಾರ ಆಕಸ್ಮಿಕವಾದ ಸಾಹಸ ಕಾ ಬೂಲಿಗೆ ಬಂದುಬಿಟ್ಟದ್ದನ್ನು ನೋಡಿ ಕೆಲವರು ಅಮೀರರ ಸಹೋದ ರರು ರಾಜಧಾನಿಯಲ್ಲಿ ಜಗಳವಾಡಿದುದ್ದರಿಂದ ರಾಜ್ಯದ ತುಂಬಾ ಗೊಣ್ಣರ ವಾಪಸು ಬಂದುಬಿಟ್ಟರೆಂದು ವರ್ತಮಾನ ಹುಟ್ಟಿಸಿದ್ದರು ಈಚೆಗೆ ತಿಳಿದು ಬಂದಿರುವುದನ್ನು ನೋಡಿದರೆ ಆ ಪ್ರಾಂತ್ಯ ಬಹಳ ವಿಶೇಷವಾಗಿ ಮಂಜು ಸುರಿಯಲಾರಂಭಿಸಿದ್ದರಿಂದ ರಾಜಧಾನಿಗೆ ಬರ ತಕ್ಕ ಮಾರ್ಗಗಳು ಕಟ್ಟಿ ಹೋಗುವವೆಂಬ ಹೆದರಿಕೆಯುಂಟಾಗಿ ಅ ಮೀರರು ಬೇಗನೆ ವಾಪಸು ರಾಜಧಾನಿಗೆ ಬಂದು ಸೇರಿಕೊಳ್ಳಬೇಕಾ ಯಿತೆಂದು ತಿಳಿಯುವುದು.

***

ಕೊಯಮುತ್ತೂರಿನಲ್ಲಿ ಕೆಲವು ಮಂದಿ ದೇಶೀಯ ದೊಡ್ಡ ಮ ನುಷ್ಯರು ಸೇರಿ ಕಾಳೇಶ್ವರ ಕಾರ್ಖಾನೆ ಎಂಬ ಹೆಸರಿನ ಒಂದು ಹತ್ತಿ ಬಟ್ಟೆ ತಯಾರಾಗುವ ಕಾರ್ಖಾನೆಯನ್ನು ಕಟ್ಟುವುದಕ್ಕೆ ಪ್ರಾರಂಭಿಸಿ ರುತ್ತಾರೆ ಕಲೆಕ್ಟರ್ ಮಿ॥ ಪ್ಲಿಸ್ಲಿಯವರು ಅದಕ್ಕೆ ಅಸ್ತಿಭಾರ ಕಲ್ಲನ್ನು ಹಾಕಿದರು ಈ ಕಾರ್ಖಾನೆಯ ಫಂಡು ೯ ಲಕ್ಷ ರೂಪಾಯಿ, ೧೦೦ ರೂಪಾಯಿನ ೯,೦೦೦ ಷೇರುಗಳಾಗಿ ಮಾಡಿದಾರೆ. ಆ ಪೈಕಿ ಸದ್ಯ ೩,೫೦೦ ಷೇರುಗಳನ್ನು ಮಾತ್ರ ವಿಕರಿ ಮಾಡುವುದಾಗಿ ತೆಗೆದಿಟ್ಟರು ಆಗಲೇ ಜನರು ೩,೪೫೫ ಷೇರುಗಳನ್ನು ಕೊಂಡುಕೊಂಡು, ಶೇಕಡಾ ೩೦ ರಂತೆ ೧,೦೩,೦೦೦ ರೂಪಾಯನ್ನು ಪಾವತಿ ಮಾಡಿದಾರೆ ೧೦,೦೦೦ ರೂಪಾಯಿಗೆ ೧೧ ಎಕರೆ ಜಮೀನನ್ನು ಕಾರ್ಖಾನೆ ಕಟ್ಟುವುದಕ್ಕೆ ಕೊಂಡುಕೊಂಡದ್ದಲ್ಲದೆ, ೮೦,೦೦೦ ರೂಪಾಯಿಗೆ ಸೀಮೆಯಿಂದ ಯಂ ತ್ರ ಮೊದಲಾದ ಸಾಧನಗಳನ್ನು ತರಿಸುವರು ಈ ಕಾರ್ಖಾನೆಯಲ್ಲಿ ಯಂತ್ರಗಳನ್ನು ನಡಿಸುವುದಕ್ಕೆ ೫೦೦ ಕುದುರೆ ಬಲವುಳ್ಳಂಥಾ ಎನರ್ಜಿ ಬರುವುದು ಕಾರ್ಖಾನೆಯು ಮುಂದಿನ ಆಗೋಸ್ಟ್ ತಿಂಗಳಿಗೆ ಸಿದ್ಧವಾಗಿ, ನೆಯ್ಗೆಯ ಕೆಲಸ ಪ್ರಾರಂಭವಾಗುವುದೆಂದು ಗೊತ್ತು ಮಾ ಡಲ್ಪಟ್ಟಿದೆ

***

ಕಳೆದ ವಾರ ಚೋಟಾನಾಗಪುರ, ಒರಿಸ್ಸಾ, ಪೂರ್ವ ಬಂಗಾಳ, ಬಂಗಾಳ, ಬಿಹಾರ್, ಈ ಪ್ರಾಂತ್ಯ ಎರಡು ದಿನ ಸುಮಾರಾದ ಮಳೆ ಬಂದದ್ದರಿಂದ ಏನೊಂದು ಪ್ರಯೋಜನವಾಯಿತು ಆ ಮಳೆಯು ಬಿಹಾ ರ್ ಮತ್ತು ಉತ್ತರ ಹಿಂದುಸ್ಥಾನಕ್ಕೆ ಹರಡಿಕೊಳ್ಳಲಿಲ್ಲವೆಂದು ವ್ಯಸನ ಪಡಬೇಕಾಗಿದೆ ಬಂಗಾಳದಲ್ಲಿ ಮಳೆ ಬಾರದ್ದರಿಂದ ಪೈರು ಕೆಟ್ಟಿದೆ ಸಂಯುಕ್ತ ಪ್ರಾಂತ್ಯಗಳಲ್ಲಾದರೋ ಬಾಕೇರ್ ಮತ್ತು ಗೊಂಡಾ ಎಂಬೀ ಕಡೆಗಳಲ್ಲಿ ಕ್ಷಾಮಪ್ರಾಪ್ತವಾಗಿಯೇ ಇದೆ ಅವೆರಡು ಡಿಸ್ಟ್ರಿ ಕ್ಟುಗಳಲ್ಲೂ ಕಾಶೀಪಟ್ಟಣದಲ್ಲೂ ಕ್ಷಾಮನಿವಾರಣೆಗೆ ಬಡಬಗ್ಗರಿಗೆ ಧರ್ಮವನ್ನು ಮಾಡಲು ಆರಂಭವಾಯಿತು ಒಂಬತ್ತು ಡಿಸ್ಟ್ರಿಕ್ಟುಗ ಳಲ್ಲಿ ಪರಿಷ್ಕಾರ್ಥವಾದ ರಿಲೀಫ್ ಕಾಮಗಾರಿಗಳನ್ನು ಮಾಡುವಾಡಿದಾ ರೆ ಅದರ ಮೊದಲೇ ಸರ್ಕಾರದವರು ರೈತರಿಗೆ ಅಪಾರವಾಗಿ ತಕಾ ವಿ ಅಡ್ವಾನ್ಸನ್ನು ಕೊಟ್ಟದ್ದರಿಂದ ಬಹಳ ಜನರು ಆ ರಿಲೀಫ್ ಕಾಮ ಗಾರಿಗೆ ಬರಲಿಲ್ಲ ಸದ್ಯ ೫,೦೦೦ ಜನರು ಮಾತ್ರ ಆ ಕಾಮಗಾರಿಗಳ ಲ್ಲಿ ಸೇರಿಕೊಂಡಿದಾರೆ ಮಧ್ಯ ಇಂಡಿಯಾದಲ್ಲಾದರೋ ೯,೦೦೦ ಜನ ರು ರಿಲೀಫ್ ಕಾಮಗಾರಿಗಳಿಗೆ ಹೋಗಿ ಜೀವನವನ್ನು ಸಂಪಾದಿಸಿಕೊ ಳ್ಳುತ್ತಿರುವರು ಪಂಜಾಬಿನಲ್ಲಿ ದಾರಣೆಯು ಜಾಸ್ತಿಯಾಗುತ್ತಲೇ ಇದೆ

***

ಕಡಪಾ ಜಿಲ್ಲೆಗೆ ಸೇರಿದ ಪೆಳ್ಳೂರಂ ಎಂಬ ಸ್ಥಳದಲ್ಲಿ ರೋಮಾ ಯ ಕ್ರೈಸ್ತರು ಕಳೆದ ವಾರ ದೇವರ ಮೆರವಣಿಗೆಯನ್ನು ಹಿಂದೂಗಳ ಕೇರಿಯ ಮೇಲೆ ಮಾಡಿಕೊಂಡು ಹೋಗಬೇಕೆಂದು ಪ್ರಯತ್ನಪಟ್ಟು, ಸರ್ಕಾರದಿಂದ ಅದಕ್ಕಾಗಿ ಲೈಸೆನ್ಸನ್ನು ಪಡೆದುಕೊಂಡರು ಹಿಂದೂಗ ಳು ಅದನ್ನು ತಡೆಯಬೇಕೆಂದು ಪ್ರಯತ್ನಪಟ್ಟದ್ದರಿಂದ ಇವರಿಗೂ ರೋಮಾಯ ಕ್ರೈಸ್ತರಿಗೂ ಕಲಹವುಂಟಾಗಿ ಕೆಲವರಿಗೆ ಗಾಯಗಳಾ ದವು ದೊಂಬಿಯನ್ನು ಅಡಗಿಸುವುದಕ್ಕಾಗಿ ಹೋಗಿದ್ದ ಪೋಲೀಸಿನವ ರು ಜನರ ಮೇಲೆ ಗುಂಡು ಹೊಡಿಯಬೇಕಾಯಿತು ಕೆಲವು ಅಧಿಕಾ ರಿಗಳಿಗೂ ಕಲ್ಲಿನ ಏಟುಗಳು ಬಿದ್ದು ಗಾಯವಾಗಿದೆ ಹಿಂದೂಗಳು ಕ್ರೈಸ್ತರ ಮೆರವಣಿಗೆ ವಿಗ್ರಹಾದಿಗಳನ್ನು ಮುರಿದು ಕಿತ್ತುಹಾಕಿ ತೇರ ನ್ನು ಸುಟ್ಟದ್ದಲ್ಲದೆ ಕೆಲವು ಕ್ರೈಸ್ತರ ಮನೆಗಳನ್ನು ನುಗ್ಗಿ ಕೊಳ್ಳೆ ಹೊಡೆದರು ಸರ್ಕಾರಿ ಅಧಿಕಾರಿಗಳು ಈಗ ಅಲ್ಲಿ ಸೇರಿ, ತನಿಖೆ ಮಾ ಡುತ್ತಿದಾರೆ ಈ ದೊಂಬೀ ಕಲಹದಲ್ಲಿ ನಾಲ್ಕಾರು ಜನರಿಗೆ ಪ್ರಾಣ ಹೋಯಿತೆಂದು ಹೇಳುವುದು ಯಥಾರ್ಥವಾದದ್ದಲ್ಲ. ಅಲ್ಲಿನ ಪೊ ಲೀಸ್ ನೌಕರರು ಮೊದಲೇ ಸರಿಯಾದ ಏರ್ಪಾಡು ಮಾಡದೆ ಹೋದ ದ್ದರಿಂದ ಈ ರೀತಿ ಗಲಭೆಯಾಗಲು ಕಾರಣವಾಯಿತೆಂದು ಅಲ್ಲಿನ ಬಾತ್ಮಿದಾರರು ಬರೆಯುತ್ತಾರೆ

ವಿದೇಶ ವರ್ತಮಾನಗಳು.

ನ್ಯೂಜೀಲಾಂಡಿನ ಮುಖ್ಯಪಟ್ಟಣವಾದ ವೆಲ್ಲಿಂಗ್‌ಟನ್ ನಗರದ ಲ್ಲಿ ಪಾರ್ಲಿಮೆಂಟ್ ಸಭೆ ಮನೆಯು ಕಳೆದ ವಾರ ಬೆಂಕಿ ಬಿದ್ದು ಸುಟ್ಟುಹೋಯಿತೆಂದು ತಂತೀವರ್ತಮಾನ ಬಂದಿದೆ

***

ವಿಲಾಯಿತಿಯ ಮಧ್ಯ, ದಕ್ಷಿಣ ಪ್ರಾಂತ್ಯಗಳಲ್ಲಿ ಕಳೆದವಾರ ಅಪಾ ರವಾದ ಮಳೆ ಸುರಿದದ್ದರಿಂದ ಸಾವಿರಾರು ಎಕರೆಗಳ ಜಮೀನೆಲ್ಲಾ ನೀ ರಿನಲ್ಲಿ ಮುಳುಗಿ, ತುಂಬಾ ನಷ್ಟವುಂಟಾಗಿರುತ್ತದೆಂದು ತಂತೀವರ್ತ ಮಾನ ಬಂದಿದೆ

***

ಮಹಮ್ಮದೀಯ ಯಾತ್ರಾಸ್ಥಳವಾದ ಮಕ್ಕಾ ಪಟ್ಟಣದಿಂದ ಅರಾ ಫಾತ್ ನಗರಕ್ಕೂ ಮದೀನದಿಂದ ಮಕ್ಕಾಗೂ ಮುಂದಿನ ಯಾತ್ರಾ ಕಾಲ ಬರುವುದರೊಳಗಾಗಿ ರೈಲ್ ರಸ್ತೆಯು ಹಾಕಿ ಪೂರೈಸಿರಬೇಕೆಂದು ತುರ್ಕಿ ರಾಜ್ಯದ ಸುಲ್ತಾನರವರು ಹುಕುಂ ಮಾಡಿದಾರೆಂದು ತಿಳಿಯು ವುದು

***

ಅಮೇರಿಕಕ್ಕೆ ಸೇರಿದ ಮೊನಾಗಾ ಎಂಬಲ್ಲಿ ಗಣಿಗಳೊಳಗೆ ಬೆಂಕಿ ಹುಟ್ಟಿ ಅನಾಹುತವಾಯಿತೆಂದು ತಿಳಿಸಿದ್ದೆವಷ್ಟೆ ಅವುಗಳಲ್ಲಿ ಸುಮಾರು ೬೦೦ ಜನರು ಮೃತಪಟ್ಟರೆಂತಲೂ, ಇದುವರೆಗೆ ೮೫ ಶವ ಗಳನ್ನು ಮಾತ್ರ ಹೊರಕ್ಕೆ ತೆಗೆದಿದಾರೆಂತಲೂ ತಂತೀವರ್ತಮಾನ ಬಂದಿದೆ

***

ಆಸ್ಟ್ರೇಲಿಯಾದ ಪೂರ್ವ ದಿಗ್ಭಾಗದಲ್ಲಿರುವ ವ್ಲಾಡಿವೋಸ್ಟಾಕ್ ಎಂಬ ರೇವುಪಟ್ಟಣದಲ್ಲಿ ಸರ್ಕಾರದವರ ಮೇಲೆ ದಂಗೆ ಎದ್ದ ಪ್ರಜೆಗಳ ಮುಖಂಡರ ಪೈಕಿ ಕಳೆದ ವಾರ ಏಳು ಮಂದಿಯನ್ನು ಗಲ್ಲಿಗೆ ಹಾಕಿ ಸಿದ್ದರು ಈಚೆಗೆ ಇನ್ನೂ ೨೧ ಜನರನ್ನು ಕೊಲ್ಲಿಸಿದ್ದಲ್ಲದೆ ೩೭ ಜನರಿಗೆ ನಾನಾ ತರದ ಶಿಕ್ಷೆಗಳನ್ನು ವಿಧಿಸಿರುತ್ತಾರೆ.

***

ಅಮೇರಿಕಕ್ಕೆ ಸೇರಿದ ವಿಸ್‌ಕಾನ್ಸಿನ್ ಡಿಸ್ಟ್ರಿಕ್ಟಿನಲ್ಲಿ ಒಂದು ಭಾರೀ ರೈಲ್ವೆ ಸ್ಟೇಷನಿಗೆ ಬೆಂಕಿ ಬಿದ್ದು ಏಳು ಲಕ್ಷ ಬುಸೆಲ್‌ಗಳ ಧಾನ್ಯ ಗಳು ಸುಟ್ಟುಹೋದವು ಇದಲ್ಲದೆ ಮೂರು ದೊಡ್ಡ ಕಾರ್ಖಾನೆಗ ಳೂ ೩೦ ಭಾರಿ ಮನೆಗಳೂ ಬೂದಿಯಾದವು ಈ ಅನಾಹುತದಿಂದ ಸುಮಾರು ೯೦ ಲಕ್ಷ ರೂಪಾಯಿ ನಷ್ಟವಾಗಿರುತ್ತದೆ

***

ವಿಲಾಯಿತಿಗೆ ಸೇರಿದ ಆಕ್ಸ್‌ಫರ್ಡ್ ವಿದ್ಯಾನಿಲಯದ ನಕ್ಷತ್ರ ಮಂಡಲದ ಪರಿಷ್ಕರಿಸಾದ ಡಾಕ್ಟರ್ ರಾಂಬಾಟ್‌ಯವರು ಸೂರ್ಯಮಂ ಡಲದಲ್ಲಿ ಕಳೆದ ನವಂಬರ್ ೧೫ ನೆ ತಾರೀಖಿನ ದಿನ ೧೧॥ ಗಂಟೆಗೆ ಜ್ವಾಲೆಗಳು ಊರ್ಧ್ವಮುಖನಾಗಿ ಹೊರಡುತ್ತಿದ್ದವೆಂತಲೂ, ಈ ಜ್ವಾಲೆ ಗಳು ಸುಮಾರು ೩,೭೫,೦೦೦ ಮೈಲಿ ಎತ್ತರಕ್ಕೆ ಏರಿದ್ದವೆಂತಲೂ, ಮಧ್ಯಾಹ್ನ ೧೨॥ ಗಂಟೆಯ ಹೊತ್ತಿಗೆ ಎಲ್ಲಾ ಶಮನವಾಗಿ ಶುದ್ಧಮಂಡ ಲವು ಕಾಣಿಸಿಕೊಂಡಿತೆಂತಲೂ ತಿಳಿಸಿದಾರೆ

***

ಫ್ರಾನ್ಸ್ ಸಂಸ್ಥಾನದೊಳಗೆ ಲ್ರಿಂಗ್ಸ್ ಎಂಬೊಂದು ಬೆಟ್ಟವು ಅದು ಮೊದಲಿದ್ದ ಸ್ಥಾನದಿಂದ ೬೦೦ ಗಜ ದೂರಕ್ಕೆ ಹೋಗಿ ನಿಂತಿದೆ ಅದು ಹೋದ ದಾರಿಯ ಉದ್ದಕ್ಕೂ ಮೊದಲು ಜಮೀನು ಅಪಾರವಾ ಗಿತ್ತು ಈಗ ಆ ಸ್ಥಳದಲ್ಲಿ ದೊಡ್ಡ ಬಿರುಕುಗಳೂ, ಹೊಸ ಕೆರೆಗಳೂ ಉಂಟಾಗಿರುವವು ಉದ್ದಕ್ಕೂ ಇದ್ದ ರಸ್ತೆಗಳೂ ಸೇತುವೆಗಳೂ ಹಾ ಳಾದವು ಇನ್ನೊಂದು ಆಶ್ಚರ್ಯವೇನೆಂದರೆ, ಒಂದು ದೊಡ್ಡ ತೋಟ ವು ಮೊದಲಿದ್ದ ಸ್ಥಳದಿಂದ ೫೦ ಗಜ ದೂರಕ್ಕೆ ಹೋಗಿ ನಿಂತಿರುವು ದು ಅದರಲ್ಲಿದ್ದ ಗಿಡಗಳಿಗಾಗಲಿ ಸುತ್ತಲೂ ಇದ್ದ ಗೋಡೆಗಳಿಗಾಗಲಿ ಸ್ವಲ್ಪವೂ ಅಪಾಯವಾಗಲಿಲ್ಲ.

***

ಸ್ವೀಡನ್ ರಾಜ್ಯದ ದೊರೆಯವರಾದ ಆಸ್ಕರ್ ಪ್ರಭುಗಳು ಕಳೆದ ವಾರ ಕಾಲವಾದರು ಅವರಿಗೆ ಸುಮಾರು ೭೮ ವರುಷವಾಗಿತ್ತು. ಕೆಲ ವು ಕಾಲದಿಂದೀಚೆಗೆ ಅವರು ತುಂಬಾ ಕಾಯಿಲೆ ಬಿದ್ದಿದ್ದುದ್ದರಿಂದ ರಾಜ್ಯ ದ ಕಾರುಬಾರುಗಳನ್ನು ಯುವರಾಜರಿಗೆ ವಹಿಸಿಬಿಡಬೇಕೆಂಬ ಏರ್ಪಾ ಡು ನಡೆದಿತ್ತು ಇವರು ೧೮೭೨ ನೆ ಇಸವಿಯಲ್ಲಿ ರಾಜ್ಯಭಾರವನ್ನು ಸ್ವೀಕರಿಸಿದರು ಅವರಿಗೆ ನಾಲ್ಕರು ರಾಜಕುಮಾರರಿರುತ್ತಾರೆ ಆ ಪೈಕಿ ಈಗ ೪೯ ವರುಷ ವಯಸ್ಸಾಗಿರುವ ಪ್ರಿನ್ಸ್ ಗಸ್ಟೇವ್ ಯುವ ರು ಸಿಂಹಾಸನವನ್ನು ಹತ್ತುವರು ಪಟ್ಟಾಭಿಷೇಕ ಉತ್ಸವದ ಉತ್ತರಕ್ರಿ ಯಾದಿಗಳು ಮುಂದಿನ ವಾರ ನಡೆಯುವಂತೆ ಗೊತ್ತಾಗಿದೆ

***

ಪೋರ್ಚುಗಲ್ ರಾಜ್ಯದ ದೊರೆಯವರು ತಮ್ಮ ರಾಜ್ಯದಲ್ಲಿರುವ ಪಾರ್ಲಿಮೆಂಟ್ ಸಭೆಯನ್ನು ವಜಾ ಮಾಡಬೇಕೆಂದು ನಿಶ್ಚಯ ಮಾಡಿ ಕೊಂಡಿದಾರೆಂದು ಅಲ್ಲಿನ ಪ್ರಜೆಗಳು ತಿಳಿದು ಗಾಬರಿ ಪಡಲಾರಂಭಿಸಿ ದರು ಕೆಲವು ಮುಖಂಡರು ಸೇರಿ, ತಮ್ಮ ದೊರೆಯನ್ನೂ ಮಂತ್ರಿ ಸಾಮಾಜಿಕರನ್ನೂ ಮುಂದಿನ ಜನವರಿ ೨ ನೆ ತಾರೀಖಿನ ದಿನ ಮದ್ದಿನ ಗುಂಡುಗಳಿಟ್ಟು ಕೊಂದುಬಿಡಬೇಕೆಂದು ಮಸಲತ್ತು ಮಾ ಡಿದರು. ಆದರೆ ಕಳೆದ ನೊವೆಂಬರ್ ೧೭ ನೆ ತಾರೀಖಿನ ದಿನ ಸರ್ಕಾ

ರದವರಿಗೆ ಈ ಫಿತೂರಿಯು ಗೊತ್ತಾಯಿತು. ಅವರು ಹೋಗಿ ಆ ದುಷ್ಟರ ಸಭೆಮನೆಯನ್ನು ಶೋಧನೆ ಮಾಡಿದಾಗ ಅನೇಕ ಮದ್ದಿನ ಗುಂಡುಗಳು ದೊರಕಿದವು. ಆ ಪೈಕಿ ಒಂದು ಗುಂಡು ಹಾರಿ ಇಬ್ಬರು ಪೋಲೀಸು ಮನುಷ್ಯರು ಆ ಕ್ಷಣ ಮೃತಪಟ್ಟರು. ಸರ್ಕಾರದವರು ಮೂರು ಜನ ಮುಖಂಡರನ್ನು ದಸ್ತಗಿರಿ ಮಾಡಿರುತ್ತಾರೆ.

❦❦❦

ಕೋಟೀಶ್ವರರೆಂತಲೂ ಧರ್ಮಿಷ್ಠರೆಂತಲೂ ಪ್ರಖ್ಯಾತಿಪಡೆದಿರುವ ಮೆ॥ ರಾಕ್‌ಫೆಲರ್‌ಯವರು ಅಮೇರಿಕದ ಮುಖ್ಯನಗರವಾದ ನ್ಯೂಯಾರ್ಕ್ ಪಟ್ಟಣದಲ್ಲಿ ಒಂದು ವಿದ್ಯಾನಿಲಯದ ಮೂಲಧನಕ್ಕೆ ೩೬ ಲಕ್ಷ ರೂಪಾಯಿ ಧರ್ಮಕೊಟ್ಟಿದ್ದರು. ಈಚೆಗೆ ಅದೇ ವಿದ್ಯಾಶಾಲೆಗೆ ಇನ್ನೂ ೩೬ ಲಕ್ಷ ರೂಪಾಯಿ ಕೊಟ್ಟಿದ್ದಾರೆಂದು ತಿಳಿಯುವುದು.

❦❦❦

ಅಮೇರಿಕದ ಕೆಲವು ಬ್ಯಾಂಕುಗಳು ಮುಳುಗಿಹೋದವೆಂತಲೂ ಅವುಗಳ ಮುಖಂಡರ ಪೈಕಿ ೧೮ ಮಂದಿ ಆತ್ಮಹತ್ಯಮಾಡಿಕೊಂಡರೆಂತಲೂ ತಿಳಿಸಿದೆವಷ್ಟೆ. ಬ್ಯಾಂಕಿನ ಹಣ ತಿಂದುಹಾಕಿದರೆಂದು ಸರ್ಕಾರದವರು ಒಂದು ಬ್ಯಾಂಕಿನ ಡೈರೆಕ್ಟರುಗಳನ್ನು ದಸ್ತಗಿರಿಮಾಡಿದ್ದರು. ಈ ಪೈಕಿ ನಾಲ್ಕು ಮಂದಿ ಆತ್ಮಹತ್ಯಮಾಡಿಕೊಂಡರೆಂದು ತಂತೀವರ್ತಮಾನಬಂದಿದೆ.

❦❦❦

ಫ್ರಾನ್ಸ್ ಸಂಸ್ಥಾನದಲ್ಲಿ ವರ್ತಕರು ಸೇರಿ ದಿನಸಿ ಮೊದಲಾದ ವ್ಯಾಪಾರ ವಸ್ತುಗಳ ಧಾರಣೆಮಾಸಿಗಳನ್ನು ಗೊತ್ತುಮಾಡುವಂಥಾ ಕಟ್ಟೆಗಳಿಗೆ ಹಾಕಿರುವ ಕಂದಾಯವನ್ನು ಹೆಚ್ಚಿಸಿ, ಅಲ್ಲಿ ಸೇರತಕ್ಕವರಿಂದ ವಸೂಲ್ಮಾಡಬೇಕಾದದ್ದು ಅವಶ್ಯವೆಂದು ಅಲ್ಲಿನ ಮಂತ್ರಿ ಸಭೆಯವರು ಚರ್ಚೆಮಾಡಿ ಗೊತ್ತುಮಾಡಿದಾರೆ. ನಮ್ಮ ದೇಶದಲ್ಲೂ ಇಂಥಾ ಕಂದಾಯವನ್ನು ಹಾಕುವುದು ತುಂಬಾ ಒಳ್ಳೇದೆಂದು ಉತ್ತರದೇಶದ ಪತ್ರಿಕೆಯೊಂದು ಸೂಚಿಸಿರುತ್ತದೆ.

❦❦❦

ಅಮೇರಿಕಕ್ಕೆ ಸೇರಿದ ನ್ಯೂಜರ್ಸಿ ಡಿಸ್ಟ್ರಿಕ್ಟಿನಲ್ಲಿ ಕೆಲವು ಕಾಲದಿಂದ ಒಂದು ಕಂಪನಿ ಏರ್ಪಾಡಾಗಿ, ವಿದ್ಯುಚ್ಛಕ್ತಿಯ ಸಹಾಯದಿಂದ ಓಡತಕ್ಕ ಟ್ರಾಮ್ ಗಾಡಿಗಳನ್ನು ನಡಿಸಿ ಹಣ ಉತ್ಪತ್ತಿಮಾಡಿ, ಷೇರುದಾರರಿಗೆ ಲಾಭವನ್ನು ಹಂಚಿಕೊಡುತ್ತಿತ್ತು. ಈಗ ಈ ಕಂಪನಿಯು ದಿವಾಳಿಯಾಯಿತೆಂತಲೂ, ಅದರಿಂದ ನಾಲ್ಕು ಕೋಟಿ ದ್ರವ್ಯ ಮುಳುಗಿಹೋಯಿತೆಂತಲೂ, ಸರ್ಕಾರದವರು ಕಂಪನಿಯ ಆದಾಯವ್ಯಯಗಳನ್ನು ತನಿಖೆಮಾಡಲು ಒಬ್ಬ ಸರ್ಕಾರಿ ಅಧಿಕಾರಿಯನ್ನು ನೇಮಕ ಮಾಡಿರುತ್ತಾರೆಂತಲೂ ತಂತೀ ವರ್ತಮಾನ ಬಂದಿದೆ. ಈ ಕಂಪನಿಯಲ್ಲಿ ಹಣ ಹಾಕಿದ್ದ ಅನೇಕ ಜನರು ತಮ್ಮ ಹಣ ಹೋದದ್ದಕ್ಕಾಗಿ ತುಂಬಾ ಪರಿತಾಪಪಡುತ್ತಿದಾರೆ.

❦❦❦

ಫ್ರಾನ್ಸ್ ಸಂಸ್ಥಾನದಲ್ಲಿ ರೋಮನ್ ಕ್ರೈಸ್ತ ಪಾದ್ರಿಗಳು ತಮ್ಮ ಮತದ ಮುಖ್ಯ ಅಧ್ಯಕ್ಷರಾದ ಪೋಪ್ ಸ್ವಾಮಿಗಳಿಗೆ ಒಂದು ವಿಜ್ಞಾಪನಾ ಪತ್ರಿಕೆಯನ್ನು ಬರೆದು, ೩,೦೦೦ ಮಂದಿ ಅದಕ್ಕೆ ರುಜು ಹಾಕಿ ಒಪ್ಪಿಸಿರುತ್ತಾರೆ. ಅದರಲ್ಲಿ ಈ ವೈದಿಕ ಪಾದ್ರಿಗಳು ಮಾಡಿಕೊಂಡಿರುವ ಅಂಶವೇನೆಂದರೆ—ರೋಮನ್ ಕ್ರೈಸ್ತ ಪಾದ್ರಿಗಳಾದ ನಾವು ಮದುವೆಮಾಡಿಕೊಳ್ಳಕೂಡದೆಂದು ಮೊದಲಿನ ಪೋಪ್ ಸ್ವಾಮಿಗಳು ಆಜ್ಞೆ ಮಾಡಿರುತ್ತಾರೆಯೇ ಹೊರತಾಗಿ, ವೈದಿಕರು ಮದುವೆಮಾಡಿಕೊಳ್ಳಕೂಡದೆಂಬುವುದೇನೂ ದೇವರ ನಿಯಾಮಕವಲ್ಲ. ಇಂಥಾ ಆಜ್ಞೆಯಿಂದ ತುಂಬಾ ಹಾನಿಯುಂಟಾಗುತ್ತಿರುವುದು. ಇದರಿಂದ ಪಾದ್ರಿಗಳು ತಮ್ಮ ಉದ್ಯೋಗವನ್ನು ತೃಪ್ತಿಕರವಾಗಿ ನಡಿಸಿಕೊಂಡುಹೋಗಲು ಅಡಚಣೆಯಾಗಿದೆ. ಆದಕಾರಣ ಆ ಆಜ್ಞೆಯನ್ನು ವಜಾಮಾಡಿ, ನಮ್ಮ ಪ್ರಾರ್ಥನೆಯನ್ನು ನೆರವೇರಿಸಿಕೊಡಬೇಕೆಂತಲೂ, ನಾವುಗಳು ವಿವಾಹಿತರಿಂದ ಸಂಸಾರಿಗಳಾಗಿರುವಂತೆ ಅನುಜ್ಞೆ ದಯಪಾಲಿಸಬೇಕೆಂತಲೂ ಬೇಡುತ್ತೇವೆ ಎಂಬುದೇ.

❦❦❦

ನಿವೇಡಾ ದೇಶದ ಚಿನ್ನದ ಗಣಿಗಳಲ್ಲಿ ಕೆಲಸ ಮಾಡತಕ್ಕವರಿಗೆ ಯಜಮಾನರು ಸಂಬಳ ಬಟವಡೆ ಮಾಡುವಾಗ್ಗೆ ನಾಣ್ಯಗಳನ್ನು ಕೊಡದೆ ಚೆಕ್ಕುಗಳನ್ನು ಬರೆದುಕೊಡುತ್ತಾ ಬಂದಿದಾರೆ. ಈ ಚೆಕ್ಕುಗಳಿಗೆ ಬ್ಯಾಂಕಿನಲ್ಲಿ ಹಣವಿಲ್ಲದ್ದರಿಂದ ಚಿಲ್ಲರೆ ದೊರಕುವುದು ತುಂಬಾ ಪ್ರಯಾಸವಾಗಿ, ಆ ಕೆಲಸಗಾರರ ಜೀವನಕ್ಕೇನೇ ತೊಂದರೆಯುಂಟಾಗಿದೆ. ಆದಕಾರಣ ಆ ಜನವೆಲ್ಲಾ ಯಜಮಾನರ ಮೇಲೆ ಕೋಪಮಾಡಿಕೊಂಡು, ಅನೇಕ ದಾಂಧಲೆಗಳನ್ನು ನಡಿಸಿದರು. ಈ ಗಲಭೆಯನ್ನು ಶಮನಮಾಡುವುದಕ್ಕೆ ಸ್ಯಾನ್‌ಫ್ರಾನ್ಸಿಸ್ಕೋದಿಂದ ಸರ್ಕಾರದವರು ಸೈನಿಕರನ್ನು ಕಳುಹಿಸಿಕೊಟ್ಟಾಗ, ಆ ಕೆಲಸಗಾರರು ಆ ಸೈನಿಕರು ಬರತಕ್ಕ ರೈಲ್ ಮಾರ್ಗದ ಕೆಳಗಡೆ ಉದ್ದಕ್ಕೂ ಸುರಂಗ ಕೊರೆದು ಮದ್ದುಗುಂಡು ತುಂಬಿ, ಕಂಬಿಗಳನ್ನೆಲ್ಲಾ ಹಾರಿಸಿಬಿಡಬೇಕೆಂದು ಮುಸಲತ್ತು ಮಾಡಿಕೊಂಡರು. ದೇವರ ದಯದಿಂದ ಕೆಲವು ರೈಲ್ವೆ ನೌಕರರು ಈ ಫಿತೂರಿಯನ್ನು ತಿಳಿದು, ಅಂಥಾ ಅನಾಹುತವಾಗುವುದಕ್ಕೆ ಮೊದಲೇ ಅಧಿಕಾರಿಗಳಿಗೆ ಹೋಗಿ ಹೇಳಿಬಿಟ್ಟದ್ದರಿಂದ ಆ ಸೈನಿಕರಿಗೆ ಯಾವ ಅಪಾಯವೂ ಆಗದೆ ನಿವಾರಣೆಯಾಯಿತು.

ತಾಲ್ಲೋಕು ವರ್ತಮಾನಗಳು.

ತಿಪಟೂರು.—ಮಳೆಯಿಲ್ಲದೆ ಒಣಗಿ ಹೋದಂಥಾ ಪೈರುಗಳನ್ನು ಕಟಾವ್ ಮಾಡಿದರು. ಮೋಡಮಾಡುತ್ತಾ ಶೀತಗಾಳಿ ಬೀಸುತ್ತದೆ. ಛಳಿ ಜ್ವರಾದಿಗಳು ಬಹಳವಾಗಿದೆ. ಡಾಕ್ಟರ್ ಪಾಪಯ್ಯನವರು ಕಾಯಿಲೆಸೆಯಿಂದ ರಜಾದ ಮೇಲಿರುತ್ತಾರೆ. ಮೆ॥ ತಂಗಾಮುಟ್ಟಿಯವರು ಚಟುವಟಿಕೆಯಿಂದಲೂ ಪ್ರೀತಿಯಿಂದಲೂ ಕೆಲಸ ಮಾಡುತ್ತಿರುವರೆಂದು ತಿಳಿಯಬಂತು.—ಪೋಸ್ಟ್‌ಮಾಸ್ಟರ್ ಮೆ॥ ದಾಮೋದರನಾಯ್ಡುರವರು ಕಳೆದ ೩ ವರ್ಷಗಳಿಂದಲೂ ಪ್ರಜಾನುರಾಗಿಗಳಾಗಿ ಕೆಲಸಮಾಡಿ, ಪ್ರಮೋಷನ್ ಮೇಲೆ ಸೀರ್ಯಕ್ಕೆ ವರ್ಗವಾಗಿ ಹೋದರು. ಇವರ ತರುವಾಯ ೮—೧೦ ದಿನಗಳೊಳಗೆ ಇನ್ನೊಬ್ಬರು ಮಾಸ್ತರು ಬಂದಂತಾಯಿತು.—ಕಚೇರಿಯ ಸಿಬ್ಬಂದಿಗಳೊಳಗೆ ಕೆಲವು ಬದಲಾವಣೆಗಳಾಯಿತೆಂದು ತಿಳಿಯಿತು.—ಶಾನುಭೋಗ ದೇಶಮುಖಿ ಸಂಕಟಪ್ಪನವರು ೩ ತಿಂಗಳು ರಜಾ ತೆಗೆದುಕೊಂಡು ಬಿಟ್ಟು ದೈವಾಧೀನರಾದರು. ಇವರು ಬಹು ಧಾರ್ಮಿಕರು. ಇವರ ಅಕಾಲಮರಣದಿಂದ ಬಹಳ ವ್ಯಸನವಾಗಿರುತ್ತದೆ.—ದಿನಸಿ ಧಾರಣೆಯು ದಿನದಿನಕ್ಕೆ ಏರುತ್ತದೆ. ಬಡವರು ಕಣ್ಣೀರುಬಿಡುವ ಕಾಲ ಬಂತಲ್ಲಾ ಎಂದು ವ್ಯಥೆಪಡುತ್ತಿದಾರೆ. ಸರ್ಕಾರದವರು ಈ ಕಾಲದಲ್ಲಿ ಒಂದು ಗೊತ್ತಾದ ಧಾರಣೆಯನ್ನು ಏರ್ಪಡಿಸಿದರೆ ಉತ್ತಮವಾಗಿ ತೋರುತ್ತೆ.—ಪ್ರಯಾಣಿಕರ ಸೌಕರ್ಯಕ್ಕಾಗಿ ಅನೇಕ ಕಡೆ ಮುಸಾಫರಿ ಬಂಗ್ಲೆ ಮತ್ತು ಸತ್ರಗಳು ಸ್ಥಾಪನೆಯಾಗಿವೆ. ಹುಳಿಯಾರಿನಲ್ಲಿರುವ ಸತ್ರದಲ್ಲಿ ಪ್ರತಿ ಕೊಠಡಿಗೂ ಬೀಗ ಹಾಕಿರುತ್ತೆ. ಮತ್ತು ಅಧಿಕಾರಿಗಳೂ ಉತ್ತಮವರ್ಣದವರೂ ಅಲ್ಲಿ ಇಳಿದುಕೊಂಡು ಅಡಿಗೆ ಮುಂತಾದ್ದು ಮಾಡಬಹುದು ಎಂದು ಶೇಕ್‌ದಾರರ ಅಪ್ಪಣೆಯನ್ನು ಸತ್ರದ ಕಾವಲುಗಾರನು ತಿಳಿಸಿದನು. ಒಂದು ಕೊಠಡಿಯನ್ನೂ ತೆಗೆದೂ ಕೊಡಲಿಲ್ಲ. ಸರ್ಕಾರದವರು ಇಂಥಾ ತೊಂದರೆಗಳನ್ನು ತಪ್ಪಿಸಿ ಸದರಿ ಶೇಕ್‌ದಾರರನ್ನು ಎಚ್ಚರಪಡಿಸಬೇಕಾಗಿದೆ.

ಚನ್ನಪಟ್ಟಣ.—ಇಲ್ಲಿ ಹವಾ ಬದಲಾಗಿ ರಾತ್ರಿಯಲ್ಲಿ ತುಂಬಾ ಚಳಿಯಾಗುತ್ತದೆ. ಹಗಲು ಬಿಸಲಿನ ತಾಪ ಹೆಚ್ಚು. ಆಗಾಗ್ಗೆ ಮಳೆ ಮೋಡಗಳಾಡುತ್ತಾ ತುಂತುರು ಹನಿಗಳೂ ಬೀಳುತ್ತಿವೆ. ಪ್ಲೇಗ್ ರೋಗವು ಈಗ ಸ್ವಲ್ಪ ಕಡಮೆಯಾಗಿದೆ. ಈ ವಾರ ಕ್ಯಾಂಪುಗಳಲ್ಲಿ ಮಾತ್ರ ಮೂರು ಮರಣಗಳಾದವು. ಇಲ್ಲಿನ ಶಿರಸ್ತೇದಾರರು ಪ್ಲೇಗಿನಲ್ಲಿ ಕಾಲವಾದರು.—ಪ್ಲೇಗಿನದೆಸೆಯಿಂದ ಜೋಪಡಿಗಳಿಗೆ ವಾಸಮಾಡುವ ಜನರು ಸರ್ಕಾರದವರ ಅಪ್ಪಣೆ ಪಡೆಯದೆ ಊರೊಳಕ್ಕೆ ಬರಬಾರದೆಂತಲೂ ಹಾಗೆ ಬಂದಲ್ಲಿ ಶಿಕ್ಷೆಗೆ ಗುರಿಯಾಗುವರೆಂತಲೂ ಟಾಂ ಟಾಂ ಮೂಲಕ ಸಾರಿಸೋಣವಾಯಿತು. ಆದರೂ ಅನೇಕ ಜನರು ಚಳಿಗಾಳಿಯನ್ನು ಸಹಿಸಲಾರದ್ದಕ್ಕೆ ಊರು ಮನೆ ಸೇರುತ್ತಲಿದಾರೆ. ಈಗಾಗಲೇ ೩೦—೪೦ ಮನೆಗಳ ವರೆಗೂ ಮುಸಲ್ಮಾನ ಜನರು ಬಂದಿರುವದಾಗಿ ತಿಳಿದು ಬರುತ್ತೆ. ನಮ್ಮ ಅಮಲ್ದಾರರು ಊರಿನಲ್ಲಿದಾರೆಂಬ ಭಯದಿಂದಲೋ ಏನೋ ಜನರು ಸರ್ಕಾರದವರ ಹುಕುಮನ್ನು ಲಕ್ಷಿಸದವರಾಗಿದಾರೆ. ಒಬ್ಬನೊಬ್ಬ ಸಾಹುಕಾರರು ತಮ್ಮ ಅಂಗಡಿಯನ್ನು ತೆರೆದದ್ದನ್ನು ನೋಡಿ ಯಾಕೆ ತೆಗೆದಿದ್ದೀರಿ ಎಂಬದಾಗಿ ಅಮಲ್ದಾರರು ಕೇಳಿದಾಗ್ಗೆ ಸಾಹುಕಾರರು ಮೇಲಕ್ಕೆ ಬರೆಯಿರಿ ಎಂದು ಉತ್ತರ ಕೊಟ್ಟರಂತೆ. ಅಮಲ್ದಾರರು ಡೆಪ್ಯುಟಿ ಕಮಿಷನರವರ ನೋಟೀಸಿಗೆ ತಂದು ಸಾಹುಕಾರರಿಗೆ ಕೆಲವರಿಗೆ ಶಿಕ್ಷೆ ಆದೀತೆಂದು ತೋರುತ್ತೆ.—ಪ್ಲೇಗಿನ ಕಾಲವಾದುದರಿಂದ ಸರ್ಕಾರದವರು ಪೋಲೀಸ್ ಸಿಬ್ಬಂದಿಯನ್ನು ಹೆಚ್ಚಿಸಲಾಯಿತು. ಸರ್ಕಾರದ ಹಣ ಪ್ರತಿ ತಿಂಗಳಲ್ಲೂ ಖರ್ಚಾಗುತ್ತೇ ಹೊರತು ಪೋಲೀಸಿನವರು ಎಲ್ಲಿದಾರೋ ಧಫೇದಾರರು ಇಬ್ಬರು ಮೂವರೂ ಯಾವ ಕೆಲಸ ಮಾಡುತ್ತಾರೋ ಗೊತ್ತಾಗದು. ಕಳೆದವಾರ ಬೆಂಗಳೂರಿನಿಂದ ಬಂದ ಮೆ॥ ಥಾಸಿಗ್‌ಯವರು ತಮ್ಮ ಕೆಲವು ಪದಾರ್ಥಗಳನ್ನು ಕಳೆದುಕೊಂಡರು. ಪೋಲೀಸಿನವರು ಪತ್ತೆಹಚ್ಚುತ್ತಿದಾರೆ.—ಈಚೆಗೆ ಇಸ್ಪೀಟಾಟವು ಹೆಚ್ಚು ರೂಢಿಯಾಗುತ್ತಿದೆ. ಕೆಲವರು ಕ್ಯಾಂಪುಗಳಲ್ಲಿ ಜೇಸರ ಕಳೆಯುವದಾಗಿ ಒಂದೊಂದೇ ಕಾಸಿನಮೇಲೆ ಆಡುತ್ತೇವಷ್ಟೆ ಎಂದು ಹೇಳುವರು. ಮುಖ್ಯವಾಗಿ ನಿಡಗಟ್ಟದ ಸಂತೆಯಲ್ಲಿ ಮೂರೆಲೆ ಆಟಗಾರರಿಂದ ಬಹುಜನ ಕೆಟ್ಟು, ಮೋಸ ಹೋಗುತ್ತಿದಾರೆ. ಹಳ್ಳಿಯವರ ಮನೆ ಸಾಮಾನುಗಳಿಗಾಗಿ ತಂದ ಹಣವನ್ನು ಈ ಮಾಯಕಾರರ ಬಾಯಿನಲ್ಲಿ ಹಾಕಿ ದುಃಖಪಡುವರು. ಸರ್ಕಾರದವರು ಈ ವಿಷಯದಲ್ಲಿ ಕಠಿಣವಾದ ಗಮನ ಕೊಡದೇಹೋದಲ್ಲಿ ತುಂಬಾ ಹಾನಿಗೆ ಕಾರಣವಾದೀತು. ಸಂತೆ, ಜಾತ್ರೆಗಳಲ್ಲಿ ಪೋಲೀಸಿನವರಿಗೆ ಕಾಂಚಾಣಕ್ಕೆ ಮಾರ್ಗವಾದರೆ ಆಟದವರಿಗೇನೂ ಕಡಮೆಯಿಲ್ಲ.

ಖಾತ್ರಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಖಾತ್ರಿಗಳಿಗೆ ನಾವು ಎಡೆ ಕೊಡಲಾರೆವು. ಆದಕಾರಣ ಖಾತ್ರಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಖಾತ್ರಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ಎಡೆ ಕೊಡಲಾರೆವು.

ಖಾತ್ರಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿಟರ್]

["ಒಬ್ಬ ವೈಶ್ಯ" ಎಂಬ ಖಾತ್ರಿದಾರರು ಈ ವಾರ ನಮ್ಮಲಿಗೆ ಒಂದು ಕಾಗದವನ್ನು ಬರೆದಿದಾರೆ. ವಿಷಯವು ಕಳೆದ ವಾರ ನಮ್ಮ ಪತ್ರಿಕೆಯಲ್ಲಿ "ಸತ್ಯವಾದಿ"ಯು ಬರೆದಿದ್ದ ವೈಶ್ಯರ ವಿಚಾರವಾದ ಖಾತ್ರಿಯನ್ನು ಕುರಿತದ್ದು. ಕೋಮಟಿಗಳು ವೈಶ್ಯರೇ ಅಲ್ಲವೇ ಎಂಬ ವಿಷಯವನ್ನು ಕುರಿತು ನಾವು ಚರ್ಚೆಮಾಡಲು ಕುತೂಹಲಪಡುವವರಾಗಿಲ್ಲ. ಕೆಲವು ಮಂದಿ ಕೋಮಟಿಗಳು ಹೇಳುವುದನ್ನು ಮಾಡಿರುವುವನ್ನು "ಸತ್ಯವಾದಿ"ಯು ಯಥಾರ್ಥವಾಗಿ ವಿವರಿಸಿರುತ್ತಾರೆಂದು ನಂಬಿರುವೆವು. ಹಿಂದಿನ ವಾರ ಒಬ್ಬ ಕೋಮಟಿಯು ನಮಗೆ ಒಂದು ಖಾತ್ರಿಯನ್ನು ಬರೆದಿದ್ದರು. ಅದರಲ್ಲಿ ಅವರು—ಕೋಮಟಿಗಳು ತಮ್ಮಲ್ಲೇ ಗುರುಪೀಠವನ್ನು ಏರ್ಪಡಿಸಿಕೊಳ್ಳಬೇಕೆಂತಲೂ ತಮ್ಮಲ್ಲೇ ಪುರೋಹಿತರನ್ನು ಮಾಡಿಕೊಳ್ಳಬೇಕೆಂತಲೂ ಬರೆದಿದ್ದರು. ಈ ಖಾತ್ರಿಯನ್ನು ನಾವು ಪ್ರಕಟಿಸಲಿಲ್ಲ. "ಸತ್ಯವಾದಿ"ಯು ಬರೆದ ಖಾತ್ರಿಯ ಮುಖ್ಯಾಭಿಪ್ರಾಯವು ಇಷ್ಟೇ.—ವೈಶ್ಯಕುಲೋತ್ಪತ್ತಿಯನ್ನಾಗಲಿ ಜಾತಿ ನಾರಧಾರಣೆಯನ್ನಾಗಲಿ ಕುರಿತು ಜಿಜ್ಞಾಸೆಮಾಡುವುದಕ್ಕಿಂತಲೂ ಸತ್ಯಸಂಧರಾಗಿರುವುದೂ ಸ್ವಯಂಭೂಷಣೆ ರಹಿತರಾಗಿರುವುದೂ ಉತ್ತಮೋತ್ತಮವೂ ಪರಮಾವಶ್ಯವೂ ಆಗಿರುತ್ತದೆ ಎಂಬುದೇ.—ಎಡಿ]

ಕರೆಸ್‌ಪಾಂಡೆನ್ಸ್

ಇನಾಕ್ಯುಲೇಷನ್ ಇಲಿ ಪ್ಲೇಗ್ ಚಿಮುಟಿನ ಫಲಿತಾಂಶವು

ಅಯ್ಯಾ,

ಕಳೆದ ನವಂಬರು ೫॥ ೨೮ರ ತಮ್ಮ ಪತ್ರಿಕೆಯ ಮೂಲಕ ಘನವೆತ್ತಿದ ಚಕ್ರವರ್ತಿ ಸಾರ್ವಭೌಮರೇ ಆದಿಯಾಗಿ ಬೊಂಬಾಯಿ ಅಧಿಪತ್ಯದ ಗವರ್ನರುಗಳೇ ಮೊದಲಾದವರು ಪ್ಲೇಗಿನಿಂದ ಪ್ರತ್ಯಕ್ಷ ದುಃಖಪಟ್ಟ ವಿಷಯವಾಗಿ ಕೇವಲ ಸಂತಾಪಪಡುವರಲ್ಲದೆ ಈ ವ್ಯಾಧಿಯನ್ನು ತಡೆಯಬಹುದಾದ ಪ್ಲೇಗ್ ಚಿಮುಟಿನ ವಿಷಯ ಬಹಳವಾಗಿ ತಿಳುವಳಿಕೆ ಕೊಡುತ್ತಾ ಬರುತ್ತಿದಾರೆಂಬುವದು ಸಹಜವಾಗಿದೆ. ಆದರೂ ಇನ್ನೂ ಲಕ್ಷೋಪಲಕ್ಷ ಜನರು ಅದನ್ನು ನಂಬುವ ವಿಷಯದಲ್ಲಿ ಹಿಂದಾಳುಗಳಾಗಿ ಸಂಶಯದಲ್ಲಿಯೋ ಭಯದಲ್ಲಿಯೋ ಇದಾರೆ. ಈ ವಿಷಯದಲ್ಲಿ ಈ ಸಾರಿ ಈ ನಮ್ಮ ಚನ್ನಪಟ್ಟದಲ್ಲೇ ಅನುಭವಕ್ಕೆ ಬಂದಿರುವ ಕೆಲವು ಸಂಗತಿಗಳನ್ನು ವಾಚಕರ ಗಮನಕ್ಕೆ ತಂದರೆ ಅವರುಗಳಲ್ಲಿರುವ ಸಂಶಯ ಭಯಾದಿಗಳು ನೀಗಬಹುದೆಂಬದಾಗಿ ನಂಬುತ್ತೇನೆ.

ಈ ಚನ್ನಪಟ್ಟದಲ್ಲಿ ಸುಮಾರು ೧೬ ಸಹಸ್ರ ಪ್ರಜೆಗಳಿದಾರೆ. ಈ ಪೈಕಿ ಈ ಸಾರಿ ಪ್ಲೇಗ್ ಪ್ರಾರಂಭವಾದಾಗ್ಗೆ ಸುಮಾರು ೧,೧೬೩ ಜನ ಮಟ್ಟಿಗೆ ಇನಾಕ್ಯುಲೇಷನ್ ಎಂಬ ಪ್ಲೇಗ್ ಚಿಮುಟನ್ನು ಹಾಕಿಸಿಕೊಂಡರು. ಇವರುಗಳಲ್ಲಿ ಕ್ಯಾಂಪುಗಳಿಗೆ ಹೋದವರನ್ನು ಬಿಟ್ಟು, ಇಲ್ಲಿನ ಪಾಯಿತೆ ಮುಸಲ್ಮಾನರಲ್ಲಿ ಚಿಮುಟು ಹಾಕಿಸಿಕೊಂಡ ೨೫೩ ಜನರು ತಮ್ಮ ತಮ್ಮ ಊರು ಮನೆಗಳಲ್ಲೇ ವಾಸವಾಗಿದ್ದರು. ಈ ಪೈಕಿ ೬೯ ಜನರಿಗೆ ಪ್ಲೇಗ್ ರೋಗವು ತಗಲಿತು. ಈ ಪೈಕಿ ೩ ಜನರು ಮಾತ್ರ ಮೃತಪಟ್ಟಿದಾರೆ. ಅಲ್ಲದೆ, ಈ ಚಿಮುಟನ್ನು ಹಾಕಿಸಿಕೊಂಡು ರೋಗದಲ್ಲಿ ಬಿದ್ದವರ, ಮತ್ತು ಚಿಮುಟು ಹಾಕಿಸಿಕೊಳ್ಳದೆ ಬಿದ್ದವರ ಸ್ಥಿತಿಗಳಲ್ಲಿ ಬಹಳ ವ್ಯತ್ಯಾಸಗಳು ತಿಳಿದುಬಂದಿರುತ್ತೆ. ಚಿಮುಟು ಹಾಕಿಸಿಕೊಳ್ಳದವರು ಪೈತ್ಯ ಹಿಡಿದವರಾಗಿ, ಅನ್ನಪಾನಾದಿಗಳು ಸೇರದೆ, ಮಾತನಾಡಲು ನಿಶ್ಶಕ್ತರಾಗಿ ಮರಣವನ್ನೇ ಹೊಂದುವರು. ಚಿಮುಟು ಹಾಕಿಸಿಕೊಂಡವರು ಪರೋ, ಅವರಿಗೆ ಜ್ವರದ ಕಾಟವಿಲ್ಲ. ಗಡ್ಡೆಗಳಿದ್ದರೂ ಅಷ್ಟು ಬಾಧೆಯಿಲ್ಲ. ಅನ್ನಪಾನಾದಿಗಳಿಗೆ ಬಹು ಮಟ್ಟಿಗೂ ಅವಕಾಶವುಂಟು. ಇವರುಗಳೆಲ್ಲಾ ಬೇಗ ಗುಣ ಹೊಂದಿದರು. ಗರ್ಭಿಣಿಯರಿಗೂ ಈ ಚಿಮುಟು ಪ್ರಯೋಜನವೇ ಆಗಿರುತ್ತೆ. ಇಲ್ಲಿನ ಮುಖ್ಯ ಮಸೀದಿ ವಿಷಯದ ಸೈಯ್ಯದ್ ಜೈನುಲ್ ಅಬ್ದೀನ್ ರ ಪತ್ನಿಗೆ ಸುಮಾರು ಎಂಟು ತಿಂಗಳಾಗಿತ್ತು. ಅವರ ಇಬ್ಬರು ಮಕ್ಕಳಿಗೆ ರೋಗ ತಗಲಿ ಮೃತಪಟ್ಟರು. ಆಗ್ಗೆ ಅವರು ಈ ಗರ್ಭಿಣಿಯ ವಿಷಯ ಚಿಂತಿಸಿ, ಜನಾನಾ ಆಸ್ಪತ್ರೆಯಲ್ಲಿನ ಡಾಕ್ಟರ್ ಲಾಕ್‌ವುಡ್‌ಯವರ ಬಳಿಗೆ ಕರೆತರಲು ಅವರು ಬಹು ಚಮತ್ಕಾರವಾಗಿ, ಆ ಗರ್ಭಿಣಿಗೆ ಎಷ್ಟು ಚಿಮುಟು ಹಾಕಬೇಕಾಗಿತ್ತೋ ಅಷ್ಟರಲ್ಲಿ ಅರ್ಧವನ್ನು ಆಗಲೇ ಹಾಕಿ, ಮತ್ತೆ ಅರ್ಧವನ್ನು ಒಂದು ವಾರದ ನಂತರ ಎರಡನೇ ಸಾರಿ ಹಾಕಿದರು. ಅವರೂ ಅಲ್ಲಿಗೂ ಪ್ಲೇಗ್ ತಗಲಿತು. ಅವರೂ ದೇವಾನುಗ್ರಹದಿಂದ ಈಗ ಸುರಕ್ಷಿತಳಾಗಿದಾರೆ. ಈ ಪ್ಲೇಗ್ ಚಿಮುಟಿನ ವಿಷಯ ಬಹು ದಿವಸಗಳಿಂದಲೂ ಹೇಳುತ್ತಾ ಬಂದದ್ದು ಈಗ ನಮ್ಮ ಅನುಭವಕ್ಕೇನೇ ಬಂದಂತಾಯಿತು. ಈಗ ಇಲ್ಲಿನ ನಮ್ಮ ದಾವೂದ್ ಮುಸಲ್ಮಾನರ ಪೈಕಿ ಅನೇಕರು ಸಹ ಪ್ಲೇಗಿಗೆ ಪ್ಲೇಗ್ ಚಿಮುಟು ಒಳ್ಳೇದೇ ಸರಿ ಎಂಬ ತಮ್ಮ ಅನುಭವವನ್ನು ಹೇಳುವವರಲ್ಲಿ ಸಂತೋಷಪಡುವವರಾಗಿದಾರೆ. ಹೀಗಿರುವದರಿಂದ ಉಳಿದ ನಮ್ಮ ಸ್ನೇಹಿತರು ಸ್ವದೇಶೀಯರೂ ಈ ವಿಷಯದಲ್ಲಿ ನನ್ನ ಅನುಭವವನ್ನು ಧ್ಯಾನಕ್ಕೆ ತಂದುಕೊಂಡು ಧೈರ್ಯಗೊಂಡಾರೆಂಬದಾಗಿ ನಂಬುತ್ತೇನೆ.

ಚನ್ನಪಟ್ಟದ ನಿವಾಸಿ

ಪ್ರಕಟನೆಗಳು

ನೀವೇ ವಿಮಾಸಿಸಿ ನೋಡಿರಿ

93 16

ಯಾವದು ಉತ್ತಮ? ಸ್ವತಃ ಪರೀಕ್ಷಿಸಿ ನೋಡುವದೋ ಅಥವಾ ಕಲ್ಕತ್ತೆಯ ಒಬ್ಬ ಪ್ರಸಿದ್ಧ ಡಾಕ್ಟರರ ಅನುಭವವನ್ನು ನಂಬುವದೋ?

ಸಂಶಯವಾಗಿದ್ದರೆ ಪರಿಶೋಧನೆಮಾಡಿ ಹೇಳಿಕೆಗೆ ಸರಿಯಾಗಿ ಉಂಟೋ ಎಂಬದನ್ನು ಖಾತ್ರಿ ಮಾಡಿಕೊಳ್ಳಬೇಕು. ಇಲ್ಲವಾದರೆ ಸಂದೇಹ ಹುಟ್ಟುವದು. ಪರಕೀಯರ ಮಾತು ಪರಿಷ್ಕಾರವಾದ ರುಜುವಾತಾಗಿರುವದಿಲ್ಲ. ಡೋನ್ಸ್‌ರ ಬ್ಯಾಕ್ ಏಕ್-ಕಿಡ್ನಿ ಪಿಲ್ಸ್‌ಗಳಿರುವ ಪ್ರತಿ ಒಂದು ಶೀಸೆಯೊಂದಿಗೆ ಸ್ವದೇಶೀಯ ಸಾಕ್ಷ್ಯವು ಇರುತ್ತದೆ. ಈ ಕೆಳಗಿನದನ್ನು ಓದಿ ನೋಡಿರಿ. ಮೆಡಿಕಲ್ ಕಾಲೇಜಿನಲ್ಲಿ ವನಸ್ಪತಿ ಶಾಸ್ತ್ರದ (ಬಾಟನಿ)-ಮುಕ್ಕೊಣನೋವಿನ ವೈದ್ಯದ ಉಪನ್ಯಾಸಕರಾಗಿಯೂ ಈಸ್ಟ್ ಎಂಡ್ ಮೆಡಿಕಲ್ ಹಾಲಿನಲ್ಲಿ ವೈದ್ಯ ಚಿಕಿತ್ಸಕರಾಗಿಯೂ, ಇರುವ ಡಾಕ್ಟರ್ ಎ. ಟಿ. ರೇ ಯವರು ಹೇಳುವದೇನಂದರೆ — ಡೋನ್ಸ್‌ರ (ಬ್ಯಾಕ್ ಏಕ್ ಕಿಡ್ನಿ ಪಿಲ್ಸ್)ಗಳು ಬೆನ್ನುನೋವು-ಮೂತ್ರಕೋಶದ ಔಷಧಿ ಗುಳಿಗೆಗಳನ್ನು ಮುಖ್ಯವಾಗಿ ಬೆನ್ನುನೋವು ಸಹಜವಾದ ಬಾಧೆಯಾಗಿರುವಲ್ಲಿ ಸ್ತ್ರೀಯರಿಗೆ ಮುಖ್ಯವಾಗಿ ಚಿಕಿತ್ಸೆ ನಡಿಸಿ ಹೆಚ್ಚು ಸಮಾಧಾನ ಪಟ್ಟಿದ್ದೇನೆ. ಸ್ತ್ರೀಯರ ಅನೇಕ ಅಸ್ವಸ್ಥಗಳು ಮೂತ್ರಪಿಂಡಗಳ ದೋಷದಿಂದಾಗುವಂಥಾದ್ದಾಗಿವೆ. ಮತ್ತು ಆ ಯಾವತ್ತು ಸಂಗತಿಗಳಲ್ಲಿ ಈ ಔಷಧದಿಂದ ತತ್‌ಕ್ಷಣವೇ ಮತ್ತು ನಿಸ್ಸಂದೇಹವಾಗಿ ಗುಣಾಂಶ ಸಿಕ್ಕುತ್ತದೆ.

ಅವು ಮೂತ್ರಕೋಶದ ಬಗ್ಗೇನೇ ಮುಖ್ಯವಾಗಿ ಉದ್ದೇಶಿಸಲ್ಪಟ್ಟ ಔಷಧವಾಗಿ ಮೂತ್ರಸಂಬಂಧವಾದ ವಿಷಪದಾರ್ಥಗಳನ್ನು ದೂರಪಡಿಸುವಲ್ಲಿ ಸಹಕಾರಿಯಾಗಿದೆ. ಈ ರೀತಿ ನಿದ್ರೆಗೇಡು, ಬೆನ್ನುನೋವು-ವಾತರೋಗ, ಮೂತ್ರಬಾಧೆ ಇವುಗಳಿಗೆ ಹೇತುವಾಗಿರುವ ರಕ್ತದಲ್ಲಿರುವ ಮಲಿನತ್ವವನ್ನು ಶುದ್ಧಿಪಡಿಸುತ್ತದೆ.

ಎಲ್ಲಾ ಔಷಧ ವರ್ತಕರಿಂದ ಮಾರಲ್ಪಡುತ್ತದೆ. ಶೀಸೆ ಒಂದಕ್ಕೆ ರೂ. ೨, ಅಥವಾ ೬ ಶೀಸೆಗಳಿಗೆ ರೂ. ೧೦-೧೮-೦, ಅಥವಾ ಮುಂಬಾಯಿಯಲ್ಲಿಯ ಡೋನ್ಸ್‌ರ ಔಷಧಗಳ ಕೋಠಿಯಿಂದಾ ಕೇಳಾ ಪಡಿಸಿ, ಕೊಳ್ಳಬಹುದು. ಪಿ. ಒ. ಬಾಕ್ಸ್. ನಂ. ೨೦, ಮುಂಬಾಯಿ.

ಇಲ್ಲಿ ನೋಡಿ!

86 24

ತುಮಕೂರು ಡಿಸ್ಟ್ರಿಕ್ಟ್ ಇಲಾಖೆಯಲ್ಲಿ ಯೂರೋಪಿಯನ್ ಮೇಸ್ತ್ರಿಗಳಿಂದ ಉತ್ತಮ ತರದ ಹಾಸನದ ಟೋಪಿಗಳು ಅತಿ ಶ್ರೇಷ್ಠವಾದ ಉಲ್ ದಾರದಿಂದ ತಯಾರಾಗುತ್ತವೆ

ಕ್ರಯ—೧೨ ಆಣೆ ಮೊದಲ್ಗೊಂಡು ೧ ರೂ ೧೨ ಆಣೆಯ ವರೆಗೆ

೧ ಡಜ಼ನ್ ಟೋಪಿಗಳನ್ನು ತೆಗೆದುಕೊಳ್ಳುವವರಿಗೆ ಶೇಕಡ ೫ ರ ಡಿಸ್ಕೌಂಟ್ ಕೊಡಲ್ಪಡುವದು

ನಮ್ಮ ವಿಳಾಸ — ಮೇನೇಜರ್

ಹಾಸನದ ಟೋಪಿ ಕಾರ್ಖಾನೆ, ಡಿಸ್ಟ್ರಿಕ್ಟ್ ಇಲಾಖೆ, ತುಮಕೂರು

ನೂತನ ಡೈರಿಗಳು.

143-2

ಈ ಕೆಳಗೆ ಕಾಣಿಸಿರುವಂತೆ ನಾಲ್ಕು ವಿಧವಾದ ಡೈರಿಗಳು ನಮ್ಮಲ್ಲಿ ಬಹು ಸುಲಭವಾಗಿ ದೊರೆಯುವವು.

		೧೦೦ ಕ್ಕೆ	೧೨ ಕ್ಕೆ	೧ ಕ್ಕೆ
೧	ಸಣ್ಣ ಸೈಜು ಸಾದಾ	೧೩-೦-೦	೧-೧೪-೦	೦-೨-೯
೨	,, ,, ಫ್ಲಾಪ್	೨೦-೦-೦	೨-೧೨-೦	೦-೪-೦
೩	ದೊಡ್ಡ ಸೈಜು ಸಾದಾ	೩೦-೦-೦	೩-೧೨-೦	೦-೫-೬
೪	,, ,, ಫ್ಲಾಪ್	೪೫-೦-೦	೫-೧೧-೦	೦-೮-೦

ನಮ್ಮ ವಿಳಾಸ — ವಾಜಿಕೋಡಿಯುಂ ಕೃಷ್ಣಯ್ಯ,

ಬುಕ್ಕು ಡಿಪೋ, ಬೆಂಗಳೂರು ಸಿಟಿ.

ಈಗಲೇ ಸೀಮೆಯಿಂದ ಬಂದಿದೆ.

117 8

೫,೦೦೦ ಹಾಸನ ಟೋಪಿ ಹೊಲಿಯುವ ಸುಪೀರಿಯರ್ ಉಲ್ಲನ್ ದಾರಗಳು. ಬಿತನೇಟು—ಮಾತ್ರ ಇದೆ—ಚಾರಿ, ಕಪ್ಪು ಕ್ರಯ

೧ ಟೋಪಿಯಾಗುವ ಉಲ್ಲನ್ ದಾರಕ್ಕೆ	೦—೮—೦
೧೦ ಟೋಪಿಯಾಗುವ ಬಂಡಲ್‌ಗೆ ೧ ಕ್ಕೆ	೩—೮—೦
ಕೊಕ್ಕೆ ಸೂಜಿ ೧ ಕ್ಕೆ	೦—೧—೬
೩೦ ಇಂಚಿನ ಬನಿಯನ್ ೧ ಕ್ಕೆ	೦—೯—೦

ಎರಡು ಕಡೆಯಲ್ಲಿ ಬರೆಯುವ ಪೋಸ್ಟ್ ಕಾರ್ಡ್ ೧೦೦ ಕ್ಕೆ ೪ ಆಣೆ. ಉಚಿತ ಸ್ಯಾಂಪಲ್ ಕಳುಹಿಸಿ ನೇತ್ರಾನಂದಕರವಾದ ೧೯೦೮ ನೆ ಇಸವಿಯ ಕ್ಯಾಲೆಂಡರ್ ಪಡೆಯಿರಿ ವಿಳಾಸ —

ಪ್ರೊಪ್ರೈಟರ್, ದಿ ಉಲ್ಲನ್ ಮಾರ್ಟ್, ಮಂಗಳೂರು

ಕಾರ್ಡ್ ಸೈಜು ೪|×೩.

ಫೋಟೋ ತೆಗೆಯುವ

ಫೋಟೋ ಕ್ಯಾಮೆರಾ.

54 18

ಬೆಲೆ ಫಕ್ತ ಮೂರು ರೂಪಾಯಿ.

ಇದರಿಂದ ಬೇಕಾದ ಮನುಷ್ಯನ ಫೋಟೋ ಅವನಿಗೆ ತಿಳಿಯದಂತೆ ತೆಗೆಯಲಿಕ್ಕೆ ಬರುತ್ತದೆ ವೇಗದಿಂದ ಓಡುವ ಗಾಡಿಯು ಮತ್ತು ಹಾರುವ ಪಕ್ಷಿಯು ಫೋಟೋ ಸಹ ತೆಗೆಯಬಹುದು ಇದರಲ್ಲಿ ಕಲಿಯತಕ್ಕದ್ದೇನೂ ಇಲ್ಲ. ಈ ಕ್ಯಾಮರಾದ ಮಾಹಿತಿಯನ್ನು ಕೊಳ್ಳುವವರಿಗೆ ನಾವು ಕೂಡಲೇ ಮಾಡಿಕೊಡುವೆವು. ಎಷ್ಟೋ ಕಡೆಗೆ ಇದಕ್ಕೆ ೧೦ ರಿಂದ ೧೫ ರೂ. ಬೆಲೆ ಬೀಳುತ್ತದೆ. ಆದರೆ ಇದರ ಖರೀದಿ ಕಿಮ್ಮತ್ತು ೩ ರೂಪಾಯಿ ಮಾತ್ರ ಇರುವದು. ಟಪಾಲ್ ಖರ್ಚು ೯ ಆಣೆ. ಇದು ಸಿಕ್ಕತಕ್ಕ ವಿಳಾಸ —

ಛೋಟಾಲಾಲ ಛಗನಲಾಲ ಮಹಾಜನ, ಠಾಕೂರದ್ವಾರ ರೋಡ, ಪೋಸ್ಟ ಕಾಳಬಾದೇವಿ, ಮುಂಬಯಿ.

ಹೊಸ ಬೂನೀಸುಗಳು.

ಹೊಂಬಾ ಖಾತರಿ ಸಾಮಾನು! ಬೇಗ ತರಿಸಿಕೊಳ್ಳಿ!!

123 5

ಛಳಿಗಾಲಕ್ಕೆ ತಕ್ಕ ಶುದ್ಧ ಸರ್ಜ ಉಣ್ಣೆಯ ದಪ್ಪನಾದ "ಬ್ಲಾಂಕೆಟ್" ಹೊಸ ನಮೂನೆ ಬನಾತವು ಕಪ್ಪುರನಾದ ಛಳಿಯನ್ನು ತಪ್ಪಿಸೈಗೆ ಬಾಬನ್ನೀಯತ್ತೆ ಸುಖವಾದ ಹೊದ್ದಿಕೆ. ನೋಡಿ ಚಕ್ಕಿತರಮ್ಯ. ನಮ್ಮಲ್ಲಿ ಮಾತ್ರವೇ ಇರುತ್ತೆ ಉದ್ದ ೯೦ ಅಂಗುಲ ಅಗಲ ೪೮ ಅಂಗುಲ ಕ್ರಯ ರೂ. ೬ ೨ ನೆಯ ತರಹ ೯೫×೮೦(ಅಂಗುಲ) ರೂ. ೪. ಅತಿ ಪ್ರಸಿದ್ಧವಾದ್ದಕ್ಕೆ ರೂ. ೨

ಮದರಾಸು ಸೀರೆಗಳು.

ಹೊಸನಮೂನೆ! ವಿ ಪಿ ಖರ್ಚ ೮ ಆಣೆ ಖಾತರಿ ಬಣ್ಣ!!

ಶ್ರೇಷ್ಠವಾದ ಕಪ್ಪು ನೂಲಿನಿಂದ ತಯಾರಿಸಿ ಪ್ರಸಿದ್ಧವಾದ ಬಿಳಿ ಯ ಅಸ್ಸಾಂ ರೇಷ್ಮೆಯ ಅಂಚುಗಳಿಂದ ಮಿಂಚುತ್ತೆ. ನೇಸಲತರ ಸ್ಯ ಉವಲು ಬಹು ಬಾಳಿಕೆ ಕರಿದರೂ ಬಣ್ಣ ಕೆಡದು ಸೇಗಸಾ ದ ಬಳಿ, ಹಳದಿ ರೇಷ್ಮೆಗಳ ಸೆರಗುಗಳಿರುವ ಕಡೆಯಲ್ಲಿಯು ಒಂದೊಂ ದು ಗಜದುದ್ದವುಳ್ಳ ಈ ಸೀರೆಯು ೧೬ ಗಜದಗಲ ೯ ಗಜದುದ್ದ ದಾರಿ ಕಾಣಿದ ಇಷ್ಟು ಉತ್ತಮ ಮಾಲು ಖಾತ್ರಿಯೂ ಸಿಕ್ಕದು ಪ್ರತ್ಯಕ್ಷ ತರಿಸಿ ಉಪಯೋಗಿಸಿದರ ಸೀರೆಯ ಉತ್ಕೃಷ್ಟತೆಯು ಸ್ಪಷ್ಟವಾಗುತ್ತೆ. ಕ್ರಯ ೨ ಅಂಗುಲ ರೇಷ್ಮೆಯಂಚಿನದಕ್ಕೆ ರೂ ೯—೮—೦, ೩ ಅಂಗುಲ ಅಂಚಿನದಕ್ಕೆ ರೂ ೧೧—೮—೦

ವಿಳಾಸ — ದಾಸ್ ಎಂಪೋರಿಯಂ, ಸೈಡನ್‌ಹಾಂ ರೋಡ್,

ವೇಪೇರಿ, ಮದರಾಸು

ಬಹುಮಾನ.

132-2

೫ ಆಣೆ ಪೋಸ್ಟೇಜು ಸ್ಟಾಂಪು ಕಳುಹಿಸಿಕೊಟ್ಟಲ್ಲಿ ಶ್ರೀಮಚ್ಛಂಕರಾಚಾರ್ಯರಿಂದ ರಚಿಸಲ್ಪಟ್ಟ ೪ ಭಾಗಂವುಳ್ಳ ಪ್ರಶ್ನೋತ್ತರ ರತ್ನಮಾಲಿಕೆಯೊಂದಿಗೆ ೮×೧೦ ಸೈಜಿನ ಶ್ರೀಮನ್ಮಹಾರಾಜರ ಫೋಟೋವನ್ನೂ, ಇದೇ ಸೈಜಿನ ಈಗಿನ ಶೃಂಗೇರಿ ಸ್ವಾಮಿಗಳ ಫೋಟೋವನ್ನೂ ಶ್ರೀಮನ್ ಮಹಾರಾಜ ಯುವರಾಜರುಗಳ ಭಾವಚಿತ್ರಗಳಿಂದ ಕೂಡಿದ ಪ್ಲವಂಗ ಕೀಲಕ ಪಂಚಾಂಗಸಹಿತ ಹೊಸನಮೂನೆಯಾದ ೧೯೦೮ ನೇ ಇಸವಿ ಹಿಂದೂ ಕ್ಯಾಲೆಂಡರನ್ನೂ ಮತ್ತು ಶ್ರೀಮನ್ನಿರಂಜನ ಶ್ರೀ ಮಾರ್ತಾಂಡಚೇಂದ್ರಸ್ವಾಮಿಗಳ ಫೋಟೋವನ್ನೂ ಬಹುಮಾನವಾಗಿ ಕಳುಹಿಸುತ್ತೇವೆ ೮ ಆಣೆಗೆ ಬೇರೆ ವಿಧವಾದ ಮತ್ತೆರಡು ಫೋಟೋಗಳು ಹೆಚ್ಚಾಗಿ ಸಿಕ್ಕುವವು. ಶಂಕರ ಕಥಾಮೃತವೆಂಬ ಆದಿ ಶಂಕರಾಚಾರ್ಯರ ಚರಿತ್ರೆ ಪ್ರತಿ ೧ಕ್ಕೆ ೧೨ ಆಣೆ.

ವಿಳಾಸ — ವೈ ನಾಗಪ್ಪ, ಫಾಸ್ ಕೀಪರ್, ಕೋಟೆ, ಮೈಸೂರು.

The Pourwal Cash Bazzar—Bangalore City.

ಧಾರಿವಾಲ್ (ಪಂಜಾಬ್) ಶಾಲುಗಳು.

130-3

ಕೆಂಪು, ಎಣ್ಣೆಬಣ್ಣ, ಕೆಂಪು, ಕೇಸರಿ, ಹಸರು, ನಶ್ಯದ ಬಣ್ಣ, ಬಾದಾಮಿ, ಕಪ್ಪು, ಬಿಳುಪು, ಮುಂತಾದ ಬಣ್ಣದ್ದು. ಮತ್ತು ಚಕ್ ನಮೂನೆ, ಪೂರ ಆರು ಮೊಳ ಉದ್ದ ಮೂರು ಮೊಳ ಅಗಲವುಳ್ಳದ್ದು.

ಈಗತಾನೇ ವಿಲಾಯತಿಯಿಂದ ಬಂದಿರುವ ೫,೦೦೦ ಪೌಂಡು ಟೋಪಿಗೆ ಲಾಯಖಾದ ತರಹೆವಾರಿ ಉಲ್ ಮತ್ತು ಇವುಗಳಲ್ಲಿ ತಯಾರಾದ ತರಹೆವಾರಿ ಟೋಪಿಗಳು ನಮ್ಮಲ್ಲಿ ಸಿದ್ಧವಾಗಿರುತ್ತವೆ

ಇವುಗಳಲ್ಲದೆ ನೀವು ಕೇಳುವ ಯಾವ ಸಾಮಾನೇ ಆಗಲಿ ನಂಬಿಕೆಯಿಂದ ಅಗ್ಗವಾಗಿ ಕಳುಹಿಸುವೆವು. ಖರೀದಿ ವಗೈರೆ ತಿಳಿಯಬೇಕಾದವರು ಇವರಿಗೆ ಬರೆಯಿರಿ—

ಹೆಚ್. ಜವಾರ್ ಮಲ್ ಕಂಪೆನಿ,

ಚಿಕ್ಕಪೇಟೆ, ಬೆಂಗಳೂರು ಸಿಟಿ.

ಇಗೋ! ಕನ್ನಡ "ಮಾಡಲ್" ಪಾಕೆಟ್ ಡೈರಿ!

122 5

ಸೊಗಸಾದ ಡೈರಿಗಳು!! ಉತ್ತಮವಾದ ಡೈರಿಗಳು!!

ಉತ್ಕೃಷ್ಟವಾದ ಡೈರಿಗಳು!!!



೧೯೦೮ ನೇ ವರುಷದ ಕನ್ನಡ ಡೈರಿಗಳು ಸೊಗಸಾಗಿ ರೂಲ್ ಹಾಕಿದ ಕಾಗದದ ಮೇಲೆ ಮುತ್ತಿನಂಥಾ ಅಕ್ಷರಗಳಿಂದ ಪ್ರಿಂಟಾಗಿ ಮನಸ್ಸಿಗೆ ಆಹ್ಲಾದವನ್ನುಂಟುಮಾಡತಕ್ಕವುಗಳಾಗಿರುತ್ತವೆ ಇವುಗಳಲ್ಲಿ ಅಡಕವಾಗಿರುವ ವಿಷಯಗಳು—ಜಮಾಖರ್ಚಿನ ಪಟ್ಟಿ, ಜೋಬಿ ಲೆಕ್ಕ, ದಿನ ಸಂಬಳದ ಪಟ್ಟಿ, ವಾರಶೂಲೆ, ಗುಳಿಕ ಕಾಲ, ರಾಹು ಕಾಲ, ಹಲ್ಲಿ ಬಿದ್ದ ಫಲ, ಪ್ರಶ್ನಶಾಸ್ತ್ರ, ಗೌರಿ ಪಂಚಾಂಗ, ತೂಕಗಳು, ಜಮೀನುಗಳ ಅಳತೆ, ಪೋಸ್ಟಾಫೀಸಿನ ಎಲ್ಲಾ ವಿಷಯಗಳು, ರಿಜಿಸ್ಟರ್ ಫೀಜುಗಳು, ಸ್ಟಾಂಪು, ಪ್ರೋಸೆಸ್ ರಸುಂ, ಕೋರ್ಟ್ ಫೀಜು ರೈಲ್ ಛಾರ್ಜ್, ರಜಾ ದಿನಗಳು ಹಬ್ಬಗಳು, ಕ್ಯಾಲೆಂಡರು, (ಗ್ರಹಣಾವಳಿ ಸಹಿತ) ಪ್ಲವಂಗ ಸಂ|| ಪಂಚಾಂಗ, ಇವೇ ಮುಂತಾದ ಅನೇಕ ವಿಷಯಗಳು ಅಡಗಿರುತ್ತವೆ ಡೈರಿಗಳ ಕ್ರಯ —

ನಂ|| ೧ ಸಣ್ಣ ಸೈಜು ಪೆನ್ಸಿಲ್ ಇಡತಕ್ಕ ಡೈರಿ ೦—೪—೦, ಹನ್ನೆರಡು ಡೈರಿಗಳಿಗೆ ೧ ಇನಾಮು.

ನಂ|| ೨ ಸಣ್ಣ ಸೈಜು ಪೆನ್ಸಿಲ್ ಇಟ್ಟು ಮುಚ್ಚಳ ಹಾಕಿರುವ ಫ್ಲಾಪ್ ಡೈರಿ ೦—೬—೦, ಹನ್ನೆರಡು ಡೈರಿಗಳಿಗೆ ೧ ಇನಾಮು

ನಂ|| ೩ ದೊಡ್ಡ ಸೈಜು ಪೆನ್ಸಿಲ್ ಇಡತಕ್ಕ ಡೈರಿ ೦—೬—೦; ಹನ್ನೆರಡು ಡೈರಿಗಳಿಗೆ ೧ ಇನಾಮು

ನಂ|| ೪ ದೊಡ್ಡ ಸೈಜು ಪೆನ್ಸಿಲ್ ಇಟ್ಟು ಮುಚ್ಚಳ ಹಾಕಿರುವ ಡೈರಿ ೦—೮—೦, ಹನ್ನೆರಡು ಡೈರಿಗಳಿಗೆ ೧ ಇನಾಮು.

ಡೈರಿಗಳ ಗಲಾಟೆಯಲ್ಲಿ ಭ್ರಾಂತಿಗೊಂಡಬೇಡಿ ಉತ್ತಮವಾದವುಗಳಿಗೆ ಹಣವನ್ನು ವ್ಯಯಮಾಡಿರಿ. ನಮ್ಮ ಡೈರಿಗಳು ಬಹು ಸುಲಭ ಕ್ರಯವುಳ್ಳವುಗಳು. ಇವುಗಳು ಗೌರ್ನಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿವೆ ನಮ್ಮ ವಿಳಾಸ —

ಎಸ್. ಡಿ. ನತ್‌ಮಲ್ ಕಂಪೆನಿ, ದೊಡ್ಡಪೇಟೆ, ಮೈಸೂರು.

ಅಥವಾ,

ಎಲ್. ಎ ಪ್ರೇಂಪಾಲ್—ಬೆಂಗಳೂರು ಸಿಟಿ.

ಅಥವಾ,

ಮ್ಯಾನೇಜರ್. ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

ಬಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

26-44

೧. ಶೋಕಾಮಯಹರ ಕಸ್ತೂರೀ ಮಾತ್ರೆ.—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ.

ಚಳಿಜ್ವರ, ಜ್ವರ, ಹೊಟ್ಟೆಶೂಲೆ, ಸಂದುಗಳ ನೋವು, ಮೈ ಕೈಕಾಲು ಸೆಳೆತ (ಛಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿಮಾಂದ್ಯ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ.

ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತ ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಬಾಯುರಿಗೂ ದಾರಿಕೊಡದೆ, ನೀರು ಹವಾಗಳ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೈಕತ್ತುಗಳನ್ನು ಗುಣಪಡಿಸುತ್ತದೆ.

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.

ಅನುಪಾನಪತ್ರ ಔಷಧದ ಸಂಗಡಲೇ ಇರುತ್ತದೆ

೨೦ ಮಾತ್ರೆಯುಳ್ಳ ಕುಪ್ಪಿಗೆ ೪ ಆಣೆ, ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು. ೧ ರಿಂದ ೧೨ ಕುಪ್ಪಿ ವರೆಗೆ ಪೋಸ್ಟೇಜು ೪ ಆಣೆ.

ವಿಳಾಸ:—ಬಾಳ್ಯದ ವೆಂಕಟಾಚಲ ಪಂಡಿತ,

ಎಸ್. ಎಸ್. ಆರ್. ವೈದ್ಯಶಾಲಾ,

ಲಕ್ಷ್ಮೀವಿಲಾಸ ರೋಡ್, ಮೈಸೂರು

ದೀಪಾವಳಿಯ ಬಹುಮಾನ!

ಬಹುಮಾನದ ಮೇಲೆ ಬಹುಮಾನ!! ತ್ವರೆಮಾಡಿ!!!

128 1

ನಮ್ಮಲ್ಲಿ ದೊರೆಯುವ ಈ ಕೆಳಗೆ ಕಂಡ ಕನ್ನಡದ ನವೀನ ಗ್ರಂಥಗಳನ್ನು ಭಾಷಾಭಿಮಾನಿಗಳೆಲ್ಲರೂ ತರಿಸಿಕೊಂಡು ಓದಿ ಸಂತೋಷಪಡಬೇಕೆಂಬ ಉದ್ದೇಶದಿಂದಲೂ ಕನ್ನಡಿಗರಿಗೆ ಪ್ರೋತ್ಸಾಹವನ್ನುಂಟುಮಾಡಬೇಕೆಂತಲೂ ೧೯೦೮ ನೆಯ ಇಸವಿ ಫೆಬ್ರುವರಿ ತಿಂಗಳ ವರೆಗೆ ಮಾತ್ರ ನಮ್ಮ ಪುಸ್ತಕಗಳಲ್ಲಿ ಒಂದು ರೂಪಾಯಿ ಬೆಲೆ ಬಾಳುವ ಪುಸ್ತಕಗಳನ್ನು ತರಿಸಿಕೊಳ್ಳುವವರಿಗೆ ಪ್ರತಿ ಒಂದು ರೂಪಾಯಿಗೂ ೩ ಆಣೆ ಕ್ರಯ ಬಾಳುವ 'ಸ್ತೋತ್ರಮಾಲಿಕೆ,' ೨ ಆಣೆ ಕ್ರಯ ಬಾಳುವ 'ಶೃಂಗಾರಶತಕ,' "ದೊಡ್ಡ ಸೈಜಿನ ಮಹಾರಾಜರವರ ಭಾವಚಿತ್ರ," 'ಬಿ. ಸಿ ಪಾಲ್ ರವರ ಭಾವಚಿತ್ರ,' ಶ್ರೀಮನ್ಮಹಾರಾಜರವರ ಮತ್ತು ಶ್ರೀಮದ್ಯುವರಾಜರವರ ಭಾವಚಿತ್ರಗಳಿಂದ ಕೂಡಿದ ೧೯೦೮ ನೇ ಸ್ವದೇಶೀ ಹಿಂದೂ ಕ್ಯಾಲೆಂಡರ್, 'ಸೀತಾಚರಿತ್ರೆಯ' ಪೂರ್ವ ಭಾಗ ಈ ಆರನ್ನೂ ಉಚಿತವಾಗಿ ಕೊಡುತ್ತೇವೆ ಎರಡು ರೂಪಾಯಿ ಬೆಲೆ ಬಾಳುವ ಪುಸ್ತಕಗಳನ್ನು ತರಿಸಿಕೊಳ್ಳುವವರಿಗೆ ಮೇಲ್ಕಂಡ ಬಹುಮಾನಗಳಲ್ಲದೆ ೧೯೦೮ ನೆಯ ಇಸವಿಯ ಒಂದು ಡೈರಿಯನ್ನೂ ಉಚಿತವಾಗಿ ಕಳುಹಿಸುತ್ತೇವೆ. ಅಂಚೆ ವೆಚ್ಚ ಬೇರೆ

"ನಿರುಪಮಾ"—ಇದು ಐದು ಅಂಕಗಳುಳ್ಳ ಹೊಸ ಕನ್ನಡದ ನವೀನ ನಾಟಕ. ಸಂತಾಪಕನೆಂಬ ದುಷ್ಟನು ಅನೇಕ ಘೋರ ಕೃತ್ಯಗಳನ್ನು ಮಾಡಿ ನಿರುಪಮೆಯನ್ನು ಅಪಹರಿಸಿಕೊಂಡು ಬಂದುದೂ, ಕಮಲೆಯ ಸತೀತ್ವವೂ, ವೇಶ್ಯೆಯರ ಮನೆಯಲ್ಲಿ ನಡೆಯಬಹುದಾದ ಕೃತ್ಯಾಕೃತ್ಯಗಳೂ, ಇವೇ ಮೊದಲಾದ ಅನೇಕ ವಿಷಯಗಳು ಅಡಕವಾಗಿವೆ ಆಡುವುದಕ್ಕೂ ಓದುವುದಕ್ಕೂ ಅನುಕೂಲಿಸುವಂತೆ ಹೊಸಗನ್ನಡದಲ್ಲಿರುವ ಈ ಗ್ರಂಥವನ್ನು ಓದುವುದಕ್ಕೆ ಪ್ರಾರಂಭಿಸಿದರೆ ಕೊನೆಮುಟ್ಟುವ ವರೆಗೂ ಬಿಡುವುದಕ್ಕೆ ಮನಸ್ಸಾಗುವುದಿಲ್ಲ ೧೨ ಆಣೆ.

"ಕೃಷ್ಣವಿಜಯ"—ಇದರಲ್ಲಿ ರುಕ್ಮಿಣೀದೇವಿಯ ವಿವಾಹಮಹೋತ್ಸವವೂ, ಶಿಶುಪಾಲಜರಾಸಂಧಾದಿಗಳೊಡನೆ ಕೃಷ್ಣನು ಯುದ್ಧಮಾಡಿ ಗೆದ್ದುದೂ, ಯುದ್ಧರಂಗ ವರ್ಣನೆಯೂ ಲಲಿತವಾದ ಹಳೆಗನ್ನಡದಲ್ಲಿ ಬರೆಯಲ್ಪಟ್ಟಿದೆ ಯುದ್ಧವನ್ನು ಪ್ರತ್ಯಕ್ಷವಾಗಿ ನೋಡಬೇಕೆಂದು ಅಪೇಕ್ಷಿಸುವವರೆಲ್ಲರೂ ಇದನ್ನೋದಿ ಕೃತಕೃತ್ಯರಾಗಬಹುದು. ಇದರ ಬೆಲೆ ೬ ಆಣೆ.

"ಪ್ರಿಯದರ್ಶಿಕೆ"—ಪ್ರಸಿದ್ಧ ಕವಿಯಾದ ಶ್ರೀಹರ್ಷನ ಗ್ರಂಥದ ಭಾಷಾಂತರ ನಾಲ್ಕು ಅಂಕಗಳುಳ್ಳ ಈ ನಾಟಕದಲ್ಲಿ ಮತ್ತೊಂದು ಗರ್ಭನಾಟಕವಿರುವುದರಿಂದ ಕಥಾಸಂವಿಧಾನವು ಪಾಠಕಮಹಾಶಯರಿಗೆ ಕೌತುಕಾಸ್ಪದವಾಗದಿರಲಾರದು ಇದರ ಬೆಲೆ ೬ ಆಣೆ

"ಸೀತಾಚರಿತ್ರೆ"—ರಾಮಾಯಣದ ಕಥೆಯೆಲ್ಲಾ ಹೆಂಗಸರಿಗೂ ಮಕ್ಕಳಿಗೂ ಸುಲಭವಾಗಿ ಅರ್ಥವಾಗುವಂತೆ ಶ್ರೀಮನ್ಮಹಾರಾಣೀ ರೀಜೆಂಟರವರ ಆಜ್ಞಾನುಸಾರ ಷಟ್ಪದೀ ರೂಪವಾಗಿ ಬರೆಯಲ್ಪಟ್ಟಿದೆ ಹದಿನಾರು ಅಧ್ಯಾಯಗಳುಳ್ಳ ಈ ಪುಸ್ತಕದ ಬೆಲೆ ೮ ಆಣೆ

"ಉತ್ತರ ಸೀತಾಚರಿತ್ರೆ"—ಇದರಲ್ಲಿ ರಾಮಾಯಣದ ಉತ್ತರ ಕಾಂಡವೆಲ್ಲಾ ಸೀತಾಚರಿತ್ರೆಯಂತೆಯೇ ಬರೆಯಲ್ಪಟ್ಟಿದೆ ೨ ಆಣೆ

"ಸತ್ಯವತೀ ಚರಿತ್ರೆ"—ಇದರಲ್ಲಿ ಅತ್ತೆ ಸೊಸೆಯರ ಜಗಳ, ಅತ್ತಿಗೆ ನಾದಿನಿಯರ ಕಲಹ, ಅವಿದ್ಯಾವತಿಯರ ಮತ್ತು ವಿದ್ಯಾವತಿಯರ ತಾರತಮ್ಯ, ಇವೇ ಮೊದಲಾದ ಸಾಂಸಾರಿಕ ಸಂಭಾವ್ಯ ವಿಷಯಗಳು ಕಥಾರೂಪವಾಗಿ ಹೇಳಲ್ಪಟ್ಟಿವೆ. ಸಕಲರೂ ತರಿಸಿಕೊಂಡು ಓದಬೇಕಾದದ್ದು ಕೆಲವು ಪ್ರತಿಗಳು ಉಳಿದಿವೆ. ಇದರ ಬೆಲೆ ೪ ಆಣೆ.

ನಿಮ್ಮ ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಿರಿ ನಮ್ಮ ವಿಳಾಸ—

ಅರಮನೆಯ ವಿದ್ವಾಂಸ ನಂಜನಗೂಡು ಶ್ರೀಕಂಠಶಾಸ್ತ್ರಿ,

ಕೃಷ್ಣರಾಜ ಬೋಕಲಾ, ಮೈಸೂರು.

“ನಂಬಲು ಧೈರ್ಯಸಾಲದೆ ಪೆ-ರೂ-ನಾ ಸೇವಿಸಿದೆನು”

ಎಂದು ಅಲ್ಬನಿಯ ಮಿ॥ ನ್ಯೂಹಾಫ್ ಬರೆಯುತ್ತಾರೆ. 34-37

ಗಂಡಸರಲ್ಲಿ ಕೆಳಹೊಟ್ಟೆಯ ರೋಗಗಳು.

ಕೆಳಹೊಟ್ಟೆಯ ಮತ್ತು ಜಲಬಾಧೆಕೋಶದ ಕಾರಣವಾದ ನಾನಾ ತರದ ರೋಗಗಳನ್ನು ಅನೇಕಾನೇಕ ಜನರು ಬಹು ಕಷ್ಟದಿಂದ ಅನುಭವಿಸುತ್ತಾ ಜೀವಮಾನವನ್ನು ಕಳೆಯುತ್ತಿದಾರೆ.

ಮೂತ್ರಕೋಶದ ರೋಗಬಾಧೆಗೆ ಸರಿಹೋಲುವ ರೋಗವು ಮತ್ತೊಂದಿಲ್ಲ. ದೇಹವು ಬಲಹೀನವಾಗುವುದು, ಮುಖವು ಬಾಡಿಹೋಗುವುದು, ಎಲ್ಲಾ ವಿಷಯಗಳಲ್ಲೂ ಜೀವಕಳೆ ಕುಂದಿ ಹೋಗುವರು.

ಈ ತರಹ ರೋಗಿಗಳ ಗುಂಪಿಗೆ ಸೇರಿದವರೆಲ್ಲರೂ ಒಬ್ಬೊಬ್ಬರಾಗಿ ಪೆರೂನಾ ಸೇವನೆಯಿಂದ ಆ ರೋಗಗಳೆಲ್ಲಾ ನಿವಾರಣೆಯಾಗುವವೆಂಬದಾಗಿ ಹೊಸಹೊಸದಾಗಿ ಕಂಡುಕೊಳ್ಳುತ್ತಾ ಬಂದಿದಾರೆ.



ಒಬ್ಬನು ಇನ್ನೊಬ್ಬನಿಗೆ ತಿಳಿಸುವನು. ಈ ರೀತಿಯಾಗಿ ದೇಶದ ಬೇರೆ ಕಡೆಗಳಲ್ಲಾ ಅದರ ಕೀರ್ತಿಯು ಹಬ್ಬಿ ಹರಡುವುದು. ಪೆರೂನಾದಿಂದ ಮೂತ್ರಕೋಶದ ರೋಗಗಳು ಖಂಡಿತವಾಗಿ ಪರಿಹಾರವಾಗುವವೆಂದು ಎಲ್ಲರಿಗೂ ಪರಿಷ್ಕಾರವಾಗಿ ತಿಳಿದಿರುತ್ತದೆ.

ಅನ್ನಕೋಶ, ಕೆಳಹೊಟ್ಟೆಯ ನಾನಾ ಕೋಶಗಳ ಕಾಯಿಲೆಗಳೆಲ್ಲಾ ಈ ಔಷಧದಿಂದ ಗುಣವಾಗಿವೆ ಎಂದು ಅನೇಕರಿಂದ ಸಮಾಚಾರಗಳು ಬಂದಿವೆ.

ಪೆರೂನಾದಿಂದ ಎಷ್ಟು ಮಟ್ಟಿಗೆ ರೋಗನಿವಾರಣೆಯಾಗಿದೆ ಎಂಬುದನ್ನು ನಿದರ್ಶನಪಡಿಸುವುದಕ್ಕೆ ಎರಡು ಪ್ರಾಮುಖ್ಯವಾದ ಸರ್ಟಿಫಿಕೇಟುಗಳನ್ನು ಈ ಕೆಳಗೆ ಪ್ರಕಟಿಸಿರುತ್ತೇವೆ.

ಮೂತ್ರಕೋಶದ ರೋಗವು.

ಮಿ॥ ಸಿ ಬಿ ನ್ಯೂಹಾಫ್, ೧೦ ಡೆಲಾವೇರ್ ಬೀದಿ ಅಲ್ಬನಿ, ಎನ್ ವೈ, ಮಾಂಟಫೈಯೋರೇ ಕ್ಲಬ್ ಪ್ರೆಸಿಡೆಂಟ್ ಇವರು ಬರೆಯುವುದು—

“ನನಗೆ ಐದು ವರುಷದ ಕಾಲ ನನ್ನ ಮೂತ್ರಕೋಶದಲ್ಲಿ ಆಗಾಗ್ಗೆ ಬಾಧೆಯುಂಟಾಗುತ್ತಾ ಬಂದಿತ್ತು. ಡಾಕ್ಟರುಗಳನ್ನು ಕೇಳಿದ್ದರಲ್ಲಿ ವೈದ್ಯದಿಂದ ನನ್ನ ಮೂತ್ರಕೋಶದ ಬಾಧೆ ತೊಂದರೆ ಪಡಿಸುವುದೆಂತಲೂ, ವಯಸ್ಸು ಮೀರಿರುವುದರಿಂದ ಅದು ದೀರ್ಘವಾಗಿದೆ ಎಂತಲೂ ಹೇಳಿದರು. ನನಗೆ ಪ್ರಯೋಜನವಾದೀತೆಂಬ ಭರವಸ ನನ್ನಲ್ಲಿ ಉಳಿಯದೆ ಹೋದಾಗ್ಯೂ ನಾನು ಪೆರೂನಾವನ್ನು ಸೇವಿಸುವುದಕ್ಕೆ ಪ್ರಾರಂಭಿಸಿದೆನು. ಆದರೆ ನನ್ನ ಸಂತೋಷವನ್ನು ಎಷ್ಟೆಂದು ಹೇಳಲಿ. ಕೂಡಲೇ ನನಗೆ ಬಾಧೆ ಕಡಮೆಯಾಗುತ್ತಾ ಬಂತು. ಮೂತ್ರಕೋಶದಲ್ಲಿ ಉರಿಯುವುದು ಕ್ರಮೇಣ ಇಳಿಯುತ್ತಾ ಬಂದು ತರುವಾಯ ಅದಕ್ಕೆ ಸಂಬಂಧಪಟ್ಟ ಬಾಧೆಯೆಲ್ಲಾ ನಿವಾರಣೆಯಾಯಿತು. ಈಗ ಏಳು ತಿಂಗಳಿಂದಲೂ ನಾನು ಬಹಳ ಆರೋಗ್ಯದಿಂದಲೂ ಸುಖವಾಗಿಯೂ ಇದೇನೆ. ಬಹಳ ಚನ್ನಾಗಿ ಭೋಜನ ಮಾಡುತ್ತೇನೆ, ಸುಖವಾಗಿ ನಿದ್ದೆಮಾಡುತ್ತೇನೆ. ಅಂತು ಇಪ್ಪತ್ತು ವರುಷಗಳ ಹಿಂದೆ ನನಗಿದ್ದ ಸೌಖ್ಯವು ಈಗ ನನಗೆ ಉಂಟಾಗಿರುತ್ತದೆ. ಇಷ್ಟಕ್ಕೆಲ್ಲಾ ಪೆರೂನಾವೇ ಕಾರಣವಾದ್ದರಿಂದ ಅದನ್ನು ಬಹಳವಾಗಿ ಹೊಗಳುವೆನು.”

ಹೊಟ್ಟೆ ಕೆಳಹೊಟ್ಟೆಯ ರೋಗವು

ಮಿ॥ ಎಚ್ ಎಲ್ ಇಮ್ರಾಯಿ, ಫೈರ್ ಛಾನ್ಸೆಲರ್ ಮತ್ತು ಮಾಸ್ಟರ್ ಆಫ್ ಆರ್ಮ್ಸ್, ಕೆ ಪಿ ಆಫ್ ಓಮಾಹಾ, ನೆಬ್, ಇವರು ಉತ್ತರ ೧೬ ನೇ ಬೀದಿ ೨೦೫ ನೇ ಮನೆಯಿಂದ ಪೆರೂನಾವು ಬಲಕಾರಿಯಾದ ಔಷಧವೆಂದು ಅದನ್ನು ಹೊಗಳಿ ಬರೆಯುವುದೇನೆಂದರೆ—

“ಪೆರೂನಾ ಅಸಾಧಾರಣವಾದ ಯೋಗ್ಯತೆಯುಳ್ಳ ಶಕ್ತಿವರ್ಧಕ ಸೇವನಾ ಔಷಧವೆಂದು ನಾನು ಬಹು ಸಂತೋಷದಿಂದ ಶಿಫಾರಸು ಮಾಡುತ್ತೇನೆ. ನಾನು ಸೇರಿರುವ ಬೇರೆ ಬೇರೆ ಕಂಗಡದ ಅನೇಕಾನೇಕ ಜನರಿಗೆ ಇದು ಅವರ ಶರೀರದ ನಾನಾ ಅಸೌಖ್ಯಗಳನ್ನೂ ಜಾಡ್ಯಗಳನ್ನೂ ಮೂತ್ರಕೋಶದ ರೋಗಾದಿಗಳನ್ನೂ ವಾಸಿಮಾಡಿರುತ್ತದೆ.”

“ಪೆರೂನಾವು ಶರೀರದ ಅಂಗಾಂಗಗಳ ಶಕ್ತಿಯನ್ನೂ ವೃದ್ಧಿಪಡಿಸುತ್ತದೆ, ಆಹಾರವನ್ನು ಜೀರ್ಣಮಾಡಿಸುತ್ತದೆ, ಸುಖನಿದ್ರೆಕೊಡುತ್ತದೆ; ಆದ್ದರಿಂದ ಎಲ್ಲಾ ತರದ ರೋಗಿಗಳಿಗೂ ಪೆರೂನಾವನ್ನು ಸೇವಿಸುವಂತೆ ಪ್ರೋತ್ಸಾಹಪಡಿಸುವುದು.”

ಮಿ॥ ಡೇವಿಡ್ ಎಲ್. ಜೇಕಾಕ್ಸ್, ಚಾಪ್ಲೇನ್ ಕ್ಯಾರಿಂಡಾ ಐ ಓ ಜಿ ಟಿ ಮತ್ತು ಚಾಪ್ಲೇನ್ ಜಿ ಎ ಆರ್, ೧೬೫ ಬ್ರಾಡ್ವೇ, ಓಕ್ಲೆಂಡ್, ಕಾಲ್, ಇವರು ಬರೆಯುವುದು:

“ನಾನು ಪೂರ್ವದಲ್ಲಿ ಯುದ್ಧಕ್ಕೆ ಹೋಗಿದ್ದೆನು. ನನಗೆ ಕೆಳಹೊಟ್ಟೆಯಲ್ಲೂ ಮೂತ್ರಕೋಶದಲ್ಲೂ ಕಠಿಣವಾದ ಬಾಧೆ ಪ್ರಾಪ್ತವಾಯಿತು. ನೂರಾರು ರೂಪಾಯಿ ಖರ್ಚು ಮಾಡಿಕೊಂಡು ಅನೇಕ ಡಾಕ್ಟರುಗಳ ಅಭಿಪ್ರಾಯವನ್ನು ತೆಗೆದುಕೊಂಡಾಗ್ಯೂ ನನಗೆ ಸ್ವಲ್ಪವೂ ಪ್ರಯೋಜನವಾಗಲಿಲ್ಲ.”

“ಕಡೆಗೆ, ಪೆರೂನಾದಿಂದ ಗುಣಹೊಂದಿದ ನನ್ನ ಸ್ನೇಹಿತರಲ್ಲಿ ಕೆಲವರು ಅದನ್ನು ತೆಗೆದುಕೊಂಡು ನೋಡೆಂದು ನನಗೆ ತಿಳಿಸಿದರು. ಕೂಡಲೇ ನಾನು ಒಂದು ಬಾಟ್ಲಿಯನ್ನು ಕೊಂಡು ಉಪಯೋಗಿಸಿದಾಗ ಅದರಿಂದ ನನಗೆ ವಾಸಿಯಾಗುತ್ತಾ ಬಂದದ್ದರಿಂದ, ಬಿಡದೆ ಅದನ್ನೇ ಸುಮಾರು ನಾಲ್ಕು ತಿಂಗಳು ತನಕ ಸೇವಿಸುತ್ತಾ ಬಂದೆನು. ನಾನು ಸೇವಿಸಿದ ಎಲ್ಲಾ ಔಷಧಗಳಿಗಿಂತಲೂ ಪೆರೂನಾ ಸರ್ವೋತ್ಕೃಷ್ಟವಾದದ್ದೆಂದು ಸಿದ್ಧಾಂತವಾಯಿತು. ನನ್ನ ಬಾಧೆಯು ನಿವಾರಣೆಯಾಯಿತು. ನನಗೆ ಸಂಪೂರ್ಣವಾಗಿ ರೋಗ ವಾಸಿಯಾಗಿದೆ ಎಂದು ನಂಬುತ್ತೇನೆ. ನನಗೆ ಸೌಖ್ಯವಾಗಿದೆ. ಪೆರೂನಾ ಬಾಟ್ಲಿಯ ಕ್ರಯ ಹತ್ತರಷ್ಟಾದರೂ ಅವಶ್ಯಕವಾಗ ಅದನ್ನು ಕೊಳ್ಳದೆ ಇರಲಾರೆನು. ಮಿ॥ ರಾಬರ್ಟ್ ಇ. ಕಾರ್ನ್ವೆ, ಟ್ರೆಜರರ್ ನೈಟ್ಸ್ ಆಫ್ ಇಂಡಸ್ಟ್ರಿಯಲ್ ಫ್ರೀಡಂ, ಮತ್ತು ಪ್ರಸಿದ್ಧ ಗ್ರಂಥಕರ್ತನೂ ಉಪನ್ಯಾಸಕನೂ, ಇಲ್ ಚಿಕಾಗೋ ೧೧ ದಕ್ಷಿಣ ನಿಕೋಲಸ್ ಬೀದಿ ಈತ ಬರೆಯುವುದು —

“ಈಗ್ಗೆ ನಾಲ್ಕು ವರುಷಗಳ ಹಿಂದಿನ ತನಕ ನಾನು ಸೌಖ್ಯವಾಗಿದ್ದೆನು. ಆಗ ನನ್ನ ಬೆನ್ನಿನಲ್ಲಿ ಕೆಟ್ಟ ನೋವು ಪ್ರಾರಂಭವಾಯಿತು. ಅದು ದಿನೇ ದಿನೇ ಹೆಚ್ಚುತ್ತಲೇ ಬಂತು. ನೋವು ತಡೆಯಲಾರದೆ ಕ್ರಮೇಣ ನನ್ನ ಶಕ್ತಿಯು ಕುಂದಿಹೋಯಿತು. ನನ್ನ ಬಲಬಾಧೆಯು ಬಹಳ ತಿರುಗಿತು ಮತ್ತು ಜಲಬಾಧೆಯಾಗುವುದು ಅಕ್ರಮಕ್ಕೆ ಬಿದ್ದಿತು. ಇದರಿಂದ ನನ್ನ ಮೂತ್ರ ಕೋಶವು ಕೆಟ್ಟಿದೆ ಎಂದು ನಾನು ತಿಳಿದುಕೊಂಡೆನು.”

“ಪೆರೂನಾ ವಿಷಯವನ್ನು ಓದಿದಾಗ ಅದನ್ನು ಸೇವಿಸಬೇಕೆಂದು ಗೊತ್ತುಮಾಡಿಕೊಂಡೆನು. ಹತ್ತು ದಿನ ಅದನ್ನು ಸೇವಿಸುವುದರೊಳಗಾಗಿ ನನ್ನ ಬಾಧೆಯು ಕಡಿಮೆಯಾಯಿತು ಎಂದು ನನಗೆ ತೋರಿತು. ನೋವು ಕ್ರಮೇಣ ಇಳಿಯುತ್ತಾ ಬಂತು. ಆದರಿಂದ ನನಗೆ ಎಷ್ಟೋ ಹರ್ಷವುಂಟಾಯಿತೆಂದು ನಿಶ್ಚಯವಾಗಿ ಹೇಳುತ್ತೇನೆ. ಮೂರು ತಿಂಗಳೊಳಗಾಗಿ ನಾನು ಯಥಾಪ್ರಕಾರ ಆರೋಗ್ಯವನ್ನು ಸಂಪಾದಿಸಿಕೊಂಡೆನು. ನಾಲಿಗೆಯ ಅರುಚಿಯು ಪರಿಹಾರವಾಯಿತು. ನರಗಳ ಬಲಹೀನತೆಯೂ ಆದರಿಂದುಂಟಾಗುವ ಜುಗುಪ್ಸೆಯೂ ಸಿಟ್ಟೂ ಎಲ್ಲಾ ತೊಲಗಿದವು. ಈಗ ಎರಡು ವರುಷಗಳಿಂದಲೂ ನಾನು ಸುಖವಾಗಿ ಆರೋಗ್ಯದಿಂದಿದೇನೆ. ನಿಮ್ಮ ಪೆರೂನಾವನ್ನು ನಾನು ಬಹಳವಾಗಿ ವಂದಿಸುವೆನು. ಅದು ಮನುಷ್ಯನಿಗೆ ಪರಮಶ್ರೇಷ್ಠವಾದ ಸಂಜೀವನವೆಂದು ನಾನು ನಂಬುತ್ತೇನೆ.”

ವಿಳಾಸ:—ಈ ಔಷಧ ಸಿಕ್ಕುವ ಸ್ಥಳಗಳು:—

(೧) ಹಿಗ್ಗಿನ್ಬಾಥಮ್ ಅಂಡ್ ಸನ್ಸ್, ಬೆಂಗಳೂರು; ಅಥವಾ,

(೨) ಇಂಗ್ಲಿಷ್ ಡ್ರಗ್ ಕಂಪೆನಿ, ೩೯೭ ಮಿಂಟ್ ಬೀದಿ, ಮದರಾಸ್.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

29—11—1907 ರಿಂದ 6—12—1907 ರ ವರೆಗೆ

ಸ್ಥಳ.	ಪ್ಲೇಗ್ ಆದದ್ದು.	ಪ್ಲೇಗ್ ಸತ್ತದ್ದು	ಕಾಲರಾ ಆದದ್ದು.
ಬೆಂಗಳೂರು ಪಟ್ಟಣ	40	31	0
ಮೈಸೂರು ,,	71	50	0
ಬೆಂಗಳೂರು ಡಿಸ್ಟ್ರಿಕ್ಟು	63	72	0
ಮೈಸೂರು ,,	122	82	0
ಕೋಲಾರ್ ,,	64	39	0
ಕೋಲಾರ್ ಚಿನ್ನದ ಗಣಿಗಳು	43	34	0
ತುಮಕೂರು ಡಿಸ್ಟ್ರಿಕ್ಟು	21	15	0
ಹಾಸನ ,,	15	6	0
ಚಿತ್ರದುರ್ಗ ,,	14	13	0
ಕಡೂರ್ ,,	16	16	0
ಶಿವಮೊಗ್ಗ ,,	51	46	0
ಜುಮ್ಲಾ	540	404	0

ಶಾಲಿವಾಹನ ಶಕ ವರುಷಂಗಳು ೧೮೨೯ ನೇ ಪ್ಲವಂಗನಾಮ ಸಂವತ್ಸರದ ಮಾರ್ಗಶಿರ ಶುದ್ಧ ಪೌರ್ಣಮಿ ಗುರುವಾರದಿಂದ ಮಾರ್ಗಶಿರ ಬಹುಳ ಪಂಚಮಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೭ನೇ ಇಸವಿ ಡಿಸೆಂಬರ್

ತಾ	ವಾರ		ತಿಥಿ.	ಘಳಿಗೆ.	ನಕ್ಷತ್ರ	ಘಳಿಗೆ
19	ಗುರು	*	ಪೌರ್ಣಮಿ	38 5	ಮೃ	51 11
20	ಶುಕ್ರ	,,	ಪಾಡ್ಯ	42 10	ಆ	57-2
21	ಶನಿ	|	ಬಿದಿಗೆ	17-37	ಪು	60 0
22	ರವಿ		ತದಿಗೆ	52-56	ಪು	3 3
23	ಚಂದ್ರ	,,	ಚೌತಿ	58 2	ಪು	9-36
24	ಕುಜ		ಪಂಚಮಿ	60 0	ಶ್ಲೇ	15-45
25	ಬುಧ	‡	ಪಂಚಮಿ	3-13	ಮ	21 48

* ದತ್ತಾತ್ರೇಯ ಜಯಂತಿ, ವ್ಯತೀಪಾತಯೋಗ, ಅಂಧ... ಸಂಕಾರ ,, ಆರಿದ್ರಾದರ್ಶನೋತ್ಸವ | ಪರಶುರಾಮ ಜಯಂತಿ ,, ಕೃಷ್ಣಚತುರ್ಥಿ .. ದಗ್ಧಯೋಗ ‡ ಕ್ರಿಸ್ಮಸ್ ಹಬ್ಬ

ಪೇಟೇ ಧಾರಣೆ.

ದಿನಸಿ		ಮೈಸೂರು.
ಕಪ್ಪೀ ಅಕ್ಕಿ ಪಲ್ಲ ೧ಕ್ಕೆ	ರೂ.	೧೬-೦-೦
ಕಂಬೋತ ಅಕ್ಕಿ ಅವಲ್		೧೬-೦-೦
,, ದಪ್ಪ		೧೩ ೮-೦
ಜೀರಾಪ್ರೀ ಅಕ್ಕಿ		೧೩ ೮-೦
ಸಣ್ಣಕ್ಕಿ ಅವಲ್		೧೭-೮-೦
,, ದುಂಡು		೧೫ ೮-೦
ತೊಗರೀ ಬೇಳೆ ಪಲ್ಲ ೧ಕ್ಕೆ		೧೫ ೮-೦
,, ದುಂಡು		೧೪ ೦-೦
ಕೈ ರಾಗಿ ಪಲ್ಲ ೧ಕ್ಕೆ		೭ ೪ ೦
ಕಾರಾಗಿ		೭ ೦-೦
ಜೋಳ		೬ ೦-೦
ಹಲಸಂದೆ ಪಲ್ಲ ೧ಕ್ಕೆ		೧೦ ೮-೦
ಬಿಳೀ ಅವರೆ		೯ ೧೪-೦
ಹೆಸರು		೧೧ ೯ ೦
ಉದ್ದು		೧೩ ೦-೦
ಕಡಲೆ		೧೩-೮-೦
ಎಳ್ಳು ಸೇ ೧೦೦ಕ್ಕೆ		೨೩-೮-೦
ಹುರಳಿ		೫-೮-೦
ಪಗಳು ೧ ೦೭ ಸೇರಿಗೆ		೧೨-೦-೬
ಸೀಗೇಕಾಯಿ ಮಣ ೧ಕ್ಕೆ		೨-೮ ೦
ಮೆಣಸಿನಕಾಯಿ		೨-೮-೦
ದುಂಡು		೨ ೪-೦
ಬೆಲ್ಲ ದೊಡ್ಡ ಅಚ್ಚು		೫-೪-೦
ಒಳ್ಳೆಣ್ಣೆ ಮಣ ೧ಕ್ಕೆ		೭-೦ ೦
ಹರಳೆಣ್ಣೆ ,,		೫-೪-೦
ಕೊತ್ತುಂಬರಿ ಪಲ್ಲ ೧ಕ್ಕೆ		೫-೦-೦
ಉಪ್ಪು ,,		೫-೦-೦
ಹುಣಸೇ ಹಣ್ಣು		೨-೦-೦
,, ಹಳೇದು		೧-೮
ತುಪ್ಪ ಮಣ ೧ಕ್ಕೆ		೧೭-೦ ೦
ಸೀಮೆಯೆಣ್ಣೆ ಟಿಪ್ಪ ೧ಕ್ಕೆ		೪-೧೫-೦
ತೆಂಗಿನಕಾಯಿ ೧೦೦ಕ್ಕೆ		೩-೮-೦
ಅಳಲೇಕಾಯಿ ಮಣ ೧ಕ್ಕೆ		೧-೦-೦
ಅಂಟ್ವಾಳದ ಕಾಯಿ ಮಣ ೧ಕ್ಕೆ		೦-೧೨-೦
ಚಿನ್ನ (ಪೌ) ಕೆಂಪು		೧೫-೭-೦
,, ,, ಪಸಿಮೆ		೧೫-೧೧-೦
,, ,, ಗಟ್ಟಿ ತೊಲ ೧ಕ್ಕೆ		೨೩-೧೨-೦
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ		೭೫-೦-೦

Printed and Published by the Rev. E. W. Thompson, M. A., Proprietor and Manager, Wesleyan Mission Press, Mysore. 19/12/1907.

REGISTERED
M 20

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು. ಕ್ರಯ ೧ ದುಡ್ಡು.

ಸಂಪುಟ ೨೧ ಮೈಸೂರು—ಸರ್ ೧೯೦೭ ನೇ ಇಸವಿ ಡಿಸೆಂಬರ್ ತಾರೀಖು ೨೬ ನೇ ಗುರುವಾರ. ಸಂಚಿಕೆ ೩೦

ಡೈರಿಗಳ ಬಹುಮಾನ!

136 2

ಈ ಕೆಳಗೆ ಬರೆದಿರುವ ಮಾ॥ ಬಿ ವೆಂಕಟಾಚಾರ್ಯರ ಪುಸ್ತಕಗಳ್ಲಿ ಪ್ರತಿಯೊಂದು ರೂಪಾಯಿನ ಬೆಲೆಗೂ ಒಂದೊಂದು ಡೈರಿಯಂತೆ ಬಹುಮಾನವು ಕೊಡಲ್ಪಡುವುದು

ನಮ್ಮ ವಿಳಾಸ ದಿ ಜನರಲ್ ಏಜನ್ಸಿ, ಮೈಸೂರು

ಜ್ವರಹರಿ.

1188

WILLIAM & CO., BOMBAY.

ಅಪೂರ್ವಲಾಭ— ಸರ್ವಾಂಗರಕ್ಷ— ಲೋಕಪ್ರಖ್ಯಾತ—

ಅಮೃತಾಂಜನ

27 44

ತರಿಸಿಕೊಳ್ಳಿರಿ — ತ್ವರೆಯಾಗಿ — ಅಮೃತಾಂಜನ ಸರ್ವಲೋಕರಂಜನ, ಸರ್ವ ಸರ್ವವ್ಯಾಧಿಭಂಜನ, ಚಿಕಿತ್ಸೆಗಳೊಳ್ ಕಾಂಚನ, ದೇಹಾಂಗಗಳಿಗೆ ಸಂಜೀವನ, ವಾಸನೆಯಲ್ಲಿ ಮನೋರಂಜನ, ಬೆಲೆಯಲ್ಲಿ ಅಲ್ಪ, ಯೋಗ್ಯತೆಯಲ್ಲಿ ಅದ್ಭುತ, ಔಷಧಿಯಲ್ಲಿ ದ್ವಿರಹಿತ, ಕೊಳ್ಳುವವರಲ್ಲಿ ಮೋಡಿದ್ದಿರ್ಯೂ, ಇದರಿಂದ ಗುಣ ಕಂಡುಬರುವದಿಲ್ಲವಾದರೆ ಹಣ ಹಿಂತಿರುಗಿ ಕೊಡಲ್ಪಡುವದು ಒಂದೇ ಸಾರಿ ಆರು ಬಾಟ್ಲಿ ತರಿಸಿಕೊಂಡವರಿಗೆ ಒಂದು ಜರ್ಮನ್ ಬೆಳ್ಳಿಯ ಕಪ್ ಉಚಿತವಾಗಿ ದೊರಕುವದು.

ಪ್ರಖ್ಯಾತಿಯಾಗಿ ಭಾರತವರ್ಷದಲ್ಲಿಯ ಔಷಧಿಗಳಿಂದ ತಯಾರಿಸಿದ ಹೊರುಪಯೋಗಕ್ಕೋಸುಗ ಮುಲಾಮು. ಇದರಿಂದ ತಲೆನೋವು, ಶಿರೋವೇದನೆ, ವಾತ, ಸಂಧಿವಾತ ಪಕ್ಷವಾತ, ಗಂಟಲುನೋವು, ಸೊಂಟದ ನೋವು, ಗಂಟ್ಲು ನೋವು, ಶೀತ, ಜಳವು, ಉಳುಕು, ಕೈಕಾಲುಗಳಿಗೆ ಆಗುವ ಎಲ್ಲಾ ತರದ ನೋವಿಗೆ ಇದು ಅತ್ಯುತ್ತಮ

ಈ ಕಂಪನಿಯವರು ಹೆಚ್ಚು ನಮೂನೆಯ ಔಷಧಿಗಳನ್ನು ತಯಾರಿಸುವದರಿಂದ ಕ್ಯಾಟಲಾಗು ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ರವಾನಿಸಲ್ಪಡುವದು.

ಬಾಟ್ಲೆ ಒಂದಕ್ಕೆ ಕಿಮ್ಮತ್ತು ೦—೮—೦ ಪೋಸ್ಟು ಖರ್ಚು ೦—೪—೦

ಗಜಕರ್ಣದ ಮುಲಾಮು.

ದಂತಮಂಜನ —ಹಲ್ಲುಗಳಿಂದ ಬರುವ ರಕ್ತ ನಿಲ್ಲಿಸುತ್ತದೆ ಹಲ್ಲುಗಳು ಘಟ್ಟಿಯಾಗುತ್ತವೆ ಹಲ್ಲುಗಳು ಬೆಳ್ಳಗಾಗುತ್ತವೆ ಹಲ್ಲುಗಳ ನೋವನ್ನು ತೆಗೆಯುತ್ತದೆ ಡಬ್ಬಿ ಒಂದಕ್ಕೆ ೦—೨—೦ ಪೋಸ್ಟು ಖರ್ಚು ೦—೪—೦

ವಜ್ರಗುಟಿಕ —ಧಾತು ಪುಷ್ಟಿ ನಿಪುಣವಂತರಿಗೆ ಶಕ್ತಿ ಕೊಡುತ್ತದೆ, ಸ್ವಪ್ನದಲ್ಲಿ ಆಗುವದು ನಿಲ್ಲಿಸುತ್ತದೆ ರಕ್ತ ಶುದ್ಧಿಮಾಡಿ ದೇಹದಲ್ಲಿ ಆರೋಗ್ಯಕೊಡುತ್ತದೆ ಡಬ್ಬಿ ಒಂದಕ್ಕೆ ೧—೦—೦ ಪೋಸ್ಟು ಖರ್ಚು ೦—೪—೦

ಕೇಶವರ್ಧಿನಿ —ತಲೆ ಹೇನುಗಳು ನಿರ್ಮೂಲ ಮಾಡುವದು, ಕೂದಲುಗಳನ್ನು ಬೆಳೆಸುವದು, ಕೂದಲುಗಳನ್ನು ಕಪ್ಪುಮಾಡುವದು, ಮನಸ್ಸಿನ ಶುದ್ಧಿ ಮಾಡುವದು ಬಹಳ ಪರಿಮಳ ಉಳ್ಳದ್ದು ೩ ಔನ್ಸು ಬಾಟ್ಲು ಒಂದಕ್ಕೆ ೧—೦—೦ ಪೋಸ್ಟು ಖರ್ಚು ೦—೪—೦.

ವಿಳಾಸ:—ವಿಲಿಯಂ ಮತ್ತು ಕಂಪನಿ, ೧೬ ಓಕ್ ಲೇನ್, ಫೋರ್ಟ್, ಮುಂಬಯಿ.

ಟೆಲಿಗ್ರಾಫು ಅಡ್ರೆಸು—"ಅಮೃತಾಂಜನ," ಮುಂಬಯಿ.

ರಬ್ಬರ್ ಸ್ಟಾಂಡ್ ಪ್ರೆಸ್.

114 12

ನೋಟ್ ಪೇಪರ್ ಸೈಜು, ರೂಪಾಯಿ ೪—೦—೦.

ಹಾಫ್ ಫುಲ್‌ಸ್ಕ್ಯಾಪ್ ಸೈಜು, ೬—೦—೦

ಪೋಸ್ಟೇಜು ಬೇರೆ

ವಿಳಾಸ — ವರ್ಧಮಾನ ಏಜನ್ಸಿ,
ಪೋಸ್ಟ್ ಕಾಲಬಾದೇವಿ,
ಮುಂಬಯಿ.

ಸರ್ ೧೯೦೮ ನೇ ಇಸವಿಯ

127 5



ಈ ಡೈರಿಗಳು ವರ್ತಕರು, ಲಾಯರುಗಳು ಕಂಟ್ರಾಕ್ಟರುಗಳು, ದೊಡ್ಡ ಮನುಷ್ಯರು, ಮುನ್ಸಿಪಾಲ್ ಕೌನ್ಸಿಲರ್ ಇವರಿಗೆ ಉಪಯೋಗವಾಗಿರುತ್ತವೆ

ಟಿ. ಕೆ. ಮತ್ತು ಎಂ. ಆರ್ ಕೃಷ್ಣಸ್ವಾಮಿ ಶೆಟ್ಟಿ,
ಬಳ್ಳಾಪುರ ಪೇಟೆ ಬೆಂಗಳೂರು ಸಿಟಿ

೧೯೦೮ನೇ ಇಸವಿಯ ಇಂಗ್ಲೀಷು—ಕನ್ನಡ

119-8

ಪಾಕೆಟ್ ಡೈರಿ

ಎ. ನಂ॥ ಬಿ. ನಂ॥ ಸಿ. ನಂ॥ ಡಿ. ನಂ॥

ಕ್ರಯ ೩ ಆಣೆ. ೪ ಆಣೆ. ೬ ಆಣೆ. ೮ ಆಣೆ.

ಈ ಡೈರಿಗಳು—ವರ್ತಕರು, ಲಾಯರುಗಳು, ಕಂಟ್ರಾಕ್ಟರು, ದೊಡ್ಡ ಮನುಷ್ಯರು, ಬುಕ್‌ಕೀಪರ್ ಮುಂತಾದವರಿಗೆ ಉಪಯೋಗವಾಗಿರುತ್ತವೆ. ಇವುಗಳಲ್ಲಿ ಅಡಕವಾಗಿರುವ ವಿಷಯಗಳು—ಕೀಲಕ ಸಂ॥ ಪಂಚಾಂಗ, ಗ್ರಹ ಕುಂಡಲಿ ಸಹಿತ, ಕ್ಯಾಲೆಂಡರು, ಹಬ್ಬಗಳು, ರಜಾ ದಿನಗಳು, ರೈಲ್ ಛಾರ್ಜು, ಕೋರ್ಟ್ ಫೀಜು, ಪೋಸ್ಟಲ್ ರೂಲುಗಳು, ಸ್ಟಾಂಪು ರಿಜಿಸ್ಟರ್ ಫೀಜುಗಳು, ಪೋಸ್ಟಾಫೀಸಿನ ಎಲ್ಲಾ ವಿಷಯಗಳು, ಜಮೀನುಗಳ ಅಳತೆ, ಗೌರಿ ಪಂಚಾಂಗ, ಪ್ರಶ್ನಶಾಸ್ತ್ರ, ರಾಹುಕಾಲ, ಗುಳಿಕಕಾಲ, ವಾರಶೂಲೆ, ಮಾಸಫಲಗಳು, ದಿನ ಸಂಬಳದ ಪಟ್ಟಿ, ಧೋಬಿ ಲೆಕ್ಕ, ಜಮಾ ಖರ್ಚುಪಟ್ಟಿ, ಇನ್ನೂ ಅನೇಕ ವಿಷಯಗಳು ಇವೆ. ಉತ್ಕೃಷ್ಟವಾದ ಕಾಗದ, ರೂಲು ಹಾಕಿದೆ ಸೀಮೆ ಸಾಮಾನು ಬೈಂಡು, ಚಿನ್ನದ ಬಂಗಾರದ ರೇಖೆನಿಂದ ಕುಂದಣ ಮಾಡಲ್ಪಟ್ಟಿದೆ.

ಎ ನಂಬರ್ ಚಿಕ್ಕ ಸೈಜು	೩ ಆಣೆ
ಬಿ ನಂಬರ್ ಮುಚ್ಚಳವುಳ್ಳದ್ದು	೪ ಆಣೆ
ಸಿ ನಂಬರ್ ದೊಡ್ಡ ಸೈಜು	೬ ಆಣೆ
ಡಿ ನಂಬರ್ ಮುಚ್ಚಳವುಳ್ಳದ್ದು	೮ ಆಣೆ.

ಪೋಸ್ಟು ಛಾರ್ಜು ಬೇರೆ. ಒಂದೇ ನಮೂನೆಯಲ್ಲಿ ೧೨ ಡೈರಿ ತರಿಸಿಕೊಂಡರೆ ೧ ಡೈರಿ ಉಚಿತವಾಗಿ ಕೊಡುವೆವು. ಎ. ಪಿ. ಮೂಲಕವೂ ತರಿಸಿಕೊಳ್ಳಬಹುದು.

ನಮ್ಮ ವಿಳಾಸ:—ಶ್ರೀ. ಶಿವಲಿಂಗಂ ಶೆಟ್ಟಿ ಕಂಪನಿ,

ಕರ್ನಾಟಕ ಬುಕ್ ಡಿಪೋ ಪ್ರೆಸ್, ಬಳ್ಳಾರಿ

ಆರ್ಡರ್ ಬರುತ್ತಿವೆ! ಬೇಗ ನೋಡಿ!!

ಪ್ರಪಂಚವೇ ಆಶ್ಚರ್ಯಪಡುವದು.

121-7

ರೂ ೩—೮—೦ಗೆ ೫೧ ಬಹುಮಾನಗಳೂ, ಒಂದು ಟೇಬಲ್ ಟೈಂಪೀಸಿನೊಡನೆ ಒಂದು ಸುಂದರವಾದ ಗಡಿಯಾರವೂ.

ದೊಡ್ಡ ಮನುಷ್ಯರೇ, ಹಿಂದುಸ್ಥಾನದಲ್ಲಿ ಪ್ರಕಟನೆಗಳ ಮಯವಾಗಿದೆ. ಕೆಲವು ಕಂಪನಿಯವರು ಮೋಸ ಮಾಡುವವರಿಂದ ಪ್ರಕಟನೆಯನ್ನು ಕಂಡರೆ ಜನರು ಅಸಹ್ಯಪಟ್ಟು ಎಸೆಯುತ್ತಾರೆ. ಸತ್ಯವಂತರ ಪ್ರಕಟನೆಯನ್ನೂ ಕೂಡ ನಂಬುವದು ಕಷ್ಟ. ಯಥಾರ್ಥವುಳ್ಳ ಕಂಪನಿಯು ನೋಟೀಸುಗಳನ್ನು ಕಸ ಬುಟ್ಟಿಗೆ ಬಿಸಾಡಿ ಕಟ್ಟುವದಕ್ಕೆ ಕೊಟ್ಟು ಬಿಡುವರು. ಆದರೆ ಹಾಗಲ್ಲ, ನಮ್ಮ ಕಂಪನಿಯ ಯೋಗ್ಯತೆಯನ್ನು ಒಂದಾವರ್ತಿ ಪರೀಕ್ಷಿಸಿ ನೋಡಿ. ಈ ಪ್ರಕಟನೆಯು ನಿಮಗೆ ಎಷ್ಟು ಆಶ್ಚರ್ಯಕರವಾದದ್ದು. ನಾವು ೩೦ ಗಂಟೆ ನಡೆಯುವ ಶಾಶ್ವತವಾದ ಐದು ವರುಷದ ಗ್ಯಾರಂಟಿ ಉಳ್ಳ ಲೀವರ್ ಗಡಿಯಾರವನ್ನು ಈಗ ಬಹುಮಾನವನ್ನಾಗಿ ಕೊಡುವೆ ಕಳುಹಿಸುತ್ತೇವೆ. ಇದರಲ್ಲಿ ಸತ್ಯವಾದ ಕಂಪನಿಯ ಕೀರ್ತಿ ಹೆಚ್ಚು ಹೆಚ್ಚಾಗಬೇಕೆಂಬುವದೊಂದೇ ನಮ್ಮ ಮುಖ್ಯ ಉದ್ದೇಶ. ಒಂದಾವರ್ತಿ ನಮಗೆ ಬರೆದು ತರಿಸಿ ನಮ್ಮ ಸತ್ಯತೆಯನ್ನು ಪರೀಕ್ಷೆಮಾಡಿ. ಗಡಿಯಾರದ ಕೂಡ ನಾವು ಕಳುಹಿಸುವ ಬಹುಮಾನಗಳೇನೆಂದರೆ—ಒಂದು ಗಡಿಯಾರ, ಬಲವಾದದ್ದು, ೩೦ ಗಂಟೆ ನಡೆಯುವದು, ಹಿಂದೆ ಎರಡು ಮುಚ್ಚಳ, ಪರೀಕ್ಷೆಯಿಂದ ಸರಿ ಮಾಡಿದ್ದು, ಒಂದು ಸೊಗಸಾದ ಪೆಟ್ಟಿಗೆಯಲ್ಲಿ, ಐದು ವರುಷದ ಜಾಮೀನು ಉಳ್ಳದ್ದು. ಒಂದು ಸೊಗಸಾದ ಗಡಿಯಾರದ ಸರಪಣಿ, ಅರೆ ಬೇಗದ ಕೈ ಉಳ್ಳ ಬಲವಾದ ಇಂಗ್ಲಿಷ್ ಖಜಾನೆ ಪೆಟ್ಟಿಗೆ, ಒಂದು ಟೇಬಲ್ ಟೈಂಪೀಸು, ಒಂದು ದೊಡ್ಡ ದಬ್ಬಿ, ಒಂದಾವರ್ತಿ ಎಣ್ಣೆ ಹಾಕಿದರೆ ಒಂದು ತಿಂಗಳು ಉರಿಯುವ ಹೊಸ ತರಹಾ ಲಾಂಧ್ರ, ಒಂದಾವರ್ತಿ ಶಾಯಿ ತುಂಬಿದರೆ ಅನೇಕ ದಿನಗಳ ತನಕ ಬರೆಯುವ ಫೌಂಟೆನ್ ಲೇಖಣಿ, ಒಂದು ಜೊತೆ ದೊಡ್ಡ ಕಾಲುಚೀಲ, ಬಲವಾದ ದಂತದ ಹಿಡಿಯುಳ್ಳ ಚಾಕ್, ಒಂದು ದೊಡ್ಡ ಕತ್ತರಿ, ಒಂದು ದೊಡ್ಡ ಚರ್ಮದ ದುಡ್ಡು ಹಾಕಿಡುವ ಚೀಲ, ಒಳ್ಳೇ ಬಾಚಣಿಗೆ, ದಂತದ ಕನ್ನಡಿ, ಕೂದಲು ಬಾಚಿಕೊಳ್ಳುವ ಬ್ರಷ್, ಷರಟಿನ ಒಂದು ಸೆಟ್ ಗುಂಡಿಗಳು, ಒಂದು ಸೊಗಸಾದ ಕನ್ನಡಕ, ಒಂದು ಸಾಬೂನುಪೆಟ್ಟಿಗೆ, ಒಂದು ಸಾಬೂನುಪೆಟ್ಟಿ, ಒಂದು ಕೈವಸ್ತ್ರ, ಎಂದಿಗೂ ಕೆಡದ ಚಪ್ಪಲಿ, ಒಂದು ರಬ್ಬರು, ಸುಂದರವಾದ ದೊಡ್ಡ ಹಾಯಿಕಾಗದ, ಒಂದು ಪೆನ್ಸಲ್, ಬರೆಯುವ ೧೨ ಲೇಖಣಿ ಕಡ್ಡಿಗಳು, ೬ ಕಪ್ಪು ಪೆನ್ಸಲುಗಳು, ೧೦೦ ಲಕೋಟೆಗಳು, ೧೦೦ ಲೆಟರ್ ಪೇಪರುಗಳು, ಪೋಸ್ಟು ರವಾನಿಸಲು ಸೊಗಸಾದ ೧೦೦ ಪ್ರೌನ್ ಕಾರ್ಡುಗಳು, ೩೩ ಸ್ಟೀಲ್ ಮುಳ್ಳುಗಳು.

ಇಷ್ಟಕ್ಕೆಲ್ಲಾ ಕ್ರಯ ರೂ. ೩—೮—೦ ಮಾತ್ರವೇ.

ಅರ್ಧ ಹಣ ಅಡ್ವಾನ್ಸ್ ಮಣಿಆರ್ಡರ್ ಬಂದಲ್ಲಿ ಉಳಿದ ಅರ್ಧಕ್ಕೆ ವಿ. ಪಿ. ಮಾಡುತ್ತೇವೆ. ಒಪ್ಪದಿದ್ದರೆ ಹಣವಾಪಸು ಕಳುಹಿಸುವೆವು.

ಎಂ. ಎ. ಸುಟಾಲಾ ಮತ್ತು ಕಂಪನಿ,

ಚಿತ್ತೂರು, ಉತ್ತರ ಆರ್ಕಾಟು.

ಮನಿಆರ್ಡರ್ ಕೂಪನಿನಲ್ಲಿ ತಮ್ಮ ಊರಿಗೆ ಹತ್ತಿರವಾಗಿ ರೈಲ್ ಸ್ಟೇಷನ್ ಇದ್ದಲ್ಲಿ ತಿಳಿಸಬೇಕು.

CHAMBERLAIN'S COLIC, CHOLERA AND DIARRHOEA REMEDY.

ಚೇಂಬರ್ಲೇನ್ ಯವರು ಹೊಟ್ಟೆಶೂಲೆ, ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು.

4-26.



ಕೆಳ ಹೊಟ್ಟೆಯ ನೋವು, ಬರೀ ಭೇದಿಯಾಗುವುದು, ಆಮಶಂಕೆ, ವಾಂತಿಭೇದಿ ಉಪದ್ರ, ಕೀಲುಗಳ ನೋವು, ಹೊಟ್ಟೆಯ ನಾನಾ ತರದ ಶೂಲೆಗಳು—ಈ ರೋಗಗಳನ್ನೆಲ್ಲಾ ನಾಶಮಾಡುತ್ತದೆ. ಈ ಪರಮಾಶ್ಚರ್ಯಯುಕ್ತವಾದ ಔಷಧವು ಜನರನ್ನು ಬದುಕಿಸಿರುವಷ್ಟು ಮತ್ತು ನೋವನ್ನೂ ಬಾಧೆಯನ್ನೂ ನಿವಾರಣೆ ಮಾಡಿರುವಷ್ಟು ಪ್ರಪಂಚದಲ್ಲೇ ಇನ್ಯಾವ ಔಷಧವೂ ಮಾಡಿರುವುದಿಲ್ಲ.

ಜ್ಞಾಪಕದಲ್ಲಿಟ್ಟುಕೊಳ್ಳಿ—ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯೊಳಗಿರುವ ಎಲ್ಲಾ ತರದ ನೋವನ್ನೂ ನಿಲ್ಲಿಸಿಬಿಡುತ್ತದೆ. ಬಹಳ ಕಠಿಣವಾದ ಭೇದಿಯೂ ಕೂಡ ಮೂರೇ ಹೊತ್ತಿನ ಈ ಔಷಧದಿಂದ ನಿರ್ಮೂಲನಮಾಡಿ ನಿಲ್ಲಿಸುತ್ತದೆ. ಖಂಡಿತವಾಗಿ ನಾಶಮಾಡುವುದೇ ಇದರ ಗುಣ.

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ.

ಕೈಯಿಂದ ಸ್ವಲ್ಪವೂ ಮುಟ್ಟಿದ್ದಲ್ಲ.

ಇದು ಎಲ್ಲೆಲ್ಲೂ ಬಿಕರಿಯಾಗುವುದು ಸಣ್ಣ ಸೀಸೆಗೆ ೧ ರೂಪಾಯಿ. ದೊಡ್ಡ ಸೀಸೆಗೆ ೨ ರೂಪಾಯಿ

ಮಕ್ಕಳ ಹಿತಕಾರಿ

ಎಂದು

SCOTT'S EMULSION

31-11

(ಸ್ಕಾಟ್ಸ್ ಇಮಲ್‌ಷನ್)

ಎಂಬೀ ಸೇವನಾ ಔಷಧಕ್ಕೆ ಕೋಟ್ಯಾಂತರ ತಂದೆತಾಯಿಗಳು ಹೆಸರಿಟ್ಟಿದ್ದಾರೆ. ಯಾಕಂದರೆ ಇದು ಮಕ್ಕಳ ಆರೋಗ್ಯವನ್ನು ವೃದ್ಧಿಪಡಿಸಿ ದೇಹವನ್ನು ಪುಷ್ಟಿಯಾಗಿ ಬೆಳೆಸಿರುತ್ತದೆ.

ಇದು ತುಂಬಾ ರುಚಿಯಾಗಿರುವದರಿಂದ ಮಕ್ಕಳು ಬಹು ಸಂತೋಷವಾಗಿ ಸೇವನೆಮಾಡುತ್ತಾರೆ.

ಇದು ಕಾಯಿಲೆ ಮಕ್ಕಳನ್ನು ಆರೋಗ್ಯಮಾಡುವುದು, ಆರೋಗ್ಯವಾದ ಮಕ್ಕಳನ್ನು ಬಲಿಷ್ಠರನ್ನಾಗಿ ಮಾಡುತ್ತದೆ.

ಕೈಸೋಕದೆ ತಯಾರಾದದ್ದು.

ಎಲ್ಲಾ ಔಷಧ ವ್ಯಾಪಾರಸ್ಥರಲ್ಲೂ ಬಿಕರಿಯಾಗುತ್ತೆ.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್,

ಈ ಮನುಷ್ಯ ಇರುವ ಔಷಧವನ್ನೇ ಕೇಳಿ ಕೊಂಡುಕೊಳ್ಳಿ,

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಒಂದು ತರಿಸಿಕೊಳ್ಳಿ.

7-21

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇಳಾದದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯಿತಿಯಿಂದಲೇ ಬರುವದು (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಸೀದಾ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದು ಚನ್ನಾಗಿಲ್ಲದದ್ದು ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ.

ಕಾಡ, ಕೆಂಪು, ಕಪ್ಪು, ಬಿಳಿ, ಕಾಫಿ ಟೋಪಿಗಳು ೧ ರೂ. ೮ ಆ. ೧ ರೂ. ೬ ಆ., ೧ ರೂ. ೪ ಆ.

ರೇಷ್ಮೆ ಚುಕ್ಕೆಯುಳ್ಳ ಟೋಪಿಗಳು ೧ ರೂ. ೮ ಆ.; ೨ ರೂ.

ದಾರದ ಟೋಪಿಗಳು ೧ ರೂ. ೧೨ ಆ. ೧ ರೂ. ೮ ಆ., ೧ ರೂ. ೬ ಆ.

ಉಣ್ಣೆ ಟೋಪಿಗಳು ೧ ರೂ. ೮ ಆ., ೧ ರೂ. ೬ ಆ.

ಕೂಸುಗಳ ಟೋಪಿ, ಸೂಫಿ ಮೇಜೋಡು, ಅರ್ಧ ಮೇಜೋಡು ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು.

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ

ಈಗಲೇ ಸೀಮೆಯಿಂದ ಬಂದಿದೆ.

117-9

೫,೦೦೦ ಹಾಸಿಗೆ ಟೋಪಿ ಹೊಲಿಯುವ ಸುಪೀರಿಯರ್ ಉಲ್ಲನ್ ದಾರಗಳು. ಬಿಳಿ—ಮಾತ್ರ ಇದೆ—ಬಾರಿ, ಕಮ್ಮಿ ಕ್ರಯ

೧ ಟೋಪಿಯಾಗುವ ಉಲ್ಲನ್ ದಾರಕ್ಕೆ	೦—೮—೦
೧೦ ಟೋಪಿಯಾಗುವ ಬಂಡಲ್‌ಗೆ ೧ಕ್ಕೆ	೩—೮—೦
ಕೊಕ್ಕೆ ಸೂಜಿ ೧ಕ್ಕೆ	೦—೧—೬
೩೦ ಇಂಚಿನ ಬನಿಯನ್ ೧ಕ್ಕೆ	೦—೯—೦

ಎರಡು ಕಾಸಿನಲ್ಲಿ ಬರೆಯುವ ಪೋಸ್ಟು ಕಾರ್ಡಿಗೆ ೧೦೦ಕ್ಕೆ ೬ ಆ. ಒಂದಾಣೆ ಸ್ಟಾಂಪು ಕಳುಹಿಸಿ ನೇತ್ರಾನಂದಕರವಾದ ೧೯೦೮ನೆ ಇಸವಿಯ ಕ್ಯಾಲೆಂಡರ್ ಪಡೆಯಿರಿ. ವಿಳಾಸ —

ಪ್ರೊಪ್ರೈಟರ್, ದಿ ಉಲನ್ ಮಾರ್ಟ್, ಮಂಗಳೂರು

ಕಾರ್ಡ್ ಸೈಜು ೪|×೩.

ಫೋಟೋ ತೆಗೆಯುವ

ಛಾಯಾ ಕ್ಯಾಮರಾ.

81-19

ಬೆಲೆ ಫಕ್ತ ಮೂರು ರೂಪಾಯಿ.

ಇದರಿಂದ ಬೇಕಾದ ಮನುಷ್ಯನ ಫೋಟೋ ಅವನಿಗೆ ತಿಳಿಯದಂತೆ ತೆಗೆಯಬೇಕಾದರೆ ಬರುತ್ತದೆ. ವೇಗದಿಂದ ಓಡುವ ಗಾಡಿಯು ಮತ್ತು ಹಾರುವ ಪಕ್ಷಿಯ ಫೋಟೋ ಸಹ ತೆಗೆಯಬಹುದು. ಇದರಲ್ಲಿ ಕಲಿಯತಕ್ಕದ್ದೇನೂ ಇಲ್ಲ. ಈ ಕ್ಯಾಮರಾದ ಮಾಹಿತಿಯನ್ನು ಕೊಳ್ಳುವವರಿಗೆ ನಾವು ಕೂಡಲ್ಲಿಯೇ ಮಾಡಿಕೊಡುವೆವು. ಎಷ್ಟೋ ಕಡೆಗೆ ಇದಕ್ಕೆ ೧೦ರಿಂದ ೧೫ ರೂ. ಬೆಲೆ ಬೀಳುತ್ತದೆ. ಆದರೆ ಇದರ ಬೆಲೆ ಕಿಮ್ಮತ್ತು ೩ ರೂಪಾಯಿ ಮಾತ್ರ ಇರುವದು. ಟಪ್ಪಾಲ್ ಖರ್ಚು ೯ ಆಣೆ. ಇದು ಸಿಕ್ಕತಕ್ಕ ವಿಳಾಸ:—

ಛೋಟಾಲಾಲ ಛಗನಲಾಲ ಮಹಾಜನ, ಠಾಕೂರದ್ವಾರ ರೋಡ, ಪೋಸ್ಟು ಕಾಳಬಾದೇವಿ, ಮುಂಬಯಿ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು

26-45

೧ ಬೋಧಾನಾಮಯಹರ ಕಸ್ತೂರೀ ಮಾತ್ರೆ—ಈ ಮಾತ್ರೆಗಳನ್ನು ಬಂಗಾರದ ಭಸ್ಮ, ಚಿನ್ನಗರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ.

ಚಳಿಜ್ವರ, ಜ್ವರ, ಹೊಟ್ಟೆಶೂಲೆ, ಸಂದುಗಳ ನೋವು, ಮೈ ಕೈಕಾಲು ಸೆಳೆತ (ವಾತ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಕಣ್ಣು ನೋವು, ಕೆಮ್ಮು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ.

ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಬಾಯಿ ಕೆಟ್ಟ ದುರ್ವಾಸನೆಯಾಗದು. ಎಂತಹ ಆಹಾರವನ್ನಾದರೂ ಜೀರ್ಣಿಸುವ ಜಠರ ವಾಯುಗಳಿಗೆ ದಾರಿ ಕೊಡದೆ, ನೀರು ಮಲಗಳ ಒದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ಬಚ್ಚುಬ್ಬರ ಕೃಶತ್ವಗಳನ್ನು ಗುಣಪಡಿಸುತ್ತದೆ.

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.

ಅನುಪಾನಪತ್ರ ಔಷಧದ ಸಂಗಡಲೇ ಇರುತ್ತದೆ.

೨೦ ಮಾತ್ರೆಯುಳ್ಳ ಡಪ್ಪಿಗೆ ೪ ಆಣೆ, ೪ ಡಪ್ಪಿಗೆ ೧ ರೂಪಾಯಿ. ೧ ರಿಂದ ೧೨ ಡಪ್ಪಿ ವರೆಗೆ ಪೋಸ್ಟೇಜು ೪ ಆಣೆ.

ವಿಳಾಸ:—ಪಾಳ್ಯದ ವೆಂಕಟಾಚಲ ಪಂಡಿತ,

ಎಸ್. ಎಸ್. ಆರ್. ವೈದ್ಯಶಾಲಾ,

ಲಕ್ಷ್ಮೀವಿಲಾಸ ರೋಡ್, ಮೈಸೂರು

ವೃತ್ತಾಂತ ಪತ್ರಿಕೆ.

೧೯೦೭ ನೇ ಇಸವಿ ಡಿಸೆಂಬರ್ ತಾ॥ ೨೬ ನೇ ಗುರುವಾರ

ಸ್ವರ್ಗವಾಕ್ಯಗಳು.

"ವಾಕ್ಯವೆಂದು ಕರೆಯಲ್ಪಡುವ ಯೇಸುಕ್ರಿಸ್ತನು ಮಾನವಾವತಾರ ಎತ್ತಿ ನಮ್ಮ ಮಧ್ಯದಲ್ಲಿ ವಾಸವಾಗಿದ್ದನು. ನಾವು ಆತನ ಮಹಿಮೆಯನ್ನು ನೋಡಿದೆವು. ಆತನು ಕೃಪೆಯಿಂದಲೂ ಸತ್ಯದಿಂದಲೂ ತುಂಬಿದವನಾಗಿದ್ದನು. ಕೃಪೆಯೂ ಸತ್ಯವೂ ಯೇಸುಕ್ರಿಸ್ತನ ಮುಖಾಂತರ ಬಂದವು. ನಾವೆಲ್ಲರು ಆತನ ಸಂಪೂರ್ಣತೆಯೊಳಗಿಂದ ಕೃಪೆಯ ಮೇಲೆ ಕೃಪೆಯನ್ನು ಹೊಂದಿದೆವು. ದೇವರನ್ನು ಯಾರೂ ಎಂದೂ ಕಂಡಿಲ್ಲ, ಯಾವನು ಏಕಪುತ್ರನಾಗಿಯೂ ಸ್ವತಃ ದೇವರಾಗಿಯೂ ಇದ್ದು ಭಗವಂತನ ಸಾನ್ನಿಧ್ಯದಲ್ಲಿದ್ದಾನೋ ಆತನೇ ತಿಳಿಯಪಡಿಸಿದನು"

ದಾಮೋದರದಾಸ್ ಧರ್ಮಫಂಡು

ವಿಲಾಯತಿ ಮೊದಲಾದ ಅನ್ಯದೇಶಗಳ ವಿದ್ಯಾಶಾಲೆಗಳ ಲ್ಲಿ ಶಾಸ್ತ್ರಗಳ ಅಭಿವೃದ್ಧಿಗೆ ಸಹಾಯಕವಾಗುವಂಥಾ ಶಾಸ್ತ್ರ ಶೋಧನಾ ಸಾಮರ್ಥ್ಯವನ್ನು ಸಂಪಾದಿಸಿಕೊಂಡು ಬರುವುದಕ್ಕೆ ಮೈಸೂರು ಗವರ್ನಮೆಂಟಿನವರು ದಾಮೋದರದಾಸ್ ಧರ್ಮಫಂಡಿನ ಉತ್ಪತ್ತಿಯಿಂದ ವಿದ್ಯಾವಂತರಾದ ಯೌವನಸ್ಥರಿಗೆ ವೇತನಗಳನ್ನು ಕೊಟ್ಟು ಕಳುಹಿಸುವ ವಿಷಯದಲ್ಲಿ ಎರಡು ವಾರಗಳ ಕೆಳಗೆ ಕೆಲವು ನಿಬಂಧನೆಗಳನ್ನು ಮಾಡಿ ಪ್ರಕಟಿಸಿದರು. ಈ ನಿಬಂಧನೆಗಳು ಬಹುಮಟ್ಟಿಗೆ ಸರ್ವೋತ್ತಮವಾಗಿರುತ್ತವೆ. ಈ ವೇತನವು ವರ್ಷಕ್ಕೆ ೨೦೦ ಪೌಂಡು (೩,೦೦೦ ರೂ.), ವಿದ್ಯಾರ್ಥಿಗಳು ಯಾವುದಾದರೊಂದು ಶಾಸ್ತ್ರವನ್ನು ಕಲಿಯಬೇಕು; ಅವರು ಸಚ್ಚರಿತ್ರರಾಗಿಯೂ ಚಟುವಟಿಕೆಯಿಂದಲೂ ಅಂಥಾ ವಿದ್ಯಾಶಾಲೆಗಳಲ್ಲಿ ವ್ಯಾಸಂಗಮಾಡತಕ್ಕವರಾಗಿರಬೇಕು ಎಂಬೀ ರೀತಿಯಾಗಿ ನಿಬಂಧನೆಮಾಡಿದ್ದಾರೆ. ಇವು ಅವಶ್ಯವೆನ್ನುವುದಕ್ಕೆ ಸಂಶಯವೇ ಇಲ್ಲ. ಯಾಕೆಂದರೆ ಕೆಲವು ವಿದ್ಯಾರ್ಥಿಗಳು ವೇತನಗಳನ್ನು ಪಡೆದು ಅನ್ಯದೇಶಕ್ಕೆ ಹೋಗಿ ವಿದ್ಯೆ ಕಲಿಯುವಂತೆ ನಟಿಸುತ್ತಾ ವ್ಯರ್ಥ ಕಾಲಕ್ಷೇಪ ಮಾಡಿ ಹಣವನ್ನು ದುರ್ವಿನಿಯೋಗಪಡಿಸಿರುತ್ತಾರೆ. ಈಗ ಗವರ್ನಮೆಂಟಿನವರು ಮಾಡಿರುವ ರೂಲುಸುಗಳ ಪ್ರಕಾರ ವಿದ್ಯಾರ್ಥಿಯು ಒಳ್ಳೆ ನಡತೆ, ಅವನು ಮನಸ್ಸಿಟ್ಟು ವ್ಯಾಸಂಗಮಾಡುವುದು ಈ ವಿಚಾರವನ್ನು ಕುರಿತು ಅವನು ಓದತಕ್ಕ ವಿದ್ಯಾಶಾಲೆಯ ಅಧಿಕಾರಿಗಳು ತೃಪ್ತಿಕರವಾದ ವರದಿಯನ್ನು ಆಗಿಂದಾಗ್ಗೆ ಒರೆದು ಕಳುಹಿಸದೆ ಇದ್ದರೆ ಅಂಥಾ ವಿದ್ಯಾರ್ಥಿಗೆ ಗವರ್ನಮೆಂಟಿನಿಂದ ಸಲ್ಲತಕ್ಕ ವೇತನವನ್ನು ನಿಲ್ಲಿಸಿಬಿಡುವರು.

ಆದರೆ ಇವುಗಳ ಪೈಕಿ ಸ್ವಲ್ಪವೂ ತೃಪ್ತಿಕರವಾಗಿಲ್ಲವೆಂದು ಬಹಳವಾಗಿ ಆಕ್ಷೇಪಿಸಲ್ಪಟ್ಟಿರುವ ನಿಬಂಧನೆ ಯಾವುದೆಂದರೆ—"ಈ ವೇತನಗಳನ್ನು ಹಿಂದುಸ್ಥಾನವರ್ಯಾರೇ ಆಗಲಿ ಪಡೆಯಬಹುದು, ಆದರೆ ಅವರು ಬಿ. ಎ. ಪರೀಕ್ಷೆಯಲ್ಲಿ ಪ್ಯಾಸಾಗಿರಬೇಕು. ಇವರಲ್ಲಿ ಮೈಸೂರು ದೇಶೀಯರಾದ ವಿದ್ಯಾರ್ಥಿಗಳಾಗಲಿ ಈ ಸಂಸ್ಥಾನದ ವಿದ್ಯಾಶಾಲೆಗಳಲ್ಲಿ ಕಲಿತ ವಿದ್ಯಾರ್ಥಿಗಳಾಗಲಿ ದೊರಕದೆ ಇದ್ದ ಪಕ್ಷದಲ್ಲಿ ಹೊರಗಿನವರಿಗೆ ಈ ವೇತನವನ್ನು ಕೊಡತಕ್ಕದ್ದಿಲ್ಲ." ರಾಜಧಾನಿಯಲ್ಲಿ ಕಳೆದವಾರ ಒಂದು ಸಭೆ ನಡೆದು ಈ ನಿಬಂಧನೆಯು ಸಹಜವಲ್ಲವೆಂದು ಬಹಳವಾಗಿ ಆಕ್ಷೇಪಣೆ ಮಾಡಲ್ಪಟ್ಟಿತು. ಈ ವೇತನಗಳನ್ನು ಈ ಸಂಸ್ಥಾನದ ಪ್ರಜೆಗಳಿಗೆ ಕೊಡುವ ಕಟ್ಟು ಬದಲಾವಣೆಯಾಗಬೇಕೆಂದು ಅಭಿಪ್ರಾಯಪಟ್ಟರು. ಈ ಸಭೆಯಲ್ಲಿ ಮಾತನಾಡಿದವರು ಹೇಳಿದ ಅಭಿಪ್ರಾಯಗಳೆಲ್ಲಾ ವಿವಾಸರವಾದ ಮೇಲಾಗಲೀ ಗವರ್ನಮೆಂಟಿನವರ ಮೇಲಾಗಲೀ ತಪ್ಪುಹೊರಿಸುವುವುಗಳಾಗಿದ್ದವೇ ಹೊರತು ಅನ್ಯಥಾ ಅಲ್ಲವೆಂದು ತಿಳಿಸಲು ವಿಷಾದಿಸುತ್ತೇವೆ.

ಗವರ್ನಮೆಂಟಿನವರು ಈ ನಿಬಂಧನೆಯನ್ನು ಮಾತ್ರ ಉಂಟುಮಾಡಿದ ಕಾರಣವೇನೆಂಬುದಾಗಿ ತಾಳ್ಮೆಯಿಂದಲೂ, ನಿಷ್ಪಕ್ಷಪಾತವಾಗಿಯೂ, ಯಾರ ಮೇಲೂ ದೋಷಾರೋಪಣೆ ಮಾಡದೆಯೂ ಯೋಚಿಸಿ ನೋಡೋಣ. ಈಗ ಬಂದೆರಡು ವರ್ಷಗಳಿಂದಲೂ ಎಲ್ಲಾ ಭಾಗಗಳಲ್ಲೂ ತೃಪ್ತಿ ಕೊಡುವಂಥಾ ಯೌವನಸ್ಥರ್ಯಾರೂ ಈ ವೇತನಗಳನ್ನು ತಮಗೆ ಕೊಡಿಸಬೇಕೆಂದು ಕೇಳಿರುವುದಿಲ್ಲ. ಎಲ್ಲಾ ಭಾಗಗಳಲ್ಲೂ ಸಂಪೂರ್ಣತೃಪ್ತಿಯನ್ನು ಕೊಡತಕ್ಕಂಥಾ ಸಮರ್ಥರಾದ ಯೌವನಸ್ಥರಿಗೇನೇ ಈ ವೇತನಗಳನ್ನು ಕೊಡುತ್ತೇವೆಂದು ಸರ್ಕಾರದವರು ಗೊತ್ತುಮಾಡಿರುವುದು ನ್ಯಾಯವಾಗಿಯೇ ಇರುತ್ತದೆ. ಈ ವರ್ಷವಾದರೋ ಬಿ. ಎ. ಪರೀಕ್ಷೆಯ ಮೊದಲನೇ ತರಗತಿಯಲ್ಲಿ ತೇರ್ಗಡೆ ಹೊಂದಿರತಕ್ಕವರ್ಯಾರೂ ಅರ್ಜಿ ಬರೆದುಕೊಳ್ಳಲಿಲ್ಲ. ಅರ್ಜಿ ಕೊಂಡವರೆಲ್ಲರೂ ಸುಮಾರಾಗಿ ೩ನೇ ತರಗತಿಯಲ್ಲಿ ತೇರ್ಗಡೆಯಾದವರೇ. ಹೀಗಿರುವಲ್ಲಿ ಗವರ್ನಮೆಂಟಿನವರು ಈ ಫಂಡಿನ ಉತ್ಪತ್ತಿಯನ್ನು ನಾಲ್ಕು ವಿಧವಾಗಿ ವಿನಿಯೋಗಿಸಬಹುದಾಗಿತ್ತೆಂದು ನಮಗೆ ತೋರುತ್ತದೆ.

(೧) ಅಯೋಗ್ಯರಿಗೆ ಈ ವೇತನಗಳನ್ನು ಕೊಟ್ಟು ಕಳುಹಿಸುವುದು. ಹೀಗೆ ಮಾಡಿದ್ದರೆ ಆ ಹಣವು ವ್ಯರ್ಥವಾಗುತ್ತಿತ್ತೆಂದು ನಾವು ಹೇಳಬೇಕಾದದ್ದಿಲ್ಲ. (೨) ವೇತನಗಳನ್ನು ಯಾರಿಗೂ ಕೊಡದೆ, ಮೈಸೂರಿನವರು ಯೋಗ್ಯತಾಸಿದ್ಧಿಯನ್ನು ಪಡೆದುಬಂದು ಕೇಳುವ ತನಕ ಕೂಡಿಸಿಡುತ್ತಾ ಬರುವುದು. ಇದು ಸಹಜವಾದ ವಿನಿಯೋಗವೆಂದು ನಾವು ಒಪ್ಪಲಾರೆವು (೩) ಎಲ್ಲಾ ಭಾಗಗಳಲ್ಲೂ ಯೋಗ್ಯತೆಯನ್ನೂ ಸಾಮರ್ಥ್ಯವನ್ನೂ ಪಡೆದಿರುವಂಥಾ ಹೊರಗಿನ ಯೌವನಸ್ಥರಿಗಾದರೂ—ಹಿಂದುಸ್ಥಾನದವರಿಗೆ, ಈ ವೇತನಗಳನ್ನು ಕೊಡುವಂತೆ ಏರ್ಪಾಡು ಮಾಡುವುದು. ನಮ್ಮ ಗವರ್ನಮೆಂಟಿನವರು ಸದ್ಯದಲ್ಲಿ ಮಾಡಿರುವ ನಿಬಂಧನೆಯೂ ಇದೇ. (೪) ಪ್ರತಿ ವರ್ಷವೂ ವೇತನಕೊಡದೆ ಉಳಿಯಬಹುದಾದ ಹಣವನ್ನು ಸಂಸ್ಥಾನದಲ್ಲೇ ಇತರ ವಿಧವಾದ ವಿದ್ಯಾಭಿವೃದ್ಧಿಗೆ ವಿನಿಯೋಗಿಸುವುದು. ಈ ರೀತಿ ಮಾಡುವುದೇ ಸರ್ವೋತ್ತಮವಾಗಿತ್ತೆಂದು ನಾವು ನಂಬುತ್ತೇವೆ. ಇದು ಮೈಸೂರು ಸಂಸ್ಥಾನದ ಧರ್ಮಫಂಡಾಗಿರೋಣದರಿಂದ ಅದರ ಉತ್ಪತ್ತಿಯನ್ನು ಈ ಸಂಸ್ಥಾನದ ಪ್ರಜೋಪಕಾರ ಕಾರ್ಯಗಳಿಗೇನೇ ವಿನಿಯೋಗಿಸಬೇಕಾದದ್ದು ನ್ಯಾಯವೂ ಧರ್ಮವೂ ಆಗಿರುತ್ತೆಂದು ಸಕಾರಣವಾಗಿಯೂ ಹೇಳಬಹುದಾಗಿದೆ. ಈಗ ಈ ಸಂಸ್ಥಾನದಲ್ಲಿ ಕಸಬುದಾರಿ ಪಾಠಶಾಲೆಗಳನ್ನು ಸ್ಥಾಪಿಸಬೇಕೆಂದೂ, ಹೈಸ್ಕೂಲುಗಳ ವಿದ್ಯಾರ್ಥಿಗಳಿಗೆ ಹಸ್ತಕೌಶಲವನ್ನು ಹೆಚ್ಚಿಸುವುದಕ್ಕೆ ಮರಗೆಲಸ ಲೋಹಕೆತ್ತನೇ ಮೊದಲಾದುವನ್ನು ಕಲಿಸಬೇಕೆಂದೂ ಸಾಮಾನ್ಯವಾದ ಓದುಬರಹ ಲೆಕ್ಕಾಚಾರಗಳನ್ನು ಸಂಸ್ಥಾನದ ಎಲ್ಲಾ ಬಾಲಕರಿಗೂ ಕಲಿಸಬೇಕೆಂದೂ. ಚಿಕ್ಕಮಕ್ಕಳಿಗೆ ಕಿಂಡರ್‌ಗಾರ್ಟನ್ ಎಂಬ ಹೊಸತರಹ ಬಾಲಶಿಕ್ಷೆಯನ್ನು ಮಾಡಿಸಬೇಕೆಂದೂ ಮಾತು ನಡೆಯುತ್ತಿದೆ ಇಂಥಾದ್ದರಲ್ಲಿ ಗವರ್ನಮೆಂಟಿನವರು ಈಗ ಸ್ಯಾಂಕ್ಷನ್ ಮಾಡುತ್ತಿರುವ ಹಣವು ಇದಕ್ಕೆ ಎಷ್ಟುಮಾತ್ರವೂ ಸಾಲದೆಂತಲೂ ಇನ್ನೂ ಹೆಚ್ಚು ಹಣವನ್ನು ಒದಗಿಸಬೇಕಾಗುವುದೆಂತಲೂ ಯಾರೂ ಹೇಳದಿರಲಾರರು. ಆವರು ಈ ಹೆಚ್ಚು ಹಣವನ್ನು ಎಲ್ಲಿಂದ ಒದಗಿಸುವುದಕ್ಕಾದೀತು?

ಆದಕಾರಣ ಗವರ್ನಮೆಂಟಿನವರು ಮೈಸೂರು ಪ್ರಜೆಗಳಿಗೆ ಪ್ರತಿ ವರ್ಷವೂ ಮೇಲ್ಕಂಡ ಎರಡು ವೇತನಗಳನ್ನು ಕೊಡುವವರಾಗಲಿ, ಒಂದುವೇಳೆ ಸಮರ್ಥರಾದ ಯೌವನಸ್ಥರು ದೊರಕದೆ ಹೋದರೆ, ಅಂಥಾ ವರುಷದ ಹಣವನ್ನೆಲ್ಲಾ ಸ್ಪೆಷಲ್ ವಿದ್ಯಾಭಿವೃದ್ಧಿಯ ಫಂಡೆಂದು ತೆಗೆದಿಟ್ಟು, ಇದರಿಂದ ಕಸಬುದಾರಿ ವಿದ್ಯೆಯನ್ನು ಕಲಿಸುವುದಕ್ಕೂ, ಹೊಸ ಪಾಠಶಾಲೆಗಳನ್ನು ಕಟ್ಟಿಸುವುದಕ್ಕೂ, ಹೊಸ ನಮೂನೆಯ ವಿದ್ಯಾಸಾಧನಗಳನ್ನು ಕೊಂಡುತರಿಸುವುದಕ್ಕೂ ವಿನಿಯೋಗಿಸುತ್ತಾ ಬರಲಿ. ಅಂತು, ನಮ್ಮ ಅಭಿಪ್ರಾಯವನ್ನು ಕೇಳಿದರೆ ಈ ವೇತನಗಳನ್ನು ಹಿಂದುಸ್ಥಾನದ ಯೌವನಸ್ಥರಿಗೆ ದೊರಕುವಂತೆ ಮಾಡುವುದಕ್ಕಿಂತಲೂ ನಾವು ಮೇಲೆ ಹೇಳಿರುವಂತೆ ವಿನಿಯೋಗಪಡಿಸುವುದೇ ಉತ್ತಮವೆಂತಲೂ ಅದೇ ಸಹಜವಾದದ್ದೆಂತಲೂ ಸೂಚಿಸುವೆವು.

ಬಳದೇಶದ ವೃತ್ತಾಂತಗಳು.

ಗುಂಡ್ಲುಪೇಟೆಯ ಪ್ರಜೆಗಳು ಏಕೀಭವಿಸಿ ಒಂದು ಪರಸ್ಪರ ಸಹಾಯಕ ಸಂಘವನ್ನು ಏರ್ಪಡಿಸಿಕೊಂಡಿದ್ದಾರೆ ಈ ಸಂಘವು ಈ ತಿಂಗಳ ಮೊದಲನೇ ವಾರದಲ್ಲಿ ರಿಜಿಸ್ಟರಾಗಿರುತ್ತದೆ

***

ಒಬ್ಬ ಬಾತ್ಮೀದಾರರಿಂದ—"ಚಿತ್ರದುರ್ಗ ಜಿಲ್ಲೆಗೆ ಸೇರಿದ ವದ್ದೀಕೆರೆ ಗ್ರಾಮದೊಳಗೆ ನಾಲ್ವರು ಮನೆಯಲ್ಲಿ ಮಲಗಿರಲಾಗಿ ಮನೆಯ ಅಕಸ್ಮಾತ್ ಕುಸಿದು ಮನೆ ಬಿದ್ದು ನಾಲ್ವರು ಸಹ ಸತ್ತು ಹೋಗಿರುತ್ತಾರೆ"

***

ಬ್ರಿಡ್ಜ್‌ಗಾರ್ಡನ್ ಹೈಸ್ಕೂಲ್ ಹೆಡ್ ಮಾಸ್ಟರ್ ಮಿ॥ ಆರ್ ರಘುನಾಥರಾಯರು ನೆನ್ನೆಯೂ ಮೊನ್ನೆಯೂ ಇಲ್ಲಿನ ಟೌನ್ ಹಾಲ್ ಬಂಗಲೆಯಲ್ಲಿ ವಿವಾಹವನ್ನು ಕುರಿತು ಉಪನ್ಯಾಸಮಾಡುವವರಾಗಿದ್ದರು

***

ಮೋತೀಖಾನೆ ಸಾ॥ ಸೂರಣ್ಣನವರ ಒಂದು ನೂರು ರೂಪಾಯಿನ ಕರೆನ್ಸಿನೋಟು ಹಿಂದಿನವಾರ ಬೆಂಗಳೂರಿನಲ್ಲಿ ಕಳುವಾಗಿರುವುದರಿಂದ ಅದನ್ನು ಪತ್ತೆಮಾಡಿದವರಿಗೆ ಹತ್ತು ರೂಪಾಯಿ ಬಹುಮಾನ ಕೊಡುವುದಾಗಿ ಅವರು ತಿಳಿಸುತ್ತಾರೆ

***

ಬೆಂಗಳೂರಿನಲ್ಲಿ ಜನವರಿ ೧೩ ರಿಂದ ಸರ್ಕಾರದವರು ಏರ್ಪಡಿಸಿರುವ ಶೇಕ್ದಾರಿ ಸ್ಕೂಲು ಪ್ರಾರಂಭವಾಗುವುದು ಡೆಪ್ಯುಟಿ ಕಮಿಷನರುಗಳು ವಯಸ್ಸಾದ ಶೇಕ್ದಾರರನ್ನು ಆರಿಸಿ ಕಳುಹಿಸುವುದು ಅಪೇಕ್ಷಣೀಯವಾದದ್ದಲ್ಲವೆಂದು ಆ ಸ್ಕೂಲ್ ಛಾರ್ಜನ್ನು ವಹಿಸಿರತಕ್ಕ ಒವರ್ಸೀಯರು ಅಭಿಪ್ರಾಯಪಟ್ಟಿದ್ದಾರೆ.

***

ರಾಜಧಾನಿಯ ದೊಡ್ಡಪೇಟೆಯಲ್ಲಿ ಕಳೆದವಾರ ಮಿ॥ ಸಂಜೀವಶೆಟ್ಟಿಯವರ ಮನೆಗೆ ಹಗಲು ಹೊತ್ತಿನಲ್ಲೇ ಕಳ್ಳರು ಬಂದು ಸಾಮಾನುಗಳನ್ನು ಎತ್ತಿಕೊಂಡು ಹೋದರು ಪೊಲೀಸಿನವರು ಕೆಲವರನ್ನು ಹಿಡಿದಿದ್ದು ತನಿಖೆಮಾಡಿ ಬಿಟ್ಟುಬಿಟ್ಟರೆಂದು ಕೇಳುತ್ತೇವೆ ಹ್ಯಾಗೂ ಅವರು ಈ ಕಳವನ್ನು ಪತ್ತೆಮಾಡದಿರಲಾರರೆಂದು ನಿರೀಕ್ಷಿಸುವೆವು.

***

ದೊಡ್ಡಬಳ್ಳಾಪುರದ ತಾಲ್ಲೂಕು ಘಾಟಿ ಸುಬ್ರಹ್ಮಣ್ಯಸ್ವಾಮಿ ಜಾತ್ರೆಯು ಜನವರಿ ೧೩ ಕ್ಕೆ ಆರಂಭವಾಗುತ್ತಿದರಿಂದ ಆ ಜಾತ್ರೆ ಕಾಲದಲ್ಲಿ ಆ ದೇವಸ್ಥಾನದ ಬಳಿ ಗೋವುಗಳ ಪ್ರದರ್ಶನವನ್ನು ಸರ್ಕಾರದವರು ನಡಿಸಿ, ಒಳ್ಳೇ ಜಾತಿಯ ರಾಸುಗಳಿಗೆ ಸುಮಾರು ೩೦೦ ರೂಪಾಯಿ ವರೆಗೆ ಬಹುಮಾನಗಳನ್ನು ಕೊಡುವುದಾಗಿ ಪ್ರಕಟಿಸಿದಾರೆ

***

ಕೆಲವು ಕಾಲದಿಂದ ರಾಜಧಾನಿಗೆ ಬಂದು ಸ್ವದೇಶೀ ವಿಚಾರವನ್ನು ಕುರಿತು ಪಬ್ಲಿಕ್ ಸ್ಥಳಗಳಲ್ಲಿ ಉಪನ್ಯಾಸ ಮಾಡುತ್ತಿದ್ದ ಮಿ॥ ಸ್ವಾಮಿರಾಯರಿಗೆ ಕೆಲವು ಪುರಜನರು ಸೇರಿ, ಕಳೆದ ವಾರ ಇಲ್ಲಿನ ಟೌನ್ ಹಾಲ್ ಬಂಗಲೆಯಲ್ಲಿ ಬಹುಮಾನವನ್ನು ಕೊಟ್ಟು, ಅವರು ಮಾಡುವ ಕೆಲಸವನ್ನು ಕೊಂಡಾಡಿದರು. ಮಿ॥ ಸ್ವಾಮಿರಾಯರು ಮರುದಿನ ಬೆಂಗಳೂರಿಗೆ ಪ್ರಯಾಣಮಾಡಿದರು

***

ಬೆಂಗಳೂರು ಪಟ್ಟಣಕ್ಕೂ ಅದಕ್ಕೆ ಸೇರಿದ ಸುತ್ತುಮುತ್ತಲ ಭಾಗಗಳಿಗೂ ಬಡಾವಣೆಗಳಿಗೂ ವಿದ್ಯುಚ್ಛಕ್ತಿಯ ದೀಪವನ್ನೇ ರಾತ್ರಿ ಹೊತ್ತು ಹಚ್ಚುವುದಕ್ಕೆ ಸರ್ಕಾರದವರು ವರ್ಷಕ್ಕೆ ೨೨ ಸಾವಿರ ರೂಪಾಯಿ ಕೊಡಬೇಕೆಂದು ಮ್ಯುನಿಸಿಪಾಲಿಟಿಯವರನ್ನು ಕೇಳಿದರು ಮ್ಯುನಿಸಿಪಲ್ ಕೌನ್ಸಿಲರುಗಳು ಅಷ್ಟು ಹಣ ಕೊಡಲು ತಮಗೆ ಚೈತನ್ಯಸಾಲದಾಗಿರೂ ವರ್ಷಕ್ಕೆ ೨೦ ಸಾವಿರ ರೂಪಾಯಿನಂತೆ ಕೊಡುತ್ತೇವೆಂದು ಒಪ್ಪಿಕೊಂಡಿದ್ದಾರೆ

***

ಅರಸೀಕೆರೆ ತಾಲ್ಲೂಕು ಆಫೀಸಿನಲ್ಲಿ ಇಂಪ್ರೆಸ್ಟ್ ಹಣದ ಪೈಕಿ ಸುಮಾರು ೬೦೦ ರೂಪಾಯಿಗೆ ಲೆಕ್ಕ ಸಮಜಾಯಿಷಿ ಆಗಲಿಲ್ಲವೆಂದು ಕಂಡುಬಂದಿದೆ ಅಮಲ್ದಾರರನ್ನು ಕೇಳಿದಾಗ ಆ ವ್ಯತ್ಯಾಸವಿರುವುದು ತಮಗೆ ತಿಳಿಯಲಿಲ್ಲವೆಂದು ಹೇಳಿದರು ಆ ತಾಲ್ಲೂಕಿನಲ್ಲಿ ಹಿಂದೆ ಅಮಲ್ದಾರೀ ಮಾಡಿದಂಥವರಿಂದಲೂ ಈ ವಿಚಾರಕ್ಕೆ ಸಮಜಾಯಿಷಿ ತೆಗೆದು ರಿಪೋರ್ಟ್ ಕಳುಹಿಸಬೇಕೆಂಬದಾಗಿ ಗವರ್ನಮೆಂಟಿನವರು ರೆವಿನ್ಯೂ ಕಮಿಷನರಿಗೆ ತಿಳಿಸಿರುತ್ತಾರೆ

***

ಕೋಲಾರ್ ಚಿನ್ನದ ಗಣಿಗಳಲ್ಲಿ ಕೂಲಿಮಾಡತಕ್ಕ ಪ್ರಜೆಗಳಿಗೆ ಒಳ್ಳೇ ಕುಡಿಯುವ ನೀರನ್ನು ನಲ್ಲಿಗಳ ಮೂಲಕ ತಂದು ಒದಗಿಸಬೇಕೆಂದು ಅಲ್ಲಿನ ಸ್ಯಾನಿಟರಿ ಬೋರ್ಡ್ ಮೆಂಬರುಗಳು ತೀರ್ಮಾನ ಮಾಡಿ, ಗವರ್ನಮೆಂಟಿನವರು ಅದರ ಖರ್ಚಿಗೆ ೧೫,೦೦೦ ರೂಪಾಯಿ ಸಾಲ ಕೊಡಬೇಕೆಂತಲೂ, ಈ ಸಾಲವನ್ನು ವರ್ಷಕ್ಕೆ ೩,೦೦೦ ರೂಪಾಯಿನಂತೆ ಕೊಟ್ಟು ಐದು ಕಂತುಗಳಲ್ಲಿ ತೀರಿಸುತ್ತೇವೆಂತಲೂ ಸರ್ಕಾರದವರನ್ನು ಕೇಳಿಕೊಂಡಿದಾರೆ

***

ಸಂಪಿಗೆ ರಸ್ತೆಯಲ್ಲಿ ಮರ್ಗಸಿಫರಾಗಿದ್ದ ಲೇಟ್ ಕ್ಯಾಪ್ಟನ್ ಪಡಿಯಪ್ಪ, ಬೆಂಗಳೂರಿನಲ್ಲಿ ವಾಸಮಾಡುತ್ತಿದ್ದ ಮಿ॥ ಎಸ್ ಕೇಶವರಾಯರು ಕಳೆದ ವಾರ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ ಇವರು ಕಳೆದ ೧೮೬೫ ನೇ ಇಸವಿಯಲ್ಲಿ ಸರ್ಕಾರು ಸೇವೆಗೆ ಸೇರಿ ೨೦ ವರುಷ ಸಣ್ಣ ಕೆಲಸಗಳಲ್ಲಿದ್ದು, ತರುವಾಯ ೧೦ ವರುಷ ಮರ್ಗಸಿಫರಾಗಿದ್ದು ತುಂಬಾ ನಿಸ್ಪೃಹತೆಯಿಂದ ಕೆಲಸ ಮಾಡಿದವರು. ಇವರು ನಿಷ್ಪಕ್ಷಪಾತಿಗಳಾಗಿಯೂ, ಹಿಂದೂ ಸಭ್ಯರಾಗಿಯೂ ದೊಡ್ಡ ಸಂಸಾರಿಗಳಾಗಿಯೂ ಇದ್ದರು

***

ಬೆಂಗಳೂರಿನಲ್ಲಿರುವ ಕೆಲವು ಸ್ಕೂಲ್ ಕಟ್ಟಡಗಳಿಗೆ ತೆರಿಗೆಯನ್ನು ವಸೂಲುಮಾಡುವುದಕ್ಕಾಗುವದಿಲ್ಲವೆಂದು ಅಲ್ಲಿನ ಮ್ಯುನಿಸಿಪಲ್ ಕೌನ್ಸಿಲರುಗಳು ತೀರ್ಮಾನಮಾಡಿದಾರೆ ಮಠ, ಛತ್ರ, ದೇವಸ್ಥಾನ, ಪಾಠಶಾಲೆಗಳನ್ನು ತೆರಿಗೆ ಕಾಣದೆ ವಿನಾಯತಿ ಮಾಡಬೇಕಾದದ್ದು ಎಲ್ಲೂ ಸಹಜವಾಗಿರುತ್ತದೆಂದು ಹೇಳಬೇಕಾದದ್ದಿಲ್ಲ ಆದರೂ ಬೆಂಗಳೂರು ಮ್ಯುನಿಸಿಪಾಲಿಟಿಯವರು ಅಲ್ಲಿನ ಪಾಠಶಾಲೆಗಳಿಗೆ ತೆರಿಗೆ ಹಾಕಬೇಕೆಂದು ಯಾಕೆ ಗೊತ್ತುಮಾಡಿದರೋ ತಿಳಿಯಲಿಲ್ಲ

***

ಬೆಂಗಳೂರು ಕೋಟೆಯ ಬಳಿ ಜನೋಪಕಾರಿ ಮಿ॥ ದೊಡ್ಡಣ್ಣನವರ ಪಾಠಶಾಲೆಯಲ್ಲಿ ಜನವರಿ ೩ ೧೮ ನೇ ಮಂಗಳವಾರ ಫಲಪುಷ್ಪಗಳನ್ನೂ, ತಿಂಡೀ ಸಾಮಾನ್ನೂ, ಗಂಧದ ಕಡ್ಡಿ ಮತ್ತು ಬೆಲ್ಲ, ರೇಷ್ಮೆ ಮತ್ತು ಜರತಾರಿ ಬಟ್ಟೆ, ಇವನ್ನು ಇಟ್ಟು ಪ್ರದರ್ಶನಮಾಡಿಸುವವರಾಗಿದಾರೆ ಈ ವಸ್ತುಗಳೂ ಪದಾರ್ಥಗಳೂ ಎಲ್ಲಾ ಬೆಂಗಳೂರಿನಲ್ಲೇ ಬೆಳೆದ ಅಥವಾ ತಯಾರಾದದ್ದುಗಳಾಗಿರಬೇಕೆಂದು ವಿಧಿಸಲ್ಪಟ್ಟಿದೆ ಉತ್ಕೃಷ್ಟವಾದವುಗಳಿಗೆ ಸುಮಾರು ೩೦೦ ರೂಪಾಯಿ ವರೆಗೆ ಬಹುಮಾನಗಳನ್ನು ಕೊಡುವರು.

ಹಿಂದುಸ್ಥಾನದ ಸಾರ್ವಜನಿಕ ಸಮಾಜವು.

ಹಿಂದುಸ್ಥಾನದ ನ್ಯಾಷನಲ್ ಕಾಂಗ್ರೆಸ್ ಎಂಬ ಸಾರ್ವಜನಿಕ ಸಮಾಜವು ಬೊಂಬಾಯಿನ ಆಚೆ ಇರುವ ಸೂರತ್ ನಗರದಲ್ಲಿ ಈ ೨೬, ನಾಳೆ, ನಾಡಿದ್ದು, ಈ ಮೂರು ದಿನಗಳಲ್ಲಿ ನಡೆಯುವುದು. ಇದಕ್ಕಾಗಿ ತಪತೀ ನದಿಯ ದಡದಲ್ಲಿ ಲಾ ಕೋರ್ಟುಗಳ ಮತ್ತು ಕಲೆಕ್ಟರ್ ಬಂಗಲಿಯ ಬಳಿಯಲ್ಲಿರುವ ಫ್ರೆಂಚ್ ಗಾರ್ಡನ್ ಎಂಬುವ ಉದ್ಯಾನವನದ ಮೈದಾನಿನಲ್ಲಿ ಕಟ್ಟಿರುವ ದೊಡ್ಡ ಭವನದಲ್ಲಿ ಈ ದಿನ ಮಧ್ಯಾಹ್ನ ೧ ಗಂಟೆಗೆ ಪ್ರಾರಂಭವಾಗುತ್ತದೆ. ಈ ಸಭೆಗೆ ರಾಷ್ ಬಿಹಾರಿ ಘೋಸ್ ಎಂಬ ದೇಶವತ್ಸಲರು ಪ್ರೆಸಿಡೆಂಟರಾಗಿ ನಿಂತು ಸಭಿಕರನ್ನು ಕುರಿತು ಉಪನ್ಯಾಸಮಾಡುವರು. ಆದರೆ ಕೆಲವು ದೇಶವತ್ಸಲರು ಈಗ ಕಾನೇ ಗಡೀಪಾರಿನಿಂದ ಬಿಡುಗಡೆ ಹೊಂದಿ ಬಂದಿರುವಂಥಾ ಲಾಲಾ ಲಾಜಪತ್ ರಾಯಿಯವರನ್ನೇ ಈ ಸಲ ಈ ಸಭಾನಾಯಕರನ್ನಾಗಿ ನೇಮಿಸಬೇಕೆಂದು ಸೂಚಿಸಿ, ತುಂಬಾ ಚರ್ಚೆಮಾಡಿದರು. ಲಾಲಾ ಲಾಜಪತ್‌ರಾಯಿಯವರು ಈ ಜಿಜ್ಞಾಸೆಗಳನ್ನು ಓದಿ ನೋಡಿ, ತಾವು ಈ ಸಲ ಕಾಂಗ್ರೆಸ್ ಸಮಾಜಕ್ಕೆ ಪ್ರೆಸಿಡೆಂಟರಾಗಿ ನಿಲ್ಲುವುದರಲ್ಲಿ ತಮಗೆ ಸ್ವಲ್ಪವೂ ಸಾಮರ್ಥ್ಯವಾಗಲಿ ಅಭಿಪ್ರಾಯವಾಗಲಿ ಇಲ್ಲವೆಂತಲೂ, ಈಗ ನೇಮಕನಾಗಿರತಕ್ಕ ರಾಷ್ ಬಿಹಾರಿ ಘೋಸ್‌ಯವರು ಎಲ್ಲಾ ಭಾಗಗಳಲ್ಲೂ ತಮಗಿಂತಲೂ ಯೋಗ್ಯರೂ ಸಮರ್ಥರೂ ಆಗಿರುತ್ತಾರೆಂತಲೂ, ತಮ್ಮನ್ನು ಪ್ರೆಸಿಡೆಂಟಾಗಿ ನೇಮಿಸುವ ಅಭಿಪ್ರಾಯವಿರುವಪಕ್ಷಕ್ಕೆ ತಾವು ಈ ಸಲ ಕಾಂಗ್ರೆಸ್ ಸಭೆಗೇನೇ ಬರುವುದಿಲ್ಲವೆಂತಲೂ ತಿಳಿಸಿಬಿಟ್ಟರು. ಆದ್ದರಿಂದ ಈ ವರ್ಷದ ಸಭೆಗೆ ರಾಷ್ ಬಿಹಾರಿ ಘೋಸ್ ಯವರೇ ಪ್ರೆಸಿಡೆಂಟರಾಗಿ ನಿಲ್ಲುವುದು ಖಂಡಿತವಾಯಿತು.

ಈ ಸಭೆಗೆ ಪ್ರತಿನಿಧಿಗಳು ಹಿಂದುಸ್ಥಾನದ ಎಲ್ಲಾ ಭಾಗಗಳಿಂದಲೂ ಹೋಗಿ ಸೇರುತ್ತಾರೆ. ಅಲ್ಲಿ ಅವರು ಚರ್ಚಿಸತಕ್ಕದ್ದೆಂದು ಗೊತ್ತುಮಾಡಿಕೊಂಡಿರುವ ವಿಚಾರಗಳ್ಯಾವವೆಂದರೆ—(೧) ಈ ವರುಷ ಗವರ್ನ್ಮೆಂಟಿನವರು ಜಾರಿಗೆ ತಂದಿರುವ ಪ್ರಜಾಭಿಪ್ರಾಯಕ್ಕೂ ದೇಶಾಭ್ಯುದಯಕ್ಕೂ ಸಲ್ಲದ ಕೆಲವು ಶಾಸನಗಳು, (೨) ಇಂಡಿಯಾ ಗವರ್ನ್ಮೆಂಟಿನವರು ಸರ್ಕಾರ ದೊಡ್ಡ ಉದ್ಯೋಗಗಳಿಗೂ ಮಂತ್ರಾಲೋಚನಾ ಸಭೆಗಳಿಗೂ ದೇಶೀಯ ದೊಡ್ಡಮನುಷ್ಯರನ್ನು ಹೆಚ್ಚು ಹೆಚ್ಚಾಗಿ ನೇಮಿಸತಕ್ಕ ವಿಚಾರ, (೩) ಹಿಂದುಸ್ಥಾನದ ಪ್ರಜೆಗಳಿಗೆ ದಕ್ಷಿಣ ಆಫ್ರಿಕಾ ವೇ ಮೊದಲಾದ ಸ್ವಾಸ್ಥ್ಯಗಳಲ್ಲಿ ಉಂಟಾಗಿರುವ ಕಷ್ಟನಷ್ಟಗಳ ವಿಚಾರ, (೪) ಜುಡಿಷಲ್ ಮತ್ತು ಎಕ್ಸಿಕ್ಯೂಟಿವ್ ಅಧಿಕಾರಗಳನ್ನು ಪ್ರತ್ಯೇಕಮಾಡತಕ್ಕ ವಿಚಾರ, (೫) ಸ್ವದೇಶೀ ವಿಷಯ, (೬) ಬಂಗಾಳಾ ಆಧಿಪತ್ಯವನ್ನು ಎರಡಾಗಿ ವಿಭಾಗಮಾಡಿದ ವಿಚಾರ, (೭) ವಿದ್ಯಾಭ್ಯಾಸ, (೮) ಈ ರಾಷ್ಟ್ರದ ಉಟ್ಟುವಳಿಯು, ಸೈನ್ಯದ ಇಲಾಖೆಯ ಖರ್ಚು, (೯) ಕ್ಷಾಮ, (೧೦) ಪ್ಲೇಗ್‌ಜಾಡ್ಯ (೧೧) ಕಾಂಗ್ರೆಸ್ ಮಹಾ ಸಭೆಯ ಕಟ್ಟುಪಾಡು, ಅದು ಮುಂದೆ ನಡಿಸತಕ್ಕ ಕಾರ್ಯಭಾಗಗಳು.

ಕೈಗಾರಿಕೆಗಳನ್ನು ಕುರಿತ ಮಹಾಸಭೆಯು.

ಹಿಂದುಸ್ಥಾನದ ಕೈಗಾರಿಕೆಗಳನ್ನು ಕುರಿತ ಮೂರನೇ ಮಹಾಸಭೆಯು ಈ ಸಲ ಸೂರತ್ ನಗರದಲ್ಲಿ ನ್ಯಾಷನಲ್ ಕಾಂಗ್ರೆಸ್ ಎಂಬ ರಾಜಕೀಯ ಮಹಾಸಭೆ ನೆರವೇರಿದ ಮೇಲೆ ಅದೇ ಮಂದಿರದಲ್ಲಿ ಈ ತಿಂಗಳ ತಾ. ೩೦ ನೇ ಸೋಮವಾರ ಪ್ರಾತಃಕಾಲ ೧೧ ಗಂಟೆಗೆ ಪ್ರಾರಂಭವಾಗುತ್ತದೆ. ಬರೋಡಾ ಸಂಸ್ಥಾನದಲ್ಲಿ ಚೀಫ್ ಜಡ್ಜರಾಗಿದ್ದು ಪೆನ್ಷನ್ ಪಡೆದು ಈಗ ಅಹಮದಾಬಾದಿನಲ್ಲಿ ವಾಸಮಾಡಿಕೊಂಡಿರುವ ದಿವಾನ್ ಬಹದೂರ್ ಅಂಬಾಲಾಲ್ ಸಕೇರ್ ಲಾಲ್ ದೇಸಾಯಿಯವರು ಆ ಮಹಾಸಭೆಯ ಪ್ರೆಸಿಡೆಂಟರಾಗಿ ಚುನಾಯಿಸಲ್ಪಟ್ಟಿದ್ದಾರೆ. ಪಂಡಿತ ಟಿ. ಕೆ. ಗಜ್ಜಾರ್ ಎಂಬ ಬೊಂಬಾಯಿನ ಪ್ರಸಿದ್ಧ ಕಾರ್ಯಗಾರರು ಕಾರ್ಯನಿರ್ವಾಹಕ ಸಭೆಯ ಮುಖಂಡರಾಗಿ ನಿಂತು ಮಹಾಸಭೆಯ ಪ್ರತಿನಿಧಿಗಳಿಗೆ ಉಪನ್ಯಾಸಪೂರ್ವಕವಾಗಿ ಸುಸ್ವಾಗತವನ್ನು ಬಯಸುವರು. ಹೋದ ವರುಷ ಈ ಸಭೆಗೆ ಪ್ರೆಸಿಡೆಂಟರಾಗಿದ್ದ ಮೆ॥ ವಿಠಲ್ ದಾಸ್ ದಾಮೋದರ್ ಥ್ಯಾಕರ್ಸೇ ಎಂಬ ಬೊಂಬಾಯಿನ ಭಾರೀ ವರ್ತಕರು ಕಳೆದ ವರುಷದ ರಿಪೋರ್ಟನ್ನು ಸಭಿಕರಿಗೆ ಓದಿ ಕೇಳಿಸುತ್ತಾರೆ. ತರುವಾಯ ಆ ಸಭೆಯಲ್ಲಿ ಹಿಂದುಸ್ಥಾನದ ಶ್ರೇಯೋಭಿವೃದ್ಧಿಗೆ ಸಹಕಾರಿಗಳಾದ ಕಸಬುಗಳನ್ನು ಕುರಿತು ಕೆಲವು ಮಹನೀಯರೂ ಕಸಬುದಾರರೂ ಉಪನ್ಯಾಸಗಳನ್ನು ಮಾಡುವರು. ಈ ಸಭೆಯಲ್ಲಿ ಪ್ರತಿನಿಧಿಗಳು ಚರ್ಚಿಸಿ ತೀರ್ಮಾನಮಾಡಬೇಕೆಂದು ಗೊತ್ತುಮಾಡಿರತಕ್ಕ ವಿಚಾರಗಳೇನೆಂದರೆ—

(೧) ಹಿಂದುಸ್ಥಾನದ ಬೇರೆ ಬೇರೆ ಆಧಿಪತ್ಯಗಳಲ್ಲೂ ದೇಶೀಯ ಸಂಸ್ಥಾನಗಳಲ್ಲೂ ಯಾವ ಯಾವ ಕಸಬುಗಳು ವಿಶೇಷವಾಗಿ ನಡೆಯುತ್ತಿವೆ; ಆ ಪ್ರಕೃತಿ ವಗೈರೆ ಯಾವನ್ನು ಎಷ್ಟೆಷ್ಟು ಮಟ್ಟಿಗೆ ಅಭಿವೃದ್ಧಿಗೆ ತರಬಹುದು; ಇದಕ್ಕೆ ಆಯಾ ಕಡೆ ದೊರಕತಕ್ಕ ಅನುಕೂಲಗಳೇನು ಎಂಬೀ ವಿಚಾರವನ್ನು ಗವರ್ನ್ಮೆಂಟಿನವರು ಅಧಿಕಾರಿಗಳ ಮುಖಾಂತ್ರ ದೇಶೀಯ ದೊಡ್ಡ ಮನುಷ್ಯರುಗಳ ಮೂಲಕ ವಿಚಾರಿಸಿ ಗೊತ್ತುಮಾಡಿಸಬೇಕಾಗಿರುತ್ತದೆ. (೨) ಸಂಯುಕ್ತ ಆಧಿಪತ್ಯಗಳ ಗವರ್ನ್ಮೆಂಟಿನವರು ಆ ರಾಜ್ಯದಲ್ಲಿ ಪ್ರಜೆಗಳ ಮಕ್ಕಳಿಗೆ ನಾನಾ ತರದ ಕಸಬುಗಳನ್ನು ಕಲಿಸಿಕೊಡಬೇಕೆಂದು ಏರ್ಪಾಡು ಮಾಡಿರುವ ಭಾಗದಲ್ಲಿ ಈ ಮಹಾ ಸಭೆಯು ಅವರನ್ನು ಬಹಳವಾಗಿ ವಂದಿಸುವುದು. ಇತರ ಆಧಿಪತ್ಯಗಳ ಗವರ್ನ್ಮೆಂಟಿನವರೂ ಇದೇ ರೀತಿ ತಮ್ಮ ಭಾಗಗಳೊಳಗೆ ಕಸಬುಗಳನ್ನು ಕಲಿಸುವುದಕ್ಕೆ ಏರ್ಪಾಡು ಮಾಡಬೇಕಾದದ್ದು ಅವರ ಮೊದಲನೇ ಕರ್ತವ್ಯವಾಗಿರುವುದೆಂದು ಈ ಮಹಾಸಭೆಯು ಆಯಾ ಗವರ್ನ್ಮೆಂಟಿನವರನ್ನು ಕೇಳಿಕೊಳ್ಳುವುದು. ದೇಶೀಯ ಸಂಸ್ಥಾನಗಳ ಪ್ರಭುಗಳು ಕೂಡ ತಮ್ಮ ಸಂಸ್ಥಾನಗಳಲ್ಲಿ ಕಸಬುದಾರಿ ವಿದ್ಯೆಗಳನ್ನು ಪ್ರಜೆಗಳಿಗೆ ಕಲಿಸಲು ಏರ್ಪಡಿಸಬೇಕಾಗಿರುತ್ತದೆಂದು ಈ ಮಹಾಸಭಿಕರು ಅವರನ್ನು ಪ್ರಾರ್ಥಿಸಿಕೊಳ್ಳುತ್ತಾರೆ. ಅಲ್ಲದೆ ಹಿಂದುಸ್ಥಾನದ ಪ್ರಜೆಗಳಲ್ಲಿ ದೇಶೀಯ ಕಸಬುಗಳನ್ನು ಹೆಚ್ಚಾಗಿ ಕಲಿಯಬೇಕೆಂತಲೂ, ಅವುಗಳನ್ನು ಅಭಿವೃದ್ಧಿಗೆ ತರುವುದಕ್ಕೆ ಹೊಸ ಕ್ರಮಗಳನ್ನೂ ಸಾಧನಗಳನ್ನೂ ತಿಳಿದುಕೊಳ್ಳಬೇಕೆಂತಲೂ ವಿಶೇಷ ಉತ್ಸಾಹವುಂಟಾಗಿರುವುದು ಸಂತೋಷಪ್ರದವಾಗಿರುತ್ತದೆ. ಪ್ರಜೆಗಳ ಮುಖಂಡರೂ ಪುಣ್ಯವಂತರೂ ಏಕೀಭವಿಸಿ ಮುಂದಾಳುಗಳಾಗಿ ನಿಂತು ಕಸಬುದಾರಿ ಪಾಠಶಾಲೆಗಳನ್ನು ಸ್ಥಾಪಿಸಬೇಕಾಗಿದೆ, ಕಸಬು ಕಲಿಯತಕ್ಕವರಿಗೆ ವೇತನಗಳನ್ನು ಕೊಡುವುದಾಗಿ ಫಂಡುಗಳನ್ನು ಮಾಡಿಡಬೇಕು ಮತ್ತು ಅವರು ಪ್ರಜೆಗಳ ಮಕ್ಕಳಿಗೆ ಕಸಬು ಕಲಿಸುವಂತೆ ಪ್ರೋತ್ಸಾಹಪಡಿಸಬೇಕಾಗಿರುವುದು. (೩) ಗವರ್ನ್ಮೆಂಟಿನವರು ವ್ಯವಸಾಯಾಭಿವೃದ್ಧಿಯ ಬ್ಯಾಂಕುಗಳನ್ನೂ ಪರಸ್ಪರ ಸಹಾಯಕ ಸಂಘಗಳನ್ನೂ ಪ್ರಜೆಗಳು ಹೆಚ್ಚಾಗಿ ಮಾಡಿಕೊಳ್ಳುವಂತೆ ವಿಶೇಷವಾಗಿ ಪ್ರೋತ್ಸಾಹಪಡಿಸಬೇಕೆಂತಲೂ, ರೈತಪ್ರಜೆಗಳು ಸುಲಭ ಬಡ್ಡಿಗೆ ಸಾಲ ಪಡೆಯಲು ಅನುಕೂಲಿಸುವಂತೆ ಈ ಬ್ಯಾಂಕುಗಳಿಗೆ ಗವರ್ನ್ಮೆಂಟಿನವರು ಇನ್ನೂ ಹೆಚ್ಚಾಗಿ ದ್ರವ್ಯಸಹಾಯ ಮಾಡಬೇಕೆಂತಲೂ ಈ ಸಭಿಕರು ಪ್ರಾರ್ಥಿಸುತ್ತಾರೆ. (೪) ಗವರ್ನ್ಮೆಂಟಿನವರು ಬೇರೆ ಬೇರೆ ಆಧಿಪತ್ಯಗಳಲ್ಲಿ ವ್ಯವಸಾಯವನ್ನು ಕಲಿಸುವುದಕ್ಕಾಗಿ ವಿದ್ಯಾಶಾಲೆಗಳನ್ನು ಏರ್ಪಾಡುಮಾಡಬೇಕೆಂದು ಗೊತ್ತುಮಾಡಿರುವುದು ಬಹು ಸಂತೋಷಕರವಾಗಿರುತ್ತದೆ. ವ್ಯವಸಾಯಶಾಸ್ತ್ರವನ್ನೂ ಅದರ ಅಭಿವೃದ್ಧಿಗೆ ಆವಶ್ಯವಾದ ಸಾಧನಗಳನ್ನೂ ವ್ಯವಸಾಯಗಾರರಿಗೆ ಚೆನ್ನಾಗಿ ತಿಳಿಸುವಂತೆ ಗವರ್ನ್ಮೆಂಟಿನವರು ನೋಡಬೇಕೆಂದು ಈ ಸಭೆಯು ಕೇಳಿಕೊಳ್ಳುವುದು. ಇದಲ್ಲದೆ ಗವರ್ನ್ಮೆಂಟಿನವರು ಅನುಕೂಲವಾದ ಅನೇಕ ಸ್ಥಳಗಳಲ್ಲಿ ವ್ಯವಸಾಯದ ಪರೀಕ್ಷೆಗೋಸ್ಕರ ತೋಟಗಳನ್ನು ಸ್ಥಾಪಿಸಬೇಕಾಗಿರುತ್ತದೆ. (೫) ಕಾಫಿ ತಯಾರಾಯವರ ಕಬ್ಬಿಣ ಮತ್ತು ಉಕ್ಕುಗಳನ್ನು ತಯಾರುಮಾಡುವ ಕಾರ್ಖಾನೆಯು ಪ್ರಾರಂಭವಾಗುವಂತೆ ಈ ರಾಷ್ಟ್ರದ ಪ್ರಜೆಗಳು ಆ ಕಂಪನಿಯ ಷೇರುಗಳನ್ನು ಕೊಂಡುಕೊಂಡದ್ದು ದೇಶಾಭ್ಯುದಯಕ್ಕೆ ತುಂಬಾ ಪ್ರೋತ್ಸಾಹಕವಾಯಿತು. ಈ ರಾಷ್ಟ್ರದಲ್ಲಿ ಸಾಹುಕಾರರು ದ್ರವ್ಯವನ್ನು ಕೂಡಿಸಿ, ಲೋಹಗಳೇ ಮೊದಲಾದವುಗಳನ್ನು ಗಣಿಗಳಿಂದ ತೆಗೆಯುವುದಕ್ಕೆ ಪ್ರಯತ್ನಪಡಬೇಕಾಗಿದೆ. ಇದು ಕಾಲಾನುಕಾಲದಲ್ಲಿ ಅಪಾರ ಲಾಭಕರವಾದ ಮತ್ತು ಅನೇಕ ಸಂಸಾರಗಳನ್ನು ಬದುಕಿಸತಕ್ಕ ಉದ್ಯೋಗವಾಗಿರುತ್ತದೆಂದು ಈ ಸಭಿಕರು ಹೇಳಬೇಕಾದದ್ದಿಲ್ಲ. (೬) ಸ್ವದೇಶೀ ಪದಾರ್ಥಗಳ ಬಳಕೆಯ ಈ ರಾಷ್ಟ್ರದ ನೇಯ್ಗೆ ಕಸಬಿಗೆ ಉಂಟಾಗಿರುವ ಪ್ರೋತ್ಸಾಹವನ್ನು ಅಷ್ಟು ಹೇಳಲಾಗದು. ಸಕಲ ಪ್ರಜೆಗಳೂ, ಅಂದರೆ ಜಮೀನ್ದಾರರು ಕೂಡ ವ್ಯವಸಾಯವನ್ನು ಹೆಚ್ಚು ಹೆಚ್ಚಾಗಿ ಮಾಡಲು ಗಮನಕೊಡಬೇಕು. ಬೇರೆ ಕತ್ತೆಯನ್ನು ಬಿಡಿಸುವುದಕ್ಕೂ, ಬಿಡಿಸಿ ಕಸ್ತೂರಿಯನ್ನು ನೂಲುವುದಕ್ಕೂ ನೂತ ದಾರಗಳಿಂದ ಬಟ್ಟೆಗಳನ್ನು ತಯಾರುಮಾಡುವುದಕ್ಕೂ ಬೇಕಾದ ವಿಶೇಷವಾಗಿ ಕಾರ್ಖಾನೆಗಳನ್ನು ಏರ್ಪಡಿಸಬೇಕಾಗಿರುತ್ತದೆ. (೭) ಪರದೇಶದ ಸಕ್ಕರೆಯನ್ನು ಈ ದೇಶದಲ್ಲಿ ವರ್ಷವರ್ಷಕ್ಕೆ ಹೆಚ್ಚು ಹೆಚ್ಚಾಗಿ ಕೊಂಡು ತರಿಸಿಕೊಳ್ಳುತ್ತಿರುವುದು ಬಹಳ ಶೋಚನೀಯವಾಗಿರುತ್ತದೆ. ಹೊಸ ಮತ್ತು ಲಾಭಕರವಾದ ಜಾತಿಗಳ ಕಬ್ಬನ್ನು ನಮ್ಮ ದಮೀನ್ದಾರರು ಬೆಳೆಯುವುದನ್ನು ಪ್ರಾರಂಭಿಸಿದ ಹೊರತು ಸ್ವದೇಶೀ ಸಕ್ಕರೆಯು ನಮಗೆ ಬೇಕಾದಷ್ಟು ಉತ್ಪತ್ತಿಮಾಡಲಾಗುವುದಿಲ್ಲ. ಕಬ್ಬನ್ನು ಲಾಭಕರವಾಗಿ ಬೆಳೆಯುವ ಸಕ್ಕರೆ ತಯಾರುಮಾಡಿಕೊಳ್ಳುವುದಕ್ಕೆ ಯಂತ್ರಸಾಧನಗಳನ್ನು ಒದಗಿಸಿಕೊಳ್ಳಬೇಕಾಗಿರುತ್ತದೆ.

ಕೈಗಾರಿಕೆಗಳ ಪ್ರದರ್ಶನವು.

ಈ ಮಹಾ ಸಭೆಯವರು ಸೂರತ್ತಿನಲ್ಲಿ ಸಾಮಾನ್ಯವಾದ ಒಂದು ಪ್ರದರ್ಶನವನ್ನು ನಡಿಸುವವರಾಗಿದ್ದಾರೆ. ದೇಶೀಯ ಕಸಬುದಾರರು ತಯಾರುಮಾಡಿದ ವಸ್ತುವಿಶೇಷಗಳನ್ನೂ ಹೊಸ ಮಾದರಿಯ ನೇಯ್ಗೆ ಯಂತ್ರಗಳನ್ನೂ ಪ್ರದರ್ಶನಮಾಡುವರು. ಬರೋಡಾ ಸಂಸ್ಥಾನದವರು ಇದಕ್ಕೆ ತುಂಬಾ ಸಹಾಯ ಮಾಡುವುದಾಗಿ ತಿಳಿಸಿರುತ್ತಾರೆ. ಉತ್ತಮವಾಗಿ ಕಂಡುಬಂದ ಸರಕುಗಳಿಗೆ ಬಹುಮಾನಗಳನ್ನು ಕೊಡುವಂತೆ ಪ್ರಕಟಿಸಿದ್ದಾರೆ. ಇದಲ್ಲದೆ ಬೇರೆ ಸುಂದರವಾಗಿಯೂ ತೃಪ್ತಿಕರವಾಗಿಯೂ ನೇಯ್ಗೆ ಕೆಲಸಮಾಡಲು ಅನುಕೂಲಿಸುವಂಥಾ ಕಾಟೇಜ್ ಮಗ್ಗಗಳನ್ನು ಕೈಮಗ್ಗಗಳನ್ನು ಕಂಡುಹಿಡಿದವರಿಗೆ ವಿಶೇಷ ಬಹುಮಾನಗಳನ್ನು ಕೊಡುವರು. ಹೊಸ ತರಹ ಮಗ್ಗಗಳು ಇನ್ನೂ ಹೆಚ್ಚಾಗಿ ಪ್ರದರ್ಶನಕ್ಕೆ ಬಂದರೆ ಹಿತಕರ. ಇನ್ನೂ ಬಹುಮಾನಗಳನ್ನು ಕೊಡುವುದಾಗಿ ತಿಳಿಸಿರುತ್ತಾರೆ.

ಪರ್ಷಿಯಾ ರಾಜ್ಯದಲ್ಲಿ ಗಲಭೆಯು.

ಪರ್ಷಿಯಾ ರಾಜ್ಯದಲ್ಲಿ ಹೋದ ಷಾ ಸುಲ್ತಾನರವರು ಸಾಯುವ ಮುಂಚೆ ಮೊದಲು ಪ್ರಜಾಪ್ರತಿನಿಧಿಗಳ ರಾಜ್ಯಭಾರವನ್ನು ನಡಿಸಬೇಕೆಂದು ತೀರ್ಮಾನಿಸಿ ಪಾರ್ಲಿಮೆಂಟ್ ಸಭೆಯನ್ನು ಪ್ರಾರಂಭಿಸಿದರು. ಪ್ರಜೆಗಳು ತುಂಬಾ ಸಂತೋಷಪಟ್ಟು ತಮ್ಮ ಪ್ರತಿನಿಧಿಗಳನ್ನು ಚುನಾಯಿಸಿ ಕಳುಹಿಸಿದರು. ಆದರೆ ಷಾ ಸುಲ್ತಾನರು ಬದುಕಿರುವಾಗಲೇ ಅವರಿಗೂ ಈ ಪಾರ್ಲಿಮೆಂಟ್ ಮೆಂಬರುಗಳಿಗೂ ಮನಸ್ತಾಪಗಳುಂಟಾಗಿ, ರಾಜ್ಯಭಾರ ಕ್ರಮಗಳ ವಿಷಯದಲ್ಲಿ ವಾದ ನಡೆಯುತ್ತಿರುವಲ್ಲಿ ಸುಲ್ತಾನರವರು ಕಾಲವಾದರು. ಅವರ ಮಗನು ಈಚೆಗೆ ಷಾ ರವರು ಸುಲ್ತಾನರಾಗಿ ಸಿಂಹಾಸನವನ್ನು ಹತ್ತಿ, ಪಾರ್ಲಿಮೆಂಟ್ ಮೆಂಬರುಗಳಿಗೆ ಅನೇಕ ಭಾಷಣಗಳನ್ನು ಕೊಟ್ಟರು. ಆದರೆ ಅವರು ಆ ರೀತಿ ಪ್ರಜಾಸ್ವಾತಂತ್ರ್ಯ ಕ್ರಮಗಳನ್ನು ಕಾರ್ಯತಃ ಮಾಡದೆ ಹೋದದ್ದರಿಂದ ಪ್ರಜೆಗಳಿಗೆ ಅವರ ಮೇಲೆ ನಂಬಿಕೆ ಬಿನ್ನಾಭಿಪ್ರಾಯವುಂಟಾಯಿತು. ಹೊಸದಾಗಿ ವಿರೋಧಗಳಾದ ಅನೇಕ ಅಂತರಂಗ ಸ್ಥಳಗಳು ಏರ್ಪಟ್ಟವು. ರಾಜ್ಯದಲ್ಲಿ ಜನಗಳಿಗೆ ದೊರೆಯ ಮೇಲೆ ದ್ವೇಷವುಂಟಾಯಿತು. ಕಳೆದ ಸೆಪ್ಟೆಂಬರ್ ತಿಂಗಳಲ್ಲಿ ಎಂದರೆ ರಂಜಾನ್ ಹಬ್ಬದ ಕಡೇ ದಿನ ಪಾರ್ಲಿಮೆಂಟ್ ಎಂಬ ದೇವಾಲಯದ ಮೈದಾನದಲ್ಲಿ ಸುಮಾರು ೫೦,೦೦೦ ಜನ ನಾಗರಿಕರು ದೊಡ್ಡಮನುಷ್ಯರು ಸಭೆಸೇರಿ ದೇವರ ಪ್ರಾರ್ಥನೆ ಮಾಡಿದ ಮೇಲೆ ಶಹಜಾದಾ (ರಾಜಕುಮಾರ) ಅಂದಾದಲ್‌ಮುಲ್ಕ್ ಎಂಬಾತನು ಗುರುಪೀಠವನ್ನು ಹತ್ತಿ ಸಭಿಕರನ್ನು ಕುರಿತು ಈಗಿನ ಪ್ರಭುವಿನ ವಿಷಯವಾಗಿ ಬಹು ಕಠಿಣವಾದ ಉಪನ್ಯಾಸಮಾಡಿ, ದಾರಿ ದೊರೆತನವನ್ನು ತಪ್ಪಿಸದೆ ಹೋದರೆ ಪರ್ಷಿಯಾ ರಾಜ್ಯದಲ್ಲಿ ಪ್ರಜಾಸ್ವಾತಂತ್ರ್ಯವುಂಟಾಗಲಾರದೆಂದು ತಿಳಿಸಿದರು. ಅವರು ಹೇಳಿದ್ದೇನೆಂದರೆ—"ನಮ್ಮ ರಾಜ್ಯದಲ್ಲಿ ಪಾರ್ಲಿಮೆಂಟು ಏರ್ಪಡಿಸಿ ೧೫ ತಿಂಗಳಾಯಿತು. ಈಗ ನಮ್ಮ ಸ್ಥಿತಿಗತಿಯನ್ನು ವಿಚಾರಮಾಡಿ ನೋಡೋಣ. ಈ ಸಂಸ್ಥಾನದ ಎಲ್ಲಾ ಭಾಗಗಳಲ್ಲೂ ದಂಗೆಯುಂಟಾಗುವ ಸ್ಥಿತಿಯಲ್ಲಿದೆ. ಗವರ್ನ್ಮೆಂಟಿನ ದರ್ಪವು ಎಲ್ಲೂ ಕಾಣುವುದಿಲ್ಲ. ಸರ್ಕಾರವು ಪ್ರಜಾಸ್ವಾತಂತ್ರ್ಯವನ್ನು ಕಾಪಾಡುವುದಕ್ಕೆ ಪ್ರತಿಯಾಗಿ ಪ್ರಜಾಕಂಟಕ ಕಾರ್ಯಗಳನ್ನೇ ಮಾಡುತ್ತಿದೆ. ರಷ್ಯಾದವರು ನಮ್ಮನ್ನು ಸುತ್ತಲೂ ಆವರಿಸಿಕೊಂಡಿದ್ದಾರೆ. ನಮ್ಮ ಪ್ರಜೆಗಳ ಮನೆಮಠಗಳನ್ನು ಕೊಳ್ಳೆ ಹೊಡೆಯುವರು, ಅನೇಕ ಪ್ರಜೆಗಳನ್ನು ಕೊಂದರು, ಇಲ್ಲವೇ ಕೈಸೆರೆ ಹಿಡಿದರು. ರಾಜಧಾನಿಯಲ್ಲೂ ಆ ಸಂಸ್ಥಾನದಲ್ಲೂ ಅವರ ಘತಾರಿಗಳು ಹೆಚ್ಚುತ್ತಲಿವೆ. ಇದಕ್ಕೆಲ್ಲಾ ಕಾರಣವೇನು ಬಲ್ಲಿರಾ? ನಿಮಗೆ ತಿಳಿಯದೆ ಇದ್ದರೆ ನಾನು ಹೇಳುತ್ತೇನೆ ಕೇಳಿರಿ. ನಿಮ್ಮ ದೊರೆಯಿಂದಲೇ ರಾಜ್ಯವು ಈ ಸ್ಥಿತಿಗೆ ಬಂದಿದೆ. ಅವರೇ ಘತಾರಿ ಮಾಡುತ್ತಿದ್ದಾರೆ. ಅವರು ನಿಮ್ಮ ಪಕ್ಷವನ್ನು ವಹಿಸಿಲ್ಲ, ಅವರು ತಮ್ಮ ರಾಜ್ಯವು ನೆಮ್ಮದಿಯಾಗಿರಬೇಕೆಂದು ಅಪೇಕ್ಷಿಸತಕ್ಕವರಾಗಿಲ್ಲ. ಪಾರ್ಲಿಮೆಂಟಿನವರು ಮಾಡತಕ್ಕ ಕಾರ್ಯಗಳಿಗೆಲ್ಲಾ ಅವರು ಅಡ್ಡಹಾಕುತ್ತಿದ್ದಾರೆ. ಬಡ ರೈತ ಪ್ರಜೆಗಳೇ, ನಿಮಗುಂಟಾಗಿರತಕ್ಕ ಎಲ್ಲಾ ತರದ ಕಷ್ಟನಷ್ಟಗಳಿಗೂ ನಿಮ್ಮ ದೊರೆಯಾದ ಮಹಮದಲ್ಲಿ ಷಾ ಸುಲ್ತಾನರೇ ಕಾರಣರಾಗಿರುವರು. ಈ ರಾಜ್ಯದಲ್ಲಿ ಪ್ರಜಾಸೆಮ್ಮದಿಯೂ ಏಳಿಗೆಯೂ ಚೆನ್ನಾಗಿ ಭವ್ಯದಾಯವು ನೆಲೆಗೊಳ್ಳಬೇಕೆಂದು ನೀವು ಅಪೇಕ್ಷಿಸುವ ಪಕ್ಷದಲ್ಲಿ ಈ ದೊರೆಯನ್ನು ಸಿಂಹಾಸನದಿಂದ ತಳ್ಳಿಬಿಟ್ಟು, ಇನ್ನೊಬ್ಬನನ್ನು ದೊರೆಯಾಗಿ ಮಾಡಿಕೊಳ್ಳಿ" ಎಂಬೀ ರೀತಿಯಾಗಿ ಹೇಳಿದರ ಮಾತಿನಲ್ಲಿ ಸೇರಿದ್ದವರಲ್ಲಿ ನೂರಾರುಮಂದಿ ಕಣ್ಣೀರು ಸುರಿಸಿ, ಎಲ್ಲರೂ ಆ ರಾಜಕುಮಾರನ ಹೇಳುವಂತೆ ನಡೆದುಕೊಳ್ಳುವುದಾಗಿ ಶಪಥ ಮಾಡಿದರು.

ಷಾ ದೊರೆಯವರು ಈ ಉಪನ್ಯಾಸ ನಡೆದ ಸಂಗತಿಯನ್ನು ಕೇಳಿ ಗಾಬರಿಬಿದ್ದು, ಪಾರ್ಲಿಮೆಂಟಿನ ಪ್ರೆಸಿಡೆಂಟರನ್ನು ಕರೆಸಿಕೊಂಡು ತನಿಖೆ ಮಾಡಿದರು ಮತ್ತು ಅವರ ಸಂಗಡ ಬಹಳ ನಂಬಿಕೆಯಿಂದಲೂ ಪ್ರೀತಿಯಿಂದಲೂ ಮಾತನಾಡಿ ತನ್ನ ಮುಂದೆ ಪಾರ್ಲಿಮೆಂಟಿನವರ ಅಭಿಪ್ರಾಯಾನುಸಾರವಾಗಿ ರಾಜ್ಯಭಾರವನ್ನು ನಡಿಸುತ್ತೇನೆಂದು ಭರವಸೆ ಹೇಳಿದರು. ಪ್ರೆಸಿಡೆಂಟರು ಪಶ್ಚಾತ್ತಾಪಪಟ್ಟು, ಪಾರ್ಲಿಮೆಂಟಿನವರು ದೊರೆಯವರ ವಿಷಯದಲ್ಲಿ ಭಯಭಕ್ತಿಯಿಂದ ನಡೆದುಕೊಂಡಾರೆಂದು ಅರಿಕೆಮಾಡಿಕೊಂಡರು. ಮೇಲ್ಕಂಡ ಉಪನ್ಯಾಸಮಾಡಿದಂಥಾ ರಾಜಕುಮಾರ (ಷಹಜಾದಾ)ನನ್ನು ಷಾ ಸುಲ್ತಾನರು ಹಿಡಿಸಿ ಅವರ ಮೇಲೆ ವಿಚಾರಣೆ ಮಾಡಿದ್ದಾರೆ.

ಪ್ರಜಾ ನೆಮ್ಮದಿಯು ಈಗ ತುಂಬಾ ಕೆಟ್ಟಿದೆ. ರಾಜಧಾನಿಯಾದ ಟೆಹರಾನಲ್ಲೂ ಬೇರೆ ಬೇರೆ ನಗರದಲ್ಲೂ ಗಲಭೆಯುಂಟಾಗಿದೆ. ಇದಾದ ಮೇಲೆ ಮಂತ್ರಿಗಳೆಲ್ಲಾ ಕೆಲಸಕ್ಕೆ ರಾಜೀನಾಮೆ ಕೊಟ್ಟರು. ಆದರೆ ಷಾ ದೊರೆಯವರು ಅದನ್ನು ಅಂಗೀಕರಿಸಲಿಲ್ಲ. ದೊರೆಯ ಪಕ್ಷದವರೂ ಪ್ರಜಾಪಕ್ಷದವರೂ ಅಲ್ಲಲ್ಲಿ ಯುದ್ಧ ಗುಂಪು ಮುಂತಾದದ್ದನ್ನು ಸಿದ್ಧಪಡಿಸಿಕೊಂಡಿದ್ದಾರೆ.

ಈಚೆಗೆ ಬಂದಿರುವ ತಂತೀವರ್ತಮಾನಗಳು

ಲಂಡನ್, ಡಿಸೆಂಬರ್ ೧೫ — ಟೆಹರಾನ್ ರಾಜಧಾನಿಯಲ್ಲಿ ಸೇರಿದರುಗಳು ವರ್ತಕರಿಬ್ಬರನ್ನು ಕೊಂದದ್ದಕ್ಕೆ ಬೇರೆ ಮಸೀದಿಯಲ್ಲಿ ಹಾಕಲ್ಪಟ್ಟರು. ಆ ವರ್ತಕರ ಮನೆಯವರೂ ಅರ್ಜಿದಾರ ಸಭೆಗಳ ಮುಖಂಡರೂ ಆ ಸೇರಿದರುಗಳನ್ನು ಗಲ್ಲಿಗೆ ಹಾಕಬೇಕೆಂದು ಕೇಳಿದ್ದಕ್ಕೆ ಷಾರವರು ಆ ರೀತಿ ಹುಕುಂ ಕೊಡಲಿಲ್ಲ. ಇದರ ಮೇಲೆ ಇರಾನ್ ಮಂತ್ರಿಗಳೆಲ್ಲಾ ರಾಜೀನಾಮೆ ಕೊಟ್ಟರು. ಪ್ರಜೆಗಳು ಕೋಪಯುಕ್ತರಾಗಿ ಆಯುಧ ಸಮೇತ ಪಾರ್ಲಿಮೆಂಟಿನ ಬಳಿ ಸೇರಿದರು. ಅಂಗಡಿಗಳೆಲ್ಲಾ ಮುಚ್ಚಲ್ಪಟ್ಟವು. ಅರಮನೆ ಪಕ್ಕದವರಿಗೂ ಸೈನಿಕರಿಗೂ ಷಾರವರು ಮದ್ದುಗುಂಡನ್ನು ಕೊಡಿಸಿರುತ್ತಾರೆ. ನೈಜಾಂ ಸುಲ್ತಾನೆ ಮತ್ತು ನೈಜಾಮುಲ್‌ಮುಲ್ಕ್ ಎಂಬೀ ಇಬ್ಬರು ಮಂತ್ರಿಗಳನ್ನು ಷಾ ಸುಲ್ತಾನರು ಹಿಡಿಸಿ ಸೆರೆಮನೆಯಲ್ಲಿ ಹಾಕಿಸಿದರು. ಪಾರ್ಲಿಮೆಂಟ್ ಸಭಿಕರು ಸೇರಿ, ಘಾತಯ ಸಮಾಧಾನ ಹೇಳುವ ತನಕ ತಾವು ಸಭೆ ಮನೆಯಿಂದ ಹೋಗುವುದಿಲ್ಲವೆಂದು ತಿಳಿಸಿದರು. ಜನರ ಗುಂಪು ಇನ್ನೂ ಅಲ್ಲೇ ಇದೆ.

ಲಂಡನ್, ಡಿಸೆಂಬರ್ ೧೬ — ಆಗತಾನೇ ರಾಜೀನಾಮೆ ಕೊಟ್ಟ ಇಬ್ಬರು ಮಂತ್ರಿಗಳನ್ನೂ ಬಂದೀಖಾನೆಯಲ್ಲಿ ಹಾಕಿಸಿದ್ದರಿಂದ ಟೆಹರಾನಲ್ಲಿ ತುಂಬಾ ಗಲಭೆ ಯುಂಟಾಗಿದೆ. ಪಾರ್ಲಿಮೆಂಟಿನವರು ಇದಕ್ಕೆ ಸಮ್ಮತಿಪಡದೆ ಪ್ರತಿಘಟಿಸಿದಾರೆ (ಈಚೆಗೆ) ಬಂದೀಖಾನೆಗೆ ಹಾಕಿಸಲ್ಪಟ್ಟ ಮಂತ್ರಿಯನ್ನು ಬಿಡಿಸಿ ಯೂರೋಪ್ಪಿಗೆ ಹೋಗಬಹುದೆಂದು ದೊರೆಯವರು ಹುಕುಂ ಕೊಟ್ಟಿದ್ದಾರೆ ಮತ್ತು ದೊರೆಯವರು ಪಾರ್ಲಿಮೆಂಟಿನವರನ್ನು ಸಮಾಧಾನಪಡಿಸಬೇಕೆಂದು ಪ್ರಯತ್ನ ಪಡುತ್ತಿರುವರು. ಸಭಿಕನಿರುವ ಅಲ್ಲಿರ ಪ ಇತರರನ್ನು ಬಿಡುಗಡೆ ಮಾಡಲಿಲ್ಲ.

ಲಂಡನ್, ಡಿಸೆಂಬರ್ ೧೭ — ಇಂಗ್ಲಿಷ್ ರಾಯಭಾರಿಗಳು ಮಧ್ಯಸ್ಥಿಕೆಮಾಡಿ ಹೇಳಿದ್ದರಿಂದ ದೊರೆಯವರು ಮಂತ್ರಿಯವರನ್ನು ಸೆರೆಮನೆಯಿಂದ ಬಿಡಿಸಿದರು.

ಪರ್ಷಿಯಾದಲ್ಲಿ ಉಂಟಾಗಿರುವ ಗಲಭೆಯನ್ನು ನಿವಾರಣೆ ಮಾಡುವದಕ್ಕೆ ಇಂಗ್ಲಿಷ್ ಮತ್ತು ರಷ್ಯ ರಾಜ್ಯಗಳವರು ಒಂದಾಗಿ ಕಾರ್ಯಭಾಗ ನಡಿಸುತ್ತಿದ್ದಾರೆ.

ಪಾರ್ಲಿಮೆಂಟಿನಲ್ಲಿ ಇತ್ಯರ್ಥವಾದ ಪ್ರಕಾರ ಪರ್ಷಿಯಾ ರಾಜ್ಯದ ಪ್ರಜೆಗಳು ಯುವರಾಜನ ರಾಜ್ಯಾಧಿಕಾರಿಗಳಿಗೆಲ್ಲಾ ಒಂದು ಪತ್ರಿಕೆಯನ್ನು ಬರೆದು—ನಮ್ಮ ದೊರೆಯು ಚಿಕ್ಕ ವಯಸ್ಸಿನವನಾಗಿದ್ದು ಕೆಟ್ಟ

ಪ ಪೂರ್ವಿಕರ ಸಲಹೆ ಮತ್ತು ಪ್ರೋತ್ಸಾಹಗಳನ್ನು ಪಡೆದು, ಅನುಮತಿಯಿಂದ ರಾಜ್ಯಭಾರ ನಡಿಸದೆ ಇರುತ್ತಾರೆ ನಮ್ಮ ಹಕ್ಕು ಸ್ವತ್ತುಗಳಿಗೆ ನಮ್ಮ ದೊರೆಯಿಂದ ಯಾವ ಲೋಪವೂ ಉಂಟಾಗದಂತೆ ಪ್ರಜಾಂಗಗಳವರೂ ನಮಗೆ ಸಹಾಯಮಾಡಬೇಕು ಎಂದು ತಿಳಿಸಿದ್ದಾರೆ ಅಂಗಡಿ ಮುಂಗಟ್ಟುಗಳು ಇನ್ನೂ ತೆರೆಯಲೇ ಇಲ್ಲ.

ಲಂಡನ್, ಡಿಸೆಂಬರ್ ೧೯ — ದೊರೆಯು ಪಕ್ಷದವರು ಸುಮಾರು ೩೦೦ ದಷ್ಟರನ್ನು ಸೇರಿಸಿಕೊಂಡು, ಅರಮನೆಯ ಮುಂದೆ ಮದ್ದು ಗುಂಡು ಫಿರಂಗಿಗಳನ್ನು ಸಿದ್ಧಪಡಿಸಿಕೊಂಡಿದ್ದಾರೆ ಪ್ರಜಾಪಕ್ಷದವರು ಸುಮಾರು ೧೦,೦೦೦ ಜನರು ಪಾರ್ಲಿಮೆಂಟಿನ ಸುತ್ತಲೂ ಸೇರಿ ಅದರ ರಕ್ಷಣಾಧಿಕಾರಿಕೆ ಮಾಡುತ್ತಿರುವರು

ದೊರೆಯವರೂ ಪಾರ್ಲಿಮೆಂಟಿನವರೂ ಪರಿಶೀಲಿಸಿ ಒಪ್ಪಂದಗಳನ್ನು ಮಾಡಿಕೊಳ್ಳುತ್ತಿರುವುದಾಗಿಯೂ, ಪ್ರಜೆಗಳು ಗಲಭೆಮಾಡುವುದನ್ನೂ ಗುಂಪುಸೇರುವುದನ್ನೂ ನಿಲ್ಲಿಸಿ, ಅವರವರ ಕೆಲಸಗಳ ಮೇಲೆ ಹೋಗದಿದ್ದರೆ ಆ ಒಪ್ಪಂದದ ಪ್ರಯತ್ನವನ್ನೇ ನಿಲ್ಲಿಸಿಬಿಡುವುದಾಗಿಯೂ ಇಷ್ಟು ಜಾರಿ ಕೊಟ್ಟಿದ್ದರಿಂದ ಮೈದಾನುಗಳಲ್ಲೂ ಪಾರ್ಲಿಮೆಂಟು ಸಭೆಯ ಸುತ್ತಲೂ ತಂಡ ತಂಡವಾಗಿ ಸೇರಿದ್ದ ಜನರೆಲ್ಲಾ ಚದುರಿಹೋದರು ಎಲ್ಲಾ ಕ್ಷೇಮವೂ ಅನುಕೂಲವೂ ಆಗುತ್ತಿದೆ ಎಂದು ತಿಳಿದುಬಂದಿತು ಆದರೆ ಈ ದಿನ ಮಧ್ಯಾಹ್ನದವೇಳೆ ಬಂದೂಕುಗಳು ಹಿಡಿಸಲ್ಪಟ್ಟವು ಮೈದಾನದಲ್ಲಿ ಕಿತ್ತು ಹಾಕಿದ್ದ ಡೇರಾಗಳನ್ನು ಮತ್ತೆ ಹಾಕಿಕೊಟ್ಟರು ಪ ಜೆಗಳು ಯಥಾಪ್ರಕಾರ ಗುಂಪುಸೇರಿಕೊಂಡರು.

ಲಂಡನ್, ಡಿಸೆಂಬರ್ ೨೦ — ಪರ್ಷಿಯಾ ರಾಜಧಾನಿಯಾದ ಟೆಹರಾನ್ ಪಟ್ಟಣದ ಓಣಿಗಳಿಂದ — ಬೇರೆ ಬೇರೆ ಪಂಗಡಗಳ ಪಾಳ್ಯಗಾರರು ಮಂತ್ರಿಗಳೂ ಮಧ್ಯಸ್ಥಿಕೆಮಾಡಿ ಪ್ರಜೆಗಳಿಗೆ ಸಮಾಧಾನ ಹೇಳಿದ್ದರಿಂದ ಗುಂಪುಗಳೆಲ್ಲಾ ಚದರಿಹೋದವು ಬಹಳ ದೊಂಬಿ ಮಾಡುತ್ತಿದ್ದ ಹಳ್ಳಿ ಜನಗಳೆಲ್ಲಾ ತಮ್ಮ ತಮ್ಮ ಮನೆಗಳನ್ನು ಕುರಿತು ತೆರಳಿದರು

ನೈಜಾಮ್ ಸಲ್ತನೆ ಎಂಬ ಒಬ್ಬ ದೊಡ್ಡ ಮನುಷ್ಯರು ಮಂತ್ರಿಪದವಿಯನ್ನು ಒಪ್ಪಿಕೊಂಡು ಒಂದು ರಾಜ್ಯಭಾರವನ್ನು ನಡಿಸುವುದಕ್ಕೆ ತನಗೆ ಬೇಕಾದ ದೊಡ್ಡ ಜನರನ್ನು ಬೇರೆ ಬೇರೆ ಇಲಾಖೆಗಳ ಮಂತ್ರಿಗಳನ್ನಾಗಿ ನೇಮಿಸಿಕೊಂಡಿದ್ದಾರೆ

ವಿದೇಶ ವರ್ತಮಾನಗಳು

ಅಮೇರಿಕಕ್ಕೆ ಸೇರಿದ ಪಿಟ್ಸ್‌ಬರ್ಗಿನಲ್ಲಿ ಒಂದು ಕಲ್ಲಿದ್ದಲ ಗಣಿಯೊಳಗೆ ಬೆಂಕಿ ಹತ್ತಿ ಅನಾಹುತವಾಯಿತು ಇನ್ನೂರು ಮಂದಿ ಸತ್ತಿದ್ದಾರೆ

❧❧❧

ಪಾಲಮೆರ್ ನಗರದಲ್ಲಿ ಒಂದು ಸೋರ್ಟೆಲು ಕಳೆಚಿ ಬಿದ್ದುಹೋಗಿ ೩೩ ಮಂದಿ ಸತ್ತುಹೋದರು ೬೦ ಜನರಿಗೆ ಜಖಂ ಆಯಿತು ಅನೇಕರ ಸಿಕ್ಕಿ ಇಲ್ಲ

❧❧❧

ಲಂಡನ್ ಪಟ್ಟಣದ ಒಂದು ಧರ್ಮಶಾಲೆಯಲ್ಲಿದ್ದ ಸಾರಾ ಬ್ರಾಂಟ್ ಎಂಬೊಬ್ಬ ವಿಧವೆಯು ಕಾಲವಾದಳು ಈಕೆಗೆ ೧೦೫ ವರುಷ ತುಂಬಿತ್ತೆಂದು ವರ್ತಮಾನವಿದೆ

❧❧❧

ಲಂಡನ್ ಪಟ್ಟಣದ ಸಾಲ್ಟ್ಬೋರ್ನ್ ಎಂಬ ಪೇಟೆಯಲ್ಲಿ ಗಾಮೇಜ್ ಎಂಬ ದೊಡ್ಡ ಅಂಗಡಿಗೆ ಬೆಂಕಿಬಿದ್ದು ನಾಲ್ಕೈದು ಲಕ್ಷ ರೂಪಾಯಿನ ಸರಕು ಸುಟ್ಟುಹೋಯಿತು

❧❧❧

ಕಳೆದ ೧೭ ವರುಷಗಳಲ್ಲಿ ಅಮೇರಿಕದ ಗಣಿಗಳಲ್ಲಿ ಒಟ್ಟು ೨೨,೯೪೦ ಜನ ಕೂಲಿಗಾರರು ಮೃತಪಟ್ಟರೆಂತಲೂ, ಈ ಸ್ಥಳಗಳಲ್ಲಿ ಅನೇಕ ಗೌಣ ಅಪಘಾತಗಳಲ್ಲಿ ಮೃತಪಟ್ಟರೆಂತಲೂ, ೧೯೦೬ ನೆ ಇಸವಿಯಲ್ಲಿ ೨,೦೬೫ ಜನರು ಪ್ರಾಣ ಕಳೆದುಕೊಂಡಿದ್ದರೆಂತಲೂ ಸರ್ಕಾರಿ ರಿಪೋರ್ಟು ತಿಳಿಸಿರುವುದು.

❧❧❧

ಕಳೆದ ನವೆಂಬರ್ ೨೩ ನೇ ತಾರೀಖಿನ ದಿನ ಪ್ಯಾಟ್ರಿ ಎಂಬುದೊಂದು ಫ್ರಾನ್ಸಿನ ಆಕಾಶವಿಮಾನವು (ಆಕಾಶಬುಟ್ಟಿ) ಪ್ಯಾರಿಸ್ ಪಟ್ಟಣದಿಂದ ಹೊರಟು, ೬೦೦ ಮೈಲಿ ದೂರದಲ್ಲಿರುವ ವರ್ಡನ್ ಎಂಬ ಪಟ್ಟಣಕ್ಕೆ ಹೋಗಿ ಇಳಿಯಿತು ಅಂದರೆ ಆ ವಿಮಾನವು ಅಂತರಿಕ್ಷದಲ್ಲಿ ಗಂಟೆಗೆ ೩೩ ಮೈಲಿಯ ಪ್ರಕಾರ ಸಂಚಾರಮಾಡಿದಂತಾಯಿತು

❧❧❧

ಕೊರಿಯಾ ರಾಜ್ಯದ ಯುವರಾಜರೂ, ಜಪಾನ್ ರಾಜ್ಯದ ಪ್ರತಿನಿಧಿಯಾದ ಮಾರ್ಕ್ವಿಸ್ ಇಟೋಯವರೂ ಈಗ ಜಪಾನ್ ರಾಜಧಾನಿಗೆ ಹೋಗಿದ್ದಾರೆ ಕೊರಿಯದಲ್ಲಿ ಪ್ರಜೆಗಳು ಸ್ವಲ್ಪ ಗಲಭೆಯನ್ನು ಎಬ್ಬಿಸುತ್ತಿರುವದರಿಂದ ಜಪಾನ್ ಸೈನ್ಯಗಳನ್ನು ಬೇಗನೆ ಅಲ್ಲಿಗೆ ಕಳುಹಿಸಬೇಕೆಂದು ಜಪಾನ್ ಗವರ್ನಮೆಂಟಿನವರು ಆಲೋಚಿಸುತ್ತಿದ್ದಾರೆ.

❧❧❧

ಅಮೇರಿಕದ ನ್ಯೂಯಾರ್ಕ್ ಪಟ್ಟಣದ ನ್ಯೂಯಾರ್ಕ್ ನಗರದಲ್ಲಿ ಹೆಸರುಗೊಂಡಿದ್ದ ಎಳು ಅಂತಸ್ತಿನ ಒಂದು ಮನೆಯು ಬೆಂಕಿಬಿದ್ದು ಉರಿದು ಎಲ್ಲಾ ಬೂದಿಯಾಯಿತು ಮೊದಲನೆಯ ಅಂತಸ್ತಿನಲ್ಲಿದ್ದ ೧೩ ಮಂದಿ ಇದರಲ್ಲಿ ಸಿಕ್ಕಿ ಸತ್ತುಹೋದರು ಅನೇಕ ಜನಗಳಿಗೆ ಪೆಟ್ಟು ಗಾಯಗಳಾದವು ಯಾರೋ ಬೇಕೆಂದು ಬೆಂಕಿ ಹಾಕಿರುವರೆಂದು ಹೇಳುತ್ತಾರೆ

❧❧❧

ಸ್ವೀಡನ್ ರಾಜ್ಯದ ಆಸ್ಕಾರ್ ದೊರೆಯವರ ಶವವನ್ನು ಕಳೆದ ತಿಂಗಳು ಪದ್ಧತಿಯ ಪ್ರಕಾರ ರಾಜ್ಯಮರ್ಯಾದೆಯಿಂದ ಸಾಗಿಸಿ ದಫನ್ ಮಾಡಿದರು. ಸ್ವೀಡನ್ ಮತ್ತು ಡೆನ್ಮಾರ್ಕ್ ರಾಜ್ಯಗಳ ದೊರೆಗಳೂ, ಡ್ಯೂಕ್ ಆಫ್ ಕನ್ನಾಟ್ ರವರೂ, ಅನ್ಯದೇಶಗಳ ರಾಜಕುಮಾರರೂ ಮೆರವಣಿಗೆಯಲ್ಲಿ ಹಾಜರಾಗಿದ್ದರು ರಾಜ್ಯದ ಮೂಲೆ ಮೂಲೆಗಳಿಂದ ರೋಗಿಗಳು ಸಹ ಹೋದರು

❧❧❧

ಜರ್ಮನಿಗೆ ಸೇರಿರತಕ್ಕ ಪೋಲಾಂಡಿನಲ್ಲಿ ಜರ್ಮನಿ ಪ್ರಜೆಗಳೇ ವರ್ತಕರೂ ಜಮೀನ್ದಾರರೂ ಆಗಿರಬೇಕೆಂದು ಗವರ್ನಮೆಂಟಿನವರು ಗೊತ್ತುಮಾಡಿ, ಇತರ ದೇಶಗಳ ಜನರಿಂದ ಜಮೀನುಗಳನ್ನು ಬಿಡಿಸಿಕೊಂಡು, ಅವರಿಗೆ ಪ್ರತಿಫಲವನ್ನು ಕೊಟ್ಟು ಜಮೀನನ್ನು ಜರ್ಮನಿಯ ಜನರಿಗೇನೇ ಕೊಡಿಸುವುದಕ್ಕೋಸ್ಕರ ೨೬ ಕೋಟಿಯೂ ೨೫ ಲಕ್ಷ ರೂಪಾಯಿ ಮಂಜೂರ್ ಆಗಿದೆ

❧❧❧

ಜರ್ಮನಿ ರಾಜ್ಯದಲ್ಲಿ ಪಬ್ಲಿಕ್ ಸಭೆಗಳಲ್ಲಿ ಉಪನ್ಯಾಸಮಾಡತಕ್ಕವರೆಲ್ಲಾ ಜರ್ಮನಿ ಭಾಷೆಯಲ್ಲೇ ಮಾತನಾಡಬೇಕೆಂತಲೂ, ಪರದೇಶಗಳ ಭಾಷೆಗಳನ್ನು ಸಭೆಗಳಲ್ಲಿ ಆಡಲೇ ಕೂಡದೆಂತಲೂ, ಸಭೆಯ ನಿಬಂಧನೆಗಳೂ ಕೂಡ ಜರ್ಮನಿ ಭಾಷೆಯಲ್ಲೇ ಇರಬೇಕೆಂದೂ ಮೊದಲೇ ಗವರ್ನಮೆಂಟಿಗೆ ತಿಳಿಸಬೇಕೆಂತಲೂ ಕೆಲವು ಮಂತ್ರಿಗಳು ಒಂದು ಹೊಸದಾದ ಕಾನೂನ್ ಮಾಡಿ ಚರ್ಚಿಸುತ್ತಿದ್ದಾರೆ

❧❧❧

ಸ್ಪೇನ್ ರಾಜ್ಯಕ್ಕೆ ಸೇರಿದ ಬಾರ್ಸಿಲೋನಾ ಪಟ್ಟಣದಿಂದ ಬಹು ವೇಗವಾಗಿ ಹೋಗತಕ್ಕ ಎಕ್ಸ್‌ಪ್ರೆಸ್ ರೈಲುಗಾಡಿಯು ಒಂದು ಸೇತುವೆಯ ಮೇಲೆ ಹಾದಿ ತಪ್ಪಿ ಕೆಳಗೆ ನದಿಯೊಳಕ್ಕೆ ಉರುಳಿಕೊಂಡಿತು. ಆ ಗಾಡಿಯಲ್ಲಿ ಸುಮಾರು ೯೦ ಜನ ಪ್ರಯಾಣಿಕರಿದ್ದರು ಆ ಪೈಕಿ ಇಬ್ಬರು ಮಾತ್ರ ತಪ್ಪಿಸಿಕೊಂಡರೆಂತಲೂ, ಇದುವರೆಗೆ ೨೦ ಶವಗಳನ್ನು ನದಿಯೊಳಗಿಂದ ಮೇಲಕ್ಕೆ ತೆಗೆದಿದ್ದಾರೆಂತಲೂ ಪ್ರಕಟವಾಗಿದೆ

❧❧❧

ಜಪಾನಿನವರ ಮ್ಯಾಂಚೂರಿಯಾ ಯುದ್ಧದಲ್ಲಿ ಪ್ರಯೋಗಿಸಿದ ಬಂದೂಕಿನ ಸಾಮಾನುಗಳು ತುಂಬಾ ಉಪಯೋಗಕಾರಿಗಳಾಗಿದ್ದವೆಂದೂ, ಇದ್ದರಿಂದ ಅಂಥಾ ಸಾಮಾನುಗಳನ್ನೇ ಇಂಗ್ಲೀಷ್ ಸೈನಿಕರಿಗೂ ಕೊಡಿಸುವಂತೆ ಏರ್ಪಾಡು ಮಾಡಬೇಕೆಂತಲೂ ಇಂಗ್ಲೀಷ್ ಸೈನ್ಯದ ಕರ್ನಲ್ ಎಂಬುವರು ಸೂಚಿಸಿರುತ್ತಾರೆ ಇಂಗ್ಲೀಷ್ ಸೈನಿಕರು ಉಪಯೋಗಿಸುತ್ತಿರುವ ಸಾಮಾನುಗಳಿಗಿಂತಲೂ ಜಪಾನಿನವರ ಸಾಮಾನುಗಳು ಹಗುರವಾಗಿ ಉಪಯೋಗಕರವಾಗಿರುತ್ತವೆ

❧❧❧

ಅಮೇರಿಕದ ಸಂಯುಕ್ತ ಸಂಸ್ಥಾನಗಳಲ್ಲಿ ಕಳೆದ ಜೂನ್ ಆಖೈರಿಗೆ ಮುಗಿದ ೧೨ ತಿಂಗಳಲ್ಲಿ ರೈಲ್ವೆ ಅನಾಹುತಗಳ ದೆಸೆಯಿಂದ ೫,೦೦೦ ಜನರು ಮೃತಪಟ್ಟರು ೭೬,೩೦೦ ಜನರಿಗೆ ಗಾಯಗಳಾದವು ಆ ವರುಷದ ಆದೇ ಮೂರು ತಿಂಗಳೊಳಗೆ ೧,೯೦೫ ಅನಾಹುತಗಳಾದವು, ೧೯೩೦ ಸ್ಥಳಗಳಲ್ಲಿ ಗಾಡಿಗಳು ಹಳಿ ಬಿಟ್ಟು ಹೋದವು ೧,೦೭೫ ಜನರು ಮೃತಪಟ್ಟರು ೧೪,೬೫೦ ಜನರಿಗೆ ಜಖಂ ಆಯಿತು ರೈಲ್ ಕಂಪನಿಯವರಿಗೆ ೯೦ ಲಕ್ಷ ರೂಪಾಯಿ ನಷ್ಟವಾಗಿರುತ್ತದೆ

❧❧❧

ಜನ್ಸಿರಾಜ್ಯದಲ್ಲಿ ಕೌಂಟ್ ಜೆಸ್ಟಲರ್ ಎಂಬೊಬ್ಬ ಕಾರ್ಯಗಾರನು ಅಂತರಿಕ್ಷದಲ್ಲಿ ಸಂಚರಿಸತಕ್ಕ ಅರ್ಗಾದ ರಥಗನ್ನು (ಆಕಾಶಬುಟ್ಟಿ) ತಯಾರುಮಾಡುವುದಕ್ಕೋಸ್ಕರ ಆತನಿಗೆ ಸರ್ಕಾರದಿಂದ ಮೂರು ಲಕ್ಷ ರೂಪಾಯಿ ಸಹಾಯ ಮಾಡಬೇಕೆಂತಲೂ, ಆತನ ಉದ್ದೇಶವು ಕೈಗೂಡಿ, ತೃಪ್ತಿಕರವಾದ ರಥವು ಕಟ್ಟಲ್ಪಟ್ಟರೆ ಸಿದ್ಧಿಸಿದ ಪಕ್ಷದಲ್ಲಿ ಆತನಿಗೆ ೧೬ ಲಕ್ಷ ೧೩ ಸಾವಿರ ರೂಪಾಯಿ ಸರ್ಕಾರದ ಬಹುಮಾನ ಕೊಡತಕ್ಕದ್ದೆಂತಲೂ ಅಲ್ಲಿನ ಪಾರ್ಲಿಮೆಂಟ್ ಮೆಂಬರುಗಳು ಗೊತ್ತು ಮಾಡಿರುತ್ತಾರೆ

❧❧❧

ವಿಲಾಯಿತಿಯಲ್ಲಿ ಕಳೆದ ವಾರ ಒಂದು ಭಯಂಕರವಾದ ಬಿರುಗಾಳಿ ಬೀಸಿತು ದಕ್ಷಿಣ ಸಮುದ್ರತೀರದಲ್ಲಿದ್ದ ಅನೇಕ ಹಡಗುಗಳು ಕೊಚ್ಚಿ ಒಡೆದುಹೋದವು ಕೆಲವರು ಪ್ರಾಣ ಕಳೆದುಕೊಂಡರು ಸ್ಲಿಪ್ಪಿ ದ್ವೀಪದ ಬಳಿ ಒಂದು ಅಮೇರಿಕದ ಹಡಗು ಒಡೆದುಹೋಗಿ ೧೮ ಜನರು ಸಮುದ್ರಪಾಲಾದರು ಪ್ಲಿಮತ್ ಸಮುದ್ರತೀರದಲ್ಲಿ ಒಂದು ಹಡಗು ಮುಳುಗಿ ಎಂಟು ಮಂದಿ ಮೃತಪಟ್ಟರು ಇಂಗ್ಲೀಷ್ ಕಾಲುವೆಯಲ್ಲಿ ಅನೇಕ ರಸ್ತೆಗಳೆಲ್ಲಾ ನಿಂತುಹೋಗಿದೆ ಟೆಲಿಗ್ರಾಫ್ ಕಂಬಗಳೂ ತಂತಿಗಳೂ ಅನೇಕ ಕಡೆ ಕಿತ್ತುಬಿದ್ದವು ಅಪಾರವಾದ ಮಳೆ ಸುರಿದದ್ದರಿಂದ ಟೇಮ್ಸ್ ಮತ್ತು ಸೆವರ್ನ್ ನದಿಗಳಲ್ಲಿ ಪೂರ್ಣಪ್ರವಾಹ ಬಂದಿದೆ ನೀರು ಪಟ್ಟಣಗಳ ಒಳಕ್ಕೆ ನುಗ್ಗಿ ವಿಸ್ತಾರವಾದ ಪ್ರದೇಶವನ್ನು ಮುಳುಗಿಸಿಬಿಟ್ಟಿದೆ

❧❧❧

ರಷ್ಯಾ ರಾಜ್ಯದಲ್ಲಿ ಮೊದಲನೇ ಡೂಮಾ ಪಾರ್ಲಿಮೆಂಟಿನ ಮೆಂಬರುಗಳ ಪೈಕಿ ಗವರ್ನಮೆಂಟಿನವರು ೩೦೦ ಮಂದಿಯನ್ನು ಚಕ್ರವರ್ತಿಯವರಿಗೂ ಅವರ ರಾಜ್ಯಭಾರಕ್ಕೂ ದ್ರೋಹ ಚಿಂತನ ಮಾಡಿದರೆಂದು ಅವರ ಮೇಲೆ ಮೊಕದ್ದಮೆ ಮಾಡಿದರು ರಾಜಧಾನಿಯಾದ ಸೇಂಟ್ ಪೀಟರ್ಸ್‌ಬರ್ಗಿನಲ್ಲಿ ಈ ಮೊಕದ್ದಮೆಯು ಕಳೆದ ವಾರ ವಿಚಾರಣೆಯಾಗಿ ೩೦ ಮಂದಿ ಅಪರಾಧಿಗಳನ್ನು ಸೈಬೀರಿಯಾ ಕಾರಾಗೃಹಕ್ಕೆ ಗಡೀಪಾರು ಮಾಡಿದರು ಈ ಶಿಕ್ಷೆಯಲ್ಲದೆ ಆ ಪೈಕಿ ೨೦ ಮಂದಿಗೆ ಬೇರೆ ಬೇರೆ ತರಹ ಸಜಾ ಶಿಕ್ಷೆಯನ್ನು ವಿಧಿಸಿರುತ್ತಾರೆ ಆದ್ದರಿಂದಲೇ ರಷ್ಯಾದಲ್ಲಿ ಸ್ವಾತಂತ್ರ್ಯದಲ್ಲಿ ಇರುವಂಥಾ ಸರ್ಕಾರಿ ಬಂದೀಖಾನೆಗಳಾ ಪ್ರಜೆಗಳಿಂದ ತುಂಬಿ ತುಳುಕುತ್ತಿರುವುದನ್ನು ನೋಡಿ, ಗವರ್ನಮೆಂಟಿನವರು ಜೈಲುಗಳ ಸ್ಥಳವನ್ನು ಒಂದು ಹೊಸ ಜೈಲನ್ನು ಏರಡುಂಕೆ ಮಾಡಬೇಕೆಂದು ಯೋಚಿಸುತ್ತಾರೆ.

❧❧❧

ಹಿಂದೂಸ್ಥಾನದಿಂದ ಜಪಾನಿಗೂ ಅಲ್ಲಿಂದ ಇಲ್ಲಿಗೂ ಸಾಮಾನುಗಳನ್ನು ಪ್ರಯಾಣಿಕರನ್ನೂ ಇದುವರೆಗೆ ವಿಲಾಯಿತಿ ಪಿ ಅಂಡ್ ಓ ಕಂಪನಿಯವರು ಸಾಗಿಸುತ್ತಿದ್ದರೆಂತಲೂ ಈಗೀಗ ಜಪಾನ್ ಕಂಪನಿಯವರು ತಮ್ಮ ಜಹಜುಗಳನ್ನು ಹಿಂದೂಸ್ಥಾನಕ್ಕೆ ಹೆಚ್ಚಾಗಿ ತರುತ್ತಲೂ ಸರಕನ್ನೂ ಪ್ರಯಾಣಿಕರನ್ನೂ ಸಾಗಿಸಲಾರಂಭಿಸಿರೋದರಿಂದ ವಿಲಾಯಿತಿಯ ಕಂಪನಿಯವರಿಗೆ ನಷ್ಟವಾಗುತ್ತಿದೆ ಎಂತಲೂ ಸರ್ ಥಾಮಸ್ ಸದರ್ಲೆಂಡ್ ಎಂಬ ಇಂಗ್ಲೀಷ್ ದೊಡ್ಡ ಮನುಷ್ಯನು ತಿಳಿಸಿದ್ದಾನೆ ಈ ಸಂದರ್ಭದಲ್ಲಿ ಕೌಂಟ್ ಒಕೂಮಾ ಎಂಬೊಬ್ಬ ಜಪಾನಿ ದೊಡ್ಡ ಮನುಷ್ಯನು ಕೋಬೀ ನಗರದ ಜಪಾನ್ ವರ್ತಕರುಂಡಲಿಯವರನ್ನು ಕುರಿತು ಹೇಳಿದ ಕೆಲವು ಮಾತುಗಳು ನಿಜವಾಗಿದ್ದಲ್ಲಿ ತುಂಬಾ ಅರ್ಥಗರ್ಭಿತವಾಗಿರುತ್ತೆಂದು ತೋರುವುದು ಅವರು ಹೇಳಿದರೆಂದು ಪ್ರಕಟವಾಗಿರುವ ಸಂಗತಿ ಏನೆಂದರೆ — "ಯೂರೋಪ್ಯರಿಂದ ಕಷ್ಟನಷ್ಟಗಳಿಗೆ ಗುರಿಯಾಗಿರುವ ಹಿಂದೂಸ್ಥಾನದ ಮೂವತ್ತು ಕೋಟಿ ಪ್ರಜೆಗಳು ಜಪಾನ್‌ನವರು ಬಂದು ತಮ್ಮನ್ನು ಕಾಪಾಡಿಯಾರೆಂತಲೂ ಯೂರೋಪ್ಯನವರ ಹಿಂಸೆಯಿಂದ ಬಿಡುಗಡೆಮಾಡಿಯಾರೆಂತಲೂ ಎದುರು ನೋಡುತ್ತಿದ್ದಾರೆ ಹಿಂದೂಸ್ಥಾನದವರಾದರೋ ಯೂರೋಪ್ಯನಿಂದ ಬರುವ ವ್ಯಾಪಾರಸರಕುಗಳನ್ನು ಬಹಿಷ್ಕರಿಸುತ್ತಾ ಅವು ಬಿಕರಿಯಾಗದಂತೆ ಪ್ರಯತ್ನಪಡುತ್ತಿರುವರು ಇಂಥಾ ಒಳ್ಳೇ ಸಮಯವನ್ನು ಜಪಾನಿನವರು ತ್ಯಜಿಸಿಬಿಟ್ಟರೆ ಹಿಂದೂಸ್ಥಾನದವರ ಕೋರಿಕೆಯನ್ನೂ ನಿರೀಕ್ಷೆಗಳನ್ನೂ ಹಾಳುಮಾಡಿದಂತಾಗುವುದು ದೇವರಿಂದ ಕೊಡಲ್ಪಟ್ಟದ್ದನ್ನು ಜಪಾನಿನವರು ತೆಗೆದುಕೊಳ್ಳದೆ ಹೋದರೆ ಅವರಿಗೆ ತಕ್ಕ ಶಿಕ್ಷೆಯಾದೀತು." ಎಂಬುದೇ ಇದು ಯಥಾರ್ಥವೆಂದು ಸಂಬಂಧಪಟ್ಟದ್ದಕ್ಕೆ ಜಪಾನಿನವರು ತಮ್ಮ ಸ್ನೇಹವನ್ನು ಪರೀಕ್ಷೆ ಮಾಡುವುದಕ್ಕಾಗಿ ಸ್ನೇಹಿತರ ಭೂಪ್ರದೇಶಕ್ಕೆ ಬಾರದಿರಲಾರರೆಂದು ಕೇಳಬಂದದು

ಇಂಡಿಯಾ ದೇಶದ ವೃತ್ತಾಂತಗಳು

ಬಂಗಾಳದ ಲೆಪ್ಟಿನೆಂಟ್ ಗವರ್ನರರವರು ಕಳೆದ ವಾರ ಒಬ್ಬ ಮಾರ್ವಾಡಿ ಕಟ್ಟಿದ ಹತ್ತಿ ಬಿಡಿಸುವ ಕಾರ್ಖಾನೆಯನ್ನು ಪ್ರತಿಷ್ಠೆಮಾಡಿದರು

❧❧❧

ಬಂಗಾಳದಲ್ಲಿ ಪ್ರಸಿದ್ಧ ಕೇಶವಚಂದ್ರಸೇನರೆಂಬ ಮಹನೀಯರ ಮಾತೃಶ್ರೀಯವರಾದ ಸರೋದಾ ಸುಂದರಿ ದಾಸಿ ಎಂಬಾಕೆಯು ಕಳೆದ ವಾರ ಕಾಲವಾದರು ಈಕೆಗೆ ೮೮ ವರುಷವಾಗಿತ್ತು

❧❧❧

ಪುದುಕೋಟೆ ಸಂಸ್ಥಾನದ ರಾಜರು ಇದುವರೆಗೆ ಲಂಡನ್ ಪಟ್ಟಣದ ಒಂದು ಹೋಟೆಲಿನಲ್ಲಿ ಇದ್ದು, ಕಳೆದ ೩ ನೇ ತಾ ಜಹಜು ಹತ್ತಿ ಹಿಂದೂಸ್ಥಾನವನ್ನು ಕುರಿತು ಪ್ರಯಾಣಮಾಡಿದರು

❧❧❧

ಬೊಂಬಾಯಿ ಪಟ್ಟಣವನ್ನು ಬೆಳೆಸಿ ಮಾಡುವುದಕ್ಕಾಗಿ ಅಲ್ಲಿನ ಗವರ್ನರರವರು ಕಳೆದ ವಾರ ಅಸ್ತಿಭಾರವನ್ನು ಹಾಕಿದರು ಈ ಬಿಡಾರವು ೫೮೩ ಮೈಲಿಗಳಷ್ಟು ವಿಸ್ತಾರವುಳ್ಳದ್ದಾಗುವುದು ಇದಕ್ಕೆಲ್ಲಾ ೧ ಕೋಟಿಯೂ ೫೭ ಲಕ್ಷ ರೂಪಾಯಿನ ವೆಚ್ಚ ಬೀಳಬಹುದೆಂದು ಅಂದಾಜಾಗಿದೆ

❧❧❧

ಕೊಚ್ಚಿ ಸಂಸ್ಥಾನದಲ್ಲಿ ಆಲಪ್ಪಿ ವೈಕೋಮಿಗೂ ನಡುವೆ ಇರುವ ತಣ್ಣೀರ್ಮುಕ್ಕಂ ಎಂಬ ಊರ ದೇವಸ್ಥಾನದಲ್ಲಿ ಕೆಲವು ವಾರಗಳ ಹಿಂದೆ ಸುಮಾರು ೧೦,೦೦೦ ರೂಪಾಯಿನ ನಗನಾಣ್ಯಗಳು ಕಳುವಾದವು ಪೋಲೀಸಿನವರು ಇದುವರೆಗೆ ಪತ್ತೆ ತರದ ಕಾರಣದಿಂದ ಮಾಡಿದ್ದರಲ್ಲಿ ಕಳ್ಳರು ಸಿಕ್ಕಬಹುದೆಂಬ ಸೂಚನೆ ಈಗ ಕಂಡುಬಂದಿದೆ

❧❧❧

ನವಾನಗರದ ಜಾಮ್‌ಸಾಹೇಬರಾದ ರಂಜಿತ್‌ಸಿಂಗ್‌ಜಿಯವರು ದೇಹಾರೋಗ್ಯಕ್ಕೋಸ್ಕರ ಡಾಕ್ಟರುಗಳ ಅಭಿಪ್ರಾಯದಂತೆ ವಿಲಾಯತಿಗೆ ಪ್ರಯಾಣಮಾಡಿರುತ್ತಾರಷ್ಟೆ ಲಂಡನ್ ಪಟ್ಟಣದಲ್ಲಿರುವ ಬಕಿಂಗ್‌ಹಾಂ ರಾಜಭವನದಲ್ಲಿ ಎಡ್ವರ್ಡ್ ಚಕ್ರವರ್ತಿಯವರು ಅವರಿಗೆ ಕಳೆದ ವಾರ ಭೇಟಿ ದಯಪಾಲಿಸಿದರೆಂದು ರಾಯಿಟರ್ ತಂತಿ ವರ್ತಮಾನ ಬಂದಿದೆ

❧❧❧

ಮಿ॥ ನೆವಿನ್‌ಸನ್ ಎಂಬೊಬ್ಬ ವಿಲಾಯತಿ ಪಾರ್ಲಿಮೆಂಟಿನ ಮೆಂಬರು ಕಳೆದ ವಾರ ಉತ್ತರದೇಶದಲ್ಲಿ ಸಂಚಾರಮಾಡಿಕೊಂಡು, ಗುರುವಾರ ಮೈಮನ್‌ಸಿಂಗಿಗೆ ಹೋದರು ಅಲ್ಲಿನ ಒಬ್ಬ ಹೊಡೆಯುವ ಮಹಮ್ಮದೀಯ ರೆಲ್ಲಾ ಇವರು ಹಿಂದೂಗಳ ಪಕ್ಷದವರೆಂದು ಹೇಳುತ್ತಾ ಒಬ್ಬರಾದರೂ ಅವರಿಗೆ ಗಾಡಿ ಕೊಡದೆ ಹೋದರು

❧❧❧

ಮಧ್ಯ ಇಂಡಿಯಾ ಸಂಸ್ಥಾನಗಳ ರೆಸಿಡೆಂಟರಾದ ಕರ್ನಲ್ ಡಾಲಿ ಯವರು ಧಾರ್ ಸಂಸ್ಥಾನದ ರಾಜಾ ಉದಾಜಿರಾವ್ ಪೊವಾರ್ ಸಾಹೆಬ್ ಬಹದ್ದೂರ್ ಯವರಿಗೆ ರಾಜ್ಯಾಭಿಷೇಕವನ್ನು ಮಾಡಿದರು ಈ ರಾಜರಿಗೆ ಕಳೆದ ಅಕ್ಟೋಬರ್ ತಿಂಗಳಲ್ಲಿ ೨೧ ವರುಷ ತುಂಬಿತು ಅವರು ವಿದ್ಯಾದಿ ಸಾಮರ್ಥ್ಯವನ್ನು ಸಂಪಾದಿಸಿಕೊಂಡಿದ್ದಾರೆಂತಲೂ ಬಹು ವಿಚಕ್ಷಣೆಯಿಂದ ರಾಜ್ಯಪರಿಪಾಲನೆ ಮಾಡಬಲ್ಲರೆಂತಲೂ ತಿಳಿದು ಬಂದಿದೆ

❧❧❧

ಕಳೆದ ವಾರ ಹಿಂದೂಸ್ಥಾನದಲ್ಲೆಲ್ಲಾ ಒಟ್ಟು ೩,೧೩೩ ಜನರು ಪ್ಲೇಗ್ ಉಪದ್ರವದಲ್ಲಿ ಕಾಲವಾದರು ಪ್ರಾಂತವಾರು — ಬೊಂಬಾಯಿ ಅಧಿಪತ್ಯ ೧,೬೦೦, ಪಂಜಾಬ್ ೩೬೬, ಮೈಸೂರು ಸಂಸ್ಥಾನ ೩೫೦, ಸಂಯುಕ್ತ ಅಧಿಪತ್ಯಗಳು ೩೩೬, ಬಂಗಾಳ ೨೦೩, ಮಧ್ಯಪ್ರಾಂತ್ಯಗಳು ಮತ್ತು ಬೇರಾರ್ ೧೧೮, ಮದ್ರಾಸ್ ಅಧಿಪತ್ಯ ೧೧೩, ಹೈದರಾಬಾದ್ ಸಂಸ್ಥಾನ ೯೫, ಬರ್ಮಾ ೬೧, ರಾಜಪುಟಾನಾ ೬೨, ಮಧ್ಯ ಇಂಡಿಯಾ ೨೬, ವಾಯುವ್ಯ ಸರಹದ್ದಿನ ಪ್ರಾಂತ್ಯ ೨೧

❧❧❧

ಕೆಲವು ವಾರಗಳ ಹಿಂದೆ ಉತ್ತರದೇಶದ ಈಸ್ಟ್ ಇಂಡಿಯಾ ರೈಲ್ವೆ ಕಂಪನಿಯ ನೌಕರರು ತಮ್ಮ ಸಂಬಳವನ್ನು ಏರಿಸಬೇಕೆಂದು ತಮ್ಮ ಕಷ್ಟನಷ್ಟಗಳನ್ನು ಪರಿಹರಿಸಿಕೊಳ್ಳುವ ತನಕ ಕಾಲು ಕೆಲ

ಸಕ್ಕೆ ಬರುವದಿಲ್ಲವೆಂದು ಹೇಳಿ, ನಿಂತುಬಿಟ್ಟದ್ದರಿಂದ ಕಾಲಕ್ಕೆ ಸರಿಯಾಗಿ ರೈಲ್‌ಗಾಡಿಗಳು ನಡಿಯದೆ ಎರಡು ವಾರಗಳ ವರೆಗೆ ತುಂಬಾ ತೊಂದರೆಯಾಗಿತ್ತಷ್ಟೆ. ಈ ರೈಲ್ವೆ ಕಂಪನಿಗೆ ಆ ಎರಡು ವಾರಕ್ಕೆ ಸಾಮಾನ್ಯವಾಗಿ ೩೩ ಲಕ್ಷ ರೂಪಾಯಿ ಉತ್ಪತ್ತಿಯಾಗುತ್ತಿದ್ದದ್ದು ನಷ್ಟವಾಗಿ ೧೯ ಲಕ್ಷ ರೂಪಾಯಿ ಮಾತ್ರ ಹುಟ್ಟುವಳಿ ಆಗಿದೆ ಎಂತಲೂ, ಈ ನೌಕರರು ಹಟಹಿಡಿದ ದೆಸೆಯಿಂದ ೧೪ ಲಕ್ಷ ರೂಪಾಯಿ ಕಂಪನಿಗೆ ನಷ್ಟವಾಯಿತೆಂತಲೂ ತಿಳಿಯುತ್ತದೆ

***

ಮಧ್ಯಪ್ರಾಂತ್ಯಗಳಲ್ಲಿ ಮಳೆಬಂದದ್ದರಿಂದ ಕಾಲಸ್ಥಿತಿಯು ತಕ್ಕಮಟ್ಟಿಗೆ ಅನುಕೂಲವಾಯಿತು ಇತರ ಭಾಗಗಳಲ್ಲಿ ಒಂದೇ ಸಮನಾಗಿದೆ; ವಿಶೇಷ ವ್ಯತ್ಯಾಸವೇನೂ ಕಂಡುಬರುವದಿಲ್ಲ. ಸಂಯುಕ್ತಾಧಿಪತ್ಯಗಳಲ್ಲಿ ಕ್ಷಾಮಪೀಡಿತರ ಸಂಖ್ಯೆಯು ೩೧,೦೦೦ ಕ್ಕೆ, ಮಧ್ಯ ಇಂಡಿಯಾದಲ್ಲಿ ೧೩ ಸಾವಿರಕ್ಕೂ ಏರಿರುತ್ತದೆ. ಪಂಜಾಬಿನಲ್ಲಿ ಆಹಾರ ದಿನಸುಗಳ ಧಾರಣೆಯು ದಿನೇ ದಿನೇ ಹೆಚ್ಚುಗುತ್ತಲೇ ಬಂದಿದೆ

***

ಸುಮಾರು ಎರಡು ವಾರಗಳ ಕೆಳಗೆ ಬಂಗಾಳಾ ಲೆಫ್ಟಿನೆಂಟ್ ಗವರ್ನರವರು ಸಂಚಾರ ಹೋದಾಗ್ಗೆ ಅವರು ಕುಳಿತಿದ್ದ ರೈಲ್ ಗಾಡಿಯನ್ನು ಕೆಡವಿಬಿಡಬೇಕೆಂದು ಯಾರೋ ಕೆಲವು ದುಷ್ಟರು ಪ್ರಯತ್ನಪಟ್ಟಹಾಗೆ ವರ್ತಮಾನ ಹುಟ್ಟಿತ್ತು. ಪೋಲೀಸಿನವರು ಆ ದುಷ್ಟರನ್ನು ಹಿಡಿಯಬೇಕೆಂದು ಇದುವರೆಗೆ ಪ್ರಯತ್ನಪಟ್ಟದ್ದರಲ್ಲಿ ಕಳೆದ ವಾರ ಏಳು ಮಂದಿ ಸಿಕ್ಕಿಬಿದ್ದರೆಂತಲೂ, ಈ ಪೈಕಿ ಒಬ್ಬನು ಕೆಲವು ಸಂಗತಿಗಳನ್ನು ಹೇಳಿ ಒಪ್ಪಿಕೊಂಡಿರುತ್ತಾನೆಂತಲೂ ತಂತೀ ವರ್ತಮಾನ ಬಂದಿರುತ್ತೆ

***

ಪೂನಾ ಪಟ್ಟಣದಲ್ಲಿ ಕ್ಯಾಪ್ಟನ್ ಆರ್ಮ್‌ಸ್ಟ್ರಾಂಗ್ ಎಂಬೊಬ್ಬ ಸೈನ್ಯದ ಉದ್ಯೋಗಸ್ಥ ಮೋಟಾರ್ ಗಾಡಿಯಲ್ಲಿ ಕುಳಿತು ಹೋಗುತ್ತಿದ್ದಾಗ ಒಬ್ಬ ಹೆಂಗಸಿಗೆ ಆ ಗಾಡಿ ತಗಲಿ ಬಿದ್ದುಕೊಂಡಳು ಆಗ ಆತನು ಆ ಹೆಂಗಸನ್ನು ಆಸ್ಪತ್ರೆಗೆ ಹೊರಿಸಿಕೊಂಡು ಹೋಗಿ ಚಿಕಿತ್ಸೆಮಾಡಿಸುತ್ತಿದ್ದನು. ಪೋಲೀಸಿನವರು ಆತನ ಮೇಲೆ ಫಿರ್ಯಾದು ತಂದಾಗ ಆತನು ನಡೆದ ಸಂಗತಿಯನ್ನು ಯಥಾರ್ಥವಾಗಿ ತಿಳಿಸಿದ್ದರಿಂದ ಮ್ಯಾಜಿಸ್ಟ್ರೇಟರು ಆಸ್ಪತ್ರೆಗೆ ಹೋಗಿ ಗಾಯಪಟ್ಟವಳ ಸ್ಥಿತಿಯನ್ನು ನೋಡಿ, ಡಾಕ್ಟರಿಂದ ಆಕೆಯ ಗಾಯಗಳ ವಿಚಾರವನ್ನು ತಿಳಿದುಬಂದು ಅಪರಾಧಿಗೆ ೫೦ ರೂಪಾಯಿ ಜುಲ್ಮಾನೆ ವಿಧಿಸಿ, ಆ ಹಣವನ್ನು ಅವಳಿಗೆ ಕೊಡುವಂತೆ ಹುಕುಂ ಮಾಡಿದರು

***

ಬೊಂಬಾಯಿ ಗವರ್ನರವರು ಪ್ಲೇಗ್ ಉಪದ್ರದ ಹಾವಳಿಯನ್ನು ನಿಲ್ಲಿಸುವುದಕ್ಕೆ ಪ್ರಜೆಗಳು ಪ್ಲೇಗ್ ಸಿಡುಬನ್ನು ಹಾಕಿಸಿಕೊಳ್ಳುವ ಭಾಗದಲ್ಲಿ ವರ್ತಮಾನಪತ್ರಿಕೆಗಳ ಎಡಿಟರುಗಳಿಗೆ ಬರೆದಿದ್ದ ವಿಜ್ಞಾಪನೆಯನ್ನು ನಮ್ಮ ವಾಚಕರು ಓದಿ ತಿಳಿದುಕೊಂಡಿರುತ್ತಾರಷ್ಟೆ. ಕಳೆದ ವಾರ ಆ ತಮ್ಮ ಉದ್ದೇಶವನ್ನು ಗವರ್ನರವರು ಇನ್ನೂ ಸಾರ್ಥಕಪಡಿಸುವುದಕ್ಕೋಸ್ಕರ ಬೊಂಬಾಯಿ ಆಧಿಪತ್ಯದಲ್ಲಿ ಪ್ರಕಟವಾಗತಕ್ಕ ಸಮಸ್ತ ದೇಶೀಯ ವರ್ತಮಾನ ಪತ್ರಿಕೆಗಳ ಎಡಿಟರುಗಳಿಗೂ ಬಹು ಆದರ ಪೂರ್ವಕವಾಗಿ ಕಾಗದಗಳನ್ನು ಬರೆದು, ಅವರನ್ನೆಲ್ಲಾ ಬೊಂಬಾಯಿಗೆ ಕರೆಸಿಕೊಂಡು, ಪ್ಲೇಗ್ ಸಿಡುಬಿನ ಹಾಲು ತಯಾರಾಗುವಂಥಾ ಸರ್ಕಾರಿ ಕಾರ್ಖಾನೆಯನ್ನು ಅವರಿಗೆ ತೋರಿಸಿದರು. ಹಿಂದು, ಮಹಮದೀಯ, ಪಾರಸೀ, ಉರ್ದು, ಪೋರ್ಚುಗೀಸ್, ಈ ಮೊದಲಾದ ಭಾಷೆಗಳಲ್ಲಿ ಪ್ರಕಟವಾಗತಕ್ಕ ದೇಶೀಯ ವರ್ತಮಾನ ಪತ್ರಿಕೆಗಳ ಎಡಿಟರುಗಳೆಲ್ಲಾ ಆ ಕಾರ್ಖಾನೆಗೆ ಹೋದರು. ಪ್ಲೇಗ್ ಸಿಡುಬಿನ ಹಾಲು ತಯಾರಾಗತಕ್ಕ ವಿಧಾನಗಳನ್ನೂ ಯಂತ್ರ ಮೊದಲಾದವುಗಳನ್ನೂ ಕ್ಯಾಪ್ಟನ್ ಲಿಸ್ಟರ್ ಎಂಬ ಡಾಕ್ಟರು ಆ ಎಡಿಟರುಗಳಿಗೆ ತೋರಿಸಿ ವಿವರಿಸಿದ್ದಲ್ಲದೆ ಅಲ್ಲಿ ತಯಾರಾದ ಹಾಲು ನಿರ್ದೋಷವೂ ನಿರುಪಾಧಿಕವೂ ಆಗಿರುತ್ತದೆಂಬುವುದನ್ನು ಸಿದ್ಧಾಂತ ಪಡಿಸುವುದಕ್ಕೆ ಆ ಡಾಕ್ಟರು ಆಗಲೇ ಅವರೆದುರಿಗೇನೇ ಐದನೇ ಸಲ ಪ್ಲೇಗ್ ಸಿಡುಬು ಹಾಕಿಸಿಕೊಂಡರು ಅವರಿಗೆ ಅದರಿಂದ ಸ್ವಲ್ಪವೂ ನೋವಾಗಲಿಲ್ಲ ತರುವಾಯ ಗವರ್ನರವರು ಎಡಿಟರುಗಳನ್ನೆಲ್ಲಾ ಕರೆದು ಸೇರಿಸಿಕೊಂಡು, ಅವರನ್ನೆಲ್ಲಾ ಸಿಡುಬು ಹಾಕಿಸಿಕೊಳ್ಳಬೇಕೆಂತಲೂ, ತರುವಾಯ ಅದರಿಂದ ಅವರಿಗುಂಟಾದ ಅನುಭವವನ್ನು ತಮ್ಮ ಪತ್ರಿಕೆಯಲ್ಲಿ ಬರೆದು, ಎಲ್ಲಾ ಪ್ರಜೆಗಳಿಗೂ ಅದನ್ನು ಓದಿ ತಿಳಿದುಕೊಂಡು ಸಿಡುಬು ಹಾಕಿಸಿಕೊಂಡು, ಪ್ಲೇಗ್ ಉಪದ್ರದ ಹಾವಳಿಯನ್ನು ನಿಲ್ಲಿಸುವಂತೆ ಮಾಡಬೇಕಾಗಿರುತ್ತದೆಂತಲೂ, ಈ ಉಪದ್ರವನ್ನು ಅಡಗಿಸುವುದಕ್ಕೆ ಈ ಉಪಾಯ ಬಿಟ್ಟರೆ ಬೇರೆ ಅನುಕೂಲವಾದ ಮಾರ್ಗವು ಬಡಬಗ್ಗರಿಗೆಲ್ಲಾ ಸಾಧ್ಯವಿಲ್ಲವೆಂತಲೂ ಅಪ್ಪಣೆ ಕೊಡಿಸಿದರು

ತಾಲ್ಲೋಕು ವರ್ತಮಾನಗಳು.

ತುಮಕೂರು.—ಕಳ್ಳರ ಆವಾಂತರವು ಊರಿನಲ್ಲಿ ಹೆಚ್ಚಾಗುತ್ತಿದೆ ಅದಕ್ಕೆ ಅವಕಾಶ ಕೊಡದಂತೆ ಪೋಲೀಸ್ ಆಫೀಸರುಗಳು ಎಚ್ಚರಿಕೆಯುಳ್ಳವರಾಗಿ ಸಂಚರಿಸಬೇಕೆನ್ನುತ್ತೇನೆ —೨೨ ನೇ ಬುಧವಾರ ನಮ್ಮ ದಿವಾನರಾದ ಮ|| ಮಾಧವರಾಯರವರು ಇಲ್ಲಿಗೆ ದಯಮಾಡಿಸಿ ಪುರಪ್ರಮುಖರಿಂದ ಸತ್ಕಾರಹೊಂದಿ ಟ್ರಾವಲರ್ಸ್ ಬಂಗಲೆಯಲ್ಲಿ ಎರಡು ದಿವಸಗಳಿದ್ದು, ನೆನ್ನೆ ಮಂಗಳವಾರ ಮಧುಗಿರಿ ಪ್ರಾಂತ್ಯ ಸರ್ಕೀಟು ದಯಮಾಡಿದರು. ಹಿಂದೆ ಎರಡು ವರುಷಗಳಲ್ಲಿ ಮಿಷನ್ ಪಾದ್ರಿಗಳಾಗಿದ್ದು ಸೀಮೆಗೆ ದಯಮಾಡಿದ್ದ ಮಿ|| ಎಡ್ವರ್ಡ್ ನೇಯವರು ತಾ|| ೨೧ ನೇ ಶನಿವಾರ ಕುಟುಂಬಸಹಿತ ಇಲ್ಲಿಗೆ ವಾಪಸು ಬಂದರು ಬೆಂಗಳೂರಿಂದ ಮಿಷನ್ ಛೇರ್ಮನ್ ಸಾಹೇಬರವರು ದಯಮಾಡಿ, ಇಲ್ಲಿನ ಅರ್ಫನೇಜ್ ಕಟ್ಟಡವನ್ನು ಪ್ರತಿಷ್ಠೆಯನ್ನು ಮಾಡಿದರು —ಬೆಳ್ಳಾವಿ ಸಂತೆಯ ಗದ್ದಲದಲ್ಲಿ ಪೋಲೀಸಿನವರ ಸುಳಿವೇ ಅಪರೂಪವಾಗಿರುವದರಿಂದ ಕಳ್ಳತನ ನಡೆಯುವುದು ಆಶ್ಚರ್ಯವಲ್ಲ ಅದರಂತೆಯೇ ಇಂಜನಿಯರ್ ಇಲಾಖೆಯವರು ಬೆಳ್ಳಾವಿಯ ರಸ್ತೆಯನ್ನು ದುರಸ್ತು ಮಾಡಿಸಬೇಕು. ಸಾವಿರಾರು ಭರ್ತಿ ಗಾಡಿಗಳು ಆ ರಸ್ತೆಯಲ್ಲಿ ಸಂಚಾರವಾಗುವದರಿಂದ ಹೀನಸ್ಥಿತಿಯಲ್ಲಿರುವ ಆ ರಸ್ತೆಯು ಗಾಡಿ ಎತ್ತುಗಳಿಗೆ ತುಂಬಾ ಕಷ್ಟಕರವಾಗಿದೆ

ಚಿಕ್ಕಬಳ್ಳಾಪುರ.—ಕಳೆದ ಮೂರು ವರುಷಗಳಿಂದಲೂ ಈ ಊರು ಪ್ಲೇಗಿಲ್ಲದೆ ಸುರಕ್ಷಿತವಾಗಿತ್ತು. ಸುಮಾರು ಹದಿನೈದು ದಿವಸಗಳಿಂದ ಮೋಡ ಕವಿದುಕೊಂಡು ಆಗಾಗ್ಗೆ ತುಂತುರು ಹನಿಗಳು ಬೀಳುತ್ತಾ ಬಿಸಿಲಿನ ಮುಖವೇ ಇಲ್ಲದೆ ಜನರಿಗೆ ಬಹಳ ತೊಂದರೆಯಾಗಿದೆ ಈ ಮಧ್ಯೆ ಅಲ್ಲಲ್ಲೇ ಕೆಲವು ಮನೆಗಳಲ್ಲಿ ಇಲಿಗಳು ಬಿದ್ದಿದ್ದಾಗ್ಯೂ ಹಿಂದೆ ಅನುಭವಿಸಿದ ಕಷ್ಟಗಳನ್ನು ಮರೆತುಬಿಟ್ಟು, ಅಲಕ್ಷ್ಯಭಾವದಿಂದ ಅವುಗಳನ್ನು ಎತ್ತಿ ಬಿಸಾಟು ಸುಮ್ಮನೇ ಇದ್ದರು ನೆನ್ನೆ ಮಂಗಳವಾರದಿಂದ ಇದ್ದಕ್ಕಿದ್ದಹಾಗೇ ಖಾಯಿಲೆಗಳು ಕಾಣಿಸಿಕೊಂಡು, ಗಡ್ಡೆಗಳು ಎದ್ದು ೭—೮ ದಿನಗಳಲ್ಲಿಯೇ ಸುಮಾರು ೧೦—೧೫ ಜನರುಗಳೂ ಮೃತಪಟ್ಟರು ಈಗಿನ ಪ್ಲೇಗು ಬಹು ಭಯಂಕರವಾಗಿರುವಹಾಗೆ ಕಾಣುತ್ತದೆ ಜನರು ಖಾಯಿಲೆಯಾದ ೧—೨ ದಿನಗಳಲ್ಲಿಯೇ ಮೃತಪಡುತ್ತಾರೆ ಈಗ ಜನರು ವಿಶಾಲವಾದ ಷೆಡ್ಡುಗಳಿಗೂ ಸುತ್ತಮುತ್ತಲಿನ ಗ್ರಾಮಗಳಿಗೂ ಒಳಗೋಗುತ್ತಿರುವರು ಹೆಚ್ಚು ಕಡಮೆ ಊರಿನ ಪೂರ್ವಭಾಗವೆಲ್ಲಾ ಖಾಲಿಯಾಯಿತು ಇನ್ನೂ ಅನೇಕರಿಗೆ ಹೋಗಲಿಕ್ಕೆ ಮನಸ್ಸಿದ್ದಾಗ್ಯೂ ಕಳ್ಳಕಾಕರಿಗೆ ಭಯಪಟ್ಟು ಹಿಂಜರಿಯುತ್ತಿದ್ದಾರೆ ಈ ದುರ್ಭಿಕ್ಷಕಾಲದಲ್ಲಿ ವ್ಯಾಪಾರಕಾರ್ಖಾನೆಗಳಿಲ್ಲದೆಯೂ, ಬಡ ಜನರಿಗೆ ಕೂಲಿನಾಲಿಗಳಿಲ್ಲದೆಯೂ ಕೆಟ್ಟುಹೋಗಲಿಕ್ಕೆ ಕಾರಣವಾಯಿತು ಇಂಥಾ ಸಮಯದಲ್ಲಿ ಪೋಲೀಸಿನವರು ಹೆಚ್ಚು ಗಮನಕೊಟ್ಟು ಕಳ್ಳತನಗಳಿಗೆ ಅವಕಾಶವಿಲ್ಲದಂತೆ ನೋಡಿಕೊಳ್ಳಬೇಕಾಗಿದೆ

ಚಿಕ್ಕಮಗಳೂರು.—ಇಲ್ಲಿ ಸುಮಾರು ೨ ವಾರಗಳಿಂದ ಮೋಡಗಳು ಮುಚ್ಚಿಕೊಂಡಿವೆ ೨—೩ ದಿನಗಳಿಂದ ರಾತ್ರಿ ಅಲ್ಪಸ್ವಲ್ಪ ಮಳೆಯೂ ಬರುತ್ತದೆ ಮಾಗೀಕಾಲದ ಛಳಿಯು ಸದ್ಯ ಕಮ್ಮಿಯಾಗಿದ್ದರೂ, ಕೆಲವು ಸಮಯದಲ್ಲಿ ಥಂಡಿ ಗಾಳಿ ಬೀಸುತ್ತಿರುವುದರಿಂದ ಸುಮಾರಾಗಿ ಚಳಿಯಾಗುತ್ತಿದೆ ಆದರೆ ಈ ಕಾಲದಲ್ಲಿ ಮಳೆ ಹೆಚ್ಚಾಗಿ ಬೀಳುವದಾದರೆ ಕೊಯಿಲಿಗೆ ಬಂದಿರುವ ಭತ್ತಕ್ಕೂ ಕಾಫಿ ಗಿಡಕ್ಕೂ ಸ್ವಲ್ಪ ನಷ್ಟವೆಂದು ಹೇಳುತ್ತಾರೆ —ಊರಲ್ಲಿ ಗಲಾಟೆ ಇಲ್ಲದೆ ಇರುವದರಿಂದ ಜನರೆಲ್ಲಾ ಊರು ಸೇರಿಕೊಂಡರು. ಕಾಫಿ ತೋಟಗಳ ಪ್ರಾಂತ್ಯ ಒಂದೊಂದು ತೋಟದಲ್ಲಿ ನೂರಾರು ಜನರು ಕಾಫಿ ಹಣ್ಣನ್ನು ಬಿಡಿಸುತ್ತಾ, ಬಿಡಿಸಿದ ಹಣ್ಣನ್ನು ರಾಟೆಗೆ ಕೊಡುತ್ತಾ, ಸಿಪ್ಪೆ ಸುಲಿದ ಬೀಜವನ್ನು ಒಣಗಿಸುತ್ತಾ ಇದ್ದಾರೆ ಮುಂದೆ ಒಣಗಿದ ಬೀಜವನ್ನು ಮಂಗಳೂರಿಗೆ ರವಾನಿಸುವವರಾಗಿದ್ದಾರೆ —ನಮ್ಮ ಡೆಪ್ಯುಟಿ ಕಮೀಷನರು ಮೂಡಿಗೆರೆ ಪ್ರಾಂತ್ಯ ಜಮಾಬಂದಿಗೆ ಹೋಗುವವರಾಗಿಯೂ, ಈ ತಿಂಗಳ ಕಡೆಯಲ್ಲಿ ಬರುವವರಾಗಿದ್ದಾರೆಂದೂ ಕೇಳುತ್ತೇನೆ —ಪಾದ್ರಿ ರೆವರೆಂಡ್ ಸಾಹೇಬರು ತರೀಕೆರೆ, ಕೊಪ್ಪ, ಸೋಳ್ಯಪೈಲ್, ಬಾಳೆಹೊನ್ನೂರು ಕಡೆ ಮೂರು ವಾರಗಳ ವರೆಗೆ ಸರ್ಕೀಟು ಮಾಡಿಕೊಂಡು, ಆಯಾ ಕಡೆಗಳಲ್ಲಿ ಯೂರೋಪಿಯನ್ ಪ್ಲಾಂಟರುಗಳ ಸಂಗಡ ದೇವಾರಾಧನೆ ನಡಿಸಿ, ೧೯ ನೇ ತಾ|| ಊರನ್ನು ಸೇರಿದರು ಬರುವ ವಾರದಿಂದ ಇಲ್ಲಿನ ಸ್ಕೂಲುಗಳಿಗೆಲ್ಲಾ ಕ್ರಿಸ್ಮಸ್ ರಜಾ ಕೊಟ್ಟಿರೋಣದರಿಂದ ಅವು ಎರಡು ವಾರಗಳ ವರೆಗೂ ಮುಚ್ಚಲ್ಪಡುವವು

ಮಂಡ್ಯ.—ಇಲ್ಲಿನ ಹವಾ ಸದ್ಯ ಚನ್ನಾಗಿದೆ ಪ್ಲೇಗ್ ವ್ಯಾಧಿಯು ಸಂಪೂರ್ಣವಾಗಿ ನಿಂತುಹೋದದ್ದರಿಂದ ಜನರೆಲ್ಲಾ ತಮ್ಮ ಷೆಡ್ಡುಗಳಿಂದ ಮನೆಗಳಿಗೆ ಬಂದಿರುತ್ತಾರೆ ಧಾರಣೆವಾಸಿಗಳು ಹೆಚ್ಚುತ್ತಾ ಇದೆ ಕಳೆದ ಬುಧವಾರ ಬೆಳಿಗ್ಗೆ ಫ್ರೆಂಚ್‌ರಾಕ್ಸ್ ಸಬ್ ಡಿವಿಜನ್ ಆಫೀಸರ್ ಮಿ|| ಬಿ ಕೃಷ್ಣರಾಯರು ಬಸರಾಳಿನ ಮಾರ್ಗವಾಗಿ ಇಲ್ಲಿಗೆ ದಯಮಾಡಿದರು ಇವರು ಆ ದಿನ ಮಧ್ಯಾಹ್ನ ಲೋಕಲ್ ಬೋರ್ಡ್ ಮೀಟಿಂಗು ನಡೆಸಿದ ತರುವಾಯ ಇಲ್ಲಿನ ಅನ್ಯೋನ್ಯಸಹಾಯಕ ಸಂಘದ ಮೀಟಿಂಗ್ ಇಟ್ಟು, ಅದರ ಅನುಕೂಲತೆಗಳನ್ನು ಚರ್ಚಿಸಿ, ಪುನಸ್ಥಾಪನೆಮಾಡಿ, ಹೊಸದಾಗಿ ಸೇಪಕ್ಕೆ ಸಬ್ ಡಿವಿಜನ್ ಆಫೀಸರು, ಹೊಸದಾಗಿ ಬಂದಿರುವ ನಮ್ಮ ಅಮಲ್ದಾರರು, ಶಿರಸ್ತೇದಾರರು, ಸಬ್ ರಿಜಿಸ್ಟ್ರಾರು, ಎಲಿಸ್ ಸಾಹೇಬರು ಮುಂತಾದವರು ಮೆಂಬರುಗಳಾಗಿ ಸೇರಿ, ಸಂಘದವರು ಹಿಂದೆ ನಡಿಸಿದ ಪ್ರಕಾರ ವ್ಯಾಪಾರ ಮುಂತಾದದ್ದು ನಡಸದೆ, ಒಂದು ಬ್ಯಾಂಕ್ ಇಟ್ಟು ಮೆಂಬರುಗಳು ಶಿಫಾರಸುಮಾಡಿದ ಬಡಬಗ್ಗರಿಗೆ ಸಹಾಯಮಾಡುವದಲ್ಲದೆ, ಮೆಂಬರುಗಳಿಗೆ ಬೇಕಾದ ಸಾಮಾನುಗಳನ್ನು ತರಿಸಿಕೊಡುವದೇ ಉದ್ದೇಶವಾಗಿರಬೇಕೆಂದು ತೀರ್ಮಾನಮಾಡಿದರು —ಕಳೆದ ಒಂದೂವರೆ ವರ್ಷಗಳಿಂದ ಇಲ್ಲಿ ಅಮಲ್ದಾರರಾಗಿದ್ದ ಮೆ|| ಬಿ ಟಿ ಸೀತಾರಾಮಯ್ಯನವರು ಹಾಸನಕ್ಕೆ ವರ್ಗಾಯಿಸಲ್ಪಟ್ಟರು ಇವರು ಪ್ಲೇಗ್ ಕಾಲದಲ್ಲಿ ಇಲ್ಲಿನ ಬಡಬಗ್ಗರಿಗೆ ಷೆಡ್ಡುಕಟ್ಟಿಕೊಳ್ಳುವದಕ್ಕೆ ಗಳು, ಬಿದಿರು ಮುಂತಾದವುಗಳನ್ನು ಬಹಳವಾಗಿ ಸಹಾಯಮಾಡಿದರು. ಇವರಿಗೆ ಬದಲಾಗಿ ಮೆ|| ಬಿ ಜಿ ನಾರಾಯಣರಾಯರು ಬೆಂಗಳೂರಿಂದ ಇಲ್ಲಿಗೆ ಅಮಲ್ದಾರರಾಗಿ ಬಂದಿರುತ್ತಾರೆ.—ಇಲ್ಲಿನ ಆಸ್ಪತ್ರೆ ಅಸಿಸ್ಟೆಂಟರಾದ ಮೆ|| ಮಹಮದ್ ಅಲಿ ಖಲೀಲ್ ಯವರು ರೋಗಿಗಳನ್ನು ಒಳ್ಳೆ ಮುತುವರ್ಜಿಯಿಂದ ನೋಡುತ್ತಾರೆ. ಪ್ಲೇಗ್ ಕಾಲದಲ್ಲಿ ಇವರು ಬಡಬಗ್ಗರನ್ನು ಒಳ್ಳೆಯಾಗಿ ಉಪಚರಿಸಿದರು ಎರಡು ವಾರಗಳ ಕೆಳಗೆ ಸಿವಿಲ್ ಸರ್ಜನರವರು ಇಲ್ಲಿಗೆ ದಯಮಾಡಿಸಿ, ಆಸ್ಪತ್ರೆಯ ಕೆಲಸಗಳನ್ನು ಪರೀಕ್ಷಿಸಿ ಸಂತೋಷಪಟ್ಟು, ಊರು ಬದಾವಣೆಯ ಸ್ಥಳವನ್ನು ನೋಡಿಕೊಂಡು ಮೈಸೂರಿಗೆ ಪ್ರಯಾಣಬೆಳಸಿದರು

ಹೊಸದುರ್ಗ —ಇಲ್ಲಿನ ಅಮಲ್ದಾರ್ ಮಿ|| ಬಿ ಕೆ ಲಕ್ಷ್ಮಣಯ್ಯನವರನ್ನು ಸಸ್ಪೆಂಡ್ ಮಾಡಿದಮೇಲೆ ಕುಣಿಗಲಿನಿಂದ ಮೆ|| ನಾರಾಯಣಸ್ವಾಮಿ ಮೊದಲಿಯಾರ್ ಅಮಲ್ದಾರರಾಗಿ ಬಂದಿರುತ್ತಾರೆ ಇವರು ಬಂದ ಮೇಲೆ ಕಚೇರಿಯಲ್ಲಿ ಕ್ರಮದಿಂದ ಕೆಲಸವು ಸದ್ದುಬಿಟ್ಟಾಗಿ ನಡೆಯುತ್ತಾ ಇದೆ ನೆನ್ನೆ ನಮ್ಮ ಡೆಪ್ಯುಟಿ ಕಮೀಷನರ್ ಸಾಹೇಬರವರೂ ಚಂಗ್ಯಾಚಾರ್ಯರವರೂ ಪೋಲೀಸ್ ಸೂಪರಿಂಟೆಂಡೆಂಟ್ ಮೆ|| ರಾಮಸ್ವಾಮಯ್ಯನವರೂ ಇಲ್ಲಿಗೆ ಬಂದು ೧—೨ ದಿವಸ ಇದ್ದು ಎಲ್ಲಾ ವಿಷಯಗಳನ್ನೂ ತನಿಖೆ ಮಾಡಿಕೊಂಡು, ಡೆಪ್ಯುಟಿ ಕಮೀಷನರು ಮಾರೀಕಣಿವೆ ಮಾರ್ಗವಾಗಿಯೂ, ಪೊ|| ಸೂಪರಿಂಟೆಂಡೆಂಟರು ಬೆಲಗೂರು ಕಡೆಯೂ ಪ್ರಯಾಣಮಾಡಿದರು —ಇಲ್ಲಿನ ಹವೆಯು ಸಾಧಾರಣವಾಗಿ ಸೇರುತ್ತೆ ದಿನಸಿಗಳೆಲ್ಲಾ ದುಬಾರಿಯಾಗಿದೆ. ಮಳೆ ಮುಖವೇ ಇಲ್ಲ ಸೂರ್ಯನ ದರ್ಶನವೂ ಇಲ್ಲ. ಹೊಲಗಳೆಲ್ಲಾ ಬೈಲಾದವು ಕಣಗಳಲ್ಲಿ ಇರುವ ಬಣವೆಗಳು ದೊಡ್ಡವಾಗಿ ರಾಶಿ ರಾತ್ರವಲ್ಲದೆ ರಾಗೀ ಮಾತ್ರ ಆರು ತಿಂಗಳಿಗೆ ಸಾಲದು ಇಷ್ಟಾದಾಗ್ಯೂ ಈ ಪ್ರಾಂತ್ಯ ರೈತರು ಜಗಳ ದೊಂಬಿಯನ್ನು ಬಿಡಲಿಲ್ಲ —ಕಾಡು ಚಳಿ ಹಾವಳಿ ಕೊಪ್ಪಲು ದ್ಯಾಮಪ್ಪನು ಬೆಲಗೂರು ಬಳಿ ಕೋಡಿಹಳ್ಳಿಯ ಗಾಡಿ ಕಣವೆ ಎಂಬುವನ ಮೋಸ ಮಾಡಿದ್ದ ಎತ್ತುಗಳ ಕಳವು ಹೋಗಿದ್ದವೆಂದು ಸುಮಾರು ಒಂದು ವರ್ಷದಿಂದಲೂ ನಡಿಯುತ್ತಾ ಇದ್ದು, ಚಿತ್ರದುರ್ಗದ ಪ್ರಿನ್ಸಿಪಲ್ ಅಸಿಸ್ಟೆಂಟರ ಕೋರ್ಟಿನಲ್ಲಿ ಅಪರಾಧಿಗೆ ಖುಲಾಸೇ ಆಗಿ, ಎತ್ತುಗಳು ಕಾತನವೇ ಸರಿ ಎಂದು ತೀರ್ಮಾನವಾಯಿತು. ಈ ಅಪರಾಧಿಗೆ ಸುಮಾರು ೫೦೦ ರೂಪಾಯಿ ನಷ್ಟವೆಂದು ಹೇಳುತ್ತಾರೆ. ಬೆಲಗೂರು ಫಿರ್ಕಾ ಮತ್ತೋಡು ಗ್ರಾಮದಲ್ಲಿ ಎಂಟು ತಿಂಗಳಿಂದ ನಡಿಯುತ್ತಿದ್ದ ತೋಟದ ವ್ಯಾಜ್ಯದಲ್ಲಿ ಸರ್ಕಾರದವರು ತೋಟವನ್ನು ಸರ್ಕಾರೀ ಸುಪರ್ದಿಗೆ ತೆಗೆದುಕೊಂಡು ಇರುತ್ತಾರೆ ಈ ರೀತಿ ರೈತರು ವೃಥಾ ವ್ಯಾಜ್ಯಮಾಡಿ ದ್ರವ್ಯನಷ್ಟಕೊಂಡು, ಸ್ವತ್ತನ್ನು ಹಾಳುಮಾಡಿಕೊಳ್ಳುತ್ತಾರೆಯೇ ಹೊರತು ವಿಶೇಷವಾಗಿ ಪಂಚಾಯಿತರಲ್ಲಿ ತಮ್ಮ ಕಲಹವನ್ನು ಸರಿಪಡಿಸಿಕೊಳ್ಳಬೇಕೆಂದು ತಿಳಿದುಕೊಳ್ಳುವುದಿಲ್ಲ —ಬೆಲಗೂರು ಗ್ರಾಮವು ಯೂನಿಯನ್ ಆಗುವಂತೆ ಹುಕುಂ ಆಗಿದೆ. ನಮ್ಮ ಶೇಕ್ದಾರರು ಇಲ್ಲಿಗೆ ಬಂದು ಮೆಂಬರುಗಳನ್ನು ಚುನಾಯಿಸಿ, ಮನೆಗಳಿಗೆ ಅಂದಾಜು ಕ್ರಯ ನಿಗದಿಮಾಡಿಕೊಂಡು ಹೋದರು ಇಲ್ಲಿ ಪೋಲೀಸ್ ಸ್ಟೇಷನ್ ಮೊದಲಿದ್ದ ಯಲ್ಲಮ್ಮನ ದೇವಸ್ಥಾನದ ಕಟ್ಟಡವನ್ನು ಮಾಲೀಕರು ಬಿಡಿಸಿಕೊಂಡದ್ದರಿಂದ ಆಫೀಸಿಗೆ ಸ್ಥಳವಿಲ್ಲದೆ ಗುಡಿಸಲಲ್ಲಿ ಇಟ್ಟುಕೊಂಡಿದ್ದಾರೆ ಯೂನಿಯನ್‌ಗೆ ಯಾರಯಾರನ್ನು ಮೆಂಬರುಗಳಂತೆ ಚುನಾಯಿಸಿರುತ್ತಾರೋ ತಿಳಿಯದು. ಒಳ್ಳೇ ಸ್ಥಿತಿಗಿರುವವರನ್ನು ಮಾತ್ರ ಮೆಂಬರುಗಳಂತೆ ಚುನಾಯಿಸುವದರಿಂದ ಪ್ರಯೋಜನವಿಲ್ಲ. ವಿದ್ಯೆ ಬುದ್ಧಿ ತಿಳಿದವರಾಗಿಯೂ, ಗ್ರಾಮವನ್ನು ಅಭಿವೃದ್ಧಿಪಡಿಸುವುದಕ್ಕೆ ಅಭಿಲಾಷೆ ಮತ್ತು ಯೋಗ್ಯತೆಗಳನ್ನು ಉಳ್ಳವರಾಗಿಯೂ, ಬಡಬಗ್ಗರ ಕಷ್ಟಸುಖಗಳನ್ನು ಚನ್ನಾಗಿ ತಿಳಿದು ನಡೆಸತಕ್ಕವರಾಗಿಯೂ, ತಕ್ಕಮಟ್ಟಿಗೆ ಕಾನೂನನ್ನು ಅರಿತವರಾಗಿಯೂ ಇರುವಂಥಾವರನ್ನು ಮೆಂಬರುಗಳಂತೆ ಚುನಾಯಿಸುವದು ಒಳ್ಳೇದು ಅಮಲ್ದಾರರು ಈ ವಿಷಯಕ್ಕೆ ಗಮನಕೊಡಬೇಕೆಂದು ಪ್ರಾರ್ಥಿಸುವೆವು

ಯಡತೊರೆ.—ಈ ಊರಿನಲ್ಲಿ ಪ್ಲೇಗು ಹೆಚ್ಚಾಗಿ ಒಂದು ತಿಂಗಳಾಗುತ್ತಾ ಬಂತು ಜನರೆಲ್ಲರೂ ಷೆಡ್ಡುಗಳಲ್ಲಿ ವಾಸಮಾಡುತ್ತಾ ಇದ್ದಾರೆ ಈಗ ೪—೫ ದಿವಸಗಳಿಂದ ಮಳೆಯು ಪ್ರಾರಂಭವಾಗಿ ಜನಗಳಿಗೆ ಬಹಳ ತೊಂದರೆಯನ್ನುಂಟುಮಾಡುತ್ತಿದೆ ನಮ್ಮ ಹೊಸ ಅಮಲ್ದಾರ್ರು ಮೆ|| ಶ್ರೀನಿವಾಸರಾಯರು ಜನಗಳಿಗೆ ಬಹಳ ಸಹಾಯವನ್ನು ಮಾಡುತ್ತಿದ್ದಾರೆ, ಸಾಮಾನುಗಳನ್ನು ತರಿಸಿ ಬಹು ಖರ್ಚಿಯಿಂದ ಬಿಕರಿ ಮಾಡುತ್ತಿದ್ದಾರೆ, ಸಿಡಿ ಸಾಮಾನುಗಳಿಲ್ಲದೆ ಬಹಳ ತೊಂದರೆಯನ್ನನುಭವಿಸುತ್ತಿದ್ದ ಜನಗಳಿಗೆ ತುಂಬಾ ಉಪಕಾರವಾಯಿತು ಬಡಜನಗಳಿಗೆ ಉಚಿತವಾಗಿ ಕೊಡುತ್ತಿದ್ದಾರೆ ನಮ್ಮ ಆಸ್ಪತ್ರೆ ಅಸಿಸ್ಟೆಂಟ್ ಮೆ|| ಶ್ರೀನಿವಾಸರಾಯರು ಜನಗಳ ಸಮೀಪದಲ್ಲಿಯೇ ಷೆಡ್ಡಿನಲ್ಲಿ ವಾಸಮಾಡುತ್ತಾ, ಜನಗಳ ಯೋಗಕ್ಷೇಮವನ್ನು ವಿಚಾರಿಸುತ್ತಲಿದ್ದಾರೆ ಜನಗಳು ಷೆಡ್ಡಿನಲ್ಲಿ ವಾಸಮಾಡುತ್ತಾ, ಸೋಂಕಿಲ್ಲ ಊರನೊಳಕ್ಕೆ ಹೋಗಿ ಬರುತ್ತಲಿದ್ದಾರೆ. ಇದು ಶ್ರೇಯಸ್ಕರವಾದುದಲ್ಲ. ನಮ್ಮ ಅಮಲ್ದಾರರು ತಕ್ಕ ಬಂದೋಬಸ್ತಿನಿಂದ ಊರನೊಳಕ್ಕೆ ಯಾರನ್ನೂ ಹೋಗಗೊಡಿಸದ ಹಾಗೆ ಮಾಡುತ್ತಾರೆಂದು ಪ್ರಾರ್ಥಿಸುತ್ತೇವೆ —ಊರಿನಲ್ಲಿ ಈಗಾಗಲೇ ೫—೬ ಕಳ್ಳತನಗಳಾದವು ಈ ಕಾಲದಲ್ಲಿ ಊರಿನಲ್ಲಿ ಪೋಲೀಸು ಬಂದೋಬಸ್ತು ಬಹಳ ಚನ್ನಾಗಿರಬೇಕಾಗಿದೆ. ಜನರ ಮಾನಧನಗಳನ್ನು ಕಾಪಾಡುವುದಕ್ಕೋಸ್ಕರ ಪೋಲೀಸು ಅಧಿಕಾರಿಗಳು ಬಹಳ ಜಾಗರೂಕತೆಯನ್ನು ವಹಿಸಬೇಕಾಗಿ ಕೋರುತ್ತೇವೆ —ಜನಗಳೆಲ್ಲರೂ ಊರಿಗೆ ಪೂರ್ವಭಾಗದಲ್ಲಿ ಗುಡಿಸಲುಗಳನ್ನು ಕಟ್ಟಿದ್ದಾರೆ ನೀರಿಗೆ ಬಹು ತೊಂದರೆಯಾಗಿದೆ ಮುಂದಿನ ತಿಂಗಳು ಒಂದನೆ ತಾರೀಖಿಗೆ ನಾಲೆ ನೀರು ಕಟ್ಟುಬಿಡುತ್ತಾರೆ ಜನಗಳಿಗೆ ನೀರಿಲ್ಲದೆ ಬಹು ತೊಂದರೆಯೂ, ಕಷ್ಟವೂ ಉಂಟಾಗುವದು ಇನ್ನೊಂದು ತಿಂಗಳು ನಾಲೆಯಲ್ಲಿ ನೀರು ಬಿಡುವ ಹಾಗೆ ಜನರೆಲ್ಲರೂ ಸರ್ಕಾರಕ್ಕೆ ಅರ್ಜಿಯನ್ನು ಬರೆದುಕೊಂಡಿರುವರಲ್ಲದೆ ಡೆಪ್ಯುಟಿ ಕಮೀಷನರವರು ದಯಮಾಡಿದ್ದಾಗ ಅವರಿಗೆ ಖುದ್ದಾಗಿಯೂ ಕೇಳಿಕೊಂಡರು. ಸರ್ಕಾರದವರು ನೀರು ನಾಲೆಯಲ್ಲಿ ಇನ್ನೊಂದು ತಿಂಗಳು ಇರುವಹಾಗೆ ಮಾಡಿಕೊಡುವರೆಂದು ನಿರೀಕ್ಷಿಸುತ್ತೇವೆ —ಇಲ್ಲಿ ಸರ್ಕಾರಿ ಸತ್ರದ ಮುಸಾಫರಖಾನೆಯಲ್ಲಿರುತ್ತಿಗೆ ಸರಿಯಾದ ಮೇಲ್ವಿಚಾರಣೆ ಇಲ್ಲವೆಂತಲೂ ಪರಸ್ಥಳದವರಿಗೆ ಅನುಕೂಲಗಳಿಲ್ಲವೆಂತಲೂ ಅನೇಕರು ಗೊಣಗುಟ್ಟುತ್ತಿದ್ದಾರೆ. ಪೋಲೀಸಿನವರು ಸರಿಯಾದ ವಿಚಾರಣೆಯನ್ನು ವಹಿಸಬೇಕೆಂದು ಪ್ರಾರ್ಥಿಸುತ್ತೇವೆ ಪರಸ್ಥಳದಿಂದ ಬರತಕ್ಕವರಿಗೂ ಮುಸಾಫರರಿಗೂ ಇಳಿದುಕೊಳ್ಳುವದಕ್ಕಾಗಿ ಕಟ್ಟಲ್ಪಟ್ಟ ಮುಸಾಫರಖಾನೆಯಲ್ಲಿ ಎಲ್ಲಾ ಭಾಗದಲ್ಲೂ ತಾಲ್ಲೂಕ್ ನೌಕರರು ವಾಸಿಸುತ್ತಿದ್ದಾರೆ. ಪರಸ್ಥಳದಿಂದ ಬಂದ ಜನಗಳಿಗೆ ಇಳಿದುಕೊಳ್ಳುವದಕ್ಕೆ ಸ್ಥಳವಿಲ್ಲದೆ ಬಹಳ ತೊಂದರೆಯಾಗಿದೆ ಊರಿನಲ್ಲಿ ಪ್ಲೇಗ್ ಪ್ರಾರಂಭವಾಗಿರುವದರಿಂದ ಪರಸ್ಥಳದವರಿಗೆ ಸರಿಯಾದ ಸ್ಥಳವಿಲ್ಲದೆ ಇರುವುದು ಬಹು ಸಂಕಟವನ್ನುಂಟುಮಾಡಿದೆ ಅನೇಕರು ಸ್ಥಳವಿಲ್ಲದೆ ಬಹು ಕ್ಲೇಶವನ್ನನುಭವಿಸಿ ಹಿಂತಿರುಗಿ ಹೋಗುತ್ತಾರೆ ಇದನ್ನೆಲ್ಲಾ ತಿಳಿದ ತಾಲ್ಲೂಕು ನೌಕರರು ಮುಸಾಫರಖಾನೆಯಲ್ಲಿ ವಾಸಮಾಡಿಕೊಂಡು ಪರಸ್ಥಳದವರಿಗೆ ತೊಂದರೆಯನ್ನುಂಟುಮಾಡುವದು ಒಳ್ಳೇದಲ್ಲ ಅಮಲ್ದಾರರು ಇವರನ್ನು ಬಿಡಿಸಿ, ಅಲ್ಲಿ ವಾಸಮಾಡತಕ್ಕ ನೌಕರರನ್ನು ಷೆಡ್ಡುಗಳಲ್ಲಿ ವಾಸಮಾಡುವಂತೆ ಬಲಾತ್ಕರಿಸಿ ಪರಸ್ಥಳದವರಿಗೆ ಅನುಕೂಲಮಾಡಿಸಿಕೊಡುತ್ತಾರೆಂದು ಬೇಡಿಕೊಳ್ಳುತ್ತೇವೆ.

ಕಲ್ಕತ್ತೆಯ ಡಾಕ್ಟರುಗಳ ಅಭಿಪ್ರಾಯಗಳು.

99-17

ನಾವೆ ಸ್ವತಃ ಕಾರ್ಯವನ್ನು ನೋಡಲಿಕ್ಕಾಗುವಾಗ, ನಮ್ಮ ಕಿವಿಗೆ ಕೇಳುವಾಗ, ನಮ್ಮ ಸ್ನೇಹಿತರು ರುಜುಮಾಡಿಸುವಾಗ ಇದಕ್ಕಿಂತ ಹೆಚ್ಚಾದ ಸಾಕ್ಷ್ಯ ಯಾವದು?

ಮುಂಬಾಯಿ ಜನರು ಏನು ಹೇಳುತ್ತಾರೆಂಬದಾಗಲೀ, ಕೊಲಂಬೋ ಜನರ ಅಭಿಪ್ರಾಯವೇನೆಂಬದಾಗಲೀ ಹೇಳಿ ಪ್ರಯೋಜನವಿಲ್ಲ. ಕಲ್ಕತ್ತೆಯವರಿಗೆ ಈ ವಿಷಯವಾಗಿ ನಿಜವಾಗಿ ಗೊತ್ತಿರುವಂಥಾ ಅಭಿಪ್ರಾಯವನ್ನೇ ತಿಳಿಸುತ್ತೇವೆ. ನೀವು ನಿಮ್ಮ ನೆರೆಕರೆಯವರ ಮಾತನ್ನು ನಂಬುವಿರೋ? ಹಾಗಾದ ಪಕ್ಷದಲ್ಲಿ ಬೋಸ್ ಮತ್ತು ಕಂಪನಿಯವರ ಬಳಿ ಇರುವ ವೈದ್ಯ ಚಿಕಿತ್ಸಕರಾದ ಡಾಕ್ಟರ್ ಸುರೇಶನಾಥ ದತ್ತ ರವರ ಅಭಿಪ್ರಾಯವನ್ನು ಓದಿ ನೋಡಿರಿ.

ಡೋನ್ಸರ (ಬ್ಯಾಕ್ ಏಕ್ ಕಿಡ್ನಿ ಪಿಲ್ಸ್) ಬೆನ್ನು ನೋವಿನ ಮೂತ್ರಬಾಧೆಯ ಗುಳಿಗೆಗಳು ಮೂತ್ರಕೋಶದ ಬಾಧೆಗಳಲ್ಲಿ ಮುಖ್ಯವಾಗಿ ಕಲ್ಲು ಬೀಳುವಲ್ಲಿ ಉಪಯೋಗಕರವಾಗಿದೆ.

ಬೆನ್ನು ನೋವು-ಮೂತ್ರಾ(ಶೋ)ಧ್ರವ-ಮೂತ್ರ ಸಂಬಂಧವಾದ ಬಾಧೆಗಳ ಹಾಗೆಯೇ ಕಲ್ಲು ಬೀಳುವದು ನಿಶ್ಚಯವಾಗಿ ಮೂತ್ರಪಿಂಡಗಳ ಬಲಹೀನತೆಯಿಂದ ಯಾ ಕೆಟ್ಟು ಹೋಗುವಿಕೆಯಿಂದ ಆಗುವದು.

ಈ ಮಾತ್ರೆಗಳಲ್ಲಿ ಸಸ್ಯಾದಿ ಮೂಲ ಪದಾರ್ಥಗಳು ಮಾತ್ರ ಇರುವದರಿಂದ ಅವು ಬೇಗನೇ ಉಪಶಮನವುಂಟಾಗುವಂತೆ ವಿಲಾಯಿಸುತ್ತವೆ; ಅತ್ಯಂತ ಸೂಕ್ಷ್ಮವಾದ ದೇಹಪ್ರಕೃತಿಯವರು ಸಹಾ ಉಪಯೋಗಿಸಬಹುದು. ಮತ್ತು ಕೂಡಲೇ ಮಾತ್ಸ್ಯತವಾದ ಗುಣವು ಸಿಕ್ಕುವದು ಸಂದೇಹವಿಲ್ಲ. ಮುಂದೆ ಇದರಿಂದ ಯಾವ ಬಾಧಕವೂ ಇರುವದಿಲ್ಲ.

ಎಲ್ಲಾ ಔಷಧ ಅಂಗಡಿಗಳಲ್ಲಿ ಮಾರಲ್ಪಡುತ್ತದೆ. ೬ ಸೀಸೆ ಒಂದಕ್ಕೆ ರೂ. ೨-೩-೦. ಅಥವಾ ೬ ಸೀಸೆಗಳಿಗೆ ರೂ. ೧೧-೮-೦. ಅಥವಾ ಮುಂಬಾಯಿ ಕೊಲ್ಲಿಯ ಡೋನ್ಸ್ ಔಷಧಗಳ ಕಂಪೆನಿಯಿಂದ ಬೇಡಾ ತರಿಸಿಕೊಳ್ಳಬಹುದು. ಪಿ. ಬಿ. ಬಾಕ್ಸ್ ನಂ. ೫೦. ಮುಂಬಾಯಿ.

ಹೊಸ ಫ್ಯಾಸನ್ ಸುಗಳು.

ಹೊಸ ಜಾತಿರ ಸಾಮಾನು! ಬೇಗ ತರಿಸಿಕೊಳ್ಳಿ!!

123 6

ಛಳಿಗಾಲಕ್ಕೆ ತಕ್ಕ ಶುದ್ಧ ನಾರ ಉಣ್ಣೆಯ ದಪ್ಪವಾದ "ಬ್ಲ್ಯಾಂಕೆಟ್" ಹೊಸ ನಮೂನೆ ಬನಾತವು ಕೋರವಾದ ಛಳಿಯನ್ನು ತಡೆಯುವದಕ್ಕೆ ಸುಖವಾದ ಹೊದ್ದಿಕೆ. ನೋಡಲು ಅತಿರಮ್ಯ. ನಮ್ಮಲ್ಲಿ ಮಾತ್ರವೇ ಇರುತ್ತೆ. ಉದ್ದ ೯೦ ಅಂಗುಲ ಅಗಲ ೬೦ ಅಂಗುಲ ಕ್ರಯ ರೂ. ೬. ೨ ನೆಯ ತರಹ ೬೪ × ೮೦ (ಅಂಗುಲ) ರೂ ೪. ಇತ್ತಿ ಎರಡಕ್ಕೆ ರೂ. ೧.

ಮದರಾಸು ಶೀನೆಗಳು.

ಹೊಸ ನಮೂನೆ! ... ಜರತಾರ ೪ ಅಡಿ ಜಾತಿರ ಬಣ್ಣ!!

ಶ್ರೇಷ್ಠವಾದ ಕಪ್ಪು ನೂಲಿನಿಂದ ತಯಾರಿಸಿ ಪ್ರಸಿದ್ಧವಾದ ಬಿಳಿ ಮತ್ತು ಕೆಂಪು ರೇಷ್ಮೆಯ ಅಂಚುಗಳು ನೆಯ್ಯಿಸಿರುತ್ತೆ. ನೋಡಲು ಅಂದವಾದ ಬಣ್ಣ ಬಣ್ಣ ಕೆಡದು. ಸೊಗಸಾದ ರೇಷ್ಮೆಯ ಕೆಲಸಗಳಿಂದ ಕೂಡಿದ ಅಂಚುಗಳುಳ್ಳ ... ಶುದ್ಧವಾದ ... ಇಷ್ಟು ಉದ್ದವುಳ್ಳ ... ಕ್ರಯ ...

ವಿಳಾಸ—ರಾಜ್ ಎಂಪೋರಿಯಂ, ಸ್ಟೇಷನ್ ರೋಡ್, ವೇಪೇರಿ ಮದರಾಸು.

ಮಹಾ ಬಾಧಾಪಹಾರಿಣಿಯು.

...

ಇದನ್ನು "... ಪ್ರಪಂಚದಲ್ಲಿ ಇಲ್ಲವು"

ಕೈಯೊಳಗಿನ ... ಲೇಪನವು ಸಕಲ ಸಣ್ಣವಾದ ಬಾಧೆಗಳನ್ನು ಪರಿಹರಿಸುತ್ತದೆ. ಗಾಯಗಳು, ಕಾಯಿಲೆಗಳು, ಈ ಮ ... ಅನೇಕರು ... ಕೆಂಪು, ಕೆಮ್ಮು, ... ಪೀಡೆ, ... ನಾನಾವಿಧ ... ತಲೆನೋವು, ಹಲ್ಲುನೋವು, ... ಅಂಗಾಂಗಗಳಲ್ಲಿ ... ಪರಿಹಾರವಾಗುತ್ತವೆ ... ಬಾಧೆ ... ಬಳಕೆಯಿಂದ ...

ಕ್ರಯ ಸೀಸೆ ೧ಕ್ಕೆ ೧೨ ಆಣೆ ಪ್ಯಾಕಿಂಗ್ ೪ ಆಣೆ. ಅದರ ... ಒಂದೇಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ... ವ್ಯಾಪಾರಸ್ಥರಿಗೆ ಮತ್ತು ... ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ... ಮುಖ್ಯ ಏಜಂಟರ ವಿಳಾಸ—

ಎಫ್. ಡಬ್ಲ್ಯು. ಜರ್ಡ,

ಸಿಮೆಟ್ರಿ ರೋಡ್, ವೇಪೇರಿ, ಮದರಾಸ್.

ಬಹುಮಾನ.

132-3

೫ ಆಣೆ ಪೋಸ್ಟೇಜು ಸ್ಟಾಂಪು ಕಳುಹಿಸಿಕೊಟ್ಟಲ್ಲಿ ಶ್ರೀಮಚ್ಛಂಕರಾಚಾರ್ಯರಿಂದ ರಚಿಸಲ್ಪಟ್ಟ ೪ ಬಾರಂಭಕ್ಕೆ ಪ್ರಶ್ನೋತ್ತರ ರತ್ನಮಾಲಿಕೆಯೊಂದಿಗೆ ೮ × ೧೦ ಸೈಜಿನ ಶ್ರೀಮಚ್ಛಂಕರಾಚಾರ್ಯರ ಫೋಟೋವನ್ನೂ, ಇದೇ ಸೈಜಿನ ಈಗಿನ ಶೃಂಗೇರಿ ಸ್ವಾಮಿಗಳ ಫೋಟೋವನ್ನೂ **ಶ್ರೀಮನ್ ಮಹಾರಾಜ ಯುವರಾಜರುಗಳ ಭಾವಚಿತ್ರಗಳಿಂದ** ಕೂಡಿದ ಪ್ಲನಂಗ ಕೀಲಕ ಪಂಚಾಂಗಸಹಿತ ಹೊಸನಮೂನೆಯಾದ ೧೯೦೮ ನೇ ಇಸವಿ ಹಿಂದೂ ಕ್ಯಾಲೆಂಡರನ್ನೂ ಮತ್ತು ಶ್ರೀಮನ್ನಿರಂಜನ ಶ್ರೀ ಮಧುರಾಧೀಶಾಚಾರ್ಯೇಂದ್ರಸ್ವಾಮಿಗಳ ಫೋಟೋವನ್ನೂ ಬಹುಮಾನವಾಗಿ ಕಳುಹಿಸುತ್ತೇವೆ. ೮ ಆಣೆಗೆ ಬೇರೆ ವಿಧವಾದ ಮತ್ತೆರಡು ಫೋಟೋಗಳು ಹೆಚ್ಚಾಗಿ ಸಿಕ್ಕುವವು. ಶಂಕರ ಕಥಾಮೃತವೆಂಬ ಆದಿಶಂಕರಾಚಾರ್ಯರ ಪಚನರೂಪವಾದ ಚರಿತ್ರೆ ಪ್ರತಿ ೧ಕ್ಕೆ ೧೨ ಆಣೆ.

ವಿಳಾಸ—ವೈ. ನಾಗಪ್ಪ, ಷಾಪ್ ಕೀಪರ್, ಕೋಟೆ, ಮೈಸೂರು.

The Pourwal Cash Bazzar—Bangalore City.

ಧಾರಿವಾಲ್ (ಪಂಜಾಬ್) ಶಾಲುಗಳು.

130-4

ಕೆಂಪು, ಎಣ್ಣೆ ಬಣ್ಣ, ಕೆಂಪು, ಕೇಸರಿ, ಹಸುರು, ನಕ್ಷದ ಬಣ್ಣ, ಬಾದಾಮಿ, ಕಪ್ಪು, ಬಿಳುಪು, ಮುಂತಾದ ಬಣ್ಣದ್ದು, ಮತ್ತು ಚಕ್ ನಮೂನೆ, ಪೂರ ಅರು ಮೊಳ ಉದ್ದ ಮೂರು ಮೊಳ ಅಗಲವುಳ್ಳದ್ದು.

ಈಗತಾನೇ ವಿಲಾಯತಿಯಿಂದ ಬಂದಿರುವ ೫,೦೦೦ ಪೌಂಡು ಟೋಪಿಗೆ ಲಾಯಖಾದ ತರಹೆವಾರಿ ಉಲ್ ಮತ್ತು ಇವುಗಳಲ್ಲಿ ತಯಾರಾದ ತರಹೆವಾರಿ ಟೋಪಿಗಳು ನಮ್ಮಲ್ಲಿ ಸಿದ್ಧವಾಗಿರುತ್ತವೆ.

ಇವುಗಳಲ್ಲದೆ ನೀವು ಕೇಳುವ ಯಾವ ಸಾಮಾನೇ ಆಗಲಿ ನಂಬಿಕೆಯಿಂದ ಅಗ್ಗವಾಗಿ ಕಳುಹಿಸುವೆವು. ಖರೀದಿ ವಗ್ಯರೆ ತಿಳಿಯಬೇಕಾದವರು ಇವರಿಗೆ ಬರೆಯಿರಿ—

ಹೆಚ್. ಜವಾರ್ ಮಲ್ ಕಂಪನಿ,

ಚಿಕ್ಕಪೇಟೆ, ಬೆಂಗಳೂರು ಸಿಟಿ.

ಇಗೋ! ಕನ್ನಡ "ಮಾಡಲ್" ಪಾಕೆಟ್ ಡೈರಿ!

122 6

ಸೊಗಸಾದ ಡೈರಿಗಳು!! ಉತ್ತಮವಾದ ಡೈರಿಗಳು!!

ಉತ್ಕೃಷ್ಟವಾದ ಡೈರಿಗಳು!!



೧೯೦೮ ನೇ ವರುಷದ ಕನ್ನಡ ಡೈರಿಗಳು ಸೊಗಸಾಗಿ ರೂಲ್ ಮಾಡಿದ ಕಾಗದದ ಮೇಲೆ ಮುದ್ರಿಸಲ್ಪಟ್ಟು ... ಜೊತೆಯಾಗಿ ಮೂನ ... ಅತ್ಯಾನಂದ ... ಉತ್ಕೃಷ್ಟವುಗಳಾಗಿರುತ್ತವೆ. ಇವುಗಳಲ್ಲಿ ಅವಶ್ಯಕವಾದ ವಿಷಯಗಳು ... ಸಿದ್ಧ ... ಕೋಟಿ ಲೆಕ್ಕ, ದಿನ ಸಂಬಳದ ಪಟ್ಟಿ, ... ಗುಳಿಕ ಕಾಲ, ರಾಹು ಕಾಲ, ಹಲ್ಲಿ ಬಿದ್ದ ಫಲ, ... ಪಂಚಾಂಗ, ರಜಗಳು, ... ಪೋಸ್ಟಾಫೀಸಿನ ಎಲ್ಲಾ ವಿಷಯಗಳು, ರಿಜಿಸ್ಟರ್ ... ಸ್ಟ್ಯಾಂಪು ... ಟ್ರೆಯಿನ್ ... ರೈಲ್ ... ಕ್ಯಾಲೆಂಡರ್, ಗ್ರಾಹಕ ... ಇವೇ ಮುಂತಾದ ಅನೇಕ ವಿಷಯಗಳು ಅಡಗಿರುತ್ತವೆ. ಡೈರಿಗಳ ಕ್ರಯ—

ನಂ। ೧ ಸಣ್ಣ ಸೈಜು ಪೆನ್ಸಿಲ್ ಇರುವುದು ಡೈರಿ ೦-೬-೦, ಡಜನ್ ಡೈರಿಗಳಿಗೆ ೪ ರೂಪಾಯಿ.

ನಂ। ೨ ಸಣ್ಣ ಸೈಜು ಪೆನ್ಸಿಲ್ ಇಟ್ಟು ... ಫ್ಲಾಪ್ ಡೈರಿ ೦-೮-೦, ಡಜನ್ ಡೈರಿಗಳಿಗೆ ೫ ರೂಪಾಯಿ.

ನಂ। ೩ ದೊಡ್ಡ ಸೈಜು ಪೆನ್ಸಿಲ್ ಇರುವ ಡೈರಿ ೦-೧೨-೦; ಡಜನ್ ಡೈರಿಗಳಿಗೆ ೮ ರೂಪಾಯಿ.

ನಂ। ೪ ದೊಡ್ಡ ಸೈಜು ಪೆನ್ಸಿಲ್ ಇಟ್ಟು ... ಡೈರಿ ೧-೪-೦, ಡಜನ್ ಡೈರಿಗಳಿಗೆ ೧೨ ರೂಪಾಯಿ.

ಡೈರಿಗಳ ಆಕೃತಿಯಲ್ಲಿ ಭ್ರಾಂತಿಕೊಂಡರೆ ಉತ್ತಮವಾದವುಗಳಿಗೆ ... ಡೈರಿಗಳು ಬಹು ಸುಲಭ ಕ್ರಯವುಳ್ಳವುಗಳು. ಇವುಗಳು ಗೌರ್ನಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿವೆ. ನಮ್ಮ ವಿಳಾಸ—

ಎಸ್. ಡಿ. ಸಿತಾರಾಮ್ ಕಂಪೆನಿ, ದೊಡ್ಡಪೇಟೆ, ಮೈಸೂರು.

ಅಥವಾ,

ಎಲ್. ಎ. ಪೌರ್‌ವಾಲ್—ಬೆಂಗಳೂರು ಸಿಟಿ.

ಅಥವಾ,

ಮ್ಯಾನೇಜರ್. ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

ಇಲ್ಲಿ ನೋಡಿ!

66 25

ತುಮಕೂರು ಪಿಸ್ತರ್ ಇಲಾಖೆಯಲ್ಲಿ ಯುರೋಪಿಯನ್ ಮೇಸ್ತ್ರಿಯವರಿಂದ ಉತ್ತಮ ತರಹದ ಹಾಸನದ ಟೋಪಿಗಳು ಅತಿ ಶ್ರೇಷ್ಠವಾದ ಉಲ್ ದಾರದಿಂದ ತಯಾರಾಗುತ್ತವೆ.

ಕ್ರಯ—೧-೦ ಆಣೆ ಮೊದಲ್ಗೊಂಡು ೧ ರೂ ೧-೦ ಆಣೆಯ ವರೆಗೆ.

೧ ಡಜನ್ ಟೋಪಿಗಳನ್ನು ತೆಗೆದುಕೊಳ್ಳುವವರಿಗೆ ಶೇಕಡ ೫ ರಂತೆ ಡಿಸ್‌ಕೌಂಟ್ ಕೊಡಲ್ಪಡುವದು.

ನಮ್ಮ ವಿಳಾಸ:—ಮೇನೇಜರ್,

ಹಾಸನದ ಟೋಪಿ ಕಾರ್ಖಾನೆ, ಪಿಸ್ತರ್ ಇಲಾಖೆ, ತುಮಕೂರು.

ನೂತನ ಡೈರಿಗಳು.

133-3

ಈ ಕೆಳಗೆ ಕಾಣಿಸಿರುವಂತೆ ನಾಲ್ಕು ವಿಧವಾದ ಡೈರಿಗಳೂ ನಮ್ಮಲ್ಲಿ ಬಹು ಸುಲಭವಾಗಿ ದೊರೆಯುವವು.

	೧೦೦ ಕ್ಕೆ	೧೨ ಕ್ಕೆ	೧ ಕ್ಕೆ
೧. ಸಣ್ಣ ಸೈಜು ಸಾದಾ	೧೩-೦-೦	೧-೧೪-೦	೦-೨-೯
೨. ,, ,, ಫ್ಲಾಪ್	೨೦-೦-೦	೨-೮-೨-೦	೦ ೬-೦
೩. ದೊಡ್ಡ ಸೈಜು ಸಾದಾ	೩೦-೦-೦	೩-೧೨-೦	೦-೫-೬
೪ ,, ,, ಫ್ಲಾಪ್	೪೫-೦-೦	೫-೧೦-೦	೦-೮-೦

ನಮ್ಮ ವಿಳಾಸ:—ವಾಜೆಪೇಯಂ ಕೃಷ್ಣಯ್ಯ,

ಬುಕ್ಕು ಡಿಪೋ, ಬೆಂಗಳೂರು ಸಿಟಿ.

ದಂಡ ಕೊಡುವುದನ್ನು ತಪ್ಪಿಸಿಕೊಂಡು ದುಡ್ಡನ್ನು ಉಳಿಸಿಕೊಳ್ಳಿ.

138-2

ಮನುಷ್ಯ ಸಾಮಾನ್ಯರಲ್ಲಿ ಲೇವಾದೇವಿಗಳಿಂದ ಜೀವಿಸುವವರೇ ಹೆಚ್ಚು. ಹಿಗಿದ್ದಾಗ್ಯೂ ಅನೇಕರಿಗೆ ಪತ್ರಗಳನ್ನು ಬರೆಯುವುದರಲ್ಲಿಯೂ ರಿಜಿಸ್ಟ್ರೇಷನ್ ಆಫೀಸುಗಳಲ್ಲಿ ಕೆಲಸ ನಡಿಸಿಕೊಳ್ಳುವುದರಲ್ಲಿಯೂ ಅನೇಕ ವಿಷಯಗಳು ತಿಳಿಯವು, ನಾನಾ ವಿಧವಾದ ದಂಡಗಳಿಗೆ ಒಳಗಾಗುವರು. ಈ ರೀತಿ ಜನಗಳು ತೊಂದರೆಪಡಬಾರದೆಂಬ ಅಭಿಪ್ರಾಯದಿಂದ ಬರೆದಿರುವ "ಲೇಖನ ಪ್ರಕಾಶಿಕಾ" ಎಂಬ ಪುಸ್ತಕವು, ಸ್ಟಾಂಪು ಮತ್ತು ರಿಜಿಸ್ಟ್ರೇಷನ್ ವಿಷಯವಾಗಿ ಪರರಪೇಕ್ಷೆ ಇಲ್ಲದೆ ಓದು ಬರಹ ಬಲ್ಲವರೆಲ್ಲರಿಗೂ ಸ್ವತಂತ್ರವಾಗಿ ಕೆಲಸ ನಡಿಸಿಕೊಳ್ಳುವಷ್ಟು ಸಾಮರ್ಥ್ಯವನ್ನುಂಟುಮಾಡುತ್ತದೆ. ಮತ್ತು ಇದರಲ್ಲಿ ಎಲ್ಲಾ ತರಹಾ ಪತ್ರಗಳ ನಮೂನೆಯೂ, ಅದಕ್ಕೆ ಹಾಕಬೇಕಾದ ಸ್ಟಾಂಪು ಫೀಜು ಸಹಾ ಹೇಳಿದೆ. ವಾಚಕರೇ, ಈ ಪುಸ್ತಕವನ್ನು ತರಿಸಿ ನೋಡಿದರೆ ಖಂಡಿತವಾಗಿಯೂ ಒಪ್ಪಿ ಒಳ್ಳೇ ಸ್ನೇಹಿತನನ್ನು ಸಂಪಾದಿಸಿಕೊಂಡಂತೆ ಭಾವಿಸುವಿರಿ. ಇತರ ಪುಸ್ತಕಗಳೊಂದಿಗೆ ಹೋಲಿಸಿದರೆ ಇದರ ಯೋಗ್ಯತೆಯು ನಿಮಗೆ ಗೊತ್ತಾಗುವುದು.

ಕ್ರಯ — ಟಪ್ಪಾಲ್ ಛಾರ್ಜು

೧—೦—೦ — ೦—೧—೦

ವಿಳಾಸ —ಕೆ. ನರಸಿಂಹಮೂರ್ತಿಯ್ಯ ಮತ್ತು ಕಂಪನಿ, ಮೈಸೂರು.

ದೀಪಾವಳಿಗೆಯ ಬಹುಮಾನ!

124 6

ಡೈರಿಯ ಸಮೇತ-ನಾಲ್ಕು ಬಹುಮಾನ.

೧೯೦೮ ನೇ ಫೆಬ್ರವರಿ ವರೆಗೆ ಮಾತ್ರ.

ಹಿಂದೆ ತಿಳಿಸಿರುವಂತೆ ಈ ಕೆಳಗೆ ಕಂಡ ನವೀನ ಕನ್ನಡ ಗ್ರಂಥಗಳಲ್ಲಿ ಒಂದು ರೂಪಾಯಿ ಬೆಲೆ ಬಾಳುವ ಪುಸ್ತಕಗಳನ್ನು ತರಿಸಿಕೊಳ್ಳುವವರಿಗೆ ಪ್ರತಿ ಒಂದು ರೂಪಾಯಿಗೂ ೪ ಆಣೆಯ "ಸೀತಾ ಚರಿತ್ರೆ ಪೂರ್ವಭಾಗ," ೩ ಆಣೆಯ "ಶ್ಲೋಕಮಾಲಿಕೆ," ೨ ಆಣೆಯ "ಶೃಂಗಾರಶತಕ" ಇವುಗಳಲ್ಲದೆ (ನಾವು ಕೆ ... ಭಾವಚಿತ್ರಗಳೂ ಕ್ಯಾಲೆಂಡರೂ ಮುಗಿದುಹೋಗಿರುವುದರಿಂದ) ಡಾಯಲ್ ಡೈರಿ ಒಂದನ್ನು ಬಹುಮಾನವಾಗಿ ಕಳುಹಿಸುತ್ತೇವೆ. ಅಂಚೆ ವೆಚ್ಚ ಬೇರೆ.

"ನಿರುಪಮಾ"—ಇದು ಐದು ಅಂಕಗಳುಳ್ಳ ಹೊಸ ಕನ್ನಡದ ನವೀನ ನಾಟಕ. ಸಂತಾಪಕನೆಂಬ ದುಷ್ಟನು ಅನೇಕ ಘೋರ ಕೃತ್ಯಗಳನ್ನು ಮಾಡಿ ನಿರುಪಮೆಯನ್ನು ಅಪಹರಿಸಿಕೊಂಡು ಬಂದುದೂ, ಕಮಲೆಯ ಸಹಿಷ್ಣುತ್ವವೂ, ವೇಶ್ಯೆಯರ ಮನೋವೃತ್ತಿ ಸನೆಯ ... ಕೃತ್ಯಾಕೃತ್ಯಗಳೂ, ಇವೇ ಮೊದಲಾದ ಅನೇಕ ವಿಷಯಗಳು ಅಡಕವಾಗಿವೆ. ಆಡುವುದಕ್ಕೂ ಓದುವವರಿಗೂ ಅನುಕೂಲಿಸುವಂತೆ ಹೊಸಗನ್ನಡದಲ್ಲಿರೂ ಈ ಗ್ರಂಥವನ್ನು ಓದುವುದಕ್ಕೆ ಪ್ರಾರಂಭಿಸಿದರೆ ಕೊನೆ ಮುಟ್ಟುವ ವರೆಗೂ ಬಿಡುವುದಕ್ಕೆ ಮನಸ್ಸಾಗುವದಿಲ್ಲ. ೧-೦ ಆಣೆ.

"ಪ್ರಿಯದರ್ಶಿಕೆ"—ಪ್ರಸಿದ್ಧ ಕವಿಯಾದ ಶ್ರೀಹರ್ಷನ ಗ್ರಂಥದ ಭಾಷಾಂತರ. ನಾಲ್ಕು ಅಂಕಗಳುಳ್ಳ ಈ ನಾಟಕದಲ್ಲಿ ಮತ್ತೊಂದು ಗರ್ಭನಾಟಕವಿರುವುದರಿಂದ ಆಡುವವರಿಗೂ ... ಇದು ಬೆಲೆ ೬ ಆಣೆ.

ಕೃಷ್ಣ ವಿಜಯ ರುಕ್ಮಿಣೀ ಪರಿಣಯ ಹಳೆಗನ್ನಡ	೦ ೬-೦
ಸೀತಾಚರಿತ್ರೆ ಸೀತೆಯ ಕಥೆ ಹೊಸ ಕನ್ನಡ ಪದ್ಯ	೦ ೪ ೦
ಉತ್ತರ ಸೀತಾಚರಿತ್ರೆ	೦ ೬ ೦
ಸತ್ಯವತೀ ಚರಿತ್ರೆ ಉತ್ತಮ ಕಥೆಯಾದ ಹೊಸ ಕನ್ನಡದ ಕಥೆ	೦ ೬ ೦

ನಿಮ್ಮ ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಿರಿ. ನಮ್ಮ ವಿಳಾಸ—

ಅರಮನೆಯ ವಿದ್ವಾಂಸ ಸಂದಿಸನಗೂಡು ಶ್ರೀಕಂಠಶಾಸ್ತ್ರಿ,

ಕೃಷ್ಣರಾಜ ಮೊಹಲ್ಲಾ, ಮೈಸೂರು.

"ನಂಬಲು ಧೈರ್ಯಸಾಲದ ಪೆ-ರೂ-ನಾ ಸೇವಿಸಿದೆನು"

ಎಂದು ಆಲ್ಬನಿಯ ಮಿ॥ ನ್ಯೂಹಾಫ್ ಬರೆಯುತ್ತಾನೆ. 38-38

ಗಂಡಸರಲ್ಲಿ ಕೆಳಹೊಟ್ಟೆಯ ರೋಗಗಳು.

ಕೆಳಹೊಟ್ಟೆಯು ಮತ್ತು ಜಲಬಾಧೆಕೋಶದ ಸಂಬಂಧವಾದ ನಾನಾ ತರದ ರೋಗಗಳನ್ನು ಅನೇಕಾನೇಕ ಜನರು ಬಹು ಕಷ್ಟದಿಂದ ಅನುಭವಿಸುತ್ತಾ ಜೀವಮಾನವನ್ನು ಕಳೆಯುತ್ತಾರೆ.

ಮೂತ್ರಕೋಶದ ರೋಗಬಾಧೆಗೆ ಸರಿಹೋಲುವ ರೋಗವು ಮತ್ತೊಂದಿಲ್ಲ. ದೇಹವು ಬಲಹೀನವಾಗುವದು, ನಾಯುವು ಬಾಡಿಹೋಗುವದು, ಎಲ್ಲಾ ವಿಷಯಗಳಲ್ಲೂ ಜೀವಶವಗಳಂತಾಗುವರು.

ಈ ತರಹಾ ರೋಗಿಗಳ ಗುಂಪಿಗೆ ಸೇರಿದವರೆಲ್ಲರೂ ಒಟ್ಟೊಬ್ಬರಾಗಿ ಪೆರೂನಾ ಸೇವನೆಯಿಂದ ಆ ರೋಗಗಳೆಲ್ಲಾ ನಿವಾರಣೆಯಾಗುವವೆಂಬದಾಗಿ ಹೊಗಳಿಕೊಳ್ಳುತ್ತಾ ಬಂದಿದ್ದಾರೆ



CHARLES B. NEWHOF



H. L. EMORY

ಒಬ್ಬನು ಇನ್ನೊಬ್ಬನಿಗೆ ತಿಳಿಸುವನು. ಈ ರೀತಿಯಾಗಿ ದೇಶದ ನಾಲ್ಕು ಮೂಲೆಗಳಲ್ಲೂ ಅದರ ಕೀರ್ತಿಯು ಹಬ್ಬಿ ಹರಡುವದು. ಪೆರೂನಾದಿಂದ ಮೂತ್ರಕೋಶದ ರೋಗಗಳು ಖಂಡಿತವಾಗಿ ಪರಿಹಾರವಾಗುವವೆಂದು ಎಲ್ಲರಿಗೂ ಪರಿಷ್ಕಾರವಾಗಿ ತಿಳಿದಿರುತ್ತದೆ.

ಅನ್ನಕೋಶ, ಕೆಳಹೊಟ್ಟೆಯು ನಾನಾ ಕೋಶಗಳ ಕಾಯಿಲೆಗಳೆಲ್ಲಾ ಈ ಔಷಧದಿಂದ ಗುಣವಾಗಿವೆ ಎಂದು ಅನೇಕರಿಂದ ಸಮಾಚಾರಗಳು ಬಂದಿವೆ.

ಪೆರೂನಾದಿಂದ ಎಷ್ಟು ಮಟ್ಟಿಗೆ ರೋಗನಿವಾರಣೆಯಾಗಿದೆ ಎಂಬದನ್ನು ನಿದರ್ಶನಪಡಿಸುವದಕ್ಕೆ ಎರಡು ಪ್ರಾಮಾಣ್ಯವಾದ ಸರ್ಟಿಫಿಕೇಟುಗಳನ್ನು ಈ ಕೆಳಗೆ ಪ್ರಕಟಿಸಿರುತ್ತೇವೆ.

ಮೂತ್ರಕೋಶದ ರೋಗವು.

ಮಿ॥ ಸಿ. ಬಿ. ನ್ಯೂಹಾಫ್, ೧೦ ಡಿಲಾವೇರ್ ಬೀದಿ, ಆಲ್ಬನಿ, ಎನ್ ವೈ., ಮಾಂಟಿಫ್ಯೊರೇ ಕ್ಲಬ್ ಪ್ರಸಿಡೆಂಟ್, ಇವರು ಬರೆಯುವದು:—

"ನನಗೆ ವಯಸ್ಸಾದ ಲಾಗಾಯತು ನನ್ನ ಮೂತ್ರಕೋಶದಲ್ಲಿ ಆಗಾಗ್ಗೆ ಬಾಧೆಯುಂಟಾಗುತ್ತಾ ಬಂದಿತ್ತು. ಡಾಕ್ಟರುಗಳನ್ನು ಕೇಳಿದ್ದರಲ್ಲಿ ವೃದ್ಧ್ಯದಿಂದ ನನ್ನ ಮೂತ್ರಕೋಶವು ನನಗೆ ತೊಂದರೆ ಪಡಿಸುವದೆಂತಲೂ, ವಯಸ್ಸು ಮೀರಿರುವದರಿಂದ ಅದು ದೀರ್ಘವಾಗಿದೆ ಎಂತಲೂ ಹೇಳಿದರು. ನನಗೆ ಪ್ರಯೋಜನವಾದೀತೆಂಬ ಭರವಸ ನನ್ನಲ್ಲಿ ಉಂಟಾಗದೆ ಹೋದಾಗ್ಯೂ ನಾನು ಪೆರೂನಾವನ್ನು ಸೇವಿಸುವದಕ್ಕೆ ಪ್ರಾರಂಭಿಸಿದೆನು. ಆದರೆ ನನ್ನ ಸಂತೋಷವನ್ನು ಎಷ್ಟೆಂದು ಹೇಳಲಿ. ಕೂಡಲೇ ನನಗೆ ಬಾಧೆ ಕಡಮೆಯಾಗುತ್ತಾ ಬಂತು. ಮೂತ್ರಕೋಶದಲ್ಲಿ ಉರಿಯುವದು ಕ್ರಮೇಣ ಇಳಿಯುತ್ತಾ ಬಂತು. ತರುವಾಯ ಅದಕ್ಕೆ ಸಂಬಂಧಪಟ್ಟ ಬಾಧೆಯೆಲ್ಲಾ ನಿವಾರಣೆಯಾಯಿತು. ಈಗ ಏಳು ತಿಂಗಳಿಂದಲೂ ನಾನು ಬಹಳ ಆರೋಗ್ಯದಿಂದಲೂ ಸುಖವಾಗಿಯೂ ಇದ್ದೇನೆ. ಬಹಳ ಚನ್ನಾಗಿ ಭೋಜನ ಮಾಡುತ್ತೇನೆ, ಸುಖವಾಗಿ ನಿದ್ರೆಮಾಡುತ್ತೇನೆ. ಹಿಂದೆ ಇಪ್ಪತ್ತು ವರುಷಗಳ ಹಿಂದೆ ನನಗಿದ್ದಷ್ಟು ಶರೀರಸೌಖ್ಯವೂ ಬಲವೂ ಈಗ ನನಗೆ ಉಂಟಾಗಿರುತ್ತದೆ. ಇಷ್ಟಕ್ಕೆಲ್ಲಾ ಪೆರೂನಾವೇ ಕಾರಣವಾದ್ದರಿಂದ ಅದನ್ನು ಬಹಳವಾಗಿ ಹೊಗಳುವೆನು."

ಹೊಟ್ಟೆ ಕೆಳಹೊಟ್ಟೆಯ ರೋಗವು.

ಮಿ॥ ಎಚ್. ಎಲ್ ಇಮಾರಿ, ವೈಸ್ ಛಾನ್ಸೆಲರ್ ಮತ್ತು ಮಾಸ್ಟರ್ ಆಫ್ ಆರಂಸ್, ಕೆ. ಪಿ ಆಫ್ ಓಮಾಹಾ, ನೆಬ್, ಇವರು ಉತ್ತರ ೧೬ ನೇ ಬೀದಿ ೨೦೫ ನೇ ಮನೆಯಿಂದ ಪೆರೂನಾವು ಬಲಕಾರಿಯಾದ ಔಷಧನೆಂದು ಅದನ್ನು ಹೊಗಳಿ ಬರೆಯುವದೇನೆಂದರೆ—

"ಪೆರೂನಾ ಅಸಾಧಾರಣವಾದ ಯೋಗ್ಯತೆಯುಳ್ಳ ಶಕ್ತಿವರ್ಧಕ ಸೇವನಾ ಔಷಧವೆಂದು ನಾನು ಬಹು ಸಂತೋಷದಿಂದ ಶಿಫಾರಸು ಮಾಡುತ್ತೇನೆ. ನಾನು ಸೇರಿರುವ ಬೇರೆ ಬೇರೆ ಸಂಗಡದ ಅನೇಕಾನೇಕ ಜನರಿಗೆ ಇದು ಅವರ ಶರೀರದ ನಾನಾ ಅಸ್ವಸ್ಥಗಳನ್ನೂ ಜಾಡ್ಯಗಳನ್ನೂ ಮೂತ್ರಕೋಶದ ರೋಗಾದಿಗಳನ್ನು ವಾಸಿಮಾಡಿರುತ್ತದೆ."

"ಪೆರೂನಾವು ಶರೀರದ ಅಂಗಾಂಗಗಳ ಶಕ್ತಿಯನ್ನು ವೃದ್ಧಿಪಡಿಸುತ್ತದೆ, ಆಹಾರವನ್ನು ಜೀರ್ಣಮಾಡಿಸುತ್ತದೆ, ಸುಖನಿದ್ರೆಕೊಡುತ್ತದೆ; ಆದ್ದರಿಂದ ಎಲ್ಲಾ ತರದ ರೋಗಿಗಳಿಗೂ ಪೆರೂನಾವನ್ನು ಸೇವಿಸುವಂತೆ ಪ್ರೋತ್ಸಾಹಪಡಿಸುವದು."

ಮಿ॥ ಡಿ ವಿಪ್ ಎಲ್, ಜೇಕಾಕ್ಸ್, ಚಪ್ಲೇನ್ ಕ್ಯಾಲಿಂಪಾ ಐ ಓ ಜಿ. ಟಿ ಮತ್ತು ಚಪ್ಲೇನ್ ಜಿ ಎ ಆರ್, ೪೩೫ ಬ್ರಾಡ್ವೇ, ಓಕ್ಲೆಂಡ್, ಕಾಲ್., ಇವರು ಬರೆಯುವದು:

"ನಾನು ಪೂರ್ವದಲ್ಲಿ ಯುದ್ಧಕ್ಕೆ ಹೋಗಿದ್ದವನು. ನನಗೆ ಕೆಳಹೊಟ್ಟೆಯಲ್ಲೂ ಮೂತ್ರಕೋಶದಲ್ಲೂ ಸಂಬಂಧವಾದ ಬಾಧೆ ಪ್ರಾಪ್ತವಾಯಿತು. ನೂರಾರು ರೂಪಾಯಿ ಖರ್ಚು ಮಾಡಿಕೊಂಡು ಅನೇಕ ಡಾಕ್ಟರುಗಳ ಅಭಿಪ್ರಾಯವನ್ನು ತೆಗೆದುಕೊಂಡಾಗ್ಯೂ ನನಗೆ ಸ್ವಲ್ಪವೂ ಪ್ರಯೋಜನವಾಗಲಿಲ್ಲ."

"ಕಡೆಗೆ, ಪೆರೂನಾದಿಂದ ಗುಣಹೊಂದಿದ ನನ್ನ ಸ್ನೇಹಿತರಲ್ಲಿ ಕೆಲವರು ಅದನ್ನು ತೆಗೆದುಕೊಳ್ಳು ನೋಡೆಂದು ನನಗೆ ತಿಳಿಸಿದರು. ಕೂಡಲೇ ನಾನು ಒಂದು ಬಾಟ್ಲಿಯನ್ನು ಕೊಂಡು ಉಪಯೋಗಿಸಿದಾಗ ಅದರಿಂದ ನನಗೆ ವಾಸಿಯಾಗುತ್ತಾ ಬಂದದ್ದರಿಂದ ಬಿಡದೆ ಅದನ್ನೇ ಸುಮಾರು ನಾಲ್ಕು ತಿಂಗಳ ತನಕ ಸೇವಿಸುತ್ತಾ ಬಂದೆನು. ನಾನು ಸೇವಿಸಿದ ಎಲ್ಲಾ ಔಷಧಗಳಿಗಿಂತಲೂ ಪೆರೂನಾ ಸರ್ವೋತ್ಕೃಷ್ಟವಾದದ್ದೆಂಬುದು ಸಿದ್ಧಾಂತವಾಯಿತು. ನನ್ನ ಬಾಧೆಯು ನಿವಾರಣೆಯಾಯಿತು. ನನಗೆ ಸಂಪೂರ್ಣವಾಗಿ ರೋಗ ವಾಸಿಯಾಗಿದೆ ಎಂದು ನಂಬುತ್ತೇನೆ. ನನಗೆ ಸೌಖ್ಯವಾಗಿದೆ. ಪೆರೂನಾ ಬಾಟ್ಲಿಯು [illegible] ಅದನ್ನು ಕೊಳ್ಳದೆ ಇರಲಾರೆನು. ಮಿ॥ [illegible] ಹರ್ಟ್ ಇ. ಹರ್ನ್ಸ್, ಫ್ರೆಟರಲ್ ಸ್ಟೇಟ್ಸ್ ಆಫ್ ಇಂಡಸ್ಟ್ರಿಯಲ್ ಫ್ರೀಡಂ, ಮತ್ತು ಪ್ರ[illegible] ಗ್ರಂಥಕರ್ತನೂ ಉಪನ್ಯಾಸಕನ . ಇಲ್, ಚಿಕಾಗೋ ೧೧ ದಕ್ಷಿಣ ನಿಕೋಲಸ್ ಬೀದಿ ಇವರು ಬರೆಯುವದು:—

"ಈಗ್ಗೆ ನಾಲ್ಕು ವರುಷಗಳ ಹಿಂದಿನ ತನಕ ನಾನು ಸೌಖ್ಯವಾಗಿದ್ದೆನು. ಆಗ ನನ್ನ ಬೆನ್ನಿನಲ್ಲಿ ಕೆಟ್ಟ ನೋವು ಪ್ರಾರಂಭವಾಯಿತು. ಅದು ದಿನೇ ದಿನೇ ಕೆಟ್ಟತರವಾಗುತ್ತ ಬಂತು. ನೋವು ತಡೆಯಲಾರದೆ ಕಡೆಗೆ ನನ್ನ ಶಕ್ತಿಯು ಕುಂದಿಹೋಯಿತು. ನನ್ನ ಜಲಬಾಧೆಯು ಬಣ್ಣ ತಿರುಗಿತು. ಮತ್ತು ಜಲಬಾಧೆಯಾಗುವದು ಅಕ್ರಮಕ್ಕೆ ಬಿದ್ದಿತು. ಇದರಿಂದ ನನ್ನ ಮೂತ್ರಕೋಶವು ಕೆಟ್ಟಿದೆ ಎಂದು ನಾನು ತಿಳಿದುಕೊಂಡೆನು."

"ಪೆರೂನಾ ವಿಷಯವನ್ನು ಓದಿದಾಗ ಅದನ್ನು ಸೇವಿಸಬೇಕೆಂದು ಗೊತ್ತುಮಾಡಿಕೊಂಡೆನು. ಹತ್ತು ದಿನ ಅದನ್ನು ಸೇವಿಸುವದರೊಳಗಾಗಿ ನನ್ನ ಬಾಧೆಯು ಕಡಮೆಯಾಯಿತೆಂದು ನನಗೆ ತೋರಿತು. ನೋವು ಕ್ರಮೇಣ ಇಳಿಯುತ್ತಾ ಬಂತು. ಅದರಿಂದ ನನಗೆ ಎಷ್ಟೋ ಆಶ್ಚರ್ಯವುಂಟಾಯಿತೆಂದು ನಿಶ್ಚಯವಾಗಿ ಹೇಳುತ್ತೇನೆ. ಮೂರು ತಿಂಗಳೊಳಗಾಗಿ ನಾನು ಯಥಾಪ್ರಕಾರ ಆರೋಗ್ಯವನ್ನು ಸಂಪಾದಿಸಿಕೊಂಡೆನು. ಹಾಲಿಗೂ ಆರು ತಿಂಗಳು [illegible] ನರಗಳ ಬಲಹೀನತೆಯು ಅದರಿಂದುಂಟಾಗುವ ಜುಗುಪ್ಸೆಯೂ ಬಿಟ್ಟು ಎಲ್ಲಾ ಹೋಗಿವೆ. ಈಗ ಎರಡು ವರುಷಗಳಿಂದಲೂ [illegible] ಆರೋಗ್ಯದಿಂದಿದ್ದೇನೆ. ನಿಮ್ಮ ಔಷಧವನ್ನು ನಾನು ಬಹಳವಾಗಿ ವಂದಿಸುವೆನು. ಅದು ಮನುಷ್ಯನಿಗೆ ಪರಮಶ್ರೇಷ್ಠವಾದ ಸಂಜೀವನವೆಂದು ನಾನು ನಂಬುತ್ತೇನೆ."

ವಿಳಾಸ:—ಈ ಔಷಧ ಸಿಕ್ಕುವ ಸ್ಥಳಗಳು:—

(೧) ಹಿಚ್‌ಕಾಕ್ ಅಂಡ್ ಸನ್ಸ್, ಬೆಂಗಳೂರು; ಅಥವಾ,

(೨) ಇಂಗ್ಲಿಷ್ ಡ್ರಗ್ ಕಂಪನಿ, ೩೯೮ ಮಿಂಟ್ ಬೀದಿ, ಮದರಾಸ್.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

6—12—1907 ರಿಂದ 13—12—1907 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು
ಬೆಂಗಳೂರು ಪಟ್ಟಣ	37	38	0
ಮೈಸೂರು ,,	28	55	0
ಬೆಂಗಳೂರು ಡಿಸ್ಟ್ರಿಕ್ಟು	88	78	0
ಮೈಸೂರು ,,	70	44	0
ಕೋಲಾರ್ ,,	39	30	0
ಕೋಲಾರ್ ಚಿನ್ನದ ಗಣಿಗಳು	38	30	0
ತುಮಕೂರು ಡಿಸ್ಟ್ರಿಕ್ಟು	14	18	0
ಹಾಸನ ,,	3	3	0
ಚಿತ್ರದುರ್ಗ ,,	13	11	0
ಕಡೂರ್ ,,	12	8	41
ಶಿವಮೊಗ್ಗ ,,	36	23	0
ಜುಮ್ಲಾ	378	297	41

ಶಾಲಿವಾಹನ ಶಕ ವರುಷಂಗಳು ೧೮೨೯ ನೇ ಪ್ಲವಂಗನಾಮ ಸಂವತ್ಸರದ ಮಾರ್ಗಶಿರ ಬಹುಳ ಷಷ್ಟಿ ಗುರುವಾರದಿಂದ ಮಾರ್ಗಶಿರ ಬಹುಳ ದ್ವಾದಶಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೭ನೇ ಡಿಸೆಂಬರ್ ಮತ್ತು ೧೯೦೮ನೇ ಜನವರಿ.

ತಾ.	ವಾರ		ತಿಥಿ.	ಘಳಿಗೆ.	ನಕ್ಷತ್ರ.	ಘಳಿಗೆ.	
26	ಗುರು	*	ಷಷ್ಟಿ	8-28	ಪುಬ್ಬ	26-44	1[illegible]
27	ಶುಕ್ರ		ಸಪ್ತಮಿ	10-20	ಉತ್ತ	31-32	1[illegible]
28	ಶನಿ	†	ಅಷ್ಟಮಿ	12-0	ಹಸ್ತ	33-13	1[illegible]
29	ರವಿ		ನವಮಿ	12-21	ಚಿತ್ತ	34-34	1[illegible]
30	ಚಂದ್ರ		ದಶಮಿ	11-31	ಸ್ವಾತಿ	34-46	1[illegible]
31	ಕುಜ	::	ಏಕಾದಶಿ	9-39	ವಿ	34-48	1[illegible]
1	ಬುಧ	‡	ದ್ವಾದಶಿ	6-26	ಅನು	31-58	1[illegible]

* ದಗ್ಧಯೋಗ. † ವ್ಯತೀಪಾತಯೋಗ, ಕಾಲಾಷ್ಟಮಿ.

:: ಸರ್ವತ್ರ ಏಕಾದಶಿ

‡ ಪ್ರದೋಷ, ಅಮೃತಸಿದ್ಧಿಯೋಗ

ಪೇಟೇ ಧಾರಣೆ.

ದಿನಸಿ.		ಮೈಸೂರು	ಬೆಂಗಳೂರು
ಕಳ್ಳೀ ಅಕ್ಕಿ ಪಲ್ಲಾ ೧ಕ್ಕೆ	ರೂ.	೧೭-೦-೦	೧೭-೮-[illegible]
ಕಂಬಸತಿ ಅಕ್ಕಿ ಲಿಸಲ್		೧೭-೦-೦	೧೭-೮-[illegible]
,, ಸಾಧಾರಣ		೧೩-೮-೦	೧೩-[illegible]
ಜಾಪಾಳ ಅಕ್ಕಿ		೨೩-೮-೦	೧೭-[illegible]
ಸಣ್ಣಕ್ಕಿ ಅವಲ್		೧೬-೮-೦	೧೬-[illegible]
,, ದಪ್ಪ		೧೫ ೮-೦	೧೪-[illegible]
ತೊಗರೀ ಬೇಳೆ ಪಲ್ಲಾ ೧ಕ್ಕೆ		೧೬-೮-೦	೧೬-[illegible]
,, ದಪ್ಪ		೧೫ ೦-೦	೧೩-೮-[illegible]
ಹೆಸರು ಬೇಳೆ ಪಲ್ಲಾ ೧ಕ್ಕೆ		೬ ೭-೦	೬ ೮-[illegible]
ಕಾರಾಗಿ		೬-೦-೦	೬ ೭-[illegible]
ಜೋಳ		೬ ೦-೦	೪-೮-[illegible]
ಹಲಸಂದೆ ಪಲ್ಲಾ ೧ಕ್ಕೆ		೧೦-೮-೦	೧೦-[illegible]
ಬಳ್ಳೀ ಅವರೆ		೯ ೦೭-೦	೧೦-[illegible]
ಹೆಸರು		೧೧ ೯ ೦	೧೧-[illegible]
ಉದ್ದು		೧೩-೦ ೦	೧೨-[illegible]
ಕಡಲೆ		೧೩-೮-೦	೧೨-[illegible]
ಎಳ್ಳು ಸೇ [illegible] ಕ್ಕೆ		೨೩-೮-೦	೨೦-[illegible]
ಹುರುಳಿ		೫-೮-೦	೬-[illegible]
ಹರಳು ೧ ಖಂಡಗ ಸೇರಿಗೆ		೧೨ ೦-೦	೧೩-[illegible]
ಸೀಗೇಕಾ ೧ ಮಣ ೧ಕ್ಕೆ		೨ ೮ ೦	೨-[illegible]
ಮೆಣಸಿನಕಾಯಿ		೨-೮ ೦	೨ ೭-[illegible]
ದಪ್ಪ		೨ ೭-೦	೨ ೦[illegible]
ಬೆಲ್ಲ ಗೊಡ್ಡ ಅಚ್ಚು		೫-೭-೦ ಮ	೨ ೦[illegible]
ಒಳ್ಳೆ ಸ್ಥಳ ಮಣ ೧ಕ್ಕೆ		೬ ೦-೦	೬ ೦[illegible]
ಪರಂಗಿಕ್ಕೆ ,,		೫ ೭-೦	೫ ೦[illegible]
ಕೊತ್ತುಂಬರಿ ಪಲ್ಲಾ ೧ಕ್ಕೆ		೫-೦-೦	೬ ೦[illegible]
ಉಪ್ಪು ,,		೫-೦-೦	೫ ೦[illegible]
ಹುಣಿಸೇ ಹಣ್ಣು		೨ ೦-೦	೧ ೬[illegible]
,, ಕಳೇದು		೧-೮	೨ ೭[illegible]
ತುಪ್ಪ ಮಣ ೧ಕ್ಕೆ		೧೭ ೦ ೦	೧೫ ೮[illegible]
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ		೭-೧೫-೦	೭ ೦[illegible]
ತೆಂಗಿನಕಾಯಿ ೧೦೦ಕ್ಕೆ		೪ ೮-೦	೬ ೦[illegible]
ಅಡಿಕೆ ಕಾಯಿ ಮಣ ೧ಕ್ಕೆ		೧-೦-೦	೦-೨[illegible]
ಅಂಟ್ವಾಳದ ಕಾಯಿ ಮಣ ೧ಕ್ಕೆ		೦-೧೨-೦	೦-೧[illegible]
ಚಿನ್ನ (ಬಾರ್) ತೊಲ		೧೭-೬-೦	೧೫-೬[illegible]
,, ,, ಪವನು		೧೫-೧೦-೦	೧೫-೬[illegible]
,, ,, ಗಟ್ಟಿ ತೊಲ ೧		೨೩-೧೨-೦	೨೩ ೬[illegible]
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ		೭೫-೦-೦	೭೪-೦[illegible]

Printed and Published by the Rev. E. W. THOMPSON, M. A., Proprietor and Manager, Wesleyan Mission Press, Mysore. 26/12/1907.